START

KARNATAKA
STATE
ARCHIVES

ARS 3 APP 2012

ಬಸವ ಸಮಿತಿಯ ಪತ್ರದ ಸಂಖ್ಯೆ : ಬಸ/ಗ್ರಂಥಾಲಯ/
2012-13 ದಿನಾಂಕ 18-2-2013

ಮೈಸೂರ್ ಸ್ಟಾರ್ ವಾರ ಪತ್ರಿಕೆಗಳ ಮರು

ದಿನಾಂಕ 2.1.1911 ರಿಂದ 26.12.1932 ರ
ವರೆಗೆ ಒಟ್ಟು 17 ಸಂಪುಟಗಳು.

(Retakes of Mysore Star weekly News paper)

ಮೈಸೂರ್ ಸ್ಟಾರ್ ವಾರ ಪತ್ರಿಕೆಗಳ ಪಟ್ಟಿ

ಕ್ರಮ ಸಂ.	ವರ್ಷ	ಮೈಸೂರ್ ಸ್ಟಾರ್ ವಾರ ಪತ್ರಿಕೆಗಳ ದಿನಾಂಕ (ದಿಂದ ವರೆಗೆ)	ಪರಿಗ್ರಹಣ ಸಂಖ್ಯೆ
✓ 1	1911	2.1.1911 – 25.12.1911	N11.24
✓ 2	1912	1.1.1912 – 23.12.1912	N12.25
3	1914	5.1.1914 – 27.12.1914	N14.27
4	1915	3.1.1915 – 15.08.1915	N15.28
5	1916	2.1.1916 – 31.12.1916	N16.29
6	1917	7.1.1917 – 30.12.1917	N17.30
7	1918	6.1.1918 – 29.12.1918	N18.31
8	1919	9.2.1919 – 28.12.1919	N19.32
9	1920	4.1.1920 – 26.12.1920	N20.33
10	1921	9.1.1921 – 25.12.1921	N21.34
11	1922	1.1.1922 – 31.12.1922	N22.35
12	1923	14.1.1923 – 23.12.1923	N23.36
13	1923	21.1.1923 – 30.12.1923	N23.36
14	1924	6.1.1924 – 28.12.1924	N24.37
15	1925	4.1.1925 – 26.12.1925	N25.38
16	1926	2.1.1926 – 25.12.1926	N26.39
17	1929	5.1.1929 – 28.12.1929	N29.42
18	1932	4.1.1931 – 26.12.1932	N32.45

ಮೈಸೂರ ಸ್ಟಾರ್ ವಾರ ಪತ್ರಿಕೆಯು
ದಿನಾಂಕ 04-10-1914
ರಿಂದ ಪ್ರಾರಂಭಿಸಿದೆ.

ದಿ ಜನರಲ್ ಏಜೆನ್ಸಿ, ಮೈಸೂರು.

ಕಾದಂಬರಿಗಳು :— ಚಂಡಮಾರುತ ೦-೨-೦; ಚರಿತಾಮೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಪೀಟರಿನಚತ್ರಿರಿ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಮಹಾಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೬-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 53

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ -೦-೦; ೫-೦-೦; ೩-೯-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು. ಟಿ. ಎಲ್. ಉಪಾಧ್ಯಾಯ,

ಸುಗಂಧಕಾರಿ,

ಮೈಸೂರು.

22

ನ್ಯಾಯದರ್ಪಣ.

35

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ. ಬೆಲೆ ರೂ. 1-8-0. ವಿ. ಪಿ. ಮೂಲ್ಯ 1-12-0.

ಎಂ. ಎಸ್. ನಂಜಪ್ಪನವರು,

ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

---

42 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೫೧೨ ಪುಟ)

ಟಪಾಲು ಹಾಸಲು ೪ ಆಣೆ.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೮-೦. (೫೩೬ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ ! ಮಾನ್ಯತೆಯು ಬೇಕಾದರೆ, ವಾಗ್ವೈಖರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಲಿಚ್ಛೆಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯಲ್ಲಾಸೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೩೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ. ೧-೪-೦ ಟಪಾಲ್ ಹಾಸಲು ೩ ಆಣೆ.

ಈಗಲೇ ಬರೆ ನಿಸಾ. ನಮ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಾಲಾಮಿಸ್ರಿಯು ಕಾಬೂಲ್ ದೇಶದಲ್ಲಿ ಪೌಂಡು ೧ ಕ್ಕೆ ೧-೧೦-೦ ಇತ್ತು ಈಗ ಪೌಂಡು ೧ಕ್ಕೆ ೩-೪-೦ ಆಗಿಧೆ. ಆದ್ದರಿಂದ ಇದರಕ್ರಯ ೨-೦೦ ರೂಪಾಯಿ ಮಾಡಿರುತ್ತೆ. 9

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬಾ.

ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ವಿನ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದೂ, ತಲೆಯು ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು ಹಳೇ ತಲೆ ನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಸೇಖರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯು ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು.

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂ. ಬಹುಮಾನವಾಗಿ ಕೊಡಲ್ಪಡುವುದು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನದಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧ಕ್ಕೆ ರೂ. ೨-೦-೦. ಟಪ್ಪಾಲ್‌ಖರ್ಚು ಬೇರೆ. ಅನುಪಾನಪತ್ರಿಕೆ ಔಷಧದಸಂಗಡ ಇರುತ್ತೆ.

ಡಿ. ಮುನ್ನಾಲಾಲ್, 5 ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನಮ್ಮ ಏಜಂಟರು-ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

20



ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇವೊಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧ ೦-೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ. ಮೈಸೂರು

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚುಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡರ್ಜ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಧಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗನಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ದರ್ಜ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,

ಗೋಪಸೆಟ್ಟಿಪುರ, ಹನೂರು ಪೋಸ್ಟ್

ಕೊಳ್ಳೇಗಾಲದ ತಾಲ್ಲೂಕು.

31

೧೯೧೪ ನೆಯ ಇಸವಿ ಸೆಪ್ಟಂಬರ್ ತಾ॥ ೨೭ರಿಂದ ೧೯೧೪ನೆಯ ಅಕ್ಟೋಬರ್ ತಾ॥ ೩ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ಆಶ್ವಯುಜ ಶು॥ ಅಷ್ಟಮಿಯಿಂದ ಆಶ್ವಯುಜ ಶು॥ ಚತುರ್ದಶಿ ವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ತೇದಿ ಕನ್ಯಾ
27	[1] ಭಾನು	ಅಷ್ಟ	8-14	ಪೂಷಾ	53-12	12
28	[2] ಸೋ	ನವ	4-49	ಉತ್ತಾಷಾ	52-17	13
29	[3] ಮಂ	ದಶ	2-23	ಶ್ರವಣ	52-38	14
30	[4] ಬುಧ	ಏಕಾ	1-9	ಧನಿಷ್ಠ	53-52	15
1	[5] ಗುರು	ದ್ವಾ	1-7	ಶತಭಿಷ	56-39	16
2	ಶುಕ್ರ	ತ್ರ	2-25	ಪೂಭಾ	60-	17
3	ಶನಿ	ಚತು	4-58	ಪೂಭಾ	0-59	18

(1) ದುರ್ಗಾಷ್ಟಮೀ, ತಿರುಪತಿ ವೆಂಕಟಾಚಲಸ್ವಾಮಿ
ರಥಃ. (2) ಸ್ವಾಯಂಭುವಮನ್ವಾದಿಃ, ಮಹಾನವ
ಆಯುಧಗಜಾಶ್ವಪೂಜಾ, ಅಮಲುದೇವತಾಪೂಜಾ, ಹ
ಗ್ರೀವಜಯಂತೀ, ಮೃತ್ಯುಯೋಗಃ. (3) ವಿಜಯದಶ
ಶಮಿಪೂಜಾ, ವೆಂಕಟೇಶಜಯಂತೀ, ವೇದಾಂತಾಚಾ
ತಿರುನಕ್ಷತ್ರಂ. (4) ಸರ್ವತ್ರೈಕಾದಶೀ. (5) ರಾತ್ರಿ
ಕುವೆ, ರಲ, ಪ್ರದೋಷಃ, ಗೋದ್ವಾದಶೀ.

ಮೈಸೂರ್ ಪ್ರೈ. ವಿರೂಪಾಕ್ಷಯ್ಯನವರಿಂದ
ಕೃಷ್ಣನಿಲ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED, NO M 124

ಮೈಸೂರ್ ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ !
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ।
ನಿಮಾತೀತ ಯಶಃಪ್ರತಾಪವಿಪುಲಂರದ್ವೃತ್ತಮಾಲಾಕುಲಂ । ಪ್ರೇಮಂಬಿಭ್ರತಿ ಕೆಯಂಸದಾಪ್ಯರೆಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧-೦-೦

ಅಂಚೆವೆಚ್ಚ ಸೇರಿ ೧-೧೪-೦

REGISTERED. NO M 124

ಸಂಪುಟ ೨೨) ಮೈಸೂರ್ ಸ್ಟಾರ್ ಸೆ ೧೯೧೪ ನೆಯ ಇಸವಿ ಅಕ್ಟೋಬರ್ ತಾರೀಖು ೪ನೆಯ ಭಾನುವಾರ. (ಸಂಚಿಕೆ ೪೦

ಮೈಸೂರಿನಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನರವರು ಮಾಡಿದ ಉಪನ್ಯಾಸದ ಮುಖ್ಯಭಾಗಗಳು.

ಮಹಾಶಯರೇ,

ಶ್ರೀಮನ್ಮಹಾರಾಜ ರಾಜಾಸಾಹೇಬ್ಬಹಾದುರವರ ಆಜ್ಞಾನುಸಾರವಾಗಿ ದಸರಾ ಪ್ರಜಾಪ್ರತಿನಿಧಿಗಳ ಈ ಮೂವತ್ತೊಂದನೆಯ ಸಭೆಗೆ ತಮ್ಮಗಳನ್ನು ಆದರಪೂರ್ವಕವಾಗಿ ಬರಮಾಡಿಕೊಂಡು, ಕಳೆದ ಸರ್ಕಾರೀ ವರ್ಷದಲ್ಲಿ ನಡೆದ ಸಂಸ್ಥಾನದ ಆಡಳಿತಗಳ ವಿಷಯವನ್ನೂ, ಶ್ರೀಮನ್ಮಹಾರಾಜರವರ ಪ್ರಜೆಗಳ ಪುರೋವೃದ್ಧಿಗಾಗಿ ಈಗ ಕೈಗೊಂಡಿರುವ ಮತ್ತು ಮುಂದೆ ಕೈಗೊಳ್ಳಬೇಕೆಂದಿರುವ ಏರ್ಪಾಡುಗಳನ್ನೂ ತಮ್ಮಗಳಿಗೆ ತಿಳಿಯಪಡಿಸುವುದಕ್ಕಾಗಿ ನಾವು ಉದ್ಯುಕ್ತರಾಗಿದ್ದೇವೆ.

ಯುದ್ಧ.

ಪ್ರಕೃತದಲ್ಲಿ ಎಲ್ಲರ ಮನಸ್ಸಿನಲ್ಲಿಯೂ ಇತರ ಭಾವನೆಗಳನ್ನು ಮರೆಯಿಸಿ ಪರಮಮುಖ್ಯವೆನಿಸಿಕೊಂಡಿರುವದು, ಯೂರೋಪ್ ಖಂಡವನ್ನು ಅತ್ಯಂತವಾಗಿ ಅಲ್ಲೋಲಕಲ್ಲೋಲವನ್ನು ಮಾಡುತ್ತಿರುವ ಪ್ರಬಲಯುದ್ಧವಾಗಿದೆ. ಸಂಚಾರ ಸಮಾಚಾರ ಸಾಧನಗಳು ಹೆಚ್ಚಿರುವದರಿಂದ, ಈ ಯುದ್ಧದ ಪರಿಣಾಮವು ಪ್ರಪಂಚದ ನಾನಾ ಭಾಗಗಳಲ್ಲಿ ವಾಸಮಾಡುವ ಸಕಲ ಜನರ ಅನುಭವಕ್ಕೂ ಬಂದಿರುತ್ತದೆ. ಬ್ರಿಟಿಷ್ ಚಕ್ರಾಧಿಪತ್ಯದ ಒಂದುಭಾಗವಾಗಿರುವದರಿಂದ ಇಂಡಿಯಾ ದೇಶವು ಯುದ್ಧದಲ್ಲಿ ವಿಶೇಷ ಸಂಬಂಧವನ್ನು ಪಡೆದಿರುತ್ತದೆ. ಇಂಥಾ ಯುದ್ಧಕಾಲದಲ್ಲಿಯೂ ಕೂಡ ವಿಶೇಷ ಕಳವಳಕ್ಕೂ ಚಿತ್ತೋದ್ವೇಗಕ್ಕೂ ಒಳಗಾಗದೆ ಯಥಾಪ್ರಕಾರವಾಗಿ ನಾವು ನಮ್ಮ ವಾಡಿಕೆಯಾದ ಕೆಲಸಗಳನ್ನು ನಡೆಸಿಕೊಂಡು ಬರುತ್ತಿರುವುದಕ್ಕೆ ಬ್ರಿಟಿಷ್ ಚಕ್ರಾಧಿಪತ್ಯದ ಪ್ರಬಲವಾದ ನಾವಿಕಬಲವೂ ಬ್ರಿಟಿಷ್‌ನವರ ರಾಜ್ಯಭಾರಕ್ರಮದ ಕಟ್ಟುಪಾಟುಗಳ ವಿಚಕ್ಷಣೆಯೂ ಕಾರಣಗಳಾಗಿರುತ್ತವೆ. ಈ ಯುದ್ಧವು ಬ್ರಿಟಿಷ್ ಇಂಡಿಯಾದೇಶದಲ್ಲಿನ ಸಾರ್ವಭೌಮರ ಪ್ರಜೆಗಳನ್ನು ಸ್ವಾಮಿಭೃತ್ಯಭಾವದಲ್ಲಿ ಮೊದಲಿಗಿಂತ ಕೇವಲ ಸಮೀಪವರ್ತಿಗಳನ್ನಾಗಿ ಮಾಡಿ ಇದೆ. ಮತ್ತು ರಾಜರುಗಳಿಗೂ, ಪ್ರಜೆಗಳಿಗೂ, ಸಾಮ್ರಾಜ್ಯಕ್ಕೂ, ಸಾಮಂತರಾಜ್ಯಗಳಿಗೂ, ಮನೋಭಾವ ಸಮ್ಮೇಳನವೂ, ಕ್ಷೇಮಲಾಭದ ಏಕರೂಪತೆಯೂ ಈಗಿರುವಷ್ಟು ಹಿಂದೆ ಯಾವ ಕಾಲದಲ್ಲಿಯೂ ಇದ್ದಂತೆ ಕಂಡುಬರಲಿಲ್ಲ.

ಒಂದು ಸಾಮಂತ ರಾಜ್ಯದವರಾದ ನಾವೂ ನಮ್ಮ ಕರ್ತವ್ಯವನ್ನು ನೆರವೇರಿಸಲು ಪ್ರಯತ್ನಪಟ್ಟಿದ್ದೇವೆ. ಶ್ರೀಮನ್ಮಹಾರಾಜರವರು ತಮ್ಮ ಸೈನ್ಯಗಳನ್ನೂ, ತಮ್ಮ ಸಂಸ್ಥಾನದ ಸರ್ವಸ್ವವನ್ನೂ, ಸ್ವಲ್ಪವೂ ಹಿಂಜೆಗೆಯದೆ ಸಾರ್ವಭೌಮ ಸರ್ಕಾರದವರ ಅಧೀನಕ್ಕೆ ಬಿಟ್ಟಿರುತ್ತಾರೆ. ಶ್ರೀಮನ್ಮಹಾರಾಜರವರು ಈಗ ಯೂರೋಪ್ ಖಂಡದಲ್ಲಿ ಚಕ್ರಾಧಿಪತ್ಯದ ಪರವಾಗಿ ಯುದ್ಧಮಾಡುತ್ತಿರುವ ಇಂಡಿಯಾ ದೇಶದ ಸೈನ್ಯದ ಖರ್ಚಿಗಾಗಿ ಐವತ್ತುಲಕ್ಷ ರೂಪಾಯಿ ಮೊಬಲಗನ್ನು ಕೊಟ್ಟಿರುತ್ತಾರೆ.

ಕಾಲಸ್ಥಿತಿ.

ಯುದ್ಧ ವಿಷಯಾನಂತರದಲ್ಲಿ ನಾವು ವಿಚಾರಮಾಡಬೇಕಾಗಿರುವುದು ಕಾಲಸ್ಥಿತಿಗೆ ಸಂಬಂಧಪಟ್ಟದ್ದಾಗಿರುತ್ತದೆ. ಹೋದವರ್ಷದಲ್ಲಿ ಮಳೆಯೇ ಕಡಿಮೆ. ಎಲ್ಲಾ ಕಡೆಗಳಲ್ಲಿಯೂ ಸಮವಾಗಿ ಬೀಳಲೂ ಇಲ್ಲ. ತಡವಾಗಿ ಪ್ರಾರಂಭವಾಗಿ, ಬೇಗನೆ ನಿಂತುಹೋಯಿತು. ಜೂನ್ ಮಾಹೆಯಿಂದ ಅಕ್ಟೋಬರ್ ವರೆಗೆ ಸಂದ ಐದುತಿಂಗಳ ಮಳೆಗಾಲದಲ್ಲಿ, ಬೆಂಗಳೂರಿನಲ್ಲಿ ಒಟ್ಟು 19.38 ಹದ ಮಳೆಯಾಯಿತು. ಅದರ ಹಿಂದಿನ ವರ್ಷದಲ್ಲಿ 27.09 ಹದ ಮಳೆಯಾಯಿತು. ಸಂಸ್ಥಾನದಲ್ಲೆಲ್ಲಾ ಸರಾಸರಿ 29.25 ಹದ ಮಳೆ ಬಿದ್ದಿತು.—ಎಂದರೆ ಸರಾಸರಿ ಬೀಳಬೇಕಾದ ಮಳೆಗಿಂತಲೂ 10.32 ಹದ ಮಳೆ ಕಡಿಮೆಯಾಯಿತು. ವಿಶೇಷವಾಗಿ ಬಿದ್ದ ಮುಂಗಾರುಮಳೆಯು ದೀರ್ಘಕಾಲದವರೆಗೂ ಎಂದರೆ ಸೆಪ್ಟೆಂಬರ್ ವರೆಗೂ ಬರಲಿಲ್ಲ. ಹಿಂಗಾರುಮಳೆ ಮಾತ್ರ ನಮಗೆ ಅಕ್ಟೋಬರ್ ಆದಿಭಾಗದಲ್ಲಿ ಕೆಲವು ದಿನಗಳ ಮಟ್ಟಿಗೆ ಒದಗಿತು. ಈ ಎರಡು ತಿಂಗಳುಗಳಲ್ಲಿಯೂ ಬಿದ್ದ ಮಳೆಯಿಂದ ವಿಶೇಷ ಪ್ರಯೋಜನವೇನೋ ಆಯಿತು. ಆದರೆ ಅಕ್ಟೋಬರ್ ಮಾಹೆಯ ಮೊದಲನೆಯ ವಾರದಲ್ಲಿಯೇ ಹಿಂಗಾರು ಮಳೆಯು ತಟ್ಟನೆ ನಿಂತುಹೋದುದರಿಂದ ಇದರ ಪ್ರಯೋಜನಕ್ಕೆ ಸ್ವಲ್ಪಮಟ್ಟಿಗೆ ಕುಂದಕವಾಯಿತು. ಇದರಿಂದ ರಾಗಿ ಬೆಳೆಯ ವಿಸ್ತೀರ್ಣವು ಕಡಿಮೆಯಾಗಿ, ಹುರುಳಿ ಬೆಳೆಯ ವಿಸ್ತೀರ್ಣವು ಹೆಚ್ಚಿತು. ಈ ಎರಡರ ಪೈಕಿ ಯಾವ ಬೆಳೆಯೂ ಚೆನ್ನಾಗಿ ಆಗಲಿಲ್ಲ. ಕೆರೆಗಳಿಗೆ ಯಾವಾಗಲೂ ಬರುವಂತೆ ನೀರು ಬರಲಿಲ್ಲ. ಮೈದಾನ ಪ್ರಾಂತ್ಯದಲ್ಲಿ ಬತ್ತದ ಬೆಳೆಗೆ ಬಾಧಕವುಂಟಾಯಿತು. ಆದರೆ, ವಿಶೇಷವಾಗಿ ಬತ್ತದ ಬೆಳೆ ಆಗುವ ಮಲೆನಾಡು ಮತ್ತು ಮೈಸೂರುಡಿಸ್ಟ್ರಿಕ್ಟಿನ ಮುಖ್ಯ ಪ್ರದೇಶಗಳಲ್ಲಿ ಬತ್ತದ ಬೆಳೆ ಅತೃಪ್ತಿಕರವಾಗಿರಲಿಲ್ಲ. ಮೇವಿಲ್ಲದೆ ಅನೇಕ ದನಗಳು ನಷ್ಟವಾದವು, ಇಲ್ಲವೇ ಕಂಗೆಟ್ಟವು.

ಈ ವರ್ಷದಲ್ಲಿಯೂ ಮಳೆಯು ಸರಿಯಾಗಿ ಉಪಕ್ರಮಿಸಲಿಲ್ಲ. ಮಾಮೂಲಾಗಿ ಬರುವ ಮುಂಗಾರುಮಳೆಯು ವಿಶೇಷವಾಗಿಯೂ ಬರಲಿಲ್ಲ, ಎಲ್ಲಾ ಕಡೆಯೂ ಬೀಳಲೂ ಇಲ್ಲ. ಮಲೆನಾಡಿನಲ್ಲಿ ಬಿದ್ದ ಮಳೆಯೂ ಸೇರಿ ಜೂನ್ ತಿಂಗಳಲ್ಲಿ 2.59 ಹದ ಮಳೆಯೂ, ಜುಲೈ ತಿಂಗಳಲ್ಲಿ 13 33 ಹದ ಮಳೆಯೂ ಆಯಿತು. ಸರಾಸರಿ ಆ ತಿಂಗಳುಗಳಲ್ಲಿ 4.51 ಹದವೂ, 10.25 ಹದವೂ ಬೀಳಬೇಕಾಗಿತ್ತು. ಆದರೆ ಮೈದಾನ ಪ್ರದೇಶಗಳಲ್ಲಿ ಸದರಿ ತಿಂಗಳುಗಳಲ್ಲಿ ಕ್ರಮವಾಗಿ ಸರಾಸರಿ 2.22 ಹದವೂ, 3.61 ಹದವೂ ಮಳೆಯಾಗಬೇಕಾಗಿರುವಲ್ಲಿ, 0.72 ಹದ, 2.58 ಹದ, ಈ ಮೇರೆಗೆ ಆಯಿತು. ಆಗಸ್ಟ ತಿಂಗಳಲ್ಲಿ ಅನುಕೂಲವಾಗಿ ಮಳೆಯಾದುದರಿಂದ, ಕಾಲಸ್ಥಿತಿಯು ಸ್ವಲ್ಪಮಟ್ಟಿಗೆ ಉತ್ತಮವಾಯಿತು. ಆದರೆ ಅನೇಕ ಪ್ರದೇಶಗಳಲ್ಲಿ ಪೈರು ಇನ್ನೂ ಎಳೆಯದಾಗಿರುವುದರಿಂದ, ಮುಂದೆ ಕೆಲವು ವಾರಗಳಲ್ಲಿ ಬೀಳಬಹುದಾದ ಮಳೆಯನ್ನು ನೋಡಿಕೊಂಡು ಸುಗ್ಗಿ ಕಾಲದಲ್ಲಿ ಕಟಾವಿಗೆ ಬರತಕ್ಕ ಫಸಲಿನ ಸ್ಥಿತಿಯನ್ನು ನಿರ್ಧರಿಸಬೇಕಾಗಿರುತ್ತದೆ.

ಧಾರಣೆವಾಸಿಗಳು.

ಜಾಗ್ರತೆಯಾಗಿ ಸರಕುಗಳು ಸಾಗಲು ಅವಕಾಶವಿರುವುದರಿಂದಲೂ, ದೇಶಾಂತರಗಳ ಸ್ಥಿತಿಗಳು ಬದಲಾಯಿಸುತ್ತಿರುವುದರಿಂದಲೂ, ಕೆಲವು ವರ್ಷಗಳಿಂದೀಚೆಗೆ ಧಾರಣೆಗಳು ಏರುತ್ತಲಿವೆ. ಕಳೆದ ಎರಡು ಮಳೆಗಾಲಗಳಲ್ಲಿಯೂ ಮಳೆ ಕಡಮೆಯಾದ ಕಾರಣ ಈ ಧಾರಣೆಗಳು ಕ್ಷಾಮಕಾಲದ ದರಗಳವುಟ್ಟಿಗೂ ಏರಿರುತ್ತವೆ. ಇದರಿಂದ ಬಡವರಾದ ಸರ್ಕಾರಿ ನೌಕರರಿಗೂ, ಕಸಬುದಾರರಿಗೂ, ಕೂಲಿಜನಗಳಿಗೂ ತುಂಬಾ ಕಷ್ಟವುಂಟಾಗಿರುತ್ತದೆ. ಫಸಲಿಗೆ ಒಳ್ಳೇ ಬೆಲೆ ದೊರೆಯುತ್ತಿರುವುದರಿಂದ ರೈತರಿಗೆ ಕಂದಾಯಕಟ್ಟುವುದು ಸಾಮಾನ್ಯವಾಗಿ ಕಷ್ಟ ಕಾಣದಿದ್ದರೂ, ಬೆಳೆ ಸ್ವಲ್ಪ ಹೆಚ್ಚಾಗಿ ಕೆಟ್ಟಕಡೆಗಳಲ್ಲಿ ಮಾತ್ರ ಮಾರುವುದಕ್ಕೆ ವಿಶೇಷ ಉಳಿಯಲಿಲ್ಲ.

ಕಷ್ಟನಿವಾರಣೋಪಾಯಗಳು.

ಈಗಿನ ಸ್ಥಿತಿಯ ನಿವಾರಣೆಗೆ ತಮಗೆ ಸಾಧ್ಯವಾದ ಎಲ್ಲಾ ಏರ್ಪಾಡುಗಳನ್ನೂ ಸರ್ಕಾರದವರು ಮಾಡಿರುತ್ತಾರೆ. ಕೆರೆಯ ಅಂಗಳಗಳನ್ನು ಸಾಗುವಳಿಗೆ ಕೊಡುವಂತೆ ಹುಕುಂ ಮಾಡಲಾಗಿರುತ್ತದೆ. ಕುಡಿಯುವ ನೀರಿನ ಬಾವಿಗಳನ್ನು ತೆಗೆಯಿಸುವುದಕ್ಕಾಗಿ ಹಣವನ್ನು ಮಂಜೂರ್ಮಾಡಲಾಗಿದೆ. ದನಗಳ ಮೇವಿಗಾಗಿ ಸಂಸ್ಥಾನದ ಜಂಗಲುಗಳನ್ನು ಬಿಟ್ಟುಕೊಡಲಾಗಿದೆ. ಮೇವನ್ನು ಸಂಗ್ರಹಿಸಿ ಸರಬರಾಯಿ ಮಾಡುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಲಾಗಿರುತ್ತದೆ. ಮುಂಗಡವಾಗಿ ರೈತರುಗಳಿಗೆ ಕೊಡುವುದಕ್ಕಾಗಿ ರೆವಿನ್ಯೂ ಅಧಿಕಾರಿಗಳು ಕೇಳಿದಷ್ಟು ಭಾರೀ ಹಣವನ್ನು ಮಂಜೂರ್ಮಾಡಿದೆ.

ಈ ಸಂಬಂಧದಲ್ಲಿ ಗ್ರಾಮಾಂತರಗಳಲ್ಲಿ ಜರುಗಿಸಲು ಏರ್ಪಡಿಸಿರುವ ಕಾಮಗಾರಿಗಳು ಸಾಕೇ ಸಾಲವೇ? ಇವುಗಳು ಸರಿಯಾಗಿ ಹಂಚಿಕೆಯಾಗಿರುತ್ತವೆಯೋ ಇಲ್ಲವೇ? ಎಂಬುದನ್ನು ನಿಶ್ಚಯಿಸಲು, ಇವುಗಳ ಪಟ್ಟಿಯನ್ನು ಪುನರ್ವಿಮರ್ಶೆಗೆ ಗುರಿಪಡಿಸಿದೆ. ಅನೇಕ ಗ್ರಾಮಗಳಲ್ಲಿ ಕಾಮಗಾರಿಗಳು ಕೈಗೊಳ್ಳಲು ಸಿದ್ಧವಾಗಿರುವುದರಿಂದಲೂ, ಪಬ್ಲಿಕ್ ವರ್ಕ್ಸ್ ಮತ್ತು ರೈಲ್ವೆ ಇಲಾಖೆಗಳಲ್ಲಿ ಕೆಲವು ಭಾರಿಭಾರಿ ಕಾಮಗಾರಿಗಳು ಸಹಿತ ಅನೇಕ ಕೆಲಸಗಳು ಸಂಸ್ಥಾನದಲ್ಲಿ ಅಲ್ಲಲ್ಲಿ ನಡೆಯುತ್ತಿರುವುದರಿಂದಲೂ, ಕೆಲಸಕ್ಕೆ ಸೇರಲಪೇಕ್ಷಿಸುವ ಜನರಿಗೆ ಕೆಲಸವನ್ನು ಒದಗಿಸಲು ನಮಗೆ ಎಂದಿಗಿಂತಲೂ ಈಗ ವಿಶೇಷವಾಗಿ ಹೆಚ್ಚು ಅವಕಾಶ ಉಂಟಾಗಿರುತ್ತದೆ.

(ಬಳಿಕ ಮೈಸೂರಿಗೆ ಲಾರ್ಡ್ ಹಾರ್ಡಿಂಜ್‌ರವರು ದಯಮಾಡಿಸಿದ್ದಾಗ ಅವರನ್ನು ಸತ್ಕರಿಸಿದ ಸಮಾರಂಭ, ಅವರ ಪತ್ನಿಯವರ ಮೃತಿಯಿಂದ ಉಂಟಾದ ದುಃಖ, ಮೈಸೂರು ಸಂಸ್ಥಾನಕ್ಕೂ ಸಾರ್ವಭೌಮ ಸರ್ಕಾರಕ್ಕೂ ಹಿಂದೆ ನಡೆದಿದ್ದ ತಹನಾಮೆಯನ್ನು ಗೌರವತರವಾದ ರೀತಿಯಲ್ಲಿ ಬದಲಾಯಿಸಿದುದು. ಈ ಸಂಗತಿಗಳು ತಿಳಿಸಲ್ಪಟ್ಟಿರುವುವು. ಪ. ಪ್ರ.)

ನ್ಯಾಯವಿಧಾಯಕ ಸಭೆಯಲ್ಲಿ ಬದಲಾವಣೆಗಳು.

ಶ್ರೀಮನ್ಮಹಾರಾಜರವರಿಂದ ಮಂಜೂರ್ ಮಾಡಲ್ಪಟ್ಟು ಹೋದವರ್ಷದಲ್ಲಿ ತಮಗೆ ತಿಳಿಸಲ್ಪಟ್ಟ ನ್ಯಾಯವಿಧಾಯಕಸಭೆಯ ಸಂಬಂಧವಾದ ಬದಲಾವಣೆಗಳನ್ನು ಸಂಪೂರ್ಣವಾಗಿ ಜಾರಿಗೆ ತರಲಾಗಿರುತ್ತದೆ. ಈ ಸಭೆಯಿಂದ ಚುನಾಯಿಸಲ್ಪಟ್ಟ ನಾಲ್ಕುಜನ ಮೆಂಬರುಗಳನ್ನೂ, ಡಿಸ್ಟ್ರಿಕ್ಟುಗಳಿಂದ ಚುನಾಯಿಸಲ್ಪಟ್ಟ ನಾಲ್ಕುಜನ ಮೆಂಬರುಗಳನ್ನೂ ನಿಯಮಿಸಿಕೊಳ್ಳತಕ್ಕ ವಿಷಯವೂ, ಸರ್ಕಾರೀ ಆಡಳಿತಗಳನ್ನು ಕುರಿತು ಸಮಜಾಯಿಷಿ ಬಗ್ಗೆ ಪ್ರಶ್ನೆಕೇಳುವ ಹಕ್ಕೂ, ಬಜೆಟ್ಟನ್ನು ಚರ್ಚಿಸತಕ್ಕ ಹಕ್ಕೂ ಸಹ ಸದರಿ ಬದಲಾವಣೆಗಳಲ್ಲಿ ಸೇರಿರುತ್ತವೆ.

ಈ ರೀತಿ ವಿಸ್ತರಿಸಲ್ಪಟ್ಟ ಸಭೆಯು ಕಳೆದ ವರ್ಷದಲ್ಲಿ ಮೂರುಸಲ ಸೇರಿತು, ಮತ್ತು ಈ ಸಂಸ್ಥಾನದ ಬಜೆಟ್ಟನ್ನು ಫೈನಾನ್ಷಲ್ ಸೆಕ್ರಿಟರಿಯವರ ವಿವರಣೆಗಳೊಡನೆ ಕಳೆದ ಜೂನ್ ಮಾಹೆಯಲ್ಲಿ ಸದರಿ ಸಭೆಯ ಮುಂದೆ ಚರ್ಚೆಗೆ ತರಲಾಯಿತು. ಜೂನ್ ೭ನೆಯ ತಾರೀಖಿನಲ್ಲಿ ಚರ್ಚೆಯು ನಡೆಯಿತು. ಅದರಲ್ಲಿ ಸ್ವಲ್ಪ ಹೆಚ್ಚುಕಡಿಮೆ ಸರ್ಕಾರೀ ಉದ್ಯೋಗಸ್ಥರಲ್ಲದ ಈಗಿನ ಮೆಂಬರುಗಳೆಲ್ಲರೂ ಭಾಗಿಗಳಾಗಿದ್ದರು

ಎಗ್ಸಿಕ್ಯುಟಿವ್ ಕೌನ್ಸಿಲ್ ಮತ್ತು ಶ್ರೀಮದ್ಯುವರಾಜರು ಎಕ್ಸ್‌ಟ್ರಾರ್ಡಿನರಿ ಮೆಂಬರ್ ಪದವಿಗೆ ಬಂದದ್ದು.

ಶ್ರೀಮದ್ಯುವರಾಜರವರನ್ನು ಒಬ್ಬ ಎಕ್ಸ್‌ಟ್ರಾರ್ಡಿನರಿ ಮೆಂಬರನ್ನಾಗಿ ನಿಯಮಿಸಿದ್ದರಿಂದ, ಎಗ್ಸಿಕ್ಯುಟಿವ್ ಕೌನ್ಸಿಲಿನ ಮೆಂಬರುಗಳ ಸಂಖ್ಯೆಯನ್ನು ಎರಡರಿಂದ ಮೂರಕ್ಕೆ ಹೆಚ್ಚಿಸಲಾಯಿತು. ತಮಗೆ ತಿಳಿದಂತೆ ಶ್ರೀಮದ್ಯುವರಾಜರವರು ಕೆಲವುಕಾಲ ಮಿಲಿಟರಿ ಸೆಕ್ರೆಟರಿಗಳಾಗಿ ಕೆಲಸ ಮಾಡಿದರು. ಆದರೆ, ಅವರ ಶಕ್ತಿಪ್ರಸರಣೆಗೆ ಆ ಅಧಿಕಾರದಲ್ಲಿ ಅವಕಾಶವು ಸಾಲದುದಾಯಿತು. ಆದಕಾರಣ ಶ್ರೀಮನ್ ಮಹಾರಾಜರವರು, ಶ್ರೀಮದ್ಯುವರಾಜರು ಯೂರೋಪ್ ದೇಶಗಳಲ್ಲಿ ಸಂಚಾರಮಾಡಿಕೊಂಡು ಹಿಂದಕ್ಕೆ ದಯಮಾಡಿಸಿದ ಬಳಿಕ ಅವರನ್ನು ಕೌನ್ಸಿಲಿಗೆ ಒಬ್ಬ ಎಕ್ಸ್‌ಟ್ರಾರ್ಡಿನರಿ ಮೆಂಬರನ್ನಾಗಿ ನೇಮಿಸಬೇಕೆಂದು ನಿಶ್ಚಯಿಸಿದರು. ಶ್ರೀಮದ್ಯುವರಾಜರವರು ಈಗ ಆ ಉನ್ನತ ಪದವಿಯನ್ನು ಸುಮಾರು ಎಂಟು ತಿಂಗಳುಗಳಿಂದ ವಹಿಸಿರುತ್ತಾರೆ. ಅವರು ಮಾಡುವ ಕಾರ್ಯದ ಶ್ಲಾಘನೆಯನ್ನು ನಾವು ಮಾಡತಕ್ಕದ್ದಲ್ಲವಾದರೂ, ಸಹೋದ್ಯೋಗಿಯಾದುದರಿಂದ ಅವರ ಸಮೀಚೀನವಾದ ವಿವೇಚನಾಶಕ್ತಿಯನ್ನೂ, ತಮ್ಮ ಬಳಿಗೆ ಪರ್ಯಾಲೋಚನೆಗೆ ಬರುವ ವಿಷಯಗಳನ್ನು ವಿಮರ್ಶೆ ಮಾಡುವುದರಲ್ಲಿ ತೋರ್ಪಡಿಸುತ್ತಿರುವ ಬುದ್ಧಿವಿಶಾಲತೆಯನ್ನೂ, ಅಭಿಪ್ರಾಯ ನವೀನತೆಯನ್ನೂ ನೋಡಿ ನಮಗುಂಟಾಗಿರುವ ಆಶ್ಚರ್ಯವನ್ನು ತಿಳಿಯಪಡಿಸದೆ ಬಿಡಲಾರೆವು.

ಈ ವರ್ಷದ ರಾಜ್ಯಾಡಳಿತದ ಮುಖ್ಯವಿಷಯಗಳು.

ಸರ್ಕಾರೀ ಇಲಾಖೆಗಳ ಆಡಳಿತಗಳನ್ನು ಫೈನಾನ್ಷಲ್ ಇಲಾಖೆಯಿಂದ ಆರಂಭಿಸಿ, ಒಂದೊಂದಾಗಿ ಸಂಗ್ರಹರೂಪದಲ್ಲಿ ಈಗ ತಿಳಿಸುತ್ತೇನೆ.

ಫೈನಾನ್ಷಲ್ ಇಲಾಖೆ.

ತಮಗೆಲ್ಲಾ ತಿಳಿದಿರುವಂತೆ ಶ್ರೀಮನ್ ಮಹಾರಾಜರವರ ಸರ್ಕಾರದ 1914–15 ನೆಯ ವರ್ಷದ ಫೈನಾನ್ಷಲ್ ಜಮಾಖರ್ಚು ಅಂದಾಜು ತಖ್ತೆಯನ್ನು ಕುರಿತು ನ್ಯಾಯವಿಧಾಯಕ ಸಭೆಯಲ್ಲಿ ಕಳೆದ ಜುಲೈ ತಿಂಗಳಲ್ಲಿ ಚರ್ಚೆ ನಡೆದಿರುತ್ತದೆ.

1913–14 ನೆಯ ವರ್ಷದ ತಿದ್ದುಪಾಟಾದ ಅಂದಾಜುಗಳು.

ತಿದ್ದುಪಾಟಾದ ಅಂದಾಜಿನ ಮೇರೆಗೆ 1913–14ನೆಯ ವರ್ಷದ ಹುಟ್ಟುವಳಿಯು 317.30 ಲಕ್ಷ ರೂಪಾಯಿಯೂ, ಆ ವರ್ಷದ ಖರ್ಚು 237.23 ಲಕ್ಷ ರೂಪಾಯಿಯೂ ಆಗಿರುವದರಿಂದ, ನಿವ್ವಳ 80.07 ಲಕ್ಷ ರೂಪಾಯಿ ಉಳಿಕೆಯಾದಂತೆ ಆಯಿತು. ಇದರಲ್ಲಿ ಸಿವಿಲ್ ಮತ್ತು ಮಿಲಿಟರಿ ಸ್ಟೇಷನಿನ ಸರ್‌ಪ್ಲಸ್ ಹುಟ್ಟುವಳಿ ಬಾಬಿನಲ್ಲಿ ಬಂದ 30 ಲಕ್ಷ ರೂಪಾಯಿಯನ್ನು ವಜಾಮಾಡಿದರೆ, ಇದರಡಿ ಕಾಣಿಸಿರುವ ಮೇರೆಗೆ ಈ ವರ್ಷದ ಜಮಾಖರ್ಚು ಖಾತಾ 50.07 ಲಕ್ಷ ರೂಪಾಯಿ ಉಳಿದಂತೆ ಆಯಿತು :—

ಬಜೆಟ್ಟಿನಲ್ಲಿ ದಾಖಲ್ಮಾಡಿದ್ದ ಲೆಖ್ಖಕ್ಕಿಂತಲೂ ಜಾಸ್ತಿಯಾದ ಹುಟ್ಟುವಳಿ	30.13 ಲಕ್ಷ
ಸಾಮಾನ್ಯ ಬಾಬುಗಳ ಖರ್ಚಿನಲ್ಲಿ ಉಳಿದಿರುವದು	11.22 ,,
~~ಮೊದಲಿನ ಬಜೆಟ್ಟಿನಲ್ಲಿ~~ ಅಂದಾಜು ಮಾಡಿದ್ದ ಸರ್‌ಪ್ಲಸ್ ಮೊಬಲಗು	8.72 ,,
ಜುಮ್ಲಾ	50.07 ಲಕ್ಷ

ಮುಖ್ಯಮುಖ್ಯವಾದ ಭಾರೀ ಕಾಂಗಾರಿಗಳಿಗಾಗಿಯೂ ಎಂದರೆ, ಕಾವೇರೀ ಜಲಾಶಯದ ಕಾಂಗಾರಿಯೂ, ಕಾವೇರೀ ವಿದ್ಯುಚ್ಛಕ್ತಿಯ ಏರ್ಪಾಟನ್ನು ಹೆಚ್ಚಿಸುವುದೂ, ಹೊಸದಾಗಿ ರೈಲನ್ನು ಹಾಕುವದೂ, ಬೆಂಗಳೂರಿನಲ್ಲಿ ಟ್ರ್ಯಾಂವೆಯನ್ನು ಹಾಕುವದೂ, ಇವುಗಳಿಗಾಗಿ ಸ್ಪೆಷಲ್ ಗ್ರ್ಯಾಂಟ್ ಯಾನೆ ಒಟ್ಟು 65.10 ಲಕ್ಷ ರೂಪಾಯನ್ನು ಕೊಟ್ಟಿರುತ್ತದೆ. ಈ ಗ್ರ್ಯಾಂಟು ಮೊಬಲಗಿನ ಪೈಕಿ 37.68 ಲಕ್ಷ ರೂಪಾಯಿಗಳವರೆಗೆ ಉಪಯೋಗಿಸಿಕೊಳ್ಳಲು ಆಯಾ ಇಲಾಖೆಗಳಿಗೆ ಸಾಧ್ಯವಾಯಿತು.

ಕಾವೇರೀ ಜಲಾಶಯದ ಏರ್ಪಾಡಿನ ಸಂದರ್ಭದಲ್ಲಿ ಕಂಪೆನ್ಸೇಷನ್ ಮೊಬಲಗನ್ನು ಪಾವತಿ ಮಾಡದೆ ನಿಲ್ಲಿಸಿಕೊಂಡಿರುವದು, ಏರ್ಪಾಡುಗಳನ್ನು ಪೂರಯಿಸುವುದರಲ್ಲಿಯೂ ಮತ್ತು ಉದ್ದೇಶಿಸಲ್ಪಟ್ಟ ರೈಲ್ವೆ, ಟ್ರ್ಯಾಂವೆ ಮತ್ತು ವಿದ್ಯುಚ್ಛಕ್ತಿ ಕಾಂಗಾರಿಗಳಿಗೆ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುವುದರಲ್ಲಿಯೂ ಯತ್ನವಿಲ್ಲದೆ ವಿಳಂಬವಾಗಿರುವುದು. ಇವುಗಳೇ ಆ ಬಾಬುಗಳಿಗಾಗಿ ಒದಗಿಸಿದ್ದ ಹಣ ಪೂರಾ ಖರ್ಚಾಗದೆ ಇರುವುದಕ್ಕೆ ಮುಖ್ಯ ಕಾರಣಗಳಾಗಿವೆ.

1914–15 ನೆಯ ಇಸವಿಯ ಬಜೆಟ್ ಅಂದಾಜುಗಳು.

ಮಳೆ ಬೆಳೆಗಳು ಸಾಮಾನ್ಯವಾಗಿ ನಡೆಯಬಹುದೆಂಬ ನಿರೀಕ್ಷಣೆಯಮೇಲೆ ತಯಾರ್ಮಾಡಿದ ಚಾಲತಿ ಸರ್ಕಾರೀ ಸಾಲಿನ (1914–15 ನೆಯ ವರ್ಷದ) ಬಜೆಟ್ಟು ಅಂದಾಜುಗಳನ್ನು ಈಗ ವಿಚಾರಕ್ಕೆ ತೆಗೆದುಕೊಂಡಲ್ಲಿ ಒಟ್ಟು 285.09 ಲಕ್ಷ ರೂಪಾಯಿ ಉತ್ಪತ್ತಿಯೂ, 358.63 ಲಕ್ಷ ರೂಪಾಯಿಯ ಒಟ್ಟು ಖರ್ಚೂ, ಆಗುವದೆಂದು ಅಂದಾಜು ಮಾಡಿಯಿದೆ. ಇವುಗಳನ್ನು ಸಾಮಾನ್ಯಬಾಬು ವಿಶೇಷಬಾಬು ಎಂದು ವಿಂಗಡಿಸಿದರೆ ಜಮಾಖರ್ಚುಗಳ ಲೆಕ್ಕವು ಇದರಡಿ ಕಂಡಂತೆ ಇರುತ್ತದೆ:—

ಹುಟ್ಟುವಳಿ	ಲಕ್ಷ ರೂಪಾಯಿಗಳಲ್ಲಿ
ಒಟ್ಟು ಹುಟ್ಟುವಳಿ	285.09
ಪೈಕಿ ವಜಾ—ಸಿವಿಲ್ ಮತ್ತು ಮಿಲಿಟರಿ ಸ್ಟೇಷನಿನ ಸರ್‌ಪ್ಲಸ್ ರೆವಿನ್ಯೂ ಬಾಕಿ	12.00
ನಿವ್ವಳ ಸಾಮಾನ್ಯ ಜಮಾಬಾಬು	273.09
ಖರ್ಚು	ಲಕ್ಷ ರೂಪಾಯಿಗಳು.
ಒಟ್ಟು ಖರ್ಚು	358.63

ಭಾರೀ ಕಾಂಗಾರಿಗಳಿಗಾಗಿ ಕೊಟ್ಟಿರುವ ಸ್ಪೆಷಲ್ ಗ್ರ್ಯಾಂಟುಗಳ ವಜಾ.

1. ಕಾವೇರೀ ಜಲಾಶಯಕ್ಕಾಗಿ	37.50 ಲಕ್ಷ	
2. ಕಾವೇರೀ ವಿದ್ಯುಚ್ಛಕ್ತಿಯ 4 ನೆಯ ಸ್ಥಾಪನೆಗಾಗಿ	5.67 ,,	
3. ಎಲೆಕ್ಟ್ರಿಕ್ ಟ್ರ್ಯಾಮ್‌ವೇಗಳಿಗಾಗಿ	6.00 ,,	
4. ಸ್ಟೇಟ್ ರೈಲ್ವೆಗಳನ್ನು ಹಾಕುವುದಕ್ಕಾಗಿ	36.00 ,,	
5. ಸರ್ಕಾರೀ ಸಹಾಯ ಪಡೆದು ಹಾಕಿದ ರೈಲ್ವೆಗಳಿಗೆ ಮೂಲಧನ	10.00	95.17
ಸಾಮಾನ್ಯ ಬಾಬುಗಳಿಗಾಗುವ ನಿವ್ವಳ ಖರ್ಚು		263.46
ಸಾಮಾನ್ಯ ಲೆಕ್ಕದಲ್ಲಿ ಸರ್‌ಪ್ಲಸ್		9.63
ಜುಮ್ಲಾ		273.09

1914 ನೆಯ ಜೂಲೈ 1 ನೆಯ ತಾರೀಖಿನಲ್ಲಿ ಇದ್ದ ಈ ಸಂಸ್ಥಾನದ ಲೇಣೆ ದೇಣೆ ಬಾಬುಗಳನ್ನು ತೋರಿಸುವ ತಖ್ತೆಯನ್ನು ಈ ಉಪನ್ಯಾಸಕ್ಕೆ ಪರಿಶಿಷ್ಟವಾಗಿ ಕೊಟ್ಟಿದೆ. ಇದನ್ನು ನೋಡಿದರೆ ಮೂಲದ್ರವ್ಯವನ್ನು ಖರ್ಚು ನಡೆಸುವ ಕಾಂಗಾರಿಗಳಿಗಾಗಿ ಭಾರಿಯಾಗಿ ಹಣ ಖರ್ಚಾಗಿದ್ದರೂ ಹಣ ಕಾಸಿನ ಸ್ಥಿತಿಯು ಪೂರ್ತಿಯಾಗಿ ತೃಪ್ತಿಕರವಾಗಿರುತ್ತದೆಂದು ಭಾವಿಸಬಹುದಾಗಿದೆ.

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನಿನ ಸರ್‌ಪ್ಲಸ್ ಹುಟ್ಟುವಳಿ.

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನಿನ ಸರ್‌ಪ್ಲಸ್ ಹುಟ್ಟುವಳಿಯ ವಿಷಯದಲ್ಲಿ ಮೈಸೂರು ಸರ್ಕಾರದವರಿಗೆ ಇದ್ದ ಹಕ್ಕನ್ನು ಇಂಡಿಯಾ ಸರ್ಕಾರದವರು ಔದಾರ್ಯದಿಂದ ಅಂಗೀಕರಿಸುತ್ತಾರೆಂಬ ಅಂಶವನ್ನು ಹೋದವರ್ಷ ತಿಳಿಸಿರುತ್ತದೆ. ಬಹಳ ಜಾಗರೂಕತೆಯಿಂದ ಪರಿಶೋಧನೆ ಮಾಡಿ 1911–12 ನೆ ಇಸವಿಯ ಆಖೈರ ವರೆಗೆ ಈ ಸಂಸ್ಥಾನಕ್ಕೆ 39 ಲಕ್ಷ ರೂಪಾಯಿಗಿಂತ ಸ್ವಲ್ಪ ಜಾಸ್ತಿಯಾಗಿ ಹಣ ಸಲ್ಲಬೇಕಾಗಿರುತ್ತದೆಂಬದಾಗಿ ಗೊತ್ತುಮಾಡಲ್ಪಟ್ಟಿತು. ಆ ಪೈಕಿ ಭಾರಿ ಕಂತು ಎಂದರೆ 30 ಲಕ್ಷ ರೂಪಾಯಿ ಈ ವರ್ಷದಲ್ಲಿ ಜಮಾ ಬಂದಿರುತ್ತದೆ:

ಅಬ್ಕಾರಿ.

1912–13 ನೆಯ ವರ್ಷದಲ್ಲಿ ಅಬ್ಕಾರಿ ಹುಟ್ಟುವಳಿಯಾದಷ್ಟು ಹಿಂದೆ ಯಾವ ಸಂವತ್ಸರದಲ್ಲಿಯೂ ಆಗಿರಲಿಲ್ಲವೆಂದು ಹೋದವರ್ಷ ತಿಳಿಸಲಾಯಿತು. ಆದರೆ 1913–14 ನೆಯ ವರ್ಷದ ಉತ್ಪತ್ತಿಯು ಇನ್ನೂ ಜಾಸ್ತಿಯಾಗಿದೆ. ಈ ಉತ್ಪತ್ತಿಯು 55,28,281 ರೂಪಾಯಿಗಳು, ಎಂದರೆ ಹಿಂದಿನ ವರ್ಷದ ಹುಟ್ಟುವಳಿಗಿಂತ 4,33,971 ರೂಪಾಯಿಗಳಷ್ಟು ಜಾಸ್ತಿಯಾಗಿದೆ. ಇದರಲ್ಲಿ ಸುಮಾರು ಅರ್ಧಪಾಲು ದುಕಾನ್ ಗುತ್ತಿಗೆ ಬಾಬಿನಿಂದಲೂ, ಉಳಿದ ಮೊಬಲಗು ಮದ್ಯವು ಹೆಚ್ಚಾಗಿ ಬಿಕರಿಯಾದುದರಿಂದಲೂ ಉತ್ಪತ್ತಿಯಾಯಿತು. ಈ ಹೆಚ್ಚು ಹುಟ್ಟುವಳಿಯು ಅನ್ಯದೇಶದ ಮದ್ಯದ ವಿನಾ ಡ್ಯೂಟಿಗೆ ಗುರಿಯಾದ ಎಲ್ಲಾ ಬಾಬುಗಳಿಂದಲೂ ಆಯಿತು. ಸುಲಭಕ್ರಯಕ್ಕೆ ದೊರೆಯುವ ಹಲವು ಬಗೆಯಾದ ಅನ್ಯದೇಶದ ಮದ್ಯಗಳ ಪಾನವು ಕ್ರಮೇಣ ಕಡಿಮೆಯಾಗಿ ಬೆಂಗಳೂರು ಸೆಂಟ್ರಲ್ ಡಿಸ್ಟಿಲರಿಯಲ್ಲಿ ತಯಾರಾಗುವ ಮದ್ಯಗಳ ಉಪಯೋಗವೇ ಹೆಚ್ಚಾಗುತ್ತಿದೆ.

ಫಾರೆಸ್ಟು.

ಪ್ರಸಕ್ತ ಸಂವತ್ಸರದ ಫಾರೆಸ್ಟು ಬಾಬಿನಲ್ಲಿ ಆದಷ್ಟು ಉತ್ಪತ್ತಿಯು ಹಿಂದೆ ಯಾವಾಗಲೂ ಆಗಿರಲಿಲ್ಲ. ಈ ಬಾಬಿನ ಉತ್ಪತ್ತಿಯು 32,71,336 ರೂಪಾಯಿಗಳಷ್ಟು ಆಯಿತು. ಇದರ ಪೈಕಿ ಸುಮಾರು ಮೂರರಲ್ಲಿ ಎರಡುಪಾಲು 2,158 ಟನ್‌ಗಳಷ್ಟು ಗಂಧದಮರದ ಬಿಕರಿಯಿಂದ ಬಂದಿತು. ಜಂಗಲ್ ರಕ್ಷಣೆಗಾಗಿಯೂ ಇಲಾಖೆಯ ಶಿಬ್ಬಂದಿಗಾಗಿಯೂ 7,45,476 ರೂಪಾಯಿ ಖರ್ಚಾಯಿತು.

ಫಾರೆಸ್ಟುಗಳಲ್ಲಿ ಸಂಸ್ಥಾನದ ಉತ್ಪತ್ತಿಗೆ ಆಕರವಾದ ಪದಾರ್ಥಗಳು ಎಷ್ಟರಮಟ್ಟಿಗೆ ಸಿಕ್ಕುತ್ತವೆ ಎಂಬುದನ್ನು ತಿಳಿಯುವುದಕ್ಕಾಗಿಯೂ, ಅವುಗಳನ್ನು ಕೈಗಾರಿಕೆ ಕೆಲಸಗಳಿಗೆ ಉಪಯೋಗಿಸುವುದು ಸಾಧ್ಯವೇ ಎಂಬ ಅಂಶವನ್ನು ಪರಿಶೀಲನೆ ಮಾಡುವುದಕ್ಕಾಗಿಯೂ ಇಬ್ಬರು ಫಾರೆಸ್ಟು ಆಫೀಸರುಗಳನ್ನು ಸ್ಪೆಷಲ್ ಡ್ಯೂಟಿಯ ಮೇಲೆ ನೇಮಿಸಿರುತ್ತದೆ. ಸದರಿ ಆಫೀಸರುಗಳು ಪ್ರಸಕ್ತ ಸಂವತ್ಸರವು ಮುಗಿಯುವುದರೊಳಗೆ ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿನ ಘಾಟೀ ಫಾರೆಸ್ಟುಗಳನ್ನೂ, ಕಡೂರು ಡಿಸ್ಟ್ರಿಕ್ಟಿನಲ್ಲಿ ತುಂಗಾನದಿಯ ಮೇಲ್ಭಾಗದ ಬಳಿ ಇರುವ ಫಾರೆಸ್ಟುಗಳನ್ನೂ, ಜಾಗರಕಣಿವೆಯಲ್ಲಿರುವ ಫಾರೆಸ್ಟುಗಳನ್ನೂ ಸಂಪೂರ್ಣವಾಗಿ ಪರಿಶೋಧಿಸಿದರು. ಇದಲ್ಲದೆ ಇವರಿಬ್ಬರ ಪೈಕಿ ಒಬ್ಬ ಆಫೀಸರು ಸಂಸ್ಥಾನದಲ್ಲಿ ಸೀಸದಕಡ್ಡಿ, ಬೆಂಕಿಕಡ್ಡಿ ಇವುಗಳನ್ನು ತಯಾರುಮಾಡುವುದಕ್ಕೆ ಸಾಧ್ಯವೆ ಎಂಬ ಅಂಶವನ್ನು ವಿಮರ್ಶೆಮಾಡಲು ಸರ್ಕಾರದವರು ನೇಮಿಸಿದ ಕಲಾಭಿಜ್ಞರಿಗೆ ಸಹಕಾರಿಗಳಾಗಿದ್ದರು. ಈ ಆಫೀಸರುಗಳು ತಮ್ಮ ತಪ್ಸೀಲ್‌ವಾರ್ ರಿಪೋರ್ಟುಗಳನ್ನು ಕಳುಹಿಸಿರುತ್ತಾರೆ. ಅವು ಈಗ ಸರ್ಕಾರದವರ ಪರ್ಯಾಲೋಚನೆಯಲ್ಲಿರುತ್ತವೆ.

ಕಳೆದ ನವೆಂಬರು ತಿಂಗಳಲ್ಲಿ ಘನತೆಯನ್ನೈದಿದ ವೈಸರಾಯಿಯವರು ಈ ಸಂಸ್ಥಾನಕ್ಕೆ ದಯೆಮಾಡಿಸಿದ ಸಂದರ್ಭದಲ್ಲಿ ಏರ್ಪಾಡುಮಾಡಿದ ಖೆಡ್ಡಾ ಕೆಲಸಗಳು ತೃಪ್ತಿಕರವಾಗಿ ನಡೆದುವು. ಹಿಡಿದ ಆನೆಗಳ ಪೈಕಿ ಅನೇಕವು ನಷ್ಟವಾದರೂ, ಈ ಬಾಬಿನಿಂದ ಸಂಸ್ಥಾನಕ್ಕೆ 52,685 ರೂಪಾಯಿಗಳಷ್ಟು ನಿವ್ವಳ ಆದಾಯವಾಯಿತು.

ಸ್ಟ್ಯಾಂಪು.

ಪ್ರಸಕ್ತ ವರ್ಷದಲ್ಲಿ ಘನತೆಯನ್ನು ಹೊಂದಿದ ಶ್ರೀಮನ್ಮಹಾರಾಜರವರ ಭಾವಚಿತ್ರವುಳ್ಳ ಸ್ಟ್ಯಾಂಪುಗಳನ್ನು ಉಪಯೋಗಕ್ಕೆ ತಂದದ್ದೇ ಸ್ಟ್ಯಾಂಪು ಇಲಾಖೆಗೆ ಸಂಬಂಧಪಟ್ಟ ಸಂತೋಷಕರವಾದ ಒಂದು ಹೊಸ ಏರ್ಪಾಡಾಗಿರುತ್ತದೆ.

ಪೋಲೀಸ್ ಇಲಾಖೆ.

ಹೋದವರ್ಷದ ಉಪನ್ಯಾಸದಲ್ಲಿ ತಿಳಿಸಿದ್ದ ಮೇರೆಗೆ, ಪೋಲೀಸು ಇಲಾಖೆಯ ಸಿಬ್ಬಂದಿಯನ್ನೂ ಬಡ್ತಿ ಸಂಬಳವನ್ನೂ ಅಭಿವೃದ್ಧಿಪಡಿಸತಕ್ಕ ಸಲಹೆಗಳನ್ನು ಜಾರಿಗೆ ತಂದಿರುತ್ತದೆ. ಈ ಪೋಲೀಸು ಬಲದ ಕಾಯಂ ಸಿಬ್ಬಂದಿಯಲ್ಲಿ 1914 ನೆಯ ಜೂನ್ 30 ನೆಯ ತಾರೀಖಿನಲ್ಲಿ 862 ಮಂದಿ ಆಫೀಸರುಗಳೂ, 5,161 ಮಂದಿ ನೌಕರರೂ ಇದ್ದರು. ಕೋಲಾರದ ಗೋಲ್ಡ್ ಫೀಲ್ಡ್ಸ್ ರೈಲ್ವೇ ಮೇಲಣ ಅಧಿಕಾರವನ್ನು ಹಂಗಾಮಿಯಾಗಿ ಸಂಸ್ಥಾನಕ್ಕೆ ತೆಗೆದುಕೊಂಡು, ಆವಶ್ಯಕವಾದ ಪೋಲೀಸ್ ಶಿಬ್ಬಂದಿಯನ್ನು ಒಂದು ವರ್ಷದವರೆಗೆ ನೇಮಿಸಲಾಗಿದೆ.

ಮಿಲಿಟರಿ ಇಲಾಖೆ.

ಸಂಸ್ಥಾನದ ಮಿಲಿಟರಿ ಇಲಾಖೆಗೆ ಸೇರಿದ ಫೌಜಿನ ಶಿಕ್ಷಣ ಕ್ರಮವೂ, ಯೋಗ್ಯತೆಯೂ ಎಂದಿನಂತೆ ಈ ವರ್ಷದಲ್ಲಿಯೂ ಉತ್ತಮಸ್ಥಿತಿಯಲ್ಲಿದ್ದವು; ಫೌಜಿನವರ ಆರೋಗ್ಯವೂ ಕೂಡ ಚೆನ್ನಾಗಿತ್ತು.

ಬಾರ್‌ಸಿಪಾಯಿಗಳ ಸಂಬಳವನ್ನೂ, ಮುಂದೆ ಅವರು ಬಡ್ತಿಗೆ ಬರುವ ಸಂಭವಗಳನ್ನೂ, ಅಭಿವೃದ್ಧಿಗೆ ತರಬೇಕೆಂಬ ಆಲೋಚನೆ ಇರುತ್ತದೆಂದು ಕಳೆದ ವರ್ಷದ ಉಪನ್ಯಾಸದಲ್ಲಿ ತಿಳಿಸಲಾಯಿತು. ವರ್ಷ ಒಂದಕ್ಕೆ 26,000 ರೂಪಾಯಿಗಳ ಜಾಸ್ತಿ ಖರ್ಚು ತಗಲುವ ಒಂದು ಏರ್ಪಾಡನ್ನು ಈಚೆಗೆ ಮಂಜೂರ್ಮಾಡಲಾಯಿತು. ಅದನ್ನು ಈಗ ಜಾರಿಗೆ ತರುತ್ತಿದೆ.

ವೈದ್ಯ ಮತ್ತೂ ಜನಾರೋಗ್ಯದ ಇಲಾಖೆಗಳು.

ಈ ಸಂಸ್ಥಾನದಲ್ಲಿ ದೇವೀ ಹಾಕುವುದಕ್ಕೆ ಉಪಯೋಗಿಸಿದ ಹಾಲಿನಲ್ಲಿ ದೋಷಗಳಿದ್ದವೆಂದು ಬಂದ ಕೆಲವು ಫಿರ್ಯಾದುಗಳನ್ನು ಚೆನ್ನಾಗಿ ವಿಚಾರಮಾಡುವುದಕ್ಕಾಗಿ ಒಂದು ಕಮಿಟಿಯನ್ನು 1913 ನೆಯ ಜುಲೈ ತಿಂಗಳಲ್ಲಿ ನೇಮಿಸಲಾಯಿತೆಂದು ಹೋದವರ್ಷದ ಉಪನ್ಯಾಸದಲ್ಲಿ ತಿಳಿಯಿಸಿದೆ. ಕಮಿಟಿಯವರು ಈ ವಿಷಯವನ್ನು ಬಹಳ ಜಾಗರೂಕತೆಯಿಂದ ವಿಚಾರಮಾಡಿದಮೇಲೆ ಮೈಸೂರು ಸೀಮೆಯ ಹಾಲಿನಲ್ಲಿ ಕೆಡಕು ಉಂಟಾಗತಕ್ಕ ದೋಷಗಳೇನೂ ಇಲ್ಲವೆಂತಲೂ, ಶಕ್ತಿಯ ವಿಷಯದಲ್ಲಿ ಇಂಡಿಯಾ ದೇಶದ ಇತರ ಪ್ರದೇಶಗಳಲ್ಲಿ ತಯಾರಾದ ಹಾಲಿಗೆ ನಮ್ಮ ಹಾಲು ನಿಕೃಷ್ಟವಾದದ್ದಲ್ಲವೆಂತಲೂ ನಿರ್ಣಯಿಸಿದರು. ಆದರೆ ಸದರಿ ಹಾಲಿನಲ್ಲಿ ಬೇರೆ ಸಜೀವ ಸೂಕ್ಷ್ಮವಸ್ತುಗಳು ಇರುತ್ತವೆಯಾಗಿ, ಅವುಗಳಿಂದ ಯಾವ ಕೆಡಕೂ ಇಲ್ಲದಿದ್ದರೂ, ಅವುಗಳನ್ನೂ ಕೂಡ ತೆಗೆದು ಹಾಕತಕ್ಕದ್ದು ಅವಶ್ಯಕವಾಗಿರುವದೆಂದು ಕಮಿಟಿಯವರು ಅಭಿಪ್ರಾಯಪಟ್ಟು, ಆ ವಿಷಯದಲ್ಲಿ ಕೆಲವು ಸಲಹೆಗಳನ್ನೂ ಕೊಟ್ಟಿರುತ್ತಾರೆ. ಈ ಸಲಹೆಗಳನ್ನು ಸರ್ಕಾರದವರು ಒಪ್ಪಿ ಇರುತ್ತಾರೆ.

ರಾಬರ್ಟ್‌ಸನ್ ಪೇಟೆಯಲ್ಲಿ ಹೆರಿಗೆಯ ಆಸ್ಪತ್ರೆಯನ್ನು ಜಾಗ್ರತೆಯಲ್ಲಿ ಜನರ ಉಪಯೋಗಕ್ಕೆ ತರಲಾಗುವುದು. ಈ ಆಸ್ಪತ್ರೆಯ ಸಿಬ್ಬಂದಿಯವರಿಗೆ ವಾಸದ ಮನೆಗಳನ್ನು ಇನ್ನೂ ಕಟ್ಟಿಸಿರುವುದಿಲ್ಲ. ಆದರೆ ಸದ್ಯಕ್ಕೆ ಇವರುಗಳಿಗೆ ಹಂಗಾಮಿಯಾಗಿ ವಾಸದ ಮನೆಗಳನ್ನು ಕೊಡಿಸಿ ಆಸ್ಪತ್ರೆಯ ಕೆಲಸವನ್ನು ನಡಿಸಲಾಗುವುದು.

ಮಲೆನಾಡು ಪ್ರದೇಶದ ಆರೋಗ್ಯಾಭಿವೃದ್ಧಿಗಾಗಿಯೂ ಸಂಪದಭಿವೃದ್ಧಿಗಾಗಿಯೂ ಈ ಪ್ರಸಕ್ತ ವರ್ಷದಲ್ಲಿ ಕೈಗೊಂಡ ಮಲೆನಾಡು ಅಭಿವೃದ್ಧಿಯ ಏರ್ಪಾಡಿನ ವಿಷಯವನ್ನು ಈ ಉಪನ್ಯಾಸದ ಮತ್ತೊಂದು ಕಡೆಯಲ್ಲಿ ತಿಳಿಸಲಾಗುವುದು.

ವಿದ್ಯಾಭಿವೃದ್ಧಿ ಮತ್ತೂ ಭಾಗ್ಯಾಭಿವೃದ್ಧಿ.

ಸಂಪದಭ್ಯುದಯಸಮಾಜ.

ಕಳೆದ ಸರ್ಕಾರೀ ಸಾಲಿನಲ್ಲಿ ಸಂಪದಭ್ಯುದಯಸಮಾಜದ ಬೇರೆ ಬೇರೆ ಕಮ್ಮಿಟಿಗಳನ್ನೂ, ಸದರಿ ಕಮ್ಮಿಟಿಗಳಿಗೆ ಸಂಬಂಧಪಟ್ಟ ಇಲಾಖೆಗಳನ್ನೂ ಬಲಪಡಿಸಲಾಯಿತು. ಕಾನ್‌ಫರೆನ್ಸಿನ ಕೆಲಸವನ್ನು ಕ್ರಮಪಡಿಸುವದಕ್ಕೂ, ಅದನ್ನು ಕಾರ್ಯತಃ ನೆರವೇರಿಸಲಾಗುವಂತೆ ಮಾಡುವುದಕ್ಕೂ ವಿಶೇಷವಾದ ಪ್ರಯತ್ನಗಳನ್ನು ನಡಿಸಲಾಯಿತು. ವರ್ಷದ ಆರಂಭದಲ್ಲಿ ಕಾನ್‌ಫರೆನ್ಸಿನ ಮತ್ತು ಅದಕ್ಕೆ ಸೇರಿದ ಕಮಿಟಿಗಳ ಏರ್ಪಾಟುಗಳಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಿ ಅವುಗಳ ಕಾರ್ಯಗಳನ್ನು ಸ್ಪಷ್ಟವಾಗಿ ಗೊತ್ತುಮಾಡಲಾಯಿತು. ಕಳೆದ ಅಕ್ಟೋಬರಿನಲ್ಲಿ ನಾವು ತಿಳಿಯಪಡಿಸಿದಂತೆ, ಈ ಸಭೆಯಿಂದ 8 ಜನ ಮೆಂಬರುಗಳನ್ನೂ ಡಿಸ್ಟ್ರಿಕ್ಟ್ ಎಲೆಕ್ಟೋರೇಟುಗಳಿಂದ (ಚುನಾವಣೆಯ ಸ್ಥಳಗಳಿಂದ) 8 ಜನ ಮೆಂಬರುಗಳನ್ನೂ, ಚುನಾಯಿಸತಕ್ಕಬಗ್ಗೆ 16 ಸ್ಥಾನಗಳಿಗೆ ಅವಕಾಶ ಕೊಡಲಾಯಿತು. ಈರೀತಿ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ಕಳೆದ ಜೂನ್ ಮಾಹೆಯಲ್ಲಿ ನಡೆದ ಕಾನ್‌ಫರೆನ್ಸಿನ ಮೀಟಿಂಗಿನ ಕೆಲಸದಲ್ಲಿ ಭಾಗಿಗಳಾಗಿದ್ದರು. ಎಜ್ಯುಕೇಷನ್ ಕಮ್ಮಿಟಿಗೆ ಉದ್ಯೋಗಪ್ರಯುಕ್ತ ಸೆಕ್ರೆಟರಿಯವರಾಗಿಯೂ ಇದ್ದ ವಿದ್ಯಾಭ್ಯಾಸದ ಇಲಾಖೆಯ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್‌ರವರು ಮಾಡಬೇಕಾದ ಕೆಲಸಗಳು ವಿಶೇಷವಾಗಿದ್ದುದರಿಂದ, ಎಜ್ಯುಕೇಷನ್ ಕಮ್ಮಿಟಿಯ ಕೆಲಸವನ್ನು ನೋಡಿಕೊಳ್ಳುವುದಕ್ಕಾಗಿ ಪೂರಾಕಾಲ ಕೆಲಸಮಾಡತಕ್ಕ ಒಬ್ಬ ಆಫೀಸರನ್ನು ನೇಮಿಸಲಾಯಿತು. ಮೂರು ಸೆಂಟ್ರಲ್ ಕಮಿಟಿಗಳಿಗೆ ಸಂಬಂಧಪಟ್ಟ ಕೆಲಸವನ್ನು ಒಟ್ಟುಗೂಡಿಸಿ ಪರಿಶೀಲನೆ ಮಾಡತಕ್ಕದ್ದೇ ಮುಖ್ಯ ಕರ್ತವ್ಯವಾಗಿರುವ ಸ್ಟ್ಯಾಂಡಿಂಗ್ ಕಮಿಟಿಯು, ಅನೇಕ ಮುಖ್ಯಮುಖ್ಯವಾದ ಸಂಗತಿಗಳನ್ನು ವಿಚಾರಮಾಡತಕ್ಕಬಗ್ಗೆ, ಪ್ರಸಕ್ತವರ್ಷದಲ್ಲಿ ಎರಡುಸಲ ಸೇರಿತ್ತು. ಮೂರು ಸೆಂಟ್ರಲ್ ಕಮಿಟಿಗಳೂ ಅನುರೂಪವಾದ ಸಬ್‌ಕಮಿಟಿಗಳನ್ನು ಏರ್ಪಡಿಸುವುದರಮೂಲಕ, ಡಿಸ್ಟ್ರಿಕ್ಟ್ ಕಮಿಟಿಗಳ ಕೆಲಸವನ್ನು ಮತ್ತಷ್ಟು ತೃಪ್ತಿಕರವಾಗಿ ನಡೆಯುವಂತೆ ಮಾಡಲಾಯಿತು.

ಕಾನ್‌ಫರೆನ್ಸಿನ ಕಾರ್ಯವು ತುಂಬಾ ಅಭಿವೃದ್ಧಿಗೆ ಬಂದಿರುತ್ತದೆ. ಈ ಅಭಿವೃದ್ಧಿ ವಿಷಯವನ್ನು ಮುಂದೆತಿಳಿಸಲಾಗುತ್ತೆ.

ವಿದ್ಯಾಭ್ಯಾಸದ ಇಲಾಖೆ.

ಸರ್ಕಾರೀ ಸ್ಕೂಲುಗಳ ಸಂಖ್ಯೆಯು 2,725 ರಿಂದ 3,001 ರವರೆಗೆ ಎಂದರೆ 286 ಹೆಚ್ಚಿ, ಅವುಗಳಲ್ಲಿ ಓದುವವರ ಸಂಖ್ಯೆಯು 1,31,539 ರಿಂದ 1,58,334 ರ ವರೆಗೆ ಎಂದರೆ 26,795 ಹೆಚ್ಚಿತು. ಇದೇ ರೀತಿಯಲ್ಲಿ ಕೂಲಿ ಮಠಗಳ ಸಂಖ್ಯೆಯು 1,843 ರಿಂದ 2,133 ರ ವರೆಗೂ, ಅವುಗಳಲ್ಲಿ ಓದುತ್ತಿರುವರ ಸಂಖ್ಯೆಯು 24,901 ರಿಂದ 29,396 ರ ವರೆಗೂ, ಹೆಚ್ಚಾಯಿತು. ಸ್ಕೂಲುಗಳ ಸಂಖ್ಯೆಯೂ, ಅವುಗಳಲ್ಲಿ ಓದುವವರ ಸಂಖ್ಯೆಯೂ ಹೆಚ್ಚುವುದಕ್ಕೆ, ಬಾಲಕರಿಗೂ ಬಾಲೆಯರಿಗೂ ಅನೇಕ ಪ್ರೈಮರಿ ಸ್ಕೂಲುಗಳನ್ನು ಹೊಸದಾಗಿ ಕಲ್ಪಿಸಿದ್ದೇ ಮುಖ್ಯ ಕಾರಣವಾಗಿದೆ. ಕೈಗಾರಿಕೆಯ ಸ್ಕೂಲುಗಳೂ ಇತರ ಕಲಾಶಾಲೆಗಳೂ 28 ರಿಂದ 35 ರ ವರೆಗೆ ಹೆಚ್ಚಿರುತ್ತವೆ. ಸರ್ಕಾರೀ ಸ್ಕೂಲುಗಳ ಮತ್ತು ಕೂಲಿಮಠಗಳ ಒಟ್ಟು ಸಂಖ್ಯೆಯು ಹೋದವರ್ಷ 4,568 ಇದ್ದದ್ದು ಈವರ್ಷ 5,134 ಕ್ಕೂ, ಅವುಗಳಲ್ಲಿ ಓದುತ್ತಿರುವವರ ಸಂಖ್ಯೆ ಹೋದ ವರ್ಷ 1,56, 440 ಇದ್ದದ್ದು ಈವರ್ಷ 1,87,730 ಕ್ಕೂ ಹೆಚ್ಚಿರುತ್ತದೆ. ಈರೀತಿಯಾಗಿ ಹೆಚ್ಚಿದ ಎರಡುವಿಧವಾದ ಸ್ಕೂಲುಗಳ ಒಟ್ಟು ಸಂಖ್ಯೆ 566 ಆಗಿಯೂ, ಅವುಗಳಲ್ಲಿ ಓದುವವರ ಸಂಖ್ಯೆ 31,290 ಆಗಿಯೂ ಇತ್ತು. ಒಟ್ಟು ವ್ಯಾಸಂಗಮಾಡುತ್ತಿರುವವರಲ್ಲಿ 1,54,319 ಮಂದಿ ಬಾಲಕರಾಗಿಯೂ, 33,411 ಮಂದಿ ಬಾಲೆಯರಾಗಿಯೂ ಇದ್ದರು. 1912–13ರಲ್ಲಿ ಒಟ್ಟು 1,29,009 ಮಂದಿ ಬಾಲಕರೂ, 27,431 ಮಂದಿ ಬಾಲೆಯರೂ ವ್ಯಾಸಂಗಮಾಡುತ್ತಿದ್ದರು. ಸ್ಕೂಲಿಗೆ ಹೋಗುವುದಕ್ಕೆ ಅರ್ಹವಾದ ವಯಸ್ಸುಳ್ಳ ಗಂಡಸರ ಪೈಕಿ, ಸ್ಕೂಲಿನಲ್ಲಿ ವ್ಯಾಸಂಗಮಾಡುತ್ತಿರುವವರ ಸಂಖ್ಯೆಯು ಶೇಕಡ 29.8 ರಿಂದ 35 ಕ್ಕೂ ಅದೇರೀತಿಯಲ್ಲಿರುವ ಒಟ್ಟು ಹೆಂಗಸರ ಪೈಕಿ ವ್ಯಾಸಂಗಮಾಡುತ್ತಿರುವ ಬಾಲೆಯರ ಸಂಖ್ಯೆಯು ಶೇಕಡ 6.4 ರಿಂದ 7.7 ಕ್ಕೂ ಹೆಚ್ಚಿರುತ್ತದೆ. ವ್ಯಾಸಂಗಾರ್ಹವಾದ ವಯಸ್ಸುಳ್ಳ ಒಟ್ಟು ಸ್ತ್ರೀಪುರುಷರ ಸಂಖ್ಯೆಯ ಪೈಕಿ ಒಟ್ಟು ವ್ಯಾಸಂಗಮಾಡುತ್ತಿರುವ ಬಾಲಿಕಾ ಬಾಲಕರ ಸಂಖ್ಯೆಯು ಕಳೆದ ವರ್ಷ ಶೇಕಡ 18.0 ಇದ್ದದ್ದು, ಈವರ್ಷ ಶೇಕಡ 21.4 ಕ್ಕೆ ಹೆಚ್ಚಿದಂತಾಗಿದೆ.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಕೆಮಿಸ್ಟ್ರಿ ಶಾಖೆಯ ಬಿ. ಎ. ಪ್ಯಾಸ್ ಕೋರ್ಸನ್ನೂ, ಫಿಜಿಕ್ಸ್ ಶಾಖೆಯ ಆನರ್ಸ್ ಕೋರ್ಸನ್ನೂ ಮದರಾಸ್ ಯೂನಿವರ್ಸಿಟಿಗೆ ಸಂಬಂಧಪಡಿಸಲಾಯಿತು. ಆದರೆ ಸುಶಿಕ್ಷಿತರಾದ ಯೂರೋಪ್ ದೇಶದ ಒಬ್ಬ ಅಸಿಸ್ಟೆಂಟ್ ಪ್ರೊಫೆಸರು ಇಲ್ಲದೆ ಇರುವದರಿಂದ, ಕೆಮಿಸ್ಟ್ರಿ ಶಾ

[redacted]

ಡೆ. ಗೌರ್ನಮೆಂಟ್ ಪ್ರೆಸ್ ಕಟ್ಟಡದ ಒಂದು ಭಾಗದಲ್ಲಿ, ಆಚೆ ಮಾಯಿಷಿ ತರೀಕ್ ಒಂದುವರ್ಷದವರೆಗೆ ಒಂದು ಪ್ರಿಂಟಿಂಗ್ ಕ್ಲಾಸನ್ನು ಇಡಲಾಗುತ್ತದೆ. ಅದರಲ್ಲಿ ಮೊಳೆಗಳನ್ನು ಜೋಡಿಸುವುದು, ಪ್ರೂಫುಗಳನ್ನು ಓದಿ ತಿದ್ದುವುದು, ಮುದ್ರಿಸುವುದು, ಈ ಕೆಲಸಗಳನ್ನು ಕಲಿಸಲಾಗುವುದು.

ಸ್ತ್ರೀವಿದ್ಯಾಭ್ಯಾಸವೂ ಕೂಡ ಅಭಿವೃದ್ಧಿಯಾಗುತ್ತಿದೆ. ಕಳೆದ ಸಾಲಿನಲ್ಲಿ ಇದ್ದ ಗರ್ಲ್ಸ್ ಸ್ಕೂಲುಗಳ ಸಂಖ್ಯೆಯು 360 ರಿಂದ ಪ್ರಕೃತ ವರ್ಷದಲ್ಲಿ 397 ರ ವರೆಗೆ ಹೆಚ್ಚಿರುತ್ತದೆ. ಮೈಸೂರಲ್ಲಿರುವ ಮಹಾರಾಣೀ ಕಾಲೇಜನ್ನೂ, ಡಿಸ್ಟ್ರಿಕ್ಟ್ ಕಸಬೆಗಳಲ್ಲಿರುವ ಗರ್ಲ್ಸ್ ಸ್ಕೂಲುಗಳನ್ನೂ, ಅವುಗಳ ಪ್ರಯೋಜನವು ಹೆಚ್ಚಬೇಕೆಂಬ ಉದ್ದೇಶದಿಂದ, ಪುನಃ ಪರಿಷ್ಕರಿಸಲು ಹುಕುಂ ಕೊಡಲಾಗಿರುತ್ತದೆ. ಸದರಿ ಕಾಲೇಜಿಗೆ ಸೇರಿದಂತೆ ಒಂದು ಹಾಸ್ಟೆಲನ್ನು ಏರ್ಪಡಿಸಲಾಗುವುದು ಮತ್ತು ಮುಂದೆ ಸರ್ಕಾರದ ಆಡಳಿತಕ್ಕೆ ತೆಗೆದುಕೊಳ್ಳುವ ಮೈಸೂರು ವಿಡೋಸ್ ಹೋಮನ್ನು ಅದಕ್ಕೆ ಸೇರಿಸಲಾಗುತ್ತದೆ. ಬೆಂಗಳೂರಿನಲ್ಲಿರುವ ಗೌರ್ನಮೆಂಟ್ ಗರ್ಲ್ಸ್ ಸ್ಕೂಲಿನಲ್ಲಿಯೂ, ತುಮಕೂರು ಯಂಪ್ರೆಸ್ ಗರ್ಲ್ಸ್ ಸ್ಕೂಲಿನಲ್ಲಿಯೂ ಕನ್ನಡ ಅಪ್ಪರ್ ಸೆಕೆಂಡರಿ ತರಗತಿಗಳನ್ನಿಟ್ಟು ಸದರಿ ಸ್ಕೂಲುಗಳನ್ನು ಹೈಸ್ಕೂಲ್ ಅಂತಸ್ತಿಗೆ ತರಲಾಗುವುದು. ಈ ಸ್ಕೂಲುಗಳಲ್ಲಿಯೂ ಬೆಂಗಳೂರು ಆರ್ಯಬಾಲಿಕಾ ಪಾಠಶಾಲೆಯಲ್ಲಿಯೂ, ಚಾಮರಾಜಪೇಟೆ ಗರ್

ಯ ವರ್ಷದ ವ್ಯಾಸಂಗವನ್ನು ಮಾಡುವವರೂ ಇದ್ದಾರೆ. ರೈತರ ಮತ್ತೂ ಜಮೀನ್ ಹಿಡುವಳಿದಾರರ ಪ್ರಯೋಜನಕ್ಕೋಸ್ಕರ ಜಮೀನು ಸಾಗುವಳಿ ಕೆಲಸಗಳನ್ನು ಒಂದು ವಾರದವರೆಗೆ ಬೋಧಿಸುವುದಕ್ಕೆ ಏರ್ಪಾಡು ಮಾಡಲ್ಪಟ್ಟಿತು. ಈ ಬೋಧೆಯನ್ನು ಕೇಳುವುದಕ್ಕಾಗಿ ಸುಮಾರು ನೂರುಮಂದಿ ಜನರು ಬಂದು ಇದ್ದರು. ಈ ಚಾಲ್ತೀ ವರ್ಷದಲ್ಲಿ ಇದೇ ರೀತಿಯಲ್ಲಿ ಸಣ್ಣಸಣ್ಣ ಉಪನ್ಯಾಸಗಳನ್ನು ಕ್ರಮವಾಗಿ ನಡೆಸಬೇಕೆಂಬ ಉದ್ದೇಶವಿದೆ. ಅವುಗಳನ್ನು ಕೇಳುವುದಕ್ಕೋಸ್ಕರ ಬರುವ ಜನರು ಇಳಿದುಕೊಳ್ಳುವುದಕ್ಕೆ ಕಟ್ಟಡಗಳನ್ನು ಕಟ್ಟಿಸುತ್ತಲಿದೆ.

ಕೈಗಾರಿಕೆ ಮತ್ತೂ ವ್ಯಾಪಾರ ಇಲಾಖೆ.

ಕೈಗಾರಿಕೆಯ ಕೆಲಸಗಳಿಗಾಗಿ ತಕಾವಿ ಸಾಲ ಕೊಡುವುದನ್ನು ಕ್ರಮಪಡಿಸುವುದಕ್ಕೆ ಸಂಬಂಧಪಟ್ಟ ನಿಬಂಧನೆಗಳನ್ನು, ಹೋದವರ್ಷದ ಉಪನ್ಯಾಸದಲ್ಲಿ ಸೂಚಿಸಿರುವಂತೆ ವಿಸ್ತರಿಸಿ, ತಕಾವಿ ಸಾಲಗಳಿಗೆ ಬದಲಾಗಿ ಬಾಡಿಗೆ ಕ್ರಯದಮೇರೆ ಯಂತ್ರಗಳನ್ನು ಬಿಕರಿ ಮಾಡುವುದಕ್ಕೆ ಅವಕಾಶ ಕೊಟ್ಟಿರುತ್ತದೆ. ಈ ವರ್ಷದಲ್ಲಿ ಸುಮಾರು ಒಂದು ಲಕ್ಷ ರೂಪಾಯಿಗಳ ವರೆಗೆ ತಕಾವಿ ಸಾಲಗಳನ್ನೂ, ಇತರವಿಧವಾದ ಸಾಲಗಳನ್ನೂ ಕೊಟ್ಟಿರುತ್ತದೆ.

ಸಾಲಾಖೈರಿಗೆ, 1,44,000 ರೂ. ಖರ್ಚಿನಲ್ಲಿ 26 ಯಂತ್ರ
ನ್ನೂ 13 ಯಂತ್ರಗಳ

ಣಿಯಲ್ಲಿಯೂ ಸ್ಥಾಪಿಸಿದ
ಸ ಮಾಡುತ್ತಿರುವುದರಿಂ
ರದಲ್ಲಿಯೂ ಅದರ ಎರ
ಬೇರಾವರಿಗಾಗಿ ಅನೇಕ
ರೀಕ್ಷೆಗೆ ಇದೆ.
ಯಂತ್ರಗಳ ಮ
ಗಳ ಉಪಯೋಗ,
ಮೊದಲಾದ ವಿಷಯಗಳ
ಇಲಾಖೆಯವರು ಮಾ
ಗಳನ್ನು ಹೋದವರ್ಷ
ರ ಮಾಡಿದರು. ರೈಲ್ವೆ
ಪಕ್ಕಗಳು ಇದುವರೆಗೆ
ಗಿಲ್ಲದಿರುವುದರಿಂದ, ರೈ
ಕ್ಕ ಹೊರಗಣಿಂದ ಇಲ್ಲಿ
ತನ್ನೀಲ್ಯಾರಾಗಿ ಮೂ
ಡಬೇಕೆಂದು, ಮದ್ರಾ
ರುವರೊಡನೆ ಏರ್ಪಾಡು

ಂಘಗಳು.

ಸಹಾಯಕ ಸಂಘಗಳ ಏ
ತು. ಈ ಏರ್ಪಾಡು ಇ
ಅಭಿವೃದ್ಧಿಗೆ ಬಾರದೆ
ವದು ತೃಪ್ತಿಕರವಾಗಿದೆ.
ಸಾಲ ಕೊಡುವ ಸಂಘ
ಉಪಯೋಗಕರವಾಗಿ
ಪರಸ್ಪರ ಸಹಾಯಕ ಸಂ
ವೆ; ಎಂದರೆ ಪರಸ್ಪರ ಸ
ಗೆ ನೀರು ಸರಬರಾಯಿ
ರ್ಥಗಳನ್ನು ಕೊಂಡುಕೊ
ಬಿಕರಿ ಮಾಡುವ ಕೆಲಸ
ಬೇರೆ ಸಂಘಗಳು ಹು

ಯು 343 ರಿಂದ 530
ರಿಂದ 40,479 ಕ್ಕೂ ಕೆ
ಮೂಲಧನವು 12,89,338
ಗೂ, ಒಟ್ಟು ಲೇವಾದೇ
28,523 ರೂಪಾಯಿಗೂ
2,30,224 ರೂಪಾಯಿ
ಯಿಂದ 56,240 ರೂ
ನ ಸೆಂಟ್ರಲ್ ಬ್ಯಾಂಕು
ತು, 57 ಸಂಘಗಳಿಗೆ
ರುತ್ತದೆ. ಗ್ರಾಮಾಂತರ
ಲಧನಕ್ಕೆ ಇದೇ ಮು
ರು ಯೂನಿಯನುಗಳು
ಬಂಡವಾಳವನ್ನು ಒದ
ಸೇರಿದ ಶಾಖಾ ಸಂಘಗೆ
ವನ್ನು ಒದಗಿಸಿಕೊಡಬೇ
ದ ಮೂಲಧನವನ್ನೂ
ಹೇಳಿದ ಸಂಘಗಳಿಂದಾ
ಸ್ವಂತವಾಗಿ ಶ್ರೀಮ
ವಶದಲ್ಲಿ ಕೊಟ್ಟ ದ್ರವ್ಯ
ವ ಆವಶ್ಯಕತೆಯೂ ಇ

ನೂರನೆಯ ವರ್ಷದ ಸಾಂ
ತಿಂಗಳಲ್ಲಿ ಮೈಸೂರು
ಜದ ಆರಂಭೋತ್ಸವವ

ನ್ನು ಶ್ರೀಮದ್ಯುವರಾಜರವರು ನೆರವೇರಿಸಿದರು. ಇದಕ್ಕೆ ದಿವಾನ್ ಬಹಾದುರ್ ರಾಜಸಭಾ ಭೂಷಣ ಮಿ. ಕೆ. ಪಿ. ಪುಟ್ಟಣ್ಣಶೆಟ್ಟಿರವರು ಅಧ್ಯಕ್ಷರಾಗಿದ್ದರು. ಇದಕ್ಕಿಂತ ಸಣ್ಣಸಣ್ಣವಾದರೂ, ಉಪಯೋಗವಿಷಯದಲ್ಲಿ ತತ್ಸಮಾನಗಳಾದ ಕಾನ್‌ಫರೆನ್ಸುಗಳು ಇನ್ನೂ ಹತ್ತು ಸ್ಥಲಗಳಲ್ಲಿ ನಡೆದುವು. ಇವುಗಳು ಸೇರುವುದಕ್ಕೂ ಸಾರ್ಥಕವಾಗಿ ಕೆಲಸವನ್ನು ಮಾಡುವುದಕ್ಕೂ ಬಹಳವಾಗಿ ಆಯಾ ಪ್ರದೇಶದ ಜನಗಳೇ ಪಟ್ಟ ಪ್ರಯತ್ನಗಳೂ ಏರ್ಪಾಡುಗಳೇ ಕಾರಣಗಳಾಗಿರುತ್ತವೆ.

[೬ ನೆಯ ಪುಟವನ್ನು ನೋಡಿರಿ.]

ಬಜೆಟ್ಟಿನಲ್ಲಿ ದಾಖಲ್ಮಾಡಿದ್ದ ಲೆಖ್ಖಕ್ಕಿಂತಲೂ ಜಾಸ್ತಿಯಾದ ಹುಟ್ಟುವಳಿ	30.13 ಲಕ್ಷ
ಸಾಮಾನ್ಯ ಬಾಬುಗಳ ಖರ್ಚಿನಲ್ಲಿ ಉಳಿದಿರುವದು	11.22 ,,
ಮೊದಲಿನ ಬಜೆಟ್ಟಿನಲ್ಲಿ ಅಂದಾಜು ಮಾಡಿದ್ದ ಸರ್‌ಪ್ಲಸ್ ಮೊಬಲಗು	8.72 ,,
ಜುಮ್ಲಾ	50.07 ಲಕ್ಷ

ಮುಖ್ಯಮುಖ್ಯವಾದ ಭಾರೀ ಕಾಂಗಾರಿಗಳಿಗಾಗಿಯೂ ಎಂದರೆ, ಕಾವೇರೀ ಜಲಾಶಯದ ಕಾಂಗಾರಿಯೂ, ಕಾವೇರೀ ವಿದ್ಯುಚ್ಛಕ್ತಿಯ ವಿಸ್ತಾರವನ್ನು ಹೆಚ್ಚಿಸುವುದೂ, ಹೊಸದಾಗಿ ರೈಲನ್ನು ಹಾಕುವದೂ, ಬೆಂಗಳೂರಿನಲ್ಲಿ ಟ್ರಾಂವೆಯನ್ನು ಹಾಕುವದೂ, ಇವುಗಳಿಗಾಗಿ ಸ್ಪೆಷಲ್ ಗ್ರ್ಯಾಂಟ್ ಯಾನೆ ಒಟ್ಟು 65.10 ಲಕ್ಷ ರೂಪಾಯಿಯನ್ನು ಕೊಟ್ಟಿರುತ್ತದೆ. ಈ ಗ್ರ್ಯಾಂಟು ಮೊಬಲಗಿನ ಪೈಕಿ 37.68 ಲಕ್ಷ ರೂಪಾಯಿಗಳವರೆಗೆ ಉಪಯೋಗಿಸಿಕೊಳ್ಳಲು ಆಯಾ ಇಲಾಖೆಗಳಿಗೆ ಸಾಧ್ಯವಾಯಿತು.

ಕಾವೇರೀ ಜಲಾಶಯದ ವಿಸ್ತಾರದ ಸಂದರ್ಭದಲ್ಲಿ ಕಂಟ್ರಾಕ್ಟರ ಮೊಬಲಗನ್ನು ಪಾವತಿ ಮಾಡದೆ ನಿಲ್ಲಿಸಿಕೊಂಡಿರುವದು, ಏರ್ಪಾಡುಗಳನ್ನು ಪೂರಯಿಸುವದರಲ್ಲಿಯೂ ಮತ್ತು ಉದ್ದೇಶಿಸಲ್ಪಟ್ಟ ರೈಲ್ವೆ, ಟ್ರಾಂವೆ ಮತ್ತು ವಿದ್ಯುಚ್ಛಕ್ತಿ ಕಾಂಗಾರಿಗಳಿಗೆ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುವದರಲ್ಲಿಯೂ ಯತ್ನವಿಲ್ಲದೆ ವಿಳಂಬವಾಗಿರುವದೂ, ಇವುಗಳೇ ಈ ಬಾಬುಗಳಿಗಾಗಿ ಒದಗಿಸಿದ್ದ ಹಣ ಪೂರಾ ಖರ್ಚಾಗದೆ ಇರುವದಕ್ಕೆ ಮುಖ್ಯ ಕಾರಣಗಳಾಗಿವೆ.

1914-15 ನೆಯ ಇಸವಿಯ ಬಜೆಟ್ ಅಂದಾಜುಗಳು.

ಮೇಲೆ ಹೇಳಿದ ಸಾಮಾನ್ಯವಾಗಿ ನಡೆಯುವ ಪದ್ಧತಿಯ ಮೇರೆಗೆ ತಯಾರ್ಮಾಡಿದ ಚಾಲತಿ ಸರ್ಕಾರೀ ಸಾಲಿನ (1914-15 ನೆಯ ವರ್ಷದ) ಬಜೆಟ್ಟು ಅಂದಾಜುಗಳನ್ನು ಈಗ ವಿಚಾರಕ್ಕೆ ತೆಗೆದುಕೊಂಡಲ್ಲಿ ಒಟ್ಟು 285.09 ಲಕ್ಷ ರೂಪಾಯಿ ಉತ್ಪತ್ತಿಯೂ, 358.63 ಲಕ್ಷ ರೂಪಾಯಿಯು ಒಟ್ಟು ಖರ್ಚೂ, ಆಗುವದೆಂದು ಅಂದಾಜು ಮಾಡಿರುವದಿ. ಇವುಗಳನ್ನು ಸಾಮಾನ್ಯ ಬಾಬು ವಿಶೇಷಬಾಬು ಎಂದು ವಿಂಗಡಿಸಿದರೆ ಖುಲಾಸೆಯಾದ ಲೆಕ್ಕವು ಇದರ ಕೆಳಕಂಡಂತೆ ಇರುತ್ತದೆ:—

ಹುಟ್ಟುವಳಿ	ಲಕ್ಷ ರೂಪಾಯಿಗಳಲ್ಲಿ	
ಒಟ್ಟು ಹುಟ್ಟುವಳಿ	285.09	
ಪೈಕಿ [illegible] ಮತ್ತು [illegible] ಸ್ಪೇಷಲ್ ಸರ್‌ಪ್ಲಸ್ ರೆವಿನ್ಯೂ ಖಾತೆ	12.00	
ನಿವ್ವಳ ಸಾಮಾನ್ಯ ಬರೋಬಾಬು	273.09	
ಖರ್ಚು	ಲಕ್ಷ ರೂಪಾಯಿಗಳು.	
ಒಟ್ಟು ಖರ್ಚು	358.63	
ಭಾರೀ ಕಾಂಗಾರಿಗಳಿಗಾಗಿ ಕೊಟ್ಟಿರುವ ಸ್ಪೆಷಲ್ ಗ್ರ್ಯಾಂಟುಗಳ ವಜಾ.		
1. ಕಾವೇರೀ ಜಲಾಶಯಕ್ಕಾಗಿ	37.50 ಲಕ್ಷ	
2. ಕಾವೇರೀ ವಿದ್ಯುಚ್ಛಕ್ತಿಯ 4 ನೆಯ ಸ್ಥಾಪನೆಗಾಗಿ	5.67 ,,	
3. ಎಲೆಕ್ಟ್ರಿಕ್ ಟ್ರಾಂವೆಗಳಿಗಾಗಿ	6.00 ,,	
4. ಸ್ಟೇಟ್ ರೈಲ್ವೆಗಳನ್ನು ಹಾಕುವುದಕ್ಕಾಗಿ	36.00 ,,	
5. ಸರ್ಕಾರೀ ಮುಂಗಡ ಪಡೆದು ಹಾಕುವ ರೈಲ್ವೆಗಳಿಗೆ ಮೂಲಧನ	10.00	95.17
ಸಾಮಾನ್ಯ ಬಾಬುಗಳಿಗಾಗುವ ನಿವ್ವಳ ಖರ್ಚು		263.46
ಸಾಮಾನ್ಯ ಲೆಕ್ಕದಲ್ಲಿ ಸರ್‌ಪ್ಲಸ್		9.63
ಜುಮ್ಲಾ		273.09

1914 ನೆಯ ಜುಲೈ 1 ನೆಯ ತಾರೀಖಿನಲ್ಲಿ ಇದ್ದ ಈ ಸಂಸ್ಥಾನದ ಲೇಣೆ ದೇಣೆ ಬಾಬುಗಳನ್ನು ತೋರಿಸುವ ಪತ್ರವನ್ನು ಈ ಉಪನ್ಯಾಸಕ್ಕೆ ಸಂಪತ್ರವಾಗಿ ಕೊಟ್ಟಿದೆ. ಅದನ್ನು ನೋಡಿದರೆ ಮೂಲಧನವನ್ನು ಖರ್ಚು ನಡೆಸುವ ಕಾಂಗಾರಿಗಳಿಗಾಗಿ ಭಾರವಾಗಿ ಹಣ ಖರ್ಚಾಗಿದ್ದರೂ ಧನ ಸ್ಥಿತಿಯು ಪೂರ್ಣವಾಗಿ ತೃಪ್ತಿಕರವಾಗಿರುತ್ತದೆಂದು ಭಾವಿಸಬಹುದಾಗಿದೆ.

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನಿನ ಸರ್‌ಪ್ಲಸ್ ಹುಟ್ಟುವಳಿ.

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನಿನ ಸರ್‌ಪ್ಲಸ್ ಹುಟ್ಟುವಳಿಯ ವಿಷಯದಲ್ಲಿ ಮೈಸೂರು ಸರ್ಕಾರದವರಿಗೆ ಇದ್ದ ಹಕ್ಕನ್ನು ಇಂಡಿಯಾ ಸರ್ಕಾರದವರು ಉದಾರಬುದ್ಧಿಯಿಂದ ಅಂಗೀಕರಿಸುತ್ತಾರೆಂಬ ಅಂಶವನ್ನು ಹೋದವರ್ಷ ತಿಳಿಸಿದ್ದೆನು. ಬಹಳ ಜಾಗರೂಕತೆಯಿಂದ ಪರಿಶೋಧನೆ ಮಾಡಿ 1911-12 ನೆ ಇಸವಿಯ ಆಖೈರ ವರೆಗೆ ಈ ಸಂಸ್ಥಾನಕ್ಕೆ 30 ಲಕ್ಷ ರೂಪಾಯಿಗಿಂತ ಸ್ವಲ್ಪ ಜಾಸ್ತಿಯಾಗಿ ಹಣ ಸಲ್ಲಬೇಕಾಗಿರುತ್ತದೆಂಬುದಾಗಿ ಗೊತ್ತುಮಾಡಲ್ಪಟ್ಟಿತು. ಆ ಪೈಕಿ ಭಾರಿ ಕಂತು ಎಂದರೆ 30 ಲಕ್ಷ ರೂಪಾಯಿ ಈ ವರ್ಷದಲ್ಲಿ ಜಮಾ ಬಂದಿರುತ್ತದೆ.

ಅಬ್ಕಾರಿ.

1912-13 ನೆಯ ವರ್ಷದಲ್ಲಿ ಅಬ್ಕಾರಿ ಹುಟ್ಟುವಳಿಯಾದಷ್ಟು ಹಿಂದೆ ಯಾವ ಸಂವತ್ಸರದಲ್ಲಿಯೂ ಆಗಲಿಲ್ಲವೆಂದು ಹೋದವರ್ಷ ತಿಳಿಸಲಾಯಿತು. ಆದರೆ 1913-14 ನೆಯ ವರ್ಷದ ಉತ್ಪತ್ತಿಯು ಇನ್ನೂ ಜಾಸ್ತಿಯಾಗಿದೆ. ಈ ಉತ್ಪತ್ತಿಯು 55,28,281 ರೂಪಾಯಿಗಳು, ಎಂದರೆ ಹಿಂದಿನ ವರ್ಷದ ಹುಟ್ಟುವಳಿಗಿಂತ 4,33,971 ರೂಪಾಯಿಗಳಷ್ಟು ಜಾಸ್ತಿಯಾಗಿದೆ. ಇದರಲ್ಲಿ ಸುಮಾರು ಅರ್ಧಪಾಲು ದುಕಾಣ ಗುತ್ತಿಗೆ ಬಾಬಿನಿಂದಲೂ, ಉಳಿದ ಮೊಬಲಗು ಮದ್ಯವು ಹೆಚ್ಚಾಗಿ ಖರ್ಚಾದುದರಿಂದಲೂ ಉತ್ಪತ್ತಿಯಾಯಿತು. ಈ ಹೆಚ್ಚು ಹುಟ್ಟುವಳಿಯು ಅನ್ಯದೇಶದ ಮದ್ಯದ ವಿನಾ ಮಿಕ್ಕ ಎಲ್ಲಾ ಬಾಬುಗಳಿಂದಲೂ ಆಯಿತು. ಸುಲಭಕ್ರಯಕ್ಕೆ ದೊರೆಯುವ ಹಲವು ಬಗೆಯಾದ ಅನ್ಯದೇಶದ ಮದ್ಯಗಳ ಸ್ಥಾನವು ಕ್ರಮೇಣ ಕಡಿಮೆಯಾಗಿ ಬೆಂಗಳೂರು ಸೆಂಟ್ರಲ್ ಡಿಸ್ಟಿಲರಿಯಲ್ಲಿ ತಯಾರಾಗುವ ಮದ್ಯಗಳ ಉಪಯೋಗವೇ ಹೆಚ್ಚಾಗುತ್ತಿದೆ.

ಫಾರೆಸ್ಟು.

ಪ್ರಸಕ್ತ ಸಂವತ್ಸರದ ಫಾರೆಸ್ಟು ಬಾಬಿನ ಉತ್ಪತ್ತಿಯು ಹಿಂದೆ ಯಾವಾಗಲೂ ಆಗಿರಲಿಲ್ಲ. ಈ ಬಾಬಿನ ಉತ್ಪತ್ತಿಯು 32,71,1?0 ರೂಪಾಯಿಗಳಷ್ಟು ಆಯಿತು. ಇದರ ಪೈಕಿ ಸುಮಾರು ಮೂರರಲ್ಲಿ ಎರಡುಪಾಲು, 2,158 ಟನ್ನುಗಳಷ್ಟು ಗಂಧದಮರದ ವಿಕ್ರಯದಿಂದ ಬಂದಿತು. ಜಂಗಲ್ ರಕ್ಷಣೆಗಾಗಿಯೂ ಇಲಾಖೆಯ ಸಿಬ್ಬಂದಿಗಾಗಿಯೂ 7,45,470 ರೂಪಾಯಿ ಖರ್ಚಾಯಿತು.

ಫಾರೆಸ್ಟುಗಳಲ್ಲಿ ಸಂಪಾದನೆ ಉತ್ಪತ್ತಿಗೆ ಆಕರವಾದ ಪದಾರ್ಥಗಳು ಎಷ್ಟರಮಟ್ಟಿಗೆ ಸಿಕ್ಕುತ್ತವೆ ಎಂಬುದನ್ನು ತಿಳಿಯುವದಕ್ಕಾಗಿಯೂ, ಅವುಗಳನ್ನು ಕೈಗಾರಿಕೆ ಕೆಲಸಗಳಿಗೆ ಉಪಯೋಗಿಸುವುದು ಸಾಧ್ಯವೇ ಎಂಬ ಅಂಶವನ್ನು ಪರೀಕ್ಷಿಸಿ ನೋಡುವದಕ್ಕಾಗಿಯೂ ಇಬ್ಬರು ಫಾರೆಸ್ಟು ಆಫೀಸರುಗಳನ್ನು ಸ್ಪೆಷಲ್ ಡ್ಯೂಟಿಯ ಮೇಲೆ ನೇಮಿಸಿರುತ್ತದೆ. ಸದರಿ ಆಫೀಸರುಗಳು ಪ್ರಸಕ್ತ ಸಂವತ್ಸರದ ಮುಗಿಯುವದರೊಳಗೆ ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಭಾರೀ ಫಾರೆಸ್ಟುಗಳನ್ನೂ, [illegible] ಫಾರೆಸ್ಟುಗಳನ್ನೂ ಸಂಪೂರ್ಣವಾಗಿ ಪರಿಶೋಧಿಸಿದರು. [illegible] ಸಂಸ್ಥಾನದಲ್ಲಿ [illegible] ಅವುಗಳನ್ನು ತಯಾರುಮಾಡುವದಕ್ಕೆ ಸಾಧ್ಯವೇ ಎಂಬ ಅಂಶವನ್ನು [illegible] ಸರ್ಕಾರದವರು [illegible] ಉಪಕಾರಿಗಳಾಗಿದ್ದರು. ಈ ಆಫೀಸರುಗಳು ತಮ್ಮ [illegible] ಅಭಿಪ್ರಾಯಗಳನ್ನು [illegible] ಈಗ ಸರ್ಕಾರದವರ ಪರ್ಯಾಲೋಚನೆಯಲ್ಲಿರುತ್ತವೆ.

ಕಳೆದ ನವೆಂಬರು ತಿಂಗಳಲ್ಲಿ ಘನತೆವೆತ್ತ ಶ್ರೀ ವೈಸರಾಯಿಯವರು ಈ ಸಂಸ್ಥಾನಕ್ಕೆ ದಯಮಾಡಿಸಿದ ಸಂದರ್ಭದಲ್ಲಿ ಏರ್ಪಾಡುಮಾಡಿದ ಖೆಡ್ಡಾ ಕೆಲಸಗಳು ತೃಪ್ತಿಕರವಾಗಿ ನಡೆದುವು. ಹಿಡಿದ ಆನೆಗಳ ಪೈಕಿ ಅನೇಕವು ನಷ್ಟವಾದರೂ, ಈ ಬಾಬಿನಿಂದ ಸಂಸ್ಥಾನಕ್ಕೆ [illegible] ರೂಪಾಯಿಗಳಷ್ಟು ನಿವ್ವಳ ಆದಾಯವಾಯಿತು.

ಸ್ಟ್ಯಾಂಪ್ಸ್.

[illegible]

[illegible] ಇಲಾಖೆ.

[illegible] ಉಪನ್ಯಾಸದಲ್ಲಿ [illegible] ಒಂದು [illegible] 1914 ನೆಯ ಜೂನ್ 30 ನೆಯ ತಾರೀಖಿನಲ್ಲಿ 862 ಮಂದಿ [illegible] 3,161 ಮಂದಿ ನೌಕರರೂ ಇದ್ದರು. [illegible] ಸಂಸ್ಥಾನಕ್ಕೆ ತೆಗೆದುಕೊಂಡು, [illegible] ಒಂದು ವರ್ಷದವರೆಗೆ ನೇಮಿಸಲಾಗಿದೆ.

[illegible] ಇಲಾಖೆ.

ಸಂಸ್ಥಾನದ [illegible] ಇಲಾಖೆಗೆ ಸೇರಿದ [illegible] ಈ ವರ್ಷದಲ್ಲಿಯೂ [illegible] ಆರೋಗ್ಯ [illegible].

[illegible] ಮುಂದೆ ಆಗಲು [illegible] ಅಭಿವೃದ್ಧಿಗೆ ತರಬೇಕೆಂಬ ಆಲೋಚನೆ ಇರುತ್ತದೆಂದು ಕಳೆದ ವರ್ಷದ ಉಪನ್ಯಾಸದಲ್ಲಿ ತಿಳಿಸಲಾಯಿತು. [illegible] 20,000 ರೂಪಾಯಿಗಳ ಜಾಸ್ತಿ ಖರ್ಚು ತಗಲುವ ಒಂದು ಏರ್ಪಾಡನ್ನು, ಈಚೆಗೆ ಮಂಜೂರ್ಮಾಡಲಾಯಿತು. ಅದನ್ನು ಈಗ ಜಾರಿಗೆ ತರುತ್ತಿದೆ.

ಮೈಸೂರು ನಗರದ ಜನಾರೋಗ್ಯದ ಏರ್ಪಾಡುಗಳು.

ಈ ಸಂಸ್ಥಾನದಲ್ಲಿ ದೀಪ ಹಾಕುವುದಕ್ಕೆ ಉಪಯೋಗಿಸುವ [illegible] ದೋಷಗಳುಂಟೆಂದು [illegible] ಪದಾರ್ಥಗಳನ್ನು ಚೆನ್ನಾಗಿ ವಿಚಾರಮಾಡುವುದಕ್ಕಾಗಿ ಒಂದು ಕಮಿಟಿಯನ್ನು 1913 ನೆಯ ಜುಲೈ ತಿಂಗಳಲ್ಲಿ ನೇಮಿಸಲಾಯಿತೆಂದು ಹೋದವರ್ಷದ ಉಪನ್ಯಾಸದಲ್ಲಿ ತಿಳಿಸಿದೆ. ಕಮಿಟಿಯವರು ಈ ವಿಷಯವನ್ನು ಬಹಳ ಜಾಗರೂಕತೆಯಿಂದ ವಿಚಾರಮಾಡಿದನಂತರ ಮೈಸೂರು ಸೀಮೆಯ ಹಾಲಿನಲ್ಲಿ ಕೆಡಕು ಉಂಟಾಗತಕ್ಕ ದೋಷಗಳೇನೂ ಇಲ್ಲವೆಂತಲೂ, ಶಕ್ತಿಯ ವಿಷಯದಲ್ಲಿ ಇಂಡಿಯಾ ದೇಶದ ಇತರ ಪ್ರದೇಶಗಳಲ್ಲಿ ತಯಾರಾದ ಹಾಲಿಗೆ ನಮ್ಮ ಹಾಲು ನಿಕೃಷ್ಟವಾದದ್ದಲ್ಲವೆಂತಲೂ ನಿರ್ಣಯಿಸಿದರು. ಆದರೆ ಸ್ವಲ್ಪ ಹಾಲಿನಲ್ಲಿ ಬೇರೆ ಸಣ್ಣ ಸೂಕ್ಷ್ಮ ವಸ್ತುಗಳು ಇರುತ್ತವೆಯಾಗಿ, ಅವುಗಳಿಂದ ಯಾವ ಕೆಡಕೂ ಇಲ್ಲದಿದ್ದರೂ, ಅವುಗಳನ್ನೂ ಕೂಡ ತೆಗೆದು ಹಾಕತಕ್ಕದ್ದು ಅವಶ್ಯಕವಾಗಿರುವದೆಂದು ಕಮಿಟಿಯವರು ಅಭಿಪ್ರಾಯಪಟ್ಟು, ಆ ವಿಷಯದಲ್ಲಿ ಕೆಲವು ಸಲಹೆಗಳನ್ನೂ ಕೊಟ್ಟಿರುತ್ತಾರೆ. ಈ ಸಲಹೆಗಳನ್ನು ಸರ್ಕಾರದವರು ಒಪ್ಪಿ ಇರುತ್ತಾರೆ.

ರಾಬರ್ಟ್‌ಸನ್ ಪೇಟೆಯಲ್ಲಿ ಹೆಂಗಸರ ಆಸ್ಪತ್ರೆಯನ್ನು [illegible] ಗ್ರಹಿಕೆಯಲ್ಲಿ ಜನರ ಉಪಯೋಗಕ್ಕೆ ತರಲಾಗುವುದು. ಈ ಆಸ್ಪತ್ರೆಯ ಸಿಬ್ಬಂದಿಯವರಿಗೆ ವಾಸದ ಮನೆಗಳನ್ನು ಇನ್ನೂ ಕಟ್ಟಿಸಿರುವುದಿಲ್ಲ. ಆದರೆ ಸದ್ಯಕ್ಕೆ ಇವರುಗಳಿಗೆ ಹಂಗಾಮಿಯಾಗಿ ವಾಸದ ಮನೆಗಳನ್ನು ಕೊಡಿಸಿ ಆಸ್ಪತ್ರೆಯ ಕೆಲಸವನ್ನು ನಡೆಸಲಾಗುವುದು.

ಮಲೆನಾಡು ಪ್ರದೇಶದ ಆರೋಗ್ಯಾಭಿವೃದ್ಧಿಗಾಗಿಯೂ ಸಂಪದಭಿವೃದ್ಧಿಗಾಗಿಯೂ ಈ ಪ್ರಸಕ್ತ ವರ್ಷದಲ್ಲಿ ಕೈಗೊಂಡ ಮಲೆನಾಡು ಅಭಿವೃದ್ಧಿಯ ವಿಸ್ತಾರದ ವಿಷಯವನ್ನು ಈ ಉಪನ್ಯಾಸದ ಮುಕ್ತಾಯದ ಕಡೆಯಲ್ಲಿ ತಿಳಿಸಲಾಗುವುದು.

ವಿದ್ಯಾಭಿವೃದ್ಧಿ ಮತ್ತು ಭಾಗ್ಯಾಭಿವೃದ್ಧಿ.
ಸಂಪದಭ್ಯುದಯಸಮಾಜ.

ಕಳೆದ ಸರ್ಕಾರೀ ಸಾಲಿನಲ್ಲಿ ಸಂಪದಭ್ಯುದಯಸಮಾಜದ ಬೇರೆ ಬೇರೆ ಕಮ್ಮಿಟಿಗಳನ್ನೂ, ಸದರಿ ಕಮ್ಮಿಟಿಗಳಿಗೆ ಸಂಬಂಧಪಟ್ಟ ಶಾಖೆಗಳನ್ನೂ ಏರ್ಪಡಿಸಲಾಯಿತು. ಕಾನ್ಫರೆನ್ಸಿನ ಕೆಲಸವನ್ನು ಕ್ರಮಪಡಿಸುವದಕ್ಕೂ, ಅದನ್ನು ಕಾರ್ಯತಃ ನೆರವೇರಿಸಲಾಗುವಂತೆ ಮಾಡುವುದಕ್ಕೂ ವಿಶೇಷವಾದ ಪ್ರಯತ್ನಗಳನ್ನು ನಡೆಸಲಾಯಿತು. ವರ್ಷದ ಆರಂಭದಲ್ಲಿ ಕಾನ್ಫರೆನ್ಸ ಮತ್ತು ಅದಕ್ಕೆ ಸೇರಿದ ಕಮಿಟಿಗಳ ಏರ್ಪಾಟುಗಳಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಿ ಅವುಗಳ ಕಾರ್ಯಗಳನ್ನು ಸ್ಪಷ್ಟವಾಗಿ ಗೊತ್ತುಮಾಡಲಾಯಿತು. ಕಳೆದ ಅಕ್ಟೋಬರನಲ್ಲಿ ನಾನು ತಿಳಿಯಪಡಿಸಿದಂತೆ, ಈ ಸಭೆಯಿಂದ 8 ಜನ ಮೆಂಬರುಗಳನ್ನೂ, ಡಿಸ್ಟ್ರಿಕ್ಟು ಎಲೆಕ್ಟೋರೇಟುಗಳಿಂದ (ಜನಾನುಮತಿಯ ಸ್ಥಳಗಳಿಂದ) 8 ಜನ ಮೆಂಬರುಗಳನ್ನೂ ಚುನಾಯಿಸತಕ್ಕಬಗ್ಗೆ 16 ಸ್ಥಾನಗಳಿಗೆ ಅವಕಾಶ ಕೊಡಲಾಯಿತು. ಈರೀತಿ ಚುನಾಯಿತರಾದ ಪ್ರತಿನಿಧಿಗಳು ಕಳೆದ ಜೂನ್ ನಾಯದಲ್ಲಿ ನಡೆದ ಕಾನ್ಫರೆನ್ಸಿನ ಮೀಟಿಂಗಿನ ಕೆಲಸದಲ್ಲಿ ಭಾಗಿಗಳಾಗಿದ್ದರು. ಎಜುಕೇಷನ್ ಕಮ್ಮಿಟಿಗೆ ಉದ್ಯೋಗಪ್ರಯುಕ್ತ ಸೆಕ್ರಟರಿಯವರಾಗಿಯೂ ಇದ್ದ ವಿದ್ಯಾಭ್ಯಾಸದ ಇಲಾಖೆಯ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲರವರು ಮಾಡಬೇಕಾದ ಕೆಲಸಗಳು ವಿಶೇಷವಾಗಿದ್ದುದರಿಂದ, ಎಜ್ಯುಕೇಷನ್ ಕಮ್ಮಿಟಿಯ ಕೆಲಸವನ್ನು ನೋಡಿಕೊಳ್ಳುವದಕ್ಕಾಗಿ ಪೂರಾಕಾಲ ಕೆಲಸಮಾಡತಕ್ಕ ಒಬ್ಬ ಆಫೀಸರನ್ನು ನೇಮಿಸಲಾಯಿತು. ಮೂರು ಸೆಂಟ್ರಲ್ ಕಮಿಟಿಗಳಿಗೆ ಸಂಬಂಧಪಟ್ಟ ಕೆಲಸವನ್ನು ಒಟ್ಟುಗೂಡಿಸಿ ಪರಿಶೀಲನೆ ಮಾಡತಕ್ಕದ್ದೇ ಮುಖ್ಯ ಕರ್ತವ್ಯವಾಗಿರುವ ಸ್ಟ್ಯಾಂಡಿಂಗ್ ಕಮಿಟಿಯು, ಅನೇಕ ಮುಖ್ಯಮುಖ್ಯವಾದ ಸಂಗತಿಗಳನ್ನು ವಿಚಾರಮಾಡತಕ್ಕಬಗ್ಗೆ, ಪ್ರಸಕ್ತವರ್ಷದಲ್ಲಿ ಎರಡುಸಲ ಸೇರಿತ್ತು. ಮೂರು ಸೆಂಟ್ರಲ್ ಕಮಿಟಿಗಳೂ ಅನುರೂಪವಾದ ಸಬ್‌ಕಮಿಟಿಗಳನ್ನು ಏರ್ಪಡಿಸುವದರಮೂಲಕ, ಡಿಸ್ಟ್ರಿಕ್ಟು ಕಮಿಟಿಗಳ ಕೆಲಸವನ್ನು ಮತ್ತಷ್ಟು ತೃಪ್ತಿಕರವಾಗಿ ನಡೆಯುವಂತೆ ಮಾಡಲಾಯಿತು.

ಕಾನ್ಫರೆನ್ಸಿನ ಕಾರ್ಯವು ತುಂಬಾ ಅಭಿವೃದ್ಧಿಗೆ ಬಂದಿರುತ್ತದೆ. ಈ ಅಭಿವೃದ್ಧಿ ವಿಷಯವನ್ನು ಮುಂದೆ ತಿಳಿಸಲಾಗುತ್ತೆ.

ವಿದ್ಯಾಭ್ಯಾಸದ ಇಲಾಖೆ.

ಸರ್ಕಾರೀ ಸ್ಕೂಲುಗಳ ಸಂಖ್ಯೆಯು 2,725 ರಿಂದ 3,001 ರವರೆಗೆ ಎಂದರೆ 286 ಹೆಚ್ಚು, ಅವುಗಳಲ್ಲಿ ಓದುವವರ ಸಂಖ್ಯೆಯು 1,31,539 ರಿಂದ 1,58,334 ರ ವರೆಗೆ ಎಂದರೆ 26,795 ಹೆಚ್ಚಿತು. ಇದೇ ರೀತಿಯಲ್ಲಿ ಕೂಲಿ ಮಠಗಳ ಸಂಖ್ಯೆಯು 1,843 ರಿಂದ 2,133 ರ ವರೆಗೂ, ಅವುಗಳಲ್ಲಿ ಓದುತ್ತಿರುವರ ಸಂಖ್ಯೆಯು 24,901 ರಿಂದ 29,396 ರ ವರೆಗೂ, ಹೆಚ್ಚಾಯಿತು. ಸ್ಕೂಲುಗಳ ಸಂಖ್ಯೆಯೂ, ಅವುಗಳಲ್ಲಿ ಓದುವವರ ಸಂಖ್ಯೆಯೂ ಹೆಚ್ಚುವುದಕ್ಕೆ, ಬಾಲಕರಿಗೂ ಬಾಲೆಯರಿಗೂ ಅನೇಕ ಪ್ರೈಮರಿ ಸ್ಕೂಲುಗಳನ್ನು ಹೊಸದಾಗಿ ಕಲ್ಪಿಸಿದ್ದೇ ಮುಖ್ಯ ಕಾರಣವಾಗಿದೆ. ಕೈಗಾರಿಕೆಯ ಸ್ಕೂಲುಗಳೂ ಇತರ ಕಲಾಶಾಲೆಗಳೂ 28 ರಿಂದ 35 ರ ವರೆಗೆ ಹೆಚ್ಚಿರುತ್ತವೆ. ಸರ್ಕಾರೀ ಸ್ಕೂಲುಗಳ ಮತ್ತು ಕೂಲಿಮಠಗಳ ಒಟ್ಟು ಸಂಖ್ಯೆಯು ಹೋದವರ್ಷ 4,568 ಇದ್ದದ್ದು ಈವರ್ಷ 5,134 ಕ್ಕೂ, ಅವುಗಳಲ್ಲಿ ಓದುತ್ತಿರುವವರ ಸಂಖ್ಯೆ ಹೋದ ವರ್ಷ 1,56,440 ಇದ್ದದ್ದು ಈವರ್ಷ 1,87,730 ಕ್ಕೂ ಹೆಚ್ಚಿರುತ್ತವೆ. ಈರೀತಿಯಾಗಿ ಹೆಚ್ಚಿದ ಎರಡುವಿಧವಾದ ಸ್ಕೂಲುಗಳ ಒಟ್ಟು ಸಂಖ್ಯೆ 566 ಆಗಿಯೂ, ಅವುಗಳಲ್ಲಿ ಓದುವವರ ಸಂಖ್ಯೆ 31,290 ಆಗಿಯೂ ಇತ್ತು. ಒಟ್ಟು ವ್ಯಾಸಂಗಮಾಡುತ್ತಿರುವವರಲ್ಲಿ 1,54,319 ಮಂದಿ ಬಾಲಕರಾಗಿಯೂ, 33,411 ಮಂದಿ ಬಾಲೆಯರಾಗಿಯೂ ಇದ್ದರು. 1912-13 ರಲ್ಲಿ ಒಟ್ಟು 1,29,009 ಮಂದಿ ಬಾಲಕರೂ, 27,131 ಮಂದಿ ಬಾಲೆಯರೂ ವ್ಯಾಸಂಗಮಾಡುತ್ತಿದ್ದರು. ಸ್ಕೂಲಿಗೆ ಹೋಗುವುದಕ್ಕೆ ಅರ್ಹವಾದ ವಯಸ್ಸುಳ್ಳ ಗಂಡಸರ ಪೈಕಿ, ಸ್ಕೂಲಿನಲ್ಲಿ ವ್ಯಾಸಂಗಮಾಡುತ್ತಿರುವವರ ಸಂಖ್ಯೆಯು ಶೇಕಡ 29.8 ರಿಂದ 35 ಕ್ಕೂ ಅದೇರೀತಿಯಲ್ಲಿರುವ ಒಟ್ಟು ಹೆಂಗಸರ ಪೈಕಿ ವ್ಯಾಸಂಗಮಾಡುತ್ತಿರುವ ಬಾಲೆಯರ ಸಂಖ್ಯೆಯು ಶೇಕಡ 6.4 ರಿಂದ 7.7 ಕ್ಕೂ ಹೆಚ್ಚಿರುತ್ತದೆ. ವ್ಯಾಸಂಗಾರ್ಹವಾದ ವಯಸ್ಸುಳ್ಳ ಒಟ್ಟು ಪ್ರಜೆಗಳ ಸಂಖ್ಯೆಯ ಪೈಕಿ ಒಟ್ಟು ವ್ಯಾಸಂಗಮಾಡುತ್ತಿರುವ ಬಾಲಿಕಾ ಬಾಲಕರ ಸಂಖ್ಯೆಯು ಕಳೆದ ವರ್ಷ ಶೇಕಡ 18.0 ಇದ್ದದ್ದು, ಈವರ್ಷ ಶೇಕಡ 21.4 ಕ್ಕೆ ಹೆಚ್ಚಿದಂತಾಗಿದೆ.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಕೆಮಿಸ್ಟ್ರಿ ಶಾಖೆಯು ಬಿ. ಎ. ಪ್ಯಾಸ್ ಕೋರ್ಸನ್ನೂ, ಫಿಜಿಕ್ಸ್ ಶಾಖೆಯು ಆನರ್ಸ್ ಕೋರ್ಸನ್ನೂ ಮದರಾಸ್ ಯೂನಿವರ್ಸಿಟಿಗೆ ಸಂಬಂಧಪಡಿಸಲಾಯಿತು. ಆದರೆ ಸುಶಿಕ್ಷಿತರಾದ ಯೂರೋಪ್ ದೇಶದ ಅಸಿಸ್ಟೆಂಟ್ ಪ್ರೊಫೆಸರು ಇಲ್ಲದೆ ಇರುವದರಿಂದ, ಕೆಮಿಸ್ಟ್ರಿ ಶಾ

ಗಳಲ್ಲಿರುವ ಗರ್ಲ್ಸ್ ಸ್ಕೂಲುಗಳನ್ನೂ, ಅವುಗಳ ಪ್ರಯೋಜನವು ಹೆಚ್ಚಬೇಕೆಂಬ ಉದ್ದೇಶದಿಂದ, [illegible] ಕೊಡಲಾಗಿರುತ್ತದೆ. ಸದರಿ ಕಾಲೇಜಿಗೆ ಸೇರಿದಂತೆ ಒಂದು ಹಾಸ್ಟೆಲನ್ನು ಏರ್ಪಡಿಸಲಾಗುವುದು ಮತ್ತು ಮುಂದೆ ಸರ್ಕಾರದ ಆಡಳಿತಕ್ಕೆ ತೆಗೆದುಕೊಳ್ಳುವ ಮೈಸೂರು ವಿಡೋಸ್ ಹೋಮನ್ನು ಅದಕ್ಕೆ ಸೇರಿಸಲಾಗುತ್ತದೆ. ಬೆಂಗಳೂರಿನಲ್ಲಿರುವ ಗೌರ್ನಮೆಂಟ್ ಗರ್ಲ್ಸ್ ಸ್ಕೂಲಿನಲ್ಲಿಯೂ, ತುಮಕೂರು ವೆಸ್ಲಿಯನ್ ಗರ್ಲ್ಸ್ ಸ್ಕೂಲಿನಲ್ಲಿಯೂ ಕನ್ನಡ ಅಪ್ಪರ ಸೆಕೆಂಡರಿ ತರಗತಿಗಳನ್ನಿಟ್ಟು ಸದರಿ ಸ್ಕೂಲುಗಳನ್ನು ಮೈಸ್ಕೂಲ್ ಅಂತಸ್ತಿಗೆ ತರಲಾಗುವುದು. ಈ ಸ್ಕೂಲುಗಳಲ್ಲಿಯೂ ಬೆಂಗಳೂರು [illegible] ದ ಬಾಲಿಕಾ ಪಾಠಶಾಲೆಯಲ್ಲಿಯೂ, ಚಾಮರಾಜಪೇಟೆ ಗರ್

ಕೈಗಾರಿಕೆ ಮತ್ತು ವ್ಯಾಪಾರ ಇಲಾಖೆ.

ಕೈಗಾರಿಕೆಯ ಕೆಲಸಗಳಿಗಾಗಿ ತಕಾವಿ ಸಾಲ ಕೊಡುವುದನ್ನು ಕ್ರಮಪಡಿಸುವುದಕ್ಕೆ ಸಂಬಂಧಪಟ್ಟ ನಿಬಂಧನೆಗಳನ್ನು, ಹೋದವರ್ಷದ ಉಪನ್ಯಾಸದಲ್ಲಿ ಸೂಚಿಸಿರುವಂತೆ ವಿಸ್ತರಿಸಿ, ತಕಾವಿ ಸಾಲಗಳಿಗೆ ಬದಲಾಗಿ ಬಾಡಿಗೆ ಕ್ರಯದಮೇರೆ ಯಂತ್ರಗಳನ್ನು ವಿಕ್ರಯ ಮಾಡುವುದಕ್ಕೆ ಅವಕಾಶ ಕೊಟ್ಟಿರುತ್ತದೆ. ಈ ವರ್ಷದಲ್ಲಿ ಸುಮಾರು ಒಂದು ಲಕ್ಷ ರೂಪಾಯಿಗಳ ವರೆಗೆ ತಕಾವಿ ಸಾಲಗಳನ್ನೂ, ಇತರವಿಧವಾದ ಸಾಲಗಳನ್ನೂ ಕೊಟ್ಟಿರುತ್ತದೆ.

ಸಾರಾಂಶವಾಗಿ, 1,11,000 ರೂ. ಖರ್ಚಿನಲ್ಲಿ 28 ಯಂತ್ರ [illegible] ನ್ನೂ 13 ಯಂತ್ರಗಳ [illegible]

ಈ ಸಂಚಿಕೆಯ ಪುರವಣಿ.

ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,

ಪೋಸ್ಟು: ಬನವಾಸಿ. (ಉತ್ತರ ಕಾನಡಾ.)

ಗುಣಕಾರಿಯಾಗಿರುವ ಔಷಧಗಳು.

ಕರ್ಣಶೂಲ ಹಾರಿಬಿಂದು.

ಈ ಮಿಶ್ರಣದ ಕೆಲವು ಬಿಂದುಗಳನ್ನು ಕಿವಿಯಲ್ಲಿ ಹಾಕುವದರಿಂದ ಕಿವಿ [illegible]ಳತ ಇವು ನಿಂತು ಕಿವಿ ಸೋರುವದು ನಿಲ್ಲುವ ಬಗ್ಗೆ ಕೆಲದಿವಸ [illegible]ಸಿದ್ದಲ್ಲಿ ಖಾತ್ರಿಯಾಗಿ ಗುಣವಾಗುವದು.

ಕಿಮ್ಮತ್ತು ಬಾಟ್ಲಿಗೆ 1—0—0.

ನಂಪುಸಕತ್ವಾರಿ ತೈಲವು.

[illegible]ಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ [illegible]ವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ [illegible]ಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ಬಲಪ [illegible]ಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದ[illegible]ಗಿಸುವಾಗ್ಯೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು.

ಕಿಮ್ಮತ್ತು ಬಾಟ್ಲಿ 1ಕ್ಕೆ 2—12—0.

ಪಿತ್ತರೋಗಕ್ಕೆ ಔಷಧ.

[illegible] ವಿಕಾರ ಉಂಟಾಯಿತೆಂದರೆ ತಲೆತಿರುಗುವದು, ಕಣ್ಣುಮುಂದೆ ಕತ್ತ[illegible]ದು, ಪಚನಶಕ್ತಿ ಕಡಿಮೆಯಾಗುವದು, ತಿಂದಪದಾರ್ಥಗಳು ರುಚಿ[illegible] ನಾಲಿಗೆಕೆಟ್ಟು ಬಾಯಿ ಕಹಿಯಾಗುವದು, ಬೆಳಿಗ್ಗೆ ಎದ್ದಕೂಡಲೇ [illegible]ಲ್ಲಿ ಕೆಟ್ಟ ಸಂಕಟವಾಗುವದು. ಇವೆಲ್ಲ ಉಂಟಾಗಿ ನಿಸ್ಸಾಮರ್ಥ್ಯ[illegible] ಹೊಂದುವರು ಇಂಥವರು ನಮ್ಮ ಪಿತ್ತದ ಔಷಧವನ್ನು 21ದಿನ [illegible] ಮೇಲೆ ಹೇಳಿದ ಎಲ್ಲಾರೋಗಗಳು ನಿಸ್ಸಂದೇಹವಾಗಿ ಗುಣವಾಗಿ [illegible] ಕಾಂತಿಯೂ ಉಳ್ಳವರಾಗುವರು.

21 ದಿವಸದ ಔಷಧಕ್ಕೆ ಕಿಮ್ಮತ್ತು 4—0—0.

ಇಂದ್ರಿಯ ಸ್ತಂಭನ ಗುಳಿಗೆ.

[illegible]ಕ್ಕ ಪ್ರಾಯದಲ್ಲಿ ಅತ್ಯಾಚಾರದಿಂದ ಹಸ್ತ ಘರ್ಷಣೆಮಾಡಿ ಇಂದ್ರಿಯ [illegible]ಮಾಡಿದ್ದರಿಂದ ಉಂಟಾದ ನಪುಂಸಕತ್ವ, ಕ್ಷೀಣತೆ ಮತ್ತು ಧಾತು ತೆಳ್ಳ[illegible] ಕೃಶವಾಗಿಯು ಶಿವಿಲಾಸಕ್ಕೆ ಆಶೆ ಇಲ್ಲದವರಾಗಿಯೂ ಆಗುವದು. [illegible] ಈ ಗುಳಿಗೆಗಳನ್ನು ಸೇವಿಸುವದರಿಂದ ಸಶಕ್ತರಾಗಿಯೂ, ಅಂಗ[illegible]ಷ್ಟವರಾಗಿಯೂ ಮದನವಿಲಾಸಕ್ಕೆ ಸಂಪೂರ್ಣ ಶಕ್ತಿಯುಳ್ಳವರಾಗಿ[illegible]ಗುವರು. ಒಬ್ಬರಿಗೆ 64 ಗುಳಿಗೆಗಳು ಬೇಕಾಗುವವು. ಇದನ್ನು [illegible]ಸುವಾಗ್ಯೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಬೇಕು.

[illegible] 32 ಗುಳಿಗೆಗಳಿಗೆ 2—8—0.

ಕೇಶವರ್ಧಿನಿ ಸುಗಂಧ ತೈಲವು.

[illegible] ಸುವಾಸನೆಯುಳ್ಳ ಈ ತೈಲವನ್ನು ಹೆಂಗಸರು ತಲೆಗೆ ಇಡುವದ[illegible]

೩೨ ಧಾತುಪೌಷ್ಟಿಕ ಲೇಹವು

ಇದರಿಂದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಹಳೇಜ್ವರ, ಅಶಕ್ತತೆ, ಸ್ವಪ್ನಾವಸ್ಥೆ, ಧಾತುಪತನ, ಎದೆನೋವು, ಕಟಿಶೂಲೆ, ವಾತರೋಗ, ರಕ್ತೋದ್ರೇಕ, ಕಫ, ಕೆಮ್ಮು, ದಮ್ಮು ಮೇಹಸಂಬಂಧಿ ಧಾತುಹೋಗೋಣ, ತಲೆಶೂಲೆ, ಹೊಟ್ಟೆಶೂಲೆ ಮುಂತಾದವು ಅತಿತ್ವರೆಯಿಂದ ಗುಣವಾಗಿ ಶರೀರಕ್ಕೆ ಕಾಂತಿಯೂ, ಶಕ್ತಿಯೂ ಉಂಟಾಗುತ್ತದೆ. ಒಬ್ಬನಿಗೆ 40 ತೊಲೆಯಿಂದ 80 ತೊಲೆ ವರೆಗೆ ಬೇಕಾಗುವದು.

ಕಿಮ್ಮತ್ತು 40 ತೊಲೆಗೆ ರೂ. 3-8-0; 80 ತೊಲೆಗೆ ರೂ. 6-0-0.

ಈ ತೈಲವನ್ನು ಸೇವಿಸುವಾಗ್ಯೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

೩೩ ಬಾಲಾಮೃತವು

ಇದು ಅಶಕ್ತರಾಗಿಯೂ, ರೋಗಿಗಳಾಗಿಯೂ, ಮಂದಬುದ್ಧಿಯವರಾಗಿಯೂ, ಕೈಕಾಲುಗಳು ಕೃಶವಾಗಿ ಹೊಟ್ಟೆಯು ಬಹಳ ದೊಡ್ಡದಾಗಿ ಜ್ವರ, ಕೆಮ್ಮು, ದಮ್ಮು ಮುಂತಾದ ಹುಡುಗರಿಗೆ ಆಗುವ ಎಲ್ಲಾ ತರದ ರೋಗಗಳನ್ನು ನಾಶಮಾಡುವದು. ಇದರ ಸೇವನೆಯಿಂದ ಚನ್ನಾಗಿ ಹಸಿವಾಗಿ ಅನ್ನ ಪಚನವಾಗುವದು, ಜೀರ್ಣಶಕ್ತಿಯು ಚನ್ನಾಗಿ ಆಗಿ ಮೈಯಲ್ಲಿರುವ ರಕ್ತ ಮಾಂಸ ವೃದ್ಧಿಯಾಗುವದು, ಶರೀರಕ್ಕೆ ಆಗುವ ಅನೇಕ ವಿಕಾರಗಳು ನಾಶವಾಗುವವು, ಎಲುಬುಗಳು ಚನ್ನಾಗಿ ಬೆಳೆಯುವವು, ಎದೆಯು ಅಗಲವಾಗಿ ನರಗಳು ಬಲವಾಗುವವು, ಹುಡುಗರು ಯಾವಾಗಲೂ ಸಶಕ್ತರಾಗುವರು, ಹುಡುಗರ ಬುದ್ಧಿ ಮತ್ತು ಕಾಂತಿಹೆಚ್ಚುವದು, ಅತಿಸಾರ ಹೊಟ್ಟೆ ಉಬ್ಬರಿಸುವದು, ಕೈಕಾಲು ಸಣ್ಣದಾಗಿ ಮೈ ಯಾವಾಗಲೂ ಬಸಿಯಾಗಿರುವದು, ಅಸ್ತಿಜ್ವರ, ಕೆಮ್ಮು, ಮೊದಲಾದ ರೋಗಗಳು ಗುಣವಾಗುವದು.

ಕಿಮ್ಮತ್ತು ಬಾಟ್ಲಿ 1ಕ್ಕೆ ರೂ. 1-0-0.

೩೪ ಬಾಲರಕ್ಷಕ ಸಂಜೀವನಿ ಗುಳಿಗೆ

ಈ ಗುಳಿಗೆಯು ಬಾಲಾಮೃತದಂತೇನೆ ಗುಣಕಾರಿಯಾಗಿದೆ. ಈ ಗುಳಿಗೆಯನ್ನು ಬಾಲಾಮೃತವನ್ನು ಕೂಡಿಸಿ ಸೇವಿಸಲಿಕ್ಕೆ ಕೊಟ್ಟರೆ ಹುಡುಗರು ಬಲವಾಗಿ ಬೆಳೆಯುವರು.

ಚೀಲಿ 20 ಗುಳಿಗೆ ರೂ. 1—0—0.

೩೫ ಜುಲಾಬಿನ ಗುಳಿಗೆಗಳು.

ಇದರ ಸೇವನೆಯಿಂದ ಕಫ, ಪಿತ್ತ, ಮತ್ತು ಹೊಟ್ಟೆಯೊಳಗಿನ ಕಲ್ಮಷ ಹೋಗಿ, ಜುಲಾಬು ಆಗುವಾಗ್ಯೆ ಏನೂ ಪ್ರಯಾಸವಾಗುವದಿಲ್ಲ; ಸೇವಿಸಲಿಕ್ಕೆ ಅಸಹ್ಯಕರವಲ್ಲ.

ಕಿಮ್ಮತ್ತು 16 ಗುಳಿಗೆಗಳಿಗೆ 1—0—0.

೩೬ ನಾರುಹುಣ್ಣಿನ ಮೇಲೆ ಔಷಧ.

ಈ ವ್ಯಾಧಿಯಿಂದ ಬೈಲುಸೀಮೆ ಅತ್ತಕಡೆಯಲ್ಲಿ ಬಹಳ ಜನರು ನರಳುತ್ತಿರುವದನ್ನು ನೋಡಿ ಆ ಬಗ್ಗೆ ಬೇಗನೆ ಗುಣ ಉಂಟಾಗುವಂತೆ ರಾಮಬಾಣ ಔಷಧವನ್ನು ತಯಾರಿಸಿದೆ. ಹೊಟ್ಟೆಗೆ ತಕ್ಕೊಳ್ಳಲಿಕ್ಕೆ ಚೂರ್ಣವನ್ನೂ ಮೇಲೆ ಉಪಯೋಗಿಸಲಿಕ್ಕೆ ಮುಲಾಮನ್ನೂ ತಯಾರಿಸಿರುತ್ತದೆ.

ದೆ. ಗವರ್ನಮೆಂಟ್ ಪ್ರೆಸ್ ಕಟ್ಟಡದ ಒಂದು ಭಾಗದಲ್ಲಿ, ಅದು ಮಾಯಿಸಿ ತರೀಕ ಬಂದುವರ್ಷದವರೆಗೆ ಒಂದು ಪ್ರಿಂಟಿಂಗ್ ಕ್ಲಾಸನ್ನು ಇಡಲಾಗುತ್ತದೆ. ಅದರಲ್ಲಿ ಮೊಳೆಗಳನ್ನು ಜೋಡಿಸುವುದು, ಪ್ರೂಫುಗಳನ್ನು ಓದಿ ತಿದ್ದುವುದು, ಮುದ್ರಿಸುವುದು, ಈ ಕೆಲಸಗಳನ್ನು ಕಲಿಸಲಾಗುವುದು.

ಸ್ತ್ರೀವಿದ್ಯಾಭ್ಯಾಸವೂ ಕೂಡ ಅಭಿವೃದ್ಧಿಯಾಗುತ್ತಿದೆ. ಕಳೆದ ಸಾಲಿನಲ್ಲಿ ಇದ್ದ ಗರ್ಲ್ಸ್ ಸ್ಕೂಲುಗಳ ಸಂಖ್ಯೆಯು 360 ರಿಂದ ಪ್ರಕೃತ ವರ್ಷದಲ್ಲಿ 397 ರ ವರೆಗೆ ಹೆಚ್ಚಿರುತ್ತದೆ. ಮೈಸೂರಲ್ಲಿರುವ ಮಹಾರಾಣೀ ಕಾಲೇಜನ್ನೂ, ಡಿಸ್ಟ್ರಿಕ್ಟು ಕಸಬೆ

ಯ ವರ್ಷದ ವ್ಯಾಸಂಗವನ್ನು ಮಾಡುವವರೂ ಇದ್ದಾರೆ. ರೈತರ ಮತ್ತು ಜಮೀನು ಹಿಡುವಳಿದಾರರ ಪ್ರಯೋಜನಕ್ಕೋಸ್ಕರ ಜಮೀನು ಸಾಗುವಳಿ ಕೆಲಸಗಳನ್ನು ಒಂದು ವಾರದವರೆಗೆ ಬೋಧಿಸುವುದಕ್ಕೆ ಏರ್ಪಾಡು ಮಾಡಲ್ಪಟ್ಟಿತು. ಈ ಬೋಧೆಯನ್ನು ಕೇಳುವುದಕ್ಕಾಗಿ ಸುಮಾರು ನೂರುಮಂದಿ ಜನರು ಬಂದು ಇದ್ದರು. ಈ ಚಾಲ್ತೀ ವರ್ಷದಲ್ಲಿ ಇದೇ ರೀತಿಯಲ್ಲಿ ಸಣ್ಣಸಣ್ಣ ಉಪನ್ಯಾಸಗಳನ್ನು ಕ್ರಮವಾಗಿ ನಡೆಸಬೇಕೆಂಬ ಉದ್ದೇಶವಿದೆ. ಅವುಗಳನ್ನು ಕೇಳುವುದಕ್ಕೋಸ್ಕರ ಬರುವ ಜನರು ಇಳಿದುಕೊಳ್ಳುವುದಕ್ಕೆ ಕಟ್ಟಡಗಳನ್ನು ಕಟ್ಟಿಸುತ್ತಲಿದೆ.

[illegible] ಆರಂಭೋತ್ಸವವನ್ನು ಶ್ರೀಮನ್ಮಹಾರಾಜರವರು ನೆರವೇರಿಸಿದರು. ಇದಕ್ಕೆ ದಿವಾನ್ ಬಹಾದುರ್ ರಾಜಸಭಾ ಭೂಷಣ ಮಿ. ಕೆ. ಪಿ. ಪುಟ್ಟಣ್ಣಶೆಟ್ಟರವರು ಅಧ್ಯಕ್ಷರಾಗಿದ್ದರು. ಇದಕ್ಕಿಂತ ಸಣ್ಣಸಣ್ಣವಾದರೂ, ಉಪಯೋಗಿಸುವದರಲ್ಲಿ ತತ್ಸಮಾನಗಳಾದ ಎಗ್ಜಿಭಿಷನುಗಳು ಇನ್ನೂ ಹತ್ತು ಸ್ಥಳಗಳಲ್ಲಿ ನಡೆದುವು. ಇವುಗಳು ಸೇರುವುದಕ್ಕೂ ಸಾರ್ಥಕವಾಗಿ ಕೆಲಸವನ್ನು ಮಾಡುವುದಕ್ಕೂ ಬಹಳವಾಗಿ ಆಯಾ ಪ್ರದೇಶದ ಜನಗಳೇ ಪಟ್ಟ ಪ್ರಯತ್ನಗಳೂ ಏರ್ಪಾಡುಗಳೇ ಕಾರಣಗಳಾಗಿರುತ್ತವೆ.

[೬ ನೆಯ ಪುಟವನ್ನು ನೋಡಿ.]

ಬಜೆಟ್ಟಿನಲ್ಲಿ ದಾಖಲ್ಮಾಡಿದ್ದ ಲೆಖ್ಖಕ್ಕಿಂತಲೂ ಜಾಸ್ತಿಯಾದ ಹುಟ್ಟುವಳಿ	30.13 ಲಕ್ಷ
ಸಾಮಾನ್ಯ ಬಾಬುಗಳ ಖರ್ಚಿನಲ್ಲಿ ಉಳಿದಿರುವದು	11.22 ,,
ಮೊದಲಿನ ಬಜೆಟ್ಟಿನಲ್ಲಿ ಅಂದಾಜು ಮಾಡಿದ್ದ ಸರ್‌ಪ್ಲಸ್ ಬಾಬಲಗು	8.72 ,,
ಜುಮ್ಲಾ	50.07 ಲಕ್ಷ

ಮುಖ್ಯಮುಖ್ಯವಾದ ಭಾರೀ ಕಾಂಗಾರಿಗಳಿಗಾಗಿಯೂ ಎಂದರೆ, ಕಾವೇರೀ ಜಲಾಶಯದ ಕಾಂಗಾರಿಯೂ, ಕಾವೇರೀ ವಿದ್ಯುಚ್ಛಕ್ತಿಯ ಏರ್ಪಾಟನ್ನು ಹೆಚ್ಚಿಸುವದೂ, ಹೊಸದಾಗಿ ರೈಲನ್ನು ಹಾಕುವದೂ, ಬೆಂಗಳೂರಿನಲ್ಲಿ ಟ್ರಾಂವೆಯನ್ನು ಹಾಕುವದೂ, ಇವುಗಳಿಗಾಗಿ ಸ್ಪೆಷಲ್ ಗ್ರ್ಯಾಂಟ್ ಯಾನೆ ಒಟ್ಟು 65.10 ಲಕ್ಷ ರೂಪಾಯನ್ನು ಕೊಟ್ಟಿರುತ್ತದೆ. ಈ ಗ್ರ್ಯಾಂಟು ಬಾಬಲಗಿನ ಪೈಕಿ 37.68 ಲಕ್ಷ ರೂಪಾಯಿಗಳವರೆಗೆ ಉಪಯೋಗಿಸಿಕೊಳ್ಳಲು ಆಯಾ ಇಲಾಖೆಗಳಿಗೆ ಸಾಧ್ಯವಾಯಿತು.

ಕಾವೇರೀ ಜಲಾಶಯದ ಏರ್ಪಾಟಿನ ಸಂದರ್ಭದಲ್ಲಿ ಕಂಪೆನ್ಸೇಶನ್ ಬಾಬಲಗನ್ನು ಖಾಸಗಿ ಮಾಡದೆ ನಿಲ್ಲಿಸಿಕೊಂಡಿರುವದು, ಏರ್ಪಾಡುಗಳನ್ನು ಪೂರೈಸುವದರಲ್ಲಿಯೂ ಮತ್ತು ಉದ್ದೇಶಿಸಲ್ಪಟ್ಟ ರೈಲ್ವೆ, ಟ್ರಾಂವೆ ಮತ್ತು ವಿದ್ಯುಚ್ಛಕ್ತಿ ಕಾಂಗಾರಿಗಳಿಗೆ ಬೇಕಾದ ಸಾಮಾನುಗಳನ್ನು ತರಿಸಿಕೊಳ್ಳುವದರಲ್ಲಿಯೂ ಯತ್ನವಿಲ್ಲದೆ ವಿಳಂಬವಾಗಿರುವುದು. ಇವುಗಳೇ ಆ ಬಾಬುಗಳಿಗಾಗಿ ಒದಗಿಸಿದ್ದ ಹಣ ಪೂರಾ ಖರ್ಚಾಗದೆ ಇರುವುದಕ್ಕೆ ಮುಖ್ಯ ಕಾರಣಗಳಾಗಿವೆ.

1914-15 ನೆಯ ಇಸವಿಯ ಬಜೆಟ್ ಅಂದಾಜುಗಳು

ಮಳೆ ಬೆಳೆಗಳು ಸಾಮಾನ್ಯವಾಗಿ ನಡೆಯುವುವೆಂಬ ನಿರೀಕ್ಷಣೆಯಮೇಲೆ ತಯಾರ್ಮಾಡಿದ ಚಾಲ್ತಿ ಸರ್ಕಾರೀ ಸಾಲಿನ (1914-15 ನೆಯ ವರ್ಷದ) ಬಜೆಟ್ಟು ಅಂದಾಜುಗಳನ್ನು ಈಗ ವಿಚಾರಕ್ಕೆ ತೆಗೆದುಕೊಂಡಲ್ಲಿ ಒಟ್ಟು 285.09 ಲಕ್ಷ ರೂಪಾಯಿ ಉತ್ಪತ್ತಿಯೂ, 358.63 ಲಕ್ಷ ರೂಪಾಯಿಯ ಒಟ್ಟು ಖರ್ಚೂ, ಆಗುವದೆಂದು ಅಂದಾಜು ಮಾಡಿರುವದೆ. ಇವುಗಳನ್ನು ಸಾಮಾನ್ಯಬಾಬು ವಿಶೇಷಬಾಬು ಎಂದು ವಿಂಗಡಿಸಿದರೆ ಜಮಾಖರ್ಚುಗಳ ಲೆಕ್ಕವು ಇದರ ಕೆಳಕಂಡಂತೆ ಇರುತ್ತದೆ:—

ಹುಟ್ಟುವಳಿ	ಲಕ್ಷ ರೂಪಾಯಿಗಳಲ್ಲಿ
ಒಟ್ಟು ಹುಟ್ಟುವಳಿ	285.09
ಪೈಕಿ ವಜಾ-ಸಿವಿಲ್ ಮತ್ತು ಮಿಲಿಟರಿ ಸ್ಟೇಷನಿನ ಸರ್‌ಪ್ಲಸ್ ರೆವಿನ್ಯೂ ಬಾಕಿ	12.00
ನಿವ್ವಳ ಸಾಮಾನ್ಯ ಜಮಾಬಾಬು	273.09

ಖರ್ಚು	ಲಕ್ಷ ರೂಪಾಯಿಗಳು.
ಒಟ್ಟು ಖರ್ಚು	358.63

ಭಾರೀ ಕಾಂಗಾರಿಗಳಿಗಾಗಿ ಕೊಟ್ಟಿರುವ ಸ್ಪೆಷಲ್ ಗ್ರ್ಯಾಂಟುಗಳ ಪಟ್ಟಿ.

1. ಕಾವೇರೀ ಜಲಾಶಯಕ್ಕಾಗಿ	37.50 ಲಕ್ಷ	
2. ಕಾವೇರೀ ವಿದ್ಯುಚ್ಛಕ್ತಿಯ 1 ನೆಯ ಸ್ಥಾಪನೆಗಾಗಿ	6.67 ,,	
3. ಎಲೆಕ್ಟ್ರಿಕ್ ಟ್ರ್ಯಾಮ್‌ವೇಗಳಿಗಾಗಿ	6.00 ,,	
4. ಸ್ಟೇಟ್ ರೈಲ್ವೆಗಳನ್ನು ಹಾಕುವುದಕ್ಕಾಗಿ	35.00 ,,	
5. ಸರ್ಕಾರೀ ಸಹಾಯ ಪಡೆದು ಹಾಕುವ ರೈಲ್ವೆಗಳಿಗೆ ಮೂಲಧನ	10.00	95.17
ಸಾಮಾನ್ಯ ಬಾಬುಗಳಿಗಾಗುವ ನಿವ್ವಳ ಖರ್ಚು		263.46
ಸಾಮಾನ್ಯ ಲೆಕ್ಕದಲ್ಲಿ ಸರ್‌ಪ್ಲಸ್		9.63
ಜುಮ್ಲಾ		273.09

1914 ನೆಯ ಜುಲೈ 1 ನೆಯ ತಾರೀಖಿನಲ್ಲಿ ಇದ್ದ ಈ ಸಂಸ್ಥಾನದ ಬೇರೆ ಬೇರೆ ಬಾಬುಗಳನ್ನು ತೋರಿಸುವ ಪಟ್ಟಿಯನ್ನು ಈ ಉಪನ್ಯಾಸಕ್ಕೆ ಪುರವಣಿಯಾಗಿ ಕೊಟ್ಟಿದೆ. ಇದನ್ನು ನೋಡಿದರೆ ಮೂಲದ್ರವ್ಯವನ್ನು ಖರ್ಚು ನಡೆಸುವ ಕಾಂಗಾರಿಗಳಿಗಾಗಿ ಭಾರವಾಗಿ ಹಣ ಖರ್ಚಾಗಿದ್ದರೂ ಹಣಕಾಸಿನ ಸ್ಥಿತಿಯು ಪೂರ್ತಿಯಾಗಿ ತೃಪ್ತಿಕರವಾಗಿರುತ್ತದೆಂದು ಭಾವಿಸಬಹುದಾಗಿದೆ.

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನಿನ ಸರ್‌ಪ್ಲಸ್ ಹುಟ್ಟುವಳಿ.

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನಿನ ಸರ್‌ಪ್ಲಸ್ ಹುಟ್ಟುವಳಿಯ ವಿಷಯದಲ್ಲಿ ಮೈಸೂರು ಸರ್ಕಾರದವರಿಗೆ ಇದ್ದ ಹಕ್ಕನ್ನು ಇಂಡಿಯಾ ಸರ್ಕಾರದವರು [illegible] ಅಂಗೀಕರಿಸುತ್ತಾರೆಂಬ ಅಂಶವನ್ನು ಹೋದವರ್ಷ ತಿಳಿಸಿರುತ್ತದೆ. ಬಹಳ ಜಾಗರೂಕತೆಯಿಂದ ಪರಿಶೋಧನೆ ಮಾಡಿ 1911-12 ನೆ ಇಸವಿಯ ಆಖೈರ ವರೆಗೆ ಈ ಸಂಸ್ಥಾನಕ್ಕೆ 39 ಲಕ್ಷ ರೂಪಾಯಿಗಿಂತ ಸ್ವಲ್ಪ ಜಾಸ್ತಿಯಾಗಿ ಹಣ ಸಲ್ಲಬೇಕಾಗಿರುತ್ತದೆಂಬದಾಗಿ ಗೊತ್ತುಮಾಡಲ್ಪಟ್ಟಿತು. ಆ ಪೈಕಿ ಭಾರಿ ಕಂತು ಎಂದರೆ 30 ಲಕ್ಷ ರೂಪಾಯಿ ಈ ವರ್ಷದಲ್ಲಿ ಜಮಾ ಬಂದಿರುತ್ತದೆ.

ಆಬ್ಕಾರಿ.

1912-13 ನೆಯ ವರ್ಷದಲ್ಲಿ ಆಬ್ಕಾರಿ ಹುಟ್ಟುವಳಿಯಾದಷ್ಟು ಹಿಂದೆ ಯಾವ ಸಂವತ್ಸರದಲ್ಲಿಯೂ ಆಗಿರಲಿಲ್ಲವೆಂದು ಹೋದವರ್ಷ ತಿಳಿಸಲಾಯಿತು. ಆದರೆ 1913-14 ನೆಯ ವರ್ಷದ ಉತ್ಪತ್ತಿಯು ಇನ್ನೂ ಜಾಸ್ತಿಯಾಗಿದೆ. ಈ ಉತ್ಪತ್ತಿಯು 55,28,281 ರೂಪಾಯಿಗಳು, ಎಂದರೆ ಹಿಂದಿನ ವರ್ಷದ ಹುಟ್ಟುವಳಿಗಿಂತ 4,33,971 ರೂಪಾಯಿಗಳಷ್ಟು ಜಾಸ್ತಿಯಾಗಿದೆ. ಇದರಲ್ಲಿ ಸುಮಾರು ಅರ್ಧಪಾಲು ದುಕಾನ್ ಗುತ್ತಿಗೆ ಬಾಬಿನಿಂದಲೂ, ಉಳಿದ ಬಾಬಲಗು ಮದ್ಯವು ಹೆಚ್ಚಾಗಿ ಖರ್ಚಿಯಾದುದರಿಂದಲೂ ಉತ್ಪತ್ತಿಯಾಯಿತು. ಈ ಹೆಚ್ಚು ಹುಟ್ಟುವಳಿಯು ಅನ್ಯದೇಶದ ಮದ್ಯದ ವಿನಾ ಡ್ಯೂಟಿಗೆ ಗುರಿಯಾದ ಎಲ್ಲಾ ಬಾಬುಗಳಿಂದಲೂ ಆಯಿತು. ಸುಲಭಕ್ರಯಕ್ಕೆ ದೊರೆಯುವ ಹಲವು ಬಗೆಯಾದ ಅನ್ಯದೇಶದ ಮದ್ಯಗಳ ಪಾನವು ಕ್ರಮೇಣ ಕಡಿಮೆಯಾಗಿ ಬೆಂಗಳೂರು ಸೆಂಟ್ರಲ್ ಡಿಸ್ಟಿಲರಿಯಲ್ಲಿ ತಯಾರಾಗುವ ಮದ್ಯಗಳ ಉಪಯೋಗವೇ ಹೆಚ್ಚಾಗುತ್ತಿದೆ.

ಫಾರೆಸ್ಟು.

ಪ್ರಸಕ್ತ ಸಂವತ್ಸರದ ಫಾರೆಸ್ಟು ಬಾಬಿನಲ್ಲಿ ಆದಷ್ಟು ಉತ್ಪತ್ತಿಯು ಹಿಂದೆ ಯಾವಾಗಲೂ ಆಗಿರಲಿಲ್ಲ. ಈ ಬಾಬಿನ ಉತ್ಪತ್ತಿಯು 32,71,330 ರೂಪಾಯಿಗಳಷ್ಟು ಆಯಿತು. ಇದರ ಪೈಕಿ ಸುಮಾರು ಮೂರರಲ್ಲಿ ಎರಡುಪಾಲು 2,158 ಟನ್ನುಗಳಷ್ಟು ಗಂಧದಮರದ ವಿಕ್ರಯದಿಂದ ಬಂದಿತು. ಜಂಗಲ್ ರಕ್ಷಣೆಗಾಗಿಯೂ ಇಲಾಖೆಯ ಸಿಬ್ಬಂದಿಗಾಗಿಯೂ 7,43,176 ರೂಪಾಯಿ ಖರ್ಚಾಯಿತು.

ಫಾರೆಸ್ಟುಗಳಲ್ಲಿ ಸಂಸ್ಥಾನದ ಉತ್ಪತ್ತಿಗೆ ಆಕರವಾದ ಪದಾರ್ಥಗಳು ವಿಸ್ತಾರವಾಗಿ ಸಿಕ್ಕುತ್ತವೆ ಎಂಬುದನ್ನು ತಿಳಿಯುವುದಕ್ಕಾಗಿಯೂ, ಅವುಗಳನ್ನು ಕೈಗಾರಿಕೆ ಕೆಲಸಗಳಿಗೆ ಉಪಯೋಗಿಸುವುದು ಸಾಧ್ಯವೇ ಎಂಬ ಅಂಶವನ್ನು ಪರೀಕ್ಷಿಸುವುದಕ್ಕಾಗಿಯೂ ಇಬ್ಬರು ಫಾರೆಸ್ಟು ಆಫೀಸರುಗಳನ್ನು ಸ್ಪೆಷಲ್ ಡ್ಯೂಟಿಯ ಮೇಲೆ ನೇಮಿಸಿರುತ್ತದೆ. ಈ ಆಫೀಸರುಗಳು ಪ್ರಸಕ್ತ ಸಂವತ್ಸರವು ಮುಗಿಯುವುದರೊಳಗೆ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಭಾರೀ ಫಾರೆಸ್ಟುಗಳನ್ನೂ, ಕಡೂರು ಡಿಸ್ಟ್ರಿಕ್ಟಿನಲ್ಲಿ ತುಂಗಾನದಿಯ ಮೇಲ್ಭಾಗದ ಬಳಿ ಇರುವ ಫಾರೆಸ್ಟುಗಳನ್ನೂ, [illegible] ಫಾರೆಸ್ಟುಗಳನ್ನೂ ಸಂಪೂರ್ಣವಾಗಿ ಪರಿಶೋಧಿಸುವರು. ಇದಲ್ಲದೆ ಇವರಿಬ್ಬರ ಪೈಕಿ ಒಬ್ಬ ಆಫೀಸರು ಸಂಸ್ಥಾನದಲ್ಲಿ [illegible] ಇವುಗಳನ್ನು ತಯಾರಿಸುವುದಕ್ಕೆ ಸಾಧ್ಯವೇ ಎಂಬ ಅಂಶವನ್ನು ವಿಮರ್ಶಿಸಲು [illegible] ಸಹಕಾರಿಗಳಾಗಿದ್ದರು. ಈ ಆಫೀಸರುಗಳು ತಮ್ಮ ತನಿಖಾ ರಿಪೋರ್ಟುಗಳನ್ನು ಕಳುಹಿಸಿರುತ್ತಾರೆ. ಅವು ಈಗ ಸರ್ಕಾರದವರ ಪರ್ಯಾಲೋಚನೆಯಲ್ಲಿರುತ್ತವೆ.

ಕಳೆದ ನವೆಂಬರು ತಿಂಗಳಲ್ಲಿ ಮಹನೀಯರಾದ ವೈಸರಾಯಿಯವರು ಈ ಸಂಸ್ಥಾನಕ್ಕೆ ದಯಮಾಡಿಸಿದ ಸಂದರ್ಭದಲ್ಲಿ ಏರ್ಪಾಡುಮಾಡಿದ ಖೆಡ್ಡಾ ಕೆಲಸಗಳು ತೃಪ್ತಿಕರವಾಗಿ ನಡೆದುವು. ಹಿಡಿದ ಆನೆಗಳ ಪೈಕಿ ಅನೇಕವು ನಷ್ಟವಾದರೂ, ಈ ಬಾಬಿಂದ ಸಂಸ್ಥಾನಕ್ಕೆ 52,588 ರೂಪಾಯಿಗಳಷ್ಟು ನಿವ್ವಳ ಆದಾಯವಾಯಿತು.

[illegible]

ಪ್ರಸಕ್ತ ವರ್ಷದಲ್ಲಿ [illegible]

ಪೋಲೀಸ್ ಇಲಾಖೆ.

ಹೋದವರ್ಷದ ಉಪನ್ಯಾಸದಲ್ಲಿ ತಿಳಿಸಿದ್ದ ಮೇರೆಗೆ, ಪೋಲೀಸು ಇಲಾಖೆಯ ಸಿಬ್ಬಂದಿಯನ್ನೂ ಬಲ್ಲಿ ಸಂಬಳವನ್ನೂ ಅಭಿವೃದ್ಧಿ ಪಡಿಸತಕ್ಕ ಸಂಗತಿಗಳನ್ನು ಜಾರಿಗೆ ತಂದಿರುತ್ತದೆ. ಈ ಪೋಲೀಸು ಬಲದ ಕಾಯಂ ಸಿಬ್ಬಂದಿಯಲ್ಲಿ 1914 ನೆಯ ಜೂನ್ 30 ನೆಯ ತಾರೀಖಿನಲ್ಲಿ 862 ಮಂದಿ ಆಫೀಸರುಗಳೂ, 4,161 ಮಂದಿ ನೌಕರರೂ ಇದ್ದರು. ಕೋಲಾರದ ಗೋಲ್ಡ್ ಫೀಲ್ಡ್ಸ್ ಪೋಲೀಸ್ ಅಧಿಕಾರವನ್ನು ಹಂಗಾಮಿಯಾಗಿ ಸಂಸ್ಥಾನಕ್ಕೆ ತೆಗೆದುಕೊಂಡು, ಹಾಲಿ ಇರುವ ಪೋಲೀಸ್ ಸಿಬ್ಬಂದಿಯನ್ನು ಒಂದು ವರ್ಷದವರೆಗೆ ನೇಮಿಸಲಾಗಿದೆ.

ಮಿಲಿಟರಿ ಇಲಾಖೆ.

ಸಂಸ್ಥಾನದ ಮಿಲಿಟರಿ ಇಲಾಖೆಗೆ ಸೇರಿದ ಪ್ರಜಾಜನ ಶಿಕ್ಷಣ ಕ್ರಮವೂ, ಯೋಗ್ಯತೆಯೂ ಎಂದಿನಂತೆ ಈ ವರ್ಷದಲ್ಲಿಯೂ ಉತ್ತಮಸ್ಥಿತಿಯಲ್ಲಿದ್ದವು. ಪ್ರಜಾಜನರ ಆರೋಗ್ಯವೂ ಕೂಡ ಚೆನ್ನಾಗಿತ್ತು.

ಬಾರ್‌ಕಿಗಳ ಸಂಬಳವನ್ನೂ, ಮುಂದೆ ಆಸರು ಬದ್ಧಿಗೆ ಬರುವ ಸಂಘಗಳನ್ನೂ ಅಭಿವೃದ್ಧಿಗೆ ತರಬೇಕೆಂಬ ಆಲೋಚನೆ ಇರುತ್ತದೆಂದು ಕಳೆದ ವರ್ಷದ ಉಪನ್ಯಾಸದಲ್ಲಿ ತಿಳಿಸಲಾಯಿತು. ವರ್ಷ ಒಂದಕ್ಕೆ 26,000 ರೂಪಾಯಿಗಳ ಜಾಸ್ತಿ ಖರ್ಚು ತಗಲುವ ಒಂದು ಏರ್ಪಾಟನ್ನು ಈಚೆಗೆ ಮಂಜೂರ್ಮಾಡಲಾಯಿತು. ಅದನ್ನು ಈಗ ಜಾರಿಗೆ ತರುತ್ತದೆ.

ವೈದ್ಯ ಮತ್ತು ಜನಾರೋಗ್ಯದ ಇಲಾಖೆಗಳು.

ಈ ಸಂಸ್ಥಾನದಲ್ಲಿ ದೇವೀ ಹಾಕುವುದಕ್ಕೆ ಉಪಯೋಗಿಸಿದ ಹಾಲಿನಲ್ಲಿ ದೋಷಗಳಿದ್ದುವೆಂದು ಬಂದ ಕೆಲವು ಫಿರ್ಯಾದುಗಳನ್ನು ಚೆನ್ನಾಗಿ ವಿಚಾರಮಾಡುವುದಕ್ಕಾಗಿ ಒಂದು ಕಮಿಟಿಯನ್ನು 1913 ನೆಯ ಜುಲೈ ತಿಂಗಳಲ್ಲಿ ನೇಮಿಸಲಾಯಿತೆಂದು ಹೋದವರ್ಷದ ಉಪನ್ಯಾಸದಲ್ಲಿ ತಿಳಿಯಿಸಿದೆ. ಕಮಿಟಿಯವರು ಈ ವಿಷಯವನ್ನು ಬಹಳ ಜಾಗರೂಕತೆಯಿಂದ ವಿಚಾರಮಾಡಿದಮೇಲೆ ಮೈಸೂರು ಸೀಮೆಯ ಹಾಲಿನಲ್ಲಿ ಕೆಡಕು ಉಂಟಾಗತಕ್ಕ ದೋಷಗಳೇನೂ ಇಲ್ಲವೆಂತಲೂ, ಶಕ್ತಿಯ ವಿಷಯದಲ್ಲಿ ಇಂಡಿಯಾ ದೇಶದ ಇತರ ಪ್ರದೇಶಗಳಲ್ಲಿ ತಯಾರಾದ ಹಾಲಿಗೆ ನಮ್ಮ ಹಾಲು ನಿಕೃಷ್ಟವಾದದ್ದಲ್ಲವೆಂತಲೂ ನಿರ್ಣಯಿಸಿದರು. ಆದರೆ ಸ್ವಲ್ಪ ಹಾಲಿನಲ್ಲಿ ಬೇರೆ ಸಜೀವ ಸೂಕ್ಷ್ಮ ವಸ್ತುಗಳು ಇರುತ್ತವೆಯಾಗಿ, ಅವುಗಳಿಂದ ಯಾವ ಕೆಡಕೂ ಇಲ್ಲದಿದ್ದರೂ, ಅವುಗಳನ್ನೂ ಕೂಡ ತೆಗೆದು ಹಾಕತಕ್ಕದ್ದು ಅವಶ್ಯಕವಾಗಿರುವದೆಂದು ಕಮಿಟಿಯವರು ಅಭಿಪ್ರಾಯಪಟ್ಟು, ಆ ವಿಷಯದಲ್ಲಿ ಕೆಲವು ಸಲಹೆಗಳನ್ನೂ ಕೊಟ್ಟಿರುತ್ತಾರೆ. ಈ ಸಲಹೆಗಳನ್ನು ಸರ್ಕಾರದವರು ಒಪ್ಪಿ ಇರುತ್ತಾರೆ.

ರಾಬರ್ಟ್ಸನ್ ಪೇಟೆಯಲ್ಲಿ ಹೆಂಗಸರ ಆಸ್ಪತ್ರೆಯನ್ನು ಜಾಗ್ರತೆಯಲ್ಲಿ ಜನರ ಉಪಯೋಗಕ್ಕೆ ತೆರಲಾಗುವುದು. ಈ ಆಸ್ಪತ್ರೆಯ ಸಿಬ್ಬಂದಿಯವರಿಗೆ ವಾಸದ ಮನೆಗಳನ್ನು ಇನ್ನೂ ಕಟ್ಟಿಸಿರುವುದಿಲ್ಲ. ಆದರೆ ಸದ್ಯಕ್ಕೆ ಇವರುಗಳಿಗೆ ಹಂಗಾಮಿಯಾಗಿ ವಾಸದ ಮನೆಗಳನ್ನು ಕೊಡಿಸಿ ಆಸ್ಪತ್ರೆಯ ಕೆಲಸವನ್ನು ನಡಿಸಲಾಗುವುದು.

ಮಲೆನಾಡು ಪ್ರದೇಶದ ಆರೋಗ್ಯಾಭಿವೃದ್ಧಿಗಾಗಿಯೂ ಸಂಪದಭಿವೃದ್ಧಿಗಾಗಿಯೂ ಈ ಪ್ರಸಕ್ತ ವರ್ಷದಲ್ಲಿ ಕೈಗೊಂಡ ಮಲೆನಾಡು ಅಭಿವೃದ್ಧಿಯ ಏರ್ಪಾಟಿನ ವಿಷಯವನ್ನು ಈ ಉಪನ್ಯಾಸದ ಮತ್ತೊಂದು ಕಡೆಯಲ್ಲಿ ತಿಳಿಸಲಾಗುವುದು.

ವಿದ್ಯಾಭಿವೃದ್ಧಿ ಮತ್ತೂ ಭಾಗ್ಯಾಭಿವೃದ್ಧಿ.

ಸಂಪದಭ್ಯುದಯಸಮಾಜ.

ಕಳೆದ ಸರ್ಕಾರೀ ಸಾಲಿನಲ್ಲಿ ಸಂಪದಭ್ಯುದಯಸಮಾಜದ ಬೇರೆ ಬೇರೆ ಕಮಿಟಿಗಳನ್ನೂ, ಸದರಿ ಕಮಿಟಿಗಳಿಗೆ ಸಂಬಂಧಪಟ್ಟ ಇಲಾಖೆಗಳನ್ನೂ ಬಲಪಡಿಸಲಾಯಿತು. ಕಾನ್‌ಫರೆನ್ಸಿನ ಕೆಲಸವನ್ನು ಕ್ರಮಪಡಿಸುವದಕ್ಕೂ, ಅದನ್ನು ಕಾರ್ಯತಃ ನೆರವೇರಿಸಲಾಗುವಂತೆ ಮಾಡುವುದಕ್ಕೂ ವಿಶೇಷವಾದ ಪ್ರಯತ್ನಗಳನ್ನು ನಡಿಸಲಾಯಿತು. ವರ್ಷದ ಆರಂಭದಲ್ಲಿ ಕಾನ್‌ಫರೆನ್ಸಿನ ಮತ್ತು ಅದಕ್ಕೆ ಸೇರಿದ ಕಮಿಟಿಗಳ ಏರ್ಪಾಟುಗಳಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಿ ಅವುಗಳ ಕಾರ್ಯಗಳನ್ನು ಸ್ಪಷ್ಟವಾಗಿ ಗೊತ್ತುಮಾಡಲಾಯಿತು. ಕಳೆದ ಅಕ್ಟೋಬರಿನಲ್ಲಿ ನಾವು ತಿಳಿಸಿದಂತೆ, ಈ ಸಭೆಯಿಂದ 8 ಜನ ಮೆಂಬರುಗಳನ್ನೂ ಡಿಸ್ಟ್ರಿಕ್ಟ್ ಎಲೆಕ್ಟೋರೇಟುಗಳಿಂದ (ಚುನಾವಣೆಯ ಸ್ಥಳದಿಂದ) 8 ಜನ ಮೆಂಬರುಗಳನ್ನೂ ಚುನಾಯಿಸತಕ್ಕ ಬಗ್ಗೆ 16 ಸ್ಥಾನಗಳಿಗೆ ಅವಕಾಶ ಕೊಡಲಾಯಿತು. ಈರೀತಿ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ಕಳೆದ ಜೂನ್ ಮಾಹೆಯಲ್ಲಿ ನಡೆದ ಕಾನ್‌ಫರೆನ್ಸಿನ ಮೀಟಿಂಗಿನ ಕೆಲಸದಲ್ಲಿ ಭಾಗಿಗಳಾಗಿದ್ದರು. ಎಜುಕೇಷನ್ ಕಮ್ಮಿಟಿಗೆ ಉದ್ಯೋಗಪ್ರಯುಕ್ತ ಸೆಕ್ರೆಟರಿಯವರಾಗಿಯೂ ಇದ್ದ ವಿದ್ಯಾಭ್ಯಾಸದ ಇಲಾಖೆಯ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್‌ರವರು ಮಾಡಬೇಕಾದ ಕೆಲಸಗಳು ವಿಶೇಷವಾಗಿದ್ದುದರಿಂದ, ಎಜ್ಯುಕೇಷನ್ ಕಮಿಟಿಯ ಕೆಲಸವನ್ನು ನೋಡಿಕೊಳ್ಳುವುದಕ್ಕಾಗಿ ಪೂರಾಕಾಲ ಕೆಲಸಮಾಡತಕ್ಕ ಒಬ್ಬ ಆಫೀಸರನ್ನು ನೇಮಿಸಲಾಯಿತು. ಮೂರು ಸೆಂಟ್ರಲ್ ಕಮಿಟಿಗಳಿಗೆ ಸಂಬಂಧಪಟ್ಟ ಕೆಲಸವನ್ನು ಒಟ್ಟುಗೂಡಿಸಿ ಪರಿಶೀಲನೆ ಮಾಡತಕ್ಕದ್ದೇ ಮುಖ್ಯ ಕರ್ತವ್ಯವಾಗಿರುವ ಸ್ಟ್ಯಾಂಡಿಂಗ್ ಕಮಿಟಿಯು, ಅನೇಕ ಮುಖ್ಯಮುಖ್ಯವಾದ ಸಂಗತಿಗಳನ್ನು ವಿಚಾರಮಾಡತಕ್ಕ ಬಗ್ಗೆ, ಪ್ರಸಕ್ತವರ್ಷದಲ್ಲಿ ಎರಡುಸಲ ಸೇರಿತ್ತು. ಮೂರು ಸೆಂಟ್ರಲ್ ಕಮಿಟಿಗಳೂ ಅನುರೂಪವಾದ ಸಬ್‌ಕಮಿಟಿಗಳನ್ನು ಏರ್ಪಡಿಸುವುದರಮೂಲಕ, ಡಿಸ್ಟ್ರಿಕ್ಟ್ ಕಮಿಟಿಗಳ ಕೆಲಸವನ್ನು ಮತ್ತಷ್ಟು ತೃಪ್ತಿಕರವಾಗಿ ನಡೆಯುವಂತೆ ಮಾಡಲಾಯಿತು.

ಕಾನ್‌ಫರೆನ್ಸಿನ ಕಾರ್ಯವು ತುಂಬಾ ಅಭಿವೃದ್ಧಿಗೆ ಬಂದಿರುತ್ತದೆ. ಈ ಅಭಿವೃದ್ಧಿ ವಿಷಯವನ್ನು ಮುಂದೆ ತಿಳಿಸಲಾಗುತ್ತೆ.

ವಿದ್ಯಾಭ್ಯಾಸದ ಇಲಾಖೆ.

ಸರ್ಕಾರೀ ಸ್ಕೂಲುಗಳ ಸಂಖ್ಯೆಯು 2,725 ರಿಂದ 3,001 ರವರೆಗೆ ಎಂದರೆ 286 ಹೆಚ್ಚಿ, ಅವುಗಳಲ್ಲಿ ಓದುವವರ ಸಂಖ್ಯೆಯು 1,31,539 ರಿಂದ 1,58,334 ರ ವರೆಗೆ ಎಂದರೆ 26,795 ಹೆಚ್ಚಿತು. ಇದೇ ರೀತಿಯಲ್ಲಿ ಕೂಲಿ ಮಠಗಳ ಸಂಖ್ಯೆಯು 1,843 ರಿಂದ 2,133 ರ ವರೆಗೂ, ಅವುಗಳಲ್ಲಿ ಓದುತ್ತಿರುವರ ಸಂಖ್ಯೆಯು 24,001 ರಿಂದ 29,396 ರ ವರೆಗೂ, ಹೆಚ್ಚಾಯಿತು. ಸ್ಕೂಲುಗಳ ಸಂಖ್ಯೆಯೂ, ಅವುಗಳಲ್ಲಿ ಓದುವವರ ಸಂಖ್ಯೆಯೂ ಹೆಚ್ಚುವುದಕ್ಕೆ, ಬಾಲಕರಿಗೂ ಬಾಲೆಯರಿಗೂ ಅನೇಕ ಪ್ರೈಮರಿ ಸ್ಕೂಲುಗಳನ್ನು ಹೊಸದಾಗಿ ಕಲ್ಪಿಸಿದ್ದೇ ಮುಖ್ಯ ಕಾರಣವಾಗಿದೆ. ಕೈಗಾರಿಕೆಯ ಸ್ಕೂಲುಗಳೂ ಇತರ ಕಲಾಶಾಲೆಗಳೂ 28 ರಿಂದ 35 ರ ವರೆಗೆ ಹೆಚ್ಚಿರುತ್ತವೆ. ಸರ್ಕಾರೀ ಸ್ಕೂಲುಗಳ ಮತ್ತು ಕೂಲಿಮಠಗಳ ಒಟ್ಟು ಸಂಖ್ಯೆಯು ಹೋದವರ್ಷ 4,568 ಇದ್ದದ್ದು ಈವರ್ಷ 5,134 ಕ್ಕೂ, ಅವುಗಳಲ್ಲಿ ಓದುತ್ತಿರುವವರ ಸಂಖ್ಯೆ ಹೋದ ವರ್ಷ 1,56,440 ಇದ್ದದ್ದು ಈವರ್ಷ 1,87,730 ಕ್ಕೂ ಹೆಚ್ಚಿರುತ್ತದೆ. ಈರೀತಿಯಾಗಿ ಹೆಚ್ಚಿದ ಎರಡುವಿಧವಾದ ಸ್ಕೂಲುಗಳ ಒಟ್ಟು ಸಂಖ್ಯೆ 566 ಆಗಿಯೂ, ಅವುಗಳಲ್ಲಿ ಓದುವವರ ಸಂಖ್ಯೆ 31,290 ಆಗಿಯೂ ಇತ್ತು. ಒಟ್ಟು ವ್ಯಾಸಂಗಮಾಡುತ್ತಿರುವವರಲ್ಲಿ 1,54,319 ಮಂದಿ ಬಾಲಕರಾಗಿಯೂ, 33,411 ಮಂದಿ ಬಾಲೆಯರಾಗಿಯೂ ಇದ್ದರು. 1912-13ರಲ್ಲಿ ಒಟ್ಟು 1,29,009 ಮಂದಿ ಬಾಲಕರೂ, 27,131 ಮಂದಿ ಬಾಲೆಯರೂ ವ್ಯಾಸಂಗಮಾಡುತ್ತಿದ್ದರು. ಸ್ಕೂಲಿಗೆ ಹೋಗುವುದಕ್ಕೆ ಅರ್ಹವಾದ ವಯಸ್ಸುಳ್ಳ ಗಂಡಸರ ಪೈಕಿ, ಸ್ಕೂಲಿನಲ್ಲಿ ವ್ಯಾಸಂಗಮಾಡುತ್ತಿರುವವರ ಸಂಖ್ಯೆಯು ಶೇಕಡ 29.8 ರಿಂದ 35 ಕ್ಕೂ ಆದೇರೀತಿಯಲ್ಲಿರುವ ಒಟ್ಟು ಹೆಂಗಸರ ಪೈಕಿ ವ್ಯಾಸಂಗಮಾಡುತ್ತಿರುವ ಬಾಲೆಯರ ಸಂಖ್ಯೆಯು ಶೇಕಡ 6.1 ರಿಂದ 7.7 ಕ್ಕೂ ಹೆಚ್ಚಿರುತ್ತದೆ. ವ್ಯಾಸಂಗಾರ್ಹವಾದ ವಯಸ್ಸುಳ್ಳ ಒಟ್ಟು ಪ್ರಜಾಸಂಖ್ಯೆಯ ಪೈಕಿ ಒಟ್ಟು ವ್ಯಾಸಂಗಮಾಡುತ್ತಿರುವ ಬಾಲಿಕಾ ಬಾಲಕರ ಸಂಖ್ಯೆಯು ಕಳೆದ ವರ್ಷ ಶೇಕಡ 18.0 ಇದ್ದದ್ದು, ಈವರ್ಷ ಶೇಕಡ 21.4 ಕ್ಕೆ ಹೆಚ್ಚಿದಂತಾಗಿದೆ.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಕೆಮಿಸ್ಟ್ರಿ ಶಾಖೆಯ ಬಿ. ಎ. ಪ್ಯಾಸ್ ಕೋರ್ಸನ್ನೂ, ಫಿಸಿಕ್ಸ್ ಶಾಖೆಯ ಆನರ್ಸ್ ಕೋರ್ಸನ್ನೂ ಮದರಾಸ್ ಯೂನಿವರ್ಸಿಟಿಗೆ ಸಂಬಂಧಪಡಿಸಲಾಯಿತು. ಆದರೆ ಸುಶಿಕ್ಷಿತರಾದ ಯೂರೋಪ್ ದೇಶದ ಒಬ್ಬ ಅಸಿಸ್ಟೆಂಟ್ ಪ್ರೊಫೆಸರು ಇಲ್ಲದೆ ಇರುವದರಿಂದ, ಕೆಮಿಸ್ಟ್ರಿ ಶಾ

ದೆ. ಗೌರ್ನಮೆಂಟ್ ಪ್ರೆಸ್ ಕಟ್ಟಡದ ಒಂದು ಭಾಗದಲ್ಲಿ, ಶಿಕ್ಷಣ ಮಾಯಿಸಿ ತರೀಕ್ ಒಂದುವರ್ಷದವರೆಗೆ ಒಂದು ಪ್ರಿಂಟಿಂಗ್ ಕ್ಲಾಸನ್ನು ಇಡಲಾಗುತ್ತದೆ. ಅದರಲ್ಲಿ ಮೊಳೆಗಳನ್ನು ಜೋಡಿಸುವುದು, ಪ್ರೂಫುಗಳನ್ನು ಓದಿ ತಿದ್ದುವುದು, ಮುದ್ರಿಸುವುದು, ಈ ಕೆಲಸಗಳನ್ನು ಕಲಿಸಲಾಗುವುದು.

ಸ್ತ್ರೀವಿದ್ಯಾಭ್ಯಾಸವೂ ಕೂಡ ಅಭಿವೃದ್ಧಿಯಾಗುತ್ತಿದೆ. ಕಳೆದ ಸಾಲಿನಲ್ಲಿ ಇದ್ದ ಗರ್ಲ್ಸ್ ಸ್ಕೂಲುಗಳ ಸಂಖ್ಯೆಯು 360 ರಿಂದ ಪ್ರಕೃತ ವರ್ಷದಲ್ಲಿ 397 ರ ವರೆಗೆ ಹೆಚ್ಚಿರುತ್ತದೆ. ಮೈಸೂರಲ್ಲಿರುವ ಮಹಾರಾಣೀ ಕಾಲೇಜನ್ನೂ, ಡಿಸ್ಟ್ರಿಕ್ಟು ಕಸಬೆಗಳಲ್ಲಿರುವ ಗರ್ಲ್ಸ್ ಸ್ಕೂಲುಗಳನ್ನೂ, ಅವುಗಳ ಪ್ರಯೋಜನವನ್ನು ಹೆಚ್ಚಿಸಬೇಕೆಂಬ ಉದ್ದೇಶದಿಂದ, ಪುನಃ ಸುವ್ಯವಸ್ಥೆಗೊಳಿಸಲು ಹುಕುಂ ಕೊಡಲಾಗಿರುತ್ತದೆ. ಸದರಿ ಕಾಲೇಜಿಗೆ ಸೇರಿದಂತೆ ಒಂದು ಹಾಸ್ಟೆಲನ್ನು ಏರ್ಪಡಿಸಲಾಗುವುದು ಮತ್ತು ಮುಂದೆ ಸರ್ಕಾರದ ಆಡಳಿತಕ್ಕೆ ತೆಗೆದುಕೊಳ್ಳುವ ಮೈಸೂರು ವಿಡೋಸ್ ಹೋಮನ್ನು ಅದಕ್ಕೆ ಸೇರಿಸಲಾಗುತ್ತದೆ. ಬೆಂಗಳೂರಿನಲ್ಲಿರುವ ಗೌರ್ನಮೆಂಟ್ ಗರ್ಲ್ಸ್ ಸ್ಕೂಲಿನಲ್ಲಿಯೂ, ತುಮಕೂರು ಯಂಗ್ ಲೇಡಿಸ್ ಗರ್ಲ್ಸ್ ಸ್ಕೂಲಿನಲ್ಲಿಯೂ ಕನ್ನಡ ಅಪ್ಪರ್ ಸೆಕೆಂಡರಿ ತರಗತಿಗಳನ್ನಿಟ್ಟು ಸದರಿ ಸ್ಕೂಲುಗಳನ್ನು ಮೈಸ್ಕೂಲ್ ಅಂತಸ್ತಿಗೆ ತರಲಾಗುವುದು. ಈ ಸ್ಕೂಲುಗಳಲ್ಲಿಯೂ ಬೆಂಗಳೂರು ಆರ್ಯಬಾಲಿಕಾ ಪಾಠಶಾಲೆಯಲ್ಲಿಯೂ, ಚಾಮರಾಜಪೇಟೆ ಗರ್

ಯ ವರ್ಷದ ವ್ಯಾಸಂಗವನ್ನು ಮಾಡುವವರೂ ಇದ್ದಾರೆ. ರೈತರ ಮತ್ತೂ ಜಮೀನ್ ಹಿಡುವಳಿದಾರರ ಪ್ರಯೋಜನಕ್ಕೋಸ್ಕರ ಜಮೀನು ಸಾಗುವಳಿ ಕೆಲಸಗಳನ್ನು ಒಂದು ವಾರದವರೆಗೆ ಬೋಧಿಸುವುದಕ್ಕೆ ಏರ್ಪಾಡು ಮಾಡಲ್ಪಟ್ಟಿತು. ಈ ಬೋಧೆಯನ್ನು ಕೇಳುವುದಕ್ಕಾಗಿ ಸುಮಾರು ನೂರುಮಂದಿ ಜನರು ಬಂದು ಇದ್ದರು. ಈ ಚಾಲ್ತೀ ವರ್ಷದಲ್ಲಿ ಇದೇ ರೀತಿಯಲ್ಲಿ ಸಣ್ಣಸಣ್ಣ ಉಪನ್ಯಾಸಗಳನ್ನು ಕ್ರಮವಾಗಿ ನಡೆಸಬೇಕೆಂಬ ಉದ್ದೇಶವಿದೆ. ಅವುಗಳನ್ನು ಕೇಳುವುದಕ್ಕೋಸ್ಕರ ಬರುವ ಜನರು ಇಳಿದುಕೊಳ್ಳುವುದಕ್ಕೆ ಕಟ್ಟಡಗಳನ್ನು ಕಟ್ಟಿಸುತ್ತಲಿದೆ.

ಕೈಗಾರಿಕೆ ಮತ್ತೂ ವ್ಯಾಪಾರ ಇಲಾಖೆ.

ಕೈಗಾರಿಕೆಯ ಕೆಲಸಗಳಿಗಾಗಿ ತಕಾವಿ ಸಾಲ ಕೊಡುವುದನ್ನು ಕ್ರಮಪಡಿಸುವುದಕ್ಕೆ ಸಂಬಂಧಪಟ್ಟ ನಿಬಂಧನೆಗಳನ್ನು, ಹೋದವರ್ಷದ ಉಪನ್ಯಾಸದಲ್ಲಿ ಸೂಚಿಸಿರುವಂತೆ ವಿಸ್ತರಿಸಿ, ತಕಾವಿ ಸಾಲಗಳಿಗೆ ಬದಲಾಗಿ ಬಾಡಿಗೆ ಕ್ರಯದಮೇರೆ ಯಂತ್ರಗಳನ್ನು ವಿಕರಿ ಮಾಡುವದಕ್ಕೆ ಅವಕಾಶ ಕೊಟ್ಟಿರುತ್ತದೆ. ಈ ವರ್ಷದಲ್ಲಿ ಸುಮಾರು ಒಂದು ಲಕ್ಷ ರೂಪಾಯಿಗಳ ವರೆಗೆ ತಕಾವಿ ಸಾಲಗಳನ್ನೂ, ಇತರವಿಧವಾದ ಸಾಲಗಳನ್ನೂ ಕೊಟ್ಟಿರುತ್ತದೆ.

ಸಾರಾಸ್ತೈರಿಗೆ, 1,14,000 ರೂ. ಬೆಲೆಯಲ್ಲಿ 26 ಯಂತ್ರ … ನ್ನೂ 13 ಯಂತ್ರಗಳ …

… ಯಲ್ಲಿಯೂ ಸ್ಥಾಪಿಸಿದ … ನ ಮಾಡುತ್ತಿರುವುದರಿಂ … ರದಲ್ಲಿಯೂ ಆದರ ಎರ … ರಾವಣಗಾಗಿ ಅನೇಕ … ಕ್ಷಣೆ ಇದೆ. … ಯಂತ್ರಗಳ ಮ … ಗಳ ಉಪಯೋಗ, … ಮೊದಲಾದ ವಿಷಯಗಳ … ಇಲಾಖೆಯವರು ಮಾ … ಗಳನ್ನು ಹೋದವರ್ಷ … ಮಾಡಿದರು. ರೈಲ್ವೆ … ಗಳು ಇದುವರೆಗೆ … ದುದರಿಂದ, ರೈ … ಹೊರಗಣಿಂದ ಇಲ್ಲ … ರಾಗಿ ಮೂ … ಬೇಕೆಂದು, ಮದ್ರಾ … ಮದರೊಡನೆ ಏರ್ಪಾಡು …

… ಸಂಘಗಳು.

… ಹಾಯಕ ಸಂಘಗಳ … ಈ ಏರ್ಪಾಡು … ಅಭಿವೃದ್ಧಿಗೆ ಬಾರದೆ … ಮ ತೃಪ್ತಿಕರವಾಗಿದೆ. … ಸಾಲ ಕೊಡುವ ಸಂಘ … ಉಪಯೋಗಕರವಾಗಿ … ಪರಸ್ಪರ ಸಹಾಯಕ ಸಂ … ಎಂದರೆ ಪರಸ್ಪರ ಸ … ಗೆ ಸೇರು ಸರಬರಾಯಿ … ಗಳನ್ನು ಕೊಂಡುಕೊ … ವಿಕರಿ ಮಾಡುವ ಕೆಲಸ … ಸೇರಿದ ಸಂಘಗಳು ಹು …

… ಯು 313 ರಿಂದ 330 … ರಿಂದ 40,170 ಕ್ಕೂ ಕೆ … ಮೂಲಧನವು 12,80,338 … ಗೂ, ಒಟ್ಟು ಲೇವಾದೇ … 28,533 ರೂಪಾಯಿಗೂ … 3,30,224 ರೂಪಾಯಿ … ದಾಯಿಂದ 56,340 ರೂ … ನ ಸೆಂಟ್ರಲ್ ಬ್ಯಾಂಕು … 57 ಸಂಘಗಳಿಗೆ … ರುತ್ತದೆ. ಗ್ರಾಮಾಂತರ … ಮೂಲಧನಕ್ಕೆ ಇದೇ ಮು … ರು ಯೂನಿಯನುಗಳು … ಬಂಡವಾಳವನ್ನು ಒದ … ಸೇರಿದ ರಾಜಾ ಸಂಘಗೆ … ವನ್ನು ಒದಗಿಸಿಕೊಡಬೇ … ನದ ಮೂಲಧನವನ್ನೂ … ಹೇಳಿದ ಸಂಘಗಳಿಂದಾ … ಸ್ವಂತವಾಗಿ ಕ್ರಿಮ … ವರದಲ್ಲಿ ಕೊಟ್ಟ ದ್ರವ್ಯ … ವ ಆವಶ್ಯಕತೆಯೂ ಇ …

… ಮೂರನೆಯ ವರ್ಷದ ಸಾಂ … ತಿಂಗಳಲ್ಲಿ ಮೈಸೂರು … ಜದ ಆರಂಭೋತ್ಸವವ

ನ್ನು ಶ್ರೀಮದ್ಯುವರಾಜರವರು ನೆರವೇರಿಸಿದರು. ಇದಕ್ಕೆ ದಿವಾನ್ ಬಹಾದುರ್ ರಾಜಸಭಾ ಭೂಷಣ ಮಿ. ಕೆ. ಪಿ. ಪುಟ್ಟಣ್ಣಶೆಟ್ಟಿರವರು ಅಧ್ಯಕ್ಷರಾಗಿದ್ದರು. ಇದಕ್ಕಿಂತ ಸಣ್ಣಸಣ್ಣವಾದರೂ, ಉಪಯೋಗವಿಷಯದಲ್ಲಿ ತತ್ಸಮಾನಗಳಾದ ಕಾನ್‌ಫರೆನ್ಸುಗಳು ಇನ್ನೂ ಹತ್ತು ಸ್ಥಳಗಳಲ್ಲಿ ನಡೆದುವು. ಇವುಗಳು ಸೇರುವುದಕ್ಕೂ ಸಾರ್ಥಕವಾಗಿ ಕೆಲಸವನ್ನು ಮಾಡುವುದಕ್ಕೂ ಬಹಳವಾಗಿ ಆಯಾ ಪ್ರದೇಶದ ಜನಗಳೇ ಪಟ್ಟ ಪ್ರಯತ್ನಗಳೂ ಏರ್ಪಾಡುಗಳೇ ಕಾರಣಗಳಾಗಿರುತ್ತವೆ.

[೬ ನೆಯ ಪುಟವನ್ನು ನೋಡಿ.]

ಈ ಸಂಚಿಕೆಯ ಪುರವಣಿ.

ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟು: ಬನವಾಸಿ. (ಉತ್ತರ ಕಾನಡಾ.)

ಗುಣಕಾರಿಯಾಗಿರುವ ಔಷಧಗಳು.

ಕರ್ಣಶೂಲ ಹಾರಿಬಿಂದು.

ಈ ಮಿಶ್ರಣದ ಕೆಲವು ಬಿಂದುಗಳನ್ನು ಕಿವಿಯಲ್ಲಿ ಹಾಕುವದರಿಂದ ಕಿವಿ … ಳತ ಇವು ನಿಂತು ಕಿವಿ ಸೋರುವದು ನಿಲ್ಲುವ ಬಗ್ಗೆ ಕೆಲದಿವಸ … ಸಿದ್ದಲ್ಲಿ ಖಾತ್ರಿಯಾಗಿ ಗುಣವಾಗುವದು.

ಕಿಮ್ಮತು ಬಾಟ್ಲಗೆ 1—0—0.

ನಂಪುಸಕತ್ವಾರಿ ತೈಲವು.

… ಸನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ … ವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ … ರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ಬಲಪ … ಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದ … ಗಿಸುವಾಗ್ಯೆ ಮದನೋದ್ಭವಗುಳಿಗೆಗಳನ್ನುಪಯೋಗಿಸಬೇಕು.

ಕಿಮ್ಮತು ಬಾಟ್ಲ 1ಕ್ಕೆ 2—12—0.

ಪಿತ್ತರೋಗಕ್ಕೆ ಔಷಧ.

… ವಿಕಾರ ಉಂಟಾಯಿತೆಂದರೆ ತಲೆತಿರುಗುವದು, ಕಣ್ಣುಮುಂದೆ ಕತ್ತ … ದು, ಪಚನಶಕ್ತಿ ಕಡಿಮೆಯಾಗುವದು, ತಿಂದಪದಾರ್ಥಗಳು ರುಚಿ … ನಾಲಿಗೆಕೆಟ್ಟು ಬಾಯಿ ಕಹಿಯಾಗುವದು, ಬೆಳಿಗ್ಗೆ ಎದ್ದಕೂಡಲೇ … ಲ್ಲಿ ಕೆಟ್ಟ ಸಂಕಟವಾಗುವದು. ಇವೆಲ್ಲ ಉಂಟಾಗಿ ನಿಸ್ಸಾಮರ್ಥ್ಯಸ್ಥಿ … ಹೊಂದುವರು ಇಂಥವರು ನಮ್ಮ ಪಿತ್ತದ ಔಷಧವನ್ನು 21 ದಿನ … ಮೇಲೆ ಹೇಳಿದ ಎಲ್ಲಾರೋಗಗಳು ನಿಸ್ಸಂದೇಹವಾಗಿ ಗುಣವಾಗಿ … ತ್ರೂ ಕಾಂತಿಯೂ ಉಳ್ಳವರಾಗುವರು.

21 ದಿವಸದ ಔಷಧಕ್ಕೆ ಕಿಮ್ಮತು 4—0—0.

ಇಂದ್ರಿಯ ಸ್ತಂಭನ ಗುಳಿಗೆ.

… ಕ್ಕ ಪ್ರಾಯದಲ್ಲಿ ಅತ್ಯಾಚಾರದಿಂದ ಹಸ್ತ ಘರ್ಷಣೆಮಾಡಿ ಇಂದ್ರಿಯ … ಮಾಡಿದ್ದರಿಂದ ಉಂಟಾದ ನಪುಂಸಕತ್ವ, ಕ್ಷೀಣತೆ ಮತ್ತು ಧಾತು ತೆಳ್ಳ … ಕೃಶವಾಗಿಯು ಶಿವಿಲಾಸಕ್ಕೆ ಆಶೆ ಇಲ್ಲದವರಾಗಿಯೂ ಆಗುವದು. … ಈ ಗುಳಿಗೆಗಳನ್ನು ಸೇವಿಸುವದರಿಂದ ಸಶಕ್ತರಾಗಿಯೂ, ಅಂಗ … ಳ್ಳವರಾಗಿಯೂ ಮದನವಿಲಾಸಕ್ಕೆ ಸಂಪೂರ್ಣ ಶಕ್ತಿಯುಳ್ಳವರಾಗಿ … ಆಗುವರು. ಒಬ್ಬರಿಗೆ 64 ಗುಳಿಗೆಗಳು ಬೇಕಾಗುವವು. ಇದನ್ನು … ಸುವಾಗ್ಯೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಬೇಕು.

… 32 ಗುಳಿಗೆಗಳಿಗೆ 2—8—0.

ಕೇಶವರ್ಧಿನಿ ಸುಗಂಧ ತೈಲವು.

… ಸುವಾಸನೆಯುಳ್ಳ ಈ ತೈಲವನ್ನು ಹೆಂಗಸರು ತಲೆಗೆ ಇಡುವದ …

೩೨ ಧಾತುಪೌಷ್ಟಿಕ ಲೇಹವು

ಇದರಿಂದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಹಳೇಜ್ವರ, ಅಶಕ್ತತೆ, ಸ್ವಪ್ನಾವಸ್ಥೆ, ಧಾತುಪತನ, ಎದೆನೋವು, ಕಟಿಶೂಲೆ, ವಾತರೋಗ, ರಕ್ತೋದ್ರೇಕ, ಕಫ, ಕೆಮ್ಮು, ದಮ್ಮು ಮೇಹಸಂಬಂಧಿ ಧಾತುಹೋಗೋಣ, ತಲೆಶೂಲೆ, ಹೊಟ್ಟೆಶೂಲೆ ಮುಂತಾದವು ಅತಿತ್ವರೆಯಿಂದ ಗುಣವಾಗಿ ಶರೀರಕ್ಕೆ ಕಾಂತಿಯೂ, ಶಕ್ತಿಯೂ ಉಂಟಾಗುತ್ತದೆ. ಒಬ್ಬನಿಗೆ 40 ತೊಲೆಯಿಂದ 80 ತೊಲೆ ವರೆಗೆ ಬೇಕಾಗುವದು.

ಕಿಮ್ಮತು 40 ತೊಲೆಗೆ ರೂ. 3-8-0; 80 ತೊಲೆಗೆ ರೂ. 6-0-0.

ಈ ತೈಲವನ್ನು ಸೇವಿಸುವಾಗ್ಯೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ.

೩೩ ಬಾಲಾಮೃತವು

ಇದು ಅಶಕ್ತರಾಗಿಯೂ, ರೋಗಿಗಳಾಗಿಯೂ, ಮಂದಬುದ್ಧಿಯವರಾಗಿಯೂ, ಕೈಕಾಲುಗಳು ಕೃಶವಾಗಿ ಹೊಟ್ಟೆಯು ಬಹಳ ದೊಡ್ಡದಾಗಿ ಜ್ವರ, ಕೆಮ್ಮು, ದಮ್ಮು ಮುಂತಾದ ಹುಡುಗರಿಗೆ ಆಗುವ ಎಲ್ಲಾ ತರದ ರೋಗಗಳನ್ನು ನಾಶಮಾಡುವದು. ಇದರ ಸೇವನೆಯಿಂದ ಚನ್ನಾಗಿ ಹಸಿವಾಗಿ ಅನ್ನ ಪಚನವಾಗುವದು, ಜೀರ್ಣಶಕ್ತಿಯು ಚನ್ನಾಗಿ ಆಗಿ ಮೈಯಲ್ಲಿರುವ ರಕ್ತ ಮಾಂಸ ವೃದ್ಧಿಯಾಗುವದು, ಶರೀರಕ್ಕೆ ಆಗುವ ಅನೇಕ ವಿಕಾರಗಳು ನಾಶವಾಗುವವು, ಎಲುಬುಗಳು ಚನ್ನಾಗಿ ಬೆಳೆಯುವವು, ಎದೆಯು ಅಗಲವಾಗಿ ನರಗಳು ಬಲವಾಗುವವು, ಹುಡುಗರು ಯಾವಾಗಲೂ ಸಶಕ್ತರಾಗುವರು, ಹುಡುಗರ ಬುದ್ಧಿ ಮತ್ತು ಕಾಂತಿಹೆಚ್ಚುವದು, ಅತಿಸಾರ ಹೊಟ್ಟೆ ಉಬ್ಬರಿಸುವದು, ಕೈಕಾಲು ಸಣ್ಣದಾಗಿ ಮೈ ಯಾವಾಗಲೂ ಬಿಸಿಯಾಗಿರುವದು, ಅಸ್ತಿಜ್ವರ, ಕೆಮ್ಮು, ಮೊದಲಾದ ರೋಗಗಳು ಗುಣವಾಗುವದು.

ಕಿಮ್ಮತ್ತು ಬಾಟ್ಲ 1ಕ್ಕೆ ರೂ. 1-0-0.

೩೪ ಬಾಲರಕ್ಷಕ ಸಂಜೀವನಿ ಗುಳಿಗೆ

ಈ ಗುಳಿಗೆಯು ಬಾಲಾಮೃತದಂತೇನೆ ಗುಣಕಾರಿಯಾಗಿದೆ. ಈ ಗುಳಿಗೆಯನ್ನು ಬಾಲಾಮೃತವನ್ನು ಕೂಡಿಸಿ ಸೇವಿಸಲಿಕ್ಕೆ ಕೊಟ್ಟರೆ ಹುಡುಗರು ಬಲವಾಗಿ ಬೆಳೆಯುವರು.

ಬೆಲೆ 20 ಗುಳಿಗೆಗೆ ರೂ. 1—0—0.

೩೫ ಜುಲಾಬಿನ ಗುಳಿಗೆಗಳು.

ಇದರ ಸೇವನೆಯಿಂದ ಕಫ, ಪಿತ್ತ, ಮತ್ತು ಹೊಟ್ಟೆಯೊಳಗಿನ ಕಲ್ಮಷ ಹೋಗಿ, ಜುಲಾಬು ಆಗುವಾಗ್ಯೆ ಏನೂ ಪ್ರಯಾಸವಾಗುವದಿಲ್ಲ; ಸೇವಿಸಲಿಕ್ಕೆ ಅಸಹ್ಯಕರವಲ್ಲ.

ಕಿಮ್ಮತು 16 ಗುಳಿಗೆಗಳಿಗೆ 1—0—0.

೩೬ ನಾರುಹುಣ್ಣಿನ ಮೇಲೆ ಔಷಧ.

ಈ ವ್ಯಾಧಿಯಿಂದ ಬೈಲುಶೀಮೆ ಅತ್ತಕಡೆಯಲ್ಲಿ ಬಹಳ ಜನರು ನರಳುತ್ತಿರುವದನ್ನು ನೋಡಿ ಆ ಬಗ್ಯೆ ಬೇಗನೆ ಗುಣ ಉಂಟಾಗುವಂತೆ ರಾಮಬಾಣ ಔಷಧವನ್ನು ತಯಾರಿಸಿದೆ. ಹೊಟ್ಟೆಗೆ ತಕ್ಕೊಳ್ಳಲಿಕ್ಕೆ ಚೂರ್ಣವನ್ನೂ ಮೇಲೆ ಉಪಯೋಗಿಸಲಿಕ್ಕೆ ಮುಲಾಮುನ್ನೂ ತಯಾರಿಸಿರುತ್ತದೆ.

ಬಜೆಟ್ಟಿನಲ್ಲಿ ದಾಖಲ್ಮಾಡಿದ್ದ ಲೆಖ್ಖಕ್ಕಿಂತಲೂ ಜಾಸ್ತಿಯಾದ ಹುಟ್ಟುವಳಿ	30.13 ಲಕ್ಷ
ಸಾಮಾನ್ಯ ಬಾಬುಗಳ ಖರ್ಚಿನಲ್ಲಿ ಉಳಿದಿರುವದು	11.22 ,,
ಮೊದಲಿನ ಬಜೆಟ್ಟಿನಲ್ಲಿ ಅಂದಾಜು ಮಾಡಿದ್ದ ಸರ್‌ಪ್ಲಸ್ ಮೊಬಲಗು	8.72 ,,
ಜುಮ್ಲಾ	50.07 ಲಕ್ಷ

ಮುಖ್ಯಮುಖ್ಯವಾದ ಭಾರೀ ಕಾಂಗಾರಿಗಳಿಗಾಗಿಯೂ ಎಂದರೆ, ಕಾವೇರೀ ಜಲಾಶಯದ ಕಾಂಗಾರಿಯೂ, ಕಾವೇರೀ ವಿದ್ಯುಚ್ಛಕ್ತಿಯ ಏರ್ಪಾಟನ್ನು ಹೆಚ್ಚಿಸುವುದೂ, ಹೊಸದಾಗಿ ರೈಲನ್ನು ಹಾಕುವದೂ, ಬೆಂಗಳೂರಿನಲ್ಲಿ ಟ್ರಾಂವೆಯನ್ನು ಹಾಕುವದೂ, ಇವುಗಳಿಗಾಗಿ
65.10 ಲಕ್ಷ ರೂಪಾ
ಮೊಬಲಗಿನ ಪೈಕಿ
ಯೋಗಿಸಿಕೊಳ್ಳಲು
ಕಾವೇರೀ ಜ
ಪ್ರೊಟೆಕ್ಷನ್ ಮೊಬ
ವದು, ಏರ್ಪಾಡುಗ
ಉದ್ದೇಶಿಸಲ್ಪಟ್ಟ ರೈ
ಗಾರಿಗಳಿಗೆ ಬೇಕಾದ
ಯೂ ಯತ್ನವಿಲ್ಲದೆ
ಬುಗಳಿಗಾಗಿ ಒದಗಿ
ದಕ್ಕೆ ಮುಖ್ಯ ಕಾರ
1914-15 ನೆಯ
ಮಳೆ ಬೆಳೆಗಳ
ನಿರೀಕ್ಷಣೆಯಮೇಲೆ
(1914-15 ನೆಯ ವ
ವಿಚಾರಕ್ಕೆ ತೆಗೆದುಕ
ಉತ್ಪತ್ತಿಯೂ, 358
ಆಗುವದೆಂದು ಅಂದಾ
ನ್ಯಬಾಬು ವಿಶೇಷಬಾ
ಗಳ ಲೆಕ್ಕವು ಇದರ
ಹುಟ್ಟುವಳಿ
ಒಟ್ಟು ಹುಟ್ಟುವಳಿ
ಪೈಕಿ ವಜಾ-ಸಿವಿಲ್
ಸ್ಟೇಷನಿನ ಸರ್
ನಿವ್ವಳ ಸಾಮಾನ್ಯ ಬ
ಖರ್ಚು
ಒಟ್ಟು ಖರ್ಚು
ಭಾರೀ ಕಾಂಗ

1. ಕಾವೇರೀ ಜಲಾ
2. ಕಾವೇರೀ ವಿದ್ಯು
ಸ್ಥಾಪನೆಗಾ
3. ಎಲೆ[illegible] ಟ್ರಾ
4. ಸ್ಟೇಟ್ ರೈಲ್ವೆಗಳ
5. ಸರ್ಕಾರೀ ಸಹಾ
ರೈಲ್ವೆಗಳಿಗೆ

ಸಾಮಾನ್ಯ ಬಾಬುಗಳ
ಸಾಮಾನ್ಯ ಲೆಕ್ಕದಲ್ಲಿ

1914 ನೆಯ ಜು
ಸಂಸ್ಥಾನದ ಲೇಣೆ ದೇ
ನ್ನು ಈ ಉಪನ್ಯಾಸಕ್ಕೆ
ನೋಡಿದರೆ ಮೂಲದ್ರ
ಳಿಗಾಗಿ ಭಾರಿಯಾಗಿ
ಸ್ಥಿತಿಯು ಪೂರ್ತಿಯಾ
ಹುದಾಗಿದೆ.

ಬೆಂಗಳೂರು ಸಿವಿ
ಸರ

ಬೆಂಗಳೂರು ಸಿವಿ
ಪ್ಲಸ್ ಹುಟ್ಟುವಳಿಯ
ರಿಗೆ ಇದ್ದ ಹಕ್ಕನ್ನು ಇ
ಅಂಗೀಕರಿಸುತ್ತಾರೆಂಬ
ಬಹಳ ಜಾಗರೂಕತೆಯಿ
ಇಸವಿಯ ಆಖೈರ ವರೆಗೆ ಈ ಸಂಸ್ಥಾನಕ್ಕೆ 39 ಲಕ್ಷ ರೂಪಾಯಿಗಿಂತ ಸ್ವಲ್ಪ ಜಾಸ್ತಿಯಾಗಿ ಹಣ ಸಲ್ಲಬೇಕಾಗಿರುತ್ತನೆಂಬದಾಗಿ ಗೊತ್ತುಮಾಡಲ್ಪಟ್ಟಿತು. ಆ ಪೈಕಿ ಭಾರಿ ಕಂತು ಎಂದರೆ 30 ಲಕ್ಷ ರೂಪಾಯಿ ಈ ವರ್ಷದಲ್ಲಿ ಜಮಾ ಬಂದಿರುತ್ತದೆ:

ಆಬ್ಕಾರಿ.

1912-13 ನೆಯ ವರ್ಷದಲ್ಲಿ ಆಬ್ಕಾರ ಹುಟ್ಟುವಳಿಯಾದಷ್ಟು ಹಿಂದೆ ಯಾವ ಸಂವತ್ಸರದಲ್ಲಿಯೂ ಆಗಿರಲಿಲ್ಲವೆಂದು ಹೋದವರ್ಷ ತಿಳಿಸಲಾಯಿತು. ಆದರೆ 1913-14 ನೆಯ ವರ್ಷದ ಉತ್ಪತ್ತಿಯು ಇನ್ನೂ ಜಾಸ್ತಿಯಾಗಿದೆ. ಈ ಉತ್ಪತ್ತಿಯು 53,28,221 ರೂಪಾಯಿಗಳು, ಎಂದರೆ ಹಿಂದಿನ ವರ್ಷದ ಹುಟ್ಟುವಳಿಗಿಂತ 4,33,971 ರೂಪಾಯಿಗಳಷ್ಟು ಜಾಸ್ತಿಯಾಗಿದೆ. ಇದರಲ್ಲಿ ಸುಮಾರು ಅರ್ಧಪಾಲು ದುಕಾನ್ ಗುತ್ತಿಗೆ ಬಾಬಿನಿಂದಲೂ, ಉಳಿದ ಮೊಬಲಗು ಮದ್ಯವು ಹೆಚ್ಚಾಗಿ ಬಿಕರಿಯಾದುದರಿಂದಲೂ ಉತ್ಪತ್ತಿಯಾಯಿತು. ಈ ಹೆಚ್ಚು ಹುಟ್ಟುವಳಿಯು ಅನ್ಯದೇಶದ ಮದ್ಯದ ವಿನಾ ಡ್ಯೂಟಿಗೆ ಗುರಿಯಾದ ಎಲ್ಲಾ ಬಾಬುಗಳಿಂದಲೂ ಆಯಿತು. ಸುಲಭಕ್ರಯಕ್ಕೆ ದೊರೆಯುವ ಹಲವು ಬಗೆಯಾದ ಅನ್ಯದೇಶದ ಮದ್ಯಗಳ ಪಾನವು ಕ್ರಮೇಣ ಕಡಿಮೆಯಾಗಿ ಬೆಂಗಳೂರು ಸೆಂಟ್ರಲ್ ಡಿಸ್ಟಲರಿಯಲ್ಲಿ ತಯಾರಾಗುವ ಮದ್ಯಗಳ ಉಪಯೋಗವೇ ಹೆಚ್ಚಾಗು

[redacted]

ವೈದ್ಯ ಮತ್ತೂ ಜನಾರೋಗ್ಯದ ಇಲಾಖೆಗಳು.

ಈ ಸಂಸ್ಥಾನದಲ್ಲಿ ದೇವೀ ಹಾಕುವುದಕ್ಕೆ ಉಪಯೋಗಿಸಿದ ಹಾಲಿನಲ್ಲಿ ದೋಷಗಳಿದ್ದವೆಂದು ಬಂದ ಕೆಲವು ಫಿರ್ಯಾದುಗಳನ್ನು ಚೆನ್ನಾಗಿ ವಿಚಾರಮಾಡುವುದಕ್ಕಾಗಿ ಒಂದು ಕಮಿಟಿಯನ್ನು 1913 ನೆಯ ಜುಲೈ ತಿಂಗಳಲ್ಲಿ ನೇಮಿಸಲಾಯಿತೆಂದು ಹೋದವರ್ಷದ ಉಪನ್ಯಾಸದಲ್ಲಿ ತಿಳಿಯಿಸಿದೆ. ಕಮಿಟಿಯವರು ಈ ವಿಷಯವನ್ನು ಬಹಳ ಜಾಗರೂಕತೆಯಿಂದ ವಿಚಾರಮಾಡಿದಮೇಲೆ ಮೈಸೂರು ಸೀಮೆಯ ಹಾಲಿನಲ್ಲಿ ಕೆಡಕು ಉಂಟಾಗತಕ್ಕ ದೋಷಗಳೇನೂ ಇಲ್ಲವೆಂತಲೂ, ಶಕ್ತಿಯ ವಿಷಯದಲ್ಲಿ ಇಂಡಿಯಾ ದೇಶದ ಇತರ ಪ್ರದೇಶಗಳಲ್ಲಿ ತಯಾರಾದ ಹಾಲಿಗೆ ನಮ್ಮ ಹಾಲು ನಿಕೃಷ್ಟವಾದದ್ದಲ್ಲವೆಂತಲೂ ನಿರ್ಣಯಿಸಿದರು. ಆದರೆ ಸದರಿ ಹಾಲಿನಲ್ಲಿ ಬೇರೆ ಸಜೀವ ಸೂಕ್ಷ್ಮವಸ್ತುಗಳು ಇರುತ್ತವೆಯಾಗಿ, ಅವುಗಳಿಂದ ಯಾವ ಕೆಡಕೂ ಇಲ್ಲದಿದ್ದರೂ, ಅವುಗಳನ್ನೂ ಕೂಡ ತೆಗೆದು ಹಾಕತಕ್ಕದ್ದು ಅವಶ್ಯಕವಾಗಿರುವದೆಂದು ಕಮಿಟಿಯವರು ಅಭಿಪ್ರಾಯಪಟ್ಟು, ಆ ವಿಷಯದಲ್ಲಿ ಕೆಲವು ಸಲಹೆಗಳನ್ನೂ ಕೊಟ್ಟಿರುತ್ತಾರೆ. ಈ ಸಲಹೆಗಳನ್ನು ಸರ್ಕಾರದವರು ಒಪ್ಪಿ ಇರುತ್ತಾರೆ.

ರಾಬರ್ಟ್‌ಸನ್ ಪೇಟೆಯಲ್ಲಿ ಹೆರಿಗೆಯ ಆಸ್ಪತ್ರೆಯನ್ನು ಜಾಗ್ರತೆಯಲ್ಲಿ ಜನರ ಉಪಯೋಗಕ್ಕೆ ತರಲಾಗುವುದು. ಈ ಆಸ್ಪ

ಅವುಗಳಲ್ಲಿ ಓದುವವರ ಸಂಖ್ಯೆ 31,290 ಆಗಿಯೂ ಇತ್ತು. ಒಟ್ಟು ವ್ಯಾಸಂಗಮಾಡುತ್ತಿರುವವರಲ್ಲಿ 1,54,319 ಮಂದಿ ಬಾಲಕರಾಗಿಯೂ, 33,411 ಮಂದಿ ಬಾಲೆಯರಾಗಿಯೂ ಇದ್ದರು. 1912-13ರಲ್ಲಿ ಒಟ್ಟು 1,29,009 ಮಂದಿ ಬಾಲಕರೂ, 27,431 ಮಂದಿ ಬಾಲೆಯರೂ ವ್ಯಾಸಂಗಮಾಡುತ್ತಿದ್ದರು. ಸ್ಕೂಲಿಗೆ ಹೋಗುವುದಕ್ಕೆ ಅರ್ಹವಾದ ವಯಸ್ಸುಳ್ಳ ಗಂಡಸರ ಪೈಕಿ, ಸ್ಕೂಲಿನಲ್ಲಿ ವ್ಯಾಸಂಗಮಾಡುತ್ತಿರುವವರ ಸಂಖ್ಯೆಯು ಶೇಕಡ 29.8 ರಿಂದ 35 ಕ್ಕೂ ಅದೇರೀತಿಯಲ್ಲಿರುವ ಒಟ್ಟು ಹೆಂಗಸರ ಪೈಕಿ ವ್ಯಾಸಂಗಮಾಡುತ್ತಿರುವ ಬಾಲೆಯರ ಸಂಖ್ಯೆಯು ಶೇಕಡ 6.4 ರಿಂದ 7.7 ಕ್ಕೂ ಹೆಚ್ಚಿರುತ್ತದೆ. ವ್ಯಾಸಂಗಾರ್ಹವಾದ ವಯಸ್ಸುಳ್ಳ ಒಟ್ಟು ಸ್ತ್ರೀಪುರುಷರ ಸಂಖ್ಯೆಯ ಪೈಕಿ ಒಟ್ಟು ವ್ಯಾಸಂಗಮಾಡುತ್ತಿರುವ ಬಾಲಿಕಾ ಬಾಲಕರ ಸಂಖ್ಯೆಯು ಕಳೆದ ವರ್ಷ ಶೇಕಡ 18.0 ಇದ್ದದ್ದು, ಈವರ್ಷ ಶೇಕಡ 21.4 ಕ್ಕೆ ಹೆಚ್ಚಿದಂತಾಗಿದೆ.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಕೆಮಿಸ್ಟ್ರಿ ಶಾಖೆಯ ಬಿ. ಎ. ಪ್ಯಾಸ್ ಕೋರ್ಸನ್ನೂ, ಫಿಜಿಕ್ಸ್ ಶಾಖೆಯ ಆನರ್ಸ್ ಕೋರ್ಸನ್ನೂ ಮದರಾಸ್ ಯೂನಿವರ್ಸಿಟಿಗೆ ಸಂಬಂಧಪಡಿಸಲಾಯಿತು. ಆದರೆ ಸುಶಿಕ್ಷಿತರಾದ ಯೂರೋಪ್ ದೇಶದ ಒಬ್ಬ ಅಸಿಸ್ಟೆಂಟ್ ಪ್ರೊಫೆಸರು ಇಲ್ಲದೆ ಇರುವದರಿಂದ, ಕೆಮಿಸ್ಟ್ರಿ ಶಾಖೆಯ ಆನರ್ಸ್ ಕೋರ್ಸನ್ನು ಪ್ರಾರಂಭಿಸುವದು ಸಾವಕಾಶಮಾಡಬೇಕಾಯಿತು. ಮೈಸೂರು ಮಹಾರಾಜಾ ಕಾಲೇಜಿನಲ್ಲಿ, ಹಿಸ್ಟರಿ ಮತ್ತು ಎಕನಾಮಿಕ್ಸ್ ಭಾಗಗಳಲ್ಲಿ ಒಂದು ಆನರ್ಸ್ ಕೋರ್ಸನ್ನೂ ಏರ್ಪಡಿಸಲಾಯಿತು. ಈ ಕೋರ್ಸುಗಳನ್ನು ಏರ್ಪಡಿಸಿದ್ದರಿಂದ ಬೇಕಾದ ಸಲಕರಣೆಗಾಗಿಯೂ ಹೆಚ್ಚು ಶಿಬ್ಬಂದಿಗಾಗಿಯೂ ಸ್ವಲ್ಪ ಖರ್ಚನ್ನು ಮಾಡುವುದು ಅವಶ್ಯಕವಾಯಿತು.

ಪ್ರೌಢವಿದ್ಯಾಭ್ಯಾಸದ ವಿಷಯದಲ್ಲಿಯೂ ಇತರ ಅಭಿವೃದ್ಧಿಕಾರ್ಯಗಳು ಜರುಗಿಸಲ್ಪಟ್ಟವು. ಆದರೆ ಈ ಇಲಾಖೆಯ ಯಾವಚ್ಛಕ್ತಿಯನ್ನೂ ಮುಖ್ಯವಾಗಿ ಪ್ರಾಥಮಿಕ ವಿದ್ಯಾಭಿವೃದ್ಧಿಗಾಗಿ ವಿನಿಯೋಗಿಸಲಾಯಿತು. ಗ್ರಾಮಪಾಠಶಾಲೆಗಳನ್ನು ಹೆಚ್ಚಿಸುವುದಕ್ಕಾಗಿ ಪ್ರತ್ಯೇಕವಾಗಿ ಒಂದು ಲಕ್ಷ ರೂಪಾಯಿ ಗ್ರಾಂಟನ್ನೂ, ಸ್ಕೂಲ್ ಕಟ್ಟಡಗಳನ್ನು ಕಟ್ಟಿಸತಕ್ಕಬಗ್ಗೆ ಅರ್ಧ ಲಕ್ಷ ರೂಪಾಯಿ ಗ್ರಾಂಟನ್ನೂ ಕೊಡಲಾಯಿತು. ಗ್ರಾಂಟ್ ಇನ್‌ಯೆಯ್ಡ್ ನಿಬಂಧನೆಗಳ ಮೇರೆ 1,000 ಸ್ಕೂಲುಗಳನ್ನು ಏರ್ಪಡಿಸಲು ಮುಂಜೂರ್‌ಮಾಡಲಾಯಿತು. ಯಾವ ಉಪಾಧ್ಯಾಯನಿಗೇ ಆಗಲಿ ಮಾಹೆಯಾನ 10 ರೂಪಾಯಿಗೆ ಕಮ್ಮಿ ಇಲ್ಲದಷ್ಟು ಸಂಬಳ ದೊರೆಯುವಂತೆ ಮಾಡಲು, ಸರ್ಕಾರದಿಂದ ಕೊಡುವ ಗ್ರಾಂಟಿನ ಜೊತೆಗೆ ಗ್ರಾಮಸ್ಥರು ದ್ರವ್ಯರೂಪವಾಗಿಯಾಗಲೀ ಧಾನ್ಯರೂಪವಾಗಿಯಾಗಲಿ ಸಹಾಯ ಮಾಡಬೇಕಾದದ್ದೇ ಇದರ ಮೂಲತತ್ವವು.

ನಿರ್ಬಂಧ ವಿದ್ಯಾಭ್ಯಾಸದ ಒಂದು ಏರ್ಪಾಟನ್ನು ಮಂಜೂರ್ಮಾಡಿರುವದಲ್ಲದೆ, ಇದನ್ನು ಸದ್ಯದಲ್ಲಿ ಚುನಾಯಿಸಲ್ಪಟ್ಟಿರುವ 15 ಮುಖ್ಯ ಸ್ಥಳಗಳಲ್ಲಿ ಆಜಮಾಯಿಷಿ ಮಾಡಲಾಗುವುದು. ಇದಕ್ಕಾಗಿ ನಿಯಮಗಳನ್ನು ತಯಾರ್ಮಾಡಿಸಿ, ಹಣವನ್ನು ಒದಗಿಸಿ ಇದೆ. ಮತ್ತು ಮೊದಲು ಮಾಡಬೇಕಾದ ಸಂವಿಧಾನಗಳೆಲ್ಲಾ ಮುಗಿದಿರುತ್ತವೆ.

ಪ್ರಾಥಮಿಕ ವಿದ್ಯಾಭ್ಯಾಸವನ್ನೂ ಸಾಮಾನ್ಯ ವಿದ್ಯಾಭ್ಯಾಸವನ್ನೂ ಹೆಚ್ಚಿಸಿದ್ದರಿಂದ, ಸಂಸ್ಥಾನದಲ್ಲಿ ಇದುವರೆಗೆ ದೊರೆಯುತ್ತಿದ್ದುದಕ್ಕಿಂತಲೂ ಶಿಕ್ಷಿತರಾದ ಹೆಚ್ಚು ಜನ ಉಪಾಧ್ಯಾಯರನ್ನೂ, ಇನ್ನೂ ಉತ್ತಮವಾದ ಶಿಕ್ಷಣಕ್ರಮವನ್ನೂ ಒದಗಿಸತಕ್ಕದ್ದು ಅವಶ್ಯಕವಾಗಿರುತ್ತದೆ. ಇದನ್ನು ಒದಗಿಸಬೇಕೆಂಬ ಉದ್ದೇಶದಿಂದ ಟ್ರೇನಿಂಗ್ ಸ್ಕೂಲ್‌ಗಳನ್ನು ಇನ್ನೂ ಚೆನ್ನಾಗಿ ಸರಿಪಡಿಸುವುದಕ್ಕೂ, ಅವುಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕೂ ಒಂದು ಏರ್ಪಾಡು ಅಂಗೀಕೃತವಾಗಿದೆ. ಆ ಏರ್ಪಾಡಿನ ಸಾರಾಂಶವೇನೆಂದರೆ—ಗ್ರಾಜುಯೇಟುಗಳಾದ ಉಪಾಧ್ಯಾಯರಿಗಾಗಿ ಒಂದು ಟ್ರೇನಿಂಗ್ ತರಗತಿಯನ್ನಿಟ್ಟು ಮೈಸೂರು ನಾರ್ಮಲ್‌ಸ್ಕೂಲನ್ನು ಒಂದು ಟ್ರೇನಿಂಗ್ ಕಾಲೇಜನ್ನಾಗಿ ಮಾಡುವುದು; ಶಿವಮೊಗ್ಗೆಯಲ್ಲಿಯೂ, ಕೋಲಾರದಲ್ಲಿಯೂ ಇರುವ ಟ್ರೇನಿಂಗ್ ಸ್ಕೂಲುಗಳನ್ನು ಇನ್ನೂ ಚೆನ್ನಾಗಿ ಸರಿಪಡಿಸುವುದು; ಮತ್ತು ಶೀಘ್ರದಲ್ಲಿಯೇ ತುಮಕೂರಲ್ಲಿ ಒಂದು ಟ್ರೇನಿಂಗ್ ಸ್ಕೂಲನ್ನು ಇಡುವುದು. ಈಗ ಸಾಲಿಯಾನ 254 ಜನ ಉಪಾಧ್ಯಾಯರಿಗೆ ಶಿಕ್ಷಣವನ್ನು ಕೊಡುತ್ತಿರುವುದಕ್ಕೆ ಬದಲಾಗಿ, ಮುಂದೆ 440 ಜನ ಉಪಾಧ್ಯಾಯರಿಗೆ ಶಿಕ್ಷಣವನ್ನು ಕೊಡುವುದೇ ಈ ಬದಲಾವಣೆಗಳ ಫಲಿತಾಂಶವಾಗುವುದು.

ಹಿಂದಿನ ವರ್ಷದ ಉಪನ್ಯಾಸದಲ್ಲಿ ನಿರೂಪಿಸಿರುವಂತೆ ಶಿಲ್ಪ ವಾಣಿಜ್ಯ ವಿದ್ಯಾಭಿವೃದ್ಧಿಗೆ ಬೇಕಾದ ಅನೇಕ ಏರ್ಪಾಡುಗಳನ್ನು ಜಾರಿಗೆ ತರಲಾಯಿತು. ಬೆಂಗಳೂರಲ್ಲಿ ಒಂದು ಮೆಕ್ಯಾನಿಕಲ್ ಎಂಜನಿಯರಿಂಗ್ ಸ್ಕೂಲನ್ನೂ ಒಂದು ಕಮರ್ಷಿಯಲ್ ಸ್ಕೂಲನ್ನೂ ಸ್ಥಾಪಿಸಲಾಯಿತು. ಮೈಸೂರಲ್ಲಿ ಮೊದಲಿದ್ದ ಎರಡು ಶಿಲ್ಪಶಾಲೆಗಳನ್ನು ಸೇರಿಸಿ ಹೊಸದಾಗಿ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟನ್ನು ಏರ್ಪಡಿಸಲಾಯಿತು. ಪ್ರಸಕ್ತ ಸಂವತ್ಸರದಲ್ಲಿ ಮೇಲ್ಕಂಡ ವಿದ್ಯಾಲಯಗಳಲ್ಲೆಲ್ಲಾ ಅತ್ಯುತ್ತಮವಾದ ಉದ್ಯೋಗವು ಜರುಗಿರುತ್ತದೆ ಎಂದು ತಿಳಿಯಬರುತ್ತದೆ. ಕೈಗಾರಿಕೆ ಕಸಬನ್ನು ಕಲಿಸುವ ಉಪಾಧ್ಯಾಯರುಗಳನ್ನೂ, ರೈಲ್ವೆ ಪರ್ಮನೆಂಟ್ ವೇ ಇನ್‌ಸ್ಪೆಕ್ಟರುಗಳನ್ನೂ ಎಂಜಿನ್ ಡ್ರೈವರುಗಳನ್ನೂ ಮತ್ತು ಟೆಲಿಗ್ರಾಫಿಕ್ ಸಿಗ್ನಲರುಗಳನ್ನೂ, ತಯಾರ್ಮಾಡತಕ್ಕ ಬಗ್ಗೆ ಮೆಕ್ಯಾನಿಕಲ್ ಎಂಜನಿಯರಿಂಗ್ ಸ್ಕೂಲಿನಲ್ಲಿ ಹೊಸ ತರಗತಿಗಳನ್ನು ಇಡಲು ಏರ್ಪಾಡು ಮಾಡಲಾಗಿದೆ. ಗೌರ್ನಮೆಂಟ್ ಪ್ರೆಸ್ ಕಟ್ಟಡದ ಒಂದು ಭಾಗದಲ್ಲಿ, ಆಜಮಾಯಿಷಿ ತರೀಕ್ ಒಂದುವರ್ಷದವರೆಗೆ ಒಂದು ಪ್ರಿಂಟಿಂಗ್ ಕ್ಲಾಸನ್ನು ಇಡಲಾಗುತ್ತದೆ. ಅದರಲ್ಲಿ ಮೊಳೆಗಳನ್ನು ಜೋಡಿಸುವುದು, ಪ್ರೂಫುಗಳನ್ನು ಓದಿ ತಿದ್ದುವುದು, ಮುದ್ರಿಸುವುದು, ಈ ಕೆಲಸಗಳನ್ನು ಕಲಿಸಲಾಗುವುದು.

ಸ್ತ್ರೀವಿದ್ಯಾಭ್ಯಾಸವೂ ಕೂಡ ಅಭಿವೃದ್ಧಿಯಾಗುತ್ತಿದೆ. ಕಳೆದ ಸಾಲಿನಲ್ಲಿ ಇದ್ದ ಗರ್ಲ್ಸ್ ಸ್ಕೂಲುಗಳ ಸಂಖ್ಯೆಯು 360 ರಿಂದ ಪ್ರಕೃತ ವರ್ಷದಲ್ಲಿ 397 ರ ವರೆಗೆ ಹೆಚ್ಚಿರುತ್ತದೆ. ಮೈಸೂರಲ್ಲಿರುವ ಮಹಾರಾಣೀ ಕಾಲೇಜನ್ನೂ, ಡಿಸ್ಟ್ರಿಕ್ಟು ಕಸಬೆಗಳಲ್ಲಿರುವ ಗರ್ಲ್ಸ್ ಸ್ಕೂಲುಗಳನ್ನೂ, ಅವುಗಳ ಪ್ರಯೋಜನವನ್ನೂ ಹೆಚ್ಚಿಸಬೇಕೆಂಬ ಉದ್ದೇಶದಿಂದ, ಪುನಃ ಪರಿಷ್ಕರಿಸಲು ಹುಕುಂ ಕೊಡಲಾಗಿರುತ್ತದೆ. ಸದರಿ ಕಾಲೇಜಿಗೆ ಸೇರಿದಂತೆ ಒಂದು ಹಾಸ್ಟೆಲನ್ನು ಏರ್ಪಡಿಸಲಾಗುವುದು ಮತ್ತು ಮುಂದೆ ಸರ್ಕಾರದ ಆಡಳಿತಕ್ಕೆ ತೆಗೆದುಕೊಳ್ಳುವ ಮೈಸೂರು ವಿಡೋಸ್ ಹೋಮನ್ನು ಅದಕ್ಕೆ ಸೇರಿಸಲಾಗುತ್ತದೆ. ಬೆಂಗಳೂರಿನಲ್ಲಿರುವ ಗೌರ್ನಮೆಂಟ್ ಗರ್ಲ್ಸ್ ಸ್ಕೂಲಿನಲ್ಲಿಯೂ, ತುಮಕೂರು ಯಂಪ್ರೆಸ್ ಗರ್ಲ್ಸ್ ಸ್ಕೂಲಿನಲ್ಲಿಯೂ ಕನ್ನಡ ಅಪ್ಪರ್ ಸೆಕೆಂಡರಿ ತರಗತಿಗಳನ್ನಿಟ್ಟು ಸದರಿ ಸ್ಕೂಲುಗಳನ್ನು ಹೈಸ್ಕೂಲ್ ಅಂತಸ್ತಿಗೆ ತರಲಾಗುವುದು. ಈ ಸ್ಕೂಲುಗಳಲ್ಲಿಯೂ ಬೆಂಗಳೂರು ಆರ್ಯಬಾಲಿಕಾ ಪಾಠಶಾಲೆಯಲ್ಲಿಯೂ, ಚಾಮರಾಜಪೇಟೆ ಗರ್ಲ್ಸ್ ಸ್ಕೂಲಿನಲ್ಲಿಯೂ ಇಂಗ್ಲೀಷ್ ಲೋವರ್‌ಸೆಕೆಂಡರಿ ಕ್ಲಾಸುಗಳನ್ನು ಇಡಲಾಗುವುದು. ಬೆಂಗಳೂರು ಮಲ್ಲೇಶ್ವರದ ಗರ್ಲ್ಸ್ ಸ್ಕೂಲಿನಲ್ಲಿಯೂ, ಕೋಲಾರ, ಚಿಕ್ಕಮಗಳೂರು, ಚಿತ್ರದುರ್ಗ, ಶಿವಮೊಗ್ಗೆ, ಹಾಸನ ಇವುಗಳಲ್ಲಿನ ಗರ್ಲ್ಸ್ ಸ್ಕೂಲುಗಳಲ್ಲಿಯೂ ಇಂಗ್ಲೀಷ್ ಭಾಷೆಯನ್ನು ಕಲಿಸುವುದಕ್ಕೆ ಏರ್ಪಾಡು ಮಾಡಲಾಗುವುದು. ಈ ಹೊಸ ಬದಲಾವಣೆಗಳಿಂದ ಭಾಷೆಗೆ ಸಂಬಂಧಪಟ್ಟ ವಿದ್ಯೆಯೊಂದಿಗೆ ಕೈಗಾರಿಕೆಗೂ ಗೃಹಕೃತ್ಯಕ್ಕೂ ಸಂಬಂಧಪಟ್ಟ ವಿದ್ಯೆಗಳಿಗೂ ಅವಕಾಶವುಂಟಾಗುವುದು. ಹಿಂದುಸ್ಥಾನಿ ಗರ್ಲ್ಸ್ ಸ್ಕೂಲುಗಳಿಗೆ ಒಬ್ಬರು ಇನ್‌ಸ್ಪೆಕ್ಟ್ರೆಸ್ಸನ್ನು ಹಂಗಾಮಿಯಾಗಿ ನೇಮಿಸಿಯಿದೆ.

ಜಾರಿಗೆ ತಂದಿರುವ ಮುಖ್ಯಮುಖ್ಯ ಇತರ ಏರ್ಪಾಡುಗಳಲ್ಲಿ ಈ ಕೆಳಗೆ ಕಂಡ ಸಂಗತಿಗಳನ್ನು ಉದಹರಿಸಬಹುದಾಗಿದೆ :— ವರ್ನಾಕ್ಯುಲರ್ ವಿದ್ಯಾಭ್ಯಾಸದ ನೀದಾ ಛಾರ್ಜಿಗೆ ವಿದ್ಯಾಭ್ಯಾಸದ ಇಲಾಖೆಯ ಡೆಪ್ಯುಟಿ ಇನ್‌ಸ್ಪೆಕ್ಟರ್ ಜನರಲ್‌ರವರನ್ನು ನಿಯಮಿಸಿದ್ದು, ಆಫೀಸರುಗಳ ಮತ್ತೂ ಹೈಸ್ಕೂಲ್ ಆಂಗ್ಲೋ ವರ್ನಾಕ್ಯುಲರ್ ಸ್ಕೂಲುಗಳ ಹೆಡ್ಮಾಸ್ಟರ ಮತ್ತೂ ಇತರ ಉಪಾಧ್ಯಾಯರ ಸಂಬಳದ ದರ್ಜೆಯನ್ನು ಪುನರ್ವಿಮರ್ಶೆ ಮಾಡಿದ್ದು, ಪ್ರತಿ ದರ್ಜೆಯಲ್ಲಿಯೂ ಎಷ್ಟು ಜನಗಳಿರಬೇಕೆಂಬುದನ್ನು ಕ್ಲಪ್ತಪಡಿಸುವುದು, ಒಂದು ದರ್ಜೆಯು ಮತ್ತೊಂದು ದರ್ಜೆಗೆ ಸೇರಿಕೊಳ್ಳದಂತೆ ಮಾಡುವುದು, ಯೋಗ್ಯತೆಯ ಆಧಾರದ ಮೇಲೆಯೇ ಚುನಾವಣೆಯನ್ನು ಮಾಡಿಕೊಳ್ಳಲು ಸೌಲಭ್ಯವನ್ನು ಕಲ್ಪಿಸುವುದು, ಪಾಠಹೇಳುವ ಉಪಾಧ್ಯಾಯರುಗಳೂ, ಪರೀಕ್ಷೆ ಕೆಲಸವನ್ನು ನೋಡುವ ಇನ್‌ಸ್ಪೆಕ್ಟರುಗಳೂ ಒಬ್ಬರ ಕೆಲಸವನ್ನು ಮತ್ತೊಬ್ಬರು ಕ್ರಮವಾಗಿ ವಹಿಸುವುದಕ್ಕೆ ಅವಕಾಶಕೊಡುವುದು, ಮತ್ತೂ ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್ ಉಪಾಧ್ಯಾಯರುಗಳ ಸಂಬಳವು ಅಪೇಕ್ಷಾರ್ಹವಾಗಿ ಇರುವಂತೆ ಮಾಡುವುದು, ಸರ್ಕಾರಿ ಸಹಾಯವನ್ನು ಪಡೆಯುವ ಸ್ಕೂಲುಗಳ ಉಪಾಧ್ಯಾಯರಿಗೆ ಸಂಸ್ಥಾನದ ಬೀಮಾ ಕ್ರಮದಿಂದ (ಇನ್‌ಷ್ಯೂರೆನ್ಸ್) ಉಂಟಾಗುವ ಪ್ರಯೋಜನವನ್ನು ಪಡೆಯಲು ಕೆಲವು ಷರತ್ತುಗಳ ಮೇಲೆ ಅವಕಾಶಕೊಡಲಾಗಿದೆ.

ಕಳೆದ ದಸರಾ ಮಹೋತ್ಸವ ಕಾಲದಲ್ಲಿ ಮೈಸೂರಲ್ಲಿ ವಿದ್ಯಾಭ್ಯಾಸಪ್ರದರ್ಶನವನ್ನು ನಡೆಯಿಸಲಾಯಿತು. ಆ ಪ್ರದರ್ಶನಕ್ಕೆ ಅನೇಕ ಜನಗಳು ಬಂದಿದ್ದರು. ಡಿಸೆಂಬರ ಮಾಹೆಯ ಆಖೈರಿನಲ್ಲಿ ಅಂತಹ ಮತ್ತೊಂದು ಪ್ರದರ್ಶನವನ್ನು ಬೆಂಗಳೂರು ಹೈಸ್ಕೂಲಿನಲ್ಲಿ ಜರುಗಿಸಲಾಯಿತು. ಅದೂ ಜನಗಳ ವಿಶ್ವಾಸಕ್ಕೆ ಪಾತ್ರವಾಯಿತು.

ವ್ಯವಸಾಯದ ಇಲಾಖೆ.

ಈ ಸಂಸ್ಥಾನದ ಮುಖ್ಯ ಕಸಬಾದ ವ್ಯವಸಾಯವನ್ನು ಉತ್ತಮಸ್ಥಿತಿಗೆ ತರುವ ವಿಷಯದಲ್ಲಿ ವ್ಯವಸಾಯದ ಇಲಾಖೆಯವರು ಸಾರ್ಥಕವಾದ ಕೆಲಸವನ್ನು ಮಾಡಬೇಕಾದರೆ, ಆ ಇಲಾಖೆಗೆ ಹೆಚ್ಚು ಸಿಬ್ಬಂದಿಯನ್ನು ಕೊಡುವ ಅವಶ್ಯಕತೆಯು ಕೆಲವು ಕಾಲದಿಂದ ಕಂಡುಬಂದಿತ್ತು. ಈ ಉದ್ದೇಶದಿಂದಲೇ ಈ ವರ್ಷದಲ್ಲಿ ಈ ಇಲಾಖೆಯನ್ನು ಪರಿಷ್ಕರಿಸಲಾಗಿದೆ. ಇದರ ಫಲಿತಾಂಶವು ಗೋಚರಕ್ಕೆ ಬರುತ್ತಲಿದೆ. ಈ ಹೊಸ ಏರ್ಪಾಡುಗಳನ್ನು ಪ್ರಸಕ್ತವರ್ಷ ಮುಗಿಯುವುದಕ್ಕೆ ಹಿಂದೆ ನಾಲ್ಕುತಿಂಗಳಲ್ಲಿಯೇ ಜಾರಿಗೆ ತರಲು ಅವಕಾಶವಾಯಿತು—ಆದರೂ ಅಷ್ಟು ಸ್ವಲ್ಪ ಕಾಲದೊಳಗೆ ವಿಶೇಷ ಹೊಸಕೆಲಸಗಳನ್ನು ಎಂದರೆ ಮುಖ್ಯವಾಗಿ ನಿದರ್ಶನಪೂರ್ವಕವಾಗಿ ತೋರಿಸುವ ವ್ಯವಸಾಯದ ಕೆಲಸಗಳನ್ನು ಪ್ರಾರಂಭಿಸುವುದಕ್ಕೆ ಸಾಧ್ಯವಾಯಿತು. ಯತ್ನವಿಲ್ಲದಿದ್ದುದರಿಂದ ಈ ನಿದರ್ಶನದಕೆಲಸಗಳನ್ನು ಇದುವರೆಗೆ ಕೆಲವು ಸ್ಥಳಗಳಲ್ಲಿ ಮಾತ್ರ ನಡಿಸುತ್ತಿತ್ತು. ಆ ಕೆಲಸವನ್ನು ಈಗ ಈ ಸಂಸ್ಥಾನದ ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ನಡೆಸುತ್ತಲಿದೆ.

ಹೋದವರ್ಷದ ಉಪನ್ಯಾಸದಲ್ಲಿ ವ್ಯವಸಾಯ ವಿಷಯಕವಾದ ಕೆಲಸಗಳನ್ನು ಕಾರ್ಯತಃ ನಡೆಯಿಸುವುದಕ್ಕಾಗಿ ತಿಳುವಳಿಕೆಯನ್ನು ಕೊಡುವುದಕ್ಕೆ ಬೆಂಗಳೂರಲ್ಲಿ ಒಂದು ವ್ಯವಸಾಯದ ಸ್ಕೂಲನ್ನು ಸ್ಥಾಪಿಸಲಾಗಿದೆ ಎಂಬುದಾಗಿ ತಿಳಿಸಿರುತ್ತದೆ. ಈ ಸ್ಕೂಲು ಪ್ರಾರಂಭವಾಗಿ ಒಂದು ವರ್ಷವಾಗಿದೆ. ಅದರಲ್ಲಿ 15 ಮಂದಿ ಹೊಸ ವಿದ್ಯಾರ್ಥಿಗಳೂ ಮತ್ತೂ 14 ಮಂದಿ ೨ ನೆಯ ವರ್ಷದ ವ್ಯಾಸಂಗವನ್ನು ಮಾಡುವವರೂ ಇದಾರೆ. ರೈತರ ಮತ್ತೂ ಜಮೀನ್ ಹಿಡುವಳಿದಾರರ ಪ್ರಯೋಜನಕ್ಕೋಸ್ಕರ ಜಮೀನು ಸಾಗುವಳಿ ಕೆಲಸಗಳನ್ನು ಒಂದು ವಾರದವರೆಗೆ ಬೋಧಿಸುವುದಕ್ಕೆ ಏರ್ಪಾಡು ಮಾಡಲ್ಪಟ್ಟಿತು. ಈ ಬೋಧೆಯನ್ನು ಕೇಳುವುದಕ್ಕಾಗಿ ಸುಮಾರು ನೂರುಮಂದಿ ಜನರು ಬಂದು ಇದ್ದರು. ಈ ಚಾಲ್ತೀ ವರ್ಷದಲ್ಲಿ ಇದೇ ರೀತಿಯಲ್ಲಿ ಸಣ್ಣಸಣ್ಣ ಉಪನ್ಯಾಸಗಳನ್ನು ಕ್ರಮವಾಗಿ ನಡೆಸಬೇಕೆಂಬ ಉದ್ದೇಶವಿದೆ. ಅವುಗಳನ್ನು ಕೇಳುವುದಕ್ಕೋಸ್ಕರ ಬರುವ ಜನರು ಇಳಿದುಕೊಳ್ಳುವುದಕ್ಕೆ ಕಟ್ಟಡಗಳನ್ನು ಕಟ್ಟಿಸುತ್ತಲಿದೆ.

ಕೈಗಾರಿಕೆ ಮತ್ತೂ ವ್ಯಾಪಾರ ಇಲಾಖೆ.

ಕೈಗಾರಿಕೆಯ ಕೆಲಸಗಳಿಗಾಗಿ ತಕಾವಿ ಸಾಲ ಕೊಡುವುದನ್ನು ಕ್ರಮಪಡಿಸುವುದಕ್ಕೆ ಸಂಬಂಧಪಟ್ಟ ನಿಬಂಧನೆಗಳನ್ನು, ಹೋದವರ್ಷದ ಉಪನ್ಯಾಸದಲ್ಲಿ ಸೂಚಿಸಿರುವಂತೆ ವಿಸ್ತರಿಸಿ, ತಕಾವಿ ಸಾಲಗಳಿಗೆ ಬದಲಾಗಿ ಬಾಡಿಗೆ ಕ್ರಯದಮೇರೆ ಯಂತ್ರಗಳನ್ನು ಬಿಕರಿ ಮಾಡುವುದಕ್ಕೆ ಅವಕಾಶ ಕೊಟ್ಟಿರುತ್ತದೆ. ಈ ವರ್ಷದಲ್ಲಿ ಸುಮಾರು ಒಂದು ಲಕ್ಷ ರೂಪಾಯಿಗಳ ವರೆಗೆ ತಕಾವಿ ಸಾಲಗಳನ್ನೂ, ಇತರವಿಧವಾದ ಸಾಲಗಳನ್ನೂ ಕೊಟ್ಟಿರುತ್ತದೆ.

ಸಾಲಾಖೈರಿಗೆ, 1,44,000 ರೂ. ಖರ್ಚಿನಲ್ಲಿ 26 ಯಂತ್ರಗಳ ಸ್ಥಾಪನೆಯು ಮುಗಿದಿತ್ತು ; ಇನ್ನೂ 13 ಯಂತ್ರಗಳ ಸ್ಥಾಪನೆಯು ನಡೆಯಬೇಕಾಗಿತ್ತು.

ಹುಳಿಹರದಲ್ಲಿಯೂ, ಹಂಸವಾಡಿಯಲ್ಲಿಯೂ ಸ್ಥಾಪಿಸಿದ ನೀರೆತ್ತುವ ಯಂತ್ರಗಳು ಚೆನ್ನಾಗಿ ಕೆಲಸ ಮಾಡುತ್ತಿರುವುದರಿಂದ. ಶೀಘ್ರದಲ್ಲಿಯೇ ತುಂಗಭದ್ರಾ ತೀರದಲ್ಲಿಯೂ ಅದರ ಎರಡು ದೊಡ್ಡ ಶಾಖೆಗಳ ತೀರದಲ್ಲಿಯೂ ನೀರಾವರಿಗಾಗಿ ಅನೇಕ ಪಂಪಿನ ಯಂತ್ರಗಳನ್ನು ಸ್ಥಾಪಿಸುವ ನಿರೀಕ್ಷಣೆ ಇದೆ.

ಮೈಸೂರಲ್ಲಿ ಸಕ್ಕರೆ ತಯಾರಿ, ಎಣ್ಣೆ ಯಂತ್ರಗಳ ಮತ್ತೂ ಹೀರುವ ಗ್ಯಾಸ್ ಯಂತ್ರಸಾಮಗ್ರಿಗಳ ಉಪಯೋಗ, ಸಿಸಲ್ ಸೆಣಬಿನ ವ್ಯವಸಾಯ, ಇವೇ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ವಿಚಾರವನ್ನು ಆಯಾ ಇಲಾಖೆಯವರು ಮಾಡಿ ಆ ಮೂಲಕ ತಿಳಿಯಬಂದ ಸಂಗತಿಗಳನ್ನು ಹೋದವರ್ಷ ಅನೇಕ ಲೇಖನಗಳ ಮೂಲಕ ಪ್ರಚಾರ ಮಾಡಿದರು. ರೈಲ್ವೆ ಮೂಲಕ ನಡೆಯುವ ವ್ಯಾಪಾರದ ಲೆಕ್ಕಪಕ್ಕಗಳು ಇದುವರೆಗೆ ಬಂದಿರುವವುಗಳು ಕೇವಲ ತೃಪ್ತಿಕರವಾಗಿಲ್ಲದಿರುವುದರಿಂದ, ರೈಲ್ವೇ ಮೂಲಕ ಈ ದೇಶದಿಂದ ಹೊರಕ್ಕೂ ಹೊರಗಣಿಂದ ಇಲ್ಲಿಗೂ ಸಾಗುವ ವಸ್ತುಗಳ ಲೆಕ್ಕಗಳನ್ನು ತಪ್ಸೀಲ್ವಾರಾಗಿ ಮೂರು ತಿಂಗಳಿಗೊಂದುಸಾರಿ ಕಳುಹಿಸಿಕೊಡಬೇಕೆಂದು, ಮದ್ರಾಸು ದಕ್ಷಿಣ ಮಹಾರಾಷ್ಟ್ರ ಕಂಪೆನಿಯವರೊಡನೆ ಏರ್ಪಾಡು ಮಾಡಿ ಇದೆ.

ಪರಸ್ಪರ ಸಹಾಯಕ ಸಂಘಗಳು.

ಪ್ರಸಕ್ತವರ್ಷದಲ್ಲಿ ಪರಸ್ಪರ ಸಹಾಯಕ ಸಂಘಗಳ ಏರ್ಪಾಡು ವಿಶೇಷ ಅಭಿವೃದ್ಧಿಗೆ ಬಂದಿತು. ಈ ಏರ್ಪಾಡು ಇದುವರೆಗೆ ಮಲೆನಾಡು ಡಿಸ್ಟ್ರಿಕ್ಟುಗಳಲ್ಲಿ ಅಭಿವೃದ್ಧಿಗೆ ಬಾರದೆ ಇದ್ದು, ಈಗ ಅಲ್ಲಿಗೂ ವ್ಯಾಪಿಸುತ್ತಿರುವದು ತೃಪ್ತಿಕರವಾಗಿದೆ.

ಕ್ರೆಡಿಟ್ ಸೊಸೈಟಿಗಳು ಎಂದರೆ ಸಾಲ ಕೊಡುವ ಸಂಘಗಳು ಎಂದಿನಂತೆ ಜನರಿಗೆ ಬೇಕಾಗಿಯೂ ಉಪಯೋಗಕರವಾಗಿಯೂ ಇರುವಲ್ಲಿ, ಇತರ ವಿಧಗಳಾದ ಪರಸ್ಪರ ಸಹಾಯಕ ಸಂಘಗಳೂ ಕ್ರಮೇಣ ಬಳಕೆಗೆ ಬರುತ್ತಿವೆ; ಎಂದರೆ ಪರಸ್ಪರ ಸಹಾಯಕ ನಿಯಮಗಳ ಮೇಲೆ ಜಮೀನಿಗೆ ನೀರು ಸರಬರಾಯಿ ಮಾಡುವ ಕೆಲಸವನ್ನೂ, ಕಚ್ಚಾಪದಾರ್ಥಗಳನ್ನು ಕೊಂಡುಕೊಳ್ಳುವ ಕೆಲಸವನ್ನೂ ಮತ್ತು ಸರಕನ್ನು ಬಿಕರಿ ಮಾಡುವ ಕೆಲಸವನ್ನೂ ನಡಿಸುವುದಕ್ಕೆ ಈಗ ಬೇರೆ ಬೇರೆ ಸಂಘಗಳು ಹುಟ್ಟಿವೆ.

ಈ ವರ್ಷದಲ್ಲಿ ಸಂಘಗಳ ಸಂಖ್ಯೆಯು 343 ರಿಂದ 530 ಕ್ಕೂ, ಮೆಂಬರುಗಳ ಸಂಖ್ಯೆ 24,538 ರಿಂದ 40,479 ಕ್ಕೂ ಕೆಲಸ ನಡಿಸುವದಕ್ಕೆ ಸಹಾಯಕವಾದ ಮೂಲಧನವು 12,89,338 ರೂಪಾಯಿಂದ 21,47,340 ರೂಪಾಯಿಗೂ, ಒಟ್ಟು ಲೇವಾದೇವಿಗಳು 59,52,081 ರೂಪಾಯಿಂದ 96,28,523 ರೂಪಾಯಿಗೂ ಲಾಭವು 12,998 ರೂಪಾಯಿಂದ 2,30,224 ರೂಪಾಯಿಗೂ, ರಿಜರ್ವ್ ಫಂಡು 30,600 ರೂಪಾಯಿಂದ 56,240 ರೂಪಾಯಿಗೂ ಹೆಚ್ಚಿರುತ್ತವೆ. ಬೆಂಗಳೂರಿನ ಸೆಂಟ್ರಲ್ ಬ್ಯಾಂಕು ಉಚ್ಛ್ರಾಯ ಸ್ಥಿತಿಯಲ್ಲಿದ್ದುಕೊಂಡು, 57 ಸಂಘಗಳಿಗೆ 2,65,000 ರೂಪಾಯಿ ಸಾಲ ಕೊಟ್ಟಿರುತ್ತವೆ. ಗ್ರಾಮಾಂತರಗಳಲ್ಲಿರುವ ಸಂಘಗಳಿಗೆ ಬೇಕಾದ ಮೂಲಧನಕ್ಕೆ ಇದೇ ಮುಖ್ಯಾಧಾರವಾಗಿದ್ದುಕೊಂಡಿದೆ. ಮೂರು ಯೂನಿಯನುಗಳು ಸುಮಾರು 25,000 ರೂಪಾಯಿ ವರೆಗೆ ಬಂಡವಾಳವನ್ನು ಒದಗಿಸಿವೆ. ಅವುಗಳಲ್ಲಿ ಒಂದು, ಅದಕ್ಕೆ ಸೇರಿದ ಶಾಖಾ ಸಂಘಗಳಿಗೆ 20,000 ರೂಪಾಯಿ ವರೆಗೆ ಹಣವನ್ನು ಒದಗಿಸಿಕೊಡಬೇಕೆಂದು ಪರ್ಯಾಲೋಚಿಸುತ್ತಿದೆ. ಬೇಕಾದ ಮೂಲಧನವನ್ನೂ ಆಯಾ ಸ್ಥಳದಲ್ಲಿಯೇ ಆಗಲೀ ಮೇಲೆ ಹೇಳಿದ ಸಂಘಗಳಿಂದಾಗಲೀ ಒದಗಿದುದರಿಂದ, ಸರ್ಕಾರದವರೂ ಸ್ವಂತವಾಗಿ ಶ್ರೀಮನ್ಮಹಾರಾಜರವರೂ ರಿಜಿಸ್ಟ್ರಾರರವರ ವಶದಲ್ಲಿ ಕೊಟ್ಟ ದ್ರವ್ಯದಿಂದ ಯಾವ ಗ್ರಾಂಟುಗಳನ್ನು ಕೊಡುವ ಆವಶ್ಯಕತೆಯೂ ಇಲ್ಲವಾಯಿತು.

ಸಂಪದಭ್ಯುದಯ ಸಮಾಜದ ಮೂರನೆಯ ವರ್ಷದ ಸಾಂಸ್ಥಾನಿಕ ಸಭೆಯು ಕಳೆದ ಅಕ್ಟೋಬರ್ ತಿಂಗಳಲ್ಲಿ ಮೈಸೂರು ರಾಜಧಾನಿಯಲ್ಲಿ ಸೇರಿತ್ತು. ಈ ಸಮಾಜದ ಆರಂಭೋತ್ಸವವನ್ನು ಶ್ರೀಮದ್ಯುವರಾಜರವರು ನೆರವೇರಿಸಿದರು. ಇದಕ್ಕೆ ದಿವಾನ್ ಬಹಾದುರ್ ರಾಜಸಭಾ ಭೂಷಣ ವಿ. ಕೆ. ಪಿ. ಪುಟ್ಟಣ್ಣ ಶೆಟ್ಟರವರು ಅಧ್ಯಕ್ಷರಾಗಿದ್ದರು. ಇದಕ್ಕಿಂತ ಸಣ್ಣಸಣ್ಣವಾದರೂ, ಉಪಯೋಗವಿಷಯದಲ್ಲಿ ತತ್ಸಮಾನಗಳಾದ ಕಾನ್‌ಫರೆನ್ಸುಗಳು ಇನ್ನೂ ಹತ್ತು ಸ್ಥಲಗಳಲ್ಲಿ ನಡೆದುವು. ಇವುಗಳು ಸೇರುವುದಕ್ಕೂ ಸಾರ್ಥಕವಾಗಿ ಕೆಲಸವನ್ನು ಮಾಡುವುದಕ್ಕೂ ಬಹಳವಾಗಿ ಆಯಾ ಪ್ರದೇಶದ ಜನಗಳೇ ಪಟ್ಟ ಪ್ರಯತ್ನಗಳೂ ಏರ್ಪಾಡುಗಳೇ ಕಾರಣಗಳಾಗಿರುತ್ತವೆ.

[೬ ನೆಯ ಪುಟವನ್ನು ನೋಡಿ.]

ಬಜೆಟ್ಟಿನಲ್ಲಿ ದಾಖಲ್ಮಾಡಿದ್ದ ಲೆಖ್ಖಕ್ಕಿಂತಲೂ ಜಾಸ್ತಿಯಾದ
ಹುಟ್ಟುವಳಿ 30.13 ಲಕ್ಷ
ಸಾಮಾನ್ಯ ಬಾಬುಗಳ ಖರ್ಚಿನಲ್ಲಿ ಉಳಿದಿರುವದು 11.22 ,,
ಮೊದಲಿನ ಬಜೆಟ್ಟಿನಲ್ಲಿ ಅಂದಾಜು ಮಾಡಿದ್ದ
ಸರ್‌ಪ್ಲಸ್ ಮೊಬಲಗು 8.72 ,,
ಜುಮ್ಲಾ 50.07 ಲಕ್ಷ

ಮುಖ್ಯಮುಖ್ಯವಾದ ಭಾರೀ ಕಾಂಗಾರಿಗಳಿಗಾಗಿಯೂ ಎಂದರೆ, ಕಾವೇರೀ ಜಲಾಶಯದ ಕಾಂಗಾರಿಯೂ, ಕಾವೇರೀ ವಿದ್ಯುಚ್ಛಕ್ತಿಯ ಏರ್ಪಾಟನ್ನು ಹೆಚ್ಚಿಸುವುದೂ, ಹೊಸದಾಗಿ ರೈಲನ್ನು ಹಾಕುವದೂ, ಬೆಂಗಳೂರಿನಲ್ಲಿ ಟ್ರಾಂವೆಯನ್ನು ಹಾಕುವದೂ, ಇವುಗಳಿಗಾಗಿ

65.10 ಲಕ್ಷ ರೂಪಾ
ಮೊಬಲಗಿನ ಪೈಕಿ
ಯೋಗಿಸಿಕೊಳ್ಳಲು
ಕಾವೇರೀ ಜ
ಮೆ ಸೇಷನ್ ಮೊಬ
ವದು, ಏರ್ಪಾಡುಗ
ಉದ್ದೇಶಿಸಲ್ಪಟ್ಟ ಕೆ
ಗಾರಿಗಳಿಗೆ ಬೇಕಾದ
ಯೂ ಯತ್ನವಿಲ್ಲದೆ
ಬುಗಳಿಗಾಗಿ ಬದಗಿ
ದಕ್ಕೆ ಮುಖ್ಯ ಕಾರ
1914-15 ನೆಯ
ಮಳೆ ಬೆಳೆಗಳ
ನಿರೀಕ್ಷಣೆಯಮೇಲೆ
(1914-15 ನೆಯ ವ
ವಿಚಾರಕ್ಕೆ ತೆಗೆದುಕೆ
ಉತ್ಪತ್ತಿಯೂ, 338
ಆಗುವದೆಂದು ಅಂದಾ
ನ್ಯಬಾಬು ವಿಶೇಷಬಾ
ಗಳ ಲೆಕ್ಕವು ಇದರಲ್ಲಿ
ಹುಟ್ಟುವಳಿ
ಒಟ್ಟು ಹುಟ್ಟುವಳಿ
ಪೈಕಿ ಮಜಾ-ನಿವಿ
ಸ್ಟೇಷನಿನ ಸರ್
ನಿವ್ವಳ ಸಾಮಾನ್ಯ ಬ
ಖರ್ಚು
ಒಟ್ಟು ಖರ್ಚು
ಭಾರೀ ಕಾಂಗಾ
1. ಕಾವೇರೀ ಜಲಾ
2. ಕಾವೇರೀ ವಿದ್ಯು
ಸ್ಥಾಪನೆಗಾಗಿ
3. ಎಲೆಕ್ಟ್ರಿಕ್ ಟ್ರಾ
4. ಸ್ಟೇಟ್ ರೈಲ್ವೆಗಳ
5. ಸರ್ಕಾರೀ ಸಹಾರ
ರೈಲ್ವೆಗಳಿಗೆ
ಸಾಮಾನ್ಯ ಬಾಬುಗಳ
ಸಾಮಾನ್ಯ ಲೆಕ್ಕದಲ್ಲಿ
1914 ನೆಯ ಜ
ಸಂಸ್ಥಾನದ ಲೇಣಿ ದೇ
ನ್ನು ಈ ಉಪನ್ಯಾಸಕ್ಕೆ
ನೋಡಿದರೆ ಮೂಲದ್ರ
ಳಿಗಾಗಿ ಭಾರಿಯಾಗಿ
ಸ್ಥಿತಿಯು ಪೂರ್ತಿಯಾ
ಹುದಾಗಿದೆ.
ಬೆಂಗಳೂರು ಸಿಟಿ
ಸರ
ಬೆಂಗಳೂರು ಸಿಟಿ
ಪ್ಲಸ್ ಹುಟ್ಟುವಳಿಯ
ರಿಗೆ ಇದ್ದ ಹಕ್ಕನ್ನು ಇ
ಅಂಗೀಕರಿಸುತ್ತಾರೆಂಬ
ಬಹಳ ಜಾಗರೂಕತೆಯಿ

ಇಸವಿಯ ಆಖೈರ ವರೆಗೆ ಈ ಸಂಸ್ಥಾನಕ್ಕೆ 39 ಲಕ್ಷ ರೂಪಾಯಿಗಿಂತ ಸ್ವಲ್ಪ ಜಾಸ್ತಿಯಾಗಿ ಹಣ ಸಲ್ಲಬೇಕಾಗಿರುತ್ತದೆಂಬುದಾಗಿ ಗೊತ್ತುಮಾಡಲ್ಪಟ್ಟಿತು. ಆ ಪೈಕಿ ಭಾರಿ ಕಂತು ಎಂದರೆ 30 ಲಕ್ಷ ರೂಪಾಯಿ ಈ ವರ್ಷದಲ್ಲಿ ಜಮಾ ಬಂದಿರುತ್ತದೆ.

ಅಬ್ಕಾರಿ.

1912-13 ನೆಯ ವರ್ಷದಲ್ಲಿ ಅಬ್ಕಾರಿ ಹುಟ್ಟುವಳಿಯಾದಷ್ಟು ಹಿಂದೆ ಯಾವ ಸಂವತ್ಸರದಲ್ಲಿಯೂ ಆಗಿರಲಿಲ್ಲವೆಂದು ಹೋದವರ್ಷ ತಿಳಿಸಲಾಯಿತು. ಆದರೆ 1913-14 ನೆಯ ವರ್ಷದ ಉತ್ಪತ್ತಿಯು ಇನ್ನೂ ಜಾಸ್ತಿಯಾಗಿದೆ. ಈ ಉತ್ಪತ್ತಿಯು 55,38,2[illegible] ರೂಪಾಯಿಗಳು, ಎಂದರೆ ಹಿಂದಿನ ವರ್ಷದ ಹುಟ್ಟುವಳಿಗಿಂತ 4,33,971 ರೂಪಾಯಿಗಳಷ್ಟು ಜಾಸ್ತಿಯಾಗಿದೆ. ಇವರಲ್ಲಿ ಸುಮಾರು ಅರ್ಧಪಾಲು ದುಕಾನ್ ಗುತ್ತಿಗೆ ಬಾಪತ್ತಿನಿಂದಲೂ, ಉಳಿದ ಮೊಬಲಗು ಮದ್ಯವು ಹೆಚ್ಚಾಗಿ ಖರ್ಚಾದುದರಿಂದಲೂ ಉತ್ಪತ್ತಿಯಾಯಿತು. ಈ ಹೆಚ್ಚು ಹುಟ್ಟುವಳಿಯು ಅನ್ಯದೇಶದ ಮದ್ಯದ ವಿನಾ ಡ್ಯೂಟಿಗೆ ಗುರಿಯಾದ ಎಲ್ಲಾ ಬಾಬುಗಳಿಂದಲೂ ಆಯಿತು. ಸುಲಭಕ್ರಯಕ್ಕೆ ದೊರೆಯುವ ಹಲವು ಬಗೆಯಾದ ಅನ್ಯದೇಶದ ಮದ್ಯಗಳ ಪಾನವು ಕ್ರಮೇಣ ಕಡಿಮೆಯಾಗಿ ಬೆಂಗಳೂರು ಸೆಂಟ್ರಲ್ ಡಿಸ್ಟಿಲರಿಯಲ್ಲಿ ತಯಾರಾಗುವ ಮದ್ಯಗಳ ಉಪಯೋಗವೇ ಹೆಚ್ಚಾಗುತ್ತಿದೆ.

ವೈದ್ಯ ಮತ್ತೂ ಜನಾರೋಗ್ಯದ ಇಲಾಖೆಗಳು.

ಈ ಸಂಸ್ಥಾನದಲ್ಲಿ ದೇವೀ ಹಾಕುವುದಕ್ಕೆ ಉಪಯೋಗಿಸಿದ ಹಾಲಿನಲ್ಲಿ ದೋಷಗಳಿದ್ದವೆಂದು ಬಂದ ಕೆಲವು ಫಿರ್ಯಾದುಗಳನ್ನು ಚೆನ್ನಾಗಿ ವಿಚಾರಮಾಡುವುದಕ್ಕಾಗಿ ಒಂದು ಕಮಿಟಿಯನ್ನು 1913 ನೆಯ ಜುಲೈ ತಿಂಗಳಲ್ಲಿ ನೇಮಿಸಲಾಯಿತೆಂದು ಹೋದವರ್ಷದ ಉಪನ್ಯಾಸದಲ್ಲಿ ತಿಳಿಯಿಸಿದೆ. ಕಮಿಟಿಯವರು ಈ ವಿಷಯವನ್ನು ಬಹಳ ಜಾಗರೂಕತೆಯಿಂದ ವಿಚಾರಮಾಡಿದಮೇಲೆ ಮೈಸೂರು ಸೀಮೆಯ ಹಾಲಿನಲ್ಲಿ ಕೆಡಕು ಉಂಟಾಗತಕ್ಕ ದೋಷಗಳೇನೂ ಇಲ್ಲವೆಂತಲೂ, ಶಕ್ತಿಯ ವಿಷಯದಲ್ಲಿ ಇಂಡಿಯಾ ದೇಶದ ಇತರ ಪ್ರದೇಶಗಳಲ್ಲಿ ತಯಾರಾದ ಹಾಲಿಗೆ ನಮ್ಮ ಹಾಲು ನಿಕೃಷ್ಟವಾದದ್ದಲ್ಲವೆಂತಲೂ ನಿರ್ಣಯಿಸಿದರು. ಆದರೆ ಸದರಿ ಹಾಲಿನಲ್ಲಿ ಬೇರೆ ಸಜೀವ ಸೂಕ್ಷ್ಮವಸ್ತುಗಳು ಇರುತ್ತವೆಯಾಗಿ, ಅವುಗಳಿಂದ ಯಾವ ಕೆಡಕೂ ಇಲ್ಲದಿದ್ದರೂ, ಅವುಗಳನ್ನೂ ಕೂಡ ತೆಗೆದು ಹಾಕತಕ್ಕದ್ದು ಅವಶ್ಯಕವಾಗಿರುವದೆಂದು ಕಮಿಟಿಯವರು ಅಭಿಪ್ರಾಯಪಟ್ಟು, ಆ ವಿಷಯದಲ್ಲಿ ಕೆಲವು ಸಲಹೆಗಳನ್ನೂ ಕೊಟ್ಟಿರುತ್ತಾರೆ. ಈ ಸಲಹೆಗಳನ್ನು ಸರ್ಕಾರದವರು ಒಪ್ಪಿ ಇರುತ್ತಾರೆ.

ರಾಬರ್ಟ್‌ಸನ್ ಪೇಟೆಯಲ್ಲಿ ಹೆರಿಗೆಯ ಆಸ್ಪತ್ರೆಯನ್ನು ಶೀಘ್ರತೆಯಲ್ಲಿ ಜನರ ಉಪಯೋಗಕ್ಕೆ ತರಲಾಗುವುದು. ಈ ಆಸ್ಪ

ಅವುಗಳಲ್ಲಿ ಓದುವವರ ಸಂಖ್ಯೆ 31,290 ಆಗಿಯೂ ಇತ್ತು. ಒಟ್ಟು ವ್ಯಾಸಂಗಮಾಡುತ್ತಿರುವವರಲ್ಲಿ 1,54,319 ಮಂದಿ ಬಾಲಕರಾಗಿಯೂ, 33,411 ಮಂದಿ ಬಾಲೆಯರಾಗಿಯೂ ಇದ್ದರು. 1912-13ರಲ್ಲಿ ಒಟ್ಟು 1,29,009 ಮಂದಿ ಬಾಲಕರೂ, 27,431 ಮಂದಿ ಬಾಲೆಯರೂ ವ್ಯಾಸಂಗಮಾಡುತ್ತಿದ್ದರು. ಸ್ಕೂಲಿಗೆ ಹೋಗುವುದಕ್ಕೆ ಅರ್ಹವಾದ ವಯಸ್ಸುಳ್ಳ ಗಂಡಸರ ಪೈಕಿ, ಸ್ಕೂಲಿನಲ್ಲಿ ವ್ಯಾಸಂಗಮಾಡುತ್ತಿರುವವರ ಸಂಖ್ಯೆಯು ಶೇಕಡ 29.8 ರಿಂದ 35 ಕ್ಕೂ ಅದೇರೀತಿಯಲ್ಲಿರುವ ಒಟ್ಟು ಹೆಂ

ವಾಗಿಯೂ, ಕಪ್ಪಾಗಿಯೂ, ಮೃದುವಾಗಿಯೂ ಬೆಳೆದು ಮುಖಕ್ಕೆ ವನ್ನುಂಟುಮಾಡುತ್ತದೆ. ಇದಲ್ಲದೆ ಶಿರೋವಾಯು, ಕಟಿಶೂಲೆ, ಶೂಲೆ, ನೇತ್ರದೋಷಗಳು, ಕೊರಳು ನರದ ಚಳಕು, ಅಂಗಾಲುರಿ ದಲು ಇವೆಲ್ಲ ನಾಶವಾಗಿ ಮೆದುಳಿಗೆ ತಂಪನ್ನುಂಟುಮಾಡಿ ಜ್ಞಾಪಕ ನ್ನು ಹೆಚ್ಚಿಸುತ್ತದೆ. ಕಿಮ್ಮತ್ತು ಬಾಟ್ಲಿ 1 ಕ್ಕೆ 1—0—0.

ಸೌಭಾಗ್ಯಶುಂಠಿ ಲೇಹವು.

ದನ್ನು ಗರ್ಭಿಣಿ ಸ್ತ್ರೀಯರು ಪ್ರಸೂತರಾದ ಎರಡನೇ ತಿಂಗಳಿನಿಂದ ಸೇವಿಸಿದರೆ,—ನೀರಡಿಕೆ, ಜ್ವರ, ಕೆಮ್ಮು, ದಾಹ, ಕ್ರಿಮಿ, ಜ್ವರ ಇವೆಲ್ಲ ಬಿಳುಪು ಆಗುವ ಬಾಣಂತಿರೋಗ ವಗೈರೆ ಗುಣವಾಗಿ ಬಲ, ಇವನ್ನುಂಟುಮಾಡಿ ವಾಲಿವಾಲಿತರೋಗವನ್ನು ನಾಶಮಾಡು ಬಾಣಂತಿಯರಿಗೆ ಸಂಜೀವನಿಯಾದುದರಿಂದ ಬೇರೆ ಔಷಧವನ್ನು ಅಗತ್ಯವೇ ಇಲ್ಲ. ಕಿಮ್ಮತ್ತು 60 ತೊಲೆಗೆ 6—0—0.

ಕ್ರಿಮಿನಾಶಕ ಗುಳಿಗೆಗಳು.

ಹೊಟ್ಟೆಯಲ್ಲಿ ಜಂತುಗಳು ಉದ್ಭವಿಸುವದರಿಂದ ಕೈಕಾಲುಗಳು ಕೃಶವಾಗಿ ದೊಡ್ಡದಾಗಿ ಮಹಾರೋಗದಂತೆ ಭಾಸವಾಗುವದು, ಮತ್ತು ಈ ದ ಯಾವಾಗಲೂ ಹೊಟ್ಟೆ ಕಡಿಯುವದು, ಜ್ವರಬರುವದು, ಅಶಕ್ತತೆ ವದು, ಇವೆಲ್ಲ ವಿಕಾರಗಳು ತೋರಬಂದೊಡನೆ ಕ್ರಿಮಿನಾಶಕ ನ್ನು ಸೇವಿಸಿದ್ದಲ್ಲಿ ಕ್ರಿಮಿಗಳು ಗುದದ್ವಾರದಿಂದ ಬಿದ್ದು ಹೊಟ್ಟೆಯು ನಿರೋಗ ಉತ್ಸವರಾಗುವರು. ಇದನ್ನು ಸೇವಿಸಿದನಂತರ ಮಕ್ಕ ಬಾಲಾಮೃತವನ್ನೂ ದೊಡ್ಡವರಾದರೆ ಪೌಷ್ಟಿಕಪಾಕವನ್ನೂ ಉಪ ಬೇಕು. ಕಿಮ್ಮತ್ತು ಡಬ್ಬಿಗೆ 0—12—0.

ವಾತಹಾರಕ ತೈಲವು.

80 ಪ್ರಕಾರದ ವಾತರೋಗಗಳನ್ನು ಗುಣಪಡಿಸಲು ರಾಮಬಾಣ ಈ ತೈಲವನ್ನು ವಾತ(ಕಸ) ಬಂದ ಸ್ಥಳಕ್ಕೆ 3-4 ಸಾರೆ ಹಚ್ಚಿ ತಿಕ್ಕು ವಾತ, ನೋವು, ಕೀಲನೋವು, ನರಗಳ ಹಿಡತ, ಕಟಿಶೂಲೆ ವಗೈರೆ ವ್ಯಾಧಿಗಳನ್ನು ಖಾತ್ರಿಯಿಂದ ಗುಣಪಡಿಸುವದು.
ಕಿಮ್ಮತ್ತು ಬಾಟ್ಲಗೆ 1—0—0.

ತಾಂಬೂಲಕ್ಕೆ ಸುಖಕರ ವಸ್ತು.

ಇದು ಅನೇಕ ಸುಗಂಧಮಯವಾದ ಮತ್ತು ಗುಣಕಾರಿಯಾದ ಪದಾ ತಯಾರಿಸಿದೆ. ಪ್ರತಿದಿವಸ ತಾಂಬೂಲದೊಡನೆ ಉಪಯೋಗಿಸುವ ಅತಿಜಡವಾದ ಆಹಾರವನ್ನು ತ್ವರ್ಯದಿಂದ ಜೀರ್ಣಗೊಳಿಸಿ, ಆಹಾರ, ಮತ್ತು ಹವೆಗಳ ಬದಲಾವಣೆಗಳನ್ನು ಸರಿಪಡಿಸಿ ರಕ್ತವನ್ನು ಶುದ್ಧ ಯನ್ನು ಬೆಳಸುತ್ತದೆ. ಹಲ್ಲುನೋವು ಬಾಯಿವಾಸನೆ ದೂರಪಡಿ ಇದರಲ್ಲಿ ಯಾವದೊಂದು ಆಕ್ಷೇಪಕರವಾದ ವಸ್ತುವಿನ ಮಿಶ್ರಣ ದರಿಂದ ಯಾವ ವಯಸ್ಸಿನವರಾದರೂ ಉಪಯೋಗಿಸಲು ಆಕ್ಷೇಪವಿಲ್ಲ.
ಕಿಮ್ಮತ್ತು ಡಬ್ಬಿಗೆ 0—12—0.

ವ್ರಣನಾಶಕ ಮಲಮು.

ದರಿಂದ ಖಜ್ಜಿ, ಕುರು, ಆನೆಗಜ್ಜಿ, ಇಸಬು, ಹುಣ್ಣು, ಗರ್ಮಿಯಿಂದಾ ನಾರ್ಹುಣ್ಣು ಮುಂತಾದ ಎಲ್ಲಾ ಪ್ರಕಾರದ ಹುಣ್ಣುಗಳು ನಾಶ ಸಲ್ಪವೂ ಉರಿಯುವದಿಲ್ಲ. ಮುಂದೆ ಆಗುವದೂ ಇಲ್ಲ.
ಕಿಮ್ಮತ್ತು ಡಬ್ಬಿಗೆ 1—0—0.

ಕಿಮ್ಮತ್ತು 1 ಡಬ್ಬಿ ಚೂರ್ಣಕ್ಕೆ 2-0-0;

೩೭ ಪಿನಾಶಿ ರೋಗಕ್ಕೆ ಔಷಧ.

ಇದರ ಸೇವನೆಯಿಂದ ಮೂಗಿನಲ್ಲಿಯ ಪಿನಾಶಿರೋಗ ಗುಣವಾಗಿ ದುರ್ವಾಸನೆ ವಗೈರೆ ಹೋಗಲಾಡಿಸುತ್ತದೆ.
ಕಿಮ್ಮತ್ತು ಡಬ್ಬಿ1ರ 5—0—0. ಈ ಬಗ್ಗೆ ಮೂಗಿನಲ್ಲಿ ಹಾಕುವ ಘೃತ ಬಾಟ್ಲಿ 1ಕ್ಕೆ 2—0—0.

೩೮ ಕುಷ್ಟ(ತೊನ್ನು) ರೋಗಕ್ಕೆ ಚೂರ್ಣ.

ಕುಷ್ಟರೋಗವು ಮೈಮೇಲೆ ಹಬ್ಬಿ ಮೈ ದಪ್ಪನಾಗಿ ಬಿಳೀ ಯಾ ಕೆಂಪು ವರ್ಣವಾಗಿ ಬೆಳೆಯುತ್ತದೆ. ಈ ರೋಗಕ್ಕೆ ಹೊಟ್ಟೆಯಲ್ಲಿ ತಕ್ಕೊಳ್ಳುವ ಚೂರ್ಣವು ಮತ್ತು ಮೈಮೇಲೆ ಹಚ್ಚುವ ಮಲಾಮು ಇವುಗಳ ಸೇವನೆಯಿಂದ ಕುಷ್ಟ ರೋಗವು ಸಾಧಾರಣವಾಗಿದ್ದರೆ 1½ ತಿಂಗಳಲ್ಲಿ ಗುಣವಾಗುವದು, ಮತ್ತು ಹಳೇ ಕರದ್ದು ಬಲವತ್ತಾಗಿದ್ದರೆ 4 ತಿಂಗಳಲ್ಲಿ ಗುಣವಾಗುವದು.
ಕಿಮ್ಮತ್ತು ಚೂರ್ಣ ಡಬ್ಬಿ 1ಕ್ಕೆ 5—0—0; ಮಲಮು ಡಬ್ಬಿ 1ಕ್ಕೆ 2—0—0.

೩೯ ಮೂತ್ರಕೃಚ್ಛ್ರದ ಗುಳಿಗೆ.

ಈ ರೋಗ ಇದ್ದವರಿಗೆ ಮೂತ್ರಸ್ಥಾನದಿಂದ ಪದೇ ಪದೇ ಹನಿ ಹನಿಯಂತೆ ಮೂತ್ರ ಹೋಗುತ್ತದೆ. ಹಾಗೆ ಹೋಗುವಾಗ್ಯೆ ಹೆಚ್ಚು ಆಯಾಸವಾಗಿ ಕಿಬ್ಬೊಟ್ಟೆ ನೋಯುತ್ತದೆ. ತ್ವರ್ಯದಲ್ಲಿ ಇದಕ್ಕೆ ಔಷಧ ಕೊಡದಿದ್ದರೆ ಕ್ರಮೇಣ ಮೂತ್ರ ಹೋಗುವದು ಬಂದಾಗಿ, ವೇದನೆ ಹೆಚ್ಚುತ್ತದೆ. ಇದರ ಸೇವನೆಯಿಂದ ಮೂತ್ರವು ಸರಿಯಾಗಿ ಹೋಗಿ ವೇದನೆ ಸಹ ಗುಣವಾಗುತ್ತದೆ. ಹೊಸದಿದ್ದರೆ 12 ದಿವಸಗಳಲ್ಲೂ, ಹಳೆಯದಿದ್ದರೆ 2 ತಿಂಗಳಲ್ಲೂ ಗುಣ.
ಕಿಮ್ಮತ್ತು 24 ಗುಳಿಗೆಗಳ ಡಬ್ಬಿ 1ಕ್ಕೆ 3—0—0.

೪೦ ತಂಬಾಕಿನ ಗುಳಿಗೆ.

ಕಸ್ತೂರಿ ಮೊದಲಾದ ಹೆಚ್ಚು ಬೆಲೆಯ ಪದಾರ್ಥಗಳನ್ನುಪಯೋಗಿಸಿದ ಇದರ ಸೇವನೆಯಿಂದ ಬಾಯಿಯ ದುರ್ವಾಸನೆ ಹೋಗಲಾಡಿಸಿ ಮುಖವು ಸುವಾಸನೆಯಾಗಿ; ಹಲ್ಲುನೋವು ನಾಶವಾಗಿ; ಹಲ್ಲುಗಳು ಘಟ್ಟಿಯಾಗುವವು. ಇದನ್ನು ತಾಂಬೂಲದೊಡನೆ ಸೇವಿಸಬೇಕು. ಬೆಲೆ ಡಬ್ಬಿ 1ರ 0-12-0.

೪೧ ಸುಗಂಧಿ ಹಲ್ಲು ಪುಡಿ.

ಈ ಸುಗಂಧಿ ಹಲ್ಲು ಪುಡಿಯಿಂದ ಹಲ್ಲುಗಳನ್ನು ತಿಕ್ಕುವದರಿಂದ ಹಲ್ಲುಗಳಲ್ಲಿ ಬೀಳತಕ್ಕ ಕೀವು ಗುಣವಾಗಿ ಬಾಯಿಯಿಂದ ಹೊರಡುವ ದುರ್ವಾಸನೆ ಹೋಗಿ ಹಲ್ಲುಗಳು ವಜ್ರದಂತೆ ಘಟ್ಟಿಯಾಗಿ ಮುತ್ತುಗಳಂತೆ ಶುಭ್ರವಾಗುವವು.
ಕಿಮ್ಮತ್ತು ಡಬ್ಬಿ 1ಕ್ಕೆ 0—4—0; 12 ಡಬ್ಬಿಗಳಿಗೆ 2—8—0. 24 ಡಬ್ಬಿಗಳಿಗೆ 1 ಟ್ರ್ಯಾಂಪೀಸ ಇನಾಮಾಗಿ ಸಿಕ್ಕುವದು. 48 ಡಬ್ಬಿ ತರಿಸಿಕೊಂಡರೆ ಕಿಸೆಯೊಳಗೆ ಇಡುವ ಲಿವರ್ ರೈಲ್ವೆ ರೇಗ್ಯುಲೇಟರ್ ವಾಚ್ ಇನಾಮಾಗಿ ಸಿಕ್ಕುವದು. 100 ಡಬ್ಬಿಗಳನ್ನು ಒಂದೇ ಸಾರಿ ತರಿಸಿಕೊಂಡರೆ 8 ದಿವಸಕ್ಕೊಮ್ಮೆ ಕೀಲಿ ಕೊಡುವ, ಘಂಟೆ ಹೊಡೆಯುವ ಆಫೀಸ ಕ್ಲೋಕ್ ಇನಾಮಾಗಿ ಸಿಕ್ಕುವದು. ಮುಂಗಡವಾಗಿ ರೂಪಾಯಿ 3 ಕಳುಹಿಸಿ ರೈಲ್ವೆ ಸ್ಟೇಶನ್ ತಿಳಿಸಬೇಕು.

೪೨ ಗೃಹಸಂಜೀವನಿ ತೈಲವು.

ಈ ಶ್ರೇಷ್ಠವಾದ ಒಂದೇ ತೈಲದಿಂದ ವಾತರೋಗ, ಉಳುಕು, ತಲೆನೋವು, ಜಖಂ, ಸುಟ್ಟಗಾಯ, ಕಡಿತಗಾಯ, ಎದೆನೋವು, ಜಜ್ಜಿದಗಾಯ, ಅಜೀರ್ಣ, ಗಂಟಲನೋವು, ಹಲ್ಲುಬೇನೆ, ಸಂಧುವಾತ, ಹುರಕು, ಗಜ್ಜಿ ವಗೈರೆ 24 ರೋಗಗಳು ಗುಣವಾಗುವವು. ಚಿಕ್ಕ ಮಕ್ಕಳ ಬಾಲಗ್ರಹ ಮೊದಲಾದವುಗಳಿಗೆ ಬಹಳ ಗುಣಕಾರಿಯಾಗಿದೆ. ಆದ್ದರಿಂದ ಈ ತೈಲವನ್ನು ಪ್ರತಿ ಒಬ್ಬರು ಮನೆಯಲ್ಲಿ ಸಂಗ್ರಹಿಸಿ ಇಡತಕ್ಕದ್ದು. ಕಿಮ್ಮತ್ತು ಬಾಟ್ಲಿ 1ಕ್ಕೆ 1—0—0.

ಗಸರ ಪೈಕಿ ವ್ಯಾಸಂಗಮಾಡುತ್ತಿರುವ ಬಾಲೆಯರ ಸಂಖ್ಯೆಯು ಶೇಕಡ 6.4 ರಿಂದ 7.7 ಕ್ಕೂ ಹೆಚ್ಚಿರುತ್ತದೆ. ವ್ಯಾಸಂಗಾರ್ಹವಾದ ವಯಸ್ಸುಳ್ಳ ಒಟ್ಟು ಸ್ತ್ರೀಪುರುಷರ ಸಂಖ್ಯೆಯ ಪೈಕಿ ಒಟ್ಟು ವ್ಯಾಸಂಗಮಾಡುತ್ತಿರುವ ಬಾಲಿಕಾ ಬಾಲಕರ ಸಂಖ್ಯೆಯು ಕಳೆದ ವರ್ಷ ಶೇಕಡ 18.0 ಇದ್ದದ್ದು, ಈವರ್ಷ ಶೇಕಡ 21.4 ಕ್ಕೆ ಹೆಚ್ಚಿದಂತಾಗಿದೆ.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಕೆಮಿಸ್ಟ್ರಿ ಶಾಖೆಯ ಬಿ. ಎ. ಪ್ಯಾಸ್ ಕೋರ್ಸನ್ನೂ, ಫಿಜಿಕ್ಸ್ ಶಾಖೆಯ ಆನರ್ಸ್ ಕೋರ್ಸನ್ನೂ ಮದರಾಸ್ ಯೂನಿವರ್ಸಿಟಿಗೆ ಸಂಬಂಧಪಡಿಸಲಾಯಿತು. ಆದರೆ ಸುಶಿಕ್ಷಿತರಾದ ಯೂರೋಪ್ ದೇಶದ ಒಬ್ಬ ಅಸಿಸ್ಟೆಂಟ್ ಪ್ರೊಫೆಸರು ಇಲ್ಲದೆ ಇರುವದರಿಂದ, ಕೆಮಿಸ್ಟ್ರಿ ಶಾಖೆಯ ಆನರ್ಸ್ ಕೋರ್ಸನ್ನು ಪ್ರಾರಂಭಿಸುವದು ಸಾವಕಾಶವಾಗಬೇಕಾಯಿತು. ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಹಿಸ್ಟರಿ ಮತ್ತು ಎಕನಾಮಿಕ್ಸ್ ಭಾಗಗಳಲ್ಲಿ ಒಂದು ಆನರ್ಸ್ ಕೋರ್ಸನ್ನೂ ಏರ್ಪಡಿಸಲಾಯಿತು. ಈ ಕೋರ್ಸುಗಳನ್ನು ಏರ್ಪಡಿಸಿದ್ದರಿಂದ ಬೇಕಾದ ಸಲಕರಣೆಗಾಗಿಯೂ ಹೆಚ್ಚು ಸಿಬ್ಬಂದಿಗಾಗಿಯೂ ಸ್ವಲ್ಪ ಖರ್ಚನ್ನು ಮಾಡುವುದು ಅವಶ್ಯಕವಾಯಿತು.

ಪ್ರೌಢವಿದ್ಯಾಭ್ಯಾಸದ ವಿಷಯದಲ್ಲಿಯೂ ಇತರ ಅಭಿವೃದ್ಧಿಕಾರ್ಯಗಳು ಜರುಗಿಸಲ್ಪಟ್ಟವು. ಆದರೆ ಈ ಇಲಾಖೆಯ ಯಾವಚ್ಛಕ್ತಿಯನ್ನೂ ಮುಖ್ಯವಾಗಿ ಪ್ರಾಥಮಿಕ ವಿದ್ಯಾಭಿವೃದ್ಧಿಗಾಗಿ ವಿನಿಯೋಗಿಸಲಾಯಿತು. ಗ್ರಾಮಪಾಠಶಾಲೆಗಳನ್ನು ಹೆಚ್ಚಿಸುವುದಕ್ಕಾಗಿ ಪ್ರತ್ಯೇಕವಾಗಿ ಒಂದು ಲಕ್ಷ ರೂಪಾಯಿ ಗ್ರ್ಯಾಂಟನ್ನೂ, ಸ್ಕೂಲ್ ಕಟ್ಟಡಗಳನ್ನು ಕಟ್ಟಿಸತಕ್ಕಬಗ್ಗೆ ಅರ್ಧ ಲಕ್ಷ ರೂಪಾಯಿ ಗ್ರ್ಯಾಂಟನ್ನೂ ಕೊಡಲಾಯಿತು. ಗ್ರ್ಯಾಂಟ್ ಇನ್‌ಏಯ್ಡ್ ನಿಬಂಧನೆಗಳ ಮೇರೆ 1,000 ಸ್ಕೂಲುಗಳನ್ನು ಏರ್ಪಡಿಸಲು ಮಂಜೂರ್ ಮಾಡಲಾಯಿತು. ಯಾವ ಉಪಾಧ್ಯಾಯನಿಗೇ ಆಗಲಿ ಮಾಹೆಯಾನ 10 ರೂಪಾಯಿಗೆ ಕಮ್ಮಿ ಇಲ್ಲದಷ್ಟು ಸಂಬಳ ದೊರೆಯುವಂತೆ ಮಾಡಲು, ಸರ್ಕಾರದಿಂದ ಕೊಡುವ ಗ್ರ್ಯಾಂಟಿನ ಜೊತೆಗೆ ಗ್ರಾಮಸ್ಥರು ದ್ರವ್ಯರೂಪವಾಗಿಯಾಗಲೀ ಧಾನ್ಯರೂಪವಾಗಿಯಾಗಲಿ ಸಹಾಯ ಮಾಡಬೇಕಾದದ್ದೇ ಇದರ ಮೂಲತತ್ವವು.

ನಿರ್ಬಂಧ ವಿದ್ಯಾಭ್ಯಾಸದ ಒಂದು ಏರ್ಪಾಟನ್ನು ಮಂಜೂರ್ಮಾಡಿರುವದಲ್ಲದೆ, ಇದನ್ನು ಸದ್ಯದಲ್ಲಿ ಆರಿಸಲ್ಪಟ್ಟಿರುವ 15 ಮುಖ್ಯ ಸ್ಥಳಗಳಲ್ಲಿ ಆಚರಣೆಯಲ್ಲಿ ತರಲಾಗುವುದು. ಇದಕ್ಕಾಗಿ ನಿಯಮಗಳನ್ನು ತಯಾರ್ಮಾಡಿ, ಅವನ್ನು ಬಿಡಗಿಸಿ ಇದೆ. ಮತ್ತು ಮೊದಲು ಮಾಡಬೇಕಾದ ಸಂವಿಧಾನಗಳೆಲ್ಲಾ ಮುಗಿದಿರುತ್ತವೆ.

ಪ್ರಾಥಮಿಕ ವಿದ್ಯಾಭ್ಯಾಸವನ್ನೂ ಸಾಮಾನ್ಯ ವಿದ್ಯಾಭ್ಯಾಸವನ್ನೂ ಹೆಚ್ಚಿಸಿದ್ದರಿಂದ, ಸಂಸ್ಥಾನದಲ್ಲಿ ಇದುವರೆಗೆ ದೊರೆಯುತ್ತಿದ್ದುದಕ್ಕಿಂತಲೂ ಶಿಕ್ಷಿತರಾದ ಹೆಚ್ಚು ಜನ ಉಪಾಧ್ಯಾಯರನ್ನೂ, ಇನ್ನೂ ಉತ್ತಮವಾದ ಶಿಕ್ಷಣಕ್ರಮವನ್ನೂ ಒದಗಿಸತಕ್ಕದ್ದು ಆವಶ್ಯಕವಾಗಿರುತ್ತದೆ. ಇದನ್ನು ಒದಗಿಸಬೇಕೆಂಬ ಉದ್ದೇಶದಿಂದ ಟ್ರೇನಿಂಗ್ ಸ್ಕೂಲ್‌ಗಳನ್ನು ಇನ್ನೂ ಚೆನ್ನಾಗಿ ಸುಸಜ್ಜಿಸುವುದಕ್ಕೂ, ಅವುಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕೂ ಒಂದು ಏರ್ಪಾಡು ಅಂಗೀಕೃತವಾಗಿದೆ. ಆ ಏರ್ಪಾಡಿನ ಸಾರಾಂಶವೇನೆಂದರೆ—ಗ್ರ್ಯಾಜುಯೇಟುಗಳಾದ ಉಪಾಧ್ಯಾಯರಿಗಾಗಿ ಒಂದು ಟ್ರೇನಿಂಗ್ ತರಗತಿಯನ್ನಿಟ್ಟು ಮೈಸೂರು ನಾರ್ಮಲ್ ಸ್ಕೂಲನ್ನು ಒಂದು ಟ್ರೇನಿಂಗ್ ಕಾಲೇಜನ್ನಾಗಿ ಮಾಡುವುದು; ಶಿವಮೊಗ್ಗೆಯಲ್ಲಿಯೂ, ಕೋಲಾರದಲ್ಲಿಯೂ ಇರುವ ಟ್ರೇನಿಂಗ್ ಸ್ಕೂಲುಗಳನ್ನು ಇನ್ನೂ ಚೆನ್ನಾಗಿ ಸುಸಜ್ಜಿಸುವುದು; ಮತ್ತು ಶೀಘ್ರದಲ್ಲಿಯೇ ತುಮಕೂರಲ್ಲಿ ಒಂದು ಟ್ರೇನಿಂಗ್ ಸ್ಕೂಲನ್ನು ಇಡುವುದು. ಈಗ ಸಾಲಿಯಾನ 264 ಜನ ಉಪಾಧ್ಯಾಯರಿಗೆ ಶಿಕ್ಷಣವನ್ನು ಕೊಡುತ್ತಿರುವುದಕ್ಕೆ ಬದಲಾಗಿ, ಮುಂದೆ 440 ಜನ ಉಪಾಧ್ಯಾಯರಿಗೆ ಶಿಕ್ಷಣವನ್ನು ಕೊಡುವುದೇ ಈ ಬದಲಾವಣೆಗಳ ಫಲಿತಾಂಶವಾಗುವುದು.

ಹಿಂದಿನ ವರ್ಷದ ಉಪನ್ಯಾಸದಲ್ಲಿ ನಿರೂಪಿಸಿರುವಂತೆ ಶಿಲ್ಪವಾಣಿಜ್ಯ ವಿದ್ಯಾಭಿವೃದ್ಧಿಗೆ ಬೇಕಾದ ಅನೇಕ ಏರ್ಪಾಡುಗಳನ್ನು ಜಾರಿಗೆ ತರಲಾಯಿತು. ಬೆಂಗಳೂರಲ್ಲಿ ಒಂದು ಮೆಕಾನಿಕಲ್ ಎಂಜಿನಿಯರಿಂಗ್ ಸ್ಕೂಲನ್ನೂ, ಒಂದು ಕಮರ್ಷಿಯಲ್ ಸ್ಕೂಲನ್ನೂ ಸ್ಥಾಪಿಸಲಾಯಿತು. ಮೈಸೂರಲ್ಲಿ ಮೊದಲಿದ್ದ ಎರಡು ಶಿಲ್ಪಶಾಲೆಗಳನ್ನು ಸೇರಿಸಿ ಹೊಸದಾಗಿ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟನ್ನು ಏರ್ಪಡಿಸಲಾಯಿತು. ಪ್ರಸಕ್ತ ಸಂವತ್ಸರದಲ್ಲಿ ಮೇಲ್ಕಂಡ ವಿದ್ಯಾಲಯಗಳಲ್ಲೆಲ್ಲಾ ಅತ್ಯುತ್ತಮವಾದ ಉದ್ಯೋಗವೇ ಜರುಗಿರುತ್ತದೆ ಎಂದು ತಿಳಿಯಬರುತ್ತದೆ. ಕೈಗಾರಿಕೆ ಕಸಬನ್ನು ಕಲಿಸುವ ಉಪಾಧ್ಯಾಯರುಗಳನ್ನೂ, ರೈಲ್ವೆ ಪರ್ಮನೆಂಟ್ ವೇ ಇನ್‌ಸ್ಪೆಕ್ಟರುಗಳನ್ನೂ ಎಂಜಿನ್ ಡ್ರೈವರುಗಳನ್ನೂ ಮತ್ತು ಟೆಲಿಗ್ರಾಫ್ ಸಿಗ್ನಲರುಗಳನ್ನೂ, ತಯಾರ್ಮಾಡತಕ್ಕ ಬಗ್ಗೆ ಮೆಕ್ಯಾನಿಕಲ್ ಎಂಜಿನಿಯರಿಂಗ್ ಸ್ಕೂಲಿನಲ್ಲಿ ಹೊಸ ತರಗತಿಗಳನ್ನು ಇಡಲು ಏರ್ಪಾಡು ಮಾಡಲಾಗಿದೆ. ಗೌರ್ನಮೆಂಟ್ ಪ್ರೆಸ್ ಕಟ್ಟಡದ ಒಂದು ಭಾಗದಲ್ಲಿ, ಆಜಮಾಯಿಷಿ ತರ್ಹೆ ಒಂದುವರ್ಷದವರೆಗೆ ಒಂದು ಪ್ರಿಂಟಿಂಗ್ ಕ್ಲಾಸನ್ನು ಇಡಲಾಗುತ್ತದೆ. ಅದರಲ್ಲಿ ಮೊಳೆಗಳನ್ನು ಜೋಡಿಸುವುದು, ಪ್ರೂಫುಗಳನ್ನು ಓದಿ ತಿದ್ದುವುದು, ಮುದ್ರಿಸುವುದು, ಈ ಕೆಲಸಗಳನ್ನು ಕಲಿಸಲಾಗುವುದು.

ಸ್ತ್ರೀವಿದ್ಯಾಭ್ಯಾಸವೂ ಕೂಡ ಅಭಿವೃದ್ಧಿಯಾಗುತ್ತಿದೆ. ಕಳೆದ ಸಾಲಿನಲ್ಲಿ ಇದ್ದ ಗರ್ಲ್ಸ್ ಸ್ಕೂಲುಗಳ ಸಂಖ್ಯೆಯು 360 ರಿಂದ ಪ್ರಕೃತ ವರ್ಷದಲ್ಲಿ 397 ರ ವರೆಗೆ ಹೆಚ್ಚಿರುತ್ತದೆ. ಮೈಸೂರಲ್ಲಿರುವ ಮಹಾರಾಣೀ ಕಾಲೇಜನ್ನೂ, ಡಿಸ್ಟ್ರಿಕ್ಟ್ ಕಸಬೆಗಳಲ್ಲಿರುವ ಗರ್ಲ್ಸ್ ಸ್ಕೂಲುಗಳನ್ನೂ, ಅವುಗಳ ಪ್ರಯೋಜನವು ಹೆಚ್ಚಬೇಕೆಂಬ ಉದ್ದೇಶದಿಂದ, ಪುನಃ ದುರಸ್ತಿಸಲು ಹುಕುಂ ಕೊಡಲಾಗಿರುತ್ತದೆ. ಸದರಿ ಕಾಲೇಜಿಗೆ ಸೇರಿದಂತೆ ಒಂದು ಹಾಸ್ಟೆಲನ್ನು ಏರ್ಪಡಿಸಲಾಗುವುದು ಮತ್ತು ಮುಂದೆ ಸರ್ಕಾರದ ಆಡಳಿತಕ್ಕೆ ತೆಗೆದುಕೊಳ್ಳುವ ಮೈಸೂರು ವಿಡೋಸ್ ಹೋಮನ್ನು ಅದಕ್ಕೆ ಸೇರಿಸಲಾಗುತ್ತದೆ. ಬೆಂಗಳೂರಿನಲ್ಲಿರುವ ಗೌರ್ನಮೆಂಟ್ ಗರ್ಲ್ಸ್ ಸ್ಕೂಲಿನಲ್ಲಿಯೂ, ತುಮಕೂರು ವೆಂಟ್ರಿಸ್ ಗರ್ಲ್ಸ್ ಸ್ಕೂಲಿನಲ್ಲಿಯೂ ಕನ್ನಡ ಅಪ್ಪರ್ ಸೆಕಂಡರಿ ತರಗತಿಗಳನ್ನಿಟ್ಟು ಸದರಿ ಸ್ಕೂಲುಗಳನ್ನು ಹೈಸ್ಕೂಲ್ ಅಂತಸ್ತಿಗೆ ತರಲಾಗುವುದು. ಈ ಸ್ಕೂಲುಗಳಲ್ಲಿಯೂ ಬೆಂಗಳೂರು ಆರ್ಯಬಾಲಿಕಾ ಪಾಠಶಾಲೆಯಲ್ಲಿಯೂ, ಚಾಮರಾಜಪೇಟೆ ಗರ್ಲ್ಸ್ ಸ್ಕೂಲಿನಲ್ಲಿಯೂ ಇಂಗ್ಲಿಷ್ ಲೋವರ್ ಸೆಕೆಂಡರಿ ಕ್ಲಾಸುಗಳನ್ನು ಇಡಲಾಗುವುದು. ಬೆಂಗಳೂರು ಮಲ್ಲೇಶ್ವರದ ಗರ್ಲ್ಸ್ ಸ್ಕೂಲಿನಲ್ಲಿಯೂ, ಕೋಲಾರ, ಚಿಕ್ಕಮಗಳೂರು, ಚಿತ್ರದುರ್ಗ, ಶಿವಮೊಗ್ಗ, ಹಾಸನ ಇವುಗಳಲ್ಲಿನ ಗರ್ಲ್ಸ್ ಸ್ಕೂಲುಗಳಲ್ಲಿಯೂ ಇಂಗ್ಲಿಷ್ ಭಾಷೆಯನ್ನು ಕಲಿಸುವುದಕ್ಕೆ ಏರ್ಪಾಡು ಮಾಡಲಾಗುವುದು. ಈ ಹೊಸ ಬದಲಾವಣೆಗಳಿಂದ ಭಾಷೆಗೆ ಸಂಬಂಧಪಟ್ಟ ವಿಷಯದೊಂದಿಗೆ ಕೈಗಾರಿಕೆಗೂ ಗೃಹಕೃತ್ಯಕ್ಕೂ ಸಂಬಂಧಪಟ್ಟ ವಿಷಯಗಳಿಗೂ ಅವಕಾಶವುಂಟಾಗುವುದು. [illegible] ಗರ್ಲ್ಸ್ ಸ್ಕೂಲುಗಳಿಗೆ ಒಬ್ಬರು ಇನ್‌ಸ್ಪೆಕ್ಟ್ರೆಸ್ಸನ್ನು ಹಂಗಾಮಿಯಾಗಿ ನೇಮಿಸಿಯದೆ.

ಜಾರಿಗೆ ತಂದಿರುವ ಮುಖ್ಯಮುಖ್ಯ ಇತರ ಏರ್ಪಾಡುಗಳಲ್ಲಿ ಈ ಕೆಳಗೆ ಕಂಡ ಸಂಗತಿಗಳನ್ನು ಉದಹರಿಸಬಹುದಾಗಿದೆ:— [illegible]

ಕಳೆದ ದಸರಾ ಮಹೋತ್ಸವ ಕಾಲದಲ್ಲಿ ಮೈಸೂರಲ್ಲಿ ವಿದ್ಯಾಭ್ಯಾಸಪ್ರದರ್ಶನವನ್ನು ನಡೆಸಲಾಯಿತು. ಆ ಪ್ರದರ್ಶನಕ್ಕೆ ಅನೇಕ ಜನಗಳು ಬಂದಿದ್ದರು. ಡಿಸೆಂಬರ್ ಮಾಹೆಯ ಆಖೈರಿನಲ್ಲಿ ಅಂಥದು ಮತ್ತೊಂದು ಪ್ರದರ್ಶನವನ್ನು ಬೆಂಗಳೂರು ಹೈಸ್ಕೂಲಿನಲ್ಲಿ ಜರುಗಿಸಲಾಯಿತು. ಅದೂ ಜನಗಳ ವಿಶ್ವಾಸಕ್ಕೆ ಪಾತ್ರವಾಯಿತು.

ವ್ಯವಸಾಯದ ಇಲಾಖೆ.

ಈ ಸಂಸ್ಥಾನದ ಮುಖ್ಯ ಕಸುಬಾದ ವ್ಯವಸಾಯವನ್ನು ಉತ್ತಮಸ್ಥಿತಿಗೆ ತರುವ ವಿಷಯದಲ್ಲಿ ವ್ಯವಸಾಯದ ಇಲಾಖೆಯವರು ಸಾರ್ಥಕವಾದ ಕೆಲಸವನ್ನು ಮಾಡಬೇಕಾದರೆ, ಆ ಇಲಾಖೆಗೆ ಹೆಚ್ಚು ಸಿಬ್ಬಂದಿಯನ್ನು ಕೊಡುವ ಅವಶ್ಯಕತೆಯೂ ಕೆಲವು ಕಾಲದಿಂದ ಕಂಡುಬಂದಿತ್ತು. ಈ ಉದ್ದೇಶದಿಂದಲೇ ಈ ವರ್ಷದಲ್ಲಿ ಈ ಇಲಾಖೆಯನ್ನು ಪರಿಷ್ಕರಿಸಲಾಗಿದೆ. ಇದರ ಫಲಿತಾಂಶವು ಗೋಚರಕ್ಕೆ ಬರುತ್ತಲಿದೆ. ಈ ಹೊಸ ಏರ್ಪಾಡುಗಳನ್ನು ಪ್ರಸಕ್ತವರ್ಷ ಮುಗಿಯುವುದಕ್ಕೆ ಹಿಂದೆ ನಾಲ್ಕುತಿಂಗಳಲ್ಲಿಯೇ ಜಾರಿಗೆ ತರಲು ಅವಕಾಶವಾಯಿತು.—ಆದರೂ ಅಷ್ಟು ಸ್ವಲ್ಪ ಕಾಲದೊಳಗೆ ವಿಶೇಷ ಹೊಸಕೆಲಸಗಳನ್ನು ಎಂದರೆ ಮುಖ್ಯವಾಗಿ ನಿದರ್ಶನಪೂರ್ವಕವಾಗಿ ತೋರಿಸುವ ವ್ಯವಸಾಯದ ಕೆಲಸಗಳನ್ನು ಪ್ರಾರಂಭಿಸುವುದಕ್ಕೆ ಸಾಧ್ಯವಾಯಿತು. [illegible] ಈ ನಿದರ್ಶನದ ಕೆಲಸಗಳನ್ನು ಇದುವರೆಗೆ ಕೆಲವು ಸ್ಥಳಗಳಲ್ಲಿ ಮಾತ್ರ ನಡಿಸುತ್ತಿತ್ತು. ಆ ಕೆಲಸವನ್ನು ಈಗ ಈ ಸಂಸ್ಥಾನದ ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ನಡೆಸುತ್ತಲಿದೆ.

ಹೋದವರ್ಷದ ಉಪನ್ಯಾಸದಲ್ಲಿ ವ್ಯವಸಾಯ ವಿಷಯಕವಾದ ಕೆಲಸಗಳನ್ನು ಕಾರ್ಯತಃ ನಡಿಯಿಸುವುದಕ್ಕಾಗಿ ತಿಳುವಳಿಕೆಯನ್ನು ಕೊಡುವುದಕ್ಕೆ ಬೆಂಗಳೂರಲ್ಲಿ ಒಂದು ವ್ಯವಸಾಯದ ಸ್ಕೂಲನ್ನು ಸ್ಥಾಪಿಸಲಾಗಿದೆ ಎಂಬುದಾಗಿ ತಿಳಿಸಿರುತ್ತದೆ. ಈ ಸ್ಕೂಲು ಪ್ರಾರಂಭವಾಗಿ ಒಂದು ವರ್ಷವಾಗಿದೆ. ಅದರಲ್ಲಿ 18 ಮಂದಿ ಹೊಸ ವಿದ್ಯಾರ್ಥಿಗಳೂ ಮತ್ತೂ 14 ಮಂದಿ 2 ನೆಯ ವರ್ಷದ ವ್ಯಾಸಂಗವನ್ನು ಮಾಡುವವರೂ ಇದ್ದಾರೆ. ರೈತರ ಮತ್ತೂ ಜಮೀನ್ ಹಿಡುವಳಿದಾರರ ಪ್ರಯೋಜನಕ್ಕೋಸ್ಕರ ಜಮೀನು ಸಾಗುವಳಿ ಕೆಲಸಗಳನ್ನು ಒಂದು ವಾರದವರೆಗೆ ಬೋಧಿಸುವುದಕ್ಕೆ ಏರ್ಪಾಡು ಮಾಡಲ್ಪಟ್ಟಿತು. ಈ ಬೋಧೆಯನ್ನು ಕೇಳುವುದಕ್ಕಾಗಿ ಸುಮಾರು ನೂರುಮಂದಿ ಜನರು ಬಂದು ಇದ್ದರು. ಈ ಚಾಲ್ತಿ ವರ್ಷದಲ್ಲಿ ಇದೇ ರೀತಿಯಲ್ಲಿ ಸಣ್ಣಸಣ್ಣ ಉಪನ್ಯಾಸಗಳನ್ನು ಕ್ರಮವಾಗಿ ನಡೆಸಬೇಕೆಂಬ ಉದ್ದೇಶವಿದೆ. ಅವುಗಳನ್ನು ಕೇಳುವುದಕ್ಕೋಸ್ಕರ ಬರುವ ಜನರು ಇಳಿದುಕೊಳ್ಳುವುದಕ್ಕೆ ಕಟ್ಟಡಗಳನ್ನು ಕಟ್ಟಿಸುತ್ತಲಿದೆ.

ಕೈಗಾರಿಕೆ ಮತ್ತೂ ವ್ಯಾಪಾರ ಇಲಾಖೆ.

ಕೈಗಾರಿಕೆಯ ಕೆಲಸಗಳಿಗಾಗಿ ತಕಾವಿ ಸಾಲ ಕೊಡುವುದನ್ನು ಕ್ರಮಪಡಿಸುವುದಕ್ಕೆ ಸಂಬಂಧಪಟ್ಟ ನಿಬಂಧನೆಗಳನ್ನು, ಹೋದವರ್ಷದ ಉಪನ್ಯಾಸದಲ್ಲಿ ಸೂಚಿಸಿರುವಂತೆ ವಿಸ್ತರಿಸಿ, ತಕಾವಿ ಸಾಲಗಳಿಗೆ ಬದಲಾಗಿ ಬಾಡಿಗೆ ಕ್ರಯದಮೇರೆ ಯಂತ್ರಗಳನ್ನು ವಿಕ್ರಯ ಮಾಡುವುದಕ್ಕೆ ಅವಕಾಶ ಕೊಟ್ಟಿರುತ್ತದೆ. ಈ ವರ್ಷದಲ್ಲಿ ಸುಮಾರು ಒಂದು ಲಕ್ಷ ರೂಪಾಯಿಗಳ ವರೆಗೆ ತಕಾವಿ ಸಾಲಗಳನ್ನೂ, ಇತರವಿಧವಾದ ಸಾಲಗಳನ್ನೂ ಕೊಟ್ಟಿರುತ್ತದೆ.

ಸಾಹುಕಾರರಿಗೆ, 1,44,000 ರೂ. ಖರ್ಚಿನಲ್ಲಿ 26 ಯಂತ್ರಗಳ ಸ್ಥಾಪನೆಯು ಮುಗಿದಿತ್ತು; ಇನ್ನೂ 18 ಯಂತ್ರಗಳ ಸ್ಥಾಪನೆಯು ನಡೆಯಬೇಕಾಗಿತ್ತು.

ಹುಣಸೂರಿನಲ್ಲಿಯೂ, [illegible] ಸ್ಥಾಪಿಸಿದ [illegible] ಯಂತ್ರಗಳು ಚೆನ್ನಾಗಿ ಕೆಲಸ ಮಾಡುತ್ತಿರುವುದರಿಂದ, ಶೀಘ್ರದಲ್ಲಿಯೇ ತುಂಗಭದ್ರಾ ತೀರದಲ್ಲಿಯೂ ಅದರ ಎರಡು ಹೊಸ ಶಾಖೆಗಳ ತೀರದಲ್ಲಿಯೂ ನೀರಾವರಿಗಾಗಿ ಅನೇಕ ಪಂಪಿನ ಯಂತ್ರಗಳನ್ನು ಸ್ಥಾಪಿಸುವ ಸಂಭವವಿದೆ.

ಮೈಸೂರಲ್ಲಿ ಸಕ್ಕರೆ ತಯಾರಿ, ಎಣ್ಣೆ [illegible] ಯಂತ್ರಸಾಮಗ್ರಿಗಳ ಉಪಯೋಗ, [illegible] ಇವೇ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ವಿಚಾರವನ್ನು ಆಯಾ ಇಲಾಖೆಯವರು ಮಾಡಿ ಆ ಮೂಲಕ ತಿಳಿದುಬಂದ ಸಂಗತಿಗಳನ್ನು, ಹೋದವರ್ಷ ಅನೇಕ ರಿಪೋರ್ಟುಗಳ ಮೂಲಕ ಪ್ರಕಾಶ ಮಾಡಿದರು. ಕೈಗಾರಿಕೆ ಮೂಲಕ ನಡೆಯುವ ವ್ಯಾಪಾರದ ಲೆಕ್ಕಪತ್ರಗಳು, ಇದುವರೆಗೆ ಬಂದಿರುವವುಗಳು ಕೇವಲ ಸ್ವಲ್ಪವಾಗಿದ್ದುದರಿಂದ, ರೈಲ್ವೆ ಮೂಲಕ ಈ ದೇಶದಿಂದ ಹೊರಕ್ಕೂ ಹೊರಗಿನಿಂದ ಇಲ್ಲಿಗೂ ಸಾಗುವ ವಸ್ತುಗಳ ಲೆಕ್ಕಗಳನ್ನು ಕ್ರಮವಾಗಿ ಮೂರು ತಿಂಗಳಿಗೊಂದುಸಾರಿ ತಯಾರಿಸಿಕೊಡಬೇಕೆಂದು, ಮದ್ರಾಸು ರೈಲ್ವೆ ಕಂಪನಿಯವರೊಡನೆ ಏರ್ಪಾಡು ಮಾಡಿ ಇದೆ.

ಪರಸ್ಪರ ಸಹಾಯಕ ಸಂಘಗಳು.

ಪ್ರಸಕ್ತವರ್ಷದಲ್ಲಿ ಪರಸ್ಪರ ಸಹಾಯಕ ಸಂಘಗಳ ಏರ್ಪಾಡು ವಿಶೇಷ ಅಭಿವೃದ್ಧಿಗೆ ಬಂದಿತು. ಈ ಏರ್ಪಾಡು ಇದುವರೆಗೆ ಮುಖ್ಯವಾಗಿ [illegible] ಅಭಿವೃದ್ಧಿಗೆ ಬಾರದೆ ಇದ್ದು, ಈಗ ಅಲ್ಲಿಗೂ ಹಬ್ಬುತ್ತಿರುವದು ತೃಪ್ತಿಕರವಾಗಿದೆ.

ಕ್ರೆಡಿಟ್ ಸೊಸೈಟಿಗಳು ಎಂದರೆ ಸಾಲ ಕೊಡುವ ಸಂಘಗಳು ಎಂದಿನಂತೆ ಈವಾಗಲೂ ಬೇಕಾಗಿಯೂ ಉಪಯೋಗಕರವಾಗಿಯೂ ಇರುವವು. ಇತರ ವಿಧಗಳಾದ ಪರಸ್ಪರ ಸಹಾಯಕ ಸಂಘಗಳೂ ಕ್ರಮೇಣ ಏಳಿಗೆಗೆ ಬರುತ್ತಿವೆ. ಎಂದರೆ ಪರಸ್ಪರ ಸಹಾಯಕ ನಿಯಮಗಳ ಮೇಲೆ ಜಮೀನಿಗೆ ನೀರು ಸರಬರಾಯಿ ಮಾಡುವ ಕೆಲಸವನ್ನೂ, ಕಚ್ಚಾಪದಾರ್ಥಗಳನ್ನು ಕೊಂಡುಕೊಳ್ಳುವ ಕೆಲಸವನ್ನೂ ಮತ್ತು ಸರಕನ್ನು ವಿಕ್ರಯ ಮಾಡುವ ಕೆಲಸವನ್ನೂ ನಡಿಸುವುದಕ್ಕೆ ಈಗ ಬೇರೆ ಬೇರೆ ಸಂಘಗಳು ಹುಟ್ಟಿವೆ.

ಈ ವರ್ಷದಲ್ಲಿ ಸಂಘಗಳ ಸಂಖ್ಯೆಯು 318 ರಿಂದ 580 ಕ್ಕೂ, ಮೆಂಬರುಗಳ ಸಂಖ್ಯೆ 24,818 ರಿಂದ 40,120 ಕ್ಕೂ ಹೆಚ್ಚಿರುವದಲ್ಲದೆ, ಸಹಾಯಕವಾದ ಮೂಲಧನವು 12,80,118 ರೂಪಾಯಿಂದ 21,17,330 ರೂಪಾಯಿಗೂ, ಒಟ್ಟು ಲೇವಾದೇವಿಗಳು 30,52,031 ರೂಪಾಯಿಂದ 50,88,623 ರೂಪಾಯಿಗೂ ಲಾಭವು 12,198 ರೂಪಾಯಿಂದ 2,30,221 ರೂಪಾಯಿಗೂ, ರಿಸರ್ವ್ ಫಂಡು 30,600 ರೂಪಾಯಿಂದ 30,210 ರೂಪಾಯಿಗೂ ಹೆಚ್ಚಿರುತ್ತವೆ. ಬೆಂಗಳೂರಿನ ಸೆಂಟ್ರಲ್ ಬ್ಯಾಂಕು ಉತ್ತಮ ಸ್ಥಿತಿಯಲ್ಲಿದ್ದುಕೊಂಡು, 37 ಸಂಘಗಳಿಗೆ 2,47,100 ರೂಪಾಯಿ ಸಾಲ ಕೊಟ್ಟಿರುತ್ತದೆ. ಗ್ರಾಮಾಂತರಗಳಲ್ಲಿರುವ ಸಂಘಗಳಿಗೆ ಬೇಕಾದ ಮೂಲಧನಕ್ಕೆ ಇದೇ ಮುಖ್ಯಾಧಾರವಾಗಿದ್ದುಕೊಂಡಿದೆ. ಮೂರು ಯೂನಿಯನುಗಳು ಸುಮಾರು 25,000 ರೂಪಾಯಿ ವರೆಗೆ ಬಂಡವಾಳವನ್ನು ಒದಗಿಸಿವೆ. ಅವುಗಳಲ್ಲಿ ಒಂದು, ಅದಕ್ಕೆ ಸೇರಿದ ಶಾಖಾ ಸಂಘಗಳಿಗೆ 25,000 ರೂಪಾಯಿ ವರೆಗೆ ಹಣವನ್ನು ಒದಗಿಸಿಕೊಡಬೇಕೆಂದು ಆಲೋಚಿಸುತ್ತಿದೆ. ಬೇಕಾದ ಮೂಲಧನವನ್ನೂ ಆಯಾ ಸ್ಥಳದಲ್ಲಿಯೇ ಆಗಲೀ ಮೇಲೆ ಹೇಳಿದ ಸಂಘಗಳಿಂದಾಗಲೀ ಒದಗಿದುದರಿಂದ, ಸರ್ಕಾರದವರೂ ಸ್ವಂತವಾಗಿ ಶ್ರೀಮನ್ಮಹಾರಾಜರವರೂ ರಿಜಿಸ್ಟ್ರಾರವರ ವಶದಲ್ಲಿ ಕೊಟ್ಟ ದ್ರವ್ಯದಿಂದ ಯಾವ ಗ್ರ್ಯಾಂಟುಗಳನ್ನೂ ಕೊಡುವ ಆವಶ್ಯಕತೆಯೂ ಇಲ್ಲವಾಯಿತು.

ಸಂಸದಭ್ಯುದಯ ಸಮಾಜದ ಮೂರನೆಯ ವರ್ಷದ ಸಾಂವತ್ಸರಿಕ ಸಭೆಯು ಕಳೆದ ಅಕ್ಟೋಬರ್ ತಿಂಗಳಲ್ಲಿ ಮೈಸೂರು ರಾಜಧಾನಿಯಲ್ಲಿ ಸೇರಿತ್ತು. ಈ ಸಮಾಜದ ಆರಂಭೋತ್ಸವವನ್ನು ಶ್ರೀಮದ್ಯುವರಾಜರವರು ನೆರವೇರಿಸಿದರು. ಇದಕ್ಕೆ ದಿವಾನ್ ಬಹದ್ದೂರ್ ರಾಜಸಭಾ ಭೂಷಣ ಎ. ಕೆ. ಪಿ. ಕೃಷ್ಣಶೆಟ್ಟರವರು ಅಧ್ಯಕ್ಷರಾಗಿದ್ದರು. ಇದಕ್ಕಿಂತ ಸಣ್ಣಸಣ್ಣವಾದರೂ, ಉಪಯೋಗವಿಷಯದಲ್ಲಿ ತತ್ಸಮಾನಗಳಾದ ಕಾನ್‌ಫರೆನ್ಸುಗಳು ಇನ್ನೂ ಹತ್ತು ಸ್ಥಳಗಳಲ್ಲಿ ನಡೆದುವು. ಇವುಗಳು ಸೇರುವುದಕ್ಕೂ ಸಾರ್ಥಕವಾಗಿ ಕೆಲಸವನ್ನು ಮಾಡುವುದಕ್ಕೂ ಬಹಳವಾಗಿ ಆಯಾ ಪ್ರದೇಶದ ಜನಗಳೇ ಪಟ್ಟ ಪ್ರಯತ್ನಗಳೂ ಏರ್ಪಾಡುಗಳೇ ಕಾರಣಗಳಾಗಿರುತ್ತವೆ.

[೬ ನೆಯ ಪುಟವನ್ನು ನೋಡಿರಿ.]

ಬಜೆಟ್ಟಿನಲ್ಲಿ ದಾಖಲ್ಮಾಡಿದ್ದ ಲೆಖ್ಖಕ್ಕಿಂತಲೂ ಜಾಸ್ತಿಯಾದ ಹುಟ್ಟುವಳಿ	30.13 ಲಕ್ಷ
ಸಾಮಾನ್ಯ ಬಾಬುಗಳ ಖರ್ಚಿನಲ್ಲಿ ಉಳಿದಿರುವದು	11.22 ,,
ಮೊದಲಿನ ಬಜೆಟ್ಟಿನಲ್ಲಿ ಅಂದಾಜು ಮಾಡಿದ್ದ ಸರ್‌ಪ್ಲಸ್ ಮೊಬಲಗು	8.72 ,,
ಜುಮ್ಲಾ	50.07 ಲಕ್ಷ

ಮುಖ್ಯಮುಖ್ಯವಾದ ಭಾರೀ ಕಾಂಗಾರಿಗಳಿಗಾಗಿಯೂ ಎಂದರೆ, ಕಾವೇರೀ ಜಲಾಶಯದ ಕಾಂಗಾರಿಯೂ, ಕಾವೇರೀ ವಿದ್ಯುಚ್ಛಕ್ತಿಯ ಏರ್ಪಾಟನ್ನು ಹೆಚ್ಚಿಸುವುದೂ, ಹೊಸದಾಗಿ ರೈಲನ್ನು ಹಾಕುವದೂ, ಬೆಂಗಳೂರಿನಲ್ಲಿ ಟ್ರಾಂವೆಯನ್ನು ಹಾಕುವದೂ, ಇವುಗಳಿಗಾಗಿ [illegible]

65.10 ಲಕ್ಷ ರೂಪಾ
ಮೊಬಲಗಿನ ಪೈಕಿ
ಯೋಗಿಸಿಕೊಳ್ಳಲು
ಕಾವೇರೀ ಜ
ವೆಕ್ಸೇಷನ್ ಮೊಬ
ವದು, ಏರ್ಪಾಡುಗ
ಉದ್ದೇಶಿಸಲ್ಪಟ್ಟ ರೈ
ಗಾರಿಗಳಿಗೆ ಬೇಕಾದ
ಯೂ ಯತ್ನವಿಲ್ಲದೆ
ಮುಗಳಿಗಾಗಿ ಒದಗಿ
ದಕ್ಕೆ ಮುಖ್ಯ ಕಾರ
1914-15 ನೆಯ
ಮಳೆ ಬೆಳೆಗಳ
ನಿರೀಕ್ಷಣೆಯಮೇಲೆ
(1914-15 ನೆಯ ವ
ವಿಚಾರಕ್ಕೆ ತೆಗೆದುಕೊ
ಉತ್ಪತ್ತಿಯೂ, 368
ಆಗುವದೆಂದು ಅಂದಾ
ನ್ಯಬಾಬು ವಿಶೇಷಬಾ
ಗಳ ಲೆಕ್ಕವು ಇದರ
ಹುಟ್ಟುವಳಿ
ಒಟ್ಟು ಹುಟ್ಟುವಳಿ
ಪೈಕಿ ವಜಾ-ನಿಲ
ಸ್ಪೇಷಲ್ ಸರ
ನಿವ್ವಳ ಸಾಮಾನ್ಯ
ಖರ್ಚು
ಒಟ್ಟು ಖರ್ಚು
ಭಾರೀ ಕಾಂ
1. ಕಾವೇರೀ ಜಲಾ
2. ಕಾವೇರೀ ವಿದ್ಯು
ಸ್ಥಾಪನೆಗಾ
3. ಎಲೆಕ್ಟ್ರಿಕ್ ಟ್ರಾ
4. ಸ್ಟೇಟ್ ರೈಲ್ವೆಗಳ
5. ಸರ್ಕಾರೀ ಸಹಾ
ರೈಲ್ವೆಗಳಿಗೆ
ಸಾಮಾನ್ಯ ಬಾಬುಗಳ
ಸಾಮಾನ್ಯ ಲೆಕ್ಕದಲ್ಲಿ
1914 ನೆಯ ಜು
ಸಂಸ್ಥಾನದ ಲೇಣೆ ದೇ
ನ್ನು ಈ ಉಪನ್ಯಾಸಕ್ಕೆ
ನೋಡಿದರೆ ಮೂಲದ್ರ
ಳಿಗಾಗಿ ಭಾರಿಯಾಗಿ
ಸ್ಥಿತಿಯು ಪೂರ್ತಿಯಾ
ಕುವಾಗಿದೆ.
ಬೆಂಗಳೂರು ಸಿವಿ
ಸರ
ಬೆಂಗಳೂರು ಸಿವಿ
ಪ್ಲಸ್ ಹುಟ್ಟುವಳಿಯ
ರಿಗೆ ಇದ್ದ ಹಕ್ಕನ್ನು ಇ
ಅಂಗೀಕರಿಸುತ್ತಾರೆಂಬ
ಬಹಳ ಜಾಗರೂಕತೆಯಿ

ಇಸವಿಯ ಆಖೈರ ವರೆಗೆ ಈ ಸಂಸ್ಥಾನಕ್ಕೆ 30 ಲಕ್ಷ ರೂಪಾಯಿಗಿಂತ ಸ್ವಲ್ಪ ಜಾಸ್ತಿಯಾಗಿ ಹಣ ಸಲ್ಲಬೇಕಾಗಿರುತ್ತದೆಂಬದಾಗಿ ಗೊತ್ತುಮಾಡಲ್ಪಟ್ಟಿತು. ಆ ಪೈಕಿ ಭಾರಿ ಕಂತು ಎಂದರೆ 30 ಲಕ್ಷ ರೂಪಾಯಿ ಈ ವರ್ಷದಲ್ಲಿ ಜಮಾ ಬಂದಿರುತ್ತದೆ.

ಅಬ್ಕಾರಿ.

1912-13 ನೆಯ ವರ್ಷದಲ್ಲಿ ಅಬ್ಕಾರ ಹುಟ್ಟುವಳಿಯದಷ್ಟು ಹಿಂದೆ ಯಾವ ಸಂವತ್ಸರದಲ್ಲಿಯೂ ಆಗಿರಲಿಲ್ಲವೆಂದು ಹೋದವರ್ಷ ತಿಳಿಸಲಾಯಿತು. ಆದರೆ 1913-14 ನೆಯ ವರ್ಷದ ಉತ್ಪತ್ತಿಯು ಇನ್ನೂ ಜಾಸ್ತಿಯಾಗಿದೆ. ಈ ಉತ್ಪತ್ತಿಯು 53,38,8[illegible] ರೂಪಾಯಿಗಳು, ಎಂದರೆ ಹಿಂದಿನ ವರ್ಷದ ಹುಟ್ಟುವಳಿಗಿಂತ 4,33,971 ರೂಪಾಯಿಗಳಷ್ಟು ಜಾಸ್ತಿಯಾಗಿದೆ. ಇದರಲ್ಲಿ ಸುಮಾರು ಅರ್ಧಪಾಲು ದುಕಾನ್ ಗುತ್ತಿಗೆ ಹರಾಜಿನಿಂದಲೂ, ಉಳಿದ ಮೊಬಲಗು ಮದ್ಯವು ಹೆಚ್ಚಾಗಿ ಖರ್ಚಿಯಾದುದರಿಂದಲೂ ಉತ್ಪತ್ತಿಯಾಯಿತು. ಈ ಹೆಚ್ಚು ಹುಟ್ಟುವಳಿಯು ಅನ್ಯದೇಶದ ಮದ್ಯದ ವಿನಾ ಡ್ಯೂಟಿಗೆ ಗುರಿಯಾದ ಎಲ್ಲಾ ಬಾಬುಗಳಿಂದಲೂ ಆಯಿತು. ಸುಲಭಕ್ರಯಕ್ಕೆ ದೊರೆಯುವ ಹಲವು ಬಗೆಯಾದ ಅನ್ಯದೇಶದ ಮದ್ಯಗಳ ಪಾನವು ಕ್ರಮೇಣ ಕಡಿಮೆಯಾಗಿ ಬೆಂಗಳೂರು ಸೆಂಟ್ರಲ್ ಡಿಸ್ಟಿಲರಿಯಲ್ಲಿ ತಯಾರಾಗುವ ಮದ್ಯಗಳ ಉಪಯೋಗವೇ ಹೆಚ್ಚಾಗುತಿದೆ.

ವೈದ್ಯ ಮತ್ತು ಜನಾರೋಗ್ಯದ ಇಲಾಖೆಗಳು.

ಈ ಸಂಸ್ಥಾನದಲ್ಲಿ ದೇವೀ ಹಾಕುವುದಕ್ಕೆ ಉಪಯೋಗಿಸಿದ ಹಾಲಿನಲ್ಲಿ ದೋಷಗಳಿದ್ದವೆಂದು ಬಂದ ಕೆಲವು ಫಿರ್ಯಾದುಗಳನ್ನು ಚೆನ್ನಾಗಿ ವಿಚಾರಮಾಡುವುದಕ್ಕಾಗಿ ಒಂದು ಕಮಿಟಿಯನ್ನು 1913 ನೆಯ ಜುಲೈ ತಿಂಗಳಲ್ಲಿ ನೇಮಿಸಲಾಯಿತೆಂದು ಹೋದವರ್ಷದ ಉಪನ್ಯಾಸದಲ್ಲಿ ತಿಳಿಯಿಸಿದೆ. ಕಮಿಟಿಯವರು ಈ ವಿಷಯವನ್ನು ಬಹಳ ಜಾಗರೂಕತೆಯಿಂದ ವಿಚಾರಮಾಡಿದಮೇಲೆ ಮೈಸೂರು ಸೀಮೆಯ ಹಾಲಿನಲ್ಲಿ ಕೆಡಕು ಉಂಟಾಗತಕ್ಕ ದೋಷಗಳೇನೂ ಇಲ್ಲವೆಂತಲೂ, ಶಕ್ತಿಯ ವಿಷಯದಲ್ಲಿ ಇಂಡಿಯಾ ದೇಶದ ಇತರ ಪ್ರದೇಶಗಳಲ್ಲಿ ತಯಾರಾದ ಹಾಲಿಗೆ ನಮ್ಮ ಹಾಲು ನಿಕೃಷ್ಟವಾದದ್ದಲ್ಲವೆಂತಲೂ ನಿರ್ಣಯಿಸಿದರು. ಆದರೆ ನಮ್ಮ ಹಾಲಿನಲ್ಲಿ ಬೇರೆ ಸಜೀವ ಸೂಕ್ಷ್ಮವಸ್ತುಗಳು ಇರುತ್ತವೆಯಾಗಿ, ಅವುಗಳಿಂದ ಯಾವ ಕೆಡಕೂ ಇಲ್ಲದಿದ್ದರೂ, ಅವುಗಳನ್ನೂ ಕೂಡ ತೆಗೆದು ಹಾಕತಕ್ಕದ್ದು ಅವಶ್ಯಕವಾಗಿರುವದೆಂದು ಕಮಿಟಿಯವರು ಅಭಿಪ್ರಾಯಪಟ್ಟು, ಆ ವಿಷಯದಲ್ಲಿ ಕೆಲವು ಸಲಹೆಗಳನ್ನೂ ಕೊಟ್ಟಿರುತ್ತಾರೆ. ಈ ಸಲಹೆಗಳನ್ನು ಸರ್ಕಾರದವರು ಒಪ್ಪಿ ಇರುತ್ತಾರೆ.

ರಾಬರ್ಟ್‌ಸನ್ ಪೇಟೆಯಲ್ಲಿ ಹೆರಿಗೆಯ ಆಸ್ಪತ್ರೆಯನ್ನು ಜಾಗ್ರತೆಯಲ್ಲಿ ಜನರ ಉಪಯೋಗಕ್ಕೆ ತರಲಾಗುವುದು. ಈ ಆಸ್[illegible]

ಅವುಗಳಲ್ಲಿ ಓದುವವರ ಸಂಖ್ಯೆ 31,290 ಆಗಿಯೂ ಇತ್ತು. ಒಟ್ಟು ವ್ಯಾಸಂಗಮಾಡುತ್ತಿರುವವರಲ್ಲಿ 1,54,319 ಮಂದಿ ಬಾಲಕರಾಗಿಯೂ, 33,411 ಮಂದಿ ಬಾಲೆಯರಾಗಿಯೂ ಇದ್ದರು. 1912-13ರಲ್ಲಿ ಒಟ್ಟು 1,29,009 ಮಂದಿ ಬಾಲಕರೂ, 27,431 ಮಂದಿ ಬಾಲೆಯರೂ ವ್ಯಾಸಂಗಮಾಡುತ್ತಿದ್ದರು. ಸ್ಕೂಲಿಗೆ ಹೋಗುವುದಕ್ಕೆ ಅರ್ಹವಾದ ವಯಸ್ಸುಳ್ಳ ಗಂಡಸರ ಪೈಕಿ, ಸ್ಕೂಲಿನಲ್ಲಿ ವ್ಯಾಸಂಗಮಾಡುತ್ತಿರುವವರ ಸಂಖ್ಯೆಯು ಶೇಕಡ 29.8 ರಿಂದ 35 ಕ್ಕೂ ಆದೇರೀತಿಯಲ್ಲಿರುವ ಒಟ್ಟು ಹೆಂಗಸರ ಪೈಕಿ ವ್ಯಾಸಂಗಮಾಡುತ್ತಿರುವ ಬಾಲೆಯರ ಸಂಖ್ಯೆಯು ಶೇಕಡ 6.4 ರಿಂದ 7.7 ಕ್ಕೂ ಹೆಚ್ಚಿರುತ್ತದೆ. ವ್ಯಾಸಂಗಾರ್ಹವಾದ ವಯಸ್ಸುಳ್ಳ ಒಟ್ಟು ಸ್ತ್ರೀಪುರುಷರ ಸಂಖ್ಯೆಯ ಪೈಕಿ ಒಟ್ಟು ವ್ಯಾಸಂಗಮಾಡುತ್ತಿರುವ ಬಾಲಿಕಾ ಬಾಲಕರ ಸಂಖ್ಯೆಯು ಕಳೆದ ವರ್ಷ ಶೇಕಡ 18.0 ಇದ್ದದ್ದು, ಈವರ್ಷ ಶೇಕಡ 21.1 ಕ್ಕೆ ಹೆಚ್ಚಿದಂತಾಗಿದೆ.

[illegible] ಸ್ವರಾಗಿಯೂ, [illegible] ಧೈರ್ಯವಾಗಿಯೂ ಬೆಳೆದು ಮುಖಕ್ಕೆ [illegible] ವರ್ಣವನ್ನು [illegible] ಇದಲ್ಲದೆ ಶೀತವಾಯು, ಕಟಿಶೂಲೆ, [illegible] ಕೆಮ್ಮು [illegible] ಮೊದಲು [illegible] ಜ್ಞಾಪಕಶಕ್ತಿಯನ್ನು ಹೆಚ್ಚಿಸುತ್ತದೆ. ಕಿಮ್ಮತ್ತು ಬಾಟ್ಲಿ 1 ಕ್ಕೆ 1-0-0.

ಸೌಭಾಗ್ಯಶುಂಠಿ ಲೇಹವು.

ಇದನ್ನು ಗರ್ಭಿಣಿ ಸ್ತ್ರೀಯರು ಪ್ರಸೂತರಾದ ಎರಡನೇ ತಿಂಗಳಿನಿಂದ [illegible] ಸೇವಿಸಿದರೆ,—ನೀರಡಿಕೆ, ಜ್ವರ, ಕೆಮ್ಮು, ದಾಹ, ಕ್ರಿಮಿ, ಜ್ವರ [illegible] ಇವೆಲ್ಲ ಬಳುವ ಆಗುವ ಬಾಣಂತಿರೋಗ ವಗೈರೆ ಗುಣವಾಗಿ ಬಲ, [illegible] ಇವನ್ನುಂಟುಮಾಡಿ ವಾಲಿವಾಲಿಕರೋಗವನ್ನು ನಾಶಮಾಡುವ [illegible] ಬಾಣಂತಿಯರಿಗೆ ಸಂಜೀವಿನಿಯಾದುದರಿಂದ ಬೇರೆ ಔಷಧವನ್ನು [illegible] ಅಗತ್ಯವೇ ಇಲ್ಲ. ಕಿಮ್ಮತ್ತು 60 ತೊಲೆಗೆ 6-0-0.

ಕ್ರಿಮಿನಾಶಕ ಗುಳಿಗೆಗಳು.

ಹೊಟ್ಟೆಯಲ್ಲಿ ಜಂತುಗಳು ಉದ್ಭವಿಸುವದರಿಂದ ಕೈಕಾಲುಗಳು ಕೃಶವಾಗಿ [illegible] ದೊಡ್ಡದಾಗಿ ಮಹಾರೋಗದಂತೆ ಭಾಸವಾಗುವದು, ಮತ್ತು ಈ [illegible] ದ ಯಾವಾಗಲೂ ಹೊಟ್ಟೆ ಕಡಿಯುವದು, ಜ್ವರಬರುವದು, ಅಶಕ್ತತೆ [illegible] ವದು. ಇವೆಲ್ಲ ವಿಕಾರಗಳು ತೋರಬಂದೊಡನೆ ಕ್ರಿಮಿನಾಶಕ [illegible] ನ್ನು ಸೇವಿಸಿದ್ದಲ್ಲಿ ಕ್ರಿಮಿಗಳು ಗುದದ್ವಾರದಿಂದ ಬಿದ್ದು ಹೊಟ್ಟೆಯು [illegible] ನಿರೋಗ ಉಳ್ಳವರಾಗುವರು. ಇದನ್ನು ಸೇವಿಸಿದನಂತರ ಮಕ್ಕಳಿಗೆ ಬಾಲಾಮೃತವನ್ನೂ ದೊಡ್ಡವರಾದರೆ ಪೌಷ್ಟಿಕಪಾಕವನ್ನೂ ಉಪಯೋಗಿಸಬೇಕು. ಕಿಮ್ಮತ್ತು ಡಬ್ಬಿಗೆ 0-12-0.

ವಾತಹಾರಕ ತೈಲವು.

[illegible] ಸು 80 ಪ್ರಕಾರದ ವಾತರೋಗಗಳನ್ನು ಗುಣಪಡಿಸಲು ರಾಮಬಾಣ [illegible] ಈ ತೈಲವನ್ನು ವಾತ (ಕಸ) ಬಂದ ಸ್ಥಳಕ್ಕೆ 3-4 ಸಾರೆ ಹಚ್ಚಿ ತಿಕ್ಕು [illegible] ವಾತ, ನೋವು, ಕೀಲನೋವು, ನರಗಳ ಹಿಡತ, ಕಟಿಶೂಲೆ ವಗೈರೆ ವ್ಯಾಧಿಗಳನ್ನು ಖಾತ್ರಿಯಿಂದ ಗುಣಪಡಿಸುವದು.

ಕಿಮ್ಮತ್ತು ಬಾಟ್ಲಿಗೆ 1-0-0.

ತಾಂಬೂಲಕ್ಕೆ ಸುಖಕರ ವಸ್ತು.

ಇದು ಅನೇಕ ಸುಗಂಧಮಯವಾದ ಮತ್ತು ಗುಣಕಾರಿಯಾದ ಪದಾರ್ಥಗಳಿಂದ ತಯಾರಿಸಿದೆ. ಪ್ರತಿದಿವಸ ತಾಂಬೂಲದೊಡನೆ ಉಪಯೋಗಿಸುವದರಿಂದ ಅತಿಜಡವಾದ ಆಹಾರವನ್ನು ತ್ವರ್ಯದಿಂದ ಜೀರ್ಣಗೊಳಿಸಿ, ಆಹಾರ, [illegible] ಮತ್ತು ಹವೆಗಳ ಬದಲಾವಣೆಗಳನ್ನು ಸಂಪಡಿಸಿ ರಕ್ತವನ್ನು ಶುದ್ಧಿ [illegible] ಯನ್ನು ಬೆಳೆಸುತ್ತದೆ. ಹಲ್ಲುನೋವು ಬಾಯಿವಾಸನೆ ದೂರಪಡಿ[illegible] ಇದರಲ್ಲಿ ಯಾವದೊಂದು ಆಕ್ಷೇಪಕರವಾದ ವಸ್ತುವಿನ ಮಿಶ್ರಣ [illegible] ರಿಂದ ಯಾವ ವಯಸ್ಸಿನವರಾದರೂ ಉಪಯೋಗಿಸಲು ಆಕ್ಷೇಪವಿಲ್ಲ.

ಕಿಮ್ಮತ್ತು ಡಬ್ಬಿಗೆ 0-12-0.

ವ್ರಣನಾಶಕ ಮಲಮು.

ಇದರಿಂದ ಖಜ್ಜಿ, ಕುರು, ಆನೆಗಜ್ಜಿ, ಇಸಬು, ಹುಣ್ಣು, ಗರ್ಮಿಯಿಂದಾದ [illegible], ನಾರ್ಹುಣ್ಣು ಮುಂತಾದ ಎಲ್ಲಾ ಪ್ರಕಾರದ ಹುಣ್ಣುಗಳು ನಾಶವಾಗುವವು. ಸಲ್ಪವೂ ಉರಿಯುವದಿಲ್ಲ. ಮುಂದೆ ಆಗುವದೂ ಇಲ್ಲ.

ಕಿಮ್ಮತ್ತು ಡಬ್ಬಿಗೆ 1-0-0.

ಕಿಮ್ಮತ್ತು 1 ಡಬ್ಬಿ ಚೂರ್ಣಕ್ಕೆ 2-0-0;

೩೭ ಪೀನಾಶಿ ರೋಗಕ್ಕೆ ಔಷಧ.

ಇದರ ಸೇವನೆಯಿಂದ ಮೂಗಿನಲ್ಲಿಯ ಪೀನಾಶಿರೋಗ ಗುಣವಾಗಿ ದುರ್ವಾಸನೆ ವಗೈರೆ ಹೋಗಲಾಡಿಸುತ್ತದೆ.

ಕಿಮ್ಮತ್ತು ಡಬ್ಬಿ 1ರ 5-0-0. ಈ ಬಗ್ಗೆ ಮೂಗಿನಲ್ಲಿ ಹಾಕುವ ಘೃತ ಬಾಟ್ಲಿ 1ಕ್ಕೆ 2-0-0.

೩೮ ಕುಷ್ಟ (ತೊನ್ನು) ರೋಗಕ್ಕೆ ಚೂರ್ಣ.

ಕುಷ್ಟರೋಗವು ಮೈಮೇಲೆ ಹಬ್ಬಿ ಮೈ ದಪ್ಪವಾಗಿ ಬಿಳೀ ಯಾ ಕೆಂಪು ವರ್ಣವಾಗಿ ಬೆಳೆಯುತ್ತದೆ. ಈ ರೋಗಕ್ಕೆ ಹೊಟ್ಟೆಯಲ್ಲಿ ತಕ್ಕೊಳ್ಳುವ ಚೂರ್ಣವು ಮತ್ತು ಮೈಮೇಲೆ ಹಚ್ಚುವ ಮುಲಾಮು ಇವುಗಳ ಸೇವನೆಯಿಂದ ಕುಷ್ಟ ರೋಗವು ಸಾಧಾರಣವಾಗಿದ್ದರೆ 1½ ತಿಂಗಳಲ್ಲಿ ಗುಣವಾಗುವದು, ಮತ್ತು ಹಳೇ ಕರದು ಬಲವತ್ತಾಗಿದ್ದರೆ 4 ತಿಂಗಳಲ್ಲಿ ಗುಣವಾಗುವದು.

ಕಿಮ್ಮತ್ತು ಚೂರ್ಣ ಡಬ್ಬಿ 1ಕ್ಕೆ 5-0-0; ಮಲಮು ಡಬ್ಬಿ 1ಕ್ಕೆ 2-0-0.

೩೯ ಮೂತ್ರಕೃಚ್ಛ್ರದ ಗುಳಿಗೆ.

ಈ ರೋಗ ಇದ್ದವರಿಗೆ ಮೂತ್ರಸ್ಥಾನದಿಂದ ಪದೇ ಪದೇ ಹನಿ ಹನಿಯಂತೆ ಮೂತ್ರ ಹೋಗುತ್ತದೆ. ಹಾಗೆ ಹೋಗುವಾಗ್ಗೆ ಹೆಚ್ಚು ಆಯಾಸವಾಗಿ ಕಷ್ಟಪಟ್ಟು ನೋಯುತ್ತದೆ. ತ್ವರ್ಯದಲ್ಲಿ ಇದಕ್ಕೆ ಔಷಧ ಕೊಡದಿದ್ದರೆ ಕ್ರಮೇಣ ಮೂತ್ರ ಹೋಗುವದು ಬಂದಾಗಿ, ವೇದನೆ ಹೆಚ್ಚುತ್ತದೆ. ಇದರ ಸೇವನೆಯಿಂದ ಮೂತ್ರವು ಸರಿಯಾಗಿ ಹೋಗಿ ವೇದನೆ ಸಹ ಗುಣವಾಗುತ್ತದೆ. ಹೊಸದಿದ್ದರೆ 12 ದಿವಸಗಳಲ್ಲೂ, ಹಳೆಯದಿದ್ದರೆ 2 ತಿಂಗಳಲ್ಲೂ ಗುಣ.

ಕಿಮ್ಮತ್ತು 24 ಗುಳಿಗೆಗಳ ಡಬ್ಬಿ 1ಕ್ಕೆ 3-0-0.

೪೦ ತಂಬಾಕಿನ ಗುಳಿಗೆ.

ಕಸ್ತೂರಿ ಮೊದಲಾದ ಹೆಚ್ಚು ಬೆಲೆಯ ಪದಾರ್ಥಗಳನ್ನುಪಯೋಗಿಸಿದ ಇದರ ಸೇವನೆಯಿಂದ ಬಾಯಿಯ ದುರ್ವಾಸನೆ ಹೋಗಲಾಡಿಸಿ ಮುಖವು ಸುವಾಸನೆಯಾಗಿ; ಹಲ್ಲುನೋವು ನಾಶವಾಗಿ; ಹಲ್ಲುಗಳು ಘಟ್ಟಿಯಾಗುವವು. ಇದನ್ನು ತಾಂಬೂಲದೊಡನೆ ಸೇವಿಸಬೇಕು. ಬೆಲೆ ಡಬ್ಬಿ 1ರ 0-12-0.

೪೧ ಸುಗಂಧಿ ಹಲ್ಲು ಪುಡಿ.

ಈ ಸುಗಂಧಿ ಹಲ್ಲು ಪುಡಿಯಿಂದ ಹಲ್ಲುಗಳನ್ನು ತಿಕ್ಕುವದರಿಂದ ಹಲ್ಲುಗಳಲ್ಲಿ ಬೀಳತಕ್ಕ ಕೀವು ಗುಣವಾಗಿ ಬಾಯಿಯಿಂದ ಹೊರಡುವ ದುರ್ವಾಸನೆ ಹೋಗಿ ಹಲ್ಲುಗಳು ವಜ್ರದಂತೆ ಘಟ್ಟಿಯಾಗಿ ಮುತ್ತುಗಳಂತೆ ಶುಭ್ರವಾಗುವವು.

ಕಿಮ್ಮತ್ತು ಡಬ್ಬಿ 1ಕ್ಕೆ 0-4-0; 12 ಡಬ್ಬಿಗಳಿಗೆ 2-8-0. 24 ಡಬ್ಬಗಳಿಗೆ 1 ಟ್ಯಾಂಪೀಸ ಇನಾಮಾಗಿ ಸಿಕ್ಕುವದು. 48 ಡಬ್ಬಿ ತರಿಸಿಕೊಂಡರೆ ಕಿಸೆಯೊಳಗೆ ಇಡುವ ಲಿವ್ಹರ ರೈಲ್ವೆ ರೇಗ್ಯುಲೇಟರ್ ವೊಚ್ ಇನಾಮಾಗಿ ಸಿಕ್ಕುವದು. 100 ಡಬ್ಬಿಗಳನ್ನು ಒಂದೇ ಸಾರಿ ತರಿಸಿಕೊಂಡರೆ 8 ದಿವಸಕ್ಕೊಮ್ಮೆ ಕೀಲಿ ಕೊಡುವ, ಘಂಟೆ ಹೊಡೆಯುವ ಆಫೀಸ ಕ್ಲೊಕ್ ಇನಾಮಾಗಿ ಸಿಕ್ಕುವದು. ಮುಂಗಡವಾಗಿ ರೂಪ್ಯಾ 3 ಕಳುಹಿಸಿ ರೈಲ್ವೆ ಸ್ಟೇಶನ್ ತಿಳಿಸಬೇಕು.

೪೨ ಗೃಹಸಂಜೀವನಿ ತೈಲವು.

ಈ ಶ್ರೇಷ್ಠವಾದ ಒಂದೇ ತೈಲದಿಂದ ವಾತರೋಗ, ಉಳುಕು, ತಲೆನೋವು, ಚಕ್ರ, ಸುಟ್ಟಗಾಯ, ಕಡಿತಗಾಯ, ಎದೆನೋವು, ಜಜ್ಜಿದಗಾಯ, ಅಜೀರ್ಣ, ಗಂಟಲನೋವು, ಹಲ್ಲುಬೇನೆ, ಸಂಧುವಾತ, ಹುರಕು, ಗಜ್ಜಿ ವಗೈರೆ 24 ರೋಗಗಳು ಗುಣವಾಗುವವು. ಚಿಕ್ಕಮಕ್ಕಳ ಬಾಲಗ್ರಹ ಮೊದಲಾದವುಗಳಿಗೆ ಬಹಳ ಗುಣಕಾರಿಯಾಗಿದೆ. ಆದ್ದರಿಂದ ಈ ತೈಲವನ್ನು ಪ್ರತಿ ಒಬ್ಬರು ಮನೆಯಲ್ಲಿ ಸಂಗ್ರಹಿಸಿ ಇಡತಕ್ಕದ್ದು. ಕಿಮ್ಮತ್ತು ಬಾಟ್ಲಿ 1ಕ್ಕೆ 1-0-0.

ಬೆಂಗಳೂರು ಸೆಂಟ್ರಲ್ ಕಾಲೇಜಿನ ಕೆಮಿಸ್ಟ್ರಿ ಶಾಖೆಯ ಬಿ. ಎ. ಪ್ಯಾಸ್ ಕೋರ್ಸನ್ನೂ, ಫಿಜಿಕ್ಸ್ ಶಾಖೆಯ ಆನರ್ಸ್ ಕೋರ್ಸನ್ನೂ ಮದರಾಸ್ ಯೂನಿವರ್ಸಿಟಿಗೆ ಸಂಬಂಧಪಡಿಸಲಾಯಿತು. ಆದರೆ ಸುಶಿಕ್ಷಿತರಾದ ಯೂರೋಪ್ ದೇಶದ ಒಬ್ಬ ಅಸಿಸ್ಟೆಂಟ್ ಪ್ರೊಫೆಸರು ಇಲ್ಲದೆ ಇರುವದರಿಂದ, ಕೆಮಿಸ್ಟ್ರಿ ಶಾಖೆಯ ಆನರ್ಸ್ ಕೋರ್ಸನ್ನು ಪ್ರಾರಂಭಿಸುವದು ಸಾವಕಾಶಮಾಡಬೇಕಾಯಿತು. ಮೈಸೂರು ಮಹಾರಾಜಾ ಕಾಲೇಜಿನಲ್ಲಿ, ಹಿಸ್ಟರಿ ಮತ್ತು ಎಕನಾಮಿಕ್ಸ್ ಭಾಗಗಳಲ್ಲಿ ಒಂದು ಆನರ್ಸ್ ಕೋರ್ಸನ್ನೂ ಏರ್ಪಡಿಸಲಾಯಿತು. ಈ ಕೋರ್ಸುಗಳನ್ನು ಏರ್ಪಡಿಸಿದ್ದರಿಂದ ಬೇಕಾದ ಸಲಕರಣೆಗಾಗಿಯೂ ಹೆಚ್ಚು ಶಿಬ್ಬಂದಿಗಾಗಿಯೂ ಸ್ವಲ್ಪ ಖರ್ಚನ್ನು ಮಾಡುವುದು ಅವಶ್ಯಕವಾಯಿತು.

ಪ್ರೌಢವಿದ್ಯಾಭ್ಯಾಸದ ವಿಷಯದಲ್ಲಿಯೂ ಇತರ ಅಭಿವೃದ್ಧಿಕಾರ್ಯಗಳು ಜರುಗಿಸಲ್ಪಟ್ಟುವು. ಆದರೆ ಈ ಇಲಾಖೆಯ ಯಾವಚ್ಛಕ್ತಿಯನ್ನೂ ಮುಖ್ಯವಾಗಿ ಪ್ರಾಥಮಿಕ ವಿದ್ಯಾಭಿವೃದ್ಧಿಗಾಗಿ ವಿನಿಯೋಗಿಸಲಾಯಿತು. ಗ್ರಾಮಪಾಠಶಾಲೆಗಳನ್ನು ಹೆಚ್ಚಿಸುವುದಕ್ಕಾಗಿ ಪ್ರತ್ಯೇಕವಾಗಿ ಒಂದು ಲಕ್ಷ ರೂಪಾಯಿ ಗ್ರಾಂಟನ್ನೂ, ಸ್ಕೂಲ್ ಕಟ್ಟಡಗಳನ್ನು ಕಟ್ಟಿಸತಕ್ಕಬಗ್ಗೆ ಅರ್ಧ ಲಕ್ಷ ರೂಪಾಯಿ ಗ್ರಾಂಟನ್ನೂ ಕೊಡಲಾಯಿತು. ಗ್ರಾಂಟ್ ಇನ್ ಏಯ್ಡ್ ನಿಬಂಧನೆಗಳ ಮೇರೆ 1,000 ಸ್ಕೂಲುಗಳನ್ನು ಏರ್ಪಡಿಸಲು ಮುಂಜೂರ್‌ಮಾಡಲಾಯಿತು. ಯಾವ ಉಪಾಧ್ಯಾಯನಿಗೇ ಆಗಲಿ ಮಾಹೆಯಾನ 10 ರೂಪಾಯಿಗೆ ಕಮ್ಮಿ ಇಲ್ಲದಷ್ಟು ಸಂಬಳ ದೊರೆಯುವಂತೆ ಮಾಡಲು, ಸರ್ಕಾರದಿಂದ ಕೊಡುವ ಗ್ರಾಂಟಿನ ಜೊತೆಗೆ ಗ್ರಾಮಸ್ಥರು ದ್ರವ್ಯರೂಪವಾಗಿಯಾಗಲೀ ಧಾನ್ಯರೂಪವಾಗಿಯಾಗಲಿ ಸಹಾಯ ಮಾಡಬೇಕಾದದ್ದೇ ಇದರ ಮೂಲತತ್ವವು.

ನಿರ್ಬಂಧ ವಿದ್ಯಾಭ್ಯಾಸದ ಒಂದು ಏರ್ಪಾಟನ್ನು ಮಂಜೂರ್ಮಾಡಿರುವದಲ್ಲದೆ, ಇದನ್ನು ಸದ್ಯದಲ್ಲಿ ಹುನಾಯಿಸಲ್ಪಟ್ಟಿರುವ 15 ಮುಖ್ಯ ಸ್ಥಳಗಳಲ್ಲಿ ಅಮಲ್ಮಾಯಿಸಿ ಮಾಡಲಾಗುವುದು. ಇದಕ್ಕಾಗಿ ನಿಯಮಗಳನ್ನು ತಯಾರ್ಮಾಡಿ, ಹಣವನ್ನು ಒದಗಿಸಿ ಇದೆ. ಮತ್ತು ಮೊದಲು ಮಾಡಬೇಕಾದ ಸಂವಿಧಾನಗಳೆಲ್ಲಾ ಮುಗಿದಿರುತ್ತವೆ.

ಪ್ರಾಥಮಿಕ ವಿದ್ಯಾಭ್ಯಾಸವನ್ನೂ ಸಾಮಾನ್ಯ ವಿದ್ಯಾಭ್ಯಾಸವನ್ನೂ ಹೆಚ್ಚಿಸಿದ್ದರಿಂದ, ಸಂಸ್ಥಾನದಲ್ಲಿ ಇದುವರೆಗೆ ದೊರೆಯುತ್ತಿದ್ದುದಕ್ಕಿಂತಲೂ ಶಿಕ್ಷಿತರಾದ ಹೆಚ್ಚು ಜನ ಉಪಾಧ್ಯಾಯರನ್ನೂ, ಇನ್ನೂ ಉತ್ತಮವಾದ ಶಿಕ್ಷಣಕ್ರಮವನ್ನೂ ಒದಗಿಸತಕ್ಕದ್ದು ಅವಶ್ಯಕವಾಗಿರುತ್ತದೆ. ಇದನ್ನು ಒದಗಿಸಬೇಕೆಂಬ ಉದ್ದೇಶದಿಂದ ಟ್ರೇನಿಂಗ್ ಸ್ಕೂಲ್‌ಗಳನ್ನು ಇನ್ನೂ ಚೆನ್ನಾಗಿ ಸುಧಾರಿಸುವುದಕ್ಕೂ, ಅವುಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕೂ ಒಂದು ಏರ್ಪಾಡು ಅಂಗೀಕೃತವಾಗಿದೆ. ಆ ಏರ್ಪಾಡಿನ ಸಾರಾಂಶವೇನೆಂದರೆ—ಗ್ರ್ಯಾಜುಯೇಟುಗಳಾದ ಉಪಾಧ್ಯಾಯರುಗಾಗಿ ಒಂದು ಟ್ರೇನಿಂಗ್ ತರಗತಿಯನ್ನಿಟ್ಟು ಮೈಸೂರು ನಾರ್ಮಲ್‌ಸ್ಕೂಲನ್ನು ಒಂದು ಟ್ರೇನಿಂಗ್ ಕಾಲೇಜನ್ನಾಗಿ ಮಾಡುವುದು; ಶಿವಮೊಗ್ಗೆಯಲ್ಲಿಯೂ, ಕೋಲಾರದಲ್ಲಿಯೂ ಇರುವ ಟ್ರೇನಿಂಗ್ ಸ್ಕೂಲುಗಳನ್ನು ಇನ್ನೂ ಚೆನ್ನಾಗಿ ಸುಧಾರಿಸುವುದು; ಮತ್ತು ಶೀಘ್ರದಲ್ಲಿಯೇ ತುಮಕೂರಲ್ಲಿ ಒಂದು ಟ್ರೇನಿಂಗ್ ಸ್ಕೂಲನ್ನು ಇಡುವುದು. ಈಗ ಸಾಲಿಯಾನ 251 ಜನ ಉಪಾಧ್ಯಾಯರಿಗೆ ಶಿಕ್ಷಣವನ್ನು ಕೊಡುತ್ತಿರುವುದಕ್ಕೆ ಬದಲಾಗಿ, ಮುಂದೆ 440 ಜನ ಉಪಾಧ್ಯಾಯರಿಗೆ ಶಿಕ್ಷಣವನ್ನು ಕೊಡುವುದೇ ಈ ಬದಲಾವಣೆಗಳ ಫಲಿತಾಂಶವಾಗುವುದು.

ಹಿಂದಿನ ವರ್ಷದ ಉಪನ್ಯಾಸದಲ್ಲಿ ನಿರೂಪಿಸಿರುವಂತೆ ಶಿಲ್ಪವಾಣಿಜ್ಯ ವಿದ್ಯಾಭಿವೃದ್ಧಿಗೆ ಬೇಕಾದ ಅನೇಕ ಏರ್ಪಾಡುಗಳನ್ನು ಜಾರಿಗೆ ತರಲಾಯಿತು. ಬೆಂಗಳೂರಲ್ಲಿ ಒಂದು ಮೆಕ್ಯಾನಿಕಲ್ ಎಂಜಿನಿಯರಿಂಗ್ ಸ್ಕೂಲನ್ನೂ ಒಂದು ಕಮರ್ಷಿಯಲ್ ಸ್ಕೂಲನ್ನೂ ಸ್ಥಾಪಿಸಲಾಯಿತು. ಮೈಸೂರಲ್ಲಿ ಮೊದಲಿದ್ದ ಎರಡು ಶಿಲ್ಪಶಾಲೆಗಳನ್ನು ಸೇರಿಸಿ ಹೊಸದಾಗಿ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟನ್ನು ಏರ್ಪಡಿಸಲಾಯಿತು. ಪ್ರಸಕ್ತ ಸಂವತ್ಸರದಲ್ಲಿ ಮೇಲ್ಕಂಡ ವಿದ್ಯಾಲಯಗಳಲ್ಲೆಲ್ಲಾ ಅತ್ಯುತ್ತಮವಾದ ಉದ್ಯೋಗವು ಜರುಗಿರುತ್ತದೆ ಎಂದು ತಿಳಿಯಬರುತ್ತದೆ. ಕೈಗಾರಿಕೆ ಕಸಬನ್ನು ಕಲಿಸುವ ಉಪಾಧ್ಯಾಯರುಗಳನ್ನೂ, ರೈಲ್ವೆ ಪರ್ಮನೆಂಟ್ ವೇ ಇನ್ಸ್‌ಪೆಕ್ಟರುಗಳನ್ನೂ ಎಂಜಿನ್ ಡ್ರೈವರುಗಳನ್ನೂ ಮತ್ತು ಟೆಲಿಗ್ರಾಫಿಕ್ ಸಿಗ್ನಲರುಗಳನ್ನೂ ತಯಾರ್ಮಾಡತಕ್ಕ ಬಗ್ಗೆ ಮೆಕ್ಯಾನಿಕಲ್ ಎಂಜಿನಿಯರಿಂಗ್ ಸ್ಕೂಲಿನಲ್ಲಿ ಹೊಸ ತರಗತಿಗಳನ್ನು ಇಡಲು ಏರ್ಪಾಡು ಮಾಡಲಾಗಿದೆ. ಗೌರ್ನಮೆಂಟ್ ಪ್ರೆಸ್ ಕಟ್ಟಡದ ಒಂದು ಭಾಗದಲ್ಲಿ, ಅಜಮಾಯಿಷಿ ತರೀಕ ಒಂದುವರ್ಷದವರೆಗೆ ಒಂದು ಪ್ರಿಂಟಿಂಗ್ ಕ್ಲಾಸನ್ನು ಇಡಲಾಗುತ್ತದೆ. ಅದರಲ್ಲಿ ಮೊಳೆಗಳನ್ನು ಜೋಡಿಸುವುದು, ಪ್ರೂಫುಗಳನ್ನು ಓದಿ ತಿದ್ದುವುದು, ಮುದ್ರಿಸುವುದು, ಈ ಕೆಲಸಗಳನ್ನು ಕಲಿಸಲಾಗುವುದು.

ಸ್ತ್ರೀವಿದ್ಯಾಭ್ಯಾಸವೂ ಕೂಡ ಅಭಿವೃದ್ಧಿಯಾಗುತ್ತಿದೆ. ಕಳೆದ ಸಾಲಿನಲ್ಲಿ ಇದ್ದ ಗರ್ಲ್ಸ್ ಸ್ಕೂಲುಗಳ ಸಂಖ್ಯೆಯು 360 ರಿಂದ ಪ್ರಕೃತ ವರ್ಷದಲ್ಲಿ 397 ರ ವರೆಗೆ ಹೆಚ್ಚಿರುತ್ತದೆ. ಮೈಸೂರಲ್ಲಿರುವ ಮಹಾರಾಣೀ ಕಾಲೇಜನ್ನೂ, ಡಿಸ್ಟ್ರಿಕ್ಟು ಕಸಬೆಗಳಲ್ಲಿರುವ ಗರ್ಲ್ಸ್ ಸ್ಕೂಲುಗಳನ್ನೂ, ಅವುಗಳ ಪ್ರಯೋಜನವು ಹೆಚ್ಚಬೇಕೆಂಬ ಉದ್ದೇಶದಿಂದ, ಪುನಃ ಪರಿಷ್ಕರಿಸಲು ಹುಕುಂ ಕೊಡಲಾಗಿರುತ್ತದೆ. ಸದರಿ ಕಾಲೇಜಿಗೆ ಸೇರಿದಂತೆ ಒಂದು ಹಾಸ್ಟೆಲನ್ನು ಏರ್ಪಡಿಸಲಾಗುವುದು ಮತ್ತು ಮುಂದೆ ಸರ್ಕಾರದ ಆಡಳಿತಕ್ಕೆ ತೆಗೆದುಕೊಳ್ಳುವ ಮೈಸೂರು ವಿಡೋಸ್ ಹೋಮನ್ನು ಅದಕ್ಕೆ ಸೇರಿಸಲಾಗುತ್ತದೆ. ಬೆಂಗಳೂರಿನಲ್ಲಿರುವ ಗೌರ್ನಮೆಂಟ್ ಗರ್ಲ್ಸ್ ಸ್ಕೂಲಿನಲ್ಲಿಯೂ, ತುಮಕೂರು ಯುಂಗ್ರೆನ್ ಗರ್ಲ್ಸ್ ಸ್ಕೂಲಿನಲ್ಲಿಯೂ ಕನ್ನಡ ಅಪ್ಪರ್ ಸೆಕೆಂಡರಿ ತರಗತಿಗಳನ್ನಿಟ್ಟು ಸದರಿ ಸ್ಕೂಲುಗಳನ್ನು ಹೈಸ್ಕೂಲ್ ಅಂಕಿತಕ್ಕೆ ತರಲಾಗುವುದು. ಈ ಸ್ಕೂಲುಗಳಲ್ಲಿಯೂ ಬೆಂಗಳೂರು ಆರ್ಯಬಾಲಿಕಾ ಪಾಠಶಾಲೆಯಲ್ಲಿಯೂ, ಚಾಮರಾಜಪೇಟೆ ಗರ್ಲ್ಸ್ ಸ್ಕೂಲಿನಲ್ಲಿಯೂ ಇಂಗ್ಲೀಷ್ ಲೋವರ್‌ಸೆಕೆಂಡರಿ ಕ್ಲಾಸುಗಳನ್ನು ಇಡಲಾಗುವುದು. ಬೆಂಗಳೂರು ಮಲ್ಲೇಶ್ವರದ ಗರ್ಲ್ಸ್ ಸ್ಕೂಲಿನಲ್ಲಿಯೂ, ಕೋಲಾರ, ಚಿಕ್ಕಮಗಳೂರು, ಚಿತ್ರದುರ್ಗ, ಶಿವಮೊಗ್ಗೆ, ಹಾಸನ ಇವುಗಳಲ್ಲಿನ ಗರ್ಲ್ಸ್ ಸ್ಕೂಲುಗಳಲ್ಲಿಯೂ ಇಂಗ್ಲೀಷ್ ಭಾಷೆಯನ್ನು ಕಲಿಸುವುದಕ್ಕೆ ಏರ್ಪಾಡು ಮಾಡಲಾಗುವುದು. ಈ ಹೊಸ ಬದಲಾವಣೆಗಳಿಂದ ಭಾಷೆಗೆ ಸಂಬಂಧಪಟ್ಟ ವಿದ್ಯೆಯೊಂದಿಗೆ ಕೈಗಾರಿಕೆಗೂ ಗೃಹಕೃತ್ಯಕ್ಕೂ ಸಂಬಂಧಪಟ್ಟ ವಿದ್ಯೆಗಳಿಗೂ ಅವಕಾಶವುಂಟಾಗುವುದು. ಹಿಂದುಸ್ಥಾನಿ ಗರ್ಲ್ಸ್ ಸ್ಕೂಲುಗಳಿಗೆ ಒಬ್ಬರು ಇನ್ಸ್‌ಪೆಕ್ಟ್ರೆಸ್ಸನ್ನು ಹಂಗಾಮಿಯಾಗಿ ನೇಮಿಸಿಯಿದೆ.

ಜಾರಿಗೆ ತಂದಿರುವ ಮುಖ್ಯಮುಖ್ಯ ಇತರ ಏರ್ಪಾಡುಗಳಲ್ಲಿ ಈ ಕೆಳಗೆ ಕಂಡ ಸಂಗತಿಗಳನ್ನು ಉದಾಹರಿಸಬಹುದಾಗಿದೆ:—ವರ್ನಾಕ್ಯುಲರ್ ವಿದ್ಯಾಭ್ಯಾಸದ [illegible] ವಿದ್ಯಾಭ್ಯಾಸದ ಇಲಾಖೆಯ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್‌ರವರನ್ನು ನಿಯಮಿಸಿದ್ದು, ಅಧಿಕಾರಿಗಳ ಮತ್ತು ಹೈಸ್ಕೂಲ್ ಆಂಗ್ಲೋ ವರ್ನಾಕ್ಯುಲರ್ ಸ್ಕೂಲುಗಳ ಹೆಡ್ಮಾಸ್ಟರ ಮತ್ತು ಇತರ ಉಪಾಧ್ಯಾಯರ ಸಂಬಳದ ದರ್ಜೆಯನ್ನು ಪುನರ್ವಿಮರ್ಶೆ ಮಾಡಿದ್ದು, ಪ್ರತಿ ದರ್ಜೆಯಲ್ಲಿಯೂ ಎಷ್ಟು ಜನಗಳಿರಬೇಕೆಂಬುದನ್ನು ಗೊತ್ತುಪಡಿಸುವುದು, ಒಂದು ದರ್ಜೆಯು ಮತ್ತೊಂದು ದರ್ಜೆಗೆ ಸೇರಿಕೊಳ್ಳುವಂತೆ ಮಾಡುವುದು, ಯೋಗ್ಯತೆಯ ಆಧಾರದ ಮೇಲೆಯೇ [illegible] ನ್ನು ಕಲ್ಪಿಸುವುದು, [illegible] ಉಪಾಧ್ಯಾಯರುಗಳೂ ಸಬ್ ಇನ್ಸ್‌ಪೆಕ್ಟರುಗಳೂ [illegible] ಕೆಲಸವನ್ನು [illegible] ಕ್ರಮವಾಗಿ ನಡೆಸುವುದಕ್ಕೆ ಅವಕಾಶಕೊಡುವುದು, ಮತ್ತು ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್ ಉಪಾಧ್ಯಾಯರುಗಳ ಸಂಬಳವು ಅಪೇಕ್ಷ್ಯವಾದವಾಗಿ ಇರುವಂತೆ ಮಾಡುವುದು, ಸರ್ಕಾರಿ ಸಹಾಯವನ್ನು ಪಡೆಯುವ ಸ್ಕೂಲುಗಳ ಉಪಾಧ್ಯಾಯರಿಗೆ ಸಂಸ್ಥಾನದ ವಿಮಾ ಕ್ರಮದಿಂದ (ಇನ್ಶೂರೆನ್ಸ್) ಉಂಟಾಗುವ ಪ್ರಯೋಜನವನ್ನು ಪಡೆಯಲು ಕೆಲವು ಷರತ್ತುಗಳ ಮೇಲೆ ಅವಕಾಶಕೊಡಲಾಗಿದೆ.

ಕಳೆದ ದಸರಾ ಮಹೋತ್ಸವ ಕಾಲದಲ್ಲಿ ಮೈಸೂರಲ್ಲಿ ವಿದ್ಯಾಭ್ಯಾಸಪ್ರದರ್ಶನವನ್ನು ನಡೆಯಿಸಲಾಯಿತು. ಆ ಪ್ರದರ್ಶನಕ್ಕೆ ಅನೇಕ ಜನಗಳು ಬಂದಿದ್ದರು. ಡಿಸೆಂಬರ್ ಮಾಹೆಯ ಆಖೈರಿನಲ್ಲಿ ಅಂತಹ ಮತ್ತೊಂದು ಪ್ರದರ್ಶನವನ್ನು ಬೆಂಗಳೂರು ಹೈಸ್ಕೂಲಿನಲ್ಲಿ ಜರುಗಿಸಲಾಯಿತು. ಅದೂ ಜನಗಳ ಮೆಚ್ಚುಗೆಗೆ ಪಾತ್ರವಾಯಿತು.

ವ್ಯವಸಾಯದ ಇಲಾಖೆ.

ಈ ಸಂಸ್ಥಾನದ ಮುಖ್ಯ ಕಸಬಾದ ವ್ಯವಸಾಯವನ್ನು ಉತ್ತಮಸ್ಥಿತಿಗೆ ತರುವ ವಿಷಯದಲ್ಲಿ ವ್ಯವಸಾಯದ ಇಲಾಖೆಯವರು ಸಾರ್ಥಕವಾದ ಕೆಲಸವನ್ನು ಮಾಡಬೇಕಾದರೆ, ಆ ಇಲಾಖೆಗೆ ಹೆಚ್ಚು ಸಿಬ್ಬಂದಿಯನ್ನು ಕೊಡುವ ಅವಶ್ಯಕತೆಯು ಕೆಲವು ಕಾಲದಿಂದ ಕಂಡುಬಂದಿತ್ತು. ಈ ಉದ್ದೇಶದಿಂದಲೇ ಈ ವರ್ಷದಲ್ಲಿ ಈ ಇಲಾಖೆಯನ್ನು ಪರಿಷ್ಕರಿಸಲಾಗಿದೆ. ಇದರ ಫಲಿತಾಂಶವು ಗೋಚರಕ್ಕೆ ಬರುತ್ತಲಿದೆ. ಈ ಹೊಸ ಏರ್ಪಾಡುಗಳನ್ನು ಪ್ರಸಕ್ತವರ್ಷ ಮುಗಿಯುವುದಕ್ಕೆ ಹಿಂದೆ ನಾಲ್ಕು ತಿಂಗಳಲ್ಲಿಯೇ ಜಾರಿಗೆ ತರಲು ಅವಕಾಶವಾಯಿತು—ಆದರೂ ಅಷ್ಟು ಸ್ವಲ್ಪ ಕಾಲದೊಳಗೆ ವಿಶೇಷ ಹೊಸಕೆಲಸಗಳನ್ನು ಎಂದರೆ ಮುಖ್ಯವಾಗಿ ಸಿದ್ಧಾಂತಪೂರ್ವಕವಾಗಿ ಶೋಧಿಸುವ ವ್ಯವಸಾಯದ ಕೆಲಸಗಳನ್ನು ಪ್ರಾರಂಭಿಸುವುದಕ್ಕೆ ಸಾಧ್ಯವಾಯಿತು. ಯತ್ನವಿಲ್ಲದಿದ್ದುದರಿಂದ ಈ ನಿದರ್ಶನದಕೆಲಸಗಳನ್ನು ಇದುವರೆಗೆ ಕೆಲವು ಸ್ಥಳಗಳಲ್ಲಿ ಮಾತ್ರ ನಡಿಸುತ್ತಿತ್ತು. ಆ ಕೆಲಸವನ್ನು ಈಗ ಈ ಸಂಸ್ಥಾನದ ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ನಡೆಸುತ್ತಲಿದೆ.

ಹೋದವರ್ಷದ ಉಪನ್ಯಾಸದಲ್ಲಿ ವ್ಯವಸಾಯ ವಿಷಯಕವಾದ ಕೆಲಸಗಳನ್ನು ಕಾರ್ಯತಃ ನಡೆಯಿಸುವುದಕ್ಕಾಗಿ ತಿಳುವಳಿಕೆಯನ್ನು ಕೊಡುವುದಕ್ಕೆ ಬೆಂಗಳೂರಲ್ಲಿ ಒಂದು ವ್ಯವಸಾಯದ ಸ್ಕೂಲನ್ನು ಸ್ಥಾಪಿಸಲಾಗಿದೆ ಎಂಬುದಾಗಿ ತಿಳಿಸಿರುತ್ತದೆ. ಈ ಸ್ಕೂಲು ಪ್ರಾರಂಭವಾಗಿ ಒಂದು ವರ್ಷವಾಗಿದೆ. ಅದರಲ್ಲಿ 15 ಮಂದಿ ಹೊಸ ವಿದ್ಯಾರ್ಥಿಗಳೂ ಮತ್ತು 11 ಮಂದಿ 2 ನೆಯ ವರ್ಷದ ವ್ಯಾಸಂಗವನ್ನು ಮಾಡುವವರೂ ಇದ್ದಾರೆ. ರೈತರ ಮತ್ತು ಜಮೀನ್ ಹಿಡುವಳಿದಾರರ ಪ್ರಯೋಜನಕ್ಕೋಸ್ಕರ ಜಮೀನು ಸಾಗುವಳಿ ಕೆಲಸಗಳನ್ನು ಒಂದು ವಾರದವರೆಗೆ ಬೋಧಿಸುವುದಕ್ಕೆ ಏರ್ಪಾಡು ಮಾಡಲ್ಪಟ್ಟಿತು. ಈ ಬೋಧೆಯನ್ನು ಕೇಳುವುದಕ್ಕಾಗಿ ಸುಮಾರು ನೂರುಮಂದಿ ಜನರು ಬಂದು ಇದ್ದರು. ಈ ಹಾಲೀ ವರ್ಷದಲ್ಲಿ ಇದೇ ರೀತಿಯಲ್ಲಿ ಸಣ್ಣಸಣ್ಣ ಉಪನ್ಯಾಸಗಳನ್ನು ಕ್ರಮವಾಗಿ ನಡೆಸಬೇಕೆಂಬ ಉದ್ದೇಶವಿದೆ. ಅವುಗಳನ್ನು ಕೇಳುವುದಕ್ಕೋಸ್ಕರ ಬರುವ ಜನರು ಇಳಿದುಕೊಳ್ಳುವುದಕ್ಕೆ ಕಟ್ಟಡಗಳನ್ನು ಕಟ್ಟಿಸುತ್ತಲಿದೆ.

ಕೈಗಾರಿಕೆ ಮತ್ತು ವ್ಯಾಪಾರ ಇಲಾಖೆ.

ಕೈಗಾರಿಕೆಯ ಕೆಲಸಗಳಿಗಾಗಿ ತಕಾವಿ ಸಾಲ ಕೊಡುವುದನ್ನು ಕ್ರಮಪಡಿಸುವುದಕ್ಕೆ ಸಂಬಂಧಪಟ್ಟ ನಿಬಂಧನೆಗಳನ್ನು, ಹೋದವರ್ಷದ ಉಪನ್ಯಾಸದಲ್ಲಿ ಸೂಚಿಸಿರುವಂತೆ ವಿಸ್ತರಿಸಿ, ತಕಾವಿ ಸಾಲಗಳಿಗೆ ಬದಲಾಗಿ ಬಾಡಿಗೆ ಕ್ರಯದಮೇರೆ ಯಂತ್ರಗಳನ್ನು ವಿಕರಿ ಮಾಡುವುದಕ್ಕೆ ಅವಕಾಶ ಕೊಟ್ಟಿರುತ್ತದೆ. ಈ ವರ್ಷದಲ್ಲಿ ಸುಮಾರು ಒಂದು ಲಕ್ಷ ರೂಪಾಯಿಗಳ ವರೆಗೆ ತಕಾವಿ ಸಾಲಗಳನ್ನೂ, ಇತರವಿಧವಾದ ಸಾಲಗಳನ್ನೂ ಕೊಟ್ಟಿರುತ್ತದೆ.

ಸಾಲಾಖೈರಿಗೆ, 1,44,000 ರೂ. ಖರ್ಚಿನಲ್ಲಿ 26 ಯಂತ್ರಗಳ ಸ್ಥಾಪನೆಯು ಮುಗಿದಿತ್ತು; ಇನ್ನೂ 13 ಯಂತ್ರಗಳ ಸ್ಥಾಪನೆಯು ನಡೆಯಬೇಕಾಗಿತ್ತು.

ಹುಣಸೂರಿನಲ್ಲಿಯೂ, ಹಂಪಾಪುರದಲ್ಲಿಯೂ ಸ್ಥಾಪಿಸಿದ ನೀರೆತ್ತುವ ಯಂತ್ರಗಳು ಚೆನ್ನಾಗಿ ಕೆಲಸ ಮಾಡುತ್ತಿರುವುದರಿಂದ, ಶೀಘ್ರದಲ್ಲಿಯೇ ತುಂಗಭದ್ರಾ ತೀರದಲ್ಲಿಯೂ ಅದರ ಎರಡು ದೊಡ್ಡ ಕಾಲುವೆಗಳ ತೀರದಲ್ಲಿಯೂ ನೀರಾವರಿಗಾಗಿ ಅನೇಕ ಪಂಪಿನ ಯಂತ್ರಗಳನ್ನು ಸ್ಥಾಪಿಸುವ ನಿರೀಕ್ಷಣೆ ಇದೆ.

ಮೈಸೂರಲ್ಲಿ ಸಕ್ಕರೆ ತಯಾರಿ, ಎಣ್ಣೆ ಯಂತ್ರಗಳ ಮತ್ತು ಹಿಟ್ಟು ಬೀಸುವ ಗ್ರಾಮ್ಯ ಯಂತ್ರಸಾಮಗ್ರಿಗಳ ಉಪಯೋಗ, ರೇಷ್ಮೆ ನೇಯುವ ವ್ಯವಸಾಯ, ಇವೇ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ವಿಚಾರವನ್ನು ಆಯಾ ಇಲಾಖೆಯವರು ಮಾಡಿ ಆ ಮೂಲಕ ತಿಳಿಯಬಂದ ಸಂಗತಿಗಳನ್ನು, ಹೋದವರ್ಷ ಅನೇಕ ಲೇಖನಗಳ ಮೂಲಕ ಪ್ರಚಾರ ಮಾಡಿದರು. ರೈಲ್ವೆ ಮೂಲಕ ನಡೆಯುವ ವ್ಯಾಪಾರದ ಲೆಕ್ಕಪತ್ರಗಳು ಇದುವರೆಗೆ ಇರುತ್ತಿದ್ದವುಗಳು ಕೇವಲ ತೃಪ್ತಿಕರವಾಗಿಲ್ಲದಿರುವುದರಿಂದ, ರೈಲ್ವೆ ಮೂಲಕ ಈ ದೇಶದಿಂದ ಹೊರಕ್ಕೂ ಹೊರಗಿಂದ ಇಲ್ಲಿಗೂ ಸಾಗುವ ವಸ್ತುಗಳ ಲೆಕ್ಕಗಳನ್ನು ತಪ್ಪಿಲ್ಲದಾಗಿ ಮೂರು ತಿಂಗಳಿಗೊಂದುಸಾರಿ ತಯಾರಿಸಿಕೊಡಬೇಕೆಂದು, ಮದ್ರಾಸು ದಕ್ಷಿಣ ಮರಾಠಾ ರೈಲ್ವೆ ಕಂಪನಿಯವರೊಡನೆ ಏರ್ಪಾಡು ಮಾಡಿ ಇದೆ.

ಪರಸ್ಪರ ಸಹಾಯಕ ಸಂಘಗಳು.

ಪ್ರಸಕ್ತವರ್ಷದಲ್ಲಿ ಪರಸ್ಪರ ಸಹಾಯಕ ಸಂಘಗಳ ಏರ್ಪಾಡು ವಿಶೇಷ ಅಭಿವೃದ್ಧಿಗೆ ಬಂದಿತು. ಈ ಏರ್ಪಾಡು ಇದುವರೆಗೆ ಮಲೆನಾಡು ಡಿಸ್ಟ್ರಿಕ್ಟುಗಳಲ್ಲಿ ಅಭಿವೃದ್ಧಿಗೆ ಬಾರದೆ ಇದ್ದು, ಈಗ ಅಲ್ಲಿಗೂ ವ್ಯಾಪಿಸುತ್ತಿರುವದು ತೃಪ್ತಿಕರವಾಗಿದೆ.

ಕ್ರೆಡಿಟ್ ಸೊಸೈಟಿಗಳು ಎಂದರೆ ಸಾಲ ಕೊಡುವ ಸಂಘಗಳು ಎಲ್ಲಕ್ಕಿಂತ ಜನರಿಗೆ ಬೇಕಾಗಿಯೂ ಉಪಯೋಗಕರವಾಗಿಯೂ ಇರುವಲ್ಲಿ, ಇತರ ವಿಧಗಳಾದ ಪರಸ್ಪರ ಸಹಾಯಕ ಸಂಘಗಳೂ ಕ್ರಮೇಣ ಬಳಕೆಗೆ ಬರುತ್ತಿವೆ. ಎಂದರೆ ಪರಸ್ಪರ ಸಹಾಯಕ ನಿಯಮಗಳ ಮೇಲೆ ಜಮೀನಿಗೆ ನೀರು ಸರಬರಾಯಿ ಮಾಡುವ ಕೆಲಸವನ್ನೂ, ಕಚ್ಚಾ ಪದಾರ್ಥಗಳನ್ನು ಕೊಂಡುಕೊಳ್ಳುವ ಕೆಲಸವನ್ನೂ ಮತ್ತು ಸರಕನ್ನು ವಿಕರಿ ಮಾಡುವ ಕೆಲಸವನ್ನೂ ನಡಿಸುವುದಕ್ಕೆ ಈಗ ಬೇರೆ ಬೇರೆ ಸಂಘಗಳು ಹುಟ್ಟಿವೆ.

ಈ ವರ್ಷದಲ್ಲಿ ಸಂಘಗಳ ಸಂಖ್ಯೆಯು 333 ರಿಂದ 530 ಕ್ಕೂ, ಮೆಂಬರುಗಳ ಸಂಖ್ಯೆ 24,338 ರಿಂದ 40,179 ಕ್ಕೂ, ಕೆಲಸ ನಡಿಸುವದಕ್ಕೆ ಸಹಾಯಕವಾದ ಮೂಲಧನವು 12,89,338 ರೂಪಾಯಿಂದ 21,47,340 ರೂಪಾಯಿಗೂ, ಒಟ್ಟು ಲೇವಾದೇವಿಗಳು 59,42,081 ರೂಪಾಯಿಂದ 96,26,523 ರೂಪಾಯಿಗೂ ಲಾಭವು 12,936 ರೂಪಾಯಿಂದ 2,30,224 ರೂಪಾಯಿಗೂ, ರಿಜರ್ವ್ ಫಂಡು 30,000 ರೂಪಾಯಿಂದ 56,240 ರೂಪಾಯಿಗೂ ಹೆಚ್ಚಿರುತ್ತವೆ. ಬೆಂಗಳೂರಿನ ಸೆಂಟ್ರಲ್ ಬ್ಯಾಂಕು ಉತ್ತಮ ಸ್ಥಿತಿಯಲ್ಲಿದ್ದುಕೊಂಡು, 57 ಸಂಘಗಳಿಗೆ 2,63,000 ರೂಪಾಯಿ ಸಾಲ ಕೊಟ್ಟಿರುತ್ತದೆ. ಗ್ರಾಮಾಂತರಗಳಲ್ಲಿರುವ ಸಂಘಗಳಿಗೆ ಬೇಕಾದ ಮೂಲಧನಕ್ಕೆ ಇದೇ ಮುಖ್ಯಾಧಾರವಾಗಿದ್ದುಕೊಂಡಿದೆ. ಮೂರು ಯೂನಿಯನುಗಳು ಸುಮಾರು 25,000 ರೂಪಾಯಿ ವರೆಗೆ ಬಂಡವಾಳವನ್ನು ಒದಗಿಸಿವೆ. ಅವುಗಳಲ್ಲಿ ಒಂದು, ಅದಕ್ಕೆ ಸೇರಿದ ಶಾಖಾ ಸಂಘಗಳಿಗೆ 30,000 ರೂಪಾಯಿ ವರೆಗೆ ಹಣವನ್ನು ಒದಗಿಸಿಕೊಡಬೇಕೆಂದು ಪರ್ಯಾಲೋಚಿಸುತ್ತಿದೆ. ಬೇಕಾದ ಮೂಲಧನವನ್ನೂ ಆಯಾ ಸ್ಥಳದಲ್ಲಿಯೇ ಆಗಲೀ ಮೇಲೆ ಹೇಳಿದ ಸಂಘಗಳಿಂದಾಗಲೀ ಒದಗಿದುದರಿಂದ, ಸರ್ಕಾರದವರೂ ಸ್ವಂತವಾಗಿ ಶ್ರೀಮನ್ಮಹಾರಾಜರವರೂ ರಿಜಿಸ್ಟ್ರಾರವರ ವಶದಲ್ಲಿ ಕೊಟ್ಟ ದ್ರವ್ಯದಿಂದ ಯಾವ ಗ್ರಾಂಟುಗಳನ್ನು ಕೊಡುವ ಅವಶ್ಯಕತೆಯೂ ಇಲ್ಲವಾಯಿತು.

ಸಂಸದಧ್ಯವೆಯ ಸಮಾಜದ ಮೂರನೆಯ ವರ್ಷದ ಸಾಂಸ್ಥಾನಿಕ ಸಭೆಯು ಕಳೆದ ಅಕ್ಟೋಬರ್ ತಿಂಗಳಲ್ಲಿ ಮೈಸೂರು ರಾಜಧಾನಿಯಲ್ಲಿ ಸೇರಿತ್ತು. ಈ ಸಮಾಜದ ಆರಂಭೋತ್ಸವವನ್ನು ಶ್ರೀಮದ್ಯುವರಾಜರವರು ನೆರವೇರಿಸಿದರು. ಇದಕ್ಕೆ ದಿವಾನ್ ಬಹಾದುರ್ ರಾಜಸಭಾ ಭೂಷಣ ಮಿ. ಕೆ. ಪಿ. ಪುಟ್ಟಣ್ಣಶೆಟ್ಟರವರು ಅಧ್ಯಕ್ಷರಾಗಿದ್ದರು. ಇದಕ್ಕಿಂತ ಸಣ್ಣಸಣ್ಣವಾದರೂ, ಉಪಯೋಗವಿಷಯದಲ್ಲಿ ತತ್ಸಮಾನಗಳಾದ ಕಾನ್ಫರೆನ್ಸುಗಳು ಇನ್ನೂ ಹತ್ತು ಸ್ಥಳಗಳಲ್ಲಿ ನಡೆದುವು. ಇವುಗಳು ಸೇರುವುದಕ್ಕೂ ಸಾರ್ಥಕವಾಗಿ ಕೆಲಸವನ್ನು ಮಾಡುವುದಕ್ಕೂ ಬಹಳವಾಗಿ ಆಯಾ ಪ್ರದೇಶದ ಜನಗಳೇ ಪಟ್ಟ ಪ್ರಯತ್ನಗಳೂ ಏರ್ಪಾಡುಗಳೇ ಕಾರಣಗಳಾಗಿರುತ್ತವೆ.

[೬ ನೆಯ ಪುಟವನ್ನು ನೋಡಿ.]

ಮೈಸೂರ್ ಸ್ಟಾರ್.

೧೯೧೪ ನೆಯ ಅಕ್ಟೋಬರ್ ತಾ|| ೪ನೆಯ ಭಾನುವಾರ.

ಪ್ರಜಾಪ್ರತಿನಿಧಿ ಸಭೆ.

ಕಳೆದ ತಿಂಗಳು ತಾ|| ೩೦ ನೆಯ ಬುಧವಾರ ಮಧ್ಯಾಹ್ನ ಮೈಸೂರಿನ ೩೧ ನೆಯ ವರ್ಷದ ಪ್ರಜಾಪ್ರತಿನಿಧಿ ಸಭೆಯು ದಿವಾನರ ಅಧ್ಯಕ್ಷತೆಯಿಂದ ರಾಜಧಾನಿಯಲ್ಲಿ ಪದ್ಧತಿಯಂತೆ ನೆರೆದಿದ್ದಿತು. ಬ್ರಿಟಿಷ್ ರೆಸಿಡೆಂಟ್ ದಂಪತಿಗಳೂ, ಸಂಸ್ಥಾನದ ಮುಖ್ಯಾಧಿಕಾರಿಗಳೂ ಪ್ರಜಾಪ್ರತಿನಿಧಿಗಳೂ, (೧೫೨ ಮಂದಿ) ಪುರಜನರೂ ಸಹ ಸಭೆಯನ್ನಲಂಕರಿಸಿದ್ದರು. ಪದ್ಧತಿಯಂತೆ ದಿವಾನರ ಭಾಷಣವು ಇಂಗ್ಲೀಷಿನಲ್ಲೂ ಕನ್ನಡದಲ್ಲೂ ಆಯಿತು. ವಿಸ್ತೃತವೂ ಉಪಯುಕ್ತವೂ ಆಗಿದ್ದ ಅವರ ಭಾಷಣವು ೨ ವಿಭಾಗಗಳಾಗಿ ಮಾಡಲ್ಪಟ್ಟಿದ್ದಿತು. ಅದರಲ್ಲಿ ಪ್ರಥಮಭಾಗದ ಮುಖ್ಯಾಂಶಗಳನ್ನು ಆರಿಸಿ ಈ ಸಂಚಿಕೆಯಲ್ಲಿ ಮುದ್ರಿಸಿರುತ್ತೇವೆ. ದಿವಾನರ ಭಾಷಣವಾದನಂತರ ಚಿನ್ನದ ಗಣಿಯವರು, ಕಾಫಿ ತೋಟಗಾರರು ಮೊದಲಾದವರಿಂದ ೭ ವಿಜ್ಞಾಪನಾಪತ್ರಗಳು ಓದಿ ಒಪ್ಪಿಸಲ್ಪಟ್ಟುವು. ಅವೆಲ್ಲಕ್ಕೂ ಸಮಯೋಚಿತವಾದುತ್ತರವು ದಿವಾನರಿಂದ ಕೊಡಲ್ಪಟ್ಟಿತು. ಬಳಿಕ ಬ್ರಿಟಿಷ್ ರೆಸಿಡೆಂಟರು ಮೊದಲಾದ ಯೂರೋಪ್ಯಾಧಿಕಾರಿಗಳಿಗೆ ಹಾರಗುಚ್ಛಾದಿಗಳು ಅರ್ಪಿಸಲ್ಪಟ್ಟುವು. ಮರುದಿನದಿಂದ ಪ್ರತಿದಿವಸವೂ ಸಭೆಯಲ್ಲಿ ಚರ್ಚೆಗಳು ನಡೆಯುತ್ತಿವೆ.

ಮೈಸೂರಿನ ವಸ್ತುಪ್ರದರ್ಶನವು.

ಸಾಂವತ್ಸರಿಕವಾಗಿ ಏರ್ಪಟ್ಟು ನಡೆಯುತ್ತಿರುವ ಈ ಪ್ರದರ್ಶನಗಳು ಇದುವರೆಗೆ ೭ ಆಗಿ, ಈ ಸಲದ ಪ್ರದರ್ಶನವು ೮ ನೆಯದಾಗಿರುವುದು. ಇದರ ಆರಂಭಮಹೋತ್ಸವವನ್ನು ಕಳೆದ ತಿಂಗಳು ತಾ|| ೨೫ ರಲ್ಲಿ ನಮ್ಮ ಶ್ರೀಮದ್ಯುವರಾಜರವರು ನಡೆಯಿಸಿದರು. ಆಗ ಅವರು—" ಈ ಪ್ರದರ್ಶನವನ್ನು ಉಪಕ್ರಮಿಸುವುದಕ್ಕೆ ನನಗೆ ಸಂತೋಷವಾಗುತ್ತದೆ. ಅದರಲ್ಲೂ ಈ ವರ್ಷದ ಪ್ರದರ್ಶನದಲ್ಲಿ ಹಲವು ಹೊಸ ಏರ್ಪಾಟುಗಳು ನಡೆದಿರುವುದರಿಂದ ಇದರ ಆರಂಭೋತ್ಸವವು ನನ್ನ ಸಂತೋಷವನ್ನು ಮತ್ತಷ್ಟು ಹೆಚ್ಚಿಸಿರುತ್ತದೆ. ಈ ಪ್ರದರ್ಶನದ ಮೇಲ್ವಿಚಾರಣೆಯು ಸಂಪದಭ್ಯುದಯ ಸಮಾಜದ ಕೈಗಾರಿಕೆ ವ್ಯಾಪಾರಗಳ ಶಾಖೆಗೆ ವರ್ಗಾಯಿಸಲ್ಪಟ್ಟಿರುವುದರಿಂದ ಅನೇಕ ವಿಧದಲ್ಲಿ ಇದರ ಕಾರ್ಯಗಳು ಸಮೀಚೀನ ಸ್ಥಿತಿಗೆ ಬಂದುವೆಂದು ತಿಳಿದಿರುವೆನು. ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗಳನ್ನೂ ವ್ಯವಸಾಯವನ್ನೂ ವಿದ್ಯೆಯನ್ನೂ ಅಭಿವೃದ್ಧಿಗೊಳಿಸುವುದಕ್ಕಾಗಿ ಏರ್ಪಟ್ಟಿರುವ ಶಾಖೆಗಳು ಕೂಡ ಆಯಾ ಶಾಖೆಗಳಿಗೆ ಸಂಬಂಧಿಸಿದ ವಸ್ತುಗಳನ್ನು ಪ್ರದರ್ಶನಶಾಲೆಗೆ ಕಳುಹಿಸಿ ಒಂದು ವರ್ಷಕ್ಕಿಂತ ಮತ್ತೊಂದು ವರ್ಷದಲ್ಲಿ ಆಯಾ ಶಾಖೆಯಲ್ಲಿ ಎಷ್ಟು ಅಭಿವೃದ್ಧಿಯುಂಟಾಗಿರುವುದೋ ಅದನ್ನು ತಿಳಿದುಕೊಳ್ಳುವಂತೆ ಮಾಡುವುದು ಒಳ್ಳೆಯದು. ಇಷ್ಟೇ ಅಲ್ಲ, ಈ ಶಾಖೆಗಳವರು ತಮ್ಮಲ್ಲಿನ ವಸ್ತುಗಳನ್ನು ರೈತರಿಗೂ ಕೈಗಾರಿಕೆಯಿಂದ ಜೀವಿಸುವವರಿಗೂ, ದೇಶದಲ್ಲಿರುವ ವರ್ಧಿಷ್ಣುಗಳಾದ ಯುವಕರಿಗೂ ತೋರಿಸಿ, ಪ್ರದರ್ಶನಾಲಯದಲ್ಲಿ ತಾವು ನೋಡಿದಂಥ ವಸ್ತುಗಳನ್ನು ತಾವೂ [illegible]ಸಬೇಕೆಂಬ ಅಭಿಲಾಷೆಯು ಅವರುಗಳಿಗೂ ಉಂಟಾಗುವಂತೆ ಬೋಧಿಸಬೇಕು. ಭರತಖಂಡದ ಸಕಲ ಭಾಗಗಳಿಂದಲೂ ಕೈಗಾರಿಕೆಯ ಉತ್ಕೃಷ್ಟವಾದ ಪದಾರ್ಥಗಳು ಈ ವಸ್ತುಪ್ರದರ್ಶನಾಗಾರಕ್ಕೆ ಬಂದಿರುವುವು. ಅಂಥ ಹೊರಗಣ ದೇಶದಿಂದ ಇಲ್ಲಿಗೆ ಬಂದಿರುವ ವಿಶೇಷತರದ ವಸ್ತುಗಳನ್ನು ನಮ್ಮ ದೇಶದ ಕೈಗಾರಿಕೆಯವರಿಗೂ ತೋರಿಸಿ ಅಂಥ ವಸ್ತುಗಳನ್ನೇ ಇವರೂ ಮಾಡಲು ಸಮರ್ಥರಾಗುವಂತೆ ಪ್ರೋತ್ಸಾಹಿಸಲು ಈ ಪ್ರದರ್ಶನದ ಕಾರ್ಯಕಾರಿ ಸಂಘದವರು ಏರ್ಪಡಿಸಿರುತ್ತಾರೆ. ಭರತಖಂಡದ ಇತರ ಪ್ರದೇಶಗಳಿಂದ ತರಿಸಿ ಪ್ರದರ್ಶನಕ್ಕಿಟ್ಟಿರುವ ಬೆಳ್ಳಿಯ ಪದಾರ್ಥಗಳು ಬಹಳ ಉತ್ಕೃಷ್ಟವಾಗಿವೆ. ಅವುಗಳನ್ನು ನೋಡಿ ನಮ್ಮ ದೇಶದ ಚಿನ್ನಬೆಳ್ಳಿಯ ಕೆಲಸಗಾರರು ಅಂಥ ಉತ್ಕೃಷ್ಟವಾದ ಪದಾರ್ಥಗಳನ್ನೇ ಇಲ್ಲೂ ತಯಾರಿಸಲು ತಪ್ಪದೆ ಪ್ರಯತ್ನಮಾಡುವರು.'' ಎಂದು ಭಾಷಣಮಾಡಿ, ಅಧಿಕಾರಿಗಳು ಮೊದಲಾದವರೊಡನೆ ಒಳಕ್ಕೆ ಪ್ರವೇಶಿಸಿ ಎಲ್ಲ ವಸ್ತುಗಳನ್ನೂ ಸಾವಧಾನದಿಂದ ಅವಲೋಕಿಸಿ ಪುಷ್ಪಹಾರಾದಿಗಳನ್ನು ಸ್ವೀಕರಿಸಿ ಸಂತೋಷದಿಂದ ತೆರಳಿದರು.

ಈಸಲದ ಪ್ರದರ್ಶನಾಲಯಕ್ಕೆ ಬಂದಿರತಕ್ಕ ಕೈಗಾರಿಕೆ ಬೇಸಾಯದ ವಸ್ತುಗಳು ಸಂಖ್ಯೆಯಲ್ಲಿ ಕಡಮೆಯಾಗಿರುವುದಕ್ಕೆ ಕಾಲಸ್ಥಿತಿಯ ಅನನುಕೂಲತೆಯು ಕಾರಣವಾಗಿರಬೇಕು. ಯಂತ್ರಸಂಬಂಧವಾದ ಪ್ರದರ್ಶನವು ಪ್ರಶಸ್ತವಾಗಿದೆ. ಕಬ್ಬಿನ ಹಾಲನ್ನು ತೆಗೆದು ಕಾಯಿಸಿ ಬೆಲ್ಲವನ್ನು ಮಾಡುವ ಚಿಕ್ಕದೊಡ್ಡ ಯಂತ್ರಸಾಧನಗಳು ಉತ್ತಮವಾಗಿ ಜೋಡಿಸಲ್ಪಟ್ಟು, ಅದರ ಪ್ರಯೋಗವು ಮಾಡಿ ತೋರಿಸಲ್ಪಡುತ್ತಿದೆ. ವ್ಯವಸಾಯದ ಸಾಧನಗಳು, ಬೀಸುವ, ಕುಟ್ಟುವ, ತೂರುವ, ಕತ್ತರಿಸುವ, ನೀರನ್ನೆತ್ತುವ, ಮರ ಕೊಯ್ಯುವ ಮೊದಲಾದ ಯಂತ್ರಗಳು ಸಾಲುಸಾಲಾಗಿ ಇಡಲ್ಪಟ್ಟು ಅವುಗಳ ಕೆಲಸವು ನಡೆಯುತ್ತಿದೆ. ಕಾಡುಗಳ ಸಾಮಾನುಗಳನ್ನಿಟ್ಟಿರುವ ಭಾಗವು ನಮ್ಮ ದೇಶದ ಕಾಡುಗಳು ಎಷ್ಟು ಭಾಗ್ಯನಿಧಿಗಳಾಗಿರುವುವೆಂಬುದನ್ನು ವ್ಯಕ್ತಪಡಿಸುತ್ತಿದೆ. ನಮ್ಮ ಕಾಡುಗಳಲ್ಲಿ ಎಷ್ಟು ಜಾತಿಯ ಮರಗಳಿವೆ, ಅವುಗಳಲ್ಲಿ ದೀಪದಕಡ್ಡಿ ಮಾಡುವುದಕ್ಕೆ, ಸೀಸದಕಡ್ಡಿ ಮಾಡುವುದಕ್ಕೆ, ಹಡಗು ದೋಣಿ ಮೊದಲಾದವುಗಳನ್ನು ಮಾಡುವುದಕ್ಕೆ, ಮನೆ ಕಟ್ಟುವುದಕ್ಕೆ, ಬಂಡಿಗಳನ್ನು ಮಾಡುವುದಕ್ಕೆ, ಬಂದೂಕುಗಳನ್ನು ಮಾಡುವುದಕ್ಕೆ, ಕಾಗದವನ್ನು ಮಾಡುವುದಕ್ಕೆ, ಬೇಸಾಯದ ಮುಟ್ಟುಗಳಿಗೆ ಎಷ್ಟೆಷ್ಟು ತರದ ಮರಗಳು ಉಪಯುಕ್ತವಾಗುತ್ತವೆ ಎಂಬುದನ್ನು ಹೆಸರುಗಳ ಸಮೇತ ವಿಂಗಡಿಸಿ ಇಟ್ಟಿರುವರು. ಆಯಾಪದಾರ್ಥಗಳಲ್ಲಿ ಕೆಲವನ್ನು ಮಾಡಿಯೂ ಇಟ್ಟಿರುವುದು ಸಹ ಬಹು ಉಪಯುಕ್ತವಾಗಿದೆ. ಇದರಂತೆಯೇ ಬರಗಾಲದಲ್ಲಿ ಆಹಾರಾರ್ಥವಾಗಿ ಉಪಯುಕ್ತವಾಗುವ ಕಾಡು ಗೆಡ್ಡೆ ಗೆಣಸುಗಳೂ, ಹಣ್ಣುಹಂಪಲುಗಳೂ, ವಿವಿಧವಾದ ನಾರುಗಳೂ, ಮೂಲಿಕೆ ಮೊದಲಾದವುಗಳೂ ಇಡಲ್ಪಟ್ಟಿವೆ. ಮದ್ರಾಸಿನ ಪಿ. ಆರ್. ಅಂಡ್ ಸನ್ಸ್‌ರವರಿಂದ ಮತ್ತೂ ಬೆಂಗಳೂರು ಬಾರ್ಟನ್ ಕಂಪೆನಿಯವರಿಂದ ಕಳುಹಲ್ಪಟ್ಟಿರುವ ಬೆಳ್ಳಿಯ ಕೈಗಾರಿಕೆಯ ಸಾಮಾನುಗಳು ಪ್ರೇಕ್ಷಣೀಯವಾದ ಕೈಗಾರಿಕೆಯ ಮಾದರಿಗಳಾಗಿರುತ್ತವೆ. ಜಪಾನ್ ದೇಶದ ಹಲವುವಿಧದ ಕೈಗಾರಿಕೆಯ ಸಾಮಾನುಗಳು ಬಂದಿವೆ. ವಿದ್ಯಾಭ್ಯಾಸದ ವಸ್ತುಪ್ರದರ್ಶನ ಭಾಗದಲ್ಲಿಟ್ಟಿರುವ ಸಾಮಗ್ರಿಗಳು ಈಗಿನಕಾಲದ ಶಾಲಾಶಿಕ್ಷಣವು ಸಣ್ಣ ಬಾಲಕರಲ್ಲೂ ಎಷ್ಟುಮಟ್ಟಿನ ಕರಕೌಶಲವನ್ನೂ ಮತಿಕೌಶಲ್ಯವನ್ನೂ ಉಂಟುಮಾಡಲು ಸಾಧಕವಾಗಿದೆಯೆಂಬುದನ್ನು ವ್ಯಕ್ತಪಡಿಸುತ್ತ, ಅತ್ಯಂತಪ್ರೋತ್ಸಾಹಕವಾಗಿದೆ. ಬೆಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟಿರುವ ಯಾಂತ್ರಿಕ ಶಿಲ್ಪಶಿಕ್ಷಣಾಲಯದ ವಿದ್ಯಾರ್ಥಿಗಳು ಲೋಹದ ಮತ್ತು ಮರದ ಕೆಲಸದಲ್ಲಿ ಎಷ್ಟು ಯೋಗ್ಯತೆಯನ್ನು ಇದುವರೆಗೆ ಪಡೆದುಕೊಂಡಿರುತ್ತಾರೆಂಬುದನ್ನು ವ್ಯಕ್ತಪಡಿಸುವ ಸಾಮಾನುಗಳೂ ಇಲ್ಲಿವೆ. ನೆಯ್ಗೆಯ ಸಾಧನಗಳೂ, ರೇಷ್ಮೆಯ ಬೆಳೆಸಿನ ಪ್ರಯೋಗಗಳೂ ಆಯಾ ಕಸಬುಗಾರರನ್ನು ಪ್ರೋತ್ಸಾಹಿಸಿ ಆಯಾಭಾಗದಲ್ಲಿ ಪ್ರಾವೀಣ್ಯವನ್ನು ಹೆಚ್ಚಿಸಲು ಸಾಧಕವಾಗಿವೆ. ವ್ಯವಸಾಯಕ್ಷೇತ್ರದ ಕಾರ್ಯಗಳು ಯಥಾರೀತಿಯಾಗಿ ಏರ್ಪಡಿಸಲ್ಪಟ್ಟಿವೆ. ಪ್ರಜೆಗಳು ಕಳೆದ ತಿಂಗಳು ತಾ|| ೨೫ ರಿಂದಲೂ ನೋಡಿ ಸಂತೋಷಪಡುತ್ತಿದ್ದಾರೆ. ಇದೇ ತಾ|| ೯ ರಲ್ಲಿ ಪ್ರದರ್ಶನಾಲಯದ ಬಳಿಯಲ್ಲಿ ಜಂಬಾನಾ ಎಂಬ ವಿನೋದದಾಟಗಳು ನಡೆಯುವುದರಲ್ಲಿವೆ.

ಎಮ್ಡೆನ್

ಅರಬ್ಬಿಯನ್ ಸಮುದ್ರಕ್ಕೂ ಬಂದಿತು.

ಕಳೆದ ಮೂರು ವಾರಗಳಿಂದ ಭರತಖಂಡದ ಪೂರ್ವದಿಕ್ಕಿನ ಸಮುದ್ರದಲ್ಲಿ ಹಾವಳಿಯನ್ನು ಮಾಡಿ, ಇಂಡ್ಯಾ ಬರ್ಮಾ-ಕಲ್ಕತ್ತಾ-ಕೊಲಂಬೊ ಪ್ರಾಂತದ ವ್ಯಾಪಾರಕ್ಕೆ ವಿಘ್ನವನ್ನೂ ಭಯವನ್ನೂ ಉಂಟುಮಾಡಿದ ಎಮ್ಡೆನ್ ಹಡಗು ಈಗ ಪಶ್ಚಿಮ ದಿಕ್ಕಿಗೂ ಬಂದು ಲಕ್ಷದ್ವೀಪಗಳ ಹತ್ತಿರ ಕಳೆದ ತಿಂಗಳು ತಾ|| ೨೬-೨೭ ರಲ್ಲಿ ಇಂಗ್ಲೀಷರ ೪ ಹಡಗುಗಳನ್ನು ಮುಳುಗಿಸಿತೆಂಬ ವಾರ್ತೆಯು ಬಂದಿರುವುದು. ಮುಳುಗಿಸಲ್ಪಟ್ಟ ಹಡಗುಗಳಲ್ಲಿ ಟಿಮೆರಿಕ್ ಎಂಬುದು ೩೩೧೪ ಟನ್ನುಗಳ- ರಿಬೇರಿಯಾ ಎಂಬುದು ೩೫೦೦ ಟನ್ನುಗಳ-ಕಿಂಗ್‌ಲಡ್ ಎಂಬುದು ೩೬೫೦ ಟನ್ನುಗಳ- ಫಾಯಿಲ್ ಎಂಬುದು ೪೧೪೭ ಟನ್ನುಗಳ-ಭಾರವನ್ನು ಹೊರತಕ್ಕುವಾಗಿದ್ದುವು. ಈ ಹಡಗುಗಳನ್ನು ಎಮ್ಡೆನ್ ಹಡಗು ನಿಲ್ಲಿಸಿ, ಆಯುಧಪಾಣಿಗಳಾದ ತನ್ನಲ್ಲಿನ ಜರ್ಮನ್ ಭಟರನ್ನು ಆ ಹಡಗುಗಳಿಗೆ ಹತ್ತಿಸಿ, ಅಲ್ಲಿದ್ದ ಜನರನ್ನೆಲ್ಲಾ ಗ್ರೈಫ್‌ವೇಲ್ ಎಂಬ ಹಡಗಿಗೆ ಹತ್ತಿಸಿ ಅದನ್ನು ಕೊಲಂಬೋವಿಗೆ ಕಳುಹಿಸಿಬಿಟ್ಟಿತು. ಆ ೪ ಹಡಗುಗಳಿಗೂ ಗುಂಡುಹೊಡೆದು ಮುಳುಗಿಸಿಬಿಟ್ಟಿತು. ಮತ್ತೂ ವೇಲ್ಸ್ ದೇಶದಿಂದ ಕೊಲಂಬೋವಿಗೆ ಇಂಗ್ಲೀಷ್ ಸೇನಾಧಿಕಾರಿಗಳ ಅಪ್ಪಣೆಯ ಮೇರೆ ಕಲ್ಲಿದ್ದಲನ್ನು ತುಂಬಿಕೊಂಡು ಬರುತ್ತಿದ್ದ ಬುರೆಸ್ಕ್ ಎಂಬ ಹಡಗನ್ನು ಕೂಡ ಎಮ್ಡೆನ್ ಹಡಗು ತಡೆದು ನಿಲ್ಲಿಸಿ, ಅದರಲ್ಲಿದ್ದ ಕೇಪ್ಟನ್ ಟೈಲರು, ಚೀಫ್ ಆಫೀಸರು, ಚೀಫ್ ಇಂಜನಿಯರು ಅಡುಗೆಯವನು, ಬಟ್ಲರು-ಇವರಿಷ್ಟುಮಂದಿಗಳನ್ನೂ ಬಂದಿಗಳನ್ನಾಗಿ ಹಿಡಿದುಕೊಂಡು, ಉಳಿದ ಆಳುಗಳನ್ನು ಗ್ರೈಫ್‌ವೆಲ್ಲಿಗೆ ಹತ್ತಿಸಿಬಿಟ್ಟು, ಆ ಕಲ್ಲಿದ್ದಲ ಹಡಗನ್ನು ತಾನು ಸ್ವಾಧೀನಪಡಿಸಿಕೊಂಡಿತು. ಜನರೆಲ್ಲಾ ಏರಿದ್ದ ಗ್ರೈಫ್‌ವೆಲ್ ಎಂಬ ಹಡಗು ಕೊಲಂಬೋವಿಗೆ ಬಂದು ಸೇರಿತು.

ಈಗ ಸರ್ಕಾರದವರು ಈ ಪಶ್ಚಿಮ ದಿಕ್ಕಿನಲ್ಲಿ ನೌಕಾಪ್ರಯಾಣ ಮಾಡುವುದು ನಿರುಪದ್ರವವಲ್ಲವೆಂದು ಪ್ರಕಟಿಸಿದ್ದಾರೆ. ಆದರೆ ಬಂಗಾಳಾಕೊಲ್ಲಿ ಮೊದಲಾದ ಪೂರ್ವಭಾಗದ ಸಮುದ್ರಮಾರ್ಗವು ನಿರುಪದ್ರವವಾಗಿದೆಯೆಂದು ತಿಳಿಯಿಸಿದ್ದಾರೆ. ಕೊಲಂಬೋವಿನಿಂದ ಪಶ್ಚಿಮಭಾಗದ ಹಡಗಿನ ವ್ಯಾಪಾರವು ಈಗ ನಿಂತುಹೋಗಿದೆ. ಜರ್ಮನರ ಈ ಒಂದು ಸಣ್ಣ ಹಡಗಿನ ಹಾವಳಿಯು ಭರತಖಂಡದಲ್ಲಿ ಇಷ್ಟು ಆಶ್ಚರ್ಯಕರವಾದ ಪರಿಣಾಮವನ್ನು ಮಾಡುತ್ತಿದ್ದರೂ ಅದು ಇನ್ನೂ ಧ್ವಂಸಮಾಡಲ್ಪಡದಿರುವುದು ಪರಮಾಶ್ಚರ್ಯವಾಗಿದೆ.

ಕೊಲಂಬೋವಿನಿಂದ ಇಂಗ್ಲೀಷರ ಮತ್ತೂ ಜಪಾನರ ಮೂರು ಯುದ್ಧದ ಹಡಗುಗಳು ಇದನ್ನು ಅಟ್ಟಿಕೊಂಡು ಹೋಗುತ್ತಿರುವುವೆಂದು ಮದ್ರಾಸ್ ಗೌರ್ನರು ಮೊನ್ನೆತಾನೇ ಮದ್ರಾಸ್ ಪಟ್ಟಣದಲ್ಲಿ ದಿಗಿಲುಬಿದ್ದಿರುವ ಪ್ರಜೆಗಳನ್ನು ಸಮಾಧಾನಪಡಿಸುವಾಗ ನುಡಿದಿರುವರು. ಆದರೂ ಇನ್ನೂ ಅವುಗಳ ಪ್ರಯತ್ನವು ಸಫಲವಾದಂತೆ ತೋರಲಿಲ್ಲ.

ಈ ಎಮ್ಡೆನ್ ಹಡಗಿನಲ್ಲಿ ಜರ್ಮನ್ ಚಕ್ರವರ್ತಿಯ ಅಳಿಯನೊಬ್ಬನು ಇರುವನೆಂದು ಸುದ್ದಿಯಿದೆ. ಈ ಜರ್ಮನ್ ಹಡಗಿನವರು ಇದುವರೆಗೆ ಮಾಡಿರುವ ಚೇಷ್ಟೆಯೆಲ್ಲಾ ಪ್ರಜೆಗಳಿಗೆ ಯಾವ ಬಾಧೆಯನ್ನೂ ಉಂಟುಮಾಡುವ ಉದ್ದೇಶವುಳ್ಳದಾಗಿರಲಿಲ್ಲ. ಅದುಕಾರಣ ಅದು ಆಂಗ್ಲಪ್ರಭುತ್ವದವರಿಗೆ ಸಹಾ ಕೊಟ್ಟಂತೆ ತನ್ನ ಸಾಹಸವನ್ನು ಹಡಗುಗಳನ್ನು ಮುಳುಗಿಸುವುದರಲ್ಲೇ ತೋರಿಸುತ್ತ, ತಾನು ತನ್ನ ಶತ್ರುಗಳ ಕಣ್ಣಿಗೆ ಇಂಗನ್ನು ಹಚ್ಚಿ ಮಾಯವಾಗುತ್ತಲೇ ಬಂದಿದೆ. ಮುಳುಗಿಸಲ್ಪಟ್ಟ ಒಂದು ಇಂಗ್ಲೀಷ್ ಹಡಗಿನಲ್ಲಿದ್ದ ಕೇಪ್ಟನ್ ಇರ್ಸ್‌ಡೇಲ್‌ರವರು ಎಮ್ಡೆನ್ನಿನ ಅಧಿಕಾರಿಯನ್ನು ಕುರಿತು- ನಿಮ್ಮನ್ನು ಹಿಡಿದುಕೊಳ್ಳುವುದಕ್ಕೆ ಇಂಗ್ಲೀಷರ ಹಡಗು ಬಂದರೆ ನೀವೇನು ಮಾಡುವಿರಿ? ಎಂದು ಪ್ರಶ್ನೆಮಾಡಲು, ,, ನಾವು ಪಿಶಾಚಗಳಂತೆ ಹಡಗನ್ನು ಓಡಿಸಿಕೊಂಡು ಹೋಗುವೆವು. ನಮ್ಮ ಹಡಗು ಯುದ್ಧವನ್ನು ಮಾಡುವುದಕ್ಕಾಗಿ ಕಟ್ಟಲ್ಪಟ್ಟುದಲ್ಲ.'' ಎಂದು ಉತ್ತರವನ್ನು ಕೊಟ್ಟರಂತೆ. ,, ಮತ್ತೂ ಒಂದುವೇಳೆ ನಾವು ಹಿಡಿಯಲ್ಪಡುವುದಾದರೆ ಇಂಗ್ಲೀಷರ ಕೈಗೆ ಸಿಕ್ಕಿಬೀಳುವೆವು'' ಎಂದೂ ಹೇಳಿರುವರು. ಅದುಕಾರಣ, ಈ ಹಡಗಿನ ಯೋಗ್ಯತೆಯೆಲ್ಲಾ ವೇಗವಾಗಿ ಪಲಾಯನಗೊಳ್ಳುವುದರಲ್ಲಿ ಮಾತ್ರ ಇದೆಯೇಹೊರತು ನಿಂತು ಯುದ್ಧಮಾಡುವ ಕಲಿತನದಲ್ಲಿಲ್ಲವೆಂಬುದು ಸಿದ್ಧವಾಗಿರುತ್ತದೆ. ಆದರೂ ಇದನ್ನು ನಿರ್ನಾಮಮಾಡಿದಹೊರತು ಭರತಖಂಡದ ವ್ಯಾಪಾರಕ್ಕೂ ಪ್ರಜೆಗಳ ಮನಸ್ಸಿಗೂ ನೆಮ್ಮದಿಯುಂಟಾಗುವುದಿಲ್ಲ.

ನೈಜಾಂರವರ ಮಹೌದಾರ್ಯ.

ಹೈದರಾಬಾದಿನ ನೈಜಾಂರವರು ೨ ಪಟಾಲಮುಗಳಿಗೆ ಕರ್ನಲ್ ಆಗಿದ್ದಾರೆ. ಇವೆರಡು ಪಟಾಲಮ್ಮುಗಳೂ ಪ್ರಕೃತದ ಯುದ್ಧದಲ್ಲಿ ಆಂಗ್ಲಸಾಮ್ರಾಜ್ಯದ ಕಡೆಗೆ ಸಹಾಯಕ್ಕಾಗಿ ಯುದ್ಧರಂಗಕ್ಕೆ ಕಳುಹಿಸಲ್ಪಟ್ಟಿವೆ. ಇದಕ್ಕೆ ಆಗುವ ವೆಚ್ಚದ ನಿಮಿತ್ತವಾಗಿ ೬೦ ಲಕ್ಷ ರೂ.ಗಳನ್ನು ನೈಜಾಂರವರು ಕೊಟ್ಟಿರುತ್ತಾರೆ. ಈ ಹಣವನ್ನು ಮೇಲೆಕಂಡ ಪಟಾಲಮ್ಮುಗಳಿಗೆ ತಗಲುವ ವೆಚ್ಚಕ್ಕಾಗಿ ವಿನಿಯೋಗಿಸಿ, ಉಳಿದರೆ ಇತರವಿಧದ ವೆಚ್ಚಗಳಿಗೂ ಉಪಯೋಗಿಸಿಕೊಳ್ಳಬಹುದಾಗಿದೆಯೆಂದು ವೈಸರಾಯರಿಗೆ ಬಿನ್ನಯಿಸಿಕೊಂಡಿದ್ದಾರೆ. ಭರತಖಂಡದ ಪ್ರಭುಗಳಲ್ಲೆಲ್ಲಾ ಮೊಟ್ಟಮೊದಲು ಅರ್ಧಕೋಟಿ ರೂ.ಗಳನ್ನು ಸಾಮ್ರಾಜ್ಯಸರ್ಕಾರಕ್ಕೆ ಈ ಸಂಬಂಧವಾಗಿ ಅರ್ಪಿಸಿ ವಿಖ್ಯಾತರಾದವರು ನಮ್ಮ ಶ್ರೀಮನ್ಮಹಾರಾಜರು. ಈಚೆಗೆ ನೈಜಾಂರವರು ಅದನ್ನೂ ಮೀರಿಸಿದ ಔದಾರ್ಯವನ್ನು ತೋರಿಸಿರುವರು. ಅನ್ಯಾದೃಶವಾದ ಈ ಔದಾರ್ಯಗಳು ಭರತಖಂಡದ ಘನತೆಗೆ ಭೂಷಣಪ್ರಾಯವಾಗಿರುತ್ತವೆ.

ಯುದ್ಧವಾರ್ತೆ.

ಪಶ್ಚಿಮರಂಗ.

ಫ್ರಾನ್ಸ್ ದೇಶದ ಉತ್ತರ ಈಶಾನ್ಯಭಾಗದಲ್ಲಿ ಮಿತ್ರಸೈನ್ಯವೂ ಶತ್ರುಗಳ ಸೈನ್ಯವೂ ಸ್ಥಾನಬಲವನ್ನು ಮಾಡಿಕೊಂಡು ಒಬ್ಬರಿಗೊಬ್ಬರು ಜಗ್ಗದೆ ಆಗಿಂದಾಗ್ಗೆ ಕಡಿದಾಡುತ್ತ ಬಂದಿದ್ದಾರೆ. ಹಲವು ಬಾರಿ ಜರ್ಮನರು ರೋಷಾವೇಶದಿಂದ ಹಗಲುರಾತ್ರಿಯೆನ್ನದೆ ಫ್ರಾನ್ಸ್ ಇಂಗ್ಲೆಂಡ್ ಸೈನ್ಯಗಳ ಮೇಲೆ ಬಿದ್ದು, ಫಿರಂಗಿಗಳಿಂದ ಹೊಡೆದು, ಸನೀನುಗಳಿಂದ ತಿವಿದು, ಇದಿರುಪಕ್ಷದ ಸೇನಾವ್ಯೂಹವನ್ನು ಭೇದಿಸಿ ಅಥವಾ ಹಿಂದಕ್ಕೆ ದೂಡಿ ಮುಂದಕ್ಕೆ ನುಗ್ಗಬೇಕೆಂದು ಪ್ರಯತ್ನಿಸಿರುವರು. ಆದರೂ ಫಲವಾಗಲಿಲ್ಲ. ಜರ್ಮನರನ್ನೇ ಕೆಲಕಡೆ ನಮ್ಮವರು ಹಿಮ್ಮೆಟ್ಟಿಸಿದ್ದಾರೆ. ಮೊದಲಿನಷ್ಟು ಶೌರ್ಯೋತ್ಸಾಹಗಳು ಜರ್ಮನರಲ್ಲಿ ಕಾಣಬರದಿರುವುದೂ, ನಮ್ಮ ಪಕ್ಷಕ್ಕೆ ಹೆಚ್ಚು ಹೆಚ್ಚಿನ ನೂತನ ಸೈನ್ಯಗಳು ಬಂದು ಬಲವು ಹೆಚ್ಚಾಗಿರುವುದೂ ಸಹ ಈ ರೀತಿಯಾದ ಪರಿಣಾಮಕ್ಕೆ ಕಾರಣವಾಗಿದೆ. ಜರ್ಮನರಿಗೂ ಕೆಲ ಹೊಸ ಸೈನ್ಯಗಳು ಲೋರೈನ್ ಪ್ರಾಂತದಿಂದ ಬಂದು ಒದಗಿರುತ್ತವೆ. ಮ್ಯೂಸ್‌ನದಿಯ ಬಳಿಯಣ ಬೆಟ್ಟದ ಪ್ರದೇಶಗಳಲ್ಲಿ ಮಿತ್ರಮಂಡಲಿಯವರು ಸ್ಥಾನಬಲವನ್ನು ಮಾಡಿಕೊಂಡಿದ್ದಾರೆ. ಆ ಸ್ಥಲದಲ್ಲಿ ಅನೇಕ ಯುದ್ಧಗಳಾಗಿ ಇರ್ವರಿಗೂ ಜಯಾಪಜಯಗಳು ಸಾಮಾನ್ಯವಾಗಿವೆ. ಶತ್ರುಗಳು ಒಂದಾವೃತ್ತಿ ಮರಳಿ ಮ್ಯೂಸ್‌ನದಿಯನ್ನು ದಾಟಿಬಂದರು. ಆದರೂ ನಮ್ಮವರು ಬಲವಾಗಿ ಕಾದು ಹಿಂದಕ್ಕೆ ದೂಡಿಬಿಟ್ಟರು. ಫ್ರಾನ್ಸಿನ ಅಧ್ಯಕ್ಷರಾದ ಪಾಯಿಂಕೇರ್‌ರವರ ಸ್ವಂತಗ್ರಾಮವಾದ ಸಾಂಪಿನಿ ಊರಿನ ಮೇಲೆ ಫಿರಂಗಿಗುಂಡುಗಳನ್ನು ಜರ್ಮನರು ಹಾರಿಸಿದರು. ಮತ್ತು ಆ ಗ್ರಾಮದಲ್ಲಿದ್ದ ಪಾಯಿಂಕೇರ್ ಕುಟುಂಬದವರ ಆಸ್ತಿಗಳನ್ನು ಸಹ ದೋಚಿಕೊಂಡಿರುವರು.

ಜರ್ಮನರು ಬ್ರಸೆಲ್ಸನ್ನು ಬಲಪಡಿಸಿಕೊಳ್ಳುತ್ತಲಿರುವರು. ಆಂಟ್ವರ್ಪಿನ ಪಶ್ಚಿಮದ ಕೋಟೆಗಳ ಮೇಲೆ ೧-೨ ಸಲ ಫಿರಂಗಿಗುಂಡುಗಳನ್ನು ಜರ್ಮನರು ಹೊಡೆದರು. ಆದರೂ ಬೆಲ್ಜಿಯಮ್ಮಿನವರು ಪ್ರತಿಯಾಗಿ ಕೋಟೆಯಿಂದ ಗುಂಡುಗಳನ್ನು ಹೊಡೆದು ಶತ್ರುಗಳನ್ನೋಡಿಸಿದರು. ಮತ್ತೂ ಅವರು ಹಿಡಿದುಕೊಂಡಿದ್ದ ಸ್ಥಲವನ್ನೆಲ್ಲಾ ಬೆಲ್ಜಿಯಮ್ಮಿನವರು ಮರಳಿ ಹಿಡಿದುಕೊಂಡರು. ಮೆಲೈನ್ಸ್ ಪಟ್ಟಣದವರು ಹಿಂದೆ ಸಮುದ್ರದ ನೀರನ್ನು ತಮ್ಮ ಮೇಲೆ ತಿರುಗಿಸಿದ ಹಗೆಯನ್ನು ತೀರಿಸಿಕೊಳ್ಳುವುದಕ್ಕಾಗಿ ಜರ್ಮನರು ಆ ಪಟ್ಟಣದ ಮೇಲೆ ಬಹುದೂರದಿಂದ ಫಿರಂಗಿ ಗುಂಡುಗಳನ್ನು ಹಾರಿಸಿ ಕೆಲವು ಮನೆಗಳನ್ನು ಹಾಳ್ಮಾಡಿದರು. ಪ್ರಜೆಗಳಲ್ಲಿ ೧೦ ಮಂದಿ ಸತ್ತರು. ಮಾನ್ಸ್‌ಪಟ್ಟಣದ ಬಹುಭಾಗವು ಉರಿದಿರುವುದಂತೆ. ಆಂಟ್ವರ್ಪಿನಲ್ಲಿದ್ದ ಬೆಲ್ಜಿಯಂ ಸೈನಿಕರು ಈಚೆಗೆ ಬಂದು ಜರ್ಮನರ ಮೇಲೆ ಬಿದ್ದು ಕಾದಾಡಿ ಹಿಂದಕ್ಕೋಡಿಸಿ, ಅವರ ವಶದಲ್ಲಿದ್ದ ಅಲೋಸ್ಟ್ ಎಂಬ ಪಟ್ಟಣವನ್ನು ಸ್ವಾಧೀನಪಡಿಸಿಕೊಂಡರು. ಜರ್ಮನರು ಲೀರ್ ಪಟ್ಟಣದ ಮೇಲೆ ಫಿರಂಗಿಗಳನ್ನು ಹಾರಿಸಿದರು. ಒಳಗಿದ್ದ ಜನರೆಲ್ಲಾ ಓಡಿಹೋದರು. ಬಳಿಕ ಪಟ್ಟಣವನ್ನೆಲ್ಲಾ ಧ್ವಂಸಮಾಡಿಬಿಟ್ಟರು. ಜರ್ಮನರು ಮಾಲಾ ಪಟ್ಟಣವನ್ನು ಮರಳಿ ವಶಪಡಿಸಿಕೊಂಡು, ಜನರು ಊರನ್ನು ಸೇರದಿದ್ದರೆ ಪಟ್ಟಣವನ್ನೆಲ್ಲಾ ಧ್ವಂಸಮಾಡುವೆವೆಂದು ಬೆದರಿಸುತ್ತಿದ್ದಾರೆ. ಸೋಮ್-ಓಯಿಸಿ ನದಿಗಳ ಉತ್ತರಭಾಗದಲ್ಲೂ, ಎಯಿನೀಗೆ ಉತ್ತರಭಾಗದಲ್ಲೂ, ಆರ್ಗೋನ್-ಮ್ಯೂಸ್ ನದಿಗಳ ಮಧ್ಯಭಾಗದಲ್ಲೂ, ವೇವರ್-ಲೋರೈನ್-ವಾಸ್ಗೆಸ್ ಪ್ರಾಂತದಲ್ಲೂ ಯುದ್ಧಗಳು ಉಭಯಪಕ್ಷಕ್ಕೂ ನಡೆಯುತ್ತಲೇ ಇವೆ. ಆದರೂ ನಮ್ಮ ಪಕ್ಷದವರಿಗೆ ಆದ ಜಯವೇ ಹೆಚ್ಚಾಗಿದೆ. ವಾರೆನ್ನಿಸ್-ರೈಬೆಕೋರು-ರೋಯಿ-ಎಂಬಿವುಗಳು ಮಿತ್ರಸೈನ್ಯದವರ ಅಧೀನದಲ್ಲೂ, ಲಸ್ಸೀನಿ-ಥಾಲ್ಸೆಸ್-ಎಂಬಿವುಗಳು ಶತ್ರುಗಳಧೀನದಲ್ಲೂ ಇವೆ.

ಪೂರ್ವರಂಗ.

ಆಗ್ನೇಯ ದಿಕ್ಕಿನಲ್ಲಿರುವ ರಷ್ಯನ್ ಸೈನ್ಯಗಳು ಆಸ್ಟ್ರಿಯಾ ದೇಶದ ಎಲ್ಲೆಕಟ್ಟಿನಲ್ಲಿರುವ ಜಿಸ್ಕೀ-ಪೌಲ್‌ಟನ್ ಪಟ್ಟಣಗಳನ್ನೂ ಮಾರಡಿ ಮರೋ ಜಿಲ್ಲೆಯೊಳಗಿನ ಇನ್ನು ಕೆಲವು ಪ್ರದೇಶಗಳನ್ನೂ ಆಕ್ರಮಿಸಿಕೊಂಡರು. ಆ ಸ್ಥಲದಲ್ಲಿ ಆಸ್ಟ್ರಿಯಾದ ಅನೇಕ ಆಯುಧಾದಿ ಸಾಮಗ್ರಿಗಳನ್ನೂ ಹಿಡಿದುಕೊಂಡರು. ಆಸ್ಟ್ರಿಯಾದಲ್ಲಿ ರಷ್ಯನರು ಮುಂದುಮುಂದಕ್ಕೆ ಸಾಗಿ ಹೋಗುತ್ತಲೇ ಇದ್ದಾರೆ. ಗಲಿಷಿಯಾದಲ್ಲಿ ಆಸ್ಟ್ರಿಯಾದವರ ತಡೆಯೇ ಇಲ್ಲವಾಗಿದೆ. ಅವರು ಪಶ್ಚಿಮದಿಕ್ಕಿಗೆ ಓಡಿಹೋಗುತ್ತಿದ್ದಾರೆ. ಆದರಿಂದ ರಷ್ಯನರು ಸುಲಭವಾಗಿ ನುಗ್ಗುತ್ತ ದಾರಿಯಲ್ಲಿ ಸಿಕ್ಕಿದ ೨-೩ ಕೋಟೆಗಳನ್ನು ಆಕ್ರಮಿಸಿಕೊಂಡರು. ರಷ್ಯನರು ಆಸ್ಟ್ರಿಯಾಕ್ಕೆ ಸೇರಿದ ಜೆರೋಸ್ಲಾವ್ ನಗರವನ್ನು ಹಿಡಿದುಕೊಳ್ಳುವಾಗ ೮ ದಿನಗಳ ವರೆಗೆ ಭೀಕರ ಯುದ್ಧವಾಯಿತು. ಆಸ್ಟ್ರಿಯಾದವರು ಬೆಟ್ಟಗಳ ಮೇಲೆ ಸುತ್ತಲೂ ನಿಂತು ಫಿರಂಗಿ ಗುಂಡುಗಳನ್ನು ಅವಿಚ್ಛಿನ್ನವಾಗಿ ಹೊಡೆಯುತ್ತಿದ್ದರು. ಆದರೂ ರಷ್ಯನರು ಹಿಮ್ಮೆಟ್ಟದೆ ಬೆಟ್ಟಗಳ ಮೇಲೆ ಏರುತ್ತ ಪ್ರತಿಯಾಗಿ ಗುಂಡುಗಳನ್ನು ಹೊಡೆಯುತ್ತ, ಸನೀನುಗಳಿಂದ ತಿವಿಯುತ್ತ ಶತ್ರುಗಳನ್ನು ನಿರ್ಮೂಲಮಾಡಿದರು. ಅವರ ಹೆಣಗಳು ರಾಶಿರಾಶಿಯಾಗಿ ಬಿದ್ದುವು. ಏಟುತಿಂದ ಸೈನಿಕರು ೩-೪ ದಿನಗಳ ವರೆಗೆ ಬಿದ್ದರೂ ಉಪಚರಿಸುವವರಿಲ್ಲವಾಗಿದ್ದರು. ಬಂದಿಗಳಾಗಿ ಸಿಕ್ಕಿದವರು ತಮಗೆ ೩-೪ ದಿನಗಳಿಂದ ಆಹಾರವೇ ಇಲ್ಲವೆಂದು ಹೇಳಿಕೊಳ್ಳುತ್ತಿದ್ದರು. ಈಚೆಗೆ ರಷ್ಯನರು ಗಲಿಷಿಯಾದ ಇನ್ನು ೩ ಕೋಟೆಗಳನ್ನೂ ಹಿಡಿದುಕೊಂಡರು.

ಇನ್ನುಮುಂದೆ ಪಶ್ಚಿಮರಂಗಕ್ಕಿಂತ ಪೂರ್ವರಂಗದ ಯುದ್ಧಗಳು ಪ್ರಬಲಿಸುವಂತೆ ಕಾಣುತ್ತಿದೆ. ಪಶ್ಚಿಮದಲ್ಲಿದ್ದ ಜರ್ಮನ್ ಚಕ್ರವರ್ತಿಯವರು ತಾವೇ ಸೈನ್ಯಸಮೇತ ಪೂರ್ವಭಾಗದಲ್ಲಿರುವ ರಷ್ಯಾಸೇನೆಯ ಮೇಲೆ ಸಾಗಿಹೋಗಿರುವರೆಂದು ಮೊನ್ನೆಯ ತಂತ್ರೀವಾರ್ತೆಗಳಿಂದ ಗೊತ್ತಾಗುತ್ತದೆ. ಈಗ ಪಶ್ಚಿಮದಲ್ಲಿ ಜರ್ಮನರ ೧೮ ಪಟಾಲಮ್ಮುಗಳಿರುತ್ತ, ಪೂರ್ವಕ್ಕೆ ೨೨ ಪಟಾಲಮ್ಮುಗಳು ಹೋಗಿವೆ. ಇದರಿಂದ ಜರ್ಮನರಿಗೆ ಪಶ್ಚಿಮದಲ್ಲಿ ನಿರಾಶೆಯೂ, ಪೂರ್ವದಲ್ಲಿ ತಮ್ಮ ಮೇಲೆ ಏರಿಬರುತ್ತಿರುವ ರಷ್ಯನರನ್ನು ತಡೆಯಬೇಕೆಂಬ ಅವಶ್ಯಕತೆಯೂ ಹೆಚ್ಚಿರುವುದೆಂದು ಕಾಣುತ್ತದೆ. ಹೀಗೆ ಹೋದ ಜರ್ಮನ್ ಸೇನೆಯು ಒಂದು ಕಡೆಯಲ್ಲಿ ರಷ್ಯನರನ್ನು ತಡೆಗಟ್ಟುತ್ತ ಮತ್ತೊಂದು ಕಡೆ ರಷ್ಯಾ ದೇಶದೊಳಕ್ಕೆ ೧೮ ಮೈಲಿಗಳ ದೂರ ನುಗ್ಗಿ ಹೋಗಿರುವುದು. ಅಲ್ಲಿ ರಷ್ಯನರಿಗೂ ಜರ್ಮನರಿಗೂ ಸಾಪಾಟ್ಕಿನ್ ಎಂಬುವ ಕಡೆ ಯುದ್ಧವಾಯಿತು. ಈ ಪಟ್ಟಣವು ನೀಮೆನ್ ನದಿಯ ಎಡಭಾಗದಲ್ಲಿದೆ. ಮತ್ತೊಂದು ಕಡೆಯಲ್ಲಿ ಜರ್ಮನರು ವಾರ್ಸಾದಿಂದ ಪೆಟ್ರೋಗ್ರಾಡ್ ಎಂಬ ರಷ್ಯಾ ರಾಜಧಾನಿಗೆ ಹೋಗಿ ಸೇರುವ ಲೋಹಮಾರ್ಗಕ್ಕೆ ೧೮ ಮೈಲಿಗಳಷ್ಟು ದೂರದಲ್ಲಿ ಹೋಗಿ ಸೇರಿದ್ದಾರೆ. ಆದರೆ ಅಲ್ಲಿ ಜರ್ಮನಿಯವರಿಗೆ ಅಡ್ಡಲಾಗಿ ರಷ್ಯನ್ ಸೈನಿಕರ ಸಾಲುಗಳೂ ನೀಮೆನ್ ನದಿಯೂ ಅವರನ್ನು ಮುಂದಕ್ಕೆ ಸಾಗಗೊಡಿಸದೆ ಇವೆ. ಅಸ್ಟೋವಿಟ್ಜ್-ಡ್ರುಸ್ಕೆನಿಕ್-ಸಿಮ್ನೊ ಎಂಬಲ್ಲಿ ಜರ್ಮನ್ನರಿಗೂ ರಷ್ಯನರಿಗೂ ಕಡುಕಾಳಗವಾಯಿತು. ನೀಮೆನ್ ನದಿಯನ್ನು ದಾಟಬೇಕೆಂದು ಜರ್ಮನರು ವಿಶ್ವಪ್ರಯತ್ನಮಾಡಿದರು. ರಷ್ಯನರು ಹಾಯಗೊಡಿಸಲಿಲ್ಲ. ರಷ್ಯನರು ಬಹಳವಾಗಿ ಕಾದಾಡಿ ಆಗಸ್ಟಾವೊ ವನಗಳ ಉತ್ತರಭಾಗವನ್ನು ಜರ್ಮನರಿಂದ ಕಸುಕೊಂಡರು. (ಇದು ರಷ್ಯನರದು, ಜರ್ಮನರು ವಶಪಡಿಸಿಕೊಂಡಿದ್ದರು.) ಜೆಮಿಸಲ್ ಬಳಿಯಲ್ಲಿ ನಡೆದ ಯುದ್ಧದಲ್ಲಿ ಜರ್ಮನರ ಹಲವು ಫಿರಂಗಿಗಳನ್ನೂ ಬಹುಜನ ಸೈನಿಕರನ್ನೂ ರಷ್ಯನರು ಹಿಡಿದುಕೊಂಡರು.

ಮತ್ತೂ ರಷ್ಯನರು ಇತ್ತ ಆಸ್ಟ್ರಿಯಾದಲ್ಲಿ ಕಾರ್ಪೇಥಿಯಾ ಪರ್ವತದ ಕಣಿವೆಗಳಿಂದ ಹಾದು ಮುಂದೆ ಅಲ್ಲಲ್ಲಿ ಶತ್ರುಗಳನ್ನು ಸೋಲಿಸಿ ಹಂಗೇರಿಯಾ ರಾಜಧಾನಿಯಾದ ಬುಡಾಪೆಸ್ಟಿಗೆ ಸಾಗಿ ಹೋಗುತ್ತಿದ್ದಾರೆ.

ಅಡ್ರಿಯಾಟಿಕ್ ಸಮುದ್ರಕ್ಕೆ ಚಾಚಿರುವ ಆಸ್ಟ್ರಿಯಾದ ಕಟಾರೋ ಎಂಬ ತೀರಪಟ್ಟಣಕ್ಕೆ ಇಂಗ್ಲಿಷ್ ಫ್ರೆಂಚರ ಯುದ್ಧದ ನಾವೆಗಳು ಇನ್ನೂ ಫಿರಂಗಿಗಳನ್ನು ಹಾರಿಸುತ್ತಲೇ ಇವೆ.

ಸರ್ವಿಯಾ ಮಾಂಟಿನಿಗ್ರೋ

ಸರ್ವಿಯಾ ಮಾಂಟಿನೀಗ್ರೋ ಸೈನ್ಯಗಳು ಸೆರಾಜೇವೋ ಪಟ್ಟಣದ ಬಳಿಯಲ್ಲಿ ಕಾದಾಡುತ್ತಿವೆ. ಹಂಗೇರಿಯಾ ಸೈನ್ಯಗಳು ತಾವು ವಿಧಿಯಿಲ್ಲದೆ ಯುದ್ಧಮಾಡುತ್ತಿರುವೆವೆಂದು ಬಾಯಿಬಿಟ್ಟುಹೇಳುತ್ತಲಿವೆ. ಈಗ ಸರ್ವಿಯಾದ ಹೊಸಸೈನ್ಯಗಳೆರಡು ಹಿಂದೆ ಬೋಸ್ನಿಯಾದಲ್ಲಿವೆ. ಇವುಗಳಲ್ಲೊಂದು ವಿಶಿಗ್ರಾಡಿನಹತ್ತಿರ ವಿನಾನದಿಯನ್ನು ದಾಟಿದೆ. ಮತ್ತೊಂದು ಸೈನ್ಯವು ೨೫ ಮೈಲಿ ದೂರದಲ್ಲಿ ಅದೇ ನದಿಯನ್ನು ದಾಟಿ ಎರಡೂ ಸರ್ವಿಯಾ ದೇಶದ ವಾಯವ್ಯಮೂಲೆಯಲ್ಲಿರುವ ಇದೇ ನದಿಯ ಕೋಣಭಾಗದಲ್ಲಿ ಸೇರಿವೆ. ಅಲ್ಲಿ ಆಸ್ಟ್ರಿಯಾ ಸೈನ್ಯವೂ ಕೂಡಿ ಇದಿರುಬದಿರಾಗಿ ನಿಂತು ಕಾದಾಡುತ್ತಿವೆ.

ಸರ್ವಿಯಾದವರು ಆಸ್ಟ್ರಿಯಾದವರ ಮೇಲೆ ಕಠಿನವಾಗಿ ಕಾದಾಡಿ ಸೇಮ್ಲಿನ್ ಪಟ್ಟಣವನ್ನು ಮರಳಿ ವಶಪಡಿಸಿಕೊಂಡರು.

ಜಲಯುದ್ಧ.

ಉತ್ತರಸಮುದ್ರದಲ್ಲಿದ್ದ ಆಂಗ್ಲರ ಯುದ್ಧದ ಹಡಗುಗಳ ತಂಡದಮೇಲೆ ಜರ್ಮನರ ಯುದ್ಧದ ಹಡಗುಗಳು ಬಿದ್ದು ೩ ಹಡಗುಗಳನ್ನು ನಾಶಪಡಿಸಿರುವುವು. ತಾ|| ೨೨ ನೇ ಬೆಳಗಿನಜಾವದಲ್ಲಿ ಅಬೂಕರ್ ಎಂಬ ಹಡಗು ಜರ್ಮನರ ಟಾರ್ಪೆಡೋವಿನ ಬಡಿತದಿಂದ ಮುಳುಗಿಹೋಗುತ್ತಿರುವಲ್ಲಿ ಅದರಲ್ಲಿದ್ದ ಜನರನ್ನು ಇಳಿಯಿಸಿಕೊಂಡು ರಕ್ಷಿಸುವುದಕ್ಕೆ ಹೋದ ಹೋಗ್ ಎಂಬ ಹಡಗು ಸಹ ಜರ್ಮನರ ಟಾರ್ಪೆಡೋವಿನ ಬಡಿತದಿಂದ ಮುಳುಗಿತು. ಅಷ್ಟರಲ್ಲಿ ಕ್ರೆಸ್ಸಿ ಎಂಬ ಮತ್ತೊಂದು ಹಡಗು ೩೦೦ ಗಜಗಳ ದೂರದಲ್ಲಿದ್ದ ಶತ್ರುಗಳ ಹಡಗಿನ ಮೇಲೆ ಸಾಗಿಹೋಗುತ್ತ ಫಿರಂಗಿ ಗುಂಡುಗಳನ್ನು ಹೊಡೆಯಲುಪಕ್ರಮಿಸಿತು. ಅದನ್ನೂ ಜರ್ಮನರ ಟಾರ್ಪೆಡೋವು ಬಡಿದು ನಾಶಪಡಿಸಿತು. ಈ ಹಡಗುಗಳಲ್ಲಿದ್ದವರಲ್ಲಿ ೬೦ ಮಂದಿ ಸೈನ್ಯಾಧಿಕಾರಿಗಳೂ, ೧೪೦೦ ಮಂದಿ ಸೋಲ್ಜರುಗಳೂ, ಸತ್ತರು. ೭೭೯ ಮಂದಿಗಳನ್ನು ಡಚ್ಚರ ಹಡಗುಗಳು ಸಾಗಿಸಿತಂದುವು.

ಬಾಲ್ಟಿಕ್‌ಸಮುದ್ರದಲ್ಲಿ ಜರ್ಮನರ ಯುದ್ಧದ ಹಡಗುಗಳು ೨೮ ವಿಂಡಾದ ಸಮೀಪಕ್ಕೆ ಬಂದುವು. ಇವು ದಕ್ಷಿಣದಿಕ್ಕಿಗೆ ಪ್ರಯಾಣಮಾಡಿದುವಂತೆ. ಕಳೆದ ತಾ|| ೮ ರಲ್ಲಿ ವಿಂಡಾದ ಬಳಿಯಲ್ಲಿ ಜರ್ಮನರ ೧೮ ಡಿಸ್ಟ್ರಾಯರುಗಳೂ ಒಂದು ಕ್ರೂಯಿಜರೂ ಸಹ ಬಂದು ಸಮುದ್ರದ ಅಡಿಯಲ್ಲಿ ಏನಾದರೂ ಸಿಡಿಮದ್ದುಗಳಿವೆಯೋ ಎಂಬುದನ್ನು ತಡಕುವುದಕ್ಕಾಗಿ ನಾವೆಗಳನ್ನು ಇಳಿಯಿಸಿದರು. ಅಷ್ಟರಲ್ಲಿ ಫಿರಂಗಿಗಳನ್ನು ಹಾರಿಸಲು, ಅವು ಓಡಿಹೋದುವು ಎಂದು ರಷ್ಯಾ ರಾಜಧಾನಿಯಿಂದ ವಾರ್ತೆಬಂದಿದೆ.

ಆಕಾಶವಿಮಾನಗಳು.

ಜರ್ಮನ್ ವೈಮಾನಿಕರು ಫ್ರಾನ್ಸಿನ ರಾಜಧಾನಿಯಮೇಲೆ ಪದೇಪದೇ ಹಾರಿಬಂದು ಸಿಡಿಮದ್ದುಗಳನ್ನಿಡುತ್ತಿದ್ದಾರೆ. ಒಂದುಗುಂಡು ಅಮೇರಿಕಾ ದೇವಾಲಯದ ಹತ್ತಿರವೂ, ಒಂದು ಅವರ ರಾಯಭಾರಿಯ ಮನೆಯಹತ್ತಿರವೂ ಬಿದ್ದು ಸ್ವಲ್ಪ ನಷ್ಟವನ್ನುಂಟುಮಾಡಿದೆ. ಇನ್ನೊಂದುಕಡೆ ಬಿದ್ದು ಇಬ್ಬರು ಸತ್ತರು. ಬೋಲಾನ್ ಪಟ್ಟಣದಲ್ಲಿರುವ ನೌಕಾನಿರ್ಮಾಣಸ್ಥಾನದ ಮೇಲೂ ಅವರು ಸಿಡಿಮದ್ದುಗಳನ್ನಿಟ್ಟರು. ನಷ್ಟವೇನೂ ಆಗಲಿಲ್ಲ. ಜರ್ಮನರು ಬೆಲ್ಜಿಯಮ್ಮಿನವರ ಆಂಟ್‌ವರ್ಪ್‌ಪಟ್ಟಣದ ಮೇಲೂ ಸಿಡಿಮದ್ದುಗಳನ್ನಿಡುವ ಹಾವಳಿಯನ್ನು ಬಿಟ್ಟೇ ಇಲ್ಲ. ಬೆಲ್ಜಿಯಮ್ಮಿಗೆ ಸೇರಿದ ಆಸ್ಟೆಂಡ್ ಪಟ್ಟಣದಮೇಲೆ ೧೨ ಬಾರಿ ಸಿಡಿಮದ್ದಿನ ಗುಂಡುಗಳನ್ನಿಟ್ಟರು. ಒಬ್ಬ [illegible] ಏಟುಬಿದ್ದಿತು. ಮತ್ತೊಂದುಸಲ ಬಿದ್ದ ಗುಂಡುಗಳಿಂದ ೧ ನಾಯಿ ಸತ್ತು ಮೀಸಿನಂಗಡಿಯೊಂದು ನಾಶವಾಯಿತು. ಜರ್ಮನರ ವಿಮಾನಗಳು ಅತ್ತ ರಷ್ಯಾಕ್ಕೆ ಸೇರಿದ ಪೋಲಾಂಡಿನ ರಾಜಧಾನಿಯಾದ ವಾರ್ಸಾಪಟ್ಟಣದಮೇಲೂ ಸಿಡಿಮದ್ದುಗಳನ್ನು ಹಾಕಿದುವು. ಅದರಿಂದ ಪಟ್ಟಣಕ್ಕೆ ಸ್ವಲ್ಪ ನಷ್ಟವಾಯಿತು. ಅಷ್ಟರಲ್ಲಿ ಕೋಟೆಯಮೇಲಿದ್ದವರು ಆ ವಿಮಾನವನ್ನು ಗುಂಡುಗಳಿಂದ ಹೊಡೆದು ಇಳಿಯಿಸಿ ಹಿಡಿದುಕೊಂಡರು.

ಆಂಗ್ಲೇಯ ವೈಮಾನಿಕರು ಜರ್ಮನರ ವಿಮಾನಗಳನ್ನು ಮಾಡುವ ಕಾರ್ಯಾಲಯದ ಬಳಿಗೆ ಹೋಗಿ, ಅದರಮೇಲೆ ಸಿಡಿಮದ್ದನ್ನು ಹಾಕಿ ಅದರಲ್ಲಿದ್ದ ಜಪ್ಲಿನ್ ವಿಮಾನಕ್ಕೂ ಆಕಾರ್ಯಾಗಾರಕ್ಕೂ ನಷ್ಟವನ್ನುಂಟುಮಾಡಿದರು.

ಬೆಲ್ಜಿಯಮ್ಮಿನ ಬ್ರಸಲ್ಸ್‌ಪಟ್ಟಣದ ಹತ್ತಿರ ಹಾರುತ್ತಿದ್ದ ೧ ಜರ್ಮನ್ ವಿಮಾನದಮೇಲಕ್ಕೆ ಬೆಲ್ಜಿಯಂ ವಿಮಾನವೊಂದು ಹಾರಿ ಹೊಡೆದಿತು. ಅದರಿಂದ ಜರ್ಮನ್ ವಿಮಾನವು ನೆಲದಮೇಲೆ ಬಿದ್ದು ಚೂರುಚೂರಾಯಿತು. ಅದರಲ್ಲಿದ್ದವರು ಸತ್ತರು.

ಜಪಾನ್.

ಸಿಂಗ್‌ಟೌವಿನ ಸರಹದ್ದಿನಲ್ಲಿ ಜರ್ಮನರಿಗೂ ಜಪಾನರಿಗೂ ಭೂಮಿಯಮೇಲಿನ ಯುದ್ಧವಾಗುತ್ತಲಿದೆ. ಉಭಯರಕಡೆಯೂ ಸ್ವಲ್ಪ ಸೇನಾನಷ್ಟವಾಗಿದೆ. ಸಿಂಗ್‌ಟೋವಿಗೆ ೫ ಮೈಲಿಗಳ ದೂರದಲ್ಲಿ ಜರ್ಮನರ ಯುದ್ಧನಾವೆಗಳು ಜಪಾನರಮೇಲೆ ಫಿರಂಗಿಗಳನ್ನು ಹಾರಿಸಿದರು. ಜಪಾನರ ವಿಮಾನಗಳು ಮೇಲಿನಿಂದ ಆ ಹಡಗುಗಳಮೇಲೆ ಸಿಡಿಮದ್ದುಗಳನ್ನೆಸೆದುವು. ಅದರಿಂದ ಆ ಹಡಗುಗಳು ಸುಮ್ಮನಾದುವು. ಸಿಂಗ್‌ಟೋವಿಗೆ ೭ ಮೈಲಿ ದೂರದಲ್ಲಿರುವ ನದೀಪ್ರಾಂತಗಳನ್ನು ಜಪಾನರು ಹಗಲೂ ರಾತ್ರಿಯೂ ಕಾದಾಡಿ ಹಿಡಿದುಕೊಂಡು ಶತ್ರುಗಳನ್ನು ಕಿಯೋಚೋವಿಗೆ ಹಿಂದಿರುಗುವಂತೆಮಾಡಿದರು. ಜಪಾನರ ಕಡೆ ೧೫೦ ಮಂದಿಗಳು ಸತ್ತರು. ಜರ್ಮನರ ೪ ಫಿರಂಗಿಗಳೂ ೫೦ ಮಂದಿಗಳೂ ಸೆರೆಸಿಕ್ಕಿದರು. ಸಿಂಗ್‌ಟೋವಿನ ೨ ಕೋಟೆಗಳಮೇಲೆ ಜಪಾನರು ಫಿರಂಗಿಗಳನ್ನುಹಾರಿಸಿದರು. ಇಂಗ್ಲೀಷರ ಒಂದು ಯುದ್ಧದ ಹಡಗು ಆಗ ಸಹಾಯಮಾಡಿತು. ಒಂದು ಕೋಟೆಯಿಂದ ಜರ್ಮನರು ಜಪಾನರಮೇಲೆ ಗುಂಡುಗಳನ್ನು ಹಾರಿಸಿದರು.

ಒಡಂಬಡಿಕೆ.

ಅಮೇರಿಕಾ ಸಂಯುಕ್ತರಾಷ್ಟ್ರದವರೂ, ಇಂಗ್ಲೀಷರೂ, ಫ್ರಾನ್ಸಿನವರೂ, ಸ್ಪೈಯಿನ್‌ನವರೂ ಸಹ ಶಾಂತಿಯನ್ನುದ್ದೇಶಿಸಿ ತಮ್ಮ ತಮ್ಮಲ್ಲಿ ಒಂದು ಒಡಂಬಡಿಕೆಯನ್ನು ಮಾಡಿಕೊಂಡರು. ಇದರ ಪ್ರಕಾರ ಈ ರಾಷ್ಟ್ರಗಳೊಳಗೆ ವಿವಾದವೇನಾದರೂ ಸಂಭವಿಸಿದರೆ ಮಧ್ಯಸ್ಥಗಾರರಿಂದ ಪರಿಷ್ಕರಿಸಿಕೊಳ್ಳುವುದಕ್ಕೆ ಪ್ರಯತ್ನಿಸಬೇಕೆಂತಲೂ, ಅಂಥ ಪರಿಷ್ಕಾರಕ್ಕೆ ಒಂದು ವರ್ಷದ ಕಾಲ ವ್ಯವಧಿಯಿರಬೇಕೆಂತಲೂ, ಅಷ್ಟರೊಳಗೆ ಯುದ್ಧವನ್ನಾರಂಭಿಸಕೂಡದೆಂತಲೂ ನಿಬಂಧನೆಗಳೇರ್ಪಟ್ಟಿವೆ. ಈಗಿನ ಯುದ್ಧದಲ್ಲಿ ಹಡಗುಗಳನ್ನು ಯಾರಾದರೂ ಹಿಡಿದುಕೊಳ್ಳಬೇಕಾದ ಸಂಭವವುಂಟಾದರೆ ಅಂಥ ಸಂದರ್ಭದಲ್ಲಿ ಈ ಒಡಂಬಡಿಕೆಯು ಅನ್ವಯಿಸುವುದಿಲ್ಲ.

ಒಳದೇಶದ ವೃತ್ತಾಂತಗಳು.

ಪ್ರಜಾಪ್ರತಿನಿಧಿಗಳಿಗೆ ಪದ್ಧತಿಯಂತೆ ನಡೆಯಬೇಕಾದ ಔತಣವು ನಾಳೆಯದಿನ ನಡೆಯುವುದು.

ದಿವಾನರು ಏರ್ಪಡಿಸಿರುವ ಟೆನ್ನಿಸ್‌ಟೋರ್ನ್‌ಮೆಂಟು ನಿನ್ನೆಯದಿನ ಮೈಸೂರಿನ ಮ|| ರಂಗರಾಯರಿಗೂ ತಿರುಚನಾಪಲ್ಲಿಯ ಮ|| ಶೃಂಗಾರವೇಲುಯವರಿಗೂ ನಡೆಯುವುದಾಗಿದ್ದಿತು.

ರಾಜಧಾನಿಯಲ್ಲೂ ಸುತ್ತುಮುತ್ತಣ ಗ್ರಾಮಗಳಲ್ಲೂ ೨-೩ ದಿನ ಹಸ್ತದ ಮಳೆಯು ರಾತ್ರಿಯಹೊತ್ತು ಚೆನ್ನಾಗಿ ನಡೆಯಿಸಿತು. ಇದರಿಂದ ನಿಂತಿರುವ ಪೈರಿಗೆ ಒಳ್ಳೆಯ ಚೈತನ್ಯವುಂಟಾಯಿತು.

ಈ ಸಂಚಿಕೆಯೊಡನೆ ಬನವಾಸಿಯ ಜೆ. ಎಲ್. ಜೋಷಿ ಅಂಡ್ಕೋಯವರ, ಮತ್ತೂ ಮದರಾಸಿನ, ಟಿ. ರಾಜವೈದ್ಯಪಂಡಿತರ ಔಷಧಗಳ ಪ್ರಕಟನ ಪತ್ರಿಕೆಗಳನ್ನು ಹಂಚಿರುತ್ತೇವೆ, ವಾಚಕರು ಅವಲೋಕಿಸುವವರಾಗಲಿ.

೧ ನೆಯ ಕೌನ್ಸಿಲರಾದ ಮ|| ಎಚ್. ವಿ. ನಂಜುಂಡಯ್ಯನವರು ನವರಾತ್ರಿಯ ರಜದ ಜತೆಗೆ ಮತ್ತೆ ೨ ವಾರಗಳ ರಜವನ್ನು ತೆಗೆದುಕೊಂಡಿರುವುದರಿಂದ ಅವರ ಕೆಲಸವನ್ನು ದಿವಾನರೂ, ಮತ್ತೂ ೨ ನೆಯ ಕೌನ್ಸಿಲರೂ ಸಹ ಹಂಚಿಕೊಂಡು ನಿರ್ವಹಿಸುತ್ತಿರುವರು.

ಈ ಸಲದ ನವರಾತ್ರಿಯ ಕಾಲದಲ್ಲಿ ರಾಜಧಾನಿಯಲ್ಲಿ ಶುಚೀಕರಣದ ಮತ್ತೂ ಪೊಲೀಸರ ಏರ್ಪಾಟು ಸಮರ್ಪಕವಾಗಿದ್ದುದರಿಂದ ರೋಗದ ಉಬ್ಬಣವೇ ಆಗಲಿ ಕಳ್ಳರ ಉಪದ್ರವವೇ ಆಗಲಿ ಹೆಚ್ಚಲಿಲ್ಲ. ಜೂಜಾಟದವರಿಗೆ ಲೈಸನ್ಸು ಕೊಡಲ್ಪಡದಿದ್ದುದರಿಂದ ಸರ್ಕಾರದವರು ಪ್ರಜೆಗಳಿಗೆ ಹಿತವನ್ನು ಮಾಡಿದಂತಾಯಿತು.

ಯುದ್ಧದಲ್ಲಿ ಗಾಯಗೊಂಡು ಚಿಕಿತ್ಸೆಯಿಂದ ಆರೋಗ್ಯವನ್ನೈದುತ್ತಿರುವ ಸೈನಿಕರಿಗೆ ಧನವಸನಾದಿಗಳ ಮೂಲಕ ಸಹಾಯಮಾಡುವ ಬಗೆಗಾಗಿ ನಿನ್ನೆಯ ಸಾಯಂಕಾಲ ಇಲ್ಲಿನ ಮಹಾರಾಣಿಯವರ ಕಾಲೇಜುಭವನದಲ್ಲಿ ಬ್ರಿಟಿಷ್ ರೆಸಿಡೆಂಟರವರ ಪತ್ನಿಯವರ ಅಧ್ಯಕ್ಷತೆಯಲ್ಲಿ ಒಂದು ಮಹಿಳಾಸಭೆಯು ಕೂಡಿದ್ದಿತು. ಇದರ ಆಹ್ವಾನಪತ್ರಿಕೆಯು ದರ್ಬಾರ್ ಸರ್ಜನ್ ಮೇಜರ್ ಘೂಕ್ಸ್ ಪತ್ನಿಯವರ ಹೆಸರಿನಿಂದ ಹಂಚಲ್ಪಟ್ಟಿದ್ದಿತು.

ಕಳೆದ ಬುಧವಾರ-ಗುರುವಾರ-ಶುಕ್ರವಾರಗಳಲ್ಲಿ ಚಾಮುಂಡೀಬೆಟ್ಟದ ಕೆಳಗಿನ ಕುದುರೆಜೂಜಿನ ಬೋರೆಯಬಯಲಿನಲ್ಲಿ ಜೀವರಾಶಿಗಳ ಪ್ರದರ್ಶನವೂ ತತ್ಸಂಬಂಧವಾದ ವಿನೋದದ ನೋಟಗಳೂ, ೬ ಮೈಲಿಗಳ ದೂರ ಮನುಷ್ಯರನ್ನು ಜೂಜಿನಿಂದ ಓಡಿಸುವುದೂ ಸಹ ನಡೆದುವು. ಓಟದಲ್ಲಿ ಮೈಸೂರು ತಾ|| ವಾಜಮಂಗಲ ಗ್ರಾಮದವನೊಬ್ಬನು ೧ ನೆಯವನಾಗಿಯೂ, ಇದೇ ತಾ|| ರಮನಹಳ್ಳಿಯವನೊಬ್ಬನು ೨ ನೆಯವನಾಗಿಯೂ ಬಂದರು. ಶ್ರೀಮನ್ಮಹಾರಾಜ ಸಹೋದರರು, ಬಂಧುವರ್ಗದವರು, ಯೂರೋಪ್ಯಾತಿಥಿಗಳು, ಪ್ರಜಾಸ್ತೋಮವು ನೋಟಕ್ಕೆ ಸೇರುತ್ತಿದ್ದರು. ಶುಕ್ರವಾರ ಸಾಯಂಕಾಲ ಗೊತ್ತಾಗಿದ್ದ ಬಹುಮಾನಗಳು ಯೋಗ್ಯತೆಯುಳ್ಳವರಿಗೆಲ್ಲಾ ಕೊಡಲ್ಪಟ್ಟುವು.

ನವರಾತ್ರಿಯ ಪ್ರಯುಕ್ತವಾದ ವಿಜಯದಶಮಿಯುತ್ಸವವು ಕಳೆದ ಮಂಗಳವಾರ ವಿಜೃಂಭಣೆಯಿಂದ ಸಾಗಿತು. ಶ್ರೀಮನ್ಮಹಾರಾಜರೂ ಯುವರಾಜರೂ ಪೂರ್ಣಾಲಂಕೃತರಾಗಿ ಒಂದೇ ಅಂಬಾರಿಯೊಳಗೆ ಮಂಡಿಸಿದ್ದರು. ಪದ್ಧತಿಯಂತೆ ಸಕಲ ಸೇನೆಯಿಂದಲೂ ಹಿಂಗಡೆಯಲ್ಲಿ ದಿವಾನರು ಮೊದಲಾದ ಅಧಿಕಾರಿಗಳು ಕುಳಿತಿದ್ದ ರಥಗಳಿಂದಲೂ ಪರಿವೃತರಾಗಿ, ಸಾಯಂಕಾಲ ೪ ಗಂಟೆಗೆ ಅರಮನೆಯಿಂದ ಅಲಂಕೃತವಾದ ರಾಜವೀಥಿಯಲ್ಲಿ ಉತ್ಸವಹೊರಟು, ಬನ್ನಿಮಂಟಪಕ್ಕೆ ಹೋಗಿದ್ದು ರಾತ್ರಿ ೯ ಗಂಟೆಯೊಳಗೆ ಮರಳಿ ಅರಮನೆಯನ್ನು ಪ್ರವೇಶಿಸಿದರು. ಪರಸ್ಥಳದಿಂದ ಬಂದಿದ್ದ ಜನಸ್ತೋಮವು ಸಾಧಾರಣವಾಗಿದ್ದಿತು. ಬೆಂಗಳೂರ ಇಂಪೀರಿಯಲ್ ಲ್ಯಾನ್‌ಸರ್ಸ್ ಸೈನ್ಯವೂ, ಕರ್ನಲ್ ದೇಶರಾಜ ಅರಸಿನವರೂ ಸಹ ಈಸಲ ಇಲ್ಲದಿದ್ದುದರಿಂದ ಉತ್ಸವದ ವೈಖರಿಯೂ ದರ್ಪವೂ ಸ್ವಲ್ಪ ಕಡಿಮೆಯಾಗಿದ್ದುವು.

ಕಳೆದ ಗುರುವಾರ ರಾತ್ರಿ ನಡೆದ ದರ್ಬಾರಿನಲ್ಲಿ ಶ್ರೀಮನ್ಮಹಾರಾಜರವರು ಈ ಕೆಳಗೆಕಂಡ ದೊಡ್ಡಮನುಷ್ಯರ ವಿಷಯದಲ್ಲಿ ತಮ್ಮ ಅಭಿಮಾನಾಂತಃಕರಣವನ್ನು ಕಾರ್ಯರೂಪವಾಗಿ ತೋರಿಸಿ, ಇತರರಿಗೂ ಪ್ರೋತ್ಸಾಹವನ್ನಿತ್ತಿದ್ದಾರೆ. ಅವರುಗಳು ಯಾರೆಂದರೆ-ಮ|| ಗಳಾದ ಬೀರೂರಿನ ಪತ್ರೆವೀರಪ್ಪನವರು, ಮಂಡ್ಯದ ಅರಳೆ ಸಂಗಪ್ಪನವರು, ಚಿನ್ನಗನಹಳ್ಳಿ ಹನುಮಪ್ಪನವರು, ತುಮಕೂರು ಕರೀಮನೆ ಚಂದ್ರಪ್ಪನವರು- ಇವರುಗಳಿಗೆ ಖಿಲ್ಲತ್ತು, ಸರಟಿಫಿಕೇಟು, ಮತ್ತೂ ದರ್ಬಾರಿನಲ್ಲಿ ಖಾಸಾ ಹಾರದ ಮರ್ಯಾದೆ. ರಾಜಧಾನಿಯಲ್ಲಿರುವ ಮ||ಗಳಾದ ವರ್ಧಮಾನಯ್ಯನವರು, ಬನಮಯ್ಯನವರು-ಇವರುಗಳಿಗೆ ಖಾಸಾ ಹಾರದ ಮರ್ಯಾದೆ. ಈ ಮೇಲೆಕಂಡ ದೊಡ್ಡಮನುಷ್ಯರು ಪ್ರಜಾಹಿತಕರವಾದ ಕಾರ್ಯಗಳಲ್ಲಿ ತತ್ಪರರಾಗಿ ಶ್ರೀಮನ್ಮಹಾರಾಜರಿಂದ ಇಂಥ ಮರ್ಯಾದೆಯನ್ನು ಪಡೆದುಕೊಂಡುದಕ್ಕಾಗಿ ನಾವು ತುಂಬಾ ಸಂತೋಷಿಸುತ್ತೇವೆ.

[3 ನೆಯ ಪುಟದಿಂದ ಮುಂದೆ ಸಾಗಿದುದು.]

ಟೆಕ್ನಿಕಲ್ ಇಲಾಖೆಗಳು.

ಮರಹಮ್ಮತ್ ಇಲಾಖೆ.

ಲೋಕಲ್ ಫಂಡ್ ದೇವೇಲು ಎಲ್ಲಾ ಬಾಬುಗಳಿಂದಲೂ ಮರಹಮ್ಮತ್ ಕೆಲಸಗಳಿಗಾಗಿ ಒಟ್ಟು ಖರ್ಚು ಹಿಂದಿನ ಸಾಲಿನಲ್ಲಿ 51 ಲಕ್ಷ ರೂಪಾಯಿಯಾಗಿರುವಲ್ಲಿ, ಪ್ರಸಕ್ತ ವರ್ಷದಲ್ಲಿ ಸುಮಾರು 59¼ ಲಕ್ಷ ರೂಪಾಯಿಯಾಗಿರುತ್ತದೆ. ಈ ಮೊಬಲಗಿನ ಪೈಕಿ, ನೀರಾವರಿ ಕೆಲಸಗಳಿಗಾಗಿ 29¾ ಲಕ್ಷ ರೂಪಾಯಿಯನ್ನೂ, ಸಿವಿಲ್ ಕಾಮಗಾರಿಗಳಿಗಾಗಿಯೂ ಮಿಲಿಟರಿ ಕಟ್ಟಡಗಳಿಗಾಗಿಯೂ 29½ ಲಕ್ಷ ರೂಪಾಯಿಗಳನ್ನೂ ಖರ್ಚು ಮಾಡಿರುತ್ತದೆ.

ಕನ್ನಂಬಾಡಿ ಬಳಿ ಕಾವೇರೀನದಿಗೆ ಅಡ್ಡವಾಗಿ ಕಟ್ಟಿಸುತ್ತಿರುವ ಜಲಾಶಯದ ಕಾಮಗಾರಿಯು ತೃಪ್ತಿಕರವಾಗಿ ಅಭಿವೃದ್ಧಿಯಾಗುತ್ತಲಿದೆ. ನದೀ ಪಾತ್ರದಲ್ಲಿಯೂ ತೀರಗಳಲ್ಲಿಯೂ ಆಗಬೇಕಾಗಿದ್ದ ಕಷ್ಟಕರವಾದ ಕಾಮಗಾರಿಯು ಪ್ರಸಕ್ತವರ್ಷದಲ್ಲಿ ಪೂರಯಿಸಿತು. ಕಲ್ಲಿನ ಕಟ್ಟಡವು ದಕ್ಷಿಣತೀರದಲ್ಲಿ ನದೀ ಪಾತ್ರದ ಮೇಲೆ 44 ಅಡಿ ಎತ್ತರದ ವರೆಗೂ, ಉತ್ತರ ತೀರದಲ್ಲಿ 30 ಅಡಿ ಎತ್ತರದ ವರೆಗೂ ಎದ್ದಿರುತ್ತದೆ. ಅಣೆಕಟ್ಟೆಯ ಮಧ್ಯಭಾಗದಲ್ಲಿ ಸಂದುಬಿಟ್ಟಿರುವ ಸ್ಥಳದಲ್ಲಿ ಈಗ 8 ಅಡಿ ಮಟ್ಟದ ವರೆಗೆ ನೀರು ಜಮಾಯಿಸಿದೆ. ಜಲಾಶಯದ ಬಳಿಯಲ್ಲಿಯೇ ಒಂದು ಪವರ್ ಸ್ಟೇಷನನ್ನು ಕಲ್ಪಿಸಿ, ಅದರಿಂದ ಬೆಳಗೊಳದ ಪಂಪಿಂಗ್ ಸ್ಟೇಷನಿಗೂ, ಮೈಸೂರಿಗೂ, ಆ ನೆರೆಹೊರೆಯಲ್ಲಿರುವ ಇತರ ಪ್ರದೇಶಗಳಿಗೂ, ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೋಸ್ಕರ, ಅಣೆಕಟ್ಟೆಯಲ್ಲಿ ಬುಗರಿಯಂತೆ ಸುತ್ತುತ್ತಿರುವ (Turbine) ತೂಬುಗಳನ್ನು ಕಟ್ಟಿಸುವ ಏರ್ಪಾಡುಗಳನ್ನು ಮಾಡುತ್ತಲಿದೆ.

ನೀರುಮುಳುಗಡೆಗೆ ಬಂದ ಜಮೀನುಗಳ ಮಾಲೀಕರಿಗೆ ಅವರ ಜಮೀನುಗಳಿಗೆ ಬದಲಿಯಾಗಿ ಇತರ ಜಮೀನುಗಳನ್ನು ಒದಗಿಸಿಕೊಡುವುದಕ್ಕೋಸ್ಕರ, ಸರ್ಕಾರದವರು ಅವಶ್ಯಕವಾದ ಇತರ ಏರ್ಪಾಟುಗಳನ್ನು ಮಾಡಿರುವರ ಜೊತೆಗೆ, ನಾಲ್ಕು ನಾಲೆಗಳನ್ನು ಕಟ್ಟಿಸುವುದಕ್ಕೆ ಮುಂಜೂರಾತಿಯನ್ನು ಕೊಟ್ಟಿರುತ್ತಾರೆ. ಈ ಪೈಕಿ ಎರಡು ಕೆಲಸವು ಈಗಾಗಲೇ ಉಪಕ್ರಮವಾಗಿದೆ. ಉಳಿದ ಎರಡು ನಾಲೆಗಳನ್ನು ಈ ವರ್ಷದಲ್ಲಿ ಉಪಕ್ರಮಿಸಲಾಗುವುದು. ಜಲಾಶಯದ ಕೆಳಗೆ ಸಾಮಾನ್ಯವಾಗಿ ಹೆಚ್ಚು ಪ್ರದೇಶವನ್ನು ನೀರಾವರಿಗೆ ತರುವುದಕ್ಕಾಗಿಯೂ, ಹೆಚ್ಚು ಧಾರಣೆ ಬಾಳುವ ಕಬ್ಬು, ಅರಿಸಿನ, ಹಿಪ್ಪಲಿನೇರಳೆ, ಮುಂತಾದ ಫಸಲುಗಳನ್ನು ಬೆಳೆಯುವುದಕ್ಕೆ ಸೌಲಭ್ಯಗಳನ್ನು ಕಲ್ಪಿಸುವುದಕ್ಕಾಗಿಯೂ ಮಾಡಬೇಕಾದ ವಿಧಾನವನ್ನು ನಿಶ್ಚಯಿಸಲಾಗಿದೆ.

ನೀರಾವರಿ ಕೆಲಸಗಳ ಅಭಿವೃದ್ಧಿ.

ಶಾಸ್ತ್ರೀಯ ಕ್ರಮದಿಂದ ನೀರಾವರಿಯನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಮೂರುವರ್ಷಗಳ ವರೆಗೆ ಹಂಗಾಮಿಯಾಗಿ ಸಾಲಿಯಾನ 30,000 ರೂಪಾಯಿಯ ಖರ್ಚಿನಲ್ಲಿ, ಹೊಸದಾಗಿ ಒಂದು ಇರ್ರಿಗೇಷನ್ ಡಿವಿಜನನ್ನು ಏರ್ಪಡಿಸಿರುತ್ತದೆ. ಸದರಿ ಡಿವಿಜನಿಗೆ ವಹಿಸಿಕೊಟ್ಟ ಕೆಲಸಗಳನ್ನು ಹೋದವರ್ಷದ ಉಪನ್ಯಾಸದಲ್ಲಿಯೇ ವಿವರಿಸಿರುತ್ತದೆ.

ವಿದ್ಯುಚ್ಛಕ್ತಿ [illegible]

ಕಾವೇರೀ ವಿದ್ಯುಚ್ಛಕ್ತಿಯ [illegible] ನಾಲ್ಕನೆಯ ಸ್ಥಾಪನೆಯ ಕಾಮಗಾರಿಯು ಪ್ರಸಕ್ತವರ್ಷದ ಆಖೈರಿಗೆ ತಕ್ಕಮಟ್ಟಿಗೆ ಚೆನ್ನಾಗಿ ನಡೆದು ಇರುವುದಲ್ಲದೆ, 1915 ನೆಯ ಜೂಲೈ ಮಾಹೆ ಪೂರೈಸುವುದಕ್ಕೆ ಮೊದಲೇ ಮುಗಿಯಬಹುದೆಂದು ನಿರೀಕ್ಷಿಸಿದೆ. ವಿದ್ಯುಚ್ಛಕ್ತಿಯನ್ನು ಮನೆಗಳಿಗೂ ಕೈಗಾರಿಕೆಗಳಿಗೂ ಉಪಯೋಗಿಸುವುದನ್ನು ಪ್ರೋತ್ಸಾಹಪಡಿಸುವುದಕ್ಕಾಗಿ ಈ ವರ್ಷದಲ್ಲಿ ಸದರಿ ಶಕ್ತಿಯ ದರಗಳನ್ನು ಕಮ್ಮಿ ಮಾಡಲಾಯಿತು. ಬೆಂಗಳೂರಲ್ಲಿ ಎಲೆಕ್ಟ್ರಿಕ್ ಟ್ರಾಂವೇಗಳನ್ನು ಹಾಕುವದಕ್ಕಾಗಿ ಮಾಡಲ್ಪಟ್ಟ ಅಂದಾಜುಗಳನ್ನು ತಿದ್ದುಪಾಟು ಮಾಡಬೇಕಾಯಿತು ಮತ್ತು ಹೊಸ ಕೆಲಸಗಳನ್ನು ಸದ್ಯಕ್ಕೆ ನಿಲ್ಲಿಸಬೇಕಾಯಿತು. ಅಂದಾಜಾಗಿರುವ ಮೊಬಲಗಿನ ಪೈಕಿ ಸಿವಿಲ್ ಮತ್ತು ಮಿಲಿಟರಿ ಸ್ಟೇಷನಿನವರು ಕೊಡಬೇಕಾದ ತಮ್ಮ ಹಿಸ್ಸೆಯನ್ನು ಕೊಡತಕ್ಕ ವಿಚಾರವು ವ್ಯವಸ್ಥೆಯಾದ ಕೂಡಲೆ, ಈ ಕಾಮಗಾರಿಯನ್ನು ಪುನಃ ನಡಿಸಲಾಗುವುದು.

ರೈಲ್ವೇ ಇಲಾಖೆ.

1900 ನೆಯ ಇಸವಿಯ ವರೆಗೆ ಈ ಸಂಸ್ಥಾನದಲ್ಲಿ 410 ಮೈಲಿಗಳ ಫಾಸಲೆ ರೈಲ್ವೇರಸ್ತೆಯನ್ನು ಹಾಕಿರಲಾಯಿತು, ಅದಕ್ಕಾಗಿ 223 ಲಕ್ಷ ರೂಪಾಯಿನ ಬಂಡವಾಳದ ಲಾಗವಡು ತಗಲಿತು. 1911 ನೆಯ ಇಸವಿಯ ವರೆಗೂ ಸದರಿ ಫಾಸಲೆಯು ಹೆಚ್ಚದೇ ಇದ್ದ ಹಾಗೆಯೇ ಇದ್ದಿತು.

1911 ನೆಯ ನವೆಂಬರ್ 13ನೆಯ ಮರ್ಕಂ 224-30ರೈ. ಫ್ 124-11-12ನೆಯ ನಂಬರ್ ಸರ್ಕಾರಿ ಹುಕುಮಿನ ಮೂಲಕ ಮುಂಜೂರಾದ ರೈಲ್ವೆ ಅಭಿವೃದ್ಧಿಯ ಕಾರ್ಯಕ್ರಮದಿಂದ ಈಗಿರುವ ಫಾಸಲೆಯ ಜೊತೆಗೆ ಒಟ್ಟು 130 ಲಕ್ಷ ರೂಪಾಯಿ ಲಾಗವಡು ತಗಲುವ ಇನ್ನೂ 259¼ ಮೈಲಿ ಫಾಸಲೆ ರೈಲ್ವೆ ಹಾಕುವುದಕ್ಕೆ ಏರ್ಪಾಡನ್ನು ಮುಂಜೂರು ಮಾಡಲಾಯಿತು.

ಬೇರೆ ಬೇರೆ ತರಹೆ ಗೇಜುಗಳುಳ್ಳ 259 ಮೈಲಿ ಫಾಸಲೆ ರೈಲ್ವೆಗಳನ್ನು ಹಾಕತಕ್ಕ ಬಗ್ಗೆ, 110 ಲಕ್ಷ ರೂಪಾಯಿ ತಗಲುವ ಅಂದಾಜುಗಳನ್ನು ಮಂಜೂರಾದ ಪಟ್ಟಿಗೆ ದಾಖಿಲ್ಮಾಡಲಾಯಿತು. 30.69 ಮೈಲಿ ರಸ್ತೆಗಾಗಿ 12.72 ಲಕ್ಷ ರೂಪಾಯಿ ಲಾಗವಡು ಬೀಳುವ ಅಂದಾಜುಳ್ಳ ಬೆಂಗಳೂರು ಹೊಸೂರು ರೈಲಿಗಾಗಿ ಒಂದು ಏರ್ಪಾಡು ಇನ್ನೂ ರೈಲ್ವೇ ಬೋರ್ಡಿನವರ ಇತ್ಯರ್ಥದಲ್ಲಿರುತ್ತದೆ. 94 ಲಕ್ಷ ರೂಪಾಯಿ ಲಾಗವಡಿನ ಅಂದಾಜಿನಮೇಲೆ ಬೇರೆ 146 ಮೈಲಿ ಫಾಸಲೆಯ ರಸ್ತೆಗಳನ್ನು ಹಾಕುವುದಕ್ಕಾಗಿ ಕಾಂಗಾರಿ ಏರ್ಪಾಟುಗಳು ಸಿದ್ಧವಾಗಿವೆ. ಇವುಗಳಿಗಾಗಿ ಹಣವನ್ನು ಹೇಗೆ ಒದಗಿಸಬೇಕು? ಇವುಗಳಿಗೆ ಯಾವರೀತಿ ಕಾಂಗಾರಿ ಮಾಡಿಸಿ ಅವುಗಳನ್ನು ಆಡಳಿತದಲ್ಲಿಟ್ಟುಕೊಳ್ಳಬೇಕು? ಎಂಬ ವಿಷಯಗಳು ಪರ್ಯಾಲೋಚನೆಯಲ್ಲಿರುತ್ತವೆ. ಶಿವಮೊಗ್ಗಾ ಡಿಸ್ಟ್ರಿಕ್ಟಿನ ರೈಲ್ವೆ ಶಾಖೆಗಳಿಗಾಗಿಯೂ, ಹೆಬ್ಬೆ ಮತ್ತು ಲಾಕನಕೋಟೆ ಟ್ರಾಂವೇಗಳಿಗಾಗಿಯೂ, ಅಳತೆಯ ಕೆಲಸಗಳನ್ನು ಕೈಗೊಳ್ಳಲು ತಕ್ಕ ತರಬೂವನ್ನು ಮಾಡುತ್ತಲಿದೆ

ನಮ್ಮ ದೇಶದ ರೈಲ್ವೆ ಮಾರ್ಗಗಳನ್ನು, ಸುತ್ತಲೂ ಇರುವ ಬ್ರಿಟಿಷ್ ಇಂಡಿಯಾದೇಶದ ಭಾಗಗಳಲ್ಲಿನ ಮುಖ್ಯಮುಖ್ಯವಾದ ಸ್ಥಳಗಳಿಗೆ ಸೇರಿಸುವುದಕ್ಕಾಗಿ, ಇನ್ನೂ ಮೂರು ರೈಲ್ವೇ ರಸ್ತೆಗಳ ವಿಷಯವಾಗಿ ಮಾತುಕತೆಗಳನ್ನು ನಡಿಸುತ್ತಲಿದೆ. ಈ ಮೂರು ರಸ್ತೆಗಳು ಯಾವುವೆಂದರೆ— ನಂಜನಗೂಡಿನಿಂದ ಈರೋಡಿಗೆ ಒಂದು, ಹಾಸನದಿಂದ ಮಂಗಳೂರಿಗೆ ಒಂದು, ಮೈಸೂರಿಂದ ಕೊಡಗುದೇಶದ ಸರಹದ್ದಿಗೆ ಕಾವೇರೀ ನದಿಯ ಎಡದಡದ ಮಾರ್ಗವಾಗಿ ತತ್ಕಾಲಕ್ಕೆ ವೀರರಾಜೇಂದ್ರಪೇಟೆಯ ವರೆಗೆ ಮತ್ತೊಂದು. ಈ ರಸ್ತೆಗಳನ್ನು ಜಾಗ್ರತೆಯಾಗಿ ಹಾಕಿಸುವುದು ಪರಮಾವಶ್ಯವೆಂದು, ಅದರಲ್ಲಿಯೂ ಮೊದಲನೆಯದನ್ನು ಹಾಕಿಸುವುದು ಅತ್ಯವಶ್ಯವೆಂದು, ಶ್ರೀಮನ್ಮಹಾರಾಜರವರ ಸರ್ಕಾರದವರು ಎಣಿಸಿರುತ್ತಾರೆ.

ಮೈಸೂರಿಂದ ಅರಸೀಕೆರೆಗೆ ರೈಲ್ ಹಾಕುವ ಕೆಲಸವನ್ನು 1913 ನೆಯ ನವೆಂಬರ್ ಮಾಹೆಯಲ್ಲಿ ಪ್ರಾರಂಭಿಸಲಾಯಿತು. ಸದರಿ ಕಾಂಗಾರಿಯು ಈಗ ತುಂಬಾ ಮುತವರ್ಜಿಯಿಂದ ಜರಗುತ್ತಲಿದೆ. ತರೀಕೆರೆ-ಯಲಹಳ್ಳಿ ಟ್ರಾಂವೆಯ ಪೈಕಿ ತರೀಕೆರೆ ಲಕ್ಕವಳ್ಳಿ ಭಾಗವನ್ನು ಆಮದು ರಸ್ತೆಗಾಗಿ ಪ್ರಾರಂಭಿಸಲಾಗಿರುತ್ತದೆ. ಆದರೆ ಲಕ್ಕವಳ್ಳಿಗೆ ಆಚೆ ಮುಂದೆ ಕಾಂಗಾರಿಯನ್ನು ನಡಿಸುವುದಕ್ಕೆ ಆ ಪ್ರದೇಶದಲ್ಲಿ ಪ್ಲೇಗ್ ವ್ಯಾಧಿ ಹರಡಿಕೊಂಡಿದ್ದಕಾರಣದ ನಿಮಿತ್ತ ಸುಸ್ತಿಯಾಗಿರುತ್ತದೆ. ಬೆಂಗಳೂರಿಗೂ ಯಲಹಂಕಕ್ಕೂ ಮಧ್ಯದಲ್ಲಿ ಹಾಕಬೇಕಾದ ಬೆಂಗಳೂರು ಚಿಕ್ಕಬಳ್ಳಾಪುರದ ಲೈಟ್ ರೈಲ್ವೆ ಕಾಂಗಾರಿ ಕೆಲಸವನ್ನು ಮದರಾಸ್ ಮತ್ತು ಸದರ್ನ್ ಮರಾಟಾ ರೈಲ್ವೆ ಕಂಪೆನಿಯ ಮೂಲಕ ನಡಿಸಬೇಕಾಗಿರುತ್ತದೆ. ಅದಕ್ಕಾಗಿ ಬೇಕಾದ ಅಂದಾಜುಗಳು ತಯಾರಾಗುತ್ತಲಿವೆ. ಯಲಹಂಕ-ದೇವನಹಳ್ಳಿ ಭಾಗದ ಮಾರ್ಗವನ್ನು ಈಚೆಗೆ ಸಾಮಾನುಗಳ ಆಮದು ರಸ್ತೆಗಾಗಿ ಬಿಡಲು ಪ್ರಾರಂಭಿಸಲಾಯಿತು. ಉಳಿದ ಕಾಂಗಾರಿಯು 1914 ನೆಯ ಡಿಸೆಂಬರ್ ಮಾಹೆ ಆಖೈರೊಳಗಾಗಿ ಪೂರಯಿಸಬಹುದು. ಕೋಲಾರ-ಚಿಕ್ಕಬಳ್ಳಾಪುರ ರೈಲ್ವೆ ಕಾಂಗಾರಿಗಾಗಿ ಈಚೆಗೆ ಇಂಡಿಯಾ ಸರ್ಕಾರದವರಿಂದ ಮಂಜೂರಾತಿಯು ಬಂತು. ಸದರಿ ಮಾರ್ಗದ ಕಾಂಗಾರಿಯನ್ನು ಪ್ರಾರಂಭಿಸುವುದಕ್ಕೆ ತಕ್ಕ ಏರ್ಪಾಟುಗಳನ್ನು ಮಾಡುತ್ತಲಿದೆ. ಚಿಕ್ಕ ಜಾಜೂರು-ಚಿತ್ರದುರ್ಗದ ರೈಲ್ವೆ ಕಾಂಗಾರಿ ಕ್ರಮವನ್ನೂ ಇಂಡಿಯಾ ಸರ್ಕಾರದವರು ಮಂಜೂರು ಮಾಡಿರುತ್ತಾರೆ. ಈ ಕಾಂಗಾರಿಗೂ ಮತ್ತು ಕಡೂರು-ಚಿಕ್ಕಮಗಳೂರು, ಚಿಕ್ಕಮಗಳೂರು-ಹಾಸನ, ರೈಲ್ವೆಗಳ ಕಾಂಗಾರಿಗಳಿಗೂ ಹಣವನ್ನು ಒದಗಿಸುವ ವಿಚಾರವು ಪರ್ಯಾಲೋಚನೆಯಲ್ಲಿರುತ್ತದೆ.

ಸ್ಟೇಟ್ ರೈಲ್ವೆ ಲೈನುಗಳನ್ನು ನಡಿಸುವದಕ್ಕಾಗಿ, ಸರಿಯಾದ ಸಾಧನಗಳಿಂದ ಕೂಡಿದ ಲೋಕೋ, ಟ್ರಾಫಿಕ್, ವೇಸ್ ಮತ್ತು ವರ್ಕಿಂಗ್ ಇಲಾಖೆಗಳನ್ನು ಸಿದ್ಧಪಡಿಸಿಕೊಳ್ಳಲು ಏರ್ಪಾಡುಗಳನ್ನು ಮಾಡುತ್ತಿರಲಾಗಿದೆ.

ಮದರಾಸ್ ಮತ್ತು ಸದರ್ನ್ ಮರಾಟಾ ರೈಲ್ವೇ ಕಂಪೆನಿಯವರ ಮೂಲಕ ಕೆಲಸ ನಡೆಯುತ್ತಿರುವ, ಇದುವರೆಗೆ ಹಾಕಿರುವ ಸ್ಟೇಟ್ ರೈಯಿಲ್ವೆಗಳಿಗಾಗಿ, ಬಂಡವಾಳದ ರೂಪವಾಗಿ ಇನ್ನೂ ಹೆಚ್ಚು ಲಾಗವಡು ಹಾಕಲಾಯಿತು. 1913-14 ನೆಯ ಸಾಲಿನ ಆಖೈರಿಗೆ ಒಟ್ಟು 2,56,00,000 ರೂಪಾಯಿಗಳ ಲಾಗವಡು ತಗಲಿರುತ್ತದೆ. 1907-08 ನೆಯ ಸಾಲಿನ ವರೆಗೆ ಈ ಮಾರ್ಗಗಳಿಂದ ಬಂದ ನಿವ್ವಳ ಉತ್ಪತ್ತಿ ಮೊಬಲಗು, ಬಡ್ಡಿ ಮೊಬಲಗನ್ನು ಕೊಡುವುದಕ್ಕೇ ಸಾಲದುದಾಗಿತ್ತು. ಆಕಾಲದ ವರೆಗೆ ನಡಿಸಿದ ಕೆಲಸದ ನಿವ್ವಳ ಫಲಿತಾಂಶವು 65 ಲಕ್ಷ ರೂಪಾಯಿ ಕಡಮೆಯಾದುದಾಗಿತ್ತು. ಆದರೆ 1907-08 ರಿಂದೀಚೆಗೆ ಉತ್ಪತ್ತಿಯು ಹೆಚ್ಚಿ, ಹಾಗೆ ಕಡಮೆಯಾದ ಮೊಬಲಗು 50 ಲಕ್ಷ ರೂಪಾಯಿನವರೆಗೆ ಇಳಿಯಿತು.

ಜಿಯಾಲಾಜಿಕಲ್ ಮತ್ತು ಗಣಿ ಇಲಾಖೆಗಳು.

1912-13 ನೆಯ ಸಾಲಿನಲ್ಲಿ 3,23,78,944 ರೂಪಾಯಿ ಬೆಲೆಬಾಳುವ 5,61,270 ಔನ್ಸುಗಳ ತೂಕದಷ್ಟು ಚಿನ್ನವು ಗಣಿಯಿಂದ ತೆಗೆಯಲ್ಪಟ್ಟಿರುವಲ್ಲಿ, 1913-14 ನೆ ಸಾಲಿನಲ್ಲಿ ಸುಮಾರು 3,22,83,047 ರೂಪಾಯಿ ಬೆಲೆಬಾಳುವ 5,59,640 ಔನ್ಸುಗಳ ತೂಕದಷ್ಟು ಚಿನ್ನ ಉತ್ಪತ್ತಿಯಾದುದರಿಂದ, ಈ ವರ್ಷದಲ್ಲಿ 95,897 ರೂಪಾಯಿನ ಬೆಲೆಯ ಚಿನ್ನವು ಕಮ್ಮಿಯಾಗಿ ಉತ್ಪತ್ತಿಯಾದಂತೆ ಆಯಿತು. ಇದರಿಂದ ಸರ್ಕಾರಕ್ಕೆ ಸುಮಾರು 18,91,486 ರೂಪಾಯಿನ ರಾಜಾಯವು ದೊರಕಿತು. 1912-13 ನೆಯ ವರ್ಷದಲ್ಲಿ 18,99,971 ರೂಪಾಯಿ ರಾಜಾಯವು ಬಂದಿರುತ್ತದೆ.

ಲೋಕಲ್ ಸೆಲ್ಫ್ ಗೌರ್ನಮೆಂಟ್.

ಮ್ಯುನಿಸಿಪಲ್ ಫಂಡುಗಳು:

ಈ ವರ್ಷ ಮ್ಯುನಿಸಿಪಲ್ ಫಂಡುಗಳ ಬಾಬಿನಲ್ಲಿ ಆದಾಯವು ಸುಮಾರು 10,97,000 ರೂಪಾಯಿಯೂ, ವ್ಯಯವು ಸುಮಾರು 10,01,000 ರೂಪಾಯಿಯೂ ಆಯಿತು. ಈ ವ್ಯಯದ ಬಾಬತು ಮೊಬಲಗಿನಲ್ಲಿ 2,87,000 ರೂಪಾಯಿಗಳನ್ನು ಮರಹಮ್ಮತ್ ಕಾಂಗಾರಿಗಳಿಗಾಗಿಯೂ, 2,31,000 ರೂಪಾಯಿಗಳನ್ನು ಕನ್ಸರ್ವೆನ್ಸಿಗಾಗಿಯೂ, ಉಳಿದದ್ದನ್ನು ಇತರ ಬಾಬುಗಳಿಗಾಗಿಯೂ ಖರ್ಚು ಮಾಡಲಾಯಿತು.

ಎರಡು ಲಕ್ಷ ರೂಪಾಯಿಗಿಂತ ಹೆಚ್ಚು ಖರ್ಚು ತಗಲಬಹುದೆಂದು ಅಂದಾಜಾ ಕಟ್ಟಿರತಕ್ಕ ದಾವಣಗೆರೆ ನಗರದ ನೀರಿನ ಸರಬರಾಯಿ ಏರ್ಪಾಡಿಗೆ ದ್ರವ್ಯವನ್ನು ಕೊಡುವ ವಿಷಯವನ್ನು ಈ ವರ್ಷ ತೃಪ್ತಿಕರವಾಗಿ ವ್ಯವಸ್ಥೆ ಮಾಡಲಾಯಿತು. ಇದಕ್ಕಾಗಿ ಸರ್ಕಾರದವರು 30,008 ರೂಪಾಯಿಗಳಷ್ಟು ಸಹಾಯದ್ರವ್ಯವನ್ನು ಕೊಡುವದಲ್ಲದೆ, ಶಿಬ್ಬಂದಿಯ ಮತ್ತು ಯಂತ್ರಸಾಮಗ್ರಿಗಳ ಖರ್ಚನ್ನು ವಹಿಸಿ ಕಾಂಗಾರಿಯನ್ನು ನಡಿಸುವಂತೆ ಒಪ್ಪಿರುತ್ತಾರೆ. ಇದಲ್ಲದೆ ಚಿತ್ರದುರ್ಗದ ನೀರಿನ ಸರಬರಾಯಿಗಾಗಿ ಜ್ಯೂಯೆಲ್ ಫಿಲ್ಟರುಗಳನ್ನು ಸ್ಥಾಪಿಸುವುದಕ್ಕೆ ತಗಲುವ ಅರ್ಧ ಖರ್ಚನ್ನೂ, ಕೋಲಾರ, ಶಿವಮೊಗ್ಗ ನೀರಿನ ಸರಬರಾಯಿ ಕಾಂಗಾರಿಗಳಿಗೆ ಅತ್ಯವಶ್ಯಕವಾಗಿರುವ ಆಬಾದನ್ನು ಮಾಡುವುದಕ್ಕೆ ಬೇಕಾದ ಖರ್ಚಿನಲ್ಲಿ ಅರ್ಧಪಾಲನ್ನೂ, ಸರ್ಕಾರದವರು ಗ್ರಾಂಟ್ ಕೊಡಲು ಮಂಜೂರ್ಮಾಡಿರುತ್ತಾರೆ. ದೊಡ್ಡಬಳ್ಳಾಪುರಕ್ಕೆ ನೀರನ್ನು ಸರಬರಾಯಿ ಮಾಡಬೇಕೆಂಬ ಅಂಶವು ಪರ್ಯಾಲೋಚನೆಯಲ್ಲಿದೆ. ಈ ಏರ್ಪಾಡಿಗೆ ಮುಟ್ಟುವ ಖರ್ಚಿಗಾಗಿ ಈ ನಗರನಿವಾಸಿಗಳು 18,000 ರೂಪಾಯಿಗಳಷ್ಟು ಚಂದಾ ಕೊಡಲು ಒಪ್ಪಿರುವದು ಶ್ಲಾಘಾರ್ಹವಾಗಿದೆ. ಈ ಪೈಕಿ 11,000 ರೂಪಾಯಿಗಳು ಪಾವತಿಯಾಗಿವೆ.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟು ಬೋರ್ಡು.

ಭೂಮಿಯೊಳಗೆ ನಲ್ಲಿಮೂಲಕ ಚರಂಡಿಯ ನೀರನ್ನು ತೆಗೆದುಕೊಂಡು ಹೋಗಿ ಆಚೆಗೆ ಬಿಡುವುದಕ್ಕೆ ತಕ್ಕ ಕಾಂಗಾರಿಗಳನ್ನು ಈ ವರ್ಷವೂ ನಡೆಸಲಾಯಿತು. 50677 ರೂಪಾಯಿಗಳನ್ನು ಖರ್ಚುಮಾಡಿ 69 ಸ್ವತ್ತುಗಳನ್ನು ಸರ್ಕಾರಕ್ಕೆ ತೆಗೆದುಕೊಳ್ಳಲಾಯಿತು. ಅಂತು ಬೋರ್ಡಿನಿಂದ 2,93,000 ರೂಪಾಯಿ ಖರ್ಚಾಯಿತು.

ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಕಮಿಟಿ.

ಬೆಂಗಳೂರು ನಗರವನ್ನು ಆಬಾದು ಮಾಡಿ ಮುಂದೆ ಬಡಾವಣೆಮಾಡುವುದಕ್ಕೆ ಬೇಕಾದ ಆವಶ್ಯಕತೆಗಳನ್ನು ಪರಿಶೀಲನೆ ಮಾಡುವುದಕ್ಕಾಗಿ ಇಂಜನಿಯರನ್ನೂ ಇತರ ಆಫೀಸರುಗಳನ್ನೂ ಪ್ರಮುಖರಾದ ಖಾಸಗಿ ಜನರನ್ನೂ ಸೇರಿಸಿ, ರಾಜಸಭಾಭೂಷಣ ದಿವಾನ್ ಬಹದ್ದೂರು ಮಿ|| ಕೆ. ಪಿ. ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಗೆ ಒಳಪಡಿಸಿ, ಒಂದು ಕಮಿಟಿಯನ್ನು ವಿಧಾಯಕ ಮಾಡಿದೆ. ಈ ಕಮಿಟಿಯವರು ಅನೇಕಸಾರಿ ಸೇರಿ, ಮುಂದೆ ಮೂರು ವರ್ಷಗಳೊಳಗಾಗಿ ನಡೆಯಬೇಕಾದ ಆಬಾದು ಕಾಂಗಾರಿಗಳ ವಿಚಾರವಾಗಿ ಒಂದು ಕಚ್ಚಾ ಏರ್ಪಾಡನ್ನು ತಯಾರ್ಮಾಡಿರುತ್ತಾರೆ. ಈ ವಿಷಯದಲ್ಲಿ ಮೊದಲು ಮಾಡಬೇಕಾದ ಕಾರ್ಯಗಳನ್ನು ನಡಿಸುವುದಕ್ಕಾಗಿ ಸರ್ಕಾರದವರು ಕಮಿಟಿಯವರಿಗೆ 20,000 ರೂಪಾಯಿಗಳು ಗ್ರಾಂಟನ್ನು ಖರ್ಚುಮಾಡುವುದಕ್ಕಾಗಿ ಕೊಟ್ಟಿರುತ್ತಾರೆ.

ಲೋಕಲ್ ಫಂಡ್ಸ್ ಜನರಲ್.

ಈ ಬಾಬಿನಲ್ಲಿ 2,23,000 ರೂಪಾಯಿ ಜಮಾ ಬಂದಿತು ಸಾಲ್ ಷುರುವಿನಲ್ಲಿದ್ದ ಶಿಲ್ಕುಮೊಬಲಗು 2,56,901 ರೂಪಾಯಿ ಸೇರಿ, ಒಟ್ಟು ಜಮಾ 4,79,901 ರೂಪಾಯಿ ಆಯಿತು. ಈ ಸಾಲಿನಲ್ಲಿ 1,70,700 ರೂಪಾಯಿ ವರೆಗೆ ಖರ್ಚಾಗಿ, ಸಾಲಾಖೈರಿನಲ್ಲಿ 3,09,201 ರೂಪಾಯಿ ಶಿಲ್ಕು ನಿಂತಿತು.

ಡಿಸ್ಟ್ರಿಕ್ಟ್ ಫಂಡುಗಳು.

1913-14 ನೆಯ ಸಾಲಿನಲ್ಲಿ ಡಿಸ್ಟ್ರಿಕ್ಟ್ ಫಂಡಿನ ಎಲ್ಲಾ ಬಾಬುಗಳಲ್ಲಿಯೂ ಸೇರಿ ಸ್ವಲ್ಪಹೆಚ್ಚು ಕಡಿಮೆಯಾಗಿ 9,28,387 ರೂಪಾಯಿ ಜಮಾ ಬಂದು, ಷುರು ಶಿಲ್ಕು 6,56,497 ರೂಪಾಯಿ ಸೇರಿ, ಒಟ್ಟು ಜಮೆ 15,84,884 ರೂಪಾಯಿ ಆಯಿತು. ಒಟ್ಟು ಸುಮಾರು 11,42,674 ರೂಪಾಯಿ ಖರ್ಚಾಗಿ, ಸಾಲಾಖೈರಿನಲ್ಲಿ 4,42,210 ರೂಪಾಯಿ ಶಿಲ್ಕುಳಿಯಿತು. 4,77,750 ರೂಪಾಯಿ ಮರಹಮ್ಮತ್ ಕಾಮಗಾರಿಗಳಿಗೂ, 2,60,924 ರೂಪಾಯಿಗಳು ಪ್ರಜಾರೋಗ್ಯ, ನೆಮ್ಮದಿ ಮತ್ತು ಅನುಕೂಲತೆಯ ಕೆಲಸಗಳಿಗಾಗಿಯೂ, 3,02,603 ರೂಪಾಯಿ ರೈಲ್ವೆಯನ್ನು ಹಾಕುವುದಕ್ಕೂ ಖರ್ಚಾಯಿತು. ಶಿವಮೊಗ್ಗಾ ಡಿಸ್ಟ್ರಿಕ್ಟಿನ ಎಲ್ಲಾ ಲೋಕಲ್ ಬೋರ್ಡುಗಳನ್ನೂ ಈ ಸಾಲಿನಲ್ಲಿ ಪುನಃ ಏರ್ಪಡಿಸಿದ್ದಲ್ಲದೆ, ಸರ್ಕಾರದವರ ಮಂಜೂರಾತಿಯನಿಶಿ ರೈಲ್ವೆಯ ಸೆಸ್ಸನ್ನು ಡಿಸ್ಟ್ರಿಕ್ಟ್‌ಬೋರ್ಡಿನವರು ವಸೂಲ್ಮಾಡುವುದಕ್ಕೆ ಅವರಿಗೆ ಅಧಿಕಾರವನ್ನು ಕೊಡುವಹಾಗೆ 1902ನೆಯ ಇಸವಿಯ 2ನೆಯ ನಂಬರಿನ ಲೋಕಲ್ ಬೋರ್ಡ್ ರೆಗ್ಯುಲೇಷನನ್ನು ತಿದ್ದುಪಾಟು ಮಾಡಲಾಯಿತು.

ಸರ್ಕಾರೀ ಛಾಪಾಖಾನೆ.

ಸೆಂಟ್ರಲ್ ಛಾಪಾಖಾನೆಯಲ್ಲಿ ಹಿಂದಣವರ್ಷ ಕೆಲಸ ನಡೆದದ್ದಕ್ಕಿಂತ ಈ ವರ್ಷ ಕಡಿಮೆಯಾಗಿ ಕೆಲಸ ನಡೆಯಿತು. ಈ ಛಾಪಾಖಾನೆಯ ಖರ್ಚು ಹಿಂದಣವರ್ಷ 1,06,266 ರೂಪಾಯಿ ಖರ್ಚಾಗಿರುವಲ್ಲಿ, ಈ ವರ್ಷ 1,05,485 ರೂಪಾಯಿ ಆಯಿತು. ಹೀಗೆ ಕೆಲಸವೂ ಖರ್ಚೂ ಕಡಮೆಯಾದದ್ದಕ್ಕೆ, ಕೆಲವು ಭಾಗ ಕೆಲಸವನ್ನು ಮೈಸೂರಿನ ಬ್ರಾಂಚ್ ಪ್ರೆಸ್ಸಿಗೆ ಕಳುಹಿಸಿದ್ದೂ, ಬೇರೆಬೇರೆ ಇಲಾಖೆಯವರು ಮಾಡಿಸಿದ ಮುದ್ರಣದ ಕೆಲಸವು ಒಟ್ಟಿನಮೇಲೆ ಕಡಿಮೆಯಾಗಿದ್ದದ್ದೂ, ಮತ್ತು ಕೆಲವು ಮುದ್ರಣದ ಕೆಲಸಗಳನ್ನು ಖಾಸಗಿ ಛಾಪಾಖಾನೆಗಳಲ್ಲಿ ನಡೆಯಿಸಿದ್ದೂ, ಕಾರಣಗಳಾಗಿರುತ್ತವೆ.

ಸರ್ಕಾರೀ ಛಾಪಾಖಾನೆಯಲ್ಲಿ ನಡೆಯುವ ಕೆಲಸವನ್ನು ಸಾಧ್ಯವಾದರೆ, ಇನ್ನೂ ಕಡಿಮೆಮಾಡಬೇಕೆಂಬ ವಿಷಯವು ಪರ್ಯಾಲೋಚನೆಯಲ್ಲಿದೆ.

ರಿಜಿಸ್ಟರ್ಮಾಡಲ್ಪಟ್ಟ ಪುಸ್ತಕಗಳ ಮತ್ತು ಕಾಲಕಾಲಕ್ಕೆ ಪ್ರಕಟಿಸುವ ಮಾಸಪತ್ರಿಕೆಗಳ ಸಂಖ್ಯೆಯು ಹಿಂದಿನವರ್ಷ 128 ಇದ್ದದ್ದಕ್ಕೆ, ಈ ವರ್ಷ 117 ಇದ್ದವು.

ಪ್ರಾಚೀನ ಲೇಖನಾನ್ವೇಷಣದ ಇಲಾಖೆ.

ಮಿ|| ರೈಸ್‌ರವರು ಬರೆದ ಮೈಸೂರು ಗೆಜೆಟಿಯರ್ ಎಂಬ ಪುಸ್ತಕವನ್ನು ಚಾಲ್ತೀಕಾಲದವರೆಗೆ ಸಮಗ್ರವಾಗಿರುವಂತೆ ಮಾಡುವುದಕ್ಕಾಗಿ ಅದನ್ನು ಪುನರ್ವಿಮರ್ಶೆ ಮಾಡಲು ತಕ್ಕ ಏರ್ಪಾಟನ್ನು ಮಾಡಿ ಇದೆ. ಪ್ರಾಚೀನ ಲೇಖನಾನ್ವೇಷಣದ ಛಾರ್ಜಿನ

[redacted]

ರ್ಥರಾದ ಮೆಂಬರುಗಳುಳ್ಳ ಒಂದು ಆರ್‌ಬಿಟ್ರೇಷನ್ ಕಮಿಟಿಗೆ ವಿಚಾರಣೆಗಾಗಿ ಕಳುಹಿಸತಕ್ಕದ್ದೆಂದು ನಿರ್ಣಯಿಸಿದರು. ಸದರಿ ಕಮಿಟಿಯವರು ಈ ವಿಷಯವನ್ನು ಸುಮಾರು ಹತ್ತು ತಿಂಗಳ ವರೆಗೂ ಕ್ರಮವಾಗಿ ವಿಚಾರಣೆಮಾಡಿ, ಕಳೆದ ಮೇ ತಿಂಗಳಲ್ಲಿ ತಮ್ಮ ತೀರ್ಮಾನವನ್ನು ಇಂಡಿಯಾ ಸರ್ಕಾರದವರಿಗೆ ಕಳುಹಿಸಿಕೊಟ್ಟರು. ಘನತೆಯನ್ನೈದಿದ ಶ್ರೀಮನ್ ಮಹಾರಾಜರವರ ಸರ್ಕಾರದವರೂ, ಈ ಸಂಸ್ಥಾನದಲ್ಲಿರುವ ಕಾವೇರೀ ತೀರದ ನೀರಾವರೀ ಪ್ರದೇಶವನ್ನು ಅಭಿವೃದ್ಧಿಗೆ ತರುವುದರಲ್ಲಿ ಆಸಕ್ತರಾದ ಅನೇಕ ಜನರೂ ಸಹ, ತಮ್ಮ ಹಕ್ಕು ಬಾಧ್ಯತೆಗಳು ನ್ಯಾಯಸಮ್ಮತವಾಗಿವೆಯೆಂದು ನಂಬಿರುವುದಲ್ಲದೆ, ಈ ಮುಖ್ಯವಾದ ವಿಷಯದಲ್ಲಿ ಇಂಡಿಯಾ ಸರ್ಕಾರದವರ ತೀರ್ಮಾನವನ್ನು ಅತ್ಯಾಸಕ್ತಿಯಿಂದ ನಿರೀಕ್ಷಿಸುತ್ತಿದ್ದಾರೆ.

ಸಹಜವಾಗಿ ಸಮುದ್ರಕ್ಕೆ ಬಿದ್ದು ವ್ಯರ್ಥವಾಗುತ್ತಿರುವ ಕಾವೇರೀನದಿಯ ಹೆಚ್ಚು ನೀರನ್ನು ತಡೆದು ನಿಲ್ಲಿಸುವುದೇ ಕನ್ನಂಬಾಡಿ ಜಲಾಶಯದ ಏರ್ಪಾಡಿನ ಮುಖ್ಯೋದ್ದೇಶವಾಗಿರುತ್ತದೆ. ಈಗಿರತಕ್ಕ ನಾಲೆಗಳಲ್ಲಿ ಸರ್ವದಾ ನೀರು ಹರಿಯುವದು ಸಂದೇಹಾಸ್ಪದವಾಗಿದೆ. ಜಲಾಶಯದಿಂದ ನೀರನ್ನು ಸರ್ವಕಾಲಗಳಲ್ಲಿಯೂ ಖಂಡಿತವಾಗಿ ಒದಗಿಸುವುದಾದರೆ, ಆ ಪ್ರದೇಶದಲ್ಲಿ ಇದುವರೆಗೆ ಬೆಳೆಯಾಗದೆ ಇದ್ದ ಉತ್ತಮವಾದ ಧ್ರುವಸ್ಯರುಗಳ

[redacted]

ನಡಿಸುವ ಕಾರ್ಯಗಳನ್ನು ತನಿಖೆಯಿಂದ ವಿಚಾರಿಸತಕ್ಕ ಬಗ್ಗೆ ಒಂದು ಸೆಂಟ್ರಲ್ ಕಮಿಟಿಯನ್ನೂ ಏರ್ಪಾಡುಮಾಡಿ, ಇವುಗಳಿಗೆ ಬೇಕಾದ ದ್ರವ್ಯವನ್ನೂ ತಕ್ಕಷ್ಟು ಶಿಬ್ಬಂದಿಯನ್ನೂ ಕೊಟ್ಟಿದೆ. ಪ್ರಸಕ್ತ ಸಂವತ್ಸರದಲ್ಲಿ ಸದರೀ ಕ್ರಮವು ಜಾರಿಯಲ್ಲಿದ್ದ ಕೆಲವು ತಿಂಗಳೊಳಗೆ ಈ ಕೆಳಗೆ ನಡಿಸಿದ ಅಭಿವೃದ್ಧಿಕಾರ್ಯಗಳ ಪೈಕಿ, ಸ್ವೇಚ್ಛೆಯಾಗಿ ಬೆಳೆದ ಗಿಡ ಗೆಂಟೆಗಳನ್ನು ತೆಗೆದುಹಾಕಿದ್ದನ್ನೂ, ಕುಡಿಯುವ ನೀರಿನ ಸರಬರಾಯಿಯನ್ನು ಅನುಕೂಲಪಡಿಸಿದ್ದನ್ನೂ, ಅನಾರೋಗ್ಯಕರವಾದ ಗ್ರಾಮಗಳನ್ನು ಬೇರೆ ಕಡೆ ಕಟ್ಟಿಸಿದ್ದನ್ನೂ, ಕೊಯಿನಾ ಉಪಯೋಗವನ್ನು ಜನಗಳ ಬಳಕೆಗೆ ತಂದದ್ದನ್ನೂ, ದೇವಿ ಹಾಕಿಸಿಕೊಳ್ಳುವುದರಿಂದುಂಟಾಗುವ ಪ್ರಯೋಜನವನ್ನು ಪ್ರಚುರಗೊಳಿಸಿದ್ದನ್ನೂ, ದೇಹವನ್ನೂ ಮನೆಗಳನ್ನೂ ಶುಚಿಯಾಗಿ ಇಟ್ಟುಕೊಳ್ಳುವುದಕ್ಕೆ ಸಂಬಂಧಪಟ್ಟ ಆರೋಗ್ಯಸೂತ್ರಗಳನ್ನು ಜನರ ತಿಳುವಳಿಕೆಗೆ ತಂದದ್ದನ್ನೂ ತಿಳಿಸಬಹುದಾಗಿದೆ. ಮಲೇರಿಯಾ ಉಪದ್ರವವನ್ನು ಹರಡುವುದಕ್ಕೆ ಯಾವ ವಿಧವಾದ ಸೊಳ್ಳೆಯು ಕಾರಣವಾಗಿದೆ ಎಂಬುದನ್ನು ಕಂಡುಹಿಡಿಯುವುದಕ್ಕಾಗಿ, ಮಲೇರಿಯಾ ಸರ್ವೆಯನ್ನೂ, ಶೋಧನಾಲಯದಲ್ಲಿ ಪರೀಕ್ಷೆಗಳನ್ನೂ ಮಾಡಲುಪಕ್ರಮಿಸಿದೆ. ಇಂಥ ಸರ್ವೆಯನ್ನೂ ಪರಿಶೋಧನೆಯನ್ನೂ ಮಾಡತಕ್ಕ ವಿಧಾನವನ್ನು ತಿಳಿಸುವುದಕ್ಕೂ, ಜನನ ಮರಣಗಳ ಲೆಕ್ಕವನ್ನಿ

[redacted]

ಸಲು ಸಲಹೆಗಳನ್ನು ಕೊಡುವುದ
ಅನುಭವಶಾಲಿಯಾದ ಒಬ್ಬ ಆ
ಟ್ಟಿಗೆ ನೇಮಿಸಲಾಯಿತು. ದೇವಿ
ರ, ಕಾಂಪೌಂಡರುಗಳ ಸಂಖ್ಯೆಯ
ಏರ್ಪಾಡುಗಳು ನಡೆಯುತ್ತಲಿವೆ.
ದಲ್ಲಿರುವ ಮತ್ತೂ ಊರಿಂದೂರಿಗೆ
ವ ಹೆಚ್ಚು ಡಿಸ್ಪೆನ್ಸರಿಗಳನ್ನೂ, ಆ
ತ್ರೆಗಳನ್ನೂ, ಒದಗಿಸುವ ವಿಷಯ
ಪೂರ್ವಕ ಆಲೋಚಿಸುತ್ತಿದ್ದಾರೆ.
ೂಸದಾಗಿ ಬಂದು ನೆಲಸುವಂತೆ
ಯತ್ನಗಳನ್ನೂ ಮಾಡುತ್ತಲಿದೆ.
ಯವು ಸ್ವಲ್ಪಮಟ್ಟಿಗೆ ಅಭ್ಯೋ
ಮ ಸರ್ಕಾರದವರು ತಿಳಿದು, ವಿ
ಪಿಸುವುದಕ್ಕೂ, ಮುಖ್ಯವಾಗಿ
ಬಂಧಪಟ್ಟ ಸ್ಥಳೀಯ ಕೈಗಾರಿಕೆ
ಮೂಲಕ ಕಸಬುಗಳನ್ನು ಹೆಚ್ಚಿ
ರಸ್ತೆಗಳನ್ನು ಹೆಚ್ಚಿಸುವುದಕ್ಕೂ
ಗಳನ್ನು ವೃದ್ಧಿಗೊಳಿಸುವುದಕ್ಕೂ
ನ್ನು ಸರ್ಕಾರದವರು ಮುಂಜೂ

ಯ ಏರ್ಪಾಟು.

ಸದಲ್ಲಿ ಸೂಚಿತವಾದ ಈ ಏರ್ಪಾ
ನೆಯಭಾಗದಲ್ಲಿ ಕೈಗೊಳ್ಳಲಾಯಿ
ರುಗುತ್ತಿದ್ದ ಕೆಲವು ತಿಂಗಳುಗಳಲ್ಲಿ
ರುತ್ತದೆ. ಈ ಭಾಗದಲ್ಲಿ ಕಂಡು
ನ ರಿಪೋರ್ಟುಗಳಿಂದ ತಿಳಿಯಬ
ಂದ ತಿಳಿಯಬಹುದಾಗಿದೆ:—

16,740 ಗ್ರಾಮಗಳ
ಾಗಿರುವ ಗ್ರಾಮಗಳು 11,923
ಗ್ರಾಮಕಮಿಟಿಗಳು 7,440
ಯೋಜನಕ್ಕಾಗಿ ಜನಗ
ಸಮಾಡಲು ಒಪ್ಪಿಕೊಂ
... ... 6,126
ಕೊಂಡಿರುವ ಯಾ ವ
ಸುವ (ಐದು ಡಿಸ್ಟ್ರಿ
... ... 55

ತಿಯು ಸರಿಯಾಗಿರಲಿಲ್ಲವೆಂಬು
ದ ಕಾಲಸ್ಥಿತಿಯು ಸಮರ್ಪಕ
ೀಚಿಸಿದರೆ, ಜನರು ಈ ಏರ್ಪಾ
ತುಂಬಾ ಸಂತೋಷಕರವಾಗಿರು

ಏರ್ಪಾಟಿನಂತೆ, ಗ್ರಾಮಾಭಿವೃ
ವ ಕಾರ್ಯಗಳಿಗೆ ತಗಲುವ ಖ
ಲ್ಲೊಂದು ಭಾಗವನ್ನು ಸರ್ಕಾರ
ಮಾಡಲಾಗಿತ್ತು; ಆದರೆ ಪ್ರಾರಂ
ಿಸಲು ಕಷ್ಟಗಳಿರುತ್ತವೆಯೆಂದು
ಪ್ರಸಕ್ತವರ್ಷಕ್ಕೂ ಚಾಲ್ತಿಸಾಲಿ
ದ್ರವ್ಯವನ್ನು ಅರ್ಧದವರೆಗೆ ಹೆಚ್ಚಿ

ಲದಲ್ಲಿ ಗ್ರಾಮಾಭಿವೃದ್ಧಿ ಕಮಿ
ಯಿ ಲಾಗವಡು ಬೀಳುವ ಶಾಶ್ವ
ರ್ಯಗಳನ್ನು ಕೈಕೊಂಡರು. ಈ
ನ್ನು ಸರ್ಕಾರದವರು ಸಹಾಯ
ರೂಪಾಯಿಗಳನ್ನು ಸಂಬಂಧ
ಮೂಲಕವಾಗಿ, ಯಾ, ಕೆಲಸ
ಸಹಾಯಮಾಡಿದರು.

ಏರ್ಪಾಟು ಈಗಾಗಲೇ ಜನಗಳ ವಿಶ್ವಾಸಕ್ಕೆ ಪಾತ್ರವಾಗಿರುತ್ತದೆಂಬುವದಕ್ಕೆ ಚಿಹ್ನೆಗಳು ಕಾಣಬರುತ್ತಲಿವೆಯೆಂಬದಾಗಿ ರೆವಿನ್ಯೂ ಕಮಿಷನರವರು ತಿಳಿಸಿರುತ್ತಾರೆ. ಈ ಏರ್ಪಾಡು ಇಷ್ಟುಬೇಗ ಜಾರಿಗೆ ಬರುವುದಕ್ಕೆ ನಮ್ಮ ಡಿಸ್ಟ್ರಿಕ್ಟ್ ರೆವಿನ್ಯೂ ಆಫೀಸರುಗಳ ಉತ್ಸಾಹವೂ ಆದರವೂ ಕಾರಣಗಳಾಗಿವೆ. ಇದನ್ನು ಸರಿಯಾಗಿ ಜರುಗಿಸಿದಲ್ಲಿ ಜನಗಳಲ್ಲಿ ತಿಳುವಳಿಕೆ ಹೆಚ್ಚುವುದಕ್ಕೂ, ಗ್ರಾಮಗಳ ಭಾಗ್ಯೋನ್ನತಿಯನ್ನೂ ಅನುಕೂಲತೆಗಳನ್ನೂ ವೃದ್ಧಿಪಡಿಸುವುದಕ್ಕಾಗಿ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡುವಂತೆ ಪ್ರೋತ್ಸಾಹಿಸುವುದಕ್ಕೂ, ಈ ಬಗೆಯ ಕೆಲಸಗಳು ಸಾಧಕಗಳಾಗಲೇಬೇಕಾ

[3 ನೆಯ ಪುಟದಿಂದ ಮುಂದೆ ನಡೆದುದು.]

[illegible]

(Turbine) [illegible]

[illegible]

ಸರ್ಕಾರೀ ಛಾಪಾಖಾನೆಯಲ್ಲಿ ನಡೆಯುವ ಕೆಲಸವನ್ನು ಸಾಧ್ಯವಾದರೆ, ಇನ್ನೂ ಕಡಿಮೆಮಾಡಬೇಕೆಂಬ ವಿಷಯವು ಪರ್ಯಾಲೋಚನೆಯಲ್ಲಿದೆ.

ರಿಜಿಸ್ಟರ್ಮಾಡಲ್ಪಟ್ಟ ಪುಸ್ತಕಗಳ ಮತ್ತು ಕಾಲಕಾಲಕ್ಕೆ ಪ್ರಕಟಿಸುವ ಮಾಸಪತ್ರಿಕೆಗಳ ಸಂಖ್ಯೆಯು ಹಿಂದಿನವರ್ಷ 128 ಇದ್ದದ್ದಕ್ಕೆ, ಈ ವರ್ಷ 117 ಇದ್ದವು.

ಪ್ರಾಚೀನ ಲೇಖನಾನ್ವೇಷಣದ ಇಲಾಖೆ.

ಮಿ|| ರೈಸ್‌ರವರು ಬರೆದ ಮೈಸೂರು ಗೆಜಿಟಿಯರ್ ಎಂಬ ಪುಸ್ತಕವನ್ನು ಚಾಲ್ತೀಕಾಲದವರೆಗೆ ಸಮಗ್ರವಾಗಿರುವಂತೆ ಮಾಡುವುದಕ್ಕಾಗಿ ಅದನ್ನು ಪುನರ್ವಿಮರ್ಶೆ ಮಾಡಲು ತಕ್ಕ ಏರ್ಪಾಟನ್ನು ಮಾಡಿ ಇದೆ. ಪ್ರಾಚೀನ ಲೇಖನಾನ್ವೇಷಣದ ಛಾರ್ಜಿನ

ದವರ್ಷ ಇಂಡಿಯಾ ಸರ್ಕಾರದವರು, ಈ ವಿಷಯವನ್ನು [illegible] ರ್ಥರಾದ ಮೆಂಬರುಗಳುಳ್ಳ, ಒಂದು ಆರ್ಬಿಟ್ರೇಷನ್ ಕಮಿಟಿಗೆ ವಿಚಾರಣೆಗಾಗಿ ಕಳುಹಿಸತಕ್ಕದ್ದೆಂದು ನಿರ್ಣಯಿಸಿದರು. ಸದರಿ ಕಮಿಟಿಯವರು ಈ ವಿಷಯವನ್ನು ಸುಮಾರು ಹತ್ತು ತಿಂಗಳ ವರೆಗೂ ಕ್ರಮವಾಗಿ ವಿಚಾರಣೆಮಾಡಿ, ಕಳೆದ ಮೇ ತಿಂಗಳಲ್ಲಿ ತಮ್ಮ ತೀರ್ಮಾನವನ್ನು ಇಂಡಿಯಾ ಸರ್ಕಾರದವರಿಗೆ ಕಳುಹಿಸಿಕೊಟ್ಟರು. ಘನತೆಯನ್ನೈದಿದ ಶ್ರೀಮತ್ ಮಹಾರಾಜರವರ ಸರ್ಕಾರದವರೂ, ಈ ಸಂಸ್ಥಾನದಲ್ಲಿರುವ ಕಾವೇರೀ ತೀರದ ನೀರಾವರೀ ಪ್ರದೇಶವನ್ನು ಅಭಿವೃದ್ಧಿಗೆ ತರುವುದರಲ್ಲಿ ಆಸಕ್ತರಾದ ಅನೇಕ ಜನರೂ ಸಹ, ತಮ್ಮ ಹಕ್ಕು ಬಾಧ್ಯತೆಗಳು ನ್ಯಾಯವನ್ನು ತವಾಗಿವೆಯೆಂದು ನಂಬಿರುವುದಲ್ಲದೆ, ಈ ಮುಖ್ಯವಾದ ವಿಷಯದಲ್ಲಿ ಇಂಡಿಯಾ ಸರ್ಕಾರದವರ ತೀರ್ಮಾನವನ್ನು ಆತ್ಮಾಸಕ್ತಿಯಿಂದ ನಿರೀಕ್ಷಿಸುತ್ತಿದ್ದಾರೆ.

ಸಹಜವಾಗಿ ಸಮುದ್ರಕ್ಕೆ ಬಿದ್ದು ವ್ಯರ್ಥವಾಗುತ್ತಿರುವ ಕಾವೇರೀನದಿಯ ಹೆಚ್ಚು ನೀರನ್ನು ತಡೆದು ನಿಲ್ಲಿಸುವುದೇ ಕನ್ನಂಬಾಡಿ ಜಲಾಶಯದ ಏರ್ಪಾಡಿನ ಮುಖ್ಯೋದ್ದೇಶವಾಗಿರುತ್ತದೆ. ಈಗಿರತಕ್ಕ ನಾಲೆಗಳಲ್ಲಿ ಸರ್ವದಾ ನೀರು ಹರಿಯುವುದು ಸಂದೇಹಾಸ್ಪದವಾಗಿದೆ. ಜಲಾಶಯದಿಂದ ನೀರನ್ನು ಸರ್ವಕಾಲಗಳಲ್ಲಿಯೂ ಖಂಡಿತವಾಗಿ ಒದಗಿಸುವುದಾದರೆ, ಆ ಪ್ರದೇಶದಲ್ಲಿ ಇದುವರೆಗೆ ಬೆಳೆಯಾಗದೆ ಇದ್ದ ಉತ್ತಮವಾದ ಧಾನ್ಯಗಳ

[illegible] ಸ್ಥಳೀಯ ಕಮಿಟಿಯನ್ನೂ, ಅವುಗಳು ನಡಿಸುವ ಕಾರ್ಯಗಳನ್ನು ತನಿಖೆಯಿಂದ ವಿಚಾರಿಸತಕ್ಕ ಬಗ್ಗೆ ಒಂದು ಸೆಂಟ್ರಲ್ ಕಮಿಟಿಯನ್ನೂ ಏರ್ಪಾಡುಮಾಡಿ, ಇವುಗಳಿಗೆ ಬೇಕಾದ ದ್ರವ್ಯವನ್ನೂ, ತಕ್ಕಷ್ಟು ಶಿಬ್ಬಂದಿಯನ್ನೂ ಕೊಟ್ಟದೆ. ಪ್ರಸಕ್ತ ಸಂವತ್ಸರದಲ್ಲಿ ಸದರೀ ಕ್ರಮವು ಜಾರಿಯಲ್ಲಿದ್ದ ಕೆಲವು ತಿಂಗಳೊಳಗೆ ಈ ಕೆಳಗೆ ನಡಿಸಿದ ಅಭಿವೃದ್ಧಿಕಾರ್ಯಗಳ ಪೈಕಿ, ಸ್ವೇಚ್ಛೆಯಾಗಿ ಬೆಳೆದ ಗಿಡ ಗೆಂಟೆಗಳನ್ನು ತೆಗೆದುಹಾಕಿದ್ದನ್ನೂ, ಕುಡಿಯುವ ನೀರಿನ ಸರಬರಾಯಿಯನ್ನು ಅನುಕೂಲಪಡಿಸಿದ್ದನ್ನೂ, ಅನಾರೋಗ್ಯಕರವಾದ ಗ್ರಾಮಗಳನ್ನು ಬೇರೆ ಕಡೆ ಕಟ್ಟಿಸಿದ್ದನ್ನೂ, ಕೊಯಿನಾ ಉಪಯೋಗವನ್ನು ಜನಗಳ ಬಳಕೆಗೆ ತಂದದ್ದನ್ನೂ, ದೇವಿ ಹಾಕಿಸಿಕೊಳ್ಳುವುದರಿಂದುಂಟಾಗುವ ಪ್ರಯೋಜನವನ್ನು ಪ್ರಚುರಗೊಳಿಸಿದ್ದನ್ನೂ, ದೇಹವನ್ನೂ ಮನೆಗಳನ್ನೂ ಶುಚಿಯಾಗಿ ಇಟ್ಟುಕೊಳ್ಳುವುದಕ್ಕೆ ಸಂಬಂಧಪಟ್ಟ ಆರೋಗ್ಯಸೂತ್ರಗಳನ್ನು ಜನರ ತಿಳುವಳಿಕೆಗೆ ತಂದದ್ದನ್ನೂ ತಿಳಿಸಬಹುದಾಗಿದೆ. ಮಲೇರಿಯಾ ಉಪದ್ರವವನ್ನು ಹರಡುವುದಕ್ಕೆ ಯಾವ ವಿಧವಾದ ಸೊಳ್ಳೆಯು ಕಾರಣವಾಗಿದೆ ಎಂಬುದನ್ನು ಕಂಡುಹಿಡಿಯುವುದಕ್ಕಾಗಿ, ಮಲೇರಿಯಾ ಸರ್ವೆಯನ್ನೂ, ಶೋಧನಾಲಯದಲ್ಲಿ ಪರೀಕ್ಷೆಗಳನ್ನೂ ಮಾಡಲುಪಕ್ರಮಿಸಿದೆ. ಇಂಥ ಸರ್ವೆಯನ್ನೂ ಪುನಃಶೋಧನೆಯನ್ನೂ ಮಾಡತಕ್ಕ ವಿಧಾನವನ್ನು ತಿಳಿಸುವುದಕ್ಕೂ, ಜನನ ಮರಣಗಳ ಲೆಕ್ಕವನ್ನು

ಸಲು ಸಲಹೆಗಳನ್ನು ಕೊಡುವುದ
ಅನುಭವಶಾಲಿಯಾದ ಒಬ್ಬ ಆ
ಟ್ಟಿಗೆ ನೇಮಿಸಲಾಯಿತು. ದೇವಿ
ರ, ಕಾಂಪೌಂಡರುಗಳ ಸಂಖ್ಯೆಯ
ಏರ್ಪಾಟುಗಳು ನಡೆಯುತ್ತಲಿವೆ.
ಲ್ಲಿರುವ ಮಕ್ಕಳಿಗೆ ಊಟದೊಂದಿಗೆ
ನ ಹೆಚ್ಚು ಡಿಸ್ಪೆನ್ಸರಿಗಳನ್ನೂ, ಆ
ತ್ರೆಗಳನ್ನೂ, ಒದಗಿಸುವ ವಿಷಯ
ಪೂರ್ವಕ ಆಲೋಚಿಸುತ್ತಿದ್ದಾರೆ.
ಷವಾಗಿ ಒಂದು ನೆಲಸುವಂತೆ
ಯತ್ನಗಳನ್ನೂ ಮಾಡುತ್ತಲಿದೆ.
ಯವು ಸ್ವಲ್ಪಸುಟ್ಟಿಗೆ ಆರೋ
ರು ಸರ್ಕಾರದವರು ತಿಳಿದು, ವಿ
ಪಡಿಸುವುದಕ್ಕೂ, ಮುಖ್ಯವಾಗಿ
ಬಂಧದಲ್ಲಿ ಸ್ಥಳೀಯ ಕೈಗಾರಿಕೆ
ಮೂಲಕ ಕಸುಬುಗಳನ್ನು ಹೆಚ್ಚಿ
ರಸ್ತೆಗಳನ್ನು ಹೆಚ್ಚಿಸುವುದಕ್ಕೂ
ಗಳನ್ನು ವೃದ್ಧಿಗೊಳಿಸುವುದಕ್ಕೂ
ನ್ನು ಸರ್ಕಾರದವರು ಮುಂಚೂ

ಯ ಏರ್ಪಾಟು.
ಸದಲ್ಲಿ ಸೂಚಿತವಾದ ಈ ಏರ್ಪಾ
ನೆಯಭಾಗದಲ್ಲಿ ಕೈಗೊಳ್ಳಲಾಯಿ
ಮುಗುತ್ತಿದ್ದ ಕೆಲವು ತಿಂಗಳುಗಳಲ್ಲಿ
ರುತ್ತದೆ. ಈ ಭಾಗದಲ್ಲಿ ಕಂಡು
ನ ರಿಪೋರ್ಟುಗಳಿಂದ ತಿಳಿಯಬ
ಂದ ತಿಳಿಯಬಹುದಾಗಿದೆ:—
16,740 ಗ್ರಾಮಗಳ
ವಾಗಿರುವ ಗ್ರಾಮಗಳು 11,923
ಗ್ರಾಮಕಮಿಟಿಗಳು 7,110
ಯೋಜನಕ್ಕಾಗಿ ಜನಗ
ಸವಾದಲು ಒಪ್ಪಿಕೊಂ
... ... 6,126
ಕೊಂಡಿರುವ ಯಾ ವ
ಮನ (ಐದು ಡಿಸ್ಟ
... ... 58
ತಿಯು ಸರಿಯಾಗಿರಲ್ಲಿನೆಂಯ
ದ ಕಾಲಸ್ಥಿತಿಯು ಸಮರ್ಪಕ
ಚಿಸಿದರೆ, ಜನರು ಈ ಏರ್ಪಾ
ತುಂಬಾ ಸಂತೋಷಕರವಾಗಿರು

ಏರ್ಪಾಟಿನಂತೆ, ಗ್ರಾಮಾಭಿವೃ
ವ ಕಾರ್ಯಗಳಿಗೆ ತಗಲುವ ಬ
ಒಂದು ಭಾಗವನ್ನು ಸರ್ಕಾರ
ಾಡಲಾಗಿತ್ತು; ಆದರೆ ಪ್ರಾರಂ
ಡಿಸಲು ಕಷ್ಟಗಳಿರುತ್ತವೆಯೆಂದು
ಪ್ರಸಕ್ತವರ್ಷಕ್ಕೂ ಚಾಲ್ತಿಸಾಲಿ
ದ್ರವ್ಯವನ್ನು ಅರ್ಧದವರೆಗೆ ಹೆಚ್ಚಿ

ಲದಲ್ಲಿ ಗ್ರಾಮಾಭಿವೃದ್ಧಿ ಕಮಿ
ಯು ಲಾಗವನು ಬೀಳುವ ಶಾಶ್ವ
ರ್ಯಗಳನ್ನು ಕೈಕೊಂಡರು. ಈ
ನ್ನು ಸರ್ಕಾರದವರು ಸಹಾಯ
ರೂಪಾಯಿಗಳನ್ನು ಸಂಬಂಧ
ಮೂಲಕವಾಗಿ, ಯಾ, ಕೆಲಸ
ಸಹಾಯಮಾಡಿದರು.

ಏರ್ಪಾಟು ಈಗಾಗಲೇ ಜನಗಳ ವಿಶ್ವಾಸಕ್ಕೆ ಪಾತ್ರವಾಗಿರುತ್ತದೆಂಬುವದಕ್ಕೆ ಚಿಹ್ನೆಗಳು ಕಾಣಬರುತ್ತಲಿವೆಯೆಂಬದಾಗಿ ರೆವಿನ್ಯೂ ಕಮಿಷನರವರು ತಿಳಿಸಿರುತ್ತಾರೆ. ಈ ಏರ್ಪಾಡು ಇಷ್ಟುಬೇಗ ಜಾರಿಗೆ ಬರುವುದಕ್ಕೆ ನಮ್ಮ ಡಿಸ್ಟ್ರಿಕ್ಟ ರೆವಿನ್ಯೂ ಆಫೀಸರುಗಳ ಉತ್ಸಾಹವೂ ಆದರವೂ ಕಾರಣಗಳಾಗಿವೆ. ಇದನ್ನು ಸರಿಯಾಗಿ ಜರುಗಿಸಿದಲ್ಲಿ ಜನಗಳಲ್ಲಿ ತಿಳುವಳಿಕೆ ಹೆಚ್ಚುವುದಕ್ಕೂ, ಗ್ರಾಮಗಳ ಭಾಗ್ಯೋನ್ನತಿಯನ್ನೂ ಅನುಕೂಲತೆಗಳನ್ನೂ ವೃದ್ಧಿಪಡಿಸುವುದಕ್ಕಾಗಿ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡುವಂತೆ ಪ್ರೋತ್ಸಾಹಿಸುವುದಕ್ಕೂ, ಈ ಬಗೆಯ ಕೆಲಸಗಳು ಸಾಧಕಗಳಾಗಲೇಬೇಕಾ

ವಗೈರೆ 2 ಯಾ 3 ಸಲ ಹಚ್ಚುವದರಿಂದ ಗುಣವಾಗಿ ಕಲೆಸಹಿತ ಇಲ್ಲದಂತಾಗುವದು.

ಕಿಮ್ಮತ್ತು ಡಬ್ಬಿ 1ಕ್ಕೆ 0—6—0.

೫ ವಿಲಾಸೋತ್ತೇಜನ ಗುಳಿಗೆ.

ಧಾತುಸ್ತಂಭಕ, ರಕ್ತಶೋಧಕ ಕಾಮೋದ್ದೀಪಕ, ರತಿವಿಲಾಸವರ್ಧಕ, ಮನೋತ್ಸಾಹಕ ಮತ್ತು [illegible] ಧಾತುಪೌಷ್ಟಿಕವಾದ ಗುಳಿಗೆಗಳು.

ಬಾಲ್ಯಪ್ರಾಯ, [illegible]ಸ್ತ್ರೀಸಂಗ, ಆಯಾಸ, ಅತಿಸಂಭೋಗ, ಈ ಸಂಬಂಧದಿಂದ ಉಂಟಾದ ರೋಗ, ಅಶಕ್ತತೆ, ಮುಷ್ಟಿಮೈಥುನ ವಗೈರೆ ಅನೇಕ ಬಗೆಯ ಕೆಟ್ಟ ವಿಚಾರ, ಸ್ವಪ್ನಾವಸ್ಥೆ ಮೊದಲಾದ ಎಲ್ಲಾ ವಿಕಾರಗಳನ್ನು ನಮ್ಮ ಈ ವಿಲಾಸೋತ್ತೇಜನ ಗುಳಿಗೆಗಳು ಸೇವಿಸಿದ್ದರಿಂದ ದೇಹದೊಳಗಿನ ಅಶಕ್ತತೆ ಹೋಗಿ ಧಾತುಪುಷ್ಟಿ, ವೀರ್ಯಸ್ತಂಭನ ಮತ್ತು ಕಾಮೋದ್ದೀಪನವನ್ನುಂಟುಮಾಡಿ, ಮನಸ್ಸಿಗೆ ಉಲ್ಲಾಸವನ್ನೂ ದೇಹಕ್ಕೆ ಕಾಂತಿಯನ್ನೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯನ್ನೂ ಕೊಡುತ್ತದೆ.

ಕಿಮ್ಮತ್ತು 64 ಗುಳಿಗೆಗಳಿಗೆ 4—0—0.

೬ ವಿಲಾಸೋತ್ತೇಜನಲೇಹವು.

ಈ ಶ್ರೇಷ್ಠವಾದ ಲೇಹದಿಂದ,— ಉಪದಂಶ, ಮೂತ್ರಕೃಚ್ಛ್ರ, ಅಗ್ನಿಮಾಂದ್ಯ, ಮಲಬದ್ಧತೆ, ಗುಲ್ಮಪ್ರಮೇಹ, ಮೂಲವ್ಯಾಧಿ, ದಮ್ಮು, ಕೆಮ್ಮು, ವ್ರಣ, ಕುಷ್ಠ, ಭಗಂದರ, ಕ್ಷಯ, ಕಾಮಲೆ, ಪಾಂಡುರೋಗ, ಧಾತುಕ್ಷೀಣತೆ, ಜೀರ್ಣಜ್ವರ, ಸ್ತ್ರೀಯರ ಪ್ರದರರೋಗ, ಶುಕ್ಲದೋಷ, ಸ್ತ್ರೀಯರ ರಜೋದೋಷ, ನಿದ್ರಾನಾಶ, ಪತನತ್ವ ಇವೇ ಎಲ್ಲಾ ರೋಗಗಳು ಗುಣವಾಗಿ, ಕಾಂತಿವೃದ್ಧಿ, ಅಗ್ನಿವೃದ್ಧಿ, ಕಾಮವೃದ್ಧಿ, ಸ್ಮರಣಶಕ್ತಿ, ಇವನ್ನುಂಟುಮಾಡಿ ಸ್ತ್ರೀಪುರುಷರು ಸುಖವನ್ನು ಹೊಂದುವರು.

ಕಿಮ್ಮತ್ತು 60 ತೊಲೆ ಲೇಹಕ್ಕೆ 5—0—0.

೭ ಪ್ರಮೇಹ ನಿವಾರಿಣಿ.

ಇದರಿಂದ ಎಲ್ಲಾ ಪ್ರಕಾರದ ಹೊಸ ಮತ್ತು ಹಳೇ ತರಕ್ಕೆ ಬದ್ಧ ಗರ್ಮಿರೋಗ, ಮೂತ್ರವಿಸರ್ಜನ ಕಾಲಕ್ಕೆ ಆಗುವ ಉರಿ, ಶೂಲೆ, ಮೂತ್ರಸಂಕೋಚ, ರಕ್ತ ಸೋರುವದು, ಶರೀರದ ಮೇಲೆ ಆದ ಹುಣ್ಣು, ಕೆಂಪು-ಹಳದಿಯಂತೆ ಹೋಗತಕ್ಕ ಕೀವು ವಗೈರೆ ಗುಣವಾಗುವದು. ಮೇಲಿನ ಪ್ರಮೇಹ ಔಷಧವನ್ನು ಸೇವಿಸಿದ ಬಳಿಕ ಇವನ್ನು ಸೇವಿಸಿದರೆ ಪ್ರಮೇಹ ರೋಗವು ಸಮೂಲ ನಾಶವಾಗುವದು.

ಕಿಮ್ಮತ್ತು ಬಾಟ್ಲ 1ಕ್ಕೆ 3—8—0.

೮ ಕಾಮಲಿ ರೋಗಕ್ಕೆ ಔಷಧ.

ಇದರ ಸೇವನೆಯಿಂದ ಪಿತ್ತಕಾಮಲಿ, ಕುಂಭಕಾಮಲಿ, ಹಲಾಮಿಕಕಾಮಲಿ, ಪಾಂಡುರೋಗ, ಮೊದಲಾದವೆಲ್ಲ ನಾಶವಾಗಿ ವಾಂತಿ, ಅರುಚಿ, ಅಗ್ನಿಮಾಂದ್ಯ, ಅಶಕ್ತತೆ ವಗೈರೆ ಕೆಟ್ಟ ವಿಕಾರಗಳನ್ನು ಸರಿಪಡಿಸಿ ಅನ್ನಕೋಶವನ್ನು ಪಚನ ವ್ಯಾಪಾರಕ್ಕೆ ಬಲಕೊಟ್ಟು ಮೈಯಲ್ಲಿ ಶಕ್ತಿಯನ್ನು ಹುಟ್ಟಿಸುವದು.

ಕಿಮ್ಮತ್ತು ಡಬ್ಬಿ 1ಕ್ಕೆ 2—12—0.

೯ ಜ್ವರಾಂಕುಶ ಮಾತ್ರೆ.

ಇದರ ಸೇವನೆಯಿಂದ ಎಲ್ಲಾ ಪ್ರಕಾರದ ಛಳಜ್ವರ, ಬಾರೀಜ್ವರ, ಚಾತುರ್ಥಿಕ ಜ್ವರ, ಜೋಡು ಚಾತುರ್ಥಿಕಜ್ವರ, ಪಿತ್ತಜ್ವರ, ಕಫಜ್ವರ ವಗೈರೆ ಗುಣವಾಗಿ ನಾಲಿಗೆಗೆ ರುಚಿಹುಟ್ಟಿ ತಿಂದ ಆಹಾರವು ಪಚನವಾಗಿ ಮಲವಿಸರ್ಜನೆಯು ಸಾಫ ಆಗುವದು.

ಕಿಮ್ಮತ್ತು 24 ಗುಳಿಗೆಗಳ ಡಬ್ಬಿ 1ಕ್ಕೆ 1—0—0.

೧೦ ಕಫನಾಶಕ ಗುಳಿಗೆ.

ಚಿಕ್ಕಮಕ್ಕಳ (ಕಫತುಂಬಿ ಬರೋಣಕ್ಕೆ ಮೂರೆಳ್ಳೆ) ಕಫವ್ಯಾಧಿಗೆ ದಿವ್ಯೌಷಧವು. ಅದನ್ನು ಗಂಟಲಲ್ಲಿ ಘೇರ ಎಂಬಶಬ್ದ ಉಂಟಾದೊಡನೆ ಈ ಗುಳಿಗೆಯನ್ನು ಕೊಡುವದರಿಂದ ಒಂದೇ ತಾಸಿನಲ್ಲಿ ಗುಣವಾಗುವದು. ಪ್ರತಿಯೊಬ್ಬರು ಸಂಗ್ರಹಿಸತಕ್ಕದ್ದು. ಕಿಮ್ಮತ್ತು 16ಗುಳಿಗೆ ಬಾಟ್ಲಿಗೆ 1—0—0.

೧೬ ಭಂಗಿನ (ಕರಜಬ್ಬಿನ)

ಅತಿಸೂಕ್ಷ್ಮ ಕ್ರಿಮಿಗಳಿಂದ ಮೂಗಿನ ಮೇಲ್ಭಾಗ[illegible] ಮೋರೆಯಕಾಂತಿಯನ್ನು ಕೆಡಿಸುವದು. ಸ್ವಲ್ಪದಿವಸದ[illegible] ವು ಕಪ್ಪಾಗಿ ಅತ್ಯಸಹ್ಯಕರವಾಗುವದು. ಗ್ರಹಚಾರವಶಾತ್ [illegible] ದೆಂದು ಕೆಲವರು ತಿಳಿಯುವರು. ಈ ಬಗ್ಗೆ ಖಾತ್ರಿಯಿಂ[illegible] ತಯಾರಿಸಿದೆ. 15ದಿವಸಗಳಿಂದ 60 ದಿವಸಗಳೊಳಗೆ [illegible]

ಬಾಟ್ಲಿಗೆ ರೂ. 2—0—0.

೧೭ ಸುಂಗಧ ಶೀರಷಾ.

ಇದರ ಲೇಪದಿಂದ ಶಿರೋವಾತ, ತಲೆನೋವು, ಅ[illegible] ಶೂಲೆ ಇವುಗಳು 5 ನಿಮಿಷಗಳೊಳಗೆ ಗುಣವಾಗುವದು. ಹಚ್ಚುವದರಿಂದ ಕಣ್ಣುರಿಯು ಗುಣವಾಗಿ ತಂಪನ್ನುಂಟು[illegible] ಲ್ಲದೆ ಎದೆನೋವು ಸಂಧಿವಾತ ಸಹ ಗುಣ. ಡಬ್ಬಿ 1ಕ್ಕೆ [illegible]

೧೮ ಜ್ವರಗಡ್ಡೆಯ ಔಷಧ

ಪ್ರತಿ ಮನುಷ್ಯನ ಹೊಟ್ಟೆಯ ಎಡಭಾಗಕ್ಕಿರುವ ಪ್ಲೀ[illegible] ಅಥವಾ ಅಶಕ್ತತೆಯಲ್ಲಿದ್ದಾಗ ನೀರು ವಗೈರೆ ಪಾನಮಾಡಿ[illegible] ಪಚನಶಕ್ತಿಯು ಕಮ್ಮಿಯಾಗಿ, ದೊಡ್ಡದಾಗಿ, ನಿತ್ರಾಣ[illegible] ರೋಗಿಯಂತೆ ಕಾಣುವನು. ಇದೇ ಜ್ವರಗಡ್ಡೆ ಮುಂದೆ [illegible] ಎಣಿಸುವದು ಟಗ್ಗೆ ಇದು ಕಠಿಣವಾಗಿ ಮನುಷ್ಯನು ಮ[illegible] ವನು. ಆದ್ದರಿಂದ ಈ ಜ್ವರಗಡ್ಡೆಯು ಪ್ರಾರಂಭವಾದೊ[illegible] ಯ ಔಷಧವನ್ನು ಸೇವಿಸಿ ರೋಗಗಳು ಸದೃಢವಾಗಲು [illegible]

15ದಿವಸದ ಔಷಧಕ್ಕೆ 3—8

೧೯ ವಸಂತ ಮಾಲಿನಿ ತೈ

ಈ ಸುವಾಸನೆಯ ಎಣ್ಣೆಯನ್ನು ತಲೆಗೆ ಇಡುವದರಿ[illegible] ಬಲ ಉಂಟಾಗುವದಲ್ಲದೆ ಕಪ್ಪಾಗಿಯೂ ಮೃದುವಾಗಿಯ[illegible] ಬೆಳೆಯುತ್ತವೆ. ಶಿರೋವಾತ, ತಲೆನೋವು, ಕಣ್ಣುರಿ ಇವು[illegible] ತಂಪನ್ನುಂಟುಮಾಡಿ ಮೆದುಳಿಗೆ ಬಲವನ್ನುಂಟುಮಾಡು[illegible] ಮಾನಸಿಕ ಶ್ರಮಪಡುವವರಿಗೂ ವಿದ್ಯಾರ್ಥಿಗಳಿಗೂ ಇದು [illegible] ಗಿರುವದು. ಕಿಮ್ಮತ್ತು ಬಾಟ್ಲಿಗೆ ರೂ. 1—0—0;

೨೦ ಮದನೋದ್ಭವ ಗುಳಿ

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕ[illegible] ವಸ್ಥೆ ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗು[illegible] ಪೌಷ್ಟಿಕ, ವೀರ್ಯವರ್ಧಕ, ರಕ್ತ ಶೋಧಕ, ಕಾಮೋತ್ತೇ[illegible] ಹಕ, ಇಂದ್ರಿಯ ಸ್ತಂಭಕ, ಗರ್ಮಿ (ಟಾಕಿ) ಗುಪ್ತಪ್ರದೇ[illegible] ರುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾ[illegible] ವಾತರೋಗ ಮುಂತಾದವು ಆಶ್ಚರ್ಯ ಗುಣವಾಗಿ ಶರೀ[illegible] ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾ[illegible] 60ಗುಳಿಗೆಗಳು ಬೇಕಾಗಿರುವವು. ಕಿಮ್ಮತ್ತು 12ಗುಳಿಗೆ[illegible]

೨೧ ಕೇಶನಾಶಕ ವಟಿ.

ಇದನ್ನು ಕೂದಲು ಉದುರುವಜಾಗಕ್ಕೆ ಈ ವಟಿ[illegible] ನೀರಿನೊಳಗೆ ಕಲಿಸಿ ಹಚ್ಚಿಕೊಂಡು 5 ನಿಮಿಷದನಂತರ [illegible] ಉದುರಿಹೋಗಿ ಸಾಫ್ ಆಗುವದು. ಉರಿಯುವದೂ [illegible] ದೂ ಇಲ್ಲ. ಕಿಮ್ಮತ್ತು ಡಬ್ಬಿಗೆ 0—8—0.

[3 ನೆಯ ಪುಟದಿಂದ ಮುಂದೆ ಸಾಗಿದುದು.]

[illegible] ಇಲಾಖೆಗಳು.

ಮರಮತ್ತು ಶಾಖೆ.

ಲೋಕಲ್ ಫಂಡ್ ಬೇರೆಬೇರೆ ಎಲ್ಲಾ ಬಾಬುಗಳಿಂದಲೂ ಮರಮತ್ತು ಕೆಲಸಗಳಿಗಾಗಿ ಒಟ್ಟು ಖರ್ಚು ಹಿಂದಿನ ಸಾಲಿನಲ್ಲಿ 51 ಲಕ್ಷ ರೂಪಾಯಿಯಾಗಿರುವಲ್ಲಿ, ಪ್ರಸಕ್ತ ವರ್ಷದಲ್ಲಿ ಸುಮಾರು [illegible] ಲಕ್ಷ ರೂಪಾಯಿಯಾಗಿರುತ್ತದೆ. ಈ ಮೊಬಲಗಿನ ಪೈಕಿ, ನೀರಾವರಿ ಕೆಲಸಗಳಿಗಾಗಿ [illegible] ಲಕ್ಷ ರೂಪಾಯಿಯನ್ನೂ, ಸಿವಿಲ್ ಕಾಮಗಾರಿಗಳಿಗಾಗಿಯೂ [illegible] ಕಟ್ಟಡಗಳಿಗಾಗಿಯೂ [illegible] ಲಕ್ಷ ರೂಪಾಯಿಗಳನ್ನೂ ಖರ್ಚು ಮಾಡಿರುತ್ತದೆ.

ಕನ್ನಂಬಾಡಿ ಬಳಿ ಕಾವೇರೀನದಿಗೆ ಅಡ್ಡವಾಗಿ ಕಟ್ಟಿಸುತ್ತಿರುವ ಜಲಾಶಯದ ಕಾಮಗಾರಿಯು ತೃಪ್ತಿಕರವಾಗಿ ಅಭಿವೃದ್ಧಿಯಾಗುತ್ತಲಿದೆ. ನದೀ ಪಾತ್ರದಲ್ಲಿಯೂ [illegible] ಅಗೆಯಬೇಕಾಗಿದ್ದ ಕಷ್ಟಕರವಾದ ಕಾಮಗಾರಿಯು ಪ್ರಸಕ್ತ ವರ್ಷದಲ್ಲಿ ಪೂರಯಿಸಿತು. [illegible] (Turbine) [illegible]

[illegible]

ದರ ಅತ್ಯಧಿಕವಾಗಿರುತ್ತದೆ. 94 ಲಕ್ಷ ರೂಪಾಯಿ ಅಂದಾಜಿನ [illegible] 146 ಮೈಲಿ [illegible]

[illegible]

ಸುಮಾರು 10,01,000 ರೂಪಾಯಿಯೂ ಆಯಿತು. ಈ ವ್ಯಯದ ಬಾಬತು ಮೊಬಲಗಿನಲ್ಲಿ 2,87,000 ರೂಪಾಯಿಗಳನ್ನು ಮರಮತ್ತು ಕಾಮಗಾರಿಗಳಿಗಾಗಿಯೂ, 2,31,000 ರೂಪಾಯಿಗಳನ್ನು ಈ ಸರ್ವೇಗಳಿಗಾಗಿಯೂ, ಉಳಿದದ್ದನ್ನು ಇತರ ಬಾಬುಗಳಿಗಾಗಿಯೂ ಖರ್ಚು ಮಾಡಲಾಯಿತು.

ಎರಡು ಲಕ್ಷ ರೂಪಾಯಿಗಿಂತ ಹೆಚ್ಚು ಖರ್ಚು ತಗಲಬಹುದೆಂದು ಅಂದಾಜು ಕಟ್ಟಿರತಕ್ಕ ದಾವಣಗೆರೆ ನಗರದ ನೀರಿನ ಸರಬರಾಯಿ ಏರ್ಪಾಡಿಗೆ ದ್ರವ್ಯವನ್ನು ಕೊಡುವ ವಿಷಯವನ್ನು ಈ ವರ್ಷ ತೃಪ್ತಿಕರವಾಗಿ ವ್ಯವಸ್ಥೆ ಮಾಡಲಾಯಿತು. ಇದಕ್ಕಾಗಿ ಸರ್ಕಾರದವರು 30,008 ರೂಪಾಯಿಗಳನ್ನು ಸಹಾಯದ್ರವ್ಯವನ್ನು ಕೊಡುವದಲ್ಲದೆ, ಶಿಬ್ಬಂದಿಯ ಮತ್ತು ಯಂತ್ರ ಸಾಮಗ್ರಿಗಳ ಖರ್ಚನ್ನು ವಹಿಸಿ ಕಾಮಗಾರಿಯನ್ನು ನಡಿಸುವಂತೆ ಒಪ್ಪಿರುತ್ತಾರೆ. ಇದಲ್ಲದೆ ಚಿತ್ರದುರ್ಗದ ನೀರಿನ ಸರಬರಾಯಿಗಾಗಿ ಜ್ಯೂಯೆಲ್ ಫಿಲ್ಟರುಗಳನ್ನು ಸ್ಥಾಪಿಸುವುದಕ್ಕೆ ತಗಲುವ ಅರ್ಧ ಖರ್ಚನ್ನೂ, ಕೋಲಾರ, ಶಿವಮೊಗ್ಗ ನೀರಿನ ಸರಬರಾಯಿ ಕಾಮಗಾರಿಗಳಿಗೆ ಅತ್ಯವಶ್ಯಕವಾಗಿರುವ ಅಬಾದನ್ನು ಮಾಡುವುದಕ್ಕೆ ಬೇಕಾದ ಖರ್ಚಿನಲ್ಲಿ ಅರ್ಧಪಾಲನ್ನೂ, ಸರ್ಕಾರದವರು ಗ್ರಾಂಟ್ ಕೊಡಲು ಮಂಜೂರ್ಮಾಡಿರುತ್ತಾರೆ. ದೊಡ್ಡಬಳ್ಳಾಪುರಕ್ಕೆ ನೀರನ್ನು ಸರಬರಾಯಿ ಮಾಡಬೇಕೆಂಬ ಅಂಶವು ಪರ್ಯಾಲೋಚನೆಯಲ್ಲಿದೆ. ಈ ಏರ್ಪಾಡಿಗೆ ಮುಟ್ಟುವ ಖರ್ಚಿಗಾಗಿ ಈ ನಗರವಾಸಿಗಳು 18,000 ರೂಪಾಯಿಗಳನ್ನು ಚಂದಾ ಕೊಡಲು ಒಪ್ಪಿರುವದು ಶ್ಲಾಘಾರ್ಹವಾಗಿದೆ. ಈ ಪೈಕಿ 11,000 ರೂಪಾಯಿಗಳು ಪಾವತಿಯಾಗಿದೆ.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟು ಬೋರ್ಡ್.

ಭೂಮಿಯೊಳಗೆ ನಲ್ಲಿಮೂಲಕ ಹರಿಯುವ ನೀರನ್ನು ತೆಗೆದುಕೊಂಡು ಹೋಗಿ ಆಚೆಗೆ ಬಿಡುವುದಕ್ಕೆ ತಕ್ಕ ಕಾಮಗಾರಿಗಳನ್ನು ಈ ವರ್ಷವೂ ನಡೆಸಲಾಯಿತು. 50677 ರೂಪಾಯಿಗಳನ್ನು ಖರ್ಚುಮಾಡಿ 69 ಸ್ವತ್ತುಗಳನ್ನು ಸರ್ಕಾರಕ್ಕೆ ತೆಗೆದುಕೊಳ್ಳಲಾಯಿತು. ಅಂತು ಬೋರ್ಡಿನಿಂದ 2,03,000 ರೂಪಾಯಿ ಖರ್ಚಾಯಿತು.

ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಕಮಿಟಿ.

ಬೆಂಗಳೂರು ನಗರವನ್ನು ಅಬಾದು ಮಾಡಿ ಮುಂದೆ ಬಡಾವಣೆ ಮಾಡುವುದಕ್ಕೆ ಬೇಕಾದ ಆವಶ್ಯಕತೆಗಳನ್ನು ಪರಿಶೀಲನೆ ಮಾಡುವುದಕ್ಕಾಗಿ ಇಂಜನಿಯರನ್ನೂ ಇತರ ಆಫೀಸರುಗಳನ್ನೂ, ಪ್ರಮುಖರಾದ ಖಾಸಗಿ ಜನರನ್ನೂ ಸೇರಿಸಿ, ರಾಜಸಭಾಭೂಷಣ ದಿವಾನ್ ಬಹದ್ದೂರ್ ಮಿ|| ಕೆ. ಪಿ. ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಗೆ ಒಳಪಡಿಸಿ, ಒಂದು ಕಮಿಟಿಯನ್ನು ನಿಯಾಮಕ ಮಾಡಿದೆ. ಈ ಕಮಿಟಿಯವರು ಅನೇಕಸಾರಿ ಸೇರಿ, ಮುಂದೆ ಮೂರು ವರ್ಷಗಳೊಳಗಾಗಿ ನಡೆಯಬೇಕಾದ ಆಬಾದು ಕಾಮಗಾರಿಗಳ ವಿಚಾರವಾಗಿ ಒಂದು ಕಚ್ಚಾ ಏರ್ಪಾಡನ್ನು ತಯಾರ್ಮಾಡಿರುತ್ತಾರೆ. ಈ ವಿಷಯದಲ್ಲಿ ಮೊದಲು ಮಾಡಬೇಕಾದ ಕಾರ್ಯಗಳನ್ನು ನಡಿಸುವುದಕ್ಕಾಗಿ ಸರ್ಕಾರದವರು ಕಮಿಟಿಯವರಿಗೆ 20,000 ರೂಪಾಯಿಗಳು ಗ್ರಾಂಟನ್ನು ಖರ್ಚುಮಾಡುವುದಕ್ಕಾಗಿ ಕೊಟ್ಟಿರುತ್ತಾರೆ.

ಲೋಕಲ್ ಫಂಡ್ ಜನರಲ್.

ಈ ಬಾಬಿನಲ್ಲಿ 2,23,000 ರೂಪಾಯಿ ಜಮಾ ಬಂದಿತು. ಸಾಲ್ ಸುರುವಿನಲ್ಲಿದ್ದ ಶಿಲ್ಕು ಮೊಬಲಗು 2,56,901 ರೂಪಾಯಿ ಸೇರಿ, ಒಟ್ಟು ಜಮಾ 4,79,901 ರೂಪಾಯಿ ಆಯಿತು. ಈ ಸಾಲಿನಲ್ಲಿ 1,70,700 ರೂಪಾಯಿ ವರೆಗೆ ಖರ್ಚಾಗಿ, ಸಾಲಾಖೈರಿನಲ್ಲಿ 3,09,201 ರೂಪಾಯಿ ಶಿಲ್ಕು ನಿಂತಿತು.

ಡಿಸ್ಟ್ರಿಕ್ಟ್ ಫಂಡುಗಳು.

1913-14 ನೆಯ ಸಾಲಿನಲ್ಲಿ ಡಿಸ್ಟ್ರಿಕ್ಟ್ ಫಂಡಿನ ಎಲ್ಲಾ ಬಾಬುಗಳಲ್ಲಿಯೂ ಸೇರಿ ಸ್ವಲ್ಪಹೆಚ್ಚು ಕಡಿಮೆಯಾಗಿ 9,28,387 ರೂಪಾಯಿ ಜಮಾ ಬಂದು, ಸುರು ಶಿಲ್ಕು 6,56,497 ರೂಪಾಯಿ ಸೇರಿ, ಒಟ್ಟು ಜಮೆ 15,84,884 ರೂಪಾಯಿ ಆಯಿತು. ಒಟ್ಟು ಸುಮಾರು 11,42,674 ರೂಪಾಯಿ ಖರ್ಚಾಗಿ, ಸಾಲಾಖೈರಿನಲ್ಲಿ 4,42,210 ರೂಪಾಯಿ ಶಿಲ್ಕು ಆಯಿತು. 4,77,750 ರೂಪಾಯಿ ಮರಮತ್ತು ಕಾಮಗಾರಿಗಳಿಗೂ, 2,60,924 ರೂಪಾಯಿಗಳು ಪ್ರಜಾರೋಗ್ಯ, ನೆಮ್ಮದಿ ಮತ್ತು ಅನುಕೂಲತೆಯ ಕೆಲಸಗಳಿಗಾಗಿಯೂ, 3,02,093 ರೂಪಾಯಿ ರೈಲ್ವೆಯನ್ನು ಹಾಕುವುದಕ್ಕೂ ಖರ್ಚಾಯಿತು. ಶಿವಮೊಗ್ಗಾ ಡಿಸ್ಟ್ರಿಕ್ಟಿನ ಎಲ್ಲಾ ಲೋಕಲ್ ಬೋರ್ಡುಗಳನ್ನೂ ಈ ಸಾಲಿನಲ್ಲಿ ಪುನಃ ನಿರ್ಮಿಸಿದ್ದಲ್ಲದೆ, ಸರ್ಕಾರದವರ ಮಂಜೂರಾತಿಯ [illegible] ರೈಲ್ವೆಯ ಸೆಸ್ಸನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ವಸೂಲ್ಮಾಡುವುದಕ್ಕೆ ಅವರಿಗೆ ಅಧಿಕಾರವನ್ನು ಕೊಡುವಹಾಗೆ 1902ನೆಯ ಇಸವಿಯ 2ನೆಯ ನಂಬರಿನ ಲೋಕಲ್ ಬೋರ್ಡ್ ರೆಗ್ಯುಲೇಷನನ್ನು ತಿದ್ದುಪಾಟು ಮಾಡಲಾಯಿತು.

ಸರ್ಕಾರೀ ಛಾಪಾಖಾನೆ.

ಸೆಂಟ್ರಲ್ ಛಾಪಾಖಾನೆಯಲ್ಲಿ ಹಿಂದಣವರ್ಷ ಕೆಲಸ ನಡೆದದ್ದಕ್ಕಿಂತ ಈ ವರ್ಷ ಕಡಿಮೆಯಾಗಿ ಕೆಲಸ ನಡೆಯಿತು. ಈ ಛಾಪಾಖಾನೆಯ ಖರ್ಚು ಹಿಂದಣವರ್ಷ 1,06,266 ರೂಪಾಯಿ ಖರ್ಚಾಗಿರುವಲ್ಲಿ, ಈ ವರ್ಷ 1,05,485 ರೂಪಾಯಿ ಆಯಿತು. ಹೀಗೆ ಕೆಲಸವೂ ಖರ್ಚೂ ಕಡಮೆಯಾದದ್ದಕ್ಕೆ, ಕೆಲವು ಭಾಗ ಕೆಲಸವನ್ನು ಮೈಸೂರಿನ ಬ್ರಾಂಚ್ ಪ್ರೆಸ್ಸಿಗೆ ಕಳುಹಿಸಿದ್ದೂ, ಬೇರೆಬೇರೆ ಇಲಾಖೆಯವರು ಮಾಡಿಸಿದ ಮುದ್ರಣದ ಕೆಲಸವು ಒಟ್ಟಿನಮೇಲೆ ಕಡಿಮೆಯಾಗಿದ್ದದ್ದೂ, ಮತ್ತು ಕೆಲವು ಮುದ್ರಣದ ಕೆಲಸಗಳನ್ನು ಖಾಸಗಿ ಛಾಪಾಖಾನೆಗಳಲ್ಲಿ ನಡೆಯಿಸಿದ್ದೂ, ಕಾರಣಗಳಾಗಿರುತ್ತವೆ.

ಸರ್ಕಾರೀ ಛಾಪಾಖಾನೆಯಲ್ಲಿ ನಡೆಯುವ ಕೆಲಸವನ್ನು ಸಾಧ್ಯವಾದರೆ, ಇನ್ನೂ ಕಡಿಮೆಮಾಡಬೇಕೆಂಬ ವಿಷಯವು ಪರ್ಯಾಲೋಚನೆಯಲ್ಲಿದೆ.

ರಿಜಿಸ್ಟರ್ಮಾಡಲ್ಪಟ್ಟ ಪುಸ್ತಕಗಳ ಮತ್ತು ಕಾಲಕಾಲಕ್ಕೆ ಪ್ರಕಟಿಸುವ ಮಾಸಪತ್ರಿಕೆಗಳ ಸಂಖ್ಯೆಯು ಹಿಂದಿನವರ್ಷ 128 ಇದ್ದದ್ದಕ್ಕೆ, ಈ ವರ್ಷ 117 ಇದ್ದವು.

ಪ್ರಾಚೀನ ಲೇಖನಾನ್ವೇಷಣದ ಇಲಾಖೆ.

ಮಿ|| ರೈಸ್‌ರವರು ಬರೆದ ಮೈಸೂರು ಗೆಜೆಟಿಯರ್ ಎಂಬ ಪುಸ್ತಕವನ್ನು ಹಾಲೀಕಾಲದವರೆಗೆ ಸಮಗ್ರವಾಗಿರುವಂತೆ ಮಾಡುವುದಕ್ಕಾಗಿ ಅದನ್ನು ಪುನರ್ವಿಮರ್ಶೆ ಮಾಡಲು ತಕ್ಕ ಏರ್ಪಾಟನ್ನು ಮಾಡಿ ಇದೆ. ಪ್ರಾಚೀನ ಲೇಖನಾನ್ವೇಷಣದ ಛಾಪೇನ

ದವರ್ಷ ಇಂಡಿಯಾ ಸರ್ಕಾರದವರು, ಈ ವಿಷಯವನ್ನು ಸಮರ್ಥರಾದ ಮೆಂಬರುಗಳುಳ್ಳ ಒಂದು ಆರ್ಬಿಟ್ರೇಷನ್ ಕಮಿಟಿಗೆ ವಿಚಾರಣೆಗಾಗಿ ಕಳುಹಿಸತಕ್ಕದ್ದೆಂದು ನಿರ್ಣಯಿಸಿದರು. ಸದರಿ ಕಮಿಟಿಯವರು ಈ ವಿಷಯವನ್ನು ಸುಮಾರು ಹತ್ತು ತಿಂಗಳ ವರೆಗೂ ಕ್ರಮವಾಗಿ ವಿಚಾರಣೆಮಾಡಿ, ಕಳೆದ ಮೇ ತಿಂಗಳಲ್ಲಿ ತಮ್ಮ ತೀರ್ಮಾನವನ್ನು ಇಂಡಿಯಾ ಸರ್ಕಾರದವರಿಗೆ ಕಳುಹಿಸಿಕೊಟ್ಟರು. ಘನತೆಯನ್ನೈದಿದ ಶ್ರೀಮನ್ ಮಹಾರಾಜರವರ ಸರ್ಕಾರದವರೂ, ಈ ಸಂಸ್ಥಾನದಲ್ಲಿರುವ ಕಾವೇರೀ ತೀರದ ನೀರಾವರೀ ಪ್ರದೇಶವನ್ನು ಅಭಿವೃದ್ಧಿಗೆ ತರುವುದರಲ್ಲಿ ಆಸಕ್ತರಾದ ಅನೇಕ ಜನರೂ ಸಹ, ತಮ್ಮ ಹಕ್ಕು ಬಾಧ್ಯತೆಗಳು ನ್ಯಾಯಸಮ್ಮತವಾಗಿವೆಯೆಂದು ನಂಬಿರುವುದಲ್ಲದೆ, ಈ ಮುಖ್ಯವಾದ ವಿಷಯದಲ್ಲಿ ಇಂಡಿಯಾ ಸರ್ಕಾರದವರ ತೀರ್ಮಾನವನ್ನು ಅತ್ಯಾಸಕ್ತಿಯಿಂದ ನಿರೀಕ್ಷಿಸುತ್ತಿದ್ದಾರೆ.

ಸಹಜವಾಗಿ ಸಮುದ್ರಕ್ಕೆ ಬಿದ್ದು ವ್ಯರ್ಥವಾಗುತ್ತಿರುವ ಕಾವೇರೀನದಿಯ ಹೆಚ್ಚು ನೀರನ್ನು ತಡೆದು ನಿಲ್ಲಿಸುವುದೇ ಕನ್ನಂಬಾಡಿ ಜಲಾಶಯದ ಏರ್ಪಾಡಿನ ಮುಖ್ಯೋದ್ದೇಶವಾಗಿರುತ್ತದೆ. ಈಗಿರತಕ್ಕ ನಾಲೆಗಳಲ್ಲಿ ಸರ್ವದಾ ನೀರು ಹರಿಯುವದು ಸಂದೇಹಾಸ್ಪದವಾಗಿದೆ. ಜಲಾಶಯದಿಂದ ನೀರನ್ನು ಸರ್ವಕಾಲಗಳಲ್ಲಿಯೂ ಖಂಡಿತವಾಗಿ ಒದಗಿಸುವುದಾದರೆ, ಆ ಪ್ರದೇಶದಲ್ಲಿ ಇದುವರೆಗೆ ಬೆಳೆಯಾಗದೆ ಇದ್ದ ಉತ್ತಮವಾದ ಧಾನ್ಯಗಳ

ನಡಿಸುವ ಕಾರ್ಯಗಳನ್ನು ತನಿಖೆಯಿಂದ ವಿಚಾರಿಸತಕ್ಕ ಬಗ್ಗೆ ಒಂದು ಸೆಂಟ್ರಲ್ ಕಮಿಟಿಯನ್ನೂ ಏರ್ಪಾಡುಮಾಡಿ, ಇವುಗಳಿಗೆ ಬೇಕಾದ ದ್ರವ್ಯವನ್ನೂ ತಕ್ಕಷ್ಟು ಶಿಬ್ಬಂದಿಯನ್ನೂ ಕೊಟ್ಟಿದೆ. ಪ್ರಸಕ್ತ ಸಂವತ್ಸರದಲ್ಲಿ ಸದರೀ ಕ್ರಮವು ಜಾರಿಯಲ್ಲಿದ್ದ ಕೆಲವು ತಿಂಗಳೊಳಗೆ ಈ ಕೆಳಗೆ ನಡಿಸಿದ ಅಭಿವೃದ್ಧಿಕಾರ್ಯಗಳ ಪೈಕಿ, ಸ್ವೇಚ್ಛೆಯಾಗಿ ಬೆಳೆದ ಗಿಡ ಗೆಂಟೆಗಳನ್ನು ತೆಗೆದುಹಾಕಿದ್ದನ್ನೂ, ಕುಡಿಯುವ ನೀರಿನ ಸರಬರಾಯಿಯನ್ನು ಅನುಕೂಲಪಡಿಸಿದ್ದನ್ನೂ, ಅನಾರೋಗ್ಯಕರವಾದ ಗ್ರಾಮಗಳನ್ನು ಬೇರೆ ಕಡೆ ಕಟ್ಟಿಸಿದ್ದನ್ನೂ, ಕೊಯಿನಾ ಉಪಯೋಗವನ್ನು ಜನಗಳ ಬಳಕೆಗೆ ತಂದದ್ದನ್ನೂ, ದೇವಿ ಹಾಕಿಸಿಕೊಳ್ಳುವುದರಿಂದುಂಟಾಗುವ ಪ್ರಯೋಜನವನ್ನು ಪ್ರಚುರಗೊಳಿಸಿದ್ದನ್ನೂ, ದೇಹವನ್ನೂ ಮನೆಗಳನ್ನೂ ಶುಚಿಯಾಗಿ ಇಟ್ಟುಕೊಳ್ಳುವುದಕ್ಕೆ ಸಂಬಂಧಪಟ್ಟ ಆರೋಗ್ಯಸೂತ್ರಗಳನ್ನು ಜನರ ತಿಳುವಳಿಕೆಗೆ ತಂದದ್ದನ್ನೂ ತಿಳಿಸಬಹುದಾಗಿದೆ. ಮಲೇರಿಯಾ ಉಪದ್ರವನ್ನು ಹರಡುವುದಕ್ಕೆ ಯಾವ ವಿಧವಾದ ಸೊಳ್ಳೆಯು ಕಾರಣವಾಗಿದೆ ಎಂಬುದನ್ನು ಕಂಡುಹಿಡಿಯುವುದಕ್ಕಾಗಿ, ಮಲೇರಿಯಾ ಸರ್ವೆಯನ್ನೂ, ಶೋಧನಾಲಯದಲ್ಲಿ ಪರೀಕ್ಷೆಗಳನ್ನೂ ಮಾಡಲುಪಕ್ರಮಿಸಿದೆ. ಇಂಥ ಸರ್ವೆಯನ್ನೂ ಪರಿಶೋಧನೆಯನ್ನೂ ನಡೆಸತಕ್ಕ ವಿಧಾನವನ್ನು ತಿಳಿಸುವುದಕ್ಕೂ, ಜನನ ಮರಣಗಳ ಲೆಕ್ಕವನ್ನು

ಸಲು ಸಲಹೆಗಳನ್ನು ಕೊಡುವುದ
ಅನುಭವಶಾಲಿಯಾದ ಒಬ್ಬ ಆ
ಟ್ಟಿಗೆ ನೇಮಿಸಲಾಯಿತು. ದೇವಿ
ರೆ, ಕಾಂಪೌಂಡರುಗಳ ಸಂಖ್ಯೆಯು
ಏರ್ಪಾಡುಗಳು ನಡೆಯುತ್ತಲಿವೆ.
ದಲ್ಲಿರುವ ಮತ್ತೂ ಊರಿಂದೂರಿಗೆ
ವ ಹೆಚ್ಚು ಡಿಸ್ಪೆನ್ಸರಿಗಳನ್ನೂ, ಆ
ತ್ರೆಗಳನ್ನೂ, ಒದಗಿಸುವ ವಿಷಯ
ಪೂರ್ವಕ ಆಲೋಚಿಸುತ್ತಿದ್ದಾರೆ.
ಜನವಾಗಿ ಒಂದು ನೆಲಸುವಂತೆ
ಯುತ್ತಗಳನ್ನೂ ಮಾಡುತ್ತಲಿದೆ.
ಯವು ಸ್ವಲ್ಪಮಟ್ಟಿಗೆ ಅರೋ
ದು ಸರ್ಕಾರದವರು ತಿಳಿದು, ಏ
ಲ್ಪಿಸುವುದಕ್ಕೂ, ಮುಖ್ಯವಾಗಿ
ಬಂಧಪಟ್ಟ ಸ್ಥಳೀಯ ಕೈಗಾರಿಕೆ
ಮೂಲಕ ಕಸಬುಗಳನ್ನು ಹೆಚ್ಚಿ
ರಸ್ತೆಗಳನ್ನು ಹೆಚ್ಚಿಸುವುದಕ್ಕೂ
ಗಳನ್ನು ವೃದ್ಧಿಗೊಳಿಸುವುದಕ್ಕೂ
ನ್ನು ಸರ್ಕಾರದವರು ಮುಂಜೂ

ಯ ಏರ್ಪಾಟು.
ನದಲ್ಲಿ ಸೂಚಿತವಾದ ಈ ಏರ್ಪಾ
ನೆಯಭಾಗದಲ್ಲಿ ಕೈಗೊಳ್ಳಲಾಯಿ
ರುಗುತ್ತಿದ್ದ ಕೆಲವು ತಿಂಗಳುಗಳಲ್ಲಿ
ರುತ್ತದೆ. ಈ ಭಾಗದಲ್ಲಿ ಕಂಡು
ನ ರಿಪೋರ್ಟುಗಳಿಂದ ತಿಳಿಯಬ
ಂದ ತಿಳಿಯಬಹುದಾಗಿದೆ:—
16,740 ಗ್ರಾಮಗಳ
ವಾಗಿರುವ ಗ್ರಾಮಗಳು 11,923
ಗ್ರಾಮಕಮಿಟಿಗಳು 7,440
ಯೋಜನಕ್ಕಾಗಿ ಜನಗ
ವನಮಾಡಲು ಒಪ್ಪಿಕೊಂ
... ... 6,126
ಕೊಂಡಿರುವ ಯಾ ವ
ಸುವ (ಐದು ಡಿಸ್ಟ್ರ)
... ... 55
ತಿಯು ಸರಿಯಾಗಿರದಿಲ್ಲನೆಂಬು
ದ ಕಾಲಸ್ಥಿತಿಯು ಸಮರ್ಪಕ
ಲೋಚಿಸಿದರೆ, ಜನರು ಈ ಏರ್ಪಾ
ತುಂಬಾ ಸಂತೋಷಕರವಾಗಿರು

ಏರ್ಪಾಟಿನಂತೆ, ಗ್ರಾಮಾಭಿವೃ
ದ್ಧಿಯ ಕಾರ್ಯಗಳಿಗೆ ತಗಲುವ ಒ
ಲ್ಲೊಂದು ಭಾಗವನ್ನು ಸರ್ಕಾರ
ಡಲಾಗಿತ್ತು ; ಆದರೆ ಪ್ರಾರಂ
ಹಿಸಲು ಕಷ್ಟಗಳಿರುತ್ತವೆಯೆಂದು
ಪ್ರಸಕ್ತವರ್ಷಕ್ಕೂ ಚಾಲ್ತಿಸಾಲಿ
ದ್ರವ್ಯವನ್ನು ಅರ್ಧದವರೆಗೆ ಹೆಚ್ಚಿ

ಲದಲ್ಲಿ ಗ್ರಾಮಾಭಿವೃದ್ಧಿ ಕಮಿ
ಯು ಲಾಗವಡು ಬೀಳುವ ಶಾಸ್ತ್ರ
ದ್ಯಗಳನ್ನು ಕೈಕೊಂಡರು. ಈ
ನ್ನು ಸರ್ಕಾರದವರು ಸಹಾಯ
ರೂಪಾಯಿಗಳನ್ನು ಸಂಬಂಧ
ಮೂಲಕವಾಗಿ, ಯಾ, ಕೆಲಸ
ಸಹಾಯಮಾಡಿದರು.
ಏರ್ಪಾಟು ಈಗಾಗಲೇ ಜನ

ಗಳ ವಿಶ್ವಾಸಕ್ಕೆ ಪಾತ್ರವಾಗಿರುತ್ತದೆಂಬುವದಕ್ಕೆ ಚಿಹ್ನೆಗಳು ಕಾಣಬರುತ್ತಲಿವೆಯೆಂಬವಾಗಿ ರೆವಿನ್ಯೂ ಕಮಿಷನರವರು ತಿಳಿಸಿರುತ್ತಾರೆ. ಈ ಏರ್ಪಾಡು ಇಷ್ಟುಬೇಗ ಜಾರಿಗೆ ಬರುವುದಕ್ಕೆ ನಮ್ಮ ಡಿಸ್ಟ್ರಿಕ್ಟ್ ರೆವಿನ್ಯೂ ಆಫೀಸರುಗಳ ಉತ್ಸಾಹವೂ ಆದರವೂ ಕಾರಣಗಳಾಗಿವೆ. ಇದನ್ನು ಸರಿಯಾಗಿ ಜರುಗಿಸುದರಲ್ಲಿ ಜನಗಳಲ್ಲಿ ತಿಳುವಳಿಕೆ ಹೆಚ್ಚುವುದಕ್ಕೂ, ಗ್ರಾಮಗಳ ಭಾಗ್ಯೋನ್ನತಿಯನ್ನೂ ಅನುಕೂಲತೆಗಳನ್ನೂ ವೃದ್ಧಿಪಡಿಸುವುದಕ್ಕಾಗಿ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡುವಂತೆ ಪ್ರೋತ್ಸಾಹಿಸುವುದಕ್ಕೂ, ಈ ಬಗೆಯ ಕೆಲಸಗಳು ಸಾಧಕಗಳಾಗಲೇಬೇಕಾ

ವಗೈರೆ 2 ಯಾ 3 ಸಲ ಹಚ್ಚುವದರಿಂದ ಗುಣವಾಗಿ ಕಲೆಸಹಿತ ಇಲ್ಲದಂತಾಗುವದು.

ಕಿಮ್ಮತು ಡಬ್ಬಿ 1ಕ್ಕೆ 0–6–0.

೫ ವಿಲಾಸೋತ್ತೇಜನ ಗುಳಿಗೆ.

ಧಾತುಸ್ತಂಭಕ, ರಕ್ತಶೋಧಕ ಕಾಮೋದ್ದೀಪಕ, ರತಿವಿಲಾಸವರ್ಧಕ, ಮನೋತ್ಸಾಹಕ ಮತ್ತು [illegible] ಧಾತುಪೌಷ್ಟಿಕವಾದ ಗುಳಿಗೆಗಳು.

ಬಾಲ್ಯಪ್ರಾಯ, [illegible]ಸ್ತ್ರೀಸಂಗ, ಆಯಾಸ, ಅತಿಸಂಭೋಗ, ಈ ಸಂಬಂಧದಿಂದ ಉಂಟಾದ ರೋಗ, ಅಶಕ್ತತೆ, ಮುಷ್ಟಿಮೈಥುನ ವಗೈರೆ ಅನೇಕ ಬಗೆಯ ಕೆಟ್ಟ ವಿಚಾರ, ಸ್ವಪ್ನಾವಸ್ಥೆ ಮೊದಲಾದ ಎಲ್ಲಾ ವಿಕಾರಗಳನ್ನು ನಮ್ಮ ಈ ವಿಲಾಸೋತ್ತೇಜನ ಗುಳಿಗೆಗಳು ಸೇವಿಸಿದ್ದರಿಂದ ದೇಹದೊಳಗಿನ ಅಶಕ್ತತೆ ಹೋಗಿ ಧಾತುಪುಷ್ಟಿ, ವಿರ್ಯಸ್ತಂಭನ ಮತ್ತು ಕಾಮೋದ್ದೀಪನವನ್ನುಂಟುಮಾಡಿ, ಮನಸ್ಸಿಗೆ ಉಲ್ಲಾಸವನ್ನೂ ದೇಹಕ್ಕೆ ಕಾಂತಿಯನ್ನೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯನ್ನೂ ಕೊಡುತ್ತದೆ.

ಕಿಮ್ಮತು 64 ಗುಳಿಗೆಗಳಿಗೆ 4–0–0.

೬ ವಿಲಾಸೋತ್ತೇಜನಲೇಹವು.

ಈ ಶ್ರೇಷ್ಠವಾದ ಲೇಹದಿಂದ,—ಉಪದಂಶ, ಮೂತ್ರಕೃಚ್ಛ್ರ, ಅಗ್ನಿಮಾಂದ್ಯ, ಮಲಬದ್ಧತೆ, ಗುಲ್ಮಪ್ರಮೇಹ, ಮೂಲವ್ಯಾಧಿ, ದಮ್ಮು, ಕೆಮ್ಮು, ವ್ರಣ, ಕುಷ್ಠ, ಭಗಂದರ, ಕ್ಷಯ, ಕಾಮಲೆ, ಪಾಂಡುರೋಗ, ಧಾತುಕ್ಷೀಣತೆ, ಜೀರ್ಣಜ್ವರ, ಸ್ತ್ರೀಯರ ಪ್ರದರರೋಗ, ಶುಕ್ಲದೋಷ, ಸ್ತ್ರೀಯರ ರಜೋದೋಷ, ನಿದ್ರಾನಾಶ, ಪತನತ್ವ ಇವೇ ಎಲ್ಲಾ ರೋಗಗಳು ಗುಣವಾಗಿ, ಕಾಂತಿವೃದ್ಧಿ, ಅಗ್ನಿವೃದ್ಧಿ; ಕಾಮವೃದ್ಧಿ, ಸ್ಮರಣಶಕ್ತಿ, ಇವನ್ನುಂಟುಮಾಡಿ ಸ್ತ್ರೀಪುರುಷರು ಸುಖವನ್ನು ಹೊಂದುವರು.

ಕಿಮ್ಮತು 60 ತೊಲೆ ಲೇಹಕ್ಕೆ 5–0–0.

೭ ಪ್ರಮೇಹ ನಿವಾರಿಣಿ.

ಇದರಿಂದ ಎಲ್ಲಾ ಪ್ರಕಾರದ ಹೊಸ ಮತ್ತು ಹಳೇ ತರಕ್ಕೆ ಬದ್ಧ ಗರ್ಮಿರೋಗ, ಮೂತ್ರವಿಸರ್ಜನ ಕಾಲಕ್ಕೆ ಆಗುವ ಉರಿ, ಶೂಲೆ, ಮೂತ್ರಸಂಕೋಚ, ರಕ್ತ ಸೋರುವದು, ಶರೀರದ ಮೇಲೆ ಆದ ಹುಣ್ಣು, ಕೆಂಪು-ಹಳದಿಯಂತೆ ಹೋಗತಕ್ಕ ಕೀವು ವಗೈರೆ ಗುಣವಾಗುವದು. ಮೇಲಿನ ಪ್ರಮೇಹ ಔಷಧವನ್ನು ಸೇವಿಸಿದ ಬಳಿಕ ಇದನ್ನು ಸೇವಿಸಿದರೆ ಪ್ರಮೇಹ ರೋಗವು ಸಮೂಲ ನಾಶವಾಗುವದು.

ಕಿಮ್ಮತು ಬಾಟ್ಲ 1ಕ್ಕೆ 3–8–0.

೮ ಕಾಮಲಿ ರೋಗಕ್ಕೆ ಔಷಧ.

ಇದರ ಸೇವನೆಯಿಂದ ಪಿತ್ಥಕಾಮಲಿ, ಕುಂಭಕಾಮಲಿ, ಹಲಾಮಕಕಾಮಲಿ, ಪಾಂಡುರೋಗ, ಮೊದಲಾದವೆಲ್ಲ ನಾಶವಾಗಿ ವಾಂತಿ, ಅರುಚಿ, ಅಗ್ನಿಮಾಂದ್ಯ, ಅಶಕ್ತತೆ ವಗೈರೆ ಕೆಟ್ಟ ವಿಕಾರಗಳನ್ನು ಸರಿಪಡಿಸಿ ಅನ್ನಕೋಶವನ್ನು ಪಚನ ವ್ಯಾಪಾರಕ್ಕೆ ಬಲಕೊಟ್ಟು ಮೈಯಲ್ಲಿ ಶಕ್ತಿಯನ್ನು ಹುಟ್ಟಿಸುವದು.

ಕಿಮ್ಮತು ಡಬ್ಬಿ 1ಕ್ಕೆ 2–12–0.

೯ ಜ್ವರಾಂಕುಶ ಮಾತ್ರೆ.

ಇದರ ಸೇವನೆಯಿಂದ ಎಲ್ಲಾ ಪ್ರಕಾರದ ಛಳಿಜ್ವರ, ಬಾರೀಜ್ವರ, ಚಾತುರ್ಥಿಕಜ್ವರ, ಜೋಡು ಚಾತುರ್ಥಿಕಜ್ವರ, ಪಿತ್ಥಜ್ವರ, ಕಫಜ್ವರ ವಗೈರೆ ಗುಣವಾಗಿ ನಾಲಿಗೆಗೆ ರುಚಿಹುಟ್ಟಿ ತಿಂದ ಆಹಾರವು ಪಚನವಾಗಿ ಮಲವಿಸರ್ಜನೆಯು ಸಾಫ ಆಗುವದು.

ಕಿಮ್ಮತು 24 ಗುಳಿಗೆಗಳ ಡಬ್ಬಿ 1ಕ್ಕೆ 1–0–0.

೧೦ ಕಫನಾಶಕ ಗುಳಿಗೆ.

ಚಿಕ್ಕಮಕ್ಕಳ (ಕಫತುಂಬಿ ಬರೋಣಕ್ಕೆ ಮೂರೆಳ್ಳಿ) ಕಫವ್ಯಾಧಿಗೆ ದಿವ್ಯೌಷಧವು. ಇದನ್ನು ಗಂಟಲಲ್ಲಿ ಘೇರ ಎಂಬಶಬ್ದ ಉಂಟಾದೊಡನೆ ಈ ಗುಳಿಗೆಯನ್ನು ಕೊಡುವದರಿಂದ ಒಂದೇ ತಾಸಿನಲ್ಲಿ ಗುಣವಾಗುವದು. ಪ್ರತಿಯೊಬ್ಬರು ಸಂಗ್ರಹಿಸಿಡತಕ್ಕದ್ದು. **ಕಿಮ್ಮತು 16ಗುಳಿಗೆ ಬಾಟ್ಲಿಗೆ 1–0–0.**

೧೬ ಭಂಗಿನ (ಕರಂಜಬ್ಬನ)

ಅತಿಸೂಕ್ಷ್ಮ ಕ್ರಿಮಿಗಳಿಂದ ಮೂಗಿನ ಮೇಲ್ಭಾಗದ
ಮೋರೆಯಕಾಂತಿಯನ್ನು ಕೆಡಿಸುವದು. ಸ್ವಲ್ಪದಿವಸದನಂ
ವು ಕಪ್ಪಾಗಿ ಅಸಹ್ಯಕರವಾಗುವದು. ಗ್ರಹಚಾರವಶಾತ್
ದೆಂದು ಕೆಲವರು ತಿಳಿಯುವರು. ಈ ಬಗ್ಗೆ ಖಾತ್ರಿಯಿಂ
ತಯಾರಿಸಿದೆ. 15ದಿವಸಗಳಿಂದ 60 ದಿವಸಗಳೊಳಗೆ

ಬಾಟ್ಲಿಗೆ ರೂ. 2–0–0.

೧೭ ಸುಂಗಧ ಶೀರಸಾ.

ಇದರ ಲೇಪದಿಂದ ಶಿರೋವಾತ, ತಲೆನೋವು, ಅ
ಶೂಲೆ ಇವುಗಳು 5 ನಿಮಿಷಗಳೊಳಗೆ ಗುಣವಾಗುವದು.
ಹಚ್ಚುವದರಿಂದ ಕಣ್ಣುರಿಯು ಗುಣವಾಗಿ ತಂಪನ್ನುಂಟು
ಲ್ಲದೆ ಎದೆನೋವು ಸುಧಿವಾತ ಸಹ ಗುಣ. ಡಬ್ಬಿ 1ಕ್ಕೆ

೧೮ ಜ್ವರಗಡ್ಡೆಯ ಔಷಧ

ಪ್ರತಿ ಮನುಷ್ಯನ ಹೊಟ್ಟೆಯ ಎಡಭಾಗಕ್ಕಿರುವ ಪ್ಲೀ
ಅಥವಾ ಅಶಕ್ತತೆಯಲ್ಲಿದ್ದಾಗ ನೀರು ವಗೈರೆ ಪಾನಮಾಡಿ
ಪಚನಶಕ್ತಿಯು ಕಮ್ಮಿಯಾಗಿ, ದೊಡ್ಡದಾಗಿ, ನಿತ್ರಾಣ
ರೋಗಿಯಂತೆ ಕಾಣುವನು. ಇದೇ ಜ್ವರಗಡ್ಡೆ ಮುಂದೆ
ಎಣಿಸುವದು ಟಗ್ಗೆ ಇದು ಕಠಿಣವಾಗಿ ಮನುಷ್ಯನು ಮ
ವನು. ಆದ್ದರಿಂದ ಈ ಜ್ವರಗಡ್ಡೆಯು ಪ್ರಾರಂಭವಾದೊ
ಯ ಔಷಧವನ್ನು ಸೇವಿಸಿ ರೋಗಗಳು ಪದ್ಯಥವಾಗಲು

15ದಿವಸದ ಔಷಧಕ್ಕೆ 3–8–

೧೯ ವಸಂತ ಮಾಲಿನಿ ತೈ

ಈ ಸುವಾಸನೆಯ ಎಣ್ಣೆಯನ್ನು ತಲೆಗೆ ಇಡುವದರಿ
ಬಲ ಉಂಟಾಗುವದಲ್ಲದೆ ಕಪ್ಪಾಗಿಯೂ ಮೃದುವಾಗಿಯ
ಬೆಳೆಯುತ್ತವೆ. ಶಿರೋವಾತ, ತಲೆನೋವು, ಕಣ್ಣುರಿ ಇವು
ತಂಪನ್ನುಂಟುಮಾಡಿ ಮೆದುಳಿಗೆ ಬಲವನ್ನುಂಟುಮಾಡು
ಮಾನಸಿಕ ಶ್ರಮಪಡುವವರಿಗೂ ವಿದ್ಯಾರ್ಥಿಗಳಿಗೂ ಇದು
ಗಿರುವದು. **ಕಿಮ್ಮತು ಬಾಟ್ಲಿಗೆ ರೂ. 1–0–0;**

೨೦ ಮದನೋದ್ಭವ ಗುಳಿ

ಜನನೇಂದ್ರಿಯದ ಶಿಥಿಲತೆ, ನಿರ್ಜಲತೆ, ನಪುಂಸಕ
ವಸ್ಥೆ ಮೊದಲಾದುವು ಈ ಗುಳಿಗೆಯ ಸೇವನೆಯಿಂದ ಗು
ಪೌಷ್ಟಿಕ, ವೀರ್ಯವರ್ಧಕ, ರಕ್ತ ಶೋಧಕ, ಕಾಮೋತ್ತೇ
ಹಕ, ಇಂದ್ರಿಯ ಸ್ತಂಭಕ, ಗರ್ಮಿ (ಟಾಕಿ) ಗುಪ್ತಪ್ರದೇ
ರುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾ
ವಾತರೋಗ ಮುಂತಾದವು ಆಶ್ಚರ್ಯ ಗುಣವಾಗಿ ಶರೀ
ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾ
60ಗುಳಿಗೆಗಳು ಬೇಕಾಗಿರುವವು. **ಕಿಮ್ಮತು 12ಗುಳಿಗೆ**

೨೧ ಕೇಶನಾಶಕ ವಟಿ.

ಇದನ್ನು ಕೂದಲು ಉದುರುವಜಾಗಕ್ಕೆ ಈ ವಟಿ
ನೀರಿನೊಳಗೆ ಕಲಿಸಿ ಹಚ್ಚಿಕೊಂಡು 5 ನಿಮಿಷದನಂತರ
ಉದುರಿಹೋಗಿ ಸಾಫ್ ಆಗುವದು. ಉರಿಯುವದೂ
ದೂ ಇಲ್ಲ. **ಕಿಮ್ಮತು ಡಬ್ಬಿಗೆ 0–8–0.**

[3 ನೆಯ ಪುಟದಿಂದ ಮುಂದೆ ಸಾಗಿದುದು.]

ಟೆಕ್ನಿಕಲ್ ಇಲಾಖೆಗಳು.

ಮರಾಮತ್ ಇಲಾಖೆ.

ಲೋಕಲ್ ಫಂಡ್ ದೇವೇಲು ಎಲ್ಲಾ ಬಾಬುಗಳಿಂದಲೂ ಮರಾಮತ್ ಕೆಲಸಗಳಿಗಾಗಿ ಒಟ್ಟು ಖರ್ಚು ಹಿಂದಿನ ಸಾಲಿನಲ್ಲಿ 51 ಲಕ್ಷ ರೂಪಾಯಿಯಾಗಿರುವಲ್ಲಿ, ಪ್ರಸಕ್ತ ವರ್ಷದಲ್ಲಿ ಸುಮಾರು 59¼ ಲಕ್ಷ ರೂಪಾಯಿಯಾಗಿರುತ್ತದೆ. ಈ ಮೊಬಲಗಿನ ಪೈಕಿ, ನೀರಾವರಿ ಕೆಲಸಗಳಿಗಾಗಿ 29¼ ಲಕ್ಷ ರೂಪಾಯಿಯನ್ನೂ, ಸಿವಿಲ್ ಕಾಮಗಾರಿಗಳಿಗಾಗಿಯೂ ಮಿಲಿಟರಿ ಕಟ್ಟಡಗಳಿಗಾಗಿಯೂ 20¼ ಲಕ್ಷ ರೂಪಾಯಿಗಳನ್ನೂ ಖರ್ಚು ಮಾಡಿರುತ್ತದೆ.

[redacted]

ಕನ್ನಂಬಾಡಿ ಬಳಿ ಕಾವೇ
ತ್ತಿರುವ ಜಲಾಶಯದ ಕಾಮಗಾ
ವೃದ್ಧಿಯಾಗುತ್ತಲಿದೆ. ನದೀ ಪಾ
ಆಗಬೇಕಾಗಿದ್ದ ಕಷ್ಟಕರವಾದ
ರ್ಷದಲ್ಲಿ ಪೂರಯಿಸಿತು. ಕಳ್ಳಿನ
ದೀ ಪಾತ್ರದ ಮೇಲೆ 44 ಅಡಿ
ದಲ್ಲಿ 36 ಅಡಿ ಎತ್ತರದ ವರೆಗೂ
ಮಧ್ಯಭಾಗದಲ್ಲಿ ಸಂದುಬಿಟ್ಟಿರು
ಟ್ಟದ ವರೆಗೆ ನೀರು ಜಮಾಯಿ
ಯೇ ಒಂದು ಪವರ್ ಸ್ಟೇಷನ
ಆದ ಪಂಪಿಂಗ್ ಸ್ಟೇಷನಿಗೂ.
ಯಲ್ಲಿರುವ ಇತರ ಪ್ರದೇಶಗಳಿ
ಸುವುದಕ್ಕೋಸ್ಕರ, ಅಣೆಕಟ್ಟಿ
ರುವ (Turbine) ತೊಬುಗ
ಳನ್ನು ಮಾಡುತ್ತಲಿದೆ.

ನೀರುಮುಳುಗಡೆಗೆ ಬಂದ
ಅವರ ಜಮೀನುಗಳಿಗೆ ಬದಲಿ
ಒದಗಿಸಿಕೊಡುವುದಕ್ಕೋಸ್ಕರ,
ಇತರ ಏರ್ಪಾಟುಗಳನ್ನು ಮಾ
ನಾಲೆಗಳನ್ನು ಕಟ್ಟಿಸುವುದಕ್ಕೆ
ರುತ್ತಾರೆ. ಈ ಪೈಕಿ ಎರಡು ಕ
ವಾಗಿದೆ. ಉಳಿದ ಎರಡು ನಾಲೆ
ಕ್ರಮಿಸಲಾಗುವುದು. ಜಲಾಶ
ಹೆಚ್ಚು ಪ್ರದೇಶವನ್ನು ನೀರಾವರಿಗೆ
ಧಾರಣೆ ಬಾಳುವ ಕಬ್ಬು, ಉಸಿ
ಫಸಲುಗಳನ್ನು ಬೆಳೆಯುವುದಕ್ಕೆ
ಕ್ಕಾಗಿಯೂ ಮಾಡಬೇಕಾದ ಏ

ನೀರಾವರಿ ಕೆಲಸ

ಶಾಸ್ತ್ರೀಯ ಕ್ರಮದಿಂದ
ಡಿಸುವುದಕ್ಕಾಗಿ ಮೂರುವರ್ಷ
ಸಾಲಿಯಾನ 30,000 ರೂಪಾ
ಒಂದು ಇರ್ರಿಗೇಷನ್ ಡಿವಿಜನ
ಡಿವಿಜನಿಗೆ ವಹಿಸಿಕೊಟ್ಟ ಕೆಲಸ
ನ್ಯಾಸದಲ್ಲಿಯೇ ವಿವರಿಸಿರುತ್ತದೆ.

ವಿದ್ಯುಚ್ಛಕ್ತಿ

ಕಾವೇರೀ ವಿದ್ಯುಚ್ಛಕ್ತಿಯ
ನೆಯ ಕಾಮಗಾರಿಯು ಪ್ರಸಕ್ತ
ಚೆನ್ನಾಗಿ ನಡೆದು ಇರುವುದಲ್ಲದೆ,
ಪೂರೈಸುವುದಕ್ಕೆ ಮೊದಲೇ ವ
ಇದೆ. ವಿದ್ಯುಚ್ಛಕ್ತಿಯನ್ನು ವ
ಉಪಯೋಗಿಸುವುದನ್ನು ಪ್ರೋ
ರ್ಷದಲ್ಲಿ ಸದರಿ ಶಕ್ತಿಯ ದರಗ
ಬೆಂಗಳೂರಲ್ಲಿ ಎಲೆಕ್ಟ್ರಿಕ್ ಟ್ರಾ
ಮಾಡಲ್ಪಟ್ಟ ಅಂದಾಜುಗಳನ್ನು
ತು ಮತ್ತು ಹೊಸ ಕೆಲಸಗಳನ್ನು
ಅಂದಾಜಾಗಿರುವ ಮೊಬಲಗಿನ
ಸ್ಟೇಷನಿನವರು ಕೊಡಬೇಕಾದ
ವಿಚಾರವು ವ್ಯವಸ್ಥೆಯಾದ ಕೂ
ಪುನಃ ನಡಿಸಲಾಗುವುದು.

ರೈಲ್ವೇ

1900 ನೆಯ ಇಸವಿಯ
ಮೈಲಿಗಳ ಫಾಸಲೇ ರೈಲ್ವೇರಸ್ತೆ
ದಕ್ಕಾಗಿ 223 ಲಕ್ಷ ರೂಪಾಯಿ
ಲಿತು. 1911 ನೆಯ ಇಸವಿಯ
ಹೆಚ್ಚದೇ ಇದ್ದಹಾಗೆಯೇ ಇದ್ದಿ

1911 ನೆಯ ನವೆಂಬರ್
ಖ್ 124-11-12ನೆಯ ನಂಬ
ಲಕ ಮುಂಜೂರಾದ ರೈಲ್ವೆ
ಈಗಿರುವ ಫಾಸಲೆಯ ಜೊತೆಗೆ ಒಟ್ಟು 130 ಲಕ್ಷ ರೂಪಾಯಿ
ಲಾಗವಡು ತಗಲುವ ಇನ್ನೂ 259¼ ಮೈಲಿ ಫಾಸಲೆ ರೈಲ್ವೆ
ಹಾಕುವುದಕ್ಕೆ ಏರ್ಪಾಡನ್ನು ಮುಂಜೂರು ಮಾಡಲಾಯಿತು.

ಬೇರೆ ಬೇರೆ ತರಹೆ ಗೇಜುಗಳುಳ್ಳ 259 ಮೈಲಿ ಫಾಸಲೆ ರೈಲ್ವೆಗಳನ್ನು ಹಾಕತಕ್ಕ ಬಗ್ಗೆ, 110 ಲಕ್ಷ ರೂಪಾಯಿ ತಗಲುವ ಅಂದಾಜುಗಳನ್ನು ಮಂಜೂರಾದ ಪಟ್ಟಿಗೆ ದಾಖಲ್ ಮಾಡಲಾಯಿತು. 30.69 ಮೈಲಿ ರಸ್ತೆಗಾಗಿ 12.72 ಲಕ್ಷ ರೂಪಾಯಿ ಲಾಗವಡು ಬೀಳುವ ಅಂದಾಜುಳ್ಳ ಬೆಂಗಳೂರು ಹೊಸೂರು ರೈಲಿಗಾಗಿ ಒಂದು ಏರ್ಪಾಡು ಇನ್ನೂ ರೈಲ್ವೇ ಬೋರ್ಡಿನವರ ಇತ್ಯರ್ಥದಲ್ಲಿರುತ್ತದೆ. 94 ಲಕ್ಷ ರೂಪಾಯಿ ಲಾಗವಡಿನ ಅಂದಾಜಿನಮೇಲೆ ಬೇರೆ 146 ಮೈಲಿ ಫಾಸಲೆಯ ರಸ್ತೆಗಳನ್ನು ಹಾಕುವುದಕ್ಕಾಗಿ ಕಾಂಗಾರಿ ಏರ್ಪಾಟುಗಳು ಸಿದ್ಧವಾಗಿವೆ. ಇವುಗಳಿಗಾಗಿ ಹಣವನ್ನು ಹೇಗೆ ಒದಗಿಸಬೇಕು? ಇವುಗಳಿಗೆ ಯಾವರೀತಿ ಕಾಂಗಾರಿ ಮಾಡಿಸಿ ಅವುಗಳನ್ನು ಆಡಳಿತದಲ್ಲಿಟ್ಟುಕೊಳ್ಳಬೇಕು? ಎಂಬ ವಿಷಯಗಳು ಪರ್ಯಾಲೋಚನೆಯಲ್ಲಿರುತ್ತವೆ. ಶಿವಮೊಗ್ಗಾ ಡಿಸ್ಟ್ರಿಕ್ಟಿನ ರೈಲ್ವೆ ಶಾಖೆಗಳಿಗಾಗಿಯೂ, ಹೆಬ್ಬೆ ಮತ್ತು ಕಾಕನಕೋಟೆ ಟ್ರಾಂವೆಗಳಿಗಾಗಿಯೂ, ಆಳತೆಯ ಕೆಲಸಗಳನ್ನು ಕೈಗೊಳ್ಳಲು ತಕ್ಕ ತರದೂದನ್ನು ಮಾಡುತ್ತಲಿದೆ.

ನಮ್ಮ ದೇಶದ ರೈಲ್ವೆ ಮಾರ್ಗಗಳನ್ನು, ಸುತ್ತಲೂ ಇರುವ

ಗಿ ಉತ್ಪತ್ತಿಯಾದಂತೆ ಆಯಿತು. ಇದರಿಂದ ಸರ್ಕಾರಕ್ಕೆ ಸುಮಾರು 18,91,486 ರೂಪಾಯಿನ ರಾಜಾಯವು ದೊರಕಿತು. 1912-13 ನೆಯ ವರ್ಷದಲ್ಲಿ 18,99,971 ರೂಪಾಯಿ ರಜಾಯವು ಬಂದಿರುತ್ತದೆ.

ಲೋಕಲ್ ಸೆಲ್ಫ್ ಗೌರ್ನ್ಮೆಂಟ್.

ಮ್ಯುನಿಸಿಪಲ್ ಫಂಡುಗಳು:

ಈ ವರ್ಷ ಮ್ಯುನಿಸಿಪಲ್ ಫಂಡುಗಳ ಬಾಬಿನಲ್ಲಿ ಆದಾಯವು ಸುಮಾರು 10,97,000 ರೂಪಾಯಿಯೂ, ವ್ಯಯವು ಸುಮಾರು 10,01,000 ರೂಪಾಯಿಯೂ ಆಯಿತು. ಈ ವ್ಯಯದ ಬಾಬತು ಮೊಬಲಗಿನಲ್ಲಿ 2,87,000 ರೂಪಾಯಿಗಳನ್ನು ಮರಾಮತ್ ಕಾಂಗಾರಿಗಳಿಗಾಗಿಯೂ, 2,31,000 ರೂಪಾಯಿಗಳನ್ನು ಕನ್ಸರ್ವೆನ್ಸಿಗಾಗಿಯೂ, ಉಳಿದದ್ದನ್ನು ಇತರ ಬಾಬುಗಳಿಗಾಗಿಯೂ ಖರ್ಚು ಮಾಡಲಾಯಿತು.

ಎರಡು ಲಕ್ಷ ರೂಪಾಯಿಗಿಂತ ಹೆಚ್ಚು ಖರ್ಚು ತಗಲಬಹುದೆಂದು ಅಂದಾಜಾ ಕಟ್ಟಿರತಕ್ಕ ದಾವಣಗೆರೆ ನಗರದ ನೀರಿನ ಸರಬರಾಯಿ ಏರ್ಪಾಡಿಗೆ ದ್ರವ್ಯವನ್ನು ಕೊಡುವ ವಿಷಯವನ್ನು ಈ ವರ್ಷ ತೃಪ್ತಿಕರವಾಗಿ ವ್ಯವಸ್ಥೆ ಮಾಡಲಾಯಿತು. ಇದಕ್ಕಾಗಿ ಸರ್ಕಾರದವರು 30,008 ರೂಪಾಯಿಗಳಷ್ಟು ಸಹಾಯದ್ರವ್ಯವನ್ನು ಕೊಡುವದಲ್ಲದೆ, ಶಿಬ್ಬಂದಿಯ ಮತ್ತು ಯಂತ್ರ

ದ್ದಕ್ಕಿಂತ ಈ ವರ್ಷ ಕಡಿಮೆಯಾಗಿ ಕೆಲಸ ನಡೆಯಿತು. ಈ ಛಾಪಾಖಾನೆಯ ಖರ್ಚು ಹಿಂದಣವರ್ಷ 1,06,266 ರೂಪಾಯಿ ಖರ್ಚಾಗಿರುವಲ್ಲಿ, ಈ ವರ್ಷ 1,05,485 ರೂಪಾಯಿ ಆಯಿತು. ಹೀಗೆ ಕೆಲಸವೂ ಖರ್ಚೂ ಕಡಮೆಯಾದದ್ದಕ್ಕೆ, ಕೆಲವು ಭಾಗ ಕೆಲಸವನ್ನು ಮೈಸೂರಿನ ಬ್ರಾಂಚ್ ಪ್ರೆಸ್ಸಿಗೆ ಕಳುಹಿಸಿದ್ದೂ, ಬೇರೆಬೇರೆ ಇಲಾಖೆಯವರು ಮಾಡಿಸಿದ ಮುದ್ರಣದ ಕೆಲಸವು ಒಟ್ಟಿನಮೇಲೆ ಕಡಿಮೆಯಾಗಿದ್ದದ್ದೂ, ಮತ್ತು ಕೆಲವು ಮುದ್ರಣದ ಕೆಲಸಗಳನ್ನು ಖಾಸಗಿ ಛಾಪಾಖಾನೆಗಳಲ್ಲಿ ನಡೆಯಿಸಿದ್ದೂ, ಕಾರಣಗಳಾಗಿರುತ್ತವೆ.

ಸರ್ಕಾರೀ ಛಾಪಾಖಾನೆಯಲ್ಲಿ ನಡೆಯುವ ಕೆಲಸವನ್ನು ಸಾಧ್ಯವಾದರೆ, ಇನ್ನೂ ಕಡಿಮೆಮಾಡಬೇಕೆಂಬ ವಿಷಯವು ಪರ್ಯಾಲೋಚನೆಯಲ್ಲಿದೆ.

ರಿಜಿಸ್ಟರ್ ಮಾಡಲ್ಪಟ್ಟ ಪುಸ್ತಕಗಳ ಮತ್ತು ಕಾಲಕಾಲಕ್ಕೆ ಪ್ರಕಟಿಸುವ ಮಾಸಪತ್ರಿಕೆಗಳ ಸಂಖ್ಯೆಯು ಹಿಂದಿನವರ್ಷ 128 ಇದ್ದದ್ದಕ್ಕೆ, ಈ ವರ್ಷ 117 ಇದ್ದವು.

ಪ್ರಾಚೀನ ಲೇಖನಾನ್ವೇಷಣದ ಇಲಾಖೆ.

ಮಿ॥ ರೈಸ್‌ರವರು ಬರೆದ ಮೈಸೂರು ಗೆಜಿಟಿಯರ್ ಎಂಬ ಪುಸ್ತಕವನ್ನು ಚಾಲ್ತೀಕಾಲದವರೆಗೆ ಸಮಗ್ರವಾಗಿರುವಂತೆ ಮಾಡುವುದಕ್ಕಾಗಿ ಅದನ್ನು ಪುನರ್ವಿಮರ್ಶೆ ಮಾಡಲು ತಕ್ಕ ಏರ್ಪಾಟನ್ನು ಮಾಡಿ ಇದೆ. ಪ್ರಾಚೀನ ಲೇಖನಾನ್ವೇಷಣದ ಛಾರ್ಜಿನ ಆಫೀಸರ ಕೆಲಸಗಳ ಜತೆಗೆ ಈ ಕೆಲಸವನ್ನೂ, ಪ್ರಾಕ್ತನ ವಿಮರ್ಶ ವಿಚಕ್ಷಣ ಮಿ॥ ಆರ್. ಎ. ನರಸಿಂಹಾಚಾರ್ಯರವರಿಗೆ ವಹಿಸಿರಲಾಗಿರುತ್ತದೆ. ಮುಂದಿನ ಮೂರುವರ್ಷಗಳವರೆಗೆ ಈ ಇಲಾಖೆಯಲ್ಲಿ ನಡೆಯಬೇಕಾಗಿರುವ ನಿಷ್ಕೃಷ್ಟವಾದ ಕಾರ್ಯಕ್ರಮವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಅರ್ಥೋತ್ಪತ್ತಿ ಸಾಧನಗಳನ್ನು ಪುಷ್ಟೀಕರಿಸುವುದು.

ಈ ವರ್ಷದಲ್ಲಿ ರಾಜ್ಯದ ಆಡಳಿತಕ್ಕೆ ಸಂಬಂಧಪಟ್ಟ ಮುಖ್ಯಾಂಶಗಳನ್ನು ತಿಳಿಸಿ, ಅರ್ಥೋತ್ಪತ್ತಿ ಸಾಧನಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಮಾಡಿರುವ ಕೆಲವು ಭಾರೀ ಏರ್ಪಾಡುಗಳನ್ನು ಸಂಕ್ಷೇಪವಾಗಿ ತಿಳಿಯಪಡಿಸಿದರೆ ಅಯುಕ್ತವಾಗಿರಲಾರದು.

ಇಂಥಾ ಏರ್ಪಾಡುಗಳ ಪೈಕಿ ಏಳು ಗಣನಾರ್ಹವಾಗಿರುತ್ತವೆ. ಅವುಗಳಲ್ಲಿ ಒಂದು ವಿನಾ ಮಿಕ್ಕವೆಲ್ಲಾ ಶೀಘ್ರವಾಗಿ ಅಭಿವೃದ್ಧಿಯನ್ನು ಹೊಂದುತ್ತಲಿವೆ. ಇವು ಯಾವುವೆಂದರೆ:—

(1) ರೈಲುಗಳನ್ನು ಹಾಕಿ ಅವುಗಳನ್ನು ನಡಿಸುವುದು.
(2) ಕನ್ನಂಬಾಡಿ ಬಳಿಯಲ್ಲಿ ಕಾವೇರೀ ಜಲಾಶಯವನ್ನು ಕಟ್ಟಿಸುವುದು.
(3) ಕಾವೇರೀ ವಿದ್ಯುಚ್ಛಕ್ತಿಯ ಏರ್ಪಾಡನ್ನು ಇನ್ನೂ ಅಭಿವೃದ್ಧಿಪಡಿಸುವುದು.
(4) ಸಣ್ಣ ಕೆರೆಗಳನ್ನು ಕಟ್ಟಿಸಿ ಅವುಗಳನ್ನು ದುರಸ್ತು ಮಾಡಿಸುವುದು.
(5) ಮಲೆನಾಡು ಅಭಿವೃದ್ಧಿಯ ಕ್ರಮ.
(6) ಗ್ರಾಮಾಭಿವೃದ್ಧಿ ಕ್ರಮ ಮತ್ತು
(7) ಸಂಪದಭ್ಯುದಯ ಸಮಾಜದ ನಡವಳಿಕೆಗಳು.

ರೈಲ್ವೆಗಳನ್ನು ಹಾಕಿ ಅವುಗಳನ್ನು ನಡಿಸುವುದು.

1900 ರಿಂದ 1911 ರ ವರೆಗೆ, ಎಂದರೆ ಸುಮಾರು 12 ವರ್ಷಗಳವರೆಗೆ ಈ ಸಂಸ್ಥಾನದಲ್ಲಿ ರೈಲ್ವೆ ಕೆಲಸಗಳ ವಿಚಾರವಾದ ಉತ್ಸಾಹವು ಸಂಪೂರ್ತಿಯಾಗಿ ನಿಂತುಹೋಗಿತ್ತು. ಬ್ರಿಟಿಷ್ ಇಂಡಿಯಾದಲ್ಲಿನ ಜನಸಂಖ್ಯೆಯನ್ನು ಇಲ್ಲಿನ ಜನಸಂಖ್ಯೆಯೊಡನೆ ಹೋಲಿಸಿ ನೋಡಲಾಗಿ, ಮೈಸೂರಿನಲ್ಲಿರತಕ್ಕ ರೈಲ್ವೆಗಳ ಫಾಸಲೆಯು, ಅಲ್ಲಿ ಹಾಕಿರುವ ರೈಲ್ವೆಗಳ ಫಾಸಲೆಗಿಂತಲೂ ಕಮ್ಮಿಯಾಯಿತು ಎಂಬ ಸಂಗತಿಯು ನಿಮಗೆ ಗೊತ್ತಿರಬಹುದು. 1911 ರಿಂದ ಈಚೆಗೆ ರೈಲ್ವೆ ಹಾಕುವುದನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಎಡೆಬಿಡದ ಪ್ರಯತ್ನವನ್ನು ಮಾಡಲಾಗಿದೆ. ಈಗ 130 ಮೈಲಿಯಷ್ಟು ರೈಲ್ವೆ ಕಾಂಗಾರಿಯು ನಡೆಯುತ್ತಲಿದೆ.

ರೈಲು ಹಾಕುವ ಕೆಲಸವನ್ನು ಪುನಃ ಪ್ರಾರಂಭಿಸಿದಮೇಲೆ, ಹೊಸದಾಗಿ ಹಾಕಿದ ರೈಲುಗಳ ಪೈಕಿ ಮೊದಲನೆಯದಾದ ಕೋಲಾರದಿಂದ ಬೌರಿಂಗ್‌ಪೇಟೆಗೆ ಹೋಗುವ ರೈಲುಬಿಡತಕ್ಕ ಪ್ರಾರಂಭೋತ್ಸವವನ್ನು ಕಳೆದ ಡಿಸೆಂಬರು ತಿಂಗಳಲ್ಲಿ ಘನತೆಯನ್ನೈದಿದ ಶ್ರೀಮನ್ಮಹಾರಾಜರವರು ನಡಿಸಿದರು.

ಆಯಾ ಡಿಸ್ಟ್ರಿಕ್ಟಿನಲ್ಲಿರುವ ಜನರು ರೈಲ್ವೆ ಹಾಕುವ ಕೆಲಸಗಳಿಗಾಗಿ ತಮ್ಮ ದ್ರವ್ಯವನ್ನು ವಿನಿಯೋಗಿಸುತ್ತಿರುವ ಅಂಶವು ಸಂತೋಷವನ್ನುಂಟುಮಾಡತಕ್ಕದ್ದಾಗಿದೆ.

ನಮ್ಮ ಡಿಸ್ಟ್ರಿಕ್ಟುಗಳಲ್ಲಿ ಸಾಕಾದಷ್ಟು ಸಂಚಾರಸಾಧನಗಳನ್ನು ಕಲ್ಪಿಸಿ, ಈ ಸಂಸ್ಥಾನದ ವ್ಯವಸಾಯ ವ್ಯಾಪಾರಗಳನ್ನು ಉಚ್ಛ್ರಾಯಸ್ಥಿತಿಗೆ ತರುವುದಕ್ಕಾಗಿ ಸುಮಾರು 1,000 ಮೈಲಿ ಉದ್ದ ರೈಲನ್ನು ಹಾಕಬೇಕಾಗುತ್ತದೆ. ರೈಲ್ವೆ ಚಲಾವಣೆಯಲ್ಲಿರುವಾಗ ರೈಲ್ವೆ ನೌಕರಿಯಿಂದ ಈ ಸಂಸ್ಥಾನದ ಜನರಿಗೆ ಲಾಭಕರವಾದ ಜೀವನೋಪಾಯಗಳನ್ನು ಉಂಟುಮಾಡಬೇಕೆಂಬ ಅಭಿಪ್ರಾಯವೂ ಇರುತ್ತದೆ. ಈಗಾಗಲೆ ಇದಕ್ಕಾಗಿ 256 ಲಕ್ಷ ರೂಪಾಯಿ ಖರ್ಚು ತಗಲಿರುತ್ತದೆ. 1,000 ಮೈಲಿ ಉದ್ದ ರೈಲು ಹಾಕುವುದನ್ನು ಪೂರೈಸಿದರೆ, ಸುಮಾರು 5 ಕೋಟಿ ರೂಪಾಯಿ ಒಟ್ಟು ಖರ್ಚಾಗುವುದು.

ಕಾವೇರೀ ಜಲಾಶಯವನ್ನು ಕಟ್ಟಿಸುವುದು.

ಕಾವೇರೀ ನದಿಯೊಳಗೆ ಹರಿಯುವ ಹೆಚ್ಚು ನೀರನ್ನು ಮೈಸೂರು ಸಂಸ್ಥಾನದಲ್ಲಿ ಉಪಯೋಗಿಸಿಕೊಳ್ಳತಕ್ಕ ವಿಷಯವಾಗಿ ಈ ಸಂಸ್ಥಾನಕ್ಕೂ ಪಕ್ಕದಲ್ಲಿರುವ ಮದರಾಸಾಧಿಪತ್ಯಕ್ಕೂ ಕಳೆದ 3-4 ವರ್ಷಗಳಿಂದ ದೀರ್ಘವಾದ ವಿವಾದ ನಡೆದ ಬಳಿಕ, ಹೋದವರ್ಷ ಇಂಡಿಯಾ ಸರ್ಕಾರದವರು, ಈ ವಿಷಯವನ್ನು ಸಮರ್ಥರಾದ ಮೆಂಬರುಗಳುಳ್ಳ ಒಂದು ಆರ್ಬಿಟ್ರೇಷನ್ ಕಮಿಟಿಗೆ ವಿಚಾರಣೆಗಾಗಿ ಕಳುಹಿಸತಕ್ಕದ್ದೆಂದು ನಿರ್ಣಯಿಸಿದರು. ಸದರಿ ಕಮಿಟಿಯವರು ಈ ವಿಷಯವನ್ನು ಸುಮಾರು ಹತ್ತು ತಿಂಗಳವರೆಗೂ ಕ್ರಮವಾಗಿ ವಿಚಾರಣೆಮಾಡಿ, ಕಳೆದ ಮೇ ತಿಂಗಳಲ್ಲಿ ತಮ್ಮ ತೀರ್ಮಾನವನ್ನು ಇಂಡಿಯಾ ಸರ್ಕಾರದವರಿಗೆ ಕಳುಹಿಸಿಕೊಟ್ಟರು. ಘನತೆಯನ್ನೈದಿದ ಶ್ರೀಮನ್ ಮಹಾರಾಜರವರ ಸರ್ಕಾರದವರೂ, ಈ ಸಂಸ್ಥಾನದಲ್ಲಿರುವ ಕಾವೇರೀ ತೀರದ ನೀರಾವರೀ ಪ್ರದೇಶವನ್ನು ಅಭಿವೃದ್ಧಿಗೆ ತರುವುದರಲ್ಲಿ ಆಸಕ್ತರಾದ ಅನೇಕ ಜನರೂ ಸಹ, ತಮ್ಮ ಹಕ್ಕು ಬಾಧ್ಯತೆಗಳು ನ್ಯಾಯಸಮ್ಮತವಾಗಿವೆಯೆಂದು ನಂಬಿರುವುದಲ್ಲದೆ, ಈ ಮುಖ್ಯವಾದ ವಿಷಯದಲ್ಲಿ ಇಂಡಿಯಾ ಸರ್ಕಾರದವರ ತೀರ್ಮಾನವನ್ನು ಅತ್ಯಾಸಕ್ತಿಯಿಂದ ನಿರೀಕ್ಷಿಸುತ್ತಿದ್ದಾರೆ.

ಸಹಜವಾಗಿ ಸಮುದ್ರಕ್ಕೆ ಬಿದ್ದು ವ್ಯರ್ಥವಾಗುತ್ತಿರುವ ಕಾವೇರೀನದಿಯ ಹೆಚ್ಚು ನೀರನ್ನು ತಡೆದು ನಿಲ್ಲಿಸುವುದೇ ಕನ್ನಂಬಾಡಿ ಜಲಾಶಯದ ಏರ್ಪಾಡಿನ ಮುಖ್ಯೋದ್ದೇಶವಾಗಿರುತ್ತದೆ. ಈಗಿರತಕ್ಕ ನಾಲೆಗಳಲ್ಲಿ ಸರ್ವದಾ ನೀರು ಹರಿಯುವದು ಸಂದೇಹಾಸ್ಪದವಾಗಿದೆ. ಜಲಾಶಯದಿಂದ ನೀರನ್ನು ಸರ್ವಕಾಲಗಳಲ್ಲಿಯೂ ಖಂಡಿತವಾಗಿ ಒದಗಿಸುವುದಾದರೆ, ಆ ಪ್ರದೇಶದಲ್ಲಿ ಇದುವರೆಗೆ ಬೆಳೆಯಾಗದೆ ಇದ್ದ ಉತ್ತಮವಾದ ಧ್ರುವಪೈರುಗಳನ್ನು ಬೆಳೆಯಿಸುವುದಕ್ಕೆ ಅನುಕೂಲಪಡಿಸಿದಂತೆ ಆಗುವುದು. ಜಲಾಶಯದಲ್ಲಿ ನಿಲ್ಲಿಸಿಕೊಳ್ಳುವ ನೀರಿನಿಂದ ಹಾಲಿ ಇರತಕ್ಕ ಮತ್ತು ಹೊಸದಾಗಿ ತೆಗೆಯುವ ನಾಲೆಗಳ ಕೆಳಗೆ ಸುಮಾರು 10,000 ಎಕರೆ ಜಮೀನಿನಲ್ಲಿ ಕಬ್ಬಿನ ಬೆಳೆ ಇಡಲು ಏರ್ಪಾಡುಗಳನ್ನು ಮಾಡುತ್ತಲಿದೆ.

ಈ ಜಲಾಶಯದಿಂದ ನೀರುಮುಳುಗಡೆಗೆ ಸಿಕ್ಕಿದ ಗ್ರಾಮಗಳ ನಿವಾಸಿಗಳಿಗೆ ಬೇರೆ ಸ್ಥಲಗಳಲ್ಲಿ ವಸತಿಗಳನ್ನು ಕಲ್ಪಿಸಿಕೊಡುವ ವಿಚಾರದಲ್ಲಿ ನಮ್ಮ ಆಫೀಸರುಗಳು ಅನುಕೂಲವಾದ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ.

ಕಾವೇರೀ ವಿದ್ಯುಚ್ಛಕ್ತಿಯ ಏರ್ಪಾಡನ್ನು ಇನ್ನೂ ಅಭಿವೃದ್ಧಿಗೆ ತರುವುದು.

ಹಾಲಿ ಬೇಸಗೆಯಲ್ಲಿ ವಿದ್ಯುಚ್ಛಕ್ತಿಯನ್ನು ಒಂದೇಸಮನಾಗಿ ಸರಬರಾಯಿ ಮಾಡುವದು ಸ್ವಲ್ಪಮಟ್ಟಿಗೆ ಸಂದೇಹಾಸ್ಪದವಾಗಿರುವದರಿಂದ, ಈ ಜಲಾಶಯವನ್ನು ಕಟ್ಟಿಸಿದ್ದೇ ಆದರೆ ಸದರಿ ವಿದ್ಯುಚ್ಛಕ್ತಿಯ ಸರಬರಾಯಿಗೆ ಚ್ಯುತಿಯಿಲ್ಲದಂತೆ ಮಾಡುವುದಕ್ಕೂ, ಸದರಿ ಶಕ್ತಿಯನ್ನು ಸುಮಾರು 11,000 ದಿಂದ 18,000 ಅಶ್ವ ಶಕ್ತಿಯವರೆಗೆ ಹೆಚ್ಚಿಸುವುದಕ್ಕೂ, ಸರ್ಕಾರದವರಿಗೆ ಅನುಕೂಲವಾಗುತ್ತದೆ. ಬರುವ ಜುಲೈ ತಿಂಗಳೊಳಗಾಗಿ ಅವಶ್ಯಕವಾದ ಕೆಲಸಗಳು ಪೂರೈಸುತ್ತವೆಂದು ನಿರೀಕ್ಷಿಸಲಾಗಿದೆಯಲ್ಲದೆ, ಇನ್ನೂ ಹೆಚ್ಚಾದ ಶಕ್ತಿಯು ಬೇಕಾದರೆ, ಇನ್ನೂ ಹೆಚ್ಚು ಕಾಂಗಾರಿಗಳನ್ನು ನಡೆಯಿಸಲಾಗುವದು.

ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಕೈಗಾರಿಕೆ ಕೆಲಸಗಳಿಗೆ ವಿದ್ಯುಚ್ಛಕ್ತಿಯನ್ನು ಹೆಚ್ಚಾಗಿ ಉಪಯೋಗಿಸುವಂತೆ ಮಾಡಿ ಸದರಿ ಶಕ್ತಿಯ ಸರಬರಾಯಿಗೆ ಖಾಯಂ ಗಿರಾಕಿಗಳನ್ನು ಹೆಚ್ಚಿಸತಕ್ಕದ್ದು, ವಿದ್ಯುಚ್ಛಕ್ತಿ ಇಲಾಖೆಯವರ ಒಂದು ಕರ್ತವ್ಯವಾಗಿರುತ್ತದೆ.

ಸಣ್ಣ ಕೆರೆಗಳು ಮತ್ತೂ ಮರಾಮತ್ತು ಶಿಬ್ಬಂದಿ.

ಈ ವರ್ಷದಲ್ಲಿ ಸಣ್ಣ ಕೆರೆಗಳ ವಿಷಯಕ್ಕೆ ಹೆಚ್ಚಾಗಿ ನಿಗಾ ಕೊಟ್ಟಿರಲಾಗಿದೆ. ಡಿಸ್ಟ್ರಿಕ್ಟುಗಳಿಗೆ ಬೇಕಾದ ಮರಾಮತ್ತು ಶಿಬ್ಬಂದಿಯನ್ನು ಸರ್ಕಾರದವರು ಹೆಚ್ಚಿಸಿ ಇದಕ್ಕಾಗಿ 42,312 ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಸಣ್ಣ ಕೆರೆಗಳ ದುರಸ್ತಿಗೆ ಕೊಟ್ಟಿರುವ ಗ್ರಾಂಟು ಮೊಬಲಗು ಈಗ 2,00,000 ರೂಪಾಯಿಗೆ ಬಂದಿರುತ್ತದೆ. ಬೇಕಾದರೆ ಈ ಗ್ರಾಂಟನ್ನು ಇನ್ನೂ ಜಾಸ್ತಿ ಮಾಡುವುದಕ್ಕೆ ಸರ್ಕಾರದವರು ಸಿದ್ಧರಾಗಿರುತ್ತಾರೆ.

ಒಂದು ಕೆರೆಯಿಂದ ಪ್ರಯೋಜನವನ್ನು ಪಡೆಯುತ್ತಿರುವ ಗ್ರಾಮದ ಯಾ ಗ್ರಾಮಗಳ ಜನಗಳಿಗೆ ಗ್ರಾಂಟ್ ಮೊಬಲಗನ್ನು ಕೊಡುವುದರಿಂದ, ಅಥವಾ ಕಂದಾಯವನ್ನು ರೆಮಿಷನ್ ಮಾಡುವ ಅಥವಾ ಇತರ ವಿಧವಾದ ರಿಯಾಯತಿ ತೋರಿಸುವುದರಿಂದ, ಅವರೇ ಆ ಕೆರೆಯನ್ನು ಸ್ವಪ್ರಯತ್ನದಿಂದ ಆಬಾದಿಗೆ ತರುವಂತೆ ಅಥವಾ ದುರಸ್ತು ಮಾಡಿಕೊಳ್ಳುವಂತೆ ಪ್ರೋತ್ಸಾಹಿಸತಕ್ಕ ಬಗ್ಗೆ ಒಂದು ಏರ್ಪಾಟು ಪರ್ಯಾಲೋಚನೆಯಲ್ಲಿರುತ್ತದೆ. ಮುಂದೆ ಅನೇಕ ವರ್ಷಗಳ ವರೆಗೆ ಜನಗಳು ಸರ್ಕಾರದವರೊಡನೆ ಸೇರಿ ಕೆಲಸಗಳನ್ನು ಜರುಗಿಸಿ ವಿಶೇಷ ಪ್ರಯೋಜನವನ್ನು ಪಡೆಯಬಹುದಾದ ಏರ್ಪಾಡುಗಳ ಪೈಕಿ ಇದೂ ಒಂದಾಗಿರುತ್ತದೆ.

ಮಲೆನಾಡು ಅಭಿವೃದ್ಧಿಯ ಏರ್ಪಾಡು.

ಶಿವಮೊಗ್ಗಾ, ಕಡೂರು, ಹಾಸನ—ಈ ಮೂರು ಡಿಸ್ಟ್ರಿಕ್ಟುಗಳಲ್ಲಿನ ಮಲೆನಾಡು ಪ್ರದೇಶಗಳಿಗೆ ಜನಗಳು ಪುನಃ ಬಂದು ನೆಲಸುವಂತೆ ಮಾಡುವುದಕ್ಕೂ, ಅಲ್ಲಿನ ಆರೋಗ್ಯವನ್ನೂ ಅರ್ಥೋತ್ಪತ್ತಿಯನ್ನೂ ಹೆಚ್ಚಿಸುವುದಕ್ಕೂ, ತಕ್ಕ ಪ್ರಯತ್ನಗಳನ್ನು ಮುತುವರ್ಜಿಯಿಂದ ನಡೆಸಬೇಕೆಂದು ಶ್ರೀಮನ್ಮಹಾರಾಜರವರ ಸರ್ಕಾರದವರು ಉದ್ದೇಶಿಸಿರುತ್ತಾರೆಂಬುದಾಗಿ ಹೋದವರ್ಷ ತಿಳಿಸಿರುತ್ತದೆ. ಇದಕ್ಕಾಗಿ ತಯಾರ್ಮಾಡಿದ ಕಾರ್ಯಕ್ರಮವನ್ನು ಕಳೆದ ಫೆಬ್ರುವರಿಯಲ್ಲಿ ಜಾರಿಗೆ ತರಲಾಯಿತು. ಈ ಕಾರ್ಯದಲ್ಲಿ ಭಾಗಿಗಳಾಗಿರಲು ಡಿಸ್ಟ್ರಿಕ್ಟುಗಳಲ್ಲಿ ಪ್ರಮುಖರಾಗಿರುವವರಿಗೆ ಅವಕಾಶವನ್ನು ಕೊಡುವುದಕ್ಕಾಗಿ, ಸರ್ಕಾರಿ ನೌಕರರ ಜತೆಗೆ ಇತರ ಜನಗಳನ್ನೂ ಸೇರಿಸಿ, ಪ್ರತಿಯೊಂದು ಡಿಸ್ಟ್ರಿಕ್ಟಿಗೂ ಒಂದೊಂದು ಸ್ಥಳೀಯ ಕಮಿಟಿಯನ್ನೂ, ಅವುಗಳು ನಡಿಸುವ ಕಾರ್ಯಗಳನ್ನು ತನಿಖೆಯಿಂದ ವಿಚಾರಿಸತಕ್ಕ ಬಗ್ಗೆ ಒಂದು ಸೆಂಟ್ರಲ್ ಕಮಿಟಿಯನ್ನೂ ಏರ್ಪಾಡುಮಾಡಿ, ಇವುಗಳಿಗೆ ಬೇಕಾದ ದ್ರವ್ಯವನ್ನೂ ತಕ್ಕಷ್ಟು ಶಿಬ್ಬಂದಿಯನ್ನೂ ಕೊಟ್ಟಿದೆ. ಪ್ರಸಕ್ತ ಸಂವತ್ಸರದಲ್ಲಿ ಸದರೀ ಕ್ರಮವು ಜಾರಿಯಲ್ಲಿದ್ದ ಕೆಲವು ತಿಂಗಳೊಳಗೆ ಈ ಕೆಳಗೆ ನಡಿಸಿದ ಅಭಿವೃದ್ಧಿಕಾರ್ಯಗಳ ಪೈಕಿ, ಸ್ವೇಚ್ಛೆಯಾಗಿ ಬೆಳೆದ ಗಿಡ ಗೆಂಟೆಗಳನ್ನು ತೆಗೆದುಹಾಕಿದ್ದನ್ನೂ, ಕುಡಿಯುವ ನೀರಿನ ಸರಬರಾಯಿಯನ್ನು ಅನುಕೂಲಪಡಿಸಿದ್ದನ್ನೂ, ಅನಾರೋಗ್ಯಕರವಾದ ಗ್ರಾಮಗಳನ್ನು ಬೇರೆ ಕಡೆ ಕಟ್ಟಿಸಿದ್ದನ್ನೂ, ಕೊಯಿನಾ ಉಪಯೋಗವನ್ನು ಜನಗಳ ಬಳಕೆಗೆ ತಂದದ್ದನ್ನೂ, ದೇವಿ ಹಾಕಿಸಿಕೊಳ್ಳುವುದರಿಂದುಂಟಾಗುವ ಪ್ರಯೋಜನವನ್ನು ಪ್ರಚುರಗೊಳಿಸಿದ್ದನ್ನೂ, ದೇಹವನ್ನೂ ಮನೆಗಳನ್ನೂ ಶುಚಿಯಾಗಿ ಇಟ್ಟುಕೊಳ್ಳುವುದಕ್ಕೆ ಸಂಬಂಧಪಟ್ಟ ಆರೋಗ್ಯಸೂತ್ರಗಳನ್ನು ಜನರ ತಿಳುವಳಿಕೆಗೆ ತಂದದ್ದನ್ನೂ ತಿಳಿಸಬಹುದಾಗಿದೆ. ಮಲೇರಿಯಾ ಉಪದ್ರವವನ್ನು ಹರಡುವುದಕ್ಕೆ ಯಾವ ವಿಧವಾದ ಸೊಳ್ಳೆಯು ಕಾರಣವಾಗಿದೆ ಎಂಬುದನ್ನು ಕಂಡುಹಿಡಿಯುವುದಕ್ಕಾಗಿ, ಮಲೇರಿಯಾ ಸರ್ವೆಯನ್ನೂ, ಶೋಧನಾಲಯದಲ್ಲಿ ಪರೀಕ್ಷೆಗಳನ್ನೂ ಮಾಡಲುಪಕ್ರಮಿಸಿದೆ. ಇಂಥ ಸರ್ವೆಯನ್ನೂ ಪರಿಶೋಧನೆಯನ್ನೂ ಮಾಡತಕ್ಕ ವಿಧಾನವನ್ನು ತಿಳಿಸುವುದಕ್ಕೂ, ಜನನ ಮರಣಗಳ ಲೆಕ್ಕವನ್ನಿಡುವ ರೀತಿಯನ್ನು ಕ್ರಮಪಡಿಸಲು ಸಲಹೆಗಳನ್ನು ಕೊಡುವುದಕ್ಕೂ ಮೆಡಿಕಲ್ ಇಲಾಖೆಯ ಅನುಭವಶಾಲಿಯಾದ ಒಬ್ಬ ಆಫೀಸರನ್ನು ಸ್ವಲ್ಪ ಕಾಲದಮಟ್ಟಿಗೆ ನೇಮಿಸಲಾಯಿತು. ದೇವಿ ಹಾಕುವವರ, ಸೂಲಗಿತ್ತಿಯರ, ಕಾಂಪೌಂಡರುಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕೆ ತಕ್ಕ ಏರ್ಪಾಡುಗಳು ನಡೆಯುತ್ತಲಿವೆ. ಖಾಯಮ್ಮಾಗಿ ಒಂದೇಸ್ಥಳದಲ್ಲಿರುವ ಮತ್ತೂ ಊರಿಂದೂರಿಗೆ ಸಂಚರಿಸುತ್ತಾ ಔಷಧಕೊಡುವ ಹೆಚ್ಚು ಡಿಸ್ಪೆನ್ಸರಿಗಳನ್ನೂ, ಆವಶ್ಯಕವಾದ ಹೆರಿಗೆಯ ಆಸ್ಪತ್ರೆಗಳನ್ನೂ, ಒದಗಿಸುವ ವಿಷಯವನ್ನು ಸರ್ಕಾರದವರು ಆಸಕ್ತಿಪೂರ್ವಕ ಆಲೋಚಿಸುತ್ತಿದ್ದಾರೆ.

ಮಲೆನಾಡಿಗೆ ಜನರು ಹೊಸದಾಗಿ ಬಂದು ನೆಲಸುವಂತೆ ಮಾಡುವುದಕ್ಕೆ ಬೇಕಾದ ಪ್ರಯತ್ನಗಳನ್ನೂ ಮಾಡುತ್ತಲಿದೆ. ಮಲೆನಾಡಿನ ಅಭಿವೃದ್ಧಿ ವಿಷಯವು ಸ್ವಲ್ಪಮಟ್ಟಿಗೆ ಅರ್ಥೋತ್ಪತ್ತಿಯ ಸ್ವಭಾವವುಳ್ಳದೆಂದು ಸರ್ಕಾರದವರು ತಿಳಿದು, ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುವುದಕ್ಕೂ, ಮುಖ್ಯವಾಗಿ ಫಾರೆಸ್ಟು ಉತ್ಪನ್ನಗಳಿಗೆ ಸಂಬಂಧಪಟ್ಟ ಸ್ಥಳೀಯ ಕೈಗಾರಿಕೆಗಳನ್ನು ವೃದ್ಧಿಗೆ ತರುವುದರ ಮೂಲಕ ಕಸಬುಗಳನ್ನು ಹೆಚ್ಚಿಸುವುದಕ್ಕೂ, ಆ ಪ್ರದೇಶದಲ್ಲಿ ರಸ್ತೆಗಳನ್ನು ಹೆಚ್ಚಿಸುವುದಕ್ಕೂ ಪರಸ್ಪರ ಸಹಾಯ ಕಾರ್ಯಗಳನ್ನು ವೃದ್ಧಿಗೊಳಿಸುವುದಕ್ಕೂ ಮಾಡಬೇಕಾದ ಏರ್ಪಾಡುಗಳನ್ನು ಸರ್ಕಾರದವರು ಮುಂಜೂರ್ಮಾಡಿರುತ್ತಾರೆ.

ಗ್ರಾಮಾಭಿವೃದ್ಧಿಯ ಏರ್ಪಾಟು.

ಕಳೆದ ವರ್ಷದ ಉಪನ್ಯಾಸದಲ್ಲಿ ಸೂಚಿತವಾದ ಈ ಏರ್ಪಾಟನ್ನು ಪ್ರಸಕ್ತವರ್ಷದ ಕೊನೆಯಭಾಗದಲ್ಲಿ ಕೈಗೊಳ್ಳಲಾಯಿತು. ಈ ಭಾಗದಲ್ಲಿ ಕಾರ್ಯ ಜರುಗುತ್ತಿದ್ದ ಕೆಲವು ತಿಂಗಳುಗಳಲ್ಲಿ ನಡೆದ ಕೆಲಸವು ತೃಪ್ತಿಕರವಾಗಿರುತ್ತದೆ. ಈ ಭಾಗದಲ್ಲಿ ಕಂಡುಬಂದ ಫಲಿತಾಂಶವನ್ನು, ಈಚಿನ ರಿಪೋರ್ಟುಗಳಿಂದ ತಿಳಿಯಬರುವ ಈ ಕೆಳಗೆಕಂಡ ಲೆಕ್ಕಗಳಿಂದ ತಿಳಿಯಬಹುದಾಗಿದೆ:—

ಸಂಸ್ಥಾನದಲ್ಲಿರುವ ಒಟ್ಟು 16,740 ಗ್ರಾಮಗಳ ಪೈಕಿ, ಕಮ್ಮಿಟಿಗಳು ಏರ್ಪಾಡಾಗಿರುವ ಗ್ರಾಮಗಳು	11,923
ಹೊಸದಾಗಿ ಏರ್ಪಡಿಸಿದ ಗ್ರಾಮಕಮಿಟಿಗಳು	7,440
ಗ್ರಾಮ ಸಾಮಾನ್ಯದ ಪ್ರಯೋಜನಕ್ಕಾಗಿ ಜನಗಳು ವಾರಕ್ಕೆ ಅರ್ಧದಿವಸ ಕೆಲಸಮಾಡಲು ಒಪ್ಪಿಕೊಂಡಿರುವ ಗ್ರಾಮಗಳು	6,126
ಪುಸ್ತಕಾಲಯಗಳನ್ನಿಟ್ಟುಕೊಂಡಿರುವ ಯಾ ವರ್ತಮಾನ ಪತ್ರಿಕೆಗಳನ್ನು ತರಿಸುವ (ಐದು ಡಿಸ್ಟ್ರಿಕ್ಟುಗಳಲ್ಲಿನ) ಗ್ರಾಮಗಳು	55

ಹೋದವರ್ಷದ ಕಾಲಸ್ಥಿತಿಯು ಸರಿಯಾಗಿರಲಿಲ್ಲವೆಂಬುದನ್ನೂ ಇದುವರೆಗೂ ಈ ವರ್ಷದ ಕಾಲಸ್ಥಿತಿಯು ಸಮರ್ಪಕವಾಗಿರುವುದಿಲ್ಲವೆಂಬುನ್ನೂ ಯೋಚಿಸಿದರೆ, ಜನರು ಈ ಏರ್ಪಾಡಿಗೆ ಕೊಟ್ಟಿರುವ ಅವಲಂಬವು ತುಂಬಾ ಸಂತೋಷಕರವಾಗಿರುತ್ತದೆ.

ಮಂಜೂರಾಗಿರುವ ಈ ಏರ್ಪಾಟಿನಂತೆ, ಗ್ರಾಮಾಭಿವೃದ್ಧಿ ಕಮಿಟಿಗಳವರು ಕೈಗೊಳ್ಳುವ ಕಾರ್ಯಗಳಿಗೆ ತಗಲುವ ಒಟ್ಟು ಖರ್ಚಿನ ಪೈಕಿ ಮೂರರಲ್ಲೊಂದು ಭಾಗವನ್ನು ಸರ್ಕಾರದಿಂದ ಕೊಡುವಂತೆ ಗೊತ್ತುಮಾಡಲಾಗಿತ್ತು; ಆದರೆ ಪ್ರಾರಂಭದಲ್ಲಿ ಈ ಏರ್ಪಾಡನ್ನು ನಿರ್ವಹಿಸಲು ಕಷ್ಟಗಳಿರುತ್ತವೆಯೆಂದು ಯೋಚಿಸಿ, ಸರ್ಕಾರದವರು ಪ್ರಸಕ್ತವರ್ಷಕ್ಕೂ ಚಾಲ್ತಿಸಾಲಿಗೂ ಕೊಡಬೇಕಾದ ಸಹಾಯದ್ರವ್ಯವನ್ನು ಅರ್ಧದವರೆಗೆ ಹೆಚ್ಚಿಸಿದರು.

ಮೇಲೆ ನಮೂದಾದ ಕಾಲದಲ್ಲಿ ಗ್ರಾಮಾಭಿವೃದ್ಧಿ ಕಮಿಟಿಗಳವರು 1,25,000 ರೂಪಾಯಿ ಲಾಗವಡು ಬೀಳುವ ಶಾಶ್ವತವಾದ ಪ್ರಯೋಜನವುಳ್ಳ ಕಾರ್ಯಗಳನ್ನು ಕೈಕೊಂಡರು. ಈ ಪೈಕಿ 59,000 ರೂಪಾಯಿಯನ್ನು ಸರ್ಕಾರದವರು ಸಹಾಯ ಮಾಡಿದರು. ಬಾಕಿ 66,000 ರೂಪಾಯಿಗಳನ್ನು ಸಂಬಂಧಪಟ್ಟ ಗ್ರಾಮಸ್ಥರು ಹಣದ ಮೂಲಕವಾಗಿ, ಯಾ, ಕೆಲಸ ಮಾಡುವುದರ ಮೂಲಕವಾಗಿ ಸಹಾಯಮಾಡಿದರು.

ಈ ಗ್ರಾಮಾಭಿವೃದ್ಧಿಯ ಏರ್ಪಾಟು ಈಗಾಗಲೇ ಜನಗಳ ವಿಶ್ವಾಸಕ್ಕೆ ಪಾತ್ರವಾಗಿರುತ್ತದೆಂಬುವದಕ್ಕೆ ಚಿಹ್ನೆಗಳುಗಳು ಕಾಣಬರುತ್ತಲಿವೆಯೆಂಬದಾಗಿ ರೆವಿನ್ಯೂ ಕಮಿಷನರವರು ತಿಳಿಸಿರುತ್ತಾರೆ. ಈ ಏರ್ಪಾಡು ಇಷ್ಟುಬೇಗ ಜಾರಿಗೆ ಬರುವುದಕ್ಕೆ ನಮ್ಮ ಡಿಸ್ಟ್ರಿಕ್ಟ್ ರೆವಿನ್ಯೂ ಆಫೀಸರುಗಳ ಉತ್ಸಾಹವೂ ಆದರವೂ ಕಾರಣಗಳಾಗಿವೆ. ಇದನ್ನು ಸರಿಯಾಗಿ ಜರುಗಿಸಿದಲ್ಲಿ ಜನಗಳಲ್ಲಿ ತಿಳುವಳಿಕೆ ಹೆಚ್ಚುವುದಕ್ಕೂ, ಗ್ರಾಮಗಳ ಭಾಗ್ಯೋನ್ನತಿಯನ್ನೂ ಅನುಕೂಲತೆಗಳನ್ನೂ ವೃದ್ಧಿಪಡಿಸುವುದಕ್ಕಾಗಿ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡುವಂತೆ ಪ್ರೋತ್ಸಾಹಿಸುವುದಕ್ಕೂ, ಈ ಬಗೆಯ ಕೆಲಸಗಳು ಸಾಧಕಗಳಾಗಲೇಬೇಕಾ

[3 ನೆಯ ಪುಟದಿಂದ ಮುಂದೆ ಸಾಗಿದುದು.]

ಟೆಕ್ನಿಕಲ್ ಇಲಾಖೆಗಳು.

ಮರಮ್ಮತ್ ಇಲಾಖೆ.

ಲೋಕಲ್ ಫಂಡ್ ಹೊರ್ತು ಎಲ್ಲಾ ಬಾಬುಗಳಿಂದಲೂ ಮರಮ್ಮತ್ ಕೆಲಸಗಳಿಗಾಗಿ ಒಟ್ಟು ಖರ್ಚು ಹಿಂದಿನ ಸಾಲಿನಲ್ಲಿ 51 ಲಕ್ಷ ರೂಪಾಯಿಯಾಗಿರುವಲ್ಲಿ, ಪ್ರಸಕ್ತ ವರ್ಷದಲ್ಲಿ ಸುಮಾರು ೩೯½ ಲಕ್ಷ ರೂಪಾಯಿಯಾಗಿರುತ್ತದೆ. ಈ ಮೊಬಲಗಿನ ಪೈಕಿ, ನೀರಾವರಿ ಕೆಲಸಗಳಿಗಾಗಿ ೨೧½ ಲಕ್ಷ ರೂಪಾಯಿಯನ್ನೂ, ಸಿವಿಲ್ ಕಾಮಗಾರಿಗಳಿಗಾಗಿಯೂ ಮಿಲಿಟರಿ ಕಟ್ಟಡಗಳಿಗಾಗಿಯೂ ೨೧½ ಲಕ್ಷ ರೂಪಾಯಿಗಳನ್ನೂ ಖರ್ಚು ಮಾಡಿರುತ್ತದೆ.

ಕನ್ನಂಬಾಡಿ ಬಳಿ ಕಾವೇ
ತ್ತಿರುವ ಜಲಾಶಯದ ಕಾಮಗಾ
ವೃದ್ಧಿಯಾಗುತ್ತಲಿದೆ. ನದೀ ಪಾ
ಆಗಬೇಕಾಗಿದ್ದ ಕಷ್ಟಕರವಾದ
ರ್ಷದಲ್ಲಿ ಪೂರಯಿಸಿತು. ಕಳೆದ
ದೀ ಪಾತ್ರದ ಮೇಲೆ 14 ಅಡಿ
ದಲ್ಲಿ 30 ಅಡಿ ಎತ್ತರದ ವರೆಗೂ
ಮಧ್ಯಭಾಗದಲ್ಲಿ ಸಂದುಬಿಟ್ಟಿರು
ಪ್ಪದ ವರೆಗೆ ನೀರು ಬಿಡುವು
ಯೇ ಒಂದು ಸವರ್ ಸ್ಲೂಯಿಸ
ಆದ ಸಂಬಂಗಾ ಸ್ಲೂಯಿಸಿಗೂ.
ಯಲ್ಲಿರುವ ಇತರ ಪ್ರದೇಶಗಳಿಗ
ಸುವದಕ್ಕೋಸ್ಕರ, ಅಕೇಷೈ
ರುವ (Turbine) ಕೊಳವೆಗ
ಕನ್ನು ಮಾಡುತ್ತಲಿದೆ.

ನೀರುಮುಳುಗಡೆಗೆ ಒಂದ
ಅವರ ಜಮೀನುಗಳಿಗೆ ಬದಲಿಂ
ಒದಗಿಸಿಕೊಡುವುದಕ್ಕೋಸ್ಕರ,
ಇತರ ಏರ್ಪಾಟುಗಳನ್ನು ಮಾ
ನಾಲೆಗಳನ್ನು ಕಟ್ಟಿಸುವುದಕ್ಕೆ
ರುತ್ತಾರೆ. ಈ ಪೈಕಿ ಎರಡು ಕ
ವಾಗಿದೆ. ಉಳಿದ ಎರಡು ನಾಲೆ
ಕ್ರಮಿಸಲಾಗುವುದು. ಜಲಾಶಯ
ಹೆಚ್ಚು ಪ್ರದೇಶವನ್ನು ನೀರಾವರಿಗೆ
ಧಾರಣೆ ಬಾಳುವ ಕಬ್ಬು, ಅಡಿ
ಫಸಲುಗಳನ್ನು ಬೆಳೆಯುವುದಕ್ಕೆ
ಕ್ಕಾಗಿಯೂ ಮಾಡಬೇಕಾದ ವ

ನೀರಾವರಿ ಕೆಲಸ

ಶಾಸ್ತ್ರೀಯ ಕ್ರಮದಿಂದ
ಟಿಸುವುದಕ್ಕಾಗಿ ಮೂರುವರ್ಷ
ಸಾಲಿಯಾನ 30,000 ರೂಪಾಯಿ
ಒಂದು ಇರ್ರಿಗೇಷನ್ ಡಿಪಾರ್ಟ
ಡಿವಿಜನಿಗೆ ವಹಿಸಿಕೊಟ್ಟ ಕೆಲಸ
ನ್ಯಾಸದಲ್ಲಿಯೇ ವಿವರಿಸಿರುತ್ತದೆ.

ವಿದ್ಯುಚ್ಛಕ್ತಿ

ಕಾವೇರೀ ವಿದ್ಯುಚ್ಛಕ್ತಿಯ
ನೆಯ ಕಾಮಗಾರಿಯು ಪ್ರಸಕ್ತ
ಚನ್ನಾಗಿ ನಡೆದು ಇರುವುದಲ್ಲದೆ,
ಪೂರೈಸುವುದಕ್ಕೆ ಮೊದಲೇ ವ
ಇದೆ. ವಿದ್ಯುಚ್ಛಕ್ತಿಯನ್ನು ವ
ಉಪಯೋಗಿಸುವುದನ್ನು ಪ್ರೋತ್ಸಾ
ರ್ಷದಲ್ಲಿ ಸದರಿ ಶಕ್ತಿಯ ದರಗ
ಬೆಂಗಳೂರಲ್ಲಿ ಎಲೆಕ್ಟ್ರಿಕ್ ಟ್ರಾ
ಮಾಡಲ್ಪಟ್ಟ ಅಂದಾಜುಗಳನ್ನು
ತು ಮತ್ತು ಹೊಸ ಕೆಲಸಗಳನ್ನು
ಅಂದಾಜಾಗಿರುವ ಮೊಬಲಗಿನ
ಸ್ಟೇಷನಿನವರು ಕೊಡಬೇಕಾದ
ವಿಚಾರವು ವ್ಯವಸ್ಥೆಯಾದ ಕೂ
ಪುನಃ ನಡಿಸಲಾಗುವುದು.

ರೈಲ್ವೇ

1900 ನೆಯ ಇಸವಿಯ
ಮೈಲಿಗಳ ಫಾಸಲೆ ರೈಲ್ವೇ ರಸ್ತೆ
ದಕ್ಕಾಗಿ ೨೨೩ ಲಕ್ಷ ರೂಪಾಯಿ
ಇತು. 1911 ನೆಯ ಇಸವಿಯ
ಹೆಚ್ಚದೇ ಇದ್ದ ಹಾಗೆಯೇ ಇದ್ದ

1911 ನೆಯ ನವೆಂಬರ್
ಬರ್ 124-11-12ನೆಯ ನಂಬ
ಲಕ ಮಂಜೂರಾದ ರೈಲ್ವೆ ಅ
ಈಗಿರುವ ಫಾಸಲೆಯ ಜೊತೆಗೆ ಒಟ್ಟು 130 ಲಕ್ಷ ರೂಪಾಯಿ ಲಾಗವಹು ತಗಲುವ ಇನ್ನೂ ೨೫೫½ ಮೈಲಿ ಫಾಸಲೆ ರೈಲ್ವೆ ಹಾಕುವುದಕ್ಕೆ ಏರ್ಪಾಡನ್ನು ಮಂಜೂರು ಮಾಡಲಾಯಿತು.

ಬೇರೆ ಬೇರೆ ತರಹೆ ಗೇಜುಗಳುಳ್ಳ 259 ಮೈಲಿ ಫಾಸಲೆ ರೈಲ್ವೆಗಳನ್ನು ಹಾಕತಕ್ಕ ಬಗ್ಗೆ, 110 ಲಕ್ಷ ರೂಪಾಯಿ ತಗಲುವ ಅಂದಾಜುಗಳನ್ನು ಮಂಜೂರಾದ ಪಟ್ಟಿಗೆ ದಾಖಲ್ ಮಾಡಲಾಯಿತು. 30.69 ಮೈಲಿ ರಸ್ತೆಗಾಗಿ 12.72 ಲಕ್ಷ ರೂಪಾಯಿ ಲಾಗವಹು ಬೀಳುವ ಅಂದಾಜುಳ್ಳ ಬೆಂಗಳೂರು ಹೊಸೂರು ರೈಲಿಗಾಗಿ ಒಂದು ಏರ್ಪಾಡು ಇನ್ನೂ ರೈಲ್ವೇ ಬೋರ್ಡಿನವರ ಇತ್ಯರ್ಥದಲ್ಲಿರುತ್ತದೆ. 94 ಲಕ್ಷ ರೂಪಾಯಿ ಲಾಗವಹಿನ ಅಂದಾಜಿನಮೇಲೆ ಬೇರೆ 146 ಮೈಲಿ ಫಾಸಲೆಯ ರಸ್ತೆಗಳನ್ನು ಹಾಕುವುದಕ್ಕಾಗಿ ಕಾಂಗಾರಿ ಏರ್ಪಾಟುಗಳು ಸಿದ್ಧವಾಗಿವೆ. ಇವುಗಳಿಗೆ ಇವುಗಳಿಗಾಗಿ ಹಣವನ್ನು ಹೇಗೆ ಒದಗಿಸಬೇಕು? ಇವುಗಳಿಗೆ ಯಾವರೀತಿ ಕಾಂಗಾರಿ ಮಾಡಿಸಿ ಅವುಗಳನ್ನು ವಶದಲ್ಲಿಟ್ಟುಕೊಳ್ಳಬೇಕು? ಎಂಬ ವಿಷಯಗಳು ಪರ್ಯಾಲೋಚನೆಯಲ್ಲಿರುತ್ತವೆ. ಶಿವಮೊಗ್ಗಾ ಡಿಸ್ಟ್ರಿಕ್ಟಿನ ರೈಲ್ವೆ ಶಾಖೆಗಳಿಗಾಗಿಯೂ, ಹೆಚ್ಚಿ ಮತ್ತು ಶಾಸನಕೋಟೆ ಟ್ರಾಂವೇಗಳಿಗಾಗಿಯೂ, ಅಳತೆಯ ಕೆಲಸಗಳನ್ನು ಕೈಗೊಳ್ಳಲು ಪಕ್ಕಾ ಏರ್ಪಾಡನ್ನು ಮಾಡುತ್ತಲಿದೆ.

ನಮ್ಮ ದೇಶದ ರೈಲ್ವೆ ಮಾರ್ಗಗಳನ್ನು, ಸುತ್ತಲೂ ಇರುವ

ಗಿ ಉತ್ಪತ್ತಿಯಾದಂತೆ ಆಯಿತು. ಇದರಿಂದ ಸರ್ಕಾರಕ್ಕೆ ಸುಮಾರು 18,91,486 ರೂಪಾಯಿನ ಲಾಭಾಯವು ದೊರಕಿತು. 1912-13 ನೆಯ ವರ್ಷದಲ್ಲಿ 18,09,971 ರೂಪಾಯಿ ಲಾಭಾಯವು ಬಂದಿರುತ್ತದೆ.

ಲೋಕಲ್ ಸೆಲ್ಫ್ ಗವರ್ನ್‌ಮೆಂಟ್.

ಮ್ಯುನಿಸಿಪಲ್ ಫಂಡುಗಳು.

ಈ ವರ್ಷ ಮ್ಯುನಿಸಿಪಲ್ ಫಂಡುಗಳ ಬಾಬಿನಲ್ಲಿ ಆದಾಯವು ಸುಮಾರು 10,97,000 ರೂಪಾಯಿಯೂ, ವ್ಯಯವು ಸುಮಾರು 10,01,000 ರೂಪಾಯಿಯೂ ಆಯಿತು. ಈ ವ್ಯಯದ ಬಾಬತು ಮೊಬಲಗಿನಲ್ಲಿ 2,87,000 ರೂಪಾಯಿಗಳನ್ನು ಮರಮ್ಮತ್ ಕಾಂಗಾರಿಗಳಿಗಾಗಿಯೂ, 2,31,000 ರೂಪಾಯಿಗಳನ್ನು ಕನ್ಸರ್ವೆನ್ಸಿಗಾಗಿಯೂ, ಉಳಿದದ್ದನ್ನು ಇತರ ಬಾಬುಗಳಿಗಾಗಿಯೂ ಖರ್ಚು ಮಾಡಲಾಯಿತು.

ಎರಡು ಲಕ್ಷ ರೂಪಾಯಿಗಿಂತ ಹೆಚ್ಚು ಖರ್ಚು ತಗಲಬಹುದೆಂದು ಅಂದಾಜು ಕಟ್ಟಿರತಕ್ಕ ದಾವಣಗೆರೆ ನಗರದ ನೀರಿನ ಸರಬರಾಯಿ ಏರ್ಪಾಡಿಗೆ ದ್ರವ್ಯವನ್ನು ಕೊಡುವ ವಿಷಯವನ್ನು ಈ ವರ್ಷ ತೃಪ್ತಿಕರವಾಗಿ ವ್ಯವಸ್ಥೆ ಮಾಡಲಾಯಿತು. ಇದಕ್ಕಾಗಿ ಸರ್ಕಾರದವರು 30,008 ರೂಪಾಯಿಗಳಷ್ಟು ಸಹಾಯದ್ರವ್ಯವನ್ನು ಕೊಡುವದಲ್ಲದೆ, ಶಿಬ್ಬಂದಿಯ ಮತ್ತು ಯಂತ್ರ

ದ್ದಕ್ಕಿಂತ ಈ ವರ್ಷ ಕಡಿಮೆಯಾಗಿ ಕೆಲಸ ನಡೆಯಿತು. ಈ ಛಾಪಾಖಾನೆಯ ಖರ್ಚು ಹಿಂದಣವರ್ಷ 1,06,266 ರೂಪಾಯಿ ಖರ್ಚಾಗಿರುವಲ್ಲಿ, ಈ ವರ್ಷ 1,05,485 ರೂಪಾಯಿ ಆಯಿತು. ಹೀಗೆ ಕೆಲಸವೂ ಖರ್ಚೂ ಕಡಮೆಯಾದದ್ದಕ್ಕೆ, ಕೆಲವು ಭಾಗ ಕೆಲಸವನ್ನು ಮೈಸೂರಿನ ಬ್ರಾಂಚ್ ಪ್ರೆಸ್ಸಿಗೆ ಕಳುಹಿಸಿದ್ದೂ, ಬೇರೆಬೇರೆ ಇಲಾಖೆಯವರು ಮಾಡಿಸಿದ ಮುದ್ರಣದ ಕೆಲಸವು ಒಟ್ಟಿನಮೇಲೆ ಕಡಿಮೆಯಾಗಿದ್ದದ್ದೂ, ಮತ್ತು ಕೆಲವು ಮುದ್ರಣದ ಕೆಲಸಗಳನ್ನು ಖಾಸಗಿ ಛಾಪಾಖಾನೆಗಳಲ್ಲಿ ನಡೆಯಿಸಿದ್ದೂ, ಕಾರಣಗಳಾಗಿರುತ್ತವೆ.


G. L. Joshi & Co.,
Post: Banavasi (N. Kanara.)

೧೫ ವರ್ಷಗಳ ಅನುಭವದಿಂದ

ಫಕ್ತ ವನಸ್ಪತಿಯಿಂದಲೇ ತಯಾರಿಸಿದ

೧ ಪೌಷ್ಟಿಕ ಪಾಕ.

(ರಕ್ತಶುದ್ಧಿ ಮತ್ತು ರಕ್ತವೃದ್ಧಿಯ ಮೇಲೆ ಅತ್ಯುತ್ತಮ.)

ಈ ಪಾಕವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗ ಉಳ್ಳವರು, ರಕ್ತೋದ್ರೇಕವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫಉಂಟಾದವರು ಮೂಲವ್ಯಾಧಿಯವರು, ವಾಂತಿಯಾಗುವವರು, ಮೇಹ ಸಂಬಂಧ ರೋಗಗಳುಳ್ಳವರು, ಧಾತು ಹೋಗುವವರು, ಉಷ್ಣ ಹೋಗುವವರು ಸೇವಿಸಿದ್ದಲ್ಲಿ ರೋಗವು ಸಂಪೂರ್ಣವಾಗಿ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ ನಪುಂಸಕತ್ವ ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದವು ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ (ಟಾಕಿ), ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರದ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳೂ, ಕಟಿಶೂಲೆ, ವಾತರೋಗ ಇವೇ ಮೊದಲಾದ ಸರ್ವತರದ ವ್ಯಾಧಿಗಳು ತ್ವರೆಯಿಂದ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ.

ಒಬ್ಬರಿಗೆ 40 ತೊಲೆಯಿಂದ 80 ತೊಲೆಯ ವರೆಗೆ ಬೇಕಾಗಿರುವದು. ಕಿಮ್ಮತ್ತು 40 ತೊಲೆಗೆ 3—8—0; 80 ತೊಲೆಗೆ 6—0—0

(ಮೊದಲಿನ ಸ್ಥಿತಿ)

(ಈಗಿನ ಸ್ಥಿತಿ)

೨ ಪ್ರಮೇಹ (ಫರ್ಮಾ) ರೋಗದ ಔಷಧವು.

ಇದು ಮೂತ್ರಸ್ಥಾನದಿಂದ ಬಿಳಿದು, ಕೆಂಪು ಮತ್ತು ಹಳದಿಯಂತೆ ಹೋಗತಕ್ಕ ಕೀವು ಮತ್ತು ಉರಿ ಮೂರೇ ತಾಸಿನಲ್ಲಿ ಗುಣ ತೋರಿಸಿ 7 ದಿವಸಗಳಲ್ಲಿ ಎಲ್ಲಾ ಬಗೆಯ ಮೇಹಜಾಡ್ಯಗಳನ್ನು ನಾಶಮಾಡಿ ಶರೀರಕ್ಕೆ ನಿರೋಗತ್ವವನ್ನುಂಟುಮಾಡುವದು.

7 ದಿವಸದ ಔಷಧಕ್ಕೆ ಕಿಮ್ಮತ್ತು. 2—8—0.

೩ ಟಾಕಿ (ಹುಣ್ಣು) ಮಲಮು.

ಇದನ್ನು ಟಾ ಭಗಂದರ, ಕಠಿಣವಾದ ಹುಣ್ಣು ಘಾಯು ಇತ್ಯಾದಿಗಳಿಗೆ 2 ಯಾ
3 ಸಾರೆ ಹಚ್ಚುವ ತಕ್ಷಣ ಗುಣ. ಕಿಮ್ಮತ್ತು ಡಬ್ಬಿಗೆ 0—8—0.

೪ ಗಜಕರ್ಣದ ಮಲಮು.

ಇದರ ಗಳಿಂದ ಹೊಸ ಮತ್ತು ಹಳೇತರಕ್ಕೆ ಬಿದ್ದ ಗಜಕರ್ಣ, ದದ್ದು

೧೧ ಮೂಲವ್ಯಾಧಿ(ಅರ್ಶಕ್ಕೆ)ಗೆ

ಇದನ್ನು ಸೇವಿಸುವದರಿಂದ ಹೊಸ ಮತ್ತು ಹಳೇ
ಮೂಲವ್ಯಾಧಿಗಳು ನಾಶವಾಗುವವು. ರಕ್ತ ಸುರಿಯುವ
ವಾಗುವವು. ಮಲಾವರೋಧ, ಧಾತುಕ್ಷೀಣತೆ, ನಡಿಯ
ವೇದನೆ ಸಹ ನಾಶವಾಗಿ ಮಲವಿಸರ್ಜನೆ ಸಹ ಸಾಫ್ ಆ
ಉಪಯೋಗಿಸುವಾಗ ಮೂಲವ್ಯಾಧಿ ಮಲಮನ್ನೂ
ರಬೇಕು. ಕಿಮ್ಮತ್ತು ಡಬ್ಬಿ 1ಕ್ಕೆ 2—12—0.

೧೨ ಮೂಲವ್ಯಾಧಿಯ ಮಲಮು

ಇದರ ಲೇಪದಿಂದ ಮೂಲವ್ಯಾಧಿಯ ಮೊಳಕೆಗಳು
ವಿಸರ್ಜನ ಕಾಲಕ್ಕೆ ಆಗುವ ಬಾಧೆ ಕಡಿಮೆಯಾಗಿ ಮಲ
ಇದನ್ನುಪಯೋಗಿಸುವಾಗ ಮೂಲವ್ಯಾಧಿ ಔಷಧ
ಬೇಕು. ಕಿಮ್ಮತ್ತು ಡಬ್ಬಿ 1ಕ್ಕೆ 0—12—0.

೧೩ ಸರ್ವ ಮೂಲವ್ಯಾಧಿ ಬಗ್ಗೆ ಉ

ಈ ಉಂಗುರವನ್ನು ಈಗ ಹೊಸದಾಗಿ ಶೋಧ
ಯಿಂದ ತಯಾರಿಸಿದೆ. ಇದನ್ನು ಎಡಗೈಯ್ಯ ಬೆರಳಿನಲ್ಲಿ
ಕೊಂಡಿರತಕ್ಕದ್ದು. ಉಪಯೋಗಿಸಿದ ೩ನೇ ದಿವಸದಲ್ಲಿ ನ
ವಾಗಿ, ಮುಂದೆ ಆಗುವದಿಲ್ಲ. ಉಂಗುರ ಮಾತ್ರ ಬೆರಳಿನಲ್ಲಿ
ಬಹಳ ಉತ್ತಮವದೆ. ಉಂಗುರವನ್ನು ಅಪೇಕ್ಷಿಸುವವರು
ನ್ನು ಕಳಿಸಲಿಕ್ಕೆ ಮರಿಯಬಾರದು.

ಕಿಮ್ಮತ್ತು ಉಂಗುರ 1ಕ್ಕೆ 2—0—0.

೧೪ ಖಜ್ಜಿಯ ಮಲಮು.

ಖಜ್ಜಿಗಳು, ತುರಿಗಳು, ಉಸುಬುಗಳು ಮುಂತಾದ
2-3 ಸಾರೆ ಹಚ್ಚುವದರಿಂದ ನಿಸ್ಸಂದೇಹವಾಗಿ ಗುಣ
ನ್ನುಪಯೋಗಿಸುತ್ತಲೇ, ನಮ್ಮ ಪೌಷ್ಟಿಕಪಾಕವನ್ನು
ಶುದ್ಧಿಯಾಗಿ ಮುಂದಕ್ಕೆ ಇಂಥಾ ಚರ್ಮರೋಗಗಳು ಸಂ

ಕಿಮ್ಮತ್ತು ಡಬ್ಬಿಗೆ 0—4—0.

೧೫ ಸರ್ವಹುಣ್ಣುಗಳಿಗೆ ಮಲ

ಎಲ್ಲಾ ಪ್ರಕಾರದ ಹುಣ್ಣು, ಬಾವು, ಕುರು, ಉ
ದಕಜ್ಜಿ, ಕೆಂಪಗಾಗುವ ದೊಡ್ಡಬಕ್ಕೆ, ನಶೀಕಬಕ್ಕೆ ಮೊದಲಾ
ಗಳು ನಾಶವಾಗುವವು. ಇದನ್ನುಪಯೋಗಿಸುವಾಗ್ಯೆ ಪೌ
ಪಯೋಗಿಸಬೇಕು. ಕಿಮ್ಮತ್ತು ಡಬ್ಬಿ 1ಕ್ಕೆ 1—0

ಸರ್ಕಾರೀ ಛಾಪಾಖಾನೆಯಲ್ಲಿ ನಡೆಯುವ ಕೆಲಸವನ್ನು ಸಾಧ್ಯವಾದರೆ, ಇನ್ನೂ ಕಡಿಮೆಮಾಡಬೇಕೆಂಬ ವಿಷಯವು ಪರ್ಯಾಲೋಚನೆಯಲ್ಲಿದೆ.

ರಿಜಿಸ್ಟರ್ ಮಾಡಲ್ಪಟ್ಟ ಪುಸ್ತಕಗಳ ಮತ್ತು ಕಾಲಕಾಲಕ್ಕೆ ಪ್ರಕಟಿಸುವ ಮಾಸಪತ್ರಿಕೆಗಳ ಸಂಖ್ಯೆಯು ಹಿಂದಿನವರ್ಷ 128 ಇದ್ದದ್ದಕ್ಕೆ, ಈ ವರ್ಷ 117 ಇದ್ದವು.

ಪ್ರಾಚೀನ ಲೇಖನಾನ್ವೇಷಣದ ಇಲಾಖೆ.

ಮಿ|| ರೈಸ್‌ರವರು ಬರೆದ ಮೈಸೂರು ಗೆಜೆಟಿಯರ್ ಎಂಬ ಪುಸ್ತಕವನ್ನು ಹಾಲ್ತೀಕಾಲದವರೆಗೆ ಸಮಗ್ರವಾಗಿರುವಂತೆ ಮಾಡುವುದಕ್ಕಾಗಿ ಅದನ್ನು ಪುನರ್ವಿಮರ್ಶೆ ಮಾಡಲು ತಕ್ಕ ಏರ್ಪಾಟನ್ನು ಮಾಡಿ ಇದೆ. ಪ್ರಾಚೀನ ಲೇಖನಾನ್ವೇಷಣದ ಛಾರ್ಜಿನ ಆಫೀಸರ ಕೆಲಸಗಳ ಜತೆಗೆ ಈ ಕೆಲಸವನ್ನೂ, ಪ್ರಾಕ್ತನ ವಿಮರ್ಶ ವಿಚಕ್ಷಣ ಮಿ|| ಆರ್. ಎ. ನರಸಿಂಹಾಚಾರ್ಯರವರಿಗೆ ವಹಿಸಿರಲಾಗಿರುತ್ತದೆ. ಮುಂದಿನ ಮೂರುವರ್ಷಗಳವರೆಗೆ ಈ ಇಲಾಖೆಯಲ್ಲಿ ನಡೆಯಬೇಕಾಗಿರುವ ನಿಷ್ಕೃಷ್ಟವಾದ ಕಾರ್ಯಕ್ರಮವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಅರ್ಥೋತ್ಪತ್ತಿ ಸಾಧನಗಳನ್ನು ವೃದ್ಧಿಗೊಳಿಸುವುದು.

ಈ ವರ್ಷದಲ್ಲಿ ರಾಜ್ಯದ ಆಡಳಿತಕ್ಕೆ ಸಂಬಂಧಪಟ್ಟ ಮುಖ್ಯಾಂಶಗಳನ್ನು ತಿಳಿಸಿ, ಅರ್ಥೋತ್ಪತ್ತಿ ಸಾಧನಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಮಾಡಿರುವ ಕೆಲವು ಭಾರೀ ಏರ್ಪಾಡುಗಳನ್ನು ಸಂಕ್ಷೇಪವಾಗಿ ತಿಳಿಯಪಡಿಸಿದರೆ ಅಯುಕ್ತವಾಗಲಾರದು.

ಇಂಥಾ ಏರ್ಪಾಡುಗಳ ಪೈಕಿ ಏಳು ಗಣನಾರ್ಹವಾಗಿರುತ್ತವೆ. ಅವುಗಳಲ್ಲಿ ಒಂದು ವಿನಾ ಮಿಕ್ಕವೆಲ್ಲ ಶೀಘ್ರವಾಗಿ ಅಭಿವೃದ್ಧಿಯನ್ನು ಹೊಂದುತ್ತಲಿವೆ. ಅವು ಯಾವುವೆಂದರೆ:—

(1) ರೈಲುಗಳನ್ನು ಹಾಕಿ ಅವುಗಳನ್ನು ನಡಿಸುವುದು.
(2) ಕನ್ನಂಬಾಡಿ ಬಳಿಯಲ್ಲಿ ಕಾವೇರೀ ಜಲಾಶಯವನ್ನು ಕಟ್ಟಿಸುವುದು.
(3) ಕಾವೇರೀ ವಿದ್ಯುಚ್ಛಕ್ತಿಯ ಏರ್ಪಾಡನ್ನು ಇನ್ನೂ ಅಭಿವೃದ್ಧಿಪಡಿಸುವುದು.
(4) ಸಣ್ಣ ಕೆರೆಗಳನ್ನು ಕಟ್ಟಿಸಿ ಅವುಗಳನ್ನು ದುರಸ್ತು ಮಾಡಿಸುವುದು.
(5) ಮಲೆನಾಡು ಅಭಿವೃದ್ಧಿಯ ಕ್ರಮ.
(6) ಗ್ರಾಮಾಭಿವೃದ್ಧಿ ಕ್ರಮ ಮತ್ತು
(7) ಸಂಪದಭ್ಯುದಯ ಸಮಾಜದ ಸಹವರ್ತಿಗಳು.

ರೈಲ್ವೆಗಳನ್ನು ಹಾಕಿ ಅವುಗಳನ್ನು ನಡಿಸುವುದು.

1900 ರಿಂದ 1911 ರ ವರೆಗೆ, ಎಂದರೆ ಸುಮಾರು 12 ವರ್ಷಗಳವರೆಗೆ ಈ ಸಂಸ್ಥಾನದಲ್ಲಿ ರೈಲ್ವೆ ಕೆಲಸಗಳ ವಿಚಾರವಾದ ಉತ್ಸಾಹವು ಸಂಪೂರ್ತಿಯಾಗಿ ನಿಂತುಹೋಗಿತ್ತು. ಬ್ರಿಟಿಷ್ ಇಂಡಿಯಾದಲ್ಲಿನ ಜನಸಂಖ್ಯೆಯನ್ನು ಇಲ್ಲಿನ ಜನಸಂಖ್ಯೆಯೊಡನೆ ಹೋಲಿಸಿ ನೋಡಲಾಗಿ, ಮೈಸೂರಿನಲ್ಲಿರತಕ್ಕ ರೈಲ್ವೆಗಳ ಫಾಸಲೆಯು, ಅಲ್ಲಿ ಹಾಕಿರುವ ರೈಲ್ವೆಗಳ ಫಾಸಲೆಗಿಂತಲೂ ಕಮ್ಮಿಯಾಯಿತು ಎಂಬ ಸಂಗತಿಯು ನಿಮಗೆ ಗೊತ್ತಿರಬಹುದು. 1911 ರಿಂದ ಈಚೆಗೆ ರೈಲ್ವೆ ಹಾಕುವುದನ್ನು ಅಭಿವೃದ್ಧಿಪಡಿಸುವದಕ್ಕಾಗಿ ಬಿಡೆಬಿಡದ ಪ್ರಯತ್ನವನ್ನು ಮಾಡಲಾಗಿದೆ. ಈಗ 130 ಮೈಲಿಯಷ್ಟು ರೈಲ್ವೆ ಕಾಂಗಾರಿಯು ನಡೆಯುತ್ತಲಿದೆ.

ರೈಲು ಹಾಕುವ ಕೆಲಸವನ್ನು ಪುನಃ ಪ್ರಾರಂಭಿಸಿದಮೇಲೆ, ಹೊಸದಾಗಿ ಹಾಕಿದ ರೈಲುಗಳ ಪೈಕಿ ಮೊದಲನೆಯದಾದ ಕೋಲಾರದಿಂದ ಬೌರಿಂಗಪೇಟೆಗೆ ಹೋಗುವ ರೈಲುಪಥತಕ್ಕ ಪ್ರಾರಂಭೋತ್ಸವವನ್ನು ಕಳೆದ ಡಿಸೆಂಬರು ತಿಂಗಳಲ್ಲಿ ಘನತೆಯನ್ನೈದಿದ ಶ್ರೀಮನ್ಮಹಾರಾಜರವರು ನಡಿಸಿದರು.

ಆಯಾ ಡಿಸ್ಟ್ರಿಕ್ಟಿನಲ್ಲಿರುವ ಜನರು ರೈಲ್ವೆ ಹಾಕುವ ಕೆಲಸಗಳಿಗಾಗಿ ತಮ್ಮ ದ್ರವ್ಯವನ್ನು ವಿನಿಯೋಗಿಸುತ್ತಿರುವ ಅಂಶವು ಸಂತೋಷವನ್ನುಂಟುಮಾಡತಕ್ಕದ್ದಾಗಿದೆ.

ನಮ್ಮ ಡಿಸ್ಟ್ರಿಕ್ಟುಗಳಲ್ಲಿ ಸಾಕಾದಷ್ಟು ಸಂಚಾರಸಾಧನಗಳನ್ನು ಕಲ್ಪಿಸಿ, ಈ ಸಂಸ್ಥಾನದ ವ್ಯವಸಾಯ ವ್ಯಾಪಾರಗಳನ್ನು ಉಚ್ಛ್ರಾಯಸ್ಥಿತಿಗೆ ತರುವುದಕ್ಕಾಗಿ ಸುಮಾರು 1,000 ಮೈಲಿ ಉದ್ದ ರೈಲನ್ನು ಹಾಕಬೇಕಾಗುತ್ತದೆ. ರೈಲ್ವೆ ಚಲಾವಣೆಯಲ್ಲಿರುವಾಗ ರೈಲ್ವೆ ನೌಕರಿಯಿಂದ ಈ ಸಂಸ್ಥಾನದ ಜನರಿಗೆ ಲಾಭಕರವಾದ ಜೀವನೋಪಾಯಗಳನ್ನು ಉಂಟುಮಾಡಬೇಕೆಂಬ ಅಭಿಪ್ರಾಯವೂ ಇರುತ್ತದೆ. ಈಗಾಗಲೆ ಇದಕ್ಕಾಗಿ 256 ಲಕ್ಷ ರೂಪಾಯಿ ಖರ್ಚು ತಗಲಿರುತ್ತದೆ. 1,000 ಮೈಲಿ ಉದ್ದ ರೈಲು ಹಾಕುವುದನ್ನು ಪೂರೈಸಿದರೆ, ಸುಮಾರು 5 ಕೋಟಿ ರೂಪಾಯಿ ಒಟ್ಟು ಖರ್ಚಾಗುವುದು.

ಕಾವೇರೀ ಜಲಾಶಯವನ್ನು ಕಟ್ಟಿಸುವುದು.

ಕಾವೇರೀ ನದಿಯೊಳಗೆ ಹರಿಯುವ ಹೆಚ್ಚು ನೀರನ್ನು ಮೈಸೂರು ಸಂಸ್ಥಾನದಲ್ಲಿ ಉಪಯೋಗಿಸಿಕೊಳ್ಳತಕ್ಕ ವಿಷಯವಾಗಿ ಈ ಸಂಸ್ಥಾನಕ್ಕೂ ಪಕ್ಕದಲ್ಲಿರುವ ಮದರಾಸಾಧಿಪತ್ಯಕ್ಕೂ ಕಳೆದ 3-4 ವರ್ಷಗಳಿಂದ ದೀರ್ಘವಾದ ವಿವಾದ ನಡೆದ ಬಳಿಕ, ಹೋದವರ್ಷ ಇಂಡಿಯಾ ಸರ್ಕಾರದವರು, ಈ ವಿಷಯವನ್ನು ಸಮರ್ಥರಾದ ಮೆಂಬರುಗಳುಳ್ಳ ಒಂದು ಆರ್‌ಬಿಟ್ರೇಷನ್ ಕಮಿಟಿಗೆ ವಿಚಾರಣೆಗಾಗಿ ಕಳುಹಿಸತಕ್ಕದ್ದೆಂದು ನಿರ್ಣಯಿಸಿದರು. ಸದರಿ ಕಮಿಟಿಯವರು ಈ ವಿಷಯವನ್ನು ಸುಮಾರು ಹತ್ತು ತಿಂಗಳ ವರೆಗೂ ಕ್ರಮವಾಗಿ ವಿಚಾರಣೆಮಾಡಿ, ಕಳೆದ ಮೇ ತಿಂಗಳಲ್ಲಿ ತಮ್ಮ ತೀರ್ಮಾನವನ್ನು ಇಂಡಿಯಾ ಸರ್ಕಾರದವರಿಗೆ ಕಳುಹಿಸಿಕೊಟ್ಟರು. ಘನತೆಯನ್ನೈದಿದ ಶ್ರೀಮನ್ ಮಹಾರಾಜರವರ ಸರ್ಕಾರದವರೂ, ಈ ಸಂಸ್ಥಾನದಲ್ಲಿರುವ ಕಾವೇರೀ ತೀರದ ನೀರಾವರೀ ಪ್ರದೇಶವನ್ನು ಅಭಿವೃದ್ಧಿಗೆ ತರುವುದರಲ್ಲಿ ಆಸಕ್ತರಾದ ಅನೇಕ ಜನರೂ ಸಹ, ತಮ್ಮ ಪಕ್ಷ ಬಾಧ್ಯತೆಗಳು ನ್ಯಾಯಸಮ್ಮತವಾಗಿವೆಯೆಂದು ನಂಬಿರುವುದಲ್ಲದೆ, ಈ ಮುಖ್ಯವಾದ ವಿಷಯದಲ್ಲಿ ಇಂಡಿಯಾ ಸರ್ಕಾರದವರ ತೀರ್ಮಾನವನ್ನು ಅತ್ಯಾಸಕ್ತಿಯಿಂದ ನಿರೀಕ್ಷಿಸುತ್ತಿದ್ದಾರೆ.

ಸಹಜವಾಗಿ ಸಮುದ್ರಕ್ಕೆ ಬಿದ್ದು ವ್ಯರ್ಥವಾಗುತ್ತಿರುವ ಕಾವೇರೀನದಿಯ ಹೆಚ್ಚು ನೀರನ್ನು ತಡೆದು ನಿಲ್ಲಿಸುವುದೇ ಕನ್ನಂಬಾಡಿ ಜಲಾಶಯದ ಏರ್ಪಾಡಿನ ಮುಖ್ಯೋದ್ದೇಶವಾಗಿರುತ್ತದೆ. ಈಗಿರತಕ್ಕ ನಾಲೆಗಳಲ್ಲಿ ಸರ್ವದಾ ನೀರು ಹರಿಯುವದು ಸಂದೇಹಾಸ್ಪದವಾಗಿದೆ. ಜಲಾಶಯದಿಂದ ನೀರನ್ನು ಸರ್ವಕಾಲಗಳಲ್ಲಿಯೂ ಖಂಡಿತವಾಗಿ ಒದಗಿಸುವುದಾದರೆ, ಆ ಪ್ರದೇಶದಲ್ಲಿ ಇದುವರೆಗೆ ಬೆಳೆಯಾಗದೆ ಇದ್ದ ಉತ್ತಮವಾದ ಧಾನ್ಯಗಳನ್ನು ಬೆಳೆಯಿಸುವುದಕ್ಕೆ ಅನುಕೂಲಪಡಿಸಿದಂತೆ ಆಗುವುದು. ಜಲಾಶಯದಲ್ಲಿ ನಿಲ್ಲಿಸಿಕೊಳ್ಳುವ ನೀರಿನಿಂದ ಹಾಲಿ ಇರತಕ್ಕ ಮತ್ತು ಹೊಸದಾಗಿ ತೆಗೆಯುವ ನಾಲೆಗಳ ಕೆಳಗೆ ಸುಮಾರು 10,000 ಎಕರೆ ಜಮೀನಿನಲ್ಲಿ ಕಬ್ಬಿನ ಬೆಳೆ ಇಡಲು ಏರ್ಪಾಡುಗಳನ್ನು ಮಾಡುತ್ತಲಿದೆ.

ಈ ಜಲಾಶಯದಿಂದ ನೀರುಮುಳುಗಡೆಗೆ ಸಿಕ್ಕಿದ ಗ್ರಾಮಗಳ ನಿವಾಸಿಗಳಿಗೆ ಬೇರೆ ಸ್ಥಳಗಳಲ್ಲಿ ವಸತಿಗಳನ್ನು ಕಲ್ಪಿಸಿಕೊಡುವ ವಿಚಾರದಲ್ಲಿ ನಮ್ಮ ಆಫೀಸರುಗಳು ಅನುಕೂಲವಾದ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ.

ಕಾವೇರೀ ವಿದ್ಯುಚ್ಛಕ್ತಿಯ ಏರ್ಪಾಡನ್ನು ಇನ್ನೂ ಅಭಿವೃದ್ಧಿಗೆ ತರುವುದು.

ಹಾಲಿ ಬೇಸಿಗೆಯಲ್ಲಿ ವಿದ್ಯುಚ್ಛಕ್ತಿಯನ್ನು ಒಂದೇಸಮನಾಗಿ ಸರಬರಾಯಿ ಮಾಡುವದು ಸ್ವಲ್ಪಮಟ್ಟಿಗೆ ಸಂದೇಹಾಸ್ಪದವಾಗಿರುವದರಿಂದ, ಈ ಜಲಾಶಯವನ್ನು ಕಟ್ಟಿಸಿದ್ದೇ ಆದರೆ ಸದರಿ ವಿದ್ಯುಚ್ಛಕ್ತಿಯ ಸರಬರಾಯಿಗೆ ಯಾ ತೊಂದರೆಯಿಲ್ಲದಂತೆ ಮಾಡುವುದಕ್ಕೂ, ಸದರಿ ಶಕ್ತಿಯನ್ನು ಸುಮಾರು 11,000 ದಿಂದ 18,000 ಅಶ್ವ ಶಕ್ತಿಯವರೆಗೆ ಹೆಚ್ಚಿಸುವುದಕ್ಕೂ, ಸರ್ಕಾರದವರಿಗೆ ಅನುಕೂಲವಾಗುತ್ತದೆ. ಬರುವ ಜುಲೈ ತಿಂಗಳೊಳಗಾಗಿ ಅವಶ್ಯಕವಾದ ಕೆಲಸಗಳು ಪೂರೈಸುತ್ತವೆಂದು ನಿರೀಕ್ಷಿಸಲಾಗಿದೆಯಲ್ಲದೆ, ಇನ್ನೂ ಹೆಚ್ಚಾದ ಶಕ್ತಿಯು ಬೇಕಾದರೆ, ಇನ್ನೂ ಹೆಚ್ಚು ಕಾಂಗಾರಿಗಳನ್ನು ನಡೆಯಿಸಬಹುದು.

ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಕೈಗಾರಿಕೆ ಕೆಲಸಗಳಿಗೆ ವಿದ್ಯುಚ್ಛಕ್ತಿಯನ್ನು ಹೆಚ್ಚಾಗಿ ಉಪಯೋಗಿಸುವಂತೆ ಮಾಡಿ ಸದರಿ ಶಕ್ತಿಯ ಸರಬರಾಯಿಗೆ ಖಾಯಂ ಗಿರಾಕಿಗಳನ್ನು ಹೆಚ್ಚಿಸತಕ್ಕದ್ದು, ವಿದ್ಯುಚ್ಛಕ್ತಿ ಇಲಾಖೆಯವರ ಒಂದು ಕರ್ತವ್ಯವಾಗಿರುತ್ತದೆ.

ಸಣ್ಣ ಕೆರೆಗಳು ಮತ್ತೂ ಮರಮ್ಮತ್ತು ಶಿಬ್ಬಂದಿ.

ಈ ವರ್ಷದಲ್ಲಿ ಸಣ್ಣ ಕೆರೆಗಳ ವಿಷಯಕ್ಕೆ ಹೆಚ್ಚಾಗಿ ನಿಗಾ ಕೊಟ್ಟಿರಲಾಗಿದೆ. ಡಿಸ್ಟ್ರಿಕ್ಟುಗಳಿಗೆ ಬೇಕಾದ ಮರಮ್ಮತ್ತು ಶಿಬ್ಬಂದಿಯನ್ನು ಸರ್ಕಾರದವರು ಹೆಚ್ಚಿಸಿ ಇದಕ್ಕಾಗಿ 39,412 ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಸಣ್ಣ ಕೆರೆಗಳ ದುರಸ್ತಿಗೆ ಕೊಟ್ಟಿರುವ ಗ್ರಾಂಟು ಮೊಬಲಗು ಈಗ 2,00,000 ರೂಪಾಯಿಗೆ ಬಂದಿರುತ್ತದೆ. ಬೇಕಾದರೆ ಈ ಗ್ರಾಂಟನ್ನು ಇನ್ನೂ ಜಾಸ್ತಿ ಮಾಡುವುದಕ್ಕೆ ಸರ್ಕಾರದವರು ಸಿದ್ಧರಾಗಿರುತ್ತಾರೆ.

ಒಂದು ಕೆರೆಯಿಂದ ಪ್ರಯೋಜನವನ್ನು ಪಡೆಯುತ್ತಿರುವ ಗ್ರಾಮದ ಯಾ ಗ್ರಾಮಗಳ ಜನಗಳಿಗೆ ಗ್ರಾಂಟು ಮೊಬಲಗನ್ನು ಕೊಡುವುದರಿಂದ, ಅಥವಾ ಕಂದಾಯವನ್ನು ಕಡಿಮೆ ಮಾಡುವ ಅಥವಾ ಇತರ ವಿಧವಾದ ಬಹುಮಾನ ತೋರಿಸುವದರಿಂದ, ಅವರೇ ಆ ಕೆರೆಯನ್ನು ಸ್ವಪ್ರಯತ್ನದಿಂದ ಜಾರಿಗೆ ತರುವಂತೆ ಅಥವಾ ದುರಸ್ತು ಮಾಡಿಕೊಳ್ಳುವಂತೆ ಪ್ರೋತ್ಸಾಹಿಸತಕ್ಕ ಬಗ್ಗೆ ಒಂದು ಏರ್ಪಾಟು ಪರ್ಯಾಲೋಚನೆಯಲ್ಲಿರುತ್ತದೆ. ಮುಂದೆ ಅನೇಕ ವರ್ಷಗಳ ವರೆಗೆ ಜನಗಳು ಸರ್ಕಾರದವರೊಡನೆ ಸೇರಿ ಕೆಲಸಗಳನ್ನು ಜರುಗಿಸಿ ವಿಶೇಷ ಪ್ರಯೋಜನವನ್ನು ಪಡೆಯಬಹುದಾದ ಏರ್ಪಾಡುಗಳ ಪೈಕಿ ಇದೂ ಒಂದಾಗಿರುತ್ತದೆ.

ಮಲೆನಾಡು ಅಭಿವೃದ್ಧಿಯ ಏರ್ಪಾಡು.

ಶಿವಮೊಗ್ಗಾ, ಕಡೂರು, ಹಾಸನ—ಈ ಮೂರು ಡಿಸ್ಟ್ರಿಕ್ಟುಗಳಲ್ಲಿನ ಮಲೆನಾಡು ಪ್ರದೇಶಗಳಿಗೆ ಜನಗಳು ಪುನಃ ಬಂದು ನೆಲಸುವಂತೆ ಮಾಡುವುದಕ್ಕೂ, ಅಲ್ಲಿನ ಆರೋಗ್ಯವನ್ನೂ ಅರ್ಥೋತ್ಪತ್ತಿಯನ್ನೂ ಹೆಚ್ಚಿಸುವುದಕ್ಕೂ, ತಕ್ಕ ಪ್ರಯತ್ನಗಳನ್ನು ಮುತುವರ್ಜಿಯಿಂದ ನಡೆಸಬೇಕೆಂದು ಶ್ರೀಮನ್ಮಹಾರಾಜರವರ ಸರ್ಕಾರದವರು ಉದ್ದೇಶಿಸಿರುವಾರೆಂಬುದಾಗಿ ಹೋದ ವರ್ಷ ತಿಳಿಸಿರುತ್ತದೆ. ಇದಕ್ಕಾಗಿ ತಯಾರುಮಾಡಿದ ಕಾರ್ಯಕ್ರಮವನ್ನು ಕಳೆದ ಫೆಬ್ರುವರಿಯಲ್ಲಿ ಜಾರಿಗೆ ತರಲಾಯಿತು. ಈ ಕಾರ್ಯದಲ್ಲಿ ಭಾಗಿಗಳಾಗಿರಲು ಡಿಸ್ಟ್ರಿಕ್ಟುಗಳಲ್ಲಿ ಪ್ರಮುಖರಾಗಿರುವವರಿಗೆ ಅವಕಾಶವನ್ನು ಕೊಡುವುದಕ್ಕಾಗಿ, ಸರ್ಕಾರಿ ನೌಕರರ ಜತೆಗೆ ಇತರ ಜನಗಳನ್ನೂ ಸೇರಿಸಿ, ಪ್ರತಿಯೊಂದು ಡಿಸ್ಟ್ರಿಕ್ಟಿಗೂ ಒಂದೊಂದು ಸ್ಥಳೀಯ ಕಮಿಟಿಯನ್ನೂ, ಅವುಗಳು ನಡಿಸುವ ಕಾರ್ಯಗಳನ್ನು ತನಿಖೆಯಿಂದ ವಿಚಾರಿಸತಕ್ಕ ಬಗ್ಗೆ ಒಂದು ಸೆಂಟ್ರಲ್ ಕಮಿಟಿಯನ್ನೂ ಏರ್ಪಾಡುಮಾಡಿ, ಇವುಗಳಿಗೆ ಬೇಕಾದ ದ್ರವ್ಯವನ್ನೂ ತಕ್ಕಷ್ಟು ಶಿಬ್ಬಂದಿಯನ್ನೂ ಕೊಟ್ಟಿದೆ. ಪ್ರಸಕ್ತ ಸಂವತ್ಸರದಲ್ಲಿ ಸದರೀ ಕ್ರಮವು ಜಾರಿಯಲ್ಲಿದ್ದ ಕೆಲವು ತಿಂಗಳೊಳಗೆ ಈ ಕೆಳಗೆ ನಡಿಸಿದ ಅಭಿವೃದ್ಧಿಕಾರ್ಯಗಳ ಪೈಕಿ, ಸ್ವೇಚ್ಛೆಯಾಗಿ ಬೆಳೆದ ಗಿಡ ಗೆಂಟೆಗಳನ್ನು ತೆಗೆದುಹಾಕಿದ್ದನ್ನೂ, ಕುಡಿಯುವ ನೀರಿನ ಸರಬರಾಯಿಯನ್ನು ಅನುಕೂಲಪಡಿಸಿದ್ದನ್ನೂ, ಅನಾರೋಗ್ಯಕರವಾದ ಗ್ರಾಮಗಳನ್ನು ಬೇರೆ ಕಡೆ ಕಟ್ಟಿಸಿದ್ದನ್ನೂ, ಕೊಯಿನಾ ಉಪಯೋಗವನ್ನು ಜನಗಳ ಬಳಕೆಗೆ ತಂದದ್ದನ್ನೂ, ದೇವಿ ಹಾಕಿಸಿಕೊಳ್ಳುವುದರಿಂದುಂಟಾಗುವ ಪ್ರಯೋಜನವನ್ನು ಪ್ರಚುರಗೊಳಿಸಿದ್ದನ್ನೂ, ದೇಹವನ್ನೂ ಮನೆಗಳನ್ನೂ ಶುಚಿಯಾಗಿ ಇಟ್ಟುಕೊಳ್ಳುವುದಕ್ಕೆ ಸಂಬಂಧಪಟ್ಟ ಆರೋಗ್ಯಸೂತ್ರಗಳನ್ನು ಜನರ ತಿಳುವಳಿಕೆಗೆ ತಂದದ್ದನ್ನೂ ತಿಳಿಸಬಹುದಾಗಿದೆ. ಮಲೇರಿಯಾ ಉಪದ್ರವವನ್ನು ಹರಡುವುದಕ್ಕೆ ಯಾವ ವಿಧವಾದ ಸೊಳ್ಳೆಯು ಕಾರಣವಾಗಿದೆ ಎಂಬುದನ್ನು ಕಂಡುಹಿಡಿಯುವುದಕ್ಕಾಗಿ, ಮಲೇರಿಯಾ ಸರ್ವೆಯನ್ನೂ, ಶೋಧನಾಲಯದಲ್ಲಿ ಪರೀಕ್ಷೆಗಳನ್ನೂ ಮಾಡಲುಪಕ್ರಮಿಸಿದೆ. ಇಂಥ ಸರ್ವೆಯನ್ನೂ ಪರಿಶೋಧನೆಯನ್ನೂ ಮಾಡತಕ್ಕ ವಿಧಾನವನ್ನು ತೀರ್ಮಾನಿಸುವುದಕ್ಕೂ, ಜನನ ಮರಣಗಳ ಲೆಕ್ಕವನ್ನಿಡುವ ರೀತಿಯನ್ನು ಕ್ರಮಪಡಿಸಲು ಸಲಹೆಗಳನ್ನು ಕೊಡುವುದಕ್ಕೂ ಮೆಡಿಕಲ್ ಇಲಾಖೆಯ ಅನುಭವಶಾಲಿಯಾದ ಒಬ್ಬ ಆಫೀಸರನ್ನು ಸ್ವಲ್ಪ ಕಾಲದಮಟ್ಟಿಗೆ ನೇಮಿಸಲಾಯಿತು. ದೇವಿ ಹಾಕುವವರ, ಸೂಲಗಿತ್ತಿಯರ, ಕಾಂಪೌಂಡರುಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕೆ ತಕ್ಕ ಏರ್ಪಾಡುಗಳು ನಡೆಯುತ್ತಲಿವೆ. ಸಾಮಾನ್ಯವಾಗಿ ಒಂದೇಸ್ಥಳದಲ್ಲಿರುವ ಮತ್ತೂ ಊರಿಂದೂರಿಗೆ ಸಂಚರಿಸುತ್ತಾ ಔಷಧಕೊಡುವ ಹೆಚ್ಚು ಡಿಸ್ಪೆನ್ಸರಿಗಳನ್ನೂ, ಆವಶ್ಯಕವಾದ ಹೆಂಗಸರ ಆಸ್ಪತ್ರೆಗಳನ್ನೂ, ಒದಗಿಸುವ ವಿಷಯವನ್ನು ಸರ್ಕಾರದವರು ಆಸಕ್ತಿಪೂರ್ವಕ ಆಲೋಚಿಸುತ್ತಿದ್ದಾರೆ.

ಮಲೆನಾಡಿಗೆ ಜನರು ಹೊಸದಾಗಿ ಬಂದು ನೆಲಸುವಂತೆ ಮಾಡುವುದಕ್ಕೆ ಬೇಕಾದ ಪ್ರಯತ್ನಗಳನ್ನೂ ಮಾಡುತ್ತಲಿದೆ. ಮಲೆನಾಡಿನ ಅಭಿವೃದ್ಧಿ ವಿಷಯವು ಸ್ವಲ್ಪಮಟ್ಟಿಗೆ ಅರ್ಥೋತ್ಪತ್ತಿಯ ಸ್ವಭಾವವುಳ್ಳದೆಂದು ಸರ್ಕಾರದವರು ತಿಳಿದು, ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುವುದಕ್ಕೂ, ಮುಖ್ಯವಾಗಿ ಫಾರೆಸ್ಟ್ ಉತ್ಪನ್ನಗಳಿಗೆ ಸಂಬಂಧಪಟ್ಟ ಸ್ಥಳೀಯ ಕೈಗಾರಿಕೆಗಳನ್ನು ವೃದ್ಧಿಗೆ ತರುವುದರ ಮೂಲಕ ಕಸಬುಗಳನ್ನು ಹೆಚ್ಚಿಸುವುದಕ್ಕೂ, ಆ ಪ್ರದೇಶದಲ್ಲಿ ರಸ್ತೆಗಳನ್ನು ಹೆಚ್ಚಿಸುವುದಕ್ಕೂ ಪರಸ್ಪರ ಸಹಕಾರ ಸಂಘಗಳನ್ನು ವೃದ್ಧಿಗೊಳಿಸುವುದಕ್ಕೂ ಮಾಡಬೇಕಾದ ಏರ್ಪಾಡುಗಳನ್ನು, ಸರ್ಕಾರದವರು ಮಂಜೂರ್ ಮಾಡಿರುತ್ತಾರೆ.

ಗ್ರಾಮಾಭಿವೃದ್ಧಿಯ ಏರ್ಪಾಟು.

ಕಳೆದ ವರ್ಷದ ಉಪನ್ಯಾಸದಲ್ಲಿ ಸೂಚಿತವಾದ ಈ ಏರ್ಪಾಟನ್ನು ಪ್ರಸಕ್ತವರ್ಷದ ಕೊನೆಯಭಾಗದಲ್ಲಿ ಕೈಗೊಳ್ಳಲಾಯಿತು. ಈ ಭಾಗದಲ್ಲಿ ಕಾರ್ಯ ಜರುಗುತ್ತಿದ್ದ ಕೆಲವು ತಿಂಗಳುಗಳಲ್ಲಿ ನಡೆದ ಕೆಲಸವು ತೃಪ್ತಿಕರವಾಗಿರುತ್ತದೆ. ಈ ಭಾಗದಲ್ಲಿ ಕಂಡುಬಂದ ಫಲಿತಾಂಶವನ್ನು, ಈಚಿನ ರಿಪೋರ್ಟುಗಳಿಂದ ತಿಳಿಯಬರುವ ಈ ಕೆಳಗಿನ ಲೆಕ್ಕಗಳಿಂದ ತಿಳಿಯಬಹುದಾಗಿದೆ:—

ಸಂಸ್ಥಾನದಲ್ಲಿರುವ ಒಟ್ಟು 16,740 ಗ್ರಾಮಗಳ ಪೈಕಿ, ಕಮಿಟಿಗಳು ಏರ್ಪಾಡಾಗಿರುವ ಗ್ರಾಮಗಳು	11,923
ಹೊಸದಾಗಿ ಏರ್ಪಡಿಸಿದ ಗ್ರಾಮಕಮಿಟಿಗಳು	7,440
ಗ್ರಾಮ ಸಾಮಾನ್ಯದ ಪ್ರಯೋಜನಕ್ಕಾಗಿ ಜನಗಳು ವಾರಕ್ಕೆ ಅರ್ಧದಿನದ ಕೆಲಸಮಾಡಲು ಒಪ್ಪಿಕೊಂಡಿರುವ ಗ್ರಾಮಗಳು	6,126
ಪುಸ್ತಕಾಲಯಗಳನ್ನಿಟ್ಟುಕೊಂಡಿರುವ ಯಾ ವರ್ತಮಾನ ಪತ್ರಿಕೆಗಳನ್ನು ತರಿಸುವ (ಐದು ಡಿಸ್ಟ್ರಿಕ್ಟುಗಳಲ್ಲಿನ) ಗ್ರಾಮಗಳು	55

ಹೋದವರ್ಷದ ಕಾಲಸ್ಥಿತಿಯು ಸಮರ್ಪಕವಾಗಿರಲಿಲ್ಲವೆಂಬುದನ್ನೂ ಇದುವರೆಗೂ ಈ ವರ್ಷದ ಕಾಲಸ್ಥಿತಿಯು ಸಮರ್ಪಕವಾಗಿರುವುದಿಲ್ಲವೆಂಬುದನ್ನೂ ಯೋಚಿಸಿದರೆ, ಜನರು ಈ ಏರ್ಪಾಟಿಗೆ ಕೊಟ್ಟಿರುವ ಅವಲಂಬವು ಬಹಳ ಸಂತೋಷಕರವಾಗಿರುತ್ತದೆ.

ಮಂಜೂರಾಗಿರುವ ಈ ಏರ್ಪಾಟಿನಂತೆ, ಗ್ರಾಮಾಭಿವೃದ್ಧಿ ಕಮಿಟಿಗಳವರು ಕೈಗೊಳ್ಳುವ ಕಾರ್ಯಗಳಿಗೆ ತಗಲುವ ಒಟ್ಟು ಖರ್ಚಿನ ಪೈಕಿ ಮೂರರಲ್ಲೊಂದು ಭಾಗವನ್ನು ಸರ್ಕಾರದಿಂದ ಕೊಡುವಂತೆ ಗೊತ್ತುಮಾಡಲಾಗಿತ್ತು; ಆದರೆ ಪ್ರಾರಂಭದಲ್ಲಿ ಈ ಏರ್ಪಾಡನ್ನು ನಿರ್ವಹಿಸಲು ಕಷ್ಟಗಳಿರುತ್ತವೆಯೆಂದು ಯೋಚಿಸಿ, ಸರ್ಕಾರದವರು ಪ್ರಸಕ್ತವರ್ಷಕ್ಕೂ ಹಾಲ್ತಿಸಾಲಿಗೂ ಕೊಡಬೇಕಾದ ಸಹಾಯದ್ರವ್ಯವನ್ನು ಅರ್ಧದವರೆಗೆ ಹೆಚ್ಚಿಸಿದರು.

ಮೇಲೆ ನಮೂದಾದ ಕಾಲದಲ್ಲಿ ಗ್ರಾಮಾಭಿವೃದ್ಧಿ ಕಮಿಟಿಗಳವರು 1,25,000 ರೂಪಾಯಿ ಲಾಗವಹು ಬೀಳುವ ಶಾಶ್ವತವಾದ ಪ್ರಯೋಜನವುಳ್ಳ ಕಾರ್ಯಗಳನ್ನು ಕೈಕೊಂಡರು. ಈ ಪೈಕಿ 39,000 ರೂಪಾಯಿಯನ್ನು ಸರ್ಕಾರದವರು ಸಹಾಯ ಮಾಡಿದರು. ಬಾಕಿ 86,000 ರೂಪಾಯಿಗಳನ್ನು ಸಂಬಂಧಪಟ್ಟ ಗ್ರಾಮಸ್ಥರು ಹಣದ ಮೂಲಕವಾಗಿ, ಯಾ, ಕೆಲಸ ಮಾಡುವುದರ ಮೂಲಕವಾಗಿ ಸಹಾಯಮಾಡಿದರು.

ಈ ಗ್ರಾಮಾಭಿವೃದ್ಧಿಯ ಏರ್ಪಾಟು ಈಗಾಗಲೇ ಜನಗಳ ವಿಶ್ವಾಸಕ್ಕೆ ಪಾತ್ರವಾಗಿರುತ್ತದೆಂಬುವದಕ್ಕೆ ಚಿಹ್ನೆಗಳು ಕಾಣಬರುತ್ತಲಿವೆಯೆಂಬದಾಗಿ ರೆವಿನ್ಯೂ ಕಮಿಷನರವರು ತಿಳಿಸಿರುತ್ತಾರೆ. ಈ ಏರ್ಪಾಡು ಇಷ್ಟುಬೇಗ ಜಾರಿಗೆ ಬರುವುದಕ್ಕೆ ನಮ್ಮ ಡಿಸ್ಟ್ರಿಕ್ಟ್ ರೆವಿನ್ಯೂ ಆಫೀಸರುಗಳ ಉತ್ಸಾಹವೂ ಆದರವೂ ಕಾರಣಗಳಾಗಿವೆ. ಇವನ್ನು ಸರಿಯಾಗಿ ಜರುಗಿಸಿದಲ್ಲಿ ಜನಗಳಲ್ಲಿ ತಿಳುವಳಿಕೆ ಹೆಚ್ಚುವುದಕ್ಕೂ, ಗ್ರಾಮಗಳ ಭಾಗ್ಯೋನ್ನತಿಯನ್ನೂ ಅನುಕೂಲತೆಗಳನ್ನೂ ವೃದ್ಧಿಪಡಿಸುವುದಕ್ಕಾಗಿ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡುವಂತೆ ಪ್ರೋತ್ಸಾಹಿಸುವುದಕ್ಕೂ, ಈ ಬಗೆಯ ಕೆಲಸಗಳು ಸಾಧಕಗಳಾಗಲೇಬೇಕಾ

[3 ನೆಯ ಪುಟದಿಂದ ಮುಂದೆ ಸಾಗಿದುದು.]

ಟೆಕ್ನಿಕಲ್ ಇಲಾಖೆಗಳು.

ಮರಹಮ್ಮತ್ ಇಲಾಖೆ.

ಲೋಕಲ್ ಫಂಡ್ ವೇಖೀಲು ಎಲ್ಲಾ ಬಾಬುಗಳಿಂದಲೂ ಮರಹಮ್ಮತ್ ಕೆಲಸಗಳಿಗಾಗಿ ಒಟ್ಟು ಖರ್ಚು ಹಿಂದಿನ ಸಾಲಿನಲ್ಲಿ 51 ಲಕ್ಷ ರೂಪಾಯಿಯಾಗಿರುವಲ್ಲಿ, ಪ್ರಸಕ್ತ ವರ್ಷದಲ್ಲಿ ಸುಮಾರು 59½ ಲಕ್ಷ ರೂಪಾಯಿಯಾಗಿರುತ್ತದೆ. ಈ ಮೊಬಲಗಿನ ಪೈಕಿ, ನೀರಾವರಿ ಕೆಲಸಗಳಿಗಾಗಿ 20½ ಲಕ್ಷ ರೂಪಾಯಿಯನ್ನೂ, ಸಿವಿಲ್ ಕಾಮಗಾರಿಗಳಿಗಾಗಿಯೂ ಮಿಲಿಟರಿ ಕಟ್ಟಡಗಳಿಗಾಗಿಯೂ 29½ ಲಕ್ಷ ರೂಪಾಯಿಗಳನ್ನೂ ಖರ್ಚು ಮಾಡಿರುತ್ತದೆ.

ಕನ್ನಂಬಾಡಿ ಬಳಿ ಕಾವೇ
ತ್ತಿರುವ ಜಲಾಶಯದ ಕಾಮಗಾ
ವೃದ್ಧಿಯಾಗುತ್ತಲಿದೆ. ಸದೀ ವಾ
ಆಗಬೇಕಾಗಿದ್ದ ಕಷ್ಟಕರವಾದ
ರ್ಷದಲ್ಲಿ ಪೂರಯಿಸಿತು. ಕಲ್ಲಿನ
ದೀ ಪಾತ್ರದ ಮೇಲೆ 44 ಅಡಿ
ದಲ್ಲಿ 30 ಅಡಿ ಎತ್ತರದ ವರೆಗೂ
ಮಧ್ಯಭಾಗದಲ್ಲಿ ಸಂದುಬಿಟ್ಟಿರು
ಟ್ಟದ ವರೆಗೆ ನೀರು ಜಮಾಯಿ
ಯೇ ಒಂದು ಪವರ್ ಸ್ಟೇಷನ
ಆದ ಸಂಬಂಗಾ ಸ್ಟೇಷನಿಗೂ
ಯಲ್ಲಿರುವ ಇತರ ಪ್ರದೇಶಗಳಿಗೂ
ಸುವುದಕ್ಕೋಸ್ಕರ, ಅನೇಕ ಟ್ಯ
ರುವ (Turbine) ಚೂಬುಗಳ
ಳನ್ನು ಮಾಡುತ್ತಲಿದೆ.

ನೀರುಮುಳುಗಡೆಗೆ ಬಂದ
ಆವರ ಜಮೀನುಗಳಿಗೆ ಬದಲಿಗೆ
ಒದಗಿಸಿಕೊಡುವುದಕ್ಕೋಸ್ಕರ,
ಇತರ ಏರ್ಪಾಡುಗಳನ್ನು ಮಾ
ನಾಲೆಗಳನ್ನು ಕಟ್ಟುವುದಕ್ಕೆ
ರುತ್ತಾರೆ. ಈ ಪೈಕಿ ಎರಡು ಕ
ವಾಗಿದೆ. ಉಳಿದ ಎರಡು ನಾಲೆ
ಕ್ರಮಿಸಲಾಗುವುದು. ಜಲಾಶಯ
ಹೆಚ್ಚು ಪ್ರದೇಶವನ್ನು ನೀರಾವರಿಗೆ
ಧಾರಣೆ ಬಾಳುವ ಕಬ್ಬು, ಉರ
ಫಸಲುಗಳನ್ನು ಬೆಳೆಯುವುದಕ್ಕೆ
ಕ್ಕಾಗಿಯೂ ಮಾಡಬೇಕಾದ ವಿ

ನೀರಾವರಿ ಕೆಲಸ

ಶಾಸ್ತ್ರೀಯ ಕ್ರಮದಿಂದ
ಡಿಸುವುದಕ್ಕಾಗಿ ಮೂರುವರ್ಷ
ಸಾಲಿಯಾನ 30,000 ರೂಪಾಯ
ಒಂದು ಇರ್ರಿಗೇಷನ್ ಡಿವಿಜನ
ಡಿವಿಜನಿಗೆ ವಹಿಸಿಕೊಟ್ಟು ಕೆಲಸ
ನಾ ಸದಲ್ಲಿಯೇ ನಿರುಗಿರುತ್ತದೆ.

ವಿದ್ಯುಚ್ಛಕ್ತಿ

ಕಾವೇರೀ ವಿದ್ಯುಚ್ಛಕ್ತಿಯ
ನೆಯ ಕಾಮಗಾರಿಯು ಪ್ರಸಕ್ತ
ಚೆನ್ನಾಗಿ ನಡೆದು ಇರುವುದಲ್ಲದೆ,
ಪೂರೈಸುವುದಕ್ಕೆ ಮೊದಲೇ ವ
ಇದೆ. ವಿದ್ಯುಚ್ಛಕ್ತಿಯನ್ನು ಪ
ಉಪಯೋಗಿಸುವುದನ್ನು ಪ್ರೋ
ಷದಲ್ಲಿ ಸದರಿ ಶಕ್ತಿಯ ದರಗ
ಬೆಂಗಳೂರಲ್ಲಿ ಎಲೆಕ್ಟ್ರಿಕ್ ಟ್ರಾ
ಮಾಡಲ್ಪಟ್ಟ ಅಂದಾಜುಗಳನ್ನು
ತು ಮತ್ತು ಹೊಸ ಕೆಲಸಗಳನ್ನು
ಅಂದಾಜಾಗಿರುವ ಮೊಬಲಗಿನ
ಸ್ಟೇಷನಿನವರು ಕೊಡಬೇಕಾದ
ವಿಚಾರವು ವ್ಯವಸ್ಥೆಯಾದ ಕೂಡ
ಪುನಃ ನಡೆಸಲಾಗುವುದು.

ರೈಲ್ವೇ

1900 ನೆಯ ಇಸವಿಯ
ಮೈಲಿಗಳ ಫಾಸಲೆ ರೈಲ್ವೇರಸ್ತೆ
ದಕ್ಕಾಗಿ 223 ಲಕ್ಷ ರೂಪಾಯ
ಲಿತು. 1911 ನೆಯ ಇಸವಿಯ
ಹೆಚ್ಚದೇ ಇದ್ದ ಹಾಗೆಯೇ ಇದ್ದ

1911 ನೆಯ ನವೆಂಬರ್
ಳ್ಳ 121-11-12ನೆಯ ಸಂಬ
ಲಕ ಮಂಜೂರಾದ ರೈಲ್ವೆ

ಈಗಿರುವ ಫಾಸಲೆಯ ಜೊತೆಗೆ ಒಟ್ಟು 130 ಲಕ್ಷ ರೂಪಾಯಿ ಲಾಗವಡು ತಗಲುವ ಇನ್ನೂ 259½ ಮೈಲಿ ಫಾಸಲೆ ರೈಲ್ವೆ ಹಾಕುವುದಕ್ಕೆ ಏರ್ಪಾಡನ್ನು ಮಂಜೂರು ಮಾಡಲಾಯಿತು.

ಬೇರೆ ಬೇರೆ ತರಹ ಗೇಜುಗಳುಳ್ಳ 259 ಮೈಲಿ ಫಾಸಲೆ ರೈಲ್ವೆಗಳನ್ನು ಹಾಕತಕ್ಕ ಬಗ್ಗೆ, 110 ಲಕ್ಷ ರೂಪಾಯಿ ತಗಲುವ ಅಂದಾಜುಗಳನ್ನು ಮಂಜೂರಾದ ಪಟ್ಟಿಗೆ ದಾಖಲ್ ಮಾಡಲಾಯಿತು. 30.69 ಮೈಲಿ ರಸ್ತೆಗಾಗಿ 12.72 ಲಕ್ಷ ರೂಪಾಯಿ ಲಾಗವಡು ಬೀಳುವ ಅಂದಾಜುಳ್ಳ ಬೆಂಗಳೂರು ಹೊಸೂರು ರೈಲಿಗಾಗಿ ಒಂದು ಏರ್ಪಾಡು ಇನ್ನೂ ರೈಲ್ವೇ ಬೋರ್ಡಿನವರ ಇತ್ಯರ್ಥದಲ್ಲಿರುತ್ತದೆ. 94 ಲಕ್ಷ ರೂಪಾಯಿ ಲಾಗವಡಿನ ಅಂದಾಜಿನಮೇಲೆ ಬೇರೆ 140 ಮೈಲಿ ಫಾಸಲೆಯ ರಸ್ತೆಗಳನ್ನು ಹಾಕುವುದಕ್ಕಾಗಿ ಕಾಂಗಾರಿ ಏರ್ಪಾಡುಗಳು ಸಿದ್ಧವಾಗಿವೆ. ಇವುಗಳಿಗಾಗಿ ಹಣವನ್ನು ಹೇಗೆ ಒದಗಿಸಬೇಕು? ಇವುಗಳಿಗೆ ಯಾವರೀತಿ ಕಾಂಗಾರಿ ಮಾಡಿಸಿ ಅವುಗಳನ್ನು ಸಡಕಿತದಲ್ಲಿಟ್ಟು ಕೊಳ್ಳಬೇಕು? ಎಂಬ ವಿಷಯಗಳು ಪರ್ಯಾಲೋಚನೆಯಲ್ಲಿರುತ್ತವೆ. ಶಿವಮೊಗ್ಗಾ ಡಿಸ್ಟ್ರಿಕ್ಟಿನ ರೈಲ್ವೆ ಶಾಖೆಗಳಿಗಾಗಿಯೂ, ಬೆಟ್ಟ ಮತ್ತು ಕಾಡಿನಕೋಟೆ ಟ್ರಾಂವೆಗಳಿಗಾಗಿಯೂ, ಆಕರೆಯ ಕೆಲಸಗಳನ್ನು ಕೈಗೊಳ್ಳಲು ತಕ್ಕ ತರಡೂದನ್ನು ಮಾಡುತ್ತಲಿದೆ.

ನಮ್ಮ ದೇಶದ ರೈಲ್ವೆ ಮಾರ್ಗಗಳನ್ನು, ಸುತ್ತಲೂ ಇರುವ

ಗಿ ಉತ್ಪತ್ತಿಯಾದಂತೆ ಆಯಿತು. ಇದರಿಂದ ಸರ್ಕಾರಕ್ಕೆ ಸುಮಾರು 18,91,486 ರೂಪಾಯಿನ ರಾಜಾಯವು ದೊರಕಿತು. 1912-13 ನೆಯ ವರ್ಷದಲ್ಲಿ 18,09,971 ರೂಪಾಯಿ ರಜಾಯವು ಬಂದಿರುತ್ತದೆ.

ಲೋಕಲ್ ಸೆಲ್ಫ್ ಗೌರ್ನಮೆಂಟ್.

ಮ್ಯುನಿಸಿಪಲ್ ಫಂಡುಗಳು.

ಈ ವರ್ಷ ಮ್ಯುನಿಸಿಪಲ್ ಫಂಡುಗಳ ಬಾಬಿನಲ್ಲಿ ಆದಾಯವು ಸುಮಾರು 10,97,000 ರೂಪಾಯಿಯೂ, ವ್ಯಯವು ಸುಮಾರು 10,01,000 ರೂಪಾಯಿಯೂ ಆಯಿತು. ಈ ವ್ಯಯದ ಬಾಬತು ಮೊಬಲಗಿನಲ್ಲಿ 2,87,000 ರೂಪಾಯಿಗಳನ್ನು ಮರಹಮ್ಮತ್ ಕಾಂಗಾರಿಗಳಿಗಾಗಿಯೂ, 2,31,000 ರೂಪಾಯಿಗಳನ್ನು ಕನ್ಸರ್ವೆನ್ಸಿಗಾಗಿಯೂ, ಉಳಿದದ್ದನ್ನು ಇತರ ಬಾಬುಗಳಿಗಾಗಿಯೂ ಖರ್ಚು ಮಾಡಲಾಯಿತು.

ಎರಡು ಲಕ್ಷ ರೂಪಾಯಿಗಿಂತ ಹೆಚ್ಚು ಖರ್ಚು ತಗಲಬಹುದೆಂದು ಅಂದಾಜಾ ಕಟ್ಟಿರತಕ್ಕ ದಾವಣಗೆರೆ ನಗರದ ನೀರಿನ ಸರಬರಾಯಿ ಏರ್ಪಾಡಿಗೆ ದ್ರವ್ಯವನ್ನು ಕೊಡುವ ವಿಷಯವನ್ನು ಈ ವರ್ಷ ತೃಪ್ತಿಕರವಾಗಿ ವ್ಯವಸ್ಥೆ ಮಾಡಲಾಯಿತು. ಇದಕ್ಕಾಗಿ ಸರ್ಕಾರದವರು 30,008 ರೂಪಾಯಿಗಳನ್ನು ಸಹಾಯದ್ರವ್ಯವನ್ನು ಕೊಡುವದಲ್ಲದೆ, ಶಿಬ್ಬಂದಿಯ ಮತ್ತು ಯಂತ್ರ

ದ್ದಕ್ಕಿಂತ ಈ ವರ್ಷ ಕಡಿಮೆಯಾಗಿ ಕೆಲಸ ನಡೆಯಿತು. ಈ ಛಾಪಾಖಾನೆಯ ಖರ್ಚು ಹಿಂದಿನವರ್ಷ 1,06,266 ರೂಪಾಯಿ ಖರ್ಚಾಗಿರುವಲ್ಲಿ, ಈ ವರ್ಷ 1,05,485 ರೂಪಾಯಿ ಆಯಿತು. ಹೀಗೆ ಕೆಲಸವೂ ಖರ್ಚೂ ಕಡಮೆಯಾದದ್ದಕ್ಕೆ, ಕೆಲವು ಭಾಗ ಕೆಲಸವನ್ನು ಮೈಸೂರಿನ ಬ್ರಾಂಚ್ ಪ್ರೆಸ್ಸಿಗೆ ಕಳುಹಿಸಿದ್ದೂ, ಬೇರೆಬೇರೆ ಇಲಾಖೆಯವರು ಮಾಡಿಸಿದ ಮುದ್ರಣದ ಕೆಲಸವು ಒಟ್ಟಿನಮೇಲೆ ಕಡಿಮೆಯಾಗಿದ್ದದ್ದೂ, ಮತ್ತು ಕೆಲವು ಮುದ್ರಣದ ಕೆಲಸಗಳನ್ನು ಖಾಸಗಿ ಛಾಪಾಖಾನೆಗಳಲ್ಲಿ ನಡೆಯಿಸಿದ್ದೂ, ಕಾರಣಗಳಾಗಿರುತ್ತವೆ.



G. L. Joshi & Co.,
Post: Banavasi (N. Kanara.)

೧೫ ವರ್ಷಗಳ ಅನುಭವದಿಂದ

ಶುದ್ಧ ವನಸ್ಪತಿಯಿಂದಲೇ ತಯಾರಿಸಿದ

೧ ಪೌಷ್ಟಿಕ ಪಾಕ.

(ರಕ್ತಶುದ್ಧಿ ಮತ್ತು ರಕ್ತವೃದ್ಧಿಯ ಮೇಲೆ ಅತ್ಯುತ್ತಮ.)

ಈ ಪಾಕವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗ ಉಳ್ಳವರು, ರಕ್ತೋದ್ರೇಕವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವವರು, ಮೇಹ ಸಂಬಂಧ ರೋಗಗಳುಳ್ಳವರು, ಧಾತು ಹೋಗುವವರು, ಉಷ್ಣ ಹೋಗುವವರು ಸೇವಿಸಿದ್ದಲ್ಲಿ ರೋಗವು ಸಂಪೂರ್ಣವಾಗಿ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ ನಪುಂಸಕತ್ವ ಕ್ಷೀಣತೆ, ಸ್ವಪ್ನಾವಸ್ಥೆ, ಮೊದಲಾದವು ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ (ಟಾಕಿ), ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರದ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬಾಧೆಗಳೂ, ಕಟಿಶೂಲೆ, ವಾತರೋಗ ಇವೇ ಮೊದಲಾದ ಸರ್ವತರದ ವ್ಯಾಧಿಗಳು ತ್ವರ್ಯದಿಂದ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ.

—ಒಬ್ಬರಿಗೆ 40 ತೊಲೆಯಿಂದ 80 ತೊಲೆಯವರೆಗೆ ಬೇಕಾಗಿರುವದು. ಕಿಮ್ಮತ್ತು 40 ತೊಲೆಗೆ 3—8—0; 80 ತೊಲೆಗೆ 6—0—0

೨ ಪ್ರಮೇಹ (ಫರ್ಮಾ) ರೋಗದ ಔಷಧವು.

ಇದು ಮೂತ್ರಸ್ಥಾನದಿಂದ ಬಿಳಿದು, ಕೆಂಪು ಮತ್ತು ಹಳದಿಯಂತೆ ಹೋಗತಕ್ಕ ಕೀವು ಮತ್ತು ಉರಿ ಮೂರೇ ತಾಸಿನಲ್ಲಿ ಗುಣ ತೋರಿಸಿ 7 ದಿವಸಗಳಲ್ಲಿ ಎಲ್ಲಾ ಬಗೆಯ ಮೇಹಜಾಡ್ಯಗಳನ್ನು ವಾಸಿಮಾಡಿ ಶರೀರಕ್ಕೆ ನಿರೋಗತ್ವವನ್ನುಂಟುಮಾಡುವದು.

7 ದಿವಸದ ಔಷಧಕ್ಕೆ ಕಿಮ್ಮತ್ತು. 2—8—0.

೩ ಟಾಕಿ (ಹುಣ್ಣು) ಮಲಮು.

ಇದನ್ನು [illegible] ಭಗಂದರ, ಕಠಿಣವಾದ ಹುಣ್ಣು ಛಾಯು ಇವುಗಳಿಗೆ 2 ಯಾ 3 ಸಾರೆ ಹಚ್ಚುವ[illegible]ಂದ ತತ್ಕ್ಷಣ ಗುಣ. ಕಿಮ್ಮತ್ತು ಡಬ್ಬಿಗೆ 0—8—0.

೪ ಗಜಕರ್ಣದ ಮಲಮು.

ಇದರ ಉಪಯೋಗದಿಂದ ಹೊಸ ಮತ್ತು ಹಳೇತರಕ್ಕೆ ಬದ್ದ ಗಜಕರ್ಣ, ದದ್ದು

೧೧ ಮೂಲವ್ಯಾಧಿ(ಅರ್ಶಕ್ಕೆ)ಗೆ

ಇವನ್ನು ಸೇವಿಸುವದರಿಂದ ಹೊಸ ಮತ್ತು ಹಳೆ ಮೂಲವ್ಯಾಧಿಗಳು ನಾಶವಾಗುವವು. ರಕ್ತಸುರಿಯುವ ವಾಗುವವು. ಮಲಾವರೋಧ, ಧಾತುಕ್ಷೀಣತೆ, ನಡುವ ವೇದನೆ ಸಹ ನಾಶವಾಗಿ ಮಲವಿಸರ್ಜನೆ ಸಹ ಸಾಫ್ ಆ ಉಪಯೋಗಿಸುವಾಗ ಮೂಲವ್ಯಾಧಿ ಮಲಮನ್ನೂ ರಬೇಕು. ಕಿಮ್ಮತ್ತು ಡಬ್ಬಿ 1 ಕ್ಕೆ 2—12—0.

೧೨ ಮೂಲವ್ಯಾಧಿಯ ಮಲಮು

ಇದರ ಲೇಪದಿಂದ ಮೂಲವ್ಯಾಧಿಯ ಮೊಳಕೆಗಳು ವಿಸರ್ಜನ ಕಾಲಕ್ಕೆ ಆಗುವ ಬಾಧೆ ಕಡಿಮೆಯಾಗಿ ಮಲ ಇದನ್ನುಪಯೋಗಿಸುವಾಗ ಮೂಲವ್ಯಾಧಿ ಔಷಧ ಬೇಕು. ಕಿಮ್ಮತ್ತು ಡಬ್ಬಿ 1 ಕ್ಕೆ 0—12—0.

೧೩ ಸರ್ವ ಮೂಲವ್ಯಾಧಿ ಬಗ್ಗೆ ಉ

ಈ ಉಂಗುರವನ್ನು ಈಗ ಹೊಸದಾಗಿ ಶೋಧ ಯಿಂದ ತಯಾರಿಸಿದೆ. ಇದನ್ನು ಎಡಗೈಯ್ಯ ಬೆರಳಿನಲ್ಲಿ ಕೊಂಡಿರತಕ್ಕದ್ದು. ಉಪಯೋಗಿಸಿದ ೩ನೇ ದಿವಸದಲ್ಲಿ ವ ವಾಗಿ, ಮುಂದೆ ಆಗುವದಿಲ್ಲ. ಉಂಗುರ ಮಾತ್ರ ಬೆರಳಿನಲ್ಲಿ ಬಹಳ ಉತ್ತಮವದೆ. ಉಂಗುರವನ್ನು ಅಪೇಕ್ಷಿಸುವವರು ನ್ನು ಕಳಿಸಲಿಕ್ಕೆ ಮರಿಯಬಾರದು.

ಕಿಮ್ಮತ್ತು ಉಂಗುರ 1 ಕ್ಕೆ 2—0—0.

೧೪ ಖಜ್ಜಿಯ ಮಲಮು.

ಖಜ್ಜಿಗಳು, ತುಂಗಳು, ಉಸಬುಗಳು ಮುಂತಾದ 2-3 ಸಾರಿ ಹಾಗಿಸುವದರಿಂದ ನಿಸ್ಸಂದೇಹವಾಗಿ ಗುಣ ನ್ನುಪಯೋಗಿಸುತ್ತಲೇ, ನಮ್ಮ ಪೌಷ್ಟಿಕಪಾಕವನ್ನು ಶುದ್ಧಿಯಾಗಿ ಮುಂದಕ್ಕೆ ಇಂಥಾ ಚರ್ಮರೋಗಗಳು ಸಂ

ಕಿಮ್ಮತ್ತು ಡಬ್ಬಿಗೆ 0—4—0.

೧೫ ಸರ್ವಹುಣ್ಣುಗಳಿಗೆ ಮಲ

ಎಲ್ಲಾ ತರದ ಹುಣ್ಣು, ದಾದ್ಯ, ಕುರು, ಉ ದಕಜ್ಜ, ಕೆಂಪಾಗಿರುವ ದೊಡ್ಡಬಕ್ಕೆ, ಸಕ್ಕೆಬಕ್ಕೆ ಮೊದಲಾದ ಗಳು ನಾಶವಾಗುವವು. ಇದನ್ನುಪಯೋಗಿಸುವಾಗ್ಗೆ ಪ ಪಯೋಗಿಸಬೇಕು. ಕಿಮ್ಮತ್ತು ಡಬ್ಬಿ 1 ಕ್ಕೆ 1—0

ಸರ್ಕಾರೀ ಛಾಪಾಖಾನೆಯಲ್ಲಿ ನಡೆಯುವ ಕೆಲಸವನ್ನು ಸಾಧ್ಯವಾದರೆ, ಇನ್ನೂ ಕಡಿಮೆಮಾಡಬೇಕೆಂಬ ವಿಷಯವು ಪರ್ಯಾಲೋಚನೆಯಲ್ಲಿದೆ.

ರಿಜಿಸ್ಟರ್ಮಾಡಲ್ಪಟ್ಟ ಪುಸ್ತಕಗಳ ಮತ್ತು ಕಾಲಕಾಲಕ್ಕೆ ಪ್ರಕಟಿಸುವ ಮಾಸಪತ್ರಿಕೆಗಳ ಸಂಖ್ಯೆಯು ಹಿಂದಿನವರ್ಷ 128 ಇದ್ದದ್ದಕ್ಕೆ, ಈ ವರ್ಷ 117 ಇದ್ದವು.

ಪ್ರಾಚೀನ ಲೇಖನಾನ್ವೇಷಣದ ಇಲಾಖೆ.

ಮಿ|| ರೈಸ್‌ರವರು ಬರೆದ ಮೈಸೂರು ಗೆಜೆಟಿಯರ್ ಎಂಬ ಪುಸ್ತಕವನ್ನು ಹಾಲ್ತೀಕಾಲದವರೆಗೆ ಸಮಗ್ರವಾಗಿರುವಂತೆ ಮಾಡುವುದಕ್ಕಾಗಿ ಅದನ್ನು ಪುನರ್ವಿಮರ್ಶೆ ಮಾಡಲು ತಕ್ಕ ಏರ್ಪಾಟನ್ನು ಮಾಡಿ ಇದೆ. ಪ್ರಾಚೀನ ಲೇಖನಾನ್ವೇಷಣದ ಛಾರ್ಜಿನ ಆಫೀಸರ ಕೆಲಸಗಳ ಜತೆಗೆ ಈ ಕೆಲಸವನ್ನೂ, ಪ್ರಾರ್ಥನ ವಿಮರ್ಶ ವಿಚಕ್ಷಣ ಮಿ|| ಆರ್. ಎ. ನರಸಿಂಹಾಚಾರ್ಯರವರಿಗೆ ವಹಿಸಿರಲಾಗಿರುತ್ತದೆ. ಮುಂದಿನ ಮೂರುವರ್ಷಗಳವರೆಗೆ ಈ ಇಲಾಖೆಯಲ್ಲಿ ನಡೆಯಬೇಕಾಗಿರುವ ನಿಷ್ಕೃಷ್ಟವಾದ ಕಾರ್ಯಕ್ರಮವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಅರ್ಥೋತ್ಪತ್ತಿ ಸಾಧನಗಳನ್ನು ವೃದ್ಧೀಕರಿಸುವುದು.

ಈ ವರ್ಷದಲ್ಲಿ ರಾಜ್ಯದ ಆಡಳಿತಕ್ಕೆ ಸಂಬಂಧಪಟ್ಟ ಮುಖ್ಯಾಂಶಗಳನ್ನು ತಿಳಿಸಿ, ಅರ್ಥೋತ್ಪತ್ತಿ ಸಾಧನಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಮಾಡಿರುವ ಕೆಲವು ಭಾರೀ ಏರ್ಪಾಡುಗಳನ್ನು ಸಂಕ್ಷೇಪವಾಗಿ ತಿಳಿಯಪಡಿಸಿದರೆ ಅಯುಕ್ತವಾಗಲಾರದು.

ಇಂಥಾ ಏರ್ಪಾಡುಗಳ ಪೈಕಿ ಏಳು ಗಣನಾರ್ಹವಾಗಿರುತ್ತವೆ. ಅವುಗಳಲ್ಲಿ ಒಂದು ವಿನಾ ಮಿಕ್ಕವೆಲ್ಲಾ ಶೀಘ್ರವಾಗಿ ಅಭಿವೃದ್ಧಿಯನ್ನು ಹೊಂದುತ್ತಲಿವೆ. ಅವು ಯಾವುವೆಂದರೆ:—

(1) ರೈಲುಗಳನ್ನು ಹಾಕಿ ಅವುಗಳನ್ನು ನಡಿಸುವುದು.
(2) ಕನ್ನಂಬಾಡಿ ಬಳಿಯಲ್ಲಿ ಕಾವೇರೀ ಜಲಾಶಯವನ್ನು ಕಟ್ಟಿಸುವುದು.
(3) ಕಾವೇರೀ ವಿದ್ಯುಚ್ಛಕ್ತಿಯ ಏರ್ಪಾಡನ್ನು ಇನ್ನೂ ಅಭಿವೃದ್ಧಿಪಡಿಸುವುದು.
(4) ಸಣ್ಣ ಕೆರೆಗಳನ್ನು ಕಟ್ಟಿಸಿ ಅವುಗಳನ್ನು ದುರಸ್ತು ಮಾಡಿಸುವುದು.
(5) ಮಲೆನಾಡು ಅಭಿವೃದ್ಧಿಯ ಕ್ರಮ.
(6) ಗ್ರಾಮಾಭಿವೃದ್ಧಿ ಕ್ರಮ ಮತ್ತು
(7) ಸಂಪದಭ್ಯುದಯ ಸಮಾಜದ ನಡವಳಿಕೆಗಳು.

ರೈಲ್ವೆಗಳನ್ನು ಹಾಕಿ ಅವುಗಳನ್ನು ನಡಿಸುವುದು.

1900 ರಿಂದ 1911 ರ ವರೆಗೆ, ಎಂದರೆ ಸುಮಾರು 12 ವರ್ಷಗಳವರೆಗೆ ಈ ಸಂಸ್ಥಾನದಲ್ಲಿ ರೈಲ್ವೆ ಕೆಲಸಗಳ ವಿಚಾರವಾದ ಉತ್ಸಾಹವು ಸಂಪೂರ್ತಿಯಾಗಿ ನಿಂತುಹೋಗಿತ್ತು. ಬ್ರಿಟಿಷ್ ಇಂಡಿಯಾದಲ್ಲಿನ ಜನಸಂಖ್ಯೆಯನ್ನು ಇಲ್ಲಿನ ಜನಸಂಖ್ಯೆಯೊಡನೆ ಹೋಲಿಸಿ ನೋಡಲಾಗಿ, ಮೈಸೂರಿನಲ್ಲಿರತಕ್ಕ ರೈಲ್ವೆಗಳ ಫಾಸಲೆಯು, ಅಲ್ಲಿ ಹಾಕಿರುವ ರೈಲ್ವೆಗಳ ಫಾಸಲೆಗಿಂತಲೂ ಕಮ್ಮಿಯಾಯಿತು ಎಂಬ ಸಂಗತಿಯು ನಿಮಗೆ ಗೊತ್ತಿರಬಹುದು. 1911 ರಿಂದ ಈಚೆಗೆ ರೈಲ್ವೆ ಹಾಕುವುದನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಎಡೆಬಿಡದ ಪ್ರಯತ್ನವನ್ನು ಮಾಡಲಾಗಿದೆ. ಈಗ 130 ಮೈಲಿಯಷ್ಟು ರೈಲ್ವೆ ಕಾಂಗಾರಿಯು ನಡೆಯುತ್ತಲಿದೆ.

ರೈಲು ಹಾಕುವ ಕೆಲಸವನ್ನು ಪುನಃ ಪ್ರಾರಂಭಿಸಿದಮೇಲೆ, ಹೊಸದಾಗಿ ಹಾಕಿದ ರೈಲುಗಳ ಪೈಕಿ ಮೊದಲನೆಯದಾದ ಕೋಲಾರದಿಂದ ಬೌರಿಂಗ್‌ಪೇಟೆಗೆ ಹೋಗುವ ರೈಲುಬಂಡಿತಕ್ಕ ಪ್ರಾರಂಭೋತ್ಸವವನ್ನು ಕಳೆದ ಡಿಸೆಂಬರು ತಿಂಗಳಲ್ಲಿ ಘನತೆಯನ್ನೈದಿದ ಶ್ರೀಮನ್ಮಹಾರಾಜರವರು ನಡೆಸಿದರು.

ಆಯಾ ಡಿಸ್ಟ್ರಿಕ್ಟಿನಲ್ಲಿರುವ ಜನರು ರೈಲ್ವೆ ಹಾಕುವ ಕೆಲಸಗಳಿಗಾಗಿ ತಮ್ಮ ದ್ರವ್ಯವನ್ನು ವಿನಿಯೋಗಿಸುತ್ತಿರುವ ಅಂಶವು ಸಂತೋಷವನ್ನುಂಟುಮಾಡತಕ್ಕದ್ದಾಗಿದೆ.

ನಮ್ಮ ಡಿಸ್ಟ್ರಿಕ್ಟುಗಳಲ್ಲಿ ಸಾಕಾದಷ್ಟು ಸಂಚಾರಸಾಧನಗಳನ್ನು ಕಲ್ಪಿಸಿ, ಈ ಸಂಸ್ಥಾನದ ವ್ಯವಸಾಯ ವ್ಯಾಪಾರಗಳನ್ನು ಉಚ್ಛ್ರಾಯಸ್ಥಿತಿಗೆ ತರುವುದಕ್ಕಾಗಿ ಸುಮಾರು 1,000 ಮೈಲಿ ಉದ್ದ ರೈಲನ್ನು ಹಾಕಬೇಕಾಗುತ್ತದೆ. ರೈಲ್ವೆ ಇಲಾಖೆಯಲ್ಲಿರುವಾಗ ರೈಲ್ವೆ ನೌಕರಿಯಿಂದ ಈ ಸಂಸ್ಥಾನದ ಜನಗಳಿಗೆ ಲಾಭಕರವಾದ ಜೀವನೋಪಾಯಗಳನ್ನು ಉಂಟುಮಾಡಬೇಕೆಂಬ ಅಭಿಪ್ರಾಯವೂ ಇರುತ್ತದೆ. ಈಗಾಗಲೆ ಇದಕ್ಕಾಗಿ 256 ಲಕ್ಷ ರೂಪಾಯಿ ಖರ್ಚು ತಗಲಿರುತ್ತದೆ. 1,000 ಮೈಲಿ ಉದ್ದ ರೈಲು ಹಾಕುವುದನ್ನು ಪೂರೈಸಿದರೆ, ಸುಮಾರು ೯ ಕೋಟಿ ರೂಪಾಯಿ ಒಟ್ಟು ಖರ್ಚಾಗುವುದು.

ಕಾವೇರೀ ಜಲಾಶಯವನ್ನು ಕಟ್ಟಿಸುವುದು.

ಕಾವೇರೀ ನದಿಯೊಳಗೆ ಹರಿಯುವ ಹೆಚ್ಚು ನೀರನ್ನು ಮೈಸೂರು ಸಂಸ್ಥಾನದಲ್ಲಿ ಉಪಯೋಗಿಸಿಕೊಳ್ಳತಕ್ಕ ವಿಷಯವಾಗಿ ಈ ಸಂಸ್ಥಾನಕ್ಕೂ ಪಕ್ಕದಲ್ಲಿರುವ ಮದರಾಸಾಧಿಪತ್ಯಕ್ಕೂ ಕಳೆದ 3-4 ವರ್ಷಗಳಿಂದ ದೀರ್ಘವಾದ ವಿವಾದ ನಡೆದ ಬಳಿಕ, ಹೋದವರ್ಷ ಇಂಡಿಯಾ ಸರ್ಕಾರದವರು, ಈ ವಿಷಯವನ್ನು ಸಮರ್ಥರಾದ ಮೆಂಬರುಗಳುಳ್ಳ ಒಂದು ಆರ್ಬಿಟ್ರೇಷನ್ ಕಮಿಟಿಗೆ ವಿಚಾರಣೆಗಾಗಿ ಕಳುಹಿಸತಕ್ಕದ್ದೆಂದು ನಿರ್ಣಯಿಸಿದರು. ಸದರಿ ಕಮಿಟಿಯವರು ಈ ವಿಷಯವನ್ನು ಸುಮಾರು ಹತ್ತು ತಿಂಗಳವರೆಗೂ ಕ್ರಮವಾಗಿ ವಿಚಾರಣೆಮಾಡಿ, ಕಳೆದ ಮೇ ತಿಂಗಳಲ್ಲಿ ತಮ್ಮ ತೀರ್ಮಾನವನ್ನು ಇಂಡಿಯಾ ಸರ್ಕಾರದವರಿಗೆ ಕಳುಹಿಸಿ ಕೊಟ್ಟರು. ಘನತೆಯನ್ನೈದಿದ ಶ್ರೀಮನ್ ಮಹಾರಾಜರವರ ಸರ್ಕಾರದವರೂ, ಈ ಸಂಸ್ಥಾನದಲ್ಲಿರುವ ಕಾವೇರೀ ತೀರದ ನೀರಾವರೀ ಪ್ರದೇಶವನ್ನು ಅಭಿವೃದ್ಧಿಗೆ ತರುವುದರಲ್ಲಿ ಆಸಕ್ತರಾದ ಅನೇಕ ಜನರೂ ಸಹ, ತಮ್ಮ ಹಕ್ಕು ಬಾಧ್ಯತೆಗಳು ನ್ಯಾಯಸಮ್ಮತವಾಗಿವೆಯೆಂದು ನಂಬಿರುವುದಲ್ಲದೆ, ಈ ಮುಖ್ಯವಾದ ವಿಷಯದಲ್ಲಿ ಇಂಡಿಯಾ ಸರ್ಕಾರದವರ ತೀರ್ಮಾನವನ್ನು ಅತ್ಯಾಸಕ್ತಿಯಿಂದ ನಿರೀಕ್ಷಿಸುತ್ತಿದ್ದಾರೆ.

ಸಹಜವಾಗಿ ಸಮುದ್ರಕ್ಕೆ ಬಿದ್ದು ವ್ಯರ್ಥವಾಗುತ್ತಿರುವ ಕಾವೇರೀನದಿಯ ಹೆಚ್ಚು ನೀರನ್ನು ತಡೆದು ನಿಲ್ಲಿಸುವುದೇ ಕನ್ನಂಬಾಡಿ ಜಲಾಶಯದ ಏರ್ಪಾಡಿನ ಮುಖ್ಯೋದ್ದೇಶವಾಗಿರುತ್ತದೆ. ಈಗಿರತಕ್ಕ ನಾಲೆಗಳಲ್ಲಿ ಸರ್ವದಾ ನೀರು ಹರಿಯುವದು ಸಂದೇಹಾಸ್ಪದವಾಗಿದೆ. ಜಲಾಶಯದಿಂದ ನೀರನ್ನು ಸರ್ವಕಾಲಗಳಲ್ಲಿಯೂ ಖಂಡಿತವಾಗಿ ಒದಗಿಸುವುದಾದರೆ, ಆ ಪ್ರದೇಶದಲ್ಲಿ ಇದುವರೆಗೆ ಬೆಳೆಯಾಗದೆ ಇದ್ದ ಉತ್ತಮವಾದ ಧಾನ್ಯವಸ್ತುಗಳನ್ನು ಬೆಳೆಯಿಸುವುದಕ್ಕೆ ಅನುಕೂಲಪಡಿಸಿದಂತೆ ಆಗುವುದು. ಜಲಾಶಯದಲ್ಲಿ ನಿಲ್ಲಿಸಿಕೊಳ್ಳುವ ನೀರಿನಿಂದ ಹಾಲಿ ಇರತಕ್ಕ ಮತ್ತು ಹೊಸದಾಗಿ ತೆಗೆಯುವ ನಾಲೆಗಳ ಕೆಳಗೆ ಸುಮಾರು 10,000 ಎಕರೆ ಜಮೀನಿನಲ್ಲಿ ಕಬ್ಬಿನ ಬೆಳೆ ಇಡಲು ಏರ್ಪಾಡುಗಳನ್ನು ಮಾಡುತ್ತಲಿದೆ.

ಈ ಜಲಾಶಯದಿಂದ ನೀರುಮುಳುಗಡೆಗೆ ಸಿಕ್ಕಿದ ಗ್ರಾಮಗಳ ನಿವಾಸಿಗಳಿಗೆ ಬೇರೆ ಸ್ಥಳಗಳಲ್ಲಿ ವಸತಿಗಳನ್ನು ಕಲ್ಪಿಸಿಕೊಡುವ ವಿಚಾರದಲ್ಲಿ ನಮ್ಮ ಆಫೀಸರುಗಳು ಅನುಕೂಲವಾದ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ.

ಕಾವೇರೀ ವಿದ್ಯುಚ್ಛಕ್ತಿಯ ಏರ್ಪಾಡನ್ನು ಇನ್ನೂ ಅಭಿವೃದ್ಧಿಗೆ ತರುವುದು.

ಹಾಲಿ ಬೇಸಗೆಯಲ್ಲಿ ವಿದ್ಯುಚ್ಛಕ್ತಿಯನ್ನು ಒಂದೇಸಮನಾಗಿ ಸರಬರಾಯಿ ಮಾಡುವದು ಸ್ವಲ್ಪಮಟ್ಟಿಗೆ ಸಂದೇಹಾಸ್ಪದವಾಗಿರುವದರಿಂದ, ಈ ಜಲಾಶಯವನ್ನು ಕಟ್ಟಿಸಿದ್ದೇ ಆದರೆ ಸದರಿ ವಿದ್ಯುಚ್ಛಕ್ತಿಯ ಸರಬರಾಯಿಗೆ ಭಯವಿಲ್ಲದಂತೆ ಮಾಡುವುದಕ್ಕೂ, ಸದರಿ ಶಕ್ತಿಯನ್ನು ಸುಮಾರು 11,000 ದಿಂದ 18,000 ಅಶ್ವ ಶಕ್ತಿಯವರೆಗೆ ಹೆಚ್ಚಿಸುವುದಕ್ಕೂ, ಸರ್ಕಾರದವರಿಗೆ ಅನುಕೂಲವಾಗುತ್ತದೆ. ಬರುವ ಜುಲೈ ತಿಂಗಳೊಳಗಾಗಿ ಅವಶ್ಯಕವಾದ ಕೆಲಸಗಳು ಪೂರೈಸುತ್ತವೆಂದು ನಿರೀಕ್ಷಿಸಲಾಗಿದೆಯಲ್ಲದೆ, ಇನ್ನೂ ಹೆಚ್ಚಾದ ಶಕ್ತಿಯು ಬೇಕಾದರೆ, ಇನ್ನೂ ಹೆಚ್ಚು ಕಾಂಗಾರಿಗಳನ್ನು ನಡೆಯಿಸಲಾಗುವದು.

ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಕೈಗಾರಿಕೆ ಕೆಲಸಗಳಿಗೆ ವಿದ್ಯುಚ್ಛಕ್ತಿಯನ್ನು ಹೆಚ್ಚಾಗಿ ಉಪಯೋಗಿಸುವಂತೆ ಮಾಡಿ ಸದರಿ ಶಕ್ತಿಯ ಸರಬರಾಯಿಗೆ ಬಾಯಿಂಗಿರಾಕಿಗಳನ್ನು ಹೆಚ್ಚಿಸತಕ್ಕದ್ದು, ವಿದ್ಯುಚ್ಛಕ್ತಿ ಇಲಾಖೆಯವರ ಒಂದು ಕರ್ತವ್ಯವಾಗಿರುತ್ತದೆ.

ಸಣ್ಣ ಕೆರೆಗಳು ಮತ್ತೂ ಮರಹಮ್ಮತ್ತು ಶಿಬ್ಬಂದಿ.

ಈ ವರ್ಷದಲ್ಲಿ ಸಣ್ಣ ಕೆರೆಗಳ ವಿಷಯಕ್ಕೆ ಹೆಚ್ಚಾಗಿ ಗಮನಕೊಟ್ಟಿರಲಾಗಿದೆ. ಡಿಸ್ಟ್ರಿಕ್ಟುಗಳಿಗೆ ಬೇಕಾದ ಮರಹಮ್ಮತ್ತು ಶಿಬ್ಬಂದಿಯನ್ನು ಸರ್ಕಾರದವರು ಹೆಚ್ಚಿಸಿ ಇದಕ್ಕಾಗಿ 19,812 ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಸಣ್ಣ ಕೆರೆಗಳ ದುರಸ್ತಿಗೆ ಕೊಟ್ಟಿರುವ ಗ್ರ್ಯಾಂಟು ಮೊಬಲಗು ಈಗ 2,00,000 ರೂಪಾಯಿಗೆ ಬಂದಿರುತ್ತದೆ. ಬೇಕಾದರೆ ಈ ಗ್ರ್ಯಾಂಟನ್ನು ಇನ್ನೂ ಜಾಸ್ತಿ ಮಾಡುವುದಕ್ಕೆ ಸರ್ಕಾರದವರು ಸಿದ್ಧರಾಗಿರುತ್ತಾರೆ.

ಒಂದು ಕೆರೆಯಿಂದ ಪ್ರಯೋಜನವನ್ನು ಪಡೆಯುತ್ತಿರುವ ಗ್ರಾಮದ ಯಾ ಗ್ರಾಮಗಳ ಜನಗಳಿಗೆ ಗ್ರ್ಯಾಂಟ್ ಮೊಬಲಗನ್ನು ಕೊಡುವುದರಿಂದ, ಅಥವಾ ಕಂದಾಯವನ್ನು ರೆಮಿಷನ್ ಮಾಡುವ ಅಥವಾ ಇತರ ವಿಧವಾದ ರಿಯಾಯಿತಿ ತೋರಿಸುವುದರಿಂದ, ಅವರೇ ಆ ಕೆರೆಯನ್ನು ಸ್ವಪ್ರಯತ್ನದಿಂದ ಊರ್ಜಿತಕ್ಕೆ ತರುವಂತೆ ಅಥವಾ ದುರಸ್ತು ಮಾಡಿಕೊಳ್ಳುವಂತೆ ಪ್ರೋತ್ಸಾಹಿಸತಕ್ಕ ಬಗ್ಗೆ ಒಂದು ಏರ್ಪಾಟು ಪರ್ಯಾಲೋಚನೆಯಲ್ಲಿರುತ್ತದೆ. ಮುಂದೆ ಅನೇಕ ವರ್ಷಗಳ ವರೆಗೆ ಜನಗಳು ಸರ್ಕಾರದವರೊಡನೆ ಸೇರಿ ಕೆಲಸಗಳನ್ನು ಜರುಗಿಸಿ ವಿಶೇಷ ಪ್ರಯೋಜನವನ್ನು ಪಡೆಯಬಹುದಾದ ಏರ್ಪಾಡುಗಳ ಪೈಕಿ ಇದೂ ಒಂದಾಗಿರುತ್ತದೆ.

ಮಲೆನಾಡು ಅಭಿವೃದ್ಧಿಯ ಏರ್ಪಾಡು.

ಶಿವಮೊಗ್ಗಾ, ಕಡೂರು, ಹಾಸನ—ಈ ಮೂರು ಡಿಸ್ಟ್ರಿಕ್ಟುಗಳಲ್ಲಿನ ಮಲೆನಾಡು ಪ್ರದೇಶಗಳಿಗೆ ಜನಗಳು ಪುನಃ ಬಂದು ನೆಲಸುವಂತೆ ಮಾಡುವುದಕ್ಕೂ, ಅಲ್ಲಿನ ಆರೋಗ್ಯವನ್ನೂ ಅರ್ಥೋತ್ಪತ್ತಿಯನ್ನೂ ಹೆಚ್ಚಿಸುವುದಕ್ಕೂ, ತಕ್ಕ ಪ್ರಯತ್ನಗಳನ್ನು ಮುತುವರ್ಜಿಯಿಂದ ನಡೆಸಬೇಕೆಂದು ಶ್ರೀಮನ್ಮಹಾರಾಜರವರ ಸರ್ಕಾರದವರು ಉದ್ದೇಶಿಸಿರುತ್ತಾರೆಂಬುದಾಗಿ ಹೋದ ವರ್ಷ ತಿಳಿಸಿರುತ್ತದೆ. ಇದಕ್ಕಾಗಿ ತಯಾರ್ಮಾಡಿದ ಕಾರ್ಯಕ್ರಮವನ್ನು ಕಳೆದ ಫೆಬ್ರವರಿಯಲ್ಲಿ ಜಾರಿಗೆ ತರಲಾಯಿತು. ಈ ಕಾರ್ಯದಲ್ಲಿ ಭಾಗಿಗಳಾಗಿರಲು ಡಿಸ್ಟ್ರಿಕ್ಟುಗಳಲ್ಲಿ ಪ್ರಮುಖರಾಗಿರುವವರಿಗೆ ಅವಕಾಶವನ್ನು ಕೊಡುವುದಕ್ಕಾಗಿ, ಸರ್ಕಾರಿ ನೌಕರರ ಜತೆಗೆ ಇತರ ಜನಗಳನ್ನೂ ಸೇರಿಸಿ, ಪ್ರತಿಯೊಂದು ಡಿಸ್ಟ್ರಿಕ್ಟಿಗೂ ಒಂದೊಂದು ಸ್ಥಳೀಯ ಕಮಿಟಿಯನ್ನೂ, ಅವುಗಳು ನಡಿಸುವ ಕಾರ್ಯಗಳನ್ನು ತನಿಖೆಯಿಂದ ವಿಚಾರಿಸತಕ್ಕ ಬಗ್ಗೆ ಒಂದು ಸೆಂಟ್ರಲ್ ಕಮಿಟಿಯನ್ನೂ ಏರ್ಪಾಡುಮಾಡಿ, ಅವುಗಳಿಗೆ ಬೇಕಾದ ದ್ರವ್ಯವನ್ನೂ ತಕ್ಕಷ್ಟು ಶಿಬ್ಬಂದಿಯನ್ನೂ ಕೊಟ್ಟಿದೆ. ಪ್ರಸಕ್ತ ಸಂವತ್ಸರದಲ್ಲಿ ಸದರೀ ಕ್ರಮವು ಜಾರಿಯಲ್ಲಿದ್ದ ಕೆಲವು ತಿಂಗಳೊಳಗೆ ಈ ಕೆಳಗೆ ನಡಿಸಿದ ಅಭಿವೃದ್ಧಿಕಾರ್ಯಗಳ ಪೈಕಿ, ಸ್ವೇಚ್ಛೆಯಾಗಿ ಬೆಳೆದ ಗಿಡ ಗೆಂಟೆಗಳನ್ನು ತೆಗೆದುಹಾಕಿದ್ದನ್ನೂ, ಕುಡಿಯುವ ನೀರಿನ ಸರಬರಾಯಿಯನ್ನು ಅನುಕೂಲಪಡಿಸಿದ್ದನ್ನೂ, ಅನಾರೋಗ್ಯಕರವಾದ ಗ್ರಾಮಗಳನ್ನು ಬೇರೆ ಕಡೆ ಕಟ್ಟಿಸಿದ್ದನ್ನೂ, ಕೊಯಿನಾ ಉಪಯೋಗವನ್ನು ಜನಗಳ ಬಳಕೆಗೆ ತಂದದ್ದನ್ನೂ, ದೇವಿ ಹಾಕಿಸಿಕೊಳ್ಳುವುದರಿಂದುಂಟಾಗುವ ಪ್ರಯೋಜನವನ್ನು ಪ್ರಚುರಗೊಳಿಸಿದ್ದನ್ನೂ, ದೇಹವನ್ನೂ ಮನೆಗಳನ್ನೂ ಶುಚಿಯಾಗಿ ಇಟ್ಟುಕೊಳ್ಳುವುದಕ್ಕೆ ಸಂಬಂಧಪಟ್ಟ ಆರೋಗ್ಯಸೂತ್ರಗಳನ್ನು ಜನರ ತಿಳುವಳಿಕೆಗೆ ತಂದದ್ದನ್ನೂ ತಿಳಿಸಬಹುದಾಗಿದೆ. ಮಲೇರಿಯಾ ಉಪದ್ರವವನ್ನು ಹರಡುವುದಕ್ಕೆ ಯಾವ ವಿಧವಾದ ಸೊಳ್ಳೆಯು ಕಾರಣವಾಗಿದೆ ಎಂಬುದನ್ನು ಕಂಡುಹಿಡಿಯುವುದಕ್ಕಾಗಿ, ಮಲೇರಿಯಾ ಸರ್ವೆಯನ್ನೂ, ಶೋಧನಾಲಯದಲ್ಲಿ ಪರೀಕ್ಷೆಗಳನ್ನೂ ಮಾಡಲುಪಕ್ರಮಿಸಿದೆ. ಇಂಥ ಸರ್ವೆಯನ್ನೂ ಪರಿಶೋಧನೆಯನ್ನೂ ಮಾಡತಕ್ಕ ವಿಧಾನವನ್ನು ತಿಳಿಸುವುದಕ್ಕೂ, ಜನನ ಮರಣಗಳ ಲೆಕ್ಕವನ್ನಿಡುವ ರೀತಿಯನ್ನು ಕ್ರಮಪಡಿಸಲು ಸಲಹೆಗಳನ್ನು ಕೊಡುವುದಕ್ಕೂ ಮೆಡಿಕಲ್ ಇಲಾಖೆಯ ಅನುಭವಶಾಲಿಯಾದ ಒಬ್ಬ ಆಫೀಸರನ್ನು ಸ್ವಲ್ಪ ಕಾಲದಮಟ್ಟಿಗೆ ನೇಮಿಸಲಾಯಿತು. ದೇವಿ ಹಾಕುವವರ, ಸೂಲಗಿತ್ತಿಯರ, ಕಾಂಪೌಂಡರುಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕೆ ತಕ್ಕ ಏರ್ಪಾಡುಗಳು ನಡೆಯುತ್ತಲಿವೆ. ಖಾಯಮ್ಮಾಗಿ ಒಂದೇಸ್ಥಳದಲ್ಲಿರುವ ಮತ್ತೂ ಊರಿಂದೂರಿಗೆ ಸಂಚರಿಸುತ್ತಾ ಔಷಧಕೊಡುವ ಹೆಚ್ಚು ಡಿಸ್ಪೆನ್ಸರಿಗಳನ್ನೂ, ಆವಶ್ಯಕವಾದ ಹೆರಿಗೆಯ ಆಸ್ಪತ್ರೆಗಳನ್ನೂ, ಒದಗಿಸುವ ವಿಷಯವನ್ನು ಸರ್ಕಾರದವರು ಆಸಕ್ತಿಪೂರ್ವಕ ಆಲೋಚಿಸುತ್ತಿದ್ದಾರೆ.

ಮಲೆನಾಡಿಗೆ ಜನರು ಹೊಸದಾಗಿ ಬಂದು ನೆಲಸುವಂತೆ ಮಾಡುವುದಕ್ಕೆ ಬೇಕಾದ ಪ್ರಯತ್ನಗಳನ್ನೂ ಮಾಡುತ್ತಲಿದೆ. ಮಲೆನಾಡಿನ ಅಭಿವೃದ್ಧಿ ವಿಷಯವು ಸ್ವಲ್ಪಮಟ್ಟಿಗೆ ಅರ್ಥೋತ್ಪತ್ತಿಯ ಸ್ವಭಾವವುಳ್ಳದೆಂದು ಸರ್ಕಾರದವರು ತಿಳಿದು, ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುವುದಕ್ಕೂ, ಮುಖ್ಯವಾಗಿ ಫಾರೆಸ್ಟು ಉತ್ಪನ್ನಗಳಿಗೆ ಸಂಬಂಧಪಟ್ಟ ಸ್ಥಳೀಯ ಕೈಗಾರಿಕೆಗಳನ್ನು ವೃದ್ಧಿಗೆ ತರುವುದರ ಮೂಲಕ ಕಸಬುಗಳನ್ನು ಹೆಚ್ಚಿಸುವುದಕ್ಕೂ, ಆ ಪ್ರದೇಶದಲ್ಲಿ ರಸ್ತೆಗಳನ್ನು ಹೆಚ್ಚಿಸುವುದಕ್ಕೂ ಪರಸ್ಪರ ಸಹಾಯ ಕಾರ್ಯಗಳನ್ನು ವೃದ್ಧಿಗೊಳಿಸುವುದಕ್ಕೂ ಮಾಡಬೇಕಾದ ಏರ್ಪಾಡುಗಳನ್ನು ಸರ್ಕಾರದವರು ಮುಂಬೂದ್ದಾರಿರುತ್ತಾರೆ.

ಗ್ರಾಮಾಭಿವೃದ್ಧಿಯ ಏರ್ಪಾಟು.

ಕಳೆದ ವರ್ಷದ ಉಪನ್ಯಾಸದಲ್ಲಿ ಸೂಚಿತವಾದ ಈ ಏರ್ಪಾಟನ್ನು ಪ್ರಸಕ್ತವರ್ಷದ ಕೊನೆಯಭಾಗದಲ್ಲಿ ಕೈಗೊಳ್ಳಲಾಯಿತು. ಈ ಭಾಗದಲ್ಲಿ ಕಾರ್ಯ ಜರುಗುತ್ತಿದ್ದ ಕೆಲವು ತಿಂಗಳುಗಳಲ್ಲಿ ನಡೆದ ಕೆಲಸವು ತೃಪ್ತಿಕರವಾಗಿರುತ್ತದೆ. ಈ ಭಾಗದಲ್ಲಿ ಕಂಡು ಬಂದ ಫಲಿತಾಂಶವನ್ನು, ಈಚಿನ ರಿಪೋರ್ಟುಗಳಿಂದ ತೆಗೆಯಬಹುದಾದ ಈ ಕೆಳಗೆ ಕಂಡ ಲೆಕ್ಕಗಳಿಂದ ತಿಳಿಯಬಹುದಾಗಿದೆ:—

ಸಂಸ್ಥಾನದಲ್ಲಿರುವ ಒಟ್ಟು 16,710 ಗ್ರಾಮಗಳ ಪೈಕಿ, ಕಮ್ಮಿಟಿಗಳು ಏರ್ಪಾಡಾಗಿರುವ ಗ್ರಾಮಗಳು	11,923
ಹೊಸದಾಗಿ ಏರ್ಪಡಿಸಿದ ಗ್ರಾಮಕಮಿಟಿಗಳು	7,440
ಗ್ರಾಮ ಸಾಮಾನ್ಯದ ಪ್ರಯೋಜನಕ್ಕಾಗಿ ಜನಗಳು ವಾರಕ್ಕೆ ಅರ್ಧದಿವಸ ಕೆಲಸಮಾಡಲು ಒಪ್ಪಿಕೊಂಡಿರುವ ಗ್ರಾಮಗಳು	6,126
ಪುಸ್ತಕಾಲಯಗಳನ್ನಿಟ್ಟುಕೊಂಡಿರುವ ಯಾ ವರ್ತಮಾನ ಪತ್ರಿಕೆಗಳನ್ನು ತರಿಸುವ (ಐದು ಡಿಸ್ಟ್ರಿಕ್ಟುಗಳಲ್ಲಿನ) ಗ್ರಾಮಗಳು	55

ಹೋದವರ್ಷದ ಕಾಲಸ್ಥಿತಿಯು ಸರಿಯಾಗಿರಲಿಲ್ಲವೆಂಬುದನ್ನೂ, ಇದುವರೆಗೂ ಈ ವರ್ಷದ ಕಾಲಸ್ಥಿತಿಯು ಸಮರ್ಪಕವಾಗಿರುವುದಿಲ್ಲವೆಂಬುದನ್ನೂ ಯೋಚಿಸಿದರೆ, ಜನರು ಈ ಏರ್ಪಾಡಿಗೆ ಕೊಟ್ಟಿರುವ ಅವಲಂಬವು ತುಂಬಾ ಸಂತೋಷಕರವಾಗಿರುತ್ತದೆ.

ಮಂಜೂರಾಗಿರುವ ಈ ಏರ್ಪಾಟಿನಂತೆ, ಗ್ರಾಮಾಭಿವೃದ್ಧಿ ಕಮಿಟಿಗಳವರು ಕೈಗೊಳ್ಳುವ ಕಾರ್ಯಗಳಿಗೆ ತಗಲುವ ಒಟ್ಟು ಖರ್ಚಿನ ಪೈಕಿ ಮೂರರಲ್ಲೊಂದು ಭಾಗವನ್ನು ಸರ್ಕಾರದಿಂದ ಕೊಡುವಂತೆ ಗೊತ್ತುಮಾಡಲಾಗಿತ್ತು; ಆದರೆ ಪ್ರಾರಂಭದಲ್ಲಿ ಈ ಪ್ರಮಾಣವನ್ನು ನಿರ್ವಹಿಸಲು ಕಷ್ಟಗಳಿರುತ್ತವೆಯೆಂದು ಯೋಚಿಸಿ, ಸರ್ಕಾರದವರು ಪ್ರಸಕ್ತವರ್ಷಕ್ಕೂ ಹಾಲ್ತಿಸಾಲಿಗೂ ಕೊಡಬೇಕಾದ ಸಹಾಯದ್ರವ್ಯವನ್ನು ಅರ್ಧದವರೆಗೆ ಹೆಚ್ಚಿಸಿದರು.

ಮೇಲೆ ಸಮೂದಾದ ಕಾಲದಲ್ಲಿ ಗ್ರಾಮಾಭಿವೃದ್ಧಿ ಕಮಿಟಿಗಳವರು 1,25,000 ರೂಪಾಯಿ ಲಾಗವಡು ಬೀಳುವ ಶಾಶ್ವತವಾದ ಪ್ರಯೋಜನವುಳ್ಳ ಕಾರ್ಯಗಳನ್ನು ಕೈಕೊಂಡರು. ಈ ಪೈಕಿ 59,000 ರೂಪಾಯಿಯನ್ನು ಸರ್ಕಾರದವರು ಸಹಾಯ ಮಾಡಿದರು. ಬಾಕಿ 66,000 ರೂಪಾಯಿಗಳನ್ನು ಸಂಬಂಧಪಟ್ಟ ಗ್ರಾಮಸ್ಥರು ಹಣದ ಮೂಲಕವಾಗಿ, ಯಾ, ಕೆಲಸ ಮಾಡುವುದರ ಮೂಲಕವಾಗಿ ಸಹಾಯಮಾಡಿದರು.

ಈ ಗ್ರಾಮಾಭಿವೃದ್ಧಿಯ ಏರ್ಪಾಟು ಈಗಾಗಲೇ ಜನಗಳ ವಿಶ್ವಾಸಕ್ಕೆ ಪಾತ್ರವಾಗಿರುತ್ತದೆಂಬುವದಕ್ಕೆ ಚಿಹ್ನೆಗಳುಗಳು ಕಾಣಬರುತ್ತಲಿವೆಯೆಂಬದಾಗಿ ರೆವಿನ್ಯೂ ಕಮಿಷನರವರು ತಿಳಿಸಿರುತ್ತಾರೆ. ಈ ಏರ್ಪಾಡು ಇಷ್ಟುಬೇಗ ಜಾರಿಗೆ ಬರುವುದಕ್ಕೆ ನಮ್ಮ ಡಿಸ್ಟ್ರಿಕ್ಟ್ ರೆವಿನ್ಯೂ ಆಫೀಸರುಗಳ ಉತ್ಸಾಹವೂ ಆದರವೂ ಕಾರಣಗಳಾಗಿವೆ. ಇದನ್ನು ಸರಿಯಾಗಿ ಜರುಗಿಸಿದಲ್ಲಿ ಜನಗಳಲ್ಲಿ ತಿಳುವಳಿಕೆ ಹೆಚ್ಚುವುದಕ್ಕೂ, ಗ್ರಾಮಗಳ ಭಾಗ್ಯೋನ್ನತಿಯನ್ನೂ ಅನುಕೂಲತೆಗಳನ್ನೂ ವೃದ್ಧಿಪಡಿಸುವುದಕ್ಕಾಗಿ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡುವಂತೆ ಪ್ರೋತ್ಸಾಹಿಸುವುದಕ್ಕೂ, ಈ ಬಗೆಯ ಕೆಲಸಗಳು ಸಾಧಕಗಳಾಗಲೇಬೇಕಾ

ಗಿರುತ್ತದೆ. ನಮ್ಮ ದೇಶವು ಸ್ವಭಾವವಾಗಿ ಗಿರಿ ನದೀವನಗಳಿಂದಲಂಕೃತವಾಗಿ ವಿಶೇಷವಾಗಿ ಶೋಭಿಸುತ್ತಾ, ಸ್ವಭಾವತಃ ಎಲ್ಲಾ ಸೌಕರ್ಯಗಳಿಗೂ ಆಕಾರವಾಗಿರುವುದರಿಂದ, ಜನಗಳು ಪ್ರಯತ್ನಗಳನ್ನು ಮಾತ್ರ ಮಾಡಿದರೆ, ಅನೇಕ ಹಳ್ಳಿಗಳಲ್ಲಿ ಸುಯಾದ ಸ್ಥಿತಿಯಲ್ಲಿಡದೆ ಹೇಸಿಗೆಗೆ ಗುರಿಮಾಡಿದ ಖಾಲಿಜಾಗಗಳಿಂದ ವಿಂಗಡಿಸಲ್ಪಟ್ಟ ಹುಲ್ಲುಮನೆಗಳ ಗುಂಪುಗಳಿಗೆ ಬದಲಾಗಿ ಕ್ರಮವಾಗಿ ಕಟ್ಟಿದ ಶುಚಿಯಾದ ಮತ್ತು ಆಕರ್ಷಣಶಕ್ತಿಯುಳ್ಳ ಮಾನುಷ ವಾಸಸ್ಥಲಗಳು ಅನೇಕ ಗ್ರಾಮಗಳಲ್ಲಿ ಉಂಟಾಗಬಹುದು.

ಸಂಪದಭ್ಯುದಯ ಸಮಾಜ.

ಸಂಪದಭ್ಯುದಯ ಸಮಾಜದ ಏರ್ಪಾಟಿನಲ್ಲಿಯೂ ಅದರ ಕರ್ತವ್ಯಗಳ ವಿಷಯದಲ್ಲಿಯೂ ಮಾಡಿರುವ ಬದಲಾವಣೆಗಳನ್ನು ಮೊದಲೇ ತಿಳಿಸಿರುತ್ತದೆ.

ತಮಗೆಲ್ಲ ತಿಳಿದಿರುವಂತೆ, ವಿದ್ಯಾಭ್ಯಾಸವನ್ನು ಹೆಚ್ಚಿಸಿ ಜಮೀನಿನ ವ್ಯವಸಾಯವನ್ನೂ, ಕೈಗಾರಿಕೆಗಳನ್ನೂ, ವ್ಯಾಪಾರವನ್ನೂ ವೃದ್ಧಿಗೆ ತರುವುದೇ ಈ ಸಮಾಜದ ಉದ್ದೇಶವಾಗಿದೆ. ಹಿಂದೆ ಈ ವಿಚಾರವಾಗಿ ಜನರು ಕಾರ್ಯಾಸಕ್ತಿಯನ್ನು ತೋರಿಸಿ ಪ್ರಯೋಜನಾಂಶವನ್ನು ಹೊಂದಿರುವುದು ಬಹಳ ಸ್ವಲ್ಪವಾಗಿರುವುದರಿಂದ, ಜನಗಳು ತಮ್ಮ ತಮ್ಮ ಅರ್ಥೋತ್ಪತ್ತಿ ಸಾಧನಗಳನ್ನು ವೃದ್ಧಿಗೆ ತಂದುಕೊಳ್ಳಬೇಕಾದರೆ, ಅವರುಗಳು ಯಾವ ಯಾವ ಪ್ರಯತ್ನಗಳನ್ನು ಮಾಡಬೇಕೆಂಬ ವಿಷಯದಲ್ಲಿ ಸರ್ಕಾರದವರೂ, ಮುಖಂಡರಾದ ಜನರೂ ಸಹ ತಕ್ಕ ಸಹಾಯವನ್ನು ಮಾಡಬೇಕಾದದ್ದು ಅವರುಗಳ ಮುಖ್ಯ ಕರ್ತವ್ಯಗಳಾಗಿರುತ್ತವೆ. ಜನರಿಗೆ ಸದಭಿಪ್ರಾಯಗಳನ್ನು ಹುಟ್ಟಿಸಿ ದೇಶದ ಭಾಗ್ಯೋನ್ನತಿಯಲ್ಲಿ ಅವರೂ ಭಾಗಿಗಳಾಗಿರುವಂತೆ ಮಾಡುವುದಕ್ಕೂ ಸಹ ಸರ್ಕಾರದವರು ಸದ್ಯದಲ್ಲಿ ಸುಮಾರು ವರ್ಷಕ್ಕೆ ೨½ ಲಕ್ಷ ರೂಪಾಯಿಗಳನ್ನು ಎಂದರೆ ನಮ್ಮ ಸಂಸ್ಥಾನದ ಹುಟ್ಟುವಳಿಯ ಪೈಕಿ ಶೇಕಡ 1ಕ್ಕೆ ಕಮ್ಮಿಯಾದಷ್ಟು ಮೊಬಲಗನ್ನು ಶ್ರೀಮತ್ ಮಹಾರಾಜರವರ ಸರ್ಕಾರದವರು ಖರ್ಚುಮಾಡುತ್ತಿದ್ದಾರೆ. ಅವಶ್ಯಕವಾದರೆ, ೫ ವರ್ಷಗಳ ಕಾಲದವರೆಗೆ ಸಾಲಿಯಾನಾ 3 ಲಕ್ಷ ರೂಪಾಯಿ ವರೆಗೂ ಖರ್ಚುಮಾಡಲು ಸರ್ಕಾರದವರು ಸಿದ್ಧರಾಗಿರುತ್ತಾರೆ.

ವಿದ್ಯಾಭ್ಯಾಸದ ಕಮಿಟಿ.

ವಿದ್ಯಾಭ್ಯಾಸದ ಕಮಿಟಿಯವರು ಕೈಗೊಂಡ ವಿಷಯಗಳ ಪೈಕಿ ಮುಖ್ಯವಾದವುಗಳು ಯಾವುವೆಂದರೆ:—ಬೆಂಗಳೂರು ಮತ್ತು ಮೈಸೂರಲ್ಲಿ ಪಬ್ಲಿಕ್ ಲೈಬ್ರರಿಗಳ ಸ್ಥಾಪನೆ, ಕೈಗಾರಿಕೆ ಸ್ಕೂಲುಗಳ ಅಭಿವೃದ್ಧಿ, ವ್ಯಾಯಾಮ ವಿದ್ಯೆಯ ಏರ್ಪಾಟು, ಸಂಚಾರಮಾಡತಕ್ಕ ಉಪಾಧ್ಯಾಯರುಗಳನ್ನೂ ಉಪನ್ಯಾಸಕರೇ ಮೊದಲಾದವರನ್ನೂ ನೇಮಿಸುವದು, ದೊಡ್ಡ ವಯಸ್ಸಿನವರ ವಿದ್ಯಾಭ್ಯಾಸ, ಜನಸಾಮಾನ್ಯದವರಲ್ಲಿ ಸಾಮಾನ್ಯ ವಿದ್ಯಾಜ್ಞಾನವನ್ನೂ ಶಾಸ್ತ್ರೀಯಜ್ಞಾನವನ್ನೂ ಹುಟ್ಟಿಸುವದಕ್ಕೆ ಕನ್ನಡ ಭಾಷೆಯನ್ನು ಅರ್ಹವಾದ ಸಾಧನವನ್ನಾಗಿ ಮಾಡಲು ಕನ್ನಡ ಗ್ರಂಥರಚನೆಗೆ ಪ್ರೋತ್ಸಾಹ.

ವ್ಯವಸಾಯದ ಕಮಿಟಿ.

ವ್ಯವಸಾಯದ ಕಮಿಟಿಯವರು ರೇಷ್ಮೆಯ ವ್ಯವಸಾಯವನ್ನು ಅಭಿವೃದ್ಧಿಸ್ಥಿತಿಗೆ ತರುವ ವಿಷಯವನ್ನು ಈ ವರ್ಷ ಪರ್ಯಾಲೋಚನೆಗೆ ತೆಗೆದುಕೊಂಡರು. ಈ ವ್ಯವಸಾಯವು ಸಂಸ್ಥಾನದ ೨೨ ತಾಲ್ಲೂಕಿನ ಜನಗಳಿಗೆ ಲಾಭಕರವಾದ ಕಸುಬಾಗಿರುತ್ತದೆ. ರೇಷ್ಮೆ ವ್ಯವಸಾಯದಲ್ಲಿ ಕೇವಲ ಅನುಭವಶಾಲಿಗಳಾದ ಸೀನ್ಯರ್ ವಾಪಿಂಗ್‌ಟನ್ ಮಾರಿ ಎಂಬ ಇಟಲಿ ದೇಶದ ಶಾಸ್ತ್ರಜ್ಞರನ್ನು ಒಂದು ವರ್ಷದವರೆಗೆ ನೇಮಕಮಾಡಿಕೊಂಡು ಚನ್ನಪಟ್ಟಣದಲ್ಲಿ ರೇಷ್ಮೆಯ ವ್ಯವಸಾಯಕ್ಕಾಗಿ ಒಂದು ಮುಖ್ಯ ಕ್ಷೇತ್ರವನ್ನು ಏರ್ಪಡಿಸಲಾಯಿತು. ಇಲ್ಲಿ ಅವರು ಅನೇಕ ಪರೀಕ್ಷಾಕಾರ್ಯಗಳನ್ನು ನಡಿಸಿದರು. ಈ ವರ್ಷದ ಮೊದಲನೆಯ ಆರುತಿಂಗಳವರೆಗೆ 51,000 ರೇಷ್ಮೆ ಗೂಡುಗಳನ್ನು ತಯಾರು ಮಾಡಿ, ಅವುಗಳಲ್ಲಿ ಸುಮಾರು ಅರ್ಧಪಾಲು ಗೂಡುಗಳನ್ನು ರೈತರಿಗೆ ಕ್ರಯಕ್ಕೆ ಕೊಡಲಾಯಿತು. ಮೈಸೂರು ಸೀಮೆಯ ಹುಳುಗಳನ್ನೂ ಬಂಗಾಳದ ಹುಳುಗಳನ್ನೂ, ಇಟಲೀದೇಶದ ಹುಳುಗಳನ್ನೂ, ಭಿನ್ನಜಾತಿಯ ಸಂಪರ್ಕದಿಂದ ಉತ್ಪನ್ನವಾದ ಹುಳುಗಳನ್ನೂ, ಸಾಕುವ ಕೆಲಸದಲ್ಲಿ ಪರೀಕ್ಷೆಗಳನ್ನು ನಡೆಸಿದ್ದರಲ್ಲಿ, ಇನ್ನುಮುಂದೆ ಈ ವ್ಯವಸಾಯವನ್ನು ಯಾವರೀತಿಯಲ್ಲಿ ಅಭಿವೃದ್ಧಿಪಡಿಸಬೇಕೆಂಬ ವಿಷಯವಾಗಿ ಪ್ರಯೋಜನಕರವಾದ ಅಂಶಗಳು ತಿಳಿವಳಿಕೆಗೆ ಬಂದಿರುತ್ತವೆ.

ಬೇರೆಬೇರೆ ಸ್ಥಳಗಳಲ್ಲಿ ರೇಷ್ಮೆ ಹುಳುಗಳನ್ನು ಸಾಕುವುದಕ್ಕೆ ಮಾದರಿಯ ಮನೆಗಳನ್ನು ಕಟ್ಟಿಸುವ ಏರ್ಪಾಡು ತಯಾರಾಗುತ್ತಾ ಇದೆ. ಈ ಮನೆಗಳು ಸದ್ಯಕ್ಕೆ ಸ್ವಲ್ಪಮಟ್ಟಿಗೆ ಬೀಜದಹುಳುಗಳನ್ನು ಒದಗಿಸತಕ್ಕ ಸ್ಥಳಗಳಾಗಿವೆ. ರೇಷ್ಮೆಯ ವ್ಯವಸಾಯದ ನವೀನ ಕ್ರಮದ ಪ್ರಕಾರ ಶಿಕ್ಷಣವನ್ನು ಕೊಟ್ಟು ಅನೇಕ ಜನಗಳನ್ನು ತಯಾರುಮಾಡಿ, ಅಸಿಸ್ಟೆಂಟ್ ಇನ್‌ಸ್ಪೆಕ್ಟರುಗಳ ಸಂಖ್ಯೆಯನ್ನು ಹೆಚ್ಚಿಸಿ, ಅವರುಗಳನ್ನು ರೇಷ್ಮೆಯ ವ್ಯವಸಾಯ ನಡೆಯುವ ಅನೇಕ ತಾಲ್ಲೂಕುಗಳಿಗೆ ನೇಮಿಸಲಾಯಿತು. ಸಂಸ್ಥಾನದಲ್ಲಿ ರೇಷ್ಮೆಯ ವ್ಯವಸಾಯವು ಇದುವರೆಗೆ ಜಾರಿಯಲ್ಲಿಲ್ಲದೆ ಇದ್ದ ಪ್ರದೇಶಗಳಿಗೆ ಅದನ್ನು ಹೊಸದಾಗಿ ಚಾಲ್ತಿಗೆ ತರಲು ತಕ್ಕ ಪ್ರಯತ್ನಗಳನ್ನು ಮಾಡಿಯಿದೆ.

ರೇಷ್ಮೆಯ ವ್ಯವಸಾಯದ ನವೀನ ಕ್ರಮವನ್ನು ಗ್ರಾಮಾಂತರಗಳಲ್ಲಿರುವ ಹಳ್ಳಿಯ ಜನಗಳಲ್ಲಿ ಪ್ರಚಾರಕ್ಕೆ ತರುವ ಉದ್ದೇಶದಿಂದ, ಚನ್ನಪಟ್ಟಣದಲ್ಲಿ ಸಿಲ್ಕ್ ಅಸೋಸಿಯೇಷನ್ ಎಂಬ ಒಂದು ಸಂಘವನ್ನು ಏರ್ಪಡಿಸಿ ಇದೆ. ಇದಕ್ಕೆ ರೇಷ್ಮೆಯ ಕಸಬಿಗೆ ಸಂಬಂಧಪಟ್ಟ ಜನಗಳೆಲ್ಲರೂ ಸೇರಿರುತ್ತಾರೆ. ಈ ಸಂಘವು ಈಗತಾನೇ ಪ್ರಾರಂಭವಾಗಿರುತ್ತದೆ. ಆದರೆ, ಇದು ಸರ್ಕಾರದವರು ನೇಮಿಸಿರುವ ನಿಪುಣರ ಬುದ್ಧಿವಾದಗಳನ್ನು ಜನಗಳು ತೆಗೆದುಕೊಳ್ಳುವಂತೆ ಮಾಡುವುದರಲ್ಲಿ ಜಾಗ್ರತೆಯಾಗಿ ಸಹಕಾರಿಯಾಗಬಹುದೆಂದು ನಿರೀಕ್ಷಿಸಿ ಇದೆ.

ಫಲವೃಕ್ಷವ್ಯವಸಾಯಕ್ಕೆ ತುಂಬಾ ಗಮನವನ್ನು ಕೊಟ್ಟಿದೆ. ಈ ಸಂಸ್ಥಾನದಲ್ಲಿ ಹಣ್ಣಿನ ವ್ಯವಸಾಯವನ್ನು ವೃದ್ಧಿಪಡಿಸುವುದು ಎಷ್ಟರಮಟ್ಟಿಗೆ ಸಾಧ್ಯವೆಂಬ ವಿಷಯವನ್ನು ತಿಳಿಯುವುದಕ್ಕಾಗಿ, ಈ ವ್ಯವಸಾಯವು ನಡೆಯುತ್ತಿರುವ ಪ್ರದೇಶಗಳನ್ನು ಅಜಮಾಯಿಷಿ ಮಾಡುವ ಕೆಲಸವನ್ನು ಕೈಗೊಂಡಿರಲಾಗಿದೆ.

ಹೈನದ ಮನೆಗಳ ಏರ್ಪಾಡನ್ನು ಮಾಡುವುದು ಸಾಧ್ಯವೇ ಎಂಬ ಸಂಗತಿಯನ್ನು ಪರಿಶೋಧಿಸಿ ನೋಡಲಾಯಿತು. ಮತ್ತು ಈ ಕಸುಬನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಖಾಸಗಿ ಜನಗಳಿಗೆ ತಕ್ಕ ಪ್ರೋತ್ಸಾಹವನ್ನು ಕೊಡುತ್ತಾ ಇದೆ.

ಕಮಿಟಿಯವರು ಈ ವಿಷಯದಲ್ಲಿ ಉಪಯುಕ್ತವಾದ ಸಂಗತಿಗಳನ್ನು ಸಂಗ್ರಹಿಸಿ, ಇಂಗ್ಲಿಷ್ ಭಾಷೆಯಲ್ಲಿಯೂ ಕನ್ನಡ ಭಾಷೆಯಲ್ಲಿಯೂ ಅನೇಕ ಪತ್ರಿಕೆಗಳನ್ನು ಮುದ್ರಿಸಿ ಪ್ರಕಟಿಸಿರುತ್ತಾರಲ್ಲದೆ, ವ್ಯವಸಾಯವನ್ನು ಶಾಸ್ತ್ರೀಯ ಕ್ರಮಾನುಸಾರವಾಗಿ ನಡಿಸುವುದರಲ್ಲಿ ಆಸಕ್ತರಾದ ಅನೇಕ ಪಾಠಕರಿಗೆ ಸದರಿ ಸಂಗತಿಗಳನ್ನು ತಿಳಿಸಲು ಪ್ರಯತ್ನಪಟ್ಟಿರುತ್ತಾರೆ.

ಕೈಗಾರಿಕೆಗಳ ಮತ್ತು ವ್ಯಾಪಾರದ ಕಮಿಟಿ.

ಮರಗಳಿಂದ ದ್ರಾವಕಗಳನ್ನು ಭಟ್ಟಿಯಿಳಿಸುವುದು, ಹತ್ತಿ ಬೀಜದ ಎಣ್ಣೆಯನ್ನು ತಯಾರುಮಾಡುವುದು, ಔಷಧಗಳನ್ನು ತಯಾರುಮಾಡುವುದು, ಸೀಮೆಯ ಗಿಡಗಳ ವ್ಯವಸಾಯ, ತೆಂಗಿನ ನಾರು, ಗಾಜು, ಬೆಂಕಿಕಡ್ಡಿ, ಇವೇ ಮುಂತಾದುವುಗಳನ್ನು ತಯಾರುಮಾಡುವ ನಾನಾಬಗೆಯ ಕೈಗಾರಿಕೆಗಳನ್ನು ಪ್ರಾರಂಭಿಸುವ ವಿಷಯವನ್ನು ಈ ಕಮಿಟಿಯವರು ಪರ್ಯಾಲೋಚನೆ ಮಾಡಿದರು. ಇವುಗಳ ಪೈಕಿ ಕೆಲವನ್ನು ಕಾರ್ಯತಃ ಜಾರಿಯಲ್ಲಿ ತಂದಿರುತ್ತದೆ. ಮೈಸೂರು ಡಿಸ್ಟ್ರಿಕ್ಟಿನಲ್ಲಿಯೂ ಮಲೆನಾಡಿನಲ್ಲಿಯೂ ಪೆನ್ಸಿಲ್ ತಯಾರಿಗೋಸ್ಕರ ಒಂದು ಕಾರ್ಖಾನೆಯನ್ನು ಏರ್ಪಡಿಸುವ ವಿಷಯವನ್ನೂ, ದೊಡ್ಡದಾಗಿ ಹೆಂಚುಗಳ ಕಾರ್ಖಾನೆಯನ್ನು ಇಡುವುದು ಸಾಧ್ಯವೇ ಎಂಬ ವಿಷಯವನ್ನೂ, ನಿಪುಣರಾದವರು ಪರಿಶೋಧಿಸುತ್ತಾ ಇದ್ದಾರೆ. ಸ್ಥಳದಲ್ಲಿ ತಯಾರಾದ ಸಾಮಾನುಗಳ ಪ್ರದರ್ಶನಕ್ಕೂ ವಿಕ್ರಯಕ್ಕೂ ಸಹ ಬೆಂಗಳೂರಿನಲ್ಲಿ ಒಂದು ಕೈಗಾರಿಕೆಯ ಡಿಪೋವನ್ನು ಏರ್ಪಡಿಸಿ ಇರುತ್ತದೆ. ಇದರಲ್ಲಿ ತೃಪ್ತಿಕರವಾಗಿ ಕೆಲಸವು ನಡೆಯುತ್ತಾ ಇದೆ.

ಮೈಸೂರು ಸೀಮೆಯಲ್ಲಿ ಕೈಗಾರಿಕೆಗಳು ಯಾವಸ್ಥಿತಿಯಲ್ಲಿವೆ ಎಂಬ ವಿಷಯವನ್ನು ಪರಿಶೋಧನೆಮಾಡಿ ವಿಚಾರಿಸುವುದಕ್ಕಾಗಿ ಮಿ॥ ವಿ. ಎಸ್. ಸಾಂಬಶಿವ ಅಯ್ಯರನ್ನು ನೇಮಿಸಿ ಇರಲಾಗಿ, ಅವರು ಆ ವಿಷಯವನ್ನು ಪರಿಶೋಧಿಸಿ ವಿಚಾರಣೆ ಮಾಡಿರುವುದರ ಫಲಿತಾಂಶವು ಈಚೆಗೆ ಮುದ್ರಿತವಾಗಿ ಪ್ರಕಟಿಸಲ್ಪಟ್ಟಿರುತ್ತದೆ. ಇವರು ಬರೆದಿರುವ ರಿಪೋರ್ಟಿನಲ್ಲಿ ದೇಶದ ಅರ್ಥೋತ್ಪತ್ತಿಗೆ ಸಂಬಂಧಪಟ್ಟ ಅನೇಕ ವಿಷಯಗಳು ನಮೂದಿಸಲ್ಪಟ್ಟಿರುವುದಲ್ಲದೆ, ಈಗ ಇರುವ ಕೈಗಾರಿಕೆಗಳನ್ನು ಉತ್ತಮಸ್ಥಿತಿಗೆ ತರುವುದಕ್ಕೂ ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೂ ಉಪಯುಕ್ತವಾದ ಅನೇಕಸಲಹೆಗಳು ಅಡಗಿರುತ್ತವೆ.

ಮೈಸೂರು ಬ್ಯಾಂಕನ್ನು ಏರ್ಪಡಿಸಿದ್ದೇ ವ್ಯಾಪಾರಾಭಿವೃದ್ಧಿವಿಷಯಕವಾದ ಒಂದು ಮುಖ್ಯ ಸಂಗತಿಯಾಗಿರುತ್ತದೆ. ಸದರಿ ಬ್ಯಾಂಕಿನಲ್ಲಿ 1913 ನೆಯ ಅಕ್ಟೋಬರ್ ಮಾಹೆಯಲ್ಲಿ ಕೆಲಸವು ಉಪಕ್ರಮವಾಯಿತು. ಈ ಬ್ಯಾಂಕಿನ ಮೂಲಕ ಸುಮಾರು 30 ಲಕ್ಷ ರೂಪಾಯಿ ಚಲಾವಣೆಯಲ್ಲಿರುತ್ತದೆಯಲ್ಲದೆ ಸಂಸ್ಥಾನದ ನಾನಾಭಾಗಗಳಲ್ಲಿ ಸ್ಥಾಪಿಸಲ್ಪಟ್ಟಿರುವ ಏಜನ್ಸಿಗಳ ಮೂಲಕ ಹಣಕಾಸಿನ ಲೇವಾದೇವಿಯ ಸೌಕರ್ಯಗಳು ಬಹು ತೃಪ್ತಿಕರವಾಗಿ ಕಲ್ಪಿಸಲ್ಪಟ್ಟಿರುತ್ತವೆ.

ಎಕನಾಮಿಕ್ ಕಾನ್ಫರೆನ್ಸಿಗೆ ಸಂಬಂಧಪಟ್ಟ ಕೆಲಸವು ಬಹಳ ಹೆಚ್ಚಿರುವುದರಿಂದ, ತಕ್ಕ ವಿಶೇಷ ಸಹಾಯವಿಲ್ಲದೆ ಈ ಕೆಲಸಕ್ಕೆ ಸಾಕಾದಷ್ಟು ಅವಧಾನವನ್ನು ಕೊಡುವುದು ಡಿಸ್ಟ್ರಿಕ್ಟು ಆಫೀಸರುಗಳಿಗೆ ಕಷ್ಟವಾಗಿರುತ್ತದೆ. ಆದಕಾರಣ, ಪ್ರತಿಯೊಂದು ಡಿಸ್ಟ್ರಿಕ್ಟಿಗೂ ಒಬ್ಬ ಸೂಪರಿಂಟೆಂಡೆಂಟನ್ನು ಅಥವಾ ಆರ್ಗನೈಜರನ್ನು ಸರ್ಕಾರದವರು ಈಚೆಗೆ ಮೊಕರರ್ಮಾಡಿರುತ್ತಾರೆ. ತಿಳಿವಳಿಕೆಯನ್ನು ಪ್ರಚಾರಮಾಡುವುದರಲ್ಲಿಯೂ, ಆಯಾಸ್ಥಳಗಳ ಜನರ ಕಾರ್ಯೋತ್ಸಾಹಕ್ಕೆ ಉತ್ತೇಜನವನ್ನು ಕೊಡುವುದರಲ್ಲಿಯೂ, ನಾನಾಇಲಾಖೆಗಳ ನಿಪುಣರ ಸಹಾಯದಿಂದ ಪ್ರಯತ್ನಸಾಧ್ಯವಾದ ಕಾರ್ಯಗಳನ್ನು ಏರ್ಪಡಿಸುವುದರಲ್ಲಿ ಜನಗಳಿಗೆ ಸಹಾಯ ಮಾಡುವುದರಲ್ಲಿಯೂ ಸಹ, ಡೆಪ್ಯುಟಿ ಕಮಿಷನರಿಗೂ ಡಿಸ್ಟ್ರಿಕ್ಟ್ ಕಮಿಟಿಗಳಿಗೂ ಕುಮ್ಮಕ್ ಮಾಡುವುದೇ ಈ ಸೂಪರಿಂಟೆಂಡೆಂಟುಗಳ ಅಥವಾ ಆರ್ಗನೈಜರುಗಳ ಕರ್ತವ್ಯವಾಗಿರುತ್ತದೆ. ಇವರುಗಳು ನಾನಾ ಇಲಾಖೆಗಳ ಆಫೀಸರುಗಳೊಡನೆ ಕಲೆತು, ಸಮಾಚಾರಗಳನ್ನು ತಿಳಿದುಕೊಂಡು ಸೆಂಟ್ರಲ್ ಮತ್ತು ಡಿಸ್ಟ್ರಿಕ್ಟ್ ಕಮಿಟಿಗಳವರ ಕಾರ್ಯಗಳು ಒಂದಕ್ಕೊಂದು ವಿರುದ್ಧವಾಗದಂತೆ ನಡಿಸುವುದಕ್ಕೆ ಸಹಕಾರಿಗಳಾಗುವರು.

ತಾಲ್ಲೂಕುಗಳಲ್ಲಿ ಅರ್ಥೋತ್ಪತ್ತಿ ಸಾಧಕವಾದ ಕಾರ್ಯಗಳ ಅಭಿವೃದ್ಧಿಗಾಗಿ ನಾಲ್ವತ್ತೇಳು ತಾಲ್ಲೂಕು ಪ್ರೋಗ್ರೆಸ್ ಕಮಿಟಿಗಳು ಏರ್ಪಟ್ಟಿರುತ್ತವೆ. ಬರುವ ಕೆಲವು ತಿಂಗಳುಗಳೊಳಗಾಗಿಯೇ ಅಂಥಾ ಕಮಿಟಿಗಳು ಬಾಕಿ ಉಳಿದ ಎಲ್ಲಾ ತಾಲ್ಲೂಕುಗಳಲ್ಲಿಯೂ ಏರ್ಪಡುವವೆಂದು ನಿರೀಕ್ಷಿಸಿ ಇದೆ.

ಎಕನಾಮಿಕ್ ಕಾನ್ಫರೆನ್ಸಿನ ಕಾರ್ಯಗಳ ಸಂಬಂಧದಲ್ಲಿ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಒಂದು ಮಾಸಪತ್ರಿಕೆಯನ್ನು ಕ್ಷಿಪ್ರದಲ್ಲಿಯೇ ಪ್ರಕಟಿಸಬೇಕೆಂದು ನಿಶ್ಚಯಿಸಿಯಿದೆ. ಸಂಸ್ಥಾನದ ಸಂಪದಭಿವೃದ್ಧಿ ಕಾರ್ಯದಲ್ಲಿ ಅಭಿಮಾನವುಳ್ಳ ಸಮಸ್ತ ಜನರುಗಳೂ, ಅಂಥಾ ಕಾರ್ಯದಲ್ಲಿ ನಿರತರಾದ ಎಲ್ಲಾ ಏಜೆನ್ಸಿಗಳೂ, ಒಬ್ಬರೊಡನೊಬ್ಬರು ಸೇರಿ ಕೆಲಸ ನಡಿಸುವಂತೆ ಮಾಡಲು ಈ ಪತ್ರಿಕೆಯು ಸಹಕಾರಿಯಾಗುತ್ತದೆ.

ರಾಜಕೀಯ ಕಾರ್ಯನಿರ್ವಾಹಶಕ್ತಿ.

ರಾಜಕೀಯ ಕಾರ್ಯದಲ್ಲಿ ಉದ್ಯುಕ್ತವಾದ ಶಿಬ್ಬಂದಿಯ ಕಾರ್ಯನಿರ್ವಾಹಶಕ್ತಿಯನ್ನು ಅಭಿವೃದ್ಧಿಗೆ ತರುವುದಕ್ಕೆ ಮಾಡಿದ ಪ್ರಯತ್ನಗಳನ್ನು ಕುರಿತು ಕೆಲವು ಮಾತುಗಳನ್ನು ಈಗ ತಿಳಿಸಬೇಕಾಗಿದೆ.

ಎಫಿಷೆನ್ಸಿ ಆಡಿಟ್.

ಹೋದವರ್ಷದ ಉಪನ್ಯಾಸದಲ್ಲಿ ಸರ್ಕಾರೀ ಕೆಲಸಗಳಿಗೆ ಸಂಬಂಧಪಟ್ಟ ಬೇರೆಬೇರೆ ಇಲಾಖೆಗಳ ಕಾರ್ಯನಿರ್ವಾಹ ಸಾಮರ್ಥ್ಯವನ್ನು ಹೆಚ್ಚಿಸುವ ವಿಷಯಕ್ಕೆ ಸರ್ಕಾರದವರು ವಿಶೇಷ ಗಮನವನ್ನು ಕೊಡುತ್ತಿರುವರೆಂತಲೂ, 'ಎಫಿಷೆನ್ಸಿ ಆಡಿಟ್' ಎಂಬ ಹೆಸರಿನಿಂದ ಸೂಕ್ಷ್ಮಪರೀಕ್ಷಾಕ್ರಮವನ್ನೂ ತನಿಖೆಯನ್ನೂ ನಡಿಸುವ ಒಂದು ಏರ್ಪಾಡನ್ನು ಹೊಸದಾಗಿ ಮಾಡಬೇಕೆಂಬ ಆಲೋಚನೆ ಇದೆಯೆಂತಲೂ ತಿಳಿಸಲಾಯಿತು.

ಈ ಕ್ರಮವು ಜಾರಿಗೆ ಬಂದು, ಕಳೆದ ಎರಡು ಮೂರು ತಿಂಗಳುಗಳಿಂದಲೂ ಚೆನ್ನಾಗಿ ಕೆಲಸ ನಡೆಯುತ್ತಿದೆ. ಇದಕ್ಕಾಗಿ ನೇಮಿಸಲ್ಪಟ್ಟಿರುವ ಶಿಬ್ಬಂದಿಯು ಹಂಗಾಮಿಯಾದದ್ದು; ಅದರಲ್ಲಿ ಒಬ್ಬ ಗೆಜೆಟೆಡ್ ಆಫೀಸರೂ, ಕೆಲವರು ಗುಮಾಸ್ತೆಯರೂ ಇರುತ್ತಾರೆ. ಈ ಶಿಬ್ಬಂದಿಯನ್ನು ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯೆಟ್ಟಿನ ಒಂದು ಶಾಖೆಯನ್ನಾಗಿ ಮಾಡಿದೆ.

ಸರ್ಕಾರಿ ಕೆಲಸಗಳನ್ನು ನೆರವೇರಿಸತಕ್ಕದ್ದರಲ್ಲಿ ಒಂದು ಗೊತ್ತಾದ ಸರಣಿಯನ್ನೂ ಕ್ರಮವನ್ನೂ ಬೇರೆಬೇರೆ ಇಲಾಖೆಗಳು ಪರಸ್ಪರ ಸಹಾಯಕಗಳಾಗಿದ್ದುಕೊಂಡು ಕೆಲಸ ಮಾಡುವದನ್ನೂ ವೃದ್ಧಿಪಡಿಸಬೇಕೆಂಬ ಉದ್ದೇಶದಿಂದ, ಈ ಆಫೀಸರವರು ಚಾಲ್ತಿ ಹುಕುಮುಗಳನ್ನೂ ಆಫೀಸ್ ಮ್ಯಾನ್ಯುಯಲ್‌ಗಳನ್ನೂ ತನಿಖೆ ಮಾಡತಕ್ಕ ಕೆಲಸದಲ್ಲಿರುತ್ತಾರೆ. ಗಮನ ಕೊಡಬೇಕಾದ ಸರ್ಕಾರೀ ಇಲಾಖೆಗಳನ್ನು ಪುನಃ ಪರಿಷ್ಕರಿಸಬೇಕಾದ ಕೆಲಸದಲ್ಲಿಯೂ, ಅವಶ್ಯಕವಾದಾಗ ಬೇರೆಬೇರೆ ಆಫೀಸುಗಳನ್ನು ತನಿಖೆ ಮಾಡುವುದರಲ್ಲಿಯೂ, ಆಯಾ ಕಾಲದಲ್ಲಿ ನಿಶ್ಚಯಿಸಿದ ವಿಶೇಷ ಕ್ರಮಾನುಸಾರವಾಗಿ ಜರುಗಿಸುವ ಕಾರ್ಯಗಳು ಎಷ್ಟುಮಟ್ಟಿಗೆ ಅಭಿವೃದ್ಧಿಗೆ ಬಂದಿವೆ ಎಂದು ಪರೀಕ್ಷಿಸುವುದರಲ್ಲಿಯೂ, ಸದರಿ ಆಫೀಸರು ಬೇಕಾದ ಸಹಾಯವನ್ನು ಮಾಡುವರು.

ಲೋಕಲ್ ಬೋರ್ಡುಗಳ ಮತ್ತು ಮ್ಯುನಿಸಿಪಾಲಿಟಿಗಳ ಕರ್ತವ್ಯಗಳನ್ನೂ ಜವಾಬ್ದಾರಿಗಳನ್ನೂ ಕುರಿತು ವಿಚಾರಮಾಡುವ ಸಂಸ್ಥಾನದ ಲೋಕಲ್ ಸೆಲ್ಫ್ ಗೌರ್ನಮೆಂಟ್ ಏರ್ಪಾಡು ಈಗ ಪೂರಾ ಪರಿಶೋಧನೆಗೆ ಒಳಗಾಗಿರುತ್ತದೆ. ಕೆಲವರು ಸರ್ಕಾರೀ ಆಫೀಸರುಗಳೂ ಸರ್ಕಾರೀ ನೌಕರರಲ್ಲದ ದೊಡ್ಡಮನುಷ್ಯರೂ ಸೇರಿದ, ಕೌನ್ಸಿಲಿನ ಎರಡನೆಯ ಮೆಂಬರಾದ ಮಿ॥ ಕ್ಷತೆಗೊಳಗಾದ ಒಂದು ಎಮ್. ಕಾಂತರಾಜ ಅರಸ್, ಸಿ. ಎಸ್. ಐ. ಯವರ ಅಧ್ಯಕ್ಷಕಮಿಟಿಯು, ಮೇಲ್ಕಂಡ ವಿಷಯವನ್ನು ಕೆಲವು ಕಾಲದಿಂದ ಪರ್ಯಾಲೋಚಿಸುತ್ತಿದ್ದು, ಈಗತಾನೆ ಒಂದು ನಿರ್ಣಯಕ್ಕೆ ಬಂದಿರುತ್ತದೆ. (ಸಶೇಷ.)

೧೯೧೪ ನೆಯ ಇಸವಿ ಅಕ್ಟೋಬರ್ ತಾ॥ ೪ರಿಂದ ೧೯೧೪ನೆಯ ಅಕ್ಟೋಬರ್ ತಾ॥ ೧೦ರ ವರೆಗೆ ಸಲ್ಲುವ ಶಾಲೀವಾಹನ ಶಕೆ ೧೮೩೬ ನೆಯ ಆನಂದನಾಮ ಸಂ॥ ದ ಆಶ್ವಯುಜ ಶು॥ ಪೌರ್ಣಮಿಯಿಂದ ಆಶ್ವಯುಜ ಬ॥ ಷಷ್ಠಿ ವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ತೇದಿ ಕನ್ಯಾ
4	[1]ಭಾನು	ಪೌ	8-36	ಪೂಭಾ	3-53	19
5	[2]ಸೋ	ಪ್ರ	13-7	ರೇವತಿ	11-53	20
6	[3]ಮಂ	ದ್ವಿ	18-12	ಅಶ್ವಿನಿ	18-15	21
7	[4]ಬುಧ	ತದಿ	23-29	ಭರಣಿ	24-50	22
8	ಗುರು	ಚೌ	28-27	ಕೃತ್ತಿಕಾ	31-6	23
9	[5]ಶುಕ್ರ	ಪಂ	32 48	ರೋಹಿ	36-49	24
10	ಶನಿ	ಷಷ್ಠಿ	36-16	ಮೃಗ	41-30	25

(1) ಚಂದ್ರೋದಯಗೌರೀವ್ರತಂ, ದಾನಫಲವ್ರತಂ. (2) ದ್ವಿತೀಯಾತಿಥಿಃ. (3) ಶೂನ್ಯತಿಥಿಃ, ಅಮೃತಸಿದ್ಧಿಯೋಗಃ. (4) ಶಿವೆ, ಶಿಲ, ತೃತೀಯಾತಿಥಿಃ, ಸಂಕಟಹರ ೪, ಶ್ರೀಚಾಮುಂಡೇಶ್ವರೀರಥಃ. (5) ದಶರಥಗೌರೀವ್ರತಂ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED. NO M 124

ಮೈಸೂರ್ ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು

ವಾರ್ಷಿಕ ಚಂದಾ ೧—೦—೦

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಙ್ಕಜನಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಪಲಂ ।
ನಿಮಾತೀತ ಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಅಂಚೆವೆಚ್ಚ ಸೇರಿ ೧—೧೪—೦

REGISTERED. NO M 124

ಸಂಪುಟ—೨) ಮೈಸೂರ್ ಸ್ಟಾರ್ ಸೆಕ ೧೯೧೪ ನೆಯ ಇಸವಿ ಅಕ್ಟೋಬರ್ ತಾರೀಖು ೧೧ನೆಯ ಭಾನುವಾರ. (ಸಂಚಿಕೆ ೪೧

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಈಗತಾನೇ ಸೀಮೆಯಿಂದ ಬಂದಿರತಕ್ಕ ರಿಖಂವಾರ್ ವಾಚ್‌ಗಳ ಕ್ರಯದಪಟ್ಟಿ. 35



೧	ರಾಸ್ಕೋಫ್ ಸಿಸ್ಟಂಪೇಟೆಂಟ್‌ಸ್ವಿಸ್‌ಮೇಡ್‌ವಾಚ್	೧ ಕ್ಕೆ	೨-೮-೦
೨	ಗರ್ಟೈಂ ರೈಲ್ವೇ ರೆಗ್ಯುಲೇಟರ್ ವಾಚ್	೧ ಕ್ಕೆ	೩-೮-೦
೩	ಡಿಟೋ ನಮೂನೆ ಚೆಕ್ಕಸ್ಟೈಜ್ ವಾಚ್	೧ ಕ್ಕೆ	೪-೪-೦
೪	ಡಿಟೋ ಚೆಕ್ಕಸ್ಟೈಜ್ ಸ್ಪೆಷಲ್ ಸರ್ವೀಸ್‌ವಾಚ್	೧ ಕ್ಕೆ	೫-೮-೦
೪	ಜರ್ಮಲ್‌ವರ್ಗ ಡ್ರುಸ್ ವಾಚೆಂಬ ಅತ್ಯುತ್ತಮವಾದ ಲೀವರ್ ವಾಚ್	೧ ಕ್ಕೆ	೮-೧೨-೦
೫	ಡಿಟೋ ನಮೂನೆ ಕೆಂಪುಗಳನ್ನು ಕೆತ್ತಿರುವ ವಾಚ್	೧ ಕ್ಕೆ	೯-೪-೦
೬	ಹೀಕಾಕ್ ವಾಚೆಂಬ ತೆಳುವಾದ ಮತ್ತೂ ಗ್ಯಾರೆಂಟಿಯಾದ ವಾಚ್ (ಸಾವಿರಾರು ವಿಕ್ರಯ)	೧ ಕ್ಕೆ	೧೦-೮-೦
೭	ವಾರಕೊಂದಾವರ್ತಿ ಬೀಗಕೊಡುವ ನಿಕ್ಕಲ್ ಬೆಳ್ಳಿಕೇಸ್ ವಾಚ್	೧ ಕ್ಕೆ	೧೦-೮-೦
೮	ಡಿಟೋ ನಮೂನೆಯಲ್ಲಿ ಅಚ್ಚ ಬೆಳ್ಳಿಕೇಸಿನ ಚೆಕ್ಕ ಸ್ಟೈಜ್ ವಾಚ್	೧ ಕ್ಕೆ	೧೫-೪-೦
೯	೩೦ ಘಂಟೆಗೆ ಒಂದಾವರ್ತಿ ಬೀಗಕೊಡುವ ದೊಡ್ಡ ಬರ್ಮ್ಯಾಟೈಂಪೀಸ್	೧ ಕ್ಕೆ	೧-೪-೦
೧೦	ಡಿಟೋ ನಮೂನೆ ಅಲಾರಂ ಟೈಂಪೀಸ್	೧ ಕ್ಕೆ	೨-೪-೦
೧೧	ಡಿಟೋ ನಮೂನೆಯಲ್ಲಿ ಘಂಟೆ ನಿಮಿಷ ಸೆಕೆಂಡ್ ತೋರಿಸಿ ಅಲಾರಂ ಇದ್ದು ತಾರೀಖು ಸಹ ತೋರಿಸುವ ದೊಡ್ಡ ಟೈಂಪೀಸ್	೧ ಕ್ಕೆ	೩-೪-೦
೧೨	ಖಾತ್ರಿಯಾದ ಅನ್‌ಸೋನಿಯಾ "ಬಿ" ಟೈಂಪೀಸ್	೧ ಕ್ಕೆ	೨-೮-೦
೧೩	ಡಿಟೋ ಕಂಪೆನಿಯ ಅಲಾರಂಟೈಂಪೀಸ್ (ಬಹಳಮಜಬೂತಾದ್ದು) (ಸಾವಿರಾರುವಿಕ್ರಯ)	೧ ಕ್ಕೆ	೩-೮-೦
೧೪	ಅನ್‌ಸೋನಿಯಾ ಕಂಪೆನಿಯಲ್ಲಿ ತಯಾರಾದ ಘಂಟೆ, ಅರ್ಧಘಂಟೆ ಹೊಡೆದು ಅಲಾರಂ ಇರತಕ್ಕ ದೊಡ್ಡಟೈಂಪೀಸ್ (ಅನೇಕಜನ ವಿದ್ಯಾರ್ಥಿಗಳು ಇದನ್ನೇ ಉಪಯೋಗಿಸುತ್ತಲಿದ್ದಾರೆ)	೧ ಕ್ಕೆ	೬-೧೦-೦
೧೫	ಘಂಟೆ, ಅರ್ಧಘಂಟೆ ಹೊಡೆಯುವ ಕ್ಯಾರೇಜ್ ಕ್ಲಾಕೆಂಬ ಟೇಬಲ್ ಘಡಿಯಾರ	೧ ಕ್ಕೆ	೪-೧೨-೦
೧೬	ಡಿಟೋ ನಮೂನೆಯಲ್ಲಿ ಘಂಟೆ, ಅರ್ಧಘಂಟೆಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್	೧ ಕ್ಕೆ	೫-೪-೦
೧೭	ಡಿಟೋ ನಮೂನೆಯಲ್ಲಿ ಘಂಟೆಹೊಡೆಯುವದಕ್ಕೆ ಪ್ರತಿಯಾಗಿ ಗಾನಹಾಡುವ ಕ್ಲಾಕ್	೧ ಕ್ಕೆ	೫-೮-೦
೧೮	ಡಿಟೋ ನಮೂನೆಯಲ್ಲಿ ತಾವಿಷ್ಟಪಟ್ಟ ಟೈಂನಿಗೆ ಕಾಲುಘಂಟೆಕಾಲ ಕರ್ಣಾನಂದವಾಗುವಂತೆ ಮೃದುಮಧುರ ಗಾನಮಾಡತಕ್ಕ ಕ್ಲಾಕ್	೧ ಕ್ಕೆ	೫-೮-೦
೧೯	ಅನ್‌ಸೋನಿಯಾ ಕಂಪೆನಿಯ ಲಿವರ್ ಕ್ಲಾಕೆಂಬ ಗೋಡೆಗೆ ತಗಲಿಸುವ (೮ ಮೂಲೆಯ) ಅಷ್ಟಕೋಣಾಕೃತಿಯ ಚೆಕ್ಕಸ್ಟೈಜ್ ಕ್ಲಾಕ್	೧ ಕ್ಕೆ	೬-೮-೦

ಈ ಪತ್ರಿಕೆಯ ಚಂದಾದಾರರಿಗೂ ಸ್ಕೂಲ್‌ಮಾಸ್ಟರ್‌ಗಳಿಗೂ ವಿನಂತಿ.

೧೯೧೫ ನೇ ಇಸ್ವಿಯ ಸಚಿತ್ರ ಕ್ಯಾಲೆಂಡರ್‌ಗಳು ವಿಕರಿಗೆ ಸಿದ್ಧವಾಗಿವೆ ಕ್ರಯ ೧ ಕ್ಕೆ ೦-೦-೬ ಪೈ. ೫೦ ಕ್ಕೆ ೦-೧೧-೦ ಆಣೆ ೧೦೦ ಕ್ಕೆ ೧-೫-೦ ಪ್ಯಾಕಿಂಗ್ ಪೋಸ್ಟೇಜು ಮಾಫಿ ೫೦ ಕ್ಯಾಲೆಂಡರ್‌ಗಳಿಗಿಂತಲೂ ಕಡಿಮೆಯಾಗಿ ಪೋಸ್ಟುಮೂಲಕ ರವಾನಿಸಲಾಗುವುದಿಲ್ಲಾ.

ಈ ಕ್ಯಾಲೆಂಡರಿನಲ್ಲಿ ಇಂಗ್ಲೀಷ್ ಮತ್ತೂ ಕನಡ ತಿಂಗಳೂ, ತಾರೀಖು, ವಾರ, ತಿಥಿ, ನಕ್ಷತ್ರ, ಆಯಾಯ ದಿವಸದ ವಿಶೇಷ ದಿವಸಗಳು ವಿಷಿಷ್ಟ ಹಬ್ಬ ದಿವಸಗಳೂ ಇರುವುದಲ್ಲದೆ ಮೈಸೂರ್ ಮಹಾರಾಜರವರ ಮತ್ತೂ ಯುವರಾಜರವರ ಭಾವಚಿತ್ರಗಳೂ ಮತ್ತೂ ಮೈಸೂರ್ ಸಂಸ್ಥಾನದ ಈಗಿನ ಹೊಸ ಅರಮನೆಯಲ್ಲಿ ನಡೆಯುವ ನವರಾತ್ರೆ ಮಹೋತ್ಸವದ ದರ್ಬಾರ್ ಸಹಿತ ಇರುವ ನಕ್ಷೆಯನ್ನೂ ಸಹ ನುಣುಪಾದ (ಗ್ಲೇಜ್‌ಪೇಪರ್) ಕಾಗದದಲ್ಲಿ ಅಂದವಾಗಿ ಪ್ರಿಂಟ್‌ಮಾಡಿಸಿ ಮೇಲ್ಕಂಡ ದರದಂತೆ ಬಹುಸುಲಭಬೆಲೆಗೆ ಕೊಡುತ್ತಲಿದ್ದೇವೆ ಯಾವಕಾರಣ ಈ ದಿವಸವೇ ಆರ್‌ಡರ್ ಕೊಟ್ಟು ತರಿಸಿಕೊಳ್ಳಿರಿ ಸ್ವಲ್ಪ ಪ್ರತಿಗಳುಮಾತ್ರ ಉಳಿದಿವೆ. ವಿಕರಿಯಾದನಂತರಬರತಕ್ಕ ಆರ್‌ಡರ್‌ಗಳನ್ನೆಲ್ಲಾ ಹೋದವರುಸದಂತೆ ಕ್ಯಾನ್ಸಲ್‌ಮಾಡಲಾಗುತ್ತೆ.

ರಿಖಂವಾರ್ ವಾಚ್ ಸರಪಣಿಗಳು.

ನಿಕ್ಕಲ್ ಬೆಳ್ಳಿಯ ವಾಚ್‌ಸರಪಣಿ	೧ ಕ್ಕೆ	೦-೧೨-೦
ಅಚ್ಚ ಬೆಳ್ಳಿಯ ಜೇಬಿನ ವಾಚ್‌ಸರಪಣಿ	೧ ಕ್ಕೆ	೩-೪-೦
ಅಚ್ಚ ಬೆಳ್ಳಿಯ ಕೊರಳಸರಪಣಿ	೧ ಕ್ಕೆ	೧-೪-೦
೧೮ ಕ್ಯಾರೆಟ್ ಚಿನ್ನದ ವಾಚ್‌ಸರಪಣಿ	೧ ಕ್ಕೆ	೫-೮-೦
ವಾಚಿನ ಸರಪಣಿ ತುದಿಯಲ್ಲಿ ಹಾಕುವ ಅಚ್ಚ ಬೆಳ್ಳಿಯ ಶಾಶ್ವತವಾದ ಕ್ಯಾಲೆಂಡರ್ ಅಂದರೆ ಎಷ್ಟು ವರುಷಗಳ ವರಿಗಾದರೂ ತಾರೀಖು ನೋಡಬಹುದಾದ ಕ್ಯಾಲೆಂಡರ್ ಎಂದೆಂದಿಗೂ ಕೆಡತಕ್ಕದ್ದಲ್ಲಾ	೧ ಕ್ಕೆ	೧-೧೨-೦
ಡಿಟೋ ನಮೂನೆಯಲ್ಲಿ ೧೮ ಕ್ಯಾರೆಟ್ ಚಿನ್ನದಿಂದ ತಯಾರಿಸಿದ್ದು	೧ ಕ್ಕೆ	೩-೪-೦

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ಒಂದುಸಾರಿ ಶಾಯಿತುಂಬಿದರೆ ೧೦,೦೦೦ ಶಬ್ದಗಳನ್ನು ಬರೆಯಬಹುದಾದ ಲೇಖಣಿಗಳು.

ಪ್ರತಿಯೊಂದಕ್ಕೂ ೧೪ ಕ್ಯಾರೆಟ್ ಚಿನ್ನದ ನಿಬ್ಬು ಹಾಕಿದೆ.

ನೆಪ್ಚೂನ್ ೨೦೦ ನೇ ನಂ. ಪೆನ್	೧ ಕ್ಕೆ	೧-೧೪-೦
ನೆಪ್ಚೂನ್ ೨೫ ನೇ ನಂ. ಪೆನ್	೧ ಕ್ಕೆ	೨-೧೦-೦
ನೆಪ್ಚೂನ್ ೨೧೦ ನೇ ನಂ. ಪೆನ್	೧ ಕ್ಕೆ	೪-೨-೦

ಪ್ರತಿಯೊಂದು ಪೆನ್ ತರಿಸಿ ಕೊಳ್ಳುವರಿಗೂ ೪ ಪದಾರ್ಥಗಳನ್ನು ಮುಫತ್ತಾಗಿ ರವಾನಿಸುತ್ತೇವೆ.

೧ ಪೆನ್‌ಗಳನ್ನಿಡತಕ್ಕ ಸುಂದರವಾದ ಪೆಟ್ಟಿ ೧.
೨ ಪೆನ್ನಿಗೆ ಶಾಯಿಹಾಕುವ ಗಾಜಿನಕೊಳವೆ ೧.
೩ ಪೆನ್‌ಗಳನ್ನು ಕ್ಲೀನ್‌ಮಾಡುವ ವಿಧಾನ ಮತ್ತೂ ಶಾಯಿಹಾಕುವ ವಿಧಾನ ಪ್ರಿಂಟಾಗಿರುವ ಚೀಟಿ ೧.
೪ ಪೆನನ್ನು ಜೇಬಿಗೆತಗಲಿಸುವ ಸುಂದರವಾದ ಕ್ಲಿಪ್ ೧.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

154

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ರೇವಣಸಿದ್ಧೇಶ್ವರಪುರಾಣಂ ಬೆಲೆ ೧೨ ಆಣೆ. ಸಟಿಪ್ಪಣ ಸಿದ್ಧಾಂತಶಿಖಾಮಣಿ ಬೆಲೆ ೧—೮—೦.

ವೀರಶೈವ ಗ್ರಂಥಪ್ರಕಾಶಿಕಾ—ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ವರ್ಷದ ಚಂದಾ ೨—೮—೦.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಮೈಸೂರಿನಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನ್ ರವರು ಮಾಡಿದ ಉಪನ್ಯಾಸದ ಮುಖ್ಯಭಾಗಗಳು.

(ಕಳೆದ ವಾರದ ಶೇಷ)

ವ್ಯವಸ್ಥಾಕ್ರಮಕ್ಕೂ ಕಾರ್ಯಾಭಿವೃದ್ಧಿಗೂ ಸಂಬಂಧಪಟ್ಟ ಸಂಗತಿಗಳು.

ಸರ್ಕಾರಕ್ಕೂ ಜನಸಾಮಾನ್ಯಕ್ಕೂ ಸಂಬಂಧಿಸಿದ ಪ್ರತಿಯೊಂದು ವಿಷಯದಲ್ಲಿಯೂ, ಚೆನ್ನಾಗಿ ವಿಚಾರಮಾಡಿ ಪರಿಶೀಲಿಸಬೇಕಾದ ಹಲವು ಹೊಸಸಂಗತಿಗಳು ಆಗಾಗ ಕಾಣಿಸಿಕೊಳ್ಳುತ್ತವೆ; ಅಂಥವುಗಳನ್ನು ಎಡೆಬಿಡದೆ ನೋಡಿಕೊಳ್ಳುವದಕ್ಕೆ ಇಲಾಖಾ ಮೊಖ್ತೇಸರರಿಗೆ ಅನೇಕವೇಳೆ ಶಕ್ಯವಲ್ಲವಾಗಿದೆ. ಸರ್ಕಾರದ ಪ್ರತಿ ಇಲಾಖೆಯ ವ್ಯವಸ್ಥಾಕ್ರಮಕ್ಕೂ ಕಾರ್ಯಾಭಿವೃದ್ಧಿಗೂ ಸಂಬಂಧಪಟ್ಟ ಸಂಗತಿಗಳ ಪಟ್ಟಿಯೊಂದನ್ನು ಸಿದ್ಧಪಡಿಸಿ ಇಟ್ಟುಕೊಂಡು, ಅವುಗಳ ಪೈಕಿ ಕೆಲವನ್ನು, ಸರ್ಕಾರೀ ಆಫೀಸರುಗಳ ಸಹಾಯದಿಂದಲೂ, ಅವಶ್ಯಕವಾದರೆ ಅವುಗಳಲ್ಲಿ ಆಸಕ್ತಿಯನ್ನು ಪಡೆದಿರುವ ಅಥವಾ ಅವುಗಳನ್ನು ಚೆನ್ನಾಗಿ ವಿಚಾರಮಾಡಿ ತಿಳಿದುಕೊಂಡಿರುವ ಖಾಸಗಿ ದೊಡ್ಡಮನುಷ್ಯರ ಸಹಾಯದಿಂದಲೂ ಪರಿಶೀಲನೆ ಮಾಡಿ, ರಿಪೋರ್ಟು ಮಾಡುವುದಕ್ಕೋಸ್ಕರ ಆಗಾಗ ತೆಗೆದುಕೊಳ್ಳಲಾಗುವದು. ಅನೇಕ ಸಂಗತಿಗಳನ್ನು ಈ ರೀತಿಯಲ್ಲಿಯೇ ವ್ಯವಸ್ಥೆಗೆ ತಂದಿರಲಾಗಿದೆ. ಸರ್ಕಾರದವರೊಡನೆ ಸೇರಿ ಕೆಲಸಮಾಡಿ ಸಹಾಯಮಾಡಿದ ದೊಡ್ಡಮನುಷ್ಯರುಗಳಿಗೆ ನಮ್ಮ ಮನಃಪೂರ್ವಕವಾದ ವಂದನೆಗಳು ಸಲ್ಲಬೇಕಾಗಿವೆ.

ಹೊಸದಾಗಿ ಕೆಲಸಕ್ಕೆ ನೇಮಿಸಿಕೊಳ್ಳುವದು ಮತ್ತು ಬಡ್ತಿಗಳು.

ಸರ್ಕಾರದ ನೌಕರಿಗೆ ಹೊಸದಾಗಿ ಜನಗಳನ್ನು ನೇಮಿಸಿಕೊಳ್ಳುವುದರ ವಿಚಾರದಲ್ಲಿ, ಉಮೇದುವಾರರುಗಳ ಕಾರ್ಯನಿರ್ವಾಹ ಶಕ್ತಿಯನ್ನೂ ಯೋಗ್ಯತೆಯನ್ನೂ ಮುಖ್ಯಾಧಾರವಾಗಿ ಮಾಡಿಕೊಂಡು, ಒಂದು ಖಂಡಿತವಾದ ಪದ್ಧತಿಯನ್ನು ಆಚರಣೆಗೆ ತರತಕ್ಕದ್ದಾಗಿದೆ. ಆದರೆ ಹೀಗೆ ಮಾಡುವುದರಲ್ಲಿಯೂ ಕೂಡ, ಸರ್ಕಾರದ ನೌಕರಿಯಲ್ಲಿ ಇದುವರೆಗೂ ಸಾಕಾದಷ್ಟು ಪ್ರವೇಶ ಪಡೆಯದಿರುವ, ತೆರಿಗೆ ಕೊಡುತ್ತಿರುವ ಜನಸಮುದಾಯಗಳಿಗೆ ನ್ಯಾಯವಾದ ಪ್ರೋತ್ಸಾಹವನ್ನೂ ಕಲ್ಪಿಸಲಾಗುವದು. ನೌಕರಿಗೆ ನಮ್ಮ ದೇಶದಲ್ಲಿನ ಕೇವಲ ಸಮರ್ಥರಾದವರೇ ದೊರೆಯುತ್ತಿರುವಲ್ಲಿ, ಅದೇ ಸಂಬಳಕ್ಕೆ ಸಾಮಾನ್ಯರನ್ನು ನೇಮಿಸಿಕೊಳ್ಳುವುದಕ್ಕೆ ಕಾರಣವೇನೂ ತೋರುವುದಿಲ್ಲ.

ಫಲಾನಾಯವರಿಗೆ ಬಡ್ತಿ ಕೊಡಬೇಕೆಂದು ಗೊತ್ತುಮಾಡಬೇಕಾದರೆ ಅವರು ತೃಪ್ತಿಕರವಾಗಿ ಕೆಲಸಮಾಡಿರುವದನ್ನೂ ಕಾರ್ಯಾನುಗುಣವಾದ ಯೋಗ್ಯತೆಯನ್ನೂ ನೋಡಿ ಮಾಡಬೇಕು. ಇದಕ್ಕಾಗಿ ಆಯಾ ನೌಕರರ ನಡತೆಯ ವಿಷಯದಲ್ಲೂ ಯೋಗ್ಯತೆಯ ವಿಷಯದಲ್ಲಿಯೂ ಸರಿಯಾದ ಸಂಗತಿಗಳನ್ನು ಮೊದಲಿಗಿಂತ ಹೆಚ್ಚು ತಪ್ಸೀಲುಗಳೊಡನೆ ಬರೆದಿಡಬೇಕು. ಆತ್ಮಾವಲಂಬಿಗಳಾಗಿಯೂ ನಾನಾವಿಷಯ ಪರಿಜ್ಞಾನವುಳ್ಳವರಾಗಿಯೂ ಇರುವ ಆಫೀಸರುಗಳನ್ನು ಪ್ರೋತ್ಸಾಹಿಸಬೇಕಾದರೆ, ಯಾರಲ್ಲಿ ಕಾರ್ಯನಿರ್ವಾಹಶಕ್ತಿಯು ವ್ಯಕ್ತವಾಗಿ ಕಾಣುತ್ತಿರುವದೋ, ಅವರಿಗೇ ವಿಶೇಷವಾದ ಬಡ್ತಿಗಳನ್ನು ಕೊಡುವದು ಅವಶ್ಯಕವಾಗಿದೆ.

ಸಂಸ್ಥಾನದ ನಾನಾ ಇಲಾಖೆಗಳಿಗೆ ಸೇರಿದ ಆಫೀಸರುಗಳ ನಡತೆಯನ್ನೂ ಜವಾಬ್ದಾರಿಯನ್ನೂ ಕ್ರಮಪಡಿಸುವದಕ್ಕೆ ಸರಿಯಾದ ನಿಯಮಗಳನ್ನು ಸರ್ಕಾರದವರು ಸಾದರ್ಮಾಡಬೇಕೆಂದು ಆಲೋಚಿಸುತ್ತಿದ್ದಾರೆ.

ಸರ್ಕಾರದ ಕೌನ್ಸಿಲ್ ಮೆಂಬರುಗಳಿಂದ ಅಜಮಾಯಿಷಿ ಕೆಲಸಗಳು.

ನೂತನ ಕಾರ್ಯಕ್ರಮದ ಪ್ರಕಾರ ಸರ್ಕಾರದ ಕೌನ್ಸಿಲ್ ಮೆಂಬರುಗಳು ಅಜಮಾಯಿಷಿ ಕೆಲಸಕ್ಕಾಗಿ ಸಂಚಾರ ಮಾಡಿದರು. ಇದರ ಪ್ರಕಾರ ಅವರಿಂದ ವಿಶೇಷವಾದ ಅಜಮಾಯಿಷಿ ಕೆಲಸವು ನಡೆಯಿತು. ಸಂಸ್ಥಾನದಲ್ಲಿರುವ ಒಟ್ಟು 68 ತಾಲ್ಲೂಕುಗಳ ಪೈಕಿ, 52 ತಾಲ್ಲೂಕುಗಳನ್ನೂ 5 ಸಬ್ ತಾಲ್ಲೂಕುಗಳನ್ನೂ, ಕೌನ್ಸಿಲಿನ ಇಬ್ಬರು ಮೆಂಬರುಗಳೂ ನಾವೂ ಅಜಮಾಯಿಷಿ ಮಾಡಿದೆವು. ಈ ಅಜಮಾಯಿಷೀ ಕೆಲಸಗಳನ್ನು ಈ ವರ್ಷದಲ್ಲಿಯೂ ಕೂಡ ನಡಿಸಲಾಗುವದಲ್ಲದೆ, ಅವುಗಳಿಂದ ಶಾಶ್ವತವಾದ ಫಲಿತಾಂಶಗಳುಂಟಾಗುವಂತೆಯೂ, ಪ್ರತಿಯೊಂದು ತಾಲ್ಲೂಕಿನಲ್ಲಿರುವವರಿಗೆ ಅತ್ಯವಶ್ಯಕವಾಗಿ ಆಗಬೇಕಾದ ಸಂಗತಿಗಳನ್ನೂ ಈಗಿರುವ ಕುಂದುಕೊರತೆಗಳನ್ನೂ ಒಂದು ಪಟ್ಟಿ ಮಾಡಿ, ಬೇಕಾದುವುಗಳನ್ನು ಒದಗಿಸಿಕೊಟ್ಟು ಕುಂದು ಕೊರತೆಗಳನ್ನು ಪರಿಹಾರಮಾಡುವವರೆಗೂ, ಸರ್ಕಾರೀ ಇಲಾಖೆಯ ಜನಗಳೂ ಸರ್ಕಾರೀ ನೌಕರರಲ್ಲದ ಜನಗಳೂ ಸಹ ಅವುಗಳನ್ನು ಸದಾ ಲಕ್ಷ್ಯದಲ್ಲಿಡುವಂತೆಯೂ, ಏರ್ಪಾಡು ಮಾಡಲು ಪ್ರಯತ್ನಿಸಲಾಗುವದು.

ದೇಶದ ಸ್ಥಿತಿಗತಿಗಳನ್ನು ತೋರಿಸುವ ನಕ್ಷೆ, ಬುಕ್ಕು, ಡಿಸ್ಟ್ರಿಕ್ಟು ಮತ್ತು ಟವನಿನ ಕೈಪುಸ್ತಕಗಳು.

ಸಾಮಾನ್ಯವಾಗಿ ರಾಜ್ಯಾಡಳಿತಕ್ಕೂ, ಮುಖ್ಯವಾಗಿ ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ನಗರದಲ್ಲಿಯೂ ಮುಖ್ಯ ಪಟ್ಟಣಗಳಲ್ಲಿಯೂ ಇರತಕ್ಕ ಜನರ ಉಪಪತ್ತಿಗಳಿಗೂ, ಅವಶ್ಯಕತೆಗಳಿಗೂ ಸಂಬಂಧಪಟ್ಟ ಮುಖ್ಯ ವಿದ್ಯಮಾನಗಳ ವಿಷಯದಲ್ಲಿ ಈಗ ಸಮಾಚಾರ ಗೊತ್ತಾಗುವದು ಕಷ್ಟವಾಗಿದೆ. ಡಿಸ್ಟ್ರಿಕ್ಟುಗಳ ಉಪಯೋಗಕ್ಕೋಸ್ಕರ ಸಣ್ಣಸಣ್ಣ ಪುಸ್ತಕಗಳನ್ನೂ, ಮ್ಯುನಿಸಿಪಲ್ ಟವನುಗಳ ಉಪಯೋಗಕ್ಕಾಗಿ ಮಾರ್ಗಪ್ರದರ್ಶಕಗಳಾದ ಬುಕ್ಕುಗಳನ್ನೂ ತಯಾರ್ಮಾಡುವದರ ಮೂಲಕ ಮೇಲ್ಕಂಡ ಕೊರತೆಗಳನ್ನು ನಿವಾರಣೆ ಮಾಡುವುದಕ್ಕೋಸ್ಕರ, ಪ್ರಯತ್ನಗಳನ್ನು ಉಪಕ್ರಮಿಸಲಾಗಿದೆ. ಈ ದೇಶದ ಸ್ಥಿತಿಗಳನ್ನು ಕುರಿತ ನಕ್ಷೆಗಳನ್ನೂ ಸಾರಾಂಶವನ್ನೂ ತಯಾರ್ಮಾಡುವ ಕೆಲಸವನ್ನು ಈಚಿನವರೆಗೆ ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿಯಾಗಿದ್ದ ಮಿ|| ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ. ಎ., ಯವರಿಗೆ ವಹಿಸಿರುತ್ತದೆ. ಇವರು, ಸಂಬಂಧಪಟ್ಟ ಡಿಸ್ಟ್ರಿಕ್ಟು ಡೆಪ್ಯುಟಿಕಮಿಷನರುಗಳ ಸಹಾಯದೊಡನೆ, ಡಿಸ್ಟ್ರಿಕ್ಟು ಕೈಪುಸ್ತಕಗಳನ್ನು ಸಹ ತಯಾರ್ಮಾಡುತ್ತಲಿದ್ದಾರೆ.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರಾದ ದಿವಾನ್ ಬಹದ್ದೂರ್ ರಾಜಸಭಾಭೂಷಣ ಮಿ|| ಕೆ. ಪಿ. ಪುಟ್ಟಣ್ಣ ಶೆಟ್ಟರವರು ಬೆಂಗಳೂರು ಸಿಟಿ ಉಪಯೋಗಕ್ಕಾಗಿ ಉಪಯುಕ್ತವಾದ ಮತ್ತು ಅಂದವಾದ ಒಂದು ಕೈಪುಸ್ತಕವನ್ನು ಪ್ರಕಟಿಸಿರುತ್ತಾರೆ. ಇತರ ಕೆಲವು ಟವನುಗಳ ಮ್ಯುನಿಸಿಪಲ್ ಕೌನ್ಸಿಲಿನವರು ಇದರಂತೆಯೇ ಇನ್ನೂ ಚಿಕ್ಕದಾದ ಮಾರ್ಗಪ್ರದರ್ಶಕ ಪುಸ್ತಕಗಳನ್ನು ಪ್ರಕಟಿಸಲು ಉದ್ಯುಕ್ತರಾಗಿರುತ್ತಾರೆ.

ತುಮಕೂರು ಡಿಸ್ಟ್ರಿಕ್ಟಿನ ಕೈಪುಸ್ತಕವನ್ನು ಡೆಪ್ಯುಟಿಕಮಿಷನರ್ ಮಿ|| ಬಿ. ಜಿ. ಕುಮಾರಸ್ವಾಮಿ ನಾಯಕರು ಪ್ರಕಟಿಸಿರುತ್ತಾರೆ. ಕೋಲಾರ ಡಿಸ್ಟ್ರಿಕ್ಟಿಗಾಗಿ ಮತ್ತೊಂದು ಪುಸ್ತಕವು ಮಿ|| ಬಿ. ರಾಮಸ್ವಾಮಯ್ಯನವರಿಂದ ತಯಾರ್ಮಾಡಲ್ಪಟ್ಟು ಅಚ್ಚಾಗುತ್ತಾ ಇದೆ.

ತಾಲ್ಲೂಕು ಮತ್ತು ವಿಲೇಜ್ ಮ್ಯಾನ್ಯುಯಲ್‌ಗಳು.

ತಾಲ್ಲೂಕು ಕಚೇರಿಗಳ ಕೆಲಸಗಳನ್ನು ಕ್ರಮಪಡಿಸುವುದಕ್ಕೂ, ತಾಲೂಕು ನೌಕರರ ಕರ್ತವ್ಯಗಳನ್ನೂ ಜವಾಬ್ದಾರಿಗಳನ್ನೂ ವಿವರಿಸಿ ತಿಳಿಯಪಡಿಸುವದಕ್ಕೂ, ಒಂದು ಮ್ಯಾನ್ಯುಯಲನ್ನು ತಯಾರ್ಮಾಡಿಸುತ್ತಲಿದೆ. ರೆವಿನ್ಯೂ ಆಫೀಸರಾಗಿ ವಿಶೇಷಾನುಭವವನ್ನು ಪಡೆದಿರುವ ರಿಟೈರ್ಡ್ ಡೆಪ್ಯುಟಿ ಕಮಿಷನರಾದ ಮಿ|| ಕೆ. ಶ್ರೀನಿವಾಸರಾಯರು, ಯಾವ ಪ್ರತಿಫಲವನ್ನೂ ಅಪೇಕ್ಷಿಸದೆ ಈ ಕೆಲಸವನ್ನು ಕೈಗೊಂಡು, ತನ್ಮೂಲಕ ಜನೋಪಕಾರ ಕಾರ್ಯಗಳಲ್ಲಿ ಇತರರಿಗೆ ಮೇಲ್ಪಂಕ್ತಿಯನ್ನು ಹಾಕಿರುತ್ತಾರೆ. ಇವರು ವಿಲೇಜ್ ಮ್ಯಾನ್ಯುಯಲ್ ಎಂಬ ಪುಸ್ತಕಕ್ಕೆ ಬೇಕಾದ ಸಂಗತಿಗಳನ್ನು ಸಂಗ್ರಹಿಸುವ ಕೆಲಸವನ್ನು ಪೂರೈಸಿರುತ್ತಾರೆ. ತಾಲ್ಲೂಕು ಮತ್ತು ಗ್ರಾಮ ಮ್ಯಾನ್ಯುಯಲ್ ಬುಕ್ಕುಗಳು ಅಚ್ಚಾಗಿ ಪ್ರಕಟಿಸಲ್ಪಟ್ಟ ಕೂಡಲೆ ಡಿಸ್ಟ್ರಿಕ್ ಆಫೀಸ್ ನೌಕರರ ನಡೆವಳಿಕೆಯ ಬಗ್ಗೆ ಡಿಸ್ಟ್ರಿಕ್ಟ್ ಆಫೀಸ್ ಮ್ಯಾನ್ಯುಯಲ್ ಪುಸ್ತಕವನ್ನು ತಯಾರ್ಮಾಡಲಾಗುವುದು.

ಉಪಸಂಹಾರ.

ಶ್ರೀಮನ್ಮಹಾರಾಜರವರ ಪ್ರಜೆಗಳ ಅಭ್ಯುದಯವನ್ನು ಲಕ್ಷ್ಯದಲ್ಲಿಟ್ಟುಕೊಂಡು, ಮೈಸೂರು ದೇಶದಲ್ಲಿ ನಮ್ಮ ಈಗಿನ ಸ್ಥಿತಿಯನ್ನೂ, ಮುಂದಿನ ಅಪಾಯೋಪಾಯಗಳನ್ನೂ, ಕುರಿತು ಸಾಮಾನ್ಯವಾದ ಕೆಲವು ಅಂಶಗಳನ್ನು ಈಗ ತಿಳಿಸಿ, ಈ ಉಪನ್ಯಾಸವನ್ನು ಪೂರಯಿಸುತ್ತೇವೆ.

ಕಳೆದ ಸಾಲಿನಲ್ಲಿಯೂ ಈಗಲೂ ಮಳೆಯು ಕಡಿಮೆಯಾಗಿ ಜನಗಳಿಗೆ ಆಹಾರ ಜೆನಸಿಗಳೂ, ದನಗಳಿಗೆ ಮೇವೂ, ಸಿಕ್ಕುವುದು ದುಸ್ತರವೆಂದು ತಿಳಿಸಿರುತ್ತೇವೆ. ಈ ಸಂಸ್ಥಾನದಲ್ಲಿ ಮಳೆ ಬೆಳೆಗಳು ಸರಿಯಾಗಿ ಆಗದೆ ವರ್ಷೇವರ್ಷೆ ಕಾಲಸ್ಥಿತಿಯು ಕೆಡುತ್ತಲಿದೆ. ಈ ಸಂಸ್ಥಾನದ ಅನೇಕಭಾಗಗಳಲ್ಲಿ ನಡೆಯುವ ವ್ಯವಸಾಯಮಾರ್ಗಗಳು ಕೇವಲ ಪ್ರಾಚೀನವಾದುವುಗಳು. ಶಾಸ್ತ್ರರೀತಿಯಲ್ಲಿ ಕೃಷಿಮಾಡತಕ್ಕ ವಿಧಾನವು ಜನರಿಗೆ ಗೊತ್ತಿರುವದಿಲ್ಲ. ಕಾಲಸ್ಥಿತಿಯು ಸರಿಯಾಗಿದ್ದಾಗಲೂ ಕೂಡ, ಸಾಮಾನ್ಯವಾಗಿ ರೈತನಿಗೆ ವರ್ಷದಲ್ಲಿ ನಾಲ್ಕಾರುತಿಂಗಳು ಸಾಕಾದಷ್ಟು ಕೆಲಸವಿರುವುದಿಲ್ಲ. ಕಸಬುದಾರಿ ಕೆಲಸಗಳಲ್ಲಿ ಪೋಟಾಪೋಟಿ ಹೆಚ್ಚಾಗಿರುವದರ ದೆಸೆಯಿಂದ, ಅನೇಕ ಕಸಬುದಾರರು ತಮ್ಮ ಸ್ವಂತ ಕಸಬುಗಳನ್ನು ಬಿಡಬೇಕಾಗಿ ಬಂದು, ವ್ಯವಸಾಯಕ್ಕೆ ಬಿದ್ದಿರುತ್ತಾರೆ. ಗ್ರಾಮಾಂತರದ ಕೆರೆಗಳಲ್ಲಿ ಹೂಳು ತುಂಬಿಕೊಳ್ಳುವುದರಿಂದ, ಅವುಗಳ ಅಳವು ಕಮ್ಮಿಯಾಗುತ್ತಾ ಬರುತ್ತಲಿದೆ. ಅವುಗಳು ಮಳೆಗಾಲ ಕಳೆದ ಕೆಲವು ತಿಂಗಳುಗಳಲ್ಲಿಯೇ ಬತ್ತಿ ಹೋಗುತ್ತವೆ. ಇದರಿಂದ ಗ್ರಾಮಾಂತರಗಳಲ್ಲಿ, ಸಾಮಾನ್ಯವಾಗಿ ಜನಗಳಿಗೂ ದನಗಳಿಗೂ ನೀರಿಗೆ ಅಭಾವವುಂಟಾಗುತ್ತಲೇ ಇರುತ್ತದೆ.

ನಮ್ಮ ರೈತಾಪಿ ಜನರಿಗೆ ತಿಳವಳಿಕೆ ಸಾಲದು. ಉದ್ಯಮಶೀಲರಾದ ಇತರ ದೇಶೀಯರಲ್ಲಿರುವಂತೆ ನಮ್ಮ ದೇಶದವರಲ್ಲಿ ಪ್ರಜಾಸಾಮಾನ್ಯವಾದ ಕೆಲಸವನ್ನೇ ಆಗಲೀ ಸ್ವಕೀಯವಾದ ಕೆಲಸವನ್ನೇ ಆಗಲಿ, ಅನ್ಯಪ್ರೇರಣೆಯಿಲ್ಲದೆ ತಾವೇ ಉಪಕ್ರಮಿಸಿ, ಪರಸ್ಪರ ಸಹಾಯದಿಂದ ಒಗ್ಗಟ್ಟಾಗಿ ಒಂದು ಕ್ರಮವನ್ನನುಸರಿಸಿ ನಡೆದುಕೊಳ್ಳುವ ಶಕ್ತಿಯು ಸ್ವಲ್ಪವೂ ಇರುವದಿಲ್ಲ.

ಜನಗಳ ಕಾರ್ಯದಕ್ಷತೆ.

ಹೋದವರ್ಷದ ಉಪನ್ಯಾಸದಲ್ಲಿ ಜನಗಳ ಕಾರ್ಯದಕ್ಷತೆಯ ವಿಷಯವನ್ನು ಕುರಿತು ಒಂದು ಪ್ರಕರಣದಲ್ಲಿ ಸೂಚಿಸಲಾಯಿತು. ಈ ದೇಶದ ಅರ್ಥೋತ್ಪತ್ತಿ ಸಾಧನಗಳನ್ನು ಹೆಚ್ಚಿಸುವುದಕ್ಕಾಗಿಯೂ, ಸರ್ಕಾರೀ ಆಡಳಿತದ ಕ್ರಮವನ್ನು ಉತ್ತಮಸ್ಥಿತಿಗೆ ತರುವುದಕ್ಕಾಗಿಯೂ, ಸರ್ಕಾರದವರು ಯಾವಯಾವ ಕಾರ್ಯಗಳನ್ನು ಇದುವರೆಗೆ ನಡಿಸಿದ್ದಾರೆ, ಅಥವಾ ಈಗ ನಡಿಸುತ್ತಿದ್ದಾರೆ ಎಂಬ ಸಂಗತಿಯನ್ನು ನಾವು ಮೊದಲೇ ತಿಳಿಸಿರುತ್ತೇವೆ. ವಿದ್ಯಾಭ್ಯಾಸಕ್ಕಾಗಿ ಹಣವನ್ನು ವಿಶೇಷವಾಗಿ ಖರ್ಚುಮಾಡುವದರ ಮೂಲಕವಾಗಿಯೂ, ಇತರ ವಿಧವಾಗಿ ಎಂದರೆ ಕಸುಬುಗಳನ್ನೂ ಕೈಗಾರಿಕೆ ವ್ಯಾಪಾರಗಳಿಗೆ ಸಂಬಂಧಪಟ್ಟ ಕಾರ್ಯಗಳನ್ನೂ ಪ್ರೋತ್ಸಾಹಿಸುವುದರ ಮೂಲಕವಾಗಿಯೂ, ಪ್ರಜೆಗಳ ಪುರೋಭಿವೃದ್ಧಿಯ ವಿಷಯದಲ್ಲಿ ಸರ್ಕಾರದವರು ತಮ್ಮ ಕೈಲಾದುದನ್ನೆಲ್ಲಾ ಮಾಡುತ್ತಲಿದ್ದಾರೆ.

ಜನಗಳು ತಮ್ಮ ಯೋಗಕ್ಷೇಮಕ್ಕಾಗಿ ತಾವಾಗಿ ತಾವೇ ಏನೇನು ಮಾಡುತ್ತಲಿದ್ದಾರೆ? ಪೌರಕಾರ್ಯಾಭಿವೃದ್ಧಿಗಾಗಿಯೂ ದೇಶಾಭಿವೃದ್ಧಿಗಾಗಿಯೂ ಹೆಚ್ಚು ಮುತವರ್ಜಿಯನ್ನು ವಹಿಸಿ ಭಾಗಿಗಳಾಗಿರಲು ಜನರು ಎಷ್ಟರಮಟ್ಟಿಗೆ ಉದ್ಯುಕ್ತರಾಗಿರುತ್ತಾರೆ? ಎಂದು ಈ ಸಂದರ್ಭದಲ್ಲಿ ಕೇಳಬಹುದು. ಈ ಪ್ರಶ್ನೆಗಳು ಮುಂದಿನ ವರ್ಷಗಳಲ್ಲಿ ಇನ್ನೂ ಬಿಡದೆ ಪುನಃಪುನಃ ಕೇಳಲ್ಪಡತಕ್ಕವುಗಳಾಗಿರುತ್ತವೆ. ಅದಕ್ಕೆ ನೀವು ಕೊಡಬೇಕಾದ ಉತ್ತರವು ಸಮರ್ಪಕವಾಗಿಯೂ ಹೆಚ್ಚು ಹೆಚ್ಚು ಏಕಕಂಠ್ಯದಿಂದ ಕೊಡತಕ್ಕದ್ದಾಗಿಯೂ ಇರುವಂತೆ ನೀವು ನೋಡಿಕೊಳ್ಳಬೇಕಾಗಿರುತ್ತದೆ.

ನಮ್ಮ ಜನಗಳು ವಿಷಯವಿಚಾರಶಕ್ತಿಯನ್ನು ಅಭ್ಯಾಸಮಾಡಬೇಕು. ಪರದೇಶಗಳಲ್ಲಿ ಮಾನುಷಪ್ರಯತ್ನಗಳು ನೆರವೇರುವ ವಿಷಯದಲ್ಲಿ ಶಾಸ್ತ್ರವು ಎಷ್ಟರಮಟ್ಟಿಗೆ ಸಹಾಯಮಾಡಿರುತ್ತವೆ ಎಂಬುದನ್ನು ಅವರು ಚೆನ್ನಾಗಿ ತಿಳಿದುಕೊಂಡು, ಹೋಲಿಸಿನೋಡಿ, ಅದರಂತೆ ತಿಳಿಯಬರುವ ಅಂಶಗಳನ್ನು ಆಚರಣೆಗೆ ತರಬೇಕು.

ಜನಗಳ ಆಚರಣೆಗಳಲ್ಲಿ ಬದಲಾವಣೆಗಳು ಗೋಚರವಾಗದೆಯೇ ನಡೆಯುತ್ತಲಿವೆ. ಉಪಯುಕ್ತವಾದ ಅನೇಕ ಒಳ್ಳೇ ಹಿಂದಿನ ಪದ್ಧತಿಗಳೂ ಆಚರಣೆಗಳೂ ಕಣ್ಮರೆಯಾಗುತ್ತಲಿವೆ. ನಮ್ಮ ದೇಶದ ಸಂಬಂಧವಾದದ್ದಾಗಿಯೂ, ಪರದೇಶಗಳ ಸಂಬಂಧವಾದದ್ದಾಗಿಯೂ, ಇರುವ ವಿಶೇಷಪ್ರಯೋಜನಕರವಾದ ಮಾರ್ಗಗಳನ್ನೂ ಆಚರಣೆಗಳನ್ನೂ ಗೊತ್ತುಮಾಡಿಕೊಂಡು, ಜನಗಳು ಪ್ರತಿದಿನವೂ ನಡೆಯುವ ನಡೆವಳಿಕೆಗಳಲ್ಲಿ ಅವುಗಳನ್ನು ಸೂತ್ರವನ್ನಾಗಿ ಅಂಗೀಕರಿಸುವಂತೆ ಆಗುವವರೆಗೂ, ಜನಗಳಲ್ಲಿ ಅವುಗಳನ್ನು ಬಳಕೆಗೆ ತರುವದೇ ಈಗಿನಕಾಲದಲ್ಲಿ ನಮ್ಮ ಕರ್ತವ್ಯವಾಗಿರುತ್ತದೆ.

ನಗರಗಳಲ್ಲಿಯೂ, ಪಟ್ಟಣಗಳಲ್ಲಿಯೂ, ಗ್ರಾಮಗಳಲ್ಲಿಯೂ, ನಡೆಯುವ ಪ್ರವರ್ತನೆಗಳನ್ನು ಕ್ರಮಪಡಿಸುವುದು.

ಜನಗಳು ತಾವು ಮಾಡತೊಡಗುವ ಕೆಲಸವನ್ನು ಯಾವಾಗಲೂ ಚೆನ್ನಾಗಿ ಮಾಡುವಂತೆಯೂ, ತಮ್ಮ ಬಾಳಿಕೆಯನ್ನು ಯಾವಾಗಲೂ ಉತ್ತಮಸ್ಥಿತಿಗೆ ತರುವಂತೆಯೂ ಮಾಡುವುದಕ್ಕಾಗಿ, ಸಂಸ್ಥಾನಕ್ಕೆ ಸಂಬಂಧಪಟ್ಟ ಸಂಗತಿಗಳಲ್ಲಿಯೂ, ನಾಗರಿಕ ವಿಷಯಗಳಲ್ಲಿಯೂ, ಸಂಪದಭಿವೃದ್ಧಿಯ ಸಂಬಂಧವಾಗಿಯೂ, ಸಮಯಾಚಾರರೀತಿಗಳಲ್ಲಿಯೂ, ಧಾರ್ಮಿಕ ಮಾರ್ಗಗಳಲ್ಲಿಯೂ, ನಡಿಸಬೇಕಾದ ಮುಖ್ಯಮುಖ್ಯ ಪ್ರಯತ್ನಗಳನ್ನೆಲ್ಲ ಚೆನ್ನಾಗಿ ತಿಳಿದುಕೊಂಡು, ಲಕ್ಷ್ಯದಲ್ಲಿಯೂ ಆಚರಣೆಯಲ್ಲಿಯೂ ಇಟ್ಟುಕೊಳ್ಳುವಂತೆ ಜನಗಳನ್ನು ಪ್ರೋತ್ಸಾಹಪಡಿಸಬೇಕೆಂಬ ಉದ್ದೇಶದಿಂದ, ಸಲಹೆಗಳನ್ನು ವಿಚಾರಮಾಡುತ್ತಲಿದೆ.

ಪ್ರತಿನಗರದಲ್ಲಿಯೂ, ಪಟ್ಟಣದಲ್ಲಿಯೂ, ಗ್ರಾಮದಲ್ಲಿಯೂ ಆಚರಿಸತಕ್ಕ ಪ್ರತಿಯೊಂದು ಕಸಬಿಗೆ, ಯಾ ಪ್ರವರ್ತನೆಗೆ ಯಾವನಾದರೂ ಒಬ್ಬನನ್ನು, ಇಲ್ಲವೇ ಗೊತ್ತಾದ ಕೆಲವು ಜನರನ್ನು, ಜವಾಬ್ದಾರರನ್ನಾಗಿ ಮಾಡುವುದು; ಸಮಾಜದ ಬೇರೆ ಬೇರೆ ಕಸಬುಗಳಿಗೂ ಅಂತಸ್ತುಗಳಿಗೂ ಸೇರಿದವರ ಸ್ಥಿತಿಯನ್ನೂ ಸುಶೀಲತೆಯನ್ನೂ ಕ್ರಮಕ್ರಮವಾಗಿ ಅಭಿವೃದ್ಧಿಗೆ ತರುವುದಕ್ಕಾಗಿ, ಬೇಕಾದ ದ್ರವ್ಯವನ್ನು ಒದಗಿಸಿ, ಕೆಲಸವನ್ನು ನಡಿಸಲು ಪ್ರೋತ್ಸಾಹಿಸುವದು, ಇವುಗಳೇ ಆ ಸಲಹೆಗಳ ಉದ್ದೇಶಗಳಾಗಿರುತ್ತವೆ.

ಬೆಂಗಳೂರು ನಗರದಲ್ಲಿ ಗಣ್ಯರಾಗಿಯೂ ನಮ್ಮ ದೇಶೀಯರಾಗಿಯೂ ಇರುವ ದಿವಾನ್ ಬಹದ್ದೂರ್ ರಾಜಸಭಾಭೂಷಣ ಮಿ|| ಕೆ. ಪಿ. ಪುಟ್ಟಣ್ಣಶೆಟ್ಟರವರ ಪ್ರಮುಖತೆಯಲ್ಲಿ, ಮೇಲೆ ಸೂಚಿಸಿದ ಉದ್ದೇಶಾನುಸಾರ ಕಾರ್ಯವನ್ನು ಉಪಕ್ರಮಿಸಲಾಗಿದೆ. ಮುಖಂಡರಾದವರು ತಾವಾಗಿಯೇ ಮುಂದಕ್ಕೆ ಬಂದು ಕೆಲಸವನ್ನು ಮಾಡತೊಡಗಿದರೆ, ಬೆಂಗಳೂರಲ್ಲಿ ನಡೆಯುತ್ತಿರುವಂತೆ, ಮೈಸೂರು ನಗರದಲ್ಲಿಯೂ ಆರೀತಿಯಾದ ಕಾರ್ಯಪ್ರವರ್ತನೆ ಉಂಟಾಗದಿರಲು ಕಾರಣವಿಲ್ಲ; ಇನ್ನೂ ಸಣ್ಣ ಪಟ್ಟಣಗಳವರೂ ಇದೇ ಮಾರ್ಗವನ್ನು ಅವಲಂಬಿಸದಿರಲಿಕ್ಕೂ ಕಾರಣವಿಲ್ಲ.

ಪರಸ್ಪರಸಹಾಯವನ್ನು ಕುರಿತ ವಿಜ್ಞಾಪನೆ.

ಜನಗಳಿಗೆ ತಮ್ಮ ಸ್ಥಿತಿಯನ್ನು ಅಭಿವೃದ್ಧಿಮಾಡಿಕೊಳ್ಳುವುದಕ್ಕೂ, ಜಗತ್ತಿನಲ್ಲಿ ಪ್ರಾಣಪೋಷಣೆಗಾಗಿ ನಡೆಯುತ್ತಿರುವ ಹೋರಾಟದಲ್ಲಿ ಉಪಯುಕ್ತವಾದ ಸಲಕರಣೆಗಳನ್ನು ಒದಗಿಸಿಕೊಳ್ಳುವುದಕ್ಕೂ, ಸಹಾಯಮಾಡತಕ್ಕದ್ದು ತಮ್ಮ ಕರ್ತವ್ಯಕ್ಕೆ ಸೇರಿದ್ದೆಂದು ಸರ್ಕಾರದವರು ತಿಳಿದಿದ್ದಾರೆ. ಕಂದಾಯವನ್ನು ವಸೂಲ್ಮಾಡಿ, ಕಲಹವಿಲ್ಲದಂತೆ ಏರ್ಪಾಡುಮಾಡಿ, ನ್ಯಾಯವಿಮರ್ಶೆ ಮಾಡಿದ ಮಾತ್ರಕ್ಕೇ ತಮ್ಮ ಕರ್ತವ್ಯವು ತೀರಿತೆಂದು ಸರ್ಕಾರದ ಹುದ್ದೇದಾರರುಗಳು ಹೇಳಬಹುದಾಗಿದ್ದ ಕಾಲವು ಈಗ ಮಾರಿಹೋಯಿತು. ಬೆಂಗಳೂರು ನಗರದಲ್ಲಿ ಪೌರಕಾರ್ಯಗಳೂ, ಸ್ಪಷ್ಟವಾಗಿ ಅಭಿವೃದ್ಧಿಗೆ ಬರುತ್ತಲಿವೆಯೆಂತಲೂ, ಮ್ಯುನಿಸಿಪಲ್ ಕೌನ್ಸಿಲರುಗಳೂ, ಪ್ರಮುಖರಾದ ದೊಡ್ಡ ಮನುಷ್ಯರೂ ಸಹ, ಮ್ಯುನಿಸಿಪಲ್ ಕೆಲಸಗಳಿಗೂ ಸರ್ವಜನೋಪಯುಕ್ತವಾದ ಕೆಲಸಗಳಿಗೂ ತಮ್ಮ ಕಾಲವನ್ನು ಹಿಂಜರಿಯದೆ ವಿನಿಯೋಗಿಸಿ, ಕೆಲಸ ನಡಿಸುತ್ತಿದ್ದಾರೆ ಎಂತಲೂ, ಪ್ರತ್ಯಕ್ಷವಾಗಿ ನೋಡಿದವರು ನಂಬುಗೆಯಿಂದ ತಿಳಿಸಿರುತ್ತಾರೆ.

ಸರ್ಕಾರೀ ಆಫಿಸರುಗಳಿಗೂ ಡಿಸ್ಟ್ರಿಕ್ಟುಗಳಲ್ಲಿನ ಜನಗಳಿಗೂ ಪ್ರಜೋಪಕಾರಕವಾದ ವಿಷಯಗಳಲ್ಲಿ ಕಾರ್ಯಾಸಕ್ತಿಯೂ, ಏಕರೂಪವಾದ ಮನೋಭಾವವೂ ಇರುತ್ತವೆ ಎಂಬುದಕ್ಕೆ ನಿದರ್ಶನಗಳು ಕಂಡುಬರುತ್ತವೆ. ಗ್ರಾಮಾಂತರಗಳಲ್ಲಿ ಜನಗಳಿಗೆ ವಿದ್ಯಾಭಿವೃದ್ಧಿಯ ವಿಷಯದಲ್ಲಿ ಧಾರಾಳವಾದ ಉತ್ಸಾಹವಿದೆ ಎಂದು ನಮ್ಮ ಸ್ವಂತ ಅನುಭವದಿಂದ ತಿಳಿಸುತ್ತೇವೆ.

ಗ್ರಾಮಾಭಿವೃದ್ಧಿಯ ಏರ್ಪಾಟನ್ನು ಹೋದವರ್ಷದ ಉಪನ್ಯಾಸದಲ್ಲಿ ಸ್ಥೂಲವಾಗಿ ನಿರೂಪಿಸಿದಾಗ, ಆ ಏರ್ಪಾಟನ್ನು ಉಪಕ್ರಮಿಸುವುದಕ್ಕಾಗಿ ಸಹಾಯ ಮಾಡುತ್ತೇವೆಂದು 60 ಜನ ಮೆಂಬರುಗಳು ತಿಳಿಸಿದರು. ಆ ಸಾಹಾಯವು ಸಂಪೂರ್ಣವಾಗಿ ದೊರೆತಿರುತ್ತದೆ ಎಂದು ಈಗ ಹೇಳಬಲ್ಲೆವು. ಹೊಸಹೊಸ ಏರ್ಪಾಡುಗಳ ವಿಷಯದಲ್ಲೆಲ್ಲ ಸರ್ಕಾರಿ ನೌಕರರೂ ಖಾಸಗೀ ಜನಗಳೂ ಸಹ ಒಂದೇವಿಧವಾದ ಉದ್ದೇಶಗಳುಳ್ಳವರಾಗಿ, ಪರಸ್ಪರಸೌಹಾರ್ದದಿಂದ ಒಂದೇಮಾರ್ಗದಲ್ಲಿ ನಡೆಯುವುದಾದರೆ, ಅದರಿಂದ ಪ್ರಯೋಜನಾಂಶಗಳು ಸ್ಪಷ್ಟವಾಗಿ ತಲೆದೋರುವವು. ಬರುವ ಸಂವತ್ಸರದಲ್ಲಿ ನಮ್ಮ ಹುದ್ದೇದಾರರುಗಳು, ತಮ್ಮಿಂದಲೂ, ತಮ್ಮನ್ನು ಪ್ರತಿನಿಧಿಗಳಾಗಿ ಕಳುಹಿಸಿರುವ ಜನಸಾಮಾನ್ಯದಿಂದಲೂ, ಈಗ ಹೊಂದಿರುವದಕ್ಕಿಂತ ಅಧಿಕವಾದ ಸಹಾಯವನ್ನು ಹೊಂದುವರೆಂದು ಆದರಪುರಸ್ಸರವಾಗಿ ನಿರೀಕ್ಷಿಸುತ್ತೇವೆ.

ಈಚೆಗೆ ಸಂಚಾರ ಸಮಾಚಾರ ಸಾಧನಗಳು ಹೆಚ್ಚುತ್ತಿರುವುದರಿಂದ ನಮಗೆ ಪ್ರಪಂಚದಲ್ಲಿನ ಜನಾಂಗಗಳ ಸಂಬಂಧವು ಹೆಚ್ಚುಹೆಚ್ಚಾಗಿ ಉಂಟಾಗುತ್ತಲಿದೆ. ದೃಷ್ಟಾಂತದಿಂದ ಪ್ರಯೋಜನವನ್ನು ಹೊಂದುವ ಶಕ್ತಿ ನಮಗಿದ್ದಲ್ಲಿ, ನಮಗಿಂತಲೂ ಹೆಚ್ಚು ನಾಗರಿಕತೆಯುಳ್ಳ ಜನಗಳ ಸಂಪರ್ಕವು ನಮಗೆ ಕೇವಲ ಪ್ರಯೋಜನಕಾರಿಯಾದದ್ದೇ ಹೌದು; ಆದರೆ, ಈ ಅತ್ಯಂತ ಸಮೀಪ ಪರಿಚಯದಿಂದ ನಮ್ಮ ಜವಾಬ್ದಾರಿಗಳು ಹೆಚ್ಚಿರುತ್ತವೆ ಎಂಬುದನ್ನು ನಾವು ಒಪ್ಪಿಕೊಳ್ಳಲೇಬೇಕು. ಇದು ಜಗದ್ವ್ಯಾಪಾರಸಂಗ್ರಾಮ ಮಧ್ಯಕ್ಕೆ ನಮ್ಮನ್ನು ಸೆಳೆದಿರುತ್ತದೆ. ಧಾರಣೆವಾಸಿಗಳು ಏರುತ್ತಿರುವುದೇ ಇದರ ಮೊದಲನೆಯ ಸೂಚನೆಯಾಗಿದೆ. ಪೂರ್ವದಲ್ಲಿ ಸ್ಥಳೀಯ ಜನಗಳ ಕಾರ್ಯೋತ್ಸಾಹದಿಂದ ಉಂಟಾಗುತ್ತಿದ್ದ ಸಂಪದಭಿವೃದ್ಧಿಯು ಆಯಾ ಸ್ಥಳದ ವಿದ್ಯಮಾನಗಳನ್ನು ಅನುಸರಿಸಿ ಇರುವಲ್ಲಿ, ಈಗ ನಾವು ಅವಶ್ಯಕವಾದ ಶಿಕ್ಷಣೆಯೂ ಕೌಶಲ್ಯವೂ ಇಲ್ಲದೆಯೇ, ಪ್ರಾಚೀನವಾದ ಉಪಕರಣಗಳಿಂದ, ಪ್ರಪಂಚದಲ್ಲಿನ ಎಲ್ಲಾ ಜನಾಂಗಗಳ ಮಧ್ಯದಲ್ಲಿ ನಮ್ಮ ಅಂತಸ್ತನ್ನು ಉಳಿಸಿಕೊಳ್ಳುವಂತೆ ಹೋರಾಡಬೇಕಾಗಿರುತ್ತದೆ. ಈ ಹೋರಾಟದ ಘೋರತೆಯು ಪ್ರತ್ಯಕ್ಷವಾಗಿಯೇ ಬೆಳೆಯುತ್ತಿರುವಲ್ಲಿ, ನಮ್ಮ ಅಲ್ಪಸಂತುಷ್ಟಿಯಿಂದಲೂ, ಶಾಸ್ತ್ರದಲ್ಲಿಯೂ ಪ್ರಾಪಂಚಿಕ ಸಂಪತ್ತಿನಲ್ಲಿಯೂ ನಮಗಿರುವ ಉದಾಸೀನತೆಯಿಂದಲೂ, ನಮಗೆ ಉಂಟಾಗಿರುವ ಅಪಾಯವು ಹೆಚ್ಚುತ್ತಲೇ ಬರುವುದು. ನಾವು ಕಾಲಾನುಸಾರವಾಗಿ ನಡೆಯದಿದ್ದರೆ, ನಮಗೆ ಮುಂದೆ ಇನ್ನೂ ಕಷ್ಟ ಸಂಭವಿಸುವದಾದ್ದರಿಂದ, ಕೈಮೀರಿದಮೇಲೆ ಎಚ್ಚರಗೊಂಡು ಅನುತಾಪ ಪಡುವುದಕ್ಕೆ ಬದಲಾಗಿ ಮೊದಲೇ ಜಾಗರೂಕರಾಗಿ ನಡೆದುಕೊಳ್ಳುವುದು ನಮ್ಮ ಕರ್ತವ್ಯವಾಗಿದೆ.

ಎಂ. ವಿಶ್ವೇಶ್ವರಯ್ಯ,
ಮೈಸೂರು ಸಂಸ್ಥಾನದ ದಿವಾನ್‌ರವರು.

೧೯೧೪-೧೫ ನೇ ವರ್ಷದ ಜಮಾಖರ್ಚು ಅಂದಾಜಾ

(ಬಡ್ಜೆಟ್)

ಜಮೆಯ ಬಾಬುಗಳು.

	1913-14ರ ತಿದ್ದುಪಾಟಾದ ಅಂದಾಜು	1914-15ರ ಬಡ್ಜೆಟ್ ಅಂದಾಜು
ಎ.—ಹುಟ್ಟುವಳಿಯ ಮುಖ್ಯ ಬಾಬುಗಳು—		
1. ಜಮೀನ್ ಕಂದಾಯ	1,05,00,000	1,06,40,000
2. ಫಾರೆಸ್ಟು	33,14,000	28,20,000
3. ಆಬ್ಕಾರಿ	52,20,000	46,00,000
4. ಮೊಹತರ್ಫಾ ತೆರಿಗೆಗಳು	2,63,000	2,65,000
7. ಸ್ಟಾಂಪು	10,30,000	9,75,000
8. ರಿಜಿಸ್ಟ್ರೇಷನ್	1,95,000	1,85,000
ಎ. ಎ.—ಗಣಿಗಳ ಹುಟ್ಟುವಳಿ—		
9. ಗಣಿಗಳ ರಾಜಾಯ ಮತ್ತು ಗುತ್ತಿಗೆಗಳು	19,36,000	19,00,000
ಬಿ. 9 ಎ.—ಬೆಂಗಳೂರು ಸಿವಿಲ್ ಮಿಲಿಟರಿ ಸ್ಟೇಷನಿನಲ್ಲಿ ಖರ್ಚುಜಾತಾ ಉಳಿದಹಣ	30,00,000	13,43,000
ಬಿ. ಬಿ.—ಬಡ್ಡಿ—		
10. ಬಡ್ಡಿ	1,30,000	13,94,000
ಲಾಭ ಅಥವಾ ನಷ್ಟ.	16,00,000	(ಎ)
ಡಿ.—ಸಿವಿಲ್ ಇಲಾಖೆಗಳಿಂದ ಜಮಾ—		
12ಎ. ನ್ಯಾಯವಿಮರ್ಶೆ—ಲಾ ಕೋರ್ಟುಗಳು	51,000	49,000
12ಬಿ. ನ್ಯಾಯವಿಮರ್ಶೆ—ಬಂದೀಖಾನೆಗಳು	31,000	38,000
13. ಪೋಲೀಸು	27,000	30,000
14. ವಿದ್ಯಾಭ್ಯಾಸ	1,77,000	1,76,000
14ಎ. ವ್ಯವಸಾಯ		1,000
14ಬಿ. ಕೈಗಾರಿಕೆಗಳು ಮತ್ತು ವ್ಯಾಪಾರ		•
15. ವೈದ್ಯ	1,17,000	1,07,000
15ಎ. ಪಾಕೀಜಾ ಮತ್ತು ಸಿಡುಬು (ಬಿ)		15,000
16. ಶಾಸ್ತ್ರೀಯ ಮತ್ತು ಇತರ ಸಣ್ಣ ಇಲಾಖೆಗಳು	1,07,000	96,000
ಎ.—ಹುಟ್ಟುವಳಿ ಬಾಬಿನಿಂದಲೇ ಆಗಬೇಕಾದ ಖರ್ಚು—		
1. ರೀಫಂಡ್ ಮತ್ತು ವಾಪಸ್ ಜಮಾ	2,37,000	1,85,000
1ಎ. ಅಸೈನ್‌ಮೆಂಟ್ ಮತ್ತು ಕಂಪೆನ್ಸೇಷನ್	(ಎ)	80,000
ಇ.—ಚಿಲ್ಲರೆ ಬಾಬುಗಳು—		
17. ವಯೋಧಿಕಕ್ಕಾಗಿ ಕೊಡುವ ಅಲೋವೆನ್ಸುಗಳ ಮತ್ತು ಪೆನ್ಷನ್ ಬಗ್ಗೆ ಜಮೆ	2,000	2,000
18. ಸಾದಿಲ್ವಾರು ಮತ್ತು ಛಾಪಖಾನೆ	10,000	9,000
19. ಚಿಲ್ಲರೆ ಬಾಬುಗಳು	1,17,000	1,67,000
ಜಿ.—ಮಿಲಿಟರಿ ಬಾಬಿನ ಜಮೆ—		
20. ಸೈನ್ಯ	74,000	85,000
20ಎ. ಮಿಲಿಟರಿ ಕೆಲಸಗಳು	10,000	9,000
ಎಚ್.—ರೈಲ್ವೆಗಳು—ಹುಟ್ಟುವಳಿಯ ಲೆಖ್ಖ—		
21. ಮದ್ರಾಸ್ ಮತ್ತು ದಕ್ಷಿಣ ಮರಾಟಾ ರೈಲ್ವೆ ಕಂಪೆನಿಯವರು ಕೆಲಸನಡಿಸುವ ಸಂಸ್ಥಾನದ ರೈಲ್ವೆಗಳು	16,90,000	15,00,000
21ಎ. ಸರ್ಕಾರದವರು ಕೆಲಸ ನಡಿಸುವ ಸಂಸ್ಥಾನದ ರೈಲ್ವೆಗಳು	...	17,000
ಕೆ.—22. ಮರಮ್ಮತ್ ಇಲಾಖೆ	3,63,000	3,38,000
ಎಲ್.—23. ಕಾವೇರೀ ವಿದ್ಯುಚ್ಛಕ್ತಿಯ ಏರ್ಪಾಡು	17,12,000	17,58,000
ಜುಮ್ಲಾ ಹುಟ್ಟುವಳಿ ಮತ್ತ ಜಮೆಗಳು	3,17,30,000	2,85,09,000
ಖರ್ಚಿಗೆ ಸಾಲದೆ ಹೋದ ಮೊಬಲಗು	...	...
ಒಟ್ಟು ಜುಮ್ಲಾ	3,17,30,000	2,85,09,000

ಖರ್ಚು ಬಾಬುಗಳು.

	1913-14ರ ತಿದ್ದುಪಾಟಾದ ಅಂದಾಜು	1914-15ರ ಬಡ್ಜೆಟ್ ಅಂದಾಜು
ಎ. 1.—ವಸೂಲಾತಿಗೆ ತಗುಲಿದ ಖರ್ಚಿನ ವಿವರ—		
2. ಜಮೀನ್ ಕಂದಾಯ	19,07,000	19,79,000
3. ಫಾರೆಸ್ಟು	8,80,000	8,47,000
4. ಆಬ್ಕಾರಿ	3,42,000	3,50,000
8. ಸ್ಟಾಂಪು	49,000	47,000
9. ರಿಜಿಸ್ಟ್ರೇಷನ್	86,000	90,000
ಎ. ಎ. 10.—ಗಣಿಯ ಹುಟ್ಟುವಳಿಗೆ ತಗಲುವ ಖರ್ಚು.—	2,19,000	2,40,000
ಬಿ. ಬಿ.—ಬಡ್ಡಿ—		
11. ಸಾಧಾರಣ ಸಾಲದ ಬಡ್ಡಿ	80,000	85,000
12. ಇತರ ಸಾಲದ ಬಡ್ಡಿ	3,45,000	3,79,000
13. ಲಾಭ ಅಥವಾ ನಷ್ಟ	1,000	(ಬಿ)
ಸಿ. 14.—ಅರಮನೆ	22,96,000	23,40,000
ಡಿ.—ಸಿವಿಲ್ ಇಲಾಖೆಗಳ ಸಂಬಳಗಳು ಮತ್ತು ಇತರಖರ್ಚು		
15. ಸಾಮಾನ್ಯ ಆಡಳಿತ	11,04,000	11,05,000
16ಎ. ನ್ಯಾಯವಿಮರ್ಶೆ ಲಾ ಕೋರ್ಟುಗಳು	8,38,000	8,85,000
16ಬಿ. ನ್ಯಾಯವಿಮರ್ಶೆ—ಬಂದೀಖಾನೆಗಳು	1,36,000	1,53,000
17. ಪೋಲೀಸು	9,69,000	10,47,000
18. ವಿದ್ಯಾಭ್ಯಾಸ	13,69,000	18,31,000
18ಎ. ವ್ಯವಸಾಯ	(ಸಿ)	2,13,000
18ಬಿ. ಕೈಗಾರಿಕೆಗಳು ಮತ್ತು ವ್ಯಾಪಾರ	(ಸಿ)	1,41,000
19. ಮುಜರಾಯಿ, ಸತ್ರ, ದೇವಾಲಯಗಳು	3,52,000	3,57,000
20. ವೈದ್ಯ	7,99,000	6,62,000
20ಎ. ಆರೋಗ್ಯ ಮತ್ತು ಸಿಡುಬು	(ಡಿ)	2,63,000
21. ಶಾಸ್ತ್ರೀಯ ಮತ್ತು ಇತರ ಚಿಲ್ಲರೆ ಇಲಾಖೆಗಳು	3,99,000	3,30,000
ಇ.—ಚಿಲ್ಲರೆ ಸಿವಿಲ್ ಖರ್ಚುಗಳು—		
23. ಕರಾರುಗಳಮೇರೆಗೆ ಕೊಡುವ ಮೊಬಲಗುಗಳು	85,000	85,000
24. ಪೆನ್ಷನ್‌ಗಳು ಮತ್ತು ಅಲೋಯನ್ಸ್‌ಗಳು	7,90,000	8,15,000
25. ಸಾದಿಲ್ವಾರು ಮತ್ತು ಛಾಪಾಖಾನೆ	2,23,000	2,10,000
26. ಇತರ ಬಾಬುಗಳು	4,23,000	7.35,000
ಜಿ.—ಸೈನ್ಯ ಮತ್ತು ರಕ್ಷಣೆ—		
27. ಸೈನ್ಯ	13,64,000	14,75,000
27ಎ. ಬ್ರಿಟಿಷ್ ಗೌರ್ನಮೆಂಟಿನವರಿಗೆ ಕೊಡುವ ಪೊಗದಿ	35,00,000	35,00,000
27ಬಿ. ಮಿಲಿಟರಿ ಕೆಲಸಗಳು	1,19,000	95,000
ಎಫ್.—ಕ್ಷಾಮನಿವಾರಣೆ ಮತ್ತು ಇನ್ಷ್ಯೂರೆನ್ಸು—		
28. ಕ್ಷಾಮನಿವಾರಣೆಗಾಗಿ ಸಹಾಯ	...	...
29. ಸಾಲವನ್ನು ಕಡಿಮೆ ಮಾಡಿದ್ದು ಅಥವಾ ಸಾಲವಾಗದಹಾಗೆ ಮಾಡಿದ್ದು	3,33,000	3,33,000
ಎಚ್.—ಸಂಸ್ಥಾನದ ರೈಲ್ವೆಗಳು—ಹುಟ್ಟುವಳಿ ಲೆಖ್ಖ—		
30. ಮದ್ರಾಸ್ ಮತ್ತು ದಕ್ಷಿಣ ಮರಾಟಾ ರೈಲ್ವೆ ಕಂಪೆನಿಯಿಂದ ಕೆಲಸ ನಡಿಸಲ್ಪಟ್ಟ ಸಂಸ್ಥಾನದ ರೈಲ್ವೆಗಳು	7,20,000	7,20,000
30ಎ. ರೈಲ್ವೆ ಬಾಬಿನಲ್ಲಿ ಚಿಲ್ಲರೆ ಖರ್ಚು	21,000	98,000
ಜೆ.—ನೀರಾವರೀ—		
31. ಭಾರೀ ಕಾಂಗಾರಿಗಳು	4,62,000	6,01,000
32. ಸಣ್ಣ ಕಾಂಗಾರಿಗಳು	3,28,000	3,19,000
ಕೆ.—ಮರಮ್ಮತ್ ಕಾಮಗಾರಿಗಳು—		
33. ಸಿವಿಲ್‌ಕಾಂಗಾರಿಗಳು	20,91,000	25,85,000
ಕೆ.ಕೆ.—34. ಸಂಸ್ಥಾನದ ರೈಲ್ವೆ ಹಾಕುವುದಕ್ಕಾಗಿ ಬಂಡವಾಳದ ಖರ್ಚು	67,000	3,58,000
ಮ. ಮತ್ತು ದ. ಮ. ರೈಲ್ವೆ ಕಂಪೆನಿಯಿಂದ ನಡಿಸಲ್ಪಟ್ಟ ಲೈನುಗಳು	...	...
ಎಲ್.—ಕಾವೇರಿ ವಿದ್ಯುಚ್ಛಕ್ತಿಯ ಏರ್ಪಾಡು—		
35. ಹುಟ್ಟುವಳಿ ಲೆಖ್ಖ	6,98,000	7,39,000
36. ಮೂಲಧನ ಲೆಖ್ಖ	91,000	87,000
ಒಟ್ಟು ಖರ್ಚು	2,37,23,000	2,63,46,000
ಕೆಳಗೆ ತೋರಿಸಿರುವ ಮೂಲದ್ರವ್ಯ.—		
ಕಾಮಗಾರಿಗಳ ಖರ್ಚು ವಜಾ	...	...
ಖರ್ಚುಜಾತಾ ಉಳಿಯುವದು	80,07,000	21,63,000
ಒಟ್ಟು ಜುಮ್ಲಾ	3,17,30,000	2,85,09,000
ಎಣ್.—ಹುಟ್ಟುವಳಿ ಬಾಬಿಗೆ ಖರ್ಚು ಹಾಕದೇ ಇರತಕ್ಕ ಮೂಲದ್ರವ್ಯದ ಖರ್ಚು.—		
37. ಕಾವೇರೀ ಜಲಾಶಯ ಮತ್ತು ಅದಕ್ಕೆ ಸಂಬಂಧಪಟ್ಟ ಕೆಲಸಗಳು	19,70,000	37,50,000
38. ಸಂಸ್ಥಾನದ ರೈಲ್ವೆ ಮತ್ತ ಟ್ರಾಂವೆಗೆ ಮೂಲದ್ರವ್ಯದ ಖರ್ಚು	8,83,000	36,00,000
39. ಸರ್ಕಾರೀ ಸಹಾಯವನ್ನು ಪಡೆದ ರೈಲ್ವೆಗಳು	...	10,00,000
40. ಬೆಂಗಳೂರು ವಿದ್ಯುಚ್ಛಕ್ತಿಯ ಟ್ರಾಂವೆಗಳು	65,000	6,00,000
41. ಕಾವೇರೀ ವಿದ್ಯುಚ್ಛಕ್ತಿಯ 4ನೆಯ ಸ್ಥಾಪನೆ	8,50,000	5,67,000
ಜುಮ್ಲಾ	37,68,000	95,17,300

ಯುದ್ಧವಾರ್ತೆ.

ಪಶ್ಚಿಮರಂಗ.

ಫ್ರಾನ್ಸ್ ದೇಶದಲ್ಲಿ ನಡೆಯುತ್ತಿರುವ ಯುದ್ಧಗಳಲ್ಲಿ ವಿಶೇಷವೇನೂ ಇಲ್ಲ. ಶತ್ರುಗಳ ಮೇಲೆ ಇಂಗ್ಲಿಷ್ ಫ್ರೆಂಚ್ ಸೇನೆಗಳು ಅಲ್ಲಲ್ಲಿ ಕಾದಾಡುತ್ತಲೇ ಇವೆ. ಸಮಯವನ್ನು ಸಾಧಿಸಿ ಶತ್ರುಗಳೂ ಇವರ ಮೇಲೆ ಬಿದ್ದು ಕಾಯುತ್ತಲೇ ಇದ್ದಾರೆ. ಉಭಯರಲ್ಲೂ ಜಯಾಪಜಯಗಳು ಕಾಣುತ್ತಲೇ ಇವೆ. ಆದರೂ ನಮ್ಮ ಮಿತ್ರಸೈನ್ಯಗಳಿಗೆ ಜಯವು ಹೆಚ್ಚಾಗಿರುವುದೆಂದೂ ಜರ್ಮನರು ಕೆಲಕಡೆ ಹಿಮ್ಮೆಟ್ಟಿ ಹೋಗಿರುವರೆಂದೂ ಅವರಿಗೇ ನಷ್ಟವು ಹೆಚ್ಚಾಗಿರುವುದೆಂದೂ ಗೊತ್ತಾಗುತ್ತದೆ. ಜರ್ಮನರ ಕಡೆಗೆ ೬೦ ಸಾವಿರ ಮಂದಿಗಳು ನಷ್ಟವಾಗಿರುವರೆಂದೂ ಬೆಲ್ಜಿಯಂ-ಫ್ರಾನ್ಸ್ ದೇಶಗಳ ಒಟ್ಟು ರಣರಂಗದಲ್ಲಿ ಜರ್ಮನರೊಳಗೆ ಸತ್ತವರು-ಗಾಯಗೊಂಡವರು-ಸೆರೆಯಾದವರು ಇವರೆಲ್ಲಾ ಸೇರಿ ೫ ಲಕ್ಷ ಮಂದಿಗಳಾಗಿರುವರೆಂದೂ ಹೇಳಲ್ಪಡುತ್ತಿದೆ. ಆಗಸ್ಟ್ ತಾ|| ೧೯ರಲ್ಲಿ ಜರ್ಮನಿ ಚಕ್ರವರ್ತಿಯು ಯುದ್ಧರಂಗದಲ್ಲಿರುವ ತಮ್ಮ ಸೈನ್ಯಾಧಿಪತಿಗೆ ಕೊಟ್ಟಿದ್ದ ಆಜ್ಞಾಪತ್ರವು ಒಬ್ಬ ದೊಡ್ಡಮನುಷ್ಯರಿಂದ ಲಂಡನ್ ಟೈಮ್ಸ್‌ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿದೆ. ಅದರಲ್ಲಿ:—"ದ್ರೋಹಿಗಳಾದ ಇಂಗ್ಲಿಷ್ ಸೈನಿಕರನ್ನು ಸದೆಬಡಿಯುವುದಕ್ಕಾಗಿ ನನ್ನ ಸೈನಿಕರನ್ನೆಲ್ಲಾ ಸರ್ವವಿಧದಿಂದಲೂ ಉಪಯೋಗಿಸಬೇಕು. ಜನರಲ್ ಫ್ರೆಂಚ್ ಎಂಬುವನ ನಾಯಕತ್ವದ ಕೆಳಗೆ ಇರುವ ಅಲ್ಪವೂ ಅಪ್ರಯೋಜಕರವೂ ಆದ ಸೇನೆಗಳನ್ನು ಧ್ವಂಸಮಾಡಬೇಕು."

ಎಂದು ಅಪ್ಪಣೆ ಕೊಡುತ್ತೇನೆ. ಎಂದಿದ್ದಿತು. ಇದು ತತ್ಕಾಲದಲ್ಲಿ ಜರ್ಮನ್ ಸೈನಿಕರಿಗೆ ಎಷ್ಟು ಹುರಿದುಂಬಿಸಿದ್ದರೂ ಈಗ ಇಂಗ್ಲೀಷ್ ಸೇನಾನಿಗಳಿಗೂ ಅವರ ಸೈನಿಕರಿಗೂ ಆಕ್ರೋಶವನ್ನುಂಟುಮಾಡಿ ಶತ್ರುಗಳ ಮೇಲೆ ತಮ್ಮ ಕೈಬಿಸಿಯನ್ನು ಚೆನ್ನಾಗಿ ತೋರಿಸುವಂತೆ ಮಾಡಲು ಪ್ರೇರೇಪಿಸದೆ ಹೋಗಿಲ್ಲ. ಈಗ ಫ್ರಾನ್ಸಿನಲ್ಲಿ ಜರ್ಮನರು ಮೊದಲಿನಂತೆ ವೀರಾವೇಶದಿಂದ ಇದಿರು ಸೈನ್ಯದ ಮೇಲೆ ನುಗ್ಗುವುದಿಲ್ಲ. ಆತ್ಮರಕ್ಷಣೆಯ ಮೇಲೆಯೇ ಹೆಚ್ಚು ನಿರತರಾದಂತೆ ಕಾಣುತ್ತಿದೆ.

ಜರ್ಮನರ ಹೆಚ್ಚು ಪ್ರಯತ್ನವು ಬೆಲ್ಜಿಯಂ ದೇಶದಲ್ಲಿ ಉತ್ತರಕ್ಕೂ ಪಶ್ಚಿಮಕ್ಕೂ ಉಳಿದಿರುವ ಆಂಟ್‌ವರ್ಪ್ ಮೊದಲಾದ ಭಾಗಗಳನ್ನು ಆಕ್ರಮಿಸಿಕೊಳ್ಳಬೇಕೆನ್ನುವುದರಲ್ಲೇ ಇರುವಂತೆ ಕಾಣುತ್ತದೆ. ಆಂಟ್‌ವರ್ಪ್ ಕೋಟೆಯನ್ನು ಸದ್ಯಕ್ಕೆ ವಶಮಾಡಿಕೊಂಡುಬಿಟ್ಟರೆ ಬೆಲ್ಜಿಯಂ ದೇಶವೆಲ್ಲಾ ತಮ್ಮ ಹಸ್ತಗತವನ್ನಾಗಿ ಮಾಡಿಕೊಂಡಂತಾಗುವುದೆಂದೂ, ಅಲ್ಲಿ ತಳವೂರಿಕೊಂಡರೆ, ಇಂಗ್ಲೆಂಡಿನ ಮಗ್ಗುಲಲ್ಲಿ ಕಾಲೂರಿದಂತಾಗಿ, ಮುಂದೆ ಸಂಧಿಸಿಕ್ಕಿದಾಗ ಅವರ ಮೇಲೂ ಕೈತೋರಿಸಲು ಬಹಳ ಅನುಕೂಲವಾಗುವುದೆಂದೂ, ಅವರಂತೆ ಮತ್ತೊಂದು ವೇಳೆ ಪ್ಯಾರಿಸ್ಸನ್ನಾದರೂ ಬಲಿಹಾಕಬಹುದೆಂದೂ ಯೋಚಿಸಿರುವಂತೆ ಕಾಣುತ್ತದೆ.

ಆಂಟ್‌ವರ್ಪ್ ಕೋಟೆ.

ಈ ಆಂಟ್‌ವರ್ಪ್ ಕೋಟೆಯು ಬಹಳ ಪ್ರಧಾನವಾದುದು. ಇದು ಇಂಗ್ಲೀಷ್ ಚಾನಲ್ ಸಮುದ್ರತೀರಕ್ಕೆ ಹೊಂದಿರುತ್ತದೆ. ಅಭೇದ್ಯವಾದ ದುರ್ಗವುಳ್ಳದ್ದಾಗಿದೆ. ಬೆಲ್ಜಿಯಂದೇಶದ ಸಕಲ ಸೈನ್ಯವೂ ಬಂದು ಸೇರಿಕೊಂಡಿರುವುದಕ್ಕೆ ತಕ್ಕುದಾಗಿದೆ. ಈ ಕೋಟೆಯೊಳಗೆ ಆಂಟ್‌ವರ್ಪ್ ನಗರದ ಸರ್ವಪ್ರಜೆಗಳೂ ಇರಲು ಅವಕಾಶವಿದೆ, ಸುತ್ತಲೂ ಕಂದಕಗಳು ಮೊದಲಾದ ರಕ್ಷಣಸಾಧನಗಳು ಸಮಗ್ರವಾಗಿವೆ. ಸುತ್ತಲೂ ೨೦ ಕೋಟೆಗಳೂ ವಿಶಾಲವೂ ದೃಢತರವೂ ಆದ ಅನೇಕ ಕಟ್ಟಡಗಳೂ ಸಹ ಮೂರು ವರಸೆಗಳಾಗಿ ಆ ಪಟ್ಟಣದ ಸುತ್ತಲೂ ಪ್ರಾಕಾರದಂತಿರುತ್ತವೆ. ನಾಮೂರುಕೋಟೆಗಳನ್ನು ಕಟ್ಟಿಸಿದ ಜನರಲ್ ಬ್ರಯಲ್ಮಾಂಟ್ ಎಂಬ ಮಿಲಿಟರಿ ಇಂಜನಿಯರು ಏರ್ಪಡಿಸಿದ ನೂತನ ಶಾಸ್ತ್ರೀಯಪದ್ಧತಿಯನ್ನನುಸರಿಸಿಯೇ ಈ ಕೋಟೆಗಳೂ ಕಟ್ಟಲ್ಪಟ್ಟಿವೆ. ಪಟ್ಟಣಕ್ಕೆ ಹೋಗುವ ಪ್ರತಿಯೊಂದು ಮಾರ್ಗವನ್ನೂ ಒಂದೊಂದು ಕೋಟೆಯು ಸಂರಕ್ಷಿಸಿಕೊಂಡಿದೆ. ಕೋಟೆಯ ಗೋಡೆಗಳ ಮೇಲಿರುವ ಕಬ್ಬಿಣದ ಗೋಪುರಗಳಲ್ಲಿ ವೇಗದಿಂದ ಹಾರುವ ದೊಡ್ಡದೊಡ್ಡ ಫಿರಂಗಿಗಳನ್ನಿಟ್ಟಿದ್ದಾರೆ. ಒಂದು ಕೋಟೆಯಿಂದ ಮತ್ತೊಂದು ಕೋಟೆಗೆ ಮಧ್ಯದಲ್ಲಿ ಪರಸ್ಪರ ಸಂಬಂಧಿಸುವಂತೆ ದೊಡ್ಡದೊಡ್ಡ ಗೋಡೆಗಳೂ, ಕಾಲಾಳುಗಳೂ ಅಡಗಿ ಕುಳಿತುಕೊಳ್ಳುವ ಕಂದಕಗಳೂ ಫಿರಂಗಿಗಳನ್ನಿಡುವ ದಿಬ್ಬಗಳೂ, ಇನ್ನೂ ಬೇರೆಬೇರೆ ಉಪಕರಣಗಳೂ ಏರ್ಪಡಿಸಲ್ಪಟ್ಟಿವೆ. ಈ ಕೋಟೆಗಳನ್ನೆಲ್ಲಾ ಸಂರಕ್ಷಿಸಿಕೊಳ್ಳುವುದಕ್ಕೆ ತಕ್ಕಷ್ಟು ಸೈನ್ಯವು ಇಡಲ್ಪಟ್ಟಿದೆ. ಶತ್ರುಗಳು ಲೀಜುಪಟ್ಟಣಕ್ಕೆ ನುಗ್ಗಿದಂತೆ ಆಂಟ್‌ವರ್ಪಿಗೆ ಈ ಕೋಟೆಗಳ ಮಧ್ಯದಿಂದಲೂ ಮಗ್ಗುಲಿಂದಲೂ ನುಗ್ಗುವುದು ಪೂರ್ಣಾಸಂಭವ.

ಈ ಕೋಟೆಯಿರುವ ಸ್ಥಳದ ಪ್ರಕೃತಿಯು ಕೂಡ ಲೀಜುಕೋಟೆಗಿಂತ ಅತ್ಯಂತ ಸಂರಕ್ಷಕವಾದ ಸ್ಥಿತಿಯುಳ್ಳದಾಗಿದೆ. ಲೀಜಿನ ಬಳಿಯಲ್ಲಿರುವಂತೆ ಇದರ ಸುತ್ತಲೂ ಕುರುಚುಕಾಡಾಗಲಿ ಹಳ್ಳಕೊಳ್ಳಗಳಾಗಲಿ ಇರುವುದಿಲ್ಲ. ಸುತ್ತಣಪ್ರದೇಶವೆಲ್ಲಾ ಬಹುದೂರದವರೆಗೆ ಸಮಭೂಮಿಯಾಗಿ ವಿಶಾಲವಾಗಿದೆ. ಬೆಲ್ಜಿಯಮ್ಮಿನವರು ಜಲಪ್ರವಾಹವನ್ನು ಬಿಟ್ಟುಬಿಟ್ಟರೆ ಶತ್ರುಗಳು ಕೋಟೆಯಬಳಿಗೆ ಬರುವುದಕ್ಕೆ ಅವಕಾಶವನ್ನೇ ಕೊಡದಷ್ಟು ಆಳವಾಗಿ ನೀರು ಕೋಟೆಯ ಸುತ್ತಲೂ ಹರಿಯುತ್ತಿರುವುದು. ಇಂಥ ಬಲವತ್ತರವಾದ ಪ್ರಾಕಾರದಿಂದ ಸುರಕ್ಷಿತವಾಗಿರುವ ಈ ಕೋಟೆಯ ಆವರಣವು ೬೦ ಮೈಲಿಗಳ ಉದ್ದವಾಗಿರುವುದು. ಫಿರಂಗಿಗಳ ಗುಂಡಿನೇಟು ಎಷ್ಟುದೂರದವರೆಗೂ ಹೋಗಬಹುದೋ ಅಲ್ಲಿಯವರೆಗೂ ಕೋಟೆಯು ವ್ಯಾಪಿಸಿರುವುದು. ಅದುಕಾರಣ ಗುಂಡನ್ನು ಹೊಡೆದು ಇದನ್ನು ಧ್ವಂಸಮಾಡಿ ವಶಪಡಿಸಿಕೊಳ್ಳುವುದು ಸಾಧ್ಯವಲ್ಲ. ಮುತ್ತಿಗೆ ಹಾಕಿ ವಶಪಡಿಸಿಕೊಳ್ಳಬೇಕಾದರೆ ದೊಡ್ಡ ಸೈನ್ಯವು ಬೇಕು. ಕನಿಷ್ಠಪಕ್ಷ ೧ ಲಕ್ಷ ಸೈನ್ಯವಾದರೂ ಇರಬೇಕು. ಹಾಗಿಲ್ಲದಿದ್ದರೆ ನಿರಪಾಯವಾದ ಸ್ಥಳದಲ್ಲಿ ನಿಂತು ಮುತ್ತಿಗೆ ಹಾಕಲು ಅನುವಾಗುವುದಿಲ್ಲ. ಹಾಗೆ ಮುತ್ತಿಗೆ ಹಾಕಿದರೂ ಪ್ರಯೋಜನವಿಲ್ಲ. ಆಂಟ್‌ವರ್ಪಿಗೆ ಉತ್ತರದಲ್ಲೂ ವಾಯವ್ಯದಲ್ಲೂ ಇರುವ ದ್ವಾರಗಳನ್ನು ಡಚ್ ಸರ್ಕಾರದವರ ಅನುಮತಿಯಿಲ್ಲದೆ ಮುಚ್ಚಲಾಗುವುದಿಲ್ಲ. ಆಂಗ್ಲಸೈನ್ಯವು ಷೆಲ್‌ಥಾನಲಿನ ಪಕ್ಕದಲ್ಲಿರುವ ಸಮುದ್ರದ ಯಾಜಮಾನ್ಯವನ್ನು ವಹಿಸಿರುವವರೆಗೂ ಬೆಲ್ಜಿಯಮ್ಮಿನವರಿಗೆ ಆ ಸಮುದ್ರಮಾರ್ಗವು ತೆರೆದೇ ಇರುವುದು. ಅದುಕಾರಣ ಈ ಮಾರ್ಗಗಳಿಂದೆಲ್ಲಾ ಅವರು ಬೇಕಾದ ಆಹಾರ್ಯಾದಿ ಸಾಮಗ್ರಿಗಳನ್ನೂ ಯುದ್ಧಸಾಮಗ್ರಿಗಳನ್ನೂ ತರಿಸಿಕೊಳ್ಳುತ್ತಾ ಇರಬಹುದಾಗಿದೆ. ಇದರಿಂದ ಇದಕ್ಕೆ ಮುತ್ತಿಗೆ ಹಾಕುವುದು ಫಲಕಾರಿಯಲ್ಲ.

ಈಗ ಇರುವ ಜರ್ಮನರ ಸೈನ್ಯದ ಅಗ್ರಭಾಗದ ಪಕ್ಕದಲ್ಲೇ ಆಂಟ್‌ವರ್ಪ್‌ನಗರವಿದೆ. ಆಂಟ್‌ವರ್ಪಿನೊಳಗಿರುವ ೧ಲಕ್ಷ ಶೂರಭಟರು ಶತ್ರುಗಳನ್ನು ಮುತ್ತಿ ಸೋಲಿಸಿ ಓಡಿಸಿಬಿಡುವುದಕ್ಕೆ ಸಮಯ ನಿರೀಕ್ಷಣೆ ಮಾಡಿಕೊಂಡಿದ್ದಾರೆ. ಬೆಲ್ಜಿಯಮ್ಮಿನ ಉತ್ತರ ಭಾಗದಲ್ಲಿ ಜರ್ಮನರಿಗೆ ಎಷ್ಟು ಜಯಗಳುಂಟಾದರೂ ಆಂಟ್‌ವರ್ಪ್ ಮಾತ್ರ ಅವರ ಹೃದಯಕ್ಕೆ ಶಲ್ಯವಾಗಿರುವುದೇ ಹೊರತು ವಶವಾಗುವ ಹಾಗಿಲ್ಲ. ಒಂದು ವೇಳೆ ಅಲ್ಲಿ ಜರ್ಮನರಿಗೆ ಅಪಜಯವು ಸಂಭವಿಸುವುದಾದರೆ ಅದು ಅಲ್ಲಿನ ಸರ್ವಜರ್ಮನ್ ಸೈನ್ಯದ ಧ್ವಂಸವಾಗಿ ಪರಿಣಮಿಸಬಹುದು. ಅದರೊಡನೆ ಆಂಟ್‌ವರ್ಪೂ ಕೂಡ ಅಳಿದುಹೋಗಬಹುದು.

ಈಗ ಜರ್ಮನರು ೧೫ ಮೈಲಿಗಳ ದೂರ ಗುಂಡನ್ನು ಹೊಡೆಯಬಲ್ಲ ದೊಡ್ಡದೊಡ್ಡ ಫಿರಂಗಿಗಳನ್ನು ಆಂಟ್‌ವರ್ಪಿನ ಸುತ್ತಾ ತಂದಿಟ್ಟು ಭದ್ರಪಡಿಸಿ ಮುತ್ತುತ್ತಲಿದ್ದಾರೆ. ಮತ್ತೂ ಆಗಾಗ್ಗೆ ವಾಯುವಿಮಾನಗಳಿಂದ ಸಿಡಿಮದ್ದುಗಳನ್ನಿಡುತ್ತಲೂ, ಕೋಟೆಗಳಿಗೆ ಫಿರಂಗಿ ಗುಂಡುಗಳನ್ನು ಹೊಡೆಯುತ್ತಲೂ ಇದ್ದಾರೆ. ಬೆಲ್ಜಿಯಂ ಸೈನಿಕರು ಒಂದೇ ಸಮನಾದ ವೀರಾವೇಶದಿಂದ ಹಗಲಿರುಳೂ ಶತ್ರುಗಳನ್ನು ಪ್ರತಿಭಟಿಸಿ ಹಿಂದಕ್ಕಟ್ಟುತ್ತಲೇ ಬಂದಿದ್ದಾರೆ. ಈಚೆಗೆ ಬೆಲ್ಜಿಯಂ ಸೈನಿಕರು, ಬ್ರಸಲ್ಸಿಗೂ ಜರ್ಮನಿಗೂ ಹೋಗಿ ಬರುವುದಕ್ಕೆ ಅನುಕೂಲವಾಗಿದ್ದ ನದಿಯ ಸೇತುವನ್ನು ಕೆಡಹಿಬಿಟ್ಟರು. ಮೇಲೈನ್ಸ್ ಪಟ್ಟಣವನ್ನು ಜರ್ಮನರು ಹಿಡಿದುಕೊಂಡಿರಲು ಅದರ ಕೋಟೆಗೆ ಬೆಲ್ಜಿಯಮ್ಮಿನವರು ಗುಂಡುಗಳನ್ನು ಹಾರಿಸಿ ಶತ್ರುಗಳಮೇಲೆ ಕಾದಾಡಿ, ಆ ಪಟ್ಟಣವನ್ನು ಸ್ವಾಧೀನಪಡಿಸಿಕೊಂಡರು. ಜರ್ಮನರು ಫ್ರಾನ್ಸಿಗೂ ಬೆಲ್ಜಿಯಮ್ಮಿಗೂ ಹೋಗಿಬರುವುದಕ್ಕೆ ಮ್ಯೂಸ್‌ನದಿಯಮೇಲೆ ೫ ಸೇತುಗಳನ್ನು ಕಟ್ಟಿದ್ದಾರೆ. ಬೆಲ್ಜಿಯಮ್ಮಿನವರು ತಮ್ಮ ಕೋಟೆಗಳಲ್ಲಿ ಒಂದೊಂದಕ್ಕೆ ಮಧ್ಯದಲ್ಲಿರುವ ಅಂತರದಲ್ಲಿ ಮುಳ್ಳಿನ ತಂತಿಗಳ ಬೇಲಿಯನ್ನು ಹಾಕಿರುವರು. ಜರ್ಮನ್ ಸೈನ್ಯವು ಒಂದುಕಡೆ ಇಂಥ ತಂತಿಗಳನ್ನು ಹಿಡಿದು ಕಿತ್ತು ನುಗ್ಗಬೇಕೆಂದು ಅವುಗಳನ್ನು ಮುಟ್ಟಿದಾಗ ಅದರೊಳಗೆ ವಿದ್ಯುಚ್ಛಕ್ತಿಯು ಹರಿಯುತ್ತಿದ್ದುದರಿಂದ ಅದನ್ನು ಮುಟ್ಟಿದ ಸೈನಿಕರಲ್ಲಿ ಅನೇಕರು ಅಲ್ಲೇ ಮೃತರಾಗಿ ಬಿದ್ದರು. ಇಂಗ್ಲೀಷ್ ಫ್ರೆಂಚ್ ಸೇನೆಗಳಲ್ಲಿ ಉತ್ಸಾಹವು ಹೆಚ್ಚುತ್ತಿದೆ. ಅವರ ಈಗಿನ ಸೈನ್ಯಾಧಿಪತಿಗಳೂ ಸಹ ಬಹಳ ಚುರುಕಾಗಿದ್ದಾರೆ. ಇಂಗ್ಲೀಷು ಭೂಸೈನ್ಯದಲ್ಲಿ ಜರ್ಮನಿಗಿರುವಷ್ಟು ದೊಡ್ಡ ಫಿರಂಗಿ (೧೬ ಅಂಗುಲದಬಾಯುಳ್ಳವು) ಗಳಿಲ್ಲ. ಜರ್ಮನರ ದೊಡ್ಡಫಿರಂಗಿಗಳ ಗುಂಡು ಹಾರಿಸಲ್ಪಟ್ಟರೆ ಅದು ಬಿದ್ದ ಸ್ಥಳಕ್ಕೆ ೪೦-೫೦ ಅಡಿಗಳ ದೂರದವರೆಗೂ ಇದ್ದ ಯಾವ ಪದಾರ್ಥವೂ ಉಳಿಯುವುದಿಲ್ಲ. ೪೦ ಕುದುರೆಗಳಿದ್ದ ಗುಂಪಿಗೆ ಇಂಥ ಗುಂಡು ಒಂದು ಬೀಳಲು ಆ ಕುದುರೆಗಳೆಲ್ಲಾ ತುಂಡುತುಂಡಾಗಿ ಕತ್ತರಿಸಲ್ಪಟ್ಟವೆಂದು ಟೈಮ್ಸ್ ಪತ್ರಿಕೆಯ ವಿಲೇಖಕನೊಬ್ಬನು ಆ ಗುಂಡುಗಳ ಮಹತ್ವವನ್ನು ವರ್ಣಿಸಿರುತ್ತಾನೆ. ಆದರೂ ಇಂಗ್ಲೀಷರು ತಮ್ಮ ನೌಕಾಸೈನ್ಯದಲ್ಲಿರುವ ದೊಡ್ಡ ಫಿರಂಗಿಗಳನ್ನು ಯುದ್ಧರಂಗಕ್ಕೆ ತಂದು ಶತ್ರುಗಳಮೇಲೆ ಹೊಡೆಯುತ್ತಿದ್ದಾರೆ. ಈಗ ಪ್ರತಿದಿನವೂ ಶತ್ರುಗಳಕಡೆ ಸರಾಸರಿ ೮೦೦೦ಜನರಂತೆ ಸಾಯುತ್ತಿರುವರೆಂದು ವಾರ್ತೆಯಿದೆ. ಫ್ರಾನ್ಸಿನ ಪ್ರೆಸಿಡೆಂಟರು ಯುದ್ಧರಂಗಕ್ಕೆ ಹೋಗಿ ಸ್ವತಃ ತಮ್ಮ ಸೇನೆಯನ್ನು ಅಭಿನಂದಿಸಲು ಅವರ ಮಂತ್ರಿಮಂಡಲದವರೂ ಸೈನ್ಯಾಧಿಕಾರಿಗಳೂ ಒಪ್ಪಿರುವುದನ್ನು ನೋಡಿದರೆ ಶತ್ರುಗಳ ಕೈ ಯುದ್ಧರಂಗದಲ್ಲಿ ದುರ್ಬಲವಾಗಿರುವುದೆಂಬುದು ನಿದರ್ಶಿತವಾಗಿದೆ. ಇಂಗ್ಲೀಷರ ಸಾಹಾಯ್ಯವು ಫ್ರಾನ್ಸಿಗೆ ಒದಗಿದುದು ಶ್ಲಾಘ್ಯವಾಯಿತು. ಆದರೆ ಪರಹಿತಾರ್ಥವಾಗಿ ಆತ್ಮಬಲಿಯನ್ನರ್ಪಿಸಿದ ಬೆಲ್ಜಿಯಮ್ಮಿನ ರಕ್ಷಣೆಗೆ ಇವೆರಡುಸೈನ್ಯಗಳೂ ಇನ್ನೂ ನಡುಕಟ್ಟಿದಂತೆ ಕಾಣಲಿಲ್ಲ. ಬೆಲ್ಜಿಯಮ್ಮಿನ ರಕ್ಷಣವು ಇವರುಗಳ ಸ್ವರಕ್ಷಣೆಯೇ ಆಗಿದೆ. ಆಂಟ್‌ವರ್ಪ್ ಶತ್ರುಗಳಧೀನವಾದರೆ ಫ್ರಾನ್ಸಿಗೂ ಸ್ವಾಸ್ಥ್ಯವಿಲ್ಲ; ಇಂಗ್ಲೆಂಡಿಗೂ ಶಾಂತಿಯಿಲ್ಲದಂತಾಗುವುದು. ಅದುಕಾರಣ ವಿಷಮಾವಸ್ಥೆಯಲ್ಲಿರುವ ಆಂಟ್‌ವರ್ಪನ್ನುಳಿಸಲು ಬೆಲ್ಜಿಯಮ್ಮಿನವರು ಕೋಟೆಯೊಳಗೆ ಸಿದ್ಧವಾಗಿರುವಾಗಲೇ ಇಂಗ್ಲೆಂಡುಫ್ರಾನ್ಸುಸೈನ್ಯಗಳು ಹೊರಗೂ ಸನ್ನದ್ಧವಾಗಿ ಶತ್ರುಗಳನ್ನು ಇದಿರಿಸಿದ್ದರೆ ಶತ್ರುಗಳಿಗೆ ಪರಾಜಯವಾಗಬಹುದಾಗಿದ್ದಿತು. ಈ ವಿಷಯದಲ್ಲಿ ಮಿತ್ರಸೈನ್ಯಗಳವರು ಯಾವ ಯೋಜನೆಯಲ್ಲಿರುವರೋ ತಿಳಿಯಲಿಲ್ಲ. ಬೆಲ್ಜಿಯಮ್ಮಿನಲ್ಲಿ ಜರ್ಮನರ ಒಂದು ತಲೆಯೂ ಇಲ್ಲದಂತೆ ಮಾಡಿ ಆ ದೇಶವನ್ನು ಕಾಪಾಡುವೆವೆಂದು ಇಂಗ್ಲೆಂಡಿನವರು ಹಿಂದೆ ಆಶ್ವಾಸನಕೊಟ್ಟಿದ್ದಾರೆ. ಅದನ್ನು ಅವರು ನೆರವೇರಿಸದೆ ವಚನವನ್ನು ಕಳೆದುಕೊಳ್ಳಲಾರರು. ಫ್ರಾನ್ಸಿನಿಂದ ಶತ್ರುಸೈನ್ಯವೆಲ್ಲಾ ಕಾಲುಕಿತ್ತೆಗೆದಬಳಿಕ ಅಲ್ಲಿನ ಪಾರುಪತ್ಯಕ್ಕೆ ಇವರುಗಳು ಕೈಹಾಕಬೇಕೆಂದಿರಬಹುದು. ಆದರೆ ಮೊನ್ನೆ ಬಂದ ತಂತ್ರೀವಾರ್ತೆಯಿಂದ ಆಂಟ್‌ವರ್ಪಿನಲ್ಲಿದ್ದ ಪ್ರಜೆಗಳೆಲ್ಲಾ ಹೊರಕ್ಕೆ ಕಳುಹಲ್ಪಟ್ಟು, ಅದನ್ನು ಧ್ವಂಸಮಾಡುವ ಪ್ರಯತ್ನವಾಗಿದ್ದಿತೆಂದೂ, ಬೆಲ್ಜಿಯಮ್ಮಿನವರು ಅದನ್ನುಳಿಸಿಕೊಳ್ಳಲಾರದೆ ಅದನ್ನು ಬಿಟ್ಟು ಆಸ್ಟೆಂಡ್‌ಪಟ್ಟಣವನ್ನು ರಾಜಧಾನಿ ಮಾಡಿಕೊಂಡರೆಂದು ಗೊತ್ತಾಗುತ್ತದೆ.

ಜರ್ಮನರಿಗೆ ಈಗ ಪಶ್ಚಿಮ ರಣರಂಗಕ್ಕಿಂತ ಪೂರ್ವರಣರಂಗದಲ್ಲಿ ಸೇನಾಸಿದ್ಧತೆಯನ್ನು ಹೆಚ್ಚಿಸಬೇಕಾಗಿ ಬಂದಿದೆ. ಪ್ರಳಯಪ್ರವಾಹದಂತೆ ರಷ್ಯಾಸೈನ್ಯವು ಜರ್ಮನಿಯ ಪೂರ್ವದ ಎಲ್ಲೆಗಳಮೇಲೆ ಬಂದು ಬೀಳುತ್ತಿವೆ. ಈಗ ಅಲ್ಲಿ ರಷ್ಯನರ ೮೦ ಲಕ್ಷ ಸೈನ್ಯವು ಬಂದಿದೆ. ರಷ್ಯಾಚಕ್ರವರ್ತಿಯವರೂ ಯುದ್ಧಾಂಗಣಕ್ಕೆ ಬಂದಿದ್ದಾರೆ. ಅತ್ತ ಕಡುಗಾಳಗವು ನಡೆಯುತ್ತಿದೆ. ಈ ಕಾರಣದಿಂದಲೇ ಜರ್ಮನ್ ಕೇಸರರು ಸ್ವತಃ ಸೇನಾಧಿಪತ್ಯವನ್ನು ವಹಿಸಿ ಅತ್ತ ನುಗ್ಗಿದ್ದಾರೆ. ಪಶ್ಚಿಮರಂಗದಲ್ಲಿರುವ ಇಂಗ್ಲೀಷು ಫ್ರೆಂಚ್ ಸೇನೆಗಳನ್ನು ಕದಲಿಸದಂತೆಯೂ, ಅವನ್ನು ಪೂರ್ವಕ್ಕೆ ರಷ್ಯನರ ಸಹಾಯಕ್ಕೆ ಬರಗೊಡಿಸದಂತೆಯೂ, ಅಥವಾ ಬೆಲ್ಜಿಯಮ್ಮಿನವರ ಸಹಾಯಕ್ಕೆ ಹೋಗದಂತೆಯೂ ಮಾಡುವುದಕ್ಕಾಗಿಯೇ ತಮ್ಮ ಸೈನ್ಯವನ್ನು ಅಲ್ಲಿ ಇಟ್ಟಿರುವಂತೆ ಕಾಣುತ್ತದೆ.

ಜರ್ಮನರು ಮೊದಮೊದಲು ಬೆಲ್ಜಿಯಂ ಫ್ರಾನ್ಸು ದೇಶಗಳಲ್ಲಿ ನಡೆಯಿಸಿದ ಕ್ರೂರಾಚರಣೆಗಳು ಜಗತ್ತಿನಿಂದೆಲ್ಲಾ ನಿಷೇಧಿಸಲ್ಪಟ್ಟಿರುವುವು. ಅದು ಅವರ ಕೀರ್ತಿ ಪ್ರತಿಷ್ಠೆಗಳಿಗೆ ತುಂಬಾ ಲಾಂಛನವನ್ನುಂಟುಮಾಡಿದುದರಿಂದ, ಈಗ ಅದನ್ನು ಬಿಟ್ಟುಕೊಟ್ಟಂತೆ ಕಾಣುತ್ತದೆ. ಮತ್ತೂ ಲೊವೈನ್ ಮೊದಲಾದ ಪಟ್ಟಣಗಳನ್ನು ಸುಟ್ಟು ಅತ್ಯಾಚಾರ ನಡೆಯಿಸಿದ ಸೈನಿಕರ ವಿಚಾರಣೆಗಾಗಿ ಜರ್ಮನ್ ಚಕ್ರವರ್ತಿಯವರು ಒಂದು ಸಂಘವನ್ನೇರ್ಪಡಿಸಿರುವರು. ಹಲವರು ಆ ಸಂಘದವರಿಂದ ಶಿಕ್ಷೆಗೆ ಗುರಿಮಾಡಲಟ್ಟರು. ಲೋವೈನ್‌ಪಟ್ಟಣವನ್ನು ಸುಡಲು ಆಜ್ಞೆಮಾಡಿದ ಮೇಜರ್ ವನ್ಮಾಂಟ್ ಫೇಲ್ ಎಂಬುವನನ್ನು ಕೆಲಸದಿಂದ ತೆಗೆದುಹಾಕಿದರಂತೆ. ಜರ್ಮನರು ಯುದ್ಧಾರಂಭಕಾಲದಿಂದಲೂ ಹೊಸಹೊಸ ಯುದ್ಧದ ಹಡಗುಗಳನ್ನು ತ್ವರೆಯಿಂದ ಕಟ್ಟಿಸುತ್ತಿರುವರು. ಆಗಿನಿಂದ ಇದುವರೆಗೆ ೫೦ ವಿನಾಶಕ ನೌಕೆಗಳು (ಸಬ್‌ಮೆರೀನ್) ಕಟ್ಟಲ್ಪಟ್ಟು ಸಿದ್ಧವಾಗಿರುವುವಂತೆ. ಇನ್ನೂ ವಿರಾಮವಿಲ್ಲದೆ ಕೆಲಸವು ನಡೆಯುತ್ತಲೇ ಇರುವುದು.

ಭರತಖಂಡದ ಸೇನೆ.

ಇತ್ತ ಭರತಖಂಡದಿಂದ ಫ್ರಾನ್ಸ್ ದೇಶದ ರಣರಂಗಕ್ಕೆ ಹೋದ ಸೈನ್ಯವು ಮಾರ್ಸೇಲ್ಸ್ ತೀರಪಟ್ಟಣದಲ್ಲಿಳಿದಿತು. ಆ ದೇಶೀಯರು ಈ ಸೈನಿಕರ ದೇಹದಾರ್ಢ್ಯ-ಪಟುತೆ-ಉಡುಪು-ಮೊದಲಾದುವುಗಳನ್ನೂ ಇವರ ಉತ್ಸಾಹವನ್ನೂ ನೋಡಿ, ಅತ್ಯಾದರದಿಂದ ಸ್ವಾಗತಮಾಡಿ, ಅಲ್ಲಲ್ಲಿಗೆ ಪುಷ್ಪಾಂಜಲಿ ಮಾಡಿ, ಊರ ಬೀದಿಯಲ್ಲಿ ಉದ್ದಕ್ಕೂ ನಿಂತು ತಮ್ಮ ಆನಂದವನ್ನು ವ್ಯಕ್ತಪಡಿಸಿದರು. ಫ್ರಾನ್ಸ್ ದೇಶೀಯ ಗೀತವನ್ನು ಹಾಡಿಕೊಂಡು ಬಾರಿಸಿಕೊಂಡು ಹೋದ ಈ ಸೇನಾನಿವಹವನ್ನು ನೋಡಿ ಹಲವರು ಬ್ರಹ್ಮಾನಂದಪಟ್ಟು ತಮ್ಮ ದೇಶಧ್ವಜಗಳಲ್ಲಿ ಸಣ್ಣಸಣ್ಣವನ್ನು ಈ ಸೈನಿಕರ ಕೈಗೆ ಕೊಟ್ಟು ಉಡುಪುಗಳಿಗೆ ಸಿಕ್ಕಿಸಿಕೊಳ್ಳಿರೆಂದು ತಿಳಿಯಿಸಿದರು.

ಈ ಸೈನ್ಯಗಳನ್ನು ಕುರಿತು ನಮ್ಮ ಜಾರ್ಜ್ ಸಾರ್ವಭೌಮರವರು— ‹‹ ಕಾಲುಕೆರೆದು ಜಗಳಕ್ಕೆ ಬಂದ ಅತ್ಯಂತ ಕ್ರೂರರಾದ ಶತ್ರುಗಳ ಕೈಗೆ ಸಿಕ್ಕಿ ಆಂಗ್ಲಸಾಮ್ರಾಜ್ಯದ ಗೌರವವು ಭಂಗಕ್ಕೀಡಾಗದಂತೆ ನನ್ನ ಭರತಖಂಡದ ಸೈನ್ಯವು ಕಾಪಾಡುವುದೆಂದು ನಾನು ನಂಬುತ್ತೇನೆ; ರಾಜಭಕ್ತಿಪರಾಯಣರೂ, ಧೈರ್ಯಸಾಹಸವಂತರೂ ಆದ ನನ್ನ ಹಿಂದೂಸೈನಿಕರು ಸಾಮ್ರಾಜ್ಯದ ಇತರದೇಶದ ಸೈನಿಕರೊಡನೆ ಕಲೆತು ಸಾಮ್ರಾಜ್ಯದ ಗೌರವವನ್ನು ಕಾಪಾಡುವುದಕ್ಕಾಗಿ ಎಷ್ಟು ಆತುರದಿಂದ ಬಂದಿರುವರೆಂಬುದನ್ನು ನಾನು ಬಲ್ಲೆನು. ನಾನು ಯಾವ ಆಲೋಚನೆಯನ್ನು ಮಾಡುತ್ತಿದ್ದರೂ ಯಾವಾಗ ಭಗವಂತನನ್ನು ಪ್ರಾರ್ಥಿಸುತ್ತಿದ್ದರೂ ನಿಮ್ಮನ್ನು ನಾನು ಮರೆಯೆನೆಂಬುದನ್ನು ನಂಬಿಕೊಳ್ಳಿರಿ. ನೀವು ಯುದ್ಧಭೂಮಿಗೆ ಹೋಗಿ ಹೈಂದವಭಟರು ಪೂರ್ವದಲ್ಲಿ ಸಂಪಾದಿಸಿದ ಅದ್ಭುತವಾದ ಕೀರ್ತಿಪ್ರತಿಷ್ಠೆಗಳನ್ನು ಈಗ ದ್ವಿಗುಣಗೊಳಿಸಿರಿ. ಹಿಂದೂ ಸೇನೆಯ ಯಶಸ್ಸು ನಿಮ್ಮ ಕೈಯಲ್ಲಿದೆ. ಅದನ್ನು ನೀವು ನಿಲ್ಲಿಸುವಿರೆಂದು ನಂಬುತ್ತೇನೆ.'' ಎಂದು ತಂತ್ರೀವಾರ್ತೆಯಿಂದ ತಿಳಿಯಿಸಿದರು.

ಇದರಂತೆಯೇ ಭರತಖಂಡದ ಆಂಗ್ಲದೇಶಕ್ಕೂ ಒಂದು ಸಂದೇಶವನ್ನು ಕಳುಹಿಸಿರುವರು. ಈ ಸಮಯದಲ್ಲಿ ಫ್ರಾನ್ಸ್ ಪ್ರಭುತ್ವದವರು ಆಂಗ್ಲಪ್ರಭುತ್ವದವರನ್ನು ಕುರಿತು— ‹‹ ಶತ್ರುಗಳಾದ ಜರ್ಮನಿ-ಆಸ್ಟ್ರಿಯಾದವರ ನೌಕಾಶ್ರಯಗಳಿಂದ ಅವರ ಯುದ್ಧನಾವೆಗಳನ್ನು ಹೊರಕ್ಕೇ ತಲೆಯಿಕ್ಕದಂತೆ ಮಾಡಿ, ಎಷ್ಟೋ ದೂರದಲ್ಲಿರುವ ಭರತಖಂಡದ ಸೇನೆಗಳನ್ನು ನಿರ್ಭಯವಾಗಿ ಯೂರೋಪುಖಂಡಕ್ಕೆ ಬರಮಾಡಿದುದರಿಂದ ಆಂಗ್ಲಪ್ರಭುತ್ವದವರ ಯುದ್ಧಶಕ್ತಿಯು ಎಷ್ಟೆಂಬುದು ವ್ಯಕ್ತವಾಗುತ್ತಿದೆ.'' ಎಂದು ಸ್ತುತಿಸಿ ಅಭಿನಂದಿಸಿರುತ್ತಾರೆ.

ಪೂರ್ವರಣರಂಗ.

ಈಗ ಜರ್ಮನ್ ಚಕ್ರವರ್ತಿಯವರು ಸ್ವತಃ ದಳಪತಿಗಳಾಗಿ ಪೂರ್ವ ರಣರಂಗಕ್ಕೆ ಹೋಗಿರುವರಷ್ಟೆ. ಇವರು ಯಾವಾಗ ಎಲ್ಲಿರುವರೆಂಬುದನ್ನು ಶತ್ರುಗಳು ತಿಳಿಯಲಾಗದಂತೆಯೂ, ಅವರಿಗೆ ಯಾವ ಹಾನಿಯೂ ಶತ್ರುಗಳಿಂದ ಉಂಟಾಗದಂತೆಯೂ ಮಾಡುವುದಕ್ಕಾಗಿ ಅನೇಕಮಂದಿ ಅಂಗರಕ್ಷಕರೂ ಗೂಢಚಾರರೂ ಪರಿಜನರೂ ಕಾಪಾಡಿಕೊಂಡಿದ್ದಾರೆ. (ಈ ಚಕ್ರವರ್ತಿಯವರು ಸ್ವತಃ ಯುದ್ಧಾಂಗಣಕ್ಕೆ ಹೋಗುವರೆಂದೂ, ಅಲ್ಲಿ ಶತ್ರುಗಳ ಕೈಸೆರೆಯಾಗುವರೆಂದೂ ಈಗ್ಗೆ ೩ ವಾರಗಳ ಹಿಂದೆಯೇ ಒಬ್ಬ ಜ್ಯೋತಿಷ್ಕರಿಂದ ಭವಿಷ್ಯತ್ತು ಹೇಳಲ್ಪಟ್ಟಿದೆ. ಅದರಲ್ಲಿ ಈಗ ಅರ್ಧಭಾಗ ದೃಷ್ಟಾಂತವಾದಂತಾಯಿತು.) ಈ ಚಕ್ರವರ್ತಿಯವರು ಪಶ್ಚಿಮ ರಣರಂಗದಿಂದ ಬರುವಾಗ ಅತ್ತಣ ಕಾಬ್‌ಲೆಂಜ್ ಎಂಬ ಪಟ್ಟಣದಲ್ಲಿ ತಮ್ಮ ಹಿರಿಯ ಮಗನನ್ನು ಕಂಡಾಗ ಅವನನ್ನು ತಬ್ಬಿಕೊಂಡು ‹‹ ಅಪ್ಪಾ! ನೀನು ಅಜೇಯನಾದ ಶೂರನಾಗು.'' ಎಂದು ಆಶೀರ್ವದಿಸಿದುದಲ್ಲದೆ, ಆ ತಮ್ಮ ಕುಮಾರನನ್ನು ಪುರಜನರಿಗೆಲ್ಲಾ ತೋರಿಸಿ, ‹‹ ಈತನು ಪ್ರಪಂಚದಲ್ಲಿ ಶಾಂತಿಯನ್ನು ಸ್ಥಾಪಿಸುವುದಕ್ಕಾಗಿ ಹುಟ್ಟಿದ್ದಾನೆ.'' ಎಂದು ಹೇಳಿದರಂತೆ. (ಈ ಮಾತನ್ನು ಕೇಸರರು ಹೇಳುವಾಗ, ತಾವು ಅಶಾಂತಿಗೆ ಕಾರಕರಾದೆವೆಂಬ ಚಿಂತೆಯು ಮನಸ್ಸಿನಲ್ಲಿ ಕೊರೆಯುತ್ತಿದ್ದಿರಬಹುದು.) ಈ ಚಕ್ರವರ್ತಿಯವರು ಪೂರ್ವದ ರಣರಂಗಕ್ಕೆ ಹೋಗುವುದಕ್ಕಿಂತ ಮುಂಚೆ ಎಂದರೆ ಕಳೆದವಾರ ಕೆಲ ದಿನಗಳ ರಾತ್ರಿಯಹೊತ್ತು ಯಾರಿಗೂ ತಿಳಿಯದಂತೆ ತಮ್ಮ ಸೇನಾಶಿಬಿರಗಳಿಗೆ ಹೋಗಿ ಯಾರು ಯಾರು ಏನನ್ನು ಮಾಡುತ್ತಿರುವರೋ ಎಂಬುದನ್ನು ಪರೀಕ್ಷಿಸಿದರು. ಆಗ ಇವರನ್ನು ಪ್ರತ್ಯಕ್ಷವಾಗಿ ನೋಡಿದ ಸೈನಿಕರು ಪ್ರಸಿದ್ಧ ನೆಪೋಲಿಯನ್ನನೇ ಮರಳಿ ಪಿಶಾಚವಾಗಿ ಈ ರೂಪದಿಂದ ಬಂದನೊ! ಎಂದು ಯೋಚಿಸಿದರಂತೆ.

ಈಗ ರಷ್ಯನ್-ಜರ್ಮನರಿಗೆ ಬಲವಾದ ಯುದ್ಧಗಳಾಗುತ್ತಿವೆ. ಮೊದಲು ಜರ್ಮನರು ರಭಸದಿಂದ ತಮ್ಮ ದೇಶದಮೇರೆಯನ್ನು ದಾಟಿ ರಷ್ಯಾದೇಶದೊಳಕ್ಕೆ ೧೦-೨೦ ಮೈಲಿಗಳದೂರ ನುಗ್ಗಿಹೋಗಿದ್ದರು. ಇವರ ದೊಡ್ಡದೊಡ್ಡ ಫಿರಂಗಿಗಳ ಹೊಡೆತವು ರಷ್ಯನ್ನರನ್ನು ಹಿಮ್ಮೆಟ್ಟಿಸಿದ್ದುವು. ಇದಕ್ಕೆ ಸರಿಯಾಗಿ ಅವರುಗಳೂ ದೊಡ್ಡಫಿರಂಗಿಗಳ ಗುಂಡುಗಳ ಮಳೆಯನ್ನು ಮಾಡಿ, ಬಹುಜನರನ್ನು ಕೊಂದು ಜರ್ಮನರನ್ನು ಸ್ವದೇಶಕ್ಕೆ ಹೋಗಿ ಸೇರಿಕೊಳ್ಳುವಂತೆ ಮಾಡಿರುವರು. ಆಗ ರಷ್ಯನರು ತಮ್ಮ ದೇಶದ ಅಸೊವೆಡ್ಜ್ ಕೋಟೆ ಸೋಪೊಟ್ಕಿನ್ ಸೋಪ್ರಾಂತ ಮೊದಲಾದವುಗಳಲ್ಲಿ ದೇಹಾಭಿಮಾನವನ್ನು ತೊರೆದು ಶತ್ರುಗಳಮೇಲೆ ಬಿದ್ದು ಬಲವಾದ ಯುದ್ಧವನ್ನು ಮಾಡಿದರೆಂದು ಪ್ರಕಟವಾಗಿದೆ. ಆ ಯುದ್ಧಗಳಲ್ಲಿ ಜರ್ಮನರು ಪೂರ್ಣವಾಗಿ ಸೋತುಹೋದರು. ಏಟುತಿಂದವರನ್ನೂ ಸತ್ತವರ ಹೆಣಗಳನ್ನೂ ಮದ್ದುಗುಂಡು ಮೊದಲಾದವುಗಳನ್ನೂ ಅಲ್ಲಲ್ಲೇ ಬಿಟ್ಟು ತಮ್ಮ ದೇಶಕ್ಕೆ ಓಡಿಹೋದರು. ಕಳೆದ ತಾ|| ೩ ರೊಳಗಾಗಿ ಜರ್ಮನರನ್ನೆಲ್ಲಾ ರಷ್ಯಾದಿಂದ ಓಡಿಸಿಬಿಟ್ಟು ಅವರನ್ನು ಬೆನ್ನಟ್ಟಿಕೊಂಡು ಹೋದರು. ಅಸೋವಿಡ್ಜ್ ಕೋಟೆಯಬಳಿಯಲ್ಲಿನ ಯುದ್ಧದ ವಿವರವು ಹೇಗೆಂದರೆ:—ಈ ಕೋಟೆಯು ರಷ್ಯನರದು. ಮಳೆಯು ಹೆಚ್ಚಾಗಿ ಬಿದ್ದುದರಿಂದ ಆ ಸುತ್ತೆಲ್ಲಾ ಕೆಸರುಮಯವಾಗಿದ್ದಿತು. ಜರ್ಮನರ ಫಿರಂಗಿ ಬಂಡಿಗಳು ಅದರಲ್ಲಿ ಹೂತುಕೊಂಡುದರಿಂದ ಅವು ಕೋಟೆಯ ಸಮೀಪಕ್ಕೆ ಸಾಗಲಾರದೆ ಹೋದುವು. ಹಿಂದಕ್ಕೂ ಸಾಗಿಸಲಾಗದೆ ಹೋಯಿತು. ಆದುದರಿಂದ ಅವಿದ್ದಸ್ಥಲದಿಂದಲೇ ಕೋಟೆಗೆ ಗುಂಡುಗಳನ್ನು ಹೊಡೆಯಲಾರಂಭಿಸಿ ಸೇನೆಗಳನ್ನು ಕೋಟೆಯ ಬಳಿಗೆ ಕಳುಹಿಸಿದರು. ಕೋಟೆಯಲ್ಲಿದ್ದ ರಷ್ಯನ್ ಸೈನಿಕರು ಹೊರಗಿದ್ದ ಜರ್ಮನ್‌ಸೈನಿಕರಮೇಲೆ ರಾತ್ರಿಯಹೊತ್ತು ಬೀಳುತ್ತಿದ್ದರು. ಮತ್ತುಕೆಲವು ಸೈನಿಕರು ಗೂಢವಾದ ಮಾರ್ಗಗಳಿಂದ ಶತ್ರುಗಳಿಗೆ ತಿಳಿಯದಂತೆ ಹೊರಕ್ಕೆ ಬಂದು ಶತ್ರುಗಳ ಎಡಕ್ಕೂ ಬಲಕ್ಕೂ ಸುತ್ತಿಮುತ್ತಿದರು. ಆಗ ಘೋರಯುದ್ಧವಾಯಿತು. ರಷ್ಯನರು ಮಧ್ಯಸಿಕ್ಕಿದ ಶತ್ರುಗಳಮೇಲೆ ಫಿರಂಗಿ ಗುಂಡುಗಳ ಮಳೆಯನ್ನು ಸುರಿಸಿದರು. ಕೋಟೆಯಮೇಲಿದ್ದ ದೊಡ್ಡದೊಡ್ಡ ಫಿರಂಗಿಗಳಿಂದ ಮಾರ್ಗದಲ್ಲಿ ಬರುತ್ತಿದ್ದ ಶತ್ರುಗಳಮೇಲೆ ಗುಂಡುಗಳನ್ನು ಸುರಿಸಿದರು. ಇದರಿಂದ ಜರ್ಮನರ ಹೆಣಗಳು ರಾಶಿರಾಶಿಯಾಗಿ ಬೀಳುವಂತಾಯಿತು. ಈ ಯುದ್ಧವು ೩೬ ಗಂಟೆಗಳಕಾಲ ನಡೆದಿತು. ಕಡೆಗೆ ಉಳಿದ ಜರ್ಮನರು ಕೆಸರಿನಲ್ಲಿ ಹೂತ ಫಿರಂಗಿಗಳನ್ನು ಅಲ್ಲಲ್ಲೇ ಬಿಟ್ಟು ಪಲಾಯನಗೊಂಡರು. ಇದುವರೆಗೆ ಪೂರ್ವರಣರಂಗದೊಳಗೆ ಹೋರಾಡಿದುದರಲ್ಲಿ ಜರ್ಮನರ ಕಡೆ ೬೦ ಸಾವಿರ ಸೈನ್ಯವು ಮೃತಪಟ್ಟಿರುವುದೆಂದು ರೋಮ್ ನಗರದಲ್ಲಿರುವ ರಷ್ಯಾ ರಾಯಭಾರಿಯು ಪ್ರಕಟಿಸಿರುತ್ತಾನೆ.

ಈಗ ಜರ್ಮನಿಯವರು ತಮ್ಮ ದೇಶದ ಪಶ್ಚಿಮದ ಎಲ್ಲೆಯ ಮಗ್ಗುಲಲ್ಲಿರುವ ಲುಕ್ಸಂಬರ್ಗ್ ದೇಶದಲ್ಲಿಟ್ಟಿದ್ದ ಸೇನೆಯನ್ನೂ ಕೂಡ ಪೂರ್ವರಂಗಕ್ಕೆ ಕರೆಯಿಸಿಕೊಂಡಿರುವರೆಂದೂ, ಆ ಲುಕ್ಸಂಬರ್ಗ್ ದೇಶದ ರಾಣಿಯನ್ನು ತಮ್ಮ ದೇಶದ ನೂರಂಬರ್ಗ್ ಕೋಟೆಯಲ್ಲಿ ಸೆರೆಯಾಗಿಟ್ಟಿರುವರೆಂದೂ, ಈಗ ಲುಕ್ಸಂಬರ್ಗಿನಲ್ಲಿ ಜರ್ಮನರ ಸೈನಿಕರು ೨೫೦ ಮಂದಿ ಮಾತ್ರವೇ ಇಡಲ್ಪಟ್ಟಿರುವರೆಂದೂ ಪ್ರಕಟವಾಗಿದೆ. ಈಗ ಪೂರ್ವರಂಗದಲ್ಲಿ ಜರ್ಮನರ ೧೫ ಪಟಾಲಮ್ಮುಗಳಿವೆ. ಇನ್ನುಮುಂದೆ ದೊಡ್ಡದೊಡ್ಡ ಯುದ್ಧಗಳು ಹೆಚ್ಚುವಂತೆ ಕಾಣುತ್ತವೆ. ರಷ್ಯನರು ಜರ್ಮನಿಯನ್ನು ಒಳನುಗ್ಗುತ್ತಿದ್ದಾರೆ. ಅವರಿಗೆ ಹೊಸಹೊಸ ಸೈನ್ಯಗಳು ಬಂದು ಕೂಡುತ್ತಿವೆ. ಅವರು ಒಂದುಕಡೆ ಜರ್ಮನರ ಮೇಲೂ ಒಂದುಕಡೆ ಆಸ್ಟ್ರಿಯಾದವರ ಮೇಲೂ ಒಂದೇ ಸಮನಾಗಿ ಕಾದಾಡುತ್ತಿದ್ದಾರೆ. ಅವರಕೈಯೇ ಇದುವರೆಗೂ ಮುಂದಾಗಿದೆ.

ಸರ್ವಿಯಾ ಮಾಂಟೆನೀಗ್ರೋದವರೂ ಆಸ್ಟ್ರಿಯಾದ ಸೆರಾಜೇವೋ ಕೋಟೆಗಳನ್ನು ಮುತ್ತಿದ್ದಾರೆ. ಆಸ್ಟ್ರಿಯಾದವರು ತಮ್ಮ ರಾಜಧಾನಿಯನ್ನು ವಿಯನ್ನಾಪಟ್ಟಣದಿಂದ ಮತ್ತೊಂದುಸ್ಥಳಕ್ಕೆ ಬದಲಾಯಿಸಲು ನಿಶ್ಚಯಿಸಿಕೊಂಡಿದ್ದಾರೆ. ಇನ್ಸ್‌ಬರ್ಕ್ ಎಂಬ ಪಟ್ಟಣಕ್ಕೆ ಬದಲಾಯಿಸುವುದು ಉತ್ತಮವೆಂದು ಅಧಿಕಾರಿಗಳು ಹೇಳುತ್ತಿದ್ದಾರೆ.

ಎಮ್ಡೆನ್.

ತಾ|| ೫ ರಲ್ಲಿ ಕಲ್ಕತ್ತಾಕ್ಕೆ ಬಂದುಸೇರಿದ ಓರ್ಸ ಎಂಬ ನಾರ್ವೆ ಹಡಗಿನವರಿಂದ ಎಮ್ಡೆನ್ನಿನ ವಿಷಯವಾಗಿ ಮತ್ತೊಂದು ಸಂಗತಿ ಗೊತ್ತಾಗಿರುವುದು. ಏನೆಂದರೆ —ಸೆಪ್ಟಂಬರ್ ತಾ|| ೨೫ ರಲ್ಲಿ ಕೊಲಂಬೋವಿನ ಹತ್ತಿರ ಎಮ್ಡೆನ್ ಹಡಗು ಈ ಹಡಗನ್ನು ನಿಲ್ಲಿಸಿ ಹಿಡಿದಿತು. ಅದರ ಆಯುಧಪಾಣಿಯಾದ ಅಧಿಕಾರಿಯು ಈ ಹಡಗಿಗೆ ಬಂದು, ಇಂಗ್ಲೀಷಿನಲ್ಲಿ ಮರ್ಯಾದೆಯಿಂದ ಮಾತುಕತೆಯಾಡಿ, ಇದು ತಟಸ್ಥರಾಷ್ಟ್ರದವರ ಹಡಗೆಂದು ತಿಳಿದುದರಿಂದ ಯಾವತೊಂದರೆಯನ್ನೂ ಮಾಡದೆ ದಾರಿಹಿಡಿದು ಹೋಗಬಹುದೆಂದು ಅಪ್ಪಣೆ ಕೊಟ್ಟನು ಎಂಬುದು. ಬಳಿಕ ಎಮ್ಡೆನ್ ಹಡಗೂ ಅದರ ಜತೆಯ ಹಡಗೂ ಸಹ ವೇಗವಾಗಿ ಪಶ್ಚಿಮದಕಡೆಗೆ ಹೋದುವಂತೆ.

ಮೈಸೂರ್ ಸ್ಟಾರ್.

ಸನ್ ೧೯೧೪ ನೆಯ ಅಕ್ಟೋಬರ್ ತಾ|| ೧೧ನೆಯ ಭಾನುವಾರ.

ಮೈಸೂರು ರಾಜ್ಯಭಾರ.

ನಮ್ಮ ಸಂಸ್ಥಾನದ ಕಾರ್ಯಭಾಗಗಳು ದಿನದಿನಕ್ಕೆ ಅನೇಕಮುಖವಾಗಿ ವೃದ್ಧಿಹೊಂದುತ್ತಲೂ ದೇಶಾಭ್ಯುದಯಕ್ಕೆ ವಿಶೇಷ ಸಾಧಕಗಳಾಗಿ ಪರಿಣಮಿಸುತ್ತಲೂ ಇರುವುವೆಂಬ ಸಂಗತಿಯು ಈಸಲದ ದಿವಾನರ ಉಪನ್ಯಾಸವನ್ನು ಓದಿ ನೋಡುವುದರಿಂದ ಸರ್ವರಿಗೂ ಗೊತ್ತಾಗದೆ ಇರಲಾರದು. ಈಚೆಗೆ ಸಂಸ್ಥಾನದ ಸಾಂಪತ್ತಿಕ ಸ್ಥಿತಿಯು ತೀವ್ರವಾಗಿ ವೃದ್ಧಿಹೊಂದುತ್ತಾ ಬರುತ್ತಿದೆ. ಸಂಸ್ಥಾನದಲ್ಲಿ ಮಳೆಬೆಳೆಗಳ ಸ್ಥಿತಿಯು ವರ್ಷೇ ವರ್ಷೇ ಅಷ್ಟೇನೂ ಸಮರ್ಪಕವಾಗಿಲ್ಲದಿದ್ದರೂ, ಸಮರ್ಪಕವಾದ ವರ್ಷದಲ್ಲಿ ಆಗುತ್ತಿದ್ದಂತೆಯೇ ಭೂಗಂದಾಯದ ಆಯತಿಯು ಆಗುತ್ತಿರುವುದು ಆಶ್ಚರ್ಯವು. ಭೂಗಂದಾಯ, ಮದದ್ರವ್ಯಶಾಖೆ, ಕಾಡುಗಳು, ಗಣಿಗಳು, ವಿದ್ಯುಚ್ಛಕ್ತಿ, ಈ ನಾಲ್ಕಾರು ಬಾಬುಗಳ ಉತ್ಪತ್ತಿಯೇ ೨ ಕೋಟಿಗಳಾಗುತ್ತಿರುವುದು. ಮದದ್ರವ್ಯಶಾಖೆಯ ವರಮಾನವೊಂದೇ ಅರ್ಧಕೋಟಿಗಿಂತ ಮಿಗಿಲಿರುವುದು. ಸರ್ಕಾರದವರು ಪ್ರಜೆಗಳಲ್ಲಿ ಮದ್ಯಪಾನದ ದುರ್ವ್ಯಸನವನ್ನು ಕಡಿಮೆಮಾಡುವುದಕ್ಕಾಗಿ ಆ ದ್ರವ್ಯಗಳ ಬೆಲೆಯನ್ನು ಹೆಚ್ಚಿಸಿದ ಉಪಾಯವು ತಕ್ಕ ಸಾಧನವೆಂದು ಕಂಡುಬರಲಿಲ್ಲ. ಪ್ರಜೆಗಳನ್ನು ವಿದ್ಯಾವಂತರನ್ನಾಗಿಯೂ ನೀತಿವಂತರನ್ನಾಗಿಯೂ ಮಾಡುತ್ತ ಬಂದಲ್ಲದೆ ಇದರ ಭೀಕರ ವ್ಯಾಪನೆಯು ಅಡಗಲಾರದು. ಈಗ ಮೈಸೂರು ಡಿಸ್ಟ್ರಿಕ್ಟಿನ ಅನೇಕ ಭಾಗಗಳಲ್ಲಿ ಅಂತ್ಯಜರು ತಮಗೆ ದೊರೆತ ಸದ್ಬೋಧನೆಯ ಫಲವಾಗಿ ಮದ್ಯಪಾನವನ್ನು ಶಪಥಪೂರ್ವಕವಾಗಿ ವಿಸರ್ಜಿಸುತ್ತಿರುವರೆಂದೂ ಮದ್ಯಪಾನಮಾಡಿದ ಸಜಾತೀಯನಿಗೆ ೧೦ ರೂ ಅರ್ಧದಂಡವನ್ನೂ ಅಂಥ ಮದ್ಯಪಾಯಿಗಳನ್ನು ತೋರಿಸಿಕೊಟ್ಟವನಿಗೆ ೨ ರೂ ಬಹುಮಾನವನ್ನೂ ಮಾಡುವ ಕಟ್ಟುಪಾಡನ್ನು ಮಾಡಿಕೊಂಡಿರುವರೆಂದೂ ಬಹುಜನರು ಈ ಕಟ್ಟಿಗೆ ವಿಧೇಯರಾಗಿರುತ್ತಿರುವರೆಂದೂ ಕೇಳುವುದಕ್ಕೆ ಸಂತೋಷವಾಗುತ್ತದೆ. ಅದುಕಾರಣ, ಸರ್ಕಾರದವರು ಪ್ರಜೆಗಳಲ್ಲಿ ಮದ್ಯಪಾನದ ದುರಾಚಾರವನ್ನು ತಪ್ಪಿಸಬೇಕಾದರೆ ಅವರಲ್ಲಿ ವಿದ್ಯಾವಿವೇಕಗಳನ್ನುಂಟುಮಾಡುವುದಕ್ಕಿಂತಲೂ ಇತರವಾದ ಶ್ರೇಷ್ಠೋಪಾಯವಾವುದೂ ಇರಲಾರದು. ಮದದ್ರವ್ಯಶಾಖೆಯ ವರಮಾನದಿಂದ ಬೊಕ್ಕಸವನ್ನು ತುಂಬಬೇಕೆಂಬ ಅಪೇಕ್ಷೆಯು ಸರ್ಕಾರಕ್ಕಿರುವುದಿಲ್ಲವಾದರೆ, ಆ ದುರಭ್ಯಾಸಿಗಳ ಜೇಬಿದಿಂದ ಬಂದ ಆ ಶಾಖೆಯ ಹಣವನ್ನೆಲ್ಲಾ ಆ ದುರಭ್ಯಾಸದ ನಿರೋಧನಕ್ಕೇ ಉಪಯೋಗಿಸಲಿ; ಎಂದರೆ ಪ್ರಜೆಗಳ ವಿದ್ಯಾವಿವೇಕವೃದ್ಧಿಯನ್ನು ಮಾಡುವ ಕೆಲಸಕ್ಕೇ ಪ್ರತಿವರ್ಷವೂ ವಿನಿಯೋಗಿಸುತ್ತಾ ಬರಲಿ. ಈಗಲಾದರೊ ವರ್ಷಕ್ಕೆ ೫೨ ಲಕ್ಷ ರೂ. ಗಳನ್ನು ಹೆಂಡಗುಡಿಕರಿಂದ ನಮ್ಮ ಸರ್ಕಾರದವರು ಸಂಪಾದಿಸಿ, ಪ್ರಜೆಗಳನ್ನು ವಿದ್ಯಾವಂತರನ್ನು ಮಾಡುವುದಕ್ಕೆ ೧೮ ಲಕ್ಷ ರೂ. ಗಳನ್ನು ವೆಚ್ಚಮಾಡುತ್ತಿದ್ದಾರೆ.

ಸಂಸ್ಥಾನದ ಉತ್ಪತ್ತಿಯು ಹೆಚ್ಚುತ್ತಾ ಬರುತ್ತಿದ್ದಂತೆ ನಾನಾಮುಖವಾಗಿ ಗೊತ್ತುಗುರಿಯಿಲ್ಲದಂತೆ ಅದರ ವೆಚ್ಚಗಳೂ ಹೆಚ್ಚಿಹೋಗುತ್ತಿವೆ. ಈ ಸಂಸ್ಥಾನದಲ್ಲಿ ನ್ಯಾಯವಾಗಿಯೂ ಅವಶ್ಯಕವಾಗಿಯೂ ಇರುವ ಕೆಲಕಾರ್ಯಭಾಗಗಳಿಗೆ ತಕ್ಕಷ್ಟು ಹಣವು ಒದಗಿಸಲ್ಪಡದೆಯೂ, ಅಷ್ಟೇನೂ ಅತ್ಯವಶ್ಯಕವಲ್ಲದ ಕೆಲವು ಕಾರ್ಯಗಳಿಗೆ ಹಣವು ವಿನಿಯೋಗಿಸಲ್ಪಡುತ್ತಲೂ, ಇದೆಯೆಂದು ಕಾಣುತ್ತಿದೆ. ಅದುಕಾರಣ, ವರ್ಷೇವರ್ಷೇ ಸರ್ಕಾರದವರು ಮಾಡಬೇಕೆಂದು ನಿರ್ಣಯಿಸುವ ವೆಚ್ಚದ ಕಾರ್ಯಭಾಗಗಳನ್ನು ನಿರ್ಣಯಿಸುವಾಗ ಅನೌದ್ಯೋಗಿಕರಾದ ಕೆಲ ನ್ಯಾಯವಿಧಾಯಕ ಸಭಿಕರ ಅಭಿಪ್ರಾಯವನ್ನೂ ತೆಗೆದುಕೊಳ್ಳುವಂತೆ ಮಾಡಿದರೆ ಈ ನ್ಯೂನಾತಿರೇಕವು ಪರಿಹಾರವಾಗಬಹುದು. ಬಜೆಟ್ಟನ್ನು ರಚಿಸಿಬಿಟ್ಟು ತತ್ಸಂಬಂಧವಾಗಿ ನ್ಯಾಯವಿಧಾಯಕ ಸಭೆಯಲ್ಲಿ ೧-೨ ಪ್ರಶ್ನೆಗಳನ್ನು ಕೇಳಿ ಚರ್ಚಿಸುವಷ್ಟರ ಅವಕಾಶವನ್ನು ಕೊಟ್ಟುಬಿಡುವ ಮಾತ್ರದಿಂದ ನಿಜವಾದ ಫಲಿತಾಂಶವು ಆ ಭಾಗದಲ್ಲಿ ತೃಪ್ತಿಕರವಾಗಿರಲಾರದು. ಸಂಸ್ಥಾನದಲ್ಲಿ ಉತ್ಪತ್ತಿಯಾದ ಹೆಚ್ಚುಭಾಗದ ಹಣವನ್ನು ಒಂದೊಂದು ಪಟ್ಟಣದ ಅಲಂಕಾರಗಳಿಗೇ ವಿನಿಯೋಗಿಸುತ್ತಬರುವುದೂ, ಕುಡಿಯುವ ನೀರಿಗೂ ಗತಿಯಿಲ್ಲದ ಅನಾರೋಗ್ಯಸ್ಥಲದಲ್ಲಿ ನರಳುತ್ತಿರುವ ಬಡಗ್ರಾಮನಿವಾಸಿಗಳಿಗೆ ಒಂದು ಬಾವಿಯನ್ನು ತೋಡಿಸಬೇಕಾದರೆ ನೀವರ್ಧ ಹಣವನ್ನು ಕೊಡಿರೆಂದು ಕೇಳುವುದೂ ಅವರಿಗೆ ಎಷ್ಟು ಮನಃಖೇದವನ್ನುಂಟುಮಾಡುವುದೆಂಬುದನ್ನು ಭೂತದಯಾಪರರೂ, ನ್ಯಾಯಕೋವಿದರೂ ಆಲೋಚಿಸಬೇಕು.

ಒಂದೊಂದುಕಡೆಯ ರೈತರು ತಮ್ಮ ಬೇಸಾಯಕ್ಕೆ ಆಧಾರವಾಗಿರುವ ಕೆರೆಗಳನ್ನು ಜೀರ್ಣೋದ್ಧಾರಮಾಡಿಸಿಕೊಡಬೇಕೆಂದು ೧೦-೧೫ ವರ್ಷಗಳಿಂದಲೂ ಮೊರೆಯಿಡುತ್ತ, ನೂರಾರು ಅರ್ಜಿಗಳನ್ನೂ ಬೇಕಾದಷ್ಟು ಧೂಪದೀಪೋಪಹಾರಗಳನ್ನೂ ಅರ್ಪಿಸಿದ್ದರೂ, ಅವರ ಪ್ರಾರ್ಥನೆಯನ್ನು ಸರ್ಕಾರದವರು ನೆರವೇರಿಸದವರಾಗಿದ್ದಾರೆ. ಆದರೂ ‹‹ಸೋಂಬೇರಿಗಳು-ಉದ್ಯೋಗತತ್ಪರರಲ್ಲ'' ಎಂಬ ಬಿರುದುಗಳು ಆ ರೈತರಿಗೇ ದೊರೆಯುತ್ತಿವೆ. ಉತ್ತು ಬಳೆದು ಉಣ್ಣಬೇಕೆಂಬ ಅಪೇಕ್ಷೆಯು ಯಾವ ರೈತನಿಗೆ ತಾನೇ ಇರುವುದಿಲ್ಲ? ಆದರೆ ಈಕಾಲದ ಮಳೆ ಬೆಳೆಯ ವೈಷಮ್ಯದಲ್ಲಿ ಪ್ರಬಲಜಲಾಧಾರಗಳನ್ನು ಪಡೆಯದ ರೈತರ ಬಾಳು ಬಹಳ ಶೋಚನೀಯವಾಗಿರುತ್ತದೆ. ನಮ್ಮ ದೇಶದ ಪೂರ್ವದ ಅಧಿಕಾರಿಗಳು ಸಂಸ್ಥಾನಕ್ಕೆ ನೀರಿನ ದುರ್ಭಿಕ್ಷವು ತಟ್ಟಬಾರದೆಂದು ಅಸಂಖ್ಯಾಕವಾಗಿ ಸಣ್ಣದೊಡ್ಡ ಕೆರೆಗಳನ್ನು ದೇಶದ ಎಲ್ಲ ತಾಲ್ಲೂಕುಗಳಲ್ಲೂ ನಿರ್ಮಿಸಿದ್ದಾರೆ. ಈಗಿನ ಕಾಲದಲ್ಲಿ ಅದೇ ನಮ್ಮ ಸರ್ಕಾರದವರು ಆ ಕೆರೆಗಳನ್ನು ಜೀರ್ಣೋದ್ಧಾರಮಾಡುವುದಕ್ಕೂ ಹಣವಿಲ್ಲವೆಂದು ಪೇಚಾಡುತ್ತಿದ್ದಾರೆ. ಪೂರ್ವದಲ್ಲಿ ಸಂಸ್ಥಾನಕ್ಕೆ ಇದ್ದ ಉತ್ಪತ್ತಿಗಿಂತಲೂ ಈಗ ಕಡಿಮೆಯಾಗಿದೆಯೆ? ಹೊಸದಾಗಿ ಕಟ್ಟಿಸುವುದಕ್ಕಿಂತಲೂ ಜೀರ್ಣೋದ್ಧಾರಮಾಡುವುದಕ್ಕೆ ಹೆಚ್ಚುಹಣವು ಬೇಕೆ? ಈ ವಿಷಯವನ್ನು ದಯಾಳುಗಳಾದ ಸರ್ಕಾರದವರು ಚೆನ್ನಾಗಿ ಪರ್ಯಾಲೋಚಿಸಬೇಕು. ದೇಶದಲ್ಲಿ ಸಂಪದಭ್ಯುದಯ ಮಾಡಬೇಕೆಂದು ಸರ್ಕಾರದವರು ಕುತೂಹಲಪಡುತ್ತಿರುವುದು ಶ್ಲಾಘನೀಯವಾಗಿದೆ. ಆದರೆ ಅವರು ಅದಕ್ಕಾಗೆಂದ ಎಷ್ಟೋ ಲಕ್ಷಾಂತರ ರೂ.ಗಳನ್ನು ಚೆಲ್ಲುತ್ತಿರುವುದು, ಬಕಬಂಧನ ಚಾತುರ್ಯದಂತಿದೆಯೆಂಬ ಆಕ್ಷೇಪವುಂಟಾಗಿದೆ. ಎಲ್ಲ ತಾಲ್ಲೂಕುಗಳಲ್ಲೂ ಬೇಸಾಯಕ್ಕೆ ನೀರು ಒದಗುವಂತೆ ಜಲಾಶಯಗಳು ಸಿದ್ಧಗೊಳಿಸಲ್ಪಟ್ಟರೆ ರೈತರು ಕಾಲಕಾಲಕ್ಕೆ ದವಸವನ್ನು ಬಳೆದು ಈ ಮಿತಿಮೀರಿದ ದಾರಣೆಯುಳ್ಳ ಕಾಲದಲ್ಲಿ ಮಾರಿ, ತಾವಾಗಿ ಸಂಪದ್ವೃದ್ಧಿಯನ್ನು ಮಾಡಿಯೇಮಾಡಿಕೊಳ್ಳುವರು. ತಾಯ್ತಂದೆಗಳು ಮಕ್ಕಳಿಗೆ ಅಸ್ಥಿಯಲ್ಲಿರುವ ರೋಗವನ್ನು ಪರಿಹರಿಸದೆ ಮೇಲೆ ಉಪಚಾರವನ್ನು ಮಾಡಿದರೆ ಅವು ಪುಷ್ಟವಾಗುವುದು ನಿಜವೆ? ಪ್ರಗಮನಶೀಲ ವಿಶಾಲಮತಿಗಳಾದ ನಮ್ಮ ಮಂತ್ರಿವರ್ಯರು ಈ ವಿಷಯಗಳನ್ನು ಪರ್ಯಾಲೋಚಿಸದೆ ಇರಲಾರರೆಂದು ನಂಬುತ್ತೇವೆ.

ಬೊಂಬಾಯಿ ಸ್ತ್ರೀಯರ ಸಹಾಯ.

ವೈಸ್ರಾಯರು ಸ್ಥಾಪಿಸಿರುವ ಸಹಾಯನಿಧಿಗೆ ಬೊಂಬಾಯಿ ಅಧಿಪತ್ಯದಲ್ಲಿ ಕಳೆದ ತಿಂಗಳು ತಾ|| ೨೫ ರ ವರೆಗೆ ೧೫|| ಲಕ್ಷ ರೂ. ಗಳು ಕೂಡಿದ್ದುವು. ಫ್ರಾನ್ಸ್ ಬೆಲ್ಜಿಯಂ ದೇಶದಲ್ಲಿನ ವಿಪನ್ನರಾದವರ ಸಹಾಯಕ್ಕಾಗಿ ಬೇರೆ ಧನರಾಶಿಯು ವಿಶೇಷವಾಗಿ ಕೂಡುತ್ತಿರುವುದು. ಬೊಂಬಾಯಿಯ ಸ್ತ್ರೀಯರೇ ಕೂಡಿಸುತ್ತಿರುವ ನಿಧಿಗೆ ೧ ಲಕ್ಷದ ೩೦ ಸಾವಿರ ರೂ.ಗಳವರೆಗೆ ಕೂಡಿರುವುದು. ಮತ್ತು ಅಲ್ಲಿನ ಸ್ತ್ರೀಯರು ಸೈನಿಕರ ಉಪಯೋಗಾರ್ಥವಾಗಿ ೨೫ ಸಾವಿರ ಉಡುಪುಗಳನ್ನು ನಿರ್ಮಿಸಿಕೊಟ್ಟಿರುವರು. ಈ ಉಡುಪುಗಳು ಯುದ್ಧದಲ್ಲಿ ಗಾಯಗೊಂಡಿದ್ದು ಚಿಕಿತ್ಸೆಯಿಂದ ಗುಣಗೊಳ್ಳುತ್ತಿರುವ ಸೈನಿಕರಿಗಾಗಿ ಉಪಯೋಗಿಸಲ್ಪಡುವುವು. ಇಂಥ ಉಡುಪುಗಳ ೨೦,೧೬೦ ಗಂಟುಗಳು ಯುದ್ಧರಂಗಕ್ಕೆ ಕಳುಹಿಸಲ್ಪಟ್ಟಿವೆ. ಆಂಗ್ಲ ಸೈನಿಕರಿಗೆ ಕೊಡಲ್ಪಡುವ ಉಡುಪಿನ ಗಂಟಿನಲ್ಲಿ ಪ್ರತಿಯೊಬ್ಬನಿಗೆ ೧ ಶರಾಯಿ, ೨ ಫ್ಲಾನಲ್ ಶರಟುಗಳು, ಒಂದು ಜತೆ ಮೃದುವಾದ ಸ್ಲಿಪ್ಪರು, ಒಂದುಜತೆ ಕಾಲುಚೀಲ, ೧ ಹೊಗೆಸೇದುವ ಚಿಮಿನಿ, ಹೊಗೆಸೊಪ್ಪು ಅಥವಾ ಸಿಗರೆಟ್ಟನ್ನು ತುಂಬಿದ ೧ ಪೆಟ್ಟಿಗೆ, ಬರೆಯುವ ಪೆನ್ಸಿಲ್ ೧, ಒಂದು ನೋಟುಬುಕ್ಕು, ೧ ಸಾಬೂನು, ೧ ಟುವಾಲು, ಇಷ್ಟು ಪದಾರ್ಥಗಳಿರುವುವು. ಭಾರತೀಯ ಸೈನಿಕನಿಗೆ ಕೊಡುವ ಗಂಟಿನಲ್ಲಿ ೧ ಹಚ್ಚಡ, ೨ ಫ್ಲಾನಲ್ ಜುಬ್ಬಗಳು, ೨ ಜತೆ ಕಾಲುಚೀಲಗಳು, ೧ ನೋಟುಬುಕ್ಕು, ೧ ಸೀಸದಕಡ್ಡಿ, ಸಿಗರೇಟು ಅಥವಾ ಬೀಡಿ, ಅಡಕೆ, ದೇಶಭಾಷಾ ಪುಸ್ತಕ, ೧ ಸಾಬೂನು, ೧ ತುವಾಲು, ಇರುವುದು. ಆ ಗಂಟನ್ನು ಒಂದೊಂದು ಚೀಲದಲ್ಲಿ ಹಾಕಿ, ಅದರ ಮೇಲೆ ‹‹ಬೊಂಬಾಯಿ ಅಧಿಪತ್ಯದ ಸ್ತ್ರೀಯರಿಂದ'' ಎಂದು ಬರೆಯಲ್ಪಟ್ಟಿರುವುದು. ಬೊಂಬಾಯಿ ಅಧಿಪತ್ಯದ ಎಲ್ಲಾ ಜಿಲ್ಲೆಗಳ ಸ್ತ್ರೀಯರೂ ಇಂಥ ಉಡುಪುಗಳ ಸಹಾಯವನ್ನು ಮಾಡುತ್ತಿರುವರು. ಪೂನಾ ಪಟ್ಟಣದ ಸ್ತ್ರೀಯರೇ ೫೦೦೦ ಉಡುಪುಗಳನ್ನು ಒದಗಿಸಿಕೊಟ್ಟಿರುವರು. ಭರತಖಂಡದ ಸ್ತ್ರೀಮಂಡಲಿಯವರುಸಹ ಇಂಥ ಉಚಿತೌದಾರ್ಯವನ್ನು ತೋರಿಸುತ್ತಿರುವುದಕ್ಕೆ ನಮ್ಮ ಪುಣ್ಯಭೂಮಿಯ ನಿಸರ್ಗಸದ್ಗುಣದ ಪ್ರಭಾವವೇ ಕಾರಣವಲ್ಲವೆ? ನಮ್ಮ ಮೈಸೂರಿನ ಅರಸು ಸ್ತ್ರೀಯರುಗಳಿಂದ ಸೆಂಟ್ ಜಾನ್ ಆಂಬ್ಯುಲೆನ್ಸ್ ಸಂಘದವರು ಕೂಡಿಸುತ್ತಿರುವ ಪಂಡಿಗೆ ೯೧೮ ರೂ. ಗಳನ್ನು ಕೊಟ್ಟಿರುವರು. ಇತರ ಸ್ತ್ರೀಮಂಡಲಿಯವರೂ ಇದೇ ಮೇಲ್ಪಂಗ್ತಿಯನ್ನು ಅನುಸರಿಸುವವರಾಗಲೆಂದು ಕೋರುತ್ತೇವೆ.

ಒಳದೇಶದ ವೃತ್ತಾಂತಗಳು

ರಾಜಧಾನಿಯ ದೊಡ್ಡಪೇಟೆಯಲ್ಲಿ ಒಂದು ಫಲಾಹಾರಮಂದಿರದಲ್ಲಿ ಕೆಲಸಮಾಡಿಕೊಂಡಿದ್ದ ೧೬-೧೮ ವರ್ಷದ ವಯಸ್ಸಿನ ಹುಡುಗಿಯು ಕಳೆದ ತಾ|| ೯ ರಲ್ಲಿ ಏನುಕಾರಣದಿಂದಲೋ ಮನೆಯಹತ್ತಿರದಲ್ಲಿದ್ದ ಬಾವಿಯೊಳಗೆ ಬಿದ್ದು ಸತ್ತುಹೋಗಿದ್ದಳು.

ತುಮಕೂರಿನ ಡಿ|| ಕಮೀಷನರವರಾಗಿದ್ದ ಮ|| ಬಿ. ಜಿ. ಕುಮಾರಸ್ವಾಮಿನಾಯಕರು ದಸರಾಮಹೋತ್ಸವಕ್ಕಾಗಿ ರಾಜಧಾನಿಗೆ ಬಂದಿದ್ದು, ತಮ್ಮ ಮುಖದಮೇಲೆ ಎದ್ದಿದ್ದ ಒಂದು ಗುಳ್ಳೆಯನ್ನು ಕ್ಷೌರಮಾಡಿಸುವಾಗ ಕೆರೆಯಿಸಿದ ಕಾರಣದಿಂದ ಅದೇ ಮಹತ್ತಾಗಿ ಊದಿಕೊಂಡು ಜ್ವರಬಂದು ಬಾಧೆಯು ಹೆಚ್ಚಾದುದರಮೇಲೆ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿ ಗುಣವನ್ನು ಹೊಂದದೆ ಕಾಲಾಧೀನರಾದರೆಂದು ತಿಳುಹಲು ಬಹಳ ವಿಷಾದವಾಗುತ್ತದೆ

ರತ್ನಾವಳೀ ನಾಟಕ ಕಂಪೆನಿಯವರು ಕಳೆದ ತಾ|| ೮ ರ ರಾತ್ರಿ ಪ್ರಸಿದ್ಧವಾದ ಪ್ರಹ್ಲಾದಚರಿತ್ರೆಯನ್ನು ತಮ್ಮ ಸ್ವಂತ ಚಪ್ಪರದಲ್ಲಿ ಅಭಿನಯಿಸಿ ಅದರಿಂದುತ್ಪನ್ನವಾದ ೬೫೦ ರೂ. ಗಳಲ್ಲಿ ವೆಚ್ಚಕಳೆದುಳಿದುದನ್ನು ಸೆಂಟ್‌ಜಾನ್ ಆಂಬ್ಯುಲೆನ್ಸ್ ಸಂಘದವರಿಗೆ ಕೊಟ್ಟರು. ಈ ನಾಟಕಾವಲೋಕನಕ್ಕೆ ಶ್ರೀಮದ್ಯುವರಾಜರೂ, ಸರ್ದಾರ್ ಲಕ್ಷ್ಮೀಕಾಂತರಾಜ ಅರಸಿನವರೂ, ಅನೇಕ ದೊಡ್ಡಮನುಷ್ಯರುಗಳೂ ದಯೆಮಾಡಿಸಿದ್ದರು. ನಾಟಕಾಭಿನಯವು ಬಹಳ ಶ್ಲಾಘ್ಯವಾಗಿದ್ದಿತು.

ರಾಜಧಾನಿಯಲ್ಲಿ ಹೋದವಾರ ಮಳೆಯು ಬಂದುದಲ್ಲದೆ ಈಚೆಗೆ ಬರೇ ಮೋಡಕಟ್ಟಿಕೊಂಡು ಸಹಿಸಲಶಕ್ಯವಾದಷ್ಟು ಸೆಕೆಯಾಗಿರುವುದರ ವಿನಾ ಮಳೆಯು ಬರಲಿಲ್ಲವು. ಪ್ಲೇಗುರೋಗವು ಊರಿನ ಎಲ್ಲ ಭಾಗದಲ್ಲೂ ಹಬ್ಬುತ್ತಿದೆ. ಇದರ ನಿವಾರಣಕ್ಕಾಗಿ ಆರೋಗ್ಯಶಾಖೆಯವರು ತಕ್ಕಷ್ಟು ಗಮನವನ್ನು ಕೊಡುತ್ತಿಲ್ಲವು. ಬೆಟ್ಟದಜಾತ್ರೆಯು ಕಳೆದ ಬುಧವಾರ ನಡೆಯಿತು. ನೆರೆ ಗ್ರಾಮಗಳ ಮತ್ತು ಊರಿನ ಜನರು ವಿಶೇಷವಾಗಿ ಬೆಟ್ಟದ ಮೇಲೂ ಕೆಳಗೂ ಸೇರಿದ್ದರು.

ಶ್ರೀಮದ್ಯುವರಾಜರವರು ೨ ನೆಯ ಕೌನ್ಸಿಲರ್ ಸರದಾರ್ ಕಾಂತರಾಜಅರಸಿನವರ ಕೂಡ ಕಳೆದ ತಾ॥ ೯ ರ ಬೆಳಿಗ್ಗೆ ರಾಜಧಾನಿಯ ಮೋತಿಖಾನೆ ಲಕ್ಷ್ಮೀಪತಯ್ಯನವರ ಜೈನವಿದ್ಯಾರ್ಥಿನಿಲಯಕ್ಕೆ ದಯಮಾಡಿಸಿ, ಅದರ ಸ್ಥಾಪಕರಾದ ಶ್ರೀಮಂತ ವರ್ಧಮಾನಯ್ಯನವರಿಂದಲೂ ವಿದ್ಯಾರ್ಥಿಗಳಿಂದಲೂ ದ್ವಾರದ ಬಳಿ ಇದಿರ್ಗೊಳ್ಳಲ್ಪಟ್ಟು ಸುಂದರವಾಗಿ ಅಲಂಕರಿಸಲ್ಪಟ್ಟಿದ್ದ ಮಂದಿರದೊಳಗೆ ಚಿತ್ತೈಸಿ ಜಿನದೇವರ ದರ್ಶನಮಾಡಿ ಅನಂತರ ಮ॥ ವರ್ಧಮಾನಯ್ಯನವರು ಒಪ್ಪಿಸಿದ ವಿಜ್ಞಾಪನ ಪತ್ರಿಕೆಯನ್ನು ಸ್ವೀಕರಿಸಿ, „ಈ ವಿದ್ಯಾರ್ಥಿನಿಲಯಕ್ಕೆ ನಮ್ಮ ಸುಖಾಗಮನವನ್ನು ನೀವುಗಳು ಬಯಸಿದುದಕ್ಕಾಗಿ ನಿಮ್ಮನ್ನು ವಂದಿಸುತ್ತೇವೆ. ಜೈನಮತವು ವಿಶೇಷವಾದ ಸಾನುಭೂತಿ ಪ್ರಾಣಿಮಾತ್ರದಲ್ಲಿ ದಯೆ ಮೊದಲಾದ ನೀತಿಗಳಿಗೆ ಪ್ರಖ್ಯಾತವಾಗಿದೆ. ನೀವು ಆ ನೀತಿಯನ್ನು ಹಿಡಿದು ಯುಕ್ತವಾದ ಮಾರ್ಗದಲ್ಲಿ ಧರ್ಮ ಮಾಡುತ್ತಿರುವುದನ್ನು ನೋಡಿ ನಮಗೆ ಬಹಳ ಸಂತೋಷವಾಗಿದೆ. ನೀವು ವಿದ್ಯಾರ್ಥಿಗಳಿಗೆ ವಿಶೇಷ ಪ್ರಯೋಜನಕಾರಿಗಳಾಗಿರುವುದರಿಂದ ನಿಮ್ಮನ್ನು ನಾವು ಅಭಿನಂದಿಸುತ್ತೇವೆ.'' ಎಂದು ಉತ್ತರವನ್ನು ದಯೆಪಾಲಿಸಿ ವಿದ್ಯಾರ್ಥಿಗಳ ನಿಲಯವನ್ನು ಪರಾಮರ್ಶಿಸಿಕೊಂಡು ತೆರಳಿದರು. ಪಾಠಶಾಲೆಯ ಪಂಡಿತರುಗಳಿಂದಲೂ, ವಿದ್ಯಾರ್ಥಿಗಳಿಂದಲೂ ಸ್ವಾಗತಪರವಾದ ಕೆಲ ಸಂಸ್ಕೃತ ಶ್ಲೋಕಗಳು ಹೇಳಲ್ಪಟ್ಟುವು. ಈ ನಿಲಯದ ಸಹಾಯದಿಂದ ಒಬ್ಬರು ಬಿ.ಎ., ೨ ಎಫ್.ಎ., ೮ ಮೆಟ್ರಿಕ್ಯುಲೇಷನ್, ೭ ಲೋವರ್ ಸೆಕೆಂಡರಿ, ೨ ಸೇಕಡಾರಿ ಪರೀಕ್ಷೆಗಳನ್ನು ಕೊಟ್ಟಿರುವರು. ಈ ನಿಲಯದಲ್ಲಿ ಒಟ್ಟು ೩೫ ವಿದ್ಯಾರ್ಥಿಗಳಿರುವರಲ್ಲದೆ ೮ ಬ್ರಾಹ್ಮಣವಿದ್ಯಾರ್ಥಿಗಳಿಗೆ ವೇತನವು ಕೊಡಲ್ಪಡುತ್ತಿರುವುದು. ಈ ನಿಲಯದಲ್ಲಿ ಸ್ಥಾಪಿತವಾಗಿರುವ ಸಂಸ್ಕೃತಪಾಠಶಾಲೆಯಲ್ಲಿ ೮೦ ವಿದ್ಯಾರ್ಥಿಗಳಿರುವರು.

ಮೈಸೂರ ಪ್ರಜಾಪ್ರತಿನಿಧಿಸಭೆಯಲ್ಲಿ ಮೆಂಬರುಗಳು ಮಾಡಿದ ಪ್ರಾರ್ಥನೆ ಮತ್ತೂ ದಿವಾನರು ದಯಪಾಲಿಸಿದ ಉತ್ತರಗಳು.

ಪ್ರಾ.—ನಿಯಮನಿರ್ಮಾಣಸಭೆಗೆ ಈಗ ೮ ಡಿಸ್ಟ್ರಿಕ್ಟುಗಳಿಂದ ೪ ಮೆಂಬರುಗಳು ಜನರಿಂದಾರಿಸಲ್ಪಟ್ಟು ಉಳಿದ ನಾಲ್ವರು ಸರ್ಕಾರದಿಂದ ನಿಯಮಿಸಲ್ಪಡುವುದು ಸರಿಯಷ್ಟೆ. ಇನ್ನುಮೇಲೆ ೮ ಮೆಂಬರುಗಳೂ ಜನರಿಂದಲೇ ಆರಿಸಲ್ಪಡುವಂತೆಯೂ, ಈ ಸಭೆಯಲ್ಲಿ ಒಂದು ಪ್ರಶ್ನೆಯ ಜತೆಗೆ ಅದೇ ಸಂಬಂಧದ ಮತ್ತೆ ಕೆಲವು ಪ್ರಶ್ನೆಗಳನ್ನು ಹಾಕುವಂತೆಯೂ, ಸಂಸ್ಥಾನದ ಆಯವ್ಯಯ ಸಂಬಂಧದ ಲೆಕ್ಕವನ್ನು ಪರಿಶೀಲಿಸಲು ಈ ಸಭೆಯ ಮೆಂಬರುಗಳಲ್ಲಿ ಕೆಲರಿಂದ ಕೂಡಿದ ಒಂದು ಕಮಿಟಿಯನ್ನೇರ್ಪಡಿಸಿ ಕೊಡುವಂತೆಯೂ, ಸರ್ಕಾರಿಯ ಕಾರ್ಯಗಳು ಕ್ರಮವಾಗಿ ನಡೆಯುವ ವಿಚಾರದಲ್ಲಿ ಮೆಂಬರುಗಳು ಚರ್ಚಿಸಿ ನಿರ್ಧಾರಗಳನ್ನು ಸೂಚಿಸುವ ಬಗೆಗೆ ಅವಕಾಶವನ್ನುಂಟುಮಾಡಿ ಕೊಡುವಂತೆಯೂ ಆಗಬೇಕು. ಉತ್ತರ.—ನೀವು ಪ್ರಾರ್ಥಿಸಿರುವ ಸೌಲಭ್ಯದಲ್ಲಿ ಕೆಲವನ್ನು ನಿಯಮನಿರ್ಮಾಣ ಸಭೆಗುಂಟುಮಾಡಿಕೊಡಬೇಕೆಂದು ಸರ್ಕಾರದವರ ಪರ್ಯಾಲೋಚನೆಯಲ್ಲಿರುವುದು. ಮತ್ತೂ ಉಳಿದ ಸೌಲಭ್ಯಗಳೂ ಕಾಲಕ್ರಮೇಣ ಪ್ರಾಪ್ತವಾಗತಕ್ಕವಾಗಿವೆ.

ಪ್ರಾ.—ಈ ಸೀಮೆಯ ಕೆಲಸಗಾರರು ಕೆಲಸಕ್ಕಾಗಿ ಮುಂಗಡದ ಹಣವನ್ನು ತೆಗೆದುಕೊಂಡಿದ್ದಾಗ್ಯೂ ಬ್ರಿಟಿಷ್ ರಾಜ್ಯದ ಮೇಸ್ತ್ರಿಗಳ ಪ್ರೇರಣೆಯಿಂದ ಕೆಲಸವನ್ನು ಬಿಟ್ಟುಹೋಗುವುದರಿಂದ ಇಲ್ಲಿಯ ಜಮೀನ್ದಾರರು ಮೊದಲಾದವರಿಗೆ ಬಹಳ ತೊಂದರೆಯಾಗಿರುವುದರಿಂದ ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟಿನಲ್ಲಿ ಕೆಲ ತಿದ್ದುಪಡಿಯನ್ನುಮಾಡಿಕೊಡಬೇಕು. ಇಲ್ಲವಾದಲ್ಲಿ ಮದ್ರಾಸ್ ಸರ್ಕಾರದಲ್ಲಿ ಆಚರಣೆಯಲ್ಲಿರುವ ಲೇಬರ್ ಆಕ್ಟನ್ನು ಅನುಷ್ಠಾನಕ್ಕೆ ತಂದ ಹೊರತು ಉಪಾಯವಿಲ್ಲ. ಉ.—ಲೇಬರ್ ಆಕ್ಟನ್ನು ಇಲ್ಲಿಗೂ ಆಚರಣೆಗೆ ತರುವ ಭಾಗದಲ್ಲಿ ಮದ್ರಾಸ್ ಸರ್ಕಾರದವರ ಕೂಡ ಪತ್ರವ್ಯವಹಾರವನ್ನು ನಡೆಸಿ, ಅನುಷ್ಠಾನಕ್ಕೆ ತರುವ ಭಾಗವು ಸರ್ಕಾರದವರಿಂದ ಪರ್ಯಾಲೋಚಿಸಲ್ಪಡುವುದು.

ಪ್ರಾ.—ಪತ್ರಿಕಾ ಸ್ವಾತಂತ್ರ್ಯ ನಿರ್ಬಂಧವಿಧಿಯಿಂದ ಪತ್ರಿಕಾಪ್ರಕಾಶಕರಿಗೂ, ಪತ್ರವ್ಯವಹಾರಕರಿಗೂ ತಮ್ಮಭಿಪ್ರಾಯಗಳನ್ನು ಧಾರಾಳವಾಗಿ ಬರೆಯಲವಕಾಶವಿಲ್ಲದಿರುವುದರಿಂದ ಈ ನಿರ್ಬಂಧ ವಿಧಿಯನ್ನು ತಪ್ಪಿಸಿಕೊಡಬೇಕು. ಒಂದುವೇಳೆ ಹಾಗೆಮಾಡದಿದ್ದಲ್ಲಿ ಪತ್ರಿಕೆಗಳನ್ನು ಹೊಸದಾಗಾರಂಭಿಸಲಪೇಕ್ಷಿಸುವವರು ಸರ್ಕಾರದಪ್ಪಣೆಯನ್ನು ಮುಂದಾಗಿತೆಗೆದುಕೊಳ್ಳಬೇಕೆಂಬ ಮತ್ತೂ ಪ್ರಕಾಶಕರನ್ನು ಯಾವುದಾದರೂ ತಪ್ಪಿತಕ್ಕಾಗಿ ವಿಚಾರಣೆಯಿಲ್ಲದೆ ದೇಶಭ್ರಷ್ಟರನ್ನಾಗಿ ಮಾಡಲ್ಪಡುವರೆಂಬ ನಿರ್ಬಂಧದ ವಿಧಿಯನ್ನು ತಪ್ಪಿಸಿಕೊಡಬೇಕು. ಅಪರಾಧವನ್ನು ಮಾಡಿದಂತಹ ಲೇಖಕರನ್ನು ಚೀಫ್‌ಕೋರ್ಟಿನ ಫುಲ್‌ಬೆಂಚಿನವರು ವಿಚಾರಿಸಲವಕಾಶವನ್ನು ಕಲ್ಪಿಸಿಕೊಡಬೇಕು.

ಈ ವಿಧಿಯು ಅನುಷ್ಠಾನಕ್ಕೆ ತರಲ್ಪಟ್ಟಾರಭ್ಯ ಈ ದೇಶದಲ್ಲಿ ಬಹು ಉಪಯುಕ್ತವಾಗಿದ್ದ ಕೆಲ ಪತ್ರಿಕೆಗಳು ಪ್ರಕಟಗೊಳ್ಳದೆ ನಿಂತುಹೋಗಿರುವುವು. ಇಂಗ್ಲೀಷ್ ಜನರಿಂದ ನಡೆಸಲ್ಪಡುವ ಪತ್ರಿಕೆಗಳಲ್ಲಿ ಎಂತಹ ಕಠಿನವಾದ ಲೇಖನಗಳು ಪ್ರಕಟವಾದರೂ ಆಕ್ಷೇಪಿಸಲ್ಪಡುತ್ತಿಲ್ಲವು. ಈ ನಮ್ಮ ದೇಶೀಯ ಪತ್ರಿಕೆಗಳಿಗೆ ಈ ನಿರ್ಬಂಧವಿರುವುದರಿಂದಲೇ ಸ್ಥಳೀಯಾಧಿಕಾರಿಗಳ ಸ್ವೇಚ್ಛಾವರ್ತನವು ಬಹಿರಂಗವಾಗಿ ಖಂಡಿಸಲ್ಪಡುವುದಕ್ಕವಕಾಶವಿಲ್ಲವಾದ ಪ್ರಯುಕ್ತ ಹೆಸರಿಲ್ಲದ ಅರ್ಜಿಗಳು ಹೆಚ್ಚಲು ಕಾರಣವಾಗಿದೆ. ನಮ್ಮ ದೇಶದ ವಿದ್ಯಮಾನಗಳು ಆಸ್ಟ್ರೇಲಿಯಾ ಕಾನಡಾ ಮೊದಲಾದ ಪರದೇಶಗಳ ವಿದ್ಯಮಾನಗಳಂತಿರಬೇಕೆಂದು ಪದೇಪದೇ ಹೇಳಲ್ಪಡುತ್ತಿರುವುದು. ಆದರೆ ಈ ದೇಶದ ಪತ್ರಿಕೆಗಳಿಗಿರುವ ನಿರ್ಬಂಧವು ತಪ್ಪಿದಹೊರತು ಅಂತಹ ಅಭಿವೃದ್ಧಿಗವಕಾಶವೆಲ್ಲಿರುವುದು? ಉ.—ನಮ್ಮ ಸಂಸ್ಥಾನದ ವೃತ್ತಪತ್ರಿಕೆಗಳ ಸಂಖ್ಯೆಯು ಹೆಚ್ಚಬೇಕೆಂಬುದು ಸರ್ಕಾರದವರಭಿಪ್ರಾಯವಾಗಿರುವುದು. ಈ ನಿರ್ಬಂಧ ವಿಧಿಯ ವಿಷಯವು ಪರ್ಯಾಲೋಚಿಸಲ್ಪಡುವುದು.

ಪ್ರಾ.—ಬಾಲ್ಯವಿವಾಹ ನಿರ್ಬಂಧವಿಧಿಯ ಪ್ರಕಾರ ಈಗಿರುವ ಹುಡುಗಿಯರ ವಯಸ್ಸನ್ನು ೮ ರಿಂದ ೧೦ ಕ್ಕೂ ಹುಡುಗರ ವಯಸ್ಸನ್ನು ೧೪ ರಿಂದ ೧೬ ಕ್ಕೂ ಹೆಚ್ಚಿಸಬೇಕು. ಉ.—ಇಂತಹ ಸಮಾಜ ಸುಧಾರಣಾವಿಚಾರಗಳನ್ನು ಜನರು ತಾವುತಾವೇ ಮಾಡಿಕೊಳ್ಳತಕ್ಕದ್ದಾಗಿದೆ. ಮತ್ತೂ ಪ್ರಜೆಗಳೆಲ್ಲರೂ ಒಮ್ಮುಖವಾಗಿ ಅಭಿಪ್ರಾಯಪಟ್ಟಲ್ಲಿ ಸರ್ಕಾರದವರು ಕೈಹಾಕಬಹುದು. ಈ ಸಭೆಯಲ್ಲಿ ಬಾಲ್ಯವಿವಾಹ ನಿರ್ಬಂಧವಿಧಿಯನ್ನು ಬದಲಾಯಿಸುವ ವಿಚಾರದಲ್ಲಿ ಅಂಗೀಕರಿಸುವವರೆಷ್ಟು ಎಂಬುದನ್ನು ಕೈಯೆತ್ತಿರಿ ನೋಡುವ [೨೦ ಜನರು ಅಂಗೀಕಾರಕ್ಕಾಗಿಯೂ, ೩೮ ಜನರು ಅನಂಗೀಕಾರಕ್ಕಾಗಿಯೂ ಕೈಯೆತ್ತಿದರು.] ಅದಕ್ಕೆ ದಿವಾನರು—ಎರಡು ಪಕ್ಷದಭಿಪ್ರಾಯವೂ ಸಮವಾಗಿದೆ. ನಿಮ್ಮಗಳಭಿಪ್ರಾಯವನ್ನು ತಿಳಿಯುವಬಗೆಗೆ ಈರೀತಿ ಕೇಳಿದುದೇ ಹೊರತು ಅನ್ಯಥಾ ಅಲ್ಲವು. ನಮ್ಮ ಸುತ್ತಲೂ ಕುಳಿತಿರುವ ಅಧಿಕಾರಿಗಳು (ಪ್ರಾಯಶಃ ೨೩ ಮಂದಿಗಳು) ಬದಲಾವಣೆಯಾಗಬೇಕೆಂದಭಿಪ್ರಾಯ ಪಡುತ್ತಾರೆ.

ಪ್ರಾ.—ಈ ಸಂಸ್ಥಾನದಲ್ಲಿ ಹೊಸವಾಗುಪಯೋಗಕ್ಕೆ ತರಲ್ಪಟ್ಟಿರುವ ಸ್ಟಾಂಪುಗಳಲ್ಲಿರುವ ಶ್ರೀಮನ್ಮಹಾರಾಜರವರ ಭಾವಚಿತ್ರವು ಸರಿಯಾಗಿಲ್ಲವು. ಅಲ್ಲದೆ ಈ ಸ್ಟಾಂಪಿನಲ್ಲಿ ಮುದ್ರಿತವಾಗಿರುವ ಅಕ್ಷರಗಳು ಕನ್ನಡನಾಡಿಗೆ ಅಪಮಾನಕರವಾಗಿರುವುದು. ಮತ್ತೂ ಭಾವಚಿತ್ರಕ್ಕೆ ರಂಧ್ರವನ್ನು ಹಾಕಿ ಅರೂಪ ಮಾಡುವುದು ಯುಕ್ತವಾಗಿಲ್ಲವು. ಉ.—ಪರ್ಯಾಲೋಚಿಸಲ್ಪಡುವುದು.

ಪ್ರಾ.—ಮೈಸೂರ ರಿಜಿಸ್ಟ್ರೇಷನ್ ರೆಗ್ಯುಲೇಷನ್ ೧೮ ನೆಯ ಸೆಕ್ಷನ್ನಿನಲ್ಲಿ ಕೆಲ ಪತ್ರಗಳನ್ನು ಬೇಕಿದ್ದಲ್ಲಿ ರಿಜಿಸ್ಟರ್ ಮಾಡದೆ ಬಿಡಬಹುದೆಂಬುದನ್ನು ತಪ್ಪಿಸಿ ಎಲ್ಲ ಪತ್ರಗಳೂ ರಿಜಿಸ್ಟರ್ [illegible]ತಲ್ಪಡಲೇ ಬೇಕೆಂದು ತಿದ್ದುಪಡಿಮಾಡಿಕೊಡಬೇ[illegible] ಉ.—೧೦೦ ರೂಪಾಯಿಗಳೊಳಗಿರುವ ಪತ್ರಗಳನ್ನು ರಿಜಿಸ್ಟರ್ ಮಾಡಿಸಲೇಬೇಕೆಂದು ನಿರ್ಬಂಧಪಡಿಸುವ ಆವಶ್ಯಕತೆಯು ಸರ್ಕಾರದವರಿಗೆ ಕಂಡುಬರುವುದಿಲ್ಲವು.

ಪ್ರಾ.—ಸಂಸ್ಥಾನದ ಸರ್ಕಾರಿಯುದ್ಯೋಗಸ್ಥರಲ್ಲಿ ಲಂಚವನ್ನುತೆಗೆದು ಕೊಳ್ಳುವುದು ನಿತ್ಯವಲ್ಲೂ ಹೆಚ್ಚುತ್ತಿದೆ. ಬ್ರಿಟಿಷ್‌ಸರ್ಕಾರದಲ್ಲಿ ಈ ದುಷ್ಟಪದ್ಧತಿಯು ಇಲ್ಲಿರುವಷ್ಟಿಲ್ಲ. ಲಂಚವನ್ನು ಕೊಟ್ಟವನೂ ಮತ್ತೂ ತೆಗೆದುಕೊಂಡವನೂ ಶಿಕ್ಷೆಗೆ ಗುರಿಮಾಡಲ್ಪಡುವವರಾದುದರಿಂದ, ಅನಿವಾರ್ಯ ಸಂದರ್ಭದಿಂದ ಲಂಚವನ್ನು ಕೊಡಬೇಕಾಗಿ ಬಂದರೂ ಕೊಟ್ಟವರು ತಾವು ಶಿಕ್ಷೆಗೆ ಗುರಿಯಾಗಬೇಕಾಗುತ್ತದೆಂಬ ಭಯದಿಂದ ಬಾಯನ್ನು ಬಿಡದೆ ಇರಬೇಕಾಗಿರುತ್ತಾದ ಪ್ರಯುಕ್ತ ಈ ಕೆಟ್ಟಪದ್ಧತಿಯು ಬಹು ವಿಶೇಷವಾಗಿ ವ್ಯವಹರಣೆಯಲ್ಲಿರುತ್ತದೆ. ಅದುಕಾರಣ, ಸರ್ಕಾರದವರು ಈ ವಿಚಾರದಲ್ಲಿ ಪೂರ್ಣಲಕ್ಷ್ಯವಿಟ್ಟು ಲಂಚಕೊಟ್ಟವರನ್ನು ಶಿಕ್ಷೆಗೆ ಗುರಿಮಾಡದೆಬಿಟ್ಟಲ್ಲಿ ತೆಗೆದುಕೊಂಡ ವಿಚಾರವು ನಿರ್ಭಯದಿಂದ ಹೊರಬಿದ್ದು ಮೇಲ್ಪಟ್ಟಧಿಕಾರಿಗಳ ಗಮನಕ್ಕೆ ಬರಲವಕಾಶವಾಗಿ ಅದರ ನಿಗ್ರಹಕ್ಕೆ ತಕ್ಕ ಮಾರ್ಗವು ಕಲ್ಪಿಸಲ್ಪಡಲಾಗುವುದು. [ಚೀಫ್ ಇಂಜನಿಯರು-ಬ್ರಿಟಿಷ್ ಸೀಮೆಯಲ್ಲಿ ಲಂಚವನ್ನು ತೆಗೆದುಕೊಳ್ಳುವುದು ಹೆಚ್ಚಿರುವಷ್ಟು ನಮ್ಮ ಸೀಮೆಯಲ್ಲಿಲ್ಲವೆನ್ನಲು, ಕೆಲ ಮೆಂಬರುಗಳು ಈ ಸೀಮೆಯಲ್ಲಿರುವಷ್ಟು ಹೆಚ್ಚಾಗಿ ಬ್ರಿಟಿಷ್ ಸೀಮೆಯಲ್ಲಿ ಖಂಡಿತವಾಗಿಯೂ ಇಲ್ಲವೆಂದು ಹೇಳಿದರು.] ಉ.—ಲಂಚವನ್ನು ನಿಲ್ಲಿಸುವ ವಿಷಯದಲ್ಲಿ ನೀವು ಕೋರುವಂಥ ಏರ್ಪಾಟುಳ್ಳ ವಿಧಿಯು ಬ್ರಿಟಿಷ್ ಸರ್ಕಾರದಲ್ಲಿಲ್ಲವು; ಅಂತಹ ವಿಧಿಯನ್ನು ಮಾಡುವುದಸಾಧ್ಯವು ಅಲ್ಲದೆ ರೋಗಕ್ಕಿಂತ ರೋಗನಿವಾರಣೋಪಾಯವು ಅನರ್ಥಕಾರಿಯಾದಂತಾಗುವುದು.

ಪ್ರಾ.—ನಮ್ಮ ಸಂಸ್ಥಾನದಲ್ಲಿ ಕಾಫಿ ಬೀಜವನ್ನು ಹುರಿದು ಪುಡಿಮಾಡುವ ಕಂಪೆನಿಗಳು ಕೆಲವಿವೆ. ಇವು ಈ ಪುಡಿಯೊಳಗೆ ಬೇರೆ ಪದಾರ್ಥಗಳನ್ನು ಮಿಶ್ರಮಾಡುವರು, ಈ ರೀತಿ ಬೇರೆ ಪದಾರ್ಥವೆಷ್ಟು ಸೇರಿಸಲ್ಪಟ್ಟಿವೆಯೆಂಬುದನ್ನು ಚೇಟಿಯಮೇಲೆ ಸ್ಪಷ್ಟವಾಗಿ ಬರೆದು ಡಬ್ಬಾದಮೇಲೆ ಹಚ್ಚುವಂತೆ ಒಂದು ವಿಧಿಯಾಗಬೇಕು. ಉ.—ಪರ್ಯಾಲೋಚಿಸಿ ಮಾಡುವುದಾಗುತ್ತದೆ.

ಪ್ರಾ.—ಚರ್ಮವು ನಮ್ಮ ಸೀಮೆಯಿಂದ ವಿಶೇಷವಾಗಿ ಸಾಗಿಹೋಗುವುದರಮೂಲಕ ಅದರ ವ್ಯಾಪಾರವು ಬಹಳ ಹೆಚ್ಚಿರುವುದರಿಂದ ಚರ್ಮದ ಆಸೆಗಾಗಿ ದನಗಳನ್ನು ಕದ್ದು ಅವುಗಳನ್ನು ಕೊಲ್ಲುವುದು ಪ್ರಬಲವಾಗುತ್ತಿದೆ. ಅದುಕಾರಣ ದನಗಳ ಕಳುವನ್ನು ಹಿಡಿದುಕೊಟ್ಟವನಿಗೆ ಬಹುಮಾನವನ್ನು ಕೊಡುವುದಲ್ಲದೆ, ಚರ್ಮದಂಗಡಿಗಳನ್ನು ಆಗಾಗ್ಗೆ ಪರೀಕ್ಷಿಸಲೂ ಮತ್ತೂ ಹೊರಗೆ ಸಾಗಿಹೋಗುವ ಚರ್ಮಕ್ಕೆ ಸುಂಕವನ್ನು ಹಾಕಲೂ ಒಂದು ವಿಧಿಯನ್ನು ಕಲ್ಪಿಸಬೇಕು. ಉ.—ಇದನ್ನು ಕ್ರಮಪಡಿಸುವ ಬಗೆಗೆ ಒಂದು ವಿಧಿಯು ಮಾಡಲ್ಪಟ್ಟು ನಿಯಮನಿರ್ಮಾಣಸಭೆಯಲ್ಲಿ ಚರ್ಚೆಗೆ ತರಲ್ಪಡುವುದಲ್ಲದೆ ಅದು ಕೂಡಲೇ ಅಂಗೀಕೃತವಾಗಿ ಅನುಷ್ಠಾನಕ್ಕೆ ಬರುವಂತೆ ಮಾಡುವೆವು.

ಪ್ರಾ.—ಭಿಕ್ಷುಕರ ಸಂಖ್ಯೆಯು ನಿತ್ಯದಲ್ಲೂ ಹೆಚ್ಚುತ್ತ ಅವರ ಕಾಟವು ಅಸಹ್ಯವಾಗಿರುವುದರಿಂದ ಅವರಿಗಾಗಿ ಒಂದು ನಿರ್ಬಂಧವಿಧಿಯನ್ನು ಕಲ್ಪಿಸಬೇಕಲ್ಲದೆ ಅಂಗವಿಕಲರ ಪೋಷಣೆಗಾಗಿ ಒಂದು ಆಶ್ರಮವನ್ನೇರ್ಪಡಿಸಬೇಕು. ಉ.—ಮ॥ ಆರ್ ಟಿ ಮಹಾದೇವರಾಯರು ಒಂದು ಮಸೂದೆಯನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿರುತ್ತಾರೆ. ಈ ವಿಧಿಯನ್ನು ಮಾಡಬೇಕು ಅಥವಾ ಬೇಡ ಎಂಬ ಬಗೆಗೆ ಮೆಂಬರುಗಳು ಕೈಗಳನ್ನೆತ್ತಿ ತಮ್ಮ ಸಮ್ಮತವನ್ನು ತಿಳಿಸಬೇಕು. [ಸಭಿಕರಲ್ಲಿ ಮೂರು ಭಾಗದವರಿಗಿಂತ ಹೆಚ್ಚಾಗಿಯೇ ವಿಧಿಯಾಗಬೇಕೆಂದು ತಿಳಿಸಲು, ತಮ್ಮಲ್ಲಿಗೆ ಬಂದಿರುವ ಮಸೂದೆಯನ್ನು ನಿಯಮನಿರ್ಮಾಣಸಭೆಯ ಪರ್ಯಾಲೋಚನೆಗಿಡಲ್ಪಡುವುದೆಂದು ದಿವಾನರಪ್ಪಣೆಯನ್ನು ಕೊಡಿಸಿದರು.]

ಪ್ರಾ.—ಬಾಡಿಗೆಗೆ ಬಂಡಿಯನ್ನು ಹೊಡೆಯುವವರು ತಮ್ಮ ಬಂಡಿಯ ಭಾರವನ್ನೂ ದನಗಳ ಶಕ್ತಿಯನ್ನೂ ಲಕ್ಷಿಸದೆ ಹೆಚ್ಚು ಸಾಮಗ್ರಿಗಳನ್ನು ತುಂಬಿ ಮೂಕಪ್ರಾಣಿಗಳಿಗೆ ಬಹಳ ಹಿಂಸೆಯನ್ನು ಕೊಡುತ್ತಿರುವುದರಿಂದ ಆರೀತಿ ಮಾಡದ ಹಾಗೆ ಒಂದು ನಿರ್ಬಂಧವಿಧಿಯನ್ನು ಕಲ್ಪಿಸಿಕೊಡಬೇಕು. ಉ.—ವಿಧಿಯನಿರ್ಬಂಧದ ಭಯದಿಂದ ಜನರನ್ನು ನೀತಿವಂತರನ್ನಾಗಿ ಮಾಡಬೇಕೆನ್ನುವಿರೋ? ಜನರು ಪ್ರಾಣಿಮಾತ್ರದಲ್ಲಿ ದಯಾವಿಶಿಷ್ಟರಾಗಿರಬೇಕಲ್ಲವೆ? ಈ ಕೆಟ್ಟ ಆಚರಣೆಯನ್ನು ತಪ್ಪಿಸಲು ಪೊಲೀಸು ರೂಲ್ಸಿನಲ್ಲವಕಾಶವಿರುವುದು. ಅದನ್ನು ಗಮನಿಸುವಂತೆ ಪೊಲೀಸರಿಗೆ ಅಪ್ಪಣೆ ಕೊಡುತ್ತೇವೆ.

ಪ್ರಾ.—ಒಬ್ಬಧಿಕಾರಿಗೆ ರೆವಿನ್ಯೂ ಮತ್ತೂ ಕ್ರಿಮಿನಲ್ ಕೆಲಸಗಳು ವಹಿಸಲ್ಪಟ್ಟಿರುವುದರಿಂದ ಕಕ್ಷಿಗಾರರಿಗೆ ತೊಂದರೆಯಾಗಿರುವುದಲ್ಲದೆ ಕೆಲಸಗಳು ಸರಿಯಾಗಿ ನಡೆಯದೆ ಸಾವಕಾಶಕ್ಕೆ ಕಾರಣವಾಗಿರುತ್ತದೆ. ಮತ್ತೂ ಸರಿಯಾದ ನ್ಯಾಯವು ದೊರಕುವದಿಲ್ಲವು. ಅದುಕಾರಣ, ರೆವಿನ್ಯೂ ಅಧಿಕಾರಿಗಳಿಗಿರತಕ್ಕ ಕ್ರಿಮಿನಲ್ ಉದ್ಯೋಗವನ್ನು ತಪ್ಪಿಸಿ ಪರಸ್ಥಳ ಸಂಚಾರ ಹೊರಡದೆ ಒಂದೇಸ್ಥಳದಲ್ಲಿರುವವರನ್ನು ಮ್ಯಾಜಿಸ್ಟ್ರೇಟರನ್ನಾಗಿ ನಿಯಮಿಸಿಕೊಡಬೇಕು. ಮುನಸೀಫರ ಸಂಖ್ಯೆಯು ಹೆಚ್ಚಿಸಲ್ಪಟ್ಟು ಸಿವಿಲ್ ಮೊಖದ್ದಮೆಯ ಜತೆಗೆ ತಾಲ್ಲೋಕಿನ ಕ್ರಿಮಿನಲ್ ಕೆಲಸವನ್ನೂ ನೋಡುವಂತೇರ್ಪಾಟಾಗಬೇಕು. ಉ.—ಇದು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಪ್ರಾ.—ಒಂದೇ ವಿಧವಾದ ತೂಕದ ಬಟ್ಟುಗಳನ್ನೂ ಅಳತೆಯ ಸೇರುಗಳನ್ನೂ ಸಂಸ್ಥಾನಕ್ಕೆಲ್ಲಾ ಕೂಡಲೆ ಒದಗಿಸಿಕೊಟ್ಟು ತತ್ಸಂಬಂಧವಾದ ವಿಧಿಯು ಸರ್ವತ್ರ ಆಚರಣೆಗೆ ಬರುವಂತೆ ಮಾಡಿಸಬೇಕು. ಈಗ ಹೊಸದಾಗಿ ಮಾಡಲ್ಪಡುವ ಸೇರು ಬಟ್ಟುಗಳಿಗೆ ಮೃದುವಾದ ಲೋಹವುಪಯೋಗಿಸಲ್ಪಡುತ್ತಿರುವುದರಿಂದ ಅವನ್ನು ದೊಡ್ಡವುಗಳನ್ನಾಗಿಯಾಗಲಿ ಅಥವಾ ಚಿಕ್ಕವುಗಳನ್ನಾಗಿಯಾಗಲಿ ಮಾಡಿಕೊಳ್ಳಲವಕಾಶವಾಗಿರುತ್ತಾದಪ್ರಯುಕ್ತ ಪೂರ್ವದಲ್ಲಿದ್ದಂತೆ ಕಂಚಿನಿಂದ ಸೆಂಟ್ರಲ್ ಜೈಲಿನಲ್ಲಿ ಮಾತ್ರ ಮಾಡುವಂತಾಗಬೇಕು. ತೂಕ ಮತ್ತೂ ಅಳತೆಯ ವಿಧಿಯು ಮಾಡಲ್ಪಟ್ಟು ಬಹಳ ದಿನಗಳಾಗಿದಾಗ್ಯೂ ಹಳೆಯ ಸೇರು ಮತ್ತೂ ಬಟ್ಟುಗಳನ್ನೂ ಉಪಯೋಗದಲ್ಲಿರುವುದರಿಂದ ಜನರ ನಷ್ಟಕ್ಕೆ ಕಾರಣವಾಗಿದೆ. ಅದುಕಾರಣ ಈ ಹೊಸ ಸೇರು ಬಟ್ಟುಗಳು ಎಂದಿನಿಂದುಪಯೋಗಕ್ಕೆ ತರಲ್ಪಟ್ಟಿರುವುವೆಂಬ ಬಗೆಗೆ ಸಂಸ್ಥಾನದ ಎಲ್ಲ ಕಡೆಯೂ ಪ್ರಸಿದ್ಧಿಗೊಳಿಸಲ್ಪಡಬೇಕು. ಪ್ರತಿ ತಾಲ್ಲೂಕಿಗೂ ೫೦೦ ಸೇರು-ಬಟ್ಟುಗಳೂ ಮೈಸೂರು ಬೆಂಗಳೂರು ಪಟ್ಟಣಗಳಿಗೆ ೧೦೦೦ ಸೇರು-ಬಟ್ಟುಗಳೂ ಒದಗಿಸಲ್ಪಡಬೇಕು. ಹಾಗೂ ಕೊಳಗದ ಪ್ರಮಾಣವೂ ಏಕರೂಪವಾಗಿ ಸರಿಪಡಿಸಲ್ಪಡಬೇಕು. ಉ.—ಈ ವಿಚಾರವು ಕೈಗಾರಿಕೆ ಮತ್ತೂ ವ್ಯಾಪಾರ ಶಾಖೆಯವರ ಪರ್ಯಾಲೋಚನೆಗೆ ತರಲ್ಪಡುವುದು.

ಸಶೇಷ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರಘರಾಜೇಂದ್ರ ಮಹಾಸ್ವಾಮಿಗಳವರ ಕೆಣಬರಗಿಯಲ್ಲಿ ರಾಮಸಾಹೇಬ ಶಿವಮೂರ್ತಿಸ್ವಾಮಿ ಕೆಣಬರಗಿ ಮಠ ಇವರಲ್ಲಿಗೆ ಆಗಮನವು.

ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರಘರಾಜೇಂದ್ರ ಮಹಾಸ್ವಾಮಿ ಚಿತ್ರದುರ್ಗ-ಇವರ ಸ್ವಾರಿಯು ಪರಿವಾರ ಸಹಿತ ಶ್ರಾವಣಮಾಸದಲ್ಲಿ ಕೊಲ್ಲಾಪುರದಲ್ಲಿಯ ನೂತನ ಮಠ ಪ್ರತಿಷ್ಠಾ ಕಾರ್ಯವನ್ನು ತೀರಿಸಿಕೊಂಡು ಭಕ್ತಮಾಹೇಶ್ವರರಿಗೆ ಆಶೀರ್ವಾದವನ್ನು ಕೊಡುತ್ತಾ ನಿಪ್ಪಾಣಿ-ಸಂಕೇಶ್ವರಗಳ ಮಾರ್ಗವಾಗಿ ಶಹಾಪೂರಕ್ಕೆ ಬಂದು, ಸರ್ವ ಬಿರುದಾವಳಿಗಳಿಂದ ದಸರೆ ಹಬ್ಬವನ್ನು ಅನ್ನಸಂತರ್ಪಣೆಯನ್ನೂ-ಧರ್ಮದಬಗೆಯ ಸಭೆಗಳನ್ನೂ ಶಾಸ್ತ್ರವಿವೇಚನಗಳನ್ನೂ ಯಥಾಸಾಂಗವಾಗಿ ನಡೆಸುತ್ತಲೂ, ಭಕ್ತರ ಬಿನ್ನಹಗಳನ್ನು ಕೈಕೊಂಡು ಆಶೀರ್ವಾದಗಳನ್ನು ಕೊಡುತ್ತಿರುವಲ್ಲಿ, ಮಹಾಸ್ವಾಮಿಗಳವರ ಸ್ವಾರಿಯು ಪರಿವಾರ ಸಹಿತ ಕೆಣಬರಗಿಗೆ ದಯಮಾಡಿಸಬೇಕೆಂದು ರಾ॥ ಸಾ॥ ಶಿವಮೂರ್ತಿಸ್ವಾಮಿಗಳು ವಿಜ್ಞಾಪನೆಯಮಾಡಿದ್ದನ್ನು ಮಾನ್ಯಮಾಡಿ, ರವಿವಾರ ತಾ॥ ೪-೧೦-೧೯೧೪ ಮುಂಜಾನೆ ೮ ಘಂಟೆಗೆ ಸರಿಯಾಗಿ ಅಡ್ಡಪಾಲಕಿ, ಮೂರ್ಚಾಲ, ಪಂಚಕಲಶ, ಮಕರತೋರಣ, ಹಗಲುದೀವಟಿಗೆ ಮುಂತಾದ ಬಿರುದಾವಳಿಗಳಿಂದ ನಗಾರಿ ಶಾಬತು ಕುದುರೆಸ್ವಾರರಿಂದ ಒಡಗೂಡಿ ಬರಲು, ಪುರಜನರೆಲ್ಲರೂ ಜಾತಿಭೇದಗಳಿಲ್ಲದೆ ಪ್ರೇಮಪೂರಿತರಾಗಿ ಸ್ವಾಮಿಗಳನ್ನ ಇದಿರುಗೊಂಡು, ಚಂದ್ರವಾದ್ಯ, ಸೂರ್ಯವಾದ್ಯ, ಬ್ಯಾಂಡುಹಲಿಗಿ, ಕಹಳೆ, ತಾಸೆ, ಭಜಂತ್ರಿ, ಕರಡಿ, ತೊಳ್ಳು ಮುಂತಾದ ಮಂಗಲವಾದ್ಯಗಳೊಡಗೂಡಿ ಊರೆಲ್ಲಾ ಮೆರವಣಿಗೆಯಾಗಿ, ೧೨ ಗಂಟೆಗೆ ರಾ॥ ಸಾ॥ ರವರ ಸ್ವಗೃಹಕ್ಕೆ ಮಹಾಸ್ವಾರಿಯು ಅನೇಕಜನರ ಸಮೂಹದೊಡನೆ ಮುಟ್ಟಿತು. ಕೆಣಬರಗಿ ಊರಜನರು ತಮ್ಮತಮ್ಮ ಮನೆಗಳಮುಂದೆ ಚಿತ್ರವಿಚಿತ್ರವಾದ ಧ್ವಜಪತಾಕೆ ಮಕರತೋರಣಗಳಿಂದ ಶೃಂಗರಿಸಿ, ಕಾಯಿ ಕರ್ಪೂರ ಮಂಗಳಾರತಿಗಳಿಂದ ಸ್ವಾಮಿಗಳಿಗೆ ನಮಸ್ಕಾರಗಳನ್ನು ಒಪ್ಪಿಸುತ್ತಿದ್ದರು. ಗೋಕಾಕ, ರಬಕವಿ, ರಾಮದುರ್ಗ, ಕಂಣ್ಣೂರ, ಬೆಳಗಾವ, ಶಾಹಾಪೂರಕಡೆಯಿಂದ ಅನೇಕ ಸ್ವಾಮಿಗಳೂ ಭಕ್ತಮಾಹೇಶ್ವರರೂ ದರ್ಶನಾಪೇಕ್ಷೆಗಾಗಿ ಬಂದಿದ್ದರು. ಮಹಾಸ್ವಾಮಿಗಳ ಸ್ವಾರಿಯು ಮನೆಗೆ ಮುಟ್ಟಿದಕೂಡಲೇ ಪ್ರಸಿದ್ಧ ಫೋಟೋಗ್ರಾಫರ್ ಎಸ್. ಮಹಾದೇವಸನ್ಸ ಬೆಳಗಾಂವ ಇವರಿಂದ ಭಾವಚಿತ್ರಗಳನ್ನ ತೆಗಿಸಿ ನಂತರ ಸಭೆಯನ್ನು ಮಾಡಿ ರಾ॥ ರಾ॥ ಲಿಂಗಪ್ಪಾ ಕಾರಭಾರಿ, ಮಂಜಪ್ಪಾ ಹರಡೆಕರ ಎಡಿಟರ ಧನುರ್ಧಾರಿ ದಾವಣಗೇರಿ, ಶಿ॥ ರಾ॥ ಶಿವಬಸಯ್ಯಾ ಹೆಡ್ಡಮಾಸ್ತರ ಇವರ ಭಾಷಣಗಳೂ ಆದನಂತರ ರಾ॥ ಸಾ॥ ಶಿವಮೂರ್ತಿಸ್ವಾಮಿಗಳು-ಮಹಾಸ್ವಾಮಿಗಳು ತಮ್ಮ ಆಮಂತ್ರಣವನ್ನು ಸ್ವೀಕರಿಸಿ ಇಲ್ಲಿಗೆಬಂದದ್ದಕ್ಕೆ ಬಹಳ ಆನಂದವನ್ನೂ ಬಾಕಿಜನರ ಬಗ್ಗೆ ಆಭಾರವನ್ನೂ ಪ್ರದರ್ಶನ ಮಾಡಿದನಂತರ ಮಹಾಸ್ವಾಮಿ ಜಗದ್ಗುರುಗಳು ತಮ್ಮ ಮಂಜುಳವಾಣಿಯಿಂದ ಯಾವತ್ತು ಜನರಿಗೆ ಸಂತೋಷವಾಗುವಂತೆ ಧರ್ಮಜಾಗ್ರತೆಯ ಬಗೆಗೂ, ವಿದ್ಯಾಪ್ರಸಾರದ ಬಗೆಗೂ, ಈಗ ಸದ್ಯಕ್ಕೆ ನಮ್ಮನ್ನಾಳುವ ಸಾರ್ವಭೌಮರಿಗೆ ನಡೆದಿರುವ ಯುದ್ಧದಲ್ಲಿ ನಾವು ಯಾವಯಾವ ಬಗೆಯಿಂದ ಸಹಾಯಮಾಡಬೇಕೆಂಬುದನ್ನು ಅವರಿಗೆ ತೀವ್ರವೇ ಜಯವು ಸಿಗಲೆಂತಲೂ ಉತ್ತಮರೀತಿಯಿಂದ ಜನರಿಗೆ ಬೋಧವಾಗುವಂತೆ ಉಪದೇಶಮಾಡಿದರು. ಅನಂತರ ಲಿಂಗಾರ್ಚನೆಗೆ ಸಮಯವಾದ ಮೂಲಕ ಗಂಧಪರಿಮಳ ತಾಂಬೂಲ ಫಲಪುಷ್ಪಗಳನ್ನು ಸರ್ವರಿಗೂ ಅರ್ಪಿಸಿ ಸಭೆಯು ಬರಖಾಸ್ತ ಮಾಡಲ್ಪಟ್ಟಿತು. ಆ ಕಾಲಕ್ಕೆ ಸರ್ವರಿಗೂ ಭೋಜನದ ವ್ಯವಸ್ಥೆ ಮಾಡಲ್ಪಟ್ಟಿತು. ಮಹಾಸ್ವಾಮಿಗಳವರ ಸ್ವಾರಿಯು ೪ ದಿವಸ ಕೆಣಬರಗಿಯಲ್ಲಿ ಮುಕ್ಕಾಮು ಮಾಡಿ ಮುಂದೆ ಗುರುವಾರ ಬೆಳಗಾಂವಿಯ ಭಕ್ತಜನರ ಆಮಂತ್ರಣವನ್ನು ಸ್ವೀಕರಿಸಿ ಕ್ಷಿಪ್ರದಲ್ಲಿಯೇ ಧಾರವಾಡ ಲಕ್ಷ್ಮೇಶ್ವರಗಳ ಮಾರ್ಗವಾಗಿ ತಮ್ಮ ಶೂನ್ಯಸಿಂಹಾಸನ ಮಠಕ್ಕೆ ದಿಜಯಂಗೈಯುವರಾಗಿ ತಿಳಿಯುತ್ತದೆ.

ಪ್ರತ್ಯಕ್ಷದರ್ಶಿ.

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೈಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳಸಹಿತ ಆದ ಸಮಾರಂಭ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೊ (ರಾಮೂಡಿಕೆರ ಚಿತ್ರದಂತೆ, ಕಲ್ಪಿತವಲ್ಲ) ಕ್ರಯ ಫುಲ್ಲಸೈಜು ಬಣ್ಣದ್ದು ೧। ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೊ ಸಿಕ್ಕುತ್ತವೆ ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.

ಹೊಸಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರಪಳಿಗೆ ಹಚ್ಚುವಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಈಪ್ರಕಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ।||= , ೧, ೧।, ಪ್ರಕಾರ, ಮತ್ತೂ ಬೆಳ್ಳೀದು ರು ೧॥ ರೋತ್ ಗೋಲ್ಡ ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨।|| ರೂ.

ಪರೂರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೇಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ

ನಮ್ಮವಿಳಾಸ— ಗಂಗಪ್ಪಾ ಜೀರಿಗೆ,
ಆರ್ಟಿಸ್ಟ್ ಸೊಲ್ಲಾಪುರ.

25

೧೯೧೫ ನೆಯ
ಶ್ರೀ ಸೀತಾರಾಘವ
ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.



ಶಾಯಿ ಇಳಿಯದ ಉತ್ತಮವಾದ ಕಾಗದ ಮುದ್ದಾದ ಮುದ್ರಣ. ಅನೇಕವಾದ ಹೊಸಸಂಗತಿಗಳಿವೆ.

೧ ನಂ—ಸಣ್ಣಸೈಜು ಸಾದಾ	೦-೪-೦
೨ ನಂ—ಪೆನ್ಸಲ್‌ಮುಚ್ಚಳವುಳ್ಳದು	೦-೬-೦
೩ ನಂ—ದೊಡ್ಡಸೈಜು ಸಾದಾ	೦-೬-೦
೪ ನಂ—ಪೆನ್ಸಲ್‌ಮುಚ್ಚಳವುಳ್ಳದು	೦-೮-೦

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ—೧ ಇನಾಮ್.

ಹೆಚ್ಚಾಗಿ ತರಿಸುವವರಿಗೆ ರೂಪಾಯಿ ೧ ಕ್ಕೆ ೦-೨-೦ ಆಣೆ ಕಮಿಷನ್ ದೊರೆಯುವುದು. ವಿಳಾಸ:—
ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.

2

ಶುದ್ಧ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

42

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪುದ್ರೇಕವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರ ಕಫ, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣಜಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ,ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦ ೮೦ ತೋಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ:—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸಾಂಕರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠತಮವಾದ

53

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರರಜ್ವರ ನಾಲ್ಕರಜ್ವರ- ಮಲೇರಿಯಾಜ್ವರ- ತಲೆನೋವು- ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಶೆಳೆತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ. ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು ಉಬ್ಬಸ, ವಾಂತಿ, ನಾಕರಿಗೆ, ಮಲಬಂದ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತತ್ಕ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ. ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ಡಿ॥

S.U.N.&Co
BENARES CITY.
KASHI
VISHWESHWAR.

53

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಲಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯು. ಎನ್. ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ದಿ ಜನರಲ್ ಏಜೆನ್ಸಿ, ಮೈಸೂರು.

ಕಾದಂಬರಿಗಳು:— ಚಂಡಮಾರುತ ೦-೨-೦; ಚರಿತಾಮೃತಂ ೦-೬-೦; ರಾಜಕಥಾವಲ್ಲರಿ ೦-೬-೦; ಪೀಟರಿನಚತ್ರಿರಿ ೦-೨-೦; ವಿಯೋಗಿನಿ ೦-೩೦-; ಉನ್ಮತ್ತೆ ೦-೨-೬; ಸೀತೆ ೦-೬-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 54

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ -೦-೧೨ ೬-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹನಾಶಕ ಚೂರ್ಣ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು. ಟಿ. ಎಲ್. ಉಪಾಧ್ಯಾಯ,

ಸುಗಂಧಕಾರಿ,

ಮೈಸೂರು.

23

43 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೬೧೨ ಪುಟ) ಟಪಾಲು ಹಾಸಲು ೪ ಆಣೆ. ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೮-೦. (೬೩೬ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಕ್ಚಾತುರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಲಿಚ್ಛೆಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಳ್ಳಾಸೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೬೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ. ೧-೪-೦ ಟಪಾಲ್ ಹಾಸಲು ೩ ಆಣೆ. ಈಗಲೇ ಬರೆ ನಿರಿ. ನಮ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಾಲಾಮಿಸ್ರಿಯು ಕಾಬೂಲ್ ದೇಶದಲ್ಲಿ ಪೌಂಡು ೧ ಕ್ಕೆ ೧-೧೦-೦ ಇತ್ತು ಈಗ ಪೌಂಡು ೧ಕ್ಕೆ ೩-೪-೦ ಆಗಿದೆ. ಆದ್ದರಿಂದ ಇದರ ಕ್ರಯ ೨-೦೦ ರೂಪಾಯಿ ಮಾಡಿರುತ್ತೆ. 10

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬಾ.

ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ವಿನ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದೂ, ತಲೆಯ ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು ಹಳೇ ತಲೆ ನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಸೇಖರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು.

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ
೩೦೦ ರೂ. ಬಹುಮಾನವಾಗಿ ಕೊಡಲ್ಪಡುವುದು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನದ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧ಕ್ಕೆ ರೂ. ೨-೦-೦. ಟಪ್ಪಾಲ್‌ಖರ್ಚು ಬೇರೆ. ಅನುಪಾನಪತ್ರಿಕೆ ಔಷಧದಸಂಗಡ ಇರುತ್ತೆ.

ಡಿ. ಮನ್ನಾಲಾಲ್, 5 ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.
ನಮ್ಮ ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು. 21

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೬ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧ • •

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ. ಮೈಸೂರು

ನ್ಯಾಯದರ್ಪಣ.

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾ
ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿ
ಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ ವ್ಯ
ಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ
ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸ್
ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಅಚ
ಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ಪತ್ರಿಕೆಗ
ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟು
ಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರು
ತ್ತವೆ. ಬೆಲೆ ರೂ. 1-8-0. ವಿ. ಪಿ. ಮೂಲ್ಯ 1-12-0

ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

ಗಂಧರಾಜ ನಸ್ಯದಪುಡಿ.



ಈ ಪುಡಿಯನ್ನು ಹಾಕಿಕೊಳ್ಳುವ
ದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು
ಕೆಟ್ಟವಾಸನೆಬರುವುದು, ಶೀತ, ನೆಗಡಿ
ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸ
ಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ
ತಲೆ ನೋಯುವುದು, ತಲೆಯಲ್ಲಿ ನೀರ
ತುಂಬಿ ಧಿಮ್ಮೆನ್ನುವುದು, ಈ ಯಾವುದ
ಗಿದರೂ ತಪ್ಪದೆ ಗುಣವಾಗುತ್ತದೆ
ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚ
ಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿ
ರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ
ಆಣೆ. ೧ ಡಜ಼ನ್ ಡಬ್ಬಿಗೆ ೨-೨-೦

ಉತ್ತಮವಾದ ನಸ್ಯದಪುಡಿ.

ಧಾತು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊ
ಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನ
ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣ
ನಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮ
ತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿ
೧೦ ಆಣೆ ೬ ಸೇರಿಗೆ ೨-೮-೦

ಮುಬೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು
ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋ
ಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸು
ವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪ
ಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜ಼ನ್ ಡಬ್ಬಿಗ
ಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್
32 ಕೊಳ್ಳೇಗಾಲದ ತಾಲ್ಲೂಕು.

೧೯೧೪ನೆಯಇಸವಿ ಅಕ್ಟೋಬರ್ ತಾ|| ೧೧ರಿಂದ ೧೯೧೪ನೆ
ಯ ಅಕ್ಟೋಬರ್ ತಾ|| ೧೭ರ ವರೆಗೆ ಸಲ್ಲುವ ಶಾಲೀವಾಹನ
ಶಕ ೧೮೩೬ ನೆಯ ಆನಂದನಾಮ ಸಂ|| ದ ಆಶ್ವಯುಜ
ಬ|| ಸಪ್ತಮಿಯಿಂದ ಆಶ್ವಯುಜ ಬ|| ತ್ರಯೋದಶಿವರೆಗಿನ
ಪಂಚಾಂಗ.

ತಾ||	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ತೇದಿ ಕನ್ಯಾ
11	ಭಾನು	ಸಪ್ತ	38-26	ಆರಿದ್ರಾ	45-5	26
12	ಸೋ	ಅಷ್ಟ	39-18	ಪುನ	47-21	27
13	ಮಂ	ನವ	38-57	ಪುಷ್ಯ	48-22	28
14	ಬುಧ	ದಶ	37-11	ಆಶ್ಲೇ	48-10	29
15	[1]ಗುರು	ಏಕಾ	34-27	ಮಖಾ	46-55	30
16	ಶುಕ್ರ	ದ್ವಾದ	30 39	ಪುಬ್ಬಾ	44-38	31
17	[2]ಶನಿ	ತ್ರ	26-0	ಉತ್ತ	41-28	1

(1) ಕೇತ್ರಾಂ, ಸರ್ವತ್ರೈಕಾದಶೀ, ಕೋ, ಗಂ, ವಾ,
ಅರ್ಪ್ಪ, ಸ್ವಾಮಿ, ತಿರುನಕ್ಷತ್ರಂ, ಕಾಲಸ್ನಾನಂ, ಯಮತ
ರ್ಪಣಂ, ವಿಷುವತ್ಪುಣ್ಯಕಾಲಃ. (2) ತ್ರಯೋದಶಿತಿಥಿ,
ನರಕಚತುರ್ದಶಿಪ್ರಯುಕ್ತ, ನೀರುತುಂಬುವ ಹಬ್ಬ, ಚಂ
ದ್ರೋದಯ.

ಮ್ಯಾನೇಜರ್ ಪೈ. ವಿರೂಪಾಕ್ಷಯ್ಯನವರಿಂದ ಕೋ
ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED, No M 124

ಮೈಸೂರ್ ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು

ವಾರ್ಷಿಕ ಚಂದಾ ೧—೦—೦

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೇಯಾತ್ ।
ಶ್ರೀಮತ್ಕೃಷ್ಣನೃಪಾಲಮತ್ತಮಕಲಾಲೋಲಂಸುಧೀಪುಂಗವ, ಸ್ತೋಮಾಧೀಶ್ವದಶೇಲ ನಾಕಲಿತಸಾದ್ಗುಣ್ಯಾಲವಾಲಂವಲಂ।
ಸಿಮಾತೀತ ಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ / ಪ್ರೇಮಂಬಿಭ್ರತೀಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ।

ಅಂಚೆವೆಚ್ಚ ಸೇರಿ ೧—೧೪—೦

REGISTERED, No M 124

ಸಂಪುಟ ೨೬) ಮೈಸೂರ್ ಸ್ಟಾರ್ ಸನ್ ೧೯೧೪ ನೆಯ ಇಸವಿ ಅಕ್ಟೋಬರ್ ತಾರೀಖು ೧೮ನೆಯ ಭಾನುವಾರ (ಸಂಚಿಕೆ ೪೨

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಈಗತಾನೇ ಸೀಮೆಯಿಂದ ಬಂದಿರತಕ್ಕ ರಬಿಂವಾರ್ ವಾಚ್‌ಗಳ ಕ್ರಯದಪಟ್ಟಿ. 36



೧ ರಾಸ್ಕೋಪ್ ಸಿಸ್ಟಂಪೇಟೆಂಟ್‌ಸ್ವಿಸ್‌ಮೇಡ್‌ವಾಚ್	೧ ಕ್ಕೆ	೨-೮-೦
೨ ಗರ್ಟ್ಯೆಂ ರೈಲ್ವೇ ರೆಗ್ಯುಲೇಟರ್ ವಾಚ್	೧ ಕ್ಕೆ	೩-೮-೦
೩ ಡಿಟೋ ನಮೂನೆ ಚೆಕ್ಕೈಜ್ ವಾಚ್	೧ ಕ್ಕೆ	೪-೪-೦
೪ ಡಿಟೋ ಚೆಕ್ಕೈಜ್ ಸ್ಪೆಷಲ್ ಸರ್ವಿಸ್‌ವಾಚ್	೧ ಕ್ಕೆ	೬-೮-೦
೪ ಚ್ಯಾಟಲ್‌ವರ್ತ್ ಡ್ರುರ್ ವಾಚೆಂಬ ಅತ್ಯುತ್ತಮವಾದ ಲೀವರ್ ವಾಚ್	೧ ಕ್ಕೆ	೮-೧೨-೦
೫ ಡಿಟೋ ನಮೂನೆ ಕೆಂಪುಗಳನ್ನು ಕೆತ್ತಿರುವ ವಾಚ್	೧ ಕ್ಕೆ	೯-೪-೦
೬ ಪೀರ್ಲೆಸ್ ವಾಚೆಂಬ ತೆಳುವಾದ ಮತ್ತೂ ಗ್ಯಾರೆಂಟಿಯುಳ್ಳ ವಾಚ್ (ಸಾವಿರಾರು ವಿಕ್ರಯ)	೧ ಕ್ಕೆ	೧೦-೮-೦
೭ ವಾರಕ್ಕೊಂದಾವರ್ತಿ ಬೀಗಕೊಡುವ ನಿಕ್ಕಲ್ ಬೆಳ್ಳಿಕೇಸ್ ವಾಚ್	೧ ಕ್ಕೆ	೧೦-೮-೦
೮ ಡಿಟೋ ನಮೂನೆಯಲ್ಲಿ ಅಚ್ಚಬೆಳ್ಳಿಕೇಸಿನ ಚೆಕ್ಕೈಜ್ ವಾಚ್	೧ ಕ್ಕೆ	೧೬-೪-೦
೯ ೩೦ ಘಂಟೆಗೆ ಒಂದಾವರ್ತಿ ಬೀಗಕೊಡುವ ದೊಡ್ಡ ಬರ್ಮಾಟೈಂಪೀಸ್	೧ ಕ್ಕೆ	೧-೪-೦
೧೦ ಡಿಟೋ ನಮೂನೆ ಅಲಾರಂ ಟೈಂಪೀಸ್	೧ ಕ್ಕೆ	೨-೪-೦
೧೧ ಡಿಟೋ ನಮೂನೆಯಲ್ಲಿ ಘಂಟೆ ನಿಮಿಷ ಸೆಕೆಂಡ್ ತೋರಿಸಿ ಅಲಾರಂ ಇದ್ದು ತಾರೀಖು ಸಹ ತೋರಿಸುವ ದೊಡ್ಡ ಟೈಂಪೀಸ್	೧ ಕ್ಕೆ	೩-೪-೦
೧೨ ಖಾತ್ರಿಯಾದ ಅರ್ಸೋನಿಯಾ "ಬಿ" ಟೈಂಪೀಸ್	೧ ಕ್ಕೆ	೨-೮-೦
೧೩ ಡಿಟೋ ಕಂಪೆನಿಯ ಅಲಾರಂಟೈಂಪೀಸ್ (ಬಹಳಮಜಬೂತಾದ್ದು) (ಸಾವಿರಾರುವಿಕ್ರಯ)	೧ ಕ್ಕೆ	೩-೮-೦
೧೪ ಅರ್ಸೋನಿಯಾ ಕಂಪೆನಿಯಲ್ಲಿ ತಯಾರಾದ ಘಂಟೆ, ಅರ್ಧಘಂಟೆ ಹೊಡೆದು ಅಲಾರಂ ಇರತಕ್ಕ ದೊಡ್ಡಟೈಂಪೀಸ್ (ಅನೇಕಜನ ವಿದ್ಯಾರ್ಥಿಗಳು ಇದನ್ನೇ ಉಪಯೋಗಿಸುತ್ತಿದ್ದಾರೆ)	೧ ಕ್ಕೆ	೬-೧೨-೦
೧೫ ಘಂಟೆ, ಅರ್ಧಘಂಟೆ ಹೊಡೆಯುವ ಕ್ಯಾರೇಜ್ ಕ್ಲಾಕೆಂಬ ಟೇಬಲ್ ಘಡಿಯಾರ	೧ ಕ್ಕೆ	೪-೧೨-೦
೧೬ ಡಿಟೋ ನಮೂನೆಯಲ್ಲಿ ಘಂಟೆ, ಅರ್ಧಘಂಟೆಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್	೧ ಕ್ಕೆ	೭-೪-೦
೧೭ ಡಿಟೋ ನಮೂನೆಯಲ್ಲಿ ಘಂಟೆಹೊಡೆಯುವದಕ್ಕೆ ಪ್ರತಿಯಾಗಿ ಗಾನಹಾಡುವ ಕ್ಲಾಕ್	೧ ಕ್ಕೆ	೭-೮-೦
೧೮ ಡಿಟೋ ನಮೂನೆಯಲ್ಲಿ ತಾವಿಷ್ಟಪಟ್ಟ ಟೈಂವಿಗೆ ಕಾಲುಘಂಟೆಕಾಲ ಕರ್ಣಾನಂದವಾಗುವಂತೆ ಮೃದುಮಧುರ ಗಾನಮಾಡತಕ್ಕ ಕ್ಲಾಕ್	೧ ಕ್ಕೆ	೭-೮-೦
೧೯ ಅರ್ಸೋನಿಯಾ ಕಂಪೆನಿಯ ಓವರ್ ಕ್ಲಾಕೆಂಬ ಗೋಡೆಗೆ ತಗಲಿಸುವ (೮ ಮೂಲೆಯ) ಅಷ್ಟಕೋಣಾಕೃತಿಯ ಚೆಕ್ಕೈಜ್ ಕ್ಲಾಕ್	೧ ಕ್ಕೆ	೬-೮-೦

ಈ ಪತ್ರಿಕೆಯ ಚಂದಾದಾರರಿಗೂ ಸ್ಕೂಲ್‌ಮಾಸ್ಟರ್‌ಗಳಿಗೂ ವಿನಂತಿ.

೧೯೧೫ ನೇ ಇಸ್ವಿಯ ಸಚಿತ್ರ ಕ್ಯಾಲೆಂಡರ್‌ಗಳು ವಿಕರಿಗೆ ಸಿದ್ಧವಾಗಿವೆ ಕ್ರಯ ೧ ಕ್ಕೆ ೦-೦-೬ ಪೈ. ೫೦ ಕ್ಕೆ ೦-೧೧-೦ ಆಣೆ ೧೦೦ ಕ್ಕೆ ೧-೫-೦ ಪ್ಯಾಕಿಂಗ್ ಪೋಸ್ಟೇಜು ಮಾಫಿ ೫೦ ಕ್ಯಾಲೆಂಡರ್‌ಗಳಿಗಿಂತಲೂ ಕಡಿಮೆಯಾಗಿ ಪೋಸ್ಟುಮೂಲಕ ರವಾನಿಸಲಾಗುವುದಿಲ್ಲಾ.

ಈ ಕ್ಯಾಲೆಂಡರಿನಲ್ಲಿ ಇಂಗ್ಲೀಷ್ ಮತ್ತೂ ಕನಡ ತಿಂಗಳೂ, ತಾರೀಖು, ವಾರ, ತಿಥಿ, ನಕ್ಷತ್ರ, ಆಯಾಯ ದಿವಸದ ವಿಶೇಷ ದಿವಸಗಳು ವಿಶಿಷ್ಟ ಹಬ್ಬ ದಿವಸಗಳೂ ಇರುವುದಲ್ಲದೆ ಮೈಸೂರ್ ಮಹಾರಾಜರವರ ಮತ್ತೂ ಯುವರಾಜರವರ ಭಾವಚಿತ್ರಗಳೂ ಮತ್ತೂ ಮೈಸೂರ್ ಸಂಸ್ಥಾನದ ಈಗಿನ ಹೊಸ ಅರಮನೆಯಲ್ಲಿ ನಡೆಯುವ ನವರಾತ್ರಿಮಹೋತ್ಸವದ ದರ್ಬಾರ್ ಸಹಿತ ಇರುವ ನಕ್ಷೆಯನ್ನೂ ಸಹ ನುಣುಪಾದ (ಗ್ಲೇಜ್‌ಪೇಪರ್) ಕಾಗದದಲ್ಲಿ ಅಂದವಾಗಿ ಪ್ರಿಂಟ್‌ಮಾಡಿಸಿ ಮೇಲ್ಕಂಡ ದರದಂತೆ ಬಹುಸುಲಭಬೆಲೆಗೆ ಕೊಡುತ್ತಿದ್ದೇವೆ ಯಾದಕಾರಣ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ ಸ್ವಲ್ಪ ಪ್ರತಿಗಳುಮಾತ್ರ ಉಳಿದಿವೆ. ವಿಕರಿಯಾದನಂತರಬರತಕ್ಕ ಆರ್ಡರ್‌ಗಳನ್ನೆಲ್ಲಾ ಹೋದವರುಸುದಂತೆ ಕ್ಯಾನ್ಸಲ್‌ಮಾಡಲಾಗುತ್ತೆ.

ರಬಿಂವಾರ್ ವಾಚ್ ಸರಪಣಿಗಳು.

ನಿಕ್ಕಲ್ ಬೆಳ್ಳಿಯ ವಾಚ್‌ಸರಪಣಿ	೧ ಕ್ಕೆ	೦-೧೨-೦
ಅಚ್ಚಬೆಳ್ಳಿಯ ಜೇಬಿನ ವಾಚ್‌ಸರಪಣಿ	೧ ಕ್ಕೆ	೩-೪-೦
ಅಚ್ಚಬೆಳ್ಳಿಯ ಕೊರಳಸರಪಣಿ	೧ ಕ್ಕೆ	೧-೪-೦
೧೮ ಕ್ಯಾರೆಟ್ ಚಿನ್ನದ ವಾಚ್‌ಸರಪಣಿ	೧ ಕ್ಕೆ	೬-೮-೦
ವಾಚಿನ ಸರಪಣಿ ತುದಿಯಲ್ಲಿ ಹಾಕುವ ಅಚ್ಚಬೆಳ್ಳಿಯ ಶಾಶ್ವತವಾದ ಕ್ಯಾಲೆಂಡರ್ ಅಂದರೆ ಎಷ್ಟು ವರುಷಗಳ ವರಿಗಾದರೂ ತಾರೀಖು ನೋಡಬಹುದಾದ ಕ್ಯಾಲೆಂಡರ್ ಎಂದೆಂದಿಗೂ ಕೆಡತಕ್ಕದ್ದಲ್ಲಾ	೧ ಕ್ಕೆ	೧-೧೨-೦
ಡಿಟೋ ನಮೂನೆಯಲ್ಲಿ ೧೮ ಕ್ಯಾರೆಟ್ ಚಿನ್ನದಿಂದ ತಯಾರಿಸಿದ್ದು	೧ ಕ್ಕೆ	೩-೪-೦

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ಒಂದುಸಾರಿ ಶಾಯಿತುಂಬಿದರೆ ೧೦,೦೦೦ ಶಬ್ದಗಳನ್ನು ಬರೆಯಬಹುದಾದ ಲೇಖಣಿಗಳು.

ಪ್ರತಿಯೊಂದಕ್ಕೂ ೧೪ ಕ್ಯಾರೆಟ್ ಚಿನ್ನದ ನಿಬ್ಬು ಹಾಕಿದೆ.

ನೆಪ್ಚೂನ್ ೨೦೦ ನೇ ನಂ. ಪೆನ್	೧ ಕ್ಕೆ	೧-೧೪-೦
ನೆಪ್ಚೂನ್ ೨೫ ನೇ ನಂ. ಪೆನ್	೧ ಕ್ಕೆ	೨-೧೦-೦
ನೆಪ್ಚೂನ್ ೨೧೦ ನೇ ನಂ. ಪೆನ್	೧ ಕ್ಕೆ	೪-೨-೦

ಪ್ರತಿಯೊಂದು ಪೆನ್ ತರಿಸಿ ಕೊಳ್ಳುವವರಿಗೂ ೪ ಪದಾರ್ಥಗಳನ್ನು ಮುಫತ್ತಾಗಿ ರವಾನಿಸುತ್ತೇವೆ.

೧ ಪೆನ್‌ಗಳನ್ನಿಡತಕ್ಕ ಸುಂದರವಾದ ಪೆಟ್ಟಿಗೆ ೧.
೨ ಪೆನ್ನಿಗೆ ಶಾಯಿಹಾಕುವ ಗಾಜಿನಕೊಳವೆ ೧.
೩ ಪೆನ್‌ಗಳನ್ನು ಕ್ಲೀನ್‌ಮಾಡುವ ವಿಧಾನ ಮತ್ತೂ ಶಾಯಿಹಾಕುವ ವಿಧಾನ ಪ್ರಿಂಟಾಗಿರುವ ಚೀಟಿ ೧.
೪ ಪೆನ್ನನ್ನು ಜೇಬಿಗೆತಗಲಿಸುವ ಸುಂದರವಾದ ಕ್ಲಿಪ್ ೧.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್. ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೬—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೫—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ

ಹೊಸಪುಸ್ತಕಗಳು.

155

ಸಿದ್ಧಾಂತಶಿಖಾಮಣಿ — ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೬೬ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ.— ಬೆಲೆ ೧ ೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ.— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.— ಬೆಲೆ ೧ ೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ.— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ.— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ

ಪಂಡಿತಾರಾಧ್ಯಚರಿತ್ರಂ.— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸುತ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾರಕಮಂಡಲಿ, ಮೈಸೂರು.

ಮೈಸೂರ ಪ್ರಜಾಪ್ರತಿನಿಧಿಸಭೆಯಲ್ಲಿ ಮೆಂಬರುಗಳು ಮಾಡಿದ ಪ್ರಾರ್ಥನೆ, ಮತ್ತೂ ದಿವಾನರು ದಯಪಾಲಿಸಿದ ಉತ್ತರಗಳು.

ಪ್ರಾ.—ಸಾಮಾನ್ಯ ಕ್ರಿಮಿನಲ್ ವಿವಾದಗಳನ್ನು ವಿಚಾರಿಸಿ ಬಗೆಹರಿಸುವುದಕ್ಕಾಗಿ ಮೈಸೂರು ಮತ್ತೂ ಬೆಂಗಳೂರು ಪಟ್ಟಣಗಳಲ್ಲಿ ಆನರರಿ ಮ್ಯಾಜಿಸ್ಟ್ರೇಟರನ್ನು ನಿಯಮಿಸಿರುವಂತೆ ಇತರ ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರುಗಳಲ್ಲೂ ನಿಯಮಿಸಿಕೊಡಬೇಕು. ಉ.—ಇದು ಸರ್ಕಾರದ ಪರ್ಯಾಲೋಚನೆಯಲ್ಲಿದೆ. ಸ್ಥಳೀಕರು ಆ ರೀತಿ ಕೆಲಸಮಾಡುವುದಾದರೆ ಅಗತ್ಯವಾಗಿ ನಡೆಸುವುದಾಗುತ್ತದೆ.

ಪ್ರಾ.—ಎರಡನೆಯ ಅಪ್ಪೀಲನ್ನು ಮಾಡುವಾಗ್ಗೆ ಕೆಳಕೋರ್ಟಿನ ಡಿಕ್ರಿ ಮತ್ತೂ ಜಡ್ಜ್ ಮೆಂಟುಗಳ ಕಾಪಿಗಳನ್ನು ಹೊಸದಾಗಿ ಕೊಡಬೇಕಾಗಿರುವುದು ಕಕ್ಷಿಗಾರರಿಗೆ ನಷ್ಟಕ್ಕೆ ಕಾರಣವಾಗಿರುವ ಪ್ರಯುಕ್ತ ಮೊದಲನೆಯ ಅಪೀಲಿನ ಕಾಲದಲ್ಲಿ ಕೊಟ್ಟ ಡಿಕ್ರಿ ಮತ್ತೂ ಜಡ್ಜ್ ಮೆಂಟ್ ಕಾಪಿಗಳನ್ನೇ ಉಪಯೋಗಿಸುವಂತಾದರೆ ಉಪಕಾರವಾಗುತ್ತದೆ ಉ.—ಆ ಪ್ರಕಾರ ವಿಧಿಯಿದೆ; ಅದು ಆಚರಣೆಗೆ ತರಲ್ಪಡುವುದು.

ಪ್ರಾ.—ಕ್ರಿಮಿನಲ್ ಕೋರ್ಟುಗಳಿಗೆ ಕೊಟ್ಟ ಜಡ್ಜ್ ಮೆಂಟ್ ಕಾಪಿ ಅಥವಾ ಇತರ ದಾಖಲೆಯ ಕಾಗದ ಪತ್ರಗಳ ನಕಲನ್ನು ಮಡಚು ಕೊಟ್ಟು ಪಡೆಯಬೇಕಾಗಿರುವುದು ಕಕ್ಷಿಗಾರರಿಗೆ ತೊಂದರೆಯಾಗಿರುವ ಪ್ರಯುಕ್ತ ಅಸಲು, ದಾಖಲೆ ಕಾಗದದ ಪತ್ರಗಳು ಹಿಂದಕ್ಕೆ ಕೊಡಲ್ಪಡುವಂತಪ್ಪಣೆಯಾಗಬೇಕು ಉ—ನೀವಪೇಕ್ಷಿಸುವ ಪ್ರಕಾರವೇ ವಿಧಿಯಿರುತ್ತದೆ. ಒಂದುವೇಳೆ ಹಾಗೆ ಕೊಡಲ್ಪಡದಿದ್ದಲ್ಲಿ ಚೀಫ್ ಕೋರ್ಟಿಗೆ ಬರೆದುಕೊಂಡರೆ ಅವರು ಕೊಡಿಸುತ್ತಾರೆ.

ಪ್ರಾ.—ಕ್ರಿಮಿನಲ್ ವಿವಾದಗಳಲ್ಲಿ ಅಪರಾಧಿಗೆ ಸಮನ್ಸಿನ ಕೂಡ ಫಿರ್ಯಾದಿನ ನಕಲೂ ಕೊಡಲ್ಪಡುವಂತಾಗಬೇಕು ಉ—ಯೋಚಿಸಿ ನೋಡತಕ್ಕದಾಗಿದೆ.

ಪ್ರಾ.—ಸಿವಿಲ್ ಮತ್ತೂ ರೆವಿನ್ಯೂಹರಾಜುಗಳು ಸರ್ಕಾರದ ಜನರಿಂದ ನಡೆಸಲ್ಪಡುವುದರಿಂದ ಸಮರ್ಪಕವಾಗಿ ನಡೆಸಲ್ಪಡುವುದಿಲ್ಲವಾದ ಪ್ರಯುಕ್ತ ೧೦೦ ಕ್ಕೆ ೫ ರ ಪ್ರಕಾರ ಕಮಿಷನ್ ಕೊಟ್ಟು ಉದ್ಯೋಗಸ್ಥರಲ್ಲದ ಬೇರೆ ಜನರ ಮೂಲಕ ನಡೆಸುವಂತೇರ್ಪಾಟಾಗಬೇಕು. ಉ—ಯೋಚಿಸುತ್ತೇವೆ

ಪ್ರಾ—ಸಿವಿಲ್ ವಿವಾದಗಳಲ್ಲಿ ಕಕ್ಷಿಗಾರರಿಗೆ ಬರಬೇಕಾದ ಹಣಕ್ಕಾಗಿ ಚೆಕ್ಕು ಕೊಡಲ್ಪಡುವುದು ಆದರೆ ಆ ಚೆಕ್ಕುಗಳಿಗೆ ಲಾಯರು ಸೈನ್ ಮಾಡದಿದ್ದರೆ ಖಜಾನೆಯಲ್ಲಿ ಹಣವು ಕೊಡಲ್ಪಡುವುದಿಲ್ಲವು. ಇದರಿಂದ ಕಕ್ಷಿಗಾರರಿಗೆ ಬಹಳ ತೊಂದರೆಯಾಗಿರುತ್ತಾದ ಪ್ರಯುಕ್ತ ಈ ಕ್ರಮವನ್ನು ತಪ್ಪಿಸಿಕೊಡಬೇಕು. ಉ—ಆ ರೀತಿ ವಿಧಿಯಲ್ಲ; ಕಕ್ಷಿಗಾರನ ರುಜು ಗುರ್ತಿಗಾಗಿ ಅವನ ವಕೀಲರಾಗಲಿ ಅಥವಾ ಮತ್ತೊಬ್ಬರಾಗಲಿ ರುಜುಮಾಡಿದಲ್ಲಿ ಹಣವು ಕೊಡಲ್ಪಡತಕ್ಕದೆಂದು ವಿಧಿಯಿದೆ.

ಪ್ರಾ—ಈಗ ಹೊಸದಾಗಿ ಆಚರಣೆಗೆ ತರಲ್ಪಟ್ಟಿರುವ ಕೋರ್ಟು ಕಚೇರಿಗಳಲ್ಲಿ ಕಾಪಿ ಬರೆಯುವ ಕಾಗದಗಳ ಒಂದುಕಡೆ ಮಾತ್ರ ೬೦-೭೦ ಮಾತುಗಳು ಬರೆಯಲ್ಪಡುವುದೂ ೧-೩ ಮಾತುಗಳಿದ್ದರೂ ೩ ಆಣೆಯಂತೆ ತೆಗೆದುಕೊಳ್ಳಲ್ಪಡುವುದೂ ಕಕ್ಷಿಗಾರರಿಗೆ ಬಹಳ ನಷ್ಟಕ್ಕೆ ಕಾರಣವಾಗಿರುವ ಪ್ರಯುಕ್ತ ಮದ್ರಾಸ್ ಸರ್ಕಾರದಲ್ಲಿ ಕಾಗದದ ಒಂದುಕಡೆ ೧೭೫ ಮಾತುಗಳು ಬರೆಯಲ್ಪಡಬೇಕೆಂಬ ನಿರ್ಬಂಧವಿರುವಂತೆ ಇಲ್ಲೂ ಆಚರಣೆಗೆ ತರಬೇಕು. ಉ.—ಈಗಿರುವ ಏರ್ಪಾಟನ್ನು ಲಾಭದ ಮೇಲಿನ ದೃಷ್ಟಿಯಿಂದ ಮಾಡಿರತಕ್ಕದಾಗಿಲ್ಲವು. ಈಗತಾನೇ ಹೊಸದಾಗಿ ಆಚರಣೆಗೆ ತರಲ್ಪಟ್ಟಿರುವುದರಿಂದ ಇನ್ನು ಕೆಲಕಾಲ ಹೀಗೆಯೇ ನಡೆದಲ್ಲಿ ಮುಂದೆ ಪರ್ಯಾಲೋಚಿಸಿ ಒಂದು ಪಕ್ಕದಲ್ಲಿ ಇಷ್ಟೇ ಮಾತುಗಳು ಬರೆಯಲ್ಪಡಬೇಕೆಂದು ನಿರ್ಧರಿಸುವುದಾಗುತ್ತದೆ

ಪ್ರಾ—ಕ್ರಿಮಿನಲ್ ವಿವಾದಗಳಲ್ಲಿ ಸಾಕ್ಷಿಗಳಿಗೆ ಬತ್ತವು ಕೊಡಲ್ಪಡುವಂತಾಗಬೇಕು ಉ.—ಇದು ಸದ್ಯದಲ್ಲಾಗತಕ್ಕದ್ದಲ್ಲವು.

ಪ್ರಾ.—ಸಬ್ ರಿಜಿಸ್ಟ್ರಾರುಗಳು ಕ್ರಯಪತ್ರದ ಸಂಗಡ ವರ್ಗರಾಜೀನಾಮೆಯನ್ನು ತೆಗೆದುಕೊಳ್ಳುವಂತೆ ದಾನಪತ್ರ, ವಿಭಾಗಪತ್ರ, ರಿಲೀಜ್ ಬಾಂಡುಗಳ ಕೂಡ ಕೊಡಲ್ಪಡುವ ವರ್ಗರಾಜೀನಾಮೆಗಳನ್ನೂ ಸ್ವೀಕರಿಸುವಂತಾಗಬೇಕು. ಉ.—ಆರೀತಿ ಅಪ್ಪಣೆ ಕೊಟ್ಟಿದೆ, ಕೂಡಲೇ ಆಚರಣೆಗೆ ಬರಬಹುದು.

ಪ್ರಾ—ಗ್ರಾಮಾಂತರಗಳಲ್ಲಿ ಜನರಿಗೆ ಛಾಪಾಕಾಗದಗಳು ದೊರೆಯುವುದಿಲ್ಲವಾದುದರಿಂದ ಸಾಧಾರಣಕಾಗದಗಳನ್ನು ಕರಾರು ಮೊದಲಾದವುಗಳಿಗುಪಯೋಗಿಸುತ್ತಾರೆ. ಇವು ಕೋರ್ಟಿಗೆ ಹೋದಾಗ ದಂಡವು ತೆಗೆದುಕೊಳ್ಳಲ್ಪಡುವುದರಿಂದ ಗ್ರಾಮದ ಪಟೇಲನು ೧೦-೧೫ ರೂ ಗಳ ಛಾಪಾಕಾಗದವನ್ನಿಟ್ಟು ಮಾರುವಂತಾದಲ್ಲಿ ಲೇವಾದೇವಿಗೆ ಬಹಳ ಅನುಕೂಲವಾಗಿ ಜನರು ವೃಥಾ ದಂಡವನ್ನು ತೆರುವುದು ತಪ್ಪುತ್ತದೆ. ಉ—ವಿಚಾರಿಸಿನೋಡುತ್ತೇವೆ.

ಪ್ರಾ—ಆಧಾರವಾಗಿರುವ ಸ್ವತ್ತು, ಆಧಾರಮಾಡಿಕೊಂಡಿರುವವರಿಗೆ ವಿಕ್ರಯವಾದಲ್ಲಿ ಆಧಾರಪತ್ರದ ಮೊಬಲಗನ್ನು ಕ್ರಯಪತ್ರದ ಮೊಬಲಗಿನ ಕೂಡ ಸೇರಿಸಿಕೊಳ್ಳುವಂತೆ ಅಪ್ಪಣೆಯಾಗಬೇಕು. ಉ—ಹಾಗಾಗಬಹುದು. ಆಪ್ರಕಾರ ಸಬ್ ರಿಜಿಸ್ಟ್ರಾರುಗಳಿಗೆಲ್ಲಾ ಅಪ್ಪಣೆಮಾಡುತ್ತೇವೆ.

ಪ್ರಾ.—ಮನೆಯನ್ನು ಕಟ್ಟುವುದಕ್ಕಾಗಿ ಮರಮುಟ್ಟುಗಳನ್ನೂ, ಮನೆಯ ಬಳಕೆಗಾಗಿ ಸೌದೆಯನ್ನೂ ಸಾಗಿಸಲು ಅಪ್ಪಣೆಯನ್ನು ಪಡೆಯುವುದಕ್ಕಾಗಿ ಕೊಡುವ ಅರ್ಜಿಗೆ ೮ ಆಣೆ ಸ್ಟಾಂಪನ್ನು ಹಚ್ಚಬೇಕೆಂದು ನಿರ್ಬಂಧಪಡಿಸುತ್ತಾರೆ ಇದನ್ನು ತಪ್ಪಿಸಿ ಅಂತಹ ಅರ್ಜಿಗೆ ೧ ಆಣೆ ಸ್ಟಾಂಪನ್ನುಪಯೋಗಿಸುವಂತಪ್ಪಣೆಯಾಗಬೇಕು. ಉ—ಆ ಅರ್ಜಿಗಳಿಗೆ ೮ ಆ. ಸ್ಟಾಂಪನ್ನು ಹಚ್ಚಬೇಕಾದುದಿಲ್ಲವು. ೧ ಆಣೆ ಸ್ಟಾಂಪನ್ನು ಹಚ್ಚಿದರೆ ಸಾಕೆಂಬಂಶಕ್ಕೆ ಹುಕುಂ ಕೊಡುತ್ತೇವೆ.

ಪ್ರಾ.—ಮಲೆನಾಡಿನಲ್ಲಿ ಪ್ರಜಾಕ್ಷೋಭೆಯ ದೆಸೆಯಿಂದ ಬೇಸಾಯದ ಕೆಲಸಕ್ಕೆ ಜನರು ಸಿಕ್ಕದೆ ದಕ್ಷಿಣಕನ್ನಡದಿಂದ ಆಳುಗಳನ್ನು ಬರಮಾಡಿಕೊಂಡು ಹೆಚ್ಚು ಕೂಲಿಯನ್ನು ಕೊಡಬೇಕಾಗಿರುತ್ತದೆ. ಬೇಸಾಯದ ಕೆಲಸಕ್ಕೆ ಈ ತೊಂದರೆಯಿರುವುದಲ್ಲದೆ, ಮಲೆನಾಡಿನ ರೈತರು ಲೋಕಲ್ ಸೆಸ್ಸು, ಸುಪಾರಿಸೆಸ್ಸು, ಮತ್ತೂ ರೀಸರ್ವೆ ಸೆಟ್ಲಮೆಂಟಿನ ಪ್ರಕಾರ ಹೆಚ್ಚು ಕಂದಾಯಗಳನ್ನೂ ತರಬೇಕಾಗಿರುವುದು. ಇವಿಷ್ಟು ಸಾಲದೆ ನೀರಾವರಿ ಸೆಸ್ಸನ್ನು ಬೇರೆ ತರಬೇಕಾಗಿರುವುದು ಬಹಳ ಕಷ್ಟತರವಾಗಿರುವ ಪ್ರಯುಕ್ತ ಇದನ್ನು ಮನ್ನಿಸಿ ಕೊಡಬೇಕು ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿ ಉತ್ಪನ್ನವಾದ ಇರಿಗೇಷನ್ ಸೆಸ್ಸು ಆಯಾ ಡಿಸ್ಟ್ರಿಕ್ಟಿನಲ್ಲೇ ಡಿ|| ಬೋರ್ಡಿನವರಿಂದ ವಿನಿಯೋಗಿಸಲ್ಪಡುವಂತಾಗಬೇಕು. ಇರಿಗೇಷನ್ ಸೆಸ್ ಫಂಡು ಕೆರೆಗಳ ಮತ್ತೂ ನಾಲೆಗಳ ರಿಪೇರಿ ಮೊದಲಾದ ಕಾರ್ಯಗಳಿಗುಪಯೋಗಿಸಲ್ಪಡುತ್ತಿಲ್ಲವಾದುದರಿಂದ ರೈತರ ಜಮೀನುಗಳಿಗೆ ನೀರು ಸರಿಯಾಗಿ ಬಾರದೆ ಬಹಳ ತೊಂದರೆಯಾಗಿದೆ ಉ.—ನೀರಾವರಿ ಕೆಲಸಕ್ಕಾಗಿ ೩೫೦೦೦ ರೂಪಾಯಿಗಳನ್ನುಪಯೋಗಿಸತಕ್ಕದೆಂದು ಈ ಮೊದಲೇ ಅಪ್ಪಣೆಯಾಗಿರುತ್ತದೆ

ಪ್ರಾ.—ಕೆರೆ ಕೆಳಗಿನ ಭೂಕಂದಾಯದಲ್ಲಿ ಸರಾಸರಿ ೧೦ ವರ್ಷಗಳು ಕೃಷ್ಯದ ಮೇಲೆ ದೊಡ್ಡ ಮತ್ತೂ ಸಣ್ಣಕೆರೆಗಳೆಂದು ವಿಂಗಡಿಸುವ ಕ್ರಮವು ಸಮರ್ಪಕವಾಗಿರುವುದಿಲ್ಲವಾದ ಪ್ರಯುಕ್ತ, ಕೆರೆ ಕೆಳಗಿನ ಭೂಮಿಯ ಒಟ್ಟು ಕಂದಾಯವನ್ನನುಸರಿಸಿ ವಿಂಗಡಿಸುವಂತಾಗಬೇಕು. ಸಣ್ಣ ಕೆರೆಗಳ ಮಣ್ಣಿನ ಕೆಲಸವನ್ನು ಸರ್ಕಾರದಿಂದಲೇ ಮಾಡಿಸಿ ಅದರ ಖರ್ಚಿನಲ್ಲಿ ಅರ್ಧವನ್ನು ಆ ಕೆರೆಕೆಳಗಿನ ಹಿಡುವಳಿದಾರರಾದ ರೈತರಿಂದ ಕಿಸ್ತುವಾರು ತೆಗೆದುಕೊಳ್ಳಬೇಕು. ಸಣ್ಣ ಕೆರೆಗಳನ್ನು ಬಹಳ ಅನಾದರಣೆಮಾಡಿರುವುದರಿಂದ ಜನರಿಗೂ ದನಗಳಿಗೂ ಸಾಕಷ್ಟು ನೀರು ದೊರಕುವುದು ದುಸ್ತರವಾಗಿದೆ. ಅದುಕಾರಣ ಈ ವಿಷಯಗಳನ್ನು ವಿಚಾರಿಸುವ ಬಗೆಗೆ ಒಂದು ಕಮಿಷನ್ ಏರ್ಪಾಟಾಗಬೇಕು. ಉ.—ಸಂಸ್ಥಾನದ ೨೫೦೦೦ ಸಣ್ಣ ಕೆರೆಗಳಲ್ಲಿ ೨೫೦೦ ಕೆರೆಗಳು ಸರ್ಕಾರದಿಂದ ಜೀರ್ಣೋದ್ಧಾರಮಾಡಲ್ಪಟ್ಟಿರುವುವು. ಕೆರೆಯ ಹೂಳನ್ನು ತೆಗೆಯುವ ಕಾರ್ಯವನ್ನು ಕ್ರಿಯೆಗೆತರಲು ರೈತಜನರ ಸಹಾಯವೂ ಉತ್ಸುಕತೆಯೂ ಅವಶ್ಯಕವು. ಈಗ ಜೀರ್ಣೋದ್ಧಾರವಾಗಬೇಕಾಗಿರುವ ೧೯೫೦೦ ಕೆರೆಗಳಲ್ಲಿ ಪ್ರತಿವರ್ಷದಲ್ಲೂ ೧೦೦ ಕೆರೆಗಳಂತೆ ಸರಿಪಡಿಸುತ ಹೋದಲ್ಲಿ ಬಹಳ ಕಾಲಾತೀತವಾಗುವುದರಿಂದ ಕೆಲಸವು ಚುರುಕಾಗಿ ನಡೆಯುವ ಏರ್ಪಾಟಾಗಬೇಕು. ಇದಕ್ಕಾಗಿ ಕೆಲ ನಿಬಂಧನೆಗಳು ಮಾಡಲ್ಪಟ್ಟಿರುವುದು ಹೇಗೆಂದರೆ:—ಸರಿಯಾದ ಪ್ಲಾನು ಮತ್ತೂ ಅಂದಾಜು ಪಟ್ಟಿಗಳು ಪ್ರಥಮತಃ ತಯಾರಿಸಲ್ಪಡಬೇಕು. ಇದಕ್ಕಾಗಿ ಸರ್ಕಾರದಿಂದ ತಕ್ಕ ಜನರನ್ನು ಗೊತ್ತುಮಾಡಿ ಅಪೇಕ್ಷಿಸಿದ ಗ್ರಾಮಸ್ಥರಿಗೆ ಪ್ಲಾನನ್ನೂ ಅಂದಾಜುಪಟ್ಟಿಗಳನ್ನೂ ಕೊಡುವರು. ಕೆಲಕಾಲಾನಂತರ ಜನರು ಈ ಕಾರ್ಯಗಳನ್ನು ತಾವೇ ಸ್ವತಃ ನೆರವೇರಿಸಿಕೊಳ್ಳುವಂತಾಗಿ ಸರ್ಕಾರದವರು ಅದರ ಮೇಲ್ವಿಚಾರಣೆಯನ್ನು ತೆಗೆದುಕೊಳ್ಳುವಂತಾಗಬೇಕು. ಗ್ರಾಮಸ್ಥರು ತಮ್ಮ ಗ್ರಾಮದ ಕೆರೆಯನ್ನು ತಾವೇ ಸರಿಪಡಿಸುವುದನುಭವಕ್ಕೆ ತಂದುಕೊಳ್ಳುವುದಾವಶ್ಯಕವಾದುದರಿಂದ ಕೆರೆ ಕೆಳಗೆ ಹೆಚ್ಚು ಭೂಮಿಯನ್ನುಳ್ಳವರಲ್ಲಿ ೩ ಜನ ಪ್ರಮುಖ ರೈತರಿಂದ ಸರಿಯಾದ ಕೆಲಸವು ನಡೆಯುವ ಬಗೆಗೆ ಮುಚ್ಚಳಿಕೆಯನ್ನು ಬರೆಯಿಸಿಕೊಂಡು ಈ ಕೆಲಸವು ಅವರಿಗೆ ವಹಿಸಲ್ಪಡಬೇಕು ಗ್ರಾಮಸ್ಥರು ಈ ಕೆಲಸವನ್ನು ಕಂಟ್ರಾಕ್ಟಿನಿಂದಾಗಲಿ ಅಥವಾ ಬೇರೆರೀತಿಯಿಂದಾಗಲಿ ಸ್ವತಃಮಾಡಿಸಿ ಮೇಲ್ವಿಚಾರಣೆಗೆ ಸಿದ್ಧಗೊಳಿಸಬೇಕು. ಒಂದು ಕೆರೆಯನ್ನು ಜೀರ್ಣೋದ್ಧಾರಮಾಡಲು ತಗಲುವ ಒಟ್ಟು ವೆಚ್ಚದಲ್ಲಿ ರೈತರು $\frac{1}{3}$ ಭಾಗವನ್ನು ಕೊಟ್ಟಲ್ಲಿ ಉಳಿದ $\frac{2}{3}$ ಭಾಗವನ್ನು ಸರ್ಕಾರದವರು ಕೊಡುವರು ಹೀಗೆ ರೈತರೂ ಸರ್ಕಾರದವರೂ ಕೊಡುವ ಹಣವು ಖಜಾನೆಯಲ್ಲಿಡಲ್ಪಟ್ಟಿದ್ದು ಆವಶ್ಯಕವಿದ್ದಲ್ಲಿ ರೈತರಿಗೆ ಈ ಮೊಬಲಗಿನಿಂದಲೇ ಅಡ್ವಾನ್ಸು ಕೊಡಲ್ಪಟ್ಟು ಮುಂದೆ ಬಿಲ್ಲುಗಳಲ್ಲಿ ವಜಾಹಾಕಲ್ಪಡುವುದು. ಮುಂದೆ ಕೆಲಸ ನಡೆದ ಹಾಗೆ ಸರ್ಕಾರದ ಕಡೆಯವರಿಂದ ತನಿಖೆಮಾಡಲ್ಪಟ್ಟು ತಿಂಗಳಿಗೆ ಅಥವಾ ೩ ತಿಂಗಳಿಗೆ ಒಂದಾವೃತ್ತಿ ಹಣವು ಕೊಡಲ್ಪಡುವುದು ಅವಶ್ಯಕವಾದ ಸ್ಥಳಗಳಲ್ಲಿ ಕೆರೆಗಳನ್ನು ಹೊಸದಾಗಿ ಕಟ್ಟತಕ್ಕ ಸಂದರ್ಭದಲ್ಲೂ ಇದೇ ವಿಧಾನದಿಂದ ನಡೆಸತಕ್ಕದಾಗಿದೆ ಈಗಿರತಕ್ಕ ಕೆರೆಗಳು ತುಂಬಿದಾಗಲೂ ಕೂಡ ಆಳವಿಲ್ಲದಿರುವುದು ಶೋಚನೀಯವಾಗಿದೆ ಇದಕ್ಕೆ ಪ್ರತಿವರ್ಷದಲ್ಲಿ ಗೋಡು ಹೆಚ್ಚುತ್ತಿರುವುದು ಕಾರಣವಾಗಿದೆ ಒಂದುವರ್ಷದಲ್ಲಿ ೧೦೦ ರಿಂದ ೩೦೦ ಕೆರೆಗಳವರೆಗೂ ಸರಿಪಡಿಸುವುದಕ್ಕೂ ಪ್ರತಿವರ್ಷದಲ್ಲೂ ಈಗಿರತಕ್ಕ ಕೆರೆಗಳಿಗೆ ಮಣ್ಣುಬಂದು ಸೇರುವುದಕ್ಕೂ ಸರಿಹೋಗುತ್ತದೆ ಅದುಕಾರಣ ಸಂಸ್ಥಾನದಲ್ಲೆಲ್ಲಾ ಒಟ್ಟು ೧೦೦೦ ಕೆರೆಗಳು ಪ್ರತಿವರ್ಷದಲ್ಲೂ ಸರಿಪಡಿಸಲ್ಪಡಬೇಕೆಂದಾಲೋಚಿಸಲ್ಪಟ್ಟಿದೆ ಈ ರೀತಿಯಾಗಿ ೧೦೦೦ ಕೆರೆಗಳನ್ನು ಸರಿಪಡಿಸಲು ಸಾಮಾನ್ಯವಾಗಿ ಕೆರೆಯೊಂದಕ್ಕೆ ಸರಾಸರಿ ೮೦೦ ರೂಪಾಯಿಗಳಂತೆ ೮೦೦೦೦೦ ರೂಪಾಯಿಗಳಾಗುವುವು, $2\frac{2}{3}$ ಲಕ್ಷ ರೂಪಾಯಿಗಳನ್ನು ಜನರೂ, $5\frac{1}{3}$ ಲಕ್ಷ ರೂಪಾಯಿಗಳನ್ನು ಸರ್ಕಾರದವರೂ ವಹಿಸಬೇಕಾಗುವುದು. ಇದರಿಂದ ೨೦ ವರ್ಷದಲ್ಲಿ ೧ ಕೋಟಿ ರೂಪಾಯಿಗಳನ್ನು ವ್ಯಯಮಾಡಬೇಕಾಗುತ್ತದೆ ಯಾವುದಾದರೂ ಒಂದು ವರ್ಷದಲ್ಲಿ ಕೆಲಸಗಳನ್ನು ನಡೆಸಬೇಕಾಗಿದ್ದಲ್ಲಿ ಕೆರೆ ಕೆಳಗಿನ ಭೂಮಿಯ ಕಂದಾಯದ ೧೦ ರಷ್ಟಕ್ಕಿಂತ ಹೆಚ್ಚಾಗಿ ಖರ್ಚುತಗಲದಂತಹ ಕೆರೆಗಳ ಕೆಲಸವು ಉಪಕ್ರಮಿಸಲ್ಪಡುವುದು

ಪ್ರಾ.—ಸಂಸ್ಥಾನದಲ್ಲಿ ಗ್ರಾಮಾಭಿವೃದ್ಧಿಯ ಕಾರ್ಯವು ಬಹಳ ತೃಪ್ತಿಕರವಾಗಿ ನಡೆಯುತ್ತಿದೆ ಈ ಕಾರ್ಯವು ಶಾಶ್ವತವಾಗಿ ನಡೆದುಕೊಂಡು ಹೋಗಲು ಒಂದು ಫಂಡು ಅವಶ್ಯಕವಾಗಿರುವುದರಿಂದ ಪ್ರತಿಯೊಂದು ಗ್ರಾಮದ ಮೊಹತರ್ಫಾ ಕಂದಾಯದಲ್ಲಿ ಅರ್ಧವು ಈ ಕಾರ್ಯಕ್ಕಾಗಿ ಉಪಯೋಗಿಸಲ್ಪಡುವಂತಾಗಬೇಕು ಉ—ಈ ಗ್ರಾಮಾಭಿವೃದ್ಧಿಯ ಕಾರ್ಯನಿರ್ವಹದಲ್ಲಿ ಜನರು ತಾವಾಗಿಯೇ ಹೆಚ್ಚು ಉತ್ಸುಕತೆಯನ್ನು ತೋರಿಸುವುದಾದಲ್ಲಿ ಸರ್ಕಾರದವರು ಸಹಾಯಮಾಡಲು ಸಿದ್ಧರಾಗಿರುವರು.

ಪ್ರತಿಯೊಂದು ಗ್ರಾಮಕ್ಕೂ ಅದರವಿಸ್ತೀರ್ಣ, ಜನಸಂಖ್ಯೆ ಮೊದಲಾದುವನ್ನು ತಿಳಿಸತಕ್ಕ ಚರಿತ್ರೆಯ ಪುಸ್ತಕವು ಅಚ್ಚು ಮಾಡಿಸಲ್ಪಟ್ಟು ಜನರಿಗೆ ಅಸಲು ಬೆಲೆಗೆ ವಿಕ್ರಯಿಸಲ್ಪಡಬೇಕು. ಮತ್ತೂ ಇದನ್ನು ೧೦ ವರ್ಷಕ್ಕೊಂದಾವೃತ್ತಿ ಬದಲಾಯಿಸಿ ಹೊಸದಾಗಿ ಅಚ್ಚುಮಾಡಿಸುವಂತಿರಬೇಕು ಬ್ರಿಟಿಷ್ ಇಂಡ್ಯಾದಲ್ಲಿ ಆಚರಣೆಯಲ್ಲಿರುವಂತೆ ಒಂದು ಕ್ರಮವನ್ನು ರಚಿಸಿದೆ. ಅದನ್ನು ಸ್ವಾಮಿಯವರು ಪರಾಮರ್ಶಿಸಬೇಕು ಉ—ಇದನ್ನು ನೋಡಿ ಪರ್ಯಾಲೋಚಿಸುತ್ತೇವೆ

ಪ್ರಾ.—ಮಾರಿಕಣಿವೆಯ ಮತ್ತು ಕಾವೇರಿಯ ಜಲಾಶಯಗಳ ಕೆಳಗೆ ದೊಡ್ಡ ತೋಟಗಳನ್ನುಮಾಡಲು ಸ್ಥಳವನ್ನು ಬೇರ್ಪಡಿಸಿ ವ್ಯವಸಾಯಮಾಡಲಿಚ್ಛಿಸುವಂತಹ ಸುಧಾರಿಸಿದ ಮತ್ತೂ ಉತ್ಸಾಹಶೀಲರಾದ ರೈತರುಗಳಿಗೆ ಉಚಿತವಾಗಿ ಕೊಡಿಸಿಕೊಡಬೇಕು ಅಲ್ಲದೆ ಕೆಲಸಗಾರರನ್ನು ಸಂಸ್ಥಾನದ ಹೊರಗಿನಿಂದ ಸರ್ಕಾರದ ಅರ್ಧಖರ್ಚಿನಿಂದಲೂ ಸ್ವಂತಜನರ ಅರ್ಧಖರ್ಚಿನಿಂದಲೂ ಬರಮಾಡಿಕೊಳ್ಳಬೇಕು ಉ— ಈ ವಿಚಾರವು ಸರ್ಕಾರದ ಪರ್ಯಾಲೋಚನೆಯಲ್ಲಿರುವುದು.

ಪ್ರಾ.— ಫಾರೆಸ್ಟ್ ಶಾಖೆಯವರು ಏಲಕ್ಕಿಯ ವ್ಯವಸಾಯಕ್ಕಾಗಿ ಭೂಮಿಯನ್ನು ಕೊಡುವರೀತಿಯಲ್ಲಿ ರೆವಿನ್ಯೂಶಾಖೆಯವರು ಮಂಜ್ರಾಬಾದಿನಲ್ಲಿ ಏಲಕ್ಕಿಯವ್ಯವಸಾಯಕ್ಕಾಗಿ ಭೂಮಿಯನ್ನು ಕೊಡುವಂತೆ ಅಪ್ಪಣೆಯಾಗಬೇಕು. ಉ— ಈ ವಿಷಯವು ವಿಚಾರಿಸಲ್ಪಡತಕ್ಕದಾಗಿದೆ

ಪ್ರಾ— ಈಗಿನ ಪದ್ಧತಿಯಪ್ರಕಾರ ಬೆಳೆಯಾಗಲಿ ಅಥವಾ ಆಗದಿರಲಿ ರೈತರು ಕಂದಾಯವನ್ನು ಕೊಟ್ಟೇಕೊಡಬೇಕಾಗಿದೆ ಬೆಳೆಯಾಗದಿದ್ದ ವೇಳೆಯಲ್ಲಿ ರೈತರು ತಮ್ಮ ದನಕರುಗಳನ್ನು ಮಾರಿಯಾಗಲೀ ಅಥವಾ ಸಾಲವನ್ನುಮಾಡಿಯಾಗಲೀ ಕಂದಾಯವನ್ನು ಕಟ್ಟಬೇಕು ಇದರಿಂದ ರೈತರು ಬಹಳ ನಷ್ಟಕಷ್ಟಗಳಿಗೆ ಗುರಿಯಾಗುತ್ತಾರಾದಪ್ರಯುಕ್ತ ಕೆರೆಯು ತುಂಬದಿದ್ದ ವೇಳೆಯಲ್ಲಿ ತರಿಕಂದಾಯವನ್ನು ಮನ್ನಿಸಬೇಕು. ಈ ವಿಚಾರವು ಕಳೆದ ೩೦ ವರ್ಷಗಳಿಂದಲೂ ಚರ್ಚಿಸಲ್ಪಡುತ್ತಿದೆ. ಕೆರೆಯು ಒಣಗಿಹೋಗಿರುವಾಗ್ಗೆ ಅದರ ಕೆಳಗಿನಭೂಮಿಗಳ ಕಂದಾಯವನ್ನೆತ್ತುವುದು ಬಹಳ ಅಸಂಗತವು. ಉ.— ಈ ವಿಚಾರವು ಕಷ್ಟತರವಾದುದು. ಬೆಳೆಯು ಸಂಪೂರ್ಣವಾಗಿ ನಾಶವಾಗಿಲ್ಲವಾದುದರಿಂದ ಕಂದಾಯವನ್ನು ಮನ್ನಿಸಲಾಗುವುದಿಲ್ಲವು.

ಪ್ರಾ.—ತಾಕಾವಿ ಸಾಲವನ್ನು ಕೊಡತಕ್ಕ ಮೊಬಲಗಿನ ಬಡ್ಡಿಯನ್ನು ಶೇಕಡ ೬ ರಿಂದ ೪ ಕ್ಕೆ ಕಡಿಮೆಮಾಡಿಸಿಕೊಡಬೇಕು ಉ.—ಸ್ವತಂತ್ರ ಜನರಿಗೆ ಹಣವನ್ನು ಸಾಲವಾಗಿಕೊಡುವಲ್ಲಿ ನಷ್ಟಪ್ರಮೇಯವೂ ಇರುವುದರಿಂದ ಬಡ್ಡಿಯನ್ನು ಕಡಿಮೆಮಾಡಲು ಸಾಧ್ಯವಿಲ್ಲವು.

ಪ್ರಾ —ಕೆಲ ಹೈಸ್ಕೂಲುಗಳಲ್ಲಿ ಇಂಗ್ಲೀಷ್ ಭಾಷೆ ಮತ್ತೂ ಸೈನ್ಸ್ ಅಂದರೆ ಶಾಸ್ತ್ರ ಬೋಧೆಗೆ ಅರ್ಹರಾದ ಜನರು ನಿಯಮಿಸಲ್ಪಟ್ಟಿಲ್ಲವಾದುದರಿಂದ ಇಂಗ್ಲೀಷ್ ಯೂನಿವರ್ಸಿಟಿಗಳಲ್ಲಿ ಗ್ರಾಜ್ಯುಯೇಟರುಗಳಾಗಿರುವ ಯೂರೋಪ್ಯರಾಗಲಿ ಅಥವಾ ಭಾರತೀಯರಾಗಲಿ ಹೆಡ್ಮಾಸ್ಟರುಗಳಾಗಿ ನಿಯಮಿಸಲ್ಪಡಬೇಕು. ಯೂರೋಪ್ಯರ ಕೈಕೆಳಗೆ ತಯಾರಾಗಿ ವಿದ್ಯಾಶಾಖೆಯಲ್ಲಿ ಅಧಿಕಾರಿಗಳಾಗಿರುವವರು ಹೈಸ್ಕೂಲುಗಳ ಹೆಡ್ಮಾಸ್ಟರುಗಳಾಗಿ ನಿಯಮಿಸಲ್ಪಟ್ಟು ಅವುಗಳ ಸ್ಥಿತಿಯು ಉತ್ತಮಪಡಿಸಲ್ಪಡಬೇಕು.

ಉ.—ಅರ್ಹರಾದ ಜನರನ್ನು ತರ್ಪೇತುಮಾಡಿ ನಿಯಮಿಸಲು ಬೇಕಾದ ಪ್ರಯತ್ನವು ಮಾಡಲ್ಪಡುತ್ತಿರುವುದು.

ಪ್ರಾ.—ಟೆಕ್ಸ್ಟ್ ಬುಕ್ ಕಮಿಟಿಗೆ ಸರ್ಕಾರದ ಉದ್ಯೋಗಸ್ಥರಲ್ಲದ ಜನರು ಹೆಚ್ಚಾಗಿ ಮೆಂಬರುಗಳಾಗಿ ನಿಯಮಿಸಲ್ಪಡಬೇಕಲ್ಲದೆ, ಸಣ್ಣಕ್ಷರಗಳಿಂದ ಅಚ್ಚಾದ ಪುಸ್ತಕಗಳನ್ನೋದುವುದರಿಂದ ವಿದ್ಯಾರ್ಥಿಗಳ ಕಣ್ಣಿಗೆ ಬಾಧೆಯಾಗುತ್ತಾದಪ್ರಯುಕ್ತ ದಪ್ಪಕ್ಷರಗಳನ್ನು ಉಪಯೋಗಿಸಿರುವ ಪುಸ್ತಕಗಳನ್ನೇ ಆರಿಸಿ ಕಾಲೇಜುಗಳಲ್ಲೂ ಸ್ಕೂಲುಗಳಲ್ಲೂ ಟೆಕ್ಸ್ಟ್ ಬುಕ್ಕುಗಳನ್ನಾಗಿ ನಿಯಮಿಸಲು ಒಂದು ಕಮಿಟಿಯನ್ನು ನಿಯಮಿಸಬೇಕು. ಉ.—ಈ ಕಾರ್ಯಕ್ಕೆ ಅನುಭವಸ್ಥರಾದವರು ದೊರೆಯುವುದಿಲ್ಲವು.

ಪ್ರಾ.—ಟೆಕ್ಸ್ಟ್ ಬುಕ್ಕುಗಳನ್ನು ಪದೇಪದೇ ಬದಲಾಯಿಸುವುದರಿಂದ ಬಡವಿದ್ಯಾರ್ಥಿಗಳಿಗೂ ಪಾಠಶಾಲೆಯಲ್ಲಿ ಪಾಠಪ್ರವಚನೆಗೂ ಬಹಳ ತೊಂದರೆಯಾಗುವುದರಿಂದ ಎಲ್ಲಾ ಸ್ಕೂಲುಗಳಲ್ಲೂ ಒಂದೇ ಪುಸ್ತಕವು ಟೆಕ್ಸ್ಟಾಗಿ ನಿಯಮಿಸಲ್ಪಟ್ಟು, ಅದು ಕನಿಷ್ಠ ಪಕ್ಷ ೩ ವರ್ಷ ಕಾಲದವರೆಗೂ ಬದಲಾಯಿಸಲ್ಪಡದಂತಾಗಬೇಕು. ಉ.—ಈ ಪ್ರಾರ್ಥನೆಯನ್ನು ನಾವು ಅಂಗೀಕರಿಸುತ್ತೇವೆ.

ಪ್ರಾ —ಹೈಸ್ಕೂಲುಗಳಲ್ಲೂ ಕಾಲೇಜುಗಳಲ್ಲೂ ಈಗ ವಿಧಿಸಿರತಕ್ಕ ಫೀಜು ಹೆಚ್ಚಾಗಿರುವುದರಿಂದ ಕಡಿಮೆಮಾಡಿಕೊಡಬೇಕು. ಉ— ಯೋಚಿಸುವಬಗೆಗೆ ಗುರ್ತುಮಾಡಿಕೊಂಡಿದೆ.

ಪ್ರಜಾಪ್ರತಿನಿಧಿಸಭೆಯಿಂದ ಸಂಪದಭ್ಯುದಯಸಮಾಜದ ಮೆಂಬರಾಗಾರಿಸಲ್ಪಟ್ಟಿದ್ದ ಮ|| ಎಚ್. ಕೆ. ವೀರಬಸವಯ್ಯನವರು ಮೆಂಬರಸ್ಥಾನದಿಂದ ನಿವೃತ್ತರಾಗಲು, ಅವರ ಬದಲು ಮ|| ಎಂ. ಬಸವಯ್ಯ ಬಿ.ಎ, ಬಿ.ಎಲ್., ರವರು ನಿಯಮಿಸಲ್ಪಟ್ಟುದಕ್ಕಾಗಿ ಕೆಲ ಆಕ್ಷೇಪಗಳು ಬಂದುದರಮೇಲೆ ಹೊಸದಾಗಿ ಮತ (ಓಟು)ಗಳನ್ನು ತೆಗೆದುಕೊಂಡುದರಲ್ಲಿ ಮ|| ಬಸವಯ್ಯನವರಿಗೇ ಹೆಚ್ಚು ಮತಗಳು ದೊರೆತುದರಿಂದ ಅವರು ಮೆಂಬರಾಗಿ ಆರಿಸಲ್ಪಟ್ಟರು.

ಪ್ರಾ—ಇಂಗ್ಲೀಷ್ ವಿದ್ಯಾಭ್ಯಾಸವನ್ನು ಮಾಡತಕ್ಕ ವಿದ್ಯಾರ್ಥಿಗಳಲ್ಲಿ ವೇತನವನ್ನು ಪಡೆಯತಕ್ಕವರ ಸಂಖ್ಯೆಯನ್ನು ೨೦ ರಿಂದ ೩೦ ಕ್ಕೆ ಹೆಚ್ಚಿಸಿಕೊಡಬೇಕು. ಮಹಮ್ಮದೀಯ ವಿದ್ಯಾರ್ಥಿಗಳಿಗೆ ಕೈಗಾರಿಕೆಯ ವಿದ್ಯಾಭ್ಯಾಸದಲ್ಲಿ ಅಭಿರುಚಿ ಹೆಚ್ಚಾಗಿರುವುದರಿಂದ ಈಚೆಗೇರ್ಪಡಿಸಲ್ಪಟ್ಟಿರುವ ಕೈಗಾರಿಕೆಯಪಾಠಶಾಲೆಗಳಲ್ಲೋದುವ ವಿದ್ಯಾರ್ಥಿಗಳಿಗೆ ವೇತನವನ್ನು ಕೊಡಿಸಿಕೊಡಬೇಕಲ್ಲದೆ ಹಿಂದೂಸ್ಥಾನಿ ಲೋವರ್ ಸೆಕೆಂಡರಿ ಸ್ಕೂಲುಗಳಲ್ಲೋದತಕ್ಕವರ ವೇತನವನ್ನೂ ಹೆಚ್ಚಿಸಿಕೊಡಬೇಕು. ಉ—ವಿದ್ಯಾರ್ಥಿಗಳ ವೇತನವನ್ನು ಹೆಚ್ಚಿಸಲಾಗುವುದಿಲ್ಲವಾದರೂ, ವಿಶೇಷಸಂದರ್ಭದಲ್ಲಿ ರಿಯಾಯತಿಯು ಕೊಡಿಸಲ್ಪಡುವುದು. ಮೈಸೂರುಸೀಮೆಯ ಪ್ರಜಾಸಂಖ್ಯೆಯಲ್ಲಿ ೧೦ ಕ್ಕೆ ೫ ರಂತೆ ಮಾತ್ರ ಮಹಮ್ಮದೀಯರ ಸಂಖ್ಯೆಯಿರುವುದಾದರೂ ಇವರು ಸ್ವಲ್ಪ ಕಂದಾಯವನ್ನುಕೊಟ್ಟು ಹೆಚ್ಚು ಅನುಕೂಲ್ಯವನ್ನಪೇಕ್ಷಿಸುವರು.

ಪ್ರಾ—ಮತತ್ರಯಕ್ಕೆ ಸೇರದ ವಿದ್ಯಾರ್ಥಿಗಳಲ್ಲಿ ಅರ್ಹರಾದವರನ್ನು ಸರ್ಕಾರಿಯ ಸಂಸ್ಕೃತಕಾಲೇಜುಗಳಿಗೆ ಸೇರಿಸುವಂತಪ್ಪಣೆಯಾಗಬೇಕು. ಉ—ಈ ವಿಷಯವನ್ನು ವಿಚಾರಿಸುವಬಗೆಗೆ ಮುಜರಾಯಿಸೂಪರೆಂಟೆಂಡೆಂಟರನ್ನು ಕೇಳಿರುತ್ತೇವೆ. ಇತರ ವಿದ್ಯಾರ್ಥಿಗಳಿಗೆ ಈ ವಿಚಾರದಲ್ಲಿ ತಕ್ಕ ಅನುಕೂಲ್ಯವನ್ನು ಕಲ್ಪಿಸಿಕೊಡಬಹುದಾದರೂ ಮತಬೋಧಕ ಸಂಸ್ಥೆಗಳಿಗೆ ಮಾತ್ರ ಅವರನ್ನು ಸೇರಿಸಲಾಗುವುದಿಲ್ಲವು.

ಪ್ರಾ— ಸ್ಕೂಲ್ ಫೈನಲ್ ಪರೀಕ್ಷಾಕ್ರಮವು ಕೊಂಚವೂ ತೃಪ್ತಿಕರವಾಗಿಲ್ಲವಾದಪ್ರಯುಕ್ತ ಈ ಪರೀಕ್ಷೆಯಬೋರ್ಡಿಗೆ ನಿಯಮನಿರ್ಮಾಣಸಭೆಯ ಅನೌದ್ಯೋಗಿಕ ಸಭಾಸದರಲ್ಲಾಗಲಿ ಅಥವಾ ಪ್ರಜಾಪ್ರತಿನಿಧಿಗಳಲ್ಲಾಗಲಿ ವಿಶೇಷ ವಿದ್ಯಾಪ್ರಶಸ್ತಿಯನ್ನು ಪಡೆದಿರುವ ಇಬ್ಬರನ್ನು ಮೆಂಬರುಗಳನ್ನಾಗಾರಿಸುವಂತಾಗಬೇಕು. ಉ.—ಈ ವಿಚಾರವು ಸರ್ಕಾರದ ಪೂರ್ಣಪರ್ಯಾಲೋಚನೆಯಲ್ಲಿದೆ ಮತ್ತೂ ಇನ್ನು ೪ ತಿಂಗಳಲ್ಲಿ ವ್ಯವಸ್ಥಿತವಾಗುವುದು.

ಪ್ರಾ.— ಈ ಸ್ಕೂಲ್ ಫೈನಲ್ ಪರೀಕ್ಷೆಯನ್ನೇ ತಪ್ಪಿಸಿಬಿಡುವುದು ಉತ್ತಮವು. ಉ — ಈ ವಿಚಾರವು ಪರ್ಯಾಲೋಚನೆಯಲ್ಲಿದೆ ಏತನ್ಮಧ್ಯೆ ಬೆಂಗಳೂರು ಮತ್ತೂ ಮೈಸೂರು ಕಾಲೇಜುಗಳಲ್ಲಿಯೂ ಇಂಟರ್ ಮೀಡಿಯಟ್ ತರಗತಿಗಳಲ್ಲಿಯೂ ಸ್ಥಳಗಳು ಹೆಚ್ಚಿಸಲ್ಪಡುವುವು.

ಪ್ರಾ.—ಸೈನ್ಯದಲ್ಲಿ ಸೇರಿರುವವರು ಸರ್ಕಾರದಲ್ಲಿ ಡಿಪಾಜಿಟ್ಟಿಟ್ಟಿರುವ ಮತ್ತೂ ಇತರವಿಧವಾಗಿ ಕೊಟ್ಟಿರುವ ಹಣದಿಂದುತ್ಪನ್ನವಾಗುವ ಬಡ್ಡಿಯ ಮೊಬಲಗಿನಲ್ಲಿ ಒಂದುಭಾಗವನ್ನಾದರೂ ಆ ಜನರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲಿಸುವಂತಪ್ಪಣೆಯಾಗಬೇಕು. ಉ.— ಗುರ್ತುಮಾಡಿಕೊಂಡಿದೆ

ಪ್ರಾ.—ಹೆಚ್ಚು ಸಂಬಳವನ್ನು ಪಡೆಯತಕ್ಕ ಸರ್ಕಾರಿಯುದ್ಯೋಗಸ್ಥರಿಗೆ ಪ್ರಯಾಣದ ಖರ್ಚಿಗೆ ಕೊಡುವುದನ್ನು ನಿಲ್ಲಿಸಿಬಿಟ್ಟು, ಅದರಿಂದುಳಿಯುವ ಹಣವನ್ನು ಆವಶ್ಯಕ ಕಂಡುಬಂದಲ್ಲಿ ಸಣ್ಣ ಉದ್ಯೋಗಸ್ಥರ ಸಂಬಳವನ್ನು ಹೆಚ್ಚಿಸಲುಪಯೋಗಿಸಬಹುದು. ಇದು ಸಾಧ್ಯವಿಲ್ಲವಾದಲ್ಲಿ ಪ್ರಯಾಣಕ್ಕಾಗಿಷ್ಟೇ ಖರ್ಚಾಗಬೇಕೆಂದು ಒಂದು ಕ್ಲಪ್ತಿಯನ್ನಾದರೂ ಮಾಡಬೇಕು. ಉ —ಈ ವಿಚಾರವನ್ನು ಚರ್ಚಿಸುವುದರಿಂದ ಪ್ರಯೋಜನವಿಲ್ಲವು

ಪ್ರಾ —ಸರ್ಕಾರಿಯುತ್ಪನ್ನದ ಮೊಬಲಗಿನಲ್ಲಿ ಖರ್ಚು ಜಾತಾ ಉಳಿಯುವ ಹಣವನ್ನು ಹೊರಗಣ ಬ್ಯಾಂಕುಗಳಲ್ಲಿಡುವುದಕ್ಕೆ ಬದಲು ಸಂಸ್ಥಾನದ ವ್ಯಾಪಾರದ ಮತ್ತೂ ಕೈಗಾರಿಕೆಯ ಅಭಿವೃದ್ಧಿಗಾಗುಪಯೋಗಿಸುವಂತಾಗಬೇಕು. ಉ.—ಈರೀತಿಯಾಗಿ ಮಾಡಲ್ಪಡುತ್ತಿರುವುದು

ಪ್ರಾ.—ಸಂಸ್ಥಾನದ ವಿದ್ಯಾಭಿವೃದ್ಧಿ, ಲೋಹಮಾರ್ಗಾಭಿವೃದ್ಧಿ ಮೊದಲಾದ ಉಪಯುಕ್ತಕಾರ್ಯಗಳಿಗೆ ಸಹಾಯಕವಾಗಿರುವುದಕ್ಕಾಗಿ ಸಂಸ್ಥಾನದ ಸಾಂಪತ್ತಿಕ ಸ್ಥಿತಿಯನ್ನು ಉತ್ತಮಪಡಿಸುವ ಬಗೆಗೆ ಬೇಸಾಯಗಾರರಲ್ಲದ ಜನರಮೇಲೆ ಆದಾಯದ ತೆರುಗೆಯನ್ನು ವಿಧಿಸಬೇಕು. ಇದಕ್ಕೆ ಕೆಲ ಮೆಂಬರುಗಳು ಬಲವತ್ತರವಾಗಿ ನಿರೋಧಿಸಿದರು. ಮತ್ತೆ ಕೆಲರು ಪುಷ್ಟೀಕರಿಸಿದರು. ಉ— ೧೦೦೦ ರೂಪಾಯಿಗಳು ಮತ್ತೂ ಅದಕ್ಕಿಂತ ಕಡಿಮೆಯಾಗಾದಾಯವುಳ್ಳ ಬೇಸಾಯಗಾರರಿಗೂ ಇತರರಿಗೂ ಈ ಕಂದಾಯವು ವಿಧಿಸಲ್ಪಡುವುದಿಲ್ಲವು. ಈ ವಿಚಾರದಲ್ಲಿ ಮೆಂಬರುಗಳ ಅಭಿಪ್ರಾಯವೇನೆಂದು ಕೇಳುವಲ್ಲಿ ೬೮ ಜನರು ಅನುಕೂಲವಾಗಿಯೂ, ೬೧ ಜನರು ಪ್ರತಿಕೂಲವಾಗಿಯೂ ಮತಗಳನ್ನು ಕೊಟ್ಟರು.

ಪ್ರಾ.—ಸರ್ಕಾರದ ಜೀವವಿಮೆಯ ಕಂಪೆನಿಗೆ ಉದ್ಯೋಗಸ್ಥರಲ್ಲದ ಇತರರು ಜೀವವಿಮೆಯನ್ನು ಮಾಡಿಕೊಳ್ಳಲವಕಾಶವಾಗಬೇಕು. ಉ.—ಈ ಸೌಲಭ್ಯವನ್ನು ಸ್ವತಂತ್ರಜನರಿಗೂ ಕೊಡಬಹುದಾಗಿದೆ. ಈಗ ನೀವು ಕೊಟ್ಟಿರುವ, ಸರ್ಕಾರಿಯ ಸಾಹಾಯ್ಯವನ್ನು ಪಡೆದ ಜೀವವಿಮೆ ಕಂಪೆನಿಯ ಸ್ಥಾಪನೆಯ ಸಂಬಂಧವಾದ ಅರ್ಜಿಯು ಮುಂದೆ ಪರ್ಯಾಲೋಚನೆಗಿಡಲ್ಪಟ್ಟಿರುವುದು.

ಬೆಲ್ಜಿಯಂ ಜರ್ಮನ್ ಯುದ್ಧಕಾರಣ.

ಬೆಲ್ಜಿಯಂ ಸರ್ಕಾರದವರು ಪ್ರಕಟಿಸಿರುವ ಯುದ್ಧವಿಷಯಕವಾದ ಪುಸ್ತಕದಿಂದ ಯುದ್ಧಾರಂಭಸಮಯದಲ್ಲಿ ಜರ್ಮನ್ ಸರ್ಕಾರಕ್ಕೂ ಅದಕ್ಕೂ ನಡೆದ ಮಾತುಕತೆಗಳೂ ಯುದ್ಧಾರಂಭಕಾರಣವೂ ಸಹ ವಿಶದವಾಗಿರುತ್ತದೆ. ಅದರ ಮುಖ್ಯಾಂಶವೇನೆಂದರೆ—೧೯೧೧ ನೆಯ ವರ್ಷದಲ್ಲಿ ಬೆಲ್ಜಿಯಮ್ಮಿನಲ್ಲಿದ್ದ ಜರ್ಮನ್ ರಾಯಭಾರಿಯು, ಬೆಲ್ಜಿಯಮ್ಮಿನ ತಟಸ್ಥವೃತ್ತಿಗೆ ತಾವು ಯಾವಾಗಲೂ ಭಂಗವನ್ನುಂಟುಮಾಡುವವರಲ್ಲ ಎಂದು ಹೇಳಿರುತ್ತಾನೆ. ಈಗಲೂ ಅದೇಮಾತಿಗೆ ತಾವು ತಪ್ಪುವವರಲ್ಲವೆಂದು ಬೆಲ್ಜಿಯಮ್ಮಿನಲ್ಲಿರುವ ಈಗಿನ ಜರ್ಮನ್ ರಾಯಭಾರಿಯು ಕಳೆದ ಜುಲೈ ತಾ|| ೩೧ ರಲ್ಲಿ ಬೆಲ್ಜಿಯಮ್ಮಿನ ವಿದೇಶಾಂಗಮಂತ್ರಿಗೆ ತಿಳಿಯಿಸಿದನು. ನಿಮ್ಮ ತಾಟಸ್ಥ್ಯಕ್ಕೆ ಭಂಗವನ್ನು ತರದೆ ಇರುವುದು ಜರ್ಮನಿಗೆ ಕರ್ತವ್ಯವಾಗಿದೆ; ಜರ್ಮನಿಯನ್ನು ಕುರಿತು ನೀವು ಭಯಪಡಬೇಕಾದುದಿಲ್ಲ ಎಂದು ಅದೇ ರಾಯಭಾರಿಯು ಬಳಿಕ ಆಗಸ್ಟ್ ತಾ|| ೨ ರಲ್ಲಿಯೂ ಬೆಲ್ಜಿಯಂ ಮಂತ್ರಿಯವರನ್ನು ಕುರಿತು ಬರೆದನು. ಅದಕ್ಕೆ ಆ ಮಂತ್ರಿಯು—ಜರ್ಮನಿಯವರ ಅಭಿಪ್ರಾಯವನ್ನು ನಾನುಬಲ್ಲೆ, ಆದರೂ "ಬೆಲ್ಜಿಯಂದೇಶದ ತಾಟಸ್ಥ್ಯವನ್ನು ನಾವು ಗೌರವಿಸುತ್ತೇವೆ" ಎಂದು ಮತ್ತೊಂದುಬಾರಿ ಈಗ ಪ್ರಕಟಿಸಿದರೆ ನಮಗೆ ಎಷ್ಟೋ ನಂಬುಗೆಯಾಗುವುದು ಎಂದು ಜರ್ಮನ್ ರಾಯಭಾರಿಗೆ ಪ್ರತ್ಯುತ್ತರವನ್ನು ಬರೆದನು. ಆ ದಿನ ಸಾಯಂಕಾಲ ೭ ಗಂಟೆಗೆ ಜರ್ಮನ್ ರಾಯಭಾರಿಯು "ನಮ್ಮ ಸೇನೆಗಳನ್ನು ಬೆಲ್ಜಿಯಮ್ಮಿನಮೇಲೆ ತಡೆಯಿಲ್ಲದೆ ಮುಂದಕ್ಕೆ ಹೋಗಬಿಡಬೇಕು. ಇಲ್ಲದಪಕ್ಷದಲ್ಲಿ ನೀವು ನಮ್ಮ ಶತ್ರುಗಳೆಂದಾಗಿ ಪರಿಗಣಿಸಲ್ಪಡುವಿರಿ" ಎಂದು ಅಂತ್ಯಸಂದೇಶವನ್ನು ಕಳುಹಿದನು.

"ಫ್ರೆಂಚ್ ವೈಮಾನಿಕರು ಸಿಡಿಮದ್ದುಗಳನ್ನು ಹಾಕಿದ್ದಾರೆ. ಫ್ರೆಂಚರ ಅಶ್ವಸೇನೆಯು ತಮ್ಮ ಎಲ್ಲೆಯನ್ನು ದಾಟಿಬಂದು ಒಂದು ಜಾತಿಗೂ ಮತ್ತೊಂದು ಜಾತಿಗೂ ಇರುವ ಧರ್ಮಗಳಿಗೆ ಭಂಗವನ್ನುಂಟುಮಾಡಿದೆ" ಎಂದು ನಮ್ಮ ಸರ್ಕಾರದವರು ನಿಮಗೆ ತಿಳಿಯಿಸಬೇಕೆಂದು ನನಗೆ ತಂತ್ರೀವಾರ್ತೆಯನ್ನು ಕೊಟ್ಟಿದ್ದಾರೆ ಎಂದು ಜರ್ಮನ್ ರಾಯಭಾರಿಯು ಬೆಲ್ಜಿಯಂ ಮಂತ್ರಿಗೆ ತಿಳಿಯಪಡಿಸಿದನು. ಅದರಮೇಲೆ "ಫ್ರೆಂಚರು ಯಾವದೇಶದಲ್ಲಿ ಸಿಡಿಮದ್ದನ್ನು ಹಾಕಿದ್ದಾರೆ? ಅಂತರ್ಜಾತೀಯ ಧರ್ಮಕ್ಕೆ ವಿರುದ್ಧವಾಗಿ ತಮ್ಮ ಅಶ್ವಸೇನೆಯನ್ನು ಯಾವ ಇತರದೇಶಕ್ಕೆ ನುಗ್ಗಿಸಿದ್ದಾರೆ?" ಎಂದು ಬೆಲ್ಜಿಯಂಮಂತ್ರಿಯು ಜರ್ಮನ್ ರಾಯಭಾರಿಯನ್ನು ಕೇಳಿದನು. ಅದಕ್ಕೆ ರಾಯಭಾರಿಯು—"ಅವರು ಜರ್ಮನಿಗೆ ನುಗ್ಗಿದ್ದಾರೆ. ಜರ್ಮನಿಯಲ್ಲಿ ಸಿಡಿಮದ್ದನ್ನು ಹಾಕಿದ್ದಾರೆ" ಎಂದು ಉತ್ತರವನ್ನು ಕೊಟ್ಟನು. ಅದರಮೇಲೆ ಬೆಲ್ಜಿಯಂಮಂತ್ರಿಯು—"ಆದರೆ ಈ ಸುದ್ದಿಯನ್ನು ನಮಗೆ ತಿಳಿಯಿಸುವುದರಲ್ಲಿ ನಿಮ್ಮ ಅಭಿಪ್ರಾಯವೇನೋ ನನಗೆ ತಿಳಿಯಲಿಲ್ಲ" ಎಂದು ಬರೆದನು. ಅದಕ್ಕೆ ಜರ್ಮನ್ ರಾಯಭಾರಿಯು—"ಫ್ರೆಂಚರ ನಡತೆಯು ಅಂತರ್ಜಾತೀಯ ಧರ್ಮಗಳಿಗೆ ವಿರುದ್ಧವಾಗಿದೆ. ಇಂಥ ಧರ್ಮವಿರುದ್ಧ ಕಾರ್ಯಗಳನ್ನು ಫ್ರಾನ್ಸು ಇನ್ನು ಯಾವಾಗಲಾದರೂ ಮಾಡಬಹುದೆಂದು ಈಗಿನ ಅದರ ಚರ್ಯದಿಂದ ತೋರುತ್ತದೆ" ಎಂದು ತಿಳಿಯಪಡಿಸಿದನು.

ಬಳಿಕ ಮರುದಿನ ಬೆಳಗ್ಗೆ ಜರ್ಮನ್ ರಾಯಭಾರಿಯು ಬೆಲ್ಜಿಯಂ ಮಂತ್ರಿಗೆ ಕೊನೆಯಮಾತಾಗಿ ಈ ಕೆಳಗಣ ಸಂದೇಶವನ್ನು ಕಳುಹಿದನು—"ಜರ್ಮನ್ ಸರ್ಕಾರವು ಸದುದ್ದೇಶದಿಂದ ಹೇಳಿದ ಮಾತನ್ನು ಕೇಳದೆ ನಿರಾಕರಿಸುವ ಪಕ್ಷದಲ್ಲಿ ಜರ್ಮನಿಯವರು ಫ್ರೆಂಚಿನವರ ಉಪದ್ರವದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಆಯುಧಬಲವನ್ನು ಉಪಯೋಗಿಸಿಯಾದರೂ ತಮ್ಮ ಕೋರಿಕೆಯನ್ನು ನೆರವೇರಿಸಿಕೊಳ್ಳಬೇಕಾಗುವುದು. (ಎಂದರೆ ಬೆಲ್ಜಿಯಮ್ಮಿನ ಮೇಲೆ ಯುದ್ಧವನ್ನು ಮಾಡಿಯಾದರೂ ತಮ್ಮ ಸೇನೆಗಳನ್ನು ಬೆಲ್ಜಿಯಮ್ಮಿನ ಮೇಲಿಂದ ಫ್ರಾನ್ಸಿಗೆ ತೆಗೆದುಕೊಂಡು ಹೋಗುವರು ಎಂದರ್ಥವು)

ಇದನ್ನೆಲ್ಲಾ ಪರಿಭಾವಿಸಿದರೆ ಈಸೋಪನಕತೆಯ ಪುಸ್ತಕದಲ್ಲಿನ "ತೋಳವೂ ಕುರಿಯೂ" ಎಂಬ ಕತೆಯು ಸ್ಮರಣೆಗೆ ಬರುವುದಲ್ಲವೆ? ಜರ್ಮನಿಯು ತನ್ನ ದುರಾಶಾಪರಿಪೂರಣಕ್ಕಾಗಿ ಉದ್ಧತತನದ ಘಾತಕಕೃತ್ಯಾರಂಭವನ್ನು ಮಾಡಲು ಅದಕ್ಕೆ ನ್ಯಾಯಮೂಲಕತ್ವವನ್ನು ಕಲ್ಪಿಸಲು ಎಷ್ಟು ಕುಹಕವನ್ನು ನಡೆಯಿಸಿ, ಸಲ್ಲದಕಾರಣವನ್ನು ಒಡ್ಡಿದೆಯೆಂಬುದು ಗೊತ್ತಾಗುವುದಲ್ಲವೆ? ಈ ಕಾರಣದಿಂದಲೇ ಆಂಗ್ಲದೇಶದ "ಪಂಚ್" ಎಂಬ ಪರಿಹಾಸಕಪತ್ರಿಕೆಯು ಜರ್ಮನಿಯು ಮಾಡಿದ ಯುದ್ಧಪ್ರಕಟನೆಯ ರೀತಿಯನ್ನು ಈ ಕೆಳಗೆ ಕಂಡ ರೂಪದಿಂದ "ಗೇಲಿ" ಮಾಡಿರುವುದು ಬಲು ಚೆನ್ನಾಗಿ ಒಪ್ಪುತ್ತಿದೆ:—

ಜರ್ಮನ್ ಚಕ್ರವರ್ತಿಯ ಯುದ್ಧಪ್ರಕಟನ ರೀತಿ.

"ಜರ್ಮನಿಯಲ್ಲಿರುವ ವೆನಿಜುಲಾ ರಾಯಭಾರಿಯು ಬರೆದ ಪತ್ರಿಕೆಯನ್ನು ಪೋಸ್ಟಾಫೀಸಿನವರು ನನಗೆ ಕಳುಹಿಕೊಟ್ಟಿದ್ದಾರೆ. ಆ ಕಾಗದದ ಚೀಲದಮೇಲೆ ನನ್ನ ಆಕೃತಿಯಿರುವ ಸ್ಟಾಂಪನ್ನು ಬಲವಾಗಿ ಅಂಟಿಸಿದ್ದಾರೆ. ಅದು ನನಗೆ ಅವಮಾನಕರವು. ಅದು ನನ್ನ ಧ್ವಜಪತಾಕೆಗೂ ಅವಮಾನವೇ. ವೆನಿಜುಲಾದವರಿಗೆ ೪೯ ನಿಬಂಧನೆಗಳನ್ನು ಮಾಡಿಕೊಟ್ಟಿದ್ದೇವೆ. ಅವುಗಳಲ್ಲಿ ೧ ಕ್ಕೆ ಅವರು ಅಂಗೀಕರಿಸದೆ ಹೋಗಿದ್ದಾರೆ. ಅದುಕಾರಣ, ಅವರಮೇಲೆ ಯುದ್ಧವನ್ನು ಪ್ರಕಟಿಸಿರಿ. ನಮ್ಮ ದೇಶದವರಿಗೋಸುಗ ನನ್ನಪ್ಪಣೆಯನ್ನು ಹೀಗೆ ಪ್ರಕಟಿಸಿರಿ "ನಮ್ಮ ಶತ್ರುಗಳಾದ ಇವರು ಬಲವಂತರೂ ಮೋಸಗಾರರೂ ಆಗಿರುತ್ತ, ಕೆಟ್ಟ ಉದ್ದೇಶದಿಂದ ಬುದ್ಧಿಪೂರ್ವಕವಾಗಿ ನಮ್ಮನ್ನು ಪ್ರತಿಭಟಿಸುತ್ತಿರುವುದರಿಂದ, ಯುದ್ಧಮಾಡುವುದಕ್ಕೆ ನಮಗೆ ಎಷ್ಟುಮಾತ್ರವೂ ಇಷ್ಟವಿಲ್ಲದಿದ್ದರೂ ನಮ್ಮನ್ನು ಅವರೇ ಯುದ್ಧಮಾಡುವುದಕ್ಕೆ ಹುರಿದುಂಬಿಸಿದ್ದಾರೆ" ಎಂಬುದು ಮೊದಲಾದ ಪದ್ಧತಿಯ ಒಕ್ಕಣೆಗಳನ್ನು ಬರೆದು ಕಳುಹಿಸಿರಿ.

.........ಹಾಂಬರ್ಗಿನಿಂದ ಬರುತ್ತಿರುವ ಜಾಡಿಗಳಮೇಲೆ "ಬಹಳ ಉತ್ತಮವಾದವು" ಎಂಬ ಅಕ್ಷರಗಳುಳ್ಳ ಚೀಟಿಗಳನ್ನು ಅಂಟಿಸಿದ್ದಾರೆ. ಜರ್ಮನಿದೇಶದಲ್ಲಾಗುವ ಹಚ್ಚಡಗಳಿಗಿಂತ ಉತ್ತಮವಾದವುಗಳು ಲೋಕದಲ್ಲೆಲ್ಲೂ ಆಗದೆಯಿರುವಲ್ಲಿ ಹಾಂಬರ್ಗಿನವರು ತಮ್ಮ ಹಚ್ಚಡಗಳಮೇಲೆ ಹಾಗೆ ಬರೆದುಕೊಳ್ಳುವುದು ನಮಗೆ ಅಗೌರವವನ್ನು ಪಡಿಸುವುದು ಮಾತ್ರವೇಅಲ್ಲದೆ, ನಾವು ಅಮೇರಿಕಾದ ಸಂಯುಕ್ತಪ್ರಭುತ್ವದವರಿಗೆ ಬರೆದ ಕಡೆಯ ಕಾಗದಕ್ಕೆ ಅವರಿಂದ ಸರಿಯಾದ ಸಮಾಧಾನವು ಬಂದಿಲ್ಲ; ಈ ಕಾರಣಗಳಿಂದ ಅವರಮೇಲೆ ಯುದ್ಧವನ್ನು ಪ್ರಕಟಿಸಿರಿ. ಮತ್ತೂ ನನ್ನ ಪ್ರಜೆಗಳಿಗೆ ಪದ್ಧತಿಯಂತೆ ನನ್ನ ಆಜ್ಞೆಯನ್ನು ತಿಳಿಯಿಸಿರಿ.

ಕೊಚಿನ್ ಚೀನಾದಲ್ಲಿ ಯಾರೋಒಬ್ಬನು ಬರೆದ ಪುಸ್ತಕದಲ್ಲಿ ಮೇಲ್ಗಡೆ ಚಿತ್ರವೊಳಗೆ ಜರ್ಮನಿದೇಶದ ಹುಂಜವನ್ನು ಕೊಚಿನ್ ಚೀನಾದ ಕೋಳಿಯು ಹೊಡೆದು ಬೀಳಿಸಿದಂತೆ ಚಿತ್ರಿಸಿದ್ದಾನೆ. ಇದು ನಿಜವಾಗಿಯೂ ದೌರ್ಜನ್ಯವೇ. "ನೀವು ತತ್‌ಕ್ಷಣವೇ ನಮ್ಮ ಕ್ಷಮಾಪಣೆಯನ್ನು ಕೇಳದಿದ್ದರೆ ನಿಮ್ಮಮೇಲೆ ಯುದ್ಧಕ್ಕೆಬರುವೆ" ವೆಂದು ಕೊಚಿನ್ ಚೀನಾದವರಿಗೆ ಕೂಡಲೇ ಬರೆದೆವು. ಕೊಚಿನ್ ಚೀನಾವು ಫ್ರಾನ್ಸಿಗೆ ಸೇರಿರುವುದೆಂದು ಅವರು ಬರೆದಿರುವರು. ಹಾಗಾದರೂ ಸರಿ, ಫ್ರಾನ್ಸಿನಮೇಲೆ ನಾವು ಇಷ್ಟರೊಳಗೇ ಯುದ್ಧವನ್ನು ಆರಂಭಿಸಿರುವೆವಾದುದರಿಂದ ಈ ಕೊಚಿನ್ ಚೀನಾದವರ ಮೇಲೆ ಮರಳಿ ಆರಂಭಿಸಬೇಕಾದುದಿಲ್ಲ.

.........ಭೂಮಧ್ಯರೇಖೆಯ ಸಮೀಪದಲ್ಲಿರುವಷ್ಟು ತೀಕ್ಷ್ಣತೆಯು ಮತ್ತೆಲ್ಲೂ ಇಲ್ಲವೆಂದು ಒಬ್ಬನು ಬರೆದಿದ್ದಾನೆ. ನಮ್ಮ ಪ್ರಜೆಗಳಿಗೆ ಇರುವಷ್ಟು ತೀಕ್ಷ್ಣತೆಯು ಮತ್ತಾರಿಗೂ ಇರಲಾರದು. ಆದುದರಿಂದ ಈ ಬರವಣಿಗೆಯು ತಪ್ಪಾದುದು. ಭೂಮಧ್ಯರೇಖಾಸಮೀಪದಲ್ಲಿನ ದೇಶಗಳಲ್ಲಿ ಇರುವವರ ಮೇಲೆಲ್ಲಾ ಯುದ್ಧವನ್ನು ಪ್ರಕಟಿಸಿರಿ, ಈ ವಿಷಯವನ್ನು ನಮ್ಮ ಪ್ರಜೆಗಳಿಗೆ ತಿಳಿಸಿರಿ.

.........ಸೌತ್‌ಪೋಲ್ ರಿಪಬ್ಲಿಕ್ಕಿನವರು ಯುದ್ಧಸನ್ನಾಹದಲ್ಲಿದ್ದಾರೆಂದು ತಿಳಿದು ಯುದ್ಧವನ್ನಾರಂಭಿಸಿದೆವು. ಆ ರಿಪಬ್ಲಿಕ್ಕಿನ ಅಧ್ಯಕ್ಷನು ಪೆಂಗ್ವಿನ್ ದೇಶೀಯನೆಂದು ಬಳಿಕ ಗೊತ್ತಾಯಿತು. ತಿಳಿದರೆ ಏನು? ಮಾತನ್ನು ಹಿಂದಿರುಗಿಸುವುದಕ್ಕೆ ಅವಕಾಶವಿಲ್ಲ; ಯುದ್ಧದ ಹಡಗುಗಳೂ ಕೂಡ ಆಗಲೇ ಹೋಗಿಬಿಟ್ಟಿವೆ. ಊಟದ ಸಮಯವಾಗುತ್ತಿದೆ. ಇನ್ನು ೭ ನಿಮಿಷಗಳು ಮಾತ್ರ ವ್ಯವಧಿಯಿದೆ. ಸ್ಪೇಯಿನ್—ಪೋರ್ಚುಗಲ್ಲು—ಟಿಬೆಟ್ಟು—ಲಾಪ್ಲಂಡ್—ಮೊನಾಕೋ—ಈ ದೇಶಗಳಮೇಲೂ ಯುದ್ಧವನ್ನು ಪ್ರಕಟಿಸಿರಿ. ಕಾರಣಗಳ ಸಮೇತ ಪ್ರಕಟನ ಪತ್ರಿಕೆಗಳನ್ನು ಹಿಂದನಿಂದ ಕಳುಹಿಸಿಕೊಡಬಹುದು.

.........ಬೋಸ್ನಿಯಾ—ಹರ್ಜಗೋವಿನಾಗಳ ಮೇಲೆ ಯುದ್ಧವನ್ನು ಪ್ರಕಟಿಸಿದೆವು. ಈ ಜಿಲ್ಲೆಗಳು ನಮ್ಮಸ್ನೇಹಿತರ ಅಧಿಪತ್ಯದಲ್ಲೇ ಇರುವುವೆಂದು ಈಗ ತಿಳಿದುಬಂದಿತು. ಪ್ರಕಟನವು ಆಗಿಹೋದಮೇಲೆ ಯುದ್ಧವನ್ನು ಮಾಡಿಯೇ ಮುಗಿಸಬೇಕು. ಆನಮ್ಮ ಸ್ನೇಹಿತನಮೇಲೇ ಸೈನ್ಯಗಳನ್ನು ಕಳುಹಿಸಿಕೊಡಿ.

.........ಮುದ್ರಣಾಲಯಗಳಲ್ಲಿಹಗಲೂ ರಾತ್ರಿಯೂ ಕೆಲಸವು ನಡೆಯುತ್ತಿದ್ದರೂ ಯುದ್ಧಪ್ರಕಟನ ಪತ್ರಿಕೆಗಳು ಸಾಲದೆ ಇವೆ. ಆದುದರಿಂದ ಅವುಗಳಲ್ಲಿರಬೇಕಾದ ವಿಷಯಗಳಿಲ್ಲದಿದ್ದರೂಸರಿ; ದೇಶದ ಹೆಸರೊಂದನ್ನುಮಾತ್ರವೇ ಮುದ್ರಿಸಿ ಕಳುಹಿಸಬಹುದೆಂದು ನಾನು ಆಜ್ಞಾಪಿಸಿರುವೆನು.

.........ಸರಿ; ಇನ್ನು ಯುದ್ಧಮಾಡುವುದಕ್ಕೆ ಯಾವ ದೇಶವೂ ಉಳಿದಿಲ್ಲವೆ? ಈ ರಾತ್ರಿ ೨ ಜಾವಗಳೊಳಗೆ ಯುದ್ಧಮಾಡಲು ತಕ್ಕ ದೇಶಗಳು ಕೆಲವನ್ನು ಗೊತ್ತುಮಾಡಿ ನನಗೆ ತಿಳಿಯಪಡಿಸದಿದ್ದರೆ ನಾನುಜರ್ಮನಿದೇಶದ ಮೇಲೆಯೇ ಯುದ್ಧವನ್ನು ಮಾಡುವೆನು.

.........ರಾತ್ರಿ ೨ ಜಾವಗಳಾದುವು ಉಳಿದಿರುವ ದೇಶಗಳ ಹೆಸರು ಹೇಳಲ್ಪಡಲಿಲ್ಲ. ಅದುಕಾರಣ, ಜರ್ಮನಿದೇಶದಮೇಲೆಯೇ ಯುದ್ಧವನ್ನು ಪ್ರಕಟಿಸಿದೆನು."

ಜರ್ಮನ್ ಪ್ರಜೆಗಳ ಕಷ್ಟ.

ರಾಜ್ಯವನ್ನಾಳತಕ್ಕವರು ಯಾವಯಾವ ಅಭಿನಿವೇಶಗಳಿಂದಲೋ ಯುದ್ಧಾರಂಭಮಾಡಿದ ಬಳಿಕ ಅವರ ಶತ್ರುಗಳ ದೇಶಕ್ಕೆ ಮಾತ್ರ ಅನರ್ಥವುಂಟಾಗುವುದೆಂದು ಭಾವಿಸುವುದು ತಪ್ಪು. ಈಗಿನ ಮಹಾಯುದ್ಧದಿಂದ ಪ್ರಪಂಚಕ್ಕೇ ಮಹಾನರ್ಥವಾಗುತ್ತಿದೆ. ಅದರೊಳಗೂ ಮಹಾಯುದ್ಧಕ್ಕೆ ಕಾಲುಕೆರೆದು ನಿಂತ ಜರ್ಮನ್ ಚಕ್ರವರ್ತಿಯವರ ದೇಶದೊಳಗೇ ಎಷ್ಟು ಕಷ್ಟಗಳೊದಗಿವೆಯೆಂಬುದನ್ನು ತಿಳಿದರೆ ಇತರ ದೇಶಗಳ ವಿಷಯವನ್ನೂ ಊಹಿಸಿಕೊಳ್ಳಬಹುದಾಗಿದೆ. ಈ ಕೆಳಗೆ ಹೇಳುವ ಸ್ಥಿತಿಯು ಜರ್ಮನಿಯೊಳಗೆ ಯುದ್ಧಾರಂಭವಾದ ೩ ವಾರಗಳ ಅವಧಿಯಲ್ಲಿ ಪ್ರಾಪ್ತವಾದುದಾಗಿರುತ್ತದೆ. ಇದನ್ನು ಡೇಲಿಮೇಲ್ ಪತ್ರಿಕೆಗೆ ಆಸ್ಟಿನ್ ಹಾರಿಸನ್‌ರವರು ಬರೆದಿರುತ್ತಾರೆ:—ಅದೇನೆಂದರೆ—"ಜರ್ಮನ್ ರಾಜಧಾನಿಯಾದ ಬರ್ಲಿನ್ ನಗರದಲ್ಲಿ ೧ ಲಕ್ಷ ಮಂದಿಗಳು ಉದ್ಯೋಗವಿಲ್ಲದೆ ಅಲೆದಾಡುತ್ತಿದ್ದಾರೆ. ಈ ಸಂಗತಿಯು ನಿಜವಾದುದರಿಂದ ಇದನ್ನು ಸ್ವದೇಶದ ಒಂದು ಪತ್ರಿಕೆಯಲ್ಲಿ ಪ್ರಕಟಿಸಲು ಆ ಪ್ರಭುತ್ವದವರೇ ಅನುಮತಿಯನ್ನು ಕೊಟ್ಟಿದ್ದಾರೆ. ಅನುದ್ಯೋಗಿಗಳಾಗಿರುವ ಆ ಜನರ ವಿವರವೆಂತೆಂದರೆ.—ರೊಟ್ಟಿಗಳನ್ನು ಮಾಡುವವರು ೮೦೦ ಮಂದಿ, ಕೂಲಿಯವರು ೨೩೦೦ ಮಂದಿ, ಪುಸ್ತಕಗಳ ಬೈಂಡ್ ಮಾಡುವವರು ೩೦೪೮ ಮಂದಿ, ಮುದ್ರಣಾಲಯದ ಕೆಲಸಗಾರರು ೮೦೦೦ ಮಂದಿ, ಅಲ್ಲಿ ಕೆಲಸವನ್ನು ಕಲಿಯುತ್ತಿದ್ದವರು ೧೧೩೩ ಮಂದಿ, ಉಳಿದ ಫ್ಯಾಕ್ಟರಿಗಳ ಕೆಲಸಗಾರರು ೪೦೦ ಮಂದಿ, ಕ್ಷೌರಿಕರು ೧೫೫ ಮಂದಿ, ಸಣ್ಣಸಣ್ಣ ಹೋಟಲಿನವರೂ ಸಾರಾಯಿ ಅಂಗಡಿಯವರು ೩೫೩೦ ಮಂದಿ, ಟೋಪಿಗಳನ್ನು ಮಾಡುವವರು ೪೦೦ ಮಂದಿ, ಒಡ್ಡರು ೧೪೦೦೦ ಮಂದಿ, ಲೋಹದ ಕೆಲಸಗಾರರು ೧೧೦೦೦ ಮಂದಿ, ಜೀನುಗಾರರು ೯೦೦ ಮಂದಿ, ದರ್ಜಿ ಕೆಲಸದವರು ೨೦೦ ಮಂದಿ, ಕಂಬಳಿ ಕೆಲಸದವರು ೧೨೦೦ ಮಂದಿ, ನೆಯ್ಗೆಯವರು ೧೦೦೦ ಮಂದಿ, ಸಾಮಾನುಗಳನ್ನು ಇಳಿಯಿಸುವ ಸಾಗಿಸುವ ಕೆಲಸಗಾರರು ೫೦೦೦ ಮಂದಿ, ಕಲ್ಲಚ್ಚಿನ ಕೆಲಸಗಾರರು ೧೦೦೦ ಮಂದಿ, ಬಣ್ಣಗಾರರು ೨೩೦೦ ಮಂದಿ, ಚರ್ಮದ ಕೆಲಸಗಾರರು ೧೮೫ ಮಂದಿ, ಇವಿಷ್ಟು ಜನರೂ ಮಾಡುವುದಕ್ಕೆ ಕೆಲಸವಿಲ್ಲದವರಾಗಿದ್ದಾರೆ. ಇದರಿಂದ ಪಟ್ಟಣದಲ್ಲಿ ವ್ಯಾಕುಲತೆಯುಂಟಾಗಿದೆ. ಅದು ಕಾರಣ, ಪಟ್ಟಣದಲ್ಲಿ ಜನಸಂಖ್ಯೆಯನ್ನು ಕಡಿಮೆಮಾಡುವ ಪದ್ಧತಿಯನ್ನು ಮ್ಯಾಜಿಸ್ಟ್ರೇಟರು ಅವಲಂಬಿಸಿದ್ದಾರೆ. ಆಗಸ್ಟ್ ತಾ|| ೨೪ ರಲ್ಲಿ ೩೦೦೦ ಮಂದಿ ಕೆಲಸಗಾರರನ್ನು ದೇಶದ ಬೇರೆಬೇರೆ ಭಾಗಕ್ಕೆ ಕಳುಹಿಸಿಬಿಟ್ಟರು. ಆಗಸ್ಟ್ ತಾ|| ೨೩ ರಲ್ಲಿ ಮತ್ತೆ ೨೦೦೦ ಮಂದಿಗಳನ್ನು ಕಳುಹಿಬಿಟ್ಟರು. ಪುರನಿವಾಸಿಗಳು ತಮಗೆ ಶಕ್ತಿಯಿರುವವರೆಗೂ ಬಡಬಗ್ಗರಿಗೆ ಸಹಾಯವನ್ನು ಮಾಡಬೇಕೆಂದು ಸರ್ಕಾರದವರು ಪಟ್ಟಣಿಗರಿಗೆಲ್ಲಾ ಅಪ್ಪಣೆಮಾಡಿದ್ದಾರೆ. ಸಾಯಂಕಾಲವಾದ ಬಳಿಕ ಪಟ್ಟಣದಲ್ಲಿ ಯಾವ ಪ್ರಜೆಗಳೂ ಬೀದಿಯಲ್ಲಿ ತಿರುಗಾಡಕೂಡದೆಂದು ಆಜ್ಞೆಮಾಡಿದ್ದಾರೆ. ಜರ್ಮನಿದೇಶದಲ್ಲಿ ಪದಾರ್ಥಗಳ ಯಾತಾಯಾತಗಳ ವ್ಯಾಪಾರವು ಕೆಟ್ಟುಹೋಗಿರುವುದರಿಂದ ೭ ಲಕ್ಷ ಮಂದಿಗಳು ಜೀವನಾಧಾರವಿಲ್ಲದೆ ತಪಿಸುತ್ತಿದ್ದಾರೆಂದು ತಿಳಿಯಬಂದಿದೆ. ಹೊಲಿಗೆಯ ವ್ಯಾಪಾರಕ್ಕೆ ಹೆಚ್ಚು ಉಪದ್ರವವುಂಟಾಗಿದೆಯೆಂದು ಜರ್ಮನಿಯ ವರ್ಟ್ಸ್ ಪತ್ರಿಕೆಯು ಹೇಳುತ್ತದೆ. ಉದ್ಯೋಗ ತಪ್ಪಿದುದರಿಂದ ಸ್ತ್ರೀಪುರುಷರು ಹೊಟ್ಟೆಗಿಲ್ಲದೆ ಬಹಳ ತಾಪತ್ರಯಪಡುತ್ತ ಗುಂಪುಗುಂಪಾಗಿ ತಿರುಗುತ್ತಿದ್ದಾರೆ. ಅವರಿಗೆ ಯಾವುದಾದರೂ ಜೀವನಾಧಾರವನ್ನು ಕಲ್ಪಿಸುವುದು ಅವಶ್ಯಕವೆಂದು ದೇಶೀಯಪತ್ರಿಕೆಗಳು ಬರೆಯುತ್ತಿವೆ. ಈ ಪ್ರಯತ್ನವನ್ನು ನಾವು ಮಾಡದಿದ್ದರೆ ದೇಶದಲ್ಲಿ ಕ್ಷೋಭೆಕೂಡ ಉಂಟಾಗುವುದೆಂದು ಬರೆದಿರುತ್ತವೆ ಇದುವರೆಗೆ ೧೦ ಲಕ್ಷ ಮಂದಿಗಳು ಅನ್ನವಿಲ್ಲದೆ ಸಾಯುವ ಸ್ಥಿತಿಗೆ ಬಂದಿದ್ದಾರೆಂದು ಮತ್ತೊಂದು ಜರ್ಮನ್ ಪತ್ರಿಕೆಯು ಬರೆದಿದೆ. ಪ್ರತಿದಿನವೂ ಸಾವಿರಾರು ಜನಗಳು ಪ್ರತಿಯೊಂದು ವೃತ್ತಪತ್ರಿಕೆಯ ಕಾರ್ಯಾಲಯದ ಬಾಗಿಲಲ್ಲಿ ಗುಂಪುಕೂಡಿ ತಮ್ಮ ಕಷ್ಟಗಳನ್ನು ಹೇಳಿಕೊಂಡು ಅಲ್ಲೀನಾದರೂ ಕೆಲಸವು ಸಿಕ್ಕೀತೋ ಎಂದು ನಿರೀಕ್ಷಿಸುತ್ತಲಿದ್ದಾರೆ. ಹುಡುಗರು ಯುವತೀಯುವಕರು ಮುದುಕರು ಮೊದಲಾದವರೆಲ್ಲಾ ಕೆಲಸಗಳನ್ನು ಹುಡುಕಿಕೊಂಡು ಅಲೆಯುತ್ತಿದ್ದಾರೆ. ಹಲವರು ಬಡವರಿಗೆ ನಿಲ್ಲುವುದಕ್ಕೆ ಮನೆಯೂ ಇಲ್ಲ; ಬಾಡಿಗೆ ಕೊಡುವುದಕ್ಕೆ ಕೈಯಲ್ಲಿ ರೊಕ್ಕವಿಲ್ಲ; ಅದುಕಾರಣ ಬಾಡಿಗೆಮನೆಗಳು ಅನೇಕಾನೇಕ ಖಾಲಿಯದಾಗಿ ಬಿದ್ದಿವೆ. ಬಾಡಿಗೆಗೆ ತೆಗೆದುಕೊಳ್ಳುವವರೇ ಇಲ್ಲವಾಗಿದೆ. ಪತ್ರಿಕಾವಿಲೇಖಕರೂ ವೃತ್ತಾಂತಸಂಗ್ರಹಕಾರರೂ ಕೆಲಸವನ್ನು ಕೊಡಿರೆಂದು ಪತ್ರಿಕಾಧಿಪತಿಗಳನ್ನು ಬೇಡುತ್ತಿದ್ದಾರೆ. ಎತ್ತನೋಡಿದರೂ ಹೊಟ್ಟೆಗಿಲ್ಲದವರೂ ಉದ್ಯೋಗವಿಲ್ಲದವರೂ ಕಣ್ಣಿಗೆ ಬೀಳುತ್ತಿದ್ದಾರೆ. ಎಂದು ವರ್ವಾರ್ಟ್ಸ್ ಪತ್ರಿಕೆಯು ಒಂದಾನೊಂದು ಸಂಚಿಕೆಯಲ್ಲಿ ಬರೆಯಲ್ಪಟ್ಟಿದೆ.

ಸರ್ವಜನಸಮಾನದರ್ಶಕ ಸಂಘದ ಸ್ತ್ರೀಯರು ೬೦೦ ಮಂದಿಗಳು ಸಭೆಯನ್ನು ಕೂಡಿದ್ದರು. ಈಗಿನ ದಾರುಣಾವಸ್ಥೆಯನ್ನು ನಿವಾರಿಸುವುದಕ್ಕೆ ಕೂಡಲೇ ತಕ್ಕ ಪ್ರಯತ್ನವನ್ನು ಮಾಡದಿದ್ದರೆ ಹೇಳಲಾಗದಷ್ಟು ಅನರ್ಥಗಳು ಸಂಘಟಿಸುವುವೆಂದು ಅವರು ಸರ್ಕಾರಕ್ಕೆ ಬಿನ್ನಯಿಸಿಕೊಂಡರು. ಇಂಗ್ಲಾಂಡಿಗೆ ಷೆಫೀಲ್ಡ್ ಎಂಬುದು ಹೇಗೋ ಜರ್ಮನಿಗೆ ಸೋಲಿಂಜನ್ ಎಂಬುದು ಹಾಗೆ ಕೈಗಾರಿಕೆ ಯಂತ್ರಗಾರಿಕೆ ಮೊದಲಾದುವುಗಳಿಗೆ ಪ್ರಸಿದ್ಧಸ್ಥಲವಾಗಿದೆ. ಈಗ ಆ ಸ್ಥಲದಲ್ಲಿ ಎಲ್ಲತೆರದ ಕೆಲಸಗಳೂ ಕಟ್ಟಾಗಿಹೋಗಿವೆ. ಅಲ್ಲಿ ಆಣಿಯಾಗುವ ಸಾಮಾನುಗಳಲ್ಲಿ ಮುಕ್ಕಾಲುಭಾಗವೆಲ್ಲಾ ವಿದೇಶಗಳಿಗೆ ಸಾಗಿಹೋಗುತ್ತಿದ್ದಿತು. ಈಗ ಅವು ಸಾಗಿಹೋಗಲು ಅವಕಾಶವಿಲ್ಲದೆ, ಅವುಗಳ ನಿರ್ಮಾಣವೇ ನಿಂತುಹೋಗಿದೆ. ಅಲ್ಲಿನ ವರ್ತಕ ಸಂಘದವರಿಗೆ ಇತರ ದೇಶದವರು ಲಕ್ಷಗಟ್ಟಲೆಯಾಗಿ ಹಣವನ್ನು ಕೊಡಬೇಕಾಗಿದೆ. ಆದರೇನು? ಆ ವ್ಯವಹಾರವೆಲ್ಲಾ ಕಟ್ಟಾಗಿ ಹೋಗಿದೆ. ಅವೂರಿನ ಕೆಲ ಕಾರ್ಯಾಲಯಗಳಲ್ಲಿ ಈಗ ದಿನಕ್ಕೆ ಒಂಬೆರಡು ಗಂಟೆಗಳ ಕಾಲ ಕೆಲಸನಡೆಯುತ್ತಿದೆ. ಪಟ್ಟಣವೆಲ್ಲಾ ಭೀಕರಾವಸ್ಥೆಯಲ್ಲಿರುವುದೆಂದು ಆಗಸ್ಟ ತಾ|| ೧೮ರಲ್ಲಿ ವರ್ವರ್ಟ್ಸ್ ಪತ್ರಿಕೆಯಲ್ಲಿ ಬರೆದಿದೆ.

ಯುದ್ಧಾರಂಭವಾದ ೧ ತಿಂಗಳೊಳಗಾಗಿ ವಸ್ತುನಿರ್ಮಾಣಾಲಯಗಳೆಲ್ಲಾ ಮುಚ್ಚಲ್ಪಟ್ಟುವು. ಅನ್ನಾತುರವೂ ದಾರಿದ್ರ್ಯವೂ ದೇಶದಲ್ಲಿ ಕವಿದುಕೊಳ್ಳುತ್ತಿದೆ. ಜರ್ಮನ್ ಸೈನ್ಯಾಧಿಕಾರಿಗಳು ಯುದ್ಧಕ್ಕೆ ಹೊರಟಾಗ ತಮ್ಮ ದೇಶಕ್ಕೆ ಮುಂದೆ ಎಂತಹ ಗತಿಯುಂಟಾಗುವುದೋ ಎಂಬುದನ್ನು ಅವರು ಈಷತ್ತೂ ಯೋಚಿಸಲೇ ಇಲ್ಲವಾಗಿರಬೇಕು. ಯುದ್ಧರಂಗಕ್ಕೆ ಹೋಗಿ ಹೋರಾಡುವ ಸೈನಿಕರಿಗೆ ಎಷ್ಟು ತೆರದ ಬಾಧೆಗಳುಂಟಾಗುವುವೋ, ಮನೆಗಳಲ್ಲಿದ್ದುಕೊಂಡಿರುವ ಪುರಜನರಿಗೂ ಸಹಮತ್ತೊಂದು ತೆರದ ಬಾಧೆಗಳು ಅಷ್ಟೇ ಇರುತ್ತಿರುವುವು. ಧನಾಭಾವದಿಂದಲೇ ಬಹಳ ಬಾಧೆಯು ಪ್ರಜೆಗಳಿಗೆ ತಟ್ಟುತ್ತಿರುವುದು. ಅದರ ಬಾಧೆಯು ಈಗ ಸಾಮಾನ್ಯವಾಗಿದ್ದರೂ ಮುಂದೆ ಬಹಳ ಭಯಂಕರವಾಗುವುದು. ಮಳೆಗಾಲವು ಸಮೀಪಿಸಿದಾಗ ಧನಾಭಾವದಿಂದುಂಟಾಗುವ ದಾರುಣಾವಸ್ಥೆಯು ವಾಚಾಮಗೋಚರವಾಗುವುದು. ಆಗಿನ ಜರ್ಮನ್ ಪ್ರಜೆಗಳ ಅವಸ್ಥೆಯು ಮಾನವಕೋಟಿಗೆ ಅತ್ಯಂತಭೀಭತ್ಸವಾಗಿ ತೋರುವ ಗತಿಗೆ ಬಾರದೆಯಿರುವುದಿಲ್ಲ. ಆಗ ಸ್ತ್ರೀಯರು ಮಾಡಬಹುದಾದ ಕೆಲಸಗಳು ಇದುವರೆಗಿನ ಯಾವ ಚರಿತ್ರದಲ್ಲೂ ಕಾಣದಿದ್ದಂತಹ ಅಸಾಧಾರಣಸ್ಥಿತಿಗೆ ಬಂದುಹೋಗುವುವು. ಈಗ ಜರ್ಮನ್ನರು ಇತರ ದೇಶದವರಿಗೆ ಉಂಟುಮಾಡುತ್ತಲಿರುವ ದಾರುಣಾವಸ್ಥೆಗಳಿಗೆಲ್ಲಾ ಮುಯ್ಯಾಗಿ ಅತ್ಯಂತ ದಾರುಣಾವಸ್ಥೆಗಳು ಅವರ ದೇಶದಲ್ಲೇ ಪ್ರಾಪ್ತವಾಗುವುವು.'' ಎಂಬ ಈ ವಿವರಣವು ಬರೆಯಲ್ಪಟ್ಟು ಇಲ್ಲಿಗೆ ೧|| ತಿಂಗಳಾಗಿರುವುದು. ಎಂದಬಳಿಕ ಈಗ ಜರ್ಮನಿಯ ಅವಸ್ಥೆಯು ಇನ್ನೆಷ್ಟು ಭೀಕರವಾಗಿರುವುದೆಂಬುದನ್ನು ಹೇಳಬೇಕಾಗಿಲ್ಲ.

ಯುದ್ಧದ ಸ್ಥಿತಿ.

ಪಶ್ಚಿಮ ರಣರಂಗ.

ರಾಯ್ ಪ್ರಾಂತದಲ್ಲಿ ಜರ್ಮನ್ ಸೇನೆಯು ವಿಸ್ತಾರವಾಗಿಯೇ ಇದೆ. ಕೆಲಕಡೆ ಶತ್ರುಗಳು ಬಿಟ್ಟ ಸ್ಥಲಗಳನ್ನು ನಮ್ಮ ಕಡೆಯ ಸೈನ್ಯಗಳು ಹಿಡಿದುಕೊಂಡವು. ಏಯಿಸ್ನ ನದಿಗೆ ಉತ್ತರದಲ್ಲೂ ಮ್ಯೂಜ್ ನದಿಗೂ ರೀಮ್ಸ್ [illegible] ಮಧ್ಯದಲ್ಲೂ ಎಲ್ಲವೂ ಯಥಾಸ್ಥಿತವಾಗಿದೆ. [illegible] ಯಿಂಟ್‌ಮಿಹಿಲ್‌ಗಳಿಗೆ ಮಧ್ಯದಲ್ಲಿದ್ದ ಜರ್ಮನ್ ಸೈನ್ಯವು ಉತ್ತರಕ್ಕೆ ಸರಿದಿತು. ಸೆಯಿಂಟ್‌ಮಿಹಿಲ್ಲಿಗೆ ಉತ್ತರದಲ್ಲೂ ಮ್ಯೂಜುನದಿಗೆ ಬಲಗಡೆಯಲ್ಲೂ ಇರುವ ಕೆಲ ಪ್ರದೇಶಗಳೆಲ್ಲಾ ಇನ್ನೂ ಜರ್ಮನರ ಅಧೀನದಲ್ಲೇ ಇವೆ. ಓವರ್‌ಲೋರ್ನ್ ಪ್ರಾಂತದಲ್ಲೂ ಎಪ್ರಮೆಂಟಿಗೆ ಪಶ್ಚಿಮದಲ್ಲೂ ಜರ್ಮನರು ಭೀಕರವಾಗಿ ಯುದ್ಧಮಾಡಿದರು. ಅದರಂತೆ ವಾಸ್‌ಜೆಸ್ಸು-ಲೋರೈನ್ ಪ್ರಾಂತಗಳಲ್ಲೂ ಯುದ್ಧವಾಗುತ್ತಲೇ ಇವೆ. ಜಯಾಪಜಯಗಳು ಸಮನಾಗಿಯೇ ಇದ್ದುವು. ಮಿತ್ರಸೈನ್ಯಗಳಿಗೆ ಎಡಗಡೆಯಲ್ಲಿರುವ ಜರ್ಮನ್ ಸೈನ್ಯವು ಯಾವಕಡೆಯಲ್ಲೂ ಮುಂದಕ್ಕೆ ಸಾಗಲಾಗಲಿಲ್ಲ. ಕೆಲಕಡೆ ಹಿಂದಕ್ಕೇ ಹೋಗಬೇಕಾಯಿತು. ಅಪ್ರಾಸಿಗೆ ಉತ್ತರದಲ್ಲಿ ಜರ್ಮನರು ನಮ್ಮ ಸೈನ್ಯಗಳ ಹೊಡೆತದಿಂದ ಹಿಮ್ಮೆಟ್ಟಿಸಲ್ಪಟ್ಟರು. ಈ ಪ್ರದೇಶದಲ್ಲಿ ಮಿತ್ರಸೈನ್ಯಗಳಿಗೆ ಅನುಕೂಲವಾದ ಸ್ಥಲವು ದೊರೆದಿದೆ. ರಾಯ್ ಪ್ರಾಂತದಲ್ಲಿ ಶತ್ರುಗಳು ಎಷ್ಟು ಸಾಹಸಪಟ್ಟರೂ ಇಂಗ್ಲಿಷ್ ಫ್ರೆಂಚ್ ಸೇನೆಗಳು ನಿಂತಿದ್ದ ಅನುಕೂಲ ಸ್ಥಲವನ್ನು ವಶಪಡಿಸಿಕೊಳ್ಳಲಾಗಲಿಲ್ಲ. ಈ ಸ್ಥಲದಲ್ಲಿ ನಡೆದ ಭಯಂಕರಯುದ್ಧದಲ್ಲಿ ಜರ್ಮನರ ೧೬೦೦ ಮಂದಿ ಸೈನಿಕರು ನಮ್ಮವರಿಗೆ ಸೆರೆಯಾಗಿ ಸಿಕ್ಕಿದರು. ಇನ್ನೊಂದುಕಡೆ ೨೦ ಸಾವಿರ ಶತ್ರುಸೈನ್ಯವನ್ನು ನಮ್ಮವರು ಹಿಂದಕ್ಕೋಡಿಸಿದರು. ಜರ್ಮನರು ಕಳೆದೆರಡುವಾರಗಳಲ್ಲಿ ಫ್ರಾನ್ಸಿಗೆ ಸೇರಿದ ಅಲ್ಬರ್ಟ ಪಟ್ಟಣವನ್ನೂ ರಾಯ್ ಪಟ್ಟಣವನ್ನೂ ಸುಟ್ಟು ಬೂದಿಮಾಡಿರುವರು. ಲಿಲ್ಲೀಪಟ್ಟಣವನ್ನು ಮುತ್ತಿ ಕಾದಾಡಿ ಸಾಹಸದಿಂದ ವಶಪಡಿಸಿಕೊಂಡರು. ಫ್ರೆಂಚರ ಫಿರಂಗಿಗಳು ಬಹಳ ಭಯಂಕರವಾಗಿ ಫಿರಂಗಿಗುಂಡುಗಳನ್ನು ಹಾರಿಸಿ ಬಹು ಶತ್ರುಗಳನ್ನು ನಾಶಮಾಡಿದುವು. ಈಚೆಗೆ ಜರ್ಮನರು ತಮ್ಮ ಮುತ್ತಿಗೆಯ ದೊಡ್ಡ ಫಿರಂಗಿಗಳನ್ನು ಫ್ರಾನ್ಸ್ ದೇಶಕ್ಕೆ ಬೆಲ್ಜಿಯಮ್ಮಿನಿಂದ ಸಾಗಿಸುತ್ತಿದ್ದಾರೆ. ಬೆಲ್ಜಿಯಮ್ಮಿನವರು ತಮ್ಮ ಸರ್ಕಾರದ ಕಾರ್ಯವನ್ನು ನೆರವೇರಿಸುವುದಕ್ಕಾಗಿ ಫ್ರಾನ್ಸ್‌ದೇಶದ ಹಾವರ್‌ಪಟ್ಟಣವನ್ನು ಏರ್ಪಡಿಸಿಕೊಂಡರು. ಅವರ ಮಂತ್ರಿಮಂಡಲವೆಲ್ಲಾ ಆಸ್ಟೆಂಡಿನಿಂದ ಆ ಪಟ್ಟಣಕ್ಕೆ ಬಂದು ಸೇರಿದರು. ಆಸ್ಟೆಂಡಿಗೂ ಜರ್ಮನರು ಮುತ್ತುವಂತೆ ಕಾಣುತ್ತಿದೆ. ಈಗ ಬೆಲ್ಜಿಯಂದೇಶದಲ್ಲಿ ಜರ್ಮನರು ಆಕ್ರಮಿಸಿರುವ ಭಾಗಗಳಲ್ಲೆಲ್ಲಾ ಕ್ಷಾಮವು ಕಾಲಿಕ್ಕಿದೆ. ರೋಗೋಪದ್ರವಗಳೂ ಕಾಣಿಸಿಕೊಂಡಿವೆ. ಪಶ್ಚಿಮ ರಂಗದಲ್ಲಿ ಈಗ ಒಟ್ಟು ೫೦ ಲಕ್ಷ ಸೈನ್ಯವು ಯುದ್ಧರಂಗದಲ್ಲಿ ಕಾದಾಡುತ್ತ ನಿಂತಿದೆ. ಪ್ರತಿಯೊಬ್ಬರ ಸೈನವೂ ಸಮಬಲವುಳ್ಳದಾಗಿದೆ. ಸಂಯುಕ್ತ ಸೈನ್ಯದವರ ಬಲವು ಹೆಚ್ಚಿದಲ್ಲದೆ ಶತ್ರುಗಳನ್ನು ಅವರು ಓಡಿಸಲಾರರು. ಜರ್ಮನರಿಗಾದರೊ ಮತ್ತೆ ಹತ್ತು ಪಟಾಲಂ ಸೈನ್ಯವು ಹೊಸದಾಗಿ ಒದಗಿತೆಂಬ ಸುದ್ದಿಯಿದೆ. ಇಂಗ್ಲಾಂಡಿನಿಂದ ಹೊಸಹೊಸ ಸೈನ್ಯಗಳು ರಣರಂಗಕ್ಕೆ ಕಳುಹಿಸಲ್ಪಡುತ್ತಲೇ ಇವೆ. ಇಂಗ್ಲೆಂಡಿನಲ್ಲಿ ಹೊಸದಾಗಿ ಇದುವರೆಗೆ ಸೈನ್ಯಕ್ಕೆ ಸೇರಿರುವವರ ಸಂಖ್ಯೆಯು ೬ಲಕ್ಷವಾಗಿದೆ. ಇನ್ನೆರಡುತಿಂಗಳಲ್ಲಿ ಇದು ೧೦ ಲಕ್ಷಕ್ಕೆ ಏರುವುದು. ಲೀಜು-ನಾಮೂರು-ಆಂಟ್‌ವರ್ಪ್-ಬ್ರಸೆಲ್ಸ್ ಈ ಕೋಟೆಗಳೆಲ್ಲಾ ಜರ್ಮನರ ವಶವಾಗಿರುವುದರಿಂದಲೂ ಅವು ಅವರ ಸೈನ್ಯಗಳಿಗೆ ಸುರಕ್ಷಿತಪ್ರದೇಶವಾಗಿರುವುದರಿಂದಲೂ, ಅಲ್ಲಿಂದಲೂ ಫ್ರಾನ್ಸಿನ ಎಲ್ಲೆಗಳಿಂದಲೂ ಶತ್ರುಗಳನ್ನು ಓಡಿಸಬೇಕಾದರೆ ಇನ್ನು ಸಂಯುಕ್ತಸೈನ್ಯದವರಿಗೆ ಶ್ರಮವೂ ಬಲವೂ ಹೆಚ್ಚಬೇಕಾದುದು ಖಂಡಿತವು. ಬೆಲ್ಜಿಯಂ-ಇಂಗ್ಲಾಂಡು-ಫ್ರಾನ್ಸು ಈ ತ್ರಿವಿಧ ಸೈನ್ಯಗಳೂ ಕೂಡಿ ಇನ್ನುಮುಂದೆ ಶತ್ರುಗಳ ಪಾರುಪತ್ಯವನ್ನು ಚೆನ್ನಾಗಿ ನಡಿಯಿಸದೆ ಬಿಡರೆಂದು ನಂಬಬಹುದು.

ಪೂರ್ವರಂಗ.

ಪೂರ್ವದಿಕ್ಕಿನಲ್ಲಿ ರಷ್ಯನರಮೇಲೆ ಹೊರಡುತ್ತಿರುವ ಜರ್ಮನಾ ಸೇನೆಯು ಈಗ ೪೧ ಪಟಾಲಮ್ಮುಗಳೆವೆಯಂತೆ. ಇವಲ್ಲದೆ ಲಾಂಡುಕರ್ ಲಾಂಡುಸ್ಟರ್ಮ್ ಡಿವಿಜನ್ನುಗಳುಬೇರೆ ಇವೆ. ವಿಶ್ಚುಲಾನದಿಯಬಳಿ ಒಪಾಟೊ-ಸಾಂಡೋಮಿರ್ ಎಂಬ ಸ್ಥಲಗಳಲ್ಲಿ ರಷ್ಯನ್ನರಿಗೂ ಜರ್ಮನರಿಗೂ ನಡೆದ ಯುದ್ಧದಲ್ಲಿ ರಷ್ಯನ್ನರೇ ಜಯಶೀಲರಾದರು. ರಷ್ಯನ್ನರು ತಮ್ಮ ಆಸೋವೆಟ್ಜ್ ಕೋಟೆಯನ್ನು ಶತ್ರುಗಳಿಗೆ ಬಿಡದೆ ಧೈರ್ಯದಿಂದ ಕಾದಾಡಿ ಅವರನ್ನು ಸೋಲಿಸಿ ಓಡಿಸಿಬಿಟ್ಟರಷ್ಟೆ. ಅಲ್ಲಿ ಸಾಹಸ ತೋರಿಸಿದ ತಮ್ಮ ಸೈನಿಕರನ್ನು ರಷ್ಯಾಚಕ್ರವರ್ತಿಯವರು ಪ್ರತ್ಯಕ್ಷವಾಗಿ ಬಂದು ಅಭಿನಂದಿಸಿದುದಲ್ಲದೆ ಕೋಟೆಯನ್ನು ಪರಾಮರ್ಶಿಸಿದರು. ಜರ್ಮನರಕಡೆಗೂ ರಷ್ಯನರಕಡೆಗೂ ಹೊಸಹೊಸ ಸೈನ್ಯಗಳು ಬಂದು ಸೇರುತ್ತಲೇ ಇವೆ. ರಷ್ಯನರು ಈಗ ಜರ್ಮನ್‌ದೇಶದೊಳಗೆ ನುಗ್ಗಿಹೋಗುತ್ತಿದ್ದಾರೆ. ಹಲವುಸ್ಥಳಗಳಲ್ಲಿ ಪ್ರತಿದಿನವೂ ಜರ್ಮನರಿಗೂ ಅವರಿಗೂ ಯುದ್ಧವಾಗುತ್ತಲೇ ಇದೆ. ಜರ್ಮನರು ಹಿಮ್ಮೆಟ್ಟುತ್ತಿದ್ದಾರೆ. ರಷ್ಯನರು ಈಕಡೆಗಳಲ್ಲಿ ಮಾಡುತ್ತಿರುವ ಫಿರಂಗಿಯುದ್ಧವು ಶ್ಲಾಘಿಸಲ್ಪಡುತ್ತಿದೆ. ಅವುಗಳ ಗುರಿ ಚೆನ್ನಾಗಿದೆ. ಜರ್ಮನರು ಕೆಸರಿನಲ್ಲಿ ಹೂತ ಫಿರಂಗಿಗಳನ್ನೂ ಸತ್ತ ಕುದುರೆಗಳನ್ನೂ ಅಲ್ಲಲ್ಲೇ ಬಿಟ್ಟುಓಡುತ್ತಿದ್ದಾರೆ. ವಿಶ್ಚುಲಾನದಿಯಬಳಿಯಲ್ಲಿ ಉಭಯರಿಗೂ ಫಿರಂಗಿಯ ಯುದ್ಧವು ಭಯಂಕರವಾಗಿ ನಡೆಯಿತು. ಜರ್ಮನರು ಲಿಕ್ಕಿನಬಳಿಯಲ್ಲಿ ಸೋತು ಓಡುವಾಗ ನದಿಗಳ ಸೇತುಗಳನ್ನು ಧ್ವಂಸಮಾಡಿಬಿಟ್ಟುಹೋದರು. ರಷ್ಯನರು ಈ ಪ್ರಾಂತದಲ್ಲಿ ೫೦ ಲಕ್ಷ ಸೈನ್ಯವನ್ನು ಯುದ್ಧಕ್ಕೆ ನಿಲ್ಲಿಸಿ ಇನ್ನು ೮೦ ಲಕ್ಷವನ್ನು ಅಣಿಮಾಡಿಟ್ಟಿದ್ದಾರೆ.

ಕಾರ್ಪಾಥಿಯನ್ ಬೆಟ್ಟಗಳಲ್ಲಿ ಸಾನ್ಸನದೀತೀರದಲ್ಲಿ ರಷ್ಯನ್ನರು ಆಸ್ಟ್ರಿಯನ್ನರನ್ನು ಓಡಿಸಿದರು. ಬುಡಾಪೆಸ್ಟ್‌ಪಟ್ಟಣಕ್ಕೆ ೧೫೦ ಮೈಲಿ ದೂರದಲ್ಲಿ ಮರ್ಮಾಕಾಸ್ಸಿನ ಹತ್ತಿರ ರಷ್ಯನ್ನರು ಆಸ್ಟ್ರಿಯನ್ನರ ಕೆಲ ಫಿರಂಗಿಗಳನ್ನು ಹಿಡಿದುಕೊಂಡರು. ಬೇವಿಸಿಲ್ ಪಟ್ಟಣದಮೇಲೆ ರಷ್ಯನ್ನರು ಫಿರಂಗಿಗಳನ್ನು ಹೊಡೆದು ಊರನ್ನೂ ಕೋಟೆಗಳನ್ನೂ ಧ್ವಂಸಮಾಡಿದರು. ಆಸ್ಟ್ರಿಯನ್ ಸೈನಿಕರು ಎಷ್ಟು ಸಾಹಸಪಟ್ಟರೂ ಕೋಟೆಗಳನ್ನು ರಕ್ಷಿಸಲಾಗಲಿಲ್ಲ. ಮಾಂಟೆನೀಗ್ರೋ ಸೈನಿಕರನ್ನು ಸರಾಜೇವೋಪಟ್ಟಣದ ಸಮೀಪಕ್ಕೆ ಬರಗೊಡಿಸದಂತೆ ತಡೆಯಬೇಕೆಂದು ಆಸ್ಟ್ರಿಯನ್ನರ ೨೫ ಸಾವಿರ ಸೈನ್ಯವು ಇದಿರಾಗಿ ಹೋಗುತ್ತಿರಲು, ಮಾಂಟೆನೀಗ್ರೋ ಸೈನ್ಯವು ಎತ್ತಣಿಂದಲೋ ಬಂದು ಆ ಸೈನ್ಯದ ಮೇಲೆ ಬಿದ್ದಿತು. ಮೊದಲನೆದಿನ ನಡೆದ ಯುದ್ಧದಲ್ಲಿ ಏಟುತಿಂದವರು ಸತ್ತವರುಗಳೆಲ್ಲಾ ಸೇರಿ ಆಸ್ಟ್ರಿಯಾದಕಡೆ ೧೧|| ಸಾವಿರ ಜನರು ನಷ್ಟವಾದರು. ಉಳಿದವರು ಓಡಿಹೋದರು. ೨ನೆ ದಿನ ನಡೆದ ಯುದ್ಧದಲ್ಲಿ ೫೦೦ ಮಂದಿ ನಷ್ಟವಾದರು. ಅನೇಕ ಮಂದಿ ಆಸ್ಟ್ರಿಯನ್ನರು ಮಾಂಟೆನೀಗ್ರೋದವರ ಸೆರೆಯಾಳಾದರು. ಹಲವು ಮದ್ದುಗುಂಡು ಮೊದಲಾದ ಸಾಮಾನುಗಳೂ ಅವರಿಗೆ ಸಿಕ್ಕಿದುವು. ರಷ್ಯನ್ನರು ಟ್ರಾನ್ಸಿಲ್‌ವೇನಿಯಾವನ್ನು ಪ್ರವೇಶಿಸಿದರು. ಆಸ್ಟ್ರಿಯಾದವರು ಆ ದೇಶಭಾಗಕ್ಕೆ ಸ್ವಪರಿಪಾಲನಸ್ವಾತಂತ್ರ್ಯವನ್ನು ಕೊಡುವುದರಲ್ಲಿದ್ದಾರಂತೆ.

ಆಸ್ಟ್ರಿಯಾದವರು ಸರ್ವಿಯಾದ ರಾಜಧಾನಿಯಾದ ಬೆಲ್ಗ್ರೇಡಿಗೆ ಕಳೆದ ೧೧ ವಾರಗಳಿಂದ ಫಿರಂಗಿ ಗುಂಡುಗಳನ್ನು ಹೊಡೆಯುತ್ತಿದ್ದಾರೆ. ಇದರಿಂದ ಪಟ್ಟಣದಲ್ಲಿ ಯತ್ಕಿಂಚಿತ್ತಾಗ ಮಾತ್ರ ನಷ್ಟವಾಗಿದೆ. ಸರ್ವಿಯನ್ನರು ಚೆನ್ನಾಗಿ ಪ್ರತಿಭಟಿಸಿ ಕಾಯುತ್ತಿದ್ದಾರೆ.

ಜಲಯುದ್ಧ.

ರೀಮ್ಸ್ ನದಿಯ ಕಾಲ್ವೆಯಲ್ಲಿ ಇಂಗ್ಲೀಷರ ನೀರಿನಲ್ಲಿ ಮುಳುಗಿಹೋಗುವ ಒಂದು ಹಡಗು ಜರ್ಮನರ ಟಾರ್ಪೆಡೋ ಹಡಗೊಂದನ್ನು ಮುಳುಗಿಸಿಬಿಟ್ಟು ತಾನು ಸುರಕ್ಷಿತವಾಗಿ ಬಂದಿತು. ಇದೇಹಡಗೇ ಹಿಂದೆ ಜರ್ಮನರ ಹೇಲಾ ಎಂಬ ಹಡಗನ್ನು ಮುಳುಗಿಸಿದ್ದಿತು. ಜರ್ಮನರ ಹಡಗು ಇದರ ಏಟಿನಿಂದ ೨ ಕಡೆದದ್ದಾಗಿ ೫ ನಿಮಿಷಗಳೊಳಗಾಗಿ ಮುಳುಗಿತು. ಅದರಲ್ಲಿ ೮೦ ಜನ ನಾವಿಕರಿದ್ದರು.

ಬಾಲ್ಟಿಕ್ ಸಮುದ್ರದಲ್ಲಿ ಜರ್ಮನರ ಸಬ್‌ಮೇರೀನ್ (ಜಲಾಂತರ್ಗಾಮಿ) ಒಂದು ರಷ್ಯನರ ಪಲ್ಲಾಡ ಎಂಬ ಯುದ್ಧದಹಡಗಿನಮೇಲೆ ಟಾರ್ಪೆಡೋವಿನ ಬಡಿತವನ್ನು ಹಾಕಿ ಮುಳುಗಿಸಿತು. ರಷ್ಯನರ ಕ್ರೂಸರುಗಳು ಜರ್ಮನರ ೨ ಸಬ್‌ಮೆರೈನುಗಳನ್ನು ಮುಳುಗಿಸಿದುವು.

ಆಕಾಶವಿಮಾನಗಳು.

ಇಂಗ್ಲೀಷರ ಇಬ್ಬರು ಸೇನಾನಿಗಳು ಆಕಾಶವಿಮಾನದಲ್ಲಿ ಕುಳಿತು ೧೦೦ ಮೈಲಿಗಳ ದೂರ ಜರ್ಮನ್ ದೇಶದ ಡಸ್ಸೆಲ್‌ಡ್ರಾಪ್ ಎಂಬ ಪಟ್ಟಣಕ್ಕೆ ಹೋಗಿ ಅಲ್ಲಿನ ಜಪ್ಲಿನ್ ವಿಮಾನನಿಲಯದ ಮೇಲೆ ೫೦೦ ಅಡಿಗಳ ಎತ್ತರದಿಂದ ಸಿಡಿಮದ್ದಿನ ಗೋಲಗಳನ್ನು ಹಾಕಿದರು. ಅಲ್ಲಿದ್ದ ೧ ವಿಮಾನವು ನಾಶವಾಯಿತು. ಎಯಿನ್ ನದಿಗೆ ಉತ್ತರದಲ್ಲಿದ್ದ ಮಿತ್ರಸೈನ್ಯಗಳ ಮೇಲ್ಗಡೆಗೆ ಜರ್ಮನರ ವಿಮಾನಗಳು ಹಾರಿ, ಸೈನ್ಯವಿದ್ದ ಸ್ಥಲವನ್ನು ತಿಳಿದು, ಆ ಕಡೆಗೆ ಫಿರಂಗಿ ಗುಂಡುಗಳನ್ನು ಹಾರಿಸುವಂತೆ ತಮ್ಮ ಸೈನಿಕರಿಗೆ ಸಂಜ್ಞೆಯಿಂದ ತಿಳಿಯಿಸುತ್ತಿದ್ದುವು. ಅದರಮೇಲೆ ಫಿರಂಗಿಗುಂಡುಗಳು ಹಾರಲುಪಕ್ರಮಿಸಲು, ಅಷ್ಟರಲ್ಲಿ ಫ್ರೆಂಚರ ವಿಮಾನವು ಮೇಲಕ್ಕೆ ಹಾರಿ, ಜರ್ಮನರ ವೈಮಾನಿಕನ ಮೇಲೆ ತುಪಾಕಿಯ ಗುಂಡನ್ನು ಹೊಡೆದಿತು. ಜರ್ಮನ್ ವೈಮಾನಿಕನೂ ತುಪಾಕಿಯನ್ನು ಹಾರಿಸಲಾಗಿ ಫ್ರೆಂಚ್ ವೈಮಾನಿಕನಿಗೆ ಏಟುಬಿದ್ದಿತು. ಅವನ ವಿಮಾನವು ನೆಲಕ್ಕೆಬಿದ್ದಿತು. ಕಳೆದ ಸೋಮವಾರ ಫ್ರಾನ್ಸ್ ಮತ್ತೂ ಜರ್ಮನರ ಆಕಾಶವಿಮಾನಗಳಿಗೆ ಮೂರಾವೃತ್ತಿ ಪರಸ್ಪರಯುದ್ಧ ನಡೆದು ೩ ನೆಯಾವೃತ್ತಿಯಲ್ಲಿ ಫ್ರಾನ್ಸಿನ ವೈಮಾನಿಕರಿಗೆ ಜಯವಾಯಿತು. ತಾ|| ೧೧ ರಲ್ಲಿ ೨ ಜರ್ಮನ್ ವಿಮಾನಗಳು ಪ್ಯಾರಿಸ್‌ಪಟ್ಟಣದಮೇಲೆ ೨೦ ಸಿಡಿಮದ್ದುಗಳನ್ನು ಹಾಕಿದುವು. ಅದರಿಂದ ಮೂವರು ಸತ್ತರು, ೧೪ ಮಂದಿಗೆ ಗಾಯಗಳಾದುವು. ಫ್ರೆಂಚ್‌ವಿಮಾನಗಳು ಜರ್ಮನ್ ವಿಮಾನಗಳನ್ನು ಬೆನ್ನಟ್ಟುತ್ತಲಿವೆ. ಪ್ಯಾರಿಸ್ಸಿಗೆ ಒಂದಾವೃತ್ತಿ ಜರ್ಮನರ ವಿಮಾನವು ಸಿಡಿಮದ್ದನ್ನಿಡುವಾಗ ಒಂದು ಬಾವುಟವನ್ನೂ ಇಟ್ಟಿತು. ಅದರಲ್ಲಿ "ನಾವು ಆಂಟ್‌ವರ್ಪನ್ನು ಹಿಡಿದುಕೊಂಡೆವು; ನಿಮ್ಮ ಕಡೆಗೂ ಇಷ್ಟರಲ್ಲೇ ಬರುತ್ತೇವೆ" ಎಂಬುದಾಗಿ ಅದರ ಬಟ್ಟೆಯಮೇಲೆ ಬರೆದಿದ್ದಿತು. ತಾ|| ೧೨ ರಲ್ಲಿ ಮತ್ತೆ ೬ ಸಿಡಿಮದ್ದುಗಳನ್ನು ಜರ್ಮನರ ೧ ವಿಮಾನವು ಇಟ್ಟಿತು. ನಾಟ್ರಿಡೇಮು ಎಂಬ ಭವನಕ್ಕೆ ಏಟುಬಿದ್ದು ಸ್ವಲ್ಪ ನಷ್ಟವಾಯಿತು. ಇನ್ನುಮುಂದೆ ಶತ್ರುಗಳ ವಿಮಾನವು ಆ ಪಟ್ಟಣದಮೇಲೆ ಇಂಥ ಅನರ್ಥವನ್ನು ಮಾಡದಿರುವಂತೆ ನೋಡಿಕೊಳ್ಳಲು ಫ್ರೆಂಚರು ವೈಮಾನಿಕಸೇನೆಯನ್ನು ಏರ್ಪಡಿಸುತ್ತಿದ್ದಾರೆ.

ವೈಸ್ರಾಯರ ಕುಮಾರರು.

ನಮ್ಮ ಸಾರ್ವಭೌಮರವರು ವೈಸ್ರಾಯರಾದ ಲಾರ್ಡ್ ಹಾರ್ಡಿಂಜ್‌ರವರಿಗೆ ತಾ|| ೧೧ ರಲ್ಲಿ ಒಂದು ತಂತ್ರೀವಾರ್ತೆಯನ್ನು ಕೊಟ್ಟು, ಅದರಲ್ಲಿ ನಿಮ್ಮ ಮಗನಿಗೆ ಯುದ್ಧದಲ್ಲಿ ಏಟು ತಗುಲಿದೆ. ಮೂರು ದಿನಗಳು ಅವಿಚ್ಛಿನ್ನವಾಗಿ ಶತ್ರುಗಳು ಫಿರಂಗಿಗಳನ್ನು ಹಾರಿಸಿ, ಗುಂಡುಗಳ ಮಳೆಯನ್ನು ಸುರಿಸಿ ಎಷ್ಟೋ ಕಷ್ಟವನ್ನುಂಟುಮಾಡಿದಾಗ ನಿಮ್ಮ ಮಗನು ತೋರಿಸಿದ ಧೈರ್ಯಸಾಹಸಗಳಿಗೆ ನಾನು ಮೆಚ್ಚಿಕೊಂಡು, ಅವರಿಗೆ "ಡಿ. ಎಸ್. ಓ." ಎಂಬ ಬಿರುದನ್ನು ಕೊಟ್ಟಿರುತ್ತೇನೆ. ಇವರಿಗೆ ಉಂಟಾಗಿರುವ ಗಾಯವು ಮಾಯುತ್ತಿದೆ'' ಎಂದು ತಿಳಿಯಿಸಿರುತ್ತಾರೆ. ಇದನ್ನು ಕೇಳಿ ವೈಸ್ರಾಯರೊಡನೆ ಭಾರತೀಯರೆಲ್ಲರೂ ಸಂತೋಷಿಸುವುದಲ್ಲದೆ, ಅವರಿಗೆ ಬೇಗನೆ ಪೂರ್ಣಾರೋಗ್ಯವುಂಟಾಗಲೆಂದು ಬಯಸುತ್ತೇವೆ.

ವಿಶೇಷ ವಾರ್ತೆಗಳು.

ಪೋರ್ಚುಗಲ್ ದೇಶದವರು ಇಷ್ಟರಲ್ಲೇ ಜರ್ಮನಿಯಮೇಲೆ ಯುದ್ಧವನ್ನು ಪ್ರಕಟಿಸುವವರಾಗಿದ್ದಾರೆ.

ರೊಮೇನಿಯಾದ ಪ್ರಭುಗಳಾದ ಕರೋಲ್‌ರವರು ಮೃತರಾದರು. ಇದರಿಂದ ಯಾವ ಮಾರ್ಪುಗಳೂ ನಡೆಯಲವಕಾಶವೇನೂ ಇಲ್ಲ.

ತುರ್ಕಿಗೆ ಸೇರಿದ ಡಾರ್ಡನೆಲ್ಸ್ (ಜಲಸಂಧಿಯ) ಬಾಗಿಲನ್ನು ತುರ್ಕಿಯವರು ಮುಚ್ಚಿಬಿಟ್ಟಿದ್ದಾರೆ. ಇದರ ಮಗ್ಗುಲ ಬಾಸ್‌ಫರಸ್ ಕೋಟೆಗಳ ಮೇಲೆ ಜರ್ಮನರು ದೊಡ್ಡದೊಡ್ಡ ಫಿರಂಗಿಗಳನೇಕವನ್ನು ಇಟ್ಟಿದ್ದಾರಂತೆ.

ಎಮ್ಡನ್ ಹಡಗನ್ನು ಹುಡುಕಿಕೊಂಡು ತಿರುಗುತ್ತಿರುವ ಯುದ್ಧದ ಹಡಗುಗಳಲ್ಲೊಂದಾದ ಜಪಾನರ "ಓಕುಮಾ" ಎಂಬ ಹಡಗು ಕಳೆದ ತಾ|| ೮ ರಲ್ಲಿ ಮದ್ರಾಸುರೇವಿಗೆ ಬಂದು ನಿಂತಿದ್ದಿತು. ಪಟ್ಟಣಿಗರಲ್ಲಿ ಕೆಲರು ಹೋಗಿ ಇದನ್ನು ನೋಡಿಬಂದರು. ಇದರಲ್ಲಿ ಮಧ್ಯರೇಖೆ ೬ ಅಂಗುಲದ ಬಾಯಿಯ ೮ ಫಿರಂಗಿಗಳಿವೆ. ಎಮ್ಡನ್ನಿನಲ್ಲಾದರೂ ೪ ಅಂಗುಲದ ಬಾಯಿಯ ಫಿರಂಗಿಗಳಿವೆ. ಎಮ್ಡನ್ನು ಗಂಟೆಗೆ ೨೫ ಮೈಲಿಯಂತೆ ಓಡುತ್ತಿದ್ದರೆಇದು ೨೬ ಮೈಲಿಯಂತೆ ಓಡುತ್ತದೆ. ಇದರಲ್ಲಿ ಇನ್ನು ಕೆಲ ಸಣ್ಣ ಫಿರಂಗಿಗಳೂ ಮದ್ದುಗುಂಡು ಮೊದಲಾದ ಬಹಳ ಸಾಮಗ್ರಿಗಳೂ ತುಂಬಿವೆ. ೪೮೦೦ ಟನ್ನುಗಳ ಭಾರವನ್ನು ಹೊರಬಲ್ಲುದು.

ಜರ್ಮನರು ಇದುವರೆಗಿನ ಯುದ್ಧದಲ್ಲಿ ತಮ್ಮ ಕಡೆ ನಷ್ಟ ಹೊಂದಿದವರ ಹೆಸರಿನ ೪೬ ಪಟ್ಟಿಗಳನ್ನು ಪ್ರಕಟಿಸಿದ್ದಾರೆ. ಮೊದಲಿನ ೩೫ ಪಟ್ಟಿಗಳ ಪ್ರಕಾರ, ೯೭೪ ಅಧಿಕಾರಿಗಳು ಸತ್ತುಹೋಗಿರುವರೆಂದೂ, ೨೧೮೮ ಮಂದಿ ಅಧಿಕಾರಿಗಳಿಗೆ ಗಾಯವಾಗಿರುವುದೆಂದೂ, ೧೯೦೫೧ ಮಂದಿ ಸೈನಿಕರು ಸತ್ತಿರುವರೆಂದೂ, ೫೭೬೬೪ ಮಂದಿ ಸೈನಿಕರಿಗೆ ಗಾಯತಗುಲಿದೆಯೆಂದೂ, ನೌಕಾ ಸೈನಿಕರಲ್ಲಿ ೧೪೦೫೪ ಮಂದಿ ನಷ್ಟಪಟ್ಟಿರುವರೆಂದೂ ಗೊತ್ತಾಗುತ್ತದೆ. ಇದಲ್ಲದೆ ಬವೇರಿಯಾ, ಸಾಕ್ಸನ್ ವರ್ಟೆಂಬರ್ಗ್ ಪಟಾಲಮ್ಮುಗಳಲ್ಲಾದ ನಷ್ಟವು ಇದರಲ್ಲಿ ಸೇರಿಲ್ಲ.

೨ ನೆಯಾವೃತ್ತಿ ಪ್ರಕಟಿತವಾದ ಪಟ್ಟಿಯದೂ ಸೇರಿದರೆ ಒಟ್ಟು ನಷ್ಟವಾದವರು ೨೧೧೦೦೦ ಮಂದಿಗಳೆಂದು ಗೊತ್ತಾಗುತ್ತದೆ.

ಇಟಲಿಯು ಆಸ್ಟ್ರಿಯಾದ ಮೇಲೆ ಯುದ್ಧವನ್ನು ಪ್ರಕಟಿಸುವುದರಲ್ಲಿದೆ. ಹಾಗೆ ಅವರು ಮಾಡಿದರೆ ಆಸ್ಟ್ರಿಯಾದ ಅಧೀನದಲ್ಲಿರುವ ಟ್ರೀಸ್ಟೆ ಎಂಬ ಇಟಲಿಯ ಪಟ್ಟಣದಲ್ಲಿರುವ ೧ ಸಾವಿರ ಮಂದಿ ಇಟಾಲಿಯನ್ ಪ್ರಮುಖರನ್ನು ಹಿಡಿದು ಸೆರೆಹಾಕಬೇಕೆಂದು ಆಸ್ಟ್ರಿಯನ್ ಗೌರ್ನರು ಯೋಚಿಸಿ, ಅಂಥ ಪ್ರಮುಖರ ಪಟ್ಟಿಯನ್ನು ಮಾಡಬೇಕೆಂದು ಪೊಲೀಸಿಗೆ ಅಪ್ಪಣೆ ಮಾಡಿರುವನು. ಇದಲ್ಲದೆ "ಟ್ರೀಸ್ಟೆ ಪಟ್ಟಣದವರು ಇಟಲಿದೇಶದಮೇಲೆ ಸ್ವಲ್ಪವೂ ಅಭಿಮಾನವನ್ನು ತೋರಿಸಕೂಡದು. ತೋರಿಸಿದರೆ ವಿಚಾರಣೆಮಾಡದೆಯೇ ಅಂಥವರನ್ನು ಸುಟ್ಟುಬಿಡುತ್ತೇವೆ. ಅಷ್ಟೇ ಅಲ್ಲದೆ ಟ್ರಿಸ್ಟೀಯ ಡೆಪ್ಯುಟಿಗಳಾದ ೬ ಮಂದಿ ಪ್ರಮುಖರನ್ನು ನೇಣುಹಾಕಿಸುತ್ತೇವೆ" ಎಂದು ಆಸ್ಟ್ರಿಯಾ ಸರ್ಕಾರದವರು ಪ್ರಕಟಿಸಿದ್ದಾರೆ.

ಮೈಸೂರ್ ಸ್ಟಾರ್.

ಸನ್ ೧೯೧೪ ನೆಯ ಅಕ್ಟೋಬರ್ ತಾ|| ೧೮ನೆಯ ಭಾನುವಾರ.

ಆಂಟ್‌ವರ್ಪ್ ಜರ್ಮನಿಯವರ ವಶವಾಯಿತು.

ಬೆಲ್ಜಿಯಮ್ಮಿನವರು ಬ್ರಸೆಲ್ಸನ್ನು ಬಿಟ್ಟು ಇದುವರೆಗೆ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ಆಂಟ್ವರ್ಪ್ ನಗರವೂ ಕೋಟೆಗಳೂ ಕಡೆಗೆ ಕಳೆದ ತಾ|| ೯ ರಲ್ಲಿ ಜರ್ಮನರ ವಶವಾದುವು. ಈ ಕೋಟೆಗಳು ಪ್ರಾಚೀನಕಾಲದ ಶಸ್ತ್ರಾಸ್ತ್ರಗಳಿಗೂ ಯುದ್ಧರೀತಿಗೂ ಅಭೇದ್ಯಗಳೆಂದು ಹೆಸರುಗೊಂಡುವಾಗಿದ್ದರೂ, ಅಸಾಧಾರಣವಾದ ಈಗಿನ ಯುದ್ಧೋಪಕರಣಗಳ ಮುಂದೆ ಅದು ನಿಲ್ಲಲಾರದೆ ಹೋಯಿತು. ಇದನ್ನು ಮುತ್ತಿಗೆ ಹಾಕುವುದು ಪ್ರಯೋಜಕವಲ್ಲವೆಂದುಪರಿಭಾವಿಸಿ, ಬಹಳ ದೊಡ್ಡವಾದ (ಎಂದರೆ ಮೂತಿಯಲ್ಲಿ ೧೬ ಅಂಗುಲ ಕೈವಾರದ ಅಗಲವಿರುವ) ಫಿರಂಗಿಗಳು ಮುನ್ನೂರನ್ನು ಆಂಟ್‌ವರ್ಪ್ ಪಟ್ಟಣದ ಈಶಾನಭಾಗದಲ್ಲಿಟ್ಟು ಕಳೆದ ತಾ|| ೮ರ ರಾತ್ರಿಯಿಂದ ಒಂದೇಸಮನಾಗಿ ಕೋಟೆಗಳ ಮೇಲೂ ಪಟ್ಟಣದ ಮೇಲೂ ಗುಂಡುಗಳನ್ನು ಹೊಡೆಯುತ್ತ ಬಂದರು. ಈ ಗುಂಡುಗಳು ೧೫ ಮೈಲಿಗೆ ಕಡಿಮೆಯಿಲ್ಲದಷ್ಟು ದೂರಕ್ಕೆ ಹೋಗಬಲ್ಲುವು. ಇಂಥ ಗುಂಡುಗಳನ್ನು ಭೂಮಿಯ ಮೇಲಿನಿಂದಲೂ ಸಿಡಿಮದ್ದುಗಳನ್ನು ವಿಮಾನಗಳ ಮೇಲಿಂದಲೂ ಪಟ್ಟಣದೊಳಕ್ಕೆ ಸುರಿಸುತ್ತ ಬಂದರು. ಬೆಲ್ಜಿಯಮ್ಮಿನವರು ಅದಕ್ಕೆ ಮೊದಲೇ ತಮಗೆ ಸಹಾಯವು ಅವಶ್ಯಕವಾಗಿದೆಯೆಂದು ಕೋರಿಕೊಂಡುದರಿಂದ ಆಂಗ್ಲಪ್ರಭುತ್ವದವರು ಜನರಲ್ ಪ್ಯಾರಿಸ್ ಎಂಬ ದಳಪತಿಯ ಕೈಕೆಳಗೆ ಮೂರು ನೌಕಾಸೇನೆಗಳನ್ನೂ (೮ ಸಾವಿರ), ಕೆಲ ದೊಡ್ಡ ಫಿರಂಗಿಗಳನ್ನೂ ಬೆಲ್ಜಿಯಮ್ಮಿನವರ ಸಹಾಯಕ್ಕೆ ಕಳೆದ ತಾ|| ೪ ರಲ್ಲಿ ಕಳುಹಿಸಿಕೊಟ್ಟಿದ್ದರು. ತಾ|| ೫ ನೆಯ ರಾತ್ರಿಯವರೆಗೂ ಈ ಸೈನ್ಯವೂ ಬೆಲ್ಜಿಯಮ್ಮಿನ ಸೈನ್ಯವೂ ಸಹ ನೀತ್ ನದೀಪ್ರಾಂತವನ್ನು ರಕ್ಷಿಸಿಕೊಂಡುವು. ಬೆಲ್ಜಿಯಮ್ಮಿನವರಿಗೆ ಇಂಗ್ಲೀಷ್‌ಸೈನ್ಯವು ಸಹಾಯಕ್ಕೆ ಬಂದಿತೆಂಬುದನ್ನು ತಿಳಿದಮೇಲೆ ಜರ್ಮನರು ಮತ್ತಷ್ಟು ವೀರಾವೇಶದಿಂದ ಗುಂಡುಗಳನ್ನು ವಿಶೇಷವಾಗಿ ಹಾರಿಸುತ್ತ, ಇಂಗ್ಲೀಷು ಸೈನ್ಯವಿದ್ದಕಡೆಗೇ ಗುರಿಯಿಟ್ಟು ಬಹಳ ಗುಂಡುಗಳನ್ನು ಹಾರಿಸಿದರು. ಶತ್ರುಗಳ ಹೊಡೆತವು ದುಸ್ಸಹವಾಯಿತು. ಇಂಗ್ಲೀಷ್ ಸೇನೆಗೆ ತಕ್ಕಷ್ಟು ಫಿರಂಗಿಗಳಿರಲಿಲ್ಲ. ಧೈರ್ಯವಾಗಿ ನಿಂತು ಕಾಪಾಡಲು ಅಸಾಧ್ಯವಾಯಿತು. ತಾ|| ೬ ನೆಯ ಮಂಗಳವಾರ ಈ ಉಭಯ ಸೇನೆಗಳೂ ಹಿಂದಕ್ಕೆ ಹೋಗಬೇಕಾಯಿತು. ಎಂದರೆ ಹೊರಸಾಲಿನ ಕೋಟೆಗಳನ್ನು ರಕ್ಷಿಸುತ್ತಿದ್ದ ಸೇನೆಗಳು ಬಿಟ್ಟು ಅದನ್ನು ಅದರ ಹಿಂದಿನ ಸಾಲಿನ ಕೋಟೆಗಳನ್ನು ರಕ್ಷಿಸಿಕೊಳ್ಳಲು ಹೋಗಬೇಕಾಯಿತು. ಈ ಸಂಧಿಯನ್ನು ಜರ್ಮನರು ಸಾಧಿಸಿ, ಆ ಹೊರಗಣ ಕೋಟೆಗಳನ್ನು ತಾವು ಹಿಡಿದುಕೊಂಡು, ಅವುಗಳಮೇಲೆ ತಮ್ಮ ಫಿರಂಗಿಗಳನ್ನೇರಿಸಿ, ಪಟ್ಟಣದೊಳಕ್ಕೆ ಗುಂಡುಗಳನ್ನು ಹಾರಿಸಲುಪಕ್ರಮಿಸಿದರು. ಕುಡಿಯುವ ನೀರಿನ ನಳ್ಳಿಗಳನ್ನೊಡೆದು ಪಟ್ಟಣಕ್ಕೆ ಜಲಾಭಾವವಾಗುವಂತೆ ಮಾಡಿದರು. ಬುಧವಾರವೂ ಗುರುರುವಾರವೂ ಸಹ ಜರ್ಮನರು ಹಾಗೆಯೇ ಅಗ್ನಿವರ್ಷವನ್ನು ಸುರಿಸುತ್ತಲೇ ಇದ್ದರೂ ಬೆಲ್ಜಿಯಂ-ಇಂಗ್ಲೀಷ್ ಸೈನ್ಯಗಳು ಒಳಕೋಟೆಯನ್ನು ರಕ್ಷಿಸಿಕೊಂಡೇ ಇದ್ದರು. ಆಂಗ್ಲಸೇನೆಗಳು ಕಂದಕದೊಳಗೆ ಇದ್ದು ಯುದ್ಧಮಾಡುತ್ತಿದ್ದುವು. ಅವರ ೮ ಸಾವಿರ ಸೈನ್ಯದಲ್ಲಿ ೫೦೦ಕ್ಕೆ ಸ್ವಲ್ಪ ಕಡಿಮೆಯಾಗಿ ನಷ್ಟವಾಗಿರುವುದೆಂದು ಗೊತ್ತಾಯಿತು. ಗುರುವಾರದ ದಿವಸ ಇಂಗ್ಲೀಷ್ ಸೇನೆಯ ಸಹಾಯಕ್ಕೆ ಹೊಸಸೇನೆಗಳೂ ಆಹಾರ್ಯಪದಾರ್ಥಮೊದಲಾದುವೂ ಬರುತ್ತಿರಲು, ಮಾರ್ಗದಲ್ಲಿ ಲೋವೇರೆನ್ನಿನ ಹತ್ತಿರ ಅವನ್ನು ಜರ್ಮನರು ಹಿಡಿದು ವಶಪಡಿಸಿಕೊಳ್ಳಬೇಕೆಂದು ಪ್ರಯತ್ನಿಸಿದರು. ಆಗ ಬೆಲ್ಜಿಯಂ ಸೈನ್ಯವು ಶತ್ರುಗಳ ಮೇಲೆ ಬಿದ್ದು ಬಹಳ ವೀರಾವೇಶದಿಂದ ಹೋರಾಡಿತು. ಆದರೂ ಶತ್ರುಸೈನ್ಯವು ಬಹಳ ಹೆಚ್ಚಾಗಿದ್ದುದರಿಂದ ಬೆಲ್ಜಿಯಮ್ಮಿನವರು ಹಿಮ್ಮೆಟ್ಟಬೇಕಾಯಿತು. ತಾ|| ೯ರಲ್ಲಿ ಶತ್ರುಗಳು ಹೊಡೆದ ಗುಂಡಿನೇಟುಗಳು ಬಹಳ ತೀವ್ರವಾಗಿದ್ದುವು. ಪಟ್ಟಣದಲ್ಲಿ ಎತ್ತೆತ್ತಲೂ ಉರಿಯುವ-ಉರುಳುವ ಮನೆಗಳೇ ಕಾಣುವಂತಾದುವು. ಆ ಹೊತ್ತಿನೊಳಗಾಗಿ ಪಟ್ಟಣದ ಜನರು ೫ ಲಕ್ಷ ಮಂದಿಯವರೆಗೂ ಹಾಲೆಂಡಿಗೆ ಹೋಗಿಬಿಟ್ಟರು. ಹಗಲೂ ರಾತ್ರಿಯೂ ಹೊಗೆಬಂಡಿಗಳು ಅಲ್ಲಿನ ಪ್ರಜೆಗಳನ್ನು ಹೊರಕ್ಕೆ ಸಾಗಿಸುತ್ತಲೇ ಇದ್ದುವು. ಪಶ್ಚಿಮ ದಿಕ್ಕಿನಿಂದ ಹಡಗುಗಳಮೇಲೆ ಆಸ್ಟೆಂಡಿಗೆ ಸಾಗುವುದಕ್ಕೆ ರೇವಿನಲ್ಲಿ ಜನರು ಗುಂಪುಗುಂಪಾಗಿ ಸೇರಿ ತವಕಪಡುತ್ತಿದ್ದರು. ಅನೇಕರು ಲಂಡನ್ನಿನ ದಾರಿಯನ್ನು ಹಿಡಿದರು. ಗುರುವಾರದ ದಿವಸ ಪಟ್ಟಣದಲ್ಲಿ ಸೀಮೆಯೆಣ್ಣೆಗಳ ಟ್ಯಾಂಕು (ತೊಟ್ಟಿಗಳು) ೫೦ ಬೆಂಕಿಹೊತ್ತಿ ಉರಿಯಲಾರಂಭಿಸಿದುವು. (ಇವಕ್ಕೆ ಬೆಲ್ಜಿಯಮ್ಮಿನವರೇ ಬೆಂಕಿಯಿಕ್ಕಿ ಅವು ಶತ್ರುಗಳ ಅಧೀನವಾಗದಂತೆ ಮಾಡಿದರಂತೆ) ಇವಿಷ್ಟೂ ಹತ್ತಿ ಉರಿಯುತ್ತಿದ್ದುದರಿಂದ ಬಹುದೂರಕ್ಕೆ ಪಟ್ಟಣವೇ ಉರಿದುಹೋಗುತ್ತಿರುವಂತೆ ಭೀಕರವಾಗಿ ಕಾಣುತ್ತಿದ್ದಿತು. ಫಿರಂಗಿಗಳ ಗುಂಡಿನೇಟಿನಿಂದ ದೊಡ್ಡದೊಡ್ಡ ಭವನಗಳನೇಕವು ಧ್ವಂಸವಾಗಿ ಹೋದುವು. ಊರೆಲ್ಲಾ ಹೊಗೆ ಸುತ್ತಿಹೋಯಿತು. ಕಡೆಗೆ ಇಂಗ್ಲೀಷ್-ಬೆಲ್ಜಿಯಂ ಸೇನಾಧಿಪತಿಗಳು ಆಲೋಚನೆಮಾಡಿಕೊಂಡು, ಇನ್ನು ಪಟ್ಟಣವನ್ನು ರಕ್ಷಿಸುವುದು ಸಾಧ್ಯವಲ್ಲವೆಂದು ನಿಶ್ಚೈಸಿ, ತಾವುಗಳು ಸೇನಾಸಮೇತ ಹೊರಕ್ಕೆ ಹೊರಟುಹೋದರು. ಬೆಲ್ಜಿಯಮ್ಮಿನ ಕಡೆ ಜನರಲ್ ಡಿ. ಗೈಜ್‌ರವರು ಸೇನಾಧಿಪತಿಗಳಾಗಿದ್ದರು. ಆಂಟ್‌ವರ್ಪನ್ನು ಬಿಟ್ಟ ಇಂಗ್ಲೀಷರ ೩ ನೌಕಾಸೈನ್ಯಗಳು ಗುರುವಾರ ರಾತ್ರಿಯೇ ನಡೆದುಹೋಗಿ ಸೆಂಟ್ ಗೈಲ್ಸನ್ನು ಸೇರಿ ಅಲ್ಲಿ ಹೊಗೆಬಂಡಿಯನ್ನೇರಿದುವು. ಇವುಗಳಲ್ಲಿ ೨ ಪಟಾಲಮ್ಮುಗಳು ಸುರಕ್ಷಿತವಾಗಿ ಆಸ್ಟೆಂಡನ್ನು (ಈಗಿನಬೆಲ್ಜಿಯಂ ರಾಜಧಾನಿ; ಇದು ಬೆಲ್ಜಿಯಮ್ಮಿನ ಪಶ್ಚಿಮದಲ್ಲಿ ಸಮುದ್ರತೀರವನ್ನು ಹೊಂದಿರುವ ಪಟ್ಟಣ) ಸೇರಿದುವು. ೩ ನೆಯ ಪಟಾಲಮ್ಮನ್ನು ಜರ್ಮನರು ಅಡ್ಡಗಟ್ಟಿ ತಡೆದರು. ಆ ಸೈನ್ಯವು ಹಾಲ್ಸ್ಟ್ಸ ಬಳಿಯಲ್ಲಿ ಹಾಲೆಂಡ್ ದೇಶಕ್ಕೆ ನುಗ್ಗಿಬಿಟ್ಟಿತು. ಹಾಲೆಂಡ್ ದೇಶವು ತಟಸ್ಥರಾಷ್ಟ್ರವಾಗಿರುವುದರಿಂದ ಅಂಥ ದೇಶಕ್ಕೆ ಯುದ್ಧಮಾಡುತ್ತಿರುವ ಯಾವ ದೇಶದ ಸೈನಿಕರೂ ಆಯುಧ ಸಮೇತರಾಗಿ ಪ್ರವೇಶಿಸಕೂಡದಾದುದರಿಂದ, ಆ ೩ ನೆಯ ಪಟಾಲಮ್ಮು ತಮ್ಮ ಆಯುಧಗಳನ್ನೆಲ್ಲಾ ಬಿಸುಡಿಬಿಟ್ಟು ಹೋಯಿತು. ಬೆಲ್ಜಿಯಂ ಸೈನ್ಯವಾದರೊ ಯಾವ ತೊಂದರೆಯೂ ಇಲ್ಲದೆ ಆಸ್ಟೆಂಡಿನ ಕಡೆಗೆ ಹಿಂದಕ್ಕೆ ಹೋಗಿಬಿಟ್ಟುವು. ಘೆಂಟ್ ಪಟ್ಟಣದ ಕಡೆಯಿಂದ ಇಂಗ್ಲೀಷ್ ನೌಕಾಸೈನ್ಯಗಳೂ, ಬೆಲ್ಜಿಯಂ ಸೈನ್ಯಗಳೂ ಸಹ ಸೇರಿ ಹಿಂಗಡೆಗೆ ಹೋಗುತ್ತಿರುವಲ್ಲಿ ಹೊಸದಾಗಿ ಕೆಲಇಂಗ್ಲೀಷ್ ಸೈನ್ಯಗಳು ದೊಡ್ಡದೊಡ್ಡ ಫಿರಂಗಿಗಳನ್ನೂ ಆಯುಧಾದಿ ಸಾಮಗ್ರಿಗಳನ್ನೂ ಸಾಗಿಸಿಕೊಂಡು ಬಂದುವು. ಈ ಬಂಡಿಗಳಿಗೆ ಯಾವ ವಿಧವಾದ ವಿಪತ್ತೂ ಒದಗದಂತೆ ಮೇಲ್ಗಡೆಯಲ್ಲಿ ಇಂಗ್ಲೀಷರ ನೌಕಾ ವೈಮಾನಿಕರು ಆಕಾಶಮಾರ್ಗದಲ್ಲಿ ಕಾವಲಾಗಿ ಬರುತ್ತಿದ್ದರು. ಕಡೆಗೆ ಬೆಲ್ಜಿಯಮ್ಮಿನವರು ಪಟ್ಟಣವನ್ನು ಶತ್ರುಗಳ ಅಧೀನಮಾಡುವುದಕ್ಕೆ ಗ್ರಾಮಾಧಿಕಾರಿಗೆ ಹೇಳಿಬಿಟ್ಟು ಅನೇಕ ಧಾನ್ಯದ ಕಣಜಗಳನ್ನೂ, ಉಳಿದ ಮದ್ದುಗುಂಡುಗಳನ್ನೂ, ಆಹಾರ್ಯಸಾಮಗ್ರಿ ಮೊದಲಾದುವುಗಳನ್ನೂ, ಮೋಟಾರಿಗೆ ಉಪಯೋಗಿಸುವ ಪೆಟ್ರೋಲ್ ಎಣ್ಣೆಯನ್ನೂ ಶತ್ರುಗಳ ವಶವಾಗದಂತೆ ತಾವೇ ಸುಟ್ಟುಬಿಟ್ಟು ಹೊರಟುಹೋದರು. ಶುಕ್ರವಾರ ಬೆಳಗ್ಗೆ ಬೆಲ್ಜಿಯಮ್ಮಿನವರು ಪಟ್ಟಣದ ಗೋಡೆಗಳ ಮೇಲೆಲ್ಲಾ ದೊಡ್ಡದೊಡ್ಡ ಅಕ್ಷರಗಳ ಪ್ರಕಟನಪತ್ರಿಕೆಯನ್ನು ಅಂಟಿಸಿದ್ದರು. ಅದರಲ್ಲಿ ಪಟ್ಟಣವು ಜರ್ಮನರ ವಶವಾಗುವುದಕ್ಕೆ ಸಿದ್ಧವಾಗಿದೆಯೆಂದು ಅಚ್ಚುಮಾಡಲ್ಪಟ್ಟಿದ್ದಿತು. ಬೆಲ್ಜಿಯಂ ದೇಶದ ಪ್ರಭುಗಳಾದ ಆಲ್ಬರ್ಟ್ ರಾಜರೂ ಇಂಗ್ಲೀಷ್-ಬೆಲ್ಜಿಯಂನವರ ಮುಖ್ಯ ಸೈನ್ಯಗಳೂ ಸಹ ತಾ|| ೧೧ ನೆಯ ಭಾನುವಾರ ಬೆಳಗ್ಗೆ ಆಸ್ಟೆಂಡ್ ಪಟ್ಟಣವನ್ನು ಕ್ಷೇಮವಾಗಿ ಸೇರಿದರು. ಆಗ ಅಲ್ಬರ್ಟ್ ರಾಜರ ಕೈಯು ಬಟ್ಟೆಯಿಂದ ಮೇಲಕ್ಕೆತ್ತಿಕಟ್ಟಲ್ಪಟ್ಟಿದ್ದಿತಂತೆ. (ಇವರು ಕಡೆಯವರೆಗೂ ಕೋಟೆಗಳಲ್ಲಿದ್ದು ಕಾರ್ಯಕ್ರಮಗಳನ್ನು ಸೈನಿಕರಿಗೆ ತಿಳಿಯಿಸಿ, ಅವರಿಗೆ ಪ್ರೋತ್ಸಾಹಿಸುತ್ತಿದ್ದರಂತೆ. ಬಹುಶಃ ಶತ್ರುಗಳ ಗುಂಡಿನೇಟೇನಾದರೂ ಸ್ವಲ್ಪ ತಗಲಿರಬಹುದು.) ಇವರ ಪತ್ನಿಯವರು ಲಂಡನ್ ಪಟ್ಟಣವನ್ನು ಸೇರಿರುವರಂತೆ. ಬೆಲ್ಜಿಯಂ ಸೈನ್ಯವೆಲ್ಲಾ ಹೊರಟುಹೋಗಿರುವ ಮತ್ತೂ ಹಾಳುಬಿಡುತ್ತಿರುವ ಆಪಟ್ಟಣವನ್ನು ಹಿಡಿದುಕೊಂಡ ಜರ್ಮನರಿಗೆ ಅಷ್ಟೇನೂ ಲಾಭವಾಗಲಿಲ್ಲವೆಂದು ಹೇಳಲ್ಪಡುತ್ತಿದೆ. ಆದರೂ ಬಹಳ ಆಹಾರ್ಯಪದಾರ್ಥಗಳೂ ಕೆಲ ಬೆಲ್ಜಿಯಂ ಸೈನಿಕರೂ ಜರ್ಮನರಿಗೆ ಸಿಕ್ಕಿರುವರು.

೧೫ ಸಾವಿರ ಸೈನ್ಯವನ್ನು ಕಟ್ಟಿಕೊಂಡು ಈ ಕೋಟೆಯನ್ನು ಹಿಡಿದ ಜರ್ಮನ್ ಸೇನಾನಿಯ ಹೆಸರು ಜನರಲ್ ಬೇಸ್ಲರ್ ಎಂಬುದಾಗಿ. ಈತನ ಸಾಹಸವನ್ನು ಜರ್ಮನ್ ಚಕ್ರವರ್ತಿಯವರು ಮೆಚ್ಚಿಕೊಂಡು "ಪೂ-ಮೆರಿಟ" ಎಂಬ ಬಿರುದನ್ನು ದಯಪಾಲಿಸಿದರು. ಈಗ ಆ ಸೈನ್ಯಾಧಿಪತಿಯು ಆ ಪಟ್ಟಣವನ್ನೆಲ್ಲಾ ವಶಪಡಿಸಿಕೊಂಡು "ನೀವು ವಿರೋಧಕಾರ್ಯವನ್ನೇನೂ ಮಾಡದಿದ್ದರೆ ನಿಮ್ಮ ಆಸ್ತಿಪಾಸ್ತಿಯನ್ನೆಲ್ಲಾ ನಾವು ರಕ್ಷಿಸುವೆವು. ಹಾಗಲ್ಲದೆ ಹೋದರೆ ಯುದ್ಧನಿಯಮಪ್ರಕಾರ ನಿಮ್ಮನ್ನು ಶಿಕ್ಷಿಸುವೆವು; ಮತ್ತೂ ಶೃಂಗಾರಪೂರಿತವಾದ ನಿಮ್ಮ ಪಟ್ಟಣವೂ ಹಾಳಾಗುವುದು.'' ಎಂದು ಸಾರಿಸಿದನು. ಈಗ ೫೦ ಕೋಟಿ ರೂ. ಗಳನ್ನು ದಂಡ ಕೊಡಬೇಕೆಂದು ಆಪಟ್ಟಣಿಗರಿಗೆ ವಿಧಿಸಿರುವರು. ಈ ಪಟ್ಟಣದ ಬಳಿಯಲ್ಲಿ ಕಾದಾಡಿದಾಗ ಇಂಗ್ಲೀಷ್ ಬೆಲ್ಜಿಯಂ ಸೇನೆಗಳ ಫಿರಂಗಿಗಳ ಹೊಡೆತವು ಜರ್ಮನರಿಗೂ ಬಲವಾಗಿ ಬಿದ್ದಿರುವುದು. ಇದರಿಂದ ಬಹಳ ಸೈನ್ಯವು ಇವರ ಕಡೆ ನಷ್ಟವಾಗಿರುವುದು. ಏಟುತಿಂದ ಜರ್ಮನ್ ಸೈನಿಕರನ್ನೇ ಒಂದೊಂದಾವೃತ್ತಿ ೪೦ ಬಂಡಿಗಳಲ್ಲಿ ತುಂಬಿ ಹೀಗೆ ೫ ಆವೃತ್ತಿ ಜರ್ಮನಿಗೆ ಹೊಗೆಬಂಡಿಗಳ ಮೂಲಕ ಸಾಗಿಸಿದರಂತೆ.

ಆಂಟ್ವರ್ಪು ಹೀಗೆ ಜರ್ಮನರ ಸ್ವಾಧೀನವಾದುದರಿಂದ ಜರ್ಮನಿಗೆ ತನ್ನ ಸಂಕಲ್ಪವು ನೆರವೇರಿತೆಂಬ ಸಂತೋಷವುಂಟಾಗಿರಬಹುದು. ಅಷ್ಟೇಹೊರತು ಆ ಪಟ್ಟಣವು ಕಾಡಿನಂತಾಗಿರುವುದರಿಂದ ಇತರ ವಿಧದ ಲಾಭವೇನೂ ಇಲ್ಲ. ಈ ಪಟ್ಟಣಕ್ಕೆ ಪಶ್ಚಿಮದಲ್ಲಿರುವ ಶೇಲ್ಡ್ ನದಿಯು ಹಾಲೆಂಡಿನವರಿಗೆ ಸೇರಿದೆ. ಅಲ್ಲಿಂದ ಇಲ್ಲಿಗೆ ಯಾವಾಗಲೂ ಹೋಗಿಬರುವುದಕ್ಕೆ ಆತಂಕವಿರುವುದಿಲ್ಲ. ಪಶ್ಚಿಮದಲ್ಲಿರುವ ಸಮುದ್ರವೆಲ್ಲಾ ಆಂಗ್ಲಪ್ರಭುತ್ವದಿಂದ ಪರಿರಕ್ಷಿತವಾಗಿದೆ. ಅದುಕಾರಣ ಜರ್ಮನರಿಗೆ ಇದರಿಂದ ಮತ್ತಾವ ಲಾಭವಾಗದೆಯಿದ್ದರೂ, ಉತ್ತರತ್ರ ಜರ್ಮನರು ಬೆಲ್ಜಿಯಂ ದೇಶವನ್ನೇ ಬಿಟ್ಟು ಹೋಗಬೇಕಾದ ಅವಸ್ಥೆಗಿಳಿದಾಗ ಕೆಲಕಾಲ ಆಂಟ್ವರ್ಪ್ ಕೋಟೆಯಲ್ಲಿ ತಮ್ಮ ಸುರಕ್ಷಿತತೆಯನ್ನು ಮಾಡಿಕೊಂಡು ಹೋರಾಡಲು ಅನುಕೂಲವಾಗದೆ ಇರುವುದಿಲ್ಲ. ಇನ್ನು ಮುಂದೆ ಮಿತ್ರಸೈನ್ಯದವರು ಜರ್ಮನರ ಮೇಲೆ ಈ ಆಂಟ್ವರ್ಪಿನ ಬಳಿಯಲ್ಲೂ ಹೋರಾಡಬೇಕಾದ ಸಂಭವವು ಉಂಟಾಗದೆ ಇರಲಾರದು.

ಈ ಆಂಟ್ವರ್ಪ್ ಪಟ್ಟಣವು ಶತ್ರುಗಳ ವಶವಾದರೂ ಉತ್ತರಪಶ್ಚಿಮದಲ್ಲಿ ಕೆಲ ಕೋಟೆಗಳು ಇನ್ನೂ ವಶವಾಗಲಿಲ್ಲವೆಂದು ವಾರ್ತೆಯಿದೆ, ಆದರೇನು? ದೇಹವೇ ಅಧೀನವಾದಮೇಲೆ ಮೂಗು ತಪ್ಪಿಸಿಕೊಳ್ಳಲಾದೀತೆ? ಈ ಆಂಟ್ವರ್ಪ್ ನಗರವು ಬೆಲ್ಜಿಯಮ್ಮಿನವರ ಕೈತಪ್ಪಿದುದರಿಂದ ಅವರಿಗಾದ ನಷ್ಟವು ಪರಾಕಾಷ್ಠದಶೆಯನ್ನು ಹೊಂದಿದಂತಾಯಿತು. ಈ ಪಟ್ಟಣವು ವ್ಯಾಪಾರದ ವಿಷಯದಲ್ಲಿ ಯೂರೋಪುಖಂಡಕ್ಕೇ ಮೊದಲನೆಯ ಪಟ್ಟಣವಾಗಿದ್ದಿತು. ೧೯೧೧ ನೆಯ ವರ್ಷದಲ್ಲಿ ಈ ಪಟ್ಟಣದೊಳಗೆ ೧೩೨೫೬೬೬ ಟನ್ನುಗಳ ತೂಕದ ಪದಾರ್ಥಗಳ ಆಯಾತವೂ ೧೫೨೭೬೬೬೫ ಟನ್ನುಗಳ ತೂಕದ ಪದಾರ್ಥಗಳ ನಿರ್ಯಾತವೂ ಆಗಿರುವುದು.

ಈ ಪಟ್ಟಣದ ರೇವೆಯನ್ನು ಅಣಿಮಾಡುವುದಕ್ಕೆ ಬೆಲ್ಜಿಯಂನವರು ಅನೇಕ ಕೋಟಿಗಟ್ಟಲೆಯ ರೂ. ಗಳನ್ನು ವ್ಯಯಮಾಡಿರುವರು. ಪಟ್ಟಣವೋ ಅತ್ಯಂತ ರಮಣೀಯಗಳಾದ ಭವನಗಳಿಂದ ಬಹು ಶೃಂಗಾರಭರಿತವಾದುದು. ಇದರ ಕೋಟೆಗಳು ಕಂದಕಗಳು ಇತರ ವಿಧವಾದ ರಕ್ಷಣಸಾಧನಗಳೂ ಸಹ ಬಹಳ ಧನವ್ಯಯದಿಂದ ಅತ್ಯಂತಾಭೇದ್ಯವಾಗಿದ್ದುವು. ದೊಡ್ಡದೊಡ್ಡ ಫಿರಂಗಿಗಳ ಹೊಡೆತದಿಂದಲ್ಲದಿದ್ದರೆ ಎಂದಿಗೂ ಇದು ಇಷ್ಟು ಬೇಗನೆ ಶತ್ರುಗಳ ವಶವಾಗುತ್ತಿರಲಿಲ್ಲ. ಇದರ ಪಾತದಿಂದ ಬೆಲ್ಜಿಯಮ್ಮಿನವರ ಪ್ರಾಣಪದಕವೇ ಕಳಚಿಬಿದ್ದಂತಾಯಿತು. ನಿರಪರಾಧಿಗಳಾದ ಈ ಸಣ್ಣ ದೇಶೀಯರಿಗೆ ಜರ್ಮನರು ಈಗ ಉಂಟುಮಾಡಿರುವ ವಿಪತ್ತು ವರ್ಣನಾತೀತವಾಗಿರುವುದು. ಆದೇಶದ ಮುಖ್ಯಪಟ್ಟಣಗಳೆಲ್ಲಾ ಸ್ಮಶಾನವಾದುವು. ಜನರು ಪುರಂದರದಾಸರಾದರು. ಸಕಲೋದ್ಯೋಗಗಳೂ ಹಾಳಾದುವು. ಹಲವರು ಪ್ರಾಣಕಳೆದುಕೊಂಡರು. ಧನಹಾನಿ ಮಾನಹಾನಿಗಳು ವಾಚಾಮಗೋಚರವಾದಷ್ಟಾದುವು. ಇಷ್ಟೆಲ್ಲಾ ಅನರ್ಥವು ಅವರಿಗೆ ನಿಷ್ಕಾರಣವಾಗಿ ಉಂಟಾಗಿರುವುದನ್ನು ಕೇಳಿದರೆ ಎಂಥ ಕಲ್ಲೆದೆಯವರಿಗೂ ಎದೆಯು ಬಿರಿದುಹೋಗುತ್ತಿರುವುದು. ಇಷ್ಟು ಅನರ್ಥವನ್ನು ನಿರಪರಾಧಿಗಳಿಗೆ ಉಂಟುಮಾಡಿದವರಿಗೆ ತಕ್ಕ ಪ್ರತಿಫಲವನ್ನು ಜಗದೀಶ್ವರನು ಉಂಟುಮಾಡದೆ ಇರಲಾರನು. ಈಗ ಜರ್ಮನರು ಆಸ್ಟೆಂಡಿನಕಡೆಗೂ ನುಗ್ಗುವುದರಲ್ಲಿದ್ದಾರಂತೆ. ಈಚೆಗೆ ಅವರು ಘೆಂಟ್ ಪಟ್ಟಣವನ್ನೂ ಸ್ವಾಧೀನಪಡಿಸಿಕೊಂಡರೆಂದು ಸುದ್ದಿ ಬಂದಿದೆ. ಇದು ಆಂಟ್‌ವರ್ಪಿಗೆ ನೈಋತ್ಯದಲ್ಲಿದೆ.

ಬೆಂಗಳೂರ ಇಂಪೀರಿಯಲ್ ಸರ್ವಿಸ್ ಲ್ಯಾನ್ಸರ್ಸ್.

ಕಳೆದ ತಾ|| ೧೩ರಲ್ಲಿ ಬೆಂಗಳೂರಿಂದ ನಮ್ಮ ಸಂಸ್ಥಾನದ ಇಂಪೀರಿಯಲ್ ಸರ್ವಿಸ್ ಲ್ಯಾನ್ಸರ್ಸ್ ಸೇನೆಯು ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧಕ್ಕಾಗಿ ಪ್ರಯಾಣಮಾಡಿತು. ಆ ಕಾಲದಲ್ಲಿ ನಮ್ಮ ಶ್ರೀಮನ್ ಮಹಾರಾಜರವರು ಈ ಕೆಳಗೆ ಕಂಡ ಸಂದೇಶವನ್ನು * ಅವರಿಗೆಕಳುಹಿಕೊಟ್ಟಿದ್ದರು.—

"ನೀವು ನಮ್ಮ ಪ್ರಿಯಚಕ್ರವರ್ತಿಯವರ ಸಲುವಾಗಿ ಬಹಳ ಧೈರ್ಯದಿಂದ ಯುದ್ಧಮಾಡಿ ನಮ್ಮ ಮೈಸೂರುಸಂಸ್ಥಾನದ ಖ್ಯಾತಿಯನ್ನುಳಿಸುವಿರೆಂದು ನಮಗೆ ಪೂರ್ಣನಂಬುಗೆಯುಂಟೆಂದು ನೀವು ರಣರಂಗಕ್ಕೆ ಪ್ರಯಾಣಮಾಡುವ ಸಮಯದಲ್ಲಿ ನಾವು ದೃಢವಾಗಿ ಹೇಳುತ್ತೇವೆ. ನಮ್ಮ ಧೈರ್ಯಶಾಲಿಯಾದ ಸೇನೆಗೆ ಜಯವಾಗಲೆಂಬ ನಿರೀಕ್ಷಣೆಯಲ್ಲಿರುತ್ತೇವಲ್ಲದೆ ನಿಮ್ಮ ಪತ್ನಿಯರುಗಳ ಮತ್ತೂ ನಿಮ್ಮ ಕುಟುಂಬದ ಯೋಗಕ್ಷೇಮವು ಯಾವಾಗಲೂ ನಮ್ಮ ಪ್ರಥಮಚಿಂತನೆಯಾಗಿರುವುದೆಂದು ನೀವು ದೃಢವಾಗಿ ತಿಳಿಯಿರಿ. ನಿಮಗೆ ಕ್ಷೇಮವಾಗಲಿ.''

ಈ ಸೇನೆಯಲ್ಲಿ ಕೆಲಅರಸುಗಳಿರುವುದರಿಂದ, ರಾಜಧಾನಿಯ ಅರಸು ಜಮಖಾನಕ್ಲಬ್ಬಿನವರು ಈ ಸೇನೆಗೆ ಕ್ಷೇಮವನ್ನು ಬಯಸಿ ಒಂದು ವಿಜ್ಞಾಪನಪತ್ರವನ್ನು ಕೊಟ್ಟಿದ್ದುದಕ್ಕೆ, ಸೇನೆಯ ಕಮ್ಯಾಂಡೆಂಟರಾದ ಮ|| ಬಿ. ಚಾಮರಾಜ ಅರಸ್ ಬಹದ್ದೂರ್‌ರವರು- "ಪ್ರಬಲವಾದ ಬ್ರಿಟಿಷ್‌ಚಕ್ರಾಧಿಪತ್ಯಕ್ಕೋಸ್ಕರ ಯುದ್ಧಮಾಡಲು ಹೊರಡುವ ವೇಳೆಯಲ್ಲಿ ಈ ಸೇನೆಯ ಕ್ಷೇಮವನ್ನು ಬಯಸಿರುವುದಕ್ಕಾಗಿ ಅರಸು ಜಮಖಾನಾಕ್ಲಬ್ಬಿನವರನ್ನು ನಮ್ಮ ಸೇನೆಯಪರವಾಗಿ ವಂದಿಸುತ್ತೇನೆ. ಈಗತಾನೇ ನಾವು ಕೈಕೊಳ್ಳಲಿಕ್ಕಿರುವ ಕಾರ್ಯದಲ್ಲಿ ನಮ್ಮ ಸೇನೆಯೆಲ್ಲಕ್ಕೂ ವಿಶೇಷೋತ್ಸಾಹವುಂಟಾಗಿರುವುದು. ಮತ್ತೂ ಈ ಪರೀಕ್ಷಾಸಮಯದಲ್ಲಿ ತಮ್ಮ ಕರ್ತವ್ಯವನ್ನು ವಿಶೇಷ ತೇಜಸ್ಸಿನಿಂದ ನೆರವೇರಿಸಿ ತಮಗೂ, ಹಿಂದೆಯೂ ಈಗಲೂ ತಮ್ಮನ್ನು ಬಹು ಕರುಣೆಯಿಂದ ಸಲಹುತ್ತಿರುವ ನಮ್ಮ ಪ್ರಿಯ ಶ್ರೀಮನ್ಮಹಾರಾಜರವರಿಗೂ ಖ್ಯಾತಿಯನ್ನು ತರುವರೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಆಫೀಸರು

---

* ಇದನ್ನು ಮೈಸೂರ್ ಜನರಲ್ ಏಜನ್ಸಿಯ ಮ|| ಎಲ್. ರಾಮಚಂದ್ರರಾಯರು ಶ್ರೀಮನ್ ಮಹಾರಾಜರವರ ಭಾವಚಿತ್ರದೊಡನೆ ಅಂದವಾಗಿ ಮುದ್ರಣಮಾಡಿಸಿ ಪ್ರತಿಯೊಂದಕ್ಕೆ ೬ ಪೈ ನಂತೆ ವಿಕ್ರಯಿಸಿ, ಅದರಿಂದ ಬರುವ ಉತ್ಪತ್ತಿಯನ್ನು ಯುದ್ಧದ ಫಂಡಿಗೆ ಕೊಡತಕ್ಕವರಾಗಿರುವರು.

ಗಳಾದ ಅರಸುಗಳ ಕುಲಕ್ಕೆ ಸೇರಿದ ನಾವುಗಳು ಕ್ಲಬ್ಬಿನವರು ನಮಗೆ ಉತ್ಸಾಹಪ್ರೀತಿಕರವಾದ ಮಾತುಗಳನ್ನಾಡಿರುವುದಕ್ಕಾಗಿ ಅವರನ್ನು ವಂದಿಸುತ್ತೇವಲ್ಲದೆ, ನಮ್ಮಲ್ಲಿ ಪ್ರತಿಯೊಬ್ಬರೂ ಯುದ್ಧರಂಗದಲ್ಲಿ ನಮ್ಮ ಶಕ್ತಿಸಾಹಸವನ್ನು ಪ್ರದರ್ಶಿಸಿ ನಮ್ಮ ಕುಲದ ಹೆಸರಿಗೆ ಕೀರ್ತಿಯನ್ನು ತರುತ್ತೇವಲ್ಲದೆ ನಾವು ಯುದ್ಧಭಟರೆಂದುಂಟಾಗಿರುವ ಖ್ಯಾತಿಯನ್ನು ಹೆಚ್ಚಿಸುತ್ತೇವೆಂದು ವಾಗ್ದಾನಮಾಡುತ್ತೇವೆ. ನಮ್ಮ ಸೈನಿಕರೆಲ್ಲರೂ ನಮ್ಮ ಕರ್ತವ್ಯಧರ್ಮವನ್ನರಿತು ಸರ್ವಶಕ್ತನಾದ ಭಗವಂತನ ಸಾಹಾಯ್ಯದಿಂದ ನಮ್ಮ ಕರ್ತವ್ಯಕರ್ಮವನ್ನು ನೆರವೇರಿಸಿ ಕೊಂಚಕಾಲದಲ್ಲೇ ನಿಮ್ಮನ್ನು ಪುನಃ ಸೇರಲು ನಿರೀಕ್ಷಿಸುತ್ತೇವೆ'' ಎಂದುತ್ತರವನ್ನು ಕೊಟ್ಟರು.

ಒಳದೇಶದ ವೃತ್ತಾಂತಗಳು

ಅರಮನೆಗೆ ಸೇರಿದ ಮುಜರಾಯಿ ದೇವಸ್ಥಾನ ಮಠಗಳ ಮೇಲ್ವಿಚಾರಣೆಯ ಬಗೆಗೆ ಮ|| ಗಳಾದ ಅಂಬಲೆ ಅಣ್ಣಯ್ಯ ಪಂಡಿತರು, ಎಸ್. ನಂಜಪ್ಪನವರು, ಲಕ್ಷ್ಮೀಪುರದ ಶ್ರೀನಿವಾಸಾಚಾರರು, ಪಿ. ರಾಮಚಂದ್ರರಾಯರು, ಮುದ್ದರಾಜ ಅರಸಿನವರು, ಮತ್ತೂ ಟಿ. ಎಂ. ರಾಮಸ್ವಾಮಯ್ಯನವರು ಧರ್ಮದರ್ಶಿಗಳಾಗಿ ನಿಯಮಿಸಲ್ಪಟ್ಟಿರುವರು.

ರಾಜಧಾನಿಯ ಮಹಾರಾಣೀ ಕಾಲೇಜಿನ ಸಹೋಪಾಧ್ಯಾಯಿನಿಯರಾದ ಸೌ|| ಭಾಗೀರತಮ್ಮನವರು ತಾವು ವ್ಯಾಸಂಗಮಾಡುತ್ತಿರುವಾಗ್ಯೆ ಪಡೆಯುತ್ತಿದ್ದ ವಿದ್ಯಾರ್ಥಿ ವೇತನವಲ್ಲದೆ ಈಚೆಗೆ ಉಪಾಧ್ಯಾಯಿನಿಯರಾದಮೇಲೆ ಬರುವ ಸಂಬಳದಲ್ಲೂ ಒಂದುದಿನದ ಉತ್ಪನ್ನದಂತೆ ಕೂಡಿಟ್ಟಿರುವ ೧೯೦೦ ರೂಗಳನ್ನು ಸರ್ಕಾರದವರು ವಹಿಸಿಕೊಂಡು ಅದರಿಂದ ಬರುವ ಬಡ್ಡಿಯಹಣದಲ್ಲಿ ಪ್ರತಿ ವರ್ಷವೂ ಮಹಾರಾಣೀಕಾಲೇಜಿನಲ್ಲಿ ಇಂಗ್ಲೀಷ್ ಮತ್ತು ಲೋವೆರ್‌ಸೆಕೆಂಡರಿ ಪರೀಕ್ಷೆಗಳಲ್ಲಿ ಒಂದನೆಯವರಾಗಿ ತೇರ್ಗಡೆಯನ್ನು ಹೊಂದುವ ಒಬ್ಬೊಬ್ಬ ವಿಧ್ಯಾರ್ಥಿನಿಗೆ ಬಹುಮಾನವನ್ನು ತಮ್ಮ ಹೆಸರಿನಮೇಲೆ ಕೊಡಿಸಿಕೊಡಬೇಕೆಂದು ವಿದ್ಯಾಶಾಖೆಯ ಜನರಲ್‌ರವರನ್ನು ಕೇಳಿರುವರು. ಸ್ತ್ರೀಯರು ಇಷ್ಟರಮಟ್ಟಿಗೆ ತಮ್ಮ ಕಷ್ಟಾರ್ಜಿತ ದ್ರವ್ಯದಲ್ಲಿ ಸ್ತ್ರೀವಿದ್ಯಾಪ್ರೋತ್ಸಾಹಕ್ಕಾಗಿ ಸಹಾಯಮಾಡುವುದು ಸ್ತುತ್ಯವಾದುದಲ್ಲದೆ ತಮ್ಮಂತ ವಿದ್ಯಾವತಿಯರಾದವರಿಗೆ ಮಾರ್ಗದರ್ಶಕವಾಗಿರುವುದು

ಮರಿಮಲ್ಲಪ್ಪನವರ ಹೈಸ್ಕೂಲ್ ಹೆಡ್ಮಾಸ್ಟರಾದ ಮ|| ಎಂ. ವೆಂಕಟಕೃಷ್ಣಯ್ಯನವರು ಮೈಸೂರ ದೇಶೀಯರ ಕ್ಷೇಮಚಿಂತನೆಯನ್ನು ಮೂಲಮಂತ್ರವನ್ನಾಗಿಟ್ಟುಕೊಂಡು ವೃತ್ತಪತ್ರಿಕೆಗಳಲ್ಲೂ, ಪ್ರಜಾಪ್ರತಿನಿಧಿಸಭೆ ಮೊದಲಾದ ಸಭೆಗಳಲ್ಲೂ, ಉಪನ್ಯಾಸಗಳಲ್ಲೂ ಈ ದೇಶೀಯರ ಪಕ್ಷವನ್ನು ಹಿಡಿದು ನಿರ್ಭಯದಿಂದಲೂ ಯುಕ್ತಿಯುಕ್ತವಾಗಿಯೂ ವಾದಿಸುತ ನಾನಾರೀತಿಯಲ್ಲಿ ಉಪಕಾರವನ್ನು ಮಾಡಿರುವುದಕ್ಕಾಗಿ ಈ ದೇಶದ ಎಲ್ಲ ಡಿಸ್ಟ್ರಿಕ್ಟಿನ ಪ್ರಮುಖ ದೊಡ್ಡಮನುಷ್ಯರು ಈ ವೃದ್ಧಮಹಾಪುರುಷರು ಕಳೆದವರ್ಷ ನಿಯಮನಿರ್ಮಾಣಸಭಾಸ್ತಾರರಾಗಿ ನಿಯಮಿಸಲ್ಪಟ್ಟುದರಿಂದ ತಮಗುಂಟಾದ ಮಹಾನಂದವನ್ನು ಕಳೆದ ತಾ|| ೮ ರಲ್ಲಿ ರಾಜಧಾನಿಯ ಟೌನ್‌ಹಾಲಿನಲ್ಲಿ ವಿದ್ಯಾಶಾಖೆಯ ಇ|| ಜನರಲ್‌ರವರಾದ ರಾ [illegible] ಎಂ. ಶಾಮರಾಯರ ಅಧ್ಯಕ್ಷತೆಯಲ್ಲಿ ಒಂದು ಪ್ರಚಂಡ ಸಭೆಯನ್ನು ಸೇರಿಸಿ ವಿಜ್ಞಾಪನಪತ್ರವನ್ನೊಪ್ಪಿಸಿ ಪ್ರದರ್ಶಿಸಿದರು. ಅಧ್ಯಕ್ಷಮಹಾಶಯರೂ ಮತ್ತಿತರರೂ ವೃದ್ಧಮಹಾಪುರುಷರ ಗುಣಕಥನವನ್ನು ಮಾಡಿದಮೇಲೆ ಮ|| ವೆಂಕಟಕೃಷ್ಣಯ್ಯನವರು ಕಾಲೋಚಿತವಾದುತ್ತರವನ್ನಿತ್ತರು.

ಪತ್ರವ್ಯವಹಾರ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳ ಶ್ರೀಮಚ್ಛಿನ್ಮೂಲಾದ್ರಿ ಬೃಹನ್ಮಠ ಮಹಾ|| ಸಂಸ್ಥಾನದಿಂದ.

ಶ್ರೀಮನ್ಮಹಾಖಾಸ ಸ್ವಾರಿಯು ಬೆಳಗಾಂ ಶಹರದಿಂದ ಬೆಳಗಾಂ ಜಿಲ್ಲಾ ಪೈಕಿ ತಾಲ್ಲೋಕು ಖಾನಾಪುರಕ್ಕೆ ಚಿತ್ತೈಸುತ್ತಾದುದರಿಂದ ಮಹಾ|| ಸನ್ನಿಧಾನಕ್ಕೆ ಪತ್ರಗಳನ್ನು ಬನ್ನೈಸಿಕೊಳ್ಳತಕ್ಕವರು ಖಾನಾಪೂರ್ ಪೋಸ್ಟಿಗೆ ಬನ್ನೈಸಿಕೊಳ್ಳತಕ್ಕದ್ದು.

ಮುಕ್ಕಾಂ, ಬೆಳಗಾಂಸಿಟಿ.
ತಾ|| ೧೩–೧೦–೧೯೧೪.

ಚೆನ್ನಬಸವಯ್ಯಾ ಹೇಮಗಿರಿಮಠ ಕಾರಭಾರಿ, ಸಂಸ್ಥಾನ ಚಿತ್ರದುರ್ಗ.

ದಾವಣಗೇರಿ ತಾ|| ಕೊಡಗನೂರು.

ಮೊನ್ನೆ ವಿಜಯದಶಮಿದಿವಸ ಕೊಡಗನೂರ ನಿವಾಸಿಗಳಾದ ರಾ|| ರಾ|| ಚಿಗಂತೆಪ್ಪನವರು, ಸಾವಕಾರ ಹಾಲಪ್ಪನವರ, ಮಹಾದೇವಪ್ಪ ಹವಿಲ್ದಾರ, ವೀರಪ್ಪ ಮಾಳಿಕೊಂಡೀ, ವಗೈರೆ ಸದ್ಗೃಹಸ್ಥರು, ಮಿ|| ಜಯರಾಮಾಚಾರ್ಯ ಕೊಪ್ಪಳ, ಮ|| ಕೆ. ಕೆ. ನಾರಾಯಣಸ್ವಾಮಿ ಅಯ್ಯಂಗಾರ್ ಸ್ಕೂಲ ಮಾಸ್ತರು ಕೊಡಗನೂರು, ಈ ಉಭಯರ ಆಮಂತ್ರಣಕ್ಕೆ ಮಾನಕೊಟ್ಟು ತಮ್ಮ ಮಿತ್ರಮಂಡಲಿಯಿಂದ ಸಭೆಯನ್ನು ಅಲಂಕರಿಸಿದರು. ಅನಂತರ ಬಾಳಾಜಿರಾವ ವಿಟ್ಟ ಇವರು, [illegible] ನೆರವೇರಿಸಿದ ಸಂಗತಿಯನ್ನು ಎಲ್ಲರಿಗೂ ವಿಜ್ಞಾಪಿಸಿ ನರಸಿಂಗರಾವ ವಿಟ್ಟ ಇವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿದರು. ಅನಂತರ ಜಯರಾಮಾಚಾರ್ಯ ಇವರು ಪ್ರಸ್ತುತದಲ್ಲಿ ನಡೆದ ಮಹಾಯುದ್ಧದ ಸಂಗತಿಯನ್ನು ಎಲ್ಲರಿಗೂ ತಿಳಿಯುವಂತೆ ಉಪನ್ಯಾಸ ಮಾಡಿ, ಜಾರ್ಜ್ ಪ್ರಭುಗಳಿಗೂ ಶ್ರೀಮನ್ಮಹಾರಾಜರಿಗೂ ಕ್ಷೇಮಾಭಿವೃದ್ಧಿಯನ್ನು ಅಪೇಕ್ಷಿಸಿದರು. ವಾರ್‌ಫಂಡಿಗೆ ಸಭೆಯಲ್ಲಿಯೇ ೫೦ ರೂಪಾಯಿ ವಸೂಲುಮಾಡಿದರು. ಆಮೇಲೆ ಎಲ್ಲರೂ ವಿಜಯವು ಜಾರ್ಜ್‌ಪ್ರಭುಗಳಿಗೆ ವಿಜಯವು ಎಂದು ಸಂತೋಷದಿಂದ ಉದ್ಘೋಷಿಸಿದರು.

ದಾವಣಗೆರೆ.

ಈ ವರ್ಷವಲ್ಲಿ ಪ್ಲೇಗು ಆರಂಭವಾಗಿ ಬಹುಶಃ ೯–೧೦ ತಿಂಗಳಾಯಿತು. ಈಗ ೨ ತಿಂಗಳಿಂದಲೂ ಹೆಚ್ಚಾಗುತ್ತಾ ಬಂತು. ಜನರು ಷೆಡ್ ಹಾಕಲು ಮ್ಯುನಿಸಿಪಾಲಿಟಿಯಲ್ಲಿ ಸ್ಥಳವಿಲ್ಲದೆಯೂ ಊರಿಗೆ ದೂರವಾಗಿ ಹೊಲಗಳಲ್ಲಿ ಷೆಡ್ ಹಾಕಿಕೊಂಡರೆ ನೀರಿನ ಅನುಕೂಲತೆಯಿಲ್ಲದೆಯೂ ಮನೆಗಳನ್ನು ಬಿಡಲವಕಾಶವಾಗಲಿಲ್ಲ. ಪ್ರಯುಕ್ತ ಪ್ಲೇಗ್ ಜಾಸ್ತಿಯಾಯಿತು. ನಂತರ ಕೆಲವರು ಇವಾಕ್ಯುಲೇಟ್ ಮಾಡಿಸಿಕೊಂಡರು. ಈ ಗ್ರಾಮದಪೈಕಿ ಹತ್ತಾಣೆಭಾಗದವರು ಪರಸ್ಥಳಗಳಿಗೆ ಹೋಗಿರುವರು. ಬಾಕಿ ಆರಾಣೆಪೈಕಿ ಕೆಲವರು ತಂತಮ್ಮ ಸ್ಥಳಗಳಲ್ಲಿ ಕ್ಯಾಂಪ್ ಮಾಡಿಕೊಂಡಿರುವರು. ಬಾಕಿ ಬಡಜನರು ಊರುಬಿಡಲವಕಾಶವಿಲ್ಲದ್ದರಿಂದ ಪ್ಲೇಗು ಬಡಜನರಿಗೆ ಗಂಟುಬಿದ್ದಿರುವದು. ಇವರಲ್ಲೂ ಅನೇಕರು ಅನಾಥರಾಗಿರುವರು. ಇವರಿಗೆ ಔಷಧ ಆಹಾರವಿಲ್ಲದೆ ಅನೇಕ ತೊಂದರೆ ಕಂಡುಬಂದದ್ದರಿಂದ ವರ್ತಕರು ಅನಾಥ ಪ್ಲೇಗ್ ರೋಗಿಗಳಿಗೆ ಔಷಧ, ಹಾಲು, ಸಕ್ಕರೆ, ರವೆ, ಅಕ್ಕಿಯನ್ನೂ ಕ್ಯಾಂಪು ಹಾಕಿಕೊಳ್ಳಲು ಗಳ, ಬೊಂಬು, ಚಾಪೆಯನ್ನೂ ಕೊಡಲು ಫಂಡ್ ಏರ್ಪಡಿಸಿರುವರು. ಇದರಿಂದ ಸ್ವಲ್ಪ ಗುಣಕಂಡುಬಂದಿದೆ. ಹಾಲಿ ಕ್ಯಾಂಪುಗಳಲ್ಲೂ ಊರಲ್ಲೂ ಸಹ ರೋಗ ತಗಲುತ್ತಿರುವದು. ಹಾಗೂ ಹಳ್ಳಿಗಳಲ್ಲೂ ಆರಂಭವಾಗಿರುವುದರಿಂದ ಈ ಊರಜನರು ಹಳ್ಳಿಗಳಿಗೆ ಹೋದವರು ಪುನಃ ಮನೆಗಳಿಗೆ ಬರಬೇಕಾಯಿತು. ಈ ಕಷ್ಟಗಳನ್ನು ಶ್ರೀದೇವರು ಮತ್ತು ನಮ್ಮ ಗೌರ್ನಮೆಂಟ್ ನವರು ಪಾರುಮಾಡಬೇಕು. ಹಾಗೂ ನಮ್ಮ ಗೌರ್ನಮೆಂಟಿನವರು ಬಡಜನರಿಗೆ ಪ್ಲೇಗ್ ಬಂದಕಾಲದಲ್ಲಿ ಷೆಡ್ ಹಾಕಲು ಸ್ಥಳಗಳನ್ನೂ ಮತ್ತೂ ಕೂಲಿಯಾಸೆಯಿಂದ ಬಂದ ಪರಸ್ಥಳದ ಜನರಿಗೆ ಕ್ಯಾಂಪು ವಗೈರೆ ಗುಡಿಸಲು ಹಾಕಲು ಸ್ಥಳಗಳನ್ನೂ ಈ ಎರಡನ್ನು ಜಾಗ್ರತೆ ಅನುಕೂಲಪಡಿಸಿಕೊಟ್ಟರೆ ಗ್ರಾಮಕ್ಕೆ ಪ್ಲೇಗ್ ದೂರವಾಗಿ ಸೌಖ್ಯವಾದೀತೆಂದು ನಮ್ಮ ಕೋರಿಕೆ.

ಗ್ರಾಮಸ್ಥ.

ಚಿತ್ರದುರ್ಗ ತಾಲ್ಲೂಕು ಅಜ್ಜೇಹಾಳು.

ಕಳೆದ ತಿಂಗಳು ೨೫ ನೇ ತಾರೀಖು ಶುಕ್ರವಾರ ಸಾಯಂಕಾಲ ಇಲ್ಲಿನ ಎ. ವಿ. ಸ್ಕೂಲಿನಲ್ಲಿ ಗ್ರಾಮಸಮಾಜದವರು ಸೇರಿದ್ದ ಸಭೆಯಲ್ಲಿ ಮ|| ರಾ|| ಅಮಲ್ದಾರ್ರವರು ಅಗ್ರಾಸನವನ್ನು ವಹಿಸಿದ್ದರು. ಈ ಗ್ರಾಮವು ಈ ತಾಲ್ಲೂಕಿಗೆ ಕೊನೆಗಡಿಯಾಗಿಯೂ ಗುಡ್ಡಪ್ರದೇಶದಲ್ಲಿ ಮಧ್ಯರಾಷ್ಟ್ರವಾಗಿಯೂ ಇರುವುದರಿಂದ ಇಲ್ಲಿನ ಪ್ರಜಾಸಂಖ್ಯೆಗೆ ಅನುಕೂಲವಾಗುವಂತೆ ಒಂದು ಸಂತೆಯನ್ನು ಏರ್ಪಡಿಸಿ ಕೊಡಬೇಕೆಂದು ಗ್ರಾಮಸ್ಥರು ಅಮಲ್ದಾರ್ರವರನ್ನು ಪ್ರಾರ್ಥಿಸಿಕೊಂಡ ಪ್ರಕಾರ ಗವರ್ನಮೆಂಟಿಗೆ ಶಿಫಾರಸ್ಸುಮಾಡಿ ಅಲ್ಲಿಂದ ಮಂಜೂರಾಗಿ ಬಂದು, ಸುಮಾರು ಎರಡುತಿಂಗಳಿಂದ ಸಂತೆ ನಡೆಯುತ್ತಾ ಇದೆ. ಈ ಪ್ರಾಂತದ ಜನಗಳಿಗೆಲ್ಲಾ ಇದು ಬಹಳ ಅನುಕೂಲವಾಗಿದೆ. ಇದಕ್ಕಾಗಿ ನಮ್ಮ ಗ್ರಾಮಾಭಿವೃದ್ಧಿ ಸಮಾಜದವರು ಶ್ರೀಮತ್ ಮಹಾರಾಜಾ ಸಾಹೇಬ್ ಬಹದ್ದೂರ್ರವರ ಸರ್ಕಾರಕ್ಕೆ ಕೃತಜ್ಞರಾಗಿರುತ್ತೇವೆಂದು ರಿಕಾರ್ಡ್ ಮಾಡಲಾಯಿತು. ತರುವಾಯ ಸಭಾಧ್ಯಕ್ಷರು ನಮ್ಮ ಚಕ್ರವರ್ತಿ ಗಳವರಿಗೆ ಒದಗಿದ ಮಹಾಯುದ್ಧ ಸಂದರ್ಭವನ್ನೂ, ನಮ್ಮ ಮಹಾರಾಜರವರು ಇಂಡಿಯಾ ಗವರ್ನಮೆಂಟಿನವರ ಉಪಯೋಗಕ್ಕೆ ದೇಶೀಯರಾಜ ಸೈನಿಕರನ್ನು ಯುದ್ಧಭೂಮಿಗೆ ಕಳುಹಿಸಿ ಕೊಟ್ಟಿರುತ್ತಾರೆಂತಲೂ ಅಂಥವರ ಸಂಸಾರವನ್ನು ಸಂರಕ್ಷಣೆಮಾಡುವದು ನಮ್ಮ ಕರ್ತವ್ಯವೆಂತಲೂ ಈ ಪುಣ್ಯಕರವಾದ ಕಾರ್ಯಕ್ಕೆ ಅವರವರ ಶಕ್ತ್ಯನುಸಾರ ಸಹಾಯಮಾಡಬೇಕೆಂತಲೂ ಗ್ರಾಮಸ್ಥರಾದ ಸರ್ವರೂ ಅವಗಾಹನೆ ಮಾಡಿಕೊಳ್ಳುವಂತೆ ಉಪನ್ಯಾಸ ಮಾಡಿದರು. ಆ ಕೂಡಲೆ ಗ್ರಾಮಸ್ಥರೆಲ್ಲರೂ ಸೇರಿ ನಲವತ್ತು ರೂಪಾಯಿಗಳನ್ನು (ರೂ ೪೦–೦–೦) ಚಂದಾ ವಸೂಲ್ಮಾಡಿ "ಇಂಪೀರಿಯಲ್ ಇಂಡಿಯನ್ ವಾರ್‌ರಿಲೀಫ್ ಫಂಡಿಗೋಸ್ಕರ ತಾಲ್ಲೂಕು ಅಮಲ್ದಾರ್ರವರ ವಶಕ್ಕೆ ಒಪ್ಪಿಸಿದರು. ನಮ್ಮ ಶ್ರೀಮತ್ ಮಹಾರಾಜಾ ಸಾಹೇಬ್ ಬಹದ್ದೂರ್ರವರಿಗೆ ರಾಜಭಕ್ತಿಪುರಸ್ಸರವಾದ ನಮ್ಮ ವಿಜ್ಞಾಪನೆಗಳನ್ನು ತಾವು ಸಮರ್ಪಿಸಬೇಕೆಂದು ಗ್ರಾಮಾಭಿವೃದ್ಧಿ ಸಮಾಜದವರು ಪ್ರಾರ್ಥಿಸಿಕೊಂಡರು. ಈ ಪ್ರಕಾರ ಒಳ್ಳೇ ವಿಜೃಂಭಣೆಯಿಂದ ನಡೆದ ಸಭೆಯು ಶ್ರೀಮತ್ ಮಹಾರಾಜರವರ ಮತ್ತು ಸಾರ್ವಭೌಮರವರ ಶ್ರೇಯಃಪ್ರಾರ್ಥನೆಯನ್ನು ಮಾಡಿ ಬರಖಾಸ್ತಾಯಿತು.

ಒಬ್ಬ ಮೆಂಬರು.

ಮೊಳಕಾಲ್ಮೂರು ತಾ|| ಕೋಣಸಾಗರ

ಅಯ್ಯಾ ಈಗ್ರಾಮಕ್ಕೆ ಉತ್ತರೆಯಮಳೆಯುಮಾತ್ರ ೨–೩ಹದನಡೆಯಿಸಿತು. ಪೈರುಗಳು ಸಾಧಾರಣಸ್ಥಿತಿಯಲ್ಲಿವೆ. ಈವರ್ಷ ಮುಂಗಾರುಮಳೆಯು ಸುತರಾಂ ಬರದೆಹೋದುದರಿಂದ ಕಪಿಲೆಬಾವಿಗಳಲ್ಲಿ ನೀರಿನ ಅಭಾವವು ಹೇಳತೀರದಾಗಿದೆ. ಧಾರಣೆವಾಸಿಗಳು ಏರಿಹೋಗಿವೆ. ಈ ಕಾರಣದಿಂದ ಬಡಬಗ್ಗರ ತೊಂದರೆಗಳು ಅನಿರ್ವಚನೀಯವಾಗಿವೆ. ಇದನ್ನುನೋಡಿದರೆ ಕ್ಷಾಮವು ಒಂದುವರ್ಷಕ್ಕಿಂತಲೂ ಮತ್ತೊಂದುವರ್ಷ ಹೆಚ್ಚಾಗಿ ತಲೆಹಾಕುತ್ತಿರುವಂತೆ ಕಾಣುತ್ತದೆ. ದೈವಸಂಕಲ್ಪ ಉಪಾಯವಿಲ್ಲ ಈ ಗ್ರಾಮವುರೋಗಭಿವೃದ್ಧಿಸ್ಥಿತಿಯು ಸಮರ್ಪಕವಾಗಿರುವುದಿಲ್ಲ. ಆಗಾಗ್ಗೆ ಸಣ್ಣಪುಟ್ಟಕಳ್ಳತನಗಳು ಒಳಗೊಳಗೇನಡೆಯುತ್ತಿದ್ದರೂ ಅವು ಯಾವಕಾರಣದಿಂದಲೂ ಹೊರಗೆಬರಲು ಅವಕಾಶವಿಲ್ಲ. ಕೀಟಲೆಕಾರರತೊಂದರೆಯು ಹೆಚ್ಚುತ್ತಲೇಇದೆಈ ಕಾರಣದಿಂದ ಮೊನ್ನೆ ಸೆಪ್ಟಂಬರು ತಾ|| ೮–೯–೧೯೧೪ರಲ್ಲಿ ಇದೇಗ್ರಾಮದ ಕುರುಬರ ಲಿಂಗಯ್ಯನಮಗ ಗುಂಡನೆಂಬ (ಸುಮಾರು ೩೦–೩೫ ವಯಸ್ಸಿನ) ವನನ್ನು ಯಾರೋ ಘಾತಕರು ಕೊಲೆ ನಡಿಸಿದರು. ಈ ವಿಚಾರವಾಗಿ ಪೊಲೀಸ್‌ಶಾಖೆಯವರು ಇಬ್ಬರು ಅಪರಾಧಿಗಳನ್ನು ತಪ್ಪಿತಸ್ಥರೆಂಬುದರಮೇಲೆ ಹಿಡಿದು ವಿಚಾರಣೆಗೆ ಗುರಿಪಡಿಸಿರುವರು. ಈ ಸಂದರ್ಭದಲ್ಲಿ ನಮ್ಮ ಶಿಕ್ಷಣರಕ್ಷಣಕರ್ತರಾದ ಗೌರ್ನಮೆಂಟಿನವರು ಸರಿಯಾದ ವಿಮರ್ಶೆಯಿಂದ ಈ ದುಷ್ಟಕೃತ್ಯವನ್ನು ನಡೆಸಿದ ನೀಚಾಧಮರಿಗೆ ಕ್ರೂರದಂಡನೆಯನ್ನು ವಿಧಿಸಿ ಪಾಪಹೇತುವಾದ ಈ ನೀಚಕೃತ್ಯಗಳಕಡೆಗೆ ತಕ್ಕಪ್ರತಿಬಂಧಕವನ್ನುಂಟುಮಾಡದೆ ಇರಲಾರರೆಂತ ನಿರೀಕ್ಷಿಸುತ್ತೇನೆ. ಮತ್ತೂ ಇಲ್ಲಿನ ತಾಲ್ಲೋಕು ಅಮಲ್ದಾರರಾಗಿದ್ದ ಮ|| ಎ. ಸುಬ್ಬರಾಯರವರನ್ನು ವರ್ಗಾಯಿಸಿದಸಂಗತಿ ಈ ತಾಲ್ಲೋಕಿನ ಪ್ರಜೆಗಳಿಗೆಲ್ಲಾ ತುಂಬಾ ವ್ಯಸನಕರವಾಗಿದೆ. ಇವರು ಈ ತಾಲ್ಲೋಕಿನಲ್ಲಿ ನಿಸ್ಪೃಹತ್ವದಿಂದಲೂ ದಕ್ಷತೆಯಿಂದಲೂ ಕೆಲಸಗಳನ್ನು ನಿರ್ವಹಿಸುತ್ತ ಬಡಬಗ್ಗರ ಕಷ್ಟನಷ್ಟಗಳನ್ನು ವಿಚಾರಿಸುವುದರಲ್ಲಿ ತುಂಬಾ ದಯಾಳುಗಳಾಗಿ ಗೌರ್ನಮೆಂಟಿನವರ ದಯೆಗೂ ಪ್ರಜಾನುರಾಗಕ್ಕೂ ಪಾತ್ರರಾಗಿದ್ದರು. ಇವರಲ್ಲಿದ್ದ ಸಹನಗುಣವೂ ನಿಷ್ಪಕ್ಷಪಾತಬುದ್ಧಿಯೂ, ಮ|| ರಾಯರ ಅಸಾಧರಣಯೋಗ್ಯತೆಯನ್ನು ಪ್ರಕಟಿಸತಕ್ಕವುಗಳಾಗಿದ್ದವು. ಅಲ್ಲದೆ ಈ ತಾಲ್ಲೋಕಿನಲ್ಲಿ ಹಾಲಿಕಟ್ಟಲ್ಪಡುತ್ತಿರುವ ಟವುನ್‌ಹಾಲು ಇವರ ಅನುಗ್ರಹದಿಂದಲೇ ಏರ್ಪಟ್ಟು ಚಿರಸ್ಮರಣೀಯವಾದುದೆನಿಸಿಕೊಂಡಿರುವುದು. ಇಷ್ಟುಬೇಗನೆ ಇವರು ವರ್ಗಾಯಿಸಲ್ಪಟ್ಟದ್ದು ತುಂಬಾ ವ್ಯಸನಕರವಾಗಿದೆ. ಹಾಲಿ ವರ್ಗಪಟ್ಟು ಬಂದಿರುವ ಅಮಲ್ದಾರ್ ಮ|| ಮರುಡಪ್ಪನವರಾದರೂ ಇವರಂತೆ ಪ್ರಜೆಗಳಲ್ಲಿ ಔದಾರ್ಯದಯೆಗಳನ್ನು ತೋರ್ಪಡಿಸಿ ಕೀಳನೌಕರರು ನಡೆಸುವ ಅಚಾತುರ್ಯಗಳಿಗೆ ಅವಕಾಶವಿಲ್ಲದಂತೆ ತಕ್ಕನಿಗಾವಣೆಯಿಂದ ಕೆಲಸಗಳನ್ನುನಿರ್ವಹಿಸಿ ತಮ್ಮ ಭಾಗಕ್ಕೆ ಕೀರ್ತಿಪ್ರತಿಷ್ಠೆಗಳನ್ನು ಪಡೆಯುವರೆಂದು ನಂಬಿರುತ್ತೇನೆ.

ಏರ್ಪಾಟು.— ಈ ಗ್ರಾಮದ ಸ್ಕೂಲಿನಲ್ಲಿ ಹಾಲಿಯಿರುವ ಮಾಸ್ಟರಲ್ಲದೆ ಮತ್ತೊಬ್ಬ ಮಾಸ್ಟರವರನ್ನು ಚುನಾಯಿಸಿಕೊಡತಕ್ಕವಿಷಯದಲ್ಲಿ ಗೌರ್ನಮೆಂಟಿನವರಿಗೆ ೧–೨ ಅರ್ಜಿಗಳನ್ನು ಗುಜರಾಯಿಸಿಕೊಂಡರೂ ಈ ಏರ್ಪಾಡಿನವಿಷಯವು ಗೌರ್ನಮೆಂಟಿನವರಗಮನಕ್ಕೆ ಬಾರದಿರುವುದು ತುಂಬಾ ಶೋಚನೀಯವಾಗಿದೆ. ಈಗಲಾದರೂ ಇಲಾಖೆ ಮುಖ್ಯಾಧಿಕಾರಿಗಳು ಈ ಕಡೆಗೆ ಲಕ್ಷ್ಯಕೊಟ್ಟು ಪ್ರಕೃತ ಒಬ್ಬಮಾಸ್ಟರನ್ನು ಚುನಾಯಿಸಿಕೊಟ್ಟು ಹಳ್ಳಿಗಾಡುಗಳ ವಿದ್ಯಾಭಿವೃದ್ಧಿಗೆ ತುಂಬಾ ಪ್ರೋತ್ಸಾಹಾನುಕೂಲ್ಯವನ್ನುಂಟುಮಾಡುವರೆಂದು ಕೋರುತ್ತೇನೆ.

"ಓರ್ವಪ್ರಜಾಹಿತಚಿಂತಕ"

ಶ್ರೀ ಸೌ|| ಬಸವ್ವಾಬಾಯಿ ವಾರದ ಇವರ ೫ ನೆಯ ಪುಣ್ಯತಿಥಿಯು; ಸೋಲಾಪುರ.

ಪ್ರತಿ ವರ್ಷದಂತೆ ಈ ವರ್ಷದ ಆಶ್ವೀಜ ಶುದ್ಧ ೧೪ ಶನಿವಾರದಲ್ಲಿ ಅವರ ಪುಣ್ಯಾಶ್ರಮ ಬಗೀಚದಲ್ಲಿಯ ಲೋಹಮಂಟಪದಲ್ಲಿ ಪುಣ್ಯತಿಥಿನಿಮಿತ್ತವಾಗಿ ಮಹಿಲಾಸಭೆಯು ಸೇರಿದ್ದಿತು. ತಳಿರುತೋರಣ ಪುಷ್ಪಮಾಲಿಗೆಗಳಿಂದಲೂ ರಂಭಾಸ್ತಂಭಗಳಿಂದಲೂ ಪ್ರತಿ ಕಮಾನುಗಳಲ್ಲಿ ಇಳಿಬಿಟ್ಟದ್ದ ಕೆಂಪು ಹಸರು ಹಳದಿ ಬಣ್ಣ ವಸ್ತ್ರಗಳಿಂದಲೂ ಶೋಭಿಸುತ್ತಿತ್ತು. ಪತ್ರಿಕೆಯಿಂದ ಪ್ರಸಿದ್ಧಪಡಿಸಿದಂತೆ ಸಾಯಂಕಾಲ ೪ ಘಂಟೆಗೆ ಸರಿಯಾಗಿ ಆಮಂತ್ರಿತರಾದ ವೀರಶೈವ, ಬ್ರಾಹ್ಮಣ, ಗುಜರಾತ, ಮಾರ್ವಾಡಿ, ಪಾರ್ಸಿ, ಮರಾಟಿ, ರಜಪೂತ, ಯುರೋಪಿಯನ್, ಕ್ರಿಶ್ಚಿಯನ್, ಮುಸಲಮಾನ

ಜಾತಿಯ ಪ್ರಮುಖರೂ ಸುಶಿಕ್ಷಿತರೂ ಆದ ರಮಣೀಮಣಿಯರು ಸಭೆಯನ್ನು ಅಲಂಕರಿಸಿದರು. ಮೊದಲು ಬಾಲಿಕೆಯರು ಈಶಸ್ತವನನ್ನು ಪದ್ಯರೂಪದಿಂದ ಹಾಡಿ ಶ್ರೀ ಸೌ|| ಬಸವ್ವಾಬಾಯಿ ಸಾಹೇಬರ ಗುಣವರ್ಣನರೂಪಗಳಾದ ಪದ್ಯಗಳನ್ನು ಪಿಯಾನಿನ ನಾದದೊಡನೆ ಕಿವಿಗಿಂಪಾಗುವಂತೆ ಹಾಡಿದರು. ಸೌ|| ರಾಧಾಬಾಯಿ ಕೆಲ್ಲಸ್ಕರ ಇವರು ಶ್ರೀ ಸೌ|| ಪ್ರಸಿದ್ಧಗ್ರಂಥಕರ್ತ್ರಿಯರಾದ ಗಿರಿಜಾಬಾಯಿ ಕೇಳಕರ ಇವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಬೇಕೆಂದು ಸೂಚಿಸಿದರು. ಸೌ|| ಲಕ್ಷ್ಮೀಬಾಯಿ ಟಿಕೇಕರ ಇವರು ಅನುಮೋದನವನ್ನಿತ್ತರು. ಸರ್ವಮಹಿಳೆಯರ ಕರತಾಡನದೊಡನೆ ಅಧ್ಯಕ್ಷಸ್ಥಾನವನ್ನು ವಹಿಸಿದರು. ಬಳಿಕ ಹೈದರಾಬಾದ್ ಮುಂಡಲ ಮಿರಜ ಶಹಪುರ ಕೊಲ್ಹಾಪುರ ಗೋಕಾಕ್ ಪುಣೆ ಈ ನಗರಗಳಿಂದ ಬಂದ ತಾರ ಮತ್ತೂ ಪತ್ರಿಕೆಗಳನ್ನು ಓದಿ ಹೇಳಿದರು. ನಾಗಾಬಾಯಿ ನಖಾತೆ ಸೌ|| ಸರಸ್ವತಿಬಾಯಿ ವಿಜಾಪುರೆ ಸೌ|| ಭಾಗೀರಥಿಬಾಯಿ ಕಟಾವ ಇವರು ಅವ್ವನವರ ಗುಣಕಥನಗಳನ್ನು ಬರೆದುತಂದ ನಿಬಂಧನಗಳಿಂದ ಓದಿದರು. ಸೌ|| ಲಕ್ಷ್ಮೀಬಾಯಿ ಟಿಕೇಕರ, ಕ್ರಿಶ್ಚನ್ ಸೌ|| ಸುಲೋಚನಬಾಯಿ ಶಾಲಾ ಮಾಸ್ತರಣಿ, ಯುರೋಪಿಯನ್ ಮಿಸ್ ಪಾವಲರ್ ಇವರು ಅವ್ವನವರಲ್ಲಿದ್ದ ದಯಾದಾಕ್ಷಿಣ್ಯಾದಿಗುಣಗೌರವವನ್ನು ಎಲ್ಲರಿಗೂ ತಿಳಿಯುವಂತೆ ಉಪನ್ಯಾಸಿಸಿದರು. ಬಳಿಕ ಅಧ್ಯಕ್ಷಿಣಿಯರು ಇದೇ ಮಂಟಪದಲ್ಲಿ ಇದೇ ಅಧ್ಯಕ್ಷಸ್ಥಾನವನ್ನು ಕಳೆದ ೨ ವರ್ಷಗಳಲ್ಲಿ ಕ್ರಮವಾಗಿ ಮಿಸ್ ಡಿಸೋಜಾ ಜಡ್ಜ ಮತ್ತು ಲೋಕಪ್ರಸಿದ್ಧರಾದ ಪುಣೆದ ಕೈ ಮಾಧವರಾವ ರಾನಡೆ ಜಡ್ಜ ಇವರ ಪ್ರಿಯಪತ್ನಿಯವರಾದ ರಮಾಬಾಯಿ ಇವರು ಸ್ವೀಕರಿಸಿದರು. ಇಂಥ ಸ್ಥಾನಕ್ಕೆ ವಿದ್ಯೆ ಮುಂತಾದ ಅಧಿಕಾರದಿಂದ ಅಷ್ಟು ಅರ್ಹಳಲ್ಲದಿದ್ದರೂ ತಮ್ಮಗಳ ಸ್ನೇಹಾಗ್ರಹಮೂಲಕ ಇದನ್ನುಸ್ವೀಕರಿಸಲು ಸಂತೋಷಿಸುತ್ತೇನೆ, ನಾವೆಲ್ಲರೂ ಇವರ ಪುಣ್ಯತಿಥಿಯ ಸಲುವಾಗಿ ಇಲ್ಲಿ ಕೂಡಿರುವದೆಂದರೆ ಕೇವಲ ಬಾಯಿಯವರ ಶ್ರೀಮಂತಿಕೆಯ ಗೌರವಕ್ಕೆಂದು ಯಾರೂ ತಿಳಿಯಕೂಡದು. ಶ್ರೀಮಂತಿಕೆಯು ದೃಶ್ಯವಸ್ತುವಿನಂತೆ ಕ್ಷಣಭಂಗುರವಾದುದು; ಬಾಯಿಯವರಲ್ಲಿದ್ದ ಉದಾರಗುಣಗಳೇ ಮುಖ್ಯಕಾರಣವು. ಅವುಗಳಲ್ಲಿ ಸ್ತ್ರೀಸಮಾಜವು ವಿದ್ಯೆಯಿಂದಲೂ ಕಲಾಕೌಶಲ್ಯದಿಂದಲೂ ಪುರುಷವರ್ಗದಂತೆ ಬೇಗನೆ ಮುಂದಕ್ಕೆಬರಬೇಕೆಂಬ ಉದಾರೇಚ್ಛೆಯಿಂದ ಅಹೋರಾತ್ರಿ ಅಶ್ರಾಂತಶ್ರಮಪಟ್ಟು ಸರಸ್ವತೀ ಮಂದಿರವನ್ನು ಸ್ಥಾಪಿಸಿ ಅದರ ಅಧ್ಯಕ್ಷತೆಯನ್ನು ಸರ್ವಸಮ್ಮತಿ ಮೇರೆಗೆ ತಾವು ವಹಿಸಿ ಅದರ ಪುರೋಭಿವೃದ್ಧಿಯನ್ನು ನಾನಾಬಗೆಯಿಂದ ಮಾಡಿದರು. ಭೂತದಯೆಯು ಅವರಲ್ಲಿ ಅನನ್ಯಸಾಧಾರಣವಾಗಿದ್ದಿತು. ಇಂಥ ಸದ್ಗುಣಶೀಲೆಯರು ಸ್ತ್ರೀ ಸಮಾಜದಲ್ಲಿ ಪ್ರಾದುರ್ಭವಿಸುವದು ಅತಿವಿರಲ. ಇವರ ಪಶ್ಚಾತ್ ಇವರಂತೆ ಶ್ರಮವನ್ನು ವಹಿಸುತ್ತಿದ್ದ ಸೌ|| ಲಕ್ಷ್ಮೀಬಾಯಿ ಕೆಲ್ಲಸ್ಕರ ಇವರು ಕೂಡಾ ಮೊನ್ನೆ ನಮ್ಮ ಕೈಬಿಟ್ಟು ಪರಲೋಕವನ್ನೈದಿದರು. ಇದರಿಂದ ಸರಸ್ವತೀ ಮಂದಿರಕ್ಕೆ ಉಂಟಾದ ಹಾನಿಯನ್ನು ಜಗದೀಶನು ಇನ್ನೊಂದು ಇಂಥ ವ್ಯಕ್ತಿಯನ್ನು ತೋರಿಸಿ ಬೇಗನೆಕಳೆಯಲಿ ಎಂಬುದೇ ಮೊದಲಾಗಿ ಭಾಷಣವನ್ನು ಮಾಡಿದರು. ಕಡೆಗೆ ಶ್ರೀ ಸೌ|| ಭಾಗೀರಥೀಬಾಯಿ ಪಾಟೀಲ ಇವರು ಎಲ್ಲಾ ನಾರೀಮಣಿಗಳಪರವಾಗಿ ಅಧ್ಯಕ್ಷೆಯರ ಆಭಾರವನ್ನು ಮಾನಿಸಿದರು. ಸಭೆಯು ಹೋದವರ್ಷಕ್ಕಿಂತಲೂ ಈ ವರ್ಷ ಬಹು ಸುಗಮವಾಗಿ ನೆರವೇರಿತು. ಈ ಸತ್ಕಾರ್ಯವು ಸುಗಮವಾಗಿ ನೆರವೇರುವದಕ್ಕೂ ಇದಕ್ಕೆ ಬಂದಿರುವ ಉತ್ತಮ ಶೋಭೆಗೂ ಶ್ರೀ ಸೌ|| ಭಾಗೀರಥೀಬಾಯಿ ಪಾಟೀಲ ಇವರ ಉದಾರವಾದ ಪರಿಶ್ರಮವೇ ಮುಖ್ಯಕಾರಣವೆಂದು ಸಭಿಕರು ತಿಳಿದರು.

ಓರ್ವಳು
ಸರಸ್ವತೀಮಂದಿರದ ಮೆಂಬರ, ಸೋಲಾಪುರ.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ
ಧಾತುಪೌಷ್ಟಿಕ ಲೇಹವು.

43

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯು ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಸರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪ್ರಕೋಪವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರ ಕಫ, ಉಂಟಾದವರು, ಮೂಲವ್ಯಾಧಿಯುವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ತಾಕತ, ಗುಪ್ತಪ್ರವೇಶಕ ಕೇಳಿ ಹುಟ್ಟುಗುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯದಿಂದ ಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತವೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೨–೮–೦. ೮೦ ತೊಲೆಗೆ ರೂಪಾಯಿ ೫ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ:—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

S.U.N.&Co
BENARES CITY.
KASHI
VISHWESHWAR.

4

ದೊಡ್ಡ ಕಂಪೆನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರಿಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯು. ಎನ್. ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

೧೯೧೫ ನೆಯ
ಶ್ರೀ ಸೀತಾರಾಘವ
ಪಾಕೆಟ್ ಡೈರಿಗಳು
ಬಿಕರಿಗೆ ಸಿದ್ಧವಾಗಿವೆ.

ಶಾಯಿ ಇಳಿಯದ ಉತ್ತಮವಾದ ಕಾಗದ ಮುದ್ದಾದ ಮುದ್ರಣ. ಅನೇಕವಾದ ಹೊಸಸಂಗತಿಗಳಿವೆ.

೧ ನಂ—ಸಣ್ಣಸೈಜು ಸಾದಾ	೦–೪–೦
೨ ನಂ—ಪೆನ್ಸಲ್‌ಮುಚ್ಚಳವುಳ್ಳುದು	೦–೬–೦
೩ ನಂ—ದೊಡ್ಡಸೈಜು ಸಾದಾ	೦–೬–೦
೪ ನಂ—ಪೆನ್ಸಲ್‌ಮುಚ್ಚಳವುಳ್ಳುದು	೦–೮–೦

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ

ಹೆಚ್ಚಾಗಿ ತರಿಸುವವರಿಗೆ ರೂಪಾಯಿ ೧ ಕ್ಕೆ ೦–೨–೦ ಕಮಿಷನ್ ದೊರೆಯುವುದು. ವಿಳಾಸ:—

ಶ್ರೀ ಸೀತಾರಾಘವ ವೈದ್ಯಶಾಲಾ,
3 ಮೈಸೂರು.

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೈಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳುಸಹಿತ ಆದ ಸಮಾರಂಭ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೊ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲ) ಕ್ರಯ ಫುಲ್ಲಸೈಜು ಬಣ್ಣದ್ದು ೧|| ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೊ ಸಿಕ್ಕುತ್ತವೆ ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.

ಹೊಸಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವ ಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಈಪ್ರಕಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ||, |||= , ೧, ೧|, ಪ್ರಕಾರ, ಮತ್ತೂ ಬೆಳ್ಳೀದು ರು ೧| ರೋಲ್ಡ ಗೋಲ್ಡು ಭಂಗಾರದ್ದು ಪುರ್ಬಿನ ಗ್ಲಾಸದೂ ಕ್ರಯ ೨||, ೨||| ರೂ.

ಪರಊರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ.

ನಮ್ಮವಿಳಾಸ— ಗಂಗಪ್ಪಾ ಜೀರಿಗೆ,
26 ಆರ್ಟಿಸ್ಟ್ ಸೊಲ್ಲಾಪುರ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ
ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸಾಂ
ಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು
3 . ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು—ಕೆಮ್ಮು—ನೆಗಡಿ—ದಿನಜ್ವರ—ಮೂರರಜ್ವರ ನಾಲ್ಕರಜ್ವರ— ಮಲೇರಿಯಾಜ್ವರ— ತಲೆನೋವು— ಮೈಕೈನೋವು ಮತ್ತು ಭಾರ—ಅರೋಚಕ ಹಲ್ಲುನೋವು—ಹೊಟ್ಟೆನೋವು—ಮಲಬಂಧ—ಅಜೀರ್ಣಭೇದಿ—ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳೆತ—ಹೊಟ್ಟೆಯುಬ್ಬರ—ಮಂದಜ್ವರ—ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ. ಛಾರ್ಜ ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಕೆ, ಮಲಬಂಧ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತತ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುಪುಷ್ಟಿಯಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜ ಪ್ರತ್ಯೇಕ.

ವಿಳಾಸ— ಬಿ ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.

ಮೈಸೂರ್ ರಾ||

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು:— ಚಂಡಮಾರುತ ೦–೨–೦; ಚರಿತಾವೃತಂ ೦–೫–೦; ರಾಜಕಥಾವಲ್ಲರಿ ೦–೫–೦; ಪೀಟರಿನಚರಿತ್ರೆ ೦–೨–೦; ವಿಯೋಗಿನಿ ೦–೩–೦; ಉನ್ಮತ್ತೆ ೦–೨–೬; ಸೀತೆ ೦–೫–೦; ಸಾಹಸಿಕೆ, ಕಲಾನಾಥ ೦–೮–೦; ಮಹಾಲಕ್ಷ್ಮಿ ೦–೬–೦; ತಾರಾಸುಂದರಿ ೦–೮–೦; ಪದ್ಮಿನಿ ೦–೨–೦; ಸತ್ಯಸಂಜೀವಿನಿ ೦–೮–೦; ಕೊಹಿನೂರು ೦–೧೨–೦; ಆನಂದಮಠ ೧–೦–೦; ರಾಧಾರಾಣಿ ೦–೩–೦; ಸೀತಾವನವಾಸ ೦–೧೨–೦; ರಜನಿ ೦–೧೨–೦. 55

ಊದಬತ್ತಿಗಳು.

ವಿಧವಿಧವಾದ ಊದುಬತ್ತಿಗಳು ಸೇರು ೧ ಕ್ಕೆ ೦–೧೨ ೫–೦–೦; ೩–೦–೦; ೨–೮–೦; ೧–೪–೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧–೦–೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹನೂಪ ಬೆಟ್ಟಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್ ಸನ್ಸ್
24 ಸುಗಂಧಕಾರಿ, ಮೈಸೂರು.

ನ್ಯಾಯದರ್ಪಣ. 37

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಿಸಿಪ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ಪತ್ರಿಕೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ. ಬೆಲೆ ರೂ. 1–8–0. ವಿ. ಪಿ. ಮೂಲ್ಯ 1–12–0.

ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

44 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧–೮–೦ (೫೧೨ ಪುಟ) ಟಪಾಲು ಹಾಸಲು ೪ ಆಣೆ ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧–೮–೦. (೫೭೬ ಪುಟ)

ಸಚಿತ್ರ ವಿದ್ಯಾಮಂಜರಿಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಕ್ಚಾತುರ್ಯವಿರಬೇಕೆನ್ನುವಿದ್ದರೆ, ಲೋಕರೀತಿಯನ್ನು ತಿಳಿಯಲಿಚ್ಛೆಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಲ್ಲಾಸೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೬೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ. ೧–೪–೦ ಟಪಾಲ್ ಹಾಸಲು ೩ ಆಣೆ. ಈಗಲೇ ಬರೆ ನಿಮ್ಮ. ನಮ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಾಲಾಮಿಸ್ರಿಯು ಕಾಬೂಲ್ ದೇಶದಲ್ಲಿ ಪೌಂಡು ೧ ಕ್ಕೆ ೧–೧೦–೦ ಇತ್ತು, ಈಗ ಪೌಂಡು ೧ಕ್ಕೆ ೩–೪–೦ ಆಗಿದೆ. ಆದ್ದರಿಂದ ಇದರಕ್ರಯ ೨–೧೦ ರೂಪಾಯಿ ಮಾಡಿರುತ್ತೆ. 11

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬಾ.

ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ವಿನ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬುಸ ಬರುವುದೂ, ತಲೆಯ ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು ಹಳೇ ನಲಿ ನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಸೇರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯ ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು.

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂ. ಬಹುಮಾನವಾಗಿ ಕೊಡಲ್ಪಡುವುದು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನದಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧ಕ್ಕೆ ರೂ. ೨–೧–೦. ಟಪಾಲ್ ಖರ್ಚು ಬೇರೆ. ಅನುಪಾನಪತ್ರಿಕೆ ಔಷಧದಸಂಗಡ ಇರುತ್ತೆ.
ಡಿ. ಮನ್ನಾಲಾಲ್, 5 ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.
ನಮ್ಮ ಏಜಂಟರು–ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು. 22



ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸಜ್ಜುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ— ೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೦ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮಾರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಪೊಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೆಹುಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧ . .

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಮ ವೈದ್ಯಶಾಲಾ. ಮೈಸೂರು

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದರೂ ತಪ್ಪದೆ ಗುಣವಾಗುತ್ತದೆ. ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚುಟಿಕೆ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡರ್ಜ ಡಬ್ಬಿಗೆ ೨–೨–೦

ಉತ್ತಮವಾದ ನಶ್ಯದಪುಡಿ.

ಧಾತು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨–೮–೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡರ್ಜ ಡಬ್ಬಿಗಳಿಗೆ ೧–೧೪–೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಸೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್
33 ಕೊಳ್ಳೇಗಾಲದ ತಾಲ್ಲೂಕು.

೧೯೧೪ನೆಯಇಸವಿ ಅಕ್ಟೋಬರ್ ತಾ॥೧೮ರಿಂದ ೧೯೧೪ನೆಯ ಅಕ್ಟೋಬರ್ ತಾ॥ ೨೪ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ಆಶ್ವಯುಜ ಬ॥ ಚತುರ್ದಶಿಯಿಂದ ಕಾರ್ತಿಕ ಶು॥ ಷಷ್ಠಿ ವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ತೇದಿ ತುಲಾ
18	¹ಭಾನು	ಚತು	20-43	ಹಸ್ತ	37-53	2
19	²ಸೋ	ಅಮಾ	15-0	ಚಿತ್ತ	33-51	3
20	³ಮಂ	ಪಾ	9-1	ಸ್ವಾತಿ	29-37	4
21	⁴ಬುಧ	ಬಿ	3-7	ಅನು	54-2	5
22	ಗುರು	ಚಾ	51-26	ಅನೂ	21-29	6
23	ಶುಕ್ರ	ಪಂ	46-25	ಜ್ಯೇಷ್ಠ	18-0	7
24	⁵ಶನಿ	ಷಷ್ಠಿ	42-8	ಮೂಲ	15-5	8

(1) ತಿಥಿದ್ವಯ, ಸರ್ವತ್ರಾಮಾವಾಸ್ಯಾ, ಕೇದಾರೇಶ್ವರವ್ರತಂ, ಅಮೃತಸಿದ್ಧಿಯೋಗಃ. (2) ರಕ್ತಾಂ, ಪ್ರಥಮಾತಿಥಿಃ, ಬಲೀಂದ್ರಪೂಜಾ, ಪದ್ಮಕಃ. (3) ರಾವೆ, ಚಂದ್ರೋದಯಃ, ದೀಪಾವಳಿಃ, ಕಾಮಧೇನುಪೂಜಾ, ಜಿಲ್ಲೀಜ್ ಚಂ ೧. (4) ಶುಕ್ರಾಂ, ರಾಲ, ಅವಮಃ, ಶ್ರೀರಂಗದಲ್ಲಿ ತೋಲೋತ್ಸವಾರಂಭಃ, ದಗ್ಧಯೋಗಃ. (5) ಜೇಯರ್ ತಿರುನಕ್ಷತ್ರಂ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED, NO M 124

ಮೈಸೂರ್ ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧–೦–೦

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ।
ಸಿಮಾತೀತ ಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಕಾನುಕಂಪೋಜ್ವಲಂ।

ಅಂಚೆವೆಚ್ಚ ಸೇರಿ ೧–೧೪–೦

REGISTERED, NO M 124

ಸಂಪುಟ ೨೩) ಮೈಸೂರ ಸ್ಟಾರ್ ಸ ೧೯೧೪ ನೆಯ ಇಸವಿ ಅಕ್ಟೋಬರ್ ತಾರೀಖು ೨೫ನೆಯ ಭಾನುವಾರ. (ಸಂಚಿಕೆ ೪೩

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಈಗತಾನೇ ಸೀಮೆಯಿಂದ ಬಂದಿರತಕ್ಕ ರಖಿಂವಾರ್ ವಾಚ್‌ಗಳ ಕ್ರಯದಪಟ್ಟಿ. 37



೧ ರಾಸ್ಕೋಪ್ ಸಿಲ್ವರ್ ಪೇಟೆಂಟ್ ಸ್ವಿಸ್ ಮೇಡ್ ವಾಚ್	೧ ಕ್ಕೆ	೨–೮–೦
೨ ಗರ್ಟೈಂ ರೈಲ್ವೇ ರೆಗ್ಯುಲೇಟರ್ ವಾಚ್	೧ ಕ್ಕೆ	೩–೮–೦
೩ ಡಿಟೋ ನಮೂನೆ ಚೆಕ್ಕಸೈಜ್ ವಾಚ್	೧ ಕ್ಕೆ	೪–೪–೦
೪ ಡಿಟೋ ಚಿಕ್ಕಸೈಜ್ ಸ್ಪೆಷಲ್ ಸರ್ವಿಸ್ ವಾಚ್	೧ ಕ್ಕೆ	೫–೮–೦
೪ ಜರ್ಟಲ್‌ಮೆರ್ ಡ್ರೆಸ್ ವಾಚೆಂಬ ಅತ್ಯುತ್ತಮವಾದ ಲೀವರ್ ವಾಚ್	೧ ಕ್ಕೆ	೮–೧೨–೦
೫ ಡಿಟೋ ನಮೂನೆ ಕೆಂಪುಗಳನ್ನು ಕೆತ್ತಿರುವ ವಾಚ್	೧ ಕ್ಕೆ	೯–೪–೦
೬ ಪೀಕಾಕ್ ವಾಚೆಂಬ ತೆಳುವಾದ ಮತ್ತೂ ಗ್ಯಾರೆಂಟಿಯಾದ ವಾಚ್ (ಸಾವಿರಾರು ವಿಕ್ರಯ)	೧ ಕ್ಕೆ	೧೦–೮–೦
೭ ವಾರಕೊಂದಾವರ್ತಿ ಬೀಗಕೊಡುವ ನಿಕ್ಕಲ್ ಬೆಳ್ಳೀಕೇಸ್ ವಾಚ್	೧ ಕ್ಕೆ	೧೦–೮–೦
೮ ಡಿಟೋ ನಮೂನೆಯಲ್ಲಿ ಅಚ್ಚಬೆಳ್ಳೀಕೇಸಿನ ಚಿಕ್ಕ ಸೈಜ್ ವಾಚ್	೧ ಕ್ಕೆ	೧೫–೪–೦
೯ ೩೦ ಘಂಟೆಗೆ ಒಂದಾವರ್ತಿ ಬೀಗಕೊಡುವ ದೊಡ್ಡ ಬರ್ಮಾಟೈಂಪೀಸ್	೧ ಕ್ಕೆ	೧–೪–೦
೧೦ ಡಿಟೋ ನಮೂನೆ ಅಲಾರಂ ಟೈಂಪೀಸ್	೧ ಕ್ಕೆ	೨–೪–೦
೧೧ ಡಿಟೋ ನಮೂನೆಯಲ್ಲಿ ಘಂಟೆ ನಿಮಿಷ ಸೆಕೆಂಡ್ ತೋರಿಸಿ ಅಲಾರಂ ಇದ್ದು ತಾರೀಖು ಸಹ ತೋರಿಸುವ ದೊಡ್ಡ ಟೈಂಪೀಸ್	೧ ಕ್ಕೆ	೩–೪–೦
೧೨ ಖಾತ್ರಿಯಾದ ಅನ್‌ಸೋನಿಯಾ "ಬಿ" ಟೈಂಪೀಸ್	೧ ಕ್ಕೆ	೨–೮–೦
೧೩ ಡಿಟೋ ಕಂಪೆನಿಯ ಅಲಾರಂಟೈಂಪೀಸ್ (ಬಹಳಮಜಬೂತಾದ್ದು) (ಸಾವಿರಾರುವಿಕ್ರಯ)	೧ ಕ್ಕೆ	೩–೮–೦
೧೪ ಅನ್‌ಸೋನಿಯಾ ಕಂಪೆನಿಯಲ್ಲಿ ತಯಾರಾದ ಘಂಟೆ, ಅರ್ಧ ಘಂಟೆ ಹೊಡೆದು ಅಲಾರಂ ಇರತಕ್ಕ ದೊಡ್ಡಟೈಂಪೀಸ್ (ಅನೇಕಜನ ವಿದ್ಯಾರ್ಥಿಗಳು ಇದನ್ನೇ ಉಪಯೋಗಿಸುತ್ತಲಿದ್ದಾರೆ)	೧ ಕ್ಕೆ	೬–೧೨–೦
೧೫ ಘಂಟೆ, ಅರ್ಧಘಂಟೆ ಹೊಡೆಯುವ ಕ್ಯಾರೇಜ್ ಕ್ಲಾಕೆಂಬ ಟೇಬಿಲ್ ಘಡಿಯಾರ	೧ ಕ್ಕೆ	೪–೧೨–೦
೧೬ ಡಿಟೋ ನಮೂನೆಯಲ್ಲಿ ಘಂಟೆ, ಅರ್ಧಘಂಟೆಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್	೧ ಕ್ಕೆ	೫–೪–೦
೧೭ ಡಿಟೋ ನಮೂನೆಯಲ್ಲಿ ಘಂಟೆಹೊಡೆಯುವದಕ್ಕೆ ಪ್ರತಿಯಾಗಿ ಗಾನಹಾಡುವ ಕ್ಲಾಕ್	೧ ಕ್ಕೆ	೫–೮–೦
೧೮ ಡಿಟೋ ನಮೂನೆಯಲ್ಲಿ ತಾವಿಷ್ಟಪಟ್ಟ ಟೈಂಮಿಗೆ ಕಾಲುಘಂಟೆಕಾಲ ಕರ್ಣಾನಂದವಾಗುವಂತೆ ಮೃದುಮಧುರ ಗಾನಮಾಡತಕ್ಕ ಕ್ಲಾಕ್	೧ ಕ್ಕೆ	೫–೮–೦
೧೯ ಅನ್‌ಸೋನಿಯಾ ಕಂಪೆನಿಯ ಲಿವರ್ ಕ್ಲಾಕೆಂಬ ಗೋಡೆಗೆ ತಗಲಿಸುವ (೮ ಮೂಲೆಯ) ಅಷ್ಟಕೋಣಾಕೃತಿಯ ಚಿಕ್ಕಸೈಜ್ ಕ್ಲಾಕ್	೧ ಕ್ಕೆ	೬–೮–೦

ಈ ಪತ್ರಿಕೆಯ ಚಂದಾದಾರರಿಗೂ ಸ್ಕೂಲ್‌ಮಾಸ್ಟರ್‌ಗಳಿಗೂ ವಿನಂತಿ.

೧೯೧೫ ನೇ ಇಸ್ವಿಯ ಸಚಿತ್ರ ಕ್ಯಾಲೆಂಡರ್‌ಗಳು ಬಿಕರಿಗೆ ಸಿದ್ಧವಾಗಿವೆ ಕ್ರಯ ೧ ಕ್ಕೆ ೦–೦–೬ ಪೈ. ೫೦ ಕ್ಕೆ ೮–೧೧–೦ಆಣೆ ೧೦೦ ಕ್ಕೆ ೧–೫–೦ ಪ್ಯಾಕಿಂಗ್ ಪೋಸ್ಟೇಜು ಮಾಫಿ ೫೦ ಕ್ಯಾಲೆಂಡರ್‌ಗಳಿಗಿಂತಲೂ ಕಡಿಮೆಯಾಗಿ ಪೋಸ್ಟುಮೂಲಕ ರವಾನಿಸಲಾಗುವುದಿಲ್ಲ.

ಈ ಕ್ಯಾಲೆಂಡರಿನಲ್ಲಿ ಇಂಗ್ಲೀಷ್ ಮತ್ತೂ ಕನಡ ತಿಂಗಳೂ, ತಾರೀಖು, ವಾರ, ತಿಥಿ, ನಕ್ಷತ್ರ, ಆಯಾಯ ದಿವಸದ ವಿಶೇಷ ದಿವಸಗಳು ವಿಶಿಷ್ಟ ಹಬ್ಬ ದಿವಸಗಳೂ ಇರುವುದಲ್ಲದೆ **ಮೈಸೂರ್ ಮಹಾರಾಜರವರ ಮತ್ತೂ ಯುವರಾಜರವರ ಭಾವಚಿತ್ರಗಳೂ ಮತ್ತೂ ಮೈಸೂರ್ ಸಂಸ್ಥಾನದ ಈಗಿನ ಹೊಸ ಅರಮನೆಯಲ್ಲಿ ನಡೆಯುವ ನವರಾತ್ರಮಹೋತ್ಸವದ ದರ್ಬಾರ್** ಸಹಿತ ಇರುವ ನಕ್ಷೆಯನ್ನೂ ಸಹ ನುಣುಪಾದ (ಗ್ಲೇಜ್‌ಪೇಪರ್) ಕಾಗದದಲ್ಲಿ ಅಂದವಾಗಿ ಪ್ರಿಂಟ್‌ಮಾಡಿಸಿ ಮೇಲ್ಕಂಡ ದರದಂತೆ ಬಹುಸುಲಭಬೆಲೆಗೆ ಕೊಡುತ್ತಲಿದ್ದೇವೆ ಯಾದಕಾರಣ ಈ ದಿವಸವೇ ಆರ್‌ಡರ್ ಕೊಟ್ಟು ತರಿಸಿಕೊಳ್ಳಿರಿ ಸ್ವಲ್ಪ ಪ್ರತಿಗಳುಮಾತ್ರ ಉಳಿದಿವೆ. ಬಿಕರಿಯಾದನಂತರಬರತಕ್ಕ ಆರ್‌ಡರ್‌ಗಳನ್ನೆಲ್ಲಾ ಹೋದವರುಸುದಂತೆ ಕ್ಯಾನ್ಸಲ್‌ಮಾಡಲಾಗುತ್ತೆ.

ರಖಿಂವಾರ್ ವಾಚ್ ಸರಪಣಿಗಳು.

ನಿಕ್ಕಲ್ ಬೆಳ್ಳಿಯ ವಾಚ್‌ಸರಪಣಿ	೧ ಕ್ಕೆ	೦–೧೨–೦
ಅಚ್ಚಬೆಳ್ಳಿಯ ಜೇಬಿನ ವಾಚ್‌ಸರಪಣಿ	೧ ಕ್ಕೆ	೩–೪–೦
ಅಚ್ಚಬೆಳ್ಳಿಯ ಕೊರಳಸರಪಣಿ	೧ ಕ್ಕೆ	೧–೪–೦
೧೮ ಕ್ಯಾರಟ್ಟು ಚಿನ್ನದ ವಾಚ್‌ಸರಪಣಿ	೧ ಕ್ಕೆ	೫–೮–೦
ವಾಚಿನ ಸರಪಣಿ ತುದಿಯಲ್ಲಿ ಹಾಕುವ ಅಚ್ಚಬೆಳ್ಳಿಯ ಶಾಶ್ವತವಾದ ಕ್ಯಾಲೆಂಡರ್ ಅಂದರೆ ಎಷ್ಟು ವರುಷಗಳ ವರಿಗಾದರೂ ತಾರೀಖು ನೋಡಬಹುದಾದ ಕ್ಯಾಲೆಂಡರ್ ಎಂದೆಂದಿಗೂ ಕೆಡತಕ್ಕದ್ದಲ್ಲಾ	೧ ಕ್ಕೆ	೧–೧೨–೦
ಡಿಟೋ ನಮೂನೆಯಲ್ಲಿ ೧೮ ಕ್ಯಾರಟ್ಟು ಚಿನ್ನದಿಂದ ತಯಾರಿಸಿದ್ದು	೧ ಕ್ಕೆ	೩–೪–೦

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ಒಂದುಸಾರಿ ಶಾಯಿತುಂಬಿದರೆ ೧೦,೦೦೦ ಶಬ್ದಗಳನ್ನು ಬರೆಯಬಹುದಾದ ಲೇಖಣಿಗಳು.

ಪ್ರತಿಯೊಂದಕ್ಕೂ ೧೪ ಕ್ಯಾರಟ್ಟು ಚಿನ್ನದ ನಿಬ್ಬು ಹಾಕಿದೆ

ನೆಪ್ಚೂನ್ ೨೦೦ನೇ ನಂ. ಪೆನ್	೧ ಕ್ಕೆ	೧–೧೪–೦
ನೆಪ್ಚೂನ್ ೨೦೫ ನೇ ನಂ. ಪೆನ್	೧ ಕ್ಕೆ	೨–೧೦–೦
ನೆಪ್ಚೂನ್ ೨೧೦ ನೇ ನಂ. ಪೆನ್	೧ ಕ್ಕೆ	೪–೨–೦

ಪ್ರತಿಯೊಂದು ಪೆನ್ ತರಿಸಿ ಕೊಳ್ಳುವರಿಗೂ ೪ ಪದಾರ್ಥಗಳನ್ನು ಮುಫತ್ತಾಗಿ ರವಾನಿಸುತ್ತೇವೆ.
೧ ಪೆನ್‌ಗಳನ್ನಿಡತಕ್ಕ ಸುಂದರವಾದ ಪೆಟ್ಟಿಗೆ ೧.
೨ ಪೆನ್ನಿಗೆ ಶಾಯಿಹಾಕುವ ಗಾಜಿನಕೊಳವೆ ೧.
೩ ಪೆನ್‌ಗಳನ್ನು ಕ್ಲೀನ್‌ಮಾಡುವ ವಿಧಾನ ಮತ್ತೂ ಶಾಯಿಹಾಕುವ ವಿಧಾನ ಪ್ರಿಂಟಾಗಿರುವ ಚೀಟಿ ೧.
೪ ಪೆನನ್ನು ಜೇಬಿಗೆತಗಲಿಸುವ ಸುಂದರವಾದ ಕ್ಲಿಪ್ ೧.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧–೦–೦
ಪರವಾದಿಗಜಾಂಕುಶತಾರಾವಳಿ	೦–೮–೦
ಶಿವಪೂಜಾವಿಧಿಃ	೦–೮–೦
ಚಾರುಶೀಲೆಚರಿತ್ರೆ	೦–೫–೦
ಸಟೀಕ ನಂದೀವ್ರತ	೦–೪–೦
ಸಟೀಕ ವಿವಾಹವಿಧಿ	೦–೬–೦
ವಿವೇಕಮಂಜರಿ [೨ನೆಯ ಭಾಗ]	೦–೩–೦
ವ್ರತಪಂಚಕ	೦–೨–೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ)	೦–೨–೦
ಗುರುಶಂಕರೇಶ್ವರಶತಕಂ	೦–೧–೦

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

156

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೩೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ ಬೆಲೆ ೧–೮–೦.

ರೇವಣ ಸಿದ್ಧೇಶ್ವರ ಪುರಾಣಂ— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ— ಬೆಲೆ ೧ ೪–೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧–೮–೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧ ೩–೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ.— ಬೆಲೆ ೧–೩–೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧–೩–೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧–೩–೦

ಸೌಂದರಪುರಾಣಂ— ೧–೩–೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕಮಂಡಲಿ, ಮೈಸೂರು.

A Transit of Mercury across the Sun's disc.

ಬುಧಸಂಕ್ರಮವೆಂಬ ಸೂರ್ಯಗ್ರಹಣವು

೧೯೧೪ನೆಯ ಇಸವಿ ನವಂಬರ್ ತಾರೀಖು ೭ನೆಯ ಶನಿವಾರ ಮಧ್ಯಾಹ್ನಾನಂತರ ಸೂರ್ಯಬಿಂಬದ ದಕ್ಷಿಣಾರ್ಧಭಾಗದಲ್ಲಿ, ಒಂದು ಸಣ್ಣಮಸಿಯ ಬೊಟ್ಟು ಸೂರ್ಯನ ಆಗ್ನೇಯಭಾಗದಲ್ಲಿ ಕಾಣಿಸಿಕೊಂಡು ನೈಋತ್ಯದ ಕಡೆಗಾಗಿ ಪ್ರಯಾಣಮಾಡುವುದನ್ನು ನೋಡಬಹುದು. ಈ ಕಪ್ಪುಬಿಂದುವನ್ನು ಬುಧಗ್ರಹವೆಂದು ತಿಳಿಯಬೇಕು. ಸೂರ್ಯಬಿಂಬವು ಚಂದ್ರಬಿಂಬದಿಂದ ಮರೆಯಾದಾಗ ಸೂರ್ಯಗ್ರಹಣವು ಪ್ರಾಪ್ತವಾಗುವಂತೆ, ಈಗ ಬುಧಬಿಂಬವು ರವಿಬಿಂಬದ ಒಂದು ಭಾಗವನ್ನು ಮರೆಮಾಡಿ ಸೂರ್ಯಗ್ರಹಣವನ್ನುಂಟುಮಾಡುವುದು. ಇಂಥ ಖಗೋಳವೈಚಿತ್ರ್ಯಗಳನ್ನು ನಿರ್ಣೈಸಲು ನಮ್ಮ ಪ್ರಾಚೀನಸಿದ್ಧಾಂತಗಳಿಗೆ ಸಾಧ್ಯವಾಗಿಲ್ಲ. ನಮ್ಮದೇಶದ ಪಂಚಾಂಗಗಳೆಲ್ಲಾ ಬಹಳಮಟ್ಟಿಗೆ ಸ್ಥೂಲವಾಗಿರುವುದರಿಂದ, ಈ ಬುಧಸಂಕ್ರಮದ ಸಮಯದಲ್ಲಿ ಬುಧನಿಗೂ ಸೂರ್ಯನಿಗೂ ಬಹಳ ಅಂತರವನ್ನು ಸೂಚಿಸುವುವು. ಅವುಗಳ ಪ್ರಕಾರ ನವಂಬರ್ ೫ನೆಯ ತಾರೀಖಿನಲ್ಲಿ ಬುಧಸಂಕ್ರಮವಾಗುವಂತೆ ಗೊತ್ತಾಗುವುದು. ಇಷ್ಟು ದೊಡ್ಡ ವ್ಯತ್ಯಾಸವು ಖಗೋಳ ವೈಚಿತ್ರ್ಯಗಳ ಸಮಯಗಳನ್ನು ನಿರ್ಣೈಸುವುದರಲ್ಲಿ ನಿಷ್ಪ್ರಯೋಜನವಾಗುವುದು. ಈ ಕಾಲದಲ್ಲಿ ಜನರು ಸ್ಥೂಲಕ್ರಮಗಳನ್ನು ಬಿಟ್ಟು ಸೂಕ್ಷ್ಮಕ್ರಮಗಳನಿಚ್ಛೈಸುವ ಕಾರಣ, ಇವರಿಗೆ ಪ್ರತ್ಯಕ್ಷವಾಗಿ ತೋರುವ ದೃಕ್ಸಿದ್ಧಪಂಚಾಂಗಗಳನ್ನು ಒದಗಿಸುವುದು ಪಂಚಾಂಗಕರ್ತರ ಕರ್ತವ್ಯವಾಗಿದೆ. ನಮ್ಮ ಸಿದ್ಧಾಂತಪಂಚಾಂಗಗಳಲ್ಲಿ ದಿನಗಟ್ಟಳೆಯ ವ್ಯತ್ಯಾಸಗಳೇ ತೋರುವಾಗ, ಗಳಿಗೆ ವಿಗಳಿಗೆಗಳ ವ್ಯತ್ಯಾಸಗಳು ಅಪರಿಮಿತವಾಗಿರುವುವೆಂಬುದನ್ನು ಹೇಳಬೇಕಾದುದೇ ಇಲ್ಲ. "ಪ್ರತ್ಯಕ್ಷಂ ಜ್ಯೋತಿಷಂಶಾಸ್ತ್ರಂ" ಎಂಬ ವಾಕ್ಯಾನುಸಾರ ಪಂಚಾಂಗದಲ್ಲಿ ಬರೆಯುವ ವಿಷಯಗಳೆಲ್ಲಾ ದೃಕ್ಸಿದ್ಧವಾಗಿರಬೇಕು. ಈಗ ಇಂಥ ಒಂದು ದೃಗ್ಗಣಿತವು ವಿಧಿ, ಉದಾಹರಣೆಗಳ ಸಮೇತವಾಗಿ ಕರ್ನಾಟಕಭಾಷೆಯಲ್ಲಿ ಮುದ್ರಿತವಾಗಿ ಸಿದ್ಧವಾಗಿದೆ. ಇದನ್ನನುಸರಿಸಿ ಪಂಚಾಂಗವನ್ನು ಪ್ರಕಟಿಸುವುದಾದರೆ ಖಗೋಳ ವೈಚಿತ್ರ್ಯಗಳೆಲ್ಲಾ ನಿರ್ಣೈಸಿದ ಸಮಯಕ್ಕೆ ಸರಿಯಾಗಿ ದೃಗ್ಗೋಚರವಾಗುವುದರಲ್ಲಿ ಸಂದೇಹವಿಲ್ಲ. ಈ ದಿನ ರವಿಬಿಂಬದಕಲೆ ೩೨-೧೮ ಬುಧಬಿಂಬದ ವಿಕಲೆ ೧೦. ರವಿಬಿಂಬಕ್ಕೂ, ಬುಧಬಿಂಬಕ್ಕೂ ಇರುವ ಈ ದೊಡ್ಡ ವ್ಯತ್ಯಾಸವನ್ನು ನೋಡಲಾಗಿ ರವಿಬಿಂಬದಲ್ಲಿ ಬುಧಬಿಂಬವು ರವಿಯ ೨೦೦ ರಷ್ಟು ಕಡಮೆಯಾದ ವ್ಯಾಸವನ್ನು ಸೂಚಿಸುವುದು. ಆದ ಪ್ರಯುಕ್ತ ಈ ಬುಧಸಂಕ್ರಮವನ್ನು ದೂರದರ್ಶಕಯಂತ್ರದಿಂದ ನೋಡಬೇಕು. ದುರ್ಬೀನಿನ ನೋಡುವ ಕನ್ನಡಿಯನ್ನು ಕರ್ಪೂರದ ಹೊಗೆ ಹಿಡಿದು ಹದವಾಗಿ ಕಪ್ಪುಮಾಡಿ, ನಂತರ ಸೂರ್ಯನನ್ನು ದೃಷ್ಟಿಸಬೇಕು. ಇಲ್ಲವಾದರೆ ಕಣ್ಣಿಗೆ ಅಪಾಯವಾಗುವುದು. ಅಥವಾ ಕಣ್ಣಿಗೂ ದುರ್ಬೀನಿಗೂ ಮಧ್ಯೆ ಕೆಂಪುಗಾಜನ್ನಿಟ್ಟು ನೋಡಬಹುದು.

ಸ್ಪರ್ಶಕಾಲ	ಮಧ್ಯ	ಮೋಕ್ಷ
ಘಂಟೆ-ನಿಮಿಷ	ಘಂಟೆ-ನಿಮಿಷ	ಘಂಟೆ-ನಿಮಿಷ
೩—೨೯	೫—೩೩	೭—೩೯



ಈ ಚಿತ್ರದಿಂದ ಸೂರ್ಯಬಿಂಬದಲ್ಲಿ ಸ್ಪರ್ಶಮೋಕ್ಷಸ್ಥಾನಗಳನ್ನು ತಿಳಿಯಲು ಸಾಧ್ಯವಾಗುವುದು.

ಸಿ. ಚಿಕ್ಕಣ್ಣ, ಅಸ್ಟ್ರನಮರ್
ಸವಾಯಿಮಂಡಿ, ಮೈಸೂರು.

ಜರ್ಮನರ ಅಸಾಧಾರಣದೇಶಾಭಿಮಾನಸೂತ್ರಗಳು.

ಜರ್ಮನ್ ಪ್ರಭುತ್ವದವರು ಈ ಕೆಳಗೆ ಕಾಣುವ ೧೦ ನಿಯಮಗಳನ್ನು ಅಚ್ಚುಹಾಕಿಸಿ ತಮ್ಮ ದೇಶದಲ್ಲೆಲ್ಲಾ ಕಳೆದ ಮೂರುವರ್ಷಗಳಿಂದಲೂ ಹಂಚಿದ್ದಾರೆ. ಇದನ್ನು ಪ್ರತಿಯೊಬ್ಬ ದೇಶೀಯರೂ ಗಮನಿಸಿದರೆ ಉದ್ಧಾರಗೊಳ್ಳಬಹುದು.

೧. ನೀವು ಯಾವಾಗ ಹಣವನ್ನು ವೆಚ್ಚಮಾಡಬೇಕಾಗಿ ಬಂದರೂ ನಿಮ್ಮ ದೇಶೀಯರಿಗೆ ನಷ್ಟವಾಗುವಂತೆ ವೆಚ್ಚಮಾಡಬೇಡಿ.

೨. ನೀವು ವಿದೇಶದ ವಸ್ತುಗಳನ್ನು ಕೊಳ್ಳುವಾಗಲೆಲ್ಲಾ ನಿಮ್ಮದೇಶಕ್ಕೆ ನಷ್ಟವಾಗುವುದೆಂಬ ಸಂಗತಿಯನ್ನು ಮರೆಯಬೇಡಿ.

೩. ನಿಮ್ಮ ಹಣದಿಂದ ಜರ್ಮನರಿಗೆಹೊರತು ಇತರ ದೇಶೀಯರಿಗೆ ಲಾಭವಾಗಕೂಡದು.

೪. ಜರ್ಮನಿದೇಶದ ಯಂತ್ರಾಲಯಗಳನ್ನು ವಿದೇಶಿಯ ಯಂತ್ರಸಾಮಗ್ರಿಗಳಿಂದ ಯಾವಾಗಲೂ ಅಪವಿತ್ರಗೊಳಿಸಬೇಡಿ.

೫. ಇತರದೇಶದಿಂದ ಬಂದಿಳಿಯುವ ಆಹಾರ್ಯಪದಾರ್ಥಗಳನ್ನು ಭುಂಜಿಸಬೇಡಿ.

೬. ಜರ್ಮನ್ ಕಾಗದದಮೇಲೆ ಜರ್ಮನ್ ಲೇಖನಿಯಿಂದಲೇ ಬರೆಯಿರಿ. ಜರ್ಮನ್ ದೇಶದ ಕಾಗದವನ್ನೇ ಉಪಯೋಗಿಸಿರಿ.

೭. ಜರ್ಮನ್ ದೇಶದ ಹಣ್ಣುಹಂಪಲು, ಜರ್ಮನ್ ದೇಶದ ಧಾನ್ಯದಹಿಟ್ಟು, ಜರ್ಮನ್ ಸಾರಾಯಿ— ಇವುಗಳೇ ನಿಮ್ಮ ಶರೀರಕ್ಕೆ ನಿಜವಾದ ಜರ್ಮನ್ ಜೀವಕಳೆಯನ್ನು ಉಂಟುಮಾಡುವುವು.

೮. ಜರ್ಮನಿಯಲ್ಲಿ ಆಗುವ ಕಾಫಿಯಲ್ಲಿ ನಿಮಗೆ ಇಷ್ಟವಿಲ್ಲದೆ ಹೋಗುವ ಪಕ್ಷಕ್ಕೆ ಜರ್ಮನ್ ಸಾಮ್ರಾಜ್ಯಕ್ಕೆ ಸೇರಿದ ಅಧಿನಿವೇಶಗಳಿಂದ ಬರುವ ಕಾಫಿಯನ್ನಾದರೂ ಉಪಯೋಗಿಸಿರಿ.

೯. ಜರ್ಮನ್ ಬಟ್ಟೆಗಳನ್ನೂ ಜರ್ಮನ್ ಟೋಪಿಗಳನ್ನೂ ಮಾತ್ರವೇ ಉಪಯೋಗಿಸಿರಿ.

೧೦. ಪರದೇಶದವರು ಎಷ್ಟೆಷ್ಟು ಉಬ್ಬಿಸುವ ಮಾತುಗಳನ್ನಾಡಿದರೂ ಈ ಮೇಲೆಕಂಡ ನಿಯಮಗಳನ್ನು ಮೀರಿ ಹೋಗಬೇಡಿ. ಯಾರು ಎಷ್ಟು ಬೋಧಿಸಿದರೂ ಜರ್ಮನರಿಗೆ ಜರ್ಮನಿಯ ಪದಾರ್ಥಗಳೇ ಘನವಾದುವುಗಳೆಂಬ ಸಂಗತಿಯನ್ನು ಮಾತ್ರ ಯಾವಾಗಲೂ ಸ್ಮರಿಸಿಕೊಳ್ಳುತ್ತಿರಿ.

ಯುದ್ಧದ ಹಡಗುಗಳಲ್ಲಿಡಲ್ಪಟ್ಟಿರುವ ದೊಡ್ಡ ಫಿರಂಗಿಗಳು.

ಮೂತಿಯಲ್ಲಿ ಅಡ್ಡರೇಖೆ ೧೨ ಅಂಗುಲದಷ್ಟಿರುವ ಇಂಗ್ಲೀಷರ ಫಿರಂಗಿಗೆ ಉಪಯೋಗಿಸತಕ್ಕ ಗುಂಡಿನ ತೂಕವು ೮೫೦ ಪೌಂಡ್ ಇರುವುದು. ಫಿರಂಗಿಯು ೪೩೦೦೦ ಅಡಿ ಟನ್ನಿನ ಭಾರವುಳ್ಳುದಾಗಿರುವುದು. ಅದರಗುಂಡು ೩೦೦೦ ಗಜದ ದೂರ ಹೋಗಿ ಉಕ್ಕಿನತಗಡಿಗೆ ಬಡಿದು ೧೧॥ ಅಂಗುಲದಷ್ಟುಗಲದ ರಂಧ್ರವನ್ನು ಬೀಳಿಸಬಲ್ಲುದು.

ಅವೇ ೧೨ ಅಂಗುಲದ ಅಗಲದ ಬಾಯಿಯ ಮತ್ತೊಂದು ತೆರದ ಇಂಗ್ಲೀಷು ಫಿರಂಗಿಯ ಗುಂಡು ೬೫೦ ಪೌಂಡ್ ತೂಕವೂ, ಫಿರಂಗಿಯು ೫೦೦೦೦ ಅಡಿ ಟನ್ನುಗಳ ಭಾರವೂ ಉಳ್ಳುದಾಗಿ, ಅದರಗುಂಡು ೧೦೦೦೦ ಗಜದ ದೂರಹೋಗಿ, ಕಬ್ಬಿಣದ ತಗಡಿಗೆ ಬಡಿದು ೯ ಅಂಗುಲದ ರಂಧ್ರವನ್ನು ಬೀಳಿಸಬಲ್ಲುದು.

೧೩॥ ಅಂಗುಲದ ಬಾಯಿಯ ಇಂಗ್ಲೀಷ್ ಫಿರಂಗಿಯು ೫೩೦೦೦ ಅಡಿ ಟನ್ನುಗಳ ಭಾರವುಳ್ಳುದಾಗಿರುವುದು. ಅದರ ಗುಂಡು ೧೨೫೦ ಪೌಂಡುಗಳ ತೂಕವುಳ್ಳುದಾಗಿ, ಅದು ೩೦೦೦ ಗಜಗಳ ದೂರಹೋಗಿ ೧೧ ಅಂಗುಲದ ಮಂದದ ಕಬ್ಬಿಣದ ತಗಡಿನಲ್ಲಿ ರಂಧ್ರವನ್ನು ಕೆಡಹುವುದು.

೧೧ ಅಂಗುಲದಗಲದ ಬಾಯಿಯ ಜರ್ಮನರ ಫಿರಂಗಿಯು ೪೫೦೦೦ ಅಡಿ ಟನ್ನುಗಳ ಭಾರವುಳ್ಳುದಾಗಿರುವುದು. ಅದರ ಗುಂಡು ೭೬೦ ಪೌಂಡ್ ತೂಕವುಳ್ಳುದಾಗಿ ೧೦೦೦೦ ಗಜಗಳ ದೂರಹೋಗಿ, ೮॥ ಅಂಗುಲದ ಮಂದದ ಕಬ್ಬಿಣದ ತಗಡಿಗೆ ಬಡಿದು ರಂಧ್ರವನ್ನು ಬೀಳಿಸುವುದು.

೧೨ ಅಂಗುಲದಗಲದ ಬಾಯಿಯ ಜರ್ಮನರ ಫಿರಂಗಿಯು ೫೫ ಸಾವಿರ ಅಡಿ ಟನ್ನುಗಳ ಭಾರವುಳ್ಳುದಾಗಿರುವುದು. ಅದರ ಗುಂಡು ೯೮೦ ಟನ್ನುಗಳ ತೂಕವುಳ್ಳುದಾಗಿರುವುದು. (ಅದು ಬೀಳಿಸುವ ರಂಧ್ರದಳತೆಯು ಗೊತ್ತಾಗಿಲ್ಲ)

೧೪ ಅಂಗುಲದ ಬಾಯಗಲದ ಫಿರಂಗಿಗಳೂ ಅವರಲ್ಲಿರುವುವು. ಅದರ ಯೋಗ್ಯತೆಯು ಗೊತ್ತಾಗಿಲ್ಲ. ೧೨ ಅಂಗುಲದಗಲದ ಬಾಯಿಯ ಅಮೇರಿಕನ್ ಫಿರಂಗಿಯು ೫೦೦೦೦ ಅಡಿ ಟನ್ನುಗಳ ಭಾರವುಳ್ಳುದಾಗಿರುವುದು. ಅದರ ಗುಂಡು ೮೫೦ ಪೌಂಡ್ ತೂಕವುಳ್ಳುದಾಗಿ ೯೦೦೦ ಗಜಗಳ ದೂರಹೋಗಿ ೧೧ ಅಂಗುಲದ ಮಂದದ ಕಬ್ಬಿಣದ ತಗಡಿಗೆ ಬಡಿದು ತೂತನ್ನು ಕೆಡಹುವುದು.

೧೪ ಅಂಗುಲದಗಲದ ಬಾಯಿಯ ಅಮೇರಿಕನ್ ಫಿರಂಗಿಯು ೬೫೬೦೦ ಅಡಿ ಟನ್ನಿನ ಭಾರವುಳ್ಳುದಾಗಿರುವುದು. ಅದರಗುಂಡು ೧೪೦೦ ಪೌಂಡ್ ತೂಕವುಳ್ಳುದಾಗಿರುವುದು. (ಅದರಶಕ್ತಿಯು ಗೊತ್ತಾಗಿಲ್ಲ)

ರಷ್ಯಾಚಕ್ರವರ್ತಿಯವರ ಸಂಪತ್ತಿ.

ಈ ಚಕ್ರವರ್ತಿಯವರ ಸಂಪತ್ತಿಯು ಗೊತ್ತುಗುರಿಯಿಲ್ಲದಷ್ಟಿರುವುದು. ಅಮೇರಿಕಾದೇಶದಲ್ಲಿರುವ ಕೋಟೀಶ್ವರರೆಲ್ಲರೂ ಈ ಸಾರ್ವಭೌಮರಿಗೆ ಸರಿದೂಗರು. ಈ ಸಾರ್ವಭೌಮರು ದರ್ಬಾರನ್ನು ನಡಸುವಾಗ ಅವರು ಧರಿಸಿಕೊಳ್ಳುವ ನವರತ್ನಖಚಿತ ಕಿರೀಟಗಳೂ ಇತರ ವಸ್ತ್ರಾಭರಣಗಳೂ ಸಹ ಕೋಟ್ಯಂತರ ಡಾಲರುಗಳ ಬೆಲೆಬಾಳತಕ್ಕವಾಗಿರುವುವು. ಅವರು ಧರಿಸಿಕೊಳ್ಳುವ ರಾಜದಂಡದ ತುದಿಯಲ್ಲಿ ಕೆತ್ತಲ್ಪಟ್ಟಿರುವ ಒಂದು ವಜ್ರವೇ ೪೩ ಲಕ್ಷ ರೂ.ಗಳ ಬೆಲೆ ಬಾಳುವುದು. ಅಂತಹ ವಜ್ರವು ಪ್ರಪಂಚದಲ್ಲಿನ್ನಾರಲ್ಲೂ ಇಲ್ಲವಂತೆ. ರಷ್ಯಾಸಾಮ್ರಾಜ್ಯದ ಅನೇಕ ಪ್ರದೇಶಗಳಲ್ಲಿ ಅವರ ರಾಜಭವನಗಳಿರುವುವು. ಅವುಗಳಲ್ಲಿ ಅದ್ಭುತವಾದ ಸಾವಿರಾರು ಚಿತ್ರಪಟಗಳೂ ಶಿಲಾವಿಗ್ರಹಗಳೂ ರಮಣೀಯವಾಗಿ ಅಲಂಕರಿಸಲ್ಪಟ್ಟಿರುವುವು. ಆ ಸಂಪತ್ತಿಯನ್ನೆಲ್ಲಾ ವರ್ಣಿಸುವುದಕ್ಕೆ ಹಿಡಿದರೆ ಒಂದು ದೊಡ್ಡ ಗ್ರಂಥವಾಗುವುದು.

ಪ್ರತಿವರ್ಷವೂ ಅವರ ಸ್ವಂತದ ಆಸ್ತಿಗಳಿಂದ ಬರತಕ್ಕ ವರಮಾನವೇ ಅಪರಿಮಿತವಾಗಿರುವುದು. ಕೆಲವು ಚಿನ್ನಬೆಳ್ಳಿಯ ಗಣಿಗಳು ಕೂಡ ಇವರ ಸ್ವಂತದ ಆಸ್ತಿಯಾಗಿರುವುವು. ಇವುಗಳಿಂದ ಉತ್ಪನ್ನವಾಗುವ ಚಿನ್ನಬೆಳ್ಳಿಗಳನ್ನೆಲ್ಲಾ ಟಂಕಸಾಲೆಗೆ ಕಳುಹಿಸಿ ನಾಣ್ಯಗಳನ್ನಾಗಿ ಮಾಡಿಸುವರು. ಮತ್ತೂ ಅಮೃತಶಿಲೆ ಮೊದಲಾದ ಕೆಲವು ಬೆಲೆಬಾಳುವ ಕಲ್ಲುಗಳ ಗಣಿಗಳು ಕೂಡ ಇವರ ಭೂಮಿಯಲ್ಲಿರುವುವು. ಪ್ರಪಂಚದಮೇಲೆ ಕಟ್ಟಲ್ಪಡುವ ದೊಡ್ಡದೊಡ್ಡ ಭವನಗಳಿಗೆ ಬೇಕಾಗುವ ಉತ್ತಮವಾದ ಕಲ್ಲುಗಳನ್ನು ಈ ಗಣಿಗಳಿಂದ ತೆಗೆದುಕೊಂಡು ಹೋಗುವರು. ವೈಡೂರ್ಯ ಮೊದಲಾದ ರತ್ನದ ಗಣಿಗಳೂ ಕೂಡ ಇವರ ಆಸ್ತಿಯಾಗಿರುವುವು. ಆ ರತ್ನಗಳನ್ನು ದೊಡ್ಡದೊಡ್ಡ ದೇವಾಲಯಗಳ ಮತ್ತೂ ಪುಸ್ತಕಭಾಂಡಾರಗಳ ಪ್ರಾಣಿಪ್ರದರ್ಶನಾಲಯಗಳ ಕಂಬಗಳಲ್ಲಿ ಕೆತ್ತುವುದಕ್ಕೆ ಉಪಯೋಗಿಸುವರು. ಮತ್ತೂ ಅವುಗಳನ್ನು ಅನೇಕ ಶ್ರೀಮಂತರು ತಮ್ಮ ಭವನಗಳ ಅಲಂಕಾರಕ್ಕೂ ಉಪಯೋಗಿಸುತ್ತಿರುವರು. ಇದರಂತೆ ಗೋಮೇಧಿಕ—ಮೊದಲಾದ ನವರತ್ನಗಳ ಗಣಿಗಳೂ ಕೂಡ ಅನೇಕವಾಗಿರುವುವು. ಅವುಗಳಿಂದ ಸಹಾ ಶ್ರೇಷ್ಠವಾದ ರತ್ನಗಳನ್ನು ಹೊರಕ್ಕೆ ತೆಗೆಯುತ್ತಿರುವರು. ಅವನ್ನೆಲ್ಲಾ ವಿಕ್ರಯಿಸುವುದಕ್ಕೆ ಬೇರೆಬೇರೆ ಉದ್ಯೋಗಿಗಳನ್ನೇರ್ಪಡಿಸಿರುವರು. ಇದಲ್ಲದೆ ಅವರಿಗೆ ಲಕ್ಷಾಂತರ ಎಕರೆಯ ಭೂಮಿಗಳಲ್ಲಿ ವ್ಯವಸಾಯವು ನಡೆದು ಅವರ ಉತ್ಪತ್ತಿಯೂ ಬರುತ್ತಿರುವುದು. ಮತ್ತೂ ಅನೇಕ ಯಂತ್ರಾಲಯಗಳನ್ನು ಸ್ವಂತದ ಹಣದಿಂದ ಸ್ಥಾಪಿಸಿರುವರು. ಇವುಗಳಿಂದಲೂ ವಿಶೇಷವಾದ ವರಮಾನವಾಗುತ್ತಿರುವುದು. ಇದಲ್ಲದೆ ದೊಡ್ಡದೊಡ್ಡ ಶ್ರೀಮಂತರಾದ ವರ್ತಕರು ಮೊದಲುಗೊಂಡು ಸಾಮಾನ್ಯ ಮನುಷ್ಯರವರೆಗಿನ ಪ್ರಜೆಗಳೆಲ್ಲಾ ಚಕ್ರವರ್ತಿಯವರಿಗೆ ಒಂದು ಕಾಣಿಕೆಯ ರೂಪವಾದ ತೆರಿಗೆಯನ್ನು ಕೊಡುವ ವಾಡಿಕೆಯು ಅಲ್ಲುಂಟು. ಅದೂ ಬ್ರಹ್ಮಾಂಡ ವರಮಾನವಾಗಿರುವುದು. ಇವುಗಳನ್ನೆಲ್ಲಾ ಸೇರಿಸಲಾಗಿ ಪ್ರಪಂಚದಲ್ಲಿ ಮತ್ತಾವಚಕ್ರವರ್ತಿಗೂ ಇಲ್ಲದಷ್ಟು ವರಮಾನವು ರಷ್ಯಾಚಕ್ರವರ್ತಿಯವರಿಗೆ ಆಗುತ್ತಿರುವುದು. ಅವು ವರ್ಷೇವರ್ಷೆ ವೃದ್ಧಿಹೊಂದುತ್ತಿರುವುವು.

ಭರತಖಂಡದ ಸೇನೆ.

ಈ ದೇಶದಿಂದ ಫ್ರಾನ್ಸಿಗೆ ಯುದ್ಧಾರ್ಥವಾಗಿ ಕಳುಹಿಸಲ್ಪಟ್ಟಿರುವ ಭಾರತೀಯಸೈನ್ಯದ ವಿಷಯವಾಗಿ ಇಂಡ್ಯಾಸ್ಟೇಟ್ ಸೆಕ್ರೆಟರಿಯವರು ನಮ್ಮ ವೈಸ್‌ರಾಯರಿಗೆ ಕಳೆದ ತಾ॥ ೧೫ ರಲ್ಲಿ ತಂತಿಯಮೂಲಕ ಹೀಗೆ ತಿಳಿಸಿರುತ್ತಾರೆ. "ಫ್ರಾನ್ಸ್‌ದೇಶವನ್ನು ಸೇರಿದ ಭಾರತೀಯ ಸೈನಿಕರು ಇಷ್ಟು ಮಂದಿಯೆಂಬುದನ್ನು ಅವರು ಇಂಥ ಸ್ಥಲಕ್ಕೆ ಹೋಗುತ್ತಿರುವರೆಂಬುದನ್ನೂ ಸಹ ತಿಳಿಸುವುದಕ್ಕೆ ಕೆಲವು ಕಾರಣದಿಂದ ಅವಕಾಶವಿಲ್ಲ. ಇವರು ಫ್ರಾನ್ಸ್‌ದೇಶದಲ್ಲಿ ಫ್ರೆಂಚ್‌ಭೂಮಿಯಮೇಲೆ ಕಾಲಿಟ್ಟಾಗಿನಿಂದಲೂ ಇವರಿಗೆ ಫ್ರೆಂಚ್‌ದೇಶೀಯರು ಮಾಡಿದ ಸ್ವಾಗತವೂ ಇವರಮೇಲೆ ಅವರು ತೋರಿಸಿದ ಆದರವೂ ಇಷ್ಟಿಷ್ಟೆಂದು ಹೇಳಿ ಮುಗಿಯಲಾರದು. ಸೈನಿಕರು ಪುರವೀಥಿಯಲ್ಲಿ ಹೋಗುತ್ತಿರುವಾಗ ಪ್ರಜೆಗಳು ಉತ್ಸಾಹಭರಿತರಾಗಿ ಕೇಕೆಹಾಕಿದರು. ಹಿಂದೂದೇಶದ ಸೈನಿಕರಿಗೆ ಉತ್ತಮವಾದ ವಾಸಸ್ಥಲವು ಒದಗಿಸಿಕೊಡಲ್ಪಟ್ಟಿದೆ. ಭರತಖಂಡದಿಂದ ಬಂದ ಸೈನ್ಯಗಳು ಒಳ್ಳೆಯ ಆರೋಗ್ಯಸ್ಥಿತಿಯಲ್ಲಿವೆ. ಪ್ರಯಾಣಕಾಲದಲ್ಲಿ ಎಲ್ಲೋ ಸ್ವಲ್ಪ ಕುದುರೆಗಳುಮಾತ್ರ ಸತ್ತವು. ಫ್ರೆಂಚ್ ಪತ್ರಿಕೆಯಲ್ಲಿ ಬರೆಯಲ್ಪಟ್ಟಿರುವ ವಿಷಯವನ್ನು ನೋಡಿದರೆ ಹಿಂದೂದೇಶದ ಸೈನಿಕರ ಗಾಂಭೀರ್ಯ ಧೈರ್ಯಾದಿ ಸದ್ಗುಣಗಳು ಫ್ರೆಂಚ್‌ದೇಶೀಯರನ್ನು ಆಶ್ಚರ್ಯದಲ್ಲಿ ಮುಳುಗಿಸಿವೆ. ಅವರು ತಮ್ಮ ಆಫ್ರಿಕನ್‌ಸೈನಿಕರ ಧೈರ್ಯಸಾಹಸಗಳನ್ನು ಬಲ್ಲವರಾಗಿದ್ದರೂ, ಇತರ ವ್ಯವಹಾರವಿಷಯವನ್ನೇ ಆಗಲಿ ಪ್ರಕೃತದ ಯುದ್ಧವಿಷಯವನ್ನೇ ಆಗಲಿ ಆಲೋಚಿಸಿದರೂ, ಭರತಖಂಡದಿಂದ ಬಂದಿರುವ ಸೈನ್ಯದಂಥ ಒಂದು ಸೈನ್ಯವನ್ನಾದರೂ ತಾವು ಅಣಿಮಾಡಲಾರದೆಹೋದೆವೆಂದು ನಮ್ಮ ಸ್ನೇಹಿತರಾದ ಫ್ರೆಂಚರು ಒಪ್ಪಿಕೊಳ್ಳುತ್ತಾರೆ. ಹಿಂದೂದೇಶದ ಸೈನಿಕರ ಪ್ರವರ್ತನವು ಬಹಳ ಚೆನ್ನಾಗಿದೆ. ಇವರು ಯೂರೋಪುಖಂಡಕ್ಕೆ ಬಂದು ಹೊಸದೇಶಗಳಲ್ಲಿ ತಿರುಗುತ್ತಿದ್ದರೂ ಭಯವನ್ನೂ ಆಶ್ಚರ್ಯವನ್ನೂ ಪಡದೆ ಇರುವರೆಂದು ಕೆಲರು ಬರೆಯುತ್ತಿದ್ದಾರೆ. ಇದುವರೆಗೆ ಇವರು ಪರದೇಶಗಳಾದ ದಕ್ಷಿಣಾಫ್ರಿಕಾ ಚೀನಾದೇಶಗಳಿಗೆ ಹೋಗಿ ಯುದ್ಧಮಾಡಿರುವುದೇ ಇದಕ್ಕೆ ಕಾರಣ. ಈಗಿನ ಹಿಂದೂದೇಶದ ಸೈನಿಕರು ಪೂರ್ವದಲ್ಲಿ ಕಾಬೂಲ್ ಕಾಂದಹಾರ್ ದೇಶಗಳಿಗೆ ಹೋಗಿ ನಮ್ಮ ಪಕ್ಷವಾಗಿ ಯುದ್ಧಮಾಡಿದ ಸೈನಿಕರಂತೆಯೇ ಮಹಾ ಪರಾಕ್ರಮಶಾಲಿಗಳಾಗಿದ್ದಾರೆ. ಇವರಿಗೆ ಆ ಪೂರ್ವದವರಿಗಿಂತಲೂ ಹೆಚ್ಚಾಗಿ ಪ್ರಪಂಚಜ್ಞಾನವಿರುವುದು. ಇವರು ಕೇವಲ ಹಿಂದೂದೇಶದ ಸೈನಿಕರಲ್ಲ; ಆಂಗ್ಲಸಾಮ್ರಾಜ್ಯದ ಸೈನಿಕರಾಗಿದ್ದಾರೆ. ಸೈನಿಕರ ಉಪಯೋಗಾರ್ಥವಾಗಿ ಭರತಖಂಡದಿಂದ ಬಂದಿಳಿದಿರುವ ಪದಾರ್ಥಗಳನ್ನು ನೋಡುವಲ್ಲಿ ಈ ನಮ್ಮ ಸೈನಿಕರಿಗೆ ಯಾವವಿಧದ ಪದಾರ್ಥಗಳ ಕೊರತೆಯೂ ಉಂಟಾಗುವುದಿಲ್ಲವೆಂದು ತೋರುತ್ತದೆ. ಇವರಿಗಾಗಿ ಕೆಲ ವಸ್ತುಗಳನ್ನು ಭರತಖಂಡದಿಂದ ತರಿಸಿಕೊಳ್ಳಬೇಕಾಗಬಹುದೆಂದು ಯೋಚಿಸುತ್ತಿದ್ದೆವು. ಆದರೆ ಬೇಕಾದ ವಸ್ತುಗಳೆಲ್ಲಾ ಈ ದೇಶದಲ್ಲೇ ದೊರಕುತ್ತಿವೆ" ಎಂಬುದಾಗಿ.

ಜರ್ಮನ್ ಯುವರಾಜರು ಈಗ ಫ್ರಾನ್ಸ್‌ದೇಶದ ರಣರಂಗದಲ್ಲಿರುವರಷ್ಟೆ. ಇವರು ನಮ್ಮ ಭರತಖಂಡಕ್ಕೆ ಒಂದಾವೃತ್ತಿ ಬಂದು ಹೋಗಿರುವರು. ಇಲ್ಲಿನ ಸೈನಿಕರ ವಿಷಯದಲ್ಲಿ ಇವರು ಬರೆದಿರುವುದೇನೆಂದರೆ— "ನಾನು ಘೂರ್ಖಾಸೈನಿಕರನ್ನು ನೋಡಿದೆನು. ಅವರು ನೇಪಾಳದೇಶೀಯರು. ಆಕೃತಿಯಲ್ಲಿ ಪೂರ್ವರಷ್ಯಾದಲ್ಲಿರುವವರನ್ನು ಹೋಲುತ್ತಾರೆ. ಅವರನ್ನು ನೋಡಿದವರು ಬಹುಶಃ ಜಪಾನರೆಂದೇ ಭ್ರಮೆಪಡಬಹುದೇನೋ. ಆಂಗ್ಲರಿಗೆ ಇರುವ ಹಿಂದೂಸೈನಿಕರೊಳಗೆಲ್ಲಾ ಇವರು ಬಹಳ ಶ್ರೇಷ್ಠರು. ಇವರು ಸ್ವಲ್ಪ ಸ್ಥೂಲಾಂಗರಾದರೂ ಶ್ರಮವನ್ನು ಸಹಿಸಿ ಸೆಣಸಬಲ್ಲರು. ಇವರು ಯಾವುದಕ್ಕೂ ಭಯಪಡರು" ಎಂಬುದಾಗಿ.

ಭರತಖಂಡದ ಜನರು ವಿದ್ಯಾಬುದ್ಧಿಗಳಲ್ಲಿ ಪಾಶ್ಚಾತ್ಯರಿಗೆ ಕಡಿಮೆಯಾದವರಲ್ಲವೆಂಬ ಪ್ರತೀತಿಯನ್ನು ಅನಂತವಿಧವಾಗಿ ಪಡೆದು ಈ ಮೊದಲೇ ಅನೇಕವೇಳೆ ಶ್ಲಾಘಿಸಲ್ಪಟ್ಟಿರುವರು. ನಮ್ಮದೇಶದ ಸೈನಿಕೋದ್ಯೋಗದ ಜನರು ಸಹ ತಮ್ಮ ಸಾದ್ಗುಣ್ಯವಿಷಯದಲ್ಲಿ ಪಾಶ್ಚಾತ್ಯರಿಂದಲೇ ಹೀಗೆ ಶ್ಲಾಘಿಸಲ್ಪಡುವಂತಾಗಿರುವುದು ಭರತಖಂಡದ ವಿಶಿಷ್ಟ ಘನತೆಗೆ ತಕ್ಕುದಾಗಿರುತ್ತದೆ. ಇವರು ರಣರಂಗದಲ್ಲಿ ಈಗ ತೋರಿಸಲಿಕ್ಕಿರುವ ಧೈರ್ಯಸ್ಥೈರ್ಯಶೌರ್ಯ ಕೌಶಲಸಾಹಸಾದಿಗಳಿಂದಲೂ ತಕ್ಕ ಜಯವನ್ನು ಪಡೆದು, ಸ್ವದೇಶಕ್ಕೆ ಕೀರ್ತಿಯನ್ನೂ ಮಿತ್ರಮಂಡಲಿಯ ಪ್ರಭುತ್ವದವರಿಗೆ ಆನಂದವನ್ನೂ ಭಾರತೀಯರಿಗೆ ಸಂತೃಪ್ತಿಯನ್ನೂ ಉಂಟುಮಾಡುವವರಾಗಲೆಂದು ಕೋರುತ್ತೇವೆ.

ಯುದ್ಧದ ಪಲಸರಕು.

ಪ್ರತಿಯೊಬ್ಬ ಸೈನಿಕನೂ ಧರಿಸುವ ಪಾದರಕ್ಷೆಯ ಬೆಲೆಯು ೧೦॥ ರೂ. ಗಳಾಗುವುವು.

ಯುದ್ಧದ ದೊಡ್ಡದೊಡ್ಡ ಫಿರಂಗಿಗಳೊಂದನ್ನು ನಿರ್ಮಿಸುವುದಕ್ಕೆ ೧ ವರ್ಷಕಾಲ ಹಿಡಿಯುವುದಂತೆ.

ಯುದ್ಧಕ್ಕೆ ಅಣಿಯಾಗಿ ನಿಂತ ಪ್ರತಿಯೊಬ್ಬ ಸೈನಿಕನಿಗೂ ದಿನ ೧ ಕ್ಕೆ ೩॥ ರೂ. ನಂತೆ ವೆಚ್ಚವಾಗುವುದು.

ಪ್ಯಾರಿಸ್‌ಪಟ್ಟಣದಲ್ಲಿರುವ ೨॥ ಸಾವಿರ ಮಂದಿ ಬ್ಯಾರಿಸ್ಟರುಗಳಲ್ಲಿ ೨೦೦೦ ಜನರು ಯುದ್ಧಕ್ಕೆ ಹೋಗಿದ್ದಾರೆ.

ಜರ್ಮನರ ಧ್ವಜಪಟವನ್ನು ಮೊಟ್ಟಮೊದಲು ಹಿಡಿದುಕೊಂಡ ಫ್ರೆಂಚ್‌ಸೈನಿಕನಿಗೆ ೩೦೦೦ ರೂ. ಗಳ ಬಹುಮಾನವು ಕೊಡಲ್ಪಟ್ಟಿತು.

ಜರ್ಮನ್ ಸಾಮ್ರಾಜ್ಯದಮೇಲೆ ಇಲ್ಲಿನ ಪ್ರಭುವು ನಡೆಯಿಸುತ್ತಿರುವ ಅಧಿಕಾರವು ಮರಳಿ ತಲೆಯೆತ್ತದಂತೆ ಧ್ವಂಸಮಾಡಲ್ಪಡಬೇಕು."

ಇಂಗ್ಲೀಷು ಫ್ರೆಂಚ್‌ಸೇನೆಗಳಿಗೆ ವಿಜಯವು ಪ್ರಾಪ್ತವಾದ ಹೊರತು ಜರ್ಮನಿದೇಶದ ಕೂಲಿಗಾರರಿಗೆ ಶಾಶ್ವತವಾದ ಸೌಖ್ಯವು ಲಭಿಸದು.

ಈಗ ನಡೆಯುತ್ತಿರುವ ಯುದ್ಧದಲ್ಲಿ ದಿನ ೧ ಕ್ಕೆ ಎಲ್ಲರ ಪಕ್ಷದಿಂದಲೂ ೧೮೦೦೦೦೦೦೦ ರೂ. ಗಳು ವೆಚ್ಚವಾಗುತ್ತಿರುವುದೆಂದು ಲೆಕ್ಕ ಹಾಕಲ್ಪಟ್ಟಿದೆ.

ಈ ಮೇಲಣ ಸುದ್ದಿಯಿಂದ ಜರ್ಮನ್ ಪ್ರಜೆಗಳಿಗೆ ಅಲ್ಲಿನ ಪ್ರಭುತ್ವದವರ ಈಗಿನ ಯುದ್ಧಾಸಕ್ತಿಯು ಎಷ್ಟು ಬೇಸರನ್ನುಂಟುಮಾಡಿರುವುದೆಂಬುದು ಗೊತ್ತಾಗುತ್ತದೆ.

ಜರ್ಮನರ ಪ್ರತಿಯೊಂದು ಜಲಾಂತರ್ಗಾಮಿಯಾದ ಹಡಗುಗಳಲ್ಲೂ ೨೦೦೦ ಮೈಲಿಗಳ ದೂರ ಹೋಗಿಬರುವುದಕ್ಕೆ ಸಾಕಾಗುವಷ್ಟು ಪೆಟ್ರೋಲಿಯಂತೈಲವು ತುಂಬಿರುವುದಂತೆ.

ಮೊಟ್ಟಮೊದಲು ಜರ್ಮನರ ರಾಜಧಾನಿಯನ್ನು ಯಾವ ರಷ್ಯನ್ ಸೈನಿಕನು ಪ್ರವೇಶಿಸುವನೋ ಅವನಿಗೆ ೩೦ ಸಾವಿರ ರೂ. ಬಹುಮಾನವು ಕೊಡಲ್ಪಡುವುದೆಂದು ಪ್ರಕಟಿಸಲ್ಪಟ್ಟಿದೆ.

ಯುದ್ಧದಲ್ಲಿ ಪೆಟ್ಟುತಿಂದು ಗಾಯಗೊಂಡು ಅಸಹಾಯನಾಗಿ ಬಿದ್ದಿರುವ ಸೈನಿಕನನ್ನು ಗುರ್ತಿಸಿ ಹಿಡಿಯುವುದಕ್ಕಾಗಿ ಅಭ್ಯಸ್ತವಾಗಿರುವ ಕೆಲ ನಾಯಿಗಳನ್ನು ಆಂಗ್ಲಸೈನಿಕರು ಯುದ್ಧರಂಗಕ್ಕೆ ತೆಗೆದುಕೊಂಡು ಹೋಗಿದ್ದಾರೆ.

ಜರ್ಮನರ ಬಳಿಯಲ್ಲಿ ೩೦೦ ಕೋಟಿ ರೂ. ಗಳ ಬೆಲೆಬಾಳುವ ವ್ಯಾಪಾರದ ಹಡಗುಗಳಿರುವುವು. ಅವುಗಳಲ್ಲಿ ೯೦ ಕೋಟಿ ರೂ. ಬೆಲೆಯ ಹಡಗುಗಳು ಈಗ ಆಂಗ್ಲೇಯರ ವಶವಾಗಿವೆ. ಜರ್ಮನರಿಗೆ ಇರುವ ಒಟ್ಟು ೮೦೦ ಹಡಗುಗಳಲ್ಲಿ ಈಗ ಆಂಗ್ಲೇಯರ ಕೈಗೆ ೨೮೦ ಸಿಕ್ಕಿಹೋಗಿವೆ.

ಮಾನವಜಾತಿಯ ಸೌಖ್ಯವನ್ನು ಕೋರುವವರೆಲ್ಲರೂ ಒಟ್ಟಿಗೆ ಕೂಡಿ, ಕಳೆದ ೫ ವಾರಗಳಿಂದಲೂ ಭಯಂಕರವಾದ ಕೃತ್ಯಗಳನ್ನು ನಡಸುತ್ತಿರುವ ಕೇಸರನನ್ನೂ ಆತನ ಮಂತ್ರಾಲೋಚಕರನ್ನೂ ಸೆರೆಹಿಡಿಯುವುದು ಧರ್ಮವೆಂಬುದಾಗಿ, ಜರ್ಮನೀದೇಶದ ಕ್ಷೇಮವನ್ನು ಕೋರುವ ನಾವುಗಳು ನಿರ್ಭರವಾಗಿ ಹೇಳುತ್ತೇವೆ.

ಜರ್ಮನರ ಸೇನಾನಿವಹಕ್ಕೆಲ್ಲಾ ವಾರಕ್ಕೆ ಬೇಕಾಗುವ ಆಹಾರ್ಯಪದಾರ್ಥಗಳ ವಿವರವು ಎಷ್ಟೆಂದರೆ— ತೂಕ ಪೌಂಡ್—ರೊಟ್ಟಿ ೬೧೩೦೦೦೦, ಮಾಂಸ—೧೬೩೦೦೦೦, ಸಕ್ಕರೆ ೧೩೩೫೦೦೦, ಕಾಫಿ—೨೮೯೦೦೦, ಉಪ್ಪು—೨೮೯೦೦೦, ಇವಲ್ಲದೆ ಅವರು ಕುಡಿಯುವ ಸಾರಾಯಿ ಮೊದಲಾದುವುಗಳು ವಿಶೇಷವಾಗಿರುವುವು.

ಯುದ್ಧಪ್ರಸಾರದಿಂದ ಅರಬ್ಬಿಯವರ ಖರ್ಜೂರ ವ್ಯಾಪಾರವು ಹಾಳಾಗಿಹೋಗಿದೆ. ಹೊರಕ್ಕೆ ಸಾಗಿಸಲು ಮಾರ್ಗವಿಲ್ಲದೆ ಅದು ಹುಳುತು ಕೊಳೆಯುತ್ತಿದೆ. ಮಂಗಳೂರು ಕಣ್ಣಾನೂರು ಕಡೆಯಲ್ಲಿ ಗೇರುಪಪ್ಪಿನ ವ್ಯಾಪಾರವೂ ಹೀಗೇ ಆಗಿ ವರ್ತಕರೂ ಬೇಸಾಯಗಾರರೂ ಲಕ್ಷಾಂತರ ರೂ. ಗಳನಷ್ಟವನ್ನು ಅನುಭವಿಸುತ್ತಿದ್ದಾರೆ.

ಸಿನಿಮೊಟೋಗ್ರಾಫ್ ಯಂತ್ರಗಳಿಂದ ಭಾವಚಿತ್ರಗಳನ್ನು ಪ್ರದರ್ಶನಮಾಡತಕ್ಕವರಿಗೆ ಈಗ ಒಳ್ಳೆಯ ಸುಗ್ಗಿಕಾಲವಾಗಿದೆ. ಈಗಿನ ಮಹಾಯುದ್ಧದಲ್ಲಿ ಅವರ ಕಡೆಯವರು ಪ್ರಾಣಧನಗಳನ್ನು ನೀರಿನಂತೆ ವೆಚ್ಚಮಾಡಿ ಭಾವಚಿತ್ರಗಳನ್ನು ಗ್ರಹಿಸುತ್ತಿದ್ದಾರೆ. ಈಗಾಗಲೇ ಯೂರೋಪುಖಂಡದಲ್ಲಿ ಯುದ್ಧದ ಭಾವಚಿತ್ರಗಳು ಪ್ರದರ್ಶನಮಾಡಲ್ಪಡುತ್ತಿವೆ.

ಜರ್ಮನಿದೇಶದಲ್ಲಿ ಸಕಲಜನರ ಸೌಖ್ಯವನ್ನು ಕೋರುವ ಸಂಘವೊಂದಿದೆ. ಅದರ ಸಭ್ಯರು ರೋಟರ್‌ಡಾಮ್ ಪಟ್ಟಣದಿಂದ ಈ ಕೆಳಗಣ ತಂತೀವಾರ್ತೆಯನ್ನು ಕಳೆದ ಸೆಪ್ಟಂಬರ್ ತಾ॥ ೨೩ ರಲ್ಲಿ ಪ್ರಪಂಚಕ್ಕೆ ಹಂಚಿರುತ್ತಾರೆ— "ಪ್ರಪಂಚಕ್ಕೆಲ್ಲಾ ಯಾವನ ದುರಾಶೆಯೂ, ಯಾವನ ನಿಜಸ್ವರೂಪವೂ ಪ್ರಕಟವಾಗಿದೆಯೋ ಆ ನಿರಂಕುಶನ ಯುದ್ಧವು ಮುಗಿದಬಳಿಕ ಅವನು ತಪ್ಪದೆ ಸಿಂಹಾಸನದಿಂದ ಪರಿಭ್ರಷ್ಟನಾಗುವನು. (ಈ ನಿರಂಕುಶನೆಂಬುವವನು ಜರ್ಮನ್ ಚಕ್ರವರ್ತಿಯಾದ ಕೇಸರನು.)

ಜರ್ಮನರು ಪಾರಿವಾಳದ ಹಕ್ಕಿಗಳನ್ನು ಯುದ್ಧರಂಗಕ್ಕೆ ಕಳುಹಿಸಿದ್ದಾರೆ. ಇವು ತಮ್ಮ ಕೊರಳಿಗೆ ಬಿಗಿದ ಕಾಗದಗಳನ್ನು ತಮ್ಮ ಶಿಬಿರಗಳಿಂದ ತಮ್ಮ ದೇಶಕ್ಕೆ ೩೦೦-೪೦೦ ಮೈಲಿಗಳ ದೂರ ಹಾರಿಹೋಗಿ, ತಮ್ಮ ಪ್ರಭುತ್ವದವರಿಗೆ ತಲುಪಿಸುವುವು. ಮತ್ತೂ ಇವುಗಳ ಎದೆಯಮೇಲೂ ಹೊಟ್ಟೆಯಕೆಳಗೂ ಸಣ್ಣಸಣ್ಣ ಫೋಟೋಗ್ರಾಫುಯಂತ್ರಗಳು ಕಟ್ಟಲ್ಪಟ್ಟಿರುವುವು. ಅದರಲ್ಲಿರುವ ಭಾವಗ್ರಾಹಿಕನ್ನಡಿಯು ೨-೩ ನಿಮಿಷಕ್ಕೊಂದಾವೃತ್ತಿ ತಿರುಗುತ್ತಿರುವುದರಿಂದ ಮುಂಗಡೆಯೂ ಕೆಳಗಡೆಯೂ ಕಾಣುವ ದೇಶಭಾಗದ ಮತ್ತೂ ಸೇನಾಶಿಬಿರಗಳ ಭಾವಚಿತ್ರವೆಲ್ಲಾ ಅದರಲ್ಲಿ ಪ್ರತಿಫಲಿಸಿರುವುವು. ಅವನ್ನು ಜರ್ಮನರು ತೆಗೆದುಕೊಂಡು ಅಲ್ಲಿನ ಸಂಗತಿಗಳನ್ನು ತಿಳಿದುಕೊಳ್ಳುತ್ತಿರುವರು. ಈಗ ಇಂಗ್ಲೀಷು ಫ್ರೆಂಚ್‌ಸೇನೆಗಳು ಅಂಥ ಪಾರಿವಾಳಗನ್ನು ಕಂಡಕೂಡಲೇ ತುಪಾಕಿಯಿಂದ ಹೊಡೆದು ಕೊಲ್ಲಲು ಏರ್ಪಡಿಸಿಕೊಂಡಿದ್ದಾರೆ.

ಇಂಗ್ಲೀಷರ ಬಳಿಯಲ್ಲಿರುವ ೧೩॥ ಅಂಗುಲದ ಬಾಯಿಯ ಫಿರಂಗಿಯು ೬೦೦೦೦ ಟನ್ನುಗಳ ಬಲವುಳ್ಳುದಾಗಿ ೧೩ ಅಡಿಯುದ್ದ ಇರುವುವು. ಇದಕ್ಕೆ ಉಪಯೋಗಿಸುವ ಗುಂಡಿನ ಉದ್ದವು ೬ ಅಡಿ, ಸುತ್ತಳತೆ ೩೩ ಅಂಗುಲ ಅದರ ಭಾರ ೧೩೫೦ ಪೌಂಡ್ ಆಗಿರುವುದು. ಅಂಥ ಪ್ರತಿಯೊಂದು ಗುಂಡಿನ ಬೆಲೆಯು ೨೨೫೦ ರೂ. ಗಳಾಗುವುವು. ಗುಂಡಿನಾಕಾರವು ಹೀಗಿರುವುದು. ಈ ಗುಂಡು ೧೫ ಮೈಲಿಗಳ ದೂರ ಹೋಗುವುದು. ಆಕರ್ಷಣಶಕ್ತಿಗೆ ಪ್ರತಿಭಟಿಸಿ, ಗುರಿಗೆ ತಗಲುವುದಕ್ಕಾಗಿ ಅದು ೨೦೦೦೦ ಅಡಿಗಳ ಮೇಲಕ್ಕೆ ಹೋಗಿ ಮರಳಿ ಇಳಿಯಬೇಕಾಗುವುದು. ಈ ಗುಂಡನ್ನು ೫ ಮೈಲಿಗಳ ದೂರದಲ್ಲಿ ಗುರಿಯಿಟ್ಟು ಹಾರಿಸುವ ಪದ್ಧತಿಯುಂಟು ಗುಂಡು ೫ ಮೈಲಿಗಳ ದೂರ ಹೋಗಿ ಸೇರುವುದಕ್ಕೆ ೧೨ ಸೆಕೆಂಡು ಹಿಡಿಯುವುದು. ನಿಮಿಷ ೧ ಕ್ಕೆ ೨೫ ಮೈಲಿಗಳ ದೂರದಷ್ಟು ವೇಗದಲ್ಲಿ ಗುಂಡು ಹೋಗುವುದು. ಗುಂಡು ಶತ್ರುಗಳ ಹಡಗಿಗೆ ತಗುಲಿತು ಅಥವಾ ಇಲ್ಲವೆಂಬುದನ್ನು ದುರ್ಬೀನಿನಿಂದಲೂ ಹೊತ್ತಿದ ಬೆಂಕಿಯಿಂದಲೂ ಗೊತ್ತುಮಾಡಿಕೊಳ್ಳುವರು. ಇವೆರಡುಪದ್ಧತಿಯೇ ಅಲ್ಲದೆ ಆಂಗ್ಲೇಯರಿಗೆ ಇನ್ನೂ ಒಂದು ಗುಟ್ಟಾದ ಪದ್ಧತಿಯು ಗೊತ್ತುಂಟು. ನೌಕಾಸೇನಾಯುದ್ಧವು ಹಡಗು ನಡೆಯುತ್ತಿರುವಾಗಲೇ ಜರುಗುವುದು. ಆದುದರಿಂದ ಶತ್ರುಗಳ ಹಡಗಿಗೆ ಚಲಿಸುತ್ತಿರುವಾಗ ಗುರಿಕಟ್ಟಿ ಹೊಡೆಯುವುದಕ್ಕೆ ಬಹುಕಾಲಾಭ್ಯಾಸವು ಬೇಕು. ಅಂಥ ನೈಪುಣ್ಯವು ಅವರಿಗೆ [illegible] ಬಲಪಟ್ಟಿದೆ.

ಈಗಿನ ಪಾಶ್ಚಾತ್ಯರ ಸೇನಾಸಂಖ್ಯಾನಿಯಮಪ್ರಕಾರ ಹೆಸರುಗಳೂ, ಅವುಗಳ ಅಧಿಕಾರಿಗಳ ಬಿರುದುಗಳೂ ಈ ಕೆಳಗೆ ಕಂಡಪ್ರಕಾರ ಆಂಗ್ಲರಿಗೆ ಇರುವುವು. ಯುದ್ಧಸಮಯಗಳಲ್ಲಿ ಒಂದೊಂದು ಸೇನಾಗುಲ್ಮ (ರಿಜಮೆಂಟು) ನಲ್ಲಿ ೨೦೦೦ ಭಟರಿರುವರು. ಅವರಮೇಲಣ ಅಧಿಕಾರಿಗೆ ಕರ್ನಲ್ ಎಂದು ಹೆಸರು. ಅಂಥ ಮೂರುಗುಲ್ಮಗಳು ಸೇರಿದರೆ ಒಂದು ಸೈನ್ಯವಾಹಿನಿ (ಬ್ರಿಗೇಡು) ಆಗುವುದು. ಅದರಲ್ಲಿ ೧೦೦೦೦ ಭಟರಿರುವರು. ಅದರಮೇಲಣ ಅಧಿಕಾರಿಗೆ ವಾಹಿನೀನಾಯಕ (ಬ್ರಿಗೇಡಿಯರ್‌ಜನರಲ್) ಎಂದು ಹೆಸರು. ಅಂಥವಾಹಿನಿಗಳೆರಡು ಸೇರಿದರೆ ಒಂದು ಸೈನ್ಯಭಾಗವಾಗುವುದು. ಅದರ ಅಧಿಕಾರಿಗೆ ದಂಡನಾಯಕ (ಲೆಫ್ಟಿನೆಂಟ್‌ಜನರಲ್) ಎಂದು ಹೆಸರು. ಅಂಥ ಸೈನ್ಯಭಾಗಗಳು ಎರಡು ಸೇರಿದರೆ ಒಂದು ಸೈನ್ಯನಿವಹ (ಆರ್ಮಿಕೋರ್) ಆಗುವುದು. ಅಂಥ ಸೈನ್ಯನಿವಹದಲ್ಲಿ ೪೦೦೦೦ ಭಟರಿರುವರು. ಅದರ ಅಧಿಕಾರಿಗೆ ಸೇನಾನಾಯಕ (ಜನರಲ್) ಎಂದು ಹೆಸರು. ಇಂಥ ಸೈನ್ಯನಿವಹಗಳನೇಕಕ್ಕೆ ಅಧಿಪತಿಯಾದವನೇ ಸರ್ವ ಸೇನಾಧ್ಯಕ್ಷನೆಂದು ಕರೆಯಲ್ಪಡುವನು. ಈ ಸೈನ್ಯನಿವಹಗಳು ೩ ಸೇರಿದರೆ ಒಂದು ಅಕ್ಷೋಹಿಣಿ (ಸಂಪೂರ್ಣಸೈನ್ಯ) ವಾಗುವುದು. ಪ್ರತಿಯೊಂದು ಅಕ್ಷೋಹಿಣಿಯಲ್ಲೂ ಕಾಲ್ಬಲವೂ, ಫಿರಂಗಿಗಳನ್ನು ಹಾರಿಸುವವರೂ, ರಾವುತರೂ, ಆಳುಗೆಲಸದವರೂ, ಆಹಾರ್ಯವಸ್ತುಗಳನ್ನು ಕೊಡುವವರೂ, ಇಂಜನಿಯರುಗಳೂ, ವೈದ್ಯರೂ, ವೈಮಾನಿಕರೂ ತಕ್ಕಷ್ಟು ಇರುತ್ತಿರುವರು.

ಯುದ್ಧದಸ್ಥಿತಿ.

(ಪಶ್ಚಿಮರಣರಂಗ)

ಬೆಲ್ಜಿಯಂ.

ಜರ್ಮನರಕಡೆಯ ಸೇನೆಯು ಈಗ ಫ್ರಾನ್ಸಿನಲ್ಲೂ ಬೆಲ್ಜಿಯಮ್ಮಿನಲ್ಲೂ ಸಹ ೧೩ ಲಕ್ಷದವರೆಗೆ ಇರುವುದೆಂದು ಊಹಿಸಲ್ಪಟ್ಟಿದೆ. ಇವರು ಈಗ ಬೆಲ್ಜಿಯಮ್ಮಿನ ಪಶ್ಚಿಮಭಾಗವನ್ನೆಲ್ಲಾ ಸಮುದ್ರದ ತೀರದವರೆಗೂ ಆಕ್ರಮಿಸಿಕೊಳ್ಳಬೇಕೆಂದು ಕಳೆದ ವಾರದಲ್ಲೆಲ್ಲಾ ಬಹಳ ಸಾಹಸಮಾಡಿರುವರು. ಬೆಲ್ಜಿಯಮ್ಮಿನ ಪ್ರಭುತ್ವದವರು ತಮ್ಮ ದೇಶವನ್ನು ಬಿಟ್ಟು ಹೋಗುವುದಕ್ಕೆ ಮುಂಚೆ ಕೆಲ ಪ್ರಕಟನಪತ್ರಿಗಳನ್ನು ಊರುಗಳ ಗೋಡೆಗಳಮೇಲೆ ಅಂಟಿಸಿದ್ದರು. ಅದರಲ್ಲಿ—"ಬೆಲ್ಜಿಯಂದೇಶಸ್ಥರು ದೇಶಭಕ್ತಿಯಿಂದಲೂ ಸಹನೆಯಿಂದಲೂ ಇರಬೇಕು. ಈಗ ಸಂಭವಿಸಿರುವ ವಿಪತ್ತು ಕ್ಷಣಿಕವಾದುದು; ಇದರಿಂದ ಬೆಲ್ಜಿಯಮ್ಮಿನವರು ಮುಂದೆ ಪೂರ್ವಕ್ಕಿಂತಲೂ ಉತ್ತಮವಾದ ಸ್ಥಿತಿಗೆ ಬರಲವಕಾಶವಾಗುವುದು ಬೆಲ್ಜಿಯಮ್ಮು ಬಹುಕಾಲ ಸ್ವತಂತ್ರವಾಗಿರಲಿ" ಎಂದು ಅಚ್ಚುಮಾಡಲ್ಪಟ್ಟಿದ್ದಿತು. ಈ ಬೆಲ್ಜಿಯಂದೇಶದ ಒಟ್ಟು ಜನಸಂಖ್ಯೆ ೭೦ ಲಕ್ಷ. ಇದರಲ್ಲಿ ೧೫ ಲಕ್ಷ ಮಂದಿಗಳು ಹಾಲೆಂಡು ಇಂಗ್ಲೆಂಡು ದೇಶಗಳಿಗೆ ಹೋಗಿ ಸೇರಿಕೊಂಡಿದ್ದಾರೆ. ಉಳಿದವರು ನಾನಾವಿಧದ ಕಷ್ಟನಷ್ಟಗಳಿಗೆ ಪಾತ್ರರಾಗಿ ತಮ್ಮತಮ್ಮ ಮನೆಗಳಲ್ಲೇ ಇದ್ದಾರೆ. ಇಂಗ್ಲೆಂಡಿಗೂ ಹಾಲೆಂಡಿಗೂ ಹೋಗಿ ಸೇರಿರುವವರನ್ನು ಆಯಾದೇಶೀಯರು ಬಹಳ ಭೂತದಯೆಯಿಂದಲೂ ಪ್ರೀತಿಯಿಂದಲೂ ಆದರಿಸುತ್ತಿದ್ದಾರೆ. ಇಂಗ್ಲೆಂಡಿನ ಫೋಕ್‌ಸ್ಟನ್ನಿಗೆ ಹೋಗಿ ಸೇರುವ ಬಹು ಜನರು ಕೇವಲ ನಿಸ್ಸಹಾಯರಾಗಿದ್ದಾರೆ. ಪ್ರಜೆಗಳಲ್ಲದೆ ಇಂಗ್ಲೀಷ್ ಬೆಲ್ಜಿಯಂ ಸೈನಿಕರೇ ೨೨ ಸಾವಿರ ಮಂದಿಯವರೆಗೆ ಹಾಲೆಂಡಿಗೆ ಹೋಗಿ ಸೇರಿಕೊಂಡಿದ್ದಾರೆ. ಇವರೆಲ್ಲರನ್ನೂ ಅವರು ಸೆರೆಯಾಳುಗಳಂತೆ ಕಾಪಾಡುತ್ತಿದ್ದಾರೆ. ಆಂಟ್ವರ್ಪಿನಲ್ಲಿ ಶತ್ರುಗಳಿಂದ ಪೆಟ್ಟುತಿಂದು ಗಾಯಗೊಂಡಿರುವ ಸೈನಿಕರಲ್ಲಿ ೫ ಸಾವಿರ ಮಂದಿಗಳು ಇಂಗ್ಲೆಂಡಿನ ಡೋವರ್‌ರೇವಿನಲ್ಲಿಳಿದರು.

ಜರ್ಮನರು ಬೆಲ್ಜಿಯಮ್ಮಿನ ಪಶ್ಚಿಮದ ಬ್ರೂಜಿಸ್—ಥೀಲ್ಟ್ ಜಿಲ್ಲಾಗಳಿಗೆ ಪ್ರವೇಶಿಸಿ, ಹಲವುಕಡೆ ಯುದ್ಧಮಾಡಿ, ಆಸ್ಟೆಂಡನ್ನೂ ವಶಪಡಿಸಿಕೊಂಡರು. ಆದರೆ ಮಿತ್ರಸೈನ್ಯದವರು ಯುದ್ಧಮಾಡಿ ಅದನ್ನು ಮರಳಿ ತಾವು ವಶಪಡಿಸಿಕೊಂಡರೆಂದೂ ಆಗ ಬೆಲ್ಜಿಯಂಸೈನಿಕರು ತುಂಬಾ ಸಾಹಸಮಾಡಿದರೆಂದೂ ವರ್ತಮಾನವಿದೆ. ಜರ್ಮನರಿಗೆ ಆಂಟ್ವರ್ಪ್ ಪಟ್ಟಣವು ವಶವಾದಾಗ ಅದರಲ್ಲಿ ೫೦೦ ಫಿರಂಗಿಗಳೂ, ಬಹಳ ಮದ್ದುಗುಂಡುಗಳೂ, ಅನೇಕ ಉಗ್ರಾಣಗಳೂ, ಮೋಟಾರುಬಂಡಿಗಳೂ, ಎಂಜಿನ್ನುಗಳೂ, ಲಕ್ಷಗಟ್ಟಲೆ ಕಂಡಗದ ಧಾನ್ಯವೂ, ೫ ಲಕ್ಷ ಮೂಟೆಗಳ ಹಿಟ್ಟು, ಕಲ್ಲಿದ್ದಲು, ಗೋಣಿನಾರು, ಬೆಳ್ಳಿ, ತಾಮ್ರ, ಪಶುಗಳು, ಆಯುಧಗಳಿಂದ ತುಂಬಿದ ಒಂದು ರೈಲ್ವೆಬಂಡಿಗಳ ಸಾಲು, ಇವಿಷ್ಟೂ ದೊರೆದುವಂತೆ. ಆ ಪಟ್ಟಣದ ರೇವೆಯಲ್ಲಿ ಇಂಗ್ಲೀಷರ ಹಡಗುಗಳಾಗಲಿ ಬೆಲ್ಜಿಯಮ್ಮಿನವರ ಹಡಗೇ ಆಗಲಿ ಒಂದೂ ಇರಲಿಲ್ಲ. ಆದರೆ ಜರ್ಮನರ ೩೩ ಹಡಗುಗಳಿದ್ದುವು. ಅವುಗಳ ಎಂಜಿನ್ನುಗಳೆಲ್ಲಾ ಹಾಳ್ಮಾಡಲ್ಪಟ್ಟು, ಕೆಲಸಕ್ಕೆ ಬಾರದಂತಾಗಿ [illegible]

ವೆವು. ಆಂಟ್ವರ್ಪನ್ನು ವಶಪಡಿಸಿಕೊಳ್ಳಲು ಜರ್ಮನರಕಡೆಯ ೬೦ ಸಾವಿರ ಮಂದಿ ಸೈನಿಕರು ಮೇಲೆಬಿದ್ದು ಫಿರಂಗಿಗಳನ್ನು ಹೊಡೆಯುತ್ತಿದ್ದರೆಂದೂ ಆದರೂ ಸ್ವಲ್ಪ ಸಂಖ್ಯಾಕರಾಗಿದ್ದ ನಮ್ಮ ಕಡೆಯ ಸೈನಿಕರು ಬಹಳ ಧೈರ್ಯದಿಂದ ಹೋರಾಡಿ, ಯುದ್ಧತಂತ್ರವನ್ನನುಸರಿಸಿ, ಹಿಂದಕ್ಕೆ ಬಂದುಬಿಟ್ಟರೆಂದೂ ನೊಗಲಾಗಿ ಇಂಗ್ಲೆಂಡಿನ ನೌಕಾಸೇನಾಧ್ಯಕ್ಷರು ಹೇಳಿ, ಅಲ್ಲಿಗೆ ಹೋಗಿದ್ದ ತಮ್ಮ ಸೈನಿಕರ ಧೈರ್ಯಸಾಹಸಗಳನ್ನು ಮೆಚ್ಚಿಕೊಂಡಿದ್ದಾರೆ.

ಈಗ ಆಂಟ್ವರ್ಪ್ ನಗರವನ್ನು ಜರ್ಮನರ ೧೨ ಸಾವಿರ ನೌಕಾಸೈನಿಕರು ಒಬ್ಬ ಅಡ್ಮಿರಲ್ಲಿನ ಅಧ್ಯಕ್ಷತೆಯಿಂದ ರಕ್ಷಣೆಮಾಡಿಕೊಂಡಿದ್ದಾರೆ. ಅದರ ಮಗ್ಗುಲಲ್ಲಿರುವ ಷೇಲ್ಟ್ ನದಿಯಲ್ಲಿ ಇತರ ಹಡಗುಗಳು ಬರದಂತೆ ಮಾಡುವುದಕ್ಕಾಗಿ ಮದ್ದಿನ ಗುಂಡುಗಳನ್ನು ಜರ್ಮನರು ಇಡುತ್ತಿದ್ದಾರೆ. ಆ ಪಟ್ಟಣವನ್ನು ಬಿಟ್ಟು ಹೋಗಿರುವ ಪ್ರಜೆಗಳನ್ನೆಲ್ಲಾ ಮರಳಿ ಅಲ್ಲಿಗೆ ಬಂದು ಸೇರಿಕೊಳ್ಳುವಂತೆ ಮಾಡಲು ಆತೋತ್ತರಗಳನ್ನು ಹುಟ್ಟಿಸುತ್ತಿದ್ದಾರೆ. ಅದಕ್ಕಾಗಿ ಅವರು ಮಾಡಿರುವ ಪ್ರಕಟನೆಯಲ್ಲಿ— “ನಿರಾಯುಧರಾಗಿರುವ ಪ್ರಜೆಗಳನ್ನು ನಾವು ಹಿಂಸೆಪಡಿಸುವುದಿಲ್ಲ. ಯೌವನಸ್ಥರಾದ ಬೆಲ್ಜಿಯಂ ಜನರನ್ನು ಸೇನೆಯಲ್ಲಿ ಸೇರಿಸಿಕೊಳ್ಳುವುದಕ್ಕಾಗಿ ನಾವು ಜರ್ಮನಿಗೆ ಸಾಗಿಸುವುದಿಲ್ಲ ; ಬೆಲ್ಜಿಯಂ ಸೈನಿಕರು ಸೇನೆಯುಡುಪನ್ನು ಧರಿಸದೆ, ಸಾಮಾನ್ಯವಾದ ಉಡುಪನ್ನು ಧರಿಸಿಕೊಂಡು ಬಂದು ತಾವು ಸೈನಿಕರೆಂಬುದನ್ನು ಹೇಳಿಕೊಂಡರೆ ಅವರನ್ನು ಸೆರೆಯಾಳುಗಳಂತೆ ಇಡುವೆವು: ಇನ್ನೇನನ್ನೂ ಮಾಡುವುದಿಲ್ಲ. ವಾರ್ತಾ ಪತ್ರಿಕೆಗಳನ್ನು ಬೆಲ್ಜಿಯಂ ಪ್ರಜೆಗಳು ಪ್ರಕಟಿಸಿಕೊಳ್ಳಬಹುದು. ಅದರಲ್ಲಿ ಇಂಗ್ಲೀಷ್-ಫ್ರೆಂಚ್-ಬೆಲ್ಜಿಯಂ ಪ್ರಭುತ್ವದ ಪ್ರಕಟನಗಳನ್ನು ಮುದ್ರಿಸಿಕೊಳ್ಳಬಹುದು.” ಎಂದು ತಿಳಿಯಿಸಿದ್ದಾರೆ. ಇದರಮೇಲೆ ಅನೇಕ ಪ್ರಜೆಗಳು ಆ ನಗರಕ್ಕೆ ಬಂದು ಸೇರುತ್ತಿದ್ದಾರೆ. ತಟಸ್ಥದೇಶೀಯರೆಲ್ಲರಿಗೂ “ಈಗ ನನ್ನನ್ನು ಬೆಲ್ಜಿಯಮ್ಮಿನ ಪ್ರಭುವನ್ನಾಗಿ ಅಂಗೀಕರಿಸುವಿರಾ ?” ಎಂದು ಜರ್ಮನಿಯ ಚಕ್ರವರ್ತಿಯವರು ಕೇಳಿರುವರೆಂದು ಅಮೇರಿಕಾದ ವಾಷಿಂಗ್ಟನ್ನಿನಲ್ಲಿರುವ ರಾಯಭಾರಿಗಳಿಗೆ ಗೊತ್ತಾಗಿರುವುದಂತೆ.

ಈಗ ಮಿತ್ರಮಂಡಲಿಯ ಸೈನ್ಯಗಳು ಫ್ರಾನ್ಸಿಗೆ ಉತ್ತರದಲ್ಲಿ ಬೆಲ್ಜಿಯಂ ದೇಶದೊಳಕ್ಕೂ ಪ್ರವೇಶಿಸಿ, ಅಲ್ಲಿ ಶತ್ರುಗಳಮೇಲೆ ಕಾದಾಡುತ್ತಿವೆ. ಘೆಂಟ್ ಪಟ್ಟಣದ ಬಳಿಯಲ್ಲಿ ಜರ್ಮನರ ೧ ಲಕ್ಷ ಸೈನ್ಯವು ಸೇರಿದೆಯಂತೆ. ಈ ಪಟ್ಟಣದ ಪೂರ್ವಭಾಗದಲ್ಲಿ ಬಹಳ ತೀಕ್ಷ್ಣವಾದ ಫಿರಂಗಿಯುದ್ಧವು ನಡೆಯಿತು. ಬೆಲ್ಜಿಯಮ್ಮಿನವರ ಪರಾಕ್ರಮವನ್ನು ಆಸ್ಟ್ರೇಲಿಯಾದವರು ಮೆಚ್ಚಿಕೊಂಡು ೧೫ ಲಕ್ಷ ರೂ. ಗಳನ್ನು ಬಹುಮಾನವಾಗಿ ಕಳುಹಿಸಿಕೊಟ್ಟಿದ್ದಾರೆ.

ಫ್ರಾನ್ಸ್ ದೇಶ.

ಫ್ರಾನ್ಸಿನ ಉತ್ತರದ ಎಲ್ಲೆಯಲ್ಲಿ ಸಮುದ್ರತೀರದಲ್ಲಿರುವ ಕೆಲೈಯ ಕಡೆಗೆ ಜರ್ಮನ್ ಸೈನ್ಯವು ಬೆಲ್ಜಿಯಮ್ಮಿನಿಂದ ಬರಲಾರಂಭಿಸಿ, ದಾರಿಯಲ್ಲಿರುವ ಬೆಯಿಲೂಲ್-ಹಾಜೆಬ್ರೂಕ್ ಎಂಬ ಪಟ್ಟಣಗಳಮೇಲೆ ಫಿರಂಗಿಗಳನ್ನು ಹಾರಿಸಿತು. ಅಲ್ಲೂ, ಅದಕ್ಕೆ ಪೂರ್ವದಲ್ಲಿರುವ ಲಿಲ್ಲಿಯ ಕೋಟೆಯ ಸುತ್ತಲೂ ಇದ್ದ ಜರ್ಮನರಮೇಲೆ ಮಿತ್ರಸೈನಿಕರು ಭೀಕರವಾಗಿ ಕಾದಾಡಿ, ಅವರನ್ನೆಲ್ಲಾ ಬೆಲ್ಜಿಯಂ ದೇಶದೊಳಕ್ಕೆ ಓಡಿಹೋಗುವಂತೆ ಮಾಡಿದರು. ರಂನ್ಸ್ ಪಟ್ಟಣಕ್ಕೆ ಉತ್ತರದಲ್ಲೂ, ಪೂರ್ವದಲ್ಲೂ ವೇವರಿನ ಬಳಿಯಲ್ಲೂ ಸೆಂಟ್‌ಮಿಹಿಲ್ಲಿಗೆ ದಕ್ಷಿಣದಲ್ಲೂ, ಮಾರ್ಸೆವಿಲ್ಲಿಯ ಸಮೀಪದಲ್ಲೂ ಮಿತ್ರಮಂಡಲಿಯ ಸೈನ್ಯಗಳು ಜರ್ಮನರನ್ನು ಹಿಂದಕ್ಕೆದಬ್ಬಿ ತಾವು ಮುಂದುವರಿಸಿದ್ದಾರೆ. ಅರ್ರಾಸ್-ಅಲ್ಬರ್ಟ್‌ಗಳ ಮಧ್ಯದಲ್ಲಿ ನಮ್ಮ ಸೇನೆಗಳಿಗೆ ಜಯವುಂಟಾಗಿದೆ. ಜರ್ಮನರು ಫಿರಂಗಿ ಗುಂಡುಗಳನ್ನು ಹೊಡೆಯುತ್ತಿದ್ದರೂ ನಮ್ಮ ಕಾಲ್ಬಲವು ಶತ್ರುಗಳನೇಲೆ ಬಿದ್ದು ಹಿಂದಕ್ಕೆ ದೂಡಿರುತ್ತದೆ. ಮಿತ್ರಸೈನ್ಯಗಳು ಬೈಸಿನಬಳಿಯಲ್ಲಿ ಜರ್ಮನರು ತೋಡಿಕೊಂಡಿದ್ದ ಅನೇಕ ಕಂದಕಗಳನ್ನು ಆಕ್ರಮಿಸಿಕೊಂಡುವು. ತಾ|| ೧೪ ರಲ್ಲಿ ಮಿತ್ರಸೈನ್ಯಗಳು ವೆರ್ಡನ್-ಮೆಟ್ಜು ಮಾರ್ಗಗಳ ದಕ್ಷಿಣಕ್ಕೆ ಬಹುದೂರ ಶತ್ರುಗನನ್ನು ಅಟ್ಟಿಕೊಂಡು ಮುಂದಕ್ಕೆ ಸಾಗಿಹೋಗಿದ್ದಾರೆ. ಈಚೆಗೆ ಜರ್ಮನರು ಉತ್ತರದಲ್ಲಿ ಬ್ಲಾಕನ್‌ಬರ್ಗ್-ಬ್ರೂಜೆಸ್ ಕೋರ್ಟ್ರಾಯಿಗಳ ಹತ್ತಿರ ಸ್ವರಕ್ಷಣಾರ್ಥವಾಗಿ ಕಂದಕಗಳನ್ನು ತೋಡಿಕೊಂಡರು. ಕೆಲೈನ ಮೇಲೆ ಒಂದಾವೃತ್ತಿ ಬೀಳಬೇಕೆಂದು ದೊಡ್ಡ ಸೇನೆಯೊಡನೆ ಹೊರಟರು. ಮೌಂಟ್‌ರಿಯೂಲ್ ಹತ್ತಿರ ಫ್ರಾನ್ಸಿನವರು ಬಲವಾದ ಫಿರಂಗಿಗಳನ್ನು ಎತ್ತರವಾದ ಸ್ಥಲದಲ್ಲಿಟ್ಟಿದ್ದರು. ಜರ್ಮನರ ಸೇನೆಯು ಕೆಲೈಯ ಕಡೆಗೆ ಹೋಗಬೇಕೆಂದು ಈ ಸ್ಥಲಕ್ಕೆ ಬಂದಕೂಡಲೇ ಮೇಲಿನಿಂದ ಫ್ರೆಂಚರು ಫಿರಂಗಿಗುಂಡುಗಳನ್ನು ಅವಿಚ್ಛಿನ್ನವಾಗಿ ಸುರಿಸಿದರು. ಈ ಏಟಿಗೆ ಬಹುಜನ ಜರ್ಮನ್‌ಸೈನಿಕರು ಸತ್ತುಬಿದ್ದರು. ಇಲ್ಲಿ ಫ್ರೆಂಚರ ಫಿರಂಗಿಗಳಿವೆಯೆಂಬ ಸಂಗತಿಯು ಜರ್ಮನರಿಗೆ ತಿಳಿದಿರಲಿಲ್ಲ. ಸತ್ತು ಉಳಿದವರು ಛಿದ್ರಛಿದ್ರವಾಗಿ ಗುಂಪೊಡೆದು ಪಲಾಯನಗೊಂಡರು. ಅವರ ಬೆಂಬಿಡದೇ ಮಿತ್ರಸೈನ್ಯದವರು ೨ ದಿನಗಳ ವರೆಗೂ ಅಟ್ಟಿಕೊಂಡು ಹೋಗಿ ಅವರನ್ನು ಬೆಲ್ಜಿಯಂ ದೇಶದೊಳಕ್ಕೆ ಹುಗಿಸಿಬಿಟ್ಟರು. ಈ ಮಧ್ಯೆ ಉತ್ತರದಲ್ಲಿ ಕೆಲ ದಿನಗಳಿಂದ ನಡೆದ ಯುದ್ಧದಲ್ಲಿ ಇಂಗ್ಲೀಷ್ ಫ್ರೆಂಚ್ ಸೈನ್ಯಗಳು ಶತ್ರುಗಳನ್ನು ೩೦ ಮೈಲಿಗಳ ದೂರದವರೆಗೂ ಅಟ್ಟಿಬಿಟ್ಟಿರುವರು. ಫ್ರಾನ್ಸಿನವರು ಈಗ ತಮ್ಮ ದೇಶದಲ್ಲಿರುವ ೧೮೯೫ನೆಯ ವರ್ಷದಲ್ಲಿ ಹುಟ್ಟಿರುವ ಎಂದರೆ ೧೯ ವರ್ಷ ವಯಸ್ಸಾಗಿರುವ ಯುವಕರೆಲ್ಲಾ ಯುದ್ಧಶಿಕ್ಷಣವನ್ನು ಪಡೆಯಲು ಸೇರಬೇಕೆಂದು ಆಜ್ಞಾಪಿಸಿರುವರು.

ಈಗ ಪಶ್ಚಿಮರಣರಂಗದಲ್ಲಿ ಮಿತ್ರಮಂಡಲಿಯವರ ಸಹಾಯಕ್ಕೆ ಲಂಡನ್ನಿನಿಂದ ೧೬ ಅಂಗುಲದ ಮಧ್ಯರೇಖೆಯ ಅಗಲದ ಫಿರಂಗಿಗಳು ಬಂದು ಸೇರಿವೆ. ಇವನ್ನು ಉಪಯೋಗಿಸುತ್ತಿರುವುದರಿಂದ ನಮ್ಮ ಕಡೆಗೆ ಉತ್ತಮವಾದ ಲಾಭವು ತೋರಿಬರುತ್ತಿದೆ. ಶತ್ರುಗಳು ಹಲವು ಕಡೆ ಹಿಮ್ಮೆಟ್ಟುತ್ತಲೇ ಇದ್ದಾರೆ. ಒಟ್ಟಿಗೆ ನಮ್ಮವರಿಗೆ ಆದ ಜಯಲಾಭಗಳೇ ಹೆಚ್ಚಾಗಿವೆ; ದೊಡ್ಡದೊಡ್ಡ ಫಿರಂಗಿಗಳನ್ನು ದೊಡ್ಡ ಯುದ್ಧದಲ್ಲಿ ಉಪಯೋಗಿಸುವುದರಿಂದ ಬಹಳ ಪ್ರಯೋಜನವುಂಟೆಂದು ಈಗಿನ ಯುದ್ಧದಿಂದ ಅನುಭವಕ್ಕೆ ಬಂದಿದೆ. ಫ್ರಾನ್ಸ್ ದೇಶದಲ್ಲಿ ಕಳೆದ ೪-೫ ವಾರಗಳಿಂದಲೂ ಮಿತ್ರಮಂಡಲಿಯ ಸೈನ್ಯಗಳು ಸ್ವಲ್ಪವೂ ವಿರಾಮವಿಲ್ಲದೆ ಉತ್ಸಾಹಕೆಡದೆ ಯುದ್ಧಮಾಡಿ ಒಳ್ಳೇ ಫಲಿತಾಂಶವನ್ನು ಪಡೆದಿರುತ್ತವೆ. ಸೆಪ್ಟಂಬರ್ ತಾ|| ೧೨ ರಿಂದ ಅಕ್ಟೋಬರ್ ತಾ|| ೮ ರ ವರೆಗೆ ಮಿತ್ರಮಂಡಲಿ ಸೈನ್ಯಗಳಲ್ಲಿ ೫೬೦ ಮಂದಿ ಆಫೀಸರುಗಳೂ ೧೯೪೮೦ ಮಂದಿ ಸೈನಿಕರೂ ಮೃತರಾಗಿದ್ದಾರೆ. ಜರ್ಮನ್ ಸೈನಿಕರಲ್ಲಿ ಜ್ವರಬಾಧೆಯು ಹೆಚ್ಚಾಗಿ, ಆಹಾರವು ಕಡಿಮೆಯಾಗಿ, ಅವರು ಬಹಳ ಬಳಲಿದ್ದಾರೆಂಬುದು ಸೆರೆಯಾಗಿ ಸಿಕ್ಕಿರುವ ಜರ್ಮನ್ ಸೈನಿಕರಿಂದ ಗೊತ್ತಾಗಿದೆ.

ಪೂರ್ವರಣರಂಗ.

(ರಷ್ಯಾ-ಜರ್ಮನಿ)

ಜರ್ಮನರು ತಮ್ಮ ಸೈನ್ಯದಲ್ಲಿ ಕೆಲಸಮಾಡಿ ವಿಶ್ರಾಂತಿ ಪಡೆದುಕೊಂಡಿದ್ದವರನ್ನೂ, ಬಾಲಪಾಠಶಾಲೆಗಳ ಉಪಾಧ್ಯಾಯರುಗಳನ್ನೂ ಸಹ ಸೈನಿಕರನ್ನಾಗಿ ಯುದ್ಧಕ್ಕೆ ಕಳುಹಿಸುತ್ತಿದ್ದಾರೆ. ರಷ್ಯನರು ವಾರ್ಸಾಕ್ಕೆ ವಾಯವ್ಯ ಮೂಲೆಯಲ್ಲಿ ಜರ್ಮನರನ್ನು ಪೂರ್ಣವಾಗಿ ಸೋಲಿಸಿ ಓಡಿಸಿದರು. ಜರ್ಮನರ ರಕ್ಷಕಸೈನ್ಯವು ೭ ಮೈಲಿ ಹಿಂದಕ್ಕೆ ಹೋಗಿ ನಿಂತಿತು. ಅಲ್ಲೂ ಉಭಯಸೇನೆಗಳಿಗೆ ಹೋರಾಟವಾಯಿತು. ಅಲ್ಲೂ ರಷ್ಯನ್ನರು ಜರ್ಮನರನ್ನು ಹಿಂದಕ್ಕಟ್ಟಿದರು. ಮರಳಿ ವಾರ್ಸಾಪಟ್ಟಣಕ್ಕೆ ೩೦ ಮೈಲಿಗಳ ದೂರದಲ್ಲಿ ಯುದ್ಧವಾಯಿತು. ಈ ಯುದ್ಧಗಳಲ್ಲಿ ಜರ್ಮನರಕಡೆ ೧೦೦೦೦ ಮಂದಿಗಳು ಕೊಲ್ಲಲ್ಪಟ್ಟರಂತೆ. ಮತ್ತೂ ೧೦೦೦೦ ಮಂದಿ ಜರ್ಮನರೂ ಅವರ ೪೨ ಫಿರಂಗಿಗಳೂ ಸಹ ರಷ್ಯನರಿಂದ ಹಿಡಿದುಕೊಳ್ಳಲ್ಪಟ್ಟುವೆಂದು ಪ್ರಕಟವಾಗಿದೆ. ಈ ವಾರ್ಸಾ ಯುದ್ಧದಲ್ಲಿ ಮೊಟ್ಟಮೊದಲು ಜರ್ಮನರೇ ರಷ್ಯನ್ನರನ್ನು ಸೋಲಿಸಿ ಓಡಿಸಿದ್ದರು. ಆಗ ರಷ್ಯನ್ ಸೇನೆಗಿಂತ ಜರ್ಮನ್ ಸೇನೆಯು ೫ ಪಾಲು ಹೆಚ್ಚಾಗಿದ್ದಿತು. ಆದರೂ ರಷ್ಯನರು ನಿರೀಕ್ಷಿಸಿಕೊಂಡಿದ್ದು ತಮಗೆ ಹೊಸಸೇನೆಯೂ ಫಿರಂಗಿಗಳೂ ಬಂದನಂತರ ತಮಗಿಂತ ಆಗಲೂ ಹೆಚ್ಚಾಗಿದ್ದ ಜರ್ಮನ್ ಸೇನೆಯ ಮೇಲೆ ಬಿದ್ದು ಯುದ್ಧಮಾಡಿ ಓಡಿಸಿದರು. ಈಗ ವಿಶ್ಚುಲಾನದಿಯ ಉತ್ತರದಲ್ಲಿ ಈಸ್ಟರ್‌ನದಿಯನ್ನು ಅನುಸರಿಸಿಕೊಂಡು ವಾರ್ಸಾದಿಂದ ಹಿಡಿದು ಪೇಮ್ಮಿಲ್ಲಿನವರೆಗಿನ ೧೬೦ ಮೈಲಿ ಪ್ರದೇಶದಲ್ಲೆಲ್ಲಾ ಯುದ್ಧವು ಜರುಗುತ್ತಿದೆ. ಇಲ್ಲಿ ಜರ್ಮನಿ ಆಸ್ಟ್ರಿಯಾದ ಸೈನ್ಯಗಳು ೧೫ ಲಕ್ಷದವರೆಗೂ, ರಷ್ಯನರ ಸೈನ್ಯಗಳು ೨೦ ಲಕ್ಷದ ವರೆಗೂ ಇವೆ. ಇಲ್ಲಿನ ರಷ್ಯಾದ ಎಲ್ಲೆಯೊಳಗೆ ಈಗ ಬಹಳ ಚಳಿಯಾಗಿದೆ. ಅಲ್ಲಿಗೆ ತಕ್ಕ ಉಡುಪು ಜರ್ಮನರಿಗಿಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ. ರಷ್ಯನ್ ಸೈನಿಕರಿಗಾದರೋ ಸ್ಥಳದ ವಿದ್ಯಮಾನವು ಗೊತ್ತಿದ್ದುದರಿಂದ ಚಳಿಗಾಲಕ್ಕೆ ತಕ್ಕ ಉಡುಪಿನಿಂದಲೇ ಅವರು ಕಳುಹಿಸಲ್ಪಟ್ಟಿದ್ದಾರೆ. ಈಗ ಜರ್ಮನರು ಈ ಚಳಿಗಾಲವನ್ನು ಹಾಲಂಡಿನಲ್ಲಿ ಕಳೆಯಬೇಕೆಂದು ಯೋಚಿಸಿ, ಯುದ್ಧರಂಗದಿಂದ ಸಾಧ್ಯವಾದಷ್ಟು ಕುದುರೆಗಳನ್ನು ಹಿಂದಕ್ಕೆ ಸಾಗಿಸಿಕೊಂಡು ಹೋಗುತ್ತಿದ್ದಾರೆ. ಹೀಗೆ ಹಿಂದಕ್ಕೆ ಹೋಗುವಾಗ ಸೈನ್ಯಗಳು ಕುಳಿತಿದ್ದ ಹೊಗೆಬಂಡಿಗಳು ರಷ್ಯನ್ನರಿಂದ ಉರುಳಿಸಲ್ಪಟ್ಟು ಅದರಲ್ಲಿದ್ದ ಜರ್ಮನರೆಲ್ಲಾ ಸತ್ತರು. ಎಲ್ಲೆಕಟ್ಟಿನಿಂದ ವಿಶ್ಚುಲಾನದಿಯವರೆಗೆ ಮಾರ್ಗಗಳೆಲ್ಲಾ ಜರ್ಮನರ ಸಾಮಾನುಬಂಡಿಗಳಿಂದಲೂ, ಸತ್ತುಹೋಗಿರುವ ಕುದುರೆಗಳಿಂದಲೂ ತುಂಬಿಹೋಗಿವೆ. ಮಳೆಸುರಿದು ಮಾರ್ಗಗಳೆಲ್ಲಾ ನಡೆಯಲಾಗದಂತೆ ರೊಚ್ಚಾಗಿವೆ. ಯುದ್ಧವು ಎಂದಿಗೆ ಮುಗಿಯುವುದೋ ಎಂದು ಆಸ್ಟ್ರಿಯನ್ ಸೈನಿಕರು ದೈವಕ್ಕೆ ಮೊರೆಯಿಡುತ್ತಿರುವರು. ಆಸ್ಟ್ರಿಯಾದವರ ಫಿರಂಗಿಗಳನ್ನು ಎಳೆಯುವುದಕ್ಕೆ ಕುದುರೆಗಳಿಗೆ ಶಕ್ತಿಯೇ ಇಲ್ಲವಾಗಿದೆ. ಎಂದು ಪೆಟ್ರೋಗ್ರೇಡಿನಿಂದ ಲಂಡನ್ ಟೈಮ್ಸ್‌ಪತ್ರಿಕೆಗೆ ಒಬ್ಬ ಪತ್ರವ್ಯವಹಾರಕನು ಬರೆದಿದ್ದಾನೆ.

ರಷ್ಯಾ-ಆಸ್ಟ್ರಿಯಾ.

ಬೇಂಸಿಲ್ ಪಟ್ಟಣಕ್ಕೆ ದಕ್ಷಿಣದಲ್ಲಿ ರಷ್ಯನರು ಆಸ್ಟ್ರಿಯನ್ನರನ್ನು ಹೊಡೆದೋಡಿಸಿ, ಅವರಲ್ಲಿನ ೭ ಮಂದಿ ಆಫೀಸರುಗಳನ್ನೂ ೫೦೦ ಮಂದಿ ಸೈನಿಕರನ್ನೂ ಕೆಲಫಿರಂಗಿಗಳನ್ನೂ ಹಿಡಿದುಕೊಂಡರು.

ಆಸ್ಟ್ರಿಯಾದವರಿಗೆ ಸೇರಿದ ಟ್ರೀಸ್ಟೆ ಎಂಬ ರೇವೆಯಪಟ್ಟಣವು ಅಡ್ರಿಯಾಟಿಕ್ ಸಮುದ್ರದಲ್ಲಿದೆ. ಇದು ಅವರ ನೌಕಾಶ್ರಯಸ್ಥಲವು ಆಯುಧಶಾಲೆಯು ಇಲ್ಲಿರುವುದು. ಇಲ್ಲಿ ೩೦೦೦ ಜನರು ಕೆಲಸಮಾಡುತ್ತಿದ್ದರು. ಆ ಕೆಲಸಗಾರರೇ ಅಲ್ಲಿನ ಆಯುಧಶಾಲೆಗೆ ಬೆಂಕಿಯಿಕ್ಕಿದರಂತೆ. ಅದರಿಂದ ಇಷ್ಟರಲ್ಲೇ ಯುದ್ಧಕ್ಕೆ ಹೊರಡಲು ಸಾಯುಧವಾಗಿ ಸಿದ್ಧವಾಗಿದ್ದ ಆಸ್ಟ್ರಿಯಾದ ಯುದ್ಧದ ಹಡಗೊಂದು ಪೂರ್ಣವಾಗಿ ಸುಟ್ಟುಹೋಯಿತು. ೬ ಡಿಸ್ಟ್ರಾಯರುಗಳು ಕೆಟ್ಟುಹೋದುವಂತೆ. ಇಲ್ಲಿನ ಆಯುಧಶಾಲೆಯಲ್ಲಿ ಕೆಲಸಮಾಡುತ್ತಿದ್ದ ಇಟಾಲಿಯನ್ ಜನರ ಮೇಲೆ ಆಸ್ಟ್ರಿಯಾದವರಿಗೆ ನಂಬುಗೆಯಿಲ್ಲದಿದ್ದುದರಿಂದ ಅಲ್ಲಿಗೆ ಸ್ಲಾವುಜಾತಿಯವರನ್ನು ನಿಯಮಿಸಿದ್ದರು. ಕಡೆಗೆ ಈ ಪರ್ಯವಸಾನವಾಯಿತು. ಈಗ ಆ ಸ್ಥಲವನ್ನೆಲ್ಲಾ ಸೈನಿಕರು ವಶಪಡಿಸಿಕೊಂಡಿದ್ದಾರೆ. ಹೀಗೆ ಇಲ್ಲಿದ್ದ ಇಟಾಲಿಯನ್ ಪ್ರಜೆಗಳನ್ನೆಲ್ಲಾ ಟ್ರೀಸ್ಟಿಗಾರ್ಡ್ನರು ಹೊರಕ್ಕೆ ಬಲಾತ್ಕಾರದಿಂದ ಕಳುಹಿಸಿಬಿಟ್ಟುದರಿಂದ ಇಟಲಿಯಲ್ಲಿ ಅಸಮಾಧಾನವೆದ್ದಿದೆ.

ಜಲಯುದ್ಧ.

ಉತ್ತರಸಮುದ್ರದಲ್ಲಿ ಮೀನನ್ನು ಹಿಡಿಯುವ ದೋಣಿಗಳವರಾರಾದರೂ ಸರಿಯೆ, ಆ ಪ್ರಾಂತದಲ್ಲಿ ಸುತ್ತುತ್ತಿರುವ ಶತ್ರುಗಳ ಯುದ್ಧದ ಹಡಗುಗಳನ್ನು ತಿಳಿಯಿಸಿ ಅವುಗಳನ್ನು ಹಿಡಿದುಕೊಳ್ಳುವುದಕ್ಕೆ ಅಥವಾ ಧ್ವಂಸಮಾಡುವುದಕ್ಕೆ ಮಾರ್ಗವನ್ನು ತಿಳಿಯಿಸಿದರೆ ಅವರಿಗೆ ೧೫ ಸಾವಿರ ರೂ.ಗಳ ಬಹುಮಾನವೂ, ಅಥವಾ ಇಂಥ ಸ್ಥಲದಲ್ಲಿ ಶತ್ರುಗಳ ಹಡಗುಗಳಿವೆಯೆಂದು ತಿಳಿಯಿಸಿ ಅವುಗಳನ್ನು ಅಟ್ಟಿಕೊಂಡುಹೋಗಲು ಅವಕಾಶವನ್ನುಂಟುಮಾಡಿಕೊಟ್ಟವರಿಗೆ ೩೦೦೦ ರೂ.ಗಳ ಬಹುಮಾನವೂ ಕೊಡಲ್ಪಡುವುದೆಂದು ಇಂಗ್ಲೀಷ್ ನೌಕಾಸೇನಾಧಿಕಾರಿಗಳು ಪ್ರಕಟಿಸಿದ್ದಾರೆ.

ಉತ್ತರಸಮುದ್ರದಲ್ಲಿ ಕಳೆದ ತಾ|| ೧೫ನೆಯ ದಿನ ಥೀಸಸ್ ಎಂಬ ಇಂಗ್ಲೀಷರ ಯುದ್ಧದ ಹಡಗನ್ನು ಮುಳುಗಿಸಬೇಕೆಂದು ಜರ್ಮನರ ಒಂದು ಸಬ್‌ಮೆರೀನ್ (ಜಲಾಂತರ್ಗಾಮಿ) ಪ್ರಯತ್ನಿಸಿತು, ಆದರೆ ಇಂಗ್ಲೀಷರ ಹಡಗು ತಪ್ಪಿಸಿಕೊಂಡಿತು. ಅಷ್ಟರಲ್ಲಿ ಶತೃಗಳ ೧ ಟಾರ್ಪೆಡೋವು ಇಂಗ್ಲಿಷರ “ಹಾಕ್” ಎಂಬ ಯುದ್ಧದಹಡಗಿಗೆ ಬಡಿಯಲು ಅದು ದಡ್ಡಾಗಿ ೫ ನಿಮಿಷಗಳಲ್ಲಿ ಮುಳುಗಿಹೋಯಿತು. ಅದರಲ್ಲಿದ್ದ ೪೦೦ ಮಂದಿಗಳಲ್ಲಿ ೪೯ ಮಂದಿ ಕಲಾಸಿಗಳೂ, ೩ ಮಂದಿ ಸಣ್ಣ ಆಫೀಸರುಗಳೂ ಸಹ ದೋಣಿಗಳಮೇಲೆಯೂ, ಸಣ್ಣ ಸಣ್ಣ ಮರದ ತುಂಡುಗಳನ್ನು ತಪ್ಪಿಕೊಂಡು ನೀರಿನಮೇಲೆ ತೇಲುತ್ತಿದ್ದ ಇನ್ನೂ ೨೧ ಮಂದಿಗಳು ಸಹ ಆ ದಾರಿಯಲ್ಲಿ ಹೋಗುತ್ತಿದ್ದ ಒಂದು ನಾರ್ವೆ ದೇಶದ ಹಡಗಿನ ಸಹಾಯದಿಂದ ಸ್ಕಾಟ್ಲಾಂಡಿಗೆ ಸೇರಿದ ಅಬರ್ಡೀನ್ ರೇವೆಗೆ ಸೇರಿಸಲ್ಪಟ್ಟರು.

ಆಸ್ಟ್ರೇಲಿಯಾದವರ ಒಂದು ಯುದ್ಧದಹಡಗು ಕಾಮೆಟ್ ಎಂಬ ಜರ್ಮನರ ಹಡಗನ್ನು ಹಿಡಿದುಕೊಂಡಿತು. ಅದರಲ್ಲಿದ್ದ ತಂತಿಯಿಲ್ಲದೆ ವಾರ್ತೆಯನ್ನು ಕಳುಹಿಸುವ ಯಂತ್ರಸಾಮಗ್ರಿಯನ್ನೆಲ್ಲಾ ಧ್ವಂಸಮಾಡಿತು.

ಕಳೆದ ತಾ|| ೧೭ರ ಮಧ್ಯಾಹ್ನ ಇಂಗ್ಲೀಷರ ಒಂದು ಕ್ರೂಯಿಝುರು ಕೆಲ ಡಿಸ್ಟ್ರಾಯರುಗಳನ್ನು ಸಂಗಡ ಕರೆದುಕೊಂಡು ಡಚ್ ದೇಶದ ಸಮೀಪದಲ್ಲಿ ನಿಂತಿದ್ದ ಜರ್ಮನಿಯವರ ಡಿಸ್ಟ್ರಾಯರುಗಳು ನಾಲ್ಕರಮೇಲೆಬಿದ್ದು ಯುದ್ಧಮಾಡಿ ಅವು ನಾಲ್ಕನ್ನೂ ಮುಳುಗಿಸಿಬಿಟ್ಟಿತು. ಇದರ ವಿವರಣೆ ಹೇಗೆಂದರೆ— ಎಷ್ಟೋ ದಿನಗಳಿಂದ ಕಣ್ಣಿಗೆ ಕಾಣಿಸದೆ ಇದ್ದ ಜರ್ಮನ್ ಹಡಗುಗಳನ್ನು ಹಾಲೆಂಡಿನ ತೀರದಲ್ಲಿ ಇಂಗ್ಲಿಷರ ನೌಕಾಸೇನೆಯವರು ಕಂಡು ಆಶ್ಚರ್ಯಪಟ್ಟರು. ಇವರನ್ನು ಕಂಡಕೂಡಲೆ ಜರ್ಮನ್ ಕ್ರೂಯಿಝುರುಗಳು ತಲೆತಪ್ಪಿಸಿಕೊಂಡು ಓಡಲು ಪ್ರಯತ್ನಿಸಿದುವು. ಆದರೆ ಇಂಗ್ಲಿಷ್ ನೌಕಾಸೇನೆಯು “ಅನ್‌ಡಾಂಟೆಡ್” ಎಂಬ ಕ್ರೂಯಿಝುರಿನಿಂದ ೫ ಮೈಲಿದೂರ ಗುಂಡುಹೋಗುವ ಫಿರಂಗಿಗಳನ್ನು ಹಾರಿಸಿತು. ಸ್ವಲ್ಪಹೊತ್ತಿಗೆ ಉಳಿದ ಇಂಗ್ಲಿಷ್ ಕ್ರೂಯಿಝುರುಗಳೂ ಅದರ ಸಹಾಯಕ್ಕೆ ಬಂದುವು. ಇವೆಲ್ಲವೂ ಸೇರಿ ಶತ್ರುಗಳ ಹಡಗುಗಳಮೇಲೆ ಯುದ್ಧಕ್ಕೆ ಬಿದ್ದುವು. ಶತೃಗಳ ಹಡಗಿನ ಟಾರ್ಪೆಡೋ ಏಟುಗಳು ಅನ್‌ಡಾಂಟೆಡ್ಡಿಗೆ ಬೀಳದಂತೆ ಉಳಿದ ಹಡಗುಗಳು ಅಡ್ಡಲಾಗಿ ನಿಂತುಕೊಂಡುವು. ಇಂಗ್ಲೀಷರ ಫಿರಂಗಿ ಗುಂಡುಗಳು ಶತ್ರುಗಳ ಹಡಗಿಗೆ ಚೆನ್ನಾಗಿ ತಗುಲಿದುವು. ಜರ್ಮನರ ಗುಂಡುಗಳು ಸರಿಯಾಗಿ ಹೊಡೆಯಲ್ಪಡಲಿಲ್ಲ. ಅದರಿಂದಲೇ ನಮ್ಮ ಕಡೆಯ ಹಡಗುಗಳಿಗೆ ವಿಶೇಷ ನಷ್ಟವೇನೂ ಆಗಲಿಲ್ಲ. ೧ ಘಂಟೆ ಹೊತ್ತು ಯುದ್ಧವಾಗುವುದರಲ್ಲಿ ಶತ್ರುಗಳ ಹಡಗುಗಳು ಮುಳುಗಿ ಮಾಯವಾಗಿ ಹೋದುವು. ಈ ಯುದ್ಧದಲ್ಲಿ ಆಂಗ್ಲರ ನೌಕಾಸೇನೆಯಲ್ಲಿ ಒಬ್ಬ ಅಧಿಕಾರಿಗೆ ಏಟುತಗುಲಿರುವುದು; ೪ ಮಂದಿ ಸೈನಿಕರಿಗೆ ಗಾಯವಾಯಿತು. ಇಂಗ್ಲೀಷ್ ಡಿಸ್ಟ್ರಾಯರುಗಳಿಗೂ ಸ್ವಲ್ಪ ನಷ್ಟವಾಗಿರುವುದು. ಸತ್ತವರು ಹೋಗುತ ಮಿಕ್ಕ ಜರ್ಮನ್ ಸೈನಿಕರು ೩೬ ಮಂದಿಗಳನ್ನು ಆಂಗ್ಲರು ಸೆರೆಯಾಳುಗಳನ್ನಾಗಿ ಹಿಡಿದುತಂದರು.

ಜರ್ಮನಿಯವರ ವೈದ್ಯಶಾಲೆಯಾಗಿ ಉಪಯೋಗಿಸುತ್ತಿದ್ದ ಒಂದು ಹಡಗನ್ನು ಆಂಗ್ಲನೌಕಾಸೈನಿಕರು ಹಿಡಿದು ಅದನ್ನು ಯಾರ್ಮತ್ತಿಗೆ ತಂದರು. ಇದರಲ್ಲಿ ತಂತಿಯಿಲ್ಲದೆ ವಾರ್ತೆ ಕಳುಹಿಸುವ ಕಾರ್ಯಾಲಯವಿದ್ದಿತು. ಅದನ್ನು ಧ್ವಂಸಮಾಡಿದರು. ಫ್ರೆಂಚರ ಕೆಲ ಕ್ರೂಯಿಝುರುಗಳು ಅಡ್ರಿಯಾಟಿಕ್ ಸಮುದ್ರದಲ್ಲಿ ಡಾಲ್ಮೇಷಿಯಾ ತೀರದಲ್ಲಿ ಶತ್ರುಗಳ ಹಡಗುಗಳೇನಾದರೂ ಇವೆಯೋ ಎಂದು ಹುಡುಕುತಿದ್ದುವು. ಅಷ್ಟರಲ್ಲಿ ಕಟಾರೋ ಕಡೆಯಿಂದ ಬಂದ ಆಸ್ಟ್ರಿಯಾದ ಸಬ್‌ಮೇರೀನ್‌ಗಳೆರಡು ಫ್ರೆಂಚರ ಹಡಗುಗಳಮೇಲೆ ಬಿದ್ದುವು. “ವಾಲ್‌ಡೆಕ್‌ರೋಸೊ” ಎಂಬ ಫ್ರೆಂಚರ ಕ್ರೂಯಿಝುರು ಆಸ್ಟ್ರಿಯನ್ನರ ಒಂದು ಸಬ್‌ಮೆರೀನನ್ನ ಮುಳುಗಿಸಿಬಿಟ್ಟಿತು. ಬಳಿಕ ಫ್ರೆಂಚರ ಕ್ರೂಯಿಝುರುಗಳು ಕಟಾರೋ ಕೋಟೆಯಮೇಲೆ ಫಿರಂಗಿಗಳನ್ನು ಹಾರಿಸಿದುವು.

ಚೀನಾದ ಬಳಿಯಲ್ಲಿ ಕಯಾಚೂ ಕೊಲ್ಲಿಯೊಳಗೆ “ಟಕಾಚಿಹೋ” ಎಂಬ ಜಪಾನ್ ಕ್ರೂಯಿಝುರು ನೀರಿನೊಳಗಿದ್ದ ಮದ್ದಿನ ಗೋಳಕ್ಕೆ ಬಡಿದು ಮುಳುಗಿಹೋಯಿತು. ಇದು ೩ ಸಾವಿರ ಟನ್ನುಗಳ ಭಾರವನ್ನು ಹೊರಬಲ್ಲುದಾಗಿದ್ದಿತು.

ಈಚೆಗೆ ಇಂಗ್ಲೀಷರ ಯುದ್ಧದ ಹಡಗುಗಳು ಜರ್ಮನ್ ದೇಶದ ತೀರಗಳಿಗೆ ಹೋಗಿ ಫಿರಂಗಿಗಳನ್ನು ಹಾರಿಸಿದುವೆಂದೂ ಅಷ್ಟರಲ್ಲಿ ಜರ್ಮನರ ಸಬ್‌ಮೆರೈನುಗಳು ಬಂದು ಈ ಹಡಗುಗಳ ಮೇಲೆ ಬೀಳಲು ಡೋವರ್‌ನಿಂದ ಇಂಗ್ಲೀಷರ ಕೆಲಡಿಸ್ಟ್ರಾಯರುಗಳೂ ಗನ್‌ಬೋಟುಗಳೂ ಹೋಗಿ ಜರ್ಮನರ ಸಬ್‌ಮೆರೈನುಗಳನ್ನು ಅಟ್ಟಿದುವೆಂದೂ, ಅವುಗಳಿಗೆ ಸ್ವಲ್ಪ ನಷ್ಟವಾಗಿರುವುದೆಂದೂ, ಇಂಗ್ಲೀಷರ ಗನ್‌ಬೋಟುಗಳು ಇನ್ನೂ ಆ ತೀರಗಳಮೇಲೆ ಗುಂಡುಗಳನ್ನು ಹಾರಿಸುತ್ತಲೇ ಇರುವುವೆಂದೂ, ಅದಕ್ಕೆ ಪ್ರತಿಯಾಗಿ ಜರ್ಮನರ ತೀರಗಳಿಂದಲೂ ಫಿರಂಗಿಗಳು ಹಾರಿಸಲ್ಪಡುತ್ತಿರುವುವೆಂದೂ ಲಂಡನ್ ಟೈಮ್ಸ್ ಪತ್ರಿಕೆಗೆ ಒಬ್ಬ ಪತ್ರವ್ಯವಹಾರಕನು ಬರೆದಿರುವನು. ನಾರ್ವೆಯ ಸಮುದ್ರತೀರಕ್ಕೆ ೧೧ ಮೈಲಿಗಳ ದೂರದಲ್ಲಿ ಗ್ಲಿತ್ರಾ ಎಂಬ ಇಂಗ್ಲೀಷರ ಹಡಗನ್ನು ಒಂದು ಜರ್ಮನ್ ಸಬ್‌ಮೆರೈನು ಮುಳುಗಿಸಿತು. ಇದನ್ನು ಮುಳುಗಿಸುವುದಕ್ಕೆ ಮುಂಚೆ ಸಾಯುಧರಾದ ಜರ್ಮನರು ಆ ಹಡಗಿನ ಮೇಲಕ್ಕೆ ಹತ್ತಿ, ಮೇಲಿದ್ದ ಇಂಗ್ಲೀಷ್‌ಪತಾಕೆಯನ್ನು ಕೆಳಕ್ಕೆ ಇಳುಹಿಸಲು ಕಲಾಸಿಗಳಿಗೆ ಅಪ್ಪಣೆಮಾಡಿ, ಅದನ್ನು ಚೂರುಚೂರಾಗಿ ಹರಿದು ಕಾಲುಕೆಳಕ್ಕೆ ಹಾಕಿ ತುಳಿದು, ಆ ಕಲಾಸಿಗಳನ್ನು ಚಿಕ್ಕ ಬೋಟುಗಳಿಗೆ ಹತ್ತಿಸಿ ಕಳುಹಿಬಿಟ್ಟರು ಎಂದು ಸುದ್ದಿಬಂದಿದೆ.

ಆಕಾಶವಿಮಾನಗಳು.

ರಷ್ಯಾರಾಜ್ಯಕ್ಕೆ ಸೇರಿದ ಪೋಲಾಂಡಿನಲ್ಲಿರುವ ವಾರ್ಸಾ ಪಟ್ಟಣದ ಸಮೀಪದಲ್ಲಿ ಜರ್ಮನರ ಒಂದು ಜಪ್ಲಿನ್ ವಿಮಾನವು ಹಾರಾಡುತ್ತಿರುವಲ್ಲಿ ಆ ಪ್ರಾಂತದ ಅಡವಿಗಳಲ್ಲಿ ಅಡಗಿ ಕುಳಿತಿದ್ದ ರಷ್ಯನ್ ಸೈನಿಕರು ಅದರಮೇಲೆ ಗುಂಡನ್ನು ಹಾರಿಸಿ, ಅದನ್ನು ಹಿಡಿದು ವಾರ್ಸಾಪಟ್ಟಣಕ್ಕೆ ತೆಗೆದುಕೊಂಡು ಹೋದರು. ಒಳಗಿದ್ದವರಿಗೆ ಏಟು ತಗುಲಿರಲಿಲ್ಲ.

ಪಶ್ಚಿಮರಣರಂಗದಲ್ಲಿರುವ ಜರ್ಮನ್ ಸೈನಿಕರಲ್ಲಿ ಟೈಫಸ್ ಎಂಬ ಸಾಂಕ್ರಾಮಿಕ ವಿಷರೋಗವು ಹುಟ್ಟಿ ಬಹಳ ಅನರ್ಥವಾಗುತ್ತಿದೆ. ಅದುಕಾರಣ ತಮ್ಮ ಸೈನಿಕರಿಗೂ ಅದು ವ್ಯಾಪಿಸಿಕೊಂಡೀತೆಂಬ ಭಯದಿಂದ ಫ್ರೆಂಚರು ತಮ್ಮ ವೈಮಾನಿಕರು ಜರ್ಮನರು ಇರುವ ಸ್ಥಲದ ಬಳಿಯಲ್ಲಿ ೬೦೦೦ಅಡಿಗಳ ಮೇಲೆಸಂಚರಿಸಬೇಕೇ ಹೊರತು ಕೆಳಕ್ಕಿಳಿಯಕೂಡದೆಂದು ಪ್ರಕಟಿಸಿರುವರಂತೆ.

ಜಪಾನ್.

ಚೀನಾದಲ್ಲಿರುವ ಜರ್ಮನರ ಸ್ವಾಸ್ಥ್ಯವಾದ ಕಯಾಚೂವಿಗೆ ಸೇರಿದ ಸಿಂಗ್ಟಾ ಪಟ್ಟಣದಮೇಲೆ ಜಪಾನರು ಗುಂಡುಗಳನ್ನು ಹೊಡೆಯುವುದಕ್ಕೆ ಸನ್ನಾಹಮಾಡಿಕೊಂಡು, ನಿಷ್ಕಾರಣವಾಗಿ ಅದರಲ್ಲಿನ ಪ್ರಜೆಗಳಿಗೆ ಹಿಂಸೆಯಾಗಬಾರದೆಂದು ಅವರನ್ನೆಲ್ಲಾ ಹೊರಕ್ಕೆ ಮೊದಲೇ ಕಳುಹಿಸಿಬಿಡುವಂತೆ ಜಪಾನ್ ಚಕ್ರವರ್ತಿಯವರು ಸಿಂಗ್ಟಾ ಕೋಟೆಯಲ್ಲಿದ್ದ ಜರ್ಮನಿ ಸೇನಾನಾಯಕನಿಗೆ ಮುಂದಾಗಿ ತಿಳಿಯಿಸಿ, ಅದರಂತೆ ಮಾಡಿಸಿದರು. ಜಪಾನಿನವರ ಯುದ್ಧದ ಹಡಗುಗಳು ಇಲ್‌ಟಿಲ್-ಕೇಜರ್ ಕೋಟೆಗಳ ಮೇಲೆ ಫಿರಂಗಿಗಳನ್ನು ಹೊಡೆದುವು. ವಿಮಾನಗಳು ಪಟ್ಟಣದ ಮೇಲೆ ಸಿಡಿಮದ್ದುಗಳನ್ನು ಹಾಕಿದುವು. ಕೋಟೆಗಳಲ್ಲಿ ಸ್ವಲ್ಪ ಭಾಗವು ನಾಶವಾಯಿತು. ಜಪಾನರ ನೌಕಾಸೈನ್ಯವು ಫೆಸಿಫಿಕ್ ಮಹಾಸಮುದ್ರದಲ್ಲಿ ಜರ್ಮನಿಗೆ ಸೇರಿದ್ದ ೩ ದ್ವೀಪಸಮೂಹಗಳನ್ನು ವಶಪಡಿಸಿಕೊಂಡಿತು.

ಸರ್ವಿಯಾ-ಮಾಂಟನೀಗ್ರೋ.

ಈ ಸೈನ್ಯಗಳು ಟೂಲ್ಸಾದ ಬಳಿಯಲ್ಲಿ ಆಸ್ಟ್ರಿಯಾದವರ ಮೇಲೆ ಭೀಕರವಾದ ಯುದ್ಧವನ್ನು ಮಾಡಿದುವು. ಇದರಲ್ಲಿ ಜಯಾಪಜಯವು ಗೊತ್ತಾಗಲಿಲ್ಲ. ಆದರೂ ಆಸ್ಟ್ರಿಯನ್ನರ ಕಡೆ ಬಹುಜನರು ಹತರಾದರು. ಸೆರಾಜೇವೋ ಕೋಟೆಗಳ ಇದಿರಿಗಿರುವ ಗ್ಲಾಸಿನಾಟ್ಜಿಯ ದಿಣ್ಣೆಯಮೇಲೆ ನಿಂತಿದ್ದ ಆಸ್ಟ್ರಿಯಾ ಸೈನ್ಯದಮೇಲೆ ಸರ್ವಿಯಾ ಮಾಂಟನೀಗ್ರೋ ಸೈನ್ಯಗಳು ಬಿದ್ದು ಯುದ್ಧಮಾಡಿ ಸಂಪೂರ್ಣವಾಗಿ ಸೋಲಿಸಿ ಓಡಿಸಿಬಿಟ್ಟುವು.

ತುರ್ಕಿ.

ಕಪ್ಪುಸಮುದ್ರದಲ್ಲಿ ತುರ್ಕಿಯವರು ಜರ್ಮನಿಯವರೊಡನೆ ಕಲೆತುಕೊಳ್ಳುವುದಕ್ಕೆ ಯತ್ನಿಸಿರುವರೆಂಬ ಸುದ್ದಿಯುಂಟಾಗಿದೆ. ಗೋಯಿಬೆನ್-ಬ್ರೆಸ್ಲಾ ಎಂಬ ೨ ಯುದ್ಧದ ಹಡಗುಗಳು ಬಲ್ಗೇರಿಯಾ ರುಮೇನಿಯಾ ತೀರಗಳಲ್ಲಿ ಹೋಗುತ್ತಿವೆ. ಕಪ್ಪುಸಮುದ್ರದಲ್ಲಿ ಬಲವಾದ ಫಿರಂಗಿಗಳ ಶಬ್ದವು ಆಯಿತಂತೆ. ಅಲ್ಲೇ ರಷ್ಯನ್ನರು ಜರ್ಮನಿಯವರ ೨ ಹಡಗುಗಳನ್ನು ಹಿಡಿದರು.

ರುಮೇನಿಯಾ.

ಇದರ ಹಿಂದಿನ ರಾಜರು ಮೃತರಾಗಿಹೋಗಲು, ಆಸ್ಥಾನಕ್ಕೆ ಫೆರ್ಡಿನಾಂಡ್ ಎಂಬುವರು ಪ್ರಭುಗಳಾಗಿ ಏರ್ಪಟ್ಟರು. ಅವರು ಪಾರ್ಲಿಮೆಂಟಿಗೆ ಬಂದು ಪ್ರಮಾಣಮಾಡುವಾಗ “ನಾನು ಒಬ್ಬ ರುಮೇನಿಯಾ ದೇಶಸ್ಥನಂತೆಯೇ ದೇಶಸೇವೆಯನ್ನು ಮಾಡುತ್ತೇನೆ ” ಎಂದು ಭಾಷೆಯಿತ್ತರು.

ಎಮ್ಡನ್.

ಸ್ಟೇಟ್ ಸೆಕ್ರೆಟೆರಿಯವರು ನಮ್ಮ ವೈಸ್‌ರಾಯರಿಗೆ ತಾ|| ೧೬ ರಲ್ಲಿ ಕೊಟ್ಟಿರುವ ತಂತ್ರೀವಾರ್ತೆಯಲ್ಲಿ— “ಎಮ್ಡನ್ ಎಂಬ ಜರ್ಮನರ ಯುದ್ಧದ ಹಡಗಿನೊಡನೆ ಇದ್ದ ಕಲ್ಲಿದ್ದಲು ಮೊದಲಾದ ಸಾಮಾನುಗಳನ್ನು ಹೊತ್ತುಕೊಂಡಿದ್ದ “ಮಾರ್ಕೋಮೇನಿಯಾ” ಎಂಬ ಹಡಗನ್ನು ನಮ್ಮ “ಯಾರ್ಮೌತ್” ಎಂಬ ಯುದ್ಧದ ಹಡಗು ಮುಳುಗಿಸಿಬಿಟ್ಟಿತು. ಮತ್ತೂ ಅದರ ಜತೆಯಲ್ಲಿದ್ದ “ಪಾಂಟ್‌ಪೊರಸ್” ಎಂಬ ಹಡಗನ್ನು ಹಿಡಿದುಕೊಂಡಿತು (ಇದು ಗ್ರೀಕರದಂತೆ) ಮತ್ತೂ ೫೦ ಮಂದಿಗಳನ್ನು ಸೆರೆಯಾಗಿ ಹಿಡಿದುಕೊಂಡಿತು.” ಎಂದು ತಿಳಿಯಿಸಿದ್ದಾರೆ. ಎಮ್ಡನ್ ಹಡಗುಮಾತ್ರ ತಪ್ಪಿಸಿಕೊಂಡು ಓಡಿರುವುದು.

ಈ ಹಡಗು ಅರೇಬಿಯಾ ಸಮುದ್ರದಲ್ಲಿ ಪೂರ್ವದಲ್ಲಿ ಹಡಗುಗಳನ್ನು ಮುಳುಗಿಸಿದ್ದ ಲಕ್ಷದ್ವೀಪದ ದಕ್ಷಿಣಕ್ಕೆ ಸ್ವಲ್ಪ ದೂರದೊಳಗೆ ಕಳೆದ ತಾ|| ೧೫ ರಿಂದ ೧೯ ರೊಳಗೆ ಪದಾರ್ಥಗಳಿಂದ ತುಂಬಿದ್ದ ೫ ಹಡಗುಗಳನ್ನು ಮತ್ತೆ ಮುಳುಗಿಸಿಬಿಟ್ಟು ಇನ್ನೆರಡನ್ನು ಹಿಡಿದುಕೊಂಡಿತು. ಇವುಗಳಲ್ಲಿ ‘ಕಾಂಗ್ರಾಂಟು’ ಎಂಬ ಹಡಗಿನಲ್ಲಿದ್ದ ಸಾಮಾನುಗಳೊಳಗೆ ಮದ್ರಾಸುಗೌರ್ನರಿಗೆ ಸೇರಬೇಕಾಗಿದ್ದ ಬಹುಶಃ ೩೦ ಸಾವಿರ ರೂ. ಗಳ ಬೆಲೆಯ ಚಿತ್ರಪಟದ ಪುಸ್ತಕಗಳು ಮೊದಲಾದ ಸಾಮಗ್ರಿಯಿದ್ದುವು. ಟ್ರಾಯಿಲಸ್ ಎಂಬ ಹಡಗಿನಲ್ಲಿ ೩೫೦ ಟನ್ನುಗಳ ತೇಯಲೆಯಿದ್ದಿತು. ಎಕ್ಸ್‌ಪೋರ್ಡ್-ಬ್ಯಾರೆಸ್ಕ್ ಎಂಬ ಇಂಗ್ಲೀಷ್ ಸರ್ಕಾರದ ಕಲ್ಲಿದ್ದಲು ತುಂಬಿದಹಡಗುಗಳನ್ನು ಎಮ್ಡೆನ್ ಹಿಡಿದುಕೊಂಡಿತು ೭ ಹಡಗುಗಳಲ್ಲೂ ಇದ್ದ ೩೨೫ ಮಂದಿ ನಾವಿಕರನ್ನೂ ೨೨ ಮಂದಿ ಪ್ರಯಾಣಿಕರನ್ನೂ ಎಗ್ಬರ್ಟ್ ಎಂಬ ಹಡಗಿನಮೇಲೆ ಹತ್ತಿಸಿ ಕೊಚ್ಚಿಗೆ ಕಳುಹಿಸಿಬಿಟ್ಟಿತು. ಅಲ್ಲದೆ ಹಡಗಿನಲ್ಲಿದ್ದವರೊಳಗೆ ಚೀನಾದವರು ಕೆಲರನ್ನೂ, ಇಬ್ಬರು ಯೂರೋಪ್ಯರನ್ನೂ ಬಿಟ್ಟುಕೊಟ್ಟಿಲ್ಲ. ಈ ಎಮ್ಡನ್ನಿನ ನೌಕಾಧಿಪತಿಯು ಅವರೆಲ್ಲರನ್ನೂ ಮರ್ಯಾದೆಯಿಂದ ಕಂಡಿರುವನು.

ಮೊದಲಿಂದ ಇದುವರೆಗೂ ಈ ಎಮ್ಡನ್ನು ಮುಳುಗಿಸಿರುವ ಹಡಗುಗಳು ೧೫ ಆಗಿರುತ್ತವೆ. ಇದರಿಂದಾದ ನಷ್ಟವು ೩ ಕೋಟಿ ರೂ.ಗಳೆಂದು ಲೆಕ್ಕಮಾಡಲ್ಪಟ್ಟಿದೆ. ಈ ಹಡಗಿನ ಸಹಾಯಕವಾದ ಹಡಗುಗಳು ನಮ್ಮವರ ಹಡಗುಗಳಿಂದ ಧ್ವಂಸಮಾಡಲ್ಪಟ್ಟು ಅದು ಒಂಟಿಯಾಗಿದ್ದರೂ, ಇನ್ನೂ ಸಿಕ್ಕಿಬೀಳದೆ ಇಷ್ಟು ಅನರ್ಥವನ್ನು ಪುನಃ ಮಾಡಿರುವುದನ್ನು ನೋಡಿದರೆ ಆ ಹಡಗಿನ ಅಧಿಪತಿಯ ಸಾಹಸವು ಆಶ್ಚರ್ಯಕರವಾಗಿದೆ.

ಹಿಂದೂಸ್ಥಾನದಸೈನ್ಯ.

ಇದುವರೆಗೆ ಭರತಖಂಡದಿಂದ ಹೋಗಿರುವ ಸೈನ್ಯದೊಳಗೆ ಘೂರ್ಖಾಸೈನ್ಯವೇ ೨೦ ಸಾವಿರ ಇರುವುದು. ಸಮಯಬಿದ್ದರೆ ಇನ್ನೂ ೪೦ ಸಾವಿರ ಸೈನ್ಯವನ್ನು ನೇಪಾಳದ ಪ್ರಭುಗಳು ಕಳುಹಿಸಿಕೊಡಲು ಸಿದ್ಧರಾಗಿರುವರು.

ಈ ಸೈನ್ಯಗಳ ಜತೆಗೆ ಯುದ್ಧಾಂಗಣಕ್ಕೆ ಹೋಗಿರುವ ರಾಜರುಗಳಲ್ಲಿ ಪಾಟಿಯಾಲಾಮಹಾರಾಜರು ಲೆಫ್ಟನೆಂಟ್ ಕರ್ನಲ್‌ರಾಗಿಯೂ, ಇದಾರ್‌ಮಹಾರಾಜರು ಮೇಜರ್‌ರಾಗಿಯೂ, ಪನ್ನಾಸಂಸ್ಥಾನದ ರಾಜಕುಮಾರರೂ, ಜೋಧಪುರದ ಮಹಾರಾಜರೂ ಸಹ ಲೆಫ್ಟನೆಂಟರಾಗಿಯೂ ನಿಯಮಿಸಲ್ಪಟ್ಟಿರುವರು.

ಮತ್ತೂ ಈ ಕೆಳಗಣವರಿಗೆ ಯುದ್ಧಕಾಲದಲ್ಲಿ ಈ ಪ್ರಕಾರವಾದ ಗೌರವೋದ್ಯೋಗಗಳು ಕೊಡಲ್ಪಟ್ಟಿವೆ—ಹೈದರಾಬಾದಿನ ಲ್ಯಾನ್ಸರ್ಸಿನಲ್ಲಿರುವ ಹಾಮಿಜಾರ್ಜಬೇರವರಿಗೆ ಕೇಪ್ಟನ್ ಪದವಿ. ಕುಚ್‌ಬಿಹಾರಿನ ಹಾತೇಂದ್ರನಾರಾಯಣರವರಿಗೂ, ಟಿಕಾರಿಸಂಸ್ಥಾನದ ಮಹಾರಾಜಕುಮಾರರಾದ ನಾರಾಯಣಸಿಂಗರಿಗೂ, ಸರ್ದಾರ್ ಜೋಗೇಂದ್ರಸಿಂಗರಿಗೂಸಹ ಲೆಫ್ಟನೆಂಟ್‌ಪದವಿ.

ಯುದ್ಧರಂಗಕ್ಕೆ ಹೋಗಿರುವ ಹಿಂದೂಸೈನಿಕರನ್ನು ಅಲ್ಲಿನ ಸೈನ್ಯಾಧಿಕಾರಿಗಳು ಬಹಳ ಶ್ರದ್ಧೆಯಿಂದ ನೋಡಿಕೊಳ್ಳುತ್ತಿದ್ದಾರೆ. ಅವರಿಗೆ ಬೇಕಾದ ಪದಾರ್ಥಗಳನ್ನು ಒದಗಿಸಿಕೊಡುವ ಉದ್ಯೋಗಿಗಳೂ ಕೂಡ ಸಮರ್ಪಕವಾಗಿ ಕೆಲಸವನ್ನು ಮಾಡುತ್ತಿದ್ದಾರೆಂದು ಫ್ರಾನ್ಸಿನ ಪ್ರಭುತ್ವದವರು ಪ್ರಕಟಿಸಿದ್ದಾರೆ.

ಮೈಸೂರ್ ಸ್ಟಾರ್.

ಸನ್ ೧೯೧೪ ನೆಯ ಅಕ್ಟೋಬರ್ ತಾ|| ೨೫ನೆಯ ಭಾನುವಾರ.

ಮಹಾಯುದ್ಧ, ಮತ್ತೂ ಜನವಾರ್ತೆ.

ಈಗಿನ ಯೂರೋಪು ಯುದ್ಧದ ಸ್ಥಿತಿಯು ದಿನದಿನಕ್ಕೆ ವಿಸ್ತಾರವಾಗುತ್ತಲೂ, ದೀರ್ಘಕಾಲ ನಡೆಯುವ ಲಕ್ಷಣವನ್ನು ಹೊಂದುತ್ತಲೂ ಬರುತ್ತಿದೆ. ಬರುವ ಫೆಬ್ರುವರಿಯೊಳಗೆ ಇದು ಪರಿಸಮಾಪ್ತಿಗೊಳ್ಳಬಹುದೆಂದು ಮಾಡಲ್ಪಡುತ್ತಿದ್ದ ಊಹೆಯು ಕೊಚ್ಚಿಹೋಯಿತು. ಈಗ ಇಂಗ್ಲೀಷ್-ಫ್ರೆಂಚ್ ಸೇನೆಗಳು ದಿನದಿನಕ್ಕೆ ಬಲವಾಗುತ್ತ ಬಂದಿರುವುದರಿಂದ ಇದುವರೆಗಿನಂತೆ ಅವರು ಆತ್ಮರಕ್ಷಣೆಯಲ್ಲೇ ಇರದೆ ಶತ್ರುಗಳ ದೇಶದಮೇಲೆ ಅಭಿಯೋಗಮಾಡುವುದಕ್ಕೂ, ಬೆಲ್ಜಿಯಮ್ಮಿನಲ್ಲಿ ಅವರು ಬಿಟ್ಟಿರುವ ಬೇರನ್ನು ಉತ್ಪಾಟನಮಾಡುವುದಕ್ಕೂ ಪ್ರಯತ್ನಿಸಿದ್ದಾರೆ. ಮೊನ್ನೆಯ ತಂತ್ರೀವಾರ್ತೆಯಿಂದ ಇಂಗ್ಲೀಷ್ ನೌಕಾ ಸೈನ್ಯವು ಜರ್ಮನ್ ದೇಶದ ಉತ್ತರದ ಸಮುದ್ರತೀರದಲ್ಲಿ ಅಭಿಯೋಗಮಾಡಿದ ಸಂಗತಿಯು ಗೊತ್ತಾಗುತ್ತದೆ. ಇದರಿಂದ ಜರ್ಮನರು ತಮ್ಮ ನೌಕಾಶ್ರಯರಕ್ಷಣೆಗಾಗಿ ಬೆಲ್ಜಿಯಂನಲ್ಲಿದ್ದ ತಮ್ಮ ನೌಕಾ ಸೇನೆಗಳನ್ನು ಅತ್ತಕಡೆಗೆ ಕರೆಯಿಸಿಕೊಂಡಿರುವರೆಂದು ಗೊತ್ತಾಗುತ್ತದೆ. ಪೂರ್ವಪ್ರಸ್ಯಾದಲ್ಲಿ ರಷ್ಯನರ ಹೊಡೆತವು ಪ್ರಬಲವಾಗಿದೆ. ಇನ್ನುಮುಂದೆ ಜರ್ಮನಿಗೆ ಇದುವರೆಗೆ ದೊರೆದಂತಹ ಜಯಲಾಭಗಳು ಆಗುವುದು ಸಾಧ್ಯವಲ್ಲವೆಂದು ಯೋಚಿಸಬಹುದಾಗಿದೆ.

ಶತ್ರುಪಕ್ಷದ ಜರ್ಮನ್-ಆಸ್ಟ್ರಿಯಾ ಸೇನೆಗಳಿಗೂ, ಮಿತ್ರಪಕ್ಷದ ಇಂಗ್ಲೆಂಡು- ಫ್ರಾನ್ಸು- ರಷ್ಯಾಗಳ ಸೇನೆಗಳಿಗೂ ಹೋಲಿಸಿ ನೋಡಿದರೆ ಶತ್ರುಪಕ್ಷದಲ್ಲಿ ಈಗ ೫೪ ಲಕ್ಷ ಸೈನ್ಯವೂ, ಮಿತ್ರಪಕ್ಷದಲ್ಲಿ ಸೈನ್ಯವು ೧ ಕೋಟಿಯಮೇಲೆಯೂ ಇರುತ್ತಿದೆ. ಈ ವ್ಯತ್ಯಾಸವನ್ನು ಪರಿಭಾವಿಸಿದರೂ ಮಿತ್ರಮಂಡಲಿಗೇ ಜಯವು ಪರಿಣಾಮದಲ್ಲಿ ಸಿದ್ಧವೆಂದು ಕಾಣುತ್ತಿದೆ. ಮತ್ತೂ ಧರ್ಮಕ್ಕೇ ಪರಿಣಾಮದಲ್ಲಿ ಜಯವೆಂಬ ತತ್ತ್ವವನ್ನನುಸರಿಸಿ ನೋಡಿದರೂ ರಷ್ಯಾ ಜಪಾನ್ ಯುದ್ಧದಲ್ಲಿ ಕಂಡ ಪರಿಣಾಮದಂತೆ, ಸತ್ಯಧರ್ಮಗಳ ರಕ್ಷಣೆಗಾಗಿ ಮಿತ್ರಮಂಡಲಿಯು ಆಯುಧವನ್ನು ಧರಿಸಿರುವುದರಿಂದ ಈ ಕಡೆಗೇ ಜಯವು ಲಭಿಸಬೇಕಾಗಿದೆ. ನಿರಪರಾಧಿಗಳಾದ ಬೆಲ್ಜಿಯಂನವರಿಗೆ ಜರ್ಮನಿಯು ಮಾಡಿದ ಪಾತಕಗಳಿಗೆ ತಕ್ಕ ಶಿಕ್ಷೆಯು ದೈವಾನುಗ್ರಹದಿಂದ ಆಗಲೇಬೇಕಾಗಿದೆ. ಉಳಿದ ಪರಿಸ್ಥಿತಿಗಳ ಮೇಲಿಂದಲೂ ಯುದ್ಧಕಲಾವಿಶಾರದರು ಮಿತ್ರಮಂಡಲಿಯ ಜಯವನ್ನೇ ಪರಿಣಾಮಫಲವನ್ನಾಗಿ ಊಹಿಸುತ್ತಿದ್ದಾರೆ.

ಜರ್ಮನಿಯಲ್ಲಿ ೩೦ ವರ್ಷದಿಂದಲೂ ಅಖಂಡವಾದ ಯುದ್ಧಸನ್ನಾಹವು ನಡೆದಿದ್ದುದರಿಂದಲೂ, ದೇಶದಲ್ಲಿ ಒಂದುಕಡೆಯಿಂದ ಮತ್ತೊಂದುಮೂಲೆಗೆ ವೇಗದಿಂದ ಸೈನ್ಯಗಳನ್ನು ಸಾಗಿಸಲಿಕ್ಕೆ ಲೋಹಮಾರ್ಗ ಮೊದಲಾದುವುಗಳ ಅನುಕೂಲ್ಯವು ಚೆನ್ನಾಗಿರುವುದರಿಂದಲೂ, ಯುದ್ಧಾರಂಭಕಾಲದಲ್ಲಿ ಅವರಿಗೆ ಎತ್ತೆತ್ತಲೂ ಜಯಲಾಭಗಳು ಕಂಡುದೇನೋ ನಿಜ. ಆದರೆ ಜೂಜಿನಲ್ಲಿ ಮೊದಲೇ ಪ್ರಬಲವಾಗಿ ಓಡಿದ ಕುದುರೆಗಳು ಕಡೆಕಡೆಗೆ ಹೇಗಾಗುವುವೋ ಅಂಥ ಸ್ಥಿತಿಯು ಪರಿಣಾಮದಲ್ಲಿ ಅದಕ್ಕೆ ತಪ್ಪಿದುದಲ್ಲ. ಇಂಗ್ಲೀಷರ ಅಸಿತರಸಾಧಾರಣವಾದ ನೌಕಾಸೇನಾಸಂಪತ್ತಿಯು ಜಗತ್ತನ್ನೇ ತಲ್ಲಣಿಸಬಲ್ಲುದು. ಜಲಯುದ್ಧದಲ್ಲಿ ಜರ್ಮನಿಯು ಪೂರ್ಣವಾಗಿ ರಸಾತಳವನ್ನು ಹೊಂದುವುದರಲ್ಲಿ ಸಂಶಯವಿಲ್ಲ. ಜರ್ಮನಿ-ಆಸ್ಟ್ರಿಯಾ-ಮೊದಲಾದ ಯೂರೋಪ್ಯರಾಷ್ಟ್ರಗಳಲ್ಲಿ ಪ್ರತಿಯೊಬ್ಬ ಯೌವನಸ್ಥನೂ ಸೇನೆಯಲ್ಲಿ ಸೇರಿ ಶಿಕ್ಷಿತನಾಗಬೇಕೆಂಬ ನಿರ್ಬಂಧವಿರುವಂತೆ ಇಗ್ಲೆಂಡಿನಲ್ಲಿರುವುದಿಲ್ಲ. ಆ ನಿರ್ಬಂಧಪದ್ಧತಿಯು ನಮ್ಮಲ್ಲೂ ಅವಶ್ಯಕವಾಗಿ ಮಾಡಲ್ಪಡಬೇಕೆಂದು ಹಿಂದೆ ಸರ್ವಸೇನಾಪತಿಗಳಾಗಿದ್ದ ಲಾರ್ಡ್‌ರಾಬರ್ಟ್ಸ್‌ರವರೇ ಮೊದಲಾದ ಕೆಲ ದೇಶಾಭಿಮಾನಿಗಳು ಹೇಳುತ್ತಿರುವರು. ಅದರಂತೆ ಮಾಡಿದ್ದರೆ ಇಗ್ಲೆಂಡಿನ ಬಲವು ಅತ್ಯಂತಾಭೇದ್ಯವಾಗುತ್ತಿದ್ದಿತು. ಈಗಲೂ ಇಂಗ್ಲೆಂಡಿನವರ ದೇಶಾಭಿಮಾನದಿಂದಲೂ, ಅವರ ಸ್ವಾಸ್ಥ್ಯಗಳ ರಾಜನಿಷ್ಠಾಸಂಪತ್ತಿಯಿಂದಲೂ, ೧-೨ ತಿಂಗಳೊಳಗಾಗಿ ಬಹುಶಃ ೨೦ ಲಕ್ಷದಷ್ಟು ಸೇನೆಯು ಅವರ ಕಡೆಗೆ ಸನ್ನದ್ಧವಾಗಿರುವುದು. ಪ್ರತಿವಾರದಲ್ಲೂ ಅವರ ಸೇನಾಸಂಪತ್ತಿಯು ವೃದ್ಧಿಯಾಗುತ್ತಿರುವುದು. ಸೇನಾನಷ್ಟವು ಶತ್ರುಗಳಲ್ಲಿ ಆಗುತ್ತಿರುವುದರಲ್ಲಿ ¼ ಭಾಗವೂ ಅವರಿಗಾಗುತ್ತಲಿಲ್ಲ.

ಒಳದೇಶದ ವೃತ್ತಾಂತಗಳು

ಶ್ರೀಮನ್ ಮಹಾರಾಜರವರು ರಾಣೀವಾಸದವರೊಡನೆ ಬರುವ ನವೆಂಬರ್ ತಾ|| ೧೭ ರಲ್ಲಿ ತಲಕಾವೇರೀ ಸ್ನಾನಕ್ಕಾಗಿ ಕೊಡಗಿಗೆ ದಯಮಾಡಿಸುವುದಾಗಿ ತಿಳಿಯಬರುತ್ತದೆ.

ಕಳೆದ ಭಾನುವಾರ ಶ್ರೀಮನ್ ಮಹಾರಾಜರವರು ದಿವಾನರೊಡನೆ ಶ್ರೀ ಚಾಮುಂಡೇಶ್ವರೀ ಬೆಟ್ಟಕ್ಕೆ ದಯಮಾಡಿಸಿದ್ದು ಅಲ್ಲಿಯ ಬಂಗಲೆಯಲ್ಲಿ ಭೋಜನಾದಿಗಳನ್ನು ತೀರಿಸಿಕೊಂಡು ಆ ಸಾಯಂತರ ಚಿತ್ತೈಸಿದರು.

ರಾಜಧಾನಿಯಲ್ಲಿ ಜವಳಿ ವ್ಯಾಪಾರಿಗಳಾದ ಮೆಸರ್ಸ್ ಎನ್. ಶ್ರೀಕಂಠಯ್ಯ ಕಂಪೆನಿಯವರು ಈಸಲ ನಡೆದ ದಸರಾ ಕೈಗಾರಿಕೆಯ ಮತ್ತೂ ಬೇಸಾಯದ ವಸ್ತುಪ್ರದರ್ಶನದಲ್ಲಿ ಉತ್ತಮವೂ ಶ್ಲಾಘ್ಯವೂ ಆದ ಅಹಮದಾಬಾದಿನ ಕಲಾಬತ್ತಿನ ಸೀರೆಗಳನ್ನೂ ಸೇಲಂ ಕುಂಭಕೋಣ ಮೊದಲಾದ ದೇಶಗಳ ರೇಶ್ಮೆ ಮಡಿಗಳನ್ನೂ ಪೇಟಾಗಳನ್ನೂ ಶೇಖರಿಸಿದ್ದುದಕ್ಕಾಗಿ ಭಂಗಾರ ಬೆಳ್ಳಿಯ ಮತ್ತೂ ಬ್ರಾಂಜಿನ ಮೆಡಲುಗಳು ಬಹುಮಾನವಾಗಿಕೊಡಲ್ಪಟ್ಟುವೆಂದು ಕೇಳಿ ಸಂತೋಷಿಸುತ್ತೇವೆ.

ಮೈಸೂರು ಗವರ್ನಮೆಂಟ್ ಸೆಕ್ಯೂರಿಟಿಯನ್ನು ಪಡೆದಿರುವ ಮೈಸೂರು ಜೀವವಿಮೆ ಮತ್ತೂ ವಿವಾಹವಿಮೇ ಲೈಫ್ ಅಂಡ್ ಮ್ಯಾರಿಯೇಜ್ ಅಷೂರೆನ್ಸ್ ಕಂಪೆನಿಯ ಮ್ಯಾನೇಜಿಂಗ್ ಡೈರೆಕ್ಟರಾದ ಮ|| ಎಂ. ಎಲ್. ನಾಗಣ್ಣನವರು ಹಿಂದೆ ಅಮೃತಸರದ ನ್ಯಾಷನಲ್ ಜೀವವಿಮೆ ಮತ್ತೂ ಬ್ಯಾಂಕಿಂಗ್ ಕಂಪೆನಿಯ ಚೀಫ್ ಏಜಂಟರಾಗಿದ್ದಾಗ್ಗೆ ಹಣವನ್ನು ದುರುಪಯೋಗಪಡಿಸಿದರೆಂದು, ಮದ್ರಾಸಿನಲ್ಲಿ ಆ ಕಂಪೆನಿಯ ಬ್ರಾಂಚ್ ಸೆಕ್ರೆಟರಿಯಾದ ಮ|| ಟಿ. ಎಸ್. ಆರ್. ಅಯ್ಯರ್‌ರವರು ರಾಜಧಾನಿಯ ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾಡಿದ್ದ ೧೯೧೩-೧೪ ನೆಯ ಸಂ|| ೩೪೮ ನೆಯ ನಂ. ಕ್ರಿಮಿನಲ್ ವಿವಾದವು ಜರುಗಿ ಬಹಳ ದಿವಸದಿಂದ ನರಳುತ್ತಿದ್ದು ಅಪರಾಧದ ರುಜುವಾತಿಗೆ ತಕ್ಕ ಕಾರಣಗಳಿಲ್ಲದೆ ಹೋದುದರ ಮೇಲೆ ಕಳೆದ ತಾ|| ೨೨ರಲ್ಲಿ ತಳ್ಳುಪಡಿ ಮಾಡಲ್ಪಟ್ಟಿತೆಂದು ತಿಳುಹಲು ಸಂತೋಷವಾಗುತ್ತದೆ. ಮ|| ಅಯ್ಯರ್‌ರವರು ಸುಳ್ಳುಸಾಕ್ಷ್ಯವನ್ನು ನುಡಿದುದಕ್ಕಾಗಿ ಅವರಮೇಲೆ ಪ್ರಾಸಿಕ್ಯೂಷನ್ ಮಾಡಲು ಮ|| ನಾಗಣ್ಣನವರು ಕೋರ್ಟಿನವರ ಅಪ್ಪಣೆಯನ್ನು ಕೇಳಿರುತ್ತಾರೆ. ಅಸೂಯೆಯಿಂದ ನಿರಪರಾಧಿಗಳನ್ನು ವೃಥಾ ಕಷ್ಟಕ್ಕೆ ಗುರಿಮಾಡಲೆಳಸುವವರು ಹೀಗೆ ತಾವೇ ಕಷ್ಟನಷ್ಟಗಳಿಗೆ ಗುರಿಯಾಗುವರೆಂಬುದಕ್ಕೆ ಇದು ದೃಷ್ಟಾಂತವು.

ಪತ್ರವ್ಯವಹಾರ.

ದಾವಣಗೆರೆ ಚಿತ್ರದುರ್ಗಕ್ಕೆ ನಡೆದಿರುವ ರಸ್ತೆಯು ಮಧ್ಯ ಅನಗೋಡಿಂದ ಕೊಡಗನೂರು ರೈಲ್ವೇರಸ್ತೆಗೆ ಚಿಕ್ಕ ತಾರಸ್ತೆ ಕೂಡಿರುತ್ತೆ. ಪುನಃ ಮುಂದಕ್ಕೆ ಸಾಗಲಿಲ್ಲ. ಸರ್ಕಾರದ ಉದ್ಯೋಗಸ್ಥರು ಯಾರೂ ಪರಾಮರಿಸಲಿಲ್ಲ. ಏನೆಂದರೆ—ಕಬ್ಬೂರು ಬಾಡ ಕಣಗೇರಿ ಸಂತೆಬೆನ್ನೂರು ಮಣಿಕೆ ೧ ರಸ್ತೆಯನ್ನೂ ಮತ್ತು ಕಬ್ಬೂರಿಂದ ವ್ಯಾಸುವ್ವನಹಳ್ಳಿ ಹುಳಿಲಕೆರೆ ಕಾಗಲೆ ಮತ್ತಿಗೆ ೧ ರಸ್ತೆಯನ್ನೂ ಹಾಕಿದರೆ [illegible]

ಉಪಕಾರವಾಗುತ್ತೆ. ಮಳೆಗಾಲದಲ್ಲಿ ಜನಜಾನುವಾರುಗಳು ರೈಲ್ವೆಬಂಡಿಗೆ ಬರುವದಕ್ಕೆ ಅನಾನುಕೂಲವಾಗುತ್ತೆ. ನಿತ್ಯವೂ ತಪ್ಪದೆ ಅನೇಕ ಬಂಡಿಗಳು ಎತ್ತುಗಳು ಸಹ ಓಡಾಡತಕ್ಕದ್ದಾರಿಯಾಗಿದೆ. ಇದರಿಂದ ಪರೋಪಕಾರ ಕೀರ್ತಿಯುಂಟಾಗುತ್ತದೆ. ಧರ್ಮಸರ್ಕಾರದವರು ಇದನ್ನು ನೆರವೇರಿಸಿಕೊಟ್ಟರೆ ಪ್ರಜೆಗಳಿಗೆ ಹಿತವಾಗುವುದು. ಪ್ರಜಾಹಿತಚಿಂತಕ.

ಸೊಲ್ಲಾಪುರದ ವೀರಶೈವ ಸಂಸ್ಕೃತ ಪಾಠಶಾಲಾ.

ಪ್ರತಿವರ್ಷದಂತೆ ಈ ವರ್ಷದಲ್ಲಿಯೂ ಶ್ರೀಮಂತ ರಾ. ಬ. ಅಪ್ಪಾಸಾಹೇಬ ವಾರದ ಇವರ ಜಾಗದಲ್ಲಿಯ ಸಂಸ್ಕೃತ ಪಾಠಶಾಲೆಯಲ್ಲಿ ಶ್ರೀ ಶಾರದೆಯ ಪೂಜೋತ್ಸವವು ಜರುಗಿತು. ವಿಶಾಲವಾದ ಅಂಗಣದಲ್ಲಿ ಮಂಟಪರಚನೆಯು ಬಹು ಭವ್ಯವಾಗಿ ಮಾಡಲ್ಪಟ್ಟಿದ್ದಿತು. ಸಾಲುಸಾಲಾಗಿ ಕಟ್ಟಿರುವ ಭಾವಚಿತ್ರಗಳಿಂದಲೂ, ಕನ್ನಡಿಗಳಿಂದಲೂ, ಗಾಜಿನ ಹಂಡೆಹುಮ್ಮರಗಳಿಂದಲೂ, ಅತಿ ಧವಲವಾದ ಭಿತ್ತಿನಲ್ಲಿ ಕೆಂಪು ಹಳದಿಬಣ್ಣದ ರೇಷ್ಮೆವಸ್ತ್ರಗಳ ಮಡಿಕೆಗಳಿಂದಲೂ, ಕೇವಲ ಕನ್ನಡಿ ಹರಳುಗಳಿಂದ ನಿರ್ಮಿತವಾದ ಶಾರದಾಸಿಂಹಾಸನದಿಂದಲೂ, ದೀಪೋತ್ಸವದ ಕಾಲದಲ್ಲಿ ಮಂಟಪದ ಶೋಭೆಯು ನೋಡುವವರ ಕಣ್ಮನಗಳನ್ನು ಆಕರ್ಷಿಸುತ್ತಿದ್ದಿತು. ಶಾರದೆಯ ಆಹ್ವಾನವು ಸಪ್ತಮಿ ಮೂಲಾನಕ್ಷತ್ರದಲ್ಲಿ ಆಗಿ, ೩ ದಿವಸಗಳವರೆಗೂ ಮುಂಜಾನೆ ಸಾಯಂಕಾಲಗಳಲ್ಲಿ ಚೌಘುಡವೆಂಬ ಮಂಗಲವಾದ್ಯವೂ ಮತ್ತು ಬ್ಯಾಂಡವಾದ್ಯವೂ ನಡೆಯುತ್ತಿದ್ದಿತು. ಸಾಯಂಕಾಲದ ೬ ಘಂಟೆಯಿಂದ ೭ ರ ವರೆಗೂ ಗಾನವೂ ಬಳಿಕ ೭ ರಿಂದ ೯ ರ ವರೆಗೂ ಕೀರ್ತನವೂ ನಡೆದು ಕಡೆಯದಿವಸ ಅಂದರೆ– ಶು॥ ೯ ದಿವಸ ಸಾಯಂಕಾಲ ಒಂಬತ್ತರವರೆಗೂ ಕೀರ್ತನ ನಡೆದು, ಬಂದ ಶ್ರೀಮಂತ ಬಾಬಾಸಾಹೇಬ ವಾರದ ಶ್ರೀ ಬಂಡೆಪ್ಪ ಅಣ್ಣಾ ಕಾತಾಡಿ, ಶ್ರೀ ಗುರುಶಾಂತಪ್ಪ ಅಣ್ಣಾ ಉಮ್ಮರಜಿ ಶ್ರೀ ಚನ್ನಬಸಪ್ಪ ಅಣ್ಣಾ ಮಡಿಕಿ, ಶ್ರೀ ಮಲ್ಲಿಕಾರ್ಜುನಪ್ಪ ಅಣ್ಣಾ ಪಾಟೀಲ, ಮಿ. ಜಗದೇವರಾವ ದೇಶಮುಖ ಡಾಕ್ಟರ್, ಇವರೇ ಮೊದಲಾದ ವೀರಶೈವ ಬಾಂಧವರಿಗೂ ಇತರ ಗುಜರಾತ ಮೊದಲಾದವರಿಗೂ ಪುಷ್ಪಮಾಲಾ ಗುಚ್ಛ ತಾಂಬೂಲ ಮೊದಲಾದವುಗಳಿಂದ ಮರ್ಯಾದೆಯು ನಡೆದು ಮಂಗಳವಾರ ಶ್ರವಣನಕ್ಷತ್ರದಲ್ಲಿ ಶಾರದೆಯ ವಿಸರ್ಜನವು ಮಾಡಲ್ಪಟ್ಟಿತು. ಓರ್ವಪ್ರೇಕ್ಷಕ.

ಜಗಲೂರು ತಾ॥ ಬಿಳಿಚೋಡು.

ಆಯ್ಯಾ ಈ ನಮ್ಮ ತಾ॥ ಗೆ ಮಿ ಸ್ಟರ್ ಜಿ. ಬಾಲ್‌ಸಾಹೇಬರೆಂಬವರು ಅಮಲ್ದಾರರಾಗಿ ಬಂದು ಸುಮಾರು ೨ ವರ್ಷವಾಯಿತು. ಇವರ ಕಾಲದಲ್ಲಿ ಸರ್ಕಾರದ ಕೆಲಸಗಳೆಲ್ಲ ಬಹು ವಿಚಕ್ಷಣೆಯಿಂದ ನಡೆದು ಈ ತಾಲ್ಲೋಕಿನ ಪ್ರಜೆಗಳೆಲ್ಲಾ ಬಹಳ ಅನುರಾಗ ಪಾತ್ರರಾಗಿದ್ದರು. ಹಾಗು ಕೆಲದಿನದ ಕೆಳಗೆ ಇದೇ ಬಿಳಿಚೋಡು ಗ್ರಾಮಕ್ಕೆ ದಯಮಾಡಿಸಿದ ಕಾಲದಲ್ಲಿ ಗ್ರಾಮಸ್ಥರ ಅಹವಾಲಿನಂತೆ ಪೇಟೆ ಬಸವೇಶ್ವರ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಸಾವಿರಾರು ರೂಪಾಯಿನ ವರೆಗೂ ತಾವೇ ಸ್ವತಃ ಪ್ರತಿಯೊಬ್ಬ ಪ್ರಜಾಪ್ರಮುಖರನ್ನು ಬರಮಾಡಿಕೊಂಡು ಚಂದಾಪಟ್ಟಿಯನ್ನು ಏರ್ಪಡಿಸಿದ್ದರು. ಇನ್ನು ಕೆಲ ಕಾಲದ ವರೆಗೆ ಇವರು ಇಲ್ಲಿಯೇಯಿದ್ದರೆ ಮೇಲ್ಕಂಡ ಕೆಲಸವು ನಿರ್ವಿಘ್ನವಾಗಿ ನೆರವೇರುತ್ತಿತ್ತು. ಇವರಿಗೆ ಕ್ಷಿಪ್ರದಲ್ಲಿಯೆ ಬೇರೆಕಡೆಗೆ ವರ್ಗವಾದುದಕ್ಕಾಗಿ ತುಂಬಾ ವಿಷಾದಿಸುತ್ತೇವೆ. ಹಾಗು ಇವರು ಹೋಗುವ ಕಾಲದಲ್ಲಿ ಇದೇ ಬಿಳಿಚೋಡುಗ್ರಾಮಕ್ಕೆ ದಯಮಾಡಿಸಿರಲು ಗ್ರಾಮಸ್ಥರೆಲ್ಲರೂ ಸಭೆ ಸೇರಿ ಮ॥ ರಾ॥ ಶೆಟ್ಟರ ಸಣ್ಣರುದ್ರಪ್ಪನವರು ಇವರ ಗುಣಾತಿಶಯವಿಷಯದಲ್ಲಿ ಸರಸವಾಗಿ ಒಂದು ಭಾಷಣವನ್ನು ಮಾಡಿದುದಲ್ಲದೆ ತಾವೇ ಸ್ವಂತವಾಗಿ ರಚಿಸಿದ್ದ ಕೆಲವು ಶ್ಲೋಕಗಳನ್ನು ಓದಿ ಹೇಳಿದರು. ನಂತರ ಗಂಧಪುಷ್ಪತಾಂಬೂಲಗಳಿಂದ ಸಭೆಯು ವಿಸರ್ಜಿಸಲ್ಪಟ್ಟು ಗೌರವದಿಂದ ಮಿಸ್ಟರ್ ಸಾಹೇಬರನ್ನು ಕೆಲವುದೂರ ಸಾಗಕಳುಹಿಸಿದರು. ಕೇವಲ ಇಂಗ್ಲೀಷ್‌ಪ್ರಭುಗಳಾದ ಇವರು ಪರಮತಪಕ್ಷಪಾತವಿಲ್ಲದೆ ಈರೀತಿಯಾದ ದೇವತಾಭಿಮಾನವನ್ನು ವಹಿಸಿ ಪ್ರಜಾಸಾಮಾನ್ಯದ ಅನುರಾಗಕ್ಕೂ ಸರ್ಕಾರದವರಮೆಚ್ಚಿಗೆಗೂ ಪಾತ್ರರಾಗಿದ್ದರು. ಇವರನ್ನು ಕಳೆದುಕೊಂಡುದಕ್ಕಾಗಿ ಈ ತಾಲ್ಲೋಕಿನಪ್ರಜೆಗಳೆಲ್ಲರೂ ತುಂಬಾ ವ್ಯಸನಪಡುತ್ತಾರೆ. ಕ್ಷಿಪ್ರದಲ್ಲಿಯೇ ಇವರು ಇನ್ನೂ ಉನ್ನತಪದವಿಗೆ ಹೋಗಲೆಂದು ಕೋರುವ

ಓರ್ವಸತ್ಯವಾದಿ.

ಶ್ರೀ ವಿಶ್ವನಾಥೋ ವಿಜಯತೇತರಾಮ್.

ಜಿಲ್ಲಾ ಬೆಳಗಾವಿ ತಾಲೂಕ ಹುಕ್ಕೇರಿಯ ಸಂಸ್ಕೃತ ಪಾಠಶಾಲೆಯಲ್ಲಿ ಪ್ರತಿವರ್ಷದಂತೆ ಈ ವರ್ಷವಲ್ಲಾದರೂ ಶಾರದಾಮಹೋತ್ಸವ ಸಮಯದಲ್ಲಿ ವಿಜಯದಶಮಿಯು ಮಹೋತ್ಸವಕ್ಕೋಸ್ಕರ ಶೃಂಗರಿಸಿದ ಈ ಗ್ರಾಮದ ರಾಜಮಾರ್ಗವು ತಳಿರುತೋರಣಗಳಿಂದಲೂ, ಎಡಬಲಭಾಗಗಳಲ್ಲಿ ಒಪ್ಪುತ್ತಿರುವ ರಂಭಾಸ್ತಂಭಗಳಿಂದಲೂ, ಚಿತ್ರವಿಚಿತ್ರತರವಾದ ಧ್ವಜಪತಾಕೆಗಳಿಂದಲೂ, ಸಭಿಕರ ಸಂದಣಿಯಿಂದಲೂ ಪ್ರೇಕ್ಷಕರ ಮನಸ್ಸನ್ನಪಹರಿಸುವಂತಾಗಿ ಒಪ್ಪುತ್ತಿತ್ತು. ಇಂಥ ರಾಜಮಾರ್ಗದಲ್ಲಿರುವ ವೀರಶೈವ ಸಂಸ್ಕೃತ ಪಾಠಶಾಲೆಯ ಪ್ರಮುಖರು ಸದರೀಶಾಲೆಯ ಮುಂಭಾಗದಲ್ಲಲಂಕರಿಸಿದ್ದ ಚೌಕಿನಲ್ಲಿ ಸ್ಥಲಾಧಿಕಾರಿಗಳೇ ಮೊದಲಾದ ಸಮಸ್ತ ಮತಸ್ಥರೊಂದಿಗೆ ಏರ್ಪಡಿಸಿದ್ದ ವೀರಶೈವಸಭೆಯ ಅಧ್ಯಕ್ಷಸ್ಥಾನವನ್ನು ಮ॥ ರಾ॥ ರಾ॥ ಶೆಟ್ಟರ ಶ್ರೀ ಶಿವರುದ್ರಪ್ಪನವರು ಸ್ವೀಕರಿಸಿದ್ದರು. ಆಮೇಲೆ ಸದರೀಶಾಲೆಯ ವಿದ್ಯಾರ್ಥಿಗಳು ತಮ್ಮ ಸುಸ್ವರದಿಂದ ಶಾರದಾಸ್ತೋತ್ರಗಳನ್ನು ಮಾಡಿ ಸಭಿಕರ ಮನಸ್ಸನ್ನು ಸಂತೋಷಗೊಳಿಸಿದರು. ತದನಂತರ ಪಾಠಶಾಲಾಧ್ಯಾಪಕ ಪಂಡಿತ ಶ್ರೀ ಬಸವರಾಜಶಾಸ್ತ್ರಿಗಳು ಕೋಡೀಕೊಪ್ಪ ಇವರು ೩ ಘಂಟೆಯಿಂದ ೪ ಘಂಟೆಯುವರೆಗೂ ಸಂಸ್ಕೃತ ವಿದ್ಯಾವಿಷಯದಲ್ಲಿ ಮೃದುಮಧುರವಾದ ವಾಣೀಸರಂಪರೆಗಳಿಂದ ಅಸ್ಖಲಿತವಾಗಿ ಮಾಡಿದ ಭಾಷಣವು ಸಭಿಕರಿಗೆ ಆನಂದವನ್ನುಂಟುಮಾಡಿತು. ಅನಂತರ ಕೂಡಿದ ಸಭಿಕರು ರಾಜರಾಜೇಶ್ವರ ಶ್ರೀಮನ್ ಪಂಚಮಜಾರ್ಜ್ ಮಹೋದಯರ ವಿಜಯಾರ್ಥವಾಗಿ ಪ್ರಾರ್ಥನಾ ಮಾಡಿದನಂತರ ಕೈ॥ ವೈ॥ ವೀರಸಂಗಪ್ಪನವರ ಮತ್ತು ಕೈ॥ ರಾವಸಾಹೇಬ ಮಲ್ಲಪ್ಪಾ ಬಸಪ್ಪಾ ವಾರದ ಇವರುಗಳ ಮಹದುಪಕಾರಗಳನ್ನು ಸ್ಮರಿಸಿ, ಸದರಿಯವರಿಗೆ ಅಗ್ರತಾಂಬೂಲಾದಿಗಳನ್ನು ಹಂಚಿದಮೇಲೆ ಸಭ್ಯಜನರಿಗೆ ಗಂಧತಾಂಬೂಲಾದಿಗಳನ್ನರ್ಪಿಸಿ ಜಯಘೋಷದಿಂದ ಸಭಾವಿಸರ್ಜನೆ ಮಾಡಲ್ಪಟ್ಟಿತು ಓರ್ವವಿದ್ಯಾಭಿಮಾನಿ.

ಶಿವಗಂಗೆ.

ಈ ಕ್ಷೇತ್ರದಲ್ಲಿ ನವರಾತ್ರಿ ಕಟ್ಟಳೆಯು ಬಹಳ ವಿಜೃಂಭಣೆಯೊಡನೆ ನೆರವೇರಿತು. ಈ ಗ್ರಾಮದಲ್ಲಿ ಮಳೆ ಈಗ ೬–೭ ದಿನಗಳಿಂದ ಇಲ್ಲದೆ ಇರುವದು ಜನಗಳಿಗೆ ತುಂಬಾ ವ್ಯಸನಕರವಾಗಿರುತ್ತದೆ. ಚಕೋರಪಕ್ಷಿಗಳು ಮಳೆಗಾಲವನ್ನು ಕಾಣದೆ ಹೇಗೆ ಸಂಕಟಪಡುವವೋ ಆರೀತಿಯಾಗಿ ಜನಗಳ ಮನಸ್ಸು ದಿನೇದಿನೇ ಕರಗುತ್ತಾ ಇದೆ. ನುತ್ತ ಕ್ಷೇತ್ರಕ್ಕೆ ಯಾತ್ರಾರ್ಥಿಗಳು ಬರುತ್ತಲೇ ಇರುತ್ತಾರೆ. ರಾತ್ರಿಕಾಲ ಸಂಚಾರಮಾಡಲು ಪೇಟೆಯಲ್ಲಿ ಲಾಂದ್ರದ ಕಂಭಗಳೇ ಇಲ್ಲ. ಇದರಮೇಲೆ ರಾತ್ರಿವೇಳೆ ಚಿರತೆಗಳ ಕಾಟ ಬಲವಾಗಿದೆ. ನಿನ್ನೆರಾತ್ರಿ ಒಂದು ಭಾರಿಕ್ರಯಬಾಳುವ ಹಸುವನ್ನು ಗ್ರಾಮದೊಳಗೆಯೇ ತಿಂದುಬಿಟ್ಟಿತು. ಇದರಿಂದ ರಾತ್ರಿವೇಳೆ ಸಂಚಾರಮಾಡಲು ಕಷ್ಟವಾಗಿರುತ್ತದೆ. ಸರ್ಕಾರದವರು ಮುನಸಿಪಾಲಟಿಯನ್ನು ಅಭಿವೃದ್ಧಿಗೆ ತರಬೇಕಾಗಿ ಪ್ರಾರ್ಥನೆ. ಇಲ್ಲಿನ ವಿ. ಇ. ಸ್ಕೂಲಿಗೆ ಆರೂಡಿಸ್ಕೂಲಿನಿಂದ ವರ್ಗಪಟ್ಟು ಬಂದಿರುವ ಮ॥ ರಾ॥ ಸಿ. ವೆಂಕಟಸುಬ್ಬಯ್ಯನವರು ಬಹಳ ಮುತುವರ್ಜಿವಹಿಸಿ ಕೆಲಸಮಾಡುತ್ತಾ ಇರುತ್ತಾರೆ. ಈಗ ಹಾಲಿ ೩೦ ಮಂದಿ ಬಾಲಕರು ಸ್ಕೂಲಿನಲ್ಲಿ ವ್ಯಾಸಂಗಮಾಡುತ್ತಾ ಇರುತ್ತಾರೆ. ಇಷ್ಟು ಬಾಲಕರಿಗೂ ಒಬ್ಬರೇ ಪಾಠ ನಡಿಸಲು ಬಹಳ ಕಷ್ಟವಾಗಿರುತ್ತೆಂಬ ವಿಷಯವನ್ನು ಮಹಾಸರ್ಕಾರದವರು ನೋಡಿ ಇನ್ನೊಬ್ಬ ಅ॥ ಮಾ॥ ರನ್ನು ಕೊಟ್ಟರೆ ಬಹಳ ಉನ್ನತಸ್ಥಿತಿಗೆ ಬರುವದರಲ್ಲಿ ಯಾವಸಂಶಯವೂ ಇರಲಾರದು. ಇದಕ್ಕೆ ದೃಷ್ಟಾಂತ ವೇನಂದರೆ— ಇವರು ಬರುವದಕ್ಕೆ ಹಿಂದೆ ಇದ್ದ ಡಿ ಅನಂತರಾಮಯ್ಯನವರ ಕಾಲದಲ್ಲಿ ಸ್ಕೂಲು ಹೀನಸ್ಥಿತಿಯಲ್ಲಿತ್ತು. ಆಗ ಬಾಲಕರು ೨೩ ಜನಗಳು ಮಾತ್ರ ಹಾಜರಾಗುತ್ತಾ ಇದ್ದರೆಂತ ತಿಳಿಯುತ್ತೆ. ಈಗ ಇರುವ ೩೦ ಮಂದಿ ಬಾಲಕರ ಸಂಖ್ಯೆಯನ್ನು ನೋಡಿ, ಮಹಾಸರ್ಕಾರದವರು ಯೋಚಿಸಬಹುದು. ಮತ್ತು ಸ್ಕೂಲಿಗೆ ಗಡಿಯಾರವನ್ನು ತರಿಸಿಕೊಡುವ ಉದ್ದಿಶ್ಯವಾಗಿ ಇಲ್ಲಿನ ಹಾಲಿ ಸ್ಕೂಲ್‌ಮಾಸ್ಟರ್ ಮ॥ ರಾ॥ ವೆಂಕಟಸುಬ್ಬಯ್ಯನವರು ಗ್ರಾಮಸ್ಥರಿಗೆ ಹೇಳುತ್ತಾ ಇದ್ದಾರೆ. ಹಿಂದೆ ಇದ್ದ ಮಾಸ್ಟರು ಸ್ಕೂಲ್ ಬಾಲಕರಿಂದ ಚಂದಾದುಡ್ಡನ್ನೆತ್ತಿ ಒಂದು ಗಡಿಯಾರವನ್ನು ತರಿಸಿದ್ದುದು ಸ್ಕೂಲಿಗೆ ಸೇರಲಿಲ್ಲವಾಗಿ ಪುನಃ ಚಂದಾ ಕೊಡಲು ಆಗುವದಿಲ್ಲವೆಂದು, ಮೊದಲಾಗಿ ಜನಗಳು ಹೇಳುತ್ತಾ ಇದ್ದಾರೆ. ಮಹಾಸರ್ಕಾರದವರು ಸ್ಕೂಲಿನ ಉಪಯೋಗಾರ್ಥವಾಗಿ ಗಡಿಯಾರವನ್ನು ಅರ್ಧಕ್ರಯಕ್ಕೆ ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ

ಪ್ರತ್ಯಕ್ಷದರ್ಶಿ, ಮತ್ತು ವಿದ್ಯಾಭಿಮಾನಿ.

ಜಮಖಂಡಿ ಸಂ॥ ಹುಲಿಹಾಳ.

ಸತ್ಪುರುಷರಿಂದಾಗುವ ಲಾಭವು ಇಷ್ಟೇಯೆಂದು ಅಳತೆಮಾಡಲು ಶಕ್ಯವಲ್ಲ. ಈ ಗ್ರಾಮವು ತೀರ ಸಣ್ಣದಾಗಿದ್ದು ಇಲ್ಲಿ ವಿದ್ಯಾಧರ್ಮನೀತಿ ಇವುಗಳು ಸೇರಲು ಅವಕಾಶವಿದ್ದಿಲ್ಲ. ಆದರೆ ೧೧–೧೨ ವರುಷಗಳ ಈಚೆಗೆ ಅಕಸ್ಮಾತ್ತಾಗಿ ಇಲ್ಲಿ ದಯಮಾಡಿಸಿದ ಸತ್ಪುರುಷರುಗಳಾದ ಶ್ರೀ ಉಮಾಪಿಯ ಮಹಾರಾಜರವರು ಅಕ್ಕಲಕೋಟೆಯ ಶ್ರೀ ರೇವಣಸಿದ್ಧ ಶಿವಚರಣರವರು ಮೈಸೂರಿನ ಶ್ರೀ ಪಂಚಾಕ್ಷರಲಿಂಗಸ್ವಾಮಿ ದೇಶಿಕೇಂದ್ರರವರು ಇವರುಗಳು ಮಹತ್ಪ್ರಯಾಸಗೊಂಡು ಅಜ್ಞರಾಗಿಯೂ ದುರ್ಮಾರ್ಗಿಗಳಾಗಿಯೂ ಇರುವ ಕೆಲವು ಜನರನ್ನು ಸುಜ್ಞರನ್ನಾಗಿಯೂ ಸನ್ಮಾರ್ಗಪ್ರವೃತ್ತರನ್ನಾಗಿಯೂ ಮಾಡಿದರು. ಇವರುಗಳಲ್ಲಿ ಮೈಸೂರಿನ ಶ್ರೀ ಗಳವರಾದರೊ ಪ್ರತಿ ಸಂವತ್ಸರಗಳಲ್ಲೊಂದೆರಡು ಸಾರೆ ಆಗಮಿಸಿ, ಪುರಾಣಮುಖದಿಂದಾಗಲಿ ಶಾಸ್ತ್ರಮುಖದಿಂದಾಗಲಿ ವ್ಯಾಖ್ಯಾನರೂಪದಿಂದಾಗಲಿ ಬಲು ಸೊಗಸಾಗಿ ಜನರಿಗೆ ಸದುಪದೇಶವನ್ನು ಮಾಡುವರಲ್ಲದೆ, ಸಂಸ್ಕೃತ, ಕನ್ನಡ, ಮಹಾರಾಷ್ಟ್ರ, ಹಿಂದಿ ಇವೇ ಮೊದಲಾದ ಭಾಷೆಗಳಲ್ಲಿರುವ ಶ್ರೀಮದ್ವೀರಶೈವ ಮತಗ್ರಂಥಗಳನ್ನೂ, ವೇದಾಂತವೇ ಮೊದಲಾದ ಶಾಸ್ತ್ರಗಳನ್ನೂ, ಮಹಾಪುರಾಣೋಪಪುರಾಣಗಳನ್ನೂ ಕಾವ್ಯನಾಟಕಉಪನಿಷದ್ಧರ್ಮಶಾಸ್ತ್ರ ಚರಿತ್ರೆಗಳೇ ಮೊದಲಾದ ಸುಮಾರು ನಾಲ್ಕುನೂರು ಪುಸ್ತಕಗಳನ್ನು ಸಂಗ್ರಹಿಸಿಟ್ಟಿರುವರು. ಮತ್ತೂ ಈ ಗ್ರಾಮದಲ್ಲಿ ಸ್ವತಂತ್ರವಾದುದೊಂದು ವಾಚನಾಲಯವು ಇರಬೇಕೆಂದು ಮೊದಲಿಂದಮೇಲೆ ಹೇಳುತ್ತಿದ್ದರು. ಸದ್ಯಕ್ಕೆ ಶ್ರೀಗಳವರು ಗ್ರಾಮಾಂತರದಲ್ಲಿದ್ದರೂ ಪತ್ರಮುಖೇನ ಅದೇ ವಿಷಯವನ್ನು ಪುನಃ ಸೂಚಿಸಿದುದಕ್ಕಾಗಿ ಕಳೆದ ಜುಲೈ ತಾ॥ ೯ ರಲ್ಲಿ ಗ್ರಾಮದ ಸುಮಾರು ೪೦ ಜನರು ಮಿಳಿತರಾಗಿ ವಾಚನಾಲಯದ ಪರವಾಗಿಯೂ ಮತ್ತೂ ಅದರ ಉಪಯೋಗಪರವಾಗಿಯೂ ಬಂದ ಪತ್ರವನ್ನೋದಿದಮೇಲೆ ವಾಚಕಶಾಲೆಯನ್ನು ಸ್ಥಾಪಿಸುವುದು ಅವಶ್ಯಕವೆಂದು ಸಭಿಕರು ನಿಶ್ಚಯಿಸಿ, ಸುಮಾರು ೪೫ ರೂಪಾಯಿಗಳವರೆಗೆ ವರ್ಗಣೀ ಪಟ್ಟಿಯನ್ನು ತಯಾರಿಸಿದರು. ಈ ವೃತ್ತಾಂತವನ್ನು ಶ್ರೀಗಳವರಿಗೆ ಲೇಖನದ್ವಾರಾ ಅರಿಕೆಮಾಡಿಕೊಳ್ಳಲು ಅದನ್ನು ನೋಡಿ ಈ ಆಲಯಕ್ಕೆ ಸಾ॥ ಶಿ॥ ಯಜಮಾನ ಚನ್ನಬಸಪ್ಪನವರನ್ನು ಸೆಕ್ರೆಟರಿಗಳನ್ನಾಗಿಯೂ ಶಿರೋಳ ಸಿದ್ಧಪ್ಪನವರು ಅಂಗಡಿ ವೀರಪ್ಪನವರು ಬೂದಾರ ಶಿವಬಸಪ್ಪನವರು ಜವಳಿಗಿ ಗಿರಿಮಲ್ಲಪ್ಪನವರು ಬುದನಿ ವೆಂಕಟಪ್ಪನವರು ಇವರುಗಳನ್ನು ಮೆಂಬರುಗಳನ್ನಾಗಿಯೂ ನಿಯಮಿಸುವಂತೆ ಅಪ್ಪಣೆಯಾಯಿತು. ಆಮೇಲೆ ವಾಚನಾಲಯದ ಸ್ಥಾಪನೋತ್ಸವವು ಜುಲೈ ತಾ॥ ೧೩ರಲ್ಲಿ ಒಂದು ಸ್ವತಂತ್ರವಾದ ಕಟ್ಟಡದೊಳಗೆ ಸೆಕ್ರೆಟರಿಗಳ ಅಧ್ಯಕ್ಷತೆಯಲ್ಲಿ ಸಾಗಿಸಲ್ಪಟ್ಟಿತು. ಇದಕ್ಕೆ ಗ್ರಾಮದ ಸುಮಾರು ೫೦ ಜನ ದೊಡ್ಡಮನುಷ್ಯರು ಬಂದಿದ್ದರು. ಮತ್ತೂ ಗ್ರಾಮಾಧಿಕಾರಿಗಳು ಸ್ಕೂಲ್‌ಮಾಸ್ತರುಗಳು ಹಾಜರಿದ್ದರು ಇವರುಗಳಿಂದ ಸಭೆಯು ಸಂಜೆಯ ೭ ಘಂಟೆಗೆ ಕೂಡಿತು. ಸೆಕ್ರೆಟರಿಯವರು ಅಗ್ರಾಸನವನ್ನು ಸ್ವೀಕರಿಸಿದ ಕೂಡಲೆ ಕರತಾಡನಗಳು ಮಾಡಲ್ಪಟ್ಟವು. ಮ॥ ರಾ॥ ಶಿರೋಳರವರು ವಾಚನಾಲಯದ ವಿಷಯವಾಗಿ ಮಾಡಿದ ಉಪನ್ಯಾಸವು ಸಮಂಜಸವಾಗಿತ್ತು. ತರುವಾಯ ಅಧ್ಯಕ್ಷರಾದರೂ ಇದೇ ವಿಷಯವನ್ನು ವಿಸ್ತಾರವಾಗಿ ಹೇಳಿದರು. ಆಮೇಲೆ ವಾಗ್ದೇವೀಪೂಜೆಯನ್ನೂ ಆಂಗ್ಲಭೂಪತಿಗಳ ಶ್ರೇಯಸ್ತವವೂ ನಡಿಸಲ್ಪಟ್ಟು ಸಭಿಕರಿಗೆ ಪುಷ್ಪತಾಂಬೂಲಾದಿಗಳು ಹಂಚಲ್ಪಟ್ಟು ಜಯಧ್ವಾನದಿಂದ ಸಭೆಯು ವಿಸರ್ಜಿತವಾಯಿತು. ಜನರ ಅಜ್ಞಾನಾಂಧಕಾರವನ್ನು ನಾಶಮಾಡುವ ಸೂರ್ಯಪ್ರಾಯವಾದ ಈ ಲೈಬ್ರರಿಯನ್ನು ಸ್ಥಾಪಿಸಿರುವ ನಮ್ಮ ಶ್ರೀಗಳವರಿಗೆ ಉಮಾಮಹೇಶರು ಶುಭವನ್ನುಂಟುಮಾಡಲೆಂದು ಕೋರುತ್ತೇನೆ.

ಸುಧಾರಣಾಪ್ರಿಯ.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

44

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪ್ರದ್ರೇಕವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರ ಕಫು, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ,ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುಗುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೋಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩–೮–೦. ೮೦ ತೋಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡವೇ ರವಾನಿಸುವೆವು.

ವಿಳಾಸ:— ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪಿನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

೧೯೧೫ ನೆಯ ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಶಾಯಿ ಇಳಿಯದ ಉತ್ತಮವಾದ ಕಾಗದ ಮುದ್ದಾದ ಮುದ್ರಣ. ಅನೇಕವಾದ ಹೊಸಸಂಗತಿಗಳಿವೆ.

೧ ನಂ—ಸಣ್ಣಸೈಜು ಸಾದಾ	೦–೪–೦
೨ ನಂ—ಪೆನ್ಸಿಲ್‌ಮುಚ್ಚಳವುಳ್ಳದು	೦–೬–೦
೩ ನಂ—ದೊಡ್ಡಸೈಜು ಸಾದಾ	೦–೬–೦
೪ ನಂ—ಪೆನ್ಸಿಲ್‌ಮುಚ್ಚಳವುಳ್ಳದು	೦–೮–೦

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ

ಹೆಚ್ಚಾಗಿ ತರಿಸುವವರಿಗೆ ರೂಪಾಯಿ ೧ ಕ್ಕೆ ೦–೨–೦ ಕಮಿಷನ್ ದೊರೆಯುವುದು. ವಿಳಾಸ:—

ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.

4

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೈಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಳಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳುಸಹಿತ ಆದ ಸಮಾರಂಭ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮವಾಡಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಹಿತವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯಮಠದ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೊ, ಬಳ್ಳಾರಿ ಸ್ತ್ರೀ ಸಭಾ ಇವೇ ಫೋಟೊ ಸಿಕ್ಕುತ್ತವೆ ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.

ಹೊಸಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚಿ ಚಲಾಯಿಸುಗಳೊ, ಇದರಲ್ಲಿ ಹಿಂದೆ ಮುಂದೆ ಈಪ್ರಕಾರ ೨ ಫೋಟೊ ಬೇಕಾದ ಸತ್ಪುರುಷರ ನೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ।॥= , ೧, ೧।. ಪ್ರಕಾರ, ಮತ್ತೂ ಬೆಳ್ಳಿಯದು ರು ೧॥ ರೋಲ್ಡ್ ಗೋಲ್ಡು ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨॥। ರೂ.

ಪರೂರಿಗೆ ಏಜಂಟರು ಬೇಕಾಗಿರುತ್ತಾರೆ ಆರ್ಡರ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ. ನಮ್ಮವಿಳಾಸ— ಗಂಗಪ್ಪಾ ಜೀರಿಗೆ,
ಆರ್ಟಿಸ್ಟ್ ಸೊಲ್ಲಾಪುರ.

3

(ಹೊಸಪುಸ್ತಕ ೧೩೪೪ ಪುಟಗಳು) ಶ್ರೀ (ಹೊಸಪುಸ್ತಕ ೧೩೪೪ ಪುಟಗಳು)

ಬ್ರ॥ ಶ್ರೀ॥ ಬಿ. ವಿ. ಸುಬ್ರಹ್ಮಣ್ಯಶರ್ಮವಿರಚಿತವಾದ ಸುಧಾರ ಸಧಾರಾಯಂಬ ಕನ್ನಡ
ಟೀಕಾತಾತ್ಪರ್ಯ ಗಣಿತೋದಾಹರಣೆಗಳಿಂದೊಡಗೂಡಿ

6

ಬೃಹಜ್ಜಾತಕಾಖ್ಯ ಹೋರಾಶಾಸ್ತ್ರಮ್.

ಮಾನವನು ತನ್ನ ಅದೃಷ್ಟಚಕ್ರದ ಫಲಾಫಲಗಳನ್ನು ಅರಿತು, ಮುಂದೊದಗಬಹುದಾದ ಫಲಸ್ವರೂಪವನ್ನೂ ಇತರರ ಸಹಾಯವಿಲ್ಲದೆಯೆ ತಿಳಿದುಕೊಂಡು, ದುಷ್ಫಲಗಳು ದೂರವಾಗಿ, ಸುಫಲಗಳು ಕರಗತವಾಗುವಂತೆ ಮಾಡುವಂತಹ, ಪರಿಹಾರೋಪಾಯಗಳನ್ನು ಸೂಚಿಸಬೇಕಾದರೆ, ನಮ್ಮಿಂದ ಈಗತಾನೆ ಸಂಸ್ಕೃತ ಹಿಂದಿ ಮರಾಠಿ ಭಾಷೆಗಳಿಂದ ತರ್ಜುಮೆಮಾಡಿ ಪ್ರಕಾಶಗೊಂಡ “ಸುಧಾರಸಧಾರಾ” ಎಂಬ ಕನ್ನಡ ಟೀಕಾತಾತ್ಪರ್ಯ ಉದಾಹರಣೆಗಳಿಂದ ಕೂಡಿದ ಬೃಹಜ್ಜಾತಕವೆಂಬ ಹೋರಾಶಾಸ್ತ್ರವೊಂದಲ್ಲದೆ ಮತ್ಯಾವದೂ ಸಮರ್ಥವಾಗಿಲ್ಲವು. ೧೩೪೪ ಪುಟ ೩ ಭಾಗಗಳ ಪುಸ್ತಕ ಒಂದೇಬೈಂಡ್ ಈ ಗ್ರಂಥರತ್ನವು ಆಬಾಲವೃದ್ಧರಾದಿಯಾಗಿ ಅಕ್ಷರವನ್ನರಿತ ಹೆಂಗಸರೂ ಸಹಾಪರರ ಸಹಾಯಾಪೇಕ್ಷೆ ಇಲ್ಲದೆ ಓದಿ ತಿಳಿಯಲು, ಅನುಕೂಲವಾಗಿರುವುದು. ಇದರೊಳಗಡಗಿರುವ ೨೮ ಪ್ರಕರಣಗಳ ವಿಷಯಸಂಗ್ರಹ ವೇನೆಂದರೆ:— ೧–೨ ನೇ ಪ್ರಕರಣಗಳಲ್ಲಿ ಶಾಸ್ತ್ರಪ್ರಯೋಜನವೂ, ಜೋತಿಶಾಸ್ತ್ರದ ಹೋರಾಭಾಗಗಳು ೩, ಸಜೀವನಿರ್ಜೀವವಸ್ತುಗಳ ಉತ್ಪತ್ತಿ ೪, ಗರ್ಭಧಾರಣಯೋಗಗಳು ೫, ಜನನಕಾಲ ಲಕ್ಷಣ ಮತ್ತು ಫಲ ೬, ಬಾಲಾರಿಷ್ಟವಿಚಾರ ಅವುಗಳ ನಿವಾರಣೋಪಾಯ ೭, ಆಯುರ್ದಾಯವಿಚಾರ ೮, ದಶಾಭುಕ್ತಿನಿರ್ಣಯ ೯, ಅಷ್ಟಕವರ್ಗವಿಚಾರ ೧೦, ಜೀವನೋಪಾಯವಿಚಾರ ೧೧, ರಾಜಯೋಗಸೂಚನೆ ಅವುಗಳ ಫಲವಿಚಾರ ೧೨, ೧೮೦೦ ಯೋಗಗಳ ಲಕ್ಷಣ ಮತ್ತು ಫಲ ೧೩, ಚಂದ್ರಸಂಬಂಧವಾದ ಯೋಗಗಳು ೧೪, ಒಂದಕ್ಕಿಂತಲೂ ಹೆಚ್ಚುಗ್ರಹಗಳು ಒಂದೇಕಡೆ ಸೇರಿದರೆ ಅವುಗಳ ಫಲ ೧೫, ಸನ್ಯಾಸಯೋಗಗಳು ೧೬, ನಕ್ಷತ್ರಫಲಗಳು ೧೭, ರಾಶಿಫಲಗಳು ೧೮, ರಾಸಿಗಳ ಫಲ ಮತ್ತು ಕೇರಳಿಯೋಕ್ತ ಫಲಗಳು ೧೯, ದೃಷ್ಟಿಫಲಗಳು ೨೦, ಭಾವಲಕ್ಷಣ ಮತ್ತು ಆ ಫಲಗಳ ವಿಚಾರ ೨೧, ಕ್ಷೇತ್ರಫಲಗಳು ೨೨, ಗ್ರಹಗಳ ಅವಸ್ಥೆ ಅಷ್ಟಕವರ್ಗ ಫಲ ೨೩, ಅನಿಷ್ಟಯೋಗಗಳು ಅವುಗಳಿಂದಾಗುವ ಫಲಗಳು ೨೪, ಸ್ತ್ರೀಜಾತಕ ಅದರ ಫಲಗಳು ೨೫, ಮರಣಕಾರಣ ಅದರ ಫಲಗಳು ೨೬, ನಷ್ಟಜಾತಕ ಬರಿಯುವ ರೀತಿ ೨೭, ದ್ರೇಕ್ಕಾಣವರ್ಣನೆ ಪ್ರಶ್ನೆಗೆ ಬೇಕಾದ ಸಹಾಯವಿಷಯ ೨೮, ಅನುಕ್ರಮಣಿಕಾಸಂಗ್ರಹ ಮತ್ತು ಗ್ರಂಥಕರ್ತರ ವಂಶವರ್ಣನೆ:—

ಮೇಲೆ ಹೇಳಿರುವಂತೆ ಬರೆಯಲ್ಪಟ್ಟ ಒಂದು ಪುಸ್ತಕ ತಮ್ಮ ಬಳಿಯಲ್ಲಿದ್ದರೆ ೧೦ ಜನ ಜ್ಯೋತಿಷ್ಕರಿದ್ದರೆ ಎಷ್ಟು ಅನುಕೂಲವೋ ಅಷ್ಟು ಅನುಕೂಲ. ಇದು ಪ್ರೌಢರಿಗೂ, ಸ್ತ್ರೀಯರಿಗೂ ಧಾರಾಳವಾಗಿ ತಿಳಿಯುವಂತೆ ಉತ್ತಮಕಾಗದದಲ್ಲಿ ಪ್ರಿಂಟ್‌ಮಾಡಿಸಿದೆ, ಈ ತಿಂಗಳು ಆಖೈರಿನೊಳಗಾಗಿ ಆರ್ಡರ್ ಕೊಡುವವರಿಗೆ ೪–೧–೧ ರೂ. ವಿ. ಪಿ. ಛಾರ್ಜು ೦–೬–೧ ಆಣೆ ನಂತರ ೫–೦–೦ ರೂ. ಜಾಗ್ರತೆ ತರಿಸಿಕೊಳ್ಳಿ ನಂತರ ಈ ಬೆಲೆಗೆ ದೊರೆಯಲಾರದು.

ಇತರ ಪುಸ್ತಕಗಳು.

ಟೀಕಾಜೈಮಿನಿ ೯೩೦ ಪುಟ ೪–೦–೦ ರೂ. ಸಟೀಕಹರಿಕಥಾಮೃತಸಾರ ೩೪೪ ಪುಟ ೧–೪–೦ ರೂ. ಕನ್ನಡದ್ವಾದಶಸ್ಕಂಧ ಭಾಗವತ ೩–೦–೦ ರೂ. ಶುಕಸಪ್ತತಿ ೭೦ ಕಥೆ ಶುದ್ಧಪ್ರತಿ ೨–೦–೦ ರೂ. ೪ ಜನ ಫಕೀರರ ಕಥೆ ೦–೮–೦. ಸಟೀಕಾಭೋಜರಾಜಚರಿತ್ರೆ ೦–೮–೦. ಇವುಗಳಲ್ಲದೆ ನಮ್ಮಲ್ಲಿ ಯಾವಾಗ್ಯೂ ಕನ್ನಡ, ಸಂಸ್ಕೃತ, ತೆಲಗು ಗ್ರಂಥಗಳು ದೊರೆಯುತ್ತೆ.

ಟಿ. ಆರ್. ಕೃಷ್ಣಯ್ಯಶೆಟ್ಟಿ, ಬುಕ್‌ಡಿಪೋ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ
ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂ
ಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು
ಕಾಪಾಡುವುದರಲ್ಲಿ ಶ್ರೇಷ್ಠವಾದ

4

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ–ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘುಮಘುಮಿಸುವಂತೆ ಮಾಡುವುವು.

ಶೀತವಾಯು–ಕೆಮ್ಮು–ನೆಗಡಿ–ದಿನಜ್ವರ–ಮೂರರಜ್ವರ ನಾಲ್ಕರಜ್ವರ– ಮಲೇರಿಯಾಜ್ವರ– ತಲೆನೋವು– ಮೈಕೈನೋವು ಮತ್ತು ಭಾರ–ಅರೋಚಕ ಹಲ್ಲುನೋವು–ಹೊಟ್ಟೆನೋವು–ಮಲಬಂಧ–ಅಜೀರ್ಣಭೇದಿ–ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳೆತ–ಹೊಟ್ಟೆಯುಬ್ಬರ–ಮಂದಜ್ವರ–ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ. ಪಿ. ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು, ಉಬ್ಬಸ, ವಾಂತಿ, ವಾಕರಿಕೆ, ಮಲಬಂಧ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತಕ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ. ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ಡಿ॥



5

ದೊಡ್ಡ ಕಂಪೆನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೬ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯು. ಎನ್. ಮತ್ತು ಕಂಪನಿ,
ಬನಾರಸ್ ಸಿಟಿ (ಕಾಶೀ)

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು:— ಚಂಡಮಾರುತ ೦-೨-೦; ಚರಿತಾವೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಪಿಂಜರಿನಚಿತ್ರರಿ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೋಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 56

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೦-೧೨; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್ ಸನ್ಸ್

25 ಸುಗಂಧಕಾರಿ, ಮೈಸೂರು

45 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೫೧೨ ಪುಟ) ಟಪಾಲು ಹಾಸಲು ೪ ಆಣೆ ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೮-೦. (೫೩೬ ಪುಟ)

ಸಚಿತ್ರ ವಿದ್ಯಾಮಂಜರಿಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಕ್ಚಾತುರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಲಿಚ್ಛೆಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯಲ್ಲಾಸೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೬೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ. ೧-೪-೦ ಟಪಾಲ್ ಹಾಸಲು ೩ ಆಣೆ. ಈಗಲೇ ಬರೆ ನಿಮ್ಮ. ನಮ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸಾಲಾಮಿಸ್ರಿಯು ಕಾಬೂಲ್ ದೇಶದಲ್ಲಿ ಪೌಂಡು ೧ ಕ್ಕೆ ೧-೧೦-೦ ಇತ್ತು ಈಗ ಪೌಂಡು ೧ಕ್ಕೆ ೩-೪-೦ ಆಗಿದೆ. ಆದ್ದರಿಂದ ಇದರಕ್ರಯ ೨-೧೦ ರೂಪಾಯಿ ಮಾಡಿರುತ್ತೆ. 12

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬಾ.

ಈ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾ" ವಿನ ಸೇವನೆಯಿಂದ ವೀರ್ಯವು ನೀರಿನಂತೆ ಇದ್ದರೂ, ಸ್ವಪ್ನೇಂದ್ರಿಯವಾದರೂ, ಮೊದಲೇ ಸ್ಖಲನವಾದರೂ, ಮೂತ್ರದಲ್ಲಿ ಉರಿಯುತ್ತಿದ್ದರೂ, ಮೂತ್ರದೊಂದಿಗೆ ವೀರ್ಯವು ಹರಿಯುತ್ತಿದ್ದರೂ, ಕೈ, ಕಾಲು, ಮತ್ತು ಸೊಂಟದಲ್ಲಿ ನೋವಿದ್ದರೂ, ಹಸಿವು ಇಲ್ಲದಿದ್ದರೂ, ಮಲವಿಸರ್ಜನೆಯು ಸರಿಯಾಗಿ ಆಗದಿದ್ದರೂ, ಶರೀರದಲ್ಲಿ ರಕ್ತವು ಕೆಟ್ಟುಹೋಗಿದ್ದರೂ, ದೂರ ನಡೆಯುವುದರಿಂದ ಮೇಲುಬ್ಬಸ ಬರುವುದೂ, ತಲೆಯು ನೋವೂ ಇವುಗಳೆಲ್ಲವೂ ಪಂಜಾಬ್ ಸಾಲಾಮಿಸ್ರೀ ಮುರಬ್ಬಾ ಸೇವನೆಯಿಂದ ಗುಣವಾಗಿ ಶರೀರವನ್ನು ಒಳ್ಳೇ ಸ್ಥಿತಿಯಲ್ಲಿಡುವುದು, ಮೆದುಳಿಗೆ ಬಲವನ್ನುಂಟುಮಾಡುವುದು ಹಳೇ ತಲೆ ನೋವುಗಳನ್ನು ಹೋಗಲಾಡಿಸುವುದು, ಧಾತುವನ್ನು ಶೇಖರಿಸುವುದು, ಸೊಂಟದ ನೋವು ಸ್ವಲ್ಪ ಮಾತ್ರವೂ ಇರಲಾರದು. ಈ ಪಂಜಾಬ್ ಸಾಲಾಮಿಸ್ರಿಯು ಮುರಬ್ಬಾಕ್ಕೆ ತಾಂಬ್ರದ ಮತ್ತು ಭಂಗಾರದ ಭಸ್ಮವು ಎಷ್ಟು ಮಾತ್ರವೂ ಸಮಾನವಾಗಲಾರದು.

ಈ ಮುರಬ್ಬಾವು ಪಂಜಾಬ್ ಸಾಲಾಮಿಸ್ರಿಯಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂ. ಬಹುಮಾನವಾಗಿ ಕೊಡಲ್ಪಡುವುದು.

ಹಾಗೆ ವ್ಯಕ್ತಪಡಿಸಿದವರ ಬಹುಮಾನದಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧ಕ್ಕೆ ರೂ. ೨-೦-೦. ಟಪ್ಪಾಲ್‌ಖರ್ಚು ಬೇರೆ. ಅನುಪಾನಪತ್ರಿಕೆ ಔಷಧದಸಂಗಡ ಇರುತ್ತೆ.

ಡಿ. ಮನ್ನಾಲಾಲ್, ೫ ಹಾಜಿ ಸಾಹೇಬ್ ಮಹಡಿ, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ನಮ್ಮ ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೊ, ದೊಡ್ಡಪೇಟೆ, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು. 23

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊತೆ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯು ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ— ೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಒಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರಂ ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧-೦-೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಮವೈದ್ಯಶಾಲಾ ಮೈಸೂರು.

ನ್ಯಾಯದರ್ಪಣ. 38

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ. ಬೆಲೆ ರೂ. 1-8-0. ವಿ. ಪಿ. ಮೂಲ್ಯ 1-12-0

ಎಂ. ಎಸ್. ನಂಜಪ್ಪನವರು,

ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಸ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚುಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೨-೦

ಉತ್ತಮವಾದ ನಸ್ಯದಪುಡಿ.

ಘಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ನಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್
34 ಕೊಳ್ಳೇಗಾಲದ ತಾಲ್ಲೂಕು.

೧೯೧೪ನೆಯ ಇಸವಿ ಅಕ್ಟೋಬರ್ ತಾ॥ ೨೫ರಿಂದ ೧೯೧೪ನೆಯ ಅಕ್ಟೋಬರ್ ತಾ॥ ೩೧ ರವರೆಗೆ ಸಲ್ಲುವ ಶಾಲೀವಾಹನ ಶಕ ೧೮೩೬ ನೆಯ ಆನಂದನಾಮ ಸಂ॥ ದ ಕಾರ್ತೀಕ ಶು॥ ಸಪ್ತಮಿಯಿಂದ ಕಾರ್ತೀಕ ಶು॥ ತ್ರಯೋದಶಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ತೇದಿ ತುಲಾ
25	¹ಭಾನು	ಸಪ್ತ	38-48	ಪೂಷಾ	13-0	9
26	²ಸೋ	ಅಷ್ಟ	36-27	ಉತ್ತಷಾ	11-53	10
27	³ಮಂ	ನವ	35-20	ಶ್ರವಣ	11-50	11
28	⁴ಬುಧ	ದಶ	35-24	ಧನಿಷ್ಠ	12-58	12
29	⁵ಗುರು	ಏಕಾ	36-49	ಶತಭಿಷ	15-23	13
30	⁶ಶುಕ್ರ	ದ್ವಾ	39-28	ಪೂಭಾ	19-1	14
31	⁷ಶನಿ	ತ್ರ	43-16	ಉತ್ತಭಾ	23-48	15

(1) ವಿಷ್ವಕ್ಸೇನರ್ ತಿರುನ॥, ದೇಶರಾಜೇ ಅ॥ ವರ್ಧಂತೀ. (2) ಕಾರ್ತಿಕಸೋಮವಾರ, ಮೃತ್ಯುಯೋಗಃ. (3) ಕೃತಯುಗಾದಿಃ, ಪೋಹೈಯಾರ್, ಪುಳಲೋ ಕಾಚಾರ್ಯರ್, ತಿರುನ॥. (4) ಮೇಲುಕೋಟೆಯಲ್ಲಿ ಅಷ್ಟತೀರ್ಥೋತ್ಸವಃ, ಭೂಧತ್ತಾಳ್ವಾರ್ ತಿರುನ॥. (5) ಸರ್ವೈಕಾದಶೀ, ಮಹದಾಳ್ವಾರ್, ತಿರುನ॥. (6) ಸ್ವಾರೋಚಿಷಮನ್ವಾದಿಃ, ಉತ್ಥಾನದ್ವಾದಶೀ, ತುಳಸೀಬೃಂದಾವನೋತ್ಸವಃ. (7) ಶನಿಪ್ರದೋಷಃ, ಮೇಲುಕೋಟೆಯಲ್ಲಿ ಅಷ್ಟತೀರ್ಥಸ್ನಾನ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED, NO M 124

ಮೈಸೂರ್ ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು

ವಾರ್ಷಿಕ ಚಂದಾ ೧-೦-೦

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಕ್ಷ್ಯಜ್ಞನಹೃತ್ತಮೋಹರಾಜೀಯತಾತ್ !
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲಪಾಲಂಪಲಂ!
ಸೀಮಾತೀತ ಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ | ಪ್ರೇಮಂಬಿಭ್ರತಿಕೆಯಂಸದಾಪೋರೆಗೆ ಗೌರೀಶಾನುಕಂಪೋಜ್ವಲಂ!

ಅಂಚೆವೆಚ್ಚ ಸೇರಿ ೧-೪-೦

REGISTERED, NO M 124

ಸಂಪುಟ ೨೫) ಮೈಸೂರ ಸ್ಟಾರ್ ಸನ್ ೧೯೧೪ ನೆಯ ಇಸವಿ ನವಂಬರ್ ತಾರೀಖು ೧ನೆಯ ಭಾನುವಾರ. ಸಂಚಿಕೆ ೪೪

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರಿಗೂ ಸ್ಕೂಲ್‌ಮಾಸ್ಟರ್‌ಗಳಿಗೂ ವಿನಂತಿ.

೧೯೧೫ ನೇ ಇಸ್ವಿಯ ಸಚಿತ್ರ ಕ್ಯಾಲೆಂಡರ್‌ಗಳು ಬಿಕರಿಗೆ ಸಿದ್ಧವಾಗಿವೆ ಕ್ರಯ ೧ ಕ್ಕೆ ೦-೦-೬ ಪೈ. ೫೦ ಕ್ಕೆ ೦-೧೧-೦ಆಣೆ ೧೦೦ ಕ್ಕೆ ೧-೫-೦ ಪ್ಯಾಕಿಂಗ್ ಪೋಸ್ಟೇಜು ಮಾಫಿ ೫೦ ಕ್ಯಾಲೆಂಡರ್‌ಗಳಿಗಿಂತಲೂ ಕಡಿಮೆಯಾಗಿ ಪೋಸ್ಟುಮೂಲಕ ರವಾನಿಸಲಾಗುವುದಿಲ್ಲ.

ಈ ಕ್ಯಾಲೆಂಡರಿನಲ್ಲಿ ಇಂಗ್ಲೀಷ್ ಮತ್ತೂ ಕನಡ ತಿಂಗಳೂ, ತಾರೀಖು, ವಾರ, ತಿಥಿ, ನಕ್ಷತ್ರ, ಆಯಾಯ ದಿವಸದ ವಿಶೇಷ ದಿವಸಗಳು ವಿಷಿಷ್ಟ ಹಬ್ಬ ದಿವಸಗಳೂ ಇರುವುದಲ್ಲದೆ ಮೈಸೂರ್ ಮಹಾರಾಜರವರ ಮತ್ತೂ ಯುವರಾಜರವರ ಭಾವಚಿತ್ರಗಳೂ ಮತ್ತೂ ಮೈಸೂರ್ ಸಂಸ್ಥಾನದ ಈಗಿನ ಹೊಸ ಅರಮನೆಯಲ್ಲಿ ನಡೆಯುವ ನವರಾತ್ರಮಹೋತ್ಸವದ ದರ್ಬಾರ್ ಸಹಿತ ಇರುವ ವಕ್ಷೆಯನ್ನೂ ಸಹ ನುಣುಪಾದ (ಗ್ಲೇಜ್‌ಪೇಪರ್) ಕಾಗದದಲ್ಲಿ ಅಂದವಾಗಿ ಪ್ರಿಂಟ್‌ಮಾಡಿಸಿ ಮೇಲ್ಕಂಡ ದರದಂತೆ ಬಹುಸುಲಭಬೆಲೆಗೆ ಕೊಡುತ್ತಲಿದ್ದೇವೆ ಯಾದಕಾರಣ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ ಸ್ವಲ್ಪ ಪ್ರತಿಗಳುಮಾತ್ರ ಉಳಿದಿವೆ. ಬಿಕರಿಯಾದನಂತರಬರತಕ್ಕ ಆರ್ಡರ್‌ಗಳನ್ನೆಲ್ಲಾ ಹೋದವರುಷದಂತೆ ಕ್ಯಾನ್ಸಲ್‌ಮಾಡಲಾಗುತ್ತೆ.

ಈಗತಾನೇ ಸೀಮೆಯಿಂದ ಬಂದಿರತಕ್ಕ ರಖಂವಾರ್ ವಾಚ್‌ಗಳ ಕ್ರಯಪಟ್ಟಿ. 38



೧	ರಾಸ್ಕೋಪ್ ಸಿಕಸ್ಟಂಪೇಟೆಂಟ್‌ಸ್ವಿಸ್‌ಮೇಡ್‌ವಾಚ್	೧ ಕ್ಕೆ	೨-೮-೦
೨	ಗಟ್ಟಿಂ ರೈಲ್ವೇ ರೆಗ್ಯುಲೇಟರ್ ವಾಚ್	೧ ಕ್ಕೆ	೩-೮-೦
೩	ಡಿಟೋ ನಮೂನೆ ಚೆಕ್ಕಸೈಜ್ ವಾಚ್	೧ ಕ್ಕೆ	೪-೪-೦
೪	ಡಿಟೋ ಚೆಕ್ಕಸೈಜ್ ಸ್ಪೆಷಲ್ ಸರ್ವೀಸ್‌ವಾಚ್	೧ ಕ್ಕೆ	೫-೮-೦
೪	ಪರ್ಪಚಲ್‌ಮೆರ್ ಡ್ರಸ್ ವಾಚೆಂಬ ಅತ್ಯುತ್ತಮವಾದ ಲೀವರ್ ವಾಚ್	೧ ಕ್ಕೆ	೮-೧೨-೦
೫	ಡಿಟೋ ನಮೂನೆ ಕೆಂಪುಗಳನ್ನು ಕೆತ್ತಿರುವ ವಾಚ್	೧ ಕ್ಕೆ	೯-೪-೧
೬	ಪೀಕಾಕ್ ವಾಚೆಂಬ ತೆಳುವಾದ ಮತ್ತೂ ಗ್ಯಾರೆಂಟಿಯಾದ ವಾಚ್ (ಸಾವಿರಾರು ವಿಕ್ರಯ)	೧ ಕ್ಕೆ	೧೦-೮-೦
೭	ವಾರಕೊಂದಾವರ್ತಿ ಬೀಗಕೊಡುವ ನಿಕ್ಕಲ್ ಬೆಳ್ಳೀಕೇಸ್ ವಾಚ್	೧ ಕ್ಕೆ	೧೦-೮-೦
೮	ಡಿಟೋ ನಮೂನೆಯಲ್ಲಿ ಅಚ್ಚಬೆಳ್ಳೀಕೇಸಿನ ಚೆಕ್ಕಸೈಜ್ ವಾಚ್	೧ ಕ್ಕೆ	೧೫-೪-೦
೯	೩೦ ಘಂಟೆಗೆ ಒಂದಾವರ್ತಿ ಬೀಗಕೊಡುವ ದೊಡ್ಡ ಬರ್ಮಾಟೈಂಪೀಸ್	೧ ಕ್ಕೆ	೧-೪-೧
೧೦	ಡಿಟೋ ನಮೂನೆ ಅಲಾರಂ ಟೈಂಪೀಸ್	೧ ಕ್ಕೆ	೨-೪-೧
೧೧	ಡಿಟೋ ನಮೂನೆಯಲ್ಲಿ ಘಂಟೆ ನಿಮುಷ ಸೆಕೆಂಡ್ ತೋರಿಸಿ ಅಲಾರಂ ಇದ್ದು ತಾರೀಖು ಸಹ ತೋರಿಸುವ ದೊಡ್ಡ ಟೈಂಪೀಸ್	೧ ಕ್ಕೆ	೩-೭-೦
೧೨	ಖಾತ್ರಿಯಾದ ಅನ್ಸೋನಿಯಾ "ಬಿ" ಟೈಂಪೀಸ್	೧ ಕ್ಕೆ	೨-೮-೦
೧೩	ಡಿಟೋ ಕಂಪೆನಿಯ ಅಲಾರಂಟೈಂಪೀಸ್ (ಬಹಳಿಮುಜಬೂತಾದ್ದು) (ಸಾವಿರಾರುವಿಕ್ರಯ)	೧ ಕ್ಕೆ	೩-೮-೦
೧೪	ಅನ್ಸೋನಿಯಾ ಕಂಪೆನಿಯಲ್ಲಿ ತಯಾರಾದ ಘಂಟೆ, ಅರ್ಧಘಂಟೆ ಹೊಡೆದು ಅಲಾರಂ ಇರತಕ್ಕ ದೊಡ್ಡಟೈಂಪೀಸ್ (ಅನೇಕಜನ ವಿದ್ಯಾರ್ಥಿಗಳು ಇದನ್ನೇ ಉಪಯೋಗಿಸುತ ಲಿದ್ದಾರೆ)	೧ ಕ್ಕೆ	೬-೧೨-೦
೧೫	ಘಂಟೆ, ಅರ್ಧಘಂಟೆ ಹೊಡೆಯುವ ಕ್ಯಾರೇಜ್ ಕ್ಲಾಕೆಂಬ ಟೇಬಿಲ್ ಘಡಿಯಾರ	೧ ಕ್ಕೆ	೪-೧೨-೦
೧೬	ಡಿಟೋ ನಮೂನೆಯಲ್ಲಿ ಘಂಟೆ, ಅರ್ಧಘಂಟೆಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್	೧ ಕ್ಕೆ	೫-೪-೧
೧೭	ಡಿಟೋ ನಮೂನೆಯಲ್ಲಿ ಘಂಟೆಹೊಡೆಯುವದಕ್ಕೆ ಪ್ರತಿಯಾಗಿ ಗಾನಹಾಡುವ ಕ್ಲಾಕ್	೧ ಕ್ಕೆ	೫-೮-೦
೧೮	ಡಿಟೋ ನಮೂನೆಯಲ್ಲಿ ತಾವಿಚ್ಛೈಸಿದ್ಧ ಟೈಂಮಿಗೆ ಕಾಲುಘಂಟೆಕಾಲ ಕರ್ಣಾನಂದವಾಗುವಂತೆ ಮೃದುಮಧುರ ಗಾನಮಾಡತಕ್ಕ ಕ್ಲಾಕ್	೧ ಕ್ಕೆ	೫-೮-೦
೧೯	ಅನ್ಸೋನಿಯಾ ಕಂಪೆನಿಯ ಲಿವರ್ ಕ್ಲಾಕೆಂಬ ಗೋಡೆಗೆ ತಗಲಿಸುವ (೮ ಮೂಲೆಯ) ಅಷ್ಟಕೋಣಾಕೃತಿಯ ಚೆಕ್ಕಸೈಜ್ ಕ್ಲಾಕ್	೧ ಕ್ಕೆ	೬-೮-೦

ರಖಂವಾರ್ ವಾಚ್ ಸರಪಣಿಗಳು.

ನಿಕ್ಕಲ್ ಬೆಳ್ಳಿಯ ವಾಚ್‌ಸರಪಣಿ	೧ ಕ್ಕೆ	೦-೧೨-೦
ಅಚ್ಚಬೆಳ್ಳಿಯ ಜೇಬಿನ ವಾಚ್‌ಸರಪಣಿ	೧ ಕ್ಕೆ	೩-೪-೦
ಅಚ್ಚಬೆಳ್ಳಿಯ ಕೊರಳಸರಪಣಿ	೧ ಕ್ಕೆ	೧-೪-೦
೧೮ ಕ್ಯಾರಟ್ಟು ಚಿನ್ನದ ವಾಚ್‌ಸರಪಣಿ	೧ ಕ್ಕೆ	೫-೮-೦
ವಾಚಿನ ಸರಪಣಿ ತುದಿಯಲ್ಲಿ ಹಾಕುವ ಅಚ್ಚಬೆಳ್ಳಿಯ ಶಾಶ್ವತವಾದ ಕ್ಯಾಲೆಂಡರ್ ಅಂದರೆ ಎಷ್ಟು ವರುಷಗಳ ವರಿಗಾದರೂ ತಾರೀಖು ನೋಡಬಹುದಾದ ಕ್ಯಾಲೆಂಡರ್ ಎಂದೆಂದಿಗೂ ಕೆಡತಕ್ಕದ್ದಲ್ಲ	೧ ಕ್ಕೆ	೧-೧೨-೦
ಡಿಟೋ ನಮೂನೆಯಲ್ಲಿ ೧೮ ಕ್ಯಾರಟ್ಟು ಚಿನ್ನದಿಂದ ತಯಾರಿಸಿದ್ದು	೧ ಕ್ಕೆ	೩-೪-೦

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ಒಂದುಸಾರಿ ಶಾಯಿತುಂಬಿದರೆ ೧೦, ೦೦ ಶಬ್ದಗಳನ್ನು ಬರೆಯಬಹುದಾದ ಲೇಖಣಿಗಳು.

ಪ್ರತಿಯೊಂದಕ್ಕೂ ೧೪ ಕ್ಯಾರಟ್ಟು ಚಿನ್ನದ ನಿಬ್ಬುಹಾಕಿದೆ

ನೆಪ್ಚೂನ್ ೨೦೦ ನೇ ನಂ. ಪೆನ್	೧ ಕ್ಕೆ	೧-೧೪-೦
ನೆಪ್ಚೂನ್ ೨೫ ನೇ ನಂ. ಪೆನ್	೧ ಕ್ಕೆ	೨-೧೦-೦
ನೆಪ್ಚೂನ್ ೨೧೧ ನೇ ನಂ. ಪೆನ್	೧ ಕ್ಕೆ	೪-೨-೦

ಪ್ರತಿಯೊಂದು ಪೆನ್ ತರಿಸಿ ಕೊಳ್ಳುವರಿಗೂ ೪ ಪದಾರ್ಥಗಳನ್ನು ಮುಫತ್ತಾಗಿ ರವಾನಿಸುತ್ತೇವೆ

೧ ಪೆನ್‌ಗಳನ್ನಿಡತಕ್ಕ ಸುಂದರವಾದ ಪೆಟ್ಟಿಗೆ ೧.
೨ ಪೆನ್ನಿಗೆ ಶಾಯಿಹಾಕುವ ಗಾಜಿನಕೊಳವೆ ೧.
೩ ಪೆನ್‌ಗಳನ್ನು ಕ್ಲೀನ್‌ಮಾಡುವ ವಿಧಾನ ಮತ್ತೂ ಶಾಯಿಹಾಕುವ ವಿಧಾನ ಪ್ರಿಂಟಾಗಿರುವ ಚೀಟಿ ೧.
೪ ಪೆನನ್ನು ಜೇಬಿಗೆತಗಲಿಸುವ ಸುಂದರವಾದ ಕ್ಲಿಪ್ ೧.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧-೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಶಿವಪೂಜಾವಿಧಿಃ	೦-೮-೦
ಚಾರುಶೀಲೆಚರಿತ್ರೆ	೦-೫-೦
ಸಟೀಕ ನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವಿವೇಕಮಂಜರಿ (೨ನೆಯ ಭಾಗ)	೦-೩-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆಯವೆಚ್ಚ ಸೇರಿ.

ಹೊಸಪುಸ್ತಕಗಳು.

157

ಸಿದ್ಧಾಂತಶಿಖಾಮಣಿ — ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೩೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ — ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣ'ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಜರ್ಮನರ ಪೈಶಾಚಕೃತ್ಯಗಳು.

ಯುದ್ಧಾರಂಭವಾದಂದಿನಿಂದ ಇವರು ಶತ್ರುರಾಜ್ಯಗಳ ಪಟ್ಟಣಗ್ರಾಮಗಳಲ್ಲಿ ಮಾಡುತ್ತ ಬಂದಿರುವ ನರರಾಕ್ಷಸ ಕೃತ್ಯಗಳು ಗೊತ್ತುಗುರಿಯಿಲ್ಲದಷ್ಟಾಗಿರುವುವು. ಜರ್ಮನರು ಶತ್ರುಗಳ ಪಟ್ಟಣವನ್ನು ಆಕ್ರಮಿಸುವಾಗ ಫಿರಂಗಿ ಗುಂಡುಗಳಿಂದ ಅದನ್ನು ಹೊಡೆಯುವುದಕ್ಕೆ ಮುಂಚೆ ಆ ಪುರದ ಪ್ರಜೆಗಳಿಗೆಲ್ಲಾ ಮುಂದಾಗಿ ತಿಳುವಳಿಕೆ ಕೊಟ್ಟು ಹೊರಕ್ಕೆ ಹೊರಡಿಸಿಬಿಟ್ಟಿರುವರು. ಜರ್ಮನರಾದರೋ ಶತ್ರುದೇಶದ ಪಟ್ಟಣದ ಪ್ರಜೆಗಳನ್ನು ಕೂಡ ಶತ್ರುಸೈನ್ಯಕ್ಕಿಂತಲೂ ಹೆಚ್ಚಿನ ಪ್ರತಿಶಕ್ತಿಗಳನ್ನಾಗಿ ಭಾವಿಸಿ, ಅವರ ಊರುಗಳನ್ನು ಆಕ್ರಮಣ ಮಾಡುವುದಕ್ಕೆ ಮುಂಚೆ ಫಿರಂಗಿ ಗುಂಡುಗಳನ್ನು ಹೊಡೆಯುವುದು ಹಾಗಿರಲಿ, ಊರುಗಳನ್ನು ಹಿಡಿದಮೇಲೂ ಕೂಡ ಅವನ್ನು ಸುಡುವುದು, ಪ್ರಜೆಗಳಿಗೆ ಅರ್ಥದಂಡ— ಮಾನಹಾನಿ-ಪ್ರಾಣಹಾನಿ ಮೊದಲಾದ ನಾನಾಹಿಂಸೆಗಳನ್ನು ಮಾಡುವುದು ವಾಚಾಮಗೋಚರವಾಗಿರುವುದು. ಅವುಗಳ ಸಂಬಂಧದ ವಾರ್ತೆಗನ್ನೇ ಒಂದು ಗ್ರಂಥವನ್ನಾಗಿ ಬರೆದರೂ ಮುಗಿಯಲಾರವು. ಅವುಗಳ ಸ್ವರೂಪನಿರೂಪಣಕ್ಕಾಗಿ ಕೆಲ ಸಂಗತಿಗಳನ್ನು ಇಲ್ಲಿ ನಮ್ಮ ವಾಚಕರಿಗಾಗಿ ವಿವರಿಸಿರುತ್ತೇವೆ.

ಬೆಲ್ಜಿಯಂದೇಶದಲ್ಲಿ ಸುಪ್ರಸಿದ್ಧ ಪುಸ್ತಕ ಭಾಂಡಾಗಾರ ಮೊದಲಾದುವುಗಳನ್ನು ಹೊಂದಿ ವಿಖ್ಯಾತವಾಗಿದ್ದ ಲೋವೈನ್‌ಪಟ್ಟಣವನ್ನು ಜರ್ಮನರು ಸುಟ್ಟುಬಿಟ್ಟರಷ್ಟೆ. ಆಗ ಆ ಪಟ್ಟಣದಲ್ಲಿ ಪ್ರತ್ಯಕ್ಷವಾಗಿದ್ದ ಡಚ್‌ಪ್ರಜೆಯೊಬ್ಬನು ತನ್ನನುಭವವನ್ನು ಕುರಿತು ಬರೆದಿರುವುದರಲ್ಲಿ—“ಇವರು ನಿಜವಾಗಿಯೂ ಘಾತುಕಮೃಗಗಳೋ ಅಥವಾ ಪೈಶಾಚಗಣಕ್ಕೆ ಸೇರಿದ ಕಡಿಕರೋ ಕಾಣೆ. ಈ ಜರ್ಮನರು ಪುರಪ್ರವೇಶಮಾಡುವುದಕ್ಕೆ ಮುಂಚೆ ಪೋಲೀಸಿನವರಲ್ಲಿದ್ದ ಆಯುಧಗಳನ್ನೇ ಅಲ್ಲದೆ ಪ್ರಜೆಗಳಲ್ಲಿದ್ದ ಆಯುಧಗಳನ್ನೂ ಕಿತ್ತುಕೊಂಡರು. ಕಡೆಗೆ ಮಕ್ಕಳಾಡುವ ತುಪಾಕಿಗಳನ್ನೂ ಕಿತ್ತುಕೊಂಡರು. ಆದರೆ ಶತ್ರುಗಳ ವಿಷಯದಲ್ಲಿ ಹೀಗೆ ಮಾಡುವುದೇನೂ ಆಶ್ಚರ್ಯವಲ್ಲ. ಇರಲಿ, ಇವರು ಅಷ್ಟಕ್ಕೇ ಬಿಟ್ಟರೆ? ಪಟ್ಟಣವನ್ನೆಲ್ಲಾ ಸುಟ್ಟುಬಿಟ್ಟರು. ಊರನ್ನು ನುಗ್ಗಿದ ಒಂದೆರಡುದಿನಗಳೊಳಗಾಗಿ ಪ್ರಜೆಗಳು ತಮಗೆ ದಿನ ೧ ಕ್ಕೆ ೬೦ ಸಾವಿರ ರೂ.ಗಳಂತೆ ಕೊಡಬೇಕೆಂದು ನಿರ್ಬಂಧಿಸಿದರು. ಇಷ್ಟು ಹಣವನ್ನು ಪ್ರತಿದಿನವೂ ಅವರು ಎಲ್ಲಿಂದ ತಂದುಕೊಡಬೇಕು? ಈ ಕ್ರೂರರ ಹಿಂಸೆಯನ್ನು ತಾಳಲಾರದೆ ಪ್ರಜೆಗಳು ಅಷ್ಟಿಷ್ಟನ್ನು ನೋಟುಗಳ ರೂಪವಾಗಿಯೂ ನಾಣ್ಯದ ರೂಪವಾಗಿಯೂ ತಂದುಕೊಟ್ಟರು. ಈ ರಾಕ್ಷಸರು ಅದಕ್ಕೆ ತೃಪ್ತಿಪಡದೆ ನೋಟುಗಳಿಗೆ ಹಣವನ್ನು ತಂದುಕೊಡಿರೆಂದು ಬಾಧಿಸಿದರು. ಬಳಿಕ ಜರ್ಮನರೆಲ್ಲಾ ಒಂದುದಿನ ಊರಿನ ಬಹುಭಾಗವನ್ನು ಬಿಟ್ಟು ಹೊರಟುಹೋದರು. ಪಟ್ಟಣದ ಪ್ರಜೆಗಳಿಗೆ ಅದರಿಂದ ಸ್ವಲ್ಪ ಸಂತೋಷವುಂಟಾಯಿತು. ಆದರೇನು? ಆ ಸಾಯಂಕಾಲವೇ ಅಕಸ್ಮಾತ್ತಾಗಿ ಇವರ ಸೈನ್ಯಗಳು ಊರನ್ನು ನುಗ್ಗಿ, ಬೀದಿಗಳಲ್ಲಿ ತುಪಾಕಿಗಳನ್ನು ಹಾರಿಸಲು ಉಪಕ್ರಮಿಸಿದರು. ನಿಶ್ಶಬ್ದವಾಗಿದ್ದ ಪಟ್ಟಣದಲ್ಲಿ ಈ ತುಪಾಕಿಗಳ ಭೀಕರಧ್ವನಿ ಯುಂಟಾದ ಕೂಡಲೇ ಊರೆಲ್ಲಾ ಗೋಳಾಟದಿಂದ ತುಂಬಿಹೋಯಿತು. ಆ ಸಾಯಂಕಾಲ ೬ ಗಂಟೆಯಿಂದ ಬೆಳಗಿನ ೯ ಗಂಟೆಯವರೆಗೂ ಈ ತುಪಾಕಿಗಳ ಹೊಡೆತವು ನಿಲ್ಲಲೇ ಇಲ್ಲ. ಪಟ್ಟಣವೆಲ್ಲಾ ಅಗ್ನಿಸಮುದ್ರದಲ್ಲಿ ಮುಳುಗಾಡಿತು. ಜನರು ರಾತ್ರಿಯೆಲ್ಲಾ ಹೊರಕ್ಕೆ ಬರಲಾರದೆ ಭಯದಿಂದ ಮಕ್ಕಳುಮರಿಗಳನ್ನು ಕಟ್ಟಿಕೊಂಡು, ಗೂಡಿನಲ್ಲಿ ಸೇರಿದ ಹಕ್ಕಿಗಳಂತೆ ಮನೆಗಳಲ್ಲಿ ಅಡಗಿ ರಾತ್ರಿಯೆಲ್ಲಾ ಜಪಮಾಡುತ್ತಿದ್ದರು. ನಾನೂ ಹಾಗೇ ಮಾಡಿ, ಮರುದಿನ ನನ್ನ ಹೆಂಡತಿ ಮಕ್ಕಳುಗಳೊಡನೆ ಊರನ್ನು ಬಿಟ್ಟು ಓಡಿಹೋಗಬೇಕೆಂದು ನಿಲ್ದಾಣದ ಕಡೆಗೆ ಹೊರಟೆನು. ದಾರಿಯಲ್ಲಿ ಎಲ್ಲಿನೋಡಿದರೂ, ಸುಟ್ಟಲ್ಪಟ್ಟ—ಸತ್ತುಹೋಗಿರುವ—ಗಾಯಗೊಂಡಿರುವ ಶವಗಳೂ ಜನರುಗಳೂ ರಾಶಿರಾಶಿಯಾಗಿ ಬಿದ್ದಿದ್ದರು. ಆಗ ನನ್ನ ಪ್ಯಾಸುಪೋರ್ಟನ್ನು ಒಬ್ಬ ಜರ್ಮ ಅಧಿಕಾರಿಗೆ ತೋರಿಸಲು ನಾನು ಪ್ರಯತ್ನಿಸಿದೆನು. ಆದರೆ ಅದನ್ನು ಒಬ್ಬ ಜರ್ಮಸೋಲ್ಜರು ನಡೆಯಗೊಡದೆ ನನ್ನ ಪತ್ನೀಪುತ್ರರಿಂದ ನನ್ನನ್ನು ಬಲಾತ್ಕಾರವಾಗಿ ನಿರ್ದಯದಿಂದ ಅಗಲಿಸಿದನು. ನನ್ನನ್ನೂ ಆ ಊರಿನ ಅನೇಕ ಪ್ರಜೆಗಳನ್ನೂ ದೊಡ್ಡಿಗೆ ಮಂದೆಗಳನ್ನು ಕೂಡುವಂತೆ ಗುಂಪುಗುಂಪಾಗಿ ಒಂದು ಮನೆಗೆ ಕೂಡಿದರು. ಸರಂಗವಾಗಿ ಹೋಗದಿದ್ದ ೬೦೦ ಮಂದಿಗಳನ್ನು ತುಪಾಕಿನಿಂದ ಹೊಡೆದು ಸುಟ್ಟರು. ಅಷ್ಟರೊಳಗೇ ಗ್ರಾಮಾಧಿಕಾರಿಯನ್ನೂ ದಂಡಾಧಿಕಾರಿಯನ್ನೂ ಇನ್ನು ಕೆಲ ಸ್ಥಳೀಯೋದ್ಯೋಗಿಗಳನ್ನೂ ಕೊಂದಿದ್ದರು. ಆ ಸೆರೆಮನೆಗೆ ಹೋಗುತ್ತಿದ್ದವರ ಕೈಗಳನ್ನೆಲ್ಲಾ ಹಿಂದಕ್ಕೆ ಸೆಳೆದು ಕಟ್ಟಿಬಿಟ್ಟಿದ್ದರು. ಒಂದು ಸಣ್ಣ ಗ್ರಾಮದಿಂದ ಹಾದು ನಮ್ಮನ್ನು ಕರೆದುಕೊಂಡು ಹೋಗುವಾಗ ನಮ್ಮೊಡನೆ ಮತ್ತೆ ಕೆಲ ಸೆರೆಯಾಳುಗಳನ್ನೂ ೬ ಮಂದಿ ಮತಗುರುಗಳನ್ನೂ ಕೂಡಿಸಿದರು. ನಮ್ಮೆಲ್ಲರನ್ನೂ ಮೊಳಕಾಲೂರಿ ಕುಳಿತುಕೊಳ್ಳುವಂತೆ ಹೇಳಿ, ಸೈನಿಕರು ನಮ್ಮ ಹಿಂದಿನಿಂದ ತುಪಾಕಿಗಳನ್ನು ನಮಗೆ ಗುರಿಕಟ್ಟಿ ಹಿಡಿದರು. ಆದರೆ ನಮ್ಮ ಅದೃಷ್ಟವು ಚೆನ್ನಾಗಿದ್ದಿತು. ಅವರು ಗೋಲಿಗಳನ್ನು ಹಾರಿಸಲಿಲ್ಲ. ಈ ಸೆರೆಯಾಳುಗಳಿಗೆಲ್ಲಾ ಒಬ್ಬರೊಡನೊಬ್ಬರು ಮಾತನಾಡಲು ಅವಕಾಶಕೊಡಲಿಲ್ಲ. ಬೇಗಬೇಗನೆ ನಡೆಯಲಿಲ್ಲವೆಂಬ ಕಾರಣದಿಂದ ಒಬ್ಬ ಸೋಲ್ಜರು ನನ್ನ ತಲೆಯಮೇಲೆ ತುಪಾಕಿಯ ಹಿಡಿಯಿಂದ ಬಡಿದನು. ನಾವು ದಾಹಗೊಂಡು ನೀರಿಗಾಗಿ ಎಷ್ಟುಬೇಡಿದರೂ ಒಂದು ತೊಟ್ಟು ನೀರನ್ನೂ ಕೊಡಲಿಲ್ಲ. ನಾವು ಹೋಗುವಾಗ ದಾರಿಯಲ್ಲಿ ನೂರಾರು ಹೆಣಗಳನ್ನು ನೋಡಿದೆವು. ಬಳಿಕ ನಮ್ಮನ್ನೆಲ್ಲಾ ಒಂದು ದೇವಾಲಯದಲ್ಲಿ ಬಂಧಿಸಿಟ್ಟರು. ರಾತ್ರಿ ೧೦ ಗಂಟೆಯ ಹೊತ್ತಿನಲ್ಲಿ ಒಂದು ಮಹಾಪ್ರಕಾಶವು ಕಾಣಿಸಿತು. ಊರಿನಲ್ಲಿ ಮಹಾರೋದನಧ್ವನಿಗೆ ಆರಂಭವಾಯಿತು. ಬೆಳಗಿನ ೪ ಗಂಟೆಗೆ ಮತಗುರುಗಳನ್ನೂ ಇನ್ನು ಕೆಲ ಸೋಲ್ಜರುಗಳನ್ನೂ ಸೇರಿಸಿ ತುಪಾಕಿ ಗುಂಡುಗಳನ್ನು ಹೊಡೆದು ಸುಟ್ಟುಬಿಟ್ಟರು”

ಕಾಸ್ಟ್ಬ್ರಿಕ್‌ಲೂಯಿನ್ ಎಂಬ ಗ್ರಾಮದಲ್ಲಿ ೨೦ ವರ್ಷದ ಒಬ್ಬ ಯುವತಿಯು ಗಂಡನು ಯುದ್ಧಕ್ಕೆ ಹೋಗಿರುವಲ್ಲಿ, ಆಕೆಯು ತಮ್ಮ ನಂಟರಮನೆಯಲ್ಲಿರುತ್ತಿರಲು, ಆ ಗ್ರಾಮವನ್ನು ಪ್ರವೇಶಿಸಿದ ಜರ್ಮನರು ಆಕೆಯನ್ನು ಬಂಧುಗಳಿಂದ ಬೇರ್ಪಡಿಸುವಾಗ ಆಕೆಯು ಎಷ್ಟೋ ರೋದನಮಾಡಿ ಇವರ ಕಾಲಮೇಲೆ ಬಿದ್ದು ಬೇಡಿಕೊಂಡರೂ ಕಠಿನಾತ್ಮರಾದ ಈ ನರರಾಕ್ಷಸರು ಬಲಾತ್ಕಾರದಿಂದ ಆಕೆಯನ್ನು ಎತ್ತಿಕೊಂಡು ಹೋಗಿ ಭ್ರಷ್ಟಗೊಳಿಸಿದರು. ಅದೇ ಗ್ರಾಮದಲ್ಲಿ ಮತ್ತೊಬ್ಬ ೧೩ ವರ್ಷದ ಯುವತಿಯು ಈ ಕಿರಾತರಿಗೆ ಭಯಪಟ್ಟು ತನ್ನ ತಾಯ್ತಂದೆಗಳ ಕೊರಲನ್ನು ತಬ್ಬಿಕೊಂಡು ಅಳುತ್ತಿದ್ದರೂ ನಿರ್ಬಂಧದಿಂದ ಸೆಳೆದುಕೊಂಡು ಹೋದರು. ಇಂಥ ಮಕ್ಕಳನ್ನು ಕಳೆದುಕೊಳ್ಳಲಾರದೆ ಹಿಂದೆ ಅರಚುತ್ತ ಬಂದ ತಾಯ್ತಂದೆಗಳನ್ನು ಈ ಹಿಂಸಕರು ಹೊಡೆದು ಬಡಿದು ಅಟ್ಟಿದರು. ಇವರಿಗೆ ಹೆದರಿ ಮನೆಯೊಳಗೆ ಅಡಗಿಕೊಂಡಿದ್ದ ಬಾಲಿಕೆಯರನ್ನು ಒಳನುಗ್ಗಿ ಎಳತಂದು ತಮ್ಮೊಡನೆ ಸರಸಸಲ್ಲಾಪವನ್ನಾಡುವುದಕ್ಕೆ ನಿರ್ಬಂಧಿಸುತ್ತಿದ್ದರು. ಅದಕ್ಕೊಪ್ಪದೆ ಇದ್ದವರನ್ನು ತುಪಾಕಿಯ ಸನೀನಿಂದ ತಿವಿದರು. ಹೀಗೆ ಮಾಡಿದ ಇವರ ಹಾವಳಿಯಿಂದ ಊರೂರುಗಳೆಲ್ಲಾ ಗೋಳಿನ ಮಯವಾದುವು. ನಿಜವಾಗಿ ಬೆಲ್ಜಿಯಂದೇಶಕ್ಕೆ ಕೇಜರನೇ ಒಬ್ಬ ಯಮನೆಂದೂ, ಅವನ ಸೈನಿಕರೇ ಯಮದೂತರೆಂದೂ ಭಾವಿಸಲ್ಪಡುವಂತಾದರು. ಈ ಧೂರ್ತಸೈನಿಕರು ಒಂದುಕಡೆ ಕುಳಿತಿದ್ದ ತಾಯ್ಮಕ್ಕಳಿಬ್ಬರಿಗೂ ಭಲ್ಲೆಯದಿಂದ ಚುಚ್ಚಲು ಅದು ಒಬ್ಬರದೇಹದಿಂದ ಹಾಯ್ದು ಮತ್ತೊಬ್ಬರ ದೇಹಕ್ಕೆ ನಾಟಿಕೊಂಡಿತು. ಇವರು ನುಗ್ಗಿದ ಗ್ರಾಮಗಳ ತಲೆವಾಗಿಲಲ್ಲೂ ಮರದ ಕೊಂಬೆಗಳಲ್ಲೂ ನೇತುಗಟ್ಟಿ ಸತ್ತಿದ್ದ ಶವಗಳನ್ನು ಸಾಲುಸಾಲಾಗಿ ಕಾಣಬಹುದಾಗಿದ್ದಿತು. ಇದಲ್ಲದೆ ಕೈಕಾಲುಗಳನ್ನು ಕತ್ತರಿಸಿದ ಹೆಣಗಳು ಬೀದಿಬೀದಿಗಳಲ್ಲಿ ಬಿದ್ದಿದ್ದುವು. ಈ ದುರಾತ್ಮರು ಒಬ್ಬ ಕೂಲಿಯವನ ಹೊಟ್ಟೆಗೆ ಭರ್ಜಿಯಿಂದ ತಿವಿದರೂ ಅವನು ಸಾಯದೆ ಇರಲು, ಅವನಮೇಲೆ ಕಿರಸನಾಯಿಲ್ಲನ್ನು ಸುರಿದು ಬೆಂಕಿಹೊತ್ತಿಸಿ ಸುಟ್ಟುಬಿಟ್ಟರು. ಈ ಹಿಂಸೆಯನ್ನು ನೋಡಿ ಸಹಿಸಲಾರದ ಒಬ್ಬ ಸ್ತ್ರೀಯು ಅಳುತ್ತಿರಲು ಅವಳನ್ನು ಕಿಟಕಿಯಿಂದ ಆಚೆಗೆ ಸೆಳೆದು ಭ್ರಷ್ಟಗೊಳಿಸಿ ಅವಳನ್ನೂ ಯಮಸದನಕ್ಕೆ ಕಳುಹಿಸಿದರು. ಇನ್ನೊಂದುಕಡೆ ಒಬ್ಬ ವೃದ್ಧನನ್ನು ತೊಲೆಗೆ ನೇತುಗಟ್ಟಿ ಅವನ ಕಾಲು ತಲೆ ಭುಜಗಳ ಹೊರತು ಉಳಿದ ಭಾಗವನ್ನೆಲ್ಲಾ ಬೆಂಕಿಯಿಂದ ಸುಟ್ಟುಬಿಟ್ಟರು. ಮತ್ತೊಂದು ಗ್ರಾಮದಲ್ಲಿ ಕೆಲ ಸ್ತ್ರೀಯರನ್ನು ಹಿಡಿದು ಗ್ರಾಮದೇವತೆಗೆ ಬಲಿ ಕೊಡುವಂತೆ ಕಡಿದುಹಾಕಿದರು. ತಮ್ಮೆದುರಿಗೆ ಬಂದ ಪ್ರಜೆಗಳನ್ನೆಲ್ಲಾ ಮೃಗಗಳನ್ನು ಬೇಂಟೆಯಾಡುವಂತೆ ಅಟ್ಟಿಕೊಂಡುಹೋಗಿ ಹೊಡೆದು ಬಡಿದು ಕಡಿದು ಕೊಲ್ಲುತ್ತ ಬಂದರು. ಊರಹೊರಗೆ ಹೊಲಗಳಲ್ಲಿ ಕೆಲಸಮಾಡುತ್ತಿದ್ದ ಜನರಮೇಲೂ ಸಹ ನಿಷ್ಕಾರಣವಾಗಿ ತುಪಾಕಿಗಳ ಗುಂಡನ್ನು ಹಾರಿಸಿ ಸುಡುತ್ತಿದ್ದರು. ಇವರು ನುಗ್ಗಿದ ಊರಿನವರು ಇವರಿಗೆ ಬೇಕಾದ ಅನ್ನಪಾನಾದಿ ಭೋಗಗಳಿಗೆ ಅನುಕೂಲಪಡಿಸದೆಹೋದರೆ ಅದೇ ಅವರು ಇಂಥ ಶಿಕ್ಷೆಗಳಿಗೆಲ್ಲಾ ಒಳಪಡಬೇಕಾದ ಮಹಾಪರಾಧವಾಗುತ್ತಿದ್ದಿತು. ಹೀಗೆಲ್ಲಾ ಮಾಡಿದುದರಿಂದ ಬೆಲ್ಜಿಯಂದೇಶದ ಪುರಗ್ರಾಮವಾಟಿಗಳಲ್ಲೆಲ್ಲಾ ಮೋಟುಗೋಡೆಗಳು ಹಾಳ್ಮನೆಗಳೇ ಕಾಣಿಸುತ್ತ ಸ್ಮಶಾನದಂತೆ ತೋರುವ ಹೊತ್ತುಬಂದಿತು. ಈಘಾತುಕರ ದೌರ್ಜನ್ಯದಿಂದ ಎಷ್ಟೋ ಸುಂದರವಾದ ಪ್ರಾಸಾದಗಳೂ, ಚಿತ್ರವಿಚಿತ್ರ ಸಾಮಗ್ರಿಗಳಿಂದ ಕೂಡಿದ್ದ ಪ್ರದರ್ಶನಾಗಾರಗಳೂ ಅಮೌಲ್ಯಗ್ರಂಥಗಳುಳ್ಳ ಭಾಂಡಾರಗಳೂ, ಪವಿತ್ರವಾದ ದೇವಾಲಯಗಳೂ, ಮನೋಹರವಾದ ನಾಟಕಶಾಲೆಗಳೂ ಸಹ ಭಸ್ಮವಾಗಿ ಹೋದುವು. ಇಂಥ ದುರಾತ್ಮರಿಗೆ ಧರ್ಮದೇವತೆಯು ಹೇಗೆ ದಾರಿ ಕೊಡುವಳು? ಜಯಲಕ್ಷ್ಮಿಯು ಇವರನ್ನು ಹೇಗೆ ವರಿಸುವಳು?

ಯುದ್ಧದಸ್ಥಿತಿಯನ್ನು ಕಾಣಿಸುವ ಪತ್ರಗಳು.

ಯುದ್ಧಾಂಗಣದಲ್ಲಿ ಏಟನ್ನುತಿಂದು ಸೆರೆಸಿಕ್ಕಿರುವ ಜರ್ಮನ್‌ಸೈನಿಕರ ಬಳಿಯಲ್ಲಿ ಅವರು ತಮ್ಮ ಬಂಧುಗಳಿಗೆ ಬರೆದು ಕಳುಹಿಸಲು ಸಿದ್ಧವಾಗಿದ್ದ ಪತ್ರಿಕೆಗಳು ಕೆಲವುದೊರೆದಿರುತ್ತವೆ. ಅವುಗಳ ವಿವರವನ್ನು ನೋಡಿದರೆ ಯುದ್ಧದ ಸ್ಥಿತಿಗತಿಯು ಸ್ವಲ್ಪ ಗೊತ್ತಾಗುವಂತಿರುತ್ತವೆ. ಅದುಕಾರಣ ಅಂಥ ೩-೪ ಪತ್ರಗಳ ವಿಷಯವನ್ನು ಇಲ್ಲಿ ಭಾಷಾಂತರಿಸಿ ಪ್ರಕಟಿಸಿರುತ್ತೇವೆ.

ರೀಮ್ಸ್‌ಪಟ್ಟಣದಿಂದ ಜರ್ಮಸೈನ್ಯದ ಲೆಫ್ಟನೆಂಟೊಬ್ಬನು ಸೆಪ್ಟಂಬರ್ ತಾ॥ ೧೧ ರಲ್ಲಿ ಬರೆದ ಕಾಗದವು-“ಮಿತ್ರನೆ, ನಾನು ನನ್ನ ಪಟಾಲಮ್ಮಿನಿಂದ ಬಿಟ್ಟುಹೋಗಿ ಅನೇಕ ವಾರಗಳ ವರೆಗೆ ಯುದ್ಧದಲ್ಲಿ ಮುಳುಗಿದ್ದೆನೆಂಬ ಸಂಗತಿಯು ನಿನಗೆ ತಿಳಿದೇ ಇರುವುದು. ಯುದ್ಧದಲ್ಲಿ ನನಗೆ ಏಟುಬಿದ್ದಿರುವುದು. ನಮ್ಮ ಪಟಾಲಮು ಯುದ್ಧಕ್ಕೆ ಹೋದಾಗ್ಗೆ ಇದರಲ್ಲಿ ೬೦ ಮಂದಿ ಆಫೀಸರುಗಳಿದ್ದರು. ಈಗಲಾದರೊ ೪ ಮಂದಿ ಮಾತ್ರ ಉಳಿದಿದ್ದಾರೆ. ನಮ್ಮ ಪಕ್ಕದಲ್ಲಿ ನಿಂತು ನಮಗೆ ಸಮವಾಗಿ ಹೋರಾಡುತ್ತಿದ್ದ ನಮ್ಮ ಸಾಕ್ಸನ್‌ಸೈನಿಕರಿಗೂ ಇದೇ ಗತಿಯು ಪ್ರಾಪ್ತವಾಗಿದೆ. ಆದರೆ ನಮಗೆ ಉಂಟಾದ ಈ ಅಪರಿಮಿತವಾದ ನಷ್ಟವನ್ನು ಕುರಿತು ನೀನು ಯಾರಿಗೂ ಹೇಳಬೇಡ. ಹೇಳಿದರೆ ಕೆಲಸಕ್ಕೆ ಬರದ ಹಲವು ಗಾಳಿಸುದ್ದಿಗಳಿಗೆ ಅವಕಾಶವಾಗುವುದೇಹೊರತು ಮತ್ತೇನೂ ಇಲ್ಲ. ನಿಜಸ್ಥಿತಿಯನ್ನು ಹೇಳಬೇಕಾದರೆ ನಮ್ಮ ಪಟಾಲಮು ಕಳೆದ ೪ ವಾರಗಳಲ್ಲೂ ಅತಿಭಯಂಕರವಾದ ಪರಾಭವಕ್ಕೆ ಈಡಾಗಿದೆ. ಈ ಕಷ್ಟಗಳೆಲ್ಲವೂ ತ್ವರಿತವಾಗಿ ತುದಿಮುಟ್ಟುವುವೆಂದು ಆಶಿಸುತ್ತೇನೆ”

ಮತ್ತೊಂದು ಪತ್ರಿಕೆ.

ಫೀಲ್ಡ್ ಆರ್ಟಿಲರಿ ೨೦ನೇ ಪಟಾಲಮ್ಮಿನ ಲೆಫ್ಟನೆಂಟು ಬರೆದಿರುವ ಕಾಗದ:-“ಕಳೆದ ೪ ವಾರಗಳಿಂದಲೂ ಅಪರಿಮಿತವಾದ ಆಯಾಸವೂ ನಿದ್ರಾಭಾವವೂ ಪ್ರಾಣಾಂತಿಕವಾದ ಕಲಹಗಳೂ ನಮ್ಮ ಪಾಲಾಗಿವೆ. ಯುದ್ಧವು ಆರಂಭವಾದ ಮೊದಲದಿನದಿಂದಲೂ ೧೦ನೆಯ ಪಟಾಲಮು ಯಾವಾಗಲೂ ಮುಂದಕ್ಕೇ ಹೋಗುತ್ತಿದ್ದಿತು. ನಮ್ಮ ಫಿರಂಗಿಗಳು ಯಾವಾಗಲೂ ಮುಂದಿನ ಸೈನ್ಯದ ಜತೆಗೆ ಹೋಗುತ್ತಿದ್ದುವು. ನಮ್ಮ ಕುದುರೆಗಳೆಲ್ಲಾ ಬಳಲಿಹೋಗಿವೆ. ನಾವು ಈವಾಗ ಬೆಲ್ಜಿಯಮ್ಮಿನವರ ಮತ್ತೂ ಫ್ರೆಂಚರ ಕುದುರೆಗಳನ್ನು ಉಪಯೋಗಿಸಿಕೊಳ್ಳುತ್ತಿದ್ದೇವೆ. ಒಂದೊಂದು ಬಾರಿ ಕುದುರೆಗಳು ಬಸವಳಿದು ಮುಂದಕ್ಕೆ ಒಂದು ಹಜ್ಜೆಯನ್ನೂ ಇಡಲಾರದೆ ನಿಂತುಹೋಗುವುವು. ಆಗ ಅವು ಧೊಪ್ಪನೆ ಬಿದ್ದುಕೊಳ್ಳುವುವು. ಅನ್ನಪಾನಗಳಿಲ್ಲದೆ ನಾವು ಬೆಳಗಿನ ೪ ಗಂಟೆಯಿಂದ ರಾತ್ರಿ ೮ ಗಂಟೆಯವರೆಗೆ ಶತ್ರುಗಳ ಬೆಂಕಿಮಳೆಗಿದಿರಾಗಿ ಯುದ್ಧ ಮಾಡುತ್ತಲೇ ಇದ್ದೆವು. ಕುದುರೆಗಳು ನಡೆಯುತ್ತಿರುವಾಗ ಒಂದೊಂದು ವೇಳೆ ನಾನು ಅದರಮೇಲೆ ಕುಳಿತಿರಲು ಆಗದಷ್ಟು ಬಳಲಿಹೋದೆನು. ಮಧ್ಯಾಹ್ನದ ಹೊತ್ತಿಗೆ ಶತ್ರುಗಳು ಪ್ರಯೋಗಿಸಿದ ಸಾಧಾರಣವಾದ ಫಿರಂಗಿ ಗುಂಡುಗಳಿಂದಲೂ, ಸಿಡಿಮದ್ದುಗಳ ಗೋಲಿಗಳಿಂದಲೂ ನಮ್ಮ ಫಿರಂಗಿಗಳೆಲ್ಲಾ ಮಟ್ಟವಾಗಿಹೋದವು. ಹೀಗೆ ನಾನು ಹೇಳುವುದರಲ್ಲಿ ಅತಿಶಯೋಕ್ತಿಯು ಸ್ವಲ್ಪವೂ ಇಲ್ಲ. ಶತ್ರುಗಳ ಗುಂಡುಗಳು ನಮ್ಮಮೇಲೆ ಬೀಳುವುದಿಲ್ಲವೆಂಬ ಧೈರ್ಯದಿಂದ ನಾವು ನಮ್ಮ ಫಿರಂಗಿಗಳ ಹಿಂದೆ ನಿಂತು ೧ ನಿಮಿಷವಾದರೂ ಕೆಲಸ ಮಾಡದೆ ಹೋಗಲಿಲ್ಲ. ೬ನೇ ತಾ॥ ಭಾನುವಾರ ಮೊದಲುಗೊಂಡು ೯ನೇ ತಾ॥ ಬುಧವಾರದವರೆಗೆ ಜರುಗಿದ ಯುದ್ಧವು ಬಹಳ ಭಯಂಕರವಾಗಿ ಪ್ರಳಯಕಾಲವುಸಮೀಪಿಸಿದಂತೆ ತೋರುತ್ತಿದ್ದಿತು. ಇದರಲ್ಲಿ ವಿಶೇಷವಾಗಿ ನಷ್ಟಪಟ್ಟವರು ೧೧ನೆಯ ಪಟಾಲಮ್ಮಿನ ಸೈನಿಕರು. ಜಯಾಪಜಯಗಳನ್ನು ನಿರ್ಣಯಿಸಬಲ್ಲ ದೊಡ್ಡ ಯುದ್ಧವು ಇಷ್ಟರಲ್ಲೇ ಜರುಗಿ ಈ ಜನಪ್ರಳಯವು ಅಲ್ಲಿಗೇ ಕೊನೆಮುಟ್ಟಬಹುದೆಂದು ಆಶಿಸುತ್ತೇನೆ. ರಾತ್ರಿಯಹೊತ್ತು ಸೈನ್ಯಗಳು ಬಯಲಿನಲ್ಲಿ ವಿಶ್ರಮಿಸಿಕೊಳ್ಳುವಾಗಲೂ ಭಯವೇ ಇರುವುದು. ನಮ್ಮ ಪಟಾಲಮ್ಮಿನ ವೈಮಾನಿಕನೊಬ್ಬನು ಶತ್ರುಸೈನ್ಯಗಳಿರುವ ಸ್ಥಾನದಮೇಲೆ ೪ ಸಿಡಿಮದ್ದುಗಳನ್ನು ಇಟ್ಟನು. ಅದರಲ್ಲಿ ಮೂರು ಬಾರಿ ೨೦ ಕುದುರೆಗಳು ಸತ್ತವು, ೧೦ ಕ್ಕೆ ಗಾಯವಾಯಿತು; ೪ ಮಂದಿ ಸೈನಿಕರು ಸತ್ತರು. ಮೂವರಿಗೆ ಗಾಯವಾಯಿತು. ನಮಗೆ ಈವಾಗ ಯಾವ ಕಾಗದಗಳೂ ಬರುತ್ತಿಲ್ಲ. ೧೦ ನೆ ಪಟಾಲಮ್ಮಿನ ಅಂಚೆಯ ಮೋಟಾರುಬಂಡಿಯು ಸುಟ್ಟುಹಾಕಲ್ಪಟ್ಟಿದೆ”

ಇನ್ನೊಂದುಪತ್ರಿಕೆ.

ಸೆರೆ ಸಿಕ್ಕಿರುವ ೪ನೆಯ ಜರ್ಮ ಪಟಾಲಮ್ಮಿನ ಪದಾತಿಗಳಲ್ಲೊಬ್ಬನ ಹತ್ತಿರ ದೊರೆತ ಕಾಗದಗಳಲ್ಲಿ ಇದೊಂದಾಗಿದ್ದಿತು. ಇದರಲ್ಲಿ ಬರೆಯಲ್ಪಟ್ಟದ್ದೇನೆಂದರೆ—ನಾಲ್ಕು ದಿನಗಳಿಂದಲೂ ನಾನು ಶತ್ರುಗಳ ಫಿರಂಗಿ ಗುಂಡುಗಳಿಗೆ ಇದಿರಾಗಿ ನಿಂತಿದ್ದೆನು. ಆಗಿನ ನನ್ನ ಅನುಭವವು ನರಕಾನುಭವಕ್ಕೆ ಸಮನಾಗಿದ್ದಿತು. ನಿಜವಾಗಿ ಅದನ್ನು ನರಕಯಾತನೆಗಿಂತಲೂ ಸಾವಿರಪಾಲು ಮಿಗಿಲಾಗಿದ್ದಿತೆಂದೇ ಹೇಳಬಹುದು. ೯ ನೆ ತಾ॥ ನ ರಾತ್ರಿ ನಮ್ಮ ಪಟಾಲಮುಗಳನ್ನು ಹಿಂದಕ್ಕೆ ಸರಿದು ಹೋಗಬೇಕೆಂದು ಆಜ್ಞಾಪಿಸಿದರು. ನಮ್ಮಲ್ಲಿದ್ದ ಸ್ವಲ್ಪ ಸೈನಿಕರಿಂದ ನಾವಿದ್ದ ಸ್ಥಲವನ್ನು ರಕ್ಷಿಸಿಕೊಳ್ಳುವೆವೆಂದು ಯೋಚಿಸಿ ಯುದ್ಧಕ್ಕೆ ನಿಂತಿದ್ದರೆ ಯುಕ್ತಿಹೀನಕಾರ್ಯವಾಗಿ ಹೋಗುತ್ತಿದ್ದಿತು. ಆಗ ನಾವು ಅಲ್ಲೇ ಯುದ್ಧವನ್ನು ಕೊಟ್ಟಿದ್ದರೆ ಮರುದಿನ ತಪ್ಪದೆ ನಾವು ಪರಾಜಿತರಾಗಿ ಓಡಿಹೋಗುತ್ತಿದ್ದೆವು. ೧ ನೆಯ ಪಟಾಲಮೂ, ೩ ನೆಯ ಪಟಾಲಮೂ ಸಹ ನಮಗೆ ಸಮನಾಗಿ ಶತ್ರುಗಳಮೇಲೆ ಬಿದ್ದು ಹೋರಾಡಲಾರದೆ ಹೋದುವು. ನಾವು ಬಹಳ ವೇಗದಿಂದ ಮುಂದಕ್ಕೆ ಸರಿದೆವು. ಆದರೆ ನಮ್ಮಲ್ಲಿ ಧೈರ್ಯಸ್ಥೈರ್ಯಗಳು ಪೂರ್ಣವಾಗಿ ಕ್ಷೀಣಿಸುತ್ತ ಬಂದುವು. ಅಷ್ಟು ಕಷ್ಟಪಟ್ಟು ನಮ್ಮಲ್ಲಿ ಅನೇಕರನ್ನು ಕಳೆದುಕೊಂಡರೂ ನಮಗೆ ದೊರೆತ ಲಾಭವೇನೂ ಇಲ್ಲ. ಮೂರು ಘೋರಯುದ್ಧಗಳಲ್ಲಿ ಬಲವಾಗಿ ಹೋರಾಡಿ ಬಲವೆಲ್ಲಾ ಕುಗ್ಗಿ, ಬಹಳ ಬಳಲಿದ್ದ ನಮ್ಮ ಸೈನ್ಯವನ್ನು, ಮೂರು ವಾರಗಳಿಂದಲೂ ಶತ್ರುಗಳು ಬಹಳ ಅಚ್ಚುಕಟ್ಟಾಗಿ ಆಕ್ರಮಿಸಿಕೊಂಡು ನಿಂತಿದ್ದ ಬಲವಾದ ಸ್ಥಾನದಮೇಲೆ ಬೀಳುವುದಕ್ಕೆ ನಮ್ಮವರು ಹೇಗೆ ಕಳುಹಿದರೋ ನಾನು ಊಹಿಸಲಾರದವನಾಗಿದ್ದೇನೆ. ನಿಜವಾಗಿ ನಮ್ಮ ನಾಯಕರ ಉದ್ದೇಶವೇನಾಗಿದೆಯೆಂಬುದು ನನಗೆ ತಿಳಿಯದು. ಅಸಾಧಾರಣ ಪರಾಕ್ರಮದಿಂದ ಹೋರಾಡಿದ ನಮ್ಮ ಪೊಬಲಿನ ಪಟಾಲಮಿನ ಸೈನಿಕರ ಸಂಖ್ಯೆಯು ೨೦೦೦ ರಿಂದ ಈಗ ೯೪ ಕ್ಕೆ ಇಳಿದುಹೋಗಿದೆ. ನಡೆದಿರುವ ಸಂಗತಿಯೆಲ್ಲಾ ಈ ಸಂಖ್ಯೆಯನ್ನು ನೋಡುವುದರಿಂದಲೇ ಗೊತ್ತಾಗುವುದು.”

ಬೇರೊಂದುಪತ್ರಿಕೆ.

೩ ನೆ ರಿಜರ್ವ್ ಪಟಾಲಮ್ಮಿಗೆ ಸೇರಿದ ಒಬ್ಬ ಸೈನಿಕೋದ್ಯೋಗಿಯು ಸೆಪ್ಟಂಬರ್ ತಾ॥ ೧೩ ರಲ್ಲಿ ತನ್ನ ತಾಯ್ತಂದೆಗಳಿಗೆ ಪೆರ್ನೀಯಿಂದ ಬರೆದ ಪತ್ರಿಕೆ—ನನ್ನಪ್ರಿಯ ಜನನೀಜನಕರಿಗೆ, ನಮ್ಮ ಎಡಗಡೆಯಲ್ಲಿರುವ ೧೪ ನೆ ಪಟಾಲಮು ಶತ್ರುಗಳಿರುವ ಸ್ಥಾನವನ್ನು ಆಕ್ರಮಿಸಿಕೊಳ್ಳುವಂತಾಗುವವರೆಗೆ ಎಂಥ ದುಸ್ಥಿತಿಗಳಿಗೀಡಾದರೂ ಸರಿಯೆ ಪೆರ್ನೀಗೆ ದಕ್ಷಿಣದಲ್ಲಿರುವ ಉನ್ನತಪ್ರದೇಶಗಳನ್ನು ನಮ್ಮ ಸ್ವಾಧೀನದಲ್ಲೇ ಉಳಿಯಿಸಿಕೊಂಡಿರುವುದು ನಮ್ಮ ಪಟಾಲಮ್ಮಿನ ಕರ್ತವ್ಯವಾಗಿದೆ. ನಮ್ಮ ಬಲಪಕ್ಕದಲ್ಲಿ ಇನ್ನು ಕೆಲ ಪಟಾಲಮ್ಮುಗಳಿರುವುವು. ನಾವು ಈಗ ಇಂಗ್ಲೀಷ್‌ಸೈನ್ಯದ ಮೇಲೆ ಯುದ್ಧವನ್ನು ಮಾಡುತ್ತಿದ್ದೇವೆ. ಉಭಯಪಕ್ಷದಲ್ಲೂ ನಷ್ಟವು ಅಪರಿಮಿತವಾಗಿ ಉಂಟಾಗುತ್ತಿದೆ. ತಾವು ಆಕ್ರಮಿಸಿಕೊಂಡಿರುವ ಸ್ಥಾನವನ್ನು ಉಪಯೋಗಿಸುಕೊಳ್ಳುವುದರಲ್ಲಿ ಆಂಗ್ಲಸೈನಿಕರಿಗೆ ಇರುವ ಜಾಣ್ಮೆಯು ಆಶ್ಚರ್ಯಕರವಾಗಿದೆ. ಅವರು ಎಲ್ಲಿರುವರೋ ಕಾಣಿಸಿಕೊಳ್ಳುವುದೇ ಇಲ್ಲ, ಆದರೆ ಅವರು ಸುರಿಸುವ ಬೆಂಕಿಯಮಳೆಯು ಯಾವಾಗಲೂ ಶತ್ರುಗಳಮೇಲೆ ಬೀಳುತ್ತಲೇ ಇರುವುದು. ಫ್ರಾನ್ಸ್ ವೈಮಾನಿಕರ ಕೃತ್ಯಗಳು ಅದ್ಭುತವಾದುವು. ಅವರ ಕೃತ್ಯದಿಂದ ತಪ್ಪಿಸಿಕೊಂಡು ಹೋಗುವುದು ದುರ್ಘಟವು. ಫ್ರೆಂಚ್ ವೈಮಾನಿಕನು ಮೇಲ್ಗಡೆಯಲ್ಲಿ ಹಾದುಹೋದ ೧೦ ನಿಮಿಷಗಳೊಳಗೇ ಅವರ ಫಿರಂಗಿಗುಂಡುಗಳು ಹಾರಿ ನಮ್ಮಮೇಲೆ ಬೆಂಕಿಯಮಳೆಯನ್ನು ಸುರಿಯಿಸಲಾರಂಭಿಸುವುವು. ನಮ್ಮ ಸೈನ್ಯಗಳಲ್ಲಿರುವ ಫಿರಂಗಿಗಳ ಸಂಖ್ಯೆಯು ಬಹಳ ಸ್ವಲ್ಪ. ಆ ಫಿರಂಗಿಗಳಿಲ್ಲದಿದ್ದರೆ ನಾವು ಮುಂದಕ್ಕೆ ಸಾಗಿಹೋಗುವುದೇ ಅಸಂಭವ.”

ವಿಶೇಷ ವಾರ್ತೆಗಳು

ಜರ್ಮ ಸೇನಾಧ್ಯಕ್ಷರಾದ ಜನರಲ್ ವಾನ್‌ಮಾಲ್ಟ್ಕ್ ರವರ ಮಗನು ಯುದ್ಧದಲ್ಲಿ ಮಡಿದನು.

ಈಗ ಜರ್ಮಚಕ್ರವರ್ತಿಯವರು ಪೂರ್ವಪ್ರಷ್ಯಾದಿಂದ ಪಶ್ಚಿಮರಣರಂಗದ ಕಡೆಗೆ ತಮ್ಮ ಸೈನಿಕರ ಕಾರ್ಯಾಲಯವಿರುವಕಡೆಗೆ ಬಂದಿದ್ದಾರೆ.

ಬೊಂಬಾಯಿ ಗೌರ್ನರರಾದ ಲಾರ್ಡ್ ವೆಲ್ಲಿಂಗ್ಡನ್ ರವರ ಕುಮಾರರಿಗೆ ಕಳೆದ ತಾ॥ ೧೪ ರಲ್ಲಿ ನಡೆದ ಯುದ್ಧದಲ್ಲಿ ಏಟುತಗುಲಿ ಕಾಸೇಲಿಗೆ ಸಮೀಪದ ವೈದ್ಯಶಾಲೆಯಲ್ಲಿ ಜರ್ಮನರ ಸೆರೆಯಾಳಾಗಿರುವರೆಂದು ಕೆಲ ಜರ್ಮನರಿಂದಲೇ ನಂಬುಗೆಯಾಗಿ ತಿಳಿದುಬಂದಿರುವುದಂತೆ.

ತಿರಾಸಿನಲ್ಲಿರುವ ಮಹಮ್ಮದೀಯರ ಪ್ರತಿನಿಧಿಗಳು ಕೆಲರು ರಷ್ಯಾ ಚಕ್ರವರ್ತಿಯವರ ಸಹೋದರರ ಬಳಿಗೆ ಬಂದು, ರಾಜ್ಯರಕ್ಷಣೆಗಾಗಿ ಕಾಕಸಸ್ಸಿನ ಮಹಮ್ಮದೀಯರು ತಮ್ಮ ತನುಮನೋಧನಗಳನ್ನು ಸಮರ್ಪಿಸಲು ಸಿದ್ಧರಾಗಿರುವರೆಂದು ಬಿನ್ನಯಿಸಿದರು.

ಯುದ್ಧಾರಂಭವಾದಮೇಲೆ ಮೊದಲು ೧೦ ವಾರಗಳಲ್ಲಿ ಆಂಗ್ಲಪ್ರಭುತ್ವದವರಿಗೆ ಯುದ್ಧಕ್ಕಾಗಿ ೩೩೫೪೦೦೦೦೦ ರೂ.ಗಳು ವೆಚ್ಚವಾಗಿರುವುದೆಂದೂ, ಈಚೆಗೆ ಸೈನಿಕರಸಂಖ್ಯೆಯು ಹೆಚ್ಚಿದುದರಿಂದ ಆ ವೆಚ್ಚವು ಕಳೆದ ಒಂದೊಂದು ವಾರದಲ್ಲಿ ೧೫೩೪೦೦೦೦ ರೂ.ಗಳಾಗಿರುವುದೆಂದೂ ಗೊತ್ತಾಗುತ್ತದೆ.

ಒಂದುವೇಳೆ ಮಿತ್ರಮಂಡಲಿಯವರಿಗೆ ಜಯವು ಪ್ರಾಪ್ತವಾಗಿ ಬೆಲ್ಜಿಯಂದೇಶವನ್ನು ತಾವು ಬಿಟ್ಟು ಹೊರಟುಹೋಗಬೇಕಾಗಿಬಂದರೆ ಜರ್ಮನಿಗೆ ತಮ್ಮನ್ನು ಬೇಗನೆ ಸೇರಿಸುವುದಕ್ಕೆ ಹೊಗೆಬಂಡಿಗಳು ಅಣಿಯಾಗಿರಬೇಕೆಂದು ೨೦೦ ಎಂಜನ್ನುಗಳನ್ನು ಜರ್ಮನರು ಆಸ್ಟೆಂಡಿನಲ್ಲಿ ಸಿದ್ಧಪಡಿಸಿರುವರಂತೆ.

ಜರ್ಮಚಕ್ರವರ್ತಿಯವರು ಪಶ್ಚಿಮರಣರಂಗದ ತಮ್ಮ ಸೈನ್ಯಾಧಿಪತಿಗೆ ಕಳುಹಿಸಿದ ಒಂದು ಸಂದೇಶದಲ್ಲಿ ಇಂಗ್ಲೀಷ್‌ಸೈನ್ಯವನ್ನೂ ಅವರ ಅಧಿಪತಿಯನ್ನೂ ತುಚ್ಛೀಕರಿಸಿ ಬರೆದಿದ್ದರೆಂಬ ಸಂಗತಿಯು ಪ್ರಕಟವಾಗಿದ್ದಿತಷ್ಟೆ. ಈಗ- ಇಂಗ್ಲೀಷ್‌ಸೈನ್ಯವು ತುಚ್ಛವಾದುದೆಂದು ಜರ್ಮಚಕ್ರವರ್ತಿಯವರು ಯಾವಾಗಲೂ ಆಡಿಲ್ಲವೆಂದು ಜರ್ಮಸರ್ಕಾರದವರು ಪ್ರಕಟಿಸಿದ್ದಾರಂತೆ

ಕಾಶೀಮಹಾರಾಜರ ಆಸ್ಥಾನಪಂಡಿತರಾದ ಪಂಡಿತಗಣೇಶದತ್ತರವರು ಹಿಂದೀಭಾಷೆಯಲ್ಲಿ ಪ್ರಕಟಿಸಿರುವ ಪಂಚಾಂಗದಲ್ಲಿ ದಿಲ್ಲಿಯ ಪ್ರಭುತ್ವವು ಮಾರ್ಪಡುವುದು ಎಂದು ಬರೆದಿದ್ದುದರಿಂದ ಅಲ್ಲಿನ ದಂಡಾಧಿಕಾರಿಯು ಆ ಜ್ಯೋತಿಷ್ಕರನ್ನು ಹಿಡಿತರಿಸಿ ೧೦ ಸಾವಿರ ರೂ. ಗಳ ಹೊಣೆಯ ಮೇಲೆ ಬಿಟ್ಟಿದ್ದಾರೆಂದು ಕಾಶಿಯಿಂದ ಹಿಂದೂ ಪತ್ರಿಕೆಗೆ ಬಂದಿರುವ ತಂತೀವಾರ್ತೆಯಿಂದ ಗೊತ್ತಾಗುತ್ತದೆ.

ನಮ್ಮ ಚಕ್ರವರ್ತಿಯವರ ಸಹೋದರಿಯರಾದ ಮೇರಿ ರಾಜಕುಮಾರಿಯವರು ಬರುವ ಕ್ರಿಸ್ಮಸ್ ಹಬ್ಬದಲ್ಲಿ ಪ್ರತಿಯೊಬ್ಬ ಭೂಜಲಸೈನಿಕರಿಗೂ ಏನಾದರೂ ಬಹುಮಾನವನ್ನು (ಇಂಗ್ಲಿಷ್ ಸೈನಿಕರಿಗೆ ಹೊಗೆಸೊಪ್ಪು—ಸಿಗರೆಟ್ಟುಗಳು ತುಂಬಿದ ಪೆಟ್ಟಿಗೆಗಳು, ಹಿಂದೂಸೈನಿಕರಿಗೆ ಮಿಠಾಯಿ ಪೊಟ್ಟಣಗಳು) ಕೊಡಬೇಕೆಂದು ಸಂಕಲ್ಪಿಸಿ, ಅದಕ್ಕಾಗಿ ಒಂದು ಧನನಿಧಿಯನ್ನು ಏರ್ಪಡಿಸಿ, ಕೂಡಿಸುತ್ತಿರುವರು.

ದಕ್ಷಿಣಾಫ್ರಿಕಾದ ಬೂವರದಲ್ಲಿ ಮೊರಿಟ್ಜ್ ಎಂಬುವನೊಬ್ಬನು ತನ್ನ ಸಂಗಡ ೫೦೦ ಮಂದಿಗಳನ್ನು ಕಟ್ಟಿಕೊಂಡು ಪ್ರಭುತ್ವದವರಿಗೆ ವಿರುದ್ಧವಾಗಿ ದಂಗೆಯೆದ್ದು ಜರ್ಮನರ ಕಡೆ ಕೂಡಿಕೊಳ್ಳುವಂತೆ ತೋರುತ್ತಿದ್ದನು. ಅಲ್ಲಿನ ಬೋವರ್ ಸೈನಿಕರು ಅವರಮೇಲೆ ಯುದ್ಧಮಾಡಿ ಕೆಲರನ್ನು ಹಿಡಿದು ಹಲವರಿಗೆ ಗಾಯಪಡಿಸಿದರು. ಈಗ ಆ ಮೊರಿಟ್ಜು ಏಟುತಿಂದು ಜರ್ಮನರದೇಶಕ್ಕೆ ಓಡಿಹೋಗಿಅಡಗಿಕೊಂಡಿರುವನು

ರಷ್ಯಾಚಕ್ರವರ್ತಿಯವರು ತಮ್ಮ ದೇಶದಲ್ಲಿ ಮದ್ಯಪಾನವನ್ನು ಅಣಗಿಸುವುದಕ್ಕೆ ಅಭೂತಪೂರ್ವವಾದ ಉದಾರಪ್ರಯತ್ನಗಳನ್ನು ಮಾಡಿದ್ದಾರೆ. ಸಾರಾಯಿ ಮಾರುವುದನ್ನೇ ತಮ್ಮ ದೇಶದಲ್ಲಿ ತಪ್ಪಿಸಿಬಿಡಲು ಸಿದ್ಧರಾಗಿದ್ದಾರೆ. ಇದರಿಂದ ಆ ಶಾಖೆಯ ಮೂಲಕ ಸರ್ಕಾರಕ್ಕೆ ಆಗುತ್ತಿದ್ದ ವಾರ್ಷಿಕ ಆದಾಯ ೯೩॥ ಕೋಟಿ ರೂ.ಗಳು ನಷ್ಟವಾಗುತ್ತಿದ್ದರೂ, ಲಕ್ಷ್ಯಮಾಡದೆ ಬಿಟ್ಟುಬಿಟ್ಟಿದ್ದಾರೆ. ಈ ಉದಾಹರಣೆಯು ಪ್ರಪಂಚದ ಸಕಲ ಪ್ರಭುಗಳಿಗೂ ಗಮನೀಯವಾಗಿದೆಯಲ್ಲವೆ?

ಜರ್ಮನಿಯವರು ಫ್ರಾನ್ಸ್ ಮೊದಲಾದ ದೇಶಗಳಿಗೆ ವರ್ತಕರಂತೆ ಹೋಗಿ ಅಲ್ಲಿ ಯಂತ್ರಾಲಯಗಳನ್ನು ಕಟ್ಟಿಕೊಂಡು ಅವುಗಳಲ್ಲಿ ದೊಡ್ಡದೊಡ್ಡ ಫಿರಂಗಿಗಳನ್ನು ಜೋಡಿಸುವುದಕ್ಕೇರ್ಪಡಿಸಿಕೊಂಡಿದ್ದರು. ಇಂತಹ ಸ್ಥಲವೊಂದು ಈಗತಾನೇ ಫ್ರಾನ್ಸಿನಲ್ಲಿ ಗೊತ್ತಾಯಿತು. ಇಂತಹುದೇ ಮತ್ತೊಂದು ಇಂಗ್ಲೆಂಡಿಗೆ ಸೇರಿದ ವಿಲ್ಲೆಂಡೇನಿನಲ್ಲಿ ಗೋಚರಿಸಿತು. ಅಲ್ಲಿ ಫಿರಂಗಿಗಳನ್ನಿಡುವುದಕ್ಕೆ ದಿಣ್ಣೆಗಳನ್ನು ರಚಿಸಿದ್ದರು. ಅವುಗಳನ್ನು ಅಧಿಕಾರಿಗಳು ವಶಪಡಿಸಿಕೊಂಡು, ಅದರಲ್ಲಿನ ಜರ್ಮನಿಯವರನ್ನು ಹಿಡಿದಿದ್ದಾರೆ.

ಯುದ್ಧದ ವೈಚಿತ್ರ್ಯಗಳಲ್ಲಿ ಜರ್ಮನಿಯ ಸೈನಿಕರನ್ನೊಯ್ಯುವ ರೈಲುಬಂಡಿಗಳೂ, ವಿಚಿತ್ರವಾಗಿವೆ. ಆಕ್ಸಿಲಾಚೇಪಲ್ಲಿನ ನೈರುತಿಮೂಲೆಯ ಕಡೆಗೆ ಹೋಗುತ್ತಿದ್ದ ಒಂದು ಟ್ರೇನಿನಲ್ಲಿ ೨೦೦ ಬಂಡಿಗಳಿದ್ದುವು. ಇವುಗಳನ್ನೆಳೆಯಲು ೩ ಇಂಜಿನ್ನುಗಳು ಮುಂಗಡೆಯೂ, ೨ ಮಧ್ಯದಲ್ಲೂ, ೨ ಹಿಂಗಡೆಯಲ್ಲೂ ತಗುಲಿಸಲ್ಪಟ್ಟಿದ್ದುವು. ಈ ಬಂಡಿಗಳಲ್ಲಿ ೧೬೦೦೦ ಜನರಿದ್ದಂತೆ ಲೆಕ್ಕಿಸಲ್ಪಟ್ಟಿವೆ. ಒಂದೊಂದು ಬಂಡಿಯು ೪೦ ಅಡಿ ಉದ್ದವಿದ್ದು ಮಧ್ಯೆ ಪ್ರತಿಯೊಂದು ಬಂಡಿಗೂ ವಿರಾಮ ಬಿಡಲ್ಪಟ್ಟು ಒಟ್ಟು ಟ್ರೇನು ೨ ಮೈಲಿ ಉದ್ದವಿದ್ದಿತು

ಎಮ್ಡೆನ್‌ಹಡಗು ಕೆಡೆಯಿಸಲ ಮುಳುಗಿಸಿದ ೩ ಹಡಗುಗಳಲ್ಲಿ ಬಹಳ ಸಾಮಾನಿದ್ದಿತು. ಅವುಗಳಲ್ಲಿ ಮದ್ರಾಸಾಧಿಪತ್ಯಕ್ಕೆ ಸೇರಿದವರ ಸಾಮಾನುಗಳೇ ಈ ಕೆಳಗೆ ಕಂಡಂತೆ ಇದ್ದು ನಷ್ಟವಾಗಿರುವುದು. ಸ್ಪೆನ್‌ಸರ್ ಷಾಪಿನವರದು ೧ ಲಕ್ಷದ ೨ ಸಾವಿರ, ವಾಕರ್‌ಕಂಪೆನಿಯವರದು ೧॥ ಲಕ್ಷ, ಟಿಯಿಲರ್‌ಕಂಪೆನಿ ಬಯರ್ಸ್‌ಡೇಲ್ ಕಂಪೆನಿಗಳವರದು ||| ಲಕ್ಷ, ವಿಲ್ಸನ್‌ಕಂಪೆನಿಯವರದು ೪೦ ಸಾವಿರ, ಆರ್‌ಷಾಪಿನವರದು ೩೪ ಸಾವಿರ, ಬೆಂಗಳೂರಿನ ಬಾರ್ಬರ್‌ಕಂಪೆನಿಯವರದೂ ಮತ್ತೊಬ್ಬ ವ್ಯಾಪಾರಿಗಳದೂ ಸೇರಿ ಬಹುಶಃ ೩೪ ಸಾವಿರ ರೂ. ನೀಲಗಿರಿಯಲ್ಲಿ ಪ್ರಕಟವಾಗುತ್ತಿರುವ ಅಬ್ಜರ್‌ವರ್ ಎಂಬ ವರ್ತಮಾನ ಪತ್ರಿಕೆಯವರದು ಮೂರುಸಾವಿರ ರೂ. ಮದ್ರಾಸ್ ಗೌರ್ನರದು ೩ ಸಾವಿರ ರೂ.ಗಳ ಸಾಮಾನು ಸಮುದ್ರಾರ್ಪಿತವಾಯಿತು.

ಯುದ್ಧವಾರ್ತೆ.

ಪಶ್ಚಿಮರಣರಂಗ.

ಜರ್ಮನರು ಫ್ರಾನ್ಸಿನ ಉತ್ತರದೇಶದಲ್ಲಿ ಕೆಲ ಗ್ರಾಮಗಳನ್ನೂ ಪಟ್ಟಣಗಳನ್ನೂ ಆಕ್ರಮಿಸಿಕೊಂಡು, ಅವುಗಳ ಮಾಡದ ಮೇಲೆ ಫಿರಂಗಿಗಳನ್ನಿಟ್ಟು ಇಂಗ್ಲೀಷ್ ಫ್ರೆಂಚ್ ಸೇನೆಗಳಿಗೆ ಗುಂಡುಗಳನ್ನು ಹೊಡೆಯುತ್ತಿರುವರು. ಹೀಗೆ ಮಾಡುವುದರಿಂದ, ಇದಿರುಪಕ್ಷದವರು ತಮ್ಮ ಆ ಗ್ರಾಮಗಳು ನಾಶವಾದಾವೆಂದು ಅವುಗಳ ಮೇಲೆ ಫಿರಂಗಿ ಗುಂಡುಗಳನ್ನು ಹೊಡೆಯದೆ ಹೋಗಬಹುದಾದ ಕಾರಣ. ತಮಗೆ ಏಟು ತಪ್ಪುವುದು ಎಂಬುದೇ ಜರ್ಮನರ ಊಹೆ. ಒಂದುವೇಳೆ ಇಂಥ ಗ್ರಾಮಗಳನ್ನು ಇಂಗ್ಲೀಷ್ ಫ್ರೆಂಚ್‌ಸೇನೆಗಳು ಆಕ್ರಮಿಸಿಕೊಳ್ಳಬಹುದಾದ ಸಂದರ್ಭವು ಬಂದರೆ ಕೂಡಲೇ ಅಲ್ಲಿಂದ ಹಿಂದಕ್ಕೆ ಓಡಿಹೋಗಲು ಊರಮುಗ್ಗುಲಲ್ಲೇ ಕೆಲಕೆಲ ಮೋಟಾರುಗಳನ್ನು ಅವರು ಅಣಿಪಡಿಸಿಕೊಂಡಿರುತ್ತಿರುವರು. ಇದನ್ನು ಮಿತ್ರಸೈನ್ಯದವರು ತಿಳಿದು ಶತ್ರುಗಳ ವಿಧ್ವಂಸನಕ್ಕಾಗಿ ಅವರು ಸೇರಿಕೊಂಡಿರುವ ತಮ್ಮ ಗ್ರಾಮಗಳಮೇಲೂ ಫಿರಂಗಿಗಳನ್ನು ಹಾರಿಸುತ್ತ ಬಂದಿರುವರು. ಡಿಕ್ಸ್‌ಮುಡ್-ಬಾಸ್ಸರ್ಟ-ಆರ್ಮೆಂಟಿಯರ್ಸ್-ರೇಡಿಂಗ್‌ಹೇಂ-ಲಾಬೆಸ್ಸೀ-ಪ್ರದೇಶಗಳಲ್ಲಿ, ಶತ್ರುಸೈನ್ಯಗಳು ಬಹಳ ತೀಕ್ಷ್ಣವಾಗಿ ಪದೇಪದೇ ಮೇಲೆಬಿದ್ದು ಕಾದಾಡಿದರು. ಆದರೂ ನಮ್ಮವರು ಸ್ವಲ್ಪವೂ ಕದಲಲಿಲ್ಲ. ಫ್ರೀಕೋರ್ಟ್, ಆಲ್ಬರ್ಟಿನ ಪೂರ್ವಭಾಗ, ಕ್ರೋನೇಯ ಪಶ್ಚಿಮಭಾಗ, ಸೋಯಿರ್ಪ್ರಾಂತ-ಆರ್ಗೋನೆಯ ಬಳಿ, ಇರ್‌ಡಿಪ್ಯಾರಿಸ್ ಬಳಿ, ವೆರ್ಡನ್ನಿನ ನೈಋತ್ಯಭಾಗ, ಮಾರ್ಕಿಕೋರ್ಟ್ ಪ್ರಾಂತ, ಚಾಂಪ್ನಬಳಿ-ಸೆಂಟ್‌ಮಿಹೀಲಿಗೆ ನೈಋತ್ಯಭಾಗ— ಈ ಪ್ರದೇಶಗಳಲ್ಲೆಲ್ಲಾ ಕಳೆದವಾರ ಭೀಕರವಾಗಿ ಕಾದಾಡಿ ನಮ್ಮವರು ಶತ್ರುಗಳನ್ನು ಹಿಂದಕ್ಕೆ ಅಟ್ಟಿಬಿಟ್ಟಿದ್ದಾರೆ. ಉತ್ತರದಲ್ಲಿ ಸಮುದ್ರತೀರದಿಂದ ಲಾಬಸ್ಸಿಯವರೆಗೆ ಶತ್ರುಗಳಮೇಲೆ ಇಂಗ್ಲೀಷ್ ಫ್ರೆಂಚ್ ಬೆಲ್ಜಿಯಂ ಸೇನಾತ್ರಯವು ಬಹಳ ತೀಕ್ಷ್ಣವಾಗಿ ಕಾದಾಡುತ್ತಿವೆ. ಮತ್ತೂ ಅರ್ರಾಸಿಗೂ, ಓಯಿಸ್ಸಿಗೂ ಮಧ್ಯದಲ್ಲೂ ಹಾಗೆಯೇ ಕಾಳಗವಾಗುತ್ತಿದ್ದಿತು. ನ್ಯೂಪೋರ್ಟ್ಟಿನ ಹತ್ತಿರ ಸಮುದ್ರದ ಸಂಗಮವಾಗುವ ಈಸರ್‌ನದಿಯನ್ನು ದಾಂಟಿ ಫ್ರಾನ್ಸ್‌ದೇಶವನ್ನು ನುಗ್ಗಬೇಕೆಂದು ಜರ್ಮ ಸೈನ್ಯವು ಬಹಳ ಸಾಹಸದಿಂದ ಕಳೆದವಾರದಲ್ಲೆಲ್ಲಾ ಭೀಕರವಾಗಿ ಕಾದಾಡಿತು. ಬೆಲ್ಜಿಯಂ ಸೈನಿಕರು ಆ ಭಾಗವನ್ನು ಬಲವಾಗಿರಕ್ಷಿಸಿಕೊಂಡಿದ್ದರೂ ಮಿತ್ರಮಂಡಲಿಯ ಸೇನಾತ್ರಯಕ್ಕೂ ಶತ್ರುಗಳಿಗೂ ಫಿರಂಗಿಯ ತುಪಾಕಿಯ ಸನೀನಿನ ಯುದ್ಧಗಳೆಲ್ಲಾ ಭಯಂಕರವಾಗಿ ಜರುಗಿದುವು. ಭೂಮಿಯಲ್ಲಿ ರಕ್ತವು ಹರಿದಾಡಿತು. ಇದುವರೆಗೆ ನಡೆದ ಯುದ್ಧಗಳಲ್ಲೆಲ್ಲಾ ಇದು ಬಹು ಭೀಕರವೆಂದು ಹೇಳಲ್ಪಡುತ್ತಿದೆ. ಮಿತ್ರ ಸೈನಿಕರು ಕಾಲ್ವೆಯನ್ನು ಕಿತ್ತು ಶತ್ರುಗಳ ಮೇಲೆ ನೀರನ್ನು ಉರುಳಿಸಿ ಬಹಳ ಅನರ್ಥವನ್ನು ಮಾಡಿದರು. ಲೆಕ್ಕವಿಲ್ಲದಷ್ಟು ಬಂಡಿಗಳಮೇಲೆ ಜರ್ಮನರ ಕಡೆಯ ಏಟುತಿಂದ ಸೈನಿಕರು ಬ್ರೂಜೆಸ್‌ಪಟ್ಟಣಕ್ಕೆ ಸಾಗಿಸಲ್ಪಡುತ್ತಿದ್ದರು. ನ್ಯೂಪೋರ್ಟಿಗೂ ಆಸ್ಟೆಂಡಿಗೂ ಮಧ್ಯದಲ್ಲಿ ನಡೆದ ಮಹಾಯುದ್ಧದಲ್ಲಿ ಸತ್ತ ೧॥ ಸಾವಿರ ಜರ್ಮನರನ್ನು ಒಂದುಕಡೆ ಅವರು ದಹನಮಾಡಿದರು. ಕಡೆಗೆ ಜರ್ಮನರು ಈಜರ್‌ನದಿಯನ್ನು ದಾಟಿದರು. ಆದರೂ ದಡದಿಂದ ಮುಂದಕ್ಕೆ ಸಾಗಿ ಹೋಗದಂತೆ ಮಿತ್ರಮಂಡಲಿಯ ಸೈನ್ಯಗಳು ಶತ್ರುಸೈನ್ಯವನ್ನು ತಡೆದುಬಿಟ್ಟಿವೆ. ಈಗ ಇಂಗ್ಲೀಷು ಫ್ರೆಂಚ್ ಬೆಲ್ಜಿಯಂ ಸೈನ್ಯಗಳು ಬೆಲ್ಜಿಯಮ್ಮಿಗೆ ಸೇರಿದ ಸಮುದ್ರತೀರದ ಆಸ್ಟೆಂಡ್‌ಪಟ್ಟಣದವರೆಗೂ ಶತ್ರುಗಳನ್ನು ಒತ್ತಿಕೊಂಡು ಹೋಗಿದ್ದಾರೆ. ಫ್ರೆಂಚ್ ಸೇನೆಗಳು ಕಳೆದ ತಾ॥ ೨೪ ರಲ್ಲಿ ಜರ್ಮನರಕಡೆಯ ೫೦೦ ಮಂದಿಗಳನ್ನು ಸೆರೆಹಿಡಿದಿದ್ದಾರೆ. ಮಿತ್ರಮಂಡಲಿಯವರು ಶತ್ರುಗಳ ೨ ಫಿರಂಗಿಗಳನ್ನೂ ಹಿಡಿದುಕೊಂಡಿದ್ದಾರೆ. ಈಜರ್‌ನದಿಯ ಕಾಲ್ವೆಯನ್ನು ಕಿತ್ತುಹಾಕಿದಾಗ ಜರ್ಮನರು ಅಡಗಿಕೊಂಡಿದ್ದ ಕಂದಕಗಳಿಗೆಲ್ಲಾ ಅದರ ನೀರು ತುಂಬಿಕೊಳ್ಳಲು, ಒದ್ದಾಡುತ್ತಿದ್ದ ಶತ್ರುಗಳ ಬಿಕ್ಕಟ್ಟಿನ ಸಮಯವನ್ನು ಬೆಲ್ಜಿಯಂಸೈನಿಕರು ಸಾಧಿಸಿ, ೧೩೦೦ ಮಂದಿಗಳನ್ನು ಸೆರೆಯಾಳುಗಳನ್ನಾಗಿ ಹಿಡಿದಿದ್ದಾರೆ. ಈಚೆಗೆ ಇಂಗ್ಲೀಷ್ ಫ್ರೆಂಚ್‌ಸೈನ್ಯಗಳು ಸೈಸನ್ನಿಗೆ ವಾಯುವ್ಯಭಾಗದಲ್ಲೂ ಕ್ರಯಾರ್ನಪ್ರಾಂತದಲ್ಲೂ ಮುಂದುವರಿದು ಹೋಗಿದ್ದಾರೆ. ಮ್ಯೂಜುನದಿಯ ಉನ್ನತಪ್ರದೇಶಗಳಲ್ಲಿ ಫಿರಂಗಿಯುದ್ಧವು ನಡೆದಿದೆ. ತಿಯಾರ್ಕೋರ್ಟ್-ಪಾನ್ನಾಡ್-ಬ್ಯೂಜರೆಲ್ಸ್--ವಾಯಿಸ್ವಿಲ್ಲೆ--ಪಟ್ಟಣಗಳಮೇಲೆ ಹಾದುಹೋಗುತ್ತಿದ್ದ ಮಾರ್ಗಗಳನ್ನು ಮಿತ್ರಮಂಡಲಿಯ ಫಿರಂಗಿಸೈನಿಕರು ವಶಪಡಿಸಿಕೊಂಡರು. ಇವು ಜರ್ಮನರು ಸೆಂಟ್‌ಮಿಹೀಲಿಗೆ ಹೋಗಿಬರಲು ಏರ್ಪಡಿಸಿಕೊಂಡಿದ್ದ ಮುಖ್ಯಮಾರ್ಗಗಳು. ಆರ್ಗೋನ್‌ಜಿಲ್ಲೆಯ ಷಾಲೆಷ್‌ಪಟ್ಟಣಕ್ಕೆ ಉತ್ತರದಲ್ಲಿರುವ ಕಾಡುಗಳಲ್ಲಿ ಅಡಗಿಕೊಂಡಿದ್ದ ಜರ್ಮನರ ೧ ಪಟಾಲಮ್ಮನ್ನು ಕಳೆದ ತಾ॥ ೨೪ ರಲ್ಲಿ ಮಿತ್ರಮಂಡಲಿಯವರು ಪೂರ್ತಿಯಾಗಿ ನಾಶಮಾಡಿದ್ದಾರೆ. ಜರ್ಮನರು

ಈಜರ್ ನದಿಯನ್ನು ದಾಟಿದ್ದರೂ ಇಂಗ್ಲೀಷು ಫ್ರಾನ್ಸು ಸೈನ್ಯಗಳು ನ್ಯೂಪೋರ್ಟಿಗೂ, ಈಪ್ರೇಸಿಗೂ ಮಧ್ಯದಲ್ಲೂ ಅರ್ರಾಸಿಗೆ ಪೂರ್ವಭಾಗದಲ್ಲೂ ಮುಂದುಮುಂದಕ್ಕೆ ಸಾಗಿಹೋಗುತ್ತಿವೆ. ಜರ್ಮನರು ನ್ಯೂಪೋರ್ಟ್ ಪಟ್ಟಣದಮೇಲೆ ಫಿರಂಗಿ ಗುಂಡುಗಳನ್ನು ಹಾರಿಸುತ್ತಿದ್ದಾರೆ. ಮಿತ್ರಮಂಡಲಿಯವರು ನಾನ್ಸಿಗೆ ಪೂರ್ವದಲ್ಲಿ ಜರ್ಮನರಮೇಲೆ ಬಿದ್ದು ಕಾದು ಫ್ರಾನ್ಸ್ ಎಲ್ಲೆಗಳಿಂದ ಆಚೆಗೆ ಓಡಿಸಿದ್ದಾರೆ.

ಜಲಯುದ್ಧ.

ಕಾರ್ಮೋರಾಂಟು ಎಂಬ ಐರ್ಲಾಂಡುದೇಶದ ಹಡಗು ಉತ್ತರಸಮುದ್ರದಲ್ಲಿ ಮದ್ದಿನಗೋಳಕ್ಕೆ ಬಡಿದು ಒಡೆದು ಮುಳುಗಿಹೋಯಿತು. "ಅಟೆಂಟೀಸ್" ಎಂಬ ಇಂಗ್ಲೀಷ್ ಕ್ರೂಜರು ಜರ್ಮನರ ಸಮುದ್ರತೀರಕ್ಕೆ ಹೋಗಿ, ಅಲ್ಲಿದ್ದ ಫಿರಂಗಿಗಳ ನಿಲಯದಮೇಲೆ ಫಿರಂಗಿಗುಂಡುಗಳನ್ನು ಹೊಡೆದು ಸುಟ್ಟು ಡೋವರ್ ರೇವಿಗೆ ಬಂದು ಸೇರಿತು. ಶತ್ರುಗಳ ಕಡೆಯಿಂದ ಹೊಡೆಯಲ್ಪಟ್ಟ ಫಿರಂಗಿ ಗುಂಡುಗಳ ಚೂರುಗಳಿಂದ ಇಂಗ್ಲೀಷರ ಹಡಗಿನ ೭ ಮಂದಿ ಕಲಾಸಿಗಳಿಗೆ ಏಟುಬಿದ್ದಿತು. ಮತ್ತೂ ಇಂಗ್ಲೀಷರ ಕೆಲ ಹಡಗುಗಳು ಬೆಲ್ಜಿಯಂ ಸಮುದ್ರತೀರಕ್ಕೆ ಹೋಗಿ, ಅಲ್ಲಿನ ನ್ಯೂಪೋರ್ಟನ್ನು ರಕ್ಷಿಸಿಕೊಳ್ಳಲು ಹೋರಾಡುತ್ತಿದ್ದ ಇಂಗ್ಲೀಷ್ ಬೆಲ್ಜಿಯಂ ಸೈನಿಕರಿಗೆ ದೊಡ್ಡ ದೊಡ್ಡ ಫಿರಂಗಿಗಳ ಸಹಾಯವನ್ನು ಮಾಡಿದುವು. ಶತ್ರುಗಳಮೇಲೆ ಅವೂ ಗುಂಡುಗಳನ್ನು ಹೊಡೆದುವು. ಈ ಯುದ್ಧದಲ್ಲಿ ಶತ್ರುಗಳ ಕಡೆಯಿಂದ ಬಿದ್ದ ಗುಂಡಿನೇಟಿನಿಂದ ಇಂಗ್ಲೀಷರ ಒಬ್ಬ ಲೆಫ್ಟಿನೆಂಟು ಸತ್ತನು. ೫ ಮಂದಿಗೆ ಏಟು ಬಿದ್ದಿದೆ; ೬ ಮಂದಿ ಅಗೋಚರರಾದರು. ಇಂಗ್ಲೀಷ್ ಯುದ್ಧನಾವೆಗಳು ಸಮುದ್ರತೀರದಲ್ಲಿ ಬೆಲ್ಜಿಯಂದೇಶದಲ್ಲಿನ ಶತ್ರುಸೈನ್ಯಗಳು ಮುದುಗಿಕೊಂಡಿದ್ದ ಕಂದಕಗಳೆದಿರಿಗೆ ನಿಂತು ಬೆಳಗಿನಜಾವದಲ್ಲಿ ಫಿರಂಗಿಗಳನ್ನು ಮೂರುಮೈಲಿದೂರದಿಂದ ಹಾರಿಸಲುಪಕ್ರಮಿಸಿದುವು. ಅವುಗಳೇಟಿಗೆ ಒಂದೇ ದಿನದಲ್ಲಿ ಶತ್ರುಗಳಕಡೆ ೧೬೦೦ ಮಂದಿಗಳು ಸತ್ತರು. ಅಲ್ಲಿದ್ದ ಶತ್ರುಗಳ ಫಿರಂಗಿಗಳ ನಿಲಯಗಳು ೬ ಧ್ವಂಸವಾಗಿ ಹೋದುವು. ಭಾನುವಾರದದಿನ ಈ ಗುಂಡಿನೇಟಿನಿಂದ ಶತ್ರುಗಳ ವಿಮಾನವೊಂದು ಭಸ್ಮವಾಯಿತು. ಸೋಮವಾರದ ದಿನ ಶತ್ರುಗಳು ತಮ್ಮ ಸಬ್‌ಮೆರೀನುಗಳಿಂದ ಇಂಗ್ಲೀಷ್ ಹಡಗುಗಳನ್ನು ನಾಶಪಡಿಸಬೇಕೆಂದು ಬಹಳ ಪ್ರಯತ್ನಮಾಡಿದರು, ಆದರೆ ಅವರು ಉಪಯೋಗಿಸಿದ ಟಾರ್ಪೆಡೋಗಳು ಗುರಿ ತಪ್ಪಿಹೋದುದರಿಂದ ಹತಾಶರಾದರು. ಇಂಗ್ಲೀಷ್-ಫ್ರೆಂಚ್-ಬೆಲ್ಜಿಯಂ ಕಮ್ಯಾಂಡರುಗಳ ಕೋರಿಕೆಪ್ರಕಾರ ಬೆಲ್ಜಿಯಂತೀರದಲ್ಲಿ ಈ ನೌಕಾಯುದ್ಧವನ್ನು ನಡೆಯಿಸಬೇಕಾಯಿತು. ಇಲ್ಲಿಗೆ ಬಂದಿದ್ದ ಇಂಗ್ಲೀಷ್ ಹಡಗುಗಳಲ್ಲಿ ಬಹುದೂರಕ್ಕೆ ಗುಂಡನ್ನು ಹೊಡೆಯಬಲ್ಲ ಫಿರಂಗಿಗಳಿದ್ದುವು. ಆ ಹಡಗುಗಳಿಗೆ ಸೇರಿದ ವಿಮಾನಗಳು ಮೊದಲು ಮೇಲಕ್ಕೆಹಾರಿ ಜರ್ಮನ್ ಸೈನ್ಯಗಳಿದ್ದ ಸ್ಥಲವನ್ನು ತಿಳಿದು ತಮ್ಮ ಹಡಗುಗಳಿಗೆ ಸಂಜ್ಞೆಮಾಡಿದುವು. ಅದರಮೇಲೆ ಅವು ಅವಿಚ್ಛಿನ್ನವಾಗಿ ಗುಂಡುಗಳಮಳೆಯನ್ನು ಸುರಿಸಿದುವು. ಈ ಫಿರಂಗಿಗಳಿಂದ ನಿಮಿಷ ೧ಕ್ಕೆ ೧೪ ಗುಂಡುಗಳಂತೆ ಹೊಡೆಯಲ್ಪಟ್ಟುವು. ಇಷ್ಟು ವೇಗವಾಗಿ ಇದುವರೆಗೆ ಯಾವ ಹಡಗುಗಳ ಫಿರಂಗಿಗಳಲ್ಲೂ ಗುಂಡು ಹೊಡೆಯಲ್ಪಟ್ಟಿಲ್ಲವಂತೆ. ಇಲ್ಲಿಗೆ ಬಂದಿದ್ದ ಇಂಗ್ಲೀಷ್ ಹಡಗುಗಳೊಳಗೆ ಫೋರ್‌ಸೈಟ್ ಎಂಬ ಲೈಟ್‌ಕ್ರೂಜರು ಜರ್ಮನರ ಕಂದಕಗಳ ಮೇಲೂ ಅವರು ಈಜರ್‌ನದಿಗೆ ಕಟ್ಟುತ್ತಿದ್ದ ಸೇತುವೆ ಮೇಲೂ ಅವರ ಫಿರಂಗಿಗಳ ನಿಲಯದ ಮೇಲೂ ೧ ಸಾವಿರ ಗುಂಡುಗಳನ್ನು ಹಾರಿಸಿತು. ಇದರಿಂದ ಶತ್ರುಗಳ ಕಡೆಯಲ್ಲಿ ಬಹು ಅನರ್ಥವಾಯಿತು. ಶತ್ರುಗಳು ಹೊಗೆಸುತ್ತಿಸುವ ಸಿಡಿಮದ್ದುಗಳನ್ನು ಹಾಕಿ ಕತ್ತಲೆಗೆಯಿಸಿ, ಇದಿರುಗುಂಡುಗಳನ್ನು ಹಾರಿಸಿ ಬಹಳ ಸಾಹಸದಿಂದ ಕಾದಾಡಿದರು. ಆದರೂ ಕಡೆಗೆ ಸೋತುಹೋದರು. ಅವರಲ್ಲಿ ಸತ್ತುಕೆಟ್ಟವರು ಹೋಗುತ ಉಳಿದವರಲ್ಲಿ ಹಲವರು ದಿಕ್ಕುದಿಕ್ಕಿಗೆ ಓಡಿಹೋದರು. ಜರ್ಮನರು ತಮ್ಮಲ್ಲಿರುವ ಫಿರಂಗಿಗಳೊಳಗೆಲ್ಲಾ ದೊಡ್ಡವಾದ ಫಿರಂಗಿಗಳನ್ನು ಇಲ್ಲಿನ ಯುದ್ಧಕ್ಕೆ ತಂದು ಮಿತ್ರಮಂಡಲಿಯವರ ಮೇಲೆ ಪ್ರಯೋಗಿಸುತ್ತಿದ್ದರು. ಈ ಪ್ರದೇಶದ ಗ್ರಾಮಗಳೆಲ್ಲಾ ಉಭಯಪಕ್ಷದ ಗುಂಡಿನೇಟುಗಳಿಂದ ಧ್ವಂಸವಾಗಿ ಹೋಗಿವೆ. ಶತ್ರುಗಳಲ್ಲಿ ೪ ಸಾವಿರ ಮಂದಿ ಹತರಾದರು. ಇಂಗ್ಲಿಷ್-ಫ್ರೆಂಚ್ ದೇಶದ ಹಡಗುಗಳು ಸೇರಿ ಅತ್ತ ಜರ್ಮನಿ ಸಮುದ್ರತೀರಕ್ಕೆ ಹೋಗಿ ಅಲ್ಲಿದ್ದ ಫಿರಂಗಿಯ ನಿಲಯದಮೇಲೂ ಗುಂಡುಗಳನ್ನು ಹಾರಿಸಿದುವು.

ಅಟ್ಲಾಂಟಿಕ್ ಸಾಗರದಲ್ಲಿ ಜರ್ಮನರ ಕಾಲ್‌ಸ್ರೂ ಎಂಬ ಕ್ರೂಯಿಜರು ಇಂಗ್ಲಿಷರ ಕಡೆಯ ೧೩ ವ್ಯಾಪಾರದ ಹಡಗುಗಳನ್ನು ಮುಳುಗಿಸಿಬಿಟ್ಟಿತು. ಇವೆಲ್ಲವೂ ಒಟ್ಟು ೬೦ಸಾವಿರ ಟನ್ನುಗಳ ಭಾರದ ಸಾಮಗ್ರಿಗಳನ್ನು ಹೊರಬಲ್ಲವಾಗಿದ್ದುವು. ಜರ್ಮನಿಗೆ ಸೇರಿದ ಕೆಮರೂನ್ ದ್ವೀಪಗಳಲ್ಲಿನ ಕೋಪೋಕ್ರಿಬಿಚ್ ಎಂಬ ರೇವಿಯಮೇಲೆ ಫ್ರೆಂಚರ ೨ ಯುದ್ಧದ ಹಡಗುಗಳು ಸಾಗಿಹೋಗಿ, ಆ ಸ್ಥಲವನ್ನು ತಮಗೆ ವಶಪಡಿಸಬೇಕೆಂದು ಅದರ ಅಧಿಕಾರಿಗೆ ೨ ಬಾರಿ ವರ್ತಮಾನಕೊಟ್ಟರು. ಸಮಾಧಾನವು ಬರದಿದ್ದುದರಿಂದ ಆ ರೇವಿಯಮೇಲೆ ಫಿರಂಗಿಗಳನ್ನು ಹಾರಿಸುತ್ತಿರುವರು. ಬಾಡ್‌ಗಡ್ ಎಂಬ ಇಂಗ್ಲೀಷರ ಡಿಸ್ಟ್ರಾಯರು ಹಾಲೆಂಡಿನ ತೀರದಲ್ಲಿ ಒಂದು ಜರ್ಮನ್ ಸಬ್‌ಮೆರೀನ್‌ನನ್ನು ಗುಂಡುಗಳಿಂದ ಹೊಡೆದು ಮುಳುಗಿಸಿಬಿಟ್ಟಿತು. ಬೊಲೋನಿನಿಂದ ಹಾವರಿಗೆ ಹೋಗುತ್ತಿದ್ದ ಫ್ರೆಂಚರ ಒಂದು ಪ್ರಯಾಣಿಕರ ಹಡಗು ನೀರಿನೊಳಗಿದ್ದ ಮದ್ದಿನ ಗೋಳಕ್ಕೋ ಟಾರ್ಪೆಡೋವಿಗೋ ಬಡಿದು ಮುಳುಗಿಹೋಯಿತು. ಅದರಲ್ಲಿ ಬೆಲ್ಜಿಯಂ ದೇಶದಿಂದ ಹಾವರಿಗೆ ಹೋಗುತ್ತಿದ್ದ ೨|| ಸಾವಿರ ಪ್ರಜೆಗಳಿದ್ದರು. ಆದರೆ ಆ ಸಮಯಕ್ಕೆ ಅದೇದಾರಿಯಲ್ಲಿ ಹೋಗುತ್ತಿದ್ದ ಒಂದು ಅಂಚೆಯಹಡಗು ವಿಪನ್ನಾವಸ್ಥೆಯಲ್ಲಿದ್ದ ಆ ಜನರಲ್ಲಿ ೧೫೦ ಮಂದಿಗಳ ಹೊರತು ಉಳಿದವರನ್ನೆಲ್ಲಾ ೪೦ ನಿಮಿಷಗಳೊಳಗಾಗಿ ತನ್ನಮೇಲೇರಿಸಿಕೊಂಡು ಫೋಕ್‌ಸ್ಟನ್ ರೇವೆಯನ್ನು ಸೇರಿಸಿತು. ಸತ್ತವರಲ್ಲಿ ಹಲವರು ಭಯದಿಂದ ಕೆಳಕ್ಕೆ ಧುಮಿಕುವುದರಲ್ಲೂ ಅಂಚೆಯ ಹಡಗಿಗೆ ಹಾರುವುದರಲ್ಲೂ ದೋಣಿಗಳಿಗೆ ಮಕ್ಕಳುಮರಿಗಳನ್ನು ಇಳಿಯಿಸುವುದರಲ್ಲೂ ಆಯತಪ್ಪಿ ನೀರಿಗೆಬಿದ್ದೋ ಏಟುತಿಂದೋ ಹತರಾಗಿ ಹೋದವರಾಗಿದ್ದರು.

ಪೂರ್ವರಣರಂಗ.

ರಷ್ಯನರಕಡೆ ಸೆರೆಸಿಕ್ಕಿದ ಜರ್ಮನ್‌ಜನರ ಬಳಿಯಲ್ಲಿ ದೊರೆದ ಕೆಲಕಾಗದಗಳಿಂದ ಜರ್ಮನರು ಅಕ್ಟೋಬರ್ ೧೫ರಲ್ಲಿ ವಾರ್ಸಾ ಪಟ್ಟಣವನ್ನು ಹಿಡಿದುಕೊಳ್ಳಲು ನಿಶ್ಚಯಿಸಿದ್ದರೆಂದು ಗೊತ್ತಾಗುತ್ತದೆ. ವಾರ್ಸಾದ ಸುತ್ತಲೂ ರಷ್ಯನರು ಭಯಂಕರವಾಗಿ ಶತ್ರುಗಳನ್ನು ಧ್ವಂಸಮಾಡಿ, ಅವರ ಉದ್ದೇಶಗಳನ್ನು ಹಾಳ್ಮಾಡಿರುತ್ತಾರೆ. ಬಹುಮಂದಿ ಜರ್ಮನರು ರಷ್ಯನರ ಸೆರೆಯಾಳುಗಳಾಗಿ ಸಿಕ್ಕಿದ್ದಾರೆ. ಆ ಪ್ರದೇಶದಲ್ಲಿ ಈಗ ಬಹಳ ಮಳೆಯಾಗುತ್ತಿರುವುದರಿಂದ ಜರ್ಮನರು ತೋಡಿಕೊಂಡಿದ್ದ ಕಂದಕಗಳಲ್ಲೆಲ್ಲಾ ನೀರು ತುಂಬಿದೆ. ಈಗ ಹಿಂದಕ್ಕೆ ಓಡಿಹೋದ ಜರ್ಮನ್ ಸೈನ್ಯಗಳು ವಿಶ್ಚುಲಾ ನದಿಯನ್ನು ದಾಟಿಹೋಗಿರುತ್ತವೆ. ಈ ಸ್ಥಲಗಳಲ್ಲಿ ಜರ್ಮನರ ಕಡೆಗೆ ಆಸ್ಟ್ರಿಯನ್ ಸೈನ್ಯಗಳೂ ಸೇರಿ ಯುದ್ಧಕ್ಕೆ ಬಂದಿದ್ದುವು. ಇವೆರಡು ಸೈನ್ಯಗಳೂ ಓಡಿಹೋಗುವಾಗ ಇವಾನಗರೋಡು-ನ್ಯೂಅಲೆಗ್ಸಾಂಡ್ರಾ ಮಾರ್ಗಗಳ ಮಗ್ಗುಲಲ್ಲಿ ತೋಡಿಕೊಂಡಿದ್ದ ಹಳ್ಳಗಳಲ್ಲಿ ತಾವು ತುಂಬಿದ್ದ ಮದ್ದುಗುಂಡುಗಳನ್ನೆಲ್ಲಾ ಅಲ್ಲಲ್ಲೇ ಬಿಟ್ಟು ಓಡಿಹೋಗಿದ್ದಾರೆ. ವಾರ್ಸಾ ನಗರದ ಪಶ್ಚಿಮಕ್ಕೆ ೮೦ ಮೈಲಿಗಳ ವರೆಗೂ ಶತ್ರುಗಳ ಸುಳಿವಿಲ್ಲದಂತೆ ಮಾಡಲ್ಪಟ್ಟಿದೆಯೆಂದೂ ಅಲ್ಲಿನ ಪ್ರಜೆಗಳು ನಿಶ್ಚಿಂತರಾಗಿರುವರೆಂದೂ ರಷ್ಯಾದ ಪ್ರಭುತ್ವದವರಿಂದ ಪ್ರಕಟವಾಗಿದೆ. ಆದರೆ ಜರ್ಮನರು ಅದಕ್ಕೆ ವಿರುದ್ಧವಾಗಿ ವಾರ್ಸಾವು ತಮ್ಮಧೀನದಲ್ಲಿರುವುದೆಂದೂ ಅಲ್ಲಿ ಕದನಗಳಾಗುತ್ತಿರುವುವೆಂದೂ ಪ್ರಕಟಿಸಿಕೊಂಡಿದ್ದಾರೆ. ಇದು ಸುಳ್ಳು. ತಮ್ಮ ದೇಶದ ಪ್ರಜೆಗಳ ಮನಸ್ಸಮಾಧಾನಕ್ಕಾಗಿ ಜರ್ಮನರು ಇಂಥ ನಿಜವಲ್ಲದ ಸುದ್ದಿಗಳನ್ನು ಹಲವುಬಾರಿ ಪ್ರಕಟಿಸಿಕೊಳ್ಳುತ್ತಿರುವರು. ಇಂಗ್ಲೆಂಡನ್ನು ಮುತ್ತಿಗೆಹಾಕಿ, ಪ್ಯಾರಿಸ್ಸನ್ನು ನಾವು ಆಕ್ರಮಿಸಿಕೊಂಡಿರುವೆವೆಂದೂ ಕೂಡ ಆ ದೇಶದ ಪತ್ರಿಕೆಗಳು ಬರೆದುಕೊಂಡಿರುವುವಂತೆ! ಈಚೆಗೆ ರಷ್ಯಾದವರು ಲೋಡ್ಜು ಪಟ್ಟಣವನ್ನು ಸ್ವಾಧೀನಪಡಿಸಿಕೊಂಡಿರುವರು. ರಷ್ಯನರು ವಾರ್ಸಾದ ಪಶ್ಚಿಮಕ್ಕೆ ಶತ್ರುಗಳನ್ನು ಓಡಿಸುವಾಗ ನಡೆಯಿಸಿದ ಯುದ್ಧದಲ್ಲಿ ೩೦೦೦ ಜರ್ಮನರು ಸೆರೆ ಸಿಕ್ಕಿದ್ದಾರೆ.

ಜಪಾನ್.

ಕೀಯಾಚೂ ಹತ್ತಿರ ಜರ್ಮನರಿಗೆ ಸೇರಿದ್ದ ಮಾರಿಯಾನೆ-ಮಾರ್ಷಲ್-ಕಾರೊಲೈನ್-ಎಂಬ ದ್ವೀಪಗಳನ್ನು ಜಪಾನರು ವಶಪಡಿಸಿಕೊಂಡರು. ಅಲ್ಲಿ ಜರ್ಮನರ ಎರಡುಹಡಗುಗಳು ಕಾಣಿಸಿಕೊಳ್ಳಲು ಜಪಾನರು ಒಂದನ್ನು ಮುಳುಗಿಸಿ ಮತ್ತೊಂದನ್ನು ಹಿಡಿದುಕೊಂಡರು. ಪಸಫಿಕ್ ಸಮುದ್ರದಲ್ಲಿ ಜಪಾನರು ಜರ್ಮನರನ್ನು ಅಣಗಿಸಿ ಸಮುದ್ರ ವ್ಯಾಪಾರಕ್ಕೆ ನಿರಾತಂಕವನ್ನುಂಟುಮಾಡುವ ವಿಷಯದಲ್ಲಿ ಮಾಡುತ್ತಿರುವ ಸಾಹಸ ಸಾಹಾಯ್ಯಗಳಿಗಾಗಿ ಇಂಗ್ಲಿಷ್ ಸರ್ಕಾರದ ಪಕ್ಷದಿಂದ ನೌಕಾಸೇನಾಧ್ಯಕ್ಷರಾದ ಚರ್ಚ್‌ಹಿಲ್‌ರವರು ತಮ್ಮ ಕೃತಜ್ಞತೆಯನ್ನು ತಿಳಿಯಪಡಿಸಿದ್ದಾರೆ. ಇದಕ್ಕೆ ಜಪಾನ್ ಮಂತ್ರಿಯು ತಮ್ಮ ನೌಕಾಸೇನಾಪಕ್ಷದಿಂದ-ಉಭಯಸ್ನೇಹಿತರ ನೌಕಾದಳಗಳಿಗೂ ಇಂತಹ ಪರಸ್ಪರಾನುಕೂಲ್ಯವೂ ಪೂರ್ಣವಾದ ಏಕಮತ್ಯವೂ ಘಟಿಸಿರುವುದು ಅತ್ಯಂತ ತೃಪ್ತಿಕರವಾದುದೆಂತಲೂ ಸ್ವಲ್ಪಕಾಲದೊಳಗೇ ತಮ್ಮ ಸಂಕಲ್ಪಗಳೆಲ್ಲಾ ಸಿದ್ಧಿಸುವವೆಂದು ತಾವು ಬಯಸುತ್ತಿರುವೆವೆಂತಲೂ ಉತ್ತರಕೊಟ್ಟು ಚರ್ಚಿಲ್‌ರವರಿಗೆ ವಂದಿಸಿರುತ್ತಾರೆ. ಜಪಾನಿನ ಒಂದು ಟಾರ್ಪೆಡೋ ದೋಣಿಯು ಚೀನಾಕ್ಕೆ ಸೇರಿದ್ದ ಸಮುದ್ರಕ್ಕೆ ಪ್ರವೇಶಿಸಿ, ಅಲ್ಲಿ ಧ್ವಂಸಗೊಳಿಸಲ್ಪಟ್ಟಿದ್ದ ಒಂದು ಜರ್ಮನ್ ಯುದ್ಧನಾವೆಯಮೇಲೆ ತಮ್ಮ ಧ್ವಜವನ್ನೇರಿಸಿ ಹಿಡಿದುಕೊಳ್ಳಲು ಪ್ರಯತ್ನಿಸುತ್ತಿರುವಲ್ಲಿ ಚೀನಾದವರು ಬಂದು, ಆ ಜಪಾನ್ ಹಡಗನ್ನು ತನ್ನಲ್ಲಿರುವ ಕಳಾಸಿಗಳ ಸಮೇತ ತಮಗೆ ವಶವಾಗಬೇಕೆಂದು ತಿಳಿಸಿರುತ್ತವೆ.

ಹಿಂದೂದೇಶದ ಸೇನೆ.

ಇಲ್ಲಿಂದ ಹೋದ ಸೈನ್ಯಗಳೆಲ್ಲಾ ಸುರಕ್ಷಿತವಾಗಿ ಫ್ರಾನ್ಸನ್ನು ಸೇರಿರುವವು. ದಾರಿಯಲ್ಲಿ ಸೈನಿಕರೊಬ್ಬರೂ ಸಾಯಲಿಲ್ಲ. ಕೆಲ ಕುದುರೆಗಳು ಮಾತ್ರ ಸತ್ತವು. ಹಿಂದೂಸೈನ್ಯಗಳು ಯುದ್ಧಕ್ಕೆರಗಿರುವ ವಿಷಯವಾಗಿ ವಿರಳವಾಗಿ ವಾರ್ತೆಯು ಬರುತ್ತಿದೆ. ಒಬ್ಬ ಇಂಗ್ಲೀಷ್ ಸೈನಿಕನು ಪ್ರತ್ಯಕ್ಷಾನುಭವವನ್ನು ಬರೆದಿರುವುದರಲ್ಲಿ ಹೀಗೆ ತಿಳಿಸಿರುತ್ತಾನೆ—"ಒಂದುದಿನ ಜರ್ಮನರು ನಾವಿದ್ದ ಕಂದಕವನ್ನು ಸಮೀಪಿಸುವುದಕ್ಕಾಗಿ ಸ್ವಲ್ಪದೂರ ಬಂದರು. ಅವರಮೇಲೆ ಪ್ರತಿಭಟಿಸುವುದಕ್ಕೆ ಬಂಗಾಳಾ ಲ್ಯಾನ್‌ಸರ್ ಪಟಾಲಮ್ಮಿನ ಹಿಂದೂಸೈನಿಕರಿಗೆ ಅಜ್ಞಾಪಿಸಲ್ಪಟ್ಟಿತು. ಅಜ್ಞೆಯಾದಕೂಡಲೆ ಹಿಂದೂಸೈನಿಕರು ಕುದುರೆಗಳನ್ನೇರಿ ಬಾಣಗಳು ನುಗ್ಗಿದಂತೆ ಅತಿ ವೇಗದಿಂದ ಶತ್ರುಗಳಮೇಲೆ ಎಡಗಡೆಯಿಂದ ಸಾಗಿಹೋಗಿ ಶತ್ರುಗಳಮೇಲೆ ತುಪಾಕಿಗುಂಡುಗಳನ್ನು ಸುರಿಸುತ್ತ ಏಟಿಗೊಬ್ಬ ಜರ್ಮನಿಯವನನ್ನು ಉರುಳಿಸುತ್ತಬಂದರು. ಇದರಿಂದ ಜರ್ಮನಿಯವರು ದಿಕ್ಕುಪಾಲಾಗಿ ಓಡಿಹೋದರು. ಬಳಿಕ ಹಿಂದೂಸೈನಿಕರು ಆಶತ್ರುಗಳನ್ನು ಅರ್ಧ ಮೈಲಿದೂರ ಅಟ್ಟಿಕೊಂಡುಹೋಗಿದ್ದು ಹಿಂದಿರುಗಿಬಂದರು."

ಜರ್ಮನ್ ಪಾರ್ಲಿಮೆಂಟು.

ಕಳೆದ ತಾ|| ೨೩ ರಲ್ಲಿ ಈ ಸಭೆಯು ತೆರೆಯಲ್ಪಟ್ಟಿತು. ಜರ್ಮನ್ ಚಕ್ರವರ್ತಿಯವರು ಈಗ ಪಶ್ಚಿಮರಣರಂಗದಕಡೆಯಲ್ಲಿರುವುದರಿಂದ ತಾವು ಸಭೆಗೆ ಹೋಗಲಿಕ್ಕೆ ಅನುಕೂಲಿಸದ ಕಾರಣ ತಮ್ಮ ಅಭಿನಂದನವನ್ನು ತಂತ್ರಿಯದ್ವಾರಾ ತಿಳಿಸಿದರು. ಯುದ್ಧದ ವೆಚ್ಚಕ್ಕಾಗಿ ಮುಂದಿಡಲ್ಪಟ್ಟಿದ್ದ ಬಿಲ್ಲುಗಳೆಲ್ಲವನ್ನು ಸಭಿಕರು ಅನುಮೋದಿಸಿದರು. ಅವುಗಳಲ್ಲೊಂದು ಒಂದುನೂರಿಪ್ಪತ್ತೈದು ಕೋಟಿ ರೂ.ಗಳದಾಗಿದ್ದಿತು. ಸಭಾಧ್ಯಕ್ಷರು ಯುದ್ಧದ ವಿಷಯವನ್ನು ಕುರಿತು ಮಾತನಾಡುವಾಗ—"ಇಂಥ ದಿವ್ಯವಾದ ಕಾಲದಲ್ಲಿ ನಾವುಗಳು ಇರುತ್ತಿರುವುದಕ್ಕಾಗಿ ಬಹು ಸಂತೋಷಿಸಬೇಕಾಗಿದೆ. ನಾವು ಇನ್ನೂ ಎಷ್ಟೋ ಅಪರಿಮಿತವಾದ ತ್ಯಾಗಗಳನ್ನು ಮಾಡಬೇಕಾಗಿದೆ. ಈಗಿನ ಯುದ್ಧವು ಜರ್ಮನಿಯವರ ಪಕ್ಷಕ್ಕೇ ಜಯಪ್ರದವಾಗಿ ಮುಗಿಯದೆ ತಪ್ಪದು. ಏಕಜಾತೀಯರಾಗಿರುವವರಿಗೆ ತಮ್ಮ ಪ್ರಯತ್ನವು ನ್ಯಾಯವಾಗಿರುವುದೆಂದು ನಂಬಿಗೆಯಿರುವಾಗ ಅವರಿಗೆ ಎಂಥ ಅಜೇಯವಾದ ಶಕ್ತಿಯಿರುವುದೆಂಬುದನ್ನು ನಾವು ತೋರಿಸಬಲ್ಲೆವು" ಎಂದು ನುಡಿದರು.

ತುರ್ಕಿ.

ಈಗ ಒಂದುಕಡೆ ಇಂಗ್ಲೀಷ್ ಫ್ರೆಂಚ್‌ಸೈನ್ಯಗಳಿಗೆ ಜಯವಾಗುವಂತೆ ಕಾಣುತ್ತಿರುವುದರಿಂದಲೂ, ಮತ್ತೊಂದುಕಡೆ ರಷ್ಯನರು ಜರ್ಮನರನ್ನು ಸೋಲಿಸುತ್ತಿರುವುದರಿಂದಲೂ ಜರ್ಮನಿಯವರು ತುರ್ಕಿಯವರನ್ನು ತಮ್ಮಕಡೆಗೆ ಸೇರಿಸಿಕೊಳ್ಳುವುದಕ್ಕೆ ಬಲಾತ್ಕಾರಪಡಿಸುತ್ತಿದ್ದಾರೆ. ಆದರೆ ತುರ್ಕಿಯ ಪಾರ್ಲಿಮೆಂಟಿನವರು ನಾವು ತಟಸ್ಥರಾಗಿಯೇ ಇರುವುವೆಂದು ತಮ್ಮ ರಾಜಧಾನಿಯಲ್ಲಿರುವ ಇಂಗ್ಲೆಂಡು-ಫ್ರಾನ್ಸು-ರಷ್ಯಾ ರಾಯಭಾರಿಗಳೊಡನೆ ಹೇಳುತ್ತಿರುವರು. ತುರ್ಕಿಯವರು ಈಗ ತಟಸ್ಥರಾಗಿರುವುದೇ ಯೋಗ್ಯವಾದುದೆಂದು ಭರತಖಂಡದ ಪ್ರಮುಖ ಮಹಮದೀಯರು ಸಭೆಗಳಮೂಲಕ ನಿರ್ಧರಮಾಡಿ ಸುಲ್ತಾನರಿಗೆ ತಿಳಿಯಿಸುತ್ತಿರುವರು.

ಮೈಸೂರ್ ಸ್ಟಾರ್.

ಸನ್ ೧೯೧೪ ನೆಯ ನವಂಬರ್ ತಾ|| ೧ ನೆಯ ಭಾನುವಾರ.

ಯುದ್ಧದ ಸ್ಥಿತಿಗತಿ ಮತ್ತೂ ಗಾಳಿಸುದ್ದಿಗಳು.

ಕಳೆದ ವಾರದಲ್ಲಿ ಬಂದಿರುವ ಯುದ್ಧವಾರ್ತೆಗಳು ಯುದ್ಧದ ಅತ್ಯಂತ ತೀವ್ರತೆಯನ್ನು ವ್ಯಕ್ತಪಡಿಸುತ್ತಿವೆ. ಬೆಲ್ಜಿಯಂ ದೇಶತೀರದಲ್ಲೂ ಫ್ರಾನ್ಸಿನ ಉತ್ತರದ ಎಲ್ಲೆಗಳಲ್ಲೂ ಮಹಾ ರಕ್ತಪಾತವಾಗುತ್ತಿದೆ. ಹಲವುಕಡೆ ಇಂಗ್ಲಿಷ್-ಫ್ರೆಂಚ್-ಬೆಲ್ಜಿಯಂ ಸೈನಿಕರುಗಳು ಜರ್ಮನರನ್ನು ಹಿಂದಕ್ಕೆ ಅಟ್ಟಿ ಅವರಿದ್ದ ಸ್ಥಾನಗಳನ್ನು ಆಕ್ರಮಿಸಿಕೊಳ್ಳುತ್ತಿದ್ದಾರೆ. ಹಲವರು ಜರ್ಮನ್‌ಸೈನಿಕರು ಸೆರೆಯಾಳುಗಳಾಗಿ ಸಿಕ್ಕಿದ್ದಾರೆ. ಜಲಯುದ್ಧಗಳಲ್ಲೂ ಮಿತ್ರಮಂಡಲಿಯವರಿಗೇ ಅನುಕೂಲವಾಗಿದೆ. ಜರ್ಮನರು ಸಾಮಾನ್ಯ ಶತ್ರುಗಳಲ್ಲ. ಅತ್ಯಂತ ಪ್ರಬಲರು. ಮತ್ತೂ ಸರ್ವಸನ್ನಾಹಸಂಪೂರ್ಣರು. ಅಂಥವರನ್ನು ಪೂರ್ಣಪರಾಜಿತರನ್ನಾಗಿ ಮಾಡುವುದು ಬಾಯ್ಮಾತಿನ ಸುಲಭಕಾರ್ಯವಲ್ಲ. ಅದಕ್ಕಾಗಿಯೇ ಸಂಯುಕ್ತ ಸೈನ್ಯಗಳವರು ಅತುಲಸಾಹಸದಿಂದ ಸೆಣಸುತ್ತಿದ್ದಾರೆ. ಸ್ಥಿತಿಗತಿಗಳನ್ನು ನೋಡುವಲ್ಲಿ ಕಳೆದೆರಡು ವಾರಗಳಿಂದ ಜರ್ಮನರಿಗೆ ಅಲ್ಪಸ್ವಲ್ಪ ಲಾಘವು ಕಂಡುಬರುತ್ತಿದ್ದರೂ ಮಿತ್ರಮಂಡಲಿಯವರ ಕೈಯೇ ಮುಂದಾಗಿದೆಯೆಂದು ಖಂಡಿತವಾಗಿ ಹೇಳಬಹುದು.

ಹೀಗಿದ್ದರೂ ಜರ್ಮನರ ವಿಷಯದಲ್ಲಿ ಅನೇಕವಿಧವಾದ ಉತ್ಪ್ರೇಕ್ಷೆಗಳನ್ನು ಹುಟ್ಟಿಸಿಕೊಂಡು ನಮ್ಮ ಊರುಕೇರಿಗಳಲ್ಲೆಲ್ಲಾ ಜನರು ನಿರಾಧಾರವಾದ ಸುದ್ದಿಗಳನ್ನೂ ಭಯಗಳನ್ನೂ ಉಂಟುಮಾಡಿ ಚಪಲಪಡುತ್ತಿದ್ದಾರೆ. ಮತ್ತೂ ದೇಶೀಯಪತ್ರಿಕೆಗಳಲ್ಲಿ ಯುದ್ಧವಿಷಯವಾಗಿ ಬರುವ ವಾರ್ತೆಗಳು ಅಲ್ಪವೆಂದೂ, ಏಕಪಕ್ಷೀಯವೆಂದೂ ಆಡಿಕೊಳ್ಳುತ್ತಿದ್ದಾರೆಂದು ಕೇಳುತ್ತೇವೆ. ಯುದ್ಧರಂಗದಲ್ಲಿ ನಡೆಯುವ ಪ್ರತಿಯೊಂದು ವಿವರಣವನ್ನೂ ಹೇಳುವುದು ಯಾರಿಗೂ ಸಾಧ್ಯವಲ್ಲ. ಒಂದೊಂದು ದಿನದ ವಿಷಯವನ್ನು ತಿಳಿಸುವುದಕ್ಕೂ ಒಂದೊಂದು ಪುಸ್ತಕವನ್ನೇ ಬರೆಯಬೇಕಾದೀತು. ಈಗ ವಾರ್ತಾಪ್ರಕಟನಸಂಘದವರಿಂದಲೂ ಇಂಗ್ಲೀಷ್-ಫ್ರೆಂಚ್ ಸರ್ಕಾರಗಳಿಂದಲೂ ಪ್ರಕಟಿಸಲ್ಪಡುವ ವರ್ತಮಾನಗಳು ಸಂಪೂರ್ಣವಾಗಿ ನಂಬಲ್ಪಡತಕ್ಕವುಗಳೇ ಹೊರತು ಸುಳ್ಳುಸುದ್ದಿಗಳನ್ನೆಂದಿಗೂ ಅವರು ಪ್ರಕಟಿಸುವುದಿಲ್ಲ. ಅವುಗಳಲ್ಲಿ ಮುಖ್ಯವಾದುವುಗಳನ್ನೇ ದೇಶೀಯಪತ್ರಿಕೆಗಳು ಸಂಗ್ರಹಿಸಿ ಪ್ರಕಟಿಸುತ್ತಿವೆ. ಇದುವರೆಗಿನ ವಿದ್ಯಮಾನಗಳಲ್ಲಿ ಜರ್ಮನರು ಬೆಲ್ಜಿಯಂ ದೇಶವನ್ನೆಲ್ಲಾ ಆಕ್ರಮಿಸಿದುದನ್ನೂ ಫ್ರಾನ್ಸಿನಲ್ಲಿ ಅವರು ಪಡೆದುಕೊಂಡಿದ್ದ ಜಯಲಾಭವನ್ನೂ ಸಹ ಪ್ರಕಟಿಸಿಯೇ ಇರುವಾಗ ಏಕಪಕ್ಷೀಯ ವಾರ್ತೆಗಳನ್ನು ಮಾತ್ರ ಪ್ರಕಟಿಸುವರೆಂದು ಆಕ್ಷೇಪಿಸುವುದು ಹೇಗೆ? ಈಗಲಾದರೊ ಜರ್ಮನಿಯವರು ಫ್ರಾನ್ಸಿನಲ್ಲಿ ತಾವು ಹಿಡಿದುಕೊಂಡಿದ್ದ ಭಾಗಗಳಿಂದೆಲ್ಲಾ ಹಿಂದಕ್ಕೆ ದೂಡಲ್ಪಟ್ಟು, ಆ ದೇಶದ ಪೂರ್ವೋತ್ತರದ ಎಲ್ಲೆಗಳ ಸಮೀಪಕ್ಕೆ ಹೋಗಿ ಸೇರಿಕೊಂಡಿದ್ದಾರೆ. ಆ ಆ ಸಂಗತಿಗಳು ಕ್ರಮವಾಗಿ ಪ್ರತಿದಿನವೂ ಬರುವ ತಂತ್ರೀವಾರ್ತೆಗಳಿಂದ ಸ್ಪಷ್ಟವಾಗಿ ತಿಳಿಯಿಸಲ್ಪಡುತ್ತಲೇ ಇವೆ. ಅದು ಕಾರಣ, ತಿಳಿದವರೂ ತಿಳಿಯದವರೂ ಸಹ ಸೇರಿಕೊಂಡು ಜನರಲ್ಲಿ ಕಳವಳವನ್ನು ಹೆಚ್ಚಿಸುವ ಸುದ್ದಿಗಳನ್ನು ಹುಟ್ಟಿಸುವುದು ತಪ್ಪು. ಜನರಲ್ಲಿ ಈ ತೆರದ ಕಳವಳವನ್ನು ತಪ್ಪಿಸುವುದಕ್ಕಾಗಿಯೇ ಬೊಂಬಾಯಿ-ಬರ್ಮಾ-ಮದ್ರಾಸು ಗೌರ್ನಮೆಂಟಿನವರು ಯುದ್ಧಸಂಬಂಧವಾದ ಮುಖ್ಯಮುಖ್ಯ ಸಂಗತಿಗಳನ್ನು ಸಂಗ್ರಹಿಸಿ ಮುದ್ರಿಸಿ ಪ್ರಕಟಿಸಲು ನಿರ್ಧರಿಸಿದ್ದಾರೆ. ಇಂಥ ಏರ್ಪಾಟನ್ನು ಎಲ್ಲ ಸರ್ಕಾರದವರೂ ಅನುಸರಿಸಿದರೆ ಬಹಳ ಪ್ರಯೋಜನವಾದೀತು. ಅವುಗಳನ್ನನುಸರಿಸಿ ಅಲ್ಲಲ್ಲಿನ ದೇಶಾಭಿಮಾನಿಗಳಾದ ವಿದ್ಯಾವಂತರೂ ಶಾಲಾಬೋಧಕರೂ ನಿಜಸ್ಥಿತಿಗಳನ್ನು ಗ್ರಾಮಾಂತರದ ಜನರಿಗೂ ನಾಗರಿಕರಿಗೂ ಬೋಧಿಸುತ್ತ ಬಂದರೆ ಅನ್ಯಾಯವಾಗಿ ಜನರಲ್ಲಿ ಉಂಟಾಗುವ ಮನೋವಿಕಾರಗಳಿಗೆ ದಾರಿಯಿರಲಾರದು.

ಬೆಂಕಿಕಡ್ಡಿ ಪೆಟ್ಟಿಗೆ.

ಭರತಖಂಡಕ್ಕೆ ವಿದೇಶಗಳಿಂದ ಸಾಗಿಬರುತ್ತಿರುವ ನಿತ್ಯೋಪಯೋಗ್ಯಸಾಮಗ್ರಿಗಳಲ್ಲಿ ಬೆಂಕಿಕಡ್ಡಿ ಪೆಟ್ಟಿಗೆಯು ಮುಖ್ಯವಾಗಿರುತ್ತದೆ. ಇಂಥ ಮುಖ್ಯಸಾಮಗ್ರಿಯನ್ನು ಅಣಿಮಾಡಲು ನಮ್ಮ ದೇಶದಲ್ಲಿ ತಕ್ಕ ಮರಗಳು ದೊರೆಯುವುವೆಂದು ಇದುವರೆಗೆ ಪ್ರಭುತ್ವದವರು ನಡೆಯಿಸಿರುವ ಪರೀಕ್ಷೆಗಳಿಂದ ಗೊತ್ತಾಗಿದೆ. ನಮ್ಮ ಮೈಸೂರು ಪ್ರಭುತ್ವದವರು ಕೂಡ ಈ ವಿಷಯದಲ್ಲಿ ಪರಿಶೋಧನವನ್ನು ನಡೆಯಿಸಿ, ಅದರ ಫಲರೂಪವಾಗಿ ಕಳೆದ ವಸ್ತುಪ್ರದರ್ಶನ ಸಮಯದಲ್ಲಿ ದೀಪದಕಡ್ಡಿಯ ಪೆಟ್ಟಿಗೆಗೆ ಬೇಕಾದ ತೆಳುವಾಗಿ ಎತ್ತಿದ ಚಕ್ಕೆಗಳು, ಕೊಯ್ದ ಕಡ್ಡಿಗಳು, ಮೊದಲಾದುವನ್ನು ಇಟ್ಟಿದ್ದರು. ಅವೆಲ್ಲಾ ನಮ್ಮ ದೇಶದ ಕಾಡುಗಳಲ್ಲಿ ದೊರೆಯುವ ಮರಗಳಿಂದ ನಿರ್ಮಿತವಾದುವು. ಹೀಗೆಯೇ ನಮ್ಮ ಭರತಖಂಡದ ದಕ್ಷಿಣಭಾಗದ ಕೆಲ ಕಾಡುಗಳಲ್ಲೂ, ಆನೆಮಲೆಯಲ್ಲೂ ಬಹಳವಿಶೇಷವಾಗಿ ಮರಗಳು ಇರುವುವೆಂದು ಗೊತ್ತಾಗಿದೆ. ನಮ್ಮ ದೇಶದಲ್ಲಿ ಮಾಡಬಹುದಾದ ಸಾಮಗ್ರಿಗಳಿಗೂ ನಾವು ವಿದೇಶಕ್ಕೇ ಕೈಯೊಡ್ಡಿ ಕುಳಿತುಕೊಳ್ಳುವುದು ಪ್ರವೃದ್ಧಿಯ ಮಾರ್ಗವಲ್ಲ. ಪ್ರಪಂಚದಮೇಲೆ ಅನೇಕ ದೇಶಗಳಿಗೆ ತಮ್ಮ ಕೈಗಾರಿಕೆಯ ವಸ್ತುಗಳನ್ನು ಕಳುಹಿಸಿ, ಆ ದೇಶದ ಸಂಪತ್ತಿಯನ್ನೆಲ್ಲಾ ತಮ್ಮಲ್ಲಿಗೆ ಸೆಳೆದುಕೊಳ್ಳುತ್ತಿದ್ದ ಜರ್ಮನಿ-ಆಸ್ಟ್ರಿಯಾದೇಶಗಳು ಈಗ ಶತ್ರುಪಕ್ಷವಾಗಿ ಯುದ್ಧಕ್ಕೆ ನಿಂತಿರುವುದರಿಂದ ಅಲ್ಲಿನ ಸಾಮಗ್ರಿಗಳು ನಮ್ಮದೇಶಕ್ಕೆ ಬರದೆ ಕಟ್ಟಾಗಿಹೋಗಿವೆ. ಈಗ ಇಂಗ್ಲೆಂಡು ಫ್ರಾನ್ಸು ಮೊದಲಾದ ದೇಶಗಳು ಪ್ರಪಂಚದಮೇಲಣ ಅನೇಕರಾಷ್ಟ್ರಗಳಲ್ಲಿ ನಡೆಯುತ್ತಿದ್ದ ಜರ್ಮನಿಯ ವ್ಯಾಪಾರದ ಸ್ಥಲವನ್ನೆಲ್ಲಾ ತಾವು ಆಕ್ರಮಿಸಿಕೊಳ್ಳಲು ಬಹಳ ಆತುರದಿಂದ ಕೆಲಸಮಾಡುತ್ತಿವೆ. ಇಂಥ ಸಮಯದಲ್ಲಿ ನಮ್ಮ ಭರತಖಂಡವು ಕೂಡ ಈ ದೇಶದ ಸ್ಥಿತಿಗೆ ಸಾಧ್ಯವೆಂದು ತೋರುವ ಉಪಯೋಗ್ಯ ಸಾಮಗ್ರಿಗಳನ್ನು ಅಣಿಮಾಡಲು ತವಕಪಡುವುದಕ್ಕೆ ಇದು ಉತ್ತಮಸಂಧಿಯಾಗಿರುತ್ತದೆ. ಕೈಗಾರಿಕೆಯ ವೃದ್ಧಿಯಮೂಲಕ ದೇಶದ ಸಂಪದಭಿವೃದ್ಧಿಯನ್ನು ಕೋರುವ ಭರತಖಂಡದ ಎಲ್ಲ ಪ್ರಭುತ್ವದವರೂ ಈ ಉತ್ತಮ ಸುಸಂಧಿಯನ್ನು ವ್ಯರ್ಥಗೊಳಿಸದೆ ತಮ್ಮ ತಮ್ಮ ದೇಶದಲ್ಲಿ ನಿರ್ಮಿಸಲು ಸಾಧ್ಯವೆಂದು ತೋರುವ ಸಾಮಗ್ರಿಗಳ ರಚನೆಗಾಗಿ ಯಂತ್ರಾಲಯಗಳನ್ನು ಸ್ಥಾಪಿಸದೆ ಬಿಡಬಾರದು.

ಈಗ ಭರತಖಂಡಕ್ಕೆ ವರ್ಷ ೧ ಕ್ಕೆ ೧೧೮೦೦೦೦೦ ಗ್ರೋಸ್‌ಗಳ ದೀಪದಕಡ್ಡಿಯು ಬೇಕಾಗುತ್ತಿದೆ. ಇಷ್ಟು ದೀಪದಕಡ್ಡಿಯನ್ನು ನಮಗೆ ನಮ್ಮದೇಶದಲ್ಲೇ ಒದಗಿಸಬೇಕಾದರೆ ದಿನ ೧ ಕ್ಕೆ ೭೦೦ ಗ್ರೋಸುಗಳ ಪೆಟ್ಟಿಗೆಗಳನ್ನು ಮಾಡಲು ಸಾಧ್ಯವಾದ ೬೦ ಯಂತ್ರಾಲಯಗಳು ಇರಬೇಕಾಗುತ್ತವೆ. ಈಗಲಾದರೊ ಭರತಖಂಡದಲ್ಲಿ ಇದರ ಕಾರ್ಯಾಲಯಗಳು ೮ ಮಾತ್ರವೇ ಇವೆ. ಈ ಎಂಟರಿಂದಲೂ ಸೇರಿ ವರ್ಷಕ್ಕೆ ೭ ಲಕ್ಷ ಪೆಟ್ಟಿಗೆಗಳು ನಿರ್ಮಿಸಲ್ಪಡುತ್ತಿವೆ. ೭೦೦ ಗ್ರೋಸುಗಳ ಪೆಟ್ಟಿಗೆಯನ್ನು ದಿನ ೧ ಕ್ಕೆ ನಿರ್ಮಿಸಲು ಕಡ್ಡಿಗೂ ಪೆಟ್ಟಿಗೆಗೂ ಸಹ ೧೮೪ ಘನಅಡಿಗಳ ಮರವು ಬೇಕಾಗುತ್ತದೆ. ಈ ಪೆಟ್ಟಿಗೆಗಳನ್ನು ತುಂಬುವ ದೊಡ್ಡ ದೊಡ್ಡ ಪೆಟ್ಟಿಗೆಗಳಿಗಾಗಿ ೩೫ ಘನ ಅಡಿಗಳ ಮರವು ಬೇಕಾಗುತ್ತದೆ.

ಈ ಕಾರ್ಯದಿಂದ ಆಗುವ ಆದಾಯವ್ಯಯದ ವಿವರವು ಈ ಕೆಳಗಿನಂತೆ ಇರುವುದೆಂದು ಒಬ್ಬ ಅನುಭವಿಗಳಿಂದ "ಅಂದಾಜು" ಮಾಡಲ್ಪಟ್ಟಿದೆ—

ನಿವೇಶನಕ್ಕೂ ಕಟ್ಟಡಕ್ಕೂ	45,000
ಯಂತ್ರಸಾಮಗ್ರಿಗಳಿಗೆ	85,000
ಕಾರ್ಯಾಲಯದ ಮ್ಯಾನೇಜರು ಮೊದಲಾದವರ ವಸತಿಯ ಕಟ್ಟಡಕ್ಕೆ	10,000
ಮರ ಮೊದಲಾದವುಗಳಿಗೆ ಬಂಡವಾಳ	20,000
ಒಟ್ಟು	1,60,000
ಆದಾಯ.	
ಒಂದು ಗ್ರೋಸು ಪೆಟ್ಟಿಗೆಗೆ ೧೨ ಆಣೆಯಂತೆ ದಿನ ೧ಕ್ಕೆ ಆಗುವ ೭೦೦ ಗ್ರೋಸುಗಳಿಗೆ	525
ವರ್ಷದಲ್ಲಿ ೩೦೦ ದಿನಗಳಲ್ಲಿ ನಿರ್ಮಿಸಲ್ಪಡುವ ೨೧೦೦೦೦ ಗ್ರೋಸುಗಳ ಬೆಲೆ	15,7,200
೭೦೦ ಗ್ರೋಸುಗಳನ್ನು ನಿರ್ಮಿಸಲು ತಗಲುವ ವೆಚ್ಚ	388-1-3
ಅದರಂತೆ ೧ ವರ್ಷದಲ್ಲಿ ಅದಕ್ಕೆ ತಗಲುವವೆಚ್ಚ	1,16,423-0-0
ಉಳಿದ ವೆಚ್ಚವೂ ಯಂತ್ರಗಳ ನಷ್ಟವೂ ಸೇರಿ	6,989-0-0
ಒಟ್ಟು ವೆಚ್ಚ	12,38,000-0-0
ಉಳಿಯುವ ಲಾಭವು	33,700-0-0

ಇದರ ಪ್ರಕಾರ ನೋಡುವಲ್ಲಿ ವರ್ಷ ೧ಕ್ಕೆ ಮೂಲಧನಕ್ಕೆ "ಶೇಕಡಾ" ೧೬ರೂ.ನಂತೆ ಬಡ್ಡಿಯು ದೊರೆವುದೆಂದು ಗೊತ್ತಾಗುವುದು. ಅಭ್ಯುದಯಕಾಂಕ್ಷಿಗಳು ಈ ವಿಷಯದಲ್ಲಿ ಆಯಾ ಪ್ರಭುತ್ವದವರಲ್ಲಿ ಕೈಗಾರಿಕೆಯ ಪರಿಶೋಧನೆಗಳಿಗೆ ಏರ್ಪಟ್ಟಿರುವ ಅಧಿಕಾರಿಗಳ ಮುಖೇನ ಕೂಲಂಕಷವಾಗಿ ಹೆಚ್ಚು ವಿಷಯಗಳನ್ನೆಲ್ಲಾ ವಿಚಾರಮಾಡಿ ತಿಳಿದು, ಲಾಭಕರವಾದ ಈ ಕೈಗಾರಿಕೆಯನ್ನು ಆರಂಭಿಸುವುದು ಅತ್ಯವಶ್ಯಕವು. ನಿತ್ಯೋಪಯೋಗಿಯಾದ ಈ ವಸ್ತುವಿಗೆ "ಗಿರಾಕಿಯು" ಸದಾ ಬೇಕಾದಷ್ಟಿರುವುದು.

ಒಳದೇಶದ ವೃತ್ತಾಂತಗಳು

ಶ್ರೀಮನ್ಮಹಾರಾಜರವರು ರಾಣಿವಾಸದವರೊಡನೆ ತಲಕಾವೇರಿಯ ಸ್ನಾನಕ್ಕಾಗಿ ಕೊಡಗಿಗೆ ದಯಮಾಡಿಸುವುದಿಲ್ಲವೆಂದು ಈಚೆಗೆ ತಿಳಿದುಬಂದಿದೆ.

ದಿವಾನರು ತಮ್ಮ ಪ್ರೈವೆಟ್‌ಸೆಕ್ರಿಟರಿಯವರೊಡನೆ ಬೆಂಗಳೂರಿಗೆ ಕಳೆದ ಭಾನುವಾರ ದಯಮಾಡಿದ್ದು ಮಂಗಳವಾರ ರಾಜಧಾನಿಗೆ ಮರಳಿ ಬಂದು ಈದಿವಸ ಬೆಂಗಳೂರಿಗೆ ದಯಮಾಡಿಸುವವರಾಗಿರುವರು.

ದ್ವಿತೀಯರಾಜಕುಮಾರಿ ಕೈ|| ಕೃಷ್ಣಾಜಮ್ಮಣ್ಣಿಯವರ ಎಡೆಕಟ್ಲೆಯು ನಿನ್ನೆಯ ದಿವಸ ನಡೆದಿತು. ಕಂಗಳರಾದ ಗಂಡುಸು ಹೆಂಗುಸರುಗಳಿಗೆ ಬಾಡಿಗಾರ್ಡು ಲಾಯದಬಳಿಯಲ್ಲಿ ಬಟ್ಟೆಬರೆಗಳು ದಾನಮಾಡಲ್ಪಟ್ಟುವು.

ಕಂಬಳಿಸ್ವಾಮಿಯೆಂಬ ಮಹಮ್ಮದೀಯ ಬೋಧಕರು ರಾಜಧಾನಿಗೆ ಬಂದು ಕಳೆದ ಮಂಗಳವಾರದಿಂದ ೩ ದಿವಸ ಟೌನ್ ಹಾಲಿನಲ್ಲಿ ಆತ್ಮವಿಚಾರವಾಗಿ ಉಪನ್ಯಾಸಗಳನ್ನು ಮಾಡಿದರು. ಇವು ಶ್ರೋತೃಗಳಿಗೆ ಬಹಳ ಹಿತವಾಗಿದ್ದುವು.

ರಾಜಧಾನಿಯ ಅನೇಕ ಭಾಗಗಳಲ್ಲಿಯ ಮನೆಗಳಲ್ಲಿ ಇಲಿಗಳು ಸಾಯುತ್ತಿರುವುದರಿಂದ ಅನುಕೂಲಸ್ಥರೆಲ್ಲರೂ ಮನೆಯನ್ನು ಬಿಟ್ಟುಬಿಡುತ್ತಲಿರುವರು. ಪ್ಲೇಗುಮರಣಸಂಖ್ಯೆಯು ಬಹಳ ಹೆಚ್ಚಾಗಿಲ್ಲದಿದ್ದರೂ ಅಲ್ಲಲ್ಲೊಂದು ನಿತ್ಯದಲ್ಲೂ ಆಗುತ್ತಿರುವುದು.

ಕಳೆದ ಶುಕ್ರವಾರ ಬಕರೀದ್ ಹಬ್ಬವಾದುದರಿಂದ ರಾಜಧಾನಿಯ ಮಹಮ್ಮದೀಯರೆಲ್ಲರೂ ನೂತನವಸ್ತ್ರಧಾರಣೆಯನ್ನು ಮಾಡಿಕೊಂಡು ಈದಿಗಾದಲ್ಲಿಯ ಮೈದಾನದಲ್ಲಿ ಒಟ್ಟುಗೂಡಿ ದೇವರ ಪ್ರಾರ್ಥನೆಯನ್ನು ಮಾಡುವಾಗ್ಗೆ ಬ್ರಿಟಿಷ್ ಪ್ರಭುತ್ವದವರಿಗೆ ಯುದ್ಧದಲ್ಲಿ ಜಯವಾಗಲೆಂದು ಪ್ರಾರ್ಥಿಸಿದರು.

ರಜಾದಮೇಲೆ ಹೋಗಿದ್ದ ಒಂದನೆಯ ಕೌನ್ಸಿಲರಾದ ಮ|| ಎಚ್. ವಿ. ನಂಜುಂಡಯ್ಯನವರು ಕಳೆದ ತಾ|| ೨೨ರಲ್ಲಿ ತಮ್ಮುದ್ಯೋಗದ ಮೇಲೆ ಬಂದರು. ಇವರು ತಮ್ಮ ಸ್ವಂತ ಕೆಲಸಕ್ಕಾಗಿ ದಸರಾ ಕಾಲದಲ್ಲಿ ರಜವನ್ನು ಪಡೆದುಕೊಂಡು ಪ್ರಜಾಪ್ರತಿನಿಧಿ ಸಭೆಗೆ ಬರಲಿಲ್ಲವಾಗಿ ಜನರು ಪೊಳ್ಳುಸುದ್ದಿಯನ್ನು ಹುಟ್ಟಿಸಿದ್ದರು.

ಮೈಸೂರು ಮಹಾರಾಜಾಕಾಲೇಜಿನ ಸಂಸ್ಕೃತಪಂಡಿತರಾದ ವೇ|| ಮಂಡಿಕಲ್ ರಾಮಾಶಾಸ್ತ್ರಿಗಳು ಸಂಸ್ಕೃತದಲ್ಲಿ ರಚಿಸಿ ಸರದಾರ್ ಕಾಂತರಾಜಅರಸಿನವರ ಉದಾರಾಶ್ರಯದಿಂದ ಮುದ್ರಿಸಿರುವ ಭೈಮೀಪರಿಣಯನಾಟಕವನ್ನು ಕಾಲೇಜಿನ ವಿದ್ಯಾರ್ಥಿಗಳು ನಿನ್ನೆಯದಿನರಾತ್ರೆ ಕಾಲೇಜಿನಲ್ಲಿ ಅಭಿನಯಿಸಿದರು. ಶ್ರೀಮನ್ಮಹಾರಾಜರವರ ಸ್ವಾರಿಯು ಚಿತ್ತೈಸಿದ್ದುದಲ್ಲದೆ ದಿವಾನರಾದಿಯಾಗಿ ಅಧಿಕಾರಿಗಳೂ ದೊಡ್ಡಮನುಷ್ಯರುಗಳೂ ದಯಮಾಡಿಸಿದ್ದರು. ಹೀಗೆ ಆಧುನಿಕಪಂಡಿತರುಗಳಲ್ಲಿ ಸಂಸ್ಕೃತಭಾಷೆಯಲ್ಲಿ ನಾಟಕವನ್ನು ಬರೆದು ಅಭಿನಯಿಸುವಂತೆ ಮಾಡಿದವರಲ್ಲಿ ವೇ|| ರಾಮಾಶಾಸ್ತ್ರಿಗಳೇ ಮೊದಲನೆಯವರಾದುದರಿಂದ ಅವರ ಈ ಪ್ರಯತ್ನವು ಸ್ತುತ್ಯವಾದುದು.

ಕಳೆದ ಬುಧವಾರ ಕೊಂಚ ಮಳೆಯಾಯಿತು. ಇದರಂತೆ ಹಲವು ಕಡೆ ಮಳೆಯಾಗಿ ರಾಗಿ ಮೊದಲಾದ ಪೈರುಗಳು ಬಹಳ ಚೆನ್ನಾಗಿರುವುದಲ್ಲದೆ ಕಾನಕಾನಹಳ್ಳಿ, ಮಾಗಡಿ ಚೆನ್ನಪಟ್ಟಣ ಮೊದಲಾದ ತಾಲ್ಲೂಕುಗಳಲ್ಲಿ ರಾಗಿಯ ಬೆಳೆಯು ಸಂಪೂರ್ಣವಾಗಿ ಆಗಿರುವುದಾಗಿ ನಿರೀಕ್ಷಿಸಲ್ಪಟ್ಟಿದೆ. ಆದರೆ ಬೆಳೆಗೆ ತಕ್ಕಷ್ಟು ಮಾತ್ರ ಮಳೆಯಾಗಿರುವುದಾದರೂ ಕೆರೆಗಳಿಗೆ ಸಾಕಷ್ಟು ನೀರು ಬಾರದಿರುವುದು. ಮುಂದಿನ ವರ್ಷದಲ್ಲಿ ಮುಂಗಾರುಮಳೆಯು ಜಾಗ್ರತೆಯಾಗಾರಂಭವಾಗಿ ಕೆರೆಗಳಿಗೆ ನೀರು ಬಾರದಿದ್ದಲ್ಲಿ ನೀರಿಗೆ ವಿರಕ್ಷಾಮ ಬರುವುದೆಂದು ಜನರು ಭೀತರಾಗಿರುತ್ತಾರೆ. ದೇವರು ಕರುಣಿಸಿದರೆ ಈ ವಿಶಾಖೆಯ ಮಳೆಯು ಏಕೆ ಚೆನ್ನಾಗಿ ನಡೆಸಬಾರದು?

ಬೆಂಗಳೂರಿಂದ ಹೊಸೂರಿಗೆ ೩೦ ಮೈಲಿಗಳ ಲೋಹಮಾರ್ಗವನ್ನು ಹಾಕಲು ಮೈಲಿ ೧ಕ್ಕೆ ೪೦೦೦೦ ರೂ. ಪ್ರಕಾರ ೧೨ ಲಕ್ಷ ರೂ. ವೆಚ್ಚ ತಗಲುವುದು. ಈ ವಿಚಾರವು ಈಗ ರೈಲ್ವೆಬೋರ್ಡಿನವರ ಪರ್ಯಾಲೋಚನೆಯಲ್ಲಿದೆ. ಅವರು ಮದ್ರಾಸ್ ಸದರನ್ ಮರಾಟಾ ರೈಲ್ವೆ ಮತ್ತೂ ಸೌತ್ ಇಂಡಿಯನ್ ರೈಲ್ವೆ ಕಂಪನಿಯವರಭಿಪ್ರಾಯಗಳನ್ನು ತೆಗೆದುಕೊಂಡು ತಮ್ಮ ಇತ್ಯರ್ಥವನ್ನು ತಿಳಿಸುವವರಾಗಿರುವರು. ನಮ್ಮ ಸರ್ಕಾರದವರು ಇಂಡ್ಯಾ ಸರ್ಕಾರದಪ್ಪಣೆಯು ದೊರೆದಕೂಡಲೆ ಕೆಲಸವನ್ನುಪಕ್ರಮಿಸುವರು. ಮೈಸೂರು ಹಾಸನ ಅರಸೀಕೆರೆಯ ಲೋಹಮಾರ್ಗವು ಬಹಳ ತ್ವರಿತದಿಂದ ನಡೆಯುತ್ತಿರುವುದು. ಮಾರ್ಗಕ್ಕೆ ಬೇಕಾದ ಕಂಬಿ ಮೊದಲಾದ ಸಾಮಗ್ರಿಗಳನ್ನೂ ಕನ್ನಂಬಾಡಿ ಕಟ್ಟೆಯ ನಿರ್ಮಾಣಕ್ಕೆ ಬೇಕಾದ ಯಂತ್ರಸಾಮಗ್ರಿಗಳನ್ನೂ ಸಾಗಿಸಲನುಕೂಲವಾಗುವಂತೆ ಮೈಸೂರಿಂದ ೬ ಮೈಲಿ ದೂರದಲ್ಲಿರುವ ಬೆಳಗೊಳಕ್ಕೆ ಕಂಬಿಗಳು ಕೂಡಲೇ ಹಾಕಲ್ಪಟ್ಟು ಬಂಡಿಗಳು ಬರುವ ಜನವರಿಯೊಳಗೆ ಬಿಡಲ್ಪಡುವ ಪ್ರಯತ್ನವು ನಡೆಯುತ್ತಿದೆ.

ಶ್ರೀಮನ್ ಮಹಾರಾಜರವರ ಗುರುಗಳಾದ ಶ್ರೀ ಪರಕಾಲಸ್ವಾಮಿಗಳು ಈಚೆಗೆ ಕೆಲಕಾಲದಿಂದ ರುಗ್ಣಶಾಯಿಗಳಾಗಿ ಇಹಲೋಕವ್ಯಾಪಾರವನ್ನು ತ್ಯಜಿಸುವ ಸ್ಥಿತಿಯಲ್ಲಿರುವುದರಿಂದ ಶ್ರೀಮನ್ ಮಹಾರಾಜರವರೂ ಮಹಾಮಾತೃಶ್ರೀಯವರೂ ಮಠಕ್ಕೆ ದಯಮಾಡಿಸಿ ಶ್ರೀಗಳ ದರ್ಶನವನ್ನು ತೆಗೆದುಕೊಂಡುಬಂದರು. ಶ್ರೀಗಳವರ ಮನೋಭಿಪ್ರಾಯದಂತೆ ಅವರ ಅಳಿಯಂದರನ್ನೇ ಅವರ ಉತ್ತರಾಧಿಕಾರಿಗಳನ್ನಾಗಿ ಮಾಡಲಪ್ಪಣೆಯನ್ನು ದಯಪಾಲಿಸಿರುವರು. ಅದರಂತೆ ಇವರಿಗೆ ಬರುವ ಗುರುವಾರದ ದಿವಸ ಸನ್ಯಾಸಾಶ್ರಮಸ್ವೀಕಾರಕರ್ಮವು ನಡೆಯುವುದಾಗಿ ತಿಳಿಯುತ್ತೇವೆ. ಈ ಮಠದ ಸ್ವಮತಶಿಷ್ಯರಲ್ಲಿ ಬಹುಮಂದಿಗಳು ಸ್ವಾಮಿಗಳ ಪೂರ್ವಸಂಬಂಧಿಗಳನ್ನು ಅವರ ಉತ್ತರಾಧಿಕಾರಿಗಳನ್ನಾಗಿ ಖಂಡಿತವಾಗಿಯೂ ಮಾಡದೆ ವಿದ್ಯಾವಂತನೂ ಅರ್ಹನೂ ಆದ ಬೇರೊಬ್ಬನನ್ನು ನಿಯಮಿಸಬೇಕೆಂದು ಹಠ ಹಿಡಿದು ಬಹು ಜಿಜ್ಞಾಸೆಯನ್ನು ನಡೆಸುತ್ತಿದ್ದರು. ಆದರೆ ಅಂತ್ಯದಶೆಯಲ್ಲಿರುವ ಗುರುಗಳ ಅಭಿಪ್ರಾಯವನ್ನು ಪ್ರಭುಗಳು ಮೀರಲಾರದೆ ಹೋದಂತೆ ಕಾಣುತ್ತದೆ.

ಟಿ. ನರಸೀಪುರದ ತಾಲ್ಲೋಕು ಪೊಲೀಸಿಗೆ ಸೇರಿದ ನಂಜ, ರಾಜ, ನಂಜುಂಡ, ಮಹಮದ್ ಇಮಾಂ ಮತ್ತು ದಫೇದಾರ್ ಕಪನೀಪತಯ್ಯ ಇವರುಗಳು ಕಳೆದ ಮಾರ್ಚಿ ತಿಂಗಳಲ್ಲಿ ಶ್ರೀನಿವಾಸರಂಗಾಚಾರ್ಯರ ಮನೆಯಲ್ಲಿ ಕಳುವಾದ ಪದಾರ್ಥಗಳನ್ನು ಕಂಡುಹಿಡಿಯುವಬಗೆಗೆ ನಿಜಸ್ಥಿತಿಯನ್ನು ತಿಳಿಯಲು ನೋಸಲೆ ಸಿದ್ದಾಚಾರಿಯನ್ನು ಪೊಲೀಸು ಠಾಣದಲ್ಲಿಟ್ಟು ಹಿಂಸಿಸುವಾಗ್ಗೆ ಸಿದ್ದಾಚಾರಿಯು ಸತ್ತುಹೋಗಲು, ಮೇಲ್ಕಂಡ ೫ ಜನರು ನಂಜನಗೂಡಿನ ಸಬ್‌ಡಿವಿಜನ್ ಆ| ಕ್ರಿಮಿನಲ್ ಮ್ಯಾಜಿಸ್ಟ್ರೇಟರಿಂದ ವಿಚಾರಿಸಲ್ಪಟ್ಟು ಮೈಸೂರು ಸೆಷನ್ಸ್ ಕೋರ್ಟಿಗೆ ಕಳುಹಲ್ಪಟ್ಟರು. ಸೆಷನ್ಸ್‌ಜಡ್ಜರು ಈ ಅಪರಾಧಿಗಳನ್ನು ವಿಚಾರಿಸಿ ೫ ಜನರನ್ನೂ ಕಠಿನ ಕಾರಾಗೃಹವಾಸದ ಶಿಕ್ಷೆಗೆ ಗುರಿಮಾಡಿದ್ದರು. ಇದರಮೇಲೆ ಅಪರಾಧಿಗಳೆಲ್ಲರೂ ಚೀಫ್‌ಕೋರ್ಟಿಗೆ ಅಪೀಲನ್ನು ಮಾಡಿಕೊಂಡಿರುವಲ್ಲಿ ಚೀಫ್‌ಜಡ್ಜರಾದ ಸರ್ ವೆಸ್ಲಿ ಮಿಲ್ಲರ್‌ರವರು ವಿಚಾರಣೆಯನ್ನು ನಡೆಯಿಸಿ ಅಪರಾಧದಕೃತ್ಯವು ನಡೆದಿರುವುದು ಸ್ಪಷ್ಟವಾಗಿ ನಿದರ್ಶನಕ್ಕೆ ಬಂದಿರುವುದರಿಂದ ಕೆಳಕೋರ್ಟಿನವರು ವಿಧಿಸಿರುವ ಶಿಕ್ಷೆಯು ಸರಿಯಾಗಿದೆಯೆಂದು ತೀರ್ಮಾನಿಸಿ ಅಪೀಲನ್ನು ವಜಾಮಾಡಿಬಿಟ್ಟರು.

ವರ್ತಮಾನಸಂಗ್ರಹ.

ದಕ್ಷಿಣಾಫ್ರಿಕಾದ ಜನರಲ್ ಬೋಥಾಯವರು ರಣರಂಗಕ್ಕೆ ಹೊರಟಿರುವರು.

ಪಾಟಿಯಾಲಾ ಮಹಾರಾಜರು ಅಸ್ವಸ್ಥರಾಗಿ ಭರತಖಂಡಕ್ಕೆ ಹಿಂದಿರುಗಿ ಪ್ರಯಾಣಮಾಡಿರುವರು.

ಕಳೆದ ಬಕರೀದ್ ಹಬ್ಬದದಿವಸ ಅಯೋಧ್ಯಾನಗರದಲ್ಲಿ ಗೋವಧೆಯು ಮಾಡಲ್ಪಡಕೂಡದೆಂದು ಮಹಮ್ಮದೀಯರು ಕಟ್ಟುಮಾಡಿದ್ದರು.

ಫ್ರಾನ್ಸಿನ ಪ್ರಸಿಡೆಂಟರಾದ ಪಾಯಿನ್‌ಕೇರ್‌ಯವರು ರಣರಂಗಕ್ಕೆ ಹೋಗುವುದಕ್ಕಾಗಿ ಬೆಲಗ್ರೇಡಿನಿಂದ ಪ್ಯಾರಿಸ್‌ಪಟ್ಟಣಕ್ಕೆ ಬಂದಿರುವರು.

ಈಗ ಇಂಗ್ಲೆಂಡಿನಲ್ಲಿರುವ ಬರೋಡಾಮಹಾರಾಜ ದಂಪತಿಗಳು ಭರತಖಂಡಕ್ಕೆ ಹಿಂದಿರುಗಬೇಕೆಂದಿದ್ದವರು ಇನ್ನೂ ಕೆಲ ಕಾಲದವರೆಗಲ್ಲಿಯೇ ಇರುವವರಾಗಿರುವರು.

ಸರ್‌ರೋಪರ್‌ಲೆಥಬ್ರಿಡ್ಜ್‌ರವರ ಕುಟುಂಬದಲ್ಲಿ ಪ್ರತಿಯೊಬ್ಬ ಗಂಡುಸೂ ಯುದ್ಧಮಾಡಲಿಕ್ಕೂ ಪ್ರತಿಯೊಬ್ಬ ಹೆಂಗುಸೂ ಯುದ್ಧದಲ್ಲಿ ಗಾಯವಡೆದವರನ್ನು ಪಚರಿಸಲಿಕ್ಕೂ ಹೋಗಿರುವರಂತೆ.

ಭರತಖಂಡದ ಸೈನಿಕರು ರಾಜಭಕ್ತಿಯುತ್ಸಾಹದಿಂದ ವಿಶೇಷಧೈರ್ಯದೊಡನೆ ರಣದಲ್ಲಿ ಕಾದಾಡುತ್ತಿರುವುದಕ್ಕಾಗಿ ಟ್ರಾನ್ಸವಾಲಿನ ಬ್ರಿಟಿಷ್‌ಸಂಘದವರು ಯುದ್ಧದಾಫೀಸಿನವರ ಮೂಲಕ ಅವರಿಗೆ ತಮ್ಮಭಿನಂದನವನ್ನು ತಿಳಿಸಿರುತ್ತಾರೆ.

ಅಮೇರಿಕಾದಲ್ಲಿರುವ ಜರ್ಮನ್ ರಾಯಭಾರಿಗೂ, ಮತ್ತೊಬ್ಬ ಧನಿಕನಿಗೂ ಯುದ್ಧದ ವಿಷಯವಾಗಿ ಸಂಭಾಷಣೆ ನಡೆಯುತ್ತಿರುವಾಗ, ಆ ಧನಿಕನು—ಈ ಯುದ್ಧವು ಮುಗಿದರೆ ನೀವೇನುಮಾಡುವಿರಿ? ಎಂದು ಪ್ರಶ್ನೆಮಾಡಲು, ರಾಯಭಾರಿಯು—"ಫ್ರಾನ್ಸಿನವರ ಸ್ವಾಸ್ಥ್ಯಗಳನ್ನೆಲ್ಲಾ ಹಿಡಿದುಕೊಳ್ಳುವೆವು; ಸೆಯಿಂಟ್‌ಪೋಲರ್ ಮಿಕ್ಲಲಯನ್ಸ್‌ಗಳಿಗೆ ಪೂರ್ವದಲ್ಲಿರುವ ಪ್ರದೇಶಗಳನ್ನು ಕೂಡಾ ತಗೆದುಕೊಳ್ಳುವೆವು; ಇಷ್ಟೇ ಅಲ್ಲದೆ ಯುದ್ಧದ ವೆಚ್ಚಕ್ಕಾಗಿ ೪ ಕೋಟಿ ಪೌನುಗಳನ್ನು ಫ್ರಾನ್ಸಿನವರಿಂದ ತೆಗೆದುಕೊಳ್ಳುವೆವು; ೨೫ ವರ್ಷಗಳವರೆಗೆ ಫ್ರಾನ್ಸಿಗೆ ಬಂದ ನಮ್ಮ ಸರಕುಗಳಮೇಲೆ ಸುಂಕವನ್ನು ವಿಧಿಸದಂತೆ ಮಾಡಿಕೊಳ್ಳುವೆವು; ೨೫ ವರ್ಷಗಳವರೆಗೆ ಫ್ರಾನ್ಸಿನವರು ಸೇನೆಯಲ್ಲಿ ಹೊಸಬರನ್ನು ಸೇರಿಸಿಕೊಳ್ಳದಂತೆ ಕಟ್ಟುಮಾಡುವೆವು; ೩೦ ಲಕ್ಷ ತುಪಾಕಿಗಳನ್ನೂ, ೩ ಸಾವಿರ ಫಿರಂಗಿಗಳನ್ನೂ, ೪೦ ಸಾವಿರ ಕುದುರೆಗಳನ್ನೂ ಅವರಿಂದ ತೆಗೆದುಕೊಳ್ಳುವೆವು." ಎಂದು ಹೇಳಿದನಂತೆ. ಮನಸ್ಸಿನೊಳಗಣ ಮಂಡಿಗೆ ಎಂಬುದು ಹೀಗೇ ಅಲ್ಲವೇ! ಯುದ್ಧವು ಪರ್ಯವಸಾನಗೊಳ್ಳುವುದರೊಳಗೆ ತಮ್ಮ ಪರಿಣಾಮವೇನಾಗುವುದೆಂಬುದು ಉನ್ಮತ್ತರಾಗಿರುವ ಜರ್ಮನರಿಗೆ ತೋರುವಂತೆ ಕಾಣುವುದಿಲ್ಲ.

ಪತ್ರವ್ಯವಹಾರ.

ಮೂಡಿಗೆರೆ.

ಶ್ರೀಗುರುಮಠದಲ್ಲಿ ಇದೇ ಆಶ್ವಯುಜ ಶುದ್ಧ ದಶಮಿ ಮಂಗಳವಾರದದಿನ ವಿನಾಯಕ ಸ್ವಾಮಿಯನ್ನು ಬಹಳ ವಿಜೃಂಭಣೆಯಿಂದ ಕಳುಹಿಸಿದರು. ಆಗ್ಗೆ ಅಲ್ಲಿ ನೆರೆದಿದ್ದ ಸಭಾಸದರ ಮುಂದೆ ಮ॥ ರಾ॥ ಎಂ. ಚನ್ನಪ್ಪನವರು ಒಂದು ಉಪನ್ಯಾಸವಮಾಡಿದರು. (ಅದೇನೆಂದರೆ) ಬೀಡಿ, ಸಿಗರೇಟುಗಳನ್ನು ಸೇದುವುದರಿಂದ ದೇಹದೊಳಗಣ ರಕ್ತವು ಕೆಟ್ಟು ಸಾರವಿಲ್ಲದ ಬೆಂಡಿನಂತೆ ಆಗುತ್ತಾರೆ. ಮತ್ತು ತುಟಿ ಕಪ್ಪಾಗುವುದು, ಇಂದ್ರಿಯ ನೀರಾಗುವುದು, ಬಾಯಿಯೊಳಗೆ ದುರ್ವಾಸನೆ ಬರುವುದು, ಕೆಮ್ಮುಹುಟ್ಟಿ ಕರ್‍ರಗೆ ಒಂದು ತರದ ಕಫಾ ಬೀಳುವುದು, ಶರೀರವನ್ನೊಣಗಿಸುವುದು, ಮುಖದ ಕಾಂತಿಯನ್ನು ಕೆಡಿಸುವುದು, ಸಂಭೋಗಶಕ್ತಿಯನ್ನು ಕೆಡಿಸುವಮಾಡುವುದು, ಇದೂ ಅಲ್ಲದೆ ಎದೆಯಲ್ಲಿ ಉರಿ ಹೆಚ್ಚಾಗಿ ದಾಹಬರುವುದು. ಉಸಿರನ್ನು ಎಳೆದು ಬಿಡುವಾಗ ಸಂಕಟವಾಗುವುದು, ಹೆಚ್ಚಾಗಿ ಪ್ರಯಾಣಮಾಡಿದರೆ ದಮ್ಮುಬಂದು ನಂತರ ಕೆಮ್ಮಿಗೆ ಆರಂಭವಾಗುವುದು, ಹೆಚ್ಚಾಗಿ ಪ್ರಯಾಣಮಾಡಿದರೆ ಕೈ ಕಾಲು ಸೋಲುಬರುವುದು. ಆದಕಾರಣ ಇಂಥಾ ದುರ್ಗುಣಗಳು ಸಂಭವಿಸತಕ್ಕ ಮೇಲೆ ಕಂಡ ಈ ದುರಭ್ಯಾಸವನ್ನು ದೇಶಾಭಿಮಾನಿಗಳಾದ ದೊಡ್ಡವರು ಮತ್ತು ಚಿಕ್ಕವರು ಸಹ ತ್ಯಜಿಸಿ ಅಂದರೆ-ಬಿಟ್ಟುಬಿಟ್ಟು ಯಾವವಿಧವಾದ ಬಾಯಿಲೆಗೂ ದಾರೀಕೊಡದೆ ನಿಮ್ಮನಿಮ್ಮ ಶರೀರವನ್ನು ಚೆನ್ನಾಗಿ ಕಾಪಾಡಿಕೊಂಡು ಸುಖದಿಂದ ಪೂರ್ಣಾಯುಷ್ಯವಂತರಾಗಿ ಇರುವಿರೆಂದು ನಾನು ನಿರಂತರವೂ ಶ್ರೀಜಗದೀಶನನ್ನು ಪ್ರಾರ್ಥಿಸುತ್ತೇನೆ- ಎಂಬದಾಗಿ ಹೇಳಿ ಸಭೆಯನ್ನು ಮುಕ್ತಾಯಗೊಳಿಸಿದರು.

ಪ್ರತ್ಯಕ್ಷದರ್ಶಿ.

ಜಗಲೂರು ತಾಲ್ಲೋಕು ಸೊಕ್ಕೆ:— ಈ ಗ್ರಾಮಕ್ಕೆ ತಾ॥ ೧೦ ರಲ್ಲಿ ನಮ್ಮ ಅಮಲ್‌ದಾರರವರಾದ ಮೆ॥ ಸಿ. ರಾಮಚಂದ್ರರಾವ್ ಎಸ್‌ಕ್ವೈಯರ್ ಬಿ. ಎ. ಬಿಎಲ್. ರವರ ಸ್ವಾರಿಯು ಜಮಾಬಂದಿಗಾಗಿ ದಯಮಾಡಿಸಿ ರೆವಿನ್ಯೂ ಮತ್ತೂ ಯೂನಿಯನ್ ಜಮಾಬಂದಿಗಳನ್ನೆಲ್ಲಾ ಪೂರೈಸಿ ತಾ॥ ೧೧ ನೆ ಭಾನುವಾರ ಗ್ರಾಮಾಭಿವೃದ್ಧಿಸಮಾಜದ ಮೀಟಿಂಗನ್ನು ನಡೆಯಿಸಿ ಈ ಸಮಾಜಕ್ಕೆ ಮ॥ ರಾ॥ ಪಟೇಲ್ ಹನುಮಪ್ಪನವರು (ಪ್ರಸಿಡೆಂಟ್) ಮ॥ ರಾ॥ ಶಟ್ಟರು ಕರವೀರಪ್ಪನವರು (ಸೆಕ್ರೆಟರಿ) ಮ॥ ರಾ॥ ಆಲದಹಳ್ಳಿ ಹನುಮಪ್ಪನವರು (ಟ್ರಿಜರರ್) ಮ॥ ರಾ॥ ಲಕ್ಕಪ್ಪನ ಹನುಮಪ್ಪನವರು ಮ॥ ರಾ॥ ಯರ್ಲಕಟ್ಟೆ ಪಟೇಲ್ ತಿಮ್ಮಪ್ಪನವರು ಇವರನ್ನು ಕಮಿಟಿ ಮೆಂಬರುಗಳನ್ನಾಗಿಯೂ ನೇಮಕಮಾಡಿದರು. ಮೆ॥ ರಾಯರು ಮೀಟಿಂಗಿನಲ್ಲಿ ಗ್ರಾಮದಲ್ಲಿ ಐಕಮತ್ಯ ಪತ್ರಿಕೆಯನ್ನು ಓದುವದರಿಂದುಂಟಾಗುವ ಪ್ರಯೋಜನಗಳನ್ನು ಸಹ ಕುರಿತು ಬಹಳ ಸರಸವಾಗಿ ಭಾಷಣಮಾಡಿ, ವಾರಕ್ಕೊಂದು ಅರ್ಧದಿನದಂತೆ ಗ್ರಾಮ ಬಾಕೀಜಾ ವಗೈರೆ ಕೆಲಸಗಳನ್ನು ಮಾಡುವಂತೆಯೂ, ವಾರಕ್ಕೊಂದಾವರ್ತಿ ಹನುಮಂತದೇವರ ಗುಡಿಯಲ್ಲಿ ಎಲ್ಲಾ ಜನಗಳನ್ನು ಬರಮಾಡಿಕೊಂಡು ವರ್ತಮಾನ ಪತ್ರಿಕೆಗಳನ್ನು ಓದಬೇಕೆಂತಲೂ ಅಪ್ಪಣೆಕೊಡಿಸಿದರು. ಇವರಂತೆ ಗ್ರಾಮಸ್ಥರೆಲ್ಲರೂ ಐಕಮತ್ಯದಿಂದ ಗ್ರಾಮಾಭಿವೃದ್ಧಿ ವಿಷಯದಲ್ಲಿ ತಕ್ಕ ಏರ್ಪಾಡುಗಳನ್ನೆಲ್ಲಾ ಮಾಡಿ ಮೆ॥ ರಾಯರ ಉಪನ್ಯಾಸಕ್ಕೆ ಗೌರವ ಕೊಡಬೇಕೆಂದು ಕೋರುತ್ತೇನೆ.

ಗ್ರಾಮವಾಸಿ

ಶ್ರೀಮನ್ನಿರಂಜನ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳು, ಜಗದ್ಗುರು ಚಿತ್ರದುರ್ಗಸಂಸ್ಥಾನ ಇವರ ಸ್ವಾರಿಯು ಬೆಳಗಾವಿಗೆ ಚಿತ್ತೈಸಿದ್ದುದು.

ಕೆಣಬರಗಿಯಲ್ಲಿ ತಾ॥ ೧೧-೧೦-೧೪ ರಿಂದ ನಾಲ್ಕು ಮುಕ್ಕಾಮುಗಳನ್ನು ರಾ॥ಸಾ॥ ಶಿವಮೂರ್ತಿಸ್ವಾಮಿ ಕೆಣಬರಗಿಮಠ ಇವರಲ್ಲಿ ಮಾಡಿ, ಅನೇಕ ಭಕ್ತರ ಬಿನ್ನಹಗಳನ್ನು ಕೈಕೊಂಡು ಆಶೀರ್ವದಿಸಿ, ದಿನಂಪ್ರತಿ ಸಭೆಮಾಡಿ ವ್ಯಾಖ್ಯಾನ ರೂಪದಿಂದ ಧರ್ಮತತ್ತ್ವಗಳನ್ನೂ, ಪರಧರ್ಮಗಳ ಬಗೆಗೆ ಆದರವನ್ನೂ ರಾಜನಿಷ್ಠೆಯ ಬಗೆಗೆ ಹಾಲಿ ಈಗ ನಡೆದಿರುವ ಮಹಾಯುದ್ಧದಲ್ಲಿ ಗಾಯಹೊಂದಿದ ಶೂರ ಶಿಪಾಯಿಗಳ ಆರೈಕೆಗೆ ಅನೇಕ ರೀತಿಯಿಂದ ಸಹಾಯಮಾಡುವ ಅವಶ್ಯಕತೆಯನ್ನೂ ಜನರಿಗೆ ತಿಳಿಸಿ, ಗುರುವಾರ ತಾ॥ ೧೫-೧೦-೧೪ ರ ಮುಂಜಾನೆ ಸರ್ವಸಂಭ್ರಮದೊಡನೆ ಬೆಳಗಾವಿಯ ಭಕ್ತಮಾಹೇಶ್ವರರ ಬಿನ್ನಹವನ್ನು ಕೈಕೊಂಡು ಮಹಾಸ್ವಾಮಿಯವರು ದಯಮಾಡಿಸಿದರು. ಅಲ್ಲಲ್ಲಿ ಭಕ್ತಮಾಹೇಶ್ವರರಿಂದ ಸೇವೆಯನ್ನು ಸ್ವೀಕರಿಸುತ್ತ ವ್ಯಾಖ್ಯಾನರೂಪವಾದ ಆಶೀರ್ವಾದ ವಚನಗಳಿಂದ ಧರ್ಮ-ನೀತಿ-ಭೂತದಯೆ-ಪರೋಪಕಾರದ ಪುಣ್ಯ-ರಾಜನಿಷ್ಠೆಯ ಫಲಗಳನ್ನೂ ಮತ್ತೂ ವಿದ್ಯೆಯ ಮಹತ್ವ-ಗೃಹಸ್ಥಾಶ್ರಮಿಗಳು ಮಾಡಬೇಕಾಗಿರುವ ಪವಿತ್ರಕರ್ತವ್ಯ-ಕರ್ನಾಟಕ ಕಾಲೇಜಿನ ಅವಶ್ಯಕತೆಮುಂತಾದ ಅನೇಕ ಮಹತ್ವದವಿಷಯಗಳನ್ನು ಕುರಿತು ಮಹಾಸ್ವಾಮಿಗಳವರು ತಮ್ಮಮಂಜುಳವಾಣಿಯಿಂದ ಬಹಳ ಸರಸವಾಗಿ ಭಕ್ತವೃಂದಕ್ಕೆ ಉಪದೇಶಾಮೃತವನ್ನು ಪಾನಮಾಡಿಸಿದರು. ಹಾಗೂ ಕರ್ನಾಟಕ ಕಾಲೇಜದಲ್ಲಿ ಸಂಸ್ಕೃತದಲ್ಲಿ ಉತ್ತಮರೀತಿಯಿಂದ ತೇರ್ಗಡೆಹೊಂದಿದ ವಿದ್ಯಾರ್ಥಿಗೆ ವೇತನಸಿಗುವುದೆಂಬುವಾಗಿ ಜಯದೇವ ಮುರಘರಾಜೇಂದ್ರ ಸ್ಕಾಲರ್‌ಷಿಪ್ಪಿಗಾಗಿ ಕರ್ನಾಟಕ ಕಾಲೇಜಕ್ಕೆ ೫೦೦೦ ರೂಪಾಯಿಗಳನ್ನು ಕೊಡಲೊಪ್ಪಿ, ಕೂಡಲೇ ರಾ॥ಬ॥ ಅರಟಾಳಸಾಹೇಬರವರ ಕಡೆಗೆ ಕೆಲವು ರಕಮನ್ನು ಕಳಿಸಿದರು. ಅದರಂತೆ ಯುದ್ಧದ ಫಂಡಿಗಾಗಿ, ತಮ್ಮ ಸಂಚಾರದಲ್ಲಿ ಅಲ್ಲಲ್ಲಿಯ ತಮ್ಮ ಶಿಷ್ಯಮಠಗಳಿಗೂ, ಶಿಷ್ಯವೃಂದಕ್ಕೂ ಉಪದೇಶಿಸಿ ಸಹಾಯಮಾಡಿಸುವುದಲ್ಲದೆ ಬೆಳಗಾವಿ ಮುಕ್ಕಾಮಿನಲ್ಲಿ ಮೆಳಬರ್ಗನ ಕಮಿಷನರ, ಕಲೆಕ್ಟರ ಸಾಹೇಬರವರ ಕಡೆಗೆ ರಾ॥ಬ॥ ಅರಟಾಳ ಸಾಹೇಬರ ಮುಖಾಂತರ ಹಣವನ್ನು ತಾ॥ ೨೨-೧೦-೧೪ ರ ದಿವಸ ಕಳಿಸಿ ಆಶೀರ್ವಾದಗಳನ್ನು ತಿಳಿಸಿದರು. ಅದರಂತೆ ನಮ್ಮ ರಾ॥ಬ॥ ಅರಟಾಳ ಸಾಹೇಬರವರು ಮಹಾಸ್ವಾಮಿಗಳನ್ನು ತಮ್ಮಲ್ಲಿಗೆ ಬಹಳ ಉತ್ಸವದಿಂದ ಬಿಜಮಾಡಿಕೊಂಡು ಸಂತೋಷಗೊಳಿಸಿದರು. ಶ್ರೀ ಮಹಾಸ್ವಾಮಿಗಳು ತಾ॥ ೨೧ ನೆ ಬುಧವಾರ ದಿವಸ ಖಾನಾಪುರಕ್ಕೆ ಬೆಳಗಾವಿಯಿಂದ ದಯಮಾಡಿಸಿದರು. ರಾ॥ಬ॥ ಅರಟಾಳರವರೂ ಸಹ ಯುದ್ಧದ ಫಂಡಿಗೆ ೧೦೦೦ ರೂ. ಕೊಟ್ಟಿರುವರು.

ಪ್ರತ್ಯಕ್ಷದರ್ಶಿ.

ಕೊಣ್ಣೂರ ನಾಟಕಕಂಪೆನಿ.

ರಾಣಿಬೆನ್ನೂರಲ್ಲಿ ಕಳೆದ ತಿಂಗಳ ತಾ॥ ೬ ನೆಯ ರವಿವಾರದ ದಿವಸ ಸಂಜೆಯ ೫ ಗಂಟೆಗೆ ನಾಮದಾರ ರಾವಸಾಹೇಬ ವೆಂಕಣ್ಣನಾಯಕ ಇವರ ಅಧ್ಯಕ್ಷತೆಯ ಕೆಳಗೆ ಸಾರ್ವಜನಿಕ ರೀತಿಯಿಂದ ಮ್ಯುನಿಸಿಪಲ್ ಹಾಲಿನಲ್ಲಿ ರಾವಸಾಹೇಬ ಶಿವಮೂರ್ತಿಸ್ವಾಮಿ ಕೆಣಬರಗಿಮಠ ಇವರಿಗೆ ಪಾನಸುಪಾರಿಯು ಕೊಡಲ್ಪಟ್ಟಿತು. ಅದೇ ರಾತ್ರಿ ಪ್ರಸಿದ್ಧ ಕೊಣ್ಣೂರ ಕನ್ನಡ ಸಂಗೀತ ನಾಟಕ ಕಂಪೆನಿಯವರು ಶನಿಪ್ರಭಾವವೆಂಬ ನಾಟಕವನ್ನಭಿನಯಿಸಿದರು. ಆ ಕಾಲಕ್ಕೆ ರಾ॥ಸಾ॥ ಕೆಣಬರಗಿಮಠ ಇವರು ಈಗ ನಡೆಯುತ್ತಿರುವ ಯೂರೋಪುಖಂಡದ ಯುದ್ಧದ ಸಾದ್ಯಂತ ವರ್ಣನೆಯನ್ನು ಹೇಳಿ ಬ್ರಿಟಿಷ ರಾಜರ ಗುಣಾನುವಾದವನ್ನೂ, ಅವರು ನಿರಾಶ್ರಿತ ರಾಷ್ಟ್ರಗಳಿಗೆ ಮಾಡಿರುವ ಸಹಾಯವನ್ನೂ ಜನರ ಮನಸ್ಸಿಗೆ ಚೆನ್ನಾಗಿ ಬಿಂಬಿಸುವಂತೆ ತಿಳಿಸಿ, ಯುದ್ಧವು ಶೀಘ್ರದಲ್ಲಿಯೇ ಮುಗಿದು ಪಂಚಮ ಜಾರ್ಜ್ ಮಹಾರಾಜರಿಗೆ ಜಯವಾಗಲೆಂದು ಪ್ರಾರ್ಥಿಸಿ, ಯುದ್ಧದ ಫಂಡಿಗೆ ಸರ್ವ ರಾಜನಿಷ್ಠ ಪ್ರಜೆಗಳೂ ಸಹಾಯಮಾಡಬೇಕೆಂದು ತಿಳಿಸಿ ತಮ್ಮ ನಾಟಕ ಕಂಪೆನಿಯ ಪತಿಯಿಂದ ೫೦ ರೂ.ಗಳನ್ನು ನಾಮದಾರ ರಾ॥ಸಾ॥ನಾಯಕರವರ ಕಡೆಗೆ ಕೊಟ್ಟರು.

ಈ ಕೊಣ್ಣೂರ ನಾಟಕಕಂಪೆನಿಯವರು ಈಗ ಹುಬ್ಬಳ್ಳಿಗೆ ಬಂದಿದ್ದು ತಮ್ಮ ಪ್ರಯೋಗಗಳನ್ನು ಪ್ರಾರಂಭಿಸಿರುವರು. [illegible] ೨೪-೧೦-೧೯೧೪ ನೆಯ ಶನಿವಾರದ ದಿವಸ [illegible] ನಾಟಕವನ್ನಾಡಿದರು. ಆ ಕಾಲಕ್ಕೆ ಅನೇಕಜನ ಪ್ರಮುಖಗೃಹಸ್ಥರು ನಾಟಕವನ್ನು ನೋಡಲಿಕ್ಕೆ ರಾ॥ಸಾ॥ ಕೆಣಬರಗಿಮಠ ಇವರಿಂದ ಆಮಂತ್ರಣಹೊಂದಿ ಬಂದಿದ್ದರು. ಅವರಿಗೆಲ್ಲಾ ಎಂದರೆ- ರಾ॥ಬ॥ ಶಾಂತವೀರಪ್ಪ ಅಣ್ಣಾ ಮೆಣಸಿನಕಾಯಿ, ರೇವಣಸಿದ್ಧಯ್ಯಾಸ್ವಾಮಿ ಕಿತ್ತೂರ, ಹಾಲಬಾವಿ, ಪೋತ್ದಾರ, ಕೊಟ್ಟೂರ, ಹುರತಕೋಟಿ, ನವಲಿ, ವೀರಪ್ಪ ಮಾಸ್ತಿ, ಗುರಪ್ಪ ಆಲೂರ, ಪಂಡಿತಪ್ಪಾ ಚಿಕ್ಕೋಡಿ, ಬಸವಂತಪ್ಪಾ ಮನಮಾಪುರ, ಸೊರಬದ ರಾ॥ಸಾ॥ ಸಿದ್ಧರಾಮಪ್ಪಾ ಮೊದಲಾದ ಗೃಹಸ್ಥರಿಗೆ ಪ್ರೇಮದಿಂದ ಪಾನಸುಪಾರಿಯು ಕೊಡಲ್ಪಟ್ಟಿತು. ಹಾಗೂ ಯುದ್ಧದ ವಿಷಯವಾಗಿ ಪುನಃ ರಾ॥ಸಾ॥ ಶಿವಮೂರ್ತಿಸ್ವಾಮಿಗಳು ಬಹಳ ಸರಸವಾಗಿ ಜನರಿಗೆ ತಿಳಿಸಿ, ಮೂರ್ಖರ ಮತ್ತೂ ತಿಳಿಗೇಡಿ ಜನರ ಸುಳ್ಳುಸುದ್ದಿಗಳಿಗೆ ಕಿವಿಗೊಡಬಾರದೆಂದೂ ಮತ್ತೂ ಅಂಥ ಅವಿಚಾರಿ ಜನರನ್ನು ಹಿಡಿದು ನ್ಯಾಯಸ್ಥಾನಕ್ಕೆ ತರುವುದನ್ನು ಕುರಿತೂ ತಿಳಿಸಿದರು. ಅದಕ್ಕೆ ಮೊನ್ನೆ ಧಾರವಾಡದ ಸಂತೆಯಲ್ಲಾದ ಗಲಭೆಯನ್ನು ಉದಾಹರಣೆಯಾಗಿ ಹೇಳಿದರು. ಅನಂತರ ಸರ್ವಜನರೂ ಎದ್ದುನಿಂತು ಪಂಚಮ ಜಾರ್ಜ್ ಪ್ರಭುಗಳಿಗೆ ಜಯವಾಗಲೆಂದೂ, ಯುದ್ಧದಲ್ಲಿ ತೀವ್ರವೇ ಜಯದೊರೆಯಲೆಂದೂ ತ್ರಿವಾರ ಜಯಘೋಷಮಾಡಿದರು. ಅನಂತರ ಕೊಣ್ಣೂರ ನಾಟಕ ಕಂಪೆನಿಯ ಬಗೆಗೆ ರಾ॥ಬ॥ ಮೆಣಸಿನಕಾಯಿಯವರು ಭಾಷಣಮಾಡಿದರು. ಅದರಲ್ಲಿ- ಈ ಕಂಪೆನಿಯಿಂದ ಕನ್ನಡ ಸಮಾಜಸೇವೆಯೂ, ಜನಮನೋರಂಜನವೂ, ಸಾರ್ವಜನಿಕ ಸಂಸ್ಥೆಗಳಿಗೆ ಕಾಲಕಾಲಕ್ಕೆ ಆಗುತ್ತಿರುವ ಹಣದ ಸಹಾಯವೂ, ಯುದ್ಧದ ಫಂಡಿಗೆ ಮಾಡಿದ ಸಹಾಯವೂ ವರ್ಣಿಸಲ್ಪಟ್ಟು, ಆ ಕಂಪೆನಿಯ ಬಾಲಕರನ್ನು ಅಭಿನಂದಿಸಿದರು. ಈಗ ಕಂಪೆನಿಯಲ್ಲಿರುವ ಬಚಲಿದೀವಿಗೆ, ಸೀನ್ಸುಗಳು ಮತ್ತೂ ಹೊಸಪದ್ಧತಿಯಿಂದ ತಯಾರಾಗಿರುವ ಪಾರ್ಟಿನ ಜನರನ್ನು ಸಹ ಸ್ತುತಿಸಿ, ಕಂಪೆನಿಯು ಚಿರಾಯುವಾಗಲೆಂದು ಇಚ್ಛೈಸಿದರು.

ಪ್ರತ್ಯಕ್ಷದರ್ಶಿ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳು, ಸಂಸ್ಥಾನ ಚಿತ್ರದುರ್ಗ

ಇವರ ಸ್ವಾರಿಯು ತಾರೀಖು ೮-೧೦ ೧೯೧೪ನೆ ಇಸವಿಯ ದಿವಸ ಬೆಳಗಾಂಪಟ್ಟಣಕ್ಕೆ ಚಿತ್ತೈಸೋಣಾಯ್ತು. ಸಮಸ್ತ ಬಿರುದಾವಳಿಯ ಸಹಿತ ಅಡ್ಡಪಲ್ಲಕ್ಕಿಯ ಮಹೋತ್ಸವದ ಬೆಳಗಿನ ೭ ರಿಂದ ಮಧ್ಯಾನ್ಹ ೧೨ ಘಂಟೆಯವರೆಗೆ ಜರುಗಿತು. ಸರಕಾರದಿಂದ ಪೋಲೀಸು ಉಸ್ತುವಾರಿ ವಗೈರೆ ಸಮರ್ಪಕವಾಗಿಡಿಸಲ್ಪಟ್ಟಿದ್ದಿತು. ತಾರೀಖು ೧೪-೧೦-೧೯೧೪ ನೇ ಇಸವಿ ದಿವಸ ಕರ್ನಾಟಕ-ಸಂಗೀತ-ನಾಟಕಗಳಲ್ಲಿ ಪ್ರಸಿದ್ಧವಾದ ಮತ್ತು ಮೈಸೂರ ಮಹಾರಾಜಾ ಸರ್ಕಾರದಿಂದ ಬಹುಮಾನವನ್ನು ಮತ್ತು ಸುವರ್ಣದ ಅನೇಕ ಮೆಡಲುಗಳನ್ನು ಪಡೆದಿರುವ ಶಿರಹಟ್ಟಿ ಶ್ರೀ ಮಹಾಲಕ್ಷ್ಮೀಪ್ರಸಾದಿಕ ಸಂಗೀತ-ನಾಟಕ ಕಂಪನಿಯ ಮಾಲಕರಾದ ಮ॥ ರಾ॥ ರಾ॥ ವೆಂಕಟರಾವ ಹುಲಗೇರಿಕರ ಇವರು ಆ ದಿವಸ ಪದ್ಮಾವತೀ ಪರಿಣಯವೆಂಬ ಆಖ್ಯಾನದಯಾವತ್ತು ರಕಮನ್ನು ಶ್ರೀ ಜಗದ್ಗುರುಗಳಿಗೆ ಕಾಣಿಕೆಯಾಗಿ ಅರ್ಪಿಸಿದರು. ಅನಂತರ ಸಂಬರಗಿಯಲ್ಲಿ ಅಡ್ಡಪಲ್ಲಕ್ಕಿ ಯುತ್ಸವವು ನಡೆಯಿತು. ಮಹಾ॥ ಸನ್ನಿಧಿದರ್ಶನಕ್ಕೆ ಪಾತ್ರರಾದ ಪಂಡಿತ ಉಮಾಪತಿ ಶಾಸ್ತ್ರಿಗಳು ಅಜ್ಜಂಪೂರ, ಪಂಡಿತ ಮಲ್ಲಿಕಾರ್ಜುನ ಶಾಸ್ತ್ರಿಗಳು ಬಡ್ಡಿ, ಮಹೇಶ್ವರ ಶಾಸ್ತ್ರಿಗಳು ಹರಿಹರ, ಅಯ್ಯಪ್ಪಶಾಸ್ತ್ರಿಗಳು ಜಗತಿಮಠ ಗದಗ, ಮರುಳಸಿದ್ಧಶಾಸ್ತ್ರಿಗಳು ಉಜ್ಜಯಿನಿಮಠ ಚಿಗಟೇರಿ, ಬಸವಪ್ಪ ಪುರಾಣಿಕ ಇವರಿಗೆ ಯೋಗ್ಯಸನ್ಮಾನಗಳು ಆಶೀರ್ವದಿಸಲ್ಪಟ್ಟವು. ಅಯ್ಯಪ್ಪಶಾಸ್ತ್ರಿಗಳು, ಮತ್ತು ಮರುಳಸಿದ್ಧಶಾಸ್ತ್ರಿಗಳು, ಜಗದ್ಗುರು ಜಯದೇವಾಷ್ಟಕಗಳನ್ನು ರಚಿಸಿದ್ದಾರೆ. ಈ ಮುಕ್ಕಾಮಿನಲ್ಲಿ ಘನತೆಯನ್ನೈದಿದ ರಾವಬಹದ್ದೂರ ಅರಟಾಳ ಸಾಹೇಬ ಆಯ್. ಎಸ್. ಓ ಇವರಿಂದ ಧಾರವಾಡ ಕರ್ನಾಟಕ ಕಾಲೇಜಿಗೆ ಸಹಾಯ ಮಾಡಬೇಕೆಂಬ ವಿಷಯವು ಅರಿಕೆಯಾಗಿ ಸದರಿ ವಿದ್ಯಾಲಯದ ಫಂಡಿಗೆ ಮಹಾ॥ ಸ್ಥಂಸಾನದಿಂದ ೫೦೦೦ ರೂಪಾಯಿಗಳನ್ನು ವಾಗ್ದಾನಮಾಡಿ ೧೦೦೦ ರೂಪಾಯಿಗಳನ್ನು ಅರಟಾಳ ಸಾಹೇಬರ ವಶಕ್ಕೆ ಪಾವತಿಮಾಡಿಸೋಣವಾಗಿದೆ. ಈ ಫಂಡಿಗೆ ಮಹಾ॥ ಸಂಸ್ಥಾನದ ಶಿಷ್ಯರಿಂದಲೇ ಸಹಾಯವಾಗಿರುತ್ತಿದ್ದು, ಪುನಃ ಸಂಸ್ಥಾನದಿಂದ ಸಹಾಯಮಾಡಿದ್ದು ಮಹಾಸ್ವಾಮಿಗಳ ವಿದ್ಯಾಭಿಮಾನವನ್ನು ವ್ಯಕ್ತಪಡಿಸುತ್ತದೆ. ಮತ್ತು ಮಹಾಸ್ವಾಮಿಯವರು ತಿಪಟೂರಲ್ಲಿ ವೀರಶೈವಾನಂದಾಶ್ರಮವನ್ನು ಸ್ಥಾಪಿಸಿ ಆಶ್ರಮದಲ್ಲಿ ವಿದ್ಯಾಭ್ಯಾಸಮಾಡುವ ವಿದ್ಯಾರ್ಥಿಗಳಿಗೆ ಅಶನವಸನಗಳ ಸಲುವಾಗಿ ಸದ್ಯಃ ೧೦೦೦೦ ರೂ. ದಯಪಾಲಿಸಿರುತ್ತಾರೆ. ಮುಂಬಯಿ, ಬೆಂಗಳೂರ, ಚಿತ್ರದುರ್ಗ, ಕಾಶಿ ಮುಂತಾದ ಸ್ಥಳಗಳಲ್ಲಿ ಅಭ್ಯಾಸಮಾಡುವ ವಿದ್ಯಾರ್ಥಿಗಳಿಗೆ ಮಾಸವೇತನವನ್ನು ದಯಪಾಲಿಸುತ್ತಿದ್ದಾರೆ. ಮಹಾರಾಷ್ಟ್ರ ಪ್ರಾಂತದ ಭಕ್ತರ ಕೋರಿಕೆಯಂತೆ ಕೊಲ್ಹಾಪೂರ ಶ್ರೀಮನ್ಮಹಾರಾಜರವರ ಉದಾರಾಶ್ರಯದಿಂದ ಕೊಲ್ಹಾಪುರದಲ್ಲಿ ಮಠವನ್ನು ಸ್ಥಾಪನಮಾಡಿಸಿದ್ದಾರೆ. ತುರ್ತ (೮೦೦೦೦) ರೂ.ಗಳು ಖರ್ಚಾಗಿ ಮಠದ ಕಾರ್ಯವು ಪೂರೈಸಿದ್ದು ವೀರಶೈವಸಮಾಜಕ್ಕೆ ಅತ್ಯಂತಅನುಕೂಲವಾದ ಸಂಗತಿಯಾಗಿದೆ. ಅಲ್ಲದೆ ಅನೇಕ ಸ್ಥಳಗಳಲ್ಲಿ ಬೋರ್ಡಿಂಗಿಗೆ ಮಹಾ॥ ಸಂಸ್ಥಾನದಿಂದ ಸಹಾಯವಾಗಿರುವದು.

ತಾರೀಖು ೧೯-೧೦-೧೯೧೪ ನೇ ಇಸವಿ ದಿವಸ ಬೆಳಗಾಂವಿ ಗಣಾಚಾರಿ ಮಠದಲ್ಲಿ ಸಭೆ ನಡೆಯಿತು. ಈ ಸಭೆಗೆ ನಾಮದಾರ ಬೆಳವಿ, ವಕೀಲ, ರಾವಬಹದ್ದೂರ, ಬೋರಕರಸಾಹೇಬ ಡಿಸ್ಟ್ರಿಕ್ಟ ಡಿಪ್ಯೂಟಿಕಲೆಕ್ಟರ ರಾವಬಹದ್ದೂರ ದೇಶಪಾಂಡೆ ಸಾಹೇಬ ಹುಜೂರ ಡಿಪ್ಯೂಟಿಕಲೆಕ್ಟರ ರಾವಬಹದ್ದೂರ ಶಿರಗಾಂವ್‌ಕರ, ಡಾಕ್ಟರ, ಮಿಷ್ಟರ, ಮದಗೀರ, ವಿ॥ ನಗದಕರ, ವಿ॥ ಶ್ಯಾಮಾಚಾರ್ಯ, ಟ್ರಿಜರಿ ಮುಂತಾದ ಬಹುಜನ ಬ್ರಾಹ್ಮಣರೂ ಮತ್ತು ಶ್ರೀಮಂತ ಸರ್‌ನಾಯಿಕ, ಬಹದ್ದೂರ, ದೇಸಾಯಿ ವಿ॥ ಮಲ್ಲಿಕಾರ್ಜುನಪ್ಪ ರೈನಾಪುರ್ ಶಿರಸ್ತೇದಾರ, ರಾವಸಾಹೇಬ, ವೈಜಪ್ಪ ಅಣ್ಣಾ, ಅನಗೋಳ, ಅನರರಿ ಮಾಜಿಸ್ಟ್ರೇಟ, ರಾ॥ ರಾ॥ ಶಿವಪ್ಪ, ಕಂಕಣವಾಲ, ಮ॥ ರಾ॥ ಶಿವರುದ್ರಪ್ಪಣ್ಣಾ ಕಾರ್ಭಾರಿ ವಂಟಮುರಿ ಮುಂತಾದ ಪ್ರಮುಖಜನರೂ ಸಭೆಯಲ್ಲಿ ಹಾಜರಿದ್ದರು. ಶ್ರೀ ಮಹಾ॥ ಸನ್ನಿಧಿಯಿಂದ "ಈಶ್ವರಸಿದ್ಧಿ" ಎಂಬ ವಿಷಯವಾಗಿ ಉಚಿತೋದಾಹರಣೆಗಳಿಂದ ಬೋಧಿಸೋಣವಾಯ್ತು. ಅನಂತರ ನಾಮದಾರ ಬೆಳವಿಯವರು ಶ್ರೀ ಜಗದ್ಗುರು ಮಹಾ॥ ಸನ್ನಿಧಿಯು ಚಿತ್ತೈಸಿದ್ದು ಈ ಪ್ರಾಂತದ ವೀರಶೈವರಿಗಷ್ಟೇಅಲ್ಲದೆ ಇತರ ಯಾವತ್ತು ಜನಾಂಗಕ್ಕೂ ಆನಂದವಾಗಿದೆ ಎಂಬ ವಿಷಯವಾಗಿ ಸರಸವಾದ ವ್ಯಾಖ್ಯಾನಮಾಡಿದರು. ಅನಂತರ ಸಭಿಕರಿಗೆ ಗಂಧ ಪುಷ್ಪ ತಾಂಬೂಲಗಳು ಹಂಚಲ್ಪಟ್ಟ ತರುವಾಯ ಮಹಾ॥ ಸನ್ನಿಧಿಯಿಂದ ಸರ್ವರಿಗೂ ಫಲಾಶೀರ್ವಾದವು ದಯಪಾಲಿಸೋಣವಾಗಿ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಗೆ ಲಗ್ನ ಮೊದಲಾದವುಗಳಿಂದ ತಾ॥ ೨೮-೪-೧೪ ರಿಂದ ೨೪-೬-೧೪ ರವರೆಗೆ ಜಮಾಬಂದ ತಪ್ಸೀಲ್.

೧ ಮ॥ ರಾ॥ ಗಳಾದ ಬೆಂಗಳೂರು ಮೋಟಗಾನಹಳ್ಳಿ ಚೆನ್ನವೀರಪ್ಪನವರಿಂದ ಇವರ ಪುತ್ರಿಯ ಲಗ್ನದಲ್ಲಿ ತೆಗೆದಬಾಬ್ತು ೧೦-೦-೦ ರೂ. ೨. ಬೆಂಗಳೂರು ಗ್ರಾ॥ ಮ॥ ಪಾಪಣ್ಣನವರ ಮೂಲಕ ತರಗುಮಂಡಿ ದುರ್ಗಪ್ಪನವರಿಂದ ಅಕ್ಕಿಪೇಟೆ ಯರವನಹಳ್ಳಿ ವೀರಪ್ಪನವರ ಕುಮಾರರ ಲಗ್ನದಲ್ಲಿ ತೆಗೆದುದು ೫-೦-೦, ೩. ಬೆಂಗಳೂರು ರಾಮಸೆಟ್ಟಿ ಪೇಟೆ ಯಜಮಾನ್ ಗರಡಿಮನೆ ಚಿಕ್ಕವೀರಪ್ಪನವರ ಕುಮಾರ್ತಿಯ ಲಗ್ನದಲ್ಲಿ ವಧುವಿನ ಕಡೆ ಸದರಿ ಚಿಕ್ಕವೀರಪ್ಪನವರಿಂದ ೫-೦-೦, ವರನಕಡೆ ರಾಮಸೆಟ್ಟಿ ಪೇಟೆ ಯಜಮಾನ್ ಬಸಪ್ಪನವರಿಂದ ೫-೦-೦, ಒಟ್ಟು ೧೦-೦-೦, ೪. ಗುಬ್ಬಿ ಶೆಟ್ಟರ ಕೆಪ್ಪಣ್ಣಶೆಟ್ಟರು ಯಜಮಾನ್ ಹುಚ್ಚವೀರಪ್ಪನವರು ಇವರ ಮೂಲಕ ಗುಬ್ಬಿ ಕಲ್ಲುಮಠದ ಚೆನ್ನಯ್ಯನವರ ಮಗನ ಲಗ್ನದಲ್ಲಿ ತೆಗೆದುದು ೧-೦-೦, ಗುಬ್ಬಿ ಬೆಟ್ಟದಪುರದ ನಾಗಪ್ಪನವರ ಮಗಳ ವೀಳ್ಯಪ್ರಸ್ತದಲ್ಲಿ ತೆಗೆದುದು ೩-೦-೦, ಒಟ್ಟು ೪-೦-೦, ೫. ತಿಪ್ಟೂರು ತಾಲ್ಲೂಕು ಈಚಲೂರುಪೇಟೆ ರೇವಣ್ಣಶೆಟ್ಟರಿಂದ ಇವರ ಕುಮಾರ ಮತ್ತು ಕುಮಾರ್ತಿಯ ಲಗ್ನದಲ್ಲಿ ತೆಗೆದುದು ೬-೦-೦, ೬. ಚಿತ್ರದುರ್ಗದ ಸಾಹುಕಾರ್ ಬೇಗಳಮನೆ ಕಾಡಪ್ಪನವರಿಂದ ಇವರ ಸೋದರಸೊಸೆ ಚಿ॥ ಸೌ॥ ರುದ್ರಮ್ಮನನ್ನು ಹಾವೇರಿಯಲ್ಲಿರುವ ಮ॥ ಚಿ॥ ಶ್ರೀಯುತ ವಕೀಲ್ ಹಾಲಪ್ಪ ಬಿ. ಎ ಎಲ್. ಎಲ್. ಬಿ. ಯವರಿಗೂ, ಮತ್ತು ಇವರ ಪೌತ್ರಿ ಚಿ॥ ಸೌ॥ ಚನ್ನಬಸಮ್ಮನನ್ನು ಹೊಳಲ್ಕೆರೆ ಜಂಬಿಗೆ ಮುರಿಗಪ್ಪನವರ ಕುಮಾರ ಚಿ॥ ಮ॥ ಸಂಗಪ್ಪನವರಿಗೂ ಕೊಟ್ಟು ನಡಿಸಿದ ಲಗ್ನಗಳಲ್ಲಿ ತೆಗೆದುದು ೧೦-೦-೦, ೭. ಕೃಷ್ಣರಾಜಪೇಟೆ ತಾಲ್ಲೂಕು ಬೂಕನಕೆರೆ ಮಠದ ಗುರುಬಸವಶಾಸ್ತ್ರಿಗಳು ಸಿದ್ಧಲಿಂಗಶೆಟ್ಟರು ಇವರಿಂದ ಬೂಕನಕೆರೆಯಲ್ಲಿ ನಡೆದ ವಿವಾಹಗಳಲ್ಲಿ ತೆಗೆದುದು ೪-೦-೦ ರೂ.

ಜಿ. ಕೆ. ರುದ್ರಾರ್ಯ ಆ॥ ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ
(ಸಶೇಷ) ಫಂಡ್ ಸಭೆ, ಬೆಂಗಳೂರು.

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳಸಹಿತ ಆದ ಸಮಾರಂಭ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೊ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೊ ಸಿಕ್ಕುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.

ಹೊಸಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವ ಪಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಈಪ್ರಕಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ।॥= , ೧, ೧। ಪ್ರಕಾರ, ಮತ್ತೂ ಬೆಳ್ಳೀದು ರು ೧। ರೋಡ್ ಗೋಲ್ಡ ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨॥। ರೂ.

ಪರೂರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿ. ನಮ್ಮವಿಳಾಸ— ಗಂಗಪ್ಪಾ ಜೇರಿಗೆ,
28 ಆರ್ಟಿಸ್ಟ ಸೊಲ್ಲಾಪುರ.

(ಹೊಸಪುಸ್ತಕ ೧೩೪೪ ಪುಟಗಳು) ಶ್ರೀ (ಹೊಸಪುಸ್ತಕ ೧೩೪೪ ಪುಟಗಳು)

ಬ್ರ॥ ಶ್ರೀ॥ ಬಿ. ವಿ. ಸುಬ್ರಹ್ಮಣ್ಯಶರ್ಮವಿರಚಿತಮಾದ ಸುಧಾರಸಧಾರಾಯೆಂಬ ಕನ್ನಡ
ಟೀಕಾತಾತ್ಪರ್ಯ ಗಣಿತೋದ್ಧಾರಣೆಗಳಿಂದೊಡಗೂಡಿ 7

ಬೃಹಜ್ಜಾತಕಾಖ್ಯ ಹೋರಾಶಾಸ್ತ್ರಮ್.

ಮಾನವನು ತನ್ನ ಅದೃಷ್ಟಚಕ್ರದ ಫಲಾಫಲಗಳನ್ನು ಅರಿತು, ಮುಂದೊದಗಬಹುದಾದ ಫಲಸ್ವರೂಪವನ್ನೂ ಇತರರ ಸಹಾಯವಿಲ್ಲದೆಯೆ ತಿಳಿದುಕೊಂಡು, ದುಷ್ಫಲಗಳು ದೂರವಾಗಿ, ಸುಫಲಗಳು ಕರಗತವಾಗುವಂತೆ ಮಾಡುವಂತಹ, ಪರಿಹಾರೋಪಾಯಗಳನ್ನು ಸೂಚಿಸಬೇಕಾದರೆ, ನಮ್ಮಿಂದ ಈಗತಾನೆ ಸಂಸ್ಕೃತ ಹಿಂದಿ ಮರಾಟಿ ಭಾಷೆಗಳಿಂದ ತರ್ಜುಮೆಮಾಡಿ ಪ್ರಕಾಶಗೊಂಡ "ಸುಧಾರಸಧಾರಾ" ಎಂಬ ಕನ್ನಡ ಟೀಕಾತಾತ್ಪರ್ಯ ಉದಾಹರಣೆಗಳಿಂದ ಕೂಡಿದ ಬೃಹಜ್ಜಾತಕವೆಂಬ ಹೋರಾಶಾಸ್ತ್ರವೊಂದಲ್ಲದೆ ಮತ್ತಾವುದೂ ಸಮರ್ಥವಾಗಲ್ಲವು. ೧೩೪೪ ಪುಟ ೩ ಭಾಗಗಳ ಪುಸ್ತಕ ಒಂದೇಬೈಂಡ್ ಈ ಗ್ರಂಥರತ್ನವು ಆಬಾಲವೃದ್ಧರಾದಿಯಾಗಿ ಅಕ್ಷರವನ್ನರಿತ ಹೆಂಗಸರೂ ಸಹಾ ಪರರ ಸಹಾಯಾಪೇಕ್ಷೆ ಇಲ್ಲದೆ ಓದಿ ತಿಳಿಯಲು, ಅನುಕೂಲವಾಗಿರುವುದು. ಇದರೊಳಗಡಗಿರುವ ೨೮ ಪ್ರಕರಣಗಳ್ಳಿನ ವಿಷಯಸಂಗ್ರಹ ವೆಂತೆಂದರೆ:— ೧-೨ ನೇ ಪ್ರಕರಣಗಳಲ್ಲಿ ಶಾಸ್ತ್ರಪ್ರಯೋಜನವೂ, ಜೋತಿಶಾಸ್ತ್ರದ ಪೀಠಿಕಾಭಾಗಗಳು ೩, ಸಜೀವನಿರ್ಜೀವವಸ್ತುಗಳ ಉತ್ಪತ್ತಿ ೪, ಗರ್ಭಧಾರಣಯೋಗಗಳು ೫, ಜನನಕಾಲ ಲಕ್ಷಣ ಮತ್ತು ಫಲ ೬, ಬಾಲಾರಿಷ್ಟವಿಚಾರ ಅವುಗಳ ನಿವಾರಣೋಪಾಯ ೭, ಆಯುರ್ದಾಯವಿಚಾರ ೮, ದಶಾಭುಕ್ತಿನಿರ್ಣಯ ೯, ಅಷ್ಟಕವರ್ಗವಿಚಾರ ೧೦, ಜೀವನೋಪಾಯವಿಚಾರ ೧೧, ರಾಜಯೋಗಸೂಚನೆ ಅವುಗಳ ಫಲವಿಚಾರ ೧೨, ೧೮೦೦ ಯೋಗಗಳ ಲಕ್ಷಣ ಮತ್ತು ಫಲ ೧೩, ಚಂದ್ರಸಂಬಂಧವಾದ ಯೋಗಗಳು ೧೪, ಒಂದಕ್ಕಿಂತಲೂ ಹೆಚ್ಚು ಗ್ರಹಗಳು ಒಂದೇಕಡೆ ಸೇರಿದರೆ ಅವುಗಳ ಫಲ ೧೫, ಸನ್ಯಾಸಯೋಗಗಳು ೧೬, ನಕ್ಷತ್ರಫಲಗಳು ೧೭, ರಾಶಿಫಲಗಳು ೧೮, ರಾಸಿಗಳ ಫಲ ಮತ್ತು ಕೇರಳಿಯೋಕ್ತ ಫಲಗಳು ೧೯, ದೃಷ್ಟಿಫಲಗಳು ೨೦, ಭಾವಲಕ್ಷಣ ಮತ್ತು ಆ ಫಲಗಳ ವಿಚಾರ ೨೧, ಕ್ಷೇತ್ರಫಲಗಳು ೨೨, ಗ್ರಹಗಳ ಅವಸ್ಥೆ ಅಷ್ಟಕವರ್ಗ ಫಲ ೨೩, ಅನಿಷ್ಟಯೋಗಗಳು ಅವುಗಳಿಂದಾಗುವ ಫಲಗಳು ೨೪, ಸ್ತ್ರೀಜಾತಕ ಅದರ ಫಲಗಳು ೨೫, ಮರಣಕಾರಣ ಅದರ ಫಲಗಳು ೨೬, ನಷ್ಟಜಾತಕ ಬರಿಯುವ ರೀತಿ ೨೭, ದ್ರೇಕ್ಕಾಣವರ್ಣನೆ ಪ್ರಶ್ನೆಗೆ ಬೇಕಾದ ಸಹಾಯವಿಷಯ ೨೮, ಅನುಕ್ರಮಣಿಕಾಸಂಗ್ರಹ ಮತ್ತು ಗ್ರಂಥಕರ್ತರ ವಂಶವರ್ಣನೆ:—

ಮೇಲೆ ಹೇಳಿರುವಂತೆ ಬರೆಯಲ್ಪಟ್ಟ ಒಂದು ಪುಸ್ತಕ ತಮ್ಮ ಬಳಿಯಲ್ಲಿದ್ದರೆ ೧೦ ಜನ ಜ್ಯೋತಿಷ್ಯರಿದ್ದರೆ ಎಷ್ಟು ಅನುಕೂಲವೋ ಅಷ್ಟು ಅನುಕೂಲ. ಇದು ಶೂದ್ರರಿಗೂ, ಸ್ತ್ರೀಯರಿಗೂ ಧಾರಾಳವಾಗಿ ತಿಳಿಯುವಂತೆ ಉತ್ತಮಕಾಗದದಲ್ಲಿ ಪ್ರಿಂಟ್‌ಮಾಡಿಸಿದೆ, ಈ ತಿಂಗಳು ಆಖೈರಿನೊಳಗಾಗಿ ಆರ್ಡರ್ ಕೊಡುವವರಿಗೆ ೪—೦—೦ ರೂ. ವಿ. ಪಿ. ಛಾರ್ಜು ೦-೬-೦ ಆಣೆ ನಂತರ ೫-೦-೦ ರೂ. ಜಾಗ್ರತೆ ತರಿಸಿಕೊಳ್ಳಿ ನಂತರ ಈ ಬೆಲೆಗೆ ದೊರೆಯಲಾರದು.

ಇತರ ಪುಸ್ತಕಗಳು.

ಟೀಕಾಜೈಮಿನಿ ೯೩೦ ಪುಟ ೪-೦-೦ ರೂ. ಸಟೀಕಹರಿಕಥಾಮೃತಸಾರ ೩೪೪ ಪುಟ ೧-೪-೦ ರೂ. ಕನ್ನಡದ್ವಾದಶಸ್ಕಂಧ ಭಾಗವತ ೩-೦-೦ ರೂ. ಶುಕಸಪ್ತತಿ ೭೦ ಕಥೆ ಶುದ್ಧಪ್ರತಿ ೨-೦-೦ ರೂ. ೪ ಜನ ಘಟೀಕರರ ಕಥೆ ೦-೮-೦. ಸಟೀಕಾಭೋಜರಾಜಚರಿತ್ರೆ ೦-೮-೦. ಇವುಗಳಲ್ಲದೆ ನಮ್ಮಲ್ಲಿ ಯಾವಾಗ್ಲೂ ಕನ್ನಡ, ಸಂಸ್ಕೃತ, ತೆಲಗು ಗ್ರಂಥಗಳು ದೊರೆಯುತ್ತೆ.

ಟಿ. ರ್ಯ. ಕೃಷ್ಣಯ್ಯಸೆಟ್ಟಿ, ಬುಕ್‌ಡಿಪೋ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ
ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂ
ಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು
5 ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ-ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು—ಕೆಮ್ಮು-ನೆಗಡಿ- ದಿನಜ್ವರ-ಮೂರರಜ್ವರ ನಾಲ್ಕರಜ್ವರ- ಮಲೇರಿಯಾಜ್ವರ- ತಲೆನೋವು- ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ—ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳೆತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೨೫೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ. ಪಿ. ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರವಾಗುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಕೆ, ಮಲಬಂಧ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತತ್ಷಣ ಗೂಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ. ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ಡಿ॥

ಶುದ್ಧ ವನಸ್ಪತಿಯಿಂದಲೇ ತಯಾರಿಸಿದ
ಧಾತುಪೌಷ್ಟಿಕ ಲೇಹವು.

45

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತವುದ್ರೇಕವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರ ಕಫ, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲಿ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ ಒಬ್ಬ ಮನುಷ್ಯನಿಗೆ ೪೦ ತೋಲಿಯಿಂದ ೮೦ ತೊಲಿಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲಿಗೆ ರೂ. ೩-೮-೦. ೮೦ ತೊಲಿಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ:— ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲಾ ಉತ್ತರಕನಡಾ

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು:— ಚಂದ್ರಮೋರುತ ೦-೨-೦; ಚರಿತಾವೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಪೀಪರಿನಜತ್ರೈರಿ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೦-೬; ಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೧-೧೨-೦; ರಜನಿ ೦-೧೨-೦. 57

ಊದಬತ್ತಿಗಳು.

ನಾನಾವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೨-೦-೦, ೫-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೦-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್ ಸನ್ಸ್
ಸುಗಂಧದಾರಿ, ಮೈಸೂರು.
26

46 ಸಚಿತ್ರ ಶುಕಸಪ್ತತಿ ಕಥೆಗಳು
ರೂ. ೧-೮-೦ (೫೧೦ ಪುಟ) ಟಪಾಲು ಹಾಸಲು ೪ ಆಣೆ.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತೆ.
ರೂ ೧-೮-೦. (೫೩೬ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಗ್ವೈಖರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಲಿಚ್ಛೈಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಲ್ಲಾಸಯುದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೩೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧-೪-೦ ಟಪಾಲ್ ಹಾಸಲು ೩ ಆಣೆ.

ಈಗಲೇ ಬರೆ ನಿಮ್ಮ.ನಮ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು. 24

ಲೋಕೋಪಯುಕ್ತ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಊತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳೆವು, ಜ್ವರ, ನ ಜ್ಜುಹ್ಯರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ— ೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೨೦ ಕುಪ್ಪಿವರೆಗೆ ಪೋಸ್ಟೇಜು ೩ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮೀರಿಹೋದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, [illegible] ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. [illegible] ಯೊಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ [illegible] ರುವ ಸಿದ್ಧೌಷಧವಿದೊಂದೇ.

ಅನುಪಾನಪತ್ರಂ ಕೆಳಪರುವಾಗಿ ಇದರಲ್ಲಿದೆ. ಒಂದು ಬುಡ್ಡಿಯ ಬೆಲೆ [illegible]
ಟಪಾಲ್ ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವವೈದ್ಯಶಾಲಾ ಮೈಸೂರು.

೧೯೧೫ ನೆಯ ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.



ಶಾಯಿ ಇಳಿಯದ ಉತ್ತಮವಾದ ಕಾಗದ ಮುದ್ದಾದ ಮುದ್ರಣ. ಅನೇಕವಾದ ಹೊಸಸಂಗತಿಗಳಿವೆ.

೧ ನಂ—ಸಣ್ಣಸೈಜು ಸಾದಾ	೦-೪-೦
೨ ನಂ—ಪೆನ್ಸಿಲ್‌ಮುಚ್ಚಳವುಳ್ಳದು	೦-೬-೦
೩ ನಂ—ದೊಡ್ಡಸೈಜು ಸಾದಾ	೦-೬-೦
೪ ನಂ—ಪೆನ್ಸಿಲ್‌ಮುಚ್ಚಳವುಳ್ಳದು	೦-೮-೦

ಒಂದೇ ವಿಳಾಸಕ್ಕೆ ೧೧ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ

ಹೆಚ್ಚಾಗಿ ತರಿಸುವವರಿಗೆ ರೂಪಾಯಿ ೧ ಕ್ಕೆ ೦-೨-೦ ಕಮಿಷನ್ ದೊರೆಯುವುದು. ವಿಳಾಸ:—

ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.
5

S.U.N.& Co
BENARES CITY.
KASHI
VISHWESHWAR.

6

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ಸೀರೆ, ಜರಿಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯು. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ನ್ಯಾಯದರ್ಪಣ. 39

ಇದರಲ್ಲಿ ಪ್ರತಿಯೊಬ್ಬನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸೀಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸು, ಮನೆಗಳನ್ನು ಹಸ್ತ ಮಾಡಿಕೊಳ್ಳತಕ್ಕ ಕಾನೂನೂ, ಆಚೇಕೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ಪತ್ರೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ. ಬೆಲೆ ರೂ. 1-8-0. ವಿ. ಪಿ. ಮೂಲ್ಯ 1-12-0.

ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವದು, ಈ ಯಾವುದಾಗಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚುಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘುಮುಘುಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಧಾತು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವು ಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಪುರದು, ಹನೂರು ಪೋಸ್ಟ್
ಕೊಳ್ಳೇಗಾಲದ ತಾಲ್ಲೂಕು
35

೧೯೧೪ನೆಯ ಇಸವಿ ನವೆಂಬರ್ ತಾ॥ ೧ರಿಂದ ೧೯೧೪ನೆಯ ನವೆಂಬರ್ ತಾ॥ ೭ ರವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ಕಾರ್ತಿಕ ಶು॥ ಚತುರ್ದಶಿಯಿಂದ ಕಾರ್ತಿಕ ಬ॥ ಚೌತಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ತೇದಿ ತುಲಾ
1	¹ಭಾನು	ಚತು	47-57	ರೇವತಿ	29-26	16
2	²ಸೋ	ಹು	53-13	ಅಶ್ವಿನಿ	35-46	17
3	ಮಂ	ಪಾ	58 38	ಭರಣಿ	42-19	18
4	ಬುಧ	ಬಿದಿ	60-	ಕೃತ್ತಿ	48-50	19
5	ಗುರು	ಬಿದಿ	3-42	ರೋಹಿ	54-41	20
6	ಶುಕ್ರ	ತದಿ	8 4	ಮೃಗ	59-45	21
7	ಶನಿ	ಚೌ	11-25	ಆರ್ದ್ರಾ	60-	22

(1) ವೈಕುಂಠಚತುರ್ದಶೀ, ಜಯಲಕ್ಷ್ಮಣ್ಣೀಯವರ ಕುಮಾರ್ತೀ ವರ್ಧಂತೀ. (2) ರುದ್ರಸಾವರ್ಣಿಮನ್ವಾದಿಃ, ವ್ಯಾಸಪೂಜಾ, ಕಾರ್ತಿಕಸೋಮವಾರ.

ಮೈಸೂರ್ ವೈ. ನಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED. NO M 124

ಮೈಸೂರ್ ✵ ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧-೦-೦

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಶ್ಯತ್ವ ಸಹೃತ್ತಪೋಷರಾಪ್ಯಯಾಶ್ !
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಧೀಷ್ಟದಶೀಲ ನಾಕರಿಪುಸುತ್ಸುಸ್ತ್ಯಾಲಪಾಲಂಪಲಂ
ಸಿಮಾತೀತ ಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿಕೆಯುಂಸದಾಘರಿಗೆ ಗೌರೀಶಾನುಕಂಪೋಜ್ವಲಂ

ಅಂಚೆವೆಚ್ಚ ಸೇರಿ ೧-೪-೦

REGISTERED, NO M 124

ಸಂಪುಟ ೨೩) ಮೈಸೂರ್ ಸ್ಟಾರ್ ಸರ್ ೧೯೧೪ ನೆಯ ಇಸವಿ ನವಂಬರ್ ತಾರೀಖು ೮ನೆಯ ಭಾನುವಾರ. (ಸಂಚಿಕೆ [illegible]

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರಿಗೂ ಸ್ಕೂಲ್‌ಮಾಸ್ಟರ್‌ಗಳಿಗೂ ವಿನಂತಿ.

೧೯೧೫ ನೇ ಇಸ್ವಿಯ ಸಚಿತ್ರ ಕ್ಯಾಲೆಂಡರ್‌ಗಳು ಬಿಕರಿಗೆ ಸಿದ್ಧವಾಗಿವೆ ಕ್ರಯ ೧ ಕ್ಕೆ ೦-೦-೬ ಪೈ. ೫೦ ಕ್ಕೆ ೦-೧೧-೦ಆಣೆ ೧೦೦ ಕ್ಕೆ ೧-೫-೦ ಪ್ಯಾಕಿಂಗ್ ಪೋಸ್ಟೇಜು ಮಾಫಿ ೫೦ ಕ್ಯಾಲೆಂಡರ್‌ಗಳಿಗಿಂತಲೂ ಕಡಿಮೆಯಾಗಿ ಪೋಸ್ಟುಮೂಲಕ ರವಾನಿಸಲಾಗುವುದಿಲ್ಲಾ.

ಈ ಕ್ಯಾಲೆಂಡರಿನಲ್ಲಿ ಇಂಗ್ಲೀಷ್ ಮತ್ತೂ ಕನಡ ತಿಂಗಳೂ, ತಾರೀಖು, ವಾರ, ತಿಥಿ, ನಕ್ಷತ್ರ, ಆಯಾಯ ದಿವಸದ ವಿಶೇಷ ದಿನಗಳು ವಿಶಿಷ್ಟ ಹಬ್ಬ ದಿವಸಗಳೂ ಇರುವುದಲ್ಲದೆ ಮೈಸೂರ್ ಮಹಾರಾಜರವರ ಮತ್ತೂ ಯುವರಾಜರವರ ಭಾವಚಿತ್ರಗಳೂ ಮತ್ತೂ ಮೈಸೂರ್ ಸಂಸ್ಥಾನದ ಈಗಿನ ಹೊಸ ಅರಮನೆಯಲ್ಲಿ ನಡೆಯುವ ನವರಾತ್ರಿಮಹೋತ್ಸವದ ದರ್ಬಾರ್ ಸಹಿತ ಇರುವ ನಕ್ಷೆಯನ್ನೂ ಸಹ ನುಣುಪಾದ (ಗ್ಲೇಜ್‌ಪೇಪರ್) ಕಾಗದದಲ್ಲಿ ಅಂದವಾಗಿ ಪ್ರಿಂಟ್‌ಮಾಡಿಸಿ ಮೇಲ್ಕಂಡ ದರದಂತೆ ಬಹುಸುಲಭಬೆಲೆಗೆ ಕೊಡುತ್ತಲಿದ್ದೇವೆ ಯಾದಕಾರಣ ಈ ದಿವಸವೇ ಆರ್‌ಡರ್ ಕೊಟ್ಟು ತರಿಸಿಕೊಳ್ಳಿರಿ ಸ್ವಲ್ಪ ಪ್ರತಿಗಳುಮಾತ್ರ ಉಳಿದಿವೆ. ಬಿಕರಿಯಾದನಂತರಬರತಕ್ಕ ಆರ್‌ಡರ್‌ಗಳನ್ನೆಲ್ಲಾ ಹೋದವರುಸುದಂತೆ ಕ್ಯಾನ್ಸಲ್‌ಮಾಡಲಾಗುತ್ತೆ.

ಈಗತಾನೇ ಸೀಮೆಯಿಂದ ಬಂದಿರತಕ್ಕ ರಖಿಂವಾರ್ ವಾಚ್‌ಗಳ ಕ್ರಯದಪಟ್ಟಿ. 39



೧ ರಾಸ್ಕೋಪ್ ಸಿಸಸ್ಟಂಪೇಟೆಂಟ್‌ಸ್ವಿಸ್‌ಮೇಡ್‌ವಾಚ್	೧ ಕ್ಕೆ	೨-೮-೦
೨ ಗರ್ಟೈಂ ರೈಲ್ವೇ ರೆಗ್ಯುಲೇಟರ್ ವಾಚ್	೧ ಕ್ಕೆ	೩-೮-೦
೩ ಡಿಟೋ ನಮೂನೆ ಚೆಕ್ಕಸ್ರೈಜ್ ವಾಚ್	೧ ಕ್ಕೆ	೪-೪-೦
೪ ಡಿಟೋ ಚೆಕ್ಕಸ್ರೈಜ್ ಸ್ಪೆಷಲ್ ಸರ್ವೀಸ್‌ವಾಚ್	೧ ಕ್ಕೆ	೫-೮-೦
೫ ಜ್ಯಟಲ್‌ವರ್ಕ ಡ್ರಸ್ ವಾಚೆಂಬ ಅತ್ಯುತ್ತಮವಾದ ಲೀವರ್ ವಾಚ್	೧ ಕ್ಕೆ	೮-೧೨-೦
೬ ಡಿಟೋ ನಮೂನೆ ಕೆಂಪುಗಳನ್ನು ಕೆತ್ತಿರುವ ವಾಚ್	೧ ಕ್ಕೆ	೯-೪-೦
೭ ಪೀಕಾಕ್ ವಾಚೆಂಬ ತೆಳುವಾದ ಮತ್ತೂ ಗ್ಯಾರೆಂಟಿಯಾದ ವಾಚ್ (ಸಾವಿರಾರು ವಿಕ್ರಯ)	೧ ಕ್ಕೆ	೧೦-೮-೦
೮ ವಾರಕೊಂದಾವರ್ತಿ ಬೀಗಕೊಡುವ ನಿಕ್ಕಲ್ ಬೆಳ್ಳೀಕೇಸ್ ವಾಚ್	೧ ಕ್ಕೆ	೧೦-೮-೦
೯ ಡಿಟೋ ನಮೂನೆಯಲ್ಲಿ ಅಚ್ಚಬೆಳ್ಳೀಕೇಸಿನ ಚೆಕ್ಕ ಸ್ರೈಜ್ ವಾಚ್	೧ ಕ್ಕೆ	೧೫-೪-೦
೯ ೩೦ ಘಂಟೆಗೆ ಒಂದಾವರ್ತಿ ಬೀಗಕೊಡುವ ದೊಡ್ಡ ಬರ್ಮಾಟೈಂಪೀಸ್	೧ ಕ್ಕೆ	೧-೪-೦
೧೦ ಡಿಟೋ ನಮೂನೆ ಅಲಾರಂ ಟೈಂಪೀಸ್	೧ ಕ್ಕೆ	೨-೪-೦
೧೧ ಡಿಟೋ ನಮೂನೆಯಲ್ಲಿ ಘಂಟೆ ನಿಮುಷ ಸೆಕೆಂಡ್ ತೋರಿಸಿ ಅಲಾರಂ ಇದ್ದು ತಾರೀಖು ಸಹ ತೋರಿಸುವ ದೊಡ್ಡ ಟೈಂಪೀಸ್	೧ ಕ್ಕೆ	೩-೪-೦
೧೨ ಖಾತ್ರಿಯಾದ ಅನ್ಸೋನಿಯಾ "ಬಿ" ಟೈಂಪೀಸ್	೧ ಕ್ಕೆ	೨-೮-೦
೧೩ ಡಿಟೋ ಕಂಪೆನಿಯ ಅಲಾರಂಟೈಂಪೀಸ್ (ಬಹಳಮಜಬೂತಾದ್ದು) (ಸಾವಿರಾರುವಿಕ್ರಯ)	೧ ಕ್ಕೆ	೩-೮-೦
೧೪ ಅನ್ಸೋನಿಯಾ ಕಂಪೆನಿಯಲ್ಲಿ ತಯಾರಾದ ಘಂಟೆ, ಅರ್ಧಘಂಟೆ ಹೊಡೆದು ಅಲಾರಂ ಇರತಕ್ಕ ದೊಡ್ಡಟೈಂಪೀಸ್ (ಅನೇಕಜನ ವಿದ್ಯಾರ್ಥಿಗಳು ಇದನ್ನೇ ಉಪಯೋಗಿಸುತ್ತಲಿದಾರೆ)	೧ ಕ್ಕೆ	೬-೧೨-೦
೧೫ ಘಂಟೆ, ಅರ್ಧಘಂಟೆ ಹೊಡೆಯುವ ಕ್ಯಾರೇಜ್ ಕ್ಲಾ ಕೆಂಬ ಟೇಬಲ್ ಘಡಿಯಾರ	೧ ಕ್ಕೆ	೪-೧೨-೦
೧೬ ಡಿಟೋ ನಮೂನೆಯಲ್ಲಿ ಘಂಟೆ, ಅರ್ಧಘಂಟೆಯೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್	೧ ಕ್ಕೆ	೫-೪-೧
೧೭ ಡಿಟೋ ನಮೂನೆಯಲ್ಲಿ ಘಂಟೆಹೊಡೆಯುವದಕ್ಕೆ ಪ್ರತಿಯಾಗಿ ಗಾನಹಾಡುವ ಕ್ಲಾಕ್	೧ ಕ್ಕೆ	೫-೮-೦
೧೮ ಡಿಟೋ ನಮೂನೆಯಲ್ಲಿ ತಾವಿಷ್ಟಪಟ್ಟ ಟೈಂಮಿಗೆ ಕಾಲುಘಂಟೆಕಾಲ ಕರ್ಣಾನಂದವಾಗುವಂತೆ ಮೃದುಮಧುರ ಗಾನಮಾಡತಕ್ಕ ಕ್ಲಾಕ್	೧ ಕ್ಕೆ	೫-೮-೦
೧೯ ಅನ್ಸೋನಿಯಾ ಕಂಪೆನಿಯ ಲಿವರ್ ಕ್ಲಾಕೆಂಬ ಗೋಡೆಗೆ ತಗಲಿಸುವ (೮ ಮೂಲೆಯ) ಅಷ್ಟಕೋಣಾಕೃತಿಯ ಚೆಕ್ಕಸ್ರೈಜ್ ಕ್ಲಾಕ್	೧ ಕ್ಕೆ	೬-೮-೦

ರಖಿಂವಾರ್ ವಾಚ್ ಸರಪಣಿಗಳು.

ನಿಕ್ಕಲ್ ಬೆಳ್ಳಿಯ ವಾಚ್‌ಸರಪಣಿ	೧ ಕ್ಕೆ	೦-೧೨-೦
ಅಚ್ಚಬೆಳ್ಳಿಯ ಜೇಬಿನ ವಾಚ್‌ಸರಪಣಿ	೧ ಕ್ಕೆ	೩-೪-೦
ಅಚ್ಚಬೆಳ್ಳಿಯ ಕೊರಳಸರಪಣಿ	೧ ಕ್ಕೆ	೧-೪-೦
೧೮ ಕ್ಯಾರಟ್ಟು ಚಿನ್ನದ ವಾಚ್‌ಸರಪಣಿ	೧ ಕ್ಕೆ	೫-೮-೦
ವಾಚಿನ ಸರಪಣಿ ತುದಿಯಲ್ಲಿ ಹಾಕುವ ಅಚ್ಚಬೆಳ್ಳಿಯ ಶಾಶ್ವತವಾದ ಕ್ಯಾಲೆಂಡರ್ ಅಂದರೆ ಎಷ್ಟು ವರುಷಗಳ ವರಿಗಾದರೂ ತಾರೀಖು ನೋಡಬಹುದಾದ ಕ್ಯಾಲೆಂಡರ್ ಎಂದೆಂದಿಗೂಕೆಡತಕ್ಕದ್ದಲ್ಲಾ	೧ ಕ್ಕೆ	೧-೧೨-೦
ಡಿಟೋ ನಮೂನೆಯಲ್ಲಿ ೧೮ ಕ್ಯಾರಟ್ಟು ಚಿನ್ನದಿಂದ ತಯಾರಿಸಿದ್ದು	೧ ಕ್ಕೆ	೩-೪-೦

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ಒಂದುಸಾರಿ ಶಾಯಿತುಂಬಿದರೆ ೧೦,೦೦೦ ಶಬ್ದಗಳನ್ನು ಬರೆಯಬಹುದಾದ ಲೇಖಣಿಗಳು.

ಪ್ರತಿಯೊಂದಕ್ಕೂ ೧೪ ಕ್ಯಾರಟ್ಟು ಚಿನ್ನದ ನಿಬ್ಬು ಹಾಕಿದೆ.

ನೆಪ್ಚೂನ್ ೨೦೦ ನೇ ನಂ. ಪೆನ್	೧ ಕ್ಕೆ	೧-೧೪-೦
ನೆಪ್ಚೂನ್ ೨೦೫ ನೇ ನಂ. ಪೆನ್	೧ ಕ್ಕೆ	೨-೧೦-೦
ನೆಪ್ಚೂನ್ ೨೧೦ ನೇ ನಂ. ಪೆನ್	೧ ಕ್ಕೆ	೪-೨-೦

ಪ್ರತಿಯೊಂದು ಪೆನ್‌ತರಿಸಿ ಕೊಳ್ಳುವರಿಗೂ ೪ ಪದಾರ್ಥಗಳನ್ನು ಮುಫತ್ತಾಗಿ ರವಾನಿಸುತ್ತೇವೆ.

೧ ಪೆನ್‌ಗಳನ್ನಿಡತಕ್ಕ ಸುಂದರವಾದ ಪೆಟ್ಟಿಗೆ ೧.
೨ ಪೆನ್ನಿಗೆ ಶಾಯಿಹಾಕುವ ಗಾಜಿನಕೊಳವೆ ೧.
೩ ಪೆನ್‌ಗಳನ್ನು ಕ್ಲೀನ್‌ಮಾಡುವ ವಿಧಾನ ಮತ್ತೂ ಶಾಯಿಹಾಕುವ ವಿಧಾನ ಪ್ರಿಂಟಾಗಿರುವ ಚೀಟಿ ೧.
೪ ಪೆನನ್ನು ಜೇಬಿಗೆತಗಲಿಸುವ ಸುಂದರವಾದ ಕ್ಲಿಪ್ ೧.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೦-೨-೦
ಪರವಾದಿಗಜಾಂಕುಶತಾರಾವಳಿ	೦-೮-೦
ಶಿವಪೂಜಾವಿಧಿಃ	೦-೮-೦
ಚಾರುಶೀಲಚರಿತ್ರೆ	೦-೫-೦
ಸಟೀಕ ನಂದೀವ್ರತ	೬-೪-೦
ಸಟೀಕ ವಿವಾಹವಿಧಿ	೦-೩-೦
ವಿವೇಕಮಂಜರಿ [೨ನೆಯ ಭಾಗ]	೦-೩-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು.

158

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೬೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕಮಂಡಳಿ, ಮೈಸೂರು.

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು:— ಚಂದವೋರಾತ ೦-೨-೦; ಚರಿತಾಮೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಪೀಟರಿನಜತ್ರಿರಿ ೦-೨-೦; ಏಯೋಗಿನಿ ೦-೩-೦; ಉನ್ಮತ್ತೆ ೦-೨-೬; ಮಹಾಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೬-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೋಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦.

57

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೦-೧೨-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲ ೧ ಕ್ಕೆ ೦-೨-೦; ಹಸಿಗಂಧ ತೋಲ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಡಬ್ಬಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ ಎಲ್. ಉಪಾಧ್ಯಾಯ, ಅಂಡ್ ಸನ್ಸ್
ಸುಗಂಧಕಾರಿ, ಮೈಸೂರು.

26

46 ಸಚಿತ್ರ ಶುಕಸಪ್ತತಿ ಕಥೆಗಳು
ರೂ. ೧-೮-೦ (೫೧೦ ಪುಟ) ಟಪಾಲು ಹಾಸಲು ೪ ಆಣೆ.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ
ರೂ ೧-೮-೦. (೫೭೬ ಪುಟ)

ಸಚಿತ್ರ ವಿದ್ಯಾಮಂಜರಿಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಕ್ಚಾತುರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಬಿಚ್ಛೆಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಲ್ಲಾಸಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೩೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧-೪-೦ ಟಪಾಲ್ ಹಾಸಲು ೩ ಆಣೆ. ಈಗಲೇ ಬರೆಯಿರಿ. ನಮ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು. 24



ಲೋಕೋಪಕಾರಮಯುಚರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಬೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಊತ (ಬಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿ, ನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಂಜು ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ— ೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೩ ಆಣೆ.

ವೈಶ್ವಾನರಾಸವ. (ಕಾಲರಾ ಔಷಧಿ)

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ರೈ ವಿಷಾರಿತ-ದು ತೋರಿದಾಗಲೂ, ಅಶ್ವತ್ಥವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, [illegible] ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ [illegible] ಯಿಂದು ಬುದ್ಧಿಯು ನಿಮ್ಮಲ್ಲಿರಲಿ ಒಂದೊಂದು ಸಹಾಯವನ್ನು ಅಪೇಕ್ಷಿಸದೆ [illegible] ಪ್ಲೇಗಿನ [illegible] ಪಡಿಸುವ ಸಿದ್ಧ ವೈದ್ಯನಿದೊಂದೇ

ಅನುಪಾನಸಹಿತ ಕೊಡಬಹುದು. ಒಂದು ಬುದ್ದಿಯ ಬೆಲೆ [illegible]
ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವವೈದ್ಯಶಾಲಾ ಮೈಸೂರು.

೧೯೧೫ನೆಯ
ಶ್ರೀ ಸೀತಾರಾಘವ
ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.



ಶಾಯಿ ಇಳಿಯದ ಉತ್ತಮವಾದ ಕಾಗದ ಮುದ್ದಾದ ಮುದ್ರಣ. ಅನೇಕವಾದ ಹೊಸಸಂಗತಿಗಳಿವೆ.

೧ ನಂ—ಸಣ್ಣಸೈಜು ಸಾದಾ	೦-೪-೦
೨ ನಂ—ಪೆನ್ಸಿಲ್‌ಮುಚ್ಚಳವುಳ್ಳದು	೦-೬-೦
೩ ನಂ—ದೊಡ್ಡಸೈಜು ಸಾದಾ	೦-೬-೦
೪ ನಂ—ಪೆನ್ಸಿಲ್‌ಮುಚ್ಚಳವುಳ್ಳದು	೦-೮-೦

ಒಂದೇ ವಿಳಾಸಕ್ಕೆ ೧೧ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ

ಹೆಚ್ಚಾಗಿ ತರಿಸುವವರಿಗೆ ರೂಪಾಯಿ ೧ ಕ್ಕೆ ೦-೨-೦ ಕಮಿಷನ್ ದೊರೆಯುವುದು. ವಿಳಾಸ:—

ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.

5



6

ದೊಡ್ಡಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯು. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ನ್ಯಾಯದರ್ಪಣ. 39

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಅಚ್ಚೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ಪತ್ರಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ. ಬೆಲೆ ರೂ. 1-8-0. ವಿ. ಪಿ. ಮೂಲ್ಯ 1-12-0.

ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುವಾಗಿದ್ದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೇಡುಕಿಲ್ಲ. ಒಂದು ಚಿಟಿಕೆ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಧಾತು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಸೆಟ್ಟಿ,
ಗೋಪಸೆಟ್ಟಿಪುರದು, ಹನೂರು ಪೋಸ್ಟ್
ಕೊಳ್ಳೇಗಾಲದ ತಾಲ್ಲೂಕು

35

೧೯೧೪ನೆಯ ಇಸವಿ ನವೆಂಬರ್ ತಾ|| ೧ರಿಂದ ೧೯೧೪ನೆಯ ನವಂಬರ್ ತಾ|| ೭ ರವರೆಗೆ ಸಲ್ಲುವ ಶಾಲಿವಾಹನಶಕ ೧೮೩೬ ನೆಯ ಆನಂದನಾಮ ಸಂ|| ದ ಕಾರ್ತಿಕ ಶು|| ಚತುರ್ದಶಿಯಿಂದ ಕಾರ್ತಿಕ ಬ|| ಚೌತಿವರೆಗಿನ ಪಂಚಾಂಗ.

ತಾರೀ	ವಾರ	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ತೇದಿ ತುಲಾ
1	¹ಭಾನು	ಚತು	47-57	ರೇವತಿ	29-26	16
2	²ಸೋ	ಹು	53-13	ಅಶ್ವಿನಿ	35-46	17
3	ಮಂ	ಪಾ	58 38	ಭರಣಿ	42-19	18
4	ಬುಧ	ಬಿದಿ	60-	ಕೃತ್ತಿ	48-50	19
5	ಗುರು	ಬಿದಿ	3-42	ರೋಹಿ	54-41	20
6	ಶುಕ್ರ	ತದಿ	8 4	ಮೃಗ	59-45	21
7	ಶನಿ	ಚೌ	11-25	ಆದ್ರಾ	60-	22

(1) ವೈಕುಂಠಚತುರ್ದಶೀ, ಜಯಲಕ್ಷ್ಮಣ್ಣಿಯವರ ಕುಮಾರ್ತೀ ವರ್ಧಂತೀ. (2) ರುದ್ರಸಾವರ್ಣಿಮನ್ವಾದಿಃ, ವ್ಯಾಸಪೂಜಾ, ಕಾರ್ತಿಕಸೋಮವಾರ.

ಮೈಸೂರಿನ ಮೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED. NO M 124

ಮೈಸೂರ್ ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ವಾರ್ಷಿಕ ಚಂದಾ ೧-೦-೦

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಕ್ಷೈಕ್ಯಸತ್ಪ್ರವೃತ್ತಿಯೋಜರಾರ್ಯಾಯಾ!
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಧೀಶ್ವದಶೀಲ ನಾಕಲಿತಸಾಮ್ರಾಜ್ಯಾಭಿವೃದ್ಧ್ಯಾಕರಂ |
ಸಿಮಾತೀತ ಯಶಃಪ್ರತಾಪವಿಪುಲಂಸದ್ವೃತ್ತಮಾಲಾಕುಲಂ | ಪ್ರೇಮಂಬಿತ್ತ್ರಿಕೆಯುಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ॥

ಅಂಚೆವೆಚ್ಚ ಸೇರಿ ೧-೧೪-೦

REGISTERED. NO M 124

ಸಂಪುಟ ೨೩) ಮೈಸೂರ್ ಸ್ಟಾರ್ ಸೇ ೧೯೧೪ನೆಯ ಇಸವಿ ನವಂಬರ್ ತಾರೀಖು ೮ನೆಯ ಭಾನುವಾರ. (ಸಂಚಿಕೆ [illegible]

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರಿಗೂ ಸ್ಕೂಲ್‌ಮಾಸ್ಟರ್‌ಗಳಿಗೂ ವಿನಂತಿ.

೧೯೧೫ ನೇ ಇಸ್ವಿಯ ಸಚಿತ್ರ ಕ್ಯಾಲೆಂಡರ್‌ಗಳು ಬಿಕರಿಗೆ ಸಿದ್ಧವಾಗಿವೆ ಕ್ರಯ ೧ ಕ್ಕೆ ೦-೧-೬ ಪೈ. ೫೦ ಕ್ಕೆ ೦-೧೧-೦ಆಣೆ ೧೦೦ ಕ್ಕೆ ೧-೫-೦ ಪ್ಯಾಕಿಂಗ್ ಪೋಸ್ಟೇಜು ಮಾಫಿ ೫೦ ಕ್ಯಾಲೆಂಡರ್‌ಗಳಿಗಿಂತಲೂ ಕಡಿಮೆಯಾಗಿ ಪೋಸ್ಟುಮೂಲಕ ರವಾನಿಸಲಾಗುವುದಿಲ್ಲಾ.

ಈ ಕ್ಯಾಲೆಂಡರಿನಲ್ಲಿ ಇಙ್ಗ್ಲೀಷ್ ಮತ್ತೂ ಕನಡ ತಿಂಗಳೂ, ತಾರೀಖು, ವಾರ, ತಿಥಿ, ನಕ್ಷತ್ರ, ಆಯಾಯ ದಿವಸದ ವಿಶೇಷ ದಿನಸಗಳು ವಿಶಿಷ್ಟ ಹಬ್ಬ ದಿವಸಗಳೂ ಇರುವುದಲ್ಲದೆ ಮೈಸೂರ್ ಮಹಾರಾಜರವರ ಮತ್ತೂ ಯುವರಾಜರವರ ಭಾವಚಿತ್ರಗಳೂ ಮತ್ತೂ ಮೈಸೂರ್ ಸಂಸ್ಥಾನದ ಈಗಿನ ಹೊಸ ಅರಮನೆಯಲ್ಲಿ ನಡೆಯುವ ನವರಾತ್ರಿಮಹೋತ್ಸವದ ದರ್ಬಾರ್ ಸಹಿತ ಇರುವ ನಕ್ಷೆಯನ್ನೂ ಸಹ ನುಣುಪಾದ (ಗ್ಲೇಜ್‌ಪೇಪರ್) ಕಾಗದದಲ್ಲಿ ಅಂದವಾಗಿ ಪ್ರಿಂಟ್‌ಮಾಡಿಸಿ ಮೇಲ್ಕಂಡ ದರದಂತೆ ಬಹುಸುಲಭಬೆಲೆಗೆ ಕೊಡುತ್ತಲಿದ್ದೇವೆ ಯಾದಕಾರಣ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ ಸ್ವಲ್ಪ ಪ್ರತಿಗಳುಮಾತ್ರ ಉಳಿದಿವೆ. ಬಿಕರಿಯಾದನಂತರಬರತಕ್ಕ ಆರ್ಡರ್‌ಗನ್ನೆಲ್ಲಾ ಹೋದವರುಸದಂತೆ ಕ್ಯಾನ್ಸಲ್‌ಮಾಡಲಾಗುತ್ತೆ.

ಈಗತಾನೇ ಸೀಮೆಯಿಂದ ಬಂದಿರತಕ್ಕ ರಖಂವಾರ್ ವಾಚ್‌ಗಳ ಕ್ರಯದಪಟ್ಟಿ. 39



೧ ರಾಸ್ಕೋಪ್ ಸಿಸಸ್ಟಂಪೇಟೆಂಟ್‌ಸ್ವಿಸ್‌ಮೇಡ್‌ವಾಚ್	೧ ಕ್ಕೆ	೨-೮-೦
೨ ಗನ್‌ಟೈಂ ರೈಲ್ವೇ ರೆಗ್ಯುಲೇಟರ್ ವಾಚ್	೧ ಕ್ಕೆ	೩-೮-೦
೩ ಡಿಟೋ ನಮೂನೆ ಚಿಕ್ಕಸೈಜ್ ವಾಚ್	೧ ಕ್ಕೆ	೪-೪-೦
೪ ಡಿಟೋ ಚಿಕ್ಕಸೈಜ್ ಸ್ಪೆಷಲ್ ಸರ್ವೀಸ್‌ವಾಚ್	೧ ಕ್ಕೆ	೫-೮-೦
೪ ಜರ್ಮನ್‌ವರ್ಕ ಡ್ರಸ್ ವಾಚೆಂಬ ಅತ್ಯುತ್ತಮವಾದ ಲೀವರ್ ವಾಚ್	೧ ಕ್ಕೆ	೮-೧೨-೦
೫ ಡಿಟೋ ನಮೂನೆ ಕೆಂಪುಗಳನ್ನು ಕೆತ್ತಿರುವ ವಾಚ್	೧ ಕ್ಕೆ	೯-೪-೦
೬ ಪೀಕಾಕ್ ವಾಚೆಂಬ ತೆಳುವಾದ ಮತ್ತೂ ಗ್ಯಾರೆಂಟಿಯಾದ ವಾಚ್ (ಸಾವಿರಾರು ವಿಕ್ರಯ)	೧ ಕ್ಕೆ	೧೦-೮-೦
೭ ವಾರಕೊಂದಾವರ್ತಿ ಬೀಗಕೊಡುವ ನಿಕ್ಕಲ್ ಬೆಳ್ಳೀಕೇಸ್ ವಾಚ್	೧ ಕ್ಕೆ	೧೦-೮-೦
೮ ಡಿಟೋ ನಮೂನೆಯಲ್ಲಿ ಅಚ್ಚಬೆಳ್ಳೀಕೇಸಿನ ಚಿಕ್ಕ ಸೈಜ್ ವಾಚ್	೧ ಕ್ಕೆ	೧೫-೪-೦
೯ ೩೦ ಘಂಟೆಗೆ ಒಂದಾವರ್ತಿ ಬೀಗಕೊಡುವ ದೊಡ್ಡ ಬರ್ಮಾಟೈಂಪೀಸ್	೧ ಕ್ಕೆ	೧-೪-೦
೧೦ ಡಿಟೋ ನಮೂನೆ ಅಲಾರಂ ಟೈಂಪೀಸ್	೧ ಕ್ಕೆ	೨-೪-೦
೧೧ ಡಿಟೋ ನಮೂನೆಯಲ್ಲಿ ಘಂಟೆ ನಿಮಿಷ ಸೆಕೆಂಡ್ ತೋರಿಸಿ ಅಲಾರಂ ಇದ್ದು ತಾರೀಖು ಸಹ ತೋರಿಸುವ ದೊಡ್ಡ ಟೈಂಪೀಸ್	೧ ಕ್ಕೆ	೩-೪-೦
೧೨ ಖಾತ್ರಿಯಾದ ಅನ್‌ಸೋನಿಯಾ "ಬಿ" ಟೈಂಪೀಸ್	೧ ಕ್ಕೆ	೨-೮-೦
೧೩ ಡಿಟೋ ಕಂಪೆನಿಯ ಅಲಾರಂಟೈಂಪೀಸ್ (ಬಹಳಮಜಬೂತಾದ್ದು) (ಸಾವಿರಾರುವಿಕ್ರಯ)	೧ ಕ್ಕೆ	೩-೮-೦
೧೪ ಅನ್‌ಸೋನಿಯಾ ಕಂಪೆನಿಯಲ್ಲಿ ತಯಾರಾದ ಘಂಟೆ, ಅರ್ಧ ಘಂಟೆ ಹೊಡೆದು ಅಲಾರಂ ಇರತಕ್ಕ ದೊಡ್ಡಟೈಂಪೀಸ್ (ಅನೇಕಜನ ವಿದ್ಯಾರ್ಥಿಗಳು ಇದನ್ನೇ ಉಪಯೋಗಿಸುತ್ತಲಿದ್ದಾರೆ)	೧ ಕ್ಕೆ	೬-೧೨-೦
೧೫ ಘಂಟೆ, ಅರ್ಧಘಂಟೆ ಹೊಡೆಯುವ ಕ್ಯಾರೇಜ್ ಕ್ಲಾಕೆಂಬ ಟೇಬಲ್ ಘಡಿಯಾರ	೧ ಕ್ಕೆ	೪-೧೨-೦
೧೬ ಡಿಟೋ ನಮೂನೆಯಲ್ಲಿ ಘಂಟೆ, ಅರ್ಧಘಂಟೆಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್	೧ ಕ್ಕೆ	೫-೪-೦
೧೭ ಡಿಟೋ ನಮೂನೆಯಲ್ಲಿ ಘಂಟೆಹೊಡೆಯುವದಕ್ಕೆ ಪ್ರತಿಯಾಗಿ ಗಾನಹಾಡುವ ಕ್ಲಾಕ್	೧ ಕ್ಕೆ	೫-೮-೦
೧೮ ಡಿಟೋ ನಮೂನೆಯಲ್ಲಿ ತಾವಿಷ್ಟಪಟ್ಟ ಟೈಂಮಿಗೆ ಕಾಲುಘಂಟೆಕಾಲ ಕರ್ಣಾನಂದವಾಗುವಂತೆ ಮೃದುಮಧುರ ಗಾನಮಾಡತಕ್ಕ ಕ್ಲಾಕ್	೧ ಕ್ಕೆ	೫-೮-೦
೧೯ ಅನ್‌ಸೋನಿಯಾ ಕಂಪೆನಿಯ ಲಿವರ್ ಕ್ಲಾಕೆಂಬ ಗೋಡೆಗೆ ತಗಲಿಸುವ (೮ ಮೂಲೆಯ) ಅಷ್ಟಕೋಣಾಕೃತಿಯ ಚಿಕ್ಕಸೈಜ್ ಕ್ಲಾಕ್	೧ ಕ್ಕೆ	೬-೮-೦

ರಖಂವಾರ್ ವಾಚ್ ಸರಪಣಿಗಳು.

ನಿಕ್ಕಲ್ ಬೆಳ್ಳಿಯ ವಾಚ್‌ಸರಪಣಿ	೧ ಕ್ಕೆ	೦-೧೨-೦
ಅಚ್ಚಬೆಳ್ಳಿಯ ಜೇಬಿನ ವಾಚ್‌ಸರಪಣಿ	೧ ಕ್ಕೆ	೩-೪-೦
ಅಚ್ಚಬೆಳ್ಳಿಯ ಕೊರಳಸರಪಣಿ	೧ ಕ್ಕೆ	೧-೪-೦
೧೮ ಕ್ಯಾರಟ್ಟು ಚಿನ್ನದ ವಾಚ್‌ಸರಪಣಿ	೧ ಕ್ಕೆ	೫-೮-೦
ವಾಚಿನ ಸರಪಣಿ ತುದಿಯಲ್ಲಿ ಹಾಕುವ ಅಚ್ಚಬೆಳ್ಳಿಯ ಶಾಶ್ವತವಾದ ಕ್ಯಾಲೆಂಡರ್ ಅಂದರೆ ಎಷ್ಟು ವರುಷಗಳ ವರಿಗಾದರೂ ತಾರೀಖು ನೋಡಬಹುದಾದ ಕ್ಯಾಲೆಂಡರ್ ಎಂದೆಂದಿಗೂ ಕೆಡತಕ್ಕದ್ದಲ್ಲಾ	೧ ಕ್ಕೆ	೧-೧೨-೦
ಡಿಟೋ ನಮೂನೆಯಲ್ಲಿ ೧೮ ಕ್ಯಾರಟ್ಟು ಚಿನ್ನದಿಂದ ತಯಾರಿಸಿದ್ದು	೧ ಕ್ಕೆ	೩-೪-೦

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ಒಂದುಸಾರಿ ಶಾಯಿತುಂಬಿದರೆ ೧೦,೦೦೦ ಶಬ್ದಗಳನ್ನು ಬರೆಯಬಹುದಾದ ಲೇಖಣಿಗಳು.

ಪ್ರತಿಯೊಂದಕ್ಕೂ ೧೪ ಕ್ಯಾರಟ್ಟು ಚಿನ್ನದ ನಿಬ್ಬು ಹಾಕಿದೆ.

ನೆಪ್ಚೂನ್ ೨೦೦ ನೇ ನಂ. ಪೆನ್	೧ ಕ್ಕೆ	೧-೧೪-೦
ನೆಪ್ಚೂನ್ ೨೫ ನೇ ನಂ. ಪೆನ್	೧ ಕ್ಕೆ	೨-೧೦-೦
ನೆಪ್ಚೂನ್ ೨೧೧ ನೇ ನಂ. ಪೆನ್	೧ ಕ್ಕೆ	೪-೨-೦

ಪ್ರತಿಯೊಂದು ಪೆನ್ ತರಿಸಿ ಕೊಳ್ಳುವರಿಗೂ ೪ ಪದಾರ್ಥಗಳನ್ನು ಮುಫತ್ತಾಗಿ ರವಾನಿಸುತ್ತೇವೆ.

೧ ಪೆನ್‌ಗಳನ್ನಿಡತಕ್ಕ ಸುಂದರವಾದ ಪೆಟ್ಟಿಗೆ ೧.
೨ ಪೆನ್ನಿಗೆ ಶಾಯಿಹಾಕುವ ಗಾಜಿನಕೊಳವೆ ೧.
೩ ಪೆನ್‌ಗಳನ್ನು ಕ್ಲೀನ್‌ಮಾಡುವ ವಿಧಾನ ಮತ್ತೂ ಶಾಯಿಹಾಕುವ ವಿಧಾನ ಪ್ರಿಂಟಾಗಿರುವ ಚೀಟಿ ೧.
೪ ಪೆನನ್ನು ಜೇಬಿಗೆತಗಲಿಸುವ ಸುಂದರವಾದ ಕ್ಲಿಪ್ ೧.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧-೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಶಿವಪೂಜಾವಿಧಿ	೦-೮-೦
ಚಾರುಶೀಲಚರಿತ್ರೆ	೦-೫-೦
ಸಟೀಕ ನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೩-೦
ವಿವೇಕಮಂಜರಿ [೨ನೆಯ ಭಾಗ]	೦-೩-೦
ವ್ರತಪಂಚಕ	೦-೨-೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು.

158

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೬೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲ-ಕರಣಹಸುಗೆ-ಪಂಚೇಕರಣ-ಕಾಲಜ್ಞಾನ-ಮೊದಲಾದ ವಿಷಯುಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿ.— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸುತ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗ ಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕಮಂಡಲಿ, ಮೈಸೂರು.

ತುರ್ಕಿಯು ಯುದ್ಧಕ್ಕೆ ನಿಂತಿತು.

ತುರ್ಕಿಗೂ ಇಂಗ್ಲೆಂಡಿಗೂ ಯುದ್ಧವು ಪ್ರಾಪ್ತವಾಯಿತೆಂದು ಇದರಮೂಲಕ ಸರ್ವರೂ ತಿಳಿದುಕೊಳ್ಳಬೇಕೆಂದು ಇಂಡ್ಯಾಸರ್ಕಾರದವರು ಕಳೆದ ತಾ॥ ೧ ರಲ್ಲಿ ಈ ಕೆಳಗಣ ಪ್ರಕಟನೆಯನ್ನು ಮಾಡಿದ್ದಾರೆ. ರಷ್ಯಾಕ್ಕೆ ಸೇರಿದ ಒಡೆಸ್ಸಾದಲ್ಲಿರುವ ಇಂಗ್ಲೀಷ್‌ರಾಯಭಾರಿಯು ಕಳೆದ ತಿಂಗಳು ತಾ॥ ೨೯ ರಲ್ಲಿ ಈ ಕೆಳಗಣ ವಾರ್ತೆಯನ್ನು ತಂತಿಯಮೂಲಕ ಕಳುಹಿದನು. ಏನೆಂದರೆ—ಈ ದಿನ ಬೆಳಿಗ್ಗೆ ೩-೩ ತುರ್ಕಿಯವರ ಟಾರ್ಪೆಡೋಬೋಟುಗಳು ಒಡಿಸ್ಸಾರೇವೆಯ ಮೇಲೆ ಬಿದ್ದು ಹಾರ್ಬರಿನಲ್ಲಿದ್ದ ರಷ್ಯನರ ಡನೆಟ್ಸ್ ಎಂಬ ಫಿರಂಗಿಯ ಹಡಗನ್ನು ಮುಳುಗಿಸಿಬಿಟ್ಟವು. ಕಳಾಸಿಗಳಲ್ಲಿ ಕೆಲರಿಗೆ ಏಟುಬಿದ್ದಿರುವುದು. ಕೆಲರು ಸತ್ತುಹೋದರು. ರಷ್ಯನರ ಏಟಿಯಾಜು-ಲಿಯಾಜೆರಫ್-ವಾಂಕಾಕು-ಎಂಬ ಹಡಗುಗಳಿಗೆ ಬಹಳ ನಷ್ಟವುಂಟಾಗಿದೆ. ಫ್ರೆಂಚರ "ಫ್ರೇಜ್ಯುಗಲ್" ಎಂಬ ಹಡಗಿಗೂ ಕೂಡ ನಷ್ಟವುಂಟಾಗಿದೆ. ಅದರಲ್ಲಿನ ಇಬ್ಬರು ಕಳಾಸಿಗಳು ಸತ್ತರು. ಒಡೆಸ್ಸಾಪಟ್ಟಣದ ಮೇಲೆ ಫಿರಂಗಿಗುಂಡುಗಳನ್ನು ಹಾರಿಸಿದರು. ಇದರಿಂದ ಅಲ್ಲಿನ ಸಕ್ಕರೆ ಕಾರ್ಖಾಲಯದಲ್ಲಿ ಕೆಲಜನರು ಸತ್ತರು. ಈ ಅನಾಹುತವನ್ನು ಮಾಡಿದ ಹಡಗುಗಳು ತುರ್ಕಿಯವರವು ಎಂದು ಒಡೆಸ್ಸಾದ ಗವರ್ನರು ಹೇಳುತ್ತಾರೆ. ಎಂಬುದಾಗಿ. ಇದಲ್ಲದೆ ಕಾನ್‌ಸ್ಟಾಂಟಿನೋಪಲ್‌(ತುರ್ಕಿಯ ರಾಜಧಾನಿ) ಬಳಿಯಲ್ಲಿ ನಿಂತಿದ್ದ ರಷ್ಯನರ ೧ ಹಡಗು ಕೂಡ ಮುಳುಗಿಸಲ್ಪಟ್ಟಿತೆಂದೂ, ಒಡೆಸಿಯಾ ಎಂಬ ರಷ್ಯಾದ ಹಡಗಿನ ಮೇಲೆ ತುರ್ಕಿಯವರ ಯುದ್ಧದ ಹಡಗುಗಳು ಬಿದ್ದುವೆಂದೂ ಗೊತ್ತಾಗುತ್ತದೆ. ರಷ್ಯಾದೊಡನೆ ಯುದ್ಧವನ್ನು ಪ್ರಕಟಿಸದೆಯೂ, ಇಂಥ ಅನಾಹುತವನ್ನು ಮಾಡುವುದಕ್ಕೆ ಯಾವ ವಿಧವಾದ ಕಾರಣವೂ ಇಲ್ಲದೆಯೂ ತುರ್ಕಿಯವರು ರಷ್ಯನ್ನರ ಮೇಲೆಬಿದ್ದರು. ಇಂಗ್ಲೆಂಡಿನೊಡನೆ ಸ್ನೇಹದಲ್ಲಿರುವ ರಷ್ಯಾವನ್ನು ಹೀಗೆ ಮಾಡುವುದರಿಂದ ಇಂಗ್ಲೆಂಡು-ತುರ್ಕಿ ಪ್ರಭುತ್ವಗಳ ಸಂಬಂಧಗಳು ಕೆಟ್ಟುಹೋಗಬಹುದು. ಆದುದರಿಂದ ಜರ್ಮನಿಯವರ ಪ್ರೋತ್ಸಾಹದಿಂದ ನಡೆಯಿಸುತ್ತಿರುವ ತುರ್ಕಿಯ ತೊಂದರೆಗಾಕರವಾದ ಈ ದುಡುಕಿನ ಕೆಲಸಗಳನ್ನು ಭರತಖಂಡದಲ್ಲಿರುವ ಪ್ರಜೆಗಳಿಗೂ ಪ್ರಭುಗಳಿಗೂ ಸಹ ತಿಳಿಯಪಡಿಸುವುದು ಉಚಿತವಾದುದೆಂದು ತಿಳಿದು ವೈಸ್ರಾಯರವರು ಈ ಕೆಳಗಣ ವಿಷಯವನ್ನು ತಿಳಿಯಪಡಿಸುತ್ತಾರೆ:—

ಬ್ರೆಸ್ಲಾ-ಗೋಬೇನ್ ಎಂಬ ಜರ್ಮನರ ಯುದ್ಧದ ಹಡಗುಗಳ ವಿಷಯವಾಗಿ ತುರ್ಕಿಯವರು ಅವಲಂಬಿಸಿದ ಚರ್ಯೆಯು ಲಂಡನ್-ಪ್ಯಾರಿಸ್-ಪೆಟ್ರೋಗ್ರೇಡ್ ಪಟ್ಟಣಗಳಲ್ಲಿ ಅನುಮಾನವನ್ನು ಹುಟ್ಟಿಸಿತು. ಇವೆರಡು ಹಡಗುಗಳೂ ಮಧ್ಯಧರಾಸಮುದ್ರದಲ್ಲಿರುವ ಇಂಗ್ಲೀಷು-ಫ್ರೆಂಚರವರ ಹಡಗುಗಳಿಂದ ತಪ್ಪಿಸಿಕೊಂಡು ಬಂದು ಡಾರ್ಡನಲ್ಸ್ ಜಲಸಂಧಿಯಲ್ಲಿ ಅಡಗಿಕೊಂಡವು. ಅಂತರ್ಜಾತೀಯ ಧರ್ಮವನ್ನನುಸರಿಸಿಯೂ ಒಪ್ಪಂದಗಳನ್ನನುಸರಿಸಿಯೂ ನಡೆಯುವುದಾದರೆ ಈ ಹಡಗುಗಳನ್ನು ತುರ್ಕಿಸರ್ಕಾರದವರು ಎತ್ತಲೂ ಕದಲಾಡಗೊಡಿಸದೆ ತಡೆದು ನಿಲ್ಲಿಸಿ ಯುದ್ಧವು ಕೊನೆಮುಟ್ಟುವವರೆಗೂ ಅವುಗಳಲ್ಲಿರುವ ಕಲಾಸಿಗಳನ್ನು ಅವರ ದೇಶಕ್ಕೆ ಕಳುಹಿಸಿ ಕೊಡಬೇಕಾಗಿದ್ದಿತು. ಅಥವಾ ೨೪ ಗಂಟೆಗಳ ಹೊತ್ತು ತಮ್ಮ ರೇವೆಯಲ್ಲಿ ನಿಲ್ಲಿಸಿಕೊಂಡಿದ್ದು ಬಳಿಕ ಹೊರಟುಹೋಗಿರೆಂದು ಅವುಗಳಿಗೆ ತಿಳಿಯಿಸಿಬಿಡಬೇಕಾಗಿತ್ತು. ಆದರೆ ತುರ್ಕಿಯವರು ಹೀಗೆ ಮಾಡದೆ ಈ ಹಡಗುಗಳಿಗೆ ಅವಲಂಬನೆಯಿತ್ತು ಅವುಗಳು ಒಂದು ಫ್ರೆಂಚರ ಹಡಗಿನ ಮೇಲೆಬಿದ್ದಾಗ ಅದನ್ನು ನೋಡಿಕೊಂಡೂ ಸುಮ್ಮನಿದ್ದರು. ಬಳಿಕ ತುರ್ಕಿಯವರು ತಾವು ಈ ಹಡಗನ್ನು ಕ್ರಯಕ್ಕೆ ಕೊಂಡೆವೆಂದು ಪ್ರಕಟಿಸಿದರು. ಈ ಹಡಗುಗಳ ಮೇಲೆ ಜರ್ಮನ್ ಕಳಾಸಿಗಳನ್ನೇ ಇಟ್ಟು, ತುರ್ಕಿಯ ಯುದ್ಧನೌಕಾಸೇನೆಗೆ ಅಡ್ಮಿರಲ್ಲಾಗಿದ್ದ ಇಂಗ್ಲೀಷ್ ಅಧಿಕಾರಿಯನ್ನು ಕೆಲಸದಿಂದ ಬಿಡುಗಡೆಮಾಡಿದರು.

ಇಷ್ಟೇ ಅಲ್ಲದೆ ಡಾರ್ಡನಲ್ಸ್ ಜಲಸಂಧಿಯ ಮಾರ್ಗವನ್ನು ಮದ್ದಿನ ಗೋಳಗಳಿಂದ ತುಂಬಿ ಆ ಮಾರ್ಗದಲ್ಲಿ ಸಂಚರಿಸುವ ಮತ್ತೂ ಕಪ್ಪುಸಮುದ್ರ ಮಾರ್ಗದಿಂದ ಬರುವ ಇಂಗ್ಲೀಷ್‌ವ್ಯಾಪಾರದ ಹಡಗುಗಳನ್ನು, "ಮಾರ್ಗದಲ್ಲಿ ಮದ್ದಿನ ಗೋಳಗಳಿವೆ, ಅದುಕಾರಣ ಹೋಗುವುದಕ್ಕೆ ಅವಕಾಶವಿಲ್ಲ" ಎಂದು ಒಂದು ಕಾರಣವನ್ನೂ, "ತುರ್ಕಿಯವರು ಯುದ್ಧಪ್ರಯತ್ನವನ್ನು ಮಾಡುತ್ತಿದ್ದಾರೆ; ಸರಕುಗಳು ಬೇಕಾಗಿವೆ" ಎಂದು ಮತ್ತೊಂದು ಕಾರಣವನ್ನೂ ಹೇಳಿ ತಡೆದುಬಿಟ್ಟರು. ತಟಸ್ಥವಾಗಿರುವ ದೇಶವು ಇಂಗ್ಲೀಷರ ವ್ಯಾಪಾರವಿಷಯದಲ್ಲಿ ಸಲ್ಲದಸಂಬಂಧವನ್ನು ಉಂಟುಮಾಡಿಕೊಳ್ಳುವುದು ದೊಡ್ಡ ಅನ್ಯಾಯವು. ಇದರಿಂದ ಇಂಗ್ಲೀಷ್‌ವರ್ತಕರಿಗೂ, ಸರಕುಗಳನ್ನು ಕಳುಹಿಸುವವರಿಗೂ ದೊಡ್ಡ ನಷ್ಟವನ್ನುಂಟುಮಾಡಿದುದು ಮಾತ್ರವೇ ಅಲ್ಲದೆ ಕಪ್ಪುಸಮುದ್ರದಲ್ಲಿ ೬೦-೭೦ ಇಂಗ್ಲೀಷ್‌ವ್ಯಾಪಾರದ ಹಡಗುಗಳನ್ನು ಅಲ್ಲಾಡದಂತೆ ನಿಲ್ಲಿಸಿಬಿಟ್ಟಿದ್ದಾರೆ. ಗೋಬೆನ್-ಬ್ರೆಸ್ಲಾ ಎಂಬ ಯುದ್ಧದ ಹಡಗುಗಳು ಕಪ್ಪುಸಮುದ್ರದಲ್ಲಿದ್ದರೆ ಅವುಗಳಮೇಲೆ ಬಿದ್ದು ಧ್ವಂಸಮಾಡುವವರಿಲ್ಲ. ಡಾರ್ಡನಲ್ಸ್ ಜಲಸಂಧಿಯು ಅಂತರ್ಜಾತೀಯರ ಒಡಂಬಡಿಕೆಗಳಿಗೆ ವಿರುದ್ಧವಾಗಿ ಮುಚ್ಚಲ್ಪಟ್ಟಿದೆ. ಇದಲ್ಲದೆ ಬಾಗ್ದಾದು-ಮೆಸಪೊಟೋಮಿಯಾಗಳಲ್ಲಿರುವ ದೊಡ್ಡದೊಡ್ಡ ತುರ್ಕಿಯಧಿಕಾರಿಗಳು ಇಂಗ್ಲೀಷ್ ಪ್ರಜೆಗಳನ್ನು ಬಾಧಿಸುತ್ತಲೂ, ಪ್ರಜೆಗಳಿಗೆ ಆಂಗ್ಲಪ್ರಭುತ್ವದಮೇಲೂ ಅವರ ಮಿತ್ರಗಳಾದ ರಷ್ಯಾ ಫ್ರಾನ್ಸು ದೇಶಗಳಮೇಲೂ ಬಹಿರಂಗವಾಗಿ ತುರ್ಕಿಯವರು ದ್ವೇಷವನ್ನು ಉಂಟುಮಾಡಿಸುತ್ತಲೂ ಇದ್ದಾರೆ. ತುರ್ಕಿಯು ಹೀಗೆ ಕೋಪವನ್ನೆಬ್ಬಿಸುವ ಕಾರ್ಯಗಳನ್ನು ಮಾಡಿದರೂ "ನೀವು ಗೋಬೆನ್-ಬ್ರೆಸ್ಲಾ ಹಡಗುಗಳ ಮೇಲಿರುವ ಜರ್ಮನ್ ಕಳಾಸಿಗಳನ್ನು ತೊಲಗಿಸಿ, ನಿಮ್ಮ ದೇಶೀಯರನ್ನೇ ಅವುಗಳ ಕೆಲಸಕ್ಕೆ ನಿಯಮಿಸಿ, ಇಂಗ್ಲೀಷ್ ವ್ಯಾಪಾರದ ಹಡಗುಗಳ ಸಂಚಾರಕ್ಕೆ ತೊಂದರೆಯುಂಟಾಗದಂತೆ ಇದ್ದು, ತಟಸ್ಥದೇಶದ ಧರ್ಮಗಳನ್ನು ನ್ಯಾಯವಾಗಿ ನೀವು ಕಾಪಾಡಿಕೊಳ್ಳುವುದಾದರೆ, ನೀವು ಇದುವರೆಗೆ ಉಂಟುಮಾಡಿರುವ ಕೋಪವನ್ನೆಲ್ಲಾ ಮರೆತುಬಿಟ್ಟು, ನಿಮ್ಮ ಗೌರವಸ್ವಾತಂತ್ರ್ಯಗಳಿಗೆ ಭಂಗವುಂಟಾಗದಂತೆ ಕಾಪಾಡುವೆವು" ಎಂದು ಆಂಗ್ಲಪ್ರಭುತ್ವದವರು ತುರ್ಕಿಗೆ ತಿಳಿಯಪಡಿಸಿದರು. ಮತ್ತೂ ಯುದ್ಧವು ಮುಗಿದು ಪುನಃ ಶಾಂತಿಸ್ಥಾಪನೆಗಾಗಿ ಒಡಂಬಡಿಕೆಗಳು ಬರೆಯಲ್ಪಡುವಾಗ ತುರ್ಕಿದೇಶದ ಸ್ವಾತಂತ್ರ್ಯಕ್ಕೂ ಗೌರವಕ್ಕೂ ಸಂಪತ್ತಿಸ್ಥಿತಿಗೂ ಭಂಗವುಂಟಾಗದಿರುವ ರೀತಿಯಲ್ಲಿ ನೋಡಿಕೊಳ್ಳುವೆವು" ಎಂದೂ ಆಂಗ್ಲಪ್ರಭುತ್ವದವರು ನಂಬುಗೆಯನ್ನು ಹೇಳಿದರು. ಇಷ್ಟು ಹೇಳಿದರೂ ತುರ್ಕಿಯು ಕೇಳದೆ ಬರಬರುತ್ತ ಇಂಗ್ಲೆಂಡಿಗೆ ಕೋಪವನ್ನು ಹುಟ್ಟಿಸುವ ಕೆಲಸವನ್ನು ಮಾಡುತ್ತಿದೆ.

ಮತ್ತೂ ಸಿರಿಯಾದಲ್ಲಿ ಯುದ್ಧಪ್ರಯತ್ನಗಳು ಜರುಗುತ್ತಿವೆಯೆಂದೂ ಕೂಡ ಆಂಗ್ಲಪ್ರಭುತ್ವದವರಿಗೆ ತಿಳಿಯಬಂದಿದೆ. ಈ ಪ್ರಯತ್ನಗಳು ಈಜಿಪ್ಟಿನಮೇಲೆ ಬೀಳುವುದಕ್ಕೆ ಮಾಡಲ್ಪಡುತ್ತಿವೆಯೇ ಹೊರತು ಬೇರೆ ಯಾವುದಕ್ಕೂ ಅಲ್ಲ. ಇಷ್ಟೇ ಅಲ್ಲದೆ ಈಜಿಪ್ಟಿನ ಎಲ್ಲೆಯಲ್ಲಿರುವ ಅರಬ್ಬಿಯವರಿಗೆ ಆಂಗ್ಲಪ್ರಭುತ್ವದ ಮೇಲೆ ದ್ವೇಷವನ್ನು ಹುಟ್ಟಿಸುವುದಕ್ಕಾಗಿ ತುರ್ಕಿಯವರೂ ಜರ್ಮನಿಯವರೂ ಸಹ ಪ್ರಯತ್ನಿಸುತ್ತಿರುವಂತೆಯೂ ಕೂಡ ತಿಳಿಯಬರುತ್ತಿದೆ. ಈಜಿಪ್ಟ-ಸೂಯಜ್‌ಕಾಲುವೆ-ಇವುಗಳಮೇಲೆ ದಂಡಯಾತ್ರೆಯನ್ನು ಮಾಡುವ ಉದ್ದೇಶದಿಂದ ಸೇನೆಗಳು ದಕ್ಷಿಣದಿಕ್ಕಿಗೆ ಕಳುಹಿಸಲ್ಪಟ್ಟಿವೆ. ಈ ಪ್ರಯತ್ನದಲ್ಲಿ ಸಹಾಯವನ್ನು ಮಾಡುವುದಕ್ಕೆ ಅರಬ್ಬಿಯವರನ್ನು ಆಯುಧಪಾಣಿಗಳನ್ನಾಗಿ ಮಾಡಿದ್ದಾರೆ. ಯುದ್ಧಸಾಮಗ್ರಿಗಳನ್ನು ಶೇಖರಿಸುವುದಕ್ಕಾಗಿ ಬಂಡಿಗಳು ಅಣಿಮಾಡಲ್ಪಟ್ಟಿವೆ. ಈಜಿಪ್ಟಿನವರೆಗಿರುವ ಮಾರ್ಗವನ್ನು ಸರಿಪಡಿಸಿದ್ದಾರೆ. ಅಕಾಬಾಜಲಸಂಧಿಯ ಮೇಲೆ ಯುದ್ಧನಾವೆಗಳೊಡನೆ ಬಂದು ತಮಗೆ ಇತರರು ಅನರ್ಥವನ್ನುಂಟುಮಾಡದಿರುವಂತೆ ಮಾಡುವುದಕ್ಕಾಗಿ ಅದರಲ್ಲಿ ಮದ್ದಿನ ಗೋಳಗಳನ್ನು ಇಡುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದಾರೆ. ಕ್ರೈಸ್ತರಮೇಲೆ ಮಹಮ್ಮದೀಯರಿಗೆ ದ್ವೇಷೋತ್ಪಾದನೆಮಾಡುವವರಲ್ಲಿ ಮುಖ್ಯನಾದ ಷೇಕ್‌ಅಜೀಷಾವಿಸ್ಸು, ಗ್ರೇಟ್‌ಬ್ರಿಟನ್ನಿಗೆ ವಿರುದ್ಧವಾಗಿ ಯುದ್ಧಮಾಡಿರಿ ಎಂದು ಮಹಮ್ಮದೀಯರನ್ನು ಪ್ರೋತ್ಸಾಹಪಡಿಸುವುದಕ್ಕಾಗಿ ಬರೆದ ಕಾಗದಗಳನ್ನು ಸಿರಿಯಾದಲ್ಲಿ ಹಂಚಿರುವರು. ಬಹುಶಃ ಭರತಖಂಡದಲ್ಲೂ ಅಂಥ ಪತ್ರಿಕೆಗಳನ್ನು ಹಂಚಿರಬಹುದು.

ಇಂಗ್ಲೀಷರು ಈಜಿಪ್ಟನ್ನು ಆಕ್ರಮಿಸಿಕೊಂಡುದಕ್ಕಾಗಿ ಈಜಿಪ್ಟಿನ ರಾಜಧಾನಿಯಾದ ಕೈರೋನಗರದಲ್ಲಿ ಬಹುಕಾಲದಿಂದ ರಹಸ್ಯ ರಾಜದ್ರೋಹಪ್ರಯತ್ನಗಳನ್ನು ಮಾಡುತ್ತಿದ್ದು, ಸದ್ಯಕ್ಕೆ ಕಾನ್‌ಸ್ಟಾಂಟಿನೋಪಲ್ಲಿನಲ್ಲಿರುವ ಜರ್ಮನ್‌ರಾಯಭಾರಿಯ ಕಚೇರಿಯಲ್ಲಿ ಉದ್ಯೋಗಿಯಾಗಿರುವ ಡಾಕ್ಟರ್ ಪ್ರೂಫರ್ ಎಂಬುವನು ಸಿರಿಯಾಕ್ಕೆ ಹೋಗಿ ಆಂಗ್ಲರೊಡನೆ ಯುದ್ಧಮಾಡುವುದಕ್ಕೆ ಬನ್ನಿರೆಂದು ಪ್ರಜೆಗಳನ್ನು ಹುರಿದುಂಬಿಸುತ್ತಿರುವನು. ಇಂಥ ರಹಸ್ಯಪ್ರಯತ್ನಗಳು ಅನೇಕಸ್ಥಳಗಳಲ್ಲಿ ಜರುಗುತ್ತಿವೆ. ತುರ್ಕಿಯವರು ಭರತಖಂಡಕ್ಕೂ ಕೂಡ ಕೆಲರನ್ನು ಕಳುಹಿ, ಈ ದೇಶದಲ್ಲಿರುವ ಮಹಮ್ಮದೀಯರಿಗೆ ಇಂಗ್ಲೀಷರಮೇಲೆ ದ್ವೇಷವನ್ನು ಹುಟ್ಟಿಸಬೇಕೆಂದು ಪ್ರಯತ್ನಿಸುತ್ತಿರುವಂತೆ ತಿಳಿಯಬರುತ್ತದೆ. ಅಂಥ ರಹಸ್ಯಪ್ರಯತ್ನಗಳು ಎಷ್ಟುಮಟ್ಟಿಗೆ ವ್ಯಾಪಿಸಿರುವುವೆಂಬುದು ಈ ಕೆಳಗಿನ ವಿಷಯದಿಂದ ಗೊತ್ತಾಗುವುದು—ಮೊನ್ನೆಮೊನ್ನೆಯವರೆಗೂ ಅಲಗ್ಸಾಂಡ್ರಿಯಾ ಪಟ್ಟಣದ ಪೋಲೀಸಿನಲ್ಲಿ ಉದ್ಯೋಗಿಯಾಗಿದ್ದ ಜರ್ಮನ್ ದೇಶೀಯನೊಬ್ಬನು ಕಾನ್‌ಸ್ಟಾಂಟಿನೋಪಲ್ಲಿನಮೇಲೆ ಬಂದನು. ಸಂಶಯಪಟ್ಟು ಅವನನ್ನು ಪರಿಶೋಧಿಸಲು, ಅವನ ಬಳಿಯಲ್ಲಿ ಸೂಯೇಜ್ ಕಾಲುವೆಯ ಚಿತ್ರಪಟವೂ ಇನ್ನು ಕೆಲ ಇತರ ಕಾಗದಗಳೂ ದೊರೆದುವು.

ಇಷ್ಟೇ ಅಲ್ಲದೆ ಯುದ್ಧವು ಆರಂಭವಾದಬಳಿಕ ಜರ್ಮನಿಯಿಂದ ಭೂಜಲಸೈನ್ಯಾಧಿಕಾರಿಗಳೂ ಸೈನಿಕರೂ ಸಹ ಯುದ್ಧಸಾಮಗ್ರಿಗಳಸಮೇತ ಅವಿಚ್ಛಿನ್ನವಾಗಿ ಪ್ರವಾಹದಂತೆ ಕಾನ್‌ಸ್ಟಾಂಟಿನೋಪಲ್ಲಿಗೆ ಹೋಗುತ್ತಿದ್ದರು. ಈ ಪಟ್ಟಣವು ಜರ್ಮನರ ಸೈನಿಕರ ಶಿಬಿರದಂತಾಗಿದೆ. ಜರ್ಮನ್ ಅಧಿಕಾರಿಗಳು ತುರ್ಕಿರಾಜ್ಯದ ಎಲ್ಲ ಭಾಗಗಳಿಗೂ ಹೋಗಿ ಅಲ್ಲಿನ ಪ್ರಜೆಗಳನ್ನು ಇಂಗ್ಲೀಷ್ ಫ್ರೆಂಚ್ ರಷ್ಯಾ ಪ್ರಭುತ್ವಗಳ ಮೇಲೆ ತಿರುಗಿಬೀಳುವಂತೆ ಮಾಡಲು ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇಷ್ಟೆಲ್ಲಾ ಪ್ರಯತ್ನಗಳನ್ನು ಜರ್ಮನಿಯವರು ತುರ್ಕಿಯವರ ಸಹಾಯದಿಂದ ಮಾಡುತ್ತಿದ್ದಾರೆ. ತುರ್ಕಿಯವರು ಇಂಗ್ಲೆಂಡನ್ನು ತಮ್ಮೊಡನೆ ಯುದ್ಧಕ್ಕೆ ಇಳಿಯಿಸಬೇಕೆಂದು ಮಾಡಿದ ಪ್ರಯತ್ನಗಳಲ್ಲಿ ಈ ಕೆಳಗಿನ ವಿಷಯವು ಕೊನೆಯ ಪ್ರಯತ್ನವೆಂದು ಕಾಣಬರುತ್ತದೆ. ತುರ್ಕಿದೇಶದ ಯುದ್ಧಾಂಗಮಂತ್ರಿಯು ಜಾಫ್ನಾದ ಕಮ್ಯಾಂಡರಿಗೆ ಅಕ್ಟೋಬರ್ ತಾ॥ ೧೮ ರಲ್ಲಿ "ಆ ಪ್ರಾಂತ್ಯದೊಳಗೆ ಒಂದು ವೇಳೆ ತುರ್ಕಿ ಇಂಗ್ಲೆಂಡುಗಳ ಸ್ನೇಹ ವ್ಯವಹಾರಗಳು ಕೆಟ್ಟುಹೋಗುವ ಪಕ್ಷದಲ್ಲಿ ಇಂಥಿಂಥ ವಿಧವಾಗಿ ನಡೆದುಕೊಳ್ಳಬೇಕು" ಎಂದು ವಿವರಿಸಿ ಬರೆಯಲ್ಪಟ್ಟಿದ್ದಿತು. ಈ ಕಾಗದದಲ್ಲಿ ಇಂಗ್ಲೀಷ್ ಪ್ರಭುತ್ವದವರನ್ನು ವಿರೋಧಿಗಳನ್ನಾಗಿ ಗಣಿಸಲ್ಪಟ್ಟಿರುವುದು ಮಾತ್ರವೇಅಲ್ಲದೆ, ಜಾಫ್ನಾದಲ್ಲಿರುವ ಇಂಗ್ಲೀಷ್ ರಾಯಭಾರಿಯ ಕಚೇರಿಯಮೇಲೆ ಕಟ್ಟಲ್ಪಟ್ಟಿರುವ ಆಂಗ್ಲಪತಾಕೆಯನ್ನು ಕಿತ್ತು ಬಿಸಾಡಿಬಿಡಿ ಎಂದು ಕೂಡ ಬರೆಯಲ್ಪಟ್ಟಿದೆ

ಪ್ರಪಂಚದಮೇಲಿರುವ ಮಹಮ್ಮದೀಯರ ರಾಷ್ಟ್ರಗಳೊಳಗೆಲ್ಲಾ ತುರ್ಕಿಯಮೇಲೆ ಇಂಗ್ಲೆಂಡು ವಿಶೇಷ ಸಾನುಭೂತಿಯನ್ನು ಹೊಂದಿರುತ್ತದೆ. ಯಾವಾಗಲೂ ಸ್ನೇಹಭಾವವನ್ನು ತೋರಿಸುತ್ತಿದೆ. ತುರ್ಕಿಗೆ ಯುರೋಪಿನಲ್ಲಿರುವ ರಾಜ್ಯವನ್ನು ಉಳಿಸುವುದಕ್ಕಾಗಿ ಪ್ರಯತ್ನಿಸಿ, ಬಾಲ್ಕನ್‌ಯುದ್ಧಾನಂತರದಲ್ಲಿ ಸಹಾಯಮಾಡಿದೆ. ಅಂಥ ಇಂಗ್ಲೆಂಡನ್ನು ಮರೆತು ತುರ್ಕಿಯವರು ವಿರೋಧಿಗಳ ಮಾತನ್ನು ಕೇಳಿ ಡೊಂಕುದಾರಿಯನ್ನು ಹಿಡಿಯುವುದು ಬಹಳ ವಿಷಾದಕರವಾಗಿದೆ. ತುರ್ಕಿಯವರು ಹೀಗೆ ಮಾಡುವುದು ಅಕ್ರಮವು, ಮತ್ತೂ ಕೃತಘ್ನತೆಯು. ಸದ್ಯದ ಸ್ಥಿತಿಗಳನ್ನು ಹಿಡಿದು ನೋಡಿದರೆ, ಜರ್ಮನಿಯು ತುರ್ಕಿಯನ್ನು ತಮ್ಮ ಪಕ್ಷವಾಗಿಯೂ ತುರ್ಕಿಗೆ ವಿರೋಧಿಯಾದ ಆಸ್ಟ್ರಿಯಾದ ಪಕ್ಷವಾಗಿಯೂ ಮಾಡಿ ಇಂಗ್ಲೆಂಡಿನ ಮೇಲೆ ಯುದ್ಧಕ್ಕೆ ಇಳಿಯಿಸುವುದೆಂಬ ಸಂಗತಿಯು ನಿಸ್ಸಂಶಯವು.

ತುರ್ಕಿಯು ಮಾಡಿದ ಯುದ್ಧೋಪಕ್ರಮ.

ತಾ॥ ೨೯ ನೆಯ ಗುರುವಾರದ ದಿನ ಬೆಳಗ್ಗೆ ತುರ್ಕಿಯ ಒಂದು ಯುದ್ಧದ ಹಡಗು ಕ್ರಿಮಿಯಾಕ್ಕೆ ಸೇರಿದ ಥಿಯೊಡೋಷಿಯಾ ಪಟ್ಟಣದಮೇಲೆ (ಇದು ರಷ್ಯಾಕ್ಕೆ ಸೇರಿ ಕಪ್ಪುಸಮುದ್ರದಲ್ಲಿರುವ ತೀರಪಟ್ಟಣ) ೧ಗಂಟೆಯಹೊತ್ತು ಗುಂಡುಗಳನ್ನು ಹಾರಿಸಿ, ಅಲ್ಲಿದ್ದ ಕ್ರೈಸ್ತದೇವಾಲಯಕ್ಕೂ ನೌಕಾಶ್ರಯಕ್ಕೂ ಸಂಬಂಧಿಸಿದ ಗೋಡೆಗಳಿಗೂ ಒಬ್ಬ ಸೈನಿಕನಿಗೂ ನಷ್ಟವನ್ನುಂಟುಮಾಡಿತು. ಬಳಿಕ "ಹಮಿಡಿಯಾ" ಎಂಬ ತುರ್ಕಿಯ ಯುದ್ಧದ ಹಡಗು ಬಂದು, ತಮಗೆ ಪಟ್ಟಣವನ್ನು ಸ್ವಾಧೀನಮಾಡದಿದ್ದರೆ ಅದರಮೇಲೆ ಗುಂಡುಗಳನ್ನು ಹಾರಿಸಿ ಧ್ವಂಸಮಾಡಿಬಿಡುವೆವೆಂದು ಭಯಪಡಿಸಿ, ಆ ಪಟ್ಟಣದಲ್ಲಿದ್ದ ತುರ್ಕಿ ಅಧಿಕಾರಿಯೊಡನೆ ಮಾತನಾಡಿಕೊಂಡು ಹೋಯಿತು. ಇದರಮೇಲೆ ತುರ್ಕಿಯ ಯುದ್ಧನಾವೆಗಳು ಅದೇ ಸಮುದ್ರದಲ್ಲಿರುವ ರಷ್ಯಾಕ್ಕೆ ಸೇರಿದ ಒಡೆಸ್ಸಾರೇವೆಗೆ ಪ್ರವೇಶಿಸಿ ಅಲ್ಲಿದ್ದ ರಷ್ಯನ್‌ಹಡಗುಗಳ ಮೇಲೆ ಫಿರಂಗಿಗುಂಡುಗಳನ್ನು ಹಾರಿಸಿದುವೆಂದು ರೂಟರ್‌ಸುದ್ದಿಗಾರರು ತಿಳಿಯಿಸಿರುವರು. ಇದರಮೇಲೆ ಕಾನ್‌ಸ್ಟಾಂಟಿನೋಪಲ್ಲಿನಲ್ಲಿದ್ದ ರಷ್ಯಾರಾಯಭಾರಿಗೆ ಸ್ವದೇಶಕ್ಕೆ ಹಿಂತಿರುಗಿ ಬರಬೇಕೆಂದು ಆ ಪ್ರಭುತ್ವದವರು ಅಪ್ಪಣೆಮಾಡಿದರು. ಮತ್ತೂ ತುರ್ಕಿ ರಾಜಧಾನಿಯಲ್ಲಿರುವ ಆಂಗ್ಲರಾಯಭಾರಿಯ ಆಫೀಸಿಗೆ ಇದ್ದ ವಾರ್ತಾತಂತ್ರಿಯ ಸಂಬಂಧವನ್ನು ತುರ್ಕಿಯವರು ನಿಷ್ಕಾರಣವಾಗಿ ನಿಲ್ಲಿಸಿಬಿಟ್ಟರು. ಸದ್ಯದ ಸ್ಥಿತಿಗಳನ್ನು ನೋಡಲು ನೀವು ಯುದ್ಧಸನ್ನಾಹವನ್ನು ಮಾಡುತ್ತಿರುವಂತೆ ಕಾಣುತ್ತದೆ. ನಿಮ್ಮ ಉದ್ದೇಶವೇನು? ಎಂಬುದಾಗಿ ಆಂಗ್ಲಪ್ರಭುತ್ವದವರು ತುರ್ಕಿಯ ಪ್ರಭುತ್ವದವರನ್ನು ಕೇಳಿ ಅದಕ್ಕೆ ಅಕ್ಟೋಬರ್ ತಾ॥ ೩೧ ನೇ ಸಾಯಂಕಾಲದೊಳಗಾಗಿ ಉತ್ತರವನ್ನು ಕೊಡಬೇಕೆಂದು ಸೂಚಿಸಿದರು. ನವಂಬರ್ ತಾ॥ ಒಂದಾದರೂ ಸಮಾಧಾನವು ಬರಲಿಲ್ಲ. ಇಂಗ್ಲೀಷು-ಫ್ರಾನ್ಸ್-ರಷ್ಯಾದೇಶದ ರಾಯಭಾರಿಗಳು ಕಾನ್‌ಸ್ಟಾಂಟಿನೋಪಲ್ಲನ್ನು ಬಿಟ್ಟು ಸ್ವದೇಶಕ್ಕೆ ಹೊರಟುಹೋದರೆಂದು ನವಂಬರ್ ತಾ॥ ೧ ರ ತಂತ್ರೀವಾರ್ತೆಗಳು ತಿಳಿಯಿಸಿದುವು. ರಷ್ಯಾರಾಜಧಾನಿಯಲ್ಲಿದ್ದ ತುರ್ಕಿಯ ರಾಯಭಾರಿಯು ಸ್ವದೇಶಕ್ಕೆ ಹೊರಟುಬಂದನು.

ಈ ಮಧ್ಯದಲ್ಲಿ ಬೇರೆಬೇರೆ ಸುದ್ದಿಗಳು ಹುಟ್ಟಿರುವುವು. ಕಪ್ಪುಸಮುದ್ರದಲ್ಲಿ ತುರ್ಕಿ ಯುದ್ಧದ ಹಡಗುಗಳು ರಷ್ಯನರಮೇಲೆ ಮಾಡಿದ ಅಭಿಯೋಗಗಳು ತುರ್ಕಿ ಪ್ರಭುತ್ವದ ಅಪ್ಪಣೆಯಮೇರೆ ನಡೆದುದಲ್ಲವೆಂದೂ, ತುರ್ಕಿಯ ಯುದ್ಧದ ಹಡಗುಗಳ ಮೇಲಿದ್ದ ಜರ್ಮನ್ ಉದ್ಯೋಗಿಗಳು ತಾವೇ

ಸ್ವತಂತ್ರಿಸಿ ಇಷ್ಟು ಕೆಲಸವನ್ನು ಮಾಡಿರುವರೆಂತಲೇ ಹೇಳಲುಪಕ್ರಮವಾಯಿತು. ಒಂದುವೇಳೆ ಹೀಗಿದ್ದರೂ ಇರಬಹುದು; ಹಾಗಾದರೆ ತುರ್ಕಿಯವರು ಕೂಡಲೇ ಆ ಯುದ್ಧದ ಹಡಗುಗಳ ಮೇಲಿರುವ ಜರ್ಮನ್ ಉದ್ಯೋಗಿಗಳನ್ನು ತೊಲಗಿಸಬೇಕೆಂತಲೂ ಹಾಗೆ ಮಾಡದೆಹೋದರೆ ಇಂಗ್ಲೆಂಡ್ ರಷ್ಯಾದೇಶಗಳು ಎಂಥ ಸಂದರ್ಭಬಿದ್ದರೂ ಅದನ್ನು ನೋಡಿಕೊಳ್ಳಲು ಸಿದ್ಧರಾಗಿರುವರೆಂತಲೂ ಇಂಗ್ಲೆಂಡ್-ರಷ್ಯಾ ರಾಯಭಾರಿಗಳು ಅಭಿಪ್ರಾಯಪಟ್ಟರು. ಆದರೂ ತುರ್ಕಿಪ್ರಭುತ್ವದಿಂದ ತಕ್ಕ ಸಮಾಧಾನವು ಬರಲಿಲ್ಲ. ಯುದ್ಧವನ್ನಾರಂಭಿಸಿರುವೆವೆಂಬ ಪ್ರಕಟನೆಯೂ ಮಾಡಲ್ಪಡಲಿಲ್ಲ. ಆದರೂ ಮಿತ್ರಮಂಡಲಿಯವರು ತಾ॥ ೩ ರಲ್ಲಿ ತುರ್ಕಿಯನ್ನು ಕುರಿತು-ಕಪ್ಪುಸಮುದ್ರದಲ್ಲಿ ರಷ್ಯನರ ರೇವೆಗಳನ್ನು ಏತಕ್ಕೆ ಮುತ್ತಿದಿರಿ? ಎಂಬುದಾಗಿಯೂ, ಯುದ್ಧದ ಹಡಗಿನ ಮೇಲಿರುವ ಜರ್ಮನ್ ಉದ್ಯೋಗಿಗಳನ್ನು ತೆಗೆದುಬಿಡಿರೆಂಬುದಾಗಿಯೂ, ಗೋಬೆನ್-ಬ್ರೆಸ್ಲಾ ಹಡಗುಗಳನ್ನು ಯುದ್ಧಸಮಾಪ್ತಿಯವರೆಗೆ ಉಪಯೋಗಿಸಿಕೊಳ್ಳದೆ ಇಡಬೇಕೆಂಬುದಾಗಿಯೂ, ಹೀಗೆ ಮಾಡದೆಹೋದರೆ ತುರ್ಕಿಯೊಡನೆ ತಮ್ಮ ರಾಜಕಾರ್ಯಸಂಬಂಧಗಳು ತಪ್ಪಿಹೋಗುವುವೆಂದೂ ತಿಳಿಸಿದರು. ಅದಕ್ಕೂ ತುರ್ಕಿಯವರು ಯಾವ ಸಮಾಧಾನವನ್ನೂ ಕೊಡಲಿಲ್ಲ

ತುರ್ಕಿಯ ಈ ಚರ್ಯೆಯು ಅದರ ಡೋಲಾಯಮಾನ ಸ್ಥಿತಿಯನ್ನು ವ್ಯಕ್ತಪಡಿಸಿತು. ತಾ॥ ೩ ರಲ್ಲಿ ಕಾನ್‌ಸ್ಟಾಂಟಿನೋಪಲ್ಲಿನಲ್ಲಿದ್ದ ಆಂಗ್ಲರಾಯಭಾರಿ ರಷ್ಯಾ ಫ್ರಾನ್ಸ್ ರಾಯಭಾರಿಗಳ ಕಚೇರಿಗಳ ಇತರ ಉದ್ಯೋಗಸ್ಥರುಗಳೂ ಬಹಳಮಂದಿ ಇತರ ದೇಶೀಯರೂ ಊರನ್ನು ಬಿಟ್ಟು ಹೊರಟುಹೋದರು. ಅದೇದಿನ ಲಂಡನ್‌ಪಟ್ಟಣದಲ್ಲಿದ್ದ ತುರ್ಕಿ ರಾಯಭಾರಿಯು ವಿದೇಶಾಂಗಮಂತ್ರಿಯವರ ಬಳಿಗೆ ಹೋಗಿ ತಾನು ಸ್ವದೇಶಕ್ಕೆ ಹೊರಡಲು ಅನುಮತಿಯನ್ನು ಪಡೆದುಬಂದನು.

ಕಾನ್‌ಸ್ಟಾಂಟಿನೋಪಲ್ಲಿನಲ್ಲಿ ಇದುವರೆಗಿದ್ದ ಜರ್ಮನರಲ್ಲದೆ ಇನ್ನೂ ಅನೇಕ ಜರ್ಮನ್ ಅಧಿಕಾರಿಗಳು ಮೊನ್ನೆಮೊನ್ನೆ ಬಂದು ಸೇರಿಯೂ ಸೇರುತ್ತಲೂ ಇದ್ದಾರೆ.

ಬಸಾರಾದಲ್ಲಿರುವ ಆಂಗ್ಲರಾಯಭಾರಿಯನ್ನೂ ಕೆಲ ಆಂಗ್ಲವರ್ತಕರನ್ನೂ ಅಲ್ಲಿನ ತುರುಕರು ಹೋಗಗೊಡಿಸದೆ ಅಡ್ಡಿಮಾಡಿದ್ದಾರೆ.

ಇಂಗ್ಲೀಷರ ಮತ್ತೂ ಫ್ರೆಂಚರ ಯುದ್ಧನಾವೆಗಳು ಡಾರ್ಡನಲ್ಸ್ ಜಲಸಂಧಿಗೆ ಬಂದು ಅಲ್ಲಿರುವ ಕೋಟೆಗಳಮೇಲೆ ದೊಡ್ಡದೊಡ್ಡ ಫಿರಂಗಿಗುಂಡುಗಳನ್ನು ಹಾರಿಸಿದುವು. ಕೋಟೆಯಿಂದಲೂ ಫಿರಂಗಿಗುಂಡುಗಳು ಈ ಹಡಗುಗಳಮೇಲೆ ಹಾರಿಸಲ್ಪಟ್ಟುವು. ಮಿತ್ರಮಂಡಲಿಯವರಿಗೇನೂ ನಷ್ಟವಾಗಲಿಲ್ಲ. ಹೇಲ್ ಕೋಟೆಯಲ್ಲಿ ದೊಡ್ಡ ಶಬ್ದವಾಗಿ ವಿಪರೀತವಾದ ಹೊಗೆಯೆದ್ದಿತು. ಇದರಿಂದ ಮದ್ದಿನ ಕೊಟ್ಟಾರವು ಗುಂಡಿನೇಟಿನಿಂದ ಸುಟ್ಟುಹೋಗಿರಬೇಕೆಂದು ಕಾಣುತ್ತದೆ.

ಇಂಗ್ಲೀಷರ ಮಿನರ್ವಾ ಎಂಬ ಕ್ರೂಯಿಜರು ಅಕಾಬಾಪಟ್ಟಣದ ಬಳಿಗೆ ಬಂದಾಗ ಕೆಲ ತುರ್ಕಿ ಸೋಲ್ಜರರು ಒಂದುಕಡೆ ನಿಂತಿದ್ದರು. ಅವರಲ್ಲಿ ಒಬ್ಬ ಜರ್ಮನ್‌ಸೈನಿಕನೂ ಇದ್ದನು; ಆಯುಧಪಾಣಿಗಳಾದ ಪ್ರಜೆಗಳೂ ಇದ್ದರು. ಅಷ್ಟರಲ್ಲಿ ಕ್ರೂಯಿಜರು ಮಿನರ್ವಾ ಕೋಟೆಯಮೇಲೂ ಸೈನಿಕರಮೇಲೂ ಫಿರಂಗಿಗುಂಡುಗಳನ್ನು ಹಾರಿಸಿತು. ಒಳಗಿದ್ದ ಶತ್ರುಗಳು ಪಟ್ಟಣವನ್ನೂ ಸಾಮಗ್ರಿಗಳ ಉಗ್ರಾಣವನ್ನೂ ಪೋಸ್ಟಾಫೀಸನ್ನೂ ಬಿಟ್ಟು ಹೊರಟುಹೋದರು. ಗುಂಡಿನೇಟಿನಿಂದ ಶತ್ರುಪಕ್ಷಕ್ಕೆ ಸ್ವಲ್ಪ ನಷ್ಟವಾಯಿತು.

ನೈಜಾಂರವರ ಪ್ರಕಟನೆ.

ಹೀಗೆ ತುರ್ಕಿಯು ತಾನಾಗಿ ಇಂಗ್ಲೀಷ್‌ಪ್ರಭುತ್ವದವರ ಮೈತ್ರಿಯನ್ನು ಕಳೆದುಕೊಂಡು ಯುದ್ಧಕ್ಕೆ ಸನ್ನದ್ಧವಾದ ಸಂಗತಿಯು ಹಿಂದೂಸ್ಥಾನದ ನೈಜಾಮರಂಥ ಮಹಮ್ಮದೀಯಪ್ರಭುಗಳಿಗೂ ಭೋಜಾಪಂಗಡದ ಮುಖ್ಯಗುರುಗಳಾದ ಆಗಾಖಾನರಂಥ ಪ್ರಮುಖರನೇಕರಿಗೂ ಒಪ್ಪಿಗೆಯಾಗಿರುವುದಿಲ್ಲ. ಅವರುಗಳು ಈ ಸಂಬಂಧವಾದ ಪ್ರಕಟನೆಗಳ ಮೂಲಕ ತಮ್ಮ ಪ್ರಜೆಗಳಿಗೆ ತಿಳಿಯಪಡಿಸಿರುವುದೇನೆಂದರೆ:—

"ಯುರೋಪುಯುದ್ಧದ ಸಂದರ್ಭದಲ್ಲಿ ಈಗ ಜರುಗಿರುವ ವ್ಯವಹಾರಗಳನ್ನು ತಿಳಿದು ತಮ್ಮ ದೇಶದ ಪ್ರಜೆಗಳು ಯಾವ ತೆರದ ಗೊಂದಲವನ್ನೂ ಹೊಂದದೆ ಇರಬೇಕೆಂದು ನೈಜಾಂರವರು ಈ ಸಂದೇಶವನ್ನು ಪ್ರಕಟಿಸಿದ್ದಾರೆ—ಇದನ್ನು ಪ್ರಜೆಗಳು ಗಮನಿಸಿ, ತಮ್ಮಗಳ, ತಮ್ಮ ಪ್ರಭುವಿನ ಮತ್ತೂ ತಮ್ಮ ಚಕ್ರವರ್ತಿಯ ಪ್ರಯೋಜನಾರ್ಥವಾಗಿ ಈ ಸಂದೇಶದಲ್ಲಿ ಕಾಣಿಸಿರುವಂತೆ ನಡೆದುಕೊಳ್ಳುವರೆಂದು ನಂಬಲಾಗಿದೆ.

ಯುರೋಪಿನಲ್ಲಿ ನಡೆಯುತ್ತಿರುವ ಯುದ್ಧಕ್ರಮವನ್ನು ಅರಿತು ಈ ವಿಷಮಸಮಯದಲ್ಲಿ ಭರತಖಂಡದಲ್ಲಿರುವ ಮಹಮ್ಮದೀಯರೆಲ್ಲರೂ ಆಂಗ್ಲಪ್ರಭುತ್ವದ ವಿಷಯದಲ್ಲಿ ಭಕ್ತಿಸಂಪನ್ನರಾಗಿರುವುದು ಕರ್ತವ್ಯವಾಗಿರುತ್ತದೆ. ಈ ಲೋಕದಲ್ಲಿರುವ ಮಹಮ್ಮದೀಯ ರಾಜ್ಯಗಳಲ್ಲೇ ಆಗಲಿ ತದಿತರ ರಾಜ್ಯಗಳಲ್ಲೇ ಆಗಲಿ ಭರತಖಂಡವು ಆಂಗ್ಲಪ್ರಭುತ್ವದ ಕೆಳಗೆ ಅನುಭವಿಸುತ್ತಿರುವಂಥ ಮತಸ್ವಾತಂತ್ರ್ಯವನ್ನು ವ್ಯಕ್ತಿಸ್ವಾತಂತ್ರ್ಯವನ್ನೂ ಇನ್ನಾವ ರಾಜ್ಯದಲ್ಲೂ ಅನುಭವಿಸುತ್ತಿಲ್ಲ. ಇದುವರೆಗೆ ಮಹಮ್ಮದೀಯ ಮತಕ್ಕೆ ತಾವು ಎಷ್ಟುಮಟ್ಟಿಗೆ ಮಿತ್ರರಾಗಿರುವೆವೋ ಈಗಲೂ ಹಾಗೆಯೇ ಸ್ನೇಹಿತರಾಗಿರುವೆವೆಂತಲೂ, ತಮ್ಮ ರಾಜ್ಯದಲ್ಲಿರುವ ಮಹಮ್ಮದೀಯ ಪ್ರಜೆಗಳನ್ನು ಪ್ರೀತಿಸಿ ಅವರಿಗೆ ಯಾವ ತೊಂದರೆಯೂ ಉಂಟಾಗದಂತೆ ಕಾಪಾಡುವೆವೆಂತಲೂ ಆಂಗ್ಲಪ್ರಭುತ್ವದವರು ನಂಬುಗೆಯನ್ನು ಕೊಡುತ್ತಾರೆ. ಆದುದರಿಂದ ಈ ಸಂದಿಗ್ಧ ಸಮಯದಲ್ಲಿ ಭರತಖಂಡದ ಮಹಮ್ಮದೀಯರೆಲ್ಲರೂ ಮುಖ್ಯವಾಗಿ ನನ್ನ ದೇಶದಲ್ಲಿರುವ ಮಹಮ್ಮದೀಯರೆಲ್ಲರೂ ನಿಶ್ಚಿಂತತೆಯಿಂದ ಜೀವಿಸಬೇಕೆಂದು ಅಪೇಕ್ಷಿಸುವರಾದರೆ ಆಂಗ್ಲಪ್ರಭುತ್ವದ ವಿಷಯದಲ್ಲಿ ಇದುವರೆಗೆ ಎಷ್ಟು ಸಾಂದ್ರವಾದ ನಿಶ್ಚಲರಾಜಭಕ್ತಿಯನ್ನು ಹೊಂದಿದ್ದರೋ ಈಗಲೂ ಅಂಥ ಭಕ್ತಿಯನ್ನೇ ಹೊಂದಿರಬೇಕು. ಆಂಗ್ಲಪ್ರಭುತ್ವದವರು ಧರ್ಮಯುದ್ಧವನ್ನು ಮಾಡುತ್ತಿರುವರೆಂದು ನಾನು ನಂಬುತ್ತೇನೆ. ಅದುಕಾರಣ, ಪ್ರಜೆಗಳು ತಮ್ಮ ಪಾಲಕರೊಡನೆ ಇರುವ ಸಂಬಂಧವನ್ನು ಪವಿತ್ರವಾಗಿರಗೊಟ್ಟು, ಯಾರು ಯಾವವಿಧದ ಬೋಧೆಯನ್ನು ಮಾಡಿ ಅಡ್ಡದಾರಿಗೆ ತಿರುಗಿಸುವುದಕ್ಕೆ ಪ್ರಯತ್ನಿಸಿದರೂ, ರಹಸ್ಯವಾಗಾದರೂ ಬಹಿರಂಗವಾಗಾದರೂ ಆಂಗ್ಲಪ್ರಭುತ್ವದಮೇಲೆ ದ್ರೋಹಚಿಂತನೆಯನ್ನು ಮಾಡದೆ ರಾಜಭಕ್ತಿನಿರತರಾಗಿರಬೇಕು. ನಾನು ನನ್ನ ಪೂರ್ವಿಕರಂತೆಯೇ ಯಾವಾಗಬೇಕಾದರೆ ಆವಾಗ ನನ್ನ ದೇಹವನ್ನೂ ನನ್ನ ಬೊಕ್ಕಸದಲ್ಲಿರುವ ಎಲ್ಲಾ ಹಣವನ್ನೂ ನನ್ನ ಸ್ವಕೀಯಧನವನ್ನೂ ಸಹ ಆಂಗ್ಲಪ್ರಭುಗಳಿಗೋಸುಗ ಧಾರೆಯೆರೆಯಲು ಸಿದ್ಧನಾಗಿದ್ದೇನೆ; ಹಿಂದೂದೇಶದಲ್ಲಿರುವ ಮಹಮ್ಮದೀಯರೆಲ್ಲರೂ ಮುಖ್ಯವಾಗಿ ನನ್ನ ರಾಜ್ಯದಲ್ಲಿನ ಮಹಮ್ಮದೀಯರೆಲ್ಲರೂ ನನ್ನಂತೆಯೇ ತಮ್ಮ ಪ್ರಾಣಧನಗಳನ್ನು ಆಂಗ್ಲಪ್ರಭುಗಳಿಗೆ ಧಾರೆಯೆರೆದುಕೊಡಲು ಸಿದ್ಧರಾಗಿರಬೇಕು."

ಆಗಾಖಾನರವರ ಹಿತವಾದ.

ಬೊಂಬಾಯಿಯಲ್ಲಿರುವ ಭೋಜಾಸಂಘದವರಿಗೆ ಆಗಾಖಾನರು ಲಂಡನ್‌ಪಟ್ಟಣದಿಂದ ತಂತ್ರೀವಾರ್ತೆಯ ಮೂಲಕ ಹೀಗೆ ತಿಳಿಯಿಸಿರುತ್ತಾರೆ—"ತುರ್ಕಿರಾಜ್ಯಕ್ಕೂ ಮಿತ್ರಮಂಡಲಿಯವರಿಗೂ (ಎಂದರೆ ಇಂಗ್ಲೆಂಡ್- ರಷ್ಯಾ ಫ್ರಾನ್ಸು) ಯುದ್ಧವು ಸಂಘಟಿಸಿರುವುದು ನನಗೆ ತುಂಬಾ ಚಿಂತೆಯನ್ನುಂಟುಮಾಡಿರುತ್ತದೆ. ಈ ಸಮಯದಲ್ಲಿ ಭರತಖಂಡದಲ್ಲಿರುವ ಮಹಮ್ಮದೀಯರಲ್ಲೂ, ಅದರ ಎಲ್ಲೆಗಟ್ಟಿನಲ್ಲಿರುವ ಮಹಮ್ಮದೀಯರಲ್ಲೂ, ಇತರ ದೇಶಗಳಲ್ಲಿರುವ ಮಹಮ್ಮದೀಯರಲ್ಲೂ, ನನ್ನ ಶಿಷ್ಯರಾಗಿರುವವರೆಲ್ಲರೂ ಆಂಗ್ಲಪ್ರಭುತ್ವದಮೇಲೆ ಭಕ್ತಿವಿಧೇಯತೆಗಳಿಂದ ಕೂಡಿರಬೇಕು. ತುರ್ಕಿಯು ಜರ್ಮನಿಯವರ ದುರ್ಬೋಧೆಯಿಂದ ಯುದ್ಧಕ್ಕೆ ನಿಂತಿದೆ."

ಮಹಮ್ಮದೀಯ ಲೋಕಾಭಿಪ್ರಾಯಗಳು.

ಬೆಲೂಚಿ ಮಹಮ್ಮದೀಯರು—ಇಂಡ್ಯಾ ಎಲ್ಲೆಕಟ್ಟಿನಲ್ಲಿರುವ ಸಂಸ್ಥಾನಾಧಿಪತಿಗಳು, ಗ್ರಾಮಾಧಿಕಾರಿಗಳು ಮೊದಲಾದ ಮಹಮ್ಮದೀಯರ ದೊಡ್ಡಸಭೆಯು ಕ್ವೆಟ್ಟಾನಗರದಲ್ಲಿ ನೆರೆದು, ಈ ಕೆಳಗೆ ಕಂಡ ತೀರ್ಮಾನವನ್ನು ಮಾಡಿರುವರು—"ತುರ್ಕಿಯವರ ತಾಟಸ್ಥ್ಯಕ್ಕೆ ಭಂಗವನ್ನು ತರುವ ಜರ್ಮನರ ಆಲೋಚನೆಗಳನ್ನು ತುರ್ಕಿ ಪ್ರಭುತ್ವದವರು ಕೇಳಿದುದಕ್ಕಾಗಿ ಬೆಲೂಚಿಸ್ಥಾನದ ಮಹಮ್ಮದೀಯರು ಚಿಂತಿಪಡುವುದಲ್ಲದೆ, ಹೀಗೆ ಮಾಡುವುದರಿಂದ ತುರ್ಕಿಗೆ ಅನರ್ಥವುಂಟಾಗುವುದೆಂದು ಅಭಿಪ್ರಾಯಪಡುತ್ತಾರೆ. ಮತ್ತೂ ಮಹಮ್ಮದೀಯರಿಗೆ ಆಂಗ್ಲಪ್ರಭುತ್ವದ ಮೇಲಿರುವ ಅಚ್ಚಳಿಯದ ಭಕ್ತಿಯನ್ನು ಈಗ ಮತ್ತೊಮ್ಮೆ ವ್ಯಕ್ತಪಡಿಸಿ, ತಮ್ಮನ್ನೆಲ್ಲ ಆಂಗ್ಲಪ್ರಭುತ್ವದವರು ಪೂರ್ಣವಾಗಿ ನಂಬಬೇಕೆಂದು ಅವರೆಂದು ನಂಬುತ್ತೇವೆ."

ಬೊಂಬಾಯಿ ಮಹಮ್ಮದೀಯರು.

ತುರ್ಕಿಯು ಎಂಥ ದುರ್ಮಾರ್ಗಕ್ಕೆ ಬಿದ್ದರೂ ಹಿಂದೂದೇಶದ ಮಹಮ್ಮದೀಯರ ರಾಜಭಕ್ತಿಯು ನಿಶ್ಚಲವಾಗಿರುವುದು. ನಾವು ಜಾರ್ಜ್‌ಚಕ್ರವರ್ತಿಯವರಲ್ಲಿ ನಿಶ್ಚಲಭಕ್ತರಾಗಿರುವೆವು ಇನ್ನಾರವರಲ್ಲಿಯೂ ನಮ್ಮ ಭಕ್ತಿಯಿಲ್ಲ. ತುರ್ಕಿಯು ಯುದ್ಧಕ್ಕೆ ನಿಂತುದಕ್ಕಾಗಿ ಸುಲ್ತಾನರನ್ನು ನಾವು ನಿಂದಿಸಿ ಫಲವಿಲ್ಲ. ಏಕೆಂದರೆ—ಸುಲ್ತಾನರು ಅಲ್ಲಿನ ರಾಜಕೀಯನಾಯಕರ ಕೈಯೊಳಗಾದರೂ—ಜರ್ಮನ್‌ಪ್ರಭುತ್ವದ [illegible] ಹೇಗೆ ತಿರುಗಿಸಿದರೆ ಹಾಗೆ ತಿರುಗುವವರಾಗಿದ್ದಾರೆ. ಈ ವಿಷಯದಲ್ಲಿ ಯಾರೂ ಅನುಮಾನ ಪಡಬೇಕಾದುದಿಲ್ಲ. ಹಿಂದೂದೇಶದ ಮಹಮ್ಮದೀಯರ ರಾಜಭಕ್ತಿಯು ವಚನಮಾತ್ರದಲ್ಲಿರುವುದಲ್ಲ, ಹೃತ್ಪೂರ್ವಕವಾದುದೆಂದು ಇದುವರೆಗೆ ಕೆಲರು ಅರಿತಿದ್ದರು. ಆದರೆ ಈಗಿನ ಸಮಯದಿಂದ ಅವರ ರಾಜಭಕ್ತಿಯು ಎಷ್ಟು ನಿಶ್ಚಲವಾದುದೆಂಬುದು ಗೊತ್ತಾಯಿತು. ಹಿಂದೂದೇಶದಲ್ಲಿರುವ ಮಹಮ್ಮದೀಯನಾಯಕರೆಲ್ಲರೂ ಸಂಘಗಳನ್ನೇರ್ಪಡಿಸಿ ಹುಡುಕು ಸುದ್ದಿಗಳನ್ನು ಹರಡದಂತೆ ನಿಲ್ಲಿಸಲಾಗಿ, ಓದುಬರಹಗಳನ್ನರಿಯದ ಮಹಮ್ಮದೀಯರವರಿಗೆ ನಿಜಸ್ಥಿತಿಯನ್ನು ತಿಳಿಯಿಸಿ ಕೊಡಬೇಕು."

ಯುದ್ಧಪ್ರವರ್ತನಾನಂತರದಲ್ಲಿ ಆಂಗ್ಲಪ್ರಭುತ್ವದವರು ಅವರ ಮಿತ್ರಮಂಡಲಿಯವರೂ ಮಾತ್ರವೇ ನಿಜವಾಗಿಯೂ ಜಯಶೀಲರಾಗಿ ಜರ್ಮನಿದೇಶೀಯರೊಡನೆ ಸಂಧಿಸಂಬಂಧಗಳನ್ನು ಏರ್ಪಡಿಸುವವರಾಗುವರು ಬಂಧಿತ ಅಂಥವರೊಡನೆ ಯುದ್ಧಕ್ಕೆ ನಿಲ್ಲುವುದರಲ್ಲಿ ತುರ್ಕಿ ಸುಲ್ತಾನರು ಸರಿಯಾದ ಆಲೋಚನೆಯನ್ನು ಕೇಳಲಿಲ್ಲವೆಂದು ಹೇಳಬೇಕಾಗುತ್ತದೆ. ಜರ್ಮನಿಯ ರಾಜಕೀಯ ಸ್ವೇಚ್ಛಾಚಾರಿಗಳು ಕಾನ್‌ಸ್ಟಾಂಟಿನೋಪಲ್ಲಿಗೆ ಬಂದು ಮಾಡಿದ ದುರ್ಬೋಧನೆಯಿಂದ ಇಂಥ ಅನರ್ಥವು ಜರಗುತ್ತಿದೆ. ತುರ್ಕಿಯ ಇಂಥ ಸ್ಥಿತಿಯನ್ನುಂಟುಮಾಡಿದ ಜರ್ಮನಿಚಕ್ರವರ್ತಿಯವರ ಮೇಲೆ ನಮಗಿರುವ ಆಗ್ರಹವು ಅಪರಿಮಿತವಾಗಿರುತ್ತದೆ. ತುರ್ಕಿದೇಶೀಯರು ತಮ್ಮ ಸ್ನೇಹಿತರಿಗೂ ಅಧಿಕಾರಿಗಳಿಗೂ ಸಹ ಅಕಾರಣವಾದ ಅಪಕಾರವನ್ನು ಮಾಡಿರುತ್ತಾರೆ. ಆತ್ಮವಿನಾಶಕರವಾದ ಅವರ ಈಗಿನ ಪ್ರವರ್ತನವು ಮಹಮ್ಮದೀಯರ ಜನವರ್ಗಕ್ಕೆಲ್ಲಾ ಸಂತಾಪವನ್ನೂ ಲಜ್ಜೆಯನ್ನೂ ಉಂಟುಮಾಡಿರುತ್ತದೆ. ಸ್ವತಃ ಮಹಮ್ಮದೀಯ ಪ್ರಭುಗಳಿಂದಲೇ ಆಳಲ್ಪಡುತ್ತಿರುವ ದೇಶಗಳಲ್ಲಿರುವ ಮಹಮ್ಮದೀಯರಿಗೆ ಇಲ್ಲದಿರುವ ಸ್ವಾತಂತ್ರ್ಯವನ್ನು ಕೂಡ ಆಂಗ್ಲಪ್ರಭುತ್ವದವರು ತಮ್ಮ ಪರಿಪಾಲನೆಗೊಳಪಟ್ಟ ಮಹಮ್ಮದೀಯರಿಗೆಲ್ಲರಿಗೂ ಉಂಟುಮಾಡಿಕೊಟ್ಟಿರುವರು. ಅದುಕಾರಣ ಭರತಖಂಡದಲ್ಲಿರುವ ಮಹಮ್ಮದೀಯರೆಲ್ಲರೂ ಆಂಗ್ಲಪ್ರಭುತ್ವದ ವಿಷಯದಲ್ಲಿ ಅತ್ಯಂತ ವಿಧೇಯರಾಗಿರುವರು; ಇನ್ನು ಮುಂದೆಯೂ ಹಾಗೆಯೇ ಇರುವರು. ಆಂಗ್ಲದೇಶದೊಡನೆ ಸ್ನೇಹದಿಂದಿರುವುದು ತುರ್ಕಿಯು ಅದಕ್ಕೆ ಬಹಳ ಅತ್ಯಾವಶ್ಯಕವಾಗಿದ್ದಿತು. ಹೀಗಿರುವ ತುರ್ಕಿಯು ಇಂಗ್ಲೆಂಡಿನೊಡನೆ ಯುದ್ಧಕ್ಕೆ ನಿಲ್ಲುವುದು ಹಿಂದೂಸ್ಥಾನದ ಮಹಮ್ಮದೀಯರಿಗೆಲ್ಲಾ ಸಂತಾಪವನ್ನುಂಟುಮಾಡದೆ ಹೋಗಲ್ಲ."

"ಮಹಮ್ಮದೀಯ ಮತಸಂಬಂಧವಾದ ಪುಣ್ಯಕ್ಷೇತ್ರಗಳನ್ನು ಸಂರಕ್ಷಿಸಿಕೊಂಡಿರುವ ಮಾತ್ರದಿಂದ ತುರ್ಕಿ ಸುಲ್ತಾನರು ನಮಗೆ ಮತವಿಷಯದಲ್ಲಿ ದೊಡ್ಡವರೆನಿಸಿಕೊಂಡಿರುವ ಮಾತು ನಿಜ. ಆ ಮಾತ್ರದಿಂದಲೇ ಹಿಂದೂಸ್ಥಾನದ ಮಹಮ್ಮದೀಯರು ತುರ್ಕಿಯ ಯುವಜನರ ಅಭಿಪ್ರಾಯದೊಡನೆ ಏಕೀಭವಿಸುವುದಕ್ಕೆ ತಕ್ಕ ಕಾರಣವೇನೂ ಕಾಣಿಸುವುದಿಲ್ಲ. ನಮಗೆ ಅತ್ಯಂತ ಪ್ರೇಮಾಸ್ಪದ ಚಕ್ರವರ್ತಿಯವರಾದ ಜಾರ್ಜ್ ಪ್ರಭುಗಳ ವಿಷಯದಲ್ಲಿ ಭರತಖಂಡದ ಮಹಮ್ಮದೀಯರೆಲ್ಲರೂ ಅತ್ಯಂತ ರಾಜಭಕ್ತಿಯುಕ್ತರಾಗಿರುವರು."

ಬಂಗಾಳಿ ಮಹಮ್ಮದೀಯರ ಅಭಿಪ್ರಾಯ.

"ಯುದ್ಧಾಂಗಮಂತ್ರಿಯವರಾದ ಎನ್ವರ್ ಪಾಷಾರವರ ಮತ್ತೂ ಜರ್ಮನಿಯ ದುರ್ಬೋಧನೆ ಯುವಜನರ ಜರ್ಮನ್ ಸೈನ್ಯಾಧಿಪತಿಗಳು, ಮತ್ತೂ ಅವರ ಆಧಿಪತ್ಯಕ್ಕೊಳಪಟ್ಟಿರುವ ತುರ್ಕಿ ಯುವಜನರ ಸಂಘದವರ ಆಶಾಪಾಶದ ನಿರ್ಬಂಧಕ್ಕೆ ಸುಲ್ತಾನರು ಒಳಗಾದುದರಿಂದ ತುರ್ಕಿಯು ಯುದ್ಧಕ್ಕೆ ನಿಲ್ಲಬೇಕಾಯಿತು. ಇದು ನಮಗೆ ತುಂಬಾ ಪರಿತಾಪಕರವಾಗಿದೆ. ವಿದ್ಯಾವಂತರಾದ ಮಹಮ್ಮದೀಯರು ಒಂದು ದೊಡ್ಡ ಸಭೆಗೂಡಿ, ತಮ್ಮಲ್ಲಿನ ವಿದ್ಯಾವಂತರಲ್ಲದ ಜನರು ತಮ್ಮ ಅಭಿಪ್ರಾಯವನ್ನು ವಿಚಾರಿಸಿ ಹೋಗದಂತೆ ಮಾಡುವುದಕ್ಕಾಗಿ ತಕ್ಕ ಪ್ರಯತ್ನಗಳನ್ನು ಮಾಡುವವರಾಗಿರುವರು. ಬಂಗಾಳದಲ್ಲಿ ಎಂದೂ ಅಶಾಂತಿಯುಂಟಾಗುವುದಿಲ್ಲ. ಇಂಥ ಸ್ಥಿತಿಯೇ ಭರತಖಂಡದಲ್ಲೆಲ್ಲಾ ಇರುವುದೆಂದು ನಂಬುತ್ತೇನೆ."

ಮಹಮ್ಮದೀಯರನ್ನು ಈಗ ತಮ್ಮ ಪಕ್ಷಕ್ಕೆ ತಿರುಗಿಸಿಕೊಳ್ಳುವುದಕ್ಕೆ ಒಳ್ಳೆಯ ಸಮಯವೆಂದು ಅರಾಜಕರು ಈ ಸಮಯದಲ್ಲಿ ಪ್ರಯತ್ನಿಸಿ, ಮಹಮ್ಮದೀಯರಿಗೆ ದುರ್ಬೋಧನೆಯನ್ನು ಮಾಡಿ, ಅವರ ಮನಸ್ಸನ್ನು ಕೆಡಿಸಬಹುದು. ವಿದ್ಯಾವಂತರಾದ ಮಹಮ್ಮದೀಯರು ತಮ್ಮ ಸೋದರರ ಮನಸ್ಸು ಅಂಥ ಕೆಡುಕಿಗೆ ಒಳಗಾಗದಂತೆ ಮಾಡುವುದಕ್ಕಾಗಿ ನಿಜಸ್ಥಿತಿಯನ್ನು ಕರಪತ್ರಗಳ ಮೂಲಕ ಪ್ರಕಟಿಸಿಯೂ, ಬೋಧಿಸಿಯೂ ಅವರನ್ನು ಯಥಾಸ್ಥಿತಿಯಲ್ಲಿರಿಸುವಂತೆ ಮಾಡಬೇಕಾಗಿ ಪ್ರಾರ್ಥಿಸುತ್ತೇವೆ. ತುರ್ಕಿ ಸುಲ್ತಾನರು ಮಹಮ್ಮದೀಯರಿಗೇನೋ ನಿಜ. ಆದರೆ ಅವರು ನಮ್ಮ ಮತಗುರುಗಳಲ್ಲ. ಈಗಿನ ಯುದ್ಧವು ಮತಕ್ಕೆ ಸಂಬಂಧಪಡುವುದಲ್ಲ. ಭೂಕಾಂಕ್ಷೆಯಿಂದ ಉಂಟಾದುದು. ಆಂಗ್ಲಪ್ರಭುತ್ವಾಧಿಕಾರಿಗಳ ಮೇಲೆ ನಮಗೆ ತುಂಬಾ ನಂಬುಗೆಯಿರುವುದು. ಮಹಮ್ಮದೀಯರ ಪುಣ್ಯಕ್ಷೇತ್ರಗಳನ್ನು ಆಂಗ್ಲಪ್ರಭುತ್ವದವರು ಕಾಪಾಡಿಕೊಡುವರೆಂದು [illegible] ಈಗ ಹೊಸದಾಗಿ ಪ್ರಕಟನೆ ಮಾಡಿ ತಮ್ಮ ಸಂತೋಷವನ್ನು [illegible]

ತುರ್ಕಿಯು ಯುದ್ಧಕ್ಕೆ ನಿಂತಿತು.

ತುರ್ಕಿಗೂ ಇಂಗ್ಲೆಂಡಿಗೂ ಯುದ್ಧವು ಪ್ರಾಪ್ತವಾಯಿತೆಂದು ಇದರಮೂಲಕ ಸರ್ವರೂ ತಿಳಿದುಕೊಳ್ಳಬೇಕೆಂದು ಇಂಡ್ಯಾಸರ್ಕಾರದವರು ಕಳೆದ ತಾ॥ ೧ ರಲ್ಲಿ ಈ ಕೆಳಗಣ ಪ್ರಕಟನೆಯನ್ನು ಮಾಡಿದ್ದಾರೆ. ರಷ್ಯಾಕ್ಕೆ ಸೇರಿದ ಒಡೆಸ್ಸಾದಲ್ಲಿರುವ ಇಂಗ್ಲೀಷ್‌ರಾಯಭಾರಿಯು ಕಳೆದ ತಿಂಗಳು ತಾ॥ ೨೯ ರಲ್ಲಿ ಈ ಕೆಳಗಣ ವಾರ್ತೆಯನ್ನು ತಂತಿಯಮೂಲಕ ಕಳುಹಿದನು. ಏನೆಂದರೆ—ಈ ದಿನ ಬೆಳಗ್ಗೆ ೬-೩ ತುರ್ಕಿಯವರ ಟಾರ್ಪೆಡೋಬೋಟುಗಳು ಒಡೆಸ್ಸಾರೇವೆಯ ಮೇಲೆ ಬಿದ್ದು ಹಾರ್ಬರಿನಲ್ಲಿದ್ದ ರಷ್ಯನರ ಡನೆಟ್ಸ್ ಎಂಬ ಫಿರಂಗಿಯ ಹಡಗನ್ನು ಮುಳುಗಿಸಿಬಿಟ್ಟುವು. ಕಳಾಸಿಗಳಲ್ಲಿ ಕೆಲರಿಗೆ ಏಟುಬಿದ್ದಿರುವುದು. ಕೆಲರು ಸತ್ತುಹೋದರು. ರಷ್ಯನರ ವಿಟಿಯಾಜು-ಲಿಯಾಜಿರಫ್-ವಾ-ಬಾರು-ಎಂಬ ಹಡಗುಗಳಿಗೆ ಬಹಳ ನಷ್ಟವುಂಟಾಗಿದೆ ಫ್ರೆಂಚರ "ಪ್ರೋರ್ಚುಗಲ್" ಎಂಬ ಹಡಗಿಗೂ ಕೂಡ ನಷ್ಟವುಂಟಾಗಿದೆ. ಅದರಲ್ಲಿನ ಇಬ್ಬರು ಕಳಾಸಿಗಳು ಸತ್ತರು. ಒಡೆಸ್ಸಾಪಟ್ಟಣದ ಮೇಲೆ ಫಿರಂಗಿಗುಂಡುಗಳನ್ನು ಹಾರಿಸಿದರು. ಇದರಿಂದ ಅಲ್ಲಿನ ಸಕ್ಕರೆ ಕಾರ್ಖಾಲಯದಲ್ಲಿ ಕೆಲಜನರು ಸತ್ತರು. ಈ ಅನಾಹುತವನ್ನು ಮಾಡಿದ ಹಡಗುಗಳು ತುರ್ಕಿಯವರವು ಎಂದು ಒಡೆಸ್ಸಾದ ಗವರ್ನರು ಹೇಳುತ್ತಾರೆ. ಎಂಬುದಾಗಿ ಇದಲ್ಲದೆ ಕಾನ್‌ಸ್ಟಾಂಟಿನೋಪಲ್(ತುರ್ಕಿಯರಾಜಧಾನಿ) ಬಳಿಯಲ್ಲಿ ನಿಂತಿದ್ದ ರಷ್ಯನರ ೧ ಹಡಗು ಕೂಡ ಮುಳುಗಿಸಲ್ಪಟ್ಟಿತೆಂದೂ, ಒಡೋಸಿಯಾ ಎಂಬ ರಷ್ಯಾದ ಹಡಗಿನ ಮೇಲೆ ತುರ್ಕಿಯವರ ಯುದ್ಧದ ಹಡಗುಗಳು ಬಿದ್ದುವೆಂದೂ ಗೊತ್ತಾಗುತ್ತದೆ. ರಷ್ಯಾದೊಡನೆ ಯುದ್ಧವನ್ನು ಪ್ರಕಟಿಸದೆಯೂ, ಇಂಥ ಅನಾಹುತವನ್ನು ಮಾಡುವುದಕ್ಕೆ ಯಾವ ವಿಧವಾದ ಕಾರಣವೂ ಇಲ್ಲದೆಯೂ ತುರ್ಕಿಯವರು ರಷ್ಯನ್ನರ ಮೇಲೆಬಿದ್ದರು. ಇಂಗ್ಲೆಂಡಿನೊಡನೆ ಸ್ನೇಹದಲ್ಲಿರುವ ರಷ್ಯಾವನ್ನು ಹೀಗೆ ಮಾಡುವುದರಿಂದ ಇಂಗ್ಲೆಂಡು-ತುರ್ಕಿ ಪ್ರಭುತ್ವಗಳ ಸಂಬಂಧಗಳು ಕೆಟ್ಟುಹೋಗಬಹುದು. ಆದುದರಿಂದ ಜರ್ಮನಿಯವರ ಪ್ರೋತ್ಸಾಹದಿಂದ ನಡೆಯುತ್ತಿರುವ ತುರ್ಕಿಯ ತೊಂದರೆಗಾಕರವಾದ ಈ ದುಡುಕಿನ ಕೆಲಸಗಳನ್ನು ಭರತಖಂಡದಲ್ಲಿರುವ ಪ್ರಜೆಗಳಿಗೂ ಪ್ರಭುಗಳಿಗೂ ಸಹ ತಿಳಿಯಪಡಿಸುವುದು ಉಚಿತವಾದುದೆಂದು ತಿಳಿದು ವೈಸ್ರಾಯರವರು ಈ ಕೆಳಗಣ ವಿಷಯವನ್ನು ತಿಳಿಯಪಡಿಸುತ್ತಾರೆ:—

ಬ್ರೆಸ್ಲಾ-ಗೋಬೇನ್ ಎಂಬ ಜರ್ಮನರ ಯುದ್ಧದ ಹಡಗುಗಳ ವಿಷಯವಾಗಿ ತುರ್ಕಿಯವರು ಅವಲಂಬಿಸಿದ ಚರ್ಯೆಯು ಲಂಡನ್-ಪ್ಯಾರಿಸ್-ಪೆಟ್ರೋಗ್ರೇಡ್ ಪಟ್ಟಣಗಳಲ್ಲಿ ಅನುಮಾನವನ್ನು ಹುಟ್ಟಿಸಿತು. ಇವೆರಡು ಹಡಗುಗಳೂ ಮಧ್ಯಧರಾಸಮುದ್ರದಲ್ಲಿರುವ ಇಂಗ್ಲೀಷು-ಫ್ರೆಂಚರವರ ಹಡಗುಗಳಿಂದ ತಪ್ಪಿಸಿಕೊಂಡು ಬಂದು ಡಾರ್ಡಿನಲ್ಸ್ ಜಲಸಂಧಿಯಲ್ಲಿ ಅಡಗಿಕೊಂಡವು. ಅಂತರ್ಜಾತೀಯ ಧರ್ಮವನ್ನನುಸರಿಸಿಯೂ ಒಪ್ಪಂದಗಳನ್ನನುಸರಿಸಿಯೂ ನಡೆಯುವುದಾದರೆ ಈ ಹಡಗುಗಳನ್ನು ತುರ್ಕಿಸರ್ಕಾರದವರು ಎತ್ತಲೂ ಕದಲಾಡಗೊಡಿಸದೆ ತಡೆದು ನಿಲ್ಲಿಸಿ ಯುದ್ಧವು ಕೊನೆಮುಟ್ಟುವವರೆಗೂ ಅವುಗಳಲ್ಲಿರುವ ಕಲಾಸಿಗಳನ್ನು ಅವರ ದೇಶಕ್ಕೆ ಕಳುಹಿಸಿ ಕೊಡಬೇಕಾಗಿದ್ದಿತು. ಅಥವಾ ೨೪ ಗಂಟೆಗಳ ಹೊತ್ತು ತಮ್ಮ ರೇವೆಯಲ್ಲಿ ನಿಲ್ಲಿಸಿಕೊಂಡಿದ್ದು ಬಳಿಕ ಹೊರಟುಹೋಗಿರೆಂದು ಅವುಗಳಿಗೆ ತಿಳಿಯಪಡಿಸಬೇಕಾಗಿತ್ತು. ಆದರೆ ತುರ್ಕಿಯವರು ಹೀಗೆ ಮಾಡದೆ ಈ ಹಡಗುಗಳಿಗೆ ಅವಲಂಬನೆಯಿತ್ತು ಅವುಗಳು ಒಂದು ಫ್ರೆಂಚರ ಹಡಗಿನ ಮೇಲೆಬಿದ್ದಾಗ ಅದನ್ನು ನೋಡಿಕೊಂಡೂ ಸುಮ್ಮನಿದ್ದರು. ಬಳಿಕ ತುರ್ಕಿಯವರು ತಾವು ಈ ಹಡಗನ್ನು ಕ್ರಯಕ್ಕೆ ಕೊಂಡೆವೆಂದು ಪ್ರಕಟಿಸಿದರು. ಈ ಹಡಗುಗಳ ಮೇಲೆ ಜರ್ಮನ್ ಕಳಾಸಿಗಳನ್ನೇ ಇಟ್ಟು, ತುರ್ಕಿಯ ಯುದ್ಧನೌಕಾಸೇನೆಗೆ ಅಡ್ಮಿರಲ್ಲಾಗಿದ್ದ ಇಂಗ್ಲೀಷ್ ಅಧಿಕಾರಿಯನ್ನು ಕೆಲಸದಿಂದ ಬಿಡುಗಡೆಮಾಡಿದರು.

ಇಷ್ಟೇಅಲ್ಲದೆ ಡಾರ್ಡಿನಲ್ಸ್ ಜಲಸಂಧಿಯ ಮಾರ್ಗವನ್ನು ಮದ್ದಿನ ಗೋಳಗಳಿಂದ ತುಂಬಿ ಆ ಮಾರ್ಗದಲ್ಲಿ ಸಂಚರಿಸುವ ಮತ್ತೂ ಕಪ್ಪುಸಮುದ್ರ ಮಾರ್ಗದಿಂದ ಬರುವ ಇಂಗ್ಲೀಷ್‌ವ್ಯಾಪಾರದ ಹಡಗುಗಳನ್ನು, "ಮಾರ್ಗದಲ್ಲಿ ಮದ್ದಿನ ಗೋಳಗಳಿವೆ, ಆದುಕಾರಣ ಹೋಗುವುದಕ್ಕೆ ಅವಕಾಶವಿಲ್ಲ" ಎಂದು ಒಂದು ಕಾರಣವನ್ನೂ, "ತುರ್ಕಿಯವರು ಯುದ್ಧಪ್ರಯತ್ನವನ್ನು ಮಾಡುತ್ತಿದ್ದಾರೆ; ಸರಕುಗಳು ಬೇಕಾಗಿವೆ" ಎಂದು ಮತ್ತೊಂದುಕಾರಣವನ್ನೂ ಹೇಳಿ ತಡೆದುಬಿಟ್ಟರು. ತಟಸ್ಥವಾಗಿರುವ ದೇಶವು ಇಂಗ್ಲೀಷರ ವ್ಯಾಪಾರವಿಷಯದಲ್ಲಿ ಸಲ್ಲದಸಂಬಂಧವನ್ನು ಉಂಟುಮಾಡಿಕೊಳ್ಳುವುದು ದೊಡ್ಡ ಅನ್ಯಾಯವು. ಇದರಿಂದ ಇಂಗ್ಲೀಷ್‌ವರ್ತಕರಿಗೂ, ಸರಕುಗಳನ್ನು ಕಳುಹಿಸುವವರಿಗೂದೊಡ್ಡ ನಷ್ಟವನ್ನುಂಟುಮಾಡಿದುದು ಮಾತ್ರವೇ ಅಲ್ಲದೆ ಕಪ್ಪುಸಮುದ್ರದಲ್ಲಿ ೬೦-೭೦ ಇಂಗ್ಲೀಷ್‌ವ್ಯಾಪಾರದ ಹಡಗುಗಳನ್ನು ಅಲ್ಲಾಡದಂತೆ ನಿಲ್ಲಿಸಿಬಿಟ್ಟಿದ್ದಾರೆ. ಗೋಬೆನ್-ಬ್ರೆಸ್ಲಾ ಎಂಬ ಯುದ್ಧದ ಹಡಗುಗಳು ಕಪ್ಪುಸಮುದ್ರದಲ್ಲಿದ್ದರೆ ಅವುಗಳಮೇಲೆ ಬಿದ್ದು ಧ್ವಂಸಮಾಡುವವರಿಲ್ಲ. ಡಾರ್ಡಿನಲ್ಸ್ ಜಲಸಂಧಿಯು ಅಂತರ್ಜಾತೀಯರ ಒಡಂಬಡಿಕೆಗಳಿಗೆ ವಿರುದ್ಧವಾಗಿ ಮುಚ್ಚಲ್ಪಟ್ಟಿದೆ. ಇದಲ್ಲದೆ ಬಾಗ್ದಾದು-ಮೆಸಪೊಟೋಮಿಯಾಗಳಲ್ಲಿರುವ ದೊಡ್ಡದೊಡ್ಡ ತುರ್ಕಿಯಧಿಕಾರಿಗಳು ಇಂಗ್ಲೀಷ್ ಪ್ರಜೆಗಳನ್ನು ಬಾಧಿಸುತ್ತಲೂ, ಪ್ರಜೆಗಳಿಗೆ ಆಂಗ್ಲಪ್ರಭುತ್ವದಮೇಲೂ ಅವರ ಮಿತ್ರಗಳಾದ ರಷ್ಯಾ ಫ್ರಾನ್ಸುದೇಶಗಳಮೇಲೂ ಬಹಿರಂಗವಾಗಿ ತುರ್ಕಿಯವರು ದ್ವೇಷವನ್ನು ಉಂಟುಮಾಡಿಸುತ್ತಲೂ ಇದ್ದಾರೆ. ತುರ್ಕಿಯು ಹೀಗೆ ಕೋಪವನ್ನೆಬ್ಬಿಸುವ ಕಾರ್ಯಗಳನ್ನೆಲ್ಲಾ ಮಾಡಿದರೂ "ನೀವು ಗೋಬೆನ್-ಬ್ರೆಸ್ಲಾ ಹಡಗುಗಳ ಮೇಲಿರುವ ಜರ್ಮನ್ ಕಳಾಸಿಗಳನ್ನು ತೊಲಗಿಸಿ, ನಿಮ್ಮ ದೇಶೀಯರನ್ನೇ ಅವುಗಳ ಕೆಲಸಕ್ಕೆ ನಿಯಮಿಸಿ, ಇಂಗ್ಲೀಷ್ ವ್ಯಾಪಾರದ ಹಡಗುಗಳ ಸಂಚಾರಕ್ಕೆ ತೊಂದರೆಯುಂಟಾಗದಂತೆ ಇದ್ದು, ತಟಸ್ಥದೇಶದ ಧರ್ಮಗಳನ್ನು ನ್ಯಾಯವಾಗಿ ನೀವು ಕಾಪಾಡಿಕೊಳ್ಳುವುದಾದರೆ, ನೀವು ಇದುವರೆಗೆ ಉಂಟುಮಾಡಿರುವ ಕೋಪವನ್ನೆಲ್ಲಾ ಮರೆತುಬಿಟ್ಟು, ನಿಮ್ಮ ಗೌರವಸ್ವಾತಂತ್ರ್ಯಗಳಿಗೆ ಭಂಗವುಂಟಾಗದಂತೆ ಕಾಪಾಡುವೆವು" ಎಂದು ಆಂಗ್ಲಪ್ರಭುತ್ವದವರು ತುರ್ಕಿಗೆ ತಿಳಿಯಪಡಿಸಿದರು. ಮತ್ತೂ ಯುದ್ಧವು ಮುಗಿದು ಪುನಃ ಶಾಂತಿಸ್ಥಾಪನೆಗಾಗಿ ಒಡಂಬಡಿಕೆಗಳು ಬರೆಯಲ್ಪಡುವಾಗ ತುರ್ಕಿದೇಶದ ಸ್ವಾತಂತ್ರ್ಯಕ್ಕೂ ಗೌರವಕ್ಕೂ ಸಾಂಪತ್ತಿಕಸ್ಥಿತಿಗೂ ಭಂಗವುಂಟಾಗದಿರುವ ರೀತಿಯಲ್ಲಿ ನೋಡಿಕೊಳ್ಳುವೆವು" ಎಂದೂ ಆಂಗ್ಲಪ್ರಭುತ್ವದವರು ನಂಬುಗೆಯನ್ನು ಹೇಳಿದರು. ಇಷ್ಟು ಹೇಳಿದರೂ ತುರ್ಕಿಯು ಕೇಳದೆ ಬರಬರುತ್ತ ಇಂಗ್ಲೆಂಡಿಗೆ ಕೋಪವನ್ನು ಹುಟ್ಟಿಸುವ ಕೆಲಸವನ್ನು ಮಾಡುತ್ತಿದೆ.

ಮತ್ತೂ ಸಿರಿಯಾದಲ್ಲಿ ಯುದ್ಧಪ್ರಯತ್ನಗಳು ಜರುಗುತ್ತಿವೆಯೆಂದೂ ಕೂಡ ಆಂಗ್ಲಪ್ರಭುತ್ವದವರಿಗೆ ತಿಳಿಯಬಂದಿದೆ. ಈ ಪ್ರಯತ್ನಗಳು ಈಜಿಪ್ಟಿನಮೇಲೆ ಬೀಳುವುದಕ್ಕೆ ಮಾಡಲ್ಪಡುತ್ತಿವೆಯೋ ಹೊರತು ಬೇರೆ ಯಾವುದಕ್ಕೂ ಅಲ್ಲ. ಇಷ್ಟೇಅಲ್ಲದೆ ಈಜಿಪ್ಟಿನ ಎಲ್ಲೆಯಲ್ಲಿರುವ ಅರಬ್ಬಿಯವರಿಗೆ ಆಂಗ್ಲಪ್ರಭುತ್ವದ ಮೇಲೆ ದ್ವೇಷವನ್ನು ಹುಟ್ಟಿಸುವುದಕ್ಕಾಗಿ ತುರ್ಕಿಯವರೂ ಜರ್ಮನಿಯವರೂ ಸಹ ಪ್ರಯತ್ನಿಸುತ್ತಿರುವಂತೆಯೂ ಕೂಡ ತಿಳಿಯಬರುತ್ತಿದೆ. ಈಜಿಪ್ಟು-ಸೂಯಜ್‌ಕಾಲುವೆ-ಇವುಗಳಮೇಲೆ ದಂಡಯಾತ್ರೆಯನ್ನು ಮಾಡುವ ಉದ್ದೇಶದಿಂದ ಸೇನೆಗಳು ದಕ್ಷಿಣದಿಕ್ಕಿಗೆ ಕಳುಹಿಸಲ್ಪಟ್ಟಿವೆ. ಈ ಪ್ರಯತ್ನದಲ್ಲಿ ಸಹಾಯವನ್ನು ಮಾಡುವುದಕ್ಕೆ ಅರಬ್ಬಿಯವರನ್ನು ಆಯುಧಪಾಣಿಗಳನ್ನಾಗಿ ಮಾಡಿದ್ದಾರೆ. ಯುದ್ಧಸಾಮಗ್ರಿಗಳನ್ನು ಶೇಖರಿಸುವುದಕ್ಕಾಗಿ ಬಂಡಿಗಳು ಅಣಿಮಾಡಲ್ಪಟ್ಟಿವೆ. ಈಜಿಪ್ಟಿನವರೆಗಿರುವ ಮಾರ್ಗವನ್ನು ಸರಿಪಡಿಸಿದ್ದಾರೆ. ಅಕಾಬಾಜಲಸಂಧಿಯ ಮೇಲೆ ಯುದ್ಧನಾವೆಗಳೊಡನೆ ಬಂದು ತಮಗೆ ಇತರರುಅನರ್ಥವನ್ನುಂಟುಮಾಡದಿರುವಂತೆ ಮಾಡುವುದಕ್ಕಾಗಿ ಅದರಲ್ಲಿ ಮದ್ದಿನ ಗೋಳಗಳನ್ನು ಇಡುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದಾರೆ. ಕ್ರೈಸ್ತರಮೇಲೆ ಮಹಮ್ಮದೀಯರಿಗೆ ದ್ವೇಷೋತ್ಪಾದನೆಮಾಡುವವರಲ್ಲಿ ಮುಖ್ಯನಾದ ಷೇಕ್‌ಅಜೀಷಾವಿಸ್ಸು, ಗ್ರೇಟ್‌ಬ್ರಿಟನ್ನಿಗೆ ವಿರುದ್ಧವಾಗಿ ಯುದ್ಧಮಾಡಿರಿ ಎಂದು ಮಹಮ್ಮದೀಯರನ್ನು ಪ್ರೋತ್ಸಾಹಪಡಿಸುವುದಕ್ಕಾಗಿ ಬರೆದ ಕಾಗದಗಳನ್ನು ಸಿರಿಯಾದಲ್ಲಿ ಹಂಚಿರುವರು. ಬಹುಶಃಭರತಖಂಡದಲ್ಲೂ ಅಂಥ ಪತ್ರಿಕೆಗಳನ್ನು ಹಂಚಿರಬಹುದು.

ಇಂಗ್ಲೀಷರು ಈಜಿಪ್ಟನ್ನು ಆಕ್ರಮಿಸಿಕೊಂಡುದಕ್ಕಾಗಿ ಈಜಿಪ್ಟಿನ ರಾಜಧಾನಿಯಾದ ಕೈರೋನಗರದಲ್ಲಿ ಬಹುಕಾಲದಿಂದ ರಹಸ್ಯ ರಾಜದ್ರೋಹಪ್ರಯತ್ನಗಳನ್ನು ಮಾಡುತ್ತಿದ್ದು, ಸದ್ಯಃ ಕಾನ್‌ಸ್ಟಾಂಟಿನೋಪಲ್ಲಿನಲ್ಲಿರುವ ಜರ್ಮನ್‌ರಾಯಭಾರಿಯ ಕಚೇರಿಯಲ್ಲಿ ಉದ್ಯೋಗಿಯಾಗಿರುವ ಡಾಕ್ಟರ್ ಪ್ರೂಫರ್ ಎಂಬುವನು ಸಿರಿಯಾಕ್ಕೆ ಹೋಗಿ ಆಂಗ್ಲರೊಡನೆ ಯುದ್ಧಮಾಡುವುದಕ್ಕೆ ಬನ್ನಿರೆಂದು ಪ್ರಜೆಗಳನ್ನು ಹುರಿದುಂಬಿಸುತ್ತಿರುವನು. ಇಂಥ ರಹಸ್ಯಪ್ರಯತ್ನಗಳು ಅನೇಕಸ್ಥಲಗಳಲ್ಲಿ ಜರುಗುತ್ತಿವೆ. ತುರ್ಕಿಯವರು ಭರತಖಂಡಕ್ಕೂ ಕೂಡ ಕೆಲರನ್ನು ಕಳುಹಿ, ಈ ದೇಶದಲ್ಲಿರುವ ಮಹಮ್ಮದೀಯರಿಗೆ ಇಂಗ್ಲೀಷರಮೇಲೆ ದ್ವೇಷವನ್ನು ಹುಟ್ಟಿಸಬೇಕೆಂದು ಪ್ರಯತ್ನಿಸುತ್ತಿರುವಂತೆ ತಿಳಿಯಬರುತ್ತದೆ. ಅಂಥ ರಹಸ್ಯಪ್ರಯತ್ನಗಳು ಎಷ್ಟುಮಟ್ಟಿಗೆ ವ್ಯಾಪಿಸಿರುವುವೆಂಬುದು ಈಕೆಳಗಿನ ವಿಷಯದಿಂದ ಗೊತ್ತಾಗುವುದು —ಮೊನ್ನೆಮೊನ್ನೆಯವರೆಗೂ ಅಲೆಗ್ಸಾಂಡ್ರಿಯಾ ಪಟ್ಟಣದ ಪೊಲೀಸಿನಲ್ಲಿ ಉದ್ಯೋಗಿಯಾಗಿದ್ದ ಜರ್ಮನ್ ದೇಶೀಯನೊಬ್ಬನು ಕಾನ್‌ಸ್ಟಾಂಟಿನೋಪಲ್ಲಿನಮೇಲೆ ಬಂದನು. ಸಂಶಯಪಟ್ಟು ಅವನನ್ನು ಪರಿಶೋಧಿಸಲು, ಅವನ ಬಳಿಯಲ್ಲಿ ಸೂಯೋಜ್ ಕಾಲುವೆಯ ಚಿತ್ರಪಟವೂ ಇನ್ನು ಕೆಲ ಇತರ ಕಾಗದಗಳೂ ದೊರೆದುವು.

ಇಷ್ಟೇಅಲ್ಲದೆ ಯುದ್ಧವು ಆರಂಭವಾದಬಳಿಕ ಜರ್ಮನಿಯಿಂದ ಭೂಜಲಸೈನ್ಯಾಧಿಕಾರಿಗಳೂ ಸೈನಿಕರೂ ಸಹ ಯುದ್ಧಸಾಮಗ್ರಿಗಳಸಮೇತ ಅವಿಚ್ಛಿನ್ನವಾಗಿ ಪ್ರವಾಹದಂತೆ ಕಾನ್‌ಸ್ಟಾಂಟಿನೋಪಲ್ಲಿಗೆ ಹೋಗುತ್ತಿದ್ದರು. ಈ ಪಟ್ಟಣವು ಜರ್ಮನರ ಸೈನಿಕರ ಶಿಬಿರದಂತಾಗಿದೆ. ಜರ್ಮನ್ ಅಧಿಕಾರಿಗಳು ತುರ್ಕಿರಾಜ್ಯದ ಎಲ್ಲ ಭಾಗಗಳಿಗೂ ಹೋಗಿ ಅಲ್ಲಿನ ಪ್ರಜೆಗಳನ್ನು ಇಂಗ್ಲೀಷ್ ಫ್ರೆಂಚ್ ರಷ್ಯಾ ಪ್ರಭುತ್ವಗಳ ಮೇಲೆ ತಿರುಗಿಬೀಳುವಂತೆ ಮಾಡಲು ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇಷ್ಟೆಲ್ಲಾ ಪ್ರಯತ್ನಗಳನ್ನು ಜರ್ಮನಿಯವರು ತುರ್ಕಿಯವರ ಸಹಾಯದಿಂದ ಮಾಡುತ್ತಿದ್ದಾರೆ. ತುರ್ಕಿಯವರು ಇಂಗ್ಲೆಂಡನ್ನು ತಮ್ಮೊಡನೆ ಯುದ್ಧಕ್ಕೆ ಇಳಿಯಿಸಬೇಕೆಂದು ಮಾಡಿದ ಪ್ರಯತ್ನಗಳಲ್ಲಿ ಈ ಕೆಳಗಿನ ವಿಷಯವು ಕೊನೆಯ ಪ್ರಯತ್ನವೆಂದು ಕಾಣಬರುತ್ತದೆ. ತುರ್ಕಿದೇಶದ ಯುದ್ಧಾಂಗಮಂತ್ರಿಯು ಜಾಫ್ನಾದ ಕಮ್ಯಾಂಡರಿಗೆ ಅಕ್ಟೋಬರ್ ತಾ॥ ೧೮ ರಲ್ಲಿ "ಆ ಪ್ರಾಂತ್ಯದೊಳಗೆ ಒಂದು ವೇಳೆ ತುರ್ಕಿ ಇಂಗ್ಲೆಂಡುಗಳ ಸ್ನೇಹವ್ಯವಹಾರಗಳು ಕೆಟ್ಟುಹೋಗುವ ಪಕ್ಷದಲ್ಲಿ ಇಂಥಿಂಥ ವಿಧವಾಗಿ ನಡೆದುಕೊಳ್ಳಬೇಕು" ಎಂದು ವಿವರಿಸಿ ಬರೆಯಲ್ಪಟ್ಟಿದ್ದಿತು. ಈ ಕಾಗದದಲ್ಲಿ ಇಂಗ್ಲೀಷ್ ಪ್ರಭುತ್ವದವರನ್ನು ವಿರೋಧಿಗಳನ್ನಾಗಿ ಗಣಿಸಲ್ಪಟ್ಟಿರುವುದು ಮಾತ್ರವೇಅಲ್ಲದೆ, ಜಾಫ್ನಾದಲ್ಲಿರುವ ಇಂಗ್ಲೀಷ್ ರಾಯಭಾರಿಯ ಕಚೇರಿಯಮೇಲೆ ಕಟ್ಟಲ್ಪಟ್ಟಿರುವ ಆಂಗ್ಲಪತಾಕೆಯನ್ನು ಕಿತ್ತು ಬಿಸಾಡಿಬಿಡಿ ಎಂದು ಕೂಡ ಬರೆಯಲ್ಪಟ್ಟಿದೆ

ಪ್ರಪಂಚದಮೇಲಿರುವ ಮಹಮ್ಮದೀಯರ ರಾಷ್ಟ್ರಗಳೊಳಗೆಲ್ಲಾ ತುರ್ಕಿಯಮೇಲೆ ಇಂಗ್ಲೆಂಡು ವಿಶೇಷ ಸಾನುಭೂತಿಯನ್ನು ಹೊಂದಿರುತ್ತದೆ. ಯಾವಾಗಲೂ ಸ್ನೇಹಭಾವವನ್ನು ತೋರಿಸುತ್ತಿದೆ. ತುರ್ಕಿಗೆ ಯುರೋಪಿನಲ್ಲಿರುವ ರಾಜ್ಯವನ್ನು ಉಳಿಸುವುದಕ್ಕಾಗಿ ಪ್ರಯತ್ನಿಸಿ, ಬಾಲ್ಕನ್‌ಯುದ್ಧಾನಂತರದಲ್ಲಿ ಸಹಾಯಮಾಡಿದೆ. ಅಂಥ ಇಂಗ್ಲೆಂಡನ್ನು ಮರೆತು ತುರ್ಕಿಯವರು ವಿರೋಧಿಗಳ ಮಾತನ್ನು ಕೇಳಿ ಡೊಂಕುದಾರಿಯನ್ನು ಹಿಡಿಯುವುದು ಬಹಳ ವಿಷಾದಕರವಾಗಿದೆ. ತುರ್ಕಿಯವರು ಹೀಗೆ ಮಾಡುವುದು ಅಕ್ರಮವು, ಮತ್ತೂ ಕೃತಘ್ನತೆಯು. ಸದ್ಯದ ಸ್ಥಿತಿಗಳನ್ನು ಹಿಡಿದು ನೋಡಿದರೆ, ಜರ್ಮನಿಯು ತುರ್ಕಿಯನ್ನು ತಮ್ಮ ಪಕ್ಷವಾಗಿಯೂ ತುರ್ಕಿಗೆ ವಿರೋಧಿಯಾದ ಆಸ್ಟ್ರಿಯಾದ ಪಕ್ಷವಾಗಿಯೂ ಮಾಡಿ ಇಂಗ್ಲೆಂಡಿನ ಮೇಲೆ ಯುದ್ಧಕ್ಕೆ ಇಳಿಯಿಸುವುದೆಂಬ ಸಂಗತಿಯು ನಿಸ್ಸಂಶಯವು.

ತುರ್ಕಿಯು ಮಾಡಿದ ಯುದ್ಧೋಪಕ್ರಮ.

ತಾ॥ ೨೯ ನೆಯ ಗುರುವಾರದ ದಿನ ಬೆಳಗ್ಗೆ ತುರ್ಕಿಯ ಒಂದು ಯುದ್ಧದ ಹಡಗು ಕ್ರಿಮಿಯಾಕ್ಕೆ ಸೇರಿದ ಥಿಯೊಡೋಷಿಯಾ ಪಟ್ಟಣದಮೇಲೆ (ಇದು ರಷ್ಯಾಕ್ಕೆ ಸೇರಿ ಕಪ್ಪುಸಮುದ್ರದಲ್ಲಿರುವ ತೀರಪಟ್ಟಣ) ೧ಗಂಟೆಯಹೊತ್ತು ಗುಂಡುಗಳನ್ನು ಹಾರಿಸಿ, ಅಲ್ಲಿದ್ದ ಕ್ರೈಸ್ತದೇವಾಲಯಕ್ಕೂ ನಾಕಾಶ್ರಯಕ್ಕೂ ಸಂಬಂಧಿಸಿದ ಗೋಡೆಗಳಿಗೂ ಒಬ್ಬ ಸೈನಿಕನಿಗೂ ನಷ್ಟವನ್ನುಂಟುಮಾಡಿತು. ಬಳಿಕ "ಹೆಮಿಡಿಯಾ" ಎಂಬ ತುರ್ಕಿಯ ಯುದ್ಧದ ಹಡಗು ಬಂದು, ತಮಗೆ ಪಟ್ಟಣವನ್ನು ಸ್ವಾಧೀನಮಾಡದಿದ್ದರೆ ಅದರಮೇಲೆ ಗುಂಡುಗಳನ್ನು ಹಾರಿಸಿ ಧ್ವಂಸಮಾಡಿಬಿಡುವೆವೆಂದು ಭಯಪಡಿಸಿ, ಆ ಪಟ್ಟಣದಲ್ಲಿದ್ದ ತುರ್ಕಿ ಅಧಿಕಾರಿಯೊಡನೆ ಮಾತನಾಡಿಕೊಂಡು ಹೋಯಿತು. ಇದರಮೇಲೆ ತುರ್ಕಿಯ ಯುದ್ಧನಾವೆಗಳು ಅದೇ ಸಮುದ್ರದಲ್ಲಿರುವ ರಷ್ಯಾಕ್ಕೆ ಸೇರಿದ ಒಡೆಸ್ಸಾರೇವೆಗೆ ಪ್ರವೇಶಿಸಿ ಅಲ್ಲಿದ್ದ ರಷ್ಯನ್‌ಹಡಗುಗಳ ಮೇಲೆ ಫಿರಂಗಿಗುಂಡುಗಳನ್ನು ಹಾರಿಸಿದುವೆಂದು ರೂಟರ್‌ಸುದ್ದಿಗಾರರು ತಿಳಿಯಿಸಿರುವರು. ಇದರಮೇಲೆ ಕಾನ್‌ಸ್ಟಾಂಟಿನೋಪಲ್ಲಿನಲ್ಲಿದ್ದ ರಷ್ಯಾರಾಯಭಾರಿಗೆ ಸ್ವದೇಶಕ್ಕೆ ಹಿಂತಿರುಗಿ ಬರಬೇಕೆಂದು ಆ ಪ್ರಭುತ್ವದವರು ಅಪ್ಪಣೆಮಾಡಿದರು. ಮತ್ತೂ ತುರ್ಕಿ ರಾಜಧಾನಿಯಲ್ಲಿರುವ ಆಂಗ್ಲರಾಯಭಾರಿಯ ಆಫೀಸಿಗೆ ಇದ್ದ ವಾರ್ತಾತಂತ್ರಿಯ ಸಂಬಂಧವನ್ನು ತುರ್ಕಿಯವರು ನಿಷ್ಕಾರಣವಾಗಿ ನಿಲ್ಲಿಸಿಬಿಟ್ಟರು. ಸದ್ಯದ ಸ್ಥಿತಿಗಳನ್ನು ನೋಡಲು ನೀವು ಯುದ್ಧಸನ್ನಾಹವನ್ನು ಮಾಡುತ್ತಿರುವಂತೆ ಕಾಣುತ್ತದೆ. ನಿಮ್ಮ ಉದ್ದೇಶವೇನು? ಎಂಬುದಾಗಿ ಆಂಗ್ಲಪ್ರಭುತ್ವದವರು ತುರ್ಕಿಯ ಪ್ರಭುತ್ವದವರನ್ನು ಕೇಳಿ ಅದಕ್ಕೆ ಅಕ್ಟೋಬರ್ ತಾ॥ ೩೧ ನೇ ಸಾಯಂಕಾಲದೊಳಗಾಗಿ ಉತ್ತರವನ್ನು ಕೊಡಬೇಕೆಂದು ಸೂಚಿಸಿದರು. ನವಂಬರ್ ತಾ॥ ಒಂದಾದರೂ ಸಮಾಧಾನವು ಬರಲಿಲ್ಲ. ಇಂಗ್ಲೀಷು-ಫ್ರಾನ್ಸ್-ರಷ್ಯಾದೇಶದ ರಾಯಭಾರಿಗಳು ಕಾನ್‌ಸ್ಟಾಂಟಿನೋಪಲ್ಲನ್ನು ಬಿಟ್ಟು ಸ್ವದೇಶಕ್ಕೆ ಹೊರಟುಹೋದರೆಂದು ನವಂಬರ್ ತಾ॥ ೧ ರ ತಂತ್ರೀವಾರ್ತೆಗಳು ತಿಳಿಯಿಸಿದುವು. ರಷ್ಯಾರಾಜಧಾನಿಯಲ್ಲಿದ್ದ ತುರ್ಕಿಯ ರಾಯಭಾರಿಯು ಸ್ವದೇಶಕ್ಕೆ ಹೊರಟುಬಂದನು.

ಈ ಮಧ್ಯದಲ್ಲಿ ಬೇರೆಬೇರೆ ಸುದ್ದಿಗಳು ಹುಟ್ಟಿರುವುವು. ಕಪ್ಪುಸಮುದ್ರದಲ್ಲಿ ತುರ್ಕಿ ಯುದ್ಧದ ಹಡಗುಗಳು ರಷ್ಯನರಮೇಲೆ ಮಾಡಿದ ಅಭಿಯೋಗಗಳು ತುರ್ಕಿ ಪ್ರಭುತ್ವದ ಅಪ್ಪಣೆಯಮೇರೆ ನಡೆದುದಲ್ಲವೆಂದೂ, ತುರ್ಕಿಯ ಯುದ್ಧದ ಹಡಗುಗಳ ಮೇಲಿದ್ದ ಜರ್ಮನ್ ಉದ್ಯೋಗಿಗಳು ತಾವೇ

ಸ್ವತಂತ್ರಿಸಿ ಇಷ್ಟು ಕೆಲಸವನ್ನು ಮಾಡಿರುವರೆಂದೂ ಹೇಳಲುಪಕ್ರಮವಾಯಿತು. ಒಂದುವೇಳೆ ಹೀಗಿದ್ದರೂ ಇರಬಹುದು; ಹಾಗಾದರೆ ತುರ್ಕಿಯವರು ಕೂಡಲೇ ಆ ಯುದ್ಧದ ಹಡಗುಗಳ ಮೇಲಿರುವ ಜರ್ಮನ್ ಉದ್ಯೋಗಿಗಳನ್ನು ತೊಲಗಿಸಬೇಕೆಂತಲೂ ಹಾಗೆ ಮಾಡದೆಹೋದರೆ ಇಂಗ್ಲೆಂಡ್ ರಷ್ಯಾದೇಶಗಳು ಎಂಥ ಸಂದರ್ಭಬಿದ್ದರೂ ಅದನ್ನು ನೋಡಿಕೊಳ್ಳಲು ಸಿದ್ಧರಾಗಿರುವರೆಂತಲೂ ಇಂಗ್ಲೆಂಡ್-ರಷ್ಯಾ ರಾಯಭಾರಿಗಳು ಅಭಿಪ್ರಾಯಪಟ್ಟರು. ಆದರೂ ತುರ್ಕಿ ಪ್ರಭುತ್ವದಿಂದ ತಕ್ಕ ಸಮಾಧಾನವು ಬರಲಿಲ್ಲ. ಯುದ್ಧವನ್ನಾರಂಭಿಸಿರುವೆವೆಂಬ ಪ್ರಕಟನೆಯೂ ಮಾಡಲ್ಪಡಲಿಲ್ಲ. ಆದರೂ ಮಿತ್ರಮಂಡಲಿಯವರು ತಾ॥ ೨ ರಲ್ಲಿ ತುರ್ಕಿಯನ್ನು ಕುರಿತು-ಕಪ್ಪುಸಮುದ್ರದಲ್ಲಿ ರಷ್ಯನರ ರೇವೆಗಳನ್ನು ಏತಕ್ಕೆ ಮುತ್ತಿದಿರಿ? ಎಂಬುದಾಗಿಯೂ, ಯುದ್ಧದ ಹಡಗಿನ ಮೇಲಿರುವ ಜರ್ಮನ್ ಉದ್ಯೋಗಿಗಳನ್ನು ತೆಗೆದುಬಿಡಿರೆಂಬುದಾಗಿಯೂ, ಗೋಬೆನ್-ಬ್ರೆಸ್ಲಾ ಹಡಗುಗಳನ್ನು ಯುದ್ಧಸಮಾಪ್ತಿಯವರೆಗೆ ಉಪಯೋಗಿಸಿಕೊಳ್ಳದೆ ಇಡಬೇಕೆಂಬುದಾಗಿಯೂ, ಹೀಗೆ ಮಾಡದೆಹೋದರೆ ತುರ್ಕಿಯೊಡನೆ ತಮ್ಮ ರಾಜಕಾರ್ಯಸಂಬಂಧಗಳು ತಪ್ಪಿಹೋಗುವುವೆಂದೂ ತಿಳಿಸಿದರು. ಅದಕ್ಕೂ ತುರ್ಕಿಯವರು ಯಾವ ಸಮಾಧಾನವನ್ನೂ ಕೊಡಲಿಲ್ಲ

ತುರ್ಕಿಯ ಈ ಚರ್ಯೆಯು ಅದರ ಡೋಲಾಯಮಾನ ಸ್ಥಿತಿಯನ್ನು ವ್ಯಕ್ತಪಡಿಸಿತು. ತಾ॥ ೨ ರಲ್ಲಿ ಕಾನ್‌ಸ್ಟಾಂಟಿನೋಪಲ್ಲಿನಲ್ಲಿದ್ದ ಆಂಗ್ಲರಾಯಭಾರಿ ರಷ್ಯಾ ಫ್ರಾನ್ಸ್ ರಾಯಭಾರಿಗಳ ಕಚೇರಿಗಳ ಇತರ ಉದ್ಯೋಗಸ್ಥರುಗಳೂ ಬಹಳಮಂದಿ ಇತರ ದೇಶೀಯರೂ ಊರನ್ನು ಬಿಟ್ಟು ಹೊರಟುಹೋದರು. ಅದೇದಿನ ಲಂಡನ್‌ಪಟ್ಟಣದಲ್ಲಿದ್ದ ತುರ್ಕಿ ರಾಯಭಾರಿಯು ವಿದೇಶಾಂಗಮಂತ್ರಿಯವರ ಬಳಿಗೆ ಹೋಗಿ ತಾನು ಸ್ವದೇಶಕ್ಕೆ ಹೊರಡಲು ಅನುಮತಿಯನ್ನು ಪಡೆದುಬಂದನು.

ಕಾನ್‌ಸ್ಟಾಂಟಿನೋಪಲ್ಲಿನಲ್ಲಿ ಇದುವರೆಗಿದ್ದ ಜರ್ಮನರಲ್ಲದೆ ಇನ್ನೂ ಅನೇಕ ಜರ್ಮನ್ ಅಧಿಕಾರಿಗಳು ಮೊನ್ನೆಮೊನ್ನೆ ಬಂದು ಸೇರಿಯೂ ಸೇರುತ್ತಲೂ ಇದ್ದಾರೆ.

ಬಸೋರಾದಲ್ಲಿರುವ ಆಂಗ್ಲರಾಯಭಾರಿಯನ್ನೂ ಕೆಲ ಆಂಗ್ಲವರ್ತಕರನ್ನೂ ಅಲ್ಲಿನ ತುರುಕರು ಹೋಗಗೊಡಿಸದೆ ಅಡ್ಡಿಮಾಡಿದ್ದಾರೆ.

ಇಂಗ್ಲೀಷರ ಮತ್ತೂ ಫ್ರೆಂಚರ ಯುದ್ಧನಾವೆಗಳು ಡಾರ್ಡಿನಲ್ಸ್ ಜಲಸಂಧಿಗೆ ಬಂದು ಅಲ್ಲಿರುವ ಕೋಟೆಗಳಮೇಲೆ ದೊಡ್ಡದೊಡ್ಡ ಫಿರಂಗಿಗುಂಡುಗಳನ್ನು ಹಾರಿಸಿದುವು. ಕೋಟೆಯಿಂದಲೂ ಫಿರಂಗಿಗುಂಡುಗಳು ಈ ಹಡಗುಗಳಮೇಲೆ ಹಾರಿಸಲ್ಪಟ್ಟುವು. ಮಿತ್ರಮಂಡಲಿಯವರಿಗೇನೂ ನಷ್ಟವಾಗಲಿಲ್ಲ. ಹೆಲ್ ಕೋಟೆಯಲ್ಲಿ ದೊಡ್ಡ ಶಬ್ದವಾಗಿ ವಿಪರೀತವಾದ ಹೊಗೆಯೆದ್ದಿತು. ಇದರಿಂದ ಮದ್ದಿನ ಕೊಟ್ಟಾರವು ಗುಂಡಿನೇಟಿನಿಂದ ಸುಟ್ಟುಹೋಗಿರಬೇಕೆಂದು ಕಾಣುತ್ತದೆ.

ಇಂಗ್ಲೀಷರ ಮಿನರ್ವಾ ಎಂಬ ಕ್ರೂಯಿಸರು ಅಕಾಬಾಪಟ್ಟಣದ ಬಳಿಗೆ ಬಂದಾಗ ಕೆಲ ತುರ್ಕಿ ಸೋಲ್ಜರರು ಒಂದುಕಡೆ ನಿಂತಿದ್ದರು. ಅವರಲ್ಲಿ ಒಬ್ಬ ಜರ್ಮನ್‌ಸೈನಿಕನೂ ಇದ್ದನು; ಆಯುಧಪಾಣಿಗಳಾದ ಪ್ರಜೆಗಳೂ ಇದ್ದರು. ಅಷ್ಟರಲ್ಲಿ ಕ್ರೂಯಿಸರು ಮಿನರ್ವಾ ಕೋಟೆಯಮೇಲೂ ಸೈನಿಕರಮೇಲೂ ಫಿರಂಗಿಗುಂಡುಗಳನ್ನು ಹಾರಿಸಿತು. ಒಳಗಿದ್ದ ಶತ್ರುಗಳು ಪಟ್ಟಣವನ್ನೂ ಸಾಮಗ್ರಿಗಳ ಉಗ್ರಾಣವನ್ನೂ ಪೋಸ್ಟಾಫೀಸನ್ನೂ ಬಿಟ್ಟು ಹೊರಟುಹೋದರು. ಗುಂಡಿನೇಟಿನಿಂದ ಶತ್ರುಪಕ್ಷಕ್ಕೆ ಸ್ವಲ್ಪ ನಷ್ಟವಾಯಿತು.

ನೈಜಾಂರವರ ಪ್ರಕಟನೆ.

ಹೀಗೆ ತುರ್ಕಿಯು ತಾನಾಗಿ ಇಂಗ್ಲೀಷ್‌ಪ್ರಭುತ್ವದವರ ಮೈತ್ರಿಯನ್ನು ಕಳೆದುಕೊಂಡು ಯುದ್ಧಕ್ಕೆ ಸನ್ನದ್ಧವಾದ ಸಂಗತಿಯು ಹಿಂದೂಸ್ಥಾನದ ನೈಜಾಮರಂಥ ಮಹಮ್ಮದೀಯಪ್ರಭುಗಳಿಗೂ ಖೋಜಾಪಂಗಡದ ಮುಖ್ಯಗುರುಗಳಾದ ಆಗಾಖಾನರಂಥ ಪ್ರಮುಖರನೇಕರಿಗೂ ಒಪ್ಪಿಗೆಯಾಗಿರುವುದಿಲ್ಲ. ಅವರುಗಳು ಈ ಸಂಬಂಧವಾದ ಪ್ರಕಟನೆಗಳ ಮೂಲಕ ತಮ್ಮ ಪ್ರಜೆಗಳಿಗೆ ತಿಳಿಯಪಡಿಸಿರುವುವೇನೆಂದರೆ:—

"ಯುರೋಪುಯುದ್ಧದ ಸಂದರ್ಭದಲ್ಲಿ ಈಗ ಜರುಗಿರುವ ವ್ಯವಹಾರಗಳನ್ನು ತಿಳಿದು ತಮ್ಮ ದೇಶದ ಪ್ರಜೆಗಳು ಯಾವ ತೆರದ ಗೊಂದಲವನ್ನೂ ಹೊಂದದೆ ಇರಬೇಕೆಂದು ನೈಜಾಂರವರು ಈ ಸಂದೇಶವನ್ನು ಪ್ರಕಟಿಸಿದ್ದಾರೆ—ಇದನ್ನು ಪ್ರಜೆಗಳು ಗಮನಿಸಿ, ತಮ್ಮಗಳ, ತಮ್ಮ ಪ್ರಭುವಿನ ಮತ್ತೂ ತಮ್ಮ ಚಕ್ರವರ್ತಿಯ ಪ್ರಯೋಜನಾರ್ಥವಾಗಿ ಈ ಸಂದೇಶದಲ್ಲಿ ಕಾಣಿಸಿರುವಂತೆ ನಡೆದುಕೊಳ್ಳುವರೆಂದು ನಂಬಲಾಗಿದೆ.

ಯುರೋಪಿನಲ್ಲಿ ನಡೆಯುತ್ತಿರುವ ಯುದ್ಧಕ್ರಮವನ್ನು ಅರಿತು ಈ ವಿಷಮಸಮಯದಲ್ಲಿ ಭರತಖಂಡದಲ್ಲಿರುವ ಮಹಮ್ಮದೀಯರೆಲ್ಲರೂ ಆಂಗ್ಲಪ್ರಭುತ್ವದ ವಿಷಯದಲ್ಲಿ ಭಕ್ತಿಸಂಪನ್ನರಾಗಿರುವುದು ಕರ್ತವ್ಯವಾಗಿರುತ್ತದೆ. ಈ ಲೋಕದಲ್ಲಿರುವ ಮಹಮ್ಮದೀಯ ರಾಜ್ಯಗಳಲ್ಲೇ ಆಗಲಿ ತದಿತರ ರಾಜ್ಯಗಳಲ್ಲೇ ಆಗಲಿ ಭರತಖಂಡವು ಆಂಗ್ಲಪ್ರಭುತ್ವದ ಕೆಳಗೆ ಅನುಭವಿಸುತ್ತಿರುವಂಥ ಮತಸ್ವಾತಂತ್ರ್ಯವನ್ನೂ ವ್ಯಕ್ತಿಸ್ವಾತಂತ್ರ್ಯವನ್ನೂ ಇನ್ಯಾವರಾಜ್ಯದಲ್ಲೂ ಅನುಭವಿಸುತ್ತಿಲ್ಲ. ಇದುವರೆಗೆ ಮಹಮ್ಮದೀಯ ಮತಕ್ಕೆ ತಾವು ಎಷ್ಟುಮಟ್ಟಿಗೆ ಮಿತ್ರರಾಗಿರುವೆವೋ ಈಗಲೂ ಹಾಗೆಯೇ ಸ್ನೇಹಿತರಾಗಿರುವೆವೆಂತಲೂ, ತಮ್ಮ ರಾಜ್ಯದಲ್ಲಿರುವ ಮಹಮ್ಮದೀಯ ಪ್ರಜೆಗಳನ್ನು ಪ್ರೀತಿಸಿ ಅವರಿಗೆ ಯಾವ ತೊಂದರೆಯೂ ಉಂಟಾಗದಂತೆ ಕಾಪಾಡುವೆವೆಂತಲೂ ಆಂಗ್ಲಪ್ರಭುತ್ವದವರು ನಂಬುಗೆಯನ್ನು ಕೊಡುತ್ತಾರೆ. ಆದುದರಿಂದ ಈ ಸಂದಿಗ್ಧ ಸಮಯದಲ್ಲಿ ಭರತಖಂಡದ ಮಹಮ್ಮದೀಯರೆಲ್ಲರೂ ಮುಖ್ಯವಾಗಿ ನನ್ನ ದೇಶದಲ್ಲಿರುವ ಮಹಮ್ಮದೀಯರೆಲ್ಲರೂ ನಿಶ್ಚಿಂತತೆಯಿಂದ ಜೀವಿಸಬೇಕೆಂದು ಅಪೇಕ್ಷಿಸುವರಾದರೆ ಆಂಗ್ಲಪ್ರಭುತ್ವದ ವಿಷಯದಲ್ಲಿ ಇದುವರೆಗೆ ಎಷ್ಟು ಸಾಂದ್ರವಾದ ನಿಶ್ಚಲರಾಜಭಕ್ತಿಯನ್ನು ಹೊಂದಿದ್ದರೋ ಈಗಲೂ ಅಂಥ ಭಕ್ತಿಯನ್ನೇ ಹೊಂದಿರಬೇಕು. ಆಂಗ್ಲಪ್ರಭುತ್ವದವರು ಧರ್ಮಯುದ್ಧವನ್ನು ಮಾಡುತ್ತಿರುವರೆಂದು ನಾನು ನಂಬುತ್ತೇನೆ. ಅದುಕಾರಣ, ಪ್ರಜೆಗಳು ತಮ್ಮ ಪಾಲಕರೊಡನೆ ಇರುವ ಸಂಬಂಧವನ್ನು ಪವಿತ್ರವಾಗಿರಗೊಟ್ಟು, ಯಾರು ಯಾವವಿಧದ ಬೋಧೆಯನ್ನು ಮಾಡಿ ಅಡ್ಡದಾರಿಗೆ ತಿರುಗಿಸುವುದಕ್ಕೆ ಪ್ರಯತ್ನಿಸಿದರೂ, ರಹಸ್ಯವಾಗಾದರೂ ಬಹಿರಂಗವಾಗಾದರೂ ಆಂಗ್ಲಪ್ರಭುತ್ವದಮೇಲೆ ದ್ರೋಹಚಿಂತನೆಯನ್ನು ಮಾಡದೆ ರಾಜಭಕ್ತಿನಿರತರಾಗಿರಬೇಕು. ನಾನು ನನ್ನ ಪೂರ್ವಿಕರಂತೆಯೇ ಯಾವಾಗಬೇಕಾದರೆ ಆವಾಗ ನನ್ನ ದೇಹವನ್ನೂ ನನ್ನ ಬೊಕ್ಕಸದಲ್ಲಿರುವ ಎಲ್ಲಾಹಣವನ್ನೂ ನನ್ನ ಸ್ವಕೀಯಧನವನ್ನೂ ಸಹ ಆಂಗ್ಲಪ್ರಭುಗಳಿಗೋಸುಗ ಧಾರೆಯೆರೆಯಲು ಸಿದ್ಧನಾಗಿದ್ದೇನೆ; ಹಿಂದೂದೇಶದಲ್ಲಿರುವ ಮಹಮ್ಮದೀಯರೆಲ್ಲರೂ ಮುಖ್ಯವಾಗಿ ನನ್ನ ರಾಜ್ಯದಲ್ಲಿನ ಮಹಮ್ಮದೀಯರೆಲ್ಲರೂ ನನ್ನಂತೆಯೇ ತಮ್ಮ ಪ್ರಾಣಧನಗಳನ್ನು ಆಂಗ್ಲಪ್ರಭುಗಳಿಗೆ ಧಾರೆಯೆರೆದುಕೊಡಲು ಸಿದ್ಧರಾಗಿರಬೇಕು."

ಆಗಾಖಾನರವರ ಹಿತವಾದ.

ಬೊಂಬಾಯಿಯಲ್ಲಿರುವ ಖೋಜಾಸಂಘದವರಿಗೆ ಆಗಾಖಾನರು ಲಂಡನ್‌ಪಟ್ಟಣದಿಂದ ತಂತ್ರೀವಾರ್ತೆಯ ಮೂಲಕ ಹೀಗೆ ತಿಳಿಯಿಸಿರುತ್ತಾರೆ—"ತುರ್ಕಿರಾಜ್ಯಕ್ಕೂ ಮಿತ್ರಮಂಡಲಿಯವರಿಗೂ (ಎಂದರೆ ಇಂಗ್ಲೆಂಡ್-ರಷ್ಯಾ ಫ್ರಾನ್ಸು) ಯುದ್ಧವು ಸಂಘಟಿಸಿರುವುದು ನನಗೆ ತುಂಬಾ ಚಿಂತೆಯನ್ನುಂಟುಮಾಡಿರುತ್ತದೆ. ಈ ಸಮಯದಲ್ಲಿ ಭರತಖಂಡದಲ್ಲಿರುವ ಮಹಮ್ಮದೀಯರಲ್ಲೂ, ಆದರ ಎಲ್ಲೆಗಟ್ಟಿನಲ್ಲಿರುವ ಮಹಮ್ಮದೀಯರಲ್ಲೂ, ಇತರ ದೇಶಗಳಲ್ಲಿರುವ ಮಹಮ್ಮದೀಯರಲ್ಲೂ, ನನ್ನ ಶಿಷ್ಯರಾಗಿರುವವರೆಲ್ಲರೂ ಆಂಗ್ಲಪ್ರಭುತ್ವದಮೇಲೆ ಭಕ್ತಿವಿಧೇಯತೆಗಳಿಂದ ಕೂಡಿರಬೇಕು. ತುರ್ಕಿಯು ಜರ್ಮನಿಯವರ ದುರ್ಬೋಧೆಯಿಂದ ಯುದ್ಧಕ್ಕೆ ನಿಂತಿತು."

ಮಹಮ್ಮದೀಯ ಲೋಕಾಭಿಪ್ರಾಯಗಳು.

ಬೆಲೂಚಿ ಮಹಮ್ಮದೀಯರು—ಇಂಡ್ಯಾ ಎಲ್ಲೆಕಟ್ಟಿನಲ್ಲಿರುವ ಸಂಸ್ಥಾನಾಧಿಪತಿಗಳು, ಗ್ರಾಮಾಧಿಕಾರಿಗಳು ಮೊದಲಾದ ಮಹಮ್ಮದೀಯರ ದೊಡ್ಡಸಭೆಯು ಕ್ವೆಟ್ಟಾನಗರದಲ್ಲಿ ನೆರೆದು, ಈ ಕೆಳಗೆ ಕಂಡ ತೀರ್ಮಾನವನ್ನು ಮಾಡಿರುವರು."ತುರ್ಕಿಯವರ ಸ್ವಾಸ್ಥ್ಯಕ್ಕೆ ಭಂಗವನ್ನು ತರುವ ಜರ್ಮನರ ಆಲೋಚನೆಗಳನ್ನು ತುರ್ಕಿ ಪ್ರಭುತ್ವದವರು ಕೇಳಿದುದಕ್ಕಾಗಿ ಬಲೂಚಿಸ್ಥಾನದ ಮಹಮ್ಮದೀಯರು ಚಿಂತೆಪಡುವುದಲ್ಲದೆ, ಹೀಗೆ ಮಾಡುವುದರಿಂದ ತುರ್ಕಿಗೆ ಅನರ್ಥವುಂಟಾಗುವುದೆಂದು ಅಭಿಪ್ರಾಯಪಡುತ್ತಾರೆ. ಮತ್ತೂ ಮಹಮ್ಮದೀಯರಿಗೆ ಆಂಗ್ಲಪ್ರಭುತ್ವದ ಮೇಲಿರುವ ಅಚ್ಛಿನ್ನಭಕ್ತಿಯನ್ನು ಈಗ ಮತ್ತೊಮ್ಮೆ ವ್ಯಕ್ತಪಡಿಸಿ, ತಮ್ಮಮೇಲೆ ಆಂಗ್ಲಪ್ರಭುತ್ವದವರು ಪೂರ್ವದಂತೆಯೇ ನಂಬುಗೆಯನ್ನಿಡುವರೆಂದು ನಂಬುತ್ತೇವೆ.

ಬೊಂಬಾಯಿ ಮಹಮ್ಮದೀಯರು.

ತುರ್ಕಿಯು ಎಂಥ ದುರ್ಮಾರ್ಗಕ್ಕೆ ಬಿದ್ದರೂ ಹಿಂದೂದೇಶದ ಮಹಮ್ಮದೀಯರ ರಾಜಭಕ್ತಿಯು ನಿಶ್ಚಲವಾಗಿರುವುದು. ನಾವು ಜಾರ್ಜ್‌ಚಕ್ರವರ್ತಿಯವರಲ್ಲಿ ನಿಶ್ಚಲಭಕ್ತರಾಗಿರುವೆವು ಇನ್ನಾರಮೇಲೂ ನಮ್ಮ ಭಕ್ತಿಯಿಲ್ಲ. ತುರ್ಕಿಯು ಯುದ್ಧಕ್ಕೆ ನಿಂತುದಕ್ಕಾಗಿ ಸುಲ್ತಾನರನ್ನು ನಾವು ನಿಂದಿಸಿ ಫಲವಿಲ್ಲ. ಏಕೆಂದರೆ—ಸುಲ್ತಾನರು ಅಲ್ಲಿನ ರಾಜಕೀಯನಾಯಕರ ಕೈಯೊಳಗಣ ಗೊಂಬೆಯಂತಿದ್ದಾರೆ. ಆ ರಾಜಕೀಯನಾಯಕರಾದರೋ—ಜರ್ಮನ್‌ಪ್ರಭುತ್ವದವರು ಹೇಗೆ ತಿರುಗಿಸಿದರೆ ಹಾಗೆ ತಿರುಗುವವರಾಗಿದ್ದಾರೆ. ಈ ವಿಷಯದಲ್ಲಿ ಯಾರೂ ಅನುಮಾನ ಪಡಬೇಕಾದುದಿಲ್ಲ. ಹಿಂದೂದೇಶದ ಮಹಮ್ಮದೀಯರ ರಾಜಭಕ್ತಿಯು ವಚನಮಾತ್ರದಲ್ಲಿರುವುದೇಹೊರತು ಹೃತ್ಪೂರ್ವಕವಾದುದಲ್ಲವೆಂದು ಇದುವರೆಗೆ ಕೆಲರು ಆಡುತ್ತಿದ್ದರು. ಆದರೆ ಈಗಿನ ಯುದ್ಧದಿಂದ ಅವರ ರಾಜಭಕ್ತಿಯು ಎಷ್ಟು ನಿರ್ಮಲವಾದುದೆಂಬುದು ಗೊತ್ತಾಯಿತು. ಹಿಂದೂದೇಶದಲ್ಲಿರುವ ಮಹಮ್ಮದೀಯನಾಯಕರೆಲ್ಲರೂ ಸಂಘಗಳನ್ನೇರ್ಪಡಿಸಿ ಹುಚ್ಚು ಸುದ್ದಿಗಳನ್ನು ಹರಡದಂತೆ ನಿರ್ಮೂಲಮಾಡಿ, ಓದುಬರಹಗಳನ್ನರಿಯದ ಮಹಮ್ಮದೀಯಜನರಿಗೆ ನಿಜಸ್ಥಿತಿಯನ್ನು ತಿಳಿಯಿಸಿಕೊಡಬೇಕು."

ಯುದ್ಧಪರ್ಯವಸಾನದಲ್ಲಿ ಆಂಗ್ಲಪ್ರಭುತ್ವದವರು ಅವರ ಮಿತ್ರಮಂಡಲಿಯವರೂ ಮಾತ್ರವೇ ನಿಜವಾಗಿಯೂ ಜಯಶೀಲರಾಗಿ ಜರ್ಮನ್‌ದೇಶೀಯರಿಗೆ ಸಂಧಿನಿಬಂಧನಗಳನ್ನು ಏರ್ಪಡಿಸುವವರಾಗುವುದು ಖಂಡಿತ ಅಂಥವರೊಡನೆ ಯುದ್ಧಕ್ಕೆ ನಿಲ್ಲುವುದರಲ್ಲಿ ತುರ್ಕಿ ಸುಲ್ತಾನರು ಸರಿಯಾದ ಆಲೋಚನೆಯನ್ನು ಕೇಳಲಿಲ್ಲವೆಂದು ಹೇಳಬೇಕಾಗುತ್ತದೆ. ಜರ್ಮನಿಯ ರಂಧ್ರಾನ್ವೇಷಣ ತತ್ಪರರು ಕಾನ್‌ಸ್ಟಾಂಟಿನೋಪಲ್ಲಿಗೆ ಬಂದು ಮಾಡಿದ ದುರ್ಬೋಧನೆಯಿಂದ ಇಂಥ ಅನರ್ಥವು ಜರುಗಿರುತ್ತದೆ. ತುರ್ಕಿಗೆ ಇಂಥ ಸ್ಥಿತಿಯನ್ನುಂಟುಮಾಡಿದ ಜರ್ಮನ್‌ಚಕ್ರವರ್ತಿಯವರಮೇಲೆ ನಮಗಿರುವ ಆಗ್ರಹವು ಅಪಾರವಾಗಿರುತ್ತದೆ. ತುರ್ಕಿದೇಶೀಯರು ತಮ್ಮ ಸ್ನೇಹಿತರಿಗೂ ಅಭಿಮಾನಿಗಳಿಗೂ ಸಹ ಆಶಾಭಂಗವನ್ನು ಮಾಡಿರುತ್ತಾರೆ. ಆತ್ಮವಿನಾಶಕವಾದ ಅವರ ಈಗಿನ ಪ್ರವರ್ತನವು ಮಹಮ್ಮದೀಯ ಜನವರ್ಗಕ್ಕೆಲ್ಲಾ ಸಂತಾಪವನ್ನೂ ಲಜ್ಜೆಯನ್ನೂ ಉಂಟುಮಾಡಿರುತ್ತದೆ. ಸ್ವತಃ ಮಹಮ್ಮದೀಯ ಪ್ರಭುಗಳಿಂದಲೇ ಆಳಲ್ಪಡುತ್ತಿರುವ ದೇಶಗಳಲ್ಲಿರುವ ಮಹಮ್ಮದೀಯರಿಗೆ ಇಲ್ಲದಿರುವ ಸ್ವಾತಂತ್ರ್ಯವನ್ನು ಕೂಡ ಆಂಗ್ಲಪ್ರಭುತ್ವದವರು ತಮ್ಮ ಪರಿಪಾಲನೆಗೊಳಪಟ್ಟ ಮಹಮ್ಮದೀಯರೆಲ್ಲರಿಗೂ ಉಂಟುಮಾಡಿಕೊಟ್ಟಿರುವರು ಅದುಕಾರಣ ಭರತಖಂಡದಲ್ಲಿರುವ ಮಹಮ್ಮದೀಯರೆಲ್ಲರೂ ಆಂಗ್ಲಪ್ರಭುತ್ವದ ವಿಷಯದಲ್ಲಿ ಅತ್ಯಂತ ವಿಧೇಯರಾಗಿರುವರು; ಇನ್ನು ಮುಂದೆಯೂ ಹಾಗೆಯೇ ಇರುವರು. ಆಂಗ್ಲದೇಶದೊಡನೆ ಸ್ನೇಹದಿಂದಿರುವುದು ತುರ್ಕಿಯ ಅಭ್ಯುದಯಕ್ಕೆ ಅತ್ಯವಶ್ಯಕವಾಗಿದ್ದಿತು. ಹೀಗಿರುವ ತುರ್ಕಿಯು ಇಂಗ್ಲೆಂಡಿನೊಡನೆ ಯುದ್ಧಕ್ಕೆ ನಿಲ್ಲುವುದು ಹಿಂದೂಸ್ಥಾನದ ಮಹಮ್ಮದೀಯರಿಗೆಲ್ಲಾ ಸಂತಾಪವನ್ನುಂಟುಮಾಡದೆಹೋಗಿಲ್ಲ"

"ಮಹಮ್ಮದೀಯ ಮತಸಂಬಂಧವಾದ ಪುಣ್ಯಕ್ಷೇತ್ರಗಳನ್ನು ಸಂರಕ್ಷಿಸಿಕೊಂಡಿರುವ ಮಾತ್ರದಿಂದ ತುರ್ಕಿ ಸುಲ್ತಾನರು ನಮಗೆ ಮತವಿಷಯದಲ್ಲಿ ದೊಡ್ಡವರೆನಿಸಿಕೊಂಡಿರುವ ಮಾತು ನಿಜ. ಆ ಮಾತ್ರದಿಂದಲೇ ಹಿಂದೂಸ್ಥಾನದ ಮಹಮ್ಮದೀಯರು ತುರ್ಕಿಯ ಯುವಜನರ ಅಭಿಪ್ರಾಯದೊಡನೆ ಏಕೀಭವಿಸುವುದಕ್ಕೆ ತಕ್ಕ ಕಾರಣವೇನೂ ತೋರುವುದಿಲ್ಲ. ನಮಗೆ ಅತ್ಯಂತ ಪ್ರೇಮಾಸ್ಪದ ಚಕ್ರವರ್ತಿಯವರಾದ ಜಾರ್ಜ್ ಪ್ರಭುಗಳ ವಿಷಯದಲ್ಲಿ ಭರತಖಂಡದ ಮಹಮ್ಮದೀಯರೆಲ್ಲರೂ ಅತ್ಯಂತ ರಾಜಭಕ್ತಿಯುಳ್ಳವರಾಗಿರುವರು."

ಬಂಗಾಳಿ ಮಹಮ್ಮದೀಯರ ಅಭಿಪ್ರಾಯ.

"ಯುದ್ಧಾಂಗ ಮಂತ್ರಿಯವರಾದ ಎನ್ವರ್ ಪಾಷಾರವರ ಮತ್ತೂ ಅವರಿಗೆ ದುರ್ಬೋಧನೆ ಮಾಡಿರುವ ಜರ್ಮನ್ ಸೈನ್ಯಾಧಿಪತಿಗಳ, ಮತ್ತೂ ಅವರ ಆಧಿಪತ್ಯಕ್ಕೊಳಪಟ್ಟಿರುವ ತುರ್ಕಿ ಯುವಜನ ಸಂಘದವರ ಆಶಾ ಮಾಯಾಪಾಶದ ನಿರ್ಬಂಧಕ್ಕೆ ಸುಲ್ತಾನರು ಒಳಗಾದುದರಿಂದ ತುರ್ಕಿಯು ಯುದ್ಧಕ್ಕೆ ನಿಲ್ಲಬೇಕಾದುದು ನಮಗೆ ತುಂಬಾ ಪರಿತಾಪಕರವಾಗಿದೆ. ವಿದ್ಯಾವಂತರಾದ ಮಹಮ್ಮದೀಯರು ಒಂದು ದೊಡ್ಡ ಸಭೆಗೂಡಿ, ತಮ್ಮಲ್ಲಿನ ವಿದ್ಯಾವಂತರಲ್ಲದ ಜನರು ತಮ್ಮ ಅಭಿಪ್ರಾಯವನ್ನು ಮೀರಿ ಹೋಗದಂತೆ ಮಾಡುವುದಕ್ಕಾಗಿ ತಕ್ಕ ಪ್ರಯತ್ನಗಳನ್ನು ಮಾಡುವವರಾಗಿರುವರು. ಬಂಗಾಳದಲ್ಲಿ ಎಂಥ ಅಶಾಂತಿಯೂ ಉಂಟಾಗುವಹಾಗಿಲ್ಲ. ಇಂಥ ಸ್ಥಿತಿಯೇ ಭರತಖಂಡದೆಲ್ಲಭಾಗದಲ್ಲೂ ಇರುವುದೆಂದು ನಂಬುತ್ತೇವೆ."

ಮಹಮ್ಮದೀಯರನ್ನು ಈಗ ತಮ್ಮ ಪಕ್ಷಕ್ಕೆ ತಿರುಗಿಸಿಕೊಳ್ಳುವುದಕ್ಕೆ ಒಳ್ಳೆಯ ಸಮಯವೆಂದು ಅರಾಜಕರು ಈ ಸಮಯದಲ್ಲಿ ಪ್ರಯತ್ನಿಸಿ, ಮಹಮ್ಮದೀಯರಿಗೆ ದುರ್ಬೋಧನೆಯನ್ನು ಮಾಡಿ, ಅವರ ಮನಸ್ಸನ್ನು ಕೆಡಿಸಬಹುದು. ವಿದ್ಯಾವಂತರಾದ ಮಹಮ್ಮದೀಯರು ತಮ್ಮ ಸೋದರರ ಮನಸ್ಸು ಅಂಥ ಕೆಡುಕಿಗೆ ಒಳಗಾಗದಂತೆ ಮಾಡುವುದಕ್ಕಾಗಿ ನಿಜಸ್ಥಿತಿಯನ್ನು ಕರಪತ್ರಗಳ ಮೂಲಕ ಪ್ರಕಟಿಸಿಯೂ, ಬೋಧಿಸಿಯೂ ಅವರನ್ನು ಯಥಾಸ್ಥಿತಿಯಲ್ಲಿರಿಸುವಂತೆ ಮಾಡಲು ಪ್ರಯತ್ನಿಸಬೇಕು. ತುರ್ಕಿ ಸುಲ್ತಾನರು ಮಹಮ್ಮದೀಯರೇನೋ ನಿಜ. ಆದರೆ ಅವರು ನಮ್ಮ ಮತಗುರುಗಳಲ್ಲ. ಈಗಿನ ಯುದ್ಧವು ಮತಕ್ಕೆ ಸಂಬಂಧಪಟ್ಟುದಲ್ಲ. ಭೂಕಾಂಕ್ಷೆಯಿಂದ ಉಂಟಾದುದು. ಆಂಗ್ಲಪ್ರಭುತ್ವಾಧಿಕಾರಿಗಳ ಮೇಲೆ ನಮಗೆ ತುಂಬಾ ನಂಬುಗೆಯಿರುವುದು. ಮಹಮ್ಮದೀಯರ ಪುಣ್ಯಕ್ಷೇತ್ರಗಳನ್ನು ಆಂಗ್ಲಪ್ರಭುತ್ವದವರು ಕಾಪಾಡಿಕೊಳ್ಳುವರೆಂದು ವೈಸ್ರಾಯರು ಈಗ ತಾನೇ ಪ್ರಕಟಿಸಿರುವುದು ನಮಗೆ ಸಂತೋಷಪ್ರದವಾಗಿ

ಇಂಗ್ಲೆಂಡು ಯಾವಾಗಲೂ ಮಹಮ್ಮದೀಯರ ವಿಷಯದಲ್ಲಿ ಪ್ರೀತಿಯುಳ್ಳದ್ದಾಗಿದೆ. ಆಂಗ್ಲಪ್ರಭುತ್ವವು ನಮಗೆ ಮಹೋಪಕಾರವನ್ನು ಮಾಡಿದೆ. ಆದುಕಾರಣ ನಾವೆಲ್ಲರೂ ಆಂಗ್ಲಪಕ್ಷವನ್ನೇ ಅವಲಂಬಿಸಿರುತ್ತೇವೆ. ತುರ್ಕಿಯು ವಿರುದ್ಧಪಕ್ಷವನ್ನು ವಹಿಸಿದ್ದರೂ ಹಿಂದೂದೇಶದ ಮಹಮ್ಮದೀಯರಾದ ನಮಗೆ ಆ ತುರ್ಕಿಯ ಸಂಬಂಧವು ಮುಖ್ಯವಾದುದಲ್ಲ.''

ಇದರಂತೆ ಢಕ್ಕಾನವಾಬರು-ಬಂಕಿಪುರ-ಲಾಹೋರು-ಮೊದಲಾದ ಸ್ಥಲಗಳಲ್ಲಿನ ಮಹಮ್ಮದೀಯ ಸಂಘಗಳವರೂ ಪ್ರಮುಖರೂ ಸಹ ತುರ್ಕಿಯು ಯುದ್ಧಕ್ಕೆ ನಿಂತುದು ಯುಕ್ತವಲ್ಲವೆಂತಲೂ, ಅದು ಅದಕ್ಕೇ ಮಹಾನರ್ಥವನ್ನುಂಟುಮಾಡುವುದೆಂತಲೂ, ಆ ತುರ್ಕಿಯು ಬಾಲ್ಕನ್ ಯುದ್ಧದಲ್ಲಿ ತನ್ನ ಯೋಗಕ್ಷೇಮವನ್ನು ಕಟ್ಟಿಕೊಂಡಿದ್ದ ಭರತಖಂಡದ ಮಹಮ್ಮದೀಯರ ಲಾಭನಷ್ಟವನ್ನು ತಾನು ಈಗ ಯೋಚಿಸಿದಂತೆ ಕಂಡುಬರುವುದಿಲ್ಲವೆಂತಲೂ, ತುರ್ಕಿಯ ಈಗಿನ ಚರ್ಯೆಯು ಭರತಖಂಡದ ಮಹಮ್ಮದೀಯರ ಗೌರವಕ್ಕೆ ಭಂಗಕರವಾದುದೆಂತಲೂ, ಆದುಕಾರಣ ಅಂಥ ತುರ್ಕಿಯ ಈಗಿನ ನಡತೆಗೆ ಹಿಂದೂಸ್ಥಾನದ ಮಹಮ್ಮದೀಯರಾರೂ ಅನುಮೋದಿಸುವುದು ವಿಹಿತವಲ್ಲವೆಂತಲೂ ದೊಡ್ಡ ದೊಡ್ಡ ವಲಿಗಳೂ, ಬ್ಯಾರಿಸ್ಟರುಗಳೂ, ಅಭಿಪ್ರಾಯಪಟ್ಟಿದ್ದಾರೆ.

ಮಹಮ್ಮದೀಯರಿಗೆ ಸಂದೇಶ.

ಘನತೆಯನ್ನೈದಿದ ಆಗಾಖಾನ್ ರವರು, ಆಂಗ್ಲಸಾಮ್ರಾಜ್ಯಕ್ಕೊಳಪಟ್ಟ ಸಕಲ ಮಹಮ್ಮದೀಯರಿಗೂ ಪ್ರಕಟಪಡಿಸಿರುವ ಸಂದೇಶವೇನೆಂದರೆ—‘‘ಜರ್ಮನಿಯೊಡನೆ ಸೇರಿ, ಅದರ ಆಜ್ಞೆಯಮೇರೆ ರಷ್ಯಾ-ಇಂಗ್ಲೆಂಡ್ ಚಕ್ರವರ್ತಿಯವರಂಥ ಮಹಾಬಲಸಂಪನ್ನರಾದ ಪ್ರಭುಗಳೊಡನೆ ನಿಷ್ಕಾರಣವಾಗಿ ಯುದ್ಧವನ್ನು ಮಾಡುವುದಕ್ಕೆ ತುರ್ಕಿ ಪ್ರಭುತ್ವದವರು ಅವಿವೇಕಪ್ರಯತ್ನವನ್ನು ಮಾಡುತ್ತಿರುವರೆಂಬುದನ್ನು ತಿಳಿದು ನನಗೆ ಬಹಳ ಸಂತಾಪವಾಗುತ್ತಿದೆ. ಇದು ಸುಲ್ತಾನರ ಸ್ವತಂತ್ರೋದ್ದೇಶವಲ್ಲ. ತಾವು ಹೇಳಿದಂತೆ ನಡೆಯಕೊಳ್ಳಬೇಕೆಂದು ಅವರನ್ನು ಹಿಂಸೆಗೊಳಿಸುತ್ತಿರುವ ಜರ್ಮನಿ ಉದ್ಯೋಗಿಗಳ ಮತ್ತೂ ಮಹಮ್ಮದೀಯರಲ್ಲದ ಇತರಜನರ ಉದ್ದೇಶವಾಗಿರುತ್ತದೆ. ಆಸ್ಟ್ರಿಯಾ-ಜರ್ಮನಿಗಳು ಮಹಮ್ಮದೀಯರಿಗೆ ಅವ್ಯಾಜಮಿತ್ರರುಗಳಲ್ಲ. ಅವುಗಳಲ್ಲೊಂದು ಬೋಸ್ನಿಯಾವನ್ನು ಅಪಹರಿಸಿತು. ಮತ್ತೊಂದು ಕೆರ್ಬಾಲಾ, ನೆಜೀಫ್, ಬಾಗ್ದಾದ್ ಸಮೇತವಾದ ಏಷ್ಯಾಮೈನರು, ಮಿಸಪೊಟೋಮಿಯಾಗಳ ಅಧಿಪತ್ಯವನ್ನು ವಹಿಸಿಕೊಳ್ಳಬೇಕೆಂದು ಬಹುಕಾಲದಿಂದ ಕಪಟಪ್ರಯತ್ನಗಳನ್ನು ಮಾಡುತ್ತಿರುವುದು. ಜರ್ಮನಿಯು ಈಗಿನ ಯುದ್ಧದಲ್ಲಿ ಜಯಶೀಲವಾದರೆ (ಭಗವಂತನು ಹಾಗೆಮಾಡದೆ ಇರಲಿ) ತುರ್ಕಿದೇಶವು ಜರ್ಮನಿಯ ಸಾಮಂತರಾಷ್ಟ್ರವಾಗುವುದು. ಕೇಜರನ ಪ್ರತಿನಿಧಿಯಾದವನೊಬ್ಬನು ತುರ್ಕಿಗೆ ನಿಜವಾದ ಪ್ರಭುವಾಗಿ ಅಲ್ಲಿರುವ ಪವಿತ್ರವಾದ ಪಟ್ಟಣಗಳಮೇಲೆ ಅಧಿಕಾರವನ್ನು ಮಾಡುವನು. ಈಗಿನ ಯೂರೋಪು ಯುದ್ಧದಲ್ಲಿ ಮಹಮ್ಮದೀಯರ ಯೋಗಕ್ಷೇಮಕ್ಕೂ ಮತಕ್ಕೂ ಭಂಗವುಂಟಾಗುವುದೆಂದು ತೋರುತ್ತಿರಲಿಲ್ಲ. ಇಂಗ್ಲೆಂಡ್ ರಷ್ಯಾಸಾಮ್ರಾಜ್ಯಗಳೂ ಫ್ರಾನ್ಸ್ ಪ್ರಜಾಧಿಪತ್ಯವೂ ಕೂಡ, ತುರ್ಕಿಯು ತಟಸ್ಥವಾಗಿದ್ದುದೇಆದರೆ ಅದಕ್ಕೆ ಸೇರಿದ ರಾಷ್ಟ್ರಗಳನ್ನೆಲ್ಲಾ ಸಂಪೂರ್ಣಸ್ವಾತಂತ್ರ್ಯಸಮೇತವಾಗಿ ನಾವು ಕಾಪಾಡುತ್ತೇವೆಂದು ಪ್ರಮಾಣಬುದ್ಧಿಯಿಂದ ನುಡಿದಿರುವಕಾರಣ, ತುರ್ಕಿ ರಾಜ್ಯವೂಕೂಡ ಅಪಾಯಸ್ಥಿತಿಯಲ್ಲೇನೂ ಇರಲಿಲ್ಲ. ತುರ್ಕಿದೇಶವು ಮಹಮ್ಮದೀಯಮತಸಂರಕ್ಷಕವಾದುದು. ನಮ್ಮ ಪವಿತ್ರಪಟ್ಟಣಗಳನ್ನು ಅದರ ಅಧೀನದಲ್ಲಿಟ್ಟುಕೊಂಡಿರುವ ವಿಷಯದಲ್ಲಿ ಜಗತ್ತು ತೃಪ್ತಿಪೂರ್ವಕವಾಗಿ ಒಪ್ಪಿಕೊಂಡಿದ್ದಿತು. ಈಗ ತುರ್ಕಿಯು ಜರ್ಮನಿಯಕೈಯ ಯಂತ್ರಮಾತ್ರದಂತೆ ಸಂಕ್ಷೋಭಾಸ್ಪದವಾಗಿ ತೋರ್ಪಡಿಸಿಕೊಳ್ಳುತ್ತಿರುವುದರಿಂದ, ತುರ್ಕಿಸ್ಥಾನವು ತನ್ನನ್ನು ಹಾಳ್ಮಾಡಿಕೊಳ್ಳುವುದು ಮಾತ್ರವೇ ಅಲ್ಲದೆ ಮಹಮ್ಮದೀಯ ಮತಸಂರಕ್ಷಕತ್ವರೂಪವಾದ ಪದವಿಯನ್ನು ಕೂಡ ಹೋಗಲಾಡಿಸಿಕೊಂಡಿತು. ಆ ತುರ್ಕಿಗೆ ಕಿಡುಗಾಲವು ಒದಗಿದೆ. ಅನ್ಯರ ಪ್ರೇರಣೆಯಿಂದ ಅದು ಅಧರ್ಮಯುದ್ಧಕ್ಕಾಗಿ ಕತ್ತಿಯನ್ನು ಹಿಡಿದಿದೆ. ಉಳಿದುದು ಯಾವುದು ಹೇಗಾದರೂ ಈಗ ಅದುಹಿಡಿದಕಾರ್ಯದಿಂದ ಅದುನಾಶಗೊಳ್ಳದೆ ತಪ್ಪುವುದಿಲ್ಲ. ಮಹಾಬಲಸಂಪನ್ನರಾಗಿ ಅಜೇಯರಾಗಿರುವ ಇಂಗ್ಲೆಂಡ್ ರಷ್ಯಾಚಕ್ರವರ್ತಿಗಳಂಥ ಮಹಾ ಪ್ರಭುಗಳನ್ನು ಪ್ರತಿಭಟಿಸುವುದರಿಂದ ಅದು ಮಹಾಜಾತೀಯ ಪದವಿಯನ್ನುಕೂಡ ಕಳೆದುಕೊಳ್ಳುವುದು. ಈಗಲೇ ಸಾವಿರಾರುಮಂದಿ ಮಹಮ್ಮದೀಯರು ತಮ್ಮ ಪ್ರಭುಗಳ ಪಕ್ಷದಲ್ಲಿ ಹೋರಾಡುತ್ತಿರುವರು. ತುರ್ಕಿರಾಜ್ಯವು ಮಹಮ್ಮದೀಯ ಮತಸಂಬಂಧವಾಗಿಯೇ ಆಗಲಿ ತನ್ನ ಸ್ವಾತಂತ್ರ್ಯರಕ್ಷಣೆಗೇ ಆಗಲಿ ಯುದ್ಧಕ್ಕೆ ನಿಂತಿರುವುದಿಲ್ಲವೆಂಬುದನ್ನು ಎಲ್ಲರೂ ತಿಳಿದುಕೊಳ್ಳಬೇಕು. ಆದುಕಾರಣ ನಾವು ಐಹಿಕಾಮುಷ್ಮಿಕವಿಷಯಗಳಲ್ಲಿ ಯಾರ ಆಜ್ಞೆಗೆ ಬದ್ಧರಾಗಿರುವೆವೋ ಅವರ ವಿಷಯದಲ್ಲಿ ಈಗ ಭಕ್ತಿವಿಶ್ವಾಸ ವಿಧೇಯತೆಗಳನ್ನುಹೊಂದಿ ಪ್ರವರ್ತಿಸುವುದು ಮಹಮ್ಮದೀಯರಾದ ನಮಗೆ ಮುಖ್ಯಧರ್ಮವಾಗಿರುತ್ತದೆ.''

ಈ ಸತ್ಯವಾದ ವಿವರಣವುಳ್ಳ ಸಂದೇಶವನ್ನು ಮಹಮ್ಮದೀಯ ಸೋದರರೆಲ್ಲರೂ ಚೆನ್ನಾಗಿ ಗಮನಿಸುವವರಾಗಲೆಂದು ಕೋರುತ್ತೇವೆ.

ಯುದ್ಧವಾರ್ತೆಯು.

(ಪಶ್ಚಿಮರಣರಂಗ)

ಜರ್ಮನರು ಮೊಟ್ಟಮೊದಲು ಪ್ಯಾರಿಸ್ಸನ್ನು ಹಿಡಿಯುವುದಕ್ಕಾಗಿ ಬೆಲ್ಜಿಯಮ್ಮಿನಿಂದ ದಕ್ಷಿಣ ಪೂರ್ವ[illegible]ಯಿಂದ ನುಗ್ಗಿ ಪ್ಯಾರಿಸ್ಸಿಗೆ ೧೦ ಮೈಲಿಗಳ ದೂರದವರೆಗೂ ಹೋಗಿದ್ದು, ಅನುಕೂಲ ತಪ್ಪಿ ಪ್ರತಿಪಕ್ಷಗಳ ಹೊಡೆತದಿಂದ ಹಿಂದಕ್ಕೆ ಹೋಗಿಬಿಟ್ಟರಷ್ಟೆ. ಈವರೆಗೆ ಅವರು ಬೆಲ್ಜಿಯಮ್ಮಿನ ಆಂಟ್ವರ್ಪ್, ಆಸ್ಟೆಂಡು ಪಟ್ಟಣಗಳನ್ನು ಹಿಡಿದುಕೊಂಡಬಳಿಕ ಸಮುದ್ರತೀರದ ಕಡೆಯಿಂದ ಪಶ್ಚಿಮದ ಮಾರ್ಗವಾಗಿ ಫ್ರಾನ್ಸಿಗೆ ನುಗ್ಗಲು ಕಳೆದ ಮೂರು ವಾರಗಳಿಂದಲೂ ಸಾಹಸಮಾಡಿದರು. ಪಶ್ಚಿಮರಣರಂಗದಲ್ಲಿನ ಜರ್ಮನ್ ಸೈನ್ಯದ ವಿಶೇಷಭಾಗಗಳೂ ದೊಡ್ಡ ಫಿರಂಗಿಗಳೂ ಸಮುದ್ರತೀರಕ್ಕೆ ಸಾಗಿಸಲ್ಪಟ್ಟಿದ್ದುವು. ಆದರೆ ಇಂಗ್ಲೆಂಡು-ಫ್ರಾನ್ಸು-ಬೆಲ್ಜಿಯಂ-ರಷ್ಯಾ ಸೈನ್ಯಗಳು ಜಲಮಾರ್ಗದಿಂದಲೂ ಭೂಮಾರ್ಗದಿಂದಲೂ ಶತ್ರುಸೈನ್ಯದಮೇಲೆ ಅಸಾಧಾರಣಸಾಹಸದಿಂದ ಯುದ್ಧವನ್ನು ಮಾಡಿ, ಅವರಿಗೆ ವಿಶೇಷ ಪರಾಭವವನ್ನುಂಟುಮಾಡಿ, ಅವರ ಉದ್ದೇಶವನ್ನು ಹಾಳ್ಮಾಡಿದುವು. ಲಾಬಸ್ಸಿಯಿಂದ ಉತ್ತರಕ್ಕೆ ಇದ್ದ ಜರ್ಮನಿಸೈನ್ಯವು ಸೋತುಹೋಗಿ ಕಳೆದವಾರದಲ್ಲಿ ಅವು ದಕ್ಷಿಣಕ್ಕೆ ಶತ್ರುಗಳನ್ನು ಭೇದಿಸಿಕೊಂಡು ನುಗ್ಗಲಾರದೆ ಪೂರ್ವಮುಖವಾಗಿ ಹೋಗಬೇಕಾಯಿತು. ಈಗ ಜರ್ಮನರು ಮರಳಿ ಬೆಲ್ಜಿಯಮ್ಮಿನೊಳಗೆ ಮಿತ್ರಮಂಡಲಿಯವರ ಮೇಲೆ ಒಂದು ದೊಡ್ಡ ಯುದ್ಧವನ್ನು ನಡೆಯಿಸಬೇಕೆಂದು ಬೇರೆಬೇರೆ ಸ್ಥಲಗಳಲ್ಲಿರುವ ೩||ಲಕ್ಷ ಸೈನಿಕರನ್ನು ಬೆಲ್ಜಿಯಮ್ಮಿಗೆ ಬರಮಾಡುತ್ತಿದ್ದಾರೆ. ಆ ಸೈನ್ಯವನ್ನು ಬಂದುಕೂಡುವಾಗಲೇ ಚದರಿಸಿಬಿಡಬೇಕೆಂದು ಮಿತ್ರಮಂಡಲಿಯವರು ಸಾಹಸಪಡುವ ಚಿಹ್ನೆಗಳು ಕಾಣುತ್ತಿವೆ. ಜರ್ಮನರು ಬೆಲ್ಜಿಯಂ ದೇಶದಲ್ಲಿರುವ ಜೆಬ್ರೂಜ್ ಪಟ್ಟಣಕ್ಕೆ ದೊಡ್ಡ ದೊಡ್ಡ ಫಿರಂಗಿಗಳನ್ನೂ ಸಬ್ ಮೆರೈನುಗಳನ್ನೂ ಲೋಹಮಾರ್ಗಗಳ ಮೇಲೆ ಸಾಗಿಸುತ್ತಿದ್ದಾರೆ. ಇದನ್ನೆಲ್ಲಾ ಅಲ್ಲಿ ಸೇರಿಸಿ, ಆ ಪಟ್ಟಣವನ್ನು ಯುದ್ಧನೌಕಾಸ್ಥಾನವನ್ನಾಗಿ ಮಾಡಬೇಕೆಂಬುದು ಅವರ ಉದ್ದೇಶವಾಗಿರುವಂತೆ ಕಾಣುತ್ತದೆ. ಮತ್ತೂ ಉತ್ತರಸಮುದ್ರದ ಮಾರ್ಗವಾಗಿ ಹೇಗಾದರೂ ಮಾಡಿ ತಮ್ಮ ನೌಕಾಸೈನ್ಯವನ್ನು ಇಲ್ಲಿಗೆ ತಂದಿಳಿಸಬೇಕೆಂಬುದು ಅವರ ಪ್ರಯತ್ನವಾಗಿ ಜೇಬ್ರೂಸಿಗೂ, ಬ್ರೂಜೆಸ್ಸಿಗೂ, ಮಧ್ಯೆ ಸಮುದ್ರದ ಕಾಲುವೆಯು ೧೯ ಮೈಲುಗಳ ಅಗಲವಾಗಿದೆ. (ಇದು ಬೆಲ್ಜಿಯಂ ದೇಶಕ್ಕೆ ಸೇರಿದುದು.)

ಜರ್ಮನ್ ಚಕ್ರವರ್ತಿಯು ಪಶ್ಚಿಮರಣರಂಗದಲ್ಲಿರುವ ತಮ್ಮ ಕಡೆಯ ವರ್ಟೆಂಬರ್ಗ್ ಪ್ರಭುವಿಗೆ ಕಳುಹಿಸಿದ್ದ ವೈರ್ಲೆಸ್ ಟೆಲಿಗ್ರಾಮೊಂದನ್ನು ಮಿತ್ರಮಂಡಲಿಯವರು ತಮ್ಮ ಅಧಿಕಾರಿಗಳ ಸಹಾಯದಿಂದ ಹಿಡಿದು ನೋಡುವಲ್ಲಿ ಅದರೊಳಗೆ ‘‘ನೀವು ನವಂಬರ್ ತಾ||೧ರೊಳಗಾಗಿ ಈಪ್ರೆಸ್ಸನ್ನು ಹಿಡಿದುಕೊಳ್ಳಬೇಕು. ಹಾಗೆಮಾಡದೆ ತಪ್ಪಿದರೆ ನಮ್ಮ ಸೇನೆಯು ರೈನ್ ನದಿಯ ಹಿಂದಕ್ಕೆ ಹೋಗಬೇಕಾಗಿ ಬರುವುದು'' ಎಂದು ತಿಳಿಯಿಸಲ್ಪಟ್ಟಿದ್ದಿತು. ಈಗಲಾದರೊ ನವೆಂಬರಿನಲ್ಲಿ ೧ ವಾರವು ಕಳೆದುಹೋಯಿತು. ಈಪ್ರೆಸ್ಸನ್ನು ಹಿಡಿದುಕೊಳ್ಳುವುದಕ್ಕಾಗಿ ಜರ್ಮನರು ಕಳೆದ ತಿಂಗಳ ಕೊನೆಯಲ್ಲಿ ಬಹಳ ಸಾಹಸಮಾಡಿದರು. ಮಿತ್ರಮಂಡಲಿಯವರೂ ಬಹಳ ತೀಕ್ಷ್ಣವಾಗಿ ಕಾದಾಡಿದರು. ನಮ್ಮ ಪಕ್ಷಕ್ಕೆ ಆದ ನಷ್ಟಕ್ಕೆ ದ್ವಿಗುಣವಾಗಿ ಶತ್ರುಗಳಕಡೆ ನಷ್ಟವಾಯಿತು. ಕಡೆಗೂ ಶತ್ರುಗಳ ಇಷ್ಟವು ಈಡೇರಲಿಲ್ಲ. ಮಿತ್ರಮಂಡಲಿಯವರೇ ಈಪ್ರೆಸ್ಸಿಗೆ ಉತ್ತರದಲ್ಲೂ ಪೂರ್ವದಲ್ಲೂ ಶತ್ರುಗಳನ್ನು ಹಿಂದಕ್ಕೆ ದಬ್ಬಿ ತಾವು ಮುಂದಕ್ಕೆ ಸಾಗಿಹೋಗಿದ್ದಾರೆ. ರೀಮ್ಸ್ ಪಟ್ಟಣಕ್ಕೂ ಮ್ಯೂಜುನದಿಗೂ ಮಧ್ಯದಲ್ಲಿ ಭಯಂಕರವಾದ ಫಿರಂಗಿಯ ಯುದ್ಧವಾಯಿತು. ಅನೇಕಕಡೆ ಯುದ್ಧನಡೆದರೂ ಜರ್ಮನರು ಪಶ್ಚಿಮದಕಡೆಗಾಗಲೀ ದಕ್ಷಿಣಕ್ಕಾಗಲೀ ನುಗ್ಗಿಬರಲಾರದೆಹೋದರು. ಕಳೆದ ೧-೨ ವಾರಗಳೊಳಗೆ ಜರ್ಮನರಕಡೆ ೫೦ ಸಾವಿರಮಂದಿಗೆಮೇಲೆಯೇ ನಷ್ಟವಾಗಿರಬೇಕೆಂದು ಊಹಿಸಲ್ಪಟ್ಟಿದೆ. ಬೆಲ್ಜಿಯಮ್ಮಿನಲ್ಲಿ ಕಳೆದ ವಾರ ಒಂದುಕಡೆ ನಡೆದ ಯುದ್ಧದಲ್ಲೇ ತಮ್ಮಕಡೆ ೧೦ ಸಾವಿರ ಮಂದಿಗಳು ಸತ್ತಿರುವರೆಂದು ಜರ್ಮನ್ ಆಫೀಸರೊಬ್ಬರು ಒಪ್ಪಿಕೊಂಡಿದ್ದಾರೆ. ನ್ಯೂಪೋರ್ಟ್ ಡಿಕ್ಸ್ ಮೂಡುಗಳ ಮಧ್ಯದಲ್ಲೂ ಈಜರ್ ನದಿಗೆ ಪೂರ್ವದಲ್ಲೂ ಇದ್ದ ಜರ್ಮನರೆಲ್ಲಾ ಹತಾಶರಾಗಿ ಈಗ ಪೂರ್ವದಕಡೆಗೆ ಓಡಿಹೋಗುತ್ತಿದ್ದಾರೆ. ಈ ಸಮಯದಲ್ಲಿ ಬೆಲ್ಜಿಯಮ್ಮಿನವರು ಅನೇಕರನ್ನು ಸೆರೆಹಿಡಿದಿದ್ದಾರೆ. ಶತ್ರುಗಳ ಓಟವೆಲ್ಲಾ ಬ್ರಸಲ್ಸ್ ಪಟ್ಟಣದಕಡೆಗೆ ಇರುತ್ತದೆ. ಜರ್ಮನರು ಈಕಡೆಯ ಯುದ್ಧದಲ್ಲಿ ತಮ್ಮಲ್ಲಿ ನಷ್ಟವಾದವರ ಸ್ಥಾನಕ್ಕೆ ಭರ್ತಿಯಾಗಿ ಹೊಸಬರನ್ನು ಕಳುಹಿಸುತ್ತ ಬಂದಿದ್ದರೂ ಅವರಲ್ಲಿ ಬಹುಜನರು ಸಣ್ಣವಯಸ್ಸಿನವರೂ ಅಶಿಕ್ಷಿತರೂ ಆಗಿದ್ದುದರಿಂದ ತಿದ್ದಿದಸೈನಿಕರಮುಂದೆ ಅವರಾಟವು ಸಾಗದೆ ಅವರಲ್ಲಿ ಪಲಾಯನವೇ ಹೆಚ್ಚಾಗುತ್ತಾ ಬಂದಿರುವುದು. ಈಜರ್ ನದಿಯ ಪ್ರವಾಹವನ್ನು ದೇಶದಮೇಲೆ ಹರಿಯುವಂತೆ ಮಾಡಿರುವುದರಿಂದ ಆ ಪ್ರಾಂತವೆಲ್ಲಾ ಕೆಸರಿನಮಯವಾಗಿ ಯುದ್ಧಮಾಡುವುದು ಶತ್ರುಗಳಿಗೆ ಅಸಾಧ್ಯವಾಯಿತು. ಜರ್ಮನ್ ಸೈನಿಕರು ಬಹಳ ಆಲಸ್ಯಪಟ್ಟು ಆಹಾರವೂ ಶಕ್ತಿಯೂ ಇಲ್ಲದೆ ತನಗೆ ತಾನೇ ಮಿತ್ರಮಂಡಲಿಯವರಿಗೆ ಶರಣಾಗತರಾಗುತ್ತಿದ್ದಾರೆ. ಹೀಗೆ ಒಂದೇದಿವಸವೇ ೧ಸಾವಿರಮಂದಿ ಶರಣಾಗತರಾದರು. ಅವರಲ್ಲಿ ಬಹಳಮಟ್ಟಿಗೆ ಧೈರ್ಯವುಕೆಟ್ಟುಹೋಗಿರುವುದೆಂದು ಫ್ರೆಂಚ್ ಪತ್ರಿಕೆಗಳು ಹೇಳುತ್ತಿವೆ. ಜರ್ಮನ್ ಚಕ್ರವರ್ತಿಯವರು ಇಷ್ಟರಲ್ಲೇ ಪ್ರತ್ಯಕ್ಷವಾಗಿ ಬೆಲ್ಜಿಯಂದೇಶಕ್ಕೆ ಬರುವರೆಂಬ ವಾರ್ತೆಯಿದೆ. ಈ ಪಶ್ಚಿಮರಣರಂಗದ ಜರ್ಮನ್ ಯುದ್ಧಾಧಿಕಾರಿಗಳು ತಮ್ಮ ಕಾರ್ಯಸ್ಥಾನವನ್ನು ಥಿಲ್ಟಿನಿಂದ ಘೆಂಟ್ ಪಟ್ಟಣಕ್ಕೆ ಬದಲಾಯಿಸಿಕೊಂಡಿದ್ದಾರೆ. ಬೆಲ್ಜಿಯಂರಾಜದಂಪತಿಗಳು ತಮ್ಮ ಸೇನೆಯ ಜತೆಯೇ ಇದ್ದು ಪ್ರೋತ್ಸಾಹಿಸುತ್ತಿರುವರೆಂದು ಸುದ್ದಿಬಂದಿದೆ. ಬೆಲ್ಜಿಯಂದೇಶದವರು ಹೊಸಹೊಸದಾಗಿ ಸೈನ್ಯಗಳನ್ನು ಕೂಡಿಸಿ ಉಳಿದಿರುವ ತಮ್ಮ ದೇಶಭಾಗಗಳನ್ನು ಶತ್ರುಗಳಿಗೆ ಬಿಡದೆಯೂ, ಮಿತ್ರಮಂಡಲಿಯವರೊಡನೆ ಸೇರಿ ಶತ್ರುಗಳನ್ನು ಸೋಲಿಸಿ ಓಡಿಸುವುದರಲ್ಲಿ ದೇಶಾಭಿಮಾನಪೂರಿತವಾದ ತಮ್ಮ ಪರಾಕ್ರಮವನ್ನು ಅಪಾರವಾಗಿ ತೋರಿಸುತ್ತಲೂಇದ್ದಾರೆ. ಈ ಸ್ಥಿತಿಗತಿಗಳನ್ನೆಲ್ಲಾ ನೋಡಲು ಜರ್ಮನರಿಗೆ ಈಗ ಶತ್ರುಗಳಮೇಲಣ ಅಭಿಯೋಗವು ಅಷ್ಟು ಫಲದಾಯಕವಾಗಿಲ್ಲವೆಂದು ಚೆನ್ನಾಗಿ ಸ್ಪಷ್ಟವಾಗುವುದು. ಆದುಕಾರಣ, ಇನ್ನು ಆತ್ಮರಕ್ಷಣೆಗಾಗಿ ಅವರು ಹೆಚ್ಚುಗಮನವನ್ನೀಯುವಂತಿರುವುದು. ಅವರು ಬೆಲ್ಜಿಯಂದೇಶದ ಮಗ್ಗುಲಲ್ಲಿರುವ ತಮ್ಮ ದೇಶದ ಎಲ್ಲೆಯ ಹಾನೋವರ್ ಜಿಲ್ಲೆಯಲ್ಲಿ ಯುದ್ಧಸನ್ನಾಹವನ್ನು ಮಾಡಿಕೊಳ್ಳುತ್ತಿರುವರೆಂದು ಸುದ್ದಿಬಂದಿದೆ. ಅಲ್ಲಿನ ಅಧಿಕಾರಿಗಳು ಯುದ್ಧಕಾಲ ಶಾಸನವನ್ನು ಪ್ರಕಟಿಸಿದ್ದಾರೆ. ಅಲ್ಲಿ ನಮ್ಮ ಪಕ್ಷದ ಗೂಢಚಾರಿಗಳು ವಿಶೇಷವಾಗಿ ಸಂಚರಿಸುತ್ತಿರುವರಂತೆ. ರಣರಂಗದಲ್ಲಿ ಏಟುತಿಂದ ಜರ್ಮನ್ ಸೈನಿಕರು ಬರ್ಲಿನ್ ಪಟ್ಟಣದಲ್ಲಿ ವೈದ್ಯಶಾಲೆಗಳಲ್ಲೆಲ್ಲಾ ತುಂಬಿಹೋಗಿ, ಸ್ಥಲವು ಸಾಲದಿರುವುದರಿಂದ ಅಲ್ಲಿನ ನಾಟಕಶಾಲೆ, ಸಂಗೀತಶಾಲೆ ಮೊದಲಾದವುಗಳನ್ನೆಲ್ಲಾ ವೈದ್ಯಶಾಲೆಗಳನ್ನಾಗಿ ಮಾಡಿದ್ದಾರೆ.

ಫ್ರಾನ್ಸ್ ದೇಶದ ಪೂರ್ವದ ಎಲ್ಲೆಕಟ್ಟಿನಲ್ಲಿ ಬೆಲ್ ಫೋರ್ಟ್ ಮೊದಲುಗೊಂಡು, ಜರ್ಮನಿಗೆ ಸೇರಿದ ಅಲ್ ಸಾಸ್ ಜಿಲ್ಲೆಯ ಮುಲ್ ಹಾಸೇನಿನವರೆಗಿನ ಗ್ರಾಮಗಳನ್ನೆಲ್ಲಾ ಫ್ರೆಂಚರು ಹಿಡಿದುಕೊಂಡು ಆ ಸ್ಥಲಗಳನ್ನು ತಮ್ಮ ಸೇನಾರಕ್ಷಣ ಸ್ಥಲವನ್ನಾಗಿ ಏರ್ಪಡಿಸಿ ದೊಡ್ಡ ದೊಡ್ಡ ಫಿರಂಗಿಗಳನ್ನು ಇಡಿಸಿದ್ದಾರೆ.

ಪೂರ್ವರಣರಂಗ

ಪೂರ್ವಪ್ರಷ್ಯಾದಲ್ಲಿನ ಸೇನೆಯಲ್ಲಿ ಹೂಣೆಕಾಳಗಗಳು ನಡೆಯುತ್ತಲೇಇವೆ. ಜರ್ಮನರು ಎಷ್ಟುತೀವ್ರವಾಗಿ ಮುತ್ತಿಗೆಹಾಕಿದರೂ ರಷ್ಯನರು ಅವರನ್ನು ಹೊಡೆದೋಡಿಸುತ್ತಲೇಇದ್ದಾರೆ. ಜೆಜೊರಾವಾಪ್ರಾಂತದಲ್ಲಿ ೩ ಸಾವಿರ ಜರ್ಮನರು ರಷ್ಯನರ ಸೆರೆಗೆ ಸಿಕ್ಕಿದ್ದಾರೆ. ಬಿರಿಟ್ಜುನದಿಯ ದಕ್ಷಿಣದಲ್ಲಿ ರಷ್ಯನರು ಕೋಜೆನಿಟ್ಜುವಿನಹತ್ತಿರ ವಿಶ್ಚುಲಾನದಿಯನ್ನು ದಾಟಿದರು. ಜರ್ಮನರು ಕೊಂಜೆವಿಟ್ಜುವಿನಬಳಿಯಲ್ಲಿರುವ ದೊಡ್ಡಕಾಡಿನೊಳಗೆ ಅಡಗಿಕೊಂಡು ತಾವು ಬದುಕಿದೆವೆಂದುಭಾವಿಸಿಕೊಂಡರು. ಆದರೆ ಆ ಕಾಡಿನಮೇಲೆ ರಷ್ಯನರು ಭಯಂಕರವಾಗಿ ಬೆಂಕಿಯಮಳೆಯನ್ನು ಸುರಿಸಿದುದರಿಂದ ಕಾಡೆಲ್ಲಾ ಹೊತ್ತಿ ಉರಿಯಾಲಾರಂಭಿಸಿತು. ಅದನ್ನು ಕಂಡ ಜರ್ಮನರು ಬೆದರಿಬಿದ್ದು ದಿಕ್ಕುದಿಕ್ಕಿಗೆ ಓಡಲುಪಕ್ರಮಿಸಿದರು. ಆದರೆ ಕೆಲವರುಮಾತ್ರ ಓಡಿಹೋಗಲು ಸಾಧ್ಯವಾಯಿತಲ್ಲದೆ ಉಳಿದವರೆಲ್ಲಾ ಹೊಗೆಯಿಂದ ಉಸುರಾಡಲು ಮಾರ್ಗವಿಲ್ಲದೆಯೂ ಬೆಂಕಿಯ ಅನಾಹುತದಿಂದಲೂ ಮೃತರಾದರು.

ರಷ್ಯನರು ಆಸ್ಟ್ರಿಯಾದವರಮೇಲೆ ಕೊಜನಿಸ್-ರಾಡ-ಇವುಗಳಮಧ್ಯದ ಅಡವಿಗಳಲ್ಲಿ ಯುದ್ಧವನ್ನುಮಾಡಿದರು. ಸಾಂಬೊರಿಗೆ ದಕ್ಷಿಣದಲ್ಲಿ ಮುಂದಕ್ಕೆ ನುಗ್ಗುತ್ತಿದ್ದ ರಷ್ಯನರಮೇಲೆ ಆಸ್ಟ್ರಿಯಾದವರ ೩೧ನೆ ನಂ|| ಪಟಾಲಮ್ಮು ಬಿದ್ದು ತಡೆಯಲು ರಷ್ಯನರು ಅವರಮೇಲೆಬಿದ್ದು ಭಯಂಕರವಾಗಿ ಕಾದಾಡಿ, ೧೧ನೆ ೧ ಭಾಗದಷ್ಟು ಜನರನ್ನೂ ೨೦ ಫಿರಂಗಿಗಳನ್ನೂ ಇನ್ನು ಕೆಲಸಾಮಗ್ರಿಗಳನ್ನೂ ಹಿಡಿದುಕೊಂಡರು. ಪೂರ್ವಪ್ರಷ್ಯಾದ ಎಲ್ಲೆಕಟ್ಟಿನಲ್ಲಿ ಜರ್ಮನ್ ಸೇನೆಗಳು ರಷ್ಯನ್ನರ ರಕ್ಷಕಸ್ಥಾನಗಳನ್ನು ದಾಟಿಹೋಗಬೇಕೆಂದು ಬಹಳ ಸಾಹಸಮಾಡಿದುವು. ಅವರ ಪ್ರಯತ್ನವೆಲ್ಲಾ ವ್ಯರ್ಥವಾಯಿತು. ರಷ್ಯನರು ವಿಶ್ಚುಲಾನದಿಯ ದಕ್ಷಿಣದಲ್ಲಿ ಪೋಲಾಂಡಿನಲ್ಲಿ ಪ್ರಷ್ಯಾದ ಎಲ್ಲೆಕಟ್ಟಿನಲ್ಲಿರುವ ಕೆಲ ಪ್ರದೇಶಗಳನ್ನು ಆಕ್ರಮಿಸಿಕೊಂಡಿದ್ದಾರೆ. ೧೦ ದಿನಗಳೊಳಗಾಗಿ ರಷ್ಯನರು ಜರ್ಮನರನ್ನು ೮೮ ಮೈಲಿಗಳದೂರ ಹಿಂದಕ್ಕೆ ಅಟ್ಟಿಬಿಟ್ಟಿದ್ದಾರೆ. ಅಲ್ಲಿ ನಡೆದ ಯುದ್ಧಗಳಲ್ಲಿ ರಷ್ಯನರು ಶತ್ರುಗಳ ಕಡೆಯ ಸಾವಿರಾರುಮಂದಿಗಳನ್ನೂ ಕೆಲ ಫಿರಂಗಿಗಳನ್ನೂ ಮೋಟಾರುಬಂಡಿ ಮೊದಲಾದ ಸಾಮಗ್ರಿಗಳನ್ನೂ ಹಿಡಿದುಕೊಂಡಿದ್ದಾರೆ.

ಹಿಂದೂದೇಶದ ಸೈನಿಕರು.

ಫ್ರಾನ್ಸಿಗೆ ಸೇರಿದ ಲಾಬಸ್ಸಿಯ ಬಳಿಯಲ್ಲಿ ಪರ್ವತವೇ ನಡೆದುಬರುವಂತೆ ಜರ್ಮನ್ ಸೈನ್ಯವು ತನಗೆ ಅಡ್ಡಲಾಗಿ ಬಂದವರನ್ನೆಲ್ಲಾ ಧ್ವಂಸಗೊಳಿಸುತ್ತಾ ಭಯಂಕರವಾಗಿ ಇಂಗ್ಲೀಷ್ ಸೈನ್ಯಗಳು ನಿಂತಿರುವ ಕಂದಕಗಳ ಕಡೆಗೆ ಬರುತ್ತಿದ್ದಿತು. ಆಗ ಹಿಂದೂದೇಶದ ಸೈನಿಕರು ತೋರಿಸಿದ ಪರಾಕ್ರಮವನ್ನು ಇದುವರೆಗಿನ ಯುದ್ಧದಲ್ಲಿ ಯಾರೂ ತೋರಿಸಲಿಲ್ಲವೆಂದು ಒಬ್ಬ ಪತ್ರಿಕಾ ವಿಲೇಖಕನು ಬರೆದಿರುತ್ತಾನೆ. ಹೇಗೆಂದರೆ— ಸಿಕ್ ಗೂರ್ಖಾ ಸೈನಿಕರು ಯುದ್ಧರಂಗಕ್ಕೆ ಸೇರಿದ ಬಳಿಕ ಸಮಯದೊರೆದಾಗ ಇವರನ್ನು ಯುದ್ಧಕ್ಕೆ ನಿಲ್ಲಿಸಬೇಕೆಂದು ಸೈನ್ಯಾಧಿಕಾರಿಗಳು ಉದ್ದೇಶಿಸಿದ್ದರು. ಅಷ್ಟರಲ್ಲಿ ಮೇಲೆ ಹೇಳಿದ ಸಮಯವು ಒದಗಲು, ಇವರನ್ನು ಆ ಜರ್ಮನ್ ಸೈನ್ಯದಮೇಲೆ ಸಾಗಬಿಟ್ಟರು. ಈ ಅಶ್ವಸೈನಿಕರು ತುಪಾಕಿಗಳನ್ನೂ ಭಲ್ಲೆಯಗಳನ್ನೂ ಕೈಯಲ್ಲಿಹಿಡಿದು ಅರ್ಭಟಿಸಿಕೊಂಡು ಶತ್ರುಗಳಮೇಲೆ ಬಿದ್ದು ಹೊಡೆದು ಕಡಿದು ತುಂಡುತುಂಡಾಗಿ ಕತ್ತರಿಸುತ್ತ ನುಗ್ಗಿದರು. ಅವರು ಮುಂದಕ್ಕೆ ನುಗ್ಗಲಾರದೆ ಹಿಂದಾದರು, ಮತ್ತೂ ಶತ್ರುಗಳಿಗೆ ಬೆನ್ನುತಿರುಗಿಸಿ ಎಷ್ಟೋದೂರ ಓಡಿಹೋದರು. ಓಡಿಹೋಗುತ್ತಿದ್ದ ಆ ಜರ್ಮನರಮೇಲೆ ಇಂಗ್ಲೀಷ್ ಫ್ರೆಂಚ್ ಸೈನಿಕರು ಮಗ್ಗುಲುಗಳಿಂದ ತುಪಾಕಿ ಗುಂಡುಗಳನ್ನು ಹಾರಿಸಿದರು. ಇದರಿಂದ ಆ ಸ್ಥಲದಲ್ಲಿ ಅನೇಕಜರ್ಮನರು ಸತ್ತುರುಳಿದರು. ಆ ಜರ್ಮನರು ನಿಂತಿದ್ದ ಕಂದಕಗಳನ್ನೆಲ್ಲಾ ಹಿಂದೂಸೈನಿಕರು ಹಿಡಿದುಕೊಂಡರೂ ತೃಪ್ತರಾಗದೆ ಅವರನ್ನು, ಹಿಂದಿನ ಬೆಟ್ಟಗಳಲ್ಲಿ ಹೋಗಿ ಸೇರಿಕೊಳ್ಳುವವರೆಗೂ ಅಟ್ಟಿಕೊಂಡೇ ಹೋಗುತ್ತಿದ್ದರು. ಇನ್ನು ಓಡಿಸಿಕೊಂಡು

ಹೋಗಬೇಡಿರೆಂದು ತಮ್ಮ ಸೈನ್ಯಾಧಿಕಾರಿಗಳು ಅಪ್ಪಣೆಮಾಡಿ ಕೂಗುವವರೆಗೂ ಅವರು ಅಟ್ಟಿಕೊಂಡು ಹೋಗುತಲೇಇದ್ದು ಬಳಿಕ ಹಿಂತಿರುಗಿ ಬಂದರು.

ಘೂರ್ಖಾಸೈನಿಕರ ಅದ್ಭುತಕೃತ್ಯ.

ಒಂದುಕಡೆ ಜರ್ಮನ್ ಫಿರಂಗಿಗಳ ಏಟಿನಿಂದ ಮಿತ್ರಮಂಡಲಿಯ ಸೈನ್ಯವು ಆಯಾಸಪಟ್ಟು ನಿಂತಿದ್ದಿತು. ಶತ್ರುಗಳ ಮದ್ದುಗುಂಡುಗಳ ನಿಲಯವನ್ನು ಸುಟ್ಟುಹಾಕಬೇಕೆಂದು ಪ್ರಯತ್ನಿಸಿ ಎಷ್ಟು ಸಾಹಸಮಾಡಿದರೂ ಫಲವಾಗದೆ ನಿರಾಶವಾಗಿದ್ದಿತು. ಆಗ ಮಿತ್ರಮಂಡಲಿಯ ವೈಮಾನಿಕರು, ಶತ್ರುಗಳ ಮದ್ದುಗುಂಡು ಫಿರಂಗಿಗಳಿರುವ ಸ್ಥಲವನ್ನು ಗೊತ್ತುಮಾಡಿಕೊಂಡು ಬಂದು ತಿಳಿಯಿಸಲು, ೬ ಮಂದಿ ಗೂರ್ಖಾಸೈನಿಕರು ಇಮ್ಮುಖವಾಗಿರುವ ಕತ್ತಿಗಳನ್ನು ಹಿಡಿದುಕೊಂಡು ಈಸರ್ ನದಿಯ ಮುಖದ್ವಾರಕ್ಕೆ ಹೋಗಿ ರಾತ್ರಿಯ ನಸುಬೆಳ್ದಿಂಗಳಲ್ಲಿ ಶತ್ರುಗಳ ಮದ್ದು ಫಿರಂಗಿಗಳಿದ್ದಸ್ಥಲಕ್ಕೆ ಕಾಡುದಾರಿಯಿಂದ ಅಂಬೆಗಾಲಿಕ್ಕಿಕೊಂಡು ನೂರಾರು ಗಜಗಳ ದೂರ ಸದ್ದಿಲ್ಲದಂತೆ ತೆವಳಿಕೊಂಡು || ಗಂಟೆಯಹೊತ್ತು ಸಾಗಿಹೋಗಿ ಕಾವಲಿದ್ದ ೬ ಮಂದಿ ಜರ್ಮನ್ ಸೈನಿಕರನ್ನು ನಿಮಿಷಮಾತ್ರದಲ್ಲಿ ಶಿರಶ್ಛೇದನವನ್ನು ಮಾಡಿ ಮದ್ದಿನ ಕೊಟಾರಕ್ಕೆ ಬೆಂಕಿಹೊತ್ತಿಸಿ ಸುಟ್ಟು ಹಿಂದಿರುಗಿ ಬಂದು ತಮ್ಮ ಶಿಬಿರವನ್ನು ಸೇರಿಕೊಂಡರು.

ಮತ್ತೂ ಹಿಂದೂದೇಶದ ಸೈನಿಕರನ್ನು ಸಾಗಿಸಿಕೊಂಡು ಹೋಗುತ್ತಿದ್ದ ಹೊಗೆಬಂಡಿಯು ಫ್ರಾನ್ಸಿನ ಒಂದು ನಿಲ್ದಾಣದ ಬಳಿಯಲ್ಲಿ ನಿಂತಿರುವಾಗ, ಜರ್ಮನರ ಒಂದು ವಿಮಾನವು ಅಲ್ಲಿ ಸಿಡಿಮದ್ದನ್ನು ಹಾಕಲು ಪ್ರಯತ್ನಿಸಿತು. ಆಗ ಹಿಂದೂಸ್ಥಾನದ ಸೈನಿಕರು ಬಂಡಿಯಿಂದಿಳಿದು, ಆ ವಿಮಾನದಮೇಲೆ ತುಪಾಕಿಗುಂಡುಗಳನ್ನು ಹಾರಿಸಿದರು. ವಿಮಾನಕ್ಕೆ ಏಟುಬೀಳಲು ಅದು ಕೆಳಕ್ಕೆ ಬಿದ್ದಿತು. ಆ ರಭಸದಲ್ಲಿ ಅದರೊಳಗಿದ್ದ ಸಿಡಿಮದ್ದುಗಳು ಹೊತ್ತಿಕೊಂಡು ಅಗ್ನಿಪ್ರಳಯವಾಯಿತು. ಒಳಗಿದ್ದ ೩ ಮಂದಿ ವೈಮಾನಿಕರೂ ಆ ಏಟಿನಿಂದ ಭಿನ್ನಭಿನ್ನವಾಗಿ ಹೋದರು.

ಎಮ್ಡೆನ್.

ಜರ್ಮನರ ಈ ಕ್ರೂಯಿಸರ್ರು ಇದುವರೆಗೆ ಕೆಲ ವ್ಯಾಪಾರದ ಹಡಗುಗಳನ್ನು ಮಾತ್ರ ಮುಳುಗಿಸಿದ್ದಿತಷ್ಟೆ. ಕಳೆದವಾರ ಅದು ರಷ್ಯನರ ಒಂದು ಕ್ರೂಯಿಸರ್ರನ್ನೂ ಫ್ರೆಂಚರ ಒಂದು ಡಿಸ್ಟ್ರಾಯರನ್ನೂ ಸಹ ಕಳೆದ ತಾ|| ೩೦ರಲ್ಲಿ ಪಿನಾಂಗಿನ ಸಮೀಪದಲ್ಲಿ ಮುಳುಗಿಸಿತೆಂಬ ವಾರ್ತೆಯು ಬಂದಿದೆ. ಅದು ಆದಿನ ರಾತ್ರಿಯಾದ ಬಳಿಕ ರಷ್ಯನ್-ಫ್ರೆಂಚ್ ಹಡಗುಗಳಿದ್ದ ಕಡೆಗೆ ಬಂದಿತು. ಆಗ ಅದರ ಮೇಲೆ ರಷ್ಯನ್ ಬಾವುಟವನ್ನು ಹಾಕಿಕೊಂಡಿದ್ದಿತಂತೆ. ಆದುದರಿಂದ ಇದು ತಮ್ಮ ಕಡೆಯ ಹಡಗೆಂದು ಆ ಹಡಗಿನವರು ತಿಳಿದರು. ಅಷ್ಟರಲ್ಲಿ ಎಮ್ಡೆನ್ನು ರಭಸದಿಂದ ಬಂದು ತನ್ನ ಟಾರ್ಪಿಡೋವಿನಿಂದ ಹೊಡೆದು ರಷ್ಯನ್ನರ ಝಾಂಗುಗ್ ಎಂಬ ಹಡಗನ್ನು ಮುಳುಗಿಸಿತು. ಅದರಲ್ಲಿದ್ದವರಲ್ಲಿ ೮೫ ಮಂದಿಗಳು ನೀರಿನಲ್ಲಿ ಮುಳುಗಿ ಸತ್ತರು; ೨೫೦ ಮಂದಿಗಳು ರಕ್ಷಿಸಲ್ಪಟ್ಟಿರುವರು. ಅವರಲ್ಲಿ ೧೧೦ ಮಂದಿಗಳಿಗೆ ಏಟುತಗಲಿದೆ. ಆಮೇಲೆ ಫ್ರೆಂಚರ ಮೂಸ್ಕ್ವೆಯಿಟ್ ಎಂಬ ಯುದ್ಧದ ಹಡಗು ಇದರ ಮೇಲೆ ಬೀಳಲು ಅದನ್ನೂ ಟಾರ್ಪಿಡೋವಿನಿಂದ ಬಡಿದು ಮುಳುಗಿಸಿತು. ಆ ಹಡಗುಗಳಲ್ಲಿದ್ದ ಜನರಲ್ಲಿ ಬದುಕಿಸಲು ಸಾಧ್ಯವಾದವರನ್ನೆಲ್ಲಾ ಎಮ್ಡೆನ್ ಹಡಗು ತನ್ನಲ್ಲಿದ್ದ ದೋಣಿಗಳ ಸಹಾಯದಿಂದ ಕಾಪಾಡಿರುತ್ತದೆ. ಬಳಿಕ ಎಮ್ಡೆನ್ನು ಅದುವರೆಗೆ ತನ್ನಮೇಲೆ ಇದ್ದ ಹೊಗೆ ಹೋಗುವ ಲಾಳಿಗಳ ಜತೆಗೆ ಮತ್ತೊಂದನ್ನು ಹೊಸದಾಗಿ ಸೇರಿಸಿ ವೇಷಾಂತರ ಮಾಡಿಕೊಂಡು ಸಾಗಿತಂತೆ.

ಮೈಸೂರ್ ಸ್ಟಾರ್.

ಸನ್ ೧೯೧೪ ನೆಯ ನವಂಬರ್ ತಾ|| ೮ ನೆಯ ಭಾನುವಾರ.

ಯುದ್ಧದಲ್ಲಿ ತುರ್ಕಿಯೂ ಪ್ರವೇಶಿಸಿತು.

ಯಾವ ಮಹಾರಾಯನಿಂದ ಯಾವ ಗಳಿಗೆಯಲ್ಲಿ ಯೂರೋಪಿನ ಮಹಾಯುದ್ಧಕ್ಕೆ ಅಂಕುರಾರ್ಪಣವಾಯಿತೋ ಆ ಮಹಾರಾಯನಿಂದಲೇ ಬರಬರುತ್ತ ಯುದ್ಧವು ಪ್ರಪಂಚವನ್ನೆಲ್ಲಾ ವ್ಯಾಪಿಸುವ ಸ್ಥಿತಿಯು ಒದಗುತ್ತಲಿರುವುದನ್ನು ಕಂಡು ವಿಷಾದಿಸಬೇಕಾಗಿದೆ. ಯುದ್ಧಾರಂಭವಾದಮೇಲೆ ಎಷ್ಟೋ ಕಾಲದವರೆಗೂ ತಾನು ತಟಸ್ಥವಾಗಿರುವೆನೆಂದೇ ತುರ್ಕಿಯು ಹೇಳುತ್ತಿದ್ದಿತು. ಮತ್ತೂ ಜರ್ಮನ್ ಚಕ್ರವರ್ತಿಯು ತನ್ನ ಪಕ್ಷಕ್ಕೆ ಸೇರಬೇಕೆಂದು ತುರ್ಕಿಯನ್ನು ಪ್ರಾರ್ಥಿಸಿದ್ದರೂ, ಜರ್ಮನಿಯ ಅಧರ್ಮವರ್ತನವನ್ನು ನಿಷೇಧಿಸಿ, ತಾನು ಸೇರುವುದಿಲ್ಲವೆಂದು ನಿಕ್ಷುಣ್ಣವಾಗಿ ಉತ್ತರವನ್ನು ಕೊಟ್ಟಿದ್ದಿತು. ಹಾಗಿದ್ದರೂ ಈಗ ಅದು ಜರ್ಮನಿಯ ಪಕ್ಷವಾಗಿ ನಿಂತು, ಯುದ್ಧವನ್ನು ಪ್ರಕಟಿಸದೇನೆಯೇ ರಷ್ಯಾದಮೇಲೆ ಯುದ್ಧವನ್ನು ಆರಂಭಿಸಿತು. ತತ್ಸಂಬಂಧವಾಗಿ ಕಳೆದ ವಾರದಲ್ಲಿ ನಡೆದಿರುವ ವಿಶೇಷ ಸಂಗತಿಗಳನ್ನೆಲ್ಲಾ ಈ ಪತ್ರದ ಬೇರೆಕಡೆಯಲ್ಲಿ ಕೊಟ್ಟಿರುವುದರಿಂದ ತುರ್ಕಿಯು ಮನಃಪೂರ್ವಕವಾಗಿ ಇಂಗ್ಲೆಂಡಿನಮೇಲೆ ಯುದ್ಧಕ್ಕೆ ನಿಲ್ಲಲು ಮನಸ್ಸಿಲ್ಲದೆಯೋ, ಅಥವಾ ಪರರ ಬಲಾತ್ಕಾರಕ್ಕಾಗಿ ಯುದ್ಧಾಂಗಣಕ್ಕೆ ಇಳಿಯಬೇಕಾಗಿ ಬಂದೋ, ಮುಚ್ಚುಮರೆಯಲ್ಲಿ ಯುದ್ಧಕ್ಕೆ ಸನ್ನದ್ಧವಾಯಿತೆಂದು ಕಾಣಬರುವುದೇ ಹೊರತು, ತಾನು ಯುದ್ಧಕ್ಕೆ ನಿಲ್ಲಬೇಕಾದ ಕಾರಣವಿಂತಹುದೆಂದು ತಿಳಿಯಿಸಿ, ಘಂಟಾಘೋಷವಾಗಿ ತಾನು ಯುದ್ಧವನ್ನು ಸಾರಿ ಆಯುಧವನ್ನು ಹಿಡಿಯಲಿಲ್ಲವೆಂಬ ಸಂಗತಿಯು ಸ್ಪಷ್ಟವಾಗುವುದು. ಒಳಸಂಗತಿಗಳನ್ನು ವಿಚಾರಮಾಡಿದರೆ ತುರ್ಕಿಯಲ್ಲಿ ಎರಡುಪಕ್ಷಗಳಿವೆಯೆಂಬುದು ಬಾಲ್ಕನ್ ಯುದ್ಧದ ಕಾಲದಿಂದಲೂ ಸ್ಪಷ್ಟವಾಗಿದೆ. ಅಲ್ಲಿನ ಯುವಕಸಂಘದವರಿಗೂ ವೃದ್ಧಸಂಘದವರಿಗೂ ಎಷ್ಟೋ ವಿಷಯಗಳಲ್ಲಿ ಅಭಿಪ್ರಾಯಭೇದಗಳೂ ವೈಮನಸ್ಯಗಳೂ ಇದ್ದೇಇವೆ. ಇಂಥ ಸ್ಥಿತಿಯು ಜಗಳಗಂಟಿಗರಾದ ಜರ್ಮನರಿಗೆ ಬಹಳ ಅನುಕೂಲವಾಯಿತು. ಈಗ ಕಾನ್ಸ್ಟ್ಯಾಂಟಿನೋಪಲ್ಲಿನಲ್ಲಿ ೧೦ ಸಾವಿರದ ವರೆಗೆ ಜರ್ಮನ್ ಪ್ರಜೆಗಳಿದ್ದಾರೆಂದು ಗೊತ್ತಾಗುತ್ತದೆ. ಮತ್ತೂ ತುರ್ಕಿಗೂ ಜರ್ಮನಿಗೂ ಧನವ್ಯವಹಾರಸಂಬಂಧವು ವಿಶೇಷವಾಗಿರುವುದಲ್ಲದೆ, ತುರ್ಕಿಯ ಸೈನ್ಯಗಳನ್ನು ತಿದ್ದುವ ದಳವಾಯಿತನ ಮೊದಲಾದುವುಗಳಲ್ಲಿ ಜರ್ಮನ್ ಅಧಿಕಾರಿಗಳನೇಕರು ಬಾಲ್ಕನ್ ಯುದ್ಧಾನಂತರದಿಂದಲೂ ನಿಯುಕ್ತರಾಗಿದ್ದಾರೆ. ಈಗಲಾದರೊ ಹೇಗಾದರೂ ಮಾಡಿ ತನ್ನ ಪಕ್ಷಕ್ಕೆ ಬಲವನ್ನು ಹೆಚ್ಚಿಸಿಕೊಳ್ಳದಿದ್ದರೆ ತನ್ನ ಪರಿಣಾಮವು ನೆಟ್ಟಗಾಗುವುದಿಲ್ಲವೆಂಬುದನ್ನು ಮನಗಂಡಿರುವ ಜರ್ಮನ್ ಚಕ್ರವರ್ತಿಯು ಚತುರುಪಾಯಗಳಿಂದಲೂ ತಟಸ್ಥರಾಷ್ಟ್ರದವರನ್ನು ತನ್ನ ಪಕ್ಷಕ್ಕೆ ಸೇರಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಕಾಯಕವನ್ನು ತುರ್ಕಿಯ ವಿಷಯದಲ್ಲೂ ಚೆನ್ನಾಗಿ ಮಾಡಿ, ಅದರ ಯುವಕಸಂಘದವರ ಮನಸ್ಸನ್ನು ತಮ್ಮ ಕಡೆಗೆ ತಿರುಗಿಸಿಕೊಂಡು, ತುರ್ಕಿಯ ಕೈಗೆ ಬಲಾತ್ಕಾರದಿಂದ ಆಯುಧವನ್ನು ತುರುಕಿ, ಮಿತ್ರಮಂಡಲಿಯವರಮೇಲೆ ಪ್ರಯೋಗಿಸುವಂತೆ ಮಾಡಿರುತ್ತಾರೆ. ಬಹುಕಾಲದಿಂದಲೂ ತುರ್ಕಿಯ ಯೋಗಕ್ಷೇಮಚಿಂತನೆಯಲ್ಲಿ ನಿರತವಾಗಿರುವ ಇಂಗ್ಲೆಂಡಿನ ಮೇಲೆ ಶತ್ರುವಾಗಿ ನಿಲ್ಲುವುದು ತನಗೆ ಧರ್ಮವೂ ಅಲ್ಲ ; ಉತ್ತಮಪರಿಣಾಮಕವೂ ಅಲ್ಲವೆಂಬ ಸಂಗತಿಯೂ, ಮತ್ತೂ ಜರ್ಮನಿಯೇ ಆಗಲಿ ಆಸ್ಟ್ರಿಯಾವೇ ಆಗಲಿ, ತನಗೆ ಇಂಗ್ಲೆಂಡಿನಂತೆ ನಿಜವಾದ ಹಿತಚಿಂತಕರಲ್ಲವೆಂಬ ಸಂಗತಿಯೂ, ರಾಜ್ಯದಾಹದಿಂದ ಕೂಡಿರುವ ಜರ್ಮನಿಯು ಈಗ ತಮಗೆ ಮಾಡುತ್ತಿರುವ ಪ್ರೋತ್ಸಾಹವು ಸ್ವಾರ್ಥಸಾಧನೆಯ ಉಪಾಯವೇ ಹೊರತು ಪರಪ್ರಯೋಜಕವಾದುದಲ್ಲವೆಂಬ ಸಂಗತಿಯೂ ಸಹ ತುರ್ಕಿಯ ಸುಲ್ತಾನರಿಗೂ, ಅವರ ವೃದ್ಧಮಂತ್ರಿಮಂಡಲಕ್ಕೂ, ಅದರಂತೆ ತುರ್ಕಿದೇಶದ ವಿಶೇಷಭಾಗದ ಪ್ರಜೆಗಳಿಗೂ, ಪ್ರಪಂಚದ ಮೇಲಿರುವ ಮಹಮ್ಮದೀಯ ರಾಷ್ಟ್ರಪ್ರಭುಗಳಿಗೂ, ಆ ಪ್ರಜೆಗಳಿಗೂ ಸಹ ಗೊತ್ತಿಲ್ಲದ ಸಂಗತಿಯೇನೂ ಅಲ್ಲ. ಈ ಸ್ಥಿತಿಯನ್ನು ಇಂಗ್ಲೆಂಡು ಕೂಡ ತಿಳಿಯದೆ ಇಲ್ಲ. ಆದುಕಾರಣವೇ ಅದು ತುರ್ಕಿಯ ಈಗಿನ ದುಡುಕಿನ ಕೃತ್ಯಕ್ಕಾಗಿ ತಾನು ಕೋಪಗೊಂಡು ಪ್ರತಿಕ್ರಿಯೆಗೆ ಥಟ್ಟನೆ ಪ್ರವರ್ತಿಸದೆ ಎಷ್ಟೋ ಸಹನೆಯನ್ನು ತಂದುಕೊಂಡು, ಅದು ಎಚ್ಚರುಗೊಳ್ಳುವಂತೆ ಸೂಚನೆಗಳನ್ನು ಕೊಡುತ್ತ ಬಂದಿತು. ಈ ಹಿತ ಸೂಚನೆಯನ್ನು ಧಿಕ್ಕರಿಸುವಷ್ಟು ಅವಿವೇಕಮತಿಯು ತುರ್ಕಿಗೆ ಇಲ್ಲದಿದ್ದುದರಿಂದಲೂ, ಯುವಸಂಘದವರ ಒತ್ತಾಟದಿಂದಲೂ ತುರ್ಕಿಯು ಬಿಕ್ಕಟ್ಟಿಗೆ ಸಿಕ್ಕಿ ಡೋಲಾಯಮಾನಸ್ಥಿತಿಯಲ್ಲಿ ಕೆಲಕಾಲವನ್ನು ನೂಕಿತು. ಜರ್ಮನರಾದರೊ, ತುರ್ಕಿಯು ಹಿಂದೆಗೆವುದಾದರೆ ತಮ್ಮ ಯುದ್ಧದ ಹಡಗಿನಿಂದ ಸುಲ್ತಾನರ ಅರಮನೆಯಮೇಲೆ ಫಿರಂಗಿ ಗುಂಡನ್ನು ಹಾರಿಸುವುದಕ್ಕೂ ತಾವು ಸಿದ್ಧರಿರುವೆವೆಂದು ತೋರಿಸಿ, ಭಯಪಡಿಸುವುದಕ್ಕೂ ಹಿಂದೆಗೆಯಲಿಲ್ಲ. ಇದರ ಮೇಲೆ ತುರ್ಕಿಯು, ಹೇಗಾದರೂ ಆಗಿಕೊಳ್ಳಲಿ, ತಾನು ಇಂಗ್ಲೆಂಡಿನಮೇಲೆ ಯುದ್ಧವನ್ನು ಬಾಯಿಯಿಂದ ಸಾರಲಾರೆನೆಂದು ತೋರಿಸುವುದೋ ಎಂಬಂತೆ ಮೂಕಭಾವವನ್ನು ಅವಲಂಬಿಸಿತು. ಎನ್ವರ್ ಬೇ ಮೊದಲಾದ ಯುವಮಂತ್ರಿವರ್ಗದವರು ಯುದ್ಧೋಪಕ್ರಮವನ್ನು ಸಾಗಿಸಿಬಿಟ್ಟರು.

ಸ್ಥಿತಿಯು ಹೀಗಾದಮೇಲೆ ಇಂಗ್ಲೆಂಡು ಮೊದಲಾದ ಮಿತ್ರಮಂಡಲದವರು ತುರ್ಕಿಯನ್ನು ಶತ್ರುವರ್ಗದಲ್ಲಿ ಎಣಿಸಿ ಕಾರ್ಯಭಾಗಗಳನ್ನು ಮಾಡದಿದ್ದರೆ ಗತ್ಯಂತರವಿಲ್ಲವಾಗಿ ಪರಿಣಮಿಸಿತು. ಪ್ರಪಂಚದಮೇಲಿರುವ ಮಹಮ್ಮದೀಯ ಜನವರ್ಗದ ಮೇಲೆ ಇಂಗ್ಲೆಂಡಿಗೆ ನಿಸರ್ಗವಾಗಿರುವ ಪ್ರೀತಿವಿಶ್ವಾಸಗಳು ಅಸದಧಿಕವಾಗಿರುವುದರಿಂದ ಅವರ ಖಡ್ಗವು ಮಹಮ್ಮದೀಯಲೋಕದಮೇಲೆ ಪ್ರಹರಿಸಲ್ಪಡತಕ್ಕುದಾಗಿಲ್ಲ. ಪ್ರಸಂಗವಶಾತ್ ತುರ್ಕಿಯಮೇಲೆ ಉಪಯೋಗಿಸಲ್ಪಡುವ ಆಯುಧಪ್ರಹಾರಗಳು ಜರ್ಮನಿಯ ಪ್ರತಿಕ್ರಿಯೆಗೋಸ್ಕರಲೇ ಆಗಿದ್ದರೂ, ಬಟ್ಟೆಯನ್ನೊಗೆವವನ ಕೋಪವು ಬಟ್ಟೆಯೊಳಗಣ ಕೊಳೆಯಮೇಲೆ ಮಾತ್ರವೇ ಹೊರತು ಬಟ್ಟೆಯಮೇಲಲ್ಲದಿದ್ದರೂ ಕೊಳೆಯಮೇಲೆ ಪ್ರಯೋಗಿಸುವ ಏಟು ಬಟ್ಟೆಗೂ ತಟ್ಟಿಯೇ ತೀರಬೇಕಾದಂತೆ ತುರ್ಕಿಗೂ ತಗುಲದೆ ತಪ್ಪದು. ತುರ್ಕಿಯು ಇಂಥ ಸ್ಥಿತಿಗೆ ಬಂದು ನಿಂತುದಕ್ಕಾಗಿ ಭಾರತೀಯರು ಎಷ್ಟೋ ಸಂತಪಿಸುವರು. ಬಾಲ್ಕನ್ ಯುದ್ಧವಾದೀಚೆಗೆ ತುರ್ಕಿಗೂ ಭರತಖಂಡಕ್ಕೂ ಒಂದು ವಿಧವಾದ ಪ್ರೀತಿವಿಶ್ವಾಸಗಳು ಹೆಚ್ಚುತ್ತ ಬಂದಿದ್ದುವು. ತುರ್ಕಿಗುಂಟಾದ ನೋವು ಭರತಖಂಡಕ್ಕೂ ಆದುದೆಂದು ತಿಳಿಯುತ್ತಿದ್ದರು. ಈ ದೇಶದಲ್ಲಿ ೫ ನೆಯ ಒಂದು ಭಾಗದಷ್ಟು ಪ್ರಜೆಗಳು ಮಹಮ್ಮದೀಯರಾಗಿರುವರು. ಇಂಥ ಭರತಖಂಡಕ್ಕೆ ಆಂಗ್ಲಭೂಪರು ಸಾರ್ವಭೌಮರಾಗಿರುವರು. ಅಸ್ವಾತಂತ್ರ್ಯದಿಂದ ಈಗ ತುರ್ಕಿಯು ಇಂಗ್ಲೆಂಡಿನ ಪ್ರತಿಪಕ್ಷವಾಗಿ ಪರಿಣಮಿಸಿದುದಕ್ಕಾಗಿ ಭರತಖಂಡದ ಹಿಂದೂ ಮಹಮ್ಮದೀಯರೆಲ್ಲರೂ ವಿಷಾದಿಸುವುದು ಆಶ್ಚರ್ಯವೇನೂ ಅಲ್ಲ.

ಸರ್ವಜನಸಮತ್ವ ಸರ್ವಮತಸ್ವಾತಂತ್ರ್ಯಗಳನ್ನು ಕೋರುತ್ತಿರುವ ಇಂಗ್ಲೆಂಡಿನ ಮೈತ್ರಿಯನ್ನು ಕಳೆದುಕೊಂಡು ತುರ್ಕಿಯು ಸ್ವಾಭ್ಯುದಯೈಕಕಾಂಕ್ಷಾ ಸರ್ವಜನವಿನಾಶಗಳೇ ಲಕ್ಷಣವಾಗಿರುವ ಜರ್ಮನಿಯ ಪಕ್ಷಕ್ಕೆ ಸೇರಿ ಯುದ್ಧಕ್ಕೆ ನಿಂತಮೇಲೆ ಅದರ ಪರಿಣಾಮವು ನೆಟ್ಟಗೆ ಆಗುವುದೆಂದು ಹೇಳುವುದು ಕಷ್ಟವಾಗಿರುವುದಲ್ಲದೆ ಇಂಗ್ಲೆಂಡಿನ ಭೀತಿಗಾಗಿ ಸುಮ್ಮನಿದ್ದ ತುರ್ಕಿಯ ಸುತ್ತುಮುತ್ತಣ ಹಗೆಗಳೆಲ್ಲರೂ ಈ ಕಾಲದಲ್ಲಿ ಅದನ್ನು ಯೂರೋಪಿನಲ್ಲಿ ನಾಮಾವಶೇಷಗೊಳಿಸದೆ ಬಿಡುವರೆ ? ಎಂದು ಸಂಶಯವನ್ನೂ ಪಡಬೇಕಾಗುತ್ತದೆ. ಇನ್ನು ಅದರ ಹಣೆಯಬರಹವಿದ್ದಂತಾಗಲಿ.

ತುರ್ಕಿಯ ಸ್ಥಿತಿಯು ಹೀಗಾದುದರಿಂದ ಯುದ್ಧದಲ್ಲಿ ಹೆಚ್ಚಿನ ಪರಿಣಾಮಗಳು ಇನ್ನಾವತೆರದಲ್ಲಿ ಆಗಲಾರದಾದರೂ ಮಧ್ಯಧರಾಸಮುದ್ರದ ಸ್ಥಿತಿಯು ಸ್ವಲ್ಪ ವಿಷಮಾವಸ್ಥೆಗೆ ಬರುವುದು ನಿಜ. ಜರ್ಮನರು ಇಲ್ಲಿಯೂ ವಿಜೃಂಭಿಸಲು ಸ್ವಲ್ಪ ಮಾರ್ಗವಾಗಬಹುದು. ಇಂಗ್ಲೆಂಡು-ಇಂಡ್ಯಾಗಳ ಮಧ್ಯದಲ್ಲಿ ಜಲಮಾರ್ಗಗಳಲ್ಲಿ ಸ್ವಲ್ಪ ಅಸ್ವಸ್ಥತೆಯುಂಟಾಗಬಹುದು. ಇದರ ನಿವಾರಣೆಗಾಗಿ ಮಿತ್ರಮಂಡಲಿಯವರು ಸ್ವಲ್ಪ ಹೆಚ್ಚಿನ ಸಾಹಸವನ್ನು ವಹಿಸಿಕೊಳ್ಳಬೇಕಾಗಿ ಬರುವುದು. ಅಲ್ಲದೆ ತಟಸ್ಥವಾಗಿದ್ದ ಇಟಲಿ-ಗ್ರೀಕ್-ಬಾಲ್ಕನ್ ಸಂಸ್ಥಾನಗಳು ಮೊದಲಾದುವುಗಳೆಲ್ಲಾ ಆಯುಧಗಳನ್ನು ಹಿರಿಯಬಹುದು. ಆಗ್ಗೆ ಯುದ್ಧದ ಸ್ವರೂಪವು ಮತ್ತಷ್ಟು ವಿಸ್ತೃತವಾಗುವುದೇ ಹೊರತು ಜರ್ಮನರಿಗೇ ಆಗಲಿ ಅದರ ಪಕ್ಷವನ್ನು ಹಿಡಿದವರಿಗೇ ಆಗಲಿ ಜಯಲಾಭಕ್ಕೆ ಹೆಚ್ಚು ಸಾಧನವೇನೂ ಆಗುವಂತಿರುವುದಿಲ್ಲ. ಸ್ವಪ್ರಯೋಜನಕ್ಕಾಗಿ ಜಗತ್ತಿನ ಶಾಂತಿಯನ್ನೆಲ್ಲಾ ಕೆಡಿಸಲು ಅಸಮ ಮಾಯಾಜಾಲಗಳನ್ನು ಹರಡುತ್ತಿರುವ ಜರ್ಮನ್ ಚಕ್ರವರ್ತಿಗೆ ಜಗದೀಶನು ತಕ್ಕ ಫಲವನ್ನು ಅಂತ್ಯದಲ್ಲಿ ಕೊಟ್ಟೇಕೊಡುವನು. ಧರ್ಮರಕ್ಷಣೆಗಾಗಿ ಯುದ್ಧಕ್ಕೆ ನಿಂತಿರುವ ಮಿತ್ರಮಂಡಲಿಯವರಿಗೆ ದೈವಸಹಾಯವಿರುವುದಲ್ಲದೆ, ನ್ಯಾಯಾನ್ಯಾಯವಿಚಾರಶೀಲವಾದ ಅನೇಕ ರಾಷ್ಟ್ರಗಳ ಸಹಾನುಭೂತಿಯೂ ಇರುವುದು. ಇನ್ನು ಮಿತ್ರಮಂಡಲಿಯ ಪಕ್ಷಕ್ಕೆ ಇಟಲಿ-ಗ್ರೀಕು-ಬಾಲ್ಕನ್ ಸಂಸ್ಥಾನಗಳೂ ಸೇರುವುವು. ಅಮೇರಿಕಾ ಸಂಯುಕ್ತರಾಷ್ಟ್ರದವರ ಸಹಾನುಭೂತಿಯಂತೂ ಇಂಗ್ಲೆಂಡಿಗೆ ಪೂರ್ಣವಾಗಿರುವುದು. ಪೂರ್ವದಿಕ್ಕಿನಲ್ಲಿ ಜಪಾನರ ವಿಶೇಷವಾದ ಬೆಂಬಲವಿರುವುದು. ಇಂಗ್ಲೆಂಡಿನ ಅಧಿನಿವೇಶಗಳ ಸಹಾಯವು ದಿನದಿನಕ್ಕೆ ಹೆಚ್ಚುತ್ತಿರುವುದು. ಇವೆಲ್ಲಕ್ಕೂ ಮಿಗಿಲಾಗಿ ಭರತಖಂಡದ ಸರ್ವಸಮರ್ಪಣಸನ್ನದ್ಧವಾದ ಅತುಲಿತ ರಾಜಭಕ್ತಿಯು ಸರ್ವಾಂಗವಜ್ರಕವಚದಂತಿರುವುದು. ಹೀಗಿರುವಾಗ ಅಧರ್ಮಕ್ಷಣಿಕಮಾಯಾತೇಜೋದ್ದೀಪಿತವಾದ ೧-೨-೩ ಶತ್ರುರಾಜ್ಯಗಳ ಬಲವು ಹೇಗೆತಾನೇ ಜಯಶೀಲವಾಗುವುದು ? ಈ ಕಾರಣದಿಂದ ನಮ್ಮ ಭರತಖಂಡದ ಹಿಂದೂಮಹಮ್ಮದೀಯರೆಲ್ಲರೂ ಸದ್ಯದ ಸ್ಥಿತಿಯನ್ನು ಕೇಳಿ ಯಾವ ವಿಧದ ವಿಕಾರವನ್ನೂ ಪಡಬೇಕಾಗಿರುವುದಿಲ್ಲ. ಆದರೆ ಹಿಂದುಮುಂದನ್ನೂ, ಯುದ್ಧಾಂಗಣದ ಸ್ಥಿತಿಗತಿಯನ್ನೂ ಅರಿಯದ ಮತ್ತೂ ಲೋಕದ ಅಶಾಂತಿಯನ್ನು ವಿನೋದದ ನೋಟವನ್ನಾಗಿ ಎಣಿಸುವ ಕೆಲ ಜನರು ಅಥವಾ ದುಷ್ಪ್ರೇರಣೆಗೆ ಮನಗೊಟ್ಟಿರಬಹುದಾದ ಕೆಲರು ಇಂಥ ಸಮಯದಲ್ಲಿ ಶಾಂತವಾಗಿರುವ ರಾಷ್ಟ್ರಗಳಲ್ಲಿ ಸುಳ್ಳಾದ ಸುದ್ದಿಗಳನ್ನು ಹುಟ್ಟಿಸಿ ಹರಡಲು ಪ್ರಯತ್ನಿಸಬಹುದು. ಅಂಥ ಮಾತುಗಳಿಗೆ ಸ್ವದೇಶಕ್ಷೇಮವನ್ನೂ ಆತ್ಮಸೌಖ್ಯವನ್ನೂ ಕೋರುವ ಯಾವ ಮಹಮ್ಮದೀಯರೂ ಮನಸ್ಸನ್ನು ಕೊಡಬಾರದೆಂಬುದೇ ನಮ್ಮ ಹಿತಸೂಚನೆ. ದೇಶದಲ್ಲಿ ಅಜ್ಞಜನರೇ ಹೆಚ್ಚಾಗಿರುವುದರಿಂದ ಅಂಥವರನ್ನೆಲ್ಲಾ ಎಚ್ಚರಿಸುವುದಕ್ಕಾಗಿ ಈಗ ಇಂಡ್ಯಾಸರ್ಕಾರದವರೂ ಹೈದರಾಬಾದು ಮೊದಲಾದ ಅನೇಕ ಸಂಸ್ಥಾನಗಳವರೂ ಪ್ರಜಾಪ್ರಮುಖರ ಸಭೆಗಳೂ ಸಹ ಹಿತವಾದಗಳನ್ನು ಸಮಯೋಚಿತವಾಗಿ ಮಾಡಿರುವುದು ಪ್ರಶಂಸನೀಯವಾಗಿದೆ. ಅವುಗಳಲ್ಲಿ ಕೆಲವನ್ನು ಈ ಪತ್ರದ ಬೇರೆಕಡೆಯಲ್ಲಿ ಮುದ್ರಿಸಿರುತ್ತೇವೆ. ಇದೇ ಮೇಲ್ಪಂಕ್ತಿಯನ್ನು ಹಿಡಿದು ತಿಳಿದ ಜನರು ಅಜ್ಞಜನರಿಗೆಲ್ಲಾ ನಿಜಸ್ಥಿತಿಯ ಪರಿಜ್ಞಾನವನ್ನು ಮಾಡಿಕೊಟ್ಟು ಸ್ವಪರಶ್ರೇಯಸ್ಸನ್ನು ಕಾಯ್ದುಕೊಳ್ಳುವರೆಂದು ನಂಬುತ್ತೇವೆ.

ಸಂತೇಬೀದಿಯಲ್ಲಿ ನಮ್ಮ ಪ್ರೆಸ್ ಕಟ್ಟಡದ ಹಿಂಭಾಗದಲ್ಲಿ ವಾಸವಾಗಿರುವ ಕುಂಚಿಟಿಗರ ನರಸಿಂಹಯ್ಯನೆಂಬಾತನು ಕಳೆದ ಶುಕ್ರವಾರದ ಬೆಳಿಗ್ಗೆ ಮಗುವನ್ನೆತ್ತಿಕೊಂಡು ಮನೆಯ ಬಾಗಿಲಿನಲ್ಲಿ ನಿಂತಿರುವಾಗ್ಗೆ ಈತನಿಂದ ಮಂಡಿಯಲ್ಲಿರುವ ಮನೆಯನ್ನು ಬಾಡಿಗೆಗೆ ತೆಗೆದುಕೊಂಡಿದ್ದವನು ಬಾಡಿಗೆಗೆ ತಗಾದೆಮಾಡಲ್ಪಟ್ಟಿದ್ದುದರ ಮೇಲೆ ಕೋಪೋದ್ರಿಕ್ತನಾಗಿ ಒಂದು ಮಚ್ಚಿನಿಂದ ನರಸಿಂಹಯ್ಯನ ಮೈಕೈಮೇಲೆ ಕೆಲವೇಟುಗಳನ್ನು ಹೊಡೆದು ಟವರ್ ಹಾಲಿನ ಕಡೆ ಓಡಿಹೋಗುತ್ತಿರುವಾಗ್ಗೆ ಜನರು ತಿಳಿದು ಆ ಘಾತುಕನನ್ನು ಹಿಡಿದುಕೊಂಡು ಪೋಲೀಸರ ವಶಮಾಡಿದರು. ನರಸಿಂಹಯ್ಯನಿಗೆ ಆದ ಗಾಯದಿಂದ ರಕ್ತವು ವಿಶೇಷವಾಗಿ ಬರುತ್ತಿದ್ದುದರ ಮೇಲೆ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಮಾಡಲ್ಪಡುತ್ತಿರುವನು. ಪೋಲೀಸರು ಆ ಘಾತುಕನನ್ನು ಸೆರೆಯಲ್ಲಿಟ್ಟು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡುವವರಾಗಿರುವರು.

ಪತ್ರವ್ಯವಹಾರ.

ಕಡೂರು ತಾ॥ ಚಿಕ್ಕಂಗಳ.

ಮಹಾಸ್ವಾಮಿ ! ಈ ಗ್ರಾಮದಲ್ಲಿ ತಾ॥ ೨೧-೧೦-೧೪ ಈ ದಿವಸ ಹು॥ ಗಳಾದ ಪಟೇಲ್ ಬಿ. ಮ. ಸಿ. ಬಿದ್ದಹನುಮೆಗೌಡರು, ದಾ॥ ವೀರೇಗೌಡರು, ಕನ್ನೇನಹಳ್ಳಿ ಪಟೇಲ್ ದೊ॥ ಸಿ. ಹನುಮಂತೇಗೌಡರು, ಭಾ॥ ಹು॥ ಬಿಮ್ಮೇಗೌಡರು, ತಿಮ್ಮೇಗೌಡರು, ಚಿಕ್ಕತಿಮ್ಮೇಗೌಡರು, [illegible]ನವರು, ಹಕ್ಕಿಂಚಿ, [illegible]ನವರು, [illegible] ಹನು ಮಂತೇಗೌಡರು, [illegible]

ಮಿಗಳವರು, ಅಂತರವಳ್ಳಿ ಮಠದ ಏಜಂಟ್ ನೀಲಕಂಠಸ್ವಾಮಿಗಳವರು, ಪುಟ್ಟಶೆಟ್ಟರವರು, ಬಿ. ಕೇಶವಶೆಟ್ಟರು, ಚನ್ನಕೃಷ್ಣಪ್ಪನವರು, ವೆಂಕಟರಮಣಪಟ್ಟಪ್ಪನವರು, ಹುಂಕಳಿಯಪ್ಪನವರು, ಇನ್ನು ಮುಂತಾದ ಗ್ರಾಮಸ್ಥರು ಈ ಊರ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಸಭೆ ಸೇರಿದ್ದರು. ಈ ಸಭೆಯಲ್ಲಿ ಈ ಮುಂದೆ ಹೇಳುವ ವಿಷಯಗಳು ಪ್ರಸ್ತಾಪಿಸಲ್ಪಟ್ಟವು. ಹಾಲಿ ಈ ಗ್ರಾಮದಲ್ಲಿ ಲೋಗಾಯ್ತು ಸರ್ಕಾರಿ ಪಾಠಶಾಲೆಯಿಲ್ಲದೆ ಗ್ರಾಮಸ್ಥರ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾದುದನ್ನು ಮಾ|| ಪಟೇಲ್ ಬಿದ್ದಹನುಮೇಗೌಡರು ನೋಡಿ ತರೀಕೆರೆ ತಾಲ್ಲೂಕು ಬೇರನಹಳ್ಳಿ ಎ. ಇ. ಸ್ಕೂಲಿನಲ್ಲಿ ವಿದ್ಯಾಭ್ಯಾಸಂಗ ಮಾಡುತ್ತಿದ್ದ ಬಿ. ಕೆಂಚಪ್ಪನೆಂಬುವರನ್ನು ಇಲ್ಲಿ ಸ್ಕೂಲ್ ಸ್ಥಾಪಿಸುವ ಬಗೆಗೆ ಹೇಳಿದ್ದರಮೇರೆ ಸ್ಕೂಲನ್ನು ಇಟ್ಟಿರುತ್ತಾರೆ. ಹಾಲಿ ಸ್ಕೂಲಿಗೆ ನಮ್ಮ ಡಿಸ್ಟ್ರಿಕ್ಟ್ ಡೆ|| ಇನ್ಸ್‌ಪೆಕ್ಟರ್ ಸಾಹೇಬರವರು ಗ್ರಾಂಟ್ ಮಂಜೂರ್ಮಾಡಿರುತ್ತಾರೆ. ಇಲ್ಲಿಗೆ ಗ್ರಾಂಟ್‌ಸ್ಕೂಲ್ ಮಂಜೂರ್ಮಾಡಿದ್ದಕ್ಕಾಗಿ ನಾವೆಲ್ಲರೂ ತುಂಬಾ ಕೃತಜ್ಞರಾಗಿರುವೆವು. ಹಾಲಿ ಸ್ಕೂಲ್ ಇಡುವುದಕ್ಕೆ ಮನೆಯಿಲ್ಲದೆ ತೊಂದರೆಯಾದುದರಿಂದ ಪಾಠಶಾಲೆಗೋಸ್ಕರ ಒಂದು ಮನೆಯನ್ನು ತಯಾರ್ಮಾಡಿರುತ್ತೇವೆ. ಇಲ್ಲಿಗೆ ಬಂದಿರುವ ಗ್ರಾಂಟ್ ಸ್ಕೂಲ್‌ಮಾಸ್ಟರ್ ಬಿ. ಕೆಂಚಪ್ಪನವರು ಬಂದು ಮೂರುತಿಂಗಳಾಯ್ತು, ತುಂಬಾ ಮುತುವರ್ಜಿಯಿಂದ ಕೆಲಸ ಮಾಡುತ್ತಾ ಇದ್ದಾರೆ. ಈ ಪಾಠಶಾಲೆಯಲ್ಲಿ ಈಗಾಗಲೆ ೫೩ ಮಂದಿ ಬಾಲಕರು, ೪ ಮಂದಿ ಬಾಲಕಿಯರು, ಅಭ್ಯಾಸಿಸುತ್ತಲಿರುವರು ಇನ್ನು ಕ್ರಮೇಣ ಅಭಿವೃದ್ಧಿಸ್ಥಿತಿಗೆ ಬರಬಹುದಾಗಿದೆ. ದಯಾಳುಗಳಾದ ಸರ್ಕಾರದವರು ಸದ್ಯದಲ್ಲಿಯೇ ಸರ್ಕಾರಿ ಸ್ಕೂಲಾಗಿ ಮಾಡಿಕೊಟ್ಟಾರೆಂದು ನಂಬಿರುತ್ತೇವೆ. ಅಲ್ಲದೆ ಈ ಊರಲ್ಲಿ ಪಾನಕ್ಕೆ ಯೋಗ್ಯವಾದ ಸಿಹಿನೀರಿನ ಬಾವಿಗಳು ಇರುವುದಿಲ್ಲ. ಗ್ರಾಮಸ್ಥರೆಲ್ಲಾ ಕೆರೆಯನೀರನ್ನೇ ಉಪಯೋಗಿಸುತ್ತಾರೆ. ಇದರಲ್ಲಿ ದನಗಳ ಮೈತೊಳೆಯುವುದು ಬಟ್ಟೆಯೊಗೆಯುವುದು ಅಂಗಳದಲ್ಲಿ ದನಗಳನ್ನು ಕೂಡುವುದರಿಂದ ದನಗಳ ರೊಚ್ಚು ಸಗಣಿ ಮಲಮೂತ್ರಾದಿಗಳಿಂದ ಪಾನಕ್ಕೆ ಯೋಗ್ಯವಾದ ನೀರನ್ನು ಕೆಡಿಸಿಬಿಡುತ್ತಾರೆ. ಈ ಮೇಲೆ ಹೇಳಿದ ಕಾರಣಗಳನ್ನು ಸರ್ಕಾರದವರು ತಪ್ಪಿಸಿಯಾರೆಂದು ನಂಬಿರುತ್ತೇವೆ. ಅನಂತರ ಶ್ರೀ ಆಂಜನೇಯಸ್ವಾಮಿಗೆ ಮಂಗಳಾರ್ತಿ ನಡೆದು ಸೇರಿದ್ದ ದೊಡ್ಡಮನುಷ್ಯರುಗಳಿಗೆ ಗಂಧ ಪುಷ್ಪ ತಾಂಬೂಲಾದಿಗಳೂ, ಬಾಲಕರಿಗೆ ತಿಂಡಿಯೂ ವಿನಿಯೋಗಿಸಲ್ಪಟ್ಟು ಸಭೆಯು ಬರಖಾಸ್ತಾಯಿತು. ತಿಮ್ಮೇಗೌಡ.

ವೀರಶೈವವಿದ್ಯಾರ್ಥಿನಿಲಯ

ಬೆಂಗಳೂರಿನಲ್ಲಿ ವಿದ್ಯಾಭ್ಯಾಸಮಾಡತಕ್ಕ ಪರಸ್ಥಳದ ವೀರಶೈವ ವಿದ್ಯಾರ್ಥಿಗಳುಪಯೋಗಕ್ಕಾಗಿ ಒಂದು ವಿದ್ಯಾರ್ಥಿನಿಲಯವನ್ನು ಕಟ್ಟಬೇಕೆಂದು ೧೯೦೫ ನೆ ಇಸವಿಯಲ್ಲಿ ಬೆಂಗಳೂರಲ್ಲಿ ಜರುಗಿದ ೨ ನೇ [illegible]ಮದ್ವೀರಶೈವ ಮಹಾಸಭೆಯಲ್ಲಿ ನಿರ್ಧಾರವಾಯಿತೆಂಬುದು ಲೋಕಪ್ರಸಿದ್ಧವಾದ ಸಂಗತಿಯಾಗಿದೆ. ಮಹಾಸಭೆಯು ಈ ಸದುದ್ದೇಶವನ್ನು ಸಾರ್ಥಕಗೊಳಿಸಲು ವೀರಶೈವರ ಪುಣ್ಯೋದಯದಿಂದ ಅತ್ತಿಬೆಲೆಯ ಮ|| ಶ್ರೀಮಂತ ಸಿದ್ಧಬಸಪ್ಪನವರು ಮೇಲ್ಕಂಡ ಕಟ್ಟಡವನ್ನು ೧೦,೦೦೦ ರೂ ಖರ್ಚನ್ನಿಟ್ಟು ತಾವು ಕಟ್ಟಿಸುವದಾಗಿ ವಾಗ್ದಾನಮಾಡಿ ತಮ್ಮ ವಿದ್ಯಾಭಿಮಾನವನ್ನೂ ಔದಾರ್ಯವನ್ನೂ ವ್ಯಕ್ತಗೊಳಿಸಿ ಸಮಾಜಬಾಂಧವರಿಗೆಲ್ಲಾ ಹರ್ಷವನ್ನುಂಟುಮಾಡಿದರು. ಆದರೆ ಈ ವಿಚಾರವು ನಡೆದು ೯ ವರುಷಗಳಾದರೂ ಶ್ರೀಮಂತರ ಸತ್ಸಂಕಲ್ಪವು ನೆರವೇರದಿರುವುದನ್ನು ನೋಡಿದರೆ ವಿಷಾದಪಡಬೇಕಾಗಿದೆ. ಕಾರಣವನ್ನು ವಿಚಾರಮಾಡಲಾಗಿ ವಿದ್ಯಾರ್ಥಿನಿಲಯಕ್ಕೆ ಯೋಗ್ಯವಾದ ನಿವೇಶನವು ಇದುವರೆಗೆ ದೊರೆಯದಿರುವುದೇ ಈ ಕಾರ್ಯಕ್ಕೆ ವಿಘ್ನವಾಗಿರುವುದೆಂದು ತಿಳಿಯಬರುವುದು. ಆರಂಭದಲ್ಲಿ ವಿದ್ಯಾಭಿವೃದ್ಧಿ ಫಂಡ್ ಸಂಘದವರ ಅಶ್ರದ್ಧೆಯಿಂದ ಶ್ರೀಮನ್ಮಹಾರಾಜರವರ ಸರ್ಕಾರದವರಿಂದ ಒಂದು ನಿವೇಶನವನ್ನು ಸಂಪಾದಿಸಲು ತಕ್ಕ ಪ್ರಯತ್ನಗಳು ನಡೆಯಲಿಲ್ಲವು. ಈಚೆಗೆ ಸುಮಾರು ೫ ವರುಷಗಳಹಿಂದೆ ಮೇಲ್ಕಂಡ ಸಂಘದವರು ವಿದ್ಯಾರ್ಥಿನಿಲಯದ ಕಟ್ಟಡಕ್ಕಾಗಿ ಒಂದು ನಿವೇಶನವನ್ನು ಉಚಿತವಾಗಿ ದಯಪಾಲಿಸಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಿಕೊಂಡರು. ನಮ್ಮ ಸಂಸ್ಥಾನದಲ್ಲಿ ವಿದ್ಯಾಭಿವೃದ್ಧಿಯನ್ನು ಮಾಡಲು ಕುತೂಹಲಪಡುತ್ತಿರುವ ಸರ್ಕಾರದವರು ಇಷ್ಟು ವರುಷಗಳು ಕಳೆದಾಗ್ಯೂ ಸಂಘದವರ ಕೋರಿಕೆಯನ್ನು ನೆರವೇರಿಸದಿರುವುದು ಸಖೇದಾಶ್ಚರ್ಯವನ್ನುಂಟುಮಾಡುತ್ತಿದೆ. ಪ್ರಜಾನುರಾಗಿಗಳೂ ಅಸಾಧಾರಣ ದೇಶಾಭಿಮಾನಿಗಳೂ ಆದ ಈಗಿನ ಮಂತ್ರಿವರ್ಯರು ಮಂತ್ರಿತ್ವವನ್ನು ವಹಿಸಿದಮೇಲೆ ಮ|| ರಾ|| ಶ್ರೀಮಂತ ಸಿದ್ಧಬಸಪ್ಪನವರಾದಿಯಾಗಿ ಬೆಂಗಳೂರಲ್ಲಿರುವ ಕೆಲ ವೀರಶೈವ ಪ್ರಮುಖರು ದಿವಾನ್‌ಸಾಹೇಬರಲ್ಲಿ ಹೋಗಿ ಒಂದು ನಿವೇಶನವನ್ನು ದಯಪಾಲಿಸಬೇಕೆಂದು ಬೇಡಿಕೊಂಡರು. ಇಷ್ಟಾದರೂ ನಮ್ಮ ದಯಾಳು ಸರ್ಕಾರದವರ ಕೃಪೆಯು ಬಾರದಿರುವುದಕ್ಕಾಗಿ ವಿಷಾದಪಡಬೇಕಾಗಿದೆ. ಕೀರ್ತಿಶೇಷರಾದ ರಾವ್ ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಧರ್ಮಸತ್ರದಲ್ಲಿ ೫೦ ಮಂದಿ ವೀರಶೈವ ಬಡವಿದ್ಯಾರ್ಥಿಗಳ ಅಶನವಸನಕ್ಕೆ ತಕ್ಕನುಕೂಲವು ಕಲ್ಪಿಸಲ್ಪಟ್ಟಿದೆ. ಉಪಪನ್ನರಾದ ಪರಸ್ಥಳದ ವಿದ್ಯಾರ್ಥಿಗಳಿಗೆ ಒಂದು ವಿದ್ಯಾರ್ಥಿನಿಲಯವಿಲ್ಲವುದರಿಂದ ಸುಮಾರು ೩೦-೪೦ ವಿದ್ಯಾರ್ಥಿಗಳು ಅನಾರೋಗ್ಯಕರವಾದ ಸ್ಥಳಗಳಲ್ಲಿ ವಾಸಮಾಡಿಕೊಂಡು ವಿಶೇಷ ತೊಂದರೆ ಪಡುತ್ತಿದ್ದಾರೆ ವೀರಶೈವರಿಗೆ ನೇತ್ರಪ್ರಾಯವಾಗಿರುವ ತಮ್ಮ ಲೋಕಮಾನ್ಯವಾದ ಪತ್ರಿಕೆಯಲ್ಲಿ ತಾವಾದರೂ ಈ ವಿಚಾರವನ್ನು ಚರ್ಚಿಸಿ ನಮ್ಮ ದಯಾಳು ಸರ್ಕಾರದವರ ಗಮನಕ್ಕೆ ತರುವಿರೆಂದು ನಂಬಿರುವ,

ಓರ್ವ ವಿದ್ಯಾಭಿಮಾನಿ.

ಬೆಳಗಾಂಜಿಲ್ಲಾ ನಂದಗಡ.

ನಿನ್ನೆ ಅಂದರೆ ತಾ|| ೨೫-೧೦-೧೯೧೪ ನೆ ದಿವಸ ಪ್ರಾತಃಕಾಲ ೮ ಘಂಟೆಗೆ ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಜಯದೇವ ಮಹಾಸ್ವಾಮಿಗಳವರು ನಮ್ಮಿಲ್ಲಿಯ ವೀರಶೈವ ಸಮಸ್ತ ಮಂಡಲಿಯ ಪ್ರಾರ್ಥನೆಯ ಮೇರೆಗೆ ಬಿಜಯಂಗೈಸಿ ತಳಿರುತೋರಣಗಳಿಂದಲೂ ಧ್ವಜಪತಾಕೆಗಳಿಂದಲೂ ಕದಳೀಸ್ತಂಭಗಳಿಂದಲೂ ಸುಶೋಭಿತಮಾಡಲ್ಪಟ್ಟ ಪುರದಲ್ಲಿ ಅಡ್ಡಪಲ್ಲಕ್ಕಿ ಶ್ವೇತಛತ್ರ ಮುಂತಾದ ಯಾವತ್ತು ಬಿರುದಾವಳಿಯಿಂದೆ ಕೂಡಿ, ಉತ್ಸವಪೂರ್ವಕ ದಯಮಾಡಿಸಿದರು. ಊರೊಳಗಿನ ಸಮಸ್ತವೀರಶೈವರಲ್ಲದೆ ಇತರ ಮತೀಯರಾದ ಬ್ರಾಹ್ಮಣ ಜೈನ ಮೊದಲಾದ ಯಾವತ್ತರೂ ಸೇರಿ ಮಧ್ಯಾಹ್ನದ ೧ ಘಂಟೆಗೆ ಇಲ್ಲಿಯ ವಿರಕ್ತಮಠದಲ್ಲಿ ಶ್ರೀಗಳವರ ಸ್ವಾರಿಯು ದಯಮಾಡಿಸಿದನಂತರ ಸ್ವಾಗತ ಪರಭಾಷಣವೂ ಮತ್ತೂ ಸ್ತೋತ್ರಪಾಠವೂ ನಮ್ಮ ಬಾದಶಹರಾದ ಪಂಚಮಜಾರ್ಜ ಬಾದಶಹರು ಶತ್ರುಗಳಮೇಲೆ ಹೋದದ್ದರಲ್ಲಿ ಜಯವಾಗಲೆಂದೂ ತ್ರಿವಾರಜಯಘೋಷವೂ ಆಗಿ ಸಭೆಯು ವಿಸರ್ಜಿಸಲ್ಪಟ್ಟಿತು. ಈಹೊತ್ತು ಶ್ರೀಗಳವರು ನಿನ್ನೆ ದಿವಸಮಾಡಿದ್ದ ಆಜ್ಞಾಪ್ರಕಾರ ಸಂಧ್ಯಾಕಾಲದ ೬ ಘಂಟೆಗೆ ಸಭೆಯು ಪ್ರಾರಂಭಿಸಲ್ಪಟ್ಟಿತು. ಶ್ರೀಗಳವರ ಆಜ್ಞೆಯಂತೆ ಶ್ರೀಗಳವರ ಮಹತ್ಕಾರ್ಯದ ಪರವಾಗಿ ಎ. ಮಲ್ಲಪ್ಪಾಶೆಟ್ಟಿ ಹೀರೇಮನವಳ್ಳಿ ಇವರು ಬರೆದ ವ್ಯಾಖ್ಯಾನವನ್ನು ಜಂಬಯ್ಯಾ ಪಡದಯ್ಯಾ ಹಿರೇಮಠ ಇವರು ಸಭಿಕರಿಗೆ ತಿಳಿಯುವಂತೆ ಓದಿದಬಳಿಕ ಸದರಿ ಎ. ಮಲ್ಲಪ್ಪಾಶೆಟ್ಟಿ ಇವರು ರಚಿಸಿದ ಶ್ರೀಗಳವರ ಸ್ತೋತ್ರಪದಗಳನ್ನು ಶಿ|| ರಾ|| ರಾಚಯ್ಯಾ ಹಿರೇಮಠದ ಇವರು ಮಧುರಸ್ವರದಿಂದ ಇಂಪಾಗಿ ಗಾನಮಾಡಿ ಸಭಿಕರನ್ನು ಆನಂದಗೊಳಿಸಿದರು. ಬಳಿಕ ಶ್ರೀಗಳವರು ಭಿನ್ನಭಿನ್ನ ಮತಾನುಯಾಯಿಗಳು ಮಾಡುವ ದ್ವೇಷಾಸೂಯೆಗಳಿಂದ ಆಗುವ ಹಾನಿಯನ್ನು ತಿಳಿಸಿ ಬಳಿಕ ತತ್ವಜ್ಞಾನದ ವಿಷಯವಾಗಿ ಅಸ್ಖಲಿತವಾಣಿಯಿಂದ ಎರಡು ಘಂಟೆಯವರೆಗೆ ಯಾವತ್ತು ಮತದವರ ಮನಸಿನಮೇಲೆ ಒಳ್ಳೇ ಪರಿಣಾಮವಾಗುವಂತೆ ಉಪನ್ಯಾಸಮಾಡಿದರು. ಬಳಿಕ ಇಲ್ಲಿಯ ಕೇಶವರಾವ ನರಗುಂದಕರ ಮತ್ತೂ ರಾಮರಾವ ಭೋಂದಗೆ ಮತ್ತೂ ಬಸಪ್ಪ ತಿಮ್ಮೋಳಿ ಇವರು ಭಾಷಣಮಾಡಿದರು. ಬಳಿಕ ವಿದ್ಯಾರ್ಥಿಗಳ ಗಾಯನವಾದ ನಂತರ ಹಾರ ತುರಾಯಿ ಅತ್ತರಗಳ ವಿನಿಯೋಗವಾಗಿ, ಸಭೆಯು ವಿಸರ್ಜಿಸಲ್ಪಟ್ಟಿತು. ಶ್ರೀಗಳವರ ಪಾಂಡಿತ್ಯಕ್ಕೆ ಪರಮತೀಯರು ತಲೆದೂಗಿ ತಮ್ಮ ಆನಂದಪ್ರದರ್ಶನವನ್ನು ವ್ಯಕ್ತಮಾಡಿದರು. ಇಂಥ ಮಹಾತ್ಮರ ದರ್ಶನಯೋಗವೂ ಧರ್ಮಜಾಗ್ರತೆಯು ಪರಿಷದವೂ ಈವರೆಗೂ ಈ ಗ್ರಾಮದಲ್ಲಿ ಎಂದೂ ಆಗಿರಲಿಕ್ಕಿಲ್ಲೆಂಬ ಬಗ್ಗೆ ನಾನು ಧಾರಾಳವಾಗಿ ಹೇಳುತ್ತೇನೆ. ಶ್ರೀಗಳವರ ಮಹೋತ್ಸವಪ್ರೀತ್ಯರ್ಥವಾಗಿ ಇದೇ ತಾಲ್ಲೂಕ ಪೈಕಿ ಹಿರೇಮುನವಳ್ಳಿ ಕರಡಿಮಜಲಿನವರ ಬಾರಿಸುವಿಕೆಗೆ ಶ್ರೀಗಳವರು ಅತ್ಯಾನಂದಪಟ್ಟು ಸಂಸ್ಥಾನದ ಗುರ್ತು ಉಳಿಯುವಂತೆ ಬಕ್ಷೀಸನ್ನು ಇನ್ನು ಸ್ವಲ್ಪದಿವಸಗಳಲ್ಲಿ ಕಳುಹಿಸಿಕೊಡುವೆವೆಂದು ಆಶೀರ್ವದಿಸಿದರು. ಸದರಿ ಕಾರ್ಯದಲ್ಲಿ ತ್ರಿಕರಣಪೂರ್ವಕವಾಗಿ ಪರಮತೀಯರಾದ ಇಲ್ಲಿಯ ಸಾಹುಕಾರ ಮಾಧವವಿಠಲ ನಾಯಕರ ತುಕ್ಕಪ್ಪಾ ಇಂಗಳೆ ಇವರು ತೋರಿಸಿದ ಸಹಾನುಭೂತಿಯು ಅತ್ಯಂತ ಶ್ಲಾಘನೀಯವಾಗಿದೆ.

ಸದ್ಗುರುಪಾದಕಿಂಕರ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್‌ಸಭೆಗೆ ಲಗ್ನ ಮೊದಲಾದವುಗಳಿಂದ ತಾ|| ೨೪-೬-೧೪ ರಿಂದ ೩೦-೬-೧೪ ರವರೆಗೆ ಜಮಾಬಂದ ತಪ್ಸೀಲ್.

೧. ನಃ|| ಗಳಾದ ಮೈಸೂರು ಸ್ಟಾರ್ ಆಫೀಸ್ ಮೂಲಕ ಬೆಂಗಳೂರು ತಾ|| ದೊಡ್ಡಹಳ್ಳಿಯಲ್ಲಿರುವ ಮಠದ ತಿಪ್ಪೇಸ್ವಾಮಿಗಳಿಂದ ದೊಡ್ಡಹಳ್ಳಿಯಲ್ಲಿರುವ ಜೋಗಿಹಳ್ಳಿ ವೀರಣ್ಣನವರು, ಜೇಬಿ ಸಣ್ಣಜ್ಜಪ್ಪನವರು, ಕೊಡ್ಲಹಳ್ಳಿ ಗಿರಿಯಪ್ಪನವರು ಇವರ ಕುಮಾರ್ತಿಯರ ವಿವಾಹಗಳಲ್ಲಿ ತೆಗೆದುದು ೨-೧೫-೦ ೨. ಗುಬ್ಬಿ ಪೇಟೆ ಶೆಟ್ಟರ ಕಣ್ಣಶೆಟ್ಟರ ಮೂಲಕ ಸಗರದ ಚನ್ನಬಸಪ್ಪನವರ ಮಗನ ಲಗ್ನದಲ್ಲಿ ತೆಗೆದುದು ೩-೦-೦, ಸಗರದ ಗುಬ್ಬಣ್ಣನವರ ಮಗನ ಲಗ್ನದಲ್ಲಿ ತೆಗೆದುದು ೩-೦-೦, ಸಂಗಪ್ಪದೇವರ ಮಗನ ಉಪನಯನದಲ್ಲಿ ತೆಗೆದುದು ೧-೦-೦, ರುದ್ರದೇವರ ಹುಚ್ಚವೀರಯ್ಯನವರ ಮಗನ ಲಗ್ನದಲ್ಲಿ ತೆಗೆದುದು ೧-೦-೦, ಜುಮ್ಲಾ ೮-೦-೦, ೩. ಗುಬ್ಬಿ ತಾ|| ಹಾಗಲವಾಡಿಯಲ್ಲಿನ ಕಿಣಿಗಲ್‌ಮಠದ ವೀರಾರಾಧ್ಯರ ಮೂಲಕ ಡಿಟೋ ಗ್ರಾಮದ ಪಟೇಲ್ ಸಿದ್ರಾಮಯ್ಯನವರ ಮನೆ ವಿವಾಹಕಾಲದಲ್ಲಿ ತೆಗೆದುದು ೨-೦-೦, ೪. ಮೈಸೂರು ಸ್ಟಾರ್ ಆಫೀಸ್ ಮೂಲಕ ಜಗಳೂರು ತಾ|| ಪಲ್ಲಾಗಟ್ಟೆ ಸ್ಕೂಲ್‌ಮಾಸ್ಟರ್ ಟಿ. ಸಿದ್ಧಯ್ಯನವರಿಂದ ಪಲ್ಲಾಗಟ್ಟೆ ಬಣಕಾರ ತಳಕಲಿ ಚನ್ನಬಸಪ್ಪನವರ ತಮ್ಮಂದಿರು ಬಸಪ್ಪನವರ ಮನೆಯಲ್ಲಿ ನಡೆದ ವಿವಾಹಕಾಲದಲ್ಲಿ ತೆಗೆದುದು ೧-೧೫-೦, ೫. ಕ್ಲೋಸ್‌ಪೇಟೆ ತಾ|| ಬಿಡದಿ ಜವಳಿಅಂಗಡಿ ಚನ್ನಶೆಟ್ಟರ ಮೂಲಕ ಹೊಸೂರು ಪುಟ್ಟವೀರಪ್ಪನವರ ಮಕ್ಕಳು ಚಿಕ್ಕವೀರಪ್ಪನವರ ಲಗ್ನದಲ್ಲಿ ತೆಗೆದುದು ೩-೦-೦, ೬. ಗುಬ್ಬಿ ತಾ|| ಹೊಸಕೆರೆ ಹೊಸಮಠದ ಉಜ್ಜನಯ್ಯನವರ ಮೂಲಕ ಡಿಟೋ ಗ್ರಾಮದ ಮಲ್ಲಯ್ಯ ಮತ್ತು ಪರ್ವತಯ್ಯನವರ ಮನೆ ಲಗ್ನದಲ್ಲಿ ತೆಗೆದುದು ೪-೦-೦, ಪುಟ್ಟಣ್ಣಯ್ಯನವರ ಲಗ್ನದಲ್ಲಿ ತೆಗೆದುದು ೨-೦-೦, ಶಿದ್ವೀರಪ್ಪನವರ ಮನೆ ಲಗ್ನದಲ್ಲಿ ತೆಗೆದುದು ೨-೦-೦, ಜುಮ್ಲಾ ೮-೦-೦, ೭. ತುಮಕೂರು ತಾ|| ಚಿಕ್ಕತೊಟ್ಲಕೆರೆ ಶೆಟ್ಟರ ಮಲ್ಲಪ್ಪ ಯಜಮಾನ ಹೊನ್ನಪ್ಪ ಇವರಮೂಲಕ ಚಿಕ್ಕತೊಟ್ಲಕೆರೆ ಶೆಟ್ಟರ ಮಲ್ಲಪ್ಪನವರ ಮಗಳು ಚಿ|| ಸೌ|| ಶಾಂತವೀರಮ್ಮನನ್ನು ಗುಬ್ಬಿ ಮುದ್ದುಮಲ್ಲಪ್ಪಯ್ಯನವರ ಚನ್ನಪ್ಪನವರ ಮಗ ಮ|| ಜಿ. ಹುಚ್ಚಪ್ಪನವರಿಗೆ ಕೊಟ್ಟು ನಡಿಸಿದ ಲಗ್ನದಲ್ಲಿ ವರನಕಡೆಯಿಂದ ೨-೦-೦, ವಧುವಿನಕಡೆಯಿಂದ ೧-೦-೦, ೮. ಚನ್ನಗಿರಿ ತಾ|| ತಗಡೂರು ಕಡ್ಲಪ್ಪ ಬಸಪ್ಪನವರಿಂದ ಬಂದದ್ದು ೧೦-೦-೦, ೯. ಗುಬ್ಬಿ ತಾ|| ಮೂಗನಾಯಕನಕೋಟೆ ಯಜಮಾನ ಎಡೆಯೂರಪ್ಪನವರ ಮೂಲಕ ಮೂಗನಾಯಕನಕೋಟೆ ಕಲಿವೀರಪ್ಪನವರ ಪುತ್ರಿ ಚಿ|| ಸೌ|| ರೇವಮ್ಮನನ್ನು ತಾವರೆಕೆರೆ ಚಿ|| ಮ|| ಮಲ್ಲಿಕಾರ್ಜುನಪ್ಪನವರಿಗೆ ಕೊಟ್ಟು ತುಮಕೂರು ತಾ|| ತಾವರೆಕೆರೆಯಲ್ಲಿ ನಡಿಸಿದ ಲಗ್ನದಲ್ಲಿ ೨-೦-೦, ೧೦. ನೆಗವಂಗಲ ತಾ|| ಬೇಗೂರು ರುದ್ರಪ್ಪನವರಿಂದ ಬೇಗೂರು ಪ್ರಭವಯ್ಯನವರ ಮಮ್ಮೊಗಳನ್ನು ಚಿಕ್ಕಬಳ್ಳಾಪುರದ ಮಲ್ಲಿಕಾರ್ಜುನ ಬಸಪ್ಪನವರ ಮಗ ಚಿ|| ಮ|| ಸಿದ್ಧಪ್ಪನವರಿಗೆ ಕೊಟ್ಟು ನಡಿಸಿದ ಲಗ್ನದಲ್ಲಿ ವರನಕಡೆ ೨-೦-೦, ವಧುವಿನಕಡೆ ೧-೦-೦ ರೂ. ಬಂದದ್ದು.

ಜಿ. ಕೆ. ರುದ್ರಾರ್ಯ, ಅ| ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ
ಫಂಡ್‌ಸಭೆ, ಬೆಂಗಳೂರು.

ಅಷ್ಟದೇವತಾಮಹೋತ್ಸವ ಪುರಸ್ಸರ ರಾಜಭಕ್ತಿ ಪತ್ರಿಕಾ.

ಶ್ಲೋಕ || ಉತ್ಥಾನೇಶಯನೇಚಭೋಜನವಿಧೌವಾಮಾರ್ಗಪ್ರಯಾಣೇಸ್ಥಿತೌ | ಯಾನಾರೋಹವಿಹಾರಧರ್ಮನಿಲಯೇಷ್ವಾಸ್ಥಾನಚಿಂತಾಸುಚ || ಶ್ರೀಮನ್ಭಾರತಭೂರಿಭೂಮಿರಮಣೀ ಭೂಷಾಮಣಿಂಸಂತತಂ | ಶ್ರೀಮಜ್ಜಾರ್ಜಮಹೀಮಹೇಂದ್ರಮತುಲಂ ಧ್ಯಾಯಾತ್ಪರಾತ್ಮಾನಿಶಂ ||೧|| ಜಯತುಸಹಕಳತ್ರಶ್ರೀಯುತೋ ಜಾರ್ಜಸಮ್ರಾಟ್ | ಜಯತುಸಹಕುಟುಂಬಃ ಕೃಷ್ಣರಾಣ್ಮಾನವೇಂದ್ರಃ || ಜಯತುಜನಪದೇ ಶ್ರೀಶಾರದಾಸುಪ್ರಸನ್ನಾ | ಜಯತುಚವಸುಧೇಯಂ ಸರ್ವಸಂಪತ್ಸಮೃದ್ಧಾ ||೨|| ಕಲ್ಯಾಣಗುಣಗಣಾಢ್ಯಃ ಶಾಂತಶ್ರೀಭಾರತೀಯಸಾಮ್ರಾಜ್ಯಃ | ಪ್ರಾಜ್ಯಪ್ರಭುತಾಪೂಜ್ಯಃ ಶ್ರೀಮಜ್ಜಾರ್ಜಪ್ರಭುಶ್ಚಿರಂ ಜೀಯಾತ್ ||೩||

ದೇಶಕ್ಷೇಮಚಿಂತನೆಯೇ ಪ್ರಜೆಗಳ ಮುಖ್ಯಕರ್ತವ್ಯವಾಗಿರುವುದು. ಅಂತಹ ದೇಶವನ್ನು ಸುಖದಿಂದ ಪರಿಪಾಲಿಸತಕ್ಕ ದೇಶಾಧಿಪತಿಯಾದ ಸಾರ್ವಭೌಮನ ಸೌಖ್ಯವರ್ಧನವೇ ಪ್ರಜಾಭಿವೃದ್ಧಿ ಪುರಸ್ಸರವಾದ ಪ್ರಮಾಣದಂತಿರುವುದು. ಪ್ರಕೃತ ನಮ್ಮ ಇಂಡಿಯಾದೇಶಪಾಲಕರಾದ ಶ್ರೀಮಾನ್ ಜಾರ್ಜಪ್ರಭುಗಳು ಚಕ್ರವರ್ತಿತ್ವವನ್ನು ವಹಿಸಿ ಕೆಲವು ವರ್ಷಗಳೇ ಆದಾಗ್ಯೂ ಈಗಾಗಲೇ ಅಲ್ಲಲ್ಲಿ ತೋರಿಬರುವ ಪ್ರಬಲವಾದ ಯುದ್ಧಾದಿಗಳಿಂದ ಜಯಶೀಲರಾಗಿ ಚಿರಕಾಲವೂ ಯಥಾರೀತಿಯಾಗಿ ದೇಶವನ್ನು ಸಂರಕ್ಷಿಸುವಂತೆ ಮಾಡಲಿ ಎಂಬುದಾಗಿ ಸರ್ವಾಂತರ್ವರ್ತಿಯಾದ ಪರಮಾತ್ಮನನ್ನು ಧ್ಯಾನಿಸಲು ಮತ್ತು ಸೇವಿಸಲು ಅವರವರ ಮತಾನುಸಾರವಾಗಿ ಸರ್ವಪ್ರಜೆಗಳೂ ಭಾಗಿಗಳಾದ ಪ್ರಯುಕ್ತ ಇದೇ ಅಕ್ಟೋಬರ್ ತಾರೀಖು ೧೬ ನೆಯ ಶುಕ್ರವಾರ ಕುಣಿಗಲ್ ತಾಲ್ಲೂಕು ಎಲಿಯೂರು ಗ್ರಾಮಸ್ಥ ಅರ್ಚಕ ಪು|| ಹೊನ್ನಪ್ಪನವರು, ಪಟೇಲ್ ಚಿಕ್ಕನಂಜೇಗೌಡರು ಸಹ ಸೇರಿ

ಈ ಊರಿನ ಚೆನ್ನಿಗರಾಯಸ್ವಾಮಿಯವರು, ಸ್ವರ್ಣಾಂಬಾ ಅಮ್ಮನವರು, ಕಲ್ಯಾಣಕೆನಹಳ್ಳಿ ಆಂಜನೇಯಸ್ವಾಮಿಯವರು, ಹೊಸಹಳ್ಳಿ ಪಟ್ಟಲದಮ್ಮನವರು, ಬುಕ್ಕಸಾಗರದ ಅನಂತಶಯನ ಸ್ವಾಮಿಯವರು, ಸೊಂಡಲಿಗೆರೆ ನೃಸಿಂಹಸ್ವಾಮಿಯವರು, ಕೂತಾಡಹಳ್ಳಿ ರಂಗನಾಥಸ್ವಾಮಿಯವರು, ಗೊಟ್ಟಿಕೆರೆ ಆಂಜನೇಯಸ್ವಾಮಿಯವರು, ಮುಂತಾದ ಎಂಟು ರೂಪಾಂತರ್ವರ್ತಿಯಾದ ಜಗದಂತರಾತ್ಮನ ಪ್ರತಿಬಿಂಬಗಳನ್ನು ಈ ಊರಿನಲ್ಲಿ ಮೆರವಣಿಗೆಯನ್ನು ಮಾಡಿಸಿ ನೋಡಿ ಸಂತಸಗೊಳ್ಳಬೇಕೆಂಬ ಅಭಿಲಾಷೆಯುಳ್ಳವರಾಗಿ ಈ ದಿನ ರಾತ್ರಿ ವಿಶೇಷ ಪರಿಮಳಯುಕ್ತವಾದ ಹೂವು ಮುಂತಾದುವುಗಳ ಅಲಂಕಾರದಿಂದಲೂ, ಬ್ಯಾಂಡು ವಾದ್ಯಗಳಿಂದಲೂ, ಮತ್ತು ವೇಶ್ಯಾನರ್ತನಗಳಿಂದಲೂ, ಬತ್ತಿ ಬಿರುಸುಗಳಿಂದಲೂ ಸಹಿತವಾಗಿ ಮಾವಿನ ತಳಿರುಗಳಿಂದಲೂ, ಮತ್ತು ಬಾಳೆಯಕಂಬಗಳಿಂದಲೂ ಅಲಂಕೃತವಾದ ಈ ಊರಿನ ಬೀದಿಗಳಲ್ಲೆಲ್ಲಾ ನಿಬಿಡೀಕೃತವಾದ ಜನಸಮುದಾಯದಿಂದೊಡಗೂಡಿ ರಾತ್ರೆ ೨ ಗಂಟೆಯಿಂದ ಬೆಳಗಿನಜಾವ ೪ ಗಂಟೆಯ ಪರ್ಯಂತವೂ ಮೆರವಣಿಗೆಯನ್ನು ಮಾಡಿಸಿ ನೋಡಲಿಕ್ಕಾಗಿ ಬಂದಿದ್ದ ಸಾವಿರಾರು ಭಕ್ತಜನಗಳ ಮನಸ್ಸಂತೋಷವನ್ನು ವೃದ್ಧಿಗೊಳಿಸಿದರು. ನೋಟಕರೆಲ್ಲರಿಗೂ ಗ್ರಾಮನಿವಾಸಿಗಳ ಮನೆಗಳಲ್ಲಿ ಊಟವುಪಚಾರಾದಿಗಳು ನಡೆದುವು. ಬಂದಿದ್ದವರೆಲ್ಲರೂ ನಮ್ಮ ಶ್ರೀಮಾನ್ ಜಾರ್ಜ ಚಕ್ರವರ್ತಿಗಳ ಮತ್ತು ನಮ್ಮ ಶ್ರೀಮನ್ಮಹಾರಾಜ ಕೃಷ್ಣರಾಜಒಡೆಯರವರ ಶ್ರೇಯಃಪ್ರಾರ್ಥನೆಗಳನ್ನು ಆಚರಿಸಿದಂಥವರಾದರು. ಇದೇರೀತಿಯಾಗಿ ಪ್ರತಿಪುರವರ್ತಿಗಳೆಂದ ಮಹನೀಯರೆಲ್ಲರೂ, ರಾಜಭಕ್ತಿಪೂರಿತಹೃದಯರೂ, ದೇವಸೇವಾಪರಾಯಣರೂ ಆಗಿ ದೇವರ ಪ್ರೀತಿಗೆ ಪಾತ್ರರಾಗಬೇಕೆಂದು ಕೋರುತ್ತೇನೆ.

ಕಂದ|| ಆನಂದಾಶ್ವಿನಕೃಷ್ಣದೆ |
ಆನಂದದೆಶುಕ್ರವಾರ ದ್ವಾದಶಿನಿಶಿಯೊಳ್ ||
ಮಾನಂದದಷ್ಟಮೂರ್ತಿಗ |
ಳಾನಂದಿಸಿಮೆರೆದುವಂದುವರ್ಣನಗರಿಯೊಳ್ ||

ವೈ. ಗೋಪಾಲಭಟ್ಟ, ಎಲಿಯೂರು.

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೈಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳುಸಹಿತ ಆದ ಸಮಾರಂಭ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮನಾಥಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧| ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೋ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವಿರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೋ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೋ ಸಿಕ್ಕುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.

ಹೊಸಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರಪಳಿಗೆ ಹಚ್ಚುವ ಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಈಪ್ರಕಾರ ೨ ಫೋಟೋ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ||, |||=, ೧, ೧|, ಪ್ರಕಾರ, ಮತ್ತೂ ಬೆಳ್ಳಿಯದು ರು ೧| ರೋಲ್ಡ್ ಗೋಲ್ಡ್ ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨|, ೨||| ರೂ.

ಪರಊರಿಗೆ ಏಜಂಟರು ಬೇಕಾಗಿರುತ್ತಾರೆ ಆರ್ಡರಿಣಿ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ. ನಮ್ಮವಿಳಾಸ— ಗಂಗಪ್ಪಾ ಚೇರಿಗೆ,
29 ಆರ್ಟಿಸ್ಟ್ ಸೊಲ್ಲಾಪುರ.

(ಹೊಸಪುಸ್ತಕ ೧೩೪೪ ಪುಟಗಳು) ಶ್ರೀ (ಹೊಸಪುಸ್ತಕ ೧೩೪೪ ಪುಟಗಳು)

ಬ್ರ|| ಶ್ರೀ|| ಬಿ. ವಿ. ಸುಬ್ರಹ್ಮಣ್ಯಶರ್ಮವಿರಚಿತವಾದ ಸುಧಾರ ಸಧಾರಾಯೆಂಬ ಕನ್ನಡ
ಟೀಕಾತಾತ್ಪರ್ಯ ಗಣಿತೋದ್ಧಾರಣೆಗಳಿಂದೊಡಗೂಡಿ 8

ಬೃಹಜ್ಜಾತಕಾಖ್ಯ ಹೋರಾಶಾಸ್ತ್ರಮ್.

ಮಾನವನು ತನ್ನ ಅದೃಷ್ಟಚಕ್ರದ ಫಲಾಫಲಗಳನ್ನು ಅರಿತು, ಮುಂಬೊದಗಬಹುದಾದ ಫಲಸ್ವರೂಪವನ್ನು ಇತರರ ಸಹಾಯವಿಲ್ಲದೆಯೆ ತಿಳಿದುಕೊಂಡು, ದುಷ್ಫಲಗಳು ದೂರವಾಗಿ, ಸುಫಲಗಳು ಕರಗತವಾಗುವಂತೆ ಮಾಡುವಂತಹ, ಪರಿಹಾರೋಪಾಯಗಳನ್ನು ಸೂಚಿಸಬೇಕಾದರೆ, ನಮ್ಮಿಂದ ಈಗತಾನೆ ಸಂಸ್ಕೃತ ಹಿಂದಿ ಮರಾಟಿ ಭಾಷೆಗಳಿಂದ ತರ್ಜುಮೆಮಾಡಿ ಪ್ರಕಾಶಗೊಂಡ "ಸುಧಾರಸಧಾರಾ" ಎಂಬ ಕನ್ನಡ ಟೀಕಾತಾತ್ಪರ್ಯ ಉದಾಹರಣೆಗಳಿಂದ ಕೂಡಿದ ಬೃಹಜ್ಜಾತಕವೆಂಬ ಹೋರಾಶಾಸ್ತ್ರವೊಂದಲ್ಲದೆ ಮತ್ಯಾವದೂ ಸಮರ್ಥವಾಗಿಲ್ಲವು. ೧೩೪೪ ಪುಟ ೩ ಭಾಗಗಳ ಪುಸ್ತಕ ಒಂದೇಬೈಂಡ್ ಈ ಗ್ರಂಥರತ್ನವು ಆಬಾಲವೃದ್ಧರಾದಿಯಾಗಿ ಅಕ್ಷರವನ್ನರಿತ ಹೆಂಗಸರೂ ಸಹಾಪರರ ಸಹಾಯಾಪೇಕ್ಷೆ ಇಲ್ಲದೆ ಓದಿ ತಿಳಿಯಲು, ಅನುಕೂಲವಾಗಿರುವುದು. ಇದರೊಳಗಡಗಿರುವ ೨೮ ಪ್ರಕರಣಗಳ ವಿಷಯಸಂಗ್ರಹ ವೆಂತೆಂದರೆ:— ೧-೨ ನೇ ಪ್ರಕರಣಗಳಲ್ಲಿ ಶಾಸ್ತ್ರಪ್ರಯೋಜನವೂ, ಜೋತಿಶಾಸ್ತ್ರದ ಪೀಠಿಕಾಭಾಗಗಳು ೩, ಸಜೀವನಿರ್ಜೀವವಸ್ತುಗಳ ಉತ್ಪತ್ತಿ ೪, ಗರ್ಭಧಾರಣಯೋಗಗಳು ೫, ಜನನಕಾಲ ಲಕ್ಷಣ ಮತ್ತು ಫಲ ೬, ಬಾಲಾರಿಷ್ಟವಿಚಾರ ಅವುಗಳ ನಿವಾರಣೋಪಾಯ ೭, ಆಯುರ್ದಾಯವಿಚಾರ ೮, ದಶಾಭುಕ್ತಿನಿರ್ಣಯ ೯, ಅಷ್ಟಕವರ್ಗವಿಚಾರ ೧೦, ಜೀವನೋಪಾಯವಿಚಾರ ೧೧, ರಾಜಯೋಗಸೂಚನೆ ಅವುಗಳ ಫಲವಿಚಾರ ೧೨, ೧೮೦೦ ಯೋಗಗಳ ಲಕ್ಷಣ ಮತ್ತು ಫಲ ೧೩, ಚಂದ್ರಸಂಬಂಧವಾದ ಯೋಗಗಳು ೧೪, ಒಂದಕ್ಕಿಂತಲೂ ಹೆಚ್ಚುಗ್ರಹಗಳು ಒಂದೇಕಡೆ ಸೇರಿದರೆ ಅವುಗಳ ಫಲ ೧೫, ಸನ್ಯಾಸಯೋಗಗಳು ೧೬, ನಕ್ಷತ್ರಫಲಗಳು ೧೭, ರಾಶಿಫಲಗಳು ೧೮, ರಾಸಿಗಳ ಫಲ ಮತ್ತು ಕೇರಳಿಯೋಕ್ತ ಫಲಗಳು ೧೯, ದೃಷ್ಟಿಫಲಗಳು ೨೦, ಭಾವಲಕ್ಷಣ ಮತ್ತು ಆ ಫಲಗಳ ವಿಚಾರ ೨೧, ಕ್ಷೇತ್ರಫಲಗಳು ೨೨, ಗ್ರಹಗಳ ಅವಸ್ಥೆ ಅಷ್ಟಕವರ್ಗ ಫಲ ೨೩, ಅನಿಷ್ಟಯೋಗಗಳು ಅವುಗಳಿಂದಾಗುವ ಫಲಗಳು ೨೪, ಸ್ತ್ರೀಜಾತಕ ಅದರ ಫಲಗಳು ೨೫, ಮರಣಕಾರಣ ಅದರ ಫಲಗಳು ೨೬, ನಷ್ಟಜಾತಕ ಬರಿಯುವ ರೀತಿ ೨೭, ದ್ರೇಕ್ಕಾಣವರ್ಣನೆ ಪ್ರಶ್ನೆಗೆ ಬೇಕಾದ ಸಹಾಯವಿಷಯ ೨೮, ಅನುಕ್ರಮಣಿಕಾಸಂಗ್ರಹ ಮತ್ತು ಗ್ರಂಥಕರ್ತರ ವಂಶವರ್ಣನೆ:—

ಮೇಲೆ ಹೇಳಿರುವಂತೆ ಬರೆಯಲ್ಪಟ್ಟ ಒಂದು ಪುಸ್ತಕ ತಮ್ಮ ಬಳಿಯಲ್ಲಿದ್ದರೆ ೧೦ ಜನ ಜ್ಯೋತಿಷ್ಕರಿದ್ದರೆ ಎಷ್ಟು ಅನುಕೂಲವೋ ಅಷ್ಟು ಅನುಕೂಲ. ಇದು ಪ್ರೌಢರಿಗೂ, ಸ್ತ್ರೀಯರಿಗೂ ಧಾರಾಳವಾಗಿ ತಿಳಿಯುವಂತೆ ಉತ್ತಮಕಾಗದದಲ್ಲಿ ಪ್ರಿಂಟ್‌ಮಾಡಿಸಿದೆ, ಈ ತಿಂಗಳು ಆಖೈರಿನೊಳಗಾಗಿ ಆರ್ಡರ್ ಕೊಡುವವರಿಗೆ ೪—೦—೦ ರೂ. ವಿ. ಪಿ. ಛಾರ್ಜು ೦—೬—೦ ಆಣೆ ನಂತರ ೫—೦—೦ ರೂ. ಜಾಗ್ರತೆ ತರಿಸಿಕೊಳ್ಳಿ ನಂತರ ಈ ಬೆಲೆಗೆ ದೊರೆಯಲಾರದು.

ಇತರಪುಸ್ತಕಗಳು.

ಟೀಕಾಜೈಮಿನಿ ೯೩೦ ಪುಟ ೪—೦—೦ ರೂ. ಸಟೀಕಹರಿಕಥಾಮೃತಸಾರ ೩೪೪ ಪುಟ ೧—೪—೦ ರೂ. ಕನ್ನಡದ್ವಾದಶಸ್ಕಂಧ ಭಾಗವತ ೩—೦—೦ ರೂ. ಶುಕಸಪ್ತತಿ ೭೦ ಕಥೆ ಶುದ್ಧಪ್ರತಿ ೨—೦—೦ ರೂ. ೪ ಜನ ಘಟೀಕರರ ಕಥೆ ೦—೮—೦. ಸಟೀಕಾಭೋಜರಾಜಚರಿತ್ರೆ ೦—೮—೦. ಇವುಗಳಲ್ಲದೆ ನಮ್ಮಲ್ಲಿ ಯಾವಾಗ್ಯೂ ಕನ್ನಡ, ಸಂಸ್ಕೃತ, ತೆಲಗು ಗ್ರಂಥಗಳು ದೊರೆಯುತ್ತೆ.

ಟಿ. ಯರ್. ಕೃಷ್ಣಯ್ಯಶೆಟ್ಟಿ, ಬುಕ್‌ಡಿಪೋ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ
ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೋಂ
ಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು
6 ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು—ಕೆಮ್ಮು—ನೆಗಡಿ—ದಿನಜ್ವರ—ಮೂರರಜ್ವರ ನಾಲ್ಕರಜ್ವರ— ಮಲೇರಿಯಾಜ್ವರ— ತಲೆನೋವು— ಮೈಕೈನೋವು ಮತ್ತು ಭಾರ—ಅರೋಚಕ ಹಲ್ಲುನೋವು—ಹೊಟ್ಟೆನೋವು—ಮಲಬಂಧ—ಅಜೀರ್ಣಭೇದಿ—ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳೆತ—ಹೊಟ್ಟೆಯುಬ್ಬರ—ಮಂದಜ್ವರ—ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೨೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಗೆ, ಮಲಬಂಧ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತತ್ಕ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ. ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ಡಿ||

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

46

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯು ಮೇಲೆ ಅತಿಉತ್ತಮವು. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪ್ರಕೋಪವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರ ಕಫು, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿಗುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲಿ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೊಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೊಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚ ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ:—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನ್ನಡ

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು:— ಚಂದ್ರಮಾರುತ ೦-೨-೦; ಚರಿತಾಮೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಸೀಬರಿನಜತ್ರಿರಿ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೩; ಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೦-೦. 58

ಊದುಬತ್ತಿಗಳು.

ವಿಧವಿಧವಾದ ಊದುಬತ್ತಿಗಳು ಸೇರು ೧ ಕ್ಕೆ -೧-೧೨ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲ ೧ ಕ್ಕೆ ೧-೦-೦; ಪಸಿಗಂಧ ತೋಲ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್‌ಸನ್ಸ್
27 ಸುಗಂಧಶಾಲಿ, ಮೈಸೂರು

---

47 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೫೧೨ ಪುಟ)

ಟಪಾಲು ಹಾಸಲು ೪ ಆಣೆ.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೮-೦. (೫೭೩ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಕ್ಸ್ಫೂರ್ತಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಬಿಚ್ಛೆಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಲ್ಲಾಸೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೬೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ. ೧-೪-೦ ಟಪಾಲ್ ಹಾಸಲು ೩ ಆಣೆ. ಈಗಲೇ ಬರೆ ನಿಮ್ಮ. ನಮ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು. 25

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋಕೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಬ್ಯರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ— ೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇ ಪ್ರೆಂದು ಬುದ್ಧಿಯು ನಿಮ್ಮಲ್ಲಿರಲಿ. ಮನೆಸ್ಸಿಂದು ಸಣಾಯುವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧೌಷಧವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧ ೦ ೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘುವವೈದ್ಯಶಾಲಾ ಮೈಸೂರು.

೧೯೧೫ನೆಯ ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಶಾಯಿ ಇಳಿಯದ ಉತ್ತಮವಾದ ಕಾಗದ ಮುದ್ದಾದ ಮುದ್ರಣ. ಅನೇಕವಾದ ಹೊಸಸಂಗತಿಗಳಿವೆ.

೧ ನಂ—ಸಣ್ಣಸೈಜು ಸಾದಾ	೦-೪-೦
೨ ನಂ—ಪೆನಸಲ್‌ಮುಚ್ಚಳವುಳ್ಳುದು	೦-೬-೦
೩ ನಂ—ದೊಡ್ಡಸೈಜು ಸಾದಾ	೦-೬-೦
೪ ನಂ—ಪೆನಸಲ್‌ಮುಚ್ಚಳವುಳ್ಳುದು	೦-೮-೦

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ

ಡಜನ್ನಾಗಿ ತರಿಸುವವರಿಗೆ ರೂಪಾಯಿ ೧ ಕ್ಕೆ ೦-೨-೦ ಕಮಿಷನ್ ದೊರೆಯುವುದು. ವಿಳಾಸ:—

ಶ್ರೀ ಸೀತಾರಾಘವ ವೈದ್ಯಶಾಲಾ,
6 ಮೈಸೂರು.

S.U.N.& Co
BENARES CITY.
KASHI
VISHWESHWAR.

7

ದೊಡ್ಡ ಕಂಪನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರಿಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಲಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯು. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ನ್ಯಾಯದರ್ಪಣ. 40

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಪ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸ್, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ. ಬೆಲೆ ರೂ. 1-8-0. ವಿ. ಪಿ. ಮೂಲ್ಕ 1-12-0.

ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚುಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಧಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗನಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ದರ್ಜ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಪುರಂ, ಹನೂರು ಪೋಸ್ಟ್
36 ಕೊಳ್ಳೇಗಾಲದ ತಾಲ್ಲೂಕು.

೧೯೧೪ನೆಯ ಇಸವಿ ನವಂಬರ್ ತಾ॥ ೮ರಿಂದ ೧೯೧೪ನೆಯ ನವಂಬರ್ ತಾ॥ ೧೪ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ಕಾರ್ತಿಕ ಬ॥ ಪಂಚಮಿಯಿಂದ ಕಾರ್ತಿಕ ಬ॥ ಏಕಾದಶಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ಸೌರಿ ತುಲಾ
8	ಭಾನು	ಪಂ	13-38	ಆರ್ದ್ರಾ	3-1	23
9	[1]ಸೋ	ಷಷ್ಠಿ	14-31	ಪುನ	5-34	24
10	ಮಂ	ಸಪ್ತ	14-9	ಪುಷ್ಯ	6-52	25
11	ಬುಧ	ಅಷ್ಟ	12-33	ಆಶ್ಲೇ	6-58	26
12	ಗುರು	ನವ	9-47	ಮಖಾ	5-56	27
13	[2]ಶುಕ್ರ	ದಶ	6-3	ಪುಬ್ಬಾ	8-58	28
14	[3]ಶನಿ	ಏಕಾ	1-29	ಉಪರಿ	55-11	29

(1) ಕಾರ್ತೀಕಸೋಮವಾರ. (2) ಸ್ಮಾರ್ತೈಕಾದಶೀ, ಶ್ರೀರಂಗಪಟ್ಟಣದಲ್ಲಿ ಅಷ್ಟತೀರ್ಥೋತ್ಸವಃ. (3) ಅವಮಃ, ವೈಷ್ಣವೈಕಾದಶೀ, ಹರಿವಾಸರಃ, ಮೃತ್ಯುಯೋಗಃ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಕ್ರಾ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರ್ ಸ್ಟಾರ್.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ।
ಘನವಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ॥

ವಾರ್ಷಿಕ ಚಂದಾ ೧-೦-೦
ಅಂಚೆವೆಚ್ಚ ಸೇರಿ ೧-೧೪-೦

ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವಂ ।
ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂ ಪಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ ।
ಪ್ರೇಮಂಬಿತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಸಂಪುಟ ೨೩) ಮೈಸೂರ್ ಸ್ಟಾರ್ ಸರ್ ೧೯೧೪ ನೆಯ ಇಸವಿ ನವಂಬರ್ ತಾರೀಖು ೧೫ ನೆಯ ಭಾನುವಾರ. (ಸಂಚಿಕೆ ೪೬

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರಿಗೂ ಸ್ಕೂಲ್‌ಮಾಸ್ಟರ್‌ಗಳಿಗೂ ವಿನಂತಿ.

೧೯೧೫ ನೇ ಇಸ್ವಿಯ ಸಚಿತ್ರ ಕ್ಯಾಲೆಂಡರ್‌ಗಳು ಬಿಕರಿಗೆ ಸಿದ್ಧವಾಗಿವೆ ಕ್ರಯ ೧ ಕ್ಕೆ ೦-೦-೩ ಪೈ. ೫೦ ಕ್ಕೆ ೦-೧೧-೦ಆಣೆ ೧೦೦ ಕ್ಕೆ ೧-೫-೦ ಪ್ಯಾಕಿಂಗ್ ಪೋಸ್ಟೇಜು ಮಾಫಿ ೫೦ ಕ್ಯಾಲೆಂಡರ್‌ಗಳಿಗಿಂತಲೂ ಕಡಿಮೆಯಾಗಿ ಪೋಸ್ಟುಮೂಲ್ಕ ರವಾನಿಸಲಾಗುವುದಿಲ್ಲಾ.

ಈ ಕ್ಯಾಲೆಂಡರಿನಲ್ಲಿ ಇಂಗ್ಲೀಷ್ ಮತ್ತೂ ಕನಡ ತಿಂಗಳೂ, ತಾರೀಖು, ವಾರ, ತಿಥಿ, ನಕ್ಷತ್ರ, ಆಯಾಯ ದಿವಸದ ವಿಸೇಷ ದಿವಸಗಳು ವಿಷಿಷ್ಟ ಹಬ್ಬ ದಿವಸಗಳೂ ಇರುವುದಲ್ಲದೆ ಮೈಸೂರ್ ಮಹಾರಾಜರವರ ಮತ್ತೂ ಯುವರಾಜರವರ ಭಾವಚಿತ್ರಗಳೂ ಮತ್ತೂ ಮೈಸೂರ್ ಸಂಸ್ಥಾನದ ಈಗಿನ ಹೊಸ ಅರಮನೆಯಲ್ಲಿ ನಡೆಯುವ ನವರಾತ್ರಿಮಹೋತ್ಸವದ ದರ್ಬಾರ್ ಸಹಿತ ಇರುವ ನಕ್ಷೆಯನ್ನೂ ಸಹ ನುಣುಪಾದ (ಗ್ಲೇಜ್‌ಪೇಪರ್) ಕಾಗದದಲ್ಲಿ ಅಂದವಾಗಿ ಪ್ರಿಂಟ್‌ಮಾಡಿಸಿ ಮೇಲ್ಕಂಡ ದರದಂತೆ ಬಹುಸುಲಭಬೆಲೆಗೆ ಕೊಡುತ್ತಲಿದ್ದೇವೆ ಯಾದಕಾರಣ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ ಸ್ವಲ್ಪ ಪ್ರತಿಗಳುಮಾತ್ರ ಉಳಿದಿವೆ. ಬಿಕರಿಯಾದನಂತರಬರತಕ್ಕ ಆರ್ಡರ್‌ಗಳನ್ನೆಲ್ಲಾ ಹೋದವರುಸುದಂತೆ ಕ್ಯಾನ್ಸಲ್‌ಮಾಡಲಾಗುತ್ತೆ.

ಈಗತಾನೇ ಸೀಮೆಯಿಂದ ಬಂದಿರತಕ್ಕ ರಖಂವಾರ್ ವಾಚ್‌ಗಳ ಕ್ರಯದಪಟ್ಟಿ. 40



೧ ರಾಸ್ಕೋಪ್ ಸಿಸರ್ಸ್ಟಂಪೇಟೆಂಟ್‌ಸ್ವಿಸ್‌ಮೇಡ್‌ವಾಚ್	೧ ಕ್ಕೆ	೨-೮-೦
೨ ಗರ್‌ಟೈಂ ರೈಲ್ವೇ ರೆಗ್ಯುಲೇಟರ್ ವಾಚ್	೧ ಕ್ಕೆ	೩-೮-೦
೩ ಡಿಟೋ ನಮೂನೆ ಚಿಕ್ಕಸೈಜ್ ವಾಚ್	೧ ಕ್ಕೆ	೪-೪-೦
೪ ಡಿಟೋ ಚಿಕ್ಕಸೈಜ್ ಸ್ಪೆಷಲ್ ಸರ್ವೀಸ್‌ವಾಚ್	೧ ಕ್ಕೆ	೫-೮-೦
೪ ಜರ್ಮಲ್‌ವರ್ಮ ಡ್ರಸ್ ವಾಚೆಂಬ ಅತ್ಯುತ್ತಮವಾದ ಲೀವರ್ ವಾಚ್	೧ ಕ್ಕೆ	೮-೧೨-೦
೫ ಡಿಟೋ ನಮೂನೆ ಕೆಂಪುಗಳನ್ನು ಕೆತ್ತಿರುವ ವಾಚ್	೧ ಕ್ಕೆ	೯-೪-೦
೬ ಪೀಕಾಕ್ ವಾಚೆಂಬ ತೆಳುವಾದ ಮತ್ತೂ ಗ್ಯಾರೆಂಟಿಯಾದ ವಾಚ್ (ಸಾವಿರಾರು ವಿಕ್ರಯ)	೧ ಕ್ಕೆ	೧೦-೮-೦
೭ ವಾರಕೊಂದಾವರ್ತಿ ಬೀಗಕೊಡುವ ನಿಕ್ಕಲ್ ಬೆಳ್ಳೀಕೇಸ್ ವಾಚ್	೧ ಕ್ಕೆ	೧೦-೮-೦
೮ ಡಿಟೋ ನಮೂನೆಯಲ್ಲಿ ಅಚ್ಚಬೆಳ್ಳೀಕೇಸಿನ ಚಿಕ್ಕ ಸೈಜ್ ವಾಚ್	೧ ಕ್ಕೆ	೧೫-೪-೦
೯ ೩೦ ಘಂಟೆಗೆ ಒಂದಾವರ್ತಿ ಬೀಗಕೊಡುವ ದೊಡ್ಡ ಬರ್ಮಾಟೈಂಪೀಸ್	೧ ಕ್ಕೆ	೧-೪-೦
೧೦ ಡಿಟೋ ನಮೂನೆ ಅಲಾರಂ ಟೈಂಪೀಸ್	೧ ಕ್ಕೆ	೨-೪-೦
೧೧ ಡಿಟೋ ನಮೂನೆಯಲ್ಲಿ ಘಂಟೆ ನಿಮುಷ ಸೆಕೆಂಡ್ ತೋರಿಸಿ ಅಲಾರಂ ಇದ್ದು ತಾರೀಖು ಸಹ ತೋರಿಸುವ ದೊಡ್ಡ ಟೈಂಪೀಸ್	೧ ಕ್ಕೆ	೩-೪-೦
೧೨ ಖಾತ್ರಿಯಾದ ಅನ್ಸೋನಿಯಾ "ಬಿ" ಟೈಂಪೀಸ್	೧ ಕ್ಕೆ	೨-೮-೦
೧೩ ಡಿಟೋ ಕಂಪೆನಿಯ ಅಲಾರಂಟೈಂಪೀಸ್ (ಬಹಳಮಜಬೂತಾದ್ದು) (ಸಾವಿರಾರುವಿಕ್ರಯ)	೧ ಕ್ಕೆ	೩-೮-೦
೧೪ ಅನ್ಸೋನಿಯಾ ಕಂಪೆನಿಯಲ್ಲಿ ತಯಾರಾದ ಘಂಟೆ, ಅರ್ಧಘಂಟೆ ಹೊಡೆದು ಅಲಾರಂ ಇರತಕ್ಕ ದೊಡ್ಡಟೈಂಪೀಸ್ (ಅನೇಕಜನ ವಿದ್ಯಾರ್ಥಿಗಳು ಇದನ್ನೇ ಉಪಯೋಗಿಸುತ್ತಲಿದ್ದಾರೆ)	೧ ಕ್ಕೆ	೬-೧೨-೦
೧೫ ಘಂಟೆ, ಅರ್ಧಘಂಟೆ ಹೊಡೆಯುವ ಕ್ಯಾರೇಜ್ ಕ್ಲಾಕೆಂಬ ಟೇಬಿಲ್ ಘಡಿಯಾರ	೧ ಕ್ಕೆ	೪-೧೨-೦
೧೬ ಡಿಟೋ ನಮೂನೆಯಲ್ಲಿ ಘಂಟೆ, ಅರ್ಧಘಂಟೆಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್	೧ ಕ್ಕೆ	೫-೪-೦
೧೭ ಡಿಟೋ ನಮೂನೆಯಲ್ಲಿ ಘಂಟೆಹೊಡೆಯುವದಕ್ಕೆ ಪ್ರತಿಯಾಗಿ ಗಾನಹಾಡುವ ಕ್ಲಾಕ್	೧ ಕ್ಕೆ	೫-೮-೦
೧೮ ಡಿಟೋ ನಮೂನೆಯಲ್ಲಿ ತಾವಿಷ್ಟಪಟ್ಟ ಟೈಂಮಿಗೆ ಕಾಲುಘಂಟೆಕಾಲ ಕರ್ಣಾನಂದವಾಗುವಂತೆ ಮೃದುಮಧುರ ಗಾನಮಾಡತಕ್ಕ ಕ್ಲಾಕ್	೧ ಕ್ಕೆ	೫-೮-೦
೧೯ ಅನ್ಸೋನಿಯಾ ಕಂಪೆನಿಯ ಲಿವರ್ ಕ್ಲಾಕೆಂಬ ಗೋಡೆಗೆ ತಗಲಿಸುವ (೮ ಮೂಲೆಯ) ಅಷ್ಟಕೋಣಾಕೃತಿಯ ಚಿಕ್ಕಸೈಜ್ ಕ್ಲಾಕ್	೧ ಕ್ಕೆ	೬-೮-೦

ರಖಂವಾರ್ ವಾಚ್ ಸರಪಣಿಗಳು.

ನಿಕ್ಕಲ್ ಬೆಳ್ಳಿಯ ವಾಚ್‌ಸರಪಣಿ	೧ ಕ್ಕೆ	೦-೧೨-೦
ಅಚ್ಚಬೆಳ್ಳಿಯ ಜೇಬಿನ ವಾಚ್‌ಸರಪಣಿ	೧ ಕ್ಕೆ	೩-೪-೦
ಅಚ್ಚಬೆಳ್ಳಿಯ ಕೊರಳಸರಪಣಿ	೧ ಕ್ಕೆ	೧-೪-೦
೧೮ ಕ್ಯಾರಟ್ಟು ಚಿನ್ನದ ವಾಚ್‌ಸರಪಣಿ	೧ ಕ್ಕೆ	೫-೮-೦
ವಾಚಿನ ಸರಪಣಿ ತುದಿಯಲ್ಲಿ ಹಾಕುವ ಅಚ್ಚಬೆಳ್ಳಿಯ ಶಾಶ್ವತವಾದ ಕ್ಯಾಲೆಂಡರ್ ಅಂದರೆ ಎಷ್ಟು ವರುಷಗಳ ವರಿಗಾದರೂ ತಾರೀಖು ನೋಡಬಹುದಾದ ಕ್ಯಾಲೆಂಡರ್ ಎಂದೆಂದಿಗೂಕೆಡತಕ್ಕದ್ದಲ್ಲಾ	೧ ಕ್ಕೆ	೧-೧೨-೦
ಡಿಟೋ ನಮೂನೆಯಲ್ಲಿ ೧೮ ಕ್ಯಾರಟ್ಟು ಚಿನ್ನದಿಂದ ತಯಾರಿಸಿದ್ದು	೧ ಕ್ಕೆ	೩-೪-೦

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ಒಂದುಸಾರಿ ಶಾಯಿತುಂಬಿದರೆ ೧೦,೦೦೦ ಶಬ್ದಗಳನ್ನು ಬರೆಯಬಹುದಾದ ಲೇಖಣಿಗಳು.

ಪ್ರತಿಯೊಂದಕ್ಕೂ ೧೪ ಕ್ಯಾರಟ್ಟು ಚಿನ್ನದ ನಿಬ್ಬು ಹಾಕಿದೆ.

ನೆಪ್ಚ್ಯೂನ್ ೨೦೦ ನೇ ನಂ. ಪೆನ್	೧ ಕ್ಕೆ	೧-೧೪-೦
ನೆಪ್ಚ್ಯೂನ್ ೨೦೫ ನೇ ನಂ. ಪೆನ್	೧ ಕ್ಕೆ	೨-೧೦-೦
ನೆಪ್ಚ್ಯೂನ್ ೨೧೦ ನೇ ನಂ. ಪೆನ್	೧ ಕ್ಕೆ	೪-೨-೦

ಪ್ರತಿಯೊಂದು ಪೆನ್‌ತರಿಸಿ ಕೊಳ್ಳುವರಿಗೂ ೪ ಪದಾರ್ಥಗಳನ್ನು ಮುಫತ್ತಾಗಿ ರವಾನಿಸುತ್ತೇವೆ.

೧ ಪೆನ್‌ಗಳನ್ನಿಡತಕ್ಕ ಸುಂದರವಾದ ಪೆಟ್ಟಿ ೧.
೨ ಪೆನ್ನಿಗೆ ಶಾಯಿಹಾಕುವ ಗಾಜಿನಕೊಳವೆ ೧.
೩ ಪೆನ್‌ಗಳನ್ನು ಕ್ಲೀನ್‌ಮಾಡುವ ವಿಧಾನ ಮತ್ತೂ ಶಾಯಿಹಾಕುವ ವಿಧಾನ ಪ್ರಿಂಟಾಗಿರುವ ಚೀಟಿ ೧.
೪ ಪೆನನ್ನು ಜೇಬಿಗೆತಗಲಿಸುವ ಸುಂದರವಾದ ಕ್ಲಿಪ್ ೧.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧-೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಶಿವಪೂಜಾವಿಧಿಃ	೦-೮-೦
ಚಾರುಶೀಲಿಚರಿತ್ರೆ	೦-೫-೦
ಸಟೀಕ ನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವಿವೇಕಮಂಜರಿ [೨ನೆಯ ಭಾಗ]	೦-೩-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

159

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೇಶರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡ ಗ್ರಂಥ.

ವೀರಶೈವ ಧರ್ಮಶಿರೋಮಣಿ.— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ [illegible] ೬ ಆಣೆ; ಸಟೀಕ ಶತಸೂತ್ರರತ್ನ ೩ ಆಣೆ; [illegible] ಕಾಲೋತ್ತರಾಗಮದ ಜ್ಞಾನಾಚಾರ[illegible] (ಟೀಕೆ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; [illegible] ಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; [illegible] ಕಂಡಂ ೧ ಆಣೆ.

ಎ. ಆರ್. [illegible]
ಗ್ರಂಥ[illegible], ಮೈಸೂರು.

ಮೈಸೂರುದೇಶದ ವ್ಯವಸಾಯ ಇಲಾಖಾ ಡೈರೆಕ್ಟರವರ ಆಫೀಸು.

ಬೆಂಗಳೂರು ಸೆಪ್ಟಂಬರ್ ೧೫ ನೆಯು ೧೯೧೪.

ಪ್ರಿಯರೇ,

ನಿಮ್ಮ ಡಿ. ಒ ನಂ. ೩೬೧ ತಾ॥ ೧೧ ನೇಯು ಆಗಸ್ಟ್ ೧೯೧೪ ನೆಯು ಕಾಗದವನ್ನೂ ಅದರ ಲಗತ್ತಿದ್ದ ಕಾಗದವನ್ನೂ ಅತ್ಯಾದರದಿಂದ ಸ್ವೀಕರಿಸಿದೆನು. "ಹತ್ತಿಯಬೀಜದ ಫಸಲು" ಗಳ ವಿಷಯವನ್ನು ನೀವು ಬಹಳ ಜಾಗರೂಕತೆಯಿಂದ ಬರೆದಿರುವಂತೆ ಕಾಣಬರುತ್ತದೆ. ಮತ್ತೂ ಅದರ ವಿಷಯದಲ್ಲಿ ಎಷ್ಟು ವಿಷಯಗಳಿವೆಯೋ ಅಷ್ಟೂ ಈ ನಮ್ಮ ಪುಸ್ತಕದಲ್ಲಿ ಗರ್ಭೀಕೃತವಾಗಿದೆ ಎಂದು ಯೋಚಿಸುತ್ತೇನೆ.

ಈ ದೇಶದಲ್ಲಿ ಬಹು ಕಾಲದಿಂದಲೂ ಹತ್ತಿಯಬೀಜವು ದನಗಳಿಗೆ ಉಪಯುಕ್ತವಾದ ಆಹಾರವಾಗಿ ಪರಿಗಣಿಸಲ್ಪಟ್ಟಿರುವುದೆಂಬ ವಿಷಯವನ್ನು ಪುನಃ ಹೇಳಿದರೆ ಪುನರುಕ್ತಿಯಾಗುವುದೆಂದು ತೋರುತ್ತದೆ. ದನಗಳು ಚನ್ನಾಗಿ ತಿಂದು ಎಷ್ಟು ಕೊಬ್ಬನ್ನು ಉಪಯೋಗಿಸಿಕೊಳ್ಳಬಲ್ಲವೋ ಅದಕ್ಕಿಂತಲೂ ಹೆಚ್ಚಾದ ಕೊಬ್ಬು ಹತ್ತಿಯಬೀಜದಲ್ಲಿ ಅಡಗಿದೆ; ಆದಕಾರಣ ಎಣ್ಣೆಯ ಬಹು ಭಾಗವನ್ನು ತೆಗೆದನಂತರ ಹಿಂಡಿಯನ್ನು ದನಗಳಿಗೆ ಆಹಾರವಾಗಿ ಉಪಯೋಗಿಸಬೇಕೆಂದು ಪುಸ್ತಕದಲ್ಲಿ ನಿರೂಪಿತವಾಗಿರುವುದು ಖಂಡಿತವಾಗಿಯೂ ಲಾಭದಾಯಕವಾದದ್ದು. ಹತ್ತಿಯಬೀಜದ ಹೊಟ್ಟನ್ನು ದನಗಳಿಗೆ ಬೊಂಬಾಯಿಪ್ರಾಂತ್ಯದಲ್ಲಿ ಉಪಯೋಗಿಸಿದ್ದರಲ್ಲಿ ತೃಪ್ತಿಕರವಾದ ಫಲಿತಾಂಶವು ಕಂಡುಬಂದಿದೆ. ಬೆಂಗಳೂರಿನಲ್ಲಿರುವ ಗೌರ್ನಮೆಂಟ್ ಮಿಲಿಟರಿ ಹೈನದ ಕ್ಷೇತ್ರದ ಮ್ಯಾನೇಜರವರೂ ಸಹ ಹಾಲು ಕರೆಯುವ ದನಗಳಿಗೆ ಹಿಂಡಿಯನ್ನೂ ಬೀಜದ ಹೊಟ್ಟನ್ನೂ ಉಪಯೋಗಿಸುವುದರ ಮಹತ್ವವನ್ನು ಬಹು ಹೆಚ್ಚಾಗಿ ಹೇಳುತ್ತಾರೆ. ಹಿಂಡಿ ಮತ್ತೂ ಹೊಟ್ಟು ಇವೆರಡನ್ನೂ ಮೈಸೂರುದೇಶದಲ್ಲಿ ದನಗಳಿಗೆ ಸಾಧಾರಣವಾಗಿ ಉಪಯೋಗಿಸುವುದರಿಂದ ಅವುಗಳ ಸ್ಥಿತಿಯು ಉತ್ತಮವಾಗುವುದೆಂದು ದೃಢವಾಗಿ ನಂಬುತ್ತೇನೆ.

ಭೂಮಿಗೆ ಇವೆರಡರ ಪೈಕಿ ಯಾವದನ್ನೇ ಆಗಲಿ ಗೊಬ್ಬರವಾಗಿ ಉಪಯೋಗಿಸಿದರೂ ಅಥವಾ ದನಗಳು ಇವುಗಳನ್ನು ತಿಂದನಂತರ ಅವುಗಳ ಗೊಬ್ಬರವನ್ನು ಉಪಯೋಗಿಸಿದರೂ ನೈಟ್ರೋಜನ್ ಎಂಬ ಉತ್ತಮವಾದ ಗೊಬ್ಬರವನ್ನು ಕೊಡುತ್ತದೆ

ನಿಮ್ಮ ವಿಶ್ವಾಸಪಾತ್ರ,

(Sd) ಲೆಸ್ಲಿ ಸಿ. ಕೋಲ್‌ಮನ್.

ಮ॥ ಸಿ. ರಂಗನಾಥರಾವ್ ಸಾಹೇಬ್ ಬಿ.ಎ.,ಬಿ.ಎಲ್.,
ಅವರಿಗೆ ಕೈಗಾರಿಕೆ ಮತ್ತೂ ಸಂಘದ ವ್ಯಾಪಾರ
ಸೆಕ್ರಟರಿ ಬೆಂಗಳೂರು.

ಯುದ್ಧದ ವೈಚಿತ್ರ್ಯ.

ಫ್ರೆಂಚ್‌ಸೇನೆಯು ಅವಿನಾನ್ಸ್‌ಪಟ್ಟಣವನ್ನು ಪ್ರವೇಶಿಸಿದಾಗ ಜರ್ಮನಿಯ ರೆಡ್‌ಕ್ರಾಸ್‌ಸಂಘಕ್ಕೆ ಸೇರಿದ ಕೆಲ ಜನರೂ ಮತ್ತೂ ೮೯ ವೈದ್ಯಾಧಿಕಾರಿಗಳೂ ಸೆರೆಯಾಳುಗಳಾಗಿ ಸಿಕ್ಕಿಬಿದ್ದರು. ಫ್ರೆಂಚ್‌ಸೇನೆಯ ಜನರಲ್ಲು ಆ ಬಂದಿಗಳನ್ನೆಲ್ಲಾ ಆದರಿಸಿ ಜಿನಾವಾಪಟ್ಟಣಕ್ಕೆ ಫ್ರೆಂಚ್‌ಡಾಕ್ಟರುಗಳ ಬದಲಾಗಿರಲು ಕಳುಹಿಸಿಕೊಡುತ್ತೇವೆಂದು ವಾಗ್ದಾನಮಾಡಿದನು. ಆ ಜನಗಳನ್ನು ಶೋಧಿಸುವಲ್ಲಿ ಆಯುಧಗಳೂ ಮದ್ದುಗುಂಡೂ ದೊರಕಲು ಫ್ರೆಂಚ್‌ಜನರಲ್ಲು ರೆಡ್‌ಕ್ರಾಸ್‌ ಸಂಘಕ್ಕೆ ಸೇರಿದ ನೀವು ಹೀಗೆ ಮದ್ದುಗುಂಡು ಸಾಮಗ್ರಿಗಳನ್ನಿಟ್ಟುಕೊಂಡಿರಲು ಕಾರಣವೇನೆಂದು ಪ್ರಶ್ನೆಮಾಡಿದುದಕ್ಕೆ ಅವರು-ನಮ್ಮ ವೃತ್ತಿಯನ್ನು ತಿಳಿಯದ ಸೈನಿಕರು ನಮ್ಮಮೇಲೆ ಬೀಳುವ ಸಂದರ್ಭದಲ್ಲಿ ಆತ್ಮರಕ್ಷಣೆಗಾಗಿಟ್ಟುಕೊಂಡಿದ್ದೇವೆಂದುತ್ತರವನ್ನು ಕೊಟ್ಟರು. ಫ್ರೆಂಚ್‌ಜನರಲ್ಲು ಅವರು ಕೊಟ್ಟ ಸಮಾಧಾನವನ್ನೊಪ್ಪಿಕೊಂಡು ನಿಮ್ಮ ಸೈನಿಕರ ವೃತ್ತಿಯೇ ವಿಚಿತ್ರವಾಗಿದೆ ಎಂದು ಹೇಳಿದನು. ಆ ರಾತ್ರಿ ಫ್ರೆಂಚ್ ವೈದ್ಯಾಧಿಕಾರಿಗಳು ಆ ಸೆರೆಯಾಳುಗಳ ಕೂಡ ಪ್ರಸ್ತಾಪಿಸುವಾಗ್ಗೆ ಗಾಯಪಡೆದವರನ್ನುಪಚರಿಸುವ ವಿಚಾರವನ್ನೆತ್ತಿಕೊಂಡರು. ಆ ಸಮಯದಲ್ಲಿ ಇಬ್ಬರು ಫ್ರೆಂಚ್ ಸೈನಿಕರು ಕೆಲ ಜರ್ಮನರು ಏನನ್ನೂ ಹೇಳದೆ ಮೌನವಾಗಿದ್ದುದನ್ನು ನೋಡಿ, ಅವರ ವಿಚಾರದಲ್ಲಿ ಅನುಮಾನಪಟ್ಟು ತಮ್ಮ ಜನರಲ್ಲಿಗೆ ಆ ವಿಚಾರವನ್ನು ತಿಳಿಸಲು, ಆ ೮೯ ಜರ್ಮನರಲ್ಲಿ ಪ್ರತಿಯೊಬ್ಬನಿಗೂ ವೈದ್ಯವಿಚಾರದಲ್ಲಿ ಕೆಲ ಪ್ರಶ್ನೆಗಳನ್ನು ಹಾಕತಕ್ಕದೆಂದಾಜ್ಞಾಪಿಸಿದನು. ಅವರಲ್ಲಿ ಮೊದಲಿನ ೪ ಜನರು ಕೇಳಿದ ಪ್ರಶ್ನೆಗೆ ತತ್‌ಕ್ಷಣ ಉತ್ತರವನ್ನು ಕೊಟ್ಟರು. ಮತ್ತೂ ಉಳಿದವರು ಶುದ್ಧ ಶುಂಠರಾಯರಾಗಿರಲು, ಫ್ರೆಂಚ್‌ವೈದ್ಯರ ಒಂದು ಕಮಿಟಿಯು ಅವರೆಲ್ಲರನ್ನೂ ವಿಚಾರಿಸಿ, ಅವರಲ್ಲಿ ೧೧ ಜನರನ್ನು ಅಪರಾಧಕ್ಕೆ ಗುರಿಮಾಡಿದರು ಫ್ರೆಂಚ್ ಜನರಲ್ಲು ಅವರನ್ನು ಹಗಲಿನಲ್ಲೇ ಗುಂಡಿನಿಂದ ಸುಟ್ಟುಬಿಡಬೇಕೆಂದಾಜ್ಞಾಪಿಸಿದನು.

ಯುದ್ಧಸಾಮಗ್ರಿಗಳ ವೈಚಿತ್ರ್ಯವಲ್ಲಿ ಜರ್ಮನರ ಅಗಾಧಭಾರವುಳ್ಳ ಫಿರಂಗಿಗಳೇ ಅತಿಶಯವೆಂದು ತಿಳಿಯಲ್ಪಟ್ಟಿದ್ದುವು ಆದರೆ ಜರ್ಮನ್ ಚಕ್ರವರ್ತಿಯು, ಮಿತ್ರಸೈನ್ಯದವರು ಆಶ್ಚರ್ಯಪಡುವಂತೆ ಮತ್ತೊಂದು ವಸ್ತುವನ್ನು ನಿರ್ಮಿಸಿರುವನು. ಅದಾವುದೆಂದರೆ—ನೀರಿನಮೇಲೂ, ಅಂತರಿಕ್ಷದಲ್ಲೂ ನಡೆಯುವ ಜಪ್ಲಿನ್‌ಹಡಗು. ಇದು ಕಳೆದ ೩ ವಾರಗಳಿಂದಲೂ ಪ್ರತಿನಿತ್ಯವೂ ಕತ್ತಲೆಯವೇಳೆಯಲ್ಲಿ ಜರ್ಮನರಿಗೆ ಸೇರಿದ ಕಾನ್ಸ್ಟನ್ಸ್ ಸರೋವರದ ಫ್ರೀಡ್ರಿಚ್‌ಹಾರ್ಫ ದಡವನ್ನು ಬಿಟ್ಟು ಬಹಳ ವೇಗದಿಂದಲೂ ಕ್ರಮದಿಂದಲೂ ೧೦೦೦ ಅಡಿ ಎತ್ತರಕ್ಕೆ ಹಾರಿ, ಅಂತರಿಕ್ಷದಲ್ಲಿ ಸಂಚರಿಸುತ, ನೀರಿನೊಳಗೆ ಹಡಗುಗಳನ್ನು ನಾಶಪಡಿಸುವಂಥ ಟಾರ್ಪಿಡೊಗಳಿರುವಪೆಟ್ಟಿಗೆಯ ಆಕೃತಿಯ ೪೦ ಬಾಣಗಳನ್ನು ಸರೋವರದ ನೀರಿನಮೇಲೆ ಬೀಳಿಸುತ್ತಿರುವುದು. ಈ ಮದ್ದು ಬಹಳ ರಭಸವಾಗಿ ಹಾರುವುದರಿಂದ ನೀರಿನ ತೆರೆಯು ಅಂತರಿಕ್ಷದಲ್ಲಿ ಬಹುದೂರದವರೆಗೆ ಹಾರುವುದು. ಈ ರಾಕ್ಷಸ ಯಂತ್ರಗಳಿಂದ ಅಗಾಧವಾದ ಕಾರ್ಯಗಳನ್ನೆಸಗಬಹುದಾಗಿ ಜರ್ಮನರು ನಿರೀಕ್ಷಿಸುತ್ತಾರೆ. ಇವರು ಇವುಗಳಮೂಲಕ ಇಂಗ್ಲೀಷ್ ಮತ್ತೂ ಫ್ರೆಂಚ್‌ಹಡಗುಗಳಮೇಲೆ ಎರಗುವ ಪ್ರಯತ್ನದಲ್ಲಿರುವುದಾಗಿ ಒಂದು ಕಥೆಯು ಪ್ರಬಲವಾಗಿ ಹಬ್ಬುತ್ತಿದೆ.

ಜರ್ಮನ್‌ದೇಶದ ಕೈಗಾರಿಕೆಯ ವಸ್ತುಗಳಮೇಲೆ ಸ್ಪರ್ಧಿಸುತ್ತಿರುವ ಶತ್ರುಗಳ ಕೈಗಾರಿಕೆಯ ಕಾರ್ಖಾನೆಗಳೆಲ್ಲವನ್ನೂ ನಿರ್ದಯೆಯಿಂದ ನಾಶಪಡಿಸಬೇಕೆಂದು ಜರ್ಮನಿಯ ಸೈನಿಕರಿಗೆ ಆಜ್ಞೆಯಾಗಿರುವುದಾಗಿಯೂ, ಜರ್ಮನಿದೇಶದ ಸಕ್ಕರೆಯನ್ನು ಮೂಲೆಗೊತ್ತುತ್ತಿರುವ ಫ್ರಾನ್ಸಿನ ಸಕ್ಕರೆಯನ್ನು ಶೋಧಿಸುವ ಕಾರ್ಖಾನೆಗಳು ನಾಶಪಡಿಸಲ್ಪಟ್ಟಿರುವುದಾಗಿಯೂ ಒಬ್ಬ ಜರ್ಮನಿದೇಶದ ಬಂದಿಯು ಹೇಳುವನೆಂದು ಪ್ಯಾರಿಸ್ಸಿನ ಒಂದು ವೃತ್ತಪತ್ರಿಕೆಯು ತಿಳಿಸುತ್ತದೆ.

...ಜರ್ಮನಿಯಸೇನೆಯು ಲಕ್ಸೆಂಬರ್ಗ್ ಮೇಲೆ ಮಾರ್ಗಮಾಡಿಕೊಂಡು ಹೋದುದರಿಂದ ಲಕ್ಸೆಂಬರ್ಗ್‌ಗುಂಟಾಗಿರುವ ನಷ್ಟಕ್ಕೆ ಪರಿಹಾರವಾಗಿ ಮೊದಲನೆಯ ಕಿಸ್ತು ೮೦೦೦೦೦೦ ರೂಪಾಯಿಗಳನ್ನು ಕೊಡಲು ಜರ್ಮನ್ ಸರ್ಕಾರದವರೊಪ್ಪಿರುವರೆಂದು ಬರ್ಲಿನ್ ಪತ್ರಿಕೆಯು ತಿಳಿಸುತ್ತದೆ. ಈ ವಿಚಾರದಲ್ಲಿ ಬೆಲ್ಜಿಯಮ್ಮಿನವರು ಏನುಹೇಳುತ್ತಾರೋ ತಿಳಿಯಬೇಕಾಗಿದೆ. ಲಕ್ಸೆಂಬರ್ಗ್ ಜರ್ಮನಿ ಮತ್ತೂ ಫ್ರಾನ್ಸಿನ ಎಲ್ಲೆಕಟ್ಟುಗಳ ಮಧ್ಯೆ ಬೆಲ್ಜಿಯಮ್ಮಿಗೆ ಆಗ್ನೇಯದಿಕ್ಕಿನಲ್ಲಿರುತ್ತದೆ. ಇದನ್ನು ಒಬ್ಬ ದೊರೆಸಾನಿಯು ಆಳುತ್ತಿರುವಳು.

ಜರ್ಮನಿ ಚಕ್ರವರ್ತಿಯು ತನ್ನಪ್ರಜೆಗಳಿಗೆ ಮಾಡಿರುವ ವಿಚಿತ್ರಾಜ್ಞೆ—ನೀವು ನನ್ನಿಂದಾರಿಸಲ್ಪಟ್ಟಿರುವ ಜನರಾಗಿರುವಿರೆಂಬುದನ್ನು ಸ್ಮರಣೆಯಲ್ಲಿಡಿ. ದೇವರ ಆವೇಶವು ನನ್ನಲ್ಲಿ ಉಂಟಾಗಿರುವುದು, ಯಾಕೆಂದರೆ ನಾನು ಜರ್ಮನ್‌ಪ್ರಜೆಗಳ ಚಕ್ರವರ್ತಿಯಾಗಿದ್ದು ದೇವರ ಪ್ರತಿನಿಧಿಯೆಂದು ಪ್ರಮಾಣಪುರಸ್ಸರವಾಗಿ ಹೇಳುತ್ತೇನೆ. ಅದುಕಾರಣ ನನ್ನ ಆಜ್ಞೆಯನ್ನುಲ್ಲಂಘಿಸಿ ನನ್ನ ಪ್ರಯತ್ನದಲ್ಲಿ ಅನುಮಾನವುಳ್ಳವರೆಲ್ಲರೂ ಮರಣವನ್ನೂ ನಾಶವನ್ನೂ ಹೊಂದತಕ್ಕದಾಗಿದೆ. ಅದುಕಾರಣ, ಜರ್ಮನರ ಶತ್ರುಗಳೆಲ್ಲರನ್ನೂ ನಾಶಮಾಡಿರಿ. ಅವರ ನಾಶವು ದೇವರಿಗಿಷ್ಟವಾಗಿದೆ. ದೇವರು ಈ ನನ್ನಾಜ್ಞೆಯನ್ನು ನೀವು ನೆರವೇರಿಸಬೇಕೆಂದು ನನ್ನ ಮುಖದ್ವಾರ ಅಪ್ಪಣೆಮಾಡುತ್ತಾನೆ." ಎಂದು ಕೇಜರನು ಈಚೆಗೆ ಪ್ರಕಟಿಸಿರುವುದಾಗಿ, ಡೇಲಿಪ್ರೋಸ್ಟ್‌ಪತ್ರಿಕೆಗೆ ಪ್ಯಾರಿಸ್‌ಪಟ್ಟಣದ ವಿಲೇಖಕನು ಬರೆದಿರುತ್ತಾನೆ.

ಒಬ್ಬ ಫ್ರಾನ್ಸಿನ ಹೆಂಗುಸು ಇಂಗ್ಲೆಂಡಿನಲ್ಲಿರುವ ತನ್ನ ಸ್ನೇಹಿತನೊಬ್ಬನಿಗೆ ಕಾಗದವನ್ನು ಬರೆದಿರುವುದರಲ್ಲಿ ಜರ್ಮನರು ಕೊಲೆಯನ್ನೂ, ನಾಶವನ್ನೂ, ಮಾಡಲು ಅವಕಾಶವಿಲ್ಲದಿರುವಾಗ್ಗೆ ನಿರಪರಾಧಿಗಳಾದ ಮತ್ತೂ ಸೈನಿಕರಲ್ಲದ ಪ್ರಜೆಗಳನ್ನು ನಾನಾಬಗೆಯಿಂದ ಹಿಂಸಿಸುವರು ಎಂಬುದು ವ್ಯಕ್ತವಾಗುತ್ತದೆ. ಅದು ಹೇಗೆಂದರೆ:— "ಜರ್ಮನರು ಸೆಪ್ಟಂಬರ್ ತಾ॥ ೧೨ ರಲ್ಲಿ ಲಿವೆಟ್ಟನ್ನು ಬಿಟ್ಟುಹೋದರು. ನಾವು ೩ ವಾರಗಳವರೆಗೆ ಹಿಂಸೆಯನ್ನು ಸಹಿಸಿಕೊಂಡಿರುವಂತೆ ಮಾಡಿದ್ದರು. ಇವರು ಈಪಟ್ಟಣಕ್ಕೆ ಬಂದಕೂಡಲೆ ನಮ್ಮೆಲ್ಲರನ್ನೂ ಮನೆಗಳನ್ನು ಬಿಟ್ಟೋಡಿಸಿ ಮನೆಯೊಳಗಿದ್ದ ಕಣಜಗಳನ್ನೆಲ್ಲಾ ಸೂರೆಮಾಡಿ ಹಣವನ್ನು ತಡಕುವುದಕ್ಕಾಗಿ ಎಲ್ಲವನ್ನೂ ತಲೆಕೆಳಗೆ ಮಾಡಿದ್ದರು. ಜನರು ರಾತ್ರಿಯೆಲ್ಲಾ ಮನೆಬಾಗಿಲುಗಳ ಹೊರಗೆ ಕಾಲವನ್ನು ಕಳೆದು ಜರ್ಮನ್‌ಸೈನಿಕರಪ್ಪಣೆಯ ಮೇರೆಗೆ ಮಾರನೆಯ ಬೆಳಿಗ್ಗೆ ಮನೆಗಳನ್ನು ಪ್ರವೇಶಿಸಿ ನೋಡುವಲ್ಲಿ ತಿನ್ನುವುದಕ್ಕೆ ಏನನ್ನೂ ಬಿಟ್ಟಿರಲಿಲ್ಲವು. ಜರ್ಮನರು ತುಪಾಕಿಗಳನ್ನು ನಮಗೆ ತೋರಿಸದೆ ನಮ್ಮಕೂಡ ಮಾತನಾಡುತ್ತಲೇ ಇರಲಿಲ್ಲವು. ಇದರಿಂದ ನಾವು ನಮ್ಮ ಅಂತ್ಯವನ್ನು ಪ್ರತಿಕ್ಷಣದಲ್ಲೂ ನಿರೀಕ್ಷಿಸಿಕೊಂಡಿದ್ದೆವು. ಅವರು ೫ದಿನಗಳವರೆಗೆ ಹಗಲಿನಲ್ಲೂ ರಾತ್ರಿಯಲ್ಲೂ ಹೆಂಗುಸರನ್ನೂ ಮಕ್ಕಳನ್ನೂ ದೇವಾಲಯದೊಳಗೂ, ಗಂಡುಸರನ್ನು ಬೇರೆಕಡೆಯಲ್ಲೂ ಸೆರೆಯಿಟ್ಟಿದ್ದರು. ಜರ್ಮನರು ನಮ್ಮ ಮನೆಗಳನ್ನು ಸೂರೆಮಾಡುವಾಗ್ಗೆ ನಾವುಗಳು ಜರ್ಮನರ ಗಾಯಪಡೆದವರೂ ಹೆಣಗಳೂ ಬಿದ್ದಿದ್ದ ಹುಲ್ಲಿನಮೇಲೆ ಮಲಗಿರಬೇಕಾಗಿದ್ದಿತಲ್ಲದೆ ಹಸಿವಿನಿಂದ ಬಳಲಬೇಕಾಗಿದ್ದಿತು. ಕಲ್ಲಿನಂತೆ ಕಠಿಣವಾದ ಕಪ್ಪುರೊಟ್ಟಿಯ ಒಂದುಚೂರೂ ಮತ್ತೂ ತಾವುತಿಂದು ಮಿಕ್ಕಿರುವ ಮತ್ತೂ ಮೃಗಗಳಿಗೂ ಸಹ ಯಾರೂ ಕೊಡದಿರುವ ಮಾಂಸದ ಸಾರೂ ನಮಗೆ ಆಹಾರವಾಗಿ ಅವರಿಂದ ಕೊಡಲ್ಪಡುತ್ತಿದ್ದಿತು. ನಮ್ಮಲ್ಲೊಬ್ಬ ಹೆಂಗುಸು ಸತ್ತುಹೋದುದಲ್ಲದೆ ಒಂದು ಮಗುವು ಮೂಕಾದುದರಿಂದ ಅವರು ನಮ್ಮನ್ನು ಸೆರೆಯಿಂದ ಬಿಟ್ಟುಕೊಟ್ಟರು. ತಾಯಿಗಳು ಮಕ್ಕಳು ತಿಂಡಿಯನ್ನು ಎಷ್ಟು ಬೇಡಿಕೊಂಡಾಗ್ಯೂ ಕೊಡಲಿಕ್ಕಿಲ್ಲವಾಗಿರಬೇಕಾಗಿದ್ದರೆ ಹೆಂಗುಸರಾದ ನಮ್ಮ ಸ್ಥಿತಿಯು ಎಷ್ಟು ದುರವಸ್ಥೆಯಲ್ಲಿರಬೇಕೆಂಬುದನ್ನು ನೀವೇ ಊಹಿಸಿಕೊಳ್ಳಿರಿ. ನಾವು ಮನೆಗೆ ಹಿಂದಿರುಗಿ ಹೋಗಿ ನೋಡುವಾಗ್ಗೆ ಒಂದೆರಡು ಬಟ್ಟೆಗಳ ವಿನಾ ಉಳಿದುದೆಲ್ಲವೂ ಅವರಿಂದ ಸುಲಿದು ತೆಗೆದುಕೊಂಡು ಹೋಗಲ್ಪಟ್ಟಿದ್ದುವು. ಲಿವೆಟ್ಟನ್ನು ನಾವುಗಳು ಬಿಟ್ಟು ಬರುವದಿವಸದ ಹಿಂದಿನರಾತ್ರಿ ನನ್ನ ಮಗಳು ಅಸ್ವಸ್ಥಳಾಗಿದ್ದಳು. ಮನೆಯಲ್ಲಿ ಮೋಂಬತ್ತಿಯಾಗಲಿ ದೀಪದಕಡ್ಡಿಯಾಗಲಿ ಇರಲಿಲ್ಲವಾಗಿ ನಾವು ಕತ್ತಲೆಯಲ್ಲೇ ಕಾಲವನ್ನು ಕಳೆದೆವು. ಜರ್ಮನರು ಎಲ್ಲವನ್ನೂ ಅಪಹರಿಸಿಕೊಂಡು ಹೋಗಿದ್ದರು, ನಾನು ಆಗ ವ್ಯಸನಪಟ್ಟಷ್ಟು ಮುಂದೆ ಯಾವಾಗಲೂ ಅಳಲಾರೆ.

ವಿಶೇಷವಾರ್ತೆಗಳು.

ಸರ್ವಿಯಾವು ತುರ್ಕಿಯಮೇಲೆ ಯುದ್ಧವನ್ನು ಪ್ರಕಟಿಸಿತೆಂದು ಜರ್ಮನಿಯಿಂದ ಬಂದ ಸುದ್ದಿಗಳಿಂದ ಗೊತ್ತಾಗುತ್ತದೆ.

ಯುದ್ಧಕ್ಕೆ ಹೋಗಿದ್ದ ಆಂಗ್ಲೇಯ ರಾಜವರ್ಗದವರಲ್ಲಿ ಬಾಟೆಂಬರ್ಗಿನ ಮಾರಿಸ್ ರಾಜಕುಮಾರರು ಮೃತರಾದರು.

ಮಾರ್ಕ್ವಿಸ್‌ಲ್ಯಾನ್ಸ್‌ಡೌನ್‌ರವರ ಕುಮಾರರಾದ ಲಾರ್ಡ್‌ಚಾರ್ಲ್ಸ್‌ರವರು ಯುದ್ಧಕ್ಕೆ ಹೋಗಿದ್ದು ಕಳೆದ ತಾ॥ ೩೦ ರಲ್ಲಿ ಕೊಲ್ಲಲ್ಪಟ್ಟರು.

ಯುದ್ಧಾಂಗಣದಲ್ಲಿರುವ ಮಿತ್ರಪಕ್ಷದ ಸೈನ್ಯದ ಗುಡಿಸಲುಗಳಿಗೆ ಉಪಯೋಗಿಸುವುದಕ್ಕೆ ೧ ಲಕ್ಷ [illegible] ತಗಡುಗಳನ್ನು ಉಪಯೋಗಿಸುತ್ತಿರುವರು.

ತುರ್ಕಿಯವರಿಗೆ ಜರ್ಮನರು ೧೬ ಅಂಗುಲದ ಬಾಯಿಯ ೪ ಫಿರಂಗಿಗಳನ್ನೂ ೧ ಸಾವಿರ ಟನ್ನುಗಳ ಮದ್ದನ್ನೂ ಇತರ ಯುದ್ಧಸಾಮಗ್ರಿಗಳನ್ನೂ ಕೊಟ್ಟಿರುವರಂತೆ.

ಜರ್ಮನಿಯಲ್ಲಿ ಯುದ್ಧದ ಕಾರಣದಿಂದ ಈಗಾಗಲೇ ೩೪ ವ್ಯಾಪಾರಸಂಘಗಳಲ್ಲಿ ಕೆಲಸವು ನಿಂತುಹೋಯಿತು. ಇವುಗಳಲ್ಲಿ ೧೫ ಲಕ್ಷ ಪ್ರಜೆಗಳು ಕೆಲಸಮಾಡುತ್ತಿದ್ದರು.

ಎಮ್ಡೆನ್ ಹಡಗಿನ ಮೇಲಿರುವ ಅಧಿಕಾರಿಗಳಿಗೂ ಕೆಲ ನಾವಿಕರಿಗೂ ಸಹ ಜರ್ಮನ್ ಚಕ್ರವರ್ತಿಯವರು ಐರನ್‌ಕ್ರಾಸ್ ಎಂಬ ಘನತರವಾದ ಬಿರುದನ್ನು ಕೊಟ್ಟಿರುವರು.

ರಷ್ಯಾದೇಶದ ೧೩-೧೫ ವರ್ಷದ ತರುಣರು ಕೂಡ ಎಷ್ಟೋಮಂದಿ ತಮ್ಮ ಮನೆಗಳಲ್ಲಿ ಹೇಳದೆ ಕೇಳದೆ ಮನೆಯಲ್ಲಿದ್ದ ಆಯುಧಗಳನ್ನು ಎತ್ತಿಕೊಂಡು ಯುದ್ಧಾಂಗಣಕ್ಕೆ ಉತ್ಸಾಹದಿಂದ ಓಡಿಹೋಗುತ್ತಿರುವರಂತೆ.

ಗ್ವಾಲಿಯರ್ ಮಹಾರಾಜರು ಯುದ್ಧದ ವೆಚ್ಚಕ್ಕಾಗಿ ಇದುವರೆಗೆ ಎಷ್ಟೋ ಸಹಾಯಮಾಡಿದ್ದಾರೆ. ಅದರಮೇಲೆ ಈಗ ಸೇನೆಗಳ ಉಪಯೋಗಾರ್ಥವಾಗಿ ೮೧ ಮೋಟಾರುಬಂಡಿಗಳನ್ನೂ ಮೋಟಾರು ಸೈಕಲುಗಳನ್ನೂ ಅವಕ್ಕೆ ಬೇಕಾದ ಉಪಕರಣಗಳನ್ನೂ ಕೊಟ್ಟಿದ್ದಾರೆ.

ರಷ್ಯಾ ಜರ್ಮನರ ಯುದ್ಧದಲ್ಲಿ ಒಂದುಕಡೆ ರಷ್ಯನರು ಕುದುರೆಗಳಮೇಲೆ ಕುಳಿತುಕೊಂಡೇ ಹೊಳೆಯಲ್ಲಿ ಈಜುತ್ತ ಹೋಗಿ ಆಚೆ ದಡದಲ್ಲಿದ್ದ ಜರ್ಮನರಮೇಲೆ ಬಿದ್ದು ಹೋರಾಡಿ ೩೦೦೦ ಮಂದಿಗಳನ್ನೂ ೬ ಫಿರಂಗಿಗಳನ್ನೂ ೭ ಆಯುಧಸಮೇತವಾದ ಮೋಟಾರುಗಳನ್ನೂ ಹಿಡಿದಿರುವರು.

ಎಮ್ಡೆನ್ ಹಡಗಿನ ಮೇಲಿರುವ ಕಮ್ಯಾಂಡರ ಹೆಸರು "ವಾನ್‌ಮುಲ್ಲರು" ಎಂಬುದಾಗಿಯೂ, ಆತನು ಜರ್ಮನಿಯವನೆಂದೂ, ಅವನ ತಾಯಿಯೂ ಹೆಂಡತಿಯೂ ಕೂಡ ಇಂಗ್ಲೀಷರೆಂದೂ, ಆತನು ಚೀನಾಕ್ಕೆ ಸೇರಿದ ಷಾಂಘಾಯಿ ಪಟ್ಟಣದ ಕ್ಲಬ್ಬಿನವರಿಗೆ ಚೆನ್ನಾಗಿ ಪರಿಚಿತನೆಂದೂ, ಅವನ ಸ್ನೇಹಿತರ ಮೂಲಕ ತಿಳಿದು ಒಬ್ಬ ಪತ್ರವ್ಯವಹಾರಕನು ಬರೆದಿರುತ್ತಾನೆ.

ಚೀನಾಪ್ರಜೆಗಳಿಗೆ ಇಂಗ್ಲೆಂಡ್-ಜಪಾನ್ ಪ್ರಭುತ್ವಗಳ ಮೇಲೆ ದ್ವೇಷವನ್ನೂ ಭಯವನ್ನೂ ಹುಟ್ಟಿಸಿ ಚೀನಾವನ್ನು ಕೂಡ ಯುದ್ಧಕ್ಕೆ ನಿಲ್ಲಿಸಬೇಕೆಂದು ಆ ದೇಶದಲ್ಲಿ ಜರ್ಮನ್ ಸೈನ್ಯಾಧಿಕಾರಿಗಳು ಪ್ರಯತ್ನಿಸುತ್ತಿರುವರೆಂದೂ, ಇದರಿಂದ ಚೀನಾ ಜಪಾನ್ ದೇಶಗಳ ವ್ಯಾಪಾರವನ್ನೂ ಸೇನಾಬಲವನ್ನೂ ಹಾಳುಮಾಡಿಸಬೇಕೆಂಬುದೇ ಜರ್ಮನರ ಉದ್ದೇಶವೆಂದೂ ಚೀನಾದೇಶದ ರಾಜಧಾನಿಯಾದ ಪೆಕಿಂಗಿನಿಂದ ಲಂಡನ್ ಪಟ್ಟಣಕ್ಕೆ ಸುದ್ದಿ ಬಂದಿದೆ.

ಇದುವರೆಗೆ ೩ತಿಂಗಳಿಂದ ನಡೆದ ಯುದ್ಧದಲ್ಲಿ ಜರ್ಮನರ ಕಡೆ ಸತ್ತವರೂ ಏಟುತಿಂದವರೂ ಸೆರೆಯಾಗಿ ಸಿಕ್ಕಿಹೋಗಿರುವವರೂಸೇರಿ ೧೩ಲಕ್ಷ ಮಂದಿ ನಷ್ಟರಾಗಿರುವರೆಂದು ಲೆಕ್ಕಹಾಕಲ್ಪಟ್ಟಿದೆ.

ಫ್ರೆಂಚ್‌ದೇಶದ ಪ್ರೆಸಿಡೆಂಟರಾದ ಪಾಯಿನ್‌ಕೇರ್‌ರವರು ಯುದ್ಧಾಂಗಣಕ್ಕೆ ಹೋಗಿ ಕನ್ನಿರ್ಮ್ಯಪ್ರಾಂತವನ್ನು ಸಂದರ್ಶಿಸಿ, ಅಲ್ಲಿದ್ದ ತಮ್ಮಕಡೆಯ ಸೈನ್ಯಾಧಿಪತಿ ಜನರಲ್ ಜಾಫ್ರೆಯವರೊಡನೆಯೂ ಇಂಗ್ಲೀಷ್ ಬೆಲ್ಜಿಯಂ ಸೈನ್ಯಾಧಿಪತಿಗಳೊಡನೆಯೂ ಸಂಭಾಷಣೆಮಾಡಿಕೊಂಡು, ಅವರ ಯುಕ್ತಿಶಕ್ತಿ ಸಾಹಸಪರಾಕ್ರಮಗಳನ್ನು ಕೊಂಡಾಡಿ, ಅವರೊಡನೆ ಬೆಲ್ಜಿಯಂ ರಾಜರಿದ್ದ ಸ್ಥಳಕ್ಕೆ ಹೋಗಿ ಸಂಭಾಷಿಸಿಕೊಂಡು ಬಂದರು. ಈಪ್ರೆಸ್ಸಿನಬಳಿಗೂ ಹೋಗಿದ್ದು ಅಲ್ಲಿನ ಸ್ಥಿತಿಗಳನ್ನೆಲ್ಲಾ ಅರಿತುಕೊಂಡು ಬಂದರು.

ಜರ್ಮನರು ಬ್ರಸಲ್ಸ್-ಲೀಜು-ನಾಮೂರು-ಲಕ್ಸೆಂಬರ್ಗ್-ಹೆಯಿನಾಲ್ಟ್ ಮೊದಲಾದ ಊರುಗಳಲ್ಲಿ ಪ್ರಜೆಗಳಿಗೆ ಆಹಾರ್ಯಪದಾರ್ಥಗಳೊಂದನ್ನೂ ಉಳುಹದೆ ಹಾಳ್ಮಾಡಿಯೂ, ಅಷ್ಟೊಇಷ್ಟು ದೊರೆದುದನ್ನು ತಾವೇ ವಶಪಡಿಸಿಕೊಂಡೂ ಇರುತ್ತಿರುವುದರಿಂದ ಆ ಪ್ರದೇಶಗಳಲ್ಲಿ ಕ್ಷಾಮವುಂಟಾಗಿದೆ. ಅಮೇರಿಕಾ ಸಂಯುಕ್ತಾಧಿಪತ್ಯದವರು ಈ ದುಸ್ಥಿತಿಯನ್ನು ಕೇಳಿ ಆ ಪ್ರಜೆಗಳಿಗೆ ಆಹಾರ್ಯಪದಾರ್ಥಗಳನ್ನು ಒದಗಿಸಿಕೊಡಬೇಕೆಂದು ಜರ್ಮನ್ ಸರ್ಕಾರದವರಿಗೆ ಬರೆದಿರುವುದಲ್ಲದೆ ಅದರ ವ್ಯವಸ್ಥೆಗೆ ತಮ್ಮ ಅಧಿಕಾರಿಯೊಬ್ಬರನ್ನು ಕಳುಹಿಸಿದ್ದಾರೆ.

ಅಮೇರಿಕಾದೇಶದ ಧರ್ಮಾತ್ಮಕೋಟೀಶನಾದ ರಾಕ್‌ಫೆಲ್ಲರ್ ಮಹಾಶಯನು ಕೆಲ ಕೋಟಿ ರೂ.ಗಳನ್ನು ಕೊಟ್ಟಿದ್ದಾನೆ. ಅದರಲ್ಲಿ ಬರುವ ಆದಾಯದಿಂದ ೧೦ ಲಕ್ಷ ಡಾಲರುಗಳನ್ನು ಯುದ್ಧವು ಜರುಗುತ್ತಿರುವ ದೇಶಗಳಲ್ಲಿ ಉದ್ಯೋಗವಿಲ್ಲದೆ ನಿರ್ಗತಿಕರಾಗಿ ಆಹಾರಾಭಾವಗೊಂಡಿರುವ ಬಡವರಿಗೆ ಸಹಾಯಮಾಡಬೇಕೆಂದು ತಿಳಿಯಿಸಿರುತ್ತಾನೆ. ಮತ್ತೂ ವಿಪನ್ನರಾಗಿರುವ ಬೆಲ್ಜಿಯಂ ದೇಶೀಯರಿಗಾಗಿ ೪ ಸಾವಿರ ಟನ್ನುಗಳ ಆಹಾರ್ಯವಸ್ತುಗಳನ್ನು ಕಳುಹಿಸಿಕೊಡಲು ಏರ್ಪಡಿಸಿದ್ದಾನೆ. ಇಂಥ ಧರ್ಮಾತ್ಮರು ಚಿರಾಯುಗಳಾಗಿರಬೇಕಲ್ಲವೆ?

ಫ್ರೆಂಚರು ಮೋರ್ಟರ್ ಎಂಬ ಒಂದುತೆರದ ಆಯುಧಗಳನ್ನು ಹೊಸದಾಗಿ ನಿರ್ಮಿಸಿ, ಅದನ್ನು ಮೊನ್ನೆಯವಾರದಿಂದ ಯುದ್ಧದಲ್ಲಿ ಉಪಯೋಗಿಸುತ್ತಿದ್ದಾರೆ. ಫಿರಂಗಿಗಳಿಂದ ಹೊರಡುವ ಈ ಸಿಡಿಮದ್ದಿನ ಗೋಳಗಳು ಆಕಾಶದ ಮೇಲಕ್ಕೆ ಹೋಗಿ ಬಗ್ಗಿ ತಾರಾಮಂಡಲದಂತೆಒಡೆದು ಶತ್ರುಮಂಡಲದ ಮೇಲೆ ಅಗ್ನಿಯ ವರ್ಷವನ್ನೇ ಸುರಿಸುವುವು. ಈ ಸಿಡಿಮದ್ದುಗಳು ಒಂದೊಂದು ೨೦೦ಪೌಂಡುಗಳಷ್ಟು ಭಾರವಾಗಿರುವುವು. ಒಂದೊಂದರಿಂದಾಗುವ ಅನರ್ಥವು ೫೦೦-೬೦೦ ಗಜಗಳಷ್ಟು ಪ್ರದೇಶದಲ್ಲೆಲ್ಲಾ ವ್ಯಾಪಿಸುವುದು. ಇದರ ಪ್ರಯೋಗವು ಮಿತ್ರಮಂಡಲಿಯವರಿಗೆ ವಿಶೇಷಲಾಭವನ್ನುಂಟುಮಾಡುತ್ತಿದೆ.

ಜರ್ಮನರು ಇಂಗ್ಲೀಷ್‌ಸೈನ್ಯದ ಬಿಸಿಯನ್ನು ಕಂಡರು.

ಒಬ್ಬ ಜರ್ಮನ್ ಅಧಿಕಾರಿಯು ತಮ್ಮದೇಶದ "ಬರ್ಲಿನ್ ಟ್ಯಾಗೆಬ್ಲಾಟ್" ಎಂಬ ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದಿರುವುದರಲ್ಲಿ—ಇಂಗ್ಲೀಷ್‌ಸೈನಿಕರು ಓಡುಕುಳಿಗಳೆಂದು ಮಾಡಿಕೊಂಡಿದ್ದ ತಮ್ಮ ಹುಚ್ಚು ಊಹೆಯನ್ನು ಈಗ ಜರ್ಮನರು ಬಿಟ್ಟುಬಿಟ್ಟರು ಎಂತಲೂ, ಆಂಗ್ಲೇಯಪದಾತಿಗಳು ಜರ್ಮನರಿಗೆ ಅತ್ಯಂತಾಪಾಯಕಾರಿಗಳಾದ ಮಹಾಶತ್ರುಗಳೆಂತಲೂ, ಅವರು ತಮ್ಮ ಸ್ಥಾನಗಳನ್ನು ಬಿಡದೆ ಕಾಪಾಡಿಕೊಳ್ಳುವುದರಲ್ಲೂ, ಒಂದುವೇಳೆ ಆಯತಪ್ಪಿ ಹೋಗಿಬಿಟ್ಟ ಸ್ಥಳಗಳನ್ನು ಮರಳಿ ಅತ್ಯಂತ ಸಾಹಸದಿಂದ ಹಿಡಿದುಕೊಳ್ಳುವುದರಲ್ಲೂ ಅದ್ಭುತವಾದ ಪ್ರಯತ್ನಗಳನ್ನು ಮಾಡಲು ಸಮರ್ಥರೆಂತಲೂ, ಅವರು ಯುದ್ಧಕಾರ್ಯಕ್ಕೆ ಆಯಕಟ್ಟಾದ ಸ್ಥಾನಗಳನ್ನು ಆರಿಸಿಕೊಳ್ಳುವುದರಲ್ಲೂ, ಅವರ ಸೈನ್ಯಾಧಿಪತಿಗಳು ಸೈನಿಕರನ್ನು ನಡೆಯಿಸುವುದರಲ್ಲೂ ಅಸದೃಶವಾದ ಪಾಂಡಿತ್ಯವನ್ನು ಹೊಂದಿರುವರೆಂತಲೂ ಅಭಿಪ್ರಾಯಪಟ್ಟಿದ್ದಾನೆ.

ಬಲ್ಗೇರಿಯಾದವರ ಅಭಿಪ್ರಾಯ.

ಬಲ್ಗೇರಿಯಾ ರಾಜಧಾನಿಯಾದ ಸೋಫಿಯಾಪಟ್ಟಣದಿಂದ ಲಂಡನ್ ಟೈಮ್ಸ್‌ಪತ್ರಿಕೆಯ ವಿಲೇಖಕನಿಗೆ ಈ ಕೆಳಗಣ ಸುದ್ದಿಯು ಕಳುಹಲ್ಪಟ್ಟಿದೆ— "ಎಪಿರಸ್ಸನ್ನು ಆಕ್ರಮಿಸಿಕೊಳ್ಳುವ ವಿಷಯದಲ್ಲಿ ಗ್ರೀಕ್‌ನವರಿಗೆ ಅಪ್ಪಣೆಯನ್ನು ಕೊಟ್ಟಂತೆಯೇ ಮೆಸಿಡೋನಿಯಾವನ್ನು ಆಕ್ರಮಿಸಿಕೊಳ್ಳಲು ನಮಗೂ ಕೂಡ ಅನುಜ್ಞೆಯನ್ನಿತ್ತರೆ, ನಮ್ಮ ಸೇನೆಯನ್ನು ಫ್ರಾನ್ಸ್-ಇಂಗ್ಲೆಂಡ್-ರಷ್ಯಾದವರ ಸಹಾಯಕ್ಕಾಗಿ ಕಳುಹಿಸಲು ಸಿದ್ಧವಾಗಿದ್ದೇವೆಂದು ಬಲ್ಗೇರಿಯಾ ಪ್ರಭುತ್ವದವರು ಹೇಳುತ್ತಿದ್ದಾರೆ. ಮತ್ತೂ ಮಿತ್ರಮಂಡಲಿಯವರು ಈ ನಮ್ಮ ಅಭಿಪ್ರಾಯವನ್ನು ಅನುಮೋದಿಸುವ ಪಕ್ಷದಲ್ಲಿ ೨ ಲಕ್ಷ ಸೇನೆಯನ್ನು ತುರ್ಕಿಯಮೇಲೆ ಕಳುಹಿಸುತ್ತೇವೆ. ಈ ಸಂದರ್ಭದಲ್ಲಿ ಸರ್ವಿಯಾವು ನಮಗೆ ಅಡ್ಡಿಮಾಡದೆ ಸ್ನೇಹವಾಗಿದ್ದು ಮೆಸಿಡೋನಿಯಾವನ್ನು ಆಕ್ರಮಿಸಿಕೊಳ್ಳಲು ನಮಗೆ ಅವಕಾಶಕೊಡುವುದಾದರೆ ಈಗ ಮೆಸಿಡೋನಿಯಾದಲ್ಲಿ ಇಟ್ಟಿರುವ ೫೧ ಸಾವಿರ ಸೈನ್ಯಗಳನ್ನು ಹಿಂದಕ್ಕೆ ಕರೆಯಿಸಿಕೊಳ್ಳಬಹುದು. ರೊಮೇನಿಯಾವು ಟ್ರಾನ್ಸಲ್ವೇನಿಯಾದಮೇಲೆ ನಿರಂಕುಶವಾಗಿ ಅಭಿಯೋಗಮಾಡಬಹುದು. ಗ್ರೀಕರು ಆಕ್ರಮಿಸಿಕೊಂಡಿರುವ ಕಾವೆಲ್ಲಯನ್ನು ಅವರು ಬಿಟ್ಟುಬಿಡಬೇಕು. ಅದಕ್ಕೆ ಪ್ರತಿಯಾಗಿ ಅವರು ಏಷ್ಯಾಮೈನರಿನಲ್ಲಿ ಸ್ವಲ್ಪ ರಾಷ್ಟ್ರವನ್ನು ಆಕ್ರಮಿಸಿಕೊಳ್ಳಬಹುದು. ೧೯೧೩ನೆಯ ವರ್ಷದಲ್ಲಿ ಸರ್ವಿಯಾಕ್ಕೂ ಬಲ್ಗೇರಿಯಾಕ್ಕೂ ನಡೆದಿರುವ ಸಂಧಿಯಪ್ರಕಾರ ಬಲ್ಗೇರಿಯಾಕ್ಕೆ ಸ್ವಲ್ಪ ದೇಶವು ಸೇರಬೇಕಾಗಿದೆ. ಈ ದೇಶವನ್ನು ಬಲ್ಗೇರಿಯಾವು ಆಕ್ರಮಿಸಿಕೊಳ್ಳಬಹುದೆಂದು ಈ ಮೊದಲೇ ಫ್ರಾನ್ಸ್‌ದೇಶವು ಒಪ್ಪಿಕೊಂಡಿದೆ." ಎಂಬುದಾಗಿ.

ಜಪಾನ್ ಜರ್ಮನಿ.

ಚೀನಾದಲ್ಲಿ ಜರ್ಮನಿಗೆ ಸೇರಿದ್ದ ಸಿಂಗ್‌ಟಾವನ್ನು ಜಪಾನರು ಮುತ್ತಿಗೆ ಹಾಕಿ ಹಡಗಿನ ಫಿರಂಗಿಗಳಿಂದ ಕೋಟೆಗಳ ಮೇಲೆ ಗುಂಡುಗಳನ್ನು ಹೊಡೆಯುತ್ತಿದ್ದರಷ್ಟೆ. ಈಚೆಗೆ ಹೊರಗಿನಿಂದ ಕೋಟೆಗೆ ಆಹಾರಸಾಮಗ್ರಿಗಳು ಕಳ್ಳತನದಿಂದ ಸಾಗುವುದು ಕೂಡ ಕಟ್ಟಾಗಿಹೋದುದರಿಂದಲೂ ಕೋಟೆಯಲ್ಲೂ ಪಟ್ಟಣದಲ್ಲೂ ಬಹುಭಾಗವು ಹಾಳಾದುದರಿಂದಲೂ ಕಳೆದ ತಾ॥ ೩ ನೆಯ ಮಂಗಳವಾರ ಅದು ಜಪಾನರ ವಶವಾಗಿ ಹೋಯಿತು. ಅದಕ್ಕೆ ಮುಂಚೆ ಶುಕ್ರವಾರ ರಾತ್ರಿ ೧॥ ಗಂಟೆಯಲ್ಲಿ ಮಧ್ಯದ ಕೋಟೆಯನ್ನೂ ಬೆಳಗಿನ ಜಾವದಲ್ಲಿ ಷೋಟಂಜಾನ್-ಟೈಟೋಸ್ಸಿನ್ ಕೋಟೆಗಳನ್ನೂ, ಬೆಳಗಿನ ೭ಗಂಟೆಗೆ ಇಲ್ಟಿಸ್-ಬಿಸ್ಮಾರ್ಕ್-ಮಾರ್ಟೇಕ್ ಎಂಬ ಕೋಟೆಗಳನ್ನೂ ಜಪಾನರ ಗುಂಪುಗುಂಪಾದ ಸೇನೆಗಳು ಬೇರೆಬೇರೆ ಭಾಗದಿಂದ ಲಗ್ಗೆ ಹತ್ತಿ ವಶಪಡಿಸಿಕೊಂಡುವು. ಬಳಿಕ ಒಳಗಿದ್ದ ಜರ್ಮನ್ ಸೈನಿಕರಿಗೆ ಶರಣಾಗತರಾಗುವುದೇ ಹಿತವೆಂದು ತೋರಿದುದರಿಂದ ಸಮುದ್ರತೀರದಲ್ಲಿ ಫಿರಂಗಿಗಳ ನಿವೇಶನದ ಮೇಲೂ ನಕ್ಷತ್ರಪರಿಶೋಧನಾಲಯದ ಶಿಖರದ ಮೇಲೂ ಶರಣಾಗತಿಯನ್ನು ಸೂಚಿಸುವ ಬಿಳಿಯ ಧ್ವಜಪತಾಕೆಗಳನ್ನು ಏರಿಸಿದರು. ತದನಂತರ ಎರಡುಪಕ್ಷದ ರಾಯಭಾರಿಗಳೂ ಸೇರಿ ನಿಬಂಧನಾಪತ್ರವನ್ನು ಬರೆಯಲು ಗೊತ್ತುಮಾಡಿದರು. ಶನಿವಾರ ಸಾಯಂಕಾಲ ನಿಬಂಧನಾಪತ್ರವಾಯಿತು. ಜಪಾನರ ರಾಯಭಾರಿಯು ಸೂಚಿಸಿದ ನಿಬಂಧನೆಗಳಿಗೆಲ್ಲಾ ಜರ್ಮನ್ ರಾಯಭಾರಿಯು ಒಪ್ಪಿದನೆಂದು ಗೊತ್ತಾಗುವುದು ಮಂಗಳವಾರದ ದಿನ ಜಪಾನರು ತಮ್ಮ ವಿಜಯಧ್ವಜವನ್ನು ಆ ಕೋಟೆಯಮೇಲೇರಿಸಿ ಜಯಭೇರಿಯನ್ನು ಹೊಡೆದರು. ಹೀಗೆ ಜರ್ಮನಿಯು ಏಷ್ಯಾಖಂಡದಲ್ಲಿ ತನಗಿದ್ದ ಸಾಮ್ರಾಜ್ಯಭಾಗವನ್ನು ಈ ಕಿಯಾಚೌವಿನೊಡನೆ ಜಪಾನಿಗೆ ಒಪ್ಪಿಸಿ ಕಳೆದುಕೊಂಡು ಬಿಟ್ಟಿತು. ಶುಕ್ರವಾರದ ರಾತ್ರಿಯಿಂದ ಶನಿವಾರದ ಬೆಳಗಿನ ವರೆಗೆ ನಡೆದ ಯುದ್ಧದಲ್ಲಿ ಜರ್ಮನರ ಕಡೆಯ ೨೩೦೦ ಮಂದಿ ಸೈನಿಕರನ್ನು ಜಪಾನರು ಸೆರೆಯಾಳುಗಳಾಗಿ ಹಿಡಿದಿದ್ದರು. ಜಪಾನರಕಡೆ ೧೪ ಮಂದಿ ಅಧಿಕಾರಿಗಳಿಗೆ ಏಟು ಬಿದ್ದಿದ್ದಿತು. ಇಂಗ್ಲೀಷ್‌ಸೈನ್ಯದಲ್ಲಿ ಇಬ್ಬರು ಅಧಿಕಾರಿಗಳು ಸತ್ತರು. ಜಪಾನರ ಕಡೆ ಸತ್ತವರೂ ಏಟು ತಿಂದವರೂ ಸೇರಿ ೫೦೬ ಮಂದಿಗಳಾಗಿದ್ದರು. ಕೋಟೆಯೆಲ್ಲವೂ ಜಪಾನರ ವಶವಾದಾಗ ಒಳಗಿದ್ದ ೨೩ ಸಾವಿರ ಮಂದಿ ಜರ್ಮನ್ ಸೈನಿಕರನ್ನು ಜಪಾನರು ಸೆರೆಯಾಳುಗಳನ್ನಾಗಿ ಹಿಡಿದುಕೊಂಡರು. ಈ ಕೋಟೆಯನ್ನು ಹಿಡಿಯುವುದರಲ್ಲಿ ತೊಡಗಿದ್ದ ಜಪಾನ್ ಸೈನ್ಯಕ್ಕೆ ಜನರಲ್ ಎಮತಾ ಎಂಬುವರು ಅಧಿಪತಿಗಳಾಗಿದ್ದರು.

ಈಸಿಂಗ್‌ಟಾವನ್ನು ಜಪಾನರು ಈಗಿನ ಯುದ್ಧವು ಮುಗಿಯುವ ವರೆಗೂ ತಮ್ಮ ವಶದಲ್ಲಿಟ್ಟುಕೊಂಡಿದ್ದು ಬಳಿಕ ಚೀನಾದವರೊಡನೆ ಆಲೋಚಿಸಿ ಇದರ ವಿಷಯದಲ್ಲಿ ತಕ್ಕ ವ್ಯವಸ್ಥೆಯನ್ನು ಮಾಡಿಕೊಳ್ಳುವವರಾಗಿದ್ದಾರೆ. ಇದನ್ನು ಜಪಾನರು ಹಿಡಿದುಕೊಂಡುದರಿಂದ ಏಷ್ಯಾಖಂಡದಲ್ಲಿದ್ದ ಜರ್ಮನರ ಸೊಂಕೇ ಹರಿದುಹೋದಂತಾಯಿತು. ಇಂಥ ಜಯಪ್ರಾಪ್ತಿಯು ತಮಗೆ ಆದುದಕ್ಕಾಗಿ ಜಪಾನ್ ಚಕ್ರವರ್ತಿ ದಂಪತಿಗಳು ತಮ್ಮ ಸೈನಿಕರನ್ನು ತುಂಬಾ ಶ್ಲಾಘಿಸಿ ಅಭಿನಂದಿಸಿರುತ್ತಾರೆ. ಮತ್ತೂ ಇಂಗ್ಲೆಂಡ್ ಸರ್ಕಾರದವರು ಕೂಡ ಜಪಾನ್ ಪ್ರಭುತ್ವದವರಿಗೆ ತಮ್ಮ ಅಭಿನಂದನವನ್ನು ತಿಳಿಯಪಡಿಸಿದ್ದಾರೆ. ಜರ್ಮನ್‌ಚಕ್ರವರ್ತಿಯವರು ಇದಕ್ಕೆ ಮುಂಚೆ ಒಂದಾವೃತ್ತಿ "ಬರ್ಲಿನ್‌ಪಟ್ಟಣವನ್ನು ರಷ್ಯನರ ಅಧೀನಗೊಳಿಸುವುದಕ್ಕಿಂತಲೂ ಕಿಯಾಚೋವನ್ನು ಜಪಾನರ ಅಧೀನಗೊಳಿಸುವುದು ಬಹಳ ಅಪಮಾನಕರವು" ಎಂದು ನುಡಿದಿದ್ದರು. ಈಗ ಅವರ ಮಾತು ಅವರಿಗೇ ಗುರಿಕಟ್ಟಿ ಹೊಡೆದ ಗುಂಡಿನಂತೆ ಪರಿಣಮಿಸಿತು. ಜರ್ಮನ್ ಚಕ್ರವರ್ತಿಯವರು ಮಾಡಿಕೊಂಡಿದ್ದ ಪ್ಯಾರಿಸ್ಸನ್ನೂ-ವಾರ್ಸಾವನ್ನೂ ಹಿಡಿವುದೇ ಮೊದಲಾದ ಸಂಕಲ್ಪಗಳೆಲ್ಲಾ ಇದುವರೆಗೇ ವ್ಯರ್ಥವಾಗಿ ಹೋದುದು ಹಾಗಿರಲಿ, ಏಷ್ಯಾಖಂಡದಲ್ಲೆಲ್ಲಾ ಹಿಂದೆಒಂದು ಸ್ವತ್ತಾದ ಈ ಕಿಯಾಚೋವು ಕೈಬಿಟ್ಟು ಶತ್ರುಗಳ ಅಧೀನವಾದುದರಿಂದ ಅವರಿಗೆ ಮೂಗನ್ನೇ ಕೊಯ್ದುಕೊಂಡಂತಾಯಿತೆಂಬುದು ಅತಿಶಯೋಕ್ತಿಯಲ್ಲ. ಏಕೆಂದರೆ- ಪೂರ್ವ ಸಮುದ್ರದಲ್ಲಿ ಇದರ ಆಧಾರದಿಂದ ಅವರು ಮಾಡಬೇಕೆಂದಿದ್ದ ಮನಸ್ಸಿನ ಮಂಡಿಗೆಯೆಲ್ಲಾ ಇಲ್ಲಿಗೆ ಮಣ್ಣು ಕೂಡಿದಂತಾಯಿತು.

ಯುದ್ಧವಾರ್ತೆ.

ಪಶ್ಚಿಮ ರಣರಂಗ.

ಕಳೆದವಾರ ಬಂದಿರುವ ವಾರ್ತೆಗಳಲ್ಲಿ ಶತ್ರುಗಳು ಹತಾಶರಾಗಿ ಪೂರ್ವದಿಙ್ಮುಖವಾಗಿ ಹೋಗುತ್ತಿರುವರೆಂಬುದೂ ಮೊನ್ನೆಯ ವಾರದಲ್ಲಿ ನಡೆದ ಘೋರಯುದ್ಧಗಳ ವಿವರಣವೂ ವಿಶೇಷವಾಗಿರುತ್ತವೆ. ನಮ್ಮ ಭರತಖಂಡದ ಸೈನಿಕರು ದೇಶಕ್ಕೆ ಕೀರ್ತಿಯನ್ನು ತಂದ ವಿಶೇಷ ಸಾಹಸಪರಾಕ್ರಮಭೂಯಿಷ್ಠವಾದ ಯುದ್ಧದ ವಿವರಣಗಳೂ ಇರುತ್ತಿವೆ. ಮಿತ್ರಮಂಡಲಿಯ ಮತ್ತೂ ಶತ್ರುಗಳ ಪಕ್ಷದ ಸೈನ್ಯಗಳಿಗೆ ಫ್ರಾನ್ಸಿನ ಉತ್ತರದ ಎಲ್ಲೆಗಳಲ್ಲೂ ಬೆಲ್ಜಿಯಂ ದೇಶದ ದಕ್ಷಿಣದ ಭಾಗಗಳಲ್ಲೂ ಇನ್ನೂ ಯುದ್ಧವು ನಡೆಯುತ್ತಿದೆ. ಮಿತ್ರಮಂಡಲಿಯ ಸೈನ್ಯಗಳು ಮುಂದುಮುಂದಕ್ಕೆ ಸಾಗುತ್ತಲೇ ಇವೆ. ಜರ್ಮನರು ಬೆಲ್ಜಿಯಮ್ಮಿಗೆ ಸೇರಿದ ಏಪ್ರೆಸ್ಸನ್ನು ಹಿಡಿಯಬೇಕೆಂದೂ ಕಲೇ ಕಡೆಗೆ ಸಾಗಬೇಕೆಂದೂ ಮಾಡಿದ ಅಸಮಸಾಹಸಗಳೆಲ್ಲಾ ವ್ಯರ್ಥಗೊಳಿಸಲ್ಪಟ್ಟುವು. ಅವರು ಮೊನ್ನೆತಾನೇ ಅದರ ಆಸೆಯನ್ನು ಬಿಟ್ಟು ಪೂರ್ವದ ಕಡೆಗೆ ತಿರುಗಿದರೆಂದು ಒಂದು ವಾರ್ತೆಯೂ, ಮತ್ತೊಂದುಸಲ ದೊಡ್ಡ ಸೇನೆಯನ್ನು ಕೂಡಿಸಿ ಏಪ್ರೆಸ್ಸಿನ ಮೇಲೆ ಬೀಳುವರೆಂದು ಒಂದು ವಾರ್ತೆಯೂ ಪ್ರಕಟವಾಗಿವೆ. ಮೊನ್ನೆಯ ವಾರದಲ್ಲಿ ನಡೆದ ಯುದ್ಧಗಳೆಲ್ಲಾ ಅರ್ರಾಸಿನ ಬಳಿಯಲ್ಲೂ, ಏಪ್ರೆಸ್ಸಿನ ಬಳಿಯಲ್ಲೂ ನಡೆದ ಯುದ್ಧಗಳು ಮಹತ್ತರವಾಗಿದ್ದುವು. ಅವುಗಳನ್ನು ಕಣ್ಣಿನಿಂದ ನೋಡಿದವರು ಹೇಳಿರುವ ವಾರ್ತೆಗಳ ಮೇಲೆ ತಿಳಿದು ಬರುವುದೇನೆಂದರೆ— ಜರ್ಮನರು ಕಲೆಯನ್ನು ಸೇರಬೇಕು, ಇಲ್ಲವೆ ಬೆಲ್ಜಿಯಮ್ಮಿನ ದಕ್ಷಿಣದೇಶ ಭಾಗವನ್ನೆಲ್ಲಾ ಹಿಡಿದುಕೊಳ್ಳಬೇಕು, ಅಥವಾ ಶತ್ರುಗಳನ್ನು ಬೆಲ್ಜಿಯಮ್ಮಿನಿಂದ ಹೊರಕ್ಕೆ ದಬ್ಬಿಬಿಡಬೇಕು. ಎಂಬ ದೃಢಸಂಕಲ್ಪದಿಂದ ವಿಶೇಷವಾದ ಸೈನ್ಯಗಳನ್ನೂ ದೊಡ್ಡದೊಡ್ಡ ಫಿರಂಗಿಗಳನೇಕವನ್ನೂ ಅಲ್ಲಿ ಸೇರಿಸಿದ್ದರು. ಶತ್ರುಗಳಿಗೆ ಎಡೆಗೊಡದಂತೆ ಸಾಂದ್ರವಾಗಿ ನಿಂತು ಕದಲದೆ ಯುದ್ಧಮಾಡಬೇಕು, ಹಿಂದಿರುಗಿ ಬಂದವರನ್ನು ನಾವೇ ತುಪಾಕಿಯಿಂದ ಹೊಡೆದು ಕೊಂದುಬಿಡುತ್ತೇವೆಎಂದು ಜರ್ಮನ್ ಸೈನ್ಯಾಧಿಕಾರಿಗಳು ತಮ್ಮ ಸೈನಿಕರಿಗೆ ಎಚ್ಚರಿಸಿ ಹುರಿದುಂಬಿಸುತ್ತಿದ್ದರು. ಮಿತ್ರಮಂಡಲಿಯವರು ಅಸದೃಶವಾದ ಧೈರ್ಯಪರಾಕ್ರಮಗಳಿಂದ ಕಾದಾಡಿದರು. ತಮ್ಮ ಪಕ್ಷಕ್ಕಿಂತ ಶತ್ರುಪಕ್ಷದ ಸೈನ್ಯಗಳು ದ್ವಿಗುಣವಾಗಿಯೂ ಫಿರಂಗಿಗಳು ಚತುರ್ಗುಣವಾಗಿಯೂ ಇದ್ದರೂ ಕೂಡ ಅವರು ಹಿಮ್ಮೆಟ್ಟಲಿಲ್ಲ. ಅರ್ರಾಸಿನ ಬಳಿಯಲ್ಲಿ ಶತ್ರುಗಳು ಗಂಟೆಯೊಂದಕ್ಕೆ ೫ ಸಾವಿರ ಗುಂಡುಗಳಂತೆ ಕೂಡ ಹಾರಿಸುತ್ತಿದ್ದರು. ಹಗಲುಹೊತ್ತು ಜರ್ಮನರು ಮಿತ್ರಮಂಡಲಿಯವರನ್ನು ಹಿಂದಕ್ಕೆ ನೂಕಿ ಆಕ್ರಮಿಸಿದ ಸ್ಥಾನಗಳನ್ನೆಲ್ಲಾ ರಾತ್ರಿಯಹೊತ್ತು ಇವರು ಆಕ್ರಮಿಸಿಕೊಳ್ಳುತ್ತ ಬಂದರು. ಜರ್ಮನರ ಕಡೆ ಹೊಸಹೊಸ ಸೈನ್ಯಗಳು ಸಹಾಯಕ್ಕೆ ಬರುತ್ತಲೇ ಇದ್ದುವು. ಅವರು ಎಷ್ಟು ಗುಂಡಿನ ಮಳೆಯನ್ನು ಸುರಿಸಿದರೂ ಮಿತ್ರಮಂಡಲಿಯವರು ಮುಖವನ್ನು ಹಿಂದಿರುಗಿಸಲಿಲ್ಲ. ಇಂಗ್ಲೀಷ್ ಸೈನ್ಯಗಳ ಜತೆಗೆ ಫ್ರೆಂಚ್ ಬೆಲ್ಜಿಯಂ ಸೈನ್ಯಗಳೂ ಹಿಂದೂದೇಶದ ಸೈನ್ಯಗಳೂ ಸೇರಿ ಅದ್ಭುತವಾಗಿ ಕಾದಾಡಿದುವು. ಏಪ್ರೆಸ್ಸಿನ ಸುತ್ತಣ ಗ್ರಾಮದ ಬಳಿಯಲ್ಲಿ ಆದ ಭೀಕರ ಯುದ್ಧದಲ್ಲಿ ರಕ್ತಪ್ರವಾಹವು ಹರಿದಿತು. ಅಲ್ಲಿ ಉಭಯಪಕ್ಷದೊಳಗೂ ಸತ್ತವರಿಗೆ ಕೊನೆಮೊದಲಿಲ್ಲವಾಗಿದ್ದಿತು. ಜರ್ಮನರ ಕಡೆಯ ೪ ಪಟಾಲಮ್ಮುಗಳು ಒಂದರಹಿಂದೆ ಒಂದು ಬಂದು ಕಾದಾಡಿದುವು, ಅವೆಲ್ಲವೂ (ಬಹುಶಃ ೫೬ ಸಾವಿರ) ನಾಶವಾದುವು. ಮಿತ್ರಮಂಡಲಿಯ ಸೈನ್ಯದಲ್ಲೂ ಬಹಳ ನಷ್ಟವಾಯಿತು. ಇಂಗ್ಲೀಷು ಫ್ರೆಂಚುಸೇನೆಗಳ ತುಪಾಕಿಗಳ ಹೊಡೆತಕ್ಕೆ ಶತ್ರುಗಳು ಜಗ್ಗದೆಹೋದ ಸಂದರ್ಭದಲ್ಲೆಲ್ಲಾ ಹಿಂದೂದೇಶದ ಅಶ್ವಸೈನಿಕರು ಕುದುರೆಯನ್ನಿಳಿದು ಭರ್ಜಿಗಳನ್ನು ಕೈಯಲ್ಲಿ ಹಿಡಿದು ಸಿಂಹಗರ್ಜನೆ ಮಾಡುತ್ತ ಶತ್ರುಗಳ ಗುಂಡಿನ ಸುರಿಮಳೆಯನ್ನು ಸ್ವಲ್ಪವೂ ಲಕ್ಷ್ಯಮಾಡದೆ ಮೇಲೆಬಿದ್ದು ಇರಿದು ತರಿದು ಅವರನ್ನು ಹಿಂದಿರುಗಿಸುವಂತೆಯೂ ಸ್ಥಾನಭ್ರಷ್ಟರಾಗುವಂತೆಯೂ ಒಂದೆರಡುಸಲ ಮಾಡಿ, ತಮ್ಮಲ್ಲಿ ಅನೇಕರನ್ನು ಯುದ್ಧದಲ್ಲಿ ಕಳೆದುಕೊಂಡರೂ ಅಪಾರವಾದ ಯಶಸ್ಸನ್ನೂ ಸೈನ್ಯಾಧಿಪತಿಗಳ ಮೆಚ್ಚುಗೆಯನ್ನೂ ಪಡೆದುಕೊಂಡರು.

ಪಶ್ಚಿಮದಲ್ಲಿ ಬೆಲ್ಜಿಯಂದೇಶದ ಸಮುದ್ರಪ್ರಾಂತದಲ್ಲಿ ಸಮುದ್ರದ ನೀರಿನ ಕಟ್ಟೆಗಳನ್ನು ಮಿತ್ರಮಂಡಲಿಯವರು ಕಿತ್ತುಹಾಕಿಬಿಟ್ಟುದರಿಂದ ಡಿಕ್ಸ್‌ಮೂಡಿನ ಪ್ರಾಂತವೆಲ್ಲಾ ಜಲಮಯವಾಗಿ ಹೋಗಿದೆ. ಅಲ್ಲಿ ಜರ್ಮನರು ಪಡುತ್ತಿರುವ ಕಷ್ಟಗಳನ್ನೆಲ್ಲಾ ಇಂಗ್ಲೀಷ್ ವೈಮಾನಿಕರು ಮೇಲಿನಿಂದ ನೋಡುತ್ತಲಿದ್ದರು. ಜರ್ಮನರ ಫಿರಂಗಿಗಳೆಲ್ಲಾ ಕೆಸರಿನಲ್ಲಿ ಹೂತುಹೋದುವು. ಅವರ ಸೈನಿಕರು ದಿಣ್ಣೆಯೂದ ಪ್ರದೇಶಗಳಲ್ಲಿ ಹೋಗಿ ಸೇರಿಕೊಳ್ಳಲು ಬಹಳ ತೊಂದರೆಪಟ್ಟರು. ಆ ಸಮಯದಲ್ಲಿ ಮೇಲಿನಿಂದ ಇಂಗ್ಲೀಷ್ ವೈಮಾನಿಕರು ಸಿಡಿಮದ್ದುಗಳನ್ನು ಹಾಕಿ ಬಹು ಜನರನ್ನು ಹತಮಾಡಿದರು. ಆ ವೈಮಾನಿಕರು ಜರ್ಮನರ ಸ್ವಾಧೀನದಲ್ಲಿರುವ ಬ್ರೂಜಸ್‌ಪಟ್ಟಣದಮೇಲೂ ಸಿಡಿಮದ್ದುಗಳನ್ನು ಹಾಕಿದರು. ಮತ್ತೂ ಜರ್ಮನ್ ಚಕ್ರವರ್ತಿಯು ಬೆಲ್ಜಿಯಂದೇಶಕ್ಕೆ ಬಂದಿದ್ದರಷ್ಟೆ. ಆ ಸಂಧಿಯನ್ನು ಸಾಧಿಸಿ ನಮ್ಮ ವೈಮಾನಿಕರು ಅವರ ಬಿಡಾರದ ಮಂದಿರದಮೇಲೆ ೫-೬ ಸಿಡಿಮದ್ದುಗಳನ್ನು ಹಾಕಿದರು. ಆದರೆ ಅವು ಬೀಳುವುದಕ್ಕೆ ಕೆಲನಿಮಿಷಗಳ ಮುಂಚೆಯೇ ಚಕ್ರವರ್ತಿಯು ಆ ಮಂದಿರವನ್ನು ಬಿಟ್ಟುಹೊರಟುಹೋಗಿದ್ದರು. ಆದರಿಂದ ಆಗಿನ ಗಂಡವು ಅವರಿಗೆ ತಪ್ಪಿಹೋಯಿತು. ಆದರೂ ಚಕ್ರವರ್ತಿಯ ಅಂಗರಕ್ಷಕರಿಬ್ಬರು ಆ ಏಟುಗಳಿಂದಹತರಾದರು.

ಫ್ರಾನ್ಸ್ ಬೆಲ್ಜಿಯಂ ಎಲ್ಲೆಗಳ ಪ್ರಾಂತದಲ್ಲಿ ಮಿತ್ರಮಂಡಲಿಯವರ ಸ್ಥಿತಿಯು ಸಮರ್ಪಕವಾಗಿದೆ. ಆದರೂ ಇಲ್ಲಿ ಪೂರ್ಣ ಜಯಾಪಜಯಗಳು ಗೊತ್ತಾಗುವುದಕ್ಕೆ ಇನ್ನೂ ಕೆಲವು ವಾರಗಳೇ ಬೇಕಾಗುವುವೆಂದು ಹೇಳಲ್ಪಡುತ್ತಿದೆ. ಫ್ರಾನ್ಸಿನ ಪೂರ್ವದಭಾಗಗಳಲ್ಲೂ ಅಲ್ಲಲ್ಲಿ ಸಾಮಾನ್ಯವಾದ ಯುದ್ಧಗಳು ನಡೆಯುತ್ತಿವೆ. ಹೇಳಿಸಿಕೊಳ್ಳುವಂಥ ಸ್ಥಿತ್ಯಂತರವೇನೂ ಆಗಿಲ್ಲ. ಫ್ರಾನ್ಸಿನವರು ನುಗ್ಗಿ ಹೋಗಿರುವ ಜರ್ಮನ್‌ದೇಶದ ಲೋರ್ವೈನ್ ಜಿಲ್ಲೆಯಲ್ಲಿ ಈಗ ವಿಶೇಷವಾಗಿ ಮಂಜು ಸುರಿಯುತ್ತಿರುವುದರಿಂದ ಯುದ್ಧಕ್ರಿಯೆಯು ಚುರುಕಾಗಿ ನಡೆಯುತ್ತಲಿಲ್ಲ.

ಪೂರ್ವರಣರಂಗ.

ವಾರ್ಸಾಕ್ಕೆ ದಕ್ಷಿಣದಲ್ಲಿ ೮೦ ಮೈಲಿಗಳ ದೂರದಲ್ಲಿರುವ ಕೀಲ್ಸ್ ಎಂಬ ಪಟ್ಟಣವನ್ನೂ ಅತ್ಯಂತ ಮುಖ್ಯಪಟ್ಟಣವಾಗಿದ್ದ ಸಾಂಡೋಮಿಟ್ ಎಂಬುದನ್ನೂ ರಷ್ಯನ್ ಸೇನೆಗಳು ಹಿಡಿದುಕೊಂಡುವು. (ಇವು ಪೋಲಾಂಡಿಗೆ ಸೇರಿದುವು) ಇಲ್ಲೂ ಕೀಲ್ಸಿಗೆ ದಕ್ಷಿಣದಲ್ಲೂ ರಷ್ಯನರು ಜರ್ಮನ್-ಆಸ್ಟ್ರಿಯಾ ಸೇನೆಗಳ ಮೇಲೆ ಬಹಳ ಭೀಕರವಾಗಿ ಕಾದಾಡಿದರು. ಅಲ್ಲಿ ರಷ್ಯನರಿಗೆ ಶತ್ರುಗಳ ಬಹಳ ಫಿರಂಗಿಗಳೂ ಮದ್ದುಗುಂಡು ಸಾಮಾನುಗಳೂ ೧೬,೦೦೦ ಸೈನಿಕರೂ ೩೦೦ ಮಂದಿ ಉದ್ಯೋಗಸ್ಥರೂ ವಶವಾದರು. ಪೂರ್ವಪ್ರಷ್ಯಾ ಎಲ್ಲೆಕಟ್ಟೆನಲ್ಲಿ ಜರ್ಮನರು ಹಿಂದಕ್ಕೆ ತಮ್ಮ ದೇಶದೊಳಕ್ಕೆ ಪಶ್ಚಿಮಾಭಿಮುಖವಾಗಿ ಓಡಿಹೋಗುತ್ತಿದ್ದಾರೆ. ಈ ಸ್ಥಲದಲ್ಲಿ ರಷ್ಯನರು ವಿಶೇಷ ಜಯಶೀಲರಾದುದನ್ನು ಕಂಡು ಫ್ರೆಂಚರ ಜನರಲ್ ಜಾಫ್ರೆಯವರು ರಷ್ಯನರ ಗ್ರಾಂಡ್‌ಡ್ಯೂಕ್‌ನಿಕೋಲಸ್‌ರವರಿಗೆ ತಮ್ಮ ಅಭಿನಂದನವನ್ನು ತಿಳಿಯಿಸುವುದರಲ್ಲಿ-,,ನೀವು ಹೀಗೆ ಜಯಶೀಲರಾಗಿ ಜರ್ಮನರ ಎಲ್ಲೆಕಟ್ಟುಗಳನ್ನು ಸಮೀಪಿಸಿರುವುದಕ್ಕಾಗಿ ಅಭಿನಂದಿಸುತ್ತೇನೆ'' ಎಂದು ತಿಳಿಯಿಸಿದುದಲ್ಲದೆ, ನಮ್ಮ ಕಡೆಯಲ್ಲಿ ಈಗ ಜರ್ಮನರು ತೀವ್ರವಾಗಿ ಮಾಡುತ್ತಿದ್ದ ಅಭಿಯೋಗಗಳನ್ನು ಅಣಗಿಸಿಬಿಟ್ಟಿರುತ್ತೇವೆ. ಮತ್ತೂ ನಮ್ಮನ್ನು ಪ್ರತಿಭಟಿಸುತ್ತಿರುವ ಇನ್ನುಳಿದ ಶತ್ರುಸೇನೆಯನ್ನೂ ನಿರ್ಮೂಲಮಾಡಲು ಪ್ರಯತ್ನಿಸುತಿದ್ದೇವೆ. ನಮ್ಮ ಸ್ಥಿತಿಗಳು ಅನುಕೂಲವಾಗಿವೆ. ನಾವೆಲ್ಲರೂ ಸೇರಿ ಮಾಡುತ್ತಿರುವ ಕೃಷಿಯಿಂದ ಬೇಗನೆ ಜಯಲಾಭವಾಗುವುದೆಂದು ನಂಬುತ್ತೇನೆ. ಎಂದೂ ತಿಳಿಯಿಸಿದ್ದರು.

ಈಗ ರಷ್ಯನರು ಪ್ರತಿದಿನವೂ ಜಯಶೀಲರಾಗಿ ಮುಂದುಮುಂದಕ್ಕೆ ಜರ್ಮನ್ ಎಲ್ಲೆಕಟ್ಟಿಗೆ ಸಾಗಿಹೋಗುತ್ತಿರುವರು. ಜರ್ಮನರು ಶತ್ರುಗಳಿಗೆ ಬೆನ್ನು ತೋರಿಸಿ ಓಡುತ್ತಿರುವರು. ಪೋಲ್ಯಾಂಡಿನ ದಕ್ಷಿಣದಲ್ಲಿ ಎಲ್ಲೆಯಲ್ಲಿರುವ ಆಸ್ಟ್ರಿಯಾಕ್ಕೆ ಸೇರಿದ ಕ್ರಾಕೋಪಟ್ಟಣದಿಂದ ಹಿಡಿದು ಉತ್ತರದ ರಷ್ಯಾ ಜರ್ಮನ್ ಎಲ್ಲೆಯಲ್ಲಿರುವ ತಾರನ್ ಪಟ್ಟಣದ ವರೆಗೂ ರಷ್ಯಾ-ಜರ್ಮನಿ ಸೈನ್ಯಗಳು ಅಕ್ಟೋಬರ್ ತಾ|| ೨೩ ರಿಂದ ನವಂಬರ್ ತಾ|| ೪ರ ವರೆಗೆ ಮಾಡಿದ ಅವಿಚ್ಛಿನ್ನವಾದ ಯುದ್ಧದಲ್ಲಿ ರಷ್ಯನರು ಜರ್ಮನಿಯವರ ದೊಡ್ಡ ಫಿರಂಗಿಗಳು ೩ನ್ನೂ ೪ ಚಿಕ್ಕ ಫಿರಂಗಿಗಳನ್ನೂ ಇನ್ನೊಂದು ತೆರದ ೩೮ ಫಿರಂಗಿಗಳನ್ನೂ ೨೬೪ ಮಂದಿ ಉದ್ಯೋಗಿಗಳನ್ನೂ ೧೮,೧೦೦ ಮಂದಿ ಸೈನಿಕರನ್ನೂ ಬಹಳ ಯುದ್ಧಸಾಮಗ್ರಿಗಳನ್ನೂ ಹಿಡಿದುಕೊಂಡಿರುವರು ಎಂಬುದಾಗಿ ರಷ್ಯಾ ಸರ್ಕಾರದವರು ಪ್ರಕಟಿಸಿದ್ದಾರೆ. ಇದರಿಂದ ಪೂರ್ವಪ್ರಷ್ಯಾದಲ್ಲಿ ಜರ್ಮನರಿಗೆ ಎಷ್ಟು ಅಪಜಯವಾಗಿದೆಯೆಂಬುದು ಸ್ಪಷ್ಟವಾಗುವುದು.

ಈಗ ಜರ್ಮನರೂ ಆಸ್ಟ್ರಿಯಾದವರೂ ಸೇರಿ ಕ್ರಾಕೋನಗರದಿಂದ ತಾರನ್ ವರೆಗೆ ೩೦ ಲಕ್ಷ ಸೈನ್ಯವನ್ನು ರಷ್ಯನ್ನರಮೇಲೆ ಪ್ರತಿಭಟಿಸುವುದಕ್ಕೆ ಜರ್ಮನ್ ಎಲ್ಲೆಕಟ್ಟನಲ್ಲಿ ಸಜ್ಜುಗೊಳಿಸುತ್ತಿರುವರೆಂದೂ ತಾ|| ೪ರಲ್ಲಿ ರಷ್ಯಾಸರ್ಕಾರದವರು ಮಾಡಿರುವ ಪ್ರಕಟನೆಯ ಪ್ರಕಾರ ಅವರ ಅಶ್ವಸೈನ್ಯಗಳು ಜರ್ಮನಿದೇಶದೊಳಕ್ಕೆ ನುಗ್ಗಿ ಪ್ಲೆಸ್‌ಜೆಸ್ಸಿನ ಬಳಿಯಲ್ಲಿ ಲೋಹಮಾರ್ಗಗಳನ್ನು ಧ್ವಂಸಮಾಡಿರುತ್ತವೆಯೆಂತಲೂ ಪೂರ್ವಪ್ರಷ್ಯಾದಲ್ಲಿರುವ ರಷ್ಯನ್ ಸೈನ್ಯಗಳು ವಿಡ್‌ಬಾಲೆಸ್ಸಿನ ಬಳಿಯಲ್ಲಿ ಜರ್ಮನರು ಏರ್ಪಡಿಸಿಕೊಂಡಿದ್ದ ರಕ್ಷಕಸ್ಥಾನಗಳನ್ನು ಆಕ್ರಮಿಸಿಕೊಂಡಿರುವುವೆಂತಲೂ, ರೋಮಿನ್‌ಟೆನ್ ಕಾಡಿನಲ್ಲೂ ಲೀಕ್ ಪ್ರಾಂತ್ಯದಲ್ಲೂ ರಷ್ಯನ್ ಸೈನ್ಯಗಳು ಮುಂದಕ್ಕೆ ಸಾಗಿಹೋಗುತ್ತಿರುವುವೆಂತಲೂ, ಸಿಡ್ ನದಿಯ ಪ್ರಾಂತ್ಯದಲ್ಲಿದ್ದ ಜರ್ಮನರ ರಕ್ಷಕ ಸೈನ್ಯದ ಮೇಲೂ ಆಸ್ಟ್ರಿಯನ್ ಸೈನ್ಯದ ಮೇಲೂ ರಷ್ಯನರು ಯುದ್ಧಮಾಡಿದುದರಲ್ಲಿ ರಷ್ಯನರು ಶತ್ರುಗಳ ಕಡೆಯ ೧೫೫ ಮಂದಿ ಸೈನ್ಯೋದ್ಯೋಗಿಗಳನ್ನೂ ೧೨ ಸಾವಿರ ಮಂದಿ ಸೈನಿಕರನ್ನೂ ಕೆಲಫಿರಂಗಿಗಳನ್ನೂ ಸ್ವಲ್ಪ ಯುದ್ಧಸಾಮಗ್ರಿಯನ್ನೂ ಹಿಡಿದುಕೊಂಡರೆಂತಲೂ, ಆಸ್ಟ್ರಿಯಾಕ್ಕೆ ಸೇರಿದ ಜೇಂಸಿಲ್ ಪಟ್ಟಣದಲ್ಲಿ ಮಾಡಿದ ಯುದ್ಧದಲ್ಲೂ ರಷ್ಯನರು ಸಾವಿರಸೈನಿಕರನ್ನು ಹಿಡಿದುಕೊಂಡರೆಂತಲೂ ಗೊತ್ತಾಗುತ್ತದೆ. ಈಗ ರಷ್ಯನರು ಜರ್ಮನಿದೇಶದೊಳಕ್ಕೆ ನುಗ್ಗಿದ್ದಾರೆ.

ತುರ್ಕಿ.

ತುರ್ಕಿಯಲ್ಲಿ ಉಂಟಾಗಿರುವ ದ್ವಿಪಕ್ಷಗಳಲ್ಲಿ ಮನಸ್ತಾಪವು ಹೆಚ್ಚಾಗುತ್ತಿದೆ. ಯುದ್ಧಕ್ಕೆ ಮುಂಚೆ ಒಂದುದಿನ ಕೂಡಿದ್ದ ಸಭೆಯಲ್ಲಿ ಯುದ್ಧಪ್ರಿಯಪಕ್ಷದ ಎನ್ವರ್‌ಬೇಯವರೂ ಜರ್ಮನ್ ಸೈನ್ಯಾಧಿಪತಿಯೂ ಯುವಸುಲ್ತಾನರಮೇಲೆ ತುಪಾಕಿಯನ್ನು ಹಾರಿಸಿ ಗಾಯಪಡಿಸಿ ಭಯಪಡಿಸಿದರಂತೆ. ಈಚೆಗೆ ಮತ್ತೊಂದು ದಿನ ಅದೇ ಸಭೆಯಲ್ಲಿ ವಾಗ್ವಾದ ನಡೆಯುತ್ತಿರುವಾಗ ಸುಲ್ತಾನರ ಕುಮಾರರು ಎನ್ವರ್‌ಪಾಷಾರವರ ಕಾಲಿಗೆ ತಗಲುವಂತೆ ತುಪಾಕಿ ಗುಂಡನ್ನು ಹಾರಿಸಿದರಂತೆ. ಜರ್ಮನ್ ಉದ್ಯೋಗಿಗಳನ್ನೂ ಜರ್ಮನ್ ನಾವಿಕರನ್ನೂ ತುರ್ಕಿ ದೇಶದಿಂದ ಆಚೆಗೆ ಓಡಿಸಿದಹೊರತು ತಮ್ಮ ದೇಶಕ್ಕೆ ಶಾಂತಿಸೌಖ್ಯಗಳಿಲ್ಲವೆಂಬುದು ಶಾಂತಪಕ್ಷದವರ ನಿಶ್ಚಯವಾದ ಅಭಿಪ್ರಾಯವಾಗಿದೆ. ಪ್ರಜೆಗಳಲ್ಲಿ ಅನೇಕರು ಇದೇ ಅಭಿಪ್ರಾಯವುಳ್ಳವರಾಗಿದ್ದಾರೆ. ಇದೇ ಕಾರಣದಿಂದ ತುರ್ಕಿಯ ಕೋಶಾಧಿಕಾರಿ ಮೊದಲಾದ ಮೂವರು ಮಂತ್ರಿಗಳು ರಾಜೀನಾಮೆ ಕೊಟ್ಟರು.

ರಷ್ಯನ್ನರು ಕರ್ಕೇಷಿಯನ್ ಜಿಲ್ಲೆಗಳ ಎಲ್ಲೆಯನ್ನುದಾಟಿ ತುರ್ಕಿಯನ್ನು ಪ್ರವೇಶಿಸಿರುವರು. ಅಲ್ಲಿನ ರಕ್ಷಕಸೈನ್ಯವು ಶತೃಸೈನ್ಯಪ್ರವಾಹವನ್ನು ಕಂಡು ತಿರುಗಿನೋಡದೆ ಓಡಿಹೋಗುತ್ತಿರುವುದು.

ಏಷ್ಯಾಖಂಡದಲ್ಲಿ ತುರ್ಕಿಗೆ ಸೇರಿದ್ದ ಸೈಪ್ರಸ್‌ದ್ವೀಪವನ್ನು ಆಂಗ್ಲಪ್ರಭುತ್ವದವರು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು. ಏಷ್ಯಾಮೈನರಿನಲ್ಲಿದ್ದ ಅಚಾಬಾ ಮೊದಲಾದ ಪ್ರದೇಶಗಳನ್ನು ರಷ್ಯನರು ಆಗಲೇ ಹಿಡಿದುಕೊಂಡರು. ಡಾರ್ಡನೆಲ್ಸ್ ಜಲಸಂಧಿಯ ದ್ವಾರದಲ್ಲಿರುವ ತುರ್ಕಿಯ ಕೋಟೆಗಳನ್ನು ಇಂಗ್ಲೀಷ್ ಫ್ರೆಂಚ್ ಹಡಗುಗಳು ಫಿರಂಗಿಗಳಿಂದ ಹೊಡೆಯುತ್ತಿರುವುವಷ್ಟೆ. ಇವುಗಳನ್ನು ತುರ್ಕಿಯು ಕಾಪಾಡಿಕೊಳ್ಳಲಸಮರ್ಥವಾಗಿದೆಯೆಂದೂ ಇವನ್ನು ಜರ್ಮನರು ತಮ್ಮ ವಶದಲ್ಲಿಟ್ಟುಕೊಂಡಿರುವರೆಂದೂ ಗೊತ್ತಾಗುತ್ತದೆ. ಕೋಟೆಗಳಮೇಲೆ ಗುಂಡುಗಳನ್ನು ಹೊಡೆಯುತ್ತಿರುವ ಹಡಗುಗಳು ತುರ್ಕಿಯವರ ಫಿರಂಗಿಗುಂಡುಗಳ ಏಟಿಗೆ ಎಟ್ಟಿಗಿಸಲಾರದಷ್ಟು ದೂರದಲ್ಲಿ ನಿಂತಿವೆ. ಅಷ್ಟು ದೂರಕ್ಕೆ ಹೊಡೆಯುವಂಥ ಫಿರಂಗಿಗಳು ತುರ್ಕಿಕೋಟೆಗಳಲ್ಲಿಲ್ಲವಾಗಿದೆ. ಬೇಗಬೇಗನೆ ಪೂರ್ವದಕಡೆಯಿಂದ ತುರ್ಕಿಯನ್ನು ನುಗ್ಗಿರುವ ರಷ್ಯನ್ನರು ಮೈಸೌನು ಈಡ್ಯೆನುಗಳ ಬಳಿಯಲ್ಲಿ ತುರ್ಕಿಸೈನ್ಯಗಳಮೇಲೆ ಯುದ್ಧಮಾಡಿ ಸೋಲಿಸಿ, ತಾ|| ೩ ನೆ ಮಂಗಳವಾರ ಬೆಯೋಜಿಡ್ಜ್ ಎಂಬ ಪಟ್ಟಣವನ್ನು ಹಿಡಿದುಕೊಂಡರು.

ರಷ್ಯನರ ಸಿನೋಪು ಎಂಬ ಹಳೆಯ ಹಡಗೊಂದನ್ನು ತುರ್ಕಿಯವರು ಮುಳುಗಿಸಿದರು.

ಇಂಗ್ಲೀಷರಕಡೆಯ ಮಿನರ್ವಾ ಎಂಬ ಯುದ್ಧದ ಹಡಗು ತುರ್ಕಿಯಕಡೆಗೆ ಬಂದಿರುವುದಷ್ಟೆ. ಇದು ಮಹಮದೀಯರ ಯಾತ್ರಾಸ್ಥಲವಾದ ಜೆಡ್ಡಾ ಎಂಬ ರೇವೆಪಟ್ಟಣದಮೇಲೆ ಗುಂಡುಗಳನ್ನು ಹೊಡೆಯುತ್ತಿರುವುದೆಂದು ಜರ್ಮನರು ಸುಳ್ಳು ಸುದ್ದಿಗಳನ್ನು ಹುಟ್ಟಿಸಿ ಜನರ ಮನಸ್ಸನ್ನು ಕೆಡಿಸಲು ಪ್ರಯತ್ನಿಸಿದರು. ಇಂಥ ಕೆಲಸವನ್ನು ಇಂಗ್ಲೀಷರ ಹಡಗು ಮಾಡುತ್ತಿಲ್ಲವೆಂದೂ ಅಂಥ ಕಾರ್ಯವನ್ನು ಮಿತ್ರಮಂಡಲಿಯ ಇತರಸೈನ್ಯದವರೂ ಮಾಡುವುದಿಲ್ಲವೆಂದೂ ಇಂಡ್ಯಾಸರ್ಕಾರದವರು ಪ್ರಕಟಿಸಿದ್ದಾರೆ.

ಈಜಿಪ್ಟಿನಮೇಲೆ ತುರ್ಕಿಯವರು ಅಭಿಯೋಗಮಾಡುವುದಾದರೆ ಈಜಿಪ್ಟಿನ ಪ್ರಜೆಗಳಿಗೆ ಯಾವ ತೊಂದರೆಯನ್ನೂ ಕೊಡದಂತೆ ಆ ದೇಶದ ರಕ್ಷಣೆಗಾಗಿ ಆಂಗ್ಲಪ್ರಭುತ್ವದವರೇ ಶತ್ರುಗಳಮೇಲೆ ಹೋರಾಡುವುದಕ್ಕೆ ಸಿದ್ಧರಾಗಿದ್ದಾರೆ. ಈ ಅಭಿಪ್ರಾಯಕ್ಕೆ ಈಜಿಪ್ಟಿನ ಕೆಡೀವ್ ಪ್ರಭುಗಳೇ ಮೊದಲಾದವರೆಲ್ಲಾ ಒಪ್ಪಿ ಆನಂದದಿಂದ ತಮ್ಮ ಕೃತಜ್ಞತೆಯನ್ನು ಆಂಗ್ಲಪ್ರಭುತ್ವದವರಿಗೆ ತಿಳಿಯಪಡಿಸಿದ್ದಾರೆ.

ಈಚೆಗೆ ರಷ್ಯನರು ತುರ್ಕಿಯ ಪುರಾತನದುರ್ಗವಾದ ಬೆಜೆಟ್ ಎಂಬುದನ್ನು ಹಿಡಿದುಕೊಂಡಿದ್ದಾರೆ. ಮತ್ತೂ ಬಲವಾಗಿದ್ದ ತುರ್ಕಿಯಸೇನೆಯಮೇಲೆ ಯುದ್ಧಮಾಡಿ ಓಡಿಸಿ ಡಿಮಾಡೀಸ್ ಎಂಬ ಪಟ್ಟಣವನ್ನು ಹಿಡಿದುಕೊಂಡಿದ್ದಾರೆ. ಕೆಲ ಹಿಂದೂದೇಶ ಸೈನಿಕರೂ ೧ ನೌಕಾಸೈನ್ಯವೂಸಹ ಸೇರಿ ೧ ಗಂಟೆಯ ಹೊತ್ತು ಪರ್ಷಿಯನ್ ಸಮುದ್ರಶಾಖೆಯಲ್ಲಿ ತುರ್ಕಿಯವರಮೇಲೆ ಯುದ್ಧಮಾಡಿ ಷಟ್‌ಎಲ್‌ಅರಾಟ್ ಎಂಬ ಮುಖದ್ವಾರದಲ್ಲಿರುವ ಫಾವೋ ಎಂಬ ತುರ್ಕಿಯ ಪಟ್ಟಣವನ್ನು ಹಿಡಿದುಕೊಂಡರು.

ಕಪ್ಪುಸಮುದ್ರದಲ್ಲಿರುವ ರಷ್ಯನ್ ಯುದ್ಧನಾವೆಗಳು ತುರ್ಕಿಗೆ ಸೇರಿದ ಸಾಂಗುಲಕ್ ಎಂಬ ನೌಕಾಶ್ರಯದಮೇಲೆ ಫಿರಂಗಿಗಳನ್ನು ಹಾರಿಸಿದುದಲ್ಲದೆ ಆಹಾರ್ಯಸಾಮಗ್ರಿಗಳನ್ನೂ ಮದ್ದುಗುಂಡು ಮೊದಲಾದ ಸಾಮಗ್ರಿಗಳನ್ನೂ ಸಾಗಿಸಿಕೊಂಡುಹೋಗುತ್ತಿದ್ದ ಮೂರು ಹಡಗುಗಳನ್ನು ಮುಳುಗಿಸಿದುವು. ಅವುಗಳಲ್ಲಿ ಒಂದರೊಳಗೆ ಸೈನ್ಯಗಳನ್ನು ತುಂಬಿ ಸಾಗಿಸುತ್ತಿದ್ದರು.

ಈಗ ತುರ್ಕಿಯವರು ತಮ್ಮ ೯೦ ಸಾವಿರಸೈನ್ಯವನ್ನು ಜರ್ಮನ್‌ಸೇನಾಧಿಪತಿಗಳ ಕೈಕೆಳಗೆಕೊಟ್ಟು ಎಜೇರಮ್ ಎಲ್ಲೆಯಪ್ರಾಂತಕ್ಕೆ ಕಳುಹಿಸಿಕೊಟ್ಟಿರುವರೆಂದೂ ಅಲ್ಲಿ ತುರ್ಕಿಯವರಿಗೂ ರಷ್ಯನರಿಗೂ ದೊಡ್ಡ ಯುದ್ಧವು ನಡೆಯುವಸಂಭವವಿದೆಯೆಂದೂ ಗೊತ್ತಾಗುತ್ತದೆ.

ಜರ್ಮನಿಯವರು ಮದ್ದು ಗುಂಡು ಮೊದಲಾದ ಯುದ್ಧಸಾಮಗ್ರಿಗಳನ್ನು ೧೧೪ ವಾಗಿನ್ನುಗಳಲ್ಲಿ ತುಂಬಿ ತುರ್ಕಿಗೆ ಕಳುಹಿಸುತ್ತಿದ್ದರು. ಇದನ್ನು ಮಧ್ಯಮಾರ್ಗದಲ್ಲಿ ರೊಮೇನಿಯಾ ಪ್ರಭುತ್ವದವರು ತಡೆದು ನಿಲ್ಲಿಸಿಕೊಂಡುಬಿಟ್ಟಿರುವರು. ಇದರಿಂದ ರೊಮೇನಿಯಾಕ್ಕೆ ತುರ್ಕಿಯವಿಷಯದಲ್ಲಿ ಎಂತಹ ಭಾವವಿದೆಯೆಂಬುದು ವ್ಯಕ್ತವಾಗುತ್ತದೆ.

ತುರ್ಕಿಯವರ ಬ್ರಸ್ಲಾಎಂಬ ಕ್ರೂಯಿಝರು ರಷ್ಯಾದ ಕಾಕಸಸ್‌ಗೆ ಸೇರಿದ ಪೋಟಿಎಂಬ ರೇವೆಯಮೇಲೆ ಫಿರಂಗಿಗುಂಡುಗಳನ್ನು ಹಾರಿಸಿತು. ಆದರೆ ರಷ್ಯನ್ನರು ಫಿರಂಗಿಗಳನ್ನೂ ತುಪಾಕಿಗಳನ್ನೂ ಆ ಹಡಗಿನಮೇಲೆ ಹಾರಿಸಿ ಓಡಿಸಿಬಿಟ್ಟರು.

ಜೆಡ್ಡಾ ರೇವೆಗೆ ಸಮೀಪದಲ್ಲಿ ಮಾರ್ಗವನ್ನು ಸೂಚಿಸಲು ಸ್ಥಾಪಿಸಲ್ಪಟ್ಟಿದ್ದ ದೀಪಸ್ತಂಭಗಳನ್ನೆಲ್ಲಾ ತುರ್ಕಿಯವರು ಹಾಳ್ಮಾಡಿಬಿಟ್ಟಿದ್ದಾರೆ.

ರಷ್ಯಾ-ಆಸ್ಟ್ರಿಯಾ.

ಆಸ್ಟ್ರಿಯನ್ ಸೈನ್ಯವು ಸೀನ್ ನದಿಯಮೇಲೆ ರಷ್ಯಾದವರ ಮೇಲೆ ಬಿದ್ದು ಕಠಿನವಾಗಿ ಹೋರಾಡಿತು. ಆದರೂ ಸೋತು ಹಿಮ್ಮೆಟ್ಟಬೇಕಾಯಿತು. ಈಗ ರಷ್ಯಾದವರು ಆಸ್ಟ್ರಿಯಾಕ್ಕೆ ಸೇರಿದ ನೀಜ್ಕೊ-ಜೋಡ್ನಿಕ್ ಜಿಲ್ಲಾಗಳಲ್ಲಿ ಸ್ಥಿರವಾದ ವಸತಿಗಳನ್ನು ಮಾಡಿಕೊಂಡು ನಿಂತಿವೆ. ಆಸ್ಟ್ರಿಯಾದವರು ಗೆಲಿಷಿಯಾದಲ್ಲಿದ್ದ ತಮ್ಮ ಸೈನ್ಯಕ್ಕೆ ಅಪ್ಪಣೆಮಾಡಿ ಹಿಂದಕ್ಕೆ ಕರೆಯಿಸಿಕೊಳ್ಳುತ್ತಿದ್ದಾರೆ. ಕ್ರಾಕೋವಿನಿಂದ ಹಿಡಿದು ಕಾಲಿಸ್ಜುಪಟ್ಟಣದ ವರೆಗೆ ಇರುವ ಆಯಕಟ್ಟಿನ ಸ್ಥಲಗಳನ್ನೆಲ್ಲಾ ಆಕ್ರಮಿಸಿಕೊಂಡು ರಷ್ಯನರನ್ನು ಮುಂದಕ್ಕೆ ಬರದಂತೆ ಈ ಸೈನ್ಯಗಳಿಂದ ತಡೆಯಿಸಬೇಕೆಂಬುದೇ ಅವರ ಉದ್ದೇಶವಾಗಿದೆ. ಆಸ್ಟ್ರಿಯಾದ ಈ ಉದ್ದೇಶವು ಸಫಲವಾಗಿ ರಷ್ಯನರು ಮುಂದಕ್ಕೆ ಸಾಗಲಾರದೆ ಹೋಗುವಪಕ್ಷದಲ್ಲಿ ಜರ್ಮನಿಯವರು ತಮ್ಮ ಪೋಲಾಂಡಿನ ಸೈನ್ಯದಲ್ಲಿ ಕೆಲಭಾಗವನ್ನು ಮರಳಿ ಬೆಲ್ಜಿಯಮ್ಮಿಗೆ ಕಳುಹಿಸಿಕೊಡಬಹುದೆಂಬ ಯೋಜನೆಮಾಡಿರಬಹುದು. ಅಂತು ಜರ್ಮನಿಯ ಸೈನ್ಯಕ್ಕೆ ಅತ್ತಣಿಂದಿತ್ತ ಇತ್ತಣಿಂದತ್ತ ಪರದಾಡುವ ಸ್ಥಿತಿಯನ್ನು ಉಭಯ ರಣಾಂಗಣದಲ್ಲೂ ಮಿತ್ರಮಂಡಲಿಯ ಸೈನ್ಯಗಳು ಕಲ್ಪಿಸಿರುವುವೆಂಬುದು ಸಿದ್ಧವಾಗಿದೆ.

ಜಲಯುದ್ಧ.

ದಕ್ಷಿಣ ಅಮೇರಿಕಾಕ್ಕೆ ಸೇರಿದ ಚಿಲೀದೇಶದ ಸಮುದ್ರತೀರದಲ್ಲಿ ಇಂಗ್ಲೀಷರ ಮತ್ತೂ ಜರ್ಮನರ ಹಡಗುಗಳಿಗೆ ಜಲಯುದ್ಧವು ಕಳೆದ ತಾ|| ೧ ರಲ್ಲಿ ಹೊತ್ತು ಮುಳುಗಿದ ಮೇಲೆ ಒಂದುಗಂಟೆಕಾಲ ನಡೆದಿತು. ಇದರಲ್ಲಿ ಜರ್ಮನ್‌ರಕಡೆ ೫ ಹಡಗುಗಳಿದ್ದುವು. ಇಂಗ್ಲೀಷರಕಡೆ ಗುಡ್‌ಹೋಪ್-ಮಾನ್‌ಮತ್-ಗ್ಲಾಸ್‌ಗೊ ಎಂಬ ೩ ಯುದ್ಧದ ಹಡಗುಗಳಿದ್ದುವು. ಉಭಯಪಕ್ಷದಲ್ಲೂ ಪಿರಂಗಿಯೇಟುಗಳ ಬಡಿದಾಟವಾಯ್ತು. ಇಂಗ್ಲೀಷರ ಮಾನ್‌ಮತ್ತು-ಮತ್ತೂ ಗುಡ್‌ಹೋಪುಗಳಲ್ಲಿ ಬೆಂಕಿಯುಹೊತ್ತಿಕೊಂಡಿದ್ದುದು ಗೋಚರವಾಯಿತು. ಆದರೂ ಅವು ಯುದ್ಧಮಾಡುತ್ತಲೇ ಇದ್ದುವು. ಬಳಿಕ ಸ್ವಲ್ಪಹೊತ್ತಿಗೆ ಗುಡ್‌ಹೋಪಿನಲ್ಲಿ ಏನೋದೊಡ್ಡ ಶಬ್ದವಾಗಿ ಅದು ಮುಳುಗಿಹೋಯಿತು. ಮಾನ್‌ಮತ್ತಿಗೆ ಗುಂಡಿನೇಟುಬಿದ್ದು ರಂಧ್ರದಿಂದ ನೀರುನುಗ್ಗಿತು. ಅದು ತಪ್ಪಿಸಿಕೊಂಡು ಹೋಗಿ ಒಂದುದಡದಲ್ಲಿ ಸೇರಿತು. ಗ್ಲಾಸ್ಗೋವಿಗೆ ಯಾವ ದೊಡ್ಡಅಪಾಯವೂ ಆಗದೆ ಅದು ತಲೆತಪ್ಪಿಸಿಕೊಂಡುಹೋಯಿತು. ಅದರಲ್ಲಿದ್ದ ಕೆಲಕಲಾಸಿಗಳು ಸತ್ತರು. ಹೀಗೆ ಇಂಗ್ಲೀಷರ ಹಡಗುಗಳಿಗೆ ಅಪಜಯವಾಗುವುದಕ್ಕೆ ಕಾರಣವೇನಂದರೆ-ಜರ್ಮನ್‌ರ ಹಡಗುಗಳಲ್ಲಿ ದೊಡ್ಡಫಿರಂಗಿಗಳಿದ್ದುವು. ಅವು ೬ ಮೈಲಿಗಳ ದೂರದಲ್ಲಿ ನಿಂತು ಗುಂಡುಹೊಡೆಯುತ್ತಿದ್ದುವು. ಇಂಗ್ಲೀಷ್ ಹಡಗುಗಳಲ್ಲಿ ಅಷ್ಟುದೂರಕ್ಕೆ ಹೊಡೆಯುವ ಫಿರಂಗಿಗಳಿರಲಿಲ್ಲ. ಎಂದರೆ ಅವು ೪ ಮೈಲಿಗಳವರೆಗೆ ಮಾತ್ರ ಹೊಡೆಯಬಲ್ಲುವಾಗಿದ್ದುವು. ಈಚೆಗೆ ಜರ್ಮನರ ಜೇರ್‌ಎಂಬ ಯುದ್ಧನಾವೆಯು ಅಮೇರಿಕಾಕ್ಕೆ ಸೇರಿದ ಹೊನೋಲೂಲಿನ ಬಳಿಗೆ ಹೋಗಿರುವುದಂತೆ. ಅದರಸಹಾಯಕ್ಕೆ ಮತ್ತೊಂದು ಹಡಗೂ ಹೋಗಿರುವುದು.

ಹಿಂದೂದೇಶದ ಸೈನಿಕರು.

ಮಿತ್ರಮಂಡಲಿಯ ಸೈನ್ಯಗಳು ರಾಮ್‌ಸ್ಕಾಪೆಲೆ ಎಂಬ ಗ್ರಾಮವನ್ನು ಶತ್ರುಗಳ ಹೊಡೆತದಿಂದ ಬಿಟ್ಟುಹೋಗಬೇಕಾದ ಸಂದರ್ಭವು ಒದಗಲು, ಆಗ ಆ ಪಟ್ಟಣವನ್ನು ಉಳುಹಿಕೊಳ್ಳುವುದಕ್ಕಾಗಿ ೫೦೦೦ ಮಂದಿ ಗೂರ್ಖಾಸೈನಿಕರನ್ನು ಸೈನ್ಯಾಧಿಕಾರಿಗಳು ನಿಯಮಿಸಿ ಕಳುಹಿಸಿದರು. ಇವರು ತಮ್ಮ ಕುದುರೆಗಳಿಂದಿಳಿದು ಕೈಗಳಲ್ಲಿ ಭಲ್ಲೆಗಳನ್ನು ಹಿಡಿದು ಶತ್ರುಗಳ ಮೇಲೆ ಬಿದ್ದರು. ಆಗ ಇವರು ತೋರಿಸುತ್ತಿದ್ದ ಧೈರ್ಯಶೌರ್ಯಗಳನ್ನು ಮಿತ್ರಮಂಡಲಿಯ ಪದಾತಿ ಸೈನ್ಯದವರು ನೋಡಿ ಆನಂದಘೋಷಗಳನ್ನು ಮಾಡುತ್ತಿದ್ದರು. ಗೂರ್ಖಾಸೈನಿಕರು ಮುಂದಿಟ್ಟ ಕಾಲನ್ನು ಹಿಂದೆಗೆಯದೆ ಭರ್ಜಿಗಳ ಏಟಿನಿಂದ ಶತ್ರುಗಳನ್ನು ಸೀಳುತ್ತಾ ತಮ್ಮ ಕಡೆ ಬಿದ್ದವರನ್ನು ತಾವೇ ಮೆಟ್ಟಿಮೆಟ್ಟಿ ಮುಂದೆ ಸಾಗುತ್ತ ಆ ಪಟ್ಟಣದ ಬೀದಿಗಳ ತುಂಬಾ ಜರ್ಮನರ ಹೆಣಗಳೇ ತುಂಬಿಹೋಗುವಂತೆ ಮಾಡಿದರು. ಮತ್ತೂ ಶತ್ರುಗಳ ೧೨ ಹಡಗುಗಳ ಫಿರಂಗಿಗಳನ್ನೂ ೧೦೦೦ ಮಂದಿ ಸೈನಿಕರನ್ನೂ ಹಿಡಿದುಕೊಂಡರು.

ಮತ್ತೊಂದುಕಡೆ ಯುದ್ಧಕಾರ್ಯಕ್ಕೆ ಅತಿ ಮುಖ್ಯವಾಗಿದ್ದ ಹೋಲಿಬೀಕು, ಮೆಸ್ಸೀನ್ಸ್ ಎಂಬ ೨ ಸ್ಥಲಗಳನ್ನು ಶತ್ರುಗಳಿಂದ ಬಿಡಿಸಿಕೊಳ್ಳಲು ಹಿಂದೂಸೈನಿಕರೂ ಮತ್ತೂ ಮೊರಾಕೊ ಸೈನಿಕರೂ ಸಹ ಜತೆಯಾಗಿಹೋರಾಡಿ ವಶಪಡಿಸಿಕೊಂಡಿರುವರು

ಮತ್ತೊಂದುಕಡೆ ಭಾರತಸೈನಿಕರೂ ಅಫ್ರಿಕಾ ಸೈನಿಕರೂ ಸೇರಿ ಶತ್ರುಗಳಮೇಲೆ ಅಭಿಯೋಗಮಾಡಲು, ಅವರು ಇವರಮೇಲೆ ಗುಂಡಿನ ಮಳೆಯನ್ನು ಸುರಿಸಿದರು. ಆಗ ನಮ್ಮವರು ತಲೆತಪ್ಪಿಸಿಕೊಂಡು ಕಂದಕಗಳಲ್ಲಿ ಅಡಗಿಕೊಂಡರು. ಇವರೆಲ್ಲರೂ ಮೃತರಾಗಿರಬೇಕೆಂದು ಜರ್ಮನರು ಯೋಚಿಸಿ, ಮುಂದುಮುಂದಕ್ಕೆ ೧೦೦ ಅಡಿಗಳಷ್ಟು ದೂರ ಬಂದರು. ಅಷ್ಟರಲ್ಲಿ ಈ ಸೈನಿಕರು ಎದ್ದು ಶತ್ರುಗಳಮೇಲೆ ರಭಸದಿಂದ ತುಪಾಕಿಗಳ ಗುಂಡನ್ನು ಹಾರಿಸಿ ಎಷ್ಟೋ ಜನರನ್ನು ಕೊಲ್ಲಲು, ಅವರು ತಿರುಗಿಯೂ ನೋಡಲವಕಾಶವಿಲ್ಲದೆ ಓಡಿಹೋದರು.

ಫ್ಲಾಂಡರ್ಸ್ ಎಂಬ ಬಳಿಯಲ್ಲಿ ಒಂದು ಘೋರವಾದ ಯುದ್ಧವು ನಡೆದು ಮಿತ್ರಮಂಡಲಿಯವರು ಜಯಶೀಲರಾದರು. ಆಗ ಹಿಂದೂದೇಶದ ಸೈನಿಕರೂ ಸೇರಿದ್ದರು. ಇವರೊಡನೆ ಇದ್ದ ಒಬ್ಬ ಫ್ರೆಂಚ್ ಸೇನಾಧಿಕಾರಿಯು ಆಗ ತಾನು ಪ್ರತ್ಯಕ್ಷವಾಗಿ ಕಂಡ ಸಂಗತಿಯನ್ನು ಹೀಗೆಂದು ತಿಳಿಯಿಸಿರುತ್ತಾನೆ—,,ಹಿಂದೂ ಸೈನಿಕರು ವಿಶೇಷ ನಷ್ಟಕ್ಕೂ ವಿಶೇಷ ಯಶಸ್ಸಿಗೂ ಸಹಭಾಗಿಗಳಾದರು. ಸೈನಿಕರು ಬಂದಿಳಿಯುವುದೇ ತಡ, ಅವರನ್ನು ಪ್ರಳಯಾಗ್ನಿಯಂತೆ ಸುರಿಯುತ್ತಿದ್ದ ಶತ್ರುಗಳ ಗುಂಡಿನೇಟಿನ ಮುಂದಕ್ಕೆ ಕಳುಹಿಸಿದರು. ಇವರು ನಿರ್ಭಯವಾಗಿ ಇದಿರುಬಿದ್ದು ತಮಗುಂಟಾದ ನಷ್ಟವನ್ನೂ ಲೆಕ್ಕಿಸದೆ, ದಿಗಿಲುಬಿದ್ದು ಸ್ವಲ್ಪವೂ ಹಿಂದೆಗೆಯದೆ ಹೋರಾಡಿದರು. ಇವರು ವಿಪತ್ಸಮಯದಲ್ಲಿ ಹಿಂದೆಗೆದುಬಿಡುವರು ಎಂದು ಹೇಳಿಸಿಕೊಳ್ಳಲು ಸ್ವಲ್ಪವೂ ಅವಕಾಶಕೊಡದಂತೆ ಕಾದಾಡಿದರು. ಹಿಂದೂದೇಶದ ಸೈನಿಕರನ್ನು ಕರೆಯಿಸಿ ಅವರ ಯೋಗ್ಯತಾಂಶವನ್ನು ಪರೀಕ್ಷಿಸಬೇಕೆಂಬುದು ಮಿತ್ರಮಂಡಲಿಯವರ ಉದ್ದೇಶವಾಗಿದ್ದರೆ ಅವರ ಪರೀಕ್ಷೆಗೆ ಈ ಸಂದರ್ಭವೇ ಸ್ಪಷ್ಟವಾದ ಫಲಿತಾಂಶವೆಂದು ಹೇಳಬಹುದು.''

ಬೊಂಬಾಯಿಗೆ ಬಂದ ಸೇನೆ.

ಭರತಖಂಡದ ಬೊಂಬಾಯಿ ಕರಾಚಿ ಮೊದಲಾದ ಸ್ಥಳಗಳಲ್ಲಿದ್ದ ಸೈನ್ಯಗಳು ಯುದ್ಧಕ್ಕಾಗಿ ಹೋಗಿರುವುವಷ್ಟೆ, ಅವುಗಳ ಸ್ಥಾನಕ್ಕೆ ಇಲ್ಲಿನ ರಕ್ಷಣೆಗಾಗಿ ಆಂಗ್ಲಪ್ರಭುತ್ವದವರು ಕೆಲ ಫಿರಂಗಿಸೈನಿಕರನ್ನೂ ಕಾಲ್ಬಲವನ್ನೂ ಅಶ್ವಸೇನೆಯನ್ನೂ ಕಳುಹಿಸಿರುವರು. ಅವುಗಳೆಲ್ಲಾ ೬ ಹಡಗುಗಳಲ್ಲಿ ತುಂಬಿ ಕಳೆದ ತಾ|| ೯ ರಲ್ಲಿ ಬೊಂಬಾಯಿಪಟ್ಟಣದಲ್ಲಿಳಿದು ಗೊತ್ತಾದ ಸ್ಥಲಗಳಿಗೆ ಹೊಗೆಬಂಡಿಯಮೇಲೇರಿ ಪ್ರಯಾಣಮಾಡಿದುವು. ಈ ಹಡಗುಳ ಜತೆಯಲ್ಲಿ ೧ ಫ್ರೆಂಚರ ಯುದ್ಧದಹಡಗೂ ಬಂದಿದ್ದಿತು.

ಯುದ್ಧದಲ್ಲಿ ಏಟುತಿಂದಿರುವ ಹಿಂದೂದೇಶದ ಸೈನಿಕರು ಇಷ್ಟರಲ್ಲೇ ಬೊಂಬಾಯಿಗೆ ಬರುವುದರಲ್ಲಿದ್ದಾರೆ. ಅವರ ಉಪಚಾರಕ್ಕಾಗಿ ಆ ಪಟ್ಟಣದ ವೇಲ್ಸ್‌ಮ್ಯೂಜಿಯಂ ಕಟ್ಟಡವನ್ನು ವೈದ್ಯಶಾಲೆಯನ್ನಾಗಿ ಏರ್ಪಡಿಸಿದ್ದಾರೆ.

ಮೈಸೂರ್ ಸ್ಟಾರ್.

ಸನ್ ೧೯೧೪ ನೆಯ ನವಂಬರ್ ತಾ|| ೧೫ ನೆಯ ಭಾನುವಾರ.

ಎಮ್ಡೆನ್ನಿನ ವಿನಾಶ

ಯಾವಗಳಿಗೆಯಲ್ಲಿ ಈ ಹಡಗು ನಿರ್ಮಿತವಾಯಿತೋ! ಇದು ಭರತಖಂಡಕ್ಕೆ ಪ್ರತ್ಯಕ್ಷಯಮದಂಡವೇ ಆಗಿದ್ದಿತು. ಇದು ಕಳೆದೆರಡುತಿಂಗಳಲ್ಲಿ ಭರತಖಂಡದ ಪೂರ್ವಪಶ್ಚಿಮಸಮುದ್ರಗಳಲ್ಲಿ ಮಾಡಿದ ಹಾವಳಿಯಿಂದ ಇದರ ಹೆಸರು ಪ್ರಪಂಚದಲ್ಲೆಲ್ಲಾ ದುಮಿದುಮಿಸಿಹೋಯಿತು. ಸೂಯೆಜ್‌ಕಾಲ್ವೆಯಿಂದೀಚೆಗೆ ಸಮುದ್ರದ ಮೇಲೆಲ್ಲಾ ವ್ಯಾಪಾರದ ವ್ಯವಹಾರವು ಬಹಳ ಕ್ಷೀಣವಾಗಿಹೋಯಿತು. ಚಿನ್ನ ಬೆಳ್ಳಿಯಂಥ ಹೆಚ್ಚುಬೆಲೆಯ ವಸ್ತುಗಳು ಹಡಗಿನಲ್ಲಿ ಬರುವುದೇ ನಿಂತುಹೋಗಿದ್ದಿತು. ಬೀಮಾದ ,,ರೇಟು'' ಗಳು ೧೦೦ ಕ್ಕೆ ೫೦ ರಷ್ಟು ಹೆಚ್ಚಿಹೋಗಿದ್ದುವು. ಈ ಹಡಗಿಗೆ ಧೈರ್ಯದಿಂದ ಯುದ್ಧಮಾಡುವ ಸಾಮರ್ಥ್ಯವಿಲ್ಲದಿದ್ದರೂ, ಮೋಸ ಧೂರ್ತತನ ವೇಷಾಂತರದ ಕಾಪಟ್ಯ ಸುಲಿಗೆ ಮೊದಲಾದುವುಗಳು ಅದರ ಅಧಿಕಾರಿಗಳಲ್ಲಿ ಸಂಪೂರ್ಣವಾಗಿದ್ದುದರಿಂದ ಇದು ಕಳೆದೆರಡು ತಿಂಗಳಲ್ಲಿ ತಾನೇತಾನಾಗಿ ಮೆರೆದು, ಕಳೆದ ತಾ|| ೯ ರಲ್ಲಿ ತನ್ನ ಅವತಾರಸಮಾಪ್ತಿಯನ್ನು ಮಾಡಿಕೊಂಡಿತು. ಇಂಥ ಸ್ಥಿತಿಯು ಒಂದಲ್ಲದಿದ್ದರೆ ಒಂದುದಿವಸ ಉಂಟಾಗುವುದು ಸಿದ್ಧವೆಂದು ಸರ್ವರೂ ಭಾವಿಸಿದ್ದಂತೆಯೇ ಇದರ ಪರ್ಯವಸಾನವಾಯಿತು. ಇದರ ವಿನಾಶದ ಸುದ್ದಿಯನ್ನು ಕೇಳಿ ಭರತಖಂಡವಾದ್ಯಂತವೂ ಮುಖ್ಯವಾಗಿ ಹಡಗಿನ ವರ್ತಕರುಗಳೂ ಸಂತೋಷಪಡದೆ ಇರಲಾರರು. ಇದರ ವಿನಾಶದಿಂದ ಭರತಖಂಡದ ವ್ಯಾಪಾರಕ್ಕೆ ನಿರುಪಾಧಿಕತೆಯುಂಟಾಯಿತೆಂಬುದು ಸಂತೋಷಸ್ಥಾನವು.

ಇದು ಧ್ವಂಸಮಾಡಲ್ಪಟ್ಟ ವಿವರವು ಹೇಗೆಂದರೆ—ಕಳೆದ ತಿಂಗಳ ಕೊನೆಯಲ್ಲಿ ಪಿನಾಂಗಿನ ಹತ್ತಿರ ರಷ್ಯಾ ಫ್ರೆಂಚ್‌ದೇಶದ ಯುದ್ಧದ ಹಡಗುಗಳೆರಡನ್ನೂ ಮುಳುಗಿಸಿಬಿಟ್ಟಬಳಿಕ ಇದು ಎತ್ತಕಡೆಗೆ ಹೋಯಿತೆಂಬುದರ ಸುಳಿವೇ ಹತ್ತಿರಲಿಲ್ಲ. ಇದನ್ನು ಹಿಡಿದು ಧ್ವಂಸಮಾಡುವುದಕ್ಕಾಗಿ ಇಂಗ್ಲೆಂಡ್-ಫ್ರಾನ್ಸ್-ರಷ್ಯಾ-ಜಪಾನ್ ದೇಶಗಳ ವೇಗಗಾಮಿಗಳಾದ ಯುದ್ಧನಾವೆಗಳು ತಡಕುತ್ತಲೇ ಇದ್ದವು. ಆಸ್ಟ್ರಿಯಾಕ್ಕೂ ಕೊಲಂಬೋವಿಗೂ ಹಾಕಿರುವ ವಾರ್ತಾ ತಂತ್ರಿಗಳ ಮುಖ್ಯವಾದ ತಾಣವು ಸುಮಾತ್ರಾಕ್ಕೆ ಸೇರಿದ ಕಾಕ್ಸ್ ಅಥವಾ ಕೀಲಿಂಗ್ ಎಂಬ ದ್ವೀಪದಲ್ಲಿದೆ. ಇಲ್ಲಿಗೆ ಹೋಗಿ ಆ ತಾಣವನ್ನು ಧ್ವಂಸಮಾಡಿ ಆಸ್ಟ್ರೇಲಿಯಾಕ್ಕಿರುವ ತಂತಿಯ ಸಂಬಂಧವನ್ನು ತಪ್ಪಿಸಬಿಡಬೇಕೆಂಬುದು ಈ ಎಮ್ಡೆನ್ನಿನ ಉದ್ದೇಶವಾಗಿದ್ದಿತು. ಅದಕ್ಕಾಗಿ ಇದು ಆ ಬಳಿಗೆ ಹೋಗಿರುವಲ್ಲಿ ಇದರ ಅಸ್ತದ ಸಮಯವು ಅಲ್ಲಿ ಒದಗಿತು. ಇದರ ಧ್ವಂಸಕ್ಕಾಗಿ ಹೊರಟಿದ್ದ ಆಸ್ಟ್ರೇಲಿಯಾದ ,,ಸಿಡ್ನಿ''-,,ಮೆಲ್ಬೋರ್ನ್'' ಎಂಬ ಹಡಗುಗಳಲ್ಲಿ ಸಿಡ್ನಿ ಎಂಬ ಯುದ್ಧದ ಹಡಗಿನ ದೃಷ್ಟಿಗೆ ಇದು ಮೇಲೆಕಂಡ ದ್ವೀಪದಬಳಿಯಲ್ಲಿ ಬಿದ್ದಿತು. ಅದು ಕೂಡಲೇ ಇದರಮೇಲೆ ಯುದ್ಧಕ್ಕುಪಕ್ರಮಿಸಿತು. ಎರಡಕ್ಕೂ ಫಿರಂಗಿಗಳ ಬಡಿದಾಟವಾಯಿತು. ಸಿಡ್ನಿಯು ಎಮ್ಡೆನ್ನನ್ನು ಅತ್ತಿತ್ತ ತಪ್ಪಿಸಿಕೊಂಡು ಓಡಿಹೋಗಲು ಅವಕಾಶಕೊಡದೆ ದಡದಕಡೆಗೆ ಹಿಮ್ಮೆಟ್ಟಿಸುತ್ತ ಬಂದುದರಿಂದ ಎಮ್ಡೆನ್ನು ಮಳಲಿಗೆ ನಾಟಿಕೊಂಡಿತು. ಆಗ ಸಿಡ್ನಿಯಗುಂಡಿನೇಟು ಬಲವಾಗಿ ಬಿದ್ದುದರಿಂದ ಎಮ್ಡೆನ್ನು ದಗ್ಧವಾಗಿ ಒಡೆದು ಹಾಳಾಯಿತು. ಅದರೊಳಗಿದ್ದವರಲ್ಲಿ ೨೦೦ ಮಂದಿಗಳು ಸತ್ತರು. ೩೦೦ ಮಂದಿಗಳಿಗೆ ಏಟುತಗುಲಿರುವುದು. ಹಡಗಿನ ಕೇಪ್ಟನ್ನಿಗೂ ಜರ್ಮನ್‌ಚಕ್ರವರ್ತಿ ಬಂಧುವಾದ ಫ್ರಾಂಚ್ ಜೋಸಫ್ ಎಂಬಾತನಿಗೂ ಏಟೇನೂ ಬಿದ್ದಿಲ್ಲ. ಅವರಿಬ್ಬರನ್ನೂ ಸೆರೆಯಾಗಿ ಹಿಡಿದು ಯುದ್ಧಸಂಬಂಧವಾದ ಗೌರವವನ್ನೆಲ್ಲಾ ಅವರ ವಿಷಯದಲ್ಲಿ ತೋರಿಸಿರುವರು. ಉಳಿದ ಕೆಲ ಉದ್ಯೋಗಿಗಳನ್ನೂ ಸೈನಿಕರನ್ನೂ ಸಹ ಸೆರೆಹಿಡಿದಿರುವರು. ಸಿಡ್ನೆಯಲ್ಲಿದ್ದವರಲ್ಲಿ ಮೂವರು ಸತ್ತರು. ೧೫ ಮಂದಿಗೆ ಏಟುಬಿದ್ದಿದೆ.

ಕಂ|| ಪುಂಡಾಟದಫಲಮಂತಾ |
ನುಂಡುದುಗಡ ಎಮ್ಡೆನದರವೊಲೆ ಭೂಜನಮಂ ||
ಅಂಡಲೆವ ಜರ್ಮನೀನೃಪ |
ನುಂಡಪನೆಂದಾದೊಡೊಂದುದಿನಮಾಫಲಮಂ ||

ಗಿಲ್ಡ್‌ಹಾಲ್ ಸಭೆ.

ಲಂಡನ್‌ಪಟ್ಟಣದಲ್ಲಿರುವ ಪುರಾತನವೂ ಪ್ರಸಿದ್ಧವೂ ಆದ ಗಿಲ್ಡ್‌ಹಾಲ್ ಮಂದಿರದಲ್ಲಿ ಕಳೆದ ತಾ|| ೯ ರ ರಾತ್ರಿ ಸೈನಿಕ ಸಂಬಂಧವಾದ ಒಂದು ದೊಡ್ಡಔತಣವು ಜರುಗಿತು. ಫ್ರಾನ್ಸು-ರಷ್ಯಾ-ಜಪಾನ್-ಬೆಲ್ಜಿಯನ್-ಸರ್ವಿಯಾ-ಮಾಂಟಿನೀಗ್ರೋ ದೇಶಗಳಿಂದ ಬಂದಿದ್ದ ಅತಿಥಿಗಳು, ತಟಸ್ಥರಾಷ್ಟ್ರಗಳ ರಾಯಭಾರಿಗಳು ಮೊದಲಾದ ಬಹುಮಂದಿ ಪ್ರಮುಖರು ಸೇರಿದ್ದರು. ಸಕಲಶಾಖೆಯ ಮಂತ್ರಿಗಳೂ ನೆರೆದಿದ್ದರು. ಆ ದಿನದ ಹಗಲು ಅಧಿನಿವೇಶಗಳಿಂದ ಬಂದಿದ್ದ ಸೈನ್ಯಗಳ ಉತ್ಸವವು ಪಟ್ಟಣದಲ್ಲಿ ವಿಜೃಂಭಣೆಯಿಂದ ನಡೆದಿದ್ದಿತು. ರಾತ್ರಿಯ ಸಭೆಯಲ್ಲೂ ಮುಖ್ಯವಾಗಿ ಯುದ್ಧವಿಷಯಕ ಪ್ರಸ್ತಾಪವೇ ವಿಶೇಷವಾಗಿದ್ದಿತು. ಮೊದಲು ಯುದ್ಧಾಂಗಸೆಕ್ರೆಟರಿಯವರಾದ ಅರ್ಲ್ ಕಿಚನರ್‌ರವರು ಉಪನ್ಯಾಸ ಮಾಡುವಾಗ್ಗೆ-ಲಂಡನ್ ಸ್ಕಾಟ್ಲಾಂಡ್ ಹಿಂದೂಸ್ಥಾನಗಳ ಸೈನ್ಯಗಳು ಈಗಿನ ಯುದ್ಧದಲ್ಲಿ ತೋರಿಸುತ್ತಿರುವ ಉತ್ಕೃಷ್ಟವಾದ ಪರಾಕ್ರಮವನ್ನು ಶ್ಲಾಘಿಸಿ, ಮಿತ್ರಮಂಡಲಿಯ ಸಕಲಸೈನ್ಯದ ಶೌರ್ಯೋತ್ಸಾಹಗಳನ್ನೂ ವಿವರಿಸಿ, ಇಂಗ್ಲೀಷ್-ಫ್ರೆಂಚ್-ರಷ್ಯನ್ ದಳವಾಯಿಗಳ ಅದ್ಭುತಸಾಮರ್ಥ್ಯಗಳನ್ನು ಮನಃಪೂರ್ವಕವಾಗಿ ಗೌರವಿಸಿ, ಈಗ ಆಂಗ್ಲಸಾಮ್ರಾಜ್ಯವು ಆತ್ಮಸಂರಕ್ಷಣಾರ್ಥವಾಗಿ ಯುದ್ಧಮಾಡುತ್ತಿರುವುದೆಂದೂ, ಇದನ್ನು ತಿಳಿದೇ ಪ್ರತಿಯೊಬ್ಬ ಆಂಗ್ಲಸಾಮ್ರಾಜ್ಯ ಪ್ರಜೆಯೂ ಅಪರಿಮಿತೋತ್ಸಾಹವನ್ನು ಈ ಯುದ್ಧವಿಷಯದಲ್ಲಿ ತೋರಿಸುತ್ತಿರುವನೆಂದೂ, ಇಂಥ ಉತ್ಸಾಹವಿಲ್ಲದಿದ್ದರೆ ಎಷ್ಟು ಸೈನ್ಯದಿಂದಲೂ ಎಂಥ ಮಂತ್ರಿವರ್ಗದಿಂದಲೂ ಎಷ್ಟು ಧನಸಂಪತ್ತಿಯಿಂದಲೂ ಏನೂ ಪ್ರಯೋಜನವಿಲ್ಲವೆಂದೂ, ಈಗಲಾದರೊ ತಮಗೆ ಅಂಥ ಪ್ರಜೋತ್ಸಾಹಶಕ್ತಿ ಸೇನಾಶಕ್ತಿ ಧನಶಕ್ತಿ ಮೊದಲಾದ ಸಾಧನಸಂಪತ್ತಿಯೆಲ್ಲಾ ಅನುಕೂಲವಾಗಿರುವುವೆಂದೂ, ಇದೆಲ್ಲಾ ನಮ್ಮ ಪೂರ್ವಾರ್ಜಿತ ಫಲವೆಂದೂ, ಇವುಗಳನ್ನು ತಾವು ವಿವೇಕದಿಂದ ಪ್ರಯೋಜನಕರವಾಗಿ ವಿನಿಯೋಗಿಸಿಕೊಳ್ಳಬೇಕಾಗಿರುವುದೆಂದೂ ನುಡಿದು ಪ್ರಜೆಗಳ ಪ್ರೋತ್ಸಾಹವನ್ನು ಚೆನ್ನಾಗಿ ಮಾಡಿದರು. ಮತ್ತೂ ತಮ್ಮಕಡೆ ಈಗ ಯುದ್ಧಾಂಗಣಕ್ಕೆ ಹೋಗಿರುವ ಸೇನೆಯೇ ಅಲ್ಲದೆ ಗ್ರೇಟ್‌ಬ್ರಿಟನ್ನಿನಲ್ಲಿ ಇನ್ನೂ ೧೨|| ಲಕ್ಷ ಮಂದಿಗಳು ಯುದ್ಧಶಿಕ್ಷಣವನ್ನು ಪಡೆಯುತ್ತಿರುವರೆಂದೂ, ಕರೆಯುವುದೇ ತಡ ಅವರು ರಣಾಂಗಣಕ್ಕೆ ಹೋಗಲು ಮುಂಗಾಲಿನಲ್ಲೇ ನಿಂತಿರುವರೆಂದೂ, ಗ್ರೇಟ್‌ಬ್ರಿಟನ್ನಿನ ಸೈನ್ಯವು ಈಗಿರುವ ಉತ್ತಮಸ್ಥಿತಿಯಲ್ಲಿ ಹಿಂದೆ ಯಾವಾಗಲೂ ಇರಲಿಲ್ಲವೆಂದೂ ಹೇಳಿದರು. ಫ್ರಾನ್ಸಿನ ರಣಾಂಗಣದಲ್ಲಿರುವ ಸುಶಿಕ್ಷಿತವಾದ ಇಂಗ್ಲೀಷ್ ಫ್ರಾನ್ಸ್ ಸೈನ್ಯಗಳ ಜತೆಯಲ್ಲಿ ಸೇರಿ ತಮ್ಮ ಉತ್ತಮಸಾಂಗ್ರಾಮಿಕ ಶಕ್ತಿಯನ್ನು ಪ್ರಕಟಿಸುತ್ತಿರುವ ಹಿಂದೂಸೈನ್ಯವನ್ನೂ ಶ್ಲಾಘಿಸಿದರು. ಅದರಂತೆ ರಷ್ಯಾಜಪಾನ್ ಸೇನಾಸಾಹಸವನ್ನೂ ಕೊಂಡಾಡಿದರು.

ಮತ್ತೂ ಪ್ರಜಾಸ್ತೋಮವನ್ನು ವಿಚಿತ್ರಹಿಂಸೆಯಿಂದ ವಧಿಸುವುದು, ಪಟ್ಟಣಗಳನ್ನು ಸುಡುವುದು, ಅಧಿಕವಾಗಿ ರಕ್ತಪ್ರವಾಹಗಳನ್ನು ಹರಿಸುವುದು, ಈತೆರನಾದ ಕ್ರೂರಕಾರ್ಯಗಳಿಗೆ ಉತ್ತರವಾದಿಗಳು ಯಾರು ? ಎಂದು ಮಾಡಲ್ಪಡುವ ಐತಿಹಾಸಿಕಪ್ರಶ್ನೆಗಳಿಗೆ ಮಿತ್ರಮಂಡಲಿಯವರು ಲೇಶಮಾತ್ರವೂ ಉತ್ತರವಾದಿಗಳಾಗುವಂತಿರುವುದಿಲ್ಲವೆಂದೂ, ಪಾಂಡಿತ್ಯ-ಪ್ರಕೃತಿಶಾಸ್ತ್ರಪರಿಶೋಧನ-ಮತಾಚಾರ ಸೂತ್ರನಿರ್ಣಯ-ಮೊದಲಾದವುಗಳಲ್ಲಿ ಉನ್ನತಸ್ಥಾನವನ್ನು ಪಡೆದುಕೊಂಡವರೆಂದು ಹೇಳಿಕೊಳ್ಳುತ್ತಿರುವ ಶತ್ರುಗಳ ರಾಕ್ಷಸಕೃತ್ಯವೇ ಅದಕ್ಕೆ ಉತ್ತರವಾದಿಯಾಗಿರುವುದೆಂದೂ ಕೂಡ ಅಡಿತೋರಿಸಿದರು.

ಬಳಿಕ ಆಸ್ಕ್ವಿತ್‌ಮಂತ್ರಿವರ್ಯರು ಸಾರ್ವಭೌಮ ದಂಪತಿಗಳ ಪರವಾಗಿಯೂ ಮಂತ್ರಿವರ್ಗದ ಪರವಾಗಿಯೂ ಉಪನ್ಯಾಸಮಾಡಿದರು. ಅದರಲ್ಲಿ—ಸಾಮ್ರಾಜ್ಯಪ್ರಜೆಗಳಲ್ಲಿ ಎಲ್ಲ ಪಕ್ಷದವರೂ ಎಲ್ಲ ತರಗತಿಯವರೂ ಅವರವರ ಭೇದಗಳೊಂದನ್ನೂ ಪರಿಗಣಿಸದೆ ಸಂಪೂರ್ಣ ವಿಶ್ವಾಸದಿಂದ ಸ್ವಾರ್ಥಪರಿತ್ಯಾಗಪೂರ್ವಕವಾದ ಸಾಹಾಯ್ಯವನ್ನು ಪ್ರಭುತ್ವದವರಿಗೆ ತೋರಿಸುತ್ತಿರುವ ಅಭೂತಪೂರ್ವವಾದ ಈ ವಿಶೇಷ ಸಮಯದಲ್ಲಿ ನಾವು ಇಲ್ಲಿ ಕೂಡಿರುತ್ತೇವೆಂದೂ, ಇಂಥಾಸಮಯವು ಇದುವರೆಗೂ ಯಾವ ಪ್ರಭುತ್ವದಲ್ಲೂ ಯಾವಾಗಲೂ ಸಂಭವಿಸಿರಲಿಲ್ಲವೆಂದು ನಮಗೆ ಚರಿತ್ರೆಗಳಿಂದ ಗೊತ್ತಾಗುವುದೆಂದೂ ನುಡಿದು, ಪ್ರಕೃತದ ಯುದ್ಧಾರಂಭದ ಮೂಲವನ್ನು ವಿವರಿಸಿ, ತುರ್ಕಿಯ ಯುವಜನಸಂಘದವರು ಹಿಂದಿನ ಅಬ್ದುಲ್‌ಹಾಮಿದ್‌ರನ್ನು ಪದಭ್ರಷ್ಟರನ್ನು ಮಾಡಿದಾಗ-ಇನ್ನುಮುಂದೆ ತುರ್ಕಿಪ್ರಭುತ್ವವು ಸಾಂಕುಶವಾದ ಸ್ವತಂತ್ರ ಪರಿಪಾಲನಾಕ್ರಮವನ್ನು ರೂಢಿಸಿ ದೇಶವನ್ನು ಉತ್ತಮಸ್ಥಿತಿಗೆ ತಂದುಕೊಳ್ಳುವರೆಂದು ನಾವುಗಳೆಲ್ಲಾ ನಿರೀಕ್ಷಿಸಿದ್ದುದಕ್ಕೆ ಪ್ರತಿಯಾಗಿ, ಈಗ ಅದರ ಪುರಾತನ ಗಾಂಭೀರ್ಯವೂ ಚಟುವಟಿಕೆಯೂ ನಾಶವಾಗಿ, ಅದರ ವರ್ತನವು ಹೀನಸ್ಥಿತಿಗೆ ಬಂದು, ಪೂರ್ವದಲ್ಲಿದ್ದ ದೋಷಗಳು ಕೂಡ ಹಿಂದಿಗಿಂತ ಈಗ ಮತ್ತಷ್ಟು ಅಲ್ಲಿ ಹೆಚ್ಚಿಕೊಂಡಿರುವುವೆಂಬುದನ್ನು ಈಗ ನಾವು ತಿಳಿದೆವು. ನೀವು ತಟಸ್ಥರಾಗಿದ್ದರೆ ನಿಮ್ಮ ರಾಜ್ಯದ ಏರ್ಪಾಟುಗಳಿಗೆ ಯಾವ ನ್ಯೂನತೆಯೂ ಬರದಂತೆ ನೋಡಿಕೊಳ್ಳುವೆವೆಂದು ನಾವೂ ನಮ್ಮ ಮಿತ್ರರಾಷ್ಟ್ರದವರೂ ಸ್ಪಷ್ಟವಾಗಿ ಬರವಸೆಕೊಟ್ಟರೂ, ಅವರು ಜರ್ಮನರ ಬೆದರಿಕೆಗೂ ಅವರ ಯುದ್ಧನಾವೆಗಳ ಮತ್ತೂ ಸೈನ್ಯದ ತೋರಿಕೆಗೂ ಭ್ರಮೆಗೊಂಡು ತಮ್ಮ ಪ್ರಯೋಜನಕ್ಕೆ ತಾವೇ ಕಲ್ಲುಹಾಕಿಕೊಂಡರು. ಈಗ ಯುದ್ಧಕ್ಕೆ ಇಳಿದವರು ತುರ್ಕಿಯ ಪ್ರಜೆಗಳಲ್ಲ ; ತುರ್ಕಿಯ ಪ್ರಭುತ್ವದವರೇ ಆಗಿದ್ದಾರೆ. ಆ ಪ್ರಭುತ್ವವು ಶಸ್ತ್ರಸಹಿತವಾಗಿ ಹೋಗುವುದೆಂದು ಅದರ ಭವಿಷ್ಯತ್ತನ್ನು ನಾನು ಹೇಳುವಲ್ಲಿ ಹಿಂದೆಗೆಯುವುದಿಲ್ಲ. ಯೂರೋಪಿನಲ್ಲಿ ಮಾತ್ರವೇಅಲ್ಲ; ಏಷ್ಯಾಖಂಡದಲ್ಲೂ ಕೂಡ ಇರುವ ತುರ್ಕಿಗೆ ಸೇರಿದ ದೇಶಗಳನ್ನೆಲ್ಲಾ ಹೋಗಲಾಡಿಸಿಕೊಳ್ಳುವುದಕ್ಕೆ ಆ ತುರ್ಕಿಯೇ ಕಾರಣವಲ್ಲದೆ ನಾವಲ್ಲ. ಕೆಲ ಕೆಲ ಉತ್ತಮಪ್ರದೇಶಗಳು ತುರ್ಕಿಯಿಂದ ಆಕ್ರಮಿಸಲ್ಪಟ್ಟು ಇದುವರೆಗೆ ದುಸ್ಥಿತಿಯಲ್ಲಿರುವುವು. ತುರ್ಕಿಯು ವಿನಾಶಗೊಂಡರೆ ಆ ಪ್ರದೇಶಗಳೆಲ್ಲವೂ ಉತ್ತಮಸ್ಥಿತಿಗೆ ಬರುವುವೆಂದು ನಾನು ನಂಬುತ್ತೇನೆ. ಸುಲ್ತಾನರ ಪರಿಪಾಲನೆಗೆ ಒಳಪಟ್ಟ ಮಹಮ್ಮದೀಯ ಪ್ರಜೆಗಳ ಮೇಲೆ ನಮಗೆ ಯಾವ ವಿರೋಧಭಾವವೂ ಇಲ್ಲ. ನಮ್ಮ ಪ್ರಭುಗಳಿಂದ ಪರಿಪಾಲಿಸಲ್ಪಡುತ್ತಿರುವ ದೇಶಗಳಲ್ಲಿ ರಾಜಭಕ್ತಿ ಭರಿತರಾದ ಮಹಮ್ಮದೀಯರು ಕೋಟಿಗಟ್ಟಲೆಯಾಗಿದ್ದಾರೆ. ಅವರ ಮತವನ್ನಾಗಲೀ ಪುಣ್ಯಕ್ಷೇತ್ರಗಳನ್ನಾಗಲೀ ನಾಶಗೊಳಿಸಬೇಕೆಂಬ ಯೋಚನೆಯು ನಮಗೆ ಕನಸುಮನಸ್ಸಿನಲ್ಲಿಯೂ ಇಲ್ಲ. ಅವುಗಳನ್ನು ನಾಶಮಾಡಬೇಕೆಂದು ಇತರರಾರಾದರೂ ಪ್ರಯತ್ನಿಸಿದರೆ ನಾವು ಅದನ್ನು ತಡೆದು ಅವುಗಳನ್ನು ರಕ್ಷಿಸುವುದಕ್ಕೆ ಕಂಕಣಬದ್ಧರಾಗಿದ್ದೇವೆ. ಆದುದರಿಂದ ತುರ್ಕಿಯ ವಿನಾಶಕ್ಕೆ ಆ ಪ್ರಭುತ್ವದವರೇ ಕಾರಣರು. ಅವರ ಸಮಾಧಿಯನ್ನು ಅವರ ಕೈಯಿಂದಲೇ ತೋಡಿಕೊಂಡರು, ಎಂದು ತುರ್ಕಿಯ ಪೂರ್ವೋತ್ತರಫಲವನ್ನು ವಿವರಿಸಿ, ಬಳಿಕ ಇಂಗ್ಲೆಂಡಿನ ಆರ್ಥಿಕ ಸಂಪತ್ತಿಯನ್ನು ಕುರಿತು ಕೆಲಮಾತುಗಳನ್ನಾಡುವಾಗ್ಗೆ—

ಜುಲೈ ತಾ|| ೨೨ ರಲ್ಲಿ ೪೨೦ ಲಕ್ಷ ಪೌನ್ ಉಳಿದಿದ್ದುದು. ಆಗಸ್ಟ್ ತಾ|| ೬ ರಲ್ಲಿ ೨೬ ಲಕ್ಷಕ್ಕೆ ತಗ್ಗಿ ಇಳಿದುಹೋಗಿದ್ದಿತು. ಈಗ ಅದು ೬೯೫ ಲಕ್ಷ ಪೌನ್‌ಗಳವರೆಗೆ ಅದ್ಭುತವಾಗಿ ಏರಿ ಸಮೃದ್ಧವಾಗಿದೆ. ಕಳೆದವರ್ಷ ಈ ಕಾಲದಲ್ಲಿ ಇದ್ದ ಸ್ಥಿತಿಯಂತೆಯೇ ಈಗಿನ ನಮ್ಮ ಆರ್ಥಿಕಸ್ಥಿತಿಯೂ ಸಮರ್ಪಕವಾಗಿದೆ. ವಿದೇಶದ ಹುಂಡಿಗಳೆಲ್ಲಾ ಕೊರತೆಯಿಲ್ಲದೆ ಮಾರ್ಪುಗೊಳ್ಳುತ್ತಿವೆ. ಆಹಾರ್ಯಪದಾರ್ಥಗಳೂ ಯಥಾಸ್ಥಿತವಾಗಿ ಒದಗುತ್ತಿವೆ. ಕೆಲ ವ್ಯಾಪಾರಗಳು ಮಾತ್ರ ಕಟ್ಟಾಗಿವೆ. ಉದ್ಯೋಗವಿಲ್ಲದೆ ನಿಂತಿರುವ ಪ್ರಜೆಗಳ ಸಂಖ್ಯೆಯೇನೂ ಹೆಚ್ಚಾಗಿಲ್ಲ. ಈ ಸಮಯದಲ್ಲಿ ಧನಿಕರಾದ ಈ ನಾಗರಿಕರು ಸಾಮಾನ್ಯಪ್ರಜೆಗಳಿಗೆ ವೃತ್ತ್ಯಂತರಗಳನ್ನು ಕಲ್ಪಿಸಿಕೊಡುತ್ತಿರುವುದಕ್ಕಾಗಿ ಅವರು ವಂದನೀಯರಾಗಿರುತ್ತಾರೆಂದು ಹೇಳಿ ಬಳಿಕ ಯುದ್ಧಸಂಬಂಧದಲ್ಲಿ ಮಾತನಾಡುವಾಗ್ಗೆ-ಈಗಿನ ಯುದ್ಧವು ಬಹುಕಾಲ ನಡೆಯತಕ್ಕುದಾಗಿದೆ. ಈಗಿನ ಸ್ಥಿತಿಗತಿಗಳನ್ನೇ ನೋಡಿ ಪ್ರಜೆಗಳು ಕ್ಷೋಭೆಗೊಳ್ಳಬಾರದು. ಇದುವರೆಗೆ ೧೦೦ ದಿನಗಳಲ್ಲಿ ಜರುಗಿರುವ ಯುದ್ಧದಿಂದ ನಮಗೆ ಅಪನಂಬುಗೆಯನ್ನೂ ನಿರುತ್ಸಾಹವನ್ನೂ ಹುಟ್ಟಿಸುವ ಯಾವ ವಿಷಯವೂ ಸಂಭವಿಸಿಲ್ಲ. ನಮ್ಮ ಶತ್ರುಗಳು ಪ್ಯಾರಿಸ್ಸು ವಾರ್ಸಾ-ಕಲೆ-ಪಟ್ಟಣಗಳನ್ನು ಹಿಡಿದುಕೊಳ್ಳಬೇಕೆಂದು ಪ್ರಯತ್ನಿಸಿ, ನಮ್ಮ ಸಾಹಾಯ್ಯಸೈನ್ಯದ ಸಾಮರ್ಥ್ಯದಿಂದ ಪರಾಙ್ಮುಖವಾಗಿ ಹೋದರು. ಇಷ್ಟೇ ಸಾಲದು. ನಾವು ಇಷ್ಟು ಮಾಡುವುದಕ್ಕಾಗಿಯೇ ಯುದ್ಧಕ್ಕೆ ನಿಂತಿಲ್ಲ. ಇಷ್ಟಕ್ಕೇ ಯುದ್ಧವನ್ನು ಮುಗಿಸುವವರೂ ಅಲ್ಲ. ಬೆಲ್ಜಿಯಂ ದೇಶದಲ್ಲಿ ಹಾಳ್ಮಾಡಿಕೊಂಡಿರುವ ಪ್ರದೇಶವನ್ನೆಲ್ಲಾ ಮರಳಿ ಸ್ವಾಧೀನಪಡಿಸಿಕೊಳ್ಳುವವರೆಗೂ ನಾವು ಆಯುಧವನ್ನು ಕೆಳಕ್ಕಿಡುವವರಲ್ಲ. (ಈ ಮಾತನ್ನು ಕೇಳಿ ಸಭಿಕರೆಲ್ಲಾ ಸಂತೋಷದ ಚಪ್ಪಾಳೆಯನ್ನು ತಟ್ಟಿದರು.) ಫ್ರಾನ್ಸುದೇಶಕ್ಕೆ ಸಂಪೂರ್ಣವಾದ ಸುರಕ್ಷಿತತೆಯು ದೊರೆಯುವವರೆಗೂ, ಯೂರೋಪಿನಲ್ಲಿರುವ ಚಿಕ್ಕಚಿಕ್ಕ ರಾಷ್ಟ್ರಗಳೆಲ್ಲಾ ನಿರುಪದ್ರವಸ್ಥಿತಿಯನ್ನು ಹೊಂದುವವರೆಗೂ ಜರ್ಮನೀದೇಶದ ಯುದ್ಧವಿಷಯಕವಾದ ಉನ್ಮತ್ತತೆಯು ಧ್ವಂಸಗೊಳಿಸಲ್ಪಡುವವರೆಗೂ ಈ ಯುದ್ಧವು ನಿಲ್ಲುವುದಿಲ್ಲ. (ಮತ್ತೆ ಸಭಿಕರ ಸಂತೋಷ ಧ್ವನಿಯಾಯಿತು.)

ಬಳಿಕ ಬಾಲ್ಫರ್, ವಿನ್‌ಸ್ಟನ್ ಚರ್ಚಿಲ್‌ರವರ ಉಪನ್ಯಾಸಗಳು ನಡೆದು, ಚಕ್ರವರ್ತಿಯವರ ಮತ್ತೂ ಮಂತ್ರಿವರ್ಗದವರ ಫ್ರಾನ್ಸ್ ಮೊದಲಾದ ದೇಶಗಳ ರಾಯಭಾರಿಗಳ ಹೆಸರಿನಿಂದ ಜಯಘೋಷವಾಗಿ ಸಭೆ ಮುಗಿದಿತು.

ಪತ್ರವ್ಯವಹಾರ.

ಪ್ರಸಿದ್ಧಪತ್ರಿಕೆ.

ಬೆಂಗಳೂರು ಡಿ॥ ದೇವನಹಳ್ಳಿ ತಾಲ್ಲೂಕು ಹುಣಸು ಮಾರನಹಳ್ಳಿ ಶ್ರೀ ಚಂದ್ರಮೌಳೀಶ್ವರನಜಾತ್ರೆಯು ಬರುವ ಡಿಶಂಬರ್ ೧ನೇ ತಾರೀಖು ಲಾಗಾಯ್ತು ೯ನೇ ತಾರೀಖಿನ ವರೆಗೆ ನಡೆಯುತ್ತೆ. ಮಾಮೂಲು ಪ್ರಕಾರ ಎತ್ತಿನ ಪರಿಷೆಯು ಸೇರುತ್ತೆ. ಬರತಕ್ಕ ವರ್ತಕರು ಮತ್ತು ಆಗಂತುಕರಿಗೆ ಎಲ್ಲಾ ಸೌಕರ್ಯಗಳೂ ಉಂಟುಮಾಡಲ್ಪಡುತ್ತೆ. ಬೆಂಗಳೂರಿಗೆ ೧೦ ಮೈಲಿಯೂ ಎಲಹಂಕದ ರೈಲ್ವೆ ಸ್ಟೇಷನ್ಗೆ ೩ ಮೈಲಿಯೂ ಚಿಕ್ಕಬಳ್ಳಾಪುರದ ಹೈರೋಡ್ ಪಕ್ಕದಲ್ಲಿಯೂ ಇರುತ್ತೆ.

ಗುರುನಂಜಪಟೇಲರು ಏಜಂಟ್,
ಹುಣಸುಮಾರನಹಳ್ಳಿ ಮಠ.

ದಾವಣಗೆರೆ ತಾಲ್ಲೂಕು ನಗರಹಳ್ಳಿ:—ಐನಹಳ್ಳಿ ಮಠದ ಗುರುಸಿದ್ದಪ್ಪಯ್ಯ, ಚಿತ್ರದುರ್ಗ ತಾಲ್ಲೂಕು ಯಳಗೋಡು ಮಠದ ಸಂಗಪ್ಪಯ್ಯ ಯಿವರು ಶ್ರಾವಣ ಬ॥ ೧೩ ದಿವಸ ಜಗಲೂರ್ ತಾಲ್ಲೂಕ್ ಕಲ್ಲೇದೇವರಪುರದಲ್ಲಿ ಶಿವದೀಕ್ಷಾ ಮಹೋತ್ಸವವು ವೀರಶೈವಧರ್ಮೋಪದೇಶಸಭೆಯೂ ನಡೆಯಲು ಕೊಟ್ಟ ಜಾಹಿರಾತ್ ಪ್ರಕಾರ ಅನೇಕ ಭಕ್ತಮಾಹೇಶ್ವರರು ಸೇರಿದ್ದರು. ಶ್ರೀ ಜಗದ್ಗುರುಗಳ ಅಪ್ಪಣೆಯಂತೆ ದಾವಣಗೆರೆ ಮೃತ್ಯುಂಜಯ ಸ್ವಾಮಿಗಳು ತಾ॥ ೧೮-೮-೧೯೧೪ ರಲ್ಲಿ ದಯಮಾಡಿಸಿದರು. ಆಂದೋಳನಾದಿ ಬಿರುದುಗಳ ಸಮೇತ ಉತ್ಸವದೊಡನೆ ಬಿಜಯಮಾಡಿಸಿ ಸಿಂಹಾಸನಾರೋಹಣ ಮಾಡೋಣವಾಯಿತು. ಶ್ರೀಗಳ ಆಗಮನವನ್ನು ಕುರಿತು ಸರ್ವರ ಮನೋರಂಜನವಾಗುವಂತೆ ಶ್ರೀ॥ ಗುರುಸಿದ್ದಪ್ಪಯ್ಯನವರು ಭಾಷಣಮಾಡಿದರು. ತಾ॥ ೧೯-೮-೧೯೧೪ ನೇ ಉದಯಕ್ಕೆ ದಾವಣಗೆರೆ ಪುರೋಹಿತ ಚನ್ನಬಸವಾರಾಧ್ಯರಿಂದ ಗಣಪತಿಪೂಜೆ ಪುಣ್ಯಾಹನಾಂದಿ ಮಂಟಪದೇವತಾಪ್ರತಿಷ್ಠೆ ಲಿಂಗಸಂಸ್ಕಾರ ನಡಿಸೋಣವಾಯಿತು. ಪಂಚರಾದ ನಾಯಕನಹಟ್ಟಿ ಗೌಡತಿಪ್ಪಯ್ಯ ಬಿಕುಮಂಡೀಮಠದ ರುದ್ರಪ್ಪಯ್ಯ ದೊಡ್ಡಲಿಂಗಪ್ಪಯಿವರಿಂದ ಸರ್ಟಿಫಿಕೇಟ್ ಹೊಂದಿ ಬಂದ ವಟುಗಳಿಗೆ ಚಿತ್ರದುರ್ಗದ ಉಜ್ಜಯಿನಿಮಠದ ಪಟ್ಟದಸ್ವಾಮಿಗಳು ಹೋದಿಗ್ಗೆರೆ ಪಟ್ಟದ ಸ್ವಾಮಿಗಳು ವಿಷಾಮುದ್ರದ ಪಟ್ಟಸ್ವಾಮಿಗಳು ಮುದ್ದಬಸಪ್ಪನ ಐನಳ್ಳಿ ಚರಮೂರ್ತಿಗಳು ಕಲ್ಲೇದೇವರಪುರದ ಚರಮೂರ್ತಿಗಳು ಆಚಾರ್ಯರು ಇವರಿಂದ ಪಂಚಮಂಟಪದಲ್ಲಿ ವಿಧಿವತ್ತಾಗಿ ದೀಕ್ಷಾಸಂಸ್ಕಾರವು ನಡೆದುವು. ತಾ॥ ೨೦-೮-೧೪ ರಲ್ಲಿ ಶ್ರೀ ಜಗದ್ಗುರುಗಳಿಂದ ದಯಪಾಲಿಸಿದ ನಿರೂಪವನ್ನು ಉತ್ಸವದೊಡನೆ ಸಭಾಮಂಟಪಕ್ಕೆ ತಂದು ಷೋಡಶೋಪಚಾರಪೂಜಾನಂತರ ಮ॥ಸಂಸ್ಥಾನ್ ಸುಬೇದಾರ್ ಗುರುಸಿದ್ದಪ್ಪಯ್ಯನವರು ಸುಲಾವಣೆ ಮಾಡಿ ಮ॥ ಸಂಸ್ಥಾನದಿಂದ ಮಠಕ್ಕೆ ಉಂಟಾಗಿರುವ ಉನ್ನತಸ್ಥಿತಿಯನ್ನು ಕುರಿತು ಭಾಷಣ ಮಾಡಿದರು. ಶ್ರೀ ಮೃತ್ಯುಂಜಯ ಸ್ವಾಮಿಗಳು ಅಧ್ಯಕ್ಷರಾಗಿಯೂ ಉಜ್ಜಯಿನಿಮಠದ ಪಟ್ಟದಸ್ವಾಮಿಗಳು ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟನಂತರ ಸ್ವಾಗತಕಮಿಟಿಯಪರವಾಗಿ ಶ್ರೀ ಗುರುಸಿದ್ದಪ್ಪಯ್ಯನವರು ಭಾಷಣ ಮಾಡಿದರು. ಅಧ್ಯಕ್ಷರು ಸರ್ವರ ಮನಸ್ಸಾನಂದಗೊಳ್ಳುವಂತೆ ಭಾಷಣಮಾಡಿದನಂತರ, ವೀರಶೈವ ಸನಾತನತ್ವ ಈ ವಿಷಯದಲ್ಲಿ ಶ್ರೀರುದ್ರಮುನಿಯಪ್ಪನವರೂ, ಧರ್ಮವಿರುದ್ಧ ಆಚರಣೆ ಮತೋಪಕಾರಿಗಳ ಆಭಾರವನ್ನಣೆ ಈ ವಿಷಯದಲ್ಲಿ ಮ॥ ಸಾವುಕಾರ್ ಮಹಾಲಿಂಗಪ್ಪನವರೂ, ವಿದ್ಯೆಯಿಂದ ಆಗತಕ್ಕ ಪ್ರಯೋಜನ ಈ ವಿಷಯದಲ್ಲಿ ಮ॥ ಸ್ಕೂಲ್ಮಾಸ್ಟರ್ ಮಲ್ಲಪ್ಪನವರು, ಶ್ರೀ ತುರನ್ನೂರುಮಠದ ಬಸಲಿಂಗಪ್ಪಯ್ಯ ಮ॥ ಬಿದರಿಕೇರಿ ಚಿಂದೇನಹಳ್ಳಿ ಚನ್ನಬಸಪ್ಪ, ಸ್ತ್ರೀ ವಿದ್ಯಾವಿಷಯದಲ್ಲಿ ಸುಲ್ತಾನಿಪುರದಮಠದ ಶ್ರೀ ಉಜ್ಜನಪ್ಪಯ್ಯ ಅಷ್ಟಾವರಣ ಮಹಿಮಾವಿಷಯದಲ್ಲಿ ಶ್ರೀ ದೋಣಿಹಳ್ಳಿ ರುದ್ರಾರಾಧ್ಯರು ಧರ್ಮೋಕ್ತ ವಿಧಿಗಳನ್ನು ಆಚರಣೆಗೆ ತರುವ ವಿಷಯದಲ್ಲಿ ಮ॥ ಹೊಳೆಹೊನ್ನೂರ ಸಂಗಪ್ಪನವರು ಬಿದರಕೆರೆ ಸ್ಕೂಲ್ಮಾಸ್ಟರ್ ಮ॥ ಚನ್ನಬಸವಯ್ಯನವರು ಮ॥ ಕರಡಿಜೋತಿಲಿಂಗಪ್ಪ ಪತ್ರಿ ಬಸಪ್ಪ ಇವರುಗಳು ತಾವು ಕೈಕೊಂಡ ವಿಷಯದಲ್ಲಿ ಜನರ ಮನೋಲ್ಲಾಸವಾಗುವಂತೆ ಭಾಷಣಮಾಡಿದರು. ಶ್ರೀ ಗುರುಸಿದ್ದಪ್ಪಯ್ಯನವರು ಯಳಗೋಡು ಮಠದ ಸಂಗಪ್ಪಯ್ಯನವರು ಉದಾರಮನಸ್ಸಿನಿಂದ ಮಾಡಿದ ಸತ್ಕಾರ್ಯದಲ್ಲಿ ನಿರ್ವಹಕರಾಗಿ ಮಾಡಿದ ಸತ್ಕಾರ್ಯಕ ಸಂಘಾಧ್ಯಕ್ಷರಾದ ಮ॥ ಸಾವುಕಾರ್ ಸಣ್ಣತಮ್ಮಪ್ಪನವರು, ಮೆಂಬರರು—ಮಠದ ಗುರುಸಿದ್ದಪ್ಪನವರು ಕೆಂಚಪ್ಪನವರು ಮುನಿಯಪ್ಪನವರು ತಾ॥ ದೊಡ್ಡಲಿಂಗಪ್ಪ ನಾಡಿಗ ವೀರಭದ್ರಪ್ಪ ಮುಷ್ಟೂರು ಕಲ್ಲಪ್ಪ ಸಣ್ಣಕಲ್ಲಪ್ಪ ಪಟ್ಟಣಶೆಟ್ಟಿ ನಂಜಪ್ಪ ವಾಲಿಮರಿಗಪ್ಪ ಕರಡಿಬಸವಲಿಂಗಪ್ಪ ಯಿವರು, ಗ್ರಾಮಸ್ಥರೆಲ್ಲರೂ ಭಕ್ತಿಪೂರ್ವಕವಾಗಿ ಮಾಡಿದ ಮತಸೇವಾವಿಷಯದಲ್ಲಿ ಶ್ರೀ ಕಲ್ಲೇದೇವರಪುರದ ರುದ್ರಾರಾಧ್ಯರು ಬಹು ಸರಸವಾಗಿ ಭಾಷಣಮಾಡಿದರು. ಆದ್ಯಂತವಿಷಯದಲ್ಲಿ ನರಗುನಹಳ್ಳಿ ಶ್ರೀ ಗುರುಸಿದ್ದಪ್ಪಯ್ಯನವರು ಜನರ ಮನಸ್ಸಿನಲ್ಲಿ ಪ್ರತಿಬಿಂಬಿಸುವಂತೆ ಸರಸ ಭಾಷಣಮಾಡಿದರು. ಚಿಕ್ಕಪ್ಪನಹಳ್ಳಿ ಸಾರಂಗಮಠದ ಗುರುಸಿದ್ದಪ್ಪಯ್ಯ ಮುಪ್ಪಿನಯ್ಯ ಏಕಾಂಬರಪ್ಪ ಫೋನೋಗ್ರಾಫ್ ತಿಪ್ಪಯ್ಯ ಯಿವರಿಂದ ಸಂಗೀತ ನಡೆದು ಗಂಧ ತಾಂಬೂಲಗಳು ಹಂಚಲ್ಪಟ್ಟು ಸಭಾ ಬರಖಾಸ್ತು ಆಯಿತು

ಪ್ರತ್ಯಕ್ಷದರ್ಶಿ

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ಸಭೆಗೆ ಲಗ್ನ ಮೊದಲಾದವುಗಳಿಂದ ತಾ॥ ೧-೨-೧೪ ರಿಂದ ೩೧-೧೦-೧೪ ರವರೆಗೆ ಜಮಾಬಂದ ತಪ್ಸೀಲ್ವಿವರ.

೧. ಮ॥ ಗಳಾದ ಬೆಂಗಳೂರು ಗ್ರಾಂ॥ ರಾ॥ ಪಾಪಣ್ಣನವರ ಮೂಲಕ ವಣಿಗರಹಳ್ಳಿ ಗಂಗಪ್ಪನವರ ಶಿವಣ್ಣನವರ ಲಗ್ನದಲ್ಲಿ ೩-೦-೦ ರೂ. ಸುಗ್ಗನಹಳ್ಳಿ ವೀರಣ್ಣನವರ ಮಗ ವೀರಪ್ಪನವರ ಲಗ್ನದಲ್ಲಿ ೨-೦-೦, ೨. ಶಿರಾದಲ್ಲಿರುವ ಮದಲೂರು ಉಡೀದಮಠದ ಶ್ರೀ ಪಟ್ಟಾಧ್ಯಕ್ಷರುದ್ರದೇವರ ಮೂಲಕ—ದೊರಾಳಿನಲ್ಲಿ ಶಿರಾಹೋಳಿನ ಹಂಪಯ್ಯನವರ ಮಠದ ಪುಟ್ಟರುದ್ರಯ್ಯನವರ ಲಗ್ನದಲ್ಲಿ ೨-೦-೦, ಮಡಕಶಿರಾ ತಾ॥ ಅಗಳಿಯಲ್ಲಿ ಶಿರಾ ಚೆನ್ನಪ್ಪನವರ ಮಗ ಕಪಿನಪ್ಪನವರ ಲಗ್ನದಲ್ಲಿ ೨-೦-೦, ೩. ತೀರ್ಥಹಳ್ಳಿ ತಾ॥ ಮುಂಡಕಾರುಮಾಗಣೆ ಕೇಡುಗಾರುಹಾಲಯ್ಯನವರಿಂದ ಸಿದ್ದಂಮಾಜಿ ಮಠದ ಶ್ರೀ ರುದ್ರಯ್ಯನವರಮಠದಲ್ಲಿ ನಡೆದ ಇವರ ಭಾವಮೈದನವರವಿವಾಹದಲ್ಲಿ ೨-೦-೦, ಕೇಡುಗಾರು ಗ್ರಾಮದ ಚನ್ನಪ್ಪಯ್ಯನವರ ಮನೆಯಲ್ಲಿನಡೆದ ಇವರ ತಮ್ಮಂದಿರಲಗ್ನದಲ್ಲಿ ೨-೦-೦, ಈ ಲಗ್ನ ಕಾಲದಲ್ಲಿ ಬೆಂಗಳೂರು ವೀರಪ್ಪನವರು ಕೊಟ್ಟದ್ದು ೧-೦-೦, ಬೆಂಗಳೂರು ಬಸಪ್ಪನವರು ಕೊಟ್ಟದ್ದು ೧-೦-೦, ಜುಮ್ಲ ೬ ರೂ.ಯನ್ನು ಮೈಸೂರು ಸ್ಟಾರ್ ಆಫೀಸಿಗೆ ಕಳುಹಿಸಿದ್ದರಲ್ಲಿ ಮಣಿಆರ್ಡರ್ ಕಮಿಷನ್ ೨ ಆಣೆ ವಜಾ ಜಾತಾ ಬಂದದ್ದು ೫-೧೪-೦, ೪. ಗುಬ್ಬಿ ಶಿವರಾತ್ರಿ ಶಿವರಾತ್ರಪ್ಪನವರಿಂದ ವೀರಶೈವಮಾಹೇಶ್ವರ ವರ್ಗದ ಬಡವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕೊಡುವ ಉದ್ದಿಶ್ಯ ಬಂದದ್ದು ೧೬-೦-೦, ೫. ಬೆಂಗಳೂರು ಎಲೆ ಸಿದ್ಧಲಿಂಗಪ್ಪಶೆಟ್ಟರ ಮೂಲಕ ತಿಪಟೂರು ತಾ॥ ಗುರುಗದಹಳ್ಳಿ ಮಠದ ಯಜಮಾನ್ ರುದ್ರಪ್ಪಯ್ಯನವರ ಕುಮಾರ್ತಿ ಚಿ॥ ಸೌ॥ ನಂಜಮ್ಮನನ್ನು ತರಿಕೆರೆ ತಾ॥ ಬುಕ್ಕಾಂಬುಧಿಯಲ್ಲಿನ ಮಾವಿನಹಳ್ಳಿ ಮಠದ ಮರಿಯಪ್ಪಯ್ಯನವರ ಪುತ್ರ ಚಿ॥ ಮುರಿಗಪ್ಪಯ್ಯನಿಗೆ ಕೊಟ್ಟು ಗುರುಗದಹಳ್ಳಿಯಲ್ಲಿ ವಿವಾಹ ನಡಿಸಿದ ಕಾಲದಲ್ಲಿ ವಧುವಿನಕಡೆಯಿಂದ ೫-೦-೦, ವರನಕಡೆಯಿಂದ ೫-೦-೦, ಜುಮ್ಲ ೧೦-೦-೦, ೬. ಚಿಕ್ಕಮಗಳೂರು ತಾ॥ ವಸ್ತಾರೆಮಠದ ಎಸ್. ನಂಜಪ್ಪನವರಿಂದ ಬಂದದ್ದು ೩-೦-೦, ೭. ತುಮಕೂರು ತಾ॥ ಹೊನ್ನುಡಿಕೆ ಯಜಮಾನ್ ಹೊನ್ನಶೆಟ್ಟಪ್ಪನವರ ಮೂಲಕ ಹೊನ್ನುಡಿಕೆ ಗ್ರಾಮದಲ್ಲಿ ಚನ್ನವೀರಶೆಟ್ಟರ ಮಗ ರುದ್ರಯ್ಯನವರ ಲಗ್ನದಲ್ಲಿ ತೆಗೆದುದು ೨-೦-೦, ಹೊನ್ನುಡಿಕೆ ಗ್ರಾಮದಲ್ಲಿ ಯಜಮಾನ್ ಹೊನ್ನಶೆಟ್ಟಪ್ಪನವರ ೩ನೇ ಮಗ ಚಿ॥ ರಾ॥ ಗಂಗಾಧರಯ್ಯನವರ ಲಗ್ನದಲ್ಲಿ ತೆಗೆದುದು ೨-೦-೦, ಹೊನ್ನುಡಿಕೆ ಗ್ರಾಮದಲ್ಲಿ ಶೆಟ್ಟರ ವೀರಭದ್ರಶೆಟ್ಟರ ಪುತ್ರಿ ಚಿ॥ ಸೌ॥ ಗಂಗಮ್ಮನನ್ನು ಕ್ಯಾತ್ಸಂದ್ರದ ಸಿದ್ವೀರಪ್ಪನವರ ಪುತ್ರ ಚಿ॥ ರಾ॥ ಸಾನಂದಯ್ಯನವರಿಗೆ ಕೊಟ್ಟು ನಡಿಸಿದ ಲಗ್ನದಲ್ಲಿ ತೆಗೆದುದು ೨-೦-೦, ಗುಬ್ಬಿ ತಾ॥ ನಿಟ್ಟೂರು ಸಮ್ಮತು ಪುರದ ಗ್ರಾಮದಲ್ಲಿನ ಸಂಪಿಗೆಮಠದ ಚನ್ನಬಸವಾರಾಧ್ಯರ ಪುತ್ರಿ ಚಿ॥ ಸೌ॥ ಪಾರ್ವತಮ್ಮನನ್ನು ಭೇರ್ಯದ ವಿಭೂತಿಮಠದ ಸಿದ್ಧಲಿಂಗದೇವರ ಪುತ್ರ ಚಿ॥ ರಾ॥ ಸಾ॥ ಲಿಂಗಪ್ಪಾರ್ಯರಿಗೆ ಕೊಟ್ಟು ನಡಿಸಿದ ಲಗ್ನದಲ್ಲಿ ೨-೦-೦, ಜುಮ್ಲ ೮-೦-೦, ೮. ಬೆಂಗಳೂರು ಗುರುವಣ್ಣದೇವರ ಮಠದ ಶ್ರೀ॥ ಶ್ರೀ ನಂಜುಂಡಸ್ವಾಮಿಗಳ ಮೂಲಕ ಮಾಗಡಿ ತಾ॥ ಸೋಲೂರು ಹೋಬಳಿ ಕಂಚುಗಲ್ಲು ಬಂಡೆಮಠದ ಯಜಮಾನ್ ಬಸಪ್ಪನವರ ಮಗಳ ಲಗ್ನದಲ್ಲಿ ವಧುವಿನಕಡೆ ಬಸಪ್ಪನವರಿಂದ ೩-೦-೦, ವರನಕಡೆ ಗಂಗಪ್ಪನವರಿಂದ ೨-೦-೦, ಸದರಿ ಮಠದ ಶಾಂತಯ್ಯನವರ ಮಗನ ಲಗ್ನದಲ್ಲಿ ೩-೦-೦, ಮಾಗಡಿ ತಾ॥ ನಾಗಶೆಟ್ಟಿಹಳ್ಳಿ ಬಸಪ್ಪನವರ ಮಗ ಚಿ॥ ರುದ್ರಯ್ಯನ ಲಗ್ನದಲ್ಲಿ ೩-೦-೦, ಬೆಂಗಳೂರು ಚಾಮರಾಜಪೇಟೆ ಮುಂದಿ ಸುಗ್ಗನಹಳ್ಳಿ ಚನ್ನಪ್ಪನವರ ಮಗನ ಲಗ್ನದಲ್ಲಿ ೩-೦-೦, ಜುಮ್ಲ ೧೪-೦-೦, ೯. ಹಾಸನ ಡಿ॥ ಬೆಳಗೋಡು ದೊಡ್ಡ ಪಟೇಲ್ ಮುದ್ದಪ್ಪಶೆಟ್ಟರ ಮೂಲಕ ಬೆಳಗೋಡು ಶಿದ್ವೀರಶೆಟ್ಟರ ಮನೆ ಲಗ್ನದಲ್ಲಿ ತೆಗೆದುದು ೨-೦-೦, ೧೦. ಆಲೂರು ಸಬ್ತಾಲ್ಲೂಕು ಯಸಳೂರುಗ್ರಾಮದ ತಮ್ಮಣ್ಣಗೌಡರ ಮಗ ಈರೇಗೌಡರ ಲಗ್ನದಲ್ಲಿ ವಧೂವರರ ಕಡೆಯಿಂದ-ಆಲೂರು ಪಾಳ್ಯಂಗಡಿ ದ್ಯಾವೇಗೌಡರ ಮೂಲಕ ಬಂದದ್ದು ೧-೧೫-೦, ೧೧. ಬೆಂಗಳೂರು ಶಂಕರಣ್ಣನವರ ಶಿವಪ್ಪನವರ ಮೂಲಕ-ಮಾಗಡಿ ವಡವಟ್ಟದ ಚನ್ನಪ್ಪನವರ ಕುಮಾರರು ರುದ್ರಪ್ಪನವರ ಲಗ್ನದಲ್ಲಿ ತೆಗೆದುದು ಮಾಗಡಿ ಯಜಮಾನ್ ದಾ॥ ನಂಜುಂಡಯ್ಯನವರವಶ ಕೊಟ್ಟಿದ್ದ ಬಾಬತು ೨-೦-೦, ೧೨. ದಾವಣಗೆರೆಪೋಸ್ಟ್ ಕೊಡಗನೂರು ಗ್ರಾಮದಲ್ಲಿನ ನರಗನಹಳ್ಳಿ ಗುರುಸಿದ್ದಯ್ಯನವರಿಂದ ಮ॥ ಎಚ್. ಕೆ. ವೀರಬಸವಯ್ಯ ಬಿ.ಎ.ಬಿ.ಯಲ್ ಇವರ ಮೂಲಕ ಬಂದದ್ದು ೨-೦-೦, ೧೩. ಬೌರಿಂಗ್ಪೇಟೆ ತಾ॥ ಮಾಗೊಂದಿ ಬಳೆವ್ಯಾಪಾರಿ ಲಿಂಗಪ್ಪನವರಿಂದ ಮೈಸೂರು ಸ್ಟಾರ್ ಆಫೀಸ್ ಮೂಲಕ ಮಣಿಆರ್ಡರ್ ಕಮಿಷನ್ ವಜಾ ಜಾತಾ ಬಂದದ್ದು ೯-೧೪-೦, ೧೪. ಶೇಲಂಜಿಲ್ಲಾ ಡೆಂಕಣಿಕೋಟೆ ಶೆಟ್ಟರ ವೀರಪ್ಪನವರು ಮತ್ತೂ ಡಿ. ಯಸ್. ನೀಲಕಂಠಪ್ಪನವರು ಇವರ ಮೂಲಕ ಈ ಮುಂದೆ ಹೇಳುವ ಮೇರೆಗೆ ಬಂದಿರುವುದು:— ಡೆಂಕಣಿಕೋಟೆ ಶ್ರೀಕಂಠಪ್ಪನವರ ಕುಮಾರ ಮಲ್ಲಪ್ಪನವರ ಲಗ್ನದಬಾಬತು ವಧೂವರರಕಡೆಯಿಂದ ೫-೦-೦, ಮಲ್ಲಾಪುರದ ಮಲ್ಲಪ್ಪನವರ ಕುಮಾರ ಸಿದ್ಧಮಲ್ಲಪ್ಪನವರ ಲಗ್ನದಬಾಬತು ವಧೂವರರ ಕಡೆಯಿಂದ ೫-೦-೦, ಗಂ॥ ವೀರಪ್ಪನವರ ತಂಗಿಯವರ ಲಗ್ನದಬಾಬತು ವಧೂಕಡೆಯಿಂದ ೨-೦-೦, ಪಡುವಣಗೆರೆ ನಂಜುಂಡಪ್ಪನವರ ಕುಮಾರ್ತಿಯ ಲಗ್ನದಲ್ಲಿ ವಧೂವರರ ಕಡೆಯಿಂದ ೫-೦-೦, ಪುಟ್ಟಣ್ಣನವರ ಕುಮಾರ ಶಿವಪ್ಪನವರ ಲಗ್ನದಲ್ಲಿ ವಧೂವರರ ಕಡೆಯಿಂದ ೫-೦-೦, ವೀ॥ ನಂಜುಂಡಪ್ಪನವರ ಶ್ರೀಕಂಠಪ್ಪನವರ ನಿಷೇಕಪ್ರಸ್ತದಲ್ಲಿ ತೆಗೆದುದು ೨-೦-೦, ಜಂ॥ ನಂಜಪ್ಪನವರ ಕುಮಾರ್ತಿಯ ಲಗ್ನದಲ್ಲಿ ವಧೂವರರ ಕಡೆಯಿಂದ ೫-೦-೦, ಚನ್ನಪ್ಪನವರ ಕುಮಾರ ಬಸೆಟ್ಟಪ್ಪನವರ ನಿಷೇಕಪ್ರಸ್ತದಲ್ಲಿ ತೆಗೆದುದು ೧-೦-೦, ಕೋಡಿಹಳ್ಳಿ ಮೂಡ್ಲಟ್ಟಿ ಮಲ್ಲಮಣ್ಣನವರ ಕುಮಾರ ಪುಟ್ಟಯ್ಯನವರ ಕುಮಾರರು ನಂಜಪ್ಪನವರ ನಿಷೇಕಪ್ರಸ್ತದಲ್ಲಿ ತೆಗೆದುದು ೨-೦-೦, ಜುಮ್ಲ ೩೪-೦-೦ ರೂ.

ಜಿ. ಕೆ. ರುದ್ರಾರ್ಯ, ಅ॥ ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ
ಫಂಡ್ಸಭೆ, ಬೆಂಗಳೂರು.

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೆಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳೆಸಹಿತ ಆದ ಸಮಾರಂಭ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲ್ಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣುಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೋ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ ಕ್ಕೆ ಕ್ರಯ ಫುಲ್ಲ್ಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಅನಂದಸ್ವಾಮಿಯ ಫೋಟೋ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೋ ಸಿಕ್ಕುತ್ತವೆ. ಫುಲ್ಲ್ಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.

ಹೊಸಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರಪಳಿಗೆ ಹಚ್ಚುವ ಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಈಪ್ರಕಾರ ೨ ಫೋಟೋ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ॥।=, ೧, ೧।, ಪ್ರಕಾರ, ಮತ್ತೂ ಬೆಳ್ಳಿಯ ರು ೧। ರೋಡ್ ಗೋಲ್ಡ ಭಂಗಾರದ್ದು ಪುರ್ದಿಣದ ಗ್ಲಾಸದೂ ಕ್ರಯ ೨॥, ೨॥। ರೂ.

ಪರವೂರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ.

30 ನಮ್ಮವಿಳಾಸ— ಗಂಗಪ್ಪಾ ಜೇರಿಗೆ,
ಆರ್ಟಿಸ್ಟ ಸೊಲ್ಲಾಪುರ.

ಕನ್ನಡ ಇಂಡಿಯನ್ ಪೆನಲ್ಕೋಡ್ ಕ್ರಯ ೨—೦—೦ ರೂ. ವಿ. ಪಿ. ಛಾರ್ಜು ೦—೪—೦.
ಹೊಸಪುಸ್ತಕ ೧೩೪೪ ಪುಟಗಳು)

ಶ್ರೀ

(ಹೊಸಪುಸ್ತಕ ೧೩೪೪ ಪುಟಗಳು)

ಬ್ರ॥ ಶ್ರೀ॥ ಬಿ. ವಿ. ಸುಬ್ರಹ್ಮಣ್ಯಶರ್ಮವಿರಚಿತವಾದ ಸುಧಾರ ಸಧಾರಾಯೆಂಬ ಕನ್ನಡ
ಟೀಕಾತಾತ್ಪರ್ಯ ಗಣಿತೋದ್ಧಾರಣೆಗಳಿಂದೊಡಗೂಡಿ 9

ಬೃಹಜ್ಜಾತಕಾಖ್ಯ ಹೋರಾಶಾಸ್ತ್ರಮ್.

ಮಾನವನು ತನ್ನ ಅದೃಷ್ಟಚಕ್ರದ ಫಲಾಫಲಗಳನ್ನು ಅರಿತು, ಮುಂದೊದಗಬಹುದಾದ ಫಲಸ್ವರೂಪವನ್ನೂ ಇತರರ ಸಹಾಯವಿಲ್ಲದೆಯೆ ತಿಳಿದುಕೊಂಡು, ದುಷ್ಫಲಗಳು ದೂರವಾಗಿ, ಸುಫಲಗಳು ಕರಗತವಾಗುವಂತೆ ಮಾಡುವಂತಹ, ಪರಿಹಾರೋಪಾಯಗಳನ್ನು ಸೂಚಿಸಬೇಕಾದರೆ, ನಮ್ಮಿಂದ ಈಗತಾನೆ ಸಂಸ್ಕೃತ ಹಿಂದಿ ಮರಾಟಿ ಭಾಷೆಗಳಿಂದ ತರ್ಜುಮೆಮಾಡಿ ಪ್ರಕಾಶಗೊಂಡ "ಸುಧಾರಸಧಾರಾ" ಎಂಬ ಕನ್ನಡ ಟೀಕಾತಾತ್ಪರ್ಯ ಉದಾಹರಣೆಗಳಿಂದ ಕೂಡಿದ ಬೃಹಜ್ಜಾತಕವೆಂಬ ಹೋರಾಶಾಸ್ತ್ರವೊಂದಲ್ಲದೆ ಮತ್ತ್ಯಾವದೂ ಸಮರ್ಥವಾಗಿಲ್ಲವು. ೧೩೪೪ ಪುಟ ೨ ಭಾಗಗಳ ಪುಸ್ತಕ ಒಂದೇಬೈಂಡ್ ಈ ಗ್ರಂಥರತ್ನವು ಆಬಾಲವೃದ್ಧರಾದಿಯಾಗಿ ಅಕ್ಷರವನ್ನರಿತ ಹೆಂಗಸರೂ ಸಹಾ ಪರರ ಸಹಾಯಾಪೇಕ್ಷೆ ಇಲ್ಲದೆ ಓದಿ ತಿಳಿಯಲು, ಅನುಕೂಲವಾಗಿರುವುದು. ಇದರೊಳಗಡಗಿರುವ ೨೯ ಪ್ರಕರಣಗಳಲ್ಲಿನ ವಿಷಯಸಂಗ್ರಹ ವೆಂತೆಂದರೆ:—೧—೨ ನೇ ಪ್ರಕರಣಗಳಲ್ಲಿ ಶಾಸ್ತ್ರಪ್ರಯೋಜನವೂ, ಜ್ಯೋತಿಶಾಸ್ತ್ರದ ಪೀಠಿಕಾಭಾಗಗಳು ೩, ಸಜೀವನಿರ್ಜೀವವಸ್ತುಗಳ ಉತ್ಪತ್ತಿ ೪, ಗರ್ಭಧಾರಣಯೋಗಗಳು ೫, ಜನನಕಾಲ ಲಕ್ಷಣ ಮತ್ತು ಫಲ ೬, ಬಾಲಾರಿಷ್ಟವಿಚಾರ ಅವುಗಳ ನಿವಾರಣೋಪಾಯ ೭, ಆಯುರ್ದಾಯವಿಚಾರ ೮, ದಶಾಭುಕ್ತಿನಿರ್ಣಯ ೯, ಅಷ್ಟಕವರ್ಗವಿಚಾರ ೧೦, ಜೀವನೋಪಾಯವಿಚಾರ ೧೧, ರಾಜಯೋಗಸೂಚನೆ ಅವುಗಳ ಫಲವಿಚಾರ ೧೨, ೧೮೦೦ ಯೋಗಗಳ ಲಕ್ಷಣ ಮತ್ತು ಫಲ ೧೩, ಚಂದ್ರಸಂಬಂಧವಾದ ಯೋಗಗಳು ೧೪, ಒಂದಕ್ಕಿಂತಲೂ ಹೆಚ್ಚು ಗ್ರಹಗಳು ಒಂದೇಕಡೆ ಸೇರಿದರೆ ಅವುಗಳ ಫಲ ೧೫, ಸನ್ಯಾಸಯೋಗಗಳು ೧೬, ನಕ್ಷತ್ರಫಲಗಳು ೧೭, ರಾಶಿಫಲಗಳು ೧೮, ರಾಸಿಗಳ ಫಲ ಮತ್ತು ಕೇರಳಯೋಕ್ತ ಫಲಗಳು ೧೯, ದೃಷ್ಟಿಫಲಗಳು ೨೦, ಭಾವಲಕ್ಷಣ ಮತ್ತು ಆ ಫಲಗಳ ವಿಚಾರ ೨೧, ಕ್ಷೇತ್ರಫಲಗಳು ೨೨, ಗ್ರಹಗಳ ಅವಸ್ಥೆ ಅಷ್ಟಕವರ್ಗ ಫಲ ೨೩, ಅನಿಷ್ಟಯೋಗಗಳು ಅವುಗಳಿಂದಾಗುವ ಫಲಗಳು ೨೪, ಸ್ತ್ರೀಜಾತಕ ಅದರ ಫಲಗಳು ೨೫, ಮರಣಕಾರಣ ಅದರ ಫಲಗಳು ೨೬, ನಷ್ಟಜಾತಕ ಬರಿಯುವ ರೀತಿ ೨೭, ದ್ರೇಕ್ಕಾಣವರ್ಣನೆ ಪ್ರಶ್ನೆಗೆ ಬೇಕಾದ ಸಹಾಯವಿಷಯ ೨೮, ಅನುಕ್ರಮಣಿಕಾಸಂಗ್ರಹ ಮತ್ತು ಗ್ರಂಥಕರ್ತರ ವಂಶವರ್ಣನೆ:—

ಮೇಲೆ ಹೇಳಿರುವಂತೆ ಬರೆಯಲ್ಪಟ್ಟ ಒಂದು ಪುಸ್ತಕ ತಮ್ಮ ಬಳಿಯಲ್ಲಿದ್ದರೆ ೧೦ ಜನ ಜ್ಯೋತಿಷ್ಕರಿದ್ದರೆ ಎಷ್ಟು ಅನುಕೂಲವೋ ಅಷ್ಟು ಅನುಕೂಲ. ಇದು ಪ್ರೌಢರಿಗೂ, ಸ್ತ್ರೀಯರಿಗೂ ಧಾರಾಳವಾಗಿ ತಿಳಿಯುವಂತೆ ಉತ್ತಮಕಾಗದದಲ್ಲಿ ಪ್ರಿಂಟ್ಮಾಡಿಸಿಧೆ, ಈ ತಿಂಗಳು ಆಖೈರಿನೊಳಗಾಗಿ ಆರ್ಡರ್ ಕೊಡುವವರಿಗೆ ೪—೦—೦ ರೂ. ವಿ ಪಿ. ಛಾರ್ಜು ೦—೬—೦ ಆಣೆ ನಂತರ ೫—೦—೦ ರೂ. ಜಾಗ್ರತೆ ತರಿಸಿಕೊಳ್ಳಿ ನಂತರ ಈ ಬೆಲೆಗೆ ದೊರೆಯಲಾರದು.

ಇತರ ಪುಸ್ತಕಗಳು.

* * *

ಟೀಕಾಜೈಮುನಿ ೯೩೦ ಪುಟ ೪—೦—೦ ರೂ. ಸಟೀಕಹರಿಕಥಾಮೃತಸಾರ ೩೪೪ ಪುಟ ೧—೪—೦ ರೂ. ಕನ್ನಡದ್ವಾದಶಸ್ಕಂಧ ಭಾಗವತ ೩—೦—೦ ರೂ. ಶುಕಸಪ್ತತಿ ೭೦ ಕಥೆ ಶುದ್ಧಪ್ರತಿ ೨—೦—೦ ರೂ. ೪ ಜನ ಫಕೀರರ ಕಥೆ ೦—೮—೦. ಸಟೀಕಾಭೋಜರಾಜಚರಿತ್ರೆ ೦—೮—೦. ಇವುಗಳಲ್ಲದೆ ನಮ್ಮಲ್ಲಿ ಯಾವಾಗ್ಯೂ ಕನ್ನಡ, ಸಂಸ್ಕೃತ, ತೆಲಗು ಗ್ರಂಥಗಳು ದೊರೆಯುತ್ತೆ.

ಟಿ. ಯಸ್. ಕೃಷ್ಣಯ್ಯಶೆಟ್ಟಿ, ಬುಕ್ಡಿಪೋ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ
ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂ
ಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು
7 ಕಾಪಾಡುವುದರಲ್ಲಿ ಶ್ರೇಷ್ಠವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು—ಕೆಮ್ಮು—ನೆಗಡಿ—ದಿನಜ್ವರ—ಮೂರರಜ್ವರ ನಾಲ್ಕರಜ್ವರ— ಮಲೇರಿಯಾಜ್ವರ— ತಲೆನೋವು— ಮೈಕೈನೋವು ಮತ್ತು ಭಾರ—ಅರೋಚಕ ಹಲ್ಲುನೋವು—ಹೊಟ್ಟೆನೋವು—ಮಲಬಂಧ—ಅಜೀರ್ಣಭೇದಿ—ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಶೆಳೆತ—ಹೊಟ್ಟೆಯುಬ್ಬರ—ಮಂದಜ್ವರ—ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಗೆ, ಮಲಬಂದ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತತ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣ ಮಾಡದೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ಡಿ॥

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

47

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯು ಮೇಲೆ ಅತಿಉತ್ತಮ. ನೋಡಿ! (ಗುಣವಾಗದಿದ್ದರೆ ಹಣ ಪರತ !!) ನೋಡಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪುದ್ರೇಕವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರ ಕಫ, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೊಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೊಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ. ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲಾ ಉತ್ತರಕನಡಾ

ಬಹುಮಾನ ! ಶ್ರೀ ಬಹುಮಾನ !!

ಅತ್ಯಾಶ್ಚರ್ಯಕರವಾದ ಬಹುಮಾನ.

೫ ಸಾವಿರ ರೂಪಾಯಿಗಳು ಹಂಚಲ್ಪಡುವವು

ದಿವ್ಯಾಷಧ ಬಳ್ಳಾರಿ. ಸುಪ್ರಸಿದ್ಧಾಷಧ
ಸರ್ವಜನಮನೋಲ್ಲಾಸಿನಿ ಅಂಡ್ ಕೋ ಇವರ

(• ನಾರಸಿಂಹಚೂರ್ಣವು •)

1

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಜವಾದುದಷ್ಟೆ. ಆದರೆ ಅನೇಕ ದುರ್ವರ್ತನಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವುವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನ ಕಣ್ಣಾರ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವುವಿಧ ಔಷಧಗಳನ್ನು ವಿಶೇಷವಾದ ಬೆಲೆಯನಿಟ್ಟು ವಿಕ್ರಯಿಸಿದರು ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವದು ವಿಷಾದಕರವಾಗಿರುವದು. ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿ (ನಾರಸಿಂಹಚೂರ್ಣವು) ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ, ಅನೇಕತರದೆಯ ಮೇಹರೋಗಗಳು, ಪಾಂಡುರೋಗ, ಪೀನಸ, ಹದಿನೆಂಟುಬಗೆಯಾದ ಕುಷ್ಠಗಳು, ಎಂಟುವಿಧ ಉದರರೋಗಗಳು, ಭಗಂಧರವು, ಮೂತ್ರಕೃಛ್ರವು, ಗೃಧ್ರಸೀವಾತವು, ಕಾಮಿಲೆ, ಕ್ಷಯ ಮಹಾಶ್ವಾಸಗಳು, ದಾರುಣವಾದ ಐದುಬಗೆಯಾದ ಕಾಸೆಗಳು, ಎಂಭತ್ತುವಿಧಗಳಾದ ವಾತರೋಗಗಳು, ನಲವತ್ತು ಬಗೆಯಾದ ಪಿತ್ತಗಳು, ಇಪ್ಪತ್ತು ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಸಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ ಚಿನ್ನದಂಥಾ ಕಾಂತಿಯು, ಸಿಹ್ಮನಂತೆ ಪರಾಕ್ರಮವು, ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯು ಅತ್ಯಧಿಕ ವೀರ್ಯವೃದ್ಧಿಯು ನೃಸಿಹ್ಮನಿಗೆ ಸಮಾನರಾದ ಮಕ್ಕಳನ್ನು ಪಡೆಯುವಬಲವೂ ಉಂಟಾಗುವುದು ಇದರಲ್ಲಿ ಯಾವ ವಿಧವಾದರಸಗಳಾಗಲಿ ವಿಷವಾಗಲಿ, ಇನ್ಯಾವ ದೋಷಗಳೂ ಇಲ್ಲ. ನಿರ್ದುಷ್ಟವಾದದ್ದು, ಫಕ್ತವನಸ್ಪತಿಗಳಿಂದಲೇ ಸಿದ್ಧಮಾಡಿದದಿವ್ಯವಾದ ಔಷಧ. ಅನೇಕ ಪಂಡಿತರು, ಧನಿಕರು ಸರ್ಟಿಫಿಕೇಟುಗಳನ್ನು ಕೊಟ್ಟಿರುವರು.

೧೪ ದಿನ ಉಪಯೋಗಕ್ಕೆಬರುವ ಡಬ್ಬಿ ೧ ಕ್ಕೆ ಬೆಲೆ ರೂ. ೧—೦—೦

—(ಬಹುಮಾನಗಳನ್ನು ಹಂಚುವ ವಿಧಾನ)—

೧ ಡಜನ್ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೧೦೦೦೦ ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೬೦೦೦ ರೂ. ೩ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೪೦೦೦ ರೂ. ೨ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೩೦೦೦ ರೂ. ೧ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ೨೦೦೦ ರೂ.

೧೯೧೪ ನೇ ಜುಲೈ ೧ ನೇ ತೇದಿ ಮೊದಲು ೧೯೧೫ ನೇ ಜುಲೈ ೧ ತೇದಿಯವರೆಗೂ ಈ ಔಷಧವು ಒಂದು ಲಕ್ಷ ಡಬ್ಬಿಗಳು ಖರ್ಚಾದಕೊಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ. ಒಂದುಪಕ್ಷದಲ್ಲಿ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ವಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡೆಯುವದಲ್ಲದೆ ಬಹುಮಾನವನ್ನು ಸಹಾ ಹೊಂದುವದಕ್ಕೆ ಅರ್ಹನಾಗಿರುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರು ಸಂಶಯವಿಲ್ಲ. ಬಹುಮಾನದ ಮೊತ್ತವು ನಿಷ್ಪಕ್ಷಪಾತವಾಗಿ ಒಂದೇ ಸಮವಾಗಿ ಹಂಚಲ್ಪಡುವವು. ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಕುಹಕತನವು ಇಲ್ಲ, ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರ ಮಾತುಗಳಿಗೆ ನಿಗಾ ಕೊಡಲಾಗದು, ಜಾಗ್ರತೆ ತರಿಸಿಕೊಳ್ಳಿರಿ ಔಷಧದ ಗುಣವನ್ನು ಪರೀಕ್ಷಿಸಿರಿ ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇದಲ್ಲದೆ ನಮ್ಮಲ್ಲಿ ಇನ್ನು ಅನೇಕತರದೆಯ ಔಷಧಗಳು ಸಿಗುತ್ತವೆ. ರೋಗದಲಕ್ಷಣವನ್ನು ತಿಳಿಸಿದರೆ ಅಮೂಲ್ಯವಾದ ಮತ್ತು ಗುಣಕಾರಿಗಳಾದ ಔಷಧಗಳನ್ನು ಕಳುಹಿಸುವೆವು.

ಇವರ ಅನುಪಾನ ಪತ್ರಿಕೆಯನ್ನು ಬಹುಮಾನದ ಟಿಕೀಟನ್ನು ಡಬ್ಬಿಸಂಗಡ ಕಳಿಸುವೆವು. ನಮ್ಮ ಕಂಪೆನಿಯ ಕಾಶಿ ವಿಶ್ವನಾಥ ಮಾರ್ಕು ಇಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು.

ನಮ್ಮ ಅಡ್ರೆಸ್ಸು
ಸರ್ವಜನಮನೋಲ್ಲಾಸಿನಿ ಅಂಡ್ ಕೋ ಬಳ್ಳಾರಿ.

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು:— ಚಂಡಮಾರುತ ೦-೨-೦; ಚರಿತಾಮೃತಂ ೦-೫-೦; ರಾಜಕಥಾವಳ್ಳರಿ ೦-೫-೦; ಪೀಟರಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ನೀತಿ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 59

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೬-೦-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಡಜ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್ ಸನ್ಸ್

ಸುಗಂಧಕಾರಿ, ಮೈಸೂರು

28

ನ್ಯಾಯದರ್ಪಣ. 41

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಪ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸು; ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿಇರುತ್ತವೆ. ಬೆಲೆ ರೂ. 1-8-0. ವಿ. ಪಿ. ಮೂಲ್ಯ 1-12-0.

ಎಂ. ಎಸ್. ನಂಜಪ್ಪನವರು,

ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

48 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೫೧೨ ಪುಟ) ಟಪಾಲು ಹಾಸಲು ೪ ಆಣೆ. ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೮-೦. (೫೭೩ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಕ್ಚಾತುರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಬೇಕೆಂದಿದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಲ್ಲಾಸಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೩೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ. ೧-೪-೦ ಟಪಾಲ್ ಹಾಸಲು ೩ ಆಣೆ.

ಈಗಲೇ ಬರೆ ನಿಮ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು. 26



ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋತ (ಬಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳನು, ಜ್ವರ, ನೆಚ್ಚು ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಶೇಖಾಡಬೇಡಿರಿ. ಒಂದೇಒಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯು ಬೆಲೆ ೧ ೦-೦ ಟಪಾಲ್ ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವವೈದ್ಯಶಾಲಾ ಮೈಸೂರು.

ಗಂಧರಾಜ ನಸ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮಿದುಳಿಗಾಗಲಿ ಕೆಡುಕಿಲ್ಲ. ಒಂದು ಚುಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘುಮುಘುಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜ಼ ಡಬ್ಬಿಗೆ ೨-೨-೦

ಉತ್ತಮವಾದ ನಸ್ಯದಪುಡಿ.

ಧಾತು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜ಼ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,

ಗೋಪಸೆಟ್ಟಿಪುರ, ಹನೂರು ಪೋಸ್ಟ್

37 ಕೊಳ್ಳೇಗಾಲದ ತಾಲ್ಲೂಕು.

೧೯೧೫ ನೆಯ

ಶ್ರೀ ಸೀತಾರಾಘವ

ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.



ಶಾಯಿ ಇಳಿಯದ ಉತ್ತಮವಾದ ಕಾಗದ ಮುದ್ದಾದ ಮುದ್ರಣ. ಅನೇಕವಾದ ಹೊಸಸುಂಗತಿಗಳಿವೆ.

೧ ನಂ—ಸಣ್ಣಸೈಜು ಸಾದಾ	೦-೪-೦
೨ ನಂ—ಪೆನ್ಸಲ್‌ಮುಚ್ಚಳವುಳ್ಳದು	೦-೬-೦
೩ ನಂ—ದೊಡ್ಡಸೈಜು ಸಾದಾ	೦-೬-೦
೪ ನಂ—ಪೆನ್ಸಲ್‌ಮುಚ್ಚಳವುಳ್ಳದು	೦-೮-೦

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ

ಹೆಚ್ಚಾಗಿ ತರಿಸುವವರಿಗೆ ರೂಪಾಯಿ ೧ ಕ್ಕೆ ೦-೨-೦ ಕಮಿಷನ್ ದೊರೆಯುವುದು. ವಿಳಾಸ:—

ಶ್ರೀ ಸೀತಾರಾಘವ ವೈದ್ಯಶಾಲಾ,

7 ಮೈಸೂರು.

KASHI
VISHVESHVAR.

8

ದೊಡ್ಡ ಕಂಪಿನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನು, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಚ್. ಯು. ಎನ್ ಮತ್ತು ಕಂಪನಿ,

ಬನಾರಿಸ್ ಸಿಟಿ (ಕಾಶೀ)

೧೯೧೪ನೆಯ ಇಸವಿ ನವಂಬರ್ ತಾ॥೧೫ರಿಂದ ೧೯೧೪ನೆಯ ನವಂಬರ್ ತಾ॥ ೨೧ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ನೆಯ ಆನಂದನಾಮ ಸಂ॥ ದ ಕಾರ್ತಿಕ ಬ॥ ತ್ರಯೋದಶಿಯಿಂದ ಮಾರ್ಗಶಿರ ಶು॥ ಚೌತಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ವೃಶ್ಚಿ ತೇದಿ
15	ಭಾನು	ತ್ರ.	50-36	ಚಿತ್ತ	54-1	30
16	[1]ಸೋ	ಚತು	44-52	ಸ್ವಾತಿ	49-55	1
17	[2]ಮಂ	ಅಮಾ	38-50	ವಿಶಾ	45-28	2
18	[3]ಬುಧ	ಪಾ	33-1	ಅನೂ	41-26	3
19	[4]ಗುರು	ಬಿದಿ	27-36	ಜ್ಯೇಷ್ಠ	37-45	4
20	[5]ಶುಕ್ರ	ತದಿ	22-40	ಮೂಲ	34-39	5
21	[6]ಶನಿ	ಚೌ	18-31	ಪೂಷಾ	32-23	6

(1) ವಿಷ್ಣುಪದಪುಣ್ಯಕಾಲಃ, ಕಾರ್ತೀಕಸೋಮವಾರ, ಮಾಸಶಿವರಾತ್ರಿಃ. (2) ಸರ್ವತ್ರಾಮಾವಾಸ್ಯಾ ಪದ್ಮಕಃ. (3) ಅಮೃತಸಿದ್ಧಿಯೋಗಃ. (4) ದ್ವಿತೀಯಾತಿಥಿಃ, ಚಂದ್ರೋದಯಃ, ೧೩೩೩ನೇ ಮೊಹರಂಪ್ರಾರಂಭಃ. (5) ತ್ರಿತೀಯಾತಿಥಿಃ. (6) ತಿಥಿದ್ವಯಂ, ಕೋ।ಕಂ।ವಾ।ಅಪ್ಪಸ್ವಾಮಿಗಳವರ ಆರಾಧನೆ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಕೃಷ್ಣಸಿಂಹ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರ್ ಸ್ಟಾರ್.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ।
ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ॥

ವಾರ್ಷಿಕ ಚಂದಾ ೧-೦-೦
ಅಂಚೆವೆಚ್ಚ ಸೇರಿ ೧-೧೪-೦

ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವಂ ।
ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ।
ನಿಶಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ ।
ಪ್ರೇಮಂಬೆತ್ತಿಳೆಯುಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಸಂಪುಟ ೨೩) ಮೈಸೂರ್ ಸ್ಟಾರ್ ೧೯೧೪ ನೆಯ ಇಸವಿ ನವಂಬರ್ ತಾರೀಖು ೧೫ ನೆಯ ಭಾನುವಾರ. (ಸಂಚಿಕೆ ೪೩

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರಿಗೂ ಸ್ಕೂಲ್‌ಮಾಸ್ಟರ್‌ಗಳಿಗೂ ವಿನಂತಿ.

೧೯೧೫ ನೇ ಇಸ್ವಿಯ ಸಚಿತ್ರ ಕ್ಯಾಲೆಂಡರ್‌ಗಳು ಬಿಕರಿಗೆ ಸಿದ್ಧವಾಗಿವೆ ಕ್ರಯ ೧ ಕ್ಕೆ ೦-೦-೬ ಪೈ. ೫೦ ಕ್ಕೆ ೦-೧೧-೦ಆಣೆ ೧೦೦ ಕ್ಕೆ ೧-೫-೦ ಪ್ಯಾಕಿಂಗ್ ಪೋಸ್ಟೇಜು ಮಾಫಿ ೫೦ ಕ್ಯಾಲೆಂಡರ್‌ಗಳಿಗಿಂತಲೂ ಕಡಿಮೆಯಾಗಿ ಪೋಸ್ಟುಮೂಲಕ ರವಾನಿಸಲಾಗುವುದಿಲ್ಲಾ.

ಈ ಕ್ಯಾಲೆಂಡರಿನಲ್ಲಿ ಇಂಗ್ಲೀಷ್ ಮತ್ತೂ ಕನಡ ತಿಂಗಳೂ, ತಾರೀಖು, ವಾರ, ತಿಥಿ, ನಕ್ಷತ್ರ, ಆಯಾಯ ದಿವಸದ ವಿಶೇಷ ದಿವಸಗಳು ವಿಷಿಷ್ಟ ಹಬ್ಬ ದಿವಸಗಳೂ ಇರುವುದಲ್ಲದೆ ಮೈಸೂರ್ ಮಹಾರಾಜರವರ ಮತ್ತೂ ಯುವರಾಜರವರ ಭಾವಚಿತ್ರಗಳೂ ಮತ್ತೂ ಮೈಸೂರ್ ಸಂಸ್ಥಾನದ ಈಗಿನ ಹೊಸ ಅರಮನೆಯಲ್ಲಿ ನಡೆಯುವ ನವರಾತ್ರಿಮಹೋತ್ಸವದ ದರ್ಬಾರ್ ಸಹಿತ ಇರುವ ನಕ್ಷೆಯನ್ನೂ ಸಹ ನುಣುಪಾದ (ಗ್ಲೇಜ್‌ಪೇಪರ್) ಕಾಗದದಲ್ಲಿ ಅಂದವಾಗಿ ಪ್ರಿಂಟ್‌ಮಾಡಿಸಿ ಮೇಲ್ಕಂಡ ದರದಂತೆ ಬಹುಸುಲಭಬೆಲೆಗೆ ಕೊಡುತ್ತಲಿದ್ದೇವೆ ಯಾದಕಾರಣ ಈ ದಿವಸವೇ ಆರ್‌ಡರ್ ಕೊಟ್ಟು ತರಿಸಿಕೊಳ್ಳಿರಿ ಸ್ವಲ್ಪ ಪ್ರತಿಗಳುಮಾತ್ರ ಉಳಿದಿವೆ. ಬಿಕರಿಯಾದನಂತರಬರತಕ್ಕ ಆರ್‌ಡರ್‌ಗಳನ್ನೆಲ್ಲಾ ಹೋದವರುಸುದಂತೆ ಕ್ಯಾನ್ಸಲ್‌ಮಾಡಲಾಗುತ್ತೆ.

ಈಗತಾನೇ ಸೀಮೆಯಿಂದ ಬಂದಿರತಕ್ಕ ರಖಂವಾರ್ ವಾಚ್‌ಗಳ ಕ್ರಯದಪಟ್ಟಿ. 41



೧ ರಾಸ್ಕೋಪ್ ಸಿಲಸ್ಟಂಪೇಟೆಂಟ್‌ಸ್ಟಿಲ್‌ಮೋಡ್‌ವಾಚ್	೧ ಕ್ಕೆ	೨-೮-೦
೨ ಗರ್ಟೈಂ ರೈಲ್ವೇ ರೆಗ್ಯುಲೇಟರ್ ವಾಚ್	೧ ಕ್ಕೆ	೩-೮-೦
೩ ಡಿಟೋ ನಮೂನೆ ಚಿಕ್ಕಸೈಜ್ ವಾಚ್	೧ ಕ್ಕೆ	೪-೪-೦
೪ ಡಿಟೋ ಚಿಕ್ಕಸೈಜ್ ಸ್ಪೆಷಲ್ ಸರ್ವೀಸ್‌ವಾಚ್	೧ ಕ್ಕೆ	೫-೮-೦
೪ ಪರ್ಟಲ್‌ವರ್ಕ ಡ್ರಾಪ್ ವಾಚೆಂಬ ಅತ್ಯುತ್ತಮವಾದ ಲೀವರ್ ವಾಚ್	೧ ಕ್ಕೆ	೮-೧೨-೦
೫ ಡಿಟೋ ನಮೂನೆ ಕೆಂಪುಗಳನ್ನು ಕೆತ್ತಿರುವ ವಾಚ್	೧ ಕ್ಕೆ	೯-೪-೦
೬ ಪೀಟಿಲಾಕ್ ವಾಚೆಂಬ ತೆಳುವಾದ ಮತ್ತೂ ಗ್ಯಾರೆಂಟಿಯಾದ ವಾಚ್ (ಸಾವಿರಾರು ವಿಕ್ರಯ)	೧ ಕ್ಕೆ	೧೦-೮-೦
೭ ವಾರಕೊಂದಾವರ್ತಿ ಬೀಗಕೊಡುವ ನಿಕ್ಕಲ್ ಬೆಳ್ಳೀಕೇಸ್ ವಾಚ್	೧ ಕ್ಕೆ	೧೦-೮-೦
೮ ಡಿಟೋ ನಮೂನೆಯಲ್ಲಿ ಅಚ್ಚಬೆಳ್ಳೀಕೇಸಿನ ಚಿಕ್ಕ ಸೈಜ್ ವಾಚ್	೧ ಕ್ಕೆ	೧೫-೪-೦
೯ ೩೦ ಘಂಟೆಗೆ ಒಂದಾವರ್ತಿ ಬೀಗಕೊಡುವ ದೊಡ್ಡ ಬರ್ಮಾಟೈಂಪೀಸ್	೧ ಕ್ಕೆ	೧-೪-೦
೧೦ ಡಿಟೋ ನಮೂನೆ ಅಲಾರಂ ಟೈಂಪೀಸ್	೧ ಕ್ಕೆ	೨-೪-೦
೧೧ ಡಿಟೋ ನಮೂನೆಯಲ್ಲಿ ಘಂಟೆ ನಿಮಿಷ ಸೆಕೆಂಡ್ ತೋರಿಸಿ ಅಲಾರಂ ಇದ್ದು ತಾರೀಖು ಸಹ ತೋರಿಸುವ ದೊಡ್ಡ ಟೈಂಪೀಸ್	೧ ಕ್ಕೆ	೩-೪-೦
೧೨ ಖಾತ್ರಿಯಾದ ಅನ್‌ಸೋನಿಯಾ "ಬಿ" ಟೈಂಪೀಸ್	೧ ಕ್ಕೆ	೨-೮-೦
೧೩ ಡಿಟೋ ಕಂಪೆನಿಯ ಅಲಾರಂಟೈಂಪೀಸ್ (ಬಹಳಮಜಬೂತಾದ್ದು) (ಸಾವಿರಾರುವಿಕ್ರಯ)	೧ ಕ್ಕೆ	೩-೮-೦
೧೪ ಅನ್‌ಸೋನಿಯಾ ಕಂಪೆನಿಯಲ್ಲಿ ತಯಾರಾದ ಘಂಟೆ, ಅರ್ಧ ಘಂಟೆ ಹೊಡೆದು ಅಲಾರಂ ಇರತಕ್ಕ ದೊಡ್ಡಟೈಂಪೀಸ್ (ಅನೇಕಜನ ವಿದ್ಯಾರ್ಥಿಗಳು ಇದನ್ನೇ ಉಪಯೋಗಿಸುತ್ತಲಿದ್ದಾರೆ)	೧ ಕ್ಕೆ	೬-೧೨-೦
೧೫ ಘಂಟೆ, ಅರ್ಧಘಂಟೆ ಹೊಡೆಯುವ ಕ್ಯಾರೇಜ್ ಕ್ಲಾಕೆಂಬ ಟೇಬಿಲ್ ಘಡಿಯಾರ	೧ ಕ್ಕೆ	೪-೧೨-೦
೧೬ ಡಿಟೋ ನಮೂನೆಯಲ್ಲಿ ಘಂಟೆ, ಅರ್ಧಘಂಟೆಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್	೧ ಕ್ಕೆ	೫-೪-೦
೧೭ ಡಿಟೋ ನಮೂನೆಯಲ್ಲಿ ಘಂಟೆಹೊಡೆಯುವದಕ್ಕೆ ಪ್ರತಿಯಾಗಿ ಗಾನಹಾಡುವ ಕ್ಲಾಕ್	೧ ಕ್ಕೆ	೫-೮-೦
೧೮ ಡಿಟೋ ನಮೂನೆಯಲ್ಲಿ ತಾವಿಷ್ಟಪಟ್ಟ ಟೈಂವಿಗೆ ಕಾಲುಘಂಟೆಕಾಲ ಕರ್ಣಾನಂದವಾಗುವಂತೆ ಮೃದುಮಧುರ ಗಾನಮಾಡತಕ್ಕ ಕ್ಲಾಕ್	೧ ಕ್ಕೆ	೫-೮-೦
೧೯ ಅನ್‌ಸೋನಿಯಾ ಕಂಪೆನಿಯ ಲಿವರ್ ಕ್ಲಾಕೆಂಬ ಗೋಡೆಗೆ ತಗಲಿಸುವ (೮ ಮೂಲೆಯ) ಅಷ್ಟಕೋಣಾಕೃತಿಯ ಚಿಕ್ಕಸೈಜ್ ಕ್ಲಾಕ್	೧ ಕ್ಕೆ	೬-೮-೦

ರಖಂವಾರ್ ವಾಚ್ ಸರಪಣಿಗಳು.

ನಿಕ್ಕಲ್ ಬೆಳ್ಳಿಯ ವಾಚ್‌ಸರಪಣಿ	೧ ಕ್ಕೆ	೦-೧೨-೦
ಅಚ್ಚಬೆಳ್ಳಿಯ ಜೇಬಿನ ವಾಚ್‌ಸರಪಣಿ	೧ ಕ್ಕೆ	೩-೪-೦
ಅಚ್ಚಬೆಳ್ಳಿಯ ಕೊರಳಸರಪಣಿ	೧ ಕ್ಕೆ	೧-೪-೦
೧೮ ಕ್ಯಾರಟ್ ಚಿನ್ನದ ವಾಚ್‌ಸರಪಣಿ	೧ ಕ್ಕೆ	೫-೮-೦
ವಾಚಿನ ಸರಪಣಿ ತುದಿಯಲ್ಲಿ ಹಾಕುವ ಅಚ್ಚಬೆಳ್ಳಿಯ ಶಾಶ್ವತವಾದ ಕ್ಯಾಲೆಂಡರ್ ಅಂದರೆ ಎಷ್ಟು ವರುಷಗಳ ವರಿಗಾದರೂ ತಾರೀಖು ನೋಡಬಹುದಾದ ಕ್ಯಾಲೆಂಡರ್ ಎಂದೆಂದಿಗೂ ಕೆಡತಕ್ಕದ್ದಲ್ಲಾ	೧ ಕ್ಕೆ	೧-೧೨-೦
ಡಿಟೋ ನಮೂನೆಯಲ್ಲಿ ೧೮ ಕ್ಯಾರಟ್ ಚಿನ್ನದಿಂದ ತಯಾರಿಸಿದ್ದು	೧ ಕ್ಕೆ	೩-೪-೦

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ಒಂದುಸಾರಿ ಶಾಯಿತುಂಬಿದರೆ ೧೦,೦೦೦ ಶಬ್ದಗಳನ್ನು ಬರೆಯಬಹುದಾದ ಲೇಖಣಿಗಳು.

ಪ್ರತಿಯೊಂದಕ್ಕೂ ೧೪ ಕ್ಯಾರಟ್ ಚಿನ್ನದ ನಿಬ್ಬುಹಾಕಿದೆ.

ನೆಪ್ಚೂನ್ ೨೦೦ ನೇ ನಂ. ಪೆನ್	೧ ಕ್ಕೆ	೧-೧೪-೦
ನೆಪ್ಚೂನ್ ೨೫ ನೇ ನಂ. ಪೆನ್	೧ ಕ್ಕೆ	೨-೧೦-೦
ನೆಪ್ಚೂನ್ ೨೧೦ ನೇ ನಂ. ಪೆನ್	೧ ಕ್ಕೆ	೪-೨-೦

ಪ್ರತಿಯೊಂದು ಪೆನ್‌ತರಿಸಿ ಕೊಳ್ಳುವರಿಗೂ ೪ ಪದಾರ್ಥಗಳನ್ನು ಮುಫತ್ತಾಗಿ ರವಾನಿಸುತ್ತೇವೆ.

- ೧ ಪೆನ್‌ಗಳನ್ನಿಡತಕ್ಕ ಸುಂದರವಾದ ಪೆಟ್ಟಿಗೆ ೧.
- ೨ ಪೆನ್ನಿಗೆ ಶಾಯಿಹಾಕುವ ಗಾಜಿನಕೊಳವೆ ೧.
- ೩ ಪೆನ್‌ಗಳನ್ನು ಕ್ಲೀನ್‌ಮಾಡುವ ವಿಧಾನ ಮತ್ತೂ ಶಾಯಿಹಾಕುವ ವಿಧಾನ ಪ್ರಿಂಟಾಗಿರುವ ಚೀಟಿ ೧.
- ೪ ಪೆನನ್ನು ಜೇಬಿಗೆತಗಲಿಸುವ ಸುಂದರವಾದ ಕ್ಲಿಪ್ ೧.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್. ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧-೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಶಿವಪೂಜಾವಿಧಿಃ	೦-೮-೦
ಚಾರುಶೀಲೆಚರಿತ್ರೆ	೦-೫-೦
ಸಟೀಕ ನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವಿವೇಕಮಂಜರಿ [೨ನೆಯ ಭಾಗ]	೦-೩-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

160

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೩೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಗಳು ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧ ೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿ.— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ. ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,

ಗ್ರಂಥಪ್ರಚಾರಕಮಂಡಲಿ, ಮೈಸೂರು.

ಫೀಲ್ಡ್‌ಮಾರ್ಷಲ್ ಅರ್ಲ್‌ರಾಬರ್ಟ್ಸ್‌ರವರ ಮೃತಿಯು.

ಅರ್ಲ್‌ರಾಬರ್ಟ್ಸ್‌ರವರು ಆಂಗ್ಲಸಾಮ್ರಾಜ್ಯದ ದಳಪತಿಗಳಲ್ಲಿ ಅತ್ಯಂತ ಪ್ರಸಿದ್ಧರಾದವರು. ಮತ್ತು ಇವರು ಭರತಖಂಡದ ಕಾನ್ಪುರದಲ್ಲಿ ಹುಟ್ಟಿ, ಬಹುಕಾಲ ಮದ್ರಾಸು ಅಧಿಪತ್ಯದ ಸೈನ್ಯದಮೇಲೆ ಅಧಿಕಾರಿಗಳಾಗಿದ್ದು, ಕೆಲಕಾಲ ಭರತಖಂಡದ ಸರ್ವಸೇನಾಧಿಪತಿಗಳಾಗಿದ್ದು, ಅಫ್ಘಾನಿಸ್ಥಾನ ಮೊದಲಾದುವುಗಳ ಮೇಲೆ ನಡೆದ ಯುದ್ಧಕ್ಕೆ ಹೋಗಿದ್ದು, ಯಶಸ್ವಿಗಳಾಗಿ ಭರತಖಂಡಕ್ಕೆ ಅತ್ಯಂತ ಪರಿಚಿತರಾದ ಶೂರಸೇನಾನಿಗಳು. ಇವರು ಬಹುಕಾಲ (೪೦ ವರ್ಷ) ಭರತಖಂಡ ವಾಸವನ್ನನುಭವಿಸಿದವರಾದುದರಿಂದ ಭಾರತಜನವರ್ಗದಮೇಲೂ, ಭರತಖಂಡದ ಸೇನಾವರ್ಗದ ಮೇಲೂ ವಿಶೇಷಪ್ರೀತಿಯನ್ನು ಹೊಂದಿದ್ದವರು. ಈ ಮಹಾಪುರುಷರು ಬೂವರಯುದ್ಧದ ಕಾಲಕ್ಕೆ ದಕ್ಷಿಣಾಫ್ರಿಕಾಕ್ಕೆ ಹೋದನಂತರ ಅಲ್ಲಿನ ಆಂಗ್ಲಸೈನ್ಯಕ್ಕೆ ವಿಶೇಷ ವಿಜಯವು ಸಮನಿಸುವಂತಾಯಿತು. ಇವರು ಬಹುದಿವಸ ಆಂಗ್ಲಸಾಮ್ರಾಜ್ಯದ ಭೂಸೈನ್ಯದಮೇಲೆ ಮುಖ್ಯಾಧಿಕಾರಿಗಳಾಗಿದ್ದರು. ಈಚೆಗೆ ಇವರು ವಾರ್ಧಕ್ಯದ ಕಾರಣದಿಂದ, ಅಧಿಕಾರವನ್ನು ಬಿಟ್ಟುಕೊಟ್ಟಿದ್ದರೂ, ಒಂದು ಮುಖ್ಯಸೇನೆಯ ಗೌರವಸೇನಾಧ್ಯಕ್ಷತೆಯನ್ನು ವಹಿಸಿಯೂ, ಸೇನಾಂಗವಿಷಯದಲ್ಲಿ ಇಂಗ್ಲೆಂಡ್ ಸರ್ಕಾರಕ್ಕೆ ಸಮಯೋಚಿತವಾದ ಸೂಚನೆಯನ್ನು ಕೊಡತಕ್ಕ ಆಪ್ತಮಂತ್ರಿಯಂತೆಯೂ ಇದ್ದರು. ಯುದ್ಧಾರಂಭವಾದ ಮೇಲೆ ಕರ್ತವ್ಯವಿಷಯವನ್ನು ಕುರಿತು ಅಧಿಕಾರಿಗಳಿಗೆ ಸೂಚನೆಕೊಡುತ್ತಲೂ, ಪ್ರಜೆಗಳನ್ನು ಪ್ರೋತ್ಸಾಹಿಸುತ್ತಲೂ, ಯುದ್ಧಾಂಗಣದಲ್ಲಿ ನಡೆಯುವ ವಿಷಯಗಳನ್ನು ಕೇಳಿ, ತಮ್ಮ ಸೇನಾವರ್ಗದವರ ಶೌರ್ಯಸಾಹಸಗಳನ್ನು ಕೊಂಡಾಡುತ್ತಲೂ, ತಮಗೆ ಅತ್ಯಂತಪ್ರಿಯವಾದ ಹಿಂದೂಸ್ಥಾನಸೈನ್ಯವು ತೋರಿಸುತ್ತಿರುವ ವಿಶೇಷವಾದ ಪರಾಕ್ರಮವನ್ನು ಕೇಳಿ ಅಭಿನಂದಿಸುತ್ತಲೂ ಇದ್ದರು. ಮತ್ತು ಅತುಳಿತವಾಗಿಯೂ ಅಭೂತಪೂರ್ವವಾಗಿಯೂ ನಡೆಯುತ್ತಿರುವ ಈಗಿನ ಯುದ್ಧರಂಗದಲ್ಲಿ ತನ್ನ ಜೊತೆಯ ವೀರಾಗ್ರೇಸರರೆಲ್ಲಾ ಯುದ್ಧಮಾಡುತ್ತಿರಲಾಗಿ ತಾನುಮಾತ್ರ ಮನೆಯಲ್ಲಿ ಸ್ವಸ್ಥವಾಗಿ ಕುಳಿತುಕೊಂಡಿರುವುದು ಇವರಿಗೆ ಅಸಹ್ಯವಾಗಿ ತೋರಿದ್ದಿತು. ತನ್ನ ವಾರ್ಧಕದಶೆಯು ತನಗೆ ಯುದ್ಧಾಂಗಣ ಪ್ರವೇಶಾನರ್ಹತೆಯನ್ನುಂಟುಮಾಡಿದ್ದರೂ, ಈ ಮಹಾಶೂರಾಗ್ರಣಿಯು ಅದನ್ನು ಲೆಕ್ಕಿಸದೆ ರಣಾಂಗದಲ್ಲಿರುವ ತಮ್ಮ ಸೇನೆಗಳ ಕಾರ್ಯವನ್ನು ಹೇಗಾದರೂ ಒಂದಾವೃತ್ತಿ ನೋಡಿಬರಬೇಕೆಂದು ಯೋಚಿಸಿ, ೮೨ನೆಯ ವಯಸ್ಸಿನ ಈ ಮುಪ್ಪಿನಲ್ಲಿ ಕಳೆದ ತಾ॥ ೧೧ ನೆ ಬುಧವಾರದ ದಿವಸ ಲಂಡನ್ ಪಟ್ಟಣವನ್ನು ಬಿಟ್ಟು ತನ್ನ ಹೆಂಡತಿಯೊಡನೆಯೂ, ತನ್ನ ಅಳಿಯನಾದ ಮೇಜರ್‌ಲೋರ್ವಿನರವರೊಡನೆಯೂ ಕೂಡಿ ಫ್ರಾನ್ಸಿಗೆ ಪ್ರಯಾಣಮಾಡಿದರು. ಗುರುವಾರವೂ-ಶುಕ್ರವಾರವೂ ಸಹ ಫ್ರಾನ್ಸಿನ ಯುದ್ಧಾಂಗಣದಲ್ಲಿರುವ ಆಂಗ್ಲಸೇನಾಸ್ಥಲಗಳನ್ನೆಲ್ಲಾ ಪರೀಕ್ಷಿಸಿಕೊಂಡು ಬಂದರು. ಅಲ್ಲಲ್ಲಿದ್ದ ಪ್ರಮುಖ ಸೇನಾಧಿಕಾರಿಗಳೊಡನೆಲ್ಲಾ ಮಾತನಾಡಿಕೊಂಡು ಬಂದರು. ಶುಕ್ರವಾರದ ದಿವಸ ಅವರು ಹಿಂದೂ ಸೈನಿಕರ ಸಾಮರ್ಥ್ಯವನ್ನೂ ಪರೀಕ್ಷಿಸಿದರು. ಆದಿನ ಹಗಲು ಯುದ್ಧಾಂಗಣದಲ್ಲಿ ವಿಶೇಷವಾಗಿ ಮಳೆಯು ಸುರಿದಿತು ಮತ್ತು ಚಳಿಗಾಳಿಯು ಬಲವಾಗಿ ಬೀಸುತ್ತಿದ್ದಿತು. ಹಾಗಿದ್ದರೂ ರಾಬರ್ಟ್ಸ್‌ರವರು ಆ ದಿನದ ಯುದ್ಧರೀತಿಯನ್ನು ನೋಡುವುದಕ್ಕಾಗಿ ಒಂದು ದಿಬ್ಬದಮೇಲಕ್ಕೆ ಏರಿ ಹೋಗಿದ್ದರು. ಅಲ್ಲಿಂದ ಮರಳಿ ತಮ್ಮ ಶಿಬಿರಕ್ಕೆ ಬಂದ ಸ್ವಲ್ಪ ಹೊತ್ತಿನಮೇಲೆ ಏಕೋ ಚಳಿಚಳಿಯಾಗುತ್ತಿರುವುದೆಂದು ಹೇಳಿ ಮಲಗಿಕೊಂಡರು. ದೇಹದಲ್ಲಿ ಜ್ವರವು ಕಾಣಿಸಿಕೊಂಡಿತು. ಕೂಡಲೇ ವೈದ್ಯರು ಬರಮಾಡಲ್ಪಡಲು, ಅವರೊಡನೆ ತಮ್ಮ ಶರೀರಸ್ಥಿತಿಯನ್ನು ಬಹು ನಿಶ್ಶಕ್ತಿಯಿಂದ ಹೇಳಿದರು. ಇನ್ನಿಬ್ಬರು ವೈದ್ಯಶಿಖಾಮಣಿಗಳೂ ಕರೆಯಿಸಲ್ಪಟ್ಟರು. ಅವರೆಲ್ಲರೂ ಸಾಧ್ಯವಾದ ಚಿಕಿತ್ಸೆಗಳನ್ನು ಮಾಡುತ್ತ ಬಂದರು ಬಳಿಕ ಆ ರಾತ್ರಿ ಅವರಿಗೆ ಸುಖವಾಗಿ ನಿದ್ರೆಹತ್ತಿತು. ಮರುದಿನ ಬಹಳಹೊತ್ತಿನವರೆಗೆ ಅವರು ಏಳಲಿಲ್ಲ ಆ ದಿನ ಅವರಿಗೆ ವಿಶೇಷವಾದ ಬಾಧೆಯಾವುದೂ ಇದ್ದಂತೆ ತೋರಲಿಲ್ಲ ಆ ಶನಿವಾರ ರಾತ್ರಿ ೮ ಗಂಟೆಯಲ್ಲಿ ಅವರು ಆ ಶಿಬಿರದಲ್ಲೇ ದೀರ್ಘನಿದ್ರೆಯನ್ನು ಮಾಡಿದರು. ಆಗ ಅವರ ಪತ್ನಿಯವರು ಸಮೀಪದಲ್ಲೇ ಇದ್ದರು. ಈ ಮಹಾಶಯರಿಗೆ ಜೀವಿತದಲ್ಲಿ ಮುಖ್ಯಪ್ರಿಯವಾದುದು ಯುದ್ಧಕೇಳಿಯಾಗಿದ್ದಿತು. ಅವರ ಮನಸ್ಸಿನಲ್ಲಿ ತನಗೆ ಯುದ್ಧಾಂಗಣದಲ್ಲೇ ಅಂತ್ಯವು ಸಂಭವಿಸಬೇಕೆಂದು ಸಂಕಲ್ಪವು ಇದ್ದಿತೋ ಏನೋ ಎಂಬಂತೆಯೂ, ಭಗವಂತನು ಅದನ್ನು ನೆರವೇರಿಸಿಕೊಟ್ಟನೋ ಎಂಬಂತೆಯೂ, ಅವರು ರಣದುಂದುಭಿಯು ಮೊಳಗುತ್ತಿರುವ ರಣಾಂಗಣದ ಮಧ್ಯದಲ್ಲೇ ಶಾಂತವಾಗಿ ಕಳೇಬರವನ್ನಿಟ್ಟರು. ಇವರ ಮರಣವಾರ್ತೆಯು ಯುದ್ಧಾಂಗಣದ ಮಿತ್ರಮಂಡಲಿಯ ಸೈನ್ಯದಲ್ಲೆಲ್ಲಾ ಬಹಳ ದುಃಖವನ್ನುಂಟುಮಾಡಿತು. ಪ್ರೀತಿಪಾತ್ರರಾದ ಹಿಂದೂಸ್ಥಾನ ಸೈನಿಕರಲ್ಲಂತೂ ಅನೇಕರು ಬಾಯ್ಬಿಟ್ಟು ಗೋಳಾಡಿದರು. ಬ್ರಿಟಿಷ್‌ಸಾಮ್ರಾಜ್ಯವೆಲ್ಲಾ ದುಃಖದಲ್ಲಿ ಮುಳುಗಿತು. ಸಾರ್ವಭೌಮ ದಂಪತಿಗಳು ತಮ್ಮ ಅನುತಾಪವನ್ನು ಗತಿಸಿದವರ ಕುಟುಂಬಕ್ಕೆ ತಿಳಿಯಿಸಿರುವರು. ಲಂಡನ್‌ಪಟ್ಟಣದ ಮುಖ್ಯ ದೇವಾಲಯಗಳಲ್ಲೆಲ್ಲಾ ದುಃಖಸೂಚಕ ಘಂಟಾವಾದನಗಳೂ ದೇವತಾಪ್ರಾರ್ಥನೆಗಳೂ ನಡೆದುವು. ಇವರ ಮೃತಿಯಿಂದ ಇಂಗ್ಲೀಷ್ ಪ್ರಪಂಚಕ್ಕೆ ಉಂಟಾದ ನಷ್ಟವನ್ನು ಆಂಗ್ಲದೇಶದ ಪತ್ರಿಕೆಗಳೆಲ್ಲವೂ ಪರಿಪರಿಯಾಗಿ ಹೇಳಿಕೊಂಡು ದುಃಖಿಸಿರುವುವಲ್ಲದೆ, ಫ್ರಾನ್ಸ್‌ದೇಶದ ಪತ್ರಿಕೆಗಳೂ ಹಾಗೆಯೇ ಮಾಡಿರುವುವು. ಮತ್ತು ಜರ್ಮನಿದೇಶದ ಪತ್ರಿಕೆಗಳು ಕೂಡ ಈ ಲಾರ್ಡ್‌ರವರ ಅಸಾಧಾರಣ ಗುಣಾತಿಶಯಗಳನ್ನು ಕೊಂಡಾಡಿ ವಿಷಾದಿಸಿರುವುವು.

ಅರ್ಲ್‌ರಾಬರ್ಟ್ಸ್‌ರವರ ಸಮಾಧಿಯನ್ನು ಪ್ರಸಿದ್ಧಸೇನಾನಿಗಳಾದ ನೆಲ್ಸನ್‌ರವರ ಸಮಾಧಿಯಮಗ್ಗುಲಲ್ಲೇ ಮಾಡಲು ಏರ್ಪಾಟಾಗಿದೆ.

ಫ್ರಾನ್ಸ್‌ದೇಶದ ವೋರಿಪಟ್ಟಣದಲ್ಲಿ (ಇದು ಸದ್ಯಃ ಇಂಗ್ಲೀಷ್‌ಸೈನ್ಯದ ಮುಖ್ಯ ಕಾರ್ಯಾಲಯಸ್ಥಾನವಾಗಿರುವ ಪಟ್ಟಣ) ಮೊದಲು ಲಾರ್ಡ್‌ರಾಬರ್ಟ್ಸ್‌ರವರ ಶವಪೇಟಿಕೆಯ ಉತ್ಸವವಾಯಿತು. ಆಗ ಆ ಪೆಟ್ಟಿಗೆಯನ್ನು ೮ ಮಂದಿ ಜನರಲ್‌ಗಳು ಹೊತ್ತಿದ್ದರು. ಇಂಗ್ಲೀಷ್-ಫ್ರೆಂಚ್-ಇಂಡಿಯನ್ ಸೈನ್ಯಗಳು ಸಾಯುಧಪಾಣಿಗಳಾಗಿ ಹಿಂದುಮುಂದೆ ಹೋಗುತ್ತಿದ್ದರು. ಪ್ರಿನ್ಸ್‌ಆಫ್‌ವೇಲ್ಸ್‌ರವರೂ, ಕನಾಟ್‌ಪ್ರಭುಗಳೂ, ಸರ್ ಜಾನ್-ಫ್ರೆಂಚ್‌ರವರೂ, ಫ್ರಾನ್ಸ್-ಬೆಲ್ಜಿಯಮ್ಮುಗಳ ಪ್ರತಿನಿಧಿಗಳೂ ಜತೆಯಲ್ಲಿ ಹೋಗುತ್ತಿದ್ದರು. ಆ ಪಟ್ಟಣದ ದೇವಾಲಯದಲ್ಲಿ ದೇವಪ್ರಾರ್ಥನೆಯಾದ ನಂತರ ಮೋಟಾರ್‌ಬಂಡಿಯಲ್ಲಿ ಪೆಟ್ಟಿಗೆಯನ್ನಿಟ್ಟು ಬೋಲೋನ್‌ನಗರಕ್ಕೆ ಸಾಗಿಸಿಕೊಂಡು ಹೋದರು. ಆಗ ಮೇಲ್ಗಡೆಯಲ್ಲಿ ಒಂದು ಆಕಾಶವಿಮಾನವು ಕಾವಲಾಗಿ ಹೋಗುತ್ತಿದ್ದಿತು ಆ ಪಟ್ಟಣದಲ್ಲೂ ಉತ್ಸವವು ವಿಜೃಂಭಣೆಯಿಂದಾಯಿತು. ಇಲ್ಲಿಂದ ಶವಪೇಟಿಕೆಯನ್ನು ಹಡಗಿನಮೇಲೆ ಏರಿಸಿದರು. ಹಡಗು ಸಾಗುವಾಗ ಕರುಣಾರಸದ ವಾದ್ಯವಾದನಗಳು ಗಂಭೀರವಾಗಿ ಆಗುತ್ತಿದ್ದುವು. ಅಲ್ಲಿಂದ ರಾಬರ್ಟ್ಸ್‌ಪ್ರಭುಗಳ ಶವಪೇಟಿಕೆಯನ್ನು ಸೇನಾಮರ್ಯಾದೆಯೊಡನೆ ಫೋಕ್‌ಸ್ಟನ್‌ಪಟ್ಟಣಕ್ಕೆ ಸಾಗಿಸಿಕೊಂಡುಹೋಗಿ ಅಲ್ಲಿನದೇವಾಲಯದಲ್ಲಿಟ್ಟರು. ಆ ಶವದ ಜತೆಯಲ್ಲಿ ಭಾರತೀಯರೊಳಗೆ ಸರ್ ಪ್ರತಾಪಸಿಂಗ್‌ರವರೂ, ಜೋಧಪುರದ ಮಹಾರಾಜರೂ, ಕೃಷ್ಣಘರ್ ಮಹಾರಾಜರೂ, ಇನ್ನಿಬ್ಬರು ಹಿಂದೂಸ್ಥಾನದ ಸೈನಿಕೋದ್ಯೋಗಸ್ಥರೂ ಹೋಗಿದ್ದರು.

ಪ್ರತಿಯೊಂದು ರಾಷ್ಟ್ರಗಳಿಂದಲೂ ಲಾರ್ಡ್‌ರಾಬರ್ಟ್ಸ್‌ರವರ ಪತ್ನಿಯವರ ಹೆಸರಿಗೆ ಅನುತಾಪಪ್ರದರ್ಶಕವಾದ ತಂತೀವಾರ್ತೆಗಳು ಸಾಲುಗಟ್ಟಿ ಬರುತ್ತಿವೆ. ನಮ್ಮ ವೈಸ್ರಾಯರೂ, ಈ ದೇಶದ ಸರ್ವಸೈನಿಕರ ಪಕ್ಷದಿಂದ ಸರ್ವಸೇನಾಧಿಪತಿಗಳೂ ಸಹ ತಂತೀವಾರ್ತೆಯನ್ನು ಕಳುಹಿಸಿದ್ದರು. ಇಂಗ್ಲೆಂಡಿನ ೨ ಪಾರ್ಲಿಮೆಂಟಿನವರೂ ಸಹ ಸಂತಾಪವನ್ನು ವ್ಯಕ್ತಪಡಿಸಿದರು. ಗುರುವಾರದದಿನ ಇವರ ಶವವನ್ನು ಲಂಡನ್‌ಪಟ್ಟಣಕ್ಕೆ ಸಾಗಿಸಿದರು. ಸೆಂಟ್‌ಪಾಲ್ಸ್ ದೇವಾಲಯದಲ್ಲಿ ಇವರ ಶವವನ್ನು ಸ್ಥಾಪಿಸುವುದಕ್ಕೆ ಅವರ ಕುಟುಂಬದವರು ಅನುಮತಿ ಕೊಟ್ಟಿರುವುದರಿಂದ ಅದರಂತೆ ನಡೆಯುವುದರಲ್ಲಿದೆ.

ಭರತಖಂಡದ ವಾರ್ತಾಸಂಗ್ರಹವು.

ಬರೋಡಾ ಮಹಾರಾಜರವರು ತಮ್ಮ ಪತ್ನಿಯ ಸಮೇತ ಡಿಸೆಂಬರ್ ತಾ॥ ೪ ರಲ್ಲಿ ಬೊಂಬಾಯಿಗೆ ಬಂದಿಳಿಯುವರೆಂದು ಗೊತ್ತಾಗುತ್ತದೆ.

ಭರತಖಂಡದ ರಾಜರು ಮಹಾರಾಜರುಗಳೊಳಗೆ ಇನ್ನೂ ಕೆಲರು ಯುದ್ಧರಂಗಕ್ಕೆ ತಾವು ಹೋಗಲು ಸಿದ್ಧರಾಗಿರುವೆವೆಂದು ಬಿನ್ನಯಿಸಿಕೊಂಡಿರುವರು.

ಯುದ್ಧರಂಗದಲ್ಲಿ ಪೆಟ್ಟುತಿಂದ ಭಾರತೀಯಸೈನಿಕರ ಚಿಕಿತ್ಸಾರ್ಥವಾಗಿ ಮದ್ರಾಸು ಅಧಿಪತ್ಯದವರಿಂದ ಕಳುಹಲ್ಪಡಲು ಗೊತ್ತಾಗಿದ್ದ « ಆಸ್ಪತ್ರೆಯಹಡಗು ” ಕಳೆದ ತಾ॥ ೧೦ರಲ್ಲಿ ಮದ್ರಾಸುರೇವೆಯನ್ನು ಬಿಟ್ಟು ಪ್ರಯಾಣಮಾಡಿತು.

ಕಲ್ಕತ್ತಾದಲ್ಲಿ ಹೊಸದಾಗಿ ಸಮುದ್ರತೀರಬಂಧ (ಡಾಕ್) ಒಂದನ್ನು ರಚಿಸುತ್ತಿರುವರು. ಇದಕ್ಕೆ ನಮ್ಮ ಸಾರ್ವಭೌಮರ ಹೆಸರನ್ನಿಡಲು ಕಲ್ಕತ್ತಾ ಕಾರ್ಪೋರೇಷನ್ನಿನವರು ಪ್ರಾರ್ಥಿಸಿಕೊಂಡಿರಲು, ಅವರು ಸಾನುಕಂಪವಾಗಿ ಅನುಮತಿಯನ್ನು ಕೊಟ್ಟಿರುವರು.

ಗ್ವಾಲಿಯರ್‌ಸಂಸ್ಥಾನದ ಪ್ರಜೆಗಳಲ್ಲಿ ೩೦ ಸಾವಿರ ಜನರು ಸೈನ್ಯದಲ್ಲಿ ಸೇರಿ ಯುದ್ಧಕ್ಕೆ ಹೊರಡಲು ಸಿದ್ಧರಾಗಿರುವೆವೆಂದು ಬಿನ್ನಯಿಸಿಕೊಂಡಿರುವರೆಂದೂ ಅದರಂತೆ ಬಿಕಾನೀರ್ ಸಂಸ್ಥಾನದ ಪ್ರಜೆಗಳೂ ಶ್ರುತಪಡಿಸಿಕೊಂಡಿರುವರೆಂದೂ ಪ್ರಕಟವಾಗಿದೆ.

ಬರ್ಮಾದಲ್ಲಿ ಬತ್ತದಬೆಳೆಯು ಕಳೆದವರ್ಷದಲ್ಲಿ ೩೧೦೯೬೦೦೦ ಎಕರೆಗಳಲ್ಲಿ ಮಾಡಲ್ಪಟ್ಟಿದ್ದಿತು ಈ ವರ್ಷವಾದರೋ ೧೦೯೬೦೩೩ ಎಕರೆಗಳಲ್ಲಿ ಎಂದರೆ ಕಳೆದ ವರ್ಷಕ್ಕಿಂತ ೯೬೩೩ ಎಕರೆಗಳಲ್ಲಿ ಹೆಚ್ಚಾಗಿ ಮಾಡಲ್ಪಟ್ಟಿದೆ. ಬೆಳ ಚೆನ್ನಾಗಿದೆ. ಕೆಲಕಡೆ ಮಳೆಬೇಕಾಗಿದೆ. ಕೆಲಕಡೆ ಹೆಚ್ಚ ಪ್ರವಾಹವು ಬಂದು ಪೈರು ಕೊಚ್ಚಿ ಹೋಯಿತು.

ಕಲ್ಕತ್ತಾದಲ್ಲಿ ಪ್ರಕಟವಾಗುವ ಒಂದುವಾರಪತ್ರಿಕೆಯ ೨ ಸಂಚಿಕೆಗಳಲ್ಲಿ ಯುದ್ಧ ವಿಷಯಕ ಲೇಖನವನ್ನು ಬ ಯವಾಗ್ಗೆ ಆಂಗ್ಲ ಸಾರ್ವಭೌಮರ ವಿಷಯದಲ್ಲಿಯ ಆಂಗ್ಲ ಜನರ ವಿಷಯದಲ್ಲಿಯೂ ಭರತಖಂಡದ ಪ್ರಜೆಗಳ ಮನಸ್ಸು ಕೆಡುವ ಅಭಿಪ್ರಾಯವನ್ನು ಹುಟ್ಟಿಸುವಂತಹ ತ್ರಗಳನ್ನೂ ಬರೆವಣಿಗೆಯನ್ನೂ ಮುದ್ರಿಸಿದ್ದುದರಿಂದ ಸರ ರದವರು ಅದರ ಮುದ್ರಣಾಲಯವನ್ನೂ, ಆ ವಾರದ ಸಂ ಕೆಗಳನ್ನೂ ಮುಟ್ಟುಗೋಲು ಹಾಕಿ ವಶಪಡಿಸಿಕೊಂಡರ

ಭರತಖಂಡದಲ್ಲಿ ಹತ್ತಿಯ ಮಾರಾಟವು ಬಹಳ ಮಂ ವಾಗಿದೆ. ಹತ್ತಿಯ ಬೇಸಾಯವನ್ನು ಮಾಡುವುದಕ್ಕಿಂ ಗೋಧುಮೆಯ ಬೇಸಾಯವನ್ನು ಈ ವರ್ಷ ಮಾಡುವುದು ಕ್ಷೇ ಮಕರವೆಂದು ಬೊಂಬಾಯಿ ಸರ್ಕಾರದವರು ಸೂಚಿಸಿ ರು. ಹತ್ತಿಯ ಸಂಬಂಧವಾಗಿ ಪ್ರಕೃತದಲ್ಲುಂಟಾಗಿರು ಶೋಚನೀಯ ಸ್ಥಿತಿಯನ್ನು ಕುರಿತು ನಿವಾರಣೋಪ ಯವನ್ನು ಯೋಚಿಸಲು ಬೊಂಬಾಯಿ ಸರ್ಕಾರದವರು ರತಖಂಡದ ಸರ್ಕಾರಕ್ಕೆ ಬಿನ್ನಯಿಸಿಕೊಂಡು ಇದರ ನಿವಾ ರಣೆಗೆ ಒಂದು ಸಂಘವನ್ನು ಏರ್ಪಡಿಸುವುದು ಅವಶ್ಯಕವೆ ದು ಸೂಚಿಸಿರಲು. ಇಂಡ್ಯಾ ಸರ್ಕಾರದವರು ಅಂಥ ಸಭೆಯೊ ದನ್ನು ನಾಳೆ ತಾ॥ ೩೦ನೆಯ ಸೋಮವಾರ ದಿಲ್ಲೀಪಟ್ಟಣದ ಜರುಗಿಸಲು ನಿರ್ಧರಿಸಿದ್ದಾರೆ. ಅದಕ್ಕೆ ಎಲ್ಲ ಅಧಿಪತ್ಯದಿಂ ಲೂ ಕೆಲಕೆಲ ಪ್ರತಿನಿಧಿಗಳು ಹೋಗಿ ಸೇರುತ್ತಾರೆ.

ಈಗತಾನೇ ಸಮುದ್ರಪ್ರಯಾಣಕ್ಕೆ ಹೊಸದಾಗಿ ಸಿದ ವಾದ ಕೇಜರ್, ಇ, ಹಿಂದ್ ಎಂಬ ಅಂಚೆಯ ಹಡಗಿನ ಮೆ ಲೆ ಶ್ರೀಯುತ ಗೋಖಲೆಯವರು ಸೀಮೆಯಿಂದ ಪ್ರಯಾಣ ಮಾಡಿ ಕಳೆದ ತಾ॥ ೨೩ ರಲ್ಲಿ ಬೊಂಬಾಯಿಗೆ ಬಂದಿಳಿದು ಪುಣೆಯಲ್ಲಿರುವ ತಮ್ಮ ಮನೆಗೆ ಹೋಗಿ ಸೇರಿದರು. ವರ ಸಮುದ್ರಪ್ರಯಾಣವು ೨೦ ದಿನಗಳ ಕಾಲ ಜರುಗಿತ ಇದುವರೆಗೆ ಯಾವಕಂಪೆನಿಯವರ ಹಡಗೂ ಇಷ್ಟುಬೇಗ ಬಂದಿರಲಿಲ್ಲವಂತೆ. ಇದು ಜಿಬ್ರಾಲ್ಟರನ್ನು ಸುತ್ತಿಕೊಂಡ ಬಂದಿತು. ಇದು ಹೊರಟಮೇಲೆ ಬೊಂಬಾಯಿಯನ್ನು ಸೆ ರುವವರೆಗೂ ತಂತ್ರಿಯಸಂಬಂಧವಿಲ್ಲದ ವಾರ್ತೆಯು ಇದರಿ ದ ಕೊಡಲ್ಪಡಲಿಲ್ಲ. ಏಕೆಂದರೆ-ಇದರ ಪ್ರಯಾಣವು ಎಮ ನ್ನಿನಂಥ ಶತ್ರುಗಳ ಹಡಗಿಗೆ ತಿಳಿಯಬಾರದೆಂದು

ಆ॥ ಗೋಖಲೆಯವರು ಬರುವ ಡಿಸೆಂಬರ್ ತಿಂಗ ಕೊನೆಯವರೆಗೂ ಪುಣೆಯಲ್ಲೇ ಇದ್ದು ಜನವರಿ ತಿಂಗಳ ದಿಲ್ಲಿಯಲ್ಲಿ ಜರುಗುವ ಸಾಮ್ರಾಜ್ಯಶಾಸನ ವಿಧಾಯಕಸಭೆ ದಯಮಾಡಿಸುವವರಾಗಿದ್ದಾರೆ. ಇವರು ಪಬ್ಲಿಕ್ ಸರ್ವಿಸ ಕಮಿಷನ್ನಿನ ಕೆಲಸಕ್ಕಾಗಿ ಬರುವ ಏಪ್ರಿಲ್ ತಿಂಗಳಲ್ಲಿ ಸಿ ಮೆಗೆ ಹೋಗುವವರಾಗಿದ್ದಾರೆಂದೂ, ಚಳಿಗಾಲದಲ್ಲಿ ಇ ಗ್ಲೆಂಡಿನಲ್ಲಿರುವುದು ತಮ್ಮ ಆರೋಗ್ಯಕ್ಕೆ ಹಾನಿಕರವೆಂದ ಸ್ವದೇಶಕ್ಕೆ ಬಂದಿರುವರೆಂದೂ, ಈಗಿನ ಪಬ್ಲಿಕ್ ಸರ್ವೀಸ ಕಮಿಷನ್ ಏರ್ಪಾಟಿನಿಂದ ಭರತಖಂಡಕ್ಕೆ ಸ್ವಲ್ಪ ಹಿ ವುಂಟಾಗುವುದೆಂದು ಇವರು ಅಭಿಪ್ರಾಯಪಟ್ಟಿರುವರೆಂ ಇವರೊಡನೆ ಸಂಭಾಷಿಸಿದವರೊಡನೆ ನುಡಿದಿರುವರು. ಮ ತ್ತು ಈಗಿನ ಯುದ್ಧಪ್ರಸಕ್ತಿಯನ್ನು ಕುರಿತು ಮಾತನಾ ಡುವಾಗ ಈಗಿನ ವಿಷಮಸ್ಥಿತಿಯಲ್ಲಿ ನಾವು ಇಂಗ್ಲೀಷ್ ಪ ಭುತ್ವದವರಿಗೆ ಎಲ್ಲವಿಧದ ಸಹಾಯವನ್ನೂ ಮಾಡುವುದ ಅಗತ್ಯವಾಗಿದೆಯೆಂದೂ, ಅದರಂತೆ ಎಲ್ಲವರ್ಗದವರೂ ಆಚ ರಿಸುತ್ತಿರುವುದು ಸಂತೋಷಪ್ರದವಾಗಿದೆಯೆಂದೂ ಇದರಿ ದ ವಿಶೇಷವಾದ ಫಲಸಿದ್ಧಿಗಳು ಹಠಾತ್ತಾಗಿ ಉಂಟಾಗ ಹೋದರೂ, ಭರತಖಂಡಕ್ಕೂ ಇಂಗ್ಲೆಂಡಿಗೂ ಇರುವ ರಾ ಜಕೀಯವ್ಯವಹಾರ ಸಂಬಂಧದಲ್ಲಿ ಬಹಳ ಮಾರ್ಪುಗಳ ಉಂಟಾಗುವುವೆಂದೂ, ನಮ್ಮದೇಶದ ಸುಪ್ರಸಿದ್ಧ ದೇಶಾ ಮಾನಿಗಳಾದ ರಾಜಾರಾಮಮೋಹನ ರಾಯರವರಿಂದ ಡಿದು ದಾದಾಬಾಯಿ ನೌರೋಜಿಗಳ ವರೆಗಿನ ಪ್ರಜಾನ ಯಕರು ಈ ನಮ್ಮ ಭರತಖಂಡಕ್ಕೆ ಯಾವವಿಧವಾದ ರಾ ಕೀಯಸ್ಥಾನವು ದೊರೆಯಬೇಕೆಂದು ಕೋರುತ್ತಿದ್ದರೋ ಅಂಥ ಕೋರಿಕೆಗಳೆಲ್ಲವೂ, ಈಗ ನಮ್ಮಮೇಲೆ ಇಂಗ್ಲೀಷ ಪ್ರಭುತ್ವದವರಿಗೆ ಉಂಟಾಗಿರುವ ಉತ್ತಮಾಭಿಪ್ರಾಯದಿ ದ ಈಡೇರುವ ಕಾಲವು ಸಮೀಪಿಸಿರುವುದೆಂದೂ ನು ದಿರುವರು.

ವಿಶೇಷವಾರ್ತಾಸಂಗ್ರಹ.

ಇಂಗ್ಲೆಂಡ್ ಸರ್ಕಾರದವರು ಯುದ್ಧದ ವೆಚ್ಚಕ್ಕಾ ೩೫೦ ಕೋಟಿ ರೂ.ಗಳನ್ನು ಸಾಲ ಮಾಡುವವರಾಗಿದ ರೆಂದು ಡೇಲಿ ನ್ಯೂಸ್ ಪತ್ರಿಕೆಯು ಹೇಳುತ್ತದೆ.

ಜರ್ಮನ್‌ಸೈನ್ಯದಲ್ಲಿ ಇದುವರೆಗೆ ಏಟನ್ನು ತಿಂದವರು ತ್ತವರು ಸೆರೆಯಾದವರೆಲ್ಲಾ ಸೇರಿ ಒಟ್ಟು ೧೭ ಇಂದ ಲಕ್ಷ ಮಂದಿಗಳವರೆಗೆ ನಷ್ಟವಾಗಿರುವರೆಂದು ಲೆಕ್ಕಹಾ ಲ್ಪಟ್ಟಿದ್ದಾರೆ.

ಫ್ರಾನ್ಸ್‌ದೇಶದ ಯುದ್ಧಭೂಮಿಯಲ್ಲಿ ಯುದ್ಧಾರಂಭಕಾಲದಿಂದ ಅಕ್ಟೋಬರ್ ತಾ॥ ೧ ರ ವರೆಗೆ ಎಂದರೆ ೩ ತಿಂಗಳಕಾಲ ನಡೆದ ಯುದ್ಧದಲ್ಲಿ ಆಂಗ್ಲಪ್ರಭುತ್ವದವರ ಕಡೆಯ ಸೈನ್ಯದಲ್ಲಿ ಸ್ವಲ್ಪ ಹೆಚ್ಚುಕಡಿಮೆ ೫೭೦೦೦ ಮಂದಿ ಇಂಗ್ಲೀಷ್‌ಸೈನಿಕರು ನಷ್ಟರಾಗಿರುವರು. ಫ್ರೆಂಚ್-ಬೆಲ್ಜಿಯಂ-ರಷ್ಯಾ--ಜರ್ಮನಿಸೈನಿಕರಲ್ಲಿ ಎಷ್ಟುಮಂದಿ ನಷ್ಟರಾಗಿರುವರೋ ತಿಳಿಯದೆಂದು ಇಂಗ್ಲೀಷ್ ಮುಖ್ಯಮಂತ್ರಿಯವರು ಹೇಳಿರುವರು.

ತಟಸ್ಥವಾಗಿದ್ದ ಲಕ್ಸೆಂಬರ್ಗ್ ದೇಶದಮೇಲೆ ಜರ್ಮನ್‌ದೇಶದವರು ತಮ್ಮ ಸೈನ್ಯವನ್ನು ನುಗ್ಗಿಸಿಕೊಂಡು ಫ್ರಾನ್ಸ್‌ದೇಶದಮೇಲೆ ಹೋದರಷ್ಟೆ. ಹೀಗೆ ಲಕ್ಸೆಂಬರ್ಗಿನ ತಾಟಸ್ಥ್ಯಕ್ಕೆ ಭಂಗವುಂಟುಮಾಡಿದುದಕ್ಕಾಗಿ ಜರ್ಮನರು ಆ ದೇಶದ ರಾಣಿಗೆ ಸ್ವಲ್ಪ ಪರಿಹಾರದ್ರವ್ಯವನ್ನು ಕೊಟ್ಟರಂತೆ. ಈ ಸಂಗತಿಯನ್ನು ಆ ರಾಣಿಯು ತನ್ನ ಪಾರ್ಲಿಮೆಂಟನ್ನು ಮೊನ್ನೆತಾನೇ ಆರಂಭಿಸುವಾಗ ಸಭಿಕರಿಗೆ ತಿಳಿಯಿಸಿರುವರು.

ಇಂಗ್ಲೆಂಡ್ ಸರ್ಕಾರದವರು ಈಗ ಮಾಡಲಿಕ್ಕಿರುವ ಸಾಲದ ಹಣವೆಲ್ಲಾ ಸೇರಿದರೆ ಬರುವ ಏಪ್ರಿಲ್ ತಿಂಗಳವರೆಗೆ ಯುದ್ಧಕ್ಕೆ ಬೇಕಾಗುವಷ್ಟು ವೆಚ್ಚಕ್ಕೆಲ್ಲಾ ಸಾಕಾಗುವುದು. ಮತ್ತು ಈ ಹಣದಿಂದ ಅವರ ಮಿತ್ರಮಂಡಲಿಗೆ ಸೇರಿದ ದೇಶಗಳಿಗೂ ಕೂಡ ಸಹಾಯಮಾಡಬಹುದೆಂದು ಯೋಚಿಸಲ್ಪಟ್ಟಿದೆ. ಬೆಲ್ಜಿಯಂದೇಶಕ್ಕೆ ಇದುವರೆಗೆ ೩೦ ಲಕ್ಷ ಪೌನುಗಳನ್ನು ಬಡ್ಡಿಯಿಲ್ಲದೆ ಸಾಲವಾಗಿ ಕೊಟ್ಟಿದ್ದಾರೆ. ಸರ್ವಿಯಾಕ್ಕೆ ೮೦ ಲಕ್ಷ ಪೌನುಗಳನ್ನು ಕೊಟ್ಟಿದ್ದಾರೆ

ಹಿಂದೂದೇಶದ ಸೈನಿಕರ ವಿಷಯವಾಗಿ ಒಬ್ಬ ಫ್ರೆಂಚ್ ಅಧಿಕಾರಿಯು ಬರೆಯುವಾಗ ಅವರ ಸಹನವನ್ನೂ ಯುದ್ಧನೈಪುಣ್ಯವನ್ನೂ ಕೊಂಡಾಡಿ, ಅವರು ಮರಣಭಯವನ್ನು ತಿರಸ್ಕರಿಸಿ ಶತ್ರುಗಳ ಇದಿರಿಗೆ ನಿಂತುಕೊಳ್ಳುವುದರಿಂದ ಶತ್ರುಗಳು ಅವರಮೇಲೆ ಬಹಳ ಬಲವಾಗಿ ಫಿರಂಗಿಗುಂಡುಗಳ ಮಳೆಯನ್ನು ಸುರಿಸುವುದು ಅವರಿಗೆ ಸುಲಭವಾಗಿದೆ. ಆದುದರಿಂದ ಇವರನ್ನು ಆ ಫಿರಂಗಿಗಳ ಬಾಯಿಯ ಇದಿರಾಗಿ ಮರೆಯಿಲ್ಲದೆ ನಿಲ್ಲಿಸುವಂತೆ ಮಾಡಬಾರದು ಎಂದು ತಿಳಿಯಿಸಿರುತ್ತಾನೆ.

ಆಂಗ್ಲಪ್ರಭುತ್ವದವರು ತಮ್ಮ ಶಾಶ್ವತಸೈನ್ಯದ ಜತೆಗೆ ಹೊಸದಾಗಿ ೧೦ ಲಕ್ಷ ಸೈನಿಕರನ್ನು ಕೂಡಿಸಿಕೊಂಡರಷ್ಟೆ. ಇದಲ್ಲದೆ ಇನ್ನೂ ೧೦ ಲಕ್ಷ ಸೈನಿಕರನ್ನು ಕೂಡಿಸಿಕೊಳ್ಳುವುದಕ್ಕೂ ಯುದ್ಧದ ವೆಚ್ಚಕ್ಕಾಗಿ ಮುನ್ನೂರುಕೋಟಿ ರೂ.ಗಳನ್ನು ಸಾಲವಾಗಿ ತೆಗೆದುಕೊಳ್ಳುವುದಕ್ಕೂ ಮುಖ್ಯಮಂತ್ರಿಯವರು ಪಾರ್ಲಿಮೆಂಟಿನ ಅನುಮತಿಯನ್ನು ಕೇಳಿರುವರೆಂದು ಪ್ರಕಟವಾಗಿದೆ. ಇದಲ್ಲದೆ ಯುದ್ಧದ ವೆಚ್ಚಕ್ಕಾಗಿ ಆದಾಯದ ತೆರಿಗೆಯನ್ನು ಇನ್ನಷ್ಟು ಹೆಚ್ಚಿಸಿ ೩೫ ಕೋಟಿ ರೂ.ಗಳನ್ನು ಹುಟ್ಟಿಸಿಕೊಳ್ಳಲು ಇಂಗ್ಲೆಂಡಿನ ಕೋಶಾಧಿಕಾರಿಗಳು ಯೋಚಿಸಿರುವರಂತೆ.

ಈಜಿಪ್ಟಿನಲ್ಲಿರುವ ಮಹಮ್ಮದೀಯಮತಾಧಿಕಾರಿಗಳನೇಕರು ಒಂದು ಸಭೆಗೂಡಿದ್ದು ತಮ್ಮ ದೇಶದಲ್ಲಿರುವ ಮಹಮ್ಮದೀಯರೆಲ್ಲರೂ ಈಗಿನ ಸಂದರ್ಭದಲ್ಲಿ ಶಾಂತರಾಗಿರಬೇಕೆಂದೂ ಈಗಿನ ದಾರುಣ ಯುದ್ಧಾಗ್ನಿಯು ಪ್ರಪಂಚವನ್ನೆಲ್ಲಾ ವ್ಯಾಪಿಸುತ್ತಿದ್ದರೂ ಮಹಮ್ಮದ್ ಪೈಗಂಬರರ ಅನುಗ್ರಹದಿಂದ ಈಜಿಪ್ಟಿಗೆ ಅದರ ಸೆಲೆಯು ಸೋಕದಂತೆ ಆಗಿರುವುದೆಂದೂ ಯಾರೊಬ್ಬರೂ ದುಡುಕಿನ ಕೆಲಸವನ್ನೂ, ರಹಸ್ಯವಿಪ್ಲವಕೂಟಗಳನ್ನೂ ನಡೆಯಿಸಕೂಡದೆಂದೂ, ಶತ್ರುಪಕ್ಷದವರು ಮಾಡುವ ದುರ್ಬೋಧನೆಗೆ ಕಿವಿಗೊಡಬಾರದೆಂದೂ ಮೊದಲಾಗಿ ನಿರ್ಧರಿಸಿ, ಆವಿಷಯವನ್ನು ಯುರೋಪಿನಲ್ಲಿರುವ ಮಹಮ್ಮದೀಯರಿಗೆಲ್ಲಾ ತಿಳಿಯಪಡಿಸುವ ಕರಪತ್ರಗಳನ್ನು ಮುದ್ರಿಸಿ ಅದರಲ್ಲಿ—ಶಾಂತಿಪ್ರವರ್ತನ ಸನ್ಮಾರ್ಗವರ್ತನಗಳ ಪ್ರಯೋಜನವನ್ನು ಉಪದೇಶಿಸುವ ಕುರಾನಿನ ಕೆಲವು ವಾಕ್ಯಗಳನ್ನು ಸೇರಿಸಿದ್ದಾರೆ. ಆ ಪ್ರಕಟನ ಪತ್ರಿಕೆಗಳಲ್ಲಿ ೨೩ ಮಂದಿ ಪ್ರಮುಖರ ಹಸ್ತಾಕ್ಷರಗಳನ್ನು ಹಾಕಿದ್ದಾರೆ.

ಮೊದಲು ಗೊತ್ತಾಗಿದ್ದ ಮೇರೆಗೆ ಕಳೆದ ತಾ॥ ೧೧ ನೆ ಬುಧವಾರದ ದಿನ ಲಂಡನ್ನಿನಲ್ಲಿ ಪಾರ್ಲಿಮೆಂಟ್ ಸಭೆಯು ತೆರೆಯಲ್ಪಟ್ಟಿತು. ಚಕ್ರವರ್ತಿಯವರು ಸಭೆಗೆ ದಯಮಾಡಿಸುವಾಗ್ಗೆ ಇಂಗ್ಲೀಷು-ಹಿಂದೂಸೈನಿಕರ ಸಾಲುಗಳು ಬೀದಿಯ ಪಕ್ಕದಲ್ಲಿ ನಿಲ್ಲಿಸಲ್ಪಟ್ಟಿದ್ದುವು. ಚಕ್ರವರ್ತಿಯವರ ಆರಂಭಭಾಷಣದಲ್ಲಿ ಈಗಿನ ಯುದ್ಧದಲ್ಲಿ ಆಂಗ್ಲಪ್ರಭುತ್ವಕ್ಕೆ ಜಯವುಂಟಾಗುವ ವಿಷಯದಲ್ಲಿ ಸಾಮ್ರಾಜ್ಯದ ಪ್ರಜೆಗಳೆಲ್ಲರೂ ಸಾಹಸಪಡುತ್ತಿರುವುದನ್ನು ಅಭಿನಂದಿಸಿ, ಇಂಗ್ಲೆಂಡಿನವರಿಗೆ ಇಷ್ಟವಿಲ್ಲದಿದ್ದರೂ ವಿಧಿಯಿಲ್ಲದೆ ತುರ್ಕಿಯಮೇಲೆ ದಂಡೆತ್ತಿ ಹೋಗಬೇಕಾಗಿ ಬಂದ ಸಂದರ್ಭವನ್ನು ವಿಷಾದದಿಂದ ಸೂಚಿಸಿ, ಆದರೂ ಮಹಮ್ಮದೀಯ ಪ್ರಜೆಗಳೆಲ್ಲರೂ ಪ್ರಸ್ತುತಸ್ಥಿತಿಯನ್ನು ಬಲ್ಲವರಾದುದರಿಂದ ಯಥಾರೀತಿಯಂತೆಯೇ ತಾವು ರಾಜಭಕ್ತಿಯುಳ್ಳವರಾಗಿರುವುದನ್ನು ಸಂತೋಷದಿಂದ ಅರಿತೋರಿಸಿ, ಪ್ರಕೃತದಲ್ಲಿ ತಮ್ಮ ಸ್ಥಲ ಜಲ ಸೈನಿಕರು ತೋರಿಸುತ್ತಿರುವ ಧೈರ್ಯಶೌರ್ಯಸಾಹಸಗಳನ್ನು ಕೊಂಡಾಡಿ, ಆಂಗ್ಲಸಾಮ್ರಾಜ್ಯದ ಧರ್ಮರಕ್ಷಣೋದ್ದೇಶವು ಸಫಲಗೊಳ್ಳುವುದಕ್ಕಾಗಿ ಪ್ರಕೃತದ ಯುದ್ಧವು ತಮಗೆ ಜಯಶೀಲತೆಯನ್ನುಂಟುಮಾಡುವುದೆಂದೂ, ಯುದ್ಧಕಾರ್ಯಕ್ಕೆ ಧನಸಹಾಯವು ಅತಿ ಮುಖ್ಯವಾದುದರಿಂದ ಸಾಮ್ರಾಜ್ಯನಿವಾಸಿಗಳೆಲ್ಲಾ ಅದನ್ನು ಪರಿಪೂರಣಗೊಳಿಸುವುದು ಅವಶ್ಯಕವಾದುದೆಂದೂ ಅಪ್ಪಣೆಕೊಡಿಸಿದರು.

ಕಳೆದ ತಾ॥ ೯ ನೆಯ ರಾತ್ರಿ ನಮ್ಮ ಗೂರ್ಖಾಸೈನಿಕರು ಪಶ್ಚಿಮರಣರಂಗದಲ್ಲಿ ಒಂದುಕಡೆ ಶತ್ರುಗಳ ಕಂದಕವನ್ನಾಕ್ರಮಿಸಿಕೊಂಡಿದ್ದರು. ಆ ರಾತ್ರಿ ಒಬ್ಬ ಜರ್ಮನ್‌ಸೈನಿಕನು ಗೂರ್ಖಾಸಿಪಾಯಿಯ ಉಡುಪನ್ನು ಧರಿಸಿ, ಗೂರ್ಖಾಸಿಪಾಯಿಗಳಿದ್ದ ಕಂದಕಗಳ ಸಮೀಪಕ್ಕೆ ಬಂದು, « ನಿಮ್ಮ ಸೈನ್ಯಗಳು ಕಂದಕವನ್ನು ದಾಟಿ ಮುಂದಕ್ಕೆ ನಡೆಯಲಿ, ಹಿಂದಿನಿಂದ ಮತ್ತೊಂದು ಗೂರ್ಖಾಪಟಾಲಮು ಸಹಾಯಕ್ಕಾಗಿ ಇಲ್ಲಿಗೆ ಬರುತ್ತಿದೆ, ಅವಕ್ಕೆ ಈ ಕಂದಕವನ್ನು ಬಿಟ್ಟುಕೊಡಿ ” ಎಂದು ಹೇಳಿದನು. ಈ ಮಾತನ್ನು ಕೇಳಿ ಆ ಗೂರ್ಖಾಪಟಾಲಮ್ಮಿನ ಅಧಿಕಾರಿಗೆ ಏನೂ ತೋಚದೆ « ನೀನು ಯಾರು? ಎಲ್ಲಿಂದಬಂದೆ? ಎಂದು ಕೇಳಿದನು. « ನನ್ನ ಹಿಂದೆ ಬರುತ್ತಿರುವ ಗೂರ್ಖಾಸೈನ್ಯಕ್ಕೆ ಈ ಸ್ಥಲವನ್ನು ಬಿಟ್ಟುಕೊಟ್ಟು ನೀವು ಮುಂದಕ್ಕೆ ನಡೆಯಿರಿ ” ಎಂಬ ಮಾತನ್ನೇ ಮರಳಿಯೂ ನುಡಿದನಲ್ಲದೆ, ಅವನ ಬಾಯಿಂದ ಇನ್ನಾವ ಮಾತೂ ಬರಲಿಲ್ಲ. ಆಗ ಸೈನ್ಯಾಧಿಕಾರಿಗೆ ಸಂಶಯತೋರಿತು ಅದರಮೇಲೆ— « ನೀನು ಗೂರ್ಖಾಸೈನಿಕನಾದರೆ, ನೀನು ಈ ದೇಶಕ್ಕೆ ಯಾವಹಡಗಿನಮೇಲೆ ಬಂದೆ? ಹೇಳು ” ಎಂದು ಪ್ರಶ್ನೆಮಾಡಿದನು. ಇದಕ್ಕೆ ಥಟ್ಟನೆ ಉತ್ತರವನ್ನು ಹೇಳಲು ಆ ವೇಷಧಾರಿಗೆ ಬಾಯಿಬರದೆ ಕಾಲಿಗೆ ಬುದ್ಧಿ ಹೇಳಲು, ಅವನು ಮೂರುಮಾರುದೂರ ಓಡುವುದರೊಳಗಾಗಿ ಅಧಿಕಾರಿಯು ಅವನಮೇಲೆ ತುಪಾಕಿಯನ್ನು ಹೊಡೆಯಲು, ಗುಂಡಿನೇಟು ತಗುಲಿ ಆ ಮೋಸಗಾರನು ಸತ್ತುಬಿದ್ದನು. ಅವನಮಾತನ್ನು ನಂಬಿ ಗೂರ್ಖಾಸೈನಿಕರು ಆ ಸ್ಥಲವನ್ನು ಬಿಟ್ಟುಹೋಗಿದ್ದರೆ ದೊಡ್ಡವಿಪತ್ತಿಗೆ ಗುರಿಯಾಗುತ್ತಿದ್ದರು.

ಕಳೆದ ತಾ॥ ೧೬ ರ ರಾತ್ರಿ ಪಾರ್ಲಿಮೆಂಟ್ ಸಭೆಯು ಕೂಡಿದ್ದಾಗ ಯುದ್ಧಕ್ಕಾಗಿ ಮತ್ತೆ ೧೦ ಲಕ್ಷ ಸೈನಿಕರನ್ನು ಹೊಸದಾಗಿ ಕೂಡಿಸಿಕೊಳ್ಳುವುದಕ್ಕೂ, ವೆಚ್ಚಕ್ಕಾಗಿ ೨೨೫೦ ಲಕ್ಷ ಪೌನುಗಳನ್ನು ಉಪಯೋಗಿಸಿಕೊಳ್ಳುವುದಕ್ಕೂ ಸಭಿಕರು ಅನುಮೋದಿಸಿದರು. ಈ ವಿಷಯದಲ್ಲಿ ಸಭಿಕರ ಅನುಮತಿಯನ್ನು ಕೋರುವಾಗ ಮುಖ್ಯಮಂತ್ರಿಯವರು ಮಾಡಿದ ಭಾಷಣದಲ್ಲಿ— « ಇದುವರೆಗೆ ನೀವು ಯುದ್ಧದ ವೆಚ್ಚಕ್ಕಾಗಿ ಕೊಡಿಸಿದ ೧೦೦೦ ಲಕ್ಷ ಪೌನುಗಳೆಲ್ಲಾ ವ್ಯಯವಾಗಿ ಹೋದುವು. ಯುದ್ಧಪ್ರಯತ್ನವನ್ನು ಮಾಡುವುದಕ್ಕೂ, ನಮ್ಮ ಸಹಾಯಕ ದೇಶದವರಿಗೆ ಸಾಲವಾಗಿ ಕೊಡುವುದಕ್ಕೂ, ದೇಶಕ್ಕೆ ಅವಶ್ಯಕವಾದ ಆಹಾರ್ಯಪದಾರ್ಥಗಳನ್ನು ಮುಖ್ಯವಾಗಿ ಸಕ್ಕರೆಯನ್ನು ಕೊಂಡಿಡುವುದಕ್ಕೂ ಆ ಹಣವೆಲ್ಲಾ ವೆಚ್ಚವಾಗಿಹೋಗಿದೆ. ಬೆಲ್ಜಿಯಮ್ಮಿಗೆ ೧೦೦ ಲಕ್ಷ ಪೌನುಗಳಲ್ಲ ಸರ್ವಿಯಾಕ್ಕೆ ೮ ಲಕ್ಷ ಪೌನುಗಳೂ ಕೊಡಲ್ಪಟ್ಟಿವೆ. ಯುದ್ಧವು ಮುಗಿಯುವವರೆಗೂ ಈ ಹಣಕ್ಕೆ ಬಡ್ಡಿಯು ಬರುವುದಿಲ್ಲ. ಇದರಮೇಲೆ ನಮ್ಮ ಅಧಿನಿವೇಶ ರಾಜ್ಯಗಳಿಗೂ ಕೆಲವು ಹಣವನ್ನು ಸಾಲವಾಗಿ ಕೊಡಬೇಕಾಗಿದೆ. ದಕ್ಷಿಣಾಫ್ರಿಕಾ-ಆಸ್ಟ್ರೇಲಿಯಾ-ನ್ಯೂಜಿಲ್ಯಾಂಡ್-ಕಾನಡಾ ದೇಶಗಳಿಗೆ ಲಂಡನ್ ವರ್ತಕರೇ ಸಾಲವನ್ನು ಕೊಡಬಹುದಾಗಿದ್ದಿತು. ಆದರೆ ವರ್ತಕರನ್ನು ಅವರು ಪ್ರಾರ್ಥಿಸಬೇಕಾದ ಅವಶ್ಯಕತೆಯೇ ಉಂಟಾಗದಹಾಗೆ ನಾವೇ ಅವರಿಗೆಲ್ಲಾ ೩೦೦ ಲಕ್ಷ ಪೌನುಗಳನ್ನು ಸಾಲವಾಗಿ ಕೊಡುತ್ತೇವೆ. ಮತ್ತು ನಮ್ಮ ಸ್ವಂತದ ಭೂಜಲಸೈನ್ಯಗಳ ವೆಚ್ಚಕ್ಕೆ ೪೩೦ ಲಕ್ಷ ಪೌನುಗಳು ಉಳಿದಿವೆ. ಈಗ ಯುದ್ಧಕ್ಕಾಗಿ ದಿನ ೧ ಕ್ಕೆ ೧೦ ಲಕ್ಷ ಪೌನುಗಳ ವೆಚ್ಚವಾಗುತ್ತಿದೆ. ನೀವು ಮೊದಲು ಮಾಡಿಕೊಂಡಿದ್ದ «ಅಂದಾಜನ್ನು ” ಮೀರಿ ವೆಚ್ಚವಾಗಿರುವುದಿಲ್ಲ. ಈಗ ನೀವು ಅನುಮೋದಿಸುವುದಕ್ಕಿರುವ ೨೨೫೦ ಲಕ್ಷ ಪೌನುಗಳಲ್ಲಿ ಯುದ್ಧದ ವೆಚ್ಚಕ್ಕೆಲ್ಲಾ ಸಾಕಾಗಿಹೋಗುವುದೆಂದು ನಾನು ಹೇಳಲಾರೆ. ಇದು ಮುಂದಣ ಏಪ್ರಿಲ್‌ತಿಂಗಳವರೆಗೂ ಆಗುವ ವೆಚ್ಚಕ್ಕೆ ಸಾಕಾಗಬಹುದು, ಅಥವಾ ಸ್ವಲ್ಪ ಮಿಗಬಹುದು. ಎಂದು ಹೇಳಿದರು.

ಯುದ್ಧವಾರ್ತೆಯು.

ಕಳೆದ ವಾರದಲ್ಲಿ ಬಂದಿರುವ ಯುದ್ಧವಾರ್ತೆಯಲ್ಲಿ ಪಶ್ಚಿಮರಣರಂಗದ ವಿಷಯಗಳೆಲ್ಲಾ ಯಥಾಸ್ಥಿತವಾಗಿಯೇ ಇವೆ. ಜರ್ಮನರು ಈಪ್ರೆಸ್ಸನ್ನು ಸ್ವಾಧೀನಪಡಿಸಿಕೊಳ್ಳಬೇಕೆಂಬ ಆಸೆಯಿಂದ ಪ್ರತ್ಯಕ್ಷವಾಗಿ ಬಂದಿದ್ದ ಜರ್ಮನ್ ಚಕ್ರವರ್ತಿಯವರ ಕಠಿನಾಜ್ಞಾಪ್ರೋತ್ಸಾಹಗಳಿಂದ ಪ್ರೇರಿತನಾದ ಸೈನಿಕರು ಮತ್ತೊಂದಾವೃತ್ತಿ ಪಶ್ಚಿಮದ ಕಡೆಗೆ ಸಾಗಿಹೋಗಲು ಅಸಮಸಾಹಸ ಮಾಡಿದರು. ಅದಕ್ಕೆ ತಕ್ಕಂತೆ ಮಿತ್ರಮಂಡಲಿಯ ಸೈನ್ಯಗಳೂ ವಿಶೇಷವಾದ ಧೈರ್ಯಸ್ಥೈರ್ಯಪರಾಕ್ರಮಗಳಿಂದ ಇದಿರಿಸಿ, ಶತ್ರುಗಳನ್ನು ಹಿಮ್ಮೆಟ್ಟಿಸಿಬಿಟ್ಟಿದ್ದಾರೆಂದು ಗೊತ್ತಾಗುತ್ತದೆ. ಆದರೂ ಜರ್ಮನರು ಡಿಕ್ಸ್‌ಮೂಡ್ ಪಟ್ಟಣದ ಹತ್ತಿರ ಬಲವಾಗಿ ಕಾದಾಡಿ ತಮ್ಮಕಡೆ ೧೦೦ ಕ್ಕೆ ೯೦ ಮಂದಿಯಂತೆ ಕಳೆದುಕೊಂಡು ಆ ಪಟ್ಟಣವನ್ನು ವಶಪಡಿಸಿಕೊಂಡರು. ಆದರೂ ಅದರ ಸುತ್ತಮುತ್ತಿನ ಪ್ರದೇಶಗಳೆಲ್ಲಾ ಮಿತ್ರಮಂಡಲಿಯವರ ವಶದಲ್ಲೇ ಇವೆ. ಈಚೆಗೆ ಜರ್ಮನರನ್ನು ಪಶ್ಚಿಮದ ಕಡೆಯಿಂದ ಪೂರ್ವದ ಕಡೆಗೆ ಅಟ್ಟುವುದರಲ್ಲಿ ಮಿತ್ರಮಂಡಲಿಯವರು ವಿಶೇಷ ಪರಾಕ್ರಮವನ್ನು ತೋರಿಸುತ್ತಿದ್ದಾರೆ. ಇದುವರೆಗೆ ಜರ್ಮನರ ಕಡೆ ಹತರಾಗಿ ಹೋದ ಸೈನಿಕರು ಚೆನ್ನಾಗಿ ತಿದ್ದಿದ ಶೂರಭಟರಾಗಿದ್ದರು. ಅಂಥವರ ಗುಂಪು ಕಡಿಮೆಯಾಗಿ ಹೋದುದರಿಂದ ಜರ್ಮನಿಯವರು ಸಣ್ಣಸಣ್ಣ ಯುವಕರನ್ನೂ ಹುಡುಗರನ್ನೂ ಗುಂಪುಕೂಡಿಸಿ ಯುದ್ಧರಂಗಕ್ಕೆ ಕಳುಹಿಸುತ್ತಿದ್ದಾರೆ. ಇಂಥವರನ್ನು ಹಿಮ್ಮೆಟ್ಟಿಸುವುದು ಇನ್ನುಮುಂದೆ ಮಿತ್ರಮಂಡಲಿಯವರಿಗೆ ಹಿಂದಿನಷ್ಟು ವಿಶೇಷ ಕಷ್ಟವಾಗಿರಲಾರದು. ಜರ್ಮನ್ ಸೈನಿಕರಲ್ಲಿ ಹೆಚ್ಚಿನ ಬಲವೆಂದರೆ ಉತ್ಕೃಷ್ಟವಾದ ದೊಡ್ಡ ದೊಡ್ಡ ಫಿರಂಗಿಗಳು ಮಿತಿಮೀರಿರುವುದೇ ಆಗಿರುತ್ತದೆ. ಅವುಗಳ ಬಲವಿದ್ದರೆ ಜರ್ಮನ್ ಸೈನಿಕರು ಸಂಗೀನುಗಳ ಅಥವಾ ತುಪಾಕಿಯ ಯುದ್ಧದಲ್ಲಿ ಇಂಗ್ಲೀಷು-ಫ್ರೆಂಚ್-ಬೆಲ್ಜಿಯಂ-ಹಿಂದುಸ್ಥಾನದ ಸೈನಿಕರನ್ನು ಎಷ್ಟುಮಾತ್ರಕ್ಕೂ ಹೋಲಲಾರರೆಂದು ಎಷ್ಟೋ ಕಡೆಯ ಯುದ್ಧದಿಂದ ಗೊತ್ತಾಗಿಹೋಗಿದೆ. ಪೂರ್ವರಂಗದಲ್ಲಿ ಜರ್ಮನರಿಗೆ ಆಗುತ್ತಿರುವ ಪರಾಭವ ಪರಂಪರೆಯು ಮಿಗಿಲಾಗಿದೆ. ಅವರ ಸೈನಿಕರು ಶತ್ರುಗಳಿಗೆ ಬೆನ್ನು ತೋರಿಸಿ ಓಡುತ್ತಿರುವರೇ ಹೊರತು ಇದಿರಾಗಿ ರಷ್ಯನರನ್ನು ಹಿಮ್ಮೆಟ್ಟಿರುವ ಸ್ಥಿತಿಯೇ ಇರುವುದಿಲ್ಲ. ಪೂರ್ವಪ್ರಷ್ಯಾದಲ್ಲಿ ಜರ್ಮನ್ ಸೈನ್ಯಗಳು ಪೋಲ್ಯಾಂಡಿನವನ್ನು ಸಂಪೂರ್ಣವಾಗಿ ಬಿಟ್ಟು ಜರ್ಮನ್ ದೇಶದೊಳಕ್ಕೆ ನುಗ್ಗಿ ಹೋಗಿ ಸೇರಿಕೊಂಡಿವೆ. ಆ ಪೂರ್ವಭಾಗದ ಪ್ರಜೆಗಳಲ್ಲಿ ೧೦ ಲಕ್ಷ ಜನರು ದಿಗಿಲುಬಿದ್ದು ಜರ್ಮನ್‌ರಾಜಧಾನಿಗೆ ಹೋಗಿ ಸೇರಿಕೊಳ್ಳುತ್ತಿದ್ದಾರೆ ಜರ್ಮನರು ಬೆಲ್ಜಿಯಂದೇಶಕ್ಕೆ ನುಗ್ಗಿದಾಗ ಅಲ್ಲಿನ ಪಟ್ಟಣಗಳಿಗೆ ಯಾವ ಅವಸ್ಥೆಯನ್ನುಂಟುಮಾಡಿದರೋ ಅದೇತೆರದ ಅವಸ್ಥೆಯನ್ನು ಈಗ ರಷ್ಯನರು ಜರ್ಮನಿದೇಶದ ಪಟ್ಟಣಗಳಿಗೂ ಪ್ರಜೆಗಳಿಗೂ ಉಂಟುಮಾಡುತ್ತಿರುವರೆಂದು ಗೊತ್ತಾಗುತ್ತದೆ. ಅವರು ಹಿಡಿದುಕೊಂಡಿರುವ ಪಟ್ಟಣಗಳ ಪ್ರಜೆಗಳಮೇಲೆ ಅಪರಾಧದ್ರವ್ಯವನ್ನು ವಿಧಿಸಿ ಸುಲಿಯುತ್ತಿದ್ದಾರೆ. ಆಸ್ಟ್ರಿಯದ ಕ್ರಾಕೋಪಟ್ಟಣವನ್ನು ಫಿರಂಗಿಗುಂಡುಗಳಿಂದ ಸುಡುತ್ತಿದ್ದಾರೆ. ಆಸ್ಟ್ರಿಯನ್‌ಸೈನಿಕರು ರಷ್ಯನ್ನರನ್ನು ಹಿಮ್ಮೆಟ್ಟಿಸಲಾರದವರಾಗಿದ್ದಾರೆ. ಇತ್ತ ತುರ್ಕಿಯವರ ಸೈನ್ಯವು ಬಲವಾಗಿದ್ದ ಒಂದು ಕಡೆಯಲ್ಲಿ ರಷ್ಯನ್ನರ ಕಡೆ ತಕ್ಕಷ್ಟು ಬಲವಿದ್ದುದರಿಂದ ಅವರು ಯುದ್ಧವನ್ನು ಮಾಡುತ್ತಲೇ ಹಿಮ್ಮೆಟ್ಟಬೇಕಾಯಿತು. ಉಳಿದಕಡೆ ತುರ್ಕಿಗೆ ಅಪಜಯವು ಪ್ರಾಪ್ತವಾಗುತ್ತಲಿದೆ. ಒಟ್ಟಿನಲ್ಲಿ ಮಿತ್ರಮಂಡಲಿಯವರ ಸ್ಥಿತಿಯು ವಾರವಾರಕ್ಕೆ ಸುಮುಖವಾಗಿರುವುದೆಂದೇ ಹೇಳಬಹುದು.

ಪಶ್ಚಿಮರಣರಂಗ.

೨ ನೆಯಾವೃತ್ತಿ ಈಪ್ರೆಸ್ಸನ್ನು ಹಿಡಿದುಕೊಳ್ಳಲು ಜರ್ಮನರು ಮಾಡಿದ ಸಾಹಸಯುದ್ಧಕ್ರಮಗಳನ್ನು ಕಣ್ಣಾರನೋಡಿದ ವಾರ್ತಾಪ್ರಕಟಣಸಂಘದ ಪ್ರತಿನಿಧಿಯೊಬ್ಬನು ಅದರ ವಿವರವನ್ನು ಹೀಗೆ ತಿಳಿಯಿಸಿರುತ್ತಾನೆ:—ಬುಧವಾರದದಿನ ಸೂರ್ಯೋದಯವಾಗುವುದರೊಳಗೆ ಮೇನಿನ್—ಈಪ್ರೆಸ್ಸುಗಳ ಮಧ್ಯದಲ್ಲಿರುವ ಮಾರ್ಗದ ಉತ್ತರ ದಕ್ಷಿಣದಿಕ್ಕುಗಳಲ್ಲಿದ್ದ ನಮ್ಮ ಸೈನಿಕರ ಕಂದಕಗಳಮೇಲೆ ಜರ್ಮನರು ಫಿರಂಗಿಗುಂಡುಗಳನ್ನು ಹಾರಿಸಲುಪಕ್ರಮಿಸಿದರು. ಆಗ ಹಾರಿಸಿದಷ್ಟು ಭಯಂಕರವಾಗಿ ಜರ್ಮನರು ನಮ್ಮಮೇಲೆ ಯಾವಾಗಲೂ ಹಾರಿಸಿರಲಿಲ್ಲ. ಬಳಿಕ ಕೆಲ ಗಂಟೆಗಳ ತರುವಾಯ ಜರ್ಮನ್ ರಕ್ಷಕ (ರಿಜರ್ವ್) ಸೈನ್ಯವು ಈಪ್ರೆಸ್ಸನ್ನು ಹಿಡಿದುಕೊಳ್ಳುವುದಕ್ಕಾಗಿ ವಿಶ್ವಪ್ರಯತ್ನಗಳನ್ನು ಮಾಡಿತು. ಅದಕ್ಕೆ ಮೊದಲೇ ಜರ್ಮನರ ಕಾಲ್ಬಲವು ಈಪ್ರೆಸ್ಸನ್ನು ಹಿಡಿದುಕೊಳ್ಳಲುದ್ಯೋಗಿಸಿ ವಿಫಲವಾಗಿದ್ದಿತು. ರಿಜರ್ವ್‌ಸೇನೆಯು ನಮ್ಮಮೇಲೆ ವಿಲಿಕ್ಕಿನಿಂದ ಸಾಗಿಬಂದಿತು. ನಮ್ಮ ಸೇನೆಗಳು ಅವರಮೇಲೆ ಬಹು ಭಯಂಕರವಾಗಿ ಫಿರಂಗಿಗಳನ್ನೂ ತುಪಾಕಿಗಳನ್ನೂ ಹಾರಿಸಿದರು. ಅದರಿಂದ ಜರ್ಮನರ ಸೈನ್ಯದಲ್ಲಿ ಬಹುಜನರು ನಷ್ಟವಾದರು. ಆದರೂ ಜರ್ಮನರು ತೋರಿಸಿದ ಧೈರ್ಯಪರಾಕ್ರಮಗಳು ಆಶ್ಚರ್ಯಕರವಾಗಿದ್ದುವು. ಒಂದು ಪಕ್ಕದಲ್ಲಿ ನಮ್ಮವರು ಬೆಂಕಿಯಮಳೆಯನ್ನು ಕರೆಯುತ್ತಿದ್ದರೂ ಜರ್ಮನ್ ರಿಜರ್ವ್‌ಸೇನೆಯು ಮೂರುಕಡೆಯಲ್ಲಿ ನಮ್ಮ ಚೂಣಿಯ ಸೇನಾಭಾಗದೊಳಕ್ಕೆ ನುಗ್ಗಿ, ನಮ್ಮ ಕಂದಕಗಳ ಹಿಂಗಡೆಗೆ ಇದ್ದ ಕಾಡಿಗೆಹೋಗಿ ಸೇರಿತು. ಅವರಮೇಲೆ ನಮ್ಮವರು ಅತ್ಯಂತ ಭಯಂಕರವಾಗಿ ಫಿರಂಗಿಗುಂಡುಗಳನ್ನು ಹಾರಿಸಿ ಅಟ್ಟಿಬಿಟ್ಟರು. ಈ ಸಂದರ್ಭದಲ್ಲೇ ಜರ್ಮನರ ಕಾಲ್ಬಲವು ಮಾರ್ಗದ ದಕ್ಷಿಣಭಾಗದಿಂದ ನಮ್ಮ ಸೇನಾಮುಖವನ್ನು ದಾಟಿ ಹೋಗಬೇಕೆಂದು ಪ್ರಯತ್ನಿಸಿತು. ಆದರೆ ಆ ಪ್ರಯತ್ನವನ್ನೂ ನಮ್ಮವರು ಸಾಗಗೊಡಲಿಲ್ಲ.

ಅಡವಿಗಳಲ್ಲಿ ನಡೆಯುವ ಯುದ್ಧವು ಸಾಮಾನ್ಯವಾಗಿ ಭಯಂಕರವಾಗಿಯೂ ತುಮುಲವಾಗಿಯೂ ಇರುವುದು. ನಮ್ಮ ಕಂದಕಗಳ ಹಿಂದಿನ ಅಡವಿಗೆ ಬಂದು ಸೇರಿದ ಜರ್ಮನ್ ರಿಜರ್ವ್ ಸೇನೆಯಮೇಲೆ ನಮ್ಮವರು ಮಾಡಿದ ಅಭಿಯೋಗದಲ್ಲಿ ಅವರಿಗೆ ಹಿಂದಕ್ಕೂ ಮುಂದಕ್ಕೂ ತಪ್ಪಿಸಿಕೊಂಡು ಓಡಿಹೋಗಲು ಅವಕಾಶವಿಲ್ಲದೆಹೋದುದರಿಂದ ಅವರಲ್ಲಿ ಬಹುಮಂದಿ ಗುಂಡಿನೇಟಿನಿಂದ ಸತ್ತರು. ಉಳಿದವರೆಲ್ಲಾ ಸೆರೆಸಿಕ್ಕಿದರು. ಈಜರ್ ಕಾಲ್ವೆಯನ್ನು ದಾಟಿದ ಜರ್ಮನ್ ಸೈನ್ಯದಮೇಲೆ ಗುರುವಾರದ ರಾತ್ರಿ ಫ್ರೆಂಚ್ ಸೇನೆಯು ಬಿದ್ದು ಭಲ್ಲೆಗಳಿಂದ ಇರಿದು ಸೇನೆಯನ್ನೆಲ್ಲಾ ಧ್ವಂಸಮಾಡಿತು. ಮಿತ್ರಮಂಡಲಿಯ ಸೈನ್ಯವು ಎಲ್ಲಾದರೊಂದು ಕಡೆ ಹಿಂದಕ್ಕೆ ಹೋಗಬೇಕಾಗಿ ಬಂದರೆ ಸದ್ಯಃ ಹಾಗೆ ಮಾಡಿದ್ದು ಮತ್ತೆ ಸಮಯವನ್ನು ನೋಡಿ ಮುಂದಕ್ಕೆ ಸಾಗಿಹೋಗುತ್ತದೆ. ಜರ್ಮನರ ರಿಜರ್ವ್ ಸೇನೆಯು ಈಪ್ರಸನ್ನು ಹಿಡಿದುಕೊಳ್ಳಬೇಕೆಂದು ಮೊದಲೊಂದು ಸಲ ಮಾಡಿದ ಪ್ರಯತ್ನವು ವ್ಯರ್ಥವಾಗಿ ಹೋದುದರಿಂದ ಹೀಗೆ ೨ನೆಯ ಬಾರಿಯೂ ಜರ್ಮನ್ ಚಕ್ರವರ್ತಿಯ ಪ್ರತ್ಯಕ್ಷಪ್ರೋತ್ಸಾಹದಿಂದಲೇ ಪ್ರಯತ್ನಪಟ್ಟು ವಿಫಲವಾಯಿತು. ಕಳೆದಾವೃತ್ತಿ ಡಿಕ್ಸ್ಮೂಡಿನ ಬಳಿಯಲ್ಲಿ ನಡೆದ ಯುದ್ಧವು ಈ ಹಿಂದೆನಡೆದ ಎಲ್ಲಾ ಯುದ್ಧಗಳಿಗಿಂತಲೂ ಭಯಂಕರವಾದುದೆಂತಲೂ ,,ಪಟ್ಟಣವನ್ನು ನೀವು ವಶಪಡಿಸಿಕೊಳ್ಳಬೇಕು; ಇಲ್ಲದಿದ್ದರೆ ಪ್ರಾಣಸಮೇತ ನೀವು ಹಿಂದಕ್ಕೆ ಬರಕೂಡದು'' ಎಂದು ಜರ್ಮನ್ ಸೈನ್ಯಾಧಿಪತಿಯು ಆಗ ತಮ್ಮ ಸೈನಿಕರಿಗೆ ಆಜ್ಞಾಪಿಸಿದ್ದನೆಂತಲೂ, ಅದರ ಮೇಲೆ ವೀರಾವೇಶದಿಂದ ಮೊದಲಾವೃತ್ತಿ ಡಿಕ್ಸ್ಮೂಡಿನ ಮೇಲೆ ಸಾಗಿಹೋದ ಜರ್ಮನ್ ಸೈನಿಕರು ಮಿತ್ರಮಂಡಲಿಯವರ ಅಗ್ನಿವರ್ಷಕ್ಕೆ ಸಿಕ್ಕಿ ೧೦೦ಕ್ಕೆ ೯೦ ಮಂದಿಯಂತೆ ಹತರಾದರೆಂತಲೂ ಗೊತ್ತಾಗುತ್ತದೆ. ನ್ಯೂಪೋರ್ಟಿನಿಂದ ಡಿಕ್ಸ್ಮೂಡಿನವರೆಗೆ ಇನ್ನೂ ಫಿರಂಗಿಯುದ್ಧಗಳು ಆಗುತ್ತಲೇ ಇವೆ. ಮಿತ್ರಮಂಡಲಿಯ ಸೈನ್ಯಗಳು ಮೇರ್ಸಿ ದಿಬ್ಬಗಳ ಎತ್ತರವಾದ ಸುರಕ್ಷಿತಸ್ಥಲಗಳಿಗೆ ಏರಿಹೋಗಿವೆ. ಡಿಕ್ಸ್ಮೂಡಿಗೂ ಈಜರ್ ಕಾಲ್ವೆಗೂ ಮಧ್ಯದಲ್ಲಿ ಮಿತ್ರಮಂಡಲಿಯ ಸೈನ್ಯಗಳು ಮುಂದಕ್ಕೆ ಸಾಗಿಹೋಗಿವೆ. ಅರ್ಮೆಂಟೀರಿಸಿನಿಂದ ಲಾಬಸ್ಸಿಯವರೆಗೆ ಭಯಂಕರವಾದ ಫಿರಂಗಿ ಯುದ್ಧವಾಗುತ್ತಿದೆ. ವಯಲಿಯ ಹತ್ತಿರ ಜರ್ಮನರು ಎಸ್ಕರ್ ನದಿಯನ್ನು ದಾಟಲು ಪ್ರಯತ್ನಿಸಿ ಪರಾಜಿತರಾದರು. ರಹೀಮ್ಸ್ ಪ್ರಾಂತದಲ್ಲೂ ಫಿರಂಗಿಯುದ್ಧವಾಗುತ್ತಿದೆ. ಅರಗಾಮಿನ ಹತ್ತಿರ ಜರ್ಮನರ ಕಂದಕಗಳಲ್ಲಿ ಬಹಳಕಡೆ ನಮ್ಮವರು ಸಿಡಿಮದ್ದುಗಳನ್ನಿಟ್ಟರು. ಬೆಲ್ಜಿಯಂ ಸೈನಿಕರು ಮತ್ತೊಂದಾವೃತ್ತಿ ಸಮುದ್ರದ ಜಲವನ್ನು ಡಿಕ್ಸ್ಮೂಡಿನ ಹತ್ತಿರ ಶತ್ರುಸೈನ್ಯದ ಮೇಲೆ ಹರಿಯಿಸಿ ಮಹದನರ್ಥವನ್ನುಂಟುಮಾಡಿದ್ದಾರೆ. ನೀರುನುಗ್ಗಿ ಅವರ ಕಂದಕಗಳನ್ನೆಲ್ಲಾ ಮುಚ್ಚಿಬಿಟ್ಟಿತು. ತಮ್ಮ ಫಿರಂಗಿಗಳನ್ನು ಅಲ್ಲಲ್ಲೇ ಬಿಟ್ಟು ಜರ್ಮನರು ಪ್ರಾಣರಕ್ಷಣೆ ಮಾಡಿಕೊಳ್ಳುವುದೇ ಶ್ರಮವಾಯಿತು. ಈಗ ಜರ್ಮನರಿಗೆ ಮ್ಯೂಜ್ ನದಿಯ ಎಡಭಾಗದಲ್ಲಿ ಉಳಿದಿರುವ ಪ್ರದೇಶವು ಸ್ವಲ್ಪಮಾತ್ರವೇ ಆಗಿದೆ. ಅದೂ ದಿನದಿನಕ್ಕೆ ಕಳೆದುಹೋಗುತ್ತಲೇ ಇದೆ. ಈಚೆಗೆ ನಮ್ಮ ಭರತಖಂಡದ ಸೇನೆಯ ಮತ್ತೊಂದು ಭಾಗವು ಫ್ರಾನ್ಸಿನ ಮಾರ್ಸೇಲ್ಸಿನಲ್ಲಿಳಿದು ಸುಸ್ವಾಗತ ಮಾಡಲ್ಪಟ್ಟಿದೆ. ರಷ್ಯನರ ನೌಕಾದಳವು ಜರ್ಮನ್ ನೌಕಾದಳದ ಮೇಲೆ ಯುದ್ಧಮಾಡಲು ಬಾಲ್ಟಿಕ್ ಸಮುದ್ರದಿಂದ ಪ್ರಯಾಣವಾಗಿಹೋಗಿದೆ.

ಪೂರ್ವರಣರಂಗ.

ರಷ್ಯಾ-ಜರ್ಮನಿ.

ಲಿಕ್ಕೆನ ಬಳಿಯಲ್ಲಿ ಬಂದು ಹೋರಾಡಿದ ಜರ್ಮನ್ ಸೇನೆಗಳನ್ನು ರಷ್ಯನರು ಸೋಲಿಸಿ ಹಿಂದಕ್ಕೆ ಓಡಿಸಿದರು. ನೀಡನ್ಬರ್ಗಿಗೆ ಪೂರ್ವದಲ್ಲಿ ರಷ್ಯನರ ಅಶ್ವಸೈನ್ಯವು ಲೋಹಮಾರ್ಗವನ್ನು ಕಾಯುತ್ತಿದ್ದ ಜರ್ಮನ್ ಸೈನಿಕರನ್ನು ಹೊಡೆದೋಡಿಸಿ ಆ ಮಾರ್ಗವನ್ನು ವಶಪಡಿಸಿಕೊಂಡರು. ಒಂದು ನಿಲ್ದಾಣವನ್ನು ಹಿಡಿದುಕೊಂಡರು; ಎರಡು ಸೇತುಗಳನ್ನು ಧ್ವಂಸಮಾಡಿದರು. ರಷ್ಯನ್ ಅಶ್ವಸೈನ್ಯಗಳು ಜರ್ಮನ್ ಸ್ವಾರರನ್ನು ಕಲಿಸ್ಜು ಕಡೆಗೆ ಓಡಿಹೋಗುವಂತೆ ಮಾಡಿದರು. ಜರ್ಮನರು ಯುದ್ಧಾಂಗಣದಿಂದ ತಮ್ಮ ದೇಶಕ್ಕೆ ಓಡಿಹೋಗುವಾಗ ಮಾರ್ಗದಲ್ಲಿದ್ದ ಸೇತುಗಳನ್ನೆಲ್ಲಾ ಕೆಡಹಿಬಿಟ್ಟು ಹೋಗಿದ್ದಾರೆ. ಆದುಕಾರಣ ರಷ್ಯನರು ಆ ಸೇತುಗಳನ್ನೆಲ್ಲಾ ಸರಿಮಾಡಿಕೊಂಡು ಜರ್ಮನಿಗೆ ನುಗ್ಗುತ್ತಿದ್ದಾರೆ. ಇದರಿಂದ ಇವರ ನುಗ್ಗುವಿಕೆಯು ತಡವಾಗಿ ಸಾಗುತ್ತಿದೆ. ಇವರು ಆಭಾಗದಲ್ಲಿ ತಮ್ಮ ಸಂಚಾರಕ್ಕೆ ಸರ್ವಾನುಕೂಲ್ಯವನ್ನು ಮಾಡಿಕೊಳ್ಳಲು ಇನ್ನು ಒಂದು ತಿಂಗಳಕಾಲ ಬೇಕಾಗಬಹುದು. ತದನಂತರ ರಷ್ಯನರ ಸೈನ್ಯವು ಜರ್ಮನಿಗೆ ಪ್ರವಾಹದಂತೆ ನುಗ್ಗಲು ಅಭ್ಯಂತರವಿರುವುದಿಲ್ಲ. ಆಗ ಜರ್ಮನಿಯು ಹೆಚ್ಚು ಸೇನೆಯನ್ನು ಪೂರ್ವದಕಡೆಗೆ ಒದಗಿಸಬೇಕಾಗಿ ಬರುವುದು; ಇಲ್ಲವೆ ಬಾಗಿಲು ತೆರದುಬಿಡಬೇಕಾಗುವುದು. ಬಹುಶಃ ಆ ಕಾಲಕ್ಕೆ ಪಶ್ಚಿಮರಣರಂಗದಲ್ಲಿನ ಕೆಲ ಸೈನ್ಯವನ್ನು ಕರೆಯಿಸಿಕೊಳ್ಳಬಹುದು, ಅಥವಾ ಕೆಲಸಕ್ಕೆಬಾರದ ಚಿಳ್ಳೆಪಿಳ್ಳೆಗಳನ್ನು ಕೂಡಿಸಿ ಸೈನಿಕರೆಂದು ಕಳುಹಿಸಿ ಬಲಿಹಾಕಿಸಬಹುದು.

ಪೂರ್ವರಣರಂಗದಲ್ಲಿರುವ ರಷ್ಯಾಸೇನೆಯೊಡನಿದ್ದ ಒಬ್ಬ ಇಂಗ್ಲೀಷ್ ಯುದ್ಧಕಲಾವಿಶಾರದನು ಹೀಗೆ ಬರೆದಿರುತ್ತಾನೆ:— ಪೂರ್ವಪ್ರಷ್ಯಾದಲ್ಲಿರುವ ಜರ್ಮನಿ ಸೈನ್ಯಗಳನ್ನು ರಷ್ಯನರು ಹಿಂದಕ್ಕೆ ದಬ್ಬುತ್ತಿದ್ದಾರೆ. ರಷ್ಯನರು ಉತ್ತರ ಪೋಲ್ಯಾಂಡನ್ನು ಆಕ್ರಮಿಸಿಕೊಳ್ಳುತ್ತಿದ್ದಾರೆ. ಪ್ಲಾಕ್ ಲಾಡ್ಜು, ಪೆಟ್ರಿಯಾ, ಕೀಲ್ಸ್, ಶಾಂಡೋಮಿರ್, ಜೆರೋಸ್ಲಾವ್ ಪ್ರದೇಶಗಳೂ ಸಾನ್ ನದಿಯ ಮಾರ್ಗಗಳೂ ಸಹ ರಷ್ಯನರ ವಶದಲ್ಲೇ ಇವೆ. ರಷ್ಯನರು ಜರ್ಮನರನ್ನು ವಾರ್ಸಾಪಟ್ಟಣದ ನೈಋತಿದಿಕ್ಕಿಗೆ ಅಟ್ಟಿಬಿಟ್ಟಾಗ ಒಂದು ಕಕೇಷಿಯನ್ ಪಟಾಲಮು ವಿಸ್ಟುಲಾನದಿಯನ್ನು ದಾಟಿತು. ಒಂದುಕಡೆ ಜರ್ಮನರು ದೊಡ್ಡ ಫಿರಂಗಿಗುಂಡುಗಳನ್ನು ಹಾರಿಸುತ್ತಿದ್ದರು. ರಷ್ಯನ್ ಸೈನ್ಯಗಳು ಚಿಕ್ಕದೋಣಿಗಳಮೇಲೆ ಹತ್ತಿ ವಿಸ್ಟುಲಾನದಿಯನ್ನು ದಾಟಿ, ಜರ್ಮನರಮೇಲೆ ತೀವ್ರವಾಗಿ ಫಿರಂಗಿಗಳನ್ನು ಹೊಡೆಯಲುಜ್ಜುಗಿಸಿದುವು. ಇವೆರಡುಸೇನೆಗಳಿಗೂ ಪರಸ್ಪರ ಫಿರಂಗಿಯುದ್ಧವಾಗುತ್ತಿರುವಾಗ ರಷ್ಯನರು ಮತ್ತೊಂದುಕಡೆಯಲ್ಲಿ ನದಿಯಮೇಲೆ ದೋಣಿಗಳ ಸಾಲನ್ನು ನಿಲ್ಲಿಸಿ, ಅದರಮೇಲೆ ಸೇತುವನ್ನು ನಿರ್ಮಿಸಿ ಸೈನ್ಯವನ್ನೆಲ್ಲಾ ಸಾಗಿಸಿದರು. ಈಗ ಯುದ್ಧ ನಡೆಯುತ್ತಿರುವ ಸ್ಥಲವು ಬಹು ಮುಖ್ಯವಾಗಿದೆ. ಈ ಯುದ್ಧರಂಗದಲ್ಲಿ ಆಸ್ಟ್ರಿಯಾದಿಂದ ಬಂದಿರುವ ಸೈನ್ಯಗಳೂ ಜರ್ಮನಿಯಿಂದ ಬಂದಿರುವ ಸೈನ್ಯಗಳೂ ಕೂಡಿ ಹೋರಾಡುತ್ತಿವೆ. ಒಂದುಕಡೆ ಇವರೀರ್ವರಿಗೂ ಅಪಜಯವಾದರೆ ಆಸ್ಟ್ರಿಯನ್ ಸೈನ್ಯಗಳು ಅವರ ದೇಶಕ್ಕೂ ಜರ್ಮನ್ ಸೈನ್ಯಗಳು ಅವರ ದೇಶಕ್ಕೂ ಓಡಿಹೋಗಿಯೇ ತೀರಬೇಕು, ಅಥವಾ ಎರಡೂ ಕೂಡಿ ಎರಡರಲ್ಲೊಂದುದೇಶಕ್ಕೆ ಹೋಗಿ ಸೇರಿಕೊಳ್ಳಬೇಕು. ೨ ಸೇನೆಗಳೂ ಆಸ್ಟ್ರಿಯಾಕ್ಕೆ ಹೋಗಿ ಸೇರಿದರೆ ಜರ್ಮನ್ ರಾಜಧಾನಿಗೆ ಮೋಸವಾಗುವುದು. ಜರ್ಮನಿಗೆ ಹೋಗಿ ಸೇರಿದರೆ ಆಸ್ಟ್ರಿಯಾರಾಜಧಾನಿಗೆ ಮೋಸವಾಗುವುದು. ಎಂದು ತಿಳಿಯಿಸಿರುತ್ತಾನೆ.

ಈಚೆಗೆ ಜರ್ಮನಿಯವರು ರಷ್ಯನರೊಡನೆ ಸಂಧಿಮಾಡಿಕೊಳ್ಳಲು ವರ್ತಮಾನವನ್ನು ಕೊಟ್ಟರೆಂದೂ ಅದಕ್ಕೆ ರಷ್ಯನರು ವಷಟ್ಕಾರಮಾಡಿದರೆಂದೂ ಪ್ರಕಟವಾಗಿದೆ.

ರಷ್ಯನರು ಪೂರ್ವಪ್ರಷ್ಯಾದಲ್ಲಿರುವ ಮಜೂರಿಯೆಂಬ ಸರೋವರದ ಭಾಗಗಳನ್ನು ಸ್ವಾಧೀನಪಡಿಸಿಕೊಂಡಿದಾರೆ. ಮಾಲ್ಬಾಸೋಲ್ಡನ್ ಜಿಲ್ಲಾಗಳಲ್ಲಿ ಯುದ್ಧವು ನಡೆಯಿತು. ಅಲ್ಲಿ ರಷ್ಯನರಿಗೇ ಜಯವಾಯಿತು. ಗೆಲೀಷಿಯಾ ಜಿಲ್ಲೆಯಲ್ಲಿ ರಷ್ಯನರು ಶತ್ರುಗಳಮೇಲೆ ಭಯಂಕರವಾಗಿ ಯುದ್ಧಮಾಡುತ್ತಿದ್ದಾರೆ.

ಜರ್ಮನರು ತಮ್ಮ ದೇಶದೊಳಕ್ಕೆ ನುಗ್ಗಿ ಸೇರಿಕೊಂಡಿರುವುದಲ್ಲದೆ ದಾರಿಯುದ್ದಕ್ಕೂ ಶತ್ರುಸೇನೆಗಳು ಬರದಂತೆ ಸೇತುಗಳನ್ನು ಹಾಳ್ಮಾಡಿ ಹೋಗಿದ್ದಾರೆ. ಜರ್ಮನೀದೇಶದಲ್ಲಿ ಪೂರ್ವರಣರಂಗಕ್ಕೆ ಕಳುಹಿಸಲು ಹೊಸಸೇನೆಗಳು ಕೂಡಿಸಲ್ಪಡುತ್ತಿವೆ. ಪಶ್ಚಿಮರಣರಂಗದಿಂದಲೂ ಕೆಲ ಸೇನೆಗಳು ಪೂರ್ವದ ಕಡೆಗೆ ಹೋಗಿವೆಯಂತೆ. ಆಸ್ಟ್ರಿಯಾದಿಂದಲೂ ಕೆಲ ಸೈನ್ಯವು ಜರ್ಮನಿಯ ಪೂರ್ವಭಾಗದ ಎಲ್ಲೆಯ ಪ್ರಾಂತದ ರಕ್ಷಣೆಗೆ ಹೋಗಿವೆ; ಈಗ ಆ ಸುತ್ತಿನಲ್ಲಿ ಪೋಲ್ಕ್ಕ-ಲೆಂಚಿಸಾ-ಯುನೀವು ಎಂಬ ಕಡೆಗಳಲ್ಲಿ ಯುದ್ಧವಾಗುತ್ತಿದೆ.

ರಷ್ಯಾ-ಆಸ್ಟ್ರಿಯಾ.

ರಷ್ಯನ್ ಸೈನ್ಯವು ಜೇಂಸಿಲ್ಲಿಗೆ ದಕ್ಷಿಣದಲ್ಲಿ ಮತ್ತೆ ಆಸ್ಟ್ರಿಯಾದವರ ೧೦೦೦೦ ಮಂದಿ ಸೈನಿಕರನ್ನು ಸೆರೆಹಿಡಿದರು. ಕ್ರಾಕೋವಿನ ಕಡೆಗೆ ಹೊರಟ ರಷ್ಯನ್ ಅಶ್ವಸೈನ್ಯವು ಮಾರ್ಗದಲ್ಲಿದ್ದ ಮಿಚೋ ಪಟ್ಟಣವನ್ನು ಹಿಡಿದುಕೊಂಡಿತು, ಮತ್ತು ರೆಸ್ಜೊಜ್ವೈನೋ-ಲಿಸ್ಕೊ ಎಂಬ ಸ್ಥಳಗಳನ್ನೂ ಆಕ್ರಮಿಸಿಕೊಂಡಿತು. ಆಸ್ಟ್ರಿಯನ್ ಸೈನ್ಯವಾದರೊ ಉತ್ತರದಿಂದ ದಕ್ಷಿಣಕ್ಕೆ ಹಿಂದಾಗಿ ಹೋಗುತ್ತಲೇ ಇದೆ. ರಷ್ಯನರು ಜೋನ್ಸ್ಬರ್ಗನ್ನು ವಶಪಡಿಸಿಕೊಂಡರು, ಮತ್ತೂ ಕ್ರಾಕೋ ಪಟ್ಟಣವನ್ನು ಮುತ್ತಿಗೆಹಾಕಿ, ಫಿರಂಗಿಗುಂಡುಗಳನ್ನು ಹೊಡೆಯುತ್ತಿರುವರು. ಪ್ರಜೆಗಳು ಊರನ್ನು ಬಿಟ್ಟು ಓಡಿಹೋಗುತ್ತಿರುವರು. ಜರ್ಮನರೂ ಆಸ್ಟ್ರಿಯನ್ನರೂ ತಮ್ಮ ಸೈನ್ಯಗಳನ್ನು ಕ್ರಾಕೋ ಪಟ್ಟಣದ ವಾಯವ್ಯ ಮೂಲೆಯಲ್ಲಿರುವ ಒಪೇಲನ್ ಪ್ರಾಂತದಲ್ಲಿ ಕೂಡಿಸುತ್ತಿದ್ದಾರೆ. ಆಸ್ಟ್ರಿಯಾ ಸೈನ್ಯದ ಕೆಲಭಾಗವು ಕ್ರಾಕೋ ಪಟ್ಟಣವನ್ನು ಕಾಪಾಡುತ್ತಿದೆ. ಆದರೆ ಅದು ಇಷ್ಟರಲ್ಲೇ ರಷ್ಯನರ ವಶವಾಗುವುದರಲ್ಲಿದೆ.

ತುರ್ಕಿ.

ತುರ್ಕಿಯವರು ತಮ್ಮ ಸೇನೆಯ ಒಂದು ದೊಡ್ಡಭಾಗವನ್ನು ರಷ್ಯನ್ನರ ಮೇಲೆ ಕೊಯಿಪ್ರೀಕೋಲ್ ಬಳಿಗೆ ಕಳುಹಿಸಿಕೊಟ್ಟಿದ್ದರು. ಅಲ್ಲಿ ರಷ್ಯನರು ಅವರ ಮೇಲೆ ಕಾದಾಡಿ ಸೇನೆಯ ಬಹುಭಾಗವನ್ನು ಧ್ವಂಸಮಾಡಿ ಉಳಿದವರನ್ನು ಓಡಿಸಿಬಿಟ್ಟರು. ಆಗ ತುರ್ಕಿಯವರ ಬಹಳ ಮದ್ದುಗುಂಡುಗಳೂ ಬಹಳಮಂದಿ ಸೈನಿಕರೂ ರಷ್ಯನ್ನರಿಗೆ ಸಿಕ್ಕಿದರು. ಅಲಾಷ್ಕರ್ಟ ಪ್ರಾಂತವೆಲ್ಲಾ ಈಗ ರಷ್ಯನರ ಅಧೀನವಾಗಿರುವುದು. ಈಗ ಕಾಯುವುದಕ್ಕೆ ಬರುತ್ತಿರುವ ತುರ್ಕಿ ಸೈನಿಕರಲ್ಲಿ ಬಹುಜನರು ತಕ್ಕ ಸಾಮರ್ಥ್ಯವುಳ್ಳವರಲ್ಲವೆಂತಲೂ ಅವರಲ್ಲಿ ಬಹುಜನರಿಗೆ ಸೈನ್ಯದ ಉಡುಪೇ ಇಲ್ಲವೆಂತಲೂ ಭುಜದ ಮೇಲೆ ಒಂದು ಕೆಂಪುಬಟ್ಟೆಯ ತುಕ್ಕಡವನ್ನು ಕಟ್ಟಿರುವುದರಿಂದ ಅವರು ಸೈನಿಕರೆಂದು ಗೊತ್ತುಮಾಡಲ್ಪಟ್ಟಿರುವರೆಂತಲೂ ರೋಮಿನಿಂದ ಒಬ್ಬ ಪತ್ರಿಕಾಲೇಖಕನು ಬರೆದಿದ್ದಾನೆ. ಈಗ ತುರ್ಕಿಯನ್ನು ಯುದ್ಧಕ್ಕೆ ಇಳಿಸುವಲ್ಲಿ ಕಾರಣಭೂತನಾಗಿರುವ ಎನ್ವರ್ಪಾಷಾನ ಮೇಲೆ ತುರ್ಕಿಯಲ್ಲಿ ಬಹುಜನರು ಕೋಪಿಷ್ಠರಾಗಿ ಇಷ್ಟರಲ್ಲೇ ಅವನನ್ನು ಸೆರೆಹಿಡಿಯುವವರಾಗಿದ್ದಾರೆಂದು ಸುದ್ದಿಯುಂಟಾಗಿದೆ.

ಈಗ ತುರ್ಕಿಯವರಲ್ಲಿ ಒಂದೇ ಆಕಾಶವಿಮಾನವಿದೆಯಂತೆ ಅದರಲ್ಲೂ ಹತ್ತಿ ಕೆಲಸಮಾಡಬಲ್ಲ ಸೈನಿಕರು ಇರುವುದಿಲ್ಲ.

ಕ್ರಿಸ್ಕಲ-ಎರ್ಜೆರಂ-ಟ್ರೆಬಿಜಂಡ್ ಪ್ರದೇಶಗಳಿಂದ ತುರ್ಕಿಯ ಸೈನ್ಯವು ಅಪಾರವಾಗಿ ಬಂದು ಬಿದ್ದುದರಿಂದಲೂ ಅಲ್ಲಿದ್ದ ರಷ್ಯನ್ ಸೈನ್ಯಗಳು ಸ್ವಲ್ಪವಾಗಿದ್ದುದರಿಂದಲೂ ಸೆಣಸಾಡುತ್ತ ಅವರು ಹಿಂದಕ್ಕೆ ಸಾಗಿಹೋದರು.

ಈಚೆಗೆ ತುರ್ಕಿಯವರು ತಮ್ಮ ಸಹಾಯಕ್ಕಾಗಿ ನೂರಾರು ಮಂದಿ ಸೇನಾಧಿಕಾರಿಗಳನ್ನು ಕಳುಹಿಸಿಕೊಡಬೇಕೆಂದು ಜರ್ಮನಿಯವರನ್ನು ಕೇಳಿಕೊಂಡಿರಲು, ನಾವು ಅಷ್ಟುಮಂದಿ ಉದ್ಯೋಗಿಗಳನ್ನು ಕಳುಹಿಸಿಕೊಡಲಾರೆವೆಂತಲೂ ಬೇಕಿದ್ದರೆ ಕೆಲಮಂದಿ ಆಸ್ಟ್ರಿಯನ್ ಉದ್ಯೋಗಿಗಳನ್ನು ಕಳುಹಿಸಿಕೊಡುತ್ತೇವೆಂದು ತಿಳಿಯಿಸಿದರೆಂತಲೂ ಪ್ರಕಟವಾಗಿದೆ.

ತುರ್ಕಿಯವರು ಸುಯೇಜ್ ಕಾಲ್ವೆಯಲ್ಲಿ ಯುದ್ಧೋಪಕ್ರಮ ಮಾಡಿ ಆ ಮಾರ್ಗದಲ್ಲಿ ಅಶಾಂತಿಯನ್ನು ಮಾಡುವುದರಲ್ಲಿದ್ದರು. ಹಾಗಾದರೆ ತಮ್ಮ ವ್ಯಾಪಾರಾದಿಗಳಿಗೆ ತೊಂದರೆಯುಂಟಾಗುವುದೆಂದು ಇಟಲಿಯು ಕೇಳಿ, ಜರ್ಮನಿಗೆ ಸೂಚನೆ ಕೊಡಲು ಹಾಗೆ ಮಾಡಬೇಡಿರೆಂದು ಜರ್ಮನಿಯು ತುರ್ಕಿಗೆ ಹೇಳಿ ಸುಮ್ಮನಿರಿಸಿರುವುದು. ಭರತಖಂಡದ ಸೈನ್ಯಗಳು ಡ್ಯೂಕ್ ಆಫ್ ಎಡಿಂಬರೋ ಎಂಬ ಯುದ್ಧನಾವೆಯ ಸಹಾಯದಿಂದ ಕೆಂಪುಸಮುದ್ರದ ಮುಖದ್ವಾರದಲ್ಲಿರುವ ಬೇಬಿಲ್ಮಾಂಡೆಬ್ಬನ ಹತ್ತಿರದ ಷೇಕ್ಸಯ್ಯದ್ ಎಂಬ ಸ್ಥಾನವನ್ನೂ ಆ ಪ್ರಾಂತದಲ್ಲಿರುವ ಕೋಟೆಗಳನ್ನೂ ಆಕ್ರಮಿಸಿಕೊಂಡಿರುವುವು. ಅಲ್ಲಿದ್ದ ತುರ್ಕಿಯ ರಕ್ಷಕ ಸೈನ್ಯವನ್ನೆಲ್ಲಾ ನಮ್ಮವರು ಹೊಡೆದೋಡಿಸಿದರು. ಯುದ್ಧದ ಹಡಗು ಪೂರ್ವದಿಕ್ಕಿನ ಕೋಟೆಯ ಮೇಲೆ ಫಿರಂಗಿಗುಂಡುಗಳನ್ನು ಹೊಡೆದು ನಾಶಪಡಿಸಿತು. ತುರ್ಕಿಯವರ ದೊಡ್ಡ ೭ ಫಿರಂಗಿಗಳೂ ಬಹಳ ಮದ್ದುಗುಂಡು ಮೊದಲಾದ ಸಾಮಾನುಗಳೂ ನಮ್ಮವರ ಸ್ವಾಧೀನವಾದುವು. ನಮ್ಮ ಸೈನಿಕರಲ್ಲಿ ೪ ಮಂದಿ ಸತ್ತರು; ೧೭ಮಂದಿಗೆ ಗಾಯವಾಯಿತು. ರಷ್ಯಾದ ಜೂಣೆಯ ಸೈನ್ಯಗಳು ಎರಿಜೇರಂ ಪ್ರದೇಶಗಳಿಗೆ ಹೋಗಿ, ಅಲ್ಲಿದ್ದ ತುರ್ಕಿ ಸೈನ್ಯದ ಭಾಗವನ್ನೆಲ್ಲಾ ಹೊಡೆದೋಡಿಸಿತೆಂತಲೂ, ರಷ್ಯನರ ಮತ್ತೊಂದು ಪಟಾಲಮು ಯೂಜ್ವೆರಾನ್ ಬಳಿಯಲ್ಲಿಯೂ, ಖಾಮೂಂನ ಬಳಿಯಲ್ಲಿಯೂ ತುರ್ಕಿ ಸೇನೆಗಳ ಮೇಲೆ ಯುದ್ಧಮಾಡಿ ಸೋಲಿಸಿ ಓಡಿಸಿಬಿಟ್ಟಿರುವುದೆಂತಲೂ ರಷ್ಯಾಪ್ರಭುತ್ವವರು ಪ್ರಕಟಿಸಿದ್ದಾರೆ.

ವಿಶೇಷವಾರ್ತೆ.

ಎಮ್ಡೆನ್ ಹಡಗು ನಾಶಮಾಡಲ್ಪಟ್ಟಾಗ ಸೆರೆಸಿಕ್ಕಿರುವ ೧೫೦ ಮಂದಿಗಳನ್ನು ಸಿಂಗಪೂರಿಗೆ ತಂದು ಸೇರಿಸಿದ್ದಾರೆ.

ಇಟಲಿಯ ಮಂತ್ರಿವರ್ಗದವರು ಯುದ್ಧದ ವೆಚ್ಚಕ್ಕೆಂದು ೧೭೦ ಲಕ್ಷ ಪೌನುಗಳನ್ನು ವಿನಿಯೋಗಿಸಲು ತೀರ್ಮಾನಿಸಿದ್ದಾರೆ.

ನವೆಂಬರ್ ತಾ|| ೭ ರಲ್ಲಿ ಇನ್ನುಕೆಲ ಹಿಂದುಸ್ಥಾನದ ಸೈನ್ಯಗಳು ಮಾರ್ಸೇಲ್ಸಿನಲ್ಲಿಳಿದುವು. ಫ್ರೆಂಚ್ ಪ್ರಜೆಗಳು ಉತ್ಸಾಹದಿಂದ ಸ್ವಾಗತಮಾಡಿದರು.

ಪ್ರಿನ್ಸ್ ಆಫ್ ವೇಲ್ಸ್ರವರು ಯುದ್ಧಾಂಗಣದಲ್ಲಿ ಇಂಗ್ಲೀಷ್ ಸೇನೆಯ ಫೀಲ್ಡ್ಮಾರ್ಷಲ್ ಸರ್ಜಾನ್ ಫ್ರೆಂಚರವರ ಏಡಿಕಾಂಗ್ ಆಗಿರಲು ಕಳುಹಿಸಲ್ಪಟ್ಟಿದ್ದಾರೆ.

ಅವಶ್ಯಕತೆ ಬಿದ್ದರೆ ಮತ್ತೆ ೫೦ ಸಾವಿರ ಮಂದಿ ಸೈನಿಕರನ್ನು ಸಹಾಯಕ್ಕೆ ಕಳುಹಿಸಿಕೊಡುತ್ತೇವೆಂದು ನ್ಯೂಜಿಲೆಂಡ್ ಅಧಿನಿವೇಶದವರು ಇಂಗ್ಲೆಂಡ್ ಸರ್ಕಾರಕ್ಕೆ ಶ್ರುತಪಡಿಸಿಕೊಂಡಿದ್ದಾರೆ.

ಜರ್ಮನಿಯವರ ಗಂಟೆಗೆ ೨೩ ಮೈಲಿಯಂತೆ ಓಡುವ ಬರ್ಲಿನ್ ಎಂಬ ಯುದ್ಧದ ಹಡಗು ನಾರ್ವೇಗೆ ಸೇರಿದ ಟ್ರೊಂಡ್ಜೆಂ ಎಂಬಲ್ಲಿಗೆ ಬರಲು ಅದನ್ನು ನಾರ್ವೆದೇಶದವರು ನಿರಾಯುಧವನ್ನಾಗಿಮಾಡಿ ನಿಲ್ಲಿಸಿ ಬಿಟ್ಟಿರುವರು.

ಜರ್ಮನರು ಬೆಲ್ಜಿಯಂ ದೇಶವನ್ನು ತಮ್ಮ ದೇಶಕ್ಕೆ ಸೇರಿಸಿಕೊಂಡಿರುವುದಾಗಿ ಪ್ರಕಟಿಸಿದ್ದಾರೆ. ಇದರಿಂದ ಇನ್ನುಮುಂದೆ ಆ ದೇಶೀಯರು ಜರ್ಮನ್ ಸೇನೆಯಲ್ಲಿ ಸೇರಬೇಕಾಗಿ ಬರುವುದೆಂಬ ಕಾರಣದಿಂದ ಅಲ್ಲಿನ ಪ್ರಜೆಗಳನೇಕರು ದೇಶವನ್ನು ಬಿಟ್ಟು ಹೊರಟುಹೋಗುತ್ತಿದ್ದಾರೆ.

ಕಳೆದ ಭಾನುವಾರ ರಾತ್ರಿ ೨ ಘಂಟೆಯ ವೇಳೆಯಲ್ಲಿ ಹೆಡ್ನಾ ಎಂಬ ಹಡಗು ಬಂಗಾಳಾಕ್ಕೆ ಸೇರಿದ ಹಾಟಿಯಾ ಎಂಬ ರೇವೆಯಲ್ಲಿ ಯಾವಕಾರಣದಿಂದಲೋ ಬೋರ್ಲ್ಲಾಯಿತು. ಅದರಲ್ಲಿ ೩೦೦ ಮಂದಿ ಪ್ರಯಾಣಿಕರಿದ್ದರು. ಬಹುಮಂದಿ ಸತ್ತಿರಬೇಕು. ೧೭ಹೆಣಗಳು ಮಾತ್ರ ಸಿಕ್ಕಿದುವು.

ಒಂದು ಜರ್ಮನ್ ಕ್ರೂಯಿಸರ್ನಿಂದ ವರ್ತಕವೇಷವನ್ನು ಹಾಕಿಕೊಂಡಿದ್ದ ೧೦ ಮಂದಿ ಜರ್ಮನರು ಇಳಿದು ಅಮೇರಿಕಾಕ್ಕೆ ಸೇರಿದ ಎವರ್ಗ್ಲೇಡ್ಸ್ ಎಂಬ ಸ್ಥಲದಲ್ಲಿ ಒಂದು ವಾಯುವಾರ್ತಾಸ್ಥಾನವನ್ನು ರಹಸ್ಯವಾಗಿ ಏರ್ಪಡಿಸಿರುವರೆಂಬುದನ್ನು ಕೇಳಿ ಅಲ್ಲಿನ ಸರ್ಕಾರದವರು ಪರಿಶೋಧನೆ ಮಾಡಿಸುತ್ತಿದ್ದಾರೆ.

ಯುದ್ಧದಲ್ಲಿ ಏಟುತಿಂದು ನ್ಯೂಫಾರೆಸ್ಟ್ ವೈದ್ಯಾಲಯದಲ್ಲಿರುವ ಹಿಂದೂದೇಶದ ಸೈನಿಕರನ್ನು ಕಳೆದ ತಾ|| ೧೭ ರಲ್ಲಿ ಸಾರ್ವಭೌಮ ದಂಪತಿಗಳು ಪರಾಮರಿಸಿಕೊಂಡು ಬಂದರು. ಆಗ ಸಾರ್ವಭೌಮರು ಸೇನಾಧಿಪತಿಯ ಉಡುಪನ್ನು ಧರಿಸಿದ್ದರು. ಪ್ರತಿಯೊಬ್ಬ ಸೈನಿಕನ ಬಳಿಗೂ ಹೋಗಿ ಹಿಂದೂಸ್ಥಾನಿಭಾಷೆಯಲ್ಲಿ ಮಾತನಾಡಿದರು. ಅವರು ಅಲ್ಲಿ ಕಂಡ ಸೈನಿಕರಲ್ಲಿ ಹಲವರ ಗುರ್ತನ್ನು ಭರತಖಂಡದಲ್ಲಿ ಬಲ್ಲವರಾಗಿದ್ದರು. ಸೈನಿಕರು ಬಹಳ ಸಂತೋಷಪಟ್ಟರು. ರಾಜಪತ್ನಿಯವರೂ ಸೈನಿಕರೊಡನೆ ಸಂಭಾಷಿಸಿದರು. ,,ಸರಿ, ನಿಮಗೆ ಈಗ ಏನುಬೇಕಾಗಿದೆಯೋ ಹೇಳಿರಿ; ಕೂಡಲೇ ಕಳುಹಿಸಿಕೊಡಲು ಏರ್ಪಡಿಸುತ್ತೇವೆ'' ಎಂದು ಮಹಾರಾಣಿಯವರು ಕೇಳಲು ಉಣ್ಣೆಯ ಬಟ್ಟೆಗಳು ಬೇಕೆಂದು ಅವರು ಹೇಳಿಕೊಂಡರು. ಬಳಿಕ ಬಕಿಂಗ್ಹಾಂ ಅರಮನೆಯಿಂದ ಆ ಸೈನಿಕರಿಗೆ ಉಣ್ಣೆಬಟ್ಟೆಗಳನ್ನು ಕಳುಹಿಸಿಕೊಟ್ಟರು.

ಮೈಸೂರ್ ಸ್ಟಾರ್.

ಸನ್ ೧೯೧೪ ನೆಯ ನವಂಬರ್ ತಾ|| ೨೨ ನೆಯ ಭಾನುವಾರ.

ಪದಾರ್ಥಗಳ ಬೆಲೆಯೇರಿಕೆ.

ಭರತಖಂಡದಲ್ಲಿ ಬರಬರುತ್ತ ಆಹಾರ್ಯಪದಾರ್ಥಗಳ ಬೆಲೆಯು ಹೆಚ್ಚುತ್ತಬಂದು, ಕಳೆದ ೮-೧೦ ವರ್ಷಗಳಿಂದಲೂ ಅದರ ಸ್ಥಿತಿಯು ಹಿಂದಿನ ಕ್ಷಾಮಕಾಲ ಸ್ಥಿತಿಯನ್ನು ಹೋಲುತ್ತಿರುವುದರಿಂದ ಇದು ಬಡಜನರಿಗೆ ದುಸ್ಸಹವಾಗಿರುವುದು. ಇದರ ಕಾರಣವನ್ನು ಅರಿತು ನಿವಾರಣೋಪಾಯವೇನಾದರೂ ಇದ್ದರೆ ಅದನ್ನು ನಡೆಯಿಸಿ ದೇಶಕ್ಷೇಮವನ್ನು ಸಾಧಿಸಬೇಕೆಂದು ಭರತಖಂಡದ ಸರ್ಕಾರದವರು ಯೋಚಿಸಿ, ಇದರ ಸಂಬಂಧದ ವಿಚಾರಣೆಗಾಗಿ ಒಂದು ಕಮಿಟಿಯನ್ನು ಏರ್ಪಡಿಸಿದುದೂ, ಆ ಕಮಿಟಿಯವರು ದೇಶದ ನಾನಾ ಭಾಗಗಳಲ್ಲಿ ವಿಚಾರಣೆಗಳನ್ನು ನಡೆಯಿಸಿದುದೂ ನಮ್ಮ ಪತ್ರಿಕಾವಾಚಕರಿಗೆ ಗೊತ್ತೇ ಇರುವುದು. ಈಗ ಆ ಕಮಿಟಿಯವರು ಮಾಡಿದ ವರದಿಯೂ, ಅದರ ಮೇಲೆ ಸರ್ಕಾರದವರು ಪಟ್ಟಿರುವ ಅಭಿಪ್ರಾಯವೂ ಪ್ರಕಟಿತವಾಗಿರುವುದು. ಅದನ್ನು ನೋಡುವಲ್ಲಿ ಇನ್ನುಮುಂದೆ ಕೊಂಡು ತಿನ್ನುವ ಬಡಜನರ ಪಾಡಿಗೆ ಕೊನೆಯಿಲ್ಲವೆಂದು ಗೊತ್ತಾಗುವುದಲ್ಲದೆ, ವ್ಯವಸಾಯತತ್ಪರರಾಗಿ ಧಾನ್ಯಾದಿಗಳನ್ನು ಬೆಳೆದು ಮಾರುವ ಜನರ ಸ್ಥಿತಿಯು ಮಾತ್ರ ಸಮೃದ್ಧವಾಗುವುದೆಂದೂ ಗೊತ್ತಾಗುವುದು.

ಆ ವಿಚಾರಕಸಂಘದವರ ವರದಿಯ ಮೇಲೆ ಸರ್ಕಾರದವರು ಕೊಟ್ಟಿರುವ ತೀರ್ಮಾನದಲ್ಲಿ ಪದಾರ್ಥಗಳ ಬೆಲೆಯ ಏರಿಕೆಯು ೧೯೦೫ ನೆಯ ವರ್ಷದಿಂದ ಆರಂಭವಾಗಿ ಹೆಚ್ಚುತ್ತಲೇ ಬಂದಿರುವುದೆಂತಲೂ ಆದರೆ ಹೀಗೆ ಹೆಚ್ಚಿದುದರಿಂದ ಲಾಭವನ್ನು ಪಡೆದಿರುವವರ ಸಂಖ್ಯೆಯನ್ನು ನೋಡಿದರೆ ನಷ್ಟಪಟ್ಟವರ ಸಂಖ್ಯೆಯು ಅತ್ಯಲ್ಪವೆಂದು ತೋರುವ ಕಾರಣ ಹೀಗೆ ಬೆಲೆಯೇರುತಿರುವುದು ಭರತಖಂಡಕ್ಕೆ ಲಾಭವೇ ಎಂತಲೂ ಹೇಳಲ್ಪಟ್ಟಿದೆ. ಇದು ನಿಜವಾದ ಮಾತು. ಭರತಖಂಡವು ಬೇಸಾಯದ ದೇಶವಾದುದರಿಂದ ಬೆಳೆಯುವ ರೈತರ ಧಾನ್ಯಕ್ಕೆ ಹೆಚ್ಚು ಬೆಲೆಯು ಬರುವ ಕಾರಣ, ಅವರಿಗೆ ಈಗಿನ ಸ್ಥಿತಿಯು ಲಾಭಕರವೆಂದೇ ಹೇಳಬಹುದು. ವರ್ತಕರಿಗೂ ಇದರಿಂದ ನಷ್ಟವೇನೂ ಇಲ್ಲ. ತಾವು ಕೊಂಡಬೆಲೆಯ ಮೇಲೆ ಹೇಗೂ ಲಾಭವನ್ನಿಟ್ಟೇ ಅವರು ಮಾರಾಟಮಾಡುವರು. ಆದುಕಾರಣ ಅವರಿಗೂ ಈಗಿನ ಸ್ಥಿತಿಯಿಂದ ನಷ್ಟವೇನೂ ಇಲ್ಲ. ಆದರೆ ಬೇಸಾಯ, ವ್ಯಾಪಾರ ಮೊದಲಾದ ಯಾವ ಉದ್ಯೋಗವೂ ಇಲ್ಲದೆ ಅಲೆದಾಡುವ ಮತ್ತೂ ಅಲ್ಪವೇತನಕ್ಕಾಗಿ ಪಾರತಂತ್ರ್ಯದಲ್ಲಿ ಸಿಕ್ಕಿ ನರಳುವ ಸಣ್ಣ ಜನರಿಗೆ ಮಾತ್ರ ಈಗಿನ ಸ್ಥಿತಿಯು ಭೀಕರವಾಗಿ ಪರಿಣಮಿಸಿರುತ್ತದೆ. ಮತ್ತೂ ಈ ಬೆಲೆಯೇರಿಕೆಗೆ ಭರತಖಂಡದಲ್ಲಿನ ಸ್ಥಿತಿಯು ಮಾತ್ರವೇ ಕಾರಣವಾಗಿರದೆ, ನಾಗರಿಕ ಪ್ರಪಂಚದಲ್ಲೆಲ್ಲಾ ವ್ಯಕ್ತವಾಗುತ್ತಿರುವ ಸಂದರ್ಭಗಳು ಕೂಡ ಇದಕ್ಕೆ ಕಾರಣವಾಗಿವೆ. ಮತ್ತೂ ಈ ದೇಶದಲ್ಲಿ ಜನರ ಸಂಚಾರಕ್ಕೂ ಪದಾರ್ಥಗಳ ಸಾಗುವಿಕೆಗೂ ಲೋಹಮಾರ್ಗ ಮೊದಲಾದ ಸೌಕರ್ಯಗಳು ಹೆಚ್ಚುತ್ತಿರುವುದರಿಂದ, ಭರತಖಂಡದ ನಾನಾದೇಶಭಾಗಗಳಲ್ಲಿದ್ದ ಬೆಲೆಗಳ ಹೆಚ್ಚುಕಡಿಮೆಯನ್ನೆಲ್ಲಾ ನಿವಾರಣೆಮಾಡಿ, ಸರ್ವತ್ರ ಒಂದೇ ಸ್ಥಿತಿಯನ್ನುಂಟುಮಾಡಿರುತ್ತವೆ. ಇದರಂತೆಯೇ ವಿದೇಶಗಳಿಗೂ ಇಲ್ಲಿನ ಧಾನ್ಯಾದಿಗಳು ಸಾಗಿಹೋಗುವುದಕ್ಕೆ ಸೌಕರ್ಯಗಳು ಹೆಚ್ಚಾಗಿರುವುದರಿಂದ ಲೋಕದಲ್ಲೆಲ್ಲಾ ಇರುವ ಬೆಲೆಗೆ ಸಮನಾಗಿ ಈ ದೇಶದ ಬೆಲೆಯು ಕೂಡ ಕ್ರಮವಾಗಿ ಏರಿಹೋಗುವುದಕ್ಕೆ ಕಾರಣವಾಗಿದೆ. ಈಗಿನ ಬೆಲೆಗಳ ಸ್ಥಿತಿಯು ಪೂರ್ವಕಾಲದ ಸ್ಥಿತಿಗೆ ಇಳಿಯುವ ಹಾಗೆ ಯಾವ ಚಿಹ್ನೆಗಳೂ ತೋರಿಬರುವುದಿಲ್ಲ ಎಂದು ಈ ತೀರ್ಮಾನದಲ್ಲಿ ಬರೆಯಲ್ಪಟ್ಟಿದೆ. ಬಲುಮಟ್ಟಿಗೆ ಈ ಅಭಿಪ್ರಾಯವು ಒಪ್ಪತಕ್ಕುದೇ ಆಗಿದ್ದರೂ ಬೆಲೆಗಳ ಏರಿಳಿತಗಳು ಅನೇಕ ಕಾರಣಗಳಿಂದ ನಿರ್ಣಯಿಸಲ್ಪಡುವುವಾದ ಕಾರಣ, ಯಾವ ಸಂದರ್ಭಗಳು ಯಾವ ಕಾಲದಲ್ಲಿ ಯಾವ ತೆರದಿಂದ ಪರಿಣಮಿಸುವುವೋ ಅದನ್ನು ಹೀಗೇ ಸರಿಯೆಂದು ನಿರ್ಧರಿಸಿ ಹೇಳುವುದಕ್ಕೆ ಅಸಾಧ್ಯವಾದುದರಿಂದ ಬೆಲೆಗಳು ಮುಂದೆ ಸ್ವಲ್ಪವೂ ಇಳಿಯದೆ ಏರುತ್ತಲೇ ಇರುವುವೆಂದು ಖಂಡಿತವಾಗಿ ಹೇಳಲಿಕ್ಕೆ ಬರದು. ಅಂತೂ ಹಣಕ್ಕೆ ೭ ಸೇರು ಬೆಣ್ಣೆಯೂ, ರೂ.ಗೆ ೪೦ ಸೇರು ರಾಗಿ, ೨೫ ಸೇರು ಅಕ್ಕಿಯೂ ಮಾರುವಂಥ ಸ್ಥಿತಿಯು ಬರುವುದೇ ಇಲ್ಲವೆಂಬುದು ಮಾತ್ರ ಖಂಡಿತ. ಪ್ರಕೃತಕಾಲದ ಸ್ಥಿತಿಗಳ ಪರಿಶೀಲನೆಯಿಂದ ಮಾಡಲ್ಪಟ್ಟಿರುವ ವರದಿಯನ್ನೂ, ಅದರ ಮೇಲೆ ಸರ್ಕಾರದವರು ಪಟ್ಟಿರುವ ವರದಿಯನ್ನೂ, ವಿಚಾರಶೀಲರಿಗೆಲ್ಲಾ ಕಣ್ಣೆದುರಿಗೆ ಗೊತ್ತಾಗುವ ದೇಶದ ಪರಿಸ್ಥಿತಿಯನ್ನೂ ಸಹ ಸಮಾಲೋಚಿಸಿದರೆ, ಸಂಸಾರದಲ್ಲಿ ಜೀವನಕ್ಕೆ ತಾಪತ್ರಯವಿಲ್ಲದಂತೆ ಮಾಡಿಕೊಳ್ಳಬೇಕೆಂಬ ಪ್ರತಿಯೊಬ್ಬ ಮನುಷ್ಯನೂ ಈ ದೇಶದ ಸ್ಥಿತಿಯನ್ನನುಸರಿಸಿ, ಅಷ್ಟಿಷ್ಟು ಬೇಸಾಯದ ಭೂಮಿಯನ್ನೋ ಅಥವಾ ನಿಯತವಾದ ಆಯತಿಯುಳ್ಳ ಯಾವುದಾದರೊಂದು ಸ್ವತಂತ್ರೋದ್ಯೋಗವನ್ನೋ ಹವಣಿಸಿಕೊಳ್ಳುವವನಾಗಬೇಕು ಎಂದು ಎಚ್ಚರವನ್ನು ಹೇಳುತ್ತಿರುವುದು.

ಯುದ್ಧದಿಂದ ಭರತಖಂಡಕ್ಕಾಗುವ ಫಲ.

ಈಗಿನ ಮಹಾಯುದ್ಧದಿಂದ ಜರ್ಮನಿ ಆಸ್ಟ್ರಿಯಾಗಳೊಡನೆ ವ್ಯಾಪಾರವು ನಮ್ಮ ದೇಶಕ್ಕೆ ಕಟ್ಟಾಗಿಹೋಗಿರುವುದರಿಂದ ಕೆಲ ವಿದೇಶೀಯ ವಸ್ತುಗಳ ಬೆಲೆಯು ಹೆಚ್ಚಿಹೋಗಿರುವುದುಂಟಷ್ಟೆ. ಈಗಿನ ಯುದ್ಧವು ದೀರ್ಘಕಾಲ ನಡೆಯುವ ಸೂಚನೆಯು ತೋರುತ್ತಿರುವುದರಿಂದಲೂ, ಉತ್ತರತ್ರ ಜರ್ಮನಿ-ಆಸ್ಟ್ರಿಯಾಗಳ ವ್ಯಾಪಾರವನ್ನು ಮೂಲೆಗೊತ್ತುವ ಉದ್ದೇಶದಿಂದಲೂ ಇಂಗ್ಲೆಂಡ್-ಫ್ರಾನ್ಸು-ಅಮೇರಿಕಾ ದೇಶಗಳವರು ಇದುವರೆಗೆ ಜರ್ಮನಿ-ಆಸ್ಟ್ರಿಯಾಗಳಿಂದ ಆಣೆಯಾಗಿ ಕಳುಹಲ್ಪಡುತ್ತಿದ್ದಂಥ ವಸ್ತುಗಳನ್ನು ತಾವೇ ಅಲ್ಲಿನಷ್ಟು ಸುಲಭವಾದ ಬೆಲೆಯಿಂದ ನಿರ್ಮಿಸಿ ಕಳುಹಲು ಪ್ರಯತ್ನಪಟ್ಟಿದ್ದಾರೆ. ಆದರೆ ಇದುಕೂಡ ವಿದೇಶೀಯರ ಪ್ರಯತ್ನವೇ ಆದುದರಿಂದ ಇಂಥ ಪ್ರಯತ್ನವನ್ನು ಸ್ವದೇಶದಲ್ಲೇ ಸಾಗಿಸುವುದು ಅವಶ್ಯಕವೆಂದರಿತು ಇಲ್ಲಿನ ಪ್ರಭುತ್ವದವರು ಆಲೋಚಿಸಿ ಕಾರ್ಯೋನ್ಮುಖರಾಗಿರುವುದು ಶ್ಲಾಘನೀಯವಾಗಿದೆ. ಸ್ವದೇಶದಲ್ಲಿ ಕೈಗಾರಿಕೆಗಳನ್ನೂ ಯಂತ್ರಾಗಾರಿಕೆಗಳನ್ನೂ ಹೊಸಹೊಸದಾಗಿ ಸ್ಥಾಪಿಸಿ, ಈ ದೇಶದ ವ್ಯಾಪಾರಸ್ಥಲಗಳನ್ನೆಲ್ಲಾ ಸ್ವದೇಶದ ಸರಕುಗಳಿಂದಲೇ ತುಂಬುವುದಕ್ಕೆ ಈಗಿನ ಸುಸಂಧಿಯಲ್ಲೇ ಪ್ರಾರಂಭಿಸಿ, ಮುಂದೆ ಅನ್ಯದೇಶದ ವಸ್ತುಗಳ ನುಗ್ಗಾಟಕ್ಕೆ ವಿಶೇಷಾವಕಾಶವಿಲ್ಲದಂತೆ ಮಾಡಿದರೆ ದೇಶಕ್ಕೆ ವಿಶೇಷ ಕ್ಷೇಮವುಂಟು.

ನಮ್ಮ ಭರತಖಂಡದ ಪ್ರಸಿದ್ಧ ಪಾರ್ಸಿ ಶ್ರೀಮಂತರಾದ ದಾನಶೂರ ರತನ್ಜಿ ತಾತಾರವರ ಕಬ್ಬಿಣದ ಕಾರ್ಯಾಲಯದಲ್ಲಿ ಕಳೆದವರ್ಷ ಉಂಟಾಗಿರುವ ಪರಿಣಾಮವನ್ನು ಕೇಳಿದರೆ ಪ್ರಸಕ್ತ ಯುದ್ಧಸಂಬಂಧದಿಂದ ವಿದೇಶ ವಸ್ತುಗಳ ಆಯತಿಯು ಸ್ವಲ್ಪ ಕಟ್ಟಾದುದರಿಂದ ಸ್ವದೇಶದ ಕಾರ್ಯಾಲಯಗಳಿಗೆ ಎಷ್ಟು ಲಾಭವಾಗುತ್ತಿದೆಯೆಂಬುದೂ ಇದರಿಂದ ನೂತನ ಯಂತ್ರಾಲಯಸ್ಥಾಪನಕಾರರಿಗೆ ಎಷ್ಟು ಪ್ರೋತ್ಸಾಹವಾಗುವಂತಿದೆಯೆಂಬುದೂ ಗೊತ್ತಾಗುತ್ತದೆ.

ಈ ಕಂಪೆನಿಯವರು ಸ್ಥಾಪಿಸಿರುವ ಯಂತ್ರಾಲಯದಲ್ಲಿ ಸೀಮೆಯಿಂದ ಬರುತ್ತಿದ್ದಂತಹ ಕಬ್ಬಿಣದ ಸಾಮಾನುಗಳನ್ನೆಲ್ಲಾ ಈಗ ಅವರೇ ಈ ದೇಶದಲ್ಲೇ ನಿರ್ಮಿಸುತ್ತಿದ್ದಾರೆ. ಈಗಿನ ಯುದ್ಧದಿಂದ ಕಳೆದ ೩ ತಿಂಗಳ ಕಾಲ ವಿದೇಶದ ವಸ್ತುಗಳು ಬರದೆ ಕಟ್ಟಾಗಿರುವುದರಿಂದ, ಇವರಲ್ಲಿ ಮೂಲೆಮುಟ್ಟಿನಲ್ಲಿ ಬಿದ್ದಿದ್ದ ಪದಾರ್ಥಗಳೆಲ್ಲಾ ಮಾರಿಹೋಗಿರುವುವಲ್ಲದೆ ಈ ಕಾರ್ಯಾಲಯದಿಂದ ಕಳೆದ ವರ್ಷ ಅವರಿಗೆ ೨೨೮೩೭೧ ರೂಗಳ ಲಾಭವು ಬಂದಿರುತ್ತವೆ. ಈ ಕಾರ್ಯಾಲಯದ ಪ್ರತಿ ಶಾಖೆಯಲ್ಲೂ ನಿರ್ಮಾಣಕೌಶಲ್ಯಕ್ಕೆ ಭಂಗಬರದಂತೆ ಸಾಧ್ಯವಾದಮಟ್ಟಿಗೆ ಕೆಲಸಗಾರರಾದ ಭಾರತೀಯರಿಂದಲೇ ಕೆಲಸಮಾಡಿಸಲು ಅದರ ಡೈರೆಕ್ಟರುಗಳು ಸಾಹಸಮಾಡುತ್ತಿರುವುದು ಕೇವಲಾಭಿನಂದನೀಯವಾದ ಸಂಗತಿಯಾಗಿದೆ. ವಿದೇಶದಿಂದ ಬರುವ ಸಾಮಗ್ರಿಗಳಿಗೆ ಯಾವುದಾದರೊಂದುತೆರದ ತಡೆಯುಂಟಾಗುವುದೂ ವಿದೇಶಗಳಿಂದ ಬರುತಿರುವಂಥ ಸಾಮಗ್ರಿಗಳು ಸ್ವದೇಶದಲ್ಲೇ ಹುಟ್ಟಿ ದೊರೆಯುವಂತಾಗುವುದೂ ಇವೆರಡೇ ಭರತಖಂಡದ ಸಾಂಪತ್ತಿಕಸ್ಥಿತಿಯ ಪುನರುಜ್ಜೀವನಕ್ಕೆ ಮುಖ್ಯ ಮೂಲಕಾರಣಗಳೆಂಬುದನ್ನು ಕಳೆದವರ್ಷದ ಈ ತಾತಾ ಕಂಪೆನಿಯವರ ಕಾರ್ಯಾಲಯವು ಭಾರತೀಯರಿಗೆ ಚೆನ್ನಾಗಿ ನಿದರ್ಶನಮಾಡಿ ಕೊಟ್ಟಿದೆ. ಇದನ್ನು ನಮ್ಮ ದೇಶಬಾಂಧವರಾದ ಶ್ರೀಮಂತರೆಲ್ಲರೂ ಗಮನಿಸುವವರಾಗಲಿ.

ಕ್ರೌನ್ ಮುದ್ರಾಲಯವು.

ಈ ಮುದ್ರಾಲಯವು ಸಂತೇಪೇಟೆಯಿಂದ ಸಯ್ಯಾಜಿರಾವ್ ರೋಡಿನಲ್ಲಿ ದೊಡ್ಡ ಮಾರ್ಕೆಟ್ಟಿನ ಪೂರ್ವದ್ವಾರದ ಇದಿರುಭಾಗದಲ್ಲಿರುವ ಮಹಡಿಗೆ ವರ್ಗಾಯಿಸಲ್ಪಟ್ಟಿದೆ. ಈ ಮುದ್ರಾಲಯದಲ್ಲಿ ವಿಸಿಟಿಂಗ್ ಕಾರ್ಡುಗಳು, ಲಗ್ನಪತ್ರಿಕೆಗಳು, ಇನ್ವಿಟೇಷನ್ ಕಾರ್ಡುಗಳು ಮುಂತಾದವುಗಳನ್ನು ನಾನಾವಿಧ ಬಣ್ಣದಶಾಯಿಯಿಂದಲೂ, ಚಿನ್ನದ ಗಿಲೀಟಿನಿಂದಲೂ, ನೇತ್ರಾನಂದಕರವಾಗಿ ಕ್ಲುಪ್ತಕಾಲದಲ್ಲಿ ಸುಲಭದರದಿಂದ ಮುದ್ರಣಮಾಡಲ್ಪಡುವುವಲ್ಲದೆ ರೂಲ್ಫಾರಂಗಳೂ, ನೋಟ್ಸು ಮೊದಲಾದ ಪುಸ್ತಕಗಳೂ ಇಂಗ್ಲೀಷ್ ಮತ್ತು ಕನ್ನಡ ಅಕ್ಷರಗಳಿಂದ ಶ್ಲಾಘ್ಯವಾಗಿಯೂ ಯೋಗ್ಯ ದರದಿಂದಲೂ ಮುದ್ರಣಮಾಡಿಕೊಡಲ್ಪಡುವುವಲ್ಲದೆ, ಚಕ್ಕಳದ ಅಥವಾ ಸಾದಾ ಬೈಂಡುಕೆಲಸಗಳೂ ತೃಪ್ತಿಕರವಾಗಿ ಮಾಡಲ್ಪಡುವುವು. ಒಂದಾವೃತ್ತಿ ಪರೀಕ್ಷಿಸಿದಲ್ಲಿ ತಾನಾಗಿ ಗೊತ್ತಾಗುವುದು.

ಮ್ಯಾನೇಜರ್.

ಒಳದೇಶದ ವೃತ್ತಾಂತಗಳು

ಶ್ರೀಮನ್ ಮಹಾರಾಜರವರು ನಾಳೆಯದಿನ ಬೆಂಗಳೂರಿಗೆ ದಯಮಾಡಿಸಿ ಕೊಂಚಕಾಲವಿದ್ದು ಚಿತ್ತೈಸುವವರಾಗಿರುವರು.

ಚಿತ್ರಕಲ್ದುರ್ಗದ ಮಿ|| ಅಬ್ದುಲ್ಗನ್ನಿ, ಬಿ. ಎ., ಎಲ್ ಎಲ್. ಬಿ., ಯವರು ಮುನ್ಸೀಫರಾಗಿ ನಿಯಮಿಸಲ್ಪಟ್ಟಿರುವರೆಂದು ತಿಳಿಯಬರುತ್ತದೆ.

ವಿದ್ಯಾಭ್ಯಾಸದ ಇನ್ಸ್ಪೆಕ್ಟರ್ ಜನರಲ್ರವರಾದ ರಾ|ಬ| ಎಂ. ಶ್ಯಾಮರಾಯರ ಸಂಬಳವು ತಿಂಗಳೊಂದಕ್ಕೆ ೧೪೦೦ ರೂ.ಗೆ ಹೆಚ್ಚಿಸಲ್ಪಟ್ಟಿರುತ್ತದೆ.

ಮೈಸೂರ ನಿಯಮನಿರ್ಮಾಣಸಭೆಯು ನೆನ್ನೆಯದಿನ ಬೆಂಗಳೂರು ಪಬ್ಲಿಕ್ಆಫೀಸ್ ಕಟ್ಟಡದಲ್ಲಿ ಸೇರಿದ್ದು ಅನೇಕ ಉಪಯುಕ್ತವಾದ ವಿಷಯಗಳ ಮೇಲೆ ಚರ್ಚೆಯು ನಡೆದಿತು.

ಈಗ ಮೈಸೂರು ಮತ್ತೂ ಬೆಂಗಳೂರು ಪಟ್ಟಣಗಳಲ್ಲಿಡಲ್ಪಟ್ಟಿರುವ ಬೆಂಚ್ಮ್ಯಾಜಿಸ್ಟ್ರೇಟರ ಕೋರ್ಟುಗಳು ಸ್ಥಿರಪಡಿಸಲ್ಪಟ್ಟು, ತುಮಕೂರು, ಶಿವಮಗ್ಗ, ಚಿಕ್ಕಮಗಳೂರು ಮತ್ತೂ ಹಾಸನ ಡಿ| ಗಳಲ್ಲಿ ಬೆಂಚ್ಮ್ಯಾಜಿಸ್ಟ್ರೇಟರ ಕೋರ್ಟುಗಳು ೩ ವರ್ಷಕಾಲ ಪರೀಕ್ಷಾರ್ಥವಾಗಿಡಲ್ಪಡುವಂತೆ ಸರ್ಕಾರದಪ್ಪಣೆಯಾಗಿದೆ.

ಕಳೆದ ಶುಕ್ರವಾರ ಬೆಳಿಗ್ಗೆ ೧೪ ವರ್ಷದ ಒಬ್ಬ ಹುಡುಗನು ಬೆಂಗಳೂರ ಕೋಟೆಯಲ್ಲಿ ಸರ್ಕಾರಿಯ ಬುಕ್ಡಿಪೋವಿನ ಇದಿರಿಗಿರುವ ಒಂದು ಮರವನ್ನು ಹತ್ತಿ ಹೂವನ್ನು ಕುಯ್ಯುತ್ತಿರುವಾಗ್ಗೆ ಆಯತಪ್ಪಿ ೩೦ ಅಡಿಗಳಕೆಳಗೆಬಿದ್ದು ವಿಶೇಷ ಅಪಾಯವನ್ನು ಹೊಂದಿ ಮೂರ್ಛಿತನಾಗಿದ್ದುದರಮೇಲೆ ಕೂಡಲೇ ವಿಕ್ಟೋರಿಯಾಆಸ್ಪತ್ರೆಗೆ ಸಾಗಿಸಲ್ಪಟ್ಟು ಉಪಚರಿಸಲ್ಪಡುತ್ತಿರುವನು.

ಬರುವ ಕ್ರಿಸ್ತಮಸ್ ಹಬ್ಬದಲ್ಲಿ ಮದ್ರಾಸಿನಲ್ಲಿ ನಡೆಯುವ ಪುರನಿರ್ಮಾಣವಿಧಾನ ಪ್ರದರ್ಶನದಲ್ಲಿ ಪ್ರೊಫೆಸರ್ ಗೆಡ್ಡೆಸ್ರವರು ಕೊಡುವ ಉಪನ್ಯಾಸಗಳನ್ನು ಕೇಳಿಬರಲು ನಮ್ಮ ಸರ್ಕಾರದವರು ಚೀಫ್ಇನ್ಜನಿಯರ್ ಮ|| ಕರ್ಪೂರ್ ಶ್ರೀನಿವಾಸರಾಯರು, ಡಿ|| ಬ|| ಕೆ. ಪಿ. ಪುಟ್ಟಣ್ಣಸೆಟ್ಟರು, ಮ|| ಡಿ. ಬಿ. ರಾಮಚಂದ್ರಮೊದಲಿಯಾರರು ಮತ್ತೆಕೆಲ ಅ|| ಇನ್ಜನಿಯರುಗಳನ್ನು ಕಳುಹಿಸಲಾಲೋಚಿಸಿರುವರು.

ಬೆಂಗಳೂರ ಡಿ|| ಬಿಡದಿಯ ಸಮೀಪದಲ್ಲಿರುವ ಉರಗಳ್ಳಿ ಗ್ರಾಮವು ಮ|| ಕೃಷ್ಣಯ್ಯಂಗಾರರಿಗೆ ಸೇರಿರುತ್ತದೆ. ಇವರು ಇಲ್ಲಿ ಸೀಮೆಯನೇಗಿಲು ಮೊದಲಾದ ಯಂತ್ರಸಾಮಗ್ರಿಗಳಿಂದ ಕಬ್ಬು ನೆಲಗಡಲೆ ಮೊದಲಾದ ಪದಾರ್ಥಗಳನ್ನು ಬಹುವುತ್ಕೃಷ್ಟವಾಗಿ ಬೆಳೆಯುತ್ತಿದ್ದಾರೆ. ನಮ್ಮ ದಿವಾನರು ಆ ಗ್ರಾಮಕ್ಕೆ ದಯಮಾಡಿ ಮ|| ಕೃಷ್ಣಯ್ಯಂಗಾರರು ಮಾಡಿರುವ ವ್ಯವಸಾಯಕ್ರಮವನ್ನೂ ಅವರಿಗದರಲ್ಲಿರುವ ಆಸಕ್ತಿಯನ್ನೂ ಪರಾಮರ್ಶಿಸಿ ಅದಕ್ಕಾಗಿ ಅವರನ್ನು ವಂದಿಸಿಬಂದರು.

ಚೀಫ್ಕೋರ್ಟಿನ ಎರಡನೆಯ ಜಡ್ಜರಾದ ಮ|| ಚಂದ್ರಶೇಖರಯ್ಯರ್ರವರು ಈ ತಾ|| ೨೩ ರಿಂದ ೩೧ ದಿನಗಳ ಪ್ರಿವಿಲೇಜ್ ರಜದಮೇಲೆ ಹೋಗಿರುವುದರಿಂದ, ಮೈಸೂರ ಡಿ|| ಜಡ್ಜರಾದ ಮಿ|| ಹಂಸಾಹುಸೇನ್ ರವರು ಚೀಫ್ಕೋರ್ಟಿನ ಆಕ್ಟಿಂಗ್ ಜಡ್ಜರಾಗಿಯೂ ಅವರ ಬದಲು ಶಿವಮಗ್ಗೆಯ ಸಬ್ಜಡ್ಜರಾದ ಬ್ಯಾರಿಸ್ಟರ್ ಮ|| ಬಿ. ನಾಗಪ್ಪನವರು ಆಕ್ಟಿಂಗ್ ಡಿಸ್ಟ್ರಿಕ್ಟ ಮತ್ತೂ ಸೆಷನ್ಸು ಜಡ್ಜರಾಗಿಯೂ ಅವರ ಸ್ಥಾನದಲ್ಲಿ ಹಾಸನದ ಮುನಸೀಫರಾದ ಮ|| ಟಿ. ಕೃಷ್ಣಯ್ಯಂಗಾರರು ಆಕ್ಟಿಂಗ್ ಸಬಾರ್ಡಿನೇಟ್ ಮತ್ತೂ ಅ|| ಸೆಷನ್ಸು ಜಡ್ಜರಾಗಿಯೂ ನಿಯಮಿಸಲ್ಪಟ್ಟಿರುವರು.

ಗ್ರಾಮಪಾಠಶಾಲೆಗಳ ಉಪಾಧ್ಯಾಯರ ಸಂಬಳವು ಮ|| ಮಾಧವರಾಯರ ದಿವಾನಗಿರಿಯಲ್ಲಿ ಹತ್ತು ರೂಪಾಯಿಗಳಿಗೆ ಹೆಚ್ಚಿಸಲ್ಪಟ್ಟಿದ್ದಿತು. ಆದರೆ ಈಗಿನ ಕಾಲಸ್ಥಿತಿಯಲ್ಲಿ ಈ ಮೊಬಲಗು ಪರಸ್ಥಳ ನಿವಾಸಿಗಳಾದ ಉಪಾಧ್ಯಾಯರುಗಳ ಜೀವನಕ್ಕೆ ಸಾಲದೆಂದು ಮೊರೆಯಿಟ್ಟುಕೊಂಡಿದ್ದುದರ ಮೇಲೂ ಪ್ರಜಾಪ್ರತಿನಿಧಿಸಭೆಯಲ್ಲಿ ಬಡ ಉಪಾಧ್ಯಾಯರುಗಳ ಸಂಬಳವನ್ನು ಹೆಚ್ಚಿಸುವ ಬಗೆಗೆ ಚರ್ಚೆಯು ನಡೆಸಿದ್ದುದರ ಮೇಲೂ ದಯಾಳು ಸರ್ಕಾರದವರು ಚೆನ್ನಾಗಿ ಪರ್ಯಾಲೋಚಿಸಿ ೧೦ ರೂ. ಇಂದ ೨೫ ರೂಪಾಯಿಗಳ ವರೆಗೆ ಸಂಬಳವು ಹೆಚ್ಚಿಸಿರುವರೆಂದು ತಿಳುಹಲು ಬಹಳ ಹರ್ಷವಾಗುತ್ತದಲ್ಲದೆ ಸರ್ಕಾರದವರ ಔದಾರ್ಯವು ಅಭಿನಂದನೀಯವಾಗಿರುತ್ತದೆ.

ಬೆಂಗಳೂರ ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮ|| ಭೋಜಪ್ಪನವರು ತಮ್ಮ ಕುರುಬರ ಜಾತಿಗೆ ಅಪಮಾನಕರವಾದ ಲೇಖನವನ್ನು ಒಕ್ಕಲಿಗರ ಪತ್ರಿಕೆಯಲ್ಲಿ ಪ್ರಕಟಿಸಿರುವರೆಂದು ಆ ಪತ್ರಿಕೆಯ ಎಡಿಟರ್ ಮೊದಲಾದವರ ಮೇಲೆ ಮಾಡಿದ್ದ ವಿವಾದವು ಬಹಳದಿನಗಳಿಂದ ನಡೆಯುತ್ತಿದ್ದು ಕಳೆದ ತಾ|| ೨೦ ರಲ್ಲಿ ಮ್ಯಾಜಿಸ್ಟ್ರೇಟರಾದ ಮಿ|| ಬಿ. ರಾಣೋಜಿರಾಯರು, ಲೇಖನವನ್ನು ಬರೆದ ಬೋರಯ್ಯ ಪತ್ರಿಕೆಯ ಮುದ್ರಾಪಕರು ಮತ್ತೂ ಪ್ರಸಾರಕರೂ ಆದ ಮ|| ಎಂ. ಎಸ್. ಮಾರಪ್ಪನವರು ಮತ್ತೂ ಎಡಿಟರಾದ ಮ|| ವೆಂಕಟರಾಮಯ್ಯನವರು ತಪ್ಪಿತಸ್ಥರೆಂದು ನಿರ್ಧರಿಸಿ ಇಂಡಿಯನ್ ಪಿನಲ್ಕೋಡು ೫೦೦ ನೆಯ ಸೆಕ್ಷನ್ಪ್ರಕಾರ ಪ್ರತಿಯೊಬ್ಬರಿಗೂ ೧೦೦ ರೂ. ನ ಅರ್ಥದಂಡವನ್ನು ವಿಧಿಸಿ, ಉಳಿದ ಮಿ|| ಕೆ. ಎಚ್ ರಾಮಯ್ಯನವರು ಮ್ಯಾನೇಜರ ಮಿ|| ಸುಬ್ರಹ್ಮಣ್ಯಯರ್ರವರು ಮತ್ತೂ ಷಣ್ಮುಗಂ ಇವರು ನಿರ್ದೋಷಿಗಳೆಂದು ಬಿಟ್ಟುಬಿಟ್ಟರು.

ಪತ್ರವ್ಯವಹಾರ.

ಹುಬ್ಬಳ್ಳಿ.

ಕೊಣ್ಣೂರ ಕರ್ನಾಟಕ ಸಂಗೀತ ನಾಟಕಮಂಡಳಿಯವರು ಇಲ್ಲಿಗೆ ಬಂದು ಒಂದುತಿಂಗಳಾಯಿತು. ಇವರ ಪ್ರಯೋಗಗಳು ಅತ್ಯುತ್ತಮವಾಗುತ್ತಿದ್ದು ಅದರಲ್ಲಿ ಶನಿಪ್ರಭಾವ ನಾಟಕವಂತೂ ಬಹು ಮನೋಹರವಾಗಿರುವದು. ಈ ನಾಟಕದಲ್ಲಿಯ ಇಲೆಕ್ಟ್ರಿಕ್ ದೀವಿಗೆಗಳೂ ಹೊಸತರದ ಟ್ರಾನ್ಸಫರ್ ಸೀನ್ಸಿನ ಪರದೆಗಳೂ ಫಾರ್ಸಿ ನಾಟಕಗಳಿಗೆ ಸರಿಯಾಗಿರುವವು. ನಮ್ಮ ಹುಬ್ಬಳ್ಳಿಗೆ ಈ ಪ್ರಕಾರದ ಲಾಯಿಟ್ ಸೀನರಿಗಳು ಬಂದದ್ದರಲ್ಲಿ ಇದಕ್ಕೆ ಸರಿದೂಗುವ ಯಾವ ಕಂಪನಿಯೂ ಇಲ್ಲಿಗೆಬಂದಿದ್ದಿಲ್ಲ. ಶನಿವಾರ ತಾ||

೩-೧೧-೧೪ ಇಸವಿ ದಿವಸ ಶನಿಪ್ರಭಾವ ನಾಟಕವನ್ನು ನೋಡಲಿಕ್ಕೆ ಅತಿಶಯವಾಗಿ ಪ್ರೇಕ್ಷಕರು ನೆರೆದಿದ್ದರು. ನಾಟಕವಾದರೂ ಅತ್ಯುತ್ತಮವಾಯಿತು. ನಾಟಕ ನೋಡಲಿಕ್ಕೆ ಬಂದ ಈ ಊರ ಮ॥ ರಾ॥ ರಾ॥ ಮಡಿವಾಳಪ್ಪ ಅಣ್ಣಾ ಕಾನಳ್ಳಿ ಇವರು ಕಂಪನಿಗೆ ಜರದ ಶಲ್ಲೆ ಮತ್ತು ರುಮಾಲನ್ನು ಉಚಿತವಾಗಿ ಕೊಟ್ಟು ತಮ್ಮಲ್ಲಿರುವ ಕಂಪನಿವಿಷಯಕ ಆನಂದವನ್ನು ವ್ಯಕ್ತಪಡಿಸಿದರು. ಇನ್ನೂ ಈ ಕಂಪನಿಯವರು ೧ ತಿಂಗಳು ಈ ಊರಲ್ಲಿ ಇರಬಹುದು. ಕನ್ನಡಿಗ,

ಬೀರೂರು ಮತ್ತು ಈ ಗ್ರಾಮಕ್ಕೆ ಸಮೀಪದಲ್ಲಿರುವ ಹಿರಿಂಗಳ, ಬಿತನಹಳ್ಳಿ ಇವುಗಳ ಹುಲ್ಲುಬನ್ನಿ ಗುತ್ತಿಗೆಯನ್ನು ಪ್ರತಿವರ್ಷವೂ ಬೇರೆಯವರು ಮಾಡಿಕೊಂಡು ರೈತರಿಗೆ ಬಹಳ ತೊಂದರೆಯನ್ನುಂಟುಮಾಡುತ್ತಿದ್ದರು. ಈ ವಿಷಯವನ್ನು ಮ॥ ಶ್ರೀಮಂತರು ಪತ್ರಿ ಚೆಂ॥ ವೀರಪ್ಪಯ್ಯನವರು ತಿಳಿದು ೧೯೧೩-೧೪, ೧೯೧೪-೧೫ನೆ ಸಾಲುಗಳಲ್ಲಿ ತಮ್ಮ ಹೆಸರಿಗೇನೇ ಹರಾಜಿಗೆ ನಿಲ್ಲಿಸಿಕೊಂಡು ಹಣಾ ಕಟ್ಟಿ, ರೈತರಿಗೆ ಮುಫತ್ತಾಗಿ ದನ ಮೈರೆ ರಾಸುಗಳನ್ನು ಮೇಯಿಸಿಕೊಳ್ಳಲು ಮಾಡಿಸಿಕೊಟ್ಟ ಉಪಕಾರವನ್ನು ಇಲ್ಲಿನ ಜನರು ಕೊಂಡಾಡುತ್ತಿದ್ದಾರೆ. ಇವರಿಗೂ ಇವರ ಕುಟುಂಬವರ್ಗದವರಿಗೂ ಶ್ರೀ ಪರಮೇಶ್ವರನು ಸಕಲ ಸೌಭಾಗ್ಯಗಳನ್ನಿತ್ತು ಕಾಪಾಡಲೆಂದು ಹಾರೈಸುತ್ತೇನೆ. ಮತ್ತು ಮ॥ ಡಿಸ್ಟ್ರಿಕ್ಟ ಸಬ್‌ಡಿವಿಜನ್ ಆಫೀಸರವರು ತಾಲ್ಲೋಕು ಆಫೀಸರವರು ಸಹ ದಯಮಾಡಿಸಿ ಇಂಪೀರಿಯಲ್ ರಿಲೀಫ್‌ಫಂಡಿಗೋಸ್ಕರ ಮ॥ ಪತ್ರಿ, ವೀರಪ್ಪಯ್ಯನವರಿಂದ ೨೦೦ ರೂ. ಬರೀದಿ ರಾಮಣ್ಣನವರಿಂದ ೩೫ ರೂ. ಯನ್. ಎಂ. ಶಿವಲಿಂಗಪ್ಪನವರಿಂದ ೫೦ ರೂ. ಬಿ. ಎನ್. ಕೇಶವರಾಯಸೆಟ್ಟರಿಂದ ೫೦ ರೂ. ಬರೀದಿ ಸುಬ್ರಾಯಪ್ಪನವರಿಂದ ೫೦ ರೂ. ಕೋಡೀಹಳ್ಳಿ ಮಲ್ಲಪ್ಪನವರಿಂದ ೫೦ ರೂ. ಬರೀದಿ ಲಿಂಗಪ್ಪನವರಿಂದ ದೊಡ್ಡಮನೆ ಮರಿಯಪ್ಪನವರಿಂದ ೩೫ ರೂ. ಇನ್ನೂ ಮೊದಲಾದವರಿಂದ ಅವರವರ ಶಕ್ತ್ಯನುಸಾರವಾಗಿ ಕೊಡಲ್ಪಟ್ಟ ಚಂದಾವನ್ನು ವಸೂಲ್ ಮಾಡುತ್ತಿದ್ದಾರೆ. ಸ್ಥಳಿಕ.

ಕಡೂರು ತಾ॥ ಯಗಟಿ ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರ ನೂತನಾಲಯ ಪ್ರವೇಶ ಮಹೋತ್ಸವವು.

ಯಗಟಿ ಕ್ಷೇತ್ರವು ವೇದಾವತೀ ನದೀತೀರದಲ್ಲಿದ್ದು ದಕ್ಷಿಣಕಾಶಿಯೆಂದು ಪ್ರಖ್ಯಾತಿಗೊಂಡಿರುತ್ತೆ. ಈ ಯಗಟಿ ಕ್ಷೇತ್ರಕ್ಕೆ ಸಮೀಪದಲ್ಲಿರುವ ಪುರದ ಗ್ರಾಮದಲ್ಲಿ ಶ್ರೀ ಪ್ರಸನ್ನ ಮಲ್ಲಿಕಾರ್ಜುನಸ್ವಾಮಿಯು ಸ್ವಯಂ ಆವಿರ್ಭವಿಸಿ ಲೋಕಪಾವನಮೂರ್ತಿಯೆಂದೂ, ಇಷ್ಟಾರ್ಥಪ್ರದಾಯಕನೆಂದೂ ಪೆಸರ್ಗೊಂಡಿರುವುದರಿಂದ ಬಹು ದೂರದೇಶದಿಂದಲೂ ಭಕ್ತಾದಿಗಳು ಬಂದು ಈ ಮಹಾದೇವನಿಗೆ ಸೇವಾಸತ್ಕಾರಗಳನ್ನು ನಡೆಸುವುದರಿಂದಲೂ, ಈ ಪುಣ್ಯನದಿಯಲ್ಲಿ ಸ್ನಾನಮಾಡುವುದರಿಂದಲೂ ಕೃತಾರ್ಥತೆಯಂ ಪಡೆಯುತ್ತಿರುವರು. ಇಲ್ಲಿಯ ಉತ್ಸವಮೂರ್ತಿಯು ಯಗಟಿಕ್ಷೇತ್ರದಲ್ಲಿಯೇ ಇರುವ ಪದ್ಧತಿಯು ಪೂರ್ವಾರಭ್ಯ ನಡದುಬಂದಿರುತ್ತೆ. ಈ ಉತ್ಸವಮೂರ್ತಿದೇವಸ್ಥಾನವು ಇಟ್ಟಿಗೆಯಿಂದ ಕಟ್ಟಲ್ಪಟ್ಟ ಪುರಾತನ ಕಟ್ಟಡವಾಗಿ ಶಿಥಿಲವಾಗಿದ್ದುದರಿಂದ ಮ॥ ಗುಡೀಗೌಡ ತ್ಯಾರಪ್ಪ ಮತ್ತು ಕೆಣಬಗಟ್ಟೆ ಗೌಡ ಬಸವಪ್ಪನವರು ಸಹ ಶಿವನ ಸೇವೆಗೋಸ್ಕರ ತನುಮನಧನಂಗಳನ್ನರ್ಪಿಸಬೇಕೆಂಬ ಸದ್ಭಕ್ತಿಭಾವದಿಂ ಕೂಡಿದವರಾಗಿ ತಮ್ಮ ಸ್ವಂತ ಕಾರ್ಯಗಳನ್ನು ಒತ್ತಟ್ಟಿಗಿಟ್ಟು ಅರ್ಥಪ್ರದ ದೇಹಶ್ರಮಗಳನ್ನು ಲಕ್ಷಿಸದೆ ಸ್ವಂತ ದ್ರವ್ಯದಿಂದಲೂ, ಸ್ವಾಮಿಯ ಭಕ್ತಾದಿಗಳಿಂದ ಬಂದ ದ್ರವ್ಯದಿಂದಲೂ ಸುಮಾರು ಏಳೆಂಟು ಸಾವಿರ ರೂಪಾಯಿಗಳವರೆಗೂ ಖರ್ಚುಮಾಡಿಸಿ ಸುಂದರವಾಗಿಯೂ, ಬಂಧುರವಾಗಿಯೂ ಇರುವಂತೆ ೧೮ ಅಂಕಣ ಶಿಲಾಮಯವಾದ ದೇವಸ್ಥಾನವನ್ನು ಕಟ್ಟಿಸಿ ಒಪ್ಪಿಸಿರುತ್ತಾರೆ. ಈ ದೇವಸ್ಥಾನದ ಪ್ರವೇಶಮಹೋತ್ಸವವು ಇದೇ ಆನಂದನಾಮ ಸಂ॥ ಕಾರ್ತೀಕ ಶು॥ ೧೧ ಬುಧವಾರ ಸೂರ್ಯೋದಯಾನಂತರ ೧೫ ಗಳಿಗೆ ಲಾಗಾಯ್ತು ೧೭॥ ಗಳಿಗೆಯೊಳಗೆ ಸಲ್ಲುವ ಮಕರಲಗ್ನ ೮ ಭಾಂಶದಲ್ಲಿ ಬೆಂಗಳೂರಿಂದ ಬಂದಿದ್ದ ಬ್ರಹ್ಮಶ್ರೀ ಗುರುಲಿಂಗಶಾಸ್ತ್ರಿಗಳು ನಂಜುಂಡಶಾಸ್ತ್ರಿಗಳವರಿಂದ ವಿಧ್ಯುಕ್ತಪ್ರಕಾರವಾಗಿ ನಡೆಸಲ್ಪಟ್ಟಿತು ಮತ್ತು ಅದೇ ಲಗ್ನದಲ್ಲಿ ಶಿಖರದಮೇಲಕ್ಕೆ ಕಲಶಗಳನ್ನು ಪ್ರತಿಷ್ಠೆ ಮಾಡಿಸಿದರು. ತರುವಾಯ ಬೀರೂರುಕೆರೆ ಕೋಡೀಮಠದ ಶ್ರೀಮತ್ಪ್ರಣವ ಸ್ವರೂಪಿಗಳಾದ ನಿರಂಜನ ಚರಮೂರ್ತಿಸ್ವಾಮಿಗಳವರ ಮಹಾಪಾದಪೂಜೆಯು ಸಾಂಗವಾಗಿ ನಡೆಸಲ್ಪಟ್ಟಿತು. ಈ ಸಮಾರಂಭಕ್ಕಾಗಿ ಬಂದಿದ್ದ ಸಮಸ್ತ ಭಕ್ತಮಾಹೇಶ್ವರರಿಗೆ ಸಂತರ್ಪಣೆಯು ಬೀರೂರು ಮ॥ ಸಣ್ಣಂಗಿಪರ್ವತಪ್ಪನವರು ಜವಳಿಅಂಗಡಿ ಗಂಗಪ್ಪನವರು ಮೊದಲಾದವರಿಂದ ಬಹು ವಿತರಣೆಯಾಗಿ ಜರುಗಿಸಲ್ಪಟ್ಟಿತು. ಆ ದಿನ ಸಾಯಂಕಾಲಕ್ಕೆ ಪುರದ ಗ್ರಾಮದಿಂದ ಬೆಂಗಳೂರು ಹುಪ್ಪಾಡಿಗರಿಂದ ಶೃಂಗರಿಸಲ್ಪಟ್ಟಿದ್ದ ಮಯೂರನಾಟಕದ ವೇಲೆ ಶ್ರೀ ಪ್ರಸನ್ನಮಲ್ಲಿಕಾರ್ಜುನಸ್ವಾಮಿಯ ಉತ್ಸವವು ಮತ್ತು ಗ್ರಾಮಾಂತರಗಳಿಂದ ಬಂದಿದ್ದ ದೇವರುಗಳ ಉತ್ಸವವು ಸದಾ ಸಕಲ ಬಿರುದಾವಳೀ ವಾದ್ಯವೈಭವದೊಡನೆಯೂ ಬಾಣವಿರುಸುಗಳ ವಿನೋದದಿಂದಲೂ ಭಕ್ತರ ಭಕ್ತಿಯಂ ಕೈಕೊಳ್ಳುತ್ತಾ, ಪ್ರೇಕ್ಷಕಜನರಿಗೆ ಪರಮಾನಂದವನ್ನುಂಟುಮಾಡುತ್ತಾ, ಪುರವೀಧಿಗಳೊಳ್ ಪೂರವಮಟ್ಟ ರಾತ್ರಿ ೧೦ ಘಂಟೆ ಸಮಯಕ್ಕೆ ನೂತನಶಿವಾಲಯದ ಸಮೀಪಕ್ಕೆ ಬಿಜಯಂಗೈಸಿತು. ಈ ಮಹೋತ್ಸವಕಾಲದಲ್ಲಿ ಬೀರೂರು ಶ್ರೀಮಂತ ಪತ್ರಿ ಚೆಂ॥ವೀರಪ್ಪಯ್ಯನವರು ಎಸ್. ಪರ್ವತಪ್ಪನವರು ಯಡೆಹಳ್ಳಿ ಸಾ॥ ಶಾಂತಪ್ಪಸೆಟ್ಟರು ಎನ್. ಎಂ. ಶಿವಲಿಂಗಪ್ಪನವರು ನಂಜಪ್ಪಗೌಡರು ನಾಗಪ್ಪಗೌಡರು ಮೊದಲಾದ ಮಹಾಜನಂಗಳು ಸೇರಿದ್ದುದರಿಂದ ಬಹು ವಿತರಣೆಯಿಂದ ನಡೆಸಲ್ಪಟ್ಟಿತು. ಬಳಿಕ ಶ್ರೀಸ್ವಾಮಿಯುತ್ಸವವು ಪ್ರಾಕಾರಪ್ರದಕ್ಷಿಣೆಯನ್ನು ಮಾಡಿದ ಸಮಯದಲ್ಲಿ ವೇ॥ ಶಾಸ್ತ್ರಿಗಳವರ ವೇದಾಧ್ಯಯನವು ಆಸ್ತಿಕರಿಗೆ ಬಹುಭಕ್ತಿಯನ್ನುಂಟುಮಾಡುವದಾಗಿತ್ತು. ಶ್ರೀಮಲ್ಲಿಕಾರ್ಜುನಸ್ವಾಮಿಯು ದೇವಸ್ಥಾನದೊಳಗೆ ಬಿಜಮಾಡಿಸಿದ ನಂತರ ಶಾಸ್ತ್ರಿಗಳವರಿಂದ ರಾಜೋಪಚಾರವು ಸಾಂಗವಾಗಿ ನಡೆಸಲ್ಪಟ್ಟಿತು.

ಈ ಶಿವಾಲಯವನ್ನು ಕಟ್ಟಿಸುವುದರಲ್ಲಿ ಬದ್ಧಕಂಕಣರಾಗಿ ನಿಂತಿದ್ದ ಮ॥ ಗುಡೀಗೌಡ ತ್ಯಾರಪ್ಪನವರಿಗೂ, ಕೆಣಬಗಟ್ಟೆ ಗೌಡ ಬಸವಪ್ಪನವರಿಗೂ, ಯಗಟಿ ಬಾ ನಾಗಪ್ಪನವರಿಗೂ, ಮತ್ತು ಪುಣ್ಯಕಾರ್ಯಕ್ಕಾಗಿ ಸಹಾಯಮಾಡಿದ ಸಮಸ್ತ ಮಹಾಜನಂಗಳಿಗೂ, ಇವರುಗಳ ಅಶೇಷ ಕುಟುಂಬವರ್ಗದವರಿಗೂ ಶ್ರೀ ಪ್ರಸನ್ನಮಲ್ಲಿಕಾರ್ಜುನಸ್ವಾಮಿಯು ದೀರ್ಘಾಯುರಾರೋಗ್ಯಾದಿಗಳನ್ನೂ ಸಕಲೈಶ್ವರ್ಯಗಳನ್ನೂ ಕೊಟ್ಟು ಕಾಪಾಡಲೆಂದು ಹಾರೈಸುತ್ತೇನೆ. ದೈವಭಕ್ತ.

ಸುಲಭ! " ಚಾತುರ್ಯ " ಮಾಸಪತ್ರಿಕೆ !!

ಹಾಸ್ಯ, ವಿನೋದ, ನೀತಿ, ಚಮತ್ಕಾರಭರಿತ ಲೇಖನಗಳಿಂದ ಕೂಡಿರುವ ಮಾಸಪತ್ರಿಕೆ! ಪಂಡಿತಪಾಮರರ ಮನೋರಂಜಕವಾದದ್ದು. ಮನೋರೋಗಕ್ಕೆ ಔಷಧಪ್ರಾಯ! ಕಾಲಕ್ಕೆತಕ್ಕ ಲೇಖನಗಳು!! ವಾರ್ಷಿಕಚಂದಾ ಅಂಚೆ ವೆಚ್ಚ ಮತ್ತು ವಿ. ಪಿ. ಛಾರ್ಜು ಸೇರಿ ಸ್ತ್ರೀಯರಿಗೆ ವಿದ್ಯಾರ್ಥಿಗಳಿಗೆ ಮಾತ್ರ ೬ ಆಣೆ. ಇತರರಿಗೆ ೧೦ ಆಣೆ. ಮಾದರಿ ಸಂಚಿಕೆಗೆ ೧ ಆಣೆ ಸ್ಟ್ಯಾಂಪು ಕಳುಹಿಸಿರಿ, ನಮ್ಮಲ್ಲಿ ಅನೇಕ ಪುಸ್ತಕಗಳು ಸಹ ಸಿಗುತ್ತೆ. ಮ್ಯಾನೇಜರ್,

" ಚಾತುರ್ಯ " ಚಾಮರಾಜಪೇಟೆ ಬೆಂಗಳೂರು ಸಿಟಿ.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ
ಧಾತುಪೌಷ್ಟಿಕ ಲೇಹವು.

48

ರಕ್ತಶುದ್ಧಿ ಮತ್ತು ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪ್ರಕೋಪವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೈಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಖ್ಯಾನತೀಳಸಹಿತ ಆದ ಸಮಾರಂಭ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೊ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವಿರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಶಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ಪಗೈರೆ ಫೋಟೊ ಸಿಕ್ಕುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.

ಹೊಸಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವ ಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಈಪ್ರಕಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ॥।= , ೧, ೧।, ಪ್ರಕಾರ, ಮತ್ತೂ ಬೆಳ್ಳೀದು ರು ೧॥ ರೋಡ್ ಗೋಲ್ಡ ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨॥। ರೂ.

ಪೂರಊರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ. ನಮ್ಮವಿಳಾಸ— ಗಂಗಪ್ಪಾ ಜೇರಿಗೆ,
31 ಆರ್ಟಿಸ್ಟ್ ಸೊಲ್ಲಾಪುರ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು
8 ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ-ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರರಜ್ವರ ನಾಲ್ಕರಜ್ವರ- ಮಲೇರಿಯಾಜ್ವರ- ತಲೆನೋವು- ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಶೆಳತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ. ಏದಕ್ಕೆ ಒಂದು ಇನಾಮು. ವಿ. ಪಿ ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಕೆ, ಮಲಬಂಧ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತಕ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಏದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ. ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ಡಿ

ಕನ್ನಡ ಇಂಡಿಯನ್ ಪೆನಲ್‌ಕೋಡ್ ಕ್ರಯ ೨—೦—೦ ರೂ. ವಿ. ಪಿ. ಛಾರ್ಜು ೦—೪—೦.
ಹೊಸಪುಸ್ತಕ ೧೩೪೪ ಪುಟಗಳು) ಶ್ರೀ (ಹೊಸಪುಸ್ತಕ ೧೩೪೪ ಪುಟಗಳು)
ಬ್ರ॥ ಶ್ರೀ॥ ಬಿ. ಎ. ಸುಬ್ರಹ್ಮಣ್ಯಶರ್ಮವಿರಚಿತವಾದ ಸುಧಾರ ಸಧಾರಾಯೆಂಬ ಕನ್ನಡ
ಟೀಕಾತಾತ್ಪರ್ಯ ಗಣಿತೋದ್ಧಾರಣೆಗಳಿಂದೊಡಗೂಡಿ 10

ಬೃಹಜ್ಜಾತಕಾಖ್ಯ ಹೋರಾಶಾಸ್ತ್ರಮ್.

ಮಾನವನು ತನ್ನ ಅದೃಷ್ಟಚಕ್ರದ ಫಲಾಫಲಗಳನ್ನು ಅರಿತು, ಮುಂದೊದಗಬಹುದಾದ ಫಲಸ್ವರೂಪವನ್ನೂ ಇತರರ ಸಹಾಯವಿಲ್ಲದೆಯೆ ತಿಳಿದುಕೊಂಡು, ದುಷ್ಫಲಗಳು ದೂರವಾಗಿ, ಸುಫಲಗಳು ಕರಗತವಾಗುವಂತೆ ಮಾಡುವಂತಹ, ಪರಿಹಾರೋಪಾಯಗಳನ್ನು ಸೂಚಿಸಬೇಕಾದರೆ, ನಮ್ಮಿಂದ ಈಗತಾನೆ ಸಂಸ್ಕೃತ ಹಿಂದಿ ಮರಾಟಿ ಭಾಷೆಗಳಿಂದ ತರ್ಜುಮೆಮಾಡಿ ಪ್ರಕಾಶಗೊಂಡ " ಸುಧಾರಸಧಾರಾ " ಎಂಬ ಕನ್ನಡ ಟೀಕಾತಾತ್ಪರ್ಯ ಉದಾಹರಣೆಗಳಿಂದ ಕೂಡಿದ ಬೃಹಜ್ಜಾತಕವೆಂಬ ಹೋರಾಶಾಸ್ತ್ರವೊಂದಲ್ಲದೆ ಮತ್ತಾವದೂ ಸಮರ್ಥವಾಗಿಲ್ಲವು. ೧೩೪೪ ಪುಟ ೩ ಭಾಗಗಳ ಪುಸ್ತಕ ಒಂದೇಬೈಂಡ್ ಈ ಗ್ರಂಥರತ್ನವು ಆಬಾಲವೃದ್ಧರಾದಿಯಾಗಿ ಅಕ್ಷರವನ್ನರಿತ ಹೆಂಗಸರೂ ಸಹಾಪರರ ಸಹಾಯಾಪೇಕ್ಷೆ ಇಲ್ಲದೆ ಓದಿ ತಿಳಿಯಲು, ಅನುಕೂಲವಾಗಿರುವುದು. ಇದರೊಳಗಡಗಿರುವ ೨೮ ಪ್ರಕರಣಗಳಲ್ಲಿನ ವಿಷಯಸಂಗ್ರಹ ವೆಂತೆಂದರೆ:— ೧-೨ ನೇ ಪ್ರಕರಣಗಳಲ್ಲಿ ಶಾಸ್ತ್ರಪ್ರಯೋಜನವೂ, ಜೋತಿಶಾಸ್ತ್ರದ ಹೀರಿಕಾಭಾಗಗಳು ೩, ಸಜೀವನಿ ರ್ಜೀವವಸ್ತುಗಳ ಉತ್ಪತ್ತಿ ೪, ಗರ್ಭಧಾರಣಯೋಗಗಳು ೫, ಜನನಕಾಲ ಲಕ್ಷಣ ಮತ್ತು ಫಲ ೬, ಬಾಲಾರಿಷ್ಟವಿಚಾರ ಅವುಗಳ ನಿವಾರಣೋಪಾಯ ೭, ಆಯುರ್ದಾಯವಿಚಾರ ೮, ದಶಾಭುಕ್ತಿನಿರ್ಣಯ ೯, ಅಷ್ಟಕವರ್ಗವಿಚಾರ ೧೦, ಜೀವನೋಪಾಯವಿಚಾರ ೧೧, ರಾಜಯೋಗಸೂಚನೆ ಅವುಗಳ ಫಲವಿಚಾರ ೧೨, ೧೮೦೦ ಯೋಗಗಳ ಲಕ್ಷಣ ಮತ್ತು ಫಲ ೧೩, ಚಂದ್ರಸಂಬಂಧವಾದ ಯೋಗಗಳು ೧೪, ಒಂದಕ್ಕಿಂತಲೂ ಹೆಚ್ಚುಗ್ರಹಗಳು ಒಂದೇಕಡೆ ಸೇರಿದರೆ ಅವುಗಳ ಫಲ ೧೫, ಸನ್ಯಾಸಯೋಗಗಳು ೧೬, ನಕ್ಷತ್ರಫಲಗಳು ೧೭, ರಾಶಿಫಲಗಳು ೧೮, ರಾಸಿಗಳ ಫಲ ಮತ್ತು ಕೇರಳಿಯೋಕ್ತ ಫಲಗಳು ೧೯, ದೃಷ್ಟಿಫಲಗಳು ೨೦, ಭಾವಲಕ್ಷಣ ಮತ್ತು ಆ ಫಲಗಳ ವಿಚಾರ ೨೧, ಕ್ಷೇತ್ರಫಲಗಳು ೨೨, ಗ್ರಹಗಳ ಅವಸ್ಥೆ ಅಷ್ಟಕವರ್ಗ ಫಲ ೨೩, ಅನಿಷ್ಟಯೋಗಗಳು ಅವುಗಳಿಂದಾಗುವ ಫಲಗಳು ೨೪, ಸ್ತ್ರೀಜಾತಕ ಅದರ ಫಲಗಳು ೨೫, ಮರಣಕಾರಣ ಅದರ ಫಲಗಳು ೨೬, ನಷ್ಟಜಾತಕ ಬರಿಯುವ ರೀತಿ ೨೭, ದ್ರೇಕ್ಕಾಣವರ್ಣನೆ ಪ್ರಶ್ನೆಗೆ ಬೇಕಾದ ಸಹಾಯವಿಷಯ ೨೮, ಅನುಕ್ರಮಣಿಕಾಸಂಗ್ರಹ ಮತ್ತು ಗ್ರಂಥಕರ್ತರ ವಂಶವರ್ಣನೆ:—

ಮೇಲೆ ಹೇಳಿರುವಂತೆ ಬರೆಯಲ್ಪಟ್ಟ ಒಂದು ಪುಸ್ತಕ ತಮ್ಮ ಬಳಿಯಲ್ಲಿದ್ದರೆ ೧೦ ಜನ ಜ್ಯೋತಿಷ್ಕರಿದ್ದರೆ ಎಷ್ಟು ಅನುಕೂಲವೋ ಅಷ್ಟು ಅನುಕೂಲ. ಇದು ಪ್ರೌಢರಿಗೂ, ಸ್ತ್ರೀಯರಿಗೂ ಧಾರಾಳವಾಗಿ ತಿಳಿಯುವಂತೆ ಉತ್ತಮಕಾಗದದಲ್ಲಿ ಪ್ರಿಂಟ್‌ಮಾಡಿಸಿವೆ, ಈ ತಿಂಗಳು ಆಖೈರಿನೊಳಗಾಗಿ ಆರ್ಡರ್ ಕೊಡುವವರಿಗೆ ೪—೦—೦ ರೂ. ವಿ. ಪಿ. ಛಾರ್ಜು ೦—೩—೦ ಆಣೆ ನಂತರ ೫—೦—೦ ರೂ. ಜಾಗ್ರತೆ ತರಿಸಿಕೊಳ್ಳಿ ನಂತರ ಈ ಬೆಲೆಗೆ ದೊರೆಯಲಾರದು.

ಇತರ ಪುಸ್ತಕಗಳು.

ಟೀಕಾಜೈಮಿನಿ ೯೩೦ ಪುಟ ೪—೦—೦ ರೂ. ಸಟೀಕಹರಿಕಥಾಮೃತಸಾರ ೩೪೪ ಪುಟ ೧—೪—೦ ರೂ. ಕನ್ನಡದ್ವಾದಶಸ್ಕಂಧ ಭಾಗವತ ೩—೦—೦ ರೂ. ಶುಕಸಪ್ತತಿ ೭೦ ಕಥೆ ಶುದ್ಧಪ್ರತಿ ೨—೦—೦ ರೂ. ೪ ಜನ ಫಕೀರರ ಕಥೆ ೦—೮—೦. ಸಟೀಕಾಭೋಜರಾಜಚರಿತ್ರೆ ೦—೮—೦. ಇವುಗಳಲ್ಲದೆ ನಮ್ಮಲ್ಲಿ ಯಾವಾಗ್ಯೂ ಕನ್ನಡ, ಸಂಸ್ಕೃತ, ತೆಲಗು ಗ್ರಂಥಗಳು ದೊರೆಯುತ್ತೆ. ಟಿ. ಯನ್. ಕೃಷ್ಣಯ್ಯಸೆಟ್ಟಿ, ಬುಕ್‌ಡಿಪೋ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಲೋಕಪ್ರಸಿದ್ಧವಾದ ಪಂಜಾಸಾಲಾಮಿಸ್ರಿ ಮುರಬ್ಬಾ.

1

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ " ಪಂಜಾ ಸಾಲಾಮಿಸ್ರೀ ಮುರಬ್ಬಾವನ್ನು " ಸೇವಿಸಿರಿ ! ಸೇವಿಸಿರಿ !! ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳೆಗೆಡ್ಡೆ, ಕಾಮಗೆಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾ ಸಾಲಾಮಿಸ್ರಿಯೇ ಅಥವಾ ಬೇರೆ ತರಹಾದ್ದೇ ಎಂಬುದು ತಿಳಿದುಬರುತ್ತೆ.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ನೀರಿನಂತಿರುವ ಧಾತುವನ್ನು ಘಟ್ಟಿಪಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿ ಹೋಗುವ ಧಾತುವನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಉರಿಯುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕ್ಷಣಕ್ಷಣಕ್ಕೂ ಮೂತ್ರವಾಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೆದುಳಿಗೆ ಬಲವನ್ನು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ತಾಂಬ್ರ ಮತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲ ಬರುವಂತ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವುದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕಂಡುಬರುತ್ತೆ.

೨-೩ ಡಬ್ಬಿಗಳನ್ನು ಉಪಯೋಗಿಸುವದರಿಂದ ಜನ್ಮಾಂತರದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು " ಪಂಜಾ ಸಾಲಾಮಿಸ್ರಿ " ಅಲ್ಲವೆಂದು ವ್ಯಕ್ತಪಡಿಸುವವರಿಗೆ
೫೦೦ ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ಕ್ಕೆ ರೂ. ೨—೦—೦. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ ೬ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೋ, ದೊಡ್ಡಪೇಟೆ, ಬೆಂಗಳೂರು ಸಿಟಿ.
ಡಿ. ಮುನ್ನಾಲಾಲ್ ದಿಲ್ಲೀವೈದ್ಯರು, ಅವಿನ್ಯೂ ರೋಡ್, ಬೆಂಗಳೂರು ಸಿಟಿ.

ಬಹುಮಾನ ! ಶ್ರೀ ಬಹುಮಾನ !!
ಅತ್ಯಾಶ್ಚರ್ಯಕರವಾದ ಬಹುಮಾನ.
೨೫ ಸಾವಿರ ರೂಪಾಯಿಗಳು ಹಂಚಲ್ಪಡುವವು
ದಿವ್ಯೌಷಧ ಬಳ್ಳಾರಿ. ಸುಪ್ರಸಿದ್ಧೌಷಧ
ಸರ್ವಜನಮನೋಲ್ಲಾಸಿನಿ ಅಂಡ್ ಕೋ ಇವರ
(• ನಾರಸಿಂಹಚೂರ್ಣವು •)
2

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಜವಾದುದಷ್ಟೆ. ಆದರೆ ಅನೇಕ ದುರ್ವ್ಯತನಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವುವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನ ಕಣ್ಣಾರ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವುವಿಧ ಔಷಧಗಳನ್ನು ವಿಶೇಷವಾದ ಬೆಲೆಯನಿಟ್ಟು ವಿಕ್ರಯಿಸಿದರು ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವದು ವಿಷಾದಕರವಾಗಿರುವದು. ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿ (ನಾರಸಿಂಹಚೂರ್ಣವು) ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ, ಅನೇಕತರಹೆಯ ಮೇಹರೋಗಗಳು, ಪಾಂಡುರೋಗ, ಪೀನಸ, ಹದಿನೆಂಟು ಬಗೆಯಾದ ಕುಷ್ಠಗಳು, ಎಂಟುವಿಧ ಉದರರೋಗಗಳು, ಭಗಂಧರವು, ಮೂತ್ರಕೃಛ್ರವು, ಗೃಧ್ರಸೀವಾತವು, ಕಾಮಿಲೆ, ಕ್ಷಯವು ಮಹಾಶ್ವಾಸಗಳು, ದಾರುಣವಾದ ಐದುಬಗೆಯಾದ ಕಾಸೆಗಳು, ಎಂಭತ್ತುವಿಧಗಳಾದ ವಾತರೋಗಗಳು, ನಲವತ್ತು ಬಗೆಯಾದ ಪಿತ್ತಗಳು, ಇಪ್ಪತ್ತು ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಸಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ ಚಿನ್ನದಂಥಾ ಕಾಂತಿಯು, ಸಿಹ್ಮನಂತೆ ಪರಾಕ್ರಮವು, ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯು ಅತ್ಯಧಿಕ ವೀರ್ಯವೃದ್ಧಿಯು ನೃಸಿಹ್ಮನಿಗೆ ಸಮಾನರಾದ ಮಕ್ಕಳನ್ನು ಪಡೆಯುವಬಲವೂ ಉಂಟಾಗುವುದು. ಇದರಲ್ಲಿ ಯಾವ ವಿಧವಾದ ರಸಗಳಾಗಲಿ ಮಿಶ್ರವಾಗಿಲ್ಲ, ಇನ್ನಾವ ದೋಷಗಳೂ ಇಲ್ಲ. ನಿರ್ದುಷ್ಟವಾದದ್ದು, ಫಕ್ತವನಸ್ಪತಿಗಳಿಂದಲೇ ಸಿದ್ಧಮಾಡಿದದಿವ್ಯವಾದ ಔಷಧ. ಅನೇಕ ಪಂಡಿತರು, ಧನಿಕರು' ಸರ್ಟಿಫಿಕೇಟುಗಳನ್ನು ಕೊಟ್ಟಿರುವರು.

೧೪ ದಿನ ಉಪಯೋಗಕ್ಕೆಬರುವ ಡಬ್ಬಿ ೧ ಕ್ಕೆ ಬೆಲೆ ರೂ. ೧—೦—೦

—(ಬಹುಮಾನಗಳನ್ನು ಹಂಚುವ ವಿಧಾನ)—

೧ ಡಜನ್ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೧೦೦೦೦ ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೬೦೦೦ ರೂ. ೩ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೪೦೦೦ ರೂ. ೨ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೩೦೦೦ ರೂ. ೧ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ೨೦೦೦ ರೂ.

೧೯೧೪ ನೇ ಜುಲೈ ೧ ನೇ ತೇದಿ ಮೊದಲು ೧೯೧೫ ನೇ ಜುಲೈ ೧ ತೇದಿಯವರಿಗೂ ಈ ಔಷದವು ಒಂದು ಲಕ್ಷ ಡಬ್ಬಿಗಳು ಖರ್ಚಾದಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ. ಒಂದುಪಕ್ಷದಲ್ಲಿ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ವಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡಿಯುವದಲ್ಲದೆ ಬಹುಮಾನವನ್ನು ಸಹಾ ಹೊಂದಪದಕ್ಕೆ ಅರ್ಹನಾಗಿರುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರು ಸಂಶಯವಿಲ್ಲ. ಬಹುಮಾನದ ಮೊತ್ತವು ನಿಷ್ಪಕ್ಷಪಾತವಾಗಿ ಒಂದೇ ಸಮವಾಗಿ ಹಂಚಲ್ಪಡುವವು. ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಕುಹಕತನವು ಇಲ್ಲ, ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರ ಮಾತುಗಳಿಗೆ ನಿಗಾ ಕೊಡಲಾಗದು, ಜಾಗ್ರತೆ ತರಿಸಿಕೊಳ್ಳಿರಿ. ಔಷಧದ ಗುಣವನ್ನು ಪರೀಕ್ಷಿಸಿರಿ ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇದಲ್ಲದೆ ನಮ್ಮಲ್ಲಿ ಇನ್ನು ಅನೇಕತರಹೆಯ ಔಷಧಗಳು ಸಿಗುತ್ತವೆ. ರೋಗದಲಕ್ಷಣವನ್ನು ತಿಳಿಸಿದರೆ ಅಮೂಲ್ಯವಾದ ಮತ್ತು ಗುಣಕಾರಿಗಳಾದ ಔಷಧಗಳನ್ನು ಕಳುಸುವೆವು.

ಇದರ ಅನುಪಾನ ಪತ್ರಿಕೆಯನ್ನು ಬಹುಮಾನದ ಟಿಕೀಟನ್ನು ಡಬ್ಬಿಸಂಗಡ ಕಳಿಸುವೆವು. ನಮ್ಮ ಕಂಪೆನಿಯ ಕಾಶಿ ವಿಶ್ವನಾಥ ಮಾರ್ಕು ಇಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು. ನಮ್ಮ ಅಡ್ರೆಸ್ಸು.

ಸರ್ವಜನಮನೋಲ್ಲಾಸಿನಿ ಅಂಡ್ ಕೋ ಬಳ್ಳಾರಿ.

ದಿ ಜನರಲ್ ಏಜೆನ್ಸಿ, ಮೈಸೂರು.

ಕಾದಂಬರಿಗಳು:— ಚಂಡಮಾರುತ ೦-೨-೦; ಚರಿತಾಮೃತಂ ೦-೩-೦; ರಾಜಕಥಾವಳ್ಳರಿ ೦-೩-೦; ಹೀರದಿನಚರಿ ೦-೨-೦; ವಿಯೋಗಿನಿ ೦-೩-; ಉನ್ಮತ್ತೆ ೦-೨-೬; ಸೀತೆ ೦-೩-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 60

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೦-೦-೩ ೩-೦-೦; ೩-೦-೦; ೦-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಡಿಜ಼ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್‌ಸನ್ಸ್

29 ಸುಗಂಧಶಾಲಿ, ಮೈಸೂರು.

49 ಸಚಿತ್ರ ಶುಕಸಪ್ತತಿ ಕಥೆಗಳು ರೂ. ೧-೮-೦ (೩೧೨ ಪುಟ) ಟಪಾಲು ಹಾಸಲು ೪ ಆಣೆ. ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ ರೂ ೧-೮-೦. (೩೬೩ ಪುಟ)

ಸಚಿತ್ರ ವಿದ್ಯಾಮಂಜರಿ ಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಗ್ವೈಖರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಬೇಕೆಂದಿದ್ದರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಳ್ಳಾಶೆಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೬೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ ೧-೪-೦ ಟಪಾಲ್ ಹಾಸಲು ೩ ಆಣೆ. ಈಗಲೇ ಬರೆ ನಿಮ್ಮ. ನಮ್ಮಲ್ಲಿ ಇನ್ನೂ ಅನೇಕ ಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಸೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು. 27

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋಡಿಸ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚು ಪ್ಯರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೩ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.



ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ವಿಹಾರಿಕೊಂಡು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇ [illegible] ಬುದ್ಧಿಯು ನಿಮ್ಮಲ್ಲಿರಲಿ. ನಂಜೊತ್ತಿಂದು ಸಗಾಯವನ್ನು ಅಪೇಕ್ಷಿಸದೆ ಶಾಲಿನವನ್ನು ಬೇಗನೆ ಗುಣಪಡಿಸುವ [illegible] ವಿಯೊಂದೇ.

ಅನುಪಾನಪತ್ರಿಕೆ ಔಷಧಿಯೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧-೦-೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

೧೯೧೫ ನೆಯ
ಶ್ರೀ ಸೀತಾರಾಘವ
ಪಾಕೆಟ್ ಡೈರಿಗಳು

ವಿಕರಿಗೆ ಸಿದ್ಧವಾಗಿವೆ.



ಶಾಯಿ ಇಳಿಯದ ಉತ್ತಮವಾದ ಕಾಗದ ಮುದ್ದಾದ ಮುದ್ರಣ. ಅನೇಕವಾದ ಹೊಸಸಂಗತಿಗಳಿವೆ.

೧ ನಂ—ಸಣ್ಣಸೈಜು ಸಾದಾ	೦-೪-೦
೨ ನಂ—ಪೆನ್ಸಿಲ್‌ಮುಚ್ಚಳವುಳ್ಳದು	೦-೬-೦
೩ ನಂ—ದೊಡ್ಡಸೈಜು ಸಾದಾ	೦-೬-೦
೪ ನಂ—ಪೆನ್ಸಿಲ್‌ಮುಚ್ಚಳವುಳ್ಳದು	೦-೮-೦

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ

ಹೆಚ್ಚಾಗಿ ತರಿಸುವವರಿಗೆ ರೂಪಾಯಿ ೧ ಕ್ಕೆ ೦-೨-೦ ಕಮಿಷನ್ ದೊರೆಯುವುದು. ವಿಳಾಸ:—

ಶ್ರೀ ಸೀತಾರಾಘವ ವೈದ್ಯಶಾಲಾ,

8 ಮೈಸೂರು.

9

KASHI
VISHVESHVARA

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರಿಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯಾ. ಎನ್ ಮತ್ತು ಕಂಪೆನಿ,

ಬನಾರಿಸ್ ಸಿಟಿ (ಕಾಶೀ)

ನ್ಯಾಯದರ್ಪಣ. 42

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸು ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಅದರ ಜೊತೆಯಲ್ಲಿರತಕ್ಕ ನಾನಾವಿಧಗಳಾದ ದಸ್ತಾವೇಜು ಪತ್ರಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ. ಬೆಲೆ ರೂ 1-8-0 ವಿ. ಪಿ. ಮೂಲಕ 1-12-0.

ಎಂ. ಎಸ್. ನಂಜಪ್ಪನವರು,

ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕಡುಕಿಲ್ಲ. ಒಂದು ಚುಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜ಼ನ್ ಡಬ್ಬಿಗೆ ೨-೦-೦

ಉತ್ತಮವಾದ ನಶ್ಯದಪುಡಿ.

ಧಾತು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೩ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೆಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನಿತ್ಯಉಪಯೋಗಿಸುವ ಬರೀ ಹೊಗೆಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೆಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜ಼ನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಸೆಟ್ಟಿ,

ಗೋಪಸೆಟ್ಟಿಪುರ, ಹನೂರು ಪೋಸ್ಟ್

38 ಕೊಳ್ಳೇಗಾಲದ ತಾಲ್ಲೂಕು.

೧೯೧೪ನೆಯ ಇಸವಿ ನವೆಂಬರ್ ತಾ|| ೨೨ರಿಂದ ೧೯೧೪ನೆಯ ನವೆಂಬರ್ ತಾ|| ೨೮ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೩೬ನೆಯ ಆನಂದನಾಮ ಸಂ|| ದ ಮಾರ್ಗಶಿರ ಶು|| ಪಂಚಮಿಯಿಂದ ಮಾರ್ಗಶಿರ ಶು|| ಏಕಾದಶಿವರೆಗಿನ ಪಂಚಾಂಗ.

ತಾ||	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ವೃಶ್ಚಿ ಭೇದಿ
22	[1]ಭಾನು	ಪಂ	16-4	ಉ.ಷಾ	31-42	7
23	[2]ಸೋ	ಷಷ್ಠಿ	13-6	ಶ್ರವಣ	30-40	8
24	ಮಂ	ಸಪ್ತ	12-4	ಧನಿ	31-30	9
25	ಬುಧ	ಅಷ್ಟ	12-17	ಶತಭಿ	33-36	10
26	[3]ಗುರು	ನವ	13-50	ಪೂಭಾ	36-57	11
27	[4]ಶುಕ್ರ	ದಶ	16 36	ಉಭಾ	41-28	12
28	[5]ಶನಿ	ಏಕಾ	20 33	ರೇವತಿ	46-56	13

(1) ಷಷ್ಠೀತಿಥಿ, ನಾಗರಪಂಚಮಿ. (2) ಚಂಪಾಷಷ್ಠೀ, ಸ್ಕಂದಷಷ್ಠೀ, ಸುಬ್ರಹ್ಮಣ್ಯಸ್ವಾಮಿರಥ, ಅಮೃತಸಿದ್ಧಿಯೋಗ. (3) ಮಾರ್ಗಶಿರಲಕ್ಷ್ಮೀವ್ರತಂ. (4) ಏಕಾದಶೀತಿಥಿ. (5) ಸರ್ವತ್ರೈಕಾದಶೀ, ಶೂನ್ಯತಿಥಿ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಕ್ರಾನ್ ಶ್ರೀಸ್ವಿನತ್ಯ ಗುಡಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರ್ ಸ್ಟಾರ್.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ।
ಘನಪಥಕೃತಾವತಾರಾ ಪಶ್ಯ್ಯಜ್ಞನಕ್ಷತ್ರಮೋಹರಾಜೇಯಾತ್ ॥

ವಾರ್ಷಿಕ ಚಂದಾ ೧-೦-೦
ಅಂಚೆವೆಚ್ಚ ಸೇರಿ ೧-೧೪-೦

ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ ।
ಸ್ತೋಮಾಭೀಷ್ಟದಶೀಲನಾಕಲಿತಸಾದ್ಗುಣ್ಯಾಲವಾಲಂಪಲಂ ॥
ಸಿವಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ ।
ಪ್ರೇಮಂಬಿತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಸಂಪುಟ ೨೩) ಮೈಸೂರ್ ಸ್ಟಾರ್ ಸರ್ ೧೯೧೪ ನೆಯ ಇಸವಿ ನವಂಬರ್ ತಾರೀಖು ೨೯ ನೆಯ ಭಾನುವಾರ. (ಸಂಚಿಕೆ ೪೮

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರಿಗೂ ಸ್ಕೂಲ್‌ಮಾಸ್ಟರ್‌ಗಳಿಗೂ ವಿನಂತಿ.

೧೯೧೫ ನೇ ಇಸ್ವಿಯ ಸಚಿತ್ರ ಕ್ಯಾಲೆಂಡರ್‌ಗಳು ವಿಕರಿಗೆ ಸಿದ್ಧವಾಗಿವೆ ಕ್ರಯ ೧ ಕ್ಕೆ ೦-೦-೬ ಪೈ. ೫೦ ಕ್ಕೆ ೦-೧೧-೦ಆಣೆ ೧೦೦ ಕ್ಕೆ ೧-೫-೦ ಪ್ಯಾಕಿಂಗ್ ಪೋಸ್ಟೇಜು ಮಾಫಿ ೫೦ ಕ್ಯಾಲೆಂಡರ್‌ಗಳಿಗಿಂತಲೂ ಕಡಿಮೆಯಾಗಿ ಪೋಸ್ಟುಮೂಲಕ ರವಾನಿಸಲಾಗುವುದಿಲ್ಲಾ.

ಈ ಕ್ಯಾಲೆಂಡರಿನಲ್ಲಿ ಇಂಗ್ಲೀಷ್ ಮತ್ತೂ ಕನಡ ತಿಂಗಳೂ, ತಾರೀಖು, ವಾರ, ತಿಥಿ, ನಕ್ಷತ್ರ, ಆಯಾಯ ದಿವಸದ ವಿಸೇಷ ದಿವಸಗಳು ವಿಷಿಷ್ಟ ಹಬ್ಬ ದಿವಸಗಳೂ ಇರುವುದಲ್ಲದೆ ಮೈಸೂರ್ ಮಹಾರಾಜರವರ ಮತ್ತೂ ಯುವರಾಜರವರ ಭಾವಚಿತ್ರಗಳೂ ಮತ್ತೂ ಮೈಸೂರ್ ಸಂಸ್ಥಾನದ ಈಗಿನ ಹೊಸ ಅರಮನೆಯಲ್ಲಿ ನಡೆಯುವ ನವರಾತ್ರೆಮಹೋತ್ಸವದ ದರ್ಬಾರ್ ಸಹಿತ ಇರುವ ನಕ್ಷೆಯನ್ನೂ ಸಹ ನುಣುಪಾದ (ಗ್ಲೇಜ್‌ಪೇಪರ್) ಕಾಗದದಲ್ಲಿ ಅಂದವಾಗಿ ಪ್ರಿಂಟ್‌ಮಾಡಿಸಿ ಮೇಲ್ಕಂಡ ದರದಂತೆ ಬಹುಸುಲಭಬೆಲೆಗೆ ಕೊಡುತ್ತಲಿರುವೆ ಯಾದಕಾರಣ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ ಸ್ವಲ್ಪ ಪ್ರತಿಗಳುಮಾತ್ರ ಉಳಿದಿವೆ. ವಿಕರಿಯಾದನಂತರಬರತಕ್ಕ ಆರ್ಡರ್‌ಗಳನ್ನೆಲ್ಲಾ ಹೋದವರುಸುದಂತೆ ಕ್ಯಾನ್ಸಲ್‌ಮಾಡಲಾಗುತ್ತೆ.

ಈಗತಾನೇ ಸೀಮೆಯಿಂದ ಬಂದಿರತಕ್ಕ ರಿಷ್ಟ್‌ವಾಚ್‌ಗಳ ಕ್ರಯದಪಟ್ಟಿ. 42



೧ ರಾಸ್ಕೋಪ್ ಸಿಸ್ಟಂಪೇಟೆಂಟ್‌ಸ್ವಿಸ್‌ಮೇಡ್‌ವಾಚ್	೧ ಕ್ಕೆ	೨-೮-೦
೨ ಗರ್ಟೈಂ ರೈಲ್ವೇ ರೆಗ್ಯುಲೇಟರ್ ವಾಚ್	೧ ಕ್ಕೆ	೩-೮-೦
೩ ಡಿಟೋ ನಮೂನೆ ಚೆಕ್ಕಸೈಜ್ ವಾಚ್	೧ ಕ್ಕೆ	೪-೪-೦
೪ ಡಿಟೋ ಚೆಕ್ಕಸೈಜ್ ಸ್ಪೆಷಲ್ ಸರ್ವೀಸ್‌ವಾಚ್	೧ ಕ್ಕೆ	೫-೮-೦
೫ ಜಬಲ್‌ವರ್ತ ಡ್ರಸ್ ವಾಚೆಂಬ ಅತ್ಯುತ್ತಮವಾದ ಲೀವರ್ ವಾಚ್	೧ ಕ್ಕೆ	೮-೧೨-೦
೬ ಡಿಟೋ ನಮೂನೆ ಕೆಂಪುಗಳನ್ನು ಕೆತ್ತಿರುವ ವಾಚ್	೧ ಕ್ಕೆ	೯-೪-೦
೭ ಪೀಕಾಕ್ ವಾಚೆಂಬ ತೆಳುವಾದ ಮತ್ತೂ ಗ್ಯಾರೆಂಟಿಯಾದ ವಾಚ್ (ಸಾವಿರಾರು ವಿಕ್ರಯ)	೧ ಕ್ಕೆ	೧೦-೮-೦
೮ ವಾರಕೊಂದಾವರ್ತಿ ಬೀಗಕೊಡುವ ನಿಕ್ಕಲ್ ಬೆಳ್ಳಿಕೇಸ್ ವಾಚ್	೧ ಕ್ಕೆ	೧೦-೮-೦
೮ ಡಿಟೋ ನಮೂನೆಯಲ್ಲಿ ಅಚ್ಚ ಬೆಳ್ಳಿಕೇಸಿನ ಚೆಕ್ಕ ಸೈಜ್ ವಾಚ್	೧ ಕ್ಕೆ	೧೫-೪-೦
೯ ೩೦ ಘಂಟೆಗೆ ಒಂದಾವರ್ತಿ ಬೀಗಕೊಡುವ ದೊಡ್ಡ ಬರ್ಮಾಟೈಂಪೀಸ್	೧ ಕ್ಕೆ	೧-೪-೦
೧೦ ಡಿಟೋ ನಮೂನೆ ಅಲಾರಂ ಟೈಂಪೀಸ್	೧ ಕ್ಕೆ	೨-೪-೦
೧೧ ಡಿಟೋ ನಮೂನೆಯಲ್ಲಿ ಘಂಟೆ ನಿಮುಷ ಸೆಕೆಂಡ್ ತೋರಿಸಿ ಅಲಾರಂ ಇದ್ದು ತಾರೀಖು ಸಹ ತೋರಿಸುವ ದೊಡ್ಡ ಟೈಂಪೀಸ್	೧ ಕ್ಕೆ	೩-೪-೦
೧೨ ಖಾತ್ರಿಯಾದ ಅನ್‌ಸೋನಿಯಾ "ಬಿ" ಟೈಂಪೀಸ್	೧ ಕ್ಕೆ	೨-೮-೦
೧೩ ಡಿಟೋ ಕಂಪೆನಿಯ ಅಲಾರಂಟೈಂಪೀಸ್ (ಬಹಳಮಜಬೂತಾದ್ದು) (ಸಾವಿರಾರುವಿಕ್ರಯ)	೧ ಕ್ಕೆ	೩-೮-೦
೧೪ ಅನ್‌ಸೋನಿಯಾ ಕಂಪೆನಿಯಲ್ಲಿ ತಯಾರಾದ ಘಂಟೆ, ಅರ್ಧಘಂಟೆ ಹೊಡೆದು ಅಲಾರಂ ಇರತಕ್ಕ ದೊಡ್ಡ ಟೈಂಪೀಸ್ (ಅನೇಕಜನ ವಿದ್ಯಾರ್ಥಿಗಳು ಇದನ್ನೇ ಉಪಯೋಗಿಸುತ್ತಲಿದ್ದಾರೆ)	೧ ಕ್ಕೆ	೬-೧೨-೦
೧೫ ಘಂಟೆ, ಅರ್ಧಘಂಟೆ ಹೊಡೆಯುವ ಕ್ಯಾರೇಜ್ ಕ್ಲಾಕೆಂಬ ಟೇಬಲ್ ಘಡಿಯಾರ	೧ ಕ್ಕೆ	೪-೧೨-೦
೧೬ ಡಿಟೋ ನಮೂನೆಯಲ್ಲಿ ಘಂಟೆ, ಅರ್ಧಘಂಟೆಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್	೧ ಕ್ಕೆ	೫-೪-೦
೧೭ ಡಿಟೋ ನಮೂನೆಯಲ್ಲಿ ಘಂಟೆಹೊಡೆಯುವದಕ್ಕೆ ಪ್ರತಿಯಾಗಿ ಗಾನಹಾಡುವ ಕ್ಲಾಕ್	೧ ಕ್ಕೆ	೫-೮-೦
೧೮ ಡಿಟೋ ನಮೂನೆಯಲ್ಲಿ ತಾವಿಷ್ಟಪಟ್ಟ ಟೈಂಮಿಗೆ ಕಾಲುಘಂಟೆಕಾಲ ಕರ್ಣಾನಂದವಾಗುವಂತೆ ಮೃದುಮಧುರ ಗಾನಮಾಡತಕ್ಕ ಕ್ಲಾಕ್	೧ ಕ್ಕೆ	೫-೮-೦
೧೯ ಅನ್‌ಸೋನಿಯಾ ಕಂಪೆನಿಯ ಲಿವರ್ ಕ್ಲಾಕೆಂಬ ಗೋಡೆಗೆ ತಗಲಿಸುವ (೮ ಮೂಲೆಯ) ಅಷ್ಟಕೋಣಾಕೃತಿಯ ಚೆಕ್ಕಸೈಜ್ ಕ್ಲಾಕ್	೧ ಕ್ಕೆ	೬-೮-೦

ರಿಷ್ಟ್‌ವಾಚ್ ಸರಪಣಿಗಳು.

ನಿಕ್ಕಲ್ ಬೆಳ್ಳಿಯ ವಾಚ್‌ಸರಪಣಿ	೧ ಕ್ಕೆ	೦-೧೨-೦
ಅಚ್ಚಬೆಳ್ಳಿಯ ಜೇಬಿನ ವಾಚ್‌ಸರಪಣಿ	೧ ಕ್ಕೆ	೩-೪-೦
ಅಚ್ಚಬೆಳ್ಳಿಯ ಕೊರಳಸರಪಣಿ	೧ ಕ್ಕೆ	೧-೪-೦
೧೮ ಕ್ಯಾರಟ್ ಚಿನ್ನದ ವಾಚ್‌ಸರಪಣಿ	೧ ಕ್ಕೆ	೫-೮-೦
ವಾಚಿನ ಸರಪಣಿ ತುದಿಯಲ್ಲಿ ಹಾಕುವ ಅಚ್ಚಬೆಳ್ಳಿಯ ಶಾಶ್ವತವಾದ ಕ್ಯಾಲೆಂಡರ್ ಅಂದರೆ ಎಷ್ಟು ವರುಷಗಳ ವರಿಗಾದರೂ ತಾರೀಖು ನೋಡಬಹುದಾದ ಕ್ಯಾಲೆಂಡರ್ ಎಂದೆಂದಿಗೂ ಕೆಡತಕ್ಕದ್ದಲ್ಲಾ	೧ ಕ್ಕೆ	೧-೧೨-೦
ಡಿಟೋ ನಮೂನೆಯಲ್ಲಿ ೧೮ ಕ್ಯಾರಟ್ ಚಿನ್ನದಿಂದ ತಯಾರಿಸಿದ್ದು	೧ ಕ್ಕೆ	೩-೪-೦

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ಒಂದುಸಾರಿ ಶಾಯಿತುಂಬಿದರೆ ೧೦,೦೦೦ ಶಬ್ದಗಳನ್ನು ಬರೆಯಬಹುದಾದ ಲೇಖಣಿಗಳು.

ಪ್ರತಿಯೊಂದಕ್ಕೂ ೧೪ ಕ್ಯಾರಟ್ ಚಿನ್ನದ ನಿಬ್ಬು ಹಾಕಿದೆ.

ನೆಪ್ಚೂನ್ ೨೦೦ ನೇ ನಂ. ಪೆನ್	೧ ಕ್ಕೆ	೧-೪-೦
ನೆಪ್ಚೂನ್ ೨೫ ನೇ ನಂ. ಪೆನ್	೧ ಕ್ಕೆ	೨-೧೦-೦
ನೆಪ್ಚೂನ್ ೨೧೦ ನೇ ನಂ. ಪೆನ್	೧ ಕ್ಕೆ	೪-೨-೦

ಪ್ರತಿಯೊಂದು ಪೆನ್‌ತರಿಸಿ ಕೊಳ್ಳುವರಿಗೂ ೪ ಪದಾರ್ಥಗಳನ್ನು ಮುಫತ್ತಾಗಿ ರವಾನಿಸುತ್ತೇವೆ.

೧ ಪೆನ್‌ಗಳನ್ನಿಡತಕ್ಕ ಸುಂದರವಾದ ಪೆಟ್ಟಿಗೆ.
೨ ಪೆನ್ನಿಗೆ ಶಾಯಿಹಾಕುವ ಗಾಜಿನಕೊಳವೆ ೧.
೩ ಪೆನ್‌ಗಳನ್ನು ಕ್ಲೀನ್‌ಮಾಡುವ ವಿಧಾನ ಮತ್ತೂ ಶಾಯಿಹಾಕುವ ವಿಧಾನ ಪ್ರಿಂಟಾಗಿರುವ ಚೀಟಿ ೧.
೪ ಪೆನನ್ನು ಜೇಬಿಗೆತಗಲಿಸುವ ಸುಂದರವಾದ ಕ್ಲಿಪ್ ೧.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧-೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಶಿವಪೂಜಾವಿಧಿ	೦-೮-೦
ಚಾರುಶೀಲೆಚರಿತ್ರೆ	೦-೫-೦
ಸಟೀಕ ನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವಿವೇಕಮಂಜರಿ [೨ನೆಯ ಭಾಗ]	೦-೩-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೬

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು.

161

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೬೩ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ.— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ.— ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.— ಬೆಲೆ ೧-೩-೦. ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿ.— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ.— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ.— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ.— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ಪೇಟೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸುತ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗ ಕಂಡಂ ೧ ಆಣೆ.

ಎಸ್. ಆರ್. ಶಿವಬಸವಶಾಸ್ತ್ರಿ,

ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಕ್ರೌರ್ಕ ಮುದ್ರಾಲಯವು.

ಈ ಮುದ್ರಾಲಯವು ಸಂತೇಪೇಟೆಯಿಂದ ಸಯ್ಯಾಜಿರಾವ್ ರೋಡಿನಲ್ಲಿ ದೊಡ್ಡ ಮಾರ್ಕೆಟ್ಟಿನ ಪೂರ್ವದ್ವಾರದ ಇದಿರುಭಾಗದಲ್ಲಿರುವ ಮಹಡಿಗೆ ವರ್ಗಾಯಿಸಲ್ಪಟ್ಟಿದೆ. ಈ ಮುದ್ರಾಲಯದಲ್ಲಿ ವಿಜಿಟಿಂಗ್ ಕಾರ್ಡುಗಳು, ಲಗ್ನಪತ್ರಿಕೆಗಳು, ಇನ್ವಿಟೇಷನ್ ಕಾರ್ಡುಗಳು ಮುಂತಾದವುಗಳು ನಾನಾವಿಧ ಬಣ್ಣದ ಶಾಯಿನಿಂದಲೂ, ಚಿನ್ನದ ಗಿಲೀಟಿನಿಂದಲೂ, ನೇತ್ರಾನಂದಕರವಾಗಿ ಸ್ವಲ್ಪಕಾಲದಲ್ಲಿ ಸುಲಭದರದಿಂದ ಮುದ್ರಣಮಾಡಲ್ಪಡುವುದಲ್ಲದೆ ರೂಲ್‌ಫಾರಂಗಳೂ, ನೋಟ್ಸು ಮೊದಲಾದ ಪುಸ್ತಕಗಳೂ ಇಂಗ್ಲೀಷ್ ಮತ್ತು ಕನ್ನಡ ಅಕ್ಷರಗಳಿಂದ ಶ್ಲಾಘ್ಯವಾಗಿಯೂ ಯೋಗ್ಯ ದರದಿಂದಲೂ ಮುದ್ರಣಮಾಡಿಕೊಡಲ್ಪಡುವುವು, ಮತ್ತೂ ಚಕ್ಕಳದ ಅಥವಾ ಸಾದಾ ಬೈಂಡುಕೆಲಸಗಳೂ ತೃಪ್ತಿಕರವಾಗಿ ಮಾಡಲ್ಪಡುವುವು. ಒಂದಾವೃತ್ತಿ ಪರೀಕ್ಷಿಸಿದಲ್ಲಿ ತಾನಾಗಿ ಗೊತ್ತಾಗುವುದು.

ಮ್ಯಾನೇಜರ್.

ಶ್ರೀ ಪಂಚಾಕ್ಷರ ಮಹಾಸ್ವಾಮಿಗಳು ಹೊಸಮಠ ಮುಕ್ಕಾಂ ಸವದತ್ತಿ ಡಿ॥ ಬೆಳಗಾವ ನಮ್ಮ ಸನ್ನಿಧಿಯಿಂದಾ—ನಮ್ಮಿಸ್ವಾ ವೀರಶೈವ ಸಮಾಜಕ್ಕೆ ತಿಳಿಸುವದೇನೆಂದರೆ—ನಮ್ಮ ಮಠದಲ್ಲಿ ಇದೇ ಕಾರ್ತೀಕ ಶುದ್ಧ ಷಷ್ಟಿ ಚಂದ್ರವಾರ ದಿವಸ ಸಂಸ್ಕೃತಪಾಠಶಾಲೆಯನ್ನು ಸ್ಥಾಪನಮಾಡುತ್ತದೆ. ಇಲ್ಲಿ ವೇ॥ಶಾ॥ಸಂ॥ ಗುರುಮೂರ್ತಿಶಾಸ್ತ್ರಿಗಳವರು ಅಧ್ಯಾಪಕರಾಗಿ ನೇಮಿಸಲ್ಪಟ್ಟಿದ್ದಾರೆ. ಅಭ್ಯಾಸಮಾಡತಕ್ಕ ಛಾತ್ರವಿದ್ಯಾರ್ಥಿಗಳು ಬರಬೇಕು. ಇಲ್ಲಿ ಮಠದಲ್ಲಿಯೇ ಅನ್ನವಸ್ತ್ರದ ವ್ಯವಸ್ಥೆ ಮಾಡಲ್ಪಟ್ಟಿದೆ. ಉತ್ತಮ ಅದೆ. ಬರತಕ್ಕವರು ಧಾರವಾಡಸ್ಟೇಷನ್ನಿಗೆ ಇಳಿದು ಇಲ್ಲಿಗೆ ಬರಲಿಕ್ಕೆ ಸವಡು ಅದೆ. ಬರಬೇಕು

ಕೈ. ವಾ. ಶಿರಸಂಗಿಕರ ಸ್ಮಾರಕ ದೇವಿಹೊಸೂರ ಒಕ್ಕಲತನದ ಶಾಲೆಯ ಹೊಸ ಇಮಾರತಿಯನ್ನು ತೆರೆಯುವ ಸಮಾರಂಭವು.

ಲೇಖಕ—ಶಿವರುದ್ರಯ್ಯಾ ಸಂಗಯ್ಯಾ ಸದಾಶಿವಮಠ ಅ॥ ಮಾಸ್ತರ ಒಕ್ಕಲತನದ ಶಾಳಾ, ದೇವಿಹೊಸೂರ.

ಕರ್ನಾಟಕದಲ್ಲಿ ಕನ್ನಡ ಒಕ್ಕಲತನದ ಶಾಲೆಯು ದೇವಿಹೊಸೂರಲ್ಲಿರುವದು ಸರ್ವರಿಗೂ ಗೊತ್ತಿರುವದಷ್ಟೇ.? ಅದರ ಮುಖ್ಯಭಾಗವನ್ನು ಕಟ್ಟುವ ಕೆಲಸವು ಈಗ ಮುಗಿದಕಾರಣ ಈ ಶಾಲೆಯ ದ್ವಾರವನ್ನು ತೆರೆಯುವ ಸಮಾರಂಭವು ಇದೇತಿಂಗಳ ೩ನೇ ತಾರೀಖಿನದಿವಸ ಮುಂಜಾನೆ ೯ ಘಂಟೆಗೆ ಮೆ॥ ಲಾರೆನ್ಸ ಸಾ॥ ಬಹದ್ದೂರ ಕಮಿಷನರ ದಕ್ಷಿಣಭಾಗ ಈ ಥೋರೆಗಳವರ ಕಡೆಯಿಂದ ಆಗತಕ್ಕದ್ದಿತ್ತು, ಆದರೆ ಸದರಿಯವರು ಮಹತ್ವದ ಸರಕಾರಿಕೆಲಸದ ಅನನುಕೂಲತೆಯ ಮೂಲಕ ಬರುವದಾಗುವದಿಲ್ಲವೆಂದು ತಾರಿನಿಂದ ತಿಳಿಸಿದ ಮೂಲಕ ಮೆ॥ ವೇಲ್ಸ ಸಾ॥ ಬಹದ್ದೂರ ಕಲೆಕ್ಟರ ಧಾರವಾಡ ಇವರ ಕೈಯಿಂದ ಸಮಾರಂಭವು ನೆರವೇರಿಸಲ್ಪಟ್ಟಿತು. ಈ ಸಮಾರಂಭಕ್ಕೆ ಧಾರವಾಡ, ವಿಜಾಪೂರ, ಬೆಳಗಾವ, ಕಾರವಾರ ಜಿಲ್ಲೆಗಳಿಂದಲೂ ಮೈಸೂರ ಪ್ರಾಂತ ಇನ್ನೂ ಅನೇಕ ಇತರ ಸ್ಥಳಗಳಿಂದಲೂ ಅಜಮಾಸ ೩॥ ಸಾವಿರ ಜನರು ಕೂಡಿದ್ದರು. ಇವರಲ್ಲಿ ಮುಖ್ಯವಾಗಿ ಮೆ॥ ಕೀಟಿಂಜ ಸಾ॥ ಬಾಹದ್ದೂರ ಅಗ್ರಿಕಲ್ಚರಲ್ ಡಾಯರೆಕ್ಟರ, ಮ ಮಿಸೆಸ್ ಕೀಟಿಂಜ, ಮೆ॥ ಮ್ಯಾಕಸಿಲ ಸಾ॥ ಸ್ಪೇಸಿಯಲ್ ಡ್ಯೂಟಿಕಲೆಕ್ಟರ, ಡಾಕ್ಟರ ಮ್ಯಾನ ಸಾ॥ ಪ್ರಿನ್ಸಿಪಾಲ ಅಗ್ರಿಕಲ್ಚರಲ್ ಕಾಲೇಜ ಪುಣಾ, ಮೆಹರ್ಬಾನ ಲಿಂಬೆಬ್ಲಾಸ ಸಾಹೇಬ ಅ॥ ಕಲೆಕ್ಟರ ಧಾರವಾಡ, ಮೆ॥ ಗಿಲ್ಬರ್ಟ ಸಾ॥ ಡೆಪುಟಿ ಡಾಯರೆಕ್ಟರ ದಕ್ಷಿಣಭಾಗ ಈ ಪ್ರಕಾರ ಯುರೋಪಿಯನ್ ಜನರೂ ಅನರೇಬಲ್ ರಾವಸಾಹೇಬ ವೆಂಕಣ್ಣನಾಯಕ ರಾಣೇಬೆನ್ನೂರ, ರಾವಬಾಹದ್ದೂರ ರುದ್ರಗೌಡಾ ಅರಟಾಳ, ಎ. ಎಲ್. ಓ. ರಾವಸಾಹೇಬ ಶಾಂತವೀರಪ್ಪ ಮೆಣಸಿನಕಾಯಿ ಚೇರಮನ ಡಿ॥ ಕೆಲೆಕ್ಟರ, ರಾವಸಾಹೇಬ ನುಲ್ವಿಗ್ನರ ಲಿಂಗೋಕುಲಕರ್ಣಿ ಡಿವ್ಹಿಜನಲ್ ಇನಸ್ಪೆಕ್ಟರ, ಶ್ರೀನಿವಾಸರಾವ ದೇಸಾಯಿ ವ್ಹೈಸಪ್ರಸಿಡೆಂಟ್ ಅಗ್ರಿಕಲ್ಚರಲ್ ಅಸ್ಸೋಸಿಯೇಶನ್, ಶ್ರೀಮಂತ ಹಂದಿಗನೂರ ಸರ ದೇಸಾಯರು, ಬ್ರಹ್ಮಪ್ಪಾ ತವನಪ್ಪನವರ ದಾವಣಗೇರಿ, ಪ್ರಸಿದ್ಧವ್ಯಾಪಾರಸ್ಥ ಇವರಲ್ಲದೆ ಇನ್ನೂ ಎಷ್ಟೋಜನ ಪದವೀಧರರೂ, ಸಬ್‌ಜಜ್ಜರೂ, ಮಾಮಲೇದಾರರೂ, ವಕೀಲರೂ, ವರ್ತಕರೂ, ಶಾಲಾಧ್ಯಾಪಕರೂ ಇನ್ನೇ ಮೊದಲಾದ ಒಕ್ಕಲತನದ ಅಭಿಮಾನಿಗಳಿಂದ ಮಂಟಪವು ಇಂದ್ರಭವನದಂತೆ ಕಂಗೊಳಿಸುತ್ತಿತ್ತು.

ಮೆ॥ ವೇಲ್ಸಸಾಹೇಬ ಬಾಹದ್ದೂರರವರು ಗೊತ್ತಾದ ಹೊತ್ತಿಗೆ ಸಮಾರಂಭದ ಸ್ಥಳಕ್ಕೆ ಆಗಮಿಸಿದರು. ರಾವಬಹದ್ದೂರ ಅರಟಾಳ ಎ. ಎಲ್. ಓ. ರಾವಸಾಹೇಬ ಮೆಣಸಿನಕಾಯಿ, ನಮ್ಮ ಶಾಲೆಯ ಹೆ॥ ಮಾಸ್ತರರಾದ ಹುಲಕೋಟಿಯವರು ಮ ಮಾ॥ ಚನ್ನಬಸಪ್ಪ ಅಣ್ಣಾಶೆಟ್ಟರು ಇವರೆಲ್ಲರೂ ಒಟ್ಟುಗೂಡಿ, ಅವರ ಸ್ವಾಗತವನ್ನು ಮಾಡಿದರು. ಮೆ॥ ವೇಲ್ಸಸಾಹೇಬರು ಸ್ಥಾನಾಪನ್ನರಾದ ಬಳಿಕ ರಾವಸಾಹೇಬ ಮೆಣಸಿನಕಾಯಿ ಇವರು ಕೆಳಗೆ ಕಂಡ ಭಾಷಣ ಮಾಡಿದರು.

ಲಿಂಗಾಯತ ಸಮಾಜದ ಪ್ರಮುಖರಲ್ಲಿ ಒಬ್ಬರಾಗಿದ್ದ ಕೈ. ವಾ. ಶ್ರೀಮಂತ ಲಿಂಗಪ್ಪ ಜಾಯಪ್ಪಾ ಸರದೇಸಾಯಿ ಸಂಸ್ಥಾನಿಕ ಶಿರಸಂಗಿ ಇವರು ಲಿಂಗಾಯತ ಸಮಾಜದಲ್ಲಿ ವಿದ್ಯಾಸಂಬಂಧದ ಪ್ರಸಾರವನ್ನುಂಟುಮಾಡಲಿಕ್ಕೆ ತನುಮನಧನಗಳಿಂದ ಯತ್ನಮಾಡುತ್ತಿದ್ದರೆಂಬದು ಸರ್ವರಿಗೂ ಗೊತ್ತಿರುವದಷ್ಟೆ. ಆದರೆ ಒಕ್ಕಲತನದ ಸುಧಾರಣೆಯು ಇವರ ಪ್ರೀತಿಯ ವಿಷಯವಾಗಿತ್ತು. ಇವರು ಒಕ್ಕಲತನದ ಸುಧಾರಣೆಯ ಸಲುವಾಗಿ ಸವದತ್ತಿಯ ಬಳಿಯಲ್ಲಿ ಸಾವಿರಗಟ್ಟಲೆ ರೂಪಾಯಿಗಳನ್ನು ವೆಚ್ಚಮಾಡಿದ ಸಂಗತಿಯು ಪ್ರಸಿದ್ಧವಾಗಿರುತ್ತದೆ. ಇದೇ ಮಹನೀಯರು ತಮ್ಮ ಸಂಸ್ಥಾನವನ್ನೇ ಸಮಾಜೋನ್ನತಿಯ ಸಲುವಾಗಿ ಕೊಟ್ಟು ತಾ॥ ೨೭ ಆಗಸ್ಟ್ ೧೯೧೩ ನೇ ಇಸವಿಯಲ್ಲಿ ಇಹಲೋಕವನ್ನು ಬಿಟ್ಟು ಪರಲೋಕಕ್ಕೆ ತೆರಳಿದ್ದರಿಂದ ನಾವೆಲ್ಲರೂ ದುಃಖಾಬ್ಧಿಯಲ್ಲಿ ಮುಳುಗಿದ್ದೇವೆ. ಇದರಿಂದ ಇವರ ಹೆಸರು ಚಿರಕಾಲ ತಾನಾಗಿಯೇ ಉಳಿಯುವುದೆಂಬುದರಲ್ಲಿ ಸಂಶಯವಿಲ್ಲ. ಆದರೂ ದೇವಿಹೊಸೂರ ಪ್ರಮುಖರು ನಮ್ಮ ಪರಮಪೂಜ್ಯರಾದ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳವರ ಪ್ರೇರಣೆಯಿಂದ ತಮ್ಮ ಊರು ಮತ್ತು ಸಂಗೂರು, ಬೆಂಚಿಹಳ್ಳಿ, ವೆಂಕಟಾಪೂರ ಶೀಲವಂತ ಆಲದಕಟ್ಟಿ, ತವರಮೆಳ್ಳೀಹಳ್ಳಿ, ಬೂನಿಮೆಳ್ಳೀಹಳ್ಳಿ, ಹಲಸೂರು ಇವೆಲ್ಲ ಊರುಗಳಲ್ಲಿ ಎಂಟುಸಾವಿರ ರೂಪಾಯಿಗಳನ್ನು ಕೂಡಿಸಿ ಇಲ್ಲೊಂದು ಆಂಗ್ಲೋವ್ಹರ್ನ್ಯಾಕ್ಯುಲರ ಶಾಲೆಯನ್ನು ಸ್ಥಾಪಿಸಬೇಕೆಂದು ಯೋಚಿಸಿ, ತಾ॥ ೨೭ ನೇ ಡಿಶೆಂಬರ್ ೧೯೦೯ ನೇ ಇಸವಿ ದಿವಸ ರಾವಬಾಹದ್ದೂರ ಅರಟಾಳ ಇವರ ಕೈಯಿಂದ ಶಾಲೆಯ ಅಸ್ತಿಭಾರವನ್ನು ಹಾಕುವ ಸಮಾರಂಭವನ್ನು ನೆರವೇರಿಸಿದರು. ಮುಂದೆ ಇಮಾರತಿಯು ತಯಾರಾದ ನಂತರ ಇಲ್ಲಿಯ ಜನರು ಅಂಗ್ಲೋವ್ಹರ್ನ್ಯಾಕ್ಯುಲರ ಶಾಲೆಯನ್ನು ತೆಗೆಯಬೇಕೆಂದು ಯೋಚಿಸುತ್ತಿರುವವರಷ್ಟರಲ್ಲಿಯೇ ಮೆ॥ ಕಿಟಿಂಜ ಸಾ॥ ರೇ ಮೊದಲಾದ ಒಕ್ಕಲತನದ ಅಧಿಕಾರಿಗಳು ಕರ್ನಾಟಕದಲ್ಲಿ ಒಂದು ಒಕ್ಕಲತನದ ಶಾಲೆಯನ್ನು ಸ್ಥಾಪಿಸುವವರಿದ್ದರೆಂಬ ವರ್ತಮಾನವು ತಿಳಿಯಬಂತು. ಆಗ ಶಿರ್ಶಿಯಲ್ಲಿ ಸಬ್‌ಜಜ್ಜರಾಗಿದ್ದ ರಾವಸಾಹೇಬ ಹಾಳಭಾವಿಯವರಿಂದ ಮ॥ರಾ॥ರಾ॥ ಚನಬಸಪ್ಪಾಶೆಟ್ಟಿ ಇವರಿಗೆ ಈ ಪ್ರಕಾರ ತಿಳಿಸುವದರಲ್ಲಿ ಬಂತು ಅದೇನಂದರೆ—ಈ ಊರ ಸಮೀಪದಲ್ಲಿರುವ ಹಾವೇರಿ, ಬಂಕಾಪೂರ, ಅಲೂರ ಸವಣೂರುಗಳಲ್ಲಿ ಆಂಗ್ಲೋವ್ಹರ್ನ್ಯಾಕ್ಯೂಲರ ಶಾಲೆಗಳವೆ. ಇವಲ್ಲದೆ ಈ ಇಮಾರತಿಯು ಶಿರಸಂಗಿಕರ ಸ್ಮಾರಕವಿರುವದರಿಂದ ಇಲ್ಲಿ ಅಂಗ್ಲೋವ್ಹರ್ನ್ಯಾಕ್ಯುಲರ ಶಾಲೆಯನ್ನು ಸ್ಥಾಪಿಸುವದರ ಬದಲಾಗಿ ಅವರ ಪ್ರೀತಿಯ ವಿಷಯವಾದ ಒಕ್ಕಲತನದ ಶಾಲೆಯನ್ನು ಸ್ಥಾಪಿಸುವದರ ಬಗೆಯಿಂದ ಈ ಇಮಾರತಿಯನ್ನು ಕೆಲವು ಕರಾರುಗಳಮೇಲೆ ಸರಕಾರಕ್ಕೆ ಕೊಟ್ಟರೆ ನೆಟ್ಟಗಾಗುವದೆಂದು ತಿಳಿಸಲ್ಪಟ್ಟಿತು. ಅನಂತರ ಲಿಂಗಾಯತ ಫಂಡ ಕಮಿಟಿಯವರ ಮುಖಾಂತರ ಕೆಲಸನಡೆದು ಮುಂದೆ ಕೆಲವುದಿವಸಗಳಲ್ಲಿ ಮೆ॥ ಕಿಟಿಂಜ ಸಾ॥ ಬಾಹದ್ದೂರರವರು ಈ ಇಮಾರತಿಯನ್ನೂ ಈ ಸ್ಥಳವನ್ನೂ ನೋಡಿ ಆನಂದಭರಿತರಾಗಿ ಈ ಸ್ಥಳವು ಒಕ್ಕಲತನದ ಶಾಲೆಯನ್ನು ಸ್ಥಾಪಿಸಲಿಕ್ಕೆ ಬಹಳ ಉತ್ತಮವಿರುವದೆಂದು ಸರಕಾರಕ್ಕೆ ತಿಳಿಸಿದರು. ಆದುದರಿಂದ ಸರಕಾರದವರು ಇಲ್ಲಿ ಒಕ್ಕಲತನದ ಶಾಲೆಯನ್ನು ಸ್ಥಾಪಿಸಿದರು. ಇದರ ದೆಸೆಯಿಂದ ನಾವು ಮೆ॥ ಕಿಟಿಂಜಸಾಹೇಬರಿಗೂ ಸರಕಾರಕ್ಕೂ ಬಹಳ ಕೃತಜ್ಞರಾಗಿದ್ದೇವೆ. ಲಿಂಗಾಯತ ಫಂಡ್ ಕಮಿಟಿಯವರು ಎರಡು ಸ್ಕಾಲರಷಿಪ್ಪುಗಳನ್ನು ಈ ಶಾಲೆಯ ಸಲುವಾಗಿ ಒಂದು ಡಾಕ್ಟರ ಮ್ಯಾನಸಾಹೇಬರ ಹೆಸರಿನಿಂದ ಮತ್ತೊಂದು ಕೈಲಾಸವಾಸಿ ಮೆ॥ ಜಾಕ್ಸನ್ ಕಲೆಕ್ಟರರ ಹೆಸರಿನಿಂದ ಇಟ್ಟಿರುತ್ತಾರೆ. ಶ್ರೀ ಹಾನಗಲ್ಲ ಕುಮಾರಸ್ವಾಮಿಗಳು ೩೦೦ ರೂಪಾಯಿಗಳನ್ನು ಕೂಡಿಸಿ ಈ ರೂಪಾಯಿಗಳ ಬಡ್ಡಿಯಿಂದ ಶ್ರೀಮಂತ ಶಿರಸಂಗಿಕರ ಜನ್ಮೋತ್ಸವವನ್ನು ಪ್ರತಿವರ್ಷ ಇದೇ ಶಾಲೆಯಲ್ಲಿ ಮಾಡುವದಕ್ಕಾಗಿ ಕೊಟ್ಟಿರುತ್ತಾರೆ. ಈ ಪ್ರಕಾರ ಈ ಶಾಲೆಯ ಸಂಪೂರ್ಣ ಇತಿಹಾಸವಿದ್ದು ಇದನ್ನು ಕೇಳಿ ನಿಮ್ಮೆಲ್ಲರಿಗೂ ಆನಂದವಾಗದೆ ಇರಲಾರದು. ನೀವೆಲ್ಲರೂ ಸಮಾರಂಭಕ್ಕೆ ಬಂದದ್ದರಿಂದ ನಾವು ನಿಮ್ಮೆಲ್ಲರಿಗೆ ಕೃತಜ್ಞತೆಯನ್ನು ಅರ್ಪಿಸುವದಲ್ಲದೆ ಅಧ್ಯಕ್ಷರಿಗೆ ಶಾಲೆಯನ್ನು ದಯಮಾಡಿ ತೆರೆಯಬೇಕೆಂದು ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇನೆ. ಈ ಪ್ರಕಾರ ತಮ್ಮ ಭಾಷಣವನ್ನು ಮುಗಿಸಿ ಮೆ॥ ಲಾರೆನ್ಸ ಸಾ॥ ಬಾಹದ್ದೂರ ಕಮಿಷನರರವರು ತಮ್ಮ ಮಹತ್ವದ ಸರಕಾರಿಕೆಲಸದ ಅನಾನುಕೂಲತೆಯ ಮೂಲಕ ಬರಲಿಲ್ಲೆಂಬ ಬಗ್ಗೆ ವಿಷಾದವನ್ನು ಪ್ರದರ್ಶಿಸಿದರು.

ಹೀಗೆ ಇವರ ಇಂಗ್ಲೀಷು ಭಾಷಣ ಮುಗಿದನಂತರ ರಾವಸಾಹೇಬ ಕೆಣಬರಗಿಮಠ ಇವರು ತಮ್ಮ ಅಸ್ಖಲಿತವಾಣಿಯಿಂದ ಆವೇಶಪೂರ್ವಕವಾಗಿ ಇದನ್ನೇ ಕನ್ನಡದಿಂದ ಎಲ್ಲರಿಗೂ ತಿಳಿಯುವಂತೆ ಹೇಳಿದರು.

ಮೆ॥ ಕಿಟಿಂಜಸಾಹೇಬರ ಭಾಷಣವು—ನನ್ನೆದುರಿಗೆ ಲಿಂಗಾಯತ ಪ್ರಮುಖರೊಬ್ಬರು ಸೂಚನೆಮಾಡಿದ ಮೇರೆಗೆ ನಾನು ಈಗ ೩ ವರ್ಷಗಳ ಹಿಂದೆ ದೇವಿಹೊಸೂರಿಗೆ ಬಂದು ಈ ಇಮಾರತಿಯನ್ನೂ ಈ ಸ್ಥಳವನ್ನೂ ನೋಡಿಕೊಂಡು ಹೋದೆನು. ಮ॥ ಚನಬಸಪ್ಪಾಶೆಟ್ಟಿ ಇವರು ಲಿಂಗಾಯತ ಫಂಡ ಕಮಿಟಿಯ ಮುಖಾಂತರ ಈ ಕಟ್ಟಡವನ್ನು ಸರಕಾರಕ್ಕೆ ಕೊಟ್ಟದ್ದಲ್ಲದೆ ೧೪ ಎಕರೆ ಭೂಮಿಯನ್ನೂ ಈಶಾಲೆಯ ವಿದ್ಯಾರ್ಥಿಗಳಿಗೆ ಇರುವುದಕ್ಕೋಸ್ಕರ ಮತ್ತೂ ಊಟಕ್ಕೋಸ್ಕರ ಇಮಾರತಿಗಳನ್ನು ಕಟ್ಟಲಿಕ್ಕೆ ಸಾಕಷ್ಟು ಸ್ಥಳವನ್ನೂ ಕೊಟ್ಟಿರುತ್ತಾರೆ. ಇವರ ಈ ಉದಾರಾಶ್ರಯದ ದೆಸೆಯಿಂದಲೇ ಈ ಶಾಲೆಯು ಇಲ್ಲಿ ಸ್ಥಾಪನೆಯಾಯಿತೆಂದು ಹೇಳಲಿಕ್ಕೆ ಏನೂ ಸಂದೇಹವಿಲ್ಲ. ಒಕ್ಕಲತನದ ಶಾಲೆಯು ಕರ್ನಾಟಕದಲ್ಲಿ ಬಹು ಯೋಗ್ಯಸ್ಥಾನದಲ್ಲಿ ಸ್ಥಾಪಿಸಲ್ಪಟ್ಟದ್ದರಿಂದ ಎಲ್ಲ ಒಕ್ಕಲತನದವರು ಇದರ ಲಾಭವನ್ನು ಮಾಡಿಕೊಳ್ಳಲಿಕ್ಕೆ ಬೇಕು. ಮ॥ ಚನಬಸಪ್ಪಾಶೆಟ್ಟಿ ಮೊದಲಾದವರು ಎಂಟು ಸಹಸ್ರರೂಪಾಯಿ ವೆಚ್ಚಮಾಡಿ ಕಟ್ಟಿಸಿದ ಕಟ್ಟಡದೊಂದಿಗೆ ಸರಕಾರದವರು ೨೦ ಸಾವಿರ ರೂಪಾಯಿ ಖರ್ಚುಮಾಡಿ ವಿದ್ಯಾರ್ಥಿಗಳ ವಸತಿಗೃಹ ಭೋಜನಗೃಹಗಳನ್ನು ಕಟ್ಟಿಸಿರುತ್ತಾರೆ. ಸರಕಾರದವರು ಪ್ರತಿಯೊಬ್ಬ ವಿದ್ಯಾರ್ಥಿಯ ಸಲುವಾಗಿ ವರ್ಷಕ್ಕೆ ನಾಲ್ಕುನೂರು ರೂಪಾಯಿ ವೆಚ್ಚಮಾಡುವರು. ಇಲ್ಲಿ ಒಕ್ಕಲತನದ ವಿದ್ಯೆಯನ್ನು ಸುಧಾರಿಸಿದ ಪದ್ಧತಿಯಿಂದ ಕಲಿಸುವುದಲ್ಲದೆ ಒಕ್ಕಲಿಗರ ಯೋಗ್ಯತೆಯನ್ನು ಬೆಳೆಸುವ ಬೇರೆ ಕೆಲವು ಅವಶ್ಯಕ ವಿಷಯಗಳ ಜ್ಞಾನವು ಚೆನ್ನಾಗಿ ಆಗುವಂತೆ ವ್ಯವಸ್ಥೆಯು ಮಾಡಲ್ಪಟ್ಟಿದೆ. ಈ ಶಾಲೆಯಲ್ಲಿ ಉತ್ತಮತರದ ಶಿಕ್ಷಣವನ್ನು ಕೊಟ್ಟು ಇದನ್ನು ಉತ್ತಮವಾದ ಶಿಕ್ಷಣಾಲಯವನ್ನು ಮಾಡಬೇಕೆಂದು ನಮ್ಮ ಉತ್ಕಟಾಪೇಕ್ಷೆಯುಂಟು. ಒಕ್ಕಲಿಗರೇ ಈ ಅಲಭ್ಯಲಾಭವನ್ನು ಕಳಕೊಳ್ಳಬೇಡಿರಿ. ಈಗ ವಿದ್ಯಾರ್ಥಿಸಂಖ್ಯೆಯು ೧೪ ರ ವರೆಗೆ ಇದ್ದಾಗ್ಯೂ ಇನ್ನುಮೇಲೆ ಕೆಲವು ದಿವಸಗಳಲ್ಲಿ ಈ ಶಾಲೆಯು ವಿದ್ಯಾರ್ಥಿಗಳಿಂದ ತುಂಬುವುದೆಂದು ನಾನು ತಿಳಿಯುತ್ತೇನೆ. ಈ ಪ್ರಕಾರ ಇವರ ಇಂಗ್ಲೀಷ್‌ಭಾಷಣವು ಮುಗಿದಬಳಿಕ ನಮ್ಮ ಶಾಲೆಯ ಹೆಡ್‌ಮಾಸ್ತರರಾದ ಮೆ॥ ಹುಲಕೋಟಿಯವರು ಕನ್ನಡದಿಂದ ಸುವಾಚ್ಯವಾಗಿಯೂ ಜನರಂಜನವಾಗುವಂತೆಯೂ ಹೇಳಿದರು.

ಡಾಕ್ಟರ ಮ್ಯಾನ್ ಸಾ॥ ಇವರ ಭಾಷಣ.

ನಾನು ಮೂರೇ ಸಂಗತಿಗಳ ವಿಷಯಕ್ಕೆ ಹೇಳುತ್ತೇನೆ ಅವಾವುವೆಂದೊಡೆ (೧) ಈ ಶಾಲೆಗೆ ಉತ್ತಮ ವಿದ್ಯಾರ್ಥಿಗಳು ಬರಬೇಕು. ಈ ಶಾಲೆಯಲ್ಲಿ ಒಕ್ಕಲತನವನ್ನು ಕಲಿತು ಮಾಮಲೇದಾರ ಕಚೇರಿಗೂ ಪೋಲೀಸಕಚೇರಿಗೂ ಕಾರಕೂನಿಯ ಕೆಲಸವನ್ನು ಮಾಡಲಿಕ್ಕೆ ಹೋಗಲಪೇಕ್ಷೆಯುಳ್ಳವರು ಮಾತ್ರ ಇಲ್ಲಿಗೆ ಬರುವದು ಅಗತ್ಯವಿಲ್ಲ. ಆದುದರಿಂದ ಎಲ್ಲರೂ ಪ್ರಯತ್ನಮಾಡಿ ಈ ಶಾಲೆಗೆ ಉತ್ತಮ ವಿದ್ಯಾರ್ಥಿಗಳನ್ನು ದೊರಕಿಸಿಕೊಡತಕ್ಕದು.

(೨) ಈ ಶಾಲೆಯಿಂದ ಕಲಿತು ಹೋದವರು ತಮ್ಮ ಭೂಮಿಗಳನ್ನು ತಾವೇ ಮಾಗತಕ್ಕದು. ಮತ್ತೂ ತಾವೇ ಆ ಭೂಮಿಗಳ ಸುಧಾರಣೆಯನ್ನು ಮಾಡಿಸತಕ್ಕದು.

(೩) ಈ ಶಾಲೆಯು ಇಲ್ಲಿಯ ವಿದ್ಯಾರ್ಥಿಗಳಿಂದಲೇ ತುಂಬಬಾರದು. ಬರೇ ಇದೇ ಹಳ್ಳಿಯವರು ಇದರ ನೆರೆಹೊರೆಯ ಹಳ್ಳಿಯವರು ಮಾತ್ರ ಈ ಶಾಲೆಗೆ ಬಂದರೆ ಇದರಿಂದ ಕರ್ನಾಟಕಕ್ಕೆ ವಿಶೇಷ ಉಪಯೋಗವಾಗಲಾರದು. ಪ್ರತಿಯೊಬ್ಬ ಕನ್ನಡಿಗನು ಈ ಶಾಲೆಯು ನನ್ನದೆಂಬ ಅಭಿಮಾನವನ್ನು ಹಿಡಿಯುವಂತೆ ಈ ಶಾಲೆಯು ಸ್ಥಿತಿಯಾಗಬೇಕು. ಈ ಶಾಲೆಯು ಸರಕಾರದ್ದಲ್ಲ; ನನ್ನ ಮನೆಯ ಶಾಲೆಯು ಎಂಬ ಭಾವನೆಯು ಹುಟ್ಟುವಂತೆ ಇದರ ಬಾಲಕರು ತಕ್ಕ ವ್ಯವಸ್ಥೆಯನ್ನಿಡತಕ್ಕದು. ನಾನು ನಿಮ್ಮೆಲ್ಲರಿಗೆ ಇನ್ನೊಂದು ಸಂಗತಿಯನ್ನು ಹೇಳುವದೇನಂದರೆ—ನಮ್ಮ ಕಾಲೇಜದ ಒಬ್ಬ ಚತುರ ವಿದ್ಯಾರ್ಥಿಯು ಈ ಶಾಲೆಯ ಹೆಡ್‌ಮಾಸ್ತರರಾಗಿರುತ್ತಾರೆ. ಮೆ॥ ಕಿಟಿಂಜ ಸಾ॥ ರು ನನ್ನನ್ನು ಜಾಗ್ರತಾವಸ್ಥೆಯಲ್ಲಿಟ್ಟು ನನ್ನಿಂದ ಕಾಲೇಜದ ಒಳ್ಳೇ ಕೆಲಸವನ್ನು ತೆಗೆದುಕೊಳ್ಳುವಂತೆ ನೀವೆಲ್ಲರೂ ಮಿ॥ ಹುಲಕೋಟಿಯವರಿಗೆ ನಿದ್ರಾವಸ್ಥೆಯಲ್ಲಿ (ಆಲಸ್ಯಾವಸ್ಥೆಯಲ್ಲಿ) ಇಡದೆ ಜಾಗ್ರತಾವಸ್ಥೆಯಲ್ಲಿಟ್ಟು ಅವರಕಡೆಯಿಂದ ಒಳ್ಳೇ ಕೆಲಸವನ್ನು ತೆಗೆದುಕೊಳ್ಳಬೇಕು. ಈ ಪ್ರಕಾರ ಇವರ ಭಾಷಣವು ಮುಗಿದನಂತರ ರಾವ ಸಾ॥ ನುಲ್ವಿಗ್ನರರಾಚ ಕುಲಕರ್ಣಿಯವರು ಎಲ್ಲ

[೩ ನೆಯ ಪುಟವನ್ನು ನೋಡಿರಿ]

ನೋಟೀಸ್.

೧೯೧೫ ನೇ ಜನವರಿ ೪ ಮತ್ತು ೫ನೇ ತಾರೀಖುಗಳಲ್ಲಿ ಹಾಸನದಲ್ಲಿ ದನಗಳ ಪ್ರದರ್ಶನವು ನಡಿಯುತ್ತೆ. ಚುನಾವಣೆಯಾದ ಎಲ್ಲಾ ತರಹೆಯ ಜಾನ್ವಾರುಗಳಿಗೂ ಭಾರಿಯಾದ ಇನಾಮುಗಳು ಪೂರ್ವದಂತೆ ಕೊಡಲ್ಪಡುತ್ತವೆ. ಆಡು, ಕುರಿ ಮತ್ತು ಕುದುರೆಗಳಿಗೆ ಸಹ ಇನಾಮು ದೊರಿಯುತ್ತೆ. ಇದಲ್ಲದೆ ಹಾಲುಕೊಡುವ ಅವ್ವಲತರಹ ಹಸುವಿಗೆ ಒಂದು ಭಂಗಾರದ ಮೆಡಲು ಕೊಡಲ್ಪಡುತ್ತೆ. ಜಾಸ್ತಿ ತಪಶೀಲ್ ಅಪೇಕ್ಷಿಸುವವರು ಆನರರಿ ಸೆಕ್ರೆಟರಿಯವರಿಗೆ ಬರೆದುಕೊಳ್ಳಬಹುದು.

(Sd) V. S. Rajagopala Char.
ಜಾಯಿಂಟ್ ಆನರರಿ ಸೆಕ್ರೆಟರಿ
ಕ್ಯಾಟಲಷೋ ಕಮಿಟಿ
ಹಾಸನ.

ವಾರ್ಸಾಪಟ್ಟಣ.

ಈಗ ರಷ್ಯಾಜರ್ಮನಿಗಳಿಗೆ ಯುದ್ಧವು ನಡೆಯುತ್ತಿರುವ ಪೋಲ್ಯಾಂಡಿನ ವಾರ್ಸಾನಗರವು ಇದುವರೆಗೆ ಅನೇಕ ನೃಪತಿಗಳ ಕೈಸೆರೆಯಲ್ಲಿ ಬಂದಿರುವುದು. ಇದು ಕ್ರಿ. ಶ. ೧೩೦೦ ನೆಯ ವರ್ಷದಲ್ಲಿ ಮೊಟ್ಟಮೊದಲು ನಿರ್ಮಿತವಾಗಿ ೧೫ ನೆಯ ಶತಮಾನದ ವರೆಗೆ ಜೋವಿಯಾ ಜನರ ನಿರಂಕುಶಪ್ರಭುತ್ವಕ್ಕೆ ಒಳಪಟ್ಟಿದ್ದಿತು. ೧೬ ನೆಯ ಶತಮಾನದಲ್ಲಿ ಸ್ವೀಡ—ರಷ್ಯಾ—ಆಸ್ಟ್ರಿಯಾ—ಬ್ರಾಂಡನಬರ್ಗ—ಪ್ರಭುತ್ವಗಳವರು ಕ್ರಮವಾಗಿ ಒಬ್ಬರನಂತರ ಮತ್ತೊಬ್ಬರು ಇದನ್ನು ವಶಪಡಿಸಿಕೊಂಡು ಕೆಲಕೆಲ ಕಾಲ ಅನುಭವಿಸಿದರು. ೧೬೩೪ ನೆಯವರ್ಷದಲ್ಲಿ ಸಂಪೂರ್ಣವಾಗಿ ರಷ್ಯನರ ಅಧೀನವಾಯಿತು. ೧೭೯೫ ರಲ್ಲಿ ಪ್ರಷ್ಯಾದವರಹಸ್ತಗತವಾಯಿತು. ಬಳಿಕ ೧೮೦೬ ರಲ್ಲಿ ನೆಪೋಲಿಯನ್ ಬೋನಾಪಾರ್ಟನು ಆಕ್ರಮಿಸಿಕೊಂಡನು. ಅನಂತರ ಟಿಲ್‌ಸಿಟ್ ಸಂಧಿಯು ನಡೆದಾಗ ಇದು ಡಚ್ಚರಿಗೆ ಸೇರಿ ಸ್ವತಂತ್ರರಾಜ್ಯವಾಗಿ ಪ್ರಕಟಿಸಲ್ಪಟ್ಟಿತು. ಬಳಿಕ ೧೮೦೯ರಲ್ಲಿ ಆಸ್ಟ್ರಿಯಾದವರ ಅಧೀನವಾಯಿತು. ಆದರೂ ಅವರಕೈಯಿಂದ ಬೇಗನೆ ಬಿಟ್ಟುಹೋಯಿತು. ೧೮೧೩ ನೆಯ ವರ್ಷದಲ್ಲಿ ಇದಕ್ಕೆ ರಷ್ಯಾದವರು ಅಧಿಪತಿಗಳಾದರು. ಅವರೇ ಈಗಲೂ ಅನುಭವಿಸುತ್ತಿದ್ದಾರೆ. ಈಗಿನ ಯುದ್ಧಾಂತ್ಯದಲ್ಲಿ ಯಾರ ಹಸ್ತಗತವಾಗುವುದೋ ನೋಡಬೇಕು. ರೂಪವತಿಯಾದ ನಾರಿಯ ಮೇಲೆ ವಿಲಾಸಿಗಳ ದೃಷ್ಟಿಯು ವಿಶೇಷವಾಗಿ ಬೀಳುತ್ತಿರುವಂತೆ ವೈಭವಶಾಲಿಗಳಾದ ನಗರಿಗಳಮೇಲೆ ಬಹುಜನ ಭೂಪರ ದೃಷ್ಟಿಯೂ ಬೀಳುವುದು ಹೆಚ್ಚು. ನಾರಿಯರಮೇಲೆ ಬಿದ್ದ ದೃಷ್ಟಿಯು ಒಬ್ಬಿಬ್ಬರ ಪ್ರಾಣಹಾನಿಗೆ ಕಾರಣವಾಗಿ ಕಡೆಗೆ ನ್ಯಾಯಸ್ಥಾನದ ಮುಂದಣ ದಂಡನೆಗೆ ಪಾತ್ರಗೊಳಿಸಿ ಪರ್ಯವಸಾನಗೊಳ್ಳುತ್ತದೆ. ನಗರಿಗಳಮೇಲೆ ಬಿದ್ದ ದೃಷ್ಟಿಯು ಲಕ್ಷಾಂತರ ಪ್ರಾಣಹಾನಿಗಳಿಗೆ ಹೇತುಭೂತವಾಗಿ, ಕಡೆಗೆ ಅದರ ವಿಚಾರಣೆಗೆ ಭೂಲೋಕದ ಯಾವ ನ್ಯಾಯಸ್ಥಾನದಲ್ಲೂ ಎಡೆಯಿಲ್ಲದೆ, ಪರಲೋಕದ ಪ್ರಭುವಿನ ಮುಂದಣ ವಿಚಾರಣೆಗೆ ಮಾತ್ರ ಸಿದ್ಧವಾಗುತ್ತದೆ. ಅದುಕಾರಣವೇ ಅಂಥ ದುರಾಶೆಯ ಅರಸುಪ್ರಭುಗಳ ವಿಷಯದಲ್ಲಿ „ ರಾಜ್ಯಾಂತೇ ನರಕಂಧ್ರುವಂ " ಎಂಬ ಆರ್ಷೋಕ್ತಿಯು ಹುಟ್ಟಿರುವುದು.

ಕೆಯಾಚೋ.

ಜಪಾನರಿಂದ ಈಗ ತಾನೇ ಹಿಡಿಯಲ್ಪಟ್ಟ ಕೆಯಾಚೋವು ಚೀನಾದೇಶಕ್ಕೆ ಸೇರಿದ್ದ ಪಸಿಫಿಕ್ ಮಹಾಸಾಗರಕ್ಕೆ ಹೊದ್ದಿಕೊಂಡ ತೀರದ ಪ್ರದೇಶವಾಗಿರುತ್ತದೆ. ಇದು ಕಳೆದ ೧೦-೧೨ ವರ್ಷಗಳ ಕೆಳಗೆ ಜರ್ಮನರಿಗೆ ಸೇರಿಹೋಗಿದ್ದುದರಿಂದ, ಆಸ್ಯಾಖಂಡದೊಳಗೆ ಜರ್ಮನರಿಗೆ ಸೇರಿದ ಸೊತ್ತೆಂದು ಹೇಳಿಸಿಕೊಳ್ಳುವುದು ಇದೊಂದೇ ಆಗಿದ್ದಿತು. ೧೮೯೭ ನೆಯ ವರ್ಷದಲ್ಲಿ ಚೀನಾದವರು ಜರ್ಮನರ ಇಬ್ಬರು ಪಾದರಿಗಳನ್ನು ಕೊಂದ ಕಾರಣದಿಂದ, ಅದರ ಪ್ರತಿಕ್ರಿಯೆಗಾಗಿ ಜರ್ಮನರು ಈ ಕೆಯಾಚೋವನ್ನು ಹಿಡಿದುಕೊಂಡು, ಅಲ್ಲಿ ಕೋಟೆಗಳನ್ನು ಕಟ್ಟಿಸಿಕೊಳ್ಳುವುದಕ್ಕೆ ತಮಗೆ ಸ್ವಾತಂತ್ರ್ಯವನ್ನೂ ಅದರ ಉಪಯೋಗದ ಅಧಿಪತ್ಯವನ್ನೂ ೯೯ ವರ್ಷಗಳ ವರೆಗೆ ತಮಗೆ ಕೊಡಬೇಕೆಂದು ಚೀನಾದವರನ್ನು ಜರ್ಮನಿಯವರು ಕೇಳಿದರು. ಜರ್ಮನರು ಹೀಗೆ ಮಾಡಿದುದರಿಂದ ಚೀನಾದಲ್ಲಿ ಪಾಶ್ಚಾತ್ಯರ ವಿಷಯದಲ್ಲಿದ್ದ ಗೌರವವು ಕೆಡುವುದಕ್ಕೆ ಆರಂಭವಾಯಿತು. ೧೮೯೮ ನೆಯ ವರ್ಷದಲ್ಲಿ ರಷ್ಯನರು ಪೋರ್ಟಆರ್ಥರನ್ನೂ, ಆಂಗ್ಲೇಯರು ವೈಹೈವಿಯನ್ನು ಪಡೆದುಕೊಂಡರು. ಪ್ರಸಿದ್ಧವಾದ ರಷ್ಯಾ ಜಪಾನ ಯುದ್ಧದಲ್ಲಿ ಜಪಾನರು ಪೋರ್ಟ್ ಆರ್ಥರನ್ನು ಹಿಡಿದುಕೊಂಡುಬಿಟ್ಟರು. ಈಗಿನ ಮಹಾಯುದ್ಧದಲ್ಲಿ ಜರ್ಮನರಿಗೆ ಸೇರಿದ್ದ ಈ ಕೆಯಾಚೋವನ್ನೂ ಹಿಡಿದುಕೊಂಡುಬಿಟ್ಟರು. ಆಸ್ಯಾಖಂಡದಲ್ಲಿ ಸ್ವಾಸ್ಥ್ಯವನ್ನು ಸಂಪಾದಿಸಬೇಕೆಂಬ ಆಸೆಯು ಜರ್ಮನರಿಗೆ ಈ ಕೆಯಾಚೋವಿನೊಡನೆ ಕೆಟ್ಟುಹೋಗಿಬಿಟ್ಟಿರಬೇಕು. ಜಪಾನರು ಈಗಿನ ಯುದ್ಧದಲ್ಲಿ ತಾವು ಹಿಡಿದುಕೊಂಡಿರುವ ಕೆಯಾಚೋವನ್ನು ಕಡೆಗೆ ಚೀನಾದವರಿಗೆ ಒಪ್ಪಿಸಿಬಿಡುತ್ತೇವೆಂದು ಭಾಷೆಗೊಟ್ಟಿರುವರಂತೆ. ಇದು ನಿಜವಾಗಿ ನೆರವೇರುವುದಾದರೆ, ಅನ್ಯಾಪಹೃತವಾಗಿದ್ದ ಚೀನಾದವರ ಪೋರ್ಟಾರ್ಥರ—ವೈಹೈವಿ—ಗಳನ್ನು ಕೂಡ ಜಪಾನರೂ ಆಂಗ್ಲರೂ ಸಹ ಚೀನಾಕ್ಕೆ ಮರಳಿ ಒಪ್ಪಿಸಿಬಿಡಬಹುದು. ನ್ಯಾಯಧರ್ಮರಕ್ಷಣೆಗಾಗಿ ಮಾಡಲ್ಪಡುವ ಯುದ್ಧಗಳಲ್ಲಿ ಕಡೆಗೂ ನ್ಯಾಯಧರ್ಮಗಳ ರಕ್ಷಣೆಯು ಆ ಯುದ್ಧದೀಕ್ಷಿತರಿಂದ ನಡೆದರೆ ಜಯಲಕ್ಷ್ಮಿಯು ಅಂಥವರನ್ನು ಸರ್ವದಾ ಎಡೆಬಿಡದೆ ಇರುವಳು. ಪರಸ್ಪರ ಮಿತ್ರತ್ವದಲ್ಲಿರುವ ಆಂಗ್ಲ ಜಪಾನದೇಶಾಧಿಪತಿಗಳಿಬ್ಬರೂ ನಿರ್ಬಲವಾಗಿರುವ ಚೀನಾದ ವಿಷಯದಲ್ಲಿ ಇಂಥ ಉದಾರಬುದ್ಧಿಯನ್ನು ತೋರಿಸುವುದಾದರೆ ಅವರ ಧರ್ಮಬದ್ಧತೆಯು ಪೂರ್ವ ಪಶ್ಚಿಮದೇಶಾಂತರ್ಗತವಾದ ಪ್ರಪಂಚದಮೇಲೆಲ್ಲಾ ತೇಜೋವಿಶಿಷ್ಟವಾಗಿ ಮೆರೆಯುತ್ತಿರುವುದು. ಆದರೆ ಕೋಟ್ಯಂತರ ಧನವನ್ನು ನೂರುಸಾವಿರಗಟ್ಟಲೆಯ ಪ್ರಾಣಗಳನ್ನೂ ಬಲಿಯಿತ್ತು ಗೆದ್ದ ದೇಶವನ್ನು ಮೂಲನೆಯವರಿಗೆ ಒಪ್ಪಿಸಿಬಿಡುವ ರಾಜತಂತ್ರವನ್ನು ಈ ಜಗತ್ತಿನಲ್ಲಿ ಕಾಣುವುದು ಅತ್ಯಂತ ವಿರಳ.

ಜರ್ಮ ಗೂಢಚಾರಿಗಳು.

ಜರ್ಮ ಸೈನಿಕರಲ್ಲಿ ಗೂಢಚಾರರುಗಳು ಮಾಡುವ ಸಾಹಸವು ಅದ್ಭುತವಾಗಿದೆ. ಪರದೇಶಗಳಲ್ಲಿ ವೇಷಾಂತರದಿಂದ ಹೋಗಿ ಅಲ್ಲಿನ ವಿದ್ಯಮಾನಗಳನ್ನು ಅರಿತು ಬರುವ ಜನರು ಬಹುಕಾಲದಿಂದಲೂ ಜರ್ಮನಿಯವರಿಂದ ಏರ್ಪಡಿಸಲ್ಪಟ್ಟಿರುವರು. ಉಪೇಕ್ಷೆಯಿಂದಿದ್ದಾಗ ಅವರುಗಳ ವಿಷಯದಲ್ಲಿ ಆ ಅನ್ಯದೇಶೀಯರ ಗಮನವು ಬಿದ್ದಿರಲಿಲ್ಲ. ಈಗೀಗ ಅವರ ಪರಿಶೋಧನವು ಬಹಳ ಬಿತ್ತರದಿಂದ ನಡೆಯುತ್ತಿದೆ. ಫ್ರಾನ್ಸಿನಲ್ಲಿ ಈಗಲೂ ಜರ್ಮಗೂಢಚಾರರಲ್ಲಿ ಕೆಲವರು ಕಣಿಹೇಳುವವರ ವೇಷವನ್ನು ಧರಿಸಿ ಊರೂರು ಸುತ್ತುತ್ತ, ಅಲ್ಲಲ್ಲಿ ಗೋಡೆಗಳಮೇಲೆ ಪಶುಗಳ ಆಕಾರವನ್ನು ಬರೆದು ಹೋಗುತ್ತಿದ್ದರು. ಇದರ ಮರ್ಮವು ಈಗ ಫ್ರೆಂಚರಿಗೆ ಗೊತ್ತಾಯಿತು. ಈ ಆಕಾರದ ಮೂಲಕ ಜರ್ಮನರ ಜನರಲ್ ವಾನ್ ಕ್ಲೂಕ್‌ರವರ ಸೈನ್ಯಕ್ಕೆ ಆ ಗೂಢಚಾರರಿಂದ ಸ್ಥಳೀಯ ವಿದ್ಯಮಾನಗಳು ತಿಳಿಯಿಸಲ್ಪಡುತ್ತಿದ್ದುವು. ಚಿಕ್ಕ ಪಶುವಿನ ಆಕಾರವನ್ನು ಬರೆದಿದ್ದರೆ ಬರುವ ದಾರಿಯಲ್ಲಿ ಸೈನಿಕರಿಗೆ ಯಾವ ಅಭ್ಯಂತರವೂ ಇಲ್ಲವೆಂದು ಅರ್ಥವು. ಪಶುವಿನ ಪಾರ್ಶ್ವಭಾವಚಿತ್ರವು ಬರೆಯಲ್ಪಟ್ಟಿದ್ದರೆ ಅಕ್ಕಪಕ್ಕಗಳಲ್ಲಿ ಮಿತ್ರಮಂಡಲಿ ಸೈನ್ಯಗಳಿವೆಯೆಂದರ್ಥವು. ದೊಡ್ಡ ಆಕಾರದ ಪಶುವನ್ನು ಬರೆದಿದ್ದರೆ ದಾರಿಯಲ್ಲಿ ಕಂದಕಗಳಿವೆ; ಎಚ್ಚರ, ಎಂದರ್ಥವು. ಪಶುಗಳು ತಲೆತಲೆಗೆ ಡಿಕ್ಕಿಹೊಡೆಯುವಂತೆ ಕೊರಲುಗಳನ್ನು ನೀಡಿಕೊಂಡ ಚಿತ್ರವನ್ನು ಬರೆದಿದ್ದರೆ ಮುಂದಕ್ಕೆ ಸೈನ್ಯಗಳು ಬರುವುದಕ್ಕೆ ಮುಂಚಿತವಾಗಿ ಆಕಾಶವಿಮಾನಗಳಲ್ಲಿ ಹತ್ತಿ ಶತ್ರುಚಲನವಲನವನ್ನು ನೋಡಿರಿ ಎಂದರ್ಥವು. ಇದನ್ನೆಲ್ಲಾ ಫ್ರೆಂಚರು ತಿಳಿದುಕೊಂಡು ಶತ್ರುಗಳ ಸಂಧಾನಗಳೊಂದೂ ನಡೆಯದಂತೆ ತಕ್ಕ ಪ್ರತಿಕ್ರಿಯೆಯನ್ನು ಮಾಡಿದರು. ಮುಂದೆ ಜರ್ಮನರು ಇನ್ನಾವ ಕುತಂತ್ರವನ್ನು ಹುಡುಕುವರೋ ತಿಳಿಯದು.

ಜರ್ಮಗೂಢಚಾರರ ಸಾಹಸ.

ಆಂಗ್ಲಪ್ರಭುತ್ವದ ಉಚ್ಛ್ರಾಯಸ್ಥಿತಿಯನ್ನು ಹೇಗಾದರೂ ಮಾಡಿ ಅಳಿಸಿಬಿಡಬೇಕೆಂಬ ಮತ್ಸರಬುದ್ಧಿಯು ಜರ್ಮಚಕ್ರವರ್ತಿಗೆ ಬಹುಕಾಲದಿಂದಿದೆ. ಈ ಚಕ್ರವರ್ತಿಯ ತಾಯಿಯು ಇಂಗ್ಲೆಂಡ್‌ದೇಶದ ಪ್ರಸಿದ್ಧರಾಜ್ಞಿಯವರಾದ ಕ್ವೀನ್ ವಿಕ್ಟೋರಿಯಾರವರ ಮಗಳು. ತನ್ನ ತಂದೆಯು ಜರ್ಮದೇಶದ ಹೆಣ್ಣನ್ನು ಮದುವೆಯಾಗದೆ ಆ ಇಂಗ್ಲೆಂಡಿನ ಹೆಣ್ಣನ್ನು ಮದುವೆಯಾದುದು ಕೂಡ ಈ ದುರಭಿಮಾನಿಗೆ ಸೈರಣೆಯನ್ನುಂಟುಮಾಡಿರಲಿಲ್ಲ. ಈ ದುರಭಿಮಾನದ ಪರಾಕಾಷ್ಠದಶೆಯಿಂದ ತನ್ನ ಹೆತ್ತತಾಯಿಯನ್ನು ಕೂಡ ಕೇಜರನು ದ್ವೇಷಿಸುತ್ತಿದ್ದನು. ಗರ್ಭದಲ್ಲಿ ಬೆಂಕಿಯನ್ನು ತುಂಬಿಕೊಂಡಿರುವ ಅಗ್ನಿಪರ್ವತಕ್ಕೆ ಸರಿಹೋಲುತ್ತಿದ್ದ ಕೇಜರನು ಮೇಲೆಮೇಲೆ ಇಂಗ್ಲೆಂಡಿನ ವಿಷಯದಲ್ಲಿ ಪ್ರೀತಿಯನ್ನು ತೋರಿಸುತ್ತಿದ್ದರೂ ಆತಳಗೆ ಮತ್ಸರಾಗ್ನಿಯು ಕವಗುತ್ತಿದ್ದುದು ಮಾತ್ರ ತಪ್ಪಿರಲಿಲ್ಲ. ಅದುಕಾರಣವೇ ಈ ಚಕ್ರವರ್ತಿಯು ಬಹುಕಾಲಕ್ಕೆ ಮುಂಚೆಯೇ ಇಂಗ್ಲೆಂಡಿನ ರಹಸ್ಯವನ್ನರಿಯುವುದಕ್ಕಾಗಿ ಗೂಢಚಾರರ ಗುಂಪೊಂದನ್ನು ಏರ್ಪಡಿಸಿ, ಅದಕ್ಕೆ ಒಬ್ಬ ಅಧಿಪತಿಯನ್ನು ನಿಯಮಿಸಿ ಇಂಗ್ಲೆಂಡಿಗೆ ಕಳುಹಿಸಿದ್ದನು. ಅವನ ಮುಖದಿಂದ ಹಲವು ವಿಷಯಗಳನ್ನು ಆಗಾಗ್ಗೆ ಸಂಗ್ರಹಿಸುತ್ತಿದ್ದನು. ಕಡೆಗೆ ಜಾರ್ಜ್‌ಸಾರ್ವಭೌಮರು ಗತಿಸಿದ ವಿಕ್ಟೋರಿಯಾ ಚಕ್ರವರ್ತಿಯವರ ಸ್ಮರಣಾರ್ಥ ಚಿಹ್ನವನ್ನು ಸ್ಥಾಪಿಸಿದುದನ್ನು ನೋಡುವನೆಪದಿಂದ ಕಳೆದ ೧೯೧೧ ನೆಯ ವರ್ಷದಲ್ಲಿ ತಾನೇ ತನ್ನ ಗೂಢಚಾರನಾಯಕನಸಂಗಡ ಲಂಡನ್‌ಪಟ್ಟಣಕ್ಕೆ ಹೋಗಿದ್ದನು. ಆಗ ಲಂಡನ್‌ಪಟ್ಟಣದ ಬಕಿಂಗ್‌ಹ್ಯಾಂ ಅರಮನೆಯಲ್ಲಿ ೧ ವಾರದ ಕಾಲ ವಾಸಮಾಡಿದನು. ಆ ಕಾಲದಲ್ಲಿ ಜಾರ್ಜ್‌ಸಾರ್ವಭೌಮರಿಗೂ, ತನ್ನ ಕಡೆಯ ಗೂಢಚಾರನಾಯಕನಿಗೂ ವಿಶೇಷಮೈತ್ರಿಯನ್ನುಂಟುಮಾಡಿಸಿ ಹೋಗಬೇಕೆಂದು ಬಹಳ ಪ್ರಯತ್ನವನ್ನು ಜರ್ಮಚಕ್ರವರ್ತಿಯು ನಡೆಯಿಸಿದನಂತೆ. ಈ ಗೂಢಚಾರಾಗ್ರೇಸರನನ್ನು ಜಾರ್ಜ್‌ಪ್ರಭುಗಳ ಆಪ್ತನನ್ನಾಗಿ ಮಾಡಿಬಿಟ್ಟು ಹೋದರೆ, ಅವನು ಸಂಧಿಸಾಧಿಸಿ ಇಂಗ್ಲೆಂಡ್‌ಪ್ರಭುತ್ವವು ತಲೆಕೆಳಗಾಗುವಂಥ ಅದ್ಭುತಕೃತ್ಯವನ್ನು ನಡೆಯಿಸುವನೆಂಬ ನಂಬುಗೆಯು ಜರ್ಮಚಕ್ರವರ್ತಿಯವರಿಗಿದ್ದಿತು. ಆದರೇನು? ಧರ್ಮವೂ ಸತ್ಯವೂ ನೆಲೆಮಾಡಿದೆಡೆಯಲ್ಲಿ ಅಧರ್ಮದ ಸಾಹಸಗಳು ಕೆಂಡಕ್ಕೆ ಮುತ್ತುವ ಇರುವೆಗಳ ಸಾಹಸದಂತೆ ನಿಷ್ಫಲವಾಗುವುದೇ ಸಹಜವಲ್ಲವೆ? ಅದೇರೀತಿಯು ಕೇಜರರ ಪ್ರಯತ್ನಕ್ಕೂ ಆಯಿತು. ಅದಕ್ಕೆ ಮುಂಚೆಯೇ ಲಂಡನ್ನಿನಲ್ಲಿ ಅನೇಕ ಜರ್ಮಗೂಢಚಾರರು ಹೋಗಿ ಸೇರಿದ್ದರು. ಲಂಡನ್‌ಪಟ್ಟಣದಲ್ಲಿರುವ ಜರ್ಮನರ ವೆಸ್ಟ್‌ಎಂಡ್ ಹೋಟಲಿನ ಮ್ಯಾನೇಜರು ಈ ಗೂಢಚಾರರ ಗುಂಪಿಗೆಲ್ಲಾ ಆಶ್ರಯದಾತನಾಗಿದ್ದನು. ಇವರ ಆಪ್ತಾಲೋಚನೆಗಾಗಿಯೇ ಆ ಹೋಟಲಿನಲ್ಲಿ ಒಂದು ರಹಸ್ಯಮಂದಿರವನ್ನು ಏರ್ಪಡಿಸಿಕೊಟ್ಟಿದ್ದನಂತೆ. ಈ ಗೂಢಚಾರರೆಲ್ಲರೂ ಆ ಮಂದಿರದಲ್ಲಿ ಕೂಡಿ ತಾವು ಸಂಗ್ರಹಿಸಿದ್ದ ವಿಷಯಗಳನ್ನೆಲ್ಲಾ ತಮ್ಮ ನಾಯಕನಿಗೆ ವರದಿಮಾಡುತ್ತಿದ್ದರು. ಅದನ್ನೆಲ್ಲಾ ಆತನು ಜರ್ಮಚಕ್ರವರ್ತಿಯವರ ಬಳಿಗೆ ಕಳುಹಿಸಿಕೊಡುತ್ತಿದ್ದನಂತೆ. ಜರ್ಮಚಕ್ರವರ್ತಿಯು ಲಂಡನ್ನಿಗೆ ಬಂದುಹೋದಮೇಲೆ ಈ ಗೂಢಚಾರಿನಾಯಕನು ಒಂದೆರಡುಬಾರಿ ಲಂಡನ್ನಿಗೆ ಬಂದುಹೋದನಂತೆ. ಆದರೆ ಇವನು ಇಂಥವನೆಂಬುದು ಯಾರಿಗೂ ತಿಳಿಯದು, ಕಡೆಗೆ ಒಳಗಿನ ಸಂಗತಿಯು ಆಂಗ್ಲಯುದ್ಧಾಧಿಕಾರಿಗಳಿಗೆ ತಿಳಿಯಲು, ಅವರು ಈ ಗೂಢಚಾರನಾಯಕನ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದಿರಲುಪಕ್ರಮಿಸಿದರು. ಈಗಿನ ಯುದ್ಧಾರಂಭವಾದಮೇಲೆ ಲಂಡನ್‌ಪಟ್ಟಣದಲ್ಲಿ ೨೦೦ ಮಂದಿ ಜರ್ಮ ಗೂಢಚಾರರನ್ನು ಹಿಡಿದಿರುವರು. ಆದರೂ ಇನ್ನೂ ಕೆಲ ಗೂಢಚಾರರು ಇರುವರೆಂಬ ಸಂಶಯವಿದೆ. ಜರ್ಮಚಕ್ರವರ್ತಿಯವರ ಜತೆಯಲ್ಲಿ ಬಂದಿದ್ದ ಗೂಢಚಾರಿನಾಯಕನು ಬಹು ಕುಶಲರಾದವರನ್ನು ಆ ಪಟ್ಟಣದಲ್ಲಿ ತನ್ನ ಪ್ರತಿನಿಧಿಗಳನ್ನಾಗಿ ಏರ್ಪಡಿಸಿ ಹೋಗಿದ್ದನು. ಜರ್ಮನರ ಮಾಯಾಮೈತ್ರಿಯ ತತ್ವವು ಧರ್ಮಾತ್ಮರಾದ ಆಂಗ್ಲಪ್ರಭುತ್ವದವರಿಗೆ ಈಗ ಚೆನ್ನಾಗಿ ಗೊತ್ತಾಗಿಹೋಯಿತು. ಇನ್ನುಮುಂದೆ ಇದುವರೆಗಿನಂತೆ ಅವರ ರಹಸ್ಯೋಪಾಯಗಳು ಸಾಗಲಾರವು. ಅದುಕಾರಣ ಈ ಮಾಯಾಗೋಹನನವನ್ನು ಜಗಚ್ಛಾಂತಿಗಾಗಿ ಮಾಡಿಯೇ ತೀರಬೇಕೆಂದು ಆಂಗ್ಲಪ್ರಭುತ್ವದವರು ಬದ್ಧದೀಕ್ಷಿತರಾಗಿರುವುದು ಯುಕ್ತವಾಗಿದೆ.

ಜರ್ಮನರ ದ್ರೋಹಬುದ್ಧಿ.

ಗೂಢಚಾರರಮೂಲಕ ಪರದೇಶಗಳ ವಿದ್ಯಮಾನವನ್ನು ಅರಿಯುವುದು ರಾಜತಂತ್ರಗಳಲ್ಲಿ ಸೇರಿರುವುದರಿಂದ ಅದು ಅಷ್ಟು ನಿಂದ್ಯವೇನೂ ಅಲ್ಲ. ಆದರೆ ದ್ರೋಹಾಚರಣೆಯು ಮಾತ್ರ ನಿಂದ್ಯನೆನಿಸಿಕೊಳ್ಳದೆ ಹೋಗುವುದಿಲ್ಲ. ಈಗಿನ ಮಹಾಯುದ್ಧದಲ್ಲಿ ಜರ್ಮನರು ಲೋಕವೇ ಅಸಹ್ಯಗೊಳ್ಳುವಂಥ ದ್ರೋಹಾಚರಣೆಗಳನ್ನು ಹಲವುಕಡೆ ಮಾಡಿದ್ದಾರೆ. ಈ ಯುದ್ಧಸಮಯದ ವಿಷಯಗಳು ಹಾಗಿರಲಿ. ಸಾಮಾನ್ಯ ಸಮಯದಲ್ಲೂ ಜರ್ಮನರು ಪರೋತ್ಕರ್ಷಾಸಹನದಿಂದ ಎಂತಹ ದ್ರೋಹಾಚರಣೆಯನ್ನು ಮಾಡುವರೆಂಬುದನ್ನು ಈ ಕೆಳಗಣ ಸಂಗತಿಯು ನಿದರ್ಶನಪಡಿಸುತ್ತಿರುವುದು. ಅದೇನೆಂದರೆ—ಡಾಕ್ಟರ್ ಲೌ ಎಂಬ ಆಂಗ್ಲಪಂಡಿತರು ಒಂದು ನೂತನ ಯಂತ್ರವನ್ನು ರಚಿಸಿರುವರು. ಅದರ ಹೆಸರು „ಟೆಲಿವಿಷ್ಟಾ" ಎಂಬುದಾಗಿ. ತಂತಿಗಳಮೂಲಕ ದೂರಸ್ಥಿತವಾದ ಶಬ್ದವನ್ನು ಶ್ರವಣಮಾಡುವಂತೆಯೇ ಈ ಯಂತ್ರದ ಮೂಲಕ ದೂರಸ್ಥಿತರೂಪದರ್ಶನವನ್ನು ಮಾಡಬಹುದಾಗಿರುತ್ತದೆ. ಈ ಯಂತ್ರವು ಯುದ್ಧಸಮಯಗಳಲ್ಲಿ ಬಹಳ ಪ್ರಯೋಜನವನ್ನು ಮಾಡುತ್ತದೆ. ಈ ಯಂತ್ರದಲ್ಲಿ ಅನ್ನೂ ಇಷ್ಟು ಇದ್ದ ನ್ಯೂನಾತಿರೇಕಗಳನ್ನೆಲ್ಲಾ ಹೋಗಲಾಡಿಸಿ, ಇದನ್ನು ಸಂಪೂರ್ಣಸ್ಥಿತಿಗೆ ತರುವುದಕ್ಕೆ ಡಾಕ್ಟರ್ ಲೌರವರು ಬಹಳ ಶ್ರದ್ಧೆಯಿಂದ ಕೆಲಸಮಾಡುತ್ತಿದ್ದರು. ಅಂಥ ಪಂಡಿತೋತ್ತಮನನ್ನು ಕೊಂದುಬಿಡಬೇಕೆಂದು ಜರ್ಮ ಕ್ರೂರಾತ್ಮರು ನಿಶ್ಚಯಿಸಿದರು. ಈ ಪಂಡಿತನು ಏರ್ಪಡಿಸುತ್ತಿರುವ ಯಂತ್ರವು ಸಂಪೂರ್ಣಸಿದ್ಧವಾದರೆ ಆಂಗ್ಲಜನರಿಗೆ ವಿಶೇಷಬಲವುಂಟಾಗುವುದೆಂದು ಯೋಚಿಸಿ, ಅದಕ್ಕಾಗಿ ಅಸಹನೆಗೊಂಡುದೇ ಈ ಪ್ರಯತ್ನಕ್ಕೆ ಕಾರಣವು. ಒಂದುದಿನ ಈ ಡಾಕ್ಟರರೂ ಇವರ ಸಹೋದರನೂ ಕೆಲಸವನ್ನು ಮಾಡುತ್ತಿರುವಾಗ, ಎಂತಾವೃತ್ತಿ ಢಂ ಎಂಬ ಶಬ್ದವಾಯಿತು. ಅದು ಡಾಕ್ಟರ ಘಾತಕ್ಕಾಗಿ ಮಾಡಿದ ತುಪಾಕಿಯ ಪೆಟ್ಟಾಗಿದ್ದಿತು. ಆದರೆ ಅವು ನಿಷ್ಫಲವಾದುವು. ಬಳಿಕ ಡಾಕ್ಟರವರು ಏಕಾಂತದಲ್ಲಿ ಒಂದು ಕೋಣೆಯೊಳಗೆ ಕುಳಿತಿರುವಾಗ್ಗೆ ಒಬ್ಬ ಜರ್ಮಡಾಕ್ಟರನು ಬಂದನು. ಅವನನ್ನು ಈ ಡಾಕ್ಟರ್ ಲೌರವರು ಮರ್ಯಾದೆಯಿಂದ ಬರಮಾಡಿಕೊಂಡು, ಆಸನವನ್ನಿತ್ತು ಕುಳ್ಳಿರಿಸಿ, ಸಂಭಾಷಿಸುತ್ತಿರಲು, ಆ ಜರ್ಮಡಾಕ್ಟರು ಮರ್ಯಾದಾರೂಪವಾಗಿ ೧ ಸಿಗರೆಟ್ಟನ್ನು ಡಾಕ್ಟರ್ ಲೌರವರಿಗೆ ಕೊಟ್ಟನು. ಇವರು ಅದನ್ನು ತೆಗೆದುಕೊಂಡು

ಕೂಡಲೇ ಸೇದದೆ ಏನುಕಾರಣದಿಂದಲೋ ಅದನ್ನು ತಮ್ಮ ಮುಂಭಾಗದ ಟೇಬಲ್ಲಿನಮೇಲೆ ಇಟ್ಟುಬಿಟ್ಟರು. ಜರ್ಮನ್ ಡಾಕ್ಟರು ಮಾತನಾಡಿಕೊಂಡು ಹೊರಟುಹೋದಮೇಲೆ ಲ್ ರವರು ಆ ಸಿಗರೇಟನ್ನು ಹೊತ್ತಿಸಿ ಒಂದಾವೃತ್ತಿ ಸೇದಲಾಗಿ ಏನೋ ಒಂದು ತೆರದ ಸೊಗಡು ಗೋಚರಿಸಿತು. ಬಳಿಕ ಹಾಗೆಯೇ ಬಿಟ್ಟು, ಅದನ್ನು ಒಡೆದು ಪರೀಕ್ಷೆ ಮಾಡಲಾಗಿ ಅದರೊಳಗೆ ವಿಷ ಮಿಶ್ರವಾಗಿದ್ದಿತಂತೆ! ಅಕಬರ್‌ಬಾದುಷಾನು ಕೂಡ ಉಪಾಯದಿಂದ ತನ್ನ ಪ್ರಬಲಶತ್ರುಗಳನ್ನು ನಿಗ್ರಹಿಸುವೆಡೆಯಲ್ಲಿ ಅವರನ್ನು ಮೈತ್ರಿಯಿಂದ ಬರಮಾಡಿಕೊಂಡು, ಭೋಜನಾನಂತರ ತಾಂಬೂಲವನ್ನು ಸವಿಯುವಾಗ್ಗೆ ಒಂದೇತಟ್ಟೆಯಲ್ಲಿ ವಿಷಮಿಶ್ರವಾದ ಮತ್ತೂ ಶುದ್ಧವಾದ ಮುಖವಾಸನೆಯ ಗುಳಿಗೆಗಳನ್ನಿರಿಸಿದ್ದು, ಅವುಗಳೊಳಗೆ ವಿಷಮಿಶ್ರವಾದುವನ್ನು ಶತ್ರುವಿಗೆ ತೋರುವಂತೆಯೂ, ಶುದ್ಧವಾದುವನ್ನು ತಾನು ಉಪಯೋಗಿಸುವಂತೆಯೂ ಮಾಡಿಕೊಂಡು, ಆ ಮಾತ್ರೆಗಳ ವರ್ಣ ಮೊದಲಾದುವುಗಳಲ್ಲಿ ಪರರಿಗೆ ಯಾವ ವ್ಯತ್ಯಾಸವೂ ಕಾಣದಂತೆ ಮಾಡಿಸಿಬಿಟ್ಟುಕೊಂಡಿದ್ದು, ಹಲವು ಸಮಯಗಳಲ್ಲಿ ಈ ಮಾತ್ರೆಗಳನ್ನು ಉಪಯೋಗಿಸುತ್ತಿದ್ದನೆಂದು ಐತಿಹ್ಯವಿದೆ. ಡಾಕ್ಟರ್ ಲ್ ರವರ ವಿಷಯದಲ್ಲಿ ಆಚರಿಸಲ್ಪಟ್ಟ ಜರ್ಮನರ ದ್ರೋಹಾಚರಣೆಯೂ ಅದೇ ತೆರನಾಗಿದೆ. ಅಸ್ಥಿರವಾದ ಪ್ರಪಂಚದಲ್ಲಿ ಪ್ರಾಣಿವರ್ಗದಿಂದ ಎಂಥ ಪಾಪಾಚರಣೆಯನ್ನಾದರೂ ಮಾಡಿಸುವುದಕ್ಕೆ ಪ್ರೋತ್ಸಾಹಿಸುತ್ತಿರುವ ಈಶ್ವರೀಮಾಯೆಯು ಅದ್ಭುತವಾದುದಲ್ಲವೆ?

ಯುದ್ಧಕ್ಕೆ ಹೋಗಿದ್ದು ಸ್ವದೇಶಕ್ಕೆ ಮರಳಿ ಬಂದ ಭಾರತೀಯ ಪ್ರಥಮಸೇನೆ.

ಈ ದೇಶದಿಂದ ವಿದೇಶದ ಯುದ್ಧಾಂಗಣಕ್ಕೆ ಹೋಗಿರುವ ಭರತಖಂಡದ ಸೇನೆಯ ಕಾರ್ಯಭಾಗಗಳನ್ನು ಕೇಳಬೇಕೆಂಬ ಕುತೂಹಲವು ಭಾರತೀಯರೆಲ್ಲರಿಗೂ ನಿಸರ್ಗವಾಗಿರುತ್ತದೆ. ಅಂಥ ಕುತೂಹಲವನ್ನು ಸಾರ್ಥಕ ಪಡಿಸುವಂತೆಯೇ ಇದುವರೆಗೆ ನಮ್ಮ ದೇಶದ ಸೈನ್ಯಗಳು ಯುದ್ಧಾಂಗಣದಲ್ಲಿ ಕೆಲಸಮಾಡಿ, ಶ್ಲಾಘನೆಯನ್ನು ಪಡೆದಿದ್ದಾರೆ. ಆದರೆ ಹಾಗೆ ತಾವು ಹೋದ ಕೆಲಸವನ್ನು ಮುಗಿಸಿಕೊಂಡ ಸೈನ್ಯದ ಯಾವ ಭಾಗವೂ ಇದುವರೆಗೆ ಸ್ವದೇಶಕ್ಕೆ ಸೇರಿರಲಿಲ್ಲ. ಕಮಾಗಾಟ ಹಡಗಿನಿಂದ ಬಂದಿಳಿದ ಭಾರತೀಯರನ್ನೂ, ಭರತಖಂಡದ ತೆರವಾದ ಸೇನಾಸ್ಥಲಗಳಿಗೆ ಯೂರೋಪಿನಿಂದ ಬಂದು ಬೊಂಬಾಯಿಯಲ್ಲಿಳಿದ ಸೈನ್ಯವನ್ನೂ ಸಹ ಯುದ್ಧದಿಂದ ಹಿಂದಿರುಗಿ ಬಂದ ಸ್ವದೇಶದ ಸೈನ್ಯಗಳನ್ನಾಗಿ ಕೆಲಕೆಲರು ಯೋಚಿಸಿ ಮಾತನಾಡಿಕೊಳ್ಳುತ್ತಿದ್ದರು. ಅದೆಲ್ಲಾ ಸುಳ್ಳು. ಮೊನ್ನೆ ತಾನೇ ಬೊಂಬಾಯಿಗೆ ಬಂದಿಳಿದ ಒಂದು ಸೈನ್ಯಭಾಗವು ಮಾತ್ರ ಯುದ್ಧಾಂಗಣದಿಂದ ಬಂದುದಾಗಿರುತ್ತದೆ. ಹಿಂದಿರುಗಿ ಬಂದಿಳಿದ ಭಾರತೀಯ ಸೈನ್ಯದಲ್ಲಿ ಇದೇ ಮೊದಲನೆಯದು. ಇವರು ತುರ್ಕಿಯವರ ಮೇಲೆ ಪರ್ಷಿಯನ್ ಕೊಲ್ಲಿಯಲ್ಲಿ ನಡೆದ ಯುದ್ಧಕ್ಕಾಗಿ ಕಳುಹಿಸಲ್ಪಟ್ಟಿದ್ದವರು. ಇವರಲ್ಲಿ ಬಹುಜನರು ಶತ್ರುಗಳಿಂದ ಪ್ರಯೋಗಿಸಲ್ಪಡುತ್ತಿದ್ದ ತುಪಾಕಿಗಳ ಗುಂಡಿಗೆ ಇದಿರಾಗಿ ಹೋಗಿ ಶೌರ್ಯದಿಂದ ಕಾದಾಡಿದವರು. ಆದರೂ ಇವರಲ್ಲಿ ಒಬ್ಬನ ಎದೆಯ ಮೇಲೆ ಮಾತ್ರ ಗುಂಡಿನೇಟು ಬಿದ್ದ ಗುರ್ತು ಕಾಣಿಸುತ್ತಿದೆ. ಉಳಿದವರಿಗೆ ಅಲ್ಲಿನ ವಾಯುಗುಣದ ಶೀತೋಷ್ಣಸ್ಥಿತಿಯು ಸರಿಬೀಳದೆ ಜ್ವರ ಮೊದಲಾದ ರೋಗಗಳುಂಟಾಗಿ ತೊಂದರೆಪಡುತ್ತಲಿದ್ದಾರೆ. ಸೈನ್ಯಾಧಿಕಾರಿಗಳೊಳಗೆ ಮೇಜರ್ ಲೇನಾಕ್ಸ್‌ರವರಿಗೂ ಶೀತಜ್ವರವು ಕಾಡಿಸುತ್ತಿದೆ. ಅಲ್ಲದೆ ೫ ಮಂದಿ ಇಂಗ್ಲಿಷ್ ಸೈನಿಕರೂ ೧೮ ಮಂದಿ ಹಿಂದೂ ಸೈನಿಕರೂ ಇದೇ ರೋಗದಿಂದ ವ್ಯಥೆಪಡುತ್ತಿದ್ದಾರೆ. ಬೊಂಬಾಯಿಯ ಟೈಮ್ಸ್ ಆಫ್ ಇಂಡ್ಯಾ ಪತ್ರಿಕೆಯ ಪ್ರತಿನಿಧಿಯು ಈ ಸೈನಿಕರನ್ನು ಕಂಡು ಮಾತನಾಡಿದಾಗ ಅವರೆಲ್ಲರೂ ಉತ್ಸಾಹದಿಂದ ಉತ್ತರವನ್ನಿತ್ತರು. ತುರ್ಕಿಯ ಸೈನಿಕರೊಡನೆ ಯುದ್ಧ ಮಾಡುವುದಕ್ಕೆ ತಮಗೆ ತುಂಬಾ ಕುತೂಹಲವುಂಟೆಂತಲೂ, ಮರಳಿ ನಮ್ಮನ್ನು ಕಳುಹಿಸಿದರೆ ಯುದ್ಧಮಾಡಿ ಬರುವೆವೆಂತಲೂ ನುಡಿದಿರುವರು. ಈ ಸೇನೆಗಳು ಪರ್ಷಿಯನ್ ಕೊಲ್ಲಿಯ ಬಡದಲ್ಲಿದ್ದ “ಫಾ” ಎಂಬ ಪಟ್ಟಣವನ್ನು ಹಿಡಿದುಕೊಂಡುವಷ್ಟೆ. ತತ್ಸಂಬಂಧವಾದ ನಡವಳಿಕೆಗಳೆಲ್ಲಾ ಸೈನಿಕರಿಗೆ ಚೆನ್ನಾಗಿ ಜ್ಞಾಪ್ತಿಯಲ್ಲಿದ್ದುವು. ಆ ವಿವರಣವನ್ನು ಇಂಗ್ಲಿಷ್ ಸೈನಿಕರು ತಿಳಿಯಿಸಿರುವುದು ಹೇಗೆಂದರೆ—ನಾವು “ಫಾ” ನಲ್ಲಿ ಇಳಿದಾಗ ನಮ್ಮನ್ನು ತಡೆಯುವವರು ಅಲ್ಲಿ ಯಾರೂ ಇರಲಿಲ್ಲ. ಸಟಿಯಾ-ಪಾಟೆಲ್ ಅರಬ್ ಎಂಬ ಪ್ರದೇಶಗಳಲ್ಲಿದ್ದ ತುರ್ಕಿ ಸೈನಿಕರು ನಮ್ಮನ್ನು ಅಲ್ಲಿ ಇಳಿಯಗೊಡದಂತೆ ಮಾಡಬೇಕೆಂದು ಪ್ರಯತ್ನಿಸಿದರು. ಆದರಿಂದ ಸ್ವಲ್ಪ ಯುದ್ಧವೂ ಆಯಿತು. ಸ್ವಲ್ಪಹೊತ್ತು ನಡೆದರೂ ಆ ಯುದ್ಧವು ಭೀಕರವಾಗಿಯೇ ಆಯಿತು. ನಮ್ಮಲ್ಲಿ ಮೂವರು ಸತ್ತುಹೋದರು. ಇಬ್ಬರು ಅಧಿಕಾರಿಗಳಿಗೂ ೨೦ ಮಂದಿ ಸೈನಿಕರಿಗೂ ಏಟುಬಿದ್ದಿತು. ತುರ್ಕಿಯ ಸೈನ್ಯದಲ್ಲಿ ಬಹುಮಂದಿ ನಷ್ಟವಾದರು. ಕೆಲವರನ್ನು ನಾವು ಸೆರೆಯಾಳುಗಳನ್ನಾಗಿ ಹಿಡಿದೆವು. ಮತ್ತು ೨ ಫಿರಂಗಿಗಳನ್ನೂ ಹಿಡಿದುಕೊಂಡೆವು. ಅಲ್ಲಿ ಚಳಿಯು ವಿಪರೀತವಾಗಿದೆ. ವಾಯುಗುಣವು ಒಳ್ಳೆಯದಲ್ಲ. ಪಂಜಾಬಿ ಸೈನಿಕರು ಬಹಳ ಸಂತೋಷದಿಂದ ಕೆಲಸಮಾಡಿದರು. “ನಮ್ಮ ಸರ್ಕಾರದವರು ಶತ್ರುಗಳನ್ನು ಓಡಿಸಿ ಅವರಲ್ಲಿ ಹಲವರನ್ನುನಷ್ಟಗೊಳಿಸಿದುದಕ್ಕಾಗಿ ನಾವು ಸಂತೋಷಿಸುತ್ತೇವೆ” ಎಂದು ಪಂಜಾಬಿ ಸೈನಿಕರು ಹೇಳುತ್ತಿದ್ದಾರೆ.

ಅರ್ಲ್‌ರಾಬರ್ಟ್ಸ್‌ರವರ ಅಂತ್ಯವಿಧಿ.

ಆಂಗ್ಲ ಪ್ರಪಂಚವು ಅರ್ಲ್‌ರಾಬರ್ಟ್ಸ್‌ರವರ ವಿಷಯದಲ್ಲಿ ಎಷ್ಟು ಪೂಜ್ಯಬುದ್ಧಿಯನ್ನು ವಹಿಸಿದ್ದರೆಂಬುದು ಅವರ ಮರಣಾನಂತರ ನಡೆದ ಮಹಾ ಮರ್ಯಾದೆಗಳಿಂದ ವಿದಿತವಾಗುತ್ತಿರುವುದು. ಕಳೆದ ತಾ|| ೧೯ನೆ ಗುರುವಾರದ ದಿವಸ ಇವರ ಶವಸಂಸ್ಕಾರವಾಯಿತು. ಇದು ಇಂಗ್ಲೆಂಡಿನಲ್ಲಿ ಇದುವರೆಗೆ ನಡೆದಿರುವ ದೊಡ್ಡದೊಡ್ಡ ಉತ್ಸವಗಳಲ್ಲಿ ಒಂದಾಗಿದ್ದಿತು. ಆದಿನ ಪಟ್ಟಣದಲ್ಲಿ ತುಂತುರು ಮಳೆಯಾಗುತ್ತಿದ್ದುದರಿಂದ ಪ್ರಜೆಗಳ ಉತ್ಸಾಹಕ್ಕೆ ಸ್ವಲ್ಪ ಭಂಗಕರವಾಗಿದ್ದಿತು. ಸಮಾಧಿ ಮಾಡಿದ ಸೆಂಟ್‌ಪಾಲ್ ದೇವಾಲಯದ ವರೆಗೂ ಇರುವ ಮಾರ್ಗದಲ್ಲಿ ಜನಸ್ತೋಮವು ಕಿಕ್ಕಿರಿದು ನಿಂತುಹೋಗಿದ್ದಿತು. ಶವಪೇಟಿಕೆಯನ್ನು ಉತ್ಸವದಿಂದ ತೆಗೆದುಕೊಂಡು ಹೋಗುವುದು ಈ ಜನಸ್ತೋಮದಲ್ಲಿ ಬಹಳ ಕಷ್ಟವಾಯಿತು. ಮಾರ್ಗಗಳ ಇಕ್ಕೆಲಗಳಲ್ಲೂ ಸೈನಿಕರು ಮರ್ಯಾದೆಮಾಡುತ್ತ ನಿಂತಿದ್ದರು. ಸೈನ್ಯಶಾಖಾಧಿಕಾರಿಗಳನೇಕರು ಶವಪೇಟಿಕೆಯಜತೆಯಲ್ಲಿ ಹೋಗುತ್ತಿದ್ದುದು ಉತ್ಸವಕ್ಕೆ ಬಹಳ ವಿಜೃಂಭಣೆಯನ್ನುಂಟುಮಾಡಿದ್ದಿತು. ಶವದ ಪೆಟ್ಟಿಗೆಯ ಮೇಲೆ ಇಂಗ್ಲಿಷ್ ರಾಜ್ಯದ ಪತಾಕೆಯೂ, ಅರ್ಲ್‌ರಾಬರ್ಟ್ಸ್‌ರವರ ಕತ್ತಿಯೂ “ಬ್ಯಾಟೂ” ಇಡಲ್ಪಟ್ಟಿದ್ದುವು. ಅವರು ಏರುತ್ತಿದ್ದ ಪ್ರೀತಿಯ ಕುದುರೆಯು ಪೆಟ್ಟಿಗೆಯ ಮುಂಗಡೆಯಲ್ಲಿ ಹೋಗುತ್ತಿದ್ದಿತು. ಅರ್ಲ್‌ಕಿಚನರ್‌ರವರು ಈ ಶವಪೇಟಿಕೆಯ ಮುಂಗಡೆಯಲ್ಲಿ ಆ ಪೆಟ್ಟಿಗೆಯ ಮೇಲೆ ಮುಚ್ಚಿದ್ದ ಕಪ್ಪುಬಟ್ಟೆಯ ಮುಂಚೆರಗನ್ನು ಹಿಡಿದುಕೊಂಡು ಹೋಗುತ್ತಿದ್ದರು. ಫಿರಂಗಿ ಸೇನೆಯಿಂದಲೂ ಅನೇಕ ವಾದ್ಯವೈಭವದಿಂದಲೂ ಕೂಡಿದ ಈ ಉತ್ಸವವು ರಾಜಮಾರ್ಗದಲ್ಲಿ ನಡೆದು ಸೆಂಟ್‌ಪಾಲ್ ದೇವಾಲಯಕ್ಕೆ ಪಶ್ಚಿಮದ್ವಾರದಿಂದ ಪ್ರವೇಶಮಾಡಿ ಸೇರಿತು. ದೇವಾಲಯದಲ್ಲಿ ಪೆಟ್ಟಿಗೆಯನ್ನು ಇಳುಹುವ ಸ್ಥಲದ ಮಗ್ಗುಲಲ್ಲೇ ಜಾರ್ಜ್ ಸಾರ್ವಭೌಮರವರು ಬಂದು ಕುಳಿತುಕೊಂಡಿದ್ದರು. ಅವರು ಆಗ ಸೈನಿಕರು ಧರಿಸುವ ಕಾಕಿ ಉಡುಪನ್ನು ತೊಟ್ಟಿದ್ದರು. ಸಮಾಧಿಕ್ರಿಯೆಗೆ ಎಲ್ಲಾ ರಾಜಕುಟುಂಬಿಕರ ಪ್ರತಿನಿಧಿಗಳೂ, ಎಲ್ಲ ಮತಭೇದದ ಪ್ರತಿನಿಧಿಗಳೂ, ಎಲ್ಲ ಸ್ವಾಸ್ಥ್ಯಗಳ ಪ್ರತಿನಿಧಿಗಳೂ ಬಂದಿದ್ದರು. ಭರತಖಂಡದ ಸೇನೆಯ ಪ್ರತಿನಿಧಿಗಳು ಸಮಾಧಿಯ ಬಳಿಯಣ ಒಂದು ಮುಖ್ಯಸ್ಥಲದಲ್ಲಿ ಕುಳಿತುಕೊಂಡಿದ್ದರು. ಭರತಖಂಡದ ಪ್ರಭುಗಳೊಳಗೆ ಯೋಧಪುರ-ಬಿಕನೀರು-ಕೃಷ್ಣಘರ್ ಮಹಾರಾಜರುಗಳೂ, ಸರ್ ಪ್ರತಾಪಸಿಂಗ್‌ರವರೂ ಭರತಪುರ-ಭಾವಲ್ಪುರ-ಕುಚ್‌ಬಿಹಾರ್-ಅಕ್ಕಲಕೋಟೆ-ಕುನ್ವರ್-ತಿಕಾರಿ ಸಂಸ್ಥಾನಗಳ ಪ್ರಭುಗಳೂ, ಮಾಲಿಕಹಯೋತ್ತಮರವರೂ, ಯೋಧಪುರದ ಪೆರ್ತಿಸಿಂಗ್‌ರವರೂ, ಕೇಪ್ಟನ್ ರೂಪಸಿಂಗ್‌ರವರೂ ಸಹ ಬಂದಿದ್ದರು. ಬಳಿಕ ನಿಶ್ಶಬ್ದವಾಗಿರುವಾಗ ಮಂತ್ರಪಠನವಾಯಿತು. ಕ್ಯಾಂಟರ್‌ಬರಿ ಆರ್ಚ್‌ಬಿಷಪ್ಪರೂ, ಲಂಡನ್ ಬಿಷಪ್ಪರೂ, ಇನ್ನೂ ಕೆಲ ಮತಾಧಿಪತಿಗಳೂ ಸಮಾಧಿಕ್ರಿಯೆಯನ್ನು ವಿಧಿವತ್ತಾಗಿ ನಡೆಯಿಸಿದರು. ಶವವನ್ನು ಸಮಾಧಿಗೆ ಇಳುಹಿಸಿದಾಗ ದುಃಖಕರವಾದ ವಾದ್ಯಗಳು ಬಾರಿಸಲ್ಪಟ್ಟುವು. ಸರ್ವರೂ ಮ್ಲಾನವದನರಾಗಿ ನಿಶ್ಶಬ್ದದಿಂದಿದ್ದರು.

ಆ ದಿನವೂ ಮರುದಿನವೂ ಇಂಗ್ಲೆಂಡಿನ ಮುಖ್ಯಪಟ್ಟಣಗಳಲ್ಲೂ ಭರತಖಂಡದ ದಿಲ್ಲಿ-ಕಲ್ಕತ್ತಾ-ಕರಾಚಿ-ಬೊಂಬಾಯಿ ಮೊದಲಾದ ದೊಡ್ಡದೊಡ್ಡ ಪಟ್ಟಣಗಳಲ್ಲೂ ದೇವಾಲಯಗಳೊಳಗೆ ಪ್ರಾರ್ಥನೆಯು ನಡೆದಿತು. ಹಲವು ಕಡೆ ಕೋರ್ಟುಕಚೇರಿಗಳು ಮುಚ್ಚಲ್ಪಟ್ಟಿದ್ದುವು.

ಪಾರ್ಲಿಮೆಂಟಿನ ಲಾರ್ಡುಗಳ ಸಭೆಯಲ್ಲಿ ಅರ್ಲ್ ರಾಬರ್ಟ್ಸ್‌ರವರ ಗುಣಾತಿಶಯಪ್ರಶಂಸೆಯು ನಡೆಯುವಾಗ್ಗೆ ಅರ್ಲ್ ಕಿಚನರ್‌ರವರ.—“ತಮ್ಮ ಅವಸಾನಕಾಲದ ವರೆಗೂ ಕೂಡ ಲಾರ್ಡ್ ರಾಬರ್ಟ್ಸ್‌ರವರು ಭಾರತೀಯ ಸೈನ್ಯಗಳ ವಿಷಯವಾಗಿಯೂ, ಭರತಖಂಡದ ವಿಷಯವಾಗಿಯೂ ಬಹಳ ಶ್ರದ್ಧೆಯನ್ನು ವಹಿಸಿದ್ದರು. ಕೊನೆಗಾಲದಲ್ಲೂ ಕೂಡ ಅವರು ಯುದ್ಧರಂಗಕ್ಕೆ ಬಂದಿದ್ದ ಭಾರತೀಯ ಸೈನ್ಯವನ್ನು ನೋಡುವುದಕ್ಕಾಗಿಯೇ ಹೋಗಿದ್ದರು” ಎಂತಲೂ,

ಲಾರ್ಡ್ ಕರ್ಜನ್‌ರವರು —“ಲಾರ್ಡ್ ರಾಬರ್ಟ್ಸ್‌ರವರು ತಮ್ಮ ಮನೆಯಲ್ಲಿರುವಾಗ ಕೇವಲ ದೈವಧ್ಯಾನತತ್ಪರರಾಗಿರುತ್ತಿದ್ದವರು. ಅವರ ಜೀವಿತವು ಪರಮ ಪವಿತ್ರವಾಗಿಯೂ, ದಂಭರಹಿತವಾಗಿಯೂ ಇದ್ದಿತು. ಭರತಖಂಡದಲ್ಲಿರುವ ಪ್ರಭುತ್ವಸೇವಕವರ್ಗದಲ್ಲಿ ಉತ್ತಮಾದರ್ಶವನ್ನು ಸ್ಥಾಪಿಸುವುದಕ್ಕೂ ಭಾರತೀಯ ಸೈನ್ಯದಲ್ಲಿ ಅಸಾಧಾರಣ ಯುದ್ಧಶಕ್ತಿಯನ್ನು ವಿಜೃಂಭಣಗೊಳಿಸುವುದಕ್ಕೂ ಇವರೇ ಮೂಲಕಾರಣರು’ ಎಂತಲೂ,

ಸ್ಟೇಟ್ ಸೆಕ್ರೆಟರಿಗಳಾದ ಲಾರ್ಡ್ ಕ್ರ್ಯೂರವರು —“ಅರ್ಲ್‌ರಾಬರ್ಟ್ಸ್‌ರವರ ಮರಣವಾರ್ತೆಯನ್ನು ಕೇಳಿ ಭಾರತೀಯರಿಗಿಂತಲೂ ಹೆಚ್ಚು ವ್ಯಸನಪಡುವವರು ಮತ್ತಾರೂ ಇರಲಾರರು. ಅವರು ತಮ್ಮನ್ನು ಕೊನೆಯಸಾರಿ ಸಂದರ್ಶಿಸಿಕೊಂಡು ಹೋಗುವುದಕ್ಕಾಗಿ ಬಂದಿದ್ದ ವಿಷಯವನ್ನು ಭಾರತೀಯ ಸೈನಿಕರು ಎಂದಿಗೂ ಮರೆಯಲಾರರು” ಎಂತಲೂ,

ಮುಖ್ಯಮಂತ್ರಿ ಅಸ್ಕ್ವಿತರವರು—“—ಅರ್ಲ್ ರಾಬರ್ಟ್ಸ್‌ರವರು ಯುದ್ಧರಹಸ್ಯಜ್ಞಾನದಲ್ಲೂ ಸೇನಾವ್ಯೂಹವನ್ನು ನಡೆಯಿಸುವುದರಲ್ಲೂ ಅಸಮಾನಶಕ್ತಿಯುಳ್ಳವರು. ಮತ್ತು ಯುದ್ಧಕಲಾಕೌಶಲ್ಯದಲ್ಲೂ ರಾಜಸೇವಾಧುರಂಧರತೆಯಲ್ಲೂ ನಿರುಪಮಾನರಾದವರು. ಸುಪ್ರಸಿದ್ಧರಾದ ಆಂಗ್ಲಸೇನಾನಿಗಳಲ್ಲಿ ಅವರು ಉತ್ತಮಸ್ಥಾನವನ್ನು ಪಡೆಯಲು ಅರ್ಹರಾದವರು. ಯಾವವಿಧದಿಂದಲಾದರೂ ಸರಿ ತಂತಮ್ಮ ಕೈಲಾದ ರೀತಿಯಿಂದ ದೇಶಸೇವೆಯನ್ನು ಮಾಡಬೇಕೆಂಬ ಕೋರಿಕೆಯನ್ನು ಪ್ರತಿಯೊಬ್ಬ ಸ್ವದೇಶೀಯನೂ ಹೊಂದಿರುವಂತೆ ಮಾಡಬೇಕೆಂದು ಅವರು ಕೋರುತ್ತಿದ್ದರು. ಆ ಅಭಿಪ್ರಾಯವನ್ನು ನೆನ್ನೆತಾನೇ ಕೆಲಸಗಾರರ ಹಿಂದೆಯೂ ನುಡಿದಿದ್ದರು” ಎಂತಲೂ, ಕಾಮನ್ಸ್ ಸಭೆಯಲ್ಲಿ ಇದೇ ಅಸ್ಕ್ವಿತರವರು —“ಲಾರ್ಡ್ ರಾಬರ್ಟ್ಸ್‌ರವರು ಸ್ವಕೀಯಬುದ್ಧಿ ಕೌಶಲ್ಯವೊಂದಲ್ಲದೆ ಮತ್ತಾವ ಸಹಾಯವೂ ಇಲ್ಲದೆ ಸಣ್ಣತನದಿಂದ ದೊಡ್ಡಸ್ಥಿತಿಗೆ ಏರಿದವರು. ಅಂಥ ಮಹನೀಯನಾದ ದೇಶಭಕ್ತನ ಗೌರವಾರ್ಥವಾಗಿ ಸರ್ಕಾರದ ಬೊಕ್ಕಸದ ಹಣದ ವೆಚ್ಚದಿಂಲೇ ಒಂದು ಜ್ಞಾಪಕ ಚಿಹ್ನವನ್ನು ನಿರ್ಮಿಸಬೇಕಾಗಿದೆ. ಅವರು ಆಂಗ್ಲಸೈನಿಕರಲ್ಲಿ ಉನ್ನತ ಸ್ಥಾನವನ್ನು ಪಡೆದುಕೊಂಡವರೆಂಬುದನ್ನು ನಿರ್ವಿವಾದವಾಗಿ ಹೇಳಬಹುದಾಗಿದೆ. ಅವರು ಕೆಲಸವನ್ನು ಬಿಟ್ಟನಂತರವೂ ಕೂಡ ದೇಶಭಕ್ತಿಭರಿತರಾಗಿ ಸ್ವಲ್ಪವೂ ವಿರಾಮವಿಲ್ಲದೆ ಪಡುತ್ತಿದ್ದ ಪಾಟನ್ನು ಅಷ್ಟಿಷ್ಟೆಂದು ಹೇಳತೀರದು. ಅವರು ತಮ್ಮ ಬಾಲ್ಯ ಯೌವನಕಾಲವನ್ನು ಹಿಂದೂಸ್ಥಾನದಲ್ಲೇ ಕಳೆದವರು. ಆ ಕಾಲದಲ್ಲಿ ಅವರು ಯಾವ ಅಪಾಯಗಳಿಗೂ ಹಿಂಜರಿಯದೆ ಯಾವಉಪದ್ರವಗಳನ್ನೂ ಲೆಕ್ಕಿಸದೆ ಯುದ್ಧಾಂಗಣದಲ್ಲಿ ನುಗ್ಗಿ ತಮ್ಮ ಸಾಹಸಗಳನ್ನು ಎಷ್ಟೋ ಆವೃತ್ತಿ ಪ್ರಕಟಪಡಿಸಿದ್ದಾರೆ. ಅವರು ತಮಗೆ ಯಾವಸ್ಥಲದಲ್ಲಿ ಮರಣವು ಸಂಭವಿಸಬೇಕೆಂದು ಕೋರುತ್ತಿದ್ದರೋ ಅಂಥ ಸ್ಥಲದಲ್ಲೇ ಈಗ ಅವರಿಗೆ ಮೃತಿಯು ಸಂಭವಿಸಿತು. ಅವರ ಕೀರ್ತಿಪ್ರತಿಷ್ಠೆಗಳು ತಮ್ಮಗಳಿಗೆ ರಕ್ಷಕಮಂತ್ರವೂ ಪೂರ್ವಾರ್ಜಿತ ಪುಣ್ಯವೂ ಆಗಿರುವುವೆಂದು ಯಾರು ನಿರಂತರವೂ ತಿಳಿಯುತ್ತಿದ್ದರೋ ಅಂಥ ಭಾರತೀಯ ಸೈನಿಕರನ್ನು ಹೊಸದಾಗಿ ಪರೀಕ್ಷಿಸಿ, ಆಯುಧಪಾಣಿಗಳಾದ ತನ್ನ ಸಹೋದ್ಯೋಗಿಗಳು ತನ್ನ ಸುತ್ತಲೂ ಆವರಿಸಿರುವಾಗ, ದೂರದಲ್ಲಿ ಢಾಂ ಢಾಂ ಎಂಬದಾಗಿ ಫಿರಂಗಿಗಳು ಘೋಷಮಾಡುತ್ತಿರುವಾಗ, ರಣದುಂದುಭಿಯು ಶ್ರವಣಾಪ್ಯಾಯಮಾನವಾಗಿ ಬಾಜಿಸಲ್ಪಡುತ್ತಿರುವಾಗ, ಸಹಜವಾದ ವೀರೋತ್ಸಾಹರಸವು ತನ್ನ ಮುಖಮಂಡಲದಲ್ಲಿ ನರ್ತಿಸುತ್ತಿರುವಾಗ, ಈ ಮಹಾ ಅತಿರಥಶ್ರೇಷ್ಠರಾದ ಲಾರ್ಡ್ ರಾಬರ್ಟ್ಸ್‌ರವರು ತಮ್ಮ ಪ್ರಾಣವನ್ನು ನೀಗಿದರು” ಎಂದು ಭಾಷಣಮಾಡಿದರು.

ಹೀಗೆ ಆಂಗ್ಲಪ್ರಪಂಚದ ಸಾರ್ವಭೌಮರೇ ಮೊದಲುಗೊಂಡು ಸಾಮಾನ್ಯಜನರವರೆಗಿನ ಪ್ರಜೆಗಳಿಂದೆಲ್ಲಾ ಅಸಾಧಾರಣವಾದ ಗೌರವವನ್ನು ಪಡೆದು ದಿವಂಗತರಾದ ಲಾರ್ಡ್‌ರಾಬರ್ಟ್ಸ್‌ರವರ ಜೀವಿತವು ಧನ್ಯವಲ್ಲವೆ?

ಮೈಸೂರ್ ಸ್ಟಾರ್.

ಸನ್ ೧೯೧೪ ನೆಯ ನವಂಬರ್ ತಾ|| ೨೯ ನೆಯ ಭಾನುವಾರ.

ರಾಜಧಾನಿಯಲ್ಲಿ ವ್ಯಾಪಾರವಿದ್ಯಾಬೋಧಕಶಾಲೆ.

ರಾಜಧಾನಿಯ ಚಾಮರಾಜೇಂದ್ರ ಕೈಗಾರಿಕೆಯ ಪಾಠಶಾಲೆಯಲ್ಲಿ ವ್ಯಾಪಾರಸಂಬಂಧವಾದ ವಿದ್ಯೆಯನ್ನು ಇಂಗ್ಲೀಷಿನಲ್ಲೂ ಮತ್ತೂ ಕನಡದಲ್ಲೂ ಕಲಿಸಲು ೨ ತರಗತಿಗಳು ಈ ಡಿಸಂಬರ್ ತಾ|| ೧ ರಿಂದ ಏರ್ಪಡಿಸಲ್ಪಡುವುವು. ಕನ್ನಡದಲ್ಲಿ ಓದಲೂ ಬರೆಯಲೂ ಬಲ್ಲ ವಿದ್ಯಾರ್ಥಿಗಳು ಸ್ಕೂಲ್ ಫೀಯಿಲ್ಲದೆ ಧರ್ಮಾರ್ಥವಾಗಿ ಸೇರಿಸಿಕೊಳ್ಳಲ್ಪಟ್ಟು ಅವರಿಗೆ ಸ್ವದೇಶದ ಲೆಕ್ಕವನ್ನು ಬರೆಯುವಕ್ರಮ, ವ್ಯಾಪಾರಸಂಬಂಧವಾದ ಭೂವಿವರಣೆ, ಗುಜರಾತಿ ಅಥವಾ ಮರಾಟಿಭಾಷೆ, ಇಂಗ್ಲೀಷ್‌ಭಾಷೆ, ವ್ಯಾಪಾರಸಂಬಂಧವಾಗಿ ಪತ್ರವ್ಯವಹಾರವನ್ನು ನಡೆಸುವುದು—ಇವುಗಳು ಕಲಿಸಲ್ಪಡುವುವು. ಪಾಠವು ಬೆಳಗಿನ ೭-೪೫ ಗಂಟೆಯಿಂದ ೧೦-೪೫ ರ ವರೆಗೂ, ಮಧ್ಯಾಹ್ನ ೪-೩೦ ರಿಂದ ಸಾಯಂಕಾಲ ೭-೩೦ ರ ವರೆಗೂ ನಡೆಯುವುದು. ಇಂಗ್ಲೀಷ್ ತರಗತಿಗೆ ೫ ನೆಯ ಫಾರಂವರೆಗೆ ಇಂಗ್ಲೀಷನ್ನೋದಿರುವ ವಿದ್ಯಾರ್ಥಿಗಳು ಸೇರಿಸಲ್ಪಡುವರು. ಈ ಸಂಬಂಧವಾಗಿ ಹೆಚ್ಚು ಸಂಗತಿಯನ್ನು ತಿಳಿಯಲಪೇಕ್ಷಿಸುವವರು ಈ ತರಗತಿಗಳ ಹೆಡ್ಮಾಸ್ಟರಾದ ಮ|| ಜಿ. ಎಸ್. ಸುಬ್ಬರಾವ್, ಬಿ. ಎ., ಯವರಿಂದ ತಿಳಿಯತಕ್ಕುದಾಗಿದೆ. ದೇಶದ ಸಂಪದಭಿವೃದ್ಧಿಗೆ ಉದ್ಯೋಗಗಳಭಿವೃದ್ಧಿಯು ಆಗಿಯೇ ತೀರಬೇಕು. ಯಾವುದ್ಯೋಗದಲ್ಲೂ ಸಮರ್ಪಕವಾದ ಲಾಭವಾಗಬೇಕಾದರೆ, ಅದರ ಸಂಬಂಧವಾದ ಜ್ಞಾನವು ಚೆನ್ನಾಗಿರಬೇಕು. ಈಗಿನಕಾಲದಲ್ಲಿ ವ್ಯಾಪಾರವಿದ್ಯೆಯು ಬಹಳ ಘನತರವಾಗಿದೆ. ಅದನ್ನು ಶಾಸ್ತ್ರೀಯವಾಗಿ ಬೋಧಿಸುವ ಏರ್ಪಾಟನ್ನು ನಮ್ಮ ಸರ್ಕಾರದವರು ಬೆಂಗಳೂರಿನಲ್ಲಿ ಮಾಡಿದ್ದರು. ಇಂತಹ ಪಾಠಶಾಲೆಯನ್ನು ರಾಜಧಾನಿಯಲ್ಲೂ ಏರ್ಪಡಿಸುವುದು ಅವಶ್ಯಕವೆಂದರಿತು ನಮ್ಮ ವಿದ್ಯಾಭ್ಯಾಸದ ಶಾಖೆಯವರು ಇಲ್ಲೂ ಅಂಥ ಶಾಲೆಯೊಂದನ್ನು ಹೊಸದಾಗಿ ಏರ್ಪಡಿಸಿ ಬೊಂಬಾಯಿಗೆಹೋಗಿ ಅಲ್ಲಿಯ ವ್ಯಾಪಾರವಿದ್ಯಾಬೋಧಕ ಪಾಠಶಾಲೆಯಲ್ಲಿ ಬೋಧನಕ್ರಮವನ್ನರಿತು ಬಂದಿರುವ ಮ|| ಜಿ. ಎಸ್. ಸುಬ್ಬರಾಯರನ್ನು ಹೆಡ್ಮಾಸ್ಟರನ್ನಾಗಿ ನಿಯಮಿಸಿರುವುದು ಸಂತೋಷಪ್ರದವಾಗಿದೆ. ವರ್ತಕರ ಮಕ್ಕಳೂ ವರ್ತಕರಲ್ಲಿ ಬರೆವಣಿಗೆ ಮೊದಲಾದ ವೃತ್ತಿಯಿಂದ ಜೀವಿಸಲಿಚ್ಛಿಸುವವರೂ ಈಗ ನೂತನವಾಗಿ ಸ್ಥಾಪಿತವಾಗಿರುವ ಈಪಾಠಶಾಲೆಯನ್ನು ಸೇರಿ ಕಾಲಕ್ಕೆ ತಕ್ಕಂಥ ವ್ಯಾಪಾರಸಂಬಂಧವಾದ ಲೆಕ್ಕವನ್ನಿಡುವಕ್ರಮ ಪತ್ರವ್ಯವಹಾರವನ್ನು ನಡೆಯಿಸುವ ರೀತಿ ಮೊದಲಾದುವನ್ನು ಕಲಿತುಕೊಂಡು ವಿಶೇಷಪ್ರಯೋಜನವನ್ನು ಹೊಂದುವವರಾಗಲೆಂದಿಚ್ಛಿಸುತ್ತೇವೆ.

ಒಳದೇಶದ ವೃತ್ತಾಂತಗಳು

ಬರುವ ಡಿಸೆಂಬರ್ ತಿಂಗಳ ಕೊನೆಯಲ್ಲಿ ಮದ್ರಾಸಿನಲ್ಲಿ ಕೂಡುವ ಸಂಘಸಂಸ್ಕರಣ ಸಭೆಗೆ ನಮ್ಮ ಶ್ರೀಮದ್ಯುವರಾಜರವರು ಅಧ್ಯಕ್ಷರಾಗುವರೆಂದು ಕೇಳಿ ಸಂತೋಷಿಸುತ್ತೇವೆ.

ನಾವು ಹಿಂದೆ ತಿಳುಹಿದ್ದಂತೆ ಚಿತ್ರಕಲ್‌ದುರ್ಗದ ಫಸ್ಟ್ ಗ್ರೇಡ್ ಪ್ಲೀಡರ್ ಮಿ|| ಅಬ್ದುಲ್‌ಗನ್ನಿಯವರು ಹಾಸನದ ಆಕ್ಟಿಂಗ್‌ಮುನಸೀಫರಾಗಿ ನಿಯಮಿಸಲ್ಪಟ್ಟಿರುವರು.

ಬೆಂಗಳೂರ ಅಡ್ವೋಕೇಟ್ ಮಿ|| ಎಸ್. ಶಾಮಣ್ಣನವರು ಮೋಟಾರುಬಂಡಿಯನ್ನು ಅಜಾಗರೂಕತೆಯಿಂದ ನಡೆಸಿದುದಕ್ಕಾಗಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವಿಚಾರಣೆಗೆ ಗುರಿಮಾಡಲ್ಪಟ್ಟಿರುವರು.

ಬೆಂಗಳೂರು ಕುರುವಿಜಯ ಪತ್ರಿಕೆಯು ಮುದ್ರಣಯಂತ್ರದ ತೊಂದರೆಯಿಂದ ಇನ್ನೂ ೧-೨ ವಾರಗಳ ವರೆಗೆ ಪ್ರಕಟವಾಗಲು ಯತ್ನವಿಲ್ಲವಾಗಿ ಅದರ ಗ್ರಾಹಕರು ಮನ್ನಿಸಬೇಕೆಂದು ಆ ಪತ್ರಿಕೆಯ ಎಡಿಟರು ಪ್ರಾರ್ಥಿಸುತ್ತಾರೆ.

ಬೆಂಗಳೂರ ಫಾರೆಸ್ಟ್ ರೇಂಜಾಫೀಸಿನಲ್ಲಿ ಹಣವನ್ನು ದುರುಪಯೋಗಿಸಿಕೊಂಡು ಓಡಿಹೋಗಿದ್ದ ಶಂಕರಸ್ವಾಮಿಅಯ್ಯರನ್ನು ಪೋಲೀಸರು ಕಲಕತ್ತಾದಲ್ಲಿಹಿಡಿದು ಬೆಂಗಳೂರಿಗೆ ಕರೆದುಕೊಂಡು ಬಂದು ಸಿಟಿಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿರುತ್ತಾರೆ.

ಶ್ರೀಮನ್ಮಹಾರಾಜರವರ ಸ್ವಾರಿಯು ಬೆಂಗಳೂರಿಗೆ ಕಳೆದ ಸೋಮವಾರ ಚಿತ್ತೈಸಬೇಕಾಗಿದ್ದುದು ಕೆಲ ಅನಿವಾರ್ಯದಿಂದ ತಪ್ಪಿಹೋಗಿ ಈ ಮಂಗಳವಾರ ನಂಜನಗೂಡಿಗೆ ದಯಮಾಡಿ ಶ್ರೀ ನಂಜುಂಡೇಶ್ವರನ ಪೂರ್ಣಿಮಾಸೇವೆಯನ್ನು ಪೂರೈಸಿಕೊಂಡು, ತಾ|| ೪-೫ ರಲ್ಲಿ ಬೆಂಗಳೂರಿಗೆ ಚಿತ್ತೈಸುವುದಾಗಿ ಗೊತ್ತಾಗಿರುವುದು.

ಮೈಸೂರ ಸಿಟಿಮ್ಯಾಜಿಸ್ಟ್ರೇಟರಾದ ಮ|| ಬಿ. ಬಸವಾರಾಧ್ಯರು ಮುಂದಣ ತಿಂಗಳು ತಾ|| ೭ ರಿಂದ ೫೩ ದಿನಗಳ ಪ್ರಿವಿಲೆಜ್ ರಜಾದಮೇಲೆ ಹೋಗುವುದರಿಂದ ಅವರು ಬರುವವರೆಗೆ ದೊಡ್ಡಬಳ್ಳಾಪುರದ ಸಬ್‌ಡಿವಿಜನ್ ಆ| ಕಮೀಷನರಾದ ಮ|| ಪಿ. ಎಸ್. ಕುಪ್ಪಸ್ವಾಮಯ್ಯಂಗಾರರು ಇಲ್ಲಿಯ ಸಿಟಿಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿರುವರು.

ಮೈಸೂರು-ಹಾಸನ-ಅರಶೀಕೆರೆಯ ಲೋಹಮಾರ್ಗನಿರ್ಮಾಣಕ್ಕಾಗಿ ಭೂಮಿಯನ್ನು ಕೊಂಡುಕೊಳ್ಳುವ ಕೆಲಸದಮೇಲೆ ನಿಯಮಿತರಾಗಿರುವ ಡಿ|| ಅಮಲ್ದಾರ್ ಮ|| ಜಿ. ಮಲ್ಲಿಕಾರ್ಜುನಯ್ಯ, ಬಿ. ಎ., ಯವರು ತಿಪಟೂರಿಗೆ ವರ್ಗವಾಗಿರುವ ಅಮಲ್ದಾರ್ ಮ|| ಸಿ. ಬಿ. ಲಕ್ಷ್ಮಣರಾಯರ ಬದಲು ಗುಂಡಲಪೇಟೆಯ ಆಕ್ಟಿಂಗ್‌ಅಮಲ್ದಾರ್ ಮತ್ತೂ ೩ ನೆಯ ತ|| ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿರುವರು. ಇವರು ಉದ್ಯೋಗದಮೇಲೆ ಬರುವವರೆಗೆ ಮೈಸೂರ ಸಬ್‌ರಿಜಿಸ್ಟ್ರಾರರಾದ ಮ|| ಶ್ರೀಕಂಠರಾವ್, ಬಿ. ಎ., ಯವರು ಗುಂಡ್ಲಪೇಟೆಯ ಆಕ್ಟಿಂಗ್‌ಅಮಲ್ದಾರರಾಗಿರಲು ಸರ್ಕಾರದಪ್ಪಣೆಯಾಗಿದೆ.

ಯುದ್ಧವಾರ್ತೆಯು.

(ಪಶ್ಚಿಮರಣರಂಗ.)

ಕಳೆದ ವಾರದಲ್ಲಿ ಪಶ್ಚಿಮರಣರಂಗದ ವಾರ್ತೆಗಳಲ್ಲಿ ವಿಶೇಷವೇನೂ ಇಲ್ಲ. ಎಲ್ಲವೂ ಯಥಾಸ್ಥಿತವಾಗಿ ಸಾಗುತ್ತಲೇ ಇವೆ. ಜರ್ಮನರು ಈಪ್ರೆಸ್ಸನ್ನು ಹಿಡಿದುಕೊಳ್ಳಬೇಕೆಂಬ ಪ್ರಯತ್ನವನ್ನು ಇನ್ನೂ ಬಿಟ್ಟಿಲ್ಲ. ಆ ಸುತ್ತಿನಲ್ಲಿ ಕಠಿನತರವಾದ ಫಿರಂಗಿಯ ಯುದ್ಧ ಮೊದಲಾದುವುಗಳು ನಡೆಯುತ್ತಲೇ ಇವೆ. ಶತ್ರುಗಳ ಆಟವನ್ನು ಸಾಗಗೊಡಿಸದಂತೆ ಮಿತ್ರಮಂಡಲಿಯವರು ಬಹಳ ಸಾಹಸದಿಂದ ಕಾದಾಡುತ್ತಿದ್ದಾರೆ. ಅವರು ಈಗಲೂ ಈಪ್ರೆಸ್ಸಿಗೆ ೪-೫ ಮೈಲಿಯಾಚೆ ಇದ್ದಾರೆ. ನ್ಯೂಪೋರ್ಟ್ ವಿಯೋರಸ್-ವಾಸ್ಸುಗಳ ಪ್ರಾಂತದಲ್ಲಿ ಮಿತ್ರಮಂಡಲಿಯವರಿಗೆ ಸ್ವಲ್ಪ ಜಯವಾಗಿದೆ. ಉತ್ತರಸಮುದ್ರದಿಂದ ಹಿಡಿದು ಐಸ್‌ವರೆಗೂ ಅಲ್ಲಲ್ಲಿಗೆ ಶತ್ರುಗಳು ಫಿರಂಗಿಗುಂಡುಗಳನ್ನು ಹಾರಿಸಿ ಯುದ್ಧಮಾಡುತ್ತಲೇ ಇದ್ದರು. ಆದರೂ ವಿಶೇಷವಾದ ಲಾಭವೇನೂ ಅವರಿಗಾಗಿಲ್ಲ. ತೀರದ ಕಲೆಪಟ್ಟಣವನ್ನು ಹಿಡಿದುಕೊಳ್ಳಬೇಕೆಂಬ ಕುತೂಹಲವು ಜರ್ಮನರನ್ನು ಬಿಟ್ಟಿಲ್ಲ. ಅವರ ಸೈನ್ಯಗಳು ಪಟ್ಟಣಕ್ಕೆ ಅಭಿಮುಖವಾಗಿ ಪಶ್ಚಿಮದ ಕಡೆ ಮಹಾ ಪ್ರಯತ್ನದಿಂದ ನುಗ್ಗುವುದರಲ್ಲೇ ಇವೆ. ಈ ಪ್ರಯತ್ನವನ್ನು ಅವರು ಕಳೆದ ೬ ವಾರಗಳಿಂದಲೂ ಮಾಡುತ್ತಲೇ ಇದಾರೆ. ಆದರೂ ಅವರ ಆಟವು ಸಾಗಿಲ್ಲ. ಜರ್ಮನರು ಈಪ್ರೆಸ್‌ಪಟ್ಟಣದ ದೇವಾಲಯ ಮೊದಲಾದವುಗಳಮೇಲೆ ಸಿಡಿಮದ್ದುಗಳನ್ನು ಹಾಕುತ್ತಿದ್ದಾರೆ. ಶತ್ರುಗಳ ಕಾಲ್ಬಲವು ಈಗ ಮೊದಲಿನಷ್ಟು ತೀವ್ರವಾಗಿ ಫಿರಂಗಿಗಳ ಯುದ್ಧವನ್ನು ಮಾಡುತ್ತಲಿಲ್ಲವೆಂದು ಫ್ರಾನ್ಸಿನವರು ಪ್ರಕಟಿಸಿದ್ದಾರೆ. ಬೆಲ್ಜಿಯಂ ದೇಶಕ್ಕೆ ಸೇರಿದ ಜೇಬ್ರೂಜ್ ಎಂಬ ಸಮುದ್ರತೀರದ ಪಟ್ಟಣವು ಈ ಜರ್ಮನರ ಅಧೀನದಲ್ಲಿದೆಯಷ್ಟೆ. ಅಲ್ಲಿಗೆ ಜರ್ಮನರು ತಮ್ಮ ಕೆಲ ಸಬ್‌ಮೆರೀನು (ಸಮುದ್ರಾಂತರ್ಗಾಮಿ) ಗಳನ್ನು ಹೊಗೆಬಂಡಿಗಳ ಮೂಲಕ ತಮ್ಮ ದೇಶದಿಂದ ಸಾಗಿಸಿ ತಂದರು. ಅವನ್ನು ಅವರು ಸಮುದ್ರದೊಳಕ್ಕೆ ಇಳುಹಿಸದಂತೆ ಮಾಡಬೇಕೆಂದು ಇಂಗ್ಲಿಷ್ ಯುದ್ಧನಾವೆಗಳು ಸಮುದ್ರದಿಂದ ಜೇಬ್ರೂಜ್ ತೀರದಮೇಲೂ ಕೋಟೆಗಳಮೇಲೂ ಫಿರಂಗಿ ಗುಂಡುಗಳನ್ನು ಹಾರಿಸಿ, ಅಲ್ಲಿದ್ದ ಜರ್ಮನರ ಫಿರಂಗಿಗಳೆಲ್ಲಾ ನಿರುಪಯೋಗವಾಗುವಂತೆ ಮಾಡಿದುವು. ರೀಮ್ಸ್ ಪಟ್ಟಣದಮೇಲೆ ಶತ್ರುಗಳು ಫಿರಂಗಿಗಳನ್ನು ಹಾರಿಸುತ್ತಿರುವರು. ರೀಮ್ಸ್‌ವರ್ಡನ್ನುಗಳ ಮಧ್ಯದಲ್ಲಿರುವ ಜರ್ಮನ್ ಸೈನಿಕರಿಗೆ ಆಹಾರ್ಯವಸ್ತುಗಳೂ, ತಕ್ಕ ಉಡುಪುಗಳೂ ಇಲ್ಲದೆ, ಅವರು ಕಂಗೆಟ್ಟು ದಿನಕ್ಕೆ ೩೦-೪೦ ಮಂದಿಗಳಂತೆ ತಾವಾಗಿ ಫ್ರೆಂಚ್‌ರಿಗೆ ಶರಣಾಗತರಾಗಿ ಬರುತ್ತಿದ್ದಾರೆ. ಲಾಬಸ್ಸಿ ಹತ್ತಿರ ಹಿಂದೂಸ್ಥಾನ ಸೈನಿಕರು ಶತ್ರುಗಳ ಕಂದಕಗಳನ್ನು ಹಿಡಿದುಕೊಂಡರು.

ಪೂರ್ವರಣರಂಗ.

ಕಳೆದವಾರದಲ್ಲಿ ಜರ್ಮನರು ಮರಳಿ ಪೋಲಾಂಡಿನಲ್ಲಿ ರಷ್ಯನರಮೇಲೆ ಭಯಂಕರವಾಗಿ ಕಾದಾಡಿದುದರಲ್ಲಿ ರಷ್ಯನರು ಸ್ವಲ್ಪ ಹಿಮ್ಮೆಟ್ಟಬೇಕಾಯಿತು. ಲೋವಿಟ್ಸ್-ಸ್ಕಿರ್ನಾವಿಸ್-ರಾಡಂ ಪ್ರಾಂತಗಳಲ್ಲಿ ಭೀಕರವಾದ ಯುದ್ಧವು ನಡೆದಿತು. ಜರ್ಮನರು ಇಲ್ಲಿ ಸ್ವಲ್ಪ ಜಯಶೀಲರಾದರು. ಅವರಕಡೆ ಆದ ನಷ್ಟವು ವಿಪರೀತವಾಗಿರುವುದು. ಅವರಿಗೆ ಮರಳಿ ವಾರ್ಸಾಕ್ಕೆ ನುಗ್ಗಬೇಕೆಂದು ಇಷ್ಟವಿದೆ. ಈಚೆಗೆ ರಷ್ಯನರು ಪೂರ್ವಪ್ರಷ್ಯಾಕ್ಕೆ ಸೇರಿದ ಗೆಲೀಷಿಯಾದಲ್ಲಿ ಜರ್ಮನ್-ಆಸ್ಟ್ರಿಯನ್ ಸೈನ್ಯಗಳ ಮೇಲೆ ಬಹಳ ತೀವ್ರವಾಗಿ ಬಿದ್ದು ಅವರನ್ನು ಚದರಿಸಿಬಿಟ್ಟರು. ಜರ್ಮನಿಗೆಸೇರಿದ ಸೆಲೀಷಿಯಾ ಜಿಲ್ಲೆಗೆ ನುಗ್ಗುವುದಕ್ಕೆ ಕ್ರಾಕೋ ಪಟ್ಟಣವು ಮಾರ್ಗವಾಗಿರುವುದರಿಂದ ಅದನ್ನು ಹಿಡಿದುಕೊಳ್ಳಬೇಕೆಂದು ರಷ್ಯನರು ಬಹಳ ಪರಾಕ್ರಮವನ್ನು ತೋರಿಸುತ್ತ ಆ ಪಟ್ಟಣಕ್ಕೆ ಮುತ್ತಿಗೆಹಾಕಿ ಫಿರಂಗಿಗಳನ್ನು ಹೊಡೆಯುತ್ತಿದ್ದಾರೆ. ಇಲ್ಲಿ ಬಹಳ ಭೀಕರವಾಗಿ ಯುದ್ಧಮಾಡಿ ರಷ್ಯನರನ್ನು ಓಡಿಸಿಬಿಡಬೇಕೆಂದು ಜರ್ಮನರೂ ಆಸ್ಟ್ರಿಯನ್ನರೂ ವಿಶೇಷ ಸೈನ್ಯವನ್ನು ಈ ಸುತ್ತಿನಲ್ಲಿ ಸೇರಿಸಿದ್ದಾರೆ. ಪಶ್ಚಿಮ ಗೆಲೀಷಿಯದಲ್ಲಿ ರಷ್ಯನರು ಮುಂದುವರಿಯುತ್ತಲಿದ್ದಾರೆ. ಕೇಯಿಲ್ಸೀ-ರಾಡಂ ಪ್ರಾಂತದಲ್ಲಿ ನಡೆದ ಯುದ್ಧದಲ್ಲಿ ಜರ್ಮನರು ರಷ್ಯನ್ ಸೇನಾಪಂಕ್ತಿಯನ್ನು ಭೇದಿಸಿಕೊಂಡು ಹೋಗಬೇಕೆಂದು ಮಾಡಿದ ಪ್ರಯತ್ನದಲ್ಲಿ ಸೋತು ಹಿಮ್ಮೆಟ್ಟಬೇಕಾಯಿತು. ಆ ಸುತ್ತಿನಲ್ಲಿ ಶತ್ರುವಿನ ೧ ತಲೆಯೂ ಇಲ್ಲದಂತೆ ರಷ್ಯನರು ಓಡಿಸಿಬಿಟ್ಟಿದ್ದಾರೆ. ಅವರಿಗೆ ಹೊಸ ಸೈನ್ಯಗಳು ಬಂದು ಸೇರಿವೆ. ಕ್ರಾಕೋ ಪ್ರಾಂತದಲ್ಲಿ ರಷ್ಯನರು ಇದುವರೆಗೆ ೨ ಸಾವಿರ ಮಂದಿ ಆಸ್ಟ್ರಿಯನ್ ಸೈನಿಕರನ್ನು ಹಿಡಿದುಕೊಂಡಿದ್ದಾರೆ. ಕಾರ್ಪೇತಿಯ ಪ್ರಾಂತದಲ್ಲೂ ರಷ್ಯನ್ ಸೇನೆಗಳು ಮುಂದಕ್ಕೆ ಆಸ್ಟ್ರಿಯಾ ದೇಶದೊಳಗೆ ನುಗ್ಗಿಹೋಗುತ್ತಿವೆ. ಪೂರ್ವಪ್ರಷ್ಯಾದೊಳಗೆ ನಡೆದ ಯುದ್ಧಗಳಲ್ಲೆಲ್ಲಾ ಲೋಡ್ಜಿಗೆ ವಾಯುವ್ಯ ದಿಕ್ಕಿನಲ್ಲಿ ನಡೆದ ಯುದ್ಧವು ಮಹಾಘೋರವಾಗಿದ್ದಿತು. ಅದರಲ್ಲಿ ರಷ್ಯನರು ಜರ್ಮನರಕಡೆಯ ಕೆಲವು ದೊಡ್ಡಫಿರಂಗಿಗಳನ್ನೂ ಕೆಲವು ನೂರುಮಂದಿ ಸೈನಿಕರನ್ನೂ ಹಿಡಿದುಕೊಂಡರು. ಕ್ಲೆನ್ಸಿ ಬೊಕ್ಸಾರ್ರಾತ್ ಪ್ರದೇಶಗಳಲ್ಲಿ ಜರ್ಮನರು ಹಿಡಿದುಕೊಂಡಿದ್ದ ಸ್ವಲ್ಪ ಸ್ಥಲವನ್ನೂ ಮರಳಿ ರಷ್ಯನರು ಹೋರಾಡಿ ಕಿತ್ತುಕೊಂಡುದಲ್ಲದೆ ಅಲ್ಲಿದ್ದ ಜರ್ಮನರ ೨ ಪಟಾಲಮುಗಳಲ್ಲಿ ಅರ್ಧಭಾಗವನ್ನೂ ಅನೇಕ ಫಿರಂಗಿಗಳನ್ನೂ ಹಿಡಿದುಕೊಂಡರು. ಉಳಿದ ಜರ್ಮನರು ಹಿಂದಕ್ಕೆ ಓಡಿಹೋದರು. ವಿಸ್ಚುಲಾನದಿಯ ಪ್ರಾಂತದಲ್ಲಿ ನಡೆದ ಯುದ್ಧದಲ್ಲೂ ರಷ್ಯನರಿಗೇ ಅನುಕೂಲವಾಗಿದೆ. ಕಳೆದ ತಾ|| ೨೧ ನೇ ಶನಿವಾರ ನಡೆದ ಯುದ್ಧದಲ್ಲಿ ರಷ್ಯನ್ನರು ೫ ಸಾವಿರ ಮಂದಿ ಆಸ್ಟ್ರಿಯನ್ ಸೈನಿಕರನ್ನು ಸೆರೆಹಿಡಿದಿದ್ದಾರೆ. ಕ್ರಾಕೋವಿಗೆ ೨೪ ಮೈಲಿಗಳ ದೂರದಲ್ಲಿರುವ ಸಾಂಡಕ್ಕನ್ನು ರಷ್ಯನರು ಹಿಡಿದುಕೊಂಡರು. ಮತ್ತು ಜೆಂಗ್ಸ್ಟೋವಾಕ್ಕೂ ರಾಕೋವಿಗೂ ಮಧ್ಯದಲ್ಲಿ ರಷ್ಯನರ ಸೇನಾಮುಖದಮೇಲೆ ಬೀಳಬೇಕೆಂದು ಜರ್ಮನರು ಪ್ರಯತ್ನಿಸಿ ವಿಫಲರಾದರು. ಭಾನುವಾರದ ದಿನ ೬ ಸಾವಿರ ಜರ್ಮನರು ರಷ್ಯನರಿಗೆ ಸೆರೆಸಿಕ್ಕಿದರು.

ತುರ್ಕಿ.

ಯೂಪ್ರಟಿಸ್ ಪ್ರಾಂತದಲ್ಲಿರುವ ಮುಖ್ಯಸ್ಥಾನವಾದ ಡಟ್ಬಾ ಎಂಬ ಪಟ್ಟಣವನ್ನು ರಷ್ಯನರು ಸ್ವಾಧೀನಪಡಿಸಿಕೊಂಡರು. ಇಂಗ್ಲೀಷ್ ಸೇನೆಗಳೂ ಭಾರತೀಯ ಸೈನ್ಯಗಳೂ ಸೇರಿ ಆಸ್ಯಾ ತುರ್ಕಿಯಲ್ಲಿ ಮುಖ್ಯನಗರವಾದ ಬಸಾರಾಪಟ್ಟಣವನ್ನು ಹಿಡಿದುಕೊಂಡುವು. ಈ ಜಯದಿಂದ ಆಂಗ್ಲಪ್ರಭುತ್ವಕ್ಕೂ ಇಂಡಿಯಾ ಸೇನೆಗೂ ಬಹಳ ಗೌರವವುಂಟಾಯಿತೆಂದು ಇಂಗ್ಲೀಷ್ ಪತ್ರಿಕೆಗಳು ಘೋಷಿಸುತ್ತಿವೆ. ಈಜಿಪ್ಟಿನ ಪೂರ್ವದ ಎಲ್ಲೆಕಟ್ಟಿನ ಕೆಲ ಗ್ರಾಮಗಳಿಗೆ ತುರ್ಕಿ ಸೈನಿಕರು ನುಗ್ಗಿ ಸುಲಿಗೆ ಮಾಡಿದರು. ಅಲ್ಲಿ ಕಾವಲಿದ್ದ ಬಿಕಾನೀರ್ ಸಂಸ್ಥಾನದ ಒಂಟಿಸೇನೆಗೂ ತುರ್ಕಿಯ ಒಂಟಿಸೇನೆಗೂ ಯುದ್ಧವಾಗಿ ಶತ್ರುಗಳು ಸೋತರು. ಸ್ಮಿರ್ನಾದಲ್ಲಿರುವ ವಿದೇಶೀಯರನ್ನು ರಕ್ಷಿಸುವುದಕ್ಕಾಗಿ ಅಮೇರಿಕಾದೇಶದ ಟೆನ್ನಿಸಿ ಎಂಬ ಯುದ್ಧದ ಹಡಗು ತುರ್ಕಿಯ ರೇವೆಗೆ ಹೋಗಲು ಪ್ರಯತ್ನಿಸಿ, ಆದಕ್ಕಾಗಿ ತನಗೆ ಅನುಮತಿಯನ್ನು ಕೊಡಬೇಕೆಂದು ಕೇಳಲು ಆ ಪಟ್ಟಣದಲ್ಲಿದ್ದ ತುರ್ಕಿಯ ಸೈನ್ಯಾಧಿಕಾರಿಗಳು ಅನುಮತಿಕೊಡಲಿಲ್ಲ. ಅದರಮೇಲೆ ಆ ಹಡಗು ಒಂದು ಸಣ್ಣ ಸ್ಟೀಮ್‌ಲಾಂಚ್ (ಹೊಗೆಯದೋಣಿ) ಯನ್ನು ರೇವೆಗೆ ಕಳುಹಿಸಿಕೊಡಲು, ಅದರಮೇಲೆ ತುರ್ಕಿಯವರು ಗುಂಡುಗಳನ್ನು ಹಾರಿಸಿದರು. ಈ ಕಾರಣದಿಂದ ಅಮೇರಿಕಾದ ಟೆನ್ನಿಸಿ ಹಡಗಿನವರು ನಾವು ಬಲಾತ್ಕಾರದಿಂದ ರೇವೆಗೆ ಪ್ರವೇಶಿಸುವೆವೆಂದು ತಿಳಿಯಪಡಿಸಲು ಆ ಪಟ್ಟಣದಲ್ಲಿದ್ದ ಅಧಿಕಾರಿಗಳು ಹೆದರಿ ಪಟ್ಟಣವನ್ನು ಬಿಟ್ಟುಹೋದರಂತೆ. ತಮ್ಮ ಹಡಗಿಗೆ ಸೇರಿದ ಲಾಂಚಿನಮೇಲೆ ತುರ್ಕಿಯವರು ಗುಂಡನ್ನು ಹಾರಿಸಿದುದಕ್ಕೆ ಕಾರಣವೇನೆಂದು ಅಮೇರಿಕಾದ ಯುದ್ಧರಾಷ್ಟ್ರದವರು ತುರ್ಕಿಯವರನ್ನು ಕೇಳಲು ನಾವು ವಿರೋಧಭಾವದಿಂದ ಹಾರಿಸಲಿಲ್ಲವೆಂದೂ, ಈ ಪ್ರಾಂತದಲ್ಲಿ ಯಾವ ಹಡಗೂ ಬರಬಾರದೆಂದು ನಾವು ಮೊದಲೇ ಪ್ರಕಟಿಸಿದ್ದರೂ ಅದನ್ನು ಲಕ್ಷಿಸದೆ ಆ ಹಡಗು ಬರುತ್ತಿದ್ದುದರಿಂದ ಬರಕೂಡದೆಂಬುವುದನ್ನು ತಿಳಿಯಿಸುವುದಕ್ಕಾಗಿ ಸುಮ್ಮನೆ ಗುಂಡನ್ನು ಹಾರಿಸಿದೆವೆಂದು ತುರ್ಕಿಯವರು ಸಮಾಧಾನವನ್ನು ಕೊಟ್ಟಿದ್ದಾರೆ. ಮತ್ತು ಟೆನ್ನಿಸಿ ಹಡಗಿನಲ್ಲಿದ್ದ ಅಧಿಕಾರಿಯು ಕೂಡ ತುರ್ಕಿಯವರ ಗುಂಡನ್ನು ವಿರೋಧಭಾವದಿಂದ ಹಾರಿಸಲಿಲ್ಲವೆಂದು ಒಪ್ಪಿಕೊಳ್ಳುತ್ತಾನಾದುದರಿಂದ ಈ ವಿಷಯದಲ್ಲಿ ವೈಮನಸ್ಯವು ಬೆಳೆಯಲಾರದು.

ತುರ್ಕಿಯವರು ಈಗಿನ ತಮ್ಮ ಯುದ್ಧವನ್ನು ಮತಸಂಬಂಧವಾದ ಯುದ್ಧವೆಂದು ಪ್ರಕಟಿಸಿ ತಮ್ಮ ಜನರನ್ನು ಹುರಿದುಂಬಿಸುತ್ತಿರುವರಂತೆ. ಬಹುಶಃ ಜರ್ಮನ್-ಆಸ್ಟ್ರಿಯನ್ ಜನರೂ ಕೂಡ ಇವರ ಭಾಗಕ್ಕೆ ಮಹಮ್ಮದೀಯರೇ ಆಗಬಹುದು. ರಷ್ಯಾಕ್ಕೆ ಸೇರಿದ ಟ್ಯೂಪಸ್ ಪಟ್ಟಣದ ಮೇಲೆ ತುರ್ಕಿಯ ೧ ಯುದ್ಧದ ಹಡಗು ೧೨೫ ಫಿರಂಗಿಗುಂಡುಗಳನ್ನು ಹೊಡೆದು ಸ್ವಲ್ಪ ನಷ್ಟವನ್ನುಂಟುಮಾಡಿತು. ೪ ಮಂದಿ ಸತ್ತರು. ರಷ್ಯನರೂ ಇದಿರು ಫಿರಂಗಿಗಳನ್ನು ಹಾರಿಸಿದರು. ಜರ್ಜೆರಮ್ ಪ್ರಾಂತದಲ್ಲಿದ್ದ ರಷ್ಯನರ ಜೂಣಿಯ ಸೈನ್ಯಗಳು ತುರ್ಕಿಯ ಸೈನ್ಯಗಳನ್ನೋಡಿಸಿ, ಅವರ ಮದ್ದುಗುಂಡು ಮೊದಲಾದ ಸಾಮಗ್ರಿಗಳನ್ನು ಸಾಗಿಸಿಕೊಂಡು ಹೋಗುತ್ತಿದ್ದ ಹೊಗೆ ಬಂಡಿಗಳನ್ನು ಹಿಡಿದುಕೊಂಡರು. ಆ ಸುತ್ತಿನಲ್ಲಿ ಹಲವುಕಡೆ ತುರ್ಕಿಯವರ ಮೇಲೆ ರಷ್ಯನರು ಯುದ್ಧಮಾಡಿ ಸೋಲಿಸಿದ್ದಾರೆ ಕಪ್ಪುಸಮುದ್ರದಲ್ಲಿರುವ ರಷ್ಯನ್ನರ ನೌಕಾದಳವು ತುರ್ಕಿಯವರ ಟ್ರೆಬಿಜಾಂಡನ್ನು ಮುತ್ತಿಗೆ ಹಾಕಿರುವುದು.

ಸರ್ವಿಯಾ.

ಸರ್ವಿಯಾದಲ್ಲಿ ಈಚೆಗೆ ಆಸ್ಟ್ರಿಯನ್ನರು ನುಗ್ಗಿ ಸ್ವಲ್ಪ ಜಯವನ್ನು ಪಡೆದಿರುತ್ತಾರೆ. ಒಂದೆರಡು ಕಡೆ ಸರ್ವಿಯಾಕ್ಕೆ ಅಪಜಯವಾಗಿದೆ. ಅವರು ವಾಲ್ಜೀವೋ ಎಂಬ ಪಟ್ಟಣವನ್ನು ಶತ್ರುಗಳಿಗೆ ಬಿಟ್ಟುಕೊಡಬೇಕಾಯಿತು. ಅದರ ರಾಜಧಾನಿಯನ್ನು ಬಲ್ಗ್ರೇಡಿನಿಂದ ಉಸ್ಕುಬ್ಬಿಗೆ ವರ್ಗಾಯಿಸುವುದರಲ್ಲಿದ್ದಾರೆ. ಬಲ್ಗ್ರೇಡು ಸರ್ವಿಯಾದೇಶದ ಉತ್ತರಭಾಗದಲ್ಲಿ ಆಸ್ಟ್ರಿಯಾ ಎಲ್ಲೆಯ ಸಮೀಪದಲ್ಲಿರುವುದು. ಉಸ್ಕುಬ್ಬಾದರ ದಕ್ಷಿಣದಲ್ಲಿ ಆಸ್ಟ್ರಿಯಾಕ್ಕೆ ಬಹಳ ದೂರದಲ್ಲಿರುವುದು. ಸರ್ವಿಯಾದೇಶಕ್ಕೆ ಮುಂದೆ ಹೀಗೆ ಅಪಜಯವೇ ತೋರಿಬರುವುದಾದರೆ ಬಾಲ್ಕನ್ ಸಂಸ್ಥಾನಗಳ ಸ್ಥಿತಿಗತಿಗಳೂ ವಿಕೋಪಕ್ಕೆ ಬರುವುವು. ಆಸ್ಟ್ರಿಯನ್ನರು ಸರ್ವಿಯಾದೊಳಕ್ಕೆ ನುಗ್ಗಿ ದೇಶಭಾಗಗಳನ್ನು ಆಕ್ರಮಿಸಿಕೊಳ್ಳುತ್ತಬಂದರೆ ಬಲ್ಗೇರಿಯಾ ಮೊದಲಾದ ಸುತ್ತಮುತ್ತಣ ದೇಶಗಳೆಲ್ಲಾ ಖಂಡಿತವಾಗಿ ಪ್ರತಿಭಟಿಸುವುವು.

ರೊಮೇನಿಯಾ ಮತ್ತೂ ಬಾಲ್ಕನ್‌ರಾಷ್ಟ್ರಗಳ ಜರ್ಮನರ ವಿಜಯಾ ಅಭ್ಯುದಯಗಳು ಬಾಲ್ಕನ್‌ಸಂಸ್ಥಾನಗಳವರಿಗೆ ಇಷ್ಟವಾದುದಲ್ಲ. ಜರ್ಮನರ ವ್ಯಾಪಕತೆಯು ಅವರ ಅಭ್ಯುದಯಗಳಿಗೆಲ್ಲಾ ವಿಘ್ನಕಾರಿಯು. ಬಾಲ್ಕನ್ನರ ಪುರೋಭಿವೃದ್ಧಿಫಲಗಳು ಇಂಗ್ಲೀಷ್ ಫ್ರಾನ್ಸು ರಷ್ಯಾಗಳ ವಿಜಯದೊಡನೆ ಪೂರ್ಣಸಂಬಂಧವುಳ್ಳದ್ದಾಗಿರುತ್ತದೆ. ಅದುಕಾರಣ ಬಾಲ್ಕನ್ ರಾಷ್ಟ್ರಗಳವರೆಲ್ಲರೂ ಮೇಲೆ ಕಂಡ ಮಿತ್ರ ರಾಷ್ಟ್ರತ್ರಯದವರ ಪಕ್ಷವನ್ನು ಅವಲಂಬಿಸುವುದಕ್ಕೆ ತಕ್ಕ ಒಡಂಬಡಿಕೆಯನ್ನು ಮಾಡಿಸಬೇಕೆಂದು ರೊಮೇನಿಯದೇಶದವರು ಅತ್ಯಂತ ಶ್ರದ್ಧೆಯಿಂದ ಪ್ರಯತ್ನಿಸಬೇಕೆಂದು ರೊಮೇನಿಯ ಮಂತ್ರಿಯವರು ಅಭಿಪ್ರಾಯ ಪಟ್ಟಿದ್ದಾರೆ. ಇಟಲಿ ರಾಯಭಾರಿಯು ಈಗ ಲಂಡನಿನಿಂದ ರೋಮ್ ದೇಶಕ್ಕೆ ಹೋಗಿರುವನು. ಆ ದೇಶದ ವಿದೇಶಾಂಗ ಮಂತ್ರಿಯು ಒಂದು ದೊಡ್ಡ ಆಲೋಚನಸಭೆಯನ್ನು ಕೂಡಿಸುವುದರಲ್ಲಿದ್ದಾನೆ. ಅದಕ್ಕೆ ಫ್ರೆಂಚ್-ರಷ್ಯ ರಾಯಭಾರಿಗಳು ಕೂಡ ಹೋಗುವವರಾಗಿದ್ದಾರೆ.

ಆಕಾಶವಿಮಾನಗಳು.

ಕಳೆದವಾರದಲ್ಲಿ ಬಂದ ವಾರ್ತೆಗಳೊಳಗೆ ಇಂಗ್ಲೀಷರ ವಿಮಾನಗಳೆರಡು ಶತ್ರುದೇಶದಲ್ಲಿ ಮಾಡಿದ ಅನರ್ಥವು ವರ್ಣಿತವಾಗಿದೆ. ಇಂಗ್ಲೀಷರ ೨ ವಿಮಾನಗಳಲ್ಲಿ ವೈಮಾನಿಕರು ಕುಳಿತು ೨೫೦ ಮೈಲಿಗಳ ದೂರ ಪ್ರಯಾಣಮಾಡಿದರು. ಅದರಲ್ಲಿ ೧೫೦ ಮೈಲಿಗಳದೂರ ಜರ್ಮನ್ ದೇಶದ ಪರ್ವತಪ್ರದೇಶಗಳ ಮೇಲೆ ವಾತಾವರಣಸ್ಥಿತಿಯು ವಿಷಮವಾಗಿದ್ದರೂ ಪ್ರಯಾಣಮಾಡಿ, ಜರ್ಮನರ ಜಪ್ಪಲಿನ್ ವಿಮಾನದ ಆಶ್ರಯದಮೇಲೆ ೫ ಸಿಡಿಮದ್ದುಗಳನ್ನಿಟ್ಟರು. ಅವುಗಳಲ್ಲಿ ಕೆಲವು ಆ ಆಶ್ರಯದ ಸಮೀಪದಲ್ಲೇ ಬಿದ್ದುವು. ಅದರಿಂದ ಒಬ್ಬನು ಸತ್ತನು. ಕೆಲವು ಕಟ್ಟಡಗಳಿಗೆ ನಷ್ಟವಾಯಿತು. ಶತ್ರುಗಳಿಂದ ವಿಮಾನಗಳಮೇಲೆ ಗುಂಡುಹೊಡೆಯಲ್ಪಡಲು ವೈಮಾನಿಕರಲ್ಲೊಬ್ಬನ ಕೈಮೇಲೂ ತಲೆಯಮೇಲೂ ಗಾಯಗಳು ತಗಲಿ ಅವನು ಕೆಳಕ್ಕೆಬಿದ್ದನು. ೨ ನೆಯ ವೈಮಾನಿಕನು ಯಾವ ಅಪಾಯವನ್ನೂ ಹೊಂದದೆ ಹಿಂದಿರುಗಿಬಂದನು.

ಜಲಸೇನೆ.

ಜರ್ಮನರ ನೌಕಾದಳವು ಬಾಲ್ಟಿಕ್ ಸಮುದ್ರದಲ್ಲಿರುವ ರಷ್ಯಾಕ್ಕೆ ಸೇರಿದ ಲಿಬಾ ಎಂಬ ರೇವೆಯ ಪಟ್ಟಣದ ಮೇಲೆ ಫಿರಂಗಿಗುಂಡುಗಳನ್ನು ಹೊಡೆದು ನಷ್ಟವನ್ನು ಮಾಡಿರುವುದು. ಅಲ್ಲಿದ್ದ ಸೀಮೆಯೆಣ್ಣೆಯ ಕೊಳವನ್ನು ಸುಟ್ಟುಹಾಕಿತು. ರೇವೆಯಲ್ಲಿದ್ದ ಸಣ್ಣಸಣ್ಣ ಸಾಮಾನಿನ ಹಡಗುಗಳನೇಕವನ್ನೂ ರೇಲ್ವೆ ನಿಲ್ದಾಣವನ್ನೂ ಹಾಳ್ಮಾಡಿತು. ಆ ಜರ್ಮನರ ಯುದ್ಧದ ಹಡಗುಗಳಲ್ಲಿ ಒಂದು ನೀರಿನೊಳಗಿದ್ದ ಸಿಡಿಮದ್ದಿಗೆ ಬಡಿದು ಮುಳುಗಿಹೋಯಿತು. ಒಂದು ಜರ್ಮನ್ ಯುದ್ಧನಾವೆಯು ಶಾಕ್ರಮೆಂಟೋ ಎಂಬ ಯುದ್ಧದ ಹಡಗೊಂದನ್ನು ಹಿಡಿದುಕೊಂಡು ಚಿಲ್ಲಿ ರಾಜ್ಯಕ್ಕೆ ಸೇರಿದ ಜಾನ್‌ಫೆರಾಂಡ್ ಎಂಬ ದ್ವೀಪಕ್ಕೆ ಸಾಗಿಸಿಕೊಂಡು ಹೋಗಿ, ಅದರಲ್ಲಿದ್ದ ೬ ಸಾವಿರ ಟನ್ನುಗಳ ಕಲ್ಲಿದ್ದಲನ್ನು ದೋಚಿಕೊಂಡಿತು. ಇದರಮೇಲೆ ಚಿಲ್ಲಿ ರಾಜ್ಯದ ಅಧಿಕಾರಿಗಳು ಜರ್ಮನರಮೇಲೆ ಆಗ್ರಹಗೊಂಡಿದ್ದಾರೆ. ಚಿಲ್ಲೀ ರಾಜ್ಯಪ್ರಾಂತದ ಸಮುದ್ರದಲ್ಲಿ ಒಂದು ಜರ್ಮನ್ ಕ್ರೂಯಿಝರು ೨ ಇಂಗ್ಲೀಷ್ ವ್ಯಾಪಾರದ ಹಡಗುಗಳನ್ನು ಹಿಡಿದುಕೊಳ್ಳಲು ಹೋಗುತ್ತಿರಲು, ಅದನ್ನು ಚಿಲ್ಲಿಯ ರಾಷ್ಟ್ರದ ಯುದ್ಧನಾವೆಗಳು ನಿವಾರಿಸಿದುವು.

[೨ ನೆಯ ಪುಟದಿಂದ ಮುಂದೆ ಸಾಗಿದುದು]

ರ ಮನಸ್ಸಿನ ಮೇಲೆಯೂ ಒಳ್ಳೇ ಪರಿಣಾಮವಾಗುವಂತೆ ತಮ್ಮ ಮಂಜುಳವಾಣಿಯಿಂದ ಸದರೀ ವ್ಯಾನ ಸಾ|| ರ ಭಾಷಣವನ್ನು ಕನ್ನಡದಿಂದ ಹೇಳಿದರು.

ಇಷ್ಟಾದಮೇಲೆ ಮೆ|| ವೇಲ್ಸ ಸಾ|| ಬಾಹದ್ದೂರ ಅಧ್ಯಕ್ಷರವರು ಭಾಷಣಮಾಡಿದರು.

ಅಧ್ಯಕ್ಷರ ಭಾಷಣವು.

ಮೆ|| ಲಾರೆನ್ಸ್ ಸಾ|| ಕಮಿಷನರರು ಹಿಂದಕ್ಕೆ ಅಗ್ರಿಕಲ್ಚರಲ್ ಡಾಯರೆಕ್ಟರರಾಗಿದ್ದರು. ಅವರೇ ಬಂದು ಈ ಸಮಾರಂಭದ ಕೆಲಸವನ್ನು ಮಾಡಿದ್ದರೆ ಎಲ್ಲರಿಗೂ ತುಂಬಾ ಸಂತೋಷವಾಗುತ್ತಿತ್ತು. ಈ ಜಿಲ್ಲೆಯಲ್ಲಿ ಹಿಂದಕ್ಕೆ ಕಲೆಕ್ಟರರಿದ್ದಂಥ ಮಿ|| ಮ್ಯಾಕನೀಲ ಸಾ|| ರು ಅಥವಾ ಮೆ|| ಕಿಟಿಂಜ ಸಾ|| ರು ಈ ಸಮಾರಂಭದ ಅಧ್ಯಕ್ಷಸ್ಥಾನವನ್ನು ಕೈಕೊಂಡಿದ್ದರೆ ನಾನು ತುಂಬಾ ಹರ್ಷಿತನಾಗುತ್ತಿದ್ದೆನು. ನೀವೆಲ್ಲರೂ ನನಗೆ ಈ ಅಧ್ಯಕ್ಷಸ್ಥಾನವನ್ನು ಕೊಟ್ಟದ್ದಕ್ಕಾಗಿ ನಿಮ್ಮೆಲ್ಲರ ಉಪಕಾರವನ್ನು ನಾನು ಸ್ಮರಿಸುತ್ತೇನೆ. ಈ ಕನ್ನಡ ಒಕ್ಕಲತನದ ಶಾಲೆಗೆ ಕೊಡಲ್ಪಟ್ಟಂಥ ಸ್ಥಳವು ಬಹು ಯೋಗ್ಯವಾದದ್ದಿರುತ್ತದೆ. ಇದರ ಲಾಭವನ್ನು ಎಲ್ಲ ಒಕ್ಕಲಿಗರ ಮಕ್ಕಳೂ ಮಾಡಿಕೊಳ್ಳಲಿ. ಹಾಗೂ ಈ ಶಾಲೆಯ ಉತ್ಕರ್ಷವು ಉತ್ತರೋತ್ತರ ಬೆಳೆಯಲಿ; ಈ ಹೊತ್ತಿನ ಸಮಾರಂಭದ ವೇಳೆಯಲ್ಲಿ ಮಳೆಯಾದದ್ದು ಈ ಶಾಲೆಯ ಭಾವೀಉತ್ಕರ್ಷದ ಶುಭಚಿನ್ಹವೆಂದು ನಾನು ತಿಳಿಯುತ್ತೇನೆ. ಈ ಪ್ರಕಾರ ಅಧ್ಯಕ್ಷರು ತಮ್ಮ ಭಾಷಣವನ್ನು ಪೂರ್ಣಮಾಡಿ ತಳಿರುತೋರಣಗಳಿಂದಲಕೃತವಾದ ಶಾಲೆಯ ದ್ವಾರವನ್ನು ತೆರೆದರು. ಶಾಲೆಯನ್ನು ತೆರೆಯಲಿಕ್ಕೆ ಯಾವತ್ತು ಯುರೋಪಿಯನ್ ಗೃಹಸ್ಥರೂ ಕೆಲವು ಪ್ರಮುಖನೇಟಿವ ಗೃಹಸ್ಥರೂ ಅವರ ಸಂಗಡ ಹೋಗಿದ್ದರು. ಈ ಶಾಲೆಯನ್ನು ತೆರೆದು ಪುನಃ ಸಭಾಮಂದಿರಕ್ಕೆ ಬರಲಾಗಿ ಎಲ್ಲರಿಗೂ ಪುಷ್ಪಹಾರ ತಾಂಬೂಲ ಸುಗಂಧದ್ರವ್ಯಗಳಿಂದ ಸತ್ಕರಿಸುವುದರಲ್ಲಿ ಬಂತು. ಆಮೇಲೆ ಅಧ್ಯಕ್ಷರಿಗೂ ಸಭೆಗೆ ಬಂದ ಯಾವತ್ತು ಜನರಿಗೂ ಆಭಾರವನ್ನು ಮಾನಿಸಿ ಕಡೆಗೆ ಸಾರ್ವಭೌಮಜಾರ್ಜ ಮಹಾರಾಜರವರ ಹೆಸರಿನಿಂದಲೂ ಅಧ್ಯಕ್ಷರ ಹೆಸರಿನಿಂದಲೂ ತ್ರಿವಾರ ಜಯಘೋಷವಾದ ಬಳಿಕ ಸಭಾ ವಿಸರ್ಜನೆಯಾಯಿತು.

ಈ ಹೊತ್ತಿನ ದಿವಸವೇ ಸಂಜೆಯ ಮುಂದೆ ರಾವಬಾಹದ್ದೂರ ಅರಟಾಳ ವಿ. ಎಸ್. ಓ. ಇವರು ಈ ಶಾಲೆಯನ್ನು ನೋಡಲಿಕ್ಕೆ ಬಂದಾಗ್ಗೆ ಈ ಶಾಲೆಯ ಸ್ಥಿತಿಯನ್ನೂ ಇಲ್ಲಿಯ ವಿದ್ಯಾರ್ಥಿಗಳನ್ನೂ ಇಲ್ಲಿಗೆ ಡ್ರಿಲ್‌ಮಾಡುವದರ ಸಲುವಾಗಿ ಬಂದ ಕನ್ನಡಶಾಲೆಯ ವಿದ್ಯಾರ್ಥಿಗಳನ್ನೂ ನೋಡಿ ಈ ಶಾಲೆಯ ಮತ್ತೂ ಕನ್ನಡಶಾಲೆಯ ವಿದ್ಯಾರ್ಥಿಗಳ ಸಲುವಾಗಿ ಮಿಠಾಯಿ ಹಂಚಲಿಕ್ಕೆ ಐದುರೂಪಾಯಿ ಕೊಟ್ಟು, ಎಲ್ಲ ವಿದ್ಯಾರ್ಥಿಗಳನ್ನೂ ಸಂತೋಷಪಡಿಸಿದರು.

ತ್ಯಾಮಗೊಂಡ್ಲು.

ಈ ಊರಿನಲ್ಲಿ ಪೈರುಗಳು ಕಟಾವಿಗೆ ಸಿದ್ಧವಾಗಿವೆ. ಕ್ಷಾಮದ ಸುದ್ದಿಯನ್ನು ದೇವರು ತಪ್ಪಿಸಿದನೆಂದು ಪ್ರಜೆಗಳು ಸಂತೋಷದಿಂದಿದ್ದಾರೆ. ಬೆಳೆ ಚೆನ್ನಾಗಿದೆ. ಈ ಊರಿಂದ ದೊಡ್ಡಬೆಲೆ ರೈಲ್ವೆಸ್ಟೇಷನಿಗೆ ರಸ್ತೆ ಸ್ಯಾಂಕ್ಷನ್ ಆಗಿ ಸುಮಾರು ಒಂದು ಮೈಲಿವರೆಗೆ ಮಟ್ಟಿಕಾಮಗಾರಿ ಆಗಿರುತ್ತದೆ. ಬಾಕಿ ಕೆಲಸದ ಕಾಮಗಾರಿಯನ್ನು ಯಾಕೋ ನಿಲ್ಲಿಸಿಬಿಟ್ಟಿದ್ದಾರೆ. ಈ ಮಳೆಗಾಲದಲ್ಲಿ ಪ್ರಯಾಣಿಕರಿಗೆ ಉಂಟಾಗಿರುವ ತೊಂದರೆಯನ್ನು ನಮ್ಮ ಘನಸರ್ಕಾರದವರು ಪರಿಹರಿಸಿಕೊಡುತ್ತಾರೆಂದು ನಂಬಿದ್ದೇವೆ. ಈ ಊರಿನ ಒಳಗಡೆ ಇದ್ದ "ಮಂಜುಭಾಷಿಣೀರೀಡಿಂಗ್‌ರೂಂ" ಎಂಬುವುದು ಪ್ಲೇಗು ದೆಸೆಯಿಂದ ನಿಲ್ಲಿಸಲ್ಪಟ್ಟಿದ್ದು ಈಗ ಕೆಲವು ಜನವರ್ತಕ ಸಹಾಯದಿಂದ "ಎ ವಿ. ಲಕ್ಷ್ಮೀನಿಲಾಸರೀಡಿಂಗ್‌ರೂಂ" ಎಂಬ ಹೆಸರಿನಿಂದ ಆಗಸ್ಟು ೧೯೧೪ ರಲ್ಲಿ ಸ್ಥಾಪಿಸಲ್ಪಟ್ಟಿತು. ಇದಕ್ಕೆ ದೈನಂದಿನ, ಮಾಸಿಕ, ಸಾಪ್ತಾಹಿಕ ಪತ್ರಿಕೆಗಳು ಬರುತ್ತಾ ಇವೆ. ಮತ್ತು ಒಂದು ದೊಡ್ಡ ಪುಸ್ತಕಭಂಡಾರವು ಸ್ಥಾಪಿಸಲ್ಪಟ್ಟಿದೆ. ಅನೇಕ ಗ್ರಂಥಗಳೂ, ಕಥೆಗಳೂ ಈಗಿನ ನವನಾಗರಿಕತೆಗೆ ತಕ್ಕಹಾಗೆ ಇಡಲ್ಪಟ್ಟಿವೆ. ಆಗಾಗ್ಗೆ ಸತ್ಯ, ಜ್ಞಾನ, ವಿವೇಕ, ಸದ್ವೃತ್ತಿ, ಐಕಮತ್ಯ ಈ ವಿಷಯವಾಗಿ ಉಪನ್ಯಾಸಗಳು ಮಾಡಲ್ಪಡುವುವು. ಮ|| ಗಳಾದ ಸೊಸೈಟಿ ರೆಜಿಸ್ಟ್ರಾರವರಾದ ಮಿ|| ನಾರಣಯ್ಯಂಗಾರರವರು ನಮ್ಮ ಡಿಸ್ಟ್ರಿಕ್ಟ್ ಡೆಪ್ಯೂಟಿಕಮಿಷನರ್ ಸಾಹೇಬರವರು ಪೋಲೀಸು ಸೂಪರಿಂಟೆಂಡೆಂಟ್ ಸಾಹೇಬರವರು ಮೊದಲಾದ ಆಫೀಸರುಗಳು ಸಹ ಪರಾಂಬರಿಸಿ ಈ ಮಂದಿರವು ದೀರ್ಘಾಯುವಾಗಿರಲೆಂದು ಪ್ರೋತ್ಸಾಹಿಸಿ ಸಂತೋಷಪಟ್ಟಿರುತ್ತಾರೆ. ದಿನವೊಂದಕ್ಕೆ ನೂರಾರು ಜನರು ಬಂದು ಪತ್ರಿಕೆಗಳನ್ನು ಓದಿಕೊಂಡು ಹೋಗುತ್ತಾರೆ. ಈ ಊರಿನಲ್ಲಿ ಇನ್ನೆರಡು ಮಂದಿರಗಳು ಸ್ಥಾಪಿಸಲ್ಪಟ್ಟಿವೆ. ಈಗ ನಡೆಯುತ್ತಿರುವ ಯುದ್ಧದಲ್ಲಿ ನಮ್ಮ ಸಾರ್ವಭೌಮ ಚಕ್ರವರ್ತಿಯವರಿಗೆ ಕ್ಷಿಪ್ರದಲ್ಲಿಯೇ ಜಯವುಂಟಾಗಿ ಅವರ ಪದವಿಯು ಚಿರಾಯುವಾಗಿರಲೆಂದು ನಾವು ಪ್ರತಿಕ್ಷಣದಲ್ಲಿಯೂ ಪ್ರಾರ್ಥಿಸುತ್ತಿದ್ದೇವೆ.

ನಿವಾಸಿ

ಸುಲಭ! "ಚಾತುರ್ಯ" ಮಾಸಪತ್ರಿಕೆ!!

ಹಾಸ್ಯ, ವಿನೋದ, ನೀತಿ, ಚಮತ್ಕಾರಭರಿತ ಲೇಖನಗಳಿಂದ ಕೂಡಿರುವ ಮಾಸಪತ್ರಿಕೆ! ಪಂಡಿತಪಾಮರರ ಮನೋರಂಜಕವಾದದ್ದು. ಮನೋರೋಗಕ್ಕೆ ಔಷಧಪ್ರಾಯ! ಕಾಲಕ್ಕೆತಕ್ಕ ಲೇಖನಗಳು!! ವಾರ್ಷಿಕಚಂದಾ ಅಂಚೆ ವೆಚ್ಚ ಮತ್ತು ವಿ. ಪಿ. ಛಾರ್ಜು ಸೇರಿ ಸ್ತ್ರೀಯರಿಗೆ ವಿದ್ಯಾರ್ಥಿಗಳಿಗೆ ಮಾತ್ರ ೭ ಆಣೆ. ಇತರರಿಗೆ ೧೧ ಆಣೆ. ಮಾದರಿ ಸಂಚಿಕೆಗೆ ೧ ಆಣೆ ಸ್ಟಾಂಪು ಕಳುಹಿಸಿರಿ, ನಮ್ಮಲ್ಲಿ ಅನೇಕ ಪುಸ್ತಕಗಳು ಸಹ ಸಿಗುತ್ತೆ. ಮ್ಯಾನೇಜರ್,

2 "ಚಾತುರ್ಯ" ಚಾಮರಾಜಪೇಟೆ ಬೆಂಗಳೂರು ಸಿಟಿ.

ವಿಜ್ಞಾಪನೆ.

ಈ ಸಮಯ ಬಿಡಬೇಡಿರಿ. ಮುಂದೆ ದೊರೆಯಲಾರದು. ಮೊಳಕಾಲ್ಮುರುವಿನ ಪ್ರಸಿದ್ಧವಾದ ರೇಶ್ಮೆಯವಸ್ತ್ರಗಳು ಬೇಕೋ? ಬೆಲೆಸುಲಭ! ಬಣ್ಣ ಗ್ಯಾರಂಟಿಯಾದದ್ದು. ಒಂದು ಸಲ ತರಿಸಿನೋಡಿರಿ!! ನಮ್ಮಲ್ಲಿ ಜೋಡಿಯುವ ವಸ್ತ್ರಗಳೂ, ಮೊಗುಟಗಳೂ, ಸೀರೆಗಳೂ, ನಡುಕಟ್ಟುಗಳೂ, ಲಿಂಗದವಸ್ತ್ರಗಳೂ, ಕೈ ವಸ್ತ್ರಗಳೂ ಬಹಳ ಚೆನ್ನಾಗಿ ಎಲ್ಲಾ ರಂಗಿನಲ್ಲಿಯೂ ತಯಾರಾಗುತ್ತವೆ. ನಾವು ಮೈಸೂರು ಮದ್ರಾಸು ಸೀಮೆಗಳ ಎಲ್ಲಾ ಭಾಗಕ್ಕೂ ನಮ್ಮ ಮಾಲನ್ನು ರವಾನಿಸುತ್ತೇವೆ. ನಮ್ಮ ಮಾಲುಗಳಿಗೆ ಬಹುಮಾನಗಳೂ, ಮೆಡಲುಗಳೂ, ಬಂದಿವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಹಿಮಂತಋತುವಿನ ದರಗಳು. ೧ನೆ ನಂ. ವಸ್ತ್ರಗಳು ತೊಲೆ ೧ಕ್ಕೆ ೦-೭-೦. ೨ನೆ ನಂ. ವಸ್ತ್ರಗಳು ತೊಲೆ ೧ಕ್ಕೆ ೦-೬-೯. (ಮೊಗುಟ, ಅರಳೆಪೇಟೆ ಸೀರೆಗಳೂ, ನಡುಕಟ್ಟು, ಲಿಂಗದವಸ್ತ್ರಗಳು) ೧ನೆ ನಂ. ಮಾಲು ತೊಲೆ ೧ಕ್ಕೆ ೦-೮-೦. ೨ನೆ ನಂ. ಮಾಲು ತೊಲೆ ೧ಕ್ಕೆ ೦-೭-೬. ನಮ್ಮವಿಳಾಸ:—

ಎಂ. ಎಸ್. ಮಲಕಣ್ಣ, ಮತ್ತು ಬ್ರದರ್ಸ್,
ರೇಶ್ಮೆ ಜವಳಿ ವ್ಯಾಪಾರಿಗಳು. ದೊಡ್ಡಮೊಳಕಾಲ್ಮುರು.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

49

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ನೋಡಿ! (ಗುಣವಾಗದಿದ್ದರೆ ಹಣ ಪರತ !!) ನೋಡಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗಪೀಡಿತರು, ರಕ್ತಪಿತ್ತಪ್ರಕೋಪವಾದವರು, ತೃಷೆಪೀಡಿತರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರಿತಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೆಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಸೊಲ್ಲಾಪುರದಲ್ಲಿ ವ್ಯಾಸನಕೆಳಸಹಿತ ಆದ ಸಮಾರಂಭ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ.

ಇವರ ಖಾಸಾ ಫೋಟೋ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧|| ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೋ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವಿರಶೈವ ಸತ್ಪುರುಷಮಾಲಾ, ಹಾಳಕೇರಿ ಅನಂದಸ್ವಾಮಿಯ ಫೋಟೋ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೋ ಸಿಕ್ಕುತ್ತವೆ ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.

ಹೊಸಫ್ಯಾಷನ್—ಸಭ್ಯಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವ ಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಈಪ್ರಕಾರ ೨ ಫೋಟೋ ಬೇಕಾದ ಸತ್ಪುರುಷರ ನೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದು ||, |||= , ೧, ೧|, ಪ್ರಕಾರ, ಮತ್ತೂ ಬೆಳ್ಳಿಯದು ರು ೧|| ರೋಡ್ ಗೋಲ್ಡು ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨||, ೨||| ರೂ.

ಊರೂರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣಿ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ. ನಮ್ಮವಿಳಾಸ— ಗಂಗಪ್ಪಾ ಜೇರಿಗೆ,

32 ಆರ್ಟಿಸ್ಟ್ ಸೊಲ್ಲಾಪುರ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ
ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂ
ಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು
9 ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರರಜ್ವರ ನಾಲ್ಕರಜ್ವರ- ಮಲೇರಿಯಾಜ್ವರ- ತಲೆನೋವು- ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಕೆ, ಮಲಬಂಧ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತತ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ. ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ [illegible]

ಕನ್ನಡ ಇಂಡಿಯನ್ ಪೆನಲ್‌ಕೋಡ್ ಕ್ರಯ ೨—೦—೦ ರೂ. ವಿ. ಪಿ. ಛಾರ್ಜು ೦—೪—೦.

ಹೊಸಪುಸ್ತಕ ೧೩೪೪ ಪುಟಗಳು) ಶ್ರೀ (ಹೊಸಪುಸ್ತಕ ೧೩೪೪ ಪುಟಗಳು)

ಬ್ರ|| ಶ್ರೀ|| ಬಿ. ವಿ. ಸುಬ್ರಹ್ಮಣ್ಯಶರ್ಮವಿರಚಿತವಾದ ಸುಧಾರಸಧಾರಾಯೆಂಬ ಕನ್ನಡ
ಟೀಕಾತಾತ್ಪರ್ಯ ಗಣಿತೋದಾಹರಣೆಗಳಿಂದೊಡಗೂಡಿ 11

ಬೃಹಜ್ಜಾತಕಾಖ್ಯ ಹೋರಾಶಾಸ್ತ್ರಮ್.

ಮಾನವನು ತನ್ನ ಅದೃಷ್ಟಚಕ್ರದ ಫಲಾಫಲಗಳನ್ನು ಅರಿತು, ಮುಂದೊದಗಬಹುದಾದ ಫಲಸ್ವರೂಪವನ್ನು ಇತರರ ಸಹಾಯವಿಲ್ಲದೆಯೆ ತಿಳಿದುಕೊಂಡು, ದುಷ್ಫಲಗಳು ದೂರವಾಗಿ, ಸುಫಲಗಳು ಕರಗತವಾಗುವಂತೆ ಮಾಡುವಂತಹ, ಪರಿಹಾರೋಪಾಯಗಳನ್ನು ಸೂಚಿಸಬೇಕಾದರೆ, ನಮ್ಮಿಂದ ಈಗತಾನೆ ಸಂಸ್ಕೃತ ಹಿಂದಿ ಮರಾಠಿ ಭಾಷೆಗಳಿಂದ ತರ್ಜುಮೆಮಾಡಿ ಪ್ರಕಾಶಗೊಂಡ "ಸುಧಾರಸಧಾರಾ" ಎಂಬ ಕನ್ನಡ ಟೀಕಾತಾತ್ಪರ್ಯ ಉದಾಹರಣೆಗಳಿಂದ ಕೂಡಿದ ಬೃಹಜ್ಜಾತಕವೆಂಬ ಹೋರಾಶಾಸ್ತ್ರವೊಂದಲ್ಲದೆ ಮತ್ತಾವುದೂ ಸಮರ್ಥವಾಗಿಲ್ಲವು. ೧೩೪೪ ಪುಟ ೩ ಭಾಗಗಳ ಪುಸ್ತಕ ಒಂದೇಬೈಂಡ್ ಈ ಗ್ರಂಥರತ್ನವು ಆಬಾಲವೃದ್ಧರಾದಿಯಾಗಿ ಅಕ್ಷರವನ್ನರಿತ ಹೆಂಗಸರೂ ಸಹಾಪರರ ಸಹಾಯಾಪೇಕ್ಷೆ ಇಲ್ಲದೆ ಓದಿ ತಿಳಿಯಲು, ಅನುಕೂಲವಾಗಿರುವುದು. ಇದರೊಳಗಡಗಿರುವ ೨೮ ಪ್ರಕರಣಗಳ ವಿಷಯಸಂಗ್ರಹ ವೆಂತೆಂದರೆ:— ೧-೨ ನೇ ಪ್ರಕರಣಗಳಲ್ಲಿ ಶಾಸ್ತ್ರಪ್ರಯೋಜನವೂ, ಜೋತಿಶಾಸ್ತ್ರದ ಪೀಠಿಕಾಭಾಗಗಳು ೩, ಸಜೀವನಿರ್ಜೀವವಸ್ತುಗಳ ಉತ್ಪತ್ತಿ ೪, ಗರ್ಭಧಾರಣಯೋಗಗಳು ೫, ಜನನಕಾಲ ಲಕ್ಷಣ ಮತ್ತು ಫಲ ೬, ಬಾಲಾರಿಷ್ಟವಿಚಾರ ಅವುಗಳ ನಿವಾರಣೋಪಾಯ ೭, ಆಯುರ್ದಾಯವಿಚಾರ ೮, ದಶಾಭುಕ್ತಿನಿರ್ಣಯ ೯, ಅಷ್ಟಕವರ್ಗವಿಚಾರ ೧೦, ಜೀವನೋಪಾಯವಿಚಾರ ೧೧, ರಾಜಯೋಗಸೂಚನೆ ಅವುಗಳ ಫಲವಿಚಾರ ೧೨, ೧೮೦೦ ಯೋಗಗಳ ಲಕ್ಷಣ ಮತ್ತು ಫಲ ೧೩, ಚಂದ್ರಸಂಬಂಧವಾದ ಯೋಗಗಳು ೧೪, ಒಂದಕ್ಕಿಂತಲೂ ಹೆಚ್ಚು ಗ್ರಹಗಳು ಒಂದೇಕಡೆ ಸೇರಿದರೆ ಅವುಗಳ ಫಲ ೧೫, ಸನ್ಯಾಸಯೋಗಗಳು ೧೬, ನಕ್ಷತ್ರ ಫಲಗಳು ೧೭, ರಾಶಿಫಲಗಳು ೧೮, ರಾಸಿಗಳ ಫಲ ಮತ್ತು ಕೇರಳಯೋಕ್ತ ಫಲಗಳು ೧೯, ದೃಷ್ಟಿಫಲಗಳು ೨೦, ಭಾವಲಕ್ಷಣ ಮತ್ತು ಆ ಫಲಗಳ ವಿಚಾರ ೨೧, ಕ್ಷೇತ್ರಫಲಗಳು ೨೨, ಗ್ರಹಗಳ ಅವಸ್ಥೆ ಅಷ್ಟಕವರ್ಗ ಫಲ ೨೩, ಅನಿಷ್ಟಯೋಗಗಳು ಅವುಗಳಿಂದಾಗುವ ಫಲಗಳು ೨೪, ಸ್ತ್ರೀಜಾತಕ ಅದರ ಫಲಗಳು ೨೫, ಮರಣಕಾರಣ ಅದರ ಫಲಗಳು ೨೬, ನಷ್ಟಜಾತಕ ಬರಿಯುವ ರೀತಿ ೨೭, ದ್ರೇಕ್ಕಾಣವರ್ಣನೆ ಪ್ರಶ್ನೆಗೆ ಬೇಕಾದ ಸಹಾಯವಿಷಯ ೨೮, ಅನುಕ್ರಮಣಿಕಾಸಂಗ್ರಹ ಮತ್ತು ಗ್ರಂಥಕರ್ತರ ವಂಶವರ್ಣನೆ:—

ಮೇಲೆ ಹೇಳಿರುವಂತೆ ಬರೆಯಲ್ಪಟ್ಟ ಒಂದು ಪುಸ್ತಕ ತಮ್ಮ ಬಳಿಯಲ್ಲಿದ್ದರೆ ೧೦ ಜನ ಜ್ಯೋತಿಷ್ಯರಿದ್ದರೆ ಎಷ್ಟು ಅನುಕೂಲವೋ ಅಷ್ಟು ಅನುಕೂಲ. ಇದು ಪ್ರೌಢರಿಗೂ, ಸ್ತ್ರೀಯರಿಗೂ ಧಾರಾಳವಾಗಿ ತಿಳಿಯುವಂತೆ ಉತ್ತಮಕಾಗದದಲ್ಲಿ ಪ್ರಿಂಟ್‌ಮಾಡಿಸಿದೆ, ಈ ತಿಂಗಳು ಆಖೈರಿನೊಳಗಾಗಿ ಆರ್ಡರ್ ಕೊಡುವವರಿಗೆ ೪—೦—೦ ರೂ. ವಿ ಪಿ. ಛಾರ್ಜು ೦—೬—೦ ಆಣೆ ನಂತರ ೫—೦—೦ ರೂ. ಜಾಗ್ರತೆ ತರಿಸಿಕೊಳ್ಳಿ ನಂತರ ಈ ಬೆಲೆಗೆ ದೊರೆಯಲಾರದು.

ಇತರ ಪುಸ್ತಕಗಳು.

ಟೀಕಾಜೈಮಿನಿ ೯೫೦ ಪುಟ ೪-೦-೦ ರೂ. ಸಟೀಕಹರಿಕಥಾಮೃತಸಾರ ೩೪೪ ಪುಟ ೧-೪-೦ ರೂ. ಕನ್ನಡದ್ವಾದಶಸ್ಕಂಧ ಭಾಗವತ ೩-೦-೦ ರೂ. ಶುಕಸಪ್ತತಿ ೭೦ ಕಥೆ ಶುದ್ಧಪ್ರತಿ ೨-೦-೦ ರೂ. ೪ ಜನ ಫಕೀರರ ಕಥೆ ೦-೮-೦. ಸಟೀಕಾಭೋಜರಾಜಚರಿತ್ರೆ ೦-೮-೦. ಇವುಗಳಲ್ಲದೆ ನಮ್ಮಲ್ಲಿ ಯಾವಾಗ್ಯೂ ಕನ್ನಡ, ಸಂಸ್ಕೃತ, ತೆಲಗು ಗ್ರಂಥಗಳು ದೊರೆಯುತ್ತೆ. ಟಿ. ಎನ್. ಕೃಷ್ಣಯ್ಯಶೆಟ್ಟಿ, ಬುಕ್‌ಡಿಪೋ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಲೋಕಪ್ರಸಿದ್ಧವಾದ ಪಂಜಾಬಸಾಲಾಮಿಸ್ರಿ ಮುರಬ್ಬಾ.

2

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವವರನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಪಂಜಾ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳಿಗಡ್ಡೆ, ಶಾನುಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾ ಸಾಲಾಮಿಸ್ರಿಯೋ ಅಥವಾ ಬೇರೆ ತರಹಾದ್ದೋ ಎಂಬುದು ತಿಳಿದುಬರುತ್ತೆ.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ನೀರಿನಂತಿರುವ ಧಾತುವನ್ನು ಘಟ್ಟಿಪಡಿಸುವುದು
ಪಂಜಾ ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿ ಹೋಗುವ ಧಾತುವನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಉರಿಯುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕ್ಷಣಕ್ಷಣಕ್ಕೂ ಮೂತ್ರವಾಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೆದುಳಿಗೆ ಬಲವನ್ನು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿಕುಶಲತೆಯು, ಶರೀರಕಾಂತಿಯು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ತಾಂಬ್ರ ಮತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲ ಬರುವಂತ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವುದು

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕಂಡುಬರುತ್ತೆ. ೨-೩ ಡಬ್ಬಿಗಳನ್ನು ಉಪಯೋಗಿಸುವದರಿಂದ ಜನ್ಮಾಂತರದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು „ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ
೫೦೦ ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸಿರುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ಕ್ಕೆ ರೂ. ೨-೦-೦. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ ೬ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೋ, ದೊಡ್ಡಪೇಟೆ, ಬೆಂಗಳೂರು ಸಿಟಿ.
ಡಿ. ಮನ್ನಾಲಾಲ್ ದಿಲ್ಲೀವೈದ್ಯರು, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಬಹುಮಾನ! ಶ್ರೀ ಬಹುಮಾನ !!

ಅತ್ಯಾಶ್ಚರ್ಯಕರವಾದ ಬಹುಮಾನ.
೨೫ ಸಾವಿರ ರೂಪಾಯಿಗಳು ಹಂಚಲ್ಪಡುವವು
ದಿವ್ಯೌಷಧ ಬಳ್ಳಾರಿ. ಸುಪ್ರಸಿದ್ಧೌಷಧ
ಸರ್ವಜನಮನೋಲ್ಲಾಸಿನಿ ಅಂಡ್ ಕೋ ಇವರ

(• ನಾರಸಿಂಹಚೂರ್ಣವು •)

3

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಜವಾದುದಷ್ಟೆ. ಆದರೆ ಅನೇಕ ದುರ್ವ್ಯರ್ತನಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವುವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನ ಕಣ್ಣಾರ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವುವಿಧ ಔಷಧಗಳನ್ನು ವಿಶೇಷವಾದ ಬೆಲೆಯನಿಟ್ಟು ವಿಕ್ರಯಿಸಿದರು ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವದು ವಿಷಾದಕರವಾಗಿರುವದು ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿ (ನಾರಸಿಂಹಚೂರ್ಣವು) ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ, ಅನೇಕತರಹೆಯ ಮೇಹರೋಗಗಳು, ಪಾಂಡುರೋಗ, ಪೀನಸ, ಹದಿನೆಂಟು ಬಗೆಯಾದ ಕುಷ್ಠಗಳು, ಎಂಟುವಿಧ ಉದರರೋಗಗಳು, ಭಗಂಧರವು, ಮೂತ್ರಕೃಚ್ಛ್ರವು, ಗೃಧ್ರಸೀವಾತವು, ಕಾಮಿಲೆ, ಕ್ಷಯವು ಮಹಾಶ್ವಾಸಗಳು, ದಾರುಣವಾದ ಐದುಬಗೆಯಾದ ಕಾಸೆಗಳು, ಎಂಭತ್ತುವಿಧಗಳಾದ ವಾತರೋಗಗಳು, ನಲವತ್ತು ಬಗೆಯಾದ ಪಿತ್ತಗಳು, ಇಪ್ಪತ್ತು ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಸಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ ಚಿನ್ನದಂಥಾ ಕಾಂತಿಯು, ಸಿಹ್ಮನಂತೆ ಪರಾಕ್ರಮವು, ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯು ಅತ್ಯಧಿಕ ವೀರ್ಯವೃದ್ಧಿಯು ನೃಸಿಹ್ಮನಿಗೆ ಸಮಾನರಾದ ಮಕ್ಕಳನ್ನು ಪಡೆಯುವಬಲವೂ ಉಂಟಾಗುವುದು ಇದರಲ್ಲಿ ಯಾವ ವಿಧವಾದರಸಗಳಾಗಲಿ ವಿಷವಾಗಿಲ್ಲ, ಇನ್ನಾವ ದೋಷಗಳೂ ಇಲ್ಲ. ನಿರ್ದುಷ್ಟವಾದದ್ದು, ಫಕ್ತವನಸ್ಪತಿಗಳಿಂದಲೇ ಸಿದ್ಧಮಾಡಿದದಿವ್ಯವಾದ ಔಷಧ. ಅನೇಕ ಪಂಡಿತರು, ಧನಿಕರು' ಸರ್ಟಿಫಿಕೇಟುಗಳನ್ನು ಕೊಟ್ಟಿರುವರು.

೧೪ ದಿನ ಉಪಯೋಗಕ್ಕೆಬರುವ ಡಬ್ಬಿ ೧ ಕ್ಕೆ ಬೆಲೆ ರೂ. ೧—೦—೦

—(ಬಹುಮಾನಗಳನ್ನು ಹಂಚುವ ವಿಧಾನ)—

೧ ದರ್ಜ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೧೦೦೦೦ ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೬೦೦೦ ರೂ. ೩ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೪೦೦೦ ರೂ. ೨ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೩೦೦೦ ರೂ. ೧ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ೨೦೦೦ ರೂ.

೧೯೧೪ ನೇ ಜುಲೈ ೧ ನೇ ತೇದಿ ಮೊದಲು ೧೯೧೫ ನೇ ಜುಲೈ ೧ ತೇದಿಯುವರಿಗೂ ಈ ಔಷಧವು ಒಂದು ಲಕ್ಷ ಡಬ್ಬಿಗಳು ಖರ್ಚಾದಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ. ಒಂದುಪಕ್ಷದಲ್ಲಿ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ವಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡೆಯುವದಲ್ಲದೆ ಬಹುಮಾನವನ್ನು ಸಹಾ ಹೊಂದುವದಕ್ಕೆ ಅರ್ಹನಾಗಿರುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರು ಸಂಶಯವಿಲ್ಲ. ಬಹುಮಾನದ ಮೊತ್ತವು ನಿಷ್ಪಕ್ಷಪಾತವಾಗಿ ಒಂದೇ ಸಮವಾಗಿ ಹಂಚಲ್ಪಡುವವು. ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಕುಹಕತನವು ಇಲ್ಲ, ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರ ಮಾತುಗಳಿಗೆ ನಿಗಾ ಕೊಡಲಾಗದು, ಜಾಗ್ರತೆ ತರಿಸಿಕೊಳ್ಳಿರಿ. ಔಷಧದ ಗುಣವನ್ನು ಪರೀಕ್ಷಿಸಿರಿ ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇದಲ್ಲದೆ ನಮ್ಮಲ್ಲಿ ಇನ್ನು ಅನೇಕತರಹೆಯ ಔಷಧಗಳು ಸಿಗುತ್ತವೆ. ರೋಗದಲಕ್ಷಣವನ್ನು ತಿಳಿಸಿದರೆ ಅಮೂಲ್ಯವಾದ ಮತ್ತು ಗುಣಕಾರಿಗಳಾದ ಔಷಧಗಳನ್ನು ಕಳುಹುವೆವು.

ಇದರ ಅನುಪಾನ ಪತ್ರಿಕೆಯನ್ನು ಬಹುಮಾನದ ಟಿಕೀಟನ್ನು ಡಬ್ಬಿಸಂಗಡ ಕಳಿಸುವೆವು. ನಮ್ಮ ಕಂಪೆನಿಯ ಕಾಶಿ ವಿಶ್ವನಾಥ ಮಾರ್ಕು ಇಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು. ನಮ್ಮ ಅಡ್ರೆಸ್ಸು,

ಸರ್ವಜನಮನೋಲ್ಲಾಸಿನಿ ಅಂಡ್ ಕೋ ಬಳ್ಳಾರಿ.

ದಿ ಜನರಲ್ ಏಜೆನ್ಸಿ, ಮೈಸೂರು.

ಕಾದಂಬರಿಗಳು:— ಚಂಡಮಾರುತ ೦-೨-೦; ಚರಿತಾಮೃತಂ ೦-೬-೦; ರಾಜಕಥಾವಲ್ಲರಿ ೦-೬-೦; ಪೀಟರಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೬-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 61

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೦-೦-೨; ೬-೦-೦; ೩-೧-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗವೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್ ಸನ್ಸ್
ಸುಗಂಧಕಾರಿ, ಮೈಸೂರು

30

---

50 ಸಚಿತ್ರ ಶುಕಸಪ್ತತಿ ಕಥೆಗಳು
ರೂ. ೧-೮-೦ (೬೧೨ ಪುಟ)

ಟಪಾಲು ಹಾಸಲು ೪ ಆಣೆ.

ಸಚಿತ್ರ ಭಟ್ಟಿ ವಿಕ್ರಮಾದಿತ್ಯರಾಯನ ಚರಿತ್ರೆ
ರೂ ೧-೮-೦. (೬೩೬ ಪುಟ)

ಸಚಿತ್ರ ವಿದ್ಯಾಮಂಜರಿಕಥೆಗಳು

ವಾಚಕ ಮಹಾಶಯರುಗಳೇ! ಮಾನ್ಯತೆಯು ಬೇಕಾದರೆ, ವಾಗ್ವೈಖರಿಯೊಳಿಷ್ಟವಿದ್ದರೆ, ಲೋಕರೀತಿಯನ್ನು ತಿಳಿಯಲಿಚ್ಛೆಪಟ್ಟರೆ, ನೀತಿಯು ಅವಶ್ಯವಿದ್ದರೆ, ಧರ್ಮ ಸತ್ಯಗಳ ಸ್ಥಿತಿಯನ್ನು ಕೋರಿದರೆ, ಜಾಣತನವನ್ನಪೇಕ್ಷಿಸಿದರೆ, ಉತ್ಸಾಹಶಕ್ತಿಯುಲ್ಲಾಸಯಿದ್ದರೆ ದಯವಿಟ್ಟು ಈ ವಿದ್ಯಾಮಂಜರಿಕಥೆಗಳನ್ನು ಓದಿರಿ. ೩೩೦ ಪುಟಗಳಿಂದ ಕೂಡಿದ ೬೪ ಕಥೆಗಳುಳ್ಳ ಸೊಗಸಾದ ಬೈಂಡಿನ ಪುಸ್ತಕವಾಗಿದೆ. ಬೆಲೆ ರೂ. ೧-೪-೦ ಟಪಾಲ್ ಹಾಸಲು ೩ ಆಣೆ.

ಈಗಲೇ ಬರೆ. ನಮ್ಮಲ್ಲಿ ಇನ್ನೂ ಅನೇಕಪುಸ್ತಕಗಳು ದೊರೆಯುತ್ತವೆ, ಕ್ಯಾಟಲಾಗ್ ಬೇಕಾದರೆ ಬರೆಯಿರಿ.

ವಿಳಾಸ— ಎಂ. ಆರ್. ವೆಂಕಟಾಚಲಂ ಶೆಟ್ಟಿ, ಬುಕ್ ಡಿಪೋ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು. 28

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ. ಮಕ್ಕಳ ಎಳೆವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೬ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇವೊಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧ [illegible]
ಟಪಾಲ್ ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರ.

೧೯೧೫ ನೆಯ
ಶ್ರೀ ಸೀತಾರಾಘವ
ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಶಾಯಿ ಇಳಿಯದ ಉತ್ತಮವಾದ ಕಾಗದ ಮುದ್ದಾದ ಮುದ್ರಣ. ಅನೇಕವಾದ ಹೊಸಸಂಗತಿಗಳಿವೆ.

೧ ನಂ—ಸಣ್ಣಸೈಜು ಸಾದಾ	೦-೪-೦
೨ ನಂ—ಪೆನ್ಸಲ್ ಮುಚ್ಚಳವುಳ್ಳದು	೦-೬-೦
೩ ನಂ—ದೊಡ್ಡಸೈಜು ಸಾದಾ	೦-೬-೦
೪ ನಂ—ಪೆನ್ಸಲ್ ಮುಚ್ಚಳವುಳ್ಳದು	೦-೮-೦

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ

ಹೆಚ್ಚಾಗಿ ತರಿಸುವವರಿಗೆ ರೂಪಾಯಿ ೧ ಕ್ಕೆ ೦-೨-೦ ಕಮೀಷನ್ ದೊರೆಯುವುದು. ವಿಳಾಸ:—

ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.

9

BENARES CITY.
KASHI
VISHVESHWAR.

10

ದೊಡ್ಡ ಕಂಪೆನಿ! **ಸೊಗಸಾದ ಸರಕುಗಳು!!**

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಲಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯು. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ನ್ಯಾಯದರ್ಪಣ. 48

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ಪತ್ರಿಕೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ. ಬೆಲೆ ರೂ. 1-8-0. ವಿ. ಪಿ. ಮೂಲ್ಕ 1-12-0.

ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಸ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದ್ದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚುಟಿಕೆ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘುಮಘುಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೨-೦

ಉತ್ತಮವಾದ ನಸ್ಯದಪುಡಿ.

ಧಾತು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗ ನಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್ ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್
ಕೊಳ್ಳೇಗಾಲದ ತಾಲ್ಲೂಕು.

39

೧೯೧೪ನೆಯ ಇಸವಿ ನವಂಬರ್ ತಾ|| ೨೯ ರಿಂದ ೧೯೧೪ನೆಯ ಡಿಶಂಬರ್ ತಾ|| ೬ ರವರೆಗೆ ಸಲ್ಲುವ ಶಾಲಿವಾಹನಶಕೆ ೧೮೩೬ನೆಯ ಆನಂದನಾಮ ಸಂ|| ದ ಮಾರ್ಗಶಿರ ಶು|| ದ್ವಾದಶಿಯಿಂದ ಮಾರ್ಗಶಿರ ಬ|| ತದಿಗೆವರೆಗಿನ ಪಂಚಾಂಗ.

ತಾ||	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ವೃಶ್ಚಿ ತೇದಿ
29	[1]ಭಾನು	ದ್ವಾ	25-16	ಅಶ್ವಿನಿ	53-9	14
30	[2]ಸೋ	ತ್ರ	30-28	ಭರಣಿ	59-45	15
1	[3]ಮಂ	ಚತು	35-58	ಕೃತ್ತಿ	60-	16
2	[4]ಬುಧ	ಪೌ	41-18	ಕೃತ್ತಿ	6-19	17
3	[5]ಗುರು	ಪಾ	46-51	ರೋಹಿ	12-16	18
4	ಶುಕ್ರ	ಬಿದಿ	49-14	ಮೃಗ	17-23	19
5	ಶನಿ	ತದಿ	51-28	ಆರಿದ್ರಾ	21-27	20

(1) ದ್ವಾದಶೀತಿಥಿಃ, ಕೈಶಿಕದ್ವಾದಶೀ, ಶ್ರೀನಿವಾಸಬ್ರ ತಂತ್ರಪರಕಾಲಸ್ವಾಮಿಗಳ ತಿರುನ||, ದಗ್ಧಯೋಗಃ. (2 ಪ್ರದೋಷಃ, ಹನುಮಜ್ಜಯಂತೀ. (3) ತಿರುಮಂಗೈಯ ಳ್ವಾರ್ ತಿರುನ||, ಶಿವದೀಪಃ. (4) ದತ್ತಾತ್ರೇಯಜಯ ತೀ, ವಿಷ್ಣುದೀಪಃ. (5) ಮಾರ್ಗಶಿರಲಕ್ಷ್ಮೀವ್ರತಂ. ತಿರ ಪ್ಪಾಣಿಯಾಳ್ವಾರ್ ತಿರುನಕ್ಷತ್ರಂ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಕಾ
ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 124.

ಮೈಸೂರ್ ಸ್ಟಾರ್.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ।
ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ।

ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೧೪—೦

ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ ।
ಸ್ತೋಮಾಭೀಷ್ಟದಶೀಲನಾಕಲಿತಸದ್ಗುಣ್ಯಾಲವಾಲಂಬಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ ।
ಪ್ರೇಮಂಬಿತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಸಂಪುಟ ೨೩) ಮೈಸೂರ್ ಸ್ಟಾರ್ ಸರ್ ೧೯೧೪ ನೆಯ ಇಸವಿ ಡಿಶಂಬರ್ ತಾರೀಖು ೬ ನೆಯ ಭಾನುವಾರ. (ಸಂಚಿಕೆ ೪೯

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರಿಗೂ ಸ್ಕೂಲ್ ಮಾಸ್ಟರ್‌ಗಳಿಗೂ ವಿನಂತಿ.

೧೯೧೫ ನೇ ಇಸ್ವಿಯ ಸಚಿತ್ರ ಕ್ಯಾಲೆಂಡರ್‌ಗಳು ಬಿಕರಿಗೆ ಸಿದ್ಧವಾಗಿವೆ ಕ್ರಯ ೧ ಕ್ಕೆ ೦-೦-೬ ಪೈ. ೫೦ ಕ್ಕೆ ೦-೧೧-೦ ಆಣೆ ೧೦೦ ಕ್ಕೆ ೧-೬-೦ ಪ್ಯಾಕಿಂಗ್ ಪೋಸ್ಟೇಜು ಮಾಫಿ ೫೦ ಕ್ಯಾಲೆಂಡರ್‌ಗಳಿಗಿಂತಲೂ ಕಡಿಮೆಯಾಗಿ ಪೋಸ್ಟುಮೂಲ್ಕ ರವಾನಿಸಲಾಗುವುದಿಲ್ಲಾ.

ಈ ಕ್ಯಾಲೆಂಡರಿನಲ್ಲಿ ಇಂಗ್ಲೀಷ್ ಮತ್ತೂ ಕನಡ ತಿಂಗಳೂ, ತಾರೀಖು, ವಾರ, ತಿಥಿ, ನಕ್ಷತ್ರ, ಆಯಾಯ ದಿವಸದ ವಿಶೇಷ ದಿವಸಗಳು ವಿಶಿಷ್ಟ ಹಬ್ಬ ದಿವಸಗಳೂ ಇರುವುದಲ್ಲದೆ ಮೈಸೂರ್ ಮಹಾರಾಜರವರ ಮತ್ತೂ ಯುವರಾಜರವರ ಭಾವಚಿತ್ರಗಳೂ ಮತ್ತೂ ಮೈಸೂರ್ ಸಂಸ್ಥಾನದ ಈಗಿನ ಹೊಸ ಅರಮನೆಯಲ್ಲಿ ನಡೆಯುವ ನವರಾತ್ರಿಮಹೋತ್ಸವದ ದರ್ಬಾರ್ ಸಹಿತ ಇರುವ ನಕ್ಷೆಯನ್ನೂ ಸಹ ನುಣುಪಾದ (ಗ್ಲೇಜ್ ಪೇಪರ್) ಕಾಗದದಲ್ಲಿ ಅಂದವಾಗಿ ಪ್ರಿಂಟ್ ಮಾಡಿಸಿ ಮೇಲ್ಕಂಡ ದರದಂತೆ ಬಹುಸುಲಭಬೆಲೆಗೆ ಕೊಡುತ್ತಲಿದ್ದೇವೆ ಯಾದಕಾರಣ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ ಸ್ವಲ್ಪ ಪ್ರತಿಗಳುಮಾತ್ರ ಉಳಿದಿವೆ. ಬಿಕರಿಯಾದನಂತರಬರತಕ್ಕ ಆರ್ಡರ್‌ಗಳನ್ನೆಲ್ಲಾ ಹೋದವರುಸುದಂತೆ ಕ್ಯಾನ್ಸಲ್ ಮಾಡಲಾಗುತ್ತೆ.

ಈಗತಾನೇ ಸೀಮೆಯಿಂದ ಬಂದಿರತಕ್ಕ ರಖಂವಾರ್ ವಾಚ್‌ಗಳ ಕ್ರಯದಪಟ್ಟಿ. 43



೧ ರಾಸ್ಕೋಪ್ ಸಿಸ್ಟಂಪೇಟೆಂಟ್ ಸ್ವಿಸ್‌ಮೇಡ್ ವಾಚ್	೧ ಕ್ಕೆ	೨-೮-೦
೨ ಗನ್‌ಟೈಂ ರೈಲ್ವೇ ರೆಗ್ಯುಲೇಟರ್ ವಾಚ್	೧ ಕ್ಕೆ	೩-೮-೦
೩ ಡಿಟೋ ನಮೂನೆ ಚಿಕ್ಕಸೈಜ್ ವಾಚ್	೧ ಕ್ಕೆ	೪-೪-೦
೪ ಡಿಟೋ ಚಿಕ್ಕಸೈಜ್ ಸ್ಪೆಷಲ್ ಸರ್ವೀಸ್ ವಾಚ್	೧ ಕ್ಕೆ	೫-೮-೦
೪ ಜರ್ಮನ್‌ಮೇಡ್ ರೂಸ್ ವಾಚೆಂಬ ಅತ್ಯುತ್ತಮವಾದ ಲೀವರ್ ವಾಚ್	೧ ಕ್ಕೆ	೮-೧೨-೦
೫ ಡಿಟೋ ನಮೂನೆ ಕೆಂಪುಗಳನ್ನು ಕೆತ್ತಿರುವ ವಾಚ್	೧ ಕ್ಕೆ	೯-೪-೦
೬ ಪೀಕಾಕ್ ವಾಚೆಂಬ ತೆಳುವಾದ ಮತ್ತೂ ಗ್ಯಾರೆಂಟಿಯಾದ ವಾಚ್ (ಸಾವಿರಾರು ವಿಕ್ರಯ)	೧ ಕ್ಕೆ	೧೦-೮-೦
೭ ವಾರಕೊಂದಾವರ್ತಿ ಬೀಗಕೊಡುವ ನಿಕ್ಕಲ್ ಬೆಳ್ಳೀಕೇಸ್ ವಾಚ್	೧ ಕ್ಕೆ	೧೦-೮-೦
೮ ಡಿಟೋ ನಮೂನೆಯಲ್ಲಿ ಅಚ್ಚಬೆಳ್ಳೀಕೇಸಿನ ಚಿಕ್ಕ ಸೈಜ್ ವಾಚ್	೧ ಕ್ಕೆ	೧೫-೪-೦
೯ ೩೦ ಘಂಟಿಗೆ ಒಂದಾವರ್ತಿ ಬೀಗಕೊಡುವ ದೊಡ್ಡ ಬರ್ಮಾಟೈಂಪೀಸ್	೧ ಕ್ಕೆ	೧-೪-೦
೧೦ ಡಿಟೋ ನಮೂನೆ ಅಲಾರಂ ಟೈಂಪೀಸ್	೧ ಕ್ಕೆ	೨-೪-೦
೧೧ ಡಿಟೋ ನಮೂನೆಯಲ್ಲಿ ಘಂಟಿ ನಿಮುಷ ಸೆಕೆಂಡ್ ತೋರಿಸಿ ಅಲಾರಂ ಇದ್ದು ತಾರೀಖು ಸಹ ತೋರಿಸುವ ದೊಡ್ಡ ಟೈಂಪೀಸ್	೧ ಕ್ಕೆ	೩-೪-೦
೧೨ ಖ್ಯಾತಿಯಾದ ಅನ್ಸೋನಿಯಾ "ಬಿ" ಟೈಂಪೀಸ್	೧ ಕ್ಕೆ	೨-೮-೦
೧೩ ಡಿಟೋ ಕಂಪೆನಿಯ ಅಲಾರಂಟೈಂಪೀಸ್ (ಬಹಳಮಜಬೂತಾದ್ದು) (ಸಾವಿರಾರುವಿಕ್ರಯ)	೧ ಕ್ಕೆ	೩-೮-೦
೧೪ ಅನ್ಸೋನಿಯಾ ಕಂಪೆನಿಯಲ್ಲಿ ತಯಾರಾದ ಘಂಟಿ, ಅರ್ಧಘಂಟಿ ಹೊಡೆದು ಅಲಾರಂ ಇರತಕ್ಕ ದೊಡ್ಡಟೈಂಪೀಸ್ (ಅನೇಕಜನ ವಿದ್ಯಾರ್ಥಿಗಳು ಇದನ್ನೇ ಉಪಯೋಗಿಸುತ್ತಲಿದ್ದಾರೆ)	೧ ಕ್ಕೆ	೬-೧೨-೦
೧೫ ಘಂಟಿ, ಅರ್ಧಘಂಟಿ ಹೊಡೆಯುವ ಕ್ಯಾರೇಜ್ ಕ್ಲಾಕೆಂಬ ಟೇಬಲ್ ಘಡಿಯಾರ	೧ ಕ್ಕೆ	೪-೧೨-೦
೧೬ ಡಿಟೋ ನಮೂನೆಯಲ್ಲಿ ಘಂಟಿ, ಅರ್ಧಘಂಟಿಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್	೧ ಕ್ಕೆ	೫-೪-೦
೧೭ ಡಿಟೋ ನಮೂನೆಯಲ್ಲಿ ಘಂಟಿಹೊಡೆಯುವದಕ್ಕೆ ಪ್ರತಿಯಾಗಿ ಗಾನಹಾಡುವ ಕ್ಲಾಕ್	೧ ಕ್ಕೆ	೫-೮-೦
೧೮ ಡಿಟೋ ನಮೂನೆಯಲ್ಲಿ ತಾವಿಷ್ಟಪಟ್ಟ ಟೈಂಮಿಗೆ ಕಾಲುಘಂಟಿಕಾಲ ಕರ್ಣಾನಂದವಾಗುವಂತೆ ಮೃದುಮಧುರ ಗಾನಮಾಡತಕ್ಕ ಕ್ಲಾಕ್	೧ ಕ್ಕೆ	೫-೮-೦
೧೯ ಅನ್ಸೋನಿಯಾ ಕಂಪೆನಿಯ ಲಿವರ್ ಕ್ಲಾಕೆಂಬ ಗೋಡೆಗೆ ತಗಲಿಸುವ (೮ ಮೂಲೆಯ) ಅಷ್ಟಕೋಣಾಕೃತಿಯ ಚಿಕ್ಕಸೈಜ್ ಕ್ಲಾಕ್	೧ ಕ್ಕೆ	೬-೮-೦

ರಖಂವಾರ್ ವಾಚ್ ಸರಪಣಿಗಳು.

ನಿಕ್ಕಲ್ ಬೆಳ್ಳಿಯ ವಾಚ್ ಸರಪಣಿ	೧ ಕ್ಕೆ	೦-೧೨-೦
ಅಚ್ಚ ಬೆಳ್ಳಿಯ ಜೇಬಿನ ವಾಚ್ ಸರಪಣಿ	೧ ಕ್ಕೆ	೩-೪-೦
ಅಚ್ಚ ಬೆಳ್ಳಿಯ ಕೊರಳಸರಪಣಿ	೧ ಕ್ಕೆ	೧-೪-೦
೧೮ ಕ್ಯಾರಟ್ಟು ಚಿನ್ನದ ವಾಚ್ ಸರಪಣಿ	೧ ಕ್ಕೆ	೬-೮-೦
ವಾಚಿನ ಸರಪಣಿ ತುದಿಯಲ್ಲಿ ಹಾಕುವ ಅಚ್ಚ ಬೆಳ್ಳಿಯ ಶಾಶ್ವತವಾದ ಕ್ಯಾಲೆಂಡರ್ ಅಂದರೆ ಎಷ್ಟು ವರುಷಗಳ ವರಿಗಾದರೂ ತಾರೀಖು ನೋಡಬಹುದಾದ ಕ್ಯಾಲೆಂಡರ್ ಎಂದೆಂದಿಗೂ ಕೆಡತಕ್ಕದ್ದಲ್ಲಾ	೧ ಕ್ಕೆ	೧-೧೨-೦
ಡಿಟೋ ನಮೂನೆಯಲ್ಲಿ ೧೮ ಕ್ಯಾರಟ್ಟು ಚಿನ್ನದಿಂದ ತಯಾರಿಸಿದ್ದು	೧ ಕ್ಕೆ	೩-೪-೦

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ಒಂದುಸಾರಿ ಶಾಯಿತುಂಬಿದರೆ ೧೦,೦೦೦ ಶಬ್ಧಗಳನ್ನು ಬರೆಯಬಹುದಾದ ಲೇಖಣಿಗಳು.

ಪ್ರತಿಯೊಂದಕ್ಕೂ ೧೪ ಕ್ಯಾರಟ್ಟು ಚಿನ್ನದ ನಿಬ್ಬು ಹಾಕಿದೆ

ನೆಪ್ಚೂನ್ ೨೦೦ ನೇ ನಂ. ಪೆನ್	೧ ಕ್ಕೆ	೧-೧೪-೦
ನೆಪ್ಚೂನ್ ೨೦೬ ನೇ ನಂ. ಪೆನ್	೧ ಕ್ಕೆ	೨-೧೦-೦
ನೆಪ್ಚೂನ್ ೨೧೦ ನೇ ನಂ. ಪೆನ್	೧ ಕ್ಕೆ	೪-೨-೦

ಪ್ರತಿಯೊಂದು ಪೆನ್ ತರಿಸಿ ಕೊಳ್ಳುವರಿಗೂ ೪ ಪದಾರ್ಥಗಳನ್ನು ಮುಫತ್ತಾಗಿ ರವಾನಿಸುತ್ತೇವೆ.

೧ ಪೆನ್‌ಗಳನ್ನಿಡತಕ್ಕ ಸುಂದರವಾದ ಪೆಟ್ಟಿ ೧.
೨ ಪೆನ್ನಿಗೆ ಶಾಯಿಹಾಕುವ ಗಾಜಿನಕೊಳವೆ ೧.
೩ ಪೆನ್‌ಗಳನ್ನು ಕ್ಲೀನ್ ಮಾಡುವ ವಿಧಾನ ಮತ್ತೂ ಶಾಯಿಹಾಕುವ ವಿಧಾನ ಪ್ರಿಂಟಾಗಿರುವ ಚೀಟಿ ೧.
೪ ಪೆನ್‌ನನ್ನು ಜೇಬಿಗೆತಗಲಿಸುವ ಸುಂದರವಾದ ಕ್ಲಿಪ್ ೧.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲಚರಿತ್ರೆ	೦—೬—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೫—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು.

162

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೫೬ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ.— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.— ಬೆಲೆ ೧-೩-೦. ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ.— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ.— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣ ೧-೩-೦

ಸೌಂದರಪುರಾಣಂ- ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸುತ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
[illegible]

ಸ್ಟಾರ್ ಮುದ್ರಾಲಯವು.

ಈ ಮುದ್ರಾಲಯವು ಸಂತೇಪೇಟೆಯಿಂದ ಸಯ್ಯಾಜಿರಾವ್ ರೋಡಿನಲ್ಲಿ ದೊಡ್ಡ ಮಾರ್ಕೆಟ್ಟಿನ ಪೂರ್ವದ್ವಾರದ ಇದಿರುಭಾಗದಲ್ಲಿರುವ ಮಹಡಿಗೆ ವರ್ಗಾಯಿಸಲ್ಪಟ್ಟಿದೆ. ಈ ಮುದ್ರಾಲಯದಲ್ಲಿ ವಿಜಿಟಿಂಗ್ ಕಾರ್ಡುಗಳು, ಲಗ್ನಪತ್ರಿಕೆಗಳು, ಇನ್ವಿಟೇಷನ್ ಕಾರ್ಡುಗಳು ಮುಂತಾದವುಗಳು ನಾನಾ ವಿಧ ಬಣ್ಣದ ಶಾಯಿಯಿಂದಲೂ, ಚಿನ್ನದ ಗಿಲೀಟಿನಿಂದಲೂ, ನೇತ್ರಾನಂದಕರವಾಗಿ ಸ್ವಲ್ಪಕಾಲದಲ್ಲಿ ಸುಲಭದರದಿಂದ ಮುದ್ರಣಮಾಡಲ್ಪಡುವುವಲ್ಲದೆ ರೂಲ್‌ಫಾರಂಗಳೂ, ನೋಟ್ಸು ಮೊದಲಾದ ಪುಸ್ತಕಗಳೂ ಇಂಗ್ಲೀಷ್ ಮತ್ತು ಕನ್ನಡ ಅಕ್ಷರಗಳಿಂದ ಶ್ಲಾಘ್ಯವಾಗಿಯೂ ಯೋಗ್ಯದರದಿಂದಲೂ ಮುದ್ರಣಮಾಡಿಕೊಡಲ್ಪಡುವುವು, ಮತ್ತೂ ಚಕ್ಕಳದ ಅಥವಾ ಸಾದಾ ಬೈಂಡುಕೆಲಸಗಳೂ ತೃಪ್ತಿಕರವಾಗಿ ಮಾಡಲ್ಪಡುವುವು. ಒಂದಾವೃತ್ತಿ ಪರೀಕ್ಷಿಸಿದಲ್ಲಿ ತಾನಾಗಿ ಗೊತ್ತಾಗುವುದು. ಮ್ಯಾನೇಜರ್.

ಶ್ರೀ ಪಂಚಾಕ್ಷರ ಮಹಾಸ್ವಾಮಿಗಳು ಹೊಸಮಠ ಮುಕ್ಕಾಮು ಸವದತ್ತಿ ಡಿ|| ಬೆಳಗಾವ ನಮ್ಮ ಸನ್ನಿಧಿಯಿಂದಾ— ನಮ್ಮ ವೀರಶೈವ ಸಮಾಜಕ್ಕೆ ತಿಳಿಸುವದೇನೆಂದರೆ-ನನ್ನ ಮಠದಲ್ಲಿ ಇದೇ ಕಾರ್ತೀಕ ಶುದ್ಧ ಷಷ್ಟಿ ಚಂದ್ರವಾರ ದಿವಸ ಸಂಸ್ಕೃತಪಾಠಶಾಲೆಯನ್ನು ಸ್ಥಾಪನಮಾಡಿರುತ್ತದೆ. ಇಲ್ಲಿ ವೇ|ಶಾ|ಸಂ|| ಗುರುಮೂರ್ತಿಶಾಸ್ತ್ರಿಗಳವರು ಅಧ್ಯಾಪಕರಾಗಿ ನೇಮಿಸಲ್ಪಟ್ಟಿದ್ದಾರೆ. ಅಭ್ಯಾಸಮಾಡತಕ್ಕ ಪಾತ್ರವಿದ್ಯಾರ್ಥಿಗಳು ಬರಬೇಕು. ಇಲ್ಲಿ ಮಠದಲ್ಲೇ ಅನ್ನವಸ್ತ್ರದ ವ್ಯವಸ್ಥೆ ಮಾಡಲ್ಪಟ್ಟಿದೆ. ಉತ್ತಮ ಅದೆ. ಬರತಕ್ಕವರು ಧಾರವಾಡಸ್ಟೇಷನ್ನಿಗೆ ಇಳಿದು ಇಲ್ಲಿಗೆ ಬರಲಿಕ್ಕೆ ಸವಡು ಅದೆ. ಬರಬೇಕು 2

ಜಗಲೂರು ತಾಲ್ಲೋಕು ಸೊಕ್ಕೆ.

ನಮ್ಮ ಅಮಲ್‌ದಾರ್ ಮೆ|| ಸಿ. ರಾಮಚಂದ್ರರಾಯರವರು ತಾ|| ೨೦-೧೧-೧೪ ನೆ ಸಾಯಂಕಾಲ ದಯಮಾಡಿಸಿ, ಸ್ಕೂಲಿನಲ್ಲಿ ಯೂನಿಯನ್ ಮೆಂಬರು ವಗೈರೆ ಗ್ರಾಮಸ್ಥರನ್ನೆಲ್ಲಾ ಬರಮಾಡಿಕೊಂಡು ಇಂಡಿಯನ್-ಇಂಪೀರಿಯಲ್-ರಿಲೀಫ್‌ಫಂಡಿನ ಬಗ್ಗೆ ಎಲ್ಲರೂ ತಮ್ಮತಮ್ಮ ಯೋಗ್ಯತಾನುಸಾರ ಧನಸಹಾಯಮಾಡಿ ರಾಜಭಕ್ತಿಯನ್ನು ತೋರ್ಪಡಿಸಬೇಕಾಗಿ ಉಪನ್ಯಾಸಮಾಡಿದ್ದಕ್ಕೆ ಗ್ರಾಮಸ್ಥರೆಲ್ಲರೂ ಬಹು ಔದಾರ್ಯದಿಂದ (೧೦೬) ನೂರ ಆರುರೂಪಾಯಿಗಳನ್ನು ನಮ್ಮ ಅಮಲ್‌ದಾರ್‌ರವರ ವಶಕ್ಕೆ ಚಂದಾ ಕೊಟ್ಟು ನಮ್ಮ ಇಂಗ್ಲೀಷ್ ಪ್ರಭುಗಳಿಗೆ ಜಯವುಂಟಾಗಲೆಂದು ಪ್ರಾರ್ಥಿಸಿದರು. ಪಟೇಲ್ ಹನುಮಪ್ಪ

ತಿಪಟೂರ್ ತಾ|| ಕೋಟನಾಯ್ಕನಹಳ್ಳಿ.

ಅಯ್ಯಾ ಈಗ್ರಾಮದಲ್ಲಿ ಕಳೆದವರ್ಷವಂತೂ ಮಳೆಯಿಲ್ಲದೆ ಬತ್ತದ ಪೈರುಗಳೆಲ್ಲಾ ಒಣಗಿಹೋದವು. ಈ ಬಾರಿಯೂ ಅದೇಪ್ರಕಾರವಾಗುವುದೇನೋ ಎಂದು ಜನಗಳು ಹಾಹಾಕಾರಪಡುತ್ತಿದ್ದರು. ಆದರೆ ಚಿತ್ತಮಳೆಯಿಂದ ಹಿಡಿದು ಎಲ್ಲಾ ಮಳೆಗಳೂ ತಕ್ಕಮಟ್ಟಿಗೆ ನಡಿಸಿಕೊಂಡುಬಂದ ಪ್ರಯುಕ್ತ ಪೈರುಗಳೆಲ್ಲಾ ಸೂರ್ಯಬಿಂಬವನ್ನು ಕಂಡ ತಾವರೆಯೋಪಾದಿಯಲ್ಲಿ ಹುಲುಸಾಗಿ ಬೆಳೆದು ಸಂಪೂರ್ಣ ಬೆಳೆಯು ಕೈಸೇರುವುದೆಂದು ತೋರುತ್ತೆ. ಈ ಗ್ರಾಮದಲ್ಲಿ ಜೂಜುಗಾರರ ಅವಾಂತರವಂತೂ ಹೇಳತೀರದು. ನಮ್ಮ ಗ್ರಾಮದ ಪಟೇಲ್‌ರವರು ಸದರಿ ಜೂಜುಗಾರರನ್ನು ಕಂಡು ಹಿಡಿದು ಅವರನ್ನು ಮುಂದೆ ಆಡನಂತೆ ಬಂದೋಬಸ್ತುಮಾಡಿಸುವರೆಂದು ನಂಬುತ್ತೇನೆ. ಇಲ್ಲಿಯ ಸ್ಕೂಲಿನಲ್ಲಿ ಹಾಲಿ ೩೫ ಜನ ಬಾಲಕರು ವಿದ್ಯಾಭ್ಯಾಸಮಾಡುತ್ತಲಿದ್ದಾರೆ, ಸ್ಕೂಲ್ ಮಾಸ್ಟರು ಮ|| ರಾ|| ಆರ್. ಶಾಮರಾಯರವರು ತುಂಬಾ ಮಾತಪರ್ದಿಯಿಂದಲೂ ಪಕ್ಷಪಾತವಿಲ್ಲದೆಯೂ ಕೆಲಸಮಾಡುತ್ತಿರುತ್ತಾರೆಯಾಗಿ ಸ್ಕೂಲ್ ಇನ್ನೂ ಅಭಿವೃದ್ಧಿಗೆ ಬರುವುದೆಂದು ನಂಬುತ್ತೇನೆ ಸ್ಥಳನಿವಾಸಿ

ಚಾಮರಾಜನಗರದ ತಾಲ್ಲೋಕ್ ಕುದೇರುಗ್ರಾಮ.

ತಾಲ್ಲೋಕ್ ಅಮಲ್‌ದಾರ್ ಮ|| ರಾ|| ಕೆ. ಕೇಶವಾಚಾರ್, B. A. B. L., ರವರು ಈ ಗ್ರಾಮಕ್ಕೆ ತಾ|| ೧೩-೧೧-೧೯೧೪ ನೇ ಮಧ್ಯಾಹ್ನದಲ್ಲಿ ದಯಮಾಡಿಸಿ ಈ ಗ್ರಾಮದಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ಶ್ರೀಮದ್ಭಕ್ತಿಜ್ಞಾನಮೂರ್ತಿ ವಾಚಕಮಂದಿರವನ್ನು ಪರಾಮರ್ಶಿಸಿ ಮೆಂಬರುಗಳಿಗೂ ಗ್ರಾಮಸ್ಥರಿಗೂ ರೀಡಿಂಗ್‌ರೂಂ ವಿಚಾರವಾಗಿಯೂ ಗ್ರಾಮದ ಅಭಿವೃದ್ಧಿವಿಚಾರವಾಗಿಯೂ ಬಹಳ ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿ ಪ್ರಜೆಗಳಿಗೆ ತಿಳಿವಳಿಕೆ ಕೊಟ್ಟದ್ದು ತುಂಬಾ ಶ್ಲಾಘನೀಯವಾಗಿದೆ. ಅನಂತರ ಗ್ರಾಮದ ಬಾಯ್ಸ್ ಸ್ಕೂಲ್ ಮತ್ತೂ ಗರ್ಲ್ಸ್‌ಸ್ಕೂಲ್‌ಗಳನ್ನೂ ಸಹಾ ನೋಡಿ ಅವುಗಳ ಉತ್ತಮಸ್ಥಿತಿಯನ್ನು ಕುರಿತು ತುಂಬಾ ಸಂತೋಷಪಟ್ಟದ್ದಲ್ಲದೆ ಯೂನಿಯನ್ ಮೀಟಿಂಗ್ ನಡೆಯಿಸಿ ಅವಾಗಲೂ ಗ್ರಾಮಾಭಿವೃದ್ಧಿ ವಿಚಾರದಲ್ಲಿ ಬಹುವಾಗಿ ಜನಗಳಿಗೆ ಬುದ್ಧಿವಾದಗಳನ್ನು ಹೇಳಿ ದಯಮಾಡಿಸಿದರು. ಇದು ಭಾರಿಗ್ರಾಮವು. ಇಲ್ಲಿಗೆ ಆಗಾಗ್ಗೆ ದೊಡ್ಡ ಆಫೀಸರುಗಳು ಬಂದು ಜನಗಳಿಗೆ ತಿಳಿವಳಿಕೆಯನ್ನು ಕೊಡುತ್ತಾ ಬಂದಲ್ಲಿ ಇನ್ನೂ ಅತ್ಯುತ್ತಮಸ್ಥಿತಿಗೆ ಬರುವುದೆಂದು ನಿರೀಕ್ಷಿಸುತ್ತೇನೆ ಒಬ್ಬ ಮೆಂಬರು.

ಕೊಣ್ಣೂರ ನಾಟಕವು.

ಹುಬ್ಬಳ್ಳಿ—ಈ ಊರಿಗೆ ಕೊಣ್ಣೂರ ಕರ್ನಾಟಕ ಸಂಗೀತ ನಾಟಕಮಂಡಳಿಯವರು ಬಂದು ಪ್ರಯೋಗಗಳನ್ನು ಮಾಡಿದರು. ಅವುಗಳಲ್ಲಿ ಶನಿಪ್ರಭಾವವೆಂಬ ನಾಟಕವು ಅತಿಪ್ರೇಕ್ಷಣೀಯವಾಗಿರುವದು. ಈ ಕಂಪನಿಯವಲ್ಲಿಯ ಎಲೆಕ್ಟ್ರಿಕ್ ದೀಪಿಗೆಗಳೂ ಹೊಸತರದ ಟ್ರಾನ್ಸ್‌ಫರ್ ಸೀನರಿಗಳೂ, ಡ್ರೆಸ್ಸುಗಳೂ ಬಹು ರಮಣೀಯವಾಗಿರುವವು. ಇದಲ್ಲದೆ ಅವುಗಳಿಗೆ ಅನುಸಾರವಾಗಿ ಪಾತ್ರಗಳಾದರೂ ಚೆನ್ನಾಗಿರುವವು. ತಾ|| ೧೪-೧೧-೧೪ ನೆ ಇಸವಿ ದಿವಸ ಧಾರವಾಡ ಜಿಲ್ಹೆಯ ಮೆ|| ಕಲೆಕ್ಟರ ಸಾಹೇಬರು ಪತ್ನೀಸಮೇತವಾಗಿ ಬಂದು ನಾಟಕನೋಡಿ ಬಹು ಸಂತೋಷಭರಿತರಾಗಿ ಹೋದರು. ಅವರಿಗೆ ಸರಿಯಾಗಿ ಪಾನಸುಪಾರಿ ಆಗಿ ಪುಷ್ಪಹಾರ ತುರಾಯಿಗಳು ಕಂಪನಿಯವರಿಂದ ಮರ್ಯಾದೆ ಮಾಡಲ್ಪಟ್ಟವಲ್ಲದೆ ಯುದ್ಧಫಂಡಿಗಾಗಿ ಪುನಃ ೧೦೦ರೂ. ಸಾಹೇಬರವರಿಗೆ ಸಮರ್ಪಿಸಿದರು. ಅವರು ಹೋದನಂತರ ನೇಟಿವ್ಹ ಸಭ್ಯಗೃಹಸ್ಥರಾದ ರಾ||ಸಾ|| ಶಾಂತವೀರಪ್ಪ ಅಣ್ಣಾ ಮೆಣಸಿನಕಾಯಿ ರಾ||ಸಾ|| ಸುಬ್ರಾವ ಬ್ಯಾಹಟ್ಟಿ ವಕೀಲ ಶ್ರೀಮಂತ ರಾ||ಸಾ|| ವೀರಪ್ಪ ಅಣ್ಣಾ ಮಾಸ್ತಿ, ರಾ||ಸಾ|| ಮಾಮಲೇದಾರ ವಗೈರೆ ದೊಡ್ಡದೊಡ್ಡ ಜನರಿಗೆ ಅವರವರ ಯೋಗ್ಯತಾನುಸಾರವಾಗಿ ಪುಷ್ಪಹಾರಗಳಿಂದ ಮರ್ಯಾದೆಕೊಟ್ಟು ಪಾನಸುಪಾರಿ ಮಾಡಿದರು. ಪ್ರಸ್ತುತ ಕರ್ನಾಟಕದಲ್ಲಿ ಈ ಕಂಪನಿಯು ಚೆನ್ನಾಗಿ ಹೆಸರು ಪಡೆಯುತ್ತೆಂಬದಕ್ಕೇನೂ ಸಂಶಯವಿಲ್ಲ. ಇದೇ ಕಂಪನಿಯವರು ರಾಣೇಬೆನ್ನೂರಲ್ಲಿ ೨೦೦ ರೂ.ಗಳನ್ನು ಯುದ್ಧದ ಫಂಡಿಗೆ ಕೊಟ್ಟಿರುವರು. ಇದೇಪ್ರಕಾರವಾಗಿ ಈ ಕಂಪನಿಯು ಊರ್ಜಿತಾವಸ್ಥೆಗೆ ಬರಲೆಂದು ಕನ್ನಡಿಗರೆಲ್ಲರೂ ದೇವರನ್ನು ಪ್ರಾರ್ಥಿಸುತ್ತೇವೆ. ಕನ್ನಡಿಗ.

(ದುಃಖವಾರ್ತೆ.)

ದಾವಣಗೆರೆ ತಾಲ್ಲೂಕು ಅಣಜಿಗ್ರಾಮದ ಪಟೇಲ್ ಮ|| ರಾ|| ಎ. ಪಿ. ಸಿದ್ಧಲಿಂಗಪ್ಪನವರು ಕಳೆದ ಅಕ್ಟೋಬರ್ ತಾ|| ೨೮ ರಲ್ಲಿ ವಿಷಮಶೀತಜ್ವರದಿಂದ ಶಿವಾಧೀನರಾದರೆಂಬ ವಿಷಯವನ್ನು ತಿಳಿಸಲು ಬಹಳ ಮನಸ್ಸಂಕಟಕರವಾಗಿದೆ. ಇವರು ಬಾಲ್ಯದಲ್ಲಿಯೇ ಅನೇಕ ಸಭೆಗಳಲ್ಲಿಯೂ ಅನೇಕಸ್ಥಳಗಳಲ್ಲಿಯೂ ಉಪನ್ಯಾಸಗಳನ್ನು ಮಾಡುವುದರಲ್ಲೂ ಮತ್ತೂ ಕವಿತಾರಚನೆಯಲ್ಲೂ ಅತ್ಯಾಸಕ್ತರಾಗಿದ್ದರು. ಅಲ್ಲದೆ ತಮ್ಮ ಹಕ್ಕುದಾರಿಯಾದ ಪಟೇಲಿ ಕೆಲಸದಲ್ಲಿಯೂ ಇವರು ಶಾನುಭೋಗಿಕೆ ನೋಡುತ್ತಿದ್ದ ಗುಡಹಾಳು ಫಿರ್ಕಾದಲ್ಲಿಯೂ ಅತ್ಯಂತ ಜನಾನುರಾಗಿಗಳಾಗಿ ಸರ್ವರ ಪ್ರೀತಿಗೆ ಪಾತ್ರರಾಗಿದ್ದರು. ಇವರಿಗೆ ತಮ್ಮ ವಾಸಸ್ಥಾನವಾಗಿದ್ದ ಅಣಜಿಗ್ರಾಮವನ್ನು ಬಹಳ ಉನ್ನತಸ್ಥಿತಿಗೆ ತರುವ ಅಭಿಪ್ರಾಯವಿತ್ತು ಇವರಿಂದಲೇ ಈ ಗ್ರಾಮಕ್ಕೆ ಸ್ಕೂಲು ಮತ್ತೂ ಪೋಸ್ಟಾಫೀಸು ಸ್ಥಾಪಿತವಾದುವು. ಈ ಗ್ರಾಮವನ್ನು ಬಿಟ್ಟು ಬೇರೆ ಹೊಸಗ್ರಾಮವನ್ನು ಕಟ್ಟಿರುವ ಮನಸ್ಸು ಇವರಲ್ಲಿ ಬಹಳವಿತ್ತು ಆದರೆ ನಮ್ಮಗಳ ದುರದೃಷ್ಟದಿಂದ ಇವರು ತಮ್ಮ ೨೬ ನೇ ವಯಸ್ಸಿನಲ್ಲಿಯೇ ಶಿವಾಧೀನರಾದ್ದರಿಂದ ಸರ್ವರಿಗೂ ಬಹಳ ವ್ಯಸನವನ್ನುಂಟುಮಾಡಿದೆ. ಇಂಥಾ ಸುಪುತ್ರನನ್ನು ಕಳೆದುಕೊಂಡಂಥ ಇವರ ಚಿಕ್ಕಪ್ಪಂದಿರಾದ ಮ|| ರಾ|| ಪಟೇಲ್ ಜಡಿಯಪ್ಪನವರಿಗೂ ಮತ್ತೂ ಅವರ ಕುಟುಂಬದವರಿಗೂ ಸಹ ಆದ ವ್ಯಸನವನ್ನು ವರ್ಣಿಸಲು ಬಹಳ ಅಸದಳವಾಗಿರುತ್ತೆ. ಆದರೆ (ಅವಶ್ಯಮನುಭೋಕ್ತವ್ಯಂಕೃತಂಕರ್ಮಶುಭಾಶುಭಂ) ಎಂಬ ಆರ್ಯೋಕ್ತಿಯಂತೆ ಬಂದದ್ದನ್ನು ಅನುಭವಿಸಲೇಬೇಕಾಗಿದೆ, ಪರಲೋಕದಲ್ಲಿ ಸರ್ವೇಶನು ಮ|| ರಾ|| ಸಿದ್ಧಲಿಂಗಪ್ಪನವರಿಗೆ ಉತ್ತಮಗತಿಯನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ. ಪ್ರತ್ಯಕ್ಷದರ್ಶಿ,

---

ತುಂಕೂರು ತಾ|| ಕೋರ.

ಈ ವರ್ಷ ಈವರೆಗೆ ತಕ್ಕಮಟ್ಟಿಗೂ ಅನುಕೂಲವಾಗಿ ಮಳೆ ನಡಿಸಿದ್ದರಿಂದಲೂ ಫಸಲು ಚನ್ನಾಗಿ ಆಗುವ ಸಂಭವವಿರುವುದರಿಂದಲೂ ಈಶನು ಇನ್ನು ಒಂದೆರಡು ಹದ ಮಳೆಯನ್ನು ನಡಿಸುವುದಲ್ಲದೆ ನಮ್ಮ ಚಕ್ರವರ್ತಿ ಸಾರ್ವಭೌಮರವರು ಯುದ್ಧದಲ್ಲಿ ದಿಗ್ವಿಜಯವನ್ನು ಪಡೆದು ಸಾಮ್ರಾಜ್ಯಪದವಿಯು ಇಮ್ಮಡಿಸಲೆಂದೂ ಹರಕೆಯಂ ಮಾಡಿದ ಪಟೇಲ್ ಚಿಕ್ಕಣ್ಣಗೌಡರು, ಮ|| ಶಾಣ್ಣಗೌಡರು, ಮ|| ಚನ್ನಪ್ಪನವರು, ಶಿವಗಂಗೆ ಹುಚ್ಚಪ್ಪನವರು, ತೋ|| ಚನ್ನವೀರಪ್ಪನವರು, ದೊಡ್ಡೇರಿ ರಾಮಯ್ಯನವರು, ಸಮೋಗದ ಲಿಂಗಪ್ಪನವರು, ಜಮಾನರ ಪಾಪಯ್ಯನವರು, ಅರ್ಜುನಪ್ಪನವರು, ಶೇ|| ರಂಗಯ್ಯನವರು ವಗೈರೆ ಮುಖಂಡರು ಸೇರಿ ಒಂದು ಮೀಟಿಂಗ್ ನಡಿಸಿ ಒಂದು ಹರಕೆಯೇನೋ ನೆರವೇರಿದಂತಾಯಿತು. ತತ್ಕಾಲಕ್ಕೆ ಸಾಕಾದಷ್ಟು ಮಳೆ ಆಯಿತು. ಇನ್ನೂ ಆಗಬಹುದು. ನಮ್ಮ ಸಾಮ್ರಾಜ್ಯಾಧಿಪರ ಪದವಿಯು ಇಮ್ಮಡಿಯಾಗುವುದಕ್ಕಾಗಿ ಈಶನ ಪ್ರಾರ್ಥನೆಯನ್ನು ನೆರವೇರಿಸಬೇಕೆಂದು ಯೋಚಿಸಿ ಈ ಊರ ಶ್ರೀ ಮಲ್ಲೇಶ್ವರಸ್ವಾಮಿ ದೇವಸ್ಥಾನದ ಮುಂದೆ ೧೯-೧೦ ೧೪ ರ ಸೋಮವಾರ ಒಂದು ದೊಡ್ಡ ಗಣಂಗಳ ಆರಾಧನೆಯನ್ನು ನಡಿಸಿದರು. ಇದಕ್ಕೆ ಆಗತಕ್ಕ ದಿನಸಿ ವಗೈರೆ ಸಮಸ್ತವನ್ನೂ ಗ್ರಾಮದವರ ಸಹಾಯದಿಂದಾ ಸಿದ್ಧಪಡಿಸಿ ಎಲ್ಲರೂ ಬಹು ಭಕ್ತಿಪುರಸ್ಸರವಾದ ವಿಜೃಂಭಣೆಯಿಂದ ಈ ಕಾರ್ಯವನ್ನು ನೆರವೇರಿಸಿದರು. ಇವರ ಹರಕೆಯನ್ನು ಶ್ರೀ ಮಲ್ಲೇಶನು ಕೃಪೆಗೈದು ನೆರವೇರಿಸಲು ಏನೇನೂ ಸಂಶಯವಿಲ್ಲವೆಂದು ಮನಃಪೂರ್ವಕವಾಗಿ ನಂಬಿರುವೆನು. ಈಗಾಗಲೇ ಮುಕ್ಕಾಲುಪಾಲು ನಮ್ಮ ಸಾರ್ವಭೌಮರವರೇ ಮುಂದುವರಿದಿರುತ್ತಾರೆ. ಸಮಸ್ತರೂ ಇವರ ದಿಗ್ವಿಜಯವನ್ನೇ ಕೋರುತ್ತಿರುವರು, ಇಲ್ಲಿನ ಗ|| ವಿ. ಇ. ಸ್ಕೂಲಿನಲ್ಲಿ ಅಲಂಕರಿಸಿರುವ ಶ್ರೀ ಸಾರ್ವಭೌಮರವರ ದಂಪತಿಗಳ ಮತ್ತು ಶ್ರೀಮನ್ ಮಹಾರಾಜರವರ ಭಾವಚಿತ್ರದಮುಂದೆ ಬಾಲಕರೆಲ್ಲರೂ ನಿಂತು ಇವರ ಶ್ರೇಯಃಪ್ರಾರ್ಥನೆ ಮಾಡುತ್ತಾ ಇವರಿಗೆ ದೀರ್ಘಾಯುಸ್ಸನ್ನು ಬಯಸುತ್ತಿರುವರು. ದಿನಂಪ್ರತಿ ಪ್ರಾರ್ಥಿಸುತ್ತಿರುವ ಈ ಬಾಲಕರ ಮನೋಗತವನ್ನು ನೆರವೇರಿಸುವ ಜಗದೀಶನನ್ನು ಸಹಾ ಪ್ರಾರ್ಥಿಸುತ್ತಿರುವರು. ಈ ಮೇಲೆ ಕಂಡ ಬಾಬುಗಳನ್ನು ನಡಿಸುವುದರಲ್ಲಿ ಆಸಕ್ತಿಯು ಹುಟ್ಟುವುದನ್ನು ಕಲಿಸಿಕೊಟ್ಟವರು ಮಾನನೀಯರಾದ ನಮ್ಮ ತಾ|| ಅಮಲ್ದಾರ್ರಾಗಿದ್ದು, ಈಗ ಪೇಶೀಪದವಿಗೆ ದಯಮಾಡಿಸಿದ ಮಹಾಸ್ವಾಮಿ ಮ|| ಎಂ. ಎಸ್. ರಾಮಚಂದ್ರರಾಯರವರಿಗೆ ಈಶನು ಚಿರಾಯುಸ್ಸನ್ನೂ ಸಂಪತ್ತನ್ನೂ ಹೆಚ್ಚಿಸಲೆಂದು ಕೋರುವೆನು. ಪ್ರತ್ಯಕ್ಷದರ್ಶಿ.

ತ್ಯಾಮಗೊಂಡ್ಲು:—ಈಪ್ರಾಂತ್ಯ ಮಳೆ ತಕ್ಕಮಟ್ಟಿಗೆ ನಡೆಸಿದ್ದರಿಂದ ರಾಗಿ ಬೆಳೆಯೇನೊ ತಕ್ಕಮಟ್ಟಿಗೆ ಆಗಿರುತ್ತೆ. ಆದರೆ ಕೆರೆಗಳಲ್ಲಿ ನೀರು ಕಮ್ಮಿಯಾಗಿರುವುದರಿಂದ ಭತ್ತದ ಬೆಳೆಯು ಕೈಸೇರುವಂತಿಲ್ಲ. ಈಗ ೩-೪ ದಿನಗಳಿಂದಲೂ ಸೀತಗಾಳಿಯು ಬೀಸುವುದಕ್ಕೆ ಪ್ರಾರಂಭವಾಗಿರುವುದರಿಂದ ಅಲ್ಲಲ್ಲಿ ಜನಗಳಿಗೆ ಜ್ವರ ತಲೇನೋವು ಪ್ರಾರಂಭವಾಗಿರುತ್ತದೆ. ಯಾವಕಾರಣದಿಂದಲೊ ಆಮದುರಪ್ಪು ಮಾತ್ರಸರಿಯಾಗಿ ನಡೆಯುವುದಿಲ್ಲ ಕೆಲವು ದಿನಗಳ ಹಿಂದೆ ಯಾರೋ ದುಷ್ಟರು ಸಾರಾಯಿಅಂಗಡಿಗೆ ನುಗ್ಗಿ ಒಂದು ಶಾಲನ್ನೂ ಸ್ವಲ್ಪ ಸಾರಾಯಿಯನ್ನೂ ತೆಗೆದುಕೊಂಡು ಹೋದರಂತೆ. ಈ ವರ್ಷ ನಡೆದ ಮೊಹರಮ್ಮಿನಲ್ಲಿ ಯಾವ ಗಲಾಟೆಯೂ ನಡೆಯದಂತೆ ಮ|| ರಾ|| ಪಟೇಲ್ ಅಪ್ಪಾಜಯ್ಯನವರೂ ಪೊಲೀಸ್ ಇಲಾಖೆಯವರೂ ಬಹಳ ಚಟುವಟಿಕೆಯಿಂದ ಕೆಲಸಮಾಡಿದರು. ತುಂಕೂರಿನಿಂದ ಬೆಳಿಗ್ಗೆ ೭ ಘಂಟೆಗೆ ಹೊರಟು ಬೆಂಗಳೂರಿಗೆ ೧೦ ಘಂಟೆಗೆ ಸೇರುವ ಲೋಕಲ್‌ಟ್ರೈನು ನಿಲ್ಲಿಸಬೇಕೆಂಬ ಪ್ರಯತ್ನವಿದ್ದದ್ದು ಈಚೆಗೆ ಖಾಯಂಮಾಡಿರುವುದರಿಂದ ಸರ್ವರೂ ಉತ್ಸಾಹಪಡತಕ್ಕದ್ದಾಗಿದೆ. ಈ ಊರಿನಲ್ಲಿ ಕಳೆದ ಜುಲೈ ತಿಂಗಳಲ್ಲಿ ಸ್ಥಾಪಿಸಲ್ಪಟ್ಟ ಶ್ರೀಶಾರದಾಮಂದಿರವೆಂಬ ನಾಮಾಂಕಿತದಿಂದ ಪ್ರಕಾಶಗೊಳ್ಳುತ್ತಿರುವ ಫ್ರೀ ರೀಡಿಂಗ್‌ರೂಂ ಬಹುಜನ ವಾಚಕರಿಗೆ ಉಲ್ಲಾಸವನ್ನುಂಟುಮಾಡಿರುತ್ತದೆ. ಇದರಲ್ಲಿ ಪ್ರತ್ಯಹವೂ ವಾರ್ತಾಪತ್ರಗಳು ಅಂದರೆ ದಿನಪತ್ರಿಕೆ, ವಾರಪತ್ರಿಕೆ, ಪಕ್ಷಪತ್ರಿಕೆ, ಮಾಸಪತ್ರಿಕೆ, ಮೊದಲಾದ ಅನೇಕ ಇಂಗ್ಲೀಷ್ ಮತ್ತೂ ಕರ್ನಾಟಕಭಾಷೆಗಳ ಪತ್ರಿಕೆಗಳು ಬರುತ್ತಿರುವುವು ಈ ರೀಡಿಂಗ್‌ರೂಮಿನಲ್ಲಿ ಒಂದು ಪುಸ್ತಕಭಂಡಾರವೂ ಕೂಡ ಸ್ಥಾಪಿಸಲ್ಪಟ್ಟಿರುವುದು. ಇಲ್ಲಿ ಆಗಾಗ್ಯೆ ಧರ್ಮನೀತಿ ಭಕ್ತಿಜ್ಞಾನ ವೈರಾಗ್ಯವಿಷಯಕವಾದ ಅನೇಕ ಉಪನ್ಯಾಸಗಳು ಮಾಡಲ್ಪಡುವುದರಿಂದ ಬಹು ಜನಗಳಿಗೆ ಪ್ರಯೋಜನಕಾರಿಯಾಗಿರುತ್ತೆ. ಈ ಮಂದಿರದ ಪುರೋವೃದ್ಧಿ ವಿಷಯದಲ್ಲಿ ಡಿಸ್ಟ್ರಿಕ್ಟ್ ಮತ್ತೂ ತಾಲ್ಲೂಕು ಆಫೀಸರೇ ಮೊದಲಾಗಿ ಇತರ ಇಲಾಖೆಗಳ ಮುಖ್ಯೋದ್ಯೋಗಿಗಳೆಲ್ಲರೂ ಈ ಮಂದಿರಕ್ಕೆ ದಯಮಾಡಿಸಿ ತಮಗೆ ಈ ವಾಚಕಾಲಯ (ರೀಡಿಂಗ್‌ರೂಂ) ದ ವಿಷಯದಲ್ಲಿರತಕ್ಕ ಅಭಿಮಾನವನ್ನು ಲಿಖಿತಮೂಲಕ ವ್ಯಕ್ತಗೊಳಿಸಿ ಭಗವಂತನು ಈ ವಾಚಕಾಲಯಕ್ಕೆ ಚಿರಾಯುವನ್ನಿತ್ತು ಕಾಪಾಡಲಿ ಎಂಬದಾಗಿ ಆಶಿಸಿರುತ್ತಾರೆ. ನಮ್ಮ ತಾಲ್ಲೂಕ್ ಮ|| ರಾ|| ಅಮಲ್ದಾರರ ಪ್ರೋತ್ಸಾಹದಂತೆ ಮಂದಿರಕ್ಕೆ ಸಂಬಂಧಪಟ್ಟ ಮೆಂಬರುಗಳು ಒಂದು ಪುಟ್‌ಬಾಲ್‌ಕ್ಲಬ್ಬನ್ನು ಏರ್ಪಡಿಸಿರುತ್ತಾರೆ. ಇದೇ ವಿಚಾರದಲ್ಲಿಯೇ ಮೊನ್ನೆತಾನೇ ಜಮಾಬಂದಿಗೆ ಬಂದಿದ್ದ ಸಬ್‌ಡಿವಿಜನ್ ಆಫೀಸರೂ ಕೂಡ ಮೆಂಬರುಗಳನ್ನು ಬಹಳವಾಗಿ ಪ್ರೋತ್ಸಾಹಿಸಿರುತ್ತಾರೆ. ಈ ಊರಿನಲ್ಲಿ ಮೊನ್ನೆತಾನೇ ವೈಶ್ಯರು ಆರ್ಯವೈಶ್ಯ ಲಕ್ಷ್ಮೀವಿಲಾಸವೆಂಬ ಹೆಸರಿನಿಂದ ಒಂದು ವಾಚಕಾಲಯವನ್ನು ಸ್ಥಾಪಿಸಿರುತ್ತಾರೆ. ಇದಕ್ಕೂ ಕೆಲವು ಪತ್ರಿಕೆಗಳು ಬರುವಂತೆ ಕಾಣುತ್ತೆ.

ಅಭಿಮಾನಿ.

ನೋಟೀಸ್.

೧೯೧೫ ನೇ ಜನವರಿ ೪ ಮತ್ತು ೫ನೇ ತಾರೀಖುಗಳಲ್ಲಿ ಹಾಸನದಲ್ಲಿ ದನಗಳ ಪ್ರದರ್ಶನವು ನಡಿಯುತ್ತೆ. ಚುನಾವಣೆಯಾದ ಎಲ್ಲಾ ತರಹೆಯ ಜಾನ್ವಾರುಗಳಿಗೂ ಭಾರಿಯಾದ ಇನಾಮುಗಳು ಪೂರ್ವದಂತೆ ಕೊಡಲ್ಪಡುತ್ತವೆ. ಆಡು, ಕುರಿ ಮತ್ತು ಕುದುರೆಗಳಿಗೆ ಸಹ ಇನಾಮು ದೊರಿಯುತ್ತಲ್ಲದೆ ಹಾಲುಗೊಡುವ ಅವ್ವಲತರಹ ಹಸುವಿಗೆ ಒಂದು ಭಂಗಾರದ ಮೆಡಲು ಕೊಡಲ್ಪಡುತ್ತೆ. ಜಾಸ್ತಿ ತಪಶೀಲ್ ಅಪೇಕ್ಷಿಸುವವರು ಆನರೆರಿ ಸೆಕ್ರೆಟರಿಯವರಿಗೆ ಬರೆದುಕೊಳ್ಳಬಹುದು.

(Sd) V. S. Rajagopala Char.
ಜಾಯಿಂಟ್ ಆನರೆರಿ ಸೆಕ್ರೆಟರಿ
ಕ್ಯಾಟಲಷೋಕಮಿಟಿ
2 ಹಾಸನ.

ಯುದ್ಧರಂಗದಿಂದ ಬರೆದ ಕಾಗದಗಳು.

ಜರ್ಮನ್‌ಸೈನಿಕರು ತಾವು ಅನುಭವಿಸುತ್ತಿರುವ ಕಷ್ಟಸುಖಗಳನ್ನು ಕುರಿತು ತಮ್ಮ ಕುಟುಂಬಿಕರಿಗೆ ಬರೆದಿರುವ ಪತ್ರಗಳಲ್ಲಿ ಹಲವು ಪ್ರಕಟವಾಗಿರುತ್ತವೆ. ಅವುಗಳನ್ನು ನೋಡಿದರೆ ಜರ್ಮನರ ಮಹಾಕ್ರೂರ ರಾಕ್ಷಸತನವೂ ಮಿತ್ರಮಂಡಲಿಯವರ ಸೌಜನ್ಯವೂ ಬಲುಮಟ್ಟಿಗೆ ಪ್ರಪಂಚಕ್ಕೆ ವ್ಯಕ್ತವಾಗಿರುವುದು. ಅವುಗಳಲ್ಲಿ ಒಂದೆರಡು ಪತ್ರಗಳನ್ನು ದೃಷ್ಟಾಂತಕ್ಕಾಗಿ ಇಲ್ಲಿ ಭಾಷಾಂತರಿಸಿ ಮುದ್ರಿಸುತ್ತೇವೆ.

ಜರ್ಮನ್‌ಸೈನಿಕನೊಬ್ಬನು ತನ್ನ ದುಃಖವನ್ನು ತನ್ನ ಹೆಂಡತಿಗೆ ಬರೆದಿರುತ್ತಾನೆ. “ ಪ್ರಿಯೆ ! ಯಾವ ಮಹಾಸಂತೋಷವಾರ್ತೆಯೆಂದು ನಿನಗೆ ನಾನು ಈ ಪತ್ರಿಕೆಯನ್ನು ಬರೆಯಲಿ ? ನಮ್ಮ ಅಧಿಕಾರಿಗಳ ಅಪ್ಪಣೆಯಮೇರೆಗೆ ನಾವುಗಳು ಮಾಡಿದ ಕ್ರೂರ ಕೃತ್ಯಗಳಿಗೆ ಕೊನೆಯಿಲ್ಲ. ನಮ್ಮ ಕಾರ್ಯಗಳನ್ನು ಕಣ್ಣಿನಿಂದ ನೋಡಿದ ಎಂಥ ಕಠಿನಾತ್ಮನ ಹೃದಯವು ಕೂಡ ದಗ್ಧವಾಗಿಹೋಗುವುದು. ಮಕ್ಕಳುಮರಿಯನ್ನು ಕಟ್ಟಿಕೊಂಡಿರುವ ನಮ್ಮಂಥವರಿಗೆ ಈ ಕೃತ್ಯವನ್ನಾಚರಿಸುವುದು ತಕ್ಕದ್ದಲ್ಲ. ಏನುಮಾಡುವ ? ವಿಧಿಯಿಲ್ಲ; ನಮ್ಮಧಿಕಾರಿಗಳ ಆಜ್ಞೆಯು ಬಹು ಕಠಿನವಾಗಿದೆ ಮುಂದಿರುವ ಗ್ರಾಮವನ್ನು ಧ್ವಂಸಮಾಡುವುದಕ್ಕಾಗಿ ನಾವು ಇಲ್ಲಿಂದ ಹೋಗುತ್ತಿದ್ದೇವೆ. ನಾವು ಈಗ ಇರುವ ಗ್ರಾಮದಲ್ಲಿನ ಒಂದು ಮನೆಯ ಯಜಮಾನನ್ನು ತುಪಾಕಿಯಿಂದ ಸುಟ್ಟು ಅವನ ಹೆಂಡಿರುಮಕ್ಕಳಿಂದ ಆಹಾರವನ್ನು ತರಿಸಿಕೊಂಡೆವು. ಪ್ರಿಯೆ ! ಅವರ ದುಃಖವನ್ನು ಏನೆಂದು ಬರೆಯಲಿ ! ಗಂಡನು ಸತ್ತುದರಿಂದ ಗೋಳಾಡುತ್ತಿದ್ದ ತಾಯಿಯನ್ನು ನೋಡಿ ಮಕ್ಕಳುಗಳು ಅಳಲಾರಂಭಿಸಿದುವು. ಆ ಹಸುಳೆಗಳಿಗೆ ಇದು ದುಃಖಕರವಾದ ಕಾರ್ಯವೆಂಬುದೂ ಇದು ಸಾವೆಂಬುದೂ ಸಹ ತಿಳಿಯದು ತಾಯಿ ಅಳುತ್ತಿದ್ದುದನ್ನು ನೋಡಿ ಅಷ್ಟುಮಾತ್ರಕ್ಕೇ ಅವೂ ಅಳುತ್ತಿದ್ದುವು. ಅಂಥ ಕಂದಗಳ ಸ್ಥಿತಿಯನ್ನು ನೋಡಿ ನನ್ನ ಹೃದಯವು ಒಡೆದುಹೋಯಿತು. ನಾವು ಊಟವನ್ನು ಮುಗಿಸುವಷ್ಟರೊಳಗೇ ನಮಗೆ “ ಬುಲಾವು ” ಬಂದಿತು. ಆಂಗ್ಲಸೈನ್ಯವು ನಾವಿದ್ದಬಳಿಗೆ ೪ ಮೈಲಿಗಳ ದೂರದಲ್ಲಿದ್ದಿತು. ನಾವೆಲ್ಲರೂ ಇಕ್ಕಟ್ಟಾದ ಓಣಿಗಳಲ್ಲಿ ದೂರಿ ಬಯಲಿಗೆ ಬಂದು ನಿಂತೆವು. ಕೂಡಲೇ ಘೋರ್ರೆಂದು ಬಿರಿ ಮಳೆಯು ಆರಂಭಿಸಿತು. ಕೆಸರಿನ ಮಯವಾದ ನೆಲದ ಮೇಲೆ ನಿಂತುಕೊಂಡಿರುವುದು ಅಸಾಧ್ಯವಾಗಿದ್ದಿತು. ಸದ್ದುಮಾಡದೆ ನಮ್ಮ ಶಿಬಿರಗಳಿಗ ಬಂದು ಸೇರಿಕೊಂಡೆವು. ಬೇರೊಂದಪ್ಪಣೆಯಾಗುವವರೆಗೆ ನಮಗೆ ವಿಶ್ರಾಂತಿಯು ದೊರೆದಿತು. ಕಾಂತೆ ! ನಾನೇನು ಹೇಳಲಿ ? ೪ ದಿನಗಳಿಂದಲೂ ನಿದ್ರೆಯೆಂಬುದು ಹೇಗೋ ಕಾಣದೆ ಇದ್ದ ನಾವು ಆ ವಿಶ್ರಾಂತಿಯಪ್ಪಣೆಯು ದೊರೆದ ಕೂಡಲೇ ಎಲ್ಲೆಲ್ಲಿ ನಿಂತಿದ್ದವರು ಅಲ್ಲಲ್ಲೇ ಹೆಣಗಳಂತೆ ಮಲಗಿಬಿಟ್ಟೆವು. ಆ ದಿನ ನಮಗೆ ಆಲಸ್ಯದಿಂದ ಆಹಾರವೂ ಸಹ ರುಚಿಸದೆ ಹೋಗಿದ್ದಿತು. ಮರುದಿವಸ ನಾವು ಬೇರೊಂದುಗ್ರಾಮವನ್ನು ಪ್ರವೇಶಿಸಿದೆವು. ಆ ಗ್ರಾಮನಿವಾಸಿಗಳ ದುಸ್ಥಿತಿಯು ವರ್ಣನಾತೀತವಾಗಿದ್ದಿತು ಬಹುಶಃ ೨೦೦ ಮಂದಿ ಮಕ್ಕಳನ್ನೂ ತಾಯಂದಿರನ್ನೂ ನಾವು ಒಂದು ದೇವಾಲಯಕ್ಕೆ ಸೇರಿಸಿಬಿಟ್ಟೆವು. ನಾವು ನುಗ್ಗಿದ ಮನೆಯಲ್ಲಿದ್ದ ಮಕ್ಕಳಾಟದ ಬೊಂಬೆಗಳನ್ನು ನೋಡಿ ನನಗೆ ಎಲ್ಲೂ ಇಲ್ಲದಿದ್ದ ದುಃಖವು ಬಂದಿತು. ನಿಜವಾಗಿಯೂ ಅಲ್ಲಿನ ಪ್ರಜೆಗಳು ಪಡುವ ಕಷ್ಟವನ್ನು ನೋಡಿ ನಾನು ಅಳುತ್ತಲಿದ್ದೆನು. ಈ ಪ್ರಜೆಗಳ ದುಃಖವನ್ನೂ ಕಷ್ಟವನ್ನೂ ಕುರಿತು ನಿನಗೆ ಈ ಪತ್ರವನ್ನು ಬರೆಯುವಾಗಲೂ ಸಹ ನಾವು ಆಚರಿಸಿದ ಕ್ರೂರ ಕೃತ್ಯಗಳನ್ನು ನೆನೆದುಕೊಂಡು ನಾನು ಅಳುತ್ತಿದ್ದೇನೆ. ಯುದ್ಧವು ಮಾತ್ರ ಬಹು ಭೀಕರವಾಗಿದೆ. ಯುದ್ಧವು ಹೇಗಾದರೂ ಇರಲಿ; ಈ ದೇಶದ ಪ್ರಜೆಗಳ ರೋದನಧ್ವನಿಯನ್ನು ಮಾತ್ರ ವರ್ಣಿಸುವುದಸಾಧ್ಯವು. ಅದನ್ನು ಬರೆಯುವುದಕ್ಕೆ ನನಗೆ ಕೈಬರದು. ಇನ್ನು ಮುಂದೆ ನಿರಪರಾಧಿಗಳಾದ ಪ್ರಜೆಗಳಮೇಲೆ ಕತ್ತಿಯೆತ್ತುವಂಥ ಯೋಗವು ನಮಗೆ ಬರದೆ ಇರುವುದೆಂದು ನಂಬುತ್ತೇನೆ. ಹಾಗೆ ಮಾತಲಿಂದು ಭಗವಂತನನ್ನು ಪ್ರಾರ್ಥಿಸುತ್ತೇನೆ. ಬಹಿರಂಗವಾಗಿ ಶತ್ರುಸೈನಿಕರಮೇಲೆ ಹೋರಾಡುವುದಕ್ಕೆ ನಾನು ಹಿಂದೆಗೆವುದಿಲ್ಲ. ಆದರೆ ಪ್ರಜೆಗಳ ಮೇಲೆ ಬೀಳುವುದಕ್ಕೆ ನನ್ನ ಮನಸ್ಸು ಒಪ್ಪುವುದಿಲ್ಲ; ಎಂದು ಬರೆದಿದ್ದಾನೆ. ಜರ್ಮನ್‌ಸೈನಿಕರು ಬೆಲ್ಜಿಯಂದೇಶದಲ್ಲಿ ಮಾಡುತ್ತಿರುವ ಕ್ರೂರ ಕಾರ್ಯಗಳು ಅವರಿಗೇ ಅಷ್ಟು ದುಃಖವನ್ನು ಮಾಡುತ್ತಿರುವಾಗ ಅವರ ಕ್ರೂರಹಿಂಸೆಗಳನ್ನು ಅನುಭವಿಸುತ್ತಿರುವ ಪ್ರಜೆಗಳ ಕಷ್ಟವು ಎಷ್ಟುಮಟ್ಟಿಗಿರಬಹುದು !

ಇನ್ನೊಬ್ಬ ಜರ್ಮನ್‌ಸೈನಿಕನ ಕಾಗದ.

ಫ್ರೆಂಚರ ಸೆರೆಯಾಳಾಗಿ ಸಿಕ್ಕಿದ ಒಬ್ಬ ಜರ್ಮನ್‌ಸೈನಿಕನು ತನ್ನ ಸಹೋದರಿಗೆ ಈ ಕಾಗದವನ್ನು ಬರೆದಿದ್ದಾನೆ— “ ತಂಗಿ ! ಯುದ್ಧವು ಮುಗಿವಹೊತ್ತಿಗೆ ಕತ್ತಲಾಯಿತು. ಗಾಯತಗುಲಿದವರ ಸ್ಥಿತಿಯು ಆಗ ಬಹು ಭಯಂಕರವಾಗಿದ್ದಿತು. ಅಂಥವರಲ್ಲಿ ನಾನೊಬ್ಬನು ನಾವು ಪಡುತ್ತಿದ್ದ ಹಿಂಸೆಯು ವರ್ಣನಾತೀತವಾಗಿದ್ದಿತು. ೯ ಗಂಟೆಗಳ ಕಾಲ ಯುದ್ಧಭೂಮಿಯಲ್ಲೇ ಬಿದ್ದು ಒದ್ದಾಡುತ್ತಿದ್ದೆವು. ಆಗ ನನ್ನ ಗಾಯಕ್ಕೆ ಕಟ್ಟುಬಿಗಿದು ಒಂದು ಗ್ರಾಮಕ್ಕೆ ಸೇರಿಸಿದರು ಆ ಹಳ್ಳಿಯಲ್ಲಿ ಒಂದು ದನದ ಕೊಟ್ಟಿಗೆಯಲ್ಲಿ ಹುಲ್ಲಿನ ಮೇಲೆ ಬಿದ್ದಿದ್ದೆನು. ಆ ದಿನವೆಲ್ಲಾ ಅಲ್ಲೇಬಿದ್ದು ಹೊರಳಾಡುತ್ತಿದ್ದೆನು ಆದರೂ ನಮ್ಮನ್ನು ವಿಚಾರಿಸಿದವರೇ ಇಲ್ಲ. ಕಡೆಗೆ ನಮ್ಮನ್ನು ವೈದ್ಯಶಾಲೆಗೂ ಸೇರಿಸಲಿಲ್ಲ. ಸಾಯಂಕಾಲದಲ್ಲಿ ನಮ್ಮ ಸೇನೆಯವರು ಶತ್ರುಸೈನ್ಯವನ್ನು ಹೊಡೆದೋಡಿಸಿದೆವೆಂದು ಹೇಳಿದರು. ಆದರೆ ಅದು ಕಡೆಗೆ ಸುಳ್ಳಾಯಿತು. ನಮ್ಮವರು ಶತ್ರುಗಳನ್ನು ಹೊಡೆದೋಡಿಸಿರಲಿ, ಇಲ್ಲದಿರಲಿ, ನಮ್ಮ ಸೈನಿಕರನ್ನು ನಾವು ಕಂಡಕೂಡಲೇ ನಮ್ಮ ಗಾಯಗಳ ಬಾಧೆಯನ್ನು ತಾಳಿಕೊಳ್ಳಲಾರದೆ ಸಂಕಟಪಡುತ್ತಿದ್ದ ನಾವು, ಇನ್ನು ನಮ್ಮನ್ನು ವೈದ್ಯಶಾಲೆಗೆ ಸೇರಿಸುವರೆಂದು ಬಹಳ ಸಂತೋಷಿಸಿ ಧೈರ್ಯಗೊಂಡೆವು. ಆದರೆ ಆ ನಮ್ಮ ಸಂತೋಷವು ವ್ಯರ್ಥವಾಯಿತು. ಧೈರ್ಯವು ಮಣ್ಣುಗೂಡಿತು. ನಮ್ಮ ಸೈನಿಕರು ಗಾಯಗೊಂಡಿದ್ದ ನಮ್ಮಲ್ಲಿ ಯಾರು ನಡೆಯಬಲ್ಲವರಾಗಿದ್ದರೋ ಅಂಥವರನ್ನು ಮಾತ್ರ ತಮ್ಮ ಸಂಗಡ ಕರೆದುಕೊಂಡು ಹೋಗಿ, ಉಳಿದವರಿಗಾಗಿ ಬಂಡಿಗಳನ್ನು ಕಳುಹಿಸುತ್ತೇವೆಂದು ಹೇಳಿಹೋದರು. ಆದರೆ ತಿರಿಗಿಬಂದು ನಮ್ಮನ್ನು ನೋಡಿದವರೇ ಇಲ್ಲ. ಮರುದಿನ ಬೆಳಗ್ಗೆ ನಮ್ಮ ಪುಣ್ಯವಶದಿಂದ ಫ್ರೆಂಚ್‌ವೈದ್ಯರು ನಾವಿದ್ದ ಗ್ರಾಮಕ್ಕೆ ಪ್ರವೇಶಿಸಿದರು. ಆ ಮಹಾನುಭಾವರು ನಮ್ಮ ನಿರ್ಗತಿಕವಾದ ಸ್ಥಿತಿಯನ್ನು ನೋಡಿ ಬಹಳ ಪಶ್ಚಾತ್ತಾಪಪಟ್ಟು, ತತ್‌ಕ್ಷಣವೇ ನಮ್ಮ ಗಾಯಗಳಿಗೆ ಮದಿಬಟ್ಟೆಗಳನ್ನು ಸುತ್ತಿದರು ಆ ವೈದ್ಯರಲ್ಲೊಬ್ಬರು ಜರ್ಮನ್‌ಭಾಷೆಯಲ್ಲಿ ಬಹು ಚೆನ್ನಾಗಿ ಮಾತನಾಡುತ್ತಿದ್ದರು. ಆ ಸಾಯಂಕಾಲವೇ ಇಂಗ್ಲೀಷರೂ ಫ್ರೆಂಚರೂ ನಮಗಾಗಿ ಬಂಡಿಗಳನ್ನು ತರಿಸಿದರು. ನಾವು ಬಹುಶಃ ೨೦೦ ಮಂದಿಗಳಿದ್ದೆವು. ತಮಗೋಸ್ಕರ ಪ್ರಾಣದಾಸೆಯನ್ನು ಬಿಟ್ಟು ಹೋರಾಡಲು ಬಂದು ಇಂಥ ವಿಪತ್ಸಮುದ್ರದಲ್ಲಿ ನಾವು ಮುಳುಗಿದ್ದರೂ ನಮ್ಮಮೇಲೆ ನಮ್ಮ ಜರ್ಮನರಿಗೆ ಸ್ವಲ್ಪವೂ ಕರುಣವು ಹುಟ್ಟದೆಹೋಯಿತು. ನಮ್ಮ ಶತ್ರುಗಳೆಂದು ಹೇಳಲ್ಪಡುತ್ತಿರುವ ಇಂಗ್ಲೀಷರು ಈಗಉಪಚರಿಸುತ್ತಿರುವ ಮಟ್ಟಿಗಾದರೂ ನಮ್ಮವರು ಆದರಿಸದೆ, ಕಠಿನಾತ್ಮರಾಗಿ ಕೇಳುವವರೇ ದಿಕ್ಕಿಲ್ಲದ ಒಂದು ದೊಡ್ಡಿಯಲ್ಲಿ ನಮ್ಮನ್ನು ಕೆಡಹಿಬಿಟ್ಟು ತಿರಿಗಿಯೂ ನೋಡದೆ ಹೋದರು. ಇಂಥ ಹೀನಸ್ಥಿತಿಯಲ್ಲಿರುವ ನಾವು ಶತ್ರುಗಳ ಕೈಗೆ ಸಿಕ್ಕದೆ ನಮ್ಮವರು ಎಂಬ ಅಭಿಮಾನದಿಂದ ಜರ್ಮನರ ಬರುವಿಕೆಯನ್ನೇ ನಿರೀಕ್ಷಿಸಿಕೊಂಡಿದ್ದರೆ, ಅಥವಾ ಅವರ ಅಧೀನದಲ್ಲೇ ಇದ್ದರೆ ನಿಜವಾಗಿಯೂ ಇಷ್ಟುಹೊತ್ತಿಗೆ ಈ ಪ್ರಪಂಚದ ಸಂಬಂಧವನ್ನೇ ನಾವು ಬಿಟ್ಟುಹೋಗುತ್ತಿದ್ದೆವು. ಆ ದಿನ ಮಧ್ಯಾಹ್ನವೇ ನಮ್ಮನ್ನು ಇಂಗ್ಲೀಷು ಫ್ರೆಂಚರುಗಳು ಮೋಟಾರುಬಂಡಿಗಳಲ್ಲಿ ಮಲಗಿಸಿ ರೈಲುಸ್ಟೇಷನ್ನನ್ನು ಸೇರಿಸಿದರು. ನಮಗೆ ಕೊಡುವ ಆಹಾರಗಳನ್ನು ಅಧಿಕಾರಿಗಳು ಬಹಳ ಶ್ರದ್ಧೆಯಿಂದ ವಿಚಾರಿಸಿಕೊಳ್ಳುತ್ತಿದ್ದರು. ಹೊಗೆಬಂಡಿಯಲ್ಲಿ ಪ್ರಯಾಣಮಾಡುತ್ತಿದ್ದ ನಮ್ಮ ಕೂಡ ಗಾಯಗೊಂಡ ಫ್ರೆಂಚ್‌ಸೈನಿಕರೂ ಇದ್ದರು. ಹಗಲೂ ರಾತ್ರಿ ಪ್ರಯಾಣಮಾಡಿದೆವು. ಎಲ್ಲಿಗೆ ಕರೆದುಕೊಂಡು ಹೋಗುವರೆಂಬುದು ಮಾತ್ರ ಗೊತ್ತಾಗಲಿಲ್ಲ. ೩ ನೆಯ ದಿನ ನಮ್ಮನ್ನು ಬೋರ್ಡೆಕ್ಸಿನಲ್ಲಿಳಿಸಿದರು. ಹೊಗೆಬಂಡಿಯಿಂದಿಳಿದ ಕೂಡಲೇ ಪ್ರಜೆಗಳು ನಮಗೆ ತಿನ್ನುವುದಕ್ಕೂ ಕುಡಿಯುವುದಕ್ಕೂ ಪದಾರ್ಥಗಳನ್ನಣಿಮಾಡಿಟ್ಟಿರುವುದನ್ನು ಕಂಡೆವು. ನನಗೆ ಅವುಗಳನ್ನು ಹಂಚುವುದರಲ್ಲಿ ಇವರು ಮಿತ್ರರು-ಇವರು ಶತ್ರುಗಳು ಎಂಬ ಭೇದವನ್ನು ಅವರು ಸ್ವಲ್ಪಮಾತ್ರವೂ ಮಾಡುತ್ತಿರಲಿಲ್ಲ. ಜ್ಞಾಪಕಾರ್ಥವಾಗಿ ನಮ್ಮ ಅಂಗಿಗಳ ಗುಂಡಿಗಳನ್ನು ಮಾತ್ರ ಅವರು ಕತ್ತರಿಸಿ ಇಟ್ಟುಕೊಳ್ಳುತ್ತಿದ್ದರು. ಅಲ್ಲಿ ನಮಗೆ ವಿಶ್ರಾಂತಿಯನ್ನು ಕೊಟ್ಟಿದ್ದು, ಮರುದಿವಸ ಮೋಟಾರುಬಂಡಿಗಳಲ್ಲಿ ಕುಳ್ಳಿರಿಸಿ ಬ್ರಿಯೆರಿಟ್ಜಿಗೆ ಕರೆದುಕೊಂಡು ಹೋದರು ಇಲ್ಲಿ ಸಮುದ್ರತೀರದಲ್ಲಿ ಒಳ್ಳೆಯ ಸುಂದರವಾದ ಕಲ್ಲಿನಿಂದ ಕಟ್ಟಿದ್ದ ಕಾರಲ್ಟನ್ ಭೋಜನಾಲಯದಲ್ಲಿ ನಾವು ಫ್ರೆಂಚ್‌ಸೈನಿಕರೊಡನೆ ಕಲೆತು ಸುಖವಾಗಿದ್ದೇವೆ. ಇಂಥ ಮನೋಹರವಾದ ಪ್ರದೇಶವನ್ನು ಇದುವರೆಗೆ ನಾನು ಎಲ್ಲೂ ನೋಡಿರಲಿಲ್ಲ. ನಮ್ಮನ್ನು ಇಲ್ಲಿನ ಅಧಿಕಾರಿಗಳು ಬಹು ಶ್ರದ್ಧೆಯಿಂದ ವಿಚಾರಿಸಿಕೊಳ್ಳುತ್ತಿದ್ದಾರೆ. ನಮಗೆ ಉತ್ತಮವಾದ ಆಹಾರವು ದೊರೆಯುತ್ತಿದೆ. ನಮಗೆ ಯಾವಾಗ ಏನು ಬೇಕಾದರೂ ಅದನ್ನು ತಂದುಕೊಡುವುದಕ್ಕೆ ಅನೇಕ ಸೇವಕರು ಕಾದು ನಿಂತಿದ್ದಾರೆ. ಈ ಪಟ್ಟಣದ ಶ್ರೀಮಂತರನೇಕರು ನಮಗೆ ಪ್ರತಿದಿನವೂ ಮಿಠಾಯಿ-ಸಿಗರೇಟುಗಳನ್ನು ಕೊಟ್ಟು ಹೋಗುತ್ತಿದ್ದಾರೆ. ನಮಗೆ ಯಾವವಿಷಯದಲ್ಲೂ ಕೊರತೆಯಿಲ್ಲ. ನಿಜವಾಗಿಯೂ ನಾವು ಸೆರೆಯಾಳುಗಳಾಗಿದ್ದೇವೆಂದು ನಮಗೆ ತೋರುವುದೇ ಇಲ್ಲ. ಈಗಿನ ಯುದ್ಧವು ಬೇಗನೆ ಮುಗಿವುದೆಂದು ನಾನು ನಂಬುತ್ತೇನೆ. ಮುಗಿದಕೂಡಲೇ ನಾನು ನಿನ್ನನ್ನು ಕಾಣಬಹುದು. ಆಗ ನನ್ನ ಯುದ್ಧಚರಿತ್ರವನ್ನು ವಿವರಿಸಿ ಹೇಳುತ್ತೇನೆ. ಏಕೆಂದರೆ ಎಲ್ಲವೂ ನನಗೆ ಸ್ವಪ್ನಾವಸ್ಥೆಯಾಗಿ ಕಾಣುತ್ತಿದೆ. ನಾವು ಇಲ್ಲಿ ೩೦ ಮಂದಿಗಳಿದ್ದೇವೆ. ಉಳಿದವರು ಬೇರೆಕಡೆಯಲ್ಲಿಡಲ್ಪಟ್ಟಿರಬಹುದು. ಅವರ ವಿಷಯವು ನನಗೆ ತಿಳಿಯದು. ಇಲ್ಲಿ ಸೌಖ್ಯವಾಗಿದ್ದೇನೆ. ಬೇಗನೆ ನಿಮ್ಮೆಲ್ಲರನ್ನೂ ನೋಡುತ್ತೇನೆ ಎಲ್ಲರಿಗೂ ನನ್ನ ವಂದನೆಯನ್ನು ತಿಳಿಯಿಸು. ಇದಕ್ಕೆ ಉತ್ತರವನ್ನು ನೀನು ಬರೆಯಬೇಡ, ಏಕೆಂದರೆ— ನನಗೆ ಅದು ಸೇರದೆಹೋಗಬಹುದು.” ಎಂದು ಬರೆದಿದ್ದಾನೆ. ತಮ್ಮವರಿಂದ ತಮಗೆ ವಿಪತ್ಸಮಯದಲ್ಲಿ ಸರಿಯಾದ ಆದರಣೆಯನ್ನು ಪಡೆಯದೆ ನರಳುತ್ತಿದ್ದ ಶತ್ರುಗಳಾದ ಜರ್ಮನರನ್ನೂ ಇಂಗ್ಲೀಷ್ ಫ್ರೆಂಚ್ ಸೈನ್ಯಾಧಿಕಾರಿಗಳು ಎಷ್ಟು ಆದರದಿಂದ ಕಾಣಲು ಏರ್ಪಾಡು ಮಾಡಿರುವರೆಂಬುದನ್ನು ಮೇಲಣ ವಿವರಣೆಯು ತಿಳಿಯಿಸುತ್ತದೆ. ಇಂಥ ಧರ್ಮಾತ್ಮರನ್ನು ದೈವವು ಕೈಬಿಡುವುದೆ ?

ಸೆರೆ ಸಿಕ್ಕಿದ ಶತ್ರುಗಳನ್ನು ಇಂಗ್ಲೀಷ್ ಫ್ರೆಂಚರುಗಳು ಹೇಗೆ ಆದರಿಸುವರೆಂಬ ಸಂಗತಿಯು ಮೇಲಣ ಪತ್ರಿಕೆಗಳಿಂದ ಗೊತ್ತಾಯಿತಷ್ಟೆ. ಸೆರೆ ಸಿಕ್ಕಿದ ಇಂಗ್ಲೀಷ್ ಫ್ರೆಂಚ್‌ಸೈನಿಕರನ್ನು ಜರ್ಮನರು ಹೇಗೆ ಆದರಿಸುವರೆಂಬುದು ಈ ಕೆಳಗಣ ಲೇಖನದಿಂದ ವಿದಿತವಾಗುವುದು.

ಯುದ್ಧಾಂಗಣದಲ್ಲಿ ನಡೆದ ಸಂಗತಿಯನ್ನು ತನ್ನ ಕಣ್ಣಾರ ಕಂಡವನೊಬ್ಬನು ಈ ಕೆಳಗೆ ಕಂಡಂತೆ ಬರೆದಿದ್ದಾನೆ— “ ಜರ್ಮನ್ ಘಾತುಕರ ಕೈಗೆ ಸಿಕ್ಕಿಬಿದ್ದ ಗಾಯಗೊಂಡ ಇಂಗ್ಲೀಷ್ ಫ್ರೆಂಚ್ ಸೈನಿಕರ ಸ್ಥಿತಿಯನ್ನು ನಾನು ಒಂದುಕಡೆ ಕಂಡೆನು. ನಾನು ಆಗ ಕಂಡುದು ನನ್ನ ಜನ್ಮಾಂತದವರೆಗೂ ಮರೆಯುವಂತಾಗಿಲ್ಲ. ಇಂಥ ಕಠಿನತ್ವವನ್ನು ಇದುವರೆಗೆ ಎಲ್ಲೂ ನೋಡಿಯೂ ಇಲ್ಲ ಕೇಳಿಯೂ ಇಲ್ಲ. ದನಗಳನ್ನು ಕೊಡುವ ಒಂದು ಹೊಗೆಬಂಡಿಯಲ್ಲಿ ಕೆಲ ಫ್ರೆಂಚ್‌ಸೈನಿಕರ ಮಧ್ಯದಲ್ಲಿ ಮೂವರು ಇಂಗ್ಲೀಷ್‌ಸೈನಿಕರು ಭಯಂಕರವಾದ ಗಾಯಗಳಿಂದ ನರಳುತ್ತ ಅಸಹ್ಯಕರವಾದ ಕಸದ ಹುಲ್ಲಿನಮೇಲೆ ಮಲಗಿದ್ದರು. ಅವರ ಶೋಚನೀಯವಾದ ಸ್ಥಿತಿಯು ನೋಡುವುದಕ್ಕೂ ಅಸಹ್ಯಕರವಾಗಿದ್ದಿತು ಇಷ್ಟೇ ಅಲ್ಲದೆ ಅವರು ಕಳೆದೈದುದಿನಗಳಿಂದಲೂ ಆಹಾರ ವೆಂದರೆ ಎಂತಹದೋ ಅರಿಯದೆಇದ್ದರೆಂದು ಕೇಳಿದೆನು. ಅವರಿದ್ದ ಬಂಡಿಯ ಹತ್ತಿರ ೨೦-೩೦ ಮಂದಿ ಜರ್ಮನರು ನಿಂತುಕೊಂಡು, ಆ ದುರದೃಷ್ಟವಂತರಾದ ಇಂಗ್ಲೀಷ್ ಸೈನಿಕರನ್ನು ನೋಡಿ ಅಸಹ್ಯಕರವಾದ ಮಾತುಗಳಿಂದ ಹಂಗಿಸುತ್ತಿದ್ದರು. ಹಸಿವಿನಿಂದ ಬಳಲಿದ್ದ ಆ ಮೂವರು ಸೈನಿಕರ ಮುಂದೆಯೂ ೨-೩ ಬರಿಯ ಪಾತ್ರೆಗಳನ್ನು ಹಿಡಿದು “ ಹಂದಿಗಳಿ! ನಿಮಗೆ ಆಹಾರವು ಬೇಕೆ ? ನಿಮ್ಮಬಳಿಯಲ್ಲೇನಿದೆ ? ನಿಮಗೆ ಮರಣವು ಸಮೀಪಿಸಿದೆ; ಅದೇ ನಿಮಗೆ ಫಲ ” ಎಂಬುದು ಮೊದಲಾದ ನೀಚವಚನಗಳನ್ನಾಡಿ ಅವರನ್ನು ಮತ್ತಷ್ಟು ಹಿಂಸೆಪಡಿಸುತ್ತಿದ್ದರು. ಮತ್ತೂ ಗಾಯದಿಂದ ಸುರಿವ ರಕ್ತಕ್ಕೆ ತಡೆಯೂ ಇಲ್ಲದೆ, ಹೊಟ್ಟೆಗೆ ಸ್ವಲ್ಪವೂ ಆಹಾರವಿಲ್ಲದೆ ದೈವಕ್ಕೆ ಮೊರೆಯಿಟ್ಟುಕೊಳ್ಳುತ್ತ ಬಿದ್ದಿದ್ದ ಆ ಸೈನಿಕರಮೇಲೆ ಈ ಕ್ರೂರ ಮೃಗಪ್ರಾಯರು ಲೇಶವೂ ಕನಿಕರವೆಂಬುದಿಲ್ಲದೆ ತುಪಾಕಿಯನ್ನು ಗುರಿಯಿಟ್ಟು ಹೊಡೆಯುವಂತೆ ತೋರಿಸುತ್ತಿದ್ದರು. ಈ ದುರ್ಮಾರ್ಗರ ಚೇಷ್ಟೆಗಳನ್ನೆಲ್ಲಾ ನೋಡಿ ನನಗೆ ಸೈರಿಸದೆಹೋಯಿತು. ಮಾತಾಡುವುದೇನು ? ಮಂಕಾದ ಎಮ್ಮೆಯಂತೆ ಸುಮ್ಮನೆ ಬಾಯ್ಮಿಡುಕದೆ ನಿಂತುಕೊಂಡಿದ್ದೆನು. ಕಡೆಗೆ ತಡೆಯಲಾರದೆ, ಈ ಕಿರಾತರ ಚೇಷ್ಟೆಗಳನ್ನು ನೋಡುತ್ತ ನಗುತ್ತ ನಿಂತಿದ್ದ ಅಧಿಕಾರಿಯ ಬಳಿಗೆ ನಾನು ಹೋಗಿ “ ಈ ನಿರ್ಗತಿಕರಮೇಲೆ ಇಷ್ಟು ಕ್ರೌರ್ಯವನ್ನು ಏಕೆ ತೋರಿಸುತ್ತೀರಿ ? ಅವರೂ ನಿಮ್ಮಂತಹ ಮನುಷ್ಯರಲ್ಲವೆ ? ನಿಮ್ಮಂತೆಯೇ ಅವರೂ ತಾವು ಮಾಡಬೇಕಾದ ಕೆಲಸವನ್ನು ಮಾಡಿದರು ” ಎಂದು ಹೇಳಿದನು. ಇದಕ್ಕೆ ಹೆಚ್ಚಾಗಿ ನಾನು ಯಾವ ಮಾತನ್ನೂ ಆಡಲಿಲ್ಲ. ಅದರಮೇಲೆ ಆ ಅಧಿಕಾರಿಯು “ ಏನು ? ಅವರು ಮಾಡಬೇಕಾದ ಕೆಲಸವನ್ನು ಮಾಡಿದರೊ? ಇಲ್ಲ; ಇಲ್ಲ. ಅವರು ಹಂದಿಗಳು; ಹಂದಿಗಳು ಮಾಡತಕ್ಕ ಕೆಲಸವನ್ನು ಮಾಡಿದರು. ಅವರು ಮಾಡಬಾರದ ಕೆಲಸವನ್ನು ಮಾಡಿ ಧನಾ

ರ್ಜನೆಯನ್ನು ಮಾಡುವ ಹಂದಿಗಳು, ಎಂದು ಉತ್ತರವನ್ನಿತ್ತನು.'' ಎಂದು ಬರೆದಿರುವುದಲ್ಲದೆ ಇಂಗ್ಲೀಷರೆಂಬುವರು ತಮ್ಮ ಕಣ್ಣಿಗೆ ಬಿದ್ದರೆ ಅವರನ್ನು ಕಾರಣವಿಲ್ಲದೆ ಇದ್ದರೂ ಕೊಂದು ಬಿಡುತ್ತೇವೆಂದು, ಜರ್ಮನರು ನನ್ನೊಡನೆ ಹೇಳಿರುವರೆಂದೂ, ಇವರು ಮಾಡಿರುವ ಕ್ರೂರ ಕಾರ್ಯಗಳನ್ನು ಕುರಿತು ವಿಚಾರ ನಡೆಯುವಾಗ್ಗೆ ನನ್ನನ್ನು ಕರೆಯಿಸಿಕೊಂಡರೆ ನನ್ನ ಕಣ್ಣಾರನೋಡಿರುವ ವಿಷಯಗಳನ್ನು ನಾನು ನಿರ್ಭೀತಿಯಿಂದ ಹೇಳುವೆನೆಂದು ಸಹ ಈ ಲೇಖಕರು ಸೀಮೆಯ ಒಂದಾನೊಂದು ವೃತ್ತಪತ್ರಿಕೆಗೆ ಬರೆದಿದ್ದಾರೆ. ಈ ಲೇಖನವನ್ನು ಓದಿದ ಇಂಗ್ಲೀಷ್ ಮಂತ್ರಿಯವರು ಹೀಗೆ ಜರ್ಮನರ ಮೃಗಪ್ರಾಯತ್ವವನ್ನು ಕಣ್ಣಾರ ಕಂಡು ವೃತ್ತಪತ್ರಿಕೆಗಳ ದ್ವಾರಾ ಅದನ್ನು ಪ್ರಕಟಿಸಿದ ಲೇಖಕರಿಗೆ ತಮ್ಮ ವಂದನೆಯನ್ನು ಆ ವೃತ್ತಪತ್ರಿಕೆಯ ಮೂಲಕವೇ ತಿಳಿಯಿಸುವ ಉತ್ತರವನ್ನು ಬರೆದಿದ್ದಾರೆ. ಇಂಥ ನರರಾಕ್ಷಸತನವೇ ಮೂರ್ತೀಭವಿಸಿರುವ ಜರ್ಮನ್ ಜನರಿಗೆ ಧರ್ಮದೇವತೆಯು ದಾರಿಕೊಡುವಳೆ ? ಜಯಲಕ್ಷ್ಮಿಯು ಆಲಿಂಗಿಸುವಳೆ ?

ಯುದ್ಧವಾರ್ತೆಯು.

(ಪಶ್ಚಿಮರಣರಂಗ)

ಕಳೆದ ವಾರದಲ್ಲಿ ಪಶ್ಚಿಮರಣರಂಗದಲ್ಲಿ ಹೆಚ್ಚಿನ ವಾರ್ತೆಗಳೇನೂ ಇಲ್ಲ. ಜರ್ಮನರಿಗೆ ಈಗ ಪೂರ್ವದಕಡೆ ರಷ್ಯನರ ಹೊಡೆತವು ಹೆಚ್ಚಾಗಿರುವುದರಿಂದ ಪಶ್ಚಿಮರಣರಂಗದಿಂದ ೪ ಆರ್ಮಿಕೋರ್‌ಗಳನ್ನು ಆ ಪ್ರಾಂತಕ್ಕೆ ಕರೆಯಿಸಿಕೊಂಡಿದ್ದಾರೆ. ಜರ್ಮನ್ ಚಕ್ರವರ್ತಿಯೂ ಆ ಕಡೆಗೆ ಸ್ವತಃ ಹೋಗಿದ್ದಾರೆ. ಜರ್ಮನರು ಹಿಂದೆಗೆದು ಬಿಟ್ಟುಹೋದ ಕಂದಕಗಳನ್ನೆಲ್ಲಾ ನಮ್ಮವರು ಆಕ್ರಮಿಸಿಕೊಳ್ಳುತ್ತಿದಾರೆ. ಬೆಲ್ಜಿಯಮ್ಮಿನಲ್ಲಿ ಕೆಲಕಡೆ ಫಿರಂಗಿಯುದ್ಧಗಳು ನಡೆಯುತ್ತಿವೆ. ಅರ್ರಾಸಿಗೆ ಉತ್ತರದಲ್ಲಿ ಜರ್ಮನರು ಬಹು ಭೀಕರವಾಗಿ ಫಿರಂಗಿಗಳನ್ನು ಹಾರಿಸುತ್ತಿದ್ದರು. ಉಳಿದಕಡೆಯಲ್ಲಿ ಯುದ್ಧವು ಸಾಮಾನ್ಯತರವಾಗಿದೆ. ಕೆಲಕಡೆ ಯುದ್ಧವು ಆಟದಂತಾಗಿದೆ. ಮಿತ್ರಮಂಡಲಿಯ ವೈಮಾನಿಕರು ಶತ್ರುಗಳ ಮೇಲೆ ಗುಂಡನ್ನೆಸೆದು ಯುದ್ಧಕ್ಕೆ ಸೇರಿದ್ದಾರೆ. ಜರ್ಮನ್ ಸೈನಿಕರನೇಕರು ಕಂದಕದಲ್ಲಿ ಅಡಗಿಕೊಂಡು ಶೀತದಿಂದ ಅಲ್ಲಲ್ಲೇ ಪ್ರಾಣಗಳನ್ನು ಬಿಟ್ಟಿದ್ದಾರೆ. ತಕ್ಕ ಆಹಾರಗಳೂ ಉಪಚಾರಗಳೂ ಅವರಲ್ಲಿ ಕಡಿಮೆಯಾಗಿವೆ. ಮಿತ್ರಮಂಡಲಿಯವರು ಹೊಗೆಬಂಡಿಗಳ ಮೂಲಕ ಯುದ್ಧರಂಗಕ್ಕೆ ಆಹಾರ್ಯಸಾಮಗ್ರಿಗಳನ್ನು ವಿಶೇಷವಾಗಿ ಸಾಗಿಸುತ್ತಲೂ, ಕಾಲಕಾಲಕ್ಕೆ ಕಾಫಿ, ಬಿಸಿನೀರು, ಸಿಗರೇಟುಗಳನ್ನು ಒದಗಿಸಿಕೊಡುತ್ತಲೂ ಶುಚಿಯಾದ ಆಹಾರಗಳನ್ನು ಕೊಡುತ್ತಲೂ ಇದ್ದಾರೆ. ಮತ್ತು ಕೆಲಕಡೆ ಸೈನಿಕರಿರುವ ಬಳಿಯಲ್ಲೇ ಅಡುಗೆಯನ್ನು ಮಾಡಿಸುವುದಕ್ಕೂ ಏರ್ಪಡಿಸಿದ್ದಾರೆ. ಸೈನಿಕರಿಗೆ ಯುದ್ಧಕಾಲದಲ್ಲಿ ಈಗಿನಂತೆ ಮತ್ತಾವಾಗಲೂ ಉತ್ಕೃಷ್ಟವಾದ ಭೋಜನವ್ಯವಸ್ಥೆಯಾಗಿರಲಿಲ್ಲ. ಈ ಏರ್ಪಾಟಿನಿಂದ ಮಿತ್ರಮಂಡಲಿಯ ಸೈನಿಕರಲ್ಲಿ ವಿಶೇಷ ರಣೋತ್ಸಾಹವಿದೆ. ಆದರಿಂದಲೇ ಶತ್ರುಗಳನ್ನು ಇದಿರಿಸಿ ಹಿಮ್ಮೆಟ್ಟಿಸುವುದರಲ್ಲಿ ಶ್ಲಾಘನೀಯವಾದ ಪರಾಕ್ರಮವನ್ನು ತೋರಿಸುತ್ತಿದ್ದಾರೆ. ಈಗಲೂ ಜರ್ಮನರಕಡೆಯ ೪೦ ಲಕ್ಷ ತಿದ್ದಿದ ಸೈನ್ಯಗಳಲ್ಲಿ ೩೦ ಲಕ್ಷ ಸೈನ್ಯವು ಫ್ರಾನ್ಸ್ [illegible] ರಣರಂಗದಲ್ಲಿಯೇ ಇದೆಯೆಂದು ಎಣಿಸಲ್ಪಟ್ಟಿದೆ.

ಪೂರ್ವರಣರಂಗ.

ಈಚೆಗೆ ಪ್ರತಿದಿನವೂ ನಡೆದ ಯುದ್ಧದಲ್ಲಿ ಜರ್ಮನ್ ಸೇನೆಯಲ್ಲಿ ಬಹಳ ನಷ್ಟವಾಗಿದೆ. ಮಸೂರಿಯಾಸರಸ್ಸುಗಳ ಬಳಿಯಲ್ಲಿ ಶತ್ರುಗಳ ಸುರಕ್ಷಿತವಾದ ಸ್ಥಾನಗಳಿಂದ ಅವರನ್ನು ಓಡಿಸಿ ಅದನ್ನು ರಷ್ಯನರು ಹಿಡಿದುಕೊಂಡಿದ್ದಾರೆ. ವಿಶ್ಚುಲಾ-ವಾರ್ಟಾನದಿಗಳ ಮಧ್ಯದಲ್ಲಿ ಹಲವುಕಡೆ ಯುದ್ಧವಾಗಿದೆ. ಇಲ್ಲಿ ಕೆಲ ಫಿರಂಗಿಗಳೂ ಅನೇಕಮಂದಿ ಜರ್ಮನರೂ ರಷ್ಯನರ ಅಧೀನವಾಗಿದ್ದಾರೆ. ಕಾರ್ಪೇಥಿಯಾ ಕಣಿವೆಯ ಹತ್ತಿರ ರಷ್ಯನರು ಮರಳಿ ೧೨೦೦ ಮಂದಿ ಆಸ್ಟ್ರಿಯಾ ಸೈನಿಕರನ್ನು ಹಿಡಿದಿದ್ದಾರೆ. ಜೆನಿಸೋವಿಟ್ಜು ಎಂಬ ಪಟ್ಟಣವನ್ನು ರಷ್ಯನರು ಮರಳಿ ಹಿಡಿದುಕೊಂಡಿದ್ದಾರೆ. ಜೆಚೋವಾ-ಕ್ರಾಕೋ-ಟಿಂಬಾರ್ಕ್ ಈ ಪ್ರಾಂತಗಳಲ್ಲಿ ನಡೆದ ಯುದ್ಧದಲ್ಲಿ ರಷ್ಯನರು ಜಯಶೀಲರಾಗಿ ೪೦೦೦ ಮಂದಿ ಆಸ್ಟ್ರಿಯನ್ ಸೈನಿಕರನ್ನು ಸೆರೆಹಿಡಿದರು. ಚಾಕ್ಕ್ ಎಂಬುದನ್ನು ಆಸ್ಟ್ರಿಯನ್ನರು ಕಾಪಾಡಿಕೊಳ್ಳುವುದಕ್ಕಾಗಿ ಬಹಳ ಸಾಹಸಮಾಡಿದರು. ಆದರೂ ರಷ್ಯನರು ಒಂದೇಆವೃತ್ತಿ ಅದರಮೇಲೆ ಬಲವಾಗಿ ಬಿದ್ದು ಕಾದಾಡಿ ವಶಪಡಿಸಿಕೊಂಡರು. ಅಲ್ಲಿ ೨೦೦೦ ಮಂದಿಗಳು ಸೆರೆಸಿಕ್ಕಿದರು; ೧೦ ಫಿರಂಗಿಗಳು ಸಿಕ್ಕಿದುವು. ವಿಜಿಗ್ರಾಡ್ ಪ್ರಾಂತದಲ್ಲಿ ೮ ಆಸ್ಟ್ರಿಯನ್ ಪಟಾಲಮ್ಮುಗಳು ಮಾಂಟಿನೀಗ್ರೋ ಸೈನ್ಯಗಳ ಮೇಲೆ ಬಿದ್ದು ಕಾದಾಡಿ ಸೋತುಹೋದುವು. ಆಸ್ಟ್ರಿಯಾದವರ ಬಹಳ ಮದ್ದು ಗುಂಡು ಮೊದಲಾದ ಸಾಮಾನುಗಳೂ ಕೆಲಮಂದಿ ಸೈನಿಕರೂ ಮಾಂಟಿನೀಗ್ರೋದವರಿಗೆ ಸಿಕ್ಕಿದುವು.

ತುರ್ಕಿ.

ಇಂಗ್ಲೀಷು ಫ್ರೆಂಚ್‌ಸೇನೆಗಳು ಆಡ್ರಿಯಾಟಿಕ್ ಸಮುದ್ರವನ್ನೂ ಡಾರ್ಡಿನೆಲ್ಸ್ ಜಲಸಂಧಿಯನ್ನೂ ಕಟ್ಟಿಬಿಟ್ಟು ಈಜಿಪ್ಟು ಸಮುದ್ರತೀರವನ್ನು ಕಾಪಾಡುತ್ತಲಿವೆ. ಅರ್‌ಜೆರಂ ಬಳಿಯಲ್ಲಿ ರಷ್ಯನರು ತುರ್ಕಿಯವರಮೇಲೆ ಬಿದ್ದು ಕಾದು ಓಡಿಸಿದರು. ಅವರು ತಮ್ಮ ರಕ್ಷಕಸ್ಥಾನಗಳಿಗೆ ಹೋಗಿ ಸೇರಿಕೊಂಡರು. ತುರ್ಕಿಯವರಿಗೂ ರಷ್ಯನರಿಗೂ ಈಗ ಯುದ್ಧವಾಗುತ್ತಿರುವ ಸ್ಥಳದಲ್ಲಿ ಚಳಿಯು ವಿಶೇಷವಾಗಿದೆ. ತುರ್ಕಿಯ ಸೈನಿಕರು ಆಹಾರವಿಲ್ಲದೆ ತಾಪತ್ರಯಪಡುತ್ತಿದ್ದಾರೆ. ಚಳಿಯನ್ನು ತಡೆಯುವ ಉಡುಪುಗಳಿಲ್ಲದೆ ಬಹುಜನರು ಅವರಕಡೆಯಲ್ಲಿ ಸಾಯುತ್ತಿದ್ದಾರೆ. ಈಗ ರಷ್ಯನರು ಕಪ್ಪುಸಮುದ್ರತೀರದಲ್ಲಿ ತುರ್ಕಿಯವರ ಯುದ್ಧದ ಹಡಗು ಒಂದೂ ಇಲ್ಲದಂತೆ ಮಾಡಿದ್ದಾರೆ. ಯೂಫ್ರಟೀಸ್ ನದೀತೀರದಲ್ಲಿ ತುರ್ಕಿಯ ಸೈನ್ಯಗಳು ಕೂಡಿರುವಲ್ಲಿ ರಷ್ಯನ್ ಸೈನ್ಯಗಳು ಅವರಮೇಲೆ ಬಿದ್ದು ಓಡಿಸಿಬಿಟ್ಟರು. ಅವರ ೨ ಫಿರಂಗಿಗಳೂ ಕೆಲ ಸೈನಿಕರೂ ರಷ್ಯನರಿಗೆ ಸಿಕ್ಕಿದರು.

ಮೈಸೂರ್ ಸ್ಟಾರ್.

ಸನ್ ೧೯೧೪ ನೆಯ ಡಿಸೆಂಬರ್ ತಾ|| ೬ ನೆಯ ಭಾನುವಾರ.

ಭಾರತೀಯ ಪರಾಕ್ರಮಗೌರವ.

ಪುರಾತನೇತಿಹಾಸ ಪುರಾಣಾದಿ ಪ್ರಸಿದ್ಧವಾದ ಭಾರತೀಯ ಶೌರ್ಯಪ್ರತಾಪ ಸಾಹಸಾದಿಗಳು ಕಾಲವೈಚಿತ್ರ್ಯದಿಂದ ಬೂದಿಮುಚ್ಚಿದ ಕೆಂಡದಂತೆಯೂ ಮೇಘಾಚ್ಛಾದಿತವಾದ ಸೂರ್ಯಮಂಡಲದಂತೆಯೂ ಇದ್ದುವು. ಈಗಿನ ಪಾಶ್ಚಾತ್ಯ ಮಹಾಯುದ್ಧಕ್ಕೆ ಮೂಲಭೂತರಾದ ಜರ್ಮನ್ ಚಕ್ರವರ್ತಿಯೆಂಬ ಜಂಝೂಮಾರುತನಿಂದ ಆ ಬೂದಿಯೂ ಮೇಘಾಚ್ಛಾದನವೂ ಕಡೆಸರಿದುಹೋಗಲು ಅವಕಾಶವಾಗಲಾಗಿ, ಆ ಅಗ್ನಿಸೂರ್ಯಮಂಡಲಗಳ ನಿಸರ್ಗತೇಜಸ್ಸು ಜಗತ್ತಿನಲ್ಲಿ ಪ್ರಜ್ವಲಿಸುವಂತಾಯಿತು. ಆದುಕಾರಣ, ಈಗಿನ ಯುದ್ಧವು ಕೆಲಕಾರಣಗಳಿಂದ ಅನಿಷ್ಟವಾದುದಾಗಿದ್ದರೂ ಭರತಖಂಡಕ್ಕೆ ಕೆಲಮುಖದಿಂದ ಹಿತವನ್ನೇ ಉಂಟುಮಾಡಲು ಸಾಧನವಾಗಿರುವುದೆಂದು ಹೇಳಬಹುದು.

ಈ ದೇಶದಿಂದ ಫ್ರಾನ್ಸು-ಆಫ್ರಿಕಾ-ಈಜಿಪ್ಟು ಮೊದಲಾದ ಕಡೆಗಳಿಗೆ ಯುದ್ಧಕ್ಕಾಗಿ ಭಾರತೀಯ ಸೈನ್ಯವು ಕಳುಹಲ್ಪಟ್ಟ ಬಳಿಕ, ಮಹಾ ಪಶ್ಚಿಮರಣರಂಗದಲ್ಲಿ ನಮ್ಮ ಸೈನಿಕರು ಸ್ತೋತ್ರಾರ್ಹವಾಗುವಂತೆ ತಮ್ಮ ಧೈರ್ಯಸ್ಥೈರ್ಯಶೌರ್ಯಾದಿಗಳನ್ನು ಪ್ರದರ್ಶಿಸುತ್ತ ಬಂದಿರುವ ಸಂತೋಷದ ಸಂಗತಿಯನ್ನು ನಾವು ಆಗಿಂದಾಗ್ಗೆ ವಿವರಿಸುತ್ತಲೇ ಬಂದಿರುವೆವಷ್ಟೆ. ಕಳೆದ ವಾರದಲ್ಲಿ ಬಂದಿರುವ ತಂತ್ರೀವಾರ್ತೆಗಳಲ್ಲಿ ಭಾರತೀಯ ಲೋಕವನ್ನೆಲ್ಲಾ ಅತ್ಯಧಿಕವಾಗಿ ಸಂತೋಷಗೊಳಿಸುವ ವಾರ್ತೆಗಳು ವಿಶೇಷವಾಗಿರುವುವು. ಅವುಗಳೊಳಗೆ ''ವಿಕ್ಟೋರಿಯಾ ಕ್ರಾಸ್'' ಎಂಬ ಬಿರುದು ಒಬ್ಬಾನೊಬ್ಬ ಭಾರತೀಯ ಸೈನಿಕನಿಗೆ ಅದರಲ್ಲೂ ಹಿಂದೂವಿಗೆ ಶ್ರೀಮಚ್ಚಕ್ರವರ್ತಿಯವರಿಂದ ಅನುಗ್ರಹಿಸಲ್ಪಟ್ಟಿತೆಂಬುದು ವಿಶೇಷವಾರ್ತೆಯಾಗಿರುವುದು. ಶೂರರಾದವರಿಗೆ ಕೊಟ್ಟು ಬಹುಮಾನಿಸಲಿಕ್ಕೆ ಅನೇಕ ಬಿರುದಾಂಕನಗಳು ಆಂಗ್ಲಸಾರ್ವಭೌಮರಿಂದ ಏರ್ಪಡಿಸಲ್ಪಟ್ಟಿವೆ. ಈ ವಿಕ್ಟೋರಿಯಾಕ್ರಾಸ್ ಬಿರುದು ಅಂಥ ಸಾಮಾನ್ಯಬಿರುದುಗಳ ಕೋಟಿಗೆ ಸೇರದೆ, ಬಹಳ ಶ್ರೇಷ್ಠವೆಂದು ಗಣಿಸಲ್ಪಟ್ಟಿದೆ. ಯೂರೋಪ್ಯ ಸೈನಿಕರಲ್ಲಿ ಅತ್ಯಂತ ಶೂರಾಗ್ರಣಿಗಳಾದವರಿಗೆ ಮಾತ್ರ ಇದು ಕೊಡಲ್ಪಡುತಕ್ಕದಾಗಿದೆ. ಇದು ಇದುವರೆಗೆ ಯಾವೊಬ್ಬ ಭಾರತೀಯ ಸೈನಿಕನಿಗೂ ದೊರೆತಿರಲಿಲ್ಲ. ಇಂಥ ಅಸಾಧಾರಣವಾದ ಬಿರುದನ್ನು ಸಂಪಾದಿಸಿದ ಶೂರಾಗ್ರಣಿಯಾದ ಭಾರತಸುಪುತ್ರನ ನಾಮಧೇಯವೇನೆಂದರೆ-ಹವಾಲ್ದಾರ್ ಗಂಗಾಸಿಂಗ್ ಎಂಬುದಾಗಿ. ಈತನು ಪಂಜಾಬಾಧಿಪತ್ಯದ ಕಾಂಗ್ರಾಜಿಲ್ಲೆಯ ಟಿಕ್ಕಾತಾಲ್ಲೂಕಿಗೆ ಸೇರಿದ ಕೋಗ್ರಾ ಎಂಬ ಗ್ರಾಮದವನು. ಈತನು ಯುದ್ಧದಲ್ಲಿ ತೋರಿಸಿದ ಮಹಾಪರಾಕ್ರಮವೇನೆಂದರೆ-ಒಂದು ಕಡೆ ಈತನೂ ಸೇರಿ ೧೬ ಮಂದಿ ಗೂರ್ಖಾಸೈನಿಕರಿದ್ದ ಕಂದಕದಮೇಲೆ ಬಹುಜನ ಜರ್ಮನ್‌ಸೈನಿಕರು ಬಂದು ಬಿದ್ದರು. ಇವರಿಗೆ ಆದ ಮುಷ್ಟಾಮುಷ್ಟಿ ಯುದ್ಧದಲ್ಲಿ ಉಳಿದ ೧೫ ಮಂದಿಗಳೂ ವೀರಸ್ವರ್ಗವನ್ನು ಹೊಂದಿದರು. ಉಳಿದಿದ್ದ ಈ ಗಂಗಾಸಿಂಗನು ಆ ಜರ್ಮನರ ದಳಪತಿಯನ್ನು ತುಪಾಕಿಗುಂಡಿನಿಂದ ಸುಟ್ಟು, ಅವನ ಕೈಕತ್ತಿಯನ್ನು ಕಿತ್ತುಕೊಂಡು ಅದರಿಂದಲೇ ಇನ್ನು ಹತ್ತುಮಂದಿ ಜರ್ಮನ್ ಸೈನಿಕರನ್ನು ಕತ್ತರಿಸಿ, ಆಗ ಶತ್ರುಗಳ ಏಟಿನಿಂದ ತನ್ನ ಕೈಕಾಲು ಎದೆಗಳ ಮೇಲೆ ೪-೫ ಗಾಯಗಳಾಗಿದ್ದರೂ ಸ್ವಲ್ಪ ಚೇತರಿಸಿಕೊಂಡನಂತರ ಶಿಬಿರಕ್ಕೆ ಬಂದು ಸೇರಿದನು. ಇಂಥ ಅಸಾಧಾರಣ ಶೌರ್ಯವನ್ನು ತೋರಿಸಿದುದರಿಂದಲೇ ಅಸಾಮಾನ್ಯವಾದ ಬಿರುದು ಈ ವೀರಾಗ್ರೇಸರನಿಗೆ ದೊರೆಯಿತು.

ಭರತಖಂಡದ ಪ್ರಾಚೀನ ಶೌರ್ಯತೇಜಸ್ಸನ್ನು ಉಳುಹಿಸುವ ವೀರರು ಇಂದಿಗೂ ಭರತಖಂಡದಲ್ಲಿರುತ್ತಿರುವರೆಂಬುದನ್ನು ಹವಾಲ್ದಾರ್ ಗಂಗಾಸಿಂಗರು ಜಗತ್ತಿನಲ್ಲೆಲ್ಲಾ ಯುದ್ಧಕಲಾವಿಶಾರದರೆಂದು ಹೇಳಲ್ಪಡುತ್ತಿರುವವರ ಮಧ್ಯದಲ್ಲಿ ಮೆರೆಯಿಸಿ ಗುಣಗ್ರಹಣ ಧೌರೇಯರಾದ ಆಂಗ್ಲಪ್ರಭುತ್ವದವರಿಂದ ಅಸಾಧಾರಣವಾದ ಮರ್ಯಾದೆಗೊಂಡುದರಿಂದ ಭರತಖಂಡವೇ ಮರ್ಯಾದಿಸಲ್ಪಟ್ಟಂತಾಗಿರುವುದು. ಈ ಗಂಗಾಸಿಂಗರ ಶೌರ್ಯಸಾಹಸಗಳೂ, ಅದಕ್ಕೆ ಪ್ರಭುತ್ವದವರು ಮಾಡಿದ ಮರ್ಯಾದೆಯೂ ಇತರ ಭಾರತೀಯ ಸೈನಿಕರಿಗೂ ವಿಶೇಷ ಪ್ರೋತ್ಸಾಹವಾಯಿತೆಂಬುದಕ್ಕೆ ಸಂಶಯವಿಲ್ಲ. ಎಲ್ಲ ತೆರದ ಕಾರ್ಯಗಳಲ್ಲೂ ಭಾರತೀಯರಿಗಿರುವ ವ್ಯಾಪಕಶಕ್ತಿಗೆ ತಕ್ಕ ಪ್ರೋತ್ಸಾಹಾದಿಗಳು ದೊರೆತರೆ ಹೇಗೆ ವಿಕಸನವಾಗುವುದೆಂಬುದಕ್ಕೆ ಪ್ರಸಕ್ತವಿಷಯವೊಂದು ನಿದರ್ಶನವಾಗಿರುವುದು. ಭೂಗರ್ಭಗತವಾದ ಹೇಮಾದಿಗಳನ್ನು ಖನಿಶೋಧನದಿಂದ ಹೊರಕ್ಕೆ ತೆಗೆದು ಪಾಶ್ಚಾತ್ಯಲೋಕವು ಸಂಪತ್ಸಮೃದ್ಧವಾಗುತ್ತಿರುವಂತೆ, ಗುಪ್ತಶಕ್ತಿಯುಳ್ಳ ಭಾರತೀಯ ಶೂರವಂಶೀಯರನ್ನು ಯುಕ್ತವಾದ ಸೈನಿಕೋದ್ಯೋಗಗಳಲ್ಲಿ ವರ್ಣಭೇದದ ಪಕ್ಷಪಾತವಿಲ್ಲದೆ ಗುಣೋತ್ಕರ್ಷಗ್ರಹಣದ ಮೇಲೆ ವಿಶೇಷವಾಗಿ ನಿಯೋಜಿಸಿಕೊಳ್ಳುತ್ತ ಬಂದರೆ, ಭರತಖಂಡವು ಇತರ ವಿಷಯದಲ್ಲಿ ಆಂಗ್ಲಸಾಮ್ರಾಜ್ಯ ಲಕ್ಷ್ಮಿಯ ಮುಖ್ಯಮಾಂಗಲ್ಯದಂತೆ ಹೇಗಿರುವುದೋ ಹಾಗೆ ಇಲ್ಲಿಯ ಭಾರತೀಯ ಸೈನಿಕರು ಆಂಗ್ಲಸಾಮ್ರಾಜ್ಯದ ಮುಖ್ಯವಾದ ಬೆನ್ನುಮೂಳೆಯಂತೆ ಪರಿಣಮಿಸದೆ ಇರಲಾರರು.

ಇದುವರೆಗಿನ ಯುದ್ಧದಿಂದೇನಾಯ್ತು ?

ಈಗಿನ ಮಹಾಯುದ್ಧವು ಆರಂಭವಾಗಿ ನಾಲ್ಕು ತಿಂಗಳು ತುಂಬಿದುವು. ಈ ಯುದ್ಧಕ್ಕೆ ಆಹ್ವಾನವನ್ನು ಮಾಡಿದವರು ಮಿತ್ರಪಕ್ಷದವರಲ್ಲ. ಇಂಗ್ಲೀಷರಿಗೂ, ಫ್ರೆಂಚರಿಗೂ, ಬೆಲ್ಜಿಯಮ್ಮಿನವರಿಗೂ, ರಷ್ಯನರಿಗೂ, ಸರ್ವಿಯಾದವರಿಗೂ ಯುದ್ಧಪ್ರಸಕ್ತಿಯೇ ಬೇಕಿರಲಿಲ್ಲ. ಮತ್ತೂ ಈಗ ಇಂಥ ಮಹಾಯುದ್ಧವು ಅಕಸ್ಮಾತ್ತಾಗಿ ಮೂಡುವುದೆಂದು ಇಂಗ್ಲೀಷ್-ಫ್ರೆಂಚ್‌ಮಿತ್ರರುಗಳು ಕನಸಿನಲ್ಲಿಯೂ ಎಣಿಸಿರಲಿಲ್ಲ. ನಮ್ಮ ಸಾರ್ವಭೌಮ ಪ್ರಭುತ್ವದವರಿಗಂತೂ ಯುದ್ಧವೆಂದರೆ ತ್ರಿಕರಣಪೂರ್ವಕವಾಗಿ ಸೇರದು. ಅವರು ಲೋಕಶಾಂತಿಯನ್ನು ಕೋರತಕ್ಕವರು. ಈಗಿರುವ ಪ್ರಪಂಚದ ೫ ನೆಯ ೧ ಭಾಗದ ತಮ್ಮ ಸಾಮ್ರಾಜ್ಯದ ಪ್ರಜೆಗಳ ಸೌಖ್ಯವೊಂದೇ ಅವರ ಪರಿಪಾಲನದ ಮುಖ್ಯಲಕ್ಷ್ಯವಾಗಿರುವುದು. ಆದುಕಾರಣ, ಅವರು ನೂತನ ದೇಶವನ್ನೇ ಆಗಲಿ, ದ್ರವ್ಯರೂಪವಾದ ಲಾಭವನ್ನೇ ಆಗಲಿ, ಮತ್ತಾವತೆರದ ಸ್ವಾರ್ಥವನ್ನೇ ಆಗಲಿ ಲಕ್ಷ್ಯವಾಗಿಟ್ಟುಕೊಂಡು ಈಗಿನ ಯುದ್ಧಕ್ಕೆ ನಿಂತಿಲ್ಲ. ಉಳಿದ ಅವರ ಮಿತ್ರಪಕ್ಷದವರ ಭಾವವೂ ಸ್ವಲ್ಪ ಹೆಚ್ಚುಕಡಿಮೆ ಹಾಗೆಯೇ ಇದ್ದಿತು. ಆದುಕಾರಣ ಯುದ್ಧವನ್ನಾರಂಭಿಸಿದವರು ಶತ್ರುಪಕ್ಷದವರು. ಅವರು ಯಾವ ದುರಾಸೆಯಿಂದ ಇದನ್ನುಪಕ್ರಮಿಸಿದರೋ ಅಂಥ ಆಶೆಯ ಚರಿತಾರ್ಥವೇನಾಗಿದೆಯೆಂಬುದನ್ನು ಈಗ ವಿಚಾರಮಾಡಬಹುದು.

ಯುದ್ಧಕ್ಕೆ ಉಪಕ್ರಮಮಾಡಿದ ೧೧ ದಿನಗಳೊಳಗಾಗಿ ಪ್ಯಾರಿಸ್ ಪಟ್ಟಣವನ್ನು ಹಿಡಿದುಕೊಳ್ಳುವುದೂ, ಆಗಸ್ಟ್ ತಾ|| ೧೫ ರಲ್ಲಿ ಪೂರ್ವದೊಳಗೆ ಪೋಲಾಂಡಿನಲ್ಲಿರುವ ವಾರ್ಸಾವನ್ನು ಹಿಡಿದುಕೊಳ್ಳುವುದೂ ಸಹ ಜರ್ಮನ್ ಚಕ್ರವರ್ತಿಯ ದುರಾಶಾಸಿದ್ಧಾಂತವಾಗಿದ್ದಿತು. ಇವೆರಡೂ ೪ ತಿಂಗಳಾದರೂ ಸಿದ್ಧಿಸಲಿಲ್ಲವೆಂಬುದು ವಾಚಕರಿಗೆ ಗೊತ್ತೇ ಇದೆ. ಜರ್ಮನಿಯು ಇಂಗ್ಲೆಂಡ್-ಫ್ರಾನ್ಸು-ಬೆಲ್ಜಿಯಂ ಮೊದಲಾದ ದೇಶದವರೊಡನೆಲ್ಲಾ ಹಾಸಿನಲ್ಲಿ ಬೆರೆದ ಹೊಗುನೂಲಿನಂತೆ ವಿಶೇಷವಾಗಿ ಬೆರಸಿಕೊಂಡಿದ್ದುದರಿಂದ ಅವರೆಲ್ಲರೂ ಇದರ ವರ್ತನದಲ್ಲಿ ಅಪನಂಬುಗೆಗೊಂಡಿರಲಿಲ್ಲ. ಕ್ಷುದ್ರವಾದ ಕಾರಣವೇನನ್ನಾದರೂ ಕಲ್ಪಿಸಿಕೊಂಡು ಇದು ಇಷ್ಟು ಘೋರವಿಪತ್ತಿಗೆ ಅಂಕುರಾರೋಪಣ ಮಾಡುವುದೆಂದು ಅವರಾರೂ ನೆನೆಸಿರಲಿಲ್ಲ. ಅವರು ಹಾಗೆ ಯಥಾಜಾತರಾಗಿ ಮೋಸಹೋದುದು ಜರ್ಮನಿಗೆ ಬಹು ಸಹಾಯವಾಯಿತು. ಈ ಗೋಮುಖವ್ಯಾಘ್ರವು ಥಟ್ಟನೆ ಮೊಗವಾಡವನ್ನು ತೆಗೆದು ತನ್ನ ನಿಜಸ್ವರೂಪವನ್ನು ಹೊರಹಾಕಿತು. ಆಗ ಮಿತ್ರಮಂಡಲಿಯವರೆಲ್ಲರೂ ಬೆರಲು ಕಚ್ಚುವಂತಾಯಿತು. ಮಾಡುವುದೇನು ? ಜರ್ಮನಿಯು ತನ್ನ ಗೂಢೋದ್ದೇಶ ಸಾಧನೆಗಾಗಿ ೩೦-೩೫ ವರ್ಷಗಳಿಂದ ಯುದ್ಧಸನ್ನಾಹ ಮಾಡಿಕೊಂಡಿದ್ದುದೆತ್ತ ! ಮಿತ್ರಮಂಡಲಿಯವರು ಆಗ ಎಚ್ಚತ್ತು ಸೈನ್ಯಾದಿ ಸಹಾಯಸನ್ನಾಹವನ್ನು ಮಾಡಿಕೊಳ್ಳುವುದೆತ್ತ !! ಈ ಕಾರಣದಿಂದ ಮೊಟ್ಟಮೊದಲು ಜರ್ಮನರ ದಾಳಿಗೆ ಥಟ್ಟನೆ ಪ್ರತಿಭಟಿಸುವಷ್ಟು ಅನುಕೂಲ್ಯವು ಮಿತ್ರಮಂಡಲಿಗಿರಲಿಲ್ಲ. ಜರ್ಮನಿಯ ಭೀತಿಗಾಗಿ ಫ್ರಾನ್ಸು ತನ್ನ ಪೂರ್ವದ ಎಲ್ಲೆಕಟ್ಟುಗಳಲ್ಲಿ ನಿಶಿತವಾದ ರಕ್ಷಣೋಪಾಯಗಳನ್ನು ಸ್ಥಾಪಿಸಿ, ಆ ಭಾಗದಲ್ಲಿ ಶತ್ರುಗಳ ಪ್ರವೇಶಕ್ಕೆ ದುರ್ಗಮತ್ವವನ್ನು ಮೊದಲಿಂದಲೂ ಕಲ್ಪಿಸಿದ್ದಿತು. ಉತ್ತರದಲ್ಲಿ ತಟಸ್ಥವಾದ ಬೆಲ್ಜಿಯಂ ರಾಜ್ಯವಿದ್ದುದರಿಂದ ಆಕಡೆಗೆ ಶತ್ರುಗಳ ಭಯವೇನೂ ಇಲ್ಲವೆಂದು ಉಪೇಕ್ಷೆಮಾಡಿದ್ದಿತು. ಇದನ್ನರಿತಿದ್ದ ಜರ್ಮನರು ಆ ದಿಕ್ಕಿನಿಂದ ಫ್ರಾನ್ಸಿಗೆ ನುಗ್ಗುವುದನ್ನೇ ನಿಶ್ಚಯಿಸಿದರು. ಅದು ಅವರಿಗೆ ಸುಲಭವಾದ ದಾರಿಯಾಗಿದ್ದಿತು. ಅದಕ್ಕಾಗಿ ಅವರು ಹಿಂದೆ ತಾವು ಬೆಲ್ಜಿಯಮ್ಮಿನ ತಾಟಸ್ಥ್ಯವಿಷಯದಲ್ಲಿ ಹಸ್ತಾಕ್ಷರವನ್ನು ಹಾಕಿ ಪ್ರಮಾಣಮಾಡಿಕೊಟ್ಟಿದ್ದ ನಿಬಂಧನೆಯನ್ನು ಕೂಡ ಮೀರಿದರು. ಹೀಗೆ ಮಾಡುವುದು ಅತ್ಯಂತ ನೀಚತನವೆಂಬುದನ್ನೂ ಜಗತ್ತಿನ ದುರಪವಾದಕ್ಕೆ ಭಾಗಿಗಳಾಗಬೇಕಾಗುವುದೆಂಬುದನ್ನೂ ಸಹ ಲಕ್ಷ್ಯಮಾಡಲಿಲ್ಲ. ಅವರು ದಘುಮ್ಮನೆ ಬೆಲ್ಜಿಯಮ್ಮಿನಮೇಲೆನುಗ್ಗಿದರು. ಪಾಪ! ಆನೆಯು ನುಗ್ಗುವಾಗ ಆಡಿನ ಮರಿಯು ತಡೆಯಬಲ್ಲುದೆ ? ಆದರೂ ಬೆಲ್ಜಿಯಮ್ಮು ತನ್ನಯೋಗ್ಯತೆಯನ್ನು ಮೀರಿ ಶತ್ರುಗಳಿಗೆ ಪ್ರತಿಭಟನವನ್ನು ಮಾಡಿತು. ತಾನು ಸದ್ಯಃ ಪರಾಜಿತವಾಗಿ ದೇಶಕೋಶಗಳನ್ನು ಕಳೆದುಕೊಂಡರೂ ಆಚಂದ್ರಾರ್ಕವಾಗಿ ಮಾಜಿಸಲಳವಲ್ಲದ ಕೀರ್ತಿ ಪ್ರತಿಷ್ಠೆಗಳ ರಾಶಿಯನ್ನು ಸಂಪಾದಿಸಿಟ್ಟಿತು. ಜರ್ಮನರು ಬೆಲ್ಜಿಯಮ್ಮಿನಮೇಲೆ ದಾರಿ ಮಾಡಿಕೊಂಡು ತಡೆಬಿಡುವಿಲ್ಲದೆ ಪ್ಯಾರಿಸ್ಸಿಗೆ ಅಭಿಮುಖವಾಗಿ ದಕ್ಷಿಣಕ್ಕೆ ನುಗ್ಗುತ್ತಬಂದರು. ಇನ್ನೇನು ಪ್ಯಾರಿಸ್ಸು ಶತ್ರುಗಳಧೀನವಾಗಿ ಹೋಯಿತು ಎನ್ನುವಮಟ್ಟಿಗಾಯಿತು. ಅಷ್ಟರಲ್ಲಿ ಮಿತ್ರಮಂಡಲಿಯವರು ಸೈನ್ಯಸನ್ನಾಹಗೊಂಡರು. ಶತ್ರುಗಳನ್ನು ಪ್ರತಿಭಟಿಸಲುಪಕ್ರಮಿಸಿದರು. ಶತ್ರುಗಳ ಕಾಲು ಹಿಂದೆಗೆಯಲುಪಕ್ರಮಿಸಿತು. ಅವರು ಹಿಡಿದುಕೊಂಡಿದ್ದ ಪಟ್ಟಣಗಳನ್ನೊಂದೊಂದಾಗಿ ಇವರು ಬಿಡಿಸಿಕೊಳ್ಳುತ್ತ ಬಂದರು. ಹೀಗಾಗಿ ಈಗ ಶತ್ರುಸೈನ್ಯಗಳು ಪಶ್ಚಿಮರಣರಂಗದಲ್ಲಿ ಫ್ರಾನ್ಸಿನ ಎಲ್ಲೆಯ ಬಳಿಗೆ ಒತ್ತಲ್ಪಟ್ಟಿವೆ. ಬೆಲ್ಜಿಯಮ್ಮಿನಲ್ಲಿ ಮೊಟ್ಟಮೊದಲು ಸ್ವಲ್ಪ ಕಾಲದೊಳಗೆ ಮುಕ್ಕಾಲುಭಾಗವನ್ನೆಲ್ಲಾ ಜರ್ಮನರು ಆಕ್ರಮಿಸಿಕೊಂಡರು. ಇನ್ನು ಉಳಿದಿರುವ ಅತ್ಯಲ್ಪಭಾಗವನ್ನು ಆಕ್ರಮಿಸಿಕೊಳ್ಳ

ಬೇಕೆಂದರೆ ಶತ್ರುಗಳಿಗೆ ಈಗ ತಿಂಗಳುಗಟ್ಟಲೆಯಾದರೂ ಸಾಧ್ಯವಿಲ್ಲದೆ ಹೋಗಿದೆ. ಸಮುದ್ರತೀರದಲ್ಲಿರುವ ಕಲೆಯಪಟ್ಟಣವನ್ನು ಹಿಡಿದುಕೊಂಡರೆ ಉತ್ತರತ್ರ ತಮ್ಮ ಪ್ರಗತಿಗೆ ಅತ್ಯಂತ ಸಾಹಾಯ್ಯವಾಗುವುದೆಂದು ಜರ್ಮನರು ಯೋಚಿಸಿ ಅದಕ್ಕಾಗಿ ಕಳೆದ ೧|| ತಿಂಗಳಿಂದ ಸಾಹಸಮಾಡಿದರು. ಅದು ಅವರಿಗೆ ಸಾಧ್ಯವಲ್ಲದೆ ಹೋಗಿದೆ. ಬೆಲ್ಜಿಯಮ್ಮಿಗೆ ಸೇರಿದ ಜೆಬ್ರೂಜ್ ರೇವುಪಟ್ಟಣವನ್ನು ತಮ್ಮ ಹಡಗುಗಳ ತಾಣವನ್ನು ಮಾಡಿಕೊಂಡು ಮುಂದೆ ಸಾಹಸಮಾಡಬೇಕೆಂದು ಜರ್ಮನರು ಬಹಳ ಯತ್ನಮಾಡಿದರು. ಅದನ್ನೂ ಮಿತ್ರಮಂಡಲಿಯವರು ಸಾಗಗೊಡಿಸದೆ ಇದ್ದಾರೆ. ಕಲೆಯನ್ನು ಸೇರುವುದಕ್ಕಾಗಿ ಶತ್ರುಗಳು ಮಾಡಿದ ಸಾಹಸದಲ್ಲಿ ಲಕ್ಷಾಂತರಜನರನ್ನು ಆಹುತಿಗೊಟ್ಟಿದ್ದಾರೆ. ಸ್ವತಃ ಜರ್ಮನ್ ಚಕ್ರವರ್ತಿಯೇ ಬಂದು ತಮ್ಮ ಸೈನಿಕರನ್ನು ನಯ ಭಯವಚನಗಳಿಂದ ಪ್ರೋತ್ಸಾಹಿಸಿ ಹೋದರು. ಆಗ ಈಸರ್‌ನದಿಯ ಹತ್ತಿರ ನಡೆದ ಘೋರಸಂಗ್ರಾಮದಲ್ಲಿ ಲಕ್ಷಾಂತರಮಂದಿ ಹೆಸರಾದ ಶೂರ ಸೈನಿಕರು ಅವರಕಡೆ ಹತರಾಗಿ ಹೋದರು. ಈಸ್ಥಲದಲ್ಲಿ ನಮ್ಮ ಹಿಂದೂದೇಶದ ಸೈನಿಕರೂ ಬೆಲ್ಜಿಯಂಸೈನಿಕರೂ ಸ್ಮರಣೀಯವಾದ ಪರಾಕ್ರಮವನ್ನು ತೋರಿಸಿದರು. ಶತ್ರುಗಳು ತಾವು ಪಟ್ಟ ಇಷ್ಟು ನಷ್ಟಕಷ್ಟಕ್ಕೆ ಫಲವಾಗಿ ಡಿಕ್ಸ್‌ಮೂಡ್ ಎಂಬ ಹಳ್ಳಿಯೊಂದನ್ನು ಮಾತ್ರ ಸಾಧಿಸಿಕೊಂಡರು. ಕಲೆಯ ಆಸೆಯು ಅವರಿಗೆ ಇನ್ನೂ ಬಿಟ್ಟಿಲ್ಲ. ಮಿತ್ರಮಂಡಲಿಯವರಿಂದ ಆ ದಾರಿಯು ದಿಗ್ಬಂಧಮಾಡಲ್ಪಡಲಾಗಿ ಜರ್ಮನರು ಈಪ್ರೆಸ್ಸನ್ನಾದರೂ ಸಾಧಿಸಬೇಕೆಂದು ಮರಳಿ ಅದರಕಡೆಗೆ ತಿರುಗಿದರು. ಕಳೆದ ೨ ತಿಂಗಳಿಂದಲೂ ಇದನ್ನು ಹಿಡಿಯಲು ಶತ್ರುಗಳು ಅಸಮಸಾಹಸವನ್ನು ಮಾಡಿದ್ದಾರೆ. ಇದರ ಸುತ್ತಲೂ ಶತ್ರುಗಳು ಲಕ್ಷಾಂತರ ಜನರನ್ನು ಕಳೆದುಕೊಂಡಿದ್ದಾರೆ. ಅವರ ಪ್ರಯತ್ನವನ್ನು ನಮ್ಮವರು ಸಾಗಗೊಡಲಿಲ್ಲ. ಕಡೆಗೆ ಶತ್ರುಗಳು ಆಪಟ್ಟಣದಮೇಲೆ ಸಿಡಿಮದ್ದುಗಳನ್ನಾದರೂ ಹಾಕಿ ಉತ್ತಮವಾದ ಕಟ್ಟಡಗಳನ್ನು ಹಾಳ್ಮಾಡಿ ತಮ್ಮ ಕೋಪಶಾಂತಿಯನ್ನು ಮಾಡಿಕೊಳ್ಳಬೇಕೆಂದು ಯೋಚಿಸಿದಂತೆ ಕಾಣುತ್ತದೆ. ಇದೆಲ್ಲಾ ಜರ್ಮನರು ಪಶ್ಚಿಮರಣರಂಗದಲ್ಲಿ ಮಾಡಿದ ಸಾಹಸಫಲದ ವಿವರವಾಯಿತು. ಇನ್ನು ಅವರು ಪೂರ್ವರಣರಂಗದಲ್ಲೂ ಮಧ್ಯರಂಗದಲ್ಲೂ ಮಾಡಿದ ಕಾರ್ಯಗಳೇನು? ಪಡೆದಿರುವ ಫಲವೇನು? ಎಂಬುದನ್ನು ಮುಂದಣ ಸಂಚಿಕೆಯಲ್ಲಿ ವಿಸ್ತರಿಸುವೆವು.

ಒಳದೇಶದ ವೃತ್ತಾಂತಗಳು

ದಿವಾನರು ಈ ತಾ|| ೨ ರಲ್ಲಿ ಮಾರೀಕಣಿವೆಯ ಪ್ರಾಂತ ಸಂಚಾರ ದಯಮಾಡಿಸಿ ಈ ದಿವಸ ಬೆಂಗಳೂರಿಗೆ ಹಿಂದಿರುಗುವವರಾಗಿರುವರು.

ಶ್ರೀಮನ್ ಮಹಾರಾಜರ ಸ್ವಾರಿಯು ನಾಳೆಯದಿನ ಅಥವಾ ಬುಧವಾರದ ದಿವಸ ಬೆಂಗಳೂರಿಗೆ ಚಿತ್ತೈಸಿ ಅಲ್ಲಿಂದ ತಾ|| ೧೮ ರಲ್ಲಿ ದಾವಣಗೆರೆ-ಮೊಳಕಾಲ್ಮುರು ಪ್ರಾಂತ ಸಂಚಾರ ಹೋಗಿ ಬರುವುದಾಗಿ ತಿಳಿಯುತ್ತೇವೆ.

ಬೆಂಗಳೂರ ಅಡ್ವೋಕೇಟ್ ಮ|| ಡಿ. ವೆಂಕಟರಾಮಯ್ಯನವರ ಸಹೋದರರಾದ ಡಾಕ್ಟರ್ ಗಿರಿಯವರು ರಣರಂಗದಲ್ಲಿ ವೈದ್ಯಚಿಕಿತ್ಸೆಯನ್ನು ಮಾಡಲು ಇಂಡ್ಯಾ ಸರ್ಕಾರದಿಂದ ಕಳುಹಲ್ಪಟ್ಟಿರುವುದಾಗಿ ತಿಳಿಯಬರುತ್ತದೆ.

ಮೈಸೂರ ಸಂಪದಭ್ಯುದಯ ಸಮಾಜದವರು ಮುಂದಣ ವರ್ಷದಿಂದ ಹೊರಡಿಸಬೇಕೆಂದು ಯತ್ನಿಸಿರುವ ಪತ್ರಿಕೆಗೆ ಮದ್ರಾಸಿನ ಟೈಂಸ್‌ಪತ್ರಿಕೆಯ ಸಬ್ ಎಡಿಟರಾಗಿರುವ ಮ|| ಹಯವದನರಾಯರು ಎಡಿಟರಾಗಿ ನಿಯಮಿಸಲ್ಪಟ್ಟಿರುವರೆಂದು ಪ್ರಕಟವಾಗಿದೆ.

ಮೈಸೂರ ಫ್ರೂಟ್‌ಸಿಂಡಿಕೇಟ್‌ರವರು ಫಲವನ್ನು ಬೆಳೆಯುವುದರಲ್ಲಿ ನಿಪುಣರಾದ ಇಟಲಿದೇಶಸ್ಥರೊಬ್ಬರಿಂದ ಕಿತ್ತಲೆ, ಮಾವು, ಸೇಬು, ಅಂಜೂರ, ಚಪ್ಪರದದ್ರಾಕ್ಷಿ ಮೊದಲಾದ ಹಣ್ಣುಗಳನ್ನು ಬಹಳ ಉತ್ಕೃಷ್ಟವಾಗಿ ಬೆಳೆಸುತ್ತಿರುವ ತೋಟವು ಬೆಂಗಳೂರ ಅರಮನೆಗೆ ಕ್ರಯಕ್ಕೆತೆಗೆದುಕೊಳ್ಳಲ್ಪಟ್ಟು ತೆಂಗಿನ ಮತ್ತೂ ಮಾವಿನ ಗಿಡಗಳು ವಿಶೇಷವಾಗಿ ಬೆಳೆಸಲ್ಪಡುವುದಾಗೇರ್ಪಡಿಸಲ್ಪಟ್ಟಿದೆ.

ಕೋಲಾರ ಡಿ|| ಪೊಲೀಸ್ ಸೂಪರಿಂಟೆಂಡೆಂಟರಾದ ಮ|| ಸಿ. ದೇವರಾಜ ಅರಸಿನವರು ತಮ್ಮ ಕುಮಾರಿಯನ್ನು ಅಮೃತಮಹಲ್ ಶಾಖೆಯ ಸೂಪರಿಂಟೆಂಡೆಂಟರಾದ ಮ|| ಎಚ್. ನಂಜುಂಡರಾಜ ಅರಸಿನವರ ಕುಮಾರರಿಗೆ ಕೊಟ್ಟು ಬರುವ ಜನವರಿ ತಾ|| ೧೬ ರಲ್ಲಿ ರಾಜಧಾನಿಯಲ್ಲಿ ವಿವಾಹ ಮಹೋತ್ಸವವನ್ನು ಬೆಳೆಸುವವರಾಗಿರುವರು. ಇದಕ್ಕಾಗಿ ಮ|| ದೇವರಾಜಅರಸಿನವರು ಈ ತಾ|| ೬ ರಿಂದ ೩ ತಿಂಗಳ ಪ್ರಿವಿಲೆಜ್ ರಜವನ್ನು ಪಡೆದುಕೊಂಡಿರುವರು.

ಪ್ರತಿನಿತ್ಯದಲ್ಲೂ ವ್ಯಾಪಾರ ಮತ್ತೂ ಜನಸ್ತೋಮಗಳಿಂದ ಅಭಿವೃದ್ಧಿಗೆ ಬರುತ್ತಿರುವ ಬೆಂಗಳೂರ ಪಟ್ಟಣಕ್ಕೆ ತಕ್ಕಂತಹ ವಿಶಾಲವಾದ ಒಂದು ಬಹಿರಂಗವಾದ ಅಂದರೆ ರಾಜಧಾನಿಯಲ್ಲಿರುವ ಟವನ್‌ಹಾಲಿನಂತಹ ಕಟ್ಟಡವಿಲ್ಲದೆ ಬಹಳ ತೊಂದರೆಯಾಗಿರುವುದರಿಂದ ಅಲ್ಲಿಯ ಕೋಟೆಯೊಳಗೆ ಒಂದು ದೊಡ್ಡ ಟವನ್‌ಹಾಲು ಕಟ್ಟಿಸಲ್ಪಡುವ ಯೋಚನೆಯು ಬಹು ಕಾಲದಿಂದಲೂ ನಡೆಯುತ್ತಿದ್ದು ಈಗ ಆ ಸ್ಥಳವು ಊರಿಗೆಲ್ಲಾ ಮಧ್ಯಸ್ಥಲವಾಗಿಲ್ಲವೆಂಬ ಕಾರಣದಿಂದ ಅದನ್ನು ಡಿಸ್ಟ್ರಿಕ್ಟಾಫೀಸಿರುವ ಸ್ಥಳದಲ್ಲಿ ಕಟ್ಟಲ್ಪಡುವಹಾಗೂ, ಇದಕ್ಕಾಗಿ ಡಿಸ್ಟ್ರಿಕ್ಟಾಫೀಸನ್ನೂ ಹುಜ್ಜೂರ ಆಸ್ಪತ್ರೆಯನ್ನೂ ಬೇರೆ ಕಡೆಗೆ ವರ್ಗಾಯಿಸುವ ಹಾಗೂ ವರ್ತಮಾನವಿದೆ.

ರಾಜಧಾನಿಯ ಗಾಯನಸಮಾಜದವರು ಕಳೆದ ಭಾನುವಾರ ನಾರ್ಮಲ್‌ಸ್ಕೂಲ್ ಕಟ್ಟಡದಲ್ಲಿ ಒಂದು ವಿನೋದಕೂಟವನ್ನೇರ್ಪಡಿಸಿದ್ದರು. ಈ ಸಮಾಜರಂಭಕ್ಕೆ ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟರಾದ ಮ|| ನಾರಾಯಣರಾಯರು ಆಹೂತರಾಗಿ ಬೈಸಿಕಲ್ ಬಂಡಿಯಮೇಲೆ ಸ್ವಾರಿಮಾಡುತ ಬರುವಾಗ್ಗೆ ಆಯತಪ್ಪಿ ಕೆಳಗೆಬಿದ್ದು ಪೂರಾಪೆಟ್ಟನ್ನು ತಿಂದರು. ಇದರಿಂದ ಕಾಲಿನ ಮೂಳೆಗೆ ಪೂರಾಪೆಟ್ಟು ಬಿದ್ದಿರುವುದು. ಜನರಲ್ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫೀಸರಾಗಿರುವ ಡಾ|| ಸುಬ್ಬರಾಯರು ಎಕ್ಸ್‌ರೇಸ್ ಎಂಬ ಯಂತ್ರದ ಸಹಾಯದಿಂದ ಚರ್ಮದೊಳಗಡೆ ಪೆಟ್ಟುಬಿದ್ದಿರುವ ಭಾಗವನ್ನು ಕಂಡುಹಿಡಿದು ಚಿಕಿತ್ಸೆಯನ್ನು ಮಾಡುತ್ತಿರುವರು. ಇವರಿಗೆ ಶೀಘ್ರದಲ್ಲಿ ಆರೋಗ್ಯವಾಗಲೆಂದು ಕೋರುತ್ತೇವೆ.

ಕರ್ಜನ್‌ಪಾರ್ಕಿನ ಉತ್ತರಭಾಗದಲ್ಲಿ ಒಂದು ಹೊಸರಸ್ತೆಯೂ ಅದರ ಉತ್ತರದಲ್ಲಿ ಅಲಂಕಾರವಾದ ಷಾಪುಗಳೂ ಕಟ್ಟಲ್ಪಡುವುವು. ಈ ಬೀದಿಯ ಮೊದಲಿನಲ್ಲಿಯೇ ಜಗನ್ಮೋಹನ ಬಂಗ್ಲೆಯಲ್ಲಿರತಕ್ಕ ವಿವಾಹಮಂಟಪವನ್ನು ಬಿಚ್ಚಿಕೊಂಡು ಹೋಗಿ ಕಟ್ಟುವರು. ಈ ಮಂಟಪದಲ್ಲಿ ಪಬ್ಲಿಕ್ ಲೈಬ್ರೆರಿ, ಲೆಕ್ಚರ್ ಹಾಲು, ನಾಟಕಶಾಲೆ ಮೊದಲಾದವುಗಳಿಗೆ ಏರ್ಪಾಡಾಗುವುದು. ಎಂದು ಸಂಪದಭ್ಯುದಯಪತ್ರಿಕೆಯು ತಿಳಿಸುತ್ತದೆ. ಊರಿನಲಂಕಾರವನ್ನು ಹೆಚ್ಚಿಸುವುದರಲ್ಲಿ ಅಭಿಮಾನವನ್ನು ವಹಿಸಿರುವ ಅಧಿಕಾರಿಗಳು ಊರಿನ ಕಲಾಕೌಶಲ್ಯವು ಹೆಚ್ಚಿ ಬೆಂಗಳೂರಿನ ಹಾಗೆ ವ್ಯಾಪಾರವೂ ಅಭಿವೃದ್ಧಿಯಾಗಲು ತಕ್ಕೇರ್ಪಾಟನ್ನು ಮಾಡಲು ಗಮನವನ್ನು ಕೊಟ್ಟರೆ ಪುರಾಲಂಕಾರಕ್ಕಾಗಿ ಮಾಡುವ ಅರ್ಥಶ್ರಮ ಮತ್ತೂ ದೇಹಶ್ರಮಗಳು ಸಾರ್ಥಕವಾಗುವುದರಲ್ಲಿ ಸಂಶಯವಿಲ್ಲವು.

ವಿಶೇಷವಾರ್ತೆ.

ಈಗ ದಕ್ಷಿಣಾಫ್ರಿಕಾದಲ್ಲಿ ಉಂಟಾಗಿದ್ದ ವಿಪ್ಲವವೆಲ್ಲಾ ಶಾಂತವಾಯಿತು.

ತಾವು ರಷ್ಯನರ ೯೫೦೦ ಮಂದಿಗಳನ್ನೂ ೪೪ ಫಿರಂಗಿಗಳನ್ನೂ ಇದುವರೆಗೆ ನಡೆದ ಯುದ್ಧದಲ್ಲಿ ಹಿಡಿದುಕೊಂಡಿರುತ್ತೇವೆಂದು ಜರ್ಮನರು ಪ್ರಕಟಿಸಿದ್ದಾರೆ.

ಫ್ರಾನ್ಸ್-ಬೆಲ್ಜಿಯಂ ರಣರಂಗದಲ್ಲಿ ಕಳೆದ ೬-೭ ವಾರಗಳೊಳಗಾಗಿ ಜರ್ಮನ್ ಸೈನಿಕರೊಳಗೆ ೨ ಲಕ್ಷ ಮಂದಿಯವರೆಗೆ ಮೃತರಾಗಿರುವರೆಂದು ಪ್ರಕಟವಾಗಿದೆ.

ಸೀಮೆಯಲ್ಲಿ ಹೊಸದಾಗಿ ಕೂಡಿಸಲ್ಪಡುತ್ತಿರುವ ಸೈನಿಕರ ಗುಂಪಿನ ಮೇಲೆ ಹಿಂದೂ ಸೈನ್ಯೋದ್ಯೋಗಿಗಳು ೨೨ ಮಂದಿಗಳು ನಾಯಕರಾಗಿ ನಿಯಮಿಸಲ್ಪಟ್ಟಿದ್ದಾರೆ.

ಹಿಂದೂದೇಶದ ಸೈನಿಕರ ಉಡುಪು ಮೊದಲಾದ ಸೌಕರ್ಯಗಳಿಗಾಗಿ ಸೀಮೆಯಲ್ಲಿ ಒಂದು ಫಂಡು ಕೂಡಿಸಲ್ಪಡುತ್ತಿದೆ. ಇದಕ್ಕಾಗಿ ೩೭|| ಲಕ್ಷ ರೂಗಳಾಗಬೇಕೆಂದು ಲಾರ್ಡ್‌ಕರ್ಜನ್‌ರವರು ಅಲ್ಲಿನ ೧ ಸಭೆಯಲ್ಲಿ ತಿಳಿಯಿಸಿದರು.

ನಮ್ಮ ಸಾರ್ವಭೌಮರವರು ಫ್ರಾನ್ಸ್ ಪ್ರಸಿಡೆಂಟರ ಸಮೇತ ಫ್ರಾನ್ಸಿನ ರಣರಂಗಕ್ಕೆ ದಯಮಾಡಿಸಿ, ಸೈನಿಕರ ಸ್ಥಿತಿಗತಿ, ಏಟುತಿಂದವರಿಗಾದ ಉಪಚಾರ, ಅವರ ಆಹಾರದ ಏರ್ಪಾಟು ಮೊದಲಾದುವನ್ನು ಪರಾಮರಿಸಿದರು.

ಜರ್ಮನಿಯವರು ಪ್ಯಾರಿಸ್‌ಪಟ್ಟಣದ ಅಂಚೆ ಮುದ್ರೆಯನ್ನೇರ್ಪಡಿಸಿ, ಯುದ್ಧರಂಗದಿಂದ ತಮ್ಮೂರಿನವರಿಗೆ ಬರೆವ ಕಾಗದಗಳಮೇಲೆ ಆ ಮುದ್ರೆಯನ್ನೊತ್ತಿ ಕಳುಹಿಸುವರೆಂದು ಕಲೆಪಟ್ಟಣದಲ್ಲಿ ಸುದ್ದಿಯುಂಟಾಗಿದೆ. ಇದರಿಂದ ತಾವು ಪ್ಯಾರಿಸ್ಸನ್ನು ಹಿಡಿದುಕೊಂಡಿದ್ದೇವೆಂದು ತಮ್ಮವರು ಊಹಿಸಿಕೊಳ್ಳಲಿ ಎಂಬುದೇ ಅವರ ಆಶಯವಾಗಿರಬೇಕು. ಕೊಚ್ಚಿಕೊಂಡ ಜಂಭವು ಮಣ್ಣಿನ ಪಾಲಾದುದರಿಂದ ಜರ್ಮನರು ಹೀಗೆಲ್ಲಾ ಕಪಟನಾಟಕವನ್ನಾಡುತ್ತಿದ್ದಾರೆ.

ತುರ್ಕಿಯು ಇಂಗ್ಲೆಂಡಿನ ಮೇಲೆ ಯುದ್ಧಕ್ಕೆ ನಿಂತಿತೆಂಬ ಸಮಾಚಾರವು ಅಫ್ಘಾನ್‌ಸ್ಥಾನ್ ಅಮೀರರಿಗೆ ನಮ್ಮ ವೈಸ್ರಾಯರಿಂದ ತಿಳಿದುಬರಲು ಆಂಗ್ಲಪ್ರಭುತ್ವದವರನ್ನು ಕುರಿತುಬಹಳ ಮೈತ್ರಿಯಿಂದ ಒಂದು ಪತ್ರಿಕೆಯನ್ನು ಬರೆದು, ಅದರಲ್ಲಿ-ತುರ್ಕಿಯು ಇಂಗ್ಲೆಂಡಿನೊಡನೆ ಯುದ್ಧಕ್ಕೆ ನಿಂತುದಕ್ಕಾಗಿ ಚಿಂತಿಸುತ್ತೇನೆಂತಲೂ, ಈಗಿನ ಯುದ್ಧದಲ್ಲಿ ನಾನು ಯಾವತೆರದ ಸಂಬಂಧವನ್ನೂ ಇಟ್ಟುಕೊಳ್ಳದೆ ತಟಸ್ಥನಾಗಿರುವೆನೆಂಬ ಸಂಗತಿಯನ್ನು ಈಮೊದಲೇ ನಾನುತಿಳಿಯಿಸಿಕೊಂಡಿರುವೆನೆಂತಲೂ ಬರೆದಿದ್ದಾರೆ.

ಇದುವರೆಗೆ ನಡೆದಿರುವ ನೌಕಾಯುದ್ಧಗಳಲ್ಲಿ ಇಂಗ್ಲೀಷರ ಕಡೆ ೨೨೨ ಮಂದಿ ಅಧಿಕಾರಿಗಳು ಸತ್ತಿರುವರು; ೨೭ ಮಂದಿ ಅಧಿಕಾರಿಗಳಿಗೆ ಏಟುಬಿದ್ದಿರುವುದು. ಆಂಟ್ವರ್ಪ್‌ನಗರ ರಕ್ಷಣೆಗಾಗಿ ಕಳುಹಲ್ಪಟ್ಟಿದ್ದ ನೌಕಾ ಸೈನ್ಯದಲ್ಲಿ ೧ ಸಾವಿರ ಮಂದಿಗಳು ಕಾಣುವುದಿಲ್ಲ. ಚಿಲೀ ತೀರದಲ್ಲಿ ನಡೆದ ಯುದ್ಧದಲ್ಲಿ ಮುಳುಗಿಹೋದ ಗುಡ್‌ಹೋಪ್ ಹಡಗಿನ ಮೇಲಿದ್ದವರಲ್ಲಿ ೮೭೫ ಮಂದಿಗಳು ಕಾಣಿಸದೆ ಹೋಗಿದ್ದಾರೆ. ಇದಲ್ಲದೆ ಆಂಟ್ವರ್ಪಿಗೆ ಹೋಗಿದ್ದ ನೌಕಾ ಸೈನಿಕರಲ್ಲಿ ಕೆಲರು ಹಾಲೆಂಡಿನಲ್ಲಿ ಸಿಕ್ಕಿಹೋಗಿದ್ದಾರೆ.

ನಿಮಗೂ ನಮಗೂ ಇರುವ ಸ್ನೇಹಸಂಬಂಧದಿಂದ ನಿಮಗೆ ಅವಶ್ಯಕವಾದಾಗ್ಗೆ ನಾವು ಸಹಾಯವನ್ನು ಮಾಡಲು ಸಿದ್ಧರಾಗಿದ್ದೇವೆಂದು ಪೋರ್ಚುಗಲ್ ಪ್ರಭುತ್ವದವರು ಇಂಗ್ಲೆಂಡ್‌ಪ್ರಭುತ್ವದವರಿಗೆ ತಿಳಿಯಪಡಿಸಲು, ಇಂಗ್ಲೀಷ್ ಸರ್ಕಾರದವರು ಅದಕ್ಕೆ ಸಂತೋಷಿಸಿ, ಈಗ ಸ್ವಲ್ಪ ಸಾಹಾಯ್ಯವನ್ನು ಕಳುಹಿಸಬೇಕೆಂದು ಕೋರಿರುವರು. ಇಂಥ ಕಾಲದಲ್ಲಿ ಇಂಗ್ಲೆಂಡಿಗೆ ಸಹಾಯಮಾಡಿದರೆ ತಮ್ಮತಮ್ಮ ಮೈತ್ರಿಯು ಮತ್ತಷ್ಟು ದೃಢವಾಗುವುದಾದಕಾರಣ, ಹಾಗೆ ಮಾಡಬೇಕೆಂದು ಅಲ್ಲಿನ ಪಾರ್ಲಿಮೆಂಟಿನವರು ತೀರ್ಮಾನಿಸಿದರು.

ಪಶ್ಚಿಮರಣರಂಗದಲ್ಲಿ ಶತ್ರುಗಳಿಗೆ ವಿಶೇಷ ನಷ್ಟವೇ ಆಗಿರುತ್ತದೆ. ಆ ರಣರಂಗವೊಂದರಲ್ಲೇ ಅವರಿಗೆ ಯುದ್ಧಾರಂಭ ಕಾಲದಿಂದ ಅಕ್ಟೋಬರ್ ಕಡೆಯವರೆಗೆ ೬೦೧೪೩೮ ಮಂದಿಗಳು ನಷ್ಟವಾಗಿದ್ದಾರೆಂದು ಅವರ ಲೆಕ್ಕದಿಂದಲೇ ಗೊತ್ತಾಗುತ್ತದೆ. ಈ ಪಟ್ಟಿಯ ಸೈನಿಕರಲ್ಲದೆ ಸಾಕ್ಸನಿಯವರು ಕೊಟ್ಟಿರುವ ಪಟ್ಟಿಗಳು ೫೮ ; ಬವೇರಿಯಾದವರ ಪಟ್ಟಿಗಳು ೫೬ ; ವರ್ಟೆಂಬರ್ಗಿನವರ ಪಟ್ಟಿಗಳು ೬೧ ಬೇರೆ ಇರುವುವು. ಇಷ್ಟು ನಷ್ಟವಾಗಿದ್ದರೂ ಅವರ ಆಸೆಯು ಲಂಡನ್‌ಮೇಲೆ ಅಭಿಯೋಗವನ್ನು ಮಾಡಬೇಕೆಂದಿರುವುದಂತೆ !

ಫೀಲ್ಡ್ ಮಾರ್ಷಲ್ ಸರ್ ಜಾನ್ ಫ್ರೆಂಚಿಯವರು ನಮ್ಮ ದೇಶದ ಸೈನಿಕರ ಕಾರ್ಯವನ್ನು ಕುರಿತು ವರದಿಯಲ್ಲಿ ಬರೆಯುವಾಗ್ಗೆ ಸೇನೆಗಳು ಯುದ್ಧಭೂಮಿಯಲ್ಲಿ ಪ್ರವೇಶಿಸಿ ಯುದ್ಧಮಾಡುವುದಕ್ಕಾರಂಭಿಸಿದಂದಿನಿಂದಲೂ ಅವರ ವಿವೇಕವೂ ಯುಕ್ತಿಪ್ರಯುಕ್ತಿಗಳೂ ನನಗೆ ತುಂಬಾ ಆಶ್ಚರ್ಯವನ್ನುಂಟುಮಾಡಿವೆ. ಜರ್ಮನಿಯವರನ್ನು ಮೋಸಗೊಳಿಸುವುದಕ್ಕೆ ಇವರು ಅವಲಂಬಿಸಿರುವ ತಂತ್ರಗಳು ಬಹಳ ಲಾಭಕರವಾಗಿವೆ. ತಮಗಿಂತಲೂ ಎಷ್ಟೋ ಹೆಚ್ಚಾಗಿ ಬಂದ ಜರ್ಮನ್ ಸೇನೆಗಳನ್ನು ಇವರು ಹಲವುಬಾರಿ ತಡೆದು ನಿಲ್ಲಿಸಿರುವರು ಎಂದು ತಿಳಿಯಿಸಿದ್ದಾರೆ.

ಇಂಡಿಯಾ ಸ್ಟೇಟ್ ಅಸಿಸ್ಟೆಂಟ್ ಸೆಕ್ರೆಟರಿಗಳಾದ ರಾಬರ್ಟ್ಸ್‌ರವರು ಪಾರ್ಲಿಮೆಂಟಿನಲ್ಲಿ ಮಾತನಾಡುವಾಗ್ಗೆ—ಹಿಂದೂದೇಶದ ಸ್ಥಿತಿಗತಿಗೆ ತಕ್ಕಂತೆ ಅಲ್ಲಿನ ಪರಿಪಾಲನಾ ಪದ್ಧತಿಯನ್ನು ಬದಲಾಯಿಸುವುದು ಅವಶ್ಯಕವೆಂತಲೂ, ಆದರೆ ಸದ್ಯಃ ಅಂಥ ಏರ್ಪಾಟುಗಳನ್ನು ನಡೆಯಿಸದೆ ನಿಲ್ಲಿಸಿರಬೇಕಾಗಿದೆಯೆಂತಲೂ ಹೇಳಿದರು. ಲಾರ್ಡುಗಳ ಸಭೆಯಲ್ಲಿ ಅರ್ಲ್‌ಕಿಚನರ್‌ರವರು ಹಿಂದೂದೇಶದ ಸೈನಿಕರವಿಷಯವಾಗಿ ಮಾತನಾಡುವಾಗ್ಗೆ-''ಹಿಂದೂದೇಶದ ಸೈನಿಕರು ಯುದ್ಧರಂಗಕ್ಕೆ ಬಂದುದರಿಂದ ನಮಗೆ ತುಂಬಾ ಪ್ರಯೋಜನವಾಗಿದೆ'' ಎಂದು ಶ್ಲಾಘಿಸಿರುತ್ತಾರೆ.

ಜಪಾನರು ರಷ್ಯಾದವರಮೇಲೆ ಯುದ್ಧಕ್ಕೆ ನಿಂತರೆ ನಾನು ಯಾವತೆರದ ನಿಬಂಧನೆಗಳಿಗಾದರೂ ಒಪ್ಪಿ ನಡೆಯಲು ಸಿದ್ಧನಾಗಿದ್ದೇನೆಂದು ಜರ್ಮನ್ ಚಕ್ರವರ್ತಿಯು ಜಪಾನ್ ಚಕ್ರವರ್ತಿಯವರಿಗೆ ಒಂದು ಪತ್ರವನ್ನು ಬರೆದಿದ್ದರಂತೆ. ಇದಕ್ಕೆ ಜಪಾನ್ ಚಕ್ರವರ್ತಿಯವರು—''ಜರ್ಮನ್ ಚಕ್ರವರ್ತಿಯವರು ಬೆಲ್ಜಿಯಂ ತಾಟಸ್ಥ್ಯವನ್ನು ಕಾಪಾಡುವ ವಿಷಯದಲ್ಲಿ ತಮ್ಮ ಹಸ್ತಾಕ್ಷರವನ್ನು ಹಾಕಿದ್ದು ಮಾಡಿಕೊಂಡಿದ್ದ ಒಡಂಬಡಿಕೆಯನ್ನು ಕೂಡ ಮೀರಿ ಮಾಡಿದ ದುರಾಚಾರದಂಥ ನಡತೆಯನ್ನು ಜಪಾನ್‌ದೇಶದವರು ಎಂದಿಗೂ ಮಾಡರು'' ಎಂದು ಉತ್ತರವನ್ನು ಕೊಟ್ಟುದಲ್ಲದೆ, ಆ ಜರ್ಮನ್ ಚಕ್ರವರ್ತಿ ಬರೆದಿದ್ದ ಕಾಗದವನ್ನು ಜಪಾನ್ ಪ್ರಭುತ್ವದವರು ಅಲ್ಲಿನ ಇಂಗ್ಲೀಷ್ ರಾಯಭಾರಿಯ ಬಳಿಗೆ ಕಳುಹಿಸಿಕೊಟ್ಟಿದ್ದರಂತೆ. ಇದನ್ನು ರಷ್ಯಾದ ಒಂದು ಪತ್ರಿಕೆಯು ಪ್ರಕಟಿಸಿದೆ.

ಎಮ್ಡೆನ್ ಹಡಗು ಇಂಗ್ಲೀಷ್ ಹಡಗುಗಳ ಬಣ್ಣವನ್ನೂ, ರಷ್ಯನರ ಬಾವುಟಾವನ್ನೂ ಸಮಯೋಚಿತವಾಗಿ ತನಗೆ ಅಮರಿಸಿಕೊಂಡು ಮೋಸಮಾಡಿತಷ್ಟೆ. ಇದರ ಮುಯ್ಯನ್ನು ಈಗ ರಷ್ಯನರು ಜರ್ಮನಿಗೆ ಒಪ್ಪಿಸಿದ್ದಾರೆ. ಎಂದರೆ—ಬಾಲ್ಟಿಕ್ ಸಮುದ್ರದಲ್ಲಿನ ಕೆಲ ರಷ್ಯನ್ ಕ್ರೂಯಿಝರುಗಳಿಗೂ ಡಿಸ್ಟ್ರಾಯರುಗಳಿಗೂ ಕೂಡ ಅಡ್ಮಿರಲ್ ಬೂಸನ್‌ರವರು ಜರ್ಮನ್ ಹಡಗುಗಳಿಗಿರುವಂಥ ಬಣ್ಣವನ್ನು ತುಂಬಿಸಿ, ಜರ್ಮನರ ಹಡಗುಗಳಿರುವ ಬಳಿಗೆ ನುಗ್ಗಿಸಿದರು. ಜರ್ಮನರು ಈ ತಂತ್ರವನ್ನು ಕಂಡುಹಿಡಿಯಲಿಲ್ಲ. ಈ ರಷ್ಯನ್ ಹಡಗುಗಳು ಜರ್ಮನ್ ಯುದ್ಧನಾವೆಗಳ ಸಮೀಪಕ್ಕೆ ಹೋಗಿ ಸಂಧಿಯನ್ನು ಸಾಧಿಸಿ ಫಿರಂಗಿಗಳನ್ನು ಹಾರಿಸುವುದಕ್ಕುಪಕ್ರಮಿಸಿದುವು. ಒಂದು ಜರ್ಮನ್ ಕ್ರೂಯಿಝರು ಮುಳುಗಿಹೋಯಿತು; ಇನ್ನೊಂದು ಡಿಸ್ಟ್ರಾಯರಿಗೆ ಏಟುಬಿದ್ದು ಶಿಥಿಲವಾಯಿತು. ಇನ್ನು ಕೆಲ ಹಡಗುಗಳಿಗೂ ಹೀಗೆಯೇ ಹೊಡೆದು ನಷ್ಟಪಡಿಸಿ ತಾವು ಸುರಕ್ಷಿತವಾಗಿ ತಪ್ಪಿಸಿಕೊಂಡುವು. ಏಟುತಿಂದ ಜರ್ಮನ್ ಹಡಗುಗಳು ಕೀಲ್ ಕಾಲ್ವೆಗೆ ಹೋಗಿ ಸೇರಿಕೊಂಡುವು. ಈ ಸಂಗತಿಯು ಸೆಪ್ಟೆಂಬರ್ ತಿಂಗಳಲ್ಲಿ ಸಂಭವಿಸಿತು. ನಿಜಸ್ಥಿತಿಯು ಈಗ ಹೊರಬಿದ್ದಿತು.

ನೋಟೀಸ್.

1

ಬಂಗಲೆಯು ಕ್ರಯಕ್ಕೆ ಸಿದ್ಧವಾಗಿದೆ !

ಮೈಸೂರ ಲಾ ಕೋರ್ಟುಗಳ ಸಮೀಪದಲ್ಲಿ ಇಂಜನಿಯರ್ ರಾಘವಲು ನಾಯಿಡುಯವರ ಬಂಗಲೆಯ ಪಕ್ಕದಲ್ಲಿ ಪಶ್ಚಿಮಾಭಿಮುಖವಾಗಿರುವ ಪೆರುಮಾಳು ಪಿಳ್ಳೆಯವರ ಬಂಗಲೆಯು ಕ್ರಯಕ್ಕೆ ಸಿದ್ಧವಾಗಿದೆ ಈ ಬಂಗಲೆಯು ೧೧೫ ಅಡಿ ಉದ್ದವೂ, ೫೫ ಅಡಿ ಅಗಲವೂ ಇದೆಯಲ್ಲದೆ ಇದರಲ್ಲಿ ಗಾಡಿಖಾನೆ, ಹಿತ್ತಲು, ಬಾವಿ, ನೀರಿನ ನಲ್ಲಿಗಳು, ವಿಶಾಲವಾದ ಕಾಂಪೌಂಡು ಇವೆ. ಇವಕ್ಕೆ ತಿಂಗಳೊಂದಕ್ಕೆ ೩೫ ರೂಪಾಯಿ ಬಾಡಿಗೆ ಬರುತ್ತಿದೆ ಇದನ್ನು ಕೊಂಡುಕೊಳ್ಳಲಿಚ್ಛೆಯುಳ್ಳವರು ಈ ಕೆಳಗಿನ ವಿಳಾಸದಾರರಿಗೆ ಕಾಗದವನ್ನು ಬರೆದು ಎಲ್ಲ ಸಂಗತಿಯನ್ನೂ ತಿಳಿಯಬಹುದು. ಮತ್ತೂ ಮನೆಯನ್ನು ನೋಡಲಿಚ್ಛೆಯುಳ್ಳವರು ಸುಬ್ಬರಾಯನ ಕೆರೆಯಲ್ಲಿ ಮಠವನ್ನು ಕಟ್ಟಿಸಿಕೊಂಡಿರುವ ರಾಮರಾಮದಾಸಜಿ ದತ್ತಾತ್ರಿಯವರನ್ನಾಗಲಿ ಮಿಠಾಯಿ ಅಂಗಡಿ ಸಾಹುಕಾರ್ ರಾಮಸುಖ್‌ರಾಂ ರವರನ್ನಾಗಲಿ ಕೇಳಿದಲ್ಲಿ ತೋರಿಸುವರು.

ವಿಳಾಸ:—ಫುಲಂಚಂದ್ ಶೇಷಮಲ್,
ಅಂಡರ್‌ಸನ್ ಪೇಟೆ, ಕೋಲಾರ್ ಗೋಲ್ಡ್‌ಫೀಲ್ಡ್ಸ್.

ವೀರಶೈವಮಹನೀಯರಿಗೆ ವಿನಂತಿ.

ಬೆಂಗಳೂರಲ್ಲಿರುವ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಯು ಮೈಸೂರುದೇಶದ ವೀರಶೈವರಲ್ಲಿ ವಿದ್ಯಾಭಿವೃದ್ಧಿಯನ್ನು ಮಾಡಬೇಕೆಂಬುದ್ದೇಶದಿಂದ ಬೆಂಗಳೂರಲ್ಲಿ ನಡೆದ ೨ ನೇ ವೀರಶೈವ ಮಹಾಸಭಾಕಾಲದಲ್ಲಿ ಅಂದರೆ ತಾ॥ ೧೪-೩-೧೯೦೫ ರಲ್ಲಿ ಸ್ಥಾಪಿಸಲ್ಪಟ್ಟು ಮೈಸೂರು ಸರ್ಕಾರದಲ್ಲಿ ರಿಜಿಸ್ಟರ್ ಮಾಡಿಸಲ್ಪಟ್ಟು, ಯಾವಕಾಲಕ್ಕೂ ಚ್ಯುತಿಯಿಲ್ಲದಂತೆ ಉತ್ತರೋತ್ತರ ಅಭಿವೃದ್ಧಿಸ್ಥಿತಿಯಲ್ಲಿಯೇ ಬರುವಂತೆ ತಕ್ಕ ಏರ್ಪಾಡನ್ನು ಪ್ರೆಸಿಡೆಂಟರಾದ ಮ॥ ದಿವಾನಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರವರು ಮಾಡಿರುವರು. ಈಗ್ಯೆ ೧೯೦೦೦ ರೂ.ಗಳು ಗೌರ್ನಮೆಂಟ್ ಟ್ರಜರಿಯಲ್ಲಿರುತ್ತೆ. ಇದರ ವೃದ್ಧ್ಯಂಶದಿಂದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವು ಕೊಡಲ್ಪಡುತ್ತಿರುವುದು. ಈ ವರ್ಷ ೫೩ ಮಂದಿ ವಿದ್ಯಾರ್ಥಿಗಳಿಗೆ ವೇತನವನ್ನೂ ಮತ್ತು ಬೆಂಗಳೂರಲ್ಲಿನ ವೀರಶೈವಾಶ್ರಮ ಯಾ ಸ್ಟೂಡೆಂಟ್ಸ್‌ಹೋಮ್‌ಗೆ ಮಾಹೆಯಾನಾ ೧೦ ರೂ.ಯನ್ನೂ ಮನೆ ಬಾಡಿಗೆಗಾಗಿ ಕೊಡುತ್ತಲಿದೆ. ಆಯಾಯಗ್ರಾಮದಲ್ಲಿ ನಡೆಯುವ ಲಗ್ನ ಮೊದಲಾದವುಗಳಲ್ಲಿ ಅವರವರ ಶಕ್ತ್ಯನುಸಾರ ಫಂಡ್ ಸಭೆಗೆ ಕಾಣಿಕೆ ತೆಗೆದು ಕಳುಹಿಸುವಂತೆ ಶ್ರೀ ಸಿಂಹಾಸನಾಧೀಶ್ವರರಿಂದಲೂ ನಿರೂಪಗಳು ದಯಪಾಲಿಸಲ್ಪಟ್ಟಿರುತ್ತವೆ. ಈ ಬಾಬು ಚಾಲ್ತಿಯಲ್ಲಿಯೇ ಬಂದು ದಿನೇದಿನೆ ವೃದ್ಧಿಹೊಂದುತ್ತಲಿವೆ. ಕೆಲವು ಗ್ರಾಮಗಳಲ್ಲಿ ಫಂಡ್ ಸಭೆಯ ಕಾಣಿಕೆಯೆಂದು ಲಗ್ನ ಮೊದಲಾದವುಗಳಲ್ಲಿ ತೆಗೆಸಿ ಅಲ್ಲಲ್ಲಿನ ಪ್ರಮುಖರೇ ಇಟ್ಟುಕೊಂಡಿರುವದಾಗಿ ವರ್ತಮಾನವೂ ಕಾಗದವೂ ಸಹಾ ಬಂದಿರುತ್ತವೆ. ಅವರು ವಿದ್ಯಾಪಕ್ಷಪಾತಿಗಳಾಗಿ ಈ ರೀತಿ ಬಂದ ಹಣವನ್ನು ತಮ್ಮಲ್ಲಿಯೇ ಇಟ್ಟುಕೊಂಡಿರುವುದರ ಕಾರಣವು ಗೊತ್ತಾಗಲಿಲ್ಲ. ಈಗಲಾದರೂ ಅವರುಗಳು ದಯವಿಟ್ಟು ಫಂಡ್‌ಸಭೆಗೆ ತಮ್ಮಲ್ಲಿರುವ ಫಂಡ್ ಸಭೆಯ ಬಾಬತು ಮೊಬಲಗನ್ನು ಕಳುಹಿಸಿಕೊಡುವ ಏರ್ಪಾಡು ಮಾಡುವುದಲ್ಲದೆ, ಇನ್ನುಮುಂದೆಯೂ ಲಗ್ನ ಮೊದಲಾದವುಗಳಲ್ಲಿ ಫಂಡ್ ಸಭೆಯ ಕಾಣಿಕೆಯನ್ನು ತೆಗೆಸಿ ಆ ಕೂಡಲೆ ರವಾನಿಸುವ ಏರ್ಪಾಡನ್ನು ಸಹಾ ಮಾಡುತ್ತಾರೆಂದು ನಂಬಿರುವುದಾಗಿದೆ. ಇನ್ನು ೧೫ ದಿನಗಳೊಳಗೆ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಯ ಮ್ಯಾನ್ಯುಯಲ್ ಪುಸ್ತಕವು ಪ್ರಿಂಟಿಗೆ ಕಳುಹಿಸಲ್ಪಡುತ್ತದೆ. ಅದರಲ್ಲಿ ಫಂಡ್ ಸಭೆಯ ರೂಲ್ಸು, ಸೆಕ್ರೆಟರಿಯವರ ವಾರ್ಷಿಕ ರಿಪೋರ್ಟು, ಮಹಾಸಭಾಕಾಲದಲ್ಲಿ ವಾಗ್ದಾನಮಾಡಿದ, ಈ ಬೆಗೆ ವಸೂಲ್‌ಬಂದ, ಬಾಕಿ ನಿಂತಿರುವ ಮೊಬಲಗಿನ ಪಟ್ಟಿ, ಜನರಲ್ ಕಮಿಟಿ ಮೆಂಬರುಗಳ ಲಿಸ್ಟು, ವಗೈರೆ ಅಡಕವಾಗಿರುತ್ತವೆ. ಮಹಾಸಭಾಕಾಲದಲ್ಲಿ ವಾಗ್ದಾನಮಾಡಿದ್ದ ಮಹನೀಯರು ತಮ್ಮತಮ್ಮ ಮೊಬಲಗನ್ನು ಫಂಡ್ ಸಭೆಯ ಪ್ರೆಸಿಡೆಂಟರಾದ ಮ॥ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ ಪುಟ್ಟಣ್ಣಶೆಟ್ಟರವರಲ್ಲಿಗೆ ಅತಿ ಜಾಗ್ರತೆಯಾಗಿ ದಯವಿಟ್ಟು ಕಳುಹಿಸಿಕೊಟ್ಟರೆ ಮ್ಯಾನ್ಯುಯಲ್ ಪುಸ್ತಕದಲ್ಲಿ ದಾಖಲ್‌ಮಾಡಲಾಗುತ್ತೆ. ತಮ್ಮತಮ್ಮ ಬಾಕೀ ಮೊಬಲಗು ಶೂನ್ಯ ಅಥವಾ ಕಮ್ಮಿಯಾಗಿ ಕಂಡುಬರುವದು. ಈ ಮೇಲ್ಕಂಡ ವಿಷಯವನ್ನು ಶೀಘ್ರದಲ್ಲಿಯೇ ಗಮನಕ್ಕೆ ತೆಗೆದುಕೊಂಡು ಫಂಡ್‌ಅಭಿವೃದ್ಧಿ ಪಡಿಸಬೇಕಾಗಿ ಪ್ರಾರ್ಥನೆ.

ಜಿ. ಕೆ. ರುದ್ರಾರ್ಯ, ಅ। ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ
ಫಂಡ್ ಸಭೆ, ಬೆಂಗಳೂರು.

ಭಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

50

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪುಷ್ಟೀಕವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿಗುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲಿ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಶಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ
ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂ
ಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು
10 ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ-ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರರಜ್ವರ ನಾಲ್ಕರಜ್ವರ- ಮಲೇರಿಯಾಜ್ವರ- ತಲೆನೋವು- ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಶೆಳತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ. ಏದಕ್ಕೆ ಒಂದು ಇನಾಮು. ವಿ. ಪಿ ಛಾರ್ಜು ಪ್ರತ್ಯೇಕ.

ಅಮೋಘಬಿಡಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಗೆ, ಮಲಬಂಧ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತತ್ಕ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೫೦ ಮಾತ್ರೆ ೪ ಆಣೆ. ಏದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ. ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ಡಿ॥

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೈಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳುಸಹಿತ ಆದ ಸಮಾರಂಭ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಬಾಲಾ ಫೋಟೊ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೆಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ತಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ಕೋಟೆಬಡಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವಿರಶೈವ ಸತ್ಪುರುಷರಾಲಾ, ಹಾಳಕೇರಿ ಅನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೊ ಸಿಕ್ಕುತ್ತವೆ. ಫುಲ್ಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.

ಹೊಸಫ್ಯಾಷನ್—ಸಭ್ಯಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವ ಪಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಉಪ್ರಕಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ॥।=, ೧, ೧।, ಪ್ರಕಾರ, ಮತ್ತೂ ಬೆಳ್ಳಿದು ರು ೧॥ ರೋಲ್ಡ್ ಗೋಲ್ಡು ಭಂಗಾರದ್ದು ದರ್ಪಣದ ಗ್ಲಾಸದೂ ಕ್ರಯ ೨॥, ೨॥। ರೂ.

ಪರೂರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ದಾಣಿ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ. ನಮ್ಮವಿಳಾಸ— ಗಂಗಪ್ಪಾ ಜೇರಿಗೆ,
35 ಆರ್ಟಿಸ್ಟ್ ಸೊಲ್ಲಾಪುರ.

• (ವಿಶೇಷಸೂಚನೆಗಳು.) •

(ಜಾತಕಪತ್ರಿಕೆ) ಮಹಾಶಯರೇ ! ನಿಮ್ಮ ಶಿಶುಗಳು ಹುಟ್ಟಿದಸಂವತ್ಸರ ಮಾಸ, ತಿಥಿ, ವಾರ, ನಕ್ಷತ್ರ ಜನನಕಾಲವನ್ನು ಚೆನ್ನಾಗಿ ಬರೆದುಕಳುಹಿಸಿದರೆ ನಾವು ಸಿದ್ಧಾಂತರೀತಿಯಾಗಿ ಜನನಕಾಲವನ್ನು ಸ್ಥಿರಮಾಡಿಕೊಂಡು ಸಂವತ್ಸರಫಲ, ಮಾಸಫಲ ತಿಥಿ, ವಾರ, ನಕ್ಷತ್ರ, ರಾಶಿ, ಲಗ್ನ, ಪ್ರತ್ಯೇಕಭಾವಫಲ, ದಶಾಂತರ್ದಶಾಫಲ, ಮುಂದೆ ಇಂಥ ಸಂವತ್ಸರದಲ್ಲಿ ಇಂಥಾ ವಿಧವಾದ ಕಂಟಕಗಳು, ಬರುತ್ತವೆಂಬುವ ವಿಷಯವನ್ನು ದೇಹಪೀಡೆ, ಗ್ರಹಪೀಡೆ ಇವುಗಳಿಗೆ ಶಾಂತಿಕ್ರಮವನ್ನು ಸಹಾ ಚನ್ನಾಗಿ ಒಂದು ಬುಕ್ಕಿನಲ್ಲಿ ಬರೆದು ಕಳುಹಿಸುತ್ತೇವೆ. ಇದರಕ್ರಯ ರೂ. ೩—೮—೦

(ಪ್ರಶ್ನಜಾತಕ) ಜನನಕಾಲ ಗೊತ್ತಿಲ್ಲದೆ ಜಾತಕವಿಲ್ಲದ್ದರಿಂದ ಬಹು ತೊಂದರೆಪಡುತ್ತಿರುವರು. ಕಾರಣ ಪ್ರತಿಯೊಬ್ಬರು ತಮ್ಮ ಅಂದಾಜು ವಯಸ್ಸು ಹೆಸರನ್ನು ತಾವು ಮಾಡಿರುವ ಪ್ರಶ್ನಕಾಲವನ್ನು ಬರೆದು ಕಳುಹಿಸಿದರೆ ನಾವು ಸಿದ್ಧಾಂತರೀತಿಯಾಗಿ ಸ್ಥಿರಮಾಡಿ ಜಾತಕನಿಗೆ ಮುಂದೆ ನಡಿಯುವ ಸುಖದುಃಖ, ನಷ್ಟ, ಕಷ್ಟ ಇಂಥ ಮೂಲಕಲಾಭ ಇಷ್ಟೇವರ್ಷ ಆಯುಷ್ಯ ಇಂಥಾರೀತಿಯಾಗಿ ಮರಣ ಎಂಬುವ ರೀತಿಯನ್ನು ಒಂದು ಬುಕ್ಕಿನಲ್ಲಿ ಬರೆದು ಕಳುಹಿಸುತ್ತೇವೆ. ಕ್ರಯ ರೂ. ೬—೦—೦

(ಸಂಪೂರ್ಣಜಾತಕವು) ಜನನಕಾಲವನ್ನು ತಿಳಿಸಿದರೆ ಸಿದ್ಧಾಂತರೀತಿಯಾಗಿ ಜನನಕಾಲವನ್ನು ಸ್ಥಿರಮಾಡಿಕೊಂಡು ಗ್ರಹಸ್ಪುಟ, ಭಾವಸ್ಪುಟ, ಭಾವಕುಂಡಲಿಗಳು ಅಷ್ಟಕವರ್ಗ ಬಿಂದುಶೋಧನೆ ತ್ರಯೋದಶವರ್ಗ ಗ್ರಹಸಮಯಾವಸ್ಥೆಗಳು, ಅನೇಕವಿಧವಾದ ಆಯುರ್ದಾಯಗಣಿತಗಳನ್ನೆಲ್ಲಾ ಶೋಧಿಸಿ, ಸಂ॥ ರ ಮಾಸ, ತಿಥಿ, ವಾರ, ನಕ್ಷತ್ರ, ರಾಶಿ, ಲಗ್ನ ಇವುಗಳ ಫಲ ಧನಯೋಗ ರಾಜಯೋಗ ಸಂತಾನಯೋಗ ಕಳತ್ರಯೋಗ, ದ್ವಿಕಳತ್ರಯೋಗ ತನ್ವಾದಿದ್ವಾದಶಭಾವಫಲ ಘಾತಕಚಕ್ರನಿರ್ಣಯ ಆಯುಷ್ಯದವರಿಗೂ ದಶಾಂತರ್ದಶಾಫಲ ಮಾರಕಾದಿಗಂಡಕಾಲಗಳು (ಇದ್ದರೆ) ಅವುಗಳಿಗೆ ಶಾಂತಿಕ್ರಮವನ್ನು ಸಹ ಚನ್ನಾಗಿ ಬರಿಯುವ ಜಾತಕ ಒಂದಕ್ಕೆ ಕ್ರಯ ರೂ. ೧೨—೦—೦

(ಋತುಕಾಲನಿರ್ಣಯ) ಸ್ತ್ರೀಯರು ಋತುವಾದ ಸಂ॥ ರ ಮಾಸನಕ್ಷತ್ರ ವಾರ ಋತುವಾದ ವ್ಯಾಳ್ಯವನ್ನು ತಿಳಿಸಿದರೆ ಇಷ್ಟೇವರುಷ ಆಯುಷ್ಯ ಇಂಷ್ಟೇ ಸಂತಾನ ಮುಂದೆ ಯಾವಮೂಲಕವಾಗಿ ಕಷ್ಟನಷ್ಟಗಳುಂಟಾಗುವವೆಂಬುವ ವಿಷಯವನ್ನು ಆಯುಷ್ಯದವರಿಗೂ ಅಂತರ್ದಶಾಫಲವನ್ನು ಕಂಟಕಗಳಿಗೆ ಶಾಂತಿಕ್ರಮವನ್ನು ಸಹಾ ತಿಳಿಸುತ್ತೇವೆ. ಕ್ರಯ ರೂ ೬—೦—೦

(ಮಾಸದಶಾನಿರ್ಣಯವು) ಇದನ್ನು ಬರಿಸತಕ್ಕವರು ತಮ್ಮ ಹೆಸರು ವಯಸ್ಸನ್ನು ತಿಳಿಸಿದರೆ ೧ ವರ್ಷದವರಿಗೂ ಪ್ರತಿತಿಂಗಳಲ್ಲಿ ಉಂಟಾಗುವ ಕಷ್ಟನಷ್ಟ ದೇಹಪಿಡೆ ಇಂಥಾ ಮೂಲಕಲಾಭ ಸುಖವಾಗುವ ಸಂಗತಿಯನ್ನು ತಿಳಿಸುತ್ತೇವೆ. ಕ್ರಯ ರೂ. ೧-೦-೦ ನಮ್ಮ ವಿಳಾಸ:—

ಸ್ವಯಂಜ್ಯೋತಿರ್ಬೋಧಿನೀ ಆಫೀಸ್,
ಬಳ್ಳಾರಿ.

ವಿಜ್ಞಾಪನೆ.

ಈ ಸಮಯ ಬಿಡಬೇಡಿರಿ. ಮುಂದೆ ದೊರೆಯಲಾರದು. ಮೊಳಕಾಲ್ಮೂರಿನ ಪ್ರಸಿದ್ಧವಾದ ರೇಶ್ಮೆಯವಸ್ತ್ರಗಳು ಬೇಕೋ? ಬೆಲೆಸುಲಭ! ಬಣ್ಣ ಗ್ಯಾರಂಟಿಯಾದದ್ದು. ಒಂದುಸಲ ತರಿಸಿನೋಡಿರಿ !! ನಮ್ಮಲ್ಲಿ ಹೊದಿಯುವ ವಸ್ತ್ರಗಳೂ, ಮೊಗಟಗಳೂ, ಶೀರೆಗಳೂ, ನಡಕಟ್ಟುಗಳೂ, ಲಿಂಗದವಸ್ತ್ರಗಳೂ, ಕೈ ವಸ್ತ್ರಗಳೂ ಬಹಳ ಚೆನ್ನಾಗಿ ಎಲ್ಲಾ ರಂಗಿನಲ್ಲಿಯೂ ತಯಾರಾಗುತ್ತವೆ. ನಾವು ಮೈಸೂರು, ಮದ್ರಾಸು ಸೀಮೆಗಳ ಎಲ್ಲಾಭಾಗಕ್ಕೂ ನಮ್ಮ ಮಾಲನ್ನು ರವಾನಿಸುತ್ತೇವೆ. ನಮ್ಮ ಮಾಲುಗಳಿಗೆ ಬಹುಮಾನಗಳೂ, ಮೆಡಲುಗಳೂ, ಬಂದಿವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಹಿಮಂತಋತುವಿನ ದರಗಳು. ೧ನೆ ನಂ ವಸ್ತ್ರಗಳು ತೊಲೆ ೧ಕ್ಕೆ ೦-೩-೦. ೨ನೆ ನಂ. ವಸ್ತ್ರಗಳು ತೊಲೆ ೧ಕ್ಕೆ ೦-೬-೯. (ಮೊಗಟ, ಅರಳೆಪೇಟೆ ಶೀರೆಗಳೂ, ನಡಕಟ್ಟು, ಲಿಂಗದವಸ್ತ್ರಗಳು) ೧ನೆ ನಂ. ಮಾಲು ತೊಲೆ ೧ಕ್ಕೆ ೦-೮-೦. ೨ನೆ ನಂ. ಮಾಲು ತೊಲೆ ೧ಕ್ಕೆ ೦-೩-೬. ನಮ್ಮವಿಳಾಸ:—

2 ಎಂ. ಎಸ್. ಮಲಕಣ್ಣಾ, ಮತ್ತು ಬ್ರದರ್ಸ್,
ರೇಶ್ಮೆ ಜವಳಿ ವ್ಯಾಪಾರಿಗಳು. ಪೋಸ್ಟ್ ಮೊಳಕಾಲ್ಮುರು

ಸುಲಭ ! "ಚಾತುರ್ಯ" ಮಾಸಪತ್ರಿಕೆ !!

ಹಾಸ್ಯ, ವಿನೋದ, ನೀತಿ, ಚಮತ್ಕಾರಭರಿತ ಲೇಖನಗಳಿಂದ ಕೂಡಿರುವ ಮಾಸಪತ್ರಿಕೆ! ಪಂಡಿತಪಾಮರರ ಮನೋರಂಜಕವಾದದ್ದು ಮನೋರೋಗಕ್ಕೆ ಔಷಧಪ್ರಾಯ! ಕಾಲಕ್ಕೆತಕ್ಕ ಲೇಖನಗಳು!! ವಾರ್ಷಿಕಚಂದಾ ಅಂಚೆ ವೆಚ್ಚ ಮತ್ತು ವಿ. ಪಿ. ಛಾರ್ಜ ಸೇರಿ ಸ್ತ್ರೀಯರಿಗೆ ವಿದ್ಯಾರ್ಥಿಗಳಿಗೆ ಮಾತ್ರ ೩ ಆಣೆ. ಇತರರಿಗೆ ೧೧ ಆಣೆ. ಮಾದರಿ ಸಂಚಿಕೆಗೆ ೧ ಆಣೆ ಸ್ಟಾಂಪು ಕಳುಹಿಸಿರಿ, ನಮ್ಮಲ್ಲಿ ಅನೇಕ ಪುಸ್ತಕಗಳು ಸಹ ಸಿಗುತ್ತೆ. ಮ್ಯಾನೇಜರ್,

3 "ಚಾತುರ್ಯ" ಚಾಮರಾಜಪೇಟೆ ಬೆಂಗಳೂರು ಸಿಟಿ.

ಪಾಳ್ಯದವೆಂಕಟಾಚಲಪಂಡಿತರಸಿದ್ಧೌಷಧಗಳು. 21



ಶ್ರೀರಾಮಯುಷಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂಧುಗಳ ನೋವು ಮೈ ಕಾಲು ಹೊರೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳೆವು, ಜ್ವರ, ನಂಜು ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಮೋಸಹೋಗಬೇಡಿರಿ. ಒಂದೇಪ್ಪಿಂದು ಬುದ್ದಿಯು ನಿಮ್ಮಲ್ಲಿರಲಿ. ಮತ್ತೊಬ್ಬರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧೌಷಧವಿದೊಂದೇ.

ಅನುಪಾನಪತ್ರಿಕೆ ಔಷಧದೊಡನೆ ಇರುವುದು. ಒಂದು ಬುದ್ದಿಯ ಬೆಲೆ ೧ [illegible]

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರ.

ಕನ್ನಡ ಇಂಡಿಯನ್ ಪೆನಲ್‌ಕೋಡ್ ಕ್ರಯ ೨—೦—೦ ರೂ. ವಿ ಪಿ. ಛಾರ್ಜು ೦—೪—೦.
ಹೊಸಪುಸ್ತಕ ೧೩೪೪ ಪುಟಗಳು) ಶ್ರೀ (ಹೊಸಪುಸ್ತಕ ೧೩೪೪ ಪುಟಗಳು)

ಬ್ರ॥ ಶ್ರೀ॥ ಬಿ. ವಿ. ಸುಬ್ರಹ್ಮಣ್ಯಶರ್ಮವಿರಚಿತವಾದ ಸುಧಾರ ಸಧಾರಾಯೆಂಬ ಕನ್ನಡ
ಟೀಕಾತಾತ್ಪರ್ಯ ಗಣಿತೋದ್ಧಾರಣೆಗಳಿಂದೊಡಗೂಡಿ 12

ಬೃಹಜ್ಜಾತಕಾಖ್ಯ ಹೋರಾಶಾಸ್ತ್ರಮ್.

ಮಾನವನು ತನ್ನ ಅದೃಷ್ಟಚಕ್ರದ ಫಲಾಫಲಗಳನ್ನು ಅರಿತು, ಮುಂದೊದಗಬಹುದಾದ ಫಲಸ್ವರೂಪವನ್ನೂ ಇತರರ ಸಹಾಯವಿಲ್ಲದೆಯೆ ತಿಳಿದುಕೊಂಡು, ದುಷ್ಫಲಗಳು ದೂರವಾಗಿ, ಸುಫಲಗಳು ಕರಗತವಾಗುವಂತೆ ಮಾಡುವಂಥಹ, ಪರಿಹಾರೋಪಾಯಗಳನ್ನು ಸೂಚಿಸಬೇಕಾದರೆ, ನಮ್ಮಿಂದ ಈಗತಾನೆ ಸಂಸ್ಕೃತ ಹಿಂದಿ ಮರಾಟಿ ಭಾಷೆಗಳಿಂದ ತರ್ಜುಮೆಮಾಡಿ ಪ್ರಕಾಶಗೊಂಡ "ಸುಧಾರಸಧಾರಾ" ಎಂಬ ಕನ್ನಡ ಟೀಕಾತಾತ್ಪರ್ಯ ಉದಾಹರಣೆಗಳಿಂದ ಕೂಡಿದ ಬೃಹಜ್ಜಾತಕವೆಂಬ ಹೋರಾಶಾಸ್ತ್ರವೊಂದಲ್ಲದೆ ಮತ್ಯಾವದೂ ಸಮರ್ಥವಾಗಿಲ್ಲವು. ೧೩೪೪ ಪುಟ ೩ ಭಾಗಗಳ ಪುಸ್ತಕ ಒಂದೇಬೈಂಡ್ ಈ ಗ್ರಂಥರತ್ನವು ಆಬಾಲವೃದ್ಧರಾದಿಯಾಗಿ ಅಕ್ಷರವನ್ನರಿತ ಹೆಂಗಸರೂ ಸಹಾ ಪರರ ಸಹಾಯಾಪೇಕ್ಷೆ ಇಲ್ಲದೆ ಓದಿ ತಿಳಿಯಲು, ಅನುಕೂಲವಾಗಿರುವುದು. ಇದರೊಳಗಡಗಿರುವ ೨೮ ಪ್ರಕರಣಗಳ ವಿಷಯಸಂಗ್ರಹ ಮೆಂತೆಂದರೆ:—೧-೨ ನೇ ಪ್ರಕರಣಗಳಲ್ಲಿ ಶಾಸ್ತ್ರಪ್ರಯೋಜನವೂ, ಜ್ಯೋತಿಶಾಸ್ತ್ರದ ಪೀಠಿಕಾಭಾಗಗಳು ೩, ಸಜೀವನಿ ರ್ಜೀವವಸ್ತುಗಳ ಉತ್ಪತ್ತಿ ೪, ಗರ್ಭಧಾರಣಯೋಗಗಳು ೫, ಜನನಕಾಲ ಲಕ್ಷಣ ಮತ್ತು ಫಲ ೬, ಬಾಲಾರಿಷ್ಟವಿಚಾರ ಅವುಗಳ ನಿವಾರಣೋಪಾಯ ೭, ಆಯುರ್ದಾಯವಿಚಾರ ೮, ದಶಾಭುಕ್ತಿನಿರ್ಣಯ ೯, ಅಷ್ಟಕವರ್ಗವಿಚಾರ ೧೦, ಜೀವನೋಪಾಯವಿಚಾರ ೧೧, ರಾಜಯೋಗಸೂಚನೆ ಅವುಗಳ ಫಲವಿಚಾರ ೧೨, ೧೮೦೦ ಯೋಗಗಳ ಲಕ್ಷಣ ಮತ್ತು ಫಲ ೧೩, ಚಂದ್ರಸಂಬಂಧವಾದ ಯೋಗಗಳು ೧೪, ಒಂದಕ್ಕಿಂತಲೂ ಹೆಚ್ಚು ಗ್ರಹಗಳು ಒಂದೇಕಡೆ ಸೇರಿದರೆ ಅವುಗಳ ಫಲ ೧೫, ಸನ್ಯಾಸಯೋಗಗಳು ೧೬, ನಕ್ಷತ್ರಫಲಗಳು ೧೭, ರಾಶಿಫಲಗಳು ೧೮, ರಾಸಿಗಳ ಫಲ ಮತ್ತು ಕೇರಳಿಯೋಕ್ತ ಫಲಗಳು ೧೯, ದೃಷ್ಟಿಫಲಗಳು ೨೦, ಭಾವಲಕ್ಷಣ ಮತ್ತು ಆ ಫಲಗಳ ವಿಚಾರ ೨೧, ಕ್ಷೇತ್ರಫಲಗಳು ೨೨, ಗ್ರಹಗಳ ಅವಸ್ಥೆ ಅಷ್ಟಕವರ್ಗ ಫಲ ೨೩, ಅನಿಷ್ಟಯೋಗಗಳು ಅವುಗಳಿಂದಾಗುವ ಫಲಗಳು ೨೪, ಸ್ತ್ರೀಜಾತಕ ಅದರ ಫಲಗಳು ೨೫, ಮರಣಕಾರಣ ಅದರ ಫಲಗಳು ೨೬, ನಷ್ಟಜಾತಕ ಬರಿಯುವ ರೀತಿ ೨೭, ದ್ರೇಕ್ಕಾಣವರ್ಣನೆ ಪ್ರಶ್ನೆಗೆ ಬೇಕಾದ ಸಹಾಯವಿಷಯ ೨೮, ಅನುಕ್ರಮಣಿಕಾಸಂಗ್ರಹ ಮತ್ತು ಗ್ರಂಥಕರ್ತರ ವಂಶವರ್ಣನೆ:—

ಮೇಲೆ ಹೇಳಿರುವಂತೆ ಬರೆಯಲ್ಪಟ್ಟ ಒಂದು ಪುಸ್ತಕ ತಮ್ಮ ಬಳಿಯಲ್ಲಿದ್ದರೆ ೧೦ ಜನ ಜ್ಯೋತಿಷ್ಕರಿದ್ದರೆ ಎಷ್ಟು ಅನುಕೂಲವೋ ಅಷ್ಟು ಅನುಕೂಲ. ಇದು ಪ್ರೌಢರಿಗೂ, ಸ್ತ್ರೀಯರಿಗೂ ಧಾರಾಳವಾಗಿ ತಿಳಿಯುವಂತೆ ಉತ್ತಮಕಾಗದದಲ್ಲಿ ಪ್ರಿಂಟ್‌ಮಾಡಿಸಿದೆ, ಈ ತಿಂಗಳು ಅಖೈರಿನೊಳಗಾಗಿ ಆರ್ಡರ್ ಕೊಡುವವರಿಗೆ ೪—೦—೦ ರೂ. ವಿ. ಪಿ. ಛಾರ್ಜ್ ೦-೬-೦ ಆಣೆ ನಂತರ ೫-೦-೦ ರೂ. ಜಾಗ್ರತೆ ತರಿಸಿಕೊಳ್ಳಿ ನಂತರ ಈ ಬೆಲೆಗೆ ದೊರೆಯಲಾರದು.

ಇತರಪುಸ್ತಕಗಳು.

ಟೀಕಾಜೈಮಿನಿ ೯೩೦ ಪುಟ ೪-೦-೦ ರೂ. ಸಟೀಕಹರಿಕಥಾಮೃತಸಾರ ೩೪೪ ಪುಟ ೧-೪-೦ ರೂ. ಕನ್ನಡದ್ವಾದಶಸ್ಕಂಧ ಭಾಗವತ ೩-೦-೦ ರೂ. ಶುಕಸಪ್ತತಿ ೭೦ ಕಥೆ ಶುದ್ಧಪ್ರತಿ ೨-೦-೦ ರೂ. ೪ ಜನ ಫಕೀಕರರ ಕಥೆ ೦-೮-೦, ಸಟೀಕಾಭೋಜರಾಜಚರಿತ್ರೆ ೦-೮-೦ ಇವುಗಳಲ್ಲದೆ ನಮ್ಮಲ್ಲಿ ಯಾವಾಗ್ಯೂ ಕನ್ನಡ, ಸಂಸ್ಕೃತ, ತೆಲಗು ಗ್ರಂಥಗಳು ದೊರೆಯುತ್ತೆ. ಟಿ. ಯನ್. ಕೃಷ್ಣಯ್ಯಶೆಟ್ಟಿ. ಬುಕ್‌ಡಿಪೋ ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬಹುಮಾನ! ಶ್ರೀ ಬಹುಮಾನ !!

ಅತ್ಯಾಶ್ಚರ್ಯಕರವಾದ ಬಹುಮಾನ.
೫ ಸಾವಿರ ರೂಪಾಯಿಗಳು ಹಂಚಲ್ಪಡುವವು
ದಿವ್ಯೌಷಧ ಬಳ್ಳಾರಿ. ಸುಪ್ರಸಿದ್ಧೌಷಧ
ಸರ್ವಜನಮನೋಲ್ಲಾಸಿನಿ ಅಂಡ್ ಕೋ ಇವರ

(• ನಾರಸಿಂಹಚೂರ್ಣವು •)

4

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಜವಾದುದಷ್ಟೆ. ಆದರೆ ಅನೇಕ ದುರ್ವ್ಯರ್ತನಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವುವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನ ಕಣ್ಣಾರ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವುವಿಧ ಔಷಧಗಳನ್ನು ವಿಶೇಷವಾದ ಬೆಲೆಯನಿಟ್ಟು ವಿಕ್ರಯಿಸಿದರು ಪ್ರಯೋಜನವು ಮಾತ್ರ ಕಡಿಮೆಯಾಗುಯತ್ತಿರುವದು ವಿಷಾದಕರವಾಗಿರುವದು. ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿ (ನಾರಸಿಂಹಚೂರ್ಣವು) ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮನಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ, ಅನೇಕತರಹೆಯ ಮೇಹರೋಗಗಳು, ಪಾಂಡುರೋಗ, ಪೀನಸ, ಹದಿನೆಂಟು ಬಗೆಯಾದ ಕುಷ್ಠಗಳು, ಎಂಟುವಿಧ ಉದರರೋಗಗಳು, ಭಗಂಧರವು, ಮೂತ್ರಕೃಛ್ರವು, ಗೃಧ್ರಸೀವಾತವು, ಕಾಮಿಲೆ, ಕ್ಷಯವು ಮಹಾಶ್ವಾಸಗಳು, ದಾರುಣವಾದ ಐದುಬಗೆಯಾದ ಕಾಸಗಳು, ಎಂಭತ್ತುವಿಧಗಳಾದ ವಾತರೋಗಗಳು, ನಲವತ್ತು ಬಗೆಯಾದ ಪಿತ್ತಗಳು, ಇಪ್ಪತ್ತು ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಸಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ ಚೆನ್ನದಂಥಾ ಕಾಂತಿಯೂ, ಸಿಹ್ಮನಂತೆ ಪರಾಕ್ರಮವು, ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯೂ ಅತ್ಯಧಿಕ ವೀರ್ಯವೃದ್ಧಿಯೂ ನೃಸಿಹ್ಮನಿಗೆ ಸಮಾನರಾದ ಮಕ್ಕಳನ್ನು ಪಡೆಯುವಬಲವೂ ಉಂಟಾಗುವುದು ಇದರಲ್ಲಿ ಯಾವ ವಿಧವಾದರಸಗಳಾಗಲಿ ವಿಶ್ರವಾಗಿಲ್ಲ, ಇನ್ನಾವ ದೋಷಗಳೂ ಇಲ್ಲ. ನಿರ್ದುಷ್ಟವಾದದ್ದು, ಭಕ್ತವನಸ್ಪತಿಗಳಿಂದಲೇ ಸಿದ್ಧಮಾಡಿದದಿವ್ಯವಾದ ಔಷಧ. ಅನೇಕ ಪಂಡಿತರು, ಧನಿಕರು' ಸರ್ಟಿಫಿಕೇಟುಗಳನ್ನು ಕೊಟ್ಟಿರುವರು.

೧೪ ದಿನ ಉಪಯೋಗಕ್ಕೆಬರುವ ಡಬ್ಬಿ ೧ ಕ್ಕೆ ಬೆಲೆ ರೂ. ೧—೧—೦

—(ಬಹುಮಾನಗಳನ್ನು ಹಂಚುವ ವಿಧಾನ)—

೧ ಡಜನ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೧೦೦೦೦ ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೬೦೦೦ ರೂ. ೩ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೪೦೦೦ ರೂ. ೨ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೩೦೦೦ ರೂ. ೧ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ೨೦೦೦ ರೂ.

೧೯೧೪ ನೇ ಜುಲೈ ೧ ನೇ ತೇದಿ ಮೊದಲು ೧೯೧೫ ನೇ ಜುಲೈ ೧ ತೇದಿಯವರಿಗೂ ಈ ಔಷದವು ಒಂದು ಲಕ್ಷ ಡಬ್ಬಿಗಳು ಖರ್ಚಾದಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ. ಒಂದುಪಕ್ಷದಲ್ಲಿ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ವಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡಿಯುವದಲ್ಲದೆ ಬಹುಮಾನವನ್ನು ಸಹಾ ಹೊಂದವದಕ್ಕೆ ಅರ್ಹನಾಗಿರುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರು ಸಂಶಯವಿಲ್ಲ. ಬಹುಮಾನದ ಮೊತ್ತವು ನಿಷ್ಪಕ್ಷಪಾತವಾಗಿ ಒಂದೇ ಸಮವಾಗಿ ಹಂಚಲ್ಪಡುವವು. ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಕುಹಕತನವು ಇಲ್ಲ, ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರ ಮಾತುಗಳಿಗೆ ನಿಗಾ ಕೊಡಲಾಗದು, ಜಾಗ್ರತೆ ತರಿಸಿಕೊಳ್ಳಿರಿ. ಔಷಧದ ಗುಣವನ್ನು ಪರೀಕ್ಷಿಸಿರಿ ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇದಲ್ಲದೆ ನಮ್ಮಲ್ಲಿ ಇನ್ನು ಅನೇಕತರಹೆಯ ಔಷಧಗಳು ಸಿಗುತ್ತವೆ. ರೋಗದಲಕ್ಷಣವನ್ನು ತಿಳಿಸಿದರೆ ಅನುಕೂಲ್ಯವಾದ ಮತ್ತು ಗುಣಕಾರಿಗಳಾದ ಔಷಧಗಳನ್ನು ಕಳುಸುವೆವು.

ಇದರ ಅನುಪಾನ ಪತ್ರಿಕೆಯನ್ನು ಬಹುಮಾನದ ಟಿಕೀಟನ್ನು ಡಬ್ಬಿಸಂಗಡ ಕಳಿಸುವೆವು. ನಮ್ಮ ಕಂಪೆನಿಯ ಕಾಶಿ ವಿಶ್ವನಾಥ ಮಾರ್ಕು ಇಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು. ನಮ್ಮ ಅಡ್ರೆಸ್ಸು.

ಸರ್ವಜನಮನೋಲ್ಲಾಸಿನಿ ಅಂಡ್ ಕೋ ಬಳ್ಳಾರಿ.

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು:— ಚಂಡಮಾರುತ ೦-೨-೦; ಚರಿತಾಮೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಪೀಟರಿನಚರಿ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೦-೦. 62

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ -೦-೧೨ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

31 ಟಿ. ಎಲ್. ಉಪಾಧ್ಯಾಯ, ಅಂಡ್ ಸನ್ಸ್
ಸುಗಂಧಕಾರಿ, ಮೈಸೂರು.

ಲೋಕಪ್ರಸಿದ್ಧವಾದ ಪಂಜಾಬಸಾಲಾಮಿಸ್ರೀ ಮುರಬ್ಬಾ.

3

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವವರನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ „ಪಂಜಾಬ ಸಾಲಾಮಿಸ್ರೀ ಮುರಬ್ಬಾವನ್ನು” ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳಿಗೆಡ್ಡೆ, ಶಾಮಗೆಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾಬ ಸಾಲಾಮಿಸ್ರಿಯೋ ಅಥವಾ ಬೇರೆ ತರಹಾದ್ದೋ ಎಂಬುದು ತಿಳಿದುಬರುತ್ತೆ.

ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ನೀರಿನಂತಿರುವ ಧಾತುವನ್ನು ಘಟ್ಟಿಪಡಿಸುವುದು
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿ ಹೋಗುವ ಧಾತುವನ್ನು ನಿಲ್ಲಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಉರಿಯುವುದನ್ನು ನಿಲ್ಲಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಕ್ಷಣಕ್ಷಣಕ್ಕೂ ಮೂತ್ರವಾಗುವುದನ್ನು ನಿಲ್ಲಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಮೆದುಳಿಗೆ ಬಲವನ್ನು ಕೊಡುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿಕುಶಲತೆಯು, ಶರೀರಕಾಂತಿಯು ಕೊಡುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ತಾಂಬ್ರ ಮತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲ ಬರುವಂತ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವಹಾಗೆ ಕೈಯಿಂದ ಮುಪ್ಪಡಿ ತಯಾರು ಮಾಡಲ್ಪಟ್ಟಿರುವುದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕಂಡುಬರುತ್ತೆ. ೨-೩ ಡಬ್ಬಿಗಳನ್ನು ಉಪಯೋಗಿಸುವವರಿಂದ ಜನ್ಮಾಂತರದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು „ಪಂಜಾಬ ಸಾಲಾಮಿಸ್ರಿ” ಅಲ್ಲವೆಂದು ವ್ಯಕ್ತಪಡಿಸುವವರಿಗೆ
೫೦೦ ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ಕ್ಕೆ ರೂ. ೨-೦-೦. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ ೬ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೋ, ದೊಡ್ಡಪೇಟೆ, ಬೆಂಗಳೂರು ಸಿಟಿ.
ಡಿ. ಮನ್ನಾಲಾಲ್ ಡಿಲ್ಲೀವೈದ್ಯರು, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

೧೯೧೫ ನೆಯ
ಶ್ರೀ ಸೀತಾರಾಘವ
ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.



ಕಾಯಿ ಇಳಿಯದ ಉತ್ತಮವಾದ ಕಾಗದ ಮುದ್ದಾದ ಮುದ್ರಣ. ಅನೇಕವಾದ ಹೊಸಸಂಗತಿಗಳಿವೆ.

೧ ನಂ—ಸಣ್ಣಸೈಜು ಸಾದಾ	೦-೪-೦
೨ ನಂ—ಪೆನ್ಸಿಲ್‌ಮುಚ್ಚಳವುಳ್ಳದು	೦-೬-೦
೩ ನಂ—ದೊಡ್ಡಸೈಜು ಸಾದಾ	೦-೬-೦
೪ ನಂ—ಪೆನ್ಸಿಲ್‌ಮುಚ್ಚಳವುಳ್ಳದು	೦-೮-೦

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ

ಡಜನ್‌ಗೆ ತರಿಸುವವರಿಗೆ ರೂಪಾಯಿ ೧ ಕ್ಕೆ ೦-೨-೦ ಕಮಿಷನ್ ದೊರೆಯುವುದು. ವಿಳಾಸ:—

ಶ್ರೀ ಸೀತಾರಾಘವ ವೈದ್ಯಶಾಲಾ,
10 ಮೈಸೂರು.

11


S.M.N.& CO.
BENARES CITY.
KASHI
VISHVESHWAR.

ದೊಡ್ಡಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರಿಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯು. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ನ್ಯಾಯದರ್ಪಣ. 44

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಪ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಅಜಿರಜೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿಇರುತ್ತವೆ. ಬೆಲೆ ರೂ. 1-8-0. ವಿ. ಪಿ. ಮೂಲ್ಯ 1-12-0.

ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾದಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚಿಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಧಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗನಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವವು. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಪುರು, ಹನೂರು ಪೋಸ್ಟ್
40 ಕೊಳ್ಳೇಗಾಲದ ತಾಲ್ಲೂಕು

೧೯೧೪ನೆಯ ಇಸವಿ ಡಿಸೆಂಬರ್ ತಾ|| ೬ರಿಂದ ೧೯೧೪ನೆಯ ಡಿಸೆಂಬರ್ ತಾ|| ೧೨ ರವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ನೆಯ ಆನಂದನಾಮ ಸಂ|| ದ ಮಾರ್ಗಶಿರ ಬ|| ಚೌತಿಯಿಂದ ಮಾರ್ಗಶಿರ ಬ|| ದಶಮಿವರೆಗಿನ ಪಂಚಾಂಗ.

ತಾ||	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ವೃಶ್ಚಿಕದಿ
6	[1]ಭಾನು	ಚೌ	52-18	ಪುನ	23-51	21
7	ಸೋ	ಪಂ	51-39	ಪುಷ್ಯ	25-54	22
8	ಮಂ	ಷಷ್ಠಿ	50-16	ಆಶ್ಲೇ	26-16	23
9	ಬುಧ	ಸಪ್ತ	47-25	ಮಖಾ	25-29	24
10	[2]ಗುರು	ಅಷ್ಟ	43-40	ಪುಬ್ಬ	23-45	25
11	ಶುಕ್ರ	ನವ	39-2	ಉತ್ತ	21-5	26
12	[3]ಶನಿ	ದಶ	33-48	ಹಸ್ತ	17-45	27

(1) ಸಂಕಟಹರಚತುರ್ಥಿ. (2) ಮಾರ್ಗಶಿರಲಕ್ಷ್ಮೀವ್ರತಂ, ಭೈರವಾಷ್ಟಮಿ, ತಿಸ್ರೋಷ್ಟಕಾ. (3) ವ್ಯತ್ಯಯೋಗಃ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ [illegible] ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED NO. M. 124.

ಮೈಸೂರ್ ಸ್ಟಾರ್.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ।
ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ॥

ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ ।
ಸ್ತೋಮಾಭೀಷ್ಟದಶೀಲನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ ।
ಪ್ರೇಮಂಬಿಭ್ರತಿಯುಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧-೦-೦
ಅಂಚೆವೆಚ್ಚ ಸೇರಿ ೧-೧೪-೦

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಸಂಪುಟ ೨೩) ಮೈಸೂರ್ ಸ್ಟಾರ್ ಸರ್ ೧೯೧೪ ನೆಯ ಇಸವಿ ಡಿಸೆಂಬರ್ ತಾರೀಖು ೧೩ ನೆಯ ಭಾನುವಾರ. (ಸಂಚಿಕೆ ೫೦

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರಿಗೂ ಸ್ಕೂಲ್‌ಮಾಸ್ಟರ್‌ಗಳಿಗೂ ವಿನಂತಿ.

೧೯೧೫ ನೇ ಇಸ್ವಿಯ ಸಚಿತ್ರ ಕ್ಯಾಲೆಂಡರ್‌ಗಳು ಬಿಕರಿಗೆ ಸಿದ್ಧವಾಗಿವೆ ಕ್ರಯ ೧ ಕ್ಕೆ ೦-೦-೬ ಪೈ. ೫೦ ಕ್ಕೆ ೦-೧೧-೦ ಆಣೆ ೧೦೦ ಕ್ಕೆ ೧-೫-೦ ಪ್ಯಾಕಿಂಗ್ ಪೋಸ್ಟೇಜು ಮಾಫಿ ೫೦ ಕ್ಯಾಲೆಂಡರ್‌ಗಳಿಗಿಂತಲೂ ಕಡಿಮೆಯಾಗಿ ಪೋಸ್ಟುಮೂಲಕ ರವಾನಿಸಲಾಗುವುದಿಲ್ಲಾ.

ಈ ಕ್ಯಾಲೆಂಡರಿನಲ್ಲಿ ಇಂಗ್ಲೀಷ್ ಮತ್ತೂ ಕನ್ನಡ ತಿಂಗಳೂ, ತಾರೀಖು, ವಾರ, ತಿಥಿ, ನಕ್ಷತ್ರ, ಆಯಾಯ ದಿವಸದ ವಿಶೇಷ ದಿವಸಗಳು ವಿಶಿಷ್ಟ ಹಬ್ಬ ದಿವಸಗಳೂ ಇರುವುದಲ್ಲದೆ ಮೈಸೂರ್ ಮಹಾರಾಜರವರ ಮತ್ತೂ ಯುವರಾಜರವರ ಭಾವಚಿತ್ರಗಳೂ ಮತ್ತೂ ಮೈಸೂರ್ ಸಂಸ್ಥಾನದ ಈಗಿನ ಹೊಸ ಅರಮನೆಯಲ್ಲಿ ನಡೆಯುವ ನವರಾತ್ರಮಹೋತ್ಸವದ ದರ್ಬಾರ್ ಸಹಿತ ಇರುವ ನಕ್ಷೆಯನ್ನೂ ಸಹ ನುಣುಪಾದ (ಗ್ಲೇಜ್‌ಪೇಪರ್) ಕಾಗದದಲ್ಲಿ ಅಂದವಾಗಿ ಪ್ರಿಂಟ್‌ಮಾಡಿಸಿ ಮೇಲ್ಕಂಡ ದರದಂತೆ ಬಹುಸುಲಭಬೆಲೆಗೆ ಕೊಡುತ್ತಲಿದ್ದೇವೆ ಆದಕಾರಣ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ ಸ್ವಲ್ಪ ಪ್ರತಿಗಳುಮಾತ್ರ ಉಳಿದಿವೆ. ಬಿಕರಿಯಾದನಂತರಬರತಕ್ಕ ಆರ್ಡರ್‌ಗಳನ್ನೆಲ್ಲಾ ಹೋದವರುಷದಂತೆ ಕ್ಯಾನ್ಸಲ್‌ಮಾಡಲಾಗುತ್ತೆ.

ಈಗತಾನೇ ಸೀಮೆಯಿಂದ ಬಂದಿರತಕ್ಕ ರಖಂವಾರ್ ವಾಚ್‌ಗಳ ಕ್ರಯದಪಟ್ಟಿ. 44



೧	ರಾಸ್ಕೋಪ್ ಸಿಸ್ಟಂಪೇಟೆಂಟ್‌ಸ್ವಿಸ್‌ಮೇಡ್‌ವಾಚ್	೧ ಕ್ಕೆ	೨-೮-೦
೨	ಗನ್‌ಟೈಂ ರೈಲ್ವೇ ರೆಗ್ಯುಲೇಟರ್ ವಾಚ್	೧ ಕ್ಕೆ	೩-೮-೦
೩	ಡಿಟೋ ನಮೂನೆ ಚಿಕ್ಕಸೈಜ್ ವಾಚ್	೧ ಕ್ಕೆ	೪-೪-೦
೪	ಡಿಟೋ ಚಿಕ್ಕಸೈಜ್ ಸ್ಪೆಷಲ್ ಸರ್ವೀಸ್‌ವಾಚ್	೧ ಕ್ಕೆ	೫-೮-೦
೪	ಜರ್ಮನ್‌ಸಿಲ್ವರ್ ಡ್ರಸ್ ವಾಚೆಂಬ ಅತ್ಯುತ್ತಮವಾದ ಲೀವರ್ ವಾಚ್	೧ ಕ್ಕೆ	೮-೧೨-೦
೫	ಡಿಟೋ ನಮೂನೆ ಕೆಂಪುಗಳನ್ನು ಕೆತ್ತಿರುವ ವಾಚ್	೧ ಕ್ಕೆ	೯-೪-೦
೬	ಪೀಕಾಕ್ ವಾಚೆಂಬ ತೆಳುವಾದ ಮತ್ತೂ ಗ್ಯಾರೆಂಟಿಯಾದ ವಾಚ್ (ಸಾವಿರಾರು ವಿಕ್ರಯ)	೧ ಕ್ಕೆ	೧೦-೮-೦
೭	ವಾರಕೊಂದಾವರ್ತಿ ಬೀಗಕೊಡುವ ನಿಕ್ಕಲ್ ಬೆಳ್ಳೀಕೇಸ್ ವಾಚ್	೧ ಕ್ಕೆ	೧೦-೮-೦
೮	ಡಿಟೋ ನಮೂನೆಯಲ್ಲಿ ಅಚ್ಚಬೆಳ್ಳೀಕೇಸಿನ ಚಿಕ್ಕ ಸೈಜ್ ವಾಚ್	೧ ಕ್ಕೆ	೧೫-೪-೦
೯	೩೦ ಘಂಟೆಗೆ ಒಂದಾವರ್ತಿ ಬೀಗಕೊಡುವ ದೊಡ್ಡ ಬರ್ಮಾಟೈಂಪೀಸ್	೧ ಕ್ಕೆ	೧-೪-೦
೧೦	ಡಿಟೋ ನಮೂನೆ ಅಲಾರಂ ಟೈಂಪೀಸ್	೧ ಕ್ಕೆ	೨-೪-೦
೧೧	ಡಿಟೋ ನಮೂನೆಯಲ್ಲಿ ಘಂಟೆ ನಿಮುಷ ಸೆಕೆಂಡ್ ತೋರಿಸಿ ಅಲಾರಂ ಇದ್ದು ತಾರೀಖು ಸಹ ತೋರಿಸುವ ದೊಡ್ಡ ಟೈಂಪೀಸ್	೧ ಕ್ಕೆ	೩-೪-೦
೧೨	ಖಾತ್ರಿಯಾದ ಅನ್‌ಸೋನಿಯಾ „ಬಿ” ಟೈಂಪೀಸ್	೧ ಕ್ಕೆ	೨-೮-೦
೧೩	ಡಿಟೋ ಕಂಪೆನಿಯ ಅಲಾರಂಟೈಂಪೀಸ್ (ಬಹಳಮಜಬೂತಾದ್ದು) (ಸಾವಿರಾರುವಿಕ್ರಯ)	೧ ಕ್ಕೆ	೩-೮-೦
೧೪	ಅನ್‌ಸೋನಿಯಾ ಕಂಪೆನಿಯಲ್ಲಿ ತಯಾರಾದ ಘಂಟೆ, ಅರ್ಧಘಂಟೆ ಹೊಡೆದು ಅಲಾರಂ ಇರತಕ್ಕ ದೊಡ್ಡಟೈಂಪೀಸ್ (ಅನೇಕವಾಗಿ ವಿದ್ಯಾರ್ಥಿಗಳು ಇದನ್ನೇ ಉಪಯೋಗಿಸುತ್ತಲಿದ್ದಾರೆ)	೧ ಕ್ಕೆ	೬-೧೨-೦
೧೫	ಘಂಟೆ, ಅರ್ಧಘಂಟೆ ಹೊಡೆಯುವ ಕ್ಯಾರೇಜ್ ಕ್ಲಾಕೆಂಬ ಟೇಬಲ್ ಘಡಿಯಾರ	೧ ಕ್ಕೆ	೪-೧೨-೦
೧೬	ಡಿಟೋ ನಮೂನೆಯಲ್ಲಿ ಘಂಟೆ, ಅರ್ಧಘಂಟೆಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್	೧ ಕ್ಕೆ	೫-೪-೦
೧೭	ಡಿಟೋ ನಮೂನೆಯಲ್ಲಿ ಘಂಟೆಹೊಡೆಯುವದಕ್ಕೆ ಪ್ರತಿಯಾಗಿ ಗಾನಹಾಡುವ ಕ್ಲಾಕ್	೧ ಕ್ಕೆ	೫-೮-೦
೧೮	ಡಿಟೋ ನಮೂನೆಯಲ್ಲಿ ತಾವಿಷ್ಟಪಟ್ಟ ಟೈಂಮಿಗೆ ಕಾಲುಘಂಟೆಕಾಲ ಕರ್ಣಾನಂದವಾಗುವಂತೆ ಮೃದುಮಧುರ ಗಾನಮಾಡತಕ್ಕ ಕ್ಲಾಕ್	೧ ಕ್ಕೆ	೫-೮-೦
೧೯	ಅನ್‌ಸೋನಿಯಾ ಕಂಪೆನಿಯ ಲಿವರ್ ಕ್ಲಾಕೆಂಬ ಗೋಡೆಗೆ ತಗಲಿಸುವ (೮ ಮೂಲೆಯ) ಅಷ್ಟಕೋಣಾಕೃತಿಯ ಚಿಕ್ಕಸೈಜ್ ಕ್ಲಾಕ್	೧ ಕ್ಕೆ	೬-೮-೦

ರಖಂವಾರ್ ವಾಚ್ ಸರಪಣಿಗಳು.

ನಿಕ್ಕಲ್ ಬೆಳ್ಳಿಯ ವಾಚ್‌ಸರಪಣಿ	೧ ಕ್ಕೆ	೦-೧೨-೦
ಅಚ್ಚಬೆಳ್ಳಿಯ ಜೇಬಿನ ವಾಚ್‌ಸರಪಣಿ	೧ ಕ್ಕೆ	೩-೪-೦
ಅಚ್ಚಬೆಳ್ಳಿಯ ಕೊರಳಸರಪಣಿ	೧ ಕ್ಕೆ	೧-೪-೦
೧೮ ಕ್ಯಾರಟ್ಟು ಚಿನ್ನದ ವಾಚ್‌ಸರಪಣಿ	೧ ಕ್ಕೆ	೫-೮-೦
ವಾಚಿನ ಸರಪಣಿ ತುದಿಯಲ್ಲಿ ಹಾಕುವ ಅಚ್ಚಬೆಳ್ಳಿಯ ಶಾಶ್ವತವಾದ ಕ್ಯಾಲೆಂಡರ್ ಅಂದರೆ ಎಷ್ಟು ವರುಷಗಳ ವರಿಗಾದರೂ ತಾರೀಖು ನೋಡಬಹುದಾದ ಕ್ಯಾಲೆಂಡರ್ ಎಂದೆಂದಿಗೂಕೆಡತಕ್ಕದ್ದಲ್ಲಾ	೧ ಕ್ಕೆ	೧-೧೨-೦
ಡಿಟೋ ನಮೂನೆಯಲ್ಲಿ ೧೮ ಕ್ಯಾರಟ್ಟು ಚಿನ್ನದಿಂದ ತಯಾರಿಸಿದ್ದು	೧ ಕ್ಕೆ	೩-೪-೦

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ಒಂದುಸಾರಿ ಶಾಯಿತುಂಬಿದರೆ ೧೦,೦೦೦ ಶಬ್ಧಗಳನ್ನು ಬರೆಯಬಹುದಾದ ಲೇಖಣಿಗಳು.

ಪ್ರತಿಯೊಂದಕ್ಕೂ ೧೪ ಕ್ಯಾರಟ್ಟು ಚಿನ್ನದ ನಿಬ್ಬು ಹಾಕಿದ

ನೆಪ್ಚೂನ್ ೨೦೦ ನೇ ನಂ. ಪೆನ್	೧ ಕ್ಕೆ	೧-೧೪-೦
ನೆಪ್ಚೂನ್ ೨೫ ನೇ ನಂ. ಪೆನ್	೧ ಕ್ಕೆ	೨-೧೦-೦
ನೆಪ್ಚೂನ್ ೨೧೦ ನೇ ನಂ. ಪೆನ್	೧ ಕ್ಕೆ	೪-೨-೦

ಪ್ರತಿಯೊಂದು ಪೆನ್ ತರಿಸಿ ಕೊಳ್ಳುವರಿಗೂ ೪ ಪದಾರ್ಥಗಳನ್ನು ಮುಫತ್ತಾಗಿ ರವಾನಿಸುತ್ತೇವೆ

೧ ಪೆನ್‌ಗಳನ್ನಿಡತಕ್ಕ ಸುಂದರವಾದ ಪೆಟ್ಟಿಗೆ ೧.
೨ ಪೆನ್ನಿಗೆ ಶಾಯಿಹಾಕುವ ಗಾಜಿನಕೊಳವೆ ೧.
೩ ಪೆನ್‌ಗಳನ್ನು ಕ್ಲೀನ್‌ಮಾಡುವ ವಿಧಾನ ಮತ್ತೂ ಶಾಯಿಹಾಕುವ ವಿಧಾನ ಪ್ರಿಂಟಾಗಿರುವ ಚೀಟಿ ೧.
೪ ಪೆನ್ನನ್ನು ಜೇಬಿಗೆತಗಲಿಸುವ ಸುಂದರವಾದ ಕ್ಲಿಪ್ ೧.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್. ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧-೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಶಿವಪೂಜಾವಿಧಿಃ	೦-೮-೦
ಚಾರುಶೀಲೆಚರಿತ್ರೆ	೦-೫-೦
ಸಟೀಕ ನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವಿವೇಕಮಂಜರಿ (೨ನೆಯ ಭಾಗ)	೦-೩-೦
ಸ್ವತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆಯುವೆಚ್ಚ ಬೇರೆ.

ಹೊಸ ಪುಸ್ತಕಗಳು

163

ಸಿದ್ಧಾಂತಶಿಖಾಮಣಿ — ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೩೫ ಪುಟಗಳ ಉದ್ಗ್ರಂಥ ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ — ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ — ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ — ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦. ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತದರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ ಸಟೀಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಸ್ಟಾರ್ ಮುದ್ರಾಲಯವು.

ಈ ಮುದ್ರಾಲಯವು ಸಂತೇಪೇಟೆಯಿಂದ ಸಯ್ಯಾಜಿರಾವ್ ರೋಡಿನಲ್ಲಿ ದೊಡ್ಡ ಮಾರ್ಕೆಟ್ಟಿನ ಪೂರ್ವದ್ವಾರದ ಇದಿರುಭಾಗದಲ್ಲಿರುವ ಮಹಡಿಗೆ ವರ್ಗಾಯಿಸಲ್ಪಟ್ಟಿದೆ. ಈ ಮುದ್ರಾಲಯದಲ್ಲಿ ವಿಜಿಟಿಂಗ್ ಕಾರ್ಡುಗಳು, ಲಗ್ನಪತ್ರಿಕೆಗಳು, ಇನ್ವಿಟೇಷನ್ ಕಾರ್ಡುಗಳು ಮುಂತಾದವುಗಳು ನಾನಾವಿಧ ಬಣ್ಣದ ಶಾಯಿನಿಂದಲೂ, ಚಿನ್ನದ ಗಿಲೀಟಿನಿಂದಲೂ, ನೇತ್ರಾನಂದಕರವಾಗಿ ಸ್ವಲ್ಪಕಾಲದಲ್ಲಿ ಸುಲಭದರದಿಂದ ಮುದ್ರಣಮಾಡಲ್ಪಡುವುವಲ್ಲದೆ ರೂಲ್‌ಫಾರಂಗಳೂ, ನೋಟಸ್ಸು ಮೊದಲಾದ ಪುಸ್ತಕಗಳೂ ಇಂಗ್ಲೀಷ್ ಮತ್ತು ಕನ್ನಡ ಅಕ್ಷರಗಳಿಂದ ಶ್ಲಾಘ್ಯವಾಗಿಯೂ ಯೋಗ್ಯ ದರದಿಂದಲೂ ಮುದ್ರಣಮಾಡಿಕೊಡಲ್ಪಡುವುವು, ಮತ್ತೂ ಚಕ್ಕಳದ ಅಥವಾ ಸಾದಾ ಬೈಂಡುಕೆಲಸಗಳೂ ತೃಪ್ತಿಕರವಾಗಿ ಮಾಡಲ್ಪಡುವುವು. ಒಂದಾವೃತ್ತಿ ಪರೀಕ್ಷಿಸಿದಲ್ಲಿ ತಾನಾಗಿ ಗೊತ್ತಾಗುವುದು.

ಮ್ಯಾನೇಜರ್.

ನೋಟೀಸ್.

2

ಬಂಗಲೆಯು ಕ್ರಯಕ್ಕೆ ಸಿದ್ಧವಾಗಿದೆ!

ಮೈಸೂರ ಲಾ ಕೋರ್ಟುಗಳ ಸಮೀಪದಲ್ಲಿ ಇಂಜನಿಯರ್ ರಾಘವಲು ನಾಯುಡುಯವರ ಬಂಗಲೆಯ ಪಕ್ಕದಲ್ಲಿ ಪಶ್ಚಿಮಾಭಿಮುಖವಾಗಿರುವ ಪೆರುಮಾಳು ಪಿಳ್ಳೆಯವರ ಬಂಗಲೆಯು ಕ್ರಯಕ್ಕೆ ಸಿದ್ಧವಾಗಿದೆ. ಈ ಬಂಗಲೆಯು ೧೧೫ ಅಡಿ ಉದ್ದವೂ, ೫೫ ಅಡಿ ಅಗಲವೂ ಇದೆಯಲ್ಲದೆ ಇದರಲ್ಲಿ ಗಾಡಿ ಖಾನೆ, ಹಿತ್ತಲು, ಭಾವಿ, ಸೀಬೆ ನಲ್ಲಿಗಳು, ವಿಶಾಲವಾದ ಕಾಂಪೌಂಡು ಇವೆ. ಇದಕ್ಕೆ ತಿಂಗಳೊಂದಕ್ಕೆ ೩೫ ರೂಪಾಯಿ ಬಾಡಿಗೆ ಬರುತ್ತದೆ. ಇದನ್ನು ಕೊಂಡುಕೊಳ್ಳಲಿಚ್ಛೈಸುವವರು ಈ ಕೆಳಗಿನ ವಿಳಾಸದಾರರಿಗೆ ಕಾಗದವನ್ನು ಬರೆದು ಎಲ್ಲಾ ಸಂಗತಿಯನ್ನೂ ತಿಳಿಯಬಹುದು. ಮತ್ತೂ ಮನೆಯನ್ನು ನೋಡಲಿಚ್ಛೈಸುವವರು ಸುಬ್ರಾಯನ ಕೆರೆಯಲ್ಲಿ ಮಠವನ್ನು ಕಟ್ಟಿಸಿಕೊಂಡಿರುವ ರಾಮರಾಮಮಂಜಿ ದತ್ತಾತ್ರೇಯವರನ್ನಾಗಲಿ ಬಿಡಾಯಿ ಅಂಗಡಿ ಸಾಹುಕಾರ್ ರಾಮಸುಖ್‌ರಾಂ ರವರನ್ನಾಗಲಿ ಕೇಳವಲ್ಲಿ ಕೋರಿರುವರು.

ವಿಳಾಸ:—ಪ್ರೇಮಚಂದ್ ಕೇಸಮಲ್,
ಆಂಡರ್‌ಸನ್ ಪೇಟೆ, ಕೋಲಾರ್ ಗೋಲ್ಡ್‌ಫೀಲ್ಡ್ಸ್.

ಸ್ತ್ರೀವಿದ್ಯಾಭ್ಯಾಸವು ಹಿಂದೂದೇಶದ ಏಳಿಗೆಗೆ ಅತ್ಯಾವಶ್ಯಕವು

ಹಿಂದಿನ ಸ್ತ್ರೀಯರು.

ಪೂರ್ವದಲ್ಲಿ ಒಂದಾನೊಂದು ಕಾಲದಲ್ಲಿ ಹಿಂದೂದೇಶವು ಅತ್ಯುತ್ತಮಸ್ಥಿತಿಯಲ್ಲಿತ್ತೆಂದು ಕೇಳಿರುವೆವು. ಆ ಕಾಲದಲ್ಲಿ ಪ್ರಸಿದ್ಧರಾದ ಗಂಡುಸರೆಲ್ಲರೂ ವಿದ್ಯಾವಂತರಾಗಿದ್ದುದಲ್ಲದೆ ಹೆಂಗಸರೂ ಸಹ ಗಂಡುಸರಂತೆಯೇ ವಿದ್ಯಾವತಿಯರಾಗಿದ್ದರು. ಬರಿಯ ಪಾರಮಾರ್ಥಿಕ ವಿದ್ಯೆಯಲ್ಲಿ ಮಾತ್ರವೇ ಅಲ್ಲದೆ ಲೌಕಿಕವಿದ್ಯೆಯಲ್ಲಿಯೂ ಸಹ ನಿಪುಣೆಯರಾಗಿದ್ದರು. ಹೆಂಗಸರಲ್ಲಿ ಅನೇಕರು ಕವಿಗಳಾಗಿಯೂ ಧರ್ಮಶಾಸ್ತ್ರಜ್ಞರಾಗಿಯೂ ಸಂಗೀತ ಸಾಹಿತ್ಯವಿದ್ಯಾಪರಿಣತೆಯರಾಗಿಯೂ, ತರ್ಕಜ್ಯೋತಿಷಮೀಮಾಂಸಾಶಾಸ್ತ್ರಾಭಿಜ್ಞರಾಗಿಯೂ, ಉತ್ತಮವಾದ ಬೋಧಕರಾಗಿಯೂ ಇದ್ದಂತೆ ಅನೇಕ ಗ್ರಂಥಗಳಿಂದ ತಿಳಿಯಬರುತ್ತದೆ. ವೇದಗಳಲ್ಲಿ ಹೆಂಗಸರು ಹೇಳಿರುವ ಅನೇಕ ಋಕ್ಕುಗಳಿರುವುವು. ಅಲ್ಲದೆ ವೇದಾಂತದಲ್ಲಿಯೂ ಕೂಡ ಹೆಂಗಸರಲ್ಲಿ ಕೆಲವರು ಗಂಡುಸರಿಗೆ ಸಮಾನರಾಗಿದ್ದರು. ಕೆಲವು ವೇಳೆ ಗಂಡುಸರನ್ನು ವಿಚಾರಿಸಿದ್ದಂತೆಯೂ ಸಹ ತಿಳಿಯಬರುತ್ತದೆ. ಅಂತಹ ಅಂಗನಾಮಣಿಯರನ್ನು ಈಗಲೂ ಸಹ ನಾವು ಎಷ್ಟು ಗೌರವಿಸುತ್ತಿರುವೆವು! ಹೀಗೆ ಹೆಂಗಸರೂ ಗಂಡುಸರೂ ಉಭಯತ್ರರೂ ಸಮಾನವಿದ್ಯಾವಂತರಾಗಿ ಇದ್ದುಕೊಂಡು, ಪರಸ್ಪರ ಸಹಾಯಕರಾಗಿ ಇದ್ದುದರಿಂದಲೇ ದೇಶವು ಆ ಕಾಲದಲ್ಲಿ ಅಷ್ಟು ಉನ್ನತದಶೆಯಲ್ಲಿದ್ದು ಸತ್ಯಯುಗವೆನಿಸಿಕೊಂಡಿತು.

ಮಕ್ಕಳ ಏಳಿಗೆ.

ಈಗಲೂ ದೇಶವು ಉನ್ನತಸ್ಥಿತಿಗೆ ಬರಬೇಕಾದರೆ ಹೆಂಗಸರು ವಿದ್ಯಾವತಿಯರಾದ ಧರ್ಮಜ್ಞರಾಗಿ ಗಂಡುಸರ ಜತೆಯಲ್ಲಿ ಸಮಾನರಾದ ಸಹಧರ್ಮಿಣಿಯರಾಗಿ ಕಲಿತು ತಾವು ಮಾಡಬೇಕಾದ ಕರ್ತವ್ಯವನ್ನು ಸರಿಯಾಗಿ ನೆರವೇರಿಸಬೇಕು. ಜನಾಂಗವೆಂಬ ದೇಹದಲ್ಲಿ ಅರ್ಧದೇಹವಾದ ಹೆಂಗಸರು ಅವಿದ್ಯಾವತಿಯರಾಗಿರುವವರೆಗೂ ಗಂಡಸರು ಎಷ್ಟು ವಿದ್ಯಾವಿವೇಕಸಂಪನ್ನರಾದಾಗ್ಯೂ ಆ ಜನಾಂಗವೆಂಬ ದೇಹವು ಆರೋಗ್ಯವಾಗಲಾರದು. ಉತ್ತಮಸ್ಥಿತಿಗೂ ಬರಲಾರದು. ಆದುದರಿಂದ ನಮ್ಮ ಹೆಂಗಸರು ತಾವು ಏನುಮಾಡಿದರೆ ದೇಶವು ಉತ್ತಮಸ್ಥಿತಿಗೆ ಬರುವುದೆಂಬುದನ್ನು ಯೋಚಿಸಿ ತಿಳಿಯತಕ್ಕ ಶಕ್ತಿಯುಳ್ಳವರಾಗಬೇಕು. ತಿಳಿದಬಳಿಕ ಹಾಗೆ ಮಾಡುವ ಶಕ್ತಿಯನ್ನು ಸಂಪಾದಿಸಬೇಕು. ತಿಳುವಳಿಕೆಯೂ ಕೆಲಸಮಾಡುವ ಶಕ್ತಿಯೂ ಇದ್ದ ಮಾತ್ರಕ್ಕೇ ಫಲವಾಗಲಿಲ್ಲ. ಅದರಂತೆ ಕಾರ್ಯವನ್ನೂ ಮಾಡತಕ್ಕವರಾಗಬೇಕು. ಈಗ ಮಕ್ಕಳಾಗಿರುವವರೂ ಮತ್ತೂ ಮುಂದೆ ಹುಟ್ಟತಕ್ಕವರೂ ಅಲ್ಲವೆ ಮುಂದೆ ಜನಾಂಗವನ್ನು ಕಟ್ಟಿ ಬೆಳೆಸಿ ನಿರ್ವಹಿಸತಕ್ಕ ಬೋಧಕರು ಧರ್ಮಜ್ಞರು ರಾಜರು ರಾಜಕಾರ್ಯನಿರ್ವಾಹಕರು ಶಾಸ್ತ್ರಜ್ಞರು ಕುಶಲಕಲಾಕೋವಿದರು ವರ್ತಕರು ವೃತ್ತ್ಯರು ಮೊದಲಾದ ದೇಶಬಾಂಧವರಾಗತಕ್ಕವರು? ಅಂತಹವರನ್ನು ಹೆತ್ತು ಹೊತ್ತು ಬೆಳೆಸಿ ತಿದ್ದಿ ಯೋಗ್ಯರನ್ನಾಗಿ ಮಾಡಬೇಕಾದ ಅತ್ಯಂತ ಜವಾಬ್ದಾರಿಯ ಕೆಲಸವು ಹೆಂಗಸರದಾಗಿರುತ್ತದೆ. ಮಕ್ಕಳು ವಿದ್ಯಾಶೀಲಸ್ವಭಾವ ಸದಾಚಾರ ಸಂಪನ್ನರೂ ಧರ್ಮಿಷ್ಠರೂ ಐಶ್ವರ್ಯವಂತರೂ ಸುಖಶಾಲಿಗಳೂ ಆಗಬೇಕೆಂದು ಪ್ರಾಯಶಃ ಎಲ್ಲರೂ ಬಯಸುವೆವು. ಇಷ್ಟು ಕೆಲಸವನ್ನು ಮಾಡಲು ತಕ್ಕ ತಿಳುವಳಿಕೆ ಕಾರ್ಯನಿರ್ವಾಹಕಶಕ್ತಿ ಸ್ವಾತಂತ್ರ್ಯಗಳು ತಮಗೇ ಇಲ್ಲದೆಹೋದರೆ ತಾವು ಇತರರಿಗೆ ಕಲಿಸುವುದು ಹೇಗೆ? ಗಂಡುಸರಿಗೆ ದಿನದಲ್ಲಿ ಬಹು ಭಾಗವು ಹೊಟ್ಟೆಪಾಡಿಗೆ ಕೆಲಸಮಾಡುವುದೇ ಮೊದಲಾದುದರಲ್ಲಿ ಕಳೆದು ಹೋಗುವುದು. ಉಳಿದ ಅಲ್ಪಸ್ವಲ್ಪ ಕಾಲವು ವಿಶ್ರಾಂತಿ ವಿಹಾರಗಳಿಗೆ ಸಾಲದೆ ಹೋಗುವುದು. ಇದರಿಂದ ಮನೆಯಲ್ಲಿ ಮಕ್ಕಳ ತಿದ್ದುವಿಕೆ ವಿದ್ಯಾಭ್ಯಾಸಗಳೆಲ್ಲವೂ ಬಹು ಮಟ್ಟಿಗೆ ಹೆಂಗಸರ ಪಾಲಿಗೆ ಬರುವುದು. ಅಲ್ಲದೆ ಮಕ್ಕಳು ಚಿಕ್ಕಂದಿನಲ್ಲಿ ಹೆಂಗಸರ ಬಳಿಯಲ್ಲಿ ಬೆಳೆಯುವುದೇ ವಿಶೇಷ. ಆದುದರಿಂದ ಇದನ್ನೆಲ್ಲಾ ತಿಳಿದು ಸರಿಯಾಗಿ ಮಕ್ಕಳನ್ನು ಬೆಳೆಸುವುದಕ್ಕೆ ತಕ್ಕ ವಿದ್ಯಾಭ್ಯಾಸವು ಗಂಡುಸರಿಗಿಂತಲೂ ಹೆಂಗಸರಿಗೆ ಈಗ ಅತ್ಯಾವಶ್ಯಕವಾಗಿರುವುದು.

ಸಾಮಾನ್ಯಸ್ಥಿತಿಯಲ್ಲಿರುವ ಅನೇಕರಲ್ಲಿ ಹೆಂಗಸರಿಗೆ ಅಡುಗೆ ಕೆಲಸ ಮುಸುರೆತೊಳೆಯುವುದು, ಮಕ್ಕಳ ಪೋಷಣೆ ಮೊದಲಾದ ಮನೆಯ ಕೆಲಸಗಳಲ್ಲಿಯೇ ಬಹು ಮಟ್ಟಿಗೆ ದಿನವೆಲ್ಲವೂ ಕಳೆದುಹೋಗುತ್ತಿದೆ. ದೊರೆಯಬಹುದಾದ ಅಲ್ಪಸ್ವಲ್ಪ ಕಾಲವೂ ಕೂಡ ವಿದ್ಯಾವತಿಯರಲ್ಲದುದರಿಂದ ಯಾವ ವಿಧದಲ್ಲಿ ವೆಚ್ಚವಾಗುತ್ತಿದೆ ಎಂಬುದನ್ನು ಹೆಂಗಸರು ಪರಸ್ಪರ ಕಲೆತಾಗ್ಗೆ ನಡೆಯುವ ಸಂಭಾಷಣೆಯಿಂದ ತಿಳಿದುಕೊಳ್ಳಬಹುದು. ಅವರ ಕೋರಿಕೆಗಳೂ ಯೋಚನೆಗಳೂ ತಿಳುವಳಿಕೆಯೂ ಕೆಲಸಗಳೂ ಸುಖದುಃಖಗಳೂ ಯಾವ ಸಂಗತಿಗಳಲ್ಲಿರುವುವೋ ಅವರ ಮಾತುಗಳೂ ಆ ವಿಷಯವಾಗಿಯೇ ಇರುವುದು ಸ್ವಭಾವವು. ಸಾಮಾನ್ಯಸ್ಥಿತಿಯವರ ಸಂಭಾಷಣೆಯು ಊಟ ಅಡುಗೆಯ ಪದಾರ್ಥಗಳು ಅವುಗಳ ರುಚಿ ಒಡವೆ ವಸ್ತ್ರ ನೋಟ ಮೊದಲಾದವುಗಳ ವಿಚಾರವೇ. ಹೆಚ್ಚು ಅನುಕೂಲಸ್ಥರ ಮನೆಯ ಹೆಂಗಸರಲ್ಲಿಯೂ ಕೂಡ ಅನೇಕರ ಸ್ಥಿತಿಯು ಹೀಗೆಯೇ ಇರುವುದು. ಕೇವಲ ವಿದ್ಯಾವಂತರೂ ಅನುಭವಸ್ಥರೂ ಆದವರಿಗೆ ಕೂಡ ಎಷ್ಟೋ ಕಷ್ಟತರವಾಗಿರುವ ಮಕ್ಕಳ ಸರಿಯಾದ ಪೋಷಣೆ ಬೋಧನೆ ತಿದ್ದುವಿಕೆಗಳು ವಿಶೇಷ ತಿಳುವಳಿಕೆ ಇಲ್ಲದ ಸಾಮಾನ್ಯರಾದ ಹೆಂಗಸರಿಗೆ ಸುಲಭವೆ? ಆಹಾ! ನಾವೇನು ಮಕ್ಕಳನ್ನು ಹೆತ್ತಿಲ್ಲವೋ? ಸಾಕಿಲ್ಲವೋ? ನಮಗೇನು ತಿಳಿಯದೋ? ಈಗ ಹೊಸದಾಗಿ ಕಲಿಯತಕ್ಕದ್ದೇನಿದೆ? ಎಂದು ಒಂದೆರಡು ಮಾತಿನಲ್ಲಿಯೇ ಪೂರೈಸಿಬಿಡುವರು. ಆದರೆ ವಿಚಾರಪರರಾದವರು ಇದನ್ನೆಲ್ಲಾ ಯೋಚಿಸಬೇಕಾದ ಕಾಲವು ಬಂದಿರುವುದು. ಸುಮ್ಮನೆ ಇರುವುದೆಂದರೆ ಹಿಂದುಳಿಯುವುದೆಂದರ್ಥ. ಈ ದೇಶವು ಮೊದಲಿಗಿಂತಲೂ ಹೆಚ್ಚು ಉತ್ತಮಸ್ಥಿತಿಗೆ ಬರುವುದೆಂದು ತಿಳಿದವರು ಹೇಳುತ್ತಿರುವರು. ಈಗಿನ ಸಂದರ್ಭಗಳೆಲ್ಲವನ್ನು ಪರ್ಯಾಲೋಚಿಸಿ ನೋಡಿದರೆ ಅದು ನಿಜವೆಂದು ತೋರದೆ ಇರಲಾರದು.

ತಾಯಿಯರಿಗೆ ಮಕ್ಕಳಿಗಿಂತ ಹೆಚ್ಚು ಪ್ರೇಮಾಸ್ಪದರಾದವರು ಅಪರೂಪವು. ಮಕ್ಕಳ ಮೇಲಿಗೆಂದರೆ ತಮ್ಮ ಸರ್ವಸ್ವವನ್ನಾದರೂ ಕೊಡುವರು, ತಮ್ಮ ಸರ್ವ ಸುಖಗಳನ್ನೂ ಹುಲ್ಲುಕಡ್ಡಿಗಿಂತ ಕಡೆಯಾಗಿ ಕಾಣುವರು. ಕೊನೆಗೆ ತಮ್ಮ ಪ್ರಾಣಗಳನ್ನಾದರೂ ಕೊಡಲು ಸಿದ್ಧರಾಗಿರುವರು. ಆದರೆ ಅವರಿಗೆ ಕೆಲವು ಸಂಗತಿಗಳು ಅತ್ಯವಶ್ಯವಾಗಿ ತಿಳಿಯಬೇಕಾದದ್ದಾಗಿರುವುದು. ಅವು ಯಾವುವೆಂದರೆ:—ಮಕ್ಕಳ ದೇಹ ಇಂದ್ರಿಯ ಮನೋಧರ್ಮಗಳೆಂಥವು? ಅವುಗಳ ಸ್ವಭಾವವನ್ನು ತಿದ್ದುವ ಕ್ರಮ ಹೇಗೆ? ತಾವು ಯಾವವಿಧವಾದ ನಡೆ ನುಡಿ ಸ್ವಭಾವಗಳನ್ನು ಉಂಟುಮಾಡಿದ್ದರೆ ಮಕ್ಕಳಿಗೆ ಸರಿಯಾದ ಮೇಲ್ಪಂಕ್ತಿಯಾಗಲು ಅನುಕೂಲಿಸುವುದು? ದೇಶವು ಹಿಂದೆ ಯಾವ ಸ್ಥಿತಿಯಲ್ಲಿತ್ತು? ಈಗ ಏನಾಗಿದೆ? ಹೇಗೆ ಬದಲಾಯಿಸುತ್ತಿರುವುದು? ವಿದ್ಯಾಭ್ಯಾಸ—ವ್ಯವಸಾಯ—ಕೈಗಾರಿಕೆ ವ್ಯಾಪಾರ—ಕುಶಲವಿದ್ಯೆ—ಶಾಸ್ತ್ರವಿಚಾರ—ಪಾರಮಾರ್ಥಿಕವಿಚಾರ—ಮತವಿಚಾರ ಮೊದಲಾದವುಗಳು ಈಗ ಯಾವಸ್ಥಿತಿಯಲ್ಲಿರುವುವು? ಮುಂದೆ ಹೇಗಾಗಬೇಕು? ಅದಕ್ಕಾಗಿ ತಾವು ಈಗಿನಿಂದ ಮಾಡಬೇಕಾದದ್ದೇನು? ಎಂಬ ಇವೇ ಮೊದಲಾದ ಸಂಗತಿಗಳನ್ನು ನಮ್ಮ ಹೆಂಗಸರು ಸರಿಯಾಗಿ ತಿಳಿದುಕೊಳ್ಳಬೇಕಾದದ್ದು ಅವಶ್ಯವಾಗಿದೆ. ಅಂತಹ ತಿಳುವಳಿಕೆ ಇಲ್ಲದಿರುವ ಹೆಂಗಸರಿಂದ ತಯಾರಾದ ಮಕ್ಕಳು ಅತ್ಯುತ್ತಮವಾದ ಬಾಲ್ಯವನ್ನು ಹಾಗೂ ಹೀಗೂ ಕಳೆದುದಿಟ್ಟು, ಮುಂದೆ ದೊಡ್ಡವರಾದಾಗ ದೇಶದ ಏಳಿಗೆಗೆ ಚೆನ್ನಾಗಿ ಕೆಲಸಮಾಡುವ ಸಮರ್ಥರಾಗಬೇಕೆಂದರೆ ಎಷ್ಟು ಹೆಚ್ಚು ಶ್ರಮ ಹಿಡಿಯುವುದು! ಇಷ್ಟೇ ಅಲ್ಲದೆ ಈಗ ಈ ಕಾರ್ಯಗಳೆಲ್ಲಲ್ಲ ಪ್ರವರ್ತಿಸಿ ತಾವು ಮಾಡಬೇಕಾದ ಕರ್ತವ್ಯವನ್ನು ಗಂಡುಸರು ಸರಿಯಾಗಿ ಮಾಡಬೇಕಾದರೆ ಈ ವಾಸನೆಯೇ ವಿಶೇಷವಾಗಿಲ್ಲದ ಹೆಂಗಸರು ಗಂಡುಸರಿಗೆ ಸಹಾಯ ಮಾಡುತ್ತಾ "ಸಹಧರ್ಮಿಣಿ" ಯರೆಂಬ ಹೆಸರನ್ನು ಸಾರ್ಥಕಮಾಡಿಕೊಳ್ಳುವುದು ಹೇಗೆ?

ಮಕ್ಕಳು ಏತಕ್ಕೆ ನಮ್ಮ ಮನೆಯಲ್ಲಿ ಹುಟ್ಟುವರು—ಕೆಲವರು ಒಳ್ಳೆಯವರೂ ಕೆಲವರು ಕೆಟ್ಟವರೂ ಕೆಲವರು ವಿವೇಕಿಗಳೂ ಮತ್ತೆ ಕೆಲವರು ಅವಿವೇಕಿಗಳೂ ಕೆಲವರು ಬುದ್ಧಿಕುಶಲರೂ ಇನ್ನು ಕೆಲವರು ದಡ್ಡರೂ ಹೀಗೆ ನಾನಾ ವಿಧವಾಗಿ ಏಕೆ ಹುಟ್ಟುವರು? ಕೊಂಚ ವಿವೇಕವುಳ್ಳವರನ್ನು ಹೆಚ್ಚು ವಿವೇಕಶಾಲಿಗಳನ್ನು ಮಾಡುವುದು ಹೇಗೆ?—ಅವಿವೇಕಿಗಳೂ ದುಷ್ಟರೂ ದಡ್ಡರೂ ಆದವರನ್ನೂ ನಯದಿಂದಲೂ ಯುಕ್ತಿಯಿಂದಲೂ ಮುಖ್ಯವಾಗಿ ಪ್ರೀತಿಯಿಂದಲೂ ಬೋಧಿಸಿ ತಿದ್ದಿ ಉತ್ತಮರನ್ನಾಗಿ ಮಾಡುವುದು ಹೇಗೆ?—ಮಕ್ಕಳ ದೇಹಾರೋಗ್ಯ ದೇಹಶಕ್ತಿ ಚಟುವಟಿಕೆ ಕ್ರಮವಾಗಿ ಕೆಲಸಮಾಡುವ ಸ್ವಭಾವಗಳು ಹೆಚ್ಚಲು ಮಾಡಬೇಕಾದದ್ದೇನು?— ಅವರ ಅನ್ನಪಾನ ವಿಹಾರವ್ಯಾಯಾಮಾದಿಗಳೂ ಉಡುಪು ವಾಸಸ್ಥಳ ಸನ್ನಿವೇಶ ಸಹವಾಸಗಳೂ ಹೇಗಿರಬೇಕು? —ಅವರಿಗೆ ಶುಚಿ ರುಚಿ ಸೌಂದರ್ಯ ನ್ಯಾಯಧರ್ಮಗಳಲ್ಲಿ ಅಭಿರುಚಿಯನ್ನು ಹೆಚ್ಚಿಸುವುದು ಹೇಗೆ?—ಅವರಲ್ಲಿರುವ ಬುದ್ಧಿ ಕುಶಲತೆ ಕುತೂಹಲ ಪ್ರೇಮ ವಿಧೇಯತೆ ನಂಬಿಗೆ ವಿವೇಕ ಪರೋಪಕಾರಬುದ್ಧಿ ಭಕ್ತಿ ಮೊದಲಾದುವುಗಳನ್ನು ಸರಿಯಾದ ಮಾರ್ಗದಲ್ಲಿ ಬೆಳೆಸುವುದು ಹೇಗೆ?—ಅವರಲ್ಲಿರಬಹುದಾದ ದುರ್ಗುಣಗಳನ್ನು ನಾಶಪಡಿಸಿ ಸುಗುಣಗಳನ್ನು ವೃದ್ಧಿಗೊಳಿಸುವುದು ಹೇಗೆ?— ಮೊದಲಾದ ಅತ್ಯವಶ್ಯಕವಾದ ಅನೇಕ ಸಂಗತಿಗಳನ್ನು ಹೆಂಗಸರು ತಿಳಿಯದೆಹೋದಲ್ಲಿ ಮುಂದಿನ ದೇಶಬಾಂಧವರಾಗಬೇಕಾದ ಈಗಿನ ಮಕ್ಕಳು ಅಂತಹವರಿಂದ ಸರಿಯಾದ ಬೆಳವಣಿಗೆಯನ್ನು ಹೊಂದಲಾರರು. ಇದನ್ನೆಲ್ಲಾ ಚೆನ್ನಾಗಿ ಯೋಚಿಸಿ ನೋಡಿದರೆ ನಮ್ಮ ಏಳಿಗೆಗೆ ಸ್ತ್ರೀವಿದ್ಯಾಭ್ಯಾಸವು ಎಷ್ಟು ಆವಶ್ಯಕವೆಂಬುದು ಗೊತ್ತಾಗುವುದು.

ಇತರ ವಿಷಯಗಳಲ್ಲಿಯೂ ಸ್ತ್ರೀವಿದ್ಯಾಭ್ಯಾಸವು ಹೇಗೆ ಅವಶ್ಯಕವೆಂಬುದನ್ನು ಇನ್ನೊಂದಾವೃತ್ತಿ ವಿಚಾರಿಸೋಣ.

ಕೆ. ನರಹರಿಶಾಸ್ತ್ರಿ.

ಮಹಾಯುದ್ಧದಿಂದುಂಟಾಗಿರುವ ಪರಿಣಾಮಗಳು.

ನೀಲಿ.

ಭರತಖಂಡದಲ್ಲಿ ಬಣ್ಣಕ್ಕೆ ಉಪಯೋಗವಾದ ಸಾಮಾನುಗಳು ಪೂರ್ವಕಾಲದಲ್ಲಿ ಇಲ್ಲಿನವರಿಂದಲೇ ಅಣಿಮಾಡಲ್ಪಡುತ್ತ, ಅವು ಬಹಳ ಗಟ್ಟಿತರದವುಗಳೂ ಒಳ್ಳೆಯ ಮಿರುಗು ಉಳ್ಳವುಗಳೆಂದೂ ವಿಖ್ಯಾತವಾಗಿದ್ದುವು. ಈಚೀಚೆಗೆ ಜರ್ಮನರು ವಿಶ್ವಾಮಿತ್ರಸೃಷ್ಟಿಯಲ್ಲಿ ಅತ್ಯಂತ ವಿಶಾರದರಾಗುತ್ತ ಬಂದ ಬಳಿಕ ಈ ದೇಶದ ಅಚ್ಚಬಣ್ಣಗಳ ಸ್ಥಾನವನ್ನೆಲ್ಲಾ ಜರ್ಮನಿದೇಶದ ಕೃತಕವಾದ ಬಣ್ಣಗಳು ವ್ಯಾಪಿಸಿಕೊಂಡುವು. ಅಗ್ಗವಾದ ಆ ಬಣ್ಣಗಳ ಮೇಲಾಟದಿಂದ ಇಲ್ಲಿನ ಬಣ್ಣಗಳ ನಿರ್ಮಿತಿಯು ಮೂಲೆ ಮಟ್ಟಾಗಿಹೋಯಿತು. ಈಗಿನ ಯುದ್ಧಾರಂಭವಾದ ಮೇಲೆ ಜರ್ಮನಿಯ ಬಣ್ಣಗಳು ನಮ್ಮದೇಶಕ್ಕೆ ಬರುವುದು ಕಟ್ಟಾಗಿಹೋದುದರಿಂದ ಇಲ್ಲಿ ಬಣ್ಣಗಳಿಗೆ ಬರ ಬಂದು, ಅವುಗಳ ಬೆಲೆಯು ೧ ಕ್ಕೆ ೫-೬-೮ ರಷ್ಟು ಏರಿಹೋಗಿದೆ. ಈ ಬಣ್ಣದ ಸಾಮಾನುಗಳೊಳಗೆ ನೀಲಿಯು ಅತಿ ಮುಖ್ಯವಾದುದು. ಜರ್ಮನಿದೇಶದ ಕೃತಕ ನೀಲಿಯು ಈಗ ಬರದೆಹೋಗಿರುವುದರಿಂದ ನಮ್ಮದೇಶದ ನೀಲಿಯ ವ್ಯವಸಾಯವು ಮರಳಿ ತಲೆಯೆತ್ತುವ ಅವಶ್ಯಕತೆಯೂ ಸೂಚನೆಯೂ ಚೆನ್ನಾಗಿ ಕಾಣುತ್ತಿದೆ. ಸ್ವಭಾವವಾಗಿ ಉತ್ಕೃಷ್ಟಗುಣವುಳ್ಳ ನಮ್ಮದೇಶದ ನೀಲಿಯ ಯೋಗ್ಯತೆಯನ್ನು ಅನೇಕಪರದೇಶಗಳವರು ಬಲ್ಲರು. ಇದರ ವ್ಯವಸಾಯವು ಭರತಖಂಡದಲ್ಲಿ ಬಹು ಪುರಾತನಕಾಲಿಕವಾದುದೆಂಬುದಕ್ಕೆ ಅನೇಕ ದೃಷ್ಟಾಂತಗಳಿವೆ. ಮಾರ್ಕೊಪೋಲೋರವರು ಬರೆದಿರುವ ಚರಿತ್ರದಲ್ಲಿ ೧೩ ನೆಯ ಶತಮಾನದೊಳಗೆ ಇದರ ವ್ಯವಸಾಯವು ತಿರುವಾಂಕೂರು ಪ್ರಾಂತದಲ್ಲಿ ವಿಶೇಷವಾಗಿದ್ದಿತೆಂದು ಗೊತ್ತಾಗುತ್ತದೆ. ಆದರೆ ಅದು ೧೬ನೆಯ ಶತಮಾನದವರೆಗೂ ಇಲ್ಲಿಂದ ಇತರದೇಶಗಳಿಗೆ ಸಾಗಿಹೋಗುತ್ತಿರಲಿಲ್ಲ. ಬಳಿಕ ಇದು ಅನ್ಯದೇಶಗಳಿಗೆ ಹೋಗಲುಪಕ್ರಮವಾದಂತೆ ಇದರ ಶ್ರೇಷ್ಠತ್ವವು ಪರದೇಶೀಯರಿಗೆ ಗೊತ್ತಾಗಲು, ಇದರ ವ್ಯಾಪಾರವು ಹೆಚ್ಚಿತು. ಡಚ್ಚರೂ ಪೋರ್ಚುಗೀಸರೂ ಭರತಖಂಡದಲ್ಲಿನ ನೀಲಿಯ ಪರಿಶ್ರಮವನ್ನು ವೃದ್ಧಿಗೊಳಿಸಿ, ಅದರಿಂದ ಅವರೂ ಬಹಳ ಲಾಭವನ್ನು ಪಡೆದರು. ೧೭೭೯ ನೆಯ ವರ್ಷದಲ್ಲಿ ಫ್ರೆಂಚರು ಬಂಗಾಳ-ಬಿಹಾರ್ ಪ್ರಾಂತಗಳಲ್ಲಿ ಇದರ ವ್ಯವಸಾಯವನ್ನು ಅಭಿವೃದ್ಧಿಮಾಡಿ ಲಾಭವನ್ನು ಪಡೆದು, ಈಸ್ಟ್ಇಂಡ್ಯಾಕಂಪೆನಿಯವರಿಗೆ ಈ ಲಾಭದ ದಾರಿಯನ್ನು ತೋರಿಸಿಕೊಟ್ಟರು. ೧೭೯೬ ನೆಯ ವರ್ಷದಲ್ಲಿ ಡಚ್ ಪೋರ್ಚುಗೀಸ್ ದೇಶಭಾಗಗಳಿಂದ ಇಂಗ್ಲೆಂಡಿಗೆ ಸಾಗಿಸಿದ ನೀಲಿಯಲ್ಲಿ ೧೦ ನೇ ೧ ಭಾಗದಷ್ಟು ಬಂಗಾಳದೇಶದಿಂದಲೇ ಹೋಗಿದ್ದಿತು. ೧೯ ನೆ ಶತಮಾನದಲ್ಲಿ ಇತರ ರಾಷ್ಟ್ರಗಳಿಂದ ಹೋಗಿದ್ದುದಕ್ಕೆಲ್ಲಾ ದ್ವಿಗುಣವಾಗಿ ಬಂಗಾಳ ಒಂದರಿಂದಲೇ ಸಾಗಿಹೋಗಿದ್ದಿತು. ಈಸ್ಟಿಂಡಿಯಾ ಕಂಪೆನಿಯವರು ತಮ್ಮ ಸ್ವಂತದ ಮೇಲ್ವಿಚಾರಣೆಯಿಂದ ಈ ವ್ಯವಸಾಯವನ್ನು ಅಭಿವೃದ್ಧಿಗೊಳಿಸಿ ಬಹಳ ಲಾಭವನ್ನು ಸಂಪಾದಿಸಿದರು. ೧೯ ನೆ ಶತಮಾನದಲ್ಲಿ ಜರ್ಮನರು ಕಲ್ಪಿತವಾದ ನೀಲಿಯನ್ನು ಈ ದೇಶಕ್ಕೆ ಕಳುಹಲಾರಂಭಿಸಿದರು. ಕಲ್ಲಿದ್ದಲು ತಾರು ಮೊದಲಾದ ಪದಾರ್ಥಗಳ ಸಂಯೋಗವಿಭಾಗಾದಿಗಳಿಂದ ನೀಲಿಯನ್ನು ಅವರು ಕಲ್ಪಿತವಾಗಿ ಮಾಡಿದರು. ಇದು ೧೮೯೭ನೆಯ ವರ್ಷದೊಳಗೆ ಪ್ರಪಂಚದ ಎಲ್ಲಭಾಗಕ್ಕೂ ವ್ಯಾಪಿಸಿ, ಭರತಖಂಡದ ನೀಲಿಯ ವ್ಯಾಪಾರವನ್ನು ತುಳಿದುಬಿಟ್ಟಿತು. ಈಗಲಾದರೋ ಭರತಖಂಡದಲ್ಲಿ ಕ್ಷೀಣಿಸಿ ಹೋಗುತ್ತಿರುವ ಉತ್ತಮ ಪರಿಶ್ರಮಗಳೊಳಗೆಲ್ಲಾ ನೀಲಿಯ ಪರಿಶ್ರಮವು ಮೊದಲನೆಯದಾಗಿ ಹೋಗಿದೆ. ಭರತಖಂಡದಿಂದ ೧೮೯೬ ನೆಯ ವರ್ಷದಲ್ಲಿ ೩ ಕೋಟಿರೂ.ಗಳ ನೀಲಿಯು ಹೊರಕ್ಕೆ ಕಳುಹಿಸಲ್ಪಟ್ಟಿದ್ದಿತು ೧೯೧೧ ನೆಯ ವರ್ಷದಲ್ಲಿ ಈ ದೇಶದಿಂದ ಕಳುಹಿಸಲ್ಪಟ್ಟ ನೀಲಿಯಾದರೋ ೩೦ ಲಕ್ಷ ರೂ.ಗಳದಾಗಿದ್ದಿತು! ಇದರಿಂದ ಈ ವ್ಯಾಪಾರವು ಎಷ್ಟು ಕ್ಷೀಣವಾಗಿ ಹೋಗಿರುವುದೆಂಬುದು ಚೆನ್ನಾಗಿ ಗೊತ್ತಾಗುವುದು. ಆದರೂ ಭರತಖಂಡದಲ್ಲಿ ಇದರ ವ್ಯವಸಾಯವು ಸಂಪೂರ್ಣವಾಗಿ ನಿರ್ಮೂಲವಾಗದೆ ಅಲ್ಲಲ್ಲಿ ಅಲ್ಪಸ್ವಲ್ಪ ಕಚ್ಚಿಕೊಂಡೇ ಇದೆ. ಈಗಿನ ಯುದ್ಧಸಂಬಂಧದಿಂದ ಇಲ್ಲಿನ ನೀಲಿಯ ವ್ಯಾಪಾರವು ಚೆನ್ನಾಗಿ ತಲೆಯೆತ್ತಲು ಮಾರ್ಗವಿದೆ. ಕೃಷಿಕಾರರು ಇತ್ತಕಡೆ ಗಮನವಿತ್ತು "ಗಾಳಿಬಂದಾಗ ತೂರಿಕೋ" ಎಂಬ ಗಾದೆಯಂತೆ ನಡೆದುಕೊಂಡರೆ ಒಳ್ಳೆಯ ಲಾಭವನ್ನು ಪಡೆಯಬಹುದು.

ಭರತಖಂಡದಲ್ಲೆಲ್ಲಾ ಸಂಚರಿಸಿ ಇಲ್ಲಿನ ಪರಿಶ್ರಮ ವ್ಯವಸಾಯಾದಿ ವಿಷಯಗಳನ್ನು ಪರಿಶೀಲಿಸಿರುವ ಬರ್ಕ ಸ್ಕ್ರೀಟ್ಟ ಎಂಬ ಪಂಡಿತರು "ಭರತಖಂಡದಲ್ಲಿ ವ್ಯವಸಾಯದಿಂದ ನಿರ್ಮಿಸಲ್ಪಡುವ ಬಣ್ಣದ ತುಣುಕುಗಳಿಂದ (ನೀಲಿ) ಒಳ್ಳೆಯ ನಾಣ್ಯವಾದ ರಂಗನ್ನು ನಿರ್ಮಿಸುವುದು ಸುಲಭಸಾಧ್ಯವಾಗಿದೆ. ಈ ರಂಗುಗಳಿಂದ ಕೃತಕದ ರಂಗುಗಳನ್ನು ಅಣಗಿಸಿಬಿಡುವುದು ಬಹಳ ಸುಲಭ" ಎಂದು ಅಭಿಪ್ರಾಯಪಟ್ಟಿದ್ದಾರೆ. ಭರತಖಂಡದಲ್ಲಿ ನೀಲಿಯ ಬೆಳೆಯನ್ನು ಮಾಡುವುದನ್ನು ರೈತರು ಸಾಧಾರಣವಾಗಿ ಬಲ್ಲರು. ಶುದ್ಧವಾದ ಸ್ವದೇಶದ ನೀಲಿಯನ್ನು ಸರಿಯಾದ ಬೆಲೆಗೆ ಕೊಡುವುದಾದರೆ ರಂಗಾರಿಯವರು ಅದನ್ನು ಸಂತೋಷದಿಂದ ತೆಗೆದುಕೊಂಡು ಕಣ್ಣಿಗೆ ಒತ್ತಿಕೊಂಡು ತಮ್ಮ ಉದ್ಯೋಗಕ್ಕೆಲ್ಲಾ ಅದನ್ನೇ ಉಪಯೋಗಿಸಿಕೊಳ್ಳುವರು. ಅದರ ವ್ಯವಸಾಯಗಾರರಿಗೂ ಒಳ್ಳೆ ಗಿರಾಕಿಯೂ ಲಾಭವೂ ಇರುವುದು. ಅದನ್ನುಪಯೋಗಿಸಿದ ಬಟ್ಟೆಗಳ ಬಣ್ಣವೂ ಮಿರುಗೂ ಚೆನ್ನಾಗಿಯೂ ದೃಢವಾಗಿಯೂ ಇರುವುದು. ಇದರ ವ್ಯವಸಾಯವು ಭರತಖಂಡದಲ್ಲಿ ಶಾಸ್ತ್ರೀಯವಾಗಿಯೂ ಸಮೃದ್ಧವಾಗಿಯೂ ಮಾಡಲ್ಪಡುವಂತಾದರೆ ಈ ದೇಶದ ರಂಗಿನ ಕೆಲಸಗಳಿಗೆಲ್ಲಾ ಇಲ್ಲಿನ ನೀಲಿಯೇ ಒದಗುವಂತೆ ಮಾಡಲ್ಪಡಬಹುದಲ್ಲದೆ ವಿದೇಶದಿಂದ ಅಗ್ಗವಾದ ಕಲ್ಪಿತದ ನೀಲಿಯು ಈ ದೇಶಕ್ಕೆ ತಲೆಯಿಕ್ಕದಂತೆಯೇ ಎಂದೆಂದಿಗೂ ಮಾಡಿಬಿಡಬಹುದು. ಈ ನೀಲಿಯ ವ್ಯವಸಾಯವನ್ನು ಜಾವಾದ್ವೀಪದವರೂ ನೆಟಾಲಿನವರೂ ಬಹು ಉತ್ತಮರೀತಿಯಿಂದ ಮಾಡುತ್ತಾರಂತೆ. ನಮ್ಮದೇಶದ ವ್ಯವಸಾಯಸುಧಾರಕ ಶಾಖೆಯವರು ಅಲ್ಲಿನ ಕ್ರಮಗಳ ರೀತಿಯಲ್ಲಿಯೇ ಇಲ್ಲಿಯೂ ನೀಲಿಯ ವ್ಯವಸಾಯವನ್ನು ಉತ್ತಮಸ್ಥಿತಿಯಿಂದ ಮಾಡಿಸುವುದಕ್ಕೆ ದಾರಿಹಾಕಿಕೊಟ್ಟರೆ, ಈಗಿನ ಸುಸಂಧಿಯಲ್ಲಿ ನಮ್ಮದೇಶದ ನೀಲಿ ವ್ಯವಸಾಯವು ಒಳ್ಳೆಯ ಸುರಕ್ಷಿತಸ್ಥಾನವನ್ನು ಹೊಂದಿ ಪೂರ್ವದ ಪ್ರಾಬಲ್ಯವನ್ನು ಮರಳಿ ಪಡೆದುಕೊಳ್ಳಬಹುದು. ನೀಲಿಯ ವ್ಯಾಪಾರದಲ್ಲಿ ಪ್ರಸಿದ್ಧರಾದ ಮಿ॥ ಬಿ. ಗೆಟ್‌ರವರು ಇಲ್ಲಿನ ನೀಲಿಯ ವಿಷಯದಲ್ಲಿ ಅಭಿಪ್ರಾಯಪಟ್ಟಿರುವುದೇನೆಂದರೆ—ಭರತಖಂಡದ ಅಚ್ಚನೀಲಿಗೆ ಬಿಸಿಲು ತಗುಲಿದಂತೆ ಅದರ ಕಾಂತಿಯೂ, ನಾಣ್ಯವೂ, ಹೆಚ್ಚುತ್ತ ಬರುವುದು. ಎಷ್ಟು ಹಳೆಯದಾದರೂ ಅದರ ಬಣ್ಣವು ಕೆಡದು. ಜರ್ಮನರ ಕಲ್ಪಿತ ನೀಲಿಯಾದರೋ ಕ್ರಮವಾಗಿ ಮಂಕಾಗುತ್ತ ಬಂದು ಕಡೆಗೆ ಅಸಹ್ಯಕರವಾಗಿ ಬಿಳಿಚಿಕೊಳ್ಳುವುದು. ಭರತಖಂಡದ ನೀಲಿ ವ್ಯಾಪಾರವು ಜರ್ಮನರ ವಶವಾಗುವುದಕ್ಕಿಂತ ಮುಂಚೆ ಭರತಖಂಡದಲ್ಲಿ ವರ್ಷಕ್ಕೆ ೩॥ ಕೋಟಿ ರೂ.ನ ನೀಲಿಯು ಉತ್ಪನ್ನವಾಗುತ್ತಿದ್ದಿತು. ಈಗಲಾದರೋ ಅದರಲ್ಲಿ ೧೫ನೆಯ ೧ ಭಾಗದಷ್ಟೂ ಉತ್ಪನ್ನವಾಗುವುದಿಲ್ಲ ಎಂದು ಹೇಳಿದ್ದಾರೆ. ಅದುಕಾರಣ, ಇಂಥ ಅತ್ಯುಪಯುಕ್ತವೂ ಲಾಭಕಾರಿಯೂ ಆದ ವ್ಯವಸಾಯವನ್ನು ಅನುಕೂಲವಾದೆಡೆಗಳಲ್ಲೆಲ್ಲಾ ಅಭಿವೃದ್ಧಿಪಡಿಸುವುದಕ್ಕೆ ಎಲ್ಲ ಪ್ರಭುತ್ವದವರೂ ಪ್ರಯತ್ನಿಸಲು ಇದು ಸುಸಂಧಿಯಾಗಿರುವುದು.

ಭರತಖಂಡದ ವ್ಯಾಪಾರದ ಸದ್ಯಸ್ಥಿತಿ.

ಈಗಿನ ಯುದ್ಧಸಂದರ್ಭದಿಂದಲೂ ಮುಖ್ಯವಾಗಿ ಎಮ್ಡನ್ ಹಡಗು ನಡೆಯಿಸಿದ ವಿಶೇಷವಾದ ಹಾವಳಿಯಿಂದಲೂ ಭರತಖಂಡದ ವ್ಯಾಪಾರವು ಬಹಳ ತಗ್ಗಿಹೋಗಿರುವುದು. ಹೊರಗಿನಿಂದ ಬಂದ ಸಾಮಾನುಗಳು ಕಳೆದವರ್ಷದ ಅಕ್ಟೋಬರ್ ತಿಂಗಳಲ್ಲಿ ೧೩ ಕೋಟಿಯೂ ೩೦ ಲಕ್ಷ ರೂ.ನದಾಗಿರುವಲ್ಲಿ ಈ ವರ್ಷದ ಅಕ್ಟೋಬರ್ ತಿಂಗಳಲ್ಲಿ ಅದರಲ್ಲಿ ೪ ಕೋಟಿಯೂ ೨೦ ಲಕ್ಷದಷ್ಟು ಕಡಿಮೆಯಾಗಿಹೋಯಿತು. ಕಳೆದವರ್ಷ ಅದೇತಿಂಗಳಲ್ಲಿ ಇಲ್ಲಿಂದ ಹೊರಕ್ಕೆ ಕಳುಹಿಸಲ್ಪಟ್ಟ ಸಾಮಾನುಗಳ ಬೆಲೆಯು ೨೧ ಕೋಟಿಯೂ ೩೩ ಲಕ್ಷ ವಾಗಿರುವಲ್ಲಿ ಈ ವರ್ಷದ ಅದೇ ತಿಂಗಳಲ್ಲಿ ೯ ಕೋಟಿಯೂ ೯೩ ಲಕ್ಷದಷ್ಟಾಗಿದೆ ಎಂದರೆ ಅರ್ಧಕ್ಕಿಂತಲೂ ಕಡಿಮೆಯಾಗಿಹೋಯಿತು. ಹತ್ತಿ, ನೂಲು, ನೆಯ್ದ ಬಿಳಿಯ ಬಟ್ಟೆಗಳು, ಕೆರೋಸಿನ್ ಎಣ್ಣೆ ಮೊದಲಾದ ಸಾಮಗ್ರಿಗಳು ಸಾಗುವುದು ೧೦೦ ಕ್ಕೆ ೩೯೭ ರಷ್ಟು ಹೆಚ್ಚಿತು. ಹೊರಗಿನಿಂದ ಬಂದ ಸಾಮಗ್ರಿಗಳಲ್ಲಿ ಕಬ್ಬಿಣ-ಉಕ್ಕು ಮೊದಲಾದ ಸಾಮಾನುಗಳು ೧೦೦ಕ್ಕೆ ೫೦ ರಂತೆಯೂ, ತಾಮ್ರ-ಬಣ್ಣ-ಸಕ್ಕರೆ ಮೊದಲಾದ ಕೆಲ ಪದಾರ್ಥಗಳು ೧೦೦ಕ್ಕೆ ೩೦ ರಂತೆಯೂ ಕಡಿಮೆಯಾಗಿರುವುವು. ಗೋದುವೆ ಚರ್ಮ ಮೊದಲಾದ ಕೆಲಸಾಮಾನುಗಳು ೧೦೦ ಕ್ಕೆ ೩೩-೯೩-೧೯ ರಷ್ಟು ಹೆಚ್ಚಿ ಹೋಯಿತು. ಮುಖ್ಯವಾಗಿ ಹೊರಗಣಿಂದ ಬಂದ ಸಾಮಾನುಗಳ ಮೇಲಣ ವರಮಾನವು ೧೦೦ ಕ್ಕೆ ೨೦ ರಷ್ಟು ತಗ್ಗಿಹೋಯಿತು. ಇಲ್ಲಿಂದ ಹೊರಕ್ಕೆ ಸಾಗಿಹೋಗುವ ಸಾಮಾನುಗಳ ಮೂಲಕವಾದ ವರಮಾನದಲ್ಲಿ ಕಳೆದ ನವಂಬರ್ ತಿಂಗಳಲ್ಲಿ ೪ ಕೋಟಿಯೂ ೯೩ ಲಕ್ಷವೂ. ಹೊರಗಿನಿಂದ ಬಂದ ಸಾಮಾನುಗಳ ಮೇಲಣ ವರಮಾನವು ೨ ಕೋಟಿಯೂ ೪೩ ಲಕ್ಷವೂ ಹೆಚ್ಚು ಕಂಡಿದೆ. ಯುದ್ಧದಿಂದ ಗೋದುವೆ ಮೊದಲಾದ ಕೆಲ ಸಾಮಾನುಗಳ ಸಾಗುವಿಕೆಯು ಚೆನ್ನಾಗಿಯೇ ನಡೆಯುತ್ತಿದೆ.

ತೆಂಗಿನವ್ಯವಸಾಯ

ಈಚೆಗೆ ೪-೫ ವರ್ಷಗಳಿಂದ ಬಹಳ ಲಾಭಕರವಾಗಿದ್ದ ತೆಂಗಿನ ವ್ಯವಸಾಯವು ಈಗಿನ ಯುದ್ಧಸಂದರ್ಭದಿಂದ ಕ್ಷೀಣಸ್ಥಿತಿಗೆ ಬರುತ್ತಿದೆ. ಮಲಯಾಳದೇಶದಿಂದ ಕೊಬರಿಯು ಅನ್ಯದೇಶಗಳಿಗೆ ವಿಶೇಷವಾಗಿ ಸಾಗಿಹೋಗುತ್ತಿದ್ದಿತು. ಅಲ್ಲದೆ ತೆಂಗಿನ ಜುಂಗೂ ಹೊರಕ್ಕೆ ಸಾಗಿಹೋಗುತ್ತಿದ್ದಿತು. ಕಲ್ಲಿಕೋಟೆ ಕೊಚ್ಚಿ ಪ್ರಾಂತಗಳಲ್ಲಿ ಕಳೆದ ೧೦ ವರ್ಷಗಳಿಂದಲೂ ಎಷ್ಟೋ ಸಾವಿರಾರು ಮಂದಿಗಳು ತೆಂಗಿನ ನಾರನ್ನು ಬಿಡಿಸುವ ಹೊಸೆಯುವ ಕೆಲಸದಲ್ಲೇ ಜೀವಿಸುತ್ತಿದ್ದರು. ೧೯೧೧ ನೆಯ ವರ್ಷದಲ್ಲಿ ಈ ಉದ್ಯೋಗದೊಳಗೆ ೩೩೦೪೩ ಮಂದಿಗಳು ಜೀವಿಸುತ್ತಿದ್ದರು. ಈಗಲಾದರೋ ತೆಂಗಿನ ನಾರುಗಳ ಕೆಲಸವನ್ನು ಮಾಡುತ್ತಿದ್ದ ಯಂತ್ರಾಲಯಗಳು ನಿದ್ರೆಮಾಡುತ್ತಿವೆ. ಸದ್ಯಃ ನಾರಿನ ಹಗ್ಗಗಳು ನಾರಿನ ತಾಟುಗಳು ಅಲ್ಲಲ್ಲಿ ಅಷ್ಟೂ ಇಷ್ಟು ಮಾರಾಟವಾಗುತ್ತಿರುವಂತೆ ಕಾಣುತ್ತಿದೆ. ೧೯೧೧-೧ ನೆಯ ಇಸವಿಯಲ್ಲಿ ೩೪೪೦೩೮೪ ರೂ. ಬೆಲೆಯ ೧೯೧೪೧ ಟನ್ನುಗಳ ನಾರೂ, ೧೯೧೧-೧೧ ನೆ ವರ್ಷದಲ್ಲಿ ೩೩೩೯೭೭೨ ರೂ. ಬೆಲೆಯ ೩೧೨೩೦ ಟನ್ನುಗಳ ನಾರೂ, ೧೯೧೧-೧೨ ನೆಯ ವರ್ಷದಲ್ಲಿ ೯೩೩೩೦೦೦ ರೂ. ಬೆಲೆ ಬಾಳುವ ೨೪೨೦೦ ಟನ್ನುಗಳ ನಾರೂ ಅನ್ಯದೇಶಗಳಿಗೆ ಸಾಗಿಹೋಗಿದ್ದಿತು. ವರ್ಷೇವರ್ಷೆ ಇದರ ವ್ಯಾಪಾರವು ಹೇಗೆ ಅಭಿವೃದ್ಧಿಗೊಳ್ಳುತ್ತಿದ್ದಿತೆಂಬುದನ್ನು ಮೇಲಣ ಲೆಕ್ಕವು ನಿದರ್ಶನಪಡಿಸಿರುವುದು. ಈ ನಾರಿನಲ್ಲಿ ಬಹುಭಾಗವು ಜರ್ಮನಿಗೂ ಗ್ರೇಟ್‌ಬ್ರಿಟನ್ನಿಗೂ ಹೋಗುತ್ತಿದ್ದಿತು. ಈಗಲಾದರೋ ಇದರ ವ್ಯಾಪಾರವು ನಿಂತುಹೋಗಿ, ಇದರ ಪರಿಶ್ರಮದಲ್ಲಿ ಸೇರಿ ಕೂಲಿಮಾಡಿ ಜೀವಿಸುತ್ತಿದ್ದ ಸಾವಿರಾರು ಮಂದಿಗಳು ಕೆಲಸವಿಲ್ಲದೆ ತಾಪತ್ರಯದಿಂದ ಅಲೆಯುತ್ತಿದ್ದಾರೆ. ಜರ್ಮನಿಯವರು ಕೊಬರಿಯ ಉಪಯೋಗದಿಂದ ಮಾಡುತ್ತಿದ್ದ ಸಾಮಗ್ರಿಗಳನ್ನು ಗ್ರೇಟ್‌ಬ್ರಿಟನ್ನಿನವರೂ ಇತರ ತಟಸ್ಥರಾಷ್ಟ್ರಗಳೂ ನೆರವೇರಿಸಲು ಪ್ರಯತ್ನಿಸುವವರಾದರೆ ಇದರ ವ್ಯಾಪಾರವು ಆಗ ಸ್ವಲ್ಪ ತಲೆಯೆತ್ತಬಹುದು. ಆದರೆ ಕೊಬರಿಯನ್ನು ತರಿಸಿ ಎಣ್ಣೆಯನ್ನು ತೆಗೆದ ಹಿಂಡಿಗೆ ಅಲ್ಲಿ ಮಾರಾಟವಿಲ್ಲವೆಂದು ಗೊತ್ತಾಗುತ್ತದೆ. ಅದುಕಾರಣ ಗ್ರೇಟ್‌ಬ್ರಿಟನ್ನಿಗೆ ಕೊಬರಿಯು ವಿಶೇಷವಾಗಿ ಸಾಗಲಾರದು. ನಮ್ಮದೇಶದವರು ಕೈಯಲ್ಲಿ ಬೆಣ್ಣೆಯನ್ನಿಟ್ಟುಕೊಂಡು ನೆರೆಮನೆಯ ತುಪ್ಪಕ್ಕಾಗಿ ಹಲ್ಲುಕಿರಿಯುವಂತಿದ್ದಾರೆ. ತೆಂಗು ಹರಳು ಹತ್ತಿಬೀಜ ಮೊದಲಾದ ತೈಲಪ್ರಧಾನವಾದ ಪದಾರ್ಥಗಳು ನಮ್ಮ ದೇಶದಲ್ಲಿ ಸಮೃದ್ಧವಾಗಿ ಬೆಳೆಯುತ್ತಿವೆಯಷ್ಟೆ. ಇವುಗಳೆಲ್ಲಾ ಅವಶ್ಯಕವಾದ ಎಣ್ಣೆ ಬೆಣ್ಣೆಗಳನ್ನು ಯಂತ್ರಗಳಿಂದ ಇಲ್ಲೇ ಇಳಿಯಿಸಿ, ಅವುಗಳನ್ನುಪಯೋಗಿಸಿ ಮಾಡುವ ಸಾಬೂನು-ಮೋಂಬತ್ತಿ ಮೊದಲಾದುವುಗಳನ್ನು ನಿರ್ಮಿಸುವ ಕಾರ್ಯಾಲಯಗಳನ್ನು ಇಲ್ಲೇ ವಿಶೇಷವಾಗಿ ಸ್ಥಾಪಿಸಿ ಸಾಗಿಸುತ್ತ ಬಂದರೆ ಅವುಗಳಿಂದ ಬರುವ ಹಿಂಡಿಯು ದನಗಳ ಮೇವಿಗೂ, ಭೂಮಿಯ ಗೊಬ್ಬರಕ್ಕೂ ಬಹಳ ಅನುಕೂಲಿಸುವುದು. ತೆಂಗು ಮೊದಲಾದುವುಗಳ ವ್ಯವಸಾಯಕ್ಕೂ ಪ್ರೋತ್ಸಾಹವಾಗುವುದು. ಈಗಿನ ಸಂಧಿಯಲ್ಲಿ ಆಯಾ ಸರ್ಕಾರದವರು ಹೆಚ್ಚಿನ ಸಾಹಸವನ್ನು ಮಾಡಿ ದೇಶೋದ್ಧಾರಕವಾದ ಇಂಥ ಪ್ರಯತ್ನಗಳಲ್ಲಿ ಅನನುಭವಸ್ಥರಾಗಿರುವ ಪ್ರಜೆಗಳಿಗೆ ತಕ್ಕ ತಿಳುವಳಿಕೆಯನ್ನೂ ಪ್ರೋತ್ಸಾಹವನ್ನೂ ಕೊಡಬೇಕಲ್ಲದೆ ಸ್ವತಃ ಕೆಲ ಕಾರ್ಯಾಲಯಗಳನ್ನೂ ಸ್ಥಾಪಿಸಿಯೂ ನಿದರ್ಶನದ ಮೂಲಕ ಪ್ರಜೆಗಳಿಗೆ ಇಂಥ ಕಾರ್ಯಗಳಲ್ಲಿ ಅಭಿರುಚಿ ಹುಟ್ಟುವಂತೆಯೂ ಮಾಡಬೇಕಾಗಿರುವುದು.

ಸರಿಗೆಯ ನೆಯ್ಗೆ.

ದಕ್ಷಿಣದೇಶದ ಕೊಯಮುತ್ತೂರು ಕಂಚಿ ಮೊದಲಾದ ಕಡೆಗಳಲ್ಲಿ ಸೀರೆಗಳು ಪಂಚೆಗಳು ಮೊಗವಗಳು ಮೊದಲಾದ ಪದಾರ್ಥಗಳ ನೆಯ್ಗೆಯು ಬಹಳ ನಾಣ್ಯವಾಗಿ ನಡೆಯುವುದೆಂದು ಪ್ರಸಿದ್ಧವಾಗಿದೆಯಷ್ಟೆ. ಈ ನೆಯ್ಗೆಗೆ ಬೇಕಾದ ಭಂಗಾರದ ಸರಿಗೆಯು ವಿಶೇಷವಾಗಿ ಫ್ರಾನ್ಸಿನಿಂದ ಈ ದೇಶಕ್ಕೆ ಬರುತ್ತಿದ್ದಿತು. ಈಗಿನ ಯುದ್ಧದಿಂದ ಅದರ ಆಯಾತಿಯು ನಿಂತುಹೋಗಿ ಅದರ ನೆಯ್ಗೆಯ ಕೆಲಸವು ಸಂಪೂರ್ಣವಾಗಿ ಕಟ್ಟಾಗಿಹೋಗಿದೆ. ಕೊಯಮುತ್ತೂರಿನಲ್ಲಿ ನೆಯ್ಗೆಯ ಉದ್ಯೋಗವನ್ನು ಮಾಡುವ ಕುಟುಂಬಗಳು ೫೦೦೦ ಇವೆ. ಅವುಗಳಲ್ಲಿ ೧೫೦೦ ಮಗ್ಗಗಳು ಕೆಲಸಮಾಡುತ್ತಿದ್ದುವು. ಈಗಿನ ಸಂದರ್ಭದಿಂದ ಆ ಮಗ್ಗಗಳೆಲ್ಲಾ ಕೆಲಸವಿಲ್ಲದೆ ನಿಂತುಹೋಗಿದೆ. ಇದರಿಂದ ಆ ಕಸಬಿನ ೩-೪ ಸಾವಿರ ಜನರಿಗೆ ಜೀವನಕ್ಕೆ ಅಭಾವವಾಗಿ ತೊಂದರೆ ಪಡುತ್ತಿದ್ದಾರೆ. ಹೊರಗಿನಿಂದ ಸರಿಗೆಯು ಬರದೆ ಇರುವುದರಿಂದ ಅಲ್ಲಲ್ಲಿ ಅಷ್ಟು ಇಷ್ಟು ನಿಂತಿರುವ ಸರಿಗೆಗೂ ಬೆಲೆಯು ಹೆಚ್ಚಾಗಿಹೋಗಿದೆ ಅಷ್ಟು ಬೆಲೆಯ ಸರಕನ್ನು ತಂದು ನೆಯ್ದು ಮಾರುವುದರಿಂದ ಲಾಭವನ್ನು ಸಂಪಾದಿಸುವುದು ಕಷ್ಟವಾಗಿದೆ. ಸರಿಗೆಯಿಲ್ಲದೆ ಬರಿಯ ನೂಲಿನ ರೇಶಿಮೆಯ ಪದಾರ್ಥಗಳನ್ನು ನೆಯ್ಯುವುದಕ್ಕೆ ಅವರು ಉಪಕ್ರಮಿಸಿದರು. ಅದರ ಮಾರಾಟವು ಸರಿಯಾಗಿ ಜರುಗಲಿಲ್ಲ. ಯುದ್ಧವು ಇನ್ನೂ ಬಹುಕಾಲ ನಡೆಯುವುದಾದರೆ ಈ ನೆಯ್ಗೆಯವರ ಅವಸ್ಥೆಯು ಬಹಳ ಶೋಚನೀಯವಾಗುವುದು. ತನ್ನಲ್ಲೇ ಸಕಲವಿಧದ ಉಪಯೋಗ್ಯ ಸಾಮಗ್ರಿಗಳನ್ನೂ ಅಣಿಮಾಡಿಕೊಂಡು ತನ್ನ ಕಾಲಮೇಲೆ ತಾನು ನಿಂತು ಪ್ರಪಂಚದಲ್ಲಿ ಮೆರೆಯುತ್ತ ನೋಡಿದ ಇತರರಿಗೆಲ್ಲಾ ಬಾಯ್ನೀರು ಊರುವಂತೆ ಒಂದಾನೊಂದುಕಾಲದಲ್ಲಿ ಮಾಡಿದ್ದ ಭರತಖಂಡಕ್ಕೆ ಕಾಲವೈಚಿತ್ರ್ಯದಿಂದ ಪರರ ಬೊಗಸೆಯ ನೀರಿನಿಂದ ದಾಹ ಶಾಂತಿಯನ್ನು ಮಾಡಿಕೊಳ್ಳುವ ಅವಸ್ಥೆಯು ಪ್ರಾಪ್ತವಾದುದರಿಂದಲ್ಲವೆ ಇಷ್ಟೆಲ್ಲಾ ತೊಂದರೆಗಳು? ಈಗಿನ ಅನುಭವದಿಂದಲಾದರೂ ಸಾಮ್ರಾಜ್ಯಪ್ರಭುತ್ವದವರು ಭರತಖಂಡವನ್ನು ಅದರ ಪೂರ್ವದ ಸ್ಥಿತಿಗೆ ತರುವ ಯೋಚನೆಯನ್ನು ಮಾಡುವುದು ಆವಶ್ಯಕವು.

ಆಂಗ್ಲಪ್ರಭುತ್ವದ ನೌಕಾಸೇನಾಶಕ್ತಿ.

ನೌಕಾಸೇನಾ ಮುಖ್ಯಾಂಗಮಂತ್ರಿಯವರಾದ ವಿನ್ಸ್ಟನ್ ಚರ್ಚಿಲ್‌ರವರು ಕಾಮನ್ಸ್‌ಸಭೆಯಲ್ಲಿ ಮಾತನಾಡುವಾಗ್ಗೆ ಆಂಗ್ಲಪ್ರಭುತ್ವದ ಅಸಾಧಾರಣ ಜಲಸೇನಾ ಸ್ಥಿತಿಗತಿಯನ್ನು ಕುರಿತು ಹೀಗೆ ಮಾತನಾಡಿರುವರು—"ಯುದ್ಧವು ಪ್ರಾರಂಭವಾದಾಗ ನಮ್ಮ ನೌಕಾದಳವು ಕೆಲ ತೊಂದರೆಗಳನ್ನು ಇದಿರಿಸಬೇಕಾಯಿತು. ಯಾವುವೆಂದರೆ—ನೌಕಾದಳವು ಸನ್ನದ್ಧವಾಗಿಲ್ಲದೆ ಇದ್ದ ಸಮಯದಲ್ಲಿ ಹಠಾತ್ತಾಗಿ ಯುದ್ಧೋಪಕ್ರಮವಾದುದು, ಯುದ್ಧನಾವೆಗಳೆಲ್ಲವೂ ಒಂದೇ ಸ್ಥಳದಲ್ಲಿ ಸೇರಿಲ್ಲದೆ ಹೋಗಿದ್ದುದು, ನಮ್ಮ ವ್ಯಾಪಾರದ ಹಡಗುಗಳನ್ನು ಧ್ವಂಸಮಾಡುವ ಶತ್ರುನಾವೆಗಳು ಮಧ್ಯಸಮುದ್ರದಲ್ಲಿ ಹೋಗಿ ಸೇರಿಕೊಂಡಿದ್ದುದು, ಈ ತೊಂದರೆಯನ್ನು ನಾವು ಜಯಪ್ರದವಾಗಿ ತೊಲಗಿಸಿಕೊಂಡೆವು. ನಮ್ಮ ವ್ಯಾಪಾರದ ಹಡಗುಗಳು ಯುದ್ಧವಾರಂಭವಾದ ಸಮಯದೊಳಗೆ ೧೦೦ ಕ್ಕೆ ೫ ರಂತೆ ಹಾಳಾಗಿಹೋಗಬಹುದೆಂದು ಎಣಿಸಿದ್ದೆವು. ಆದರೆ ಹಾಗೆ ನಡೆಯಲಿಲ್ಲ. ನೂರಕ್ಕೆ ೧.೯ ರಂತೆ ಮಾತ್ರವೇ ಧ್ವಂಸಮಾಡಲ್ಪಟ್ಟಿತು. ಮತ್ತೂ ಜಲದೊಳಗೆ ಶತ್ರುಗಳು ಮದ್ದಿನ ಗೋಳಗಳನ್ನಿಟ್ಟಿದ್ದುದು ಮತ್ತೊಂದು ತೊಂದರೆ. ನಾಗರಿಕವಾದ ದೇಶಗಳು ಯಾವ ಪದ್ಧತಿಯನ್ನು ಅವಲಂಬಿಸುವುದಿಲ್ಲವೆಂದು ನಾವು ತಿಳಿದಿದ್ದೆವೋ ಅಂಥ ಪದ್ಧತಿಯನ್ನೇ ನಮ್ಮ ಶತ್ರುಗಳು ಅವಲಂಬಿಸಿದರು. ಈ ಗಣೆಗಳಿಂದ ನಮಗೆ ನಷ್ಟವು ಸಂಭವಿಸಿತು ಆ ನಷ್ಟಕ್ಕೂ ಕೊನೆ ಮಿತಿಯುಂಟು. ಮದ್ದಿನ ಗಣೆಗಳನ್ನು ಶತ್ರುಗಳು ಎಲ್ಲ ಪ್ರದೇಶಗಳಿಗೂ ವ್ಯಾಪನಗೊಳಿಸದಂತೆ ಮಾಡುವುದರಲ್ಲಿ ನಾವು ಪ್ರಯತ್ನಿಸಿದ್ದೇವೆ. ಇದರಮೇಲೆ ಶತ್ರುಗಳ ಜಲಾಂತರ್ಗಾಮಿ (ಸಬ್‌ಮೆರೈನ್) ಗಳ ತೊಂದರೆಯೊಂದು. ಈ ನಾವೆಗಳನ್ನು ಕಂಡುಹಿಡಿದ ಬಳಿಕ ನೌಕಾಯುದ್ಧದಲ್ಲಿ ಒಂದು ನೂತನಪದ್ಧತಿಯು ಏರ್ಪಟ್ಟಿದೆ. ಪೂರ್ವದಲ್ಲಿ ಬಲವಂತವಾದ ರಾಜ್ಯದ ಯುದ್ಧನಾವೆಗಳು ಎಲ್ಲ ಸ್ಥಲಗಳಲ್ಲೂ ಸ್ವೇಚ್ಛೆಯಿಂದ ತಿರುಗುವುದಕ್ಕೆ ಅವಕಾಶವಿದ್ದಿತು. ಸಬ್‌ಮೆರೀನುಗಳು ಉದಯಿಸಿದ ಬಳಿಕ ಅಂಥ ಅವಕಾಶವು ತಪ್ಪಿಹೋಯಿತು. ಇಂಗ್ಲೆಂಡ್‌ದೇಶದ ಯುದ್ಧನಾವೆಗಳು ಸ್ವೇಚ್ಛೆಯಿಂದಲೂ ಧೈರ್ಯದಿಂದಲೂ ಸಮುದ್ರದಲ್ಲಿ ಸಂಚರಿಸುವಂತಿರಬೇಕಾದುದು ಆವಶ್ಯಕವು. ಹಾಗೆ ಇರುವುದಕ್ಕೆ ತಕ್ಕ ಏರ್ಪಾಟು ಮಾತ

ಲ್ಪಡುತ್ತಿದೆ. ಶತ್ರುಗಳಿಗಿಂತ ನಮ್ಮಲ್ಲಿ ಸಬ್‌ಮೆರೈನುಗಳು ಹೆಚ್ಚಾಗಿವೆಯೆಂದು ತಿಳಿಯಿಸುವುದಕ್ಕೆ ನನಗೆ ಸಂತೋಷವಾಗುತ್ತದೆ. ಹೀಗಿದ್ದರೂ ನಾವು ಇನ್ನೂ ದೊಡ್ಡದೊಡ್ಡ ಜಯವನ್ನು ಜಲಯುದ್ಧದಲ್ಲಿ ಪಡೆಯದೆ ಇರುವುದಕ್ಕೆ ಕಾರಣವೇನೆಂದರೆ— ನಮಗೆ ತಕ್ಕ ಅವಕಾಶವು ಸಿಕ್ಕದೆಇರುವುದೇ ಆಗಿರುತ್ತದೆ. ಶತ್ರುಗಳು ಇಂಗ್ಲೆಂಡಿನ ಮೇಲೆ ದಾಳಿಯಿಡಬೇಕೆಂದು ಸಾಧಿಸುತ್ತಿರುವುದು ಮತ್ತೊಂದು ತೊಂದರೆಯಾಗಿದೆ. ಆದರೆ ಇಂಗ್ಲೆಂಡಿನ ಮೇಲೆ ದಂಡೆತ್ತಬೇಕೆನ್ನುವವರಿಗೇ ಹೆಚ್ಚಾದ ಅಪಾಯವು ಸಂಭವಿಸುತ್ತದೆ. ಇದುವರೆಗೆ ನಮ್ಮಲ್ಲೂ ಶತ್ರುಗಳಲ್ಲೂ ಸಬ್‌ಮೆರೈನುಗಳು ಸಮನಾಗಿಯೇ ನಷ್ಟವಾಗಿವೆ. ನಮ್ಮ ಡಿಸ್ಟ್ರಾಯರುಗಳಲ್ಲಿರುವ ಫಿರಂಗಿಗಳು ಶತ್ರುಗಳ ಡಿಸ್ಟ್ರಾಯರುಗಳಲ್ಲಿನ ಫಿರಂಗಿಗಳಿಗಿಂತ ಹೆಚ್ಚಾದ ಶಕ್ತಿಯನ್ನು ತೋರಿಸಿವೆ. ನಮ್ಮ ಕಡೆ ೧ ಡಿಸ್ಟ್ರಾಯರೂ ನಷ್ಟವಾಗಿಲ್ಲ. ಶತ್ರುಗಳ ಕಡೆ ೮-೧೦ ನಷ್ಟವಾಗಿವೆ. ಕಬ್ಬಿಣದ ತಗಡನ್ನು ಹೊದ್ದಿಸಿದ ಹಳೆಯ ತರದ ೬ ಕ್ರೂಯಿಜರುಗಳು ನಮ್ಮ ಕಡೆ ನಷ್ಟವಾಗಿವೆ. ಜರ್ಮನರಲ್ಲಿ ಅಂಥವು ೨ ನಷ್ಟವಾಗಿವೆ. ಇಂಥ ಕ್ರೂಯಿಜರುಗಳು ನಮ್ಮಲ್ಲಿ ಜರ್ಮನಿಯವರಲ್ಲಿರುವವುಗಳಿಗಿಂತಲೂ ಮೂರುನಾಲ್ಕರಷ್ಟು ಹೆಚ್ಚಾಗಿವೆ. ಈಗಿನ ನೌಕಾಯುದ್ಧಗಳಲ್ಲಿ ಮುಖ್ಯವಾದುವುಗಳು ವೇಗವಾಗಿ ಓಡತಕ್ಕ ಯುದ್ಧದ ಹಡಗುಗಳಾಗಿವೆ. ಇಂಥ ಹಗುರವಾದ ಕ್ರೂಯಿಜರುಗಳು ನಮ್ಮಲ್ಲಿ ೩೬ ಇವೆ. ಅವುಗಳಲ್ಲಿ ೨ ಮಾತ್ರ ನಷ್ಟವಾದುವು. ಜರ್ಮನಿಯವರಲ್ಲಿ ಇಂಥವು ೨೫ ಇದ್ದುವು. ಅವುಗಳಲ್ಲಿ ೬ ನಷ್ಟವಾದುವು.

ನಮ್ಮ ನೌಕಾಬಲದ ಸ್ಥಿತಿಗತಿಗಳು ಮುಂದೆ ಇನ್ನೂ ತೃಪ್ತಿಕರವಾಗುವುವು. ಅದಕ್ಕೆ ಕಾರಣವೇನೆಂದರೆ—ಒಂದು ಸಂವತ್ಸರದೊಳಗಾಗಿ ನಾವು ವೇಗಗಾಮಿಗಳಾದ ಹಡಗುಗಳನ್ನು ಜರ್ಮನಿಯವರಲ್ಲಿರುವುದಕ್ಕೆ ದ್ವಿಗುಣವಾಗಿ ಹೊಂದುವೆವು. ಇನ್ನು ನಮ್ಮ ಡ್ರೆಡ್‌ನಾಟ್ (ದೊಡ್ಡ ಯುದ್ಧದ ಹಡಗು)ಗಳ ಸ್ಥಿತಿಯೂ ಬಹು ದಿವ್ಯವಾಗುವುದು. ಯುದ್ಧವು ಆರಂಭವಾದ ಬಳಿಕ ನಮ್ಮ ನೌಕಾದಳದಲ್ಲಿ ಹೊಸದಾಗಿ ಎಷ್ಟು ಡ್ರೆಡ್‌ನಾಟುಗಳನ್ನು ಸೇರಿಸಿದೆನೆಂಬುದನ್ನು ನಾನು ಈಗ ಹೇಳುವುದಕ್ಕೆ ಅವಕಾಶವಿಲ್ಲ. ಜರ್ಮನಿಯವರ ನೌಕಾಬಲವನ್ನೂ ನಮ್ಮ ನೌಕಾಬಲವನ್ನೂ ಹೋಲಿಸಿನೋಡಿದರೆ ನಮ್ಮದು ಅವರದಕ್ಕಿಂತಲೂ ಎಷ್ಟೋಪಾಲು ಹೆಚ್ಚಾಗಿದೆ. ೧೯೧೫ನೆ ವರ್ಷವು ಪೂರ್ತಿಯಾಗುವುದರೊಳಗಾಗಿ ಜರ್ಮನಿಯು ಹೊಸದಾಗಿ ೩ ಯುದ್ಧನಾವೆಗಳನ್ನು ಮಾತ್ರ ನಿರ್ಮಿಸಿಕೊಳ್ಳಬಲ್ಲುದು. ನಾವಾದರೋ ಅಂಥ ೧೫ ಹಡಗುಗಳನ್ನು ಅಣಿಮಾಡಿಕೊಳ್ಳ ಬಲ್ಲವರಾಗಿದ್ದೇವೆ. ನಮ್ಮಲ್ಲಿರುವ ಡ್ರೆಡ್‌ನಾಟುಗಳಲ್ಲಿ ತಿಂಗಳೊಂದಕ್ಕೆ ಒಂದೊಂದು ನಷ್ಟವಾಗಿ ಹೋದರೂ, ನಮಗೆ ನೌಕಾಬಲವು ಯುದ್ಧಾರಂಭವಾದ ಕಾಲದಲ್ಲಿದ್ದ ಹಡಗುಗಳಿಗಿಂತಲೂ ಹೆಚ್ಚಾಗಿಯೇ ಇರುವುದು. ಇದು ಬರಿಯ ಜಂಭದ ಮಾತಲ್ಲ. ನಾನು ಈಗ ಹೇಳುವ ಮಾತುಗಳು ಅಧೈರ್ಯವನ್ನು ಹೊಂದುತ್ತಿರುವವರಿಗೆಲ್ಲಾ ಸಂತೋಷವನ್ನುಂಟುಮಾಡುವುವೆಂದು ನಂಬುತ್ತೇನೆ. ನೌಕಾನಿರ್ಮಾಣಶಾಲೆಯಲ್ಲಿ ಕೆಲಸಮಾಡುತ್ತಿರುವವರ ದೇಶಾಭಿಮಾನವು ಸ್ತೋತ್ರಾರ್ಹವಾಗಿದೆ. ಮತ್ತು ನಮ್ಮ ನಾವಿಕರು ಯುದ್ಧಾರಂಭವಾಗುವ ಕಾಲಕ್ಕಿಂತ ಈಗ ಹೆಚ್ಚು ಆರೋಗ್ಯಸ್ಥಿತಿಯಲ್ಲಿದ್ದಾರೆ. ಇವರ ಗುಣಾತಿಶಯಗಳು ಇತರರಿಗೆ ಮಾರ್ಗದರ್ಶಕವಾಗಿವೆ. ನಮ್ಮ ನಾ[illegible]ಸೈನ್ಯದವರು ಮಾಡುತ್ತಿರುವ ಯುದ್ಧವನ್ನು ಬಹ[illegible] ಗಮನಿಸುತ್ತ ಉತ್ಸಾಹವನ್ನೂ ಅಭಿಮಾನವನ್[illegible]ಸುತ್ತಿದ್ದಾರೆ. ಇವರ ಉತ್ಸಾಹವು ಅಧಿಕಾರಿಗಳಿಗೆ ಉತ್ತಮವಾದ ಧೈರ್ಯವನ್ನು ಹುಟ್ಟಿಸುತ್ತಿದೆ.

ಯುದ್ಧವಾರ್ತೆಯು.

ಪಶ್ಚಿಮರಣರಂಗ.

ಕಳೆದವಾರ ಪಶ್ಚಿಮರಣರಂಗದಲ್ಲಿ ಯುದ್ಧದ ವಿಶೇಷವೇನೂ ಇಲ್ಲ. ಸಾಮಾನ್ಯವಾಗಿ ಫಿರಂಗಿಯುದ್ಧವು ಅಲ್ಲಲ್ಲಿ ನಡೆಯುತ್ತಿದ್ದಿತು. ಜರ್ಮನರು ನ್ಯೂಪೋರ್ಟಿನ ಪೂರ್ವಕ್ಕಿರುವ ಓಸ್ಟ್‌ಡಕರ್ಕ್ ಎಂಬ ಸ್ಥಾನಕ್ಕೆ ಮುತ್ತಿ ಫಿರಂಗಿಗಳನ್ನು ಹೊಡೆಯುತ್ತಿದ್ದರು. ಮಿತ್ರಮಂಡಲಿಯವರು ಬೆಲ್ಜಿಯಮ್ಮಿನಲ್ಲಿ ಶತ್ರುಗಳಿಗೆ ಸೇರಿಹೋಗಿದ್ದ ವೆರ್ಮಲಸ್ ಎಂಬ ಗ್ರಾಮವನ್ನೂ ರುಟೋಯಿರ್ ಗ್ರಾಮವನ್ನೂ ಪೂರ್ಣವಾಗಿ ವಶಪಡಿಸಿಕೊಂಡರು. ಕಳೆದ ೨ ತಿಂಗಳಿಂದಲೂ ಇದಕ್ಕಾಗಿ ಹೋರಾಡುತ್ತಿದ್ದರು. ಅವಕ್ಕೆ ಪೂರ್ವದಲ್ಲಿ ಲೋಹಮಾರ್ಗವನ್ನು ನಮ್ಮವರು ಹಾಕಿಕೊಳ್ಳುತ್ತಿದ್ದಾರೆ. ರೂವ್ರೆ-ಲಾಕ್-ವ್ಯಿಲ್ಲರ್-ಲೀಕ್ವೆಸ್ನಿ-ಬರ್ಲಾಂಟ್ಸ್-ಈ ಪ್ರಾಂತಗಳಲ್ಲಿ ನಮ್ಮ ಸೈನಿಕರು ಸ್ವಲ್ಪಸ್ವಲ್ಪ ಮುಂದಕ್ಕೆ ಸರಿದಿದ್ದಾರೆ. ಡಿಕ್ಸ್‌ಮೂಡಿಗೆ ದಕ್ಷಿಣದಲ್ಲಿ ಫ್ರೆಂಚ್ ಸೈನ್ಯಗಳು ಮುಂದುವರಿದಿವೆ. ಜರ್ಮನಿಯವರು ಯಾವಕಡೆಯೂ ಮುಂದಕ್ಕೆ ಸಾಗಿ ಬರಲಾರದವರಾಗಿದ್ದಾರೆ.

ಮಿತ್ರಮಂಡಲಿಯವರ ನೌಕಾದಳಗಳು ಬೆಲ್ಜಿಯಂಸಮುದ್ರತೀರಗಳಲ್ಲಿರುವ ಜರ್ಮನರ ಪ್ರಯತ್ನಗಳಿಗೆ ಭಂಗವನ್ನುಂಟುಮಾಡಲು ಫಿರಂಗಿಗಳನ್ನು ಹಾರಿಸುತ್ತಲೇ ಇವೆ. ಭೂಮಾರ್ಗದಲ್ಲಿರುವ ಮಿತ್ರಮಂಡಲಿಯ ಸೈನ್ಯಗಳು ಉತ್ತರಕ್ಕೆ ಆಸ್ಟೆಂಡಿನ ಕಡೆಗೆ ಸಾಗಿಹೋಗುತ್ತಿವೆ.

ಪೂರ್ವರಣರಂಗ.

ವಿಸ್ಟುಲಾ-ವಾರ್ಟಾನದಿಗಳ ಮಧ್ಯದಲ್ಲಿ ರಷ್ಯನರಿಗೂ ಜರ್ಮನರಿಗೂ ಆದ ಮಹಾ ಭೀಕರವಾದ ಯುದ್ಧದಲ್ಲಿ ಜರ್ಮನ್ ಸೈನ್ಯದಲ್ಲಿ ೩ ನೆಯ ೨ ಭಾಗವು ನಷ್ಟವಾಯಿತು. ಲೋಡ್ಜು ಪಟ್ಟಣದ ಹತ್ತಿರವೂ ಹಾಗೆಯೇ ನಡೆದ ಭೀಕರವಾದ ಯುದ್ಧದಲ್ಲಿ ರಷ್ಯನರು ಜರ್ಮನ್ ಸೈನಿಕರನ್ನು ಇತ್ತತ್ತ ಕದಲಾಡಗೊಡದಂತೆ ಸುತ್ತುಗಟ್ಟಿದ್ದರು. ಆದರೆ ರಷ್ಯನರಿಗೆ ಮತ್ತಷ್ಟು ಸಹಾಯಸೇನೆಯು ಬಂದು ಸೇರದೆ ಹೋದುದರಿಂದ ಜರ್ಮನರು ಆ ಮುತ್ತಿಗೆಯನ್ನು ಭೇದಿಸಿಕೊಂಡು ಹೋದರು. ಈ ಸುತ್ತುಗಟ್ಟಲ್ಪಟ್ಟಿದ್ದ ಸೈನ್ಯದೊಳಗೇ ಜರ್ಮನ್ ಕೇಜರರ ಓಸ್ಕಾರು-ಐಥೀಮು- ಎಂಬ ಇಬ್ಬರು ಕುಮಾರರುಗಳು ಇದ್ದರು. ಅವರು ವಿಮಾನಗಳಲ್ಲಿ ಕುಳಿತು ಆಕಾಶಕ್ಕೆಹಾರಿ ಮುತ್ತಿಗೆಯಿಂದ ಪಾರಾಗಿಹೋದರು. ಈಯುದ್ಧದಲ್ಲಿ ಜರ್ಮನರಕಡೆ ೧ಲಕ್ಷಸೈನಿಕರು ನಷ್ಟವಾಗಿರುವರು. ಇಲ್ಲಿ ಒಟ್ಟಿಗೆ ೧೨ ಪಟಾಲಮು ಯುದ್ಧಮಾಡಿತು. ಕಡೆಗೆ ಲೋಡ್ಜು ಪಟ್ಟಣವು ಜರ್ಮನರ ವಶವಾಯಿತು. ರಷ್ಯನ್ ಸೈನ್ಯವು ಕ್ರಾಕೋ ಪಟ್ಟಣಕ್ಕೆ ತೀರ ಸಮೀಪಿಸಿದೆ. ಅದನ್ನು ಮುತ್ತುವುದಕ್ಕೆ ಹೊರಟಿರುವ ರಷ್ಯನ್ ಸೈನ್ಯಕ್ಕೆ, ಹಿಂದಿನ ಬಾಲ್ಕನ್ ಯುದ್ಧಸಮಯದಲ್ಲಿ ಬಲ್ಗೇರಿಯಾಸೇನಾಧಿಪತಿಯಾಗಿದ್ದ ಡಿಮಿಟ್ರಿಫ್ ಎಂಬುವರು ಸೇನಾಪತಿಗಳಾಗಿ ಹೋಗಿರುವರು. ಈಗ ಈ ಸೇನೆಗಳು ಕ್ರಾಕೋ ಪಟ್ಟಣದಮೇಲೆ ಫಿರಂಗಿಗಳನ್ನು ಹೊಡೆಯುತ್ತಿವೆ. ಈ ಪ್ರಾಂತದಲ್ಲಿರುವ ಜರ್ಮನ್ ಆಸ್ಟ್ರಿಯಾ ಸೇನೆಗಳ ಸಹಾಯಕ್ಕೆ ಇನ್ನಷ್ಟು ಹೊಸಸೈನ್ಯಗಳನ್ನು ಶತ್ರುಗಳು ಕಳುಹಿಸಿದ್ದಾರೆ.

ತುರ್ಕಿ.

ರಷ್ಯನರು ತುರ್ಕಿಗೆ ಸೇರಿದ ಅರ್ಮೇನಿಯಾದಲ್ಲಿರುವ ಸಾರ್ರೈವಾಸಾ ಕಾಲಾಲುಗಳನ್ನು ಸ್ವಾಧೀನಪಡಿಸಿಕೊಂಡರು. ಇದರಿಂದ ಅವರು ವಾನಿಗೆ ನಿರಾತಂಕವಾಗಿ ಹೋಗಿ ಸೇರಲು ಅವಕಾಶವಾಗಿ, ಅಲ್ಲಿರುವ ಅನೇಕ ಭಾಗಗಳನ್ನು ಆಕ್ರಮಿಸಿಕೊಳ್ಳಲು ಸುಲಭವಾಯಿತು.

ಸರ್ವಿಯಾ.

ಸರ್ವಿಯಾದ ಬೆಲ್ಗ್ರೇಡ್ ಪಟ್ಟಣವು ಆಸ್ಟ್ರಿಯಾದವರ ವಶವಾದರೂ ಸರ್ವಿಯಾ ಸೈನಿಕರು ಮತ್ತೊಂದುಕಡೆ ಆಸ್ಟ್ರಿಯಾ ಸೇನೆಗಳಮೇಲೆ ಯುದ್ಧಮಾಡಿ ೨೮೦೦ ಮಂದಿ ಸೈನಿಕರನ್ನೂ ಇಬ್ಬರು ಜನರಲ್ಲುಗಳನ್ನೂ, ಫಿರಂಗಿ ಸೈನಿಕರ ನಾಲ್ಕು ಗುಂಪನ್ನೂ ಹಿಡಿದುಕೊಂಡಿರುವರು. ಮತ್ತೂ ಸರ್ವಿಯಾ ಸೈನಿಕರು ಬಹು ವೀರಾವೇಶದಿಂದ ಶತ್ರುಸೇನಾಮುಖದಮೇಲೆ ಬಿದ್ದು ಹೋರಾಡುವಲ್ಲಿ ಶತ್ರುಗಳು ತಾವು ಹಿಡಿದಿದ್ದ ಸೆರೆಯಾಳುಗಳನ್ನೂ ಆಯುಧಸಾಮಗ್ರಿಗಳನ್ನೂ ಬಿಟ್ಟು ಓಡಿಹೋದರು. ಒಂದು ಕಡೆ ಸರ್ವಿಯನ್ನರಿಗೆ ೨ ಸಾವಿರ ಮಂದಿ ಆಸ್ಟ್ರಿಯನ್ ಸೈನಿಕರೂ ಕೆಲಧ್ವಜಪಟಗಳೂ ೨೨ ನೆಯ ಪಟಾಲಮ್ಮಿನ ಬ್ಯಾಂಡಿನವರೂ ವಶವಾಗಿರುವರು.

ಮೈಸೂರ್ ಸ್ಟಾರ್.

ಸ. ೧೯೧೪ನೆಯ ಡಿಸೆಂಬರ್ ತಾ|| ೧೩ ನೆಯ ಭಾನುವಾರ.

ಇದುವರೆಗಿನ ಯುದ್ಧದಿಂದೇನಾಯ್ತು?

(ಭಾಗ ೨)

ಜರ್ಮನರು ಮೊಟ್ಟಮೊದಲು ಬೆಲ್ಜಿಯಮ್ಮಿನಿಂದ ಹಾದು ಪ್ಯಾರಿಸ್ಸಿನ ವರೆಗೆ ಹೋದಂತೆಯೇ ಪೂರ್ವದಿಕ್ಕಿನಲ್ಲಿ ಪೋಲ್ಯಾಂಡನ್ನು ನುಗ್ಗಿ ವಾರ್ಸಾ ಪಟ್ಟಣದ ವರೆಗೂ ಹೋದರು. ಬಳಿಕ ಪ್ಯಾರಿಸ್ಸಿನ ಹತ್ತಿರದಿಂದ ಸಂಯುಕ್ತ ಸೈನ್ಯದವರು ಶತ್ರುಗಳನ್ನು ಅಟ್ಟಿ ಹಿಮ್ಮೆಟ್ಟಿಸುತ್ತ ಬಂದಂತೆಯೇ ರಷ್ಯನರು ಇವರನ್ನು ವಾರ್ಸಾದಿಂದ ಹಿಂದಕ್ಕೆ ದೂಡಲುಪಕ್ರಮಿಸಿದರು. ಉತ್ತರದಿಂದ ದಕ್ಷಿಣಕ್ಕೆ ಸಾಲುನಿಂತಿದ್ದ ರಷ್ಯನ್ ಸೈನ್ಯಮಧ್ಯದಲ್ಲಿ ನುಗ್ಗಿ ಸುತ್ತುವರಿದು ಅವರನ್ನು ಸೋಲಿಸಬೇಕೆಂದು ಜರ್ಮನರು ಬಹಳ ಸಾಹಸಮಾಡಿದರು. ಇದರಲ್ಲಿ ಜರ್ಮನರಿಗೆ ಬಹಳ ಪರಾಭವವಾಯಿತು. ಅವರು ತಮ್ಮ ಹಲವು ಸಾಮಗ್ರಿಗಳನ್ನೂ ಸೈನಿಕರನ್ನೂ ಕಳೆದುಕೊಂಡು ಸ್ವದೇಶಕ್ಕೆ ಓಡಿಹೋಗಬೇಕಾಯಿತು. ಬಳಿಕ ರಷ್ಯನರೇ ಪೂರ್ವಪ್ರಷ್ಯಾದೊಳಕ್ಕೆ ನುಗ್ಗಿ ಜರ್ಮನರನ್ನು ಹೊಡೆದು ಓಡಿಸಿ ಮಸೂರಿಯಾ ಸರಸ್ಸಿನ ಬಳಿಯಣ ದುರ್ಗಗಳಿಗೆ ಹೋಗಿ ಸೇರಿಕೊಳ್ಳುವಂತೆ ಮಾಡಿದರು. ಜರ್ಮನಿಯ ಟಿಟ್ನಿಟ್ಟು ಪ್ರಾಂತಗಳಲ್ಲಿ ಉತ್ತಮ ರಕ್ಷಣಸ್ಥಾನಗಳನ್ನು ಆಕ್ರಮಿಸಿಕೊಳ್ಳುವ ಪ್ರಯತ್ನವನ್ನು ರಷ್ಯನರು ಮಾಡಿರುವರು. ವಾರ್ಟಾ ವಿಸ್ಟುಲಾ ನದಿಗಳ ಮಧ್ಯದಲ್ಲಿ ವಿಶೇಷವಾಗಿ ಸೇರಿದ್ದ ಜರ್ಮನ್ ಆಸ್ಟ್ರಿಯಾ ಸೈನ್ಯಗಳನ್ನು ರಷ್ಯನರು ಮೂರು ಭಾಗಗಳನ್ನಾಗಿ ಭೇದಿಸಿ ೨ ತುಂಡುಗಳನ್ನು ಮುತ್ತಿರುವರು. ಅಲ್ಲಿ ರಷ್ಯನರು ಪಡೆದ ಕೆಲ ಜಯಗಳು ಶ್ಲಾಘನೀಯವಾಗಿದ್ದುವು. ಇಲ್ಲಿ ಶತ್ರುಗಳು ತಮ್ಮ ಕಡೆಯ ಸೈನ್ಯದಲ್ಲಿ ೩ನೆಯ ೨ ಭಾಗದಷ್ಟು ಕಳೆದುಕೊಂಡರು. ಇಲ್ಲಿ ರಷ್ಯನರಮುತ್ತಿಗೆಗೆ ಒಳಪಟ್ಟಿರುವ ಶತ್ರುಸೈನ್ಯಗಳು ತಪ್ಪಿಸಿಕೊಂಡುಹೋಗಲು ಯತ್ನವೇಇಲ್ಲದಂತಾಗಿದೆ. ರಷ್ಯನರು ಜರ್ಮನಿಗೆ ಸೇರಿದ ಸಿಲೇಸಿಯಾಜಿಲ್ಲೆಯ ಎಲ್ಲೆಯ ಸಮೀಪವನ್ನು ಸೇರುತ್ತಿದ್ದಾರೆ. ಮತ್ತೂ ಶತ್ರುಸೈನ್ಯದಲ್ಲಿ ೧|| ಲಕ್ಷ ಜನರವರೆಗೆ ರಷ್ಯನರು ಸೆರೆಹಿಡಿದಿದ್ದಾರೆ. ಈಚೆಗೆ ಜರ್ಮನರು ಮರಳಿ ವಾರ್ಸಾದಕಡೆಗೆ ಬಲವಾದ ಸೈನ್ಯವನ್ನು ಸೇರಿಸಿಕೊಂಡು ನುಗ್ಗಿಹೋಗಿರುವರು. ವಾರ್ಸಾಕ್ಕೆ ಆಗ್ನೇಯದಿಕ್ಕಿನಲ್ಲಿರುವ ಲೋಡ್ಜು ಪಟ್ಟಣದ ಹತ್ತಿರ ಎರಡುಕಡೆಯೂ ಲಕ್ಷಾಂತರ ಸೇನೆಗಳು ಕೂಡಿ ಭಯಂಕರವಾಗಿ ಕಾದಾಡಿದುದರಲ್ಲಿ ಲೋಡ್ಜು ಜರ್ಮನರ ಹಸ್ತಗತವಾಗಿರುವುದು. ಆದರೂ ಅವರ ಕಡೆ ಆಗಿರುವ ನಷ್ಟವು ಬಹಳವಾಗಿರುವುದು. ೧ ಲಕ್ಷ ಮಂದಿಯ ವರೆಗೆ ಅವರ ಸೈನಿಕರು ಈ ಯುದ್ಧದಲ್ಲಿ ಹತವಾಗಿರಬೇಕೆಂದು ಎಣಿಸಲ್ಪಟ್ಟಿದೆ. ರಷ್ಯನರ ಕಡೆಯ ಸೇನಾಭಾಗಗಳು ಉತ್ತರದಲ್ಲಿ ತಾರ್ನೆ ಕಡೆಗೂ ದಕ್ಷಿಣದಲ್ಲಿ ಕ್ರಾಕೋವಿನ ಕಡೆಗೂ ಹೋಗಿ ಲೋಡ್ಜಿನ ಹತ್ತಿರಕ್ಕೆ ರಷ್ಯನರ ಹೊಸಸೇನೆಗಳು ತಕ್ಕಷ್ಟು ಬಂದು ಬೇಗನೆ ಸೇರದೆ ಹೋದುದರಿಂದ ಈ ಸ್ಥಳದಲ್ಲಿ ಮಾತ್ರ ಜರ್ಮನರಿಗೆ ಸ್ವಲ್ಪ ಅನುಕೂಲವಾಯಿತು. ಆಸ್ಟ್ರಿಯಾದಲ್ಲಾದರೋ ರಷ್ಯನರು ಗಲೀಷಿಯಾ ಜಿಲ್ಲೆಯಲ್ಲಿ ಬಹುಭಾಗವನ್ನು ವಶಪಡಿಸಿಕೊಂಡು ಕಾರ್ಪೇಥಿಯನ್ ಕಣಿವೆಗಳನ್ನು ನುಗ್ಗಿ ಕ್ರಾಕೋ ಪಟ್ಟಣಕ್ಕೆ ಮುತ್ತಿಗೆಹಾಕಿ ಇಷ್ಟರಲ್ಲೇ ಅದನ್ನು ವಶಪಡಿಸಿಕೊಳ್ಳುವುದರಲ್ಲಿದ್ದಾರೆ. ಮತ್ತು ಅವರು ಸ್ವಲ್ಪಕಾಲದಲ್ಲೇ ಕಾರ್ಪೇತಿಯನ್ ಕಣಿವೆಯನ್ನೂ ದಾಟಿ ಹಂಗೇರಿಯಾದೊಳಕ್ಕೆ ನುಗ್ಗಬಹುದು.

ಪೂರ್ವ ಸಮುದ್ರದಲ್ಲಂತೂ ಜರ್ಮನರಿಗಾಗಿರುವ ಪರಾಭವವು ವಿಶೇಷವಾಗಿರುವುದು. ಅವರು ಏಷ್ಯಾಖಂಡದೊಳಗೆ ಸಂಪಾದಿಸಿಕೊಂಡಿದ್ದ ಒಂದೇಒಂದಾದ ಕಯಾಚೋ ಪ್ರಾಂತವನ್ನು ಜಪಾನರು ಸ್ವಾಹಾ ಮಾಡಿಬಿಟ್ಟರು. ಅಲ್ಲಿ ಜರ್ಮನರ ಹೆಸರು ನಿರ್ಮೂಲವಾಯಿತು. ಇದು ಜರ್ಮನರಿಗೆ ರಾಜಧಾನಿಯನ್ನು ಕಳೆದುಕೊಂಡುದಕ್ಕಿಂತಲೂ ಹೆಚ್ಚಿನ ಅವಮಾನವಾಗಿ ಕಂಡಿರುವುದು.

ಸಮುದ್ರಯುದ್ಧದಲ್ಲಂತೂ ಜರ್ಮನಿಯು ಧೈರ್ಯದಿಂದ ಇನ್ನೂ ನುಗ್ಗಿಯೇ ಇಲ್ಲ. ಅವರ ನೌಕಾದಳವು ಕೀಲ್‌ಕಾಲ್ವೆಯಲ್ಲಿ ಅಡಗಿ ಕುಳಿತಿದೆ. ಅದನ್ನು ಹೊರಕ್ಕೆ ಹೊರಡಿಸಿ ಬಲಿಯಿಕ್ಕಬೇಕೆಂದು ಆಂಗ್ಲನೌಕಾದಳವು ಹವಣಿಸುತ್ತಿದೆ. ಅಲ್ಲಿಇಲ್ಲಿ ಅಲ್ಪಸ್ವಲ್ಪ ಕಾಳಗಗಳನ್ನು ಅವರಕಡೆಯ ನಾಲ್ಕಾರು ಹಡಗುಗಳು ಮಾಡಿವೆ. ದಕ್ಷಿಣ ಅಮೇರಿಕಾದ ಚಿಲ್ಲಿಯ ಹತ್ತಿರ ನಡೆದ ಯುದ್ಧದಲ್ಲಿ ಆಂಗ್ಲನೌಕೆಗಳೆರಡು ಹಾಳಾದುದರ ಹೊರತು ಮತ್ತೇನೂ ಇಲ್ಲ. ಎಮ್ಡೆನ್ ಹಡಗಿಗಾದ ಪರ್ಯವಸಾನವು ಗೊತ್ತೇಇದೆ. ಅದರಂತೆ ತಡುಗುಣಿಯಾಗಿದ್ದ ಕೋನಿಗ್ಸ್‌ಬರ್ಗ್ ಎಂಬ ಮತ್ತೊಂದು ಜರ್ಮನ್ ಕ್ರೂಯಿಜರು ಪೂರ್ವ ಆಫ್ರಿಕಾದ ಒಂದು ನದಿಯಲ್ಲಿ ಹೋಗಿ ಸಿಕ್ಕಿಕೊಂಡು ಅಲ್ಲಾಡದಂತೆ ಕುಳಿತುಬಿಟ್ಟಿದೆ. ಜರ್ಮನರು ಬೆಲ್ಜಿಯಮ್ಮಿನ ಪಶ್ಚಿಮದಲ್ಲಿ ಜೆಬ್ರೂಜಿನ ಹತ್ತಿರ ತಮ್ಮ ಸಬ್‌ಮೆರೀನು ಮೊದಲಾದುವುಗಳನ್ನಿಳುಹಿಸಿ, ಅವುಗಳಿಂದ ಆಂಗ್ಲನೌಕಾದಳಕ್ಕೆ ಉಪಹತಿಯನ್ನು ಮಾಡಬೇಕೆಂದು ಪ್ರಯತ್ನಿಸಿದರು. ಮಿತ್ರಮಂಡಲಿಯ ನೌಕಾದಳವು ಅದಕ್ಕೆ ತಳವೂರುವುದಕ್ಕೇ ಅವಕಾಶ ಕೊಡದಂತೆ ಮಾಡಿಬಿಟ್ಟಿರುವುದು. ಇನ್ನು ಕಲೆಯನ್ನು ಸೇರಿ ದಕ್ಷಿಣದ ಕಡೆಗೂ ಇಂಗ್ಲೆಂಡಿನಮೇಲೂ ನುಗ್ಗಿಹೋಗಬೇಕೆಂಬ ಯೋಚನೆಯಂತೂ ಜರ್ಮನರಿಗೆ ಸ್ವಪ್ನದ ಕನವರಿಕೆಯಂತಾಗಿಹೋಗಿರುವುದು. ಈ ಸಂಚಿಕೆಯ ಬೇರೊಂದು ಕಡೆಯಲ್ಲಿ ಮುದ್ರಿಸಿರುವ ಆಂಗ್ಲನೌಕಾದಳದ ಸ್ಥಿತಿಗತಿಯನ್ನು ಪರಿಶೀಲಿಸಿದರೆ ಜರ್ಮನರ ನೌಕಾದಳದ ಆಟವು ನಮ್ಮವರ ನೌಕಾದಳದಮೇಲೆ ಏನೂ ಸಾಗುವ ಹಾಗಿಲ್ಲವೆಂಬುದೂ ಜಲಯುದ್ಧದಲ್ಲಿ ಶತ್ರುಗಳಿಗೆ ಸಂಪೂರ್ಣಾಪಜಯವಾಗುವುದೇ ಸಿದ್ಧವೆಂದೂ ಗೊತ್ತಾಗುತ್ತದೆ.

ಬಹುದಿನದಿಂದಲೂ ಮಾಡಿ ಮುಗಿಸಬೇಕೆಂದು ಜರ್ಮನ್ ಕೇಸರರು ಅಣಿಮಾಡಿಕೊಂಡಿದ್ದ ಈಗಿನ ಯುದ್ಧದಿಂದ ಹತ್ತಾರು ಲಕ್ಷ ಸೇನೆಯೂ ಅರ್ಬುದದಗಟ್ಟಲೆಯ ರೂಪಾಯಿಗಳೂ ನಷ್ಟವಾದುವು. ಆದರೂ ಅವರ ಸಂಕಲ್ಪದ ಮೇರೆ ಅವರಿಗೆ ಯಾವುದೊಂದು ಸಿದ್ಧಿಯೂ ಆಗಲಿಲ್ಲ. ಮತ್ತೇನೆಂದರೆ:-ತಮ್ಮ ಸೇನಾಬಲ ಮೊದಲಾದ ವಿಜೃಂಭಣೆಗಳಿಂದ ಜಗತ್ತಿನ ಮಧ್ಯದಲ್ಲಿ ಉಳುಹಿಸಿಕೊಂಡು ಬಂದಿದ್ದ ದರ್ಪಪ್ರತಿಷ್ಠಾಗೌರವಚ್ಯುತಿಗಳಾದುದೊಂದು ಮಾತ್ರ ಫಲವಾಗಿ ಕಾಣುವಂತಾಯಿತಲ್ಲದೆ ತಮ್ಮ ದೇಶದ ಅಪ್ರತಿಹತವಾಗಿದ್ದ ವ್ಯಾಪಾರವೂ, ಉದ್ಯೋಗಗಳೂ ಕೆಟ್ಟಾಗಿ, ದೇಶಕ್ಕೆ ಮಹಾವಿಪತ್ತು ಈ ಮೂಲಕ ತಟ್ಟುವಂತಾಯಿತು.

ಇದನ್ನು ಕಂಡು ಕೇಜರರಿಗೆ ತಮ್ಮ ಮದೋನ್ಮತ್ತತೆಯ ಅವಿವೇಕಾಚರಣೆಯು ಈಗ ಗೊತ್ತಾಗಿರಬಹುದು. ಸದ್ಯಕ್ಕೆ ಮಾನದಿಂದ ಹೇಗಾದರೂ ಒಂದು ಸಂಧಿಯಾದರೆ ಸಾಕೆನಿಸಿಹೋಗಿರಬೇಕು. ಇಂಗ್ಲೆಂಡಿನವರನ್ನು ಸಂಧಿಗೆ ಕರೆಯುವುದಕ್ಕೆ ಮೋರೆಯಿಲ್ಲದೆ ಉಳಿದವರಲ್ಲಿ ಆ ಪ್ರಸ್ತಾಪವನ್ನೆತ್ತಿಸಿ ಹತಾಶರಾಗಿಹೋದರು. ಇದರಮೇಲೆ ಹೇಗಾದರೂ ಮಾಡಿ ಯುದ್ಧವನ್ನು ಕೊನೆಮುಟ್ಟಿಸಿ ಗೆಲವು ಅಥವಾ ಸೋಲುಗಳಲ್ಲಿ ಯಾವುದಾದರೊಂದನ್ನು ಪಡೆಯದೆ ಬಿಡುವುದಿಲ್ಲವೆಂಬ ದೃಢಸಂಕಲ್ಪಕ್ಕೆ ಅವರು ಬೀಳಬೇಕಾಯಿತು. ತಮ್ಮ ಪಕ್ಷದಲ್ಲಿ ಇದುವರೆಗೆ ಕಂಡುಬಂದಿರುವ ದೌರ್ಬಲ್ಯದಿಂದ ಇನ್ನುಮುಂದೆ ಹೇಗಾದರೂ ಅದಕ್ಕೆ ತೂಕವನ್ನು ಹೆಚ್ಚಿಸಬೇಕೆಂದು ಸಾಹಸಮಾಡುತ್ತಿರುವರು. ತಟಸ್ಥವಾಗಿದ್ದ ರಾಷ್ಟ್ರಗಳಿಗೆಲ್ಲಾ ನಾನಾ ಆಶೆಗಳನ್ನು ತುಂಬಿಸಿಯೂ, ಕಪಟೋಪಾಯವನ್ನು ಆಚರಿಸಿಯೂ, ಅವುಗಳನ್ನೆಲ್ಲಾ ಯುದ್ಧಾಂಗಣಕ್ಕೆ ಸೆಳೆದು ಬಲಿಹಾಕಿಸಲು ಪ್ರಯತ್ನಿಸಿರುವರು. ಇಂಥ ಇವರ ಮಾಯೋಪಾಯಗಳಿಗೆ ಬಲಿಬಿದ್ದ ರಾಷ್ಟ್ರಗಳಲ್ಲಿ ತುರ್ಕಿಯೊಂದಾಯಿತು. ಅದು ಈಗಿನ ಯುದ್ಧಾಂಗಣಕ್ಕೆ ಇಳಿದಬಳಿಕ ಅದು ಸೋತರೂ ತಮಗೆ ಲಾಭವೇ; ಅದು ಗೆದ್ದರೂ ತಮಗೆ ಲಾಭವೇ ಆಗುವುದೆಂದು ಕೇಜರರು ಅಂತಃ ಯೋಚಿಸಿಕೊಂಡು, ಅದನ್ನು ಚತುರುಪಾಯಗಳಿಂದಲೂ ಮರುಳುಗೊಳಿಸಿ ಯುದ್ಧರಂಗಕ್ಕೆ ಸೆಳೆತಂದು ನಿಲ್ಲಿಸಿದರು. ತುರ್ಕಿಯು ಇಂಗ್ಲೆಂಡಿನೊಡನೆ ವಿರೋಧವನ್ನು ಕಟ್ಟಿಕೊಂಡು ಯುದ್ಧಕ್ಕೆ ಅಣಿಯಾದಕೂಡಲೇ, ಸುಯೇಜ್ ಕಾಲ್ವೆಯನ್ನು ಕಟ್ಟಿಹಾಕಿಬಿಟ್ಟು ಈಜಿಪ್ಟಿನಮೇಲೆ ದಂಡಯಾತ್ರೆಯನ್ನು ಮಾಡಿ, ಕಪ್ಪುಸಮುದ್ರದಮೇಲಿರುವ ರಷ್ಯನ್ ನೌಕಾದಳವನ್ನು ನಿರ್ಮೂಲಿಮಾಡಿ, ಕಾಕಸಸ್ ಪ್ರಾಂತದಲ್ಲಿ ನುಗ್ಗಿ ಆ ಸುತ್ತಿನಲ್ಲಿರುವ ರಷ್ಯನರನ್ನು ಹೊಡೆದೋಡಿಸಿ, ಸಾಧ್ಯವಾದರೆ ಕೆಂಪುಸಮುದ್ರವನ್ನೂ ಕಟ್ಟಿ, ಇವುಗಳಿಂದೆಲ್ಲಾ ಇಂಗ್ಲೆಂಡು ಇಂಡ್ಯಾಗಳ ಸಂಬಂಧವನ್ನು ದೂರಪಡಿಸಿಬಿಡಬಹುದೆಂದೂ, ಪ್ರಪಂಚದಮೇಲಿರುವ ಮಹಮದೀಯರ ಚಿತ್ತವನ್ನೆಲ್ಲಾ ತುರ್ಕಿಯಕಡೆಗೆ ಹೊರಳಿಸಿಬಿಟ್ಟು, ಇಂಗ್ಲೆಂಡಿನಕಡೆಗೆ ಆಜನರಿಗಿರುವ ನಂಬುಗೆಯನ್ನೂ ವಿಶ್ವಾಸವನ್ನೂ ತಪ್ಪಿಸಿಬಿಡಬೇಕೆಂದೂ, ಯೋಚಿಸಿದರು. ಈ ಮನಸ್ಸಿನ ಮಂಡಿಗೆಯೂ ಸಹ ಇದುವರೆಗಿನ ಸ್ಥಿತಿಯಿಂದಲೇ ಮಣ್ಣುಪಾಲಾಗಿರುವುದೆಂದು ಹೇಳಬಹುದು. ಮತ್ತು ಕೆಲ ಸಂದರ್ಭದಿಂದ ಅವರ ಮಂತ್ರತಂತ್ರಗಳು ಅವರಿಗೇ ತಿರುಗಿದುವೆಂದೂ ಹೇಳಬಹುದು. ತುರ್ಕಿಯು ಯುದ್ಧಕ್ಕೆನಿಂತ ಮರುದಿನವೇ ಮಿತ್ರಮಂಡಲಿಯವರು ತುರ್ಕಿಯನ್ನು ಉಸುರಾಡದಂತೆ ಮಾಡಲು ಏನೇನನ್ನು ಮಾಡಬೇಕೋ ಅದಕ್ಕೆ ತೊಡಗಿದರು. ಡಾರ್ಡನೆಲ್ಸ್ ಜಲಸಂಧಿಯನ್ನು ಮುಚ್ಚಿಹಾಕಿದರು. ಇದರಿಂದ ಜರ್ಮನರ ಕೈಕಾಲುಗಳು ಆ ಪ್ರಾಂತದಲ್ಲೂ, ಸುಯೇಜ್ ಕಾಲ್ವೆಯ ಕಡೆಯಲ್ಲೂ, ಈಜಿಪ್ಟ್ ಪ್ರಾಂತದಲ್ಲೂ, ಕಪ್ಪುಸಮುದ್ರದಲ್ಲೂ ಸಹ ಆಡಿಸಲಾಗದಂತಾಯಿತು. ಕಾಕಸಸ್ ಪ್ರಾಂತದಲ್ಲಿ ನುಗ್ಗುವ ಯತ್ನವೂ ಸಹ ಸುಲಭವಲ್ಲದೆ ಹೋಯಿತು. ಇದರಮೇಲೆ ರಷ್ಯನರೇ ಆರ್ಮೇನಿಯಾಕ್ಕೆ ನುಗ್ಗಿ ಅಲ್ಲಿದ್ದ ತುರ್ಕಿ ಜರ್ಮನ್ ಸೈನ್ಯಗಳನ್ನು ಬಡಿದು ಎರಿಜರಮ್ಮಿನವರೆಗೂ ದೂಡಿಬಿಟ್ಟರು. ಕೆಂಪುಸಮುದ್ರಕ್ಕೆ ಜರ್ಮನರು ತಲೆಹಾಕಬೇಕೆನ್ನುವುದರೊಳಗೇ ಬೇಬಿಲ್‌ಮಾಂಡಬ್ ಸಂಧಿಗೆ ದ್ವಾರದಂತಿದ್ದ ಷೇಕ್ ಸಯ್ಯದ್ದನ್ನು ನಮ್ಮವರು ಆಕ್ರಮಿಸಿಕೊಂಡು ಆಕಡೆಗೆ ಜರ್ಮನರ ಮುಖವನ್ನೇ ತೋರಿಸಲಾಗದಂತೆ ಮಾಡಿದ್ದಾರೆ. ಮತ್ತೂ ಆಂಗ್ಲಸೈನ್ಯದವರು ಪಾರಸಿ ಸಮುದ್ರಶಾಖೆಯಲ್ಲಿ ನುಗ್ಗಿ ಬಸಾರಾವರೆಗಿನ ಪ್ರದೇಶವನ್ನೂ ಷತಲ್ ಅರಬ್ಬನ್ನೂ ವಶಪಡಿಸಿಕೊಂಡರು. ಆ ಪ್ರಾಂತದಲ್ಲೆಲ್ಲಾ ತುರ್ಕಿಯ ಮತ್ತು ಜರ್ಮನಿಯ ಮಾತುಚಾಲಿಕೆಯಾವುದೂ ನಡೆಯದಂತೆಯೇ ಮಾಡಿಬಿಟ್ಟಿರುವರು. ಹೀಗೆ ತುರ್ಕಿಯು ಇಷ್ಟರೊಳಗೇ ತನ್ನ ದೇಶದ ಹಲಕೆಲವು ಭಾಗಗಳನ್ನು ಹಾಳ್ಮಾಡಿಕೊಂಡಿದೆ. ಆ ನಷ್ಟಪರಂಪರೆಯು ಇನ್ನೂ ಸಾಗುತ್ತಲೇ ಇರುವುದು. ಸ್ವತಃ ಅಲ್ಲಿನ ಪ್ರಜೆಗಳೊಳಗೇ ಇತ್ತಂಡವು ಪ್ರಬಲಿಸುತ್ತಿರುವುದು. ಮತವಿಷಯದಲ್ಲಿ ತುರ್ಕಿಯು ಸ್ವಲ್ಪಮಟ್ಟಿಗೆ ಸಂಪಾದಿಸಿಕೊಂಡಿದ್ದ ಗೌರವವನ್ನೂ ಸಹ ಅದು ಈಗ ಕಳೆದುಕೊಂಡುಬಿಟ್ಟಿತು. ಪ್ರಪಂಚದಮೇಲಿರುವ ಮುಕ್ಕಾಲುಮೂರುವೀಸಪಾಲು ಮಹಮ್ಮದೀಯರೆಲ್ಲರೂ ಈಗಿನ ತುರ್ಕಿ ಪ್ರಯತ್ನವನ್ನು ಕಂಡು ನಿಂದಿಸುತ್ತಿದ್ದಾರೆ. ಇದುವರೆಗೆ ಅದರ ವಿಷಯದಲ್ಲಿದ್ದ ಸಹಾನುಭೂತಿಯನ್ನೂ ತ್ಯಜಿಸಿಬಿಟ್ಟಿದ್ದಾರೆ. ಅದರ ಭವಿತವ್ಯತೆಯನ್ನು ಕುರಿತು ಸಂಕಟಪಡುತ್ತಿದ್ದಾರೆ. ಆಂಗ್ಲ ಪ್ರಭುತ್ವದವರ ವಿಷಯದಲ್ಲಿ ತಮಗಿರುವ ವಿಶ್ವಾಸವನ್ನು ಮತ್ತಷ್ಟು ದೃಢಪಡಿಸುತ್ತಿದ್ದಾರೆ. ಇವೆಲ್ಲಕಾರಣಗಳಿಂದ ಜರ್ಮನಿಯು ತುರ್ಕಿಯಸಂಬಂಧದಿಂದ ಮಾಡಬೇಕೆಂದು ಊಹಿಸಿಕೊಂಡಿದ್ದ ಮಾಟಗಳೆಲ್ಲಾ ಮಾಯವಾಗಿ ಹೋಗಿ ಈಮಧ್ಯರಣರಂಗದ ಅವಸ್ಥೆಯೂ ಹೀಗಾಗಿದೆ. ಇನ್ನು ಅದು ಇಟಲಿಯೊಂದನ್ನು ತನ್ನ ಪಕ್ಷಕ್ಕೆ ಸೆಳೆಯಬೇಕೆಂದು ಬಹಳ ತಂತ್ರವನ್ನು ನಡೆಯಿಸುತ್ತಿದೆ. ಅದೂ ಹೇಗೆ ಫಲಿಸುವುದೋ ನೋಡಬೇಕು. ಯುದ್ಧರಂಗಸಂಬಂಧದಿಂದ ಜರ್ಮನಿಗಾಗಿರುವ ಫಲಿತಾಂಶಗಳು ಈರೀತಿಯಲ್ಲಿರುವುವು. ಉಳಿದ ಅದರ ಸ್ಥಿತಿಗತಿಗಳು ಈಗ ಯಾವ ಗತಿಗಿಳಿದಿರುವುವು ಎಂಬುದನ್ನು ಮುಂದೆ ವಿವರಿಸುವೆವು.

ವಿಕ್ಟೋರಿಯಾ ಕ್ರಾಸ್ ಬಿರುದನ್ನು ಪಡೆದ ಮತ್ತಿಬ್ಬರು ಭಾರತೀಯರು.

ಮೊಟ್ಟಮೊದಲು ಈ ಬಿರುದನ್ನು ಹವಾಲ್‌ದಾರ್ ಗಂಗಾಸಿಂಗರು ಪಡೆದುಕೊಂಡರಷ್ಟೆ. ಈಚೆಗೆ ದರ್ವಾನ್‌ಸಿಂಗ್‌ನಾಗಿ ಎಂಬಾತನಿಗೂ ಖಾದಾದ್‌ಸಿಂಗ್ ಎಂಬಾತನಿಗೂ ಅದೇ ಬಿರುದುಗಳು ಸಾರ್ವಭೌಮರಿಂದ ದಯಪಾಲಿಸಲ್ಪಟ್ಟ ಸುದ್ದಿಯು ಕಳೆದ ವಾರದ ತಂತ್ರೀವಾರ್ತೆಗಳಿಂದ ಗೊತ್ತಾಗುತ್ತದೆ. ಇವರಿಬ್ಬರಲ್ಲಿ ಮೊದಲನೆಯ ದರ್ವಾನ್‌ಸಿಂಗ್ ಎಂಬಾತನು ಕಳೆದ ನವೆಂಬರ್ ತಾ|| ೨೩-೨೪ ನ ದಿನಗಳ ರಾತ್ರಿ ಪೆಸ್ತೂಬರ್ತ ಎಂಬುದರ ಸಮೀಪದಲ್ಲಿ ನಡೆದ ಯುದ್ಧಗಳಲ್ಲಿ ಸೇರಿದ್ದವನು. ಜರ್ಮನರು ನಮ್ಮವರ ಕಂದಕಗಳಲ್ಲಿ ಕೆಲವನ್ನು ಹಿಡಿದುಕೊಂಡಾಗ ಅವರನ್ನು ಹೊಡೆದೋಡಿಸಿ ಮರಳಿ ಅವನ್ನು ಹಿಡಿದುಕೊಳ್ಳುವುದಕ್ಕಾಗಿ ೩೯ನೆ ಗರ್ವಾಲ್ ಎಂಬ ಪಟಾಲಮು ನಿಯೋಜಿಸಲ್ಪಟ್ಟಿದ್ದಿತು. ಆ ಪಟಾಲಮ್ಮಿನಲ್ಲಿ ಈತನು ೧೯೦೯ ನೆಯ ನಂಬರು ಸಿಪಾಯಿ ನಾಯಕನಾಗಿದ್ದನು. ಮೊದಲಿನಿಂದ ಕಡೆಯವರೆಗೂ ಶತ್ರುಗಳು ಅವಿಚ್ಛಿನ್ನವಾಗಿ ತುಪಾಕಿ ಗುಂಡುಗಳನ್ನೂ ಸಿಡಿಮದ್ದುಗಳನ್ನೂ ಇದಿರಿಗೆ ಸುರಿಸುತ್ತಿದ್ದರೂ ಆ ಪ್ರಳಯಾಗ್ನಿಗೆ ಹೆದರದೆ ಪ್ರತಿಸಲವೂ ಶತ್ರುಗಳಮೇಲೆ ಬಿದ್ದು ಹೋರಾಡಿ ಅವರಿದ್ದ ಸ್ಥಾನಗಳನ್ನು ಆಕ್ರಮಿಸಿಕೊಳ್ಳುವುದರಲ್ಲಿ ಸಾಹಸಮಾಡಿದ ಸೈನಿಕರಲ್ಲೆಲ್ಲಾ ಇವನು ಮುಖಂಡನಾಗಿದ್ದನು. ಈತನ ದೇಹದಮೇಲೆ ಎಷ್ಟೋ ಗುಂಡಿನೇಟು ಬಿದ್ದಿದ್ದರೂ ಯುದ್ಧವು ಮುಗಿವವರೆಗೂ ಆ ಸಂಗತಿಯನ್ನು ಇತರರಿಗೆ ಹೇಳಿಕೊಳ್ಳದೆ ಹೋರಾಡುತ್ತಲೇ ಇದ್ದನು. ಈತನನ್ನು ಕರೆಯಿಸಿ ನಮ್ಮ ಸಾರ್ವಭೌಮರು ತಾವು ಫ್ರಾನ್ಸಿಗೆ ಹೋಗುವಾಗ್ಗೆ ಕಳೆದ ತಾ|| ೫ ರಲ್ಲಿ ವಿಕ್ಟೋರಿಯಾಕ್ರಾಸ್ ಬಿರುದನ್ನು ದಯೆಪಾಲಿಸಿದರು.

ಖಾದಾದ್‌ಸಿಂಗ್ ಎಂಬಾತನು ೧೨೯ನೇ ಬಲೂಚಿ ಪಟಾಲಮ್ಮಿಗೆ ಸೇರಿದವನು. ಹೀಗೆಯೇ ಶೌರ್ಯಪ್ರದರ್ಶನವನ್ನು ಅವನೂ ಮಾಡಿದವನು. ಈತನು ಏಟುತಿಂದು ಈಗ ವೈದ್ಯಶಾಲೆಯುಪಚಾರದಲ್ಲಿರುವನು. ಅವನಿಗೂ ಅದೇ ಬಿರುದು ಅನುಗ್ರಹಿಸಲ್ಪಟ್ಟಿರುವುದು.

ಒಳದೇಶದ ವೃತ್ತಾಂತಗಳು

ಕ್ರಿಸ್ತಮಸ್ ಹಬ್ಬಕ್ಕಾಗಿ ಸಂಸ್ಥಾನದಲ್ಲಿ ಕೋರ್ಟುಗಳೂ, ಕಚೇರಿಗಳೂ, ಸ್ಕೂಲುಗಳೂ ಈ ತಾ|| ೨೪ರಿಂದ ಜನವರಿ ತಾ|| ೧ ರ ವರೆಗೆ ಮುಚ್ಚಲ್ಪಟ್ಟು ತಾ|| ೨ ರಲ್ಲಿ ತೆರೆಯಲ್ಪಡುವುವು.

ರೆವಿನ್ಯೂ ಕಮಿಷನರಾದ ಮ|| ಕೆ. ಎಸ್. ದೊರಸಾಮಯ್ಯರ್‌ರವರಿಗೆ ಕ್ರಿಸ್ತಮಸ್ ಹಬ್ಬದ ರಜೆಯೊಡನೆ ೧೫ ದಿನಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವುದು ಅವರು ಬರುವವರೆಗೆ ಅವರ ಮೊದಲನೆಯ ಅಸಿಸ್ಟೆಂಟರು ರೆ||ಕಮಿಷನರುದ್ಯೋಗವನ್ನು ನೋಡುವರು

ರಾಜಧಾನಿಯ ಪಬ್ಲಿಕ್ ಪ್ರಾಸಿಕ್ಯೂಟರಾಗಿದ್ದ ಅಡ್ವೋಕೇಟ್ ಮ|| ಬಿ. ಕೃಷ್ಣಮಾಚಾರ್‌ರವರು ಸ್ವಲ್ಪ ಅಸ್ವಸ್ಥರಾಗಿದ್ದು ಕಳೆದವಾರ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿದ್ದು ಈ ತಾ|| ೧೦ ರಲ್ಲಿ ವಿಧಿವಶರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಬೆಂಗಳೂರ ಲಾಲಬಾಗಿನಲ್ಲಿ ಪ್ರತಿವರ್ಷವೂ ನಡೆಯುವ ಫಲಪುಷ್ಪ ಪ್ರದರ್ಶನವು ಈಸಲ ಬರುವ ಫೆಬ್ರವರಿ ತಾ|| ೬ರಲ್ಲಿ ಜರಗುವುದು. ಆ ದಿವಸ ಸೈಕಲ್ಲುಗಳನ್ನು ಪುಷ್ಪಗಳಿಂದ ದಿವ್ಯವಾಗಲಂಕರಿಸಿ ಅದರಮೇಲೆ ಕುಳಿತು ತಿರುಗಿಸುವುದರಲ್ಲಿ ಸ್ಪರ್ಧಿಸುವವರಿಗೆ ೧೫-೧೦ ಮತ್ತೂ ೫ ರೂ. ಗಳು ಬಹುಮಾನಿಸಲ್ಪಡುವುವು.

ದೊಡ್ಡಬಳ್ಳಾಪುರದ ತಾಲ್ಲೂಕಿಗೆ ಸೇರಿದ ಘಾಟಿಸುಬ್ರಹ್ಮಣ್ಯದಲ್ಲಿ ಶ್ರೀ ಸುಬ್ರಹ್ಮಣ್ಯೇಶ್ವರಸ್ವಾಮಿಯ ಜಾತ್ರೆಯು ಈ ತಾ|| ೨೨ ರಿಂದ ೩೧ ರ ವರೆಗೆ ನಡೆಯುವುದು. ತಾ|| ೨೬ ರಲ್ಲಿ ದೇವಸ್ಥಾನದ ಬಳಿ ದನಗಳ ಪ್ರದರ್ಶನವು ನಡೆಸಲ್ಪಟ್ಟು ಉತ್ತಮವಾದುವುಗಳಲ್ಲಿ ೬ ಕ್ಕೆ ಬಂಗಾರದ ಪದಕಗಳು ಕೊಡಲ್ಪಡುವುವು.

ಹಿಂದೂಪುರದಲ್ಲಿ ಒಬ್ಬ ಐಶ್ವರ್ಯವಂತನ ಮನೆಗೆ ಕೆಲ ದುಷ್ಟರು ನುಗ್ಗಿ ಅವನ ಕೈಕಾಲುಗಳನ್ನು ಹಗ್ಗದಿಂದ ಬಿಗಿದು ಕತ್ತನ್ನು ಹಿಸುಕಿ ಕೊಂದು ಅವನ ಹಣದ ಪೆಟ್ಟಿಗೆಯ ಬಾಗಿಲನ್ನು ತೆಗೆದು ೫೦೦೦ ರೂ.ವರೆಗೆ ಆಭರಣವನ್ನೂ ನಗದು ಹಣವನ್ನೂ ಅಪಹರಿಸಿಕೊಂಡು ಹೋಗಿರುವರು. ಪೋಲೀಸರು ಕೊಲೆಪಾತಕರನ್ನು ತಡಕುತ್ತಿರುವರು.

ನಮ್ಮ ಸಂಸ್ಥಾನದಲ್ಲಿ ಹಿಂದೆ ಕೌನ್ಸಿಲರಾಗಿದ್ದ ರಾ|| ಬ|| ಸಿ. ಮಾದಯ್ಯನವರ ಕುಮಾರರಾದ ಡಾಕ್ಟರ್ ಗಣಪತಿಯವರು ಮದ್ರಾಸ್ ಮ್ಯುನಿಸಿಪಾಲಿಟಿಯಲ್ಲಿ ಅಸಿಸ್ಟೆಂಟ್ ಹೆಲ್ತಾಫೀಸರಾಗಿರುವರು. ಇವರು ಐ.ಎಂ.ಎಸ್., ಗೆ ಸೇರಿಸಲ್ಪಟ್ಟು ಯುದ್ಧರಂಗಕ್ಕೆ ಹೋಗಲು ನಿನ್ನೆಯದಿನ ಇಲ್ಲಿಂದ ಪೂನಾಕ್ಕೆ ಪ್ರಯಾಣ ಮಾಡಿದರು.

ರಾಜಧಾನಿಯಲ್ಲಿ ಆಗಾಗ್ಯೆ ಮೋಡವಾಡುತ್ತಿದೆಯಲ್ಲದೆ ಮಿಂಚುತ್ತಲೂ ತುಂತುರುಮಳೆ ಬೀಳುತ್ತಲೂ ಇರುವುದು. ಮಾಗಿಕಾಲವಾಗಿದ್ದರೂ ಬಿಸಲಿನ ಜಳವಂತೂ ಸಹಿಸಲಶಕ್ಯವಾಗಿ ಚೈತ್ರವೈಶಾಖಮಾಸದಂತಿದೆ. ಪ್ಲೇಗುರೋಗವು ಇನ್ನೂ ಶಾಂತವಾಗದೆ ಅಲ್ಲಲ್ಲಿ ಒಂದೊಂದು ಮರಣವಾಗುತ್ತಿದೆ. ಡಿಂಗ್ಯೂಜ್ವರರೋಗವು ಇನ್ನೂ ಶಮನವಾಗಿಲ್ಲ.

ಶ್ರೀಮನ್ ಮಹಾರಾಜರವರು ಈ ತಾ|| ೧೮ ರಲ್ಲಿ ಚಿತ್ರಕಲ್‌ದುರ್ಗದ ಡಿಸ್ಟ್ರಿಕ್ಟಿನಲ್ಲಿ ಸಂಚಾರ ಮಾಡಿ ತಾ|| ೧೮ ರಿಂದ ೨೫ ರ ವರೆಗೆ ದಾವಣಗೆರೆ, ಹರಿಹರ ಮತ್ತೂ ಹೊಳಕಾಲ್ಮುರು ಈ ಸ್ಥಳಗಳಿಗೆ ದಯಮಾಡಿಸಿ ಬರುವರಾದುದರಿಂದ ಅಲ್ಲಿರತಕ್ಕ ಟ್ರಾವಲರ್ಸ್ ಬಂಗಲೆಗಳಲ್ಲಿ ಇತರರಾರೂ ಬಿಡದಿಯ ಕೂಡದೆಂದು ಅಪ್ಪಣೆಯಾಗಿದೆ.

ಬೆಂಗಳೂರ ಸಿಟಿ ಮ್ಯುನಿಸಿಪಾಲಿಟಿಯವರು ಕಾಯಿಪಲ್ಯದ ಮಾರ್ಕೆಟ್ಟಿನಲ್ಲಿ ಬರುವ ಜನವರಿ ತಾ|| ೧೩ ರ ದಿವಸ ತರಕಾರಿ, ಹಣ್ಣುಹಂಪಲು, ಮಾಂಸ, ಮೀನು, ಮೊಟ್ಟೆ, ಕೋಳಿ, ಬಾತುಗಳ ಪ್ರದರ್ಶನವು ನಡೆಯುವಂತೆ ಗೊತ್ತುಮಾಡಿರುವರು. ಇದರಲ್ಲಿ ಉತ್ತಮವಾದ ಪದಾರ್ಥಗಳ ಪ್ರದರ್ಶಕರಿಗೆ ೩೦೩ ರೂ.ನ ಬಹುಮಾನವು ಕೊಡಲ್ಪಡುವುವು.

ಮಲೆನಾಡಿನ ಅಭಿವೃದ್ಧಿಗಾಗಿ ಏರ್ಪಟ್ಟಿರುವ ಸಂಘದವರು ಬರುವ ಜನವರಿಯ ೨ನೆ ವಾರದಲ್ಲಿ ಕಡೂರ ಡೆ|| ಕಮಿಷನರು ಮ|| ಕೆ. ಎಸ್. ಕೃಷ್ಣಯ್ಯರ್‌ರವರ ಅಧ್ಯಕ್ಷತೆಯಲ್ಲಿ ಸಭೆಸೇರುವರು. ಆಗ್ಗೆ ಹೊಸಕೊಪ್ಪದ ಮ|| ಕೃಷ್ಣರಾಯರು ಮಲೆನಾಡು ಪ್ರಾಂತಗಳಲ್ಲುತ್ಪನ್ನವಾಗುವ ಪದಾರ್ಥಗಳನ್ನು ಪ್ರದರ್ಶಿಸಲು ತಕ್ಕ ಸನ್ನಾಹವನ್ನು ನಡೆಸುತ್ತಿರುವರು.

ಶ್ರೀಚಾಮರಾಜೇಂದ್ರ ನಾಟಕಸಂಘದವರು ನಿನ್ನೆಯದಿನ ರಾತ್ರಿ ಟೌನ್ ಹಾಲಿನಲ್ಲಿ ಗಯಚರಿತ್ರೆಯನ್ನಭಿನಯಿಸಿ ಬಂದುತ್ಪನ್ನವನ್ನು ಇಂಪೀರಿಯಲ್ ರಿಲೀಫ್ ಫಂಡಿಗೆ ಕೊಟ್ಟರು. ಈ ಕಂಪೆನಿಯು ಈವರೆಗೂ ಸರದಾರ್ ಗೋಪಾಲರಾಜ ಅರಸಿನವರ ಮೇಲ್ವಿಚಾರಣೆಯಲ್ಲಿದ್ದಿತು. ಅವರಿಗೆ ಇತರ ಕೆಲಸಗಳು ಹೆಚ್ಚಾಗಿರುವುದರಿಂದ ಪೂರ್ವದಂತೆ ಅರಮನೆಯ ದರ್ಬಾರ್ ಭಕ್ಷಿಯವರ ಮೇಲ್ವಿಚಾರಣೆಗೊಳಪಡಿಸಲ್ಪಟ್ಟಿರುವುದಾಗಿ ತಿಳಿಯುತ್ತೇವೆ.

ದಿವಾನರು ಇಷ್ಟರಲ್ಲೇ ಮಾಗಡಿ ಮತ್ತು ನೆಲಮಂಗಲ ತಾಲ್ಲೂಕುಗಳಲ್ಲಿ ೧ ವಾರದ ವರೆಗೆ ಸಂಚರಿಸಿಕೊಂಡು ಬರುವವರಾಗಿರುವರು. ಇವರು ನೆಲಮಂಗಲಕ್ಕೆ ದಯಮಾಡಿಸಿದ ವೇಳೆಯಲ್ಲಿ ಆ ತಾಲ್ಲೂಕಿನ ನಿವಾಸಿಗಳಾದ ಪ್ರಮುಖರು ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರರಾದ ಮ|| ಕರಣಿಕ ಕೃಷ್ಣಮೂರ್ತಿಯವರನ್ನು ಮುಂದಿಟ್ಟುಕೊಂಡು ದಿವಾನರನ್ನು ಕಂಡು ಗೆಬ್ಬೂರು ಬಳಿ ಕುಮುದವತಿ ನದಿಗೆ ಆಣೆಯನ್ನು ಕಟ್ಟಿಸಿಕೊಟ್ಟಲ್ಲಿ ಅನೇಕ ಎಕರೆ ಭೂಮಿಯು ನೀರಾವರಿ ವ್ಯವಸಾಯಕ್ಕನುಕೂಲಿಸುವುದೆಂದು ಪ್ರಾರ್ಥಿಸಿಕೊಳ್ಳುವವರಾಗಿರುವರು.

ವಿಶೇಷವಾರ್ತೆ.

ಫ್ರಾನ್ಸ್ ದೇಶದ ಪಾರ್ಲಿಮೆಂಟು ಪ್ಯಾರಿಸ್ ಪಟ್ಟಣದಲ್ಲಿ ಕಳೆದ ಶುಕ್ರವಾರದ ದಿನ ಆರಂಭಿಸಲ್ಪಟ್ಟಿತು.

ಇದುವರೆಗೆ ಫ್ರೆಂಚರಕಡೆ ೪ ಲಕ್ಷದಮೇಲೆ ೫ ಲಕ್ಷದೊಳಗೆ ಸೇನಾನಾಶವಾಗಿರಬೇಕೆಂದು ಊಹಿಸಲ್ಪಟ್ಟಿದೆ.

ಸರ್ವಿಯಾದೇಶದ ಹಳೆಯ ಮಂತ್ರಿವರ್ಗದವರು ರಾಜೀನಾಮೆ ಕೊಡಲಾಗಿ ಈಗ ಹೊಸ ಮಂತ್ರಿವರ್ಗವು ಏರ್ಪಟ್ಟಿದೆ.

ದಕ್ಷಿಣಾಫ್ರಿಕಾದಲ್ಲಿ ಪ್ರಭುತ್ವದವರಿಗೆ ವಿರುದ್ಧವಾಗಿ ದಂಡುಕಟ್ಟಿದ್ದ ಡಿವೆಟ್ಟು ತನ್ನ ಪರಿವಾರದೊಡನೆ ಶರಣಾಗತನಾದನು.

ಕೇಜರ್‌ರವರಿಗೆ ಜ್ವರವೂ ಗಂಟಲನೋವೂ ಉಂಟಾಗಿದ್ದುದರಿಂದ ಅವರು ಬರ್ಲಿನ್ನಿಗೆ ಪ್ರಯಾಣಮಾಡಿದರಂತೆ. ಈಗ ಸ್ವಲ್ಪ ಗುಣವಾಗಿದೆ.

ಪೋರ್ಚುಗೀಸರಿಗೆ ಸೇರಿದ ಅಂಗೋಲಾದಮೇಲೆ ಜರ್ಮನಿಯ ಸೇನೆಗಳು ನುಗ್ಗಿಹೋದ ತಪ್ಪಿತಕ್ಕಾಗಿ ಜರ್ಮನರು ಆ ಸರ್ಕಾರದ ಕ್ಷಮಾಪಣೆಯನ್ನು ಕೇಳಿಕೊಂಡರಂತೆ.

ರಷ್ಯಾ ದೇಶದಲ್ಲಿ ೧೯೧೫ನೆ ವರ್ಷದೊಳಗೆ ೪೫೦ ಕೋಟಿ ರೂ.ಗಳ ವರಮಾನವೂ ಅದಕ್ಕೆ ೨ ಲಕ್ಷ ರೂ. ಗಳು ಕಡಿಮೆಯಾದಷ್ಟುವೆಚ್ಚವೂ ಆಗುವುದೆಂದು ಎಣಿಸಲ್ಪಟ್ಟಿದೆ.

ರಷ್ಯನರು ತಾವು ಸೆರೆ ಹಿಡಿದಿರುವ ಜರ್ಮನ್ ಆಸ್ಟ್ರಿಯಾ ಸೈನಿಕರನ್ನು (೧೩೦೦೦೦) ಕೀಫ್‌ಕೋಟೆಯ ತುಂಬ ತುಂಬಿರುವರು. ಇವರಲ್ಲಿ ೨೫೦೦ ಮಂದಿ ಸೈನಿಕೋದ್ಯೋಗಿಗಳಾಗಿರುವರು.

ಪಸಿಫಿಕ್ ಸಮುದ್ರದಲ್ಲಿ ಜರ್ಮನರಿಗೆ ಸೇರಿದ್ದ ಕೆರೋಲೈನ್ ಮೊದಲಾದ ದ್ವೀಪಗಳನ್ನು ಜಪಾನರು ಹಿಡಿದುಕೊಂಡರು. ಇವನ್ನು ಆಸ್ಟ್ರೇಲಿಯಾದವರಿಗೆ ಕೊಟ್ಟುಬಿಡಲು ಜಪಾನಿನವರು ಉದ್ದೇಶಿಸಿರುವರಂತೆ.

ಬರೋಡಾ ಮಹಾರಾಜದಂಪತಿಗಳು ಕಳೆದ ತಾ|| ೪ರಲ್ಲಿ ಬೊಂಬಾಯಿಗೆ ಬಂದಿಳಿದರು. ಸಂಸ್ಥಾನದ ಮಂತ್ರಿಯವರೇ ಮೊದಲಾದ ಕೆಲರು ತೀರದಲ್ಲಿ ಕಾದಿದ್ದು ಇದಿರ್ಗೊಂಡರು. ಆದಿನವೇ ಅವರು ರಾಜಧಾನಿಗೆ ತೆರಳಿದರು.

ಯುದ್ಧಾಂಗಣದಲ್ಲಿರುವ ಭಾರತೀಯರಿಗೆ ಚಳಿಯ ಬಾಧೆಯು ಬಹಳವಾಗಿದೆ. ಗೂರ್ಖಾ ಜನರ ಕಾಲುಬೆರಳುಗಳು ಸ್ವಭಾವತಃ ಅಗಲವಾಗಿರುವುದರಿಂದ ಅವಕ್ಕೆ ತಕ್ಕಂಥ ಪಾದರಕ್ಷೆಗಳೂ ಮೇಜೋಡುಗಳೂ ಅವರಿಗೆ ಸಿಕ್ಕದೆ ತೊಂದರೆಯಾಗಿದೆ.

ಜರ್ಮನರ ಕಡೆಯೂ ಆಸ್ಟ್ರಿಯಾದವರ ಕಡೆಯೂ ಇದುವರೆಗೆ ನಷ್ಟವಾಗಿರುವ ಸೈನಿಕರ ಲೆಕ್ಕವನ್ನೆಲ್ಲಾ ಹಾಕಿದರೆ ಕಳೆದ ನಾಲ್ಕುತಿಂಗಳುಗಳಿಂದಲೂ ದಿನ ೧ ಕ್ಕೆ ೨೦ ಸಾವಿರ ಮಂದಿಗಳ ಮೇರೆ ನಷ್ಟವಾಗಿರುವರೆಂದು ಗೊತ್ತಾಗುವುದು.

ಆಂಗ್ಲವೈಮಾನಿಕರು ಜರ್ಮನಿಗೆ ಸೇರಿದ ಎಸ್ಸೆನ್ ಪಟ್ಟಣದಲ್ಲಿರುವ ಮುಖ್ಯ ಫಿರಂಗಿ ಕಾರ್ಯಾಲಯದಮೇಲೆ ಸಿಡಿಮದ್ದುಗಳನ್ನು ಹಾಕಿ ನಷ್ಟಪಡಿಸಿ ಶತ್ರುಗಳ ಗುಂಡಿನೇಟಿಗೆ ಸಿಕ್ಕದೆ ತಪ್ಪಿಸಿಕೊಂಡು ಬಂದರು. ಈ ಸುದ್ದಿಯು ಬರ್ಲಿನ್ನಿನಲ್ಲಿ ಕಳವಳವನ್ನುಂಟುಮಾಡಿದೆ.

ಸೀಡ್ಲ ಹತ್ತಿರ ನಡೆದ ಯುದ್ಧದಲ್ಲಿ ಬಹುಮಂದಿ ಹಿಂದೂ ಸೈನಿಕರ ತಲೆಪಾಗುಗಳು ಹಾಳಾದುವೆಂಬುದನ್ನು ತಿಳಿದು ಅಲಗ್ಸಾಂಡ್ರಿಯಾ ಮಹಾರಾಣಿಯವರು ಅವರುಗಳಿಗಾಗಿ ೪೦೦ ಗಜ ಮಲ್ಲುಬಟ್ಟೆಯನ್ನು ಕಳುಹಿಸಿಕೊಟ್ಟರು. ಅದನ್ನು ಅವರುಗಳು ಉಪಯೋಗಿಸಿಕೊಳ್ಳದೆ ಬಹುಮಾನವಸ್ತುವನ್ನಾಗಿ ಭರತಖಂಡಕ್ಕೆ ತೆಗೆದುಕೊಂಡುಬರಲು ಜೋಪಾನವಾಗಿಟ್ಟುಕೊಂಡಿದ್ದಾರೆ.

ಸಿಂಗ್‌ಟೋವು ಜಪಾನರಿಗೆ ವಶವಾಯಿತಷ್ಟೆ. ಅದರಲ್ಲಿ ಜರ್ಮನರಕಡೆಯ ೨|| ಸಾವಿರ ತುಪಾಕಿಗಳೂ, ೧ ನೂರು ಯಂತ್ರಫಿರಂಗಿಗಳೂ, ೩೦ ಯುದ್ಧದ ದೊಡ್ಡ ಫಿರಂಗಿಗಳೂ ೪೦ ಮೋಟಾರುಗಳೂ ೫ ಸಾವಿರ ಮಂದಿ ಸೈನಿಕರಿಗೆ ೩ ತಿಂಗಳವರೆಗೆ ಸಾಕಾಗುವಷ್ಟು ಆಹಾರ್ಯಸಾಮಗ್ರಿಗಳೂ ಸಿಕ್ಕಿದುವು. ನೌಕಾಶ್ರಯದಲ್ಲಿದ್ದ ಜರ್ಮನರ ಹಡಗುಗಳೆಲ್ಲಾ ಜರ್ಮನರಿಂದಲೇ ನಾಶಪಡಿಸಲ್ಪಟ್ಟಿದ್ದುವು.

ಕಳೆದವಾರ ಭರತಖಂಡದ ದಕ್ಷಿಣಪ್ರಾಂತದಲ್ಲಿ ವಿಶೇಷವಾಗಿ ಮಳೆಯಾಗಿದೆ. ದಕ್ಷಿಣಇಂಡ್ಯಾ ಲೋಹಮಾರ್ಗಗಳಲ್ಲೂ ನೀಲಗಿರಿ ಲೋಹಮಾರ್ಗದಲ್ಲೂ ಹಲವುಕಡೆ ಕಂಬಿಗಳು ಕಿತ್ತು ಪಪ್ರಯಾಣಕ್ಕೆ ತೊಂದರೆಯಾಗಿದೆ. ತಾಮ್ರಪರ್ಣೀ ನದಿಯಲ್ಲಿ ೨೦ ಅಡಿಯ ನೀರು ಬಂದು ತಿರುನಲ್ವೇಲಿಯಲ್ಲಿ ಕೆಲ ಬೀದಿಗಳು ನೀರಿನಲ್ಲಿ ಮುಳುಗಿಹೋದುವು. ಶರ್ಮದೇವಿ ಹತ್ತಿರ ತಾಮ್ರಪರ್ಣಿಯ ಸೇತುವಿಗೆ ಅಪಾಯವಾಯಿತು. ಅದರಿಂದ ಕ್ವಿಲಾನಿಗೆ ಹೋಗುವ ಹೊಗೆಬಂಡಿಯು ನಿಂತುಹೋಯಿತು. ಆ ಜಿಲ್ಲೆಯಲ್ಲಿರುವ ಹಲವು ದೊಡ್ಡದೊಡ್ಡ ಕೆರೆಗಳ ಏರಿಗಳು ಕಿತ್ತು ಹೊಲ ಗದ್ದೆಗಳಮೇಲೆ ನೀರು ಉರುಳಿ ಪೈರಿಗೆ ಬಹಳ ನಷ್ಟವಾಗಿರುವುದು. ಮಳೆಯು ಕೆಲಕಡೆ ಇನ್ನೂ ನಿಂತಿಲ್ಲ.

ಪತ್ರವ್ಯವಹಾರ.

ಹಿತೋಪದೇಶಕ ಸಂಘ.

ಸಾಂಗಲಿ ಸಂಸ್ಥಾನ ಪೈಕಿ ತಾಲೂಕ ಶಹಪೂರ ಮೌಜೆ ಕೂಳಿಭಾವಿ ಗ್ರಾಮಕ್ಕೆ ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸ್ವಾರಿ ತಾ|| ೪-೧೧-೧೪ ನೇ ಇರವಿವಾರ ಆಗಮನವಾಗಿದ್ದ[illegible]ತ ಸ್ವಾಗತಾರ್ಥವಾಗಿ

ಸೂಳೆಭಾವಿ ಗ್ರಾಮದ ವೀರಶೈವರು "ವೀರಶೈವಹಿತೋಪದೇಶಕಸಂಘ" ವನ್ನು ಸ್ಥಾಪನಮಾಡಿ, ಪ್ರತಿಸೋಮವಾರದಲ್ಲಿಯೂ ಸಭೆ ಸೇರಬೇಕೆಂಬ ಸಂಕಲ್ಪ ಮಾಡಿರುತ್ತಾರೆ. ಈ ವಿಷಯವು ಕೇವಲ ಸ್ತುತ್ಯ ಮತ್ತು ಸಮಾಜಸುಧಾರಣೆಯ ಮುಖ್ಯೋಪಾಯವಾಗಿರುತ್ತದೆ.

ಓರ್ವ ಸಂಘಸೇವಕ.

ಮೈಸೂರು ಟ್ರೈನಿಂಗ್ ಕಾಲೇಜ್ ವೈಸ್‌ಪ್ರಿನ್ಸಿಪಾಲ್ ರವರಾದ ಮಿ॥ ಡಿ. ವೆಂಕಟರಾಮಯ್ಯ B. A. L. T. ಯವರ ಎಂಟರ್‌ಟೇನ್‌ಮೆಂಟ್.

ಈ ಮಹೋತ್ಸವವು ಇದೇ ತಿಂಗಳು ೩೦ ನೇ ತಾ॥ ದಿವಸ ನಡೆಯುವುದಾಗಿದೆ. ವಿದ್ಯಾರ್ಥಿಗಳು ವೆಂಕಟರಾಮಯ್ಯನವರ ಮೇಲೆ ತಮಗಿರುವ ಭಕ್ತಿಪ್ರೀತಿಗಳಿಂದ ಇದನ್ನು ನಡೆಸುತ್ತಾರೆ. ಈ ಕಾಲದಲ್ಲಿ ಅವರ ವಿಷಯದಲ್ಲಿ ವಿದ್ಯಾರ್ಥಿಗಳು ತೋರಿಸಬಹುದಾದ ಮರ್ಯಾದೆ ಗುಣಕಥನ ಮುಂತಾದ ಉತ್ಸಾಹಗಳಿಗೆ ಸದರಿ ಕಾಲೇಜಿನ ಅಸಿಸ್ಟೆಂಟ್ ಮಾಸ್ತರೊಬ್ಬರು ಅವಕಾಶ ಕೊಡಬಾರದೆಂದು ಯತ್ನಿಸುತ್ತಿರುವುದಾಗಿ ತಿಳಿಯುತ್ತೇನೆ. ಇದು ಸರಿಯಲ್ಲ. ದೇವರು ಅವರಿಗೆ ಉತ್ತಮಪದವಿಯನ್ನೇನಾದರೂ ದಯಪಾಲಿಸಿದಾಗ ತಮಗಾಗಿ ನಡೆಯುವ ಉತ್ಸಾಹಕ್ಕೆ ಆತಂಕವು ಬಂದುದಾದರೆ ತಮಗುಂಟಾಗುವ ಅಸಂತೋಷವನ್ನು ಊಹಿಸಿಕೊಂಡು ಮಿ॥ ಡಿ. ವೆಂಕಟರಾಮಯ್ಯನವರ ಎಂಟರ್‌ಟೇನ್‌ಮೆಂಟನ್ನು ಉತ್ಸಾಹಭಕ್ತಿಗಳಿಂದ ವಿದ್ಯಾರ್ಥಿಗಳೊಡನೆ ನಡೆಸುವವರಾಗಲೆಂದು ಕೋರುವ ವಿದ್ಯಾರ್ಥಿ.

ಯಾದವಾಡ ತಾಲ್ಲೂಕ ಗೋಕಾಕ.

ಬೆಳಗಾವ ಜಿಲ್ಲೆಯ ಅಸಿ. ಕಲೆಕ್ಟರ ಮಿ॥ ಮಾಕ್ಸವೆಲ್ ಸಾ॥ ಬಾ॥ ರವರು ನಮ್ಮ ಗ್ರಾಮಕ್ಕೆ ತಾ॥ ೨-೧೨-೧೯೧೪ ಇಸವಿ ದಿವಸ ಬರುವರೆಂಬುದನ್ನು ಮಿ॥ ಚನ್ನಬಸಪ್ಪ ಲಕ್ಷೆಟ್ಟಿ ಲೋಕಲ್ ಬೋರ್ಡ್ ಮೆಂಬರ ಇವರು ಮುಂಚಿತವಾಗಿಯೇ ತಿಳಿದುಕೊಂಡು ಗೋಕಾಕ ಮುಕ್ಕಾಮಿನಲ್ಲಿ ಸದರಿ ಸಾಹೇಬ ಬಹಾದ್ದೂರರವರಿಗೆ ದಾನಸುಮಾರಿಯ ಬಗ್ಗೆ ಆಮಂತ್ರಣಪತ್ರಿಕೆಯನ್ನೊಪ್ಪಿಸಿಬಂದರು. ಅದೇಪ್ರಕಾರ ತಾ॥ ೩-೧೨-೧೯೧೪ ನೇ ದಿವಸ ಮಿ॥ ಲಕ್ಷೆಟ್ಟಿ ಇವರು ಸಾ॥ ಬಾ॥ ರವರನ್ನು ಅವರ ಲೇಡಿ ದೊರೆಸಾನಿಯವರೊಡನೆ ಬ್ಯಾಂಡ ವಾದ್ಯದ ಘೋಷದಿಂದ ತಮ್ಮ ಸ್ವಗೃಹಕ್ಕೆ ಕರೆತಂದರು. ಸಾ॥ ಬಾ॥ ರವರ ಸಂಗಡ (೧) ರಾವ ಸಾ॥ ಮಾಮಲೇದಾರ ಗೋಕಾಕ (೨) ಮಿ॥ ಕುಲಕರ್ಣಿ ಶಿರಸ್ತೇದಾರ (೩) ಚನ್ನಬಸಪ್ಪ ಅಣ್ಣಾ ಸಾಣದೋಳಕರ (೪) ಚನ್ನಬಸಪ್ಪ ಅಣ್ಣಾ ಹುನಗುಂದ (೫) ಚನ್ನಬಸಪ್ಪಅಣ್ಣಾ ಉಜ್ಜೆ (೬) ವೆಂಕೋಬಾಮದನಾಯ್ಕವಾಡಿ (೭) ಭೀಮರಾವ ಕುಲಕರ್ಣಿ (೮) ರಾಮನಗೌಡಾ ಪಾಟೀಲ (೯) ವಿರೂಪಾಕ್ಷಪ್ಪ ಮುನವಳ್ಳಿ (೧೦) ರುದ್ರಪ್ಪ ಅಣ್ಣಾ [illegible] ಮೊದಲಾದ ಸಭ್ಯಗೃಹಸ್ಥರೂ ಯಾದವಾಡ [illegible] ಕಟ್ಟಿ ಸ್ಕೂಲ ಮಾಸ್ತರರೂ ಆಗಮಿಸಿದ್ದರು. [illegible] ಬಾ॥ ರವರು ಲೇಡಿ ದೊರೆಸಾನಿಯವರೊಂದಿಗೆ ಸಭೆಯಲ್ಲಿ ವಿರಾಜಮಾನರಾದ ಬಳಿಕ ಪ್ರಸಿದ್ಧಗಾಯಕ ಶಿರೋಮಣಿಗಳಾದ ಶಿ. ರಾ. ರಾ. ಸಿದ್ಧಯ್ಯ ಚೆಟ್ಟಿ ಇವರು ಶ್ರೀಮನ್‌ಮಹಾರಾಜಾ ಪಂಚಮ ಜಾರ್ಜ" ಬಾದಶಹರವರ ಮೇಲೆಯೂ ಸಾ॥ ಬಾ॥ ರವರ ಮೇಲೆಯೂ ಇಂಪಾಗಿ ಗಾನವನ್ನು ಮಾಡಿದರು. ಆ ಮೇಲೆ ಸ್ಕೂಲ ಅ॥ ಮಾಸ್ತರ ಮಿ॥ ವಿ. ಜಿ. ಮಠಪತಿ ಇವರು ಸಾಹೇಬರವರನ್ನು ಬಹಳವಾಗಿ ಕೊಂಡಾಡಿ, ಈಗ ನಡೆಯುವ ಮಹಾಯುದ್ಧದಬಗ್ಗೆ ಜನರಲ್ಲಿ ರಾಜನಿಷ್ಠೆಯು ನೆಲೆಗೊಳ್ಳುವ ಹಾಗೆ ಚೆನ್ನಾಗಿ ಭಾಷಣಮಾಡಿದರು. ತರುವಾಯ ಮಿ॥ ಚನಬಸಪ್ಪ ಅಣ್ಣಾ ಲಕ್ಷೆಟ್ಟಿ ಇವರು ಸಾ॥ ಬಾ॥ ರವರ ಅಭಾರವನ್ನು ಮನ್ನಿಸಿದರು. ಕಡೆಗೆ ಸಾ॥ ಬಾ॥ ರವರ ವತಿಯಿಂದ ಮಿ॥ ಕುಲಕರ್ಣಿ ಶಿರಸ್ತೇದಾರ ಇವರು ಬಿ. ಲಕ್ಷೆಟ್ಟಿ ಇವರ ಅಭಾರವನ್ನು ಮನ್ನಿಸಿದರು. ನಂತರ ಹಾರತುರಾಯಿ ಒಪ್ಪಿಸಲ್ಪಟ್ಟು ಸಭೆಯು ವಿಸರ್ಜನವಾಯಿತು. ಈ ಸಮಾರಂಭಕ್ಕೆ ಪೋಲೀಸ ಅಂಮಲದಾರರೂ ಮಿ॥ ಶರಬಪ್ಪ ಅಣ್ಣಾ ಲಕ್ಷೆಟ್ಟಿ ಮಿ॥ ಬಸಲಿಂಗಪ್ಪ ಅಣ್ಣಾ ಮುಚ್ಚಾಫೂರ ಇವರೂ ಯೋಗ್ಯಸಹಾಯವನ್ನು ಮಾಡಿದರು.

ಸಭೆಯಲ್ಲೊರ್ವ ಪ್ರೇಕ್ಷಕ.

ಈ ಆನಂದ ಸಂವತ್ಸರದ ಕಾರ್ತಿಕ ಶುದ್ಧ ೧೩ ಸ್ಥಿರವಾರ ಹೊನ್ನಾಳಿ ತಾಲೋಕು ದೊಡ್ಡೆತ್ತಿನಹಳ್ಳಿ ಗ್ರಾಮದಲ್ಲಿ ಶಿವಪೂಜೆಗುರುಶಾಂತಪ್ಪನವರ ಮನೆಯ ವಿವಾಹಲಗ್ನದಲ್ಲಿ ಕೂಡಿದ ವೀರಶೈವ ಜನಂಗಳಲ್ಲಿ ಪೂಜ್ಯರಾದ ಬ್ರಹ್ಮಶ್ರೀ ಹೊಟ್ಯಾಪುರದ ಹಿರೇಮಠದ ಪಟ್ಟದ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಎಕ್ಕೆಹಳ್ಳಿ ಯ॥ ಶಾಂತಪ್ಪಶೆಟ್ಟರವರು ಉಪನ್ಯಾಸ ಮಾಡಿದ್ದರಲ್ಲಿ ಈ ನಮ್ಮ ವೀರಶೈವರಲ್ಲಿಯೂ ಇನ್ನೂ ಕೆಲವು ಪ್ರಭೇದದವರಲ್ಲಿಯೂ ವಿವಾಹಕಾರ್ಯಗಳಲ್ಲಿ ದುಂದು ವೆಚ್ಚವನ್ನು ಮಾಡುವುದು ಮತ್ತೂ ವೀಳ್ಯದ ಬಾಬಿಂದ ದುಬಾರಿ ಖರ್ಚು ಮಾಡುವ ವಿಧಿಯನ್ನು ಸಹ ಕುರಿತು ಸಭೆಯವರಿಗೆಲ್ಲಾ ಹೃದಯಂಗಮವಾಗುವಂತೆ ವಿಸ್ತಾರವಾಗಿ ತಿಳಿಸಿ ಈ ದುಬಾರಿಖರ್ಚುಗಳನ್ನು ನಿಲ್ಲಿಸಿ ಈ ಮಠದ ವಳಿಗೆ ಬಗ್ಗೆ ಅವರವರ ಶಕ್ತ್ಯನುಸಾರ ಧನಸಹಾಯವನ್ನು ಮಾಡಿ ಧರ್ಮಫಂಡನ್ನು ಕೂಡಿಟ್ಟು ಆಯಾಯ ಗ್ರಾಮಗಳ ಮಠೋದ್ಧಾರಕಾರ್ಯಕ್ಕಾಗಿ ವಿನಿಯೋಗಿಸಬೇಕೆಂದು ಸೂಚಿಸಿದ ವಿಷಯವನ್ನು ಶ್ರೀ ಮಠದ ಚನ್ನಮಲ್ಲಪ್ಪಯ್ಯನವರು ಪಟೇಲರು ಕೆಂಚವೀರಪ್ಪನವರು ಸಣ್ಣವೀರಪ್ಪಗೌಡರು ಮ॥ ಶಾಂತಪ್ಪನವರ ಹಾಲಪ್ಪಶೆಟ್ಟರು ಬಾಗ್ವಾಡಿ ಶಿವಲಿಂಗಪ್ಪಶೆಟ್ಟರು ಈಶ್ವರಪ್ಪನ ಬಸಪ್ಪನವರು ಇವರೂ ಇನ್ನುಮುಂತಾದ ಸಭೆಯವರೂ ಅನುಮೋದಿಸಿದರು ಆ ಅಭಿಪ್ರಾಯಕ್ಕನುಸಾರವಾಗಿ ಈ ದೊಡ್ಡೆತ್ತಿನಹಳ್ಳಿ ಗ್ರಾಮದಲ್ಲಿ ಇನ್ನು ಮುಂದೆ ನಡೆಯುವ ಲಗ್ನಗಳಲ್ಲಿ ದುಬಾರಿ ಖರ್ಚನ್ನು ನಿಲ್ಲಿಸಿ ಲಗ್ನ ೧ ಕ್ಕೆ (೬) ರೂಪಾಯಿಗಳ ಮೇರೆಗೆ ತೆಗಿಸಿ ಇವರಲ್ಲಿ ಸ್ಥಳದಲ್ಲಿ ನಡೆಯುವ ಮಠಾಭಿವೃದ್ಧಿ ಕಾರ್ಯಕ್ಕೋಸುಗ ೩ ರೂಪಾಯಿ ಕೊಡಬೇಕೆಂತಲು ಹೊನ್ನಾಳಿ ಶ್ರೀಗಿರಿರಾಜ ಸೂರ್ಯಸಿಂಹಾಸನದ ಹಿರೇಮಠದ ಶ್ರೀ ಚನ್ನಪ್ಪ ಸ್ವಾಮಿಗಳವರ ಪಾದಕ್ಕೆ ೧ ರೂಪಾಯಿ, ಮೈಸೂರು ವೀರಶೈವ ವಿದ್ಯಾವರ್ಧಕ ಫಂಡಿಗೆ ೧ ರೂಪಾಯಿ, ಕೈ॥ ಯಜಮಾನರು ವೀರಸಂಗಪ್ಪನವರ ಜ್ಞಾಪನಾರ್ಥವಾಗಿ ೧ ರೂಪಾಯಿ ಈಮೇರೆ ಆರು ರೂಪಾಯಿಗಳು ಕೊಡಬೇಕೆಂದು ನಿರ್ಧರಿಸಿ, ಕೂಡಿದ ಮಹಾಜನಗಳಿಂದ ಸಹಿಮಾಡಿಸಿ ಮೊಳ್ಳಮೂಡುವಂತೆ ಗುರುಶಾಂತಪ್ಪನವರ ಮನೆ ಲಗ್ನದಲ್ಲಿ ತೆಗಿಸಿದ ರೂ. ಗಳ ಪೈಕಿ ಫಂಡಿನ ಹಣವನ್ನು ಎಕ್ಕೆಹಳ್ಳಿ ಮ॥ ಇಂ. ಶಾಂತಪ್ಪಶೆಟ್ಟರವರ ಮೂಲಕ ವಿದ್ಯಾವರ್ಧಕ ಫಂಡಿಗೂ, ಸ್ಟಾರಾಫೀಸಿಗೂ ರವಾನಿಸಿರುತ್ತೆ. ಇನ್ನು ಮುಂದೆ ನಡೆಯುವ ಶುಭಕಾರ್ಯಗಳಲ್ಲಿ ಗ್ರಾಮಗಾಮ ಗ್ರಾಮಗಳಲ್ಲಿ ಮಠಾಭಿವೃದ್ಧಿಗೋಸುಗ ಧರ್ಮಫಂಡಿಗೆ ಧನಸಹಾಯಮಾಡಿ ಸರ್ವರೂ ಈ ಪುಣ್ಯಕ್ಕೆ ಭಾಗಿಗಳಾಗಬೇಕೆಂದು ಸವಿನಯದಿಂದ ಪ್ರಾರ್ಥಿಸಿ ಗಂಧಪುಷ್ಪ ಫಲ ತಾಂಬೂಲವನ್ನು ಕೊಟ್ಟು ಸಭೆಯು ಬರ್ಖಾಸ್ತು ಮಾಡಲಾಯಿತು.

[ಈಹಣವು ನಮಗೆ ಬಂದಿರುತ್ತದೆ.—ಪ. ಪ್ರ.]

ಜಾಹಿರಾತು.

ಶಿವಯೋಗಮಂದಿರಸಂಸ್ಥೆಯಿಂದ—ಈವರ್ಷ ಶಿವಯೋಗಮಂದಿರದಲ್ಲಿ ನಡೆಯುವ ವೀರಶೈವ ವಿದ್ಯಾರ್ಥಿಗಳ ಪರೀಕ್ಷೆಯ ಸಲುವಾಗಿತಲ್ಪಟ್ಟಿರುವ ಗ್ರಂಥಗಳು ಸಂಸ್ಕೃತಆದ್ಯಪರೀಕ್ಷೆ (೧) ಅನುಭವಸೂತ್ರ (೨) ಸ್ಪಂದಪ್ರದೀಪಿಕಾ (೩) ತತ್ವಪ್ರಕಾಶ (೪) ಈಶ್ವರಪ್ರತ್ಯಭಿಜ್ಞಾನಹೃದಯ (೫) ಪಂಚದಶೀ ಈ ಐದುಗ್ರಂಥಗಳು—ಮಧ್ಯಮಪರೀಕ್ಷೆ (೧) ಶಿವಸೂತ್ರ ವಿಮರ್ಶಿನಿ (೨) ಲಿಂಗಧಾರಣಾಚಂದ್ರಿಕಾ (೩) ಸಿದ್ಧಾಂತ ಶಿಖಾಮಣಿ (೪) ಮುಕ್ತಾವಳಿ (೫) ಶ್ರೀಕಂಠಭಾಷ್ಯ—ಈ ಐದು ಗ್ರಂಥಗಳು—ಉತ್ತಮಪರೀಕ್ಷೆ (೧) ಕ್ರಿಯಾಸಾರ ಪ್ರಥಮದ ನಾಲ್ಕು ಪರಿಚ್ಛೇದಗಳು (೨) ಶಂಕರಭಾಷ್ಯ ಅಧ್ಯಾಯ (೩) ಶಿವಾದ್ವೈತಮಂಜರಿ (೪) ಬ್ರಹ್ಮಾದ್ವೈತಮಂಜರಿ (ಅದ್ವೈತಸಿದ್ಧಿ) (೫) ರಾಮಾನುಜಭಾಷ್ಯ (೬) ಮಾಧ್ವಭಾಷ್ಯ—ಈ ಆರು ಗ್ರಂಥಗಳು—ಕನ್ನಡ ಶಿವಕೀರ್ತನಕಾರರಿಗೆ—ಶತಕತ್ರಯ ಸಂಪೂರ್ಣವು ವಿದ್ಯಾರ್ಥಿಗಳಿಗೆ ಆದ್ಯಪರೀಕ್ಷೆ (೧) ಅಖಂಡೇಶ್ವರವಚನ (೨) ಬಸವೇಶ್ವರವಚನ (೩) ನಿಜಾಚರಣೆಯ ಕಬ್ಬ (೪) ಕೈವಲ್ಯಪದ್ಧತಿ (೫) ಷಟ್‌ಸ್ಥಲಸಿದ್ಧಾಂತ. ಈ ಐದು ಗ್ರಂಥಗಳು—ಮಧ್ಯಮಪರೀಕ್ಷೆ (೧) ಶತಕಪಂಚಕ (೨) ವಿವೇಕಚಿಂತಾಮಣಿಯಲ್ಲಿ ಮೊದಲನೆಯ ನಾಲ್ಕು ಪ್ರಕರಣಗಳು. ಮತ್ತೂ ೯ ನೇ ಪ್ರಕರಣ (೩) ಸಿದ್ಧೇಶ್ವರ ಪುರಾಣ (೪) ಪರಮಾನುಭವಬೋಧೆ (೫) ಸಾರಮಾರ್ಗಪ್ರಕಾಶಿಕೆ—ಈ ಐದು ಗ್ರಂಥಗಳು. ಉತ್ತಮಪರೀಕ್ಷೆ (೧) ವೃಷಭೇಂದ್ರವಿಜಯ (೨) ಚನ್ನಬಸವೇಶ್ವರಪುರಾಣ (೩) ರಾಜಶೇಖರವಿಳಾಸ (೪) ಅನುಭವಸಾರ (೫) ಶತಕತ್ರಯ (೬) ಪಂಚದಶಿ ಈ ಆರು ಗ್ರಂಥಗಳು—ಸ್ತ್ರೀಯರಿಗೆ ಪರೀಕ್ಷೆಗೆ ನೇಮಿಸಿದ ಗ್ರಂಥಗಳು (೧) ಮೈಸೂರುಸಂಸ್ಥಾನದ ಆಸ್ಥಾನಪಂಡಿತ ಬಸವಶಾಸ್ತ್ರೀ ಕೃತಸಾವಿತ್ರೀಚರಿತ್ರೆಯು (೨) ಬಸವೇಶ್ವರಪುರಾಣದಲ್ಲಿ ನೀಲನೂರ ನಂಬಕ್ಕ ಮಹಾದೇವಿಯಕ್ಕ ಕೋಳೂರು ಕೊಡಗೂಸು ಬಿಜ್ಜಮಹಾದೇವಿ ಬಾಲಲಿಂಗಣ್ಣ ಇವರ ಕಥೆಗಳು (೩) ಶಾಂತಗಿರಿ ಅಯ್ಯಪ್ಪನವರಿಂದ ರಚಿತವಾದ ಬಾಲಿಕಾಗೀತಾ ದೀಗತಿಹಾಡು ಮಹಾಗಾವ ತತ್ಕಲ್ ಗುರುಲಿಂಗಕವಿಕೃತ ಹೆಣ್ಣುಮಕ್ಕಳ ಧರ್ಮನೀತಿಪದಗಳು. (೪) ಸೋಮೇಶ್ವರ ಮತ್ತೂ ನಿಜಲಿಂಗ ಶತಕಗಳು (೫) ಲಿಂಗಪ್ಪನವರು ಧರಣೆಪ್ಪನವರು ಮಾಸ್ತರ ಸನದಿ ಇವರಿಂದ ರಚಿತವಾದ ಲಲನಾಚಾರದರ್ಪಣ ಎಂಬ ಹೆಂಣುಮಕ್ಕಳ ನೀತಿಯ ಪದಗಳು—ಈಗ್ರಂಥಗಳಲ್ಲಿ ಪರೀಕ್ಷೆ ಕೊಡಬಿಚ್ಛಿಸುವವರು ತಾವು ಕಲಿತುಕೊಂಡ ಗ್ರಂಥ ತಮ್ಮ ಸಂಪೂರ್ಣ ಹೆಸರು ಇವುಗಳನ್ನು ಶಿವಯೋಗಮಂದಿರದ ವ್ಯವಸ್ಥಾಪಕ" ಪೋಷ್ಟು ಬಾದಾಮಿ "ಈ ವಿಳಾಸಕ್ಕೆ ಪುಷ್ಯ ಶು॥ ೧೫ ಮಿತಿ ಒಳಗಾಗಿ ತಿಳಿಯಿಸಬೇಕು.

ಶಿವಬಸಪ್ಪಾ ಶಾಗಿ. ವ್ಯವಸ್ಥಾಪಕ

ಶ್ರೀ ಪಂಚಾಕ್ಷರ ಮಹಾಸ್ವಾಮಿಗಳು ಹೊಸಮಠ ಮುಕ್ಕಾಮು ಸವದತ್ತಿ ಡಿ॥ ಬೆಳಗಾವ ನಮ್ಮ ಸನ್ನಿಧಿಯಿಂದ—ನಮ್ಮ ವೀರಶೈವ ಸಮಾಜಕ್ಕೆ ತಿಳಿಸುವದೇನೆಂದರೆ—ನಮ್ಮ ಮಠದಲ್ಲಿ ಇದೇ ಕಾರ್ತೀಕ ಶುದ್ಧ ಷಷ್ಠಿ ಚಂದ್ರವಾರ ದಿವಸ ಸಂಸ್ಕೃತಪಾಠಶಾಲೆಯನ್ನು ಸ್ಥಾಪನಮಾಡಿರುತ್ತದೆ. ಇಲ್ಲಿ ವೇ॥ಶಾ॥ಸಂ॥ ಗುರುಮೂರ್ತಿಶಾಸ್ತ್ರಿಗಳವರು ಅಧ್ಯಾಪಕರಾಗಿ ನೇಮಿಸಲ್ಪಟ್ಟಿದ್ದಾರೆ. ಅಭ್ಯಾಸಮಾಡತಕ್ಕ ಪ್ರೌಢವಿದ್ಯಾರ್ಥಿಗಳು ಬರಬೇಕು. ಇಲ್ಲಿ ಮಠದಲ್ಲಿಯೇ ಅನ್ನವಸ್ತ್ರದ ವ್ಯವಸ್ಥೆಮಾಡಲ್ಪಟ್ಟಿದೆ. ಉತ್ತಮ ಆಸೆ. ಬರತಕ್ಕವರು ಧಾರವಾಡಸ್ಟೇಷನ್ನಿಗೆ ಇಳಿದು ಇಲ್ಲಿಗೆ ಬರಲಿಕ್ಕೆ ಸಡಕು ಅದೆ. ಬರಬೇಕು. 3

ವಿಜ್ಞಾಪನೆ.

ಈ ಸಮಯ ಬಿಡಬೇಡಿರಿ. ಮುಂದೆ ದೊರೆಯಲಾರದು. ಮೊಳಕಾಲ್ಮೂರಿನ ಪ್ರಸಿದ್ಧವಾದ ರೇಶ್ಮೆಯವಸ್ತ್ರಗಳು ಬೇಕೋ? ಬೆಲೆಸುಲಭ! ಬಣ್ಣ ಗ್ಯಾರಂಟಿಯಾದದ್ದು. ಒಂದು ಸಲ ತರಿಸಿನೋಡಿರಿ !! ನಮ್ಮಲ್ಲಿ ಹೊದಿಯುವ ವಸ್ತ್ರಗಳೂ, ಮೊಗಟಗಳೂ, ಸೀರೆಗಳೂ, ನಡುಕಟ್ಟುಗಳೂ, ಲಿಂಗದವಸ್ತ್ರಗಳೂ, ಕೈ ವಸ್ತ್ರಗಳೂ ಬಹಳ ಚೆನ್ನಾಗಿ ಎಲ್ಲಾ ರಂಗಿನಲ್ಲಿಯೂ ತಯಾರಾಗುತ್ತವೆ. ನಾವು ಮೈಸೂರು, ಮದ್ರಾಸು ಸೀಮೆಗಳ ಎಲ್ಲಾ ಭಾಗಕ್ಕೂ ನಮ್ಮ ಮಾಲನ್ನು ರವಾನಿಸುತ್ತೇವೆ. ನಮ್ಮ ಮಾಲುಗಳಿಗೆ ಬಹುಮಾನಗಳೂ, ಮೆಡಲುಗಳೂ, ಬಂದಿವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಹಿಮಂತಋತುವಿನ ದರಗಳು. ೧ನೆ ನಂ. ವಸ್ತ್ರಗಳು ತೊಲೆ ೧ಕ್ಕೆ ೦-೩-೦. ೨ನೆ ನಂ. ವಸ್ತ್ರಗಳು ತೊಲೆ ೧ಕ್ಕೆ ೦-೬-೯. (ಮೊಗಟ, ಅರಳೆಪೇಟೆ ಸೀರೆಗಳೂ, ನಡುಕಟ್ಟು, ಲಿಂಗದವಸ್ತ್ರಗಳು) ೧ನೆ ನಂ. ಮಾಲು ತೊಲೆ ೧ಕ್ಕೆ ೦-೮-೦. ೨ನೆ ನಂ. ಮಾಲು ತೊಲೆ ೧ಕ್ಕೆ ೦-೩-೬. ನಮ್ಮವಿಳಾಸ:—

5 ಎಂ. ಎಸ್. ಮಲಕಣ್ಣ, ಮತ್ತು ಬ್ರದರ್ಸ್,
ರೇಶ್ಮೆ ಜವಳಿ ವ್ಯಾಪಾರಿಗಳು. ಪೋಸ್ಟ್ ಮೊಳಕಾಲ್ಮೂರು.

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳುಸಹಿತ ಆದ ಸಮಾರಂಭ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಜಾರವಿವರ್ಮರ ಚಿತ್ರದಂತೆ, ಕಲ್ಪಿತವಲ್ಲ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೋ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೋ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ನಗೈಗ್ ಫೋಟೋ ಸಿಕ್ಕುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.

ಜೊಸಫ್ಯಾಷನ್—ಶಿಷ್ಯಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವ ಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಈಪ್ರಕಾರ ೨ ಫೋಟೋ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ।॥=, ೧, ೧।. ಪ್ರಕಾರ, ಮತ್ತೂ ಬೆಳ್ಳಿದು ರೂ ೧। ರೋಲ್ಡ್ ಗೋಲ್ಡು ಭಂಗಾರದ್ದು ಡಾಬಿಣದ ಗ್ಲಾಸದೂ ಕ್ರಯ ೨।, ೨।॥ ರೂ.

ಊರೂರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ. ನಮ್ಮವಿಳಾಸ— ಗಂಗಪ್ಪಾ ಹೇರಿಗೆ,
34 ಆರ್ಟಿಸ್ಟ್, ಸೊಲ್ಲಾಪುರ.

• (ವಿಶೇಷಸೂಚನೆಗಳು.) •

(ಜಾತಕಪತ್ರಿಕೆ) ಮಹಾಶಯರೇ ! ನಿಮ್ಮ ಶಿಶುಗಳು ಹುಟ್ಟಿದಸಂವತ್ಸರ ಮಾಸ, ತಿಥಿ, ವಾರ, ನಕ್ಷತ್ರ ಜನನಕಾಲವನ್ನು ಚೆನ್ನಾಗಿ ಬರೆದುಕಳುಹಿಸಿದರೆ ನಾವು ಸಿದ್ಧಾಂತರೀತಿಯಾಗಿ ಜನನಕಾಲವನ್ನು ಸ್ಥಿರಮಾಡಿಕೊಂಡು ಸಂವತ್ಸರಫಲ, ಮಾಸಫಲ ತಿಥಿ, ವಾರ, ನಕ್ಷತ್ರ, ರಾಶಿ, ಲಗ್ನ, ಪ್ರತ್ಯೇಕಭಾವಫಲ, ದಶಾಂತರ್ದಶಾಫಲ, ಮುಂದೆ ಇಂಥ ಸಂವತ್ಸರದಲ್ಲಿ ಇಂಥಾ ವಿಧವಾದ ಕಂಟಕಗಳು, ಬರುತ್ತವೆಂಬುವ ವಿಷಯವನ್ನು ದೇಹಪೀಡೆ, ಗ್ರಹಪೀಡೆ ಇವುಗಳಿಗೆ ಶಾಂತಿಕ್ರಮವನ್ನು ಸಹಾ ಚೆನ್ನಾಗಿ ಒಂದು ಬುಕ್ಕಿನಲ್ಲಿ ಬರೆದು ಕಳುಹಿಸುತ್ತೇವೆ. ಇದರಕ್ರಯ ರೂ. ೩—೮—೦

(ಪ್ರಶ್ನಜಾತಕ) ಜನನಕಾಲ ಗೊತ್ತಿಲ್ಲದೆ ಜಾತಕವಿಲ್ಲದ್ದರಿಂದ ಬಹು ತೊಂದರೆಪಡುತ್ತಿರುವರು. ಕಾರಣ ಪ್ರತಿಯೊಬ್ಬರು ತಮ್ಮ ಅಂದಾಜು ವಯಸ್ಸು, ಹೆಸರನ್ನು ತಾವು ಮಾಡಿರುವ ಪ್ರಶ್ನಕಾಲವನ್ನು ಬರೆದು ಕಳುಹಿಸಿದರೆ ನಾವು ಸಿದ್ಧಾಂತರೀತಿಯಾಗಿ ಸ್ಥಿರಮಾಡಿ ಜಾತಕನಿಗೆ ಮುಂದೆ ನಡಿಯುವ ಸುಖದುಃಖ, ನಷ್ಟ, ಕಷ್ಟ ಇಂಥ ಮೂಲಕಲಾಭ ಇಷ್ಟೇವರ್ಷ ಆಯುಷ್ಯ ಇಂಥಾರೀತಿಯಾಗಿ ಮರಣ ಎಂಬುವ ರೀತಿಯನ್ನು ಒಂದು ಬುಕ್ಕಿನಲ್ಲಿ ಬರೆದು ಕಳುಹಿಸುತ್ತೇವೆ. ಕ್ರಯ ರೂ. ೬—೦—೦

(ಸಂಪೂರ್ಣಜಾತಕವು) ಜನನಕಾಲವನ್ನು ತಿಳಿಸಿದರೆ ಸಿದ್ಧಾಂತರೀತಿಯಾಗಿ ಜನನಕಾಲವನ್ನು ಸ್ಥಿರಮಾಡಿಕೊಂಡು ಗ್ರಹಸ್ಫುಟ, ಭಾವಸ್ಫುಟ, ಭಾವಕುಂಡಲಿಗಳು ಅಷ್ಟಕವರ್ಗ ಬಿಂದುಶೋಧನೆ ತ್ರಯೋದಶವರ್ಗ ಗ್ರಹಸನ್ಮಯಾವಸ್ಥೆಗಳು, ಅನೇಕವಿಧವಾದ ಆಯುರ್ದಾಯಗಣಿತಗಳನ್ನೆಲ್ಲಾ ಶೋಧಿಸಿ, ಸಂ॥ ರ ಮಾಸ, ತಿಥಿ, ವಾರ, ನಕ್ಷತ್ರ, ರಾಶಿ, ಲಗ್ನ ಇವುಗಳ ಫಲ ಧನಯೋಗ ರಾಜಯೋಗ ಸಂತಾನಯೋಗ ಕಳತ್ರಯೋಗ, ದ್ವಿಕಳತ್ರಯೋಗ ತನ್ವಾದಿದ್ವಾದಶಭಾವಫಲ ಘಾತಕಚಕ್ರನಿರ್ಣಯ ಆಯುಷ್ಯದವರಿಗೂ ದಶಾಂತರ್ದಶಾಫಲ ಮಾರಕಾದಿಗಂಡಕಾಲಗಳು (ಇದ್ದರೆ) ಅವುಗಳಿಗೆ ಶಾಂತಿಕ್ರಮವನ್ನು ಸಹ ಚೆನ್ನಾಗಿ ಬರಿಯುವ ಜಾತಕ ಒಂದಕ್ಕೆ ಕ್ರಯ ರೂ. ೧೨—೦—೦

(ಋತುಕಾಲನಿರ್ಣಯ) ಸ್ತ್ರೀಯರು ಋತುವಾದ ಸಂ॥ ರ ಮಾಸನಕ್ಷತ್ರ ವಾರ ಋತುವಾದ ವ್ಯಾಳ್ಯವನ್ನು ತಿಳಿಸಿದರೆ ಇಷ್ಟೇವರುಷ ಆಯುಷ್ಯ ಇಂಥ್ಟೇ ಸಂತಾನ ಮುಂದೆ ಯಾವಮೂಲಕವಾಗಿ ಕಷ್ಟನಷ್ಟಗಳುಂಟಾಗುವವೆಂಬುವ ವಿಷಯವನ್ನು ಆಯುಷ್ಯದವರಿಗೂ ಅಂತರ್ದಶಾಫಲವನ್ನು ಕಂಟಕಗಳಿಗೆ ಶಾಂತಿಕ್ರಮವನ್ನು ಸಹಾ ತಿಳಿಸುತ್ತೇವೆ. ಕ್ರಯ ರೂ ೬—೦—೦

(ಮಾಸದಶಾನಿರ್ಣಯವು) ಇದನ್ನು ಬರಿಸತಕ್ಕವರು ತಮ್ಮ ಹೆಸರು ವಯಸ್ಸನ್ನು ತಿಳಿಸಿದರೆ ೧ ವರ್ಷದವರಿಗೂ ಪ್ರತಿತಿಂಗಳಲ್ಲಿ ಉಂಟಾಗುವ ಕಷ್ಟನಷ್ಟ ದೇಹಪೀಡೆ ಇಂಥಾ ಮೂಲಕಲಾಭ ಸುಖವಾಗುವ ಸಂಗತಿಯನ್ನು ತಿಳಿಸುತ್ತೇವೆ. ಕ್ರಯ ರೂ. ೧-೦-೦ ನಮ್ಮ ವಿಳಾಸ:—

ಸ್ವಯಂಜ್ಯೋತಿರ್ಬೋಧಿನೀ ಆಫೀಸ್,
2 ಬಳ್ಳಾರಿ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ
ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸಾಂ
ಕರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು
11 ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು—ಕೆಮ್ಮು—ನೆಗಡಿ—ದಿನಜ್ವರ—ಮೂರರಜ್ವರ ನಾಲ್ಕರಜ್ವರ— ಮಲೇರಿಯಾಜ್ವರ— ತಲೆನೋವು— ಮೈಕೈನೋವು ಮತ್ತು ಭಾರ—ಅರೋಚಕ ಹಲ್ಲುನೋವು—ಹೊಟ್ಟೆನೋವು—ಮಲಬಂಧ—ಅಜೀರ್ಣಭೇದಿ—ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳೆತ ಹೊಟ್ಟೆಯುಬ್ಬರ—ಮಂದಜ್ವರ—ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವಿರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೨೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ. ಪಿ ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಗೆ, ಮಲಬಂಧ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತಕ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯಂಪುಮಾಡುವುದರಲ್ಲಿ ಶ್ರೇಷ್ಠವಾದುವೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ. ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ಡಿ॥

ಸುಲಭ ! "ಚಾತುರ್ಯ" ಮಾಸಪತ್ರಿಕೆ !!

ಹಾಸ್ಯ, ವಿನೋದ, ನೀತಿ, ಚಮತ್ಕಾರಭರಿತ ಲೇಖನಗಳಿಂದ ಕೂಡಿರುವ ಮಾಸಪತ್ರಿಕೆ ! ಪಂಡಿತಪಾಮರರ ಮನೋರಂಜಕವಾದದ್ದು. ಮನೋರೋಗಕ್ಕೆ ಔಷಧಪ್ರಾಯ ! ಕಾಲಕ್ಕೆತಕ್ಕ ಲೇಖನಗಳು !! ವಾರ್ಷಿಕಚಂದಾ ಅಂಚೆ ವೆಚ್ಚ ಮತ್ತು ವಿ. ಪಿ. ಛಾರ್ಜ ಸೇರಿ ಸ್ತ್ರೀಯರಿಗೆ ವಿದ್ಯಾರ್ಥಿಗಳಿಗೆ ಮಾತ್ರ ೭ ಆಣೆ. ಇತರರಿಗೆ ೧೧ ಆಣೆ. ಮಾದರಿ ಸಂಚಿಕೆಗೆ ೧ ಆಣೆ ಸ್ಟ್ಯಾಂಪು ಕಳುಹಿಸಿರಿ, ನಮ್ಮಲ್ಲಿ ಅನೇಕ ಪುಸ್ತಕಗಳು ಸಹ ಸಿಗುತ್ತೆ. ಮ್ಯಾನೇಜರ್,

4 "ಚಾತುರ್ಯ" ಚಾಮರಾಜಪೇಟೆ ಬೆಂಗಳೂರು ಸಿಟಿ.

ಬಹುಮಾನ! ಶ್ರೀ ಬಹುಮಾನ !!
ಅತ್ಯಾಶ್ಚರ್ಯಕರವಾದ ಬಹುಮಾನ.
೨೫ ಸಾವಿರ ರೂಪಾಯಿಗಳು ಹಂಚಲ್ಪಡುವವು
ದಿವ್ಯೌಷಧ ಬಳ್ಳಾರಿ. ಸುಪ್ರಸಿದ್ಧೌಷಧ
ಸರ್ವಜನಮನೋಲ್ಲಾಸಿನಿ ಅಂಡ್ ಕೋ ಇವರ

(• ನಾರಸಿಂಹಚೂರ್ಣವು •)

5

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಜವಾದುದಷ್ಟೆ. ಆದರೆ ಅನೇಕ ದುರ್ವ್ಯಸನಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವುವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನ ಕಣ್ಣಾರ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವುವಿಧ ಔಷಧಗಳನ್ನು ವಿಶೇಷವಾದ ಬೆಲೆಯನಿಟ್ಟು ವಿಕ್ರಯಿಸಿದರು ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವದು ವಿಷಾದಕರವಾಗಿರುವದು. ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿ (ನಾರಸಿಂಹಚೂರ್ಣವು) ಎಂಬ ಒಂದಾನೊಂದು ಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ, ಅನೇಕತರಹೆಯ ಮೇಹರೋಗಗಳು, ಪಾಂಡುರೋಗ, ಪೀನಸ, ಹದಿನೆಂಟು ಬಗೆಯಾದ ಕುಷ್ಠಗಳು, ಎಂಟುವಿಧ ಉದರರೋಗಗಳು, ಭಗಂಧರವು, ಮೂತ್ರಕೃಚ್ಛ್ರವು, ಗೃಧ್ರಸೀವಾತವು, ಕಾಮಿಲೆ, ಕ್ಷಯ, ಮಹಾಶ್ವಾಸಗಳು, ದಾರುಣವಾದ ವಿದ್ರಧಿಗೆಯಾದ ಕಾಸಗಳು, ಎಂಭತ್ತುವಿಧಗಳಾದ ವಾತರೋಗಗಳು, ನಲವತ್ತು ಬಗೆಯಾದ ಪಿತ್ತಗಳು, ಇಪ್ಪತ್ತು ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಸಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತವೆ. ಇದರ ಸೇವನೆಯಿಂದ ಚಿನ್ನದಂಥಾ ಕಾಂತಿಯು, ಸಿಂಹದಂತೆ ಪರಾಕ್ರಮವು, ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯು ಅತ್ಯಧಿಕ ವೀರ್ಯವೃದ್ಧಿಯು ನೃಸಿಂಹನಿಗೆ ಸಮಾನರಾದ ಮಕ್ಕಳನ್ನು ಪಡೆಯುವಬಲವೂ ಉಂಟಾಗುವುದು ಇದರಲ್ಲಿ ಯಾವ ವಿಧವಾದರಸಗಳಾಗಲಿ ವಿಷವಾಗಲಿ ಇಲ್ಲ, ಇನ್ನಾವ ದೋಷಗಳೂ ಇಲ್ಲ. ನಿರ್ದುಷ್ಟವಾದದ್ದು, ಫಕ್ತವನಸ್ಪತಿಗಳಿಂದಲೇ ಸಿದ್ಧಮಾಡಿದದಿವ್ಯವಾದ ಔಷಧ. ಅನೇಕ ಪಂಡಿತರು, ಧನಿಕರು ಸರ್ಟಿಫಿಕೇಟುಗಳನ್ನು ಕೊಟ್ಟಿರುವರು.

೧೪ ದಿನ ಉಪಯೋಗಕ್ಕೆಬರುವ ಡಬ್ಬಿ ೧ ಕ್ಕೆ ಬೆಲೆ ರೂ. ೧—೦—೦

—(ಬಹುಮಾನಗಳನ್ನು ಹಂಚುವ ವಿಧಾನ)—

೧ ದರ್ಜ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೧೦೦೦೦ ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೬೦೦೦ ರೂ. ೩ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೪೦೦೦ ರೂ. ೨ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೩೦೦೦ ರೂ. ೧ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ೨೦೦೦ ರೂ.

೧೯೧೪ ನೇ ಜುಲೈ ೧ ನೇ ತೇದಿ ಮೊದಲು ೧೯೧೫ ನೇ ಜುಲೈ ೧ ತೇದಿಯವರಿಗೂ ಈ ಔಷಧವು ಒಂದು ಲಕ್ಷ ಡಬ್ಬಿಗಳು ಖರ್ಚಾದಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ. ಒಂದುಪಕ್ಷದಲ್ಲಿ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ವಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡೆಯುವದಲ್ಲದೆ ಬಹುಮಾನವನ್ನು ಸಹಾ ಹೊಂದವದಕ್ಕೆ ಅರ್ಹನಾಗಿರುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರೂ ಸಂಶಯವಿಲ್ಲ. ಬಹುಮಾನದ ಮೊತ್ತವು ನಿಷ್ಪಕ್ಷಪಾತವಾಗಿ ಒಂದೇ ಸಮಯವಾಗಿ ಹಂಚಲ್ಪಡುವವು. ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಕುಹಕತನವು ಇಲ್ಲ, ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರ ಮಾತುಗಳಿಗೆ ನಿಗಾ ಕೊಡಲಾಗದು, ಜಾಗ್ರತೆ ತರಿಸಿಕೊಳ್ಳಿರಿ. ಔಷಧದ ಗುಣವನ್ನು ಪರೀಕ್ಷಿಸಿರಿ ಅಪೇಕ್ಷಕರು ಈ ಕೆಳಗಿನ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇವಲ್ಲದೆ ನಮ್ಮಲ್ಲಿ ಇನ್ನು ಅನೇಕತರಹೆಯ ಔಷಧಗಳು ಸಿಗುತ್ತವೆ. ರೋಗದಲಕ್ಷಣವನ್ನು ತಿಳಿಸಿದರೆ ಅಮೂಲ್ಯವಾದ ಮತ್ತು ಗುಣಕಾರಿಗಳಾದ ಔಷಧಗಳನ್ನು ಕಳುಹುವೆವು.

ಇದರ ಅನುಪಾನ ಪತ್ರಿಕೆಯನ್ನು ಬಹುಮಾನದ ಟಿಕೀಟನ್ನು ಡಬ್ಬಿ ಸಂಗಡ ಕಳಿಸುವೆವು. ನಮ್ಮ ಕಂಪೆನಿಯ ಶಾಕಿ ವಿಶ್ವನಾಥ ಮಾರ್ಕು ಇಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು

ನಮ್ಮ ಅಡ್ರೆಸ್ಸು.
ಸರ್ವಜನಮನೋಲ್ಲಾಸಿನಿ ಅಂಡ್ ಕೋ ಬಳ್ಳಾರಿ.

ಪಾಳ್ಯದವೆಂಕಟಾಚಲಪಂಡಿತರಸಿದ್ಧೌಷಧಗಳು. 30

ಲೋಕಾನುಗ್ರಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋಡಿತ (ಭಾರ), ಮೈನಡುಕ, ಶೀತವಾತಗಳಿಂದಾದ, ಅಜೀರ್ಣ, [illegible] ನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತವೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಯೂ ಬಾರದಂತೆ, ನೀರುದರ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿರುವ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿ ಪಡಿಸುತ್ತವೆ. ಸ್ತ್ರೀಯರ ಬಸುರಿಗೆ, ಮಕ್ಕಳ ಏಳುವು, ಜ್ವರ, [illegible] ಗಳನ್ನು ಗುಣಪಡಿಸುತ್ತವೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ [illegible] ಗೆ ಗುರಿಯಾಗುತ್ತಿಲ್ಲ. ಒಳ್ಳೆ ಶಕ್ತಿವರ್ಧಕವಾಗಿದೆ.—೬೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೪ ಕುಪ್ಪಿ [illegible] ಕುಪ್ಪಿ ಹೆಚ್ಚು, [illegible] ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. [illegible] ವಿಸಾರಿಕೆಯು ತೋರಿದಾಗಲೂ, ಅಕ್ಕಪಕ್ಕಗಳಲ್ಲಾಗುವಂತೆ ರೋಗದವೇಳೆ ಕೆಲಸಮಾಡುತ್ತವೆ. ಖಂಡಿತವಾಗಿ ಇದರಲ್ಲಿ [illegible] ಸೋಲಿಲ್ಲ. ಹೊಟ್ಟೆಯುಬ್ಬರಿಸಿದೆ, ಮೂತ್ರವು ಕಟ್ಟಿದೆ, [illegible] ಕೊಡುತ್ತದೆ. [illegible]

[illegible] ಒಂದು ಬುಡ್ಡಿಯ ಬೆಲೆ ೧—

[illegible]

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ದಿ ಜನರಲ್ ಏಜೆನ್ಸಿ, ಮೈಸೂರು.

ಕಾದಂಬರಿಗಳು:— ಚಂಡಮಾರುತ ೦-೨-೦; ಚರಿತಾಮೃತಂ ೦-೫-೦; ರಾಜಶೇಖರವಲ್ಲರಿ ೦-೫-೦; ಪೀಟರಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧-೦; [illegible] ೦-೧-೨-೦. 63

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೨-೦-೦ ೫-೦-೦; ೩-೦-೦; ೨-೮-೦; ೧-೩-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಚೂರ್ಣ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ ಎಲ್. ಉಪಾಧ್ಯಾಯ, ಅಂಡ್ ಸನ್ಸ್
ಸುಗಂಧಕಾರಿ, ಮೈಸೂರು.
32

ಲೋಕಪ್ರಸಿದ್ಧವಾದ ಪಂಜಾಬಸಾಲಾಮಿಸ್ರಿ ಮುರಬ್ಬಾ.

4

ಮುರಬ್ಬಾಸೇವನೆಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವವನನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ „ಪಂಜಾಬ ಸಾಲಾಮಿಸ್ರೀ ಮುರಬ್ಬಾ" ವನ್ನು "ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳೆಗೆಡ್ಡೆ, ಶಾಮಗಡ್ಡೆ ಇವುಗಳನ್ನು ಮಿಶ್ರಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾಬ ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುದು ತಿಳಿದುಬರುತ್ತೆ.

ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ನೀರಿನಂತಿರುವ ಧಾತುವನ್ನು ಘಟ್ಟಿಪಡಿಸುವುದು
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿ ಹೋಗುವ ಧಾತುವನ್ನು ನಿಲ್ಲಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಉರಿಯುವುದನ್ನು ನಿಲ್ಲಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಕ್ಷಣಕ್ಷಣಕ್ಕೂ ಮೂತ್ರವಾಗುವುದನ್ನು ನಿಲ್ಲಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಮೆದುಳಿಗೆ ಬಲವನ್ನು ಕೊಡುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿಕುಶಲತೆಯು, ಶರೀರಕಾಂತಿಯು ಕೊಡುವುದು.
ಪಂಜಾಬ ಸಾಲಾಮಿಸ್ರೀ ಮುರಬ್ಬಾವು—ತಾಂಬ್ರ ಮತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲ ಬರುವಂತ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವುದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕಂಡುಬರುತ್ತೆ. ೨-೩ ಡಬ್ಬಿಗಳನ್ನು ಉಪಯೋಗಿಸುವದರಿಂದ ಜನ್ಮಾಂತರದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು „ಪಂಜಾಬ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ
೫೦೦ ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿದ [illegible] ಬಹುಮಾನ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನಮ್ಮಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ಕ್ಕೆ ರೂ. ೨-೦-೦. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ ೩ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೋ., ದೊಡ್ಡಪೇಟೆ, ಬೆಂಗಳೂರು ಸಿಟಿ.
ಡಿ. ಮನ್ನಾಲಾಲ್ ಡಿಲ್ಲೀವೈದ್ಯರು, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

೧೯೧೫ ನೆಯ
ಶ್ರೀ ಸೀತಾರಾಘವ
ಪಾಕೆಟ್ ಡೈರಿಗಳು

ವಿಕರಿಗೆ ಸಿದ್ಧವಾಗಿವೆ.



ಶಾಯಿ ಇಳಿಯದ ಉತ್ತಮವಾದ ಕಾಗದ ಮುದ್ದಾದ ಮುದ್ರಣ. ಅನೇಕವಾದ ಹೊಸಸಂಗತಿಗಳಿವೆ.

೧ ನಂ—ಸಣ್ಣ ಸೈಜು ಸಾದಾ	೦-೪-೦
೨ ನಂ—ಪೆನಸಲ್‌ಮುಚ್ಚಳವುಳ್ಳದು	೦-೬-೦
೩ ನಂ—ದೊಡ್ಡ ಸೈಜು ಸಾದಾ	೦-೬-೦
೪ ನಂ—ಪೆನಸಲ್‌ಮುಚ್ಚಳವುಳ್ಳದು	೦-೮-೦

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ.

ಹೆಚ್ಚಾಗಿ ತರಿಸುವವರಿಗೆ ರೂಪಾಯಿ ೧ ಕ್ಕೆ ೦-೨-೦ ಕಮಿಷನ್ ದೊರೆಯುವುದು. ವಿಳಾಸ:—

ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.
11

S.U.N. & Co.
BENARES CITY.
KASHI
VISHWESHWAR.

12

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು !!

ಈ ನಮ್ಮ ಕಂಪೆನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯು. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ನ್ಯಾಯದರ್ಪಣ. 45

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಪ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತಾವೇಜು ಪತ್ರಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ. ಬೆಲೆ ರೂ. 1-8-0. ವಿ. ಪಿ. ಮೂಲ್ಯ 1-12-0.

ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾದಿದ್ದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚಿಟಿಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯು ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಘಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲಿ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವುವು. ನೀವು ಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಸೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್
41 ಕೊಳ್ಳೇಗಾಲದ ತಾಲ್ಲೂಕು

೧೯೧೪ನೆಯ ಇಸವಿ ಡಿಶಂಬರ್ ತಾ॥ ೧೩ರಿಂದ ೧೯೧೪ನೆಯ ಡಿಶಂಬರ್ ತಾ॥ ೧೯ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ನೆಯ ಆನಂದನಾಮ ಸಂ॥ದ ಮಾರ್ಗಶಿರ ಬ॥ ಏಕಾದಶಿಯಿಂದ ಪುಷ್ಯ ಶು॥ ತದಿಗೆವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ಧನು ಭೇದ
13	[1]ಭಾನು	ಏಕಾ	28-5	ಚಿತ್ತ	13-5	28
14	[2]ಸೋ	ದ್ವಾ	22-9	ಸ್ವಾತಿ	9-56	29
15	[3]ಮಂ	ತ್ರ	16-13	ವಿಶಾ	5-33	1
16	[4]ಬುಧ	ಚತು	10-29	ಅನೂ	1-34	2
17	[5]ಗುರು	ಅಮಾ	5-8	ಮೂಲ	54-21	3
18	[6]ಶುಕ್ರ	ಪಾ	0-20	ಪೂಷಾ	55-31	4
19	ಶನಿ	ತದಿ	52-34	ಉಷಾ	50-11	5

(1) ಸರ್ವತ್ರೈಕಾದಶೀ, ಏಕಾದಶೀತಿಥಿಃ. (2) ತಿಥಿದ್ವಯಂ, ಪ್ರದೋಷಃ. (3) ಚತುರ್ದಶೀತಿಥಿಃ, ಷಡಶೀತಿಪುಣ್ಯಕಾಲಃ, ಚಲುವಾಂಬಮ್ಮಣ್ಣಿಯವರ ವರ್ಧಂತಿ, ಮಾಸಶಿವರಾತ್ರಿಃ. (4) ಸರ್ವತ್ರಾಮಾವಾಸ್ಯಾ, ಅಮೃತಸಿದ್ಧಿಯೋಗಃ. (5) ಮಾರ್ಗಶಿರಲಕ್ಷ್ಮೀವ್ರತಂ, ಪದ್ಮಕಃ. (6) ಅಭಾವಪಾತಃ, ಅವಮಃ, ಚಂದ್ರೋದಯಃ, ಸೋಸಲೆ ಭಾಷ್ಯದೀಪಿಕಾಚಾರರ ಪುಣ್ಯದಿನ, ಶ್ರೀರಂಗದಲ್ಲಿ ಅಧ್ಯಯನೋತ್ಸವಾರಂಭಃ, (ಪಹಲ್‌ಪತ್) ಸಫರ್ ಚಂ ೧.

ಮೈಗಂಗ್ ವೈ. ವಿರೂಪಾಕ್ಷಯ್ಯನವರಿಂದ ಕ್ರಾಸ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 124.

ಮೈಸೂರ್ ಸ್ಟಾರ್.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ।
ಘನಪಥಕೃತಾನತಾರಾ ಪಕ್ಷ್ಯಜ್ಞನಹೃತ್ತಮೋಹರಾಜೀಯಾತ್ ॥

ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ ।
ಸ್ತೋಮಾಭೀಷ್ಟದಶೀಲ ನಾಕಲಿತಸದ್ಗುಣ್ಯಾಲವಾಲಂವಲಂ ॥
ಸಿನಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ ।
ಪ್ರೇಮಂಬಿಭ್ರತೀಯಂಸದಾಪುರೀಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧-೦-೦
ಅಂಚೆವೆಚ್ಚ ಸೇರಿ ೧-೧೪-೦

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಸಂಪುಟ ೨೩) ಮೈಸೂರ್ ಸ್ಟಾರ್ ಸರ್ ೧೯೧೪ ನೆಯ ಇಸವಿ ಡಿಶಂಬರ್ ತಾರೀಖು ೨೦ ನೆಯ ಭಾನುವಾರ. (ಸಂಚಿಕೆ ೫೦

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರಿಗೂ ಸ್ಕೂಲ್‌ಮಾಸ್ಟರ್‌ಗಳಿಗೂ ವಿನಂತಿ.

೧೯೧೫ ನೇ ಇಸ್ವಿಯ ಸಚಿತ್ರ ಕ್ಯಾಲೆಂಡರ್‌ಗಳು ವಿಕರಿಗೆ ಸಿದ್ಧವಾಗಿವೆ ಕ್ರಯ ೧ ಕ್ಕೆ ೦-೦-೩ ಪೈ. ೫೦ ಕ್ಕೆ ೦-೧೧-೦ ಆಣೆ ೧೦೦ ಕ್ಕೆ ೧-೫-೦ ಪ್ಯಾಕಿಂಗ್ ಪೋಸ್ಟೇಜು ಮಾಫಿ ೫೦ ಕ್ಯಾಲೆಂಡರ್‌ಗಳಿಗಿಂತಲೂ ಕಡಿಮೆಯಾಗಿ ಪೋಸ್ಟುಮೂಲಕ ರವಾನಿಸಲಾಗುವುದಿಲ್ಲಾ.

ಈ ಕ್ಯಾಲೆಂಡರಿನಲ್ಲಿ ಇಂಗ್ಲೀಷ್ ಮತ್ತೂ ಕನ್ನಡ ತಿಂಗಳೂ, ತಾರೀಖು, ವಾರ, ತಿಥಿ. ನಕ್ಷತ್ರ, ಆಯಾಯ ದಿವಸದ ವಿಶೇಷ ದಿನಗಳು ವಿಶಿಷ್ಟ ಹಬ್ಬ ದಿವಸಗಳೂ ಇರುವುದಲ್ಲದೆ ಮೈಸೂರ್ ಮಹಾರಾಜರವರ ಮತ್ತೂ ಯುವರಾಜರವರ ಭಾವಚಿತ್ರಗಳೂ ಮತ್ತೂ ಮೈಸೂರ್ ಸಂಸ್ಥಾನದ ಈಗಿನ ಹೊಸ ಅರಮನೆಯಲ್ಲಿ ನಡೆಯುವ ನವರಾತ್ರೆ ಮಹೋತ್ಸವದ ದರ್ಬಾರ್ ಸಹಿತ ಇರುವ ನಕ್ಷೆಯನ್ನೂ ಸಹ ನುಣುಪಾದ (ಗ್ಲೇಜ್ ಪೇಪರ್) ಕಾಗದದಲ್ಲಿ ಅಂದವಾಗಿ ಪ್ರಿಂಟ್ ಮಾಡಿಸಿ ಮೇಲ್ಕಂಡ ದರದಂತೆ ಬಹುಸುಲಭಬೆಲೆಗೆ ಕೊಡುತ್ತಲಿದ್ದೇವೆ ಯಾದಕಾರಣ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ ಸ್ವಲ್ಪ ಪ್ರತಿಗಳುಮಾತ್ರ ಉಳಿದಿವೆ. ವಿಕರಿಯಾದನಂತರಬರತಕ್ಕ ಆರ್ಡರ್‌ಗಳನ್ನೆಲ್ಲಾ ಹೋದವರುಷದಂತೆ ಕ್ಯಾನ್ಸಲ್ ಮಾಡಲಾಗುತ್ತೆ.

ಈಗತಾನೇ ಸೀಮೆಯಿಂದ ಬಂದಿರತಕ್ಕ ರಖಂವಾರ್ ವಾಚ್‌ಗಳ ಕ್ರಯದಪಟ್ಟಿ. 45



೧ ರಾಸ್ಕೋಪ್ ಸಿಸನ್ಸ್ ಪೇಟೆಂಟ್ ಸ್ವಿಸ್ ಮೇಡ್ ವಾಚ್	೧ ಕ್ಕೆ	೨-೮-೦
೨ ಗರ್ಟೈಂ ರೈಲ್ವೇ ರೆಗ್ಯುಲೇಟರ್ ವಾಚ್	೧ ಕ್ಕೆ	೩-೮-೦
೩ ಡಿಟೋ ನಮೂನೆ ಬಿಕ್ಕೈಜ್ ವಾಚ್	೧ ಕ್ಕೆ	೪-೪-೦
೪ ಡಿಟೋ ಬಿಕ್ಕೈಜ್ ಸ್ಪೆಷಲ್ ಸರ್ವೀಸ್ ವಾಚ್	೧ ಕ್ಕೆ	೫-೮-೦
೪ ಪರ್ಪಲ್‌ಮೆರ್ ಡ್ರಸ್ ವಾಚೆಂಬ ಅತ್ಯುತ್ತಮವಾದ ಲೀವರ್ ವಾಚ್	೧ ಕ್ಕೆ	೮-೧೨-೦
೫ ಡಿಟೋ ನಮೂನೆ ಕೆಂಪುಗಳನ್ನು ಕೆತ್ತಿರುವ ವಾಚ್	೧ ಕ್ಕೆ	೯-೪-೦
೬ ಪೀಕಾಕ್ ವಾಚೆಂಬ ತೆಳುವಾದ ಮತ್ತೂ ಗ್ಯಾರೆಂಟಿಯಾದ ವಾಚ್ (ಸಾವಿರಾರು ವಿಕ್ರಯ)	೧ ಕ್ಕೆ	೧೦-೮-೦
೭ ವಾರಕ್ಕೊಂದಾವರ್ತಿ ಬೀಗಕೊಡುವ ನಿಕ್ಕಲ್ ಬೆಸ್ಟ್ ಕೇಸ್ ವಾಚ್	೧ ಕ್ಕೆ	೧೦-೮-೦
೮ ಡಿಟೋ ನಮೂನೆಯಲ್ಲಿ ಅಚ್ಚಬೆಳ್ಳಿಕೇಸಿನ ಬಿಕ್ಕೈಜ್ ವಾಚ್	೧ ಕ್ಕೆ	೧೫-೪-೦
೯ ೩೦ ಘಂಟೆಗೆ ಒಂದಾವರ್ತಿ ಬೀಗಕೊಡುವ ದೊಡ್ಡ ಬರ್ಮಾ ಟೈಂಪೀಸ್	೧ ಕ್ಕೆ	೧-೪-೦
೧೦ ಡಿಟೋ ನಮೂನೆ ಅಲಾರಂ ಟೈಂಪೀಸ್	೧ ಕ್ಕೆ	೨-೪-೦
೧೧ ಡಿಟೋ ನಮೂನೆಯಲ್ಲಿ ಘಂಟೆ ನಿಮಿಷ ಸೆಕೆಂಡ್ ತೋರಿಸಿ ಅಲಾರಂ ಇದ್ದು ತಾರೀಖು ಸಹ ತೋರಿಸುವ ದೊಡ್ಡ ಟೈಂಪೀಸ್	೧ ಕ್ಕೆ	೩-೪-೦
೧೨ ಬಾತ್ರಿಯಾದ ಅಸ್ಸೋನಿಯಾ "ಬಿ" ಟೈಂಪೀಸ್	೧ ಕ್ಕೆ	೨-೮-೦
೧೩ ಡಿಟೋ ಕಂಪೆನಿಯ ಅಲಾರಂಟೈಂಪೀಸ್ (ಬಹಳಮಜಬೂತಾದ್ದು) (ಸಾವಿರಾರುವಿಕ್ರಯ)	೧ ಕ್ಕೆ	೩-೮-೦
೧೪ ಅಸ್ಸೋನಿಯಾ ಕಂಪೆನಿಯಲ್ಲಿ ತಯಾರಾದ ಘಂಟೆ, ಅರ್ಧಘಂಟೆ ಹೊಡೆದು ಅಲಾರಂ ಇರತಕ್ಕ ದೊಡ್ಡಟೈಂಪೀಸ್ (ಅನೇಕಜನ ವಿದ್ಯಾರ್ಥಿಗಳು ಇದನ್ನೇ ಉಪಯೋಗಿಸುತ್ತಲಿದ್ದಾರೆ)	೧ ಕ್ಕೆ	೬-೧೨-೦
೧೫ ಘಂಟೆ, ಅರ್ಧಘಂಟೆ ಹೊಡೆಯುವ ಕ್ಯಾರೇಜ್ ಕ್ಲಾಕೆಂಬ ಟೇಬಲ್ ಘಡಿಯಾರ	೧ ಕ್ಕೆ	೪-೧೨-೦
೧೬ ಡಿಟೋ ನಮೂನೆಯಲ್ಲಿ ಘಂಟೆ, ಅರ್ಧಘಂಟೆಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್	೧ ಕ್ಕೆ	೫-೪-೦
೧೭ ಡಿಟೋ ನಮೂನೆಯಲ್ಲಿ ಘಂಟೆಹೊಡೆಯುವದಕ್ಕೆ ಪ್ರತಿಯಾಗಿ ಗಾನಹಾಡುವ ಕ್ಲಾಕ್	೧ ಕ್ಕೆ	೫-೮-೦
೧೮ ಡಿಟೋ ನಮೂನೆಯಲ್ಲಿ ತಾವಿಷ್ಟಪಟ್ಟ ಟೈಮಿಗೆ ಕಾಲುಘಂಟೆಕಾಲ ಕರ್ಣಾನಂದವಾಗುವಂತೆ ಮೃದುಮಧುರ ಗಾನಮಾಡತಕ್ಕ ಕ್ಲಾಕ್	೧ ಕ್ಕೆ	೫-೮-೦
೧೯ ಅಸ್ಸೋನಿಯಾ ಕಂಪೆನಿಯ ವಿನರ್ ಕ್ಲಾಕೆಂಬ ಗೋಡೆಗೆ ತಗಲಿಸುವ (೮ ಮೂಲೆಯ) ಅಷ್ಟಕೋಣಾಕೃತಿಯ ಬಿಕ್ಕೈಜ್ ಕ್ಲಾಕ್	೧ ಕ್ಕೆ	೬-೮-೦

ರಖಂವಾರ್ ವಾಚ್ ಸರಪಣಿಗಳು.

ನಿಕ್ಕಲ್ ಬೆಳ್ಳಿಯ ವಾಚ್‌ಸರಪಣಿ	೧ ಕ್ಕೆ	೦-೧೨-೦
ಅಚ್ಚಬೆಳ್ಳಿಯ ಜೇಬಿನ ವಾಚ್‌ಸರಪಣಿ	೧ ಕ್ಕೆ	೩-೪-೦
ಅಚ್ಚಬೆಳ್ಳಿಯ ಕೊರಳಸರಪಣಿ	೧ ಕ್ಕೆ	೧-೪-೦
೧೮ ಕ್ಯಾರೆಟ್ ಚಿನ್ನದ ವಾಚ್‌ಸರಪಣಿ	೧ ಕ್ಕೆ	೫-೮-೦
ವಾಚಿನ ಸರಪಣಿ ತುದಿಯಲ್ಲಿ ಹಾಕುವ ಅಚ್ಚಬೆಳ್ಳಿಯ ಶಾಶ್ವತವಾದ ಕ್ಯಾಲೆಂಡರ್ ಅಂದರೆ ಎಷ್ಟು ವರುಷಗಳ ವರಿಗಾದರೂ ತಾರೀಖು ನೋಡಬಹುದಾದ ಕ್ಯಾಲೆಂಡರ್ ಎಂದೆಂದಿಗೂಕೆಡತಕ್ಕದ್ದಲ್ಲಾ	೧ ಕ್ಕೆ	೧-೧೨-೦
ಡಿಟೋ ನಮೂನೆಯಲ್ಲಿ ೧೮ ಕ್ಯಾರಟ್ ಚಿನ್ನದಿಂದ ತಯಾರಿಸಿದ್ದು	೧ ಕ್ಕೆ	೩-೪-೦

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ಒಂದುಸಾರಿ ಶಾಯಿತುಂಬಿದರೆ ೧೦,೦೦೦ ಶಬ್ದಗಳನ್ನು ಬರೆಯಬಹುದಾದ ಲೇಖಣಿಗಳು.

ಪ್ರತಿಯೊಂದಕ್ಕೂ ೧೪ ಕ್ಯಾರೆಟ್ ಚಿನ್ನದ ನಿಬ್ಬು ಹಾಕಿದೆ

ನೆಪ್ಚೂನ್ ೨೦೦ನೇ ನಂ. ಪೆನ್	೧ ಕ್ಕೆ	೧-೧೪-೦
ನೆಪ್ಚೂನ್ ೨೫ನೇ ನಂ. ಪೆನ್	೧ ಕ್ಕೆ	೨-೧೦-೦
ನೆಪ್ಚೂನ್ ೨೧೦ನೇ ನಂ. ಪೆನ್	೧ ಕ್ಕೆ	೪-೨-೦

ಪ್ರತಿಯೊಂದು ಪೆನ್ ತರಿಸಿ ಕೊಳ್ಳುವವರಿಗೂ ೪ ಪದಾರ್ಥಗಳನ್ನು ಮುಫತ್ತಾಗಿ ರವಾನಿಸುತ್ತೇವೆ.

೧ ಪೆನ್‌ಗಳನ್ನಿಡತಕ್ಕ ಸುಂದರವಾದ ಪೆಟ್ಟಿಗೆ ೧.
೨ ಪೆನ್ನಿಗೆ ಶಾಯಿಹಾಕುವ ಗಾಜಿನಕೊಳವೆ ೧.
೩ ಪೆನ್‌ಗಳನ್ನು ಕ್ಲೀನ್ ಮಾಡುವ ವಿಧಾನ ಮತ್ತೂ ಶಾಯಿಹಾಕುವ ವಿಧಾನ ಪ್ರಿಂಟಾಗಿರುವ ಚೀಟಿ ೧.
೪ ಪೆನ್ನನ್ನು ಜೇಬಿಗೆ ತಗಲಿಸುವ ಸುಂದರವಾದ ಕ್ಲಿಪ್ ೧.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧-೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಶಿವಪೂಜಾವಿಧಿಃ	೦-೮-೦
ಚಾರುಶೀಲೆಚರಿತ್ರೆ	೦-೫-೦
ಸಟೀಕ ನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವಿವೇಕಮಂಜರಿ [೨ನೆಯ ಭಾಗ]	೦-೩-೦
ವ್ರತಪಂಚಕ	೦-೨-೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು.

164

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ ೩೩೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ— ಬೆಲೆ ೧ ೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ. ಶಿವಯೋಗಗಳು ಸಪ್ರಮಾಣವಾಗಿ ಷಟ್‌ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧ ೩-೦. ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ.— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ದಕ್ಷಾರಿಶತಕ ೨ ಆಣೆ; ಶಂಕರಲಿಂಗಕಂಪ ೧ ಆಣೆ.

ಎಸ್. ಆರ್. ಶಿವಬಸವಶಾಸ್ತ್ರಿ.

[illegible]

ಸ್ಟಾರ್ ಮುದ್ರಾಲಯವು.

ಈ ಮುದ್ರಾಲಯವು ಸಂತೇಪೇಟೆಯಿಂದ ಸಯ್ಯಾಜಿರಾವ್ ರೋಡಿನಲ್ಲಿ ದೊಡ್ಡ ಮಾರ್ಕೆಟ್ಟಿನ ಪೂರ್ವದ್ವಾರದ ಇದಿರುಭಾಗದಲ್ಲಿರುವ ಮಹಡಿಗೆ ವರ್ಗಾಯಿಸಲ್ಪಟ್ಟಿದೆ. ಈ ಮುದ್ರಾಲಯದಲ್ಲಿ ವಿಜಿಟಿಂಗ್ ಕಾರ್ಡುಗಳು, ಲಗ್ನಪತ್ರಿಕೆಗಳು, ಇನ್ವಿಟೇಷನ್ ಕಾರ್ಡುಗಳು ಮುಂತಾದವುಗಳು ನಾನಾವಿಧ ಬಣ್ಣದ ಶಾಯಿಗಳಿಂದಲೂ, ಚಿನ್ನದ ಗಿಲೀಟಿನಿಂದಲೂ, ನೇತ್ರಾನಂದಕರವಾಗಿ ಸ್ವಲ್ಪಕಾಲದಲ್ಲಿ ಸುಲಭದರದಿಂದ ಮುದ್ರಣಮಾಡಲ್ಪಡುವುವಲ್ಲದೆ ರೂಲ್‌ಫಾರಂಗಳೂ, ನೋಟೀಸು ಮೊದಲಾದ ಪುಸ್ತಕಗಳೂ ಇಂಗ್ಲೀಷ್ ಮತ್ತು ಕನ್ನಡ ಅಕ್ಷರಗಳಿಂದ ಶ್ಲಾಘ್ಯವಾಗಿಯೂ ಯೋಗ್ಯ ದರದಿಂದಲೂ ಮುದ್ರಣಮಾಡಿಕೊಡಲ್ಪಡುವುವು, ಮತ್ತು ಚಕ್ಕಳದ ಅಥವಾ ಸಾದಾ ಬೈಂಡುಕೆಲಸಗಳೂ ತೃಪ್ತಿಕರವಾಗಿ ಮಾಡಲ್ಪಡುವುವು. ಒಂದಾವೃತ್ತಿ ಪರೀಕ್ಷಿಸಿದಲ್ಲಿ ತಾನಾಗಿ ಗೊತ್ತಾಗುವುದು. ಮ್ಯಾನೇಜರ್.

ನೋಟೀಸ್.

೩

ಬಂಗಲೆಯು ಕ್ರಯಕ್ಕೆ ಸಿದ್ಧವಾಗಿದೆ !

ಮೈಸೂರ ಲಾ ಕೋರ್ಟುಗಳ ಸಮೀಪದಲ್ಲಿ ಇಂಜನಿಯರ್ ರಾಘವಲು ನಾಯುಡುಯವರ ಬಂಗಲೆಯ ದಕ್ಷಿಣಕ್ಕೆ ಪಶ್ಚಿಮಾಭಿಮುಖವಾಗಿರುವ ಪೆರಮಾಳು ಪಿಳ್ಳೆಯವರ ಬಂಗಲೆಯು ಬಿಕರಿಗೆ ಸಿದ್ಧವಾಗಿದೆ. ಈ ಬಂಗಲೆಯು ೧೧೫ ಅಡಿ ಉದ್ದವೂ, ೫೫ ಅಡಿ ಅಗಲವೂ ಇದೆಯಲ್ಲದೆ ಇದರಲ್ಲಿ ಗಾಡಿಖಾನೆ, ಒಕ್ಕಲು, ಭಾವಿ, ನೀರಿನ ನಲ್ಲಿಗಳು, ವಿಶಾಲವಾದ ಕಾಂಪೌಂಡು ಇವೆ. ಇದಕ್ಕೆ ತಿಂಗಳೊಂದಕ್ಕೆ ೩೫ ರೂಪಾಯಿ ಬಾಡಿಗೆ ಬರುತ್ತದೆ. ಇದನ್ನು ಕೊಂಡುಕೊಳ್ಳಲಿಷ್ಟವುಳ್ಳವರು ಈ ಕೆಳಗಿನ ವಿಳಾಸದಾರರಿಗೆ ಕಾಗದವನ್ನು ಬರೆದು ಎಲ್ಲಾ ಸಂಗತಿಯನ್ನೂ ತಿಳಿಯಬಹುದು. ಮತ್ತು ಮನೆಯನ್ನು ನೋಡಲಿಷ್ಟವುಳ್ಳವರು ಸುಬ್ರಾಯನ ಕೆರೆಯಲ್ಲಿ ಮಠವನ್ನು ಕಟ್ಟಿಸಿಕೊಂಡಿರುವ ರಾಮರಾಮನುಜ ದತ್ತಾತ್ರಿಯವರನ್ನಾಗಲಿ ಮಿಠಾಯಿ ಅಂಗಡಿ ಸಾಹುಕಾರ್ ರಾಮುಸುಖ್‌ರಾಂ ರವರನ್ನಾಗಲಿ ಕೇಳಿದಲ್ಲಿ ತೋರಿಸುವರು

ವಿಳಾಸ:—ಫುಸಂಚಂದ್ ಕೇಸಮಲ್,
ಅಂಡರ್‌ಸನ್ ಪೇಟೆ, ಕೋಲಾರ್ ಗೋಲ್ಡ್‌ಫೀಲ್ಡ್ಸ್.

ದರ್ಬಾರ್‌ಡೇ ಉತ್ಸವಗಳು.

ಚಿಕ್ಕನಾಯಕನ ಹಳ್ಳಿ ತಾ॥ ಶೆಟ್ಟೀಕೆರೆ.

ಇದೇ ಮಾಹೆ ೧೦ ನೆಯ ತಾರೀಖಿನಲ್ಲಿ ಪದ್ಧತಿಪ್ರಕಾರ ಈ ಗ್ರಾಮದ ಗ॥ ಕನ್ನಡ ಬಾಯ್ಸ್‌ಸ್ಕೂಲಿನಲ್ಲಿ "ದರ್ಬಾರ್‌ಡೇ" ಉತ್ಸವವನ್ನು ವಿಜೃಂಭಣೆಯಿಂದ ನಡೆಯಿಸಲಾಯ್ತು, ಪಾಠಶಾಲೆಯ ಒಳಗೂ, ಹೊರಗೂ, ತಳಿರುತೋರಣಾದಿಗಳಿಂದಲೂ, ಕದಳೀಸ್ತಂಭಗಳಿಂದಲೂ, ಮನೋಹರವಾದ ವಿಚಿತ್ರತರಗಳಾದ ಪುಷ್ಪಲತಾಸಮೂಹಗಳಿಂದಲೂ ನೋಟಕರಿಗತ್ಯಂತ ನೇತ್ರಾನಂದಕರವಾಗಿರುವಂತೆ ಸಿಂಗರಿಸಿ, ಬ್ರಿಟಿಷ್ ಬಾವುಟ [illegible] ಕಟ್ಟಿದ್ದರು. ಶ್ರೀಮನ್ ಜಾರ್ಜ್‌ಸಾರ್ವಭೌಮ [illegible] ತಿಯನ್ನು ಶ್ರೀಮನ್ಮಹಾರಾಜಾರಾಜಾ [illegible] ಬಹದ್ದೂರ್ ಜಿ.ಸಿ.ಎಸ್.ಐ. ರವರ ಭಾವಚಿತ್ರದೊಡನೆ ಉನ್ನತವಾದ ಭದ್ರಾಸನದಲ್ಲಿ ಸುಂದರವಾದ ಮಂಟಪದ ಮಧ್ಯೆ ಅಲಂಕರಿಸಿಟ್ಟಿದ್ದರು. ಮ॥ರಾ॥ ಬಾಯ್ಸ್‌ಸ್ಕೂಲ್ ಅಮಾಸ್ಟರುಗಳು ಮತ್ತು ಗರ್ಲ್ಸ್‌ಸ್ಕೂಲ್ ಮಾಸ್ಟರುಗಳೊಡನೆ ಹೆಡ್‌ಮಾಸ್ಟರವರೂ, ಅವರ ಕೋರಿಕೆಯಂತೆ ಸ್ಕೂಲ್ ಕಮಿಟಿ ಮೆಂಬರುಗಳೂ ಇತರ ದೊಡ್ಡಮನುಷ್ಯರೂ ಬಾಲಕಬಾಲಕಿಯರೂ ಉಚಿತಾಸನಗಳಲ್ಲಿ ಸುಖಾಸೀನರಾಗಿದ್ದರು. ಸಭೆಯು ಮಧ್ಯಾಹ್ನ ಸುಮಾರು ೨ ಘಂಟೆಗೆ ಸೇರಿದನಂತರ ಬಾಯ್ಸ್‌ಸ್ಕೂಲ್ ಹೆ॥ ರವರು ಶ್ರೀ ಜಾರ್ಜ್ ಸಾರ್ವಭೌಮರವರ ಜನನಾದಿಯಾದ ಚರಿತ್ರಾಮೃತವನ್ನು ಸಭಿಕರಿಗೆಲ್ಲರಿಗೂ ಪಾನಮಾಡಿಸಿ, ಬ್ರಿಟಿಷ್‌ಪ್ರಭುತ್ವದಿಂದ ಆಗಿರುವ ಜನೋಪಕಾರಗಳನ್ನು ತಿಳಿಯಪಡಿಸಿ, ಕರ್ಣಾನಂದವನ್ನುಂಟುಮಾಡಿ, ಸದ್ಯಃ ಆಂಗ್ಲಸಾಮ್ರಾಜ್ಯಕ್ಕೊದಗಿರುವ ಯುದ್ಧಸಂಬಂಧವಾದ ಕಷ್ಟವನ್ನು ಇಂಥ ಕಾಲದಲ್ಲಿ ರಿಲೀಫ್‌ಫಂಡಿಗೆ ಸಹಾಯಮಾಡುವುದರ ಮೂಲಕ ರಾಜಭಕ್ತಿಯನ್ನು ತೋರಿಸುವುದು ಪ್ರಜೆಗಳಾದ ನಮ್ಮ ಮುಖ್ಯಕರ್ತವ್ಯವೆಂಬುವುದನ್ನು ಹೃದಯಂಗಮವಾಗುವಂತೆ ಉಪನ್ಯಾಸಮಾಡಿದರು. ಅನಂತರ ಬಾಲಕಬಾಲಕಿಯರಿಂದ ಶ್ರೀ ಸಾರ್ವಭೌಮರವರ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಗಳೂ 'ನರುಗಲ್ ಬಯಾಸ್ಕೋಪ್' ಕಂಪೆನಿಯವರ ಗ್ರಾಮಾಫೋನ್‌ವಾದ್ಯವೂ ಜರುಗಿದವು. ಕಮಿಟಿ ಮೆಂಬರುಗಳಾದ ಮ॥ ಕೆರೆ ಕೃಷ್ಣಪ್ಪನವರು, ಮ॥ ಸಾಹುಕಾರ್ ಶಿವಲಿಂಗಶೆಟ್ಟರು, ಮ॥ ರಾ॥ ಪಟೇಲ್ ಬೋರೇಗೌಡರು, ಮ॥ ಶಿದ್ಧರಾಮಸೆಟ್ಟರು, ಈ ಉತ್ಸವವನ್ನು ಬಹು ಉತ್ಸಾಹದಿಂದ ನಡೆಯಿಸಲು ಮುತವರ್ಜಿಯನ್ನು ವಹಿಸಿ ಮುಂದಾಳುಗಳಾಗಿ ನಿಂತು ಮೊದಲೇ ಏರ್ಪಡಿಸಿದ್ದಂತೆ ಸ್ಕೂಲ್ ಬಾಲಕಬಾಲಕಿಯರಿಗೆ ಬಹುಮಾನ ಪುಸ್ತಕಗಳು ಹಂಚಲ್ಪಟ್ಟವು. ತರುವಾಯ ನೆರೆದಿದ್ದವರಿಗೆಲ್ಲರಿಗೂ ಗಂಧ, ಪುಷ್ಪ, ಫಲಹಾರ ತಾಂಬೂಲಾದ್ಯುಪಚಾರಗಳನ್ನು ಸಲ್ಲಿಸಿ ಅತ್ಯಂತ ಕೋಲಾಹಲದಿಂದ ಜಯಘೋಷದೊಡನೆ ಸಭೆಯನ್ನು ಬರಖಾಸ್ತು ಮಾಡಲಾಯಿತು. ಓರ್ವ ಪ್ರೇಕ್ಷಕ.

ಗಂಜಾಂ.

ಇದೇ ೧೯೧೪ ನೇ ಡಿಸೆಂಬರು ೧೨ ನೇ ತಾರೀಖು ದರ್ಬಾರ್‌ಡೇ ಅದಪ್ರಯುಕ್ತ ಇಲ್ಲಿನ ಗೌರ್ನಮೆಂಟ್ ಕನ್ನಡ ಬಾಯ್ಸ್‌ಸ್ಕೂಲ್ ಹೆಡ್ಮಾಸ್ಟರ್ ಕೆ. ಅಪ್ರಮೇಯ ಶಾಸ್ತ್ರಿಗಳ ಪ್ರೋತ್ಸಾಹದಿಂದ ಸ್ಕೂಲನ್ನು ತಳಿರುತೋರಣಗಳಿಂದ ಮನೋಹರವಾಗಿ ಅಲಂಕರಿಸಿ, ಘನತೆಯನ್ನು ಹೊಂದಿದ ೫ನೇ ಜಾರ್ಜ್‌ಚಕ್ರವರ್ತಿಗಳವರ ಮತ್ತು ಚಕ್ರವರ್ತಿನಿಯವರ ಚಿತ್ರಪಟವನ್ನೂ ಶ್ರೀಮನ್ಮಹಾರಾಜರವರ ಚಿತ್ರಪಟವನ್ನೂ ಸಹ ಅಲಂಕಾರಮಾಡಿ, ಬೆಳಗಿನ ೮ ಘಂಟೆಗೆ ಮೇಲ್ಕಂಡ ಕಟ್ಟಡದಲ್ಲಿ ಕನ್ನಡ ಸ್ಕೂಲ್ ರೋಮನ್ ಕ್ಯಾಥೋಲಿಕ್ ಸ್ಕೂಲ್ ಗರ್ಲ್‌ಸ್ಕೂಲ್ ಮಾಸ್ಟರುಗಳೂ ಮತ್ತು ಬಾಲಕಬಾಲಕಿಯರೂ ವರ್ತಕಪ್ರಮುಖರೇ ಮೊದಲಾದ ಪುರನಿವಾಸಿಗಳೂ ನೆರೆದಿದ್ದರು. ವೀಣೆಯಲ್ಲಿ ಪಾಂಡಿತ್ಯವನ್ನು ಹೊಂದಿದ ಮ॥ ಸೂರಪ್ಪನವರೂ ಮತ್ತು ಅವರ ಮಕ್ಕಳು ಮ॥ ಸುಬ್ಬರಾಯರೂ ಸಹ ೮ ಘಂಟೆ ಲಾಗಾಯಿತು ೯ ಘಂಟೆವರೆಗೆ ಹಾಡುಗಾರಿಕೆಯನ್ನು ನಡೆಸಿದರು. ತರುವಾಯ ಅ॥ ಮಾ॥ ಮ॥ ರಾ॥ ವೆಂಕಟರಾಮಾಜೋಯಿಸ್ನರು ಇಂಗ್ಲೀಷ್‌ರಾಜ್ಯಭಾರದಿಂದ ನಮಗುಂಟಾಗಿರುವ ಪ್ರಯೋಜನಗಳನ್ನು ಕುರಿತು ಮ॥ ಶ್ಯಾ॥ ಕೃಷ್ಣಪ್ಪನವರು ಉಪನ್ಯಾಸಮಾಡಬೇಕೆಂಬುದನ್ನು ಸಭಿಕರಲ್ಲಿ ಸೂಚಿಸಲು ಸಭಿಕರು ಅನುಮೋದಿಸಿದರು. ಅನಂತರ ೧೦॥ ಘಂಟೆವರೆಗೆ ಚೆನ್ನಾಯಕನಹಳ್ಳಿ ಮತ್ತು ಕಸಬಾ ಶಾನುಭೋಗರು ಆದ ಮ॥ ಕೃಷ್ಣಪ್ಪನವರು ಪುರುಷಪ್ರಯತ್ನದಿಂದ ಸಕಲ ಇಷ್ಟಾರ್ಥಗಳೂ ಲಭಿಸುತ್ತೆಂಬ ವಿಷಯದಲ್ಲೂ, ಇಂಗ್ಲೀಷ್ ರಾಜ್ಯಭಾರದಿಂದ ನಮಗೆ ಉಂಟಾಗಿರತಕ್ಕ ಪ್ರಯೋಜನಗಳ ವಿಷಯದಲ್ಲೂ ಸಹ ಬಾಲಕಬಾಲಕಿಯರಿಗೂ ಮತ್ತು ಸಭಿಕರಿಗೂ ತಿಳಿಯುವಂತೆ ಸರಸವಾಗಿಯೂ ಚಮತ್ಕಾರವಾಗಿಯೂ ಉಪನ್ಯಾಸಮಾಡಿದರು. ತರುವಾಯ ಕಸಬಾ ಶೇಕದಾರ್ ಮ॥ ಕೃಷ್ಣಯ್ಯಂಗಾರ್ರವರು ಈ ವರ್ಷ ಗೌರ್ನಮೆಂಟ್ ಕನ್ನಡ ಬಾಯ್ಸ್ ಸ್ಕೂಲಿನಲ್ಲಿ ಲೋವರ್‌ಸೆಕಂಡರಿ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದ ಚನ್ನಯ್ಯನೆಂಬುವನಿಗೆ ವಿದ್ಯಾಭ್ಯಾಸದ ಇಲಾಖೆಯವರಿಂದ ಕೊಡಲ್ಪಟ್ಟಿದ್ದ ಸರ್ಟಿಫಿಕೇಟನ್ನು ಸ್ವಹಸ್ತದಿಂದ ಕೊಟ್ಟು ಉಳಿದ ವಿದ್ಯಾರ್ಥಿಗಳೂ ಹೀಗೆಯೇ ಸರ್ಟಿಫಿಕೇಟುಗಳನ್ನು ಪಡೆಯಲು ಮುಂದುವರಿಯಬೇಕೆಂದು ಬಾಲಕರಿಗೆ ಬುದ್ಧಿವಾದವನ್ನು ತಿಳಿಸಿದರು. ಅನಂತರ ನಮ್ಮ ಮೈಸೂರು ಸಂಸ್ಥಾನದ ದಿವಾನ್‌ಸಾಹೇಬರವರಿಂದ ರಚಿತವಾಗಿರುವ ಗ್ರಾಮಾಭಿವೃದ್ಧಿ ಕಟ್ಟಳೆಗಳು ಎಂಬ ಪುಸ್ತಕವನ್ನು ಮ॥ ಶೇಕದಾರ್ ಕೃಷ್ಣಯ್ಯಂಗಾರ್ರವರ ಅನುಮತಿಯಂತೆ ಓದಿ ತಿಳಿಸಲಾಯಿತು. ತರುವಾಯ ಗೌರ್ನಮೆಂಟ್ ಕನ್ನಡಬಾಯ್ಸ್‌ಸ್ಕೂಲ್ ಹೆ॥ ಮಾ॥ ಕೆ. ಅಪ್ರಮೇಯ ಶಾಸ್ತ್ರಿಗಳವರು ನಮ್ಮನ್ನು ನೆಮ್ಮದಿಯಿಂದ ಪರಿಪಾಲಿಸುತ್ತಿರುವ ೫ನೇ ಜಾರ್ಜ್‌ಚಕ್ರವರ್ತಿಗಳವರ ಮತ್ತು ಮಹಾರಾಜರವರ ಶ್ರೇಯಃಪ್ರಾರ್ಥನೆಯನ್ನು ಮಾಡೋಣವೆಂದು ಸಭೆಯಲ್ಲಿ ಉದಹರಿಸಿದುದರಮೇಲೆ ಶ್ರೇಯಃಪ್ರಾರ್ಥನೆಯನ್ನು ಮಾಡಿ ಸಭಿಕರಿಗೆ ಗಂಧಪುಷ್ಪತಾಂಬೂಲಾದಿಗಳು ಹಂಚಲ್ಪಟ್ಟಿತು. ಗಂಜಾಂ ಗ॥ ಕನ್ನಡ ಬಾಯ್ಸ್‌ಸ್ಕೂಲಿನಲ್ಲಿ ದರ್ಬಾರ್‌ಡೇ ಎಂಬುದನ್ನು ಇಷ್ಟು ವಿಜೃಂಭಣೆಯಿಂದ ಅ॥ ಹೆ॥ ಮಾ॥ ಅಪ್ರಮೇಯಶಾಸ್ತ್ರಿಗಳವರು ನೆರವೇರಿಸಿದುದಕ್ಕೆ ಪುರನಿವಾಸಿಗಳಿಗೆ ತುಂಬಾ ಸಂತೋಷವುಂಟಾಗಿರುವುದಲ್ಲದೆ ಸ್ಕೂಲ್ ಅಭಿವೃದ್ಧಿಯ ವಿಷಯದಲ್ಲಿ ತುಂಬಾ ಗಮನವಿಟ್ಟು ಬಾಲಕರ ಪ್ರೀತಿಗೆ ಪಾತ್ರರಾಗಿ ಸ್ಕೂಲ್ ಬಾಲಕರ ಸಂಖ್ಯೆಯನ್ನು ಸಹ ಹೆಚ್ಚಿಸುತ್ತಿರುವುದು ಸ್ತೋತ್ರಾರ್ಹವಾಗಿದೆ. ಮತ್ತು ಈ ಅ॥ ಹೆ॥ ಮಾ॥ ರವರು ಪಶುವೈದ್ಯದಲ್ಲಿ ಪ್ರೈವಟ್ ಆಗಿರುವುದರಿಂದ ಅದರ ಅನುಭವವನ್ನೂ ಸಹ ಸಂಪೂರ್ಣವಾಗಿ ಹೊಂದಿ, ಈ ಊರಿನಲ್ಲಿ ದನಗಳಿಗೆ ಉಂಟಾದ ಅನೇಕ ರೋಗಗಳಿಗೆ ತಕ್ಕ ಔಷಧಗಳನ್ನು ಕೊಟ್ಟು ಗುಣಪಡಿಸಿರುತ್ತಾರೆ. ಇದರಿಂದ ಗ್ರಾಮಾಂತರದವರೂ ಸಹ ರೋಗಗ್ರಸ್ತವಾದ ಪಶುಗಳಿಗೆ ಔಷಧಗಳನ್ನು ಕೊಡಿಸಿ ಕಷ್ಟನಷ್ಟಗಳಿಂದ ಪಾರಾಗುವುದಕ್ಕೆ ತುಂಬಾ ಅನುಕೂಲ. ಅಲ್ಲದೆ ಈ ಚಿಕಿತ್ಸೆಗಾಗಿ ಧನಾರ್ಜನೆಯಲ್ಲಿ ಮನಸ್ಸಿಡದೆ ಕರುಣೆಯಿಂದ ಚಿಕಿತ್ಸೆಮಾಡುತ್ತಿರುವುದು ಜನಗಳಿಗೆ ತುಂಬಾ ಸಂತೋಷವನ್ನುಂಟುಮಾಡಿದೆ. ಇಂಥಾವರಿಗೆ ಗೌರ್ನಮೆಂಟಿನವರು ಇದಕ್ಕಾಗಿ ತಕ್ಕಪ್ರೋತ್ಸಾಹ ಕೊಡುವದು ಉತ್ತಮವಾಗಿದೆ. ಈ ದರ್ಬಾರ್‌ಡೇ ದಿನವು ಸುದಿನವೆಂಬುದನ್ನು ದೇವೇಂದ್ರನು ಸೂಚಿಸುತ್ತಾನೋ ಎಂಬಂತೆ ಸಂಪೂರ್ಣವಾಗಿ ಆದಿನ ವೃಷ್ಟಿಯಾಯಿತು. ಈ ಊರಿನಲ್ಲಿ ಒಂದು ತಿಂಗಳಿಂದ ಆಗಾಗ್ಯೆ ೧-೨ ಪ್ಲೇಗ್ ಕೇಸುಗಳು ಆಗುತ್ತಾ ಇವೆ. ಅಲ್ಲಲ್ಲಿ ಇಲಿಗಳು ಸಾಯುತ್ತಿರುವುವು. ಆ ಕಾಲವು ಮೇಘದಿಂದ ಕೂಡಿ ಆಗಾಗ್ಯೆ ಸ್ವಲ್ಪಸ್ವಲ್ಪ ತುಂತುರುಮಳೆ ಬೀಳುತ್ತಾ ಇರುವುದು. ಬತ್ತದ ಕುಯ್ಲು ಪ್ರಾರಂಭವಾಗಿದೆ. ಈ ಊರಿನಲ್ಲಿ ಪರೋಪಕಾರನಿರತರಾಗಿಯೂ ಧೈರ್ಯಶಾಲಿಗಳಾಗಿಯೂ ಕಾರ್ಯದಕ್ಷರಾಗಿಯೂ ಸುಗುಣಿಗಳಾಗಿಯೂ ಇದ್ದ ಸಾಹುಕಾರ್ ಸುಬ್ಬರಾಯಮೊದಲಿಯಾರ್ರವರು ೧೦ ನೇ ತಾ॥ ರಾತ್ರಿ ಸ್ವರ್ಗಸ್ಥರಾದರೆಂಬ ವಿಷಯವನ್ನು ವಾಚಕರಿಗೆ ತಿಳಿಸಲು ತುಂಬಾ ವಿಷಾದವಾಗಿದೆ.

ಸೊರಬ.

ಗೌರ್ನಮೆಂಟ್ ಎ. ವಿ. ಸ್ಕೂಲು ತಾ॥ ೧೨-೧೨-೧೪ ನೇ ದಿವಸ ದರ್ಬಾರ್‌ಡೆ ಉತ್ಸವದ ಬಗ್ಗೆ ಶೃಂಗರಿಸಲ್ಪಟ್ಟಿದ್ದು, ಬಾಲಕ ಬಾಲಕಿಯರಿಂದಲೂ ಸ್ಥಲನಿವಾಸಿಗಳಿಂದಲೂ ತುಂಬಿ ಮನೋಹರವಾಗಿದ್ದಿತು. ಪ್ರಾತಃಕಾಲದ ೭ ಘಂಟೆಗೆ ಕೆಲಸಗಳು ಪ್ರಾರಂಭಿಸಲ್ಪಟ್ಟವು ಶ್ರೀಮನ್ ಚಕ್ರವರ್ತಿ ದಂಪತಿಗಳ, ಮತ್ತು ನಮ್ಮನ್ನಾಳುವ ಶ್ರೀಮನ್ ಮೈಸೂರು ಸಂಸ್ಥಾನದ ಶ್ರೀಕೃಷ್ಣರಾಜೇಂದ್ರಬಹದುರ್ ಮಹಾಸ್ವಾಮಿಯವರ ಜಿ.ಸಿ.ಎಸ್.ಐ, ಬಿರುದಿನ ಭಾವಚಿತ್ರಗಳು ಹಾರ, ತುರಾಯಿ, ಪುಷ್ಪಗಳಿಂದ ಶೃಂಗರಿಸಲ್ಪಟ್ಟು ನೋಟಕರುಗಳಿಗೆ ಆನಂದವನ್ನುಂಟುಮಾಡುತ್ತಿದ್ದವು. ಸ್ಕೂಲ್ ಕಾಂಪೌಂಡಿನಲ್ಲಿ ಶ್ರೀಮನ್ ಚಕ್ರವರ್ತಿಗಳ ಬಿರುದಿನ ಬಾವುಟಗಳು ನಿಲ್ಲಿಸಲ್ಪಟ್ಟು ಸರ್ವರಿಂದಲೂ ಸೆಲ್ಯೂಟ್ ನಡೆದು, ಆ ಕ್ಷಣವೆ ಚಕ್ರವರ್ತಿಗಳವರ ಶ್ರೇಯಃಪ್ರಾರ್ಥನೆಯು ನಡೆಸಲ್ಪಟ್ಟು, ಉತ್ಸವದೊಡನೆ ಬಾವುಟಗಳು ಕಟ್ಟಡದೊಳಕ್ಕೆ ತರಲ್ಪಟ್ಟು ಭಾವಚಿತ್ರಗಳ ಪಕ್ಕಗಳಲ್ಲಿ ಇರಿಸಿ, ಸ್ಕೂಲ್ ಬಾಲಕ, ಬಾಲಕಿಯರುಗಳಿಂದ ಶ್ರೇಯಃಪ್ರಾರ್ಥನೆಗಳು ನಡೆಸಲ್ಪಟ್ಟವು. ಅನಂತರ ಮ॥ ಎ. ವಿ. ಸ್ಕೂಲ್ ಹೆ॥ ಎಮ್. ಶ್ರೀನಿವಾಸರಾಯರವರು, ಇಂಗ್ಲೀಷ್‌ಪ್ರಭುತ್ವವು ನೆಲೆಗೊಂಡಂದಿನಿಂದ ಸರ್ವಪ್ರಜೆಗಳಿಗೂ ಉಂಟಾಗಿರತಕ್ಕ ಅನುಕೂಲಗಳು, ಅದಕ್ಕೆ ಮುಂಚೆ ಇದ್ದ ಅನಾನುಕೂಲಗಳು, ಇವರ ಪ್ರಭುತ್ವವು ನೆಲೆಗೊಂಡಿರತಕ್ಕ ಭೂಭಾಗ, ಜನಸಂಖ್ಯೆಗಳ ವಿಚಾರ—ಇವುಗಳನ್ನು ಕುರಿತು ಗ್ಲೋಬ್ ಮುಂತಾದ ಉಪಕರಣಗಳ ಮೂಲಕ ಸರ್ವರಿಗೂ ಹೃದಯಂಗಮವಾಗುವಂತೆ ತಿಳಿಯಪಡಿಸಿದರು. ಮ॥ ಗರ್ಲ್ಸ್‌ಸ್ಕೂಲ್ ಹೆ॥ ಟಿ. ಶಾಮರಾಯರು ಇಂಗ್ಲೀಷ್ ಪ್ರಭುತ್ವದಿಂದ ಉಂಟಾಗಿರತಕ್ಕ, ಇನ್ನು ಮುಂದೆ ಉಂಟಾಗುವ ಪ್ರಯೋಜನಗಳೆಲ್ಲವನ್ನೂ ಸ್ಪಷ್ಟಪಡಿಸಿದರು. ಈ ಕಾಲಕ್ಕೆ ಆಗಮಿಸಿದ್ದ ಶಿಕಾರಿಪುರದ ಮಿಷನ್ ಗರ್ಲ್ಸ್‌ಸ್ಕೂಲ್ ಲೇಟ್ ಹೆ॥ ಮಾ॥ ಎನ್. ಸಿ. ಭೀಮರಾಯರವರು ವಿದ್ಯಾಭ್ಯಾಸಕ್ಕೆ ಸದರಿ ಪ್ರಭುತ್ವದಿಂದ ಉಂಟಾಗಿರತಕ್ಕ ಫಲಗಳೆಲ್ಲವನ್ನೂ ವಿವರಿಸಿದರು. ೧೦ ಘಂಟೆಗೆ ಸರಿಯಾಗಿ ಪುನಃ ಶ್ರೇಯಃಪ್ರಾರ್ಥನೆಗಳು ನಡೆದು ಸರ್ವರಿಗೂ ಗಂಧ, ತಾಂಬೂಲವು ಹಂಚಲ್ಪಟ್ಟು, ಇಂಗ್ಲೀಷ್ ಪ್ರಭುಗಳ ಪ್ರಭುತ್ವವು ಚಂದ್ರಾರ್ಕವಾಗಿರಲೆಂಬ ಜಯಧ್ವನಿಯಿಂದ ಪ್ರಾತಃಕಾಲದ ಕೆಲಸಗಳು ಪೂರ್ಣಗೊಳಿಸಲ್ಪಟ್ಟವು. ಮಧ್ಯಾಹ್ನ ೩ ಘಂಟೆಗೆ ಬಾಲಕ, ಬಾಲಕಿಯರುಗಳ ಆಟಪಾಟಗಳನ್ನು ನಡೆಯಿಸಿ ತೇರ್ಗಡೆ ಹೊಂದಿದವರಿಗೆ ದ್ರವ್ಯರೂಪವಾದ ಬಹುಮಾನವು ಹಂಚಲ್ಪಟ್ಟು, ಸರ್ವಬಾಲಕ, ಬಾಲಕಿಯರುಗಳಿಗೆ ಬೆಂಡು, ಬತ್ತಾಸು ಮೊದಲಾದ ತಿಂಡಿಯು ಹಂಚೆ, ಪುನಃ ಶ್ರೇಯಃಪ್ರಾರ್ಥನೆಗಳೂ ಮಂಗಳಗಾನಗಳೂ ನಡೆದು ಸಾಯಂಕಾಲ ೬ ಘಂಟೆಗೆ ಈ ದಿನದ ಉತ್ಸವವನ್ನು ಹೀಗೆ ತುಂಬಾ ವಿಜೃಂಭಣೆಯಿಂದ ಸಂಪೂರ್ಣಗೊಳ್ಳುವಂತೆ ನಮ್ಮ ಎ. ವಿ ಸ್ಕೂಲ್ ಹೆಡ್ಮಾಸ್ಟರವರು ಸಾಂಗವಾಗಿ ನೆರವೇರಿಸಿದರು. ಓರ್ವ ಪ್ರೇಕ್ಷಕ.

ಸೊರಬ ತಾ॥ ಅಂಡಿಗೆಗ್ರಾಮ.

ತಾ॥ ೧೨ನೇ ಶನಿವಾರಬೆಳಿಗ್ಗೆ ೮ಘಂಟೆಗೆ ಹಾಲಿ ಸ್ಕೂಲು ಮಾಡುತ್ತಿರುವ ಮಾರುತಿದೇವಾಲಯವು ಸುಣ್ಣ ಕೆಮ್ಮಣ್ಣು ತೋರಣ ಕದಳೀಸ್ತಂಭಗಳಿಂದ ಅಲಂಕರಿಸಲ್ಪಟ್ಟು ಸಭೆಯು ಸೇರಿಸಲ್ಪಟ್ಟಿತು. ಮ॥ ಉರುಗನಹಳ್ಳಿ ಪಟೇಲ್ ವೆಂಕಪ್ಪಜೋಯಿಸ್ನರೂ, ಅಂಡಿಗೆಪಟೇಲ್ ಮಲ್ಲಪ್ಪಒಡೆಯರೂ, ಮಾವಲಿಪಟೇಲ್ ಪಂಚಾಕ್ಷರಪ್ಪಗೌಡರೂ, ಯಲವಳ್ಳಿ ಪಟೇಲ ಶಿವನಪ್ಪನವರೂ ಮುಂತಾದ ಇನ್ನೂ ಇತರ ದೊಡ್ಡಮನುಷ್ಯರೂ ಗ್ರಾಮಸ್ಥರೂ ಬಾಲಕ ಬಾಲಕಿಯರೂ ಸಹ ಸೇರಿದ್ದರು. ಸ್ಕೂಲ್‌ಮಾಸ್ಟರು ಶೇಷಗಿರಿರಾಯರು ಸಭಿಕರನ್ನು ಆದರಪೂರ್ವಕವಾಗಿ ಬರಮಾಡಿಕೊಂಡು ಸ್ಕೂಲ್ ಹೊರಗಡೆ ಮುಂಭಾಗದ ಮೈದಾನದಲ್ಲಿ ಇರಿಸಲ್ಪಟ್ಟಿದ್ದ ಬ್ರಿಟಿಷ್ ಮತ್ತು ಮೈಸೂರು ಬಾವುಟಗಳಿಗೆ ಬಾಲಕರು ಸೆಲ್ಯೂಟ್‌ಪೂರ್ವಕ ಮರ್ಯಾದೆಯನ್ನೂ ಇತರರು ಮರ್ಯಾದಾಪೂರ್ವಕ ವಂದನೆಯನ್ನೂ ಅರ್ಪಿಸಿ, ನಮ್ಮ ಶ್ರೀಮಚ್ಚಕ್ರವರ್ತಿಗಳವರಿಗೂ ಶ್ರೀಮನ್ಮಹಾರಾಜರವರಿಗೂ ಮಂಗಳವುಂಟಾಗಲೆಂದು ಕರತಾಡನಗಳಿಂದ ಜಯಘೋಷದೊಡನೆ ಭೂಮಳೆಯನ್ನು ಕರೆದರು. ನಂತರ ಸಭೆಯು ಒಳಭಾಗದಲ್ಲಿ ಸೇರಿಸಲ್ಪಟ್ಟು ಒಳಭಾಗದಲ್ಲಿ ಹೂವಿನ ಮಾಲೆಗಳಿಂದ ಅಲಂಕರಿಸಲ್ಪಟ್ಟ ಶ್ರೀಮಚ್ಚಕ್ರವರ್ತಿಯವರ ಮತ್ತು ಶ್ರೀ

[೩ ನೆಯ ಪುಟವನ್ನು ನೋಡಿರಿ]

ನಮ್ಮ ಚಕ್ರವರ್ತಿಯವರು ಪಶ್ಚಿಮರಣರಂಗದಲ್ಲಿ ವಾಸಿಸಿದುದು

ನಮ್ಮ ಜಾರ್ಜ್ ಸಾರ್ವಭೌಮರವರು ಫ್ರಾನ್ಸ್ ಬೆಲ್ಜಿಯಂ ರಣಾಂಗಣದಲ್ಲಿ ಯುದ್ಧಮಾಡುತ್ತಿರುವ ಸೈನಿಕರನ್ನು ಪರಾಮರಿಸಿಕೊಂಡು ಬರುವುದಕ್ಕಾಗಿ ದಯಮಾಡಿಸಿರುವರೆಂದು ಮೊನ್ನೆವಾರ ತಿಳಿಯಿಸಿದ್ದೆವಷ್ಟೆ. ಅವರು ಅಲ್ಲಿ ೧ ವಾರದವರೆಗೆ ಸೇನಾಮಧ್ಯದಲ್ಲಿ ವಾಸಮಾಡಿದರು. ಆ ಕಾಲದಲ್ಲಿ ಅವರು ನಾನಾ ಸೈನಿಕ ವರ್ಗಗಳನ್ನು ಪರಿಶೀಲಿಸುತ್ತಲೂ, ಅವರೊಡನೆ ಮಾತನಾಡುತ್ತಲೂ ಸಾಹಸಶಾಲಿಗಳೆಂದು ತೋರಿಬಂದಿರುವವರಿಗೆ ಬಹುಮಾನ ಪದಕಗಳನ್ನು ದಾನಮಾಡುತ್ತಲೂ, ಯುದ್ಧದಲ್ಲಿ ಸೈನಿಕರು ಮಾಡುವ ಕಾರ್ಯಗಳನ್ನು ಅವಲೋಕಿಸುತ್ತಲೂ, ಏಟುತಿಂದು ಉಪಚರಿಸಲ್ಪಡುತ್ತಿರುವ ಸೈನಿಕರ ವಿಶ್ರಮಾನಗಳನ್ನು ವಿಚಾರಿಸುತ್ತಲೂ, ಆ ತಮ್ಮ ಕಾಲವನ್ನು ಕಳೆದು ಬಂದಿರುವರು. ಅವರು ಫ್ರಾನ್ಸಿಗೆ ಹೋದಮೇಲೆ ಮೊದಲನೆ ಮಂಗಳವಾರದ ದಿನ ಹಿಂದೂದೇಶದ ಸೈನಿಕರನ್ನು ಪರಾಮರಿಸಿದರು. ಮಧ್ಯಾಹ್ನದಮೇಲೆ ಸಾರ್ವಭೌಮರೂ ಫ್ರಾನ್ಸಿನ ಪ್ರೆಸಿಡೆಂಟರೂ ಅವರ ಮಂತ್ರಿಯವರೂ ಫ್ರೆಂಚರ ಜನರಲ್ ಜಾಫ್ರೆಯವರೂ ಸೇರಿ ಸೇನಾಪರಾಮರ್ಶಕ್ಕೆ ದಯಮಾಡಿಸಿದ್ದರು. ಬರುವಾಗ್ಗೆ ನಮ್ಮ ಸಾರ್ವಭೌಮರು ಜನರಲ್ ಜಾಫ್ರೆಯವರಿಗೆ ಜಿ. ಸಿ. ಬಿ. ಎಂಬ ಬಿರುದನ್ನಿತ್ತರು.

ಬುಧವಾರದ ದಿನ ಸಾರ್ವಭೌಮರು ತಮ್ಮ ಪರಿವಾರದೊಂದಿಗೆ ೨೦ ಮೈಲಿಗಳಷ್ಟು ದೂರ ಸುತ್ತಿಕೊಂಡು ಬಂದರು. ಬಳಿಕ ಜನರಲ್ ಫೂಚವರಿಗೆ ಜಿ. ಸಿ. ಬಿ. ಎಂಬ ಬಿರುದನ್ನು ಕೊಟ್ಟರು.

ಗುರುವಾರದ ದಿನ ಹೊರಕ್ಕೆ ಹೊರಡುವುದಕ್ಕೆ ಮೊದಲೇ ನಮ್ಮ ಸಾರ್ವಭೌಮರು ತಮ್ಮ ಕಡೆಯ ಸೇನಾಧಿಪತಿಗಳಾದ ಫೀಲ್ಡ್‌ಮಾರ್ಷಲ್ ಸರ್‌ಜಾನ್ ಫ್ರೆಂಚ್‌ರವರಿಗೆ ಆರ್ಡರ್ ಆಫ್ ಮೆರಿಟ್ ಎಂಬ ಘನತರವಾದ ಬಿರುದನ್ನಿತ್ತರು. ೩ನೆ ಆರ್ಮಿಕೋರಿನ ಹೆಡ್‌ಕ್ವಾರ್ಟರಿನಲ್ಲಿ ಫಲಾಹಾರವನ್ನು ಮಾಡಿಕೊಂಡು ಬಳಿಕ ಎಲ್ಲಾ ರಣರಂಗವೂ ಕಣ್ಣಿಗೆ ಕಾಣಿಸುವಂತಹ ಎತ್ತರವಾದ ಸ್ಥಲವೊಂದಕ್ಕೆ ಹತ್ತಿ, ಲಿಲ್ಲಿಯಿಂದ ರೂಬೆವರೆಗೂ, ಮತ್ತೊಂದು ಕಡೆ ಈ ಪ್ರೆಸ್‌ವರೆಗೂ ಕಾಣುತ್ತಿದ್ದ ಯುದ್ಧಾಂಗಣವನ್ನೆಲ್ಲಾ ಅವಲೋಕಿಸಿದರು. ಜರ್ಮನಿಯವರ ಹಾವಿಟ್ಜ ಎಂಬ ಫಿರಂಗಿಗಳಿಂದ ಹಾರಿಬಂದ ಗುಂಡುಗಳು ಈ ಪ್ರೆಸ್ ಪಟ್ಟಣದ ಮೇಲೆ ಬೀಳುತ್ತಿದ್ದುದನ್ನೆಲ್ಲಾ ನೋಡಿದರು. ಸಮೀಪದಲ್ಲೇ ಮತ್ತೊಂದು ಶಿಖರದಿಂದ ಲೂಸಿಡಿಮದ್ದುಗಳು ಹಾರಿಬರುತ್ತಿದ್ದುದನ್ನೂ ಫಿರಂಗಿಗಳ ಗರ್ಜನೆಯು ಎಡೆಬಿಡದೆ ಆಗುತ್ತಿದ್ದುದನ್ನೂ ಕೇಳುತ್ತಿದ್ದರು. ಅವರು ನಿಂತಿದ್ದ ದಿಬ್ಬದ ಶಿಖರದಿಂದಲೇ ನಮ್ಮ ಸೈನಿಕರು ಕೆಲ ಫಿರಂಗಿಗುಂಡುಗಳನ್ನು ಶತ್ರುಸೈನ್ಯಗಳಮೇಲೆ ಹಾರಿಸುವುದಕ್ಕುಪಕ್ರಮಿಸಿದರು. ಕೂಡಲೇ ಶತ್ರುಗಳ ಸ್ಥಿತಿಯು ಸಾರ್ವಭೌಮರಿಗೆ ವಿದಿತವಾಯಿತು.

ಶುಕ್ರವಾರದ ದಿನ ಹೆಡ್‌ಕ್ವಾರ್ಟರಿನಲ್ಲಿರುವ ಉದ್ಯೋಗಿಗಳು ಹೇಗೆ ಕೆಲಸಮಾಡುತ್ತಿರುವರೆಂಬುದನ್ನು ಪರಾಮರಿಸಿದರು. ಬಳಿಕ ಬೆಲ್ಜಿಯಂ ಸೈನ್ಯದ ಹೆಡ್‌ಕ್ವಾರ್ಟರಿಗೆ ದಯಮಾಡಿಸಿ ಅಲ್ಲಿನ ಸಮುದ್ರಪ್ರಾಂತದಲ್ಲಿದ್ದ ಬೆಲ್ಜಿಯಂ ರಾಜರಾದ ಆಲ್ಬರ್ಟ್‌ರವರ ಮಂದಿರದಲ್ಲಿ ಅವರೊಡನೆ ಕುಳಿತು ಭೋಜನಮಾಡಿ ಆರಾಜರಿಗೆ ಗಾರ್ಟರ್ ಎಂಬ ಬಿರುದನ್ನೂ ಆ ದೇಶದ ಮುಖ್ಯಮಂತ್ರಿಯಾದ ಬ್ರೋಕ್ವಿಲ್‌ರವರಿಗೆ ಜಿ. ಸಿ. ಎಂ. ಜಿ. ಎಂಬ ಬಿರುದನ್ನೂ ಕೊಟ್ಟರು.

ಶನಿವಾರ ಬೆಳಗ್ಗೆ ಹಿಂದೂದೇಶ ಸೈನಿಕನಾದ ದರ್ವಾನ್ ಸಿಂಗ್ ಎಂಬಾತನಿಗೆ ವಿಕ್ಟೋರಿಯಾ ಕ್ರಾಸ್ ಎಂಬ ಬಿರುದನ್ನಿತ್ತರು. ಅನಂತರ ವೈಮಾನಿಕರ ಶಿಬಿರಕ್ಕೆ ಹೋಗಿದ್ದು ಪರಾಮರಿಸಿಕೊಂಡು ಬಂದರು. ಆದಿನವೇ ಸ್ವದೇಶಕ್ಕೆ ತೆರಳಿದರು. ಇವರು ಅಲ್ಲಿ ವಾಸಮಾಡಿದ ಕಾಲದಲ್ಲೆಲ್ಲಾ ಅವರ ಮೇಲ್ಗಡೆ ಸದಾ ಆಂಗ್ಲವೈಮಾನಿಕರು ಆಕಾಶದಲ್ಲಿ ಸಂಚರಿಸುತ್ತ ಕಾವಲಾಗಿದ್ದರು.

ಸಾರ್ವಭೌಮರು ಹೀಗೆ ಅಲ್ಲಿ ಕಾಲವನ್ನು ಕಳೆದು ಹಿಂದಿರುಗುವಾಗ ತಮ್ಮ ಕಡೆಯ ಸಕಲಸೈನಿಕರನ್ನೂ ಉದ್ದೇಶಿಸಿ ನುಡಿದುದೇನೆಂದರೆ—ರಣರಂಗದಲ್ಲಿರುವ ನಮ್ಮ ಸೈನಿಕರನ್ನೆಲ್ಲಾ ನಾನು ನೋಡಿ ಬರುವಂತಾದುದಕ್ಕಾಗಿ ಸಂತೋಷಿಸುತ್ತೇನೆ. ರಣರಂಗದಲ್ಲಿ ನೀವು ಹೇಗೆ ಜೀವಿಸುತ್ತಿರುವಿರೋ ಅದರಲ್ಲಿ ಅಲ್ಪಸ್ವಲ್ಪ ಸಂಗತಿಯನ್ನು ನಾನು ಪ್ರತ್ಯಕ್ಷವಾಗಿ ನೋಡಿ ತಿಳಿದೆನು. ನಿರ್ದಯಾತ್ಮಕರೂ ಬಲವಂತರೂ ಆದ ಶತ್ರುಗಳೊಡನೆ ನೀವು ಯುದ್ಧಮಾಡುತ್ತಿರುವ ರೀತಿಯನ್ನು ನೋಡಿದುದರಿಂದ ನನಗುಂಟಾಗಿರುವ ಸಂತೋಷವನ್ನು ನಿಮ್ಮಗಳಿಗೆ ತಿಳಿಯಿಸಲು ಇಚ್ಛಯಿಸುತ್ತೇನೆ. ನಿಮ್ಮ ಯುದ್ಧಕಲಾಶಿಕ್ಷೆ ಸಾಹಸಸಹನೆ, ಇವುಗಳಿಗೆ ಸಮನಾಗಿ ನಿಮ್ಮಲ್ಲಿರುವ ಅಸಾಧಾರಣ ಪರಾಕ್ರಮವೂ ಕೂಡ ಸೇರಿ ನೀವು ನಿಮ್ಮ ಪೂರ್ವಿಕರ ಗೌರವವನ್ನು ಉಳಿಯಿಸುವಂತೆ ಮಾಡಿರುವುದು. ನೀವೆಲ್ಲರೂ ಆನಂದಯುಕ್ತರಾಗಿಯೂ ಆರೋಗ್ಯವಂತರಾಗಿಯೂ ಶೌರ್ಯಸಂಪನ್ನರಾಗಿಯೂ ಇರುತ್ತಿರುವುದು ನನಗೆ ಎಷ್ಟೋ ಸಂತೋಷವನ್ನುಂಟುಮಾಡಿದೆ. ನಿಮ್ಮ ಸಂಗಡ ನಾನುಕೂಡ ನಿಮ್ಮ ಕಷ್ಟಗಳಲ್ಲೂ ಜಯದಲ್ಲೂ ಪಾಲುಗಾರನಾಗಬೇಕಾಗಿದೆ. ಅದು ಕಾರಣ, ನಾನೂ ನಿಮ್ಮ ದೇಶೀಯರೂ ಸಹ ನಿಮ್ಮ ಮೇಲೆ ಬರವಸೆಯುಳ್ಳವರಾಗಿದ್ದೇವೆಂದು ಹೇಳುತ್ತೇನೆ. ನೀವು ಜಯಾಲಂಕೃತರಾಗುವವರೆಗೂ ನೀವು ಮಾಡುತ್ತಿರುವ ಕೃತ್ಯಗಳನ್ನು ನಾನು ಸದಾ ಗಮನಿಸುತ್ತಲಿರುವೆನು" ಎಂದು ಅಪ್ಪಣೆ ಕೊಡಿಸಿರುವರು.

ಜರ್ಮನರು ಆಕ್ರಮಿಸಿರುವ ಬ್ರುಸಲ್ಸ್‌ಪಟ್ಟಣ.

ಬೆಲ್ಜಿಯಮ್ಮಿಗೆ ಸೇರಿದ ಬ್ರುಸಲ್ಸ್‌ಪಟ್ಟಣವು ಈಗ ಶತ್ರುಗಳ ಅಧೀನವಾಗಿದೆಯಷ್ಟೆ. ಅದರ ಸ್ಥಿತಿಯು ಈಗ ಹೇಗಿದೆಯೆಂಬುದನ್ನು ಈ ಕೆಳಗಣ ಪತ್ರವು ತಿಳಿಯಿಸುತ್ತದೆ. ಇದನ್ನು ಅದೇ ಪಟ್ಟಣದಲ್ಲಿರುವ ಒಬ್ಬಾನೊಬ್ಬ ಪ್ರಮುಖನು ಬರೆದಿದ್ದಾನೆ—"ಕಡೆಗೆ ಕಾಗದವನ್ನು ಬರೆಯಲು ನನಗೆ ಅನುಕೂಲಿಸಿತು. ಬರೆಯುವುದು ಮಾತ್ರವೇ ಅಲ್ಲದೆ ಅಂಚೆಮನೆಗೂ ಹಾಕಿದೆನು. ನಾವು ಈಗ ಜರ್ಮನರ ರಾಜ್ಯದಲ್ಲಿದ್ದೇವೆ. ಅದುಕಾರಣ ಬರುವ ಶೀತಕಾಲದಲ್ಲಿ ತಿನ್ನುವುದಕ್ಕೆ ರೊಟ್ಟಿಯೂ ಇಲ್ಲದೆ ಹಸಿವಿನಿಂದ ಸತ್ತುಹೋಗುವೆವೋ ಎಂದು ಆಲೋಚನೆ ಮಾಡಬೇಕಾಗಿದೆ. ಆ ವಿಷಯವನ್ನು ನಿಶ್ಚಯಿಸುವುದಕ್ಕೆ ಅವಕಾಶವಿಲ್ಲ. ನಾಗರಿಕರೂ, ಗೌರವಸ್ಥರೂ, ಶೂರರೂ ಆದ ಈ ಪುರನಿವಾಸಿಗಳು ಈಗ ನಿರಾಲಂಬರಾಗಿ ಜರ್ಮನರಿಂದ ಅತ್ಯಂತ ನೀಚರಾಗಿ ಕಾಣಲ್ಪಡುತ್ತಿದ್ದಾರೆ. ಸದ್ಯಃ ನಮ್ಮ ಸ್ವಾತಂತ್ರ್ಯವೂ, ನಮ್ಮ ಸಾಂಘಿಕತ್ವವೂ ಅಣಗಿಸಲ್ಪಟ್ಟಿವೆ. ಅರಾಜಕವಾದ ಜರ್ಮನ್ ರಾಷ್ಟ್ರಪ್ರಭುತ್ವದಲ್ಲಿ ನಮ್ಮ ನಂಟರಿಷ್ಟರ ಯೋಗಕ್ಷೇಮ ಲಾಭಗಳನ್ನು ತಿಳಿದುಕೊಳ್ಳುವುದಕ್ಕೆ ಅಂಚೆಯಾಗಲೀ, ವಾರ್ತಾತಂತಿಗಳೇ ಆಗಲೀ, ಪ್ರಯಾಣಮಾಡುವುದಕ್ಕೆ ಹೊಗೆಬಂಡಿಗಳೇ ಆಗಲೀ, ಬೈಸಿಕಲ್‌ಗಳೇ ಆಗಲಿ, ಕಡೆಗೆ ಅಪ್ಪಣೆಚೀಟಿಯಿಲ್ಲದೆ ಸ್ವತಂತ್ರಿಸಿ ತಿರುಗಾಡುವುದೇ ಆಗಲಿ ನಮಗಳಿಗೆ ಇಲ್ಲವಾಗಿದೆ. ನಾವು ನಮ್ಮ ಮಾತೃದೇಶದಲ್ಲಿ ನಮ್ಮ ಮನೆಗಳಲ್ಲಿ ಬಂದಿಗಳಂತೆ ಸೆರೆಯಾಳುಗಳಾಗಿದ್ದೇವೆ. ಪ್ರತಿಯೊಬ್ಬನೂ ತನಗೆ ಉಳಿದ ಅಲ್ಪಸ್ವಲ್ಪ ಸೊತ್ತಿನಲ್ಲಿ ಮಿತವಾಗಿ ವ್ಯಯಮಾಡುತ್ತಲೂ, ಕಡುಬಡವರಿಗೆ ಅನ್ನಪಾನಾದಿಸಹಾಯ್ಯವನ್ನು ಯಥೋಚಿತವಾಗಿ ಮಾಡುತ್ತಲೂ ಇದ್ದೇವೆ. ನಮ್ಮ ಯಾರಹತ್ತಿರವೂ ಹಣವೆಂಬುದು ಸೊನ್ನೆಯೇ. ಬ್ಯಾಂಕುಗಳೋ ? ಎಲ್ಲವೂ ಮುಚ್ಚಲ್ಪಟ್ಟಿವೆ. ಸಾಲವೆಂಬುದು ಹುಟ್ಟುವುದೇ ಇಲ್ಲ. ನಮ್ಮ ಪುರಾಧಿಪತಿಯು ನಮ್ಮಂತೆಯೇ ನಿರ್ಗತಿಕನಾಗಿ ಇಲ್ಲಿಗೆ ಸಮೀಪದಲ್ಲಿರುವ ಗ್ಲೇಪ್‌ಜೆಕ್ ಕೋಟೆಯಲ್ಲಿ ಸೆರೆಹಾಕಲ್ಪಟ್ಟಿದ್ದಾನೆ. ಆತನ ಸ್ಥಿತಿಯು ಬಹಳ ಪರಿತಾಪಕರವಾಗಿದೆ. ಈ ನಗರಕ್ಕೆ ಜರ್ಮನರು ಪ್ರವೇಶಿಸಿ ನಮ್ಮ ಪುರಪಾಲಕನನ್ನು ಬಾಧಿಸಿದಾಗ ಜರ್ಮನ್ ಅಧಿಕಾರಿಯನ್ನು ಕುರಿತು—"ನನ್ನ ಪ್ರಾಣವನ್ನು ಬೇಕಾದರೆ ತೆಗೆದುಕೊಳ್ಳಿ, ನನ್ನ ಮಾನವನ್ನು ಕಳೆಯಬೇಡಿ" ಎಂದು ಆತನು ನಿರ್ಭಯವಾಗಿ ಹೇಳಿದೆಂದುದಕ್ಕೋಸ್ಕರಲೇ ಅವನಿಗೆ ಈ ದುರವಸ್ಥೆಯು ಪ್ರಾಪ್ತವಾಗಿದೆ. ಆತನಿರುವ ಕೋಟೆಯಮೇಲೆ ರಷ್ಯಾದವರು ಈಗ ಫಿರಂಗಿಗುಂಡುಗಳನ್ನು ಹೊಡೆಯುತ್ತಿದ್ದಾರೆ. ಆಕಸ್ಮಿಕವಾಗಿ ಅವರ ಫಿರಂಗಿ ಗುಂಡುಗಳು ಈತನಿಗೆ ತಗುಲಿ ಸತ್ತುಹೋದರೂ ಹೋಗಲಿ ಎಂಬ ಯೋಚನೆಯಿಂದಲೇ ಜರ್ಮನರು ಈತನನ್ನು ಆ ಕೋಟೆಯಲ್ಲಿಟ್ಟಿದ್ದಾರೆಂಬುದು ಸ್ಪಷ್ಟವಾಗಿದೆ. ಹಾಗಲ್ಲದಪಕ್ಷದಲ್ಲಿ ಆತನನ್ನು ಅಲ್ಲಿಗೇ ಏತಕ್ಕೆ ಕಳುಹಿಸಬೇಕಾಗಿತ್ತು ? ಮಗ್‌ಡೇಬರ್ಗಿನಲ್ಲೇ ಆತನನ್ನು ಏತಕ್ಕೆ ಇಡಬಾರದಾಗಿತ್ತು ? ಇಲ್ಲಿ "ಬಂದೋಬಸ್ತು" ಇಲ್ಲವೆ ? ಈ ಪ್ರಶ್ನೆಯ ಮೇಲೇನೆಯೇ ನಾವು ಯಥಾರ್ಥವಾದ ಉತ್ತರವನ್ನು ಆಲೋಚಿಸಿಕೊಳ್ಳಬಹುದು. ಈ ಪಟ್ಟಣದಲ್ಲಿರುವ ಪ್ರಜೆಗಳ ಸ್ಥಿತಿಯು ಬಹಳ ಶಾಂತವಾಗಿಯೂ ಗೌರವವಾಗಿಯೂ ಇದೆ. ಸೆರೆಯಲ್ಲಿರುವ ಬೆಲ್ಜಿಯಂ ನಗರಾಧಿಕಾರಿಯು ಮೊದಲೇ ಈ ಸಮೀಚೀನವಾದ ಏರ್ಪಾಟನ್ನು ಮಾಡಿರುವನು. ಈ ನಗರಾಧಿಪತಿಯು ವಿದೂಷಕನು ನೆಮ್ಮದಿಯಿಂದಲೇ ಇದ್ದಾನೆ. ಅವನು ತನ್ನ ಹಿಂದಣ ಪದ್ಧತಿಯಂತೆಯೇ ಪರಿಹಾಸಕಾರ್ಯವನ್ನು ಮಾಡಿಕೊಂಡೇ ತಿರುಗುತ್ತಿದ್ದಾನೆ. ಆತನು ಬೀದಿಯಲ್ಲಿ ತಿರುಗುತ್ತಿರುವಾಗ ಮಾಡುವ ಕಾರ್ಯಗಳನ್ನು ಶತ್ರುವರ್ಗದವರು ಪರಿಹಾಸದ ಕಾರ್ಯಗಳೆಂದು ತಿಳಿದುಕೊಳ್ಳದೆ ಇದ್ದರೆ ನಿಜವಾಗಿಯೂ ಅವು ಅವರಿಗೆ ದಿಗ್ಭ್ರಮೆಯನ್ನು ಹುಟ್ಟಿಸದೆ ಬಿಡುವುದಿಲ್ಲ."

ಜಲಯುದ್ಧ.

(ಆಂಗ್ಲನೌಕಾದಳದ ವಿಜಯ)

ಕಳೆದವಾರ ಬಂದಿರುವ ವಾರ್ತೆಗಳೊಳಗೆ ಜರ್ಮನರ ಕಡೆಯ ನಾಲ್ಕು ಯುದ್ಧದ ಹಡಗುಗಳನ್ನು ನಮ್ಮ ಆಂಗ್ಲಪ್ರಭುತ್ವದ ನೌಕಾಬಲವು ಮುಳುಗಿಸಿತೆಂಬ ವಾರ್ತೆಯು ಸಂತೋಷಕರವಾಗಿದೆ. ಎಮ್ಡನ್ನು ಹಾಳಾದುದು ನಮ್ಮವರಿಗೆ ಎಷ್ಟು ಮನಶ್ಶಾಂತಿಯನ್ನು ಮಾಡಿತೋ ಅದಕ್ಕೆರಡನೆಯದಾಗಿ ಈ ಸುದ್ದಿಯು ಸಮಾಧಾನವನ್ನುಂಟುಮಾಡತಕ್ಕದು. ಏಕೆಂದರೆ ಈಗ ಮುಳುಗಿದ ಶತ್ರುಗಳ ನೌಕಾಬಲದೊಡನೆ ಶತ್ರುಗಳಿಗೆ ಪೂರ್ವಸಮುದ್ರದಲ್ಲಿದ್ದ ನೌಕಾಬಲವೆಲ್ಲವೂ ನಾಶವಾಗತಕ್ಕದಾಗಿದೆ. ಜಪಾನಿನವರು ಜರ್ಮನರ ಕಿಯಾಚೋವನ್ನು ಹಿಡಿದುಕೊಂಡು ಬಿಟ್ಟುದರಿಂದ ಪೂರ್ವಸಮುದ್ರದಲ್ಲಿ ಜರ್ಮನರ ಅರ್ಧ ಬಲವೆಲ್ಲಾ ನಾಶವಾದಂತಾಯಿತು. ಬಳಿಕ ಪೂರ್ವಸಮುದ್ರದಲ್ಲಿ ಅಲ್ಲಲ್ಲಿ ಅಲ್ಪಸ್ವಲ್ಪವಾಗಿದ್ದ ಜರ್ಮನರ ಹಡಗುಗಳೆಲ್ಲಾ ಸೇರಿ ಅಮೇರಿಕಾದ ಚಿಲ್ಲಿರಾಷ್ಟ್ರದ ಹತ್ತಿರ ಆಂಗ್ಲನೌಕಾಬಲದ ಮೇಲೆ ಬಿದ್ದು ೨ ಹಡಗುಗಳನ್ನು ಹಾಳುಮಾಡಿದ್ದುವು. ಕಿಯಾಚೋವಿನಲ್ಲಿದ್ದ ಹಡಗುಗಳ ಗುಂಪಿನಿಂದ ಮುಂಚಿತವಾಗಿ ಜಾರಿಕೊಂಡು ಬಂದಿದ್ದುದೇ ಎಮ್ಡನ್ ಹಡಗು. ಕೋನಿಗ್ಸ್‌ಬರ್ಗ್ ಸಜೀವಬಂಧಿತವಾಗಿರುವುದೂ ಕೂಡ ನಮ್ಮ ವಾಚಕರಿಗೆ ಗೊತ್ತೇ ಇದೆ. ಚಿಲ್ಲಿ ಪ್ರಾಂತದಲ್ಲಿ ಆಂಗ್ಲನೌಕಾದಳಕ್ಕೆ ಪೆಟ್ಟುಬಿದ್ದ ಕಾಲದಿಂದ ಆ ಶತ್ರುನೌಕಾದಳವನ್ನು ಪಾತಾಳಗಾಣಿಸಬೇಕೆಂದು ಆಂಗ್ಲನೌಕಾದಳವು ಸಮುದ್ರದಲ್ಲೆಲ್ಲಾ ತಡಕುತ್ತಿದ್ದಿತು. ಅದು ಸಫಲವಾಗುವ ಕಾಲವು ಬಂದಿತು. ಜರ್ಮನ್‌ನೌಕಾದಳಕ್ಕೂ ನಮ್ಮ ನೌಕಾದಳಕ್ಕೂ ನಡೆದ ಯುದ್ಧದ ರೀತಿಯು ಹೇಗೆಂದರೆ—

ದಕ್ಷಿಣ ಅಮೇರಿಕಾಕ್ಕೆ ಸೇರಿದ ತೆಂಕಣತುದಿಗೆ ಪೂರ್ವಭಾಗದಲ್ಲಿರುವ ಫಾಲ್ಕ್‌ಲಂಡ್‌ದ್ವೀಪದ ಹತ್ತಿರ ಕಳೆದ ಡಿಸೆಂಬರ್ ತಾ॥ ೮ ರಲ್ಲಿ ಷಾರ್ನಹಾರೆಸ್ಟ್—ನೀಸ್ನಾ—ನ್ಯೂರೆಂಬರ್ಗ್—ಲೀಪ್ಸಿಕ್—ಡ್ರೆಸ್ಡೆನ್—ಎಂಬ ಜರ್ಮನರ ೫ ಯುದ್ಧದ ಹಡಗುಗಳು ನಮ್ಮವರ ನೌಕಾದಳದ ಕಣ್ಣಿಗೆ ಬಿದ್ದುವು. ನಮ್ಮವರ ನೌಕಾದಳಕ್ಕೆ ಅಡ್ಮಿರಲ್ ಸ್ಟರ್ಡಿ ಎಂಬುವರು ಅಧಿಪತಿಗಳಾಗಿದ್ದರು. ಶತ್ರುಗಳ ಹಡಗಿನಮೇಲೆ ನಮ್ಮವರ ಹಡಗುಗಳು ಫಿರಂಗಿಗುಂಡುಗಳನ್ನು ಹೊಡೆದು ಯುದ್ಧವನ್ನುಪಕ್ರಮಿಸಿದುವು. ೮ ನೆ ತಾ॥ ಬೆಳಗಿನ ೮ ಗಂಟೆಯಿಂದ ಆರಂಭವಾಗಿ ೭ ಗಂಟೆಗಳ ಕಾಲ ನಡೆದಿತು. ಜರ್ಮನರ ಕಡೆಯ ನಾಲ್ಕು ಹಡಗುಗಳು ಮುಳುಗಿಹೋದುವು. ಡ್ರೆಸ್ಡೆನ್ ಎಂಬ ೧ ಹಡಗು ಮಾತ್ರ ತಪ್ಪಿಸಿಕೊಂಡು ಓಡಿಹೋಯಿತು. ಅದನ್ನು ನಮ್ಮ ಹಡಗುಗಳು ಹಿಡಿದು ಮುಳುಗಿಸಬೇಕೆಂದು ತಡಕುತ್ತಿರುವುವು. ೨ ಕಲ್ಲಿದ್ದಲ ಸಾಮಾನ್ಯಹಡಗುಗಳು ನಮ್ಮವರ ವಶವಾದುವು. ಮುಳುಗುವುದಕ್ಕಿಂತ ಮುಂಚೆ ಲೀಪ್ಸಿಗ್—ನೀಸ್ನಾ ಎಂಬ ಶತ್ರುಗಳ ಹಡಗಿನಲ್ಲಿ ಹತಶೇಷರಾಗಿದ್ದವರನ್ನು ನಮ್ಮವರು ರಕ್ಷಿಸಿ, ಸೆರೆಯಾಗಿ ಹಿಡಿದರು. ಈ ಯುದ್ಧದಲ್ಲಿ ಆಂಗ್ಲರ ಯುದ್ಧನೌಕೆಗಳಲ್ಲಿ ಯಾವುದೊಂದೂ ಮುಳುಗಲಿಲ್ಲ. ಹೀಗೆ ಆಂಗ್ಲನೌಕಾದಳಕ್ಕೆ ಉಂಟಾದ ಜಯವನ್ನು ಕುರಿತು ಸಂಯುಕ್ತರಾಷ್ಟ್ರದವರೆಲ್ಲರೂ ಆನಂದಾಭಿನಂದನಗಳನ್ನು ತಿಳಿಯಪಡಿಸಿದ್ದಾರೆ. ಅಮೇರಿಕಾ ಸಂಯುಕ್ತರಾಷ್ಟ್ರದ ಪ್ರಜೆಗಳೂ ಬಹಳ ಸಂತೋಷವನ್ನು ಪ್ರದರ್ಶಿಸಿದ್ದಾರೆ. ಈಗ ಮುಳುಗಿಹೋದುವುಗಳಲ್ಲದೆ ಪೂರ್ವಸಮುದ್ರದಲ್ಲಿ ಜರ್ಮನರ ಕಡೆಯವಾಗಿ ಇನ್ನು ಡ್ರುಸ್‌ಡೆನ್—ಕೆರ್ಲ್ಸರೂಹಿ—ಪ್ರಿನ್ಸ್ ಫ್ರೆಂಜು—ಇಟಲ್—ಫ್ರೆಡ್ರಿಕ್—ಕ್ರಾನ್‌ಫ್ರಿಂಜು—ವಿಲಿಯಂ—ಎಂಬ ಕೆಲ ಹಡಗುಗಳು ಮಾತ್ರ ತಲೆತಪ್ಪಿಸಿಕೊಂಡು ತಿರುಗುತ್ತಲಿವೆ. ಅವಕ್ಕೂ ಪಾತಾಳವನ್ನು ಕಾಣಿಸಬೇಕೆಂದು ಆಂಗ್ಲನೌಕಾಬಲವು ಸಮುದ್ರದಲ್ಲಿ ಪರಿಶೋಧಿಸುತ್ತಲಿದೆ. ಇವೆಲ್ಲಕ್ಕೂ ಜಲಸಮಾಧಿಯಾದರೆ ಪೂರ್ವಸಮುದ್ರದಲ್ಲಿ ಶತ್ರುಗಳ ನೌಕಾಬಲವೇ ನಿಶ್ಶೇಷವಾಗಿ ಹೋಗುವುದು.

ಯುದ್ಧವಾರ್ತೆಯು.

(ಪಶ್ಚಿಮರಣರಂಗ)

ಮಿತ್ರಮಂಡಲಿಯವರಿಗೆ ಫ್ರಾನ್ಸ್ ಬೆಲ್ಜಿಯಂ ದೇಶಗಳಲ್ಲಿ ಬಹಳ ಅನುಕೂಲಸ್ಥಿತಿಯುಂಟಾಗಿದ್ದಿತೆಂಬುದೇ ಕಳೆದವಾರದ ವಾರ್ತೆಯಲ್ಲಿ ವಿಶೇಷವಾಗಿದೆ. ಹಿಂದೆ ಬರುತ್ತಿದ್ದ ವಾರ್ತೆಗಳಲ್ಲಿ ಮಿತ್ರಮಂಡಲಿಯವರು ಅಡಿಗಟ್ಟಲೆಯಾಗಿ ಶತ್ರುಗಳನ್ನು ಹಿಂದಕ್ಕೆ ಒತ್ತಿ ತಾವು ಮುಂದಾಗುತ್ತಿರುವರೆಂಬ ಸುದ್ದಿಯು ಬರುತ್ತಿದ್ದಿತು. ಈಗಲಾದರೊ ನಮ್ಮವರು ಮೈಲಿಗಟ್ಟಲೆಯಾಗಿ ಶತ್ರುಗಳನ್ನು ಹಿಂದಕ್ಕೊತ್ತಿ ತಾವು ಮುಂದುವರಿಯುತ್ತಿರುವರೆಂದೂ, ಶತ್ರುಗಳಿಗೆ ಹಿಮ್ಮೆಟ್ಟುವ ಅವಸ್ಥೆಯು ಚೆನ್ನಾಗಿ ಪ್ರಾಪ್ತವಾಗಿರುವುದೆಂದೂ, ಅವರಿಗೆ ತಾವು ಹಿಡಿದಿರುವ ಆಂಟ್‌ವರ್ಪನ್ನು ರಕ್ಷಿಸಿಕೊಳ್ಳುವ ಭಯವು ಹೆಚ್ಚಾಗಿದೆಯೆಂಬೂ, ಅದಕ್ಕಾಗಿ ೪೦ ಸಾವಿರ ಜರ್ಮನ್ ಸೈನ್ಯವನ್ನು ಹೊಸದಾಗಿ ಆಂಟ್ವರ್ಪಿಗೆ ತರಿಸಿಕೊಂಡರೆಂದೂ ಗೊತ್ತಾಗುತ್ತದೆ. ಇದುವರೆಗೆ ಮಿತ್ರಮಂಡಲಿಯವರು ಮಾಡಿದ ಸಾಹಸದಿಂದ ಜರ್ಮನರು ತಾವು ಹಿಡಿದುಕೊಂಡಿದ್ದ ಬಹುಭಾಗವನ್ನು ಬಿಟ್ಟು ಹೊರಟುಹೋಗಬೇಕಾಯಿತು. ಫ್ರಾನ್ಸ್ ದೇಶದೊಳಗೆಲ್ಲಾ ಇನ್ನು ಶತ್ರುಗಳ ಅಧೀನದಲ್ಲಿರುವ ಭಾಗವು ೧೦೦ ರಲ್ಲಿ ಮೂರುಮುಕ್ಕಾಲುಭಾಗದಷ್ಟು

ಮಾತ್ರವಾಗಿರುತ್ತದೆ. ಫ್ರಾನ್ಸ್ ಸರ್ಕಾರವು ಇದಕ್ಕೆ ಹಿಂದೆ ಪ್ಯಾರಿಸ್ಸನ್ನು ಬಿಟ್ಟು ಬೋರ್ಡಿಕ್ಸಿಗೆ ಹೋಗಿ ಸ್ಥಾಪಿಸಲ್ಪಟ್ಟಿದ್ದಿತಷ್ಟೆ. ಈಗ ಮರಳಿ ಅದು ಪ್ಯಾರಿಸ್ಪಟ್ಟಣಕ್ಕೇ ಬಂದು ಕಳೆದ ವಾರದಲ್ಲಿ ಅದರ ಪಾರ್ಲಿಮೆಂಟು ಕೆಲಸವೂ ಉಪಕ್ರಮವಾಗಿ ನಡೆದಿತು. ಇದರಿಂದ ಫ್ರಾನ್ಸಿನಲ್ಲಿ ಸದ್ಯಃ ಶತ್ರುಗಳ ಉಪಟಲವು ಎಷ್ಟುಮಟ್ಟಿಗೆ ಕಡಿಮೆಯಾಗಿದೆಯೆಂಬುದನ್ನು ಊಹಿಸಿಕೊಳ್ಳಬಹುದು. ಫ್ಲಾಂಡರ್ಸಿನಲ್ಲಿ ಮಾಡುತ್ತಿರುವ ಮಹಾಯುದ್ಧದ ಫಲವಾಗಿ ಮಿತ್ರಮಂಡಲಿಯವರು ರೋಲರ್ಸ್ ಎಂಬ ಪಟ್ಟಣವನ್ನು ವಶಪಡಿಸಿಕೊಂಡಿದ್ದಾರೆ. ಪಶ್ಚಿಮಫ್ಲಾಂಡರ್ಸಿನಲ್ಲಿ ತಮಗುಂಟಾಗಿರುವ ವಿಷಮಸ್ಥಿತಿಯನ್ನು ಜರ್ಮನರು ತಿಳಿದುಕೊಂಡು, ಅಲ್ಲಿ ತಮಗಾಗಿರುವ ಸೈನ್ಯನಷ್ಟವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಬೆಲ್ಜಿಯಮ್ಮಿನಿಂದ ಸೈನ್ಯಗಳನ್ನು ಅಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ಉತ್ತರಫ್ರಾನ್ಸಿನಿಂದಲೂ ಕೂಡ ೭ಸಾವಿರ ಸೈನ್ಯವನ್ನು ಫ್ಲಾಂಡರ್ಸಿಗೆ ಕಳುಹಿಸಿಕೊಟ್ಟಿದ್ದಾರೆ. ಅಲ್ಲಿಗೆ ಮಿತ್ರಮಂಡಲಿಯ ಸೈನ್ಯಗಳು ಬಂದುಸೇರುವುದಕ್ಕೆ ಮೊದಲೇ ಕೋರಾಟು-ತೀಲ್ಟುಗಳನ್ನು ತಾವು ಬಿಟ್ಟುಹೋಗಬೇಕೆಂದು ಜರ್ಮನರು ಯೋಚಿಸುತ್ತಿರುವರೆಂದು ಹಾಲೆಂಡ್‌ದೇಶದ ಪತ್ರಿಕೆಗಳು ಹೇಳುತ್ತಿವೆ. ಎಯ್ಸ್ನೆ ಪ್ರಾಂತದಲ್ಲಿ ಮಿತ್ರಮಂಡಲಿಯವರದೊಡ್ಡ ಫಿರಂಗಿಗಳ ಪುಂಡಾಟವನ್ನ ನಗಿಸಿ, ಅವರಕಡೆಯ ಹವಿಜ್ಜರ್ ಎಂಬ ರಾಕ್ಷಸಫಿರಂಗಿಗಳ ಗುಂಪೊಂದನ್ನು ಧ್ವಂಸಮಾಡಿದುವು. ಮ್ಯೂಸ್‌ನದಿಯ ಬಳಿಯ ಪರ್ವತಪ್ರಾಂತದಲ್ಲೂ ನಮ್ಮ ಫಿರಂಗಿಗಳು ಶತ್ರುಗಳ ದೊಡ್ಡ ಫಿರಂಗಿಗಳ ಗುಂಪೊಂದನ್ನು ಹಾಳ್ಮಾಡಿದುವು. ಹಲವುಕಡೆಯಲ್ಲಿ ನಮ್ಮವರು ಶತ್ರುಗಳ ಕಂದಕಗಳನ್ನು ವಶಪಡಿಸಿಕೊಂಡು ಅವರನ್ನು ಓಡಿಸಿದ್ದಾರೆ. ಜರ್ಮನರು ಈಗ ಈಜರ್‌ನದಿಯ ಕಾಲ್ವೆಯ ದಡವನ್ನು ಸಂಪೂರ್ಣವಾಗಿ ಬಿಟ್ಟು ಹೊರಟು ಹೋಗಿದ್ದಾರೆ. ಆ ಸ್ಥಲವನ್ನೆಲ್ಲಾ ಮಿತ್ರಮಂಡಲಿಯವರು ಆಕ್ರಮಿಸಿಕೊಂಡಿದ್ದಾರೆ.

ಈ ಪ್ರೆಸ್ಸಿನ ಹತ್ತಿರ ಮರಳಿ ಘೋರಯುದ್ಧವು ನಡೆದಿತು. ಅದರ ಸುತ್ತಲೂ ಜರ್ಮನರು ಮೂರಾವೃತ್ತಿ ಘೋರವಾಗಿ ನಮ್ಮ ಸೈನಿಕರಮೇಲೆ ಬಿದ್ದರು. ಫ್ರಾನ್ಸಿನವರು ತೀವ್ರವಾಗಿ ಪ್ರತಿಭಟಿಸಿ ಮೂರುಸಲವೂ ಹಿಂದಕ್ಕಟ್ಟಿದರು. ೪ ನೆಯಾವೃತ್ತಿ ಜರ್ಮನ್ ಸೇನೆಯು ಹೇಗೊ ಫ್ರಾನ್ಸ್ ಸೇನೆಯ ಪ್ರಥಮಸಂತಿಯ ಕಂದಕವನ್ನು ಆಕ್ರಮಿಸಿಕೊಳ್ಳುತ್ತಿದ್ದರು. ಅಷ್ಟರಲ್ಲಿ ಫ್ರಾನ್ಸ್ ಸೈನ್ಯಗಳು ವೀರಾವೇಶದಿಂದ ವಿಜೃಂಭಿಸಿ ಶತ್ರುಗಳನ್ನು ತರುಬಿ ಆ ಕಂದಕಗಳನ್ನು ವಶಪಡಿಸಿಕೊಂಡು ಸ್ವಲ್ಪ ಮುಂದಕ್ಕೂ ಸಾಗಿ ಹೋದರು. ಈಪ್ರೆಸ್ಸಿನಮೇಲೂ ಆಸ್ಪೆಚಿ ರೈಲ್ವೆ ಠಾಣದಮೇಲೂ ಜರ್ಮನರು ಮರಳಿ ಮರಳಿ ನುಗ್ಗಿ ಬಂದು ಹಿಮ್ಮೆಟ್ಟಿರುವರು. ಕಾಮರ್ಸಿ ಪಟ್ಟಣದ ಸಿಲ್ದಾಣದಮೇಲೆ ಅವರು ಗುಂಡುಗಳನ್ನು ಹೊಡೆದರು. ನಷ್ಟವೇನೂ ಆಗಲಿಲ್ಲ. ಅಲ್ಸಸ್‌ಜಿಲ್ಲೆಯಲ್ಲಿ ಫ್ರಾನ್ಸ್‌ಸೈನಿಕರು ಸ್ಟೈರ್‌ಬಾಕಿಗೆ ಉತ್ತರದಲ್ಲೂ ಎಗ್ಗಿಂಜಿನ್ಸಿಗೆ ಪೂರ್ವದಲ್ಲೂ ಶತ್ರುಗಳಮೇಲೆ ಬಿದ್ದು ಕಾದಾಡಿ ಸೋಲಿಸಿ ಸ್ವಲ್ಪಭಾಗ ಮುಂದಕ್ಕೆ ಸಾಗಿಹೋಗಿದ್ದಾರೆ.

ರೋಲರ್ಸಿಗೆ ಪಶ್ಚಿಮದಲ್ಲಿರುವ ಸ್ಟಾಡೆನ್ ಪಟ್ಟಣವನ್ನು ಆಂಗ್ಲಸೈನಿಕರು ಹಿಡಿದುಕೊಂಡಿರುವರು. ರೋಲರ್ಸ್‌ಪ್ರಾಂತ್ಯದಲ್ಲಿ ಆಂಗ್ಲಸೈನಿಕರು ಬಹಳ ಮುಂದಕ್ಕೆ ಸಾಗಿಹೋಗಿರುವರು. ಅಲ್ಲಿಗೆ ಪಶ್ಚಿಮದಲ್ಲಿದ್ದ ಜರ್ಮನಿಯವರ ಫಿರಂಗಿಗಳ [illegible] ಅಡಗಿಹೋಯಿತು. ವೆಸ್ಟ್‌ಲೀಸು ಮಿತ್ರಮಂಡಲಿ[illegible]ಗಿರುವುದರಿಂದ ಲಾಬಸ್ಸಿಗೆ ನೈರುತ್ಯದಲ್ಲಿರುವ [illegible]ಗಳನ್ನು ಜರ್ಮನರು ಬಿಟ್ಟುಹೋದರು. ಈಗ ಬೆಲ್ಜಿಯಂ [illegible]ರಂಗದೊಳಗೆ ಜರ್ಮನಿಯವರಲ್ಲಿರುವ ಫಿರಂಗಿಗಳಿಗಿಂತಲೂ ದೊಡ್ಡವಾದ ಫಿರಂಗಿಗಳು ಇಂಗ್ಲೀಷರಕಡೆಗೆ ಬಂದಿರುವುದರಿಂದ ಶತ್ರುಗಳ ಫಿರಂಗಿಯಾಟವು ಸಾಗದೆ ಅವನ್ನು ಜರ್ಮನರು ಹಿಂದಿರುಗಿಸಿಕೊಳ್ಳುತ್ತಿದ್ದಾರೆ. ಮತ್ತು ಫ್ಲಾಂಡರ್ಸಿನಲ್ಲಿ ಜರ್ಮನರಮೇಲೆ ಮಿತ್ರಮಂಡಲಿ ಸೈನಿಕರೇ ಬಿದ್ದು ಕಾದಾಡಿದುದರಲ್ಲಿ ಶತ್ರುಗಳ ಹಲವು ಕಂದಕಗಳೂ ಬಹುಮಂದಿ ಸೈನಿಕರೂ ನಮ್ಮವರ ವಶವಾದರು. ಮತ್ತೂ ಇಲ್ಲಿನ ವಿಟೇಸಾಕ್ಕೆ ಪಶ್ಚಿಮದಲ್ಲಿರುವ ಚಿನ್ನಿಕಾಡು ಮಿತ್ರಮಂಡಲಿಯವರ ವಶವಾಯಿತು. ಪಶ್ಚಿಮದಲ್ಲಿ ಜರ್ಮನರ ಸಬ್‌ಮೆರೀನುಗಳಲ್ಲಿ ಒಂದೆರಡು ಇಂಗ್ಲೆಂಡಿನ ಪೂರ್ವತೀರದಲ್ಲಿರುವ ಡೋವರ್‌ನೌಕಾಶ್ರಯಕ್ಕೆ ನುಗ್ಗಬೇಕೆಂದು ೨ ಸಲ ಪ್ರಯತ್ನಿಸಿದುವೆಂತಲೂ ಇದಿರುಕಡೆಯಿಂದ ಫಿರಂಗಿಗುಂಡುಗಳು ಬಲವಾಗಿ ಹಾರಿಸಲ್ಪಟ್ಟುದರಿಂದ ತಲೆತಪ್ಪಿಸಿಕೊಂಡು ಹೋದುವೆಂದೂ ಸುದ್ದಿಯುಂಟಾಗಿದೆ.

ಕಳೆದ ತಾ|| ೧೬-೧೭ ರಲ್ಲಿ ಜರ್ಮನರ ಕೆಲ ಯುದ್ಧದ ಹಡಗುಗಳು ಉತ್ತರಸಮುದ್ರದಲ್ಲಿ ಕಾಣಿಸಿಕೊಂಡು ಇಂಗ್ಲೆಂಡಿನ ಯಾರ್ಕ್ ಜಿಲ್ಲೆಗೆ ಸೇರಿದ ಸ್ಕಾರ್ಬರೋ-ಹಾರ್ಟಿಪೂಲ್-ರೆಡ್‌ಕಾರ್-ವ್ಹಿಟ್‌ಬಿ ಎಂಬ ತೀರಪಟ್ಟಣಗಳ ಮೇಲೆ ಗುಂಡುಗಳನ್ನು ಹೊಡೆದು ಹಲವು ಕಟ್ಟಡಗಳ ನಾಶವನ್ನೂ ೧೦೦ ಮಂದಿಗೆ ಪ್ರಾಣನಷ್ಟವನ್ನೂ ಕೆಲವರಿಗೆ ಗಾಯವನ್ನೂ ಉಂಟುಮಾಡಿ ತಲೆತಪ್ಪಿಸಿಕೊಂಡು ಓಡಿಹೋಗಿವೆ. ಇದು ಎನ್ನೆನ್ನು ಮಾಡಿದಂತಹ ಹಾವಳಿಯೇ ಹೊರತು ಇದಿರಿಗೆ ಪ್ರತಿಭಟಿಸಿ ನಿಂತು ಮಾಡಿದ ನೌಕಾಯುದ್ಧವಾಗಿಲ್ಲ.

ಆಕಾಶವಿಮಾನಗಳು.

ಆಂಟ್ವರ್ಪಿನ ಹತ್ತಿರದ ಷೆಲ್ಟ್‌ನದಿಯಮೇಲೆ ಜರ್ಮನರು ದೋಣಿಗಳನ್ನು ನಿಲ್ಲಿಸಿ ಕಟ್ಟಿದ್ದ ಸೇತುಗಳಮೇಲೆ ಮಿತ್ರಮಂಡಲಿಯ ವೈಮಾನಿಕನೊಬ್ಬನು ಸಿಡಿಮದ್ದುಗಳನ್ನು ಹಾಕಿ ಬಂದನು. ಇನ್ನೊಬ್ಬ ವೈಮಾನಿಕನು ಆಂಟ್ವರ್ಪ್ ಕೋಟೆಯ ಮೇಲ್ಗಡೆಗೆ ಹೋಗಿ ಕೆಲ ಕಾಗದಗಳನ್ನು ಪಟ್ಟಣದೊಳಗೆ ಇಟ್ಟು ಬಂದನು. ಅದರೊಳಗೆ "ಮಿತ್ರಮಂಡಲಿಯವರು ಡಿಶಂಬರ್ ತಾ|| ೧೨ ರೊಳಗೆ ಆಂಟ್ವರ್ಪನ್ನು ಪ್ರವೇಶಿಸುವವರಾಗಿದ್ದಾರೆ" ಎಂದು ಮುದ್ರಿಸಲ್ಪಟ್ಟಿದ್ದಿತು. ಈ ವೈಮಾನಿಕನ ಮೇಲೆ ಜರ್ಮನರು ತುಪಾಕಿಯ ಗುಂಡುಗಳನ್ನು ಹಾರಿಸಿದರು. ಆದರೆ ಆತನು ಗುಂಡಿನೇಟಿಗೆ ತನ್ನ ವಿಮಾನವನ್ನು ಗುರಿಪಡಿಸದೆ ಅತ್ತಿತ್ತ ಹೊರಳಾಡಿಸಿಕೊಂಡು ಸುರಕ್ಷಿತವಾಗಿ ಬಂದುಬಿಟ್ಟನು. ಫ್ರಾನ್ಸ್ ವೈಮಾನಿಕರು ಜರ್ಮನಿಗೆ ಸೇರಿದ ಬೇಡೆನ್‌ಫ್ರೈಬರ್ಗ್ ಪಟ್ಟಣಗಳ ಮೇಲೆ ಮತ್ತೆ ತಾ|| ೯ ರ ರಾತ್ರಿ ಹಾರಿಹೋಗಿ ೧೬ ಸಿಡಿಮದ್ದುಗಳನ್ನು ಹಾಕಿದರು. ಆ ವಿಮಾನಗಳಮೇಲೆ ಜರ್ಮನರು ಫಿರಂಗಿಗುಂಡುಗಳನ್ನು ಅವಿಚ್ಛಿನ್ನವಾಗಿ ಹಾರಿಸಿದರು. ಅಪಾಯವೇನೂ ಆಗಲಿಲ್ಲ.

ಪೂರ್ವರಣರಂಗ.

ಉತ್ತರಪೋಲ್ಯಾಂಡಿನಲ್ಲಿ ಜರ್ಮನರಿಗೂ ರಷ್ಯನರಿಗೂ ಯುದ್ಧವು ನಡೆಯುತ್ತಲೇ ಇದೆ. ಮ್ಲಾವಾಕ್ಕೆ ಪೂರ್ವಭಾಗದಲ್ಲಿ ಶತ್ರುಗಳ ಬಾಧೆಗೊಳಗಾಗದಂತೆ ರಷ್ಯನ್ ಸೈನ್ಯವು ಸುರಕ್ಷಿತ ಸ್ಥಾನವನ್ನು ಸೇರಿ ಹೋರಾಟಮಾಡುತ್ತಿರುವುದು. ದಕ್ಷಿಣ ಪೋಲ್ಯಾಂಡಿನಲ್ಲಿ ಜರ್ಮನ್ ಆಸ್ಟ್ರಿಯನ್ ಸೈನ್ಯಗಳೆರಡೂ ಸೇರಿ ರಷ್ಯನರಮೇಲೆ ಕಾದಾಡುತ್ತಿರುವುವು. ಲಾಥ್-ಲೋವಿಜ್-ಸ್ಟ್ರಿಕಾಫ್-ಲೋಡ್ಜ-ಈಪ್ರಾಂತಗಳಲ್ಲಿರುವ ಶತ್ರುಗಳ ಜೂಣಿದಳದವರು ಬಹಳ ರಭಸದಿಂದ ರಷ್ಯನರಮೇಲೆ ಹಲವುಬಾರಿ ಬಿದ್ದು ಕಾಳಗಮಾಡಿದುದರಲ್ಲಿ ಅವರನ್ನೆಲ್ಲಾ ರಷ್ಯನರು ಹಿಮ್ಮೆಟ್ಟಿಸಿರುವರು. ಇಲೋವಿಜ್ ಪ್ರಾಂತದಲ್ಲಿ ೨ ದಿನ ಅವಿಚ್ಛಿನ್ನವಾಗಿ ಹಗಲೂ ರಾತ್ರಿಯೂ ಜರ್ಮನರು ರಷ್ಯನರಮೇಲೆ ಬಿದ್ದು ಕಾದಾಡಿದುದರಲ್ಲಿ ಜರ್ಮನರಕಡೆ ಬಹುಜನರು ಸಾಯಲು ಮಿಕ್ಕವರು ಪೂರ್ಣವಾಗಿ ಸೋತು ಓಡಿಹೋದರು. ವಿಶ್ಚುಲಾನದಿಯ ಪಶ್ಚಿಮತೀರದ ಯುದ್ಧರಂಗದಲ್ಲೂ ಜರ್ಮನರು ಹಿಮ್ಮೆಟ್ಟುತ್ತಿದ್ದಾರೆ. ದಕ್ಷಿಣದಲ್ಲಿ ಕಳೆದ ತಾ|| ೧೦-೧೧ ರಲ್ಲಿ ಕ್ರಾಕೋವಿನ ಹತ್ತಿರ ರಷ್ಯನರಿಗೂ ಆಸ್ಟ್ರಿಯನ್ನರಿಗೂ ಭಯಂಕರವಾದ ಯುದ್ಧವಾಯಿತು. ೪ ಸಾವಿರ ಮಂದಿ ಶತ್ರುಸೈನಿಕರು ರಷ್ಯನರ ಸೆರೆಯಾಳುಗಳಾಗಿ ಸಿಕ್ಕಿದರು. ಮ್ಲಾವಾ ಪ್ರಾಂತದಲ್ಲೂ ಜರ್ಮನರಿಗೆ ಪರಾಭವವಾಯಿತು. ಕಾರ್ಪೆಥಿಯನ್ ಕಣಿವೆಗಳ ಕಡೆಗೆ ಆಸ್ಟ್ರಿಯನ್ ಸೈನ್ಯವು ಬಂದಿದ್ದು ರಷ್ಯನರಮೇಲೆ ಯುದ್ಧಮಾಡಿ ಹಿಮ್ಮೆಟ್ಟಿದೆ ಆದರೂ ಅಲ್ಲಿ ಯುದ್ಧವಾಗುತ್ತಲೇ ಇದೆ. ಪ್ರಜೆಸ್ಮಿಜ್-ಸೈಬಿನೋ ಪ್ರಾಂತಗಳಲ್ಲಿ ಶತ್ರುಸೈನ್ಯವನ್ನು ರಷ್ಯನರು ಪೂರ್ಣವಾಗಿ ಸೋಲಿಸಿ ಅವರದೇಶದ ಎಲ್ಲೆಕಟ್ಟಿಗೆ ಓಡಿಸಿದ್ದಾರೆ. ಲೊವೈಜು-ಅಲೋವೋ ಪ್ರಾಂತದಲ್ಲಿ ಜರ್ಮನರ ಸೈನ್ಯವು ವಿಶೇಷವಾಗಿ ಬಂದು ತೀಕ್ಷ್ಣವಾಗಿ ಕಾದಾಡಿದುದರಲ್ಲಿ ಅವರಕಡೆ ಬಹಳಮಂದಿ ನಷ್ಟವಾದರು.

ಸರ್ವಿಯಾ-ಮಾಂಟಿನೀಗ್ರೋ-ಆಸ್ಟ್ರಿಯಾ.

ಸರ್ವಿಯಾದವರಿಗೆ ಉಂಟಾದ ವಿಶೇಷ ಜಯಲಾಭವನ್ನು ಕಳೆದವಾರದ ತಂತ್ರೀವಾರ್ತೆಗಳು ಪ್ರಕಟಿಸಿರುವುವು. ಹಿಂದೆ ಆಸ್ಟ್ರಿಯನ್ನರ ವಿಶೇಷವಾದಸೈನ್ಯಗಳು ಸರ್ವಿಯಾಕ್ಕೆ ನುಗ್ಗಿಬಂದುದರಿಂದ ಸರ್ವಿಯನ್ನರು ಹಿಮ್ಮೆಟ್ಟಬೇಕಾಗಿ ಬಂದು ತಮ್ಮ ದೇಶದ ರಾಜಧಾನಿಯಾದ ಬೆಲ್ಗ್ರೇಡನ್ನೂ ಅದರ ಹತ್ತಿರದ ವಾಲ್ಜೀವೋ-ಯುಜಿಟ್ಜಿ ಎಂಬ ಪಟ್ಟಣಗಳನ್ನೂ ಆಸ್ಟ್ರಿಯನ್ನರಿಗೆ ಒಪ್ಪಿಸಿಬಿಡಬೇಕಾಯಿತು. ಈಚೆಗೆ ಸರ್ವಿಯನ್ನರು ಹೊಸಸೇನೆಗಳನ್ನು ಅಣಿಮಾಡಿಕೊಂಡು ಬಹಳ ವೀರಾವೇಶದಿಂದ ಶತ್ರುಗಳ ಮೇಲೆ ಬಿದ್ದುದರಿಂದಲೂ, ಆಸ್ಟ್ರಿಯನ್ನರು ರಷ್ಯನರ ಹಾವಳಿಯನ್ನು ತಡೆಯುವುದಕ್ಕಾಗಿ ಅತ್ತಕಡೆಗೆ ಸ್ವಲ್ಪ ಸೈನ್ಯವನ್ನು ಈಕಡೆಯಿಂದ ಕರೆಯಿಸಿಕೊಂಡು ಬಿಟ್ಟುದರಿಂದಲೂ, ಅವರನ್ನು ಸರ್ವಿಯನ್ನರು ದಕ್ಷಿಣದಿಕ್ಕಿಗೆ ಬರಗೊಡದಂತೆ ತಡೆದು ಪ್ರತಿಭಟಿಸಿ ಭಯಂಕರವಾದ ಯುದ್ಧವನ್ನು ಮಾಡಿ ಅವರ ಸೇನಾಮುಖವನ್ನು ಭೇದಿಸಿ, ಸುತ್ತುಗಟ್ಟಿ ಸೋಲಿಸಿದರು. ಆದರಿಂದ ಸರ್ವಿಯನ್ನರು ತಮ್ಮ ಬೆಲ್ಗ್ರೇಡು-ವಾಲ್ಜೀವೋ-ಯುಜಿಟ್ಜಿ ಎಂಬ ಪಟ್ಟಣಗಳನ್ನು ಮರಳಿ ತಮ್ಮ ವಶಪಡಿಸಿಕೊಂಡರು. ಮತ್ತೂ ಶತ್ರುಗಳ ಕಡೆಯ ೨೦,೦೦೦ ಸೈನಿಕರನ್ನೂ ೫೧ ಫಿರಂಗಿಗಳನ್ನೂ ಬಹಳ ಮದ್ದುಗುಂಡು ಮೊದಲಾದ ಸಾಮಗ್ರಿಗಳನ್ನೂ ವಶಪಡಿಸಿಕೊಂಡರು. ಮೊರಾವಾದಲ್ಲಿರುವ ಪಶ್ಚಿಮದ ಕಣಿವೆಗಳಲ್ಲಿ ಲೀಗ್ ನದಿಯ ದಡದಮೇಲೆ ಮುಂದಕ್ಕೆ ಸಾಗಿಹೋದರು. ಲೇಲಿಕ್ ಪರ್ವತದ ಬಳಿಯಲ್ಲಿದ್ದ ಶತ್ರುಸೇನೆಯಮೇಲೆ ಬಿದ್ದು ಸೋಲಿಸಿ, ಕೆಲ ಫಿರಂಗಿಗಳನ್ನೂ ಹಲವುಮಂದಿ ಸೈನಿಕರನ್ನೂ ಹಿಡಿದು ಆ ಪರ್ವತಭಾಗಗಳನ್ನು ತಾವು ಆಕ್ರಮಿಸಿಕೊಂಡರು. ಈಚೆಗೆ ಮರಳಿ ಸರ್ವಿಯನ್ನರಿಗೆ ಎತ್ತೆತ್ತಲೂ ಜಯವಾಗುವ- ಆಸ್ಟ್ರಿಯನ್ನರಿಗೆ ಸೋಲಾಗುವ ಸ್ಥಿತಿಯೇ ಆರಂಭವಾಗಿದೆ. ಈಚೆಗೆ ರಷ್ಯನರು ಸರ್ವಿಯಾ ಮಾಂಟಿನೀಗ್ರೋದವರ ಸಹಾಯಕ್ಕಾಗಿ ೫ ಪಟಾಲಮ್ಮುಗಳನ್ನು ಕಳುಹಿಸಿಕೊಟ್ಟಿರುವರಂತೆ. ಈ ನೂತನ ಸೈನ್ಯವು ಅಕ್ಟೋಬರ್ ತಾ|| ೨೭ ರಲ್ಲಿ ಸ್ವದೇಶದಿಂದ ಹೊರಟು ನವಂಬರ್ ತಾ|| ೨೯ ರಲ್ಲಿ ಯುದ್ಧಾಂಗಣಕ್ಕೆ ಬಂದು ಕೂಡಿರುವುದು. ಈ ರಷ್ಯನ್ ಸೈನ್ಯವು ರಷ್ಯಾಕ್ಕೆ ಸೇರಿದ ಆರ್ಕೇಂಜ್ (ಇದು ಉತ್ತರತಟ ರೇಖೆಯಲ್ಲಿರುವ ರೇವೆಪಟ್ಟಣ) ನಿಂದ ದಕ್ಷಿಣದಲ್ಲಿ ಆಡ್ರಿಯಾಟಿಕ್ ಸಮುದ್ರದಲ್ಲಿರುವ ಮಾಂಟಿನೀಗ್ರೋವಿನ ಅಂಟಿವಾರಿ ಎಂಬ ರೇವೆಪಟ್ಟಣದಲ್ಲಿ ಬಂದಿಳಿದಿರುವುದು. ಇಷ್ಟು ದೂರದ ಪ್ರಯಾಣಮಾಡಿ ತಮ್ಮ ಸೈನ್ಯವನ್ನು ರಷ್ಯಾದವರು ಸರ್ವಿಯಾ ಸಹಾಯಕ್ಕೆ ಕಳುಹಿಸಿರುವುದು ಪ್ರಶಂಸನೀಯವಾದ ಕಾರ್ಯವಾಗಿದೆ.

ಬೆಲ್ಗ್ರೇಡಿನ ಸುತ್ತುಮುತ್ತಿನಲ್ಲಿ ಶತ್ರುಗಳು ಸರ್ವಿಯನ್ನರ ಮೇಲೆ ಬಲವಾಗಿ ಬಿದ್ದು ಕಾದಾಡಿದರೂ ಕಡೆಗೆ ಸೋತು ಹಿಮ್ಮೆಟ್ಟಬೇಕಾಯಿತು. ಆ ಯುದ್ಧದಲ್ಲಿ ಆಸ್ಟ್ರಿಯನ್ನರು ತಮ್ಮ ಕಡೆ ಹತವಾದ ೨|| ಸಾವಿರ ಮಂದಿಯನ್ನು ರಣರಂಗದಲ್ಲೇ ಬಿಟ್ಟು ಓಡಿಹೋಗಿರುವರು. ಎಡಪಕ್ಕದಲ್ಲಿರುವ ಸರ್ವಿಯನ್ ಸೈನ್ಯಗಳು ಆಸ್ಟ್ರಿಯನ್ ಸೈನ್ಯಗಳನ್ನು ಡಿನಾನದಿಯ ಪಕ್ಕಕ್ಕೂ ಉತ್ತರದಿಕ್ಕಿಗೂ ನೈರುತ್ಯದಿಕ್ಕಿಗೂ ಹಿಮ್ಮೆಟ್ಟಿಸಿ ಓಡಿಸುತ್ತಲಿವೆ. ಉತ್ತರದಿಕ್ಕಿನಲ್ಲಿ ಸರ್ವಿಯನ್ ಸೈನ್ಯವೂ, ದಕ್ಷಿಣದಲ್ಲಿ ರಷ್ಯನ್ ಮಾಂಟಿನೀಗ್ರೋ ಸೈನ್ಯಗಳೂ ಈಗ ಆಸ್ಟ್ರಿಯನ್ನರ ಮೇಲೆ ಬಿದ್ದು ಸೆಣಸುತ್ತಿವೆ. ಇದರಿಂದ ಸರ್ವಿಯನ್ ಸೈನ್ಯಗಳಲ್ಲೂ ಪ್ರಜೆಗಳಲ್ಲೂ ನೂತನೋತ್ಸಾಹವು ವಿಜೃಂಭಿಸಿದೆ. ಮಾಂಟಿನೀಗ್ರೋ ಸೈನ್ಯದ ಒಂದು ಭಾಗವು ಶತ್ರುಗಳಮೇಲೆ ಬಿದ್ದು ಅವರನ್ನು ವಿಷಿಗಾರ್ಡಿನ ಕಡೆಗೆ ಓಡಿಸಿ, ತಾವು ನದಿಯನ್ನು ದಾಂಟಿ ಮುಂದಕ್ಕೆ ಸಾಗಿ ಶತ್ರುಗಳ ಕಡೆಯ ೧೫೦ ಮಂದಿಯನ್ನು ಸೆರೆಹಿಡಿದಿದ್ದಾರೆ. ಮಾಂಟಿನೀಗ್ರೋದವರು ಆಸ್ಟ್ರಿಯಾದ ವಿಷ್‌ಗ್ರೇಡ್ ಪಟ್ಟಣವನ್ನು ಹಿಡಿದುಕೊಂಡರು. ಅಲ್ಲಿದ್ದ ಬಹಳ ಸಾಮಗ್ರಿಯೂ ಹಲವುಮಂದಿ ಸೈನಿಕರೂ ಅವರ ವಶರಾದರು. ಕಳದ ತಾ|| ೧೧ ರಲ್ಲಿ ಸರ್ವಿಯನ್ನರು ಆಸ್ಟ್ರಿಯಾದ ಕಡೆಯ ೨೦ ಫಿರಂಗಿಗಳನ್ನೂ ೨೨೨೦ ಮಂದಿ ಸೈನಿಕರನ್ನೂ ಹಿಡಿದುಕೊಂಡಿದ್ದಾರೆ. ಮತ್ತೂ ಅವರು ಮುಂದುಮುಂದಕ್ಕೆ ಸಾಗಿ ಹೋಗಿ ಪಾಬಾಟ್-ಸ್ನಿಟ್ಜಾ ಪಟ್ಟಣಗಳನ್ನು ಸಮೀಪಿಸುತ್ತ ಮಧ್ಯದಲ್ಲಿ ನಡೆದ ಯುದ್ಧದಲ್ಲಿ ಆಸ್ಟ್ರಿಯನ್ನರ ೨೮ ಸಾವಿರ ಮಂದಿ ಸೈನಿಕರನ್ನೂ ೭೦ ಸಾಮಾನ್ಯ ಫಿರಂಗಿಗಳನ್ನೂ, ೪೪ ವೇಗಗಾಮಿಗಳಾದ ಫಿರಂಗಿಗಳನ್ನೂ ಹಿಡಿದುಕೊಂಡರೆಂದು ತಾ|| ೧೪ ರ ತಂತ್ರೀವಾರ್ತೆಯು ತಿಳಿಯಿಸುತ್ತದೆ. ಇದರಿಂದ ಆಸ್ಟ್ರಿಯನ್ನರನ್ನು ಸರ್ವಿಯನ್ನರು ಎಷ್ಟುಮಟ್ಟಿಗೆ ಸೋಲಿಸುತ್ತಿರುವರೆಂಬುದೂ, ಆಸ್ಟ್ರಿಯನ್ನರ ಕೈ ಎಷ್ಟು ಕೀಳಾಗಿರುವುದೆಂಬುದೂ ಗೊತ್ತಾಗುತ್ತದೆ. ಯುದ್ಧಾರಂಭಕಾಲದಲ್ಲಿ ಆಸ್ಟ್ರಿಯನ್ನರಿಗಿದ್ದ ಉತ್ಸಾಹಶಕ್ತಿಯೆಲ್ಲಾ ಈಗ ಅಳಿದುಹೋಗಿದೆ. ಹಂಗೇರಿಯಾದ ಪ್ರಜೆಗಳು ಬಲು ಬೇಸತ್ತು ಹೋಗಿದ್ದಾರೆ. ಅವರಿಗೆ ಮೊದಲಿಂದಲೂ ಜಯದ ಮುಖವೇ ಇಲ್ಲದೆಹೋಗಿದೆ. ಅಲ್ಲಿನ ರಾಜ್ಯಾಂಗ ಯುದ್ಧಸಂಬಂಧದಲ್ಲಿ ಜರ್ಮನರು ವಿಶೇಷವಾಗಿ ತಲೆಹಾಕಿಕೊಂಡು ಸರ್ವಾಧಿಕಾರವನ್ನೂ ಅವರೇ ವಹಿಸಿಕೊಂಡಿರುವುದು ಅಲ್ಲಿನ ಪ್ರಜೆಗಳಿಗೆ ಸರಿಬೀಳದೆ ಬಹಳ ಆಗ್ರಹವನ್ನುಂಟುಮಾಡಿದೆ. ಅವರು ಹೇಗಾದರೂ ಮಾಡಿ ರಷ್ಯನರೊಡನೆ ಸಂಧಿಮಾಡಿಕೊಳ್ಳಬೇಕೆಂದು ಅಪೇಕ್ಷಿಸುತ್ತಿದ್ದಾರೆ. ಸರ್ವಿಯನ್ನರು ಬೆಲ್ಗ್ರೇಡಿನ ಹತ್ತಿರ ತಮ್ಮನ್ನು ಸೋಲಿಸಿ ಹಿಮ್ಮೆಟ್ಟಿಸಿರುವರೆಂದು ಆಸ್ಟ್ರಿಯನ್ನರೇ ಒಪ್ಪಿಕೊಂಡಿದ್ದಾರೆ. ಆಸ್ಟ್ರಿಯಾದವರ ಡಿಸ್ಟ್ರಾಯರುಗಳು ಎರಡು ಅಡ್ರಿಯಾಟಿಕ್ ಸಮುದ್ರದಲ್ಲಿ ಮದ್ದಿನ ಗೋಳಗಳಿಗೆ ಬಡಿದು ಮುಳುಗಿ ಹೋಗಿವೆ.

ತುರ್ಕಿ.

ಯೂಪ್ರೆಟಿಸ್-ಟೈಗ್ರಿಸ್ ನದಿಗಳ ಸಂಗಮಸ್ಥಲದಲ್ಲಿರುವ ಕುರ್ನಾಪಟ್ಟಣದೊಳಗೆ ಇದ್ದ ತುರ್ಕಿಯ ಸೈನ್ಯವೆಲ್ಲಾ ಆಂಗ್ಲಸೈನಿಕರಿಗೆ ಶರಣಾಗತವಾಯಿತು. ಡೆಲ್ಟಾ ಪ್ರಾಂತದಲ್ಲಿರುವ ಫಲವತ್ತಾದ ಪ್ರದೇಶಗಳೆಲ್ಲಾ ಈಗ ಆಂಗ್ಲಪ್ರಭುತ್ವದವರ ವಶವಾಗಿವೆ. ಪರ್ಷಿಯ ಸಿಂಧುಶಾಖೆಗೆ ಹೋದ ಭರತಖಂಡದ ಸೈನಿಕರು ಈ ಸ್ಥಲದಲ್ಲಿ ತುರ್ಕಿಯವರಮೇಲೆ ಯುದ್ಧಮಾಡಿ ಜಯಶೀಲರಾಗಿರುತ್ತಾರೆ. ಕಳೆದ ತಾ|| ೫ ರಲ್ಲಿ ನೌಕಾಸೈನಿಕರೂ ಭೂ ಸೈನಿಕರೂ ಸಾಯುಧರಾಗಿ ಕುರ್ನಾಕ್ಕೆ ಇದಿರಿನಲ್ಲಿ ನದೀ ಸಂಗಮಸ್ಥಲದಲ್ಲಿ ಶತ್ರುಗಳಮೇಲೆ ಬಿದ್ದರು. ಶತ್ರುಗಳು ನದಿಯಾಚೆ ಪಕ್ಕಕ್ಕೆ ಓಡಿದರು. ಅವರ ಕಡೆಯ ೨ ಫಿರಂಗಿಗಳೂ ೭೦ ಮಂದಿ ಸೈನಿಕರೂ ನಮ್ಮವರ ವಶರಾದರು. ೭ ನೆಯ ತಾರೀಖಿನಲ್ಲಿ ನಮ್ಮ ಕಡೆಯ ೨ ಹಡಗುಗಳಿಗೆ ಏಟುಬಿದ್ದಿತು. ೮ ನೆಯ ತಾರೀಖಿನಲ್ಲಿ ಕುರ್ನಾಕ್ಕೆ ಇದಿರಾಗಿರುವ ಮಾಸೇರಾವನ್ನು ನಮ್ಮವರು ಹಿಡಿದುಕೊಂಡರು. ಅಲ್ಲಿದ್ದ ೩ ಫಿರಂಗಿಗಳು ನಮ್ಮವರ ವಶವಾದುವು. ಟೈಗ್ರಿಸ್ ನದಿಯಮೇಲೆ ದೋಣಿಗಳಿಂದ ನಮ್ಮವರು ಕಟ್ಟಿದ ಸೇತುವಿನ ಮೇಲೆ ಹಿಂದೂ ಸೈನಿಕರ ೨ ಪಟಾಲಮುಗಳು ದಾಟಿಹೋಗಿ ತಾ|| ೮ ರಲ್ಲಿ ಕುರ್ನಾವನ್ನು ಸ್ವಾಧೀನಪಡಿಸಿಕೊಂಡರು. ಅಲ್ಲಿದ್ದ ತುರ್ಕಿಯ ಸೈನ್ಯಕ್ಕೆಲ್ಲಾ ಅಧಿಪತಿಯಾಗಿದ್ದ ಬಸಾರಾ ಗೌರ್ನರು ನಮ್ಮವರಿಗೆ ಶರಣಾಗತನಾಗಿ ಸಿಕ್ಕಿಹೋದನು. ಅವನ ಜತೆಯಲ್ಲಿದ್ದ ೪೨ ಮಂದಿ ಸೈನಿಕೋದ್ಯೋಗಿಗಳೂ ೧೧೦೦ ಮಂದಿ ಸೈನಿಕರೂ ೯ ಫಿರಂಗಿಗಳೂ ಸೆರೆಯಾಳುಗಳಾಗಿ ಸಿಕ್ಕಿದರು. ಈ ಯುದ್ಧರಿಂದ ನಮ್ಮವರು ಕುರ್ನಾ ಮೊದಲುಗೊಂಡು ಸಮುದ್ರತೀರದವರೆಗಿನ ಫಲವತ್ತಾದ ಭೂಮಿಯನ್ನೆಲ್ಲಾ ಆಕ್ರಮಿಸಿಕೊಂಡಂತಾಯ್ತು.

ತುರ್ಕಿಗೆ ಸೇರಿದ ಗೋಯಿಬೆನ್ ಯುದ್ಧದ ಹಡಗು ಕಳೆದ ತಾ|| ೧೧ ರಲ್ಲಿ ತನ್ನ ಜತೆಗೆ ೧ ಫಿರಂಗಿ ಹಡಗನ್ನು ಸೇರಿಸಿಕೊಂಡು ರಷ್ಯಾಕ್ಕೆ ಸೇರಿದ ಬಟೋಮ್ ಎಂಬ ತೀರಪಟ್ಟಣದಮೇಲೆ ಫಿರಂಗಿ ಗುಂಡುಗಳನ್ನು ೧೦-೧೫ ಹಾರಿಸಿತು. ಅಷ್ಟರಲ್ಲಿ ಕೋಟೆಯೊಳಗಿಂದ ಇದಿರುಗುಂಡುಗಳು ಹಾರುವುದಕ್ಕೆ ಪ್ರಾರಂಭಿಸಿದುವು ಗೋಯಿಬೆನ್ನು ತಲೆತಪ್ಪಿಸಿಕೊಂಡು ಹೋಯಿತು. ಇದರ ಏಟಿನಿಂದ ರೇವೆಗೆ ಸ್ವಲ್ಪ ನಷ್ಟವಾಯಿತು. ಹುಡಿಡಾ ಎಂಬ ಪಟ್ಟಣದಲ್ಲಿದ್ದ ಇಂಗ್ಲೀಷ್ ರಾಯಭಾರಿಯು ಅಲ್ಲಿರುವ ಇಟಲಿ ರಾಯಭಾರಿಯನ್ನು ಮರೆಬಿದ್ದಿದ್ದರೂ ತುರ್ಕಿಯವರು ಬಲಾತ್ಕಾರದಿಂದ ಇಂಗ್ಲೀಷ್ ರಾಯಭಾರಿಯನ್ನು ಹಿಡಿದುಕೊಂಡು ತಮ್ಮಲ್ಲಿ ಸೆರೆಹಾಕಿಕೊಂಡುದರಿಂದ ಇಟಲಿಗೆ ತುರ್ಕಿಯಮೇಲೆ ಆಗ್ರಹವುಂಟಾಗಿದೆ. ಇದರಮೇಲೆ ಅವರು ಗೆಯಿಲಿಯೂನಾ ಎಂಬ ಯುದ್ಧದ ಹಡಗನ್ನು ಕಳುಹಿಸಿದರು. ಮತ್ತೂ ಹೀಗೆ ಮಾಡಿದುದಕ್ಕಾಗಿ ತಮಗೆ ನಷ್ಟಪರಿಹಾರವನ್ನು ಕೊಡಬೇಕೆಂದು ಕಾನ್ಸ್ಟಾಂಟಿನೋಪಲ್ಲಿನಲ್ಲಿರುವ ಇಟಲಿಯ ರಾಯಭಾರಿಯು ತುರ್ಕಿ ಸರ್ಕಾರದವರಿಗೆ ತಿಳಿಯಪಡಿಸಿದ್ದಾರೆ. ತುರ್ಕಿಯವರು

ಇಂಗ್ಲೀಷ್ ರಾಯಭಾರಿಯ ಜತೆಗೆ ಫ್ರಾನ್ಸ್ ರಾಯಭಾರಿಯನ್ನೂ ಸಹ ಅರೇಬಿಯಾದಲ್ಲಿ ಸೆರೆಯಲ್ಲಿಟ್ಟಿದ್ದಾರಂತೆ. ಇಟಲಿಯ ವಿದೇಶಾಂಗಮಂತ್ರಿಯು ತಮ್ಮ ಪಾರ್ಲಿಮೆಂಟಿನಲ್ಲಿ ಮಾತನಾಡುವಾಗ್ಗೆ- ತುರ್ಕಿಯು ಇನ್ನುಮುಂದೆ ಎಂದಿಗೂ ಇಂಥ ಕೆಲಸವನ್ನು ಮಾಡದೆ ಇರುವಂತೆ ಅದಕ್ಕೆ ಬುದ್ಧಿಬರುವಹಾಗೆ ನಾವು ಅದರಿಂದ ಪ್ರತಿಫಲವನ್ನು ಈಗ ಬರಮಾಡಿಕೊಳ್ಳಬೇಕು-ಎಂದರು. ಕಾನ್ಸ್ಟಾಂಟಿನೋಪಲ್ಲಿಗೂ ಹೊಡಿಡಾಕ್ಕೂ ತಂತ್ರೀವಾರ್ತೆಯು ಹೋಗಿಬರುವ ಮಾರ್ಗವು ಕೆಟ್ಟಾಗಿದೆಯೆಂದು ತುರ್ಕಿಯವರು ಇಟಲಿಗೆ ಉತ್ತರವನ್ನು ಕೊಟ್ಟರು. ತಮಗೆ ನಷ್ಟ ಪರಿಹಾರವನ್ನು ಕೊಡಬೇಕೆಂದು ಮಂತ್ರಿಯವರು ಕೂಡಲೇ ಮರಳಿ ತುರ್ಕಿಗೆ ತಂತ್ರೀವಾರ್ತೆಯನ್ನು ಕಳುಹಿಸಿರುವರು. ತುರ್ಕಿಗೆ ಸೇರಿದ ಸಿರಿಯನ್ ಸೈನಿಕರಲ್ಲಿ ಯುದ್ಧದ ವಿಷಯಕವಾಗಿ ಬೇಸರುಂಟಾಗಿರುವುದು. ಬಹುಮಂದಿ ಸೇನೆಯನ್ನು ಬಿಟ್ಟು ಹೋಗುತ್ತಿರುವರು. ೨೫೦೦ ಮಂದಿಗಳಲ್ಲಿ ಒಂದು ಸೇನಾನಿವಹದಲ್ಲಿ ೯೦೦ ಮಂದಿಗಳು ಒಂದೇ ಆವೃತ್ತಿ ಬಿಟ್ಟು ಹೋದರು. ಇಂಗ್ಲೀಷರ ಒಂದು ಸಬ್‌ಮೆರಿನ್ನು ಡಾರ್ಡನೆಲ್ಸ್ ಜಲಸಂಧಿಯನ್ನು ನುಗ್ಗಿ ಅದರೊಳಗಿದ್ದ ಮೆಸ್ಸೋದಿಯಾ ಎಂಬ ತುರ್ಕಿಯ ಯುದ್ಧದ ಹಡಗಿಗೆ ಟಾರ್ಪೆಡೋವನ್ನು ಬಿಟ್ಟು ಒಡೆದು ಮುಳುಗಿಸಿಬಿಟ್ಟಿತು. ಈ ಸಬ್‌ಮೆರಿನ್ನು ಹೋಗುವಾಗ ಸಮುದ್ರದ ಬಲವತ್ತರವಾದ ತೆರೆಗಳಿದ್ದುವು. ಆದೂ ಉಪಾಯದಿಂದ ನುಗ್ಗಿತು. ಮತ್ತೂ ೫ ಸಾಲುಗಳ ಸಿಡಿಮದ್ದಿನ ಗೋಳಗಳು ಆ ಜಲಸಂಧಿಯ ಬಾಯಲ್ಲಿ ಹಾಕ್ಕಟ್ಟಿದ್ದರೂ ನೇರ್ಪಿನಿಂದ ಅವುಗಳ ಮಧ್ಯದಲ್ಲಿ ನುಸುಳಿ, ತನ್ನಮೇಲೆ ತುರ್ಕಿಯವರು ಫಿರಂಗಿ ಗುಂಡುಗಳನ್ನು ಹೊಡೆಯುತ್ತಿದ್ದರೂ ಅವುಗಳ ಏಟಿಗೆ ಈಡಾಗದೆ ತನ್ನ ಕೆಲಸವನ್ನು ಮುಗಿಸಿಕೊಂಡು ಸುರಕ್ಷಿತವಾಗಿ ಹಿಂದಿರುಗಿ ಬಂದಿರುವುದು. ತುರ್ಕಿಗೆ ಸೇರಿದ ಅರ್ಮೇನಿಯಾದ ಪೂರ್ವದ ಎಲ್ಲೆಕಟ್ಟಿನಲ್ಲಿ ರಷ್ಯನರು ನುಗ್ಗಿ ಬಹುದೂರ ಹೋಗಿಬಿಟ್ಟಿದ್ದಾರೆ. ಎನ್ವರ್‌ಪಾಷಾರವರು ಕಾಕಸ್ ಪ್ರಾಂತದಲ್ಲಿರುವ ತುರ್ಕಿಸೈನ್ಯಕ್ಕೆ ತಾನೇ ಅಧಿಪತಿಗಳಾಗಿರು ಹೋಗಿದ್ದಾರೆ.

ಮೈಸೂರ್ ಸ್ಟಾರ್.

ಸನ್ ೧೯೧೪ನೆಯ ಡಿಸೆಂಬರ್ ತಾ|| ೨೦ ನೆಯ ಭಾನುವಾರ.

ಮೈಸೂರು ದೇಶದಲ್ಲಿ ಬೆಂಕಿಕಡ್ಡಿಯ ಪರಿಶ್ರಮ.

ಭರತಖಂಡದಲ್ಲಿ ನಾನಾ ವಿಧದ ಪರಿಶ್ರಮಗಳನ್ನು ಆರಂಭಿಸುವುದಕ್ಕೂ ಜೀರ್ಣೋದ್ಧಾರ ಮಾಡುವುದಕ್ಕೂ ಈ ಯುದ್ಧಸಂಧಿಯು ಸಹಾಯಕವಾಗಿದೆ. ಭರತಖಂಡದ ಸರ್ಕಾರದವರೂ ಪ್ರಾಂತಿಕ ಸರ್ಕಾರದವರೂ ಇದಕ್ಕಾಗಿ ಬಹಳ ಶ್ರದ್ಧೆಯಿಂದ ಕೆಲಸಮಾಡುತ್ತಿದ್ದಾರೆ. ಬಂಗಾಳಾ ಗೌನರ್ಮೆಂಟಿನವರು ಒಂದು ಪ್ರದರ್ಶನವನ್ನೇರ್ಪಡಿಸಿ, ಅದರಲ್ಲಿ ಜರ್ಮನಿ ಆಸ್ಟ್ರಿಯಾ ದೇಶಗಳಿಂದ ಈ ದೇಶಕ್ಕೆ ವಿಶೇಷವಾಗಿ ಬರುತ್ತಿದ್ದ ಸಾಮಗ್ರಿಗಳಾವಾವುವೆಂಬುದನ್ನು ಅಲ್ಲಿನ ಪ್ರದರ್ಶನಕ್ಕಿಡಿ! ಅಂಥವುಗಳಲ್ಲಿ ಸಾಧ್ಯವಾದುವನ್ನೆಲ್ಲಾ ಈ ದೇಶದಲ್ಲೇ ಮಾಡುವುದಕ್ಕೆ ಹೇಗೆ ಏರ್ಪಡಿಸಬಹುದೆಂಬುದನ್ನು ಆಲೋಚಿಸುತ್ತಾ, ಪ್ರಜೆಗಳಿಗೂ ಪ್ರೋತ್ಸಾಹ ಹುಟ್ಟುವಂತೆ ಮಾಡುತ್ತಲಿರುವರು. ಮದ್ರಾಸು ಪ್ರಭುತ್ವದವರು ವ್ಯವಸಾಯಶಾಖೆ, ವ್ಯಾಪಾರಶಾಖೆಗಳ ಕೆಲಸನೆರಡನ್ನೂ ಒಂದುಮಾಡಿ, ಅವುಗಳ ಪರಸ್ಪರ ಸಂಗದಿಂದ ಎರಡರ ಅಭಿವೃದ್ಧಿಗೂ ಮತ್ತೂ ಸ್ವಾಭಿವೃದ್ಧಿಗೂ ತಕ್ಕ ಪ್ರಯತ್ನಗಳನ್ನು ವಿಶೇಷ ಧನವ್ಯಯದಿಂ ಮಾಡಲು ಕೃತಸಂಕಲ್ಪರಾಗಿರುವರು. ಇದರಂತೆ ಇತರ ಆಧಿಪತ್ಯಗಳಲ್ಲೂ ಕೆಲಸವು ನಡೆಯುತ್ತಿರುವುದೆಂಬ ವಾರ್ತೆಯು ಬರುತ್ತಿರುವುದು ಸಂತೋಷಪ್ರದವಾಗಿದೆ.

೩-೪ ವರ್ಷಗಳ ಹಿಂದಿನಿಂದಲೂ ಸ್ವದೇಶದ ಸಂಪತ್ತನ್ನು ಅಭಿವೃದ್ಧಿಮಾಡಲು ನಿಶಿತವಾದ ಪ್ರಯತ್ನಗಳನ್ನು ಮಾಡುತ್ತಿರುವ ಮೈಸೂರು ಸಂಸ್ಥಾನವು ಇಂಥ ಸಮಯವನ್ನು ವ್ಯರ್ಥಮಾಡುವುದುಂಟೆ ? ಆದೂಕೂಡ ತಾನು ಇದುವರೆಗೆ ನಡೆಸಿದ ಪರಿಶೋಧನದ ಫಲರೂಪವಾಗಿ ಏರ್ಪಡಿಸಲಿಕ್ಕಿರುವ ಕಾರ್ಯಗಳೊಳಗೆ ಬೆಂಕಿಕಡ್ಡಿಯ ನಿರ್ಮಾಣದ ಯಂತ್ರಾಲಯಸ್ಥಾಪನವೊಂದು ಪ್ರಮುಖವಾಗಿರುವುದೆಂಬುದನ್ನು ಕೇಳಿ ಸಂತೋಷಿಸುತ್ತೇವೆ. ನಮ್ಮದೇಶದ ಕಾಡುಗಳಲ್ಲಿ ಬೆಂಕಿಕಡ್ಡಿಯ ಮತ್ತೂ ಅದರ ಪೆಟ್ಟಿಗೆಯ ನಿರ್ಮಾಣಕ್ಕೆ ಉಪಯೋಗಿಸುವ ಮರಳ ಜಾತಿಯನ್ನು ಕಳೆದ ಸಲದ ವಸ್ತುಪ್ರದರ್ಶನಶಾಲೆಯಲ್ಲಿಟ್ಟು ಪ್ರದರ್ಶಿಸಿದ್ದರೆಂಬುದನ್ನು ತತ್ಕಾಲದಲ್ಲೇ ನಾವು ಬರೆದಿದ್ದೆವಷ್ಟೆ. ಇದರಂತೆ ನಮ್ಮ ಸಂಸ್ಥಾನದ ಕಾಡುಗಳಲ್ಲಿ ಸೀಸಕಡ್ಡಿಯನ್ನೂ ಕಾಗದವನ್ನೂ ಸಹ ಮಾಡಲು ಅನುಕೂಲಿಸುವ ವೃಕ್ಷಜಾತಿಗಳೂ ಹೇರಳವಾಗಿರುವುವೆಂದು ಪರಿಶೋಧನದಿಂದ ದೃಢಪಡಿಸಲ್ಪಟ್ಟಿದೆ. ಅವುಗಳ ಆಧಾರದ ಮೇಲೆ ಸ್ಥಾಪಿಸಬಹುದ ಪ್ರಯತ್ನಗಳೊಳಗೆ ಮೊಟ್ಟಮೊದಲು ಬೆಂಕಿಕಡ್ಡಿಯನಿರ್ಮಾಣದ ಯಂತ್ರಾಲಯವನ್ನು ಸ್ಥಾಪಿಸಲು ನಮ್ಮ ಸರ್ಕಾರದವರು ನಿಶ್ಚಯಿಸಿದ್ದಾರೆ. ಈ ಕಾರ್ಯವನ್ನು ಸಾಗಿಸಲು ಅದು ತುಂಬಾ ಅನುಭವಶಾಲಿಗಳಾಗಿರುವ ಮಿ|| ಇವೆನ್ಸ್ ಎಂಬ ಪಾಶ್ಚಾತ್ಯ ಪಂಡಿತರೊಬ್ಬರನ್ನು ಕಲ್ಕತ್ತಾದಿಂದ ಕರೆಯಿಸಿಕೊಂಡು ಮಾತುಕತೆಗಳನ್ನು ನಡೆಯಿಸಿ ಏರ್ಪಡಿಸಿಕೊಂಡಿರುವರೆಂದು ಕೇಳುತ್ತೇವೆ. ಈ ಏರ್ಪಾಟಿಗೆ ಭರತಖಂಡದ ಸರ್ಕಾರದವರು ಸಂತೋಷಿಸಿ ಇದರ ವಿಷಯದಲ್ಲಿ ಬೇಕಾದ ಅನುಭವಗಳನ್ನು ತಮ್ಮ ಕಡೆಯ ಅನುಭವಿಗಳಿಂದಲೂ ತಿಳಿಯಪಡಿಸಿ ಕೊಟ್ಟಿರುವರೆಂದು ಕೇಳುತ್ತೇವೆ. ಮತ್ತು ಮೈಸೂರು ದೇಶದ ಅಡವಿಗಳ ಮುಖ್ಯಾಧಿಕಾರಿಗಳು ಕೂಡ ಬೆಂಕಿಕಡ್ಡಿಗಳಿಗಾಗಿ ಸಂಸ್ಥಾನದ ಕಾಡುಗಳೊಳಗೆ ವರ್ಷ ೧ಕ್ಕೆ ಎಷ್ಟುಮರವು ಒದಗಬಹುದೆಂಬುದನ್ನೂ ಅದನ್ನು ಅಣಿಮಾಡುವುದಕ್ಕೆ ತಗಲುವ ವೆಚ್ಚವನ್ನೂ, ಈಗ ಅದಕ್ಕಿರುವ ಬೆಲೆಯನ್ನೂ ಸಹ ವಿಶದವಾಗಿ ವರದಿಮಾಡಿರುತ್ತಾರೆಂದು ಅರಿಯುತ್ತೇವೆ. ಇದರ ಮೇಲೆ ಕಲ್ಕತ್ತಾದಿಂದ ಬಂದಿದ್ದ ಮಿ||ಇವೆನ್ಸ್‌ರವರು ಕೂಡ ಪ್ರತ್ಯಕ್ಷವಾಗಿ ಕಾಡಿಗೆ ಹೋಗಿ ತಮ್ಮ ಕಾರ್ಯಕ್ಕೆ ಉಪಯೋಗಿಸುವ ಪ್ರತಿಜಾತಿಯ ಮರಗಳ ಮೃದುತ್ವಾದಿ ಲಕ್ಷಣವನ್ನೆಲ್ಲಾ ಪರೀಕ್ಷೆಯಿಂದ ತಿಳಿದು, ಚೆನ್ನಾಗಿ ಕೆಲಸ ನಡೆಯುವುದೆಂದೂ, ಶ್ರದ್ಧೆಯಿಂದ ಕೆಲಸಮಾಡಿ ಈ ಕಾರ್ಯದಲ್ಲಿ ತುಂಬಾ ಜಯಪ್ರಾಪ್ತಿಯಾಗುವಂತೆ ಮಾಡಲು ತಾವು ಸಿದ್ಧವಾಗಿರುವೆನೆಂದೂ ತಿಳಿಯಿಸಿರುವುದಾಗಿ ಕೇಳುತ್ತೇವೆ. ಹೀಗೆ ಮೈಸೂರು ಪ್ರಭುತ್ವದವರು ಆದಿಯಲ್ಲೇ ಚೆನ್ನಾಗಿ ಪರಿಶೋಧನವನ್ನು ನಡೆಯಿಸಿ ಕಾರ್ಯಾರಂಭ ಮಾಡುವವರಾಗಿರುವುದರಿಂದ ಈ ಕಾರ್ಯವು ವಿಶೇಷ ನ್ಯೂನಾತಿರೇಕಕ್ಕೆ ಈಡಾಗದಂತೆ ಲಾಭಕಾರಿಯಾಗಿ ಪರಿಣಮಿಸದೆ ಹೋಗಲಾರದೆಂದು ನಂಬಬಹುದಾಗಿದೆ. ಹಾಗಲ್ಲದಿದ್ದರೆ ಸಂಪದಭ್ಯುದಯ ಕಾರ್ಯಶಾಖೆಯವರು ಇದುವರೆಗೆ ಶೋಧನೆಗೋಸುಗವೇ ಎಂದು ಮಾಡಿರುವ ಲಕ್ಷಾಂತರದ ವೆಚ್ಚಗಳಿಗೆ ಫಲವೇನು ?

ಮುಖ್ಯವಾಗಿ ಬೆಂಕಿಕಡ್ಡಿಗೂ ಪೆಟ್ಟಿಗೆಗೂ ಉಪಯೋಗವಾಗುವ ಜಾತಿಯ ಮರಗಳಲ್ಲಿ ಅತ್ಯಂತ ಮುಖ್ಯವಾದ ಒಂದು ಜಾತಿಯ ಮರವು ಶಿವಮೊಗ್ಗಾ ಡಿಸ್ಟ್ರಿಕ್ಟಿನ ಕಾಡಿನಲ್ಲಿ ವಿಶೇಷವಾಗಿವೆಯಂತೆ. ಶಿವಮೊಗ್ಗಾ ಪಟ್ಟಣಕ್ಕೆ ೧೫ ಮೈಲಿಗಳ ದೂರದಲ್ಲಿರುವ ಕಾಡಿನಲ್ಲಿ ಈ ಮರವು ವರ್ಷ ೧ಕ್ಕೆ ೩೯ ಸಾವಿರ ಘನಅಡಿಗಳ ಪರಿಮಾಣದಷ್ಟು ದೊರೆವುದಂತೆ. ಉತ್ತರತ್ರ ಈ ಮರವು ವೆಚ್ಚವಾಗುತ್ತ ಬಂದ ಹಾಗೆಲ್ಲಾ ಹೊಸಹೊಸ ಮರಗಳನ್ನು ಬೆಳಸಿಕೊಳ್ಳಬಹುದಾಗಿದೆ. ಆದುಕಾರಣ ಡಿಸ್ಟ್ರಿಕ್ಟಿನಲ್ಲೇ ಈ ಕಾರ್ಯಾಲಯವನ್ನು ಸ್ಥಾಪಿಸುವುದರಿಂದ ಮರಗಳ ಸಾಗುವಿಕೆಗಾಗಿ ಆಗಬೇಕಾದ ವೆಚ್ಚಗಳು ಕಡಿಮೆಬಿದ್ದು ಕಾರ್ಯವೂ ಲಾಭಕಾರಿಯಾಗಿ ಪರಿಣಮಿಸುವುದೆಂದು ನಿರ್ಧರಿಸಲ್ಪಟ್ಟಿದೆ. ಈ ಕಾರ್ಯಾಲಯದಲ್ಲಿ ದಿನ ೧ಕ್ಕೆ ೧೫೦ ಪೆಟ್ಟಿಗೆಗಳ ಕಡ್ಡಿಯನ್ನು ನಿರ್ಮಿಸಬಹುದೆಂದೂ, ಅದಕ್ಕಾಗಿ ೭೫೦ ರೂ.ಗಳ ವ್ಯಯವಾಗುವುದೆಂದೂ ವರ್ಷ ೧ಕ್ಕೆ ೩೦೦ ದಿನಗಳಂತೆ ಕೆಲಸಮಾಡಿದರೆ ೩೩೭೫೦೦ರೂ. ಆದಾಯವಾಗುವುದೆಂದೂ, ಈ ಕಾರ್ಯಾಲಯ ಸ್ಥಾಪನೆಗೆ ೪,೨೦,೦೦೦ ರೂ.ಗಳ ಮೂಲಧನವು ಬೇಕಾಗುವುದೆಂದೂ ಮೇಲೆಕಂಡ ಮಿ|| ಇವೆನ್ಸ್‌ರವರು ಅಭಿಪ್ರಾಯ ಪಟ್ಟಿದ್ದಾರಂತೆ. ಬಹುಶಃ ಅವರು ಹೇಳಿದಷ್ಟು ಲಾಭವು ಬಾರದೆ ಹಾಕಿದ ಹಣಕ್ಕೆ ವೆಚ್ಚಕಳೆದು ಸೇಕಡಾ ೮ ಆಣೆಯಂತೆ ಲಾಭಬರುವುದಾದರೂ ಕಾರ್ಯವು ನೆರವೇರಿಸಲ್ಪಡತಕ್ಕುದೇ. ಇದು ಲಾಭಕಾರಿಯಾಗಿ ಪರಿಣಮಿಸಿದರೆ ಮೈಸೂರುದೇಶದ ಕಾಡುಗಳ ಉತ್ಪತ್ತಿಯು ಇನ್ನಷ್ಟು ಹೆಚ್ಚಲು ಅವಕಾಶವಾಗುವುದು. ಇನ್ನುಳಿದ ಕಾರ್ಯಾಲಯ ಸ್ಥಾಪನೆಗೂ ಪ್ರೋತ್ಸಾಹವು ಉಂಟಾಗುವುದೆಂಬುದರಲ್ಲಿ ಸಂಶಯವಿಲ್ಲ.

ಒಳದೇಶದ ವೃತ್ತಾಂತಗಳು.

ಶ್ರೀಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರು ದೈವಾಧೀನರಾಗಿ ಕಳೆದ ತಾ|| ೧೭ ರ ದಿವಸಕ್ಕೆ ೧೯ ವರ್ಷಗಳಾದುದರಿಂದ ಆ ದಿವಸ ಎಣೆಕಟ್ಟಲೆಯು ಅವರ ಸಮಾಧಿಯಿರುವ ಕಲಕತ್ತಾದಲ್ಲೂ, ಬೆಂಗಳೂರಿನಲ್ಲೂ ನಡೆದಿತು. ತ್ರಿಮತಸ್ಥ ಬ್ರಾಹ್ಮಣರಿಗೆ ಭೋಜನವು ಮಾಡಿಸಲ್ಪಟ್ಟು ದಕ್ಷಿಣೆಯು ಕೊಡಲ್ಪಟ್ಟಿತು.

ಕಳೆದ ತಾ|| ೧೮ ರ ಬೆಳಿಗ್ಗೆ ರಾಜಧಾನಿಯ ಹೆಲ್ತಾಫೀಸರಾದ ಡಾ|| ಎ. ಕೆ. ಪಾಣಿಯವರು ಮತ್ತೊಬ್ಬರೊಡನೆ ತಮ್ಮ ಡಾಗ್‌ಕಾರ್ಟ್ ಕುದುರೆಯ ಬಂಡಿಯಲ್ಲಿ ಕುಳಿತು ಟವನ್‌ಹಾಲಿನಿಂದ ಹೊರಟು ದೊಡ್ಡಪೇಟೆ ಮಾರ್ಗವಾಗಿ ಬರುತ್ತಿರುವಾಗ್ಗೆ ಭಕ್ಷಿ ನರಸಪ್ಪನವರ ಮನೆಯಿದಿರಿಗೆ ಕುದುರೆ ಮುಗ್ಗುರಿಸಿ ಬಂಡಿಸಮೇತ ಬಿದ್ದುಬಿಟ್ಟಿತು. ಮೇಲೆ ಕುಳಿತಿದ್ದ ಡಾ|| ರವರೂ ಅವರ ಸ್ನೇಹಿತರೂ ಕೂಡಲೆ ಕೆಳಗೆ ದುಮಿಕಿಬಿಟ್ಟರು. ದೈವಾಧೀನದಿಂದ ಯಾರಿಗೂ ಅಪಾಯವಾಗಲಿಲ್ಲವು.

ಶ್ರೀಮನ್ ಮಹಾರಾಜರ ಸ್ವಾರಿಯು ದಾವಣಗೆರೆ ಮೊಳಕಾಲ್ಮುರು ಮೊದಲಾದ ಪ್ರಾಂತಗಳಲ್ಲಿ ಸಂಚರಿಸಿಕೊಂಡು ಬರಲು ತಾ|| ೧೮ ರಲ್ಲಿ ಬೆಂಗಳೂರಿಂದ ಚಿತ್ತೈಸಿತು. ದಾವಣಗೆರೆಯ ನಿವಾಸಿಗಳು ನಿನ್ನೆಯದಿನ ಪ್ರಭುಗಳಿಗೆ ಒಂದು ವಿಜ್ಞಾಪನಪತ್ರಿಕೆಯನ್ನೊಪ್ಪಿಸಲು ತಕ್ಕೇರ್ಪಾಟಿಗಿದ್ದುದಲ್ಲದೆ, ತಾ|| ೨೨ರಲ್ಲಿ ಮೊಳಕಾಲ್ಮುರುವಿನಲ್ಲಿ ಹೊಸದಾಗಿ ಕಟ್ಟಿಸಿರುವ ಟವನ್‌ಹಾಲಿನ ಪ್ರವೇಶೋತ್ಸವವನ್ನು ಮಹಾರಾಜರ ಹಸ್ತದಿಂದ ನೆರವೇರಿಸಲು ಆ ತಾ|| ಅಮಲ್ದಾರರು ಬೇಕಾದ ಸನ್ನಾಹಗಳನ್ನು ಮಾಡಿರುವರು.

ಬೆಂಗಳೂರ ಮ್ಯುನಿಸಿಪಾಲಿಟಿಗೆ ಆನರರಿ ಪ್ರೆಸಿಡೆಂಟರು ನಿಯಮಿಸಲ್ಪಟ್ಟಿರುವಂತೆ ರಾಜಧಾನಿಯ ಮ್ಯುನಿಸಿಪಾಲಿಟಿಗೆ ರೆವಿನ್ಯೂಕಮೀಷನರಾಗಿದ್ದು ನಿವೃತ್ತಿಸುಖವನ್ನನುಭವಿಸುತ್ತಿರುವ ರಾ||ಬ|| ಎ. ರಂಗಸ್ವಾಮಯ್ಯಂಗಾರರು ಆನರರಿ ಪ್ರೆಸಿಡೆಂಟರಾಗಿ ನಿಯಮಿಸಲ್ಪಟ್ಟು ಈಗ ಪ್ರೆಸಿಡೆಂಟರಾಗಿರುವ ಮ|| ಲಕ್ಷ್ಮಣರಾಯರು ಟ್ರಸ್ಟ್‌ಬೋರ್ಡಿನ ಚೇರ್ಮನ್ನರಾಗಿ ಮಾತ್ರ ಇರುವರೆಂದೂ, ಇತಃಪರಃ ಟ್ರಸ್ಟ್‌ಬೋರ್ಡಾಫೀಸು ವೀರನಗೆರೆ ಮಾರ್ಗದಲ್ಲಿರುವ ಬಾಡಿಗಾರ್ಡ್ಸ್ ಲೈನಿನಲ್ಲಿ ನಡೆಸಲ್ಪಡುವುದೆಂದೂ ತಿಳಿಯುತ್ತೇವೆ.

ಚೆನ್ನರಾಯಪಟ್ಟಣದಲ್ಲಿ ಒಂದು ಮನೆಯನ್ನು ಕೆಡಹುತ್ತಿರುವಾಗ್ಗೆ ಒಂದು ಮಣ್ಣಿನಕುಡಿಕೆಯಲ್ಲಿ ಕೆಲ ನಾಣ್ಯಗಳಿದ್ದುದು ಕಂಡುಬರಲು, ಮನೆಯ ಯಜಮಾನಿಯಾದ ಪುಟ್ಟಮ್ಮನು ಅದನ್ನು ತನ್ನ ಮನೆಗೆ ತೆಗೆದುಕೊಂಡು ಹೋದಳು. ಈ ವಿಚಾರವು ಪೋಲೀಸಿನವರಿಗೆ ತಿಳಿದು ಅವರು ಬಂದು ವಿಚಾರಿಸಿ ಆ ಕುಡಿಕೆಯನ್ನೂ ಅದರಲ್ಲಿದ್ದ ೨೦೦ವರ್ಷಗಳ ಹಿಂದಿನ ಮಹಮ್ಮದೀಯರ ರೂಪಾಯಿಗಳು ೨೦೦, ಈಸ್ಟ್ ಇಂಡ್ಯಾಕಂಪೆನಿಯ ರೂಪಾಯಿ ೧೯೫ ಇಷ್ಟನ್ನೂ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಅದರ ಸಂಬಂಧದ ವ್ಯವಹಾರವನ್ನು ನಡೆಸುತ್ತಿರುವರು.

ಶ್ರೀಮದ್ಯುವರಾಜರು ದಿವಾನರೊಡನೆ ಬರುವ ಜನವರಿಯ ಮೊದಲನೆಯ ವಾರದಲ್ಲಿ ಕಡೂರು ಮತ್ತೂ ಶಿಮೊಗ್ಗ ಡಿ||ಗಳಲ್ಲಿ ಸಂಚರಿಸಿಕೊಂಡು ಬರುವವರಾಗಿರುವರು. ಈ ವೇಳೆಯಲ್ಲಿ ಹೊಸಕೊಪ್ಪದ ನಿವಾಸಿಗಳು ಶ್ರೀ ಶೃಂಗಗಿರಿಯ ಜಗದ್ಗುರು ನೃಸಿಂಹಭಾರತಿಸ್ವಾಮಿಗಳ, ಹಿಂದೆ ದಿವಾನರಾಗಿದ್ದ ಕೈ|| ಸರ್. ಶೇಷಾದ್ರಿಅಯ್ಯರ್‌ರವರ, ಮ|| ಮಾಧವರಾಯರ, ಈಗಿನ ನಮ್ಮ ದಿವಾನರ, ಮತ್ತೂ ದಿ|| ಬ|| ಕೆ. ಪಿ. ಪುಟ್ಟಣ್ಣಶೆಟ್ಟರ ಭಾವಚಿತ್ರ ಪಟಗಳ ಮೇಲುಮುಸುಗನ್ನು ತೆಗೆಯುವ ಮಹೋತ್ಸವವನ್ನು ಶ್ರೀಮದ್ಯುವರಾಜರ ಹಸ್ತದಿಂದ ನೆರವೇರಿಸಲು ತಕ್ಕೇರ್ಪಾಟನ್ನು ಮಾಡುತ್ತಿರುವರಂತೆ.

ರಾಜಧಾನಿಯಲ್ಲಿ ಪ್ಲೇಗಿನ ಹಾವಳಿಯು ಇನ್ನೂ ಕಡಮೆಯಾಗದೆ ಎಲ್ಲಭಾಗದಲ್ಲೂ ಹರಡಿಕೊಂಡು ನಿತ್ಯದಲ್ಲೂ ೪-೫ ಮರಣಗಳವರೆಗಾಗುತ್ತಿರುವುದು. ಆರೋಗ್ಯಶಾಖೆಯವರ ಅಶ್ರದ್ಧೆಯಿಂದಲೋ ಮತ್ತಾವಕಾರಣದಿಂದಲೋ ಊರಿನ ಯಾವ ಭಾಗದಲ್ಲಿ ನೋಡಿದರೂ ಹೇಸಿಗೆಯು ಹೆಚ್ಚಾಗಿ ಅನಾರೋಗ್ಯವು ಹೆಚ್ಚಲು ಕಾರಣವಾಗಿದೆ. ಬೆಂಗಳೂರಿನಲ್ಲಿ ಬಹಳ ಒಳ್ಳೇಹೆಸರನ್ನು ಪಡೆದಿದ್ದ ಡಾ|| ಪಾಣಿಯವರು ಈಚೀಚೆಗೆ ಅಷ್ಟೊಂದು ಶ್ರದ್ಧೆಯನ್ನು ವಹಿಸುತ್ತಿಲ್ಲವೆಂದು ಜನರು ಆಡಿಕೊಳ್ಳುತ್ತಿದ್ದಾರೆ. ಇದು ನಿಜವಾಗಿದ್ದಲ್ಲಿ ಡಾ|| ಪಾಣಿಯವರು ಈ ದೂರಿನಕಡೆಗೆ ಗಮನವನ್ನು ಕೊಡುವರೆಂದು ನಿರೀಕ್ಷಿಸುತ್ತೇವೆ.

ವಿವಿಧವಾರ್ತಾಸಂಗ್ರಹ.

ರಾಮ್ಸೆ ಮೆಕ್ಡಾನಲ್ಡ್‌ರವರು ಉಪಚಾರಕ ಸೇನಾವರ್ಗದಲ್ಲಿ ಸೇರಿ ರಣರಂಗಕ್ಕೆ ಹೋಗಿರುವರು, ಇವರಂತೆ ಹಲವುಮಂದಿ ಪಾರ್ಲಿಮೆಂಟ್ ಸಭಾಸದರು ದೇಶಾಭಿಮಾನದಿಂದ ಕದಿದಾಡುವುದಕ್ಕೋ ಅಥವಾ ಪೆಟ್ಟುತಿಂದವರನ್ನು ಉಪಚರಿಸುವುದಕ್ಕೋ ಯುದ್ಧರಂಗಕ್ಕೆ ಹೋಗಿರುವರು.

ಜರ್ಮನ್ ದೇಶದಲ್ಲಿ ತಾಮ್ರಕ್ಕೆ ಕ್ಷಾಮವುಂಟಾಗಿದೆ. ಎಲ್ಲಿಂದಲೂ ಅವರ ದೇಶಕ್ಕೆ ಆ ಲೋಹವು ಸಾಗಿಬರುತ್ತಲಿಲ್ಲ. ಆದುಕಾರಣ ಅವರು ಬೆಲ್ಜಿಯಂ ದೇಶದಲ್ಲಿ ತಾವು ಸೂರೆಮಾಡಿದಾಗ ಸಿಕ್ಕಿದ ತಪ್ಪಲೆ ಬಿಂದಿಗೆ ಮೊದಲಾದ ತಾಮ್ರಪಾತ್ರಗಳನ್ನೆಲ್ಲಾ ತಮ್ಮ ದೇಶಕ್ಕೆ ಸಾಗಿಸುತ್ತಿದ್ದಾರೆ.

ಹಲಗೆಗಳನ್ನು ತುಂಬಿಕೊಂಡು ಹೋಗುತ್ತಿದ್ದ ನಾರ್ವೆದೇಶದ ೫ ಹಡಗುಗಳನ್ನು ಯುದ್ಧಸಾಮಗ್ರಿಯನ್ನು ಸಾಗಿಸುವ ಹಡಗೆಂದು ಜರ್ಮನರು ಹಿಡಿದುಕೊಂಡುದರಿಂದ ಆ ಸರ್ಕಾರದವರಿಗೆ ತಮ್ಮ ಅಸಮಾಧಾನವನ್ನು ಬಲವಾಗಿ ತಿಳಿಯಪಡಿಸಬೇಕೆಂದು ನಾರ್ವೆ ಸರ್ಕಾರದವರು ತಮ್ಮ ದೇಶದ ನೌಕಾದಳಾಧಿಕಾರಿಗೆ ಆಜ್ಞೆಮಾಡಿದ್ದಾರೆ.

ಕ್ರಿಸ್ತಮಸ್ ಹಬ್ಬದ ದಿನ ಯುದ್ಧವನ್ನು ನಿಲ್ಲಿಸಿರುವಂತೆ ಮಾಡಬೇಕೆಂದು ಕ್ರೈಸ್ತಜಗದ್ಗುರುಗಳು ಬಹಳ ಪ್ರಯತ್ನಪಟ್ಟರು. ಅದಕ್ಕೆ ಕೆಲ ದೇಶದವರು ಒಪ್ಪದೆ ಹೋದುದರಿಂದ ಪೋಪರು ವಿಫಲಮನೋರಥರಾದರಂತೆ. ಕ್ರೈಸ್ತನ ಬೋಧೆಯನ್ನು ಕ್ರೈಸ್ತ ಪ್ರಭುತ್ವದವರೆಲ್ಲರೂ ಅನುಸರಿಸಿ ನಡೆಯುತ್ತಿದ್ದರೆ ಈಗಿನ ಯುದ್ಧಕ್ಕೆ ಅವಕಾಶವೇ ಇರುತ್ತಿರಲಿಲ್ಲ. ಮದೋನ್ಮತ್ತತೆಯಿಂದ ಅಂಧರಾಗಿರುವವರಿಗೆ ಗುರುದೈವಭಕ್ತಿಯೆಲ್ಲಿರುವುದು ?

ಅಮೇರಿಕಾ ಸಂಯುಕ್ತರಾಷ್ಟ್ರದ ಯುದ್ಧಶಾಖಾ ಮಂತ್ರಿಯವರು ರಾಜಸಭೆಯಲ್ಲಿ ರಾಜ್ಯಾಡಳಿತದ ವರದಿಯನ್ನೋದುವಾಗ್ಗೆ-ತಾವು ಸದ್ಯಃ ೨೫ ಸಾವಿರ ಮಂದಿ ಸೈನಿಕರನ್ನೂ ೧ ಸಾವಿರಮಂದಿ ಉದ್ಯೋಗಿಗಳನ್ನೂ ಹೊಸದಾಗಿ ಸೇರಿಸಿಕೊಳ್ಳಬೇಕಾಗಿರುವುದೆಂದೂ, ಈಗಿನ ಯೂರೋಪ್ಯ ಮಹಾಯುದ್ಧದ ಪರಿಣಾಮವನ್ನು ಹೀಗೇ ಸರಿಯೆಂದು ನಿರ್ಧರಿಸಿ ಹೇಳುವುದು ಅಸಾಧ್ಯವೆಂದೂ, ದೇಶರಕ್ಷಣೆಗಾಗಿ ಸೇನೆಯನ್ನು ಹೊಸದಾಗಿ ಸೇರಿಸುವುದಕ್ಕೂ, ಪರರಾಷ್ಟ್ರಗಳಮೇಲಣ ಅಭಿಯೋಗಕ್ಕಾಗಿ ಅಪಾರಸೈನ್ಯಗಳನ್ನು ಕೂಡಿಸುವುದಕ್ಕೂ ಬಹಳ ಭೇದವಿರುವುದೆಂದೂ ಹೇಳಿರುವರು.

ಜರ್ಮನ್ ಚಕ್ರವರ್ತಿಯವರಿಗೂ ಅವರ ಕಡೆ ಸೈನ್ಯಾಧಿಪತಿಯಾಗಿದ್ದ ಜನರಲ್ ವಾನ್ ಮಾಲಿಕ್‌ರವರಿಗೂ ಕೆಲ ವಿಷಯದಲ್ಲಿ ಅಭಿಪ್ರಾಯಭೇದವಾದುದರಿಂದ, ವಾನ್ ಮಾಲಿಕ್‌ರವ ಸ್ಥಾನಕ್ಕೆ ಚಕ್ರವರ್ತಿಯವರು ತಮ್ಮ ಪ್ರೇಮಾಸ್ಪದರಾದ ಜನರಲ್ ವಾನ್‌ಫಾಕ್ಕೆ ಹರ್ಯಿನ್‌ರವರನ್ನು ನಿಯಮಿಸಿರುವರು. ಜನರಲ್ ವಾನ್ ಮಾಲಿಕ್‌ರವರು ತಮ್ಮ ಸೈನ್ಯವನ್ನು ಪಶ್ಚಿಮರಣರಂಗದಲ್ಲಿ ವರ್ಡನ್ನಿನ ಹತ್ತಿರ ಸೇರಿಸಿ, ವರ್ಡನ್ನಿನ ಉತ್ತರಭಾಗದಲ್ಲಿ ಮಿತ್ರಮಂಡಲಿಯ ಸೈನ್ಯವನ್ನು ಭೇದಿಸಬೇಕೆಂದು ಅಭಿಪ್ರಾಯಗೊಂಡಿದ್ದರು. ಜರ್ಮನ್ ಚಕ್ರವರ್ತಿಯವರಿಗಾದರೊ ಉತ್ತರದಿಕ್ಕಿನಲ್ಲಿರುವ ಮಿತ್ರಮಂಡಲಿಯ ಸೈನ್ಯದ ವ್ಯೂಹವನ್ನು ಚದರಿಸಿ, ಅಲ್ಲಿಂದ ಕಲೆಯ ಕಡೆಗೆ ನುಗ್ಗಿ ಅದನ್ನು ಸ್ವಾಧೀನಪಡಿಸಿಕೊಳ್ಳಬೇಕೆಂಬ ಅಭಿಪ್ರಾಯವಿದ್ದಿತು. ಚಕ್ರವರ್ತಿಯವರ ಅಭಿಪ್ರಾಯದಂತೆಯೇ ವಾನ್‌ಫಾಕ್ಕೆಯವರು ವ್ಯೂಹರಚನೆಯನ್ನು ಮಾಡಿದರು. ಅದ ಪರ್ಯವಸಾನವಂತೂ ಗೊತ್ತೇ ಇದೆ.

[೨ ನೆಯ ಪುಟದಿಂದ ಮುಂದೆ ಸಾಗಿದುದು]

ರ್ವಮಹಾರಾಜರವರ ಪಟಗಳಿಗೆ ವಂದನೆಯನ್ನು ಅರ್ಪಿಸಿ, ಸಭಿಕರು ತಮ್ಮತಮ್ಮ ಸ್ಥಳಗಳಲ್ಲಿ ಕುಳಿತನಂತರ ಒಬ್ಬ ಬಾಲಕನು ಸಭೆ ಸೇರುವುದಕ್ಕೆ ಕಾರಣವನ್ನು ವಿವರಿಸಿದನು. ಬಾಲಕರು ಶ್ರೀಮಚ್ಚಕ್ರವರ್ತಿಗಳ ಮತ್ತು ಮಹಾರಾಜರವರ ಶ್ರೇಯಃಪ್ರಾರ್ಥನೆಗಳನ್ನು ಮಾಡಿದರು. ಮೇಸ್ಟರು ಮ॥ ಎಚ್. ಶೇಷಗಿರಿರಾಯರು ಬ್ರಿಟಿಷ್ ರಾಜ್ಯಭಾರದಿಂದ ಉಂಟಾದ ಸೌಖ್ಯಗಳನ್ನು ವಿವರಿಸಿ ಪ್ರಸಕ್ತಕಾಲದಲ್ಲಿ ಒದಗಿದ ಯುದ್ಧಗಳಲ್ಲಿ ನಮ್ಮ ಚಕ್ರವರ್ತಿಗಳು ಜಯಶಾಲಿಗಳಾಗಲೆಂದು ದೇವರನ್ನು ಪ್ರಾರ್ಥಿಸಿ ಚಿರಕಾಲವೂ ಬ್ರಿಟಿಷ್ ಸಾಮ್ರಾಜ್ಯವು ನೆಲೆಗೊಳ್ಳಲೆಂದು ಹಾರೈಸಿದರು. ಹಾಲಿ ಸ್ಕೂಲ್ ಮಾಡುತ್ತಿರುವ ಈ ದೇವಾಲಯದಲ್ಲಿ ಶಿಲ ಹುಡುಗರಿಗೆ ಸ್ಥಳ ಸಾಲದ್ದರಿಂದ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಗ್ರಾಮಸ್ಥರು ಒಂದು ಒಳ್ಳೆಯ ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದೂ, ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವುದು ಈಗಿನ ಮುಖ್ಯಕರ್ತವ್ಯವೆಂದೂ, ಇಂಥ ಉತ್ಸವಗಳನ್ನು ನೆರವೇರಿಸುವುದಕ್ಕೆ ಗ್ರಾಮಸ್ಥರು ಸಹಾಯ ಮಾಡಿದಲ್ಲಿ ಸ್ಕೂಲು ಅಭಿವೃದ್ಧಿಗೆ ಬರುವುದಕ್ಕೆ ತುಂಬಾ ಸಹಾಯವಾಗುವುದೆಂದೂ ಒಂದು ಚಿಕ್ಕ ಉಪನ್ಯಾಸವನ್ನು ಮಾಡಿದರು. ಅನಂತರ ಮ॥ ವೆಂಕಪ್ಪಜೋಯಿಸರು ಬಾಲಕರು ಉಪಾಧ್ಯಾಯರ ವಿಷಯದಲ್ಲಿಯೂ ಹಿರಿಯರ ವಿಷಯದಲ್ಲಿಯೂ ನಡೆಸತಕ್ಕ ಬುದ್ಧಿಮಾರ್ಗವನ್ನು ಕುರಿತು ಒಂದು ಉಪನ್ಯಾಸ ಓದಿದರು. ತರುವಾಯ ದೇವರ ಮಂಗಳಾರತಿ ನಡೆದು, ಸಭಿಕರಿಗೆ ಗಂಧಪುಷ್ಪ ತಾಂಬೂಲಾದಿಗಳೂ ಬಾಲಕರಿಗೆ ಮಿಠಾಯಿಯೂ ಹಂಚಲ್ಪಟ್ಟು, ಸಭೆಯು ಬರಖಾಸ್ತಾಯಿತು. ಮಧ್ಯಾಹ್ನಾನಂತರ ೩ ಘಂಟೆಗೆ ಸಭೆ ಸೇರಿ ಬಾಲಕರಿಂದ ಲಾಂಗ್‌ಜಂಪ್ ಹೈಜಂಪ್ ರನ್ನಿಂಗ್‌ರೇಸ್ ಅರ್ಥಮೆಟಿಕ್‌ರೇಸ್ ಮೂರುಕಾಲಿನೋಟ ಹಗ್ಗಎಳೆಯುವುದು ರಿಂಗ್‌ಬೆಲ್ ಮೊದಲಾದ ಆಟಗಳನ್ನಾಡಿಸಿ ಬಹುಮಾನಗಳು ಹಂಚಲ್ಪಟ್ಟು, ಶ್ರೀಮಚ್ಚಕ್ರವರ್ತಿಗಳಿಗೂ ಮಹಾರಾಜರವರಿಗೂ ಮಂಗಳವಾಗಲೆಂಬ ಜಯಘೋಷದೊಡನೆ ಸಭೆಯು ಬರಖಾಸ್ತಾಯಿತು. ಸ್ಕೂಲ್ ಮುಂಭಾಗದ ಅಂಗಳದಲ್ಲಿ ದೇವರು ರಾಜನನ್ನು ರಕ್ಷಿಸಲಿ ಎಂಬುದನ್ನು ಬರೆದು ರಾಗಿ ಬಿತ್ತಿ ಬೆಳೆದಿರುವ ಸಸಿಗಳು ನೋಡುವುದಕ್ಕೆ ಅಲಂಕರವಾಗಿರುವುದಲ್ಲದೆ ರಾಜಭಕ್ತಿಯನ್ನು ಸಹ ಪ್ರದರ್ಶಿಸಿತು.

ಹೊಳಲ್‌ಕೆರೆ ತಾಲ್ಲೋಕು ರಾಮಗಿರಿ.

ಈ ಗ್ರಾಮದ ಎ. ವಿ. ಬಾಯ್ಸ್ ಸ್ಕೂಲಿನಲ್ಲಿ ನಾಲ್ಕು ಜನ ಮಾಸ್ಟರುಗಳೂ ೧೩೦ ಹುಡುಗರೂ ಇರುತ್ತಾರೆ. ಈ ಸ್ಕೂಲಿಗೆ ೧೯೧೪ ನೇ ಇಸವಿ ಜನವರಿ ಆದಿಯಲ್ಲಿ ಮ॥ ರಾ॥ ಎಂ. ವೆಂಕಟೇಶಶಾಸ್ತ್ರಿಗಳವರು ಹೆಡ್ಮಾಸ್ಟರಾಗಿ ದಯಮಾಡಿಸಿದರು. ಇವರು ಬರುವುದಕ್ಕಿಂತ ಮುಂಚೆ ಈ ಸ್ಕೂಲಿನಲ್ಲಿ ಸುಮಾರು ೬೦ ಜನ ವಿದ್ಯಾರ್ಥಿಗಳೂ, ಮೂರು ಮಾಸ್ಟರುಗಳೂ ಮಾತ್ರ ಇದ್ದರು. ಈ ಹೆಡ್ಮಾಸ್ಟರು ಮೇಲೆ ದಿನೇದಿನೇ ಸ್ಕೂಲು ಅಭಿವೃದ್ಧಿಸ್ಥಿತಿಗೆ ಬಂದು, ಕನ್ನಡ ಲೋ॥ ಸೆ॥ ಪರೀಕ್ಷೆಯಲ್ಲಿ ಅನೇಕ ಹುಡುಗರು ತೇರ್ಗಡೆ ಹೊಂದಿದುದಲ್ಲದೆ ಇವರ ಹಿತೋಕ್ತಿಗಳಿಂದ ತೇರ್ಗಡೆಯಾದ ಹುಡುಗರು ಇಂಗ್ಲೀಷ್ ವಿದ್ಯಾಭ್ಯಾಸಕ್ಕೂ ಕನ್ನಡ ಅಪ್ಪರ್‌ಸೆಕೆಂಡರಿ ಪರೀಕ್ಷೆಗೂ ವ್ಯಾಸಂಗಮಾಡಲು ಎ. ವಿ. ಸ್ಕೂಲ್‌ಗಳಿಗೂ ಹೋಗಿರುತ್ತಾರೆ. ಇವರು ಶಾಂತರಾಗಿಯೂ ಕಷ್ಟಸಹಿಷ್ಣುಗಳಾಗಿಯೂ ಇದ್ದು, ಸರ್ಕಾರಿ ಕೆಲಸವನ್ನು ಮುತುವರ್ಜಿಯಿಂದ ಮಾಡುತ್ತಾ ಇದ್ದರು. ಇಂಥವರನ್ನು ನಮ್ಮ ಸರ್ಕಾರದವರು ಬೇರೇಗ್ರಾಮಕ್ಕೆ ವರ್ಗಾಯಿಸಿರುವುದು ತುಂಬಾ ವಿಷಾದವಾಗಿದೆ. ಇನ್ನು ಮುಂದೆಯಾದರೂ ಇವರಿಗೆ ತಕ್ಕಫಲಪ್ರಾಪ್ತಿಯಾಗಲೆಂದು ನಾನು ಆರೈಸುತ್ತೇನೆ:—ವರ್ಗವಾಗಿ ಹೋಗುವ ಮೇಲ್ಕಂಡ ಮ॥ ರಾ॥ ಎಂ. ವೆಂಕಟೇಶಶಾಸ್ತ್ರಿಗಳವರಿಗೆ ತಾ॥ ೧೧–೧೨–೧೯೧೪ ನೇ ಶುಕ್ರವಾರ ಈ ಗ್ರಾಮದ ವರ್ತಕ ಮಹಾಜನಗಳೂ ಕಮಿಟಿ ಮೆಂಬರುಗಳೂ ಸ್ಕೂಲ್ ವಿದ್ಯಾರ್ಥಿಗಳೂ ಬಾಯ್ಸ್ ಸ್ಕೂಲಿನಲ್ಲಿ ಸಭೆಸೇರಿ ಅಡ್ರೆಸ್‌ಗಳನ್ನು ಒಪ್ಪಿಸಿದರು. ಆ ಸಭೆಗೆ ಮ॥ರಾ॥ ರಮ್ಮತು ಶೇಕದಾರ್ ಕೃಷ್ಣಯ್ಯಂಗಾರರವರೂ ರೈಲ್ವೆಸ್ಟೇಷನ್ ಮಾಸ್ಟರವರೂ ಯೂನಿಯನ್ ಮುತ್ಸದ್ದಿಯವರೂ ದಯಮಾಡಿಸಿದ್ದರು. ಮಧ್ಯಾಹ್ನ ೧ ಘಂಟೆಲಾಗಾಯಿತು ಸಾಯಂಕಾಲ ೪ ಘಂಟೆ ಯವರೆಗೆ ಬಾಲಕರಿಂದ ಅನೇಕ ವಿಧವಾದ ಆಟಪಾಟಗಳನ್ನು ಆಡಿಸಿ ಬಹುಮಾನಗಳನ್ನು ಕೊಟ್ಟರು. ಸಭೆಯಲ್ಲಿ ನೆರೆದಿದ್ದ ವರ್ತಕಮಹಾಜನಗಳು ಮ॥ ಎಂ. ವೆಂಕಟೇಶಶಾಸ್ತ್ರಿಗಳವರಿಗೆ ವಿನಯಪೂರ್ವಕವಾಗಿ ಅನೇಕ ಬಹುಮಾನಗಳನ್ನು ಕೊಟ್ಟು, ಸರ್ವರಿಗೂ ಸಕ್ಕರೆಯನ್ನು ಹಂಚಿ ಭಗವತ್‌ಪ್ರಾರ್ಥನೆಯೂ ನಮ್ಮ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯೂ ಆದ ತರುವಾಯ ಮಂಗಳವನ್ನು ಹೇಳಿಸಿ ಸಾಯಂಕಾಲ ೬ ಘಂಟೆಗೆ ಸಭೆಯನ್ನು ಬರಖಾಸ್ತುಮಾಡಿದರು. ಈಗ ನಡೆಯುತ್ತಿರುವ ಮಹಾಯುದ್ಧದಲ್ಲಿ ನಮ್ಮ ಚಕ್ರವರ್ತಿಯವರಿಗೆ ಜಯವಾಗಲೆಂದು ಸರ್ವರೂ ಭಗವಂತನನ್ನು ಧ್ಯಾನಮಾಡಿದರು. ಮೇಲ್ಕಂಡ ಕಾರ್ಯಕ್ಕೆಲ್ಲಾ ಇದೇ ಸ್ಕೂಲಿನ ಅ॥ ಮಾ॥ ಮ॥ ಎಚ್. ಎಸ್. ತಿಪ್ಪಯ್ಯನವರು ಕೇವಲ ಮುತುವರ್ಜಿ ವಹಿಸಿ ಎಲ್ಲಾ ಕಾರ್ಯಗಳನ್ನೂ ಸಾಂಗವಾಗಿ ನಡೆಸಿದ್ದರಿಂದ ಇವರಿಗೆ ಗ್ರಾಮದವರೆಲ್ಲರೂ ವಂದಿಸಬೇಕಾಗಿದೆ. ಅಲ್ಲದೆ ಇವರೇ ತತ್ಕಾಲಕ್ಕೆ ಹೆಡ್ಮಾಸ್ಟರ್ ಛಾರ್ಜಿನಲ್ಲಿ ಇರುತ್ತಾರೆ. ಇವರು ಕನ್ನಡ ಮತ್ತು ಇಂಗ್ಲೀಷ್ ಲೋವರ್‌ಸೆಕೆಂಡರಿ ಪ್ಯಾಸ್‌ಮಾಡಿ, V. ಫಾರಂವರೆಗೂ ವ್ಯಾಸಂಗಮಾಡಿರುತ್ತಾರೆ. ಈ ಗ್ರಾಮಕ್ಕೆ ಬಂದಲಾಗಾಯಿತು ಇವರು ಕೇವಲ ಮುತುವರ್ಜಿಯಿಂದಲೂ ಚಟುವಟಿಕೆಯಿಂದಲೂ ಕೆಲಸಮಾಡುತ್ತಾ ಅನುಭವಶಾಲಿಗಳಾಗಿ ಹೆಡ್ಮಾಸ್ಟರ್‌ಕೆಲಸಕ್ಕೆ ಯೋಗ್ಯರಾಗಿರುತ್ತಾರೆ. ಅದುದರಿಂದ ಇವರನ್ನೇ ಘನತೆಯನ್ನು ಹೊಂದಿದ ನಮ್ಮಸರ್ಕಾರದವರು ಖಾಯಂ ಹೆಡ್ಮಾಸ್ಟರಾಗಿ ಮಂಜೂರ್ ಮಾಡಿದರೆ, ಸ್ಕೂಲು ಅಭಿವೃದ್ಧಿಸ್ಥಿತಿಗೆ ಬರಬಹುದಾಗಿದೆ. ನಮ್ಮ ಸರ್ಕಾರದವರು ಇದನ್ನು ನೆರವೇರಿಸುತ್ತಾರೆಂದು ನಂಬಿದ್ದೇವೆ.

ಓರ್ವ ಪ್ರತ್ಯಕ್ಷದರ್ಶಿ.

ಪತ್ರವ್ಯವಹಾರ.

ಅಯ್ಯಾ ವೀರಶೈವ ಬಾಂಧವರಿರಾ !

ಧಾರವಾಡ ಜಿಲ್ಲಾ ಹಿರೇಕೆರೂರ ತಾಲೂಕ ಪೈಕಿ ಕಾಗಿನೆಲ್ಲಿಯಲ್ಲಿ ಕಾರ್ತೀಕ ಶು॥ ೧ ಮೊದಲುಗೊಂಡು ಶ್ರೀ ಬಸವೇಶ್ವರ ಪುರಾಣಶ್ರವಣವು ನಡೆಯುತ್ತಿದ್ದು ಕಾರ್ತೀಕ ಶು॥ ೧೫ ಪೂರ್ಣಿಮೆಯ ದಿವಸ ಶ್ರೀಮದ್ವೀರಶೈವ ಮತೋತ್ಕರ್ಷದ ವಿಷಯವಾಗಿ ಸಭೆ ಸೇರಿ ಅಷ್ಟಾವರಣಮಹತ್ವ, ಸುಧಾರಣೋಪಾಯ, ಶ್ರೀ ಶಿವಯೋಗಮಂದಿರ ಮುಂತಾದವುದರ ವಿಷಯವಾಗಿ ಕ್ರಮವಾಗಿ ಶ್ರೀ ಶಿವಮೂರ್ತಿಗಳಾದ ಗುರುಪಾದಾಚಾರ್ಯರು ಹಿರೇಮಠ, ಗಂಗನಬಸನಗೌಡರು ಪಾಟೀಲ, ಶಿಡೇನೂರ ವೀರಪ್ಪಯ್ಯನವರು, ಮುಂತಾದವರ ಭಾಷಣಗಳಾದ ತರುವಾಯ ಅಧ್ಯಕ್ಷರಾದ ಶ್ರೀ ಹಿರೇಮಠದ ಸಂಗನಬಸವದೇಶಿಕೇಂದ್ರ ಚರಪಟ್ಟಾಧ್ಯಕ್ಷರವರು ಶ್ರೀ ಶಿವಯೋಗಮಂದಿರದ ಮಹತ್ವವನ್ನು ಸರ್ವರಿಗೂ ತಿಳಿಯುವಂತೆ ಹೇಳಿ, ಈ ವರ್ಷದ ಅತಿವೃಷ್ಟಿಯ ಮೂಲಕ ಮಲಾಪಹಾರಿ ನದಿಯಿಂದ ಶ್ರೀ ಶಿವಯೋಗಮಂದಿರಕ್ಕೆ ಉಂಟಾಗಿರುವ ಅನಾಹುತವನ್ನು ತಿಳಿಯಹೇಳಲು, ಗುರುಪಾದಾಚಾರ್ಯ ಚನ್ನಬಸವಸ್ವಾಮಿ ಹಿರೇಮಠ ಇವರು ಪ್ರಗಲ್ಭಭಾಷಣದಿಂದ ಶಕೆ ೧೮೩೭ ನೇ ರಾಕ್ಷಸನಾಮ ಸಂ॥ ರದ ಪಂಚಾಂಗವನ್ನು ನಾವು ಬಹು ಪರಿಶ್ರಮದಿಂದ ರಚಿಸಿ, ಈಗ ೨ ದಿವಸಗಳ ಕೆಳಗೆ ಅವು ಪ್ರಿಂಟಾಗಿ ಬಂದಿವೆ; ಶ್ರೀ ಶಿವಯೋಗಮಂದಿರವು ನಮ್ಮ ಧರ್ಮಕ್ಕೆ ಕೇವಲ ಕಂಠಪ್ರಾಯವಾಗಿದ್ದು, ಅದಕ್ಕೆ ಅತಿವೃಷ್ಟಿಯಿಂದಾಗಿರುವ ಅನಾಹುತದ ದೆಸೆಯಿಂದ ನನ್ನ ಪಂಚಾಂಗದಿಂದ ಬರುವ ಲಾಭದಂಶವನ್ನು ಶ್ರೀ ಶಿವಯೋಗಮಂದಿರಕ್ಕೆ ಅತಿಸಂತೋಷದೊಡನೆ ಅರ್ಪಿಸುತ್ತೇನೆಂದು ನುಡಿದರು. ಈ ವಿಷಯವಾಗಿ ಸರ್ವಸಭಿಕರೂ ಆಶ್ಚರ್ಯಚಕಿತರಾಗಿ ತಮ್ಮ ಆನಂದೋದ್ಗಾರಗಳನ್ನು ಕರತಾಡನ ಮೂಲಕವಾಗಿ ತಿಳಿಸಿದರು. ಬಾಂಧವರೇ! ಶ್ರೀ ಗುರುಪಾದಾಚಾರ್ಯರ ಶಿವಯೋಗಮಂದಿರದ ಮೇಲಿನ ಮಮತೆಯನ್ನೂ ಧರ್ಮಾಭಿಮಾನವನ್ನೂ ನೋಡಿದಿರೋ? ಅನಂತರದಲ್ಲಿ–ಮೈಸೂರ ಶೈ॥ ವೀರಸಂಗಪ್ಪನವರು ನಮ್ಮ ಧರ್ಮದಮೇಲೆ ಮಾಡಿರುವ ಮಹದುಪಕಾರವನ್ನು ಶ್ರೀ ಗುರುಪಾದಾಚಾರ್ಯರು ತಿಳಿಯಹೇಳಿ, ಅವರ ಬಗ್ಗೆ ಅಗ್ರತಾಂಬೂಲವು ತೆಗೆಯಲ್ಪಟ್ಟು, ಅವರೊಬ್ಬ ದ್ವಿತೀಯಬಸವೇಶ್ವರರೆಂದೂ, ಶ್ರೀ ಬಸವೇಶ್ವರ ಪುರಾಣದ ಮಂಗಲ ಮೆರವಣಿಗೆಯ ಕಾಲಕ್ಕೆ ಶೈ. ವೀರಸಂಗಪ್ಪನವರ ಫೋಟೋ ತರಿಸಿ ಮೆರವಣಿಗೆಯನ್ನು ಮಾಡಬೇಕೆಂದೂ, ಆಗ್ಗೆ ವೀರಸಂಗಪ್ಪನವರ ತಾಂಬೂಲ ಕಾಣಿಕೆಯು ಕಳುಹಲ್ಪಡಬೇಕೆಂದೂ, ಹೇಳಲು ಸರ್ವರೂ ಸಂತೋಷದೊಡನೆ ಕರತಾಡನವನ್ನು ಮಾಡಿದರು. ಆವೇಳೆ ಶಿವಮೂರ್ತಿಸ್ವಾಮಿಗಳು ಶ್ರೀ ಗುರುಪಾದಾಚಾರ್ಯರ ಗುಣಕಥನ ಮಾಡಿ ಇವರು ಬಹು ವಿವೇಕಶಾಲಿಗಳೆಂದೂ, ತಮ್ಮ ಪಂಚಾಂಗದ ಲಾಭದಂಶವನ್ನು ಶ್ರೀ ಶಿವಯೋಗಮಂದಿರಕ್ಕೆ ಅರ್ಪಿಸುತ್ತೇನೆಂದಾಡಿದ ವಾಕ್ಯಗಳಿಂದ ಸಂತೋಷಭರಿತನಾದ ನಾನು ವೀರಶೈವ ಸಮಾಜದ ವತಿಯಿಂದ ಅಭಿನಂದಿಸುತ್ತೇನೆಂದೂ, ಮತ್ತು ಸರ್ವ ವೀರಶೈವಬಾಂಧವರೂ ಸದರೀ ಪಂಚಾಂಗವನ್ನು ತರಿಸಿದ್ದಾದರೆ ಸಜ್ಜ್ವಾಯಕ್ಕೆ ಸಲ್ಲಿ, ಇತಃಪರಃ ಈ ಎರಡು ಕಾರ್ಯಗಳು ಸಾಧಿಸುವವುವಾದ್ದರಿಂದ ಸರ್ವವೀರಶೈವರೂ ಇದನ್ನೇ ಪಂಚಾಂಗವನ್ನೇ ತರಿಸಬೇಕೆಂದೂ ಹೇಳಿದರು. ಆವೇಳೆ ಗುರುಪಾದಾಚಾರ್ಯರು ನಾನು ಇನ್ನುಮೇಲೆ ಪ್ರತಿವರ್ಷದ ಪಂಚಾಂಗದಿಂದ ಬರುವ ಲಾಭದಲ್ಲಿ ಶ್ರೀ ಶಿವಯೋಗಮಂದಿರದಲ್ಲಿ ಶಿವಯೋಗದಶಾಲಕ್ಕೆ ಆಗುವ ವೀರಶೈವ ವಿದ್ಯಾರ್ಥಿಗಳ ಪರೀಕ್ಷೆಗೆ ಯಥಾಶಕ್ತಿಯಾಗಿ ಸಹಾಯಮಾಡುತ್ತೇನೆಂದು ನುಡಿದನಂತರ ಸರ್ವರಿಗೂ ಗಂಧ ತಾಂಬೂಲಾದಿಹಾರಗಳು ಸಮರ್ಪಿಸಲ್ಪಟ್ಟ ನಂತರ ಸಭೆಯು ವಿಸರ್ಜಿಸಲ್ಪಟ್ಟಿತು.

ಮಲ್ಲನಗೌಡಾ, ಸಂಗನಬಸವನಗೌಡಾ, ಪಾಟೀಲ,
ಕಾಗಿನೆಲ್ಲಿ–ಜಿ. ಧಾರವಾಡ.

(ಸೂಚನೆ:—ಪಂಚಾಂಗದ ಕಿಮ್ಮತ್ತು ೨॥ ಆಣೆ ಇದ್ದು ಇತರ ಜ್ಯೋತಿಷ್ಯ ವಿಷಯಗಳು ೧೬೫ ಒಳಗೊಂಡಿವೆ ಪಂಚಾಂಗ ಸಿಗುವ ಪತ್ತೆ–ಹಿರೇಮಠ, ಕಾಗಿನೆಲ್ಲಿ ಪೋಷ್ಟ ಜಿ. ಧಾರವಾಡ)

ಶ್ರೀ ಪಂಚಾಕ್ಷರ ಮಹಾಸ್ವಾಮಿಗಳು ಹೊಸಮಠ ಮುಕ್ಕಾಮ ಸವದತ್ತಿ ಡಿ॥ ಬೆಳಗಾವ ನಮ್ಮ ಸನ್ನಿಧಿಯಿಂದಾ—ನಮ್ಮ ವೀರಶೈವ ಸಮಾಜಕ್ಕೆ ತಿಳಿಸುವದೇನೆಂದರೆ–ನಮ್ಮ ಮಠದಲ್ಲಿ ಇದೇ ಕಾರ್ತೀಕ ಶುದ್ಧ ಷಷ್ಠಿ ಚಂದ್ರವಾರ ದಿವಸ ಸಂಸ್ಕೃತಪಾಠಶಾಲೆಯನ್ನು ಸ್ಥಾಪನಮಾಡಿರುತ್ತದೆ. ಇಲ್ಲಿ ವೇ॥ಶಾ॥ಮ॥ ಗುರುಮೂರ್ತಿಶಾಸ್ತ್ರಿಗಳವರು ಅಧ್ಯಾಪಕರಾಗಿ ನೇಮಿಸಲ್ಪಟ್ಟಿದ್ದಾರೆ. ಅಭ್ಯಾಸಮಾಡತಕ್ಕ ಪ್ರೌಢವಿದ್ಯಾರ್ಥಿಗಳು ಬರಬೇಕು. ಇಲ್ಲಿ ಮಠದಲ್ಲಿಯೇ ಅನ್ನವಸ್ತ್ರದ ವ್ಯವಸ್ಥೆ ಮಾಡಲ್ಪಟ್ಟಿದೆ. ಉತ್ತಮ ಉಪೆ. ಬರತಕ್ಕವರು ಧಾರವಾಡಸ್ಟೇಷನ್ನಿಗೆ ಇಳಿದು ಇಲ್ಲಿಗೆ ಬರಲಿಕ್ಕೆ ಸವಡು ಅದೆ. ಬರಬೇಕು 4

ವಿಜ್ಞಾಪನೆ.

ಈ ಸಮಯ ಬಿಡಬೇಡಿರಿ. ಮುಂದೆ ದೊರೆಯಲಾರದು. ಮೊಳಕಾಲ್ಮೂರಿನ ಪ್ರಸಿದ್ಧವಾದ ರೇಷ್ಮೆಯವಸ್ತ್ರಗಳು ಬೇಕೋ? ಬೆಲೆಸುಲಭ! ಬಣ್ಣ ಗ್ಯಾರಂಟಿಯಾದದ್ದು. ಒಂದು ಸಲ ತರಿಸಿನೋಡಿರಿ!! ನಮ್ಮಲ್ಲಿ ಹೊದಿಯುವ ವಸ್ತ್ರಗಳೂ, ಮೊಗಟಗಳೂ, ಸೀರೆಗಳೂ, ನಡಕಟ್ಟುಗಳೂ, ಲಿಂಗದವಸ್ತ್ರಗಳೂ, ಕೈ ವಸ್ತ್ರಗಳೂ ಬಹಳ ಚೆನ್ನಾಗಿ ಎಲ್ಲಾ ರಂಗಿನಲ್ಲಿಯೂ ತಯಾರಾಗುತ್ತವೆ. ನಾವು ಮೈಸೂರು, ಮದ್ರಾಸು ಸೀಮೆಗಳ ಎಲ್ಲಾ ಭಾಗಕ್ಕೂ ನಮ್ಮ ಮಾಲನ್ನು ರವಾನಿಸುತ್ತೇವೆ. ನಮ್ಮ ಮಾಲುಗಳಿಗೆ ಬಹುಮಾನಗಳೂ, ಮೆಡಲುಗಳೂ, ಬಂದಿವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಹಿಮಂತಋತುವಿನ ದರಗಳು. ೧ನೆ ನಂ ವಸ್ತ್ರಗಳು ತೊಲೆ ೧ಕ್ಕೆ ೦–೩–೦. ೨ನೆ ನಂ. ವಸ್ತ್ರಗಳು ತೊಲೆ ೧ಕ್ಕೆ ೦–೬–೯. (ಮೊಗಟ, ಅರಸಿಪೇಟೆ ಸೀರೆಗಳೂ, ನಡಕಟ್ಟು, ಲಿಂಗದವಸ್ತ್ರಗಳು) ೧ನೆ ನಂ. ಮಾಲು ತೊಲೆ ೧ಕ್ಕೆ ೦–೮–೦. ೨ನೆ ನಂ. ಮಾಲು ತೊಲೆ ೧ಕ್ಕೆ ೦–೩–೬. ನಮ್ಮವಿಳಾಸ:—

4 ಎಂ. ಎಸ್. ಮಲಕಣ್ಣ, ಮತ್ತು ಬ್ರದರ್ಸ್,
ರೇಷ್ಮೆ ಜವಳಿ ವ್ಯಾಪಾರಿಗಳು. ಪೋಸ್ಟ ಮೊಳಕಾಲ್ಮೂರು.

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೈಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೦ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳುಸಹಿತ ಆದ ಸಮಾರಂಭ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೊ (ರಾಮಾಟಕರ ಚಿತ್ರದಂತೆ, ಕಲ್ಪಿತವಲ್ಲ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೦ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ಪಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೦ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಅನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೊ ಸಿಕ್ಕುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.

ಹೊಸಫ್ಯಾಷನ್—ಸಣ್ಣಗೃಸ್ಥರು ಗಡಿಯಾರ ಸರ್ವರಿಗೆ ಹಚ್ಚುವಲಾಕೇಟುಗಳೂ, ಇದರಲ್ಲಿ ಹಿಂಡೆ ಮುಂದೆ ಈಪ್ರಕಾರ ೨ ಫೋಟೊ ಬೇಕಾದ ಸತ್ಪುರುಷರ ನೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ।।।=, ೧, ೧।. ಪ್ರಕಾರ, ಮತ್ತೂ ಬೆಳ್ಳಿದು ರು ೧॥ ರೋತ್ ಗೋಲ್ಡು ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨।।। ರೂ.

ಪೂರಊರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ದಾಣೆ ಟಿಕೇಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ

ನಮ್ಮವಿಳಾಸ— ಗಂಗಪ್ಪಾ ಜೇರಿಗೆ,
35 ಆರ್ಟಿಸ್ಟ್, ಸೊಲ್ಲಾಪುರ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು
12 ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ–ಚಿನ್ನದ ರೇಕು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು–ಕೆಮ್ಮು–ನೆಗಡಿ–ವಿಷಜ್ವರ–ಮೂರರಜ್ವರ ನಾಲ್ಕರಜ್ವರ– ಮಲೇರಿಯಾಜ್ವರ– ತಲೆನೋವು– ಮೈಕೈ ನೋವು ಮತ್ತು ಭಾರ–ಅರೋಚಕ ಹಲ್ಲುನೋವು–ಹೊಟ್ಟೆ ನೋವು–ಮಲಬಂಧ–ಅಜೀರ್ಣಭೇದಿ–ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳೆತ–ಹೊಟ್ಟೆಯುಬ್ಬರ–ಮಂದಜ್ವರ–ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೇ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೨೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ. ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರದ ಕಮ್ಮ, ದಮ್ಮು, ಉಬ್ಬಸ, ವಾಂತಿ, ವಾಕರಿಗೆ, ಮಲಬಂಧ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗನ್ನು ತಕ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ೫ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜ ಪ್ರತ್ಯೇಕ.

ವಿಳಾಸ— ಬಿ ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ಡಿ॥

• (ವಿಶೇಷಸೂಚನೆಗಳು.)

(ಜಾತಕಪತ್ರಿಕೆ) ಮಹಾಶಯರೇ! ನಿಮ್ಮ ಶಿಶುಗಳು ಹುಟ್ಟಿದಸಂವತ್ಸರ ಮಾಸ, ತಿಥಿ, ವಾರ, ನಕ್ಷತ್ರ ಜನನಕಾಲವನ್ನು ಚೆನ್ನಾಗಿ ಬರೆದುಕಳುಹಿಸಿದರೆ ನಾವು ಸಿದ್ಧಾಂತರೀತಿಯಾಗಿ ಜನನಕಾಲವನ್ನು ಸ್ಥಿರಮಾಡಿಕೊಂಡು ಸಂವತ್ಸರಫಲ, ಮಾಸಫಲ ತಿಥಿ, ವಾರ, ನಕ್ಷತ್ರ, ರಾಶಿ, ಲಗ್ನ, ಪ್ರತ್ಯೇಕಭಾವಫಲ, ದಶಾಂತರ್ದಶಾಫಲ, ಮುಂದೆ ಇಂಥ ಸಂವತ್ಸರದಲ್ಲಿ ಇಂಥಾ ವಿಧವಾದ ಕಂಟಕಗಳು, ಬರುತ್ತವೆಂಬುವ ವಿಷಯವನ್ನು ದೇಹಪೀಡೆ, ಗ್ರಹಪೀಡೆ ಇವುಗಳಿಗೆ ಶಾಂತಿಕ್ರಮವನ್ನು ಸಹಾ ಚನ್ನಾಗಿ ಒಂದು ಬುಕ್ಕಿನಲ್ಲಿ ಬರೆದು ಕಳುಹಿಸುತ್ತೇವೆ. ಇದರಕ್ರಯ ರೂ. ೩–೮–೦

(ಪ್ರಶ್ನಜಾತಕ) ಜನನಕಾಲ ಗೊತ್ತಿಲ್ಲದೆ ಜಾತಕವಿಲ್ಲದ್ದರಿಂದ ಬಹು ತೊಂದರೆಪಡುತ್ತಿರುವರು. ಕಾರಣ ಪ್ರತಿಯೊಬ್ಬರು ತಮ್ಮ ಅಂದಾಜು ವಯಸ್ಸು ಹೆಸರನ್ನು ತಾವು ಮಾಡಿರುವ ಪ್ರಶ್ನಕಾಲವನ್ನು ಬರೆದು ಕಳುಹಿಸಿದರೆ ನಾವು ಸಿದ್ಧಾಂತರೀತಿಯಾಗಿ ಸ್ಥಿರಮಾಡಿ ಜಾತಕನಿಗೆ ಮುಂದೆ ನಡಿಯುವ ಸುಖದುಃಖ, ನಷ್ಟ, ಕಷ್ಟ ಇಂಥ ಮೂಲಕಲಾಭ ಇಷ್ಟೇವರ್ಷ ಆಯುಷ್ಯ ಇಂಥಾರೀತಿಯಾಗಿ ಮರಣ ಎಂಬುವ ರೀತಿಯನ್ನು ಒಂದು ಬುಕ್ಕಿನಲ್ಲಿ ಬರೆದು ಕಳುಹಿಸುತ್ತೇವೆ. ಕ್ರಯ ರೂ. ೬–೦–೦

(ಸಂಪೂರ್ಣಜಾತಕವು) ಜನನಕಾಲವನ್ನು ತಿಳಿಸಿದರೆ ಸಿದ್ಧಾಂತರೀತಿಯಾಗಿ ಜನನಕಾಲವನ್ನು ಸ್ಥಿರಮಾಡಿಕೊಂಡು ಗ್ರಹಸ್ಪುಟ, ಭಾವಸ್ಪುಟ, ಭಾವಕುಂಡಲಿಗಳು ಅಷ್ಟಕವರ್ಗ ಬಿಂದುಶೋಧನೆ ತ್ರಯೋದಶವರ್ಗ ಗ್ರಹಸಮಯಾವಸ್ಥೆಗಳು, ಅನೇಕವಿಧವಾದ ಆಯುರ್ದಾಯಗಣಿತಗಳನ್ನೆಲ್ಲಾ ಶೋಧಿಸಿ, ಸಂ॥ ರ ಮಾಸ, ತಿಥಿ, ವಾರ, ನಕ್ಷತ್ರ, ರಾಶಿ, ಲಗ್ನ ಇವುಗಳ ಫಲ ಧನಯೋಗ ರಾಜಯೋಗ ಸಂತಾನಯೋಗ ಕಳತ್ರಯೋಗ, ದ್ವಿಕಳತ್ರಯೋಗ ತನ್ವಾದಿದ್ವಾದಶಭಾವಫಲ ಘಾತಕಚಕ್ರನಿರ್ಣಯ ಆಯುಷ್ಯದವರಿಗೂ ದಶಾಂತರ್ದಶಾಫಲ ಮಾರಕಾದಿಗಂಡಕಾಲಗಳು (ಇದ್ದರೆ) ಅವುಗಳಿಗೆ ಶಾಂತಿಕ್ರಮವನ್ನು ಸಹ ಚನ್ನಾಗಿ ಬರಿಯುವ ಜಾತಕ ಒಂದಕ್ಕೆ ಕ್ರಯ ರೂ. ೧೨–೦–೦

(ಋತುಕಾಲನಿರ್ಣಯ) ಸ್ತ್ರೀಯರು ಋತುವಾದ ಸಂ॥ ರ ಮಾಸನಕ್ಷತ್ರ ವಾರ ಋತುವಾದ ವ್ಯಾಳ್ಯವನ್ನು ತಿಳಿಸಿದರೆ ಇಷ್ಟೇವರುಷ ಆಯುಷ್ಯ ಇಂಷ್ಟೇ ಸಂತಾನ ಮುಂದೆ ಯಾವಮೂಲಕವಾಗಿ ಕಷ್ಟನಷ್ಟಗಳುಂಟಾಗುವವೆಂಬುವ ವಿಷಯವನ್ನು ಆಯುಷ್ಯದವರಿಗೂ ಅಂತರ್ದಶಾಫಲವನ್ನು ಕಂಟಕಗಳಿಗೆ ಶಾಂತಿಕ್ರಮವನ್ನು ಸಹಾ ತಿಳಿಸುತ್ತೇವೆ. ಕ್ರಯ ರೂ ೬–೦–೦

(ಮಾಸದಶಾನಿರ್ಣಯವು) ಇದನ್ನು ಬರಿಸತಕ್ಕವರು ತಮ್ಮ ಹೆಸರು ವಯಸ್ಸನ್ನು ತಿಳಿಸಿದರೆ ೧ ವರ್ಷದವರಿಗೂ ಪ್ರತಿತಿಂಗಳಲ್ಲಿ ಉಂಟಾಗುವ ಕಷ್ಟನಷ್ಟ ದೇಹಪೀಡೆ ಇಂಥಾ ಮೂಲಕಲಾಭ ಸುಖವಾಗುವ ಸಂಗತಿಯನ್ನು ತಿಳಿಸುತ್ತೇವೆ. ಕ್ರಯ ರೂ. ೧–೦–೦ ನಮ್ಮ ವಿಳಾಸ:—

ಸ್ವಯಂಜ್ಯೋತಿರ್ಬೋಧಿನೀ ಆಫೀಸ್,
3 ಬಳ್ಳಾರಿ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು. 31

ಲೋಕಾಮಯಹರ ಕಸ್ತೂರಿ ಮಾತ್ರೆ—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲ ಹೊಡೆತ (ಭಾರ), ಪೈಸದುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನಿಮಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗದು ಶುದ್ಧಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೆ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೨೦ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಹೇಡಬೇಡಿರಿ. ಒಂದೇಷ್ಟೊಂದು ಬುದ್ದಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗ ಗುಣಪಡಿಸುವ ಸಿದ್ಧವಸ್ತುವಿದೊಂದೇ.

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುದ್ದಿಯ ಬೆಲೆ ೧ . .

[illegible]

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರ.

ಬಹುಮಾನ! ಶ್ರೀ ಬಹುಮಾನ !!

ಅತ್ಯಾಶ್ಚರ್ಯಕರವಾದ ಬಹುಮಾನ.
೨೫ ಸಾವಿರ ರೂ[illegible]ಗಳು ಹಂಚಲ್ಪಡುವವು
ದಿವ್ಯೌಷಧ ಬಳ್ಳಾರಿ ಸುಪ್ರಸಿದ್ಧೌಷಧ
ಸರ್ವಜನಮನೋಲ್ಲಾಸಿನಿ ಅಂಡ್ ಕೋ ಇವರ

(• ನಾರಸಿಂಹಚೂರ್ಣವು)

6

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಜವಾದುದಷ್ಟೆ. ಆದರೆ ಅನೇಕ ದುರ್ವ್ಯಸನಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವುವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನು ಕಣ್ಣಾರ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವುವಿಧ ಔಷಧಗಳನ್ನು ವಿಶೇಷವಾದ ಬೆಲೆಯನಿಟ್ಟು ವಿಕ್ರಯಿಸಿದರು ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವದು ವಿಷಾದಕರವಾಗಿರುವದು. ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿ (ನಾರಸಿಂಹಚೂರ್ಣವು) ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ, ಅನೇಕತರಹೆಯ ಮೇಹರೋಗಗಳು, ಪಾಂಡುರೋಗ, ಪೀನಸ, ಹದಿನೆಂಟು ಬಗೆಯಾದ ಕುಷ್ಠಗಳು, ಎಂಟುವಿಧ ಉದರರೋಗಗಳು, ಭಗಂಧರವು, ಮೂತ್ರಕೃಛ್ರವು, ಗೃಧ್ರಸೀವಾತವು, ಕಾಮಿಲೆ, ಕ್ಷಯವು ಮಹಾಶ್ವಾಸಗಳು, ದಾರುಣವಾದ ಐದುಬಗೆಯಾದ ಕಾಸಗಳು, ಎಂಭತ್ತುವಿಧಗಳಾದ ವಾತರೋಗಗಳು, ನಲವತ್ತು ಬಗೆಯಾದ ಪಿತ್ತಗಳು, ಇಪ್ಪತ್ತು ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಸಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ ಚಿನ್ನದಂಥಾ ಕಾಂತಿಯು, ಸಿಹ್ಮನಂತೆ ಪರಾಕ್ರಮವು, ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯು ಅತ್ಯಧಿಕ ವೀರ್ಯವೃದ್ಧಿಯು ನೃಸಿಹ್ಮನಿಗೆ ಸಮಾನರಾದ ಮಕ್ಕಳನ್ನು ಪಡೆಯುವಬಲವೂ ಉಂಟಾಗುವುದು ಇದರಲ್ಲಿ ಯಾವ ವಿಧವಾದರಸಗಳಾಗಲಿ ಮಿಶ್ರವಾಗಿಲ್ಲ, ಇನ್ನಾವ ದೋಷಗಳೂ ಇಲ್ಲ. ನಿರ್ದುಷ್ಟವಾದದ್ದು, ಫಕ್ತವನಸ್ಪತಿಗಳಿಂದಲೇ ಸಿದ್ಧಮಾಡಿದದಿವ್ಯವಾದ ಔಷಧ. ಅನೇಕ ಪಂಡಿತರು, ಧನಿಕರು' ಸರ್ಟಿಫಿಕೇಟುಗಳನ್ನು ಕೊಟ್ಟಿರುವರು.

೧೪ ದಿನ ಉಪಯೋಗಕ್ಕೆಬರುವ ಡಬ್ಬ ೧ ಕ್ಕೆ ಬೆಲೆ ರೂ. ೧–೦–೦

—(ಬಹುಮಾನಗಳನ್ನು ಹಂಚುವ ವಿಧಾನ)—

೧ ಡಜನ್ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೧೦೦೦೦ ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೬೦೦೦ ರೂ. ೩ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೪೦೦೦ ರೂ. ೨ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೩೦೦೦ ರೂ. ೧ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ೨೦೦೦ ರೂ.

೧೯೧೪ ನೇ ಜುಲೈ ೧ ನೇ ತೇದಿ ಮೊದಲು ೧೯೧೫ ನೇ ಜುಲೈ ೧ ತೇದಿಯವರಿಗೂ ಈ ಔಷದವು ಒಂದು ಲಕ್ಷ ಡಬ್ಬಿಗಳು ಖರ್ಚಾದಕೊಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ. ಒಂದುಪಕ್ಷದಲ್ಲಿ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ವಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ವಾಮಾಷಾಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡಿಯುವದಲ್ಲದೆ ಬಹುಮಾನವನ್ನು ಸಹಾ ಹೊಂದವದಕ್ಕೆ ಅರ್ಹನಾಗಿರುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರು ಸಂಶಯವಿಲ್ಲ. ಬಹುಮಾನದ ಮೊತ್ತವು ನಿಷ್ಪಕ್ಷಪಾತವಾಗಿ ಒಂದೇ ಸಮಯವಾಗಿ ಹಂಚಲ್ಪಡುವವು. ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಕುಹಕತನವು ಇಲ್ಲ, ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರ ಮಾತುಗಳಿಗೆ ನಿಗಾ ಕೊಡಲಾಗದು, ಜಾಗ್ರತೆ ತರಿಸಿಕೊಳ್ಳಿರಿ. ಔಷಧದ ಗುಣವನ್ನು ಪರೀಕ್ಷಿಸಿರಿ ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇದಲ್ಲದೆ ನಮ್ಮಲ್ಲಿ ಇನ್ನು ಅನೇಕತರಹೆಯ ಔಷಧಗಳು ಸಿಗುತ್ತವೆ. ರೋಗದಲಕ್ಷಣವನ್ನು ತಿಳಿಸಿದರೆ ಅಮೂಲ್ಯವಾದ ಮತ್ತು ಗುಣಕಾರಿಗಳಾದ ಔಷಧಗಳನ್ನು ಕಳುಹುವೆವು.

ಇದರ ಅನುಪಾನ ಪತ್ರಿಕೆಯನ್ನು ಬಹುಮಾನದ ಟಿಕೇಟನ್ನು ಡಬ್ಬಿಸಂಗಡ ಕಳಿಸುವೆವು. ನಮ್ಮ ಕಂಪನಿಯ ಕಾಶಿ ವಿಶ್ವನಾಥ ಮಾರ್ಕು ಇಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು.

ನಮ್ಮ ಅಡ್ರೆಸ್ಸು.
ಸರ್ವಜನಮನೋಲ್ಲಾಸಿನಿ ಅಂಡ್ ಕೋ ಬಳ್ಳಾರಿ.

ದಿ ಜನರಲ್ ಏಜೆನ್ಸಿ, ಮೈಸೂರು.

ಕಾದಂಬರಿಗಳು: — [illegible]ಮೋರಂತ ೧-೨-೦; ಚರಿತಾವೃತಂ ೦-೫-೦; ರಾ[illegible]ಕಥಾವಲ್ಲರಿ ೦-೫-೦; ಪೀಟರಿನಚರಿತ್ರೆ ೦-೨-೦; [illegible]ಯೋಗಿನಿ ೦-೩-; ಉನ್ಮತ್ತೆ ೦-೨-೩; ಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; [illegible]ತ್ಯಸಂಜೀವನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೦-೦. 64

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೨-೦-೦ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹ ದೂಪವರ್ತಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್ ಸನ್ಸ್
33 ಸುಗಂಧಶಾಲಿ, ಮೈಸೂರು.

ನ್ಯಾಯದರ್ಪಣ.

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯು, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸೀಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತಾವೇಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯು ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ. ಬೆಲೆ ರೂ. 1-8-0. ವಿ. ಪಿ. ಮುಶುಲ್ಕ 1-12-0.

ಎಂ. ಎಸ್. ನಂಜಪ್ಪನವರು,
46 ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಲೋಕಪ್ರಸಿದ್ಧವಾದ ಪಂಜಾಸಾಲಾಮಿಸ್ರಿ ಮುರಬ್ಬಾ.

5

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವವನನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ „ ಪಂಜಾ ಸಾಲಾಮಿಸ್ರೀ ಮುರಬ್ಬಾವನ್ನು ” ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗೆಡ್ಡೆ, ಶಾವುಗಡ್ಡೆ ಇವುಗಳನ್ನು ಪಕ್ವಮಾಡಿಟ್ಟು ಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾ ಸಾಲಾಮಿಸ್ರಿಯೋ ಅಥವಾ ಬೇರೆ ತರಹಾದ್ದೋ ಎಂಬುದು ತಿಳಿದುಬರುತ್ತೆ.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ನೀರಿನಂತಿರುವ ಧಾತುವನ್ನು ಘಟ್ಟಿಪಡಿಸುವುದು
ಪಂಜಾ ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿ ಹೋಗುವ ಧಾತುವನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಉರಿಯುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕ್ಷಣಕ್ಷಣಕ್ಕೂ ಮೂತ್ರವಾಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೆದುಳಿಗೆ ಬಲವನ್ನು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ತಾಂಬ್ರ ಮತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲ ಬರುವಂತ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವುದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕಂಡುಬರುತ್ತೆ. ೨-೩ ಡಬ್ಬಿಗಳನ್ನು ಉಪಯೋಗಿಸುವದರಿಂದ ಜನ್ಮಾಂತರದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು „ ಪಂಜಾ ಸಾಲಾಮಿಸ್ರಿ ” ಅಲ್ಲವೆಂದು ವ್ಯಕ್ತಪಡಿಸುವವರಿಗೆ
೫೦೦ ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿ[illegible] ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ಕ್ಕೆ ರೂ. ೨-೦-೦. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ ೬ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೋ, ದೊಡ್ಡಪೇಟೆ, ಬೆಂಗಳೂರು ಸಿಟಿ.
ಡಿ. ಮನ್ನಾಲಾಲ್ ಡಿಲ್ಲೀವೈದ್ಯರು, ಅವೆನ್ಯು ರೋಡ್, ಬೆಂಗಳೂರು ಸಿಟಿ.

೧೯೧೫ ನೆ [illegible]

ಶ್ರೀ ಸೀತಾರಾಘವ

ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.



ಶಾಯಿ ಇಳಿಯದ ಉತ್ತಮವಾದ ಕಾಗದ ಮುದ್ದಾದ ಮುದ್ರಣ. ಅನೇಕವಾದ ಹೊಸಸಂಗತಿಗಳಿವೆ.

೧ ನಂ—ಸಣ್ಣಸೈಜು ಸಾದಾ	೦-೪-೦
೨ ನಂ—ಪೆನ್ಸಿಲ್‌ಮುಚ್ಚಳವುಳ್ಳುದು	೦-೬-೦
೩ ನಂ—ದೊಡ್ಡಸೈಜು ಸಾದಾ	೦-೬-೦
೪ ನಂ—ಪೆನ್ಸಿಲ್‌ಮುಚ್ಚಳವುಳ್ಳುದು	೦-೮-೦

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ

ಹೆಚ್ಚಾಗಿ ತರಿಸುವವರಿಗೆ ರೂಪಾಯಿ ೧ ಕ್ಕೆ ೦-೨-೦ ಕಮೀಷನ್ ದೊರೆಯುವುದು. ವಿಳಾಸ:—

ಶ್ರೀ ಸೀತಾರಾಘವ ವೈದ್ಯಶಾಲಾ,
12 ಮೈಸೂರು.

13

S.U.N.&Co
BENARES CITY.
KASHI
VISHWESHWAR.

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯು. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾ ಇದ್ದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚಿಟಿಕೆ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಧಾತು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಬ್ಬೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜಾ ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ. ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವವು. ನೀವು ಉಪಯೋಗಿಸುವ ಬರಿ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್ ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಿನಶೆಟ್ಟಿಪುರ, ಹನೂರು ಪೋಸ್ಟ್
42 ಕೊಳ್ಳೇಗಾಲದ ತಾಲ್ಲೂಕು

೧೯೧೪ನೆಯ ಇಸವಿ ಡಿಶೆಂಬರ್ ತಾ|| ೨೦ರಿಂದ ೧೯೧೪ನೆಯ ಡಿಶೆಂಬರ್ ತಾ|| ೨೬ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆ ಆನಂದನಾಮ ಸಂ|| ದ ಪುಷ್ಯ ಶು|| ಚೌತಿಯಿಂದ ಪುಷ್ಯ ಶು|| ದಶಮಿವರೆಗಿನ ಪಂಚಾಂಗ.

ತಾ||	ವಾ||	ತಿ||	ಗಳಿಗೆ	ನಕ್ಷತ್ರ	ಗಳಿಗೆ	ಧನು ತೇದಿ
20	[1]ಭಾನು	ಚೌ	50-41	ಶ್ರವಣ	9-35	6
21	[2]ಸೋಮ	ಪಂ	49-13	ಧನಿಷ್ಠ	50-8	7
22	[3]ಮಂಗಳ	ಷಷ್ಠಿ	49-58	ಶತಭಿಷ	51-56	8
23	[4]ಬುಧ	ಸಪ್ತ	52-18	ಪೂಭಾ	54-58	9
24	[5]ಗುರು	ಅಷ್ಟ	54-41	ಉಭಾ	59-15	10
25	[6]ಶುಕ್ರ	ನ	58-45	ರೇವತಿ	60-	11
26	ಶನಿ	ದ	60-	ರೇವತಿ	4-59	12

(1) ದೂರ್ವಾಗಣಪತಿವ್ರತಂ. (2) ಘಂಟಾವತಾರ ಪರಕಾಲಸ್ವಾಮಿಗಳ ತಿರುನಕ್ಷತ್ರಂ. (3) ತುಳಸಿಮಹಿ, ವ್ಯತೀಪಾತಯೋಗಃ (4) ಮಕರಾಯಣಂ. (5) ಮಾರ್ಗಶಿರ ಲಕ್ಷ್ಮೀವ್ರತಂ. (6) ಉಡುಪಿ ಕೃಷ್ಣೋತ್ಸವಃ, ಅಮೃತಸಿದ್ಧಿಯೋಗಃ.

ಮೈಸೂರ್ [illegible] ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO M. 124.

ಮೈಸೂರ್ ಸ್ಟಾರ್.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ।
ಘನಪಥಗೈತಾವತಾರಾ ಪಶ್ಯಜ್ಜನಸ್ತುತ್ತಮೋಹರಾಜೀಯಾತ್ ॥

ವಾರ್ಷಿಕ ಚಂದಾ ೧-೦-೦
ಅಂಚೆವೆಚ್ಚ ಸೇರಿ ೧-೧೪-೦

ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ ।
ಸ್ತೋಮಾಭೀಷ್ಟದಶೀಲ ನಾಕಲಿತಸಾಧ್ವಗ್ಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ ।
ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಸಂಪುಟ ೨೭) ಮೈಸೂರ್ ಸ್ಟಾರ್ ಸರ್ ೧೯೧೪ ನೆಯ ಇಸವಿ ಡಿಶೆಂಬರ್ ತಾರೀಖು ೨೭ ನೆಯ ಭಾನುವಾರ. (ಸಂಚಿಕೆ ೫೨

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರಿಗೂ ಸ್ಕೂಲ್‌ಮಾಸ್ಟರ್‌ಗಳಿಗೂ ವಿನಂತಿ.

೧೯೧೫ ನೇ ಇಸ್ವಿಯ ಸಚಿತ್ರ ಕ್ಯಾಲೆಂಡರ್‌ಗಳು ಬಿಕರಿಗೆ ಸಿದ್ಧವಾಗಿವೆ ಕ್ರಯ ೧ ಕ್ಕೆ ೦-೦-೬ ಪೈ. ೫೦ ಕ್ಕೆ ೦-೧೧-೦ಆಣೆ ೧೦೦ ಕ್ಕೆ ೧-೫-೦ ಪ್ಯಾಕಿಂಗ್ ಪೋಸ್ಟೇಜು ಮಾಫಿ ೫೦ ಕ್ಯಾಲೆಂಡರ್‌ಗಳಿಗಿಂತಲೂ ಕಡಿಮೆಯಾಗಿ ಪೋಸ್ಟುಮೂಲಕ ರವಾನಿಸಲಾಗುವುದಿಲ್ಲಾ.

ಈ ಕ್ಯಾಲೆಂಡರಿನಲ್ಲಿ ಇಂಗ್ಲೀಷ್ ಮತ್ತೂ ಕನಡ ತಿಂಗಳೂ, ತಾರೀಖು, ವಾರ, ತಿಥಿ, ನಕ್ಷತ್ರ, ಆಯಾಯ ದಿವಸದ ವಿಶೇಷ ದಿವಸಗಳು ವಿಶಿಷ್ಟ ಹಬ್ಬ ದಿವಸಗಳೂ ಇರುವುದಲ್ಲದೆ ಮೈಸೂರ್ ಮಹಾರಾಜರವರ ಮತ್ತೂ ಯುವರಾಜರವರ ಭಾವಚಿತ್ರಗಳೂ ಮತ್ತೂ ಮೈಸೂರ್ ಸಂಸ್ಥಾನದ ಈಗಿನ ಹೊಸ ಅರಮನೆಯಲ್ಲಿ ನಡೆಯುವ ನವರಾತ್ರಿಮಹೋತ್ಸವದ ದರ್ಬಾರ್ ಸಹಿತ ಇರುವ ನಕ್ಷೆಯನ್ನೂ ಸಹ ನುಣುಪಾದ (ಗ್ಲೇಜ್‌ಪೇಪರ್) ಕಾಗದದಲ್ಲಿ ಅಂದವಾಗಿ ಪ್ರಿಂಟ್‌ಮಾಡಿಸಿ ಮೇಲ್ಕಂಡ ದರದಂತೆ ಬಹುಸುಲಭಬೆಲೆಗೆ ಕೊಡುತ್ತಲಿದ್ದೇವೆ ಯಾದಕಾರಣ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ ಸ್ವಲ್ಪ ಪ್ರತಿಗಳುಮಾತ್ರ ಉಳಿದಿವೆ. ಬಿಕರಿಯಾದನಂತರಬರತಕ್ಕ ಆರ್ಡರ್‌ಗಳನ್ನೆಲ್ಲಾ ಹೋದವರುರುದಂತೆ ಕ್ಯಾನ್ಸಲ್‌ಮಾಡಲಾಗುತ್ತೆ.

ಈಗತಾನೇ ಸೀಮೆಯಿಂದ ಬಂದಿರತಕ್ಕ ರಖಂವಾರ್ ವಾಚ್‌ಗಳ ಕ್ರಯದಪಟ್ಟಿ. 46



೧ ರಾಸ್ಕೋಫ್ ಸಿಸ್ಟಂಪೇಟೆಂಟ್‌ಸ್ವಿಸ್‌ಮೇಡ್‌ವಾಚ್	೧ ಕ್ಕೆ	೨-೮-೦
೨ ಗಟ್ಟೈಂ ರೈಲ್ವೇ ರೆಗ್ಯುಲೇಟರ್ ವಾಚ್	೧ ಕ್ಕೆ	೩-೮-೦
೩ ಡಿಟ್ಟೋ ನಮೂನೆ ಜೆಕ್ಕೈಜ್ ವಾಚ್	೧ ಕ್ಕೆ	೪-೪-೦
೪ ಡಿಟ್ಟೋ ಜೆಕ್ಕೈಜ್ ಸ್ಪೆಶಲ್ ಸರ್ವೀಸ್‌ವಾಚ್	೧ ಕ್ಕೆ	೫-೮-೦
೪ ವಾಲ್ಥಮ್‌ವರ್ಕ್ ಡ್ಯೂಕ್ ವಾಚೆಂಬ ಅತ್ಯುತ್ತಮವಾದ ಲೀವರ್ ವಾಚ್	೧ ಕ್ಕೆ	೮-೧೨-೦
೫ ಡಿಟ್ಟೋ ನಮೂನೆ ಕೆಂಪುಗಳನ್ನು ಕೆತ್ತಿರುವ ವಾಚ್	೧ ಕ್ಕೆ	೯-೪-೦
೬ ಪೀಕಾಕ್ ವಾಚೆಂಬ ತೆಳುವಾದ ಮತ್ತೂ ಗ್ಯಾರೆಂಟಿಯಾದ ವಾಚ್ (ಸಾವಿರಾರು ವಿಕ್ರಯ)	೧ ಕ್ಕೆ	೧೦-೮-೦
೭ ವಾರಕ್ಕೊಂದಾವರ್ತಿ ಬೀಗಕೊಡುವ ನಿಕ್ಕಲ್ ಬೆಳ್ಳೀಕೇಸ್ ವಾಚ್	೧ ಕ್ಕೆ	೧೦-೮-೦
೮ ಡಿಟ್ಟೋ ನಮೂನೆಯಲ್ಲಿ ಅಚ್ಚಬೆಳ್ಳಿಕೇಸಿನ ಜೆಕ್ಕೈಜ್ ವಾಚ್	೧ ಕ್ಕೆ	೧೫-೪-೦
೯ ೩೦ ಘಂಟೆಗೆ ಒಂದಾವರ್ತಿ ಬೀಗಕೊಡುವ ದೊಡ್ಡ ಜರ್ಮನ್ಟೈಂಪೀಸ್	೧ ಕ್ಕೆ	೧-೪-೦
೧೦ ಡಿಟ್ಟೋ ನಮೂನೆ ಅಲಾರಂ ಟೈಂಪೀಸ್	೧ ಕ್ಕೆ	೨-೪-೦
೧೧ ಡಿಟ್ಟೋ ನಮೂನೆಯಲ್ಲಿ ಘಂಟೆ ನಿಮಿಷ ಸೆಕೆಂಡ್ ತೋರಿಸಿ ಅಲಾರಂ ಇದ್ದು ತಾರೀಖು ಸಹ ತೋರಿಸುವ ದೊಡ್ಡ ಟೈಂಪೀಸ್	೧ ಕ್ಕೆ	೩-೪-೦
೧೨ ಖಾತ್ರಿಯಾದ ಅನ್ಸೋನಿಯಾ „ ಬಿ ” ಟೈಂಪೀಸ್	೧ ಕ್ಕೆ	೨-೮-೦
೧೩ ಡಿಟ್ಟೋ ಕಂಪೆನಿಯ ಅಲಾರಂಟೈಂಪೀಸ್ (ಬಹಳಮಜಬೂತಾದ್ದು) (ಸಾವಿರಾರುವಿಕ್ರಯ)	೧ ಕ್ಕೆ	೩-೮-೦
೧೪ ಅನ್ಸೋನಿಯಾ ಕಂಪೆನಿಯಲ್ಲಿ ತಯಾರಾದ ಘಂಟೆ, ಅರ್ಧ ಘಂಟೆ ಹೊಡೆದು ಅಲಾರಂ ಇರತಕ್ಕ ದೊಡ್ಡಟೈಂಪೀಸ್ (ಅನೇಕಜನ ವಿದ್ಯಾರ್ಥಿಗಳು ಇದನ್ನೇ ಉಪಯೋಗಿಸುತ್ತಲಿದ್ದಾರೆ)	೧ ಕ್ಕೆ	೬-೧೨-೦
೧೫ ಘಂಟೆ, ಅರ್ಧಘಂಟೆ ಹೊಡೆಯುವ ಕ್ಯಾರೇಜ್ ಕ್ಲಾಕೆಂಬ ಟೇಬಲ್ ಘಡಿಯಾರ	೧ ಕ್ಕೆ	೪-೧೨-೦
೧೬ ಡಿಟ್ಟೋ ನಮೂನೆಯಲ್ಲಿ ಘಂಟೆ, ಅರ್ಧಘಂಟೆಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್	೧ ಕ್ಕೆ	೫-೪-೦
೧೭ ಡಿಟ್ಟೋ ನಮೂನೆಯಲ್ಲಿ ಘಂಟೆಹೊಡೆಯುವದಕ್ಕೆ ಪ್ರತಿಯಾಗಿ ಗಾನಹಾಡುವ ಕ್ಲಾಕ್	೧ ಕ್ಕೆ	೫-೮-೦
೧೮ ಡಿಟ್ಟೋ ನಮೂನೆಯಲ್ಲಿ ತಾವಿಷ್ಟಪಟ್ಟ ಟೈಮಿಗೆ ಕಾಲುಘಂಟೆಕಾಲ ಕರ್ಣಾನಂದವಾಗುವಂತೆ ಮೃದುಮಧುರ ಗಾನಮಾಡತಕ್ಕ ಕ್ಲಾಕ್	೧ ಕ್ಕೆ	೫-೮-೦
೧೯ ಅನ್ಸೋನಿಯಾ ಕಂಪೆನಿಯ ಲಿವರ್ ಕ್ಲಾಕೆಂಬ ಗೋಡೆಗೆ ತಗಲಿಸುವ (೮ ಮೂಲೆಯ) ಅಷ್ಟಕೋಣಾಕೃತಿಯ ಜೆಕ್ಕೈಜ್ ಕ್ಲಾಕ್	೧ ಕ್ಕೆ	೬-೮-೦

ರಖಂವಾರ್ ವಾಚ್ ಸರಪಣಿಗಳು.

ನಿಕ್ಕಲ್ ಬೆಳ್ಳಿಯ ವಾಚ್‌ಸರಪಣಿ	೧ ಕ್ಕೆ	೦-೧೨-೦
ಅಚ್ಚಬೆಳ್ಳಿಯ ಜೇಬಿನ ವಾಚ್‌ಸರಪಣಿ	೧ ಕ್ಕೆ	೩-೪-೦
ಅಚ್ಚಬೆಳ್ಳಿಯ ಕೊರಳಸರಪಣಿ	೧ ಕ್ಕೆ	೧-೪-೦
೧೮ ಕ್ಯಾರಟ್ ಚಿನ್ನದ ವಾಚ್‌ಸರಪಣಿ	೧ ಕ್ಕೆ	೫-೮-೦
ವಾಚಿನ ಸರಪಣಿ ತುದಿಯಲ್ಲಿ ಹಾಕುವ ಅಚ್ಚಬೆಳ್ಳಿಯ ಶಾಶ್ವತವಾದ ಕ್ಯಾಲೆಂಡರ್ ಅಂದರೆ ಎಷ್ಟು ವರುಷಗಳ ವರಿಗಾದರೂ ತಾರೀಖು ನೋಡಬಹುದಾದ ಕ್ಯಾಲೆಂಡರ್ ಎಂದೆಂದಿಗೂ ಕೆಡತಕ್ಕದ್ದಲ್ಲಾ	೧ ಕ್ಕೆ	೧-೧೨-೦
ಡಿಟ್ಟೋ ನಮೂನೆಯಲ್ಲಿ ೧೮ ಕ್ಯಾರಟ್ ಚಿನ್ನದಿಂದ ತಯಾರಿಸಿದ್ದು	೧ ಕ್ಕೆ	೩-೪-೦

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ಒಂದುಸಾರಿ ಶಾಯಿತುಂಬಿದರೆ ೧೧,೦೦೦ ಶಬ್ದಗಳನ್ನು ಬರೆಯಬಹುದಾದ ಲೇಖಣಿಗಳು.

ಪ್ರತಿಯೊಂದಕ್ಕೂ ೧೪ ಕ್ಯಾರಟ್ ಚಿನ್ನದ ನಿಬ್ಬು ಹಾಕಿದೆ

ನೆಪ್ಚೂನ್ ೨೦ನೇ ನಂ. ಪೆನ್	೧ ಕ್ಕೆ	೧-೧೪-೦
ನೆಪ್ಚೂನ್ ೨೫ನೇ ನಂ. ಪೆನ್	೧ ಕ್ಕೆ	೨-೧೦-೦
ನೆಪ್ಚೂನ್ ೨೧೧ನೇ ನಂ. ಪೆನ್	೧ ಕ್ಕೆ	೪-೨-೦

ಪ್ರತಿಯೊಂದು ಪೆನ್‌ತರಿಸಿ ಕೊಳ್ಳುವರಿಗೂ ೪ ಪದಾರ್ಥಗಳನ್ನು ಮುಫತ್ತಾಗಿ ರವಾನಿಸುತ್ತೇವೆ.

೧ ಪೆನ್‌ಗಳನ್ನಿಡತಕ್ಕ ಸುಂದರವಾದ ಪೆಟ್ಟಿಗೆ ೧.
೨ ಪೆನ್ನಿಗೆ ಶಾಯಿಹಾಕುವ ಗಾಜಿನಕೊಳವೆ ೧.
೩ ಪೆನ್‌ಗಳನ್ನು ಕ್ಲೀನ್‌ಮಾಡುವ ವಿಧಾನ ಮತ್ತೂ ಶಾಯಿಹಾಕುವ ವಿಧಾನ ಪ್ರಿಂಟಾಗಿರುವ ಚೀಟಿ ೧.
೪ ಪೆನನ್ನು ಜೇಬಿಗೆತಗಲಿಸುವ ಸುಂದರವಾದ ಕ್ಲಿಪ್ ೧.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧-೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಶಿವಪೂಜಾವಿಧಿಃ	೦-೮-೦
ಚಾರುಶೀಲಚರಿತ್ರೆ	೦-೫-೦
ಸಟೀಕ ಸಂಜೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವಿವೇಕಮಂಜರಿ [೨ನೆಯ ಭಾಗ]	೦-೩-೦
ವ್ರತಪಂಚಕ	೦-೨-೦
ಷಟ್‌ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

165

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೩೫ ಪುಟಗಳ ಉದ್ಗ್ರಂಥ ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದೀ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್‌ಸ್ಥಲ-ಕರಣಹಸಿಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ. ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦. ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರೆ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ- ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸೂಕ್ತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಕ್ರಾಸ್ ಮುದ್ರಾಲಯವು.

ಈ ಮುದ್ರಾಲಯವು ಸಂತೇಪೇಟೆಯಿಂದ ಸಯ್ಯಾಜಿರಾವ್ ರೋಡಿನಲ್ಲಿ ದೊಡ್ಡ ಮಾರ್ಕೆಟ್ಟಿನ ಪೂರ್ವದ್ವಾರದ ಇದಿರುಭಾಗದಲ್ಲಿರುವ ಮಹಡಿಗೆ ವರ್ಗಾಯಿಸಲ್ಪಟ್ಟಿದೆ. ಈ ಮುದ್ರಾಲಯದಲ್ಲಿ ವಿಜಿಟಿಂಗ್ ಕಾರ್ಡುಗಳು, ಲಗ್ನಪತ್ರಿಕೆಗಳು, ಇನ್ವಿಟೇಷನ್ ಕಾರ್ಡುಗಳು ಮುಂತಾದವುಗಳು ನಾನಾವಿಧ ಬಣ್ಣದ ಶಾಯಿಯಿಂದಲೂ, ಚಿನ್ನದ ಗಿಲೀಟಿನಿಂದಲೂ, ನೇತ್ರಾನಂದಕರವಾಗಿ ಸ್ವಲ್ಪಕಾಲದಲ್ಲಿ ಸುಲಭದರದಿಂದ ಮುದ್ರಣಮಾಡಲ್ಪಡುವುವಲ್ಲದೆ ರೂಲ್‌ಫಾರಂಗಳೂ, ನೋಟ್ಸು ಮೊದಲಾದ ಪುಸ್ತಕಗಳೂ ಇಂಗ್ಲೀಷ್ ಮತ್ತು ಕನ್ನಡ ಅಕ್ಷರಗಳಿಂದ ಶ್ಲಾಘ್ಯವಾಗಿಯೂ ಯೋಗ್ಯ ದರದಿಂದಲೂ ಮುದ್ರಣಮಾಡಿಕೊಡಲ್ಪಡುವುವು, ಮತ್ತೂ ಚಕ್ಕಳದ ಅಥವಾ ಸಾದಾ ಬೈಂಡುಕೆಲಸಗಳೂ ತೃಪ್ತಿಕರವಾಗಿ ಮಾಡಲ್ಪಡುವುವು. ಒಂದಾವೃತ್ತಿ ಪರೀಕ್ಷಿಸಿದಲ್ಲಿ ತಾನಾಗಿ ಗೊತ್ತಾಗುವುದು. ಮ್ಯಾನೇಜರ್.

ನೋಟೀಸ್. 4

ಬಂಗಲೆಯು ಕ್ರಯಕ್ಕೆ ಸಿದ್ಧವಾಗಿದೆ !

ಮೈಸೂರ ಲಾ ಕೋರ್ಟುಗಳ ಸಮೀಪದಲ್ಲಿ ಇಂಜನಿಯರ್ ರಾಘವಲು ನಾಯಿಡುಯವರ ಬಂಗಲೆಯ ದಕ್ಷಿಣಕ್ಕೆ ಪಶ್ಚಿಮಾಭಿಮುಖವಾಗಿರುವ ಪೆರಮಾಳು ಪಿಳ್ಳೆಯವರ ಬಂಗಲೆಯು ಬಿಕರಿಗೆ ಸಿದ್ಧವಾಗಿದೆ. ಈ ಬಂಗಲೆಯು ೧೧೫ ಅಡಿ ಉದ್ದವೂ, ೫೫ ಅಡಿ ಅಗಲವೂ ಇರುವುದಲ್ಲದೆ ಇದರಲ್ಲಿ ಗಾಡಿಖಾನೆ, ಹಿತ್ತಲು, ಭಾವಿ, ನೀರಿನ ನಲ್ಲಿಗಳು, ವಿಶಾಲವಾದ ಕಾಂಪೌಂಡು ಇವೆ. ಇದಕ್ಕೆ ತಿಂಗಳೊಂದಕ್ಕೆ ೩೫ ರೂಪಾಯಿ ಬಾಡಿಗೆ ಬರುತ್ತಿದೆ. ಇದನ್ನು ಕೊಂಡುಕೊಳ್ಳಲಿಚ್ಛೆಯುಳ್ಳವರು ಈ ಕೆಳಗಿನ ವಿಳಾಸದಾರರಿಗೆ ಕಾಗದವನ್ನು ಬರೆದು ಎಲ್ಲಾ ಸಂಗತಿಯನ್ನೂ ತಿಳಿಯಬಹುದು. ಮತ್ತೂ ಮನೆಯನ್ನು ನೋಡಲಿಚ್ಛೆಯುಳ್ಳವರು ಸುಬ್ರಾಯನ ಕೆರೆಯಲ್ಲಿ ಮಠವನ್ನು ಕಟ್ಟಿಸಿಕೊಂಡಿರುವ ರಾಮರಾಮನಂಜ ದಕ್ಷಾದ್ರಿಯವರನ್ನಾಗಲಿ ಮಿಠಾಯಿ ಅಂಗಡಿ ಸಾಹುಕಾರ್ ರಾಮಸುಖ್‌ರಾಂ ರವರನ್ನಾಗಲಿ ಕೇಳಿದಲ್ಲಿ ತೋರಿಸುವರು.

ವಿಳಾಸ:—ಪೂನಂಚಂದ್ ಶೇಷಮಲ್,
ಅಂಡರ್‌ಸನ್ ಪೇಟೆ, ಕೋಲಾರ್ ಗೋಲ್ಡ್‌ಫೀಲ್ಡ್ಸ್.

ದರ್ಬಾರ್‌ಡೇ ಉತ್ಸವಗಳು.

ಚೆನ್ನಪಟ್ಟಣದ ತಾ|| ಮಳೂರು ಬಾಯ್ಸ್‌ಸ್ಕೂಲ್.

ಕಾರೊನೇಷನ್ ಉತ್ಸವಾರ್ಥವಾಗಿ ಸ್ಕೂಲ್ ಹಾಲಿನಲ್ಲಿ ಸಭೆಯು ಸೇರಿಸಲ್ಪಟ್ಟಿತು. ಬಾಲಕಬಾಲಕಿಯರ ಸಮುದಾಯವು ನೆರೆದಿದ್ದಿತು. ಸ್ಕೂಲ್ ಮುಂಭಾಗದ ಅಲಂಕೃತಸ್ಥಲದಲ್ಲಿ ನಿಲ್ಲಿಸಿದ್ದ ಇಂಗ್ಲಿಷ್ ರಾಜ್ಯಭಾರಸೂಚಕವಾದ ಪತಾಕೆಗೆ ಸರ್ವರೂ ಅಭಿವಂದಿಸಿದರು. ಸಭಿಕರ ಪ್ರಾರ್ಥನೆಯಂತೆ ಮ|| ರಾ|| ರಾ|| ಈ ತಾ|| ಅಮಲ್‌ದಾರರು, ನಾರಾಯಣಸ್ವಾಮಿ ಮೊದಲಿಯಾರರವರು ಅಗ್ರಾಸನವನ್ನು ವಹಿಸಿದರು. ಸ್ಕೂಲ್ ಹೆ|| ಮಾ|| ಮ|| ಅಶ್ವತ್ಥಶಾಸ್ತ್ರಿಗಳು, ಸ್ಕೂಲ್ ರಿಪೋರ್ಟನ್ನು ಓದಿ, ಇಂಗ್ಲಿಷ್ ರಾಜ್ಯಭಾರದಿಂದ ಪ್ರಜೆಗಳಿಗುಂಟಾಗಿರುವ ಅನುಕೂಲ್ಯಗಳನ್ನು ಕುರಿತು ಉಪನ್ಯಸಿದರು. ತರುವಾಯ ಅಗ್ರಾಸನಾಧಿಪತಿಗಳು, ಇಂಗ್ಲಿಷ್ ರಾಜ್ಯಭಾರದಲ್ಲಿ ಉಂಟಾಗಿರುವ ಉಪಕಾರಗಳನ್ನೂ, ಅವುಗಳಲ್ಲಿ ಮುಖ್ಯವಾದ ವಿದ್ಯಾಭ್ಯಾಸದ ಅನುಕೂಲ್ಯಗಳನ್ನೂ ಶ್ಲಾಘಿಸಿ ಉಪನ್ಯಸಿಸಿದ ತರುವಾಯ ಇಲ್ಲಿನ ಅ|| ಮಾ|| ಮ|| ಅಪ್ರಮೇಯಅಯ್ಯಂಗಾರ್ಯರೂ, ಗರ್ಲ್ಸ್‌ಸ್ಕೂಲ್ ಅ|| ಮಾ|| ಮ|| ರಾಘವಾಚಾರ್ಯರೂ, ಬಾಲಕಬಾಲಕಿಯರಿಂದ ಶ್ರೀ ಸಾರ್ವಭೌಮರವರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನ ರೂಪಕವಾದ ಮಂಗಳಗಾನವನ್ನು ಮಾಡಿಸಿದ ತರುವಾಯ ಅಗ್ರಾಸನಾಧಿಪರಿಗೂ, ಸಭಿಕರಿಗೂ, ಗಂಧ ಪುಷ್ಪ ತಾಂಬೂಲಗಳೂ, ಬಾಲಕಬಾಲಕಿಯರಿಗೆ ತಿಂಡಿಯಸಾಮಾನುಗಳೂ ವಿನಿಯೋಗಿಸಿದ ತರುವಾಯ ಸಭೆಯು ಬರಖಾಸ್ತಾಯಿತು. ಈ ದಿನವನ್ನು ಇಲ್ಲಿನ ಜನರು ಬಹಳ ಸಂತೋಷದಿಂದ ಕಳೆದರು.

ಶಿರಾ ತಾ|| ಕಳ್ಳಂಬೆಳ್ಳದ ವಿ. ಇ. ಗರ್ಲ್ಸ್‌ಸ್ಕೂಲ್.

ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರಾದ ಜಾರ್ಜಿ ಮಹಾಪ್ರಭುಗಳ ಕಿರೀಟಧಾರಣೆ ಮಹೋತ್ಸವದ ಸಂತೋಷಕ್ಕಾಗಿ ಇದೇ ಡಿಶಂಬರ್ ಮಾಹೆ ೧೨ ನೇ ತಾ|| ಶನಿವಾರ ಈ ಕಳ್ಳಂಬೆಳ್ಳದ ಊರೊಳಗೆ ಗರ್ಲ್ಸ್‌ಸ್ಕೂಲಿಗಾಗಿ ಗ್ರಾಮಸ್ಥರಿಂದ ಕೊಡಲ್ಪಟ್ಟಿರುವ ರಂಗನಾಥಸ್ವಾಮಿ ದೇವಸ್ಥಾನವನ್ನು ಕದಳೀಸ್ತಂಭಗಳಿಂದಲೂ, ಬಗೆಬಗೆಯಾದ ತೋರಣಗಳಿಂದಲೂ ಅಲಂಕರಿಸಿ ಶ್ರೀಮದಿಂಡಿಯಾ ಚಕ್ರವರ್ತಿ ಸಾರ್ವಭೌಮರಾದ ಜಾರ್ಜಿ ಮಹಾಪ್ರಭುಗಳವರ ಭಾವಚಿತ್ರವನ್ನೂ, ನಮ್ಮ ಶ್ರೀಮನ್ ಮಹಾರಾಜರವರ ಭಾವಚಿತ್ರವನ್ನೂ ಪುಷ್ಪಾದಿಗಳೊಡನೆ ಅಲಂಕರಿಸಿ ರಂಗನಾಥಸ್ವಾಮಿಯವರ ಸನ್ನಿಧಿಯಲ್ಲಿಟ್ಟು ಇದೇಪ್ರಾಂತ ಶಾನುಭೋಗರು ಮ|| ಗೋವಿಂದಪ್ಪನವರು ಅಗ್ರಾಸನಾಧಿಪತ್ಯವನ್ನು ವಹಿಸಿ ಡಿ|| ಬೋರ್ಡು ಮೆಂಬರಾದ ಮ|| ಚಿಕ್ಕಬಾಡೇಗೌಡರು, ಜಹಗೀರ್‌ದಾರ್ ಮುದಿಯಣ್ಣನವರು, ಇನ್ನೂ ಮುಂತಾದ ಮುಖಂಡ ಮಹನೀಯರುಗಳಿಂದ ಸಭೆಯು ಅಲಂಕರಿಸಲ್ಪಟ್ಟಿತು. ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ಗರ್ಲ್ಸ್‌ಸ್ಕೂಲನ್ನು ಅಭಿವೃದ್ಧಿಗೆ ತಂದು ಮುತವರ್ಜಿಯಿಂದ ಕೆಲಸ ಮಾಡುತ್ತಿರುವ ಹೆ|| ಮಾ|| ಲಿಂಗಪ್ಪಯ್ಯನವರು ಸಿಂಗಿಂಗ್ (Singing master) ನಂಜಪ್ಪಾಚಾರರೂ ಇವರುಗಳು ಅಲ್ಲಿ ನೆರೆದಿದ್ದ ಬಾಲಿಕೆಯರಿಂದ ಗಾಯನ ಕಿಂಡರ್‌ಗಾರ್ಟನ್ ಮುಂತಾದ ಆಟಪಾಟಗಳಿಂದ ಮಹನೀಯರ ಮನಸ್ಸನ್ನು ಸಂತೋಷಗೊಳಿಸಿದರು. ಇದೇಪ್ರಾಂತ ಬಾಯ್ಸ್‌ಸ್ಕೂಲ್ ಅ|| ಮಾ|| ಹೆಚ್. ವೆಂಕಟರಾಮಯ್ಯನವರು ಅಲ್ಲಿ ನೆರೆದಿದ್ದ ಮಹಾಜನಗಳ ಸಮೂಹದಲ್ಲಿ ನಮ್ಮ ಚಕ್ರವರ್ತಿ ಸಾರ್ವಭೌಮರಾದ ಜಾರ್ಜಿ ಮಹಾಪ್ರಭುಗಳು ಚಿರಕಾಲಸ್ಥಿರವಾಗಿ ರಾಜ್ಯಪರಿಪಾಲನೆ ಮಾಡಲೆಂದೂ, ಪ್ರಕೃತ ನಮ್ಮ ಬ್ರಿಟಿಷ್‌ರಾಜ್ಯಕ್ಕೆ ಸಂಭವಿಸಿರತಕ್ಕ ಮಹಾಯುದ್ಧದಲ್ಲಿ ಜಾರ್ಜಿ ಮಹಾಪ್ರಭುಗಳು ಜಯಪ್ರದವನ್ನು ಹೊಂದಿ ಸಾರ್ವಭೌಮರಾಗಿ ರಾಜ್ಯಪರಿಪಾಲನೆ ಮಾಡಲೆಂದೂ ಉಪನ್ಯಾಸಮಾಡಲು, ಅಲ್ಲಿ ನೆರೆದಿದ್ದ ಮಹಾಜನಗಳೆಲ್ಲರೂ ಸಂತೋಷದಿಂದ ಜಾರ್ಜಿ ಮಹಾಪ್ರಭುಗಳವರ ಮತ್ತು ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆ ಮಾಡುತ್ತಾ ರಂಗನಾಥಸ್ವಾಮಿಯನ್ನು ಪ್ರಾರ್ಥಿಸಿದರು. ಅನಂತರ ಸ್ಕೂಲ್ ಬಾಲಿಕೆಯರು ಶ್ರೀಮನ್ ಮಹಾರಾಜರವರ ಮತ್ತು ಚಕ್ರವರ್ತಿ ಸಾರ್ವಭೌಮರ ಶ್ರೇಯಃಪ್ರಾರ್ಥನೆಯೊಡನೆ ಮಂಗಳವನ್ನು ಹಾಡಿದರು. ಅಲ್ಲಿ ನೆರೆದಿದ್ದ ಮಹನೀಯರೆಲ್ಲರಿಗೂ ಗಂಧ ಪುಷ್ಪ ತಾಂಬೂಲಗಳೊಡನೆ ಸಕ್ಕರೆಯು ಹಂಚಲ್ಪಟ್ಟಿತು. ತರುವಾಯ ಮಹಾಜನಗಳೆಲ್ಲರೂ ಅವರವರ ಮನೆಗೆ ತೆರಳಿದರು.

ತುಮಕೂರು ತಾ|| ಹೆತ್ತೇನಹಳ್ಳಿ.

ಡಿಶಂಬರ್ ತಾ|| ೧೨ ಈ ದಿನ ದರ್ಬಾರ್‌ಡೇ ಆದುದರಿಂದ ಸ್ಕೂಲ್ ಕಟ್ಟಡದ ಮುಂಭಾಗದಲ್ಲಿ ಚಪ್ಪರವು ಹಾಕಲ್ಪಟ್ಟಿದ್ದಿತು. ಸದರಿ ಚಪ್ಪರವು ಹಸುರುತೋರಣಗಳಿಂದಲೂ, ಕದಲೀಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟಿದ್ದಿತು. ಪ್ರಾತಃಕಾಲ ಬಾಲಕರ ಆಟಪಾಟ ಮುಂತಾದವುಗಳು ನಡೆದುವು. ಮಧ್ಯಾಹ್ನ ೩ ಘಂಟೆಗೆ ಈ ಗ್ರಾಮದ ಮಿ|| ಎನ್. ರುದ್ರಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಸೇರಿಸಲ್ಪಟ್ಟಿದ್ದಿತು. ಇಲ್ಲಿಯ ಸ್ಕೂಲ್‌ಮಾಸ್ಟರ್ ಕೆ. ವೆಂಕಟರಾಯರವರು ಇಂಗ್ಲೀಷ್ ಸಾಮ್ರಾಜ್ಯದಿಂದ ಉಂಟಾಗಿರುವ ಸುಖಸಂಪತ್ತುಗಳನ್ನೂ, ಮತ್ತು ಗ್ರಾಮದಲ್ಲಿ ರೈತಾಪಿಜನಗಳು ಪರಸ್ಪರ ಅನ್ಯೋನ್ಯವಾಗಿ ಕೆಲಸಮಾಡುವುದರಿಂದ ಉಂಟಾಗುವ ಪ್ರಯೋಜನವನ್ನೂ ಕುರಿತು ಒಂದು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ನಂತರ ಅಗ್ರಾಸನಾಧಿಪತಿಗಳು ಸದರಿ ಉಪನ್ಯಾಸವು ಬಹಳ ಸ್ವಾರಸ್ಯವಾಗಿದೆ ಎಂದೂ ಇವರು ಬಂದಮೇಲೆ ವಿದ್ಯಾಭಿವೃದ್ಧಿಯು ಮೊದಲಿಗಿಂತಲೂ ಚೆನ್ನಾಗಿ ನಡೆಯುತ್ತಾ ಗ್ರಾಮಸ್ಥರ ಅನುರಾಗಕ್ಕೆ ಪಾತ್ರರಾಗಿರುತ್ತಾರೆಂದೂ ವಗೈರೆ, ಸದರೀ ಸ್ಕೂಲ್‌ಮಾಸ್ಟರವರ ಗುಣಕಥನವನ್ನು ಮಾಡಿದರು. ಅನಂತರ ಬಾಲಕರಿಂದ ಶ್ರೀಮದಿಂಡಿಯಾ ಚಕ್ರವರ್ತಿಯವರ ಮತ್ತು ನಮ್ಮ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆಯು ನಡಿಸಲ್ಪಟ್ಟಿತು. ತರುವಾಯ ಬಾಜಾಬಜಂತ್ರಿ ಮುಂತಾದ ವಾದ್ಯಗಳು ಮಾಡಲ್ಪಟ್ಟುವು. ಸಭಿಕರಿಗೆಲ್ಲಾ ಗಂಧಪುಷ್ಪ ತಾಂಬೂಲಾದಿಗಳೂ, ಬಾಲಕರಿಗೆ ತಿಂಡಿಯೂ ಹಂಚಲ್ಪಟ್ಟಿತು. ಈ ಊರಿನಲ್ಲಿರುವ ಎಲ್ಲಾ ದೇವರುಗಳಿಗೂ, ಮೇಲ್ಕಂಡ ಎನ್. ರುದ್ರಯ್ಯನವರು ಮತ್ತು ಸ್ಕೂಲ್‌ಮಾಸ್ಟರ್ ಮುಂತಾದವರ ಪ್ರೋತ್ಸಾಹದಿಂದ ಅಭಿಷೇಕೋತ್ಸವಾದಿಗಳು ನಡಿಸಲ್ಪಟ್ಟುವು. ಹಾಲಿ ನಡೆಯುತ್ತಿರುವ ಯುದ್ಧದಲ್ಲಿ ಶ್ರೀಮದಿಂಡಿಯಾ ಚಕ್ರವರ್ತಿಯವರಿಗೆ ಜಯವಾಗಲೆಂದು ಪ್ರಾರ್ಥನೆಯು ಅರ್ಪಿಸಲ್ಪಟ್ಟಿತು. ಅಲ್ಲದೆ ಮಿ|| ರುದ್ರಯ್ಯನವರು ಮಿ|| ಕೆ. ವೆಂಕಟರಾಯರವರು ಇವರಿಬ್ಬರೂ ಗ್ರಾಮಸ್ಥರಿಂದ ಚಂದಾವಸೂಲ್ಮಾಡಿ ಈ ಊರಿನಲ್ಲಿ ರೀಡಿಂಗ್‌ರೂಂ ಸ್ಥಾಪನೆಮಾಡಲು ಕಟ್ಟಡ ತಯಾರ್ಮಾಡಿಸುತ್ತಾ ಇದ್ದಾರೆ. ಈ ರೀತಿ ಗ್ರಾಮಾಭಿವೃದ್ಧಿಗಾಗಿ ಕಷ್ಟಪಡುತ್ತಿರುವ ಮೇಲ್ಕಂಡ ಮಹನೀಯರುಗಳಿಬ್ಬರಿಗೂ, ಗ್ರಾಮಕ್ಕೆ ಮಾತೃಪ್ರಾಯರಾಗಿರುವ ಶಾನುಭೋಗರಿಗೂ, ಮತ್ತು ಈ ಗ್ರಾಮದ ಪಟೇಲರುಗಳಿಬ್ಬರಿಗೂ, ಮ|| ಚಿಕ್ಕಮಾಯಣ್ಣನವರಿಗೂ, ಇನ್ನೂ ಮುಂತಾದವರುಗಳಿಗೂ ಸಹ ದೇವರು ಶ್ರೇಯಸ್ಸನ್ನು ಕೊಟ್ಟು, ಇವರುಗಳು ಕೈಗೊಂಡಿರುವ ರೀಡಿಂಗ್‌ರೂಂ ಕೆಲಸವು ಜಾಗ್ರತೆ ನೆರವೇರಲೆಂದು ಕೋರುತ್ತೇನೆ.

ಸ್ಥಳನಿವಾಸಿ

ಗದಗ ತಾ|| ಹುಲಕೋಟಿ.

ಈ ಹೊತ್ತಿನ ದಿವಸ ಅಂದರೆ ತಾ|| ೧೨-೧೨-೧೪ ರಲ್ಲಿ ಗಂಡುಹುಡುಗರ ಶಾಲೆಯಲ್ಲಿ ಶ್ರೀಮನ್ ಪಂಚಮಜಾರ್ಜರವರ ಪಟ್ಟಾಭಿಷೇಕದ ಸಮಾರಂಭವು ನಡೆಯಿತು. ಶಾಲಾಮನೆಯ ಮುಖ್ಯಮುಖ್ಯ ಸ್ಥಳಗಳನ್ನು ಚಿತ್ರದ ವಸ್ತುಗಳಿಂದಲೂ, ತಳಿರುತೋರಣಗಳಿಂದಲೂ ಅಂದಗೊಳಿಸಿದ್ದರು. ಸಾರ್ವಭೌಮರ ಭಾವಪಟವನ್ನು ಶೃಂಗರಿಸಿದ ಗದ್ದುಗೆಯಮೇಲೆ ಇಟ್ಟಿದ್ದರು. ಸಭಾಸ್ಥಾನದಲ್ಲಿ ಸ್ಕೂಲ ಕಮಿಟಿಯವರೂ, ಗ್ರಾಮಸ್ಥರೂ, ಊರಲ್ಲಿಯ ಸಭ್ಯಗೃಹಸ್ಥರೂ ಮಂಡಿಸಿದ್ದರು. ಅನಂತರ ಸಭೆಯಲ್ಲಿ ಕೆಳಗೆ ಬರೆದ ಸಂಗತಿಗಳು ಜರುಗಿದವು. ಮೊದಲು ಚಿಕ್ಕಚಿಕ್ಕ ಬಾಲಕಬಾಲಿಕೆಯರು ಸ್ವಾಗತಪರ ಪದವನ್ನು ಸಂಗೀತದೊಡನೆ ಹಾಡಿ ಸಭೆಗೆ ರಂಜನೆಯನ್ನುಂಟುಮಾಡಿದರು. ಮತ್ತು ನೀತಿಪರವಾದ ಸಂಭಾಷಣೆಗಳನ್ನು ಮಾಡಿದರು. ಅನಂತರ ಹೆ|| ಮಾಸ್ತರವರು ಸಭೆಯ ಉದ್ದೇಶವನ್ನು ಹೇಳಿದರು. ಆಮೇಲೆ ಇಲ್ಲಿಯ ೧ ನೆಯ ಅ|| ಮಾ|| ನಾಗನೂರ ಇವರು ಸಾರ್ವಭೌಮರ ಮತ್ತು ಮೇರಿ ಮಹಾರಾಣಿಯವರ ಜೀವನಚರಿತ್ರವನ್ನು ಹುಡುಗರಿಗೂ, ಸಭಿಕರಿಗೂ ಚನ್ನಾಗಿ ಮನದಲ್ಲಿ ಬಿಂಬಿಸುವಂತೆ ಹೇಳಿದರು. ಆಮೇಲೆ ಮಿ|| ಆರ್. ಕೆ. ಪಾಟೀಲ ಇವರು ನಕಾಸೆ ಮೊದಲಾದ ಉಪಕರಣಗಳ ಮೇಲಿಂದ ಪ್ರಸ್ತುತ ಒದಗಿದ ಮಹಾಯುದ್ಧದ ಕಾರಣಗಳನ್ನೂ ಅದರ ಪರಿಸ್ಥಿತಿಯನ್ನೂ ವಿಶದವಾಗಿ ಸಭಿಕರಿಗೆ ತಿಳಿಯುವಂತೆ ಸುಬೋಧಮಾಡಿದರು. ನಂತರ ಮ|| ಹೆ|| ಮಾಸ್ತರರು ಶ್ರೀ|| ಸಿದ್ಧನಗೌಡರ ಇವರು ಎಜ್ಯುಕೇಷನಲ್ ಡಿಪಾರ್ಟಮೆಂಟಿನಿಂದ ಬಂದ ಸರಕ್ಯೂಲರದ ಪ್ರಕಾರ ಯಾವತ್ತು ಆಬಾಲವೃದ್ಧರಿಗೆ ನಿಜವಾದ ತಿಳುವಳಿಕೆ ದೃಢವಾಗುವಂತೆ ಉಪದೇಶಮಾಡಿದರು. ತರುವಾಯ ಮಿ|| ತಮ್ಮನಗೌಡ ಎಕ್ಸಾಯಜ ಕಲೆಕ್ಟರ ಆಫೀಸಕ್ಲಾರ್ಕ ಇವರು ಇಂಗ್ಲಿಷರಿಂದ ಆದ ಹಿಂದುಸ್ಥಾನದ ಶಾಂತತೆ, ಸುವ್ಯವಸ್ಥೆ, ಪ್ರಜಾಪಾಲನ ಮೊದಲಾದ ಲಾಭವನ್ನೂ ಪೇಶ್ವೆಯರ ಆಳಿಕೆಯ ದುಃಸ್ಥಿತಿಯನ್ನೂ ಕುರಿತು ತಮ್ಮ ಅಸ್ಖಲಿತವಾದ ವಾಣಿಯಿಂದ ಸರಸವಾಗಿ ಹೇಳಿದರು. ಮಿ|| ಗೋವಿಂದಗೌಡ ಪಾಟೀಲ ಅಸೋಸಿಯೇಷನ್ ಲೋಕಲ್‌ಸೆಕ್ರೆಟರಿ, ಇವರು ಸ್ವಚ್ಛತೆಯ ಬಗ್ಗೆ ಬಾಲಕಬಾಲಿಕೆಯರಿಗೆ ಚನ್ನಾಗಿ ಮನನವಾಗುವಂತೆ ತಿಳಿಸಿ ಹೇಳಿದರು. ಮತ್ತು ಅಸೋಸಿಯೇಷನ್‌ದ ಉದಾತ್ತ ಉದ್ದೇಶವನ್ನು ಕುರಿತೂ ಅದರಿಂದಾಗುವ ಲೋಕಹಿತವನ್ನೂ ಸಭಿಕರಿಗೆ ತಿಳಿಸಿ ಹೇಳಿದರು. ಆಮೇಲೆ ಇಲ್ಲಿಯ ಪೂರ್‌ಫಂಡಿನ ವ್ಯವಸ್ಥಾಪಕರಾದ ಮಿ|| ಸಿದ್ದನಗೌಡಾ ಪೊಲೀಸ ಪಾಟೀಲ ಇವರು ಪೂರ್‌ಫಂಡಿನ ಉದ್ದೇಶವನ್ನೂ ಶಾಲೆಯ ಊರ್ಜಿತಸ್ಥಿತಿಯನ್ನೂ ಕುರಿತು ಹೇಳಿದರು. ಆಗ ಮಿ|| ತಮ್ಮನಗೌಡ, ಎಕ್ಸೈಜ ಕಲೆಕ್ಟರ ಆಫೀಸಕ್ಲಾರ್ಕ ಇವರು ದೊಡ್ಡ ಹುಡುಗರ ಉಪಕರಣಕ್ಕಾಗಿ ೧ ರೂ ಇನಾಮಾಗಿ ಕೊಟ್ಟರು. ಇಷ್ಟಾದಮೇಲೆ ಹುಡುಗರಿಗೆ ಮಿಠಾಯಿ ಹಂಚಿದರು. ಸಭಿಕರಿಗೆ ಹಾರ ತುರಾಯಿ ತಾಂಬೂಲಾದಿಗಳನ್ನು ಇತ್ತು ಶ್ರೀಘೋಷದೊಡನೆ ಸಭೆಯು ವಿಸರ್ಜನೆಯಾಯಿತು.

ಬೀರೂರ ಎ. ವಿ. ಸ್ಕೂಲು.

ಈ ಮಾಹೆ 12 ತಾ|| ಶನಿವಾರ ನಮ್ಮ ಜಾರ್ಜ್ ಮಹಾಪ್ರಭುಗಳ ಕಿರೀಟಧಾರಣೆಯ ಜ್ಞಾಪಕಾರ್ಥವಾಗಿ ನಡೆಯಿಸಲ್ಪಡುವ ದರ್ಬಾರ್‌ಡೇ ಮಹೋತ್ಸವಕ್ಕಾಗಿ ದಯಮಾಡಿಸಬೇಕೆಂದು ಎ ವಿ. ಸ್ಕೂಲ್ ಹೆಡ್ಮಾಸ್ಟರಾದ ಮ|| ರಾ|| ಎಂ. ಕೆ. ಶಾಮರಾಯರವರಿಂದ ಆಹ್ವಾನಿಸಲ್ಪಟ್ಟಂತೆ ಆ ದಿನ ಸಾಯಂಕಾಲ ಸುಮಾರು ೬ ಘಂಟೆಗೆ ಮ|| ಪತ್ರೆ ವೀರಪ್ಪಯ್ಯನವರೇ ಮೊದಲಾದ ಸ್ಥಳೀಯ ದೊಡ್ಡಮನುಷ್ಯರೂ ಇಲ್ಲಿಯ ಸಬ್ ಅ|| ಸರ್ಜನ್‌ರವರೂ ಸಾ|| ಇನ್ಸ್‌ಪೆಕ್ಟರವರೂ ನೇಟಿವ್ ಡಾಕ್ಟರವರೂ ಪೋಸ್ಟ್‌ಮಾಸ್ಟರವರೂ ಎ. ವಿ ಮತ್ತೂ ಗರ್ಲ್ಸ್‌ಸ್ಕೂಲುಗಳ ಉಪಾಧ್ಯಾಯರುಗಳೂ ಬಾಲಕಬಾಲಿಕೆಯರೂ ಎ. ವಿ ಸ್ಕೂಲಿನಲ್ಲಿ ಸನ್ನಿಹಿತರಾಗಿದ್ದರು. ಎ. ವಿ. ಸ್ಕೂಲ್ ಹಾಲಿನಲ್ಲಿ ಸಭೆಯು ಸೇರಿಸಲ್ಪಟ್ಟಿತು. ಸಭಿಕರ ಕೋರಿಕೆಯಂತೆ ಸಬ್|| ಅ|| ಸರ್ಜನ್‌ರಾದ ಮ|| ರಾ|| ವೀರಭಾಸ್ಕರಮೊದಲಿಯಾರರು ಅಗ್ರಾಸನವನ್ನು ವಹಿಸಿ ಆದಿನದ ಸಭೆಯ ಉದ್ದೇಶವನ್ನು ತಿಳಿಸಿದರು. ಅಗ್ರಾಸನಾಸೀನರ ಅನುಮತಿಯಂತೆ ಎ. ವಿ. ಸ್ಕೂಲು ಅ|| ಮಾಸ್ತರು ಮ|| ರಾ|| ಬಿ ಶ್ರೀನಿವಾಸರಾಯರವರು ದರ್ಬಾರ್‌ಡೇ ಮಹೋತ್ಸವದ ಮತ್ತೂ ಬ್ರಿಟಿಷ್ ಪ್ರಭುತ್ವದಿಂದ ನಮಗುಂಟಾಗಿರುವ ಅನುಕೂಲತೆ ಮೊದಲಾದವುಗಳ ವಿಚಾರವಾಗಿ ಶ್ಲಾಘ್ಯವಾದ ಉಪನ್ಯಾಸಮಾಡಿದರು. ಆದಾದಮೇಲೆ ನೇಟಿವ್ ಡಾಕ್ಟರವರಾದ ಮ|| ರಾ|| ಚಿದಂಬರಪಂಡಿತರೂ ವೀರಶೈವ ಸಂಸ್ಕೃತಪಾಠಶಾಲಾಧ್ಯಾಪಕರಾದ ಮ|| ಸಿದ್ಧಲಿಂಗಶಾಸ್ತ್ರಿಗಳವರೂ ಶ್ರೀಮಂತರಾದ ಜಾರ್ಜ್ ಮಹಾಪ್ರಭು ದಂಪತಿಗಳ ಗುಣಕಥನ ಮಾಡಿ, ಅವರ ಸತ್ಯಸಂಧತೆ ಪ್ರಜಾಪರಿಪಾಲನೆ ಇವುಗಳನ್ನು ವಿವರಿಸಿ ಅವರ ಶ್ರೇಯಸ್ಸನ್ನು ಕೋರಿದರು. ಅಗ್ರಾಸನಾಸೀನರು ಯಥೋಚಿತವಾದ ಭಾಷಣವನ್ನು ಮಾಡಿದರು. ಆಮೇಲೆ ಸ|| ಸ್ಕೂಲ್ ಸಿಂಗಿಂಗ್ ಮಾಸ್ಟರಾದ ಮ|| ವೆಂಕಟಕೃಷ್ಣಯ್ಯಂಗಾರ್ಯರವರು ಬಾಲಿಕೆಯರ ಮೂಲಕ ಜಾರ್ಜ್‌ಚಕ್ರವರ್ತಿಗಳ ಶ್ರೀಮನ್ ಮಹಾರಾಜರವರ ಮತ್ತೂ ಯುವರಾಜರವರ ಶ್ರೇಯಃಪ್ರಾರ್ಥನೆಗಳನ್ನು ಹೇಳಿಸಿದರು. ಇದಾದಮೇಲೆ ಸ್ಕಾ|| ಇನ್ ವಿ. ಅಳಸಿಂಗರಾಚಾರ್ಯರವರು ಸಭಿಕರೆಲ್ಲರೊಡನೆ ಚಕ್ರವರ್ತಿದಂಪತಿಗಳ ಸಕುಟುಂಬರಾದ ನಮ್ಮ ಶ್ರೀಮನ್ ಮಹಾರಾಜರವರ ಮತ್ತೂ ಯುವರಾಜರವರ ಶ್ರೇಯಃಪ್ರಾರ್ಥನೆಗಳನ್ನು ಮಾಡಿದರು. ತರುವಾಯ ಎ. ವಿ ಸ್ಕೂಲ್ ಅ|| ಮಾ|| ಮ|| ಎಂ ಟಿ. ಶೇಷಾದ್ರಯ್ಯಂಗಾರ್ಯರವರು ಅಗ್ರಾಸನವನ್ನಲಂಕರಿಸಿದ್ದ ಡಾಕ್ಟರವರಿಗೂ ಈ ಮಹೋತ್ಸವವನ್ನು ನೆರವೇರಿಸಿದ ಮ|| ಪತ್ರೆವೀರಪ್ಪನವರಿಗೂ ಸಭೆಗೆ ದಯಮಾಡಿಸಿದ್ದ ಮಹನೀಯರುಗಳಿಗೂ ವಂದನೆಗಳನ್ನರ್ಪಿಸಿದರು. ಅನಂತರ ಎ. ವಿ ಸ್ಕೂಲ್ ಹೆಡ್ಮಾಸ್ಟರವರು ವರ್ಷವರ್ಷವೂ ನಡೆಯುತ್ತಿರುವಂತೆ ಈ ವರ್ಷವೂ ಈ ಮಹೋತ್ಸವವನ್ನು ನೆರವೇರಿಸಿದ ಮ|| ಪತ್ರೆ ವೀರಪ್ಪನವರಿಗೆ ಸ್ಕೂಲಿನ ಪರವಾಗಿ ಕೃತಜ್ಞತೆಯನ್ನು ತಿಳಿಸಿ ಅವರಿಗೆ ಶ್ರೇಯಸ್ಸನ್ನು ಕೋರಿದರು. ಆಮೇಲೆ ಸಭಿಕರಿಗೆ ಗಂಧ ಪುಷ್ಪ ತಾಂಬೂಲಗಳೂ ಬಾಲಕ ಬಾಲಕಿಯರಿಗೆ ಸಕ್ಕರೆಯೂ ವಿನಿಯೋಗಿಸಲ್ಪಟ್ಟು ಚಕ್ರವರ್ತಿಗಳ ಜಯಘೋಷದೊಡನೆ ಸಭೆಯು ವಿರಾಮಹೊಂದಿತು. ಮ|| ಪತ್ರೆವೀರಪ್ಪನವರು ಈರೀತಿ ಆಗಾಗ್ಗೆ ಸ್ಕೂಲಿನಲ್ಲಿ ನಡೆಯುವ ಬಾಲಕರ ಆಟಪಾಟಗಳಿಗೆ ಉದಾರವಾಗಿ ಸಹಾಯಮಾಡುತ್ತಾ ಅವರ ವಿದ್ಯಾಭಿವೃದ್ಧಿಗೆ ಪ್ರೋತ್ಸಾಹಕರಾಗಿರುವುದು ಸಂತೋಷಕರವಾಗಿದೆ. ಕಳೆದ ನವರಾತ್ರಿಯ ಉತ್ಸವಕಾಲದಲ್ಲಿ ಇವರು ಮಾಡಿರುವ ಉದಾರ ಸಹಾಯಗಳಿಗಾಗಿ ಶ್ರೀಮನ್ ಮಹಾರಾಜರವರಿಂದ ದರ್ಬಾರಿನಲ್ಲಿ ಖಿಲ್ಲತ್ತನ್ನು ಹೊಂದಿ ಗೌರವಿಸಲ್ಪಟ್ಟಿರುವರು. ಇಲ್ಲಿಯ ಗರ್ಲ್ಸ್‌ಸ್ಕೂಲನ್ನು ಕಟ್ಟಿಸಿಕೊಡುವವರಾಗಿರುವರು. ಇವರಿಗೆ ಆಯುರಾರೋಗ್ಯ ಐಶ್ವರ್ಯಗಳನ್ನಿತ್ತು ಕಾಪಾಡಬೇಕಾಗಿ ದೇವರನ್ನು ಪ್ರಾರ್ಥಿಸುತ್ತೇವೆ.

ವಿದ್ಯಾಭಿಮಾನಿ.

ದೇವನಹಳ್ಳಿ ತಾ|| ಜೋಡಿಹುಣಸಮಾರನಹಳ್ಳಿ ವಿ. ಇ ಸ್ಕೂಲ್ ಪ್ರತಿಷ್ಠೆ.

ತಾ|| ೬-೧೨-೧೪ ನೇ ಭಾನುವಾರ ಈ ಊರಿನಲ್ಲಿ ಲೇಟ್ ಚನ್ನಬಸವಪ್ಪೊಡೇರವರ ಜ್ಞಾಪಕಾರ್ಥವಾಗಿ ಮಠದ ಶ್ರೀಮಾನ್ ಸ್ವಾಮಿಗಳವರು ಏಜಂಟರಾದ ಮ|| ಗುರುನಂಜಪ್ಪಡೇರವರು ಸ್ಕೂಲ್ ಕಳಹದಿಯನ್ನು ಸಬ್‌ಡಿವಿಜನ್ ಸಾಹೇಬರವರಾದ ಮ|| ಕುಪ್ಪಸ್ವಾಮಯ್ಯಂಗಾರರವರಿಂದ ಕಳೆದ ತಾ|| ೫-೪-೧೪ ರಲ್ಲಿ ಹಾಕಿಸಿದ್ದು ಸರಿಯಷ್ಟೆ. ಈ ಸ್ಕೂಲ್ ಕಟ್ಟಡವು ಪೂರೈಸಿ ಈ ತಿಂಗಳು ತಾ|| ೬ನೇ ಭಾನುವಾರ ೧೦ ಘಂಟೆಗೆ ವಿದ್ಯಾಭ್ಯಾಸದ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರವರಾದ ರಾವ್‌ಬಹದ್ದೂರ್ ಎಂ. ಶಾಮರಾಯರವರಿಂದ ಪ್ರವೇಶಮಹೋತ್ಸವವನ್ನು ನಡಿಸುವಂತೆ ಒಪ್ಪಿಕೊಂಡಿದ್ದರು. ಸ್ಕೂಲಿನ ಮುಂಭಾಗದಲ್ಲಿ ವಿಶಾಲವಾದ ಮತ್ತು ಸುಂದರವಾದ ಚಪ್ಪರವನ್ನು ಹಾಕಿಸಲ್ಪಟ್ಟಿತು. ಈ ಮಹೋತ್ಸವಕ್ಕೆ ದಿವಾನ್ ಬಹದ್ದೂರ್ ರಾಜಸಭಾಭೂಷಣ ಮ|| ಕೆ.ಪಿ. ಪುಟ್ಟಣ್ಣಶೆಟ್ಟರು, ಡೆ|| ಕಮೀಷನರಾದ ಮ|| ಚಾಂದಿಸಾಹೇಬರವರು, ಪೊಲೀಸ್ ಸೂಪರಿಂಟೆಂಡೆಂಟರಾದ ಮ|| ರಾಮಸ್ವಾಮಯ್ಯನವರು, ಎಕನಾಮಿಕ್‌ಕಾನ್ಫರೆನ್ಸ್ ಸೆಕ್ರೆಟರಿಯವರು, ಮ||ಗಳಾದ ಸರ್ಕಲ್‌ಸ್ಕೂಲ್‌ಗಳ ಇನ್ಸ್‌ಪೆಕ್ಟರ್ ಬಿ. ದಾಸಪ್ಪನವರು, ಡೆ|| ಇನ್ಸ್‌ಪೆಕ್ಟರ್ ಹೆಚ್. ಎನ್. ವೆಂಕಟರಮಣಯ್ಯನವರು, ಅ|| ಡೆ|| ಇನ್ಸ್‌ಪೆಕ್ಟರ್ ಅನಂತಸುಬ್ಬರಾಯರು, ಅಡ್ವೋಕೇಟ್ ಡಿ ವೆಂಕಟರಾಮಯ್ಯನವರು, ರಿಟೈರ್ಡ್ ಡೆ|| ಕಮೀಷನರವರಾದ ಚೆಂಗಯ್ಯಶೆಟ್ಟರು, ದೇವನಹಳ್ಳಿ ಅಮಲ್‌ದಾರ್ ಲಕ್ಷ್ಮಣಯ್ಯನವರು, ಮೈಸೂರು ಬಿ. ಎಂ ಸಿದ್ಧಲಿಂಗಶಾಸ್ತ್ರಿಗಳವರು, ಬೆಂಗಳೂರು ಅರಳೆಪೇಟೆ ಯಜಮಾನರಾದ ಮ|| ಬಸಪ್ಪನವರು, ಅರಳೆಪೇಟೆ ವೀರಭದ್ರಶೆಟ್ಟರು, ದೊಡ್ಡಬಳ್ಳಾಪುರದ ಎ. ವಿ. ಸ್ಕೂಲ್ ಹೆ|| ಡಿ|| ಕೋಗಾಡಿಯಪ್ಪನವರೇ ಆದಿಯಾಗಿ ಅನೇಕ ದೊಡ್ಡಮನುಷ್ಯರು ಹಾಜರಾಗಿದ್ದರು. ರಾವ್‌ಬಹದ್ದೂರ್ ಮ|| ಎಂ. ಶಾಮರಾಯರವರು ನಿಷ್ಕರ್ಷಿಸಲ್ಪಟ್ಟ ಬೆಳಗ್ಗೆ ೧೦ ಗಂಟೆಗೆ ಸರಿಯಾಗಿ ದಯಮಾಡಿಸುವಾಗ್ಗೆ ಸರ್ವರೂ ಇದಿರ್ಗೊಂಡು ಬ್ಯಾಂಡುವಾದ್ಯವೇ ಮೊದಲಾದುವುಗಳು ಘೋಷರೆಯುತ್ತಿರುವಲ್ಲಿ ಏಜಂಟ್ ಮ|| ಗುರುನಂಜಪ್ಪಡೇರವರು ಸಮರ್ಪಿಸಿದ ಹಾರ ತುರಾಯಿಯನ್ನು ಸ್ವೀಕರಿಸಿ, ಚಪ್ಪರದ ಮುಂಭಾಗದಲ್ಲಿ ಬಾಲಕಬಾಲಿಕೆಯರು ಸುಖಾಗಮನವನ್ನು ಬಯಸುವ ಹಾಡುಗಳನ್ನು ಹೇಳಿದಮೇಲೆ ಚಪ್ಪರದೊಳಕ್ಕೆ ದಯಮಾಡಿಸಿ ಆಹ್ವಾನದ ಒಪ್ಪಿಗೆಯಂತೆ ಸಭಾಧ್ಯಕ್ಷರಾದರು. ಬಾಲಕಬಾಲಕಿಯರು ದೇವತಾಸ್ತೋತ್ರ, ಚಕ್ರವರ್ತಿಗಳವರ ಶ್ರೇಯಃಪ್ರಾರ್ಥನೆ, ಮಹಾರಾಜರವರ ಶ್ರೇಯಃಪ್ರಾರ್ಥನೆ, ಸಣ್ಣ ಬಾಲಕರ ನೀತಿಸಂಬಂಧವಾದ ಪ್ರಶ್ನೋತ್ತರಗಳು ಹಣದ ಉಪಯೋಗದ ಪ್ರಶ್ನೋತ್ತರಗಳನ್ನು ಹೇಳಿದರು. ಇದನ್ನು ಕೇಳಿ ಬಹಳ ಸಂತೋಷಪಟ್ಟರು. ಸ್ಕೂಲ್ ಮಾ|| ಮ|| ಸಿ|| ಗುರುಪಾದಪ್ಪನವರಿಂದ ೧೯೧೧ ನೇ ಇಸವಿ ಮೇ ತಾ|| ಲಾಗಾಯ್ತು ೧೯೧೪ ನೇ ಇಸವಿಯವರೆಗೆ ಸ್ಕೂಲಿನಲ್ಲಿ ನಡೆದಕಾರ್ಯದರಿಪೋರ್ಟನ್ನು ಬಹುಸ್ವಾರಸ್ಯವಾಗಿ ಓದಿದರು. ನಂತರ ಬೊಂಬಾಯಿ ಮೆಟ್ರಿಕ್‌ಗೆ ಅಪ್ಪಿಯರಾಗಿರುವ ರಾಜಶೇಖರಪ್ಪೊಡೇರವರು ಇಂಗ್ಲೀಷಿನಲ್ಲಿ ಉಪನ್ಯಾಸವನ್ನು ಓದಿದರು. ರಾವ್‌ಬಹದ್ದೂರ್ ಮ|| ಎಂ. ಶಾಮರಾಯರವರು ಅಪ್ಪಣೆ ಕೊಡಿಸಿದ್ದೇನೆಂದರೆ, ಪೂರ್ವಕಾಲದಲ್ಲಿ ವಿದ್ಯಾಭ್ಯಾಸಮಾಡಲು ಪ್ರಜೆಗಳು ಇಷ್ಟವುಳ್ಳವರಾಗಿರಲಿಲ್ಲ. ಈಗಲಾದರೊ ಗೌರ್ನಮೆಂಟಿನವರು ಬೇಕಾದಷ್ಟು ಹಣವನ್ನು ಸ್ಯಾಂಕ್ಷನ್ ಮಾಡುತ್ತಲೇ ಇರುತ್ತಾರೆ. ಪ್ರಜೆಗಳೂ ಸಹ ವಿದ್ಯಾಭ್ಯಾಸಮಾಡಿಸಲು ಪ್ರಯತ್ನಪಡುತ್ತಲಿರುತ್ತಾರೆ. ಲೇಟ್ ಚನ್ನಬಸವಪ್ಪೊಡೇರವರು ಈಮಠಕ್ಕೆ ಮಾಡಿರುವ ಮಹೋಪಕಾರಕ್ಕಾಗಿ ಅವರ ಹೆಸರು ಶಾಶ್ವತವಾಗಿರಬೇಕೆಂದು ಯೋಚಿಸಿ, ಶ್ರೀಮಾನ್ ಸ್ವಾಮಿಗಳವರು ಮತ್ತು ಗುರುನಂಜಪ್ಪಡೇರವರು ಸಹ ೭೦೦೦ ರೂ ಬಾಳುವ ಸ್ಕೂಲನ್ನು ಉದಾರಮನಸ್ಸಿನಿಂದ ಕಟ್ಟಿಸಿಕೊಟ್ಟದ್ದಕ್ಕಾಗಿ ಇವರಿಗೆ ಕೃತಜ್ಞನಾಗಿರುತ್ತೇನೆ. ಈ ಸ್ಕೂಲಿಗೆ ಇಂಗ್ಲೀಷ್ ಮಾಸ್ಟರನ್ನು ಕಳುಹಿಸಿಕೊಡುತ್ತೇವೆ. ನಮ್ಮನ್ನು ಈ ಪ್ರತಿಷ್ಠೆಗಾಗಿ ಕರೆಸಿಕೊಂಡ ಶ್ರೀಮಾನ್ ಸ್ವಾಮಿಗಳವರಿಗೂ, ಗುರುನಂಜಪ್ಪಡೇರವರಿಗೂ ಪುನಃ ಕೃತಜ್ಞನಾಗಿರುತ್ತೇನೆ ಎಂದುಅಪ್ಪಣೆಕೊಟ್ಟು, ಶಾಸ್ತ್ರಿಗಳವರು ವೇದಘೋಷಮಾಡುವ ಸಂದರ್ಭದಲ್ಲಿ ಸ್ಕೂಲುಬಾಗಿಲನ್ನು ತೆರೆದರು. ಅಸ್ಟ್ರಾಲಜರ್ ಬಿ ಸೂರ್ಯನಾರಾಯಣರಾಯರವರು ಈ ಸ್ಕೂಲಿನ ಪುಸ್ತಕಭಂಡಾರಕ್ಕಾಗಿ ೫೦ರೂ. ಪುಸ್ತಕಗಳನ್ನು ಕೊಡುತ್ತೇವೆಂದು ಒಪ್ಪಿಕೊಂಡರು. ಅನಂತರ ರಾವ್‌ಬಹದ್ದೂರ್ ಮ|| ಎಂ. ಶಾಮರಾಯರವರು ೩೦ ರೂ. ಬಾಳುವ ಪುಸ್ತಕಗಳನ್ನು ಲೈಬ್ರರಿಗಾಗಿ ಕೊಡುತ್ತೇವೆಂದು ವಾಗ್ದಾನಮಾಡಿದರು. ಗಂಧ, ಪುಷ್ಪ, ತಾಂಬೂಲವಿನಿಯೋಗವಾದನಂತರ ಸಭೆಯುಬರಖಾಸ್ತಾಯಿತು. ಬ್ಯಾಂಡ್‌ವಾದ್ಯದೊಡನೆ ಊರಿನೊಳಕ್ಕೆಮೇಲ್ಕಂಡ ಎಲ್ಲಾ ದೊಡ್ಡಮನುಷ್ಯರೂ ದಯಮಾಡಿಸಿದರು. ಮಠದದಿವ್ಯಪಾಠಶಾಲೆಯಮೇಲೆ ಶ್ರೀಮಾನ್ ಸ್ವಾಮಿಗಳವರು ಈ ಅಧಿಕಾರಿಗಳನ್ನು ಆದರದಿಂದ ಸನ್ಮಾನಿಸಿ ಅವರುಗಳನ್ನು ವಿಚಾರಿಸಿ ಭೋಜನಕ್ಕೆ ತೆರಳಲು ಸೂಚಿಸಿದರು. ಭೋಜನಾನಂತರ [illegible] ಸಂಗೀತ ಇವುಗಳಿಂದ ಸಭೆಯವರನ್ನು ಆನಂದಪಡಿಸಿ, ಸಾಯಂಕಾಲ ೪ ಘಂಟೆಗೆ ಟೀಪಾರ್ಟಿ ತೀರಿಸಿ ತಂತಮ್ಮ ಅವರವರ ಸ್ಥಳಗಳಿಗೆ ವಾಪಸು ತೆರಳಿದರು. ದೇವನಹಳ್ಳಿ ತಾ|| ಜೋಡಿಹುಣಸಮಾರನಹಳ್ಳಿಗೆ ೧೧-೧೨-೧೪ ನೇ ಶುಕ್ರವಾರ ದಿವಾನ್‌ಸಾಹೇಬರವರಾದ ಮಿ|| ಎಂ. ವಿಶ್ವೇಶ್ವರಯ್ಯನವರು ಸಾಯಂಕಾಲ ೫|| ಗಂಟೆಗೆ ಬಂದರು. ಇವರನ್ನು ಮಠದ ಏಜಂಟರಾದ ಮ|| ಗುರುನಂಜಪ್ಪಡೇರವರು, ಮತ್ತು ಇವರ ಮಕ್ಕಳಾದ ಮ|| ಗುರುಶಾಂತಪ್ಪೊಡೇರವರು, ರಾಜಶೇಖರಪ್ಪೊಡೇರವರು, ಗ|| ಸ್ಕೂಲ್ ಮಾ|| ಸಿ ಗುರುಪಾದಪ್ಪನವರು ಹೊಸದಾಗಿ ಕಟ್ಟಿಸಲ್ಪಟ್ಟಿರುವ ಸ್ಕೂಲಿನಹತ್ತಿರ ಇದಿರ್ಗೊಂಡರು. ದಿವಾನ್‌ಸಾಹೇಬರವರು ೫|| ಗಂಟೆ ವರೆಗೆ ಇದ್ದು ಬಾಲಕಬಾಲಿಕೆಯರ ಸುಖಾಗಮನವನ್ನು ಕೇಳಿ, ಸ್ಕೂಲನ್ನು ಪರಾಂಬರಿಸಿ, ಊರಿನೊಳಗೆ ವಿಲೇಜ್ ಇಂಪ್ರೂವ್‌ಮೆಂಟಿನಿಂದ ತಯಾರಾದ ರಸ್ತೆಗಳನ್ನು ನೋಡಿ, ಮಠಕ್ಕೆ ದಯಮಾಡಿ ಸ್ವಾಮಿಗಳವರ ದರ್ಶನವನ್ನು ತೆಗೆದುಕೊಂಡು ಗ್ರಾಮದ ನೈರ್ಮಲ್ಯಕ್ಕೆ ಬಹಳ ಸಂತೋಷಿಸಿ, ವಿಲೇಜ್ ಇಂಪ್ರೂವ್ಮೆಂಟ್ ಕ್ರಮವಾಗಿದೆಯೆಂದು ಅಭಿಪ್ರಾಯಪಟ್ಟು ೭ ಗಂಟೆಗೆ ವಾಪಸು ದಯಮಾಡಿಸಿದರು.

ಜರ್ಮನರ ಹಡಗುಗಳು ಮಾಡಿದ ಹಾವಳಿ

ಜಲಸೈನ್ಯದಲ್ಲಿ ಪ್ರಪಂಚದೊಳಗೆಲ್ಲಾ ಆಂಗ್ಲರನ್ನು ಸಮಗಟ್ಟುವ ರಾಷ್ಟ್ರವು ಮತ್ತಾವುದೂ ಇರುವುದಿಲ್ಲ. ಜರ್ಮನರು ಅದನ್ನು ನೋಡಿ ಸೈರಿಸಲಾರದೆ ಈಚೀಚೆಗೆ ನೌಕಾಬಲವನ್ನು ಹೆಚ್ಚಿಸುತ್ತ ಬಂದಿದ್ದಾರೆ. ಆದರೂ ಆಂಗ್ಲನೌಕಾಬಲವನ್ನು ಇದಿರಿಸಿ ಕಾದಾಡಿ ಜಯಿಸುವಷ್ಟು ಬಲವು ಅವರ ನೌಕಾದಳಕ್ಕಿರುವುದಿಲ್ಲ. ಅದುಕಾರಣ ಅದು ಜಲದಮೇಲೆ ಸಾಮಾನ್ಯವಾದ ಪುಂಡಾಟವನ್ನು ಮಾಡುತ್ತಿರುವುದೇ ತನ್ನ ಚರಿತಾರ್ಥವೆಂದುಭಾವಿಸಿದಂತೆ ಕಾಣುತ್ತದೆ. ಮೊನ್ನೆ ವಾರದಲ್ಲಿ ಇಂಗ್ಲೆಂಡಿಗೆ ಸೇರಿದ ಯಾರ್ಕ್‌ಷೈರಿನ ತೀರಪಟ್ಟಣಗಳು ೨-೩ ರ ಮೇಲೆ ಅದು ಮಾಡಿದ ತುಂಟತನವು ಪುಂಡಾಟಕ್ಕೆ ಸೇರಿದುದೇ ಹೊರತು ಯುದ್ಧದ ಗೌರವಕ್ರಮಕ್ಕೆ ಸಂಬಂಧಿಸಿದುದಾಗಿರಲಿಲ್ಲ. ಫ್ರಾನ್ಸು-ಬೆಲ್ಜಿಯಂಗಳಲ್ಲಿ ಈಗ ಜರ್ಮನರು ನಡೆಯಿಸುತ್ತಿರುವ ಯುದ್ಧದಲ್ಲಿ ರುಚಿಗೆಟ್ಟುಹೋಗಿರುವುದರಿಂದ ಅವರು ಜಲದಮೇಲೆ ಸ್ವಲ್ಪ ಕೈಚಾಚಿ ನೋಡಬೇಕೆಂದು ಯೋಚಿಸಿಯೋ, ಅಥವಾ ಶಾಂತವಾಗಿರುವ ಇಂಗ್ಲೀಷ್ ತೀರಪಟ್ಟಣಗಳ ಮೇಲೆ ಇಂಥ ಅನಾಹುತಗಳನ್ನು ನಡೆಯಿಸಿ ಪ್ರಜೆಗಳನ್ನು ಕಳವಳಪಡಿಸಿಬಿಟ್ಟರೆ, ಇನ್ನುಮೇಲೆ ಇಂಗ್ಲೆಂಡಿನವರು ಯುದ್ಧರಂಗಕ್ಕೆ ಹೊಸಸೇನೆಗಳನ್ನು ಕೂಡಿಸಿ ಕಳುಹುವುದು ತಪ್ಪಿಹೋಗುವುದೆಂದು ಯೋಚಿಸಿಯೋ, ಇಲ್ಲವೆ ಜರ್ಮನ್‌ದೇಶದವರು ತಮ್ಮ ನೌಕಾಬಲವು ಯಾವುದೊಂದು ಕೆಲಸವನ್ನೂ ಮಾಡದೆ ಮೂಲೆ ಮುಟ್ಟಾಗಿ ಕುಳಿತಿದೆಯಲ್ಲಾ ಎಂದು ಆಡಿಕೊಳ್ಳುವುದನ್ನು ತಪ್ಪಿಸಿ ಅಳುವವರ ಕಣ್ಣನ್ನೊರಸಿದಂತೆ ಅವರನ್ನು ಸಮಾಧಾನಪಡಿಸಬೇಕೆನ್ನುವುದಕ್ಕಾಗಿಯೋ, ಅಥವಾ ಆಂಗ್ಲನೌಕಾದಳವನ್ನು ಕೆಣಕಿ, ಅವುಗಳನ್ನು ತಾವು ಮದ್ದಿನ ಗೋಳಗಳನ್ನು ಹೂತಿರುವ ಸಮುದ್ರದಕಡೆಗೆ ಸೆಳೆದು ಅನರ್ಥವನ್ನು ಮಾಡಬೇಕೆಂಬುದಕ್ಕಾಗಿಯೋ, ಇದೇತೆರದ ಇನ್ನಾವ ದುಸ್ಸಂಕಲ್ಪದಿಂದಲೋ ಜರ್ಮನರು ಇಂಥ ಕ್ಷುದ್ರಪ್ರಯತ್ನಗಳನ್ನು ಮಾಡಿದ್ದಾರೆ. ಆದರೆ ಯುದ್ಧಕ್ಕೆ ನಿಂತ ರಾಷ್ಟ್ರದವರಿಗೆ ಶತ್ರುಗಳಿಂದ ಇಂಥ ಅನರ್ಥವಾಗುವುದೇನೂ ಆಶ್ಚರ್ಯವಲ್ಲ. ಶತ್ರುಗಳ ಕಪಟಮಾಯಾಜಾಲಕ್ಕೆ ಬಿದ್ದು ದುಡುಕುವಷ್ಟು ಜಾಳ್ಮತ್ವವು ಆಂಗ್ಲರ ನೌಕಾದಳಾಧಿಕಾರಿಗಳಲ್ಲಿಲ್ಲ. ಅವರು ಬಹಳ ದೀರ್ಘಾಲೋಚನಪರರು; ಅನುಪಮಮೇಧಾವಿಗಳು. ಶತ್ರುಗಳ ಪುಂಡಾಟವನ್ನು ತತ್ಕಾಲದಲ್ಲಿ ಸಹನದಿಂದ ಸೈರಿಸಿ, ಅದಕ್ಕೆ ನೂರರಷ್ಟು ಕೇಡನ್ನು ಗೌರವವಾದರೀತಿಯಿಂದ ತಕ್ಕ ಸಂಧಿಯುಲ್ಲಿ ಇವರು ಮಾಡಬಲ್ಲರು. ತಮ್ಮ ಆಂಗ್ಲನೌಕಾದಳಸಾಮರ್ಥ್ಯವಿಷಯದಲ್ಲಿ ಆಂಗ್ಲಪ್ರಪಂಚಕ್ಕೆಲ್ಲಾ ಅಸಾಧಾರಣವಾದ ನಂಬುಗೆಯಿದೆ. ಅದುಕಾರಣ ಈಗ ಜರ್ಮನರು ನಡೆಯಿಸಿದ ಹಾವಳಿಯಿಂದ ಆಂಗ್ಲಪ್ರಜೆಗಳಲ್ಲಿ ಸ್ವಲ್ಪವಾದರೂ ಕಳವಳವು ಹುಟ್ಟಿಲ್ಲ. ಅವರು ಮತ್ತಷ್ಟು ಶತ್ರುಗಳಮೇಲೆ ರೇಗಿ ಇಂಗ್ಲೆಂಡಿನ ಒಂದು ಪ್ರಜೆ ಒಂದು ಗುಂಡು ಒಂದು ಕೋವಿ ಉಳಿಯುವವರೆಗೂ ಶತ್ರುಗಳಮೇಲೆ ಕಾದಾಡಿ ಅವರ ಹಮ್ಮನ್ನು ಅಡಗಿಸಿಬಿಡಬೇಕೆಂದು ವಿಜೃಂಭಿಸಿದ್ದಾರೆ. ಆಂಗ್ಲಪತ್ರಿಕೆಗಳೆಲ್ಲವೂ ಅಚಂಚಲಭಾವವನ್ನೇ ವ್ಯಕ್ತಪಡಿಸುತ್ತಿವೆ. ಅಮೇರಿಕಾ ಪತ್ರಿಕೆಗಳಾದರೋ ಜರ್ಮನರ ಈ ಪುಂಡಾಟದಿಂದ ಆಂಗ್ಲರ ಸಾಹಸಕಾರ್ಯಗಳೂ ಒಗ್ಗಟ್ಟೂ ಮತ್ತಷ್ಟು ಹೆಚ್ಚುಗುವುವೆಂದೂ, ಇದು ಜರ್ಮನರ ಕೀರ್ತಿಪ್ರತಿಷ್ಠೆಗೆ ಭಂಗವನ್ನು ತರತಕ್ಕ ತುಂಟತನದ ಹಿಂಸಾಕಾರ್ಯವೇ ಹೊರತು ಯುದ್ಧಸ್ವಭಾವಕ್ಕೆ ಸೇರಿದುದಲ್ಲವೆಂದೂ ಹೇಳುತ್ತಿವೆ. ಫ್ರಾನ್ಸ್‌ಪತ್ರಿಕೆಗಳಂತೂ—ಇಂಗ್ಲೆಂಡಿನವರೂ ಫ್ರಾನ್ಸಿನವರೂ ಸಮುದ್ರದಮೇಲೆ ಸರ್ವಾಧಿಕಾರ ವಹಿಸಿರುವುದನ್ನು ನೋಡಿ ಸೈರಿಸಲಾರದ ಜರ್ಮನಿಯು ಇಂಥ ತುಂಟಾಟವನ್ನು ಮಾಡಿ ಇಂಗ್ಲೀಷರನ್ನು ಭಯಪಡಿಸಲು ಪ್ರಯತ್ನಿಸುವುದು ಹಾಸ್ಯಾಸ್ಪದವೆಂದು ಸಾರುತ್ತಿವೆ. ಅದುಕಾರಣ, ಜರ್ಮನರು ಮಾಡಿದ ಹಡಗಿನ ಹಾವಳಿಯು ನಿಷ್ಫಲವಾದ ತುಡುಗುತನವೇ ಹೊರತು ಘನವಾದ ಯುದ್ಧವಲ್ಲ.

ಈ ತುಂಟತನದ ವಿವರಣೆಯೂ ಅದರಿಂದಾದ ಅನರ್ಥವೂ ಸಹ ಈ ಕೆಳಗೆ ಕಂಡಮೇರೆ ಇದ್ದಿತೆಂದು ಕಳೆದವಾರದ ತಂತಿವಾರ್ತೆಗಳಿಂದ ಗೊತ್ತಾಗಿರುವುದು.

ಶತ್ರುಗಳಕಡೆಯ ಮೂರು ಯುದ್ಧದ ಹಡಗುಗಳು ಬಂದಿದ್ದುವು. ಅವು ಬಹಳ ವೇಗವಾಗಿ ಓಡತಕ್ಕವಾಗಿದ್ದುವು. ಬೆಳಗಿನ ೮ ಗಂಟೆಯಿಂದ ೯|| ಗಂಟೆಯೊಳಗೆ ಈ ಹಡಗುಗಳು ತೀರಪಟ್ಟಣಗಳಮೇಲೆ ಗುಂಡುಗಳನ್ನು ಹಾರಿಸಿದುವು. ಆಗ ಅಲ್ಲಿನ ಕಾವಲಿನ ಇಂಗ್ಲೀಷ್ ಯುದ್ಧದಹಡಗುಗಳೂ ಕೋಟೆಯಲ್ಲಿನ ಫಿರಂಗಿಗಳೂ, ಶತ್ರುಗಳ ಹಡಗಿನಮೇಲೆ ಪ್ರತಿಯಾಗಿ ಗುಂಡುಗಳನ್ನು ಹಾರಿಸಿದುವು. ಜರ್ಮನರಕಡೆಯ ೩ ಯುದ್ಧದ ಹಡಗಿನೊಳಗೆ ೧ ಮುಳುಗಿತೆಂದೂ ಮತ್ತೆರಡು ಮಂಜಿನಲ್ಲಿ ಕಾಣಿಸದೆ ತಪ್ಪಿಸಿಕೊಂಡುಹೋದುವೆಂದೂ ಸುದ್ದಿಯಿದೆ. ಶತ್ರುಗಳ ಗುಂಡಿನೇಟಿನಿಂದ ಆಂಗ್ಲರ ಫಿರಂಗಿಗಳಿಗೇಆಗಲಿ ಹಡಗುಗಳಿಗೇಆಗಲಿ ಅಪಾಯವೇನೂ ಆಗಲಿಲ್ಲ. ಪಟ್ಟಣದಲ್ಲಿದ್ದ ಸೈನಿಕರಲ್ಲಿ ೭ಮಂದಿ ಸತ್ತರು; ೧೪ ಮಂದಿಗೆ ಪೆಟ್ಟುತಗುಲಿತು. ಹಡಗುಗಳಲ್ಲಿದ್ದ ಸೈನಿಕರಲ್ಲಿ ೪ ಮಂದಿ ಸತ್ತರು; ೧೫ ಮಂದಿಗಳಿಗೆ ಗಾಯವಾಯಿತು. ಪಟ್ಟಣಗಳಲ್ಲಿನ ಕಟ್ಟಡಗಳಿಗೆ ಸ್ವಲ್ಪ ನಷ್ಟವಾಯಿತು. ಹಾರ್ಟಲ್‌ಪೂಲ್ ಎಂಬ ಪಟ್ಟಣದಲ್ಲಿ ೯೮ ಮಂದಿ ಸತ್ತರು; ೨೫೦ ಮಂದಿಗೆ ಗಾಯವಾಯಿತು. ಆ ಪಟ್ಟಣದಲ್ಲಿ ಫಿರಂಗಿಗಳಿಟ್ಟಿದ್ದ ಭಾಗವು ಬಹಳ ನಷ್ಟವಾಯಿತು. ೨|| ಲಕ್ಷ ರೂ. ಗಳಷ್ಟು ನಷ್ಟವಾಯಿತು. ಸ್ಕಾರ್ಬರೋ ಪಟ್ಟಣದಲ್ಲಿ ೧೭ ಮಂದಿ ಪ್ರಜೆಗಳು ಸತ್ತರು. ವಿಟ್ಬಿಯಲ್ಲಿ ಇಬ್ಬರು ಸತ್ತರು. ಒಟ್ಟು ಈ ಅನಾಹುತದಿಂದ ೧೨೦ ಮಂದಿಗಳು ಸತ್ತಿರುವರು.

ನಮ್ಮ ಗೂರ್ಖಾಸೈನಿಕಪರಾಕ್ರಮ.

ಯುದ್ಧದಲ್ಲಿ ಗಾಯಗೊಂಡು ವೈದ್ಯಶಾಲೆಯ ಉಪಚಾರದಲ್ಲಿರುವ ಒಬ್ಬಾನೊಬ್ಬ ಗೂರ್ಖಾಸೈನಿಕನು ಹೀಗೆ ಹೇಳುತ್ತಾನೆ—ನಮ್ಮ ಪ್ರಭುವರ್ಯರ ಪಕ್ಷವಾಗಿ ಶತ್ರುಗಳ ಮೇಲೆ ಯುದ್ಧಮಾಡುವುದಕ್ಕಾಗಿ ನಾವು ಕರೆಯಲ್ಪಟ್ಟಾಗ ನಮಗೆ ಅಭೂತಪೂರ್ವವಾದ ಸಂತೋಷವುಂಟಾಯಿತು. ನಮ್ಮಲ್ಲಿ ಒಬ್ಬರಿಬ್ಬರಿಗೆ ಹೊರತು ಉಳಿದವರಿಗೆಲ್ಲಾ ಇಲ್ಲಿನ ಫಿರಂಗಿಯುದ್ಧವು ಸಂಪೂರ್ಣವಾಗಿ ಅನನುಭೂತವಾದ ವಿಷಯವಾದುದರಿಂದ ಮೊದಮೊದಲು ನಮಗೆ ಸ್ವಲ್ಪ ತೊಂದರೆಯಾಗಿದ್ದಿತು. ಬಳಿಕ ಕೆಲದಿನಗಳಮೇಲೆ ಈ ಫಿರಂಗಿಯ ಧ್ವನಿಯೂ ಪಟಾಕಿಯ ಸದ್ದಿಗಿಂತಲೂ ಹೆಚ್ಚಿನದಾಗಿ ಕಾಣಲಿಲ್ಲ. ಜರ್ಮನರು ತುಪಾಕಿಯ ಯುದ್ಧದಲ್ಲಿ ಅಷ್ಟೇನೂ ಪ್ರವೀಣರಲ್ಲ. ಅದುಕಾರಣ ಈ ಯುದ್ಧವು ನಮಗೆ ದೊಡ್ಡದಾಗಿ ಕಾಣುವುದಿಲ್ಲ. ಬಂದಾನೊಂದುದಿವಸ ಯುದ್ಧವು ನಮ್ಮ ಸೇನಾನಿವಹದ ಬಳಿಗೆ ಬಂದೊದಗಿರುವುದೆಂಬ ಸುದ್ದಿಯನ್ನು ಕೇಳಿದಕೂಡಲೇ ನಮಗೆ ಎಲ್ಲೂ ಇಲ್ಲದಿದ್ದಂಥ ಉತ್ಸಾಹವು ಹುಟ್ಟಿ, ಚಕ್ರವರ್ತಿಯವರ ಆಜ್ಞಾವಚನವನ್ನು ಹೇಳುತ್ತ ನಮ್ಮ ಇದಿರಿಗೆ ಗೊತ್ತುಬೆದರಿಕೆಯನ್ನು ತೋರಿಸುತ್ತಿದ್ದ ಸೋಲ್ಜರುಗಳ ಮುಂದೆ ನಮ್ಮ ಪರಾಕ್ರಮವನ್ನು ತೋರಿಸುವುದಕ್ಕೆ ಅವಕಾಶವುಂಟಾಯಿತಲ್ಲಾ ಎಂದು ಸಂತೋಷಿಸಿದೆವು. ಯುದ್ಧವು ಆಸನ್ನವಾದಾಗ ನಾವು ಶತ್ರುಗಳ ಸಮೀಪದಲ್ಲೇ ಇದ್ದೆವು. ನಾವೆಲ್ಲಾ ಒಂದೇಗುಂಪಾಗಿ ಹೊರಟೆವು. ನಮ್ಮಮೇಲೆ ಶತ್ರುಗಳು ಬೆಂಕಿಯಮಳೆಯನ್ನು ಸುರಿಸುತ್ತಿದ್ದರು. ನಮ್ಮ ಸನೀನುಗಳನ್ನು ಕೈಯಲ್ಲಿ ಹಿಡಿದುಕೊಂಡು ಒಂದೇಆವೃತ್ತಿ ಶತ್ರುಗಳಮೇಲೆ ಬಿದ್ದೆವು. ನಾವು ಹೋಗಿ ಕೈಕೈ ಕೂಡಿಸುವವರೆಗೂ ಶತ್ರುಗಳು ತಾವಿದ್ದ ಸ್ಥಲದಲ್ಲಿ ನಿಂತಿರಲಾರದೆ ಹುಲಿಯನ್ನು ಕಂಡ ಪಶುಗಳಂತೆ ಹೆದರಿ ಓಡಿಹೋದರು. ಅವರು ಹಾಗೆ ಓಡಿಹೋಗುತ್ತಿದ್ದರೂ ನಾವು ಅವರ ಬೆನ್ನುಬಿಡದೆ ಅವರ ಸುರಕ್ಷಿತಸ್ಥಾನದವರೆಗೂ ಅಟ್ಟಿಕೊಂಡು ಹೋದೆವು. ಹೀಗೆ ಮಾಡಿದುದು ಒಂದೆರಡುಸಲವಲ್ಲ; ಹಲವುಸಲ ಹೀಗೆಯೇ ನಡೆದಿರುವುದು. ನಮ್ಮ ಅಧಿಕಾರಿಗಳ ಅಪ್ಪಣೆಯನ್ನು ವಿಚಾರಲಾಗದೆ ನಾವು ಹಿಂದಿರುಗಿ ಬರುತ್ತಿದ್ದೆವು. ಅವರು ಹಾಗೆ ಅಪ್ಪಣೆಮಾಡದಿದ್ದರೆ ಅವರ ಸೇನಾಪಂಕ್ತಿಗಳನ್ನು ಕೂಡ ನುಗ್ಗಿ ಅವರೊಡನೆ ಹೋರಾಡಿ ಬರುತ್ತಿದ್ದೆವು. ನಾವು ಹಾಗೆ ಹೋಗಿ ಶತ್ರುಗಳ ಮೇಲೆಬಿದ್ದು ಕಾದಾಡಿ ಹಿಂದಿರುಗಿ ಬರುವಾಗ ನಮ್ಮನ್ನೆಲ್ಲಾ ಯಾವುದಾದರೊಂದು ಕಪಟೋಪಾಯದಿಂದ ಧ್ವಂಸಮಾಡಿಬಿಡಬೇಕೆಂದು ಶತ್ರುಗಳು ತಂತ್ರವನ್ನು ಮಾಡಿದರು. ಆದರೆ ಅವರ ಯುಕ್ತಿಗಳು ನಮ್ಮಮೇಲೆ ಸಾಗಲಿಲ್ಲ. ನಾವು ಕತ್ತಿಗಳನ್ನು ಬಾಯಲ್ಲಿ ಕಚ್ಚಿಕೊಂಡು, ತುಪಾಕಿಗಳನ್ನು ಎದೆಯಮೇಲೆ ಅನಿಸಿ ಇಟ್ಟುಕೊಂಡು, ಶತ್ರುಗಳ ಸಮೀಪಕ್ಕೆ ಹೋಗಿ ಒಂದೇಸಲ ಅಶ್ವಸೈನಿಕರ ಮೇಲೆಬಿದ್ದೆವು. ಅವರು ನಮ್ಮಮೇಲೆ ತುಪಾಕಿಗುಂಡುಗಳನ್ನು ಹಾರಿಸುವುದಕ್ಕೂ ಕೂಡ ಅವಕಾಶಕೊಡದಂತೆ ನಮ್ಮ ಸನೀನುಗಳಿಂದ ಇರಿಯುವುದಕ್ಕೆ ಆರಂಭಿಸಿದೆವು. ನಾವು ಮಾಡಿದ ಈ ಹೊಸತೆರದ ಯುದ್ಧರೀತಿಗೆ ಶತ್ರುಗಳ ಕುದುರೆಗಳೂ ಕೂಡ ತಡೆಯಲಾರದೆ ಮೇಲೆ ಕುಳಿತಿರುವ ರಾವುತರನ್ನು ಕೆಡಹಿಬಿಟ್ಟು ತಾವು ಓಡಿಹೋಗುತ್ತಿದ್ದುವು. ಯುದ್ಧವು ಪೂರ್ಣವಾಗಿ ಮುಗಿಯುವುದಕ್ಕೆ ಮುಂಚೆಯೇ ಶತ್ರುಗಳು ಅಲ್ಲಿಂದಲ್ಲೇ ಪಲಾಯನಗೊಳ್ಳುತ್ತಿದ್ದರು. ಬಳಿಕ ನಾವು ಶತ್ರುಗಳನ್ನು ಬಹುದೂರದವರೆಗೆ ಓಡಿಸಿಬಿಟ್ಟು ನಮ್ಮ ಶಿಬಿರಕ್ಕೆ ಬಂದು ಸೇರಿದೆವು. ಆಂಗ್ಲೀಯ ಫ್ರೆಂಚ್‌ಸೈನಿಕರುಗಳು ನಮ್ಮನ್ನು ಉತ್ಸಾಹಪೂರ್ಣವಾದ ಘೋಷಗಳಿಂದ ಇಳಿಯಿಸಿಕೊಂಡರು. ಇಂಥ ಜಯವನ್ನೇ ನಾವು ಕೋರುತ್ತಿರುವೆವು. ನಮ್ಮ ಸ್ವದೇಶಕ್ಕೆ ಹೋದಾಗ ನಮ್ಮವರೊಡನೆ ಹೇಳಿಕೊಳ್ಳುವುದಕ್ಕೆ ಏನಾದರೂ ಹೊಸಸಂಗತಿಗಳು ಇರಬೇಕಲ್ಲವೆ? ಎಂಬುದಾಗಿ.

ನಮ್ಮ ಸಿಕ್‌ಸೈನಿಕರ ಪರಾಕ್ರಮ.

ನಮ್ಮದೇಶದ ಸಿಕ್‌ಸೈನಿಕರ ಪರಾಕ್ರಮವು ಕೂಡ ಈಗಿನ ಮಹಾಯುದ್ಧದಲ್ಲಿ ಅತಿಶಯವಾಗಿ ದೃಗ್ಗೋಚರವಾಗಿದೆ. ಡಾಕ್ಟರ್ ಗುಡಾಲ್ ಎಂಬ ಪಂಡಿತರು ಇವರ ಶೌರ್ಯಸಾಹಸ ಯುಕ್ತಿಗಳನ್ನವಲೋಕಿಸಿ, ಇವರು ಪ್ರಪಂಚದೊಳಗೆಲ್ಲ ಬಹುಚೆನ್ನಾಗಿ ಯುದ್ಧಕಲೆಯಲ್ಲಿ ಶಿಕ್ಷಿತರಾದವರೆಂದು ಅಭಿಪ್ರಾಯಪಟ್ಟಿದ್ದಾರೆ. ಮತ್ತೂ ಇವರಿಗೆ ಹೃದಯಕೋಶಸಂಬಂಧವಾದ ರೋಗಗಳಿಲ್ಲ. ನೂರುಮೈಲಿಗಳ ದೂರವನ್ನು ಅವಿಚ್ಛಿನ್ನವಾಗಿ ನಡೆದರೆ ಅವರಲ್ಲಿ ನೂರಕ್ಕೆ ಇಬ್ಬರು ಮೂವರು ಮಾತ್ರ ಏನೇನೋವಿಧ ಅಸ್ವಾಸ್ಥ್ಯವನ್ನು ಹೊಂದುವರು. ಗಂಟೆಗೆ ೪ ಮೈಲಿಯಂತೆ ೩೦ ಮೈಲಿಗಳ ದೂರವನ್ನು ಈಗಿನ ಯುದ್ಧದಲ್ಲಿ ಅವರು ಒಂದುದಿವಸ ನಡೆದಿರುವರು. ಮತ್ತೂ ಈ ಪ್ರಯಾಣವು ರಾತ್ರಿಯುಹೊತ್ತು ಜರುಗಿರುವುದು. ಹೀಗೆ ಪ್ರಯಾಣಮಾಡಿದ ೨ ಸಾವಿರ ಮಂದಿಗಳುಳ್ಳ ೨ ಸೇನಾನಿವಹಗಳಲ್ಲಿ ನಾಲ್ಕುಮಂದಿ ಮಾತ್ರವೇ ಅಸ್ವಸ್ಥರಾದರು. ಯೂರೋಪ್ಯಸೈನಿಕರು ಹೀಗೆ ನಡೆಯಲಾರರು. ಅಥವಾ ನಡೆದರೂ ಎಷ್ಟೋಮಂದಿಗಳು ಅಸ್ವಸ್ಥತೆಯನ್ನು ಹೊಂದಿ ಮಲಗುವರು. ಎಂದು ಅದೇ ಡಾ|| ಗುಡಾಲ್‌ರವರು ಅಭಿಪ್ರಾಯಪಟ್ಟಿದ್ದಾರೆ.

ಈ ನಮ್ಮ ಗೂರ್ಖಾಸಿಕ್‌ಸಿಪಾಯಿಗಳು ಪಶ್ಚಿಮರಣರಂಗಕ್ಕೆ ಹೋದಮೇಲೆ ಅವರು ಅಲ್ಲಿಗೆ ಇಳಿದ ೪ ನೆಯ ದಿನದಲ್ಲೇ ಲಾಬಸ್ಸೆಯ ಬಳಿಯಲ್ಲಿ ಶತ್ರುಗಳಮೇಲೆ ಮೊದಲನೆಸಲದ ಯುದ್ಧವನ್ನು ಮಾಡಬೇಕಾಯಿತು. ಆ ಮೊದಲದಿನದ ಯುದ್ಧವೇ ಪ್ರಪಂಚಕ್ಕೆಲ್ಲಾ ಆಶ್ಚರ್ಯವನ್ನುಂಟುಮಾಡಿ, ಅವರ ಶೌರ್ಯಕೀರ್ತಿಯು ದಿಙ್ಮಂಡಲಗಳನ್ನೆಲ್ಲಾ ವ್ಯಾಪಿಸುವಂತಾಯಿತು. ಆ ಮೊದಲನೆ ಏಟಿನಲ್ಲೇ ಶತ್ರುಗಳಕಡೆ ಗಾಯಗೊಂಡವರೂ ಮೃತರಾದವರೂ ಸಹ ೨೦ ಸಾವಿರ ಮಂದಿಗಳಾಗಿರುವರೆಂದು ಎಣಿಸಲ್ಪಟ್ಟಿದೆ. ಯುದ್ಧಾರಂಭವಾದ ಕಾಲದಿಂದಲೂ ಶತ್ರುಸೈನ್ಯವನ್ನು ಈ ನಮ್ಮ ಸೈನಿಕರು ಚೆನ್ನಭಿನ್ನಗೊಳಿಸಿದ ರೀತಿಯಲ್ಲಿ ಮತ್ತಾರೂ ಮಾಡಿರಲಿಲ್ಲವೆಂದು ಪ್ರಸಿದ್ಧವಾಗಿದೆ.

ಯುದ್ಧವಾರ್ತೆಯು.

(ಪಶ್ಚಿಮರಣರಂಗ)

ಈ ಕಡೆಯ ಯುದ್ಧ ಸಂಬಂಧವಾಗಿ ಕಳೆದವಾರದಲ್ಲಿ ಬಂದಿರುವ ವಾರ್ತೆಗಳಲ್ಲಿ ವಿಶೇಷವೇನೂ ಇಲ್ಲ. ಮಿತ್ರಮಂಡಲಿಯವರು ಮುಂದುಮುಂದೆ ಸಾಗುತ್ತಿರುವ ಸಂಗತಿಯು ಮಾತ್ರ ವಿಶೇಷವಾಗಿದೆ. ನ್ಯೂಪೋರ್ಟಿನ ವಾಯುವ್ಯದಿಕ್ಕಿನಲ್ಲೂ ಈಪ್ರೆಸ್ಸಿನ ಈಶಾನ್ಯದಿಕ್ಕಿನಲ್ಲೂ ಸಮುದ್ರದಕಡೆಗೂ, ಲಾಬಸ್ಸೆ ಪಕ್ಕದಲ್ಲೂ ಮಿತ್ರಮಂಡಲಿಯವರು ಮುಂದುಮುಂದಕ್ಕೆ ಸಾಗಿಹೋಗಿದ್ದಾರೆ. ಸಮುದ್ರತೀರದಿಂದ ಮೊದಲುಮಾಡಿಕೊಂಡು ಲೀಸಿನವರೆಗೂ ಇದ್ದ ಜರ್ಮನ್‌ಸೈನಿಕರ ಕಂದಕಗಳಲ್ಲಿ ಬಹಳವನ್ನು ನಮ್ಮವರು ಸನೀನಯುದ್ಧಮಾಡಿ ವಶಪಡಿಸಿಕೊಂಡಿದ್ದಾರೆ. ಘೇಲುವೆಲ್ಟ್‌ಗೆ ಪಶ್ಚಿಮಭಾಗದಲ್ಲಿ ಮಿತ್ರಮಂಡಲಿಯವರು ಆಕ್ರಮಿಸಿದ ಸ್ಥಾನಗಳನ್ನೆಲ್ಲಾ ಬಲಪಡಿಸಿಕೊಂಡಿದ್ದಾರೆ. [illegible]-ಛಾಂಪೆನಿ-ಆರ್ಗೋನ್-ವೆರ್ಡೂನ್ ಈ ಪ್ರಾಂತಗಳಲ್ಲಿ ಮಿತ್ರಮಂಡಲಿಯವರೇ ಶತ್ರುಗಳಮೇಲೆ ದೊಡ್ಡ ಫಿರಂಗಿಗಳನ್ನಿಟ್ಟು ಹಾರಿಸಿದರು. ಬೆಲ್ಜಿಯಮ್ಮಿನಲ್ಲೂ ಫ್ರಾನ್ಸಿನಲ್ಲೂ ಜರ್ಮನರು ಈಗ ಬಹಳ ಮಂದಗತಿಯಿಂದ ಯುದ್ಧಮಾಡುತ್ತಿರುವುದನ್ನು ನೋಡಿ ಅವರು ಅಂತರಂಗದಲ್ಲಿ ಇನ್ನಾವುದೋ ಒಂದುಕಡೆ ದೂರುವ ಯೋಚನೆಯಿಂದ ಹೀಗೆ ಮಾಡುತ್ತಿರಬಹುದೆಂದು ಮಿತ್ರಮಂಡಲಿಯವರು ಯೋಚಿಸುತ್ತಿದ್ದಾರೆ. ಇದುವರೆಗೂ ಜರ್ಮನರು ತಮ್ಮ ಬಲಭಾಗದಿಂದ ಶತ್ರುಗಳನ್ನು ಸುತ್ತುವರಿದು ಮುಂದಕ್ಕೆ ನುಗ್ಗಬೇಕೆಂದು ಪ್ರಯತ್ನಿಸಿ, ವಿಫಲರಾದರು. ಇನ್ನು ಅವರು ಆ ಪ್ರಯತ್ನವನ್ನು ಎಡಗಡೆಯಿಂದ ಮಾಡಬೇಕೆಂದು ಯೋಚಿಸಿರುವಂತೆ ಕಾಣುತ್ತದೆ. ಮ್ಯೂಸನದೀಪ್ರಾಂತದ ಪರ್ವತಪ್ರದೇಶದಲ್ಲಿ ಮಿತ್ರಮಂಡಲಿಯವರು ತಮ್ಮ ವಿಮಾನಿಕರ ಮೂಲಕ ಶತ್ರುಗಳ ಫಿರಂಗಿ[illegible]

ಸ್ಥಲವನ್ನು ತೀರಿದು ಫಿರಂಗಿ ಸಿಡಿಮದ್ದುಗಳನ್ನು ಅಲ್ಲಿಗೆ ಹೊಡೆದು ಎರಡು ಫಿರಂಗಿಸೇನೆಗಳನ್ನೂ ಇನ್ನೊಂದು ಪಟಾಲಮ್ಮನ್ನೂ ಸಹ ನಾಶಪಡಿಸಿದರು. ಫೀಸ್ಟ್ರಾಲ್-ಲೀಪಾಸ್ ಪ್ರಾಂತದಲ್ಲೂ ಕೂಡ ನಮ್ಮವರು ಶತ್ರುಗಳಮೇಲೆ ಬಿದ್ದು ಬಲವಾಗಿ ಕಾದಾಡಿ ಅವರ ಒಂದು ಪಟಾಲಮ್ಮನ್ನು ಧ್ವಂಸಗೊಳಿಸಿದರು. ಈಜರ್ ನದಿಯ ಹತ್ತಿರ ಇನ್ನೂ ಫಿರಂಗಿಯುದ್ಧವು ನಡೆಯುತ್ತಿದೆ. ಈಪ್ರೆಸ್ಸಿನ ಬಳಿಗೆ ಶತ್ರುಗಳು ಇನ್ನೂ ಹೊಸ ಸೈನ್ಯಗಳನ್ನು ಕಳುಹಿಸಿ ಬಲಪಡಿಸುತ್ತಿದ್ದಾರೆ. ಈಜರ್ ನದಿಯ ಬಳಿಯಲ್ಲಿ ಹಿಂದೆ ನಡೆದ ಯುದ್ಧದಲ್ಲಿ ತಮ್ಮ ಕಡೆ ೩೦ ಸಾವಿರಮಂದಿಗಳು ನಷ್ಟವಾದರೆಂದು ಜರ್ಮನರೇ ಒಪ್ಪಿಕೊಂಡಿದ್ದಾರೆ. ಕೆಲಕಡೆ ಜರ್ಮನರು ನಮ್ಮವರಿಂದ ಕಸುಕೊಂಡಿದ್ದ ಕಂದಕಗಳನ್ನು ಮರಳಿ ಇಂಗ್ಲೀಷ್ ಫ್ರೆಂಚ್ ಸೈನ್ಯಗಳು ಸಾಹಸದಿಂದ ವಶಪಡಿಸಿಕೊಂಡಿವೆ. ಈಚೆಗೆ ಬಂದಿರುವ ವಾರ್ತೆಗಳಿಂದ ಜರ್ಮನರು ಈಗ ಕಳೆದೆರಡು ತಿಂಗಳ ಹಿಂದೆ ಇದ್ದ ಸ್ಥಿತಿಗಿಂತಲೂ ಉತ್ತಮವಾದ ಏರ್ಪಾಟನ್ನು ಮಾಡಿಕೊಂಡು ತಮ್ಮ ಲೋಪಗಳನ್ನು ಪರಿಹರಿಸಿಕೊಂಡಿರುವರೆಂದೂ, ಶತ್ರುಮಂಡಲಿಯವರು ತಮ್ಮಮೇಲೆ ಬಿದ್ದರೂ ಅವರ ಏಟುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಎಷ್ಟೋ ಕಟ್ಟಡಗಳನ್ನೂ ಒಂದರಹಿಂದೊಂದರಂತೆ ಅನೇಕ ಸೇನಾಪಂಕ್ತಿಗಳನ್ನೂ, ಅವಕ್ಕೆ ತಕ್ಕ ವಿಸ್ತಾರವಾದ ಕಂದಕಗಳನ್ನೂ ಏರ್ಪಡಿಸಿಕೊಂಡಿದ್ದಾರೆಂದೂ ಗೊತ್ತಾಗುತ್ತದೆ. ಆದರೂ ಮಿತ್ರಮಂಡಲಿಯವರು ಕೆಲಕಡೆ ಮೆಲ್ಲಗೂ ಅನುಕೂಲಿಸಿದ ಕಡೆ ತ್ವರಿತವಾಗಿಯೂ ಮುಂದಕ್ಕೆ ಸಾಗುತ್ತಲೇ ಇದ್ದಾರೆ.

ಪೂರ್ವರಣರಂಗ.

ಆಸ್ಟ್ರಿಯಾದವರು ಕಾರ್ಪೇತಿಯನ್ ಕಣಿವೆಗಳ ಕಡೆಗೆ ನುಗ್ಗಿ ರಷ್ಯನರಮೇಲೆ ಬೀಳಲು ಪ್ರಯತ್ನಿಸಿ ಹಿಮ್ಮೆಟ್ಟಿಸಲ್ಪಟ್ಟರು. ಲೋಡ್ಜಿನ ಸುತ್ತುಮುತ್ತ ನಡೆದ ಯುದ್ಧದಲ್ಲಿ ರಷ್ಯನರ ಕಡೆ ೨೦ ಸಾವಿರಕ್ಕಿಂತಲೂ ಹೆಚ್ಚುಮಂದಿ ನಷ್ಟವಾಗಿರುವರೆಂದು ಪ್ರಕಟವಾಗಿದೆ. ಮೂಲ್ವಾ ಪ್ರಾಂತದಲ್ಲಿ ಜರ್ಮನರನ್ನು ರಷ್ಯನರು ಬಲವಾಗಿ ಸೋಲಿಸಿ ಬಹು ಸೈನ್ಯವನ್ನು ಪೂರ್ವಪ್ರಷ್ಯಾದ ಎಲ್ಲೆಕಟ್ಟನ್ನು ದಾಟಿಸಿ ಓಡಿಸಿಬಿಟ್ಟಿದ್ದಾರೆ. ಅಲ್ಲಿನ ಯುದ್ಧದಲ್ಲಿ ಅನೇಕ ಫಿರಂಗಿಗಳನ್ನೂ ಮದ್ದುಗುಂಡು ಮೊದಲಾದ ಸಾಮಗ್ರಿಗಳನ್ನೂ ರಷ್ಯನರು ವಶಪಡಿಸಿಕೊಂಡಿದ್ದಾರೆ. ಎಷ್ಟು ನಷ್ಟವಾದರೂ ಸರಿ; ವಾರ್ಸಾಪಟ್ಟಣವನ್ನು ಹಿಡಿದುಕೊಂಡೇ ತೀರಬೇಕೆಂದು ಜರ್ಮನ್ ಕೇಸರರು ತಮ್ಮ ಸೈನಿಕರಿಗೆ ಆಜ್ಞಾಪಿಸಿದ್ದಾರಂತೆ. ಮೊದಲು ನಾವು ಮುಖ್ಯವಾಗಿ ಯುದ್ಧಮಾಡಬೇಕಾದ ಸ್ಥಲವು ಪೋಲೆಂಡೆಂದೂ, ಪಶ್ಚಿಮರಣರಂಗದಲ್ಲಿರತಕ್ಕ ಕೆಲಸವನ್ನು ಮಾಡುವುದಕ್ಕೆ ಇನ್ನೂ ಬೇಕಾದಷ್ಟು ಕಾಲವಿರುವುದೆಂದೂ, ಯುದ್ಧರಂಗದಿಂದ ಗಾಯಗೊಂಡು ಮರಳಿ ಬಂದ ಜರ್ಮನರು ಹೇಳುತ್ತಿರುವರಂತೆ. ೧ ತಿಂಗಳಿಂದೀಚೆಗೆ ಜರ್ಮನರು ಜನರಲ್ ವಾನ್ ಹಾನ್ ಡೆಂಬರ್ಗ್‌ರವರ ಸಾಹಾಯ್ಯಕ್ಕೆ ೯ ಹೊಸ ಸೈನ್ಯಗಳನ್ನು ಕಳುಹಿಸಿಕೊಟ್ಟಿರುವರೆಂದೂ, ಈಚೆಗೆ ಮತ್ತೆ ೩ ಹೊಸಸೈನ್ಯಗಳನ್ನು ಸಾಹಾಯ್ಯಕ್ಕೆ ಕಳುಹಿಸಿಕೊಟ್ಟರೆಂದೂ, ಅವುಗಳಲ್ಲಿ ೨ ಸೈನ್ಯಗಳು ಆಸ್ಟ್ರಿಯಾದ ಸಾಹಾಯ್ಯಕ್ಕೆ ಹೋಗಿರುವುವೆಂದೂ ಉಳಿದ ೨೦ ಮಹಾಸೈನ್ಯಗಳು ಪೋಲೆಂಡಿನಲ್ಲಿ ಇರುವುವೆಂದೂ ತಿಳಿದುಬಂದಿದೆ. ಕಾರ್ಪೇತಿಯನ್ ಕಣಿವೆ ಹತ್ತಿರ ಅಲ್ಲಲ್ಲಿ ಚದರಿಕೊಂಡಿದ್ದ ರಷ್ಯನ್ ಸೈನ್ಯಗಳೆಲ್ಲಾ ಈಗ ಒಟ್ಟಿಗೆ ಸೇರಿ ಅಭೇದ್ಯವಾದ ಗುಂಪಾಗಿ ಬಯಲಿನಲ್ಲಿವೆ. ಆಸ್ಟ್ರಿಯಾ ಸೈನ್ಯಗಳ ಸ್ಥಿತಿಯು ಮಾತ್ರ ಹಾಗಿರದೆ ಮಧ್ಯಮಧ್ಯದಲ್ಲಿರುವ ಗುಡ್ಡಗಳ ದೆಸೆಯಿಂದ ಒಟ್ಟುಗೂಡುವುದಕ್ಕವಕಾಶವಿಲ್ಲದೆ ವಿರಳವಾಗಿವೆ. ಡಿಶೆಂಬರ್ ತಾ|| ೧೮ ರೊಳಗಾಗಿ ರಷ್ಯನರು ಪಶ್ಚಿಮ ಗೆಲೀಷಿಯಾದಲ್ಲಿ ತಮ್ಮಮೇಲೆ ಬೀಳುತ್ತಿದ್ದ ಶತ್ರುಸೈನ್ಯವನ್ನೆಲ್ಲಾ ತಡೆದೋಡಿಸಿ ಗೆಲೀಷಿಯಾದ ಘಾಸ್ಟೋಲಿಸ್ಕುಗಳ ಮುಂಭಾಗದಲ್ಲಿ ಶತ್ರುಗಳಮೇಲೆ ತಾವೇ ಬಿದ್ದು ಕಾದಾಡಿ ಜಯಿಸಿ, ಶತ್ರುಪಕ್ಷದ ೩೦೦೦ ಮಂದಿಗಳನ್ನೂ ಹಲವು ಫಿರಂಗಿಗಳನ್ನೂ, ಅನೇಕ ಯುದ್ಧೋಪಕರಣಗಳನ್ನೂ ವಶಪಡಿಸಿಕೊಂಡಿದ್ದಾರೆ. ಈಗ ಕ್ರಾಕೋ-ಕಾರ್ಪೇಥಿಯನ್ ಕಣಿವೆಗಳ ಕಡೆ ಉಭಯಪಕ್ಷದ ಮಹಾಸೇನೆಗಳೂ ಸೇರಿವೆಯಷ್ಟೆ. ಇಲ್ಲಿ ಇಷ್ಟರಲ್ಲೇ ಮಹತ್ತರವಾದ ಯುದ್ಧವಾಗುವುದೆಂದೂ, ಅದರ ಜಯಾಪಜಯಗಳು ಆಯಾರಾಷ್ಟ್ರದ ಪೂರ್ಣಜಯಾಪಜಯಗಳಿಗೆ ಗುರ್ತಾಗುವಂತೆ ಪರಿಣಮಿಸುವುದೆಂದೂ ನಿರೀಕ್ಷಿಸಲ್ಪಟ್ಟಿದೆ. ಇದಿರುಬದಿರಿಗೆ ನಿಂತಿರುವ ಎರಡು ಪಕ್ಷದ ಸೈನ್ಯಗಳೂ ಒಬ್ಬರಮೇಲೊಬ್ಬರು ಬೀಳುವುದಕ್ಕೆ ತಕ್ಕ ಸಮಯವನ್ನು ನಿರೀಕ್ಷಿಸಿಕೊಂಡಿದ್ದಾರೆ. ವಿಶ್ಚುಲಾನದಿಯ ಪಶ್ಚಿಮತೀರದಲ್ಲಿ ನಡೆಯಿಸಿದ ಯುದ್ಧದಲ್ಲಿ ರಷ್ಯನರು ಶತ್ರುಗಳ ೧೦೦೦೦ ಮಂದಿಯನ್ನು ಸೆರೆಯಾಗಿ ಹಿಡಿದಿರುವರು. ಪ್ರಿಜ್ಮೆಸಲ್ ಕೋಟೆಯಲ್ಲಿರುವ ಶತ್ರುಸೈನ್ಯಗಳು ಹೊರಕ್ಕೆ ಬರಬೇಕೆಂದು ಎರಡುಸಲ ಬಹಳ ಪ್ರಯತ್ನಪಟ್ಟರು. ಆದರೆ ರಷ್ಯನರು ಸಾಗಗೊಡಲಿಲ್ಲ. ಅವರಿಗೆ ಬಹಳ ನಷ್ಟವನ್ನುಂಟುಮಾಡಿ ಮರಳಿ ಕೋಟೆಯೊಳಗೇ ಸೇರಿಕೊಳ್ಳುವಂತೆ ಮಾಡಿದರು. ಡುಕ್ಲಾ ಕಣಿವೆಯಲ್ಲಿ ಆಸ್ಟ್ರಿಯನ್ ಸೈನ್ಯಕ್ಕೂ ರಷ್ಯನ್ ಸೈನ್ಯಕ್ಕೂ ನಡೆದ ಯುದ್ಧವು ಭಯಂಕರವಾಗಿ ನಡೆದುದರಲ್ಲಿ ತಮ್ಮ ಕಡೆ ಸತ್ತ ೫೦೦ ಮಂದಿಗಳನ್ನು ಆಸ್ಟ್ರಿಯನ್ನರು ರಣರಂಗದಲ್ಲೇ ಬಿಟ್ಟು ಓಡಿಹೋದರು. ೧೦೦೦ ಮಂದಿಗಳು ರಷ್ಯನರಿಗೆ ಸೆರೆಯಾಗಿ ಸಿಕ್ಕಿದರು. ವಾರ್ಸಾಪಟ್ಟಣದ ಬಳಿಗೆ ಹೋಗಬೇಕೆಂಬ ಯತ್ನದಲ್ಲಿ ಜರ್ಮನರ ೨ ಪಟಾಲಮ್ಮುಗಳು ಬಜರ್ರಾ ನದಿಯನ್ನು ದಾಟಿದುವು. ಆದರೆ ಅವರನ್ನು ರಷ್ಯನರು ಹೊಡೆದು ಧ್ವಂಸಮಾಡಿ, ಉಳಿದವರನ್ನು ಹಿಂದಕ್ಕಟ್ಟಿದರು. ಈಗ ಪೂರ್ವರಣರಂಗದಲ್ಲಿ ರಷ್ಯನರಮೇಲೆ ಯುದ್ಧಮಾಡುವುದಕ್ಕೆ ಥಾರ್ನ್-ಕ್ರಾಕೋ-ಮ್ಲಾವಾ ಪ್ರಾಂತಗಳಲ್ಲಿ ಶತ್ರುಗಳ ೨೩ ಮಹಾಸೈನ್ಯಗಳು ನಿಂತಿರುವುವೆಂದೂ, ಇವಲ್ಲದೆ ಜರ್ಮನ್ನಿನ ಎಲ್ಲೆಕಟ್ಟಿನ ಮಸೂರಿಯಾ ಸರಸ್ಸಿನ ಹತ್ತಿರವೂ ಗೆಲೀಷಿಯಾದಲ್ಲೂ ಬೇರೆಬೇರೆ ಸೈನ್ಯಗಳಿರುವುವೆಂದೂ ಗೊತ್ತಾಗುತ್ತದೆ. ಇವೆಲ್ಲಕ್ಕೂ ಪ್ರತಿಭಟಿಸಲು ಸಾಕಾಗುವಷ್ಟು ಸೈನ್ಯವನ್ನು ರಷ್ಯನರೂ ಕೂಡ ಅಣಿಮಾಡಿ ನಿಲ್ಲಿಸಿದ್ದಾರೆ. ರಷ್ಯನ್ ಸೈನ್ಯಗಳ ತುದಿಗಳನ್ನು ಎಡಬಲ ಪಕ್ಕಗಳೆರಡರಲ್ಲೂ ಸುತ್ತಿ ಮಧ್ಯಭಾಗದಲ್ಲಿ ಸೇನೆಯಮೇಲೆ ಬಿದ್ದು ಭೇದಿಸಿಕೊಂಡು ಹೋಗುವುದಕ್ಕೆ ತಕ್ಕಷ್ಟು ಸೇನೆಯನ್ನು ಕೂಡಿಸಿ ಒಂದೇ ಆವೃತ್ತಿ ನುಗ್ಗಿ ತಮ್ಮ ಉದ್ದೇಶವನ್ನು ಸಾಧಿಸಬೇಕೆಂದು ಜರ್ಮನರು ಬಹಳ ಸಾಹಸಮಾಡಿದರು. ಆದರೆ ಅವರ ಉದ್ದೇಶವನ್ನು ಸಾಗಗೊಡದೆ ಹೋದುದರಿಂದ ರಷ್ಯನರಿಗೆ ಬಹಳ ಅನುಕೂಲವಾಗಿರುವುದು. ಮಧ್ಯದಲ್ಲಿ ರಷ್ಯನ್ ಸೈನ್ಯವನ್ನು ಭೇದಿಸಿಕೊಂಡು ನುಗ್ಗಲು ಜರ್ಮನರಿಗೆ ಸಾಧ್ಯವಾಗಿದ್ದರೆ ಅವರ ೬೦ ಸಾವಿರ ಸೈನ್ಯಗಳು ಕಾರ್ಪೇತಿಯನ್ ಕಣಿವೆಗಳ ಕಡೆಗೆ ನುಗ್ಗಿ ರಷ್ಯನರನ್ನು ಇದಿರಿಸುವಂತಾಗುತ್ತಿದ್ದಿತು. ಆಗ ರಷ್ಯನರ ಕಷ್ಟನಷ್ಟಗಳು ಹೆಚ್ಚುತ್ತಿದ್ದುವು. ಅದು ಈಗ ತಪ್ಪಿಹೋಯಿತು.

ತುರ್ಕಿ.

ಮಿತ್ರಮಂಡಲಿಯವರು ಡಾರ್ಡಿನೆಲ್ಸ್ ಮೇಲೆ ಫಿರಂಗಿಗುಂಡುಗಳನ್ನು ಹೊಡೆದುದರಿಂದ ಗಾಯಗೊಂಡ ತುರ್ಕಿ ಸೈನಿಕರು ೬೦ ಮಂದಿಗಳು ಹಾನಾಕ್ ವೈದ್ಯಶಾಲೆಯಲ್ಲಿಡಲ್ಪಟ್ಟಿದ್ದಾರೆ. ಸಾರಾಸ್ ಸಮುದ್ರಶಾಖೆಯಲ್ಲಿ ಕೂಡಿದ್ದ ತುರ್ಕಿ ಸೈನಿಕರ ಮೇಲೆ ಇಂಗ್ಲೀಷ್ ನೌಕಾಸೈನಿಕರು ಫಿರಂಗಿ ಗುಂಡುಗಳನ್ನು ಹಾರಿಸಿ ನಷ್ಟಗೊಳಿಸಿ ಚದರಿಸಿದರು. ತುರ್ಕಿ ಪ್ರಭುತ್ವದವರು ಹೊಡೆಡಾದಲ್ಲಿ ಹಿಡಿದಿದ್ದ ಇಂಗ್ಲೀಷ್ ರಾಯಭಾರಿಯನ್ನು ಇಟಲಿಯವರ ಇಷ್ಟದ ಪ್ರಕಾರ ಕೂಡಲೇ ಇಟಲಿಯ ರಾಯಭಾರಿಯ ವಶಕ್ಕೆ ಒಪ್ಪಿಸಿಬಿಟ್ಟರು. ಈ ಸಂಬಂಧದಲ್ಲಿ ದುಡುಕಿ ತಪ್ಪು ಕೆಲಸಮಾಡಿದವರನ್ನು ಶಿಕ್ಷಿಸುವುದಕ್ಕೂ ಏರ್ಪಡಿಸಿರುವರೆಂದು ಪ್ರಕಟವಾಗಿದೆ. ಬಾಗ್ದಾದಿನಲ್ಲಿದ್ದ ಹೊಸಸೈನ್ಯಗಳು ಬಂದು ಕೂಡಿದುದರಿಂದ ಬಲಪಟ್ಟ ತಮ್ಮ ಸೈನ್ಯವನ್ನು ತುರ್ಕಿಯವರು ಯೂಪ್ರಟಿಸ್ ಪ್ರಾಂತದಲ್ಲೂ ವಾನ್‌ಸೀರಸ್ ಪ್ರಾಂತದಲ್ಲೂ ರಷ್ಯನರಮೇಲೆ ನುಗ್ಗಿಸಿದರು. ಸಾಮಾನ್ಯವಾದ ಯುದ್ಧವಾಯಿತು. ಅಷ್ಟಕ್ಕೇ ತುರ್ಕಿ ಸೈನ್ಯಗಳು ಪೂರ್ಣವಾಗಿ ಸೋತು ಓಡಿಹೋದುವು. ಅವರಕಡೆ ಬಹಳ ನಷ್ಟವೂ ಆಯಿತು. ಬಹುಜನರು ಸತ್ತರು. ಫಿರಂಗಿಗಳೂ ಮದ್ದುಗುಂಡುಗಳೂ ವಿಶೇಷವಾಗಿ ರಷ್ಯನರಿಗೆ ಸಿಕ್ಕಿದುವು. ಇದನ್ನು ಕೇಳುವಲ್ಲಿ ತುರ್ಕಿ ಸೈನ್ಯದ ಸ್ಥಿತಿಯು ಬಹಳ ಶೋಚನೀಯವಾಗಿರುವಂತೆ ಕಾಣುತ್ತದೆ. ಡಾರ್ಡಿನೆಲ್ಸ್ ಜಲಸಂಧಿಯಲ್ಲಿ ಇಂಗ್ಲೀಷರ ಸಬ್‌ಮೇರಿನ್ನು ನುಗ್ಗಿ ತುರ್ಕಿಯವರ ಯುದ್ಧದ ಹಡಗನ್ನು ಮುಳುಗಿಸಿ ಬಂದ ಸಾಹಸಕ್ಕಾಗಿ ಇಟಲಿ-ಫ್ರಾನ್ಸು-ರಷ್ಯಾ-ಅಮೇರಿಕಾದವರುಗಳು ಬಹಳ "ಶಹಬಾಸ್‌ಗಿರಿ" ಯನ್ನು ಕೊಟ್ಟಿದ್ದಾರೆ. ಈ ಹಡಗು ಮುಳುಗುವಾಗ ಅದರಲ್ಲಿದ್ದ ೧೦೦ ಮಂದಿಗಳೂ ಮುಳುಗಿದರು. ಅದ್ರಿಯಾನೋಪಲ್ಲಿನಲ್ಲಿರುವ ತುರ್ಕಿ ಸೈನ್ಯಕ್ಕೆ ತಕ್ಕಷ್ಟು ಆಹಾರವು ಕೊಡಲ್ಪಡದಿರುವುದರಿಂದ ಅವರು ಕೆರಳಿದ್ದಾರೆ. ಹಲವರು ಸೈನಿಕೋದ್ಯೋಗಿಗಳು ಆತ್ಮಹತ್ಯೆಯನ್ನು ಮಾಡಿಕೊಂಡಿರುವರಂತೆ. ಕಾನ್‌ಸ್ಟಾಂಟಿನೋಪಲ್ ಪಟ್ಟಣದಲ್ಲಿರುವ ಇಟಲಿ ದೇಶೀಯರನೇಕರು ತಮ್ಮ ಕುಟುಂಬಸಮೇತರಾಗಿ ಅಲ್ಲಿಂದ ಸ್ವದೇಶಕ್ಕೆ ಹೊರಟುಹೋಗುತ್ತಿದ್ದಾರೆ. ಫೀಲ್ಡ್ ಮಾರ್ಷಲ್ ವಾನ್‌ಡೇರ್ ಗಾಲ್ಟ್ಜ್ ಎಂಬ ಜರ್ಮನ್ ಸೇನಾನಿಯು ತುರ್ಕಿಯ ಸರ್ವಸೇನಾಧಿಪತಿಯಾಗಿ ಏರ್ಪಡಿಸಲ್ಪಟ್ಟಿರುವನು. ಇಂಗ್ಲೀಷರ ನೌಕಾದಳವು ಪಾರಸೀಕ ದೇಶದ ಮುಖಭಾಗದ ಗುಡ್ಡಗಳನ್ನು ಮುತ್ತಿರುವುದರಿಂದ ಅಲ್ಲಿದ್ದ ತುರ್ಕಿಯವರು ಭಯಪಟ್ಟು ಮಧ್ಯದೇಶಕ್ಕೆ ಓಡಿಹೋದರು. ಅಲ್ಲಿದ್ದ ಸೇನಾನಿವೇಶಗಳೆಲ್ಲಾ ಧ್ವಂಸಮಾಡಲ್ಪಟ್ಟಿವೆ. ಕೋಟೆಗಳಿಗೆಲ್ಲಾ ಇಂಗ್ಲೀಷ್ ಸೈನಿಕರು ಗುಂಡನ್ನು ಹೊಡೆದು ಬಹಳ ನಷ್ಟಪಡಿಸಿದ್ದಾರೆ. ಯುದ್ಧದಲ್ಲಿ ಸೆರೆಯಾಗಿ ಹಿಡಿದುಕೊಂಡಿರುವ ೪೦ ತುರ್ಕಿ ಸೈನ್ಯಾಧಿಕಾರಿಗಳನ್ನೂ ೧೧೦೦ ಮಂದಿ ಸೈನಿಕರನ್ನೂ ಸಹ ಬರ್ಮಾಕ್ಕೆ ಸೇರಿದ ಥೈಮ್ಯೋನಗರಕ್ಕೆ ಸಾಗಿಸಿ ತರುವವರಾಗಿದ್ದಾರೆ. ತುರ್ಕಿಗೆ ಈಗ ಹಣದ ಕೊರತೆಯು ಬಹಳವಾಗಿದೆ. ನಗದಾಗಿ ೫೦ ಸಾವಿರ ಪೌನುಗಳಷ್ಟು ಹಣವೂ ಸಹ ಉಳಿದಿಲ್ಲವಾದುದರಿಂದ ೫೦ ಸಾವಿರ ಪೌನುಗಳಿಗೆ ತಕ್ಕಷ್ಟು ನೋಟುಗಳನ್ನು ಪ್ರಕಟಿಸಬೇಕೆಂದು ಯೋಚಿಸಿರುವರಂತೆ. ಅಸ್ಕಾಲ್ಡ್ ಎಂಬ ರಷ್ಯನ್ ಕ್ರೂಯಿಸರಿನ ಕೇಪ್ಟನ್ನು ಈಗ ಪೋರ್ಟ್‌ಸೆಡ್ಡಿಗೆ ಬಂದಿರುವನು. ಅವನು ತುರ್ಕಿದೇಶದ ಸಮುದ್ರತೀರದಲ್ಲಿ ಕಾವಲಾಗಿದ್ದ ಅವರ ಎರಡು ಹಡಗುಗಳನ್ನು ಮುಳುಗಿಸಿದೆನೆಂದೂ, ಘಾಯರ್ ಎಂಬ ಜರ್ಮನರ ಹಡಗನ್ನು ಹಿಡಿದುಕೊಂಡೆನೆಂದೂ ಹೇಳಿರುವನು. ತುರ್ಕಿ ಜರ್ಮನ್ ಸೈನ್ಯಾಧಿಪತಿಗಳ ಕೈಕೆಳಗೆ ೪ ಸಾವಿರ ಮಂದಿ ಅರಬ್ಬಿ ಸೈನಿಕರನ್ನು ತುರ್ಕಿಯವರು ಟ್ರಿಪೋಲಿಯಮೇಲೆ ಕಳುಹಿಸಿರುವರಂತೆ. ಹೀಗೆ ಕಳುಹಿಸುವುದಕ್ಕೆ ಕಾರಣವೇನೆಂಬುದಕ್ಕೆ ಸಮಾಧಾನವನ್ನು ತಿಳಿಯಿಸದಿದ್ದರೆ ವಿರೋಧಕ್ಕೆ ಕಾರಣವಾಗುವುದೆಂದು ಕಾನ್‌ಸ್ಟಾಂಟಿನೋಪಲ್ಲಿನಲ್ಲಿರುವ ಇಟಲಿಯ ರಾಯಭಾರಿಯು ತುರ್ಕಿ ಪ್ರಭುತ್ವದವರನ್ನು ಕೇಳಿರುವರೆಂದು ಸುದ್ದಿಯುಂಟಾಗಿದೆ.

ಸರ್ವಿಯಾ.

ಸರ್ವಿಯಾ ರಾಜರೂ ಯುವರಾಜರೂ ಸಹ ಸೇನಾಪರಿವಾರ ಸಮೇತರಾಗಿ ವಿಜಯೋತ್ಸಾಹದಿಂದ ತಾವು ಹಿಡಿದುಕೊಂಡ ತಮ್ಮ ಪೂರ್ವದ ರಾಜಧಾನಿಯಾದ ಬೆಲ್‌ಗ್ರೇಡು ಪಟ್ಟಣವನ್ನು ಪ್ರವೇಶಿಸಿದರು. ಪ್ರಜೆಗಳು ಬಹಳ ಆನಂದವನ್ನು ಪ್ರದರ್ಶಿಸಿದರು. ಸರ್ವಿಯನ್ನರು ಹಿಡಿದುಕೊಂಡಿರುವ ಶತ್ರುಪಕ್ಷದ ೬೦ ಸಾವಿರಮಂದಿ ಸೈನಿಕರ ಹೊರತು ಸರ್ವಿಯಾದಲ್ಲಿ ಈಗ ಜರ್ಮನ್ ಆಸ್ಟ್ರಿಯಾ ಮನುಷ್ಯನೊಬ್ಬನೂ ಇರುವುದಿಲ್ಲ.

ಆಸ್ಟ್ರಿಯಾ.

ಸರ್ವಿಯಾದವರಿಗೆ ಉಂಟಾದ ವಿಶೇಷ ಜಯವನ್ನು ಕಂಡು ಆಸ್ಟ್ರಿಯಾದೇಶದ ಪ್ರಜೆಗಳು ಕಳವಳಗೊಂಡಿದ್ದಾರೆ. ವಿಯನ್ನಾ-ಬುಡಾಪೇಸ್ಟ್ ಮೊದಲಾದುವುಗಳ ಪ್ರಜೆಗಳು ಪ್ರಭುತ್ವದವರ ಮೇಲೆ ಅಸಂತುಷ್ಟಿಗೊಂಡು ಗದ್ದಲವನ್ನು ಎಬ್ಬಿಸುವಂತಿದ್ದಾರೆ. ಪ್ರೇಗು ಪಟ್ಟಣದ ಪ್ರಜೆಗಳು ತಮ್ಮ ದೇಶವನ್ನು ಜರ್ಮನರ ಸಿಕ್ಕಿನಿಂದ ಬಿಡಿಸಿಕೊಳ್ಳುವುದು ಅತ್ಯವಶ್ಯಕವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೆ. ಆಸ್ಟ್ರಿಯನ್-ಜರ್ಮನ್ ಸೈನ್ಯಗಳೆರಡೂ ಸೇರಿ ಕ್ರಾಕೋಪಟ್ಟಣ ಮತ್ತೂ ಪ್ರಿಜ್ಮೆಸಲ್ ಪಟ್ಟಣ ಇವೆರಡನ್ನೂ ರಷ್ಯನರ ಮುತ್ತಿಗೆಯಿಂದ ತಪ್ಪಿಸಿಬಿಡಬೇಕೆಂದು ಈಗ ಬಹಳ ಸಾಹಸಪಡುತ್ತಿವೆ.

ಆಕಾಶವಿಮಾನಗಳು.

ಫ್ರಾನ್ಸ್ ವೈಮಾನಿಕರು ಜರ್ಮನರ ಫ್ರೀಬರ್ಗಿನಲ್ಲಿರುವ ವಾಯುವಿಮಾನಶಾಲೆಗಳ ಮೇಲೂ ನಿಲ್ದಾಣದಮೇಲೂ ಮರಳಿ ೧೮ ಸಿಡಿಮದ್ದುಗಳನ್ನು ಹಾಕಿದರು. ಅವುಗಳಲ್ಲಿ ೧೪ ಒಡೆದು ನಷ್ಟವನ್ನುಂಟುಮಾಡಿದುವು. ಶತ್ರುಗಳು ಆಗ ಊರ್ಧ್ವಮುಖವಾಗಿ ಫಿರಂಗಿ ಗುಂಡುಗಳನ್ನು ಅವಿಚ್ಛಿನ್ನವಾಗಿ ಹಾರಿಸುತ್ತಿದ್ದರೂ ಇವರು ಸುರಕ್ಷಿತವಾಗಿ ಹಿಂದಿರುಗಿ ಬಂದಿರುವರು. ಕಳೆದ ತಾ|| ೨೦ ರಲ್ಲಿ ಜರ್ಮನರ ಒಂದು ನೌಕಾವಿಮಾನವು ಕೆಲೆ ಪಟ್ಟಣದಮೇಲೆ ೨ ಸಿಡಿಮದ್ದುಗಳನ್ನು ಹಾಕಿತು. ಅದರಿಂದ ನಷ್ಟವೇನೂ ಆಗಲಿಲ್ಲ.

ಮೈಸೂರ್ ಸ್ಟಾರ್.

ಸನ್ ೧೯೧೪ನೆಯ ಡಿಸೆಂಬರ್ ತಾ|| ೨೭ ನೆಯ ಭಾನುವಾರ.

ಸಕ್ಕರೆಯ ಕೈಗಾರಿಕೆಯನ್ನು ಹೇಗೆ ಹೆಚ್ಚಿಸಬೇಕು?

ಯುದ್ಧಾರಂಭವಾದಮೇಲೆ ನಮ್ಮ ಭರತಖಂಡದಲ್ಲೆಲ್ಲ ಬೆಲ್ಲಸಕ್ಕರೆಗಳ ಬೆಲೆಯು ೩ನೆಯ ೧ಭಾಗದಷ್ಟು ಹೆಚ್ಚಿಹೋಗಿದೆ. ಏಕೆಂದರೆ ಜರ್ಮನಿ ಆಸ್ಟ್ರಿಯಾದೇಶಗಳಿಂದ ನಮ್ಮಲ್ಲಿಗೆ ಬರುತ್ತಿದ್ದ ಸಕ್ಕರೆಯು ನಿಂತುಹೋಯಿತು. ಮತ್ತು ಮಾರಿಷಸ್‌ನಿಂದಲೂ ಜಾವಾದಿಂದಲೂ ನಮಗೆಬರುತ್ತಿದ್ದ ಸಕ್ಕರೆಗೆ ಅಭ್ಯಂತರವಿಲ್ಲವಾದರೂ ಅಲ್ಲಿನ ಸಕ್ಕರೆಯೆಲ್ಲಾ ಅಮೇರಿಕಾಕ್ಕೂ ಇಂಗ್ಲೆಂಡಿಗೂ ಸಾಗಿಹೋಗುತ್ತಿದೆ. ಅದುಕಾರಣ ವಿಶೇಷೋಪಯೋಗಿಯಾದ ಬೆಲ್ಲಸಕ್ಕರೆಗಳು ಈ ದೇಶದಲ್ಲಿ ತಕ್ಕಷ್ಟು ದೊರೆಯದೆ ಅವುಗಳ ಬೆಲೆಯು ಏರಿಹೋಗಿದೆ. ಅವನ್ನು ಅನ್ಯದೇಶಾಪೇಕ್ಷೆಯಿಲ್ಲದೆ ನಮ್ಮಲ್ಲೇ ತಕ್ಕಷ್ಟು ಹುಟ್ಟಿಸಿಕೊಳ್ಳುವುದಕ್ಕೆ ನಮ್ಮ ದೇಶದವರು ಪ್ರಯತ್ನಪಡದಿದ್ದರೆ ಅವುಗಳ ಬೆಲೆಯು ದಿನಕ್ರಮೇಣ ಇನ್ನೂ ಹೆಚ್ಚಿಹೋಗಬಹುದು.

ಭರತಖಂಡದ ನಾನಾಭಾಗಗಳಲ್ಲಿ ಕೆಲ ವರ್ಷಗಳಿಂದಲೂ ಸಕ್ಕರೆಯ ಪರಿಶ್ರಮಾಭಿವೃದ್ಧಿ ವಿಷಯವು ಬಹು ವಿಶೇಷವಾಗಿ ಯೋಚಿಸಲ್ಪಡುತ್ತಲಿದೆ. ಕಬ್ಬಿನ ವ್ಯವಸಾಯಾಭಿವೃದ್ಧಿಗೂ ಸಕ್ಕರೆಯನ್ನು ಲಾಭಕಾರಿಯಾಗಿ ನಿರ್ಮಿಸುವುದಕ್ಕೂ ಅಲ್ಲಲ್ಲಿ ಪ್ರಭುತ್ವದವರೂ ಪ್ರಜಾಪ್ರಮುಖರೂ ಸಾಹಸಪಡುತ್ತಿಲ್ಲದೆ ಇಲ್ಲ. ಅವರ ಪ್ರಯತ್ನಗಳಿಗೆ ಈಗಿನ ಸಂಧಿಯು ಮತ್ತಷ್ಟು ವಿಶೇಷ ಚೈತನ್ಯವನ್ನುಂಟುಮಾಡುತ್ತಲಿದೆ.

ನಮ್ಮ ಸಂಸ್ಥಾನದಲ್ಲಿ ಕಬ್ಬಿನ ಗಾಣ ಬೆಲ್ಲದ ಮತ್ತು ಸಕ್ಕರೆಯ "ತಯಾರಿ" ಇವುಗಳ ಸಂಬಂಧವಾದ ಪರಿಶೋಧನೆಗಳು ವಿಶೇಷವಾಗಿ ನಡೆಯಿಸಲ್ಪಟ್ಟಿವೆ. ದೊಡ್ಡವಾದ ಯಂತ್ರಸಾಮಗ್ರಿಗಳನ್ನು ಇಟ್ಟುಕೊಂಡು ಪರಿಶೋಧನೆಯನ್ನು ನಡೆಯಿಸಿದ್ದಾರೆ. ಅದರಿಂದ ಲಾಭವಿಲ್ಲದೆ ಹೋದುದಕ್ಕೆ ಕೆಲ ಕಾರಣಗಳನ್ನು ಮಿ|| ಚಾಟರ್‌ಟನ್‌ರವರು ಹೇಳಿರುತ್ತಾರೆ. ಅದೇ ತೆರದ ಅಭಿಪ್ರಾಯವು ಈಗ ಒಬ್ಬ ಅನುಭವಸ್ಥರಿಂದ ಬಂದಿರುವಕಾರಣ ಅದರ ಮುಖ್ಯಾಂಶವನ್ನು ವಿವರಿಸಿದರೆ ಈ ಪರಿಶ್ರಮದಲ್ಲಿ ಪ್ರವರ್ತಿಸುವವರಿಗೆಲ್ಲಾ ಪ್ರಯೋಜನವಾಗುವುದೆಂದು ಎಣಿಸುತ್ತೇವೆ.

ಬಂಗಾಳಾಕ್ಕೆ ಸೇರಿದ ಆಲಂಪುರ್‌ಗಂಜ್ ಎಂಬಲ್ಲಿರುವ ಹಾಡಿ ಪರಿಶ್ರಮಶಾಲಾಧ್ಯಕ್ಷರಾದ ಬಾಬು ರಘುನಂದನಪ್ರಸಾದ್ ಎಂಬುವರು ತಮ್ಮ ಅನುಭವದಿಂದ ಹೇಳುವುದೇನೆಂದರೆ—ಈ ದೇಶದಲ್ಲಿನ ಸದ್ಯದ ಸ್ಥಿತಿಗತಿಗಳನ್ನು ಅನುಸರಿಸಿ ನೋಡಿದರೆ ಒಂದೊಂದು ಮುಖ್ಯಸ್ಥಲದಲ್ಲಿ ದೊಡ್ಡದೊಡ್ಡ ಸಕ್ಕರೆಯ ಪರಿಶ್ರಮಾಲಯಗಳನ್ನು ಸ್ಥಾಪಿಸುವುದರಿಂದ ಈಗಲೇ ಆಗಲಿ ಇನ್ನು ಕೆಲಕಾಲದಮೇಲೆಯೇ ಆಗಲಿ ಅವು ಲಾಭಕರವಾಗಿ ಪರಿಣಮಿಸುವುದಿಲ್ಲವೆಂದು ನನಗೆ ತೋರುತ್ತದೆ. ಒಂದರಹಿಂದೆ ಒಂದರಂತೆ ಇದುವರೆಗೆ ನಾಶವಾದ ಈತೆರದ ಶಾಲೆಗಳು ಈ ನನ್ನ ಅಭಿಪ್ರಾಯವನ್ನು ದೃಢಪಡಿಸುತ್ತವೆ. ಮತ್ತು ಈಗಲೂ ಉಳಿದಿರುವ ಕಾರ್ಯಾಲಯಗಳೂ ಕೂಡ ಲಾಭಕರವಾಗಿ ತೋರುವುದಿಲ್ಲ ಎಂದು ಹೇಳಿರುತ್ತಾರೆ. ಇದಕ್ಕೆ ಕಾರಣಗಳೇನೆಂಬುದನ್ನು ಅವರು ತಿಳಿಯಿಸಿರುವುದರಲ್ಲಿ—ಕಬ್ಬು ಈ ದೇಶದಲ್ಲಿ ದೂರದೂರಪ್ರದೇಶದಲ್ಲಿ ವಿರಳವಾಗಿ ಬೆಳೆಯುತ್ತಿರುವುದರಿಂದ ಅಷ್ಟು ದೂರಪ್ರದೇಶಗಳಿಂದ ಕಾರ್ಯಾಲಯವಿರುವ ಸ್ಥಲಕ್ಕೆ ಕಬ್ಬನ್ನು ಸಾಗಿಸುವುದಕ್ಕೆ ಹೆಚ್ಚು ಧನವ್ಯಯವು ತಗಲುವುದೆಂದೂ, ಮತ್ತು ಸಾಗಿಬರುವುದು ಸಾವಕಾಶವಾಗುವುದರಿಂದ ಕಬ್ಬಿನ ಹದವು ತಪ್ಪಿಹೋಗುವುದೆಂದೂ, ಬೆಲ್ಲಕ್ಕೆ ಹೆಚ್ಚು ಬೆಲೆಯಿರುವುದರಿಂದ ಕಬ್ಬಿಗೂ ಹೆಚ್ಚು ಬೆಲೆಯಾಗಿರುವುದೆಂದೂ, ಕಬ್ಬನ್ನು ಸ್ಥಲದಿಂದ ಸ್ಥಲಕ್ಕೆ ಸಾಗಿಸಿ ತರುವುದಕ್ಕೆ ಮಾರ್ಗಾದಿಸಾಧನಗಳು ಸರಿಯಾಗಿಲ್ಲವೆಂದೂ, ಇದಕ್ಕೆಲ್ಲಾ ಹೇಗೋ ಪಾಟುಪಟ್ಟು ಕಾರ್ಯವನ್ನು ಸಾಗಿಸಿದರೆ ವ್ಯಯವು ಹೆಚ್ಚಾಗಿ ಲಾಭವು ಸೊನ್ನೆಯಾಗುವುದೆಂದೂ ಅವರು ಹೇಳಿರುತ್ತಾರೆ. ಈ ಲೋಪವನ್ನು ಪರಿಹರಿಸಿಕೊಂಡು ದೊಡ್ಡ ಪರಿಶ್ರಮಾಲಯಗಳಿಂದ ಲಾಭವನ್ನು ಸಂಪಾದಿಸಬೇಕಾದರೆ ಕಬ್ಬು ಒಂದೇಕಡೆ ವಿಸ್ತಾರವಾಗಿ ಬೆಳೆಯತಕ್ಕ ಏರ್ಪಾಟನ್ನು ಮಾಡಿಕೊಳ್ಳಬೇಕೆಂದು ಅವರು ತಿಳಿಯಿಸಿರುತ್ತಾರೆ. ಇದು ಉಪಯುಕ್ತವಾದ ಸೂಚನೆಯಾಗಿದೆ. ನಮ್ಮ ದೇಶದಲ್ಲಿ ಮಾರಿಕಣಿವೆ ಬೋರನಕಣಿವೆಗಳ ಕೆಳಗೆ ಸಾವಿರಾರು ಎಕರೆ ಭೂಮಿಗಳು ವ್ಯವಸಾಯಕ್ಕೆ ಅರ್ಹವಾಗಿರುತ್ತವಷ್ಟೆ. ಅಂಥ ಸ್ಥಲಗಳಲ್ಲಿ ನಮ್ಮಲ್ಲಿನ ಶ್ರೀಮಂತರು ದೇಶಾಭಿಮಾನಿಗಳು ಸರ್ಕಾರದಿಂದೊದಗುವ ಸಹಾಯಗಳಿಂದ ವಿಸ್ತಾರವಾದ ಕಬ್ಬಿನ ಬೆಳೆಸಿಗೂ ಸಕ್ಕರೆಯ ಪರಿಶ್ರಮಾಲಯಸ್ಥಾಪನೆಗೂ ಏರ್ಪಡಿಸಿಕೊಂಡರೆ, ಭರತಖಂಡದ ಪಟ್ಟಣನಗಳಲ್ಲೆಲ್ಲಾ ಮೈಸೂರಿನ ಸಕ್ಕರೆಯು ವ್ಯಾಪಿಸುವಂತೆ ಏರ್ಪಡಿಸಬಹುದು.

ಅಂಥ ದೊಡ್ಡ ಪ್ರಯತ್ನವನ್ನು ಮಾಡಲು ಸಾಧ್ಯವಿಲ್ಲದೆಡೆಯಲ್ಲಿ ಸಣ್ಣಸಣ್ಣ ಪರಿಶ್ರಮಾಗಾರಗಳನ್ನು ಸ್ಥಾಪಿಸಿಕೊಂಡರೆ, ವಿಶೇಷ ಲಾಭವುಂಟಾಗುವುದೆಂದು ಮೇಲೆಕಂಡ ದೊಡ್ಡಮನುಷ್ಯರೇ ಆಧಾರಸಮೇತವಾಗಿ ನಿರೂಪಿಸಿದ್ದಾರೆ. ಮತ್ತೂ ತಾವು ೫ ವರ್ಷಗಳಿಂದಲೂ ಅಂಥ ಸಣ್ಣ ಕಾರ್ಯಾಲಯವೊಂದನ್ನು ಸ್ಥಾಪಿಸಿ ಲಾಭವನ್ನು ಹೊಂದುತ್ತಿರುವೆನೆಂದೂ ಸಹ ತಿಳಿಯಪಡಿಸಿದ್ದಾರೆ. ಅವರು ಸ್ಥಾಪಿಸಿರುವ ಕಾರ್ಯಾಗಾರದ ಯಂತ್ರಸಮುದಾಯಕ್ಕೆಲ್ಲಾ ೪ ಸಾವಿರ ರೂಗಳು ಮಾತ್ರವೇ ತಗುಲಿರುವುವು. ಇಂಥ ಕಾರ್ಯಾಲಯದಲ್ಲಿ ಕೆಲಸಮಾಡಿದುದರಲ್ಲಿ ೪ ತಿಂಗಳೊಳಗೆ ೨೬೦೦ಮಣ ಸಕ್ಕರೆಯನ್ನೂ ೩೦೦೦ ಮಣ ಬೆಲ್ಲವನ್ನೂ ತಯಾರಿಸಿರುವರಂತೆ. ಈ ಕೆಲಸಗಳನ್ನೆಲ್ಲಾ ಜರುಗಿಸುವುದಕ್ಕೆ ಅವರು ೨೫ ಸಾವಿರ ರೂ. ನ ಮೂಲಧನವನ್ನು ಹಾಕಿಕೊಂಡಿದ್ದರಂತೆ. ಮೂಲಧನವು ಹೆಚ್ಚಾದಷ್ಟು ಲಾಭವೂ ಹೆಚ್ಚುವುದೆಂದೂ, ವೆಚ್ಚವು ಕಡಿಮೆಯಾಗುವುದೆಂದೂ, ಯಂತ್ರಸಾಮಗ್ರಿಗಳಿಗೆ ಇನ್ನುಸ್ವಲ್ಪ ಹೆಚ್ಚು ವೆಚ್ಚ ಮಾಡಿದರೆ ಲಾಭವು ಇನ್ನಷ್ಟು ಅಧಿಕವಾಗುವುದೆಂದೂ, ಕಬ್ಬಿನ ಗಾಣದ ಕೆಲಸವಿಲ್ಲದಿದ್ದಾಗ ಎಣ್ಣೆಯ ಬಿತ್ತಗಳಿಂದ ಎಣ್ಣೆಯನ್ನು ತೆಗೆದು ಕೆಲಸವನ್ನು ಅದೇ ಯಂತ್ರಗಳಿಂದಲೇ ಮಾಡಿಕೊಳ್ಳಬಹುದೆಂದೂ ಸಹ ಹೇಳಿರುತ್ತಾರೆ.

ಮತ್ತೂ ರಸವನ್ನು ತೆಗೆಯತಕ್ಕ ಯಂತ್ರೋಪಕರಣದ ಭೇದಗಳನ್ನನುಸರಿಸಿ ಈ ಪರಿಶ್ರಮದಲ್ಲಿ ಲಾಭನಷ್ಟಗಳು ಬಹಳ ವ್ಯತ್ಯಾಸಗೊಳ್ಳುವುವೆಂದು ನಿರೂಪಿಸುವಾಗ್ಗೆ ೧೦೦ ಮಣ ಕಬ್ಬಿನಿಂದ ಉತ್ತಮ ಯಂತ್ರಸಾಧನದ ಮೂಲಕ ೬೨|| ಮಣ ರಸವನ್ನು ತೆಗೆಯಬಹುದೆಂದೂ, ಸಾಮಾನ್ಯವಾದ ಗಾಣವಾಗಿದ್ದರೆ ಅಷ್ಟೇ ಕಬ್ಬಿನಿಂದ ೬|| ಮಣ ರಸವು ಮಾತ್ರ ಬರುವುದೆಂದೂ ಸಹ ವಿವರಿಸಿದ್ದಾರೆ. ಅದುಕಾರಣ, ಈ ಪರಿಶ್ರಮದಲ್ಲಿ ಕಬ್ಬಿನಿಂದ ರಸವನ್ನು ಇಳಿಯಿಸುವ ಸಾಧನವು ಪ್ರಶಸ್ತವಾಗಿರಬೇಕೆಂಬುದು ಸಿದ್ಧವಾಗುತ್ತದೆ.

ಈಗಿನ ಸ್ಥಿತಿಯಲ್ಲಿ ಎಷ್ಟು ಪ್ರಶಸ್ತವಾದ ಯಂತ್ರಸಾಧನಗಳಾದರೂ ದೊರೆಯುತ್ತವೆ. ನಾಲ್ಕೈದುಸಾವಿರವನ್ನು ಮುಟ್ಟಿಸಿ, ಯಂತ್ರೋಪಕರಣಗಳನ್ನು ಸ್ಥಾಪಿಸಿಕೊಂಡು, ಕಾರ್ಯವನ್ನು ಸಾಗಿಸಬಲ್ಲ ವ್ಯವಸಾಯಗಾರರದ ಧನಿಕರೂ ನಮ್ಮಲ್ಲಿ ಸಾವಿರಾರುಗಟ್ಟಲೆ ಸಿಕ್ಕುವರು. ಅಂಥವರೆಲ್ಲಾ ಕೈಗಾರಿಕೆಯ ವ್ಯವಸಾಯಸಂಪತ್ತಿನ ಅಭಿವೃದ್ಧಿಗಾಗಿ ಬೇಕಾದಷ್ಟು ಸಹಾಯ ಪ್ರೋತ್ಸಾಹಗಳನ್ನು ಮಾಡಿ ತಮ್ಮ ದೇಶವನ್ನು ನಾನಾವಿಧದಿಂದ ಮುಂದಕ್ಕೆ ತರಲು ಕುತೂಹಲಪಡುತ್ತಿರುವ ನಮ್ಮ ಪ್ರಭುತ್ವದವರ ಅವಲಂಬನೆಯಿಂದ ಇಂಥ ಲಾಭಕರವಾದ ಕಾರ್ಯದಲ್ಲಿ ತೊಡಗುವುದು ಶ್ರೇಯಸ್ಕರವಲ್ಲವೆ?

ಶ್ರೀಮನ್ಮಹಾರಾಜ ಸಹೋದರರ ಸಂಚಾರ.

ಶ್ರೀಮನ್ಮಹಾರಾಜರವರೂ, ಶ್ರೀಮದ್ಯುವರಾಜರೂ, ಕಳೆದ ತಾ|| ೧೯ ರಲ್ಲಿ ದಾವಣಗೆರೆಗೆ ಚಿತ್ತೈಸಿ ಅಲ್ಲಿಯ ಪುರನಿವಾಸಿಗಳೊಪ್ಪಿಸಿದ ವಿಜ್ಞಾಪನಪತ್ರಿಕೆಗುತ್ತರವನ್ನು ದಯಪಾಲಿಸುವಾಗ್ಗೆ ಬಚ್ಚಲುಗಳನ್ನು ಕಟ್ಟಲು ತಗಲುವ ವೆಚ್ಚದಲ್ಲಿ ಅರ್ಧಭಾಗವನ್ನು ಊರಿನವರು ವಹಿಸಿಕೊಳ್ಳುವುದಾದರೆ ಈ ವಿಚಾರವು ಪರ್ಯಾಲೋಚಿಸಲ್ಪಡುವುದೆಂದೂ, ಬಟ್ಟೆಯಮೇಲಿನ ಸುಂಕವನ್ನು ತಪ್ಪಿಸಲಾಗುವುದಿಲ್ಲವೆಂದು ನಿಮ್ಮ ಮ್ಯುನಿಸಿಪಾಲಿಟಿಯವರೇ ಅಭಿಪ್ರಾಯಪಟ್ಟಿರುವರೆಂದೂ, ನಿಮ್ಮಿಷ್ಟದಂತೆ ಈ ಊರಲ್ಲಿ ಹೈಸ್ಕೂಲ್ ಸ್ಥಾಪನೆಯಾಗುವ ವಿಚಾರವು ಸರ್ಕಾರದಿಂದ ಪರ್ಯಾಲೋಚಿಸಲಾಗುವುದೆಂದೂ, ಈಗ ನಿಮ್ಮ ಸ್ಕೂಲಿನಲ್ಲೇ ಅಪ್ಪರ್‌ಸೆಕೆಂಡರಿ ತರಗತಿಗಳನ್ನೇರ್ಪಡಿಸುವ ಭಾಗವು ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದೂ, ಈಗ ನಡೆಯುತ್ತಿರುವಯುದ್ಧದದೆಸೆಯಿಂದ ಹತ್ತಿಯೂ, ಎಳ್ಳೂ ಹೊರಗೆಸಾಗದೆ ಅದರ ವ್ಯಾಪಾರವು ನಿಂತುಹೋಗಿ ಅವನ್ನು ಬೆಳೆಯುವವರಿಗೂ ವ್ಯಾಪಾರಮಾಡುವವರಿಗೂ ಬಹಳ ನಷ್ಟಕ್ಕೆಕಾರಣವಾಗಿದೆಯೆಂದು ನೀವುತಿಳಿಸಿರುವಿರಾದರೂ ಈ ವಿಧವಾದ ತೊಂದರೆಯು ಅನಿವಾರ್ಯವಾದುದಾಗಿರುವುದಲ್ಲದೆ ಇದಕ್ಕೆ ಸರ್ಕಾರದವರು ಪರಿಹಾರೋಪಾಯವನ್ನು ಮಾಡುವುದು ಸಾಧ್ಯವಿಲ್ಲವೆಂದೂ, ಈ ವಿಚಾರದಲ್ಲಿ ನಮ್ಮ ಸಾನುಭೂತಿಯಿರುವುದೆಂದೂ, ಈ ಯುದ್ಧದಿಂದ ವ್ಯಾಪಾರಕ್ಕೆಂತಹ ತೊಂದರೆಯುಂಟಾದರೂ ಸಾರ್ವಭೌಮಸಮ್ರಾಟರಿಗೂ ನಮ್ಮ ಸಂಸ್ಥಾನಕ್ಕೂ ಇರತಕ್ಕ ಮೈತ್ರಿವಿಶ್ವಾಸಸಂಬಂಧವು ಗ್ರೇಟ್‌ಬ್ರಿಟನ್ನೂ ಅದರ ಮಿತ್ರಮಂಡಲಿಯವರೂ ಸತ್ಯಮಾರ್ಗವನ್ನು ಹಿಡಿದು ಯುದ್ಧಮಾಡುತ್ತಿರುವಾಗ್ಗೆ ನಾವು ಸಂತೋಷದಿಂದ ನೆರವಾಗುವಂತೆ ಮಾಡಿರುವುದೆಂದೂ, ಆದಾಯದ ಮೇಲಣ ತೆರುಗೆಯನ್ನು ವಿಧಿಸುವ ವಿಚಾರದಲ್ಲಿ ಜನರಭಿಪ್ರಾಯವು ಚೆನ್ನಾಗಿ ಪರಿಗಣಿಸಲ್ಪಡುವುದೆಂಬುದನ್ನು ನೀವು ಖಂಡಿತವಾಗಿ ತಿಳಿಯಿರಿ ಎಂದೂ ಮೊದಲಾಗಿ ಅಪ್ಪಣೆಯನ್ನು ಕೊಡಿಸಿದರು. ಮಹಾರಾಜ ಸಹೋದರರು ತಾ|| ೨೦ರಬೆಳಿಗ್ಗೆ ಮ|| ಮಾಗಾನಹಳ್ಳಿ ಷಡಕ್ಷರಪ್ಪನವರ ಜಿನ್ನಿಂಗ್‌ಕಾರ್ಯಾಲಯವನ್ನೂ, ಶ್ರೀವಿರಕ್ತಮಠವನ್ನೂ ಪರಾಮರ್ಶಿಸಿಕೊಂಡು ಬಂದು, ಮಧ್ಯಾಹ್ನ ಪುರಪ್ರಮುಖರಿಗೆ ತಮ್ಮ ಬಿಡಾರದಲ್ಲಿ ದರ್ಶನವನ್ನಿತ್ತರು. ತಾ|| ೨೧ ರ ಮಧ್ಯಾಹ್ನ ಮೊಳಕಾಲ್ಮುರುವಿಗೆ ಚಿತ್ತೈಸಿ ಅಲ್ಲಿಯ ಪ್ರಮುಖಜನರೊಪ್ಪಿಸದ ವಿಜ್ಞಾಪನಪತ್ರಿಕೆಯನ್ನು ಸ್ವೀಕರಿಸಿ, ಸಂಪದಭ್ಯುದಯ ಸಮಾಜ, ಮೈಸೂರು ಬ್ಯಾಂಕುಗಳ ಸ್ಥಾಪನೆ, ಮತ್ತೂ ಪರಸ್ಪರ ಸಹಾಯಸಂಬಂಧವಾದ ಕಾರ್ಯಕ್ರಮ ಇವುಗಳ ವಿಚಾರಗಳು ನಿಮ್ಮಗಳಿಗೊಪ್ಪಿತವಾಗಿರುವುದನ್ನು ಕಂಡು ನಮಗೆ ಸಂತೋಷವಾಗಿದೆ. ಪ್ರಸಿದ್ಧವಾದ ಈ ಊರಿನ ನೆಯ್ಗೆಯ ಕೈಗಾರಿಕೆಯಭಿವೃದ್ಧಿಯ ವಿಚಾರದಲ್ಲಿ ಸಹಾಯಮಾಡಲು ಸರ್ಕಾರದವರು ಸಿದ್ಧರಾಗಿದ್ದಾರೆ. ಈ ಊರಿಗೆ ಜಗ್ಗಪ್ಪನ ಗುಡ್ಡದಿಂದ ಕುಡಿಯುವ ನೀರನ್ನೊದಗಿಸುವ ವಿಚಾರವು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ. ಎ. ವಿ. ಸ್ಕೂಲು ಹೊಸದಾಗಿ ಕಟ್ಟಲ್ಪಡುವುದು, ಬಲಾತ್ಕಾರ ಬಾಲವಿದ್ಯಾಭ್ಯಾಸದುಪಯೋಗವು ನಿಮಗೆ ಗೊತ್ತಾಗಿರುವುದೂ ಸಂತೋಷಪ್ರದವಾಗಿದೆ. ಇದು ಕೆಲಸ್ಥಳಗಳಲ್ಲಿ ಪರೀಕ್ಷಾರ್ಥವಾಗಿ ನಡೆಯಿಸಲ್ಪಡುತ್ತದೆ. ಅಲ್ಲಿ ಅದು ಪ್ರಯೋಜನಕಾರಿಯಾಗಿ ಕಂಡುಬಂದಲ್ಲಿ ನಿಮ್ಮ ಪ್ರಾರ್ಥನೆಯಂತೆ ಇಲ್ಲೂ ಆಚರಣೆಗೆ ತರಿಸಲ್ಪಡುವುದು. ಚಿಕ್ಕಜಾಜೂರಿಂದ ಚಿತ್ರಕಲ್‌ದುರ್ಗಕ್ಕೆ ಲೋಹಮಾರ್ಗವನ್ನು ಹಾಕಲು ಇಂಡಿಯಾ ಸರ್ಕಾರದನುಮತಿಯು ದೊರೆದಿರುತ್ತದೆ. ಅಲ್ಲಿಂದ ರಾಯದುರ್ಗಕ್ಕೆ ಹಾಕುವ ವಿಚಾರವು ಧನಾನುಕೂಲವಾದಂತೆ ಪರ್ಯಾಲೋಚಿಸಲ್ಪಡುವುದು ಎಂದು ಮೊದಲಾಗಿ ಅಪ್ಪಣೆಕೊಡಿಸಿ ನೂತನವಾಗಿ ಕಟ್ಟಿರುವ ಟವರ್ ಹಾಲಿನ ಪ್ರವೇಶೋತ್ಸವವನ್ನು ಜರುಗಿಸಿದರು. ಮೊಳಕಾಲ್ಮುರುವಿಗೆ ಸೇರಿದ ಒಂದು ಹಳ್ಳಿಯಲ್ಲಿ ೨||ಅಡಿ ಎತ್ತರಮಾತ್ರವಿರುವ ೧೨ ವರ್ಷದ ಒಬ್ಬ ಹುಡುಗನನ್ನೂ ೨೦ ವರ್ಷದ ಅವನ ಅಕ್ಕನನ್ನೂ ಪರಾಮರ್ಶಿಸಿ, ಅವುಗಳಿಗೆ ನೀಕವಾದ ಉಡುಪುಗಳನ್ನು ಧರಿಸಲಿಕ್ಕೆಂದು ಒಂದು ಸವರನ್ನನ್ನು ದಯಪಾಲಿಸಿದರು.

ಒಳದೇಶದ ವೃತ್ತಾಂತಗಳು

ನಮ್ಮ ಶ್ರೀಮದ್ಯುವರಾಜರು ಈ ದಿನ ಪ್ರಾತಃಕಾಲ ಮದ್ರಾಸ್‌ಪಟ್ಟಣದಲ್ಲಿ ಕೂಡುವ ಭಾರತೀಯ ಸಂಘಪರಿಷ್ಕರಣ ಮಹಾಸಭೆಯ ಅಧ್ಯಕ್ಷಸ್ಥಾನವನ್ನಲಂಕರಿಸಲು ನಿನ್ನೆಯದಿನ ಬೆಳಗ್ಗೆ ಎಕ್ಸ್‌ಪ್ರೆಸ್ ರೈಲ್ವೆಬಂಡಿಯಲ್ಲಿ ಮದ್ರಾಸಿಗೆ ಚಿತ್ತೈಸಿದರು.

ನಮ್ಮ ಮೈಸೂರ ಸರ್ಕಾರದಿಂದ ವಿದ್ಯಾರ್ಥಿವೇತನವನ್ನು ಪಡೆದು ಪ್ರೌಢವಿದ್ಯಾಭ್ಯಾಸಂಗಕ್ಕಾಗಿ ಜರ್ಮನಿಗೆ ಹೋಗಿರುವ ನರಸಿಂಹಯ್ಯಂಗಾರ್ ಎಂಬ ವಿದ್ಯಾರ್ಥಿಯು ಪ್ರಸಕ್ತಯುದ್ಧ ಪ್ರಕರಣದಿಂದ ತಮ್ಮಗಳ ವಿದ್ಯಾಭ್ಯಾಸಂಗಕ್ಕೆ ಯಾವ ಆತಂಕವೂ ಇಲ್ಲದೆ ತಾವುಗಳು ನೆಮ್ಮದಿಯಿಂದಿರುವುದಾಗಿ ಬರೆದಿರುತ್ತಾರೆ.

ಕಳೆದ ಮಂಗಳವಾರ ರಾತ್ರಿ ೯|| ಗಂಟೆಯಲ್ಲಿ ರಾಜಧಾನಿಯಿಂದ ಬೆಂಗಳೂರಿಗೆ ಹೊರಟ ರೈಲ್ವೆಬಂಡಿಯ ಗಾರ್ಡಿನ ವಶದಲ್ಲಿದ್ದ ಒಂದು ಕಬ್ಬಿಣದ ಪೆಟ್ಟಿಗೆಯಲ್ಲಿ ಆ ದಿವಸದುತ್ಪನ್ನದ ಹಣವಿಡಲ್ಪಟ್ಟಿದ್ದಿತು. ಕ್ಲೋಸ್‌ಪೇಟೆಗೆ ಬಂಡಿಯು ಹೋದಾಗ ಆ ಸ್ಟೇಷನ್ನಿನುತ್ಪತ್ತಿಯ ಹಣವೂ ಪೆಟ್ಟಿಗೆಯಲ್ಲಿ ಹಾಕಲ್ಪಟ್ಟು ಭದ್ರಪಡಿಸಲ್ಪಟ್ಟಿತು. ಅಲ್ಲಿಂದ ಬಿಡದಿಗೆ ಬಂಡಿಯು ಬಂದಾಗ ಅಲ್ಲಿಯ ಹಣವನ್ನು ಹಾಕಲು ಪೆಟ್ಟಿಗೆಯ ಬಾಗಿಲನ್ನು ತೆಗೆಯಲು ಹೋಗಿ ಅದು ಮಾಯವಾಗಿದ್ದುದನ್ನು ಕಂಡು ಗಾರ್ಡು ದಿಗಿಲುಬಿದ್ದು ಇಂಜಿನ್ನಿನಲ್ಲಿಕುಳಿತು ಹಿಂದಿರುಗಿ ದಾರಿಯುದ್ದಕ್ಕೂ ಹುಡುಕುತ ಬರುವಾಗ್ಗೆ ಕ್ಲೋಸ್‌ಪೇಟೆಗೂ ಬಿಡದಿಗೂ ಮಧ್ಯೆ ಪೆಟ್ಟಿಗೆಯು ಒಡೆದುಬಿದ್ದಿದ್ದುದನ್ನು ಕಂಡು ಬರೀಪೆಟ್ಟಿಗೆಯನ್ನು ಬಿಡದಿಗೆ ತೆಗೆದುಕೊಂಡು ಬರಲು, ಮುಂದಕ್ಕೆ ಬಂಡಿಯು ಪ್ರಯಾಣಮಾಡಿತು. ಪೊಲೀಸರು ಈ ಕೃತ್ಯವನ್ನು ನಡೆಸಿದ ಕಳ್ಳರನ್ನು ತಡಕುತ್ತಿರುವರು. ಕ್ಲೋಸ್‌ಪೇಟೆಯವರೆಗೂ ಆ ದಿವಸ ಉತ್ಪನ್ನವಾಗಿದ್ದ ಪ್ರಾಯಶಃ ೪೦೦೦ ರೂ.ಗಳು ಪೆಟ್ಟಿಗೆಯಲ್ಲಿಡಲ್ಪಟ್ಟಿದ್ದುವಂತೆ.

ವಿವಿಧವಾರ್ತಾಸಂಗ್ರಹ.

ಹಾಲಂಡ್‌ದೇಶದವರು ಪ್ರತಿಯೊಬ್ಬ ಯೌವನಸ್ಥರೂ ಕೆಲಕಾಲ ಸೈನ್ಯದಲ್ಲಿ ಸೇರಿರಬೇಕೆಂಬ ಬಲಾತ್ಕಾರಶಾಸನವೊಂದನ್ನು ಏರ್ಪಡಿಸುವುದರಲ್ಲಿದ್ದಾರೆ.

ಕಾನ್‌ಸ್ಟಾಂಟಿನೋಪಲ್ ಪಟ್ಟಣದಲ್ಲಿರುವ ಜರ್ಮನ್ ಅಧಿಕಾರಿಗಳ ದೌರ್ಜನ್ಯದಿಂದ ತುರ್ಕಿ ಸೈನಿಕರು ಪ್ರಭುತ್ವದಮೇಲೆ ತಿರುಗಿಬೀಳುವ ಅಭಿಪ್ರಾಯವುಂಟಾಗಿದೆ.

ಕಳೆದ ತಾ|| ೧೦ ರಲ್ಲಿ ಒಬ್ಬ ಸೈನಿಕೋದ್ಯೋಗಿಯು ನಮ್ಮ ಹಿಂದೂದೇಶದ ಸೈನಿಕರಲ್ಲಿ ಕೆಲರನ್ನು ಪಾರ್ಲಿಮೆಂಟ್ ಭವನಕ್ಕೆ ಕರೆದುಕೊಂಡು ಹೋಗಿ ತೋರಿಸಿಕೊಂಡು ಬಂದರು.

ಜರ್ಮನಿಯವರಲ್ಲಿ ಇನ್ನು ೧ ಪಕ್ಷಕಾಲದವರೆಗೆ ಸಾಕಾಗ್ಯವಷ್ಟು ಕೋಟಾಗಳು ಮಾತ್ರ ಇವೆಯಂತೆ. ಅವನ್ನು ಹೊಸದಾಗಿ ನಿರ್ಮಿಸುವುದಕ್ಕೆ ಬೇಕಾದ ತಾಮ್ರವು ಅವರಿಗೆ ದೊರಕುತ್ತಾ ಇಲ್ಲ.

ಬೆಲ್ಜಿಯಂದೇಶದಲ್ಲಿರುವ ಸೈನಿಕರ ಕಾಲುಗಳೂ ಮುಖಗಳೂ ಚಳಿಯಿಂದ ಬಿರಿಕುಬಿಟ್ಟಿರುವುದರಿಂದ ಅದಕ್ಕೆ ಸವರುವುದಕ್ಕಾಗಿ ೧ ಲಕ್ಷ ವಾಸಲೀನ್ ಡಬ್ಬಿಗಳನ್ನು ಕೊಡಿಸಿಕೊಡಲು ಗ್ವಾಲಿಯರ್ ಮಹಾರಾಜರು ಲಂಡನ್ನಿನಲ್ಲಿರುವ ತಮ್ಮ ಪ್ರತಿನಿಧಿಗೆ ಅಪ್ಪಣೆಮಾಡಿದ್ದಾರೆ.

ಕಾನ್‌ಸ್ಟಾಂಟಿನೋಪಲ್ಲಿನಲ್ಲೂ ಅದ್ರಿಯಾನೋಪಲ್ ಕೋಟೆಯಲ್ಲೂ ಇರುವ ಫಿರಂಗಿಮದ್ದಿನ ಮನೆಗಳಲ್ಲಿ ಗದ್ದಲವೆದ್ದಿದ್ದು ೫ ಮಂದಿ ಜರ್ಮನರು ಕೊಲ್ಲಲ್ಪಟ್ಟರು. ತುರ್ಕಿಯನ್ನು ಜರ್ಮನಿಯವರ ಮಾಯಾಜಾಲಕ್ಕೆ ಒಳಬೀಳಿಸಿ ಯುದ್ಧಕ್ಕೆ ನಿಲ್ಲುವಂತೆ ಮಾಡಿದ ಎನ್ವರ್‌ಬೇಯವರ ಮಂದಿರದ ಮೇಲೆ ಸಿಡಿಮದ್ದುಗಳನ್ನು ಹಾಕಿದರು. ಆದರೆ ಅವರು ಏಟಿಗೆ ಸಿಕ್ಕದೆ ತಪ್ಪಿಸಿಕೊಂಡರು.

ಗ್ರೀಕರು ಎಲ್ಲಿ ಶತ್ರುಗಳ ಪಕ್ಷಕ್ಕೆ ಸೇರಿಕೊಳ್ಳುವರೋ ಎಂಬ ಭಯದಿಂದ ಜರ್ಮನ್ ಚಕ್ರವರ್ತಿಯವರು ಪೂರ್ವದಲ್ಲಿ ಆಸ್ಟ್ರಿಯಾ ಎಲಿಜ್‌ಬೆತ್ ಚಕ್ರವರ್ತಿನಿಯವರಿಗಾಗಿ ೪೦ ಲಕ್ಷ ಪೌನುಗಳ ವ್ಯಯದಿಂದ ಕಟ್ಟಿಸಿರುವ ಕೆಲವು ಸುಂದರವಾದ ಮಂದಿರಗಳನ್ನು ಗ್ರೀಕರ ಕಡೆಯ ಸ್ವಿಸ್‌ಹೋಟಲ್ ಸಿಂಡಿಕೇಟಿನವರಿಗೆ ಬಹಳ ಕಡಿಮೆ ಬೆಲೆಗೆ ಕೊಟ್ಟುಬಿಡುವವರಾಗಿದ್ದಾರಂತೆ.

ಹಾಲೆಂಡ್ ದೇಶದ ಪಾರ್ಲಿಮೆಂಟಿನಲ್ಲಿ ಅಲ್ಲಿನ ಕೋಶಾಧಿಕಾರಿಯು ಮಾತನಾಡುವಾಗ ನಮ್ಮ ದೇಶದ ತಾಟಸ್ಥ್ಯಕ್ಕೆ ಭಂಗವುಂಟಾಗಿ ಯುದ್ಧಕ್ಕೆ ಇಳಿಯಬೇಕಾಗುವುದೆಂದು ಪ್ರಭುತ್ವದವರು ಭಯಪಡುವುದಿಲ್ಲ, ಆದರೆ ಧೈರ್ಯದಿಂದಿರುವುದಕ್ಕೆ ಅವಕಾಶವಿಲ್ಲ. ಅದುಕಾರಣ ತಕ್ಕಷ್ಟು ಸೈನ್ಯವನ್ನೂ ಹಣವನ್ನೂ ಕೂಡಿಸಿಕೊಂಡಿರಬೇಕಾದುದು ಅವಶ್ಯಕವು ಎಂದು ನುಡಿದಿರುವರು.

ಇನ್ನೂ ನಮ್ಮವರಿಗೆ ದೆಯ್ಯದ ಭಯವು ತಪ್ಪಿಲ್ಲ. ಅಲಹಾಬಾದ್ ಜಿಲ್ಲೆಯ ಒಂದು ಗ್ರಾಮದಲ್ಲಿ ಒಂದು ತಿಂಗಳ ಮಗುವಿಗೆ ಹಲ್ಲು ಮೂಡಿದುದರಿಂದ ಗ್ರಾಮಕ್ಕೆ ಅರಿಷ್ಟವಾಗುವುದೆಂದು ಹೇಳಿ ತಾಯ್ತಂದೆಗಳು ಆ ಮಗುವನ್ನು ಜೀವಸಹಿತ ಹೂತುಬಿಟ್ಟರಂತೆ. ಇದರಿಂದ ತಂದೆಗೆ ದ್ವೀಪಾಂತರವಾಸ ಶಿಕ್ಷೆಯಾಗಿದ್ದು ಮಗುವಿಗೆ ಜೀವ ಹೋದಮೇಲೆ ಹೂತರೆಂಬುದು ಅಪ್ಪೀಲಿನಲ್ಲಿ ತಿಳಿಯಬಂದುದರಿಂದ ಶಿಕ್ಷೆಯ ಬಿಡುಗಡೆಯಾಯಿತು.

ಫಿನ್‌ಲ್ಯಾಂಡ್ ತೀರದ ಪ್ರಾಂತದಲ್ಲಿ ನೀರಿನೊಳಗಿದ್ದ ಮದ್ದಿನ ಗೋಳಕ್ಕೆ ಬಡಿದು ಸ್ವೀಡನ್ ದೇಶದ ಮೂರು ಹಡಗುಗಳು ಮುಳುಗಿಹೋದುವು. ಅವುಗಳಲ್ಲಿದ್ದ ಕಳಾಸಿಗಳು ಸತ್ತುಹೋದರು. ಈ ಮದ್ದಿನ ಗೋಳಗಳನ್ನು ಜರ್ಮನರೇ ಇಟ್ಟಿದ್ದರೆಂದು ಸ್ವೀಡನ್ ದೇಶೀಯರು ಯೋಚಿಸಿದ್ದಾರೆ. ಜರ್ಮನರ ಯುದ್ಧದ ಹಡಗುಗಳು ಅದಕ್ಕೆ ಮುಂಚೆ ಫಿನ್‌ಲ್ಯಾಂಡಿನ ಪಾರ್ಶ್ವದಲ್ಲಿ ತಿರುಗುತ್ತಿದ್ದುವಂತೆ.

ಈಜಿಪ್ಟಿನ ಹಿಂದಿನ ಸುಲ್ತಾನನು ಯುದ್ಧಾರಂಭಕಾಲದಿಂದಲೂ ತುರ್ಕಿಯಲ್ಲಿ ಹೋಗಿ ಸೇರಿಕೊಂಡು ಜರ್ಮನಿ ಪಕ್ಷಪಾತಿಯಾಗಿದ್ದನು. ಈಗ ಆಂಗ್ಲಪ್ರಭುತ್ವದವರು ಈಜಿಪ್ಟನ್ನು ತುರ್ಕಿಯ ಅಧೀನತೆಯಿಂದ ತಪ್ಪಿಸಿ, ತಮ್ಮ ಸಾಮ್ರಾಜ್ಯಕ್ಕೆ ಒಳಪಡಿಸಿಕೊಂಡು ಅದಕ್ಕೆ ಹಿಂದಿನ ಸುಲ್ತಾನನ ಚಿಕ್ಕಪ್ಪಂದಿರಾದ ಹುಸ್ಸೇನ್‌ರಾಜಕುಮಾರರನ್ನು ಖೆಡೀವ್ (ಪ್ರಭು) ವನ್ನಾಗಿ ನಿಯಮಿಸಿ, ಸಿಂಹಾಸನಾರೋಹಣಗೊಳಿಸಿದರು. ಪ್ರಜೆಗಳೆಲ್ಲರೂ ಹೊಸ ಸುಲ್ತಾನರನ್ನು ಗೌರವದಿಂದಲೂ ಆನಂದದಿಂದಲೂ ಸ್ವಾಗತಿಸಿದ್ದಾರೆ.

ರಣರಂಗದಲ್ಲಿರತಕ್ಕ ಮಿತ್ರಮಂಡಲಿಯ ಸೈನಿಕರಿಗೆ ಅವರವರ ಮನೆಯಲ್ಲಿಗಿಂತಲೂ ವಿಶೇಷವಾದ ಊಟಉಪಚಾರ ಮೊದಲಾದವುಗಳು ಈಗಿನ ಕ್ರಿಸ್ತುಮಸ್ ಹಬ್ಬದಲ್ಲಿ ನಡೆಯುವಂತೆ ಶ್ಲಾಘ್ಯವಾದ ಏರ್ಪಾಟು ನಡೆದಿದೆ. ರುಚಿರುಚಿಯಾದ ರೊಟ್ಟಿಗಳು, ಹಾಲು, ಹಣ್ಣುಗಳು, ಹೊಗೆಬತ್ತಿಗಳು, ಉತ್ತಮವಾದ ಉಡುಪುಗಳೂ ಸಹ ಅವರುಗಳಿಗೆ ಹಂಚಲ್ಪಡುವುವು. ಫ್ರೆಂಚರ ಸೈನ್ಯದವರು ಹೋಗಿಬರುವ ಮಾರ್ಗದಲ್ಲಿ ೧ ವಾರದವರೆಗೆ ಔತಣವನ್ನು ಮಾಡಿಸುವುದಕ್ಕಾಗಿ ಸೈಮೂರಿಕ್ ಹಿಕ್ಸ್ ಎಂಬುವರು ಏರ್ಪಡಿಸಿದ್ದಾರೆ.

ಯುದ್ಧಾರಂಭಕಾಲದಿಂದ ನವಂಬರ್ ತಿಂಗಳ ಪ್ರಾರಂಭದವರೆಗೆ ಶತ್ರುಗಳ ಕೈಗೆ ಸೆರೆ ಸಿಕ್ಕಿಹೋಗಿರುವ ಮಿತ್ರಮಂಡಲಿಯವರ ಸೈನಿಕರ ಸಂಖ್ಯಾವಿವರವು ಹೇಗೆಂದರೆ.—

	ಉದ್ಯೋಗಿಗಳು	ಸೈನಿಕರು
ಆಂಗ್ಲರಲ್ಲಿ	೪೧೭	೧೫೭೩೦
ಫ್ರೆಂಚರಲ್ಲಿ	೩೧೩೮	೧೮೮೬೧೮
ರಷ್ಯಾದವರಲ್ಲಿ	೩೧೨೧	೧೮೬೭೭೯
ಬೆಲ್ಜಿಯಮ್ಮನವರಲ್ಲಿ	೫೩೭	೩೪೯೦೭
ಒಟ್ಟು	೪೨೧೩	೪೨೬೦೩೪

ನಮ್ಮ ವೈಸ್ರಾಯರ ಕುಮಾರರಾದ ಲೆಫ್ಟನೆಂಟ್ ಇ. ಸಿ. ಹಾರ್ಡಿಂಜ್‌ರವರು ಯುದ್ಧಲ್ಲಿ ಗಾಯಗೊಂಡು ವೈದ್ಯಶಾಲೆಯಲ್ಲಿ ಚಿಕಿತ್ಸೆಗೊಳ್ಳುತ್ತಿರುವರೆಂಬ ಸುದ್ದಿಯು ಈಗ್ಗೆ ೩ ತಿಂಗಳಲ್ಲಿ ಬಂದಿದ್ದಿತಷ್ಟೆ. ಕಡೆಗೂ ಚಿಕಿತ್ಸೆಯು ಫಲವಾಗದೆ ಅವರು ತೀರಿಕೊಂಡರೆಂಬ ದುಃಖಕರವಾದ ವಾರ್ತೆಯು ಕಳೆದವಾರ ಬಂದಿರುವುದು. ಮೊನ್ನೆತಾನೇ ಪತ್ನೀವಿಯೋಗವನ್ನು ಹೊಂದಿರುವ ನಮ್ಮ ಪ್ರಿಯ ವೈಸ್ರಾಯರಿಗೆ ಇಂಥ ಜ್ಯೇಷ್ಠಪುತ್ರವಿಯೋಗವೂ ಪ್ರಾಪ್ತವಾದುದಕ್ಕಾಗಿ ಭಾರತೀಯರೆಲ್ಲರೂ ಅತಿಶಯವಾಗಿ ದುಃಖಿಸುತ್ತಿರುವರು. ಅನಂತವಿಧದಲ್ಲಿ ತಮ್ಮ ಅನುತಾಪವನ್ನು ನಿವೇದಿಸುತ್ತಿರುವರು.

ವಿಶೇಷವಾರ್ತೆ.

ಉಭಯಪಕ್ಷದ ಸ್ಥಿತಿಗಳನ್ನು ಅವಲೋಕಿಸಿದ ದೀರ್ಘದರ್ಶಿಯಾದ ಯುದ್ಧಕಲಾವಿಶಾರದನಾದ ಫ್ರಾನ್ಸ್ ದೊಡ್ಡ ಮನುಷ್ಯನೊಬ್ಬನು ಈ ಯುದ್ಧವು ಇನ್ನು ಮೂರುವರ್ಷಗಳ ವರೆಗೂ ಸಾಗುವುದೆಂದು ಅಭಿಪ್ರಾಯಪಟ್ಟಿದ್ದಾನೆ. ಹಲವರು ಇದೇ ಭವಿಷ್ಯತ್ತನ್ನು ಆಡುತ್ತಿದ್ದಾರೆ.

ಪೋಲ್ಲಾಂಡಿನ ಬಳಿಯಲ್ಲಿನ ನಾಶಕಾರಿಯುದ್ಧದಲ್ಲಿ ತಮಗೆ ಅಪಜಯವಾದುದರಿಂದ ಬರ್ಲಿನ್ ಪಟ್ಟಣದ ಜರ್ಮನ್ ಪ್ರಜೆಗಳು ಕಳವಳಗೊಂಡಿದ್ದಾರಂತೆ ಮತ್ತೂ ತಮ್ಮ ಊರಿನ ಮೇಲೆ ಶತ್ರುಗಳ ವಾಯುವಿಮಾನದ ಸಿಡಿಮದ್ದುಗಳು ಯಾವಾಗ ಬೀಳುವವೋ ಎಂದು ಅವರು ಭಯಪಡುತ್ತಿದ್ದಾರೆ. ಆದರೂ ಕಡೆಗೆ ತಮಗೆ ಜಯವಾಗುವುದೆಂದು ಅವರು ನಿರೀಕ್ಷಿಸುತ್ತಿದ್ದಾರೆ.

ಜರ್ಮನಿಯವರು ಅನುಸರಿಸುತ್ತಿರುವ ಯುದ್ಧಮಾರ್ಗವು ಪ್ರಪಂಚವೆಲ್ಲಾ ಅಗೌರವಕ್ಕೆ ಪಾತ್ರವಾಯಿತಂತಲೂ ಪ್ರಪಂಚವವೆಲ್ಲಾ ಸೇರಿ ಜರ್ಮನಿಗೆ ಜಯವು ಪ್ರಾಪ್ತವಾಗದಂತೆ ಮಾಡುವರೆಂಬುವಾಗಿಯೂ ಇದನ್ನು ಜರ್ಮನಿಯವರಿಗೆ ತಿಳಿಯಪಡಿಸಬೇಕೆಂತಲೂ ಅಮೇರಿಕಾದಲ್ಲಿರುವ ಜರ್ಮನರನ್ನು ನಾವು ಕೋರುತ್ತೇವೆಂತಲೂ ನ್ಯೂಯಾರ್ಕಿನ ಟೈಮ್ಸ್ ಪತ್ರಿಕೆಯು ಹೇಳಿರುತ್ತದೆ. ಜರ್ಮನಿಗೆ ಜಯಪ್ರಾಪ್ತಿಯಾದರೆ ಪ್ರಪಂಚದಲ್ಲಿ ಶಾಂತಿಯೂ ಪ್ರಜಾಕ್ಷೇಮವೂ ಉಂಟಾಗುವದಿಲ್ಲವೆಂಬುದು ಆ ಲೇಖಕರ ಅಭಿಪ್ರಾಯವಾಗಿದೆ.

ಜರ್ಮನರು ರಾಜಕೀಯ ವಿಷಯಸಂಬಂಧವಾದ ಕೆಲ ದೂತರನ್ನು ಅಮೇರಿಕಕ್ಕೆ ಕಳುಹಿಸಿ ಅವರ ಮೂಲಕ ಅಮೇರಿಕನ್ನರ ಬಲವನ್ನು ತಮ್ಮ ಕಡೆಗೆ ಉಂಟುಮಾಡಿಕೊಳ್ಳಲು ಪ್ರಯತ್ನಿಸಿದರು. ಇವರು ದಕ್ಷಿಣ ಅಮೇರಿಕಕ್ಕೆ ಹೋಗಿ ಬಹಳ ಪ್ರಯತ್ನಪಟ್ಟರು. ಆದರೂ ಜರ್ಮನರು ಬೆಲ್ಜಿಯಂದೇಶದಲ್ಲಿ ನಡೆಯಿಸಿರುವ ದುರಾಗತಗಳನ್ನು ಕೇಳಿ ರೇಗಿಹೋಗಿರುವ ಅಮೇರಿಕನ್ನರು ಇವರುಗಳ ಮಾತಿಗೆ ಸೋಲಲಿಲ್ಲ. ಇಂಥಸುದ್ದಿಯನ್ನು ಜರ್ಮನ್‌ದೇಶದ ಪತ್ರಿಕೆಗಳು ಕೇಳಿ ಸಿಡುಕುಕೊಂಡು ಇನ್ನು ಮುಂದೆ ತಾವು ಅಮೇರಿಕನ್ನರನ್ನು ಯಾತಕ್ಕು ಅನುಸರಿಸಬೇಕಾದ ಅವಶ್ಯಕತೆ ಇರುವುದಿಲ್ಲವೆಂದು ಒದರಿಕೊಳ್ಳುತ್ತಿವೆ.

ಇಂಗ್ಲೀಷರ ಕೃತನಿಶ್ಚಯ.

ಇಂಗ್ಲೆಂಡ್ ಕೋಶಾಧ್ಯಕ್ಷರಾದ ಲಾಯಿಡ್ ಜಾರ್ಜ್‌ರವರು ಒಬ್ಬ ದೊಡ್ಡಮನುಷ್ಯರೊಡನೆ ಸಂಭಾಷಿಸುವಾಗ ಇಂಗ್ಲೀಷರ ಕೃತನಿಶ್ಚಯವನ್ನು ಹೀಗೆಂದು ತಿಳಿಯಿಸಿದರು. ಈಗ ಯುದ್ಧಕ್ಕಾಗಿ ಇಂಗ್ಲೀಷ್‌ನವರಿಗೆ ತಿಂಗಳೊಂದಕ್ಕೆ ೪ ಕೋಟಿ ೫೦ ಲಕ್ಷ ಪೌಂಡ್ (೬೭೫ ಕೋಟಿ ರೂ) ವೆಚ್ಚವಾಗುತ್ತಿದೆ. ಈಗ ಯುದ್ಧಕ್ಕೆ ಸನ್ನದ್ಧರಾಗುತ್ತಿರುವ ಭೂಜಲಸೈನಿಕರೆಲ್ಲಾ ೨೦ ಲಕ್ಷ ಮಂದಿಗಳಾಗಿದ್ದಾರೆ. ಇನ್ನು ಸ್ವಲ್ಪಕಾಲದೊಳಗೆ ೩೫ ಲಕ್ಷ ಮಂದಿಗಳಾಗುತ್ತಾರೆ. ಇವರಲ್ಲಿ ಎಲ್ಲರೂ ಒಳ್ಳೇ ದೃಢಾಂಗರಾಗಿದ್ದಾರೆ. ಬರುವ ವಸಂತ ಋತುವಿಗೆ ಮುಂಚೆ ಫ್ರೆಂಚರಿಗೆ ಸಹಾಯವಾಗಿ ಒಳ್ಳೆ ಚನ್ನಾಗಿ ಶಿಕ್ಷಿತರಾದ ೫ಲಕ್ಷಮಂದಿ ಸೈನಿಕರು ಹೋಗುವರು. ಇದೇರೀತಿಯಲ್ಲಿ ನಮಗೆ ಜಯಸಿದ್ಧಿಯಾಗುವವರೆಗೂ ಜರುಗುತ್ತಿರುವುದು. ಲೋಕವಾತ್ಸಲ್ಯವೂ ಧೈರ್ಯಗುಂದದೆ ಶಾಂತವಾಗಿ ಯುದ್ಧವನ್ನು ಕೊನೆಯವರೆಗೂ ಸಾಗಿಸಿಯೇ ತೀರಬೇಕೆಂದು ಇಂಗ್ಲೀಷರು ನಿಶ್ಚಯಿಸಿರುವರು.

ಪತ್ರವ್ಯವಹಾರ.

ಸೊರಬ.

ಅಯ್ಯಾ ಪತ್ರಪ್ರಕಾಶಕರೇ !

ಮೈಸೂರುಸೀಮೆಯು ಘನತೆಯನ್ನೈದಿದ ಶ್ರೀಮನ್ಮಹಾರಾಜರವರ ಸರ್ಕಾರದ ವಿದ್ಯಾಭ್ಯಾಸದ ಇಲಾಖೆಯಲ್ಲಿ ಈಗೀಗ ಅನೇಕ ಬದಲಾವಣೆಗಳು ನಡೆದೂ ಮತ್ತೂ ನಡೆಯುತ್ತಲೂ ಇರುವುದು ಸರಿಯಷ್ಟೆ. ಇದುವರೆಗಿನ ವರ್ನಾಟಿನೊಳಗೆ ಎ. ವಿ. ಸ್ಕೂಲುಗಳಲ್ಲಿ ಬಡತಿ ದೊರೆಯದೆ ಸದರಿ ಸ್ಕೂಲುಗಳಲ್ಲಿಯೇ ಸದ್ಯಕ್ಕೆ ನಿಂತಿರತಕ್ಕ ಮಾಸ್ತರುಗಳಿಗೆ ಇನ್ನು ಮುಂದೆ ಜಾರಿಗೆ ಬರುವುದರಲ್ಲಿರುವ ವಿಲೇಜು ಎಲಿಮೆಂಟರಿ ಸ್ಕೂಲುಗಳ ಸ್ಕೀಮಿನಲ್ಲಿ ಬಡತಿಯಿಂದ ಎ. ವಿ. ಸ್ಕೂಲುಸ್ಥಳವನ್ನು ತಪ್ಪಿಸಿ ವಿಲೇಜು ಎಲಿಮೆಂಟರಿ ಸ್ಕೂಲುಗಳಿಗೆ ವರ್ಗಮಾಡುತ್ತಾರೆಂಬ ವದಂತಿಯು ತುಂಬಾ ಇರುವುದಾಗಿ ವರ್ತಮಾನವು ಹರಡಿಕೊಂಡಿದೆ. ಆದುದರಿಂದ ತಮ್ಮಪತ್ರಿಕಾಮೂಲಕ ತಾವು ಈಕೆಳಗಣವಿಷಯವನ್ನು ಮೈ॥ ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳವರ ಗಮನಕ್ಕೆ ಬರುವಂತೆ ಮಾಡಿ ಬಡ ನೌಕರರುಗಳನ್ನು ಕಾಪಾಡಬೇಕೆಂದು ಪ್ರಾರ್ಥಿಸುತ್ತೇನೆ. ಯಾವಯಾವ ಮಾಸ್ತರುಗಳಿಗೆ ಎ. ವಿ. ಸ್ಕೂಲ್ ಸ್ಥಳವನ್ನು ತಪ್ಪಿಸಿ ವಿ. ಇ. ಸ್ಕೂಲಿಗೆ ಬಡತಿಯಿಂದ ವರ್ಗಮಾಡುವುದಕ್ಕೆ ಮೈ॥ ವಿದ್ಯಾಭ್ಯಾಸದ ಇಲಾಖಾ ಅಧಿಕಾರಿಗಳವರು ಇಷ್ಟಪಡುತ್ತಾರೋ ಅಂಥ ಮಾಸ್ಟರುಗಳಿಗೆ ಮುಂಚಿತವಾಗಿ "ಹಾಲಿ ಸಲ್ಲುತ್ತಿರುವ ತಲಬಿನಮೇಲೆ ಎ. ವಿ. ಸ್ಕೂಲಿನಲ್ಲಿಯೇ ಇರಲು ಇಷ್ಟವಿದೆಯೆ? ಅಥವಾ ಬಡತಿಮೇಲೆ ವಿ. ಇ. ಸ್ಕೂಲಿಗೆ ಹೋಗಲು ಇಷ್ಟವಿದೆಯೆ?" ಎಂಬುದನ್ನು ವಿಚಾರಿಸಿ ಸದರಿ ಮಾಸ್ಟರುಗಳ ಕೋರಿಕೆಯಂತೆಯಾಗಲಿ ಒಂದುವೇಳೆ ಇಷ್ಟರೊಳಗೆ ಆ ಏರ್ಪಾಡು ನಡೆದಿದ್ದಲ್ಲಿ ಸದರಿ ಮಾಸ್ಟರುಗಳಿಗೆ ಹುಕುಂ ತಲುಪಿದ ಕೂಡಲೆ ಅವರು ಅರಿಕೆಮಾಡಿಕೊಳ್ಳುವ ಅಹವಾಲಿನಂತೆಯಾಗಲಿ ದಯಾಳು ಇಲಾಖಾ ಅಧಿಕಾರಿಗಳವರು ದಯವಿಟ್ಟು ನಡೆಸಿಕೊಡುವ ಏರ್ಪಾಟನ್ನು ಉಂಟುಮಾಡಿಕೊಟ್ಟು, ಬಡ ನೌಕರರುಗಳನ್ನು ಕಾಪಾಡಿ ಕೀರ್ತಿ ಪಡೆದುಕೊಳ್ಳುವರಾಗಲೆಂದು ಕರ ಮುಗಿದು ಬೇಡಿಕೊಳ್ಳುವ.

ಓರ್ವ ವಿಧೇಯ ಸೇವಕ.

ಹೊಸಸಂತೆ.

ತುಮಕೂರು ಡಿಸ್ಟ್ರಿಕ್ಟ್ ಚಿಕ್ಕನಾಯ್ಕನಹಳ್ಳಿ ತಾಲ್ಲೋಕು ಹಂದನಕೆರೆ ಹೋಬಳಿ ಗ್ರಾಮಗಳಿಗೆ ಯಾವಸಂತೆಯೂ ಸಮೀಪವಾಗಿಲ್ಲದೆ ಗ್ರಾಮಾಂತರದ ಪ್ರಜೆಗಳಿಗೆ ಬಹಳ ಕಷ್ಟನಷ್ಟಗಳು ಸಂಭವಿಸುತ್ತಾ ಇದ್ದಿತು. ಈ ಹೋಬಳಿಗೆ ಮಧ್ಯಪ್ರದೇಶವಾದ ಮತ್ತಿಗಟ್ಟವೆಂಬ ಗ್ರಾಮದಲ್ಲಿ ಸಂತೆ ನಡೆಯಿಸಲು ಏರ್ಪಾಡುಮಾಡಿ ಇದೇ ಮತ್ತಿಗಟ್ಟದ ವ್ಯಾಪಾರವರ್ತಿಗಳಾದ ಸಿದ್ಧರಾಮೇಗೌಡರು ಪ್ರಥಮೋದ್ಯೋಗಿಗಳಾಗಿ ನಿಂತು ಸಹಾಯವರ್ತಿಗಳಾದ ಮಲ್ಲಿಗೆರೆ ನಂಜೇಗೌಡರೇ ಮುಂತಾದ ಮುಖಂಡರ ಸಹಾಯದಿಂದ ನಮ್ಮ ಮೈಸೂರು ಸರ್ಕಾರದವರ ಮಂಜೂರಾತಿಯನ್ನು ಪಡೆದು ತಾ॥ ೧೧ ನೇ ಶುಕ್ರವಾರ ಪ್ರಥಮಸಂತೆಯು ಈ ಪೇಟೆಗೆ ಸಭೆಯವರಿಂದ ನಿಯಮಿಸಲ್ಪಟ್ಟ ಕರಿಸಿದ್ಧಶೆಟ್ಟರು ಸೋರಲಮಾವು ಯಜಮಾನರು ಕೆಂಚವೀರಶೆಟ್ಟರು ಮೊದಲಾದ ವರ್ತಕಮಂಡಲಿಯವರ ಸಮುದಾಯದೊಡನೆ ಸುಗಮೇಶ್ವರನ ಪೂಜಾಕಾರ್ಯವೂ ಗ್ರಾಮಸ್ಥಿತ ಬಸವಣ್ಣದೇವರಿಗೆ ಉತ್ಸವವೂ ಧ್ವಜಸ್ಥಾಪನೆಮಾಡಿ ಪ್ರಥಮ ಸಂತೆಯು ಸಾವಿರಾರು ಪ್ರಜೆಗಳಿಂದ ಅಲಂಕರಿಸಲ್ಪಟ್ಟು ಬಹು ಶ್ಲಾಘ್ಯವಾಗಿ ನಡಿಸಲ್ಪಟ್ಟಿತು. ಈ ಮಹೋತ್ಸವ ಸಮಯದಲ್ಲಿ ನಮ್ಮ ತಾ॥ ಅಮಲ್ದಾರರವರು ಮತ್ತೂ ಪೋಲೀಸ್ ಇನ್ಸ್‌ಪೆಕ್ಟರ್‌ರವರು ಸಹ ದಯಮಾಡಿಸಿ ಈ ನೂತನಸಂತೆಯು ಪರಂಪರೆಯಿಂದ ಅಲಂಕರಿಸಿದ್ದ ಸ್ಕೂಲ್ ಕಟ್ಟಡಕ್ಕೆ ಸಂತೋಷದೊಡನೆ ದಯಮಾಡಿಸಿ ಗ್ರಾಮಸ್ಥರ ಮತ್ತೂ ಮೆಂಬರುಗಳ ವಂದನೆಯನ್ನು ಸ್ವೀಕರಿಸಿ ಈ ನೂತನ ಸಂತೆಯು ಪುರೋಭಿವೃದ್ಧಿಗೆ ಬರಲು ಅನೇಕ ಬುದ್ಧಿವಾದಗಳನ್ನು ಅಪ್ಪಣೆಕೊಡಿಸಿ ದಯಮಾಡಿಸಿದರು. ತಾ॥ ೧೨ ನೆ ಶನಿವಾರ ಪರಪೇಟೆಗಳಿಂದ ಬಂದಿದ್ದ ಕೋರಿಶೆಟ್ಟರು ಮೊದಲಾದ ವರ್ತಕಮಂಡಲಿಯವರಿಗೆ ಉಡುಗೆರೆಗಳು ಒಪ್ಪಿಸಲ್ಪಟ್ಟು [illegible]ತನ ಸಂತೆಯು ಶಾಶ್ವತವಾಗಿ ನಡೆಯಲು ಏರ್ಪಾಟಂ [illegible]ಕಯಿಸಿ ದಯಮಾಡಿಸಿದರು. ಪರಂತು ಈ ಸಂತೆ [illegible]ಡಿಸಿ ಅನೇಕ ಪ್ರಜೆಗಳಿಗೆ ಮಹದುಪಕಾರವನ್ನುಂಟುಮಾಡಿದ ಮಹನೀಯರ ಗುಣಕಥನವು ಬಹು ಶ್ಲಾಘ್ಯವಾಗಿದೆ. ಈ ಮೇಲ್ಕಂಡವರು ಮಾಡಿದ ಸಂತೆಯಿಂದ ಅನೇಕ ಪ್ರಯೋಜನವಾದರೂ, ವರ್ತಕಮಂಡಲಿಯವರಿಗೆ ಮತ್ತೂ ಇತರ ಜನಗಳಿಗೆ ವ್ಯಾಪಾರಾಭಿವೃದ್ಧಿಗೂ ಕ್ಷೇಮಸಮಾಚಾರಕ್ಕೂ ಕಾಗದಪತ್ರಗಳು ನಡೆಯಲು ಈಗ ಇರುವ ಸೌಕರ್ಯವು ಸಾಲದಾಗಿ ತುಂಬಾ ವ್ಯಸನಪಡಬೇಕಾಗಿದೆ. ಈ ಕೊರತೆಯನ್ನೂ ದಯಾಳುಗಳಾದ ಸರ್ಕಾರದವರು ಹೋಗಲಾಡಿಸಿ ಕಾಗದಪತ್ರಗಳು ಸರಾಗವಾಗಿ ನಡೆಯಲು ಈ ತಾಲ್ಲೋಕಿಗೆ ಮತ್ತಿಗಟ್ಟವೆಂಬ ಗ್ರಾಮವು ಮಧ್ಯದೇಶವಾಗಿರುವುದರಿಂದ ಅಲ್ಲೊಂದು ಪೋಸ್ಟ್‌ಆಫೀಸನ್ನು ಏರ್ಪಡಿಸಿ ಕೊಡುವರೆಂದು ನಂಬಿ ನಿರೀಕ್ಷಿಸುತ್ತೇವೆ. ಪೋಸ್ಟ್‌ಆಫೀಸ್ ಅಲ್ಲಿ ಏರ್ಪಾಟು ಆಗುವವರೆಗೂ ಈಗಿರುವ ವಿಲ್ಲೇಜ್ ಪೋಸ್ಟ್‌ಮ್ಯಾನಿನ ಜೊತೆಗೆ ಮತ್ತೊಬ್ಬನನ್ನು ನಿಯಮಿಸಿ ಕಾಗದಪತ್ರಗಳ ವಾರಕ್ಕೆರಡಾವರ್ತಿಯಾದರೂ ಎಲ್ಲರಿಗೂ ಸಿಕ್ಕುವಂತೆ ಏರ್ಪಾಡುಮಾಡುವರೆಂದು ನಿರೀಕ್ಷಿಸುತ್ತೇವೆ.

ಶಿಡ್ಲಘಟ್ಟದ ತಾಲ್ಲೂಕು ತೋಟಿಹಳ್ಳಿ.

ಈ ಊರಿಗೆ ಸುತ್ತಣ ೬ ಹಳ್ಳಿಗನ್ನು ಸೇರಿಸಿ ಒಂದು ಕೋಆಪರೇಟಿವ್ ಸೊಸೈಟಿಯನ್ನು ಸ್ಥಾಪಿಸಿಕೊಂಡಿದೆ. ಸ್ಥಾಪನೆಗಾಗಿ ಒಂದು ತಿಂಗಳು ಮಾತ್ರವೇ ಆಗಿದ್ದಾಗ್ಯೂ ೪೦ ಮಂದಿ ಮೆಂಬರುಗಳು ಸೇರಿ, ಇದರ ಪ್ರಯೋಜನವನ್ನು ತಿಳುವಳಿಕೆಗೆ ತಂದುಕೊಂಡಿರುತ್ತಾರೆ. ಅಲ್ಲದೆ ಸುತ್ತಣ ಗ್ರಾಮಾಂತರದ ರೈತಾದಿಗಳು ಬಿಚ್ಚುಗಟ್ಟಿ ಸೇರುವವರಾಗಿರುತ್ತಾರೆ ಪೂರ್ವದಲ್ಲಿ ಈ ಪ್ರಾಂತ್ಯ ಸಹಾಯದ ಬ್ಯಾಂಕುಗಳು ಏರ್ಪಟ್ಟಿದ್ದು ಬಡ ರೈತರು ತಮ್ಮ ಕಷ್ಟಾರ್ಜಿತವಾದ ಹಣವನ್ನು ಅನ್ಯಾಯವಾಗಿ ಕಳೆದುಕೊಂಡಿರುವುದರಿಂದ ಈಗಲೂ ಭಯಸ್ತರಾಗಿರುತ್ತಾರೆ. ಇಂಥಾವರಿಗೆಲ್ಲಾ ಸರಿಯಾದ ಬೋಧೆಯನ್ನು ಮಾಡಿ ಈಗಲೂ ತಿಳಿಸುತ್ತ ಈ ಸೊಸೈಟಿಯನ್ನು ಸ್ಥಾಪಿಸಿರುವ ಶಿಡ್ಲಘಟ್ಟದ ಪ್ರಜಾಪ್ರತಿನಿಧಿ ಮೆಂಬರು ಎಸ್ ಹಂಪಯ್ಯನವರು ತುಂಬಾ ಮೆಹನತ್ತು ಮಾಡುತ್ತ, ತಾವೇ ಸೆಕ್ರೆಟರಿಯಾಗಿಯೂ ಕೆಲಸಮಾಡುತ್ತಿದ್ದಾರೆ. ಮತ್ತೂ ಇವರ ಮೇಲ್ವಿಚಾರಣೆಯಲ್ಲಿಯೇ ಇಲ್ಲಿ ಒಂದು ವ್ಯವಸಾಯ ಸಂಘವೂ ಸ್ಥಾಪಿತವಾಗಿದೆ ಡೆಪ್ಯೂಟಿ ಡೈರೆಕ್ಟರವರಾದ ಮಿ॥ ಯಜ್ಞನಾರಣಯ್ಯರವರನ್ನು ಈ ತಾ॥ ೧೭ ರಲ್ಲಿ ಕರೆಸಿಕೊಂಡಿದ್ದು, ಅವರ ಮೂಲಕ ಕೆಲವು ಮಾದ್ರೀ ಬೆಳೆಗಳ ವಿಷಯವಾಗಿ ಪ್ರಶ್ನೆಮಾಡಿ ಈ ಸಂಘದವರು ಮುತವರ್ಜಿಯಾಗಿ ಕೆಲಸನಡಸುತ್ತಿದ್ದಾರೆ ರಾಗಿಯನ್ನು ಕಣ ಮಾಡುವ ಯಂತ್ರವನ್ನು ಸದ್ಯಕ್ಕೆ ತರಿಸಿ ಕೆಲಸ ಮಾಡಿರುವರಾಗಿದ್ದಾರೆ. ಇಂಜನ್ ಸಹಾಯದಿಂದ ಕಬ್ಬನ್ನು ಗಾಣವಾಡುವ ಮಿಷೀನ್ ತರಿಸಬೇಕೆಂದು ಸಂಘದವರು ಬರೆದುಕೊಂಡಿರಲು ಕೋಲಾರ ಡಿ॥ ಪಿ॥ ಕಾ॥ ಸೂಪರಿಂಟೆಂಡೆಂಟರಾದ ಮಿ॥ ಎಫ್. ಎಲ್. ರಾಘವಾಚಾರ್‍ಯರವರೂ ಮಿ॥ ವೈ ನರಸಿಂಗರಾಯರವರೂ ಇಲ್ಲಿಗೆ ದಯಮಾಡಿಸಿದ್ದು ಅದರ ಅನುಕೂಲ್ಯಗಳನ್ನು ತಿಳಿಸಿದರು ವಿಶೇಷ ವಿಷಯಗಳನ್ನು ವಿವರವಾಗಿ ಬರೆಸುವಂತೆ ಇಂಡಸ್ಟ್ರಿಯಲ್ ಮತ್ತೂ ಕಾಮರ್ಸ್‌ಕಮಿಟಿ ಸೆಕ್ರೆಟರಿಯವರಿಗೆ ಬರೆದುಕೊಂಡಿರಲು ಯಂತ್ರಸ್ಥಾಪನೆಗೆ ಇನ್ನು ೧ ತಿಂಗಳು ಅವಕಾಶಬೇಕೆಂದು ಹುಕುಂಬಂದಿದೆ ಈ ಯಾರಭ್ಯ ಇಲ್ಲ ಆಲೆಮನೆಗಳು ಆರಂಭವಾಗುವುದರಿಂದ ಅನುಕೂಲವಿಲ್ಲದೆ ಮುಂದಣ ವರ್ಷಕ್ಕೆ ಇದರ ಯೋಚನೆಯನ್ನು ಇಟ್ಟುಕೊಂಡಿದ್ದಾರೆ. ಒಂದು ನೈಟ್‌ಸ್ಕೂಲು ಸಹ ಏರ್ಪಡಿಸಿರುತ್ತಾರೆ. ಕನ್ನಡ ವರ್ತಮಾನಪತ್ರಿಕೆಗಳನ್ನು ತರಿಸಿ ವಾರಕ್ಕೆ ಎರಡು ಮೂರು ಸಾರಿ ಈ ರೈತರನ್ನು ಜಮಾಯಿಸಿ ಸಂಗತಿಗಳನ್ನು ಓದಿ ಹೇಳುತ್ತಿದ್ದಾರೆ. ಒಂದು ರೀಡಿಂಗ್‌ರೂಮನ್ನು ಏರ್ಪಡಿಸಿ ಅಲ್ಲಿ ಕೆಲವು ಗ್ರಂಥಗಳನ್ನು ಇರಿಸುವಂತೆ ಏರ್ಪಾಡು ಮಾಡಿದ್ದಾರೆ. ಸಾಧ್ಯವಾದಮಟ್ಟಿಗೆ ಈ ವರ್ಷದಲ್ಲಿಯೇ ಈ ಸೊಸೈಟಿಗೆ ಸೇರಿರುವ ೬ ಹಳ್ಳಿಗಳಲ್ಲಿಯೂ ಒಂದೊಂದು ಗ್ರಾಂಟ್‌ಸ್ಕೂಲು ಅಥವಾ ರಾತ್ರಿ ಪಾಠಶಾಲೆಗಳನ್ನು ಏರ್ಪಡಿಸಿ ವ್ಯವಸಾಯ ಕಾರ್‍ಯದಲ್ಲಿಯೂ ಶಾಸ್ತ್ರೀಯವಾದ ರೀತಿಯಲ್ಲಿ ಒಂದೊಂದು ತೆರದ ಕೆಲಸವನ್ನು ಮಾಡಿಸುವುದರ ಮೂಲಕ ಗ್ರಾಮಗಳನ್ನು ಅಭಿವೃದ್ಧಿಗೆ ತರಬೇಕೆಂದಿರುವ ಇವರ ಸಂಕಲ್ಪವು ಶೀಘ್ರವಾಗಿ ನೆರವೇರುವುದಾಗಿದೆ. ಮಿ॥ ಅಮಲ್ದಾರ್ ಘಂಸರ್‌ಸಾಹೇಬರವರು ತಾ॥ ೧೫ ರಲ್ಲಿ ಇಲ್ಲಿಗೆ ದಯಮಾಡಿಸಿದ್ದು ಮಿ॥ಎಸ್. ಹಂಪಯ್ಯನವರ ಪ್ರೋತ್ಸಾಹಕ್ಕೆ ಸಂತೋಷಪಟ್ಟಿರುತ್ತಾರೆ. ಇದರಂತೆಯೇ ಇತರ ಮೆಂಬರುಗಳೂ ಪ್ರಯತ್ನಪಡುವುದಾದರೆ ದೇಶವು ಶೀಘ್ರದಲ್ಲಿ ಅಭಿವೃದ್ಧಿಗೆ ಬರುವಂತಾದೀತು.

ವಿಜ್ಞಾಪನೆ.

ಈ ಸಮಯ ಬಿಡಬೇಡಿರಿ. ಮುಂದೆ ದೊರೆಯಲಾರದು. ಮೊಳಕಾಲ್ಮೂರಿನ ಪ್ರಸಿದ್ಧವಾದ ರೇಷ್ಮೆಯವಸ್ತ್ರಗಳು ಬೇಕೋ? ಬೆಲೆಸುಲಭ! ಬಣ್ಣ ಗ್ಯಾರಂಟಿಯಾದದ್ದು. ಒಂದು ಸಲ ತರಿಸಿನೋಡಿರಿ!! ನಮ್ಮಲ್ಲಿ ಹೊದಿಯುವ ವಸ್ತ್ರಗಳೂ, ಮೊಗಟಗಳೂ, ಸೀರೆಗಳೂ, ನಡಕಟ್ಟುಗಳೂ, ಲಿಂಗದವಸ್ತ್ರಗಳೂ, ಕೈ ವಸ್ತ್ರಗಳೂ ಬಹಳ ಚೆನ್ನಾಗಿ ಎಲ್ಲಾ ರಂಗಿನಲ್ಲಿಯೂ ತಯಾರಾಗುತ್ತವೆ. ನಾವು ಮೈಸೂರು, ಮದ್ರಾಸು ಸೀಮೆಗಳ ಎಲ್ಲಾ ಭಾಗಕ್ಕೂ ನಮ್ಮ ಮಾಲನ್ನು ರವಾನಿಸುತ್ತೇವೆ. ನಮ್ಮ ಮಾಲುಗಳಿಗೆ ಬಹುಮಾನಗಳೂ, ಮೆಡಲುಗಳೂ, ಬಂದಿವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಹಿಮಂತಋತುವಿನ ದರಗಳು. ೧ನೆ ನಂ ವಸ್ತ್ರಗಳು ತೊಲೆ ೧ಕ್ಕೆ ೦-೭-೦. ೨ನೆ ನಂ. ವಸ್ತ್ರಗಳು ತೊಲೆ ೧ಕ್ಕೆ ೦-೬-೯. (ಮೊಗಟ, ಅರಳೆಪೇಟೆ ಸೀರೆಗಳೂ, ನಡಕಟ್ಟು, ಲಿಂಗದವಸ್ತ್ರಗಳು) ೧ನೆ ನಂ. ಮಾಲು ತೊಲೆ ೧ಕ್ಕೆ ೦-೮-೦. ೨ನೆ ನಂ. ಮಾಲು ತೊಲೆ ೧ಕ್ಕೆ ೦-೭-೬. ನಮ್ಮವಿಳಾಸ: —

5 ಎಂ. ಎಸ್. ಮಲಕಣ್ಣ, ಮತ್ತು ಬ್ರದರ್ಸ್,
ರೇಷ್ಮೆ ಜವಳಿ ವ್ಯಾಪಾರಿಗಳು. ಪೋಸ್ಟ್ ಮೊಳಕಾಲ್ಮೂರು

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

1

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ನೋಡಿ! (ಗುಣವಾಗದಿದ್ದರೆ ಹಣ ಪರತ !!) ನೋಡಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪಿತ್ತೋದ್ರೇಕವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರು, ಮೈ[illegible] ಉಂಟಾದವರು, ಮೂಲವ್ಯಾಧಿಯವರು, ವಾಂತಿಯ[illegible]ರು, ಮೇಹರಂಬಂಧದ ರೋಗವಿದ್ದವರು, ಧಾತು[illegible] ಪವರು, ಉಷ್ಣ ಹೋಗುವವರು, ಸೇವಿಸಬೇಕು [illegible]

ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ನರ್ವಿನ್, ಟಾನಿಕ್, ಗುಪ್ತಪ್ರದೇಶದ ಮೇಲೆ ಹುಟ್ಟುಗುವ ಎಲ್ಲಾತರದ ಬೊಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರಿತಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೊಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೊಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ —ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೆಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳುಸಹಿತ ಆದ ಸಮಾರಂಭ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೋ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೋ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಶಿದ್ಧರಾಮೇಶ್ವರ. ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೋ ಸಿಕ್ಕುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.

ಹೊಸಫ್ಯಾಷನ್—ಸಭ್ಯಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಉಪ್ರಕಾರ ೨ ಫೋಟೋ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ।।।=, ೧, ೧।, ಪ್ರಕಾರ, ಮತ್ತು ಬೆಳ್ಳಿಯದು ರು ೧। ರೋಲ್ಡ್ ಗೋಲ್ಡ್ ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨।।। ರೂ.

ಪರೂರಿಗೆ ಏಜಂಟರು ಬೇಕಾಗಿರುತ್ತಾರೆ ಆರ್ಡರ್ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ.

ನಮ್ಮವಿಳಾಸ— ಗಂಗಪ್ಪಾ ಜೀರಿಗೆ,
36 ಆರ್ಟಿಸ್ಟ್ ಸೊಲ್ಲಾಪುರ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ
ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂ
ಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು
13 ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರರಜ್ವರ ನಾಲ್ಕರಜ್ವರ- ಮಲೇರಿಯಾಜ್ವರ- ತಲೆನೋವು- ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳೆತ-ಹೊಟ್ಟೆ [illegible]ಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿ[illegible]ಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳ[illegible] ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು [illegible]ವು ಧೈರ್ಯವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ. [illegible]ದಕ್ಕೆ ಒಂದು ಇನಾಮು. ವಿ. ಪಿ ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ [illegible]ರುವಾಸನೆಯಿಂದ [illegible]ಡಿ ತಾಂಬೂಲವನ್ನು ರಂಜಿಸಿ ಆ[illegible]ಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀ[illegible]ಗಾರರಿಂದ ವಿಶೇಷ [illegible]ರ್ತಿಯನ್ನು ಸಂಪಾದಿಸಿ ನಾನಾತ[illegible]ಹಾ ಕೆಮ್ಮು, ದಮ್ಮು [illegible]ಸ, ವಾಂತಿ, ವಾಕರಿಕೆ, ಮಲಬಂಧ, ಅಗ್ನಿಮಾಂದ್ಯ, [illegible]ಂಕಟ, ಅರೋಚಕ, ಬಾಯಾರಿಕೆಗಳನ್ನು ತತ್ಕ್ಷಣ [illegible]ಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯಂ[illegible]ತುವುದರಲ್ಲಿ ಶ್ರೇಷ್ಠವಾದುದೆಂದು ಆಬಾಲವೃದ್ಧರಿಂದ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. [illegible]ಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ಡಿ॥

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು. 32.



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊತೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೊಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈ ಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಪೊಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತವಿದೊಂದೇ.

ಅನುಪಾನಪತ್ರಿಕೆ ಔಷಧಿಯೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧—೦—೦
ಟಪಾಲ್‌ಖರ್ಚ ಬೇರೆ.
ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರ.

ಬಹುಮಾನ! ಶ್ರೀ ಬಹುಮಾನ !!

ಅತ್ಯಾಶ್ಚರ್ಯಕರವಾದ ಬಹುಮಾನ.
೨೫ ಸಾವಿರ ರೂಪಾಯಿಗಳು ಹಂಚಲ್ಪಡುವವು
ದಿವ್ಯೌಷಧ ಬಳ್ಳಾರಿ. ಸುಪ್ರಸಿದ್ಧೌಷಧ
ಸರ್ವಜನಮನೋಲ್ಲಾಸಿನಿ ಅಂಡ್ ಕೋ ಇವರ

(• ನಾರಸಿಂಹಚೂರ್ಣವು •)

7

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಜವಾದುದಷ್ಟೆ. ಆದರೆ ಅನೇಕ ದುರ್ವ್ಯರ್ತನಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವುವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನ ಕಣ್ಣಾರ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವುವಿಧ ಔಷಧಗಳನ್ನು ವಿಶೇಷವಾದ ಬೆಲೆಯನಿಟ್ಟು ವಿಕ್ರಯಿಸಿದರು ಪ್ರಯೋಜನವು ಮಾತ್ರ ಕಡಿಮೆಯಾಗುಯತ್ತಿರುವದು ವಿಷಾದಕರವಾಗಿರುವದು. ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿ (ನಾರಸಿಂಹಚೂರ್ಣವು) ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ, ಅನೇಕತರಹೆಯ ಮೇಹರೋಗಗಳು, ಪಾಂಡುರೋಗ, ಪೀನಸ, ಹದಿನೆಂಟು ಬಗೆಯಾದ ಕುಷ್ಠಗಳು, ಎಂಟುವಿಧ ಉದರರೋಗಗಳು, ಭಗಂಧರವು, ಮೂತ್ರಕೃಛ್ರವು, ಗೃಧ್ರಸೀವಾತವು, ಕಾಮಿಲೆ, ಕ್ಷಯವು ಮಹಾಶ್ವಾಸಗಳು, ದಾರುಣವಾದ ಐದುಬಗೆಯಾದ ಕಾಸೆಗಳು, ಎಂಭತ್ತುವಿಧಗಳಾದ ವಾತರೋಗಗಳು, ನಲವತ್ತು ಬಗೆಯಾದ ಪಿತ್ತಗಳು, ಇಪ್ಪತ್ತು ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಸಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ. ಚಿನ್ನದಂಥಾ ಕಾಂತಿಯು, ಸಿಹ್ಮನಂತೆ ಪರಾಕ್ರಮವು. ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯು ಅತ್ಯಧಿಕ ವೀರ್ಯವೃದ್ಧಿಯು ನೃಸಿಹ್ಮನಿಗೆ ಸಮಾನರಾದ ಮಕ್ಕಳನ್ನು ಪಡೆಯುವಬಲವೂ ಉಂಟಾಗುವುದು ಇದರಲ್ಲಿ ಯಾವ ವಿಧವಾದರಸಗಳಾಗಲಿ ಮಿಶ್ರವಾಗಿಲ್ಲ, ಇನ್ನಾವ ದೋಷಗಳೂ ಇಲ್ಲ. ನಿರ್ದುಷ್ಟವಾದದ್ದು, ಫಕ್ತವನಸ್ಪತಿಗಳಿಂದಲೇ ಸಿದ್ಧಮಾಡಿದದಿವ್ಯವಾದ ಔಷಧ ಅನೇಕ ಪಂಡಿತರು, ಧನಿಕರು ಸರ್ಟಿಫಿಕೇಟುಗಳನ್ನು ಕೊಟ್ಟಿರುವರು.

೧೪ ದಿನ ಉಪಯೋಗಕ್ಕೆಬರುವ ಡಬ್ಬಿ ೧ ಕ್ಕೆ ಬೆಲೆ ರೂ. ೧—೦—೦

—(ಬಹುಮಾನಗಳನ್ನು ಹಂಚುವ ವಿಧಾನ)—

೧ ಡಜನ್ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೧೦೦೦೦ ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೬೦೦೦ ರೂ. ೩ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೪೦೦೦ ರೂ. ೨ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೩೦೦೦ ರೂ. ೧ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ೨೦೦೦ ರೂ.

೧೯೧೪ ನೇ ಜುಲೈ ೧ ನೇ ತೇದಿ ಮೊದಲು ೧೯೧೫ ನೇ ಜುಲೈ ೧ ತೇದಿಯವರಿಗೂ ಈ ಔಷದವು ಒಂದು ಲಕ್ಷ ಡಬ್ಬಿಗಳು ಖರ್ಚಾದಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ. ಒಂದುಪಕ್ಷದಲ್ಲಿ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ವಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡೆಯುವದಲ್ಲದೆ ಬಹುಮಾನವನ್ನು ಸಹಾ ಹೊಂದವದಕ್ಕೆ ಅರ್ಹನಾಗಿರುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರು ಸಂಶಯವಿಲ್ಲ. ಬಹುಮಾನದ ಮೊತ್ತವು ನಿಷ್ಪಕ್ಷಪಾತವಾಗಿ ಒಂದೇ ಸಮವಾಗಿ ಹಂಚಲ್ಪಡುವವು. ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಕುಹಕತನವು ಇಲ್ಲ, ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರ ಮಾತುಗಳಿಗೆ ನಿಗಾ ಕೊಡಲಾಗದು, ಜಾಗ್ರತೆ ತರಿಸಿಕೊಳ್ಳಿರಿ. ಔಷಧದ ಗುಣವನ್ನು ಪರೀಕ್ಷಿಸಿರಿ ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇದಲ್ಲದೆ ನಮ್ಮಲ್ಲಿ ಇನ್ನು ಅನೇಕತರಹೆಯ ಔಷಧಗಳು ಸಿಗುತ್ತವೆ. ರೋಗದಲಕ್ಷಣವನ್ನು ತಿಳಿಸಿದರೆ ಅಮೂಲ್ಯವಾದ ಮತ್ತು ಗುಣಕಾರಿಗಳಾದ ಔಷಧಗಳನ್ನು ಕಳುಸುವೆವು.

ಇದರ ಅನುಪಾನ ಪತ್ರಿಕೆಯನ್ನು ಬಹುಮಾನದ ಟಿಕೀಟನ್ನು ಡಬ್ಬಿಸಂಗಡ ಕಳಿಸುವೆವು. ನಮ್ಮ ಕಂಪೆನಿಯ ಕಾಶಿ ವಿಶ್ವನಾಥ ಮಾರ್ಕ್ ಇಲ್ಲದ ಡಬ್ಬಿಯನ್ನು ತೆಗೆ[illegible]ಗದು.

ನಮ್ಮ
ಸರ್ವಜನಮನೋಲ್ಲಾಸಿನಿ ಅಂಡ್ ಕೋ

ದಿ ಜನರಲ್ ಏಜನ್ಸಿ, ಮೈಸೂರು.

ಕಾದಂಬರಿಗಳು :— ಚಂಡಮಾರುತ ೦-೨-೦ ; ಚರಿತಾಮೃತಂ ೦-೩-೦ ; ರಾಜಕಥಾವಲ್ಲರಿ ೦-೩-೦ ; ಪೀಟರಿನಚರಿತ್ರೆ ೧-೨-೦ ; ವಿಯೋಗಿನಿ ೦-೩-೦ ; ಉನ್ಮತ್ತೆ ೦-೨-೬ ; ಮಹಾಸೀತೆ ೦-೩-೦ ; ಸಾಹಸಿಕೆ, ಕಲಾನಾಥ ೦-೮-೦ ; ಮಹಾಲಕ್ಷ್ಮಿ ೦-೬-೦ ; ತಾರಾಸುಂದರಿ ೦-೮-೦ ; ಪದ್ಮಿನಿ ೦-೨-೦ ; ಸತ್ಯಸಂಜೀವಿನಿ ೦-೮-೦ ; ಕೊಹಿನೂರು ೦-೧೨-೦ ; ಆನಂದಮಠ ೧-೦-೦ ; ರಾಧಾರಾಣಿ ೦-೩-೦ ; ಸೀತಾವನವಾಸ ೦-೧೨-೦ ; ರಜನಿ ೦-೧೨-೦. 65

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೨-೦-೦ ; ೩-೦-೦ ; ೨-೮-೦ ; ೧-೪-೦ ; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦ ; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹ ದೂಪರ್ಟಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್ ಸನ್ಸ್
34 ಸುಗಂಧಕಾರಿ, ಮೈಸೂರು.

ಲೋಕಪ್ರಸಿದ್ಧವಾದ ಪಂಜಾಸಾಲಾಮಿಸ್ರಿ ಮುರಬ್ಬಾ.

6

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವವರನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ „ ಪಂಜಾ ಸಾಲಾಮಿಸ್ರೀ ಮುರಬ್ಬಾವನ್ನು ” ಸೇವಿಸಿರಿ ! ಸೇವಿಸಿರಿ !! ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಊರುಳಿಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟು ಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾ ಸಾಲಾಮಿಸ್ರಿಯೇ ಅಥವಾ ಬೇರೆ ತರಹಾದ್ದೇ ಎಂಬುದು ತಿಳಿದುಬರುತ್ತೆ.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ನೀರಿನಂತಿರುವ ಧಾತುವನ್ನು ಘಟ್ಟಿಪಡಿಸುವುದು
ಪಂಜಾ ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿ ಹೋಗುವ ಧಾತುವನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಉರಿಯುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕ್ಷಣಕ್ಷಣಕ್ಕೂ ಮೂತ್ರವಾಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೆದುಳಿಗೆ ಬಲವನ್ನು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೋಧಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿಕುಶಲತೆಯು, ಶರೀರಕಾಂತಿಯು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ತಾಂಬ್ರ ಮತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲ ಬರುವಂತ ಪದಾರ್ಥಗಳನ್ನು ಸೇರಿಸಿ ಸ್ತ್ರೀಯೊಬ್ಬರೂ ಸೇವಿಸುವಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವುದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕಂಡುಬರುತ್ತೆ. ೨-೩ ಡಬ್ಬಿಗಳನ್ನು ಉಪಯೋಗಿಸುವದರಿಂದ ಜನ್ಮಾಂತರದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು „ ಪಂಜಾ ಸಾಲಾಮಿಸ್ರಿ ” ಅಲ್ಲವೆಂದು ವ್ಯಕ್ತಪಡಿಸುವವರಿಗೆ
೫೦೦ ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತ[illegible]ರೂ ಬಹುಮಾನ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂ ನನ್ನಿಂದ ಪಡೆಯಬಹು[illegible] ೧೫ ತೊಲೆ ಮುರಬ್ಬಾವಿನ ಡಬ್ಬಿ ೧ ಕ್ಕೆ ರೂ. ೨-೦-೦. ಟಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ ೬ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಏಜಂಟರು—ಡಿ. ಸೈಯ್ಯದ್ ಉಸ್ಮಾನ್ ಅಂಡ್ ಕೋ., ದೊಡ್ಡಪೇಟೆ, ಬೆಂಗಳೂರು ಸಿಟಿ.
ಡಿ. ಮನ್ನಾಲಾಲ್ ಡಿಲ್ಲೀವೈದ್ಯರು, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

೧೯೧೫ ನೆಯ
ಶ್ರೀ ಸೀತಾರಾಘವ
ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಶಾಯಿ ಇಳಿಯದ ಉತ್ತಮವಾದ ಕಾಗದ ಮುದ್ದಾದ ಮುದ್ರಣ. ಅನೇಕವಾದ ಹೊಸಸಂಗತಿಗಳಿವೆ.

೧ ನಂ—ಸಣ್ಣಸೈಜು ಸಾದಾ	೦-೪-೦
೨ ನಂ—ಪೆನ್ಸಲ್‌ಮುಚ್ಚಳಿವುಳ್ಳದು	೦-೬-೦
೩ ನಂ—ದೊಡ್ಡಸೈಜು ಸಾದಾ	೦-೬-೦
೪ ನಂ—ಪೆನ್ಸಲ್‌ಮುಚ್ಚಳಿವುಳ್ಳದು	೦-೮-೦

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ

ಹೆಚ್ಚಾಗಿ ತರಿಸುವವರಿಗೆ ರೂಪಾಯಿ ೧ ಕ್ಕೆ ೦-೨-೦ ದೊರೆಯುವುದು. ವಿಳಾಸ:—

ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.

ವಿದ್ಯಾಭ್ಯಾಸದ
ಬರುವಂತೆ ಮಾಡಿ
ಕೆಂದು ಪ್ರಾರ್ಥಿಸುತ್ತೇ
ಎ. ವಿ. ಸ್ಕೂಲ್ ಸ್ಕ



14

ದೊಡ್ಡಕಂಪೆನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯು. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ನ್ಯಾಯದರ್ಪಣ.

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿಇರುತ್ತವೆ. ಬೆಲೆ ರೂ. 1-8-0. ವಿ. ಪಿ. ಮೂಲ್ಯ 1-12-0.

ಎಂ. ಎಸ್. ನಂಜಪ್ಪನವರು,
47 ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಳ್ಳೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾದಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚಿಟಕೆ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆ[illegible]. ೧ ಡಜನ್ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಭಾವ ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್
43 ಕೊಳ್ಳೇಗಾಲದ ತಾಲ್ಲೂಕು.

೧೯೧೪ನೆಯ ಇಸವಿ ಡಿಸೆಂಬರ್ ತಾ॥ ೨೭ ರಿಂದ ೧೯೧೫ನೆಯ ಜನವರಿ ತಾ॥ ೨ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ಪುಷ್ಯ ಶು॥ ದಶಮಿಯಿಂದ ಪುಷ್ಯ ಬ॥ ಪಾಡ್ಯಮಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ಧನು ತೇದಿ
27	ಭಾನು	ದಶ	4-4	ಅಶ್ವಿನಿ	11-3	13
28	[1]ಸೋ	ಏಕಾ	9-26	ಭರಣಿ	17-34	14
29	[2]ಮಂ	ದ್ವಾ	14-49	ಕೃತ್ತಿ	24-6	15
30	[3]ಬುಧ	ತ್ರ	19-58	ರೋಹಿ	30-13	16
31	[4]ಗುರು	ಚತು	24-19	ಮೃಗ	35-37	17
1	[5]ಶುಕ್ರ	ಪೌ	27-37	ಆರಿದ್ರಾ	40-2	18
2	ಶನಿ	ಪಾ	29-48	ಪುನ	43-15	19

(1) ಸರ್ವತ್ರಮುಕ್ಕೋಟಿಏಕಾದಶೀ, ಚಾಕ್ಷುಷಮನ್ವಾದಿಃ, ತ್ರೈಲೋಕ್ಯಗೌರೀವ್ರತಂ, ಶ್ರೀರಂ [illegible] ತಾರೋತ್ಸವಾರಂಭಃ. (2) ತ್ರಯೋದಶೀತಿಥಿಃ, ಕುಜಪ್ರದೋಷಃ, ಮುಕ್ಕೋಟಿದ್ವಾದಶೀ (3) ಶೂನ್ಯತಿಥಿಃ, ಮೂಗೂರುಜೊಡೆ. (4) ಚತುರ್ದಶೀತಿಥಿಃ, ಶಾಕಂಬರೀವ್ರತಂ, ಅಂಧಕಾಸುರಸಂಹಾರಃ, ಮೃತ್ಯುಯೋಗಃ. (5) ಆರಿದ್ರೋತ್ಸವಃ, ಮೂಗೂರು ಥಂಡೀಉತ್ಸವಃ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಕೃಷ್ಣಸಕ್ತಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.





REGISTERED NO. M. 24.1

ಮೈಸೂರ್ ಸ್ಟಾರ್.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ।
ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ॥

ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೧೪—೦

ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ ।
ಸ್ತೋಮಾಬೀಷ್ಟದಶೀಲನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸಿವಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ ।
ಪ್ರೇಮಂಬಿತ್ತಿರ್ಯುಂಸದಾ ಪೊರೆಗೆ ಗೌರೀಶಾನುಕಂಪೋಜ್ವಲಂ ॥

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಸಂಪುಟ ೨೮) ಮೈಸೂರ್ ಸ್ಟಾರ್ ಸನ್ ೧೯೧೫ ನೆಯ ಇಸವಿ ಜನವರಿ ತಾರೀಖು ೩ ನೆಯ ಭಾನುವಾರ. (ಸಂಚಿಕೆ ೧

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರಿಗೂ ಸ್ಕೂಲ್‌ಮಾಸ್ಟರ್‌ಗಳಿಗೂ ವಿನಂತಿ.

೧೯೧೫ ನೇ ಇಸ್ವಿಯ ಸಚಿತ್ರ ಕ್ಯಾಲೆಂಡರ್‌ಗಳು ಬಿಕರಿಗೆ ಸಿದ್ಧವಾಗಿವೆ ಕ್ರಯ ೧ ಕ್ಕೆ ೦-೨-೩ ಪೈ. ೫೦ ಕ್ಕೆ -೧೧-೦ ಆಣೆ ೧೦೦ ಕ್ಕೆ ೧-೫-೦ ಪ್ಯಾಕಿಂಗ್ ಪೋಸ್ಟೇಜು ಮಾಫಿ ೫೦ ಕ್ಯಾಲೆಂಡರ್‌ಗಳಿಗಿಂತಲೂ ಕಡಿಮೆಯಾಗಿ ಪೋಸ್ಟು ಮೂಲಕ ರವಾನಿಸಲಾಗುವುದಿಲ್ಲ.

ಈ ಕ್ಯಾಲೆಂಡರಿನಲ್ಲಿ ಇಂಗ್ಲೀಷ್ ಮತ್ತೂ ಕನ್ನಡ ತಿಂಗಳೂ, ತಾರೀಖು, ವಾರ, ತಿಥಿ, ನಕ್ಷತ್ರ, ಆಯಾಯ ದಿವಸದ ವಿಶೇಷ ದಿವಸಗಳು ವಿಶಿಷ್ಟ ಹಬ್ಬ ದಿವಸಗಳೂ ಇರುವುದಲ್ಲದೆ ಮೈಸೂರ್ ಮಹಾರಾಜರವರ ಮತ್ತೂ ಯುವರಾಜರವರ ಛಾಯಾಚಿತ್ರಗಳೂ ಮತ್ತೂ ಮೈಸೂರ್ ಸಂಸ್ಥಾನದ ಈಗಿನ ಹೊಸ ಅರಮನೆಯಲ್ಲಿ ನಡೆಯುವ ನವರಾತ್ರೆ ಮಹೋತ್ಸವದ ದರ್ಬಾರ್ ಸಹಿತ ಇರುವ ನಕ್ಷೆಯನ್ನೂ ಸಹ ನುಣುಪಾದ (ಗ್ಲೇಜ್‌ಪೇಪರ್) ಕಾಗದದಲ್ಲಿ ಅಂದವಾಗಿ ಪ್ರಿಂಟ್‌ಮಾಡಿಸಿ ಮೇಲ್ಕಂಡ ದರದಂತೆ ಬಹುಸುಲಭಬೆಲೆಗೆ ಕೊಡುತ್ತಲಿದ್ದೇವೆ ಯಾದಕಾರಣ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ ಸ್ವಲ್ಪ ಪ್ರತಿಗಳುಮಾತ್ರ ಉಳಿದಿವೆ. ಬಿಕರಿಯಾದನಂತರಬರತಕ್ಕ ಆರ್ಡರ್‌ಗಳನ್ನೆಲ್ಲಾ ಹೋದವರುಸದಂತೆ ಕ್ಯಾನ್ಸಲ್‌ಮಾಡಲಾಗುತ್ತೆ

ಈಗತಾನೇ ಸೀಮೆಯಿಂದ ಬಂದಿರತಕ್ಕ ರಖಂವಾರ್ ವಾಚ್‌ಗಳ ಕ್ರಯದಪಟ್ಟಿ. 47



೧	ರಾಸ್ಕೋಪ್ ಸಿಸಪ್ಟಂಪೇಟೆಂಟ್‌ಸ್ವಿಸ್‌ಮೇತ್‌ವಾಚ್	೧ ಕ್ಕೆ	೨-೮-೦
೨	ಗಟ್ಟೈಂ ರೈಲ್ವೇ ರೆಗ್ಯುಲೇಟರ್ ವಾಚ್	೧ ಕ್ಕೆ	೩-೮-೦
೩	ಡಿಟೋ ನಮೂನೆ ಚಿಕ್ಕಸೈಜ್ ವಾಚ್	೧ ಕ್ಕೆ	೪-೪-೦
೪	ಡಿಟೋ ಚಿಕ್ಕಸೈಜ್ ಸ್ಪೆಷಲ್ ಸಿಲ್ವೇಸ್‌ವಾಚ್	೧ ಕ್ಕೆ	೫-೮-೦
೪	ಜನರಲ್‌ಮೆರ್ಕ್ ಡ್ರಿಸ್ ವಾಚೆಂಬ ಅತ್ಯುತ್ತಮವಾದ ಲೀವರ್ ವಾಚ್	೧ ಕ್ಕೆ	೮-೧೨-೦
೫	ಡಿಟೋ ನಮೂನೆ ಕೆಂಪುಗಳನ್ನು ಕೆತ್ತಿರುವ ವಾಚ್	೧ ಕ್ಕೆ	೯-೪-೦
೬	ಪೀಕಾಕ್ ವಾಚೆಂಬ ತೆಳುವಾದ ಮತ್ತೂ ಗ್ಯಾರೆಂಟಿಯಾದ ವಾಚ್ (ಸಾವಿರಾರು ವಿಕ್ರಯ)	೧ ಕ್ಕೆ	೧೦-೮-೦
೭	ವಾರಕೊಂದಾವರ್ತಿ ಬೀಗಕೊಡುವ ನಿಕ್ಕಲ್ ಬೆಳ್ಳೀಕೇಸ್ ವಾಚ್	೧ ಕ್ಕೆ	೧೦-೮-೦
೮	ಡಿಟೋ ನಮೂನೆಯಲ್ಲಿ ಅಚ್ಚಬೆಳ್ಳೀಕೇಸಿನ ಚಿಕ್ಕ ಸೈಜ್ ವಾಚ್	೧ ಕ್ಕೆ	೧೫-೪-೦
೯	೩೦ ಘಂಟೆಗೆ ಒಂದಾವರ್ತಿ ಬೀಗಕೊಡುವ ದೊಡ್ಡ ಬರ್ಮಾಟೈಂಪೀಸ್	೧ ಕ್ಕೆ	೧-೪-೦
೧೦	ಡಿಟೋ ನಮೂನೆ ಅಲಾರಂ ಟೈಂಪೀಸ್	೧ ಕ್ಕೆ	೨-೪-೧
೧೧	ಡಿಟೋ ನಮೂನೆಯಲ್ಲಿ ಘಂಟೆ ನಿಮಿಷ ಸೆಕೆಂಡ್ ತೋರಿಸಿ ಅಲಾರಂ ಇದ್ದು ತಾರೀಖು ಸಹ ತೋರಿಸುವ ದೊಡ್ಡ ಟೈಂಪೀಸ್	೧ ಕ್ಕೆ	೩-೪-೦
೧೨	ಖಾತ್ರಿಯಾದ ಅನ್ಸೋನಿಯಾ "ಬಿ" ಟೈಂಪೀಸ್	೧ ಕ್ಕೆ	೨-೮-೦
೧೩	ಡಿಟೋ ಕಂಪೆನಿಯ ಅಲಾರಂಟೈಂಪೀಸ್ (ಬಹಳಮಜಬೂತಾದ್ದು) (ಸಾವಿರಾರುವಿಕ್ರಯ)	೧ ಕ್ಕೆ	೩-೮-೦
೧೪	ಅನ್ಸೋನಿಯಾ ಕಂಪೆನಿಯಲ್ಲಿ ತಯಾರಾದ ಘಂಟೆ, ಅರ್ಧಘಂಟೆ ಹೊಡೆದು ಅಲಾರಂ ಇರತಕ್ಕ ದೊಡ್ಡ ಟೈಂಪೀಸ್ (ಅನೇಕಜನ ವಿದ್ಯಾರ್ಥಿಗಳು ಇದನ್ನೇ ಉಪಯೋಗಿಸುತ್ತಲಿದ್ದಾರೆ)	೧ ಕ್ಕೆ	೬-೧೨-೦
೧೫	ಘಂಟೆ, ಅರ್ಧಘಂಟೆ ಹೊಡೆಯುವ ಕ್ಯಾರೇಜ್ ಕ್ಲಾಕೆಂಬ ಟೇಬಲ್ ಘಡಿಯಾರ	೧ ಕ್ಕೆ	೪-೧೨-೦
೧೬	ಡಿಟೋ ನಮೂನೆಯಲ್ಲಿ ಘಂಟೆ, ಅರ್ಧಘಂಟೆಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್	೧ ಕ್ಕೆ	೫-೪-೧
೧೭	ಡಿಟೋ ನಮೂನೆಯಲ್ಲಿ ಘಂಟೆಹೊಡೆಯುವದಕ್ಕೆ ಪ್ರತಿಯಾಗಿ ಗಾನಹಾಡುವ ಕ್ಲಾಕ್	೧ ಕ್ಕೆ	೫-೮-೦
೮	ಡಿಟೋ ನಮೂನೆಯಲ್ಲಿ ತಾವಿಷ್ಟಪಟ್ಟ ಟೈಂಮಿಗೆ ಕಾಲುಘಂಟೆಕಾಲ ಕರ್ಣಾನಂದವಾಗುವಂತೆ ಮೃದುಮಧುರ ಗಾನಮಾಡತಕ್ಕ ಕ್ಲಾಕ್	೧ ಕ್ಕೆ	೫-೮-೦
೯	ಅನ್ಸೋನಿಯಾ ಕಂಪೆನಿಯ ಫ್ಲವರ್ ಕ್ಲಾಕೆಂಬ ಗೋಡೆಗೆ ತಗಲಿಸುವ (೮ ಮೂಲೆಯ) ಅಷ್ಟಕೋಣಾಕೃತಿಯ ಚಿಕ್ಕಸೈಜ್ ಕ್ಲಾಕ್	೧ ಕ್ಕೆ	೬-೮-೦

ರಖಂವಾರ್ ವಾಚ್ ಸರಪಣಿಗಳು.

ನಿಕ್ಕಲ್ ಬೆಳ್ಳಿಯ ವಾಚ್‌ಸರಪಣಿ ...ಂಟಾಯಿತಿ ೦-೧೨-೦
ಅಚ್ಚಬೆಳ್ಳಿಯ ಜೇಬಿನ ವಾಚ್‌ಸ... ಶಕ್ತಿಯು ಈಗಲೂ ೩-೪-೦
ಅಚ್ಚಬೆಳ್ಳಿಯ ಕೊರಳಸರಪ... ಸರಿಯಾದ ಮಾರ್ಗ -೪-೦
೧೮ ಕ್ಯಾರೆಟ್ ಚಿನ್ನದ ವಾಚ್... ಳ್ಳಲು ಅವಕಾಶವಿರುವುದ
...ಚಿನ ಸರಪಣಿ ತುದಿಯ... ವೃದ್ಧಿಗೆ ಬರುತ್ತಿರುವುದರಿಂದ
ಅಚ್ಚಬೆಳ್ಳಿಯ ಶಾಶ್ವತವಾ... ನ ಹಿರಿಗೆಯವರು ಎಲ್ಲ ವಿಷಯ
...ದರೆ ಎಷ್ಟು ವರು... ವರಾಗಿರುವುದರಿಂದ ಅವರಲ್ಲಿ ಸ್ವಭಾವ
...ಗಿರುವ ಶಕ್ತಿಸಾಮರ್ಥ್ಯದಿಂದ ತಕ್ಕ ಉಪಯೋಗವನ್ನು
ಮಾಡಿಕೊಳ್ಳಲು ಪ್ರಯತ್ನಿಸಬೇಕೆಂತಲೂ, ಡಿಸೆಂಬ್ರ ಬಿಜೇ
...ಸಂಘದವರು ಗ್ರಾಮಪಂಚಾಯಿತಿಸ್ಥಾಪನೆಯ ವಿಷ
ಯದಲ್ಲಿ ಸರ್ಕಾರಕ್ಕೆ ತಕ್ಕ ಸೂಚನೆಯನ್ನು ಕೊಟ್ಟು ೫ ವ
ರ್ಷಗಳಾಗಿದ್ದರೂ ತಕ್ಕ ಫಲವೇನೂ ಆಗಲಿಲ್ಲವೆಂತಲೂ, ಪ

ಒಂದುಸಾರಿ ಶಾಯಿತುಂಬಿದರೆ ೧೦,೦೦೦ ಶಬ್ದಗಳನ್ನು ಬರೆಯಬಹುದಾದ ಲೇಖಣಿಗಳು.

ಪ್ರತಿಯೊಂದಕ್ಕೂ ೧೪ ಕ್ಯಾರಟ್ಟು ಚಿನ್ನದ ನಿಬ್ಬು ಹಾಕಿದೆ.

ನೆಪ್ಚೂನ್ ೨೧೧ ನೇ ನಂ. ಪೆನ್	೧ ಕ್ಕೆ	೧-೧೪-೦
ನೆಪ್ಚೂನ್ ೨೫ ನೇ ನಂ. ಪೆನ್	೧ ಕ್ಕೆ	೨-೧೦-೦
ನೆಪ್ಚೂನ್ ೨೧೦ ನೇ ನಂ. ಪೆನ್	೧ ಕ್ಕೆ	೪-೨-೦

ಪ್ರತಿಯೊಂದು ಪೆನ್ ತರಿಸಿ ಕೊಳ್ಳುವರಿಗೂ ೪ ಪದಾರ್ಥಗಳನ್ನು ಮುಫತ್ತಾಗಿ ರವಾನಿಸುತ್ತೇವೆ.
...ಗಳನ್ನಿಡತಕ್ಕ ಸುಂದರವಾದ ಪೆಟ್ಟಿಗೆ ೧.
...ಗೆ ಶಾಯಿಹಾಕುವ ಗಾಜಿನಕೊಳವೆ ೧.
ನಮ್ಮ...ನ್ನು ಕ್ಲೀನ್‌ಮಾಡುವ ವಿಧಾನ ಮತ್ತೂ ಕಾ
...ವ ವಿಧಾನ ಪ್ರಿಂಟಾಗಿರುವ ಚೀಟಿ ೧.
...ಜೇಬಿಗೆತಗಲಿಸುವ ಸುಂದರವಾದ ಕ್ಲಿಪ್ ೧.

...ರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರಮಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾನಿಧಿಃ	೦—೮—೦
ಚಾರುಶೀಲಿಚರಿತ್ರೆ	೦—೫—೦
ಸಟೀಕ ಸಂಧೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಮಂಜರಿ	೦—೨—೦
ಶುದ್ಧಶೈವವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು

166

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ ೩೩೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ.— ಬೆಲೆ ೧ ೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ಬೆಲೆ ೧-೮-೦. ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚಾಚಾರ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ.— ಬೆಲೆ ೧೪ ಆಣೆ. ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.— ಬೆಲೆ ೧ ೩-೦. ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡ ಗ್ರಂಥ.

ವೀರಶೈವ ಧರ್ಮಶಿರೋಮಣಿ.— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ.— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ.— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣ ೧-೩-೦

ಪಾಂಡವಪುರಾಣಂ- ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ... ಸಿದ್ಧದೇವಿ ... ಕಾಲೋಪ್ತರಂಗಸುಧೆ ... ನಾಚಾರದ ... ವಿರುದ್ಧವಾದ ... ೬ ಆಣೆ; ಸಟೀಕ ದೀಕ್ಷಾ ... ತಿವಕಾಳ ... ಗಳು ... ೬ ಆಣೆ; ರಕ್ಷಾ ... ಯರು " ... ಹಿಂಸೆ ... ಕಂದಂ ೧ ಆಣೆ. ... ಹಣಗಳ-ಶ್ಲಾ ...

ಎ. ... ಎಂ ... ಪ್ರಸ್ನ

ಗ್ರಂಥ ... ಕೋ ಬಳ

ಕುಣಿಗಲುತಾ॥ ಜಿನ್ನಾಗರದ ಗೌ॥ ಕನ್ನಡ ವಿ.ಇ. ಸ್ಕೂಲು.

ಈ ಗ್ರಾಮದಲ್ಲಿ ಸ್ಕೂಲು ಸ್ಥಾಪಿತವಾಗಿ ಸುಮಾರು ೧೩ ವರ್ಷಗಳಾಗಿದ್ದಾಗ್ಯೂ ಬಾಲಕರು ೩೦ ಮಂದಿಗಿಂತಲೂ ಹೆಚ್ಚಾಗಿ ಸೇರುತ್ತಿರಲಿಲ್ಲ. ಈಗ ಬಂದಿರತಕ್ಕ ಮಾಸ್ಟರು ವರ್ಗವಾಗಿ ಬಂದು ೨ ವರ್ಷಗಳಾದಾಗ್ಯೂ ಇವರಿಗೆ ಒದಗಿದ ಮಹತ್ತಾದ ಕಷ್ಟದಶೆಯಿಂದ ಒಂದು ವರ್ಷ ರಜಾ ತೆಗೆದುಕೊಂಡಿದ್ದು ತಮ್ಮ ಕಷ್ಟನಿವಾರಣೆಯಾಗಿಬಂದ ಈಗ್ಯೆ ಒಂದು ವರ್ಷದಾರಭ್ಯ ಬಹಳ ಮಹನತ್ತಿನಿಂದ ಕೆಲಸ ಮಾಡುತ್ತಾ ಪೂರ್ವಕ್ಕಿಂತಲೂ ಸ್ಕೂಲನ್ನು ಬಹಳ ಅಭಿವೃದ್ಧಿಗೆ ತಂದು ಸದ್ಯಃ ಸ್ಕೂಲಿನಲ್ಲಿ ೫೦ ಮಂದಿ ಬಾಲಕರವರೆಗೂ ಹೆಚ್ಚಿಸಿ, ಈಗ ಸ್ಕೂಲು ಇಟ್ಟಿರತಕ್ಕ ದೇವಸ್ಥಾನದಲ್ಲಿ ಸ್ಥಳ ಸಾಲದಿರುವದರಿಂದ ಹೊಸದಾಗಿ ಸ್ಕೂಲುಕಟ್ಟಡವನ್ನು ಕಟ್ಟಲು ಗ್ರಾಮಸ್ಥರನ್ನು ಪ್ರೇರೇಪಿಸಿ, ಮುನ್ನೂರು ರೂಪಾಯಿಗಳ ಚಂದಾ ಮೊಬಲಗನ್ನು ಗ್ರಾಮಸ್ಥರು ಕೊಡುವಂತೆ ಮುಚ್ಚಳಿಕೆ ಕೊಟ್ಟಿದ್ದರಮೇಲೆ ಗೌರ್ನಮೆಂಟಿನಿಂದ ಹೆಚ್ಚಿಗೆ ಸಹಾಯವನ್ನು ಕೇಳಿಕೊಂಡಿರುತ್ತಾರೆ. ಈ ರೀತಿ ವಿದ್ಯಾವಿಷಯದಲ್ಲಿ ಸರ್ಕಾರದವರ ಮೆಚ್ಚಿಗೆಗೂ ಮತ್ತು ಗ್ರಾಮಸ್ಥರ ವಿಶ್ವಾಸಕ್ಕೂ ಪಾತ್ರರಾದ ಹಾಲಿ ಮೇಸ್ಟರಾಗಿರುವ ವಿ. ಲಕ್ಷ್ಮೀನರಸಿಂಹಯ್ಯ ಎಂಬುವರನ್ನು ವರ್ಗಾಯಿಸದೆ ಇನ್ನೂ ಕೆಲವುಕಾಲ ಇಲ್ಲಿಯೇ ಖಾಯಂ ಆಗಿ ಇಡಬೇಕೆಂದು ಸರ್ಕಾರದವರಿಗೆ ಅರಿಕೆಮಾಡಿಕೊಂಡಿರುವಂತೆ ಜಗದ್ರಕ್ಷಕನು ನೆರವೇರಿಸಿಕೊಡುವನೆಂದು ನಂಬಿರುವ ಪ್ರಜಾನುರಾಗಿ.

ಮುದಹದಿ

ಮೈಸೂರುಸೀಮೆಯ ಶ್ರೀಮನ್ಮಹಾರಾಜ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಎಸ್.ಐ ಯವರ ಸಂದರ್ಶನಕ್ಕೂ ತಮ್ಮ ಅಹವಾಲುಗಳನ್ನು ಬಿನ್ನೈಸಿಕೊಳ್ಳುವುದಕ್ಕೂ ಸಹ ದಾವಣಗೆರೆ ತಾ॥ ಮುದಹದದಿ ಗ್ರಾಮದ ದೊಡ್ಡಮನುಷ್ಯರು ಅಂದರೆ ಹುಂಜಿಗಿಮಠದ ಮಹಾದೇವಯ್ಯನವರು, ಸಾ॥ ವೀರಪ್ಪನವರು, ಸ್ಕೂಲ್ಮಾಸ್ಟರ್ ಸಿದ್ಧಲಿಂಗಯ್ಯನವರು, ಗೌಡ ಫಕೀರಪ್ಪನವರು, ಮಿಟ್ಟೆಕಟ್ಟೆ ಪಟೇಲ ಪಕೀರಪ್ಪನವರು, ಸಹ ತಾ॥ ೨೧–೧೨–೧೪ ರಲ್ಲಿ ದಾವಣಗೆರೆ ತಾ॥ ಕಚೇರಿಗೆ ಮಹಾಸ್ವಾಮಿಯವರು ದಯಮಾಡಿಸಿದಾಗ ಫಲಪುಷ್ಪ ಪುನುಗು ಜವ್ವಾದಿಗಳಿಂದ ಅಲಂಕರಿಸಲ್ಪಟ್ಟಿದ್ದ ತಟುಕುಗಳಿಂದಲೂ, ವಿಜ್ಞಾಪನಪತ್ರಿಕೆಯೊಂದಿಗಿರಿಸಲ್ಪಟ್ಟಿದ್ದ ಅಹವಾಲ್ ಅರ್ಜಿಯಿಂದಲೂ, ಪ್ರೀತಿಪೂರ್ವಕವಾದ ಭಯಭಕ್ತಿಗಳಿಂದಲೂ ಮಹಾಸ್ವಾಮಿಯವರಿಗೆ ಒಪ್ಪಿಸಲು ಮಹಾಸ್ವಾಮಿಯವರು ಪ್ರಜೆಗಳಮೇಲಣ ಪ್ರೀತಿಗೌರವವನ್ನು ತೋರ್ಪಡಿಸುತ್ತಾ ತಮ್ಮ ಕರಕಮಲಗಳಿಂದ ಸ್ಪರ್ಶಿಸಿ ಅರ್ಜಿಯನ್ನು ತೆಗೆದುಕೊಂಡರು. ಮಹಾಸ್ವಾಮಿಯವರು ಅರ್ಜಿಯನ್ನು ಪರಾಂಬರಿಸಿ ಬಡಪ್ರಜೆಗಳ ಮನೋಭೀಷ್ಟವನ್ನು ಪೂರೈಸಿಕೊಡುತ್ತಾರೆಂದು ಶುಕ್ತಿಯು ಸ್ವಾತಿಬಿಂದುವನ್ನು ನಿರೀಕ್ಷಿಸುವಂತೆ ಮಹಾಸ್ವಾಮಿಯವರ ಅಪ್ಪಣೆಯನ್ನು ಸದರಿ ಗ್ರಾಮಸ್ತರು ನಿರೀಕ್ಷಿಸಿಕೊಂಡಿರುತ್ತಾರೆ. ಪ್ರಜಾರಂಜಕರಾದ ಮಹಾಸ್ವಾಮಿಯವರು ಕೂಡ ಅವರ ಇಷ್ಟದಂತೆಯೇ ನೆರವೇರಿಸಿ ಉದ್ಧಾರಮಾಡಬಹುದಾಗಿದೆ. ಈ ವಿಷಯದಲ್ಲಿ ಬಹು ಸಾಹಸವನ್ನು ಮಾಡಿದ ಮ॥ ದಾವಣಗೆರೆ ಅಮಲ್ದಾರ್ ವೇದಾಂತಯ್ಯಂಗಾರ್ಯಸ್ವಾಮಿಯವರ ಶಾಂತಗುಣಕ್ಕೂ, ಔದಾರ್ಯಕ್ಕೂ ಎಷ್ಟು ಶ್ಲಾಘನೆಮಾಡಿದಾಗ್ಯೂ ತೀರದಾಗಿದೆ. ಈ ಮಹನೀಯರ ಉಪಕಾರವು ಚಿರಕಾಲಸ್ಮರಣೀಯವಾದುದೆಂದು ಪ್ರಜೆಗಳು ತಮ್ಮತಮ್ಮ ಕೃತಜ್ಞತೆಗಳನ್ನು ತೋರ್ಪಡಿಸಿದರು.

ಗ್ರಾಮಸ್ಥ

ತಿಪಟೂರು ತಾ॥ ಈಚನೂರು

ಈ ಊರಿನಲ್ಲಿ ಒಂದು ಕೋಆಪರೇಟಿವ್ ಸೊಸೈಟಿ ಸ್ಥಾಪನೆಯಾಗಿ ಒಂದುವರೆ ವರುಷವಾಗಿರುತ್ತೆ. ಪ್ರಸಿಡೆಂಟರವರು ಆಡಿಟರುಗಳು ಸೆಕ್ರಟರಿಯವರು ಸಹ ಮುತವರ್ಜಿಯಿಂದ ಕೆಲಸ ನಡೆಸುತ್ತಾ ಇರುತ್ತಾರೆ. ಹೀಗೆ ಕೆಲಸಗಳನ್ನು ನಡಿಸುತ್ತಾ ಇದ್ದರೆ ಜಾಗ್ರತೆಯಾಗಿ ಅಭಿವೃದ್ಧಿಗೆ ಬರುವುದರಲ್ಲಿ ಸಂದೇಹವೇಯಿಲ್ಲ. ಗ್ರಾಮಾಭಿವೃದ್ಧಿ ಸಂಘದವರು ಬಹಳ ಮುತವರ್ಜಿಯಿಂದ ಕೆಲಸಗಳನ್ನು ಮಾಡಿಸುತ್ತಾಯಿರುತ್ತಾರೆ. ಈ ಗ್ರಾಮದಲ್ಲಿ ವಿದ್ಯಾಭಿವೃದ್ಧಿಯು ಬಹಳ ಚೆನ್ನಾಗಿರುತ್ತೆ. ಇಲ್ಲಿನ ಹೆಡ್‌ಮಾಸ್ಟರ್‌ರವರು ಮ॥ ಗಂಗಾಧರಯ್ಯನವರು ಇಲ್ಲಿಗೆ ಬಂದು ೧೦ ವರುಷವಾಗುತ್ತ ಬಂತು. ಇದುವರೆಗೆ ಅವರ ಕೈಕೆಳಗೆ ೮ ಮಂದಿ ವಿದ್ಯಾ

ರು ಲೋವರ್‌ಸೆಕೆಂಡರಿ ಪರೀಕ್ಷೆಯಲ್ಲಿ

ರೆ. ಇವರ ಸಹಾಯಕ್ಕಾಗಿ ಈಗ

ಮಾಸ್ಟರ್ ಮ॥ ಎ. ಸೂರನಾ

ಯಿಂದ ಕೆಲಸಮಾಡುತ್ತ

ಳು ೧೧೦ ಮಂದಿ ಬಾಲಕ ಬಾಲಕಿಯರನ್ನು ಸ್ಕೂಲಿಗೆ ಸೇರಿಸಿರುತ್ತಾರೆ. ಈ ವರುಷ ೪ ಜನ ವಿದ್ಯಾರ್ಥಿಗಳು ಪರೀಕ್ಷೆಗೆ ಅಪ್ಲಿಕೇಷನ್ ಕಳುಹಿಸಿರುತ್ತಾರೆ. ಇಷ್ಟು ಮಂದಿ ಬಾಲಕರಿರುವ ಸ್ಕೂಲಿನಲ್ಲಿ ಇಬ್ಬರು ಮಾಸ್ಟರುಗಳಿಂದ ಕೆಲಸ ನಡಿಸಲು ಬಹಳ ಶ್ರಮವಾಗಿರುತ್ತೆ. ಆದ್ದರಿಂದ ಸರ್ಕಾರದವರು ಮತ್ತೊಬ್ಬರು ಸಹಾಯೋಪಾಧ್ಯಾಯರನ್ನು ಕಳುಹಿಸಿಕೊಟ್ಟರೆ ಸ್ಕೂಲಿನ ಕೆಲಸ ಇನ್ನೂ ತೃಪ್ತಿಕರವಾಗಿ ನಡಿಯುತ್ತೆ. ಸ್ಕೂಲಿನ ಕಟ್ಟಡ ಕೇವಲಚಿಕ್ಕದಾಗಿ ೨೦ಮಂದಿ ಬಾಲಕರನ್ನು ಒಳಭಾಗದಲ್ಲಿ ಕೂರಿಸಿಕೊಂಡು ಮಿಕ್ಕ ಬಾಲಕರನ್ನು ಊಚೆಕಡೆ ವರಾಂಡದಲ್ಲಿ ಕೂರಿಸಿ ಪಾಠ ನಡಿಸುತ್ತಾ ಇದ್ದಾರೆ. ಇದನ್ನು ಬಡಾವಣೆಮಾಡಿಸಿಕೊಟ್ಟರೆ ಯಿನ್ನೂ ಅನೇಕಮಂದಿ ಬಾಲಕರು ಸ್ಕೂಲಿಗೆ ಸೇರುತ್ತಾರೆ. ಮಾಸ್ಟರುಗಳಿಗೆ ಮಾತ್ರ ವಾಸಕ್ಕೆ ಮನೆಯಿಲ್ಲದೆ ತೊಂದರೆ ಪಡುತ್ತಿರುವದನ್ನು ಎಷ್ಟು ಹೇಳಿದರೂ ತೀರದು. ಸರ್ಕಾರದವರು ಈ ಕಾರ್ಯಗಳನ್ನೆಲ್ಲಾ ಶೀಘ್ರದಲ್ಲಿಯೆ ನೆರವೇರಿಸಿಕೊಡುತ್ತಾರೆಂದು ನಂಬಿರುತ್ತೇವೆ.

ಗ್ರಾಮನಿವಾಸಿ

ಚಿತ್ರದುರ್ಗ ತಾ॥ ಭರಮಸಾಗರ.

ಜಿ.ಸಿ.ಎಸ್.ಐ ಎಂಬ ಬಿರುದಂ ಪೊಂದಿದ ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಸ್ವಾಮಿಗಳವರು ಪರಿವಾರ ಸಮೇತ ಇದೇ ಮಾಹೆ ೨೧ ನೇ ಸೋಮವಾರ ದಾವಣಗೆರೆ ಮೊಕ್ಕಾಮಿನಿಂದ ಸದರಿ ಗ್ರಾಮದ ಮಾರ್ಗವಾಗಿ ಮೊಳಕಾಲ್ಮೂರುವಿಗೆ ದಯಮಾಡಿರುವರೆನ್ನುವ ವರ್ತಮಾನ ತಿಳಿದು ಮುಂಚಿತವಾಗಿ ಪುರನಿವಾಸಿಗಳು ಮಾರ್ಗದಲ್ಲಿ ಚಿತ್ರಕೆಲಸಗಳಿಂದಲೂ, ಫೋಟೋಗಳಿಂದಲೂ, ತಳಿರುತೋರಣಗಳಿಂದಲೂ, ಕದಳೀಸ್ತಂಭಗಳಿಂದಲೂ, ಬಾವುಟಗಳಿಂದಲೂ ನೋಟಕರ ಕಣ್ಣಿಗೆ ಆನಂದವನ್ನುಂಟುಮಾಡುವಂತೆ ಮಂಟಪವು ಸಿಂಗರಿಸಲ್ಪಟ್ಟಿದ್ದಿತು. ಅಲ್ಲಿ ಗವರ್ನ್ಮೆಂಟ್ ಅಧಿಕಾರಿಗಳು, ಗ್ರಾಮಕಮಿಟಿ ಮೆಂಬರುಗಳು, ಮಠಾಧಿಕಾರಿಗಳು, ಜೋಯಿಸರುಗಳು, ಶೆಟ್ಟರು, ವರ್ತಕರು, ಎ. ವಿ ಬಾಯ್ಸ್‌ಸ್ಕೂಲ್ ಹೆ॥ ಜ॥ ಮಾಸ್ಟರುಗಳು, ಗರ್ಲ್ಸ್ ಸ್ಕೂಲ್ ಮಾಸ್ಟರುಗಳು, ಬಾಲಕಬಾಲಕಿಯರು, ಪುರನಿವಾಸಿಗಳು, ನೇಟೀವ್‌ಪಂಡಿತರು, ಮತ್ತು ಪರಸ್ಥಳದಿಂದ ಬಂದಿದ್ದ ೨-೩ ಸಾವಿರ ಪ್ರಜೆಗಳು ಸೇರಿ ಚಾತಕಪಕ್ಷಿಗಳು ಮೇಘೋದಯವನ್ನೇ ನಿರೀಕ್ಷಿಸುವಂತೆ ಶ್ರೀಗಳವರ ಆಗಮನವನ್ನೇ ಹಾರೈಸುತ್ತಿದ್ದರು. ೧೧॥ ಘಂಟೆಗೆ ಸರಿಯಾಗಿ ಸವಾರಿಯು ಮಂಟಪಕ್ಕೆ ಸಮೀಪಿಸಿದ ಕೂಡಲೆ ಮಂಗಳವಾದ್ಯಗಳು ಮೊಳಗಿದವು ಪ್ರಜೆಗಳೆಲ್ಲಾ ಕರಜೋಡಿಸಿ ಶಿರಬಾಗಿ ರಾಜಪ್ರತ್ಯಕ್ಷದೇವತಾ ಎಂಬಂತಿರುವ ಶ್ರೀಕೃಷ್ಣರಾಜ ಒಡೆಯರವರಿಗೆ ಜಯವಾಗಲಿ ಎಂದು ಘೋಷಮಾಡಿದರು. ಬಾಲಕಬಾಲಕಿಯರು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯ ಹಾಡುಗಳನ್ನು ಹಾಡಿದರು. ಪ್ರಜೆಗಳು ಹಾರ ತುರಾಯಿ ಫಲಾದಿಗಳನ್ನು ಸಮರ್ಪಿಸಿ ಪುಷ್ಪವೃಷ್ಟಿಯನ್ನು ಕರೆದು ತಮ್ಮಗಳ ವಿಜ್ಞಾಪನೆಗಳನ್ನು ಬಿನ್ನೈಸಿಕೊಂಡರು. ಈ ರಾಜಭಕ್ತಿಯನ್ನು ಕಂಡು ಶರತ್ಕಾಲದ ಚಂದ್ರನನ್ನು ಕಂಡು ಶರಧಿಯು ಉಕ್ಕುವಂತೆ ಶ್ರೀಗಳವರ ಮನೋಹರ್ಷವು ಹೊರಸೂಸಿ ಕ್ಷೇಮಚಿಂತನೆಯನ್ನು ವಿಚಾರಿಸಿ ಸಕಲರಿಗೂ ದರ್ಶನವನ್ನಿತ್ತು, ಆಶೀರ್ವಾದಮಾಡಿ ಆನಂದದಿಂ ಸವಾರಿಯು ದಯಮಾಡಿಸಲು, ಜನಸಂದೋಹವು ವಂದನೆಮಾಡುತ್ತಾ ನಮ್ಮ ತಂದೆಗಳಿಗೆ ಯಾವಾಗಲೂ ಕಂದುಗೊರಲನ ಪ್ರೇಮವು ಸ್ಥಿರವಾಗಿರಲಿ ಎಂದು ಘೋಷಮಾಡಿ ಚಪ್ಪಾಳೆಯನ್ನು ತಟ್ಟಿದರು. ನಂತರ ಪ್ರಜೆಗಳು ಶ್ರೀಗಳವರ ಪ್ರಜಾಭಿಮಾನವನ್ನು ಕೊಂಡಾಡಿಕೊಳ್ಳುತ ಮನೆಗಳಿಗೆ ತೆರಳಿದರು. ಸರ್ಕಾರಿ ಆಫೀಸರುಗಳು ಯಾವ ನ್ಯೂನತೆಗೂ ಆಸ್ಪದವಿಲ್ಲದಂತೆ ಬಹಳ ಮುತವರ್ಜಿಯಿಂದ ಕೆಲಸಮಾಡಿದರು.

ಒಬ್ಬ ಸ್ಥಳನಿವಾಸಿ.

ಚಿಂತಾಮಣಿ ತಾ॥ ಕೈವಾರದಹೋಬಳಿ ಸಂತೇಕಲ್ಲಹಳ್ಳಿ.

ಈ ಗ್ರಾಮದಲ್ಲಿ ಸ್ಕೂಲ್ ಸ್ಥಾಪಿತವಾದಾರಭ್ಯ ಸ್ಕೂಲ್ ಕಟ್ಟಡವಿಲ್ಲದೆ ಬಹಳ ತೊಂದರೆಯಾಗಿ ದೇವಸ್ಥಾನ ಮುಂತಾದ ಕಟ್ಟಡಗಳಲ್ಲಿ ಸ್ಕೂಲ್ ಆಗುತ್ತಿತ್ತು. ಇದಕ್ಕಾಗಿ ಸರ್ಕಾರದವರು ಅನೇಕವೇಳೆ ಗ್ರಾಮಸ್ಥರಿಗೆ ಸ್ಕೂಲ್ ಕಟ್ಟಡವನ್ನು ಕಟ್ಟಿಸಿಕೊಡುವಂತೆ ಹುಕುಂ ದಯಪಾಲಿಸಿದರೂ ಪ್ರಯೋಜನವಾಗಲಿಲ್ಲ. ಈಗ್ಗೆ ೮–೧೦ ತಿಂಗಳ ಕೆಳಗೆ ಸ್ಕೂಲ್ ಕಟ್ಟಡವಿಲ್ಲದ್ದರಿಂದ ಸ್ಕೂಲನ್ನೇ ತೆಗೆದುಬಿಡುವುದಾಗಿ ಸರ್ಕಾರದವರ ಹುಕುಂ ಆಯಿತು. ಆದೇ ಗ್ರಾಮದ ವಾಸಸ್ಥರಾದ ಮ॥ ಬಿ ಹುಚ್ಚಪ್ಪ ಮತ್ತೂ ಮ॥ ಮುನಿಗುರಪ್ಪ ಎಂಬ ಇಬ್ಬರು ತಮ್ಮ ಗ್ರಾಮಾಭಿವೃದ್ಧಿಗೆ ಮುಖ್ಯವಾ

ದ ಸ್ಕೂಲು ಹೋಗುತ್ತದೆಂಬ ಶಂಕೆಯಿಂದ ಸ್ವಂತ ಲಾ

ಪಡಿನಿಂದಲೇ ಊರುಮುಂದೆ ನೋಡುವುದಕ್ಕೆ ಅಂದ

ಸುಮಾರು ಒಂದು ಸಾವಿರ ರೂಪಾಯಿ ಬಾಳುವ

ಕಟ್ಟಡವನ್ನು ಕಟ್ಟಿಸಿ, ಈ ಶುಭದಿನ ಅಂದರೆ ೪-

ನೆ ಶುಕ್ರವಾರ ಪಾಠಶಾಲಾಪ್ರತಿಷ್ಠೆಯಾಗಿ

ಟ್ಟಿರುತ್ತಾರೆ. ಮ॥ ರಾಮಕೃಷ್ಣಪ್ಪನವರು ಹೊಸ ಸ್ಕೂಲ್ ಕಟ್ಟಿರುವ ವಿಷಯದಲ್ಲಿ ಬಹಳ ಸಹಾಯಮಾಡಿರುತ್ತಾರೆ. ಮೇಲೆ ಸೂಚಿಸಿದ ೪–೧೨–೧೪ನೆಶುಕ್ರವಾರ ಮಧ್ಯಾಹ್ನ ೧೨ ಘಂಟೆಯಲ್ಲಿ ಸ್ಕೂಲ್ ಸ್ಥಾಪಿತವಾಯ್ತು. ತಾ॥ ಅಮಲ್‌ದಾರ್‌ರವರಾದ ಮ॥ ಜಿ. ಶಾಂತವೀರಪ್ಪ ಬಿ. ಎ. ಯವರು ದಯಮಾಡಿಸಿದ್ದರು. ಮೇಲಿಕಂಡ ಮ॥ ಬಿ. ಹುಚ್ಚಪ್ಪ ಮತ್ತೂ ಮ॥ ಮುನಿಗುರಪ್ಪ ಎಂಬವರು ಅಮಲ್‌ದಾರರವರನ್ನೂ ಹೋಬಳಿ ಶೇಕದಾರರವರನ್ನೂ ಸ್ಕೂಲ್ ಮಾಸ್ಟರವರನ್ನೂ ಬಾಲಕ ಬಾಲಿಕೆಯರನ್ನೂ ಗ್ರಾಮದ ಎಲ್ಲಾ ಮುಖಂಡರನ್ನೂ ಬಾಜಭಜಂತ್ರಿಯೊಡನೆ ತಳಿರುತೋರಣಗಳಿಂದಲೂ ಚಿತ್ರವಿಚಿತ್ರ ಕೆಲಸಗಳಿಂದಲೂ ಕಂಗೊಳಿಸುತ್ತಿದ್ದ ಹೊಸ ಕಟ್ಟಡಕ್ಕೆ ಕರೆತಂದರು. ಆಗ ಬಾಲಕ ಬಾಲಕಿಯರು ಜಯಘೋಷದಿಂದ ಸಭಿಕರಮೇಲೆ ಪುಷ್ಪವೃಷ್ಟಿಯನ್ನು ಕರೆದಮೇಲೆ ಅಮಲ್‌ದಾರ್ ಸ್ವಾಮಿಯವರು ಸ್ಕೂಲ್ ಬಾಗಿಲನ್ನು ತೆರೆದರು. ಅನಂತರ ಸಭೆಯು ಸೇರಿತು. ಆಗ ಅಮಲ್‌ದಾರರವರು ಸಭಾಧ್ಯಕ್ಷತೆಯನ್ನು ವಹಿಸಿದ್ದರು. ಪ್ರೋಗ್ರಾಮಿನಂತೆ ಸರಸ್ವತೀಪೂಜೆಯೂ ಬಾಲಕ ಬಾಲಕಿಯರ ಗೀತವೂ ಮಾಸ್ಟರ ಮತ್ತೂ ಹೋಬಳಿ ಶೇಕದಾರರವರಾದ ಮ॥ ಎಸ್. ಟಿ ತಿಮ್ಮರಾಯಪ್ಪನವರ ಮತ್ತೂ ಶ್ರೀ ಮ॥ ರಾಘವೇಂದ್ರಪ್ಪನವರ ಉಪನ್ಯಾಸಗಳೂ ನಡೆದವು. ಅನಂತರ ಅಗ್ರಾಸನಾಧಿಪತಿಗಳಾದ ಅಮಲ್‌ದಾರ್‌ರವರು ವಿದ್ಯಾವಿಷಯವಾಗಿಯೂ ಬ್ರಿಟಿಷ್ ಮತ್ತೂ ಮೈಸೂರ್ ಗೌ॥ ನವರ ವಿದ್ಯಾಭ್ಯಾಸಕ್ಕಾಗಿ ಮಾಡಿಕೊಟ್ಟಿರುವ ಅನುಕೂಲಗಳ ವಿಷಯವಾಗಿಯೂ ಸಭಿಕರ ಮನಸ್ಸಿಗೆ ಚೆನ್ನಾಗಿ ಗೊತ್ತಾಗುವಂತೆ ಉಪನ್ಯಾಸಮಾಡಿದರು. ಇವುಗಳೆಲ್ಲಾ ಮುಗಿದನಂತರ ಚಕ್ರವರ್ತಿ ಸಾರ್ವಭೌಮರವರ ಮತ್ತೂ ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಗಳೂ, ಈಗ ಒದಗಿರುವ ಯುದ್ಧವು ಬೇಗನೆ ಮುಕ್ತಾಯವಾಗಿ ಬ್ರಿಟಿಷ್ ಸಾಮ್ರಾಜ್ಯವು ಆ ಚಂದ್ರಾರ್ಕವಾಗಿರಲೆಂಬ ಪ್ರಾರ್ಥನೆಯೂ ಬೆಳೆದನಂತರ ಸಭಿಕರಿಗೆ ಗಂಧ ಪುಷ್ಪ ತಾಂಬೂಲಾದಿಗಳೂ ಬಾಲಕ ಬಾಲಕಿಯರಿಗೆ ಫಲಾಹಾರಗಳೂ ಹಂಚಲ್ಪಟ್ಟು, ಸಭಾ ಬರಕಾಸ್ತಾಯ್ತು. ಮ॥ ಮಾಸ್ಟರವರಾದ ಎಸ್. ಗೋಪಾಲಯ್ಯನವರು ಇಲ್ಲಿಗೆ ಬಂದಮೇಲೆ ಸ್ಕೂಲು ಅಭಿವೃದ್ಧಿಸ್ಥಿತಿಗೆ ಬಂದಿತೆಂಬುದರಲ್ಲಿ ಸಂದೇಹವೇ ಇಲ್ಲ. ಇವರು ಎಲ್ಲರಲ್ಲಿಯೂ ಸ್ನೇಹವನ್ನು ಬೆಳಸಿ ಮಕ್ಕಳ ವಿದ್ಯಾಭಿವೃದ್ಧಿಯಲ್ಲಿ ತುಂಬಾ ಪ್ರಯಾಸಪಟ್ಟು ಜನರಿಗೆ ಬೋಧಿಸುತ್ತಾ ಈಗ ೩೦ ಮಂದಿ ಬಾಲಕರೂ ೧೦ ಮಂದಿ ಬಾಲಕಿಯರೂ ಇದ್ದಾರೆ (ಅಂತು ೪೦ ಮಂದಿ) ಈ ಊರಿನಲ್ಲಿ ಸುಮಾರು ೫೦೦ ಮನೆಗಳಿವೆ. ಶಾಲೆಗೆ ಸುಮಾರು ೨೦೦ ಹುಡುಗರು ಬರಬಹುದು. ಬಲತ್ಕಾರ ವಿದ್ಯಾಭ್ಯಾಸವು ಜಾರಿಗೆ ಬರುವುದಕ್ಕಿಂತ ಮುಂಚೆಯೇ ಗ್ರಾಮಸ್ತರು ತಮ್ಮ ಮಕ್ಕಳನ್ನು ಸ್ಕೂಲಿಗೆ ಕಳುಹಿಸಿ ಸರ್ಕಾರದವರ ಉದ್ದೇಶವನ್ನು ಸಾರ್ಥಕಪಡಿಸಿಯಾರೆಂದು ನಿರೀಕ್ಷಿಸುತ್ತೇನೆ. ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಗಿರುವುದರಿಂದ ಸದ್ಯಃ ಇರತಕ್ಕ ಒಬ್ಬ ಮಾಸ್ಟರಿಂದಲೇ ಕೆಲಸ ನಡೆಯುವುದು ತುಂಬಾ ಪ್ರಯಾಸವಾಗಿದೆ. ಆದುದರಿಂದ ಗೌ॥ ನವರು ಮತ್ತೊಬ್ಬ ಮಾಸ್ಟರನ್ನು ಕಳುಹಿಸಿಯಾರೆಂದು ನಿರೀಕ್ಷಿಸಿಕೊಂಡಿದ್ದೇವೆ.

ವಿದ್ಯಾಭಿಮಾನಿ.

ತೆಂಗಿನ ಬೆಳೆಯು ವಿಶೇಷವಾಗಿ ಇರುವಕಡೆ ಸಾವಿರಾರು ಟನ್ನುಗಳ ತೆಂಗಿನನಾರು ಉಪಯೋಗಿಸಲ್ಪಡದೆ ನಾಶವಾಗುತ್ತಿದೆ. ಈ ನಾರಿನಿಂದ ರಗ್ಗುಗಳು, ಚಾಪೆಗಳು, ಬ್ರಷ್‌ಗಳು ಮುಂತಾದವುಗಳನ್ನು ಮಾಡುತ್ತಾರೆ. ಮೆತ್ತೆ ದಿಂಬು ಮುಂತಾದವುಗಳಿಗೆ ಹತ್ತಿಗೆ ಬದಲಾಗಿ ಉಪಯೋಗಿಸುತ್ತಾರೆ.

೪೦ ಕಾಯಿಗಳಲ್ಲಿ ಸುಮಾರು ೩ ಪೌಂಡು ನಾರು ಸಿಕ್ಕುತ್ತೆ. ಕಾಯಿ ದಪ್ಪನಾಗಿದ್ದರೆ ಮೂರು ಕಾಯಿಗಳಿಂದ ಒಂದು ಪೌಂಡು ನಾರು ತೆಗೆಯಬಹುದು. ಸಾವಿರ ಕಾಯಿಗಳನ್ನು ಸುಲಿಯುವದರಿಂದ ಸುಮಾರು ೧೩೦ ಪೌಂಡು ನಾರು ಸಿಗುತ್ತೆ. ಹದನಾಗಿರುವ ನಾರು ಟನ್ ಒಂದಕ್ಕೆ ಸುಮಾರು ೩೦೦ ರೂ. ಬೆಲೆಯಾಗುತ್ತೆ. ಇದರ ಲಾಗವಡು ಸುಮಾರು ೧೦

ಆಗಬಹುದು. ಕಷ್ಟಪಟ್ಟು ಕೆಲಸ ಮಾಡಿದರೆ

೦ ಕಾಯಿಗಳನ್ನು ಸುಲಿಯಬಹುದು.

ಯುವ ಒಂದುತರದ ಯಂ

ತ್ರವ

ಇದರ ಉಪಯೋಗದಿಂದ

ಗ

ಳನ್ನು ಸುಲಿಯಬಹುದು.

ನೀರಿನಲ್ಲಿ ಆರುತಿಂಗಳ

ಂದು ಯಂತ

ಹಾ

ಗಳ

ರೆ.

೨೯ ನೆ ರಾಷ್ಟ್ರೀಯ ಮಹಾಸಭೆಯು.

ಸ್ವಾಗತ ಸಂಘಾಧ್ಯಕ್ಷರಾದ ಸರ್ ಎಸ್. ಸುಬ್ರಹ್ಮಣ್ಯಯ್ಯರ್‌ರವರು ಸಭಿಕರನ್ನುದ್ದೇಶಿಸಿ ಮಾಡಿದ ಭಾಷಣವೂ ಬಳಿಕ ಆ ಮಹಾಸಭಾಧ್ಯಕ್ಷರಾದ ಬಾಬು ಭೂಪೇಂದ್ರನಾಥ ಬಾಸುರವರು ಮಾಡಿದಭಾಷಣವೂ ಅತ್ಯಂತ ವಿಸ್ತಾರವಾಗಿಯೂ ಅದಕ್ಕೆ ತಕ್ಕಂತೆ ವಿಶೇಷ ವಿಚಾರ ಪರಿಪ್ಲುತವಾಗಿಯೂ ಇದ್ದುವು. ಸ್ಥಲಸಂಕೋಚದಿಂದ ಅವುಗಳಲ್ಲಿ ಕೆಲ ಮುಖ್ಯಾಂಶಗಳನ್ನು ಮಾತ್ರ ಉದ್ಧರಿಸಿ ನಮ್ಮ ವಾಚಕರಿಗಾಗಿ ವಿವರಿಸುತ್ತೇವೆ.

ಸ್ವಾಗತ ಸಂಘಾಧ್ಯಕ್ಷರು ಮೊಟ್ಟಮೊದಲು ತಮ್ಮ ಭಾಷಣದಲ್ಲಿ ಸಭಿಕರೆಲ್ಲರಿಗೂ ಸುಸ್ವಾಗತವನ್ನು ಸತ್ಕಾರಕ ಸಂಘದ ಪಕ್ಷದಿಂದ ಮಾಡಿ, ಬಳಿಕ ಈ ಮಹಾಸಭೆಯನ್ನು ಈ ವರ್ಷ ಜರುಗಿಸಬಾರದೆಂದು ಕೆಲವರೂ ಜರುಗಿಸಿಯೇ ತೀರಬೇಕೆಂದು ಕೆಲವರೂ ಮಾಡಿದ ಚರ್ಚೆಗಳಲ್ಲಿ ನಮ್ಮ ಸಾರ್ವಭೌಮ ಪ್ರಭುತ್ವದವರಿಗೆ ನ್ಯಾಯಧರ್ಮ ರಕ್ಷಣಾರ್ಥವಾಗಿ ಯುದ್ಧಪ್ರಸಕ್ತಿಯು ಒದಗಿರುವ ಸಮಯದಲ್ಲಿ ತಮ್ಮ ಸಹಾನುಭೂತಿ ರಾಜಭಕ್ತಿ ಮೊದಲಾದುವುಗಳನ್ನು ನಿವೇದಿಸುವುದಕ್ಕಾಗಿ ಚಿರಕಾಲಿಕವಾಗಿ ಬಂದಿರುವ ಈ ಸಭೆಯನ್ನು ನಡೆಯಿಸಿಯೇ ತೀರಬೇಕಾದುದು ಅತ್ಯಾವಶ್ಯಕವಾಗಿದ್ದಿತೆಂಬುದನ್ನು ಹೇಳಿ, ತದನಂತರ ಮಹಾಸಭೆಯಲ್ಲಿ ಚರ್ವಿತ ಚರ್ವಣದಂತಾಗಿ ಬಂದಿರುವ ವಿಷಯಗಳ ವಿಮರ್ಶನದ ಕರಾಟಕ್ಕೆ ತಾವು ಬೀಳದೆ ಅದನ್ನೆಲ್ಲಾ ಮಹಾಸಭಾಧ್ಯಕ್ಷರ ಪಾಲಿಗೆ ಬಿಟ್ಟು, ಸಭಾ ಸಂಬಂಧವಾಗಿ ಮುಂದೆ ನಡೆಯಬೇಕಾದ ಅತ್ಯಾವಶ್ಯಕವಾದ ಕೆಲ ವಿಷಯಗಳನ್ನು ಮಾತ್ರ ಕುರಿತು ಪ್ರಸ್ತಾಪಿಸಿದರು.

ಅವುಗಳಲ್ಲಿ ಮೊದಲನೆಯದು ಮಹಾಸಭೆಯು ಅವ್ಯಾಹತವಾಗಿ ನಡೆದು ಹೋಗುವಂತೆ ಆಗುವುದಕ್ಕಾಗಿ ಧನಿಕರಾದ ಜಮೀನ್ದಾರರು ಈ ಸಭೆಗೆ ಸಂಪೂರ್ಣ ಸಹಾಯಕರಾಗಿ ನಿಲ್ಲಬೇಕೆಂಬುದಾಗಿತ್ತು. ಆ ಜಮೀನ್ದಾರರುಗಳು ತಮ್ಮ ಪ್ರತಿನಿಧಿಗಳನ್ನು ಇಲ್ಲಿಗೆ ಕಳುಹಿಸಿಕೊಡಬೇಕು. ಇದರಿಂದ ಅವರು ಈಸಭೆಯಲ್ಲಿ ಪ್ರತಿನಿಧಿಗಳಾಗಿಲ್ಲವೆಂಬ ಕೊರತೆಯು ದೂರವಾಗುವುದು ಮಾತ್ರವಲ್ಲದೆ ಈ ಸಭಾ ಸಂಬಂಧದಿಂದ ಅವರ ಅನೇಕ ಇಷ್ಟಾರ್ಥಗಳು ನೆರವೇರುವುದಕ್ಕೂ ಅವಕಾಶವಾಗುವುದು. ಈ ಸಭೆಯವರ ಪ್ರಯತ್ನವಿಲ್ಲದಿದ್ದರೆ ಪ್ರಾಂತಿಕಶಾಸನನಿರ್ಮಾಣ ಸಭೆಗೂ ಸಾಮ್ರಾಜ್ಯಶಾಸನ ನಿರ್ಮಾಣಸಭೆಗೂ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿಕೊಡುವ ಸ್ವಾತಂತ್ರ್ಯವು ಆ ಜಮೀನ್ದಾರರುಗಳಿಗೆ ಲಭಿಸುತ್ತಿರಲಿಲ್ಲ. ಈ ಸಭೆಯು ಪ್ರಾರಂಭದಶೆಯಲ್ಲಿದ್ದುದಕ್ಕೂ ಈಗಿಗೂ ಬಹಳ ವ್ಯತ್ಯಾಸವಿದೆ. ಆಗ ಇದರ ಕೆಲಸಗಳು ಆಟಗಾರಿಕೆಯಂತಿದ್ದುವು ಈಗ ಬಹಳ ಪ್ರೌಢವಾಗಿವೆ. ಉತ್ತಮ ಮೇಧಾವಿಗಳೂ ದೀರ್ಘಾಲೋಚನಪರರೂ ರಾಜಕೀಯ ವ್ಯವಹಾರಾನುಭವಿಗಳೂ ಆದವರಿಂದ ಇದರ ಕಾರ್ಯಗಳು ನಿರ್ವಾಹಮಾಡಲ್ಪಡತಕ್ಕವಾಗಿವೆ. ಇಂಥ ಸಭೆಯಲ್ಲಿ ಜಮೀನ್ದಾರರುಗಳು ತಮಗೂ ಅವಕಾಶವನ್ನು ಕಲ್ಪಿಸಿಕೊಂಡು ತಮ್ಮ ಸೌಕರ್ಯಗಳನ್ನೂ ದೇಶಸೇವೆಯ ಫಲವನ್ನು ಸಹ ಉಂಟುಮಾಡಿಕೊಳ್ಳಬೇಕಾದುದು ಅತ್ಯಾವಶ್ಯಕವೆಂದು ಹೇಳಿದರು.

ಬಳಿಕ ೨ನೆ ಯದಾಗಿ ಅವರು ಸೂಚಿಸಿದ ವಿಷಯವು ಗ್ರಾಮಾಂತರ ಸ್ಥಿತಿಗತಿಗಳನ್ನು ಜೀರ್ಣೋದ್ಧಾರ ಗೊಳಿಸಬೇಕೆಂಬುದಾಗಿದ್ದಿತು. ಅದರವಿಮರ್ಶೆಯನ್ನು ಮಾಡುವಾಗ ರೈತ್ವಾರಿಪದ್ಧತಿಯನ್ನು ಸ್ಥಾಪಿಸಿದಾಗಿನಿಂದ ರೈತರುಗಳಲ್ಲಿ ಸ್ವತಃ ತಮ್ಮ ಗ್ರಾಮಗಳಮೇಲ್ಮೆಗಾಗಿ ಪಾಟುಪಡುವ ಸ್ವಭಾವವು ಕ್ಷೀಣಿಸಿಹೋಯಿತೆಂತಲೂ, ಈಗ ಗ್ರಾಮಾಂತರದ ಪ್ರಜೆಗಳಲ್ಲಿ ಏಕಮತ್ಯವು ತಪ್ಪಿಹೋಗಿರುವುದೆಂತಲೂ, ಅಧಿಕಾರಿಗಳ ನಿರ್ಬಂಧಕ್ಕಾಗಿ ಯಾವುದಾದರೊಂದು ಸಾರ್ವಜನಿಕ ಕಾರ್ಯವನ್ನು ಮಾಡುವಂತಾಗಿರುವುದೇ ಹೊರತು ಸ್ವಲಾಭವೆಂಬ ಮಮಕಾರದಿಂದ ಮಾಡುತ್ತಿಲ್ಲವೆಂತಲೂ, ಗ್ರಾಮಾಂತರದ ಸುಸ್ಥಿತಿಯು ರಾಜ್ಯಾಂಗದ ಸಕಲ ವಿಷಯದ ಏಳ್ಗೆಗೂ ಮೂಲರೂಪದಂತಿರುವುದೆಂತಲೂ, ಚೋಳರಾಜರ ಆಳಿಕೆಯಲ್ಲಿ ಗ್ರಾಮದ ಪಂಚಾಯತಿ ಪರಿಪಾಲನೆಯ ಪದ್ಧತಿಯು ಸ್ಥಾಪಿತವಾಗಿದ್ದಿತೆಂತಲೂ, ಆಯಾಸ್ಥಲದ ವ್ಯವಹಾರಗಳನ್ನು ಆಯಾಗ್ರಾಮಪಂಚಾಯತಿಯವರೇ ನೆರವೇರಿಸುತ್ತಿದ್ದರೆಂತಲೂ, ಅಂಥಶಕ್ತಿಯು ಈಗಲೂ ಪ್ರಜೆಗಳಲ್ಲಿರುವುದೆಂತಲೂ ಅದನ್ನು ಸರಿಯಾದ ಮಾರ್ಗದಲ್ಲಿ ಈಗಲೂ ವಿನಿಯೋಗಿಸಿಕೊಳ್ಳಲು ಅವಕಾಶವಿರುವುದೆಂತಲೂ ಪ್ರಜೆಗಳು ದಿನೇದಿನೇ ವೃದ್ಧಿಗೆ ಬರುತ್ತಿರುವುದರಿಂದ ಈಗಿನವರಿಗಿಂತ ಮುಂದಿನ ಪೀಳಿಗೆಯವರು ಎಲ್ಲ ವಿಷಯದಲ್ಲೂ ವೃದ್ಧಿಗೆಬರತಕ್ಕವರಾಗಿರುವುದರಿಂದ ಅವರಲ್ಲಿ ಸ್ವಭಾವವಾಗಿರುವ ಶಕ್ತಿಸಾಮರ್ಥ್ಯದಿಂದ ತಕ್ಕ ಉಪಯೋಗವನ್ನು ಮಾಡಿಕೊಳ್ಳಲು ಪ್ರಯತ್ನಿಸಬೇಕೆಂತಲೂ, ಡಿಸೆಂಟ್ರಲಿಜೇಷನ್ ಸಂಘದವರು ಗ್ರಾಮಪಂಚಾಯಿತಿಸ್ಥಾಪನೆಯ ವಿಷಯದಲ್ಲಿ ಸರ್ಕಾರಕ್ಕೆ ತಕ್ಕ ಸೂಚನೆಯನ್ನು ಕೊಟ್ಟು ೫ ವರ್ಷಗಳಾಗಿದ್ದರೂ ತಕ್ಕ ಫಲವೇನೂ ಆಗಲಿಲ್ಲವೆಂತಲೂ, ಪರಸ್ಪರಸಹಾಯಕ ಸಂಘಸ್ಥಾಪನೆಗಾಗಿ ಸರ್ಕಾರದವರು ಒಬ್ಬ ಡೈರೆಕ್ಟರನ್ನು ಪ್ರತ್ಯೇಕವಾಗಿ ಏರ್ಪಡಿಸಿರುವಂತೆ ದೇಶಭಾಷೆಗಳನ್ನೂ ರೈತರ ಗುಣಧರ್ಮ ಸ್ವಭಾವಾದಿಗಳನ್ನೂ ಅರಿತ ಡೈರೆಕ್ಟರೊಬ್ಬರನ್ನು ಪ್ರತ್ಯೇಕವಾಗಿ ನಿಯಮಿಸಿ ಗ್ರಾಮಪಂಚಾಯಿತಿಯ ಪ್ರಸಾರದ ಮೇಲ್ವಿಚಾರಣೆಯನ್ನು ನಡೆಯಿಸುವಂತೆ ಮಾಡುವುದು ಅವಶ್ಯಕವೆಂತಲೂ ಸರ್ಕಾರದ ಕಾರ್ಯಗಳು ಬರಬರುತ್ತ ವಿಸ್ತರಿಸುತ್ತಿರುವುದರಿಂದ ಇಂಥ ವಿಷಯಗಳನ್ನು ಪದೇಪದೇ ಅವರಿಗೆ ಜ್ಞಾಪ್ತಿಗೆ ತಂದು ಕಾರ್ಯವನ್ನು ಮಾಡಿಸಿಕೊಳ್ಳುವುದು ಪ್ರಜೆಗಳ ಕರ್ತವ್ಯವಾಗಿರುವುದೆಂತಲೂ ಹೇಳಿದುದಲ್ಲದೆ ಆಗ್ರಾಮಗಳ ಉದ್ಧರಣೆಯಾಗಬೇಕಾದರೆ ರೈತರನ್ನು ಋಣಭಾರದಿಂದ ಉದ್ಧರಿಸುವುದು ಮುಖ್ಯಕಾರ್ಯವೆಂತಲೂ ಅದಕ್ಕಾಗಿ ಬೊಂಬಾಯಿಆಧಿಪತ್ಯದಲ್ಲಿ ಏರ್ಪಡಿಸಿರುವಂತೆ ಇಲ್ಲೂ ರೈತರಿಗೆ ಸುಲಭವಾದ ಬಡ್ಡಿಯಿಂದ ಸಾಲವನ್ನು ಕೊಡುವಂತಹ ಸಂಘಗಳನ್ನು ಏರ್ಪಡಿಸಿ, ಅವರು ಹೆಚ್ಚುಬಡ್ಡಿಗಾಗಿ ಧನಿಕರಲ್ಲಿ ಸಾಲವನ್ನು ತೆಗೆಯಬೇಕಾಗುತ್ತಿರುವ ತೊಂದರೆಯನ್ನು ತಪ್ಪಿಸುವಂತೆ ಮಾಡಬೇಕೆಂತಲೂ, ಪ್ರಭುತ್ವದವರು ರೈತರಿಂದ ತಮಗೆ ಬರಬೇಕಾದ ಆಯತಿಯನ್ನು ಸರಿಯಾಗಿ ಬರುವಂತೆ ಮಾಡಿಕೊಳ್ಳುವುದರ ಜತೆಗೆ ಆ ರೈತರಿಗೆ ಇರುವ ಕಷ್ಟಗಳನ್ನು ಪರಿಹರಿಸಿಕೊಡುವ ಪ್ರಯತ್ನವನ್ನು ಕೂಡ ಮಾಡುವುದು ಅವಶ್ಯಕವೆಂತಲೂ ಹೇಳಿದರು.

ಅನಂತರ ದೇಶೀಯಮಹಾಸಭೆಯನ್ನು ಚಿರಕಾಲ ಅವಿಚ್ಛಿನ್ನವಾಗಿ ಸಾಗಿಸಿಕೊಂಡು ಹೋಗಬೇಕಾದುದರ ಅವಶ್ಯಕತೆಯನ್ನು ವಿಮರ್ಶಿಸುವಾಗ್ಗೆ—ಇದು ತನ್ನ ಉದ್ದೇಶದ ಫಲಗಳನ್ನು ಒಂದುಕಡೆ ಉಂಟುಮಾಡಿಕೊಡುತ್ತ ಬರುತ್ತಿದ್ದರೂ ಮತ್ತೊಂದುಕಡೆ ತನ್ನ ಭಾವಿಫಲಾಂಕುರಗಳನ್ನು ಹುಟ್ಟಿಸುತ್ತಲೂ ತಾನೂ ವೃದ್ಧಿಯಾಗುತ್ತಲೂ ಇರಬೇಕೆಂತಲೂ, ಈ ಸಭೆಗೆ ಪ್ರತಿನಿಧಿಗಳಾಗಿ ಬರತಕ್ಕವರು ತಾವು ಯಾವಯಾವ ದೇಶಭಾಗದ ಅಥವಾ ಪ್ರಜಾಪಕ್ಷದ ಪ್ರತಿನಿಧಿಗಳಾಗಿ ಬಂದಿರುವರೋ, ಅವರ ಕುಂದುಕೊರತೆಗಳೇನೋ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು, ಅವುಗಳ ಪರಿಹಾರಕ್ಕಾಗಿ ಈ ಸಭಾಮುಖದಲ್ಲಿ ಚರ್ಚೆಗೆ ತಂದು ನಿವಾರಣೋಪಾಯಗಳಿಗೆ ದಾರಿಮಾಡಿಕೊಡಬೇಕೆಂತಲೂ, ಅಂಥ ಪ್ರಾಂತಿಕ ವಿಷಯ ವಿಚಾರಗಳು ಅನಂತವಾಗಿರುವ ಕಾರಣ, ಪ್ರಜಾಪ್ರಮುಖರು ಆಗಾಗ್ಗೆ ಸಭೆಗೂಡಿ ಹಲವುಸಲ ವಿಷಯವಿಚಾರಗಳನ್ನು ಮಾಡುತ್ತಿರುವುದು ಅವಶ್ಯಕವೆಂತಲೂ, ಆಂಗ್ಲಪ್ರಭುತ್ವದ ಪರಿಪಾಲನೆಯ ಕೆಳಗೆ ಸ್ವರಾಜ್ಯವನ್ನನುಭವಿಸುವ ಫಲವು ನಮಗೆ ದೊರೆಯುವವರೆಗೂ ನಾವು ಈ ಮಹಾಸಭೆಯನ್ನು ನಿಲ್ಲಿಸಕೂಡದೆಂತಲೂ, ಈ ಮಹಾಸಭೆಯನ್ನು ವರ್ಷಕ್ಕೊಂದುಸಲ ನಡೆಯಿಸುತ್ತಿದ್ದರೂ, ಅನುದಿನವೂ ದೇಶಶ್ರೇಯಶ್ಚಿಂತನದ ಕಾರ್ಯವನ್ನು ಅದರ ಸಂಬಂಧವಾಗಿ ಮಾಡುವುದಕ್ಕಾಗಿ ಮಹಾಸಭಾಸಹಾಯ್ಯಸಂಘವೊಂದನ್ನು ಏರ್ಪಡಿಸಬೇಕೆಂತಲೂ, ಆ ಸಂಘದ ಪ್ರತಿಯೊಬ್ಬ ಸಭಿಕನೂ ತಿಂಗಳೊಂದೊಂದಕ್ಕೆ ೫॥ ರೂ.ನಂತೆ ವರ್ಗಣಿಹಣ ಕೊಡಬೇಕೆಂತಲೂ, ಪ್ರತಿಯೊಂದು ಅಧಿಪತ್ಯದಲ್ಲೂ ಇಂಥ ವರ್ಗಣಿದಾರರು ಕೆಲಕೆಲರು ಇರಬೇಕೆಂತಲೂ, ಆ ವರ್ಗಣಿಯ ಮೂಲಕ ಬಂದ ಹಣದಿಂದ ಆಯಾವರ್ಷದಲ್ಲಿ ಸಂಘದವರು ನೆರವೇರಿಸಬೇಕಾದ ಕಾರ್ಯಗಳಿಗೆ ವಿನಿಯೋಗಿಸಿಕೊಳ್ಳಬೇಕೆಂತಲೂ, ಮಹಾಸಭೆಯು ಯಾವವರ್ಷದಲ್ಲಿ ಯಾವಆಧಿಪತ್ಯದಲ್ಲಿ ಜರುಗುವುದೋ ಆ ಭಾಗದವರು ಆಗಿನ ಸಭೆಗೆ ಬೇಕಾಗುವ ಹಣವನ್ನು ಜತೆಗೊಳಿಸಬೇಕೆಂತಲೂ, ಮಾಸಿಕ ಚಂದಾಮೂಲಕವಾಗಿ ಕೊಡುವ ಹಣವನ್ನು ವಿನಿಯೋಗಿಸುವುದಕ್ಕಾಗಿ ಒಂದು ರಿಜಿಸ್ಟರಾದ ಸಂಘವನ್ನೇರ್ಪಡಿಸಿಕೊಳ್ಳಬೇಕೆಂತಲೂ, ನಾವು ಇಷ್ಟನ್ನೂ ನೆರವೇರಿಸಲಾರದವರಾದರೆ ಆಂಗ್ಲೇಯರೊಡನೆ ಸಮಾನವಾದ ಸ್ವಾತಂತ್ರ್ಯಗೌರವಗಳನ್ನು ಕೋರಲು ಅರ್ಹರಾಗಲಾರೆವೆಂತಲೂ, ಆಂಗ್ಲಜನರು ದೇಶಗೌರವಾರ್ಥವಾಗಿಯೂ, ಜಾತೀಯಗೌರವಕ್ಕಾಗಿಯೂ, ತಮ್ಮ ತನುಮನಧನಗಳನ್ನು ನೀರಿನಂತೆ ವೆಚ್ಚಮಾಡುತ್ತಿರುವರೆಂತಲೂ, ಅಂಥ ಸ್ವಾರ್ಥತ್ಯಾಗಗುಣವನ್ನು ನಾವು ಕಣ್ಣಿನಿಂದಲೇ ನೋಡುತ್ತಿರುವಾಗ ಅವರಂತೆ ನಾವೂ ನಡೆದುಕೊಳ್ಳಲಾರದವರಾಗಿದ್ದರೆ ಅವರಿಗೆ ಸಮಾನವಾದ ಸ್ವಾತಂತ್ರ್ಯಗೌರವಗಳನ್ನು ನಾವು ಯಾವ ಮೋರೆಯನ್ನು ಚಾಚಿ ಕೇಳಿಕೊಳ್ಳಲಾದೀತು? ಎಂತಲೂ ಹೇಳಿ, ಬಳಿಕ ದೇಶೀಯಮಹಾಸಭಾಚಾಲಕರಲ್ಲಿ ಕೆಲದಿನಗಳಿಂದೀಚೆಗೆ ಸ್ವಲ್ಪ ನಿರುತ್ಸಾಹವು ವ್ಯಕ್ತವಾಗುತ್ತಿದೆಯೆಂತಲೂ, ನಮ್ಮಲ್ಲಿ ಬಹುಕಾಲದಿಂದ ಅಂಟಿಬಂದಿರುವ ಜಾತಿ ಮತಾಚಾರ ಭಾಷಾಭೇದಗಳಿಂದ ಉಂಟಾಗಿರುವ ಅನೈಕ್ಯಗಳನ್ನು ಈಗಿನ ನಾಗರಿಕಾದರ್ಶದಿಂದ ಅರಿದು ಐಕ್ಯವನ್ನು ಬೆಳೆಯಿಸಿಕೊಳ್ಳಬೇಕೆಂತಲೂ, ಕೆಲರು ನಮಗೆ ಹಿತೋಪದೇಶಕರಾಗಿ ಮಾರ್ಗದರ್ಶಿಗಳಾಗಿರುವುದಕ್ಕೆ ಪ್ರತಿಯಾಗಿ ನಮ್ಮ ಸತ್ಪ್ರಯತ್ನಗಳಿಗೆ ವಿಘ್ನವನ್ನು ತಂದು, ದುರಭಿಪ್ರಾಯವನ್ನು ಹುಟ್ಟಿಸುವುದಕ್ಕಾಗಿ ಸದಾ ಪ್ರಯತ್ನಿಸುತ್ತಿರುವರೆಂತಲೂ, ನಮ್ಮಲ್ಲಿ ಇರುವರೆಗೆ ಈ ಮಹಾಸಭಾಚಾಲನವಿಷಯದಲ್ಲಿ ಅತ್ಯಂತ ಶ್ರಮಸಾಹಸಗಳನ್ನು ಮಾಡಿ ವೃದ್ಧಾಪ್ಯಕ್ಕೆ ಬಂದಿರುವವರು ಈಗ ಮೊದಲಿನಷ್ಟು ಚಟುವಟಿಕೆಯಿಂದ ಕೆಲಸಮಾಡಲು ಅಸಮರ್ಥರಾಗಿರುವಕಾರಣ, ಅವರ ಸ್ಥಾನಕ್ಕೆ ಹೊಸಹೊಸಬರು ನಿಂತು ಯಥಾಪೂರ್ವವಾಗಿ ಕೆಲಸವನ್ನು ಸಾಗಿಸಿಕೊಂಡು ಹೋಗುವುದು ಅವಶ್ಯಕವೆಂತಲೂ, ಪ್ರಭುಗಳು ತಮ್ಮ ನಿತ್ಯಕ್ರಿಯೆಯನ್ನು ಎಚ್ಚರಿಕೆಯಿಂದ ನೆರವೇರಿಸಿಕೊಂಡು ಹೋಗುವಂತೆ ಮಾಡಬೇಕೆಂಬುದ್ದೇಶದಿಂದ, ಭಟರಾಜರುಗಳು ಪರಾಕುಗಳನ್ನು ಹೇಳಿಕೊಂಡು "ಜಾತಸ್ಯಮರಣಂಧ್ರುವಂ" ಇತ್ಯಾದಿ ವಚನಗಳಿಂದ ಹೇಗೆ ಎಚ್ಚರಿಸುತ್ತಿರುವರೋ ಅದರಂತೆಯೇ ಲಾರ್ಡಕರ್ಜನ್‌ರಂಥವರು ಆಡಿರುವ ಹೈಂದವಜಾತೀಯತೆಯು ಎಂದಿಗೂ ಏರ್ಪಡದು ಎಂಬಿತ್ಯಾದಿ ಅಶುಭವಚನಗಳೇ ನಮ್ಮನ್ನು ಎಚ್ಚರಿಸತಕ್ಕವು ಎಂಬುದನ್ನು ಮರೆಯದೆ ಅದನ್ನೇ ಸದಾ ಸ್ಮರಿಸುತ್ತ ನಮ್ಮ ಧ್ಯೇಯಸಂಪಾದನೆಗೆ ಪ್ರಯತ್ನಿಸುತ್ತಿರಬೇಕೆಂತಲೂ ಹೇಳಿ ಕಡೆಗೆ ದಕ್ಷಿಣಾಫ್ರಿಕಾಭಾರತೀಯರು ತಮ್ಮ ಧ್ಯೇಯಸಾಧನೆಗಾಗಿ ಹಾಕಿ ತೋರಿಸಿಕೊಟ್ಟ ರಾಜಭಕ್ತಿಪೂರಿತವಾದ ಸಾತ್ವಿಕತಪಸ್ಸೇ ನಮ್ಮಗಳ ಧ್ಯೇಯಲಾಭಕ್ಕೂ ಮಾರ್ಗದರ್ಶಕವಾದುದೆಂದು ಆಡಿತೋರಿಸಿ, "ವೈರವು ಪ್ರತಿವೈರದಿಂದ ಎಂದಿಗೂ ಅಡಗದೆ ಪ್ರೀತಿಯಿಂದಲೇ ಅದು ಅಡಗಿಹೋಗುವುದು" ಎಂಬ ನೀತಿವಚನವನ್ನು ಆದರ್ಶವಾಗಿಟ್ಟುಕೊಂಡು ನಡೆದರೆ ನಮ್ಮ ಸತ್ಸಂಕಲ್ಪಗಳೆಲ್ಲವೂ ಸಿದ್ಧಿಸಿಯೇ ತೀರುವುವೆಂತಲೂ ಹೇಳಿದರು. ಮತ್ತೂ ಭಾರತೀಯಜಾತೀಯತೆಯು ಇದುವರೆಗೂ ಏರ್ಪಡದೆ ಇದ್ದರೂ ಇನ್ನು ಕೆಲಕಾಲದೊಳಗೇ ಅದು ಏರ್ಪಡುವುದೆಂತಲೂ, ನಮ್ಮ ಪೂರ್ವಿಕರು ಫಿಲಿಫೈನ್—ಜಾವಾ ಮೊದಲಾದ ದ್ವೀಪಗಳಿಗೆ ಹೋಗಿ ಅಧಿನಿವೇಶಗಳನ್ನು ಸ್ಥಾಪಿಸಿರುವರಾದರೂ, ಈಗಿನ ನಮಗೆ ಪಾಶ್ಚಾತ್ಯರ ತಡೆಯಿಂದ ಹಾಗೆ ಮಾಡಲು ಅವಕಾಶವಿಲ್ಲವಾಗಿದೆಯೆಂತಲೂ, ಅದರಿಂದ ಅಧಿನಿವೇಶಸ್ಥಾಪನದ ಮೂಲಕ ನಮ್ಮಲ್ಲಿ ವೃದ್ಧಿಯಾಗಬೇಕಾದ ಗುಣಾತಿಶಯಗಳಿಗೆ ಮಾರ್ಗವಿಲ್ಲದೆ ಹೋಗಿದೆಯೆಂತಲೂ, ನಮ್ಮಲ್ಲಿ ಸಾಂಘಿಕ-ಆರ್ಥಿಕ-ರಾಜ್ಯಾಂಗವಿಷಯಗಳೊಳಗೆ ಏಕಮತ್ಯವು ಹುಟ್ಟಿ ಸಮಷ್ಟಿಭಾವವು ಸಂಜನಿಸುವಂತೆ ನಮ್ಮಲ್ಲಿರುವ ವಿವೇಕ ನಿರಪರಾಧಿತ್ವ ಮತಾಭಿನಿವೇಶಾದಿಸದ್ಗುಣಗಳು ಮಾಡುವುವೆಂತಲೂ, ಅದುಕಾರಣ, ನಮ್ಮಲ್ಲಿ ವಿರಳವಾಗಿ ತೋರಿಬರುತ್ತಿರುವ ಮೃಗಪ್ರಾಯತ್ವವನ್ನು, ದಯಾಸ್ವರೂಪನಾದ ಗೌತಮಬುದ್ಧನಿಂದ ಪವಿತ್ರವಾಗಿ ಏರ್ಪಡಿಸಲ್ಪಟ್ಟಿರುವ ಪ್ರೇಮಮಯ ಮಾರ್ಗಕ್ರಮಣದಿಂದ ನಿರೋಧಿಸಬೇಕೆಂತಲೂ, ಹೇಳಿ,ತದನಂತರ ಮನುಷ್ಯನಿಗೆ ವ್ಯಾಯಾಮವು ಹೇಗೆ ಅವಶ್ಯಕವೋ ಅದರಂತೆ ವೀರತ್ವವೂ ಅವಶ್ಯಕವಾದುದೆಂತಲೂ, ಅದಕ್ಕಾಗಿ ನಮಗೆ ಸ್ವಚ್ಛಂದಸೈನಿಕತ್ವವೂ,ಸ್ವಾತಂತ್ರ್ಯದಿಂದ ಆಯುಧವನ್ನು ಧರಿಸುವಿಕೆಯೂ ಅವಶ್ಯಕವೆಂತಲೂ,ಚಕ್ರವರ್ತಿಯವರಿಂದ ಪರಿಪಾಲಿತಪ್ರಜೆಗಳಾದ ಭಾರತೀಯರು ಉತ್ತಮಭಟರಾಗಿದ್ದರೆ ಸಾಮ್ರಾಜ್ಯಕ್ಕೇ ವಿಶೇಷ ಬಲವಾಗಿರುವುದೆಂತಲೂ, ಆದರೆ ಅಂಥ ಯೋಧತ್ವವು ನಮಗುಂಟಾದರೆ ಅವಿವೇಕಿ ಹಸ್ತಗತವಾದ ಆಯುಧವು ಅಪರಾಧವನ್ನು ಮಾಡುವಂಥ ಕೆಲಸವನ್ನು ಭಾರತೀಯರು ಎಂದಿಗೂ ಮಾಡುವರಲ್ಲವೆಂಬನಂಬುಗೆಯನ್ನು ಪ್ರಭುತ್ವದವರಿಗೆ ನಾವು ಉಂಟುಮಾಡಿಕೊಡಬೇಕೆಂತಲೂ, ದಕ್ಷಿಣಾಫ್ರಿಕಾದಲ್ಲಿ ನಮ್ಮ ದೇಶೀಯಬಾಂಧವರು ತಮ್ಮ ಇಷ್ಟಸಿದ್ಧಿಗಾಗಿ ನಡೆಯಿಸಿದ ನಿರಪರಾಧ ನಿರೋಧಪದ್ಧತಿಯ ಸಾತ್ವಿಕಮಾರ್ಗಕ್ರಮಣವು ನಮ್ಮ ವೈಸ್ರಾಯರವರ ಸಾನುಭೂತಿಯನ್ನು ಪಡೆಯಲು ಸಾಧಕವಾಯಿತೆಂತಲೂ, ಅದರಿಂದ ಅಲ್ಲಿನ ಯೂನಿಯನ್‌ಪ್ರಭುತ್ವದವರು ಕೂಡ ಬಾಗಿಹೋಗಬೇಕಾಯಿತೆಂತಲೂ, ಕೋಟಿಗಟ್ಟಲೆ ಸಂಖ್ಯೆಯುಳ್ಳ ಭಾರತೀಯರಿಗೂ ಅದೇ ನೀತಿಪ್ರಕೀರ್ತನವು ಇಷ್ಟಾರ್ಥಸಾಧನೆಗೆ ಮಾರ್ಗದರ್ಶಕವಾದುದೆಂತಲೂ, ಅದಕ್ಕೂ ನಾವು ಮೊದಲು ಏಕಮತ್ಯವನ್ನು ಸ್ಥಾಪಿಸಿಕೊಳ್ಳಬೇಕೆಂತಲೂ,ಹಿಂದೂ-ಮಹಮ್ಮದೀಯ-ಬ್ರಾಹ್ಮಣ-ಪಂಚಮ--ಆಂಧ್ರ-ದ್ರಾವಿಡ-ಯೂರೋಪ್ಯ--ಇತ್ಯಾದಿ ಭೇದಮೂಲಕವಾದ ವಿಷಮವೈಗ್ಯಗಳನ್ನು ನಿರ್ಮೂಲಗೊಳಿಸಬೇಕೆಂತಲೂ, ಈಗ ದೇಹದಬಣ್ಣಗಳ ಮೂಲಕವಾದ ಆಂದೋಳನವು ಅಧಿನಿವೇಶಗಳೊಳಗೆ ಒಂದುಕಡೆ ಹುಟ್ಟಿ ಸಾಮ್ರಾಜ್ಯದ ಎಲ್ಲಕಡೆಗೂ ವ್ಯಾಪಿಸಿರುವುದಾದಕಾರಣ, ಅದನ್ನು ಬೇಗನೆ ನ್ಯಾಯರೀತಿಯಿಂದ ನಿವಾರಣೆಗೊಳಿಸದಿದ್ದರೆ ಕಾಲಕ್ರಮದಿಂದ ಅದು ಉಳಿದಕಡೆಯಲ್ಲೂ ಪರಸ್ಪರ ವೈಷಮ್ಯವನ್ನು ಹೆಚ್ಚಿಸುವುದೆಂತಲೂ, ನಾವು ವಲಸೆಯಾಗಿ ಇತರ ರಾಜ್ಯಗಳಿಗೆ ಹೋಗುವಾಗ ಅಲ್ಲಿನವರಿಗೆ ಸಮಾನವಾದ ಸ್ವಾತಂತ್ರ್ಯಗೌರವಾದಿಗಳನ್ನು ಪಡೆಯುತ್ತೇವೆಂಬ ಆಶೋತ್ಸಾಹಗಳು ಹುಟ್ಟಿರುವುದು ಎಷ್ಟು ಯೋಗ್ಯವೂ ನ್ಯಾಯಶಾಸ್ತ್ರಾನುಸಾರವೂ ಆಗಿದ್ದರೂ ಕೆ

ಮ್ಮ ಪ್ರೋದ್ಯಮವಿಲ್ಲದಿದ್ದರೆ ಅದಕ್ಕೆ ವಿರುದ್ಧವಾಗ

ಳು ಅಲ್ಲಿ ಏರ್ಪಡುವುದಕ್ಕೆ ಅವಕಾಶ ವಿ ದಿ

ಹಿಂಸೆ

ಈ ವಿಷಯದಲ್ಲಿ ವೈಸ್ರಾಯರು "ಪ್ರ

ಹಣಗಳ-ಸ್ಥಲಾ

ರಬೇಕಾದುದು ಅವಶ್ಯಕವು" ಎಂ

ಪ್ರಸ್ತು

ಶ್ ಕೋ ಬಳ

ನಮಗೆ ತುಂಬಾ ಆಶಾಜನಕವಾಗಿರುವುದೆಂತಲೂ, ಈ ವಿಷಯದಲ್ಲಿ ಭಾರತೀಯರಿಗುಂಟಾಗುವ ಗೌರವಭಂಗ ಮೊದಲಾದ ಸಂಗತಿಗಳನ್ನು ಆಂಗ್ಲದೇಶೀಯರ ಮನಸ್ಸಿಗೆ ಸರಿಯಾಗಿ ಹತ್ತುವಂತೆ ನಾವು ಮಾಡಬೇಕೆಂತಲೂ, ಈಗಿನ ಯುದ್ಧಸಂದರ್ಭದಿಂದ ಭಾರತೀಯರು ತಮ್ಮ ನೈಸರ್ಗಿಕರಾಜಭಕ್ತಿಯನ್ನು ಸಮರ್ಪಿಸಲು ಅವಕಾಶವಾದುದರಿಂದ ಬ್ರಿಟನ್ನಿನವರ ಮಾತ್ರವೇ ಅಲ್ಲದೆ ಪ್ರಪಂಚದ ಮೇಲಿರುವವರೆಲ್ಲರ ಮನೋಭಾವವೂ ನಮ್ಮ ಕಡೆಗೆ ಅನುಕೂಲವಾಗಿರುವುದೆಂತಲೂ, ನಮಗೆ ಪ್ರತಿಕೂಲವಾಗಿದ್ದವರೂ ಕೂಡ ಈಗ ಸದಭಿಪ್ರಾಯಗಳನ್ನು ಕೊಡುತ್ತಿರುವರೆಂತಲೂ, ಯುದ್ಧವು ಮುಗಿದಬಳಿಕವೂ ಇದು ಹೀಗೆಯೇ ಸ್ಥಿರಪಟ್ಟು ಈ ದೇಶಕ್ಕೆ ಕ್ಷೇಮಗೊಳಿಸುವುದಾಗಲೆಂತಲೂ, ಅವ್ಯಾಜಕಾರುಣ್ಯದಿಂದ ಭಾರತೀಯರನ್ನು ತನ್ನ ಆಶ್ರಯದೊಳಕ್ಕೆ ಸೇರಿಸಿಕೊಂಡ ಆಂಗ್ಲಮಹಾಸಾಮ್ರಾಜ್ಯವೆ ನಮಗೆ ಅರ್ಹವಾದ ಪದವಿಯನ್ನು ಉಂಟುಮಾಡಿಕೊಡುವ ವಿಷಯದಲ್ಲಿ ತನಗೆ ವಿಧಾಯಕವಾದ ಕೃತ್ಯವನ್ನು ಮರೆಯದೆ ಇರಲಿ ಎಂತಲೂ ಕೋರಿ, ನಮ್ಮ ಸತ್ಪ್ರವರ್ತನವೇ ನಮ್ಮ ಜಾತೀಯಗೌರವಾಭಿವೃದ್ಧಿಗೆ ಮೂಲಕಾರಣವೆಂಬ ಉತ್ತಮಾದರ್ಶವನ್ನು ದೇಶಬಾಂಧವರಿಗೆ ಶ್ರುತಪಡಿಸಿ ತಮ್ಮ ಉಪನ್ಯಾಸವನ್ನು ಮುಗಿಸಿದರು.

(ಮುದ್ರಿತವಾಗಿದ್ದ ಈ ಭಾಷಣದಲ್ಲಿ ಆರಂಭದ ಸ್ವಲ್ಪ ಭಾಗವನ್ನು ಸರ್ ಸುಬ್ರಹ್ಮಣ್ಯಯ್ಯರು ಓದಿ, ಉಳಿದುದನ್ನೆಲ್ಲಾ ಮತ್ತೊಬ್ಬರಿಂದ ಸಭೆಯಲ್ಲಿ ಓದಿಸಿದರು.)

ಮೈಸೂರ್ ಸ್ಟಾರ್.

೧೯೧೫ ನೆಯ ಜನವರಿ ತಾ|| ೩ ನೆಯ ಭಾನುವಾರ.

ಮದ್ರಾಸಿನಲ್ಲಿನೆರವೇರಿದ ವಾರ್ಷಿಕಮಹಾಸಭೆಗಳು.

ಭರತಖಂಡದ ರಾಷ್ಟ್ರೀಯಕ್ಷೇಮವನ್ನು ಅಭಿವೃದ್ಧಿಗೊಳಿಸುವ ಸಂಕಲ್ಪದಿಂದ ದೇಶಾಭಿಮಾನಿಗಳು ಸ್ಥಾಪಿಸಿರುವ ರಾಷ್ಟ್ರೀಯಮಹಾಸಭೆಯೆಂಬುದು ಪ್ರತಿ ವರ್ಷವೂ ಒಂದೊಂದು ಪ್ರಮುಖಸ್ಥಲಗಳಲ್ಲಿ ನಡೆಯುತ್ತ ಬಂದಿರುವಂತೆ ಈಸಲದ ೨೯ ನೆಯ ಸಭೆಯು ಮದ್ರಾಸುಪಟ್ಟಣದಲ್ಲಿ ನಡೆಯಲು ಗೊತ್ತಾಗಿದ್ದ ಸಂಗತಿಯು ವಾಚಕರಿಗೆಲ್ಲಾ ಗೊತ್ತೇ ಇದೆಯಷ್ಟೆ. ಆದರಂತೆ ಅದು ಕಳೆದ ಡಿಸೆಂಬರ್ ತಾ|| 28-29-30 ಈ ದಿನಗಳಲ್ಲಿ ಯಥಾಸಾಂಗವಾಗಿ ಜರುಗಿತು. ಅದರ ಸಂಗಡಲೇ ನಡೆಯುತ್ತ ಬಂದಿರುವ ಪರಿಶ್ರಾಮಿಕಮಹಾಸಭೆ, ಸಂಘಸಂಸ್ಕಾರಕಸಭೆ, ಮದ್ಯಪಾನನಿರೋಧಕಸಭೆ, ನಿಮ್ನಜಾತ್ಯುದ್ಧಾರಕಸಭೆ ಮೊದಲಾದುವುಗಳು ಸಹ ಅದೇ ವಾರದಲ್ಲೇ ಆ ಪಟ್ಟಣದಲ್ಲಿ ನಡೆದಿರುವುವು. ದೇಶಹಿತೈಕದೃಷ್ಟಿಯಿಂದ ನಡೆಯಿಸಲ್ಪಡುವ ಇವೆಲ್ಲಸಭೆಗಳಲ್ಲಿ ಪ್ರತಿನಿಧಿತ್ವದಿಂದಲೂ ಪ್ರೇಕ್ಷಕತ್ವದಿಂದಲೂ ಅಂಗವಾಗಿರಲು ಕುತೂಹಲದಿಂದ ಭರತಖಂಡದ ನಾನಾಭಾಗಗಳಿಂದ ಸಾವಿರಾರುಗಟ್ಟಲೆಯಾಗಿ ಬಂದಿದ್ದ ಮಹಾಜನರು ಮದ್ರಾಸುಪಟ್ಟಣವನ್ನು ಅಲಂಕರಿಸಿದ್ದರು. ಮೈಸೂರಿಗೆ ಸಮೀಪವಾದ ಸ್ಥಲದಲ್ಲಿ ನಡೆಯುವುದು ಮದ್ರಾಸಿನ ಸಭೆಯೇ ಆಗಿರುವುದರಿಂದಲೂ ನಾನಾಭಾಗಗಳಿಂದ ಬಂದಿರುವ ದೇಶಬಾಂಧವರ ದರ್ಶನ ಸ್ಪರ್ಶನ ಸಂಭಾಷಣ ಸಹವಾಸಗಳೂ ಅವೆಲ್ಲಕ್ಕೂ ಮಿಗಿಲಾಗಿ ಅನುಪಮವಾಗ್ಮಿಗಳಿಂದ ಮಾಡಲ್ಪಡುವ ಉಪನ್ಯಾಸಶ್ರವಣಗಳೂ ಸಹ ಪ್ರತಿಯೊಬ್ಬ ದೇಶೀಯನನ್ನೂ ದೇಶಾಭಿಮಾನಧುರಂಧರನನ್ನಾಗಿ ಮಾಡುವ ಕಾರಣದಿಂದಲೂ, ನಮ್ಮ ದೇಶದ ಶ್ರೀಮದ್ಯುವರಾಜರವರು ಅಲ್ಲಿ ನಡೆದ ಸಂಘಪರಿಷ್ಕರಣಸಭೆಗೆ ಅಧ್ಯಕ್ಷರಾಗಿದ್ದುದರಿಂದಲೂ, ಮೈಸೂರುದೇಶದ ವಿದ್ಯಾವಂತರುಗಳನೇಕರು ಅಲ್ಲಿಗೆ ಹೋಗಿದ್ದರು.

ಪರಿಶ್ರಾಮಿಕಮಹಾಸಭೆಯು ಡಿಸೆಂಬರ್ ತಾ|| ೨೬ ರಲ್ಲಿ ಆರಂಭವಾಯಿತು. ಅದಕ್ಕೆ ಶ್ರೀಯುತ ಮನಮೋಹನ ದಾಸ್ ರಾಮ್ಜಿಯವರು ಅಧ್ಯಕ್ಷರಾಗಿದ್ದರು. ರಾ|| ಬ|| ಓಟ್ಟಿ. ತ್ಯಾಗರಾಯಶೆಟ್ಟರು ಸ್ವಾಗತಸಂಘಾಧ್ಯಕ್ಷರಾಗಿದ್ದರು. ಸಭೆಗೆ ಲೋಕಪ್ರಿಯರಾದ ಮದ್ರಾಸ್ ಗೌರ್ನರ್ ಪೆಟ್ಲೆಂಡ್ ಪ್ರಭುಗಳೂ ದಯೆಮಾಡಿಸಿದ್ದರು. ರಾಜ್ಯಸಂಪತ್ತಿಗೆ ಮೂಲಭೂತವಾದ ಪರಿಶ್ರಾಮಿಕ ವಿಷಯಗಳ ಪುರೋಭಿವೃದ್ಧಿಗೆ ಸಾಧಕವಾದ ವಿಷಯಗಳ ಊಹಾಪೋಹವು ಸಭೆಯಲ್ಲಿ ನಡೆದು ತತ್ಸಂಬಂಧದ ನಿರ್ಧಾರಗಳು ಆದುವು.

ಸಂಘಸಂಸ್ಕರಣಮಹಾಸಭೆಯು ಮೈಸೂರಿನ ಶ್ರೀಮದ್ಯುವರಾಜರವರ ಅಧ್ಯಕ್ಷತೆಯಿಂದ ತಾ|| ೨೬ರಲ್ಲಿ ಆರಂಭಿಸಲ್ಪಟ್ಟಿತು. ಸಂಘಸಂಸ್ಕರಣಧುರೀಣರಲ್ಲಿ ಮಕುಟಪ್ರಾಯರಾಗಿರುವ ಸರ್ ನಾರಾಯಣಗಣೇಶಚಂದ್ರಾವಾರ್ಕರ್‌ರವರು, ಸರ್ ಪಿ. ಶಂಕರನ್ ನಾಯರ್‌ರವರೇ ಮೊದಲಾದ ಮಹನೀಯರು ಸಭಾಕಾರ್ಯಗಳು ಸಲಕ್ಷಣವಾಗಿ ನಡೆಯುವುದಕ್ಕೆ ಏರ್ಪಡಿಸಿ ಜಯಶೀಲವಾಗುವಂತೆ ಮಾಡಿದರು. ಅಭ್ಯಾಸಸಂಘಕ್ಕೆ ಶ್ರೀಯುತ ಎಸ್. ಶ್ರೀನಿವಾಸಯ್ಯಂಗಾರರು ಅಧಿಪತಿಗಳಾಗಿದ್ದರು. ಇವರೂ ಸಭಾಧ್ಯಕ್ಷರೂ, ಮತ್ತು ಇನ್ನು ಕೆಲ ಸಭಿಕಮಹಾಶಯರೂ [illegible]ಕಾಲದಲ್ಲಿ ಸಂಘಸಂಸ್ಕರಣಕ್ಕೆ ಉಂಟಾಗಿರುವ ಅವಶ್ಯಕತೆ [illegible]ಮರ್ಶಿಸುವ ಭಾಷಣಗಳನ್ನು ಮಾಡಿದರು. ಸಂಘ [illegible]ಪ್ರಾರಂಭದಿಂದ ಇದುವರೆಗೆ ದೇಶಮಧ್ಯದಲ್ಲಿ [illegible]ಶಗಳು ವಿವೇಚಿಸಲ್ಪಟ್ಟುವು. (ಸತ್ಕಾರಕ ಸಭಾಧ್ಯಕ್ಷರ ಭಾಷಣಗಳು ಶ್ಲಾಘ[illegible] ಭಾಷಾಂತರಿಸಿ ಮುಂದಣಸಂಚಿಕೆಯಲ್ಲಿ ನಾವು ಪ್ರಕಟಿಸುವವರಾಗಿರುತ್ತೇವೆ.) ಸಭೆಯು ಮೂರು ದಿವಸ ನಡೆದು, ಸಂಘೋದ್ದೇಶಕ್ಕೆ ತಕ್ಕಂತೆ ನಿರ್ಧಾರಗಳು ಮಾಡಲ್ಪಟ್ಟುವು.

ರಾಷ್ಟ್ರೀಯ ಸಭೆಯು ತಾ|| ೨೮ ನೆ ಸೋಮವಾರ ಮಧ್ಯಾಹ್ನ ಆರಂಭಿಸಲ್ಪಟ್ಟು ೩ ದಿನಗಳು ನಡೆದಿತು. ಸ್ವಾಗತಸಂಘಕ್ಕೆ ಸರ್ ಎಸ್. ಸುಬ್ರಹ್ಮಣ್ಯಯ್ಯರ್‌ರವರು ಅಧ್ಯಕ್ಷರಾಗಿದ್ದರು. ಶ್ರೀಯುತ ಭೂಪೇಂದ್ರನಾಥಬೋಸರವರು ಮಹಾಸಭಾಧ್ಯಕ್ಷರಾಗಿದ್ದರು. ಸ್ವಾಗತಸಂಘಾಧ್ಯಕ್ಷರ ಭಾಷಣದ ಮುಖ್ಯಾಭಿಪ್ರಾಯಗಳನ್ನು ಈ ಸಂಚಿಕೆಯ ಬೇರೆ ಕಡೆಯಲ್ಲಿ ಮುದ್ರಿಸಿರುತ್ತೇವೆ. ಸಭಾಧ್ಯಕ್ಷರ ಭಾಷಣವು ಅವರ ಸಾತ್ವಿಕ ವಿಚಾರಪರಿಪಾಕದಶೆಗೆ ಅನುಗುಣವಾಗಿ ಉತ್ತಮವಾದ ಬೋಧಪರವಾಗಿರುವುದರಿಂದ ಅದರ ವಿಶೇಷಾಂಶಗಳನ್ನು ಮುಂದೆ ಸ್ಥಲಾನುಕೂಲವಾದಂತೆ ನಮ್ಮ ವಾಚಕರಸಲುವಾಗಿ ಪ್ರಕಟಿಸಬೇಕೆಂದಿರುತ್ತೇವೆ. ಸಭೆಯಲ್ಲಿ ೨ ನೆಯ ದಿನವೂ ೩ ನೆಯ ದಿನವೂ ಸಹ ಅವಶ್ಯಕವಾದ ನಿರ್ಧಾರಗಳು ಮಾಡಲ್ಪಟ್ಟಿರುವುವು. ೨ನೆಯ ದಿನದ ಸಭೆಗೆ ಮದ್ರಾಸ್ ಗವರ್ನರಾದ ಲಾರ್ಡ್ ಪೆಂಟ್ಲೆಂಡ್‌ರವರು ದಯಮಾಡಿಸಿದ್ದುದು ದೇಶೀಯಮಹಾಸಭೆಯ ಚರಿತ್ರದಲ್ಲಿ ಒಂದು ವಿಶೇಷಾಂಶವಾಗಿ ಎಣಿಸಲ್ಪಡುತಕ್ಕದಾಗಿದ್ದಿತು. ಏಕೆಂದರೆ—ಈ ಸಭೆಯ ಮೂಲಸ್ಥಾಪನೆಗೆ ಸರ್ ವೆಡರ್‌ಬರ್ನ್, ಸರ್ ಹೆನ್ರಿಕಾಟನ್, ಮಿ|| ಹ್ಯೂಂ ಮೊದಲಾದ ಪಾಶ್ಚಾತ್ಯಮಹನೀಯರುಗಳು ಅಂಗವಾಗಿದ್ದರೂ ಆಂಗ್ಲಸರ್ಕಾರದ ಪ್ರತಿನಿಧಿಗಳಾದ ಪಾಶ್ಚಾತ್ಯಾಧಿಕಾರಿಗಳನೇಕರು ಈ ಸಭೆಯ ವಿಷಯದಲ್ಲಿ ವಕ್ರದೃಷ್ಟಿಯುಳ್ಳವರಾಗಿದ್ದರು. ಲಾರ್ಡ್ ಕರ್ಜನ್‌ರವರಂತೂ ಈ ಸಭೆಯನ್ನು ವೈರವರ್ಗದ ಕೂಟವೆನ್ನುವಂತೆ ಕಾಣುತ್ತಿದ್ದರು. ಈ ಸಭೆಯ ಪ್ರತಿನಿಧಿಗಳೆನ್ನುವವರಿಗೆ ಸರ್ಕಾರದಧಿಕಾರಿಗಳು ದರ್ಶನಕೊಡುವುದಕ್ಕೂ ಕೂಡ ತಿರಸ್ಕರಿಸುತ್ತಿದ್ದರು. ಅಂಥ ಸಮಯವು ಈಗ ತೀರ ವಿಪರ್ಯಯಗೊಂಡು ಸರ್ಕಾರದ ಒಂದು ದೊಡ್ಡ ಭಾಗದ ಮುಖ್ಯಾಧಿಕಾರಿಗಳಾದ ಗೌರ್ನರೇ ಈ ಸಭೆಗೆ ಪ್ರತ್ಯಕ್ಷವಾಗಿ ದಯಮಾಡಿಸುವಂಥ ಸ್ಥಿತಿಯುಂಟಾಗುವುದೆಂದರೆ ಈ ವಿಪರ್ಯಯವನ್ನು ಸಾಮಾನ್ಯವಾದುದೆಂದು ಯಾರು ಹೇಳಬಹುದು? ಯೂರೋಪಿನ ಮಹಾರಣರಂಗದಲ್ಲಿ ಭಾರತೀಯ ಯೋಧರು ತಮ್ಮ ಅಗಾಧವಾಗ ಪರಾಕ್ರಮವನ್ನು ಒಂದುಕಡೆ ತೋರಿಸುತ್ತಿರುವುದೂ, ಭರತಖಂಡದಲ್ಲಿರುವ ಭಾರತೀಯರು ತಮ್ಮ ಅನಿತರಸಾಧಾರಣವಾದ ರಾಜಭಕ್ತಿಯನ್ನು ಜಗತ್ತು ಬೆರಗಾಗುವಂತೆ ವ್ಯಕ್ತಪಡಿಸುತ್ತಿರುವುದೂ ಸಹ ಈಗಿನ ವಿಶಿಷ್ಟತರವಾದ ವಿಪರ್ಯಯಗಳಿಗೆ ಕಾರಣವೆಂದು ಭಾವಿಸಲ್ಪಡುತ್ತಿರುವುದು. ಇದಕ್ಕೆ ಯಾವುದೇ ಕಾರಣವಾಗಿರಲಿ ಮುಖ್ಯವಾಗಿ ಭಾರತೀಯರ ಸತ್ಸಂಕಲ್ಪವು ಚಿರಕಾಲಕೃತಸಾತ್ವಿಕರಾಜನಿಷ್ಠೆಯಿಂದ ಫಲಿಸುವ ಸುದಿನಗಳು ಸಮೀಪಿಸಿತೆಂದು ಹೇಳಬಹುದು. ದಕ್ಷಿಣಾಫ್ರಿಕಾದಲ್ಲಿ ನಡೆದ ಸಂಗತಿಯೂ ಅಶ್ರುತಾದೃಷ್ಟಪೂರ್ವವಾಗಿ ಯೂರೋಪಿನಲ್ಲಿ ಸಂಭವಿಸಿದ ಮಹಾಯುದ್ಧವೂ ಸಹ ಭಾರತೀಯರ ಸುಮಂಗಳವನ್ನು ಸೂಚಿಸುವ ಶುಭಘಟನೆಗಳಾಗಿರುವುವು. ದೇಶೀಯಮಹಾಸಭಾಧ್ಯಕ್ಷರು ತಮ್ಮ ಉಪನ್ಯಾಸಾರಂಭಕಾಲದಲ್ಲಿ ತಮ್ಮ ವಿಷಯವಾಗಿ ಪ್ರಸ್ತಾಪಿಸುವಾಗ್ಗೆ-ಕಳೆದ ೨೬ ವರ್ಷಗಳಿಂದಲೂ ಈ ಮಹಾಸಭೆಯ ಶಿಷ್ಯತ್ವವನ್ನು ವಹಿಸಿ ದೇಶಸೇವೆಯನ್ನು ತಾವು ಮಾಡುತ್ತಬಂದುದರಿಂದ, ಅದರ ಫಲವಾಗಿ ತಮಗೆ ಈ ಸಭೆಯ ಗುರುಸ್ಥಾನವನ್ನು ವಿರುವ ಫಲವು ಈಗ ಲಭಿಸಿತೆಂದು ಹೇಳಿಕೊಂಡಿರುತ್ತಾರೆ. ಅದರಂತೆ ಈ ದೇಶೀಯ ಮಹಾಸಭೆಯು ಕಳೆದ ೨೮ ವರ್ಷಗಳಿಂದ ತನ್ನ ಸಾತ್ವಿಕ ವರ್ತನದಿಂದ ತನ್ನ ಕಾರ್ಯವನ್ನು ನಡೆಯಿಸಿಕೊಳ್ಳುತ್ತಬಂದುದರಿಂದ ಆ ತಪಸ್ಸಿನ ಫಲವಾಗಿ ಈಗ ಪ್ರಭುತ್ವದವರಿಗೆ ಇದರ ವಿಷಯದಲ್ಲಿ ಉಂಟಾಗಿದ್ದ ಭ್ರಾಂತಿಯೂ ಮನಃಕಾಲುಷ್ಯವೂ ತೊಲಗಿಹೋಗಿ, ಇದು ದೇಶಹಿತಕ್ಕಾಗಿ ಪ್ರಭುತ್ವದವರಿಗೆ ತಕ್ಕ ಸಲಹೆಯನ್ನು ಕೊಡುವ ಉತ್ತಮವಾದ ಮಿತ್ರನಂತಿರುವುದೆಂಬ ಪ್ರಮೆಯು ಉಂಟಾಗುವಂತಾಯಿತೆಂದು ಹೇಳಬಹುದು. ಮಹಾಸಭೆಯು ಇದುವರೆಗೆ ತಾನು ನಡೆಯಿಸಿದ ತಪಸ್ಸಿನಿಂದ ಈ ದೇಶಕ್ಕೆ ಅನೇಕ ಹಿತಗಳು ಪ್ರಭುತ್ವದವರಿಂದ ಆಚರಿಸಲ್ಪಟ್ಟಿರುವುವು. ಆದರೆ ಪ್ರಭುತ್ವ ಪ್ರತಿನಿಧಿಗಳಾದ ಅಧಿಕಾರಿಗಳಪ್ರತ್ಯಕ್ಷಾಂಗವು ಮಾತ್ರ ಈಗ ಆಗಲುಪಕ್ರಮವಾಗಿರುವುದರಿಂದ, ಇನ್ನುಮುಂದೆ ಇದರ ಭವಿಷ್ಯತ್ಫಲಗಳು ವಿದ್ಯುದ್ವೇಗಕ್ಕೆ ಸಮವಾಗಿ ಜರುಗಲು ಅಭ್ಯಂತರವಿಲ್ಲವೆಂದು ಹೇಳಬಹುದು. ಮತ್ತೂ ಮಹಾಸಭೆಯ ಜೀವಿತಕ್ರಮವೂ ಉತ್ತರೋತ್ತರ ವಿಶೇಷಸುಧಾರಣೆಗೊಳ್ಳಲು ಅವಕಾಶವಾಗಬಹುದು. ಗೌರ್ನರವರ ಆಗಮನವನ್ನು ಸಭಾಧ್ಯಕ್ಷರು ಅಭಿನಂದಿಸುವಾಗ್ಗೆ ,,ಇದು ನಮ್ಮ ಆಶಾಂಕುರಕ್ಕೆ ದೋಹದ (ಹುಲುಸಾಗುವುದಕ್ಕೆ ಮಾಡುವ ಕೃಷಿಕ್ರಿಯೆ) ಆಗಿರುವುದೆಂದು ಹೇಳಿದ ಮಾತು, ನಿಜವಾಗಿಯೂ ಅನ್ವರ್ಥವಾಗುವುದೆಂದು ಭಾರತೀಯರೆಲ್ಲರೂ ನಂಬುವರು.

ಯುದ್ಧವಾರ್ತೆಯು.

ಪಶ್ಚಿಮರಣರಂಗ.

ಕಳೆದ ವಾರದಲ್ಲಿ ಫ್ರಾನ್ಸು ಬೆಲ್ಜಿಯಂ ದೇಶದ ರಣರಂಗದಲ್ಲಿ ವಿಶೇಷವಾಗಿ ಮಂಜು ಸುರಿಯುತ್ತಿದ್ದರೂ ಸಂಯುಕ್ತಸೈನ್ಯದವರು ಶತ್ರುಗಳ ಕಂದಕಗಳನ್ನು ಹಿಡಿದು ಮುಂದುಮುಂದಕ್ಕೆ ಸಾಗಿದ ವರ್ತಮಾನಗಳೇ ವಿಶೇಷವಾಗಿ ಬಂದಿವೆ. ಈಗ ನಡೆಯುತ್ತಿರುವ ಯುದ್ಧಲ್ಲಿ ಫಿರಂಗಿ ತುಪಾಕಿ ಗುಂಡುಗಳಿಗಿಂತ ವಿಶೇಷವಾಗಿ ಸಿಡಿಮದ್ದಿನ ಗೋಳಗಳನ್ನು ಫಿರಂಗಿಗಳಿಂದಲೂ, ಕೈಗಳಿಂದಲೂ ಶತ್ರುಗಳಮೇಲೆ ಪ್ರಯೋಗಿಸಿ ಯುದ್ಧಮಾಡುವುದೇ ವಿಶೇಷವಾಗುತ್ತಿದೆ. ಫ್ರಾನ್ಸ್ ದೇಶದ ಬಹುಭಾಗದಲ್ಲಿ ಈಗ ಯುದ್ಧದ ಗಡಬಿಡಿಯು ಬಹಳ ಶಾಂತವಾಗಿಹೋಗಿರುವುದರಿಂದ ಸರ್ವವ್ಯವಹಾರಗಳೂ ಯಥಾಪೂರ್ವವಾಗಿ ನಡೆಯಲುಪಕ್ರಮವಾಗಿವೆ. ಶತ್ರುಗಳಿಂದ ಹಾಳಾಗಿ ಹೋಗಿರುವ ಪಟ್ಟಣಗಳನ್ನೂ ಸೇತುಗಳನ್ನೂ ಲೋಹಮಾರ್ಗಗಳನ್ನೂ ಸರ್ಕಾರದವರು ಕಟ್ಟುತ್ತಿದ್ದಾರೆ. ರೀಮ್ಸ್‌ಪಟ್ಟಣಕ್ಕೆ ತಂತ್ರೀವಾರ್ತೆಗಳು ಹೋಗಿ ಬರುತ್ತಿವೆ. ಸುತ್ತುಮುತ್ತಣ ೧೮ ಜಿಲ್ಲೆಗಳಲ್ಲಿನ ಅಂಚೆಮನೆಗಳಲ್ಲೆಲ್ಲಾ ಸರಿಯಾಗಿ ಕೆಲಸವು ನಡೆಯುತ್ತಿದೆ. ಪ್ಯಾರಿಸ್ಸಿನಿಂದ ಛಾಟೇವಿಲ್ಲು-ಲೀಛಾಟೆಟ್‌ವರೆಗೂ ಹೊಗೆಬಂಡಿಗಳು ನಿರಾತಂಕವಾಗಿ ತಿರುಗಾಡುತ್ತಿವೆ.

ಪೂರ್ವರಣರಂಗ.

ಕಳೆದವಾರ ವಿಶ್ಚುಲಾಕ್ಕೂ ಪಿಲಿಕಾಕಿಗೂ ಮಧ್ಯದಲ್ಲಿ ರಷ್ಯನರಿಗೂ ಆಸ್ಟ್ರಿಯನ್ನರಿಗೂ ನಡೆದ ಯುದ್ಧದಲ್ಲಿ ೨ ಸಾವಿರ ಮಂದಿ ಆಸ್ಟ್ರಿಯಾ ಸೈನಿಕರನ್ನು ರಷ್ಯನರು ಸೆರೆಹಿಡಿದರು. ಜೆಡ್ವರ್ನ್ ಜಿಲ್ಲೆಯಲ್ಲಿ ೧ ಸಾವಿರ ಮಂದಿ ಆಸ್ಟ್ರಿಯನ್ ಸೈನಿಕರು ಶರಣಾಗತರಾದರು. ಗೆಲೀಷಿಯಾದಲ್ಲಿ ನಡೆದ ಯುದ್ಧಗಳೆಲ್ಲಾ ರಷ್ಯನರಿಗೆ ಅನುಕೂಲವಾಗಿಯೇ ಇದ್ದುವು. ಈ ಜಿಲ್ಲೆಗೆ ಸೇರಿದ ರಿಗ್ಲಿಸ್ಸಿನ ಹತ್ತಿರ ಆಸ್ಟ್ರಿಯಾ ಸೈನಿಕರಮೇಲೆ ಹಠಾತ್ತಾಗಿ ರಷ್ಯನರು ಬಿದ್ದು ಯುದ್ಧಮಾಡಿ ೫೦೦ ಮಂದಿಗಳನ್ನು ಕೊಂದು ಉಳಿದವರನ್ನೆಲ್ಲಾ ಚದುರಿಸಿಬಿಟ್ಟರು. ಇನ್ನೊಂದು ಸ್ಥಲದಲ್ಲಿ ಆಸ್ಟ್ರಿಯನ್ನರ ೩ ಫಿರಂಗಿಗಳನ್ನೂ ಅನೇಕ ಸೈನಿಕರನ್ನೂ ಹಿಡಿದುಕೊಂಡರು. ಜೋಹಾರ್ ಜಾಫಿನ ಹತ್ತಿರ ಬ್ಯೂರಾ ನದಿಯನ್ನು ದಾಟಿದ ಜರ್ಮನ್ ಸೈನಿಕರಮೇಲೆ ರಷ್ಯನರು ಬಿದ್ದು ಭಯಂಕರವಾಗಿ ಕಾದಾಡಿ ಹಿಂದಕ್ಕೆ ಓಡಿಸಿ, ಅವರ ಕಡೆಯ ಸೈನಿಕರನ್ನೂ ೯ ಫಿರಂಗಿಗಳನ್ನೂ ಹಿಡಿದುಕೊಂಡರು. ಕಾರ್ಪೇತಿಯನ್ ಕಣಿವೆಗಳಲ್ಲಿ ನಡೆದ ಯುದ್ಧವೂ ರಷ್ಯನರಿಗೆ ಅನುಕೂಲವೇ ಆಯಿತು. ಜರ್ಮನರು ವಿಶೇಷವಾದ ಸೈನ್ಯಗಳನ್ನು ಸೇರಿಸಿಕೊಂಡು ಬ್ಯುಜಾ-ರಾಂಕಾ ನದಿಗಳನ್ನು ದಾಟಬೇಕೆಂದು ಹಗಲೂ ರಾತ್ರಿ ಬಹು ಸಾಹಸಪಟ್ಟರೂ ರಷ್ಯನರು ಹಿಮ್ಮೆಟ್ಟಿಸಿದರು. ಆಗ ಮಾಡಿದ ಯುದ್ಧದಲ್ಲಿ ಶತ್ರುಗಳ ಕಡೆ ಬಹು ನಷ್ಟವಾಯಿತು. ಸ್ಕಿರ್ನಿವಿಸ್ ಬಳಿಯೊಂದರಲ್ಲೇ ಶತ್ರುಗಳಕಡೆ ೧ ಸಾವಿರ ಮಂದಿಗಳು ಸತ್ತುಬಿದ್ದಿದ್ದುದು ಗೋಚರವಾಯಿತು. ಕಾರ್ಪೇತಿಯನ್ ಪ್ರಾಂತದಲ್ಲಿ ರಷ್ಯನರು ಶತ್ರುಗಳ ಮೇಲೆ ಬಿದ್ದು ಯುದ್ಧಮಾಡಲು ಯತ್ನಿಸುತ್ತಿರುವಾಗ ಅವರ ೨ ಪಟಾಲಮ್ಮುಗಳು ಹಿಮದ ಗಡ್ಡೆಗಳು ಮುಸುಕಿರುವ ಜಸೋಲೋನದಿಯಲ್ಲಿ ನಡುವಿನಮಟ್ಟದ ನೀರಿನಲ್ಲಿ ನಿಂತು, ಶತ್ರುಗಳು ಮೇಲೆ ಅಗ್ನಿವೃಷ್ಟಿಯನ್ನು ಕರೆಯುತ್ತಿದ್ದರೂ ಹಿಂದೆಗೆಯದೆ ಸನೀನುಗಳ ಯುದ್ಧವನ್ನು ಆಸ್ಟ್ರಿಯನ್ನರಮೇಲೆ ಮಾಡಿ, ಅವರಿದ್ದ ಸ್ಥಲದಿಂದ ಅವರನ್ನು ಹಿಮ್ಮೆಟ್ಟಿಸಿ ಅವರಲ್ಲಿ ಬಹುಜನರನ್ನು ಸೆರೆಯಾಗಿ ಹಿಡಿದಿದ್ದಾರೆ. ಜೂರಾನದಿಯನ್ನು ದಾಟಿದ ಜರ್ಮನ್ ಸೈನಿಕರಲ್ಲಿ ೧ ಪಟಾಲಮ್ಮನ್ನು ರಷ್ಯನರು ಪೂರ್ಣವಾಗಿ ಧ್ವಂಸಮಾಡಿ ೫೨೦ ಮಂದಿಗಳನ್ನು ಸೆರೆಹಿಡಿದಿರುವರು. ಇಲ್ಲಿನ ಭಯಂಕರವಾದ ಯುದ್ಧದಲ್ಲಿ ಜರ್ಮನರ ಕಡೆ ೭೦೦೦ ಮಂದಿ ಹತವಾದರಂತೆ. ತಾ||೨೨-೨೩ ಈ ಎರಡು ದಿನಗಳಲ್ಲಿ ಫ್ರಿಂಕೋವಿಗೆ ಉತ್ತರದಲ್ಲಿ ರಷ್ಯನರು ಜರ್ಮನರ ಕಡೆಯ ೫೭ ಮಂದಿ ಉದ್ಯೋಗಿಗಳನ್ನೂ ೩೦೦೦ ಮಂದಿ ಸೈನಿಕರನ್ನೂ ಸೆರೆಹಿಡಿದಿದ್ದಾರೆ. ಪೋಲಾಂಡಿನಲ್ಲಿ ೧-೨ ವಾರಗಳಿಂದ ರಷ್ಯನರು ಕೆಲವುಕಡೆ ಹಿಮ್ಮೆಟ್ಟಿಹೋಗಿದ್ದಾರೆ. ಆದರೂ ಜರ್ಮನರು ಆ ಸ್ಥಳಗಳಲ್ಲಿ ಮುಂದಕ್ಕೆ ನುಗ್ಗಿಹೋಗದೆ ಇದ್ದಾರೆ. ರಷ್ಯನರು ತಾವಾಗಿ ಹೀಗೆ ಸ್ಥಲಕೊಟ್ಟು ಹಿಂದಕ್ಕೆ ಹೋಗಿರುವುದು ಯಾವುದೋ ಒಂದು ಸಾಂಗ್ರಾಮಿಕ ತಂತ್ರವೆಂದು ಭಾವಿಸಲ್ಪಟ್ಟಿದೆ. ಪಶ್ಚಿಮಗೆಲೀಷಿಯಾದಲ್ಲಿ ಆಸ್ಟ್ರಿಯನ್ನರ ಒಂದು ಸೈನ್ಯವು ಮುಂದುವರಿದು ಹೋಗುತ್ತಿರುವಲ್ಲಿ ಅವರ ನಿರೀಕ್ಷಣೆಯಿಂದಲೇ ಒಂದು ಕಡೆ ಅಡಗಿಕೊಂಡಿದ್ದ ರಷ್ಯನ್ ಸೈನ್ಯವು ಎತ್ತರದ ಪ್ರದೇಶಗಳಿಂದ ಗುಂಡಿನ ಮಳೆಯನ್ನು ಸುರಿಸಿ ೧೫೦ ಮಂದಿಗಳನ್ನು ಕೊಂದರು; ಉಳಿದವರು ಪಲಾಯನಗೊಂಡರು. ಪಶ್ಚಿಮಗೆಲೀಷಿಯಾದಲ್ಲಿ ಆ ವಾರದಲ್ಲಿ ನಡೆದ ಯುದ್ಧದಲ್ಲೆಲ್ಲಾ ರಷ್ಯನರು ೪೨೬೫ ಮಂದಿ ಆಸ್ಟ್ರಿಯನ್ ಸೈನಿಕರನ್ನು ಸೆರೆಹಿಡಿದಿದ್ದಾರೆ. ಈಗ ಪೂರ್ವರಣರಂಗದಲ್ಲಿ ವಾರ್ಸಾಕ್ಕೆ ಪಶ್ಚಿಮದಿಂದ ಕ್ರಾಕೋವಿನ ವರೆಗೂ 'ಇಲಾಫ್' ನದಿ ಮೊದಲುಗೊಂಡು ಡುನಾಟ್ಜ ನದಿಯವರೆಗೂ ಇರುವ ಜರ್ಮನ್ ಆಸ್ಟ್ರಿಯನ್ ಸೇನೆಗೆ ಇದಿರಾಗಿ ೨೫೦ ಮೈಲಿಗಳ ಉದ್ದಕ್ಕೂ ರಷ್ಯನರ ಸೇನೆಗಳು ನಿಂತು ಯುದ್ಧಕೊಡುತ್ತಿವೆ. ರಷ್ಯನ್ ಚಕ್ರವರ್ತಿಯವರು ಯುದ್ಧರಂಗಕ್ಕೆ ಬಂದಿದ್ದಾರೆ. ಜರ್ಮನರು ವಾರ್ಸಾವನ್ನು ಹೇಗಾದರೂ ಮಾಡಿ ಹಿಡಿಯಬೇಕೆಂದು ಪೂರ್ಣಸಾಹಸಮಾಡುತ್ತಿದ್ದಾರೆ. ಈ ಪೋಲ್ಯಾಂಡಿನಲ್ಲಿರುವ ತಮ್ಮ ಸೈನಿಕರಿಗೆ ಯುದ್ಧಕಾಲದಲ್ಲಿ ಮೈಮೇಲೆ ಸ್ಮೃತಿಯಿಲ್ಲದೆ ವೀರಾವೇಶವುಂಟಾಗಿರಬೇಕೆಂಬ ಕಾರಣದಿಂದ ಜರ್ಮನರು ಅವರಿಗೆ ಮತ್ತುಬರುವ ಪದಾರ್ಥಗಳನ್ನು ತಿನ್ನಿಸುವ ಏರ್ಪಾಟನ್ನು ಮಾಡಿದ್ದರೆಂದು ಪ್ರಕಟವಾಗಿದೆ. ಡಿಶಂಬರ್ ತಾ|| ೨೩ ರ ವರೆಗೆ ರಷ್ಯಾದವರ ವಶದಲ್ಲಿ ಜರ್ಮನರ ೧೧೪೦ ಮಂದಿ ಉದ್ಯೋಗಿಗಳೂ, ೧೩೧೭೩೮ ಮಂದಿ ಸೈನಿಕರೂ, ಆಸ್ಟ್ರಿಯನ್ನರ ೩೧೮೭ ಮಂದಿ ಉದ್ಯೋಗಿಗಳೂ, ೨೨೧೪೪೭ ಮಂದಿ ಸೈನಿಕರೂ ಸೆರೆಯಾಳುಗಳಾಗಿದ್ದರು. ರಾವುಕಾ-ಬಾಜುರಾ-ಪ್ರಾಂತದಲ್ಲಿ ವಿಶೇಷವಾದ ಫಿರಂಗಿಯುದ್ಧವು ರಷ್ಯನರಿಗೂ ಆಸ್ಟ್ರಿಯನ್ನರಿಗೂ ನಡೆದಿತು. ಆ ಸುತ್ತಿನಲ್ಲೂ ಟರ್ಥೋಜು ಪ್ರಾಂತದಲ್ಲೂ ಬ್ರಿಚ್ ಗ್ರಾಡು-ಡುಕ್ಲಾ ಕಣಿವೆ ಪ್ರಾಂತದಲ್ಲೂ ನಡೆದ ಯುದ್ಧಗಳಲ್ಲಿ ಒಟ್ಟು ೧೦ ಸಾವಿರಮಂದಿ ಆಸ್ಟ್ರಿಯನ್ ಸೈನಿಕರನ್ನೂ ೧೦—೨೦ ರ ಮೇಲೆ ಫಿರಂಗಿಗಳನ್ನೂ ರಷ್ಯನರು ಹಿಡಿದುಕೊಂಡಿದ್ದಾರೆ. ಆಸ್ಟ್ರಿಯನ್ನರು ರಷ್ಯಾದವರಿಗೆ ಗೆಲಿಷಿಯಾ ಜಿಲ್ಲೆಯನ್ನೂ ಸರ್ವಿಯನ್ನರಿಗೆ ಬೋಸ್ನಿಯಾವನ್ನೂ ಕೊಟ್ಟುಬಿಡುತ್ತೇವೆಂದೂ ಆದರಮೇಲೆ ಸಂಧಿಮಾಡಿಕೊಳ್ಳಬೇಕೆಂದೂ ತಮ್ಮ ಬ್ಯಾಂಕಿನ ವ್ಯಾಪಾರಸ್ಥರ ಮೂಲಕ ಆಯಾಪ್ರಭುತ್ವದವರೊಡನೆ ಮಾತುಕತೆಗಳನ್ನು ನಡೆಯಿಸಿದರೆಂದು ಅಮೇರಿಕಾದ ವೃತ್ತಪತ್ರಿಕೆಯಲ್ಲಿ ಪ್ರಕಟಿತವಾಗಿದೆ.

ಆಕಾಶವಿಮಾನಗಳು.

ಈಚೆಗೆ ಆಕಾಶವಿಮಾನಗಳ ಸಂಚಾರವೂ ಅವುಗಳ ಸಿಡಿಮದ್ದಿನ ಹಾವಳಿಯೂ ಉಭಯಪಕ್ಷದವರಲ್ಲೂ ಹೆಚ್ಚುತ್ತಿವೆ. ಒಬ್ಬ ವೈಮಾನಿಕನು ಜರ್ಮನಿಗೆ ಸೇರಿದ ಸ್ಟ್ರಾಸ್ಬರ್ಗಿನಮೇಲೆ ಸಿಡಿಮದ್ದುಗಳನ್ನೆಸೆದು ಸ್ವಲ್ಪ ನಷ್ಟವನ್ನು ಮಾಡಿದನು. ಡಿಶಂಬರ್ ತಾ|| ೨೩ ರ ಹಗಲು ೧೧ ಘಂಟೆಯಲ್ಲಿ ಒಬ್ಬ ಜರ್ಮನ್ ವೈಮಾನಿಕನು ಇಂಗ್ಲೆಂಡಿಗೆ ಸೇರಿದ ಡೋವರ್ ತೀರ ಪಟ್ಟಣದಮೇಲೆ ಒಂದು ಸಿಡಿಮದ್ದಿನ ಗೋಳವನ್ನಿಟ್ಟನು. ಅದು ಒಂದು ತೋಟದಲ್ಲಿ ಬಿದ್ದಿತು. ನಷ್ಟವೇನೂ ಆಗಲಿಲ್ಲ. ಕೂಡಲೇ ಇಂಗ್ಲೀಷ್ ವೈಮಾನಿಕರು ಆಕಾಶಕ್ಕೆ ಹಾರಿದರು. ಆಗ ಮಂಜು ವಿಪರೀತವಾಗಿ ಮುಸುಕಿಕೊಂಡಿದ್ದುದರಿಂದ ಶತ್ರುವಿಮಾನವು ಮರೆಯಾಗಿ ತಪ್ಪಿಸಿಕೊಂಡು ಹೋಯಿತು. ತಾ|| ೨೫ ರಲ್ಲಿ ಶತ್ರುಗಳ ಒಂದು ವಿಮಾನವು ಷೀರ್ನೆಸ್ ಪಟ್ಟಣದಮೇಲೆ ಬಹು ದೂರದಲ್ಲಿ ಪೂರ್ವದ ಕಡೆಯಿಂದ ಪಶ್ಚಿಮದ ಕಡೆಗೆ ಹಾರಿಬರುತ್ತಿರುವುದು ಕಂಡಿತು. ಕೂಡಲೇ ಆಂಗ್ಲ ವೈಮಾನಿಕರು ಆಕಾಶಕ್ಕೇರಿ ಫಿರಂಗಿಗುಂಡುಗಳನ್ನು ಹೊಡೆಯಲುಪಕ್ರಮಿಸಿದರು. ೩-೪ ಆವೃತ್ತಿ ಏಟುಬಿದ್ದ ಬಳಿಕ ಶತ್ರುವಿಮಾನವು ಸಮುದ್ರದ ಕಡೆಗೆ ಓಡಿಹೋಯಿತು. ತಾ|| ೨೫ ರ ದಿವಸ ಲಂಡನ್ ಪಟ್ಟಣದ ದಕ್ಷಿಣಭಾಗದ ಪ್ರಜೆಗಳು ಕ್ರಿಸ್ತುಮಸ್ ಹಬ್ಬದ ಊಟವನ್ನು ವೈಭವದಿಂದ ಮಾಡುತ್ತಿರುವಾಗ ಫಿರಂಗಿಗಳ ಧ್ವನಿಯು ಕೇಳಬಂದಿತು. ಕೂಡಲೇ ಸಾವಿರಾರು ಮಂದಿಗಳು ಗುಡ್ಡದ ಮೇಲಕ್ಕೇರಿ ದೂರದರ್ಶಕ ಯಂತ್ರದಿಂದ ಆಕಾಶದ ಕಡೆಗೆ ನೋಡುವಲ್ಲಿ ಥೇಮ್ಸ್ ನದಿಯ ಮೇಲ್ಗಡೆ ಬಹಳ ಎತ್ತರದಲ್ಲಿ ಬಹಳ ವೇಗವಾಗಿ ೨ ಆಕಾಶವಿಮಾನಗಳು ಉತ್ತರಸಮುದ್ರದ ಕಡೆಗೆ ಹಾರಿಹೋಗುತ್ತಿದ್ದುದು ಗೋಚರಿಸಿತು. ಆಂಗ್ಲರ ಮೂರು ವಿಮಾನಗಳು ಶತ್ರುವಿಮಾನಗಳನ್ನು ಧ್ವಂಸಮಾಡುವುದಕ್ಕಾಗಿ ಮೇಲಕ್ಕೆ ಹಾರಿದುವು. ಆದರೆ ಶತ್ರುಗಳ ವಿಮಾನಗಳು ಬಹಳ ವೇಗವಾಗಿ ಓಡುತ್ತ ಮಂಜಿನ ರಾಶಿಯಲ್ಲಿ ಮರೆಯಾಗಿ ಹೋದುವು. ಶತ್ರುಗಳ ವಿಮಾನಗಳು ಎಲ್ಲೂ ಸಿಡಿಮದ್ದಿಟ್ಟಂತೆ ತಿಳಿದು ಬರಲಿಲ್ಲ. ಯಾವುದೊಂದು ಯುದ್ಧಪ್ರಯೋಜನವೂ ಇಲ್ಲದೆ ಜರ್ಮನರ ೧ ವಿಮಾನವು ಫ್ರಾನ್ಸಿಗೆ ಸೇರಿದ ನ್ಯಾನ್ಸಿಪಟ್ಟಣದ ಮಧ್ಯಭಾಗದಲ್ಲಿ ೧೦ ಸಿಡಿಮದ್ದುಗಳನ್ನು ಹಾಕಿತು. ಫ್ರೆಂಚರ ವಿಮಾನಗಳು ಜರ್ಮನಿಗೆ ಸೇರಿದ ಫ್ರೆಸ್[illegible]ಟ್ಸ್ ಬಳಿಯಣ ವಿಮಾನನಿಲಯದಮೇಲೂ, ಸಿಡಿಮದ್ದುಗಳ ಹಾಕಿ ಬಂದಿರುವರು. ಪೂರ್ವರಣರಂಗದಲ್ಲಿ ವಾರ್ಸಾಪಟ್ಟಣದಮೇಲೆ ಜರ್ಮನರ ವಿಮಾನಗಳು ೪೦ ಸಿಡಿಮದ್ದುಗಳ ಗೋಳಗಳನ್ನಿಟ್ಟಿರುವುವು. ಅಂಗಡಿಬೀದಿಯೂ ಸುತ್ತುಮುತ್ತಿನ ಬೀದಿಗಳೂ ಹಾಳಾಗಿ ಕೆಲವುಕಡೆ ಮನೆಗಳು ಉರಿಯುತ್ತಲಿರಲು ಜನಗಳು ಭಯಪಟ್ಟು ಓಡುತ್ತಿದ್ದರು. ಅವರಮೇಲೂ ಸಿಡಿಮದ್ದು ಬೀಳಲು ೮ ಮಂದಿ ಸತ್ತರು, ೨೬ ಮಂದಿಗಳಿಗೆ ಗಾಯವಾಯಿತು. ಆಂಗ್ಲ ವೈಮಾನಿಕನೊಬ್ಬನು ಬೆಲ್ಜಿಯಮ್ಮಿನ ಬ್ರಸೆಲ್ಸ್ ಪಟ್ಟಣದಲ್ಲಿರುವ ಜರ್ಮನರ ವಿಮಾನನಿಲಯದಮೇಲೆ ೮ ಸಿಡಿಮದ್ದುಗಳನ್ನು ಹಾಕಲು ಒಳಗಿದ್ದ ೮ ವಿಮಾನಗಳಿಗೆ ಏಟುಬಿದ್ದಿತು. ಆ ಮನೆಯು ಹೊತ್ತಿ ಉರಿಯುವ ಹೊಗೆ ಕಾಣಿಸಿತು. ಎಷ್ಟು ನಷ್ಟವಾಯಿತೆಂಬುದು ತಿಳಿಯಲಿಲ್ಲ.

ಜಲಯುದ್ಧ.

ಒಟ್ರಾಂಟೋ ಜಲಸಂಧಿಯಲ್ಲಿ ಒಂದು ಆಸ್ಟ್ರಿಯನ್ನರ ಸಬ್‌ಮೆರೀನು ಫ್ರೆಂಚರ ಯುದ್ಧದಹಡಗಿನಮೇಲೆ ೨ ಟಾರ್ಪಿಡೋಗಳನ್ನು ಬಿಟ್ಟಿತು. ಅವುಗಳಲ್ಲೊಂದು ಹಡಗಿಗೆ ಬಡಿದರೂ ವಿಶೇಷ ನಷ್ಟವೇನೂ ಆಗಲಿಲ್ಲ; ಯಾರೂ ಸಾಯಲೂ ಇಲ್ಲ. ಹೆಲಿಗೋಲ್ಯಾಂಡಿನ ಹತ್ತಿರವಿರುವ ಜರ್ಮನ್ ನೌಕಾದಳದಮೇಲೆ ಇಂಗ್ಲೀಷರ ೭ ಯುದ್ಧದ ನೌಕಾವಿಮಾನಗಳು ಕಳೆದ ಕ್ರಿಸ್ತುಮಸ್ ಹಬ್ಬದದಿನ ಹಗಲೇ ಯುದ್ಧವನ್ನು ಹೂಡಿದುವು. ಇವ[illegible] ಸಂರಕ್ಷಕವಾಗಿ ಆಂಗ್ಲನೌಕಾದಳದ ಕೆಲವು ಕ್ರೂಯಿಜರುಗಳೂ, ಡಿಸ್ಟ್ರಾಯರುಗಳೂ, ಸಬ್‌ಮೆರೀನುಗಳೂ ಜಲದಮೇಲೆ ಹೋಗಿದ್ದುವು. ಈ ಇಂಗ್ಲೀಷ್ ವಿಮಾನಗಳಮೇಲೆ ಕಾದುವುದಕ್ಕಾಗಿ ೨ ಜರ್ಮನರ ಜಪ್ಪಲಿನ್ ವಿಮಾನಗಳೂ, ೪ ಸಮುದ್ರವಿಮಾನಗಳೂ, ಹಲವು ಸಬ್‌ಮೆರೀನುಗಳೂ ಬಂದುವು. ಉಭಯಪಕ್ಷಕ್ಕೂ ನೌಕಾಯುದ್ಧವು ನಡೆದಿತು. ಯುದ್ಧವಿಷಯಕ್ಕೆ ಪ್ರಮುಖಸ್ಥಲವಾಗಿದ್ದ ಶತ್ರುಗಳ ತಾಣದಮೇಲೆ ನಮ್ಮವರು ಸಿಡಿಮದ್ದುಗಳನ್ನು ಹಾಕಿದರು. ಎಷ್ಟು ನಷ್ಟವಾಯಿತೆಂಬುದು ಗೊತ್ತಾಗಲಿಲ್ಲ. ಜರ್ಮನರ ನೌಕಾವಿಮಾನಗಳು ನಮ್ಮ ಹಡಗುಗಳ ಸಮೀಪದಲ್ಲೂ ಸಿಡಿಮದ್ದುಗಳನ್ನು ಹಾಕಿದುವು. ಅವುದಕ್ಕೂ ಏಟುಬೀಳಲಿಲ್ಲ. ಆಂಗ್ಲೇಯರಕಡೆಯ ಮೂರು ಸಮುದ್ರವಿಮಾನಗಳು ಶತ್ರುಗಳ ಏಟಿನಿಂದ ಮುಳುಗಿಹೋದುವು. ಅವುಗಳಲ್ಲಿದ್ದ ವೈಮಾನಿಕರನ್ನು ನಮ್ಮ ಸಬ್‌ಮೆರೀನುಗಳು [illegible]ಕೊಂಡು ಉಳಿಸಿದುವು. ಹೀವೆಟ್ ಎಂಬ ಆಂಗ್ಲವೈಮಾ[illegible] ಹಾಳಾಗಿಹೋದ ವಿಮಾನವು ಹೆಲಿಗೋಲ್ಯಾಂಡಿಗೆ ೮ [illegible]ಗಳ ದೂರದಲ್ಲಿ ಬಿದ್ದಿದ್ದಿತು. ಆ ವೈಮಾನಿಕನೇನಾದನೆಂ[illegible] ಗೊತ್ತಾಗಿಲ್ಲ.

ತುರ್ಕಿ.

ವಾನ್ ಪ್ರಾಂತದಲ್ಲಿ ತುರ್ಕಿಯ ಮತ್ತೂ ಜರ್ಮನಿಯ ಸೈನಿಕರನ್ನು ರಷ್ಯನರು ಹೊಡೆದು ಹಿಂದಕ್ಕಟ್ಟುತ್ತಿದ್ದಾರೆ. ಅಮೇರಿಕಾದ ಯುದ್ಧದ ಹಡಗೊಂದರಲ್ಲಿದ್ದ ನಾವಿಕರನ್ನು ತುರ್ಕಿಗೆ ಸೇರಿದ ಸಿರಿಯಾದ ತುರುಕರು ಹಿಂಸಿಸಿ ಅವಮಾನಪಡಿಸಿದರೆಂಬ ಕಾರಣದಿಂದ ಅಮೇರಿಕಾ ಪ್ರಭುತ್ವದವರು ತುರ್ಕಿಯವರನ್ನು ಸಮಾಧಾನಕೇಳಿದ್ದಾರೆ. ಕಾನ್‌ಸ್ಟಾಂಟಿನೋಪಲ್ಲಿನ ಸುತ್ತುಮುತ್ತಣ ಗ್ರಾಮಗಳನ್ನು ತುರ್ಕಿಯವರು ಭದ್ರಪಡಿಸುತ್ತಿದ್ದಾರೆ. ಡಾರ್ಡನೆಲ್ಸ್ ನಿಲ್ಲುವುದಿಲ್ಲವೆಂದು ತಿಳಿದು ಮರ್ಮೋರಾಸಮುದ್ರತೀರದ ಪಟ್ಟಣಗಳನ್ನೆಲ್ಲಾ ಬಲಪಡಿಸುತ್ತಿದ್ದಾರೆ. ಮತ್ತೂ ತುರ್ಕಿಯ ಬೊಕ್ಕಸವನ್ನು ಕಾನ್‌ಸ್ಟಾಂಟಿನೋಪಲ್ಲಿನಿಂದ ಕೋನಿಯಾಪಟ್ಟಣಕ್ಕೆ ವರ್ಗಾಯಿಸಿರುವರೆಂದು ಸುದ್ದಿಯುಂಟಾಗಿದೆ.

ಫ್ರೆಂಚರ ಕೃತನಿಶ್ಚಯ.

ಪ್ಯಾರಿಸ್‌ಪಟ್ಟಣದಲ್ಲಿ ಫ್ರೆಂಚರ ಪಾರ್ಲಿಮೆಂಟು ನೆರೆದಿದ್ದಾಗ ಮುಖ್ಯಮಂತ್ರಿಯವರಾದ ವಿವಿಯಾನಿಯವರು ಮಂತ್ರಿವರ್ಗದ ಪಕ್ಷದಿಂದ ಸಭಿಕರನ್ನು ಕುರಿತು ಈಗಿನ ಯುದ್ಧವಿಷಯದಲ್ಲಿ ಆವೇಶಯುಕ್ತವಾದ ಭಾಷಣವನ್ನು ಮಾಡುವಾಗ ಹೀಗೆ ಹೇಳಿರುವರು—ಬಲವಂತವಾಗಿ ಆಕ್ರಮಿಸಿಕೊಂಡಿರುವ ಸ್ವಾತಂತ್ರ್ಯವನ್ನು ಮತ್ತೆ ಪಡೆದುಕೊಳ್ಳುವವರೆಗೂ, ಕಳೆದುಕೊಂಡಿರುವ ದೇಶಭಾಗಗಳನ್ನು ಶಾಶ್ವತವಾಗಿ ಮತ್ತೆ ಸಂಪಾದಿಸಿಕೊಳ್ಳುವವರೆಗೂ, ಬೆಲ್ಜಿಯಂದೇಶಕ್ಕೆ ಸಂಪೂರ್ಣವಾದ ಐಶ್ವರ್ಯವೂ ಸ್ವಾತಂತ್ರ್ಯವೂ ಲಭಿಸುವವರೆಗೂ, ಜರ್ಮನಿದೇಶದ ಯುದ್ಧವಿಷಯಕವಾದ ಹಮ್ಮು ಧ್ವಂಸವಾಗಿಹೋಗುವವರೆಗೂ, ಪರ್ಯವಸಾನದಲ್ಲಿ ಮಿತ್ರಮಂಡಲಿಯವರು ಯೂರೋಪುದೇಶದಲ್ಲಿ ಶಾಂತಿಪ್ರದವೂ ನ್ಯಾಯಬದ್ಧವೂ ಆದ ನೂತನರಾಜ್ಯಗಳನ್ನು ಏರ್ಪಡಿಸಲು ಅವಕಾಶವನ್ನು ಉಂಟುಮಾಡಿಕೊಳ್ಳುವವರೆಗೂ, ಫ್ರಾನ್ಸ್‌ದೇಶೀಯರು ತಮ್ಮ ಮಿತ್ರರೊಡನೆ ಕೂಡಿ ಮಾಡುತ್ತಿರುವ ಯುದ್ಧವನ್ನು ಬಿಡರು. ಅಸಾಧಾರಣವಾದ ಯುದ್ಧನೈಪುಣ್ಯವುಳ್ಳ ಸೇನಾಧಿಪತಿಗಳ ಅಧಿಕಾರದ ಕೆಳಗೆ ಫ್ರಾನ್ಸ್‌ಸೈನಿಕರು ಅಧಿಕಸಾಹಸವನ್ನು ಯುದ್ಧಾಂಗಣದಲ್ಲಿ ತೋರಿಸುತ್ತಿರುವುದರಿಂದಲೂ, ಫ್ರಾನ್ಸಿನ ನೌಕಾಬಲವು ಆಂಗ್ಲನೌಕಾಸೈನ್ಯಕ್ಕೆ ನೆರವಾಗಿ ಸಮುದ್ರಗಳನ್ನು ಕಾಪಾಡುತ್ತಲೂ, ಸೈನ್ಯಗಳು ಒಂದುಕಡೆಯಿಂದ ಮತ್ತೊಂದುಕಡೆಗೆ ಸರಾಗವಾಗಿ ಸಾಗಿಹೋಗಲು ಅವಕಾಶವನ್ನು ಉಂಟುಮಾಡಿಕೊಡುತ್ತಲೂ ಇರುವುದರಿಂದಲೂ ಫ್ರಾನ್ಸ್‌ದೇಶಕ್ಕೆ ವಿಜಯಲಾಭವಾಗುವುದು ನಿಶ್ಚಯವು. ಫ್ರಾನ್ಸ್‌ದೇಶದ ದ್ರವ್ಯವಿಷಯಕವಾದ ಸ್ಥಿತಿಯೂ ಕೂಡ ಶ್ಲಾಘನೀಯವಾಗಿಯೇ ಇದೆ'' ಎಂದು ನುಡಿದಿರುವರು.

ಒಳದೇಶದ ವೃತ್ತಾಂತಗಳು

ದಿವಾನರು ನಂದಿಬೆಟ್ಟಕ್ಕೆ ಹೋಗಿದ್ದು ಕಳೆದ ಬುಧವಾರ ಬೆಂಗಳೂರಿಗೆ ಹಿಂದಿರುಗಿ ದಯಮಾಡಿಸಿದರು.

ಬೆಂಗಳೂರ ಸಿಟಿ ಮಾರ್ಟಿನ ಮ|| ಬಿ. ಗರುಡಾಚಾರರು ಪದ್ಧತಿಯಪ್ರಕಾರ ೧೯೧೫ ನೆಯ ವರ್ಷದ ಕ್ಯಾಲಂಡರನ್ನು ಅಂದವಾಗಿ ಮುದ್ರಣಮಾಡಿಸಿ ನಮ್ಮಲ್ಲಿಗೆ ಕಳುಹಿಸಿಕೊಟ್ಟಿರುವ ಪ್ರತಿಯೊಂದನ್ನು ನಾವು ವಿಶ್ವಾಸದೊಡನೆ ಸ್ವೀಕರಿಸಿದೆವು.

ಶ್ರೀಮದ್ಯುವರಾಜರವರು ದಿವಾನರೊಡನೆ ಈ ತಾ|| ೬ ರ ಸಾಯಂಕಾಲ ಶಿವಮೊಗ್ಗೆಗೆ ಪ್ರಯಾಣಮಾಡಿ, ಅಲ್ಲಿಂದ ಕುಂಸಿ, ಸಾಗರ, ಸೊರಬ, ತೀರ್ಥಹಳ್ಳಿ ಮೊದಲಾದಕಡೆ ಸಂಚರಿಸಿಕೊಂಡು ದಯಮಾಡಿಸುವರು. ಆ ಪ್ರಾಂತಗಳಲ್ಲಿ ಶ್ರೀಗಳವರ ಸ್ವಾಗತಕ್ಕಾಗಿ ಅನೇಕ ಏರ್ಪಾಟುಗಳು ಮಾಡಲ್ಪಡುತ್ತಿರುವುದಾಗಿ ತಿಳಿಯುತ್ತೇವೆ.

ನಂಜನಗೂಡಿನಲ್ಲಿ ಕಳೆದ ಗುರುವಾರ ರಾತ್ರಿ ಅಂಧಕಾಸುರನ ಸಂಹಾರವೂ, ಮಾರನೆಯ ಬೆಳಿಗ್ಗೆ ಆರ್ದ್ರೋತ್ಸವವೂ ಬಹಳ ವಿಜೃಂಭಣೆಯಿಂದ ನಡೆಯಿತು ಜನಸ್ತೋಮವು ಬಹಳವಾಗಿ ಸೇರಿದ್ದಿತು. ಶ್ರೀಮನ್ಮಹಾರಾಜರವರು ಬುಧವಾರ ಬೆಳಿಗ್ಗೆ ರಾಜಧಾನಿಗೆ ದಯಮಾಡಿಸಿ ಗುರುವಾರ ಮತ್ತೂ ಶುಕ್ರವಾರ ನಂಜನಗೂಡಿಗೆ ದಯಮಾಡಿಸಿದ್ದು ನಂಜುಂಡೇಶ್ವರನ ಸೇವೆಯನ್ನು ಮಾಡಿ ಉತ್ಸವಗಳನ್ನು ಪರಾಮರ್ಶಿಸಿಕೊಂಡು ಚಿತ್ತೈಸಿದರು. ಮತ್ತೂ ಈದಿನ ಬೆಂಗಳೂರಿಗೆ ಹಿಂದಿರುಗಿ ಪ್ರಯಾಣಮಾಡುವುದಾಗರಿಯುತ್ತೇವೆ.

ಡಾ|| ಅಯಚ್ಚಮ್ಮಾಳ್‌ರವರು ವಿಕ್ಟೋರಿಯಾ ಆಸ್ಪತ್ರೆಯಿಂದ ಶಿವಮೊಗ್ಗೆಯ ಆಸ್ಪತ್ರೆಗೆ ವರ್ಗಾಯಿಸಲ್ಪಟ್ಟಿರುವ ಪ್ರಯುಕ್ತರಾಜಧಾನಿಯ ಮಹಾರಾಣಿಯಾಸ್ಪತ್ರೆಯ ಡಾ|| ಡಿವಾಜ್‌ರವರು ವಿಕ್ಟೋರಿಯಾ ಆಸ್ಪತ್ರೆಗೆ ವರ್ಗಾಯಿಸಲ್ಪಟ್ಟಿರುವರು. ಡಾ|| ಡಿವಾಜ್‌ರವರು ಬಹಳ ನಿಧಾನಸ್ವಭಾವದವರಾಗಿ ರೋಗಿಗಳನ್ನು ಬಹು ವಿಶ್ವಾಸದಿಂದ ಉಪಚರಿಸುತ್ತಿರುವುದರಿಂದ ಜನರ ವಿಶೇಷವಾದ ಅನುರಾಗಕ್ಕೆ ಪಾತ್ರರಾಗಿರುವರು. ಇಂತಹ ಗುಣಾಢ್ಯರು ವರ್ಗವಾಗಿ ಹೋಗುವುದರಿಂದ ಇಲ್ಲಿಯ ಜನರ ಮನಸ್ಸಿಗೆ ವ್ಯಾಕುಲವಾಗಿದೆ.

ಈ ಸಲ ಭಾರತೀಯರಿಗೆ ಲಭ್ಯವಾಗಿರುವ ನೂತನವರ್ಷದ ಪ್ರಶಸ್ತಿಯಲ್ಲಿ ನಮ್ಮ ಸಂಸ್ಥಾನದ ಯುವರಾಜರಾದ ಕಂಠೀರವ ನರಸಿಂಹರಾಜವೊಡೆಯರ್, ಕೆ. ಸಿ. ಎಸ್. ಐ., ರವರಿಗೆ ಜಿ.ಸಿ.ಐ.ಇ., ಪ್ರಶಸ್ತಿಯೂ, ಡೆಪ್ಯುಟಿ ಚೀಫ್ ಇಂಜನಿಯರ್ ಮ|| ಕೃಷ್ಣಸ್ವಾಮಯ್ಯಂಗಾರರಿಗೂ ಮತ್ತೂ ಮ್ಯುನಿಸಿಪಲ್ ಕೌನ್ಸಿಲರೂ, ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರೂ, ಅಡ್ವೋಕೇಟರೂ ಆದ ಮ|| ಎಂ. ಸಿ. ರಂಗಯ್ಯಂಗಾರ್ಯ, ಬಿ.ಎ., ಯವರಿಗೂ ರಾವ್‌ಬಹದ್ದೂರ್ ಪ್ರಶಸ್ತಿಯೂ ಲಭ್ಯವಾಗಿರುವುದೆಂದೂ ತಿಳುಹಲು ಆನಂದವಾಗುವುದಲ್ಲದೆ ಇದಕ್ಕಾಗಿ ನಾವು ಇವರುಗಳನ್ನು ಅಭಿನಂದಿಸುತ್ತೇವೆ.

ಹಾಸನದ ಡಿ|| ಕಮಿಷನರಾದ ಮಿ|| ಪಿ. ಆರ್. ಡಬ್ಲ್ಯು. ವೆದರಾಲ್‌ರವರಿಗೆ ಈ ತಾ|| ೭ ರಿಂದ ೩ತಿಂಗಳ ಪ್ರಿವಿಲೆಜ್ ರಜವು ಕೊಡಲ್ಪಟ್ಟು ಅದು ತೀರಿದಕೂಡಲೇ ಉದ್ಯೋಗದಿಂದ ನಿವೃತ್ತರಾಗಲು ಸರ್ಕಾರದಪ್ಪಣೆಯಾಗಿ ಈಗ ಮುಜರಾಯಿ ಸೂಪರಿಂಟೆಂಡೆಂಟರಾಗಿರುವ ಮ||ಆರ್ವಾಮುದಂ ಅಯ್ಯಂಗಾರರು ೩ ನೆಯ ತರಗತಿಯ ಅಫಿಸಿಯೇಟಿಂಗ್ ಡೆ|| ಕಮಿಷನರಾಗಿಯೂ, ಇವರು ಮುಜರಾಯಿ ಸೂಪರಿಂಟೆಂಡೆಂಟ್ ಉದ್ಯೋಗದಮೇಲಿರುವವರೆಗೆ ಕೋಲಾರದ ಚಿನ್ನದ ಗಣಿಗಳ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಸೀ|| ಅ|| ಕಮಿಷನರ್ ಮ|| ಬಿ. ರಾಮಸ್ವಾಮಯ್ಯನವರು ಹಾಸನದ ಆಕ್ಟಿಂಗ್ ಡೆ|| ಕ|| ರವರಾಗಿಯೂ ನಿಯಮಿಸಲ್ಪಟ್ಟು ಮೈಸೂರ ಸಬ್‌ಡಿವಿಜನ್ ಅ||ಮ|| ವೆಂಕೋಬರಾಯರು ಚಿನ್ನದಗಣಿಯ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿಯೂ, ಸಿಟಿ ಮ್ಯಾಜಿಸ್ಟ್ರೇಟರಾದ ಮ|| ಕುಪ್ಪಸ್ವಾಮಯ್ಯಂಗಾರರು ಮೈಸೂರ ಸಬ್ ಡಿವಿಜನ್ನಿನ ಅ|| ಕ|| ರವರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ.

ವಿಶೇಷವಾರ್ತೆ.

ಪೋರ್ಚುಗೀಸರಿಗೆ ಸೇರಿದ ಅಂಗೋಲಾದಮೇಲೆ ಜರ್ಮನರು ದಂಡೆತ್ತಿಹೋಗಿದ್ದಾರೆ.

ಪೋರ್ಚುಗೀಸ್ ರಾಜ್ಯಾಂಗಸಭೆಯವರು ಯುದ್ಧರಂಗದಲ್ಲಿ ಬ್ರಿಟಿಷ್‌ಪ್ರಭುತ್ವದವರ ಕಡೆಗೆ ಸೇರಿ ಯುದ್ಧಮಾಡಲು ನಿಶ್ಚಯಿಸಿರುವರು.

ಫ್ರಾನ್ಸಿನ ಪಾರ್ಲಿಮೆಂಟಿನವರು ಯುದ್ಧದ ವೆಚ್ಚಕ್ಕಾಗಿ ಬೊಕ್ಕಸದಿಂದ ೫೧೧|| ಕೋಟಿ ರೂ.ಗಳನ್ನು ಉಪಯೋಗಿಸಿಕೊಳ್ಳಬಹುದೆಂದು ಅನುಮತಿಯನ್ನಿತ್ತಿರುವರು.

ಯಾರ್ಕ್‌ಜಿಲ್ಲೆಯ ತೀರಪಟ್ಟಣಗಳಲ್ಲಿನ ಪ್ರಜೆಗಳಿಗೆ ಜರ್ಮನರ ಹಡಗುಗಳಿಂದುಂಟಾದ ನಷ್ಟವನ್ನು ಇಂಗ್ಲೀಷ್ ಗೌರ್ನಮೆಂಟಿನವರು ಪರಿಹರಿಸಿಕೊಡಲು ಅಪ್ಪಣೆಮಾಡಿದ್ದಾರೆ.

ಆಸ್ಟ್ರಿಯಾದ ಸರ್ವಸೇನಾಧಿಪತಿಯು ದೇಹದ ಅಸ್ವಸ್ಥತೆಯಿಂದ ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟುದರಿಂದ ಯೂಜನ್ ರಾಜಕುಮಾರನು ಆ ಸ್ಥಾನಕ್ಕೆ ನಿಯಮಿಸಲ್ಪಟ್ಟಿದ್ದಾನೆ.

ಪ್ರತಿಯೊಬ್ಬ ಭೂಜಲಸೈನಿಕನಿಗೂ ಜಾರ್ಜ್ ಸಾರ್ವಭೌಮದಂಪತಿಗಳು ಕ್ರಿಸ್ತುಮಸ್ ಕಾರ್ಡುಗಳನ್ನು ಕಳುಹಿಸಿ, ಅದರ ಮೂಲಕ ಅವರೆಲ್ಲರ ಕ್ಷೇಮವನ್ನು ಬಯಸಿರುವರು. ಈ ಕಾರ್ಡುಗಳಮೇಲೆ ಒಂದುಕಡೆ ರಾಜದಂಪತಿಗಳ ಭಾವಚಿತ್ರಗಳೂ, ಮತ್ತೊಂದುಕಡೆ ಅವರ ಶುಭವಾದ ವಚನಗಳೂ ಮುದ್ರಿಸಲ್ಪಟ್ಟಿವೆ.

ಸೆಪ್ಟಂಬರ್ ತಾ|| ೧೫ ರಿಂದ ನವೆಂಬರ್ ತಾ|| ೩೦ ರ ವರೆಗೆ ಫ್ರೆಂಚರ ಕಡೆಯ ಸೈನಿಕರಲ್ಲಿ ಏಟುತಿಂದು ಗಾಯಗೊಂಡ ೪೮೫೭೨೩ ಮಂದಿಗಳು ವೈದ್ಯಶಾಲೆಗಳಲ್ಲಿ ಚಿಕಿತ್ಸೆಹೊಂದಿರುವರು. ಇವರಲ್ಲಿ ೧೦೦ ಕ್ಕೆ ೭೯ ಮಂದಿಯಂತೆ ಗುಣವಾಗಿ ಮರಳಿ ಸೈನ್ಯಕ್ಕೆ ಸೇರಿಕೊಂಡಿರುವರು. ೧೦೦ಕ್ಕೆ ೨|| ಯಂತೆ ಸತ್ತುಹೋದರು. ಈಗ ಫ್ರಾನ್ಸಿನ ವೈದ್ಯಾಲಯಗಳಲ್ಲಿ ೩೯೭೮ ಮಂದಿ ಸೈನಿಕರು ಚಿಕಿತ್ಸೆಹೊಂದುತ್ತಿದ್ದಾರೆ.

ಅಲಹಾಬಾದಿನ ಪಯೋನಿಯರ್ ಪತ್ರಿಕೆಗೆ ಲಂಡನ್ನಿನ ಪತ್ರವ್ಯವಹಾರಕನು ಬರೆದಿರುವ ತಂತ್ರೀವಾರ್ತೆಯಿಂದ ಹೀಗೆ ಗೊತ್ತಾಗುತ್ತದೆ—ಆಸ್ಟ್ರಿಯಾದವರು ಸರ್ವಿಯಾದವರೊಡನೆ ಸಂಧಿಮಾಡಿಕೊಳ್ಳಬೇಕೆಂದು ೨ ಆವೃತ್ತಿ ಬರೆದುಕೊಂಡರು. ಅದಕ್ಕೆ ಸರ್ವಿಯಾದವರು ಒಪ್ಪದೆ ತಿರಸ್ಕರಿಸಿಬಿಟ್ಟರು. ಕಡೆಯಸಾರಿ ಆಸ್ಟ್ರಿಯನ್ನರು ಸರ್ವಿಯಾದಮೇಲೆ ದಂಡೆತ್ತಿಹೋಗುವುದಕ್ಕೆ ಜರ್ಮನ್ ಚಕ್ರವರ್ತಿಯ ಬಲಾತ್ಕಾರವೇ ಮುಖ್ಯಕಾರಣವಾಗಿದ್ದಿತು.

ಜರ್ಮನರು ಈಗ ಒಂದುತೆರದ ದೊಡ್ಡದೊಡ್ಡ ಸಬ್‌ಮೆರೀನುಗಳನ್ನು ನಿರ್ಮಿಸುತ್ತಿದ್ದಾರಂತೆ. ಇವು ಬಹಳ ಚೆನ್ನಾಗಿ ಕೆಲಸಮಾಡುವುವೆಂದು ಅವುಗಳ ನಿರ್ಮಾಣವನ್ನು ಕೀಲ್‌ಕಾಲ್ವೆಯಲ್ಲಿ ನೋಡಿದ ಅಮೇರಿಕಾ ಪತ್ರವ್ಯವಹಾರಕನೊಬ್ಬನು ಬರೆದಿದ್ದಾನೆ. ಅವರ ನೌಕಾದಳವು ಪ್ರತಿದಿನವೂ ೫ ಗಂಟೆಗಳಕಾಲ ಗುರಿಹೊಡೆಯುವುದೇ ಮೊದಲಾದ ಶಿಕ್ಷಣವನ್ನು ಹೊಂದುತ್ತಿರುವುದಂತೆ. ಬರುವ ೩ ತಿಂಗಳೊಳಗಾಗಿ ಇನ್ನು ಕೆಲ ಹೊಸಹಡಗುಗಳನ್ನು ಅಣಿಮಾಡುವುದಕ್ಕಾಗಿ ೧೧ ಸಾವಿರಮಂದಿಗಳು ಹಗಲೂ ರಾತ್ರಿಯೂ ಕೆಲಸಮಾಡುತ್ತಿರುವರಂತೆ. ಆದರೂ ಆಜನರಿಗೆ ಮೊದಲಿದ್ದಷ್ಟು ಉತ್ಸಾಹವು ಈಗ ಇಲ್ಲವೆಂದು ಆ ಲೇಖಕನು ಬರೆದಿದ್ದಾನೆ.

ಒಬ್ಬ ಫ್ರಾನ್ಸು ಹುಡುಗಿಯು ಜರ್ಮನರ ಬಲಾತ್ಕಾರವನ್ನು ಕುರಿತು ಹೀಗೆ ನುಡಿದಿರುತ್ತಾಳೆ—,, ಜರ್ಮನರು ಮೋಯನ್ ಎಂಬ ಗ್ರಾಮವನ್ನು ನುಗ್ಗಿದ ಕೂಡಲೆ ಅಲ್ಲಿದ್ದ ಸ್ತ್ರೀಯರನ್ನೆಲ್ಲಾ ಗಾಯತಗುಲಿದ ಜರ್ಮನರಿಗೆ ಉಪಚಾರ ಮಾಡುವುದಕ್ಕಾಗಿ ಎಳೆದುಕೊಂಡು ಹೋದರು. ಆಗ ನಾವುಗಳು ಬಹುಶಃ ೧೨ ಮೈಲಿಗಳ ದೂರ ನಡೆದುಹೋಗಿ ಒಂದು ಅಡವಿಯನ್ನು ಸೇರಿದೆವು. ಮರಗಳ ಪೊಕ್ಕೆಯಿಂದ ಫ್ರೆಂಚರು ಹೊಡೆಯುತ್ತಿದ್ದ ಫಿರಂಗಿ ಗುಂಡುಗಳು ತಗುಲಿ ಸತ್ತಿದ್ದ ಜರ್ಮನರನ್ನು ಬಹುಶಃ ೪೦೦ ಗಜಗಳ ದೂರಕ್ಕೆ ಹೊತ್ತುಕೊಂಡು ಹೋಗಿ ನಾವು ಹೂಳಬೇಕಾಗಿ ಬಂದಿತು. ನಮ್ಮಲ್ಲಿ ಕೆಲವರು ಆ ಹೆಣಗಳನ್ನು ಹೊರಲಾರದೆ ಹಿಂದೆಗೆಯಲು, ಅವರನ್ನು ಜರ್ಮನರು ಸನೀನುಗಳಿಂದ ತಿವಿಯುತ್ತಲೂ ತಾವು ಹೇಳಿದ ಕೆಲಸವನ್ನು ಮಾಡಿ ಮುಗಿಸುವವರೆಗೂ ಬೋಡಿನಕಾಲಿನಿಂದ ಒದೆಯುತ್ತಲೂ ಹಿಂಸೆಪಡಿಸಿದರು. ನಾವು ಬೆಳಗಾಗುವವರೆಗೆ ೧೦೩ ಹೆಣಗಳನ್ನೆಲ್ಲಾ ಹೂತೆವು'' ಎಂಬುದಾಗಿ.

[illegible]

ಪತ್ರವ್ಯವಹಾರ.

ಬೆಳಗಾವಜಿಲ್ಹಾ ದೇವಲಾಪೂರ.

ತಾ॥ ೧೩ ನೇ ಡಿಶಂಬರ್ ೧೯೧೪ ನೇ ಇಸವಿಯು ರವಿವಾರದಿವಸ ಇಲ್ಲಿಗೆ ಶ್ರೀಮನ್ನಿರಂಜನ ಮುರಘುರಾಜೇಂದ್ರ ಜಗದ್ಗುರು ಜಯದೇವ ಮಹಾಸ್ವಾಮಿಗಳವರ ಆಗಮನವು ಬೈಲಹೊಂಗಲದಿಂದ ಆಯಿತು ಆಗ ಸತ್ತೀಗೇರಿ ಪಟ್ಟದ ಸ್ವಾಮಿಗಳೂ, ಸಮಸ್ತ ಮಠಾಧಿಕಾರಿಗಳೂ ಯಾವತ್ತು ಭಕ್ತರೂಕೂಡಿ ಶ್ರೀಮಜ್ಜಗದ್ಗುರುಗಳನ್ನು ಒಳ್ಳೇ ವಿಜೃಂಭಣೆಯಿಂದ ಊರೊಳಗೆ ಮುಂಜಾವಿನ ೧೧ ಘಂಟೆಗೆ ಬರಮಾಡಿಕೊಂಡರು. ಅನಂತರ ಮಹಾಸ್ವಾಮಿಗಳವರನ್ನು ಸಾಹುಕಾರ ಮಿ॥ ವೀರಭದ್ರಪ್ಪ, ಸಿದ್ಧರಾಮಪ್ಪ, ಅಣ್ಣಾ ಶಾಗಿ ಇವರ ಮನೆಯೊಳಗೆ ಬಿಡಾರಮಾಡಿಸಿದರು. ಬಳಿಕ ೧೨ ಘಂಟೆಯಿಂದ ೧ ರ ವರೆಗೆ ಈಗ ನಡೆದಿರುವ ಯೂರೋಪ್ಖಂಡೊಳಗಿನ ಮಹಾಯುದ್ಧದಲ್ಲಿ ನಮ್ಮ ಪರಮಮಾನ್ಯ ಸಾರ್ವಭೌಮ ಪಂಚಮಜಾರ್ಜ ಬಾದಶಹರವರಿಗೆ ಜಯವಾಗಲೆಂಬ ಉದ್ದೇಶದಿಂದ ರಾಜನಿಷ್ಠರಾದ ಗ್ರಾಮಸ್ಥರೂ, ಸದ್ಗೃಹಸ್ಥರೂ ಕೂಡಿಕೊಂಡು ಮಹಾಸ್ವಾಮಿಗಳವರ ಆರಾಧನೆಯನ್ನೂ, ಈಶ್ವರಾರಾಧನೆಯನ್ನೂ ನಡೆಯಿಸಿದರು. ತರುವಾಯ ೨ ಘಂಟೆಯಿಂದ ೩ ರ ವರೆಗೆ ಯಾವತ್ತರೂ ವೃಷ್ಟಾನ್ನಭೋಜನತೀರಿಸಿಕೊಂಡು ಊರೊಳಗಿನ ಮತ್ತು ಪರಸ್ಥಳದಿಂದ ಬಂದ ಯಾವತ್ತೂ ಅನಾಥರಿಗೆ ಸುಗ್ರಾಸ ಭೋಜನವನ್ನು ಮಾಡಿಸಿದರು. ಆಮೇಲೆ ೩ ರಿಂದ ೪ ರ ವರೆಗೆ ಈ ಗ್ರಾಮದ ಚಾವಡಿಯಲ್ಲಿ ಮೊದಲೇ ಮಂಟಪಾದಿಗಳಿಂದ ಶೃಂಗರಿಸಲ್ಪಟ್ಟ ಉಚ್ಚಪೀಠದಲ್ಲಿ ಶ್ರೀಗಳವರು ವಿರಾಜಮಾನರಾದರು. ಆಗ ಶಾಲೆಯ ವಿದ್ಯಾರ್ಥಿಗಳು ಸ್ವಾಗತಪರ ಮತ್ತು ರಾಜನಿಷ್ಠೆಯ ಪದಗಳನ್ನು ಮಂಜುಳಸ್ವರದಿಂದ ಗಾಯನಮಾಡಿದರು. ಬಳಿಕ ಲೋ॥ ಬೋ॥ ಮೆಂಬರ ಮಿ॥ ವಿ. ಕೆ. ಶಾಗಿ ಇವರು ಮಹಾಸ್ವಾಮಿಗಳವರ ಆಗಮನದಿಂದ ಆದ ಲಾಭವನ್ನು ಕುರಿತು ಚಿಕ್ಕಭಾಷಣವನ್ನು ಮಾಡಿದರು. ಅನಂತರ ಮಹಾಸ್ವಾಮಿಗಳವರು ರಾಜನಿಷ್ಠೆ, ಧರ್ಮ, ವಿದ್ಯೆ ಇವುಗಳನ್ನು ಕುರಿತು ಯಾವತ್ತರ ಮನಸ್ಸಿನಮೇಲೆ ಒಳ್ಳೇ ಪರಿಣಾಮವಾಗುವಂತೆ ಅಸ್ಖಲಿತ ವಾಣಿಯಿಂದ ಸರಸವಾದ ಸದುಪದೇಶವನ್ನು ಮಾಡಿದರು. ಮುಂದೆ ಸಂಜೆಯ ೬ ಗಂಟೆಯ ಸುಮಾರಕ್ಕೆ ನಮ್ಮೆಲ್ಲರಿಗೆ ಆಶೀರ್ವಾದಕೊಟ್ಟು ಪುನಃ ಬೈಲಹೊಂಗಲಕ್ಕೆ ಬಿಜಯಂಗೈಸಿದರು.

ಪ್ರತ್ಯಕ್ಷದರ್ಶಿ.

ತರೀಕೆರೆ ತಾ॥ ಅನುವನಹಳ್ಳಿ.

ಈ ಗ್ರಾಮದಲ್ಲಿ ಪದ್ಧತಿಪ್ರಕಾರ ಪ್ರತಿ ವರ್ಷವೂ ನಡೆಯುವಂತೆ ಈ ವರ್ಷವೂ ಇದೇ ಆನಂದನಾಮ ಸಂ॥ ಮಾರ್ಗಶಿರ ಬಹುಳ ೧೦ ಶನಿವಾರದಾರಭ್ಯ ೩೦ ಗುರುವಾರದ ವರೆಗೆ ಶ್ರೀ ಮಹೇಶ್ವರಸ್ವಾಮಿ ಜಾತ್ರೆಯು ಈಗ್ರಾಮದ ಪ್ರಮುಖರಾದ ಚಂದೇಗೌಡರು ಬಿ ನಾಗಪ್ಪಗೌಡರು ಪ॥ ಸಿದ್ದ[illegible]ವರು ಯಜಮಾನರು ಮಹದೇವಪ್ಪನವರು ಇನ್ನೂ ಮುಂತಾದ ಗ್ರಾಮಸ್ತರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಸಲಾಯ್ತು ಈ ಮಹೋತ್ಸವಕ್ಕೆ ಆಸುಪಾಸು ಗ್ರಾಮಗಳಿಂದ ಸಾವಿರಾರು ಪ್ರಜೆಗಳು ಬಂದಿದ್ದರು. ಈ ಮಹಾ ಜನಗಳಿಗೆ ೩ ದಿವಸದ ವರೆಗೆ ಸುಖಭೋಜನವು ಮಹೇಶ್ವರಸ್ವಾಮಿ ತೋಟದಲ್ಲಿ ನಡೆಸಲಾಯ್ತು. ಈ ಸತ್ಕಾರ್ಯವು ಕಾಲಕಾಲಕ್ಕೆ ತಪ್ಪದೆ ನಡೆಯಲು ಗ್ರಾಮಸ್ಥರು ಮಹೇಶ್ವರಸ್ವಾಮಿ ಬಾಬತು ೮೦೦ ರೂಪಾಯಿಗಳ ವರೆಗೆ ಸೊಸೈಟಿ ನೇಮದಂತೆ ಈ ಗ್ರಾಮದಲ್ಲೇ ಪ್ರಜೆಗಳಿಗೆ ಶಕ್ತ್ಯನುಸಾರವಾಗಿ ೪-೧೦-೧೪-೨೦ ಈ ರೀತಿಯಾಗಿ ಸಾಲಕೊಟ್ಟು ಮೇಲೆಕಂಡ ರೂಪಾಯಿಗಳಿಗೆ ಬರತಕ್ಕ ಬಡ್ಡಿ ಅಂಶದಿಂದಲೂ ಭಕ್ತಾದಿಗಳಿಂದ ಬರುವ ಕಾಣಿಕೆಯಿಂದಲೂ ಪ್ರತಿವರ್ಷವೂ ಈ ಕಾರ್ಯವು ನಡೆಸಲ್ಪಡುತ್ತದೆ. ಊರಿನ ಎಲ್ಲಾ ಭಾಗದಲ್ಲಿಯೂ ಜಾತ್ರೆನಡೆಯುವ ಸ್ಥಳದಲ್ಲಿಯೂ ವಿಚಿತ್ರತರವಾದ ತೋರಣ ಮೇಲ್ಕಟ್ಟು ಮಂಟಪಗಳಿಂದಲಂಕೃತವಾಗಿ ರಚಿಸಲ್ಪಟ್ಟಿತ್ತು. ಮಹಾಸ್ವಾಮಿಯ ಉತ್ಸವವು ತೋಟದಿಂದ ಊರೊಳಕ್ಕೆ ತಾ॥ ೧೨-೧೨-೧೪ನೆ ಗುರುವಾರ ರಾತ್ರೆ ದಯಮಾಡಿಸಲಾಯ್ತು ಆದಿನ ರಾತ್ರೆ, ಮ॥ ಜಿ. ಮಲ್ಲಪ್ಪನವರೂ ಮ॥ ರುದ್ರಪ್ಪನವರೂ ಬಹಳ ಮೆಹನತ್ತಿನಿಂದ ಬಾಲಕರನ್ನು ಸೇರಿಸಿಕೊಂಡು "ಲಕ್ಷ್ಮೀಸ್ವಯಂವರ" ವೆಂಬ ವಿಚಿತ್ರವಾದ ನವೀನ ನಾಟಕವನ್ನು ಆಡಿಸಿ ಆದಿವಸ ಕೂಡಿದ ಸಾವಿರಾರು ಜನಗಳಿಗೆ ಮನಸ್ಸಂತೋಷಪಡಿಸಿದರು. ತಾ॥ ೧೮ ನೆ ಶುಕ್ರವಾರ ಸ್ಕೂಲ್ ಕಟ್ಟಡದಲ್ಲಿ ಮೇಲ್ಕಂಡ ಪ್ರಮುಖರು ಪುರನಿವಾಸಿಗಳಾದ ಸಮಸ್ತರನ್ನೂ ಬರಮಾಡಿಕೊಂಡು ಸಭೆ ಮಾಡಿಸಿ ಇದೇ ರೀತಿ ಪ್ರತಿವರ್ಷವೂ ಭಕ್ತಿಪೂರ್ವಕವಾಗಿ ಶ್ರೀ ಮಹೇಶ್ವರಸ್ವಾಮಿಯ ಜಾತ್ರೆಯನ್ನು ನಡಿಸಬೇಕಾಗಿ ಬೋಧಿಸಿದರು. ಲ್‌ಮಾಸ್ಟರ್ ಎ. ನಂಜುಂಡಯ್ಯನವರು ವಿದ್ಯಾಭ್ಯಾಸ ತಕ್ಕ ಪ್ರಯೋಜನವನ್ನು ಬಾಲಕರನ್ನು ಸ್ಕೂಲಿಗೆ ೊಡಬೇಕೆಂಬದಾಗಿಯೂ ಮಧುರವಾದ ಮಾತುಗಳಿಂದ ತಿಳಿಯಪಡಿಸಿದರು. ಇವರು ಈ ಗ್ರಾಮಕ್ಕೆ ಬಂದಾರಭ್ಯ ಮುತವರ್ಜಿವಹಿಸಿ ಕೆಲಸ ನಡೆಸುವುದರಿಂದ ಹೀನಸ್ಥಿತಿಯಲ್ಲಿ ಇದ್ದ ಸ್ಕೂಲು ಈಗೀಗ ಉತ್ತಮಸ್ಥಿತಿಗೆ ಬರುವಂತೆ ಕಾಣುತ್ತದೆ. ಇವರು ಇನ್ನೂ ಕೆಲವುಕಾಲ ಇಲ್ಲೇಇದ್ದಲ್ಲಿ ಸ್ಕೂಲು ಅಭಿವೃದ್ಧಿಗೆ ಬರಲು ಸಂಶಯವಿಲ್ಲವಾಗಿ ಹೇಳಬಹುದು. ಶಿವನೆ ಸ್ಕೂಲ್ ಅ॥ ಮಾ॥ ಎಸ್ ಡಿ. ಹನುಮಯ್ಯನವರು ಪತ್ರಿಕೆಗಳನ್ನು ತರಿಸುವುದರಿಂದ ಆಗತಕ್ಕ ಪ್ರಯೋಜನವನ್ನು ಸ್ವಾರಸ್ಯವಾಗಿ ತಿಳಿಸಿದ್ದಲ್ಲದೆ ಈ ಗ್ರಾಮದಲ್ಲಿ ಒಂದು ರೀಡಿಂಗ್‌ರೂಮನ್ನು ಸ್ಥಾಪಿಸುವಂತೆ ಪ್ರೋತ್ಸಾಹಿಸಿದರು. ಮತ್ತೂ ಬಿ. ಜಿ. ನಾಗಪ್ಪನವರು ಈ ಗ್ರಾಮಕ್ಕೆ ಸೊಸೈಟಿಯೇ ಏರ್ಪಾಡು ಮಾಡಬೇಕೆಂಬದಾಗಿಯೂ ಈ ಸಂಘದಿಂದ ಆಗತಕ್ಕ ಪ್ರಯೋಜನವನ್ನು ಸಹ ಸರ್ವರೂ ತಿಳಿಯುವಂತೆ ಹೇಳಿದರು. ಪಟೇಲ್ ಸಿದ್ದಪ್ಪನವರು ಗ್ರಾಮವನ್ನು ಉತ್ತಮರೀತಿಯಲ್ಲಿಯೂ ಆರೋಗ್ಯಕ್ಕೆ ಅನುಗುಣವಾಗಿಯೂ ಇಡಬೇಕೆಂದು ಎಲ್ಲರೂ ಐಕಮತ್ಯದಿಂದ ನಡೆದುಕೊಳ್ಳಬೇಕೆಂಬದಾಗಿಯೂ ತಿಳಿಸಿದರು ಮತ್ತೂ ಗ್ರಾಮಾಭಿವೃದ್ಧಿಯಿಂದ ಆಗತಕ್ಕ ಪ್ರಯೋಜನವನ್ನು ವ್ಯಕ್ತಪಡಿಸಿದರು. ಮ॥ಹುಣಸಘಟ್ಟದ ಜವಳಿಅಂಗಡಿಫಣಿಯಪ್ಪಶೆಟ್ಟರು ಈಗ್ರಾಮವು ಪಾರ್ಟಿವಗೈರೆ ದುರ್ಮಾರ್ಗಸಂಗವಿಲ್ಲದೆ ಐಕಮತ್ಯದಿಂದ ಇರುವುದರ ಪ್ರಯೋಜನವನ್ನೂ ಪರೋಪಕಾರ ಪರಹಿಂಸೆ ಇವುಗಳಿಂದ ಆಗತಕ್ಕ ಪುಣ್ಯಪಾಪಗಳನ್ನು ಸಹ ಸಭೆಯವರಿಗೆಆನಂದವಾಗುವಂತೆ ಉಪನ್ಯಾಸಮಾಡಿದರು. ಬೆಲ್ಲದಅಂಗಡಿ ಶಾಮಣ್ಣಶೆಟ್ಟರು ಈಗ ನಡೆಯುತ್ತಿರುವ ನೂತನಯಂತ್ರಗಳಿಂದ ಆಗತಕ್ಕ ವ್ಯವಸಾಯಕ್ಕೂ ಪೂರ್ವದಲ್ಲಿ ಮಾಡುತ್ತಿದ್ದ ವ್ಯವಸಾಯಕ್ಕೂ ತಾರತಮ್ಯವನ್ನು ತೋರಿಸಿ ಉತ್ತಮವಾದ ಯಂತ್ರಗಳನ್ನು ತರಿಸಿ ಶ್ರೇಷ್ಠವಾದ ಬೆಳೆಯನ್ನು ಬೆಳೆಯುವಂತೆ ಜನಗಳಿಗೆಲ್ಲಾ ಪ್ರೋತ್ಸಾಹಿಸಿದರು. ಅನಂತರ ಸ್ಕೂಲ್ ಬಾಲಕರಿಗೆಲ್ಲಾ ತಿಂಡಿಯು ಹಂಚಲ್ಪಟ್ಟಿತು. ಸಭೆಯವರಿಗೆಲ್ಲಾ ಗಂಧಪುಷ್ಪ ತಾಂಬೂಲಗಳನ್ನು ಹಂಚಿ ಸಭೆಯು ಮುಕ್ತಾಯಮಾಡಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಕೊಳ್ಳೇಗಾಲದ ತಾ॥ ಮಧುವನಹಳ್ಳಿ ಬೋರ್ಡ್ ಎಲಿಮೆಂಟರಿ ಸ್ಕೂಲ್.

ತಾ॥ ೧೨-೧೨-೧೪ ನೇ ಶನಿವಾರ ಈ ದಿವಸ ದರ್ಬಾರ್ ಡೇ ಮಹೋತ್ಸವವು ಮ॥ ವಿಲೇಜ್ ಮ್ಯುಸೀಫ್ ಜಿ. ಸಿದ್ಧಲಿಂಗಪ್ಪನವರ ಪ್ರೋತ್ಸಾಹದಿಂದ ನೆರವೇರಿಸಲಾಯಿತು. ಸ್ಕೂಲ್ ಕಟ್ಟಡವನ್ನು ಸುಣ್ಣ, ಕೆಮ್ಮಣ್ಣು, ತಳಿರುತೋರಣ, ಕದಳೀಸ್ತಂಭಗಳಿಂದ ಅಲಂಕರಿಸಿ ಬ್ರಿಟಿಷ್ ಬಾವುಟವು ಎತ್ತಿ ಕಟ್ಟಲ್ಪಟ್ಟಿತು. ಘನತೆಯನ್ನು ಹೊಂದಿದ ಶ್ರೀಮಚ್ಚಕ್ರವರ್ತಿಯವರ ಮತ್ತು ಚಕ್ರವರ್ತಿನಿಯವರ ಭಾವಚಿತ್ರಪಟವು ಉನ್ನತವಾದ ಭದ್ರಾಸನದಲ್ಲಿ ಹಾರ ತುರಾಯಿಗಳಿಂದ ಅಲಂಕರಿಸಿ ಇಡಲ್ಪಟ್ಟಿತು. ಮಧ್ಯಾಹ್ನ ೨॥ ಘಂಟೆಗೆ ಸರಿಯಾಗಿ ಅ॥ ಮಾ॥ ಗಳೊಡನೆ ಹೆಡ್ಮಾಸ್ಟರೂ, ಬಾಲಕಬಾಲಕಿಯರೂ, ಗ್ರಾಮಮುನ್ಸೀಫ್ ಮತ್ತು ಮುಖಂಡರುಗಳೂ, ಇತರ ಕೆಲವು ಪುರನಿವಾಸಿಗಳೂ ಸ್ಕೂಲ್ ಕಟ್ಟಡದಲ್ಲಿ ನೆರೆದರು. ಬಳಿಕ ಬ್ಯಾಂಡ್‌ವಾದ್ಯ ಪ್ರಾರಂಭಿಸಲ್ಪಟ್ಟು ಬ್ರಿಟಿಷ್ ಬಾವುಟಕ್ಕೆ ಸರ್ವರೂ ವಂದನೆಯನ್ನರ್ಪಿಸಿದ ಬಳಿಕ ಉಚಿತಸ್ಥಾನಗಳಲ್ಲಿ ಸುಖಾಸೀನರಾದರು. ಸಭೆಯವರ ಕೋರಿಕೆಯ ಪ್ರಕಾರ ಮ॥ ಸಾಹುಕಾರ್ ಬಸವಲಿಂಗಪ್ಪನವರು ಅಗ್ರಾಸನವನ್ನು ಅಲಂಕರಿಸಿದರು. ಸ್ಕೂಲ್ ಹೆ॥ ಮಾ॥ ಎಸ್. ಶಾಮಣ್ಣಯ್ಯರ್‌ರವರ ಪ್ರೋತ್ಸಾಹದಿಂದ ಮುಂಚೆಯೇ ಏರ್ಪಡಿಸಿದ್ದ ಪ್ರೋಗ್ರಾಂಮೇರೆ ಸಭಾ ಕಾರ್ಯಗಳು ಪ್ರಾರಂಭಿಸಲ್ಪಟ್ಟವು. ಮ॥ ಬಿ. ಮಹದೇವಶಾಸ್ತ್ರಿಗಳವರಿಂದ ಮ॥ ಬಿ. ದೇವಣ್ಣನವರ ಹಾರ್ಮೋನಿಯಂ ಮತ್ತು ಇತರ ಸಂಗೀತೋಪಕರಣಗಳೊಡನೆ ತ್ಯಾಗಯ್ಯನವರ ಜೀವಮಾನಚರಿತ್ರೆಯು ಸಭಿಕರ ಮನಸ್ಸಿನಲ್ಲಿ ಭಕ್ತಿರಸವು ನೆಲಸುವಂತೆ ನಡಿಸಲ್ಪಟ್ಟಿತು. ಸದರಿ ಶಾಸ್ತ್ರಿಗಳವರ ಮಕ್ಕಳು ಡಿಟೋ ಸ್ಕೂಲ್ ಲೇಟ್ ವಿದ್ಯಾರ್ಥಿ ಮ॥ ಎಂ. ಸಿದ್ಧಲಿಂಗಪ್ಪನವರು ಇಂಗ್ಲೀಷ್ ರಾಜ್ಯಭಾರದಿಂದ ಇಂಡಿಯಾದೇಶಕ್ಕೆ ಉಂಟಾಗಿರುವ ಪ್ರಯೋಜನವನ್ನು ಕುರಿತು ಸಭಿಕರಿಗೆ ಸ್ಪಷ್ಟವಾಗಿ ತಿಳಿಯುವಂತೆ ಚಮತ್ಕಾರವಾಗಿ ಉಪನ್ಯಾಸ ಮಾಡಿದರು. ಅಧ್ಯಕ್ಷರ ಮಕ್ಕಳು ಸ್ಕೂಲ್ ಲೇಟ್ ವಿದ್ಯಾರ್ಥಿ ಮ॥ ಬಿ॥ ರುದ್ರಪ್ಪನವರು ಇಂಡಿಯಾದೇಶದ ಪೂರ್ವಸ್ಥಿತಿಯನ್ನು ಕುರಿತು ಸ್ಕೂಲ್ ಲೇಟ್ ವಿದ್ಯಾರ್ಥಿ ಮ॥ ಎಚ್. ಸುಬ್ಬಣ್ಣನವರು ಪ್ರಕೃತದಲ್ಲಿ ನಡೆಯುತ್ತಿರುವ ಯುದ್ಧದಿಂದ ನಮಗುಂಟಾಗಿರುವ ಅನಾನುಕೂಲಗಳನ್ನೂ ಸರ್ಕಾರದವರು ಮಾಡುತ್ತಿರುವ ಸೌಕರ್ಯಗಳನ್ನೂ ಈ ಸಮಯದಲ್ಲಿ ಸತ್ಪ್ರಜೆಗಳಾದ ನಾವುಗಳು ತನುಮನೋಧನಗಳನ್ನು ಅರ್ಪಿಸಿ ನಮ್ಮ ಕರ್ತವ್ಯವನ್ನುನೆರವೇರಿಸಿ ಕೃತಕೃತ್ಯರಾಗಬೇಕೆಂದು ಉಪನ್ಯಾಸಗಳನ್ನು ಮಾಡಿದರು. ಅನಂತರ ಸ್ಕೂಲ್ ೧ನೇ ಅ॥ ಮಾ॥ ಮ॥ ವಿ. ಶ್ರೀಕಂಠಯ್ಯನವರು ನಮ್ಮ ಶ್ರೀಮಾನ್ ಚಕ್ರವರ್ತಿಯವರಾದ ೫ ನೇ ಜಾರ್ಜ್‌ದೊರೆಗಳವರ ಜನನಾದಿಯಾಗಿ ತಹಲ್‌ವರೆಗಿನ ಚರಿತ್ರಾಮೃತವನ್ನು ಸಭಿಕರಿಗೆ ಪಾನಮಾಡಿಸಿದ್ದಲ್ಲದೆ ಬ್ರಿಟಿಷ್‌ಪ್ರಭುತ್ವದಿಂದ ಆಗಿರುವ ಜನೋಪಕಾರಗಳನ್ನು ತಿಳಿಯಪಡಿಸಿದರು. ಸ್ಕೂಲ್ ೧ನೇ ಅ॥ ಮಾ॥ ಮ॥ ಹೆಚ್. ಸಿ. ರಂಗಸ್ವಾಮಯ್ಯನವರು ಮನುಷ್ಯರಿಗೂ, ಇತರಪ್ರಾಣಿಗಳಿಗೂ ಇರತಕ್ಕ ತಾರತಮ್ಯವನ್ನೂ ನೈಜವಾದ ಮನುಷ್ಯತ್ವವು ಉಂಟಾಗಲು ಭಗವನ್ನಿಯಮಿತವಾದ ವಿದ್ಯೆಯೇ ಮುಖ್ಯಕಾರಣವೆಂತಲೂ ಸದರಿ ವಿದ್ಯಾಭ್ಯಾಸಕ್ಕೆ ಈಗಿನ ಪ್ರಭುತ್ವದಿಂದುಂಟಾಗಿರುವ ಫಲಗಳನ್ನು ಕುರಿತು ಉಪನ್ಯಾಸಮಾಡಿದರು. ೨ನೇ ಅ॥ ಮಾ॥ ಮ॥ ಪುಟ್ಟಶೆಟ್ಟರು ಈ ಊರಿಗೆ ಪ್ರಥಮದಲ್ಲಿ ಸ್ಕೂಲ್ ಏರ್ಪಡಿಸಿದಾಗ್ಯೆ ಸಹಾಯಮಾಡಿದ ಮೇಲೆಕಂಡ ಅಧ್ಯಕ್ಷರಾದ ಮ॥ ಸಾಹುಕಾರ್ ಬಸವಲಿಂಗಪ್ಪನವರು ಮತ್ತು ಯಜಮಾನ್ ಕಾಳಪ್ಪನವರು ಮುಂತಾದ ಮಹನೀಯರುಗಳ ಉದಾರವಾದ ಧರ್ಮಗುಣವನ್ನು ಶ್ಲಾಘಿಸಿ ಮುಂದೆಯೂ ಉಚಿತರೀತಿಯಲ್ಲಿ ಸಹಾಯಮಾಡಿ ಸ್ಕೂಲನ್ನು ಅಭಿವೃದ್ಧಿಗೆತಂದು ಕೀರ್ತಿಯನ್ನು ಹೊಂದಬೇಕೆಂದು ಉಪನ್ಯಾಸಮಾಡಿದರು. ಅಷ್ಟರಲ್ಲಿ ರಾತ್ರಿ ೮ ಘಂಟೆಯಾದುದರಿಂದ ಬೇರೆ ಕೆಲವು ಮಹನೀಯರುಗಳು ಉಪನ್ಯಸಿಸಬೇಕಾದ ವಿಷಯಗಳನ್ನು ನಿಲ್ಲಿಸಿ ಸ್ಕೂಲ್ ಹೆ॥ರವರು ಎದ್ದುನಿಂತು ಮೇಲೆಕಂಡ ಉಪನ್ಯಾಸಗಳನ್ನು ನಡಿಸಿದವರ ವಿಚಾರದಲ್ಲಿ ಉಚಿತರೀತಿಯಾದ ಮರ್ಯಾದಾವಚನಗಳಿಂದ ಪ್ರೋತ್ಸಾಹಿಸಿದ್ದಲ್ಲದೆ ನಾವುಗಳೂ,ವಿದ್ಯಾರ್ಥಿಗಳೂ, ಗ್ರಾಮವಾಸಿಗಳೂ ನಾಗರಿಕರಾಗಬೇಕಾದರೆ ಬರಬರುತ್ತಾ ನಮ್ಮ ಜ್ಞಾನವು ಅಭಿವೃದ್ಧಿಗೆ ಬರಬೇಕೆಂದೂ ಇದಕ್ಕಾಗಿ ನಾವೆಲ್ಲರೂ ಹೀಗೆಯೇ ತಿಂಗಳಿಗೊಂದಾವೃತ್ತಿಯಾದರೂ ಸಭೆಸೇರಿ ಉಪನ್ಯಾಸಗಳನ್ನು ಮಾಡಬೇಕೆಂದೂ, ಇದಕ್ಕೆ ಸಾಧಕವಾಗಿ ಒಂದು ವಾಚಕಶಾಲೆಯು ಅಗತ್ಯವೆಂತಲೂ ಅದರಿಂದುಂಟಾಗಬಹುದಾದ ಪ್ರಯೋಜನಗಳನ್ನು ವಿವರಿಸಿ ಹೇಳಿದ್ದರಮೇಲೆ ಸಭಿಕರು ಅನುಮೋದಿಸಿದ್ದಲ್ಲದೆ ಒಂದೆರಡು ವಾರದಲ್ಲೇ ಪುನಃ ಸಭೆಸೇರಿ ವಾಚಕಶಾಲೆಯನ್ನು ಸ್ಥಾಪಿಸುವುದಾಗಿ ವಾಗ್ದಾನಮಾಡಿದರು. ಅನಂತರ ಬಾಲಕಬಾಲಿಕೆಯರಿಂದ ಶ್ರೀಮಾನ್ ೫ ನೇ ಜಾರ್ಜ ಸಾರ್ವಭೌಮರವರ ಶ್ರೇಯಃಪ್ರಾರ್ಥನೆಯು ವಾದ್ಯಘೋಷದೊಡನೆ ಗಾನಮಾಡಲ್ಪಟ್ಟಿತು. ಅನಂತರ ನೆರೆದಿದ್ದವರೆಲ್ಲರಿಗೂ ಗಂಧಪುಷ್ಪ ಫಲಹಾರ ತಾಂಬೂಲಾದ್ಯುಪಚಾರಗಳು ಸಲ್ಲಿಸಲ್ಪಟ್ಟ ಬಳಿಕ ಬ್ರಿಟಿಷ್ ಪತಾಕೆಗೆ ಬಾಲಕರು ಸೆಲ್ಯೂಟನ್ನೂ ಮತ್ತು ಸರ್ವರೂ ವಂದನೆಗಳನ್ನೂ ಮಾಡಿ ಶ್ರೀಮಾನ್ ಚಕ್ರವರ್ತಿಯವರಿಗೆ ಮಂಗಳವಾಗಲೆಂದೂ ಪ್ರಕೃತದಲ್ಲಿ ಉಂಟಾಗಿರುವ ಯುದ್ಧ[illegible]ಜಯವುಂಟಾಗಿ ಆ ಚಂದ್ರಾರ್ಕವಾಗಿ ರಾಜ್ಯಪರಿಪಾಲಿಸಲೆಂದೂ ಹಾಡಿ ಕರತಾಡನ ಮುಂತಾದ ಜಯಘೋಷದೊಡನೆ ಸಭೆಯನ್ನು ಪೂರ್ತಿಮಾಡಿ ಎಲ್ಲರೂ ತಮ್ಮ ನಿವಾಸಗಳಿಗೆ ತೆರಳಿದರು.

ಪ್ರತ್ಯಕ್ಷದರ್ಶಿ.

ವಿಜ್ಞಾಪನೆ.

ಈ ಸಮಯ ಬಿಡಬೇಡಿರಿ. ಮುಂದೆ ದೊರೆಯಲಾರದು. ಮೊಳಕಾಲ್ಮೂರಿನ ಪ್ರಸಿದ್ಧವಾದ ರೇಶ್ಮೆಯವಸ್ತ್ರಗಳು ಬೇಕೋ? ಬೆಲೆಸುಲಭ! ಬಣ್ಣ ಗ್ಯಾರಂಟಿಯಾದದ್ದು. ಒಂದು ಸಲ ತರಿಸಿನೋಡಿರಿ !! ನಮ್ಮಲ್ಲಿ ಹೊದಿಯುವ ವಸ್ತ್ರಗಳೂ, ಮೊಗುಟಗಳೂ, ಸೀರೆಗಳೂ, ನಡಕಟ್ಟುಗಳೂ, ಲಿಂಗದವಸ್ತ್ರಗಳೂ, ಕೈ ವಸ್ತ್ರಗಳೂ ಬಹಳ ಚೆನ್ನಾಗಿ ಎಲ್ಲಾ ರಂಗಿನಲ್ಲಿಯೂ ತಯಾರಾಗುತ್ತವೆ. ನಾವು ಮೈಸೂರು, ಮದ್ರಾಸು ಸೀಮೆಗಳ ಎಲ್ಲಾ ಭಾಗಕ್ಕೂ ನಮ್ಮ ಮಾಲನ್ನು ರವಾನಿಸುತ್ತೇವೆ. ನಮ್ಮ ಮಾಲುಗಳಿಗೆ ಬಹುಮಾನಗಳೂ, ಮೆಡಲುಗಳೂ, ಬಂದಿವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಹಿಮಂತಋತುವಿನ ದರಗಳು. ೧ನೆ ನಂ ವಸ್ತ್ರಗಳು ತೊಲೆ ೧ಕ್ಕೆ ೦-೩-೦. ೨ನೆ ನಂ. ವಸ್ತ್ರಗಳು ತೊಲೆ ೧ಕ್ಕೆ ೦-೬-೯. (ಮೊಗುಟ, ಅರಳೆಪೇಟೆ ಸೀರೆಗಳೂ, ನಡಕಟ್ಟು, ಲಿಂಗದವಸ್ತ್ರಗಳು) ೧ನೆ ನಂ. ಪಾಲು ತೊಲೆ ೧ಕ್ಕೆ ೦-೮-೦. ೨ನೆ ನಂ. ಮಾಲು ತೊಲೆ ೧ಕ್ಕೆ ೦-೩-೬. ನಮ್ಮವಿಳಾಸ: —

6 ಎಂ. ಎಸ್. ಮಲಕಣ್ಣ, ಮತ್ತು ಬ್ರದರ್ಸ್,
ರೇಶ್ಮೆ ಜವಳಿ ವ್ಯಾಪಾರಿಗಳು. ಪೋಸ್ಟ್ ಮೊಳಕಾಲ್ಮೂರು.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ
ಧಾತುಪೌಷ್ಟಿಕ ಲೇಹವು.
2

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪಿತ್ತೋದ್ರೇಕವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವವರು, ಮೇಹಸಂಬಂಧದ ರೋಗವಿದ್ದವರು, ಧಾತುಪೋಗುವವರು, ಉಷ್ಣರೋಗವುಳ್ಳವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ,ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿಗುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲಿಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲಿಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ —ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ. ಜಿಲ್ಲ ಉತ್ತರಕನಡಾ

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ಸ್ವಾಗತಗಳಸಹಿತ ಆದ ಸಮಾರಂಭ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೊ (ರಾವಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವಿರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೊ ಸಿಕ್ಕುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.

ಹೊಸಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವ ಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಈಪ್ರಕಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ॥।= , ೧, ೧। ಪ್ರಕಾರ, ಮತ್ತೂ ಬೆಳ್ಳಿಯದು ರು ೧॥ ರೋಲ್ಡ್ ಗೋಲ್ಡು ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨।॥ ರೂ.

ಪರಊರಿಗೆ ಏಜೆಂಟರು ಬೇಕಾಗಿರುತ್ತಾರೆ ಅರ್ದಾಣಿ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ

ನಮ್ಮವಿಳಾಸ— ಗಂಗಪ್ಪಾ ಜೇರಿಗೆ,
37 ಆರ್ಟಿಸ್ಟ್ ಸೊಲ್ಲಾಪುರ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ
ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂ
ಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು
14 ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘುಮಘುಮಿಸುವಂತೆ ಮಾಡುವುವು.

ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರರಜ್ವರ ನಾಲ್ಕರಜ್ವರ- ಮಲೇರಿಯಾಜ್ವರ- ತಲೆನೋವು- ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳೆತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ ಛಾರ್ಜ ಪ್ರತ್ಯೇಕ.

ಅಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಕೆ, ಮಲಬಂಧ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತತ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜ ಪ್ರತ್ಯೇಕ.

ವಿಳಾಸ— ಬಿ ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ಡಿ॥

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು. 33

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊತೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೪ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಸ್ಪೂಂದು ಬುದ್ದಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುದ್ದಿಯ ಬೆಲೆ ೧—೦—೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬಹುಮಾನ! ಶ್ರೀ ಬಹುಮಾನ !!
ಅತ್ಯಾಶ್ಚರ್ಯಕರವಾದ ಬಹುಮಾನ.
೨೪ ಸಾವಿರ ರೂಪಾಯಿಗಳು ಹಂಚಲ್ಪಡುವವು
ದಿವ್ಯೌಷಧ ಬಳ್ಳಾರಿ. ಸುಪ್ರಸಿದ್ಧೌಷಧ
ಸರ್ವಜನಮನೋಲ್ಲಾಸಿನಿ ಅಂಡ್ ಕೋ ಇವರ
(• ನಾರಸಿಂಹಚೂರ್ಣವು •)
8

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಜವಾದುದಷ್ಟೆ. ಆದರೆ ಅನೇಕ ದುರ್ವರ್ತನಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವುವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನ ಕಣ್ಣಾರ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವುವಿಧ ಔಷಧಗಳನ್ನು ವಿಶೇಷವಾದ ಬೆಲೆಯನಿಟ್ಟು ವಿಕ್ರಯಿಸಿದರು ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವದು ವಿಷಾದಕರವಾಗಿರುವದು. ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿ (ನಾರಸಿಂಹಚೂರ್ಣವು) ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ, ಅನೇಕತರಹೆಯ ಮೇಹರೋಗಗಳು, ಪಾಂಡುರೋಗ, ಪೀನಸ, ಹದಿನೆಂಟು ಬಗೆಯಾದ ಕುಷ್ಠಗಳು, ಎಂಟುವಿಧ ಉದರರೋಗಗಳು, ಭಗಂಧರವು, ಮೂತ್ರಕೃಛ್ರವು, ಗೃಧ್ರಸೀವಾತವು, ಕಾಮಿಲೆ, ಕ್ಷಯವು ಮಹಾಶ್ವಾಸಗಳು, ದಾರುಣವಾದ ವಿದುಬಗೆಯಾದ ಕಾಸೆಗಳು, ಎಂಭತ್ತುವಿಧಗಳಾದ ವಾತರೋಗಗಳು, ನಲವತ್ತು ಬಗೆಯಾದ ಪಿತ್ತಗಳು, ಇಪ್ಪತ್ತು ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಸಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ ಚಿನ್ನದಂಥಾ ಕಾಂತಿಯು, ಸಿಹ್ಮನ ತೆ ಪರಾಕ್ರಮವು, ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯು ಅತ್ಯಧಿಕ ವೀರ್ಯವೃದ್ಧಿಯು ನೃಸಿಹ್ಮನಿಗೆ ಸಮಾನರಾದ ಮಕ್ಕಳನ್ನು ಪಡೆಯುವಬಲವೂ ಉಂಟಾಗುವುದು ಇದರಲ್ಲಿ ಯಾವ ವಿಧವಾದರಸಗಳಾಗಲಿ ಮಿಶ್ರವಾಗಿಲ್ಲ, ಇನ್ನಾವ ದೋಷಗಳೂ ಇಲ್ಲ. ನಿರ್ದುಷ್ಟವಾದದ್ದು, ಫಕ್ತವನಸ್ಪತಿಗಳಿಂದಲೇ ಸಿದ್ಧಮಾಡಿದದಿವ್ಯವಾದ ಔಷಧ. ಅನೇಕ ಪಂಡಿತರು, ಧನಿಕರು' ಸರ್ಟಿಫಿಕೇಟುಗಳನ್ನು ಕೊಟ್ಟಿರುವರು.

೧೪ ದಿನ ಉಪಯೋಗಕ್ಕೆಬರುವ ಡಬ್ಬಿ ೧ ಕ್ಕೆ ಬೆಲೆ ರೂ. ೧—೦—೦

—(ಬಹುಮಾನಗಳನ್ನು ಹಂಚುವ ವಿಧಾನ)—

೧ ದರ್ಜ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೧೦೦೦೦ ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೬೦೦೦ ರೂ. ೩ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೪೦೦೦ ರೂ. ೨ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೩೦೦೦ ರೂ. ೧ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ೨೦೦೦ ರೂ.

೧೯೧೪ ನೇ ಜುಲೈ ೧ ನೇ ತೇದಿ ಮೊದಲು ೧೯೧೫ ನೇ ಜುಲೈ ೧ ತೇದಿಯವರಿಗೂ ಈ ಔಷದವು ಒಂದು ಲಕ್ಷ ಡಬ್ಬಿಗಳು ಖರ್ಚಾದಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ ಒಂದುಪಕ್ಷದಲ್ಲಿ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ವಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡಿಯುವದಲ್ಲದೆ ಬಹುಮಾನವನ್ನು ಸಹಾ ಹೊಂದವದಕ್ಕೆ ಅರ್ಹನಾಗಿರುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರು ಸಂಶಯವಿಲ್ಲ. ಬಹುಮಾನದ ಮೊತ್ತವು ನಿಷ್ಪಕ್ಷಪಾತವಾಗಿ ಒಂದೇ ಸಮವಾಗಿ ಹಂಚಲ್ಪಡುವವು. ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಕುಹಕತನವು ಇಲ್ಲ, ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರ ಮಾತುಗಳಿಗೆ ನಿಗಾ ಕೊಡಲಾಗದು, ಜಾಗ್ರತೆ ತರಿಸಿಕೊಳ್ಳಿರಿ ಔಷಧದ ಗುಣವನ್ನು ಪರೀಕ್ಷಿಸಿರಿ ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇದಲ್ಲದೆ ನಮ್ಮಲ್ಲಿ ಇನ್ನು ಅನೇಕತರಹೆಯ ಔಷಧಗಳು ಸಿಗುತ್ತವೆ. ರೋಗದಲಕ್ಷಣವನ್ನು ತಿಳಿಸಿದರೆ ಅಮೂಲ್ಯವಾದ ಮತ್ತು ಗುಣಕಾರಿಗಳಾದ ಔಷಧಗಳನ್ನು ಕಳುಸುವೆವು.

ಇದರ ಅನುಪಾನ ಪತ್ರಿಕೆಯನ್ನು ಬಹುಮಾನದ ಟಿಕೇಟನ್ನು ಡಬ್ಬಿಸಂಗಡ ಕಳಿಸುವೆವು. ನಮ್ಮ ಕಂಪೆನಿಯ ಕಾಶಿ ವಿಶ್ವನಾಥ ಮಾರ್ಕು ಇಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು.

ನಮ್ಮ ಅಡ್ರೆಸ್ಸು,
ಸರ್ವಜನಮನೋಲ್ಲಾಸಿನಿ ಅಂಡ್ ಕೋ ಬಳ

ದಿ ಜನರಲ್ ಏಜೆನ್ಸಿ, ಮೈಸೂರು.

ಕಾದಂಬರಿಗಳು:— ಚಂಡಮಾರುತ ೦-೨-೦; ಚರಿತಾಮೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಪೀಟರಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಮಹಾಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಆನಂದಮಠ ೧-೦-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦.

66

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೨-೦-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹ ಧೂಪರ್ಟಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ ಎಲ್. ಉಪಾಧ್ಯಾಯ, ಅಂಡ್ ಸನ್ಸ್
ಸುಗಂಧಕಾರಿ, ಮೈಸೂರು

35

ನ್ಯಾಯದರ್ಪಣ.

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿಇರುತ್ತವೆ. ಬೆಲೆ ರೂ. 1-8-0. ವಿ. ಪಿ. ಮೂಲ್ಕ 1-12-0.

ಎಂ. ಎಸ್. ನಂಜಪ್ಪನವರು,
48 ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಲೋಕಪ್ರಸಿದ್ಧವಾದ ಪಂಜಾಸಾಲಾಮಿಸ್ರಿ ಮುರಬ್ಬಾ.

7

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವವರನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರಾಗುವಮಾಡಿರುವ „ ಪಂಜಾ ಸಾಲಾಮಿಸ್ರೀ ಮುರಬ್ಬಾವನ್ನು " ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕೆಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕೆಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳಿಗೆಡ್ಡೆ, ಶಾವುಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾ ಸಾಲಾಮಿಸ್ರಿಯೋ ಅಥವಾ ಬೇರೆ ತರಹಾದ್ದೋ ಎಂಬುದು ತಿಳಿದುಬರುತ್ತೆ.

- ಪಂಜಾ ಸಾಲಾಮಿಸ್ರೀ ಮುರಬ್ಬಾವು—ನೀರಿನಂತಿರುವ ಧಾತುವನ್ನು ಘಟ್ಟಿಪಡಿಸುವುದು.
- ಪಂಜಾ ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿ ಹೋಗುವ ಧಾತುವನ್ನು ನಿಲ್ಲಿಸುವುದು.
- ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವುದು.
- ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಉರಿಯುವುದನ್ನು ನಿಲ್ಲಿಸುವುದು.
- ಪಂಜಾ ಸಾಲಾಮಿಸ್ರೀ ಮುರಬ್ಬಾವು—ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವುದು.
- ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕ್ಷಣಕ್ಷಣಕ್ಕೂ ಮೂತ್ರವಾಗುವುದನ್ನು ನಿಲ್ಲಿಸುವುದು.
- ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೆದುಳಿಗೆ ಬಲವನ್ನು ಕೊಡುವುದು.
- ಪಂಜಾ ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವುದು.
- ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವುದು.
- ಪಂಜಾ ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವುದು.
- ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
- ಪಂಜಾ ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿಕುಶಲತೆಗಳು, ಶರೀರಕಾಂತಿಯು ಕೊಡುವುದು.
- ಪಂಜಾ ಸಾಲಾಮಿಸ್ರೀ ಮುರಬ್ಬಾವು—ತಾಂಬ್ರ ಮತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲ ಬರುವಂತ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವುದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕಂಡುಬರುತ್ತೆ. ೨-೩ ಡಬ್ಬಿಗಳನ್ನು ಉಪಯೋಗಿಸುವದರಿಂದ ಜನ್ಮಾಂತರದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು „ ಪಂಜಾ ಸಾಲಾಮಿಸ್ರಿ " ಅಲ್ಲವೆಂದು ವ್ಯಕ್ತಪಡಿಸುವವರಿಗೆ
೫೦೦ ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ತೆಗೆದುಕೊಳ್ಳಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ಕ್ಕೆ ರೂ. ೨-೦-೦. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ ೬ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೋ, ದೊಡ್ಡಪೇಟೆ, ಬೆಂಗಳೂರು ಸಿಟಿ.
ಡಿ. ಮನ್ನಾಲಾಲ್ ಡಿಲ್ಲೀವೈದ್ಯರು, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾದಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚಿಟಿಕೆ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಧಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೬ ಸೇರಿಗೆ ೨-೮-೦

ಮುಖರೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್
44 ಕೊಳ್ಳೇಗಾಲದ ತಾಲ್ಲೂಕು.

೧೯೧೫ನೆಯ ಇಸವಿ ಜನವರಿ ತಾ॥ ೩ರಿಂದ ೧೯೧೫ನೆಯ ಜನವರಿ ತಾ॥ ೯ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ದ ಪುಷ್ಯ ಬ॥ ಬಿದಿಗೆಯಿಂದ ಪುಷ್ಯ ಬ॥ ಅಷ್ಟಮಿವರೆಗಿನ ಪಂಚಾಂಗ.

ತಾ॥	ವಾರ.	ತಿಥಿ.	ಗಳಿಗೆ.	ನಕ್ಷತ್ರ	ಗಳಿಗೆ.	ಧನು ತೇದಿ
3	1 ಭಾನು	ಬಿದಿ	30-33	ಪುಷ್ಯ	45-10	20
4	2 ಸೋ	ತದಿ	30-4	ಆಶ್ಲೇ	45-46	21
5	3 ಮಂ	ಚ	28-18	ಮಖಾ	45-22	22
6	4 ಬುಧ	ಪಂ	25-26	ಪುಬ್ಬ	43-44	23
7	5 ಗುರು	ಷಷ್ಠಿ	21-36	ಉತ್ತ	42-9	24
8	6 ಶುಕ್ರ	ಸಪ್ತ	16-58	ಹಸ್ತ	37-57	25
9	ಶನಿ	ಅಷ್ಟ	11-46	ಚಿತ್ತ	34-12	26

(1) ಪಾತಾಭಾವಃ, ಮೂಗೂರುರಥಃ. (2) ಸಂಕಟಹರಚ॥ ಕೊತಾರೋತ್ಸವಾರಂಭಃ. (3) ನೂಗೂರು ಬೆಗುರುಕೆಡಿಯುವುದು. (4) ಪಂಚಮಾತಿಥಿಃ. (5) ತಿಥಿದ್ವಯಂ, ದಗ್ಧಯೋಗಃ. (6) ಅಷ್ಟತಿಥಿಃ, ತಿಸ್ರೋಷ್ಟಕಾಃ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

೧೯೧೫ ನೆಯ
ಶ್ರೀ ಸೀತಾರಾಘವ
ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.



ಶಾಯಿ ಇಳಿಯದ ಉತ್ತಮವಾದ ಕಾಗದ ಮುದ್ದಾದ ಮುದ್ರಣ. ಅನೇಕವಾದ ಹೊಸಸಂಗತಿಗಳಿವೆ.

೧ ನಂ—ಸಣ್ಣಸೈಜು ಸಾದಾ	೦-೪-೦
೨ ನಂ—ಪೆನ್ಸಲ್‌ಮುಚ್ಚಳವುಳ್ಳದು	೦-೬-೦
೩ ನಂ—ದೊಡ್ಡಸೈಜು ಸಾದಾ	೦-೬-೦
೪ ನಂ—ಪೆನ್ಸಲ್‌ಮುಚ್ಚಳವುಳ್ಳದು	೦-೮-೦

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ

ಹೆಚ್ಚಾಗಿ ತರಿಸುವವರಿಗೆ ರೂಪಾಯಿ ೧ ಕ್ಕೆ ೦-೨-೦ ಕಮಿಷನ್ ದೊರೆಯುವುದು. ವಿಳಾಸ:—

ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.

BANARAS CITY
KASHI
VISHWESHWAR

15

ದೊಡ್ಡ ಕಂಪನಿ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್ ಯೂ. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ERGISTERED NO.

ಮೈಸೂರ್ ಸ್ಟಾರ್.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ।
ಘನಪಥಕೃತಾವತಾರಾ ಪಕ್ಷ್ಯಜನಹೃತ್ತಮೋಹರಾಜೀಯಾತ್ ॥

ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೧೪—೦

ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ ।
ಶ್ರೀಮಾಭೀಷ್ಮದಶೀಲನಾಕಲಿತಸಾದ್ಗುಣ್ಯಾಲವಾಲಂಪರಂ ।
ಸಿಮ……ತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ ।
ಪ್ರೇಮಂಬೆತ್ತಿ……ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಸಂಪುಟ ೯) ಮೈಸೂರ್ ಸ್ಟಾರ್ ಸರ್ ೧೯೧೫ ನೆಯ ಇಸವಿ ಜನವರಿ ತಾರೀಖು ೧೦ ನೆಯ ಭಾನುವಾರ. (ಸಂಚಿಕೆ

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರಿಗೂ ಸ್ಕೂಲ್‌ಮಾಸ್ಟರ್‌ಗಳಿಗೂ ವಿನಂತಿ.

೧೯೧೫ ನೇ ಇಸ್ವಿಯ ಸಚಿತ್ರ ಕ್ಯಾಲೆಂಡರ್‌ಗಳು ಬಿಕರಿಗೆ ಸಿದ್ಧವಾಗಿವೆ ಕ್ರಯ ೧ ಕ್ಕೆ ೦-೦-೬ ಪೈ. ೫೦ ಕ್ಕೆ ೦-೧೧-೦ಆಣೆ ೧೦೦ ಕ್ಕೆ ೧-೫-೦ ಪ್ಯಾಕಿಂಗ್ ಪೋಸ್ಟೇಜು ಮಾಫಿ ೫೦ ಕ್ಯಾಲೆಂಡರ್‌ಗಳಿಗಿಂತಲೂ ಕಡಿಮೆಯಾಗಿ ಪೋಸ್ಟುಮೂಲ್ಕ ರವಾನಿಸಲಾಗುವುದಿಲ್ಲಾ.

ಈ ಕ್ಯಾಲೆಂಡರಿನಲ್ಲಿ ಇಂಗ್ಲೀಷ್ ಮತ್ತೂ ಕನಡ ತಿಂಗಳೂ, ತಾರೀಖು, ವಾರ, ತಿಥಿ, ನಕ್ಷತ್ರ, ಆಯಾಯ ದಿವಸದ ವಿಶೇಷ ದಿವಸಗಳು ವಿಷಿಷ್ಟ ಹಬ್ಬ ದಿವಸಗಳೂ ಇರುವುದಲ್ಲದೆ ಮೈಸೂರ್ ಮಹಾರಾಜರವರ ಮತ್ತೂ ಯುವರಾಜರವರ ಭಾವಚಿತ್ರಗಳೂ ಮತ್ತೂ ಮೈಸೂರ್ ಸಂಸ್ಥಾನದ ಈಗಿನ ಹೊಸ ಅರಮನೆಯಲ್ಲಿ ನಡೆಯುವ ನವರಾತ್ರೆಮಹೋತ್ಸವದ ದರ್ಬಾರ್ ಸಹಿತ ಇರುವ ನಕ್ಷೆಯನ್ನೂ ಸಹ ನುಣುಪಾದ (ಗ್ಲೇಜ್‌ಪೇಪರ್) ಕಾಗದದಲ್ಲಿ ಅಂದವಾಗಿ ಪ್ರಿಂಟ್‌ಮಾಡಿಸಿ ಮೇಲ್ಕಂಡ ದರದಂತೆ ಬಹುಸುಲಭಬೆಲೆಗೆ ಕೊಡುತ್ತಲಿದ್ದೇವೆ ಯಾದಕಾರಣ ಈ ದಿವಸವೇ ಆರ್ಡರ್ ಕೊಟ್ಟು ತರಿಸಿಕೊಳ್ಳಿರಿ ಸ್ವಲ್ಪ ಪ್ರತಿಗಳುಮಾತ್ರ ಉಳಿದಿವೆ. ಬಿಕರಿಯಾದನಂತರಬರತಕ್ಕ ಆರ್ಡರ್‌ಗಳೆನ್ನೆಲ್ಲಾ ಹೋದವರುಸದಂತೆ ಕ್ಯಾನ್ಸಲ್‌ಮಾಡಲಾಗುತ್ತೆ.

ಈಗತಾನೇ ಸೀಮೆಯಿಂದ ಬಂದಿರತಕ್ಕ ರಖಂವಾರ್ ವಾಚ್‌ಗಳ ಕ್ರಯದಪಟ್ಟಿ.

48



೧ ರಾಸ್ಕೋಪ್ ಸಿರಸ್ಟಂಪೇಟೆಂಟ್‌ಸ್ವಿಸ್‌ಮೇಡ್‌ವಾಚ್	೧ ಕ್ಕೆ	೨-೮-೦
೨ ಗ್ರ್ಯಾಂ ರೈಲ್ವೇ ರೆಗ್ಯುಲೇಟರ್ ವಾಚ್	೧ ಕ್ಕೆ	೩-೮-೦
೩ ಡಿಟೋ ನಮೂನೆ ಚಿಕ್ಕಸೈಜ್ ವಾಚ್	೧ ಕ್ಕೆ	೪-೪-೦
೪ ಡಿಟೋ ಚಿಕ್ಕಸೈಜ್ ಸ್ಪೆಷಲ್ ಸರ್ವೀಸ್‌ವಾಚ್	೧ ಕ್ಕೆ	೫-೮-೦
೪ ಜ್ಯಾಟಲ್‌ವರ್ಮ ಡ್ರುಸ್ ವಾಚೆಂಬ ಅತ್ಯುತ್ತಮವಾದ ಲೀವರ್ ವಾಚ್	೧ ಕ್ಕೆ	೮-೧೨-೦
೫ ಡಿಟೋ ನಮೂನೆ ಕೆಂಪುಗಳನ್ನು ಕೆತ್ತಿರುವ ವಾಚ್	೧ ಕ್ಕೆ	೯-೪-೦
೬ ಪೀಕಾಕ್ ವಾಚೆಂಬ ತೆಳುವಾದ ಮತ್ತೂ ಗ್ಯಾರೆಂಟಿಯಾದ ವಾಚ್ (ಸಾವಿರಾರು ವಿಕ್ರಯ)	೧ ಕ್ಕೆ	೧೦-೮-೦
೭ ವಾರಕ್ಕೊಂದಾವರ್ತಿ ಬೀಗಕೊಡುವ ನಿಕ್ಕಲ್ ಬೆಳ್ಳೀಕೇಸ್ ವಾಚ್	೧ ಕ್ಕೆ	೧೦-೮-೦
೮ ಡಿಟೋ ನಮೂನೆಯಲ್ಲಿ ಅಚ್ಚಬೆಳ್ಳೀಕೇಸಿನ ಚಿಕ್ಕ ಸೈಜ್ ವಾಚ್	೧ ಕ್ಕೆ	೧೫-೪-೦
೯ ೩೦ ಘಂಟೆಗೆ ಒಂದಾವರ್ತಿ ಬೀಗಕೊಡುವ ದೊಡ್ಡ ಬರ್ಮಾಟೈಂಪೀಸ್	೧ ಕ್ಕೆ	೧-೪-೦
೧೦ ಡಿಟೋ ನಮೂನೆ ಅಲಾರಂ ಟೈಂಪೀಸ್	೧ ಕ್ಕೆ	೨-೪-೦
೧೧ ಡಿಟೋ ನಮೂನೆಯಲ್ಲಿ ಘಂಟೆ ನಿಮಿಷ ಸೆಕೆಂಡ್ ತೋರಿಸಿ ಅಲಾರಂ ಇದ್ದು ತಾರೀಖು ಸಹ ತೋರಿಸುವ ದೊಡ್ಡ ಟೈಂಪೀಸ್	೧ ಕ್ಕೆ	೩-೪-೦
೧೨ ಖಾತ್ರಿಯಾದ ಅನ್ಸೋನಿಯಾ „ ಬಿ " ಟೈಂಪೀಸ್	೧ ಕ್ಕೆ	೨-೮-೦
೧೩ ಡಿಟೋ ಕಂಪೆನಿಯ ಅಲಾರಂಟೈಂಪೀಸ್ (ಬಹಳಮಜಬೂತಾದ್ದು) (ಸಾವಿರಾರುವಿಕ್ರಯ)	೧ ಕ್ಕೆ	೩-೮-೦
೧೪ ಅನ್ಸೋನಿಯಾ ಕಂಪೆನಿಯಲ್ಲಿ ತಯಾರಾದ ಘಂಟೆ, ಅರ್ಧ ಘಂಟೆ ಹೊಡೆದು ಅಲಾರಂ ಇರತಕ್ಕ ದೊಡ್ಡಟೈಂಪೀಸ್ (ಅನೇಕಜನ ವಿದ್ಯಾರ್ಥಿಗಳು ಇದನ್ನೇ ಉಪಯೋಗಿಸುತ್ತಲಿದ್ದಾರೆ)	೧ ಕ್ಕೆ	೬-೧೨-೦
೧೫ ಘಂಟೆ, ಅರ್ಧ ಘಂಟೆ ಹೊಡೆಯುವ ಕ್ಯಾರೇಜ್ ಕ್ಲಾಕೆಂಬ ಟೇಬಲ್ ಘಡಿಯಾರ	೧ ಕ್ಕೆ	೪-೧೨-೦
೧೬ ಡಿಟೋ ನಮೂನೆಯಲ್ಲಿ ಘಂಟೆ, ಅರ್ಧಘಂಟೆಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್	೧ ಕ್ಕೆ	೫-೪-೦
೧೭ ಡಿಟೋ ನಮೂನೆಯಲ್ಲಿ ಘಂಟೆಹೊಡೆಯುವದಕ್ಕೆ ಪ್ರತಿಯಾಗಿ ಗಾನಹಾಡುವ ಕ್ಲಾಕ್	೧ ಕ್ಕೆ	೫-೮-೦
೧೮ ಡಿಟೋ ನಮೂನೆಯಲ್ಲಿ ತಾವಿಷ್ಟಪಟ್ಟ ಟೈಂಮಿಗೆ ಕಾಲುಘಂಟೆಕಾಲ ಕರ್ಣಾನಂದವಾಗುವಂತೆ ಮೃದುಮಧುರ ಗಾನಮಾಡತಕ್ಕ ಕ್ಲಾಕ್	೧ ಕ್ಕೆ	೫-೮-೦
೧೯ ಅನ್ಸೋನಿಯಾ ಕಂಪೆನಿಯ ಲಿವರ್ ಕ್ಲಾಕೆಂಬ ಗೋಡೆಗೆ ತಗಲಿಸುವ (೮ ಮೂಲೆಯ) ಅಷ್ಟಕೋಣಾಕೃತಿಯ ಚಿಕ್ಕಸೈಜ್ ಕ್ಲಾಕ್	೧ ಕ್ಕೆ	೬-೮-೦

ರಖಂವಾರ್ ವಾಚ್ ಸರಪಣಿಗಳು.

ನಿಕ್ಕಲ್ ಬೆಳ್ಳಿಯ ವಾಚ್‌ಸರಪಣಿ	೧ ಕ್ಕೆ	೦-೧೨-೦
ಅಚ್ಚಬೆಳ್ಳಿಯ ಜೇಬಿನ ವಾಚ್‌ಸರಪಣಿ	೧ ಕ್ಕೆ	೩-೪-೦
ಅಚ್ಚಬೆಳ್ಳಿಯ ಕೊರಳಸರಪಣಿ	೧ ಕ್ಕೆ	೧-೪-೦
೧೮ ಕ್ಯಾರಟ್ ಚಿನ್ನದ ವಾಚ್‌ಸರಪಣಿ	೧ ಕ್ಕೆ	೫-೮-೦
ವಾಚಿನ ಸರಪಣಿ ತುದಿಯಲ್ಲಿ ಹಾಕುವ ಅಚ್ಚಬೆಳ್ಳಿಯ ಶಾಶ್ವತವಾದ ಕ್ಯಾಲೆಂಡರ್ ಅಂದರೆ ಎಷ್ಟು ವರುಷಗಳ ವರಿಗಾದರೂ ತಾರೀಖು ನೋಡಬಹುದಾದ ಕ್ಯಾಲೆಂಡರ್ ಎಂದೆಂದಿಗೂ ಕೆಡತಕ್ಕದ್ದಲ್ಲಾ	೧ ಕ್ಕೆ	೧-೧೨-೦
ಡಿಟೋ ನಮೂನೆಯಲ್ಲಿ ೧೮ ಕ್ಯಾರಟ್ ಚಿನ್ನದಿಂದ ತಯಾರಿಸಿದ್ದು	೧ ಕ್ಕೆ	೩-೪-೦

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ಒಂದುಸಾರಿ ಶಾಯಿತುಂಬಿದರೆ ೧೦,೦೦೦ ಶಬ್ದಗಳನ್ನು ಬರೆಯಬಹುದಾದ ಲೇಖಣಿಗಳು.

ಪ್ರತಿಯೊಂದಕ್ಕೂ ೧೪ ಕ್ಯಾರಟ್ ಚಿನ್ನದ ನಿಬ್ಬುಹಾಕಿದೆ.

ನೆಪ್ಚೂನ್ ೨೦೦ ನೇ ನಂ. ಪೆನ್	೧ ಕ್ಕೆ	೧-೧೪-೦
ನೆಪ್ಚೂನ್ ೨೫ ನೇ ನಂ. ಪೆನ್	೧ ಕ್ಕೆ	೨-೧೦-೦
ನೆಪ್ಚೂನ್ ೨೧೦ ನೇ ನಂ. ಪೆನ್	೧ ಕ್ಕೆ	೪-೨-೦

ಪ್ರತಿಯೊಂದು ಪೆನ್ ತರಿಸಿ ಕೊಳ್ಳುವರಿಗೂ ೪ ಪದಾರ್ಥಗಳನ್ನು ಮುಫತ್ತಾಗಿ ರವಾನಿಸುತ್ತೇವೆ.

೧ ಪೆನ್‌ಗಳನ್ನಿಡತಕ್ಕ ಸುಂದರವಾದ ಪೆಟ್ಟಿಗೆ ೧.
೨ ಪೆನ್ನಿಗೆ ಶಾಯಿಹಾಕುವ ಗಾಜಿನಕೊಳವೆ ೧.
೩ ಪೆನ್‌ಗಳನ್ನು ಕ್ಲೀನ್‌ಮಾಡುವ ವಿಧಾನ ಮತ್ತೂ ಶಾಯಿಹಾಕುವ ವಿಧಾನ ಪ್ರಿಂಟಾಗಿರುವ ಚೀಟಿ ೧.
೪ ಪೆನನ್ನು ಜೇಬಿಗೆತಗಲಿಸುವ ಸುಂದರವಾದ ಕ್ಲಿಪ್ ೧.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲಿಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ (೨ನೆಯ ಭಾಗ)	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು.

167

ಸಿದ್ಧಾಂತಶಿಖಾಮಣಿ — ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೫೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ — ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೦ ಆಣೆ.

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ಲಲಿತವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦. ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ [illegible] ಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣ[illegible] ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಕ[illegible]

ಸೌಂದರಪುರಾಣಂ— ೧-೩-೦; [illegible] ಕಾ ೬ ಆಣೆ; ಸಟೀಕ ಶತಸೂತ್ರ [illegible] ಕಾಲೋತ್ತರಾಗಮದ ಜ್ಞಾನಪ್ರಸೂನ [illegible] ಟೀಕ) ೬ ಆಣೆ; ಸಟೀಕ [illegible] ಮುಕ್ತಾವಳಿ ೬ ಆಣೆ; [illegible] ಕಂದಂ ೧ ಆಣೆ. [illegible] ನ್ನು [illegible] ವ್ಯಾಖ್ಯ [illegible] ತ್ತಿಸುವರು. [illegible] ರು ಹೊಂದಿಯೇ [illegible] ಗ್ರಂಥ

ದಿ ಜನರಲ್ ಏಜೆನ್ಸಿ, ಮೈಸೂರು.

ಕಾದಂಬರಿಗಳು:— ಚಂಡಮಾರುತ ೦-೨-೦; ಚರಿತಾವೃತಂ ೦-೬-೦; ರಾಜಕಥಾವಲ್ಲರಿ ೦-೬-೦; ಪೀಟರಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೫; ಮಹಾಶ್ವೇತೆ ೦-೬-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 66

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೦-೧೦-೦; ೬-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹ ದೂಪರ್ತಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ ಎಲ್. ಉಪಾಧ್ಯಾಯ, ಅಂಡ್ ಸನ್ಸ್
ಸುಗಂಧಕಾರಿ, ಮೈಸೂರು
35

ನ್ಯಾಯದರ್ಪಣ.

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮಪಂಚಾಯತಿ ಮುನಿಸಿಪಲ್ ಕೋರ್ಟಿನ ಕಾನೂನೂ ಮತ್ತು ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಅಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿರುತ್ತವೆ. ಬೆಲೆ ರೂ. 1-8-0. ವಿ. ಪಿ. ಮೂಲ್ಕ 1-12-0.

ಎಂ. ಎಸ್. ನಂಜಪ್ಪನವರು,
48 ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

ಲೋಕಪ್ರಸಿದ್ಧವಾದ ಪಂಜಾಸಾಲಾಮಿಸ್ರಿ ಮುರಬ್ಬಾ.

7

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ „ಪಂಜಾ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳಿಗೆಡ್ಡೆ, ಶಾಮಗೆಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾ ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುದು ತಿಳಿದುಬರುತ್ತೆ.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ನೀರಿನಂತಿರುವ ಧಾತುವನ್ನು ಘಟ್ಟಿಪಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿ ಹೋಗುವ ಧಾತುವನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಉರಿಯುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕ್ಷಣಕ್ಷಣಕ್ಕೂ ಮೂತ್ರವಾಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೆದುಳಿಗೆ ಬಲವನ್ನು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ತಾಂಬ್ರ ಮತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲ ಬರುವಂತ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವುದು.

ಒಂದು ಡಬ್ಬಿ ಮುರಬ್ಬಾವನ್ನು ೧೬ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕಂಡುಬರುತ್ತೆ. ೨-೩ ಡಬ್ಬಿಗಳನ್ನು ಉಪಯೋಗಿಸುವದರಿಂದ ಜನ್ಮಾಂತರದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು „ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೬ ತೊಲೆ ಮುರಬ್ಬಾವಿನ ಡಬ್ಬಿ ೧ಕ್ಕೆ ರೂ. ೨-೦-೧. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ ೩ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೋ., ದೊಡ್ಡಪೇಟೆ, ಬೆಂಗಳೂರು ಸಿಟಿ.
ಡಿ. ಮನ್ನಾಲಾಲ್ ಡಿಲ್ಲೀವೈದ್ಯರು, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಗಂಧರಾಜ ನಶ್ಯದಪುಡಿ.

ಈ ಪುಡಿಯನ್ನು ಹಾಕಿಕೊಳ್ಳುವದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾದಿದರೂ ತಪ್ಪದೆ ಗುಣವಾಗುತ್ತದೆ ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚಿಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜನ್ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಘಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗನಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲಿ ತೂಕದ ಸೇರಿಗೆ ೧೦ ಆಣೆ ೬ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆ ಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್
44 ಕೊಳ್ಳೇಗಾಲದ ತಾಲ್ಲೂಕು.

೧೯೧೫ ನೇಯ ಮಾಲ್ಯದ ಪಾಕೆಟ್ ಡೈರಿಗಳು

೧೯೧೫ ನೆಯ
ಶ್ರೀ ಸೀತಾರಾಘವ
ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.



ಶಾಯಿ ಇಳಿಯದ ಉತ್ತಮವಾದ ಕಾಗದ ಮುದ್ದಾದ ಮುದ್ರಣ. ಅನೇಕವಾದ ಹೊಸಸಂಗತಿಗಳಿವೆ.

೧ ನಂ—ಸಣ್ಣಸೈಜು ಸಾದಾ	೦-೪-೦
೨ ನಂ—ಪೆನ್ಸಲ್‌ಮುಚ್ಚಳವುಳ್ಳುದು	೦-೫-೦
೩ ನಂ—ದೊಡ್ಡಸೈಜು ಸಾದಾ	೦-೫-೦
೪ ನಂ—ಪೆನ್ಸಲ್‌ಮುಚ್ಚಳವುಳ್ಳುದು	೦-೮-೦

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ.
ಹೆಚ್ಚಾಗಿ ತರಿಸುವವರಿಗೆ ರೂಪಾಯಿ ೧ ಕ್ಕೆ ೦-೨-೦ ಕಮಿಷನ್ ದೊರೆಯುವುದು. ವಿಳಾಸ:—
ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.

15

KASHI VISHWESHWAR
BANARES CITY

ದೊಡ್ಡ ಕಂಪೆನಿ! **ಸೊಗಸಾದ ಸರಕುಗಳು!!**

ಈ ನಮ್ಮ ಕಂಪೆನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್ ಯೂ. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

೧೯೧೫ನೆಯ ಇಸವಿ ಜನವರಿ ತಾ॥ ೩ರಿಂದ ೧೯೧೫ನೆಯ ಜನವರಿ ತಾ॥ ೯ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ಪುಷ್ಯ ಬ॥ ಬಿದಿಗೆಯಿಂದ ಪುಷ್ಯ ಬ॥ ಅಷ್ಟಮಿವರೆಗಿನ ಪಂಚಾಂಗ.

ತಾ॥	ವಾರ.	ತಿ.	ಗಳಿಗೆ.	ನಕ್ಷತ್ರ	ಗಳಿಗೆ.	ಧನು ತೇದಿ
3	1 ಭಾನು	ಬಿದಿ	30-33	ಪುಷ್ಯ	45-10	20
4	2 ಸೋ	ತದಿ	30-4	ಆಶ್ಲೇ	45-46	21
5	3 ಮಂ	ಚ	28-18	ಮಖಾ	45-22	22
6	4 ಬುಧ	ಪಂ	25-26	ಪುಬ್ಬಾ	43-44	23
7	5 ಗುರು	ಷಷ್ಠಿ	21-36	ಉ	42-9	24
8	6 ಶುಕ್ರ	ಸಪ್ತ	16-58	ಹಸ್ತ	37-57	25
9	ಶನಿ	ಅಷ್ಟ	11-46	ಚಿತ್ತ	34-12	26

(1) ಪಾತಾಭಾವಃ, ಮೂಗೂರುರಥಃ. (2) ಸಂಕಟಹರಚ॥ ಕೊಡಾರೋತ್ಸವಾರಂಭಃ. (3) ಮೂಗೂರು ಬಿಗುರುಕಡಿಯುವುದು. (4) ಪಂಚಮಾತಿಥಿಃ. (5) ತಿಥಿದ್ವಯಂ, ದಗ್ಧಯೋಗಃ. (6) ಅಷ್ಟತಿಥಿಃ, ತಿರುವಪ್ಪಕಾಶಃ.

ಮೈಸೂರ್ ವೈ. ಏರೂಪಾಕ್ಷಯ್ಯನವರಿಂದ ಶ್ರೀಕೃಷ್ಣನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ERGISTERED NO. 1

ಮೈಸೂರ್ ಸ್ಟಾರ್.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ।
ಘನಪಥಕೃತಾವತಾರಾ ಪಶ್ಯೇಜ್ಜನಹೃತ್ತಮೋಹರಾಜೀಯಾತ್ ॥
ವಾರ್ಷಿಕ ಚಂದಾ ೧-೦-೦
ಅಂಚೆವೆಚ್ಚ ಸೇರಿ ೧-೧೪-೦

ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ ।
ಶ್ರೀಮಾಭಿಷದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸಿಮಾಂತಯುಕಕ್ಷಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ ।
ಪ್ರೇಮಂಬೆತ್ತಿಳೆಯೊಳ್‌ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಸಂಪುಟ ೯) ಮೈಸೂರ್ ಸ್ಟಾರ್ ಸೆ ೧೯೧೫ ನೆಯ ಇಸವಿ ಜನವರಿ ತಾರೀಖು ೧೦ ನೆಯ ಭಾನುವಾರ. (ಸಂಚಿಕೆ

ಮೈಸೂರ್ ಸ್ಟಾ
ಂಡಲಾದ
ಅಪರ
ನವರಿಗೆ

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜ ಮೊಹಲ್ಲಾ, ಮೈಸೂರು.

ಈ ಪತ್ರಿಕೆಯ ಚಂದಾದಾರರಿಗೂ ಸ್ಕೂಲ್‌ಮಾಸ್ಟರ್‌ಗಳಿಗೂ ವಿನಂತಿ.

೧೯೧೫ ನೇ ಇಸ್ವಿಯ ಸಚಿತ್ರ ಕ್ಯಾಲೆಂಡರ್‌ಗಳು ಬಿಕರಿಗೆ ಸಿದ್ಧವಾಗಿವೆ ಕ್ರಯ ೧ ಕ್ಕೆ ೦-೦-೫ ಪೈ. ೬೦ ಕ್ಕೆ ೦-೧೧-೦ಆಣೆ ೧೦೦ ಕ್ಕೆ ೧-೬-೦ ಪ್ಯಾಕಿಂಗ್ ಪೋಸ್ಟೇಜು ಮಾಫಿ ೬೦ ಕ್ಯಾಲೆಂಡರ್‌ಗಳಿಗಿಂತಲೂ ಕಡಿಮೆಯಾಗಿ ಪೋಸ್ಟುಮೂಲ್ಕ ರವಾನಿಸಲಾಗುವುದಿಲ್ಲಾ.

ಈ ಕ್ಯಾಲೆಂಡರಿನಲ್ಲಿ ಇಂಗ್ಲೀಷ್ ಮತ್ತೂ ಕನಡ ತಿಂಗಳೂ, ತಾರೀಖು, ವಾರ, ತಿಥಿ. ನಕ್ಷತ್ರ, ಆಯಾಯ ದಿವಸದ ವಿಶೇಷ ದಿವಸಗಳು ನಿಷಿಷ್ಟ ಹಬ್ಬ ದಿವಸಗಳೂ ಇರುವುದಲ್ಲದೆ ಮೈಸೂರ್ ಮಹಾರಾಜರವರ ಮತ್ತೂ ಯುವರಾಜರವರ ಭಾವಚಿತ್ರಗಳೂ ಮತ್ತೂ ಮೈಸೂರ್ ಸಂಸ್ಥಾನದ ಈಗಿನ ಹೊಸ ಅರಮನೆಯಲ್ಲಿ ನಡೆಯುವ ನವರಾತ್ರಮಹೋತ್ಸವದ ದರ್ಬಾರ್ ಸಹಿತ ಇರುವ ನಕ್ಷೆಯನ್ನೂ ಸಹ ನುಣುಪಾದ (ಗ್ಲೇಜ್‌ಪೇಪರ್) ಕಾಗದದಲ್ಲಿ ಅಂದವಾಗಿ ಪ್ರಿಂಟ್‌ಮಾಡಿಸಿ ಮೇಲ್ಕಂಡ ದರದಂತೆ ಬಹುಸುಲಭಬೆಲೆಗೆ ಕೊಡುತ್ತಲಿದ್ದೇವೆ ಯಾದಕಾರಣ ಈ ದಿವಸವೇ ಆರ್‌ಡರ್ ಕೊಟ್ಟು ತರಿಸಿಕೊಳ್ಳಿರಿ ಸ್ವಲ್ಪ ಪ್ರತಿಗಳುಮಾತ್ರ ಉಳಿದಿವೆ. ಬಿಕರಿಯಾದನಂತರಬರತಕ್ಕ ಆರ್‌ಡರ್‌ಗಳನ್ನೆಲ್ಲಾ ಹೋದವರುಸುದಂತೆ ಕ್ಯಾನ್ಸಲ್‌ಮಾಡಲಾಗುತ್ತೆ.

ಈಗತಾನೇ ಸೀಮೆಯಿಂದ ಬಂದಿರತಕ್ಕ ರಕಂವಾರ್ ವಾಚ್‌ಗಳ ಕ್ರಯದಪಟ್ಟಿ.

48



೧ ರಾಸ್ಕೋಫ್ ಸಿಲ್ವರ್‌ಪೇಟೆಂಟ್‌ಸ್ವಿಸ್‌ಮೇಡ್‌ವಾಚ್	೧ ಕ್ಕೆ	೨-೮-೦
೨ ಗರ್ಟ್ಯಂ ರೈಲ್ವೇ ರೆಗ್ಯುಲೇಟರ್ ವಾಚ್	೧ ಕ್ಕೆ	೩-೮-೦
೩ ಡಿಟೋ ನಮೂನೆ ಚೆಕ್ಕಸೈಜ್ ವಾಚ್	೧ ಕ್ಕೆ	೪-೪-೦
೪ ಡಿಟೋ ಚೆಕ್ಕಸೈಜ್ ಸ್ಪೆಷಲ್ ಸ್ವಿಸ್‌ವಾಚ್	೧ ಕ್ಕೆ	೬-೮-೦
೪ ಜರ್ಟಲ್‌ಮೆರ್ ಡ್ರಸ್ ವಾಚೆಂಬ ಅತ್ಯುತ್ತಮವಾದ ಲೀವರ್ ವಾಚ್	೧ ಕ್ಕೆ	೮-೧೨-೦
೫ ಡಿಟೋ ನಮೂನೆ ಕೆಂಪುಗಳನ್ನು ಕೆತ್ತಿರುವ ವಾಚ್	೧ ಕ್ಕೆ	೯-೪-೦
೬ ಪೀಕಾಕ್ ವಾಚೆಂಬ ತೆಳುವಾದ ಮತ್ತೂ ಗ್ಯಾರೆಂಟಿಯಾದ ವಾಚ್ (ಸಾವಿರಾರು ವಿಕ್ರಯ)	೧ ಕ್ಕೆ	೧೦-೮-೦
೭ ವಾರಕೊಂದಾವರ್ತಿ ಬೀಗಕೊಡುವ ನಿಕ್ಕಲ್ ಬೆಳ್ಳೀಕೇಸ್ ವಾಚ್	೧ ಕ್ಕೆ	೧೦-೮-೦
೮ ಡಿಟೋ ನಮೂನೆಯಲ್ಲಿ ಅಚ್ಚ ಬೆಳ್ಳೀಕೇಸಿನ ಚೆಕ್ಕಸೈಜ್ ವಾಚ್	೧ ಕ್ಕೆ	೧೬-೪-೦
೯ ೩೦ ಘಂಟೆಗೆ ಒಂದಾವರ್ತಿ ಬೀಗಕೊಡುವ ದೊಡ್ಡ ಬರ್ಮಾಟೈಂಪೀಸ್	೧ ಕ್ಕೆ	೧-೪-೦
೧೦ ಡಿಟೋ ನಮೂನೆ ಅಲಾರಂ ಟೈಂಪೀಸ್	೧ ಕ್ಕೆ	೨-೪-೦
೧೧ ಡಿಟೋ ನಮೂನೆಯಲ್ಲಿ ಘಂಟೆ ನಿಮಿಷ ಸೆಕೆಂಡ್ ತೋರಿಸಿ ಅಲಾರಂ ಇದ್ದು ತಾರೀಖು ಸಹ ತೋರಿಸುವ ದೊಡ್ಡ ಟೈಂಪೀಸ್	೧ ಕ್ಕೆ	೩-೪-೦
೧೨ ಖಾತ್ರಿಯಾದ ಅನ್‌ಸೋನಿಯಾ „ಬಿ" ಟೈಂಪೀಸ್	೧ ಕ್ಕೆ	೨-೮-೦
೧೩ ಡಿಟೋ ಕಂಪೆನಿಯ ಅಲಾರಂಟೈಂಪೀಸ್ (ಬಹಳಮಜಬೂತಾದ್ದು) (ಸಾವಿರಾರುವಿಕ್ರಯ)	೧ ಕ್ಕೆ	೩-೮-೦
೧೪ ಅನ್‌ಸೋನಿಯಾ ಕಂಪೆನಿಯಲ್ಲಿ ತಯಾರಾದ ಘಂಟೆ, ಅರ್ಧ ಘಂಟೆ ಹೊಡೆದು ಅಲಾರಂ ಇರತಕ್ಕ ದೊಡ್ಡಟೈಂಪೀಸ್ (ಅನೇಕಜನ ವಿದ್ಯಾರ್ಥಿಗಳು ಇದನ್ನೇ ಉಪಯೋಗಿಸುತ್ತಲಿದ್ದಾರೆ)	೧ ಕ್ಕೆ	೫-೧೨-೦
೧೫ ಘಂಟೆ, ಅರ್ಧ ಘಂಟೆ ಹೊಡೆಯುವ ಕ್ಯಾರೇಜ್ ಕ್ಲಾಕೆಂಬ ಟೇಬಲ್ ಘಡಿಯಾರ	೧ ಕ್ಕೆ	೪-೧೨-೦
೧೬ ಡಿಟೋ ನಮೂನೆಯಲ್ಲಿ ಘಂಟೆ, ಅರ್ಧಘಂಟೆಹೊಡೆದು ಅಲಾರಂ ಸಹ ಇರತಕ್ಕ ಕ್ಲಾಕ್	೧ ಕ್ಕೆ	೬-೪-೧
೧೭ ಡಿಟೋ ನಮೂನೆಯಲ್ಲಿ ಘಂಟೆಹೊಡೆಯುವದಕ್ಕೆ ಪ್ರತಿಯಾಗಿ ಗಾನಪಾಡುವ ಕ್ಲಾಕ್	೧ ಕ್ಕೆ	೬-೮-೦
೧೮ ಡಿಟೋ ನಮೂನೆಯಲ್ಲಿ ತಾವಿಷ್ಟಪಟ್ಟ ಟೈಂಮಿಗೆ ಕಾಲುಘಂಟೆಕಾಲ ಕರ್ಣಾನಂದವಾಗುವಂತೆ ಮೃದುಮಧುರ ಗಾನಮಾಡತಕ್ಕ ಕ್ಲಾಕ್	೧ ಕ್ಕೆ	೬-೮-೦
೧೯ ಅನ್‌ಸೋನಿಯಾ ಕಂಪೆನಿಯ ಲಿವರ್ ಕ್ಲಾಕೆಂಬ ಗೋಡೆಗೆ ತಗಲಿಸುವ (೮ ಮೂಲೆಯ) ಅಷ್ಟಕೋಣಾಕೃತಿಯ ಚೆಕ್ಕಸೈಜ್ ಕ್ಲಾಕ್	೧ ಕ್ಕೆ	೫-೮-೦

ರಕಂವಾರ್ ವಾಚ್ ಸರಪಣಿಗಳು.

ನಿಕ್ಕಲ್ ಬೆಳ್ಳಿಯ ವಾಚ್‌ಸರಪಣಿ	೧ ಕ್ಕೆ	೦-೧೨-೦
ಅಚ್ಚಬೆಳ್ಳಿಯ ಜೇಬಿನ ವಾಚ್‌ಸರಪಣಿ	೧ ಕ್ಕೆ	೩-೪-೦
ಅಚ್ಚಬೆಳ್ಳಿಯ ಕೊರಳಸರಪಣಿ	೧ ಕ್ಕೆ	೧-೪-೦
೧೮ ಕ್ಯಾರಟ್ ಚಿನ್ನದ ವಾಚ್‌ಸರಪಣಿ	೧ ಕ್ಕೆ	೬-೮-೦
ವಾಚಿನ ಸರಪಣಿ ತುದಿಯಲ್ಲಿ ಹಾಕುವ ಅಚ್ಚಬೆಳ್ಳಿಯ ಶಾಶ್ವಿತವಾದ ಕ್ಯಾಲೆಂಡರ್ ಅಂದರೆ ಎಷ್ಟು ವರುಷಗಳ ವರಿಗಾದರೂ ತಾರೀಖು ನೋಡಬಹುದಾದ ಕ್ಯಾಲೆಂಡರ್ ಎಂದೆಂದಿಗೂ ಕೆಡತಕ್ಕದ್ದಲ್ಲಾ	೧ ಕ್ಕೆ	೧-೧೨-೦
ಡಿಟೋ ನಮೂನೆಯಲ್ಲಿ ೧೮ ಕ್ಯಾರಟ್ ಚಿನ್ನದಿಂದ ತಯಾರಿಸಿದ್ದು	೧ ಕ್ಕೆ	೩-೪-೦

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ಒಂದುಸಾರಿ ಶಾಯಿತುಂಬಿದರೆ ೧೦,೦೦೦ ಶಬ್ದಗಳನ್ನು ಬರೆಯಬಹುದಾದ ಲೇಖಣಿಗಳು.

ಪ್ರತಿಯೊಂದಕ್ಕೂ ೧೪ ಕ್ಯಾರಟ್ ಚಿನ್ನದ ನಿಬ್ಬು ಹಾಕಿದೆ.

ನೆಪ್ಚೂನ್ ೨೦೦ ನೇ ನಂ. ಪೆನ್	೧ ಕ್ಕೆ	೧-೧೪-೦
ನೆಪ್ಚೂನ್ ೨೬ ನೇ ನಂ. ಪೆನ್	೧ ಕ್ಕೆ	೨-೧೦-೦
ನೆಪ್ಚೂನ್ ೨೧೦ ನೇ ನಂ. ಪೆನ್	೧ ಕ್ಕೆ	೪-೨-೦

ಪ್ರತಿಯೊಂದು ಪೆನ್ ತರಿಸಿ ಕೊಳ್ಳುವರಿಗೂ ೪ ಪದಾರ್ಥಗಳನ್ನು ಮುಫತ್ತಾಗಿ ರವಾನಿಸುತ್ತೇವೆ.

೧ ಪೆನ್‌ಗಳನ್ನಿಡತಕ್ಕ ಸುಂದರವಾದ ಪೆಟ್ಟಿ ೧.
೨ ಪೆನ್ನಿಗೆ ಶಾಯಿಹಾಕುವ ಗಾಜಿನಕೊಳವೆ ೧.
೩ ಪೆನ್‌ಗಳನ್ನು ಕ್ಲೀನ್‌ಮಾಡುವ ವಿಧಾನ ಮತ್ತೂ ಶಾಯಿಹಾಕುವ ವಿಧಾನ ಪ್ರಿಂಟಾಗಿರುವ ಚೀಟಿ ೧.
೪ ಪೆನನ್ನು ಜೇಬಿಗೆತಗಲಿಸುವ ಸುಂದರವಾದ ಕ್ಲಿಪ್ ೧.

ವಿಳಾಸ— ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧-೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಶಿವಪೂಜಾವಿಧಿಃ	೦-೮-೦
ಚಾರುಶೀಲೆಚರಿತ್ರೆ	೦-೬-೦
ಸಟೀಕ ನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೫-೦
ವಿವೇಕಮಂಜರಿ [೨ನೆಯ ಭಾಗ]	೦-೩-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆಯವೆಚ್ಚ ಬೇರೆ.

ಹೊಸಪುಸ್ತಕಗಳು.

167

ಸಿದ್ಧಾಂತಶಿಖಾಮಣಿ— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೬೬ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೦ ಆಣೆ.

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ವಿಸ್ತಾರವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೇಕರಣ-ಕಾಲಜ್ಞಾನ-ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜ-ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦. ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ್ರಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೫ ಆಣೆ; ಸಟೀಕ ಶತಸೂತ್ರರತ್ನ ೫ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೫ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೫ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಅರ್ಥಸಾಧಕ ಪತ್ರಿಕೆ.

ಇದು ಮೈಸೂರು ಸಂಪದಭ್ಯುದಯ ಸಭೆಯಿಂದ ಪರಿಪೋಷಿತವಾದ ಸಚಿತ್ರ ಮಾಸಪತ್ರಿಕೆ; ಇಂಗ್ಲೀಷ್ ಕನ್ನಡ—ಈ ಎರಡು ಭಾಷೆಗಳಲ್ಲಿಯೂ ಬೇರೆಬೇರೆ ಮುದ್ರಿತವಾಗುವುದು. ಪ್ರತಿಯೊಂದರಲ್ಲಿಯೂ ಕ್ರೌನ್ ಕಾಲುಗಜದ ೪೦ ಪುಟಗಳಿರುವುವು. ಇದರ ಮೊದಲನೆಯ ಸಂಚಿಕೆಯು ೧೯೧೫ನೆಯ ಜನವರಿಯಲ್ಲಿ ಹೊರಡುತ್ತದೆ.

ಪತ್ರಿಕೆಯಲ್ಲಿ ಸಂಪತ್ಸಾಧಕವಿಷಯಗಳೇ ಪ್ರಕಟವಾಗುವುವು. ಮುಖ್ಯವಾದ ಸಂಗತಿಗಳು ಯಾವುವೆಂದರೆ:—

(೧) ಸಂಪಾದಕೀಯ ಟಿಪ್ಪಣಗಳು—ಈ ಕಾ[illegible]ಲವಿನಲ್ಲಿ ಪತ್ರಿಕಾಕರ್ತರಿಂದ ವಿವಿಧವಿಷ[illegible]ಗಳು ಚರ್ಚಿಸಲ್ಪಡುವುವು.

(೨) ಸ[illegible]ತಂತ್ರ ಲೇಖನಗಳು—ಈ ಲೇಖನಗಳನ್ನು, ಆರ್ಥಿಕ (ಸಂಪದಭಿವರ್ಧಕ) ವಿಷಯಗಳಲ್ಲಿ ಪ್ರತ್ಯಕ್ಷವಾದ ಅನುಭವವುಳ್ಳ ಲೇಖಕರು, ನಮ್ಮ ದೇಶಕಾಲಸ್ಥಿತಿಗಳಿಗೆ ಅನುಗುಣವಾಗಿರುವಂತೆ, ಬರೆಯುವರು.

(೩) (i) ಕೈಗಾರಿಕೆ ಮತ್ತು ವಾಣಿಜ್ಯ.—ಇವುಗಳ ಈಗಿನ ಸ್ಥಿತಿ, ತಿದ್ದುಪಾಟಿನ ಕ್ರಮಗಳು, ವ್ಯಾಪಾರದ ಮಾರ್ಗಗಳು, ಮತ್ತೂ "ಜಾಯಿಂಟ್ ಸ್ಟಾಕ್" ಎಂಬ ಸಂಯುಕ್ತ ಮೂಲಧನ ಸಂಘದ ಆಡಳಿತ—ಇವೇ ಮೊದಲಾದ ವಿಷಯಗಳು.

(ii) ವ್ಯವಸಾಯ—ಇದಕ್ಕೆ ಅನ್ವಯಿಸುವ ನವೀನ ವಿಷಯಗಳು, ಮತ್ತೂ ಕೃಷಿವಿದ್ಯೆ ಮೊದಲಾದ ಸಂಗತಿಗಳು.

(iii) ವಿದ್ಯಾಭ್ಯಾಸ—ಇದರಲ್ಲಿ ವಿದ್ಯಾಭ್ಯಾಸಕ್ರಮ, ಅದರ ಪುರೋವೃದ್ಧಿ—ಇವೇ ಮುಂತಾದ ವಿಚಾರಗಳು.

(iv) ಪರಸ್ಪರ ಸಹಾಯ, ಮತ್ತೂ ಬ್ಯಾಂಕುಗಳಲ್ಲಿ ನಡೆಯುವ ಲೇವಾದೇವಿಗಳ ನಿರ್ವಾಹ.

(v) ಮೇಲ್ಕಂಡವುಗಳಿಗೆ ಸಂಬಂಧಪಟ್ಟ ಆಯಾ ಸ್ಥಿತಿವಿಶೇಷಗಳ ಮತ್ತೂ ಜನಸಾಮಗ್ರಿಗಳ ಮುಖ್ಯವಾದ ಸಂಖ್ಯಾವಿವರಣೆ.

ಇವಲ್ಲದೆ ಪ್ರಜೆಗಳ ಶ್ರೇಯೋಭಿವೃದ್ಧಿಗೆ ಸಾಧಕವಾದ—

೪ ಸಾಮಾಜಿಕ ವಿಚಾರ—ವಿತಂಡವಾದಕ್ಕೆ ಆಸ್ಪದವಿಲ್ಲದ ಲೋಕಾಚಾರ ವಿಷಯಗಳನ್ನು ಮಾತ್ರ ಇದರಲ್ಲಿ ಸೇರಿಸಲಾಗುವುದು.

೫. ನೈರ್ಮಲ್ಯ ಮತ್ತೂ ಆರೋಗ್ಯ—ಮುಖ್ಯವಾಗಿ ಗ್ರಾಮಾಂತರಗಳ ಸ್ಥಿತಿಗಳನ್ನೂ, ಆರೋಗ್ಯಾಭಿವೃದ್ಧಿ ಮಾರ್ಗಗಳನ್ನೂ ಕುರಿತ ಲೇಖನಗಳು ಇದರಲ್ಲಿ ಸೇರುವುವು.

"ಡಿಸ್ಟ್ರಿಕ್ಟು ಮತ್ತೂ ತಾಲ್ಲೂಕು" ಎಂಬ ಪ್ರಕರಣದ ಕೆಳಗೆ ದೇಶದ ಸಂಪದಭಿವೃದ್ಧಿಗಾಗಿ ಮಾಡುವ ಪ್ರಯತ್ನಗಳು, ತತ್ಸಂಬಂಧ ವೃತ್ತಾಂತಗಳು, ಕಾಲಸ್ಥಿತಿಗಳು—ಇವೇ ಮುಂತಾದ ವಿಷಯಗಳನ್ನು ಪ್ರಕಟಿಸಲಾಗುವುದು.

ಅರ್ಥವಿಚಾರಕ್ಕೆ ಸಂಬಂಧಪಡುವ ಗ್ರಂಥಗಳನ್ನು ಅಂಗೀಕರಿಸಿ, ಅವುಗಳ ಗುಣದೋಷವಿಮರ್ಶೆಯನ್ನು ಮಾಡಲಾಗುವುದು. ಇಂತಹ ವಿಮರ್ಶೆಯು ತಕ್ಕ ಪಂಡಿತರಿಂದ ಮಾಡಲ್ಪಡುವುದು.

ಇದಲ್ಲದೆ, ಈ ಪತ್ರಿಕೆಯ ಉದ್ದೇಶಕ್ಕೆ ತಕ್ಕಂತೆ, ಹಿಂದುದೇಶದ ಮತ್ತು ಅನ್ಯದೇಶದ ವರ್ತಮಾನ ಪತ್ರಿಕೆಗಳಿಂದ ಸಮಯೋಚಿತವಾಗಿ ಆರಿಸಿ ತೆಗೆದ, ಲೇಖನಗಳನ್ನು ಕೂಡ ಪ್ರಕಟಿಸಲಾಗುವುದು.

ಕನ್ನಡದ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಕೆಲವು ಸ್ವಕಲ್ಪಿತ; ಕೆಲವು ಇಂಗ್ಲಿಷ್ ಪತ್ರಿಕೆಯನ್ನು ಅನುಸರಿಸಿ ಬರೆದ ಭಾಷಾಂತರ.

ಪತ್ರಿಕೆಯಲ್ಲಿ ರಾಜಕೀಯ ವಿಷಯಗಳನ್ನು ಚರ್ಚಿಸುವದಿಲ್ಲ.

ಈ ಪತ್ರಿಕೆಯ ಉದ್ದೇಶಕ್ಕೊಳಪಟ್ಟ ವಿಷಯಗಳ ಮೇಲೆ ಬರೆದುಬರುವ ಸ್ವತಂತ್ರಲೇಖನಗಳು ಆದರಿಸಲ್ಪಡುವುವು. ಹಾಗೆ ಬಂದುವುಗಳಲ್ಲಿ ಅನುಮೋದಿತವಾದ ಲೇಖನಗಳಿಗೆ ಪ್ರಕಟನಾನಂತರ ತಕ್ಕ ದ್ರವ್ಯಬಹುಮಾನವು ದೊರೆಯುವುದು. ಸಂಪದಭ್ಯುದಯ ವಿಷಯಗಳ ಮೇಲೆ ವಿವಾದಾಸ್ಪದವಿಲ್ಲದ ಲೇಖನಗಳನ್ನು ಸರ್ಕಾರದ ಉದ್ಯೋಗಸ್ಥರು ಕೂಡ ಈ ಪತ್ರಿಕೆಗೆ ಬರೆದು ಕಳುಹಿಸಬಹುದೆಂದು ಗವರ್ನಮೆಂಟಿನವರ ಅಪ್ಪಣೆಯಾಗಿದೆ.

ಸಾಂಪತ್ತಿಕ ವಿಷಯಗಳನ್ನು ಕುರಿತ ಪತ್ರವ್ಯವಹಾರಗಳಿಗೆ ಅವಕಾಶವುಂಟು.

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಅಭಿಪ್ರಾಯಗಳಿಗೆ ಸರ್ಕಾರದವರು ಜವಾಬ್ದಾರರಲ್ಲ.

ಚಂದಾ ವಿವರ.

ಸಂಸ್ಥಾನದಲ್ಲಿರುವವರಿಗೆ ಇಂಗ್ಲೀಷ್‌ಪತ್ರಿಕೆಯು
ವಾರ್ಷಿಕ ಚಂದಾ . ರೂ. ೩-೦-೦ } ಅಂಚೆವೆಚ್ಚ ಉಚಿತ
" ಕನ್ನಡಪತ್ರಿಕೆಯು
ವಾರ್ಷಿಕ ಚಂದಾ ರೂ. ೨-೦-೦

ಹೊರಗಿರುವವರಿಗೆ ಇಂಗ್ಲೀಷ್ ಪತ್ರಿಕೆಯು
ವಾರ್ಷಿಕ ಚಂದಾ ರೂ. ೪-೦-೦ } ಅಂಚೆವೆಚ್ಚ ಸೇರಿ
" ಕನ್ನಡಪತ್ರಿಕೆಯು
ವಾರ್ಷಿಕ ಚಂದಾ ರೂ. ೩-೦-೦

ಅರ್ಥಸಾಧಕ ವಿಷಯಗಳಿಗೆ ಸಂಬಂಧಪಡುವ ವ್ಯಾಪಾರದ ಪ್ರಕಟನೆಗಳಿಗೆ ಪತ್ರಿಕೆಯಲ್ಲಿ ಸ್ಥಳ ದೊರೆಯುವುದು. ಅಂತಹ ಪ್ರಕಟನೆಯ ದರಗಳನ್ನು ಪತ್ರಿಕೆಯ ಸಂಪಾದಕರಿಗೆ ಬರೆದು ತಿಳಿದುಕೊಳ್ಳಬಹುದು.

ಪತ್ರಿಕೆಗೆ ಚಂದಾದಾರರಾಗಲಿಷ್ಟಪಡುವವರು ಜಾಗ್ರತೆಯಾಗಿ ಬರೆದು, ಚಂದಾ ಹಣವನ್ನು ಮುಂಗಡ ಸಲ್ಲಿಸಬೇಕೆಂದು ಕೋರಿದೆ. ಚಂದಾ ಕಟ[illegible]ಬೇಕಾದರಾಗಲಿ, ಪ್ರಕಟನೆಯ ಹಣವನ್ನು ಕಟ[illegible]ಬೇಕಾದರಾಗಲಿ, ಆಯಾ ಸ್ಥಳದಲ್ಲಿರುವ [illegible]ರ್ಕಾರದ ಖಜಾನೆಗೆ ತಲಪಿಸಬಹುದು. ಅಥವಾ ಈ ಪತ್ರಿಕಾಕಾರ್ಯಾಲಯಕ್ಕೆ ಅಂಚೆಯ ಮನಿಯಾರ್ಡರ್ ಮೂಲಕವಾಗಲಿ ಕೊಟ್ಟು ಕಳುಹಿಸಬಹುದು. ಇಲ್ಲವೆ, ಚಂದಾದಾರರು ಇಷ್ಟಪಟ್ಟರೆ, ಪತ್ರಿಕೆಯನ್ನು ವಿ. ಪಿ. ಮೂಲಕ ತರಿಸಿಕೊಳ್ಳುವಂತೆ ಏರ್ಪಾಡು ಮಾಡಿಕೊಳ್ಳಬಹುದು.

ಪತ್ರಿಕೆಗೆ ಸಂಬಂಧಪಡುವ ಯಾವದ್ವಿಶಿಷ್ಟ ಪತ್ರವ್ಯವಹಾರಗಳನ್ನೂ ಬೆಂಗಳೂರು 'ರಿಂಗ್‌ವುಡ್' ನಲ್ಲಿರುವ "ಅರ್ಥಸಾಧಕ ಪತ್ರಿಕೆ" ಯ ಸಂಪಾದಕರೊಡನೆ ನಡೆಯಿಸಬೇಕು.

ಮದ್ರಾಸಿನಲ್ಲಿ ನಡೆದ ಸಂಘಪರಿಷ್ಕಾರಕಸಭೆಯಲ್ಲಿ ಸ್ವಾಗತಸಂಘಾಧ್ಯಕ್ಷರು ಮಾಡಿದ ಭಾಷಣವು

ಸಹೋದರರಾದ ಪ್ರತಿನಿಧಿಗಳೇ, ನಾರೀಮಣಿಗಳೆ, ಪುರುಷಪುಂಗವರೆ, ಮದ್ರಾಸಿನಲ್ಲಿ ಕೂಡಿರುವ ಈ ಭಾರತೀಯ ಸಂಘಪರಿಷ್ಕಾರಕ ಮಹಾಸಭೆಗೆ ಆಹ್ವಾನಸಂಘದ ಪರವಾಗಿ ನಿಮ್ಮೆಲ್ಲರಿಗೂ ಸ್ವಾಗತವನ್ನು ಮಾಡುತ್ತೇನೆ. ಶ್ರೀಮನ್ಮೈಸೂರು ಯುವರಾಜರವರು ಈ ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಲು ಒಪ್ಪಿದುದರಿಂದ ನಾವು ಕೃತಾರ್ಥರಾದೆವು ಮೈಸೂರು ಸಂಸ್ಥಾನವು ರಾಜ್ಯಪರಿಪಾಲನ ವಿಷಯದಲ್ಲಿ ಮಾತ್ರವೇ ಅಲ್ಲದೆ ಸಂಘಸಂಸ್ಕರಣ ವಿಷಯದಲ್ಲಿಯೂ ಕೂಡ ಸ್ತೋತ್ರಪಾತ್ರವಾಗಿರುತ್ತದೆ. ದೇಶಾಟನದಿಂದ ದೂರದರ್ಶಿತೆಯನ್ನು ಸಂಪಾದಿಸಿ ಪ್ರಾಜ್ಞರಾಗಿರುವ ಈ ಯುವರಾಜರವರು ನಮಗೆ ಉಪದೇಶಪೂರ್ವಕವಾಗಿ ಸಹಾಯವನ್ನು ಮಾಡಿ ನೂತನೋತ್ಸಾಹವನ್ನು ಉಂಟುಮಾಡುವರೆಂದು ನಂಬುತ್ತೇನೆ.

ಸಂಘಸಂಸ್ಕಾರಕರು ಮಾಡಿರುವ ಕೆಲಸ.

ಭರತಖಂಡದಲ್ಲಿ ಸಂಘಪರಿಷ್ಕರಣ ವಿಷಯದಲ್ಲಿ ಲಭಿಸಿರುವ ಫಲಸಂಖ್ಯೆಗಳು ಅಗಣಿತವಾಗಿವೆ. ೫೦ ವರ್ಷದ ಹಿಂದಿಗೂ ಈಗ್ಗೂ ಸಾಂಘಿಕಜೀವಿತದಲ್ಲಿ ವಿಶೇಷ ವ್ಯತ್ಯಾಸವುಂಟಾಗಿದೆ. ರಾಜಕೀಯ ವಿಷಯಗಳಲ್ಲಿನಂತೆಯೇ ಸಾಂಘಿಕವಿಷಯದಲ್ಲಿಯೂ ಕೂಡ ವಿಶೇಷಾಭಿವೃದ್ಧಿಯುಂಟಾಗಿದೆ. ಆದರೂ ರಾಜಕೀಯ ವಿಷಯದಲ್ಲಿನಂತೆಯೇ ಇದರಲ್ಲೂ ಕೂಡ ಕ್ರಿಯಾಶಕ್ತಿಯು ಕ್ಷೀಣಿಸುತ್ತಿದೆ. ಪ್ರತಿಘಟನಘೋಷಣೆಯೂ ಮೂಢವಿಶ್ವಾಸವೂ ಕೂಡ ವಿಜೃಂಭಿಸುತ್ತಿವೆ. ವಿದ್ಯಾವಂತರಲ್ಲಿ ಐಕಮತ್ಯವಿಲ್ಲದೆ ಹೋಗುವುದರಿಂದ ಸಂಘಸಂಸ್ಕರಣ ಕಾರ್ಯಗಳು ಸ್ಥಿರಪಡದೆ ಇವೆ.

ಕುಲವಿಷಯ.

ಕುಲಗಳ ಕಟ್ಟುಪಾಡು ನಿಸರ್ಗಸಿದ್ಧವಾದುದೆಂದು ಸಿದ್ಧಾಂತಗೊಳಿಸುವುದಕ್ಕಾಗಿ ಈ ಮಧ್ಯೆ ಕೆಲ ವಿದ್ಯಾವಂತರಾದ ಹಿಂದುಗಳು ಪ್ರಯತ್ನಿಸುತ್ತಿದ್ದಾರೆ. ಕೇವಲ ಐಹಿಕ ಪ್ರಯೋಜಕವಾದ ಈ ಅಭಿನವ ಬ್ರಾಹ್ಮಣ್ಯವು ಪುರಾತನವಾದ ಬ್ರಾಹ್ಮಣ್ಯಕ್ಕಿಂತಲೂ ಅಪಾಯಕರವಾಗಿದೆ. ಇದು ಜಾತಿಭೇದವನ್ನು ಹೆಚ್ಚಿಸುವುದು. ಸಂಘಸಂಸ್ಕಾರಕರೆಲ್ಲರೂ ಸರ್ವನರಸಮಾನತ್ವವನ್ನು ಅಂಗೀಕರಿಸುವರು. ಯೂರೋಪ್ಯರು ಜಾತಿಭೇದವನ್ನು ಪರಿಗಣಿಸಕೂಡದೆಂದು ಮೊರೆಯಿಡುತ್ತಲಿರುವ ಇವರುಗಳು ತಮ್ಮಲ್ಲೇ ಜಾತಿಭೇದದ ಆಧಿಕ್ಯವನ್ನು ವಿಜೃಂಭಣೆಗೊಳಿಸಿಕೊಳ್ಳುವುದು ಅಸಂಗತವಲ್ಲವೆ? ಬ್ರಾಹ್ಮಣೇತರ ಜಾತಿಯವರು ಕೂಡ ಸಂಘಸಂಸ್ಕರಣಗಳಿಗೆ ವಿಘ್ನಕಾರಿಗಳಾಗಿದ್ದಾರೆ. ಅವರು ಕೂಡ ಆ॥ ಬಾಸುರವರ ಅಂತರ್ಜಾತೀಯ ವಿವಾಹಶಾಸನವನ್ನು ಭಯಂಕರವಾಗಿ ಆಕ್ಷೇಪಿಸಿರುವರು. ಇವರು ಬ್ರಾಹ್ಮಣರ ಆಧಿಕ್ಯವನ್ನು ಕಾಪಾಡುವುದು ಮಾತ್ರವೇ ಅಲ್ಲದೆ ಅವರ ಆಧಿಕ್ಯಾರ್ಥವಾಗಿ ತಮ್ಮ ಆಧಿಕ್ಯವನ್ನು ಕೂಡ ಕಳೆದುಕೊಳ್ಳುವರು. ಬ್ರಾಹ್ಮಣಾಧಿಕ್ಯಕ್ಕೆ ವಿಘ್ನವನ್ನು ಕಲ್ಪಿಸುವ ಸಂಸ್ಕರಣಗಳಿಗೆ ಅವಕಾಶವಾಗುವುದಿಲ್ಲ.

ಅಂತರ್ಜಾತೀಯ ವಿವಾಹ ವಿಷಯಕ ವಿಧಿ.

ಆಪಸ್ತಂಬವಚನದಂತೆ ಗೃಹ್ಯಸೂತ್ರಗಳು ಆಚಾರವನ್ನನುಸರಿಸಿ ಹುಟ್ಟಿದುವೇ ಹೊರತು ಶ್ರುತಿಪ್ರೋಕ್ತವಾದುವುಗಳಲ್ಲ. ಅವು ಪೂರ್ವಾಚಾರ ಪರಾಯಣರಿಗೆ ಮಾತ್ರವೇ ಮಾರ್ಪುಗೊಳ್ಳದರತಕ್ಕವಾಗಿವೆ. ಸ್ಮೃತಿಶಾಸ್ತ್ರವು ನಿರಾಧಾರವಾದ ಕಾರಣದಿಂದ ಅದು ಅಪ್ರಮಾಣವು. ಹಿಂದೂಸ್ಥಾನದಲ್ಲಿರುವ ಬ್ರಾಹ್ಮಣರೆಲ್ಲರೂ ಒಂದೇಜಾತಿಯವರೆಂದು ಹೇಳುವುದಕ್ಕೂ ಅವಕಾಶವಿಲ್ಲ. ದಕ್ಷಿಣಾತ್ಯರಾದ ಬ್ರಾಹ್ಮಣರು ಸೋದರಮಾವನ ಮಗಳನ್ನು ಮದುವೆಯಾಗುವ ಆಚಾರವು ಅನಾರ್ಯವಾ[illegible]ಯೂ ಅಶಾಸ್ತ್ರೀಯವಾಗಿಯೂ ಇದೆ. ಸ್ಮೃತಿಶಾಸ್ತ್ರವ[illegible] ಆಧಾರವಾಗಿ ತೆಗೆದುಕೊಂಡುದೇ [illegible] ಆದರೆ ಅಂತರ್ಜಾತೀಯ ದಂಪತಿಗಳಿಗೆ ಹುಟ್ಟಿದ ಸಂತತಿಯವರು ಏಳನೆಯ ತಲೆಯಲ್ಲಿ ಬ್ರಾಹ್ಮಣರಾಗುವರೆಂಬ ವಚನವು ಪರಿಗ್ರಾಹ್ಯವಾಗಿದೆ.

ಪ್ರಭುತ್ವದವರ ಕರ್ತವ್ಯ.

ಸರ್ಕಾರದವರು ೧೮೫೮ನೆಯ ವರ್ಷದಿಂದಲೂ ಸಾಂಘಿಕಾಭಿವೃದ್ಧಿ ವಿಷಯದಲ್ಲಿ ತಟಸ್ಥರಾಗಿದ್ದಾರೆ. ಪೂರ್ವದಲ್ಲಿ ನಿರ್ಮಿತವಾಗಿರುವ ಹಿಂದೂವಿಧವಾವಿವಾಹ, ಕುಲಭ್ರಷ್ಟಸದುಪಾಯ ಶಾಸನಗಳಿಗಿಂತಲೂ ವಿಪರ್ಯಯಸ್ಥಿತಿಯನ್ನುಂಟುಮಾಡುವ ಸಂಘಸಂಸ್ಕರಣ ಕಾರ್ಯಗಳಾವುವೂ ಇಲ್ಲ. ದೇಶದಲ್ಲಿ ವಿದ್ಯೆಯು ಹೆಚ್ಚಿ ದುರಭಿಪ್ರಾಯಗಳು ತಗ್ಗಿ, ತಮ್ಮ ಅಧಿಕಾರಿಗಳು ಬಲವಂತವಾಗಿರುವ ಈ ಕಾಲದಲ್ಲಿ ಸರ್ಕಾರದವರು ಸಾಂಘಿಕವಿಷಯದಲ್ಲಿ ಸಂಬಂಧವನ್ನಿಟ್ಟುಕೊಳ್ಳಲೊಲ್ಲದೆ ಇದ್ದಾರೆ. ಶಾಸನನಿರ್ಮಾಣಸಭೆಗಳಲ್ಲಿ ಪ್ರಜಾಪ್ರಾತಿನಿಧ್ಯಪದ್ಧತಿಯು ಏರ್ಪಟ್ಟ ಬಳಿಕ ಪ್ರಭುತ್ವದವರು ಸಂಘಸಂಸ್ಕರಣ ವಿಷಯದಲ್ಲಿ ಅನುಕೂಲರಾಗುವರೆಂದು ಲಾರ್ಡ್ ಡಫರಿನವರ ತೀರ್ಮಾನವನ್ನು ಕುರಿತು ಮಾತನಾಡುವಾಗ ಗತಿಸಿದ ಹ್ಯೂಂರವರು ಅಪ್ಪಣೆಕೊಟ್ಟಿದ್ದಾರೆ. ಇತರ ವಿಷಯಗಳಲ್ಲಿ ನಮಗೆ ಉಂಟಾಗಿರುವ ಅಭಿವೃದ್ಧಿಗೆ ಸಮನಾಗಿ ಸಾಂಘಿಕಪರಿಸ್ಥಿತಿಯೂ ಕೂಡ ಅಭಿವೃದ್ಧಿಗೊಳ್ಳುವಂತೆ ಮಾಡಲು ಪ್ರಭುತ್ವದವರು ನಮಗೆ ಸಹಾಯಕರಾಗಬೇಕು. ಅಧಿಕಸಂಖ್ಯಾಕರಾದ ಪ್ರಜೆಗಳು ಕೋರಿಕೊಳ್ಳದೆ ಇದ್ದರೆ ಶಾಸನಗಳು ನಿರ್ಮಿಸಲ್ಪಡಲಾರವು ಎಂದು ಹೇಳುವುದು ನಿರರ್ಥಕವು. ಅಧಿಕಸಂಖ್ಯಾಕರಾದ ಪ್ರಜೆಗಳು ಇಷ್ಟಪಡದಿರುವರೆಂಬ ಕಾರಣದಿಂದ ಪ್ರಭುತ್ವದವರು ಪ್ರಜೆಗಳ ಮೇಲಣ ಕಂದಾಯವನ್ನು ತೆಗೆದುಬಿಡುವರೆ? ಪ್ರಭುತ್ವದವರು ತಾವು ಯಾವಾಗಲೂ ಹಿಂದೂದೇಶದ ಸಾಂಘಿಕವಿಷಯಗಳನ್ನು ಶಾಸನಗೊಳಿಸುವುದಕ್ಕೆ ಅರ್ಹತೆಯಿಲ್ಲದ ವಿದೇಶೀಯ ಪ್ರಭುತ್ವದವರಾಗಿರುವರೆಂದು ಹೇಳಿಸಿಕೊಳ್ಳುತ್ತಲೇ ಇರುವರೆ? ಲಾರ್ಡ್ ಮಾರ್ಲೆಯವರ ಸಂಸ್ಕರಣಗಳು ಸ್ಥಾಪಿಸಲ್ಪಟ್ಟ ಬಳಿಕವೂ, ಸಾರ್ವಭೌಮರವರು ಭರತಖಂಡವನ್ನು ಸಂದರ್ಶಿಸುವುದಕ್ಕಾಗಿ ಬಂದಮೇಲೂ, ಅತ್ಯುದಾರಚಿತ್ತರಾದ ವೈಸ್ರಾಯರ ಪರಿಪಾಲನವು ಆರಂಭಗೊಂಡಮೇಲೂ, ಪ್ರಾಚ್ಯಪಾಶ್ಚಾತ್ಯಪ್ರಜೆಗಳನ್ನು ಪರಿಶುದ್ಧಗೊಳಿಸಿ ಸಮ್ಮೇಳನಗೊಳಿಸಿದ ಈಗಿನ ಮಹಾಘೋರಯುದ್ಧವು ಆರಂಭವಾದ ಬಳಿಕವೂ ಕೂಡ ನಮ್ಮ ಪ್ರಭುತ್ವವು ವಿದೇಶೀಯರದು ಎಂದು ಹೇಳಿಕೊಳ್ಳಲು ವಿವೇಕಿಯಾದ ಯಾವೊಬ್ಬ ಹಿಂದುವೂ ಇಷ್ಟಪಡನು.

ರಜಸ್ವಲಾವಿವಾಹವು

ರಜಸ್ವಲಾನಂತರ ವಿವಾಹವಿಷಯವಾಗಿ ಹಿಂದುಗಳಿಗೆ ಅಧಿಕಾರವನ್ನು ಉಂಟುಮಾಡಿಕೊಡುವುದಕ್ಕಾಗಿ ಒಂದು ಶಾಸನವು ಮದ್ರಾಸುಶಾಸನನಿರ್ಮಾಣಸಭೆಯಲ್ಲಿ ಪ್ರವೇಶಗೊಳಿಸಲ್ಪಟ್ಟಿರುವುದು. ಇದರಿಂದ ಪೂರ್ವಾಚಾರ ಪರಾಯಣರಿಗೆ ಬಾಧೆಯಿಲ್ಲ. ಜಾತೀಯಾಭಿವೃದ್ಧಿಗೆ ಇದು ಅವಶ್ಯಕವೆಂದು ಎಲ್ಲರೂ ಒಪ್ಪಿಕೊಳ್ಳತಕ್ಕ ವಿಷಯವೇ ಆದುದರಿಂದ, ಕಡೆಯಪಕ್ಷಕ್ಕೆ ಈ ಸಂದರ್ಭದಲ್ಲಾದರೂ ಸಭಿಕರೆಲ್ಲರೂ ಏಕೀಭವಿಸುವರೆಂದು ನಂಬುತ್ತೇನೆ. ಈ ಶಾಸನವು ಸಾಮ್ರಾಜ್ಯಶಾಸನ ನಿರ್ಮಾಣಸಭೆಯಲ್ಲಿ ಪ್ರವೇಶ ಪಡಿಸಲ್ಪಟ್ಟಿದ್ದರೆ ಒಂದು ವಿಧದಲ್ಲಿ ಹೆಚ್ಚು ಅನುಕೂಲ್ಯವಿರುತ್ತಿದ್ದಿತು. ಸಭಾಸರ್ವೋತ್ತರರಾದ ಗವರ್ನರ್ ಜನರಲ್‌ರವರಿಂದ ಮಾತ್ರವಲ್ಲದೆ, ಇತರ ಪ್ರಾಂತಿಕಶಾಸನನಿರ್ಮಾಣಸಭೆಗಳಿಂದ ಮಾರ್ಪುಗೊಳಿಸಲಾರದ ಹಿಂದೂಧರ್ಮಶಾಸ್ತ್ರವು ಆಯಾ ಆಧಿಪತ್ಯಗಳಲ್ಲೆಲ್ಲಾ ಅವಲಂಬನೀಯವಾದುದೆಂದು ಸ್ವಲ್ಪ ಹೆಚ್ಚುಕಡಿಮೆಯಾಗಿ ಪ್ರಾಚೀನವಾದ ಪಾರ್ಲಿಮೆಂಟಿನ ಶಾಸನವೊಂದು ಹೇಳುತ್ತಿದೆ. ಅಷ್ಟಕ್ಕೂ ಇದು ಸ್ವಲ್ಪವಿಷಯವು. ಈಗ ಇರುವ ಹಿಂದೂಸಹಜಧರ್ಮವಾಗಿಯೇ ನಂಬಲ್ಪಡತಕ್ಕುದಾಗಿದೆ. ಇದ್ದವಚನಕ್ಕೆ ಸರಿಯಾದ ಅರ್ಥವನ್ನು ಮಾಡಿ ಪ್ರಕಟಪಡಿಸುವುದೇ ಈ ಶಾಸನದ ಉದ್ದೇಶವಾಗಿದೆ ಪ್ರಭುತ್ವದವರು ಈ ಶಾಸನವನ್ನು ಅಂಗೀಕರಿಸಿದರೂ ಹೈಕೋರ್ಟಿನ ಒರ್ಜಿನಲೇ ಪಕ್ಷದವರು ಇದಕ್ಕೆ ವಿರುದ್ಧವಾಗಿ ತೀರ್ಪನ್ನು ಹೇಳಬಹುದೆಂಬ ವಿಷಯವು ಈಗ ಗಮನಿಸಲ್ಪಡತಕ್ಕುದಲ್ಲ.

ಅಪ್ರಾಪ್ತವಯಸ್ಕರಾದ ಬಾಲೆಯರು.

ಸಣ್ಣವಯಸ್ಸಿನ ಬಾಲಿಕೆಯರ ಮಾನರಕ್ಷಣೆಯನ್ನು ಮಾಡುವುದು ಬಹಳ ಪ್ರಯೋಜಕವು. ಅದನ್ನು ಮಾಡುವುದಕ್ಕಾಗಿಯೇ ಹಿಂದೂ ಶಿಕ್ಷಾಸ್ಮೃತಿ (ಕ್ರಿಮಿನಲ್ ಪ್ರೊಸಿಜರ್ ಕೋಡ್) ಯನ್ನು ಸಂಸ್ಕರಿಸುವ ವಿಷಯವೂ ಕೂಡ ಈ ಮಹಾಸಭೆಯಲ್ಲಿ ಚರ್ಚಿಸಬಹುದಾಗಿದೆ. ಪತಿಯಿಲ್ಲದವನ ವಿಷಯದಲ್ಲಿ ಸ್ತ್ರೀಯು ತನ್ನ ಸಮ್ಮತಿಯನ್ನು ತಿಳಿಯಿಸುವುದಕ್ಕೆ ಯುಕ್ತವಾದ ವಯಸ್ಸು ೧೪ ವರ್ಷವೆಂದು ಮಾರ್ಪುಗೊಳಿಸಿದರೆ ಈ ವಿಷಯಕವಾದ ಶಾಸನವು ಸಮೀಚೀನವಾಗುವುದು. ಈಗ ಪ್ರತಿಪಾದಿಸಲ್ಪಟ್ಟಿರುವ ಬಿಲ್ಲಿನಲ್ಲಿ ೩೭೨-೩೭೩ನೆ ಸೆಕ್ಷನ್ನುಗಳು, ಅಪಹರಣ ಮೊದಲಾದ ಅಪರಾಧಗಳ ವಿಷಯದಲ್ಲಿ ಪ್ರವರ್ತಿಸಲಾರವು. ಅಪರಾಧಗಳನ್ನು ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಿರುವವರೆಗೂ ಶಾಸನಗಳ ಉದ್ದೇಶವು ನೆರವೇರಲಾರದು.

ಉಪಸಂಹಾರವು.

ಕಳೆದ ಸಂಘಪರಿಷ್ಕರಣ ಮಹಾಸಭೆಯಲ್ಲಿ ಸರ್ ಸಿ. ಶಂಕರನ್ನಾಯರ್‌ರವರು ಅಪ್ಪಣೆಕೊಡಿಸಿರುವ ಮಾತುಗಳನ್ನು ಮತ್ತೊಂದುಸಲ ನಾನೂ ಪಠಿಸಿ ಈ ನನ್ನ ಉಪನ್ಯಾಸವನ್ನು ಮುಗಿಸುತ್ತೇನೆ. ಅದೇನೆಂದರೆ—"ಸಂಘಸಂಸ್ಕರಣವಾಗಬೇಕೆಂದು ಕೋರುವವರಿಗಾಗಿ ನಾನೊಂದು ಮಾತನ್ನು ಹೇಳುತ್ತೇನೆ. "ನಮ್ಮನ್ನು ತ್ರಿಕರಣಶುದ್ಧಿಯಾಗಿ ಪ್ರತಿಭಟಿಸುವವರ ಅಭಿಪ್ರಾಯದೊಡನೆ ನಾವು ಏಕೀಭವಿಸದೆ ಹೋಗುವುದು ಮಾತ್ರವೇ ಅಲ್ಲದೆ ಅವರ ವಿಷಯದಲ್ಲಿ ಈರ್ಷ್ಯೆಯುಳ್ಳವರಾಗಿಯೇ ಇರೋಣ" ವೆಂದು ಪ್ರತಿಪಕ್ಷದವರು ಎಂದುಕೊಳ್ಳುವಹಾಗೆ ಪ್ರವರ್ತಿಸುವುದು ನಮ್ಮ ಪ್ರಯತ್ನದ ಉದ್ದೇಶವಲ್ಲ. ವಿಮರ್ಶಕನು ನಮ್ಮನ್ನು "ನೀವು ಹೇಳಿದಂತೆ ಮಾಡಿರಿ" ಎಂದು ಕೇಳುವುದು ಎಷ್ಟು ಮುಖ್ಯವೋ ಸಂಘಸಂಸ್ಕರಣಾದರ್ಶನಸೌಷ್ಟವವೂ ಕೂಡ ಅಷ್ಟು ಮುಖ್ಯವಾದುದೇ. ಸಂಘಸಂಸ್ಕಾರಕರೆಲ್ಲರೂ ಪರರ ನಿಮಿತ್ತವಾಗಿ ಬಾಧೆಯನ್ನು ಸೈರಿಸಿಕೊಳ್ಳುವಷ್ಟು ದೊಡ್ಡವರಾಗಿಲ್ಲದೆ ಇರಬಹುದು. ಪ್ರತಿಯೊಂದು ಜೀವಿತಶಾಖೆಯಲ್ಲೂ ಶಾಶ್ವತವಾದ ನ್ಯಾಯವಿರುವುದೆಂದೂ, ಅದು ವರ್ಣಾಶ್ರಮಧರ್ಮಗಳಿಗಿಂತಲೂ ಅಧಿಕವಾದುದೆಂದೂ, ನಮಗೆ ಪ್ರತಿದಿನ ಸಂಬಂಧಿಗಳಾಗಿರುವ ಇತರರಿಗೆ ಬೋಧಿಸುವುದು ಎಲ್ಲರಿಗೂ ಸುಲಭವಾದ ಕಾರ್ಯವಾಗಿರುವುದು.

ಸಂಘಪರಿಷ್ಕರಣ ಮಹಾಸಭಾಧ್ಯಕ್ಷರಾಗಿದ್ದ ಮೈಸೂರು ಶ್ರೀಮದ್ಯುವರಾಜರವರ ಭಾಷಣದ ಸಾರಾಂಶವು.

ಸಭಿಕರಾದ ನಾರೀಮಣಿಗಳೇ! ಓ ಪುರುಷಪುಂಗವರೆ! ಈ ಸಭೆಯನ್ನುಪಕ್ರಮಿಸುವ ಕಾರ್ಯಕ್ಕಾಗಿ ನನ್ನನ್ನು ಕೋರಿದ ಶ್ರೀಯುತ ನಾರಾಯಣ ಗಣೇಶ ಚಂದ್ರಾವರ್ಕರ್‌ರವರೂ, ಈ ಸಭೆಯ ಆಹ್ವಾನಸಂಘದವರೂ ಕೂಡ ನನಗೆ ಉಂಟುಮಾಡಿದ ಗೌರವಾತಿಶಯವು ಅತ್ಯಂತ ಗಣ್ಯವಾದುದೆಂದು ನಾನು ಭಾವಿಸುತ್ತೇನೆ. ವಿದ್ಯೆಯಲ್ಲೂ ವಯಸ್ಸಿನಲ್ಲೂ ಅನುಭವದಲ್ಲೂ ನನಗಿಂತಲೂ ವೃದ್ಧರೂ ಈ ಸಭೆಗೆ ಸಂಬಂಧಪಟ್ಟ ವಿಷಯದಲ್ಲಿ ತಮ್ಮ ಯಾವಜ್ಜೀವ ವ್ಯಾಸಂಗವುಳ್ಳವರೂ ಆದ ನಿಮ್ಮಗಳನ್ನು ಕುರಿತು ಉಪನ್ಯಾಸಮಾಡುವುದು ಕಷ್ಟತರವಾದ ಕೆಲಸವೆಂದು ತಿಳಿಯುತ್ತೇನೆ. ಆದರೂ ಸಂಘಸಂಸ್ಕರಣ ವಿಷಯದಲ್ಲಿ ಯಾವಾಗಲೂ ನನಗಿರುವ ಪ್ರೀತಿಯೂ, ನಾನು ಮಾಡಿಬಂದ ವಿದೇಶಯಾತ್ರೆಯಿಂದ ಉಂಟಾಗಿರುವ ಅನುಕೂಲ್ಯಗಳೂ, ಸಂಘಸಂಬಂಧವಾದ ಪ್ರಶ್ನೆಗಳ ವಿಷಯದಲ್ಲಿ ನನಗುಂಟಾಗಿರುವ ಕೆಲವು ಆಶಯಗಳನ್ನು ಸ್ಪಷ್ಟವಾಗಿ ನಿಮ್ಮಗಳ ಇದಿರಿಗೆ ನಿವೇದಿಸುವ ವಿಷಯದಲ್ಲಿ ಸಹಾಯಕಾರಿಗಳಾಗುವುವೆಂಬುದಾಗಿ ನಾನು ನಂಬುತ್ತೇನೆ. ವಿವೇಕಶಾಲಿಯೂ, ಪರಹಿತೈಕಮತಿಯೂ ಆದ ಪ್ರತಿಯೊಬ್ಬ ಭಾರತೀಯನೂ ಈ ಸಂಘಸಂಸ್ಕರಣ ವಿಷಯಕವಾದ ಪ್ರಶ್ನೆಗಳಿಗೆ ಅಭಿಮುಖನಾಗಿ ಇದು ಹೀಗೆಯೇ ಸರಿಯೆಂದು ನಿರ್ಧರಿಸುವುದು ಅವಶ್ಯಕವಾಗಿದೆ.

ಸಭಾಕಾರ್ಯವು.

ಈಗಿರುವ ನಮ್ಮ ದೇಶಸ್ಥಿತಿಯನ್ನು ಈಗ್ಗೆ ಅರ್ಧಶತಮಾನದ ಹಿಂದಿನ ಸ್ಥಿತಿಗೆ ಹೋಲಿಸಿ ನೋಡಿದರೆ ಪಾಶ್ಚಾತ್ಯನಾಗರಕತೆಯಾಧಾರದಿಂದ ಎಷ್ಟೋ ಉದಾರಭಾವಗಳು ನಮ್ಮ ದೇಶೀಯರಲ್ಲಿ ಎಲ್ಲಜನವರ್ಗದವರಲ್ಲೂ ವ್ಯಾಪಿಸಿರುತ್ತವೆ. ಈ ಫಲಗಳಲ್ಲಿ ಸ್ವಲ್ಪಕ್ಕೆ ಈ ಸಭೆಯು ಕಾರಣವಾಗಿದ್ದಿತೆಂಬುದು ಅಭಿನಂದನೀಯವಾದ ಸಂಗತಿಯಾಗಿದೆ. ಈಗಿನ ಸಂಘಸಂಸ್ಕಾರಕರಿಂದ ಸಂಸ್ಥಾಪಿಸಲ್ಪಟ್ಟಿರುವ ಬ್ರಹ್ಮೋಸಮಾಜದಂತಹ ಸಂಘಗಳ ಪ್ರಯತ್ನಗಳಿಂದ ಕೆಲವು ಭಾಗವೂ, ಸಂಘಸಂಸ್ಕರಣಾಭಿಮಾನಿಗಳಾದವರು ಅವರವರ ಯೋಗ್ಯತೆಗೆ ತಕ್ಕಂತೆ ತಮ್ಮ ಸುತ್ತುಮುತ್ತಣ ಜನರ ಮೇಲೆ ತಮ್ಮ ಮಾತುಬಾರಿಕೆಯನ್ನುಪಯೋಗಿಸಿ ಮಾಡಿದ ಪ್ರಯತ್ನಗಳಿಂದ ಕೆಲವುಭಾಗವೂ, ಸಂಘಸಂಸ್ಕರಣ ರೂಪಫಲಗಳಾಗಿ ಲಭಿಸಿವೆ. ಮತ್ತೂ ಉತ್ತರಪ್ರತ್ಯುತ್ತರ ಸಂಬಂಧಗಳು ಹೆಚ್ಚುತ್ತಿರುವುದೂ, ಪಾಶ್ಚಾತ್ಯಸಂಘಸಂಸರ್ಗದಿಂದ ನಮ್ಮವರಲ್ಲಿ ವಿದೇಶಗಮನಾಭಿಲಾಷೆಯು ಹೆಚ್ಚುತ್ತಿರುವುದೂ, ಜೀವಿತವೃತ್ತಿರೀತಿಗಳ ಅವಧಿಯು ವಿಸ್ತರಿಸುತ್ತಿರುವುದೂ, ವ್ಯಾಪಾರವಿಷಯಕವಾದ ಸ್ಪರ್ಧೆಯೂ ಸಹ ಈ ಸಂಘಸಂಸ್ಕರಣಸಿದ್ಧಿಗೆ ವಿಶೇಷ ಕಾರಣಗಳಿವೆಯೆಂದು ಹೇಳಬಹುದು. ಆದರೆ ನಾನು ಮೊದಲೇ ಶ್ರುತಪಡಿಸಿರುವಂತೆ ನಮ್ಮ ಅವಶ್ಯಕತೆಗೆ ತಕ್ಕಷ್ಟು ಸಂಸ್ಕರಣಗಳು ಅಭಿವೃದ್ಧಿಗೊಳ್ಳದೆ ಮಂದಗಮನದಲ್ಲಿರುತ್ತವೆ. ಒಟ್ಟಿಗೆ ನಮ್ಮ ದೇಶದಲ್ಲಿ ಸಂಸ್ಕರಣವಿಷಯದಲ್ಲಿ ಸಾಧಾರಣವಾದಪದ್ಧತಿಯೊಂದನ್ನು ಅವಲಂಬಿಸಿ, ಇದರ ಪೋಷಣೆಗಾದರೂ ಪ್ರಯತ್ನವನ್ನು ಸಂಘಸಂಸ್ಕರಣ ಪಕ್ಷದವರು ಮಾಡುತ್ತಲಿಲ್ಲವೆಂದು ಹೇಳಿದರೆ ನಾನು ಅಷ್ಟು ಪ್ರಮಾದಮಾಡಿದವನಾಗುವುದಿಲ್ಲವೆಂದು ಅರಿಯುತ್ತೇನೆ.

ಸಾರ್ವತ್ರಿಕವಿದ್ಯೆ.

ಯಾವುದಾದರೊಂದು ಸಂಘವು ಆಧಾರಪೂರ್ವಕವಾದ ಗೌರವಸ್ಥಿತಿಯನ್ನು ಪಡೆಯಬೇಕಾದರೆ ಅದಕ್ಕೆ ಸಂಬಂಧಿಸಿದಂಥ ಸಂಘಬಲವು ಅತ್ಯಾವಶ್ಯಕವಾಗಿರಬೇಕು. ಅದಿಲ್ಲದೆ ಲಭಿಸಲಾರದು. ಈಗಿನ ಮಾನವಕೋಟಿಯನ್ನು ಮುಖ್ಯವಾಗಿ ಹುರಿದುಂಬಿಸುತ್ತಿರುವ ರಾಜಕೀಯಸಂಬಂಧವಾದ ಉನ್ನತಸ್ಥಿತಿಯನ್ನು ಪಡೆಯಬೇಕಾದರೂ ಅಂಥ ಇಷ್ಟಾರ್ಥಸಿದ್ಧಿಗೆ ಅಡ್ಡಿಯಾಗಿರುವ ಸಾಂಘಿಕದೋಷಗಳನ್ನೆಲ್ಲಾ ನಾವು ನಿರ್ಮೂಲಗೊಳಿಸಿಕೊಳ್ಳಬೇಕು. ಸಾಂಘಿಕಾಭ್ಯುದಯವು ಆ ಸಂಘದ ಪ್ರತಿಯೊಂದು ವ್ಯಕ್ತಿಯ ಸೌಖ್ಯಕ್ಕೂ ಕಾರಣವೆಂಬುದು ಸತ್ಯವೇ. ಆದರೆ, ಆಯಾಪ್ರತಿಯೊಂದು ವ್ಯಕ್ತಿಯೂ ಸಂಘವಿಷಯವಾಗಿ ಉಪಕಾರಮಾಡುವುದೇ ಸಾಂಘಿಕಾಭ್ಯುದಯಕ್ಕೆ ಸಾಧನವಾಗಿರುತ್ತದೆ. ಜನಸಾಮಾನ್ಯದಲ್ಲಿ ಹೆಚ್ಚುಭಾಗದವರು ವಿದ್ಯಾವಿಹೀನರಾಗಿ ಅಜ್ಞಾನದಲ್ಲಿ ಬಿದ್ದು ನಿದ್ರೆಗೆಯ್ಯುತ್ತಿರುವಾಗ ಯಾವುದುತಾನೇ ಫಲಪ್ರದವಾಗಿ ಪರಿಣಮಿಸುವುದು? ಸಂಘದಲ್ಲಿ ಯಾವನೊಬ್ಬನಾದರೂ ಯಾವುದೊಂದು ವರ್ಗವನ್ನು ಉಪೇಕ್ಷಿಸಿದರೂ ಆ ಸಾಂಘಿಕ ಸಮುದಾಯಜೀವನವು ದೌರ್ಬಲ್ಯವನ್ನು ಹೊಂದುವುದು. ಸಕಲ ವಿಧವಾದ ಅಭ್ಯುದಯಗಳಿಗೂ ವಿದ್ಯೆಯು ಮಾರ್ಗದರ್ಶಕವಾಗಿದೆ. ಸಂಘದಲ್ಲಿ ಒಂದು ಭಾಗದವರು ವಿದ್ಯಾವಂತರಾದ ಮಾತ್ರದಿಂದಲೇ ಸಂಘಕ್ಕೆ ವಿಶೇಷಾಭ್ಯುದಯವಾವುದೂ ಉಂಟಾಗಲಾರದು. ಅದುಕಾರಣವೇ ಸಾರ್ವತ್ರಿಕವಿದ್ಯಾಭ್ಯಾಸವು ಅವಶ್ಯಕವಾಗಿದೆ ಸ್ತ್ರೀವಿದ್ಯೆಯೂ ಈ ಅಭಿಪ್ರಾಯದಲ್ಲೇ ಏಕೀಭವಿಸಿರುತ್ತದೆ. ವಿದ್ಯಾವಿಕಾಸೋನ್ನತಿಯುಳ್ಳ ಸ್ತ್ರೀಜನರು ಸಂಘಕ್ಕೆ ಆಧಾರಭೂತರಾಗಿದ್ದಾರೆ. ಸಾಂಘಿಕಾಭ್ಯುದಯಕ್ಕೆ ಇದೇ ಮೂಲವು.

ಅತಿಬಾಲ್ಯ ವಿವಾಹಖಂಡನವು.

ಹಿಂದೆ ಹೇಳಿದ ಕಾರಣಗಳಲ್ಲಿ ಅನೇಕವು ಈ ೨ನೆ ವಿಷಯದ ವಿವೇಚನೆಗೆ ನನ್ನನ್ನು ಪ್ರವೇಶಗೊಳಿಸುತ್ತವೆ. ನಮ್ಮ ಬಾಲಿಕೆಯರ ವಿವಾಹಯೋಗ್ಯಕಾಲವನ್ನು ಹೆಚ್ಚಿಸುವುದು ಸಾಂಘಿಕಪುರೋವೃದ್ಧಿಗೆ ಅವಶ್ಯಕವಾಗಿದೆ. ಮಕ್ಕಳನ್ನು ಸನ್ಮಾರ್ಗಪ್ರವರ್ತಕರನ್ನಾಗಿ ಮಾಡಿ, ದೊಡ್ಡವರನ್ನಾಗಿ ಬೆಳೆಯಿಸಿ, ಅವರನ್ನು ಸಂಘಾಭ್ಯುದಯಸಾಧಕ ಸಭ್ಯರನ್ನಾಗಗೊಳಿಸುವುದಕ್ಕೂ ಆರೋಗ್ಯವತ್ತಾದ ಸಂತಾನವನ್ನು ಪಡೆಯುವುದಕ್ಕೂ ತಕ್ಕವರಾದ ತಾಯಿಗಳು ಸಂಘದಲ್ಲಿರಬೇಕು. ಆದರೆ ಬಾಲ್ಯದಲ್ಲೇ ಮಾತೃತ್ವವನ್ನು ಹೊಂದಿಕೊಳ್ಳುವವರಿಂದ ಆರೋಗ್ಯಶಾಲಿಯಾದ ಸಂತಾನವನ್ನು ಪಡೆಯುವೆವೆಂದು ಅಪೇಕ್ಷಿಸುವುದು ಹೇಗೆ? ಅಂಥ ಎಳೆ ವಯಸ್ಸಿನ ತಾಯಿಗಳಿಗೆ ಹುಟ್ಟುವ ಅಶಕ್ತವಾದ ಹಸುಗೂಸುಗಳಿಂದ ಎಂಥ ಪ್ರಯೋಜನವು ಸಂಘಕ್ಕೆ ಉಂಟಾಗಬಹುದು? ಇಂಥವರ ಸಂತಾನವು ದುರ್ಬಲತ್ವಕ್ಕೂ ದುಷ್ಟವ್ಯಾಧಿಗಳಿಗೂ ಪಾತ್ರವಾಗಿ, ಅವನ್ನು ಹೆತ್ತತಾಯಿಗಳಿಗೂ ಸಂಘಕ್ಕೂ ಸಹ ಖೇದಜನಕಗಳಾಗಿರುವುವು. ಸ್ತ್ರೀಯರು ನಮ್ಮ ಸಂಘಕ್ಕೆ ಆಧಾರಸ್ತಂಭದಂತಿದ್ದಾರೆ. ಅವರಮೇಲೆ ಅತ್ಯಂತ ಬಾಲ್ಯದಲ್ಲೇ ಮಾತೃತ್ವಕ್ಕೆ ಉಚಿತವಾದ ಸಂಸಾರಕ್ಲೇಶಭಾರಗಳನ್ನೆಲ್ಲಾ ಹೊರಿಸಿಬಿಡುವುದು ಲಾಭಕ್ಕೋಸುಗವಾಗಿ ವಿನಿಯೋಗಿಸುವ ಅರ್ಥವ್ಯಯವೆನಿಸಿಕೊಳ್ಳುವುದಿಲ್ಲ. ಹೆತ್ತತಾಯಿಯ ಮತ್ತೂ ಮಕ್ಕಳ ಆರೋಗ್ಯವು ಸರ್ವರಿಗೂ ಅಪೇಕ್ಷಣೀಯವಾದುದಲ್ಲವೆ? ಹೀಗಿರುವಾಗ ಈ ಬಾಲ್ಯವಿವಾಹನಿಷೇಧದ ವಿಷಯದಲ್ಲಿ ವಾದಾನುವಾದಗಳೇತಕ್ಕೆ?

ವರ್ಣ ಸಂಯೋಗವು.

ಜಾತೀಯ ಪಟುತ್ವವಿಷಯಕವಾದ ದೃಷ್ಟಿಯಿಂದ ಅವಲೋಕಿಸಿದರೆ ವರ್ಣವಿಭೇದಮೂಲಕವಾದ ವೈಷಮ್ಯದಿಂದ ನಮ್ಮದೇಶದಲ್ಲಿ ಅಧಿಕವಾದ ಸಂಘರ್ಷಣವೂ, ಶೋಚನೀಯಾವಸ್ಥೆಗಳೂ ಉಂಟಾಗುತ್ತಲಿವೆ. ಈಗಿನ ಸ್ಥಿತಿಯಲ್ಲಿರುವ ವರ್ಣಭೇದವು ಸಾಂಘಿಕಾಧಿಕಾರಬಲವಾಗಿ ಇರುವವರೆಗೂ ಜಾತೀಯತ್ವ ಸಾಧನೆಗಾಗಿ ಅವಶ್ಯಕವಾದ ಐಕ್ಯವನ್ನು ಪಡೆಯುವುದು ಸಾಧ್ಯವಾಗಲಾರದು. ಯಾವದೇಶದ ಪ್ರಭುತ್ವ ನಿರ್ವಾಹಸ್ಥಿತಿಗೂ ಈ ವರ್ಣವಿಭೇದಸ್ಥಿತಿಯು ಎಷ್ಟು ದೂಷ್ಯವಾದ ವಿಘ್ನವಾಗಿರುವುದೆಂಬುದನ್ನು ನಾನು ನಿರೂಪಿಸಬೇಕಾದ ಅವಶ್ಯಕತೆಯಿಲ್ಲ. ಜನಸಾಮಾನ್ಯವಿಷಯಕವಾದ ನ್ಯಾಯೈಕದೃಷ್ಟಿಯನ್ನೂ ನಿಷ್ಪಕ್ಷಪಾತಭಾವವನ್ನೂ ಈ ವರ್ಣಭೇದವು ತಡೆಗಟ್ಟುತ್ತಿರುವುದೆಂಬ ಸಂಗತಿಯು ನಿಮಗೆ ತಿಳಿದೇ ಇದೆ. ಆಫ್ರಿಕಾಮೊದಲಾದ ಅಧಿನಿವೇಶಸ್ಥಾನಗಳಲ್ಲಿ ಪೌರತ್ವಸಿದ್ಧಿಗಾಗಿ ಹೋರಾಡುತ್ತಲಿರುವ ನಾವು ಈ ಭರತಖಂಡ ಭೂಮಿಯನ್ನು ದಾಟಿ ಹೋದಬಳಿಕ ಯಾವ ಭೇದವೂ ಇಲ್ಲದೆ ಸರ್ವರೂ ಭಾರತೀಯರೇ ಎಂಬುದಾಗಿ ಏಕಕಂಠ್ಯದಿಂದಲೂ ಸ್ವಮತಹರಣದಿಂದಲೂ ವರ್ತಿಸುತ್ತ, ಈ ಜನ್ಮಭೂಮಿಯನ್ನು ಮೆಟ್ಟಿದಕೂಡಲೇ ಅದೇನು ಆಶ್ಚರ್ಯವೋ! ಯಕ್ಷಿಣಿಯ ಕೋಲನ್ನು ಮುಟ್ಟಿಸಿದಂತೆ ಮಂಕುಹಿಡಿದವರಾಗಿ ತಮ್ಮ ಪೂರ್ವದ ಜಾತಿಯ ವೈರಗಳಿಗೂ ಸ್ವಾರ್ಥಪರತೆಗೂ ಒಳಗಾಗಿ ಹೋಗುತ್ತೇವೆ. ಮಾತೃಭೂಮಿಯಲ್ಲಿ ಒಟ್ಟಿಗೆಹುಟ್ಟಿದವರೆಲ್ಲರೂ ಭಾರತೀಯರೇ ಎಂಬೊಂದು ಭಾವದಿಂದ ಏತಕ್ಕಿರಕೂಡದು? ಈ ಭಾರತೀಯ ವಾತಾವರಣದಲ್ಲೇ ಇರುವ ಬೇರೆಬೇರೆಯಾಗಿರುವ ವರ್ಣಗಳ ಸಮ್ಮೇಳನಕ್ಕೂ ಕಡೇಪಕ್ಷ ಅಂತರ್ಜಾತೀಯ ಸಮ್ಮೇಳನಕ್ಕಾದರೂ ಯಾತಕ್ಕೆ ಪ್ರಯತ್ನಿಸಬಾರದು? ವರ್ಣಾಂತರ ಪಙ್ಕ್ತಿಭೋಜನವೂ ವರ್ಣಾಂತರ ವಿವಾಹಗಳೂ ಸಹಿಷ್ಣುತ್ವವೂ ಸಹ ಮೇಲೆ ನಿರೂಪಿಸಿದ ಸಮ್ಮೇಳನಗಳಿಗೆ ಸೋಪಾನಗಳಂತಿರುವುದರಿಂದ ಅವುಗಳನ್ನು ಪ್ರೋತ್ಸಾಹಿಸುತ್ತಿರಬೇಕು.

ವಿದೇಶಯಾನವು.

ವಿದೇಶಯಾತ್ರೆಯಿಂದ ಉಂಟಾಗುವ ಲಾಭವು ಅಗಣಿತವಾಗಿರುವುದು. ಅದರ ಪ್ರಯೋಜನವು ಗೊತ್ತಾಗುತ್ತ ಬರುತ್ತಿರುವುದರಿಂದಲೇ ಅದರ ವಿಷಯದಲ್ಲಿದ್ದ ವಿಘ್ನಗಳು ತಗ್ಗಿಹೋಗುತ್ತಿರುವುವು. ಈ ವಿಷಯದಲ್ಲಿ ಮೈಸೂರಿನಲ್ಲಿರುವ ಧರ್ಮಶಾಸ್ತ್ರಬೋಧಕರಾದ ಬ್ರಾಹ್ಮಣರೇ ವಿದೇಶಗಳನ್ನು ನೋಡುವುದಕ್ಕಾಗಿ ಹೋಗಿ ಬಂದ ಜನರನ್ನು ತಮ್ಮ ಬಳಕೆಯಲ್ಲಿ ಸೇರಿಸಿಕೊಳ್ಳುತ್ತಿರುವರು. ಈ ವಿಷಯದಲ್ಲಿ ಒಂದಾನೊಂದು ಕಾಲದೊಳಗೆ ಪ್ರಬಲವಾಗಿದ್ದ ಮೂಢಶ್ರದ್ಧಾ ದುರಭಿಮಾನವು, ಇಂಗ್ಲೆಂಡ್ ಮೊದಲಾದ ಪಾಶ್ಚಾತ್ಯದೇಶಗಳಿಗೆ ಹೋಗಿ ಜೀವನ ವೃತ್ತಿಸಂಬಂಧವಾಗಿಯೂ ಇತರ ವಿಧವಾಗಿಯೂ ಇರುವ ವಿಶೇಷಯೋಗ್ಯತೆಗಳನ್ನು ಸಂಪಾದಿಸಿಕೊಂಡು ಬಂದರೆ ತಮಗೆ ಹೆಚ್ಚಿನ ಉದ್ಯೋಗಸ್ಥಾನಗಳು ದೊರೆಯುವುವೆಂಬ ಆಶೋತ್ತರಗಳಿಗೆ ಸಂಪೂರ್ಣವಾಗಿ ಒಳಗಾಗಿ ಅಡಗಿಹೋಗುತ್ತಿದೆ. ನಾವು ಯಾವ ಸಾಮ್ರಾಜ್ಯದ ಸಂಬಂಧವನ್ನು ಪಡೆದಿರುವೆವೆಂದು ಅಭಿಮಾನಗೊಳ್ಳುತ್ತಿರುವೆವೋ ಅದರ ಸಂರಕ್ಷಣೆಗಾಗಿ ಹೋರಾಡುವ ಶೂರಶ್ರೇಷ್ಠರಾದ ನಮ್ಮ ಭಾರತೀಯ ಯೋಧರು ಸಾವಿರಾರು ಗಟ್ಟಲೆಯಾಗಿ ವಿದೇಶಗಳಿಗೆ ಮೊನ್ನೆತಾನೇ ಹೋಗಿರುತ್ತಾರೆ. ನಮ್ಮ ಸಂಸ್ಥಾನದ ಆಸ್ಥಾನಪಂಡಿತರೂ ಕೂಡ ವಿದ್ಯಾಭ್ಯಾಸಾರ್ಥವಾಗಿ ತಮ್ಮ ಮಕ್ಕಳನ್ನು ಯೂರೋಪುಖಂಡಕ್ಕೆ ಕಳುಹಿಸಿರುವ ಸಂಗತಿಯು ಈ ಸಂದರ್ಭದಲ್ಲಿ ಹೇಳಲ್ಪಡತಕ್ಕುದಾಗಿದೆ. ಹೀಗೆ ಬಹುಜನರು ವಿದೇಶಗಳಿಗೆ ಹೋಗಿ ಬರುತ್ತಿರುವ ವಿಷಯದಲ್ಲಿ ನಮ್ಮ ಸಂಘದಲ್ಲಿರುವ ಪೂರ್ವಾಚಾರ ಪರಾಯಣರುಗಳು ಆಕ್ಷೇಪಿಸುವುದಕ್ಕೆ ಪ್ರಯತ್ನಿಸಿರುವ ವಿಷಯವು ನನಗೆ ತಿಳಿದಿರುವಮಟ್ಟಿಗೂ ಯಾವುದೂ ಇರುವಂತೆ ಕೇಳಿ ಬರಲಿಲ್ಲ. ಈ ವಿದೇಶ ಯಾತ್ರಾವಿಷಯಕವಾದ ವರ್ಣದುರಭಿಮಾನವನ್ನು ಇನ್ನು ಮುಂದೆ ನಾವು ಕೇಳುವುದಿಲ್ಲವೆಂದೇ ಹೇಳಬಹುದು.

ನಿಮ್ನ ಜಾತಿಯವರು.

ಭರತಖಂಡದಲ್ಲಿ ಹುಟ್ಟಿದ ೬ ಕೋಟಿ ಜನರನ್ನು ಯಾವಜ್ಜೀವವೂ ದಾಸ್ಯದಲ್ಲೇ ಇರುವಂತೆ ಮಾಡುವುದೂ ಅವರನ್ನು ಸೋಂಕುವುದು ಅಶುಚಿಯೆಂಬುದಾಗಿ ಹೇಳುವುದೂ ಸಾಂಘಿಕಸ್ಥಿತಿಯಲ್ಲಿ ಉನ್ನತಿಯನ್ನು ಹೊಂದಬೇಕೆಂದು ಅವರು ಅಪೇಕ್ಷಿಸಿದರೆ ಅವರಿಗೆ ಪರಂಪರೆಯಾಗಿ ಬಂದಿರುವ ಮತವನ್ನು ಅವರು ಪರಿತ್ಯಾಗ ಮಾಡಬೇಕಾಗಿರುವುದು ಸಹ ನಮ್ಮ ನಾಗರಿಕತೆಗೆ ಲಾಂಛನವಾಗಿದೆಯೆಂಬ ವಿಷಯವು ಸತ್ಯವಾಗಿದೆ. ಈ ವಿಷಯದಲ್ಲಿ ನಮ್ಮ ದೇಶಕ್ಕೂ ಇಂಗ್ಲೆಂಡ್ ಅಮೇರಿಕಾ ಮೊದಲಾದ ಪಾಶ್ಚಾತ್ಯದೇಶಗಳಿಗೂ ಇರುವ ವ್ಯತ್ಯಾಸವನ್ನು ಏನೆಂದು ಹೇಳಬಹುದು! ಆ ದೇಶಗಳಲ್ಲಿ ಸ್ವಾವಲಂಬನೆಯಿಂದ ಕಷ್ಟಪಟ್ಟು ದುಡಿದ ಚಿಕ್ಕವರೇ ಆಗಲಿ ದೊಡ್ಡವರೇ ಆಗಲಿ ಸಂಘದಲ್ಲಿ ಮಹೋನ್ನತಸ್ಥಿತಿಯನ್ನು ಹೊಂದುವರು. ಫ್ರಾನ್ಸ್ ದೇಶದಲ್ಲು ಕೂಡ ಸಾಮಾನ್ಯನಾದ ಒಬ್ಬಾನೊಬ್ಬ ಭಟನೂ ಸ್ವಾವಲಂಬನ ಬಲದಿಂದ ಮಹಾರಥಶ್ರೇಷ್ಠನಾಗಬಹುದಾಗಿದೆ. ಅದುಕಾರಣ ನಿಜವಾಗಿಯೂ ಈ ದೇಶದಲ್ಲಿ ಸಾಂಘಿಕ ಸಮತ್ವವುಂಟಾಗುವುದಕ್ಕಾಗಿ ವರ್ಣಸಮ್ಮೇಳನವು ಅತ್ಯವಶ್ಯಕವಾಗಿದೆ.

"ಧರೆಯಂ ಪರಿಕಿಸೆಭೇದವಮೆದಿಲ್ಲಂ।
ನರರೊಳಗದು ಮೆರೆವುದುಲೇಸಲ್ಲಂ॥
ಕಾಸಿಗೋಸುಗಂವರ್ಣವಿಭೇದಂ।
ಹೇಸಿಕಳೆಯಬೇಕದಸಾಮೋದಂ॥"

ಎಂದು ಒಬ್ಬ ಮಹನೀಯನು ಹೇಳಿರುತ್ತಾನೆ. ಆದರೆ ಇದರಲ್ಲಿ ಒಂದು ವಿಷಯವು ಮಾತ್ರ ನಿಶ್ಚಯವು. ಏನೆಂದರೆ- ವಿದ್ಯೆಯು ವ್ಯಾಪಿಸುತ್ತ ಬಂದಂತೆ ಸಾಂಘಿಕ ಸ್ವಾಮ್ಯವನ್ನು ಕಳೆದುಕೊಂಡಿರುವ ಲಕ್ಷಾಂತರ ಜನರು ಅವರ ಸ್ವಾಮ್ಯಸ್ಥಲವನ್ನು ಪಡೆದುಕೊಳ್ಳುವುದಕ್ಕಾಗಿ ಪ್ರಯತ್ನಿಸುವರು. ಕಡೆಗೆ ಅವರು ಅಂಥ ಸ್ಥಲವನ್ನು ಅವರು ಹೊಂದಿಯೇ ತೀರುವರು.

ಯುದ್ಧವಾರ್ತೆಯು.

ಪಶ್ಚಿಮ ರಣರಂಗ.

ಈ ಕಡೆಯಲ್ಲಿ ಮಳೆಯು ವಿಶೇಷವಾಗಿ ಬಿದ್ದು ಚಳಿಯು ಅಧಿಕವಾಗಿರುವುದರಿಂದಲೂ, ನೆಲವು ಕೆಸರಾಗಿ ನಿಲ್ಲಲೂ ತಿರುಗಾಡಲೂ ಸಾಮಗ್ರಿಗಳನ್ನು ಸಾಗಿಸಲೂ ಬಹಳ ತೊಂದರೆಯಾಗಿರುವುದರಿಂದಲೂ ಯುದ್ಧಕಾರ್ಯಗಳು ಚಟುವಟಿಕೆಯಿಂದ ನಡೆಯುತ್ತಲಿಲ್ಲ. ಮಿತ್ರಮಂಡಲಿಯವರು ಶತ್ರುಗಳಮೇಲೆ ಬಿದ್ದು ಕಾದಾಡುವುದು ಸಾವಕಾಶಕ್ಕೆ ಬಿದ್ದಿದೆ. ಜರ್ಮನರು ಈಗ ಮೊದಲಿನಂತಲ್ಲದೆ ಸ್ವಸಂರಕ್ಷಣ ಪದ್ಧತಿಯಲ್ಲಿ ನಿರತರಾಗಿದ್ದಾರೆ. ಆದರೂ ಮಿತ್ರಮಂಡಲಿಯವರು ಸಾಧ್ಯವಾದಮಟ್ಟಿಗೆ ಎಲ್ಲ ಕಡೆಯೂ ಮುಂದುಮುಂದಕ್ಕೆ ಸಾಗುತ್ತಿದ್ದಾರೆ. ಹಲವುಕಡೆ ಬೆಲ್ಜಿಯಮ್ಮಿನವರು ಫಿರಂಗಿಯುದ್ಧಗಳನ್ನು ನಡೆಯಿಸಿ, ಶತ್ರುಗಳ ಫಿರಂಗಿಗಳನ್ನು ನಾಶಪಡಿಸಿದ್ದಾರೆ. ಕ್ರೋನು-ರೀಮ್ಸು ಮೊದಲಾದ ಅನೇಕ ಪ್ರಾಂತಗಳಲ್ಲಿ ಫಿರಂಗಿ ಯುದ್ಧಗಳು ನಡೆಯುತ್ತಿರುವುವು. ಮೇಲಿನ ಆಲ್ಸೆಸ್ಸಿನಲ್ಲಿ ಆಸ್ಪಾಚಿ ಎಂಬ ಗ್ರಾಮವನ್ನೂ, ಸ್ಟೀನ್ಬಾಚ್ ಎಂಬ ಗ್ರಾಮವನ್ನೂ ಮಿತ್ರಮಂಡಲಿಯವರು ವಶಪಡಿಸಿಕೊಂಡಿದ್ದಾರೆ. ಆಗ ಅಲ್ಲಿ ತೀವ್ರವಾದ ಕದನಗಳಾಗಿವೆ. ಬೆಲ್ಜಿಯಮ್ಮಿನಲ್ಲಿ ಮಿತ್ರಮಂಡಲಿಯವರು ಜರ್ಮನರಮೇಲೆ ಕಾದಾಡಿಅವರ ವಶದಲ್ಲಿದ್ದ ಸೆಂಟ್ ಜಾರ್ಜ್ ಎಂಬ ಗ್ರಾಮವನ್ನು ವಶಪಡಿಸಿಕೊಂಡರು.

ಪೂರ್ವರಣರಂಗ.

ಪೋಲಂಡಿನಲ್ಲಿ ಜರ್ಮನರಿಗೂ ರಷ್ಯನರಿಗೂ ನಡೆಯುತ್ತಿರುವ ಯುದ್ಧದಲ್ಲಿ ರಷ್ಯನರಿಗೆ ಸ್ವಲ್ಪಸ್ವಲ್ಪ ಜಯವಾಗುತ್ತಿರುವಂತೆ ಕಾಣುತ್ತದೆ. ಜರ್ಮನರಿಗೆ ಆಗುತ್ತಿರುವ ನಷ್ಟವು ವಿಶೇಷವಾಗಿದ್ದರೂ ಅವರು ಮೇಲುಬೀಳುತ್ತಿರುವುದು ಕಡಿಮೆಯಾಗಿಲ್ಲ. ೩ ನೆಯ ಸಾರಿ ಜರ್ಮನರು ಪೋಲಂಡಿನಲ್ಲಿ ಮಾಡಿದ ದಂಡಯಾತ್ರೆಯಲ್ಲಿ ರಷ್ಯನ್ ಸೇನಾಪಂಗ್ತಿಯನ್ನು ಭೇದಿಸಬೇಕೆಂದು ಮಾಡಿದ ಪ್ರಯತ್ನವು ವ್ಯರ್ಥವಾಯಿತು. ಆಗ ಮಾಡಿದ ಯುದ್ಧದಲ್ಲಿ ಅವರ ಕಡೆ ೮ ನೆಯ ೧ ಭಾಗದಷ್ಟು ಸೈನ್ಯವು ನಷ್ಟವಾಗಿರುವುದು. ಈ ರಣರಂಗದಲ್ಲಿ ಜರ್ಮನರ ದಂಡಯಾತ್ರೆಯು ಬಲುಮಟ್ಟಿಗೆ ರಷ್ಯನರಿಂದ ತಡೆಯಲ್ಪಟ್ಟಿದೆ. ರಷ್ಯನರೇ ಶತ್ರುಗಳಮೇಲೆ ಬೀಳುತ್ತಿದ್ದಾರೆ. ರಷ್ಯನರು ಹಲವುಕಡೆ ತೋರಿಸಿರುವ ಯುದ್ಧಚಮತ್ಕಾರಗಳು ಜರ್ಮನರನ್ನು ಮುಖಗೆಡಿಸಿಬಿಟ್ಟಿವೆ. ರಷ್ಯನರ ಕಡೆಯ ಸೇನಾಪತಿಯ ಯುಕ್ತಿಸಾಮರ್ಥ್ಯಗಳು ಪ್ರಶಂಸೆಮಾಡಲ್ಪಡುತ್ತಿವೆ. ದಕ್ಷಿಣಭಾಗದಲ್ಲಿ ಕಾರ್ಪೇತಿಯನ್ ಪ್ರಾಂತದಲ್ಲಿ ರಷ್ಯನ್ ಸೈನ್ಯಗಳು ಅಪರಿಮಿತವಾಗಿರುವುದರಿಂದ ಆಸ್ಟ್ರಿಯನ್ ಸೈನ್ಯವು ಪ್ರತಿಭಟಿಸಲಾರದೆ ಬಯಲು ಪ್ರಾಂತಕ್ಕೆ ಓಡಿಹೋಗುತ್ತಿದೆ. ರಷ್ಯಾ ಎಲ್ಲೆಕಟ್ಟಿನಲ್ಲಿ ಮೊನ್ನೆ ತಾನೇ ನಡೆದ ಯುದ್ಧಗಳಲ್ಲಿ ಶತ್ರುಗಳ ಕಡೆ ೧ ಲಕ್ಷ ಮಂದಿ ಹತರಾಗಿರುವರೆಂದು ಊಹಿಸಲ್ಪಟ್ಟಿದೆ; ರಷ್ಯನರಲ್ಲೂ ಬಹಳ ನಷ್ಟವಾಗಿದೆ. ಆದರೂ ಈಗಿನ ಅವರ ಸ್ಥಿತಿಯು ವಿಜಯೋನ್ಮುಖವಾಗಿದೆ. ರಷ್ಯನರ ಫಿರಂಗಿಸೇನೆಯು ಬಲಹೀನವಾದುದೆಂದು ಜರ್ಮನರು ಯುದ್ಧಾರಂಭಕ್ಕೆ ಮುಂಚೆ ತಿಳಿದಿದ್ದರು. ಈಗ ಅದು ಬರಿಯ ಭ್ರಮೆಯೆಂದು ಅವರಿಗೆ ಗೊತ್ತಾಗಿರುವುದು. ರಷ್ಯನರಿಗೆ ಈಗಲೂ ಹೊಸಹೊಸ ಸೈನ್ಯಗಳು ಬಂದು ಕೂಡುತ್ತಿವೆ. ರಷ್ಯನರು ಆಸ್ಟ್ರಿಯಾದವರಮೇಲೆ ಕಾದಾಡುತ್ತಿರುವುದರಲ್ಲಿ ಅವರಿಗೆ ವಿಶೇಷವಾದ ಜಯಗಳೂ ಆಸ್ಟ್ರಿಯನ್ನರಿಗೆ ವಿಶೇಷವಾದ ಕಷ್ಟಗಳೂ ಆಗುತ್ತಿವೆ. ರಷ್ಯನ್ ಸೈನಿಕರು ನೀಡಾ ನದಿಯನ್ನು ದಾಂಟಿಕೋಟೆಗಳಿಂದ ರಕ್ಷಿತವಾಗಿದ್ದ ಆಸ್ಟ್ರಿಯನ್ನರ ೩ ಗ್ರಾಮಗಳನ್ನು ಮುತ್ತಿ, ಅದರಲ್ಲಿದ್ದ ೪೦ ಮಂದಿ ಉದ್ಯೋಗಿಗಳನ್ನೂ ೧೭೦೦ ಮಂದಿ ಸೈನಿಕರನ್ನೂ ಸೆರೆಹಿಡಿದಿದ್ದಾರೆ. ಡಿಸೆಂಬರ್ ತಿಂಗಳ ಮೊದಲನೆ ೩ ವಾರಗಳಲ್ಲಿ ರಷ್ಯನರು ಒಟ್ಟು ೫೦ ಸಾವಿರಮಂದಿ ಆಸ್ಟ್ರಿಯನ್ ಸೈನಿಕರನ್ನು ಸೆರೆಹಿಡಿದಿರುವರೆಂದು ರಷ್ಯಾದ ಅಧಿಕಾರಿಗಳು ಪ್ರಕಟಿಸಿದ್ದಾರೆ.

ಬುಜ್ರಾರಾಕಾನದಿಗಳ ಹತ್ತಿರ ಇನ್ನೂ ಯುದ್ಧವಾಗುತ್ತಲೇ ಇದೆ. ಉಬುಕ್ ಕಣಿವೆಗಳ ಹತ್ತಿರ ರಷ್ಯನರು ಶತ್ರುಗಳ ೯ ಯಂತ್ರದ ಫಿರಂಗಿಗಳನ್ನೂ ಸಾವಿರಾರು ಮಂದಿ ಸೇನಿಕರನ್ನೂ ಹಿಡಿದರು. ಮೂರುವಾರಗಳ ಕಾಲದಲ್ಲಿ ಪೋಲಾಂಡಿನಲ್ಲಿ ಜರ್ಮನರ ಕಡೆ ೬ ಲಕ್ಷ ಮಂದಿ ನಷ್ಟವಾಗಿರುವರೆಂದೂ ಬುಜಾರಾದ ಹತ್ತಿರದ ಯುದ್ಧದಲ್ಲೇ ೨ ಲಕ್ಷಮಂದಿ ಸತ್ತಿರುವರೆಂದೂ ಯುದ್ಧಕಲಾಭಿಜ್ಞರು ಊಹಿಸಿದ್ದಾರಂತೆ. ಬುಜಾರಾ-ರಾಕಾ-ಪಿಲಿಟ್ಜಾ-ನೀಡಾ ಎಂಬ ನದಿಗಳ ಬಳಿಯಲ್ಲಿ ನಡೆದ ಮಹಾಯುದ್ಧವು ೪ ಹೊಳೆಗಳ ಕಾಳಗವೆಂದು ಪ್ರಸಿದ್ಧವಾಗಿದೆ. ಈ ಬಳಿಯಲ್ಲಿ ಆಗಬೇಕಾಗಿದ್ದ ಮಹಾಯುದ್ಧವು ಮುಗಿದಂತೆಯೇ ಆಯಿತೆಂದು ಯುದ್ಧಕಲಾಪ್ರವೀಣರು ಹೇಳುತ್ತಾರೆ. ಜರ್ಮನರೂ ಆಸ್ಟ್ರಿಯನ್ನರೂ ಸಹ ಪೋಲಂಡಿನಲ್ಲಿ ಮುಂದಕ್ಕೆ ಬರದಂತೆ ಎಷ್ಟುಮಾಡಬೇಕೋ ಅಷ್ಟನ್ನೂ ರಷ್ಯನರು ಇಲ್ಲಿ ಮಾಡಿದರು. ಶತ್ರುಗಳಕಡೆ ಇಲ್ಲೇ ಬಹು ನಷ್ಟವಾಯಿತು. ಮುಖಾಮುಖಿಯಾಗಿ ಇಲ್ಲಿ ನಡೆದ ಯುದ್ಧದಲ್ಲಿ ರಷ್ಯನರ ಮುಂದೆ ಶತ್ರುಗಳು ನಿಲ್ಲದೆ ಹೋಗಿದ್ದಾರೆ. ರಷ್ಯನರು ಕ್ರೇಮಿಸ್ ಜೆಲೇಟಿನ್ ಎಂಬುದನ್ನೂ ರೊಮೇನಿಯಾದ ಎಲ್ಲೆಕಟ್ಟಿನ ಹತ್ತಿರವಿರುವ ಬುಕೋವಿನಾಕ್ಕೆ ಸೇರಿದ ಸೇಡೆಟ್ ಎಂಬುದನ್ನೂ ಆಕ್ರಮಿಸಿಕೊಂಡುದರಿಂದ ಪಶ್ಚಿಮಗೆಲೀಷಿಯಾದಲ್ಲೂ ಹಂಗೇರಿಯಾದಲ್ಲೂ ಯುದ್ಧಾನುಕೂಲವಾದ ಲೋಹಮಾರ್ಗಗಳು ಅವರ ಸ್ವಾಧೀನದಲ್ಲಿರುವಂತಾದುವು. ಆಸ್ಟ್ರಿಯನ್ ಪ್ರಜೆಗಳು ಬುಕೋವಿನಾವನ್ನು ಬಿಟ್ಟು ಹೋಗುತ್ತಿದ್ದಾರೆ. ಇದುವರೆಗೆ ಬುಕೋವಿನಾದಿಂದಲೂ, ಟ್ರಾನ್ಸಿಲ್ವಾನಿಯಾದಿಂದಲೂ ಬಹುಶಃ ೩೦ ಸಾವಿರ ಮಂದಿ ರುಮೇನಿಯಾಕ್ಕೆ ಓಡಿಹೋಗಿದ್ದಾರೆ. ಈಗ ಆಸ್ಟ್ರಿಯಾವು ಸರ್ವಿಯಾದಮೇಲೆ ಪ್ರತಿಭಟಿಸುವುದಕ್ಕೆ ಇಷ್ಟವಿಲ್ಲದೆ ತನ್ನ ಶಕ್ತಿಯನ್ನೆಲ್ಲಾ ರಷ್ಯಾದಮೇಲೆ ಪ್ರಯೋಗಿಸಬೇಕೆಂದು ಸಂಕಲ್ಪಿಸಿದೆಯಂತೆ. ಸೆರಾಜೀವೋ ಪಟ್ಟಣದಮೇಲೆ ಸರ್ವಿಯನ್ನರು ಹೋಗಿ ಬೀಳುವುದರಲ್ಲಿದ್ದಾರೆ. ಅಲ್ಲಿನ ಪ್ರಜೆಗಳು ತತ್ತರಿಸುತ್ತಿದ್ದಾರೆ. ಹಂಗೇರಿ ರಾಷ್ಟ್ರದಲ್ಲಿ ಸರ್ವಿಯನ್ ಸೈನ್ಯಗಳು ಜಯಶೀಲವಾಗಿ ಸಾಗುತ್ತಿವೆ. ಬುಡಾಪೆಸ್ಟ್ ಪಟ್ಟಣದ ಪ್ರಜೆಗಳು ಭಯಪಟ್ಟಿದ್ದಾರೆ. ವಿಯನ್ನಾ ಪಟ್ಟಣದ ಜನರು ಸಂಧಿಮಾಡಿಕೊಳ್ಳುವುದು ಅವಶ್ಯವೆಂದು ತಮ್ಮ ಅಭಿಪ್ರಾಯವನ್ನು ಪ್ರಭುತ್ವದವರಿಗೆ ತಿಳಿಯಪಡಿಸಿಕೊಳ್ಳಬೇಕೆಂದು ಇದ್ದಾರೆ. ಈ ಪ್ರಯತ್ನಕ್ಕಾಗಿ ಗುಂಪುಕೂಡಿದ ಪ್ರಜೆಗಳನ್ನು ಪೊಲೀಸರು ಗುಂಡುಹೊಡೆದು ಚದರಿಸುತ್ತಿದ್ದಾರೆ.

ತುರ್ಕಿ

ಕಾಕಸಸ್ ಪ್ರಾಂತದಲ್ಲಿ ತುರ್ಕಿಯವರಿಗೂ ರಷ್ಯನ್ನರಿಗೂ ಕಳೆದ ವಾರದಲ್ಲಿ ಭೀಕರವಾದ ಯುದ್ಧಗಳಾಗಿವೆ. ರಷ್ಯನ್ನರಿಗೇ ಜಯಲಾಭವಾಗಿದೆ. ನಾರ್ಯಾಕಮ್ಯೆಚ್ ಹತ್ತಿರ ಇರುವ ವೇರ್ಕ್ಹೌ ಎಂಬ ಗ್ರಾಮಕ್ಕೆ ರಷ್ಯನರು ಮುತ್ತಿದಾಗ ತುರ್ಕಿಯವರು ವೀರಾವೇಶದಿಂದ ಕಾದಾಡಿದರು. ಅವರ ಕಡೆ ಬಹಳಮಂದಿ ಸತ್ತರು. ೧೮೩೦ ಮಂದಿಯನ್ನು ರಷ್ಯನರು ಸೆರೆಯಾಗಿ ಹಿಡಿದರು. ಮಿತ್ರಮಂಡಲಿಯವರ ನೌಕಾದಳವು ಕಾನ್ಸ್ಟ್ಯಾಂಟಿನೋಪಲ್ಲಿನಮೇಲೆ ಬಂದು ಬೀಳುವುದೆಂಬ ಭಯವು ಅಲ್ಲಿನ ತುರ್ಕಿ ಸೈನಿಕೋದ್ಯೋಗಿಗಳಿಗೆ ಉಂಟಾಗಿದೆಯಂತೆ. ಡೆಡೆಗಾಚಿಯ ಮೂಲಕವಾಗಿ ಕಾನ್ಸ್ಟ್ಯಾಂಟಿನೋಪಲ್ಲಿಗೆ ಹೋಗುತ್ತಿದ್ದ ಸಾಮಗ್ರಿಗಳನ್ನು ಇಂಗ್ಲೀಷ್ ಫ್ರೆಂಚ್‌ರ ಹಡಗುಗಳು ತಡೆದುಬಿಟ್ಟಿವೆ. ಕಾಕಸಸ್‌ನಲ್ಲಿ ನಾರಿಕಾಮಷ್ಟಿನ ಹತ್ತಿರ ನಡೆದ ಯುದ್ಧದಲ್ಲಿ ತುರ್ಕಿಯ ೧೫ ಮಂದಿ ಸೈನಿಕೋದ್ಯೋಗಿಗಳೂ, ೬ ದೊಡ್ಡ ಫಿರಂಗಿಗಳೂ, ೧೪ ಸಣ್ಣ ಫಿರಂಗಿಗಳೂ, ೫೦ ಪದಾತಿಗಳ ಪಟಾಲಮೂ ಸಹ ರಷ್ಯನರಿಗೆ ಸಿಕ್ಕಿರುವರು. ಅದೇ ಸುತ್ತಿನಲ್ಲಿ ನಡೆದ ಯುದ್ಧದಲ್ಲಿ ತುರ್ಕಿಯ ಕಡೆಯ ೫೦೦೦ ಮಂದಿ ಸೈನಿಕರೂ ೪೦ ಮಂದಿ ಉದ್ಯೋಗಿಗಳೂ ಅನೇಕ ಮಂದಿ ವೈದ್ಯರೂ ರಷ್ಯನರಿಗೆ ಸೆರೆಸಿಕ್ಕಿರುವರು. ಇನ್ನೊಂದುಕಡೆಯಲ್ಲಿ ೭೦೦ ಮಂದಿ ಸೈನಿಕರನ್ನೂ ೪ ದೊಡ್ಡ ಫಿರಂಗಿಗಳನ್ನೂ ಹಿಡಿದು, ಉಳಿದ ತುರ್ಕಿ ಸೈನಿಕರನ್ನು ಓಡಿಸಿಬಿಟ್ಟಿರುವರು. ಕಾಕಸಸ್ ಪ್ರಾಂತದಲ್ಲೂ ಮಂಜು ವಿಪರೀತವಾಗಿ ಸುರಿಯುತ್ತಿರುವುದರಿಂದ ಸೈನಿಕರು ಬಲು ತೊಂದರೆಪಡುತ್ತಿದ್ದಾರೆ. ತುರ್ಕಿಯ ಯುದ್ಧಾಂಗಮಂತ್ರಿಯೂ ನೌಕಾದಳ ಮಂತ್ರಿಯೂ ರಷ್ಯಾ-ಸರ್ವಿಯಾ ಪ್ರಾಂತದ ಯುದ್ಧಸ್ಥಲಕ್ಕೆ ಹೋಗಿ ಕಾದಾಡುತ್ತಿದ್ದಾರೆ. ಕೋಶಾಧ್ಯಕ್ಷ ಮಂತ್ರಿಯು ರಾಜೀನಾಮೆಕೊಟ್ಟಿದ್ದಾನೆ. ಸ್ವದೇಶಾಂಗಮಂತ್ರಿಯಾದ ತಲ್ಲತ್‌ಬೇರವರು ಯುದ್ಧ-ನೌಕಾ-ಕೋಶ-ಇವೆಲ್ಲ ಶಾಖೆಗಳ ಮಂತ್ರಿತ್ವವನ್ನು ವಹಿಸಿಕೊಂಡಿದ್ದಾರೆ. ತುರ್ಕಿಯಲ್ಲಿ ಧನಾಭಾವದ ಕೊರತೆಯು ಬಹಳವಾಗಿದೆ. ತಕ್ಕಷ್ಟು ಹಣವು ಬೊಕ್ಕಸದಲ್ಲಿಲ್ಲದಿದ್ದರೂ ಸರ್ಕಾರದವರು ನೋಟುಗಳನ್ನು ಸುಮ್ಮನೆ ಪ್ರಕಟಿಸುತ್ತಿದ್ದಾರಂತೆ. ಸೈನ್ಯಕ್ಕೆ ಬೇಕಾದ ಸಾಮಗ್ರಿಗಳನ್ನು ಬಲಾತ್ಕಾರದಿಂದ ಪ್ರಜೆಗಳ ಮೂಲಕ ಸುಲಿಯುತ್ತಿದ್ದಾರೆ. ಪ್ರಜೆಗಳ ಅವಸ್ಥೆಯು ಶೋಚನೀಯವಾಗುತ್ತಿದೆ. ತುರ್ಕಿಯ ನೌಕಾಸೈನ್ಯವು ಕಪ್ಪುಸಮುದ್ರದಲ್ಲಿನ ರಷ್ಯನ್ ನೌಕಾದಳದಮೇಲೆ ಬಿದ್ದು ನೀರಿನಲ್ಲಿ ಮದ್ದಿನ ಗೋಳಗಳನ್ನು ಬಿಡುತ್ತಿದ್ದ ೩ ಹಡಗುಗಳನ್ನು ಮುಳುಗಿಸಿಬಿಟ್ಟಿತೆಂದು ಪ್ರಕಟಿಸಿರುವರು. ಇದು ಸುಳ್ಳೆಂದು ರಷ್ಯನ್ ಸರ್ಕಾರದವರು ಪ್ರಕಟಮಾಡಿರುವುದಲ್ಲದೆ ಈ ತೀರಕ್ಕೆ ಬ್ರೆಸ್ಲಾ ಎಂಬ ಹಡಗು ಬಂದು ತನ್ನ ತೀವ್ರಗಮನದಿಂದ ಆಗಾಗ್ಗೆ ತಪ್ಪಿಸಿಕೊಂಡು ಓಡಿಹೋಗುತ್ತಿರುವುದೆಂದೂ ಯುದ್ಧವು ನಡೆದುದಿಲ್ಲವೆಂದೂ ಹೇಳಿರುವರು. ಅದರಂತೆಯೇ ಕಕೇಷಿಯಾ ಪರ್ವತಪ್ರಾಂತದಲ್ಲಿ ನಾವು ಬಲವಾಗಿ ಕಾದಾಡಿ ಅರ್ಡೆಹಾನನ್ನು ಹಿಡಿದುಕೊಂಡೆವೆಂದು ತುರ್ಕಿಯವರು ತಿಳಿಯಿಸಿದ್ದಾರೆ. ರಷ್ಯನರಾದರೊ ಅದು ಸುಳ್ಳೆಂದೂ ಅಲ್ಲಿನ ಯುದ್ಧದಲ್ಲಿ ನಮಗೇ ಜಯವುಂಟಾಗಿರುವುದೆಂದೂ, ತುರ್ಕಿಯವರ ೯ ನೆಯ ನಂ|| ಸೇನೆಯೆಲ್ಲವೂ ನಮಗೆ ವಶವಾಗಿರುವುದೆಂದೂ, ಉಳಿದವರನ್ನೆಲ್ಲಾ ನಾವು ಓಡಿಸುತ್ತಿರುವೆವೆಂದೂ, ಅಲ್ಲಿನ ತುರ್ಕಿ ಸೇನೆಯಮೇಲೆ ಅಧಿಪತಿಯಾಗಿದ್ದ ಜನರಲ್ಲನ್ನೂ ಇನ್ನು ಮೂವರು ಡಿವಿಜನಲ್ ಕಮ್ಯಾಂಡರುಗಳನ್ನೂ ನಾವು ಹಿಡಿದುಕೊಂಡಿದ್ದೇವೆಂದೂ ಪ್ರಕಟಿಸಿದ್ದಾರೆ. ತುರ್ಕಿಯವರು ೧೦೦ ಕ್ಕೆ ೬ ರ ಬಡ್ಡಿಯಮೇರೆ ೫೦ ಲಕ್ಷ ಪೌನುಗಳನ್ನು ಸಾಲತೆಗೆಯುವ ವಿಷಯದಲ್ಲಿ ಅಲ್ಲಿನ ಪಾರ್ಲಿಮೆಂಟಿನ ಅನುಮತಿಯನ್ನು ಕೇಳಿರುವರಂತೆ.

ಆಕಾಶವಿಮಾನಗಳು.

ಬೆಲ್ಜಿಯಂ ಸಮುದ್ರತೀರ ಪ್ರಾಂತದಲ್ಲಿ ಜರ್ಮನರ ಪ್ರಯತ್ನಗಳನ್ನು ಭಂಗಪಡಿಸುವ ವಿಷಯದಲ್ಲಿ ಕೆಲಸಮಾಡುವ ಮಿತ್ರಮಂಡಲಿಯವರ ಹಡಗುಗಳಿಗೆ ಸಹಾಯವಾಗಿ ಆಂಗ್ಲವೈಮಾನಿಕರು ಸಿಡಿಮದ್ದುಗಳನ್ನೂ ಬಾಣಗಳನ್ನೂ ಪ್ರಯೋಗಿಸಿ ಬಹಳ ಸಹಾಯಮಾಡುತ್ತಿರುವರು. ಮತ್ತು ಶತ್ರುಗಳು ಆಕಾಶದಲ್ಲಿ ಏನೇನು ಕೆಲಸ ಮಾಡುವರೆಂಬುದನ್ನು ಆಕಾಶದಲ್ಲೇ ತಿರುಗಿ ತಿಳಿಯುತ್ತಲೂ ಜರ್ಮನರ ಜಲಾಂತರ್ಗಾಮಿಗಳ ಸುಳಿವನ್ನು ಅರಿಯುತ್ತಲೂ ಇರುವುವು. ಮಿತ್ರಮಂಡಲಿಯವರು ಹಿಡಿದ ಸೆಂಟ್ ಜಾರ್ಜ್ ಎಂಬ ಊರಿನ ಮೇಲೆ ಜರ್ಮನ್ ವೈಮಾನಿಕರು ಸಿಡಿಮದ್ದುಗಳನ್ನು ಬಹಳವಾಗಿ ಹಾಕಿರುವರು. ಮತ್ತೂ ಅವರ ಕಡೆಯ ೬ಮಂದಿ ವೈಮಾನಿಕರು ಸಮುದ್ರತೀರದ ಡಂಕರ್ಕ್ ಎಂಬ ಪಟ್ಟಣದ ಮೇಲೆ ಅರ್ಧಗಂಟೆಯ ಕಾಲದೊಳಗಾಗಿ ತೀಕ್ಷ್ಣವಾದ ಸಿಡಿಮದ್ದುಗಳನ್ನು ಹಾಕಿ ಎಲ್ಲ ಬೀದಿಗಳಲ್ಲೂ ಬೆಂಕಿಯನ್ನು ಹೊತ್ತಿಸಿ ಕಟ್ಟಡುಗಳು ಸುಟ್ಟುಹೋಗುವಂತೆ ಮಾಡಿದರು. ೧೫ ಮಂದಿ ಸತ್ತರು; ೩೦ ಮಂದಿಗೆ ಗಾಯವಾಯಿತು. ಅಲ್ಲಿದ್ದ ಸೈನಿಕರು ವಿಮಾನಗಳ ಮೇಲೆ ಫಿರಂಗಿಗುಂಡುಗಳನ್ನು ಹೊಡೆದರು. ಆದರೆ ಅವು ಏಟಿಗೆ ಸಿಕ್ಕದೆ ತಪ್ಪಿಸಿಕೊಂಡುಹೋದುವು. ನಾನ್ಸಿ ಮೊದಲಾದ ಫ್ರೆಂಚರ ಪಟ್ಟಣಗಳ ಮೇಲೂ ಜರ್ಮನರ ಆಕಾಶವಿಮಾನಗಳು ಸಂಚರಿಸಿಕೊಂಡು ಹೋಗುತ್ತಿವೆ.

ಹಡಗುಗಳು.

ಫಾರ್ಮಿಡಿಲ್ ಎಂಬ ಇಂಗ್ಲೀಷರ ಒಂದು ಯುದ್ಧದ ಹಡಗು ಇಂಗ್ಲೀಷ್ ಸಮುದ್ರಕಾಲ್ವೆಯಲ್ಲಿ ಮದ್ದಿನ ಗೋಳಕ್ಕೆ ಬಡಿದೋ ಅಥವಾ ಮತ್ತಾವ ಕಾರಣದಿಂದಲೋ ಜನವರಿ ಪ್ರಾರಂಭದಿನದಲ್ಲಿ ಮುಳುಗಿಹೋಯಿತು. ಇದರಲ್ಲಿದ್ದವರಲ್ಲಿ ೨೦೧ ಮಂದಿಗಳು ಬೇರೆ ಹಡಗಿನ ಸಹಾಯದಿಂದ ರಕ್ಷಿಸಲ್ಪಟ್ಟರು. ಉಳಿದ ಬಹುಶಃ ೪೦೦ ಮಂದಿಗಳು ಜಲಸಮಾಧಿಗೊಂಡರು. ಈ ಹಡಗಿನಲ್ಲಿ ೧೨ ಅಂಗುಲದ ಬಾಯಿಯ ೪ ಫಿರಂಗಿಗಳೂ ೬ ಅಂಗುಲ ಬಾಯಿಯ ೧೨ ಫಿರಂಗಿಗಳೂ ಇಡಲ್ಪಟ್ಟಿದ್ದುವು. ೧೮ ಅಂಗುಲದ ಟಾರ್ಪೆಡೋ ತಿದಿಗಳು ನೀರಿನಲ್ಲಿ ಮುಳುಗಿಕೊಂಡೇ ಇರುವಂತೆ ಇದಕ್ಕೆ ಜೋಡಿಸಲ್ಪಟ್ಟಿದ್ದುವು. ಗಂಟೆಗೆ ೧೮ ಮೈಲಿಯಂತೆ ಪ್ರಯಾಣ ಮಾಡುತ್ತಿದ್ದಿತು.

ಆಸ್ಟ್ರಿಯಾದವರ ೪ ಯುದ್ಧದ ಹಡಗುಗಳು ಬೆಲ್ಗ್ರೇಡ್ ಪಟ್ಟಣದ ಕೋಟೆಯ ಮೇಲೆ ಫಿರಂಗಿ ಗುಂಡುಗಳನ್ನು ಹಾರಿಸಿರುವುವು.

ಮೈಸೂರ್ ಸ್ಟಾರ್.

ಸನ್ ೧೯೧೫ ನೆಯ ಜನವರಿ ತಾ|| ೧೧ನೆಯ ಭಾನುವಾರ.

ಯುದ್ಧದ ಪರಿಸಮಾಪ್ತಿ ಯಾವಾಗ?

ಬರಬರುತ್ತ ಯುದ್ಧವಾರ್ತೆಗಳನ್ನು ಕೇಳುವುದೂ ಓದುವುದೂ ಸಹ ಜುಗುಪ್ಸೆಗಿಟ್ಟಿರುವುದು. ಪ್ರತಿದಿನದ ಸಾವಿಗೆ ಅಳುವವರಾರು ಎನ್ನುವಂತೆ ಇದರವಸ್ಥೆಯಾಗಿರುವುದು. ಹಲವು ಸಿದ್ಧಾಂತಿಗಳು ೧೯೧೪ನೆ ವರ್ಷದ ಅಂತ್ಯದೊಳಗಾಗಿ ಯುದ್ಧದ ಪರಿಸಮಾಪ್ತಿಯನ್ನೂ ಜರ್ಮನ್ ಚಕ್ರವರ್ತಿಯವರ ಅವತಾರ ಪೂರ್ತಿಯನ್ನೂ ಸೂಚಿಸಿದ್ದರು. ಅವರ ಸದ್ದು ಅಡಗಿಹೋಯಿತೇ ಹೊರತು ಯುದ್ಧಾಂಗಣದ ಫಿರಂಗಿಗಳ ಸದ್ದೇನೂ ಅಡಗಲಿಲ್ಲ. ಪಾಶ್ಚಾತ್ಯಯುದ್ಧಕಲಾವಿಶಾರದರು ಈಗಿನ ಯುದ್ಧವು ವರ್ಷಾನುಗಟ್ಟಲೆ ನಡೆಯಬಲ್ಲುದೆಂದು ಊಹಿಸುತ್ತಿದ್ದಾರೆ. ಆಂಗ್ಲಸೇನಾ ಮುಖ್ಯಮಂತ್ರಿಯಾಗಿರುವ ಅರ್ಲ್ ಕಿಚನರ್‌ರವರು ಇದು ಮೂರುವರ್ಷಕ್ಕೆ ಕಡಮೆಯಿಲ್ಲದೆ ಸಾಗಬಹುದೆಂದು ಹೇಳಿರುತ್ತಾರೆ. ಲಾರ್ಡ್ ಕರ್ಜನ್‌ರವರೂ ಹಾಗೆಯೇ ಅಭಿಪ್ರಾಯಪಟ್ಟಿದ್ದಾರೆ. ಈಗಿನ ಯುದ್ಧಕ್ರಮವನ್ನೂ ಸ್ಥಿತಿಗತಿಗಳನ್ನೂ ಪರಿಶೀಲಿಸಿದರೆ ಅದು ನಿಜವೆಂದೇ ಒಪ್ಪಬೇಕಾಗುವುದು. ಜರ್ಮನರು ಪ್ರಬಲರಾದ ಮತ್ತು ಗರ್ವಿಗಳಾದ ಶತ್ರುಗಳು. ಅವರು ಬಹುಕಾಲದಿಂದ ಅಣಿಮಾಡಿಕೊಂಡು ಸಂಧಿಸಾಧಿಸಿ ಹೂಡಿದ ಈ ಯುದ್ಧದಲ್ಲಿ ಇತರರಿಗೆ ಅಡಿಯಾಳಾಗಿ ತಲೆತಗ್ಗಿಸಿ, ಕೃತಕರ್ಮಕ್ಕೆ ಪಶ್ಚಾತ್ತಾಪಪಟ್ಟು, ಸಂಧಿನಿಬಂಧನೆಗಳಿಗೊಪ್ಪಿ, ಯುದ್ಧವನ್ನು ನಿಲ್ಲಿಸುವ ಸ್ವಭಾವದವರಾಗಿಲ್ಲ. ಸಂಪೂರ್ಣವಾಗಿ ಆತ್ಮನಾಶವಾಗುವವರೆಗೂ ಬಿಡದೆ ಹೋರಾಡುವ ಹುಂಜನಂತೆ ಅವರ ಸ್ಥಿತಿಯಾಗಿದೆ. ಅಂಥವರನ್ನು ಸಂಪೂರ್ಣ ನಾಶಮಾಡುವುದೆಂದರೆ ಸಾಮಾನ್ಯವಾದ ಕಾರ್ಯವಲ್ಲ. ಇದುವರೆಗೂ ಅರ್ಬುದದ ಗಟ್ಟಲೆಯ ಹಣವೂ ಲಕ್ಷಾಂತರಗಟ್ಟಲೆಯ ಪ್ರಾಣಗಳೂ ರಣದೇವತೆಗೆ ಬಲಿಯಾಗಿದ್ದರೂ, ಜರ್ಮನರ ದೇಶದೊಳಕ್ಕೆ ಅವರ ಪ್ರತಿರೋಧಿಗಳು ನುಗ್ಗಿ ಅವರ ಸಂಧಿಬಂಧಗಳನ್ನು ಮುರಿಯುವ ಪ್ರಸಕ್ತಿಯನ್ನು ಇನ್ನೂ ಉಂಟುಮಾಡಿಲ್ಲ. ಪಶ್ಚಿಮರಣರಂಗದಲ್ಲೂ ಪೂರ್ವರಣರಂಗದಲ್ಲೂ ಜರ್ಮನರೇ ಪರರಾಷ್ಟ್ರಗಳಿಗೆ ನುಗ್ಗಿ ಯುದ್ಧಾಗ್ನಿಯ ಬೇಗೆಯಿಂದಾಗುವ ಪರಿಪರಿಯ ಅನರ್ಥಗಳೆಲ್ಲಾ ಪರರಾಷ್ಟ್ರದ ಪ್ರಜೆಗಳಿಗೇ ಉಂಟಾಗುವಂತೆ ಮಾಡಿದ್ದಾರೆ. ಮತ್ತೂ ತಮಗಾದ ಅರ್ಥನಾಶದಲ್ಲಿ ಅಷ್ಟಿಷ್ಟು ಭಾಗವನ್ನು ಪರದೇಶದ ಪ್ರಜೆಗಳನ್ನು ಹೊಯ್ದು ಬಡಿದು ಕಿತ್ತುಕೊಳ್ಳುತ್ತಲಿದ್ದಾರೆ. ಅವರ ಶಸ್ತ್ರಾಸ್ತ್ರಗಳ ಸಂಭಾರವಂತು ೨೦-೩೦ ವರ್ಷಗಳಿಂದ ಶೇಖರಿಸಲ್ಪಟ್ಟಿರುವುದಾದಕಾರಣ, ಅವು ಈಗಲೇ ಮುಗಿಯುವಂತೆ ಕಾಣಲಿಲ್ಲ. ಮತ್ತೂ ಜಗತ್ತಿಗೆ ಅಗ್ನ್ಯಸ್ತ್ರಗಳನ್ನು ಒದಗಿಸಿಕೊಡುವ ಮಹಾಕಾರ್ಯಾಲಯವೇ ಜರ್ಮನಿಯಲ್ಲಿರುವಾಗ ಅದರಲ್ಲಿ ಅಪರಿಮಿತವಾಗಿ ನೂತನಾಸ್ತ್ರರಚನೆಗಳು ಆಗುವಲ್ಲಿ ಅಡ್ಡಿಯೂ ತೋರಲಿಲ್ಲ. ಈಗ ಅವರು ಮಾಡಿದ ದಂಡಯಾತ್ರೆಯಲ್ಲಿ ಅಪಾರವಾದ ನಷ್ಟವು ಅವರಿಗಾಗಿದ್ದರೂ ಬೆಲ್ಜಿಯಮ್ಮಿನ ಮುಕ್ಕಾಲುಭಾಗವೆಲ್ಲಾ ಅವರ ವಶವಾಗಿರುವುದರಿಂದ ಅವರ ನಷ್ಟಕ್ಕೆ ಪ್ರತಿಫಲವಿಲ್ಲದೆಯೇನೂ ಹೋಗಿಲ್ಲ. ಇಷ್ಟಕ್ಕೇ ಯುದ್ಧವು ನಿಂತರೂ ಅವರೇ ಜಯಶೀಲರಾದಂತೆಯೇ ಆಗುವುದು. ಆದರೆ ಕೆಟ್ಟವರೇನೋ ಹಲವರಾಗುವರು. ಆಸ್ಟ್ರಿಯನ್ನರು ಜರ್ಮನರನ್ನು ನಂಬಿ ಬಹಳ ಅರ್ಥಹಾನಿ ಪ್ರಾಣಹಾನಿ ಮಾನಹಾನಿ ದೇಶಹಾನಿಗಳನ್ನು ಹೊಂದಿರುವರು. ತುರ್ಕಿಯವರ ಅವಸ್ಥೆಯೂ ಹಾಗೆಯೇ ಆಗಿರುವುದು. ಆದರೆ ಈಗಿನ ಯುದ್ಧದಿಂದ ಯೂರೋಪು ಖಂಡದಲ್ಲಿ ಮಾತ್ರವೇ ಅಲ್ಲದೆ ಪ್ರಪಂಚದ ಯಾವುದೊಂದು ಮೂಲೆಯಲ್ಲಿಯೂ

ಅದರ ಸಂಬಂಧದಿಂದುಂಟಾಗಿರುವ ಅನರ್ಥಗಳು ಅಪರಿಮಿತವಾಗಿರುವುವು. ಅದನ್ನು ಪರ್ಯಾಲೋಚಿಸಿ ಹೇಗಾದರೂ ಇದನ್ನು ಇಷ್ಟಕ್ಕೇ ಶಾಂತಿಗೊಳಿಸಿಬಿಡುವುದು ಆವಶ್ಯಕವೆಂದು ತಟಸ್ಥ ರಾಷ್ಟ್ರದವರಾರಾದರೂ ಮಧ್ಯವರ್ತಿಗಳಾಗಿ ನಿಂತು ಬಗೆಹರಿಸಲು ಯತ್ನಿಸಿದರೂ, ಅದು ಸುಸಾಧ್ಯವೆಂದು ತೋರಿಬರುವುದಿಲ್ಲ. ಬೆಲ್ಜಿಯಮ್ಮಿನಿಂದ ಜರ್ಮನರನ್ನು ಬಿಡುಗಡೆಮಾಡದಿದ್ದರೆ ಅಂಥ ಸಂಧಿಗೆ ಮಿತ್ರಮಂಡಲಿಯವರೆಂದಿಗೂ ಒಪ್ಪುವುದಿಲ್ಲ. ಹಾಗೆ ಒಪ್ಪುವುದು ಧರ್ಮವೂ ಅಲ್ಲ; ಯುಕ್ತವೂ ಅಲ್ಲ; ಗೌರವವೂ ಅಲ್ಲ. ಆಂಗ್ಲಪ್ರಭುತ್ವದವರ ಮತ್ತು ಫ್ರಾನ್ಸಿನವರ ಅವಲಂಬನಧೈರ್ಯದಮೇಲೆ ಬೆಲ್ಜಿಯಮ್ಮು ಆನೆಯಮೇಲೆ ಪ್ರತಿಭಟಿಸಿದ ಕುರಿಮರಿಯಂತೆ ಜರ್ಮನರಿಗೆ ಇದಿರಾಗಿ ಸರ್ವನಾಶಮಾಡಿಕೊಂಡಿರುವುದು. ಅದರ ಪೂರ್ವಸ್ಥಿತಿಯನ್ನು ಅದಕ್ಕೆ ಉಂಟುಮಾಡಿಕೊಡದೆ ನಾವು ಯುದ್ಧದಿಂದ ವಿರಾಮವನ್ನು ಹೊಂದುವುದಿಲ್ಲವೆಂದು ಆಂಗ್ಲಪ್ರಭುತ್ವದವರು ವಾಗ್ದಾನಮಾಡಿರುವರು. ಅದಕ್ಕೆ ಅವರು ಭಂಗವನ್ನು ತಂದುಕೊಳ್ಳಲಾಗುವುದಿಲ್ಲ. ಮತ್ತೂ ಪ್ರಬಲವಾದ ಶತ್ರುವಿನ ಮನೋಗತವು ಈಗ ಚೆನ್ನಾಗಿ ವ್ಯಕ್ತಪಟ್ಟಿರುವಾಗ ಅದನ್ನು ಬೆಲ್ಜಿಯಮ್ಮಿನಂಥ ಮಗ್ಗುಲದೇಶಕ್ಕೆ ತಂದು ನಿಲ್ಲಿಸಿಕೊಳ್ಳುವುದೆಂದರೆ ಮನೆಮಗ್ಗುಲಿಗೆ ದಾವಾಗ್ನಿಯ ಪ್ರತಿಷ್ಠೆಯನ್ನು ಮಾಡಿಕೊಂಡಂತೆಯೇ ಆಗುವುದು. ಜರ್ಮನರಾದರೊ ಇನ್ನೂ ತಮ್ಮ ಕೈಯು ಅಸ್ತಮುಖವಾಗಿರುವುದೆಂದು ಎಂದಿಗೂ ತಿಳಿದಿಲ್ಲ. ಬೆಲ್ಜಿಯಮ್ಮನ್ನು ಮಿತ್ರಮಂಡಲಿಯವರು ತಮ್ಮಿಂದಬಿಡಿಸಿಕೊಳ್ಳುವುದೆಂಬ ಮಾತು ಗಗನಕುಸುಮಸದೃಶವೆಂದು ಅವರು ನೆನೆದಿರುವರು. ಈಗಲೂ ಅವರ ಹಮ್ಮೂ ಕುಟಿಲಯುಕ್ತಿಪ್ರಧಾನವೂ ಎಷ್ಟರಮಟ್ಟಿಗಿರುವುವೆಂಬುದನ್ನು ಅಮೇರಿಕಾದೇಶದಲ್ಲಿ ಜರ್ಮನ್ ಚಕ್ರವರ್ತಿಯ ಆರ್ಥಿಕಪ್ರತಿನಿಧಿಯಾಗಿರುವ ಹೇಡೇರ್ನ್ ಬ್ಯೂಚಿ ಯೆಂಬುವರು ಸಂಧಿನಿಬಂಧನವಿಷಯವಾಗಿ ಸೂಚಿಸಿರುವ "ಷರತ್ತು"ಗಳನ್ನು ಕೇಳಿದರೆ ಆಶ್ಚರ್ಯವಾಗುರುವುದು. ಅವರ ಮುಖ್ಯಾಶಯವೇನೆಂದರೆ—

೧. ಜರ್ಮನರಿಗೆ ಯೂರೋಪುಖಂಡದ ಯಾವುದೊಂದು ಹೊಸಭಾಗವನ್ನೂ ಸೇರಿಸಿಕೊಳ್ಳಬೇಕೆಂಬ ಇಷ್ಟವು ಇಲ್ಲ. ಆದರೆ, ಯುದ್ಧಸ್ಥಿತಿಯ ವಿಷಯದ ತಮಗೆ ಇರುವ ಲೋಪಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ ತಮ್ಮ ದೇಶದ ಎಲ್ಲೆಕಟ್ಟಿನ ಕೆಲವು ಭಾಗಗಳನ್ನು ಅವರು ಆಕ್ರಮಿಸಿಕೊಳ್ಳುವರು.

೨. ಬೆಲ್ಜಿಯಮ್ಮು ಜರ್ಮನಿ ಸೇರಿಹೋಯಿತು. ಆಂಟ್ವರ್ಪು ಜರ್ಮನಿಗೆ ಸೇರದೆ ಕೈಬಿಟ್ಟುಹೋಗುವುದೆಂದರೆ ಅದು ಪೂರ್ಣಾಸಂಭವವು. ಬೆಲ್ಜಿಯಮ್ಮಿನವರಿಗೆ ಈಗ ಉಂಟಾಗಿರುವ ದುಸ್ಸ್ಥಿತಿಗೆ ಪರಿಹಾರವೇನೂ ಇಲ್ಲ. ಅದು ಅವರ ಸ್ವಯಂಕೃತಾಪರಾಧದ ಫಲ. ಇಂಗ್ಲೆಂಡ್ ಫ್ರಾನ್ಸ್‌ದೇಶಗಳಿಗೆ ಬೆಲ್ಜಿಯಮ್ಮಿನವರು ಸಾಮಂತರಾಜರಂತೆ ಕಾದಾಡುತ್ತಿದ್ದಾರೆ. ಆದರೂ ಬೆಲ್ಜಿಯಂ ಪ್ರಜೆಗಳು, ಬವೇರಿಯಾ-ವರ್ಟೆಂಬರ್ಗು-ಸ್ಯಾಕ್ಸನೀಪ್ರಜೆಗಳಂತೆ ಜರ್ಮನ್ ಸಾಮ್ರಾಜ್ಯಕ್ಕೆ ಒಳಪಡುವುದಿಲ್ಲವಾದರೂ, ಲಕ್ಸಂಬರ್ಗು ಮೊದಲಾದ ಜರ್ಮನ್ ಅಧಿನಿವೇಶಗಳಂತೆ ಬೆಲ್ಜಿಯಮ್ಮು ಇರುವುದು. ಬೆಲ್ಜಿಯಮ್ಮು ತಟಸ್ಥದೇಶವಾಗಿ ಇನ್ನು ಮುಂದೆ ಇರುವುದು ಅಸಂಭವವಾದುದರಿಂದ ಅದನ್ನು ತಪ್ಪಿಸಿಬಿಡಬೇಕು. ಆದರೆ ಇಂಗ್ಲೆಂಡ್ ಫ್ರಾನ್ಸಿನವರು ಜರ್ಮನಿಯಮೇಲೆ ದಂಡಯಾತ್ರೆ ಮಾಡದಿರುವಂತೆ ಬೆಲ್ಜಿಯಂದೇಶದ ನೌಕಾಶ್ರಯಗಳು ಜರ್ಮನರಿಂದ ಭದ್ರಮಾಡಲ್ಪಡಬೇಕು.

೩. ಇಂಗ್ಲೆಂಡಿನವರು ಉತ್ತರಸಮುದ್ರವನ್ನೆಲ್ಲಾ ಆಕ್ರಮಿಸಿಕೊಂಡಿದ್ದಾರೆ. ಸಮುದ್ರದ ಎಲ್ಲಾಭಾಗವೂ ತಮ್ಮದೇ ಎಂದೂ, ಇತರ ರಾಷ್ಟ್ರಗಳವರಿಗೆ ೩ ಮೈಲಿಗಳ ಪ್ರದೇಶವು ಮಾತ್ರ ಸಲ್ಲತಕ್ಕುದೆಂದೂ ಹೇಳುವ ಅವರ ಮಾತು ಸಲ್ಲತಕ್ಕುದಲ್ಲ. ಇಂಗ್ಲಾಂಡು-ಹಾಲೆಂಡು-ಫ್ರಾನ್ಸ್-ಬೆಲ್ಜಿಯಂ ಸಮುದ್ರತೀರಗಳೆಲ್ಲಾ ಯುದ್ಧಸಮಯದಲ್ಲೂ ತಟಸ್ಥವಾಗಿರುವಂತೆ ಮಾಡಲ್ಪಡಬೇಕು. ಅಮೇರಿಕನ್ನರು ಜರ್ಮನರೂ ಹೇಳುತ್ತಿರುವಂತೆ ಭೂಮಿಯಮೇಲಿರುವ ಇತರದ್ರವ್ಯವನ್ನು ಹಿಡಿದುಕೊಳ್ಳುವುದಕ್ಕೆ ಎಂಥ ಸ್ವಾತಂತ್ರ್ಯವಿರುವುದೋ, ಅಂಥ ಸ್ವಾತಂತ್ರ್ಯವು ಸಮುದ್ರದಮೇಲೂ ಇರುವುದನ್ನು ನಿರ್ಧಾರಗೊಳಿಸಬೇಕು. ಇಂಗ್ಲಾಂಡು ಜರ್ಮನಿಮೇಲೆ ವ್ಯಾಪಾರವಿಷಯಕವಾದ ಯುದ್ಧವನ್ನು ಮಾಡುತ್ತಿದನ್ನು ಅಮೇರಿಕಾದವರು ಮುಖ್ಯವಾಗಿ ಗಮನಿಸಬೇಕು.

೪. ಜರ್ಮನಿಯವರ ಅಧಿನಿವೇಶಗಳೆಲ್ಲಾ ಮರಳಿ ಅವರಿಗೆ ಒಪ್ಪಿಸಿಬಿಡಬೇಕು. ಜರ್ಮನ್ ದೇಶ ಜನಸಂಖ್ಯೆಯು ಹೆಚ್ಚುತ್ತಿರುವುದರಿಂದ ಬಿಳಿಯಜನರು ಇರುವುದಕ್ಕೆ ಯೋಗ್ಯವಾದ ನೂತನದೇಶಭಾಗಗಳು ಕೆಲವನ್ನವರಿಗೆ ಕೊಡಬೇಕು. ಜರ್ಮನರು ಅಮೇರಿಕಾಕ್ಕೆ ಹೋಗಲವಕಾಶವಿಲ್ಲದುದರಿಂದ ಮೊರಾಕೋವು ವಾಸಯೋಗ್ಯಪ್ರದೇಶದುದರಿಂದ ಅದನ್ನು ಅವರು ವಶಪಡಿಸಿಕೊಳ್ಳುವರು.

೫. ತಮ್ಮ ವ್ಯಾಪಾರಪ್ರಸಾರಕ್ಕೆ ಜರ್ಮನರು ತುರ್ಕಿಯವರೊಡನೆ ಸಂಬಂಧವನ್ನು ಕಲ್ಪಿಸಿಕೊಳ್ಳುವಂತೆ ಆ ಸ್ವಾತಂತ್ರ್ಯವನ್ನು ಅವರಿಗೆ ಬಿಟ್ಟುಕೊಡಬೇಕೆಂದರೆ ಪರ್ಷಿಯನ್ ಸಂಯುಕ್ತಾಗ್ರಭೂಶಿಖರದಿಂದ ಹಿಡಿದು ಡಾರ್ಡಿನಲ್ಸ್ ಜಲಸಂಧಿಯವರೆಗೂ ಜರ್ಮನರ ಅಧಿಕಾರಕ್ಕೆ ಒಪ್ಪಿಕೊಳ್ಳಬೇಕು.

೬. ಮೊಂಚೂರಿಯಾದಲ್ಲಿ ಜರ್ಮನ್ ಅಧಿಕಾರವು ಈಗಿರುವುದಕ್ಕಿಂತ ಸ್ವಲ್ಪಮಾತ್ರವೂ ಹೆಚ್ಚದು. ತುರ್ಕಿಯವರು ಅಪೇಕ್ಷಿಸಿದರೆ ಈಜಿಪ್ಟನ್ನು ಮರುಗೆ ಒಪ್ಪಿಸಿಬಿಡಬೇಕು.

೭. ಜರ್ಮನಿಯ ಪಕ್ಷವಾಗಿ ಕೆಲಸಮಾಡುವ ಇತರ ಸಣ್ಣಸಣ್ಣ ರಾಷ್ಟ್ರಗಳಾದ ಫಿನ್ಲಾಂಡು-ಪೋಲಾಂಡು-ದಕ್ಷಿಣಾಫ್ರಿಕಾದ ಬೋವರರಾಜ್ಯ ಇವು ಮೊದಲಾದುವುಗಳಿಗೆಲ್ಲಾ ಸ್ವಾತಂತ್ರ್ಯವನ್ನು ಕೊಟ್ಟುಬಿಡಬೇಕು.

೮. ಈ ಮೇಲೆಕಂಡ ವಿಷಯಗಳೆಲ್ಲಾ ನಡೆದರೆ ಜರ್ಮನರು ಕಳೆದ ೫೫ ವರ್ಷಗಳಿಂದ ಸಂಕಲ್ಪಿಸಿಕೊಂಡಿದ್ದ ಉದ್ದೇಶಗಳೆಲ್ಲಾ ನೆರವೇರುವುವು. ಜರ್ಮನಿಯಲ್ಲೂ ಆಸ್ಟ್ರಿಯಾದಲ್ಲೂ ವಾಸಮಾಡುತ್ತಿರುವ ೧೨ ಕೋಟಿಯೂ ೨೦ ಲಕ್ಷ ಪ್ರಜೆಗಳ ಸೌಖ್ಯಸ್ವಾತಂತ್ರ್ಯಗಳಿಗಾಗಿ ಈ ಮೇಲೆ ಕಂಡಂತೆ ಆಗಬೇಕೆಂದು ಅವರು ಅಪೇಕ್ಷಿಸುವರೇ ಹೊರತು ಜರ್ಮನಿದೇಶವು ಪ್ರಪಂಚದ ಮೇಲೆಲ್ಲಾ ಏಕಛತ್ರಾಧಿಪತ್ಯವನ್ನು ನಡಸಬೇಕೆನ್ನುವುದಕ್ಕಲ್ಲ ಎಂದು ಅವರು ಅಭಿಪ್ರಾಯಪಟ್ಟಿರುವರು.

ಜರ್ಮನ್ ಪ್ರಭುತ್ವದ ಆಶಯವು ನಿಜವಾಗಿಯೂ ಹೀಗೆಯೇ ಇದೆಯೆಂಬ ವಿಷಯದಲ್ಲಿ ಸಂಶಯವು ತೋರುವುದಿಲ್ಲ. ಆದರೆ ಸೂರ್ಯನು ಪಶ್ಚಿಮಸಮುದ್ರದಲ್ಲುದಿಸಿದರೂ ಇಂಥ ಸಂಧಿಯು ನಡೆಯುವುದು ಅಸಂಭವ. ಇಂಥ ಸಂಧಿಗೆ ಮಿತ್ರಮಂಡಲಿಯವರು ಒಪ್ಪಿಕೊಳ್ಳಬೇಕಾದರೆ ಅವರು ಕೈಗಳಿಗೆಲ್ಲಾ ಬಳೆಗಳನ್ನು ತೊಟ್ಟುಕೊಂಡವರಾಗಿರಬೇಕು. ಮೇಲೆಕಂಡ ಜರ್ಮನ್ ಪ್ರತಿನಿಧಿಯ ನಿಸ್ಪೃಹತ್ವಾಚ್ಛಾದನೆಯ ಮಾತು, ನಾನೂ ನನ್ನ ಮಕ್ಕಳೂ ತಲೆತಲಾಂತರದವರೆಗೂ ಅಪ್ರತಿಹತವಾಗಿ ಬದುಕಬೇಕೆಂಬ ಆಸೆಯು ನನಗೆ ಇರುವುದೇಹೊರತು ಧನಕನಕಾದಿ ವಸ್ತುಗಳಾವುವೂ ನನಗೆ ಬೇಡ ಎಂದು ಹೇಳುವ ವಂಚಕನ ಮಾತಿನಂತಿದೆ. ಜರ್ಮನರ ಈ ದುರಾಶೆಯ ಪರಿಮಿತಿಯು ಗೊತ್ತಾದ ಬಳಿಕವೂ ಕೂಡ ಮಿತ್ರಮಂಡಲಿಯವರು ಈಗಿನ ಯುದ್ಧಕ್ಕೆ ಶಾಂತಿಯನ್ನು ಈಗಲೇ ಕೋರುವುದುಂಟೆ? ಅದುಕಾರಣವೇ ಅವರು ಸ್ಥಿರಪ್ರತಿಜ್ಞಾರೂಢರಾಗಿರುವುದು ನ್ಯಾಯವಾಗಿರುವುದು. ಅವರಿಗೆ ಅನುಗುಣವಾಗಿ ಅವರ ಮಿತ್ರಕೋಟಿಯೂ ಪ್ರತಿಜ್ಞೆಗೆಯ್ದಿರುವುದು. "ಅರ್ಥಾತುರಾಣಾಂ ನಗುರುರ್ನಬಂಧುಃ" ಎಂಬಂತೆ ಜರ್ಮನರ ಈಗಿನಯುದ್ಧವು ದೇಶಾರ್ಜನ ನಿಮಿತ್ತವಾದುದರಿಂದ, ಯುದ್ಧಸಾಮಯಿಕ ಮರ್ಯಾದೆಗಳನ್ನೂ ಪಾಪಭೀತಿಯನ್ನೂ ಮೂಟೆಗಟ್ಟಿ ಫಿರಂಗಿಗಳ ಹೊಟ್ಟೆಗೆ ತುರುಕಿ, ದೊಡ್ಡ ಕೊಳ್ಳೆಗಾರರಂತೆ ಕೆಲಸಮಾಡುತ್ತಿರುವರು. ಅದನ್ನು ನೋಡಿ ಪ್ರಪಂಚದವರೆಲ್ಲಾ ಹೇಸುತ್ತಿರುವರು. ಸ್ಥಿತಿಗತಿಯು ಹೀಗಿರುವುದರಿಂದ ಯಾವುದಾದರೊಂದು ಪಕ್ಷದವರು ನಿಸ್ಸತ್ವವಾಗುವವರೆಗೂ ಈ ಯುದ್ಧವು ಕೊನೆಮುಟ್ಟುವುದು ಪುರುಷಪ್ರಯತ್ನದಲ್ಲಿ ಅಸಾಧ್ಯವೆಂದು ತೋರುತ್ತದೆ. ಈ ಯುದ್ಧದಿಂದ ನಿರ್ನಿಮಿತ್ತವಾಗಿ ಪ್ರಪಂಚದಲ್ಲಿ ಅನಂತಜನರು ವಾಚಾಮಗೋಚರವಾದ ಅನರ್ಥಕ್ಕೆ ಗುರಿಯಾಗುತ್ತಿರುವುದರಿಂದ, ಪರಮಕಾರುಣಿಕನಾದ ಭಗವಂತನು ಲೇಶಮಾತ್ರ ಪ್ರೇರಿಸಿದರೂ ಕ್ಷಣಮಾತ್ರದಲ್ಲಿ ಯುದ್ಧಶಾಂತಿಗೆ ದಾರಿಯನ್ನು ಮಾಡಬಲ್ಲನು. ಅಂಥ ಕಾಲವನ್ನು ಜಗದೀಶನು ಅನುಗ್ರಹಿಸುವವನಾಗಲಿ.

ಒಳದೇಶದ ವೃತ್ತಾಂತಗಳು

ರಾಜಾರವಿವರ್ಮರ ಚಿತ್ರಪಟಗಳಂತೆ ನಾನಾ ಬಣ್ಣಗಳಿಂದ ಚಿತ್ರಪಟಗಳನ್ನು ಮುದ್ರಣಮಾಡುವ ಶಿಲಾಯಂತ್ರವೊಂದು "ಶ್ರೀಕಂಠರಾಜ ಕ್ರೋಮೋಲಿಥೋ ಪ್ರೆಸ್" ಎಂಬ ಹೆಸರಿನಿಂದ ಬೆಂಗಳೂರಲ್ಲಿ ಎರಡನೆಯ ಕೌನ್ಸಿಲರ್ ಸರದಾರ್ ಎಂ. ಕಾಂತರಾಜ ಅರಸಿನವರ ಉದಾರಾಶ್ರಯದಿಂದ ಸ್ಥಾಪಿಸಲ್ಪಡುವುದಾಗಿರುವುದು.

ಗುಬ್ಬಿ ತಾಲ್ಲೋಕು ಕಡಬ ಗ್ರಾಮನಿವಾಸಿಯಾದ ನಿರ್ವಾಣಪ್ಪ ಎಂಬ ೧೪ ವರ್ಷದ ಹುಡುಗನು ಒಂದು ಹೋರಿಯನ್ನು ಮೇಯಿಸಲು ಹೊಲಕ್ಕೆ ಹಿಡಿದುಕೊಂಡುಹೋಗುವಾಗ್ಗೆ ಅದು ಅವನನ್ನು ತನ್ನ ಕೊಂಬಿನಿಂದ ತಿವಿದು ವಿಶೇಷ ಗಾಯ ಮಾಡಿದುದರಮೇಲೆ ಆ ಹುಡುಗನು ಬೆಂಗಳೂರ ವಿಕ್ಟೋರಿಯಾ ಆಸ್ಪತ್ರೆಗೆ ತರಲ್ಪಟ್ಟು ಚಿಕಿತ್ಸೆಯನ್ನು ಹೊಂದುತ್ತಿರುವನು.

ನಮ್ಮ ಸೀಮೆಯ ಬ್ರಿಟಿಷ್ ರೆಸಿಡೆಂಟರಾದ ಸರ್ ಅಘ್ ಡ್ಯಾಲೆಯವರು ಮುಂದಣ ತಿಂಗಳಲ್ಲಿ ಉದ್ಯೋಗದಿಂದ ನಿವೃತ್ತರಾಗುವರೆಂದೂ, ಅವರ ಸ್ಥಾನಕ್ಕೆ ಈ ಸೀಮೆಯಲ್ಲಿ ಬಹಳ ದಿನಗಳವರೆಗಿದ್ದು ಇಲ್ಲಿಯ ವಿಚಾರದಲ್ಲಿ ಪೂರ್ಣಾನುಭವಿಗಳಾಗಿರುವ ಯೂರೋಪ್ಯರೊಬ್ಬರು ಬರುವರೆಂತಲೂ ತಿಳಿಯಬರುತ್ತದೆ. ಸರ್ ಡ್ಯಾಲೆಯವರು ಅನೇಕ ವಿಚಾರದಲ್ಲಿ ನಮ್ಮ ಸಂಸ್ಥಾನಕ್ಕೆ ಸಹಾಯವನ್ನು ಮಾಡಿ ಪ್ರಜಾರಂಜಕರಾಗಿರುವುದರಿಂದ ಇವರು ಇನ್ನೂ ಕೆಲಕಾಲ ಪ್ರಸಕ್ತ ಉದ್ಯೋಗದಲ್ಲಿರಿಸಲ್ಪಡುವಂತಾಗಬೇಕೆಂದು ಆಶಿಸುತ್ತೇವೆ.

ದೊಡ್ಡಬಳ್ಳಾಪುರದ ತಾ|| ಉಜ್ಜನಿಕಾಡಿನಲ್ಲಿ ಸೌದೆಯನ್ನು ಕಡಿದು ಸಾಗಿಸಿಕೊಳ್ಳಲು ಕಂಟ್ರಾಕ್ಟರ್ ಮುಸ್ತಫ ಷರೀಫ್ ಎಂಬಾತನು ಕೊಟ್ಟಿದ್ದ ೧೦೦ ರೂ. ಗಳನ್ನು ಫಾರೆಸ್ಟ್ ರೇಂಜರ್ ಎ. ಎಸ್. ಕೋನಾರ್‌ರವರೂ, ಫಾರೆಸ್ಟ್ ಕ್ಲಾರ್ಕ್ ಶಂಕರಸ್ವಾಮಿಅಯ್ಯರೂ ದುರುಪಯೋಗಪಡಿಸಿಕೊಂಡಿರುವರೆಂಬ ಅಪರಾಧದಮೇಲೆ ಬೆಂಗಳೂರ ಪೋಲಿಸಿನವರಿಂದ ಹಿಡಿಯಲ್ಪಟ್ಟು ಅಲ್ಲಿಯ ಮೇಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದುದರ ಮೇಲೆ ಮ್ಯಾಜಿಸ್ಟ್ರೇಟರು ಉಭಯರಮೇಲೂ ಛಾರ್ಜನ್ನು ಮಾಡಿ ಈ ತಾ|| ೧೯ ಕ್ಕೆ ಮುಂದಲ ವಿಚಾರಣೆಗಿಟ್ಟಿರುವರು.

ಚೀಫ್ ಕೋರ್ಟಿನ ಚೀಫ್ ಜಡ್ಜರು ಕ್ರಿಸ್ತಮಸ್ ರಜದಲ್ಲಿ ಗರಸಪ್ಪ ಜಲಪ್ರಪಾತಕ್ಕೆ ಹೋಗಿದ್ದು ಬರುವಾಗ್ಗೆ ಶಿವಮೊಗ್ಗೆಯ ಸಿವಿಲ್‌ಕೋರ್ಟನ್ನು ನೋಡಲು ಹೋಗಿದ್ದರು. ಅಲ್ಲಿಯ ಅಡ್ವೋಕೇಟರ ಪರವಾಗಿ ಮ|| ಬಿ. ಗರುಡಾಚಾರರು ಜಡ್ಜರ ಸ್ವಾಗತವನ್ನು ಕುರಿತು ಭಾಷಣ ಮಾಡುವಾಗ್ಗೆ ಅವರ ಗುಣಕಥನವನ್ನು ಮಾಡಿ, ಕ್ರಿಮಿನಲ್ ಕೋರ್ಟುಗಳಿಗೆ ಸಣ್ಣ ವಯಸ್ಸಿನವರೂ ಅನನುಭವಿಗಳೂ ಆದವರನ್ನು ಮ್ಯಾಜಿಸ್ಟ್ರೇಟರನ್ನಾಗಿ ಮಾಡುವುದರಿಂದ ಜನರಿಗೆ ಬಹಳ ಅನರ್ಥವಾಗುವುದೆಂದು ತಿಳಿಸಿದರು. ಇದು ಯುಕ್ತವಾದ ಸೂಚನೆಯೆಂಬುವುದರಲ್ಲಿ ಸಂದೇಹವಿಲ್ಲವು.

ಹಾಸನದ ದನಗಳ ಪ್ರದರ್ಶನದಾರಂಭಮಹೋತ್ಸವವು ಕಳೆದ ತಾ|| ೪ ರಲ್ಲಿ ಡೆ|| ಕ|| ಮಿ|| ವೆದರಾಲ್‌ರವರಿಂದ ನಡೆಸಲ್ಪಟ್ಟಿತು. ಈ ಪ್ರದರ್ಶನದ ಕಮಿಟಿಯ ಆನರರಿ ಸೆಕ್ರೆಟರಿಯವರು ವರದಿಯನ್ನೋದಿದಮೇಲೆ ಅಮಲ್ದಾರರು ಮತ್ತೆ ಕೆಲರು ಭಾಷಣಗಳನ್ನು ಮಾಡಿದರು. ೧೯೧೦ ರಲ್ಲಿ ೩೦೦೦, ೧೧ ರಲ್ಲಿ ೯೦೦೦, ೧೨ ರಲ್ಲಿ ೬೦೦೦, ೧೩ ರಲ್ಲಿ ೬೨೩೪, ೧೪ ರಲ್ಲಿ ೯೦೦೦ ಮತ್ತೂ ೧೫ ರಲ್ಲಿ ೧೧೦೦೦ ದನಗಳು ಪ್ರದರ್ಶಿಸಲ್ಪಟ್ಟಿರುವುವೆಂದು ಅವರ ವರದಿಯಿಂದ ವ್ಯಕ್ತವಾಯಿತು. ಇದೇ ಸಂದರ್ಭದಲ್ಲಿ ಪರಸ್ಪರ ಸಹಾಯಸಂಘದ ರೆಜಿಸ್ಟ್ರಾರರಾದ ಮ|| ಎಂ. ಎ. ನಾರಣಯ್ಯಂಗಾರ್‌ರವರು ಡಿಸ್ಟ್ರಿಕ್ಟ್ ಕೋಆಪರೇಟಿವ್ ಸಭೆಯನ್ನು ನಡೆಸಿದರು. ಪ್ರದರ್ಶನದಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸಿದ್ದ ಮಿ|| ವೆದರಾಲ್‌ರವರು ಶ್ರೀಮದ್ಯುವರಾಜರವರಿಗೆ ಜಿ. ಸಿ. ಐ. ಇ., ಬಿರುದು ಲಭ್ಯವಾದುದಕ್ಕಾಗಿ ಸಭಿಕರ ಪರವಾದ ಅಭಿನಂದನವನ್ನು ತಂತಿಯ ಮೂಲಕ ತಿಳುಹಿದರು.

ಮದ್ರಾಸ್ ಪಟ್ಟಣದಲ್ಲಿ ಈ ತಾ|| ೧೮ ರಿಂದ ಬರುವ ತಿಂಗಳು ತಾ|| ೬ ರ ವರೆಗೆ ನಡೆಯುವ ಪುರನಿರ್ಮಾಣ ವಿಧಾನ ಪ್ರದರ್ಶನಾಲಯಕ್ಕೆ ಬೆಂಗಳೂರ ಮತ್ತೂ ರಾಜಧಾನಿಯ ಮುಖ್ಯ ಕಟ್ಟಡಗಳ ಹಾಗೂ ಉದ್ಯಾನಗಳ ಚಿತ್ರಪಟಗಳು ಕಳುಹಲ್ಪಟ್ಟಿರುವುವು. ಈ ಪ್ರದರ್ಶನವನ್ನು ನೋಡಿ ಪ್ರಫೆಸರ್ ಎ. ಗಿಡ್ಡೆಸ್‌ರವರು ಮಾಡುವ ಉಪನ್ಯಾಸಗಳನ್ನು ಕೇಳಿಬರಲು ಬೆಂಗಳೂರ ಮ್ಯು|| ಪ್ರೆಸಿಡೆಂಟ್ ದಿ|| ಬ|| ಕೆ. ಪಿ. ಪುಟ್ಟಣ್ಣಸೆಟ್ಟರು ಡಿ|| ಚೀಫ್ ಇಂಜನಿಯರ್ ರಾ|| ಬ|| ಕೃಷ್ಣಯ್ಯಂಗಾರರು ಮೈಸೂರ್ ಮ್ಯು|| ಪ್ರೆಸಿಡೆಂಟ್ ಮ|| ಲಕ್ಷ್ಮಣರಾಯರು, ಸ್ಯಾನಿಟರಿ ಇಂಜನಿಯರ್ ಮಿ|| ಜೆ. ಬೋರ್‌ರವರು ಮ್ಯು|| ಕೌನ್ಸಿಲರ್ ರಾ|| ಬ|| ಎಂ. ಸಿ. ರಂಗಯ್ಯಂಗಾರರು ಮತ್ತೂ ಮ|| ಡಿ|| ಬಿ. ರಾಮಚಂದ್ರಮೊದಲಿಯಾರರು, ಮಿ|| ಮಾರ್ಕರ್‌ರವರು ಮ|| ಟಿ. ರಾಮಚಂದ್ರರಾಯರು ಮತ್ತೂ ಮ|| ಲಕ್ಷ್ಮೀನರಸಪ್ಪನವರು ಮದ್ರಾಸಿಗೆ ಹೊರಡುವರು.

ವಿಶೇಷವಾರ್ತೆ.

ಜರ್ಮನರು ಪೂರ್ವರಣರಂಗದಲ್ಲಿ ಪೋಲಾಂಡಿನಲ್ಲಿ ಉಂಟುಮಾಡಿರುವ ನಾಶವು ಬೆಲ್ಜಿಯಮ್ಮಿನ ಅನರ್ಥಕ್ಕಿಂತಲೂ ಹೆಚ್ಚಾಗಿದೆಯಂತೆ.

ಇದುವರೆಗೆ ಮಿತ್ರಮಂಡಲಿಯವರು ಸೆರೆ ಹಿಡಿದಿರುವ ಜರ್ಮನ್ ಸೈನಿಕರೆಲ್ಲಾ ೬೦೪೩೦೦ ಮಂದಿಗಳಾಗಿರುವರೆಂದು ಪ್ಯಾರಿಸ್ಸಿನಲ್ಲಿ ಲೆಕ್ಕಹಾಕಲ್ಪಟ್ಟಿದೆ.

ಜರ್ಮನರಿಗೆ ಸೇರಿದ್ದ ಸಾಲೆಮನ್ ದ್ವೀಪಗಳೊಳಗೆ ಜಾಗಿಇನ್‌ವಿಟ್ ಎಂಬುದನ್ನು ಆಸ್ಟ್ರೇಲಿಯಾದವರು ಹಿಡಿದುಕೊಂಡು ಅದರಮೇಲೆ ಆಂಗ್ಲಪತಾಕೆಯನ್ನು ಸ್ಥಾಪಿಸಿದರು.

ಹೆಲಿಗೋಲ್ಯಾಂಡಿನಬಳಿಗೆ ಹೋಗಿದ್ದ ಇಂಗ್ಲೀಷರ ಯುದ್ಧನಾವೆಗಳ ವೈಮಾನಿಕರೊಳಗೆ ಹ್ಯೂವೆಟ್ ಎಂಬ ನಾಯಕನೊಬ್ಬನು ಏನಾದನೆಂಬುದು ಗೊತ್ತಾಗಿರಲಿಲ್ಲವಷ್ಟೆ. ಈತನನ್ನು ಒಂದು ಡಚ್ಚರ ಹಡಗು ಸಂರಕ್ಷಿಸಿ ಕರೆತಂದಿರುವುದು.

ಎರಡು ಕಡೆಯಲ್ಲೂ ಸೆರೆಸಿಕ್ಕಿರುವ ಸೈನಿಕರಲ್ಲಿ ಯುದ್ಧಕಾರ್ಯಕ್ಕೆ ಮರಳಿ ಉಪಯುಕ್ತರಲ್ಲವೆಂದು ತೋರಿದವರನ್ನೆಲ್ಲ ಪರಸ್ಪರ ತಂತಮ್ಮ ಕಡೆಗೆ ವರ್ಗಾಯಿಸಿಕೊಳ್ಳಲು ಕ್ರೈಸ್ತಜಗದ್ಗುರುಗಳ ಉಪದೇಶಪ್ರಕಾರ ಎರಡುಪಕ್ಷದವರೂ ಒಪ್ಪಿದ್ದಾರೆ.

ಯುದ್ಧದಲ್ಲಿ ಸತ್ತ ಸೈನಿಕರ ಹೆಂಡತಿಯರಿಗೆ ಕಳೆದ ಮೂರು ವಾರಗಳಲ್ಲಿ ಜರ್ಮನ್ ಇನ್‌ಷ್ಯೂರೆನ್ಸ್ ಕಂಪೆನಿಯವರು ಬಹುಶಃ ೬ ಸಾವಿರ ಪೌನುಗಳನ್ನು ಹಂಚಿಕೊಟ್ಟಿರುವರು. ಇನ್‌ಷೂರ್ ಮಾಡಿದ್ದ ಆ ಸೈನಿಕರೆಲ್ಲಾ ಕಂಪೆನಿಗೆ ಒಂದನೆಯ ಕಂತನ್ನು ಮಾತ್ರ ಸಲ್ಲಿಸಿದ್ದರಂತೆ.

ಕ್ರಿಸ್ತ್‌ಮಸ್‌ಹಬ್ಬದದಿನ ಪಶ್ಚಿಮರಣರಂಗದಲ್ಲಿ ಜರ್ಮನ್ ಮತ್ತು ಆಂಗ್ಲಪಕ್ಷದ ಸೈನಿಕರು ತಮ್ಮ ತಮ್ಮ ಕಂದಕಗಳನ್ನು ಬಿಟ್ಟು ಹೋಗಿ ಮಧ್ಯದಲ್ಲಿ ಈರ್ವರೂ ಪರಸ್ಪರ ಹಸ್ತಾಂದೋಳನಗಳನ್ನು ಮಾಡಿ ಒಬ್ಬರನ್ನೊಬ್ಬರು ಅಭಿನಂದಿಸಿ, ತಮ್ಮ ತಮ್ಮ ಸ್ಥಾನಗಳಿಗೆ ಸೇರಿದ ಬಳಿಕ ಜಯಧ್ವನಿಗಳನ್ನು ಮಾಡಿ ಸಂತೋಷಿಸಿರುವರು.

ದಕ್ಷಿಣಾಫ್ರಿಕಾದ ವಿಪ್ಲವವೆಲ್ಲಾ ಶಾಂತವಾಯಿತೆಂದು ಹಿಂದೆ ಸುದ್ದಿ ಬಂದಿದ್ದಿತು. ಕಳೆದವಾರದ ತಂತ್ರೀವಾರ್ತೆಯಿಂದ ಅದು ಇನ್ನೂ ಶಾಂತವಾಗಿಲ್ಲವೆಂದು ಕಾಣುತ್ತದೆ. ೮೦೦ ಮಂದಿ ವಿಪ್ಲವಕಾರರು ಒಂದುಕಡೆ ಪ್ರಭುತ್ವದ ಪಕ್ಷದ ೪೮೦ ಮಂದಿ ಸೈನಿಕರ ಮೇಲೆ ಬಿದ್ದು ಕಾದಾಡಿರುವರು. ಕಡೆಗೆ ಅವರು ಹಿಮ್ಮೆಟ್ಟಬೇಕಾಯಿತು.

ಜರ್ಮನ್ ಗೂಢಚಾರಿಣಿಯರಾದ ಮೂವರು ಹೆಂಗುಸರು ಪ್ರೆಂಚ್ ಸೇನೆಯವರಲ್ಲಿ ಸೇರಿ ೧ ತಿಂಗಳಿಂದಲೂ ವಾಸಮಾಡುತ್ತಾ ಅವರ ರಹಸ್ಯಗಳನ್ನು ತಮ್ಮವರಿಗೆ ಹೇಗೋ ತಿಳಿಯಿಸುತ್ತಿದ್ದರು. ಮತ್ತು ಫ್ರೆಂಚ್ ಗೌರ್ನರುಗಳನ್ನು ತಮ್ಮವರಿಗೆ ಹಿಡಿದುಕೊಟ್ಟಿದ್ದರು. ರಣರಂಗದಲ್ಲಿ ಸತ್ತುಬಿದ್ದಿದ್ದ ಫ್ರೆಂಚರ ಶವಗಳಮೇಲಿನ ವಸ್ತುಗಳನ್ನು ಕದಿಯುತ್ತಿದ್ದರು. ಇವರು ಈಗ ಸಿಕ್ಕಿಬಿದ್ದು ವಿಚಾರಣೆಗೆ ಗುರಿಯಾಗಿ ಫಿರಂಗಿ ಗುಂಡಿನೇಟಿನಿಂದ ಸುಡಲ್ಪಟ್ಟರು.

ಪತ್ರವ್ಯವಹಾರ.

ಗ್ರಾಮಾಭಿವೃದ್ಧಿ ಕಮಿಟಿಯ ಮೀಟಿಂಗ್.

ಕಳೆದ ಡಿಸಂಬರ್ ತಿಂಗಳಲ್ಲಿ ಬೌರಿಂಗ್‌ಪೇಟೆ ತಾಲ್ಲೋಕಿನ ಗ್ರಾಮಗಳ ಮತ್ತೂ ತಾಲ್ಲೋಕುಗಳಭಿವೃದ್ಧಿ ಸಂಘಗಳ, ತಾಲ್ಲೋಕು ಮತ್ತೂ ಡಿಸ್ಟ್ರಿಕ್ಟ್ ಬೋರ್ಡುಗಳ ಮೆಂಬರುಗಳು ಪ್ರಾಯಶಃ ೪೦೦ ರ ವರೆಗೆ ಬೌರಿಂಗ್‌ಪೇಟೆಯ ಕಿಂಗ್‌ಎಡ್ವರ್ಡ್ ಹಾಲಿನಲ್ಲಿ ತಾ॥ ಅಮಲ್ದಾರ್ ಮ॥ ಕೆ. ಸಿದ್ಧರಾಮಪ್ಪ ಬಿ. ಎ., ಯವರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದರು. ಅಧ್ಯಕ್ಷರು ಗ್ರಾಮನಿವಾಸಿಗಳ ಸ್ಥಿತಿಯನ್ನು ಸಾಧ್ಯವಾದ ರೀತಿಯಲ್ಲೆಲ್ಲಾ ಅಭಿವೃದ್ಧಿಗೊಳಿಸಲು ಸರ್ಕಾರದವರು ವಿಶೇಷ ಶ್ರದ್ಧಾಭಿಮಾನವನ್ನು ವಹಿಸಿ ದ್ರವ್ಯರೂಪವಾಗಿಯೂ,ಕೃಷಿಕೈಗಾರಿಕೆ ವ್ಯಾಪಾರವಿಚಾರಗಳಲ್ಲಿ ನಿಪುಣರಾದವರನ್ನು ಹೆಚ್ಚು ಖರ್ಚಿನಿಂದ ನಿಯಮಿಸಿರುವುದರ ಮೂಲಕವೂ ಮಾಡುತ್ತಿರುವ ಸಹಾಯ್ಯವನ್ನು ಕುರಿತು ಸಭಿಕರ ಮನದಟ್ಟುವಂತೆ ಬಹು ಸ್ವಾರಸ್ಯವಾಗಿ ಭಾಷಣಮಾಡಿದರು. ಈ ಸಂದರ್ಭದಲ್ಲಿ ಅಧ್ಯಕ್ಷರು ಮುಖ್ಯವಾಗಿ ತಿಳಿಸಿದುದೇನೆಂದರೆ: “ ಜನರು ಈ ಬಂಗಾರದಂತಹ ಸಮಯವನ್ನು ಕಳೆದುಕೊಳ್ಳದೆ ಇದರಿಂದ ವಿಶೇಷ ಪ್ರಯೋಜನವನ್ನು ಪಡೆದುಕೊಳ್ಳುವವರಾಗಬೇಕು. ಪ್ರತಿಯೊಬ್ಬನೂ ತನ್ನಾದಾಯಕ್ಕೆ ಮೀರಿ ವೆಚ್ಚವನ್ನೆಂದಿಗೂ ಮಾಡದಂತೆ ಬಹಳ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು. ಕ್ಷಾಮ ಮೊದಲಾದ ದುಷ್ಕಾಲಪ್ರಾಪ್ತವಾದಾಗ್ಗೆ ಸಹಾಯಕವಾಗಿರಲು ಪ್ರತಿವರ್ಷದಲ್ಲೂ ತನ್ನಾದಾಯದಲ್ಲಿ ಕೊಂಚ ತೆಗೆದಿಟ್ಟು ಶೇಖರಿಸುವುದತ್ಯಾವಶ್ಯಕವು. ಮದುವೆ ಮೊದಲಾದ ಶುಭಶೋಭನಕಾಲಗಳಲ್ಲಿ ಅನಾವಶ್ಯಕವಾಗಿ ಆಗುವ ವೆಚ್ಚವನ್ನು ಕಡಿಮೆಮಾಡುತ್ತ ಬಂದಲ್ಲಿ ಮೇಲೆಹೇಳಿದಂತೆ ದ್ರವ್ಯವನ್ನು ಶೇಖರಿಸಲು ಬಹುಮಟ್ಟಿಗೆ ಅನುಕೂಲವಾಗುವುದು. ಗ್ರಾಮಾಭಿವೃದ್ಧಿ ಸಂಘದವರು ಗ್ರಾಮಪಂಚಾಯಿತಿಯನ್ನೇರ್ಪಡಿಸಿಕೊಂಡು ಜನರು ಕಲಹವನ್ನು ಮಾಡಿ ಸಿವಿಲ್ ಮತ್ತೂ ಕ್ರಿಮಿನಲ್‌ಕೋರ್ಟುಗಳಿಗೆ ಹೋಗಿ ತಾವು ಸಂಪಾದಿಸುವ ಅಲ್ಪ ದ್ರವ್ಯವನ್ನು ಹಾಳುಮಾಡಿಕೊಳ್ಳದಂತೆ ಅವರ ವಿವಾದಗಳನ್ನು ಬಗೆಹರಿಸಿಕೊಡುವಂತಾಗಬೇಕು. ಗ್ರಾಮಸ್ಥರು ಪ್ರತಿಯೊಬ್ಬ ರೈತನಿಂದಲೂ ಸುಗ್ಗಿಯಕಾಲದಲ್ಲಿ ಕೊಂಚ ಧಾನ್ಯವನ್ನು ಈಸಿಕೊಂಡು ಶೇಖರಿಸಿ ಕ್ಷಾಮಕಾಲದಲ್ಲಿ ಬಡವರಿಗೆ ಸುಲಭಬೆಲೆಗೆ ಕೊಡಬೇಕು. (ದನಕರು, ಕುರಿ ಮೊದಲಾದ ಪ್ರಾಣಿಗಳ ಅಭಿವೃದ್ಧಿಯ ವಿಚಾರದಲ್ಲೂ, ಗ್ರಾಮಾಭಿವೃದ್ಧಿಯುಪಾಯ, ಗ್ರಾಮಾರೋಗ್ಯ ಮೊದಲಾದ ವಿಷಯಗಳಲ್ಲೂ ಬಹಳ ರಸಯುಕ್ತವಾಗಿ ಭಾಷಣಮಾಡಿದರು.) ಸಕಾಲದಲ್ಲಿ ಮಳೆಯಾಗುವ ಭರವಸೆ ಇಲ್ಲದಿರುವುದರಿಂದ ಬೆಳೆಯು ಅಲ್ಪಸ್ವಲ್ಪವಾಗುವುದಾದ ಪ್ರಯುಕ್ತ ಪ್ರತಿಯೊಬ್ಬನೂ ತನ್ನ ಕ್ಲುಪ್ತವಾದ ವರಮಾನದ ಜತೆಗೆ ಬೇರೊಂದು ಕಸುಬನ್ನು ಕೈಕೊಳ್ಳುವುದುತ್ತಮವು. ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಿರುವುದು,ವಿದ್ಯಾಸಂಬಂಧವಾದ ಕಾರ್ಯ್ಯಸಕ್ತಿಯುಂಟಾಗಿರುವುದು,ಸೋಮಾರಿಜನರ ಸಂಖ್ಯೆಯು ಕಡಿಮೆಯಾಗಿರುವುದು, ಜನರ ಮತ್ತೂ ದನಕರುಗಳ ಮರಣಸಂಖ್ಯೆಯು ತಗ್ಗಿರುವುದು, ಗ್ರಾಮಾಭಿವೃದ್ಧಿ ಸಂಘದ ಮೆಂಬರುಗಳು ಜನಾನುರಾಗವನ್ನು ಸಂಪಾದಿಸಿರುವುದು, ಬೇಸಾಯದ ಭೂಮಿಯ ವಿಸ್ತೀರ್ಣವು ಕ್ರಮವಾಗಿ ಹೆಚ್ಚುತ್ತಿರುವುದು, ಹಳೇಮಾದರಿಯ ವ್ಯವಸಾಯದ ಪದ್ಧತಿಗಳನ್ನು ಬಿಟ್ಟು ನವೀನವೂ ಶಾಸ್ತ್ರಸಮ್ಮತವೂ ಆದ ಪದ್ಧತಿಗಳನ್ನನುಸರಿಸಿ ಬೆಳೆಸನ್ನಭಿವೃದ್ಧಿಗೊಳಿಸಿರುವುದು, ಪ್ರತಿಯೊಬ್ಬ ಮನುಷ್ಯನ ಆದಾಯದ ಶಕ್ತಿಯು ಹೆಚ್ಚಾಗಿರುವುದು ಮತ್ತೂ ಪರಸ್ಪರ ಸಹಾಯದ ಕೆಲಸವು ಬಳೆಬರುವುದು ಇವುಗಳಿಂದೆಲ್ಲಾ ಒಂದು ಗ್ರಾಮವು ಅಭಿವೃದ್ಧಿಯಾಗಿರುವುದೆಂದು ತಿಳಿಯತಕ್ಕದಾಗಿದೆ. ಎಂದು ಅಪ್ಪಣೆ ಕೊಡಿಸಿದುದಲ್ಲದೆ, ಪ್ರತಿಯೊಬ್ಬ ಮನುಷ್ಯನೂ ತನ್ನ ಸ್ವಂತಕ್ಕಾಗಿಯೂ, ತನ್ನ ಕುಟುಂಬಕ್ಕಾಗಿಯೂ, ತನ್ನ ಗ್ರಾಮದವರಿಗಾಗಿಯೂ, ತನ್ನ ರಾಜ್ಯಕ್ಕಾಗಿಯೂ, ಯಾರ ರಾಜ್ಯಭಾರದಲ್ಲಿ ದೇಶವೆಲ್ಲಾ ನೆಮ್ಮದಿಸುಖಸಂಪತ್ತನ್ನನುಭವಿಸುತ್ತಿರುವುದೋ ಅಂತಹ ಪ್ರಭುಗಳಿಗಾಗಿಯೂ ತಾನು ಮಾಡಬೇಕಾದ ಕರ್ತವ್ಯಕರ್ಮವನ್ನೂ ವರ್ತಮಾನ ಪತ್ರಿಕೆಗಳನ್ನೋದುವುದರಿಂದುಂಟಾಗುವ ವಿಶೇಷ ಪ್ರಯೋಜನವನ್ನೂ ಸಾಯಂಕಾಲದಲ್ಲಿ ಜನರೆಲ್ಲರೂ ಒಂದು ಕಡೆ ಸೇರಿ ಮತ್ತೂ ಆಗಾಗ್ಗೆ ಸಭೆಸೇರಿ ತಮ್ಮ ಸಾಧಕಬಾಧಕ ವಿಚಾರಗಳನ್ನು ಕುರಿತು ಚರ್ಚಿಸುವುದರಿಂದಾಗುವ ಲಾಭವನ್ನೂ ಸಾಂಕ್ರಾಮಿಕ ಜಾಡ್ಯಗಳು ಪ್ರಾಪ್ತವಾದಾಗ್ಗೆ ಜನರು ಮನೆಗಳನ್ನು ಬಿಟ್ಟು ಊರಹೊರಗೆ ವಾಸಮಾಡುವಂತೆ ಮೆಂಬರುಗಳು ಮಾಡುವುದಲ್ಲದೆ ರೋಗ ಪ್ರಾಪ್ತವಾದೊಡನೆ ಸರ್ಕಾರಿ ಉದ್ಯೋಗಸ್ಥರಿಗೆ ವರದಿಮಾಡಬೇಕಾಗಿರುವುದರಾವಶ್ಯಕತೆಯನ್ನೂ ಕುರಿತು ಎಲ್ಲರ ಮನಸ್ಸಿಗೆ ಚೆನ್ನಾಗಿ ಹಿಡಿಯುವಂತೆ ಬೋಧಿಸಿದರು. ತರುವಾಯ ಸಬ್‌ರೆಜಿಸ್ಟ್ರಾರಾದ ಮ॥ ಜಯರಾಯರು ಅಮಲ್ದಾರರಪ್ಪಣೆ ಕೊಡಿಸಿದ ವಿಷಯಗಳನ್ನೇ ಪುಷ್ಟೀಕರಿಸಿ ಹೇಳಿದುದಲ್ಲದೆ ಈ ಮಹಾಪ್ರಯತ್ನವು ಕೈಗೂಡಲು ಎಲ್ಲರೂ ಸಹಾಯಕರಾಗಬೇಕಾದಾವಶ್ಯಕತೆಯನ್ನು ಕುರಿತು ನೆರೆದಿದ್ದವರ ಮನಸ್ಸಿನಲ್ಲಿ ನಾಟುವಂತೆ ಉಪನ್ಯಾಸಮಾಡಿ, ಆಯವ್ಯಯದ ಲೆಖ್ಖವನ್ನು ಕ್ರಮವಾಗಿಡುವುದು ಗ್ರಾಮಕಮಿಟಿಗಳ ಮೀಟಿಂಗಿನಲ್ಲಿ ನಡೆದ ವಿಷಯಗಳನ್ನು ಬರೆದಿಡುವುದು ಮದ್ಯಸೇವನೆಯಿಂದ ಅನರ್ಥವುಂಟಾಗುವುದು ಗ್ರಾಮದಲ್ಲಿ ಒಂದು ಉಪನ್ಯಾಸಮಂದಿರವನ್ನು ನಿರ್ಮಿಸುವುದು ಇದು ಸಾಧ್ಯವಿಲ್ಲದೆಹೆಯಲ್ಲಿ ಪ್ರತಿಯೊಂದು ಮನೆಯಲ್ಲೂ ಕನಿಷ್ಠಪಕ್ಷ ಒಂದು ಫಲಪುಷ್ಪಗಿಡಗಳನ್ನಾದರೂ ಬಳೆಸುವುದು ಇತ್ಯಾದಿ ವಿಷಯಗಳನ್ನು ಕುರಿತು ಪ್ರಸ್ತಾಪಿಸಿದರು. ಅನಂತರ ಎ. ವಿ. ಸ್ಕೂಲುಗಳ ಹೆಡ್ಮಾಸ್ಟರ್ ಮ॥ ಶೇಷಗಿರಿರಾಯರು ವಿದ್ಯೆಯಿಂದುಂಟಾಗತಕ್ಕ ಅನಂತ ಪ್ರಯೋಜನಗಳನ್ನು ಕುರಿತು ಭಾಷಣಮಾಡಿ ಸಾಕಷ್ಟು ಗ್ರಾಮಪಾಠಶಾಲೆಗಳಿಲ್ಲದಿರುವುದೂ ಪಾಠಶಾಲೆಗೆ ಹೋಗತಕ್ಕ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಯಾಗಿರುವುದೂ ಗ್ರಾಮವಿದ್ಯಾಭಿವೃದ್ಧಿಯ ವಿಚಾರದಲ್ಲಿ ಮುಖ್ಯಗ್ರಾಮಸ್ಥರು ಶ್ರದ್ಧೆಯನ್ನು ವಹಿಸುತ್ತಿಲ್ಲವೆಂಬುನ್ನು ವ್ಯಕ್ತಪಡಿಸುತ್ತವೆ. ಜನಸಾಮಾನ್ಯವಾದ ವಿದ್ಯಾಭ್ಯಾಸಕ್ಕಾಗಿ ಇಷ್ಟು ಅನುಕೂಲ್ಯಗಳು ಹಿಂದೆಯಾವಾಗಲೂ ಕಲ್ಪಿಸಲ್ಪಟ್ಟರಲಿಲ್ಲವು. ಕಾಲವು ಬಹಳ ಅಮೋಘವಾದುದರಿಂದ ಎಲ್ಲರೂ ಸೋಮಾರಿಗಳಾಗಿ ಕಾಲವನ್ನು ಕಳೆಯದೆ ವಿದ್ಯಾವಂತರೂ, ದೃಢಕಾಯರೂ ಮೇಧಾವಿಗಳೂ ಆಗಲು ಸರ್ವದಾ ಪ್ರಯತ್ನಿಸಬೇಕು. ಮತ್ತೂ ಬಹಳ ಬೆಲೆಯೂ, ಡಂಭವೂ ಆದ ಉಡುಪನ್ನು ಧರಿಸದೆ ಯಾವಾಗಲೂ ಸಾಮಾನ್ಯನಾಗಿಯೂ ಶುಚಿಯಾಗಿಯೂ ಇರುವುದನ್ನು ಅಭ್ಯಾಸಮಾಡಬೇಕು. ದಾರಿದ್ರ್ಯವು ಮನುಷ್ಯರವರ ರೂಪವಾಗಿದೆ. ಎಷ್ಟೋ ಮಹನೀಯರು ದೀನಕುಟುಂಬದಲ್ಲಿ ಜನಿಸಿದವರಾಗಿರುವರು ಎಂದು ತಿಳಿಸಿದರು. ಈರೀತಿ ಗ್ರಾಮಾಭಿವೃದ್ಧಿಯಿಂದುಂಟಾಗತಕ್ಕ ಪ್ರಯೋಜನವು ನೆರೆದಿದ್ದ ಸಭಿಕರ ಮನಸ್ಸಿಗೆ ಸಂಪೂರ್ಣವಾಗಿ ಬಂದು ಸಭೆಯು ವಿಸರ್ಜನವಾಗುವ ಸಮಯದಲ್ಲಿ ಪಟೇಲ್ ಮ॥ ಗುರುಮೂರ್ತಯ್ಯನವರು ಅಗ್ರಾಸನಾಧಿಪತಿಗಳಾದ ಅಮಲ್ದಾರರೂ ಇತರರೂ ಬಹಳ ಶ್ರಮವನ್ನು ವಹಿಸಿ ಬಹಳ ಉಪಯುಕ್ತವಾದ ವಿಷಯಗಳನ್ನು ಬೋಧಿಸಿದುದಕ್ಕಾಗಿ ಸಭಿಕರ ಪರವಾದ ವಂದನೆಯನ್ನು ಅವರುಗಳಿಗೆ ತಿಳಿಸಿದರು.

ಓರ್ವಪ್ರತ್ಯಕ್ಷದರ್ಶಿ.

ದುಃಖವಾರ್ತೆಯು.

ಸುಶಿಕ್ಷಿತರಾದ ಸಾರ್ವಭೌಮ ಇಂಗ್ಲೀಷ್ ಸರ್ಕಾರದವರ ದಯಾಳುತ್ವದಿಂದ ನಮ್ಮ ಭರತಖಂಡದಲ್ಲಿ ಸ್ತ್ರೀಶಿಕ್ಷಣಕ್ಕೆ ಉತ್ತೇಜನವು ದೊರೆಯುತ್ತಿದ್ದರಿಂದ ಎಲ್ಲಸಮಾಜಗಳ ಅಲ್ಪಸ್ವಲ್ಪ ಸ್ತ್ರೀಸಮೂಹಗಳಲ್ಲಿ ವಿದ್ಯಾಪ್ರಸಾರವಾಗುತ್ತಿರುವಂತೆ ಇತ್ತಿತ್ತಲಾಗಿ ನಮ್ಮ ವೀರಶೈವಸಮಾಜದ ಸ್ತ್ರೀಶಿಕ್ಷಣಕ್ಕೂ ಅಲ್ಪಸ್ವಲ್ಪ ಉತ್ತೇಜನವು ದೊರೆಯುತ್ತಿರುವದರಿಂದ ಈ ಸಮಾಜದಲ್ಲಿ ಇನ್ನೂ ಕೈಬೆರಳಿನಿಂದ ಎಣಿಸುವಷ್ಟು ಸಹ ಸುಶಿಕ್ಷಿತಸ್ತ್ರೀಯರು ದೊರೆಯುವದು ದುರ್ಲಭವಾಗಿದೆ. ಇಂಥ ಕಾಲದಲ್ಲಿ ಎಲ್ಲಿಗಾದರೊಂದೇ ಕಾಗಲೊಲ್ಲದು, ಸುಶಿಕ್ಷಿತ ದಂಪತಿಗಳ ಜೋಡಿಯು ಇದ್ದುದನ್ನು ನೋಡಿ ಮನಸ್ಸಿಗೆ ಆನಂದಮಾಡಿಕೊಳ್ಳಬೇಕೆಂದರೆ, ದೇವರು ಅದನ್ನು ಸಹ ತೋರಗೊಡದಂತೆ ಮಾಡುತ್ತಿರುವುದು ನಮ್ಮ ಸಮಾಜದ ದುರ್ದೈವವೆಂತಲೇ ಹೇಳಬಹುದು. ಯಾಕೆಂದರೆ ಮುಂಬಯಿಯಂಥ ಪ್ರಸಿದ್ಧಪಟ್ಟಣದಲ್ಲಿ ಪಾರಸಿ, ಬ್ರಾಹ್ಮಣ ಮುಂತಾದ ಸಮಾಜಗಳ ಎಷ್ಟೋ ಸುಶಿಕ್ಷಿತ ದಂಪತಿಗಳು ಚೌಪೇಟಿಯಮೇಲೆ ಆನಂದದಿಂದ ಸಾಯಂಕಾಲದ ನಿರ್ಮಲಹವಾಕ್ಕಾಗಿ ಬರುತ್ತಿರುವುದನ್ನು ಕಂಡು, ಶಿವಶಿವಾ ಈ ಪ್ರಕಾರವಾಗಿ ಪ್ರೇಮದಿಂದ ಕೂಡಿದ ನಮ್ಮ ವೀರಶೈವರ ಒಂದು ಜೊತೆಯಾದರೂ ಇಲ್ಲಿ ತಿರುಗಾಡುವುದನ್ನು ನೋಡಿ, ಎಂದಾದರೂ ಸಂತೋಷಹೊಂದುವೆನೇ ಎಂದು ಅನ್ನಿಸುವಷ್ಟರಲ್ಲಿ, ಈಶ್ವರಕೃಪೆಯಿಂದ ನಮ್ಮ ವೀರಶೈವರ ಒಂದು ಸಲ್ಲಕ್ಷಣವಾದ ತಾರುಣ್ಯಪೂರ್ಣ ದಾಂಪತ್ಯವನ್ನು ಕಂಡು ಧನ್ಯನಾದೆನೆಂದು ಆನಂದಪಟ್ಟೆ. ಮತ್ತು ಇವರಾರಿರಬಹುದೆಂದು ಶೋಧಮಾಡುತ್ತಿರಲಿಕ್ಕಾಗಿ ಗೊತ್ತಾದದ್ದೇನಂದರೆ, ಮುಂಬಯಿಯಲ್ಲಿ ಲಿಂಗಾಯತ ಫಂಡು ಸ್ಥಾಪಿತವಾಗಿ ಅದು ಊರ್ಜಿತಸ್ಥಿತಿಗೆ ಬರುವದಕ್ಕಾಗಿ ಇದುವರೆಗೆ ಅನಂತಪರಿಶ್ರಮಗಳನ್ನು ಮಾಡಿದವರಾದ ಮ॥ ಗಂಗಾಧರಪ್ಪಾ, ಸಂಗಪ್ಪಾ, ಸಾಬೋಜಿ ಇವರು ಸಹಕುಟುಂಬವಾಗಿ ಸಮುದ್ರದಂಡೆಗೆ ದರದಿವಸ ಬರುತ್ತಿರುವರೆಂಬದನ್ನು ಕೇಳಿ ಮನಸ್ಸಿಗೆ ಬಹಳ ಹರ್ಷವಾಯಿತು. ಆಮೇಲೆ ಕೆಲವುದಿವಸಗಳ ನಂತರ ಮತ್ತೊಂದು ಹೆಚ್ಚಿನ ಸುಧಾರಣೆಯ ಸಂಗತಿಯನ್ನು ಅಂದರೆ, ಸದರಿ ಗಂಗಾಧರಪ್ಪನವರ ಕುಟುಂಬ ಸೌ॥ ಮಲ್ಲವ್ವ ಎಂಬುವರು ಮುಂಬಯಿಯಲ್ಲಿ ಸುಧಾರಿಸಿದ ಹೊಸಪದ್ಧತಿಯಿಂದ ಪ್ರಸೂತಿಕಾಲದಲ್ಲಿ ಆಗತಕ್ಕ ಉಪಚಾರದ ಅನುಭವವನ್ನು ತಕ್ಕೊಳ್ಳುವದಕ್ಕಾಗಿ ಕಾಮಾಹಾಸ್ಪಿಟಲದಲ್ಲಿ ಪ್ರಸೂತಿಯಾದ ವರ್ತಮಾನ ಕೇಳಿ, ಈ ತರದ ಧೈರ್ಯಮಾಡಿರುವವರು ನಮ್ಮ ಸ್ತ್ರೀಮಂಡಲಿಯಲ್ಲಿ ಇವರೇ ಮೊದಲನೆಯವರೆಂದ ಬಳಿಕ ಇವರು ಒಳ್ಳೇ ತಿದ್ದಿದ ಮನಸುಳ್ಳವರಾಗಿರಬಹುದೆಂದು ಯೋಚಿಸಿ, ಅವರ ವಿಷಯಕ್ಕೆ ವಿಶೇಷ ಸಂಗತಿಯನ್ನು ಕೇಳಬೇಕೆಂದು ಆಶ್ರಮದ ಕಾರಕೂನರಾದ ಚನ್ನಬಸ್ಸಾಬಾಗ ಇವರನ್ನು ಕೇಳುತ್ತಿರಲಿಕ್ಕಾಗಿ, ಅವರಿಂದ ಗೊತ್ತಾದ ಸಂಗತಿ ಯಾವದೆಂದರೆ—ಸೌ॥ ಮಲ್ಲವ್ವನವರು ಕನ್ನಡ ೪ ನೇ ಇಯತ್ತೆಯವರೆಗೆ ಅಭ್ಯಾಸಮಾಡಿರುತ್ತಾರೆ. ಕಸೂತಿ ಕೆಲಸದಲ್ಲಂತೂ ಅವರ ನಂಬರು ಬಹಳ ಮೇಲಿರುವದು. ಅದು ಹೇಗೆಂದರೆ, ಮುಂಬಯಿಯಲ್ಲಿ ಡಾ॥ ಕಾಶಿಬಾಯಿನವರಂಗೆ ಬಿ.ಎ.ಎಲ್.ಎಮ್.ಎಸ್. ಎಂಬವರ ಬಳಿಯಲ್ಲಿ ಮಲ್ಲವ್ವನವರು ಔಷಧ ತಕ್ಕೊಳ್ಳುತ್ತಿದ್ದರು. ಆವಾಗ ಸದರಿ ಡಾ॥ ಕಾಶಿಬಾಯಿಯವರು ನಿಮ್ಮ ಸೀರೆಯಮೇಲಿನ ಕಸೀದೆಯು ಬಹಳ ಉತ್ತಮವಾಗಿದೆ. ನೆಯ್ದಂತೆ ಆಗಿದೆ. ಇದೇತರದಕಸೂದಿಯನ್ನು ನನಗೊಂದು ಸೀರೆಯಮೇಲೆ ತೆಗೆದುಕೊಡಬೇಕೆಂದು ಅಪೇಕ್ಷೆಪಟ್ಟದ್ದರೆಂದು ಗೊತ್ತಾಯಿತು. ಮತ್ತೂ ಅವರು ಮರಾಠಿಭಾಷೆಯ ಅಭ್ಯಾಸವನ್ನು ತಮ್ಮ ಪತಿಯ ಸಹಾಯದಿಂದ ನಡಿಸುವರೆಂದು ಕೇಳಿ ಮನಸ್ಸಿಗೆ ಹರ್ಷವಾಯಿತು. ಇದಲ್ಲದೆ ೨ ವರ್ಷದ ಪೂರ್ವದಲ್ಲಿ ತಮ್ಮ ಸ್ಟಾರ್ ಪತ್ರಿಕೆಯಲ್ಲಿ ಪ್ರಸಿದ್ಧವಾದ “ ವೀರಶೈವ ಭಗಿನಿಯರಿಗೆ ಪ್ರಾರ್ಥನೆ ” ಎಂಬ ಲೇಖನವನ್ನು ಅವರೇ ಬರೆದಿದ್ದರೆಂದು ಗೊತ್ತಾಯಿತು. ಈ ರೀತಿಯಿಂದ ಪ್ರೌಢವಯಸ್ಸಿನಲ್ಲಿ ಇಬ್ಬರೂ ತಮ್ಮತಮ್ಮ ಮನಸ್ಸಿನ ಒಪ್ಪಿಗೆಯಿಂದ ಕೂಡಿದ ದಾಂಪತ್ಯಗಳು ನಮ್ಮ ಸಮಾಜದಲ್ಲಿ ಬಹಳ ಕಡಿಮೆ ಎಂದು ಹೇಳಬಹುದು. ಆದುದರಿಂದ ದೇವರು ಮೇಲಿನ ದಾಂಪತ್ಯವನ್ನು ಇನ್ನೂ ಕೆಲವುದಿವಸಗಳವರೆಗಾದರೂ ಸುಖರೂಪವಾಗಿ ಇಟ್ಟದ್ದರೆ ನಮ್ಮ ಸಮಾಜದ ಸ್ತ್ರೀಶಿಕ್ಷಣಕ್ಕೆ ಎಷ್ಟೋ ಸಹಾಯವಾಗುತ್ತಿದ್ದಿತೆಂದು ಹೇಳಲಿಕ್ಕೆ ಸಂದೇಹವಿಲ್ಲ. ಆದರೆ ಹಾಗೆ ಆಗದೆ ತಾ॥ ೯–೧೧–೧೯೧೩ ನೆ ಇಸವಿಯ ಬೆಳಗಿನ ೪ ಘಂಟೆಯ ಸಮಯಕ್ಕೆ ರಬಕವಿ ಮುಕ್ಕಾಮಿನಲ್ಲಿ ತಮ್ಮ ಸ್ವಗೃಹದಲ್ಲಿ ಪ್ರಸೂತಿರೋಗದಿಂದ ಸ್ವರ್ಗಸ್ಥರಾದ ಸಂಗತಿಯನ್ನು ಕೇಳಿ ಮನಸ್ಸಿಗೆ ಬಹಳ ದುಃಖವಾಯಿತು. ಮ॥ ಗಂಗಾಧರಪ್ಪಾ ಸಾಬೋಜಿ ಇವರಿಗೆ ಈ ಪರಿ ಸುಶಿಕ್ಷಿತ ಪತ್ನೀವಿಯೋಗದ ದುಃಖವು ಹತ್ತೆಂಟುವರ್ಷದಲ್ಲಿ ೨–೩ ಸಾರೆ ಪ್ರಾಪ್ತವಾಗಿರೋಣದರಿಂದ ಅವರ ಮನಸ್ಸಿಗೆ ಅತಿಶಯವಾದ ತಾಪವಾಗಿರಬಹುದು. ಆದರೆ ಅವರು ವಿಚಾರವುಳ್ಳವರಾಗಿರುವುದರಿಂದ ಮನಸ್ಸಿಗೆ ದುಃಖಮಾಡಿಕೊಳ್ಳದೆ ತಮಗೆ ಲಭಿಸಿದ ಸುಪತ್ನಿಗಳ ಸಂಯೋಗಕಾಲದಲ್ಲಿ ತಮಗೂ ಅವರಿಗೂ ಆದ ಸಪ್ರೇಮದ ಸಾಂಭಾಷಣಗಳನ್ನು ಪ್ರಕಟಿಸಿ ಸಮಾಧಾನ ಹೊಂದಬೇಕೆಂದು ಅವರಿಗೆ ಸೂಚಿಸಿ ಸೌ॥ ಮಲ್ಲವ್ವನವರ ಆತ್ಮಕ್ಕೆ ಚಿರಶಾಂತಿಯನ್ನು ದೇವರು ಕೊಡಲೆಂದು ಪ್ರಾರ್ಥಿಸಿ ಈ ದುಃಖವಾರ್ತೆಯನ್ನು ಮುಗಿಸುತ್ತೇನೆ.

ಇತಿವಿನಂತಿಯು ಓರ್ವ ವೀರಶೈವಬಂಧು.

ವಿಜ್ಞಾಪನೆ.

ಈ ಸಮಯ ಬಿಡಬೇಡಿ. ಮುಂದೆ ದೊರೆಯಲಾರದು. ಮೊಳಕಾಲ್ಮೂರಿನ ಶುದ್ಧವಾದ ರೇಶ್ಮೆಯವಸ್ತ್ರಗಳು ಬೇಕೋ? ಬೆಲೆಸುಲಭ ಬಣ್ಣ ಗ್ಯಾರಂಟಿಯಾದದ್ದು. ಒಂದು ಸಲ ತರಿಸಿನೋಡಿರಿ ನಮ್ಮಲ್ಲಿ ಹೊದೆಯುವ ವಸ್ತ್ರಗಳೂ, ಮೊಗುಟಗಳೂ ಸೀರೆಗಳೂ, ನಡಕಟ್ಟುಗಳೂ, ಲಿಂಗದವಸ್ತ್ರಗಳೂ, ಕೈವಸ್ತ್ರಗಳೂ ಬಹಳ ಚೆನ್ನಾಗಿ ಎಲ್ಲಾ ರಂಗಿನಲ್ಲಿಯೂ ತಯಾರಾಗುತ್ತವೆ. ನಾವು ಮೈಸೂರು, ಮದ್ರಾಸು ಸೀಮೆಗಳೆಲ್ಲಾ ಭಾಗಕ್ಕೂ ನಮ್ಮ ಮಾಲನ್ನು ರವಾನಿಸುತ್ತೇವೆ. ಈ ಮಾಲುಗಳಿಗೆ ಬಹುಮಾನಗಳೂ, ಮೆಡಲುಗಳೂ, ಬಂ[illegible] ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು. ಹಿಮಂತಋತುವಿನ ದರಗಳು. ೧ನೆ ನಂ. ವಸ್ತ್ರಗಳು ತೊಲೆ ೧ಕ್ಕೆ ೦–೭–೦. ೨ನೆ ನಂ. ವಸ್ತ್ರಗಳು ತೊಲೆ ೧ಕ್ಕೆ ೦–೬–೯. (ಮೊಗುಟ, ಅರಳೆಪೇಟೆ ಶೀರೆಗೆ, ನಡಕಟ್ಟು, ಲಿಂಗದವಸ್ತ್ರಗಳು) ೧ನೆ ನಂ. ಮಾಲು ತೊಲೆ ೧ಕ್ಕೆ ೦–೮–೦. ೨ನೆ ನಂ. ಮಾಲು ತೊಲೆ ೧ಕ್ಕೆ ೦–೭

ನಮ್ಮವಿಳಾಸ:—

7 ಎಂ. ಮಲಕಣ್ಣ, ಮತ್ತು ಬ್ರದರ್ಸ್,
ರೇಶ್ಮೆ ಜವಳಿ ವ್ಯಾಪಾರಿಗಳು. ಪೋಸ್ಟ್ ಮೊಳಕಾಲ್ಮೂರು

ಶಾಸ್ತ್ರಪದ್ಧತಿಯಿಂದಲೇ ತಯಾರಿಸಿದ
ಧಾತುಪುಷ್ಟಿಕ ಲೇಹವು.

3

ರಕ್ತಶುದ್ಧಿ ಮತ್ತು ರಕ್ತವೃದ್ಧಿಯ ಮೇಲೆ ಅತಿಉತ್ತಮ... ದೇಶಿ! (ಗುಣವಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ಪಾಣಿಗ್ರಹಣವುಳ್ಳವರು, ರಕ್ತಮುಖ್ಯಕವಾದವರು, ತೃಷೆವುಳ್ಳ ದಮ್ಮಿನವರು, ಕೆಮ್ಮಿನವರು, ಕ[illegible] ಉಂಟಾದವರು, ಅಲ್ಪವ್ಯಾಧಿಯುವರು, ವಾಂತಿಯಾಗುವ[illegible]ರು, ಮೇಹಸಂಬಂಧ ರೋಗವುಳ್ಳವರು, ಧಾತುರೋಗ[illegible]ವವರು, ಉಷ್ಣಗುವವರು, ಸೇವಿಸಬೇಕು. ಇದರಿಂ[illegible] ಮೇಲೆ ಹೇಳಿರುಲ್ಲಾ ರೋಗಗಳೂ ಪೂರ್ಣತೆಯಿಂ[illegible]ದ ಗುಣವಾಗಿ ಇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಈ ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪುಷ್ಟಿಕ, ವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಹರ, ಗರ್ಮಿ, ಟಾಕಿ, ಗುಪ್ತಪ್ರದೇಶ[illegible] ಮೇಲೆ ಹುಟ್ಟುವೆಲ್ಲಾ ತರದ ಬಕ್ಕೆಗಳು, ಹುಣ್ಣುಗಳು ಪಿತ್ತದ ಬಾಧೆ ಕಟಿಶೂಲೆ, ವಾತರೋಗ, ಮುಂತಾ[illegible] ಧೈರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, [illegible]ಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗು[illegible] ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೋಲೆ[illegible]ಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ [illegible]. ೮೦ ತೋಲೆಗೆ ರೂಪಾಯಿ ೬ ಬೀಳುವದು. ಪ[illegible] ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡ [illegible]ವಾನಿಸುವೆವು.

[illegible]ಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ. ಜಿಲ್ಲ ಉತ್ತರಕನಡಾ

ಶ್ರೀಜಗದ್ಗುರು

[illegible]ತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾ[illegible]ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ [illegible] ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಪಲ್ಲಕ್ಕಿಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾ[illegible] ಸೊಲ್ಲಾಪುರದಲ್ಲಿ ವ್ಯಾಸನತೊಳಸಹಿತ ಆದ ಸಮಾ[illegible] ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರವಿವರ್ಮಾದಿಕರ ಚಿತ್ರದಂತೆ, [illegible]ತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾ[illegible] ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾ[illegible] ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಹವಾಗಿ ತನ್ನ ನೇತ್ರವ ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೋ[illegible]ದು ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ ಕ್ಕೆ [illegible]ಯ ಫುಲ್ಲಸೈಜು ೧ ರೂಪಾಯಿ, ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು [illegible]ರುಸಾವಿರ ಹುಬ್ಬಳ್ಳಿ ಶ್ರೀ ವಿರಕ್ತವ ಸತ್ಪುರುಷಮ[illegible]. ಹಾಳಕೇರಿ ಆನಂದಸ್ವಾಮಿಯ ಫೋಟೋ ಬಣ್ಣದ್ದು [illegible]ತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ. [illegible]ಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿ[illegible]ಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೋ [illegible]ಕ್ಕುತ್ತವೆ ಫುಲ್ಲಸೈಜು ಕ್ರಯ ೧ ರಿಂ ೧ ರೂಪಾಯಿ ಕ್ಯಾ[illegible]ನೇಟ್ ಸೈಜು ೮ ಆಣೆ.

ಹೊಸಫ್ಯಾಷನ್—ಸಭ್ಯಗೃಹಸ್ಥರು ಗಡಿಯಾರ ಸರ್ಪ[illegible] ಹಚ್ಚುವ ಲಾಕೇಟುಗಳೂ, ಇದರ ಹಿಂದೆ ಮುಂದೆ ಈಪ್ರಕಾರ ೨ ಫೋಟೋ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟಿದೂ ॥, ।।।= , ೧, ೧।. ಪ್ರಕಾರ, ಮತ್ತೂ ಬೆಳ್ಳಿದು ರು ೧। ರೋಡ್ ಗೋಲ್ಡ್ ಬಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨।।। ರೂ.

ಪರಊರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ.

ನಮ್ಮವಿಳಾಸ— ಗಂಗಪ್ಪಾ ಜೇರಿಗೆ,
38 ಆರ್ಟಿಸ್ಟ್ ಸೊಲ್ಲಾಪುರ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ
ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂ
ಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು
15 ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ-ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು—ಕೆಮ್ಮು-ನೆಗಡಿ-ದಿನಜ್ವರ—ಮೂರರಜ್ವರ ನಾಲ್ಕರಜ್ವರ— ಮಲೇರಿಯಾಜ್ವರ— ತಲೆನೋವು— ಮೈಕೈ ನೋವು ಮತ್ತು ಭಾರ—ಅರೋಚಕ ಹಲ್ಲುನೋವು-ಹೊಟ್ಟೆ ನೋವು—ಮಲಬಂಧ-ಅಜೀರ್ಣಭೇದಿ—ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳೆತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೨೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಗೆ, ಮಲಬಂದ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತಕ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ. ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್॥ಡಿ

ಬಹುಮಾನ! ಶ್ರೀ ಬಹುಮಾನ !!

ಅತ್ಯಾಶ್ಚರ್ಯಕರವಾದ ಬಹುಮಾನ.
೫॥ ಸಾವಿರ ರೂಪಾಯಿಗಳು ಹಂಚಲ್ಪಡುವವು
ದಿವ್ಯೌಷಧ ಬಳ್ಳಾರಿ. ಸುಪ್ರಸಿದ್ಧೌಷಧ
ಸರ್ವಜನಮನೋಲ್ಲಾಸಿನಿ ಅಂಡ್ ಕೋ ಇವರ
(• ನಾರಸಿಂಹಚೂರ್ಣವು •)

9

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಜವಾದುದಷ್ಟೆ. ಆದರೆ ಅನೇಕ ದುರ್ವರ್ತನಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವುವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನ ಕಣ್ಣಾರ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವುವಿಧ ಔಷಧಗಳನ್ನು ವಿಶೇಷವಾದ ಬೆಲೆಯನಿಟ್ಟು ವಿಕ್ರಯಿಸಿದರು ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವದು ವಿಷಾದಕರವಾಗಿರುವದು. ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿ (ನಾರಸಿಂಹಚೂರ್ಣವು) ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ, ಅನೇಕತರಹೆಯ ಮೇಹರೋಗಗಳು, ಪಾಂಡುರೋಗ, ಪೀನಸ, ಹದಿನೆಂಟು ಬಗೆಯಾದ ಕುಷ್ಠಗಳು, ಎಂಟುವಿಧ ಉದರರೋಗಗಳು, ಭಗಂಧರವು, ಮೂತ್ರಕೃಛ್ರವು, ಗೃಧ್ರಸೀವಾತವು, ಕಾಮಿಲೆ, ಕ್ಷಯವು ಮಹಾಶ್ವಾಸಗಳು, ದಾರುಣವಾದ ಐದುಬಗೆಯಾದ ಕಾಸೆಗಳು, ಎಂಭತ್ತುವಿಧಗಳಾದ ವಾತರೋಗಗಳು, ನಲವತ್ತು ಬಗೆಯಾದ ಪಿತ್ತಗಳು, ಇಪ್ಪತ್ತು ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಸಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ ಚಿನ್ನದಂಥಾ ಕಾಂತಿಯು, ಸಿಹ್ಮನಂತೆ ಪರಾಕ್ರಮವು, ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯು ಅತ್ಯಧಿಕ ವೀರ್ಯವೃದ್ಧಿಯು ನೃಸಿಹ್ಮನಿಗೆ ಸಮಾನರಾದ ಮಕ್ಕಳನ್ನು ಪಡೆಯುವಬಲವೂ ಉಂಟಾಗುವುದು ಇದರಲ್ಲಿ ಯಾವ ವಿಧವಾದರಸಗಳಾಗಲಿ ಮಿಶ್ರವಾಗಿಲ್ಲ, ಇನ್ನಾವ ದೋಷಗಳೂ ಇಲ್ಲ. ನಿರ್ದುಷ್ಟವಾದದ್ದು, ಫಕ್ತವನಸ್ಪತಿಗಳಿಂದಲೇ ಸಿದ್ಧಮಾಡಿದದಿವ್ಯವಾದ ಔಷಧ. ಅನೇಕ ಪಂಡಿತರು, ಧನಿಕರು' ಸರ್ಟಿಫಿಕೇಟುಗಳನ್ನು ಕೊಟ್ಟಿರುವರು.

೧೪ ದಿನ ಉಪಯೋಗಕ್ಕೆಬರುವ ಡಬ್ಬಿ ೧ ಕ್ಕೆ ಬೆಲೆ ರೂ. ೧—೦—೦

—(ಬಹುಮಾನಗಳನ್ನು ಹಂಚುವ ವಿಧಾನ)—

೧ ಡರ್ಜ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೧೦೦೦೦ ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೬೦೦೦ ರೂ. ೩ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೪೦೦೦ ರೂ. ೨ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೩೦೦೦ ರೂ. ೧ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ೨೦೦೦ ರೂ.

೧೯೧೪ ನೇ ಜುಲೈ ೧ ನೇ ತೇದಿ ಮೊದಲು ೧೯೧೫ ನೇ ಜುಲೈ ೧ ತೇದಿಯವರಿಗೂ ಈ ಔಷದವು ಒಂದು ಲಕ್ಷ ಡಬ್ಬಿಗಳು ಖರ್ಚಾದಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ. ಒಂದುಪಕ್ಷದಲ್ಲಿ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ವಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡಿಯುವದಲ್ಲದೆ ಬಹುಮಾನವನ್ನು ಸಹಾ ಹೊಂದವದಕ್ಕೆ ಅರ್ಹನಾಗಿರುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರು ಸಂಶಯವಿಲ್ಲ. ಬಹುಮಾನದ ಮೊತ್ತವು ನಿಷ್ಪಕ್ಷಪಾತವಾಗಿ ಒಂದೇ ಸಮವಾಗಿ ಹಂಚಲ್ಪಡುವವು. ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಕುಹಕತನವು ಇಲ್ಲ, ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರ ಮಾತುಗಳಿಗೆ ನಿಗಾ ಕೊಡಲಾಗದು, ಜಾಗ್ರತೆ ತರಿಸಿಕೊಳ್ಳಿರಿ. ಔಷಧದ ಗುಣವನ್ನು ಪರೀಕ್ಷಿಸಿರಿ ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇದಲ್ಲದೆ ನಮ್ಮಲ್ಲಿ ಇನ್ನು ಅನೇಕತರಹೆಯ ಔಷಧಗಳು ಸಿಗುತ್ತವೆ. ರೋಗದಲಕ್ಷಣವನ್ನು ತಿಳಿಸಿದರೆ ಅಮೂಲ್ಯವಾದ ಮತ್ತು ಗುಣಕಾರಿಗಳಾದ ಔಷಧಗಳನ್ನು ಕಳುಸುವೆವು.

ಇದರ ಅನುಪಾನ ಪತ್ರಿಕೆಯನ್ನು ಬಹುಮಾನದ ಟಿಕೀಟನ್ನು ಡಬ್ಬಿಸಂಗಡ ಕಳಿಸುವೆವು. ನಮ್ಮ ಕಂಪೆನಿಯ ಕಾಶಿವಿಶ್ವನಾಥ ಮಾರ್ಕು ಇಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು.

ನಮ್ಮ ಅಡ್ರೆಸ್ಸು—
ಸರ್ವಜನಮನೋಲ್ಲಾಸಿನಿ ಅಂಡ್ ಕೋ ಬಳ್ಳಾರಿ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು. 34

ಶೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈಕ[illegible]ಲು ಹೊರೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ಊರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನ ಚ್ಚುಬ್ಯರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೊಂಕಿಗೆ ಗುರಿಯಾಗುವುದಿಲ್ಲ. ಬಹಳ ಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೪ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೦ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ



ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತ[illegible], ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ[illegible]ರಿಕೆಂದು ತೋರಿದಾಗಲೂ, ಅಳ್ಳ[illegible]ಗುವಂತೆ ರೋಗದಮೇಲೆ ಕೆಲಸಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅ[illegible]೦ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣ ತೋರುತ್ತದೆ. ಸಮಯದಲ್ಲಿ ಪೇ[illegible]ಬೇಡಿರಿ. ಒಂದೇಒಂದು ಬುಡ್ಡಿಯು ನಿಮ್ಮಲ್ಲಿರಲಿ ಮತ್ತೊಂದು ಸಹಾಯಕ

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧—೦—೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ದಿ ಜನರಲ್ ಏಜೆನ್ಸಿ, ಮೈಸೂರು.

ಕಾದಂಬರಿಗಳು:— ಚಂಡಮಾರುತ ೦-೨-೦; ಚರಿತಾಮೃತಂ ೦-೫-೦; ರಾಜಕಥಾವಲ್ಲರಿ ೦-೫-೦; ಪೀಟರಿನಚರಿತ್ರೆ ೦-೨-೦; ವಿಯೋಗಿನಿ ೦-೩-೦; ಉನ್ಮತ್ತೆ ೦-೨-೬; ಸೀತೆ ೦-೫-೦; ಸಾಹಸಿಕೆ, ಕಲಾನಾಥ ೦-೮-೦; ಮಹಾಲಕ್ಷ್ಮಿ ೦-೨-೦; ತಾರಾಸುಂದರಿ ೦-೮-೦; ಪದ್ಮಿನಿ ೦-೨-೦; ಸತ್ಯಸಂಜೀವಿನಿ ೦-೮-೦; ಕೊಹಿನೂರು ೦-೧೨-೦; ಆನಂದಮಠ ೧-೦-೦; ರಾಧಾರಾಣಿ ೦-೩-೦; ಸೀತಾವನವಾಸ ೦-೧೨-೦; ರಜನಿ ೦-೧೨-೦. 67

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ ಕ್ಕೆ ೦-೦-೨ ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹ ದೂಪರ್ಟಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್ ಸನ್ಸ್
ಸುಗಂಧಕಾರಿ, ಮೈಸೂರು.
36

ಲೋಕಪ್ರಸಿದ್ಧವಾದ ಪಂಜಾಸಾಲಾಮಿಸ್ರಿ ಮುರಬ್ಬಾ.

8



ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಪಂಜಾ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕೆಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು ಶಕ್ತಿಯಲ್ಲಿ ಕಾಬೂಲ್ ಕೆಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗೆಡ್ಡೆ, ಶಾವುಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾ ಸಾಲಾಮಿಸ್ರಿಯೋ ಅಥವಾ ಬೇರೆ ತರಹಾದ್ದೋ ಎಂಬುದು ತಿಳಿದುಬರುತ್ತೆ.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ನೀರಿನಂತಿರುವ ಧಾತುವನ್ನು ಘಟ್ಟಿಪಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿ ಹೋಗುವ ಧಾತುವನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಉರಿಯುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕ್ಷಣಕ್ಷಣಕ್ಕೂ ಮೂತ್ರವಾಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೆದುಳಿಗೆ ಬಲವನ್ನು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವುದು
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ತಾಂಬ್ರ ಮತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲ ಬರುವಂತ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವುದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕಂಡುಬರುತ್ತೆ. ೨-೩ ಡಬ್ಬಿಗಳನ್ನು ಉಪಯೋಗಿಸುವದರಿಂದ ಜನ್ಮಾಂತರದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು „ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ
೫೦೦ ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ಕ್ಕೆ ರೂ. ೨-೦-೦. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ ೬ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೋ, ದೊಡ್ಡಪೇಟೆ, ಬೆಂಗಳೂರು ಸಿಟಿ.
ಡಿ. ಮನ್ನಾಲಾಲ್ ಡಿಲ್ಲೀವೈದ್ಯರು, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

೧೯೧೫ ನೆಯ
ಶ್ರೀ ಸೀತಾರಾಘವ
ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.



ಶಾಯಿ ಇಳಿಯದ ಉತ್ತಮವಾದ ಕಾಗದ ಮುದ್ದಾದ ಮುದ್ರಣ. ಅನೇಕವಾದ ಹೊಸಸಂಗತಿಗಳಿವೆ.

೧ ನಂ—ಸಣ್ಣ ಸೈಜು ಸಾದಾ	೦-೪-೦
೨ ನಂ—ಪೆನ್ಸಿಲ್ ಮುಚ್ಚಳವುಳ್ಳದು	೦-೬-೦

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ

೩-೪ ನೆಯ ನಂಬರ್ ಡೈರಿಗಳು ಮುಗಿದುಹೋಗಿವೆ.

ಹೆಚ್ಚಾಗಿ ತರಿಸುವವರಿಗೆ ರೂಪಾಯಿ ೧ ಕ್ಕೆ ೦-೨-೦ ಕಮಿಷನ್ ದೊರೆಯುವುದು. ವಿಳಾಸ:—

ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.
15

S.U.N.&Co
NENARES CITY.
KASHI
VISHWESHWAR.

16

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು.

ವಿಳಾಸ— ಎಸ್. ಯೂ. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ನ್ಯಾಯದರ್ಪಣ.

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇ[illegible] ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿ[illegible]ಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ [illegible]ಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗಾ[illegible] ಮುನಸಿಪ್ ಕೋರ್ಟಿನ ಕಾನೂನೂ ಮತ್ತೂ ರೂಲ[illegible] ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಅ[illegible]ಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋ[illegible] ಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿ[illegible]ತ್ತವೆ. ಬೆಲೆ ರೂ. 1-3-0. ವಿ. ಪಿ. ಮೂಲ್ಯ 1-12

೦. ಎಸ್. ನಂಜಪ್ಪನವರು,
49 ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂ[illegible]

ಗಂಧರ್ವಾಜ ನಸ್ಯದಪುಡಿ.

ಈ ಪುಡಿಯನ್ನು ಹಾಕಿಕೊ[illegible] ದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವ[illegible] ಕೆಟ್ಟವಾಸನೆಬರುವುದು, ಶೀತ, ನೆ[illegible] ಉಸಿರುಕಟ್ಟಿಕೊಳ್ಳುವುದು (ಪೀನಸಿ[illegible]ಜೆ ಕ್ಷುತ್ತು ಬೆಳಗಿನವೇಳೆಗಳಲ್ಲಿ ಮ[illegible] ತ[illegible] ನೋಯುವುದು, ತಲೆಯಲ್ಲಿ ನಿ[illegible] ತ[illegible]ಬಿ ಥಿಮ್ಮೆನ್ನುವುದು, ಈ ಯಾ[illegible] ದ್ರಿ[illegible]ದ್ಧ ತಪ್ಪದೆ ಗುಣವಾಗುತ್ತ[illegible] ಕಣ್ಣುಗಳಿಗಾಗಲಿ ಮೆ[illegible]ಳಿಗಾಗಲಿ ಕೆಡುಕಿಲ್ಲ. ಒಂದು ಟಕಿ ಈ ಪುಡಿಯನ್ನು [illegible]ಸಾಧಾರಣ ಪುಡಿಯೊಡಿನೆ ಬೆರೆ[illegible]ರೆ ವಾಸನೆಯು ಘಮ[illegible]ಘಮಿಸುತ್ತದೆ. ೧ ಡಬ್ಬಿಯು ಬೆ[illegible] ಆಣೆ. ೧ ಡರ್ಜ ಡಬ್ಬಿ[illegible] ೨-೨-೦

ಉತ್ತ[illegible]ಮವಾದ ನಸ್ಯದಪುಡಿ.

ಘಾಟು ಸಹಜವಾ[illegible] ವಾಸನೆಗಳಿಂದ ಒಳ್ಳೇ ಹೊಗೆ[illegible]ಪ್ಪಿನಿಂದ ಈ ಪುಡಿಯ[illegible] ತಯಾರಿಸಲ್ಪಡುತ್ತಿದೆ. ಮೂ[illegible] ಹುಳಿವಾಸನೆ ಬರುವ[illegible]ಗಸೂಗು ಕಟ್ಟಿಕೊಳ್ಳುವ ದುರ್ಗು[illegible]ನಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ[illegible]ತಿನ ನಿಜವು ತಿಳಿಯ[illegible]ತ್ತದೆ. ೨೪ ತೊಲೆ ತೂಕದ ಸೆ[illegible] ೧೦ ಆಣೆ ೫ ಸೇರಿ[illegible] ೦-೮-೦

ಮುಖ[illegible]ಸಿನೀ ಹೊಗೇಸೊಪ್ಪು.

ಬಾಯಿಯ ವ[illegible]ನೆ, ಹಲ್ಲುನೋವು, ಬಾಯಿಹು[illegible] ನಾಲಿಗೆ ಅರೋಚ[illegible]ಳು ಹೋಗುವೆ. ನೀವುಉಪಯೋ[illegible]ಸುವ ಬರೀ ಹೊಗೆ[illegible]ಸೊಪ್ಪಿಗೆ ಬದಲಾಗಿ ಖಾರ, ರುಚಿ, ವಾಸನೆಗಳಿಂದ [illegible]ರೆಯುವ ಈ ಹೊಗೇಸೊಪ್ಪನ್ನು [illegible]ಯೋಗಿಸಿರಿ. ೧ ಡ[illegible]ಗೆ ೪ ಆಣೆ. ಒಂದು ಡರ್ಜ ಡಬ್ಬಿಗೆ ೧-೧೪-೦ ಟಪ[illegible]ಲ್‌ಖರ್ಚು ಬೇರೆ.

ವಿಳಾಸ—[illegible]. ಮಲ್ಲಿಕಾರ್ಜುನಶೆಟ್ಟಿ,
ಗೋ[illegible]ಪಸೆಟ್ಟಿಪುರು, ಹನೂರು ಪೋಸ್ಟ್
ಕೊಳ್ಳೇಗಾಲದ ತಾಲ್ಲೂಕ[illegible]
45

೧೯೧೫ನೆಯ[illegible] ಜನವರಿ ತಾ॥ ೧೦ರಿಂದ ೧೯೧೫ನೆ[illegible] ಜನವರಿ ತಾ॥ [illegible] ರ ವರೆಗೆ ಸಲ್ಲುವ ಶಾಲೀವಾಹನ[illegible] ೧೮೩೬ ನೆಯ [illegible]ಂದನಾಮ ಸಂ॥ ದ ಪುಷ್ಯ ಬ॥ ನವ[illegible] ಯಿಂದ ಮಾಘ [illegible]॥ ಪಾಡ್ಯಮಿವರೆಗಿನ ಪಂಚಾಂಗ.

ತಾ॥	ವಾರ.	ಗಳಿಗೆ.	ನಕ್ಷತ್ರ	ಗಳಿಗೆ.	
10	ಭಾನು	6-10	ಸ್ವಾತಿ	30-9	2
11	¹ಸೋ	0-16	ವಿಶಾ	54-7	2
12	²ಮಂ	48-33	ಅನೂ	21-47	2
13	³ಬುಧ	48-11	ಜ್ಯೇಷ್ಠ	17-57	3
14	⁴ಗುರು	38-2	ಮೂಲ	14-38	
15	⁵ಶುಕ್ರ	34-27	ಪೂಷಾ	12-0	
16	⁶ಶನಿ	31-25	ಉ॥ಷಾ	10-10	

(1) ಅವ[illegible] ಸ್ಮಾರ್ತೈಕಾದಶೀ, ಕೊಡಾರವಲ್ಲಂ, ಗ[illegible]ಧಯೋಗಃ [illegible] ವೈಷ್ಣವೈಕಾದಶೀ, ಹರಿವಾಸರಃ. (ಪಾತಾಭಾವಕ[illegible]ಲೀಕಃ, ಮಾಸಶಿವರಾತ್ರಿಃ, ಭೋ[illegible] ಹಬ್ಬ, ತೊ[illegible] ಪುಡಿಯಾಳ್ವಾರ್ ತಿ॥ (4) ಉ[illegible] ರಾಯಣಪುಣ್ಯ[illegible]ಲಃ, ಶಿವಗಂಗಾ ಗಂಗೋತ್ಪತ್ತಿಃ (ಸರ್ವತ್ರೈಕ[illegible]ಮಾವಾಸ್ಯಾ, ಗರುಡಜಯಂತೀ, ಪುರ[illegible] ರದಾಸರ ಪು[illegible]ನ, ಕನೂಹಬ್ಬ, ಚುಂಚನಕಟ್ಟೆ ರಾ[illegible] ಸ್ವಾಮಿರಥಃ, [illegible]ಶ್ರೀರಂಗಪಟ್ಟಣದಲ್ಲಿ ರಂಗಸ್ವಾಮಿಯಾರ[illegible] (6) ಮಾಘ[illegible]ವ್ರತಂ.

ಮೈಸ[illegible] ವಿರೂಪಾಕ್ಷಯ್ಯನವರಿಂದ [illegible] ಪ್ರೆಸ್ಸಿನಲ್ಲಿ [illegible] ಪ್ರಕಟಿಸಲ್ಪಟ್ಟಿತು.

ERGISTERED NO. M. 124.

ಮೈಸೂರ್ ಸ್ಟಾರ್.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ।
ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್॥

ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ।
ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ॥
ಸಿಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ।
ಪ್ರೇಮಂಬಿತ್ತ್ರಿಕೆಯುಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ॥

ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೧೪—೦

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಸಂಪುಟ ೨೮) ಮೈಸೂರ್ ಸ್ಟಾರ್ ಸನ್ ೧೯೧೫ ನೆಯ ಇಸವಿ ಜನವರಿ ತಾರೀಖು ೧೭ ನೆಯ ಭಾನುವಾರ. (ಸಂಚಿಕೆ ೩

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಈ ಕೆಳಗೆ ವಿವರಿಸಿರುವ ೧೧ ಸಾಮಾನುಗಳಿಗೆಮಾತ್ರ ಪ್ಯಾಕಿಂಗ್ ಪೋಸ್ಟೇಜು ಯಾವುದೂ ಇಲ್ಲದೆ ಮುಫತ್ತಾಗಿ ರವಾನಿಸುತ್ತೇವೆ.

49

ಎಂಟಾಣೆ ಮೇಲ್ಪಟ್ಟದ್ದನ್ನೆಲ್ಲಾ ಮಣಿಯಾರ್ಡರ್ ಮುಖಾಂತರ ಕಳುಹಿಸುವುದುತ್ತಮ.

ನಂ. ೧. ೩ ಪೈ ಬಾಬ್ತು ಪೋಸ್ಟೇಜು ಸ್ಟ್ಯಾಂಪ್ ಕಳುಹಿಸುವವರಿಗೆ ೧೯೧೫ ನೇ ಇಸವಿಯ ಸಚಿತ್ರ ಕ್ಯಾಲೆಂಡರ್ ಒಂದನ್ನು ಉಚಿತವಾಗಿ ರವಾನಿಸುತ್ತೇವೆ.

೨. ಒಂದೂವರೆಯಾಣೆ ಬಾಬ್ತು ಪೋಸ್ಟೇಜು ಸ್ಟ್ಯಾಂಪ್ ಕಳುಹಿಸುವವರಿಗೆ ಆಟೋಮೋಹಿನಿ ಪರಿಮಳ ಕಾರ್ಡನ್ನಾಗಲೀ, ಅಥವಾ ಕಾಮಿನಿಯಾ ಆಯಿಲ್ ಸ್ಯಾಂಪಲ್ ಶೀಶೆಯನ್ನಾಗಲೀ ರವಾನಿಸುತ್ತೇವೆ.

೩. ಎರಡೂವರೆಯಾಣೆ ಬಾಬ್ತು ಪೋಸ್ಟೇಜು ಸ್ಟ್ಯಾಂಪ್ ಕಳುಹಿಸುವವರಿಗೆ ಓಟೋಮೋಹಿನಿ ಸೆಂಟ್ ಸ್ಯಾಂಪಲ್ ಟ್ಯೂಬಾಗಲೀ, ನ್ಯಾಷನಲ್ ಬ್ಲೂಬ್ಲಾಕ್ ಇಂಕ್ ಪೌಡರ್ ಪೊಟ್ನ ಒಂದಾಗಲೀ, ಸರ್ಸ ತಾಂಬೂಲಮಿತ್ರ ೨೫೦ ಮಾತ್ರೆಗಳುಳ್ಳ ಪೊಟ್ನ ಒಂದಾಗಲೀ, ಅಥವಾ ಹೆಡ್ಡೇಕ್‌ಕ್ಯೂರ್ ತಲೇನೋವಿನ ಔಷಧ ಮಾದ್ರಿಡಬ್ಬಿ ಒಂದಾಗಲಿ ನೀವು ಅಪೇಕ್ಷಿಸಿದ್ದನ್ನು ರವಾನಿಸುತ್ತೇವೆ.

೪. ನಾಲ್ಕಾಣೆ ಬಾಬ್ತು ಸ್ಟ್ಯಾಂಪ್ ಕಳುಹಿಸಿರಿ ನಿಮಗೆ ಶೇಮೋತಯಾರಿ ಹಲ್ಲುಪುಡಿ ಡಬ್ಬಿ ಒಂದನ್ನು ರವಾನಿಸುತ್ತೇವೆ.

೫. ೬॥ ಆಣೆ ಪೋಸ್ಟೇಜು ಸ್ಟ್ಯಾಂಪ್ ಕಳುಹಿಸಿರಿ ನಿಮಗೆ "ಜಾಮಲಿ" ಎಂಬ ಹೊಸ ಕಾದಂಬರಿ ಪುಸ್ತಕವನ್ನು ರವಾನಿಸುತ್ತೇವೆ.

೬. ೩॥ ಆಣೆ ಸ್ಟ್ಯಾಂಪ್ ಕಳುಹಿಸಿರಿ "ಶ್ರೀಬಸವೇಶ್ವರಸ್ತೋತ್ರ" ಗುರುಬೋಧೆ, ಮನೋಬೋಧೆ, ಲಿಂಗತ್ರವಿಧಿ ಇವು ೪ ಇರುವ ಪಾರಾಯಣಕ್ಕೆ ಯೋಗ್ಯವಾದ ಪುಸ್ತಕವನ್ನು ರವಾನಿಸುತ್ತೇವೆ.

೭. ೩ ಆಣೆ ಸ್ಟ್ಯಾಂಪ್ ಕಳುಹಿಸಿರಿ "ಶತಕಪಂಚಕ" ವೆಂಬ ಬೇರೆಬೇರೆ ೫ ಶತಕಗಳಿರುವ ಪುಸ್ತಕವನ್ನು ರವಾನಿಸುವೆವು.

೮. ೧೦ ಆಣೆ ಸ್ಟ್ಯಾಂಪ್ ಕಳುಹಿಸಿರಿ "ಮನೋವಿಜಯ" ವೆಂಬ ಸರ್ವರೂ ಅಗತ್ಯ ಓದಬೇಕಾದ ಗ್ರಂಥವನ್ನು ರವಾನಿಸುತ್ತೇವೆ.

೯. ೧೧ ಆಣೆ ಸ್ಟ್ಯಾಂಪ್ ಕಳುಹಿಸಿರಿ ಒಂದುಡರ್ಜ ಓಟೋಮೋಹಿನಿ ಸೆಂಟ್‌ಕಾರ್ಡನ್ನು ರವಾನಿಸುತ್ತೇವೆ.

೧೦. ೧೨ ಆಣೆ ಸ್ಟ್ಯಾಂಪ್ ಕಳುಹಿಸಿರಿ "ರಾಜಪುತ್ರಜೀವನಸಂಧ್ಯಾ" ಎಂಬ ಹೊಸ ಕಾದಂಬರಿಯನ್ನು ರವಾನಿಸುತ್ತೇವೆ.

೧೧. ೧೪ ಆಣೆ ಕಳುಹಿಸುವವರಿಗೆ ಪ್ರತಿಯೊಬ್ಬ ಹಿಂದುವಿಗೂ ಅತ್ಯವಶ್ಯಕವಾಗಿ ಬೇಕಾದ ತಾವಿಷ್ಟಪಟ್ಟ ಕಡೆ ತಮಗೆ ಬೇಕಾದ ವಿಗ್ರಹಗಳನ್ನು ಛಾಪಿಸಬಹುದಾದ ಹಿಂದೂದೇವರ ೬ ರಬ್ಬರ್ ಮೊಹರುಗಳಿರುವ ಸುಂದರವಾದ ಪೆಟ್ಟಿ ೧ ಸ್ವತಃ ಸದಾ ಶಾಯಿಯಿರುವ ಮೆತ್ತೆ ೧ (ಸೆಲ್ಫಿಂಕ್‌ಪ್ಯಾಡ್) ಇವಿಷ್ಟನ್ನೂ ರವಾನಿಸುತ್ತೇವೆ.

ಸ್ಕೂಲ್‌ಮಾಸ್ಟರ್‌ಗಳಿಗೂ ವಿದ್ಯಾರ್ಥಿಗಳಿಗೂ ಸೂಚನೆ.

ಅಗ್ಗವೆಂದು ಬಜಾರಿಶಾಯಿಪುಡಿಯನ್ನು ಉಪಯೋಗಿಸಿ ಬರವಣಿಗೆ ಚನ್ನಾಗಿರದೆ ಬೇಜಾರು ಹೊಂದಿರುವಿರಷ್ಟೆ. ನಮ್ಮಲ್ಲಿ ಬಿಕರಿಯಾಗುವ ಹೊಸತಯಾರಿ ನ್ಯಾಷನಲ್ ಬ್ಲೂಬ್ಲಾಕ್ ಇಂಕ್ ಪೌಡರನ್ನು ಒಂದುಸಾರಿ ಉಪಯೋಗಿಸಿದಲ್ಲಿ ಗುಣವು ನಿಮಗೆ ವ್ಯಕ್ತವಾಗುತ್ತೆ.

"ನ್ಯಾಷನಲ್ ಬ್ಲೂಬ್ಲಾಕ್ ಇಂಕ್ ಪೌಡರ್" ಪೊಟ್ನ ೧ ಕ್ಕೆ ೦—೨—೦. ೧೨ ಪೊಟ್ನಗಳಿಗೆ ೧—೫—೦. ಟಪಾಲ್ ಖರ್ಚು ಮಾಫಿ. ೧ ಪೊಟ್ನ ಪುಡಿಯಲ್ಲಿ ೨೦ ಅವುನ್ಸು (ಅಂದರೆ ಮುಕ್ಕಾಲು ಶೀಶೆ) ಶ್ರೇಷ್ಠವಾದ ಬ್ಲೂಬ್ಲಾಕ್ ಶಾಯಿಯಾಗುತ್ತೆ. ಈ ಶಾಯಿಯಲ್ಲಿ ಮಸ್ಸು ನಿಲ್ಲುವುದಿಲ್ಲ. ನಿಬ್ಬು ತುಕ್ಕುಹಿಡಿಯುವುದಿಲ್ಲಾ, ಬರೆದನಂತರ ಪೇಪರ್ ಒಂದಕ್ಕೊಂದು ಅಂಟಿಕೊಳ್ಳುವುದಿಲ್ಲಾ, ಬರೆದ ಅಕ್ಷರಗಳು ಹರಡಿಕೊಳ್ಳುವುದಿಲ್ಲಾ, ಬರೆಯುವುದಕ್ಕೆ ಮನೋಹರವಾಗಿಯೂ ಬರೆದನಂತರ ನೋಡಲು ಅಂದವಾಗಿಯೂ ಇರುತ್ತೆಯಾಗಿ ಅನೇಕರು ಇವನ್ನೇ ಉಪಯೋಗಿಸುತ್ತಲಿಧಾರೆ.

ಕಡಮೆಕ್ರಯದ ಕೆಲಸಕ್ಕೆಬಾರದ ವಾಚ್‌ಗಳನ್ನು ತೆಗೆದುಕೊಂಡು ನಿಮ್ಮ ಹಣವನ್ನು ಯಾಕೆ ವ್ಯರ್ಥ ಮಾಡಿಕೊಳ್ಳುವಿರಿ ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಖಾತ್ರಿಯಾದ ಈ ಕೆಳಗೆ ವಿವರಿಸಿರುವ ವಾಚ್‌ಗಳನ್ನು ತರಿಸಿ ಪರೀಕ್ಷಿಸಿರಿ.

ಜಟಲ್‌ಮೆನ್ ಡ್ರಸ್‌ವಾಚೆಂಚ ಮ್ಯೂಡಿಯಂಸೈಜ್ ಲಿವರ್ ವಾಚ್ ೧ ಕ್ಕೆ ೮—೧೨—೦. ಡಬ್ಬಲ್ ಪೀಕಾಕ್ ವಾಚೆಂಬ ಲಿವರ್‌ವಾಚ್ (ನವಿಲುಮಾರ್ಕುಳ್ಳದ್ದು) ತೆಳುವಾಗಿಯೂ ಚಿಕ್ಕಸೈಜಾಗಿಯೂ ಇರುತ್ತೆ ೧ಕ್ಕೆ ೧೦-೮-೦.

ಈ ಮೇಲ್ಕಂಡ ವಾಚುಗಳು ಗೌರ್ನಮೆಂಟ್ ಗುಂಡಿಗೂ, ಟಿಲಿಗ್ರಾಂಟೈಮಿಗೂ, ರೈಲ್ವೇಟೈಮಿಗೂ, ಕೂಡ ಸ್ವಲ್ಪವೂ ವ್ಯತ್ಯಾಸಬರದಂತೆ ಬಹಳ ಬಂದೋಬಸ್ತಾದ ಯಂತ್ರೋಪಕರಣಗಳಿಂದ ಪ್ರಖ್ಯಾತರಾದ ಕಾರೇಗಾರರಿಂದ ಅಂದವಾಗಿ ತಯಾರಿಸಲ್ಪಟ್ಟು ಪ್ರತಿನಿತ್ಯವೂ ಅನೇಕ ಖರ್ಚಾಗುತ್ತಲಿವೆ. ಹೊತ್ತುಹೊತ್ತಿಗೆ ಸರಿಯಾಗಿ ಕೆಲಸಮಾಡತಕ್ಕ ಲಾಯರ್‌ಗಳಿಗೂ, ಸ್ಕೂಲ್‌ಮಾಸ್ಟರ್‌ಗಳಿಗೂ, ವಿದ್ಯಾರ್ಥಿಗಳಿಗೂ, ವರ್ತಕರೇ ಮೊದಲಾದ ವಿಸಿಷ್ಟಜನಗಳಿಗೂ ಕೂಡ ಈ ವಾಚು ತುಂಬಾ ಸಹಾಯಕಾರಿಯಾಗಿರುತ್ತೆಯಾಗಿ ಪ್ರತಿಯೊಬ್ಬರೂ ಈ ಮಾದ್ರಿ ಒಂದೊಂದು ವಾಚನ್ನು ಇಡುವುದರಿಂದ ತುಂಬಾ ಪ್ರಯೋಜನವನ್ನು ಹೊಂದುವಿರೆಂದು ಧಾರಾಳವಾಗಿ ಹೇಳಬಲ್ಲೆವು.

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ ಬೇರೆ.

ಹೊಸ ಪುಸ್ತಕಗಳು.

168

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೫೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ.— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಕ್ರಮದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ—ವೀರಶೈವಮತದ ಪಟ್ಟ ಆಚಾರ್ಯರ ಚರಿತ್ರೆ. ಸಟಿಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೨; ಸಟೀಕ [illegible] ಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; [illegible] ಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ಮೃತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; [illegible] [illegible]ಪ್ರಯೋಪಮಾ[illegible]ಕಂದಂ ೧ ಆಣೆ.

ಎಸ್. ಆರ್. [illegible]
ಗ್ರಂಥಪ್ರಕಾಶ[illegible]

ಅರ್ಥಸಾಧಕ ಪತ್ರಿಕೆ.

2

ಇದು ಮೈಸೂರು ಸಂಪದಭ್ಯುದಯ ಸಭೆಯಿಂದ ಪರಿಪೋಷಿತವಾದ ಸಚಿತ್ರ ಮಾಸಪತ್ರಿಕೆ; ಇಂಗ್ಲೀಷ್ ಕನ್ನಡ—ಈ ಎರಡು ಭಾಷೆಗಳಲ್ಲಿಯೂ ಬೇರೆಬೇರೆ ಮುದ್ರಿತವಾಗುವುದು. ಪ್ರತಿಯೊಂದರಲ್ಲಿಯೂ ಕ್ರೌನ್ ಕಾಲುಗಜದ ೪೦ ಪುಟಗಳಿರುವುವು. ಇದರ ಮೊದಲನೆಯ ಸಂಚಿಕೆಯು ೧೯೧೫ ನೆಯ ಜನವರಿಯಲ್ಲಿ ಹೊರಡುತ್ತದೆ.

ಪತ್ರಿಕೆಯಲ್ಲಿ ಸಂಪತ್ಸಾಧಕವಿಷಯಗಳೇ ಪ್ರಕಟವಾಗುವುವು. ಮುಖ್ಯವಾದ ಸಂಗತಿಗಳು ಯಾವುವೆಂದರೆ:—

(೧) ಸಂಪಾದಕೀಯ ಟಿಪ್ಪಣಿಗಳು—ಈ ಕಾಲಮಿನಲ್ಲಿ ಪತ್ರಿಕಾಕರ್ತರಿಂದ ವಿವಿಧವಿಷಯಗಳು ಚರ್ಚಿಸಲ್ಪಡುವುವು.

(೨) ಸ್ವತಂತ್ರ ಲೇಖನಗಳು—ಈ ಲೇಖನಗಳನ್ನು, ಆರ್ಥಿಕ (ಸಂಪದಭಿವರ್ಧಕ) ವಿಷಯಗಳಲ್ಲಿ ಪ್ರತ್ಯಕ್ಷವಾದ ಅನುಭವವುಳ್ಳ ಲೇಖಕರು, ನಮ್ಮ ದೇಶಕಾಲಸ್ಥಿತಿಗಳಿಗೆ ಅನುಗುಣವಾಗಿರುವಂತೆ, ಬರೆಯುವರು.

(೩) (i) ಕೈಗಾರಿಕೆ ಮತ್ತು ವಾಣಿಜ್ಯ.—ಈವುಗಳ ಈಗಿನ ಸ್ಥಿತಿ, ತಿದ್ದುಪಾಟಿನ ಕ್ರಮಗಳು, ವ್ಯಾಪಾರದ ಮಾರ್ಗಗಳು, ಮತ್ತೂ "ಜಾಯಿಂಟ್ ಸ್ಟಾಕ್" ಎಂಬ ಸಂಯುಕ್ತ ಮೂಲಧನ ಸಂಘದ ಆಡಳಿತ—ಇವೇ ಮೊದಲಾದ ವಿಷಯಗಳು.

(ii) ವ್ಯವಸಾಯ—ಇದಕ್ಕೆ ಅನ್ವಯಿಸುವ ನವೀನ ವಿಷಯಗಳು, ಮತ್ತೂ ಕೃಷಿವಿದ್ಯೆ ಮೊದಲಾದ ಸಂಗತಿಗಳು.

(iii) ವಿದ್ಯಾಭ್ಯಾಸ—ಇದರಲ್ಲಿ ವಿದ್ಯಾಭ್ಯಾಸಕ್ರಮ, ಅದರ ಪುರೋವೃದ್ಧಿ—ಇವೇ ಮುಂತಾದ ವಿಚಾರಗಳು.

(iv) ಪರಸ್ಪರ ಸಹಾಯ, ಮತ್ತೂ ಬ್ಯಾಂಕುಗಳಲ್ಲಿ ನಡೆಯುವ ಲೇವಾದೇವಿಗಳ ನಿರ್ವಾಹ.

(v) ಮೇಲ್ಕಂಡವುಗಳಿಗೆ ಸಂಬಂಧಪಟ್ಟ ಆಯಾ ಸ್ಥಿತಿವಿಶೇಷಗಳ ಮತ್ತೂ ಜನಸಾಮಗ್ರಿಗಳ ಮುಖ್ಯವಾದ ಸಂಖ್ಯಾವಿವರಣೆ.

ಇವಲ್ಲದೆ ಪ್ರಜೆಗಳ ಶ್ರೇಯೋಭಿವೃದ್ಧಿಗೆ ಸಾಧಕವಾದ—

೧ ಸಾಮಾಜಿಕ ವಿಚಾರ—ವಿತಂಡವಾದಕ್ಕೆ ಆಸ್ಪದವಿಲ್ಲದ ಲೋಕಾಚಾರ ವಿಷಯಗಳನ್ನು ಮಾತ್ರ ಇದರಲ್ಲಿ ಸೇರಿಸಲಾಗುವುದು.

೨. ನೈರ್ಮಲ್ಯ ಮತ್ತೂ ಆರೋಗ್ಯ—ಮುಖ್ಯವಾಗಿ ಗ್ರಾಮಾಂತರಗಳ ಸ್ಥಿತಿಗಳನ್ನೂ, ಆರೋಗ್ಯಾಭಿವೃದ್ಧಿ [illegible] ಗಳನ್ನೂ ಕುರಿತ ಲೇಖನಗಳು ಇದರಲ್ಲಿ ಸೇರುವುವು.

[illegible]ಸ್ಟ್ರಿಕ್ಟು ಮತ್ತೂ ತಾಲ್ಲೂಕು" ಎಂಬ ಪ್ರಕರಣದ ಕೆಳಗೆ ದೇಶದ ಸಂಪದಭಿವೃದ್ಧಿಗಾಗಿ ಮಾಡುವ ಪ್ರಯತ್ನಗಳು, ತತ್ಸಂಬಂಧ ವೃತ್ತಾಂತಗಳು, ಕಾಲಸ್ಥಿತಿಗಳು—ಇವೇ ಮುಂತಾದ ವಿಷಯಗಳನ್ನು ಪ್ರಕಟಿಸಲಾಗುವುದು.

ಅರ್ಥವಿಚಾರಕ್ಕೆ ಸಂಬಂಧಪಡುವ ಗ್ರಂಥಗಳನ್ನು ಅಂಗೀಕರಿಸಿ, ಅವುಗಳ ಗುಣದೋಷವಿಮರ್ಶೆಯನ್ನು ಮಾಡಲಾಗುವುದು. ಇಂತಹ ವಿಮರ್ಶೆಯು ತಕ್ಕ ಪಂಡಿತರಿಂದ ಮಾಡಲ್ಪಡುವುದು.

ಇದಲ್ಲದೆ, ಈ ಪತ್ರಿಕೆಯ ಉದ್ದೇಶಕ್ಕೆ ತಕ್ಕಂತೆ, ಹಿಂದುದೇಶದ ಮತ್ತು ಅನ್ಯದೇಶದ ವರ್ತಮಾನ ಪತ್ರಿಕೆಗಳಿಂದ ಸಮಯೋಚಿತವಾಗಿ ಆರಿಸಿ ತೆಗೆದ, ಲೇಖನಗಳನ್ನು ಕೂಡ ಪ್ರಕಟಿಸಲಾಗುವುದು.

ಕನ್ನಡದ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಕೆಲವು ಸ್ವಕಲ್ಪಿತ; ಕೆಲವು ಇಂಗ್ಲಿಷ್ ಪತ್ರಿಕೆಯನ್ನು ಅನುಸರಿಸಿ ಬರೆದ ಭಾಷಾಂತರ.

ಪತ್ರಿಕೆಯಲ್ಲಿ ರಾಜಕೀಯ ವಿಷಯಗಳನ್ನು ಚರ್ಚಿಸುವುದಿಲ್ಲ.

ಈ ಪತ್ರಿಕೆಯ ಉದ್ದೇಶಕ್ಕೊಳಪಟ್ಟ ವಿಷಯಗಳ ಮೇಲೆ ಬರೆದುಬರುವ ಸ್ವತಂತ್ರಲೇಖನಗಳು ಆದರಿಸಲ್ಪಡುವುವು. ಹಾಗೆ ಬಂದುವುಗಳಲ್ಲಿ ಅನುಮೋದಿತವಾದ ಲೇಖನಗಳಿಗೆ ಪ್ರಕಟನಾನಂತರ ತಕ್ಕ ದ್ರವ್ಯಬಹುಮಾನವು ದೊರೆಯುವುದು. ಸಂಪದಭ್ಯುದಯ ವಿಷಯಗಳ ಮೇಲೆ ವಿವಾದಾಸ್ಪದವಿಲ್ಲದ ಲೇಖನಗಳನ್ನು ಸರ್ಕಾರದ ಉದ್ಯೋಗಸ್ಥರು ಕೂಡ ಈ ಪತ್ರಿಕೆಗೆ ಬರೆದು ಕಳುಹಿಸಬಹುದೆಂದು ಗವರ್ನಮೆಂಟಿನವರ ಅಪ್ಪಣೆಯಾಗಿದೆ.

ಸಾಂಪತ್ತಿಕ ವಿಷಯಗಳನ್ನು ಕುರಿತ ಪತ್ರವ್ಯವಹಾರಗಳಿಗೆ ಅವಕಾಶವುಂಟು.

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಅಭಿಪ್ರಾಯಗಳಿಗೆ ಸರ್ಕಾರದವರು ಜವಾಬ್ದಾರರಲ್ಲ.

ಚಂದಾ ವಿವರ.

ಸಂಸ್ಥಾನದಲ್ಲಿರುವವರಿಗೆ ಇಂಗ್ಲೀಷ್‌ಪತ್ರಿಕೆಯ ವಾರ್ಷಿಕ ಚಂದಾ	ರೂ. ೩-೦-೦	ಅಂಚೆವೆಚ್ಚ ಉಚಿತ
" ಕನ್ನಡಪತ್ರಿಕೆಯ ವಾರ್ಷಿಕ ಚಂದಾ	ರೂ. ೨-೦-೦	
ಹೊರಗಿರುವವರಿಗೆ ಇಂಗ್ಲೀಷ್ ಪತ್ರಿಕೆಯ [illegible] ಚಂದಾ	ರೂ. ೪-೦-೦	ಅಂಚೆವೆಚ್ಚ ಸೇರಿ
ಕನ್ನಡಪತ್ರಿಕೆಯ	ರೂ. ೩-೦-೦	

ಅರ್ಥಸಾಧಕ ವಿಷಯಗಳಿಗೆ ಸಂಬಂಧಪಡುವ ವ್ಯಾಪಾರದ ಪ್ರಕಟನೆಗಳಿಗೆ ಪತ್ರಿಕೆಯಲ್ಲಿ ಸ್ಥಳ ದೊರೆಯುವುದು. ಅಂತಹ ಪ್ರಕಟನೆಯ ದರಗಳನ್ನು ಪತ್ರಿಕೆಯ ಸಂಪಾದಕರಿಗೆ ಬರೆದು ತಿಳಿದುಕೊಳ್ಳಬಹುದು.

ಪತ್ರಿಕೆಗೆ ಚಂದಾದಾರರಾಗಲಿಚ್ಛೆಯುಳ್ಳವರು ಜಾಗ್ರತೆಯಾಗಿ ಬರೆದು, ಚಂದಾ ಹಣವನ್ನು ಮುಂಗಡ ಸಲ್ಲಿಸಬೇಕೆಂದು ಕೋರಿದೆ. ಚಂದಾ ಕಟ್ಟಬೇಕಾದರಾಗಲಿ, ಪ್ರಕಟನೆಯ ಹಣವನ್ನು ಕಟ್ಟಬೇಕಾದರಾಗಲಿ, ಆಯಾ ಸ್ಥಳದಲ್ಲಿರುವ ಸರ್ಕಾರದ ಖಜಾನೆಗೆ ತಲಪಿಸಬಹುದು. ಅಥವಾ ಈ ಪತ್ರಿಕಾಕಾರ್ಯಾಲಯಕ್ಕೆ ಅಂಚೆಯ ಮನಿಯಾರ್ಡರ್ ಮೂಲಕವಾಗಲಿ ಕೊಟ್ಟುಕಳುಹಿಸಬಹುದು. ಇಲ್ಲವೆ, ಚಂದಾದಾರರು ಇಷ್ಟಪಟ್ಟರೆ, ಪತ್ರಿಕೆಯನ್ನು ವಿ. ಪಿ. ಮೂಲಕ ತರಿಸಿಕೊಳ್ಳುವಂತೆ ಏರ್ಪಾಡು ಮಾಡಿಕೊಳ್ಳಬಹುದು.

ಪತ್ರಿಕೆಗೆ ಸಂಬಂಧಪಡುವ ಯಾವದ್ವಿಶಿಷ್ಟ ಪತ್ರವ್ಯವಹಾರಗಳನ್ನೂ ಬೆಂಗಳೂರು 'ರಿಂಗ್‌ವುಡ್' ನಲ್ಲಿರುವ "ಅರ್ಥಸಾಧಕ ಪತ್ರಿಕೆ" ಯ ಸಂಪಾದಕರೊಡನೆ ನಡೆಯಿಸಬೇಕು.

ಸ್ತ್ರೀವಿದ್ಯಾಭ್ಯಾಸವು ಹಿಂದೂದೇಶದ ಏಳಿಗೆಗೆ ಅತ್ಯಾವಶ್ಯಕವು.

ಮತವಿಚಾರ.

ನಮ್ಮದೇಶವು ವೃದ್ಧಿಸ್ಥಿತಿಗೆ ಬರಲು ಕೆಲವು ಮುಖ್ಯಾಂಶಗಳಿರುವುವು. ಅವುಗಳಲ್ಲಿ ಒಂದಾದ ಮಕ್ಕಳ ಏಳಿಗೆಗೆ ಹೆಂಗಸರ ವಿದ್ಯಾಭ್ಯಾಸವು ಎಷ್ಟು ಅವಶ್ಯಕವೆಂಬ ಸಂಗತಿಯನ್ನು ಹಿಂದೆ ಕೊಂಚಮಟ್ಟಿಗೆ ಸೂಚಿಸಿತು. ಸರಿಯಾದ ತಿಳಿವಳಿಕೆ ಮತ್ತು ಅಭ್ಯಾಸಗಳಿಂದ ಕೂಡಿದ ಮತಶ್ರದ್ಧೆಯು ಇನ್ನೊಂದು ಮುಖ್ಯಾಂಶವು. ಇದಕ್ಕೂ ಸಹ ಸ್ತ್ರೀವಿದ್ಯಾಭ್ಯಾಸವು ಹೇಗೆ ಅವಶ್ಯಕವೆಂಬುದನ್ನು ಈಗ ಕೊಂಚ ನೋಡೋಣ. ಈ ವಿಚಿತ್ರವಾದ ಪ್ರಪಂಚವನ್ನು ಸೃಷ್ಟಿಸಿದವನು ಯಾರು, ಆತನು ಎಲ್ಲಿರುವನು, ಹೇಗಿರುವನು, ಏನು ಮಾಡುತ್ತಿರುವನು, ಈ ಪ್ರಪಂಚವು ಎಂತಹದು, ನಾವು ಇಲ್ಲಿ ಹುಟ್ಟಿರುವುದು ಏಕೆ, ನಾವಾರು, ಎಲ್ಲಿಂದ ಬಂದಿರುವೆವು, ನಮಗೆ ಆಗಬೇಕಾದದ್ದೇನು, ಅದನ್ನು ಹೊಂದಲು ಇಲ್ಲಿ ನಾವು ಏನುಮಾಡಬೇಕು, ಹೇಗೆಮಾಡಬೇಕು, ಇಷ್ಟುವಿಧವಾದ ಜನರು ಈ ಕಾಲದಲ್ಲಿ ಇಲ್ಲಿ ಹುಟ್ಟಲು ಕಾರಣವೇನು, ನಾವು ಇಲ್ಲಿ ಯಾವವಿಧದಲ್ಲಿ ನಡೆದುಕೊಂಡರೆ ನಮ್ಮ ಪರಮೋದ್ದೇಶಸಾಧನೆಗೆ ಅನುಕೂಲವಾಗುವುದು, ಎಂಬ ಇವೇ ಮೊದಲಾದ ಸಂಗತಿಗಳನ್ನು ತಿಳಿದುಕೊಳ್ಳಲು ಏರ್ಪಟ್ಟ ದಾರಿಗಳೇ ಮತಗಳಷ್ಟೆ. ಅಂತಹ ದಾರಿಗಳೇ ಇಲ್ಲದೆಹೋದರೆ ದಿಕ್ಕಿಲ್ಲದ ಪ್ರಪಂಚದಲ್ಲಿ, ಹುಚ್ಚುಹುಚ್ಚಾಗಿ ಕೆಲಸಮಾಡಿ, ಬಾಯಿಗೆಬಂದ ಮಾತನಾಡಿ, ಸ್ವೇಚ್ಛೆಯಾಗಿ ಮನಸ್ಸಿಗೆ ತೋರಿದ್ದನ್ನೆಲ್ಲಾ ಯೋಚಿಸಿ, ಕಂಡದ್ದನ್ನೆಲ್ಲಾ ಹಿತಾಹಿತಗಳನ್ನು ತಿಳಿಯದೆ ಆಶಿಸಿ, ಗೊತ್ತೂ ಗುರಿಯೂ ಇಲ್ಲದ ಫಲವನ್ನು ಅನುಭವಿಸುವುದಾದರೆ ಅನಾಯಕವಾದ ಇಂತಹ ಪ್ರಪಂಚದಲ್ಲಿ ಜೀವಿಸುವುದು ಹೇಗೆ? ಹಾಗಿಲ್ಲದೆ, ಎಲ್ಲವನ್ನೂ ಸೃಷ್ಟಿಸಿದ ಸರ್ವಚೈತನ್ಯನಾದ ಭಗವಂತನೊಬ್ಬನು ಸರ್ವಾಂತರ್ಯಾಮಿಯಾಗಿ ಎಲ್ಲದರಲ್ಲೂ ಇರುವನು. ಎಲ್ಲವನ್ನೂ ನೋಡುತ್ತಿರುವನು. ದಯಾಸಮುದ್ರನು, ನ್ಯಾಯಸ್ವರೂಪನು, ಆತನ ಕಣಗಳಾದ ಶಾಶ್ವತರಾದ ಜೀವರು ನಾವು. ಆತನಂತೆಯೇ ನಾವೂ ಸಹ ಈ ಲೋಕದಲ್ಲಿ ಶಕ್ತಿಜ್ಞಾನಾನಂದಗಳಲ್ಲಿ ವೃದ್ಧಿಯಾಗುತ್ತಾ, ಆತನಂತೆಯೇ ಭೂತಸೇವೆಯನ್ನು ಮಾಡಲು ನಮ್ಮನ್ನು ಇಲ್ಲಿಗೆ ತಂದಿರುವನು. ಆತನೇ ನಮ್ಮನ್ನು ಪೋಷಿಸಿ ಬೆಳೆಸುತ್ತಿರುವನು. ಪರಲೋಕದಲ್ಲಿರುವ ಆತನ ಶಕ್ತಿಜ್ಞಾನಾನಂದಗಳನ್ನು ಈ ಲೋಕಗಳಲ್ಲಿ ನಾವು ನಮ್ಮ ಪ್ರಯತ್ನಾನುಸಾರ ಸಂಪಾದಿಸುವುದಕ್ಕೆ ಅನುಕೂಲವಾಗಿರುವಂತೆ ದೇಹಗಳನ್ನು ಕೊಡುತ್ತಿರುವನು. ಅವುಗಳನ್ನು ಸಂಪಾದಿಸುವ ಮಾರ್ಗವನ್ನು ತಿಳಿದು ಅದರಂತೆ ಆಚರಿಸುತ್ತ ಬರಬೇಕು. ಇವುಗಳನ್ನು ಅಭ್ಯಾಸಿಸಿ ನಮಗಿಂತಲೂ ಹೆಚ್ಚಾಗಿ ಅನುಭವಹೊಂದಿದವರು ಇರುವರು. ಅವರು ನಮಗೆ ಮಾರ್ಗವನ್ನು ತೋರಿಸಿ ನಮ್ಮನ್ನು ನಡೆಸಲು ಸಿದ್ಧರಾಗಿರುವರು. ನಾವು ಅವನ್ನು ತಿಳಿದು ಅಭ್ಯಾಸಿಸುತ್ತಾ, ಇತರರೂ ಸಹ ಅಂತಹ ಶಕ್ತಿಜ್ಞಾನಾನಂದಗಳನ್ನು ಹೊಂದಲು ಸಹಾಯಮಾಡುತ್ತಾ ಬರಬೇಕು. ಮಾಡಬೇಕಾದದ್ದು ಯಾವುದು, ಬಿಡಬೇಕಾದದ್ದು ಯಾವುದು, ಧರ್ಮಾಧರ್ಮಗಳೆಂದರೇನು, ಪುಣ್ಯಪಾಪಗಳೆಂದರೇನು, ಸ್ವರ್ಗನರಕಗಳೆಂದರೇನು, ಅವು ಎಲ್ಲಿ ಹೇಗಿರುವುವು, ಇಲ್ಲಿ ನಾವು ಮಾಡುವಕೆಲಸ, ಆಡುವಮಾತು, ಕೋರುವಕೋರಿಕೆ, ಚಿಂತಿಸುವ ಯೋಚನೆ ಇವುಗಳಿಗೂ ಸ್ವರ್ಗನರಕಗಳಿಗೂ ಏನುಸಂಬಂಧ, ಎಂಬ ಸಂಗತಿಗಳನ್ನು ಸ್ತ್ರೀಪುರುಷರಿಬ್ಬರೂ ತಿಳಿಯಬೇಕಾಗಿಲ್ಲವೆ? ಮನಸ್ಸು ಎಂತಹ ಬಲವತ್ತರವಾದದ್ದು. ಅದು ನಮ್ಮನ್ನು ಹೇಗೆ ಸೆಳೆದುಕೊಂಡು ಹೋಗುತ್ತಿರುವುದು, ಅದು ಏಕೆ ಹಾಗೆ ಮಾಡುವುದು, ಅದರ ಸ್ವಭಾವವೇನು, ಮನಸ್ಸು ಕೆಟ್ಟದ್ದರಲ್ಲಿ ಏಕೆ ಪ್ರವೇಶಿಸುವುದು, ಆ ಮಾರ್ಗವನ್ನು ತಪ್ಪಿಸಿ ಒಳ್ಳೇಮಾರ್ಗದಲ್ಲಿ ನಡೆಸುವುದು ಹೇಗೆ ಮೊದಲಾದ ಸಂಗತಿಗಳನ್ನು ತಿಳಿಯಬೇಕಾದದ್ದು ಗಂಡಸರಿಗೆ ಎಷ್ಟು ಅವಶ್ಯಕವೋ ಹೆಂಗಸರಿಗೆ ಅದಕ್ಕಿಂತಲೂ ಹೆಚ್ಚು ಅವಶ್ಯಕವಲ್ಲವೆ? ಭಗವಂತನ ಸಂಕಲ್ಪವೊಂದಿರುವುದು. ಅದನ್ನರಿತು ಹೇಗೆ ಮಾಡಿದರೆ ಅದಕ್ಕೆ ಸಹಾಯವಾಗುವುದೋ ಅದನ್ನು ತಿಳಿದು, ಹಾಗೆ ಮಾಡುವುದು ಒಳ್ಳೇದು; ಅದನ್ನರಿಯದೆ, ಅದಕ್ಕೆ ವಿರೋಧವಾಗಿ ಕೆಲಸಮಾಡುವುದು ಕೆಟ್ಟದ್ದು. ಭಗವಂತನ ಸಂಕಲ್ಪಕ್ಕೆ ಅನುಕೂಲವಾದದ್ದು ಇಂಥಾದ್ದು; ಅದಕ್ಕೆ ಪ್ರತಿಕೂಲವಾದದ್ದು ಇಂಥಾದ್ದು; ಒಳ್ಳೇದನ್ನು ಸಾಧಿಸುವುದು ಹೇಗೆ, ಕೆಟ್ಟದ್ದನ್ನು ಬಿಡುವುದು ಹೇಗೆ ಎಂಬ ಇವೇ ಮೊದಲಾದ ಸಂಗತಿಗಳ ಸಾರವನ್ನು ಬೋಧಿಸಿ, ಆಚರಣೆಗೆ ತರುವ ಮಾರ್ಗವನ್ನು ತೋರಿಸತಕ್ಕದ್ದೇ ಮತವು. ಮನುಷ್ಯರೆಲ್ಲರೂ ಭಗವಂತನ ಅಂಶರೆಂದೂ, ಶಾಶ್ವತರೆಂದೂ, ಸಹೋದರರೆಂದೂ ಅನುಭವದಿಂದ ತಿಳಿಯಬೇಕು. ಒಬ್ಬರಿಗೊಬ್ಬರು ಪ್ರೀತಿಯಿಂದ ಕಲೆತು, ಪರಸ್ಪರಸಹಾಯದಿಂದ ಜ್ಞಾನವೃದ್ಧಿಹೊಂದಿ, ಪರಮಸುಖವನ್ನು ಎಲ್ಲರೂ ಹೊಂದಬೇಕು ಎಂಬುದೇ ಭಗವತ್ಸಂಕಲ್ಪವು. ಅದಕ್ಕಾಗಿಯೇ ದೇವರು ಇಷ್ಟು ವಿಧವಾದ ಸ್ವಭಾವ, ತಿಳುವಳಿಕೆ, ಭಾಷೆ, ಆಚಾರ, ನಡೆನುಡಿಗಳುಳ್ಳವರನ್ನು ಈ ಲೋಕದಲ್ಲಿ ಸೃಷ್ಟಿಸಿರುವನು. ಈ ಇಷ್ಟುಭೇದಗಳ ಮಧ್ಯದಲ್ಲಿ ನಾವು ಪ್ರೀತಿಭಾವದಿಂದ ಒಂದಾಗಿ ಕೆಲಸಮಾಡುವುದನ್ನು ಕಲಿಸಬೇಕಾದದ್ದೇ ಮತವು. ಮತವು ಒಳ್ಳೇದು ಕೆಟ್ಟದ್ದರ ವಿವೇಚನೆಗೆ ಆಸ್ತಿವಾರವು. ಸ್ವಾರ್ಥತೆಯನ್ನು ಕೊಂಚಕೊಂಚವಾಗಿ ಹೋಗಲಾಡಿಸುವುದಕ್ಕೂ, ಕಷ್ಟನಷ್ಟದುಃಖಗಳನ್ನಾದರೂ ಸಹಿಸಿ ಸಂತೋಷವಾಗಿ ಇತರರ ಮೇಲಿಗಾಗಿ ಕೆಲಸಮಾಡಬೇಕೆಂಬ ಪರಾರ್ಥವನ್ನು ಹೆಚ್ಚಿಸುವುದಕ್ಕೂ ಮತವೇ ಆಧಾರವು. ಪರಾರ್ಥಕ್ಕಾಗಿ ಕೆಲಸಮಾಡುವವರಿಲ್ಲದ ದೇಶವು ಎಂದಿಗೂ ತಲೆ ಎತ್ತದು. ನಮ್ಮ ದೇಶೀಯರಲ್ಲಿ ಪರಸ್ಪರ ವಿರೋಧಗಳಿಗೆ ಕಾರಣವಾಗಿರುವ ಮತವೇ ಪರಸ್ಪರ ಪ್ರೀತಿ ಮತ್ತು ಪರಾರ್ಥಕ್ಕೂ, ದೇಶದ ಏಳಿಗೆಗೂ ಆಧಾರಭೂತವಾಗಿರುವುದು. ಮತವೂ ಅಂತಹ ಪ್ರೀತಿಪರಾರ್ಥಯುಕ್ತವಾದ ದೇಶಸೇವೆಗೆ ಒಂದೊಂದು ಮಾರ್ಗವು. ಮತಗಳ [illegible] ಆಚಾರ [illegible] ನುಡಿಗಳು ಎಷ್ಟೇ [illegible] ತ್ಯಾಸಗಳಾಗಿ ಕಾಣುತ್ತಿದ್ದರೂ ಒಳಸಾರವನ್ನರಿತು ಶ್ರದ್ಧೆಯಿಂದ ಕೆಲಸಮಾಡಿದಲ್ಲಿ ಪ್ರಜೆಗಳಲ್ಲಿ ಪರಸ್ಪರ ಅನ್ಯೋನ್ಯಭಾವವೂ, ಪ್ರಜೆಗಳಿಗೂ ಪ್ರಭುಗಳಿಗೂ ಪ್ರೇಮಾಧಿಕ್ಯತೆಯಿಂದ ಸಮಬುದ್ಧಿಯೂ ಉಂಟಾಗಿ, ಭಾರತಮಾತೆಯು ಉತ್ತಮೋತ್ತಮ ಪದವಿಯನ್ನು ಹೊಂದುವಳು. ಹೆಂಗಸರಲ್ಲಿ ಗಂಡಸರಿಗಿಂತಲೂ ಮತದಲ್ಲಿ ಶ್ರದ್ಧೆಯು ಹೆಚ್ಚಿರುವುದು ನಿಜ. ಆದುದರಿಂದಲೇ ಅವರಿಗೆ ಮತವಿಚಾರದಲ್ಲಿ ಹೆಚ್ಚು ತಿಳಿವಳಿಕೆಯು ಅವಶ್ಯಕವೆಂಬುದು. ಇಲ್ಲದಿದ್ದರೆ ಹೆಚ್ಚು ವಿರೋಧಕ್ಕೂ, ಅನರ್ಥಕ್ಕೂ ಕಾರಣವಾಗುವುದು. ಭಕ್ತಿಯಿಲ್ಲದ ಜ್ಞಾನವು ಹೆಣಕ್ಕೆ ಮಾಡಿದ ಶೃಂಗಾರದಂತೆಯೂ, ಜ್ಞಾನವಿಲ್ಲದ ಭಕ್ತಿಯು ಕುರುಡನ ಕೈಹಿಡಿದು ನಡೆಯುವ ಕುರುಡನಂತೆಯೂ ಆಗುವುವು. ಭಕ್ತಿಜ್ಞಾನಗಳೆರಡೂ ಆಚರಣೆಗೆ ಬಾರದಿದ್ದರೆ ಕನ್ನಡಿಯೊಳಗಿನ ಗಂಟಿನಂತೆ ಪ್ರಯೋಜನವಿಲ್ಲದೆಹೋಗುವುದು. ಆದುದರಿಂದ ಮತವು ಭಕ್ತಿ ಜ್ಞಾನ ಆಚರಣೆ ಈ ಮೂರರಿಂದಲೂ ಕೂಡಿದ್ದಾಗಿಯೂ, ಹೊರ ಜಾತಿ ಕುಲಗೋತ್ರ ದೇಶಭಾಷೆಗಳು ಎಷ್ಟೇ ಬೇರೆಬೇರೆಯಾಗಿದ್ದರೂ, ಸಾರವನ್ನು ತೋರಿಸಿ ಒಬ್ಬೊಬ್ಬರಿಗೆ ಪ್ರೀತಿಯನ್ನು ಹೆಚ್ಚಿಸತಕ್ಕದ್ದಾಗಿಯೂ ಸ್ವಾರ್ಥತೆಯನ್ನು ಬಿಡಿಸಿ ಪ್ರೀತಿವಿವೇಕಗಳಿಂದ ಪರಾರ್ಥಕ್ಕೆ ಕೆಲಸಮಾಡಿಸತಕ್ಕದ್ದಾಗಿಯೂ, ಪರಾರ್ಥಸಾಧನವಾದದ್ದಾಗಿಯೂ ಇರಬೇಕು. ಹೆಂಗಸರು ಇದೆಲ್ಲವನ್ನೂ ಅರಿತು ಪ್ರೀತಿಯಿಂದ ಗಂಡರೊಡನೆ ಕಲೆತು ದೇಶದ ಮೇಲಿಗಾಗಿ ಕೆಲಸಮಾಡದಿದ್ದರೆ ಭಾರತಮಾತೆಯು ಉತ್ತಮಸ್ಥಿತಿಗೆ ಬರುವುದು ಹೇಗೆ? ಇದೊಂದು ಕಾರಣವನ್ನು ನೋಡಿದರೂ ದೇಶದ ಏಳಿಗೆಗೆ ಸ್ತ್ರೀವಿದ್ಯಾಭ್ಯಾಸವು ಎಷ್ಟು ಅವಶ್ಯಕವೆಂಬುದು ಗೊತ್ತಾಗುವುದು. ಮುಂದೆ ಇನ್ನೊಂದು ಕಾರಣವನ್ನು ವಿಚಾರಿಸೋಣ.

ಕೆ. ನರಹರಿಶಾಸ್ತ್ರಿ.

ಮದ್ರಾಸು ಸಂಘಪರಿಷ್ಕರಣ ಮಹಾಸಭೆಯಲ್ಲಿ ಶ್ರೀಮದ್ಯುವರಾಜರು ಮಾಡಿದ ಭಾಷಣದ ಅವಶೇಷವು.

ವಿಧವಾವಿವಾಹವು.

ಮನುಷ್ಯಜಾತಿಗೆ ನಿಸರ್ಗವಾಗಿರುವ ಸ್ವಾತಂತ್ರ್ಯವು ಕೂಡ ವಿಧವೆಯರಿಗೆ ಇಲ್ಲದಂತೆ ಮಾಡಲ್ಪಡುವುದರಿಂದ ಅವರು ನಿಮ್ನ ಜಾತಿಗೆ ಸೇರಿಸಲ್ಪಟ್ಟವರೇ ಆಗುವರು. ಅದು

ಕಾರಣ ಅವರನ್ನು ಉದ್ಧರಿಸುವುದಕ್ಕೆ ಪ್ರಯತ್ನಿಸುವುದು ಕೂಡ ಅತ್ಯವಶ್ಯಕವು. ಸ್ವರ್ಗವಾಸಿಗಳಾದ ರಾನಡೆಯವರು ಕೂಡ ಇದೇ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ವಿಧವೆಯರು ಪುನರ್ವಿವಾಹವಿಲ್ಲದೆ ಕಾಲವನ್ನು ಕಳೆಯಬೇಕೆಂದು ನಿರ್ಬಂಧಪಡಿಸುವುದು ಸಂಘಕ್ಕೆ ಮಹದನರ್ಥಕಾರಿಯಾಗಿ ಪರಿಣಮಿಸುತ್ತದೆ. ಭ್ರೂಣಹತ್ಯೆ, ಶಿಶುಹತ್ಯೆ ಮೊದಲಾದ ಕಾರ್ಯಗಳು ಜರುಗುವುದಕ್ಕೆ ಈ ನಿರ್ಬಂಧವೇ ಮುಖ್ಯಕಾರಣವು. ವಿಧವೆಯರಿಗೆ ವಿವಾಹವನ್ನು ಮಾಡುವ ಅಧಿಕಾರವು ಮಾನವಧರ್ಮಕ್ಕೆ ಅನುಗುಣವಾಗಿರುತ್ತದೆ. ಈ ವಿಧವಾವಿವಾಹವು ಅಂಗೀಕರಿಸಲ್ಪಡುವುದಾದರೆ, ಅದರಿಂದುಂಟಾಗುವ ಫಲಗಳೊಳಗೆ ಅನನುರೂಪ ವಿವಾಹಗಳು ಜರುಗದಂತೆ ಆಗುವುದು ಕೂಡ ಒಂದಾಗಿ ಪರಿಣಮಿಸುವುದೆಂದು ಊಹಿಸಬಹುದು.

ಪ್ರಭುತ್ವವು ಮತ್ತೂ ಸಂಘಸಂಸ್ಕರಣವು.

ಈ ಸಂಘಸಂಸ್ಕರಣ ವಿಷಯವಾಗಿ ಪ್ರಭುತ್ವದವರಾಗಲೀ ಪ್ರಜೆಗಳಾಗಲೀ ಯಾವಯಾವ ಕಾರ್ಯವನ್ನು ಎಷ್ಟರಮಟ್ಟಿಗೆ ಮಾಡಿದ್ದಾರೆ? ಇನ್ನು ಮುಂದೆ ಮಾಡಬೇಕಾಗಿರುವುದೇನು? ಎಂಬ ವಿಷಯವನ್ನು ಪರಿಶೀಲಿಸಬೇಕು. ಪ್ರಭುತ್ವದವರು ಈವಿಷಯದಲ್ಲಿ ಬಲು ಎಚ್ಚರಿಕೆಯಿಂದಲೂ ಸಾವಕಾಶವಾಗಿಯೂ ಕೆಲಸಮಾಡುತ್ತಿರುವರು. ಇಷ್ಟರೊಳಗೇ ಎಷ್ಟೋ ಕೆಲಸವನ್ನು ಮಾಡಿದ್ದಾರೆ. ೧೮೫೬ ನೆಯ ವರ್ಷದಲ್ಲೇ ವಿಧವಾವಿವಾಹಕ್ಕೆ ಅನುಕೂಲವಾದ ಒಂದು ಶಾಸನವನ್ನು ಭರತಖಂಡಕ್ಕೆಲ್ಲಕ್ಕೂ ಅನ್ವಯಿಸುವಂತೆ ಏರ್ಪಡಿಸಿರುವರು. ಇದರಿಂದ ನ್ಯಾಯಸ್ಥಾನಗಳಲ್ಲಿ ಈ ವಿಷಯಕವಾದ ವ್ಯವಹಾರಗಳಿಗೆ ಅವಕಾಶವಿಲ್ಲವಾಗಿರುವುದು. ಆದರೆ ಪ್ರಜೆಗಳು ಕೂಡ ಅಂಥ ವಿವಾಹಗಳನ್ನು ಅಂಗೀಕರಿಸಿ ಅದಕ್ಕೆ ಸಹಾಯಭೂತರಾಗದಿರುವುದರಿಂದ ವಿಶೇಷವಾದ ಫಲವು ಅದರಿಂದ ಲಭಿಸದೆ ಹೋಗಿದೆ. ಆದರೂ ಮೇಲ್ಕಂಡ ಶಾಸನದಿಂದ ಅಂಥ ವಿಧವಾವಿವಾಹಗಳು ಅಂಗೀಕಾರಾರ್ಹವಾದುವೆಂದೇ ಏರ್ಪಟ್ಟು, ದೂರದೃಷ್ಟಿಯುಳ್ಳ ಕೆಲವರು ನಿರಾತಂಕವಾಗಿ ಆ ಮಾರ್ಗವನ್ನು ಅವಲಂಬಿಸುವುದಕ್ಕೆ ಅನುಕೂಲವಾಯಿತು. ಆದರೆ ವರ್ಣಾಂತರ ಪರಸ್ಪರ ವಿವಾಹಗಳಿಗೆ ಮಾತ್ರ ಅಷ್ಟು ಆನುಕೂಲ್ಯವು ಉಂಟಾಗಲಿಲ್ಲ. ೧೮೭೨ ನೆಯ ವರ್ಷದಲ್ಲಿ ಹುಟ್ಟಿರುವ "ಸ್ಪೆಷಲ್ ಮ್ಯಾರಿಯಜ್ ಆಕ್ಟ" ಎಂಬ ಶಾಸನವು ಇಂಥ ವರ್ಣಾಂತರ ವಿವಾಹಗಳನ್ನು ಒಂದು ತೆರವಾಗಿ ಅಂಗೀಕರಿಸಿದರೂ, ಅಂಥಾ ವಿವಾಹಸಂಬಂಧವನ್ನು ನಡೆಯಿಸಿದವರು, ತಂತಮ್ಮ ಪೂರ್ವಕುಲಾಚಾರಸಂಬಂಧವನ್ನು ಬಿಟ್ಟೇಬಿಡಬೇಕಾದಂತಹ ಒಂದು ತೆರದ ತೊಂದರೆಯು ಉಂಟಾಯಿತು. ಅದುಕಾರಣ, ಅಂಥ ತೊಂದರೆಯು ಕೂಡ ಇಲ್ಲದೆ ವರ್ಣಾಂತರ ವಿವಾಹಗಳು ಧಾರಾಳವಾಗಿ ಜರುಗುವಂತೆ ಮಾಡುವುದಕ್ಕಾಗಿ ೧೯೧೧ ನೆಯ ವರ್ಷದಲ್ಲಿ ಆ॥ ಭೂಪೇಂದ್ರನಾಥ ಬಾಸುರವರು ಸಾಮ್ರಾಜ್ಯ ಶಾಸನ ನಿರ್ಮಾಣ ಸಭೆಯ ಚರ್ಚೆಗೆ ತಂದ "ಸಿವಿಲ್ ಮ್ಯಾರಿಯಜ್ ಬಿಲ್" ಎಂಬುದು ಸಭ್ಯರಿಂದ ಶಾಸನವಾಗಿ ಅಂಗೀಕರಿಸಲ್ಪಡದೆ ಹೋದುದು ಬಹಳ ವಿಷಾದಕರವಾಗಿದೆ. ಆರ್ಥಿಕವಿಷಯದಲ್ಲೂ ವಾರಸತ್ವವಿಷಯದಲ್ಲೂ ಇದೇ ತೆರದ ಇನ್ನು ಕೆಲ ಸಂದರ್ಭಗಳಲ್ಲೂ ಸ್ತ್ರೀಯರಿಗೆ ಸ್ವಾತಂತ್ರ್ಯವು ಹೆಚ್ಚಿಸಲ್ಪಟ್ಟಿದೆ. ಸಾರ್ವಜನಿಕವಾದ ವಿದ್ಯೆಯು ಸರ್ವರಿಗೂ ಸುಲಭ ಸಾಧ್ಯವಾಗುವಂತೆ ಮಾಡುವ ವಿಷಯದಲ್ಲೂ ಪ್ರಭುತ್ವದವರು ಬಹಳ ಕೆಲಸವನ್ನು ಮಾಡಿದ್ದಾರೆ. ಪ್ರಜೆಗಳು ಕೂಡ ಈ ವಿಷಯದಲ್ಲಿ ಪ್ರಭುತ್ವದವರಂತೆಯೇ ವಿಶೇಷವಾಗಿ ಕೆಲಸ ಮಾಡಿದ್ದಾರೆ. ಸ್ತ್ರೀವಿದ್ಯಾಪ್ರಸಾರಕ್ಕಾಗಿ ಪ್ರಭುತ್ವದವರೂ ಸ್ಥಾನಿಕ ಪರಿಪಾಲಕಸಂಘದವರೂ ಸಹ ಪಾಠಶಾಲೆಗಳನ್ನೂ ಕಲಾಶಾಲೆಗಳನ್ನೂ ದೇಶದಲ್ಲೆಲ್ಲಾ ಅನೇಕಾನೇಕವಾಗಿ ಸ್ಥಾಪಿಸಿದ್ದಾರೆ. ಪ್ರಜೆಗಳೂ ಕೂಡ ಅನೇಕ ವಿದ್ಯಾಶಾಲೆಗಳನ್ನು ಸ್ಥಾಪಿಸಿದ್ದಾರೆ. ಸಮರ್ಥರಾದವರು ವಿದೇಶಗಳಿಗೆ ಹೋಗಿ ಈ ವಿಷಯವಾಗಿ ವಿಶೇಷ ಶಿಕ್ಷಣವನ್ನು ಹೊಂದಿ ಅಲ್ಲಿನ ಉತ್ತಮಪದ್ಧತಿಗಳನ್ನು ಈ ದೇಶದಲ್ಲೂ ವ್ಯವಹಾರಕ್ಕೆ ತರಿಸುವ ವಿಷಯದಲ್ಲಿ ಪ್ರಯತ್ನವು ಮಾಡಲ್ಪಡುತ್ತಿದೆ. ಸ್ತ್ರೀಯರಿಗೂ ನಿಮ್ನ ಜಾತಿಯವರಿಗೂ ವಿದ್ಯಾರ್ಥವೇತನವು ಕೊಡಲ್ಪಟ್ಟು ಅವರ ವಿದ್ಯಾಭ್ಯಾಸಕ್ಕಾಗಿ ಅವಶ್ಯಕವಾದ ನಾನಾ ಉಪಾಯಗಳೆಲ್ಲಾ ಮಾಡಲ್ಪಡುತ್ತಿವೆ.

ನಿಂದೆಗಳೂ ಅವಕ್ಕೆ ಸಮಾಧಾನಗಳೂ.

ಸಂಘಪರಿಷ್ಕರಣ ಧುರೀಣರು ಮೇಲೆ ವಿವರಿಸಿರುವಂತೆ ಸಂಘಪರಿಷ್ಕರಣಕ್ಕಾಗಿ ಎಷ್ಟೋ ಶ್ರಮಪಟ್ಟಿರುವರು; ಈಗಲೂ ಪಡುತ್ತಿರುವರು. ಈ ಮಾತು ನಿಜವಾದುದು. ಆದರೆ ಅವರು ಹಿಂದುಮುಂದನ್ನೂ ಉಚಿತಾನುಚಿತ ಸಂದರ್ಭಗಳನ್ನೂ ಆಲೋಚಿಸದೇನೆಯೇ ಅತ್ಯಂತ ತೀವ್ರವಾಗಿ ಪಾಶ್ಚಾತ್ಯಪದ್ಧತಿಗಳನ್ನು ಸಂಪೂರ್ಣವಾಗಿ ಅವಲಂಬಿಸುತ್ತಿರುವರೆಂತಲೂ ಸಂಘವನ್ನು ಒಂದು ತೆರದಿಂದ ತಲೆ ಕೆಳಗು ಮಾಡುತ್ತಿದ್ದಾರೆಂತಲೂ ಅವರಮೇಲೆ ನಿಂದೆಗಳನ್ನು ಹೊರಿಸುತ್ತಿದ್ದಾರೆ. ಕೆಲವು ವಿಷಯಗಳಲ್ಲಿ ನಾವು ಪಾಶ್ಚಾತ್ಯಮಾರ್ಗವನ್ನು ಅನುಸರಿಸುತ್ತಿರುವುದೇನೋ ನಿಜ. ಆ ಮಾರ್ಗವನ್ನನುಸರಿಸಿ ಪಾಶ್ಚಾತ್ಯರು ಅಭಿವೃದ್ಧಿಗೊಂಡಿರುವುದರಿಂದ ಆ ಉತ್ತಮಮಾರ್ಗಗಳನ್ನು ನಾವು ಕೂಡ ಅವಲಂಬಿಸುತ್ತೇವೆ. ನಮ್ಮ ದೇಶದಲ್ಲಿ ಅಭಿವೃದ್ಧಿಸೂಚಕವಾದ ಚಿಹ್ನೆಗಳು ಸ್ವರೂಪನಾಶಗೊಂಡು ಬಹುಕಾಲವಾಯಿತು. ಅಭಿವೃದ್ಧಿದಶೆಯನ್ನಾಗಲೀ ಕ್ಷೀಣದಶೆಯನ್ನಾಗಲೀ ಹೊಂದದೆ ಒಂದೇ ನಿಲುಕಡೆಯಲ್ಲಿರುವುದು ಪ್ರಕೃತಿಧರ್ಮವಲ್ಲ. ಅದುಕಾರಣ ನಾವು ಸಮಯ ಸಂದರ್ಭಗಳನ್ನನುಸರಿಸಿ ಯಾವಯಾವ ಉತ್ತಮಮಾರ್ಗಗಳನ್ನವಲಂಬಿಸಬೇಕೋ ಅವುಗಳನ್ನವಲಂಬಿಸದೆ ಇದ್ದರೆ ಕ್ರಮವಾಗಿ ಕ್ಷೀಣಗತಿಗೆ ಬಿದ್ದು ಕಡೆಗೆ ಅತ್ಯಂತ ವಿನಾಶವನ್ನೇ ಹೊಂದಿಹೋಗುವೆವು.

ಆಚರಣೀಯಗಳಾದ ಸೂಚನೆಗಳು.

ನಮ್ಮ ಮತಾಚರಣದಲ್ಲಾಗಲೀ ಶಾಸ್ತ್ರದಲ್ಲಾಗಲೀ ಯಾವ ಲೋಪಗಳಿದ್ದರೂ ಅವುಗಳನ್ನು ಸಂದರ್ಭೋಚಿತವಾಗಿ ಸರಿಪಡಿಸಿಕೊಳ್ಳುತ್ತಲೇ ಇರಬೇಕು. ದ್ವಿಜರಲ್ಲೂ ಅವರಲ್ಲೂ ಗುರುತ್ವವನ್ನು ವಹಿಸಿರುವ ಮುಖ್ಯರಾದ ಬ್ರಾಹ್ಮಣರ ಮಾತುಗಳೇ ಸಾಮಾನ್ಯವಾಗಿ ಈ ದೇಶದಲ್ಲಿನ ಪ್ರಜೆಗಳಿಗೆ ಪಥ್ಯವಾಗಿರುವುವು. ಅವರ ಮಾತನ್ನೇ ಪ್ರಜೆಗಳು ಕೇಳುವರು. ಅವರ ಅಭಿಪ್ರಾಯವನ್ನೇ ಅಂಗೀಕರಿಸುವರು. ಶಾಸ್ತ್ರವಚನಾರ್ಥ ಸಮನ್ವಯವೂ ಅವರ ಕೈಯಲ್ಲೇ ಇರುವುದು. ಅದುಕಾರಣ ಅವರು ಶಾಸ್ತ್ರವಚನಗಳನ್ನು ಸಮಯಸಂದರ್ಭಗಳನ್ನನುಸರಿಸಿ ಕ್ರಮವಾಗಿ ಸಮನ್ವಯಗೊಳಿಸುವುದಾದರೆ ಸಂಘಪರಿಷ್ಕರಣಕ್ಕೆ ಅವರಕ್ಕಿಂತ ಹೆಚ್ಚಾಗಿ ಸಹಾಯಮಾಡತಕ್ಕವರು ಮತ್ತಾರೂ ಇರಲಾರರು. ನಮ್ಮ ಆಚಾರ ವ್ಯವಹಾರಗಳು ಮತಾನುಸಾರವಾಗಿರುವುದರಿಂದ ಅವರ ಸಾಹಾಯ್ಯವು ನಮಗೆ ಅತ್ಯಾವಶ್ಯಕವು. ಆದರೆ ಈಗಿನ ಸ್ಥಿತಿಯಲ್ಲಿ ಅವರು ಅಂಥ ಸಹಾಯವನ್ನು ಮಾಡುವರೆಂದು ನಿರೀಕ್ಷಿಸುವುದಕ್ಕೆ ಅವಕಾಶವಿರುವುದಿಲ್ಲ. ಅವರ ಶಾಸ್ತ್ರಪರಿಚಯವೆಲ್ಲಾ ಆಮುಷ್ಮಿಕವಾಗಿರುತ್ತದೆ. ಅವರು ಆ ಮಾರ್ಗವೊಂದನ್ನು ಮಾತ್ರವೇ ಗಮನಿಸುವವರಾಗಿದ್ದಾರೆ. ಅದುಕಾರಣ, ಅವರ ವಿದ್ಯಾಪರಿಶ್ರಮಕ್ಕೆ ಪಾಶ್ಚಾತ್ಯ ವಿದ್ಯಾಪದ್ಧತಿಯು ಕೂಡ ಸಹಾಯವಾಗದಿದ್ದರೆ, ಪ್ರಸಕ್ತವಿಷಯದಲ್ಲಿ ಅವರು ಸಹಾಯವನ್ನು ಮಾಡಲಾರರು. ನಮ್ಮ ದೇಶದಲ್ಲಿ ಸಂಸ್ಕೃತ ಕಲಾಶಾಲೆಗಳು ಅನೇಕವಾಗಿರುವುವು. ಅಲ್ಲಿ ವಿದ್ಯಾಭ್ಯಾಸಮಾಡುವವರನೇಕರು ದೊಡ್ಡದೊಡ್ಡ ಪಂಡಿತರು ಆಗಬಹುದು. ಆದರೆ ಮೆಟ್ರಿಕ್ಯುಲೇಷನ್ನಿನವರೆಗಾದರೂ ಪಾಶ್ಚಾತ್ಯಪದ್ಧತಿಯನ್ನನುಸರಿಸದ ಆಂಗ್ಲಭಾಷಾಶಿಕ್ಷಣವನ್ನು ಆ ಪಾಠಶಾಲೆಗಳಲ್ಲಿ ಉಂಟುಮಾಡಿಕೊಡುವುದಕ್ಕೆ ಮಾರ್ಗವನ್ನು ಹಾಕದೆ ಇದ್ದರೆ ಅವರಿಗೆ ಉದಾರವಾದ ದೂರದೃಷ್ಟಿಯು ಹುಟ್ಟಿ ಅವರು ಸಂಘ ಸಂಸ್ಕರಣವಿಷಯದಲ್ಲಿ ಸಹಾಯಭೂತರಾಗಲಾರರು. ಈ ಸೂಚನೆಯಂತೆ ವ್ಯವಹಾರಕ್ಕೆ ತರುವುದಾದರೆ ಸಂಘಸಂಸ್ಕರಣವು ಅತಿಶೀಘ್ರವಾಗಿ ಜರುಗಬಹುದೆಂದು ನಂಬುತ್ತೇನೆ. ನಾನು ಸೂಚಿಸುವ ಈ ವಿದ್ಯಾಪದ್ಧತಿಯು ಬೊಂಬಾಯಿ ಮೊದಲಾದ ಕೆಲವು ಸ್ಥಲಗಳಲ್ಲಿ ಅವಲಂಬಿಸಲ್ಪಡುತ್ತಿರುವುದೆಂತಲೂ, ಬೆಂಗಳೂರಿನಲ್ಲಿ ಪ್ರವೇಶಗೊಳಿಸಲ್ಪಡುವುದರಲ್ಲಿದೆಯೆಂತಲೂ ಅರಿಯುತ್ತೇನೆ.

ಉಳಿದ ವಿಷಯಗಳು.

ಇತರ ವಿಷಯಕವಾದ ಪ್ರಯತ್ನಗಳ ಸಂಬಂಧದಲ್ಲಿ ನನಗೆ ಈ ಕೆಳಗೆ ವಿವರಿಸಿರುವ ಮೇರೆಗೆ ಸೂಚನೆಗಳು ಹೊಳೆಯುತ್ತವೆ. ಸಂಸ್ಕರಿಸಲ್ಪಡಬೇಕಾದ ಸಾಂಘಿಕಲೋಪಗಳು ಆವಾವುವು ಇರುವುವೋ ಅವುಗಳನ್ನೆಲ್ಲಾ ಒಂದು ಪಟ್ಟಿಯಾಗಿ ಎತ್ತಿಡಬೇಕು. ಇದಕ್ಕೆ ಲೋಕಾನುಭವವು ಸಹಾಯವಾಗಿರಬೇಕು. ಬಳಿಕ ಆ ಸಂಸ್ಕರಣ ಪ್ರಯತ್ನಗಳನ್ನು ಮೂರುಭಾಗಗಳನ್ನಾಗಿ ಮಾಡಿಕೊಳ್ಳಬೇಕು. ಅವುಗಳಲ್ಲಿ ಮೊದಲನೆಯ ಭಾಗದೊಳಗೆ ಉತ್ತಮವರ್ಣದ ಅಂತರ್ಜಾತೀಯ ಭೇದಗಳಲ್ಲಿ ಪಙ್ಕ್ತಿಭೋಜನವನ್ನು ಮಾಡಬಹುದೆಂಬುದು, ಬಾಲ್ಯವಿವಾಹವನ್ನು ನಿಲ್ಲಿಸಿಬಿಡುವುದು, ವಿದೇಶಗಮನವನ್ನು ಅಂಗೀಕರಿಸುವುದು, ಅಂತರ್ವರ್ಣಗಳಲ್ಲಿ ಪರಸ್ಪರ ವಿವಾಹವನ್ನು ಅಂಗೀಕರಿಸುವುದು, ಶುಭಾಶುಭಕಾಲಗಳಲ್ಲಿ ಮಾಡತಕ್ಕ ದುಂದು ವೆಚ್ಚಗಳನ್ನು ಕಡಿಮೆಮಾಡುವುದು, ಇವು ಮೊದಲಾದ ಸಾಮಾನ್ಯತರದ ಸಂಸ್ಕರಣಗಳನ್ನಾರಂಭಿಸಬೇಕು. ಬಳಿಕ ೨ನೆ ೩ನೆ ಭಾಗದೊಳಗೆ ಇದಕ್ಕಿಂತಲೂ ಹೆಚ್ಚಿನ ಸ್ವಲ್ಪ ಕಷ್ಟತರವಾದ ಎಂದರೆ—ವಿಧವಾವಿವಾಹ, ನಿಮ್ನಜಾತ್ಯುದ್ಧರಣ, ಮೊದಲಾದ ಸಂಸ್ಕರಣಗಳಿಗೆ ಕೈಹಾಕಬೇಕು. ಈ ಮೂರುಭಾಗಗಳಲ್ಲೂ ಮಾಡಬೇಕಾದ ಕಾರ್ಯಕ್ರಮದ ರೀತಿಯನ್ನು ನಿರ್ಣಯಿಸಿಕೊಂಡು, ಅವನ್ನು ಈ ಮಹಾಸಭೆಯ ಕಾರ್ಯನಿರ್ವಾಹಕ ಸಂಘದವರು ದೇಶದ ಎಲ್ಲಪ್ರಾಂತಗಳಲ್ಲೂ ಪ್ರಕಟಪಡಿಸುವುದಾದರೆ ಹಿಂದೂವಿವಾಹಸಂಸ್ಕರಣ ಸಂಘದಂಥ ಸಂಘಗಳು ಅನೇಕಾನೇಕವಾಗಿ ಈ ದೇಶದ ಮುಖ್ಯಪ್ರದೇಶಗಳಲ್ಲೆಲ್ಲಾ ಸ್ಥಾಪಿಸಲ್ಪಟ್ಟು, ಸಂಸ್ಕರಣವಿಷಯಕವಾದ ಕಾರ್ಯಗಳು ಸರ್ವತ್ರ ಕ್ರಮವಾಗಿ ಜರುಗುವುದಕ್ಕೆ ಅನುಕೂಲವಾಗುವುದು.

ಯುದ್ಧದವೆಚ್ಚ.

ಈಗಿನ ಯುದ್ಧಕ್ಕಾಗಿ ಆಗುತ್ತಿರುವ ವೆಚ್ಚವನ್ನು ಯಾಚ್‌ಗಯಾಟ್ ಎಂಬ ಒಬ್ಬ ಅನುಭವಿಗಳು ಈ ಕೆಳಗೆ ಕಾಣಿಸಿರುವ ರೀತಿಯಲ್ಲಿ ಲೆಕ್ಕಮಾಡಿದ್ದಾರೆ—

ಈ ಯುದ್ಧವು ಆರಂಭಿಸಿ ಆರುತಿಂಗಳು ಮುಗಿಯುವುದಕ್ಕೆ ಬರುತ್ತಿದೆ. ಯುದ್ಧದಲ್ಲಿ ತೊಡಗಿದ ಪ್ರತಿಯೊಬ್ಬ ಸೈನಿಕನಿಗೂ ದಿನ ೧ ಕ್ಕೆ ೧೦ ಷಿಲಿಂಗಿನಂತೆ ೬ ತಿಂಗಳಿಗೆ ಎಷ್ಟಾಗುವುದೆಂದು ಲೆಕ್ಕಹಾಕಿದರೆ, ಈಗಿನ ಯುದ್ಧದಲ್ಲಿ ೧೮೫೨೦೦೦೦ ಮಂದಿಗಳು ತೊಡಗಿರುವರೆಂದು ಊಹಿಸಿ ಇಟ್ಟುಕೊಂಡರೆ ದಿನ ೧ ಕ್ಕೆ ಅವರೆಲ್ಲರ ವೆಚ್ಚವು ೯೦ ಲಕ್ಷ ಪೌನುಗಳಿಗಿಂತಲೂ ಹೆಚ್ಚಾಗುವುದು. ತಿಂಗಳೊಂದಕ್ಕೆ ೨೭ ಕೋಟಿ ಪೌನುಗಳನ್ನು ಮೀರುವುದು. ೬ ತಿಂಗಳಿಗೆ ೧೬೨ ಕೋಟಿ ಪೌನು ಅಥವಾ ೨೪೩೦೦೦೦೦೦೦೦ ರೂ.ಗಳಾಗುವುವು. ಈಗ ಸೈನ್ಯದಲ್ಲಿ ಸೇರಿರುವವರಲ್ಲಿ ೩೫ ಲಕ್ಷ ಜನರು ಯಾವಾಗಲೂ ಸೇನೆಯಲ್ಲೇ ಸೇರಿರತಕ್ಕವರೆಂದು ಊಹಿಸಿದರೂ, ಉಳಿದ ೧॥ ಕೋಟಿ ಜನರು ಬೇರೆಬೇರೆ ವೃತ್ತಿಯಲ್ಲಿ ಜೀವಿಸುತ್ತಿದ್ದವರಾಗಿರಬೇಕು. ಇವರುಗಳೆಲ್ಲಾ ಸೈನ್ಯಕ್ಕೆ ಬಂದು ಸೇರಿಕೊಂಡುದರಿಂದ ಅವರವರ ಪೂರ್ವದ ವೃತ್ತಿಗಳ ನಾಶದಿಂದ ಉಂಟಾದ ನಷ್ಟವನ್ನು ಈ ಕೆಳಗೆ ಕಾಣಿಸುವ ರೀತಿಯಿಂದ ವಿಭಾಗಿಸಬಹುದು. ಜರ್ಮನಿಗೆ ೮೩ ಕೋಟಿ ಪೌನುಗಳು, ಫ್ರಾನ್ಸಿಗೆ ೬೦ ಕೋಟಿ ಪೌನು, ರಷ್ಯಾಕ್ಕೆ ೧೧ ಕೋಟಿ ಪೌನು, ಆಂಗ್ಲಪ್ರಭುತ್ವಕ್ಕೆ ೧೦ ಕೋಟಿ ಪೌನು, ಬೆಲ್ಜಿಯಮ್ಮಿಗೆ ೪ ಕೋಟಿ ೮೦ ಲಕ್ಷ ಪೌನು. (ಬೆಲ್ಜಿಯಮ್ಮಿಗೆ ಈಗಿನ ಯುದ್ಧದಿಂದ ಉಂಟಾದ ಪರಿಶ್ರಮಿಕನಷ್ಟವು ಅಪರಿಮಿತವಾಗಿರಬೇಕು) ಆಸ್ಟ್ರಿಯಾಹಂಗೇರಿಗೆ ಆಗಿರುವ ನಷ್ಟವು ಬಹುಶಃ ಜರ್ಮನಿಯವರಿಗೂ ಫ್ರಾನ್ಸಿನವರಿಗೂ ಆಗಿರುವಷ್ಟು ನಷ್ಟವೇ ಆಗಿರುವುದು. ಎಂಬುದಾಗಿ.

ಆಂಗ್ಲರಿಗೂ ಜರ್ಮನರಿಗೂ ಇರುವ ಯುದ್ಧದ ಹಡಗುಗಳು. ಅವುಗಳಲ್ಲಿ ಇದುವರೆಗಿನ ಯುದ್ಧದಲ್ಲಿ ನಷ್ಟವಾದುವುಗಳು.

	ಆಂಗ್ಲರಲ್ಲಿ		ಜರ್ಮನರಲ್ಲಿ	
ಹಡಗುಗಳಜಾತಿ.	ಯುದ್ಧಾರಂಭಕಾಲದಲ್ಲಿದ್ದುವು	ನಷ್ಟವಾಗಿರುವುವು	ಯುದ್ಧಾರಂಭಕಾಲದಲ್ಲಿದ್ದುವು	ನಷ್ಟವಾಗಿರುವುವು
ಬ್ಯಾಟಲ್‌ಷಿಪ್ಪುಗಳು	೨೨	೦	೧೩	೦
(ಹೊಸವು)	೮	೦	೪	೦
ಬ್ಯಾಟಲ್‌ಕ್ರೂಜರು (ಹಳೆಯವು)	೩೮	೨	೨೦	೦
ಕ್ರೂಜರು (೧ ನೆ ತರಗತಿ)	೩೮	೫	೯	೪
(ಹಗುರವಾದುವು)	೭೨	೫	೩೯	೧೧
ಡಿಸ್ಟ್ರಾಯರುಗಳು	೨೧೮	೦	೧೪೨	೧೦
ಟಾರ್ಪೆಡೋಗಳು	೭೦	೦	೪೭	೦
ಸಬ್‌ಮೆರೀನುಗಳು	೭೭	೨	೨೭	೫

ಫ್ರಾನ್ಸು-ರಷ್ಯಾ-ಆಸ್ಟ್ರಿಯಾ-ತುರ್ಕಿ ದೇಶಗಳ ನೌಕಾದಳದ ವಿವರಣವನ್ನು ಮೇಲಣ ಪಟ್ಟಿಯಲ್ಲಿ ಕೊಟ್ಟಿಲ್ಲ. ಆಂಗ್ಲರೂ ಜರ್ಮನರೂ ಸಹ ಯುದ್ಧಾರಂಭವಾದೀಚೆಗೆ ಮತ್ತೆ ಹೊಸಹೊಸ ಯುದ್ಧದ ಹಡಗುಗಳನ್ನು ಕಟ್ಟಿಸಿಯೂ ಕಟ್ಟಿಸುತ್ತಲೂ ಇದ್ದಾರೆ. ಅವುಗಳಲ್ಲಿ ಆಂಗ್ಲರು ನಿರ್ಮಿಸಿರುವ ಹಡಗುಗಳು ಜರ್ಮನರು ನಿರ್ಮಿಸಿರುವವುಗಳಿಗಿಂತಲೂ ಬಹಳ ಉಪಯುಕ್ತವಾಗಿಯೂ, ಉತ್ಕೃಷ್ಟವಾಗಿಯೂ, ದ್ವಿಗುಣವಾಗಿಯೂ ಇವೆ. ೧೯೧೫ನೆಯ ವರ್ಷವು ಮುಗಿಯುವುದರೊಳಗಾಗಿ ಜರ್ಮನರು ದೊಡ್ಡ ಯುದ್ಧದಹಡಗುಗಳು ಮೂರನ್ನು ಮಾತ್ರ ಅಣಿಮಾಡಬಲ್ಲರು. ಅವುಗಳಲ್ಲಿ ಗ್ರೀಸ್‌ದೇಶದ ಹಡಗು ೧ ಆಗಿದೆ. ಅದನ್ನೂ ಜರ್ಮನರೇ ಕೊಳ್ಳುವರೆಂದು ಕಾಣುತ್ತದೆ. ಆಂಗ್ಲೇಯರಲ್ಲಾದರೋ ಈ ವರ್ಷದ ಕೊನೆಯಲ್ಲಿ ದೊಡ್ಡ ಯುದ್ಧದಹಡಗುಗಳು ೧೫ ನಿರ್ಮಿಸಲ್ಪಡುವುವು. ಶತ್ರುಗಳ ಹಡಗಿಗೆ ಯಾವ ನಷ್ಟವೂ ಆಗದೆ ಆಂಗ್ಲರ ದೊಡ್ಡ ಹಡಗುಗಳಲ್ಲೇ ತಿಂಗಳೊಂದಕ್ಕೆ ಒಂದೊಂದರಂತೆ ನಷ್ಟವಾಗುತ್ತ ಬಂದರೂ ಕೂಡ ಈ ವರ್ಷಾಂತದಲ್ಲೂ ಕೂಡ ಆಂಗ್ಲನೌಕಾದಳಸ್ಥಿತಿಯು ಯುದ್ಧಾರಂಭಕಾಲದಲ್ಲಿದ್ದಂತೆಯೇ ಶತ್ರುಗಳ ಸ್ಥಿತಿಗಿಂತ ಉತ್ತಮವಾಗಿಯೇ ಇರುವುದು. (ಈ ದೊಡ್ಡ ಯುದ್ಧದ ಹಡಗುಗಳು ಉಳಿದ ಹಡಗುಗಳೆಲ್ಲಕ್ಕಿಂತಲೂ ಆಕೃತಿ, ವಿಸ್ತಾರ, ಶಕ್ತಿ ಮೊದಲಾದವುಗಳಲ್ಲೆಲ್ಲಾ ಮಿಂಚಿದವುಗಳಾಗಿ ಪರ್ವತೋಪಮಾನಗಳಾಗಿ ಮಹತ್ತರವಾಗಿರುವುವು.)

ಮೈಸೂರ್ ಸ್ಟಾರ್.

ಸ್ ೧೯೧೫ ನೆಯ ಜನವರಿ ತಾ|| ೨೪ ನೆಯ ಭಾನುವಾರ.

ಸಂಘಸಂಸ್ಕರಣ.

ಹಿಂದೂಜನಸಮುದಾಯಕ್ಕೆ ಸದ್ಯಃಕಾಲಕ್ಕೆ ಉಚಿತವಾದ ಸಂಘಸಂಸ್ಕರಣದ ಆವಶ್ಯಕತೆಯು ಬಹಳವಾಗಿರುವುದು. ನಮ್ಮ ಸಂಘದಲ್ಲಿರುವ ಹಲವು ವಿಧವಾದ ಲೋಪಗಳಿಂದ ಐಕಮತ್ಯ ಜಾತೀಯಾಭಿವೃದ್ಧಿ ಮೊದಲಾದ ಎಲ್ಲತೆರದ ಏಳ್ಗೆಗೂ ಅಡಿಗಡಿಗೆ ವಿಘ್ನವುಂಟಾಗುತ್ತಿದೆ. ಪರಮತದ ಹಾಳಿಯೊಂದು ಕಡೆ ಪ್ರಬಲಿಸುತ್ತಿರುವಾಗ ಸ್ವಮತದಲ್ಲೂ ಕಾಲೋಚಿತವಾದ ಜೀರ್ಣೋದ್ಧಾರಕೃತ್ಯಗಳು ಅದಕ್ಕೆ ನಡೆಯದೆ ಹೋದರೆ ಅದು ದಿನಕ್ರಮೇಣ ಜೀರ್ಣಾವಸ್ಥೆಯಿಂದ ನಾಮಾವಶೇಷವಾಗುವ ಪ್ರಸಂಗವಿದೆಯೆಂಬುದು ದೀರ್ಘದರ್ಶಿಗಳ ಅಭಿಪ್ರಾಯವಾಗಿದೆ. ಸುಸಜ್ಜಿತವಾದ ಅಸ್ತಿವಾರದಮೇಲೆ ಈ ಮತವು ಸ್ಥಾಪಿತವಾಗಿದ್ದುದರಿಂದಲೇ ಅದು ಅನಂತವಾದ ಪರಮತದ ಅವಾಂತರಗಳಿಗೆ ಗುರಿಯಾದರೂ ವಿನಾಶಗೊಳ್ಳದೆ ಉಳಿದಿದೆಯೆಂಬುದು ನಿಜ. ಆದರೂ ಈಗ ಅದಕ್ಕೆ ಒದಗುತ್ತಿರುವ ಧಕ್ಕೆಯು ಗುಪ್ತಗಾಮಿಯಾದ ಟಾರ್ಪೆಡೋವಿನಂತೆ ಇರುತ್ತದೆ. ಅದರ ಭಯದಿಂದ ರಕ್ಷಣೆಮಾಡುವುದು ಪ್ರತಿಯೊಬ್ಬ ಹಿಂದೂವಿಗೂ ಕರ್ತವ್ಯವಾಗಿದೆ.

ಯಾವತೆರದಿಂದ ನಿರೀಕ್ಷಿಸಿದರೂ ಸಂಸ್ಕರಣಾವಶ್ಯಕತೆಯು ಸಾಮಾನ್ಯವೆಂದು ಎಣಿಸಲ್ಪಡುವಹಾಗಿಲ್ಲ. ನಿಷ್ಪಕ್ಷಪಾತಭಾವದಿಂದಲೂ, ವಿಶಾಲಹೃದಯದಿಂದಲೂ ವಿವೇಚನೆಮಾಡಿದರೆ ಸಂಘಸಂಸ್ಕರಣವು ಎಷ್ಟು ಫಲಪ್ರದವಾದುದೆಂಬುದು ಸ್ಪಷ್ಟವಾಗುವುದು. ದೇಹಬಲ, ಬುದ್ಧಿಬಲ, ಜ್ಞಾನಬಲ, ದ್ರವ್ಯಬಲ ಮೊದಲಾದುವುಗಳಲ್ಲಿ ಪ್ರಾಚೀನಭಾರತೀಯರಿಗೂ ಈಗಿನವರಿಗೂ ಇರುವ ತಾರತಮ್ಯವೊಂದನ್ನು ಪರಿಶೀಲಿಸಿದರೆ ಸಾಕು, ನಮ್ಮ ಸಾಂಘಿಕಲೋಪಗಳೇ ಅವುಗಳ ಅವನತಿಗೆಲ್ಲಾ ಕಾರಣವಾಗಿರುವುದೆಂದು ಚೆನ್ನಾಗಿ ವ್ಯಕ್ತವಾಗುವುದು. ಪಶುಸಮಾನರಾಗಿರುವ ಪತ್ನಿಯರನ್ನು ಕಟ್ಟಿಕೊಂಡಿರುವ ಕುಟುಂಬಗಳ ಅವಸ್ಥೆಯೂ, ಬಾಲ್ಯಾವಸ್ಥೆಯಲ್ಲಿಯೇ ಮಾತೃತ್ವವನ್ನು ಸಂಪಾದಿಸಿರುವ ಹೆಣ್ಣುಗಳನ್ನು ಪಡೆದಿರುವ ಸಂಸಾರಗಳ ಅವಸ್ಥೆಯೂ, ೧೦ ವರ್ಷ ವಯಸ್ಸಿನೊಳಗೇ ಉಪಲೋಚನಗಳನ್ನು ಹವಣಿಸಿಕೊಂಡು ಮೂವತ್ತುವರ್ಷದೊಳಗಾಗಿ ಮುಪ್ಪಿನ ಚಿಹ್ನೆಗಳನ್ನೆಲ್ಲಾ ಸಂಪಾದಿಸಿರುವ ನಮ್ಮ ಸಂತಾನಗಳ ಅವಸ್ಥೆಯೂ, ಪರದಾಸ್ಯವೇ ಉದರನಿರ್ವಾಹಕ್ಕೆ ಮುಖ್ಯಸಾಧನವೆಂದರಿತು, ತಾವನ್ಮಾತ್ರದಲ್ಲಿ ತೃಪ್ತರಾಗಿ ದೇಶವನ್ನು ಬಡತನದ ಚಿರಬಂಧುವನ್ನಾಗಿ ಮಾಡಿರುವ ಅವಸ್ಥೆಯೂ, „ಭಾರತೀಯರಲ್ಲಿ ಜನಾಂಗತ್ವವು ಎಂದಿಗೂ ಸಂಭವಿಸದು" ಎಂದು ಹೆಮ್ಮೆಗಾರರಾದ ಪರರಿಂದ ಅಲ್ಲಗಳೆಯಲ್ಪಡುವ ಅವಸ್ಥೆಗೀಡಾಗಿರುವುದೂ, ಈಶ್ವರಸೃಷ್ಟಿಗೊಳಗಾದ ಪ್ರಪಂಚದಮೇಲೆ ಸಮಾನಮಾನವರಾದ ಪಾಶ್ಚಾತ್ಯರು ಸಕಲೈಹಿಕಭೋಗಭಾಗ್ಯಗಳಿಗೂ ಪಾತ್ರರಾಗಿ ಸುಖಿಸುತ್ತಿರವಾಗ ನಾವು ನಮ್ಮ ಕಾಲಿಗೆ ನಾವೇ ಸಂಕಲೆಗಳನ್ನು ತೊಡಿಸಿಕೊಂಡವರಂತೆ ಕುಳಿತ ಸ್ಥಾನವನ್ನು ಬಿಟ್ಟು ಏಳುವುದೇ ಅಸಾಧ್ಯವೆಂದು ಯೋಚಿಸುತ್ತಿರುವುದೂ, ದಿನೇದಿನೇ ಹಿಂದೂ ಜನಸಂಖ್ಯೆಯು ಕ್ಷೀಣಿಸಿಹೋಗುತ್ತಿರುವುದೂ, ಭ್ರೂಣಹತ್ಯ, ಶಿಶುಹತ್ಯ, ಕನ್ಯಾಶುಲ್ಕ, ವರಶುಲ್ಕ, ಅನನುರೂಪದಾಂಪತ್ಯ ಮೊದಲಾದ ಹಾವಳಿಗಳು ಮಿಗಿಲಾಗುತ್ತಿರುವುದೂಸಹ ನಮ್ಮ ಸಂಘದಲ್ಲಿರುವ ನಾನಾವಿಧದ ಲೋಪಗಳ ಪರಿಣಾಮಗಳಾಗಿರುತ್ತವೆ. ಇವುಗಳನ್ನೆಲ್ಲಾ ಪರಿಹರಿಸದಿರುವುದು ವಿವೇಕಿಗಳ ಲಕ್ಷಣವೆ? ನಮ್ಮ ಮಕ್ಕಳು ಗೂಢವ್ಯಭಿಚಾರಿಣಿಗಳಾಗಿದ್ದರೂ ಇರಲಿ, ನಮ್ಮ ಸಂತಾನಗಳು ೨೦-೩೦ ವರ್ಷ ವಯಸ್ಸಿನಲ್ಲೇ ಮೃತರಾಗುವ ಅವಸ್ಥೆಗೆ ಬಂದರೂ ಬರಲಿ, ನಮ್ಮದೇಶವು ದಾಸ್ಯಕ್ಕೂ ಬಡತನಕ್ಕೂ ಎಂದೆಂದಿಗೂ ಬಲಿಯಾಗಿರಲಿ, ನಮ್ಮನ್ನು ಹೊದ್ದಿದ ಕ್ರೈಸ್ತ ಮೊದಲಾದ ಯಾವುದಾದರೂ ಪರಮತದ ಕಮರಿಗೆ ಬಿದ್ದು ನಾಮಾವಶೇಷವಾಗಿ ಹೋದರೂ ಹೋಗಲಿ, ನಮ್ಮ ಪೀಳಿಗೆಗಳು ತುಂಬೆಗಿಡಕ್ಕೆ ಏಣಿಹಾಕುವಂಥ ಅವಸ್ಥೆಗೀಡಾದರೂ ಆಗಲಿ, ನಮ್ಮ ಅಪ್ಪನು ಹಾಕಿದ ಆಲದಮರಕ್ಕೆ ನಾವು ನೇತುಹಾಕಿಕೊಳ್ಳುವ ತಪಸ್ಸನ್ನು ಮಾಡಿ ಕೃತಾರ್ಥರಾಗುವೆವೆಂದು ಯಾರಾದರೂ ಹೇಳುವುದಾದರೆ ಅವರು ಹುಚ್ಚರ ವೈದ್ಯಶಾಲೆಗೆ ಕಳುಹಿಸಲ್ಪಡಲು ಅರ್ಹರೇ ಹೊರತು ವಿವೇಕಿಗಳ ಮಧ್ಯದಲ್ಲಿ ಗಣಿಸಲ್ಪಡಲು ಅರ್ಹರಾಗುವರೆ? ಎಂದಿಗೂ ಇಲ್ಲ. ಅದುಕಾರಣವೇ ದೀರ್ಘದರ್ಶಿಗಳಾದ ಮುಂದಾಳುಗಳು ಸಂಘದ ಲೋಪಗಳನ್ನು ಪರಿಹರಿಸುವುದು ಆವಶ್ಯಕವೆಂದು ಭಾವಿಸುತ್ತಾರೆ. ಸಂಘಸಂಸ್ಕಾರಕರಿಗೆ ದೇಶೋಪಕಾರವೇ ಮುಖ್ಯಲಕ್ಷ್ಯವಾಗಿದೆ. ಅವರ ಬುದ್ಧಿಯು ಪರೋಪಕಾರನಿರತವಾಗಿಯೂ ಕರುಣಾಮಯವಾಗಿಯೂ ಇದೆ. ಅವರು ಆತ್ಮಪ್ರತಿಷ್ಠೆಗಾಗಿ ಈ ಪ್ರಯತ್ನದಲ್ಲಿ ತೊಡಗಿಲ್ಲ. ಇತರವಿಧದ ತಮ್ಮ ಅಸಾಧಾರಣ ಶಕ್ತಿಗಳಿಂದ ಸಂಪಾದಿಸಿರುವ ಕೀರ್ತಿಪ್ರತಿಷ್ಠಾಗೌರವ ಸಂಪತ್ತಿಗಳನ್ನೆಲ್ಲಾ ಈ ಲೋಕಸೇವಾರೂಪ ಕಾರ್ಯಕ್ಕೆ ವಿನಿಯೋಗಿಸಿ, ಈ ತೆರವಾದ ತಪಶ್ಚರ್ಯದಿಂದ ತಾವು ಕೃತಾರ್ಥರಾಗಬೇಕೆಂದು ಅವರು ಎಣಿಸುತ್ತಿದ್ದಾರೆಯೇ ಹೊರತು ಇದರಿಂದ ಅಭೂತಪೂರ್ವವಾದ ಪ್ರತಿಷ್ಠೆಯನ್ನಾರ್ಜಿಸಬೇಕೆಂಬುದು ಅವರಿಗೆ ಆವಶ್ಯಕವಾಗಿಲ್ಲ. ದಿವಾನ್ ಬಹದೂರ್ ಆರ್. ರಘುನಾಥರಾವ್-ರಾ||ಬ|| ವೀರೇಶಲಿಂಗಂಪಂತಲು, ಸರ್ ನಾರಾಯಣಗಣೇಶಚಂದ್ರವಾರ್ಕರ್, ಸರ್ ಶಂಕರನ್ ನಾಯರ್ ಮೊದಲಾದ ದಾಕ್ಷಿಣಾತ್ಯರೂ, ರಾಮಮೋಹನರಾಯಿ ಮೊದಲಾದ ಅನೇಕಾನೇಕ ಔತ್ತರೇಯರೂ ಸಹ ಈ ಸಂಘಸಂಸ್ಕರಣ ರೂಪಯತ್ನದ ಘಟಾಟೋಪದಿಂದ ಸ್ವನಾಮಖ್ಯಾತಿಗಾಗಿ ಬಯಸಿದರೆಂದು ಹೇಳಲ್ಪಡತಕ್ಕವರೊ? ಅದುಕಾರಣ „ಮಹಾಜನೋಯೇನಗತಸ್ಸಪಂಥಾಃ" ಎಂಬ ನಮ್ಮ ಪ್ರಾಚೀನಹಿತವಚನದಂತೆ ಈಗಿನಕಾಲದ ಸ್ಥಿತಿಗತಿಗನುಸರಿಸಿ ನಡೆಯಲು ಯಾವುದು ಸೂಕ್ತವಾದ ದಾರಿಯೆಂದು ನಮ್ಮ ಮುಂದಾಳುಗಳಾದ ಮಹಾಜನರು ತೋರಿಸುವರೋ ಅದನ್ನನುಸರಿಸಿ ನಡೆಯುವುದು ಹಿಂದೂಮತದ ಪ್ರತಿಯೊಂದು ವ್ಯಕ್ತಿಗೂ ಆವಶ್ಯಕವಾಗಿರುವುದು.

ಈಗಿನ ಸಂಘಪರಿಷ್ಕಾರಕರ ಉದ್ದೇಶದ ದಿಗ್ದರ್ಶನವು ನಮ್ಮ ಶ್ರೀಮದ್ಯುವರಾಜರು ಮದ್ರಾಸಿನಲ್ಲಿ ಮಾಡಿರುವ ಉಪನ್ಯಾಸದಿಂದ ಚೆನ್ನಾಗಿ ಆಗಿರುವುದು. ಪ್ರತಿಯೊಂದು ಹಿಂದೂವ್ಯಕ್ತಿಗೂ ಬೋಧಪ್ರದವಾದ ತತ್ವವು ಅದರಲ್ಲಿ ಶಾಂತವಾಗಿಯೂ ಸಯುಕ್ತವಾಗಿಯೂ ಪ್ರತಿಪಾದಿಸಲ್ಪಟ್ಟಿದೆ. ಶ್ರೀಮದ್ಯುವರಾಜರ ಹೃದಯವು ವಿದೇಶಪರ್ಯಟನ ಪಂಡಿತಸಂಭಾಷಣ ದೇಶಸ್ಥಿತಿಗತಿಯ ಆಲೋಚನ ಇವುಗಳಿಂದ ಎಷ್ಟು ವಿಶಾಲವೂ ಕರುಣಾರ್ದ್ರವೂ ಆಗಿರುವುದೆಂಬುದನ್ನು ಅವರ ಭಾಷಣವು ವ್ಯಕ್ತಪಡಿಸುತ್ತಿದೆ. ಮನಸ್ಸಿಗೆ ಒಪ್ಪಿದ ತತ್ವವನ್ನು ಮುಚ್ಚುಮರೆಯಿಲ್ಲದೆ ವಾಕ್ಕ್ರಿಯೆಗಳಿಂದ ನಡೆಯಿಸಿ ತೋರಿಸುವ-ಅವರಲ್ಲಿರುವ ಧೀರಗುಣವು ಅವರಂತಿರುವ ಅನೇಕ ಮಹನೀಯರಿಗೆಲ್ಲಾ ಮಾರ್ಗದರ್ಶಕವಾಗಿರುತ್ತದೆ.

ಪ್ರಕೃತದಲ್ಲಿ ಸಂಘಪರಿಷ್ಕರಣೋದ್ದೇಶಗಳನ್ನು ಸಾಧುವೆಂದು ಒಪ್ಪತಕ್ಕವರು ದೇಶದಲ್ಲಿ ಅನೇಕಾನೇಕರು ದೊರೆಯುತ್ತಾರೆ. ಆದರೆ ಹಾಗೆ ಒಪ್ಪುವವರ ಸಂಖ್ಯೆಯು ಹೆಚ್ಚುವುದಕ್ಕಿಂತಲೂ ನಡೆದು ತೋರಿಸುವವರ ಸಂಖ್ಯೆಯು ಹೆಚ್ಚಿದಲ್ಲದೆ ಉದ್ದೇಶವು ಫಲಿಸಲಾರದು. ಆಂಗ್ಲಭಾಷಾಭ್ಯಾಸದಿಂದ ಐಹಿಕಜ್ಞಾನವಾಗದಿದ್ದವರಿಗೆ ಸಂಘಸಂಸ್ಕರಣಕಾರ್ಯಗಳು ರುಚಿಸುವುದಿಲ್ಲವೆಂದು ನಮ್ಮ ಶ್ರೀಮದ್ಯುವರಾಜರು ಯೋಚಿಸಿರುತ್ತಾರೆ. ಅದು ಬಲುಮಟ್ಟಿಗೆ ನಿಜವಾದರೂ ಅಂಥ ಆಂಗ್ಲಭಾಷಾವಿಶಾರದರೂ ಕೂಡ ಒಂದೊಂದು ಸಮಯದಲ್ಲಿ ಒಕ್ಕಣ್ಣಿನ ಒಂಟೆಗಳಂತೆಯೇ ಕೆಲಸಮಾಡಲು ತತ್ಪರರಾಗುತ್ತಿರುವುದು ಕಂಡುಬರುತ್ತದೆ. ಅದು ಅನ್ಯಾಯವು. ಸಂಘಪರಿಷ್ಕರಣದ ಮಾತೆತ್ತಿದರೆ ಕಿವಿಯನ್ನು ಮುಚ್ಚಿಕೊಳ್ಳುವವರು ಸಂಘದಲ್ಲಿ ಅನೇಕರಿದ್ದಾರೆ. ಸಂಘಪರಿಷ್ಕಾರಕರ ಸತತ ಪ್ರಯತ್ನವೂ, ದೇಶದ ದೀನಾವಸ್ಥೆಯ ಶೋಚನೀಯ ದೃಶ್ಯವೂ ಕೂಡ ಒಂದಾನೊಂದು ಕಾಲದಲ್ಲಿಯಾದರೂ ಅವರ ಮನಸ್ಸನ್ನು ಕೃತಕಾರ್ಯಕ್ಕಾಗಿ ಪಶ್ಚಾತ್ತಾಪಗೊಳ್ಳುವಂತೆ ಮಾಡದೆ ಹೋಗಲಾರದು. ಆದರೆ ತೆರೆಗಳ ಬಡಿತವೆಲ್ಲಾ ನಿಂತನಂತರ ಸಾಗರಸ್ನಾನವನ್ನು ಆಚರಿಸೋಣವೆಂದು ನಿರೀಕ್ಷಿಸುವವರಂತೆ ಮಾಡದೆ, ಅಂಥ ವಿಘ್ನಸಂತೋಷಿಗಳ ಕಲಕಲವೆಲ್ಲಾ ನಿಂತನಂತರ ಸಂಘಸಂಸ್ಕರಣದವರ ಪ್ರಯತ್ನಕ್ಕೆ ಸಹಾಯಕರಾಗೋಣವೆಂದು ದೇಶೀಯರುಗಳು ನೆನೆಯುವುದು ಮಾತ್ರ ಅವಿವೇಕವು.

ಸಂಘಸಂಸ್ಕರಣದ ಆವಶ್ಯಕತೆಯು ದೇಶಕ್ಕೆ ಆವಶ್ಯಕವೆಂಬುದು ಒಡೆದು ಕಾಣುತ್ತಿರುವಲ್ಲಿ ಪ್ರಜೆಗಳ ವಿದ್ಯಾವೃದ್ಧಿ ಸಂಪದ್ವೃದ್ಧಿ ಮೊದಲಾದುವುಗಳಿಗಾಗಿ ಪ್ರಯತ್ನಿಸುತ್ತಿರುವ ಸರ್ಕಾರದವರು ಅನ್ನೆಲ್ಲತೆರದ ವೃದ್ಧಿಗಳಿಗೂ ಮೂಲಭೂತವಾದ ಸಂಘಪರಿಷ್ಕರಣದ ಕಾರ್ಯಕ್ಕೆ ಸಹಾಯಕರಾಗುವುದು ಆವಶ್ಯಕವಾಗಿಲ್ಲವೆ? ಇದನ್ನು ಶ್ರೀಮದ್ಯುವರಾಜರವರು ಯುಕ್ತಿಯುಕ್ತವಾಗಿ ಸಮರ್ಥನಮಾಡಿದ್ದಾರೆ. ದೇಶಹಿತಕಾರ್ಯವೆಂದು ತೋರಿದ ವಿಷಯದಲ್ಲಿ ಜನರ ದ್ವೈಧೀಭಾವವಿದ್ದರೂ ಅದರ ಫಲವನ್ನು ಅದಕ್ಕೆ ಕೊಡುವುದಕ್ಕಿಂತಲೂ, ಪ್ರಭುತ್ವದವರು ತಮ್ಮ ಅಧಿಕಾರಬಲವನ್ನು ತಮ್ಮ ಮನಸ್ಸಿಗೆ ಸರಿಯೆಂದು ತೋರಿದ ಉದಾತ್ತಪ್ರಯತ್ನವಿಷಯದಲ್ಲಿ ಕೊಡುವುದು ನ್ಯಾಯವು. ಪ್ರೌಢವಿವಾಹ ವಿಷಯಕವಾದ ಶಾಸನವೊಂದನ್ನು ಏರ್ಪಡಿಸುವ ವಿಷಯಕವಾಗಿ ಮದ್ರಾಸ್ ನಿಯಮನಿರ್ಮಾಣ ಸಭೆಗೆ ಅ|| ಶ್ರೀನಿವಾಸಶಾಸ್ತ್ರಿಯವರು ಒಂದು ಮನವೆಯನ್ನು ಮಾಡಿಕೊಂಡಿದ್ದಾರೆ. ಈ ವಿಷಯದಲ್ಲಿ ಶಾಸನವನ್ನು ಮಾಡುವುದಕ್ಕೆ ಪ್ರಭುತ್ವದವರು ನುಗ್ಗಬಾರದೆಂದೂ, ಇದು ಪ್ರಜೆಗಳ ಮತವಿಷಯಕವೆಂದೂ, ಇದು ಅವರಿಗೆ ಸ್ವತಂತ್ರವಾಗಿರಬೇಕೆಂದೂ, ಕೆಲ ವಿಘ್ನಸಂತೋಷಿಗಳು ಆಗಲೇ ಅಲ್ಲಲ್ಲಿ ಸಭೆಗಳ ಮೂಲಕ ಗದ್ದಲವನ್ನು ನಡೆಯಿಸುತ್ತಿದ್ದಾರೆ. ಆದರೆ ಈ ವಾದದ ಯೋಗ್ಯತೆಯನ್ನು ಪ್ರಭುತ್ವದವರು ಅರಿಯದೆ ಇರತಕ್ಕ ಅಸಮರ್ಥರೆಂದು ನಾವು ತಿಳಿಯುವುದಿಲ್ಲ. ಶೂದ್ರಾದಿಗಳು ಅಕ್ಷರಶತ್ರುಗಳೇ ಆಗಿರಬೇಕೆಂದು ಒಂದಾನೊಂದು ಕಾಲದಲ್ಲಿ ಧರ್ಮಶಾಸ್ತ್ರವಚನವು ಕಲ್ಪಿಸಲ್ಪಟ್ಟಿದ್ದಿತು. ಆದರೆ ಅದು ಕಟ್ಟುಪಾಡಿಗೆ ಒಳಪಟ್ಟದೆಂದೂ ಶಾಸ್ತ್ರಕ್ಕೆ ವಿರುದ್ಧವಾದುದೆಂದೂ ಸರ್ಕಾರದವರು ಅದಕ್ಕೆ ಕೈಹಾಕದೆ ಬಿಟ್ಟಿರುವರೆ? ಸಹಗಮನವು ಮತವಿಷಯಕ್ಕೆ ಸಂಬಂಧಪಟ್ಟುದೆಂದು ಅದನ್ನು ನಿರೋಧಿಸಲು ಸರ್ಕಾರದವರು ಕೈಹಾಕದೆ ಬಿಟ್ಟರೆ? ಇದರಂತೆಯೇ ಸದ್ಯಃಕಾಲದ ಪ್ರೌಢಾವಿವಾಹಾದಿ ವಿಷಯಗಳೂ ಆಗಿರುತ್ತವೆ. ಘಂಟಾಘೋಷವಾಗಿ ವೇದವಚನದಿಂದ ಸಿದ್ಧವಾಗುವ ಪ್ರೌಢಾವಿವಾಹವನ್ನೂ ಕೂಡ ಶಾಸ್ತ್ರಸಂರಕ್ಷಕರಂತೆ ನಟಿಸಿ ಖಂಡಿಸಲಪೇಕ್ಷಿಸುವ ಮಹನೀಯರಲ್ಲಿ ಅನೇಕರು ಆ ಶಾಸ್ತ್ರವಚನಗಳಿಂದಲೇ ಅನಂತಪ್ರಕಾರವಾಗಿ ಖಂಡಿಸಲ್ಪಟ್ಟಿರುವ ಅನೃತವಾದ-ಪರಸ್ತ್ರೀಗಮನ-ಅಪೇಯಪಾನ- ಅಭಕ್ಷ್ಯಭಕ್ಷಣಾದಿ ಪಾಪಾಚರಣೆಗಳನ್ನು ಹಜ್ಜೆಹಜ್ಜೆಗೂ ಆಚರಿಸುವುದನ್ನು ಲೋಕವೇ ಬಲ್ಲುದು. ಪ್ರೌಢಾವಿವಾಹಕ್ಕೂ ಪರಸ್ತ್ರೀಗಮನಾದಿಗಳಿಗೂ ಇರುವ ತಾರತಮ್ಯವನ್ನವಲೋಕಿಸಿದರೆ ಯಾವುದು ಪುಣ್ಯಕಾರ್ಯ ಯಾವುದು ಪಾಪಕಾರ್ಯವೆಂಬುದು ಎಂಥವರಿಗೂ ಗೊತ್ತಾಗುವುದು. ಪಂಚಮಹಾಪಾತಕಗಳನ್ನಾಚರಿಸತಕ್ಕವರನ್ನೂ ಕೂಡ ಶಾಸ್ತ್ರೈಕಶರಣ್ಯರೂ ಪವಿತ್ರರೂ ಆಗಿರುವರೆಂದು ನಂಬುವುದೂ, ಲೋಕಹಿತಕರವೂ ಶಾಸ್ತ್ರಸಿದ್ಧವೂ ಆದ ಸದಾಚರಣವೊಂದನ್ನು ಬೋಧಿಸಿದರೆ ಅದನ್ನವಲಂಬಿಸಲು ಹಿಂದೆಗೆವುದೂ ಕೂಡಎಷ್ಟು ಅಜ್ಞತ್ವವೆಂಬುದನ್ನು ಪ್ರತಿಯೊಂದು ಸಮಾಜದವರೂ ವಿಚಾರಮಾಡಿ, ಕುಹಕಿಗಳ ಪ್ರವಾದಕ್ಕೆ ಕಿವಿಗೊಡದೆ, ಸಕಲ ವಿಧದ ಪುರೋವೃದ್ಧಿಗೂ ಸಾಧಕವಾದ ಸಂಘಪರಿಷ್ಕರಣಕಾರ್ಯದ ವಿಷಯದಲ್ಲಿ ಕೈಲಾದಷ್ಟು ಅನುಕೂಲ ಪ್ರಯತ್ನಗಳನ್ನು ಮಾಡುವವರಾಗಲೆಂದು ಕೋರುತ್ತೇವೆ.

ಯುದ್ಧವಾರ್ತೆಯು.

ಪಶ್ಚಿಮರಣರಂಗ.

ಇಲ್ಲಿ ಮಳೆಯ ಆಧಿಕ್ಯದಿಂದ ವಿಶೇಷಭೂಭಾಗವು ಜಲಮಯವಾಗಿದೆ. ಸೈನಿಕರು ತೋಡಿಕೊಂಡಿದ್ದ ಕಂದಕಗಳಲ್ಲಿ ನೀರು ಜಿನಿಸಿ, ನಿಲ್ಲಲು ಅವಕಾಶವಿಲ್ಲವಾಗಿದೆ. ಆ ನೀರನ್ನು ಜರ್ಮನರು ವಿದ್ಯುಚ್ಛಕ್ತಿಯಂತ್ರಗಳಿಂದ ಹೊರಕ್ಕೆ ಚಲ್ಲಿ, ಅದು ಮಿತ್ರಮಂಡಲಿಯವರ ಕಂದಕಗಳಿಗೆ ಹರಿದುಹೋಗುವಂತೆ ಮಾಡುತ್ತಿದ್ದಾರೆ. ಅದನ್ನು ಇವರು ತಡೆಮಾಡುತ್ತಿದ್ದಾರೆ. ಬೆಲ್ಜಿಯಮ್ಮಿನ ದಕ್ಷಿಣಭಾಗದ ಪ್ರದೇಶವೆಲ್ಲಾ ವಿಶೇಷ ಜಲಮಯವಾಗಿ ಸೆಲ್ಬು-ಲೀಜು-ನದಿಗಳ ಪ್ರವಾಹವು ದಡವನ್ನು ಮೀರಿ ಹರಿಯುತ್ತಿರುವುದೆಂದು ಮಿತ್ರಮಂಡಲಿ ಪಕ್ಷದ ವೈಮಾನಿಕರು ಗೊತ್ತುಮಾಡಿ ತಿಳಿಯಿಸಿದ್ದಾರೆ. ಚಳಿಯ ಮಳೆನೀರಿನ ಉಪದ್ರವವು ವಿಶೇಷವಾಗಿದ್ದರೂ ಮಿತ್ರಮಂಡಲಿಯವರು ಶತ್ರುಗಳ ಕಂದಕಗಳನ್ನು ಹಿಡಿದು ಮುಂದುಮುಂದಕ್ಕೆ ಸಾಗುವ ಕೆಲಸವನ್ನು ಮಾಡುತ್ತಲೇ ಇದ್ದಾರೆ. ಜರ್ಮನರಲ್ಲಿ ವಿಷಮಜ್ವರದ ಬಾಧೆಯು ಇನ್ನೂ ಇದ್ದೇಯಿದೆ. ಮೊದಮೊದಲು ಪಶ್ಚಿಮರಣರಂಗದ ಯುದ್ಧದಲ್ಲಿ ಜರ್ಮನರ ಹತ್ತಿರ ಫಿರಂಗಿಮದ್ದುಗಳ ಸಿಡಿಮದ್ದಿನ ಗೋಳಗಳ ಬಲವು ವಿಶೇಷವಾಗಿದ್ದಿತು. ಅದರ ಹಾವಳಿಯು ಇದಿರುಪಕ್ಷದಲ್ಲಿ ವಿಶೇಷ ನಷ್ಟವನ್ನುಂಟುಮಾಡುತ್ತಿದ್ದಿತು. ಈಗಲಾದರೊ ಮಿತ್ರಮಂಡಲಿಯವರು ಕೂಡ ಅದೇತೆರದ ಫಿರಂಗಿಗಳನ್ನೂ ಮದ್ದುಗಳನ್ನೂ ಶತ್ರುಗಳಿಗೆ ಸಮನಾಗಿ ಹವಣಿಸಿಕೊಂಡಿರುವುದರಿಂದಲೂ, ಅವುಗಳ ಪ್ರಯೋಗಚಾತುರ್ಯವು ಜರ್ಮನರಿಗಿಂತ ಇವರಲ್ಲೇ ಚೆನ್ನಾಗಿರುವುದರಿಂದಲೂ ಶತ್ರುಗಳಕಡೆ ಈಗ ಜನನಾಶವು ಹೆಚ್ಚಾಗುತ್ತಿದೆ. ಹಿಂದಿನ ರಷ್ಯಾ ಜಪಾನ್ ಯುದ್ಧದಲ್ಲಿಯೂ, ಈಗಿನ ಮಹಾಯುದ್ಧದ ಆಂಟ್‌ವರ್ಪ್ ಮುತ್ತಿಗೆಯಲ್ಲಿಯೂ „ಹವಿಟ್ಜರ್" ಎಂಬ ರಾಕ್ಷಸಫಿರಂಗಿಯ ಸಾಮರ್ಥ್ಯವು ಹೇಗೆ ಗೋಚರವಾಯಿತೋ ಅದರಂತೆ ಈಗ ಫ್ರೆಂಚರು ಮೊದಲಾದ ಮಿತ್ರಮಂಡಲಿಯವರು ಉಪಯೋಗಿಸುತ್ತಿರುವ ಒಂದುತೆರದ ಸಿಡಿಮದ್ದುಗಳ ಫಲವು ವಿಶೇಷವಾಗಿ ಗೋಚರಿಸುತ್ತಿದೆ. ಅಲ್ಸೇಸ್ಸಿನಲ್ಲಿರುವ ಸ್ಟಿಮ್‌ಬಾಕನ್ನು ಫ್ರೆಂಚರು ಹಿಡಿದುಕೊಂಡುದು ನಿಜವೆಂದು ಜರ್ಮನರು ಒಪ್ಪಿಕೊಂಡಿದ್ದಾರೆ. ಮುಲ್‌ಹಸೇನಿನ ಹತ್ತಿರ ಫ್ರೆಂಚರು ಇನ್ನೂ ಮುಂದಕ್ಕೆ ಸಾಗಿದ್ದಾರೆ. ಮತ್ತೂ ಬೆಲ್ಜಿಯಮ್ಮಿಗೆ ಸೇರಿದ ಸೆಂಟ್‌ಜಾರ್ಜಿನ ಹತ್ತಿರವೂ ನ್ಯೂಪೋರ್ಟಿನ ಪಕ್ಕದಲ್ಲೂ ಫ್ರಾನ್ಸ್‌ಸೈನ್ಯವು ಮುಂದಕ್ಕೆ ನಡೆದಿದೆ. ಬೆಲ್ಜಿಯಂದೇಶದಲ್ಲಿ ಜರ್ಮನರಿಗೆ ನ್ಯಾಯಧಾರವಾದ ಹಕ್ಕಾವುದೂ ಇಲ್ಲವೆಂದು ಬೆಲ್ಜಿಯಮ್ಮಿನ ಮತಗುರುಗಳು ಪ್ರಕಟಪಡಿಸಿದರೆಂಬ ಕಾರಣದಿಂದ ಜರ್ಮನ್ ಸೈನ್ಯಾಧಿಕಾರಿಗಳು ಅವರನ್ನು ಸೆರೆಹಿಡಿದರು. ಡಿಕ್ಸ್‌ಮೂಡಿಗೆ ದಕ್ಷಿಣದಲ್ಲಿ ಜರ್ಮನರು ಮಿತ್ರಮಂಡಲಿಯವರ ಮೇಲೆ ತೀವ್ರವಾಗಿ ಬಿದ್ದು ಹಿಮ್ಮೆಟ್ಟಿಸಲ್ಪಟ್ಟರು. ಅಲ್ಲಿಯಹತ್ತಿರ ಶತ್ರುಗಳು ನಮ್ಮವರ ಕಂದಕಗಳಲ್ಲಿ ಒಂದನ್ನು ಹಿಡಿದಿದ್ದರು. ಅದನ್ನು ಮರಳಿ ಮಿತ್ರಮಂಡಲಿಯವರು ವಶಪಡಿಸಿಕೊಂಡರು. ಇಂಥ ಸಣ್ಣಪುಟ್ಟ ಜಯಗಳೂ ಅವಕ್ಕೆ ತಕ್ಕ ಯುದ್ಧಗಳೂ ಹಲವುಕಡೆ ನಡೆಯುತ್ತಲೇ ಇವೆ. ಜರ್ಮನರ ಒಂದು ಕಂದಕದಮೇಲೆ ಮಿತ್ರಮಂಡಲಿಯ ಸೈನ್ಯಗಳು ಹೋಗಿಬಿದ್ದು ಯುದ್ಧಮಾಡುವಾಗ ಅವರಲ್ಲಿದ್ದ ಫ್ರಾನ್ಸ್ ಮುಖ್ಯಮಂತ್ರಿಯ ಕುಮಾರನು ಏಟುತಿಂದು ಮೃತನಾದನು. ಪೆರಿಸ್ ಎಂಬ ಗ್ರಾಮವನ್ನು (ಇದು ಇಂಗ್ಲೀಷ್ ಛಾನಲ್ಲಿನ ಈಶಾನ್ಯದಲ್ಲಿದೆ) ಮಿತ್ರಮಂಡಲಿಯವರು ಹಿಡಿದುಕೊಂಡರು. ಮತ್ತೂ ಅವರು ಹಿಡಿದಿದ್ದ ಬರ್ನ್‌ಹಾಫ್ ಎಂಬ ಗ್ರಾಮವನ್ನು ಜರ್ಮನರು ವಿಶೇಷ ಸೈನ್ಯವನ್ನು ತಂದು ಕಾದಾಡಿ ಮರಳಿ ವಶಪಡಿಸಿಕೊಂಡರು. ಈಚೆಗೆ ಮಿತ್ರಮಂಡಲಿಯವರ ಸೈನ್ಯಗಳೇ ಜರ್ಮನರ ಮೇಲೆಬಿದ್ದು ಅವರನ್ನು ಹಿಮ್ಮೆಟ್ಟಿಸುತ್ತಲೂ, ಅವರ ಕಂದಕಗಳನ್ನೂ ಗ್ರಾಮಗಳನ್ನೂ ವಶಪಡಿಸಿಕೊಳ್ಳುತ್ತಲೂ ಇರುವುದರಿಂದ ಜರ್ಮನರಿಗೆ ಆಗ್ರಹವು ಹೆಚ್ಚಾಗಿ, ಅವರು ಪಶ್ಚಿಮರಣರಂಗಕ್ಕೆ ಹೊಸಹೊಸ ಸೇನೆಗಳನ್ನು ಕಳುಹಿಸುತ್ತಿದ್ದಾರೆ.

ಪೂರ್ವರಣರಂಗ.

ಮ್ಲಾವಾ ಪ್ರಾಂತ್ಯದಲ್ಲಿ ರಷ್ಯನರು ಶತ್ರುಗಳ ಮೇಲೆ ಕದನಮಾಡುತ್ತಲೇ ಇದ್ದಾರೆ. ಬಕೋವಿನಾದಲ್ಲಿ ರಷ್ಯನರು ಮುಂದಕ್ಕೆ ಸರಿಯುತ್ತ ನಾಲ್ಕು ಪಟ್ಟಣಗಳನ್ನು ಹಿಡಿದಿದ್ದಾರೆ. ಇವುಗಳಲ್ಲಿ ಎರಡು ಟ್ರಾನ್ಸಿಲ್ವೇನಿಯಾಕ್ಕೆ ಹೋಗುವ ದಾರಿಯಲ್ಲಿವೆ. ವಿಶ್ಚುಲಾನದಿಗೆ ಎಡಪಕ್ಕದಲ್ಲಿ ಜರ್ಮನರು ಕಂದಕಗಳನ್ನು ತೋಡಿಕೊಂಡು ಉಕ್ಕಿನ ತಗಡುಗಳನ್ನು ಮೇಲುಹೊದ್ದಿಕೆಯಾಗಿಟ್ಟುಕೊಂಡು ರಷ್ಯನರಮೇಲೆ ಅಭಿಯೋಗಮಾಡಿದರು. ಅವರಮೇಲೆ ರಷ್ಯನರು ವೀರಾವೇಶದಿಂದ ಬಿದ್ದು ಕೈಕೈ ಕೂಡಿಸಿ, ಸಣೀನುಗಳ ಯುದ್ಧವನ್ನು ಮಾಡಿ ಹಿಂದಕ್ಕೆ ಓಡಿಸಿ, ಅವರ ಸ್ಥಾನವನ್ನಾಕ್ರಮಿಸಿ, ಅವರ ೫ ಫಿರಂಗಿಗಳನ್ನು ಹಿಡಿದುಕೊಂಡರು. ರಷ್ಯನರು ಬಕೋವಿನಾದಲ್ಲಿ ಅವಿಚ್ಛಿನ್ನವಾಗಿ ಯುದ್ಧಮಾಡುತ್ತ ೮ ಮೈಲಿಗಳ ದೂರ ಮುಂದಕ್ಕೆ ಸಾಗಿಹೋಗಿ, ಬಕೋವಿನಾವನ್ನು ಹಂಗೇರಿಯಿಂದ ಪ್ರತ್ಯೇಕಿಸಿರುವ ಪರ್ವತಪಂಕ್ತಿಗಳನ್ನು ಸೇರಿದರು. ಅಲ್ಲಿ ರಷ್ಯನರು ಶತ್ರುಪಕ್ಷದ ೧ ಸಾವಿರ ಮಂದಿ ಸೈನಿಕರನ್ನೂ ಮದ್ದುಗುಂಡು ಮೊದಲಾದ ಅನೇಕ ಸಾಮಗ್ರಿಗಳನ್ನೂ ಹಿಡಿದರು. ಜರ್ಮನರು ಇಂಗ್ಲೀಷರನ್ನು ಹೊರಪಡಿಸಿ, ಫ್ರಾನ್ಸ್ ರಷ್ಯಾದವರೊಡನೆ ಸಂಧಿಯನ್ನು ಮಾಡಿಕೊಳ್ಳಬೇಕೆಂಬ ತಂತ್ರವನ್ನು ನಡೆಯಿಸಿರುವರೆಂದು ಪ್ರಕಟವಾಗಿದೆ. ಆದರೆ ಇಂಥ ಮಿತ್ರದ್ರೋಹಕೃತ್ಯಕ್ಕೆ ಈ ಉಭಯರಾಷ್ಟ್ರದವರೂ ಒಪ್ಪರು. ಈಚೆಗೆ ರಷ್ಯನ್ ಸೈನ್ಯಗಳು ಹಂಗೇರಿದೇಶದಲ್ಲಿ ಪೂರ್ವಭಾಗದಿಂದಲೂ ದಕ್ಷಿಣಭಾಗದಿಂದಲೂ ಬುಡಾಪೇಸ್ಟ್ ಪಟ್ಟಣದ ಕಡೆಗೆ ಅಭಿಯೋಗಮಾಡುವುದನ್ನು ನಿಲ್ಲಿಸಿಬಿಟ್ಟಂತೆ ಕಾಣುವುದೆಂದು ರಷ್ಯಾಪತ್ರಿಕೆಗಳು ಹೇಳುತ್ತಿವೆ. ವಿಶ್ಚುಲಾ ನದಿಗೆ ದಕ್ಷಿಣದಲ್ಲಿ ಇಷ್ಟರಲ್ಲೇ ಮತ್ತೊಂದು ದೊಡ್ಡ ಯುದ್ಧವು ನಡೆಯುವುದೆಂದು ಕಾಣುತ್ತಿದೆ. ವಾರ್ಸಾದ ಹತ್ತಿರ ಅತಿ ಶೀತದ ಗಾಳಿಯೂ ಮಂಜಿನ ಸುರಿಯುವಿಕೆಯೂ ಬಹಳವಾಗಿರುವುದರಿಂದ ಜರ್ಮನರು ತಡೆಯಲಾರದೆ ಗುಂಪುಗುಂಪಾಗಿ ರಷ್ಯನರಿಗೆ ಶರಣಾಗತರಾಗಿ ಹೋಗುತ್ತಿರುವರಂತೆ.

ತುರ್ಕಿ

ತುರ್ಕಿಯು ಈಗ ಪರಾಜಯ ಪರಂಪರೆಯನ್ನು ಹೊಂದುತ್ತಲಿರುವುದನ್ನು ಕಂಡು ಬಾಲ್ಕನ್ ಸಂಸ್ಥಾನಗಳವರೆಲ್ಲರೂ ತಂತಮ್ಮ ಮನಃಕಾಲುಷ್ಯಗಳನ್ನು ತೊರೆದು ಒಟ್ಟಾಗಿ ವಿನೋಪ್ರಯತ್ನವನ್ನು ಮಾಡುತಲಿರುವಂತೆ ಕಾಣಿಸುತ್ತಿದೆ. ರೊಮೇನಿಯಾದ ಬಲ್ಗೇರಿಯಾದ ರಾಜರಿಬ್ಬರೂ ಒಂದುಕಡೆ ಕಲೆತು ತಮ್ಮ ಭೇದಾಭಿಪ್ರಾಯಗಳನ್ನು ಇಷ್ಟರಲ್ಲೇ ಬಗೆಹರಿಸಿಕೊಳ್ಳುವುದರಲ್ಲಿದ್ದಾರೆ. ಅರ್ಡನ್ನಿನ ಹತ್ತಿರ ಕೂಡಿದ್ದ ತುರ್ಕಿ ಸೈನ್ಯದ ಮೇಲೆ ರಷ್ಯಾದವರ ಹೊಸಸೇನೆಗಳು ಹೋಗಿಬಿದ್ದು ಕಾದಾಡಿ ಅವರನ್ನು ಓಡಿಸಿ, ಅವರ ೮ ನೇ ನಂ|| ಪಟಾಲಮ್ಮಿನ ಧ್ವಜಪತಾಕೆಯನ್ನು ಹಿಡಿದುಕೊಂಡರು. ತುರ್ಕಿಯವರ ಸೇನಾಭಾಗವು ಬಲವತ್ತರವಾದ ಮಂಜಿನ ಗುಡ್ಡೆಗಳು ತುಂಬಿರುವ ಪರ್ವತಪಙ್ಕ್ತಿಗಳನ್ನು ಬಹಳ ಶ್ರಮದಿಂದ ದಾಟಿ ನಾರಿಕಿಮಿಯಾ ಪ್ರಾಂತದಲ್ಲಿ ಬಂದು ಸೇರಿದ್ದುವು. ಅದಕ್ಕೆ ತಕ್ಕಷ್ಟು ಮದ್ದುಗುಂಡು ಸಾಮಾನುಗಳಿದ್ದರೂ ಆಹಾರ್ಯಪದಾರ್ಥಗಳು ತಕ್ಕಷ್ಟು ಇರಲಿಲ್ಲ. ಮತ್ತು ಸಾಕಾದಷ್ಟು ಫಿರಂಗಿಗಳೂ ಇರಲಿಲ್ಲ. ಇಲ್ಲಿ ರಷ್ಯನರು ಅವರ ಮೇಲೆ ಕಾದಾಡಿದರು. ಅವರ ರಣರಂಗವು ಸಮುದ್ರ ಮಟ್ಟಕ್ಕೆ ೧೦ ಸಾವಿರ ಅಡಿಯ ಮೇಲಿದ್ದು ಚಳಿಯ ಬಾಧೆಯು ದುಸ್ಸಹವಾಗಿದ್ದಿತು. ತುರುಕರು ರಷ್ಯನರ ಮೇಲೆ ಪರಾಕ್ರಮದಿಂದ ಬಿದ್ದು ಕಾದಾಡಲುಪಕ್ರಮಿಸಿದರು. ಆಗ ರಷ್ಯನರು ಅವರನ್ನು ಹೊಡೆದು ಹಿಂದಕ್ಕಟ್ಟಿ ಅವರ ಸೈನ್ಯವನ್ನು ಸುತ್ತುಗಟ್ಟಿ ಅವರ ೨ ಆರ್ಮಿಕೋರುಗಳನ್ನು ಧ್ವಂಸಮಾಡಿದರು. ಉಳಿದಿದ್ದವರನ್ನು ಸೆರೆಹಿಡಿದರು. ಫಿರಂಗಿಗಳು ಮದ್ದುಗುಂಡು ಕುದುರೆಗಳು ಮೊದಲಾದುವುಗಳನೇಕವನ್ನು ಹಿಡಿದುಕೊಂಡರು.

ಈಗ ತುರ್ಕಿ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ಲಿನಲ್ಲಿದ್ದ ಪುರಾತನವಾದ ಕಾಗದಪತ್ರಗಳನ್ನೂ ಪುಸ್ತಕಗಳನ್ನೂ ಆ ಸರ್ಕಾರದವರು ಆದ್ರಿಯಾನೋಪಲ್ ಕಡೆಗೆ ಸಾಗಿಸುತ್ತಿರುವರಂತೆ. ತುರ್ಕಿಗೆ ಸಾಮಗ್ರಿಗಳನ್ನು ತೆಗೆದುಕೊಂಡುಹೋಗುತ್ತಿದ್ದ ಕೆಲವು ಹಡಗುಗಳು ಬಾಸ್ಪರಸ್ ಜಲಸಂಧಿ ಮುಖದಲ್ಲಿ ಮದ್ದಿನಗೋಳಗಳಿಗೆ ಬಡಿದು ಮುಳುಗಿಹೋದುವು. ಮೆಡ್ಜಿಕೊ ಎಂಬ ಕ್ರೂಝರು ಕಾವಲಾಗಿ ಸಾಗಿಸಿಕೊಂಡು ಬರುತ್ತಿದ್ದ ಮತ್ತೊಂದು ತುರ್ಕಿಹಡಗು ಕೂಡ ಸಿನೋಗಿ-ಟ್ರೆಬಿಜಾಂಡುಗಳ ಮಧ್ಯದಲ್ಲಿ ಮುಳುಗಿಸಲ್ಪಟ್ಟಿತು. ಆಗ ರಷ್ಯನರ ಮೆರ್ಕ್ಯುರಿಯಾ ಎಂಬ ಕ್ರೂಯಿಝರೂ, ಒಂದು ಡಿಸ್ಟ್ರಾಯರೂ ಕೂಡ ತುರ್ಕಿಯವರ ಮೆಡ್ಜಿಕೋವಿನ ಮೇಲೆ ಬಿದ್ದು ಫಿರಂಗಿಗುಂಡುಗಳನ್ನು ಹೊಡೆಯಲುಪಕ್ರಮಿಸಿದುವು. ತುರ್ಕಿಯ ಕ್ರೂಯಿಝರು ಏಟನ್ನು ತಿಂದೂ ಕೂಡ ತಪ್ಪಿಸಿಕೊಂಡುಹೋಯಿತು. ಯುದ್ಧರಂಗದಲ್ಲಿ ತುರ್ಕಿಯವರ ೩ನೇ ನಂ|| ಸೇನೆಯು ನಾಮಾವಶೇಷವಾಯಿತು. ರಷ್ಯನರು ಸುತ್ತುಗಟ್ಟಿದ್ದ ೩ ಸೇನೆಗಳಲ್ಲಿ ೨ ಸೇನೆಗಳು ತಪ್ಪಿಸಿಕೊಂಡುವು. ಮೊದಲನೇ ಸೇನೆಯು ಜರ್ಮನರನ್ನು ಸಂರಕ್ಷಿಸುವ ಕಾವಲಿನ ಸೇನೆಯ ಕೆಲಸಮಾಡುತ್ತಿದ್ದಿತು. ಮುಖ್ಯವಾಗಿ ೯-೧೦ ನೇ ನಂ|| ಸೇನೆಗಳು ಚೆನ್ನಾಗಿ ಕಾದಾಡಿದುವು, ಜರ್ಮನರು ಯುದ್ಧರಂಗದಲ್ಲಿ ಆಸ್ಟ್ರಿಯಾ ಸೇನೆಯನ್ನು ಮುಂದಕ್ಕೆ ಚಾಚಿ ತಾವು ಹಿಂಭಾಗಕ್ಕೆ ಸೇರಿ ಕಾದುತ್ತಿದ್ದಂತೆಯೇ ತುರ್ಕಿಯ ಸೇನೆಯನ್ನೂ ಏಟಿಗೆ ಮುಂದಕ್ಕೆ ಚಾಚಿ ತಾವು ಹಿಂದೆ ಆಟಕಾಯಿಸುತ್ತಿರುವರೆಂದು ಪ್ರಕಟವಾಗಿದೆ. ಯುದ್ಧಮಾಡಿ ಸೋತು ತಲೆಯುಳುಹಿಕೊಂಡ ತುರ್ಕಿಸೇನೆಯು ಈಗ ಇರ್ಜೆರಂ ಹತ್ತಿರದಲ್ಲಿರುವ ೧೧ ನೇ ನಂ|| ಸೇನೆಯ ಬಳಿಗೆ ಹೋಗಿ ಸೇರಿಕೊಂಡಿತು.

ಈಗಿನ ಯುದ್ಧವನ್ನು ಮತಕ್ಕೆ ಸಂಬಂಧಪಟ್ಟ ಯುದ್ಧವೆಂದು ಹೇಳಿ ಪ್ರಪಂಚದ ಮೇಲಣ ತುರುಕರನ್ನೆಲ್ಲಾ ರೇಗಿಸಬೇಕೆಂದು ತುರ್ಕಿಯವರು ತಂತ್ರಮಾಡಿದರು. ಅದೊಂದೂ ಫಲವಾಗಲಿಲ್ಲ. ಏಷ್ಯಾಮೈನರಿನಲ್ಲಿರುವ ಗ್ರೀಕ್‌ಪ್ರಜೆಗಳಿಗೆ ಅಲ್ಲಿನ ತುರ್ಕಿಜನಗಳು ಬಹಳ ಹಿಂಸೆಯನ್ನು ಬಹಿರಂಗವಾಗಿ ಕೊಡುತ್ತಿದ್ದಾರಂತೆ. ೧,೨೦,೦೦೦ ಮಂದಿ ಗ್ರೀಕರನ್ನು ಅವರ ದೇಶದಿಂದಲೇ ಹೊರಡಿಸಿಬಿಟ್ಟಿರುವರಂತೆ. ಇದರಂತೆ ಮಿತ್ರಮಂಡಲಿಯವರಿಗೆ ಸೇರಿದ ಇತರ ಪ್ರಜೆಗಳಿಗೂ ಹಿಂಸೆಕೊಡುತ್ತಿರುವರಂತೆ. ಕೆಲವರನ್ನು ಸೆರೆಯಲ್ಲಿಟ್ಟಿರುವರಂತೆ. ಇದರಿಂದ ಗ್ರೀಕರು ತುರ್ಕಿಯವರ ಮೇಲೆ ಆಗ್ರಹಗೊಂಡಿದ್ದಾರೆ. ಯುದ್ಧಕ್ಕಾಗಿ ೧ ಕೋಟಿ ಪೌನನ್ನು ಕೊಡಬೇಕೆಂದು ತುರ್ಕಿ ಪ್ರಭುತ್ವದವರು ತಮ್ಮ ಪಾರ್ಲಿಮೆಂಟ್ ಸಭಿಕರ ಅನುಮತಿಯನ್ನು ಕೇಳಿರುವರು. ಮುಂದಣ ವರ್ಷದ ಆಯವ್ಯಯದ ಪಟ್ಟಿಯ ಅಂದಾಜಿನ ಪ್ರಕಾರ ತುರ್ಕಿ ದೇಶಕ್ಕೆ ೨ ಕೋಟಿ ಪೌನುಗಳು ನಷ್ಟವಾಗುವುವೆಂದು ಗೊತ್ತಾಗಿದೆ.

ಆಕಾಶವಿಮಾನಗಳು.

ಜರ್ಮನರ ಆಕಾಶವಿಮಾನಗಳು ನಾನ್ಸಿಯ ಹತ್ತಿರ ಸಿಡಿಮದ್ದನ್ನು ಹಾಕಿದುದಕ್ಕೆ ಮುಯ್ಯಾಗಿ ಫ್ರಾನ್ಸ್ ವೈಮಾನಿಕರು ಕ್ರಿಸ್ತುಮಸ್ ಹಬ್ಬದದಿನ ಜರ್ಮನರಿಗೆ ಸೇರಿದ ಮೆಟ್ಜ್‌ಪಟ್ಟಣದ ನಿಲ್ದಾಣದಮೇಲೆ ೨೦ ಸಿಡಿಮದ್ದಿನ ಗೋಳಗಳನ್ನಿಟ್ಟರು. ಮತ್ತೂ ಜರ್ಮನ್ ಸೇನೆಗಳಿದ್ದ ಸ್ಥಲದಮೇಲೂ ಹಲವುಸಾರಿ ಮದ್ದನ್ನು ಹಾಕಿರುವರು. ಶತ್ರುಗಳ ಸ್ಥಲದಮೇಲೆ ಹಾರಿಹೋಗುವಾಗ ಅವರಿಗೆ ಗೋಚರವಾಗಬಾರದೆಂದು ರಾತ್ರಿಯಹೊತ್ತು ತಮ್ಮ ವಿಮಾನಗಳಲ್ಲಿನ ದೀಪಗಳನ್ನು ಆರಿಸಿಬಿಟ್ಟಿದ್ದರು. ಜರ್ಮನರ ಈ ವಿಮಾನಗಳಮೇಲೆ ಫಿರಂಗಿಗುಂಡುಗಳನ್ನು ಹಾರಿಸಿದರೂ ಇವು ಅವಕ್ಕೆ ಎಟ್ಟಿಗಿಸದಷ್ಟು ಎತ್ತರದಲ್ಲಿ ಹೋಗುತ್ತಿದ್ದುದರಿಂದ ಅಪಾಯವೇನು ಆಗಲಿಲ್ಲ. ಡನ್‌ಕರ್ಕಿಯಮೇಲೆ ಜರ್ಮನರ ವಿಮಾನಗಳು ಹಲವುಬಾರಿ ಬಂದು ಹೋಗಿವೆ. ಅವನ್ನು ಮಿತ್ರಮಂಡಲಿಯವರ ಫಿರಂಗಿಗಳು ಓಡಿಸುತ್ತಲಿವೆ. ಹಿಂದಿನ ಭಾನುವಾರದ ದಿವಸ ೧೨ ಮಂದಿ ಜರ್ಮನ್ ವೈಮಾನಿಕರು ಆ ಪಟ್ಟಣದಮೇಲೂ ಅದರ ಸುತ್ತಮುತ್ತಣ ಊರುಗಳಮೇಲೂ ಬಹುಶಃ ೩೦ ಮದ್ದಿನ ಗೋಳಗಳನ್ನು ಇಟ್ಟರು. ಆದರೆ ಅಲ್ಲಿನ ಪ್ರಜೆಗಳು ಮುಂಜಾಗ್ರತೆಗೊಂಡಿದ್ದುದರಿಂದ ಪ್ರಾಣನಷ್ಟವೇನೂ ಆಗಲಿಲ್ಲ. ಕಳೆದ ತಾ|| ೧೧ ರಲ್ಲಿ ಜರ್ಮನರ ವಿಮಾನಗಳು ಇಂಗ್ಲೀಷ್ ಕಡಲು ಕಾಲ್ವೆಯಮೇಲೆ ಕಾಣಬಂದುವು. ಅವು ಫ್ರಾನ್ಸ್‌ತೀರಪಟ್ಟಣದಿಂದ ಡನ್‌ಕರ್ಕಿಯಕಡೆಗೆ ಹೋದುವು.

ಹಡಗುಗಳು.

ಕಳೆದ ತಾ|| ೮ ರಲ್ಲಿ ಉತ್ತರಸಮುದ್ರದೊಳಗೆ ಇಂಗ್ಲೀಷರ ೨ ಹಡಗುಗಳೂ ಒಂದು ಸಣ್ಣ ದೋಣಿಯೂ ಮದ್ದಿನ ಗೋಳಗಳಿಗೆ ತಗುಲಿ ಮುಳುಗಿಹೋದುವು; ೨೫ ಮಂದಿಗಳು ಮೃತರಾದರು.

ಒಳದೇಶದ ವೃತ್ತಾಂತಗಳು

ಮಹಾಮಾತೃಶ್ರೀ ವಾಣೀವಿಲಾಸ ಸನ್ನಿಧಾನ, ಸಿ, ಐ., ಯವರ ಸ್ವಾರಿಯು ನಿನ್ನೆಯ ಸಾಯಂಕಾಲದ ರೈಲುಬಂಡಿಯಲ್ಲಿ ಮದ್ರಾಸಿಗೆ ಚಿತ್ತೈಸುವುದಾಗಿದ್ದಿತು.

ತರೀಕೆರೆಯಿಂದ ಎಡೆಹಳ್ಳಿಗೆ ಹಾಕಲ್ಪಡುತ್ತಿರುವ ಟ್ರಾಂ ಬಂಡಿಗಳಲ್ಲಿ ತರೀಕೆರೆ, ರಂಗನಹಳ್ಳಿ ಮತ್ತು ಲಕ್ಕುವಳ್ಳಿ ಈ ಸ್ಥಳಗಳಿಗೆ ತಾ|| ೧೫ ರಿಂದ ಸಾಮಾನುಗಳು ಸಾಗಿಸಲ್ಪಡುತ್ತಿರುವುವು.

ವೀರಶೈವ ಧಾರ್ಮಿಕಸಭೆಯು ಈ ಸಂವತ್ಸರ ಉಳವಿಮಹಾಕ್ಷೇತ್ರದಲ್ಲಿ ಜರುಗುವುದು. ಆ ಕಾಲಕ್ಕೆ ಚಿತ್ರಕಲ್‌ದುರ್ಗದ ಶ್ರೀಜಗದ್ಗುರು ಮಹಾಸ್ವಾಮಿಗಳವರು ಅಲ್ಲಿಗೆ ದಯಮಾಡಿಸುವರೆಂದು ತಿಳಿಯಬರುತ್ತದೆ.

ಮದ್ರಾಸ್ ಮೆಸರ್ಸ್ ಓಕ್ಸ್‌ಕಂಪೆನಿಯವರೂ, ಬೆಂಗಳೂರ ಪೇಟೆಯಲ್ಲಿರುವ ಕಮಲಿನಿ ಸುಗಂಧವ್ಯಾಪಾರಿಗಳೂ ಕಳುಹಿಸಿಕೊಟ್ಟಿರುವ ೧೯೧೫ ನೆಯ ಇಸವಿಯ ಕ್ಯಾಲಂಡರುಗಳನ್ನು ನಾವು ವಿಶ್ವಾಸದಿಂದ ಸ್ವೀಕರಿಸಿರುವೆವು.

ಬೆಂಗಳೂರ ಸಮೀಪದಲ್ಲಿರುವ ಹೆಬ್ಬಾಳು ಪರೀಕ್ಷಾಕ್ಷೇತ್ರದಲ್ಲಿ ಈ ತಾ|| ೨೫ ರಿಂದ ಒಂದು ವಾರದವರೆಗೆ ಕಬ್ಬಿನ ವ್ಯವಸಾಯಕ್ರಮವೂ, ಬೆಲ್ಲದ ಪಾಕವನ್ನು ತೆಗೆಯುವ ವಿಧಾನವೂ, ಆ ಕ್ಷೇತ್ರದಲ್ಲಿ ಅಭ್ಯಾಸಮಾಡುವ ವಿದ್ಯಾರ್ಥಿಗಳ ಸಲುವಾಗಿ ತೋರಿಸಲ್ಪಡುವುವು. ಇವನ್ನು ತಿಳಿಯಲಿಷ್ಟವುಳ್ಳ ಇತರರೂ ಆ ಕಾಲದಲ್ಲಿ ಬರಬಹುದಾಗಿ ಅಪೇಕ್ಷಿಸಲ್ಪಟ್ಟಿರುವುದಲ್ಲದೆ, ಅವರ ವಾಸಕ್ಕೂ ಊಟಕ್ಕೂ ತಕ್ಕೇರ್ಪಾಟು ಮಾಡಲ್ಪಡುವುದು. ಇಷ್ಟವುಳ್ಳವರು ಕೂಡಲೆ ಅಲ್ಲಿಯಧಿಕಾರಿಗಳಿಗೆ ಬರೆದು ತಿಳುಹತಕ್ಕುದಾಗಿದೆ.

ದರ್ಬಾರ್‌ಡೆ ಸಂಬಂಧವಾಗಿ ಕಳೆದ ಡಿಸೆಂಬರ್ ತಾ|| ೧೨ ರಲ್ಲಿ ಅನೇಕ ಸ್ಕೂಲುಗಳಲ್ಲಿ ನಡೆದ ಮಹೋತ್ಸವಗಳಲ್ಲಿ ಕೆಲವು ಈ ಪತ್ರಿಕೆಯಲ್ಲಿ ಪ್ರಕಟಿತವಾಗಿರುವವಷ್ಟೆ. ಇದರಂತೆ ನೆಲಮಂಗಲದ ತಾ|| ಶಿವಗಂಗೆ ಬಾಯಿಸ್ಕೂಲು, ಕಡೂರು ತಾ|| ಸಿಂಗಟಗೆರೆಯ ಎ. ಇ., ಸ್ಕೂಲು, ಡಿಟೋ ತಾ|| ಸೋಮನಹಳ್ಳಿ ಗ್ರಾಂಟ್‌ಸ್ಕೂಲು, ಶಿಕಾರಿಪುರ ತಾ|| ಶಿರಾಳ ಕೊಪ್ಪದ ಸ್ಕೂಲು, ಡಿಟೋ ತಾ|| ಗಿರಿಯಾಪುರದ ಸ್ಕೂಲು ಇತ್ಯಾದಿ ಸ್ಕೂಲುಗಳಲ್ಲಿ ದರ್ಬಾರ್‌ಡೆ ಮಹೋತ್ಸವಗಳು ಬಹು ವಿಜೃಂಭಣೆಯಿಂದ ಜರುಗಿರುವುವು. ಆದರೆ ಸ್ಥಲಸಂಕೋಚದಿಂದಲೂ, ಕಾಲಾತೀತವಾದುದರಿಂದಲೂ ಅವುಗಳನ್ನು ವಿಸ್ತಾರವಾಗಿ ಪ್ರಕಟಿಸಲು ಅವಕಾಶವಿಲ್ಲವಾಗಿ ವಿಷಾದಿಸುತ್ತೇವೆ.

ಮಿ|| ಪಿ. ಆರ್. ಡಬ್ಲ್ಯೂ ವೆದರಾಲ್‌ರವರು ಹಾಸನದ ಡಿ|| ಕಮಿಷನರಧಿಕಾರವನ್ನು ಮ|| ಬಿ. ರಾಮಸ್ವಾಮಯ್ಯ, ಬಿ. ಎ., ಬಿ. ಎಲ್., ರವರಿಗೆ ಕಳೆದ ತಾ|| ೭ ರಲ್ಲಿ ವಹಿಸಿಕೊಟ್ಟರು. ಡಿ|| ಕ|| ರವರ ಪರ್ಸನಲ್ ಅಸಿಸ್ಟೆಂಟರಾದ ಮ|| ಪಿ. ಗೋಪಾಲರಾಜಅರಸಿನವರು ಆಫೀಸಿನುದ್ಯೋಗಸ್ಥರ ಪರವಾಗಿ ಅದೇ ಸಾಯಂಕಾಲ ಮಿ|| ವೆದರಾಲ್ ಸಾಹೇಬರನ್ನೂ ಇತರರನ್ನೂ ಬರಮಾಡಿಕೊಂಡು ಸಂಗೀತ ಯಕ್ಷಣಿ ಮೊದಲಾದ ವಿನೋದಗಳಿಂದಲೂ, ಅಲ್ಪಾಹಾರದಿಂದಲೂ ಆನಂದಗೊಳಿಸಿ, ತಮ್ಮಗಳಲ್ಲಿರುವ ವಿಶ್ವಾಸವನ್ನು ಪ್ರದರ್ಶಿಸಿದರು. ಆ ಕಾಲದಲ್ಲಿ ಡಿ|| ಎಕ್ಸೈಸ್ ಆಫೀಸರೂ, ಸಬ್‌ಡಿವಿಜನ್ ಆಫೀಸರೂ ಅಮಲ್ದಾರರೂ ಮೊದಲಾದವರು ಮಿ|| ವೆದರಾಲ್ ಸಾಹೇಬರ ಗುಣಕಥನವನ್ನು ಮಾಡಿದರು.

ಬಳ್ಳಾರಿ ವೀರಶೈವಪ್ರಮುಖರಲ್ಲೊಬ್ಬರಾದ ಮ|| ಶಿಂದಿಗಿ ಗವಿಯಪ್ಪನವರು ಕೆಲಕಾಲದಿಂದ ಶೋಭೆರೋಗಗ್ರಸ್ತರಾಗಿದ್ದು ತಮ್ಮ ೫೩ ನೆಯ ವಯಸ್ಸಿನಲ್ಲಿ ಕಳೆದ ತಾ|| ೭ ರಲ್ಲಿ ಶಿವಾಧೀನರಾದರೆಂದು ತಿಳುಹಲು ಬಹಳ ಖೇದವಾಗುತ್ತದೆ. ಇವರು ಬಹಳ ವಿವೇಕದಿಂದಲೂ, ಧೈರ್ಯಸಾಹಸದಿಂದಲೂ ತಮ್ಮ ಪಿತ್ರಾರ್ಜಿತ ಆಸ್ತಿಯನ್ನು ಬಹುಮಟ್ಟಿಗಭಿವೃದ್ಧಿಗೊಳಿಸಿ ಒಳ್ಳೆಯ ವರ್ತಕರೂ, ಉದಾರಿಗಳೂ, ಧರ್ಮಿಷ್ಠರೂ, ಸ್ನೇಹಪರರೂ ಎಂದು ಹೆಸರನ್ನು ಪಡೆದಿದ್ದರಲ್ಲದೆ, ಬಳ್ಳಾರಿಯ ರಿಪನ್‌ಪ್ರೆಸ್, ಸಭಾಪತಿಪ್ರೆಸ್ ಮುಂತಾದ ಜಿನ್ನಿಂಗ್‌ಪ್ರೆಸ್ಸುಗಳ ಭಾಗದಾರರಾಗಿದ್ದುದಲ್ಲದೆ ಸ್ವತಃ ಒಂದು ಕಾರ್ಯಾಲಯವನ್ನು ಕಟ್ಟಿಸಿ ಅನೇಕ ಬಡಜನರ ಜೀವನಾಧಾರಿಗಳಾಗಿದ್ದರು. ಮತ್ತೂ ಅಲ್ಲಿ ನೆರೆದಿದ್ದ ೫ ನೆಯ ವೀರಶೈವಮಹಾಸಭೆಯ ಸ್ವಾಗತಸಂಘದ ಜನರಲ್ ಸೆಕ್ರೆಟರಿಗಳಾಗಿದ್ದು ಸಭಾಕಾರ್ಯನಿರ್ವಾಹಕ್ಕೆ ಒದಗಿದ್ದ ಮಹತ್ತರವಾದ ವಿಘ್ನಗಳಿಗೆ ಹೆದರದೆ ಸಭಾಕಾರ್ಯವನ್ನು ಸಾಂಗಗೊಳಿಸಿ ವೀರಶೈವ ವಿದ್ಯಾಫಂಡಿಗೆ ೧೦೦೦ ರೂ.ಗಳನ್ನು ಕೊಟ್ಟಿದ್ದರು. ಇಂತಹ ಸುಗುಣಿಗಳ ವಿಯೋಗದಿಂದ ಅವರ ಪತ್ನೀಪುತ್ರಾದಿಗಳಿಗೆ ವ್ಯಸನವಾಗಿರುವುದಲ್ಲದೆ ಬಳ್ಳಾರಿ ವೀರಶೈವ ಸಮಾಜಕ್ಕೇ ಬಹು ನಷ್ಟವಾಯಿತೆನ್ನುವುದರಲ್ಲಿ ಅಭ್ಯಂತರವಿಲ್ಲವು. ಈಶ್ವರನು ಇವರಾತ್ಮಕ್ಕೆ ಶಾಂತಿಯನ್ನು ಕೊಡಲೆಂದು ಪ್ರಾರ್ಥಿಸುತ್ತೇವೆ.

ವಿವಿಧವಾರ್ತಾಸಂಗ್ರಹ.

ಪಾರ್ಸಿಜನರ ೨೧ ಮಂದಿ ತರುಣರುಳ್ಳ ಒಂದು ವಾಲಂಟಿಯರ ಗುಂಪು ರಣರಂಗಕ್ಕೆ ಹೋಯಿತು.

ಲಂಡನ್ನಿನಲ್ಲಿರುವ ಬಿಕನೀರ್ ಮಹಾರಾಜರು ತಾ|| ೧೧ ರಲ್ಲಿ ಸಾರ್ವಭೌಮ ದಂಪತಿಗಳೊಡನೆ ಅರಮನೆಯಲ್ಲಿ ಔತಣದೂಟವನ್ನು ಮಾಡಿದರು.

ಈ ವರ್ಷ ಜಪಾನಿಗೆ ಹೊರಗಣಿಂದ ಅಕ್ಕಿಯನ್ನು ತರಿಸಬೇಕಾದ ಅಗತ್ಯವಿಲ್ಲದಷ್ಟು ಬೆಳಸಾಗಿರುವುದರಿಂದ ಬರ್ಮಾದ ಅಕ್ಕಿಯು ವಿಶೇಷವಾಗಿ ಭರತಖಂಡಕ್ಕೆ ಬರುವುದಾಗಿದೆ.

ಬವೇರಿಯಾ ಸೈನ್ಯದ ಜನರಲ್‌ರವರು ಮೋಟಾರಿನಲ್ಲಿ ಕುಳಿತು ಹೋಗುತ್ತಿರುವಾಗ ಒಂದು ಆಕಾಶವಿಮಾನದಿಂದ ಹೊರಟ ಉಕ್ಕಿನ ಬಾಣವು ಆತನಮೇಲೆ ಬಿದ್ದು ಅವನ ದೇಹದಲ್ಲಿ ಚುಚ್ಚಿಕೊಂಡು ಹೋಯಿತು.

ಸುಪ್ರಸಿದ್ಧರಾದ ಶ್ರೀಯುತಗಂಧಿಯವರು ಪತ್ನೀಸಮೇತರಾಗಿ ಬೊಂಬಾಯಿಗೆ ಬಂದು ಸೇರಿದರು. ಪುರಪ್ರಮುಖರು ಅವರ ಗೌರವಕ್ಕೆ ತಕ್ಕಂತೆ ಸ್ವಾಗತಮಾಡಿದರು. ಇನ್ನುಮುಂದೆ ಅವರು ಭರತಖಂಡದಲ್ಲೇ ನಿಂತು ದೇಶಸೇವಾಕಾರ್ಯದಲ್ಲಿ ತತ್ಪರರಾಗುವ ಸಂಕಲ್ಪವನ್ನು ಮಾಡಿರುವಂತೆ ಕಾಣುತ್ತದೆ.

ಬರಿಸಾಲ್‌ಜಿಲ್ಲೆಗೆ ಸೇರಿದ ವಜೀರ್‌ಪುರದ ಗಂಗೋಲಿಯೆಂಬುವನು ಪ್ಲೇಗಿನಿಂದ ಮೃತನಾಗಲು, ಆತನ ಚಿತೆಯೊಡನೇ ಬಿದ್ದು ಸಾಯಬೇಕೆಂದು ಆತನ ಪತ್ನಿಯು ಬಹಳ ಪ್ರಯತ್ನಪಟ್ಟಳು. ನೆರೆಹೊರೆಯವರು ಸಾಗಗೊಡಲಿಲ್ಲ. ಕಡೆಗೆ ಅವಳು ಹಡಗನ್ನೇರಿ ಸ್ವಸ್ಥಾನಕ್ಕೆ ಹೋಗುತ್ತಿರುವಾಗ ದಾರಿಯಲ್ಲಿ ಹಡಗಿನಿಂದ ಸಮುದ್ರಕ್ಕೆ ದುಮಿಕಿ ಪ್ರಾಣಪರಿತ್ಯಾಗ ಮಾಡಿಕೊಂಡಳಂತೆ.

ಯುದ್ಧದಲ್ಲಿ ನಿರತರಾಗಿರುವ ಸೈನಿಕರಿಗೆ ತಕ್ಕಷ್ಟು ಬೆಣ್ಣೆಯು ಪಶುಗಳ ಹಾಲಿನ ಮೂಲಕ ದೊರೆಯದೆ ಇರುವ ಕಾರಣ ಕೊಬ್ಬರಿಯಿಂದ ಬೆಣ್ಣೆಯನ್ನು ನಿರ್ಮಿಸಿ ಒದಗಿಸಬೇಕೆಂಬ ಯೋಚನೆಯು ನಡೆಯುತ್ತಿದೆ. ಅದುಕಾರಣ ಕೊಬ್ಬರಿಗೆ ಮುಂದೆ ಹೆಚ್ಚುಬೆಲೆಯುಂಟಾದೀತೆಂದು ನಿರೀಕ್ಷಿಸಲ್ಪಟ್ಟಿದೆ. ಸೈನಿಕರಿಗೆ ಮಾಂಸವು ವಿಶೇಷವಾಗಿ ಬೇಕಾಗುತ್ತಿರುವುದರಿಂದ ಸೀಮೆಯಲ್ಲಿ ಗೋಜಾತಿಯ ವಧೆಯು ವಿಶೇಷವಾಗಿ ನಡೆದು ಹಾಲು ದೊರೆಯುವುದು ಕಷ್ಟವಾಗಿದೆ.

ದೇಶೀಯ ಮಹಾಸಭಾಧ್ಯಕ್ಷರಾಗಿದ್ದ ಬಾಬು ಭೂಪೇಂದ್ರನಾಥ ಬಾಸುರವರು ವೈಸ್ರಾಯರಿಗೆ ಕಳುಹಿಸಿಕೊಟ್ಟಿದ್ದ ಮಹಾಸಭಾ ನಿರ್ಧಾರಗಳಿಗಾಗಿ ಅವರು ತಮ್ಮ ಪ್ರೈವೇಟ್ ಸೆಕ್ರೆಟರಿಯಿಂದ ಕೊಡಿಸಿದ ಉತ್ತರದಲ್ಲಿ- ಭಾರತೀಯರ ರಾಜಭಕ್ತಿಯನ್ನು ಕುರಿತು ತಮ್ಮ ಅಭಿನಂದನವನ್ನು ತಿಳಿಸಿರುವರಲ್ಲದೆ ಈ ವಿಷಯದಲ್ಲಿ ಭಾರತೀಯರಿಗೆ ಇರುವ ಸಂತೋಷದಲ್ಲಿ ತಾವೂ ಭಾಗಿಗಳಾಗಿರುತ್ತೇವೆಂತಲೂ, ಆ ಭಾವದ ಪ್ರಕಟನರೂಪವಾಗಿಯೇ ಭಾರತೀಯ ಶೂರಸೈನಿಕರನ್ನು ಯುದ್ಧರಂಗಕ್ಕೆ ಆಂಗ್ಲರ ಸಹಾಯಕ್ಕಾಗಿ ಕಳುಹಿಸಿಕೊಡುತ್ತಿರುವರೆಂತಲೂ ತಿಳಿಯಿಸಿರುವರು.

ಯುದ್ಧರಂಗದಲ್ಲಿರುವ ಗ್ರೀನ್ ಎಂಬ ಅಶ್ವಸೈನ್ಯದ ಭಟನೊಬ್ಬನು ತನ್ನ ಪಕ್ಕದಲ್ಲಿ ಗುಂಡಿನೇಟನ್ನು ತಿಂದು ಭೂಮಿಯ ಮೇಲೆ ಬಿದ್ದುಕೊಳ್ಳಲು, ಅವನ ಕುದುರೆಯೇ ಅವನಿಕ್ಕಿದ್ದ ಅಂಗಿಯನ್ನು ತನ್ನ ಬಾಯಲ್ಲಿ ಕಚ್ಚಿ ಹಿಡಿದುಕೊಂಡು, ಆ ಮೂಲಕವಾಗಿ ಅವನನ್ನು ಸುರಕ್ಷಿತವಾಗಿ ತನ್ನ ಶಿಬಿರಕ್ಕೆ ಸೇರಿಸಿತಂತೆ. ಅವನು ಈಗ ವೈದ್ಯಶಾಲೆಯಲ್ಲಿ ಗುಣಮುಖವಾಗಿದ್ದಾನೆ. ಅವನು ಆ ರಾತ್ರಿಗೆ ಮುಂಚೆ ವೈದ್ಯಶಾಲೆಗೆ ಸೇರದಿದ್ದರೆ ಬೆಳಗಾಗುವುದರೊಳಗೆ ಸತ್ತುಹೋಗುತ್ತಿದ್ದನೆಂದು ವೈದ್ಯರು ಹೇಳಿದರು. ಆ ಕುದುರೆಯ ವಿವೇಕಕ್ಕೂ ಸ್ವಾಮಿಭಕ್ತಿಗೂ ಯಾವ ವಿಕ್ಟೋರಿಯಾಕ್ರಾಸನ್ನು ಕೊಟ್ಟರೆತಾನೇ ಸಾಕಾದೀತು?

ಪತ್ರವ್ಯವಹಾರ.

ಶ್ರೀಮಂತ ರಾ॥ ಬ॥ ಅಪ್ಪಾಸಾಹೇಬವಾರದ ಇವರ ನಾಲ್ಕನೇ ಪುಣ್ಯತಿಥಿಯು.

ಸೋಲಾಪುರದಲ್ಲಿ ಶ್ರೀಮಂತರ ಪುಣ್ಯಾಶ್ರಮ ಬಗೀಚದಲ್ಲಿ ಅವರ ಸಮಾಧಿಯ ಸಮ್ಮುಖದಲ್ಲಿ ಇವರುದ್ದಿಶ್ಯ ಭದ್ರವಾಗಿ ನಿರ್ಮಿಸಲ್ಪಟ್ಟ ಮನೋಹರವಾದ ಲೋಹಮಯ ಮಂಟಪದಲ್ಲಿ ಇದೇ ಪುಷ್ಯ ಬ॥ ೫-೬-೭ ಈ ಮೂರು ದಿವಸಗಳಲ್ಲಿ ಒಳ್ಳೇ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಈ ಮೂರು ದಿವಸಗಳಲ್ಲಿ ಬೆಳಗ್ಗೆ ೮ ಘಂಟೆಯಿಂದ ೧೦ ಘಂಟೆಯವರೆಗೂ ಇಲ್ಲಿಯ ಪಾಠಶಾಲೆಯ ವೈದಿಕರಿಂದ ಸಮಾಧಿಯ ಪೂಜೆಯು ಯಥಾವಿಧಿವೈದಿಕ ಮಂತ್ರಪೂರ್ವಕ ಷೋಡಶೋಪಚಾರಗಳಿಂದ ನಡೆಯಿಸಲ್ಪಟ್ಟು, ಮೊದಲನೇ ಎರಡನೇ ದಿವಸಗಳಲ್ಲಿ ಸಾವಿರಾರು ಗಣಸಮೂಹಕ್ಕೂ ಬಡಬಗ್ಗರಿಗೂ ಅನ್ನದಾನ ದ್ರವ್ಯದಾನಗಳಿಂದ ಸಂತರ್ಪಣೆಯು ಜರುಗಿ, ಸಾಯಂಕಾಲ ೫ ಘಂಟೆಯಿಂದ ರಾತ್ರಿ ೮ ಘಂಟೆಯವರೆಗೂ ವೇ॥ ಬಸವಲಿಂಗಶಾಸ್ತ್ರಿಗಳಿಂದ ಪುರಾಣ ವೇ॥ ಜಗದೀಶಶಾಸ್ತ್ರಿಗಳಿಂದ ಸಂಸ್ಕೃತದಲ್ಲಿ ರಚಿಸಲ್ಪಟ್ಟ ಶ್ರೀಮಂತರ ಜೀವನಚರಿತ್ರೆಯ ಶ್ರವಣವೂ, ಲಿಂಗಯ್ಯನವರು ಜವಳಗೇಕರ ಇವರಿಂದ ಕೀರ್ತನವೂ, ಶ್ರೀ ಶಂಕರ ಪ್ರಾಸಾದಿಕ ಮಂಡಲಿಯವರಿಂದ ಶಿವಭಜನೆಯೂ, ಸುಶ್ರಾವ್ಯವಾಗಿ ಜರುಗಿದವು. ಮೂರನೇದಿವಸ ಮಧ್ಯಾಹ್ನದಲ್ಲಿ ಆಪ್ತೇಷ್ಟರಿಗೂ ಅನಾಥರಿಗೂ ಭೋಜನವಾದ ಬಳಿಕ ಸಾಯಂಕಾಲ ನಾಲ್ಕು ಘಂಟೆಗೆ ಸರಿಯಾಗಿ ಸಭೆಯು ಕೂಡಿಸಲ್ಪಟ್ಟಿತು. ಮಂಟಪವು ಹೊಂಬಣ್ಣದ ಛತ್ರಿನಿಂದಲೂ, ಸಾಲುಸಾಲಾಗಿ ಕಮಾನಾಕಾರವಾಗಿ ಇಳಿಬಿಟ್ಟಿದ್ದ ನಾನಾ ಬಣ್ಣದ ಸೂಕ್ಷ್ಮ ವಸ್ತ್ರಗಳಿಂದಲೂ, ಗಾಜಿನ ಹಂಡೆ ಜುಮ್ಮುರುಗಳಿಂದಲೂ, ತಳಿರುತೋರಣರಂಭಾಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟಿದ್ದಿತು. ಸಭೆಯ ಶಿರೋಭಾಗದ ಜಗುಲಿಯಲ್ಲಿ ಎಣ್ಣೆಬಣ್ಣದ ಅಂದವಾದ ಶ್ರೀಮಂತರ ದೊಡ್ಡದೊಂದು ಭಾವಚಿತ್ರವು ಇಡಲ್ಪಟ್ಟಿದ್ದಿತು ಸಾಲುಸಾಲಾಗಿ ಮಾರ್ಗದುದ್ದಕ್ಕೂ ಪತಾಕೆಗಳು ನೆಡಲ್ಪಟ್ಟಿದ್ದವು. ಭವ್ಯವಾದ ಬಗೀಚೆಯ ಮಧ್ಯದಲ್ಲಿ ಇರುವುದರಿಂದಂತೂ ಈ ಸಭೆಗೆ ಒಂದು ತರಹದ ವಿಶೇಷ ಶೋಭೆಯು ಬಂದಿದ್ದಿತು. ಸಭೆಗೆ ಪೂನಾ-ಹೈದರಾಬಾದ-ಅಂಕಲಕೋಟಿ ಮೊದಲಾದ ಗ್ರಾಮಗಳಿಂದ ಪ್ರಮುಖ ಪುರುಷರೂ, ಇಂಡಿಯ ಮಾಮಲೇದಾರ ರಾವಸಾಹೇಬ ಒಡೆಯರವರೂ, ಇಲ್ಲಿಯ ಮುನಸೀಫರೂ, ಡಿ॥ ಕಲೆಕ್ಟರೂ, ಮಾಮಲೆದಾರರೂ ಪೊಲೀಸ ಇನ್ಸ್ಪೆಕ್ಟರರೂ, ರಾ॥ ಸಾಟಿ ಮೊದಲಾದ ಪ್ರಸಿದ್ಧ ವಕೀಲರೂ, ಡಾ॥ ಕಿರ್ಲೋಸ್ಕರ-ಘೋತ್‌ಟೇ-ಜಗದೇವರಾವ ದೇಶಮುಖರೇ ಮೊದಲಾದ ಪ್ರಮುಖ ಡಾಕ್ಟರರೂ, ಶ್ರೀ॥ ಮ॥ ಬಂಡೆಪ್ಪಣ್ಣ ಕಾಡಾದೆ ಮೊದಲಾದ ವೀರಶೈವ ಪ್ರಮುಖರೂ, ಪಾರ್ಸಿ-ಜೈನ-ಮಾರ್ವಾಡಿ-ಮುಸಲಮಾನ-ಕ್ರಿಶ್ಚಿಯನ್ ಪ್ರಮುಖ ಪುರುಷರೂ, ಸಭೆಯನ್ನು ಅಲಂಕರಿಸಿದ್ದರು. ಸುಶಿಕ್ಷಿತ ಕುಲೀನರಾದ ಭಗಿನಿಯರ ವರ್ಗವು ಸಭೆಗೆ ಅಲಂಕಾರವಾಗಿದ್ದಿತು. ಸಭೆಯ ಅಧ್ಯಕ್ಷಸ್ಥಾನವನ್ನು ಡಾಕ್ಟರ್ ರಾನಡೆಯವರ ಸೂಚನೆಗೆ ಡಾ॥ ಕಿರ್ಲೋಸ್ಕರ ಇವರ ಅನುಮೋದನ ದೊರೆದ ಬಳಿಕ ಹೈದರಾಬಾದಿನ ಹೈಕೋರ್ಟ ವಕೀಲರಾದ ನಾಮದಾರ ಕೇಶವರಾಯರು ಸ್ವೀಕರಿಸಿದರು. ಬಳಿಕ ಉಪನ್ಯಾಸಕರಲ್ಲಿ ಘನತೆಯನ್ನು ಹೊಂದಿದ ಪ್ರೊಫೆಸರ ಮೇಘಾ ಇವರು, ಪುಣ್ಯತಿಥಿಯೆಂದು ಏತಕ್ಕನ್ನಬೇಕು? ಪುಣ್ಯತಿಥಿಯನ್ನು ಮಾಡುವದರ ಪ್ರಯೋಜನವಾವುದು? ಎನ್ನುವ ವಿಷಯವನ್ನೂ ಪುಣ್ಯಪುರುಷರಾದ ಶ್ರೀಮಂತರ ಉದಾರಗುಣಗಳ ಸ್ವರೂಪವನ್ನೂ ಅವುಗಳಿಂದ ಅವರಿಗುಂಟಾದ ಸತ್ಕೀರ್ತಿಯನ್ನೂ ಪ್ರತಿಪಾದಿಸಿ, ಶ್ರೀಮಂತರ ಚಿರಂಜೀವಿಯು ಸುಶೀಲನಾಗಿ ಪಿತೃಕೀರ್ತಿಯನ್ನು ಸಂಪಾದಿಸಲೆಂತಲೂ, ಕ್ರಮೇಣ ಅವರ ಗುಣಗಳನ್ನು ಹೊಂದಿ ಅವರಂತೆ ಪರೋಪಕಾರ ನಿರತರಾಗಿ ಭಾರತಮಾತೆಯ ಮನೋರಂಜಕನಾಗಲು ಪ್ರಯತ್ನಿಸುವುದೇ ಫಲವೆಂತಲೂ, ಜನರ ಮನಸ್ಸಿನಲ್ಲಿ ಚೆನ್ನಾಗಿ ಪರಿಣಮಿಸುವಂತೆ ಒಂದು ಒಂದೂವರೆ ತಾಸಿನವರೆಗೂ ಭಾಷಣವನ್ನು ಮಾಡಿದರು. ಬಳಿಕ ಪೊಲೀಸ ಸೂಪರಿಂಟೆಂಡೆಂಟರಾದ ರಾ॥ ಸಾ॥ ಗಾಗೆ ಇವರೂ ಮತ್ತೂ ಡಾಕ್ಟರ್ ದೇಶಮುಖ ಇವರೂ ಇದನ್ನೇ ಪುಷ್ಟೀಕರಿಸಿದರು. ಬಳಿಕ ಸೋಲಾಪುರ ಸಾತಾರಾ ಈ ಜಿಲ್ಲೆಗಳ ಶೇತಕಿಖಾತೆಯ ಇನ್ಸ್ಪೆಕ್ಟರಾದ ರಾ॥ ಸಾ॥ ತಗಾರೆ ಇವರು „ಅಪ್ಪಾಸಾಹೇಬರು ಒಕ್ಕಲತನದಲ್ಲಿ ಕಾಲಕ್ಕನುಸರಿಸಿ ಪಾಶ್ಚಾತ್ಯರಂತೆ ಹೊಸ ಸ್ವರೂಪವನ್ನು ತಂದು ಈ ನಮ್ಮ ಇಲಾಖೆಯಲ್ಲಿರುವ ಒಕ್ಕಲಿಗರಿಗೆ ಪ್ರೋತ್ಸಾಹ ಪೂರ್ವಕ ಮೇಲ್ಪಂಕ್ತಿಯನ್ನು ಹಾಕಿಕೊಟ್ಟವರಲ್ಲಿ ಇವರೇ ಮೊದಲನೆಯವರು. ಅಂತೇ ಇವರ ಜಮೀನುಗಳಲ್ಲಿಯ ಕಬ್ಬು ತಂಬಾಕು ಮೊದಲಾದ ಬೆಳೆಯೂ ಕೂಡ ಮೊದಲನೇ ನಂಬರದಿರುತ್ತದೆ. ಶ್ರೀಮಂತರು ಗತಿಸಿದ ಬಳಿಕಾದರೂ ಅವರ ಟ್ರಸ್ಟಿಗಳಾದ ಶ್ರೀ ಮಡಕಿ ಚೆನ್ನಬಸಪ್ಪನವರೂ ಶ್ರೀ ಮಲ್ಲಿಕಾರ್ಜುನಪ್ಪ ಪಾಟೀಲರವರೂ ಕೂಡ ಅದೇ ಪ್ರಕಾರ ವ್ಯವಸ್ಥೆಯಿಂದ ಕೆಲಸವನ್ನು ಮಾಡಿಸುತ್ತಿರವುದರಿಂದ ಇವರ ಬೆಳೆಯು ಈಗ್ಯೂ ಮೊದಲನೇ ನಂಬರದ್ದಾಗಿರುತ್ತದೆ. ನಾನು ಈ ಜಿಲ್ಲೆಯ ಮತ್ತೂ ಸಾತಾರ ಜಿಲ್ಲೆಯ ಎಲ್ಲಾ ತಾಲೂಕುಗಳ ಜಮೀನುಗಳನ್ನು ಪರಾಮರ್ಶಿಸಿರುತ್ತೇನೆ. ನಾನು ಹೇಳುವುದನ್ನು ಸ್ವತಃ ಬೆಳೆಗಳನ್ನು ಕಣ್ಣಾರ ನೋಡಿದವರು ವರ್ಣನೆಯೆಂದು ಎಂದೂ ತಿಳಿಯಲಾರರು” ಎಂದು ಭಾಷಣಮಾಡಿದ ಬಳಿಕ ರಾ॥ ಬಾ॥ ಮಾಮಲೇದಾರ ಒಡೆಯರು ಇಂಗ್ಲೀಷಿನಲ್ಲಿ ಶ್ರೀಮಂತರ ಗುಣಕಥನವನ್ನು ಮಾಡಿದರು. ಅನಂತರ ಅಧ್ಯಕ್ಷರ ಭಾಷಣವಾದ ನಂತರ ಮಿ॥ ಲೀಲಿ ವಕೀಲರವರು ಸಭೆಯವತಿಯಿಂದ ಅಧ್ಯಕ್ಷರ ಆಭಾರವನ್ನು ಮಾನಿಸಿದರು. ಅಧ್ಯಕ್ಷರಿಗೂ ಸಭಿಕರಿಗೂ ಹಾರ ತಾಂಬೂಲಾದಿ ಮರ್ಯಾದೆಯಾಗಿ ಜಯಕಾರವಾದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಬಳಿಕ ಮದ್ದಿನ ವಿನೋದವು ಪ್ರೇಕ್ಷಣೀಯವಾಗಿದ್ದಿತು.

ಓರ್ವ ಪ್ರತ್ಯಕ್ಷದರ್ಶಿ.

ಇತ್ತೀಚೆಗೆ ೧೫-೨೦ ವರ್ಷಗಳಿಂದ ಪ್ರತ್ಯೇಕಸಮಾಜದಲ್ಲಿಯ ಪ್ರಮುಖರು ಜವಾಬ್ದಾರ ಮನುಷ್ಯರು ಸಮಾಜದ ಪುರೋವೃದ್ಧಿಯಲ್ಲಿ ಕಳಕಳಿಯುಳ್ಳವರ ಲಕ್ಷ್ಯವು ತಮ್ಮ ಸಮಾಜದ ಶಿಕ್ಷಣ, ಧಾರ್ಮಿಕ, ಸಾಮಾಜಿಕ ಔದ್ಯೋಗಿಕ ಮೊದಲಾದ ಸರ್ವಾಂಗದ ಉನ್ನತಿಗಾಗಿ ರಾಷ್ಟ್ರದೊಳಗಿನ ಸುಶಿಕ್ಷಿತ ಧನಸಂಪತ್ತಿವರ್ಗ ನೀತಿಮತ್ ಸಮಾಜದೊಳಗೆ ತಮ್ಮ ಸಮಾಜವು ಅಗ್ರೇಸರವಾಗಬೇಕೆಂದು ಪ್ರಯತ್ನವು ನಡೆದಿರುತ್ತದೆ. ಇಂಥ ಮಹತ್ವವುಳ್ಳ ಚಳವಳಿಕಾಲದ ಆರಂಭದಲ್ಲಿ ನಮ್ಮ ಈ ಸಮಾಜದ ಪ್ರಮುಖಜನರು ಒಮ್ಮನಸ್ಸಿನಿಂದ ಲಕ್ಷ್ಯಗೊಡಲಿಲ್ಲವು. ಆದರೂ ಅವಧಿಯಿಂದೇಕಾಗವಲಿದು ಸಮಾಜೋನ್ನತಿಯ ತಿಳವಳಿಕೆಯು ಮನಸ್ಸಿನಲ್ಲಿ ಹುಟ್ಟಿ ಮಹಾಸಭೆಯು ಜನ್ಮವಾಯಿತು. ಈ ಮಹಾಸಭೆಗೆ ಆರಂಭದಲ್ಲಿ ವ್ಯವಸ್ಥಿತ ಸ್ವರೂಪವು ಇರದಿದ್ದರೂ ಕೆಲವುದಿವಸಗಳಾದ ಬಳಿಕ ಅತಿ ಪ್ರಮುಖಪುರುಷರ ಉದಾತ್ತವಿಚಾರ ಮತ್ತೂ ಕೃತಿಗಳಿಂದ ಸಭೆಗೆ ತಕ್ಕಷ್ಟು ಸ್ವರೂಪವು ಬಂದಿತು. ಇದರಿಂದ ನಮ್ಮ ಸಮಾಜದ ಧಾರ್ಮಿಕ ನೈತಿಕಾದಿಯ ಉನ್ನತಿಯಾಗಿ ಐಕಮತ್ಯವು ಹುಟ್ಟಿ ನೆಲೆಗೊಂಡು ಈಗಿನ ಸುಧಾರಿಸಿದ ಕಾಲದಲ್ಲಿ ವೃದ್ಧಿಯನ್ನು ಹೊಂದಬಹುದೆಂಬ ಆಶೆಯು ಸರ್ವತ್ರ ಅಂಕುರಿಸಲಾರಂಭಿಸಿತು. ಆದುದರಿಂದ ಮಹಾಸಭೆಯ ಮೂಲಕ ನಮ್ಮ ಸಮಾಜದಲ್ಲಿಯ ಅನೇಕದೇಶಸ್ಥರ, ಅನೇಕಪಂಗಡದವರ, ಅನೇಕಬಳಿಭೇದದವರ ವಿಚಾರಗಳು ತಮ್ಮತಮ್ಮಲ್ಲಿಯ ಅಜ್ಞಾನದಿಂದುಂಟಾದ ಭೇದಭಾವವನ್ನು ಅಳಿಯಬೇಕೆಂದಾಯಿತು. ಈ ಐಕಮತ್ಯದ ಸ್ಥೈರ್ಯದ ಶ್ರೇಯವು ಈ ಮಹಾಸಭೆಗಿದ್ದರೂ ಅತ್ಯಂತ ಪರಿಶ್ರಮದಿಂದಲೂ, ನಿರಪೇಕ್ಷೆಬುದ್ಧಿಯಿಂದಲೂ, ಸಹಜಕಳಕಳಿಯಿಂದಲೂ, ಇದನ್ನು ಮೊದಲು ಉತ್ಪನ್ನಮಾಡಿದ [illegible] ಶ್ರೀ ಕುಮಾರಸ್ವಾಮಿಗಳ ಕಡೆಗೆ ಇರುತ್ತದೆ. [illegible] ನಾವೇ ನಂಬುತ್ತೇವೆಂತಲ್ಲವು. ಪ್ರತ್ಯೇಕ ಮಹಾಸಭೆಯ ಅಧ್ಯಕ್ಷಮಹಾಶಯರು ತಮ್ಮ ಭಾಷಣದಲ್ಲಿ ನಿರ್ವ್ಯಾಜದಿಂದ ಹೇಳಿರುತ್ತಾರೆ. ಈಗಾದರೂ ಮಹಾಸ್ವಾಮಿಗಳ ಆಸೆಯು ಮಹಾಸಭೆಯ ವಿಷಯದಲ್ಲಿ ಇಲ್ಲವೆಂದು ಹೇಳುವುದಕ್ಕಾಗುವದಿಲ್ಲವು. ಆದರೆ ೨-೩ ವರ್ಷಗಳಿಂದ ಮಾತ್ರ ಶ್ರೀಗಳ ಅನಾಸ್ಥೆಯು ಈ ವಿಷಯದಲ್ಲಿ ಕಾಣಬರುವುದಕ್ಕೆ ಕೆಲ ಕಾರಣಗಳಾಗಿರಬಹುದೆಂದು ಹೇಳುವ ಧಿಟ್ಟತನವು ನಮಗೆ ಬರಲಾರದು. ಹೀಗಿದ್ದರೂ ಬೆಳಗಾವಿಯ ಸಭೆಯ ಕೆಲಸವು ಹಾಗೂ ಹೀಗೂ ನಿರ್ವಿಘ್ನತೆಯಿಂದ ಪೂರೈಸಲ್ಪಟ್ಟಿತು. ನಿಪ್ಪಾಣಿಯಲ್ಲಾದ ಮಹಾಸಭೆಯು ಬಹು ವೈಭವದಿಂದ ಕೊನೆಗೊಂಡಿತು. ಆದರೆ ಮಹಾಸಭೆಯು ಮುಖ್ಯೋದ್ದಿಷ್ಟವೆನಿಸುವ ಐಕಮತ್ಯವೆಂಬ ದರ್ಪಣವು ಮಾತ್ರ ಒಡೆದು ಭಿನ್ನಭಿನ್ನವಾಗಲಿಲ್ಲವೆಂದು ಹೇಳುವುದಕ್ಕಾಗುವದಿಲ್ಲವು. ಆ ಕಾಲದಲ್ಲಿ ಎಷ್ಟೋ ಸಮಂಜಸರಾದ ಸುಜ್ಞರು ಇದೇ ಕಡೆಯ ಸಭೆಯು ಎಂಬ ಉದ್ಗಾರವನ್ನು ಹೊರಹೊರಡಿಸಲಾರಂಭಿಸಿದರು. ಮತ್ತೂ ಆ ಸಭೆಯ ಅಧ್ಯಕ್ಷಸಾಹೇಬರಾದರೂ ವಿನೋದದಿಂದೇ ಕಾಗಲೊಲ್ಲದು. ಇದೇ ಕಟ್ಟಕಡೆಯ ಸಭೆಯು ಎಂಬರ್ಥವನ್ನು ಧ್ವನಿತಮಾಡಿದರು. ಆದರೆ ಆ ಕಾಲದಲ್ಲಿ ಹೀಗಾಗಲಾರದೆಂದು ನಿಶ್ಚಯಗೊಂಡ ನಮ್ಮ ಅಥವಾ ಈ ಸಮಾಜದ ದುರ್ದೈವದ ಪರಿಣಾಮದಿಂದ ಕಡೆಗೆ ಅದೇ ಸಭೆಯೇ ಕಡೆಯದಾಯಿತೆಂದು ಬಹು ಕಷ್ಟದಿಂದ ತಿಳಿಯುವ ಪ್ರಸಂಗವು ಬಂದಂತಾಗಿರುವದು. ಕಾರಣವೇನಂದರೆ-ಹೋದವರ್ಷದಲ್ಲಿ ಈ ಸಭೆಯಂತೂ ಆಗಲೇಯಿಲ್ಲ. ಈವರ್ಷ ಅರ್ಧ ಜನವರಿಯು ಜರುಗಿಹೋದರೂ ಮಹಾಸಭೆಯ ನಿವೇಶನವು ಇಂಥಲ್ಲಿಯೆಂಬ ವರ್ತಮಾನವು ಯಾವ ಪತ್ರದಲ್ಲಿಯೂ ಕಾಣುವ ಭಾಗ್ಯವು ನಮ್ಮ ಕಣ್ಣುಗಳಿಗೆ ದೊರೆಯಲಿಲ್ಲವು. ಈ ವಿಷಯಕ್ಕೆ ಸ್ಟ್ಯಾಂಡಿಂಗ್ ಕಮಿಟಿಯ ಮೆಂಬರರು ಪ್ರಯತ್ನಮಾಡಿದ್ದರೂ ಮಾಡಿರಬಹುದು. ಅದರ ಪರಿಣಾಮದ ಫಲವು ಯಾವ ಸಾಪ್ತಾಹಿಕಪತ್ರದಲ್ಲಿಯೂ ಕಾಣಲಿಲ್ಲವು. ಆದರೆ ಒಬ್ಬೊಬ್ಬ ಹಿತಬಾಂಧವರು ಮಾತ್ರ ಸಭೆಯ ವಿಷಯದಲ್ಲಿ ಅನೇಕ ಸೂಚನಾರೂಪಗಳ ವಿಚಾರಗಳನ್ನು ಮಾಡುತ್ತ ಕಡೆಗೆ ಅನೇಕ ದೂರದೂರ ದೇಶಕೋಶಗಳಿಂದ ಪ್ರವಾಹದಂತೆ ವೈಭವದಿಂದ ಬರುವ ಸಾವಿರಾರು ಮಹಾಜನಗ ಸಂದಣಿಯಿಂದ ಶೋಭಿಸುವ ಮಹಾಸಭೆಯನ್ನು ಅನಿವಾರ್ಯಮೂಲಕ ಧಾರವಾಡದಲ್ಲಿಯ ಶ್ರೀ ಜಗದ್ಗುರು ಹಾಲಿನಲ್ಲಿ ಅದೇ ಹೆಸರಿನಿಂದ ಪರಿಮಿತಜನದ ಸಭೆಯನ್ನು ಸೇರಿಸಿ ಮಹಾಸಭೆಯಾಯಿತೆಂದು ಹೇಳಿಕೊಳ್ಳುವದುತ್ತಮವೆಂದೂ ಕೂಡ ಸೂಚಿಸಿದರು. ಇದನ್ನಾದರೂ ಆಚರಿಸುವಂತೆ ನಿರ್ಧರಿಸಿದ ವರ್ತಮಾನವು ಯಾವ ಪತ್ರದಲ್ಲಿಯೂ ಕಾಣುವ ಭಾಗ್ಯವು ಇನ್ನುವರೆಗೂ ಕಂಡುಬರಲಿಲ್ಲವೆಂದು ಬಹು ದುಃಖದಿಂದ ಹೇಳಬೇಕಾಗಿರುವದು. ಇಲ್ಲಿಗೆ ಸಭೆಯು ಜನಿಸಿ (೧೧) ವರ್ಷಗಳು ಮಾತ್ರ ಆದವು. ಈ ಅವಧಿಯಲ್ಲಿ ಸಭೆಯ ಅಧಿನಿವೇಶಗಳು (೭) ಆಗಿ ಕಡೆಗೆ ಮಹಾಸಮಾಪ್ತಿಯು ಚೆನ್ನವು ತೋರುವುದೇ ನಿಶ್ಚಯವಾದರೆ, ಈ ಸಮಾಜದ ಪ್ರತಿಯೊಬ್ಬ ಹಿತಚಿಂತಕನಿಗೆ ಮಾತ್ರ ಕೆಟ್ಟವೆನಿಸುವದೆಂದೇನಲ್ಲ. ಈ ಸಮಾಜವು (೩೫) ಲಕ್ಷ ಜನಸಂಖ್ಯೆಯುಳ್ಳಂಥಾದ್ದಾಗಿದ್ದು, ಧನಾದಿ ಸಂಪತ್ತಾದರೂ ಯುಕ್ತರೂಪವಾಗಿದ್ದು, ಮಹಾಸಭೆಯು ಇಲ್ಲಿಗೆ ಮುಗಿಯಿತೆಂಬುದನ್ನು ಕೇಳಿ ಪರಮತೀಯ ಪ್ರತ್ಯೇಕ ಸಮಂಜಸ ಪುರುಷನಿಗೂ ಕೆಟ್ಟದೆನಿಸದಿರಲಾರದು. ದೇಶಬಾಂಧವರೆನಿಸುವ, ಜೈನ, ಮಹಾರಾಷ್ಟ್ರ, ಮಾಳಿ, (ಹುಗಾರ) ಮುಸಲ್ಮಾನ ಮೊದಲಾದ ಮತೀಯರ ಸಭೆಗಳು ಆರಂಭವಾದಂದಿನಿಂದ ಈವರೆಗೂ ನಿಯಮಿತಮಿತಿಗೆ ಸರಿಯಾಗಿ ಅವಿಚ್ಛಿನ್ನವಾಗಿ ನಡೆದುಬಂದಿರುವುವಲ್ಲದೆ ಸಭೆಯಿಂದ ಆಯಾ ಸಮಾಜಗಳಲ್ಲಿ ಸುಸ್ವರೂಪವು ಪೂರ್ವದೃಷ್ಟಿಯಿಂದ ನೋಡಿದರೆ ಎಷ್ಟೋ ಸುಧಾರಣೆಯ ಪದ್ಧತಿಯುಳ್ಳದ್ದು ಸರ್ವಾಂಗಸುಂದರವಾದಂತೆ ಕಂಡುಬರುತ್ತದೆ. ಇದಕ್ಕೆ ಮುಖ್ಯಕಾರಣವಾದರೂ ಆಯಾ ಸಭೆಗಳಲ್ಲಿ ಪಾಸುಮಾಡಿದ ಠರಾವುಗಳನ್ನು ಸಮಾಜದಲ್ಲಿ ಆಚರಣೆಯಲ್ಲಿ ತರುವುದಾಗಿರುತ್ತದೆ. ಸಭೆಯು ಐಕಕಂಠ್ಯದಿಂದ ಕೂಡಿ ನಿರ್ವಿಘ್ನತೆಯಿಂದ ಪೂರೈಸುತ್ತ ಬಂದಿರುವುದರಿಂದ ಆಯಾ ಸಮಾಜದವರ ವಿಶ್ವಾಸವು ಆಯಾ ಸಭೆಯ ವಿಷಯದಲ್ಲಿ ಅಪ್ರತಿಹತವಾಗಿ ಕಂಡುಬರುತ್ತದೆ.

(ಸಶೇಷ.)

ವಿಜ್ಞಾಪನೆ.

ಈ ಸಮಯ ಬಿಡಬೇಡಿರಿ. ಮುಂದೆ ದೊರೆಯಲಾರದು. ಮೊಳಕಾಲ್ಮುರುವಿನ ಪ್ರಸಿದ್ಧವಾದ ರೇಷ್ಮೆಯವಸ್ತ್ರಗಳು ಬೇಕೋ? ಬೆಲೆಸುಲಭ! ಬಣ್ಣ ಗ್ಯಾರಂಟಿಯಾದದ್ದು. ಒಂದುಸಲ ತರಿಸಿನೋಡಿರಿ !! ನಮ್ಮಲ್ಲಿ ಹೊದಿಯುವ ವಸ್ತ್ರಗಳೂ, ಮೊಗಟಗಳೂ, ಶೀರೆಗಳೂ, ನಡುಕಟ್ಟುಗಳೂ, ಲಿಂಗದವಸ್ತ್ರಗಳೂ, ಕೈ ವಸ್ತ್ರಗಳೂ ಬಹಳ ಚೆನ್ನಾಗಿ ಎಲ್ಲಾ ರಂಗಿನಲ್ಲಿಯೂ ತಯಾರಾಗುತ್ತವೆ. ನಾವು ಮೈಸೂರು, ಮದ್ರಾಸು ಸೀಮೆಗಳ ಎಲ್ಲಾ ಭಾಗಕ್ಕೂ ನಮ್ಮ ಮಾಲನ್ನು ರವಾನಿಸುತ್ತೇವೆ. ನಮ್ಮ ಮಾಲುಗಳಿಗೆ ಬಹುಮಾನಗಳೂ, ಮೆಡಲುಗಳೂ, ಬಂದಿವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಹಿಮಂತಋತುವಿನ ದರಗಳು. ೧ನೆ ನಂ. ವಸ್ತ್ರಗಳು ತೊಲೆ ೧ಕ್ಕೆ ೦-೭-೦. ೨ನೆ ನಂ. ವಸ್ತ್ರಗಳು ತೊಲೆ ೧ಕ್ಕೆ ೦-೬-೯. (ಮೊಗಟ) ಅರಳೆಪೇಟೆ ಶೀರೆಗಳೂ, ನಡುಕಟ್ಟು, ಲಿಂಗದವಸ್ತ್ರಗಳು, ೧ನೆ ನಂ. ಮಾಲು ತೊಲೆ ೧ಕ್ಕೆ ೦-೮-೦. ೨ನೆ ನಂ. ಮಾಲು ತೊಲೆ ೧ಕ್ಕೆ ೦-೭-೬.

ನಮ್ಮವಿಳಾಸ:—
8 ಎಂ. ಎಸ್. ಮಲಕಣ್ಣ, ಮತ್ತು ಬ್ರದರ್ಸ್,
ರೇಷ್ಮೆ ಜವಳಿ ವ್ಯಾಪಾರಿಗಳು. ಪೋಸ್ಟ್ ಮೊಳಕಾಲ್ಮುರು.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

4

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪಿತ್ತೋದ್ರೇಕವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫರು, ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವವರು, ದೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದ

ಅತಿ ತ್ವರಿತಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೫೦ ತೋಲೆಯಿಂದ ೮೦ ತೊಲೆವರೆಗೆ ಬೇಕಾಗುವದು. ಕಿಮ್ಮತು ೫೦ ತೋಲೆಗೆ ರೂ. ೨-೮-೦. ೮೦ ತೊಲೆಗೆ ರೂಪಾಯಿ ೪ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೈಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೦ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೋಳುಸಹಿತ ಆದ ಸಮಾರಂಭ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೦ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೦ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವಿರಶೈವ ಸತ್ಪುರುಷಮಾಲಾ, ಹಾಳಕೇರಿ ಅನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಶಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ನಕ್ಕೆಗೆ ಫೋಟೊ ಸಿಕ್ಕುತ್ತವೆ ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.



ಹೊಸಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವ ಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಈಪ್ರಕಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ||| = , ೧, ೧।. ಪ್ರಕಾರ, ಮತ್ತೂ ಬೆಳ್ಳೀದು ರು ೧॥ ರೋಡ್ ಗೋಲ್ಡ ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨||| ರೂ.

ಪೂರಊರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ.

ನಮ್ಮವಿಳಾಸ— ಗಂಗಪ್ಪಾ ಜೀರಿಗೆ,
39 ಆರ್ಟಿಸ್ಟ್ ಸೊಲ್ಲಾಪುರ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೋಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠತಮವಾದ

16

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘುಮುಘುಮಿಸುವಂತೆ ಮಾಡುವುವು.

ಶೀತವಾಯು—ಕೆಮ್ಮು—ನೆಗಡಿ—ದಿನಜ್ವರ—ಮೂರರಜ್ವರ ನಾಲ್ಕರಜ್ವರ— ಮಲೇರಿಯಾಜ್ವರ— ತಲೆನೋವು— ಮೈಕೈನೋವು ಮತ್ತು ಭಾರ—ಅರೋಚಕ ಹಲ್ಲುನೋವು—ಹೊಟ್ಟೆನೋವು—ಮಲಬಂಧ—ಅಜೀರ್ಣಭೇದಿ—ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳೆತ—ಹೊಟ್ಟೆಯುಬ್ಬರ—ಮಂದಜ್ವರ—ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೇ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ ಛಾರ್ಜು ಪ್ರತ್ಯೇಕ.

ಅಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಕೆ, ಮಲಬಂಧ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತಕ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ॥ಡಿ

ಬಹುಮಾನ! ಶ್ರೀ ಬಹ

ಅತ್ಯಾಶ್ಚರ್ಯಕರವಾದ ಬಹುಮಾನ
೨೫ ಸಾವಿರ ರೂಪಾಯಿಗಳು ಹಂಚಲ್ಪ
ದಿವ್ಯೌಷಧ ಬಳ್ಳಾರಿ. ಸುಪ
ಸರ್ವಜನಮನೋಲ್ಲಾಸಿನಿ ಅಂಡ್ ಕೋ

(• ನಾರಸಿಂಹಚೂರ್ಣವು •)

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಪುಂಗವ ।
ಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಕಿಂವಲಂ ॥
ಷ್ಟ. ಆದರೆ ಅನೇಕ ದುರ್ವರ್ತನಗಳಿಂದ ಮಂ॥ಲಂ ।
ವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲಾಜ್ವಲಂ ॥
ಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನ
ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ
ಕ ವೈದ್ಯರು ಹಲವುವಿಧ ಔಷಧಗಳನ್ನು ವಿಶೇಷ
ಯನಿಟ್ಟು ವಿಕ್ರಯಿಸಿದರು ಪ್ರಯೋಜನವು ಮಾಸಂಚಿಕೆ ೪
ಯಾಗುತ್ತಿರುವದು ವಿಷಾದಕರವಾಗಿರುವದು
ವನ್ನು ಹೋಗಲಾಡಿಸುವುದಕ್ಕಾಗಿ (ನಾರಸಿಂಹೌಷಧಗಳು.
ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂ
ಸಿದ್ಧಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮ—೧—೦
೧೫ ದಿನಗಳು ಸೇವಿಸಿದರೆ ಮುದುಕತನ, ಅನೇಕ—೮—೦
ಮೇಹರೋಗಗಳು, ಪಾಂಡುರೋಗ, ಪೀನಸ, ೧—೮—೦
ಬಗೆಯಾದ ಕುಷ್ಠಗಳು, ಎಂಟುವಿಧ ಉದರರೋಗ—೦
ಭಗಂದರ, ಮೂತ್ರಕೃಚ್ಛ್ರವು, ಗೃಧ್ರಸೀವಾತವು ೪—೦
ಲೆ, ಕ್ಷಯವು ಮಹಾಶ್ವಾಸಗಳು, ದಾರುಣ [illegible] ೦

ಗೆಯಾದ ಕಾಸಗಳು, ಎಂಭತ್ತುವಿಧಗಳಾದ ವಾತರೋಗಗಳು, ನಲವತ್ತು ಬಗೆಯಾದ ಪಿತ್ತಗಳು, ಇಪ್ಪತ್ತು ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಸಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ, ಚಿನ್ನದಂಥಾ ಕಾಂತಿಯು, ಸಿಹ್ಮನಂತೆ ಪರಾಕ್ರಮವು, ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯು ಅತ್ಯಧಿಕ ವೀರ್ಯವೃದ್ಧಿಯು ನೃಸಿಹ್ಮನಿಗೆ ಸಮಾನರಾದ ಮಕ್ಕಳನ್ನು ಪಡೆಯುವಬಲವೂ ಉಂಟಾಗುವುದು ಇದರಲ್ಲಿ ಯಾವ ವಿಧವಾದರಸಗಳಾಗಲಿ ಮಿಶ್ರವಾಗಿಲ್ಲ, ಇನ್ನಾವ ದೋಷಗಳೂ ಇಲ್ಲ. ನಿರ್ದುಷ್ಟವಾದದ್ದು, ಫಕ್ತವನಸ್ಪತಿಗಳಿಂದಲೇ ಸಿದ್ಧಮಾಡಿದದಿವ್ಯವಾದ ಔಷಧ. ಅನೇಕ ಪಂಡಿತರು, ಧನಿಕರು ಸರ್ಟಿಫಿಕೇಟುಗಳನ್ನು ಕೊಟ್ಟಿರುವರು.

೧೫ ದಿನ ಉಪಯೋಗಕ್ಕೆಬರುವ ಡಬ್ಬಿ ೧ ಕ್ಕೆ ಬೆಲೆ ರೂ. ೧—೦—೦

—(ಬಹುಮಾನಗಳನ್ನು ಹಂಚುವ ವಿಧಾನ)—

೧ ಡಜನ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೧೦೦೦೦ ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೬೦೦೦ ರೂ. ೩ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೪೦೦೦ ರೂ. ೨ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೩೦೦೦ ರೂ. ೧ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ೨೦೦೦ ರೂ.

೧೯೧೪ ನೇ ಜುಲೈ ೧ ನೇ ತೇದಿ ಮೊದಲು ೧೯೧೫ ನೇ ಜುಲೈ ೧ ತೇದಿಯವರಿಗೂ ಈ ಔಷಧವು ಒಂದು ಲಕ್ಷ ಡಬ್ಬಿಗಳು ಖರ್ಚಾದಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ. ಒಂದುಪಕ್ಷದಲ್ಲಿ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ವಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡಿಯುವದಲ್ಲದೆ ಬಹುಮಾನವನ್ನು ಸಹಾ ಹೊಂದವದಕ್ಕೆ ಅರ್ಹನಾಗಿರುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರು ಸಂಶಯವಿಲ್ಲ. ಬಹುಮಾನದ ಮೊತ್ತವು ನಿಷ್ಪಕ್ಷಪಾತವಾಗಿ ಒಂದೇ ಸಮವಾಗಿ ಹಂಚಲ್ಪಡುವವು. ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಕುಹಕತನವು ಇಲ್ಲ, ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರ ಮಾತುಗಳಿಗೆ ನಿಗಾ ಕೊಡಲಾಗದು, ಜಾಗ್ರತೆ ತರಿಸಿಕೊಳ್ಳಿರಿ. ಔಷಧದ ಗುಣವನ್ನು ಪರೀಕ್ಷಿಸಿರಿ ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇದಲ್ಲದೆ ನಮ್ಮಲ್ಲಿ ಇನ್ನು ಅನೇಕತರದ ಔಷಧಗಳು ಸಿಗುತ್ತವೆ. ರೋಗದಲಕ್ಷಣವನ್ನು ತಿಳಿಸಿದರೆ ಅಮೂಲ್ಯವಾದ ಮತ್ತು ಗುಣಕಾರಿಗಳಾದ ಔಷಧಗಳನ್ನು ಕಳುಸುವೆವು.

ಇದರ ಅನುಪಾನ ಪತ್ರಿಕೆಯನ್ನು ಬಹುಮಾನದ ಟಿಕೇಟನ್ನು ಡಬ್ಬಿಸಂಗಡ ಕಳಿಸುವೆವು. ನಮ್ಮ ಕಂಪೆನಿಯ ಕಾಶಿವಿಶ್ವನಾಥ ಮಾರ್ಕು ಇಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು.

ನಮ್ಮ ಅಡ್ರೆಸ್ಸು
ಸರ್ವಜನಮನೋಲ್ಲಾಸಿನಿ ಅಂಡ್ ಕೋ ಬಳ್ಳಾರಿ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

55



ರೋಗಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋಡಿತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಂಜು ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ: ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೦ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅ ಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣ ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇವೊಂದು ಬುದ್ದಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯುವ

ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುದ್ದಿಯ ಬೆಲೆ ೧—೦—೦
ಟಪಾಲ್‌ಖರ್ಚು ಬೇರೆ.
ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಪತ್ರವ್ಯವಹಾರ.

ಶ್ರೀಮಂತ ರಾ॥ ಬ॥ ಅಪ್ಪಾಸಾಹೇಬವಾರದ ಇವರ ನಾಲ್ಕನೇ ಪುಣ್ಯತಿಥಿಯು.

ಸೋಲಾಪುರದಲ್ಲಿ ಶ್ರೀಮಂತರ ಪುಣ್ಯಾಶ್ರಮ ಬಗೀಚದಲ್ಲಿ ಅವರ ಸಮಾಧಿಯ ಸಮುಖದಲ್ಲಿ ಇವರುದ್ದಿಶ್ಯ ಭದ್ರವಾಗಿ ನಿರ್ಮಿಸಲ್ಪಟ್ಟ ಮನೋಹರವಾದ ಲೋಹಮಯ ಮಂಟಪದಲ್ಲಿ ಇದೇ ಪುಷ್ಯ ಬ॥ ೪-೬-೭ ಈ ಮೂರು ದಿವಸಗಳಲ್ಲಿ ಒಳ್ಳೇ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಈ ಮೂರು ದಿವಸಗಳಲ್ಲಿ ಬೆಳಗ್ಗೆ ೮ ಘಂಟೆಯಿಂದ ೧೦ ಘಂಟೆಯವರೆಗೂ ಇಲ್ಲಿಯ ಪಾಠಶಾಲೆಯ ವೈದಿಕರಿಂದ ಸಮಾಧಿಯ ಪೂಜೆಯು ಯಥಾವಿಧಿವೈದಿಕ ಮಂತ್ರಪೂರ್ವಕ ಷೋಡಶೋಪಚಾರಗಳಿಂದ ನಡೆಯಿಸಲ್ಪಟ್ಟು, ಮೊದಲನೇ ಎರಡನೇ ದಿವಸಗಳಲ್ಲಿ ಸಾವಿರಾರು ಗಣಸಮೂಹಕ್ಕೂ ಬಡಬಗ್ಗರಿಗೂ ಅನ್ನದಾನ ದ್ರವ್ಯದಾನಗಳಿಂದ ಸಂತರ್ಪಣೆಯು ಜರುಗಿ, ಸಾಯಂಕಾಲ ೪ ಘಂಟೆಯಿಂದ ರಾತ್ರಿ ೮ ಘಂಟೆಯವರೆಗೂ ವೇ॥ ಬಸವಲಿಂಗಶಾಸ್ತ್ರಿಗಳಿಂದ ಪುರಾಣ ವೇ॥ ಜಗದೀಶಶಾಸ್ತ್ರಿಗಳಿಂದ ಸಂಸ್ಕೃತದಲ್ಲಿ ರಚಿಸಲ್ಪಟ್ಟ ಶ್ರೀಮಂತರ ಜೀವನಚರಿತ್ರೆಯ ಶ್ರವಣವೂ, ಲಿಂಗಯ್ಯನವರು ಜವಳಗೀಕರ ಇವರಿಂದ ಕೀರ್ತನವೂ, ಶ್ರೀ ಶಂಕರ ಸ್ವಾಮಿ ಸಾಧಿಕ ಮಂಡಲಿಯವರಿಂದ ಶಿವಭಜನೆಯೂ, ಸುಶ್ರಾವ್ಯವಾಗಿ ಜರುಗಿದವು. ಮೂರನೇದಿವಸ ಮಧ್ಯಾಹ್ನದಲ್ಲಿ ಆಪ್ತೇಷ್ಟರಿಗೂ ಅನಾಥರಿಗೂ ಭೋಜನವಾದ ಬಳಿಕ ಸಾಯಂಕಾಲ ನಾಲ್ಕು ಘಂಟೆಗೆ ಸರಿಯಾಗಿ ಸಭೆಯು ಕೂಡಿಸಲ್ಪಟ್ಟಿತು. ಮಂಟಪವು ಹೊಂಬಣ್ಣದ ಛತ್ತಿನಿಂದಲೂ, ಸಾಲುಸಾಲಾಗಿ ಕಮಾನಾಕಾರವಾಗಿ ಇಳಿಬಿಟ್ಟಿದ್ದ ನಾನಾ ಬಣ್ಣದ ಸೂಕ್ಷ್ಮ ವಸ್ತ್ರಗಳಿಂದಲೂ, ಗಾಜಿನ ಹಂಡೆ ಜುಮುರುಗಳಿಂದಲೂ, ತಳಿರುತೋರಣರಂಭಾಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟಿದ್ದಿತು. ಸಭೆಯ ಶಿರೋಭಾಗದ ಜಗುಲಿಯಲ್ಲಿ ಎಣ್ಣೆಬಣ್ಣದ ಅಂದವಾದ ಶ್ರೀಮಂತರ ದೊಡ್ಡದೊಂದು ಭಾವಚಿತ್ರವು ಇಡಲ್ಪಟ್ಟಿದ್ದಿತು ಸಾಲುಸಾಲಾಗಿ ಮಾರ್ಗದುದ್ದಕ್ಕೂ ಪತಾಕೆಗಳು ನೆಡಲ್ಪಟ್ಟಿದ್ದವು. ಭವ್ಯವಾದ ಬಗೀಚೆಯ ಮಧ್ಯದಲ್ಲಿ ಇರುವುದರಿಂದಂತೂ ಈ ಸಭೆಗೆ ಒಂದು ತರಹದ ವಿಶೇಷ ಶೋಭೆಯು ಬಂದಿದ್ದಿತು. ಸಭೆಗೆ ಪೂನಾ-ಹೈದರಾಬಾದ-ಅಂಕಲಕೋಟಿ ಮೊದಲಾದ ಗ್ರಾಮಗಳಿಂದ ಪ್ರಮುಖ ಪುರುಷರೂ, ಇಂಡಿಯ ಮಾಮಲೇದಾರ ರಾವಸಾಹೇಬ ಒಡೆಯರವರೂ, ಇಲ್ಲಿಯ ಮುನಸೀಫರೂ, ಡಿ॥ ಕಲೆಕ್ಟರೂ, ಮಾಮಲೆದಾರರೂ ಪೊಲೀಸ ಇನ್ಸ್ಪೇಕ್ಟರರೂ, ನಾ॥ ಸಾಟೆ ಮೊದಲಾದ ಪ್ರಸಿದ್ಧ ವಕೀಲರೂ, ಡಾ॥ ಕಿರ್ಲಸ್ಕರ-ಫೋತ್‌ಟೇ-ಜಗದೇವರಾವ ದೇಶಮುಖರೇ ಮೊದಲಾದ ಪ್ರಮುಖ ಡಾಕ್ಟರರೂ, ಶ್ರೀ॥ ಮಾ॥ ಬಂಡೆಪ್ಪಣ್ಣಾ ಕಾಡಾದೆ ಮೊದಲಾದ ವೀರಶೈವ ಪ್ರಮುಖರೂ, ಫಾರ್ಸಿ-ಜೈನ-ಮಾರ್ವಾಡಿ-ಮುಸಲ್ಮಾನ-ಕ್ರಿಶ್ಚಿಯನ್ ಪ್ರಮುಖ ಪುರುಷರೂ, ಸಭೆಯನ್ನು ಅಲಂಕರಿಸಿದ್ದರು. ಸುಶಿಕ್ಷಿತ ಕುಲೀನರಾದ ಭಗಿನಿಯರ ವರ್ಗವು ಸಭೆಗೆ ಅಲಂಕಾರವಾಗಿದ್ದಿತು. ಸಭೆಯ ಅಧ್ಯಕ್ಷಸ್ಥಾನವನ್ನು ಡಾಕ್ಟರ್ ರಾನಡೆಯವರ ಸೂಚನೆಗೆ ಡಾ॥ ಕಿರ್ಲಸ್ಕರ ಇವರ ಅನುಮೋದನ ದೊರೆದ ಬಳಿಕ ಹೈದರಾಬಾದಿನ ಹೈಕೋರ್ಟ ವಕೀಲರಾದ ನಾಮದಾರ ಕೇಶವರಾಯರು ಸ್ವೀಕರಿಸಿದರು. ಬಳಿಕ ಉಪನ್ಯಾಸಕರಲ್ಲಿ ಘನತೆಯನ್ನು ಹೊಂದಿದ ಪ್ರೊಫೆಸರ ಮೋಘಾ ಇವರು, ಪುಣ್ಯತಿಥಿಯೆಂದು ಏತಕ್ಕನ್ನಬೇಕು? ಪುಣ್ಯತಿಥಿಯನ್ನು ಮಾಡುವದರ ಪ್ರಯೋಜನವಾವುದು? ಎನ್ನುವ ವಿಷಯವನ್ನೂ ಪುಣ್ಯಪುರುಷರಾದ ಶ್ರೀಮಂತರ ಉದಾರಗುಣಗಳ ಸ್ವರೂಪವನ್ನೂ ಅವುಗಳಿಂದ ಅವರಿಗುಂಟಾದ ಸತ್ಕೀರ್ತಿಯನ್ನೂ ಪ್ರತಿಪಾದಿಸಿ, ಶ್ರೀಮಂತರ ಚಿರಂಜೀವಿಯು ಸುಶೀಲನಾಗಿ ಪಿತೃಕೀರ್ತಿಯನ್ನು ಸಂಪಾದಿಸಲೆಂತಲೂ, ಕ್ರಮೇಣ ಅವರ ಗುಣಗಳನ್ನು ಹೊಂದಿ ಅವರಂತೆ ಪರೋಪಕಾರ ನಿರತರಾಗಿ ಭಾರತಮಾತೆಯ ಮನೋರಂಜಕನಾಗಲು ಪ್ರಯತ್ನಿಸುವುದೇ ಫಲವೆಂತಲೂ, ಜನರ ಮನಸ್ಸಿನಲ್ಲಿ ಚೆನ್ನಾಗಿ ಪರಿಣಮಿಸುವಂತೆ ಒಂದು ಒಂದೂವರೆ ತಾಸಿನವರೆಗೂ ಭಾಷಣವನ್ನು ಮಾಡಿದರು. ಬಳಿಕ ಪೊಲೀಸ ಸೂಪರಿಂಟೆಂಡೆಂಟರಾದ ರಾ॥ ಸಾ॥ ಬಾಗೆ ಇವರೂ ಮತ್ತೂ ಡಾಕ್ಟರ್ ದೇಶಮುಖ ಇವರೂ ಇದನ್ನೇ ಪುಷ್ಟೀಕರಿಸಿದರು. ಬಳಿಕ ಸೋಲಾಪುರ ಸಾತಾರಾ ಈ ಜಿಲ್ಲೆಗಳ ಶೇತಕೀಖಾತೆಯ ಇನ್ಸ್ಪೆಕ್ಟರಾದ ರಾ॥ ಸಾ॥ ತಗಾರೆ ಇವರು " ಅಪ್ಪಾಸಾಹೇಬರು ಒಕ್ಕಲತನದಲ್ಲಿ ಕಾಲಕ್ಕನುಸರಿಸಿ ಪಾಶ್ಚಾತ್ಯರಂತೆ ಹೊಸ ಸ್ವರೂಪವನ್ನು ತಂದು ಈ ನಮ್ಮ ಇಲಾಖೆಯಲ್ಲಿರುವ ಒಕ್ಕಲಿಗರಿಗೆ ಪ್ರೋತ್ಸಾಹ ಪೂರ್ವಕ ಮೇಲ್ಪಂಕ್ತಿಯನ್ನು ಹಾಕಿಕೊಟ್ಟವರಲ್ಲಿ ಇವರೇ ಮೊದಲನೆಯವರು. ಅಂತೇ ಇವರ ಜಮೀನುಗಳಲ್ಲಿಯ ಕಬ್ಬು ತಂಬಾಕು ಮೊದಲಾದ ಬೆಳೆಯೂ ಕೂಡ ಮೊದಲನೇ ನಂಬರದಿರುತ್ತದೆ. ಶ್ರೀಮಂತರು ಗತಿಸಿದ ಬಳಿಕಾದರೂ ಅವರ ಟ್ರಸ್ಟಿಗಳಾದ ಶ್ರೀ ಪಂಡಿತೆ ಚೆನ್ನಬಸಪ್ಪನವರೂ ಶ್ರೀ ಮಲ್ಲಿಕಾರ್ಜುನಪ್ಪ ಪಾಟೀಲರವರೂ ಕೂಡ ಅದೇ ಪ್ರಕಾರ ವ್ಯವಸ್ಥೆಯಿಂದ ಕೆಲಸವನ್ನು ಮಾಡಿಸುತ್ತಿರವುದರಿಂದ ಇವರ ಬೆಳೆಯು ಈಗ್ಯೂ ಮೊದಲನೇ ನಂಬರದ್ದಾಗಿರುತ್ತದೆ. ನಾನು ಈ ಜಿಲ್ಲೆಯ ಮತ್ತೂ ಸಾತಾರ ಜಿಲ್ಲೆಯ ಎಲ್ಲಾ ತಾಲೂಕುಗಳ ಜಮೀನುಗಳನ್ನು ಪರಾಮರ್ಶಿಸಿರುತ್ತೇನೆ. ನಾನು ಹೇಳುವುದನ್ನು ಸ್ವತಃ ಬೆಳೆಗಳನ್ನು ಕಣ್ಣಾರ ನೋಡಿದವರು ವರ್ಣನೆಯೆಂದು ಎಂದೂ ತಿಳಿಯಲಾರರು" ಎಂದು ಭಾಷಣಮಾಡಿದ ಬಳಿಕ ರಾ॥ಬಾ॥ ಮಾಮಲೇದಾರ ಒಡೆಯರು ಇಂಗ್ಲೀಷಿನಲ್ಲಿ ಶ್ರೀಮಂತರ ಗುಣಕಥನವನ್ನು ಮಾಡಿದರು. ಅನಂತರ ಅಧ್ಯಕ್ಷರ ಭಾಷಣವಾದ ನಂತರ ಮಿ॥ ಲೇಲೆ ವಕೀಲರವರು ಸಭೆಯವತಿಯಿಂದ ಅಧ್ಯಕ್ಷರ ಆಭಾರವನ್ನು ಮಾನಿಸಿದರು. ಅಧ್ಯಕ್ಷರಿಗೂ ಸಭಿಕರಿಗೂ ಹಾರತಾಂಬೂಲಾದಿ ಮರ್ಯಾದೆಯಾಗಿ ಜಯಕಾರವಾದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಬಳಿಕ ಮದ್ದಿನ ವಿನೋದವು ಪ್ರೇಕ್ಷಣೀಯವಾಗಿದ್ದಿತು. ಓರ್ವ ಪ್ರತ್ಯಕ್ಷದರ್ಶಿ.

ಇತ್ತೀಚೆಗೆ ೨೪-೨೫ ವರ್ಷಗಳಿಂದ ಪ್ರತ್ಯೇಕಸಮಾಜದಲ್ಲಿಯ ಪ್ರಮುಖರು ಜವಾಬ್ದಾರ ಮನುಷ್ಯರು ಸಮಾಜದ ಪುರೋವೃದ್ಧಿಯಲ್ಲಿ ಕಳಕಳಿಯುಳ್ಳವರ ಲಕ್ಷ್ಯವು ತಮ್ಮ ಸಮಾಜದ ಶಿಕ್ಷಣ, ಧಾರ್ಮಿಕ, ಸಾಮಾಜಿಕ ಔದ್ಯೋಗಿಕ ಮೊದಲಾದ ಸರ್ವಾಂಗದ ಉನ್ನತಿಗಾಗಿ ರಾಷ್ಟ್ರದೊಳಗಿನ ಸುಶಿಕ್ಷಿತ ಧನಸಂಪತ್ತಿಮರ್ಯಾ ನೀತಿಮತ್ ಸಮಾಜದೊಳಗೆ ತಮ್ಮ ಸಮಾಜವು ಅಗ್ರೇಸರವಾಗಬೇಕೆಂದು ಪ್ರಯತ್ನವು ನಡೆದಿರುತ್ತದೆ. ಇಂಥ ಮಹತ್ವವುಳ್ಳ ಚಳವಳಿಕಾಲದ ಆರಂಭದಲ್ಲಿ ನಮ್ಮ ಈ ಸಮಾಜದ ಪ್ರಮುಖಜನರು ಒಮ್ಮನಸ್ಸಿನಿಂದ ಲಕ್ಷ್ಯಗೊಡಲಿಲ್ಲವು. ಆದರೂ ಅವಧಿಯಿಂದೇ ಕಾಗವಲಿದು ಸಮಾಜೋನ್ನತಿಯ ತಿಳವಳಿಕೆಯು ಮನಸ್ಸಿನಲ್ಲಿ ಹುಟ್ಟಿ ಮಹಾಸಭೆಯು ಜನ್ಮವಾಯಿತು. ಈ ಮಹಾಸಭೆಗೆ ಆರಂಭದಲ್ಲಿ ವ್ಯವಸ್ಥಿತ ಸ್ವರೂಪವು ಇರದಿದ್ದರೂ ಕೆಲವುದಿವಸಗಳಾದ ಬಳಿಕ ಅತಿ ಪ್ರಮುಖಪುರುಷರ ಉದಾತ್ತವಿಚಾರ ಮತ್ತೂ ಕೃತಿಗಳಿಂದ ಸಭೆಗೆ ತಕ್ಕಷ್ಟು ಸ್ವರೂಪವು ಬಂದಿತು. ಇದರಿಂದ ನಮ್ಮ ಸಮಾಜದ ಧಾರ್ಮಿಕ ನೈತಿಕಾದಿಯ ಉನ್ನತಿಯಾಗಿ ಐಕಮತ್ಯವು ಹುಟ್ಟಿ ನೆಲೆಗೊಂಡು ಈಗಿನ ಸುಧಾರಿಸಿದ ಕಾಲದಲ್ಲಿ ವೃದ್ಧಿಯನ್ನು ಹೊಂದಬಹುದೆಂಬ ಆಶೆಯು ಸರ್ವತ್ರ ಅಂಕುರಿಸಲಾರಂಭಿಸಿತು. ಆದುದರಿಂದ ಮಹಾಸಭೆಯ ಮೂಲಕ ನಮ್ಮ ಸಮಾಜದಲ್ಲಿಯ ಅನೇಕದೇಶಸ್ಥರ, ಅನೇಕಪಂಗಡದವರ, ಅನೇಕಒಳಭೇದದವರ ವಿಚಾರಗಳು ತಮ್ಮತಮ್ಮಲ್ಲಿಯ ಅಜ್ಞಾನದಿಂದುಂಟಾದ ಭೇದಭಾವವನ್ನು ಅಳಿಯಬೇಕೆಂದಾಯಿತು. ಈ ಐಕಮತ್ಯದ ಸ್ಥೈರ್ಯದ ಶ್ರೇಯವು ಈ ಮಹಾಸಭೆಗಿದ್ದರೂ ಅತ್ಯಂತ ಪರಿಶ್ರಮದಿಂದಲೂ, ನಿರಪೇಕ್ಷೆಬುದ್ಧಿಯಿಂದಲೂ, ಸಹಜಕಳಕಳಿಯಿಂದಲೂ, ಇದನ್ನು ಮೊದಲು ಉತ್ಪನ್ನಮಾಡಿದ ಹಾನಗಲ್ ಶ್ರೀ ಕುಮಾರಸ್ವಾಮಿಗಳ ಕಡೆಗೆ ಇರುತ್ತದೆ. ಇದನ್ನು ನಾವೇ ನಂಬುತ್ತೇವೆಂತಲ್ಲವು. ಪ್ರತ್ಯೇಕ ಮಹಾಸಭೆಯ ಅಧ್ಯಕ್ಷಮಹಾಶಯರು ತಮ್ಮ ಭಾಷಣದಲ್ಲಿ ನಿರ್ವ್ಯಾಜದಿಂದ ಹೇಳಿರುತ್ತಾರೆ. ಈಗಾದರೂ ಮಹಾಸ್ವಾಮಿಗಳ ಆಸೆಯು ಮಹಾಸಭೆಯ ವಿಷಯದಲ್ಲಿ ಇಲ್ಲವೆಂದು ಹೇಳುವುದಕ್ಕಾಗುವದಿಲ್ಲವು. ಆದರೆ ೨-೩ ವರ್ಷಗಳಿಂದ ಮಾತ್ರ ಶ್ರೀಗಳ ಅನಾಸ್ಥೆಯು ಈ ವಿಷಯದಲ್ಲಿ ಕಾಣಬರುವುದಕ್ಕೆ ಕೆಲ ಕಾರಣಗಳಾಗಿರಬಹುದೆಂದು ಹೇಳುವ ಧಿಟ್ಟತನವು ನಮಗೆ ಬರಲಾರದು. ಹೀಗಿದ್ದರೂ ಬೆಳಗಾವಿಯ ಸಭೆಯು ಕೆಲಸವು ಹಾಗೂ ಹೀಗೂ ನಿರ್ವಿಘ್ನತೆಯಿಂದ ಪೂರೈಸಲ್ಪಟ್ಟಿತು. ನಿಪ್ಪಾಣಿಯಲ್ಲಾದ ಮಹಾಸಭೆಯು ಬಹು ವೈಭವದಿಂದ ಕೊನೆಗೊಂಡಿತು. ಆದರೆ ಮಹಾಸಭೆಯು ಮುಂಬ್ಯೋದ್ದಿಷ್ಟವೆನಿಸುವ ಐಕಮತ್ಯವೆಂಬ ದರ್ಪಣವು ಮಾತ್ರ ಒಡೆದು ಛಿನ್ನಭಿನ್ನವಾಗಲಿಲ್ಲವೆಂದು ಹೇಳುವುದಕ್ಕಾಗುವದಿಲ್ಲವು. ಆ ಕಾಲದಲ್ಲಿ ಎಷ್ಟೋ ಸಮಂಜಸರಾದ ಸುಜ್ಞರು ಇದೇ ಕಡೆಯ ಸಭೆಯು ಎಂಬ ಉದ್ಗಾರವನ್ನು ಹೊರಹೊರಡಿಸಲಾರಂಭಿಸಿದರು. ಮತ್ತೂ ಆ ಸಭೆಯ ಅಧ್ಯಕ್ಷಸಾಹೇಬರಾದರೂ ವಿನೋದದಿಂದೇ ಕಾಗಲೊಲ್ಲರು. ಇದೇ ಕಟ್ಟಕಡೆಯ ಸಭೆಯು ಎಂಬರ್ಥವನ್ನು ಧ್ವನಿತಮಾಡಿದರು. ಆದರೆ ಆ ಕಾಲದಲ್ಲಿ ಹೀಗಾಗಲಾರದೆಂದು ನಿಶ್ಚಯಗೊಂಡ ನಮ್ಮ ಅಥವಾ ಈ ಸಮಾಜದ ದುರ್ದೈವದ ಪರಿಣಾಮದಿಂದ ಕಡೆಗೆ ಅದೇ ಸಭೆಯೇ ಕಡೆಯದಾಯಿತೆಂದು ಬಹು ಕಷ್ಟದಿಂದ ತಿಳಿಯುವ ಪ್ರಸಂಗವು ಬಂದಂತಾಗಿರುವದು. ಕಾರಣವೇನಂದರೆ-ಹೋದವರ್ಷದಲ್ಲಿ ಈ ಸಭೆಯಂತೂ ಆಗಲೇಯಿಲ್ಲ. ಈವರ್ಷ ಅರ್ಧ ಜನವರಿಯು ಹೊರಟುಹೋದರೂ ಮಹಾಸಭೆಯ ನಿವೇಶನವು ಇಂಥಲ್ಲಿಯೆಂಬ ವರ್ತಮಾನವು ಯಾವ ಪತ್ರದಲ್ಲಿಯೂ ಕಾಣುವ ಭಾಗ್ಯವು ನಮ್ಮ ಕಣ್ಣುಗಳಿಗೆ ದೊರೆಯಲಿಲ್ಲವು. ಈ ವಿಷಯಕ್ಕೆ ಸ್ಟ್ಯಾಂಡಿಂಗ್ ಕಮಿಟಿಯ ಮೆಂಬರ್ನರು ಪ್ರಯತ್ನಮಾಡಿದ್ದರೂ ಮಾಡಿರಬಹುದು. ಅದರ ಪರಿಣಾಮದ ಫಲವು ಯಾವ ಸಾಪ್ತಾಹಿಕಪತ್ರದಲ್ಲಿಯೂ ಕಾಣಲಿಲ್ಲವು. ಆದರೆ ಒಬ್ಬೊಬ್ಬ ಹಿತಬಾಂಧವರು ಮಾತ್ರ ಸಭೆಯ ವಿಷಯದಲ್ಲಿ ಅನೇಕ ಸೂಚನಾರೂಪಗಳ ವಿಚಾರಗಳನ್ನು ಮಾಡುತ್ತ ಕಡೆಗೆ ಅನೇಕ ದೂರದೂರ ದೇಶಕೋಶಗಳಿಂದ ಪ್ರವಾಹದಂತೆ ವೈಭವದಿಂದ ಬರುವ ಸಾವಿರಾರು ಮಹಾಜನಗ ಸಂದಣಿಯಿಂದ ಶೋಭಿಸುವ ಮಹಾಸಭೆಯನ್ನು ಅನಿವಾರ್ಯಮೂಲಕ ಧಾರವಾಡದಲ್ಲಿಯ ಶ್ರೀ ಜಗದ್ಗುರು ಹಾಲಿನಲ್ಲಿ ಅದೇ ಹೆಸರಿನಿಂದ ಪರಿಮಿತಜನರ ಸಭೆಯನ್ನು ಸೇರಿಸಿ ಮಹಾಸಭೆಯಾಯಿತೆಂದು ಹೇಳಿಕೊಳ್ಳುವದುತ್ತಮವೆಂದೂ ಕೂಡ ಸೂಚಿಸಿದರು. ಇದನ್ನಾದರೂ ಆಚರಿಸುವಂತೆ ನಿರ್ಧರಿಸಿದ ವರ್ತಮಾನವು ಯಾವ ಪತ್ರದಲ್ಲಿಯೂ ಕಾಣುವ ಭಾಗ್ಯವು ಇನ್ನುವರೆಗೂ ಕಂಡುಬರಲಿಲ್ಲವೆಂದು ಬಹು ದುಃಖದಿಂದ ಹೇಳಬೇಕಾಗಿರುವದು. ಇಲ್ಲಿಗೆ ಸಭೆಯು ಜನಿಸಿ (೧೧) ವರ್ಷಗಳು ಮಾತ್ರ ಆದವು. ಈ ಅವಧಿಯಲ್ಲಿ ಸಭೆಯ ಅಧಿವೇಶನಗಳು (೭) ಆಗಿ ಕಡೆಗೆ ಮಹಾಸಮಾಪ್ತಿಯು ಚೆನ್ನಾಗಿ ತೋರುವುದೇ ನಿಶ್ಚಯವಾದರೆ, ಈ ಸಮಾಜದ ಪ್ರತಿಯೊಬ್ಬ ಹಿತಚಿಂತಕನಿಗೆ ಮಾತ್ರ ಕೆಟ್ಟದೆನಿಸುವದೆಂದೇನಲ್ಲ. ಈ ಸಮಾಜವು (೩೪) ಲಕ್ಷ ಜನಸಂಖ್ಯೆಯುಳ್ಳಂಥಾದ್ದಾಗಿದ್ದು, ಧನಾದಿಸಂಪತ್ತಾದರೂ ಯುಕ್ತರೂಪವಾಗಿದ್ದು, ಮಹಾಸಭೆಯು ಇಲ್ಲಿಗೆ ಮುಗಿಯಿತೆಂಬುದನ್ನು ಕೇಳಿ ಪರಮತೀಯ ಪ್ರತ್ಯೇಕ ಸಮಂಜಸ ಪುರುಷನಿಗೂ ಕೆಟ್ಟದೆನಿಸದಿರಲಾರದು. ದೇಶಬಾಂಧವರೆನಿಸುವ, ಜೈನ, ಮಹಾರಾಷ್ಟ್ರ, ಮಾಳಿ, (ಹುಗಾರ) ಮುಸಲ್ಮಾನ ಮೊದಲಾದ ಮತೀಯರ ಸಭೆಗಳು ಆರಂಭವಾದಂದಿನಿಂದ ಈವರೆಗೂ ನಿಯಮಿತಮಿತಿಗೆ ಸರಿಯಾಗಿ ಅವಿಚ್ಛಿನ್ನವಾಗಿ ನಡೆದುಬಂದಿರುವುವುವಲ್ಲದೆ ಸಭೆಯಿಂದ ಆಯಾ ಸಮಾಜಗಳಲ್ಲಿ ಸುಸ್ವರೂಪವು ಪೂರ್ವದೃಷ್ಟಿಯಿಂದ ನೋಡಿದರೆ ಎಷ್ಟೋ ಸುಧಾರಣೆಯ ಪದ್ಧತಿಯಲ್ಲಿದ್ದು ಸರ್ವಾಂಗಸುಂದರವಾದಂತೆ ಕಂಡುಬರುತ್ತದ. ಇದಕ್ಕೆ ಮುಖ್ಯಕಾರಣವಾದರೂ ಆಯಾ ಸಭೆಗಳಲ್ಲಿ ಪಾಸುಮಾಡಿದ ಠರಾವುಗಳನ್ನು ಸಮಾಜದಲ್ಲಿ ಆಚರಣೆಯಲ್ಲಿ ತರುವುದಾಗಿರುತ್ತದೆ. ಸಭೆಯು ಐಕಮತ್ಯದಿಂದ ಕೂಡಿ ನಿರ್ವಿಘ್ನತೆಯಿಂದ ಪೂರೈಸುತ್ತ ಬಂದಿರುವುದರಿಂದ ಆಯಾ ಸಮಾಜದವರ ವಿಶ್ವಾಸವು ಆಯಾ ಸಭೆಯ ವಿಷಯದಲ್ಲಿ ಅಪ್ರತಿಹತವಾಗಿ ಕಂಡುಬರುತ್ತದೆ.

(ಸಶೇಷ.)

ವಿಜ್ಞಾಪನೆ.

ಈ ಸಮಯ ಬಿಡಬೇಡಿರಿ. ಮುಂದೆ ದೊರೆಯಲಾರದು. ಮೊಳಕಾಲ್ಮುರುವಿನ ಪ್ರಸಿದ್ಧವಾದ ರೇಶ್ಮೆಯವಸ್ತ್ರಗಳು ಬೇಕೋ? ಬೆಲೆಸುಲಭ! ಬಣ್ಣ ಗ್ಯಾರಂಟಿಯಾದದ್ದು. ಒಂದು ಸಲ ತರಿಸಿನೋಡಿರಿ !! ನಮ್ಮಲ್ಲಿ ಹೊದಿಯುವ ವಸ್ತ್ರಗಳೂ, ಮೊಗಟಗಳೂ, ಸೀರೆಗಳೂ, ನಡಕಟ್ಟುಗಳೂ, ಲಿಂಗದವಸ್ತ್ರಗಳೂ, ಶೈವ ವಸ್ತ್ರಗಳೂ ಬಹಳ ಚೆನ್ನಾಗಿ ಎಲ್ಲಾ ರಂಗಿನಲ್ಲಿಯೂ ತಯಾರಾಗುತ್ತವೆ. ನಾವು ಮೈಸೂರು, ಮದ್ರಾಸು ಸೀಮೆಗಳ ಎಲ್ಲಾ ಭಾಗಕ್ಕೂ ನಮ್ಮ ಮಾಲನ್ನು ರವಾನಿಸುತ್ತೇವೆ. ನಮ್ಮ ಮಾಲುಗಳಿಗೆ ಬಹುಮಾನಗಳೂ, ಮೆಡಲುಗಳೂ, ಬಂದಿವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಹಿಮಂತಋತುವಿನ ದರಗಳು. ೧ನೆ ನಂ ವಸ್ತ್ರಗಳು ತೊಲೆ ೧ಕ್ಕೆ ೦-೨-೦. ೨ನೆ ನಂ. ವಸ್ತ್ರಗಳು ತೊಲೆ ೧ಕ್ಕೆ ೦-೬-೯. (ಮೊಗಟ) ಅರಳೆಪೇಟಿ ಸೀರೆಗಳೂ, ನಡಕಟ್ಟು, ಲಿಂಗದವಸ್ತ್ರಗಳು, ೧ನೆ ನಂ. ಮಾಲು ತೊಲೆ ೧ಕ್ಕೆ ೦-೮-೦. ೨ನೆ ನಂ. ಮಾಲು ತೊಲೆ ೧ಕ್ಕೆ ೦-೭-೬.

ನಮ್ಮವಿಳಾಸ:—
8 ಎಂ. ಎಸ್. ಮಲಕಣ್ಣ, ಮತ್ತು ಬ್ರದರ್ಸ್,
ರೇಶ್ಮೆ ಜವಳಿ ವ್ಯಾಪಾರಿಗಳು. ಪೋಸ್ಟ ಮೊಳಕಾಲ್ಮುರು.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

4

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪ್ರದ್ರೇಕವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ,ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲಿ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೊಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೊಲೆಗೆ ರೂ. -೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧ ಸಂಗಡವೇ ರವಾನಿಸುವೆವು.

ವಿಳಾಸ —ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೈಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೦ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೋಳುಸಹಿತ ಆದ ಸಮಾರಂಭ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೦ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೋ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೦ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವಿರಕ್ತೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೋ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಶಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೋ ಸಿಕ್ಕುತ್ತವೆ ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.



ಹೊಸಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಈಪ್ರಕಾರ ೨ ಫೋಟೋ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ॥।=, ೧, ೧।. ಪ್ರಕಾರ, ಮತ್ತೂ ಬೆಳ್ಳೀದು ರು ೧। ರೋಡ್ ಗೋಲ್ಡ ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨॥। ರೂ.

ವೂರೂರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಡಾಣೆ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ.

ನಮ್ಮವಿಳಾಸ— ಗಂಗಪ್ಪಾ ಜೀರಿಗೆ,
39 ಆರ್ಟಿಸ್ಟ, ಸೊಲ್ಲಾಪುರ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ
ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂ
ಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು
16 ಕಾಪಾಡುವುದರಲ್ಲಿ ಶ್ರೇಷ್ಠತಮವಾದ

ಶ್ರೀಕಂಠಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ—ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕಂಠಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು—ಕೆಮ್ಮು-ನೆಗಡಿ—ದಿನಜ್ವರ—ಮೂರರಜ್ವರ ನಾಲ್ಕರಜ್ವರ— ಮಲೇರಿಯಾಜ್ವರ— ತಲೆನೋವು— ಮೈಕೈನೋವು ಮತ್ತು ಭಾರ—ಅರೋಚಕ ಹಲ್ಲುನೋವು-ಹೊಟ್ಟೆನೋವು—ಮಲಬಂಧ-ಅಜೀರ್ಣಭೇದಿ—ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳೆತ—ಹೊಟ್ಟೆಯುಬ್ಬರ—ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೨೪೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ. ಪಿ ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಕೆ, ಮಲಬಂಧ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತತ್ಕ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೪೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ॥ಡಿ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

55



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲಿ ಸಂದುಗಳ ನೋವು ಮೈ ಕಾಲು ಹೊಣೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚಾಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೪ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೦ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣ ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇವೊಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯದ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧—೦—೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬಹುಮಾನ! ಶ್ರೀ ಬಹ

ಅತ್ಯಾಶ್ಚರ್ಯಕರವಾದ ಬಹುಮಾನ
೨೪ ಸಾವಿರ ರೂಪಾಯಿಗಳು ಹಂಚಲ್ಪ
ದಿವ್ಯೌಷಧ ಬಳ್ಳಾರಿ. ಸುಪ್ರ
ಸರ್ವಜನಮನೋಲ್ಲಾಸಿನಿ ಅಂಡ್ ಕೋ

(• ನಾರಸಿಂಹಚೂರ್ಣವು •)

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಪುಂಗವ ।
ಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಂವಲಂ ॥
ಷ್ಟ. ಆದರೆ ಅನೇಕ ದುರ್ವ್ಯರ್ತನಗಳಿಂದ ಮಹಲಂ ।
ವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲಜ್ವಲಂ ॥
ಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನು
ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ
ಕ ವೈದ್ಯರು ಹಲವುವಿಧ ಔಷಧಗಳನ್ನು ವಿಶೇಷ
ಯನಿಟ್ಟು ವಿಕ್ರಯಿಸಿದರು ಪ್ರಯೋಜನವು ಮಾಸುಂಚಿಕೆ ೪
ಯಾಗುತ್ತಿರುವದು ವಿಷಾದಕರವಾಗಿಗುವದು
ವನ್ನು ಹೋಗಲಾಡಿಸುವುದಕ್ಕಾಗಿ (ನಾರಸಿಂಹೌಷಧಗಳು.
ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂ
ಸಿದ್ಧಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮ-೧—೦
೧೪ ದಿನಗಳು ಸೇವಿಸಿದರೆ ಮುದುಕತನ, ಅನೇಕ-೮—೦
ಮೇಹರೋಗಗಳು, ಪಾಂಡುರೋಗ, ಪೀನಸ, ೧-೮—೦
ಬಗೆಯಾದ ಕುಷ್ಠಗಳು, ಎಂಟುವಿಧ ಉದರರೋಗ—೦
ಭಗಂದರವು, ಮೂತ್ರಕೃಚ್ಛ್ರವು, ಗೃಧ್ರಸೀವಾತವು—೦
ಲೆ, ಕ್ಷಯವು ಮಹಾಶ್ವಾಸಗಳು, ದಾರುಣ—೦

ಗೆಯಾದ ಕಾಸೆಗಳು, ಎಂಭತ್ತುವಿಧಗಳಾದ ವಾತರೋಗಗಳು, ನಲವತ್ತು ಬಗೆಯಾದ ಪಿತ್ತಗಳು, ಇಪ್ಪತ್ತು ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಸಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ ಚಿನ್ನದಂಥಾ ಕಾಂತಿಯು, ಸಿಂಹನಂತೆ ಪರಾಕ್ರಮವು, ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯು ಅತ್ಯಧಿಕ ವೀರ್ಯವೃದ್ಧಿಯು ನೃಸಿಂಹನಿಗೆ ಸಮಾನರಾದ ಮಕ್ಕಳನ್ನು ಪಡೆಯುವಬಲವೂ ಉಂಟಾಗುವುದು ಇದರಲ್ಲಿ ಯಾವ ವಿಧವಾದರಸಗಳಾಗಲಿ ಮಿಶ್ರವಾಗಿಲ್ಲ, ಇನ್ನಾವ ದೋಷಗಳೂ ಇಲ್ಲ. ನಿರ್ದುಷ್ಟವಾದದ್ದು, ಫಕ್ತವನಸ್ಪತಿಗಳಿಂದಲೇ ಸಿದ್ಧಮಾಡಿದದಿವ್ಯವಾದ ಔಷಧ. ಅನೇಕ ಪಂಡಿತರು, ಧನಿಕರು' ಸರ್ಟಿಫಿಕೇಟುಗಳನ್ನು ಕೊಟ್ಟಿರುವರು.

೧೪ ದಿನ ಉಪಯೋಗಕ್ಕೆಬರುವ ಡಬ್ಬಿ ೧ ಕ್ಕೆ ಬೆಲೆ ರೂ. ೧—೦—೦

—(ಬಹುಮಾನಗಳನ್ನು ಹಂಚುವ ವಿಧಾನ)—

೧ ದರ್ಜ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೧೦೦೦೦ ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೬೦೦೦ ರೂ. ೩ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೪೦೦೦ ರೂ. ೨ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೩೦೦೦ ರೂ. ೧ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ೨೦೦೦ ರೂ.

೧೯೧೪ ನೇ ಜುಲೈ ೧ ನೇ ತೇದಿ ಮೊದಲು ೧೯೧೫ ನೇ ಜುಲೈ ೧ ತೇದಿಯವರಿಗೂ ಈ ಔಷಧವು ಒಂದು ಲಕ್ಷ ಡಬ್ಬಿಗಳು ಖರ್ಚಾದಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ. ಒಂದುಪಕ್ಷದಲ್ಲಿ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ವಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡೆಯುವದಲ್ಲದೆ ಬಹುಮಾನವನ್ನು ಸಹಾ ಹೊಂದುವದಕ್ಕೆ ಅರ್ಹನಾಗಿರುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರು ಸಂಶಯವಿಲ್ಲ. ಬಹುಮಾನದ ಮೊತ್ತವು ನಿಷ್ಪಕ್ಷಪಾತವಾಗಿ ಒಂದೇ ಸಮವಾಗಿ ಹಂಚಲ್ಪಡುವವು. ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಕುಹಕತನವು ಇಲ್ಲ, ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರ ಮಾತುಗಳಿಗೆ ನಿಗಾ ಕೊಡಲಾಗದು, ಜಾಗ್ರತೆ ತರಿಸಿಕೊಳ್ಳಿರಿ. ಔಷಧದ ಗುಣವನ್ನು ಪರೀಕ್ಷಿಸಿರಿ ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇದಲ್ಲದೆ ನಮ್ಮಲ್ಲಿ ಇನ್ನು ಅನೇಕತರಹೆಯ ಔಷಧಗಳು ಸಿಗುತ್ತವೆ. ರೋಗದಲಕ್ಷಣವನ್ನು ತಿಳಿಸಿದರೆ ಅಮೂಲ್ಯವಾದ ಮತ್ತು ಗುಣಕಾರಿಗಳಾದ ಔಷಧಗಳನ್ನು ಕಳುಸುವೆವು.

ಇದರ ಅನುಪಾನ ಪತ್ರಿಕೆಯನ್ನು ಬಹುಮಾನದ ಟಿಕೀಟನ್ನು ಡಬ್ಬಿಸಂಗಡ ಕಳಿಸುವೆವು. ನಮ್ಮ ಕಂಪೆನಿಯ ಕಾಶಿವಿಶ್ವನಾಥ ಮಾರ್ಕು ಇಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು.

ನಮ್ಮ ಅಡ್ರೆಸ್ಸು.
ಸರ್ವಜನಮನೋಲ್ಲಾಸಿನಿ ಅಂಡ್ ಕೋ ಬಳ್ಳಾರಿ.

ಸನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು

ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗ
ಶ್ರೀಮಂತ ರಾ॥ ದನಗಳ ಪಟಗಳೂ ಯುದ್ಧದ ಹಡಗುಗಳ
ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗ
ಸೋಲಾಪುರಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ
ದಲ್ಲಿ ಅವರ ಸಮಾರಾಧಕ್ಕೆ ಬಂದಿರುತ್ತದೆ. ಇದು ಬಹು ಅಮೂ
ವಾಗಿ ನಿರ್ಮಿಸಲ್ಪಟ್ಟಿತವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬ
ಮಂಟಪದಲ್ಲಿ ಇದೇ ಊಳ್ಳಿ ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.
ಸಗಳಲ್ಲಿ ಒಳ್ಳೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತ
ಈ ಮೂರು ದಿವ ಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾ
ಟಿಯುವರೆಗೂ ಇರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವ
ಮಾಧಿಯ ಪೂಜೆ ಮೊದಲಾದ ಸುಂದರವಾದ ಪಟಗಳು. ಕ್ರಯ
ಷೋಡಶೋಪಚಪಿ. ಯಲ್ಲಿ ೪ ಆಣೆ
ಎರಡನೇ ದಿವಸಗಸ. ದಿ ಜನರಲ್ ಏಜನ್ಸಿ. ಮೈಸೂರು. 68

ಬಗ್ಗೆಗೂ ಅನ್ನ
ಜರುಗಿ, ಸಾಯು
ವರೆಗೂ ವೇ॥
ಜಗದೀಶಶಾಸ್ತ್ರಿ
ಮಂತರ ಜೀವ
ಜವಳಿಗೀಕರ
ಸಾಧಿಕ ಮಂಡ
ಗಿ ಜರುಗಿದವು.
ರಿಗೂ ಅನಾಥ
ನಾಲು

ನ್ಯಾಯದರ್ಪಣ.

ಇದರಲ್ಲಿ ಪ್ರತಿಮನುಷ್ಯನೂ ತಿಳಿದುಕೊಳ್ಳಬೇಕಾದ ಲೌಕಿಕ ವ್ಯವಹಾರಕ್ಕೆ ಸಂಬಂಧಪಟ್ಟ ಸಿವಿಲ್, ಕ್ರಿಮಿನಲ್, ರೆವಿನ್ಯೂ, ಹಿಂದೂಲಾ ವಿಷಯವಾದ ಸಮಸ್ತ ಮುಖ್ಯಸಂಗತಿಗಳೂ, ಹೊಸದಾಗಿ ಜಾರಿಗೆ ಬಂದಿರುವ ಗ್ರಾಮ ಮುನಸಿಫ್ ಕೋರ್ಟಿನ ಕಾನೂನೂ ಮತ್ತೂ ರೂಲ್ಸೂ, ಮನೆಗಳನ್ನು ಹಿಸ್ಸೆ ಮಾಡಿಕೊಳ್ಳತಕ್ಕ ಕಾನೂನೂ, ಆಚರಣೆಯಲ್ಲಿರತಕ್ಕ ನಾನಾವಿಧಗಳಾದ ದಸ್ತೈವಜು ವಗೈರೆಗಳ ಅನೇಕ ನಮೂನೆಗಳೂ, ಕ್ರಿಮಿನಲ್, ರೆವಿನ್ಯೂ ಕೋರ್ಟುಗಳಿಗೆ ಕೊಡತಕ್ಕ ಅರ್ಜಿಗಳ ಮಾದರಿಗಳೂ ಅಡಗಿ ಇರುತ್ತವೆ. ಬೆಲೆ ರೂ. 1-8-0. ವಿ. ಪಿ. ಮೂಲ್ಯ 1-12-0.

ಎಂ. ಎಸ್. ನಂಜಪ್ಪನವರು,
ಪ್ಲೀಡರ್, ಲ್ಯಾನ್ಸ್‌ಡೌನ್ ಬಜಾರ್, ಮೈಸೂರು. 50

ಪ್ರಸಿದ್ಧವಾದ ಪಂಜಾಸಾಲಾಮಿಸ್ರಿ ಮುರಬ್ಬಾ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವವನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಪಂಜಾ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳಿಗೆಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟು ಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾ ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುದು ತಿಳಿದುಬರುತ್ತೆ.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ನೀರಿನಂತಿರುವ ಧಾತುವನ್ನು ಘಟ್ಟಿಪಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿ ಹೋಗುವ ಧಾತುವನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಉರಿಯುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕ್ಷಣಕ್ಷಣಕ್ಕೂ ಮೂತ್ರವಾಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೆದುಳಿಗೆ ಬಲವನ್ನು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ತಾಂಬ್ರ ಮತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲ ಬರುವಂತ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವುದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕಂಡುಬರುತ್ತೆ. ೨-೩ ಡಬ್ಬಿಗಳನ್ನು ಉಪಯೋಗಿಸುವದರಿಂದ ಜನ್ಮಾಂತರದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು „ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ
೫೦೦ ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ಕ್ಕೆ ರೂ. ೨-೦-೦. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ ೬ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಏಜಂಟರು—ಡಿ. ಸೈಯುದ್ ಉಸ್ಮಾನ್ ಅಂಡ್ ಕೋ, ದೊಡ್ಡಪೇಟೆ, ಬೆಂಗಳೂರು ಸಿಟಿ.
ಡಿ. ಮನ್ನಾಲಾಲ್ ಡಿಲ್ಲೀವೈದ್ಯರು, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

S.U.N.&.C.
KASHI
VISHWESHWAR

17

ದೊಡ್ಡಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ. ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು. ವಿಳಾಸ-ಎಸ್. ಯು. ಎನ್ ಮತ್ತು ಕಂಪೆನಿ, ಬನಾರಿಸ್ ಸಿಟಿ (ಕಾಶೀ)

೧೯೧೫ ನೆಯ
ಶ್ರೀ ಸೀತಾರಾಘವ
ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಶಾಯಿ ಇಳಿಯದ ಉತ್ತಮವಾದ ಕಾಗದ ಮುದ್ದಾದ ಮುದ್ರಣ. ಅನೇಕವಾದ ಹೊಸಸಂಗತಿಗಳಿವೆ.

೧ ನಂ.—ಸಣ್ಣಸೈಜು ಸಾದಾ	೦-೪-೦
೨ ನಂ.—ಪೆನ್ಸಿಲ್ ಮುಚ್ಚುಳವುಳ್ಳದು	೦-೬-೦

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ

೩-೪ ನೆಯ ನಂಬರ್ ಡೈರಿಗಳು ಮುಗಿದುಹೋಗಿವೆ.

ಹೆಚ್ಚಾಗಿ ತರಿಸುವವರಿಗೆ ರೂಪಾಯಿ ೧ ಕ್ಕೆ ೦-೨-೦ ಕಮಿಷನ್ ದೊರೆಯುವುದು ವಿಳಾಸ.—

ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.

16

ಊದುಬತ್ತಿಗಳು.

37

ವಿಧವಿಧವಾದ ಊದುಬತ್ತಿಗಳು ಸೇರು ೧ಕ್ಕೆ ೧೨-೦-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪರ್ತಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್‌ಸನ್ಸ್
ಸುಗಂಧಕಾರಿ, ಮೈಸೂರು.

ಗಂಧರಾಜ ನಸ್ಯದಪುಡಿ.

46

ಈ ಪುಡಿಯನ್ನು ಹಾಕಿಕೊಳ್ಳುವದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದ್ದರೂ ತಪ್ಪದೆ ಗುಣವಾಗುತ್ತದೆ. ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚಿಟಿಕೆ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜ಼ನ್ ಡಬ್ಬಿಗೆ ೨-೨-೦

ಉತ್ತಮವಾದ ನಸ್ಯದಪುಡಿ.

ಧಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು ನಾಲಿಗೆ ಅರೋಚಕಗಳು ಹೋಗುತ್ತವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡಜ಼ನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ—ಕೆ. ಮಲ್ಲಿಕಾರ್ಜುನಸೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್
ಕೊಳ್ಳೇಗಾಲದ ತಾಲ್ಲೂಕು.

೧೯೧೫ನೆಯ ಇಸವಿ ಜನವರಿ ತಾ॥ ೧೭ರಿಂದ ೧೯೧೫ನೆಯ ಜನವರಿ ತಾ॥ ೨೩ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ಮಾಘ ಶು॥ ಬಿದಿಗೆಯಿಂದ ಮಾಘ ಶು॥ ಅಷ್ಟಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕ ತೇದಿ
17	[1]ಭಾನು	ಬಿದಿ	29-26	ಶ್ರವಣ	9-22	4
18	[2]ಸೋ	ತದಿ	28-16	ಧನಿಷ್ಠ	9-41	5
19	[3]ಮಂಗ	ಚೌ	29-11	ಶತಭಿಷ	11-13	6
20	[4]ಬುಧ	ಪಂ	30-51	ಪೂಭಾ	14-10	7
21	[5]ಗುರು	ಷಷ್ಠಿ	34-1	ಉಭಾ	18-2	8
22	[6]ಶುಕ್ರ	ಸಪ್ತ	38-7	ರೇವತಿ	23-6	9
23	[7]ಶನಿ	ಅಷ್ಟ	43-2	ಅಶ್ವಿನಿ	29-0	10

(1) ಚಂದ್ರೋದಯಃ, ಕೈಲಾಸಗೌರೀವ್ರತಂ, ರಬ್ಬಿಲಪಲ್ ಚಂ ೧. (2) ವಿಜಾನಿವಿವಾಹಃ. (3) ಮೃತ್ಯುಯೋಗಃ. (4) ತರಳಪಂಚಮಿ, ಪೇಷೆವಿವಾಹಃ. (5) ಕುಮಾರಷಷ್ಠಿ, ವಿಜಾನಿವಿವಾಹಃ. (6) ಸೂರ್ಯಸಾವರ್ಣಿಮನ್ವಾದಿಃ, ರಥಸಪ್ತಮಿ, ಸೂರ್ಯಚಂದ್ರವ್ರತಂ, ಹೇಮಗಿರಿ ರಂಗಸ್ವಾಮಿರಥಃ, ಶ್ರೀರಂಗಪಟ್ಟಣದಲ್ಲಿ ರಂಗರಥಃ, ಅಪ್ರತಸಿದ್ಧಿಯೋಗಃ. (7) ಭೀಷ್ಮಾಷ್ಟಮಿ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M.124

ಮೈಸೂರ್ ಸ್ಟಾರ್.

ಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ।
ನಮಥಕೃತಾವತಾರಾ ಪಕ್ಷ್ಯಜ್ಞನಹೃತ್ತಮೋಹರಾಜೀಯಾತ್ ॥

ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ ।
ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಪಲಂ ॥
ಸಿನಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ ।
ಪ್ರೇಮಂಬೆತ್ತಿಳೆಯುಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೧೪—೦

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಸಂಪುಟ ೨೮) ಮೈಸೂರ್ ಸ್ಟಾರ್ ಸರ್ ೧೯೧೫ ನೆಯ ಇಸವಿ ಜನವರಿ ತಾರೀಖು ೨೪ ನೆಯ ಭಾನುವಾರ. (ಸಂಚಿಕೆ ೪

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಈ ಕೆಳಗೆ ವಿವರಿಸಿರುವ ೧೧ ಸಾಮಾನುಗಳಿಗೆಮಾತ್ರ ಪ್ಯಾಕಿಂಗ್ ಪೋಸ್ಟೇಜು ಯಾವುದೂ ಇಲ್ಲದೆ ಮುಫತ್ತಾಗಿ ರವಾನಿಸುತ್ತೇವೆ.

50

ಎಂಟಾಣೆ ಮೇಲ್‌ಪಟ್ಟದ್ದನ್ನೆಲ್ಲಾ ಮಣಿಯಾರ್ಡರ್ ಮುಖಾಂತರ ಕಳುಹಿಸುವುದುತ್ತಮ.

ನಂ. ೧. ೩ ಪೈ ಬಾಬ್ತು ಪೋಸ್ಟೇಜು ಸ್ಟ್ಯಾಂಪ್ ಕಳುಹಿಸುವವರಿಗೆ ೧೯೧೫ ನೇ ಇಸವಿಯ ಸಚಿತ್ರ ಕ್ಯಾಲೆಂಡರ್ ಒಂದನ್ನು ಉಚಿತವಾಗಿ ರವಾನಿಸುತ್ತೇವೆ.

೨. ಒಂದೂವರೆಯಾಣೆ ಬಾಬ್ತು ಪೋಸ್ಟೇಜು ಸ್ಟ್ಯಾಂಪ್ ಕಳುಹಿಸುವವರಿಗೆ ಆಟೋಮೋಹಿನಿ ಪರಿಮಳ ಕಾರ್ಡುಗಳನ್ನಾಗಲೀ, ಅಥವಾ ಕಾಮಿನಿಯಾ ಆಯಿಲ್ ಸ್ಯಾಂಪಲ್ ಶೀಶೆಯನ್ನಾಗಲೀ ರವಾನಿಸುತ್ತೇವೆ.

೩. ಎರಡೂವರೆಯಾಣೆ ಬಾಬ್ತು ಪೋಸ್ಟೇಜು ಸ್ಟ್ಯಾಂಪ್ ಕಳುಹಿಸುವವರಿಗೆ ಓಟೋಮೋಹಿನಿ ಸೆಂಟ್ ಸ್ಯಾಂಪಲ್ ಟ್ಯೂಬಾಗಲೀ, ನ್ಯಾಷನಲ್ ಬ್ಲೂಬ್ಲಾಕ್ ಇಙ್ಕ್ ಪೌಡರ್ ಪೊಟ್ಟಣ ಒಂದಾಗಲೀ, ಸರ್ಸೀ ತಾಂಬೂಲಮಿತ್ರ ೨೫೦ ಮಾತ್ರೆಗಳುಳ್ಳ ಪೊಟ್ಟಣ ಒಂದಾಗಲೀ, ಅಥವಾ ಹೆಡ್ಡೇಕ್‌ಕ್ಯೂರ್ ತಲೇನೋವಿನ ಔಷಧ ಮಾತ್ರೆಡಬ್ಬಿ ಒಂದಾಗಲಿ ನೀವು ಅಪೇಕ್ಷಿಸಿದ್ದನ್ನು ರವಾನಿಸುತ್ತೇವೆ.

೪. ನಾಲ್ಕಾಣೆ ಬಾಬ್ತು ಸ್ಟ್ಯಾಂಪ್ ಕಳುಹಿಸಿರಿ ನಿಮಗೆ ಶೀಮೇತಯಾರಿ ಹಲ್ಲುಪುಡಿ ಡಬ್ಬಿ ಒಂದನ್ನು ರವಾನಿಸುತ್ತೇವೆ.

೫. ೬॥ ಆಣೆ ಪೋಸ್ಟೇಜು ಸ್ಟ್ಯಾಂಪ್ ಕಳುಹಿಸಿರಿ ನಿಮಗೆ "ಜಾಮಲಿ" ಎಂಬ ಹೊಸಕಾದಂಬರಿ ಪುಸ್ತಕವನ್ನು ರವಾನಿಸುತ್ತೇವೆ.

೬. ೩॥ ಆಣೆ ಸ್ಟ್ಯಾಂಪ್ ಕಳುಹಿಸಿರಿ "ಶ್ರೀಬಸವೇಶ್ವರಸ್ತೋತ್ರ" ಗುರುಬೋಧೆ, ಮನೋಬೋಧೆ, ಲಿಂಗತ್ರವಿಧಿ ಇವು ೪ ಇರುವ ಪಾರಾಯಣಕ್ಕೆ ಯೋಗ್ಯವಾದ ಪುಸ್ತಕವನ್ನು ರವಾನಿಸುತ್ತೇವೆ.

೭. ೭ ಆಣೆ ಸ್ಟ್ಯಾಂಪ್ ಕಳುಹಿಸಿರಿ "ಶತಕಪಂಚಕ" ವೆಂಬ ಬೇರೆಬೇರೆ ೫ ಶತಕಗಳಿರುವ ಪುಸ್ತಕವನ್ನು ರವಾನಿಸುವೆವು.

೮. ೧೦ ಆಣೆ ಸ್ಟ್ಯಾಂಪ್ ಕಳುಹಿಸಿರಿ "ಮನೋವಿಜಯ" ವೆಂಬ ಸರ್ವರೂ ಅಗತ್ಯ ಓದಬೇಕಾದ ಗ್ರಂಥವನ್ನು ರವಾನಿಸುತ್ತೇವೆ.

೯. ೧೧ ಆಣೆ ಸ್ಟ್ಯಾಂಪ್ ಕಳುಹಿಸಿರಿ ಒಂದುಡಜ಼ನ್ ಓಟೋಮೋಹಿನಿ ಸೆಂಟ್‌ಕಾರ್ಡನ್ನು ರವಾನಿಸುತ್ತೇವೆ.

೧೦. ೧೨ ಆಣೆ ಸ್ಟ್ಯಾಂಪ್ ಕಳುಹಿಸಿರಿ "ರಾಜಪುತ್ರಜೀವನಸಂಧ್ಯಾ" ಎಂಬ ಹೊಸಕಾದಂಬರಿಯನ್ನು ರವಾನಿಸುತ್ತೇವೆ.

೧೧. ೧೪ ಆಣೆ ಕಳುಹಿಸುವವರಿಗೆ ಪ್ರತಿಯೊಬ್ಬ ಹಿಂದುವಿಗೂ ಅತ್ಯವಶ್ಯಕವಾಗಿ ಬೇಕಾದ ತಾವಿಷ್ಟಪಟ್ಟ ಕಡೆ ತಮಗೆ ಬೇಕಾದ ವಿಗ್ರಹಗಳನ್ನು ಛಾಪಿಸಬಹುದಾದ ಹಿಂದೂದೇವರ ೬ ರಬ್ಬರ್ ಮೊಹರುಗಳಿರುವ ಸುಂದರವಾದ ಪೆಟ್ಟಿಗೆ ೧ ಸ್ವತಹ ಸದಾ ಶಾಯಿಯಿರುವ ಮೆತ್ತೆ ೧ (ಸೆಲ್ಫಿಂಕ್‌ಪ್ಯಾಡ್) ಇವಿಷ್ಟನ್ನೂ ರವಾನಿಸುತ್ತೇವೆ.

ಸ್ಕೂಲ್‌ಮಾಸ್ಟರ್‌ಗಳಿಗೂ ವಿದ್ಯಾರ್ಥಿಗಳಿಗೂ ಸೂಚನೆ.

ಅಗ್ಗವೆಂದು ಬಜಾರಿಶಾಯಿಪುಡಿಯನ್ನು ಉಪಯೋಗಿಸಿ ಬರವಣಿಗೆ ಚನ್ನಾಗಿರದೆ ಬೇಜಾರು ಹೊಂದಿರುವಿರಷ್ಟೆ. ನಮ್ಮಲ್ಲಿ ಬಿಕರಿಯಾಗುವ ಹೊಸತಯಾರಿ ನ್ಯಾಷನಲ್ ಬ್ಲೂಬ್ಲಾಕ್ ಇಙ್ಕ್ ಪೌಡರನ್ನು ಒಂದುಸಾರಿ ಉಪಯೋಗಿಸಿದಲ್ಲಿ ಗುಣವು ನಿಮಗೆ ವ್ಯಕ್ತವಾಗುತ್ತೆ.

"ನ್ಯಾಷನಲ್ ಬ್ಲೂಬ್ಲಾಕ್ ಇಙ್ಕ್ ಪೌಡರ್" ಪೊಟ್ಟಣ ೧ಕ್ಕೆ ೦—೨—೦. ೧೨ ಪೊಟ್ಟಣಗಳಿಗೆ ೧—೫—೦. ಟಪಾಲ್ ಖರ್ಚು ಮಾಫಿ. ೧ ಪೊಟ್ಟಣ ಪುಡಿಯಲ್ಲಿ ೨೦ ಅವುನ್ಸು (ಅಂದರೆ ಮುಕ್ಕಾಲು ಶೀಶೆ) ಶ್ರೇಷ್ಠವಾದ ಬ್ಲೂಬ್ಲಾಕ್ ಶಾಯಿಯಾಗುತ್ತೆ. ಈ ಶಾಯಿಯಲ್ಲಿ ಮಸ್ಟು ನಿಲ್ಲುವುದಿಲ್ಲ. ನಿಬ್ಬು ತುಕ್ಕುಹಿಡಿಯುವುದಿಲ್ಲಾ, ಬರೆದನಂತರ ಪೇಪರ್ ಒಂದಕ್ಕೊಂದು ಅಂಟಿಕೊಳ್ಳುವುದಿಲ್ಲಾ, ಬರೆದ ಅಕ್ಷರಗಳು ಹರಡಿಕೊಳ್ಳುವುದಿಲ್ಲಾ, ಬರೆಯುವುದಕ್ಕೆ ಮನೋಹರವಾಗಿಯೂ ಬರೆದನಂತರ ನೋಡಲು ಅಂದವಾಗಿಯೂ ಇರುತ್ತೆಯಾಗಿ ಅನೇಕರು ಇದನ್ನೇ ಉಪಯೋಗಿಸುತ್ತಲಿದ್ದಾರೆ.

ಡಮೇಕ್ರಿಯದ ಕೆಲಸಕ್ಕೆಬಾರದ ವಾಚ್‌ಗಳನ್ನು ತೆಗೆದುಕೊಂಡು ನಿಮ್ಮ ಹಣವನ್ನು ಯಾಕೆ ವ್ಯರ್ಥ ಮಾಡಿಕೊಳ್ಳುವಿರಿ ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಖಾತ್ರಿಯಾದ ಈ ಕೆಳಗೆ ವಿವರಿಸಿರುವ ವಾಚ್‌ಗಳನ್ನು ತರಿಸಿ ಪರೀಕ್ಷಿಸಿರಿ.

ಜರ್ಮನ್‌ಮೇಡ್ ಡ್ರೆಸ್‌ವಾಚೆಂಬ ಮ್ಯೂಡಿಯಂಸೈಜ್ ಲಿವರ್ ವಾಚ್ ೧ ಕ್ಕೆ ೮—೧೨—೦. ಡಬ್ಬಲ್ ಪೀಕಾಕ್ ವಾಚೆಂಬ ಲಿವರ್‌ವಾಚ್ (ನವಿಲುಮಾರ್ಕುಳ್ಳದ್ದು) ತೆಳುವಾಗಿಯೂ ಚಿಕ್ಕಸೈಜಾಗಿಯೂ ಇರುತ್ತೆ ೧ಕ್ಕೆ ೧೦-೮-೦.

ಈ ಮೇಲ್ಕಂಡ ವಾಚುಗಳು ಗೌರ್ನಮೆಂಟ್ ಗುಂಡಿಗೂ, ಟೆಲಿಗ್ರ್ಯಾಂಟೈಮಿಗೂ, ರೈಲ್ವೇಟೈಮಿಗೂ, ಕೂಡ ಸ್ವಲ್ಪವೂ ವ್ಯತ್ಯಾಸಬರದಂತೆ ಬಹಳ ಬಂದೋಬಸ್ತಾದ ಯಂತ್ರೋಪಕರಣಗಳಿಂದ ಪ್ರಖ್ಯಾತರಾದ ಕಾರೇಗಾರರಿಂದ ಅಂದವಾಗಿ ತಯಾರಿಸಲ್ಪಟ್ಟು ಪ್ರತಿನಿತ್ಯವೂ ಅನೇಕ ಖರ್ಚಾಗುತ್ತಲಿವೆ. ಹೊತ್ತುಹೊತ್ತಿಗೆ ಸರಿಯಾಗಿ ಕೆಲಸಮಾಡತಕ್ಕ ಲಾಯರ್‌ಗಳಿಗೂ, ಸ್ಕೂಲ್‌ಮಾಸ್ಟರ್‌ಗಳಿಗೂ, ವಿದ್ಯಾರ್ಥಿಗಳಿಗೂ, ವರ್ತಕರೇ ಮೊದಲಾದ ವಿಸಿಷ್ಟಜನಗಳಿಗೂ ಕೂಡ ಈ ವಾಚು ತುಂಬಾ ಸಹಾಯಕಾರಿಯಾಗಿರುತ್ತೆಯಾಗಿ ಪ್ರತಿಯೊಬ್ಬರೂ ಈ ಮಾದರಿ ಒಂದೊಂದು ವಾಚನ್ನು ಇಡುವುದರಿಂದ ತುಂಬಾ ಪ್ರಯೋಜನವನ್ನು ಹೊಂದುವಿರೆಂದು ಧಾರಾಳವಾಗಿ ಹೇಳಬಲ್ಲೆವು.

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಕೃಷ್ಣರಾಜಮೊಹಲ್ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೯—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯಾವೆಚ ಬೇರೆ.

ಹೊಸ ಪುಸ್ತಕಗಳು.

169

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೩೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ.— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತೆಗಳು ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತೆ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ.. ೧-೩-೦; ಸಟೀಕ ತತ್ತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಅಡಿವಿಯ ವಿಷಯಕವಾದ ಗ್ರಾಮಪಂಚಾಯಿತಿ.

ಮೈಸೂರು ಸರ್ಕಾರದಪ್ಪಣೆ.

೧. ಯಾವ ಗ್ರಾಮದ ಪ್ರಯೋಜನಕ್ಕಾಗಿ ಗ್ರಾಮ ಫಾರೆಸ್ಟನ್ನು ಏರ್ಪಡಿಸಲಾಗುತ್ತದೆಯೋ ಆ ಗ್ರಾಮದ ಪಟೇಲ್ ಮತ್ತೂ ಶ್ಯಾನುಭೋಗರು ಸೇರಿರುವ ಒಂದು ಪಂಚಾಯತಿಗೆ ಗ್ರಾಮ ಫಾರಸ್ಟಿನ ಆಡಳಿತವನ್ನು ವಹಿಸತಕ್ಕದ್ದು. ಅಂತಹ ಪಂಚಾಯತಿಯಲ್ಲಿ ಮೂವರಿಗೆ ಕಡಿಮೆ ಇಲ್ಲದೆಯೂ ಐವ್ವರಿಗೆ ಮೀರದೆಯೂ ಇರುವಂತೆ ಪ್ರತಿ ಸಂದರ್ಭದಲ್ಲಿಯೂ ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿಕಮಿಷನರಿಂದ ಗೊತ್ತುಮಾಡಲ್ಪಡಬಹುದಾದಷ್ಟು ಜನ ಇತರ ಮೆಂಬರುಗಳಿರತಕ್ಕದ್ದು. ಸಂಬಂಧಪಟ್ಟ ಗ್ರಾಮದಲ್ಲಿ ಖಾಯಮಾಗಿ ವಾಸಮಾಡದೆಯೂ, ಯಾ ಸದರಿ ಗ್ರಾಮದಲ್ಲಿ ಜಮೀನುಗಳನ್ನು ಹೊಂದದೆಯೂ ಇರತಕ್ಕ ಯಾವನೊಬ್ಬನೂ ಮೆಂಬರಾಗಲು ಅರ್ಹನಾಗಲಾರನು.

೨. ಪಟೇಲ್ ಶಾನುಭೋಗರುಗಳಲ್ಲದ ಇತರ ಮೆಂಬರುಗಳನ್ನು ಸದರಿ ಗ್ರಾಮ ಸೇರಿರತಕ್ಕ ತಾಲ್ಲೂಕಿನ ಅಮಲ್‌ದಾರರಾದರೂ ಚುನಾಯಿಸಿ ನಿಯಮಿಸತಕ್ಕದ್ದು. ಅಥವಾ ಸಮ್ಮತಿಯನ್ನು ಕೊಡುವುದಕ್ಕೆ ಸರಿಯಾದ ಅರ್ಹತೆಯನ್ನು ಪಡೆದಿರುವ ಗ್ರಾಮಸ್ಥರು ಚುನಾಯಿಸತಕ್ಕದ್ದು; ಅಥವಾ ಪ್ರತಿ ಸಂದರ್ಭದಲ್ಲಿಯೂ ಡೆಪ್ಯುಟಿಕಮಿಷನರು ನಿರ್ಧರಿಸಬಹುದಾದಂತೆ ಕೆಲವರನ್ನು ನಿಯಮಿಸತಕ್ಕದ್ದು. ಮತ್ತೂ ಕೆಲವರನ್ನು ಚುನಾಯಿಸತಕ್ಕದ್ದು. ಆದರೆ ಮೊದಲನೆಯ ಪಂಚಾಯತಿಯ ಮೆಂಬರುಗಳನ್ನು ಡೆಪ್ಯುಟಿಕಮಿಷನರ ಅಂಗೀಕಾರಕ್ಕೆ ಒಳಪಟ್ಟಿರುವಂತೆ ಅಮಲ್‌ದಾರರೇ ನಿಯಮಿಸತಕ್ಕದ್ದು.

೩. ಪಂಚಾಯತಿಗೆ ಮೆಂಬರುಗಳನ್ನು ಚುನಾಯಿಸತಕ್ಕ ಬಗ್ಗೆ, ಜಮೀನ್ ಕಂದಾಯವನ್ನಾಗಲೀ ಮೊಹತರ್ಫಾ ತೆರಿಗೆಯನ್ನಾಗಲೀ ಕೊಡತಕ್ಕ ವಯಸ್ಕರಾದ ಎಲ್ಲಾ ಗಂಡುಸರೂ, ಹೆಂಗುಸರೂ ಸಮ್ಮತಿಕೊಡುವ ಅಧಿಕಾರವನ್ನು ಪಡೆದಿರತಕ್ಕದ್ದು. ಮತ್ತೂ ಚುನಾವಣೆಯಮೂಲಕ ಭರ್ತಿಮಾಡಲು ಎಷ್ಟು ಸ್ಥಾನಗಳು ಖಾಲಿಯಾಗಿರುತ್ತವೆಯೋ ಅಷ್ಟು ಸಮ್ಮತಿಗಳನ್ನು ಕೊಡತಕ್ಕದ್ದು.

೪. ಚುನಾವಣೆಯ ವಿಷಯವಾಗಿ ಉಂಟಾಗತಕ್ಕ ವ್ಯಾಜ್ಯಗಳನ್ನು ಅಮಲ್‌ದಾರರು ಒಡನೆಯೇ ಫೈಸಲ್‌ಮಾಡತಕ್ಕದ್ದು. ಅವರು ಮಾಡುವ ಫೈಸಲಾತಿಯ ಮೇಲೆ ಡೆಪ್ಯುಟಿ ಕಮಿಷನರಿಗೆ ಅಪೀಲ್ ಮಾಡಲು ಅವಕಾಶವಿರತಕ್ಕದ್ದು. ಸದರಿ ಡೆಪ್ಯುಟಿಕಮಿಷನರ ತೀರ್ಮಾನವೇ ಅಖೈರಾಗಿರತಕ್ಕದ್ದು.

೫. ಪ್ರತಿಯೊಂದು ಪಂಚಾಯತಿಯೂ ಮೂರುವರ್ಷದ ಕಾಲದವರೆಗೆ ಕೆಲಸದಲ್ಲಿರತಕ್ಕದ್ದು. ಆ ಕಾಲದ ಕೊನೆಯಲ್ಲಿ ಅದಕ್ಕೆ ಸೇರಿದ ಮೆಂಬರುಗಳು ಪುನಃ ನಿಯಮಿಸಲ್ಪಡಲು ಅರ್ಹರಾಗಿರುವರು. ಕಾರಣಾಂತರದಿಂದ ಉಂಟಾಗುವ ಖಾಲಿ ಸ್ಥಾನಗಳನ್ನು ಭರ್ತಿಮಾಡಲು ಅಮಲ್‌ದಾರರಿಗೆ ಅಧಿಕಾರವಿರತಕ್ಕದ್ದು.

೬. ಪ್ರತಿವರ್ಷಕ್ಕೂ, ಪಂಚಾಯತಿಯು ಅದಕ್ಕೆ ಸೇರಿದ ಮೆಂಬರುಗಳ ಪೈಕಿಯೇ ಒಬ್ಬ ಛೈರ್‌ಮಾನರನ್ನು ಚುನಾಯಿಸತಕ್ಕದ್ದು.

೭. ಪಂಚಾಯತಿಯು ಕಾರ್ಯಗಳನ್ನು ನಡಿಸತಕ್ಕ ಬಗ್ಗೆ ಕನಿಷ್ಠ ಪಕ್ಷ ತಿಂಗಳಿಗೆ ಒಂದುಸಲ ಸೇರತಕ್ಕದ್ದು. ಮೀಟಿಂಗಿನ ನಡವಳಿಕೆಗಳನ್ನು ಆ ಕೆಲಸಕ್ಕಾಗಿ ಇಟ್ಟಿರುವ ಬುಕ್ಕಿನಲ್ಲಿ ದಾಖಲ್ ಮಾಡತಕ್ಕದ್ದು. ಮತ್ತೂ ಅದಕ್ಕೆ ಚೇರ್ಮನರು ರುಜು ಮಾಡತಕ್ಕದ್ದು.

೮. ಪ್ರತಿಯೊಂದು ಪಂಚಾಯತಿಯು ಡೆಪ್ಯುಟಿ ಕಮಿಷನರಿಂದ ವಿಧಿಸಲ್ಪಟ್ಟಂಥ ಲೆಕ್ಕಗಳನ್ನೂ, ಬುಕ್ಕುಗಳನ್ನೂ ಅವರಿಂದ ವಿಧಿಸಲ್ಪಟ್ಟ ನಮೂನೆಯಲ್ಲಿ, ಕ್ರಮವಾಗಿ ಇಡತಕ್ಕದ್ದು. ಮತ್ತು ಡೆಪ್ಯುಟಿ ಕಮಿಷನರು ಹುಕುಂ ಮಾಡುವ ಲೆಕ್ಕ ಪತ್ರಗಳನ್ನು ವಿಧಾಯಕವಾಗುವ ಕಾಲದಲ್ಲಿ ಅಮಲ್‌ದಾರರ ಬಳಿಗೆ ಕಳುಹಿಸಿಕೊಡತಕ್ಕದ್ದು. ಸದರಿ ಲೆಕ್ಕಗಳನ್ನು ಅಮಲ್‌ದಾರರ ಹುಕುಮಿನಮೇಲೆ ವರ್ಷಕ್ಕೆ ಒಂದು ಸಲ ತನಿಖೆ ಮಾಡತಕ್ಕದ್ದು.

೯. ಪಂಚಾಯತಿಯು ಕೊಡತಕ್ಕ ರಹದಾರಿಯ ಮೇಲೆಯೇ ವಿಲೇಜ್ ಫಾರೆಸ್ಟಿನಿಂದ ಮರ ವಗೈರೆ ಜಂಗಲ್ ಉತ್ಪತ್ತಿಯನ್ನು ಸಾಗಿಸಿಕೊಂಡು ಹೋಗಲು ಸರಿಯಾದ ಕ್ರಮವನ್ನು ಏರ್ಪಡಿಸತಕ್ಕದ್ದು. ಅಂಥ ರಹದಾರಿಯನ್ನು, ಡಿಸ್ಟ್ರಿಕ್ಟ್ ಫಾರೆಸ್ಟುಗಳಲ್ಲಿಯೂ ಸರ್ಕಾರದ ವಿಲೇವಾರಿಗೆ ಒಳಪಟ್ಟ ಜಮೀನುಗಳಲ್ಲಿಯೂ ಇರುವ ಜಂಗಲಿನ ಉತ್ಪತ್ತಿಯ ಉಪಯೋಗವನ್ನು ಕ್ರಮಪಡಿಸಿ ಆಯಾ ಕಾಲದಲ್ಲಿ ಜಾರಿಗೆ ತರುತ್ತಲಿರುವ ನಿಬಂಧನೆಗಳಿಗನುಸಾರವಾಗಿ ಜಂಗಲ್ ಉತ್ಪತ್ತಿಯನ್ನು ಮುಫತ್ತಾಗಿ ತೆಗೆದುಕೊಂಡು ಹೋಗಲು ದರಖಾಸ್ತ್‌ದಾರನಿಗೆ ಹಕ್ಕು ಇದ್ದಲ್ಲಿ ಮುಫತ್ತಾಗಿಯೂ, ಇಲ್ಲದೇ ಇದ್ದಲ್ಲಿ ಒಂದು ಕ್ಲುಪ್ತವಾದ ಫೀಜನ್ನು ತೆಗೆದುಕೊಂಡೂ, ಕೊಡತಕ್ಕದ್ದು.

೧೦. ವಿಲೇಜ್ ಫಾರೆಸ್ಟಿನಲ್ಲಿ ಸೇರಿರತಕ್ಕ ಎಲ್ಲಾ ಗೋಮಾಳ ಜಮೀನುಗಳಲ್ಲಿಯೂ ದನಗಳನ್ನು ಮುಫತ್ತಾಗಿ ಮೇಯಿಸಿಕೊಳ್ಳತಕ್ಕದ್ದು. ಆದರೆ, ಪಂಚಾಯತಿಯವರು ಡೆಪ್ಯುಟಿ ಕಮಿಷನರವರ ಅಂಗೀಕಾರದಮೇಲೆ ಗೊತ್ತುಮಾಡುವ ಫೀಜನ್ನು ಕೊಟ್ಟಲ್ಲದೆ ಫಾರೆಸ್ಟಿನ ಉಳಿದ ಪ್ರದೇಶದಲ್ಲಿ ದನಗಳನ್ನು ಮೇಯಿಸಿಕೊಳ್ಳುವುದಕ್ಕೆ ಅವಕಾಶ ಕೊಡಲಾಗದು.

೧೧. ವಿಲೇಜ್ ಫಾರೆಸ್ಟಿಗೆ ಸೇರಿರುವ ಜಮೀನುಗಳನ್ನು, ಪಂಚಾಯತರ ಅನುಮತಿಯಿಲ್ಲದೆ, ಸಾಗುವಳಿಗೇ ಆಗಲೀ ಮತ್ತಾವ ಇತರ ಕಾರ್ಯಗಳಿಗೇ ಆಗಲಿ ಸಾಧಾರಣವಾಗಿ ಕೊಡತಕ್ಕದ್ದಲ್ಲ.

೧೨. ಫಾರೆಸ್ಟನ್ನು ಬ್ಲಾಕು (ತಾಕು) ಗಳಾಗಿ ವಿಂಗಡಿಸುವುದಕ್ಕೂ, ಮತ್ತು ಡೆಪ್ಯುಟಿ ಕಮಿಷನರು ಕಳುಹಿಸಿ ಕೊಡುವ ವರ್ಕಿಂಗ್ ಪ್ಲಾನಿನಂತೆ ಅವುಗಳ ಪೈಕಿ ಪ್ರತಿಯೊಂದರಲ್ಲಿಯೂ ತಾಕುವಾರ್ ಕ್ರಮವಾಗಿ ಕೆಲಸ ನಡಿಸುವುದಕ್ಕೂ, ಪಂಚಾಯತರಿಗೆ ಅಧಿಕಾರವಿರುತ್ತದೆ.

೧೩. ಗ್ರಾಮಸ್ಥರು ಪಂಚಾಯತಿಗೆ ಕೊಡಬೇಕಾದ ಮೊಬಲಗನ್ನು ಬಾಪತಿ ಮಾಡದೆ ಇದ್ದಲ್ಲಿ, ಅಥವಾ ಪಂಚಾಯತದಾರರು ಏರ್ಪಡಿಸುವ ನಿಯಮಗಳಲ್ಲಿ ಯಾವ ನಿಯಮದಂತೆಯಾದರೂ ನಡೆಯದೇ ಇದ್ದಲ್ಲಿ, ಅವರು ಫಾರೆಸ್ಟಿನಲ್ಲಿ ಹಕ್ಕುಗಳ ಪೈಕಿ ಯಾವುದನ್ನಾದರೂ ಚಲಾಯಿಸದಂತೆ ತಡೆಯುವುದಕ್ಕೆ ಪಂಚಾಯತಿಗೆ ಅಧಿಕಾರವಿರುತ್ತದೆ. ಅಂತಹ ಜನಗಳ ದನಗಳನ್ನು ಫಾರೆಸ್ಟಿನಿಂದ ಆಚೆ ಓಡಿಸುವುದಕ್ಕೂ ಪಂಚಾಯತರು ಏರ್ಪಡಿಸುವ ನಿಯಮಗಳಿಗೆ ವಿರುದ್ಧವಾಗಿ ಫಾರೆಸ್ಟಿನೊಳಕ್ಕೆ ಬಿಡುವ ದನಗಳನ್ನು ತೊಂಡುವಾಡಿಗೆ ಕಳುಹಿಸುವುದಕ್ಕೂ ಅವರಿಗೆ ಅಧಿಕಾರವಿರುತ್ತದೆ.

೧೪. ಅವಶ್ಯಕವೆಂದು ಕಂಡುಬರುವ ಕಾಲದವರೆಗೂ ಫಾರೆಸ್ಟಿನ ಯಾವಭಾಗದಲ್ಲಿಯಾದರೂ ಯಾವತರಹ ದನಗಳನ್ನಾದರೂ ಮೇಯಿಸಿಕೊಳ್ಳುವುದನ್ನಾಗಲೀ ಅಥವಾ ಇತರ ಯಾವುದಾದರೂ ಹಕ್ಕುಗಳನ್ನು ಚಲಾಯಿಸುವುದನ್ನಾಗಲೀ ತಡೆಯಲು ಪಂಚಾಯತಿಗೆ ಅಧಿಕಾರವಿರುತ್ತದೆ.

೧೫. ಮಲೆನಾಡಿನಲ್ಲಿಯಾಗಲೀ ಮೈದಾನದಲ್ಲಿಯಾಗಲೀ ಇರುವ ಡಿಸ್ಟ್ರಿಕ್ಟ್ ಫಾರೆಸ್ಟುಗಳಿಗೂ ಮತ್ತು ಸರ್ಕಾರದವರು ವಿಲೆ ಮಾಡತಕ್ಕ ಜಮೀನುಗಳಿಗೂ ಆಯಾ ಕಾಲದಲ್ಲಿ ಸಂಬಂಧಪಟ್ಟು ಜಾರಿಯಲ್ಲಿರುವ ನಿಯಮಗಳಿಗನುಸಾರವಾಗಿ, ತಂಗಡಿಯನ್ನೂ, ಮತ್ತು ಸರ್ಕಾರಕ್ಕೆ ಉಳಿಸಿಕೊಳ್ಳಬಹುದಾದಂಥ ಮರಗಳನ್ನೂ ಗಿಡಗಳನ್ನೂ ಬಿಟ್ಟು, ಬಾಕಿ ಎಲ್ಲಾ ಮರಗಳನ್ನೂ ಹುಲ್ಲನ್ನೂ ಇತರ ಜಂಗಲ್ ಉತ್ಪತ್ತಿಯನ್ನೂ ವಿಲೇ ಮಾಡುವದಕ್ಕೆ ಪಂಚಾಯತಿಗೆ ಅಧಿಕಾರವಿರತಕ್ಕದ್ದು. ಆದರೆ ಈ ವಿಧಾನವು ದನಗಳನ್ನು ಮುಫತ್ತಾಗಿ ಮೇಯಿಸಿಕೊಳ್ಳುವುದಕ್ಕೇ ಆಗಲೀ ಯಾವುದಾದರೂ ಜಂಗಲ್ ಉತ್ಪತ್ತಿಯನ್ನು ಮುಫತ್ತಾಗಿ ಸಾಗಿಸಿಕೊಳ್ಳುವುದಕ್ಕೇ ಆಗಲೀ ರೈತರಿಗೆ ಇರುವ ಹಕ್ಕುಗಳಿಗೆ ಒಳಪಟ್ಟಿರತಕ್ಕದ್ದು.

೧೬. ಫಾರೆಸ್ಟನ್ನು ಯಥೋಚಿತವಾಗಿ ಹದ್ದುಬಸ್ತು ಮಾಡಿ ಸದರಿ ಹದ್ದುಬಸ್ತುಗಳನ್ನು ಸರಿಯಾದ ಸ್ಥಿತಿಯಲ್ಲಿರುವಂತೆ ಕಾಪಾಡಿಕೊಳ್ಳುವುದು ಪಂಚಾಯತರ ಕರ್ತವ್ಯವಾಗಿರುತ್ತದೆ.

೧೭. ಬೆಳೆಯಿಸತಕ್ಕ ಪದಾರ್ಥದ ಸ್ಥಿತಿಯನ್ನು ಉತ್ತಮಗೊಳಿಸುವುದೂ, ಫಾರೆಸ್ಟಿನಲ್ಲಿ ಸೌದೆ, ಮರ, ಗೊಬ್ಬರದ ಸೊಪ್ಪಿಗೆ ಉಪಯೋಗವಾಗುವ ಗಿಡಗಳು ಇನ್ನೂ ಇತರ ಗಿಡಗಳು ಇವುಗಳನ್ನು ನೆಡುವುದೂ ಪಂಚಾಯತರ ಕೆಲಸವಾಗಿರತಕ್ಕದ್ದು. ಈ ಭಾಗದಲ್ಲಿ ಅವರು ಫಾರೆಸ್ಟು ಆಫೀಸರುಗಳು ಕೊಡುವ ತಿಳುವಳಿಕೆಯಂತೆ ನಡೆಯತಕ್ಕದ್ದು.

೧೮. ಹುಲ್ಲು ಬೆಳೆಯುವುದನ್ನು ಉತ್ತಮ ರೀತಿಯಲ್ಲಿ ವೃದ್ಧಿಗೊಳಿಸುವುದಕ್ಕೆ ಬೇಕಾದ ಏರ್ಪಾಡುಗಳನ್ನು ಜರುಗಿಸುವುದೂ, ಫಾರೆಸ್ಟಿನ ಸ್ವಲ್ಪಭಾಗವೇ ಗ್ರಾಮಕ್ಕೆ ಬೇಕಾದುದನ್ನೆಲ್ಲಾ ಒದಗಿಸುವುದಕ್ಕೆ ಸಾಕಾಗುವಂಥ ವಿಶೇಷ ಮಳೆಯಾಗುವ ಸಾಲುಗಳಲ್ಲಿ ಮೇವನ್ನೂ, ಕ್ಷಿಪ್ರವಾಗಿ ಬೆಳೆಯುವ ಸಸ್ಯಗಳನ್ನೂ, ಬೆಳೆಯಿಸುವುದಕ್ಕೆ ತಕ್ಕ ಏರ್ಪಾಡು ಮಾಡುವುದೂ ಸಹ ಪಂಚಾಯತರ ಕರ್ತವ್ಯವಾಗಿರುತ್ತದೆ.

೧೯. (ರಹದಾರಿ ಕ್ರಮದಮೇಲೆಯಾಗಲೀ ಅಥವಾ ಇತರ ವಿಧವಾಗಿಯಾಗಲೀ ಜರುಗಿಸುವ) ಹುಲ್ಲು ಮತ್ತು ಇತರ ಜಂಗಲ್ ಉತ್ಪತ್ತಿಯ ಹರಾಜಿನಿಂದ ಹೊರಡುವ ಮೊಬಲಗನ್ನು ವಿಲೇಜ್ ಫಾರೆಸ್ಟು ಫಂಡನ್ನಾಗಿ ಏರ್ಪಡಿಸಿ, ಅದನ್ನು ಪಂಚಾಯತಿಯ ಹೆಸರಿನಲ್ಲಿ ಗೌರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಠೇವಣಿ ಇಡತಕ್ಕದ್ದು. ಚೇರ್‌ಮನರು ಮತ್ತು ಈ ಕೆಲಸಕ್ಕಾಗಿ ನಿಯಮಿಸಲ್ಪಡುವ ಪಂಚಾಯತಿಯ ಮತ್ತೊಬ್ಬ ಮೆಂಬರು ಅವಶ್ಯಕವಾದಾಗ, ಈ ಬಗೆ ಹಣವನ್ನು ತೆಗೆದುಕೊಂಡು ಜಮಾಖರ್ಚನ್ನು ನಡಿಸಲು ಅಧಿಕಾರವನ್ನು ಪಡೆದಿರುವರು. ಈ ಫಂಡಿನ ಮೊಬಲಗನ್ನು ವಿಲೇಜ್ ಫಾರೆಸ್ಟಿನ ರಕ್ಷಣೆಗೂ ಅಭಿವೃದ್ಧಿಗೂ ಸಂಬಂಧಪಟ್ಟ ಕಾರ್ಯಗಳಿಗೆ ಮಾತ್ರವೇ ಉಪಯೋಗಿಸತಕ್ಕದ್ದು.

೨೦. ಪಂಚಾಯತಿಯಮೇಲೆ ಮೇಲ್ತನಿಖೆ ಅಧಿಕಾರವು ಡೆಪ್ಯುಟಿ ಕಮಿಷನರಿಗೆ ಸೇರಿರತಕ್ಕದ್ದು. ಅವರು ಸಬ್ ಡಿವಿಜನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಅಧಿಕಾರವನ್ನು ವಹಿಸಲು ಅಧಿಕಾರವುಳ್ಳವರಾಗಿರುವರು.

೨೧. ಸಾಕಾದ ಕಾರಣದಮೇಲೆ ಯಾವುದಾದರೂ ಪಂಚಾಯತಿಯನ್ನಾಗಲೀ ಅದಕ್ಕೆ ಸೇರಿದ ಯಾರಾದರೂ ಮೆಂಬರನ್ನಾಗಲೀ ತೆಗೆದುಹಾಕುವುದಕ್ಕೆ ಡೆಪ್ಯುಟಿ ಕಮಿಷನರಿಗೆ ಅಧಿಕಾರವಿರುತ್ತದೆ. ಒಂದು ಪಂಚಾಯತಿಯು ವಜಾ ಆದಮೇಲೆ, ಫಾರೆಸ್ಟುಗಳ ಆಡಳಿತವೂ ಅದಕ್ಕೆ ಸಂಬಂಧಪಟ್ಟ ಹಣದಮೇಲೆ ಅಧಿಕಾರವೂ ಡೆಪ್ಯುಟಿ ಕಮಿಷನರಿಗೆ ಸೇರಿರುತ್ತದೆ

೨೨. ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರರೇ ಆಗಲೀ ಅಥವಾ ರೇಂಜರ ಅಂತಸ್ತಿಗೆ ಕಡಿಮೆ ಇಲ್ಲದ ಅವರ ತಾಬೇದಾರರ ಪೈಕಿ ಯಾರೇ ಆಗಲಿ ಕನಿಷ್ಠ ಪಕ್ಷ ವರ್ಷಕ್ಕೆ ಒಂದು ಸಲವಾದರೂ ವಿಲೇಜ್ ಫಾರೆಸ್ಟನ್ನೂ ಅದರ ಸಂಬಂಧವಾದ ಲೆಕ್ಕಗಳನ್ನೂ ಅಜಮಾಯಿಷಿ ಮಾಡತಕ್ಕದ್ದಲ್ಲದೆ ಅಂಥ ಅಜಮಾಯಿಷಿಯ ಫಲಿತಾಂಶವನ್ನು ಕುರಿತು ಮೇಲ್ಪಟ್ಟ ಆಫೀಸರ ಮೂಲಕ ಡೆಪ್ಯುಟಿ ಕಮಿಷನರಿಗೆ ರಿಪೋರ್ಟ್ ಮಾಡತಕ್ಕದ್ದು.

೨೩. ರೆವಿನ್ಯೂ ಸಬ್ ಡಿವಿಜನ್ ಆಫೀಸರುಗಳೂ, ಅಮಲ್‌ದಾರರುಗಳೂ ಸಹ, ತಮ್ಮ ಸಂಚಾರ ಕಾಲದಲ್ಲಿ ವಿಲೇಜ್ ಫಾರೆಸ್ಟುಗಳನ್ನೂ ಪಂಚಾಯತಿಯಲ್ಲಿಟ್ಟಿರುವ ಲೆಕ್ಕಪತ್ರಗಳನ್ನೂ ರೆಜಿಸ್ಟರುಗಳನ್ನೂ ಅಜಮಾಯಿಷಿ ಮಾಡಬಹುದು.

೨೪. ಫಾರೆಸ್ಟ್ ರೆಗ್ಯುಲೇಷನಿನ 11 ನೆಯ ಅಧ್ಯಾಯದ ೨೪ a, b; ೨೫ b, c, d, e ಮತ್ತು f; ಮತ್ತು ೨೬ ನೆಯ ಪ್ರಕರಣಗಳು ವಿಲೇಜ್ ಫಾರೆಸ್ಟುಗಳಿಗೂ ಕೂಡ ಅನ್ವಯಿಸಲ್ಪಡತಕ್ಕವುಗಳು.

೨೫. ವಿಲೇಜ್ ಫಾರೆಸ್ಟಿಗೆ ಸಂಬಂಧಪಟ್ಟ ಅತಿಕ್ರಮಪ್ರವೇಶ ವಗೈರೆ ತಪ್ಪಿತಗಳ ವಿಷಯಕವಾದ ಎಲ್ಲಾ ಮೊಕದ್ದಮೆಗಳಲ್ಲಿಯೂ ೧೦ ರೂಪಾಯಿಗೆ ಮೀರದಂತೆ ಪರಿಹಾರ ದ್ರವ್ಯವನ್ನು ಬಾಪತಿ ಮಾಡಿದಲ್ಲಿ, ತಪ್ಪಿತವನ್ನು ಮನ್ನಿಸಿಬಿಡತಕ್ಕ ಅಧಿಕಾರವು ಪಂಚಾಯತಿಗೆ ಇರತಕ್ಕದ್ದು.

ನಗರತಾಲ್ಲೋಕಿಗೆ ಶ್ರೀಮನ್ ಯುವರಾಜರವರ ಆಗಮನ.

ಜನವರಿ ತಾ॥ ೧೨ ನೆ ಮಧ್ಯಾಹ್ನ ೪ ಘಂಟೆಗೆ ಸರಿಯಾಗಿ ತಾ॥ ಹೆಡ್‌ಕ್ವಾರ್ಟರಾದ ಕಳೂರುಕಟ್ಟೆಗೆ ಸಾಗರದಿಂದ ಸಂಸ್ಥಾನದ ದಿವಾನ್ ಸಾಹೇಬರೊಡಗೊಂಡು ಶ್ರೀಮನ್ ಯುವರಾಜರವರ ಸ್ವಾರಿಯು ದಯಮಾಡಿಸಿತು. ತಾಲ್ಲೋಕಿನ ನಾನಾಭಾಗಗಳಿಂದ ಸನ್ನಿಧಾನದ ದರ್ಶನಾಕಾಂಕ್ಷಿಗಳಾದ ಜನಗಳು ರಿಸಪ್ಷನ್ ಚಪ್ಪರದ ಬಳಿಯಲ್ಲೂ, ಬಂಗಲೆ ಹತ್ತಿರವೂ, ಮೈದಾನದಲ್ಲೂ ತುಂಬಿದ್ದರು. ಬಂಗಲೆಯೆದುರು ಚಪ್ಪರದಲ್ಲಿ ತಾಲ್ಲೋಕಿನ ಪ್ರಮುಖರಾದ ದೊಡ್ಡಮನುಷ್ಯರು ಯೂನಿಫಾರಮ್‌ಡ್ರೆಸ್ಸಿನಿಂದ ಶ್ರೀಯವರ ಆಗಮನದರ್ಶನಾಕಾಂಕ್ಷಿಗಳಾಗಿದ್ದರು. ಮೋಟಾರ್ ಕಾರಿನಲ್ಲಿ ಮ॥ ದಿವಾನ್ ಸಾಹೇಬರವರ ಡೆಪ್ಯುಟಿಕಮಿಷನರ್ ಸಾಹೇಬರವರ ಸಮೇತರಾಗಿ ಶ್ರೀಯವರ ಸ್ವಾರಿಯು ದಯಮಾಡಿಸಿತು. ಸ್ವಾರಿ ದಯಮಾಡಿಸುತ್ತಲೇ ಬ್ಯಾಂಡ್ ವಾದ್ಯಘೋಷಗಳು ನಡೆದವು. ಅನಂತರ ಅಲ್ಲಿ ಕಾದಿದ್ದ ಹಲವರು ಹಾರತುರಾಯಿ ಮುಂತಾದ ನಜರುಗಳನ್ನೊಪ್ಪಿಸಿದರು. ಶ್ರೀಯವರು ನಜರೊಪ್ಪಿಸಿದ ಪ್ರತಿಯೊಬ್ಬರನ್ನೂ ವಿಚಾರಿಸಿದರು. ಇಷ್ಟರಲ್ಲಿಯೇ ಪೂರ್ವಭಾವಿಯಾಗಿ ತಯಾರಿಸಲ್ಪಟ್ಟಿದ್ದ ಅಡ್ರೆಸ್ಸನ್ನು ತಾಲ್ಲೋಕು ಪ್ರಜೆಗಳ ಪರವಾಗಿ ಮ॥ ಸಿ. ವಾಮನರಾಯರು ಓದಿದರು. ಮ॥ ಸಿ. ನರಸಿಂಹಯ್ಯನವರು ಚಂತದ ಪೆಟ್ಟಿಗೆಯಲ್ಲಿಟ್ಟು ಶ್ರೀಯವರಲ್ಲಿ ಅರ್ಪಿಸಿದ್ದನ್ನು ಸ್ವೀಕರಿಸಿ, ಮೃದುಮಧುರವಾದ ನುಡಿಗಳಿಂದ ಪ್ರತ್ಯುತ್ತರ ದಯಪಾಲಿಸೋಣವಾಯಿತು. ಇಷ್ಟರಲ್ಲಿ ಸಾಯಂಕಾಲವಾಗುತ್ತಾ ಬಂದುದರಿಂದ ಎಲ್ಲರೂ ಅಪ್ಪಣೆಪಡೆದು ಹೊರಟುಹೋದರು. ಮಲೆನಾಡು ಹವಾದಿಂದ ಶ್ರೀಯವರಿಗೆ ಸ್ವಲ್ಪ ಶೀತವಾದ ಪ್ರಯುಕ್ತ ತಾ॥ ೧೩ ನೆ ದಿವಸ ಮ॥ ದಿವಾನ್ ಸಾಹೇಬರವರಿಂದಲೇ ತಾ॥ ಇನ್ಸ್‌ಪೆಕ್ಷನ್ ಮಾಡಲ್ಪಟ್ಟು, ತಾಲ್ಲೋಕಿನ ಪ್ರಜೆಗಳನ್ನೆಲ್ಲಾ ಬರಮಾಡಿಕೊಂಡು ಪ್ರಜೆಗಳಿಗಿರುವ ಕಷ್ಟಸುಖಗಳನ್ನು ಸಾವಧಾನವಾಗಿ ವಿಚಾರಿಸಿ ತಿಳಿದುಕೊಂಡು, ಸಮಯೋಚಿತವಾದ ಪ್ರತ್ಯುತ್ತರಗಳನ್ನು ದಯಪಾಲಿಸಿದರು. ತಾ॥ ೧೪ ನೆ ಪ್ರಾತಃಕಾಲ ಶ್ರೀಮನ್ ಯುವರಾಜರವರ ಸ್ವಾರಿಯು ಸಚಿವ ಶಿರೋಮಣಿಗಳ ಸಹಿತ ಕಳೂರಿಂದ ೯ ಘಂಟೆಗೆ ಹೊರಟು ನಗರ ಮಾರ್ಗವಾಗಿ ಹುಲಿಕಲ್ಲಿಗೆ ದಯಮಾಡಿಸಿ ವಾಪಸು ಮಧ್ಯಾಹ್ನ ೧ ಘಂಟೆಗೆ ಕ್ಯಾಂಪಿಗೆ ದಯಮಾಡಿಸೋಣಾಯಿತು. ಹುಲಿಕಲ್ಲಿಗೆ ದಯಮಾಡಿಸುವ ವೇಳೆ ದಾರಿಯಲ್ಲಿ ಕೊಡಸೆಗ್ರಾಮದ ಮಾಡ್ಲ ವಿಲೇಜು ನಗರ ಸಮೀಪವಿರುವ ದೇವಗಂಗೆ ಉದ್ಯಾ

ನವನ ಇವುಗಳನ್ನು ಪರಾಮರಿಸಿ, ನಗರದ ಪುರಾತನ ಕೋಟೆ, ಗರ್ಲ್ಸ್‌ಸ್ಕೂಲು ಇವುಗಳನ್ನು ಸಂದರ್ಶಿಸಿ, ಬಾಲಕಿಯರಿಂದ ತಯಾರಿಸಲ್ಪಟ್ಟ ರಂಗೋಲೆ, ಕಸೂತಿ ಮುಂತಾದುವನ್ನು ವೀಕ್ಷಿಸಿ ಬಾಲಕಿಯರು ಹಾಡಿದುದನ್ನು ಕೇಳಿ ತುಂಬಾ ಸಂತೋಷಪಟ್ಟರು. ತಾ॥ ೧೪ ನೆ ಮಧ್ಯಾಹ್ನ ೪ ಘಂಟೆಗೆ ಬಂಗಲೆಯಿಂದ ಮೋಟಾರಿನಲ್ಲಿ ಸ್ವಾರಿಯು ಪೇಟೆಮಾರ್ಗವಾಗಿ ಹೊರಟು ಗರ್ಲ್ಸ್‌ಸ್ಕೂಲನ್ನು ಸಂದರ್ಶಿಸಿ ಕಚೇರಿ ಸಮೀಪದ ಬೈಲಲ್ಲಿ ಹುಡುಗರ ಸ್ಪೋರ್ಟ್ಸನ್ನು ಪರಾಮರಿಸಿ, ಬಾಯ್ಸ್ ಸ್ಕೂಲ್ ಮುಂದುಗಡೆ ನಡೆಯುತ್ತಿದ್ದ ಜಟ್ಟಿಗಳ ಕಾಳಗವನ್ನು ನೋಡಲು ಚಿತ್ತೈಸೋಣಾಯಿತು. ಜಟ್ಟಿ ಕಾಳಗವಾಗುತ್ತಲೆ ಮಲೆನಾಡಿನಲ್ಲಿ ಕಾಯಿಲೆಯಾದ ಜನಗಳು ಮೊಟ್ಟಮೊದಲು ಔಷಧೋಪಚಾರಗಳನ್ನು ಕಾಣದೆ ಅಪಾಯಪಡುತ್ತಿದ್ದುದನ್ನೂ ಈಗಿನ ಇಂಗ್ಲೀಷ್ ಗೌರ್ನಮೆಂಟ್ ಏರ್ಪಾಡಿನಿಂದ ದೊರೆಯುವ ಪ್ರಯೋಜನವನ್ನೂ ಪ್ರಾಕ್ಟಿಕಲ್ ಆಗಿ ಜಮಾದಾರ್ ಗಣಪತಿರಾಯರಿಂದ ಫಾರ್ಸುಮಾಡಿ ತೋರಿಸಲ್ಪಟ್ಟಿತು. ಅನಂತರ ರೀಡಿಂಗ್‌ರೂಂ ಬಳಿ ಡೇರೆಯಲ್ಲಿ ಫಲಾಹಾರಕ್ಕಾಗಿ ದಯಮಾಡಿಸೋಣಾಯಿತು. ಹಾಗೆಯೇ ನಗರದವರ ಹಾಡುಗಾರಿಕೆಯನ್ನು ಆಲಿಸಿ ಹಾರತುರಾಯಿಗಳನ್ನು ಸ್ವೀಕರಿಸಿದನಂತರ ಬಂಗ್ಲೆಗೆ ಸ್ವಾರಿ ದಯಮಾಡಿಸೋಣಾಯಿತು. ರಾತ್ರಿ ೮ ಘಂಟೆಗೆ ಬಂಗಲೆ ಮುಂದುಗಡೆ ಮದ್ದಿನ ನೋಟವು ನಡೆಯಿತು. ತಾ॥ ೧೫ನೆ ಪ್ರಾತಃಕಾಲ ೯ ಘಂಟೆಗೆ ಕೊಡಚಾದ್ರಿಯನ್ನು ಪರಾಂಬರಿಸಲು ಸ್ವಾರಿ ದಯಮಾಡಿಸೋಣಾಯಿತು. ತಾ॥ ೧೬ ಕ್ಕೆ ಭಟ್ಕಳವನ್ನು ನೋಡಲು ದಯಮಾಡಿಸುವಂತೆ ತೋರುತ್ತೆ. ಈವರೆಗೆ ನಡೆದ ನಗರತಾಲ್ಲೋಕಿನ ಏರ್ಪಾಡುಗಳು ಒಂದಕ್ಕಿಂತಲೂ ಒಂದು ಬಹಳ ಚೆನ್ನಾಗಿದ್ದವು. ಶ್ರೀಯವರು ಪ್ರತಿಯೊಂದು ಸಂದರ್ಭದಲ್ಲಿಯೂ ತಮ್ಮ ಸಂತೋಷಾತಿಶಯವನ್ನು ಪ್ರದರ್ಶಿಸುತ್ತಿದ್ದರು. ನಗರದ ಜನಗಳು ಇಂಗ್ಲೀಷ್ ಮ್ಯಾಸ್ಟರನ್ನು ಕೊಡಿಸಬೇಕಾಗಿ ಪ್ರಾರ್ಥಿಸಿದಮೇರೆಗೆ ಜಾಗ್ರತೆ ಕೊಡಿಸುವುದಾಗಿ ಅಪ್ಪಣೆ ದಯಪಾಲಿಸೋಣಾಯಿತು. ನಗರದಲ್ಲಿಯೂ, ಕಳೂರಲ್ಲಿಯೂ ಶ್ರೀಯವರ ಮತ್ತು ದಿವಾನ್‌ಸಾಹೇಬರವರ ಸ್ವಾರಿಯ ಜೊತೆಯಲ್ಲಿ ಮ॥ ಯರ್ಕ ಶ್ಯಾಮಣ್ಣ ಉಡ್ಪರು ಇದ್ದು ಶ್ರೀಯವರು ವಿಚಾರಿಸಿದ ಪ್ರತಿಯೊಂದು ವಿಷಯವನ್ನೂ ವಿವರಿಸಿ ಹೇಳಿದರು. ಮತ್ತೊಂದುವಾರದ ಪತ್ರಿಕೆಯಲ್ಲಿ ಶ್ರೀಯವರಿಗೆ ನಗರ ತಾಲ್ಲೋಕಿನವರು ಒಪ್ಪಿಸಿದ ವಿಜ್ಞಾಪನಾಪತ್ರಿಕೆ, ಅದಕ್ಕೆ ಅಪ್ಪಣೆ ಕೊಡಿಸೋಣಾದ ಪ್ರತ್ಯುತ್ತರವನ್ನೂ ಸಹ ಕೊಡುವೆನು.

ಪ್ರತ್ಯಕ್ಷದರ್ಶಿ.

“ಬರ್ಲಿನ್”

ಮೇಲೆಕಂಡ ಹೆಸರಿನ ಒಂದಾನೊಂದು ಪುಸ್ತಕವು ಅಲಹಾಬಾದಿನ ಪಯೋನಿಯರ್ ಮುದ್ರಾಲಯದಲ್ಲಿ ಮುದ್ರಿತವಾಗಿದೆ. ಅದರೊಳಗಿರುವ ವಿಷಯವೇನೆಂದರೆ—ಭರತಖಂಡದಲ್ಲಿ ರಾಜದ್ರೋಹದ ವಾಸನೆಯು ಹುಟ್ಟುವುದಕ್ಕೂ, ಮಿಡ್ನಾಪೂರಿನ ಸಿಡಿಮದ್ದಿನ ವ್ಯಾಜ್ಯವುಂಟಾಗುವುದಕ್ಕೂ, ಬಾರಿಸಾಲಿನ ವಿಪ್ಲವರಹಸ್ಯಕೂಟವು ಜನಿಸುವುದಕ್ಕೂ, ವೈಸರಾಯರನ್ನು ಕೊಲ್ಲಬೇಕೆಂದು ಮಾಡಿದ ಪ್ರಯತ್ನಕ್ಕೂ, ಕೆನಡಾಕ್ಕೆ ಹೋಗಿದ್ದ ಕಾಮಘಾತ ಹಡಗಿನ ಸಂಬಂಧವ್ಯವಹಾರವು ಜರುಗುವುದಕ್ಕೂ, ಸ್ವದೇಶಿ ಚಳವಳಿಯು ಹುಟ್ಟುವುದಕ್ಕೂ, ವಂಗವಿಭಂಗವಾದ ನಂತರ ತತ್ಸಂಬಂಧವಾದ ಗದ್ದಲವು ಏಳುವುದಕ್ಕೂ, ಜರ್ಮನರ ಪ್ರೇರಣೆಯೇ ಕಾರಣವೆಂತಲೂ, ತಮಗೆ ಸ್ವರಾಜ್ಯವು ಕೊಡಲ್ಪಡಬೇಕೆಂದು ದೇಶೀಯಮಹಾಸಭಾಪಕ್ಷದವರು ವಾದಿಸುವುದಕ್ಕೂ, ಆಂಗ್ಲಜನರ ಮೇಲೆ ಪ್ರಜೆಗಳಿಗೆ ಅಸಂತುಷ್ಟಿಯುಂಟಾಗುವಂತೆ ತೀವ್ರವಾದ ಲೇಖನಗಳನ್ನು ವೃತ್ತಪತ್ರಕರ್ತರು ಬರೆಯುವುದಕ್ಕೂ ಸಹ ಜರ್ಮನರು ಧನಸಹಾಯವನ್ನು ಮಾಡಿ ಇವರುಗಳನ್ನು ತಮ್ಮ ಪಕ್ಷಕ್ಕೆ ತಿರುಗಿಸಿಕೊಂಡಿರುವುದೇ ಕಾರಣವೆಂತಲೂ ಮೊದಲಾಗಿ ಬರೆಯಲ್ಪಟ್ಟಿದೆ. ಇಂಥ ವಿಚಿತ್ರವೂ ಹೇಯವೂ ಆದ ಆಶಯವುಳ್ಳ ಲೇಖನಗಳನ್ನು ಆಂಗ್ಲೋ ಇಂಡಿಯನ್ನರು ಬರೆವುದು ಅವರ ನಿಸರ್ಗಗುಣವಾಗಿದ್ದರೂ, ಈಗಿನ ಮಹಾಯುದ್ಧಾರಂಭವಾಗಿ ಭಾರತೀಯರ ನಿಸರ್ಗರಾಜಭಕ್ತಿಯು ಲೋಕವಿಖ್ಯಾತವಾದಬಳಿಕ, ಅವರ ವಿಕಾರಧ್ವನಿಗಳು ಭಾರತೀಯರ ವಿಷಯದಲ್ಲಿ ಕಾಣದಂತಾಗಿದ್ದವು. ಆದರೆ ಈಗಿನ ಸಂಧಿಯಲ್ಲಿ ಜರ್ಮನರ ವಿಷಯಕವಾಗಿ ಪಾರವಿಲ್ಲದಷ್ಟು ಸುದ್ದಿಗಳು ಹುಟ್ಟಿ ಹರಡುತ್ತಿರುವುದರಿಂದ, ಅವುಗಳ ಸಾಲಿನಲ್ಲಿ ಈ ಸುದ್ದಿಯೂ ಹುಟ್ಟಿ ಹಬ್ಬುತ್ತಿದೆ. ಆದರೆ ಭರತಖಂಡದ ರಾಜನಿಷ್ಠ ದೇಶೀಯ ಮಹಾಸಭಾಚಾಲಕರಮೇಲೂ, ವೃತ್ತಪತ್ರಕರ್ತರಮೇಲೂ ಹೊರಿಸಿರುವ ದೂರೂ, ಬಂಗಾಳದ ಚಳವಳಿಗೆ ಕಾರಣವನ್ನು ಕಲ್ಪಿಸಿರುವುದೂ ಸಹ, ಅಟ್ಟಕ್ಕೂ ಬೆಟ್ಟಕ್ಕೂ ಗಂಟಿಕ್ಕಿದಂತಿರುವುದಲ್ಲದೆ, ಜರ್ಮನರ ಸಂಧಾನಕ್ಕಿಂತಲೂ ಮಿಂಚಿದ ಕುಹಕಸಂಧಾನವೆಂದು ಕಾಣುತ್ತಿದೆ.

ರಷ್ಯನ್‌ಸೈನಿಕರ ಸದ್ಗುಣ.

ಶತ್ರುದೇಶಗಳಿಗೆ ನುಗ್ಗಿದ ಜರ್ಮನ್‌ಸೈನಿಕರು ಮಾಡುತ್ತಿರುವ ಹಿಂಸೆ ಹಾವಳಿ ಮೊದಲಾದ ಕಿರಾತಕೃತ್ಯಗಳನ್ನು ನಿರೂಪಿಸುವ ಲೇಖನಗಳನೇಕವನ್ನು ನಮ್ಮ ಪತ್ರಿಕಾವಾಚಕರು ಓದಿರುವರಷ್ಟೆ. ರಷ್ಯನ್‌ಸೈನಿಕರು ತಮ್ಮ ಶತ್ರುದೇಶಗಳ ಊರುಗಳಿಗೆ ನುಗ್ಗಿದಾಗ ಅಲ್ಲಿನ ಪ್ರಜೆಗಳ ವಿಷಯದಲ್ಲಿ ಹೇಗೆ ನಡೆದುಕೊಳ್ಳುತ್ತಿರುವರೆಂಬ ಸಂಗತಿಯನ್ನು ಈ ಕೆಳಗಣ ಲೇಖನದಿಂದ ಅರಿತುಕೊಳ್ಳುವವರಾಗಲಿ:—

ಪೂರ್ವಪ್ರಷ್ಯಾದಲ್ಲಿ ಜರ್ಮನರೊಡನೆ ಯುದ್ಧಮಾಡಿ ಓಡಿಸಿ, ಅವರ ಗ್ರಾಮಗಳಿಗೆ ನುಗ್ಗಿದ ರಷ್ಯನರು ಅಲ್ಲಿನ ಪ್ರಜೆಗಳ ವಿಷಯವಾಗಿ ತೋರಿಸಿದ ದಯೆ ಪ್ರೀತಿ ಗೌರವ ಮೊದಲಾದ ಸದ್ಗುಣಗಳನ್ನು ಕುರಿತು ಜರ್ಮನ್‌ದೇಶದ ಪತ್ರಿಕೆಗಳೇ ಶ್ಲಾಘಿಸುತ್ತಿವೆ. ಹಾಗೆ ಶ್ಲಾಘಿಸುವಲ್ಲಿ ಒಂದಾನೊಂದು ಜರ್ಮನ್‌ಪತ್ರಿಕೆಯು ಈ ಕೆಳಗೆ ಕಂಡ ವಿಷಯವನ್ನು ಅವರ ಸಾದ್ಗುಣ್ಯಕ್ಕೆ ನಿದರ್ಶಕವಾಗಿ ಪ್ರಕಟಿಸಿರುತ್ತದೆ. ಒಬ್ಬ ಜರ್ಮನ್‌ದೇಶದ ಸ್ತ್ರೀಯು ತಾನು ಅನುಭವಿಸಿದ ಸಂಗತಿಯನ್ನು ಹೀಗೆಂದು ಬರೆದಿರುತ್ತಾಳಂತೆ. ಏನೆಂದರೆ—ಒಂದಾನೊಂದುದಿನ ರಷ್ಯನ್‌ಸೈನಿಕರು ನಾವಿರುವ ಗ್ರಾಮಕ್ಕೆ ನುಗ್ಗಿ, ವಿಶ್ರಾಂತಿಯನ್ನು ಪಡೆದುಕೊಳ್ಳುವುದಕ್ಕಾಗಿ ನನ್ನ ಮನೆಗೆ ಬಂದರು. ವಿಚಾರಮಗ್ನಳಾಗಿ ಕುಳಿತಿದ್ದ ನನ್ನ ಮುಖವನ್ನು ನೋಡಿ ಅವರುಗಳು—“ಅಮ್ಮಾ! ನೀನು ಏಕೋ ವ್ಯಸನಪಡುತ್ತಿರುವಂತೆ ಕಾಣುತ್ತದೆ. ಅದಕ್ಕೆ ಕಾರಣವೇನು? ಈಗಿನ ಹಾಳು ಯುದ್ಧದಲ್ಲಿ ನಿನಗೇನಾದರೂ ಸಂಬಂಧವುಂಟೆ? ಹಾಗೇನಾದರೂ ಸಂಬಂಧವಿರುವ ಪಕ್ಷದಲ್ಲಿ ಮನಸ್ಸಿಗೆ ಸಮಾಧಾನವನ್ನು ತಂದುಕೊ, ತಾಯಿ! ನಿನ್ನ ಕಡೆಯವರಾರಾದರೂ ಯುದ್ಧಕ್ಕೆ ಹೋಗಿದ್ದರೆ ಅವರೆಲ್ಲರೂ ಸೌಖ್ಯವಾಗಿಯೂ ಆರೋಗ್ಯದಿಂದಲೂ ಮರಳಿ ಬರುವರು. ಈಗಿನ ಭೀಕರವಾದ ಯುದ್ಧವು ಬೇಗನೆ ಮುಗಿದುಹೋಗಬೇಕೆಂದು ನಿನ್ನ ಮನಸ್ಸು ಹೇಗೆ ಆತುರಪಡುತ್ತಿರುವುದೋ ಅದಕ್ಕಿಂತಲೂ ಹೆಚ್ಚಾಗಿ ನಮ್ಮಗಳ ಮನಸ್ಸೂ ಆತುರಪಡುತ್ತಿರುವುದು. ಯುದ್ಧದಲ್ಲಿ ಅತ್ಯುತ್ಸಾಹದಿಂದ ಕೆಲಸಮಾಡುವುದಕ್ಕೆ ಅರ್ಹವಾದ ವಯಸ್ಸು ಮೀರಿ ಮುದಿಕರಾಗಿದ್ದರೂ ನಾವುಗಳು ನಮ್ಮ ಹೆಂಡಿರು ಮಕ್ಕಳು ಮೊದಲಾದವರನ್ನು ದಿಕ್ಕಿಲ್ಲದವರಂತೆ ಮಾಡಿ, ಈ ಭಯಂಕರ ವಿಪತ್ಸಮುದ್ರದಲ್ಲಿ ಮುಳುಗಿ ತೇಲುತ್ತಿದ್ದೇವೆ. ಯಾತಕ್ಕಾಗಿ? ನಮ್ಮ ಸ್ವಾರ್ಥಕ್ಕಲ್ಲ. ಪ್ರಜಾಸೌಖ್ಯಕ್ಕಾಗಿ ಮಾತ್ರ. ಪ್ರಪಂಚದ ಶಾಂತಿಗೋಸ್ಕರವಾಗಿ ನಾವು ಯುದ್ಧಮಾಡುತ್ತಿರುವೆವೇ ಹೊರತು ನಮ್ಮ ಲಾಭದ ಆಸೆಗೇನೂ ಅಲ್ಲ. ಅದುಕಾರಣ, ತಾಯಿ! ಚಿಂತಿಸಬೇಡ; ಸೈರಿಸಿಕೊ; ಯುದ್ಧಕ್ಕಾಗಿ ಹೋಗಿರುವ ನಿನ್ನ ಮಕ್ಕಳಾಗಲೀ ಮೊಮ್ಮಕ್ಕಳಾಗಲೀ ಸೌಖ್ಯವಾಗಿ ಮರಳಿ ಬಂದು ನಿನ್ನನ್ನು ನೋಡುವರು” ಎಂದು ಉಪಚಾರವಚನಗಳನ್ನು ಹೇಳಿ ನನ್ನ ಮನಸ್ಸನ್ನು ಸಮಾಧಾನಪಡಿಸಿದರು. ಇಷ್ಟೇಅಲ್ಲದೆ ರಷ್ಯಾಸೈನ್ಯಾಧಿಕಾರಿಗಳು ನನ್ನ ಮನೆಯಲ್ಲೇ ಸ್ವಲ್ಪದಿನ ವಾಸಮಾಡಿದರು. ಆಗ ಅವರುಗಳು ಯಾವವಿಧದ ತೊಂದರೆಯನ್ನೂ ನನಗೆ ಕೊಡಲಿಲ್ಲ” ಎಂದು ಬರೆದಿರುವಳಂತೆ.

ಇಟಲಿಯಲ್ಲಿ ಆದ ಮಹಾಭೀಕರವಾದ ಭೂಕಂಪ.

ಈಗಿನ ಪರಿಸ್ಥಿತಿಯು ಕ್ರೈಸ್ತಜನಾಂಗಕ್ಕೆ ವಿಶೇಷಾನರ್ಥಕಾರಿಯಾಗಿ ಪರಿಣಮಿಸುವಂತೆ ಕಾಣುತ್ತದೆ. ಯುದ್ಧದಿಂದ ಯುರೋಪುಖಂಡದಲ್ಲಿ ಆಗುತ್ತಿರುವ ಪ್ರಜಾಪ್ರಳಯವೂ ಧನಕನಕಾದಿನಷ್ಟವೂ ಸರ್ವವಿದಿತವಾಗಿದೆ. ಇದರಮೇಲೆ ಕ್ರೈಸ್ತ ಜಗದ್ಗುರುವು ವಾಸಿಸುವ ಇಟಲಿ ದೇಶದೊಳಗೆ ಅತ್ಯಂತ ದಾರುಣವಾದ ಭೂಕಂಪವು ಸಂಭವಿಸಿ ಅಪರಿಮಿತವಾದ ನಷ್ಟವನ್ನುಂಟುಮಾಡಿರುವುದೆಂಬ ತಂತ್ರೀವಾರ್ತೆಗಳು ಕಳೆದ ವಾರದಲ್ಲಿ ಬಂದಿರುತ್ತವೆ. ತಂತ್ರೀವಾರ್ತೆಗಳ ಮೂಲಕ ಬಂದಿರುವ ಸಂಕ್ಷಿಪ್ತವಾದ ಸುದ್ದಿಗಳಿಂದ ಈ ಭೂಕಂಪನದಿಂದಾಗಿರುವ ನಷ್ಟಗಳ ಯಾವ ವರ್ಣನೆಯೂ ಪರಿಮಿತಿಯೂ ಸ್ಪಷ್ಟವಾಗಿ ತಿಳಿಯುವುದಿಲ್ಲ. ಇದುವರೆಗೆ ಬಂದಿರುವ ವಾರ್ತೆಗಳಿಂದ ತಿಳಿಯುವುದೇನೆಂದರೆ—ಕಳೆದ ತಾ॥ ೧೩ ನೆ ಬುಧವಾರ ಬೆಳಗಿನ ೮ ಗಂಟೆಗೆ ಈ ಭೂಕಂಪವು ಕಾಣಿಸಿಕೊಂಡಿತು. ನೇಪಿಲ್ಸ್‌ಪಟ್ಟಣದಿಂದ ಹಿಡಿದು ಅಂಕೊನಾದವರೆಗೆ ಎಂದರೆ ಇಟಲಿ ದೇಶದ ಪಶ್ಚಿಮತೀರದಿಂದ ಹಿಡಿದು ಪೂರ್ವತೀರದ ವರೆಗೆ ಬಹುಶಃ ೨೦೦ ಮೈಲಿಗಳ ವರೆಗೆ ಭೂಪ್ರದೇಶವೆಲ್ಲಾ ಕದಲಿಹೋಯಿತು. ಇದರಿಂದ ಸಂಪೂರ್ಣವಾಗಿ ೨ ಪಟ್ಟಣಗಳು ಹಾಳಾಗಿಹೋದುವು. ಅವುಗಳಲ್ಲಿ ಅವೆಜ್ಜೀನೋ ಎಂಬುದು ಒಂದಾಗಿರುತ್ತದೆ. ಆ ಪಟ್ಟಣದ ಸುತ್ತುಮುತ್ತಣಿನ ಪ್ರದೇಶಗಳು ಎಷ್ಟೋ ಹಾಳಾಗಿ ಹೋಗಿವೆ. ಆ ಪಟ್ಟಣವೊಂದರಲ್ಲೇ ೮ ಸಾವಿರ ಜನರು ಸತ್ತರು. ಎಷ್ಟೋ ಸಹಸ್ರ ಜನರಿಗೆ ಏಟುಗಳು ಬಿದ್ದಿರುವುವು ಎಂಬ ಒಂದು ಸಂಗತಿಯಿಂದಲೇ ಎಷ್ಟು ಭೀಕರವಾದ ವಿಪತ್ತು ಆ ಪಟ್ಟಣಕ್ಕೆ ಒದಗಿರುವುದೆಂಬುದನ್ನು ಊಹಿಸಿಕೊಳ್ಳಬಹುದು. ಇದುವರೆಗೆ ಗೊತ್ತಾಗಿರುವ ಸ್ಥೂಲವಾರ್ತೆಯಿಂದ ಈ ವಿಪತ್ತಿನ ಮೂಲಕ ೧೦ ಸಾವಿರ ಜನರು ಸತ್ತಿರುವರೆಂದೂ, ೨೦ ಸಾವಿರ ಜನರಿಗೆ ಗಾಯವಾಗಿರುವುದೆಂದೂ ಊಹಿಸಲ್ಪಟ್ಟಿದೆ. ಈ ಸಂಖ್ಯೆಯು ಇನ್ನೂ ಹೆಚ್ಚಾಗಿರಬೇಕು. ಅದು ಮುಂದೆ ಗೊತ್ತಾಗಬಹುದು. ಈ ಭೂಕಂಪನವು ರಾತ್ರಿಯಹೊತ್ತು ನಡೆದಿದ್ದರೆ ಅನರ್ಥವು ಇನ್ನೂ ವಾಚಾಮಗೋಚರವಾಗಿ ಹೋಗುತ್ತಿದ್ದಿತು. ದೈವಾಧಿನದಿಂದ ಹಗಲುಹೊತ್ತು ನಡೆದಿರುವುದರಿಂದ ಸ್ವಲ್ಪ ಕಡಿಮೆಯಾಯಿತೆಂದು ಹೇಳಬಹುದು. ಇಟಲಿಯಲ್ಲಿ ಈ ಭೂಕಂಪನವು ಜರುಗಿದ ದಿನವೇ ನಮ್ಮ ಭರತಖಂಡದಲ್ಲಿಟ್ಟಿರುವ ವಾತಾವರಣಸ್ಥಿತಿ ಸಂದರ್ಶಕ ಯಂತ್ರದೊಳಗೆ ಇಲ್ಲಿಗೆ ೪ ಸಾವಿರ ಮೈಲಿಗಳ ದೂರದಲ್ಲಿ ಭೂಕಂಪವಾಯಿತೆಂಬ ಚಿಹ್ನೆಯು ಅಂದೇ ತೋರಿ, ಅದನ್ನು ಆ ಶಾಸ್ತ್ರಜ್ಞರು ಆದಿನವೇ ಇಲ್ಲಿ ಪ್ರಕಟಿಸಿದ್ದರು. ಅದು ಎಲ್ಲಿ ಸಂಭವಿಸಿತೆಂಬುದು ಈಗಿನ ಸಂಗತಿಯಿಂದ ಗೊತ್ತಾಯಿತು. ರೋಮ್‌ಪಟ್ಟಣದಲ್ಲಿ ಪ್ರಸಿದ್ಧವಾಗಿದ್ದ ಹಲವು ದರ್ಶನೀಯವಾದ ಕಟ್ಟಡಗಳು ಹಾಳಾದವು. ಅಲ್ಲಿನ ಸೆಂಟ್‌ಜಾನ್ ದೇವಾಲಯದ ಮೇಲಿದ್ದ ಸೆಂಟ್‌ಪಾಲ್ ವಿಗ್ರಹವು ಕೆಳಕ್ಕೆ ಕಳಚಿಬಿದ್ದು ತುಂಡುತುಂಡಾಯಿತು. ಇದರಂತೆಯೇ ಅನೇಕ ಸ್ಥಲಗಳಲ್ಲಿ ನಷ್ಟವು ನಡೆದಿದೆ. ತಂತ್ರೀವಾರ್ತೆಯ ಕಂಬಗಳು ಮುರಿದುಬಿದ್ದು ಕೆಲವು ದಿನ ಒಂದುಕಡೆಯಿಂದ ಮತ್ತೊಂದುಕಡೆಗೆ ವಾರ್ತೆಗಳೇ ನಡೆಯದಂತಾಗಿದ್ದುವು. ಊರುಗಳಲ್ಲಿ ಹೊಗೆ ಸುತ್ತಿ ಮನೆಗಳು ಉರಿಯುವುದಕ್ಕಾರಂಭಿಸಿ, ಜನರು ಹುಚ್ಚುಹಿಡಿದವರಂತೆ ಓಡಾಡುತ್ತಿದ್ದರು. ಉರಿಯುತ್ತಿದ್ದ ಮನೆಗಳನ್ನು ಆರಿಸುವುದಕ್ಕೆ ಹಲವುಕಡೆ ಸಾಕಾದಷ್ಟು ನೀರೇ ದೊರೆಯಲಿಲ್ಲ. ವಿಪತ್ತು ಒದಗಿದ ಜಿಲ್ಲೆಗಳ ಊರುಗಳಿಗೆ ರಾಜರು ದಯಮಾಡಿಸಿ ನೋಡಿಕೊಂಡು ಬಂದರು. ಗಾಯಗೊಂಡು ವೈದ್ಯಶಾಲೆಯಲ್ಲಿ ಉಪಚಾರಗೊಳ್ಳುತ್ತಿದ್ದ ಪ್ರಜೆಗಳನ್ನು ಕ್ರೈಸ್ತಜಗದ್ಗುರುವು ನೋಡಿಕೊಂಡುಬಂದರು. ಈ ಗುರುಗಳು ಕಳೆದ ೪೫ ವರ್ಷಗಳಿಂದಲೂ ತಮ್ಮ ಮಠವನ್ನು ಬಿಟ್ಟು ಹೊರಕ್ಕೆ ಹೋಗಿದ್ದುದಿಲ್ಲವಂತೆ!

ಈ ಭೂಕಂಪನದಿಂದ ಇಟಲಿದೇಶಕ್ಕೆ ಮಹತ್ತರವಾದ ಅನರ್ಥವುಂಟಾಗಿರುವುದೆಂಬುದಕ್ಕೆ ಸಂಶಯವಿಲ್ಲ. ರೋಮ್ ಸಾಮ್ರಾಜ್ಯವು ಅತ್ಯಂತ ಪ್ರಾಚೀನವಾದುದು. ಅಲ್ಲಿ ಅತ್ಯಂತ ಪ್ರಾಚೀನವೂ ಸುಂದರವೂ ಆದ ಕಟ್ಟಡಗಳು ಅನಂತವಾಗಿರುವುವು. ಅನೇಕ ಪ್ರಾಚೀನನಾಗರಕ ಚಿಹ್ನೆಗಳು ಈಗಿನ ವಿಪತ್ತಿನಿಂದ ನಷ್ಟವಾಗಿರಬೇಕೆಂದು ಕಾಣುತ್ತದೆ. ಏಕೆಂದರೆ—ಆ ದೇಶದ ಪ್ರಸಿದ್ಧ ಶಿಲ್ಪಕಾರ್ಯದ್ಯೋತಕವಾದ ಮಹಾಭವನಗಳು ಆ ದೇಶದ ದಕ್ಷಿಣಭಾಗದಲ್ಲೇ ಇದ್ದುವು. ಈಗಿನ ಭೂಕಂಪವು ಕೂಡ ಆ ದಕ್ಷಿಣಭಾಗದಲ್ಲೇ ಆಗಿರುವುದು. ಇಟಲಿದೇಶವೂ ಜಪಾನ್‌ದೇಶವೂ ಭೂಕಂಪಕ್ಕೆ ಪ್ರಸಿದ್ಧವಾದುವುಗಳು. ಅಗ್ನಿಪರ್ವತಗಳ ಸಮೀಪದಲ್ಲಿ ಈ ಕಂಪನಗಳಾಗುವುದು ವಿಶೇಷ. ಇಟಲಿಯ ದಕ್ಷಿಣಭಾಗದಲ್ಲಿರುವ ಸಿಸಲಿದ್ವೀಪದಲ್ಲಿ ಪ್ರಸಿದ್ಧವಾದ ಎಟ್ನಾ ಎಂಬ ಅಗ್ನಿಪರ್ವತವಿದೆ. ಸಿಸಲಿ ಮೊದಲಾದ ದ್ವೀಪಗಳು ಭೂಕಂಪನಕ್ಕೆ ಹೆಸರಾಗಿವೆ. ಇಲ್ಲಿ ಹಿಂದೆ ಎಷ್ಟೋ ಆವೃತ್ತಿ ಆಗಿರುವ ಭೂಕಂಪನಗಳಲ್ಲಿ ಕಡೆಯಸಲ ಆದ ಕಂಪನವು ೧೯೦೮ ನೆ ವರ್ಷದ ಡಿಶಂಬರ್ ಕಡೆಯಲ್ಲಿ ಜರುಗಿದ್ದಿತು. ಆಗ ಮೆಸ್ಸೀನಾ-ರಿಗ್ಗಿಯೋ ಎಂಬ ಎರಡುಪಟ್ಟಣಗಳು ಸಂಪೂರ್ಣವಾಗಿ ಮಣ್ಣುಮುಚ್ಚಿಹೋದುವು. ಆಗ ಸತ್ತವರಸಂಖ್ಯೆ ೭೭೦೮೩ ಆಗಿದ್ದಿತು. ಎಷ್ಟೋ ಪುರಾತನ ಮಂದಿರಗಳು ಆಗಲೇ ಹಾಳಾಗಿದ್ದುವು. ಉಳಿದಿದ್ದುವು ಕೂಡ ಈ ಸಲದ ಕಂಪನದಿಂದ ಬಹಳ ಹಾಳಾಗಿರಬೇಕು. ಇಂಥ ದೈವಿಕವಿಪತ್ತು ರೋಮ್‌ಕರಾಜ್ಯಕ್ಕೆ ಉಂಟಾದುದು ವಿಷಾದಸ್ಥಾನವು.

ಯುದ್ಧವಾರ್ತೆಯು.

(ಪಶ್ಚಿಮರಣರಂಗ)

ಕಳೆದವಾರದಲ್ಲಿ ಜರ್ಮನ್ ಕೇಸರರು ಪಶ್ಚಿಮರಣರಂಗಕ್ಕೆ ಬಂದಿದ್ದರೆಂಬ ಸುದ್ದಿಯಿರುವುದರಿಂದ ಜರ್ಮನ್‌ಸೈನ್ಯಗಳು ಚುರುಕಾಗಿ ಕೆಲಸವನ್ನು ಮಾಡಿರುವುದೆಂದು ಗೊತ್ತಾಗುತ್ತದೆ. ಪಶ್ಚಿಮರಣರಂಗದಲ್ಲಿ ಎಲ್ಲಕಡೆಯೂ ಯುದ್ಧವು ನಡೆಯುತ್ತಲೇ ಇದೆ. ಮಳೆ ಮಂಜು ಗಾಳಿಗಳ ಕಾಟವು ವಿಪರೀತವಾಗಿಯೇ ಇದೆ. ನದಿಗಳಲ್ಲಿ ಪ್ರವಾಹವೂ ವಿಶೇಷವಾಗಿದೆ ಕಂದಕಗಳಲ್ಲಿ ನೀರು ತುಂಬಿಕೊಂಡಿದೆ. ನಡೆದ ಯುದ್ಧಗಳಲ್ಲೆಲ್ಲಾ ಸೋಯಿಜನ್ಸ್ ಯುದ್ಧವು ಪ್ರಮುಖವಾಗಿದ್ದಿತು. ಇಲ್ಲಿದ್ದ ಮಿತ್ರಮಂಡಲಿಯವರ ಸೇನಾಮುಖವನ್ನು ಭೇದಿಸಿಕೊಂಡು ಮುಂದಕ್ಕೆ ನುಗ್ಗಿಹೋಗಬೇಕೆಂದು ಜರ್ಮನರು ಬಹಳ ತೀವ್ರವಾಗಿ ಈ ಬಳಿಯಲ್ಲಿ ಹೋರಾಡಿಯೂ ಆಡುತ್ತಲೂ ಇರುವರು. ಜರ್ಮನಿಯಿಂದ ಇಲ್ಲಿಗೆ ಸೈನ್ಯವನ್ನು ಲೋಹಮಾರ್ಗಗಳ ದ್ವಾರಾ ಬೇಗನೆ ತರಿಸಿಕೊಂಡು ನಿಲ್ಲಿಸುವುದಕ್ಕೂ ಇಲ್ಲಿಂದ ಪ್ಯಾರಿಸ್ಸಿಗೆ ನೇರವಾಗಿ ಸೈನ್ಯಗಳನ್ನು ಸಾಗಿಸುವುದಕ್ಕೂ ಇದು ಅನುಕೂಲವಾದ ಸ್ಥಲವಾಗಿರುವುದೆಂಬ ಕಾರಣದಮೇಲೆ ಇದನ್ನು ವಶಪಡಿಸಿಕೊಳ್ಳಬೇಕೆಂದು ಜರ್ಮನರು ಬಹಳ ಸಾಹಸಪಡುತ್ತಿದ್ದಾರೆ.

ಕಳೆದ ಸೋಮವಾರದದಿನ ಇಲ್ಲಿಗೆ ಹೊಗೆಬಂಡಿಗಳಮೇಲೂ ಮೋಟಾರುಗಳಮೇಲೂ ಜರ್ಮನರು ಒಂದೊಂದುಸಲಕ್ಕೆ ಸಾವಿರಾರುಗಟ್ಟಲೆಯಾಗಿ ಹೊಸಸೈನ್ಯಗಳನ್ನು ತಂದಿಳಿಸಿದ್ದಾರೆ. ಹೀಗೆ ಹೊಸದಾಗಿ ಬಂದಿರುವ ಸೈನ್ಯದಲ್ಲಿ ೧ ಲಕ್ಷ ಮಂದಿಗಳಿರುವರೆಂದೂ, ಜರ್ಮನ್ ಚಕ್ರವರ್ತಿಯವರೂ, ಉಳಿದ ಸೈನ್ಯಾಧಿಕಾರಿಗಳೂ ಸಹ ಲಾಸಿನಬಳಿಯಲ್ಲಿರುವರೆಂದೂ ಗೊತ್ತಾಗುತ್ತದೆ. ಈ ಸೋಯಿಜನ್ಸ್ ಎಂಬುದು ಫ್ರಾನ್ಸ್‌ದೇಶದಲ್ಲಿ ಪ್ಯಾರಿಸ್ಸಿಗೆ ಈಶಾನ್ಯದಿಕ್ಕಿನಲ್ಲಿ ಬಹುಶಃ ೪೦ ಮೈಲಿಗಳ ದೂರದಲ್ಲಿದೆ. ಇಲ್ಲಿ ಬಹುದಿನಗಳಿಂದಲೂ ಯುದ್ಧವು ನಡೆಯುತ್ತಿದ್ದರೂ, ಕಳೆದ ತಾ|| ೧೦ ರಿಂದ ಬಹು ಭೀಕರಯುದ್ಧಕ್ಕೆ ಆರಂಭವಾಯಿತು. ವಿಶೇಷವಾದ ಸನ್ನಾಹದಿಂದ ಗುಂಪುಗುಂಪಾಗಿ ಅವಿಚ್ಛಿನ್ನವಾಗಿ ಬಂದು ಮೇಲೆಬಿದ್ದ ಜರ್ಮನ್ ಸೈನ್ಯಗಳನ್ನು ಫ್ರೆಂಚ್ ಸೈನಿಕರು ಬಹಳ ಶೌರ್ಯದಿಂದ ಪ್ರತಿಭಟಿಸಿದರು. ಫಿರಂಗಿಯುದ್ಧ-ತುಪಾಕಿಗಳಯುದ್ಧ-ಸನೀನುಗಳಯುದ್ಧ ಮೊದಲಾದುವುಗಳೆಲ್ಲಾ ನಡೆದುವು. ಈ ಸೋಯಿಜನ್ಸಿಗೆ ಉತ್ತರದಲ್ಲಿ ನಡೆದ ಕಾಳಗದ ಸಮಯದಲ್ಲಿ ಉಭಯಪಕ್ಷದಲ್ಲೂ ಬಹಳ ಪ್ರಾಣಹಾನಿಗಳಾಗಿರುವುವು. ಈ ಬಳಿಯಲ್ಲಿರುವ ಏಯ್ಸ್ನ್ ನದಿಯಲ್ಲಿ ಮಿತಿಮೀರಿ ಪ್ರವಾಹ ಬಂದುದರಿಂದ ಅದರ ೨ ಸೇತುವೆಗಳು ಕೊಚ್ಚಿಹೋಗಿ ಮಿತ್ರಮಂಡಲಿ ಸೈನ್ಯದ ಸಂಚಾರಕ್ಕೆ ವಿಘ್ನವಾಯಿತು. ಆ ನದಿಗೆ ದಕ್ಷಿಣಭಾಗದಲ್ಲಿ ಮಿತ್ರಮಂಡಲಿಯವರು ಸುಸ್ಥಿರವಾಗಿರುವರು. ಸೋಯಿಜನ್ಸ್ ಉತ್ತರಭಾಗದ ಕಾಳಗದಲ್ಲಿ ಜರ್ಮನರು ಎಷ್ಟು ಸಾಹಸಮಾಡಿದರೂ ಮಿತ್ರಮಂಡಲಿಯ ಸೇನಾಪಙ್ಕ್ತಿಯು ಒಡೆದುಹೋಗದೆ ಸ್ವಲ್ಪವೂ ಎಡೆಗುಡದೆ ಹಾಗೆಯೇ ಸ್ವಲ್ಪ ಹಿಮ್ಮೆಟ್ಟಿತು. ಅಷ್ಟೇಹೊರತು ಶತ್ರುಗಳಿಗೆ ಯಾವಲಾಭವೂ ಆಗಲಿಲ್ಲ. ಆಗ ಫ್ರೆಂಚ್‌ಸೈನ್ಯಕ್ಕೆ ಸಾಕಾಗುವಷ್ಟು ಮದ್ದುಗುಂಡು ಫಿರಂಗಿಗಳೂ ಇರಲಿಲ್ಲ. ಈ ಕಾರಣದಿಂದ ಅದು ವಿಶೇಷ ನಷ್ಟವನ್ನು ಹೊಂದಲವಕಾಶವಿಲ್ಲದಂತೆ ಹಿಮ್ಮೆಟ್ಟಿತು. ಆದರೂ ಶತ್ರುಗಳಿಗೆ ಎಡೆಗುಡಲಿಲ್ಲ. ಈ ಫ್ರಾನ್ಸ್ ಸೈನ್ಯದಲ್ಲಿ ೧ ಸಾವಿರ ಮಂದಿಯವರೆಗೆ ಹತರಾದರೆಂದು ಹೇಳಲ್ಪಟ್ಟಿದೆ. ಜರ್ಮನರು ಪ್ರಕಟಿಸಿರುವುದರಲ್ಲಿ ಮಳೆಯು ಸುರಿಯುತ್ತಿದ್ದರೂ ನಾವು ಸೋಯಿಜನ್ಸಿಗೆ ಈಶಾನ್ಯದಲ್ಲಿರುವ ವ್ರೀಗ್ನಿಯ ಎತ್ತರವಾದ ಭಾಗವನ್ನು ಮುತ್ತಿ ಸಾಯಂಕಾಲವಾಗುವವರೆಗೂ ಕಾದಾಡಿ, ಒಂದೊಂದಾಗಿ ಶತ್ರುಗಳ ಕಂದಕದಮೇಲೆ ಬಿದ್ದು ಕಾದಾಡಿದುದರಲ್ಲಿ ೧೪ ಮಂದಿ ಫ್ರಾನ್ಸ್ ಉದ್ಯೋಗಿಗಳನ್ನೂ ೧೧೩೦ ಮಂದಿ ಸೈನಿಕರನ್ನೂ ೮ ಫಿರಂಗಿಗಳನ್ನೂ ಹಿಡಿದುಕೊಂಡೆವೆಂದು ಪ್ರಕಟಿಸಿದ್ದಾರೆ. ಆ ಬಳಿಯಲ್ಲಿ ಅವರು ಇಷ್ಟುಮಾತ್ರದ ಜಯವನ್ನು ಪಡೆದಿದ್ದಾರೆ. ಇದು ನಡೆಯುವಾಗ್ಗೆ ಜರ್ಮನ್ ಕೇಸರರು ಪ್ರತ್ಯಕ್ಷವಾಗಿಯೇ ಇದ್ದರಂತೆ.

ಫ್ರೆಂಚ್‌ಸೈನ್ಯಗಳು ಸಾಹಸಮಾಡಿ ಪೆರ್ತೆಸ್ಸಿಗೆ ಪೂರ್ವಭಾಗದಲ್ಲಿ ಶತ್ರುಸೇನಾಪಙ್ಕ್ತಿಯ ಮೇಲೆಬಿದ್ದು ಭೇದಿಸಿಕೊಂಡು ನುಗ್ಗಿ ಜಯಶೀಲವಾಗಿರುತ್ತವೆ. ಮಿತ್ರಮಂಡಲಿಯ ಸೈನ್ಯಗಳು ಇನ್ನೊಂದು ಮುಖ್ಯವಾದ ಜಯಲಾಭವನ್ನು ಪಡೆದಿರುತ್ತವೆ. ಲಾಬೆಸ್ಸಿಯನ್ನು ಅವರು ಹಿಡಿದುಕೊಳ್ಳಲು ಕೆಲಕಾಲದಿಂದ ಸಾಹಸಮಾಡುತ್ತಿದ್ದಾರೆ. ದಕ್ಷಿಣದಿಂದ ಬೆಲ್ಜಿಯಮ್ಮಿಗೆ ನುಗ್ಗಿಹೋಗಬೇಕಾದರೆ ಇದೇ ಮಾರ್ಗವಾಗಿದೆ. ಅದುಕಾರಣ ಇದಕ್ಕಾಗಿ ೧ ತಿಂಗಳಿಂದಲೂ ಕಾದಾಡುತ್ತಿದ್ದಾರೆ. ಈ ಮುಖ್ಯಸ್ಥಾನವನ್ನು ಜರ್ಮನರು ಮುಖ್ಯಪ್ರಾಣದಂತೆ ಕಾಪಾಡುತ್ತಿದ್ದಾರೆ. ಇಲ್ಲಿ ಎರಡುಪಕ್ಷದವರೂ ನಿಂತು ಕಾದಾಡುವಾಗ ಕೆಸರಿನ ನೆಲದಲ್ಲಿ ಕಾಲುಗಳು ಹೂತುಹೋಗಿದ್ದರೂ ಲಕ್ಷ್ಯಮಾಡದೆ ಯುದ್ಧಮಾಡಿದ್ದಾರೆ. ಇಲ್ಲಿ ಬಹುಜನ ಜರ್ಮನರು ಹತರಾದರು. ಮತ್ತೂ ಸೆರೆಸಿಕ್ಕಿದರು. ಮಿತ್ರಮಂಡಲಿಯವರು ಆ ಬಳಿಯಣ ಸೆಂಟ್‌ಮೋರ್ ಎಂಬ ಮುಖ್ಯಪ್ರದೇಶವನ್ನು ವಶಪಡಿಸಿಕೊಂಡರು. ಇದು ಜರ್ಮನರ ವಶದಲ್ಲಿದ್ದಿತು. ಆಂಗ್ಲಸೈನ್ಯದಲ್ಲಿ ನಷ್ಟವಾದುದು ಬಹಳ ಸ್ವಲ್ಪ. ಏಯ್ಸ್ನ್ ನದಿಗೆ ಉತ್ತರದಲ್ಲಿರುವ ಸೆಂಟ್‌ಪಾಲ್ ಎಂಬ ಸ್ಥಲವನ್ನು ಫ್ರೆಂಚರು ಆಕ್ರಮಿಸಿ ತಮ್ಮವಶದಲ್ಲೇ ಇಟ್ಟುಕೊಂಡಿದ್ದಾರೆ. ಇದು ಮುಖ್ಯವಾದ ಲಾಭವೆಂದು ಎಣಿಸಲ್ಪಟ್ಟಿದೆ. ಲಾಬೆಸ್ಸಿಯನ್ನು ಜರ್ಮನರು ಬಿಟ್ಟುಕೊಟ್ಟರೆಂದು ಒಂದು ಸುದ್ದಿಬಂದಿದೆ. ಇದು ಸರ್ಕಾರಿಯಾಗಿ ಪ್ರಕಟವಾಗಿಲ್ಲ. ಲಾಬಾಯಿಸೇಲ್ ಎಂಬ ಗ್ರಾಮವು ಮಿತ್ರಮಂಡಲಿಯವರ ವಶದಲ್ಲಿದ್ದಿತು. ಇದಕ್ಕೆ ಶತ್ರುಗಳ ಫಿರಂಗಿ ಗುಂಡಿನೇಟುಗಳು ಬಿದ್ದುದರಲ್ಲಿ ಒಳಗಿದ್ದ ಮದ್ದಿನಮನೆಯು ಹೊತ್ತಿಕೊಂಡು ಊರೆಲ್ಲಾ ಉರಿಯುವಂತಾಯಿತು. ಆಗ ಊರು ಶತ್ರುಗಳ ಅಧೀನವಾಯಿತು. ಆದರೆ ಮಿತ್ರಮಂಡಲಿಯವರು ಮರಳಿ ರೇಗಿಬಿದ್ದು ಶತ್ರುಗಳಮೇಲೆ ಕಾದಾಡಿ ತಾ|| ೧೮ ರಲ್ಲಿ ಮತ್ತೆ ಅದನ್ನು ಸ್ವಾಧೀನಪಡಿಸಿಕೊಂಡರು. ಇನ್ನು ಹಲವುಕಡೆ ಒಂದೊಂದುರಾತ್ರಿಗೆ ೧೦-೨೦ ಸಲ ಉಭಯಪಕ್ಷದವರೂ ಪರಸ್ಪರ ಮೇಲೆಬಿದ್ದು ಕಾದಾಡಿದ್ದಾರೆ. ಸೆಂಟ್‌ಜಾರ್ಜಿಗೂ ಸಮುದ್ರಕ್ಕೂ ಮಧ್ಯದಲ್ಲಿರುವ ಈಜರ್‌ಕಾಲ್ವೆಯ ಬಲಭಾಗದಲ್ಲಿ ಆಂಗ್ಲೇಯರು ಮುಂದಕ್ಕೆ ಸಾಗಿಹೋಗಿ ಬಲವಾದ ಸ್ಥಲದಲ್ಲಿ ನಿಂತಿದ್ದಾರೆ. ಅಲ್ಲಿಂದ ಕದಲಿಸಬೇಕೆಂದು ಜರ್ಮನರು ಎಷ್ಟೋ ಸಾಹಸಮಾಡಿದರೂ ಫಲವಾಗಲಿಲ್ಲ. ಹೊಳೆಯನ್ನು ದಾಟಿ ಮಿತ್ರಮಂಡಲಿಯವರು ಮುಂದಕ್ಕೆಹೋದರು. ಇತ್ತ ಆಲ್ಸೆಸ್ಸಿನಲ್ಲೂ ಫ್ರೆಂಚರು ತಾವು ಹಿಡಿದುಕೊಂಡಿರುವ ಸ್ಥಲಗಳನ್ನು ಬಲಪಡಿಸಿಕೊಂಡು ಮುಂದಕ್ಕೆ ಸಾಗುತ್ತಿದ್ದಾರೆ. ವರ್ಡನ್ ಪ್ರಾಂತದಲ್ಲಿ ಮ್ಯೂಜ್‌ನದಿಯ ಉನ್ನತಪ್ರದೇಶಗಳಲ್ಲಿದ್ದ ಮಿತ್ರಮಂಡಲಿಯವರ ಫಿರಂಗಿಗಳು ಜರ್ಮನ್ ಫಿರಂಗಿಗಳನ್ನು ಧ್ವಂಸಮಾಡಿ, ಮ್ಯೂಜುನದಿಗೆ ಅವರು ಅಡ್ಡವಾಗಿ ಕಟ್ಟಿದ್ದ ಸೇತುಗಳನ್ನು ಧ್ವಂಸಮಾಡಿವೆ. ಮಿತ್ರಮಂಡಲಿಯವರು ಈಜರ್‌ನದಿಯಮೇಲೆ ತಮ್ಮ ಸಂಚಾರಕ್ಕೆ ಅನುಕೂಲವಾಗುವಂತೆ ಒಂದು ಸೇತುವನ್ನು ಕಟ್ಟಿದರು. ಅದನ್ನು ಹಾಳ್ಮಾಡಬೇಕೆಂದು ಶತ್ರುಗಳು ಬಹು ಪ್ರಯತ್ನಪಟ್ಟರು. ಸಫಲವಾಗಲಿಲ್ಲ. ಇದಕ್ಕೆ ನಮ್ಮವರು ಜನರಲ್ ಜೋಫ್ರ (ಫ್ರೆಂಚ್‌ಸೈನ್ಯಾಧಿಪತಿ ಹೆಸರು) ಎಂದು ನಾಮಕರಣ ಮಾಡಿದ್ದಾರೆ. ಇದರಮೇಲೆ ಜನವರಿ ತಿಂಗಳಾರಂಭದಿಂದಲೂ ಸಂಚಾರವು ನಡೆಯುತ್ತಿದೆ. ಇಲ್ಲಿ ಜರ್ಮನರು ಮಾಡಿದ ಪ್ರಯತ್ನವು ವ್ಯರ್ಥವಾದುದರಿಂದ ಅವರು ರೇಗಿ ನ್ಯೂಪೋರ್ಟಿನಮೇಲೆ ಭಯಂಕರವಾದ ಫಿರಂಗಿಗುಂಡುಗಳನ್ನು ಹೊಡೆದರು. ಅದರಿಂದ ಏನೂ ಫಲವಾಗಲಿಲ್ಲ. ಆಲ್ಸೆಸ್ಸಿಗೆ ಸೇರಿದ ಆರ್ಗೋನ್ ಪ್ರಾಂತದಲ್ಲಿ ಫ್ರೆಂಚ್‌ಸೈನ್ಯವೂ ಇಟಾಲಿಯನ್ ಸೈನ್ಯವೂ ಸೇರಿ ಜರ್ಮನರಮೇಲೆ ಭಯಂಕರವಾದ ಯುದ್ಧವನ್ನು ಮಾಡಿದುದರಲ್ಲಿ ಜರ್ಮನ್ ಸೈನ್ಯಪಙ್ಕ್ತಿಯನ್ನು ಭೇದಿಸಿಕೊಂಡು ಬಹಳದೂರ ಮುಂದಕ್ಕೆ ಹೋದರು. ಇಲ್ಲಿನ ಯುದ್ಧದಲ್ಲೇ ಇಟಲಿಯ ಪ್ರಸಿದ್ಧದೇಶಭಕ್ತ ಗರಿಬಾಲ್ಡಿಯವರ ಮಮ್ಮಗನು ಹತನಾದನು. ಈಗ ಇಂಗ್ಲೀಷರು ಹೊಸದಾಗಿ ೬ ಸೈನ್ಯಗಳನ್ನು ಅಣಿಮಾಡುತ್ತಿದ್ದಾರೆ. ಇವರ ಯೋಗ್ಯತಾವಿಶೇಷವೆಲ್ಲಾ ಆಗಲೇ ಜರ್ಮನಿಯವರಿಗೆ ಗೊತ್ತಾಗಿಹೋಗಿದೆ. ಈ ಪ್ರಬಲವಾದ ಸೈನ್ಯವು ಬಂದು ಫ್ರೆಂಚರಿಗೆ ಸಹಾಯಮಾಡುವುದಕ್ಕೆ ಮುಂಚೆಯೇ ಫ್ರೆಂಚ್‌ಸೇನಾಪಙ್ಕ್ತಿಯನ್ನು ಭೇದಿಸಿಕೊಂಡು ನುಗ್ಗಬೇಕೆಂದು ಈಗ ಜರ್ಮನರು ಬಹಳ ಪ್ರಯತ್ನಮಾಡುತ್ತಿರುವಂತೆ ಕಾಣುತ್ತದೆ. ಅವರು ಪೋಲಾಂಡಿನಲ್ಲಿ ವಿಶ್ಚುಲಾನದಿಯ ಮುಂದಕ್ಕೆ ವಾರ್ಸಾದಕಡೆಗೆ ನುಗ್ಗುವ ಪ್ರಯತ್ನವನ್ನೂ ಕೂಡ ನಿಲ್ಲಿಸಿ, ಅಲ್ಲಿನ ಸೇನೆಗಳನ್ನು ಇತ್ತಕಡೆಗೆ ಕರೆಯಿಸಿಕೊಳ್ಳುತ್ತಿರುವಂತೆ ಕಾಣುತ್ತದೆ. ಆದರೂ ಈ ಯತ್ನವನ್ನೆಲ್ಲಾ ಮಿತ್ರಮಂಡಲಿಯವರು ಅರಿತುಕೊಂಡಿದ್ದಾರೆ. ಪಶ್ಚಿಮರಣರಂಗದ ತಮ್ಮ ಸೇನಾಮುಖವನ್ನೆಲ್ಲಾ ಬಹಳ ಭದ್ರಗೊಳಿಸಿದ್ದಾರೆ.

ಪೂರ್ವರಣರಂಗ.

ವಿಶ್ಚುಲಾನದಿಯ ಕೆಳಗಡೆ ಉತ್ತರದಿಕ್ಕಿನಲ್ಲಿದ್ದ ಸೀರ್ಪೆ ಎಂಬ ಪಟ್ಟಣವನ್ನು ರಷ್ಯನರು ವಶಪಡಿಸಿಕೊಂಡರು. ಇದು ಥಾರ್ನ್ ಕೋಟೆಗೆ ಪೂರ್ವಭಾಗದಲ್ಲಿ ೪೫ ಮೈಲಿಗಳ ದೂರದಲ್ಲಿದೆ. ಕಾರ್ಪೇತಿಯನ್ ಬೆಟ್ಟಗಳ ಪ್ರಾಂತದಲ್ಲಿ ಈಗ ಮಂಜು ವಿಪರೀತವಾಗಿ ಸುರಿಯುತ್ತಿದೆ. ಅದುಕಾರಣ ಯುದ್ಧವು ಸ್ವಲ್ಪ ವಿಶ್ರಾಂತಿಗೊಂಡಿದೆ. ಆ ಬೆಟ್ಟದ ಕಣಿವೆಗಳೆಲ್ಲವೂ ಈಗ ರಷ್ಯನರ ಅಧೀನದಲ್ಲಿವೆ. ರಷ್ಯನರ ಕುದುರೆಗಳಿಗೆ ಸಾಮಾನ್ಯವಾಗಿ ಬೆಟ್ಟಗಳ ಮೇಲೆ ಎಂಥಾ ಮಂಜಿನಲ್ಲೂ ತಿರುಗಾಡುವ ವಾಡಿಕೆಯಿದೆ. ಅಂಥ ಸೌಕರ್ಯವು ಶತ್ರುಗಳ ಕಡೆಗಿಲ್ಲ. ಎಂಥ ಕಣಿವೆಗಳ ಶಿಬಿರಕ್ಕಾದರೂ ರಷ್ಯನರ ಕುದುರೆಗಳು ಸ್ವಾರರ ಸಮೇತ ಹೋಗಿ ಅಲ್ಲಿದ್ದ ಶತ್ರುಗಳನ್ನು ಧ್ವಂಸಮಾಡುವುದಕ್ಕೋ ವಶವಾಗುವುದಕ್ಕೋ ದಾರಿಮಾಡಿಕೊಟ್ಟಿರುವುವು. ಪೂರ್ವರಣರಂಗದಲ್ಲಿದ್ದ ಹಲವು ಸೈನ್ಯಗಳನ್ನೂ ಫಿರಂಗಿಗಳು-ಮದ್ದುಗುಂಡುಗಳು ಮೊದಲಾದ ಸಾಮಗ್ರಿಗಳನ್ನೂ ಬಹಳವಾಗಿ ಜರ್ಮನರು ಪಶ್ಚಿಮ ರಣರಂಗಕ್ಕೆ ಸಾಗಿಸಿಕೊಂಡು ಹೋಗುತ್ತಿರುವುದನ್ನು ಕಂಡು ವಿಶ್ಚುಲಾ ಪ್ರಾಂತ್ಯದಲ್ಲಿ ಜರ್ಮನರು ಯುದ್ಧಮಾಡುವುದನ್ನು ಬಿಟ್ಟಿರುವರೆಂದು ಕೆಲರು ತಿಳಿಯುತ್ತಿರುವರು. ಆದರೆ ಯಾವುದೋ ಮಹಾ ಯುದ್ಧವನ್ನು ಮುಂದೆ ಸಾಗಿಸುವ ಯೋಚನೆಯಿಂದ ಜರ್ಮನರು ಹೀಗೆ ಮಾಡಿರುವರೆಂದು ಒಬ್ಬ ಪತ್ರವ್ಯವಹಾರಕನು ಊಹಿಸುತ್ತಾನೆ. ಆಸ್ಟ್ರಿಯನ್ನರು ಸೋತುಓಡಿಹೋಗುವಾಗ ತಮ್ಮ ದೊಡ್ಡದೊಡ್ಡ ಫಿರಂಗಿ ಮೊದಲಾದ ಅನಂತ ಸಾಮಗ್ರಿಗಳನ್ನು ಬಿಟ್ಟುಹೋಗಿದ್ದಾರೆ. ಇವನ್ನೆಲ್ಲಾ ರಷ್ಯನರು ಸ್ವದೇಶಕ್ಕೆ ಸಾಗಿಸಿಕೊಂಡು ಹೋಗುವುದು ಪ್ರಯಾಸವೆಂದು ತಿಳಿದು, ಗೆಲಿಷಿಯಾದಲ್ಲಿ ಶತ್ರುಗಳ ಮೇಲೆ ಯುದ್ಧಮಾಡುವಾಗ್ಗೆ ಆ ಶತ್ರುಗಳ ಫಿರಂಗಿ ಮೊದಲಾದುವುಗಳನ್ನೇ ಉಪಯೋಗಿಸುತ್ತಿದ್ದಾರೆ. ರಷ್ಯನರ ಕಡೆಗೆ ಇನ್ನೂ ಹೊಸಹೊಸ ಸೇನೆಗಳು ಬಂದು ಕೂಡುತ್ತಲೇ ಇವೆ.

ತುರ್ಕಿ.

ಕಾಕಸಸ್ ಪರ್ವತಪ್ರಾಂತದಲ್ಲಿ ರಷ್ಯನರಿಗೂ ತುರ್ಕಿಯವರಿಗೂ ಆದ ಯುದ್ಧದಲ್ಲಿ ರಷ್ಯನರಿಗೆ ಜಯವಾಯಿತು. ಒಂದು ತುರ್ಕಿ ಪಟಾಲಮನ್ನು ಅವರು ಹಿಡಿದುಕೊಂಡರು. ಮತ್ತೊಂದು ಪಟಾಲಮ್ಮನ್ನು ನಾಶಪಡಿಸಿದರು. ತುರ್ಕಿಯವರಿಗೆ ತುಂಬಾ ಅಪಜಯವಾಯಿತು. ಅಲ್ಲಿ ತುರ್ಕಿಯವರ ಕಡೆ ಸತ್ತವರು ಏಟುತಿಂದವರು ಸೆರೆಸಿಕ್ಕಿದವರು ಎಲ್ಲಾ ಸೇರಿ ೮೦ ಸಾವಿರ ಮಂದಿಗಳು. ಇದಲ್ಲದೆ ೧೧೦ ಫಿರಂಗಿಗಳೂ, ಮದ್ದುಗುಂಡು ಮೊದಲಾದ ಸಾಮಾನುಗಳೂ, ಭೂಪಟಗಳೂ, ಅನೇಕ ಕಾಗದಪತ್ರಗಳೂ, ಹಲವು ಸಾವಿರ ತುಪಾಕಿಗಳೂ, ಹೊಗೆಬಂಡಿಗಳೂ ಪಶುಗಳ ಮಂದೆಗಳೂ, ಹಲವುಮಂದಿ ತುರ್ಕಿ ಸೈನ್ಯಾಧಿಕಾರಿಗಳೂ ಸಹ ರಷ್ಯನರ ಅಧೀನವಾದರು. ಮತ್ತೂ ಅದೇ ಪ್ರಾಂತದಲ್ಲಿ ಮತ್ತೊಂದುಕಡೆ ಇದ್ದ ತುರ್ಕಿಯ ಸೇನಾ ಶಿಬಿರವನ್ನು ರಷ್ಯನರು ಆಕ್ರಮಿಸಿಕೊಂಡರು. ಅಲ್ಲಿದ್ದ ಫಿರಂಗಿಯ ಕೊಟ್ಟಾರವೂ ರಷ್ಯನರ ವಶವಾಯಿತು. ಈಗ ತುರ್ಕಿಯವರು ಈಜಿಪ್ಟಿನಮೇಲೆ ಸಾಗಿ ಬರುತ್ತಿದ್ದ ಪ್ರಯತ್ನವನ್ನು ನಿಲ್ಲಿಸಿಬಿಟ್ಟರೆಂಬ ವಾರ್ತೆ ಬಂದಿದೆ.

ಜರ್ಮನರು ತುರ್ಕಿಯ ೧೪ ನೆ ನಂ|| ಸೇನೆಯನ್ನು ಕಾನ್ಸ್ಟಾಂಟಿನೋಪಲಿನಿಂದ ಹೊರಡಿಸಿ ರಷ್ಯನರಮೇಲೆ ಯುದ್ಧಕ್ಕೆ ಕಳುಹಿಸಿಬಿಟ್ಟರಂತೆ. ಅಲ್ಲಿದ್ದ ಸೇನೆಗೆ ಪ್ರತಿಯಾಗಿ ತಮ್ಮ ಅಭಿಪ್ರಾಯಕ್ಕೆ ಅನುಸಾರವಾಗಿ ನಡೆಯುವ ಬೇರೊಂದು ಸೈನ್ಯವನ್ನು ತಂದು ಇರಿಸಿರುವರು. ೧೪ನೆ ನಂ|| ತುರ್ಕಿ ಸೈನ್ಯದಲ್ಲಿ ಬಹಳ ಪರಾಕ್ರಮಶಾಲಿಗಳಿದ್ದರು. ಅವರು ತಮ್ಮಮೇಲೆ ಜರ್ಮನರು ನಡೆಸುವ ಅಧಿಕಾರವನ್ನು ಒಪ್ಪುತ್ತಿರಲಿಲ್ಲ. ಯುದ್ಧಾರಂಭಕಾಲದಲ್ಲಿ ಜರೂಸಲೇಂ ಪ್ರಜೆಗಳು ಜರ್ಮನರಮೇಲೆ ಅಭಿಮಾನವಾಗಿದ್ದರಂತೆ. ಈಚೆಗೆ ಅವರ ಅಹಂಭಾವವನ್ನೂ ಅವರಿಗೆ ತುರ್ಕಿಸೈನ್ಯಾಧಿಕಾರಿಗಳಿಗಿಂತ ಹೆಚ್ಚು ಸಂಬಳ ಕೊಡಬೇಕಾಗಿರುವುದನ್ನೂ ನೋಡಿ ಅವರ ವಿಷಯದಲ್ಲಿದ್ದ ಅಭಿಮಾನವನ್ನು ತೊರೆದು ಧಿಕ್ಕರಿಸಿ ಮಾತನಾಡುತಿರುವರಂತೆ. ಹೀಗೆ ಮಾತನಾಡಿದ ೧೯ ಮಂದಿ ತುರ್ಕಿ ಸೈನ್ಯಾಧಿಕಾರಿಗಳನ್ನು ಜರ್ಮನ್ ಸೈನ್ಯಾಧಿಕಾರಿಗಳು ಸುಡಿಸಿ ಕೊಂದಿರುವರು. ಇಲ್ಲಿನ ಪ್ರಜೆಗಳಲ್ಲಿ ಮತಾವೇಶವನ್ನು ಹುಟ್ಟಿಸಬೇಕೆಂದು ಮಕ್ಕಾದಿಂದ ೮ ಮಂದಿ ಮತಗುರುಗಳನ್ನು ಜರೂಸಲೇಮಿಗೆ ಕರತಂದಿದ್ದರು. ಅವರಲ್ಲಿ ಮುಖ್ಯಗುರುವು ಮೃತನಾಗಿ ಹೋದುದರಿಂದ ಉಳಿದ ಗುರುಗಳ ಉತ್ಸಾಹವು ಇಳಿದುಹೋಯಿತು. ತುರ್ಕಿಯು ಮತಕಾರ್ಯಕ್ಕಾಗಿ ಯುದ್ಧಕ್ಕೆ ನಿಂತಿರುವುದೆಂದು ಮಹಮದೀಯರೆಲ್ಲಾ ಪ್ರೇರಣೆಮಾಡಬೇಕೆಂದು ತುರ್ಕಿಯವರೂ ಜರ್ಮನಿಯವರೂ ಸಹ ಪ್ರಯತ್ನಪಟ್ಟರು. ಆದರೆ ಅವರು ಎರಡು ಕ್ರೈಸ್ತ ದೇಶಗಳ ಸಹಾಯಕ್ಕೆ ನಿಂತು ಕಾದಾಡುತ್ತಿರುವುದನ್ನು ಜಗತ್ತೇ ಕಂಡಿರುವುದರಿಂದ ಅವಕ್ಕೆ ಅನೇಕದೇಶದ ಮಹಮದೀಯರು ಒಪ್ಪಲಿಲ್ಲ. ರಷ್ಯನರಕಡೆ ಲಕ್ಷಾಂತರ ಮಹಮದೀಯ ಸೈನಿಕರೇ ನಿಂತು ತುರ್ಕಿಜರ್ಮನ್ ಸೈನಿಕರಮೇಲೆ ಈಗ ಕಾದಾಡುತ್ತಿದ್ದಾರೆ. ಕಾಕಸಸ್‌ನಲ್ಲಿ ತುರ್ಕಿಯವರಿಗೆ ಆದ ದೊಡ್ಡ ಪರಾಜಯವನ್ನು ಕೇಳಿ ಸಿರಿಯನ್ನರೂ ಅರಬ್ಬಿಯವರೂ ಎದೆಗುಂದಿಹೋಗಿದ್ದಾರೆ. ಈಚೆಗೆ ತುರ್ಕಿಯ ಸೇನೆಯು ಮರಳಿ ಕಾರಾರ್ಗನ್ ಕಣಿವೆಯ ಹತ್ತಿರ ೧ ಲಕ್ಷದವರೆಗೆ ಕೂಡಿರುವುದಂತೆ. ಇಲ್ಲಿಗೆ ಎರ್ಜೆರಂನಿಂದ ಆಹಾರಾದಿ ಸಾಮಗ್ರಿಗಳು ಚೆನ್ನಾಗಿ ಒದಗುತ್ತಿವೆಯಂತೆ.

ಕಾಕಸಸ್‌ನಲ್ಲಿರುವ ರಷ್ಯನ್ ಸೈನ್ಯದಮೇಲೆ ಪ್ರತಿಭಟಿಸುವುದಕ್ಕೆ ಜರ್ಮನರು ಮತ್ತೊಂದು ತುರ್ಕಿಸೈನ್ಯವನ್ನು ಕಳುಹಿಸಿದ್ದಾರೆ. ಪೋಲಂಡಿನಲ್ಲೂ ಗಲಿಷಿಯಾದಲ್ಲೂ ಕಾಕಸಸ್‌ಪ್ರಾಂತದಲ್ಲೂ ಶತ್ರುಪಕ್ಷದವರಿಗೆ ಪರಾಜಯಗಳೇ ಪ್ರಾಪ್ತವಾಗುತ್ತಿರುವುದರಿಂದ ಪೂರ್ವದಲ್ಲಿ ಜರ್ಮನರ ಪ್ರತಿಷ್ಠೆಗೆ ಬಹಳಭಂಗಬಂದಿದೆ. ಜರ್ಮನರಮೇಲೂ, ಆಸ್ಟ್ರಿಯನ್ನರಮೇಲೂ, ತುರ್ಕಿಯವರಮೇಲೂ ಒಂದೇಸಮವಾಗಿ ರಷ್ಯನರು ಕಾದಾಡಿ ಆ ಶತ್ರುಗಳಿಗೆಲ್ಲಾ ಪರಾಭವಪರಂಪರೆಯನ್ನು ಉಂಟುಮಾಡುತ್ತಿರುವ ರಷ್ಯಾದೇಶದ ಶಕ್ತಿ ಸಾಹಸ ಪರಾಕ್ರಮಗಳು ಪ್ರಶಂಸಾರ್ಹವಾಗಿವೆ. ಈಗ ತುರ್ಕಿಯ ಕಡೆಯ ಸಿರಿಯನ್ ಸೈನಿಕರು ಬಹಳ ಬಾಧೆಪಡುತ್ತಿರುವರೆಂದು ವರ್ತಮಾನಬಂದಿದೆ. ಸಿರಿಯಾದಿಂದ ತಲೆತಪ್ಪಿಸಿಕೊಂಡು ಕೈರೋ ಪಟ್ಟಣಕ್ಕೆ ಬಂದವರು ಹೇಳುವ ಮಾತಿನಿಂದ ಗೊತ್ತಾಗುವುದೇನೆಂದರೆ—ತುರ್ಕಿಯ ಸೈನ್ಯಾಧಿಪತಿಗಳು ಸರಿಯಾದ ಏರ್ಪಾಟನ್ನು ಮಾಡಿಲ್ಲದೆ ಇದ್ದುದರಿಂದ ಸೈನಿಕರು ಉಪವಾಸಮಾಡುತ್ತಿದ್ದಾರೆ. ಅವರು ಬಿಸಿಲಕಾಲದಲ್ಲಿ ಧರಿಸುವಂಥ ಉಡುಪನ್ನೇ ಈಗಲೂ ಧರಿಸಿದ್ದಾರೆ. ಕಾಲಿಗೆ ಜೋಡಿಲ್ಲ. ಒಂಟೆಗಳಿಗೆ ಯಾವುದೋ ರೋಗವು ಬಂದು ಕೊರಗುತ್ತಿವೆ. ತುರ್ಕಿಯು ಯುದ್ಧಕ್ಕೆ ಆರಂಭಿಸಿದಾಗ ಹಬ್‌ರನ್ ಜಿಲ್ಲೆಯಿಂದ ೨೫ ಸಾವಿರಮಂದಿಗಳನ್ನು ಹೊಸದಾಗಿ ಸೈನ್ಯಕ್ಕೆ ಸೇರಿಸಿ ಕರೆದುಕೊಂಡುಹೋದರು. ಇವರೆಲ್ಲರೂ ಮೂರುದಿನಗಳವರೆಗೆ ಆಹಾರವಿಲ್ಲದೆ ಬಳಲಿದರು. ಅಯ್ಯೋ! ಇದು ಮತದ ಯುದ್ಧವಲ್ಲವಲ್ಲಾ! ಎಂದು ಸೈನ್ಯಾಧಿಪತಿಗಳನ್ನು ಬೇಡಿಕೊಂಡರು. ಮುಖ್ಯವಾಗಿ ತುರ್ಕಿ ಸೇನೆಯೊಳಗೆ ಅನತೋಲಿಯನ್ ಸೈನಿಕರು ಬಹಳ ತೊಂದರೆ ಪಟ್ಟಿರುವರು. ಅವರಿಗೆ ತುರ್ಕಿಯವರಮೇಲೆ ಸಂಪೂರ್ಣವಾಗಿ ಅಸಮಾಧಾನವುಂಟಾಗಿದೆ. ಇಂಥ ಸೈನಿಕರನ್ನು ಕಟ್ಟಿಕೊಂಡು ಈಜಿಪ್ಟಿನಮೇಲೆ ದಂಡಯಾತ್ರೆಮಾಡುವುದು ಯುಕ್ತವಲ್ಲವೆಂದು ಜರ್ಮನ್ ಸೈನ್ಯಾಧಿಪತಿಗಳು ತಮ್ಮದೇಶದ ಅಧಿಕಾರಿಗಳಿಗೆ ತಿಳಿಯಪಡಿಸಿದ್ದಾರೆ. ಈಗ ಅದ್ರಿಯಾನೋಪಲ್ಲಿನಲ್ಲಿದ್ದ ಸೈನ್ಯವನ್ನೆಲ್ಲಾ ತುರ್ಕಿಯವರು ಯುದ್ಧಕ್ಕೆ ಕರೆಯಿಸಿಕೊಂಡುಬಿಟ್ಟಿದ್ದಾರೆ. ಈಚೆಗೆ ಬಂದಿರುವ ವಾರ್ತೆಯಿಂದ ಕಾಕಸಸ್ ಪ್ರಾಂತದಲ್ಲಿದ್ದ ತುರ್ಕಿ ಸೈನ್ಯವನ್ನೆಲ್ಲಾ ರಷ್ಯನರು ನಾಶಪಡಿಸಿದರೆಂದೂ ಉಳಿದ ಅಲ್ಪಸ್ವಲ್ಪಮಂದಿ ತಲೆತಪ್ಪಿಸಿಕೊಂಡು ಓಡಿದರೆಂದೂ ಅಲ್ಲಿ ತುರ್ಕಿಯವರ ಹಲವು ಫಿರಂಗಿಗಳು ರಷ್ಯನರಿಗೆ ಸಿಕ್ಕಿದುವೆಂದೂ ಗೊತ್ತಾಗಿದೆ.

ಪರ್ಷ್ಯಾದಲ್ಲಿನ ಯುದ್ಧ.

ಓಮನ್ ಸುಲ್ತಾನನಿಗೆ ಮತವಿಷಯದಲ್ಲಿಯೂ ರಾಜಕೀಯ ವಿಷಯದಲ್ಲಿಯೂ ಇರುವ ಅಧಿಕಾರವನ್ನು ತಪ್ಪಿಸಿಬಿಡಬೇಕೆಂದು ಒಂದು ವರ್ಷದಿಂದಲೂ ಕೆಲರು ಅರಬ್ಬಿಯವರು ಪ್ರಯತ್ನಪಡುತ್ತಿದ್ದು, ಆ ಸುಲ್ತಾನರ ಮುಖ್ಯಪಟ್ಟಣವಾದ ಮಸ್ಕಟ್ಟಿನ ಮೇಲೆ ಕಳೆದ ತಾ|| ೧೧ರ ರಾತ್ರಿ ೩ ಗಂಟೆಯ ಹೊತ್ತಿನಲ್ಲಿ ಬಿದ್ದು ಕಾವಲಿನ ಸೈನಿಕರನ್ನು ಹೊಡೆದರು. ಮರುದಿನ ಮಧ್ಯಾಹ್ನದವರೆಗೂ ಉಭಯಪಕ್ಷದವರಿಗೂ ಯುದ್ಧವಾಯಿತು. ಈ ಸುಲ್ತಾನರ ಸಹಾಯಕ್ಕೆ ಇಂಗ್ಲೀಷರು ಸ್ವಲ್ಪ ಸೈನ್ಯವನ್ನು ಕಳುಹಿಸಿದ್ದರು. ಅರಬ್ಬರು ಬಹುಶಃ ೩ ಸಾವಿರ ಮಂದಿಗಳು ಬಂದಿದ್ದರು. ಅವರು ೫೦೦ ಮಂದಿಯವರೆಗೆ ಸತ್ತರು. ಉಳಿದವರು ಓಡಿಹೋದರು. ಒಬ್ಬ ಆಂಗ್ಲಸೈನಿಕೋದ್ಯೋಗಿಗೂ ೧೪ ಮಂದಿ ಸೈನಿಕರಿಗೂ ಗಾಯವಾಯಿತು. ೬ ಮಂದಿ ಸೈನಿಕರು ಸತ್ತರು. ಅರಬ್ಬರ ಪ್ರೇರಕನಾದ ಮುಖ್ಯನಾಯಕನಿಗೆ ಗಾಯವಾಯಿತು. ಪರ್ಷ್ಯಾದೇಶದ ಒಂದು ಜಿಲ್ಲೆಯ ಗೌರ್ನರನ್ನು ತುರ್ಕಿಯವರು ತುಪಾಕಿಯಿಂದ ಹೊಡೆದು ಕೊಂದರೆಂದೂ ಇನ್ನಿಬ್ಬರು ರಷ್ಯನರನ್ನೂ ಸಹ ಕೊಂದರೆಂದೂ ವಾರ್ತೆ ಬಂದಿದೆ

ಬರಬರುತ್ತ ಜರ್ಮನರು ಏಷ್ಯಾಖಂಡದಲ್ಲಿ ಯುದ್ಧಾಗ್ನಿಯನ್ನು ಹೆಚ್ಚಿಸುತ್ತಿರುವರೆಂಬುದಕ್ಕೆ ಪರ್ಷ್ಯಾಕೊಲ್ಲಿಯ ಗದ್ದಲವು ನಿದರ್ಶಕವಾಗಿದೆ. ತುರ್ಕಿಯ ಅವಾಂತರವು ಏಷ್ಯಾಮೈನರಲ್ಲಿ ಬಲವಾಗುತ್ತಲಿದೆ. ಪರ್ಷ್ಯಾ ದೇಶದಮೇಲೆ ದಂಡೆತ್ತಿ ಬರುತ್ತಿರುವ ಜರ್ಮನಿಯವರ ಕಡೆಯಿಂದ ಪರ್ಷ್ಯಾದ ಅಧಿಕಾರಿಗಳು ಲಂಚವನ್ನು ತಿಂದುಬಿಟ್ಟಿರುವರಂತೆ. ಈಗಿನ ಯುದ್ಧವು ಮತಸಂಬಂಧವಾದುದೆಂದು ತಿಳಿದು ಪರ್ಷಿಯನ್ನರು ತುರ್ಕಿಗೆ ಸೇರಿದ ಕುರ್ದು ಅಧಿಕಾರಿಗಳೊಡನೆ ಸೇರಿಕೊಂಡಿದ್ದಾರಂತೆ. ಪೆಟ್ರೋಗ್ರೇಡ್ ನಗರದಿಂದ ಟೈಮ್ಸ್ ಪತ್ರಿಕಾ ಪ್ರತಿನಿಧಿಯು ಹೀಗೆ ಬರೆದಿರುತ್ತಾನೆ.—೬೦೦ ಮಂದಿ ತುರ್ಕಿ ಸೈನಿಕರೂ ೨೫ ಸಾವಿರ ಮಂದಿ ಕುರ್ದು ಜನರೂ ಪರ್ಷ್ಯಾಕ್ಕೆ ಸೇರಿದ ಟಾಬ್ರಿಜ್ ಜಿಲ್ಲೆಗೆ ನುಗ್ಗಿದ್ದಾರೆ. ಮೇನ್‌ಡೂಯಾಬಿನ ಹತ್ತಿರ ಪರ್ಷಿಯನ್ನರು ತುರ್ಕಿಯವರ ಮೇಲೆ ಯುದ್ಧಮಾಡಿದರು. ಇಲ್ಲಿನ ಗೌರ್ನರಾದ ಷುಜಾ ಉದ್‌ದೌಲಾರವರಿಗೆ ಇಲ್ಲಿನ ಯುದ್ಧದಲ್ಲೇ ಏಟುತಗಲಿತು. ಅವರ ಆಧಿಪತ್ಯದಲ್ಲಿದ್ದ ೪೦೦ಮಂದಿ ರಾವುತರೂ ಕೊಲ್ಲಲ್ಪಟ್ಟರು. ಪರ್ಷ್ಯಾ ದೇಶದ ಜನರು ಸಾವಿರಾರುಗಟ್ಟಲೆಯಾಗಿ ರಷ್ಯಾಕ್ಕೆ ಓಡಿಹೋಗುತ್ತಿದ್ದಾರೆ. ಮೇನ್‌ಡೂಯಾಬಿನಿಂದ ತಲೆತಪ್ಪಿಸಿಕೊಂಡು ಓಡಿಹೋದವರ ಹೊರತು ಉಳಿದವರನ್ನು ಕುರ್ದು ಸೈನಿಕರು ಕೊಂದುಬಿಟ್ಟಿದ್ದಾರೆ. ಇಲ್ಲಿಗೆ ಹೊಸಸೇನೆಗಳು ಬಂದು ಸೇರಿದುದರಿಂದ ರಷ್ಯನರು ಸ್ವಲ್ಪ ದಿನದಲ್ಲೇ ಈ ಸುತ್ತಿನಲ್ಲಿನ ಗದ್ದಲವನ್ನು ಅಣಗಿಸಬಲ್ಲರು ಎಂಬುದಾಗಿ.

ಆಕಾಶವಿಮಾನಗಳು.

ಆಂಗ್ಲೇಯ ವೈಮಾನಿಕರು ಆಂಟ್ವರ್ಪ್ ಪಟ್ಟಣದಮೇಲೆ ಹಾರಿಹೋಗಿ ಅಲ್ಲಿದ್ದ ಜರ್ಮನರಮೇಲೆ ಸಿಡಿಮದ್ದುಗಳನ್ನು ಹಾಕಿ ಬಂದಿದ್ದಾರೆ. ಎಷ್ಟು ನಷ್ಟವಾಯಿತೆಂಬುದು ಗೊತ್ತಾಗಿಲ್ಲ. ಒಬ್ಬ ಫ್ರೆಂಚ್ ವೈಮಾನಿಕನು ಗೂಢಚಾರವೃತ್ತಿಗೆ ಹೋಗಿದ್ದು ಬರುತ್ತಿರುವಾಗ ಒಂದು ಜರ್ಮನ್ ವಿಮಾನವನ್ನು ಕಂಡು ಅದರ ಬೆನ್ನಂಟಿ ೪ ಆವೃತ್ತಿ ತುಪಾಕಿ ಗುಂಡುಗಳನ್ನು ಹಾರಿಸಿದನು. ಅದರಿಂದ ಅದರಲ್ಲಿದ್ದ ಲೆ|| ವಾನ್ ಫಾರ್ಕ್ ಹರ್ಯನ್ ಎಂಬಾತನು ಸತ್ತನು. ಉಳಿದ ೩ ಏಟುಗಳೂ ವಿಮಾನಕ್ಕೆ ಬಡಿದು ನಷ್ಟವನ್ನು ಮಾಡಿದುವು. ಪೂರ್ವರಣರಂಗದಲ್ಲಿ ಜರ್ಮನರ ೨ ವಿಮಾನಗಳು ಬಜಾರಾವಿಶ್ಚುಲಾ ನದಿಗಳ ಸಂಗಮಸ್ಥಲದಲ್ಲಿ ಕಾಣಿಸಿಕೊಳ್ಳಲು, ಅವಕ್ಕೆ ರಷ್ಯನರು ಗುಂಡುಗಳನ್ನು ಹೊಡೆದು ಕೆಡಹಿಬಿಟ್ಟರು. ಜರ್ಮನರ ವಿಮಾನಗಳು ರಾತ್ರಿಯಹೊತ್ತು ಬಂದರೆ ಅವಕ್ಕೆ ಪಟ್ಟಣದ ಸ್ವರೂಪವು ಗೊತ್ತಾಗಬಾರದೆಂಬುದಾಗಿ ಪ್ಯಾರಿಸ್‌ಪಟ್ಟಣದ ಪೋಲೀಸ್ ಶಾಖೆಯವರು ರಾತ್ರಿಯಹೊತ್ತು ಬೀದಿಗಳಲ್ಲಿ ದೀಪಗಳನ್ನು ಹೊತ್ತಿಸಬಾರದಂತೆ ಮಾಡಿದ್ದಾರೆ. ಸೋಯಿಜನ್ಸಿಗೆ ಪಶ್ಚಿಮದಲ್ಲಿರುವ ಚಾಂಪೆನಿಪ್ರಾಂತವು ಮಿತ್ರಮಂಡಲಿಯವರ ವಶದಲ್ಲಿದೆ. ಅಲ್ಲಿರುವ ಶಿಬಿರದ ಮೇಲ್ಗಡೆಯಲ್ಲಿ ಜರ್ಮನರ ಕೆಲವು ವಿಮಾನ ಸಂಚರಿಸುತ್ತಿದ್ದುವು. ಕೂಡಲೇ ಮಿತ್ರಮಂಡಲಿಯವರು ತುಪಾಕಿಗುಂಡುಗಳನ್ನು ಅದರ ಮೇಲೆ ಹಾರಿಸಿದರು. ಬಾರ್‌ಲಿಡಕ್ಕಿನ ಹತ್ತಿರದ ಶಿಬಿರದಲ್ಲಿ ಆ ಶತ್ರುಗಳ ವಿಮಾನಗಳಲ್ಲೆರಡು ಇಳಿದವು. ಅವುಗಳ ಯಂತ್ರಗಳು ಸರಿಯಾದ ಸ್ಥಿತಿಯಲ್ಲಿದ್ದವು. ನಾಲ್ಕು ಮಂದಿ ವೈಮಾನಿಕರನ್ನು ಸೆರೆ ಹಿಡಿದರು. ಜರ್ಮನರ ೬ ಆಕಾಶವಿಮಾನಗಳು ಕಳೆದ ತಾ|| ೧೯ ರ ಹಗಲು ೨ ಗಂಟೆಯ ಹೊತ್ತಿನಲ್ಲಿ ಇಂಗ್ಲೆಂಡಿಗೆ ಬಂದು ೨-೩ ಕಡೆ ಸಿಡಿಮದ್ದುಗಳನ್ನು ಹಾಕಿದುವು. ಒಂದು ಮದ್ದು ಕಿಂಗ್ಸ್‌ಲಿನ್‌ನಲ್ಲಿರುವ ಸಾಂಡ್ರಿಂಗಾಮ್ ಅರಮನೆಗೆ ಅರ್ಧಮೈಲಿ ದೂರದಲ್ಲಿ ಬಿದ್ದಿತು. ಆ ಮದ್ದು ಬೀಳುವುದಕ್ಕೆ ಮುಂಚೆಯೇ ಅಲ್ಲಿದ್ದ ರಾಜದಂಪತಿಗಳು ಲಂಡನ್ನಿಗೆ ಹೊರಟುಹೋಗಿದ್ದರು. ೧೨ ಮನೆ ನಷ್ಟವಾಯಿತು. ೪ ಮಂದಿ ಸತ್ತರು. ಇಬ್ಬರುಮೂವರಿಗೆ ಗಾಯವಾಯಿತು.

ನೌಕಾಸೇನೆ.

ಬಾಲ್ಟಿಕ್ ಸಮುದ್ರದಲ್ಲಿನ ಕೀಲ್‌ಕಾಲ್ವೆಯಲ್ಲಿ ಅಡಗಿಕೊಂಡಿದ್ದ ಜರ್ಮನ್ ನೌಕಾಸೇನೆಯು ಆಮೆಯು ತನ್ನ ತಲೆಯನ್ನು ಈಚೆಗೆ ಚಾಚಿದಂತೆ ಈಗತಾನೇ ಹೊರಬಿದ್ದಿರುವುದೆಂದು ವಾರ್ತೆ ಬಂದಿದೆ. ಇವುಗಳು ಕಕ್ಸ್ಸರ್-ವಿಲ್-ಹೇಲ್ಮ್‌ನಹತ್ತಿರ ಬಂದು ನಿಂತಿವೆಯಂತೆ. ಇದುವರೆಗೂ ಇವುಗಳು ಕೀಲ್‌ಕಾಲ್ವೆಯನ್ನು ಬಿಟ್ಟು ಹೊರಡದಂತೆ ರಷ್ಯನ್ ನೌಕಾದಳವು ಮಾಡಿದ್ದಿತು. ಈಗ ಹೊರಟಿರುವ ರಷ್ಯನ್ ನೌಕಾದಳದಲ್ಲಿ ೩೪ ದೊಡ್ಡ ಯುದ್ಧದ ಹಡಗುಗಳಿರಬೇಕೆಂದೂ ಅವುಗಳಲ್ಲಿ ೨೨ ಡೆಡ್‌ನಾಟುಗಳಾಗಿರುವುವೆಂದೂ ಒಬ್ಬ ಪತ್ರಿಕಾಲೇಖಕನು ಬರೆದಿದ್ದಾನೆ. ಈಗಿನ ಯಾತ್ರೆಯಿಂದ ತಮಗೆ ಜಯ ಸಿಕ್ಕಬಹುದೆಂದೂ ಒಂದು ವೇಳೆ ತಪ್ಪಿದರೆ ಈ ನೌಕಾಯುದ್ಧದಿಂದ ಆಂಗ್ಲನೌಕಾದಳದಲ್ಲಿ ಸ್ವಲ್ಪ ಬಲವನ್ನು ಹಾಳ್ಮಾಡಿದಂತೆಯಾದರೂ ಆಗುವುದೆಂದೂ ಅವರು ಸಂಕಲ್ಪಿಸಿರಬೇಕೆಂದು ಆ ಲೇಖಕನು ಊಹಿಸುತ್ತಾನೆ.

ಜರ್ಮನ್ ಸೈನಿಕರ ಮೃತರ ೧೩೬ ನೇ ಪಟ್ಟಿಯು ಈಗ ಪ್ರಕಟವಾಗಿದೆ. ಆ ಪಟ್ಟಿಗಳಿಂದೆಲ್ಲಾ ಗೊತ್ತಾಗಿರುವ ಪ್ರಕಾರ ಇದುವರೆಗೆ ಕೇವಲ ಜರ್ಮನ್ ಸೈನಿಕರಲ್ಲೇ ೮೬೬೧೦೬ ಮಂದಿಗಳು ನಷ್ಟವಾಗಿರುವರೆಂದು ಸಿದ್ಧವಾಯಿತು. ಬವೇರಿಯಾ-ಸಾಕ್ಸನಿ-ವರ್ಟೆಂಬರ್ಗ್ ಸೈನ್ಯಗಳಲ್ಲಿ ನಾಶವಾದವರೂ ಕೂಡಿದರೆ ಒಟ್ಟಿಗೆ ೨೨|| ಲಕ್ಷ ಮಂದಿಗಳು ನಷ್ಟವಾದಂತಾಯಿತು.

ಆಂಗ್ಲಸಾಮ್ರಾಜ್ಯಕ್ಕೆ ಸೇರಿದ ಎಲ್ಲ ರಾಜ್ಯಗಳವರೂ ಸೇರಿ ಇದೇ ೧೯೧೫ ನೆಯ ವರ್ಷದಲ್ಲಿ ಒಂದು ದೊಡ್ಡ ಸಭೆಯನ್ನು ಜರುಗಿಸಿ ಸಾಮ್ರಾಜ್ಯದ ಐಕ್ಯವನ್ನು ಬಲಪಡಿಸಿಕೊಳ್ಳುವ ಯೋಚನೆಯನ್ನು ಮಾಡುವುದು ಬಹಳ ಅವಶ್ಯಕವೆಂತಲೂ, ಎಷ್ಟೋ ಕಾಗದಪತ್ರಗಳನ್ನೂ ತಂತ್ರೀವಾರ್ತೆಗಳನ್ನೂ ನಡೆಯಿಸುವುದಕ್ಕಿಂತಲೂ ಸಭೆಯ ಮೂಲಕ ಪ್ರತ್ಯಕ್ಷ ಮಾತನಾಡುವುದು ಬಹಳ ಫಲಕಾರಿಯೆಂತಲೂ ಲಂಡನ್ ಟೈಮ್ಸ್ ಪತ್ರಿಕೆಯು ಸಾಮ್ರಾಜ್ಯ ಸರ್ಕಾರಕ್ಕೆ ಸೂಚನೆಯನ್ನು ಕೊಟ್ಟಿದೆ.

ಮೈಸೂರ್ ಸ್ಟಾರ್.

ಸನ್ ೧೯೧೫ ನೆಯ ಜನವರಿ ತಾ|| ೨೪ ನೆಯ ಭಾನುವಾರ.

ಅಡವಿಯ ಪಂಚಾಯತಿ.

ಮದ್ರಾಸ್‌ಆಧಿಪತ್ಯದಲ್ಲಿ ಅಡವಿಗಳ ವಿಷಯಕವಾದ ವಿಧಿಗಳ ನಿರ್ಬಂಧದಿಂದ ರೈತರಿಗೆ ನಾನಾವಿಧದ ನಿರ್ಬಂಧಗಳಿದ್ದುದರಿಂದ ಪ್ರಜೆಗಳ ದೂರು ಬಹಳವಾಯಿತು. ಅದರಮೇಲೆ ವಿಚಾರಕಸಂಘವೊಂದನ್ನೇರ್ಪಡಿಸಿ ಅವರ ವರದಿಯ ಮೇರೆ ಆ ಸರ್ಕಾರದವರು ಗ್ರಾಮಪಂಚಾಯತಿಯ ಏರ್ಪಾಟನ್ನು ಕಳೆದ ವರ್ಷದಲ್ಲಿ ಮಾಡಿದರು. ನಮ್ಮ ದೇಶದಲ್ಲೂ ಕೂಡ ಪ್ರಜಾಪ್ರತಿನಿಧಿ ಸಭಾಸ್ತಾರರು ಅಡವಿಯ ವಿಷಯಕವಾದ ತಮ್ಮ ತೊಂದರೆಗಳನ್ನು ಸರ್ಕಾರದವರ ಗಮನಕ್ಕೆ ತರುತ್ತ ಬಂದಿರುವರು. ಆದಕ್ಕಾಗಿ ನಮ್ಮ ಸರ್ಕಾರದವರು ಗ್ರಾಮಾಂತರದ ಜನರಿಗೆ ಅಡವಿಯ ಕಾರ್ಯನಿರ್ವಾಹದಲ್ಲಿ ಸ್ವಲ್ಪ ಸ್ವಾತಂತ್ರ್ಯವನ್ನೂ, ಗ್ರಾಮಾರಣ್ಯ ರಕ್ಷಣವಿಷಯಕವಾದ ಸ್ವಲ್ಪ ಭಾರವನ್ನೂ ವಹಿಸುವ ಒಂದು ವಿಧಿಯನ್ನೇರ್ಪಡಿಸಿದ್ದಾರೆ. ಅದನ್ನು ಈ ಪತ್ರದ ಬೇರೆಕಡೆಯಲ್ಲಿ ಮುದ್ರಿಸಿದ್ದೇವೆ.

ಪರಸ್ಪರ ಹಿತದೃಷ್ಟಿಯಿಂದ ಕೆಲಸಮಾಡಿ ಅದರ ಅಮೋಘಫಲವನ್ನನುಭವಿಸುವವರು ನಮ್ಮಲ್ಲಿ ಬಹಳ ಕಡಿಮೆ. ತತ್ರಾಪಿ ರೈತರಲ್ಲಿ ಅದು ಮತ್ತಷ್ಟೂ ಕಡಿಮೆ. ಪ್ರಜೆಗಳಲ್ಲಿ ಅಂಥ ಪರಸ್ಪರ ಹಿತಭಾವಗಳು ವೃದ್ಧಿಗೊಳ್ಳುತ್ತ ಬಂದರೆ ಸರ್ಕಾರದವರ ಕರ್ತವ್ಯದಲ್ಲಿ ಎಷ್ಟೋ ಭಾರವು ಕಡಿಮೆಯಾಗುವುದು. ಈಗಿನ ವಿಧಿಯು ಅಂಥ ಪರಸ್ಪರ ಹಿತಭಾವವನ್ನು ರೈತರಲ್ಲಿ ವೃದ್ಧಿಮಾಡುವುದಕ್ಕೆ ಬಹಳ ಸಾಧಕವಾಗುವುದು. ನಮ್ಮ ಸರ್ಕಾರದವರು ಮೊಟ್ಟಮೊದಲು ಗ್ರಾಮಪಂಚಾಯತಿಯನ್ನೇರ್ಪಡಿಸಿ ದೇಶಕ್ಕೆ ಮಹೋಪಕಾರವನ್ನು ಮಾಡಿದರು. ಈಗಿನ ಏರ್ಪಾಟು ಕೂಡ ಅದೇ ಮಾರ್ಗವನ್ನು ಬಲಪಡಿಸುತ್ತದೆ. ಈ ತೆರದ ಕಾರ್ಯದಲ್ಲಿ ರೈತರು ನುರುಗುತ್ತ ಬಂದಂತೆಲ್ಲಾ ಗ್ರಾಮಾಂತರದ ಸ್ಥಿತಿಗಳು ಉತ್ತಮವಾಗುವುದಕ್ಕೆ ಬಹಳ ಸಹಾಯವಾಗುವುದು. ಅಡವಿಯ ಮೇವಿನ ಮತ್ತೂ ಸೌದೆಸೊಪ್ಪಿನ ವಿಷಯದಲ್ಲಿ ಸರ್ಕಾರದ ಸಣ್ಣ ಉದ್ಯೋಗಿಗಳ ಬಲಾತ್ಕಾರ ದಂಡನೆಗಳಿಗೆ ರೈತರು ವೃಥಾ ಗುರಿಯಾಗದೆ ಎಚ್ಚರಿಕೆಯಿಂದ ತಮ್ಮ ಮನೆಯ ಸಾಮಾನುಗಳನ್ನು ಪೋಷಿಸಿಕೊಂಡು ಬಳಸುವ ರೀತಿಯಲ್ಲಿ ಅಡವಿಗಳ ಪದಾರ್ಥಗಳನ್ನು ಉಪಯೋಗಿಸುವ ಉತ್ತರವಾದಿತ್ವವು ಈಗಿನ ವಿಧಿಯಿಂದ ಪ್ರಜೆಗಳಿಗೆ ವಹಿಸಲ್ಪಟ್ಟಿದೆ. ಗ್ರಾಮಾಂತರದ ಪ್ರಜೆಗಳು ಅದನ್ನು ಚೆನ್ನಾಗಿ ಗಮನಿಸಿ, ತಂತಮ್ಮ ಗ್ರಾಮಗಳಲ್ಲಿ ಮುಂದೆ ಏರ್ಪಡಬಹುದಾದ ಪಂಚಾಯತಿಯಲ್ಲಿ ಸೇರಿ, ವಿಧಿಯ ಉದ್ದೇಶವನ್ನು ಸಾರ್ಥಕಪಡಿಸಿ ತಮ್ಮ ಕ್ಷೇಮವನ್ನೂ ಅಭಿವೃದ್ಧಿಗೊಳಿಸಿಕೊಳ್ಳುವವರಾಗಲೆಂದು ಕೋರುತ್ತೇನೆ.

ಧಾರ್ಮಿಕ ಸಭೆಗಳು.

ಬರುವ ೧ ಪಕ್ಷ ಕಾಲದಲ್ಲಿ ವೀರಶೈವ ಧಾರ್ಮಿಕ ವಿಷಯಕವಾದ ಮಹಾ ಸಭೆಗಳು ೩-೪ ಕಡೆಗಳಲ್ಲಿ ನಡೆಯುವಂತೆ ಏರ್ಪಾಟಾಗಿದೆ. ಶ್ರೀ ಉಳುವೆ ಮಹಾ ಕ್ಷೇತ್ರದಲ್ಲಿ ಇದೇ ಶುದ್ಧ ಪೂರ್ಣಿಮೆಯ ದಿನ ನಡೆಯುವ ಶ್ರೀ ಬಸವೇಶ್ವರನ ಜಾತ್ರೆಯ ಸಂದರ್ಭವನ್ನನುಸರಿಸಿ ಶ್ರೀ ಚಿತ್ರದುರ್ಗದ ಜಗದ್ಗುರು ಮಹಾಸಂಸ್ಥಾನದಿಂದ ವೀರಶೈವ ಧಾರ್ಮಿಕಮಹಾಸಭೆಯು ನಡೆಯಿಸಲ್ಪಡುವುದರಲ್ಲಿದೆ. ಆ ಕಾರ್ಯಕ್ಕಾಗಿ ಶ್ರೀಜಗದ್ಗುರು ಮಹಾಸ್ವಾಮಿಯವರ ಸ್ವಾರಿಯೇ ದಯೆಮಾಡಿಸುತ್ತದೆ. ಇತ್ತ ಮೈಸೂರು ದೇಶದಲ್ಲಿ ತಿ|| ನರಸಿಪುರದ ತಾ|| ಮುಡುಕುದೊರೆಯಲ್ಲಿ ಶ್ರೀ ಭ್ರಮರಾಂಬಿಕಾಸಮೇತ ಮಲ್ಲಿಕಾರ್ಜುನಸ್ವಾಮಿಯ ದೊಡ್ಡಜಾತ್ರೆಯಾಗುವ ಸಂದರ್ಭವನ್ನನುಸರಿಸಿ ಕಳೆದ ೧೧ ವರ್ಷಗಳಿಂದಲೂ ನಡೆದುಬಂದಿರುವ ವೀರಶೈವಮತಸಂವರ್ಧಿನೀ ಎಂಬ ವೈದಿಕಸಭೆಯು ಪದ್ಧತಿಯಂತೆ ಇದೇ ಶುದ್ಧ ಏಕಾದಶಿಯಿಂದ ಮೂರುದಿನಗಳವರೆಗೆ ನಡೆಯುವುದಾಗಿದೆ. ಮಾಘ ಬಹುಳದಲ್ಲಿನ ಮಹಾಶಿವರಾತ್ರಿಯ ಸಮಯದಲ್ಲಿ ಶ್ರೀ ಕಾಶೀಕ್ಷೇತ್ರದ ಜಂಗಮ ವಾಟಿಕಾಮಠದಲ್ಲಿ ಜಗದ್ಗುರು ಶ್ರೀ ಶಿವಲಿಂಗಶಿವಾಚಾರ್ಯ ಮಹಾಸ್ವಾಮಿಯವರು ವೈದಿಕ ವಿದ್ಯಾಪ್ರೋತ್ಸಾಹಾರ್ಥವಾಗಿಯೂ, ಧಾರ್ಮಿಕಾಭಿವೃದ್ಧಿಗಾಗಿಯೂ ಸಭೆಯನ್ನು ನಡೆಯಿಸುವವರಾಗಿದ್ದಾರೆ. ಅದೇಕಾಲದಲ್ಲಿ ಬಿಜಾಪುರ ಜಿಲ್ಲೆಯ ಬಾದಾಮಿತಾಲ್ಲೂಕಿನೊಳಗೆ ಮಲಪ್ರಭಾನದೀತೀರದಲ್ಲಿ ಸ್ಥಾಪಿತವಾಗಿರುವ ಶ್ರೀ ಶಿವಯೋಗಮಂದಿರದಲ್ಲಿ ಪ್ರತಿವರ್ಷದಂತೆ ಈ ಸಲವೂ ಮುಮುಕ್ಷುಗಳಿಗೆ ಹಿತಕರವಾದ ಪುರಾಣಶ್ರವಣ-ಶಿವಕೀರ್ತನ-ಧಾರ್ಮಿಕಗ್ರಂಥಪರೀಕ್ಷಾ-ಧಾರ್ಮಿಕೋಪನ್ಯಾಸ ಮೊದಲಾದುವುಗಳು ನಡೆಯಲು ಏರ್ಪಾಟಾಗಿದೆ. ಆಸ್ತಿಕ್ಯವು ಕ್ಷೀಣಿಸುತ್ತಿರುವ ಕಾಲದಲ್ಲಿ ಇಂಥ ಧಾರ್ಮಿಕಪ್ರಯತ್ನಗಳು ಚತುರ್ದಿಕ್ಕಿನಲ್ಲೂ ನಡೆಯುವುದು ಇಷ್ಟವಾಗಿದೆ. ಸ್ವಧರ್ಮದ ಲಕ್ಷಣವೇನು ? ಮತದಲ್ಲಿ ಜನಿಸಿದುದಕ್ಕೆ ತಾವು ಮಾಡಬೇಕಾದುದೇನು ? ತಮ್ಮ ಧನ್ಯತೆಯು ಏತರಿಂದಾಗುವುದು? ಇತ್ಯಾದಿ ಸಂಗತಿಗಳನ್ನೂ ಸದಾಚಾರಣೆಗಳನ್ನೂ ಅರಿತು ಬರುವುದಕ್ಕೆ ಅನುಕೂಲವಾದ ಈ ಸಮಯವನ್ನು ಆಯಾಭಾಗದ ಜನರು ವ್ಯರ್ಥಗೊಳಿಸದೆ ಆಯಾಸಭೆಗಳಿಂದ ತಕ್ಕಷ್ಟು ಫಲವನ್ನುಂಟುಮಾಡಿಕೊಳ್ಳುವವರಾಗಲೆಂದೂ, ಮೇಲೆಕಂಡ ಸಭೆಗಳೆಲ್ಲಾ ಮತದ ಐಕ್ಯ, ಪರಂಪರಾಗತ ಸದ್ಧರ್ಮ, ಜೀರ್ಣೋದ್ಧಾರ, ಆಸ್ತಿಕ್ಯವೃದ್ಧಿರೂಪಘನಫಲಗಳನ್ನುಂಟುಮಾಡಲು ಸಾಧಕವಾಗಿ ಪರಿಣಮಿಸಲೆಂದೂ ಕೋರುತ್ತೇವೆ.

ಒಳದದೇಶವೃತ್ತಾಂತಗಳು.

ಶ್ರೀಮನ್ ಮಹಾರಾಜರವರ ಸ್ವಾರಿಯು ಕಳೆದ ಬುಧವಾರ ರಾಜಧಾನಿಗೆ ದಯಮಾಡಿಸಿದ್ದು ಗುರುವಾರ ಮಧ್ಯಾಹ್ನ ಉದಕಮಂಡಲಕ್ಕೆ ಚಿತ್ತೈಸಿತು.

ಮೈಸೂರುದೇಶದ ಮುನ್‌ಸೀಫರಿಗೆ ೫೦ ರೂ. ವರೆಗಿನ ಸ್ಮಾಲ್‌ಕಾಜ್ ಮೊಕದ್ದಮೆಗಳ ವಿಚಾರಣೆಯ ಅಧಿಕಾರವು ೧೦೦ ರೂ. ಗಳ ವರೆಗೆ ಹೆಚ್ಚಿಸಲ್ಪಡುವುದರಲ್ಲಿದೆ.

ಹಿಂದೆ ಸೀನಿಯರ್ ಕೌನ್ಸಿಲರಾಗಿದ್ದ ರಾ|| ಬ|| ಸಿ. ಶ್ರೀನಿವಾಸಯ್ಯಂಗಾರರು ಪಾರ್ಶ್ವವಾಯುರೋಗಗ್ರಸ್ತರಾಗಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಹೊಂದುತ್ತಿರುವರೆಂದು ತಿಳುಹಲು ವಿಷಾದಿಸುತ್ತೇವೆ.

ಗ್ರಾಮಾಂತರದ ಜನರಿಗೆ ಕುಡಿಯುವ ನೀರಿನ ಬಾವಿಗಳಿಗೆ ಇರುವ ಕೊರತೆಯನ್ನು ಪರಿಹಾರಮಾಡುವುದಕ್ಕಾಗಿ ನಮ್ಮ ಸರ್ಕಾರದವರು ಒಂದು ಉಪಯುಕ್ತವಾದ ಏರ್ಪಾಟನ್ನು ಮಾಡಿದ್ದಾರೆ. ಅದನ್ನು ಮುಂದಿನ ಸಂಚಿಕೆಯಲ್ಲಿ ವಿವರಿಸುತ್ತೇವೆ.

ಮೈಸೂರು ಟ್ರೇನಿಂಗ್ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ಮುಖ್ಯೋಪಾಧ್ಯಾಯರಾಗಿದ್ದು ಮಹಾರಾಜಾ ಕಾಲೇಜಿಗೆ ವರ್ಗವಾಗಿರುವ ಮ|| ಡಿ. ವೆಂಕಟರಾಮಯ್ಯ, ಬಿ.ಎ., ಎಲ್.ಟಿ., ಯವರನ್ನುನಿನ್ನೆಯದಿನ ತಮ್ಮ ಕಾಲೇಜಿಗೆ ಬರಮಾಡಿಕೊಂಡು ಸಂಗೀತ, ಯಕ್ಷಿಣಿ ಮೊದಲಾದವುಗಳಿಂದ ವಿನೋದಗೊಳಿಸಿ ಒಂದು ವಿಜ್ಞಾಪನಾಪತ್ರವನ್ನೋದೊಪ್ಪಿಸಿ, ತಮ್ಮಗಳಿಗೆ ಅವರಲ್ಲಿರುವ ಪ್ರೀತಿಗೌರವವನ್ನು ಪ್ರದರ್ಶಿಸಿದರು.

ಮಲೆನಾಡು ಪ್ರಾಂತದಲ್ಲಿ ದಿವಾನರ ಸಮೇತ ಸಂಚರಿಸುತ್ತಿರುವ ಶ್ರೀಮದ್ಯುವರಾಜರು ಕಳೆದ ತಾ|| ೧೦ರಲ್ಲಿ ಯಡೆಹಳ್ಳಿಗೆ ದಯಮಾಡಿಸಿ ಅಲ್ಲಿಯ ಶ್ರೀಮಂತರಾದ ಮ|| ಇಂಗಳಗೊಂದಿ ಶಾಂತಪ್ಪಶೆಟ್ಟರು ನೂತನವಾಗಿ ಕಟ್ಟಿಸಿರುವ ಸತ್ರ, ಬಾವಿ ಮತ್ತು ರೀಡಿಂಗ್‌ರೂಮುಗಳ ಆರಂಭೋತ್ಸವವನ್ನು ಸ್ವಹಸ್ತದಿಂದ ನಡೆಯಿಸಿ, ಅಲ್ಲಿ ತಾ|| ೧೧ರವರೆಗಿದ್ದು ಮಧ್ಯೆ ಹೊಸಕೊಪ್ಪಕ್ಕೆ ಚಿತ್ತೈಸಿ ಅಲ್ಲಿ ಏರ್ಪಡಿಸಿದ್ದ ಸ್ಥಳೀಯ ಪದಾರ್ಥಗಳ ಪ್ರದರ್ಶನವನ್ನು ಪರಾಮರಿಸಿಕೊಂಡು ದಯಮಾಡಿಸಿದರು. ಶ್ರೀಯವರ ಸ್ವಾಗತಕ್ಕಾಗಿ ಯಡೆಹಳ್ಳಿಯಲ್ಲಿ ವಿಚಕ್ಷಣೆಯೇರ್ಪಾಟು ಮಾಡಲ್ಪಟ್ಟಿದ್ದುದಾಗಿ ತಿಳಿಯಬರುತ್ತದೆ. ಶ್ರೀಗಳವರ ಸ್ವಾರಿಯು ನಿನ್ನೆಯ ಬೆಳಿಗ್ಗೆ ಹಿಂದಿರುಗಿ ಬೆಂಗಳೂರಿಗೆ ಬರುವುದಾಗಿದ್ದಿತು.

ಮೈಸೂರು ಸಂಪದಭ್ಯುದಯಸಮಾಜದವರು ಕೈಗಾರಿಕೆ, ವ್ಯವಸಾಯ, ವ್ಯಾಪಾರ ಮೊದಲಾದ ವಿಚಾರಗಳಲ್ಲಿ ಸಂಪತ್ಸಾಧನೋಪಾಯಗಳನ್ನು ತಿಳಿಹಲು ಇಂಗ್ಲೀಷ್ ಮತ್ತು ಕನ್ನಡ ಭಾಷೆಗಳಲ್ಲಿ ಸಚಿತ್ರಮಾಸಪತ್ರಿಕೆಗಳನ್ನು ಅರ್ಥಸಾಧಕಪತ್ರಿಕೆ ಎಂಬ ಹೆಸರಿನಿಂದ ಈ ತಿಂಗಳಾರಭ್ಯ ಹೊರಡಿಸಲು ಯತ್ನಿಸಿರುವ ವಿಚಾರವು ಕಳೆದೆರಡುವಾರಗಳ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿತವಾಗಿರುವ ಪ್ರಸಿದ್ಧಿಪತ್ರಿಕೆಯಿಂದ ವ್ಯಕ್ತವಾಗಿದೆಯಷ್ಟೆ. ಈ ಪತ್ರಿಕೆಗಳಿಗೆ ಬಹಳ ಅನುಭವಸ್ಥರೂ ವಿದ್ಯಾವಂತರೂ ಆದವರು ಸಂಪಾದಕರಾಗಿ ನಿಯಮಿಸಲ್ಪಟ್ಟಿರುವುದರಿಂದ ಉಪಯುಕ್ತವಾದ ಲೇಖನಗಳು ಬರೆಯಲ್ಪಟ್ಟು ಸಮಾಜದವರ ನಿರೀಕ್ಷೆಯಂತೆ ಜನರಿಗೆ ಅರ್ಥಸಾಧನ ಕಾರ್ಯದಲ್ಲಿ ಮಾರ್ಗದರ್ಶನ ಸಾಹಾಯ್ಯವನ್ನು ಮಾಡುವುದಾಗಲೆಂದು ಕೋರುತ್ತೇವೆ.

ವಿವಿಧವಾರ್ತಾಸಂಗ್ರಹ.

ಈಗಿನ ಮಹಾ ಯುದ್ಧದಲ್ಲಿ ಇಂಗ್ಲೆಂಡಿನ ಲಾರ್ಡುಗಳಲ್ಲಿ ೧೮೦ ಮಂದಿಗಳು ತೊಡಗಿರುವರೆಂದು ಪ್ರಕಟವಾಗಿದೆ.

ರೊಮೇನಿಯಾ ದೇಶವು ಇಷ್ಟರಲ್ಲೇ ಯುದ್ಧಕ್ಕೆ ಪ್ರವೇಶಿಸುವುದರಲ್ಲಿರುವುದೆಂದು ವಿಶ್ವಾಸಾರ್ಹವಾದ ಸುದ್ದಿಯುಂಟು.

ಜಪಾನರ ಒಂದು ಸೇನೆಯು ಇಷ್ಟರಲ್ಲೇ ಇಂಗ್ಲೆಂಡಿಗೆ ಸೇರಿದ ಲಿವರ್‌ಪೂಲಿನಲ್ಲಿ ಬಂದಿಳಿಯುವುದೆಂದು ಸುದ್ದಿಬಂದಿದೆ.

ಕಳೆದ ವಾರದಲ್ಲಿ ಭರತಖಂಡದ ಪೂರ್ವಸಮುದ್ರದ ಕಡೆ ಮಳೆಗಾಳಿಯು ವಿಶೇಷವಾಗಿದ್ದಿತು. ನೀಲಗಿರಿಯಲ್ಲಿ ಒಂದೇದಿನ ೮ ಅಂಗುಲದಷ್ಟು ಮಳೆಯಾಯಿತು. ಆ ಕಾಲದಲ್ಲಿ ದಕ್ಷಿಣದೇಶದ ಹಲವು ಭಾಗಗಳಲ್ಲಿ ಮೋಡವು ಮುಸುಕಿ ಅಲ್ಪಸ್ವಲ್ಪ ಮಳೆಯೂ ಆಯಿತು. ಇದರಿಂದ ವ್ಯವಸಾಯಕ್ಕೆ ನಷ್ಟವೇ ಹೊರತು ಲಾಭವಿಲ್ಲ.

ಆಸ್ಟ್ರಿಯಾ ಹಂಗೇರಿಯಾದಲ್ಲಿ ಕ್ಷಾಮವೂ ರೋಗದ ಹಾವಳಿಯೂ ಭೀಕರವಾಗಿ ವ್ಯಾಪಿಸುತ್ತಿದೆ. ಜನರು ಜರ್ಮನರ ಎತ್ತುಗಡಿಗಾಗಿ ರೇಗಿ, ಯುದ್ಧದಿಂದ ಬೇಸತ್ತು, ಯುದ್ಧವನ್ನು ನಿಲ್ಲಿಸಿಬಿಡಬೇಕೆಂದು ಪಟ್ಟಣಗಳ ಸಭೆಗಳಲ್ಲಿ ನಿರ್ಧರಿಸಿ ಸರ್ಕಾರಕ್ಕೆ ತಿಳಿಯಿಸುತ್ತಿದ್ದಾರೆ. ಇಷ್ಟರಲ್ಲೇ ಅಲ್ಲಿ ದಂಗೆಯೂ ಆಗುವಂತೆ ಕಾಣುತ್ತದೆ.

ಜರ್ಮನಿಯವರಲ್ಲಿ ತಾಮ್ರಕ್ಕೂ ಸೀಮೆಯೆಣ್ಣೆಗೂ ಬಹಳ ದುರ್ಭಿಕ್ಷ ಬಂದಿದೆ. ೧ಟನ್ ತೂಕದ ತಾಮ್ರಕ್ಕೆ ೧೬೦ ಪೌಂಡು ಬೆಲೆಯಾಗಿದೆ. ಇತರ ದೇಶಗಳಿಂದ ಆ ಲೋಹವು ಜರ್ಮನಿಗೆ ಹೋಗದಂತೆ ಇಂಗ್ಲೆಂಡಿನವರು ಮಾಡಿದ್ದಾರೆ. ಆ ಲೋಹವು ಆಯುಧಗಳ ನಿರ್ಮಾಣಕ್ಕೆ ಅತ್ಯಾವಶ್ಯಕವಾದುದು. ಇದೇ ಲೋಹವು ಲಂಡನ್ನಿನಲ್ಲಿ ಟನ್ ೧ಕ್ಕೆ ೬೦ ಪೌಂಡಿನ ಬೆಲೆಗೆ ಸಿಕ್ಕುತ್ತದೆ. ಈಗ ಜರ್ಮನರು ಬೆಲ್ಜಿಯಂ ದೇಶದ ಪಾತ್ರೆಪದಾರ್ಥಗಳನ್ನೂ ತಮ್ಮ ಸೈನಿಕರ ಟೊಪ್ಪಿಗೆಯ ಮೇಲಣ ತಾಮ್ರದ ಕುಪ್ಪಿಗೆಗಳನ್ನೂ ಸಹ ತರಿಸಿಕೊಂಡು ಕರಗಿಸಿ ತಮ್ಮ ಕೆಲಸಕ್ಕೆ ಉಪಯೋಗಿಸಿಕೊಳ್ಳುತ್ತಿದ್ದಾರೆ.

ಪತ್ರವ್ಯವಹಾರ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು
ಮುರುಘರಾಜೇಂದ್ರ ಮಹಾಸ್ವಾಮಿನಾಂ
ಶ್ರೀಮಚ್ಛಿನ್ಮೂಲಾದ್ರಿ ಬೃಹನ್ಮಠ (ಚಿತ್ರಕಲ್ಲದುರ್ಗ)
ಮಹಾ॥ ಸಂಸ್ಥಾನದಿಂದ—

ಮಹಾ॥ ಸ್ವಾರಿಯು ಶ್ರೀ ಉಳವಿ ಕ್ಷೇತ್ರಕ್ಕೆ ದಯಮಾಡಿಸುತ್ತದೆ. ಈ ಕ್ಷೇತ್ರವು ಪರಮಪೂಜ್ಯವಾಗಿಯೂ, ಮುಂಬಯಿ ಇಲಾಖೆಯಲ್ಲಿ ಒಳ್ಳೇ ಪ್ರಖ್ಯಾತಿಯನ್ನು ಪಡೆದುದಾಗಿಯೂ, ಮಹಾ॥ ಸಂಸ್ಥಾನಕ್ಕೆ ಕೇವಲ ಸಂಬಂಧಪಟ್ಟ ಮುಖ್ಯಸ್ಥಾನವಾಗಿಯೂ ಇರತಕ್ಕದು ಸಕಲರಿಗೂ ವಿದಿತವಾದ ಸಂಗತಿಯಾಗಿದೆಯಷ್ಟೆ?

ಈ ಪುಣ್ಯಕ್ಷೇತ್ರಕ್ಕೆ ಈ ಸಂವತ್ಸರದಲ್ಲಿ ಬಹು ಭಾಗದ ಭಕ್ತರ ಕೋರಿಕೆಯ ಮೇರೆ ಸ್ವಾರಿಯು ದಯಮಾಡಿಸುವುದನ್ನು ನಿಶ್ಚಯಿಸಿದೆ. ಆದರೆ ಪ್ರತಿವರ್ಷ ಬಹುಭಾಗದ ಭಕ್ತರು ವಿಶೇಷವಾಗಿ ತಾವಾಗಿಯೇ ಭಕ್ತಿಯಿಂದ ಬಂದು ಸೇರುವ ಇಂಥ ಸ್ಥಾನದಲ್ಲಿ ಧರ್ಮಸಭೆಯನ್ನು ಸ್ಥಾಪಿಸುವುದು ಅವಶ್ಯಕವೆಂತಲೂ, ಇದು ಸಾರೋದ್ಧಾರವಾಗಿ ಜರುಗಬಹುದೆಂತಲೂ ಎಲ್ಲರ ಅಭಿಪ್ರಾಯವಾಗಿರುವುದರಿಂದ ಶ್ರೀಮದ್ವೀರಶೈವ ಧಾರ್ಮಿಕ ಸಭೆಯನ್ನು ಸ್ಥಾಪಿಸತಕ್ಕದಾಗಿದೆ.

ಮಹಾಕ್ಷೇತ್ರ ಸಮಾರಂಭವು ಮಾಘ ಶುದ್ಧ ೧೪ ರಲ್ಲಿ ಜರುಗುವುದರಿಂದ ಅಲ್ಲಿಗೆ ಬರತಕ್ಕವರು ಅಳಣಾವರ ಸ್ಟೇಶನ್ನದಿಂದ ಹಳ್ಯಾಳದ ಮಾರ್ಗವಾಗಿಯೂ, ಹುಬ್ಬಳ್ಳಿ ಸ್ಟೇಶನ್ನದಿಂದ ಕಲಘಟಗಿಯ ಮಾರ್ಗವಾಗಿಯೂ, ಹಾವೇರಿ ಸ್ಟೇಶನ್ನದಿಂದ ಶಿರಸಿಯ ಮಾರ್ಗವಾಗಿಯೂ, ಪ್ರಯಾಣ ಮಾಡತಕ್ಕದಾಗಿದೆ. ಈ ಪ್ರಾಂತ ಎಂದೂ ಬಾರದ ಆಪ್ತೇಷ್ಟ ಮಿತ್ರಬಾಂಧವ ಮಂಡಳಿಗೂ ಆಜೂಬಾಜೂ ಭಕ್ತರುಗಳಿಗೂ ಈ ಯಾವತ್ತು ಮಜಕೂರನ್ನು ತಿಳಿಸಬೇಕಾಗಿ ಅಪ್ಪಣೆಯಾಗಿದೆ.

ಸಭಾಕಾರ್ಯವು ಮಾಘ ಶುದ್ಧ ೧೩-೧೪ ವ ಬಹುಳ ಪ್ರತಿಪದೆ ಅಂದರೆ ಜನವರಿ ತಾರೀಖು ೩೦-೩೧ ಮತ್ತೂ ಫೆಬ್ರವರಿ ೧ ರಲ್ಲಿ ನಡೆಯುವುದು.

[ಕಳೆದವಾರದ ಶೇಷ.]

ಅಂತೇ ಈವರೆಗೂ ಅವರ ಉದ್ದಿಷ್ಟಕಾರ್ಯಗಳು ಕೊನೆಗಾಣಲು ಉನ್ಮುಖಗಳಾಗಿರುವವು. ನೆರೆಹೊರೆಯವರಾದ ಇತರ ದೇಶಬಾಂಧವರ ಪ್ರಯತ್ನವು ಹೀಗಿದ್ದು ನಮ್ಮಸಮಾಜದ ಮಹಾಸಭೆಯು ಹುಟ್ಟಿ ಸ್ವಲ್ಪಕಾಲದಲ್ಲಿ ಇಲ್ಲದಂತಾಗಬೇಕಾದರೆ, ಏನಾದರೊಂದು ಕಾರಣವಿರಲೇಬೇಕೆಂದು ಎಂಥಾವರಾದರೂ ಊಹಿಸಬಹುದಾಗಿರುತ್ತದೆ. ಅವಿಶ್ವಾಸವೇ ಕಾರಣವೆಂದು ಹೇಳಬೇಕಾದರೆ ಪೂರ್ವದಲ್ಲಿಕೂಡಿದ್ದ ಮಹಾಸಭೆಗಳಲ್ಲಿ ಮಹಾಜನರು ದೇವರಯಾತ್ರೆಯ ಉತ್ಸುಕತೆಯಂತೆ ಉತ್ಸುಕನಿರತರಾಗಿ ನಿಯಮಿತಕಾಲಕ್ಕೆ ಅಲ್ಲಿ ಸೇರುತ್ತಿದ್ದರು. ಇದಲ್ಲದೆ ಆ ಕಾಲದಲ್ಲಿ ಅವರವರ ಮುಖಮುದ್ರೆಯು ಸಂತೋಷದ ಮತ್ತೂ ವಿಶ್ವಾಸದಚಿನ್ಹವನ್ನು ತೋರಿಸುತ್ತಿದ್ದಿತು. ಕೂಡಿದ ೭ ಸಭೆಗಳಿಂದಲೇ ಸಮಾಜವು ಇದ್ದ ವ್ಯಂಗ್ಯವನ್ನು ಕಳಕೊಂಡು ಸರ್ವಾಂಗಸುಂದರವಾಗಿದೆ ಎಂದು ಹೇಳಬಹುದೋ? ಎಲ್ಲ ಇತರ ಸಮಾಜಗಳಿಗಿಂತಲೂ ನಮ್ಮ ಸಮಾಜವು ಎಲ್ಲಾ ವಿಷಯದಲ್ಲೂ ಎಷ್ಟೋ ಹಿಂದುಳಿದಿರುವುದು. ಮಾಡತಕ್ಕಸ್ಥಳಗಳಿಲ್ಲೆನ್ನಬೇಕೊ? ಇನ್ನೂ ಅನೇಕ ಸ್ಥಳಗಳಿರುವವು. ಹೀಗಿದ್ದೂ ಸಭೆಯು ನಿಲ್ಲುವುದಕ್ಕೆ ಕಾರಣವೇನಿರಬಹುದೆಂಬ ಶಂಕೆಯು ಮುಂದೆಬಂದು ನಿಲ್ಲುತ್ತದೆ. ಸಭೆಯು ಸೇರಿದ್ದ ಕಾಲದಲ್ಲಿದ್ದ ಕಾರ್ಯಕಾರಿಮಂಡಳಿಯು ಈಗಲೂ ಇದ್ದು ಮಾಡುವುದವಶ್ಯಕವೆಂದು ಸೂಚಿಸಿದರೆ ಅದು ಹಾಗಲ್ಲ ಇದು ಹೀಗೆ ಎಂದು ಕೆಲವರು ಹೇಳಿ ಹಠಾತ್ತಾಗಿ ಅದು ಸಮಂಜಸವಿದ್ದರೂ ಅದನ್ನು ತಡೆದು ವಿವಕ್ಷಿತ ಜನರಾಟವೇ ಸಾಗುತ್ತದೆ, ಉಳಿದವರದಿಲ್ಲವೆಂದು ತಿಳಿದು ಸತ್ಯವಾಗಿ ತಮ್ಮ ಅಂಗನವನ್ನು ತೆಗೆಯುವುದರಿಂದ ಸಭೆಯು ನಿಂತಿತೆಂದು ಕೆಲವರು ಹೇಳುವರು. ಮಹಾಸಭೆಯೆಂಬ ಶಕಟಕ್ಕೆ ಧರ್ಮ ವ್ಯಾವಹಾರಿಕಗಳೆಂಬ ಎರಡು ಚಕ್ರಗಳಿರುತ್ತವೆ. ಅವುಗಳಲ್ಲಿ ವ್ಯಾವಹಾರಿಕ ಅಂಗದಲ್ಲಿ ಕಾಲಾನುಗತಿಯಿಂದ ಹೆಚ್ಚು ಪ್ರೋತ್ಸಾಹ ಕೊಡುವುದೇ ಒಳ್ಳೇದೆಂದು ತಿಳಿದು, ಧಾರ್ಮಿಕವಿಷಯವನ್ನೂ ಧಾರ್ಮಿಕಮಾರ್ಗ ಪ್ರೋತ್ಸಾಹಕರನ್ನೂ ಉಪೇಕ್ಷಿಸಿದ್ದುದರಿಂದ ಧರ್ಮಪ್ರವರ್ತಕ ಮುಖ್ಯರೂ ಮತ್ತೂ ತದನುಯಾಯಿಗಳೂ ಈ ವಿಷಯದಲ್ಲಿ ಉದಾಸೀನರಾದದ್ದು ಮುಖ್ಯಕಾರಣವೆಂದು ಕೆಲವರು ಹೇಳುವರು. ಬಾಲಕರು ಕಾಲ ದೇಶ ಮತ್ತೂ ವರ್ತಮಾನಗಳ ತಾರತಮ್ಯವನ್ನೂ ಸ್ವರೂಪವನ್ನೂ ತಿಳಿದು, ಅದರಂತೆ ಪ್ರವರ್ತಿಸಿದರೆ ಉದ್ದಿಷ್ಟಕಾರ್ಯದ ಕೊನೆಯನ್ನು ಕಾಣುವರು ಅಹಂಮನ್ಯತೆಯಿಂದ ಹೇಳಿದ್ದೇ ಪೂರ್ವವೆಂದರೆ ಸಾಧಾರಣ ಒಂದು ಕುಟುಂಬದ ಯಜಮಾನನು ಕುಟುಂಬದೊಳಗಿನ ಜನರ ಮತಗಳನ್ನು ತಿಳಿಯದೆ ಅಹಂಮನ್ಯತೆಯಿಂದ ಕೆಲಸ ನಡಿಸಿದರೆ ಕೂಡಲೇ ಆ ಕುಟುಂಬವು ವಿಭಕ್ತವಾಗದೆ ಇರದು. ಮಹಾಸಭೆಯಾದರೂ ಅನೇಕದೇಶಗಳ ಅನೇಕ ಪಂಗಡದವರ ಅನೇಕಜನರ ಸಮಷ್ಟಿರೂಪವಾದದ್ದು. "ಪಿಂಡೇಪಿಂಡೇಮತಿರ್ಭಿನ್ನಾ" ಎಂಬಂತೆ ನಾನಾಸ್ವಭಾವ ಜನಸಮೂಹದ ಸಭೆಯ ಸ್ವರೂಪವನ್ನು ತಿಳಿದು ಅದಕ್ಕೂ ಕಾಲಕ್ಕೂ ಸಮಾಕರಿಸಿ ನಡಿಸಿದರೆ ಅದು ಬಹುಕಾಲ ನಡೆಯಬಹುದಾಗಿರುತ್ತದೆ. ಆದುದರಿಂದ ಪೂರ್ವಮಹಾಸಭೆಗಳು ಎಲ್ಲಿಲ್ಲಿ ಆಗಿರುತ್ತವೆಯೋ ಅಲ್ಲಲ್ಲಿಯ ಪ್ರಮುಖರನ್ನೂ ಮತ್ತೂ ಉಳಿದ ಸ್ಥಲಗಳ ಮತದ ಮುಂದಾಳುಗಳನ್ನೂ ಧರ್ಮವೃದ್ಧಿಯ ಇಚ್ಛೆಯುಳ್ಳ ಧರ್ಮಗುರುಗಳನ್ನೂ ಒತ್ತಟ್ಟಿಗೆ ಸೇರಿಸಿ ಸಭೆಯು ಮುಂದೆ ಅವಿಚ್ಛಿನ್ನವಾಗಿ ನಡೆಯುವುದಕ್ಕೆ ಕಾರಣವನ್ನು ಕಂಡುಹಿಡಿದು ಅದರಂತೆ ಆಚರಿಸಿ ಮತದ ಪುರೋವೃದ್ಧಿಯನ್ನು ಮಾಡಲೆಂದು ಹಾರೈಸುವ,

ಎಮ್.

ಶ್ರೀಮನ್ಮಹಾರಾಜ ಜಗದ್ಗುರು ವಿಶ್ವಾರಾಧ್ಯೋ
ವಿಜಯತೇತರಾಂ.

ಕರ್ನಾಟಕ ಮಹಾರಾಷ್ಟ್ರ ತೈಲಂಗ ದೇಶನಿವಾಸಿಗಳಾದ ಸಕಲ ವೀರಶೈವ ವೃಂದಕ್ಕೆ ಪತ್ರಮುಖದಿಂದ ನಿವೇದಿಸುವುದೇನಂದರೆ—ಪರಮಪವಿತ್ರವಾದ ಭೂಕೈಲಾಸ ಕಾಶೀಕ್ಷೇತ್ರ ವಿರಾಜಿತಜಂಗಮವಾಟಿಕಾಮಠ ಮಹಾ ಸಂಸ್ಥಾನದಲ್ಲಿ ನಾನಾ ದೇಶಗಳಿಂದ ಸಂಸ್ಕೃತ ವಿದ್ಯಾಭ್ಯಾಸಾಕಾಂಕ್ಷಿಗಳಾಗಿ ಬರತಕ್ಕ ವೀರಶೈವ ವಿದ್ಯಾರ್ಥಿಗಳ ಅಭ್ಯಾಸ ಸೌಲಭ್ಯಕ್ಕಾಗಿಯೂ ಅನ್ನ ವಸ್ತ್ರ ಮುಂತಾದುವುಗಳ ನಿರ್ವಾಹಕ್ಕಾಗಿಯೂ ವೀರಶೈವ ವಿದ್ಯಾಧರ್ಮಾಭಿವೃದ್ಧಿ ಫಂಡನ್ನು ಸ್ಥಾಪಿಸಿರುವುದು ಸರ್ವರಿಗೂ ವಿದಿತವಷ್ಟೆ. ಮತ್ತೂ ಈ ಒಳಗಾಗಿ ಸದರಿ ಫಂಡಿಗೆ ಸಹಾಯವನ್ನು ಮಾಡಿದ ಮಹಾಶಯರ ಹೆಸರುಗಳನ್ನು ಸ್ಟಾರ್‌ಪತ್ರಿಕೆಯಿಂದ ಪ್ರಸಿದ್ಧಪಡಿಸೇ ಇರುತ್ತದೆ. ಇತ್ತೀಚೆಗೆ ಸದರಿ ಫಂಡಿಗೆ ಧನಸಾಹಾಯ್ಯವನ್ನು ಮಾಡಿ ಉದಾರಾಶ್ರಮವನ್ನು ಕೊಟ್ಟವರ ವಿವರವು:—ಶ್ರೀಪಟ್ಟದದೇವರು ತಾಂಡೂರಹೊಸಪೇಟೆ ೫ ರೂ. ಮಾ॥ ರಾ॥ ಶಾಂತಪ್ಪ ಪಸಾರದ ತಾಂಡೂರ ಹೊಸಪೇಟೆ ೧೦ ರೂ. ಸಮಸ್ತ ದೈವಮಂಡಳಿ ಇಂಗಳಗಾಂವ ೧೦ ರೂ. ಭೀಮಶಂಕರ ಹರಿಶೇಟ ಪುರವಂತ ಜುನ್ನರ ೬ ರೂ. ಶಾಂತವೀರಪ್ಪ ದೊಡ್ಡ ವೀರಭದ್ರಪ್ಪ ಹಬ್ಬಿಗಿ ೫ ರೂ. ಸತ್ಯಪ್ಪ ಐಕನಾಳ ಮಾಜಿಕ ವತಗಿ ೧ ರೂ. ಪರಪ್ಪ ಝುರಕೋಳಿ ೧ ರೂ. ಗೋವಿಂದ ತಾತ್ಯಾಶೇಟಿ ನಾಂದೇಡಕರ ೧ ರೂ. ಇಂತಿಷ್ಟು ಜನರು ಅತ್ಯಂತ ಪ್ರೇಮಪೂರ್ವಕವಾಗಿ ಧನಸಹಾಯ ಮಾಡಿರುವರು. ಮತ್ತೂ ಇದೇ ಸಂವತ್ಸರದಲ್ಲಿ ಅಭ್ಯಾಸೋತ್ಸುಕರಾಗಿ ಬಂದಿರುವ ಹೊಸ ವಿದ್ಯಾರ್ಥಿಗಳ ವಿವರವು:—ಕಾಶೀನಾಥಶಾಸ್ತ್ರೀ ನಾಗನೂರ, ಹರೀಶ್ವರಶಾಸ್ತ್ರೀ ಸುಣಕಲ್ಲ ಬಿದರಿ, ಶಿವಲಿಂಗಶಾಸ್ತ್ರೀ ಸಾವಳಗಿ, ಸಂಗಮೇಶ್ವರಶಾಸ್ತ್ರೀ ಒಂಟಮುರಿ, ಬಸವಾರ್ಯಶಾಸ್ತ್ರೀ ಸಿದ್ಧಗಂಗಾ, ಬಸವರಾಜಶಾಸ್ತ್ರೀ ರಾಯಚೂರ, ವಿಶ್ವನಾಥಶಾಸ್ತ್ರೀ ಪುಣೇಕರ, ವಿರೂಪಾಕ್ಷಶರ್ಮಾ ಜೋಡಜವಳಿಕರ, ಮಲ್ಲಿನಾಥಶರ್ಮಾ ಕೊಪ್ಪ, ಇವರೆಲ್ಲರೂ ವೇದ ನ್ಯಾಯ ವ್ಯಾಕರಣ ಮೀಮಾಂಸಾದಿಶಾಸ್ತ್ರಗಳನ್ನು ಅಭ್ಯಾಸಮಾಡುತ್ತಿರುವರು. ಅಣ್ಣಪ್ಪ ಮಾಳಶೆಟ್ಟಿ ಸೋಲಾಪೂರಕರ ಈತನು ಇಂಗ್ಲೀಷ್ ಮತ್ತೂ ಅಲಂಕಾರಶಾಸ್ತ್ರವನ್ನು ಅಭ್ಯಾಸಮಾಡುತ್ತಿರುವನು. ಅಂತು ಸದ್ಯಃ ನಮ್ಮ ಸಂಸ್ಥಾನದಲ್ಲಿ ೩೫ ಜನ ವಿದ್ಯಾರ್ಥಿಗಳು ಇರುತ್ತಾರೆ. ಹೋದವರ್ಷ ವೇ॥ ಬಸವರಾಜಶಾಸ್ತ್ರೀ ಕೋಡಿಕೊಪ್ಪ ಇವರು ವ್ಯಾಕರಣ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಈ ವರ್ಷ ರೋಣ ತಾಲ್ಲೂಕ ಪೈಕಿ ಹಾಲಕೆರೆ ಪಾಠಶಾಲಾಧ್ಯಾಪಕರಾಗಿ ನೇಮಿಸಲ್ಪಟ್ಟಿರುತ್ತಾರೆ. ವಾಚಕ ಮಹಾಶಯರೇ! ತಮ್ಮೆಲ್ಲರಿಗೂ ವಿಶೇಷ ಸೂಚನೆ ಏನೆಂದರೆ-ಪ್ರತಿ ಸಂವತ್ಸರದ ಪದ್ಧತಿಯಂತೆ ಶಕೆ ೧೮೩೬ ಮಾಘ ಬ॥ ೧೩ ಶುಕ್ರವಾರ ಮಹಾಶಿವರಾತ್ರಿಯ ದಿವಸ ಪ್ರಾತಃಕಾಲ ೬ ಘಂಟೆಯಿಂದ ೧೦ ಘಂಟೆಯವರೆಗೂ ಜಗನ್ಮೂಲಾಧಾರಭೂತರಾದ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮಹಾ ರುದ್ರಾಭಿಷೇಕವು ವೇದಘೋಷ ವಾದ್ಯಘೋಷ ಮುಂತಾದವುಗಳೊಡನೆ ಅತಿ ವಿಜೃಂಭಣೆಯಿಂದ ಜರಗುತ್ತದೆ. ಬಳಿಕ ಸದರಿಯವರ ರಥೋತ್ಸವವು ಸಕಲ ಬಿರುದಾವಳಿಗಳೊಡನೆ ಜರುಗುವುದು. ಅನಂತರ ಯಾತ್ರೋದ್ದೇಶವಾಗಿ ಬಂದ ಭಕ್ತಮಾಹೇಶ್ವರರ ಶಿವಲಿಂಗಪೂಜೆಯೂ ಪದ್ಧತಿಯಂತೆ ವಿಧ್ಯುಕ್ತವಾಗಿ ಮಾಡಿಸಲ್ಪಡುವುದಲ್ಲದೆ, ಸದರಿ ಭಕ್ತ ಮಾಹೇಶ್ವರರಿಗೆ ಫಲಾಹಾರ ಮುಂತಾದವುಗಳು ಸಂಸ್ಥಾನದಿಂದಲೇ ಮಾಡಿಸಲ್ಪಡುತ್ತವೆ. ಸಾಯಂಕಾಲದಲ್ಲಿ ಶ್ರೀಗುರುಪೂಜಾ ತೀರಿದ ಬಳಿಕ ಹಿಂದೀ ಮಹಾರಾಷ್ಟ್ರ ಕರ್ನಾಟಕಾದಿ ಭಾಷೆಗಳಿಂದ ಕೈಲಾಸಮಂಟಪದ ಆಯಾಯ ಭಾಗಗಳಲ್ಲಿ ಶಿವಕೀರ್ತನ ಶಿವಭಜನ ಶಿವಕಥಾಲಾಪಾದಿ ಸತ್ಕಾರ್ಯಗಳು ಪ್ರಾತಃಕಾಲ ಪರ್ಯಂತ ಜರುಗಿಸಲ್ಪಡುವುವು. ಎರಡನೆಯ ದಿವಸ ವೆಂದರೆ ಅಮಾವಾಸ್ಯಾ ಶನಿವಾರದಲ್ಲಿ ಸದರಿ ಯಾತ್ರಿಕರಿಗೂ ಅತಿಥಿ ಅಭ್ಯಾಗತರೇ ಮೊದಲಾದ ಅರ್ಥಿ ಜನರಿಗೂ ಸಂಸ್ಥಾನದಿಂದಲೇ ಭೋಜನವು ನಡೆಸಲ್ಪಡುವುದು. ಪುನಃ ೪ ಘಂಟೆಗೆ ಸರಿಯಾಗಿ ಶ್ರೀಮಜ್ಜಗದ್ಗುರು ವಿಶ್ವಾರಾಧ್ಯ ಸಿಂಹಾಸನಾಧೀಶ ಶ್ರೀಮಜ್ಜಗದ್ಗುರು ಶ್ರೀ ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಅಧ್ಯಕ್ಷತೆಯ ಕೆಳಗೆ ಸದರಿ ಸಂಸ್ಥಾನದ ವೇದಶಾಲಾಧ್ಯಾಪಕ ಶ್ರೀ ಮನುಲಾಲ ಧರ್ಮಶಾಸ್ತ್ರಾಧ್ಯಾಪಕ ಪಂ॥ ಉಮೇಶಸ್ಮೃತಿ ತೀರ್ಥಭಟ್ಟಾಚಾರ್ಯ ನ್ಯಾಯಶಾಸ್ತ್ರಾಧ್ಯಾಪಕ ಪಂ॥ ಶ್ರೀ ವಿಶ್ವನಾಥ ಭಟ್ಟಾಚಾರ್ಯ ವ್ಯಾಕರಣಶಾಸ್ತ್ರಾಧ್ಯಾಪಕ ಪಂ॥ ಶ್ರೀಕೃಷ್ಣಶಾಸ್ತ್ರೀ ಜ್ಯೋತಿಶ್ಶಾಸ್ತ್ರಾಧ್ಯಾಪಕ ಪಂ॥ ಶ್ರೀ ಹನುಮಾನ್‌ಪ್ರಸಾದ ವೇದಾಂತ ಮೀಮಾಂಸಾಶಾಸ್ತ್ರಾಧ್ಯಾಪಕ, ಪಂ॥ ಶ್ರೀ ಅಚ್ಯುತರವರಿಂದಲೂ ಮತ್ತೂ ಗ್ರಾಮದ ಪ್ರಮುಖ ಪಂಡಿತರಿಂದಲೂ ವಿದ್ವತ್ಸಭೆಯು ಕೂಡಿ ಪ್ರಥಮದಲ್ಲಿ ಆಯಾಯ ಶಾಸ್ತ್ರಗಳಲ್ಲಿ ಶಾಸ್ತ್ರಾರ್ಥ ಜರುಗುವುದು. ಅನಂತರ ಸಂಸ್ಥಾನದ ಶಾಸ್ತ್ರಿವರ್ಗದವರ ಪೂರ್ವೋತ್ತರ ಪರಿಕ್ಷೆಗಳು ನಡೆಯುತ್ತವೆ. ಬಳಿಕ ಸಕಲ ಭಕ್ತಮಾಹೇಶ್ವರರಿಗೆ ಸುಗಮವಾಗಿ ತಿಳಿಯುವಂತೆ ಅಷ್ಟಾವರಣ ಮೊದಲಾದ ನಮ್ಮ ಮತಧರ್ಮ ತತ್ವವಿಷಯವಾಗಿ ವ್ಯಾಖ್ಯಾನಗಳು ಕೊಡಲ್ಪಡುತ್ತವೆ. ಮತ್ತೂ ಮೇಲೆ ತೋರಿಸಿದ ಶಾಸ್ತ್ರಗಳಲ್ಲಿ ಪರೀಕ್ಷೋತ್ತೀರ್ಣರಾದವರಿಗೆ ಶ್ರೀ ಸನ್ನಿಧಿಯಿಂದ ಬಹುಮಾನಗಳು ಕೊಡಲ್ಪಡುವುವು. ಅನಂತರ ಶ್ರೀ ಜಗದ್ಗುರು ವಿಶ್ವಾರಾಧ್ಯರ ನಾಮಸಂಕೀರ್ತನ ಜಯಘೋಷದಿಂದ ಸಭೆಯು ವಿಸರ್ಜಿಸಲ್ಪಡುವುದು. ಆದುದರಿಂದ ಸದಾಸಂಸಾರ ವ್ಯಾಮೋಹಪರವಶರಾದಾಗ್ಯೂ ಈ ಸತ್ಸಮಾಗಮಸಮಯದ ಸಂಗತಿಯನ್ನರಿತವರಾದ ವಾಚಕರೆಲ್ಲರೂ ಅವಶ್ಯವಾಗಿ ತಮ್ಮ ವಂಶೋದ್ಧಾರ ಮುಂತಾದ ಸುಖಸಾಮ್ರಾಜ್ಯಕ್ಕಾಗಿ ಸ್ವಕುಟುಂಬಸಮೇತರಾಗಿ ಬಂದು ಶ್ರೀ ಜಗದ್ಗುರು ವಿಶ್ವಾರಾಧ್ಯರ ದರ್ಶನಾಶೀರ್ವಾದಗಳನ್ನು ಪಡೆಯುವುದಲ್ಲದೆ ಪುಣ್ಯಪ್ರತಿಮೆಯಂತೆ ಇರುವ ಶ್ರೀ ಕ್ಷೇತ್ರದರ್ಶನವನ್ನೂ ಶ್ರೀ ವಿಶ್ವನಾಥ ಮತ್ತೂ ಜಗನ್ಮಾತೆಯಾದ ಶ್ರೀಮದನ್ನಪೂರ್ಣಾ ಮೊದಲಾದ ದೇವತೆಗಳ ದರ್ಶನಾಧಿಕ್ಯವನ್ನೂ ಅನಂತಜನ್ಮಸಂಚಿತ ಪಾಪಧ್ವಂಸಕವಾದ ಗಂಗಾಸ್ನಾನವನ್ನೂ ಮಾಡಿಕೊಂಡು ಕೃತಕೃತ್ಯರಾಗುವಿರೆಂದು ಆಶಿಸುತ್ತೇವೆ. ಮತ್ತೂ ಇದೇ ವರ್ಷ ಮಾಘಮಾಸವೊದಲ್ಗೊಂಡು ಬರತಕ್ಕ ರಾಕ್ಷಸನಾಮಸಂವತ್ಸರ ವೈಶಾಖಮಾಸಾಂತ್ಯದ ವರೆಗೂ ಹರದ್ವಾರದಲ್ಲಿ ಪೂರ್ಣಕುಂಭವು ಜರುಗುವುದು. ಸದರಿ ಯಾತ್ರೆಯಲ್ಲಿ ತಿಬೇಟ ಮೊದಲಾದ ದೇಶಗಳಿಂದ ಮಹಾಯತಿಗಳೂ ಮಹಾತಪಸ್ವಿಗಳೂ ಸಾಧುಸತ್ಪುರುಷರೂ ಕೂಡುವರು. ಸದರಿಯವರ ಅಲಭ್ಯದರ್ಶನಲಾಭವಾಗುವುದು. ಯುದ್ಧ ಜರುಗಿರುವುದೆಂದು ಯಾವ ವಿಷಯದಲ್ಲಿಯೂ ಭಯಗ್ರಸ್ತರಾಗಲು ಕಾರಣವಿಲ್ಲ. ಯಾಕೆಂದರೆ—ನಮ್ಮ ಇಂಗ್ಲೀಷ್ ಸಾರ್ವಭೌಮರ ಆಳಿಕೆಯಿಂದ ಪ್ರತಿವರ್ಷದಂತೆ ಈ ವರ್ಷವಾದಗೂ ರೈಲ ಮುಂತಾದ ವ್ಯವಸ್ಥೆಗಳು ಉತ್ತಮವಿರುವವು. ಅಲ್ಲದೆ ಬರತಕ್ಕ ಶಿಷ್ಯಮಂಡಳಿಗೆ ಮಾರ್ಗದಲ್ಲಿ ಯಾವದಕ್ಕೂ ತೊಂದರೆಯಾಗದಂತೆ ಜಬ್ಬಲಪೂರ ಪ್ರಯಾಗ ಮುಂತಾದ ಜಂಕ್ಷನ್ನುಗಳಲ್ಲಿ ಸದರಿ ಸಂಸ್ಥಾನದ ಪತಿಯಿಂದ ಏರ್ಪಾಟುಕೂಡ ಮಾಡಲ್ಪಟ್ಟಿರುತ್ತದೆ.

ವ್ಯವಸ್ಥಾಪಕ, ಸಂಸ್ಥಾನ ಜಂಗಮವಾಡಿಮಠ
ಬನಾರಸ್ ಸಿಟಿ.

ಭಕ್ತ ವನಸ್ಪತಿಯಿಂದಲೇ ತಯಾರಿಸಿದ
ಧಾತುಪೌಷ್ಟಿಕ ಲೇಹವು.

5

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪುದ್ರೇಕವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವವರು, ಮೇಹಸಂಬಂಧದ ರೋಗವಿದ್ದವರು, ಧಾತುಪೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲಿ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೋಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೨-೮-೦. ೮೦ ತೋಲೆಗೆ ರೂಪಾಯಿ ೫ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳೆಸಹಿತ ಆದ ಸಮಾರಂಭ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೋ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವಿರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೋ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಶಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೋ ಸಿಕ್ಕುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.



ಹೊಸಫ್ಯಾಷನ್—ಸಭ್ಯಗೃಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಈಪ್ರಕಾರ ೨ ಫೋಟೋ ಬೇಕಾದ ಸತ್ಪುರುಷರ ದೇವರವೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ॥।=, ೧, ೧।, ಪ್ರಕಾರ, ಮತ್ತೂ ಬೆಳ್ಳೀದು ರು ೧॥ ರೋಡ್ ಗೋಲ್ಡು ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೭॥ ರೂ.

ಪರೂರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ

ನಮ್ಮವಿಳಾಸ— ಗಂಗಪ್ಪಾ ಜೀರಿಗೆ,
ಆರ್ಟಿಸ್ಟ್ ಸೊಲ್ಲಾಪುರ.

39

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ
ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂ
ಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು
ಕಾಪಾಡುವುದರಲ್ಲಿ ಶ್ರೇಷ್ಠತಮವಾದ

16

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ-ಚಿನ್ನದ ರೇಕು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು—ಕೆಮ್ಮು-ನೆಗಡಿ-ದಿನಜ್ವರ-ಮೂರರಜ್ವರ ನಾಲ್ಕರಜ್ವರ— ಮಲೇರಿಯಾಜ್ವರ— ತಲೆನೋವು— ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳೆತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೨೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷ ಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಕೆ, ಮಲಬಂಧ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತಕ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೨೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ॥ಡಿ

ಪಾಳ್ಯದವಂಕಟಾಚಲಪಂಡಿತರಸಿದ್ಧೌಷಧಗಳು.

35

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊತೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೆರಡು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯದ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧—೦—೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬಹುಮಾನ! ಶ್ರೀ ಬಹುಮಾನ !!

ಅತ್ಯಾಶ್ಚರ್ಯಕರವಾದ ಬಹುಮಾನ.

೨೫ ಸಾವಿರ ರೂಪಾಯಿಗಳು ಹಂಚಲ್ಪಡುವವು
ದಿವ್ಯೌಷಧ ಬಳ್ಳಾರಿ. ಸುಪ್ರಸಿದ್ಧೌಷಧ
ಸರ್ವಜನಮನೋಲ್ಲಾಸಿನಿ ಅಂಡ್ ಕೋ ಇವರ
(• ನಾರಸಿಂಹಚೂರ್ಣವು •) 11

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಜವಾದುದಷ್ಟೆ. ಆದರೆ ಅನೇಕ ದುರ್ವರ್ತನಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವುವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನ ಕಣ್ಣಾರ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವುವಿಧ ಔಷಧಗಳನ್ನು ವಿಶೇಷವಾದ ಬೆಲೆಯನಿಟ್ಟು ವಿಕ್ರಯಿಸಿದರು ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವದು ವಿಷಾದಕರವಾಗಿರುವದು. ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿ (ನಾರಸಿಂಹಚೂರ್ಣವು) ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ, ಅನೇಕತರಹೆಯ ಮೇಹರೋಗಗಳು, ಪಾಂಡುರೋಗ, ಪೀನಸ, ಹದಿನೆಂಟು ಬಗೆಯಾದ ಕುಷ್ಠಗಳು, ಎಂಟುವಿಧ ಉದರರೋಗಗಳು, ಭಗಂಧರವು, ಮೂತ್ರಕೃಛ್ರವು, ಗೃಧ್ರಸೀವಾತವು, ಕಾಮಿಲೆ, ಕ್ಷಯವು ಮಹಾಶ್ವಾಸಗಳು, ದಾರುಣವಾದ ಐದುಬಗೆಯಾದ ಕಾಸೆಗಳು, ಎಂಭತ್ತುವಿಧಗಳಾದ ವಾತರೋಗಗಳು, ನಲವತ್ತು ಬಗೆಯಾದ ಪಿತ್ತಗಳು, ಇಪ್ಪತ್ತು ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಸಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ, ಚಿನ್ನದಂಥಾ ಕಾಂತಿಯು, ಸಿಹ್ಮನಂತೆ ಪರಾಕ್ರಮವು, ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯು ಅತ್ಯಧಿಕ ವೀರ್ಯವೃದ್ಧಿಯು ನೃಸಿಹ್ಮನಿಗೆ ಸಮಾನರಾದ ಮಕ್ಕಳನ್ನು ಪಡೆಯುವಬಲವೂ ಉಂಟಾಗುವುದು ಇದರಲ್ಲಿ ಯಾವ ವಿಧವಾದರಸಗಳಾಗಲಿ ಮಿಶ್ರವಾಗಿಲ್ಲ, ಇನ್ನಾವ ದೋಷಗಳೂ ಇಲ್ಲ. ನಿರ್ದುಷ್ಟವಾದದ್ದು, ಭಕ್ತವನಸ್ಪತಿಗಳಿಂದಲೇ ಸಿದ್ಧಮಾಡಿದದಿವ್ಯವಾದ ಔಷಧ. ಅನೇಕ ಪಂಡಿತರು, ಧನಿಕರು' ಸರ್ಟಿಫಿಕೇಟುಗಳನ್ನು ಕೊಟ್ಟಿರುವರು.

೧೪ ದಿನ ಉಪಯೋಗಕ್ಕೆಬರುವ ಡಬ್ಬಿ ೧ ಕ್ಕೆ ಬೆಲೆ ರೂ. ೧—೦—೦

—(ಬಹುಮಾನಗಳನ್ನು ಹಂಚುವ ವಿಧಾನ)—

೧ ಡಜ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೧೦೦೦೦ ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೬೦೦೦ ರೂ. ೩ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೪೦೦೦ ರೂ. ೨ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೩೦೦೦ ರೂ. ೧ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ೨೦೦೦ ರೂ.

೧೯೧೪ ನೇ ಜುಲೈ ೧ ನೇ ತೇದಿ ಮೊದಲು ೧೯೧೫ ನೇ ಜುಲೈ ೧ ತೇದಿಯವರೆಗೂ ಈ ಔಷದವು ಒಂದು ಲಕ್ಷ ಡಬ್ಬಿಗಳು ಖರ್ಚಾದಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ. ಒಂದುಪಕ್ಷದಲ್ಲಿ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ವಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡಿಯುವದಲ್ಲದೆ ಬಹುಮಾನವನ್ನು ಸಹಾ ಹೊಂದುವದಕ್ಕೆ ಅರ್ಹನಾಗಿರುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರು ಸಂಶಯವಿಲ್ಲ. ಬಹುಮಾನದ ಮೊತ್ತವು ನಿಷ್ಪಕ್ಷಪಾತವಾಗಿ ಒಂದೇ ಸಮವಾಗಿ ಹಂಚಲ್ಪಡುವವು. ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಕುಹಕತನವು ಇಲ್ಲ, ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರ ಮಾತುಗಳಿಗೆ ನಿಗಾ ಕೊಡಲಾಗದು, ಜಾಗ್ರತೆ ತರಿಸಿಕೊಳ್ಳಿರಿ. ಔಷಧದ ಗುಣವನ್ನು ಪರೀಕ್ಷಿಸಿರಿ ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇದಲ್ಲದೆ ನಮ್ಮಲ್ಲಿ ಇನ್ನು ಅನೇಕತರಹೆಯ ಔಷಧಗಳು ಸಿಗುತ್ತವೆ. ರೋಗದಲಕ್ಷಣವನ್ನು ತಿಳಿಸಿದರೆ ಅಮೂಲ್ಯವಾದ ಮತ್ತು ಗುಣಕಾರಿಗಳಾದ ಔಷಧಗಳನ್ನು ಕಳುಸುವೆವು.

ಇದರ ಅನುಪಾನ ಪತ್ರಿಕೆಯನ್ನು ಬಹುಮಾನದ ಟಿಕೀಟನ್ನು ಡಬ್ಬಿಸಂಗಡ ಕಳಿಸುವೆವು. ನಮ್ಮ ಕಂಪೆನಿಯ ಕಾಶಿ ವಿಶ್ವನಾಥ ಮಾರ್ಕು ಇಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು.

ನಮ್ಮ ಅಡ್ರೆಸ್ಸು,
ಸರ್ವಜನಮನೋಲ್ಲಾಸಿನಿ ಅಂಡ್ ಕೋ ಬಳ್ಳಾರಿ.

ವಿಜ್ಞಾಪನೆ.

ಈ ಸಮಯ ಬಿಡಬೇಡಿರಿ. ಮುಂದೆ ದೊರೆಯಲಾರದು. ಮೊಳಕಾಲ್ಮೂರಿನ ಪ್ರಸಿದ್ಧವಾದ ರೇಷ್ಮೆಯವಸ್ತ್ರಗಳು ಬೇಕೋ? ಬೆಲೆಸುಲಭ! ಬಣ್ಣ ಗ್ಯಾರಂಟಿಯಾದದ್ದು. ಒಂದುಸಲ ತರಿಸಿನೋಡಿರಿ !! ನಮ್ಮಲ್ಲಿ ಹೊದಿಯುವ ವಸ್ತ್ರಗೆ

ಳೂ, ಮೊಗಟಗಳೂ, ಸೀರೆಗಳೂ, ನಡಕಟ್ಟುಗಳೂ, ಲಿಂಗದವಸ್ತ್ರಗಳೂ, ಕೈ ವಸ್ತ್ರಗಳೂ ಬಹಳ ಚೆನ್ನಾಗಿ ಎಲ್ಲಾ ರಂಗಿನಲ್ಲಿಯೂ ತಯಾರಾಗುತ್ತವೆ. ನಾವು ಮೈಸೂರು, ಮದ್ರಾಸು ಸೀಮೆಗಳ ಎಲ್ಲಾ ಭಾಗಕ್ಕೂ ನಮ್ಮ ಮಾಲನ್ನು ರವಾನಿಸುತ್ತೇವೆ. ನಮ್ಮ ಮಾಲುಗಳಿಗೆ ಬಹುಮಾನಗಳೂ, ಮೆಡಲುಗಳೂ, ಬಂದಿವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಹಿಮಂತಋತುವಿನ ದರಗಳು. ೧ನೆ ನಂ. ವಸ್ತ್ರಗಳು ತೊಲೆ ೧ಕ್ಕೆ ೦-೨-೦. ೨ನೆ ನಂ. ವಸ್ತ್ರಗಳು ತೊಲೆ ೧ಕ್ಕೆ ೦-೬-೯. (ಮೊಗಟ) ಅರಳೆಪೇಟೆ ಸೀರೆಗಳೂ, ನಡಕಟ್ಟು, ಲಿಂಗದವಸ್ತ್ರಗಳು, ೧ನೆ ನಂ. ಮಾಲು ತೊಲೆ ೧ಕ್ಕೆ ೦-೮-೦. ೨ನೆ ನಂ. ಮಾಲು ತೊಲೆ ೧ಕ್ಕೆ ೦-೨-೬.

ನಮ್ಮವಿಳಾಸ:—

9 ಎಂ. ಎಸ್. ಮಲಕಣ್ಣ, ಮತ್ತು ಬ್ರದರ್ಸ್,

ರೇಶ್ಮೆ ಜವಳಿ ವ್ಯಾಪಾರಿಗಳು. ಪೋಸ್ಟ್ ಮೊಳಕಾಲ್ಮುರು

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕದನಗಳ ಪಟಗಳೂ ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ. ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು ! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ ೨ ಆಣೆ; ವಿ. ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ.—ದಿ ಜನರಲ್ ಏಜೆನ್ಸಿ. ಮೈಸೂರು. 69

ಊದಬತ್ತಿಗಳು.

38

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨ ೦-೯; ೫-೦-೦; ೩-೯-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪರ್ಟಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್ ಸನ್ಸ್
ಸುಗಂಧಕಾರಿ, ಮೈಸೂರು.

ಲೋಕಪ್ರಸಿದ್ಧವಾದ ಪಂಜಾಸಾಲಾಮಿಸ್ರಿ ಮುರಬ್ಬಾ.

10

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಪಂಜಾ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ ! ಸೇವಿಸಿರಿ !! ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳಿಗೆಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದುಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾ ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುದು ತಿಳಿದುಬರುತ್ತೆ.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ನೀರಿನಂತಿರುವ ಧಾತುವನ್ನು ಘಟ್ಟಿಪಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿ ಹೋಗುವ ಧಾತುವನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಉರಿಯುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕ್ಷಣಕ್ಷಣಕ್ಕೂ ಮೂತ್ರವಾಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೆದುಳಿಗೆ ಬಲವನ್ನು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ತಾಂಬ್ರ ಮತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲ ಬರುವಂತ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವುದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕಂಡುಬರುತ್ತೆ. ೨-೩ ಡಬ್ಬಿಗಳನ್ನು ಉಪಯೋಗಿಸುವದರಿಂದ ಜನ್ಮಾಂತರದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ
೫೦೦ ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ಕ್ಕೆ ರೂ. ೨-೦-೦. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ ೬ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೋ, ದೊಡ್ಡಪೇಟೆ, ಬೆಂಗಳೂರು ಸಿಟಿ.
ಡಿ. ಮನ್ನಾಲಾಲ್ ಡಿಲ್ಲೀವೈದ್ಯರು, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಗಂಧರಾಜ ನಶ್ಯದಪುಡಿ.

47

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದ್ದರೂ ತಪ್ಪದೆ ಗುಣವಾಗುತ್ತದೆ. ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚಿಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡಜ಼ನ್ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಘಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುತ್ತವೆ. ನೀವುಉಪಯೋಗಿಸುವ ಖರೀ ಹೊಗೇಸೊಪ್ಪಿಗೆಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ.೪ ಆಣೆ. ಒಂದು ಡಜ಼ನ್ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ—ಕೆ. ಮಲ್ಲಿಕಾರ್ಜುನಸೆಟ್ಟಿ,
ಗೋಪಸೆಟ್ಟಿಪುರು, ಹನೂರು ಪೋಸ್ಟ್
ಕೊಳ್ಳೇಗಾಲದ ತಾಲ್ಲೂಕು.

೧೯೧೫ನೆಯ ಇಸವಿ ಜನವರಿತಾ॥೨೪ ರಿಂದ ೧೯೧೫ನೆಯ ಜನವರಿ ತಾ॥ ೩೦ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ಪುಷ್ಯ ಶು॥ ನವಮಿಯಿಂದ ಮಾಘ ಶು॥ ಚತುರ್ದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಳೆ ತೇದಿ
24	[1]ಭಾನು	ನವ	48-28	ಭರಣಿ	35-30	11
25	ಸೋ	ದಶ	54-4	ಕೃತ್ತಿ	42-5	12
26	[2]ಮಂಗ	ಏಕಾ	59-8	ರೋಹಿ	48-22	13
27	[3]ಬುಧ	ದ್ವಾ	60-0	ಮೃಗ	54-4	14
28	[4]ಗುರು	ದ್ವಾ	3-12	ಆರಿದ್ರಾ	58-49	15
29	[5]ಶುಕ್ರ	ತ್ರ	6-23	ಪು	60-0	16
30	[6]ಶನಿ	ಚತು	8-17	ಪು	1-46	17

(1) ಮಧ್ವನವಮಿ. (2) ಅಭಾವಪಾತಃ, ಸ್ಮಾರ್ತಭೀಷ್ಮ ೧೧, ತಿಲಕಪದ್ಮವ್ರತಂ, ಮುದುಕತೊರೆ ಮಲ್ಲಿಕಾರ್ಜುನಸ್ವಾಮಿರಥಃ. (3) ವೈಷ್ಣವೈಕಾದಶೀ, ಹರಿವಾಸರಃ. (4) ಪ್ರದೋಷಃ. (5) ಮೇಲುಕೋಟೆಯಲ್ಲಿ ಪುನರ್ವಸೂತ್ಸವಃ, ಶ್ರೀರಂಗದಲ್ಲಿ ರಂಗನಾಥಸ್ವಾಮಿರಥಃ. (6) ತ್ರಿನಯನೇಶ್ವರಸ್ವಾಮಿರಥಃ, ಬೆಳತೂರು ಲಕ್ಷ್ಮೀನೃಸಿಂಹಸ್ವಾಮಿರಥಃ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

BANARES CITY.
KASHI
VISHWESHWAR.

18

ದೊಡ್ಡ ಕಂಪೆನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ. ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನೂ, ವಿಶ್ವೇಶ್ವರನ ೨ ಪಟಗಳನ್ನೂ ಇನಾಮಾಗಿ ಕಳುಹಿಸುವೆವು. ವಿಳಾಸ—ಎಸ್. ಯೂ. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

೧೯೧೫ನೆಯ ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.



ಶಾಯಿ ಇಳಿಯದ ಉತ್ತಮವಾದ ಕಾಗದ ಮುದ್ದಾದ ಮುದ್ರಣ. ಅನೇಕವಾದ ಹೊಸಸುಂಗತಿಗಳಿವೆ.

೧ ನಂ.—ಸಣ್ಣಸೈಜು ಸಾದಾ ೦-೪-೦
೨ ನಂ.—ಪೆನ್ಸಲ್‌ಮುಚ್ಚಳವುಳ್ಳದು ೦-೬-೦

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ

೩-೪ ನೆಯ ನಂಬರ್ ಡೈರಿಗಳು ಮುಗಿದುಹೋಗಿವೆ.

ಹೆಚ್ಚಾಗಿ ತರಿಸುವವರಿಗೆ ರೂಪಾಯಿ ೧ ಕ್ಕೆ ೦-೨-೦ ಕಮಿಷನ್ ದೊರೆಯುವುದು. ವಿಳಾಸ.—

ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.

17

ಮೈಸೂರ್ ಸ್ಟಾರ್.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ ।
ಭುವನಭಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ॥

ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೧೪—೦

ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ ।
ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ ।
ಪ್ರೇಮಂಬಿಭ್ರತಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಸಂಪುಟ ೨೮) ಮೈಸೂರ್ ಸ್ಟಾರ್ ಸನ್ ೧೯೧೫ ನೆಯ ಇಸವಿ ಜನವರಿ ತಾರೀಖು ೩೧ ನೆಯ ಭಾನುವಾರ. (ಸಂಚಿಕೆ ೫

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಷಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

೧. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

೨. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

೩. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ ಯಾವರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

೪. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

೫. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

೬. ಬೇಸಿಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

೭. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೆಷಿಂತಾನದ ಒಂದು ಪೊಟ್ಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

೪೫ ಮಾತ್ರೆಗಳ	ಪೊಟ್ಣ	೧ಕ್ಕೆ	೨	ಆಣೆ		೮೦ ಮಾತ್ರೆಗಳ	ಟಿನ್	೧ಕ್ಕೆ	೪	ಆಣೆ.
೯೫ "	"	"	೪	"		೧೦೦ "	ಶೀಶೆ	"	೪॥	"
೨೦೦ "	"	"	೭	"		೫೦೦ "	ಮರದಪೆಟ್ಟಿಗೆ	"	೧	ರೂ.
೨೦೦ "	ಟಿನ್	"	೯	"		೧,೦೦೦ "	"	"	೨	"

೧ ರೂ.ಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☛ ಭರತಖಂಡ, ಬರ್ಮ ಮತ್ತೂ ಸಿಲೋನ್ ಈ ಪ್ರಾಂತಗಳ ಎಲ್ಲಭಾಗದಲ್ಲೂ ಏಜಂಟರು ಬೇಕಾಗಿದೆ.

ಮೈಸೂರುಸೀಮೆಯ ಏಜಂಟರು:—ಎಂ. ರಾಮಸಂಜೀವ ಸೆಟ್ಟಿ, ಚನ್ನಪಟ್ಟಣ.
ಸೋಲ್ ಏಜಂಟರು:—ಸೆಷಿಂತಾನ್ ಡಿಪೋ, ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ ೨.

ಮದ್ರಾಸ್ ಏಜಂಟ್:—ಬಿ. ಸಿ. ಷಾ ಅಂಡ್ ಕೊ,
೧೨೩ ಚೀನಾಬಜಾರ್ ರೋಡ್, ಮದ್ರಾಸ್.

BANARES CITY.
KASHI
VISHWESHWAR.

19

ದೊಡ್ಡ ಕಂಪೆನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ. ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ—ಎಸ್. ಯೂ. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

೧೯೧೫ನೆಯ ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.



ಶಾಯಿ ಇಳಿಯದ ಉತ್ತಮವಾದ ಕಾಗದ ಮುದ್ದಾದ ಮುದ್ರಣ. ಅನೇಕವಾದ ಹೊಸಸುಂಗತಿಗಳಿವೆ.

೧ ನಂ.—ಸಣ್ಣಸೈಜು ಸಾದಾ ೦-೪-೦
೨ ನಂ.—ಪೆನ್ಸಲ್‌ಮುಚ್ಚಳವುಳ್ಳದು ೦-೬-೦

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ

೩ ೪ ನೆಯ ನಂಬರ್ ಡೈರಿಗಳು ಮುಗಿದುಹೋಗಿವೆ.

ಹೆಚ್ಚಾಗಿ ತರಿಸುವವರಿಗೆ ರೂಪಾಯಿ ೧ ಕ್ಕೆ ೦-೨-೦ ಕಮಿಷನ್ ದೊರೆಯುವುದು. ವಿಳಾಸ.—

ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.

18

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು.

170

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೨೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ— ಬೆಲೆ ೧-೮-೦ ದ್ವಿತೀಯಃ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತೆಗಳು ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತೆ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟಿಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ- ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕಮಂಡಳಿ, ಮೈಸೂರು.

ಹಿಂದೂದೇಶದ ಏಳಿಗೆಗೆ ಸ್ತ್ರೀ ವಿದ್ಯಾಭ್ಯಾಸವು ಅವಶ್ಯಕವು.

೧. ದೇಶದ ಏಳಿಗೆಗೆ ಅವಶ್ಯಕವಾದ ಆರೋಗ್ಯ, ವಿದ್ಯಾಭ್ಯಾಸ, ಕಾಯಪುಷ್ಟಿ, ಸತ್ಸಂತಾನವೃದ್ಧಿ, ಸಂಸಾರಸೌಖ್ಯ, ದಾಂಪತ್ಯಾನುಕೂಲ ಮೊದಲಾದವುಗಳೆಲ್ಲಕ್ಕೂ ಸರಿಯಾದ ವಿವಾಹವು ತಳಹದಿಯು. ಅಕ್ರಮ ಮತ್ತೂ ಅಕಾಲ ವಿವಾಹಗಳಿಂದ ತಂದೆತಾಯಿಗಳಿಗೂ, ಮಕ್ಕಳಿಗೂ ದೇಹಾರೋಗ್ಯ ಕಾಯಪುಷ್ಟಿಗಳು ಕಡಮೆಯಾಗಿ ಅಶಕ್ತತೆಯೂ, ರೋಗಗಳೂ, ಇಂದ್ರಿಯಚಾಪಲ್ಯವೂ ಹೆಚ್ಚುವುವು. ಬಾಲ್ಯವಿವಾಹದಿಂದ ವಿದ್ಯಾಭಿವೃದ್ಧಿಗೆ ಹಾನಿ, ದಾರಿದ್ರ್ಯ ಮತ್ತೂ ಸಂಸಾರಕಷ್ಟಗಳು ಹೆಚ್ಚುವುವು. ಗಂಡನು ಎಷ್ಟೇ ವಿದ್ಯಾವಿವೇಕಗುಣಸಂಪನ್ನನೂ, ಧೈರ್ಯಶಾಲಿಯೂ ಆದ ದೇಶಹಿತೈಷಿಯಾಗಿದ್ದರೂ, ಹೆಂಡತಿಯು ಅನುಕೂಲಳಾಗದಿದ್ದರೆ ಅತಿಕಷ್ಟ; ವಿವಾಹವಿಚಾರಗಳಲ್ಲಂತೂ "ಎತ್ತು ತಿಟ್ಟಿಗೆ ಎಳೆಯಿತು, ಕೋಣ ನೀರಿಗೆ ಎಳೆಯಿತು" ಎಂಬಂತೆ ಈತನದೇ ಒಂದುದಾರಿ, ಆಕೆಯದು ಮತ್ತೊಂದು ದಾರಿಯಾಗುವುದು. ದೇಶಬಾಂಧವರನೇಕರು ಬಾಲ್ಯವಿವಾಹದ ಕೇಡುಗಳನ್ನು ನೋಡಿ, ಈ ದುಷ್ಟಪದ್ಧತಿಯನ್ನು ಹೇಗಾದರೂ ತಪ್ಪಿಸಬೇಕೆಂದು ನಿಶ್ಚಯಿಸಿ, ಉಪನ್ಯಾಸ ಪತ್ರಿಕಾಲೇಖನ ಮೊದಲಾದವುಗಳ ದ್ವಾರಾ ಬಾಲ್ಯವಿವಾಹದ ಅನರ್ಥಗಳನ್ನು ಮನಕರಗುವಂತೆ ಇತರರಿಗೆ ಬೋಧಿಸುವರು. ಆದರೆ ಮನೆಗೆಬಂದರೆ ಹೊರಗೆ ಹೇಳಿದ್ದೊಂದೂ ಸಾಗದು. ಹೆಂಗಸರು, ಒಪ್ಪರು ೭-೮ ವರ್ಷದ ಹುಡುಗಿ, ೧೬-೧೮ ವರ್ಷದ ಹುಡುಗ ಇವರಿಗೆ ಮದುವೆ ಏಕೆ? ಹೆಂಗಸರು ಸರಿಯಾದ ವಿದ್ಯಾವತಿಯರಲ್ಲ. ತಾವು ದೇಶದಲ್ಲಿ ಒಂದಂಶವೆಂದೂ, ತಮ್ಮ ಮನೆಯಲ್ಲಿ ತಾವು ಮಾಡುವ ಕೆಲಸದಿಂದ ದೇಶಕ್ಕೇ ಮೇಲುಕೇಡುಗಳಾಗುತ್ತಿವೆಯೆಂದೂ, ದೇಶಹಿತಕ್ಕಾಗಿ ಕೆಲಸಮಾಡುವುದು ತಮ್ಮ ಕರ್ತವ್ಯವೆಂದೂ ಗೊತ್ತಿಲ್ಲ. ಏನು ಮಾಡಿದರೆ ಏನಾಗುತ್ತೆಂಬ ಕಾರ್ಯಕಾರಣಗಳನ್ನು ಯೋಚಿಸಿಲ್ಲ. ಅಲ್ಲದೆ ಮಕ್ಕಳು ಯಾರು, ಭಗವದಂಶರಾದ ಶಾಶ್ವತಜೀವರಾದ ಅವರು ತಮ್ಮ ಮನೆಗಳಲ್ಲಿ ಏಕೆ ಹುಟ್ಟಿರುವರು, ಅವರೊಳಗೆ ಅಡಗಿರುವ ಭಗವಂತನ ಗುಣಗಳನ್ನು ಸರಿಯಾದ ವಿವಾಹದ ದ್ವಾರಾ ಹೇಗೆ ವ್ಯಕ್ತಗೊಳಿಸಬಹುದು? ಎಂಬ ಇವೇ ಮೊದಲಾದ ಅನೇಕ ಸಂಗತಿಗಳು ಮರೆತುಹೋಗಿವೆ. ಹೆಂಗಸು ಇವೆಲ್ಲವನ್ನೂ ತಕ್ಕಮಟ್ಟಿಗೆ ತಿಳಿದು ಕೆಲಸಮಾಡದೆ ಹೋದರೆ ದೇಶವು ಉತ್ತಮಸ್ಥಿತಿಗೆ ಬಾರದು. ಇವೆಲ್ಲವನ್ನೂ ತಿಳಿದು ವರ್ತಿಸಬೇಕಾದರೆ ಹೆಂಗಸರು ಒಳ್ಳೆಯ ವಿದ್ಯಾವತಿಯರಾಗಬೇಕು. ಇಲ್ಲದಿದ್ದರೆ ಮುಂದೆ ಗತಿಯೇ ಇಲ್ಲವು.

೨. ಪೂರ್ವದಲ್ಲಿದ್ದ ಮನು ವ್ಯಾಸ ನಾರದ ಮಾರ್ಕಂಡೇಯಾದಿ ಮಹರ್ಷಿಗಳೂ, ದೇವತೆಗಳೂ, ಭಗವಂತನೂ ಈಗ ಇಲ್ಲವೆ? ಅನೇಕ ಮಹರ್ಷಿಗಳೂ, ದೇವತೆಗಳೂ ಪೂರ್ವಕಾಲದಲ್ಲಿ ನಮ್ಮ ಮನೆಗಳಲ್ಲಿ ಹುಟ್ಟಿ, ತಂದೆತಾಯಿ, ಅಣ್ಣತಮ್ಮ, ಅಕ್ಕತಂಗಿ, ಬಂಧುವರ್ಗ, ಸ್ನೇಹಿತರು, ರಾಜರೇ ಮೊದಲಾದವರಾಗಿದ್ದುಕೊಂಡು ನಮ್ಮನ್ನು ತಿದ್ದಿ, ನಮಗೆ ತಿಳುವಳಿಕೆಯನ್ನು ಕೊಟ್ಟು, ನಮ್ಮನ್ನು ವೃದ್ಧಿಸ್ಥಿತಿಗೆ ತರಲಿಲ್ಲವೆ? ಈಗ ಅವರೆಲ್ಲಿ, ಆಗಿನಂತೆ ಈಗ ಏಕೆ ನಮ್ಮ ಮಧ್ಯೆ ಬಂದು ಹುಟ್ಟುತ್ತಿಲ್ಲ? ಅವರು ಬರುವುದಕ್ಕೆ ಅನುಕೂಲಿಸುವಂತಹ ದೇಹ ಮತ್ತು ಸಂದರ್ಭಗಳನ್ನು ಒದಗಿಸಿಕೊಡಬೇಕಾದರೆ ನಾವು ಎಂತಹ ದೇಹದಾರ್ಢ್ಯ ಮತ್ತು ಗುಣಶೀಲಸಂಪನ್ನರಾಗಿರಬೇಕು; ಸುತ್ತಲೂ ಇರುವ ಜನರ ವಿದ್ಯಾಭ್ಯಾಸ, ನಡೆನುಡಿ, ಶುಚಿತ್ವ, ಪಾರಮಾರ್ಥಿಕತೆ, ಪ್ರೀತಿ, ಪರೋಪಕಾರ, ಬುದ್ಧಿ, ಭೂತದಯಾ, ಪಶ್ಚಾತ್ತಾಪ ಮೊದಲಾದುವು ಹೇಗಿರಬೇಕು! ಇವೆಲ್ಲವನ್ನೂ ತಿಳಿದು, ತಕ್ಕಂತೆ ನಡೆದುಕೊಳ್ಳಲು ಹೆಂಗಸು ಎಷ್ಟು ವಿದ್ಯಾವಂತಳಾಗಬೇಕು!

೩. ದೇವಸ್ಥಾನಗಳು, ಪುರಾಣಗಳು, ಮಠಗಳು, ಸತ್ಸಂಪ್ರದಾಯಗಳು ಇವುಗಳೆಲ್ಲ ವೇಷಮಾತ್ರ ನಿಂತು ಒಳಗಿನ ಸಾರವು ನಶಿಸಿ ಹೋಗದೆ ಇಲ್ಲ! ಇವೆಲ್ಲವೂ ಇನ್ನೂ ಕೊಂಚಮಟ್ಟಿಗೆ ಹೆಂಗಸರಿಂದ ನಿಂತಿವೆ. ಆದರೆ ತಿಳುವಳಿಕೆ ಇಲ್ಲದೆ ಹೀಗೆಯೇ ಅಂಧಪರಂಪರೆಯಾಗಿ ಕುರುಡು ಭಕ್ತಿಯಲ್ಲಿಯೇ ಇರುವುದಾದರೆ ಈ ಕೊಂಚವು ಕೂಡ ಬಹುದಿನ ನಿಲ್ಲುವಂತಿಲ್ಲ. ಈಗಿನ ವಿದ್ಯಾಭ್ಯಾಸವು ಕುರುಡುಭಕ್ತಿಕವಾಗಿಲ್ಲ; ವಿಚಾರಪರತೆಯನ್ನು ಹೆಚ್ಚಿಸುತ್ತಿರುವುದು, ಏನುಮಾಡಿದರೂ ತಿಳಿದು ಮಾಡಬೇಕೆಂಬ ಆಶೆಯು ಹೆಚ್ಚುತ್ತಿರುವುದು. ಪ್ರತಿಯೊಂದಕ್ಕೂ ಕಾರಣವನ್ನೂ, ಸದುತ್ತರವನ್ನೂ ಹುಡುಕುತ್ತಿರುವರು. ಅಂತಹರಿಗೆ ಕಣ್ಣುಮುಚ್ಚಿಕೊಂಡು ನಂಬಿರೆಂದರೆ ಅವರು ನಂಬುವುದಿಲ್ಲ. ಯಾವುದೊಂದು ಸಂಗತಿಯನ್ನು ತೆಗೆದುಕೊಂಡರೂ ಅದರ ಉದ್ದೇಶ, ನಿಜಾಂಶ, ಪ್ರಯೋಜನ ಏತಕ್ಕಾಗಿ ಏರ್ಪಡಿಸಲ್ಪಟ್ಟಿತು ಎಂಬ ಸಂಗತಿಗಳನ್ನು ತಿಳಿಯಬೇಕು. ಕಾಲಕ್ರಮದಲ್ಲಿ ವಿಚಾರಶೂನ್ಯತೆಯಿಂದ ಬಂದಿರುವ ಅನೇಕ ಅನುಪಯುಕ್ತವಾದ ಕೆಲವುವೇಳೆ ಅನರ್ಥಹೇತುಗಳಾದ ವಿಷಯಗಳನ್ನು ಬಿಟ್ಟು ಸಾರವಾದ ಸಂಗತಿಗಳನ್ನು ಅರಿತು ಅವುಗಳನ್ನು ತಾವು ಆಚರಿಸುತ್ತ ಬರಬೇಕು. ಅಲ್ಲದೆ ಇತರರಿಗೆ ಬೋಧಿಸಲೂಬೇಕು. ಇದರಿಂದ ಹಿಂದೂಮತವೂ ಅದರಲ್ಲಿರುವ ಅನೇಕ ಅಮೌಲ್ಯವಾದ ಸಂಗತಿಗಳೂ ಉಳಿಯುವುವು. ಇಲ್ಲವಾದರೆ ಇಂತಹ ಶ್ರೇಷ್ಠವಾದ ರತ್ನಗಳು ಹಿಂದೆ ಇದ್ದವೆಂದು ಹೇಳಬೇಕಾಗುವುದು. ಇದೊಂದನ್ನು ನೋಡಿದರೂ ಹೆಂಗಸಿನ ವಿದ್ಯಾಭ್ಯಾಸದ ಪ್ರಯೋಜನವು ಕೊಂಚಮಟ್ಟಿಗಾದರೂ ಗೊತ್ತಾಗದೆ ಇರದು.

೪. ಮತವಿಚಾರ, ಮಕ್ಕಳ ಏಳಿಗೆ, ಆರೋಗ್ಯವಿಚಾರ, ವಿದ್ಯಾಭ್ಯಾಸ, ವಿವಾಹ, ದೇಶಾಂತರಸಂಚಾರ, ಕೈಗಾರಿಕೆಗಳ ಸ್ಥಿತಿ, ದೇಶದ ಬಡತನ, ಬಡವರಸ್ಥಿತಿ, ಪಂಚಮರೇ ಮೊದಲಾದ ಕೀಳುಜಾತಿಯವರ ಸ್ಥಿತಿ, ವರ್ಣಾಶ್ರಮಧರ್ಮಗಳ ಈಗಿನ ಸ್ಥಿತಿ, ಮತ್ತು ಅವುಗಳಿಂದ ಆಗುತ್ತಿರುವ ಪ್ರಯೋಜನ, ಮತ್ತೂ ಅನರ್ಥಗಳು, ಜಾತಿ ದೇಶಕುಲಭಾಷೆಗಳಿಗಿರುವ ಪರಸ್ಪರ ಸಂಬಂಧ ಈ ಮೊದಲಾದ ಸಂಗತಿಗಳು ಸಾಧಾರಣವಾಗಿ ಹೆಂಗಸರಿಗೆ ತಿಳಿಯದಿದ್ದರೆ ಜನಾಂಗದಲ್ಲಿ ಅರ್ಧಜನವೇ ನಮ್ಮ ಭಾಗಕ್ಕೆ ಇಲ್ಲದಂತಾಗುವುದು. ಅಷ್ಟೇ ಅಲ್ಲ ಉಳಿದ ಅರ್ಧಜನರು ಮಾಡುವ ಕೆಲಸಕ್ಕೆ ಅಡಿಗಡಿಗೂ ಅಡ್ಡವಾಗುವರು. ಆದುದರಿಂದ ಇದನ್ನೆಲ್ಲಾ ನೋಡಿದರೆ ನಮ್ಮ ದೇಶದ ಏಳಿಗೆಯು ಬಹುಮಟ್ಟಿಗೆ ಹೆಂಗಸರ ವಿದ್ಯಾಭ್ಯಾಸದಮೇಲೆ ನಿಂತಿರುವಂತಿದೆ. ಅದರಲ್ಲೂ ಈಗಿನ ಕಾಲಸ್ಥಿತಿಯನ್ನು ಅನುಸರಿಸಿ ಇಂಗ್ಲೀಷು ವಿದ್ಯಾಭ್ಯಾಸ ಕೂಡ ತಕ್ಕಮಟ್ಟಿಗೆ ಅವಶ್ಯಕವೆಂದು ಗೊತ್ತಾಗುವುದು.

ವಿಚಾರಪರರಾದ ಸಹೋದರ ಸಹೋದರಿಯರು ಈ ಮೊದಲಾದ ವಿಚಾರಗಳನ್ನೆಲ್ಲಾ ಚೆನ್ನಾಗಿ ಮನನಮಾಡಿ ವಿಮರ್ಶಿಸಿ, ಯುಕ್ತವೆಂದು ತೋರಿದಲ್ಲಿ ಈಗಲೇ ಹೆಂಗಸರ ಏಳಿಗೆಗಾಗಿ ಅವರ ವಿದ್ಯಾಭ್ಯಾಸವನ್ನು ಪ್ರಾರಂಭಿಸುವ ಅಥವಾ ಪ್ರಾರಂಭಿಸಿದ್ದರೆ ಹೆಚ್ಚು ಮುತುವರ್ಜಿಯಿಂದ ಜಾಗ್ರತೆಯಲ್ಲಿ ಅಭಿವೃದ್ಧಿಗೊಳಿಸುವ.

ಕೆ. ನರಹರಿಶಾಸ್ತ್ರಿ

ಸಂಘಸಂಸ್ಕರಣವನ್ನು ನಡೆದು ತೋರಿ, ಸಾಧಿಸುವುದು.

ಸದ್ಯಃಕಾಲಕ್ಕೆ ಹಿಂದೂಸಮಾಜದಲ್ಲಿ ಯಾವಯಾವ ಸಂಸ್ಕರಣಗಳಾಗಬೇಕೋ ಅವನ್ನು ಕುರಿತು ಲಿಖಿತಮೂಲಕವಾಗಿಯೂ ಸಭಾಮೂಲಕವಾಗಿಯೂ ಆಡಿ ತೋರಿಸತಕ್ಕವರು ಹಲವರಿದ್ದಾರೆ. ಹಾಗೆ ಆಡುವವರಲ್ಲೂ ನಡೆದು ತೋರಿಸುವ ನೈತಿಕಧೈರ್ಯವುಳ್ಳವರು ಬಹಳ ಕಡಿಮೆ. ಈ ಕಾರಣದಿಂದಲೇ ಸಂಘಸಂಸ್ಕರಣಕಾರ್ಯಗಳು ಮಂದಗತಿಗೆ ಬಿದ್ದಿರುತ್ತಿವೆ. ಪ್ರಕೃತದಲ್ಲಿ ಮದ್ರಾಸಿನಲ್ಲಿ ನಡೆದಿರುವ ಒಂದು ಭಿನ್ನಮತೀಯ ವಿವಾಹವು ಸಂಘಸಂಸ್ಕಾರಕರ ಉದ್ದೇಶಕ್ಕೆ ಚೈತನ್ಯವನ್ನು ಕೊಡತಕ್ಕದಾಗಿದೆ. ಅದೇನೆಂದರೆ—ಮದ್ರಾಸ್ ಹೈಕೋರ್ಟಿನಲ್ಲಿ ನ್ಯಾಯಾಧಿಪತಿಗಳಾಗಿರುವ ಮ॥ ಸದಾಶಿವಯ್ಯರ್‌ರವರ ದ್ವಿತೀಯ ಕುಮಾರರಾದ ರಾಮಕೃಷ್ಣಮೂರ್ತಿ ಅಯ್ಯರ್‌ರವರಿಗೆ ಅದೇ ಊರಿನ ಬ್ಯಾರಿಸ್ಟರ್ ಜೆ. ಕೃಷ್ಣರಾವ್‌ರವರ ಕುಮಾರಿಯಾದ ಸೌ॥ ಕಾಮಾಕ್ಷಮ್ಮನನ್ನು ಕೊಟ್ಟು ಕಳೆದ ತಾ॥ ೨೦ ರಲ್ಲಿ ವಿವಾಹವನ್ನು ನಡೆಯಿಸಿದರು. ಈ ಸಂಬಂಧದಲ್ಲಿ ವರನಕಡೆಯವರು ಸ್ಮಾರ್ತರಲ್ಲಿನ ದ್ರಾವಿಡಭೇದಕ್ಕೆ ಸೇರಿದವರು; ವಧುವಿನಕಡೆಯವರು ಮಾಧ್ವಮತಕ್ಕೆ ಸೇರಿದ ಕರ್ನಾಟಕ ಬ್ರಾಹ್ಮಣರು. ವಧುವು ವಿದ್ಯಾವತಿ, ಮತ್ತೂ ಪೂರ್ಣಯುವತಿ. ವರನೂ ಯೌವನಸ್ಥನು. ಮ॥ ಸದಾಶಿವಯ್ಯರ್‌ರವರು ತಮ್ಮ ಹಿರಿಯಕುಮಾರನ ವಿವಾಹವನ್ನು ನಡೆಯಿಸುವಾಗ್ಗೆ ಸ್ವಮತದಲ್ಲೇ ಬೇರೆ ಪಂಗಡದವರಲ್ಲಿ ಬಾಂಧವ್ಯವನ್ನು ಬೆಳೆಯಿಸಿದ್ದರು. ಈಗಲಾದರೋ ಬ್ರಾಹ್ಮಣವರ್ಗದಲ್ಲೇ ಬೇರೆ ಮತಕ್ಕೆ ಸೇರಿದವರಲ್ಲಿ ಬಾಂಧವ್ಯವನ್ನ ನಡೆಯಿಸಿದವರಾದರು. ಇದರಿಂದ ಸಂಘಸಂಸ್ಕರಣ ದೃಷ್ಟ್ಯಾ ಪ್ರೌಢಾವಿವಾಹ-ಶಾಖಾಂತರ ವಿವಾಹರೂಪ ಕಾರ್ಯಗಳೆರಡು ಜರುಗಿದಂತಾಯಿತು. ಇಂಥ ನೈತಿಕಧೈರ್ಯವನ್ನು ಬೀಗಂದಿರಿಬ್ಬರೂ ತೋರಿಸಿದುದು ಪ್ರಶಂಸಾರ್ಹವಾಗಿದೆ. ಈ ನೂತನ ವಧೂವರರು ಚಿರಾಯುಗಳಾಗಿ ಪುತ್ರಪೌತ್ರಪ್ರಪೌತ್ರಾದಿ ಸೌಭಾಗ್ಯವನ್ನು ಪಡೆದು ಸುಖರಲಿ.

ನಗರನಿರ್ಮಾಣ ವಿಷಯಕೋಪನ್ಯಾಸಗಳು.

ಸೀಮೆಯಿಂದ ಬಂದಿರುವ ಪ್ರೊಫೆಸರ್ ಗೆಡ್ಡೀಸ್‌ರವರು ಕಳೆದ ತಾ॥ ೧೮ ರಿಂದ ಇದುವರೆಗೂ ಶನಿವಾರ ಭಾನುವಾರಗಳ ಹೊರತು ಪ್ರತಿದಿನವು ಬೆಳಗಿನ ೭॥ ಗಂಟೆಯಿಂದ ೧೧ ಗಂಟೆಯವರೆಗೂ ಮಧ್ಯಾಹ್ನ ೪ ಗಂಟೆಯಿಂದ ೬॥ಗಂಟೆಯವರೆಗೂ ನಗರನಿರ್ಮಾಣ ವಿಷಯಕವಾಗಿ ಪ್ರಸಂಗೋಚಿತವಾದ ಚಿತ್ರಪ್ರದರ್ಶನಗಳನ್ನು ಮಾಡುತ್ತ ಮದ್ರಾಸ್‌ಪಟ್ಟಣದಲ್ಲಿ ಉಪನ್ಯಾಸಗಳನ್ನು ಮಾಡುತ್ತಿರುವರು. ಅವರ ಪ್ರತಿಯೊಂದು ಉಪನ್ಯಾಸಗಳೂ ಶ್ರೋತೃಗಳಿಗೆ ತಿಳಿಯಬೇಕಾಗಿದ್ದ ಅನೇಕಸಂಗತಿಗಳನ್ನು ಗೊತ್ತುಮಾಡಿಕೊಡುವುವಾಗಿರುವುವು. ಈಪಂಡಿತರು ನಗರನಿರ್ಮಾಣ ಶಾಸ್ತ್ರದಲ್ಲಿ ವಿಶೇಷವಾದಪಾಂಡಿತ್ಯವನ್ನು ಪಡೆದವರು. ಪ್ರಪಂಚವನ್ನೆಲ್ಲಾ ಸಂಚರಿಸಿ ಅಲ್ಲಲ್ಲಿನ ಮುಖ್ಯನಗರಗಳಲ್ಲಿನ ವಿಶೇಷಗಳನ್ನೂ, ನ್ಯೂನಾತಿರೇಕಗಳನ್ನೂ ತಿಳಿದು ಬಂದಿರತಕ್ಕವರ ಸೀಮೆಯಲ್ಲಿ ಅತ್ಯಂತ ಶ್ರೇಷ್ಠವಾದ ಹಲವುಕಟ್ಟಡಗಳನ್ನು ಕಟ್ಟಿಸಿರತಕ್ಕವರು. ಇವರು ಡುಂಡಿ ಪ್ರೌಢವಿದ್ಯಾಲಯದಲ್ಲಿ ಓಷಧಿ ಶಾಸ್ತ್ರಜ್ಞಪಂಡಿತರಾಗಿದ್ದವರು. ಎಡಿಂಬರೋ ವಿದ್ಯಾಪೀಠದಲ್ಲಿನವಿದ್ಯಾರ್ಥಿಗಳಿಗೆ ಪರಮ ಪ್ರೀತ್ಯಾಸ್ಪದರು. ಮದ್ರಾಸ್ ಗೌರ್ನರವರು ಇವರನ್ನು ಬರಮಾಡಿದರು. ಇವರ ಚಿತ್ರಪ್ರದರ್ಶನಕ್ಕೆ ಅವಶ್ಯಕವಾದ ಸಾಮಗ್ರಿಗಳು ತುಂಬಿ ಬರುತ್ತಿದ್ದ ಹಡಗನ್ನು ಎಮ್ಡೆನ್ನು ಮುಳುಗಿಸಿಬಿಟ್ಟುದರಿಂದ ಮರಳಿ ಸೀಮೆಗೆ ಬರೆದು ಅಲ್ಲಿನ ಉದಾರಿಗಳ ಸಾಹಾಯ್ಯವಾಗಿ ಬಂದ ಸಾಮಗ್ರಿಗಳನ್ನು ಇಟ್ಟುಕೊಂಡು ಇವರು ಪ್ರದರ್ಶನವನ್ನು ಉಪನ್ಯಾಸವನ್ನೂ ಉಪನ್ಯಾಸವನೂ ಮಾಡುತ್ತಿದ್ದಾರೆ. ಇವರ ಉಪನ್ಯಾಸಗಳನ್ನು ಕೇಳಲು ನಮ್ಮ ಮೈಸೂರು ಬೆಂಗಳೂರಿನಿಂದ ಕೆಲಕೆಲರು ನಮ್ಮ ಸರ್ಕಾರದವರಿಂದಲೂ ಕಳುಹಲ್ಪಟ್ಟಿದ್ದಾರೆ. ಅವರ ಮೂಲಕ ನಮ್ಮ ದೇಶದ ಪುರಗ್ರಾಮ ಸಂಸ್ಕರಣಗಳಿಗೆ ದಾರಿಯಾದರೆ ಸಂತೋಷ.

ಇವರ ಉಪನ್ಯಾಸವು ಮದ್ರಾಸಿನ ಇಂಜನಿಯರಿಂಗ್ ಕಲಾಶಾಲೆಯಲ್ಲಿ ತಾ॥ ೮ ನೆ ಸಾಯಂಕಾಲದಲ್ಲಿ ಆರಂಭವಾಯಿತು. ಮದ್ರಾಸು ಪುರಪ್ರಮುಖರನೇಕರೂ ಆ ಆಧಿಪತ್ಯದ ಹಲವು ಲೋಕಲ್‌ಬೋರ್ಡು ಮ್ಯುನ್ಸಿಪಾಲಿಟಿಗಳ ಪ್ರತಿನಿಧಿಗಳೂ ಮೈಸೂರು ಮೊದಲಾದ ಇತರ ಕಡೆಯ ಕೆಲವರೂ ನೆರೆದಿದ್ದರು. ಆದಿನ ಪ್ರೊ॥ ಗೆಡ್ಡೀಸ್‌ರವರು ಚಿತ್ರಪ್ರದರ್ಶನ ಪೂರ್ವಕವಾಗಿ ಮಾಡಿದ ಉಪನ್ಯಾಸದಲ್ಲಿ—ಬೊಂಬಾಯಿಪಟ್ಟಣದಲ್ಲಿ ೮-೧೧ ಅಂತಸ್ತುಗಳುಳ್ಳ ಹಲವು ಮನೆಗಳನ್ನು ಕಟ್ಟಿದ್ದಾರೆ. ಅಷ್ಟು ಎತ್ತರವಾದ ಮನೆಗಳನ್ನು ಕಟ್ಟಲು ಅವಕಾಶವನ್ನು ಕೊಡುವುದು ಅಲ್ಲಿನ ಪುರಪಾಲಕಸಂಘದವರ ತಪ್ಪು. ಅಷ್ಟು ಅಂತಸ್ತುಗಳ ಮನೆಗಳನ್ನು ಕಟ್ಟಗೊಡಿಸಕೂಡದೆಂದು ಈಗ ಎಡಿಂಬರೋ ಪಟ್ಟಣದ ಪುರಪಾಲಕಸಂಘದವರು ಶಾಸಿಸಿದ್ದಾರೆ, ಎಂದು ಹೇಳಿದರು. ಮತ್ತೂ ಎಡಿಂಬರೋಪಟ್ಟಣದಲ್ಲಿರುವ ದೊಡ್ಡದೊಡ್ಡ ವೈದ್ಯಾಲಯ, ದೇವಾಲಯ ವಿದ್ಯಾಲಯ ಮೊದಲಾದುವುಗಳ ಚಿತ್ರವನ್ನು ಪ್ರದರ್ಶಿಸಿ ಅಲ್ಲಿ ಜನಸಮ್ಮರ್ದವು ಹೆಚ್ಚಾಗಿರುವುದರಿಂದ ಅನಾರೋಗ್ಯಕರವಾಗಿರುವ ಪುರಭಾಗವನ್ನು ತೋರಿಸಿ ಆ ಪಟ್ಟಣದ ವಿಷಯಕವಾಗಿ ಬಹಳ ವಿವರಣಗಳನ್ನು ನಿರೂಪಿಸಿದರು.

ಮರುದಿನ ಬೆಳಗ್ಗೆ ಅವರು ಸೆನೆಟ್ ಭವನದಲ್ಲಿ ಉಪನ್ಯಾಸಮಾಡಿದಾಗ ತೋರಿಸಿದ ಚಿತ್ರಪ್ರದರ್ಶನಗಳಿಂದ ಲಂಡನ್ ಪಟ್ಟಣಕ್ಕಿಂತಲೂ ಪ್ಯಾರಿಸ್‌ಪಟ್ಟಣದಲ್ಲಿನ ಬೀದಿಗಳು ಡೊಂಕುಡಿಂಕಿಲ್ಲದೆ ಒಂದು ಕಡೆಯಿಂದ ಮತ್ತೊಂದು ತುದಿಯವರೆಗೆ ನೇರವಾಗಿರುವುವೆಂತಲೂ, ಪ್ಯಾರಿಸ್‌ಪಟ್ಟಣದ ಸುತ್ತಲೂ-ದೊಡ್ಡದೊಡ್ಡ ಕಾಡುಗಳು ಇರುವುವೆಂತಲೂ, ಪ್ಯಾರಿಸ್ಸಿನಲ್ಲಿರುವಷ್ಟು ದೊಡ್ಡದಾದ ಮಾರಕಟ್ಟು ಪ್ರಪಂಚದಲ್ಲೆಲ್ಲೂ ಇಲ್ಲವೆಂತಲೂ ಗೊತ್ತಾಯಿತು. ಪ್ಯಾರಿಸ್ಸಿನಲ್ಲಿ ಬಡವರು ವಾಸಮಾಡುವ ಸ್ಥಳಗಳೆಲ್ಲವೂ ಜನರಿಂದ ನಿಬಿಡವಾಗಿ ಶುದ್ಧವಾದ ಗಾಳಿಯ ಸಂಚಾರಕ್ಕೆ ಅವಕಾಶವಿಲ್ಲದೆ ರೋಗಗಳ ನೆಲೆಮನೆಯಾಗಿರುವುವೆಂದು ಉಪನ್ಯಾಸಕರು ಹೇಳಿದರು. ಜರ್ಮನಿಯಲ್ಲಿ ಬಡವರಿಗೆ ಬಹಳ ಅನುಕೂಲಮಾಡಿಕೊಟ್ಟಿರುವರೆಂದೂ, ಅವರಿಗೆ ಆರೋಗ್ಯಕರವಾದ ಸ್ಥಳಗಳಲ್ಲಿ ಶುಚಿಯಾದ ಮನೆಗಳನ್ನು ಕಟ್ಟಿಸಿಕೊಟ್ಟಿರುವರೆಂದೂ ಅದುಕಾರಣವೇ ಆದೇಶಿಯರು ಒಳ್ಳೆ ದೃಢಗಾತ್ರರಾಗಿರುವರೆಂದೂ, ಅಲ್ಲಿನಂಥ ಸೌಕರ್ಯಗಳು ಇಂಗ್ಲಾಂಡಿನಲ್ಲಾಗಲೀ ಸ್ಕಾಟ್ಲಾಂಡಿನಲ್ಲಾಗಲೀ ಐರ್ಲಾಂಡಿನಲ್ಲಾಗಲೀ ಫ್ರಾನ್ಸಿನಲ್ಲಾಗಲೀ ರಷ್ಯಾದಲ್ಲಿಯಾಗಲೀ ಇರುವುದಿಲ್ಲವೆಂದೂ ಅದುಕಾರಣವೇ ಜರ್ಮನರು ಅಷ್ಟೊಂದು ದೇಶದ ಶತ್ರುಗಳೊಡನೆ ಹೋರಾಡಲು ಸಮರ್ಥರಾಗಿದ್ದಾರೆಂದೂ, ಆರೋಗ್ಯವಾಗಿರುವುದಕ್ಕೆ ಶುಚಿಯಾದ ಮನೆಗಳು ಮುಖ್ಯವಾಗಿರಬೇಕೆಂದೂ, ಅದುಕಾರಣವೇ ಜರ್ಮನರು ಬಡಬಗ್ಗರಿಗೆ ಆರೋಗ್ಯಾಶ್ರಯವಾದ ಮನೆಗಳನ್ನು ಕಟ್ಟಿಸಿಕೊಡುವುದರ ಕಡೆಗೆ ಮೊದಲು ಗಮನಿಸುವರೆಂದೂ ಇಂಗ್ಲಾಂಡಿನಲ್ಲಿ ಗಣಿಗಳೊಳಗೆ ಕೆಲಸಮಾಡುವ ಕೂಲಿಕಾರರ ಸ್ಥಿತಿಯು ಬಹುಶೋಚನೀಯವಾಗಿರುವುದೆಂದೂ, ಭರತಖಂಡದಲ್ಲಿ ಹೊಸ ಪದ್ಧತಿಯ ಮೇರೆಗೆ ಪಟ್ಟಣಗಳನ್ನು ನಿರ್ಮಿಸುವಾಗ್ಗೆ ಇಂಗ್ಲಾಂಡಿನ ಪಟ್ಟಣಗಳ ರೀತಿಯನ್ನು ಅನುಸರಿಸಬಾರದೆಂದೂ ಈ ವಿಷಯದಲ್ಲಿ ಜರ್ಮನರು ಸ್ತೋತ್ರಾರ್ಹವಾದ ಅಭಿವೃದ್ಧಿಯನ್ನು ಮಾಡಿರುವರೆಂಬುದು ನಿರ್ವಿವಾದವಾದ ಸಂಗತಿಯೆಂದೂ ದೇಶದ ಇತರ ಪುರೋವೃದ್ಧಿಗಳಿಗಾಗಿ ಪ್ರಯತ್ನಿಸತಕ್ಕವರು ಮೊಟ್ಟಮೊದಲು ಸ್ಥಳದ ಆರೋಗ್ಯವೃದ್ಧಿಯ ಕಡೆಗೆ ಗಮನಿಸಬೇಕೆಂದೂ ಅಂಥ ಆರೋಗ್ಯವಿರಬೇಕಾದರೆ ಬೀದಿಗಳೂ ಮನೆಗಳೂ ತಕ್ಕ ರೀತಿಯಿಂದ ನಿರ್ಮಿಸಲ್ಪಟ್ಟಿರಬೇಕೆಂದೂ ಹೇಳಿದರು.

ಆದಿನ ಸಾಯಂಕಾಲ ಉಪನ್ಯಾಸಮಾಡುವಾಗ್ಗೆ ಮದ್ರಾಸ್ ಪಟ್ಟಣದ ವಿಷಯವನ್ನು ಕುರಿತು ಪ್ರಸ್ತಾಪಿಸಿ, ಸಮುದ್ರತೀರದಲ್ಲಿನ ವಿಹಾರಾದಿಗಳಮೂಲಕ ಅಲ್ಲಿ ಜನರಿಗುಂಟಾಗುವ ಆರೋಗ್ಯಸಹಾಯಕ್ಕೆ ಸರ್ಕಾರದವರು ಪ್ರತಿಬಂಧಕವನ್ನು ಯಾವರೀತಿಯಿಂದಲೂ ಕಲ್ಪಿಸದೆ ಇರುವುದರಿಂದ ಅವರು ಕೃತಜ್ಞತಾಪಾತ್ರರಾಗಿರುವರೆಂದೂ ಲೋಹಮಾರ್ಗಗಳ ಪ್ರಸಾರದಿಂದ ದೇಶದ ನಗರಗಳ ಸೌಂದರ್ಯವು ಕೆಟ್ಟುಹೋಗುತ್ತಿರುವುದೆಂದೂ ಅದುಕಾರಣ ಅವುಗಳ ಪ್ರಸಾರಕಾರ್ಯವು ನಗರನಿರ್ಮಾಣಶಾಸನಕ್ಕೆ ಬದ್ಧವಾಗಿರುವಂತೆ ಮಾಡುವುದು ಅವಶ್ಯಕವೆಂದೂ ಮದ್ರಾಸುಪಟ್ಟಣಪಾಲಕಸಂಘದವರು ಬಡಬಗ್ಗರನ್ನು ಅನಾದರಣೆ ಮಾಡುತ್ತಿರುವುದು ಅನ್ಯಾಯವೆಂದೂ ಹೇಳಿದರು.

ರಜಸ್ವಲಾನಂತರ ವಿವಾಹಶಾಸನ.

ಮದ್ರಾಸಿನ ನಿಯಮನಿರ್ಮಾಣಸಭೆಯ ಮುಂದೆ ಆ॥ ವಿ. ಎಸ್. ಶ್ರೀನಿವಾಸಶಾಸ್ತ್ರಿಯವರು ರಜಸ್ವಲಾನಂತರ ನಡೆದ ವಿವಾಹವನ್ನು ಶಾಸನಬದ್ಧವನ್ನಾಗಿಸುವ ವಿಷಯಕವಾಗಿ ತಂದಿರುವ ಮಸೂದೆಯನ್ನು ಕುರಿತು ಈಗ ಮದ್ರಾಸುಆಧಿಪತ್ಯದೊಳಗೆ ಬಹಳ ವಾದಾನುವಾದಗಳು ನಡೆಯುತ್ತಲಿವೆ. ಇದಕ್ಕೆ ಸರ್ಕಾರದವರು ಕೈ ಹಾಕಕೂಡದೆಂದೂ, ಇದು ಮತವಿಷಯವೆಂದೂ, ಇದು ಶಾಸನವಾಗಿ ಬಿಟ್ಟರೆ ಬ್ರಾಹ್ಮಣ್ಯಕ್ಕೆ ಹಾನಿಬರುವುದೆಂದೂ ಒಂದು ಪಕ್ಷದವರು ಖಂಡಿಸುತ್ತಿದ್ದಾರೆ. ಇದು ಅವಶ್ಯಕವಾದುದೆಂದೂ, ಇದರಿಂದ ದೇಶೋದ್ಧಾರವಾಗುವುದೆಂದೂ, ಬಾಲ್ಯವಿವಾಹ ಮೂಲಕವಾದ ಅನರ್ಥಗಳೆಲ್ಲಾ ತಪ್ಪುವುದಕ್ಕೆ ಇದರಿಂದ ದಾರಿಯಾಗುವುದೆಂದೂ, ಪ್ರೌಢಾವಿವಾಹಕಾಂಕ್ಷಿಗಳಿಗೆ ಇದು ಪ್ರೋದ್ಬಲಕಾರಿಯಾಗುವುದೆಂದೂ ಒಂದು ಪಕ್ಷದವರು ಸಮರ್ಥನ ಮಾಡುತ್ತಿದ್ದಾರೆ. ಇದರ ವಿಷಯದಲ್ಲಿ ಹಿಂದೆ ಮದ್ರಾಸ್ ಹೈಕೋರ್ಟು ನ್ಯಾಯಾಧಿಪತಿಗಳಾಗಿದ್ದು ವಿಶ್ರಾಂತಿಯನ್ನು ಪಡೆದಿರುವ ಸರ್ ಎ. ಸುಬ್ರಹ್ಮಣ್ಯಯ್ಯರ್ ಕೆ. ಸಿ. ಐ. ಇ ರವರು ಪತ್ರಿಕಾಮೂಲಕ ತಮ್ಮ ಅಭಿಪ್ರಾಯವನ್ನು ಕೊಟ್ಟಿರುವುದು ಪ್ರಭುತ್ವದವರಿಗೂ ಪ್ರಜೆಗಳಿಗೂ ಸಹ ಗಮನಾರ್ಹವಾಗಿದೆ:—ಆ ಲೇಖನದ ಮುಖ್ಯಾಶಯವೇನೆಂದರೆ—

ಹಿಂದೂಗಳಲ್ಲಿ ರಜಸ್ವಲಾನಂತರ ವಿವಾಹವು ಸಲ್ಲತಕ್ಕದೆ? ಅಲ್ಲವೆ? ಎಂಬ ವಿಚಾರವೇ ಅನವಶ್ಯಕವಾದುದು. ರಜಸ್ವಲಾನಂತರ ವಿವಾಹಗಳು ಹಿಂದೂಲಾಪ್ರಕಾರ ಸಲ್ಲತಕ್ಕವುಗಳಾಗಿವೆಯೆಂದು ಹೇಳುವುದಕ್ಕೆ ಈಗಿರುವ ನ್ಯಾಯಶಾಸ್ತ್ರನಿಬಂಧನಗಳಲ್ಲೇ ಅವಕಾಶವಿರುವುದು. ಹಿಂದೂಗಳಲ್ಲಿ ರಜಸ್ವಲಾನಂತರ ವಿವಾಹಗಳು ಬ್ರಾಹ್ಮಣೇತರರಲ್ಲಿ ೧೦೦ ಕ್ಕೆ ೯೯ ರಂತೆ ನಡೆಯುತ್ತಿರುವುವು. ಅಂಥ ವಿವಾಹಗಳು ಹಿಂದೂ ಲಾ ಪ್ರಕಾರ ಸಲ್ಲತಕ್ಕವಲ್ಲವೆಂದು ಹೇಳುವುದಾದರೆ ಅವೆಲ್ಲಾ ಅಶಾಸ್ತ್ರೀಯವೆಂದೇ ಹೇಳಬೇಕಾದೀತು. ಅವನ್ನು ಅಶಾಸ್ತ್ರೀಯವೆಂದು ಯಾರೂ ಹೇಳಲಿಕ್ಕಾಗುವುದಿಲ್ಲ; ಹೇಳಿಯೂ ಇಲ್ಲ. ಬ್ರಾಹ್ಮಣೇತರ ಶಾಖೆಗಳಲ್ಲಿ ಪ್ರಾಚೀನಕಾಲದಿಂದಲೂ ರಜಸ್ವಲಾನಂತರ ವಿವಾಹಗಳು ನಡೆದೇ ಬರುತ್ತಿವೆ. ಅಂಥವರ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳನ್ನು ಜಾರಜಾತರೆಂದು ಯಾರುತಾನೇ ಹೇಳಬಹುದು? ಅವು ನ್ಯಾಯವಾದ ಸಂತಾನಗಳೇ ಎಂದು ಅಂಗೀಕರಿಸಲ್ಪಟ್ಟವೆ. ರಜಸ್ವಲಾನಂತರ ವಿವಾಹವು ಬ್ರಾಹ್ಮಣೇತರರಲ್ಲಿ ಆಗಬಹುದು; ಬ್ರಾಹ್ಮಣರಲ್ಲಿ ಮಾತ್ರ ಕೂಡದು ಎಂದು ಹಿಂದೂ ಲಾ ದಲ್ಲಿ ಎಲ್ಲಿಯೂ ಕೂಡ ವಿವರಿಸಲ್ಪಟ್ಟಿಲ್ಲವೆಂದು ನನಗೆ ನಂಬುಗೆಯಿದೆ. ಅದುಕಾರಣ, ಬ್ರಾಹ್ಮಣೇತರರಲ್ಲಿ ರಜಸ್ವಲಾನಂತರ ವಿವಾಹಗಳು ನಡೆಯುವಂತೆಯೇ ಬ್ರಾಹ್ಮಣರಲ್ಲಿಯೂ ಕೂಡ ಶಾಸನಬದ್ಧವಾಗಿ ನಡೆಯಬಹುದೆಂದೇ ನನಗೆ ತೋರುತ್ತದೆ. ರಜಸ್ವಲಾತ್ಪೂರ್ವ ನಡೆಯುವ ವಿವಾಹವು ಮತರೀತ್ಯಾ ಗೌರವಾರ್ಹವಾದುದೆಂಬ ಒಂದು ಮೂಢವಿಶ್ವಾಸವು ಮಾತ್ರ ಇದೆ. ಇದು ಬ್ರಾಹ್ಮಣೇತರರಲ್ಲಿಲ್ಲ. ಸ್ಮೃತಿಗಳಲ್ಲು ಕೂಡ ರಜಸ್ವಲಾತ್ಪೂರ್ವ ವಿವಾಹಕ್ಕೆ ಸ್ವಲ್ಪ ಗೌರವವು ಹೇಳಲ್ಪಟ್ಟಿರುವುದೇ ಹೊರತು ಅದರ ನಿಷೇಧವು ಎಲ್ಲೂ ಹೇಳಲ್ಪಟ್ಟಿಲ್ಲ. ಪೂರ್ವಕಾಲದಲ್ಲಿ ಕನ್ಯಾಸೌಖ್ಯವನ್ನೇ ಮುಖ್ಯವಾಗೆಣಿಸುವ ತಾಯ್ತಂದೆಗಳು ಚಿಕ್ಕಂದಿನಲ್ಲೇತಮ್ಮ ಹೆಣ್ಣುಮಕ್ಕಳನ್ನು ಯೋಗ್ಯ ವರನಿಗೆ ಕೊಟ್ಟು ಮದುವೆಮಾಡುವ ಅಧಿಕಾರವನ್ನು ಹೊಂದಿದ್ದರು. ರೋಮನರು ಮೊದಲಾದ ಆರ್ಯಸಂತತಿಯವರಲ್ಲಿದ್ದಂತೆ ಕುಟುಂಬದ ಯಜಮಾನರಿಗೆ ಗೃಹಕೃತ್ಯದ ವಿಷಯದಲ್ಲಿ ಕೆಲ ಅಧಿಕಾರಗಳು ಹಿಂದೂಗಳಲ್ಲೂ ಅನುಸರಿಸಿ ಬಂದಿರುವುವು. ಕನ್ಯಾದಾನವೂ ಅಂಥ ಅಧಿಕಾರಕ್ಕೆ ಒಳಪಟ್ಟುದಾಗಿದ್ದಿತು. ಆದರೆ ಈ ಅಧಿಕಾರ ನಿರ್ವರ್ತನದಲ್ಲಿ ಕನ್ಯಾಸೌಖ್ಯವು ಉಪೇಕ್ಷಿಸಲ್ಪಡುತ್ತಿರಲಿಲ್ಲ. ಕನ್ಯೆಯರನ್ನು ರಜಸ್ವಲಾತ್ಪೂರ್ವದಲ್ಲಿ ಯೋಗ್ಯನಾದ ವರನಿಗೆ ಕೊಟ್ಟು ಮದುವೆಮಾಡುವ ಅಧಿಕಾರವು ತಾಯ್ತಂದೆಗಳಿಗಿದ್ದುದು ಮಾತ್ರವಲ್ಲದೆ, ರಜಸ್ವಲಾನಂತರವೂ ಕೂಡ ಸ್ತ್ರೀಯು ಯುಕ್ತಾಯುಕ್ತ ಜ್ಞಾನವಿಲ್ಲದೆ ಅಯೋಗ್ಯನಾದ ವರನನ್ನು ವರಿಸಿಬಿಟ್ಟು ಹೋದಾಳೆಂಬ ಯೋಚನೆಯಿಂದ ರಜಸ್ವಲಾನಂತರ ೩ ವರ್ಷಗಳವರೆಗೂ ಯೋಗ್ಯ ವರನನ್ನು ತಡಕಿ ತಾಯ್ತಂದೆಗಳು ಮದುವೆ ಮಾಡಿಕೊಡಬಹುದಾಗಿರುವುದು. ಸ್ಮೃತಿಗಳು ಹೀಗೆ ಅದಕ್ಕೆ ಅವಕಾಶವನ್ನು ಕೊಟ್ಟಿರುವುದನ್ನೂ, ರಜಸ್ವಲಾತ್ಪೂರ್ವವೇ ವಿವಾಹಮಾಡಿದರೂ ಅಯೋಗ್ಯನಿಗೆಕೊಟ್ಟು ಮದುವೆಮಾಡಿದರೆ ಅದರಿಂದತಾಯ್ತಂದೆಗಳಿಗೆ ಪಾಪವೇ ಹೊರತು ಪುಣ್ಯವಿಲ್ಲವೆಂದು ಸ್ಮೃತಿಗಳು ಹೇಳಿರುವುದನ್ನೂ ನೋಡಿದರೆ ಮುಖ್ಯವಾಗಿ ವಿವಾಹವಿಷಯದಲ್ಲಿ ಕನ್ಯೆಯ ಸೌಖ್ಯವೇ ಗಮನೀಯವಾದುದೆಂಬುದು ಸ್ಪಷ್ಟವಾಗಿದೆ. ತಾಯ್ತಂದೆಗಳು ಹೆಣ್ಣುಮಕ್ಕಳ ಮದುವೆಯನ್ನು ಮಾಡಬೇಕಾದರೆ ಅವುಗಳ ಆನುಕೂಲ್ಯವನ್ನೇ ಪ್ರಧಾನವಾಗಿ ಎಣಿಸಬೇಕೆಂಬುದು ಸಿದ್ಧವಾಗಿರುವುದು. ಧರ್ಮಶಾಸ್ತ್ರಕಾರರು ಕನ್ಯಾಸೌಖ್ಯವನ್ನೇ ಮುಖ್ಯವಾಗಿಟ್ಟುಕೊಂಡು, ಅದಕ್ಕೆ ವ್ಯತಿರಿಕ್ತವಾಗಿ ನಡೆಯುವ ತಾಯ್ತಂದೆಗಳು ನಿರಂಕುಶಾಧಿಕಾರವನ್ನು ಹೆಮ್ಮಕ್ಕಳ ವಿಷಯದಲ್ಲಿ ನಡೆಯಿಸದೆ ಇರುವಂತೆ ಮಾಡಬೇಕೆಂಬುದ್ದೇಶದಿಂದ ಅದಕ್ಕೆ ತಕ್ಕ ನಿಬಂಧನಗಳನ್ನೇರ್ಪಡಿಸಿದರು. ಆ ಶಾಸ್ತ್ರವಚನಗಳ ಸದುದ್ದೇಶವನ್ನು ಅರಿತ ಪೂರ್ವಿಕರು ಕನ್ಯೆಯರ ಕ್ಷೇಮವನ್ನೇ ಮುಖ್ಯ ಲಕ್ಷ್ಯವನ್ನಾಗಿಟ್ಟುಕೊಂಡು, ಅನುಕೂಲವಾದರೆ ರಜಸ್ವಲಾತ್ಪೂರ್ವವೇನೆಯೋ, ಅನುಕೂಲವಾಗದಿದ್ದರೆ ಪರದಲ್ಲಿಯೋ ವಿವಾಹವನ್ನು ಮಾಡುತ್ತ ಇದ್ದರು. ಬರಬರುತ್ತ ಹಿಂದೂಜನವರ್ಗದಲ್ಲಿ ಸಂಸ್ಕೃತವಾಙ್ಮಯಾಭ್ಯಾಸವು ಕ್ಷೀಣಿಸಿತು. ಸ್ಥಿತಿಗತಿಯು ವ್ಯತ್ಯಾಸಗೊಂಡಿತು. ಉದರಂಭರಣಕ್ಕಾಗಿ ನಾನಾಉದ್ಯೋಗಗಳನ್ನು ಹುಡುಕಿಕೊಳ್ಳಬೇಕಾಯಿತು. ಅನೇಕರು ಸಂಸ್ಕೃತಭಾಷೆಯನ್ನು ಮರೆತೇಬಿಟ್ಟರು. ಎಲ್ಲೋ ಕೆಲವರು ಮಾತ್ರ ಅದನ್ನಭ್ಯಸಿಸುತ್ತ ಬಂದರು. ಅವರು ತಾವೇ ಶಾಸ್ತ್ರವೇತ್ತರೂ ಶಾಸನಕರ್ತರೂ ಆಗಿ, ಹೊಸಹೊಸ ಪದ್ಧತಿಗಳನ್ನು ಸ್ಥಾಪಿಸುತ್ತ ಬಂದರು. ಇವರಲ್ಲಿ ಪ್ರಾಚೀನಸಂಘ ನಿರ್ಮಾತೃಗಳಿಗಿದ್ದಂಥ ಉದಾರ ಭಾವಗಳಿರಲಿಲ್ಲ. ಈ ನೂತನ ಶಾಸ್ತ್ರಕಾರರೇ ಹಲವು ನೂತನ ಕಲ್ಪನೆಗಳನ್ನು ಶಾಸ್ತ್ರಗಳಲ್ಲಿ ಸೇರಿಸಿ ಬರೆದಿಟ್ಟರು. ರಜಸ್ವಲಾತ್ಪೂರ್ವ ವಿವಾಹ ಮಾಡಿದರೆ ಪುಣ್ಯವೆಂದೂ, ತದನಂತರ ಮಾಡಿದರೆ ಪಾಪವೆಂದೂ ಇವರೇ ಬರೆದಿಟ್ಟರು. ಇದರಿಂದ ಪ್ರಾಚೀನಶಾಸನಕರ್ತೃರ ಉದ್ದೇಶಕ್ಕೆ ಸಂಪೂರ್ಣ ಭಂಗವು ಬಂದುಹೋಯಿತು. ಜನವರ್ಗದಲ್ಲಿ ಸಂಸ್ಕೃತಜ್ಞಾನವಿಲ್ಲದವರೇ ಹೆಚ್ಚಾಗಿದ್ದುದರಿಂದ ಇವರು ಹೇಳಿದ ವಚನವನ್ನೇ ಶಿರಸಾವಹಿಸುತ್ತ ಬಂದರು. ಆಗಿನಿಂದ ಪ್ರಜೆಗಳಲ್ಲಿ ರಜಸ್ವಲಾನಂತರವಿವಾಹವು ಪಾಪಕಾರ್ಯವೆಂಬ ಭಾವವು ಬಲಿಯುವುದಕ್ಕಾರಂಭಿಸಿತು. ಹೆಮ್ಮಕ್ಕಳು ಮದುವೆಯಾದ ಬಳಿಕ ಅವರ ಸೌಖ್ಯಾದಿಗಳು ಹೇಗಿದ್ದರೂ ಇರಲಿ, ಮುಖ್ಯವಾಗಿ ರಜಸ್ವಲೆಯರಾಗುವುದಕ್ಕೆ ಮುಂಚೆ ಅವರನ್ನು ವಿವಾಹಿತರನ್ನು ಮಾಡುವುದೇ ತಮಗೆ ಮುಖ್ಯವಾದ ಪುಣ್ಯಕಾರ್ಯವೆಂದು ಪ್ರಜೆಗಳು ಎಣಿಸುವಂತಾಯಿತು. ಈ ಆಚಾರವು ಬ್ರಾಹ್ಮಣರಲ್ಲಿ ಪ್ರಬಲಿಸಲು, ಉಳಿದವರೂ ಅದನ್ನೇ ಅನುಸರಿಸಿದರು. ಇದರಿಂದ ತಾಯ್ತಂದೆಗಳು ಹೆಮ್ಮಕ್ಕಳ ವಿವಾಹವಿಷಯದಲ್ಲಿ ನಿರಂಕುಶಾಧಿಕಾರವನ್ನು ನಡೆಯಿಸುವಂತೆ ಈ ನವೀನಶಾಸ್ತ್ರವಚನಗಳು ದಾರಿಮಾಡಿ ಕೊಟ್ಟಹಾಗಾಯಿತು. ಹೀಗೆ ಎಷ್ಟೋ ಶತಮಾನಕಾಲದಿಂದ ನಡೆದು ಈಗಿನ ಪ್ರಕೃತಸ್ಥಿತಿಯು ಸಮಾಜದಲ್ಲಿ ಘಾತುಕವಾಗಿ ಪರಿಣಮಿಸಿ ಕುಂತಿದೆ. ಈ ಪರಿಣಾಮದ ಚಾರಿತ್ರವು ನಮ್ಮವರಿಗೆ ತಿಳಿಯದೆ ಇರುವುದರಿಂದಲೇ ಅವರು ರಜಸ್ವಲಾನಂತರ ವಿವಾಹಶಾಸನವನ್ನು ಪ್ರತಿಭಟಿಸುವುದಕ್ಕೆ ಮುಂದುವರಿಯುತ್ತಾರೆ. ಈಗಿನ ಶಾಸನವು ಅನುಮೋದಿತವಾದರೆ ಹೊಸದಾದ ನಿಬಂಧನೆ ಯಾವುದೂ ಉಂಟಾದಂತೆ ಆಗುವುದೇನೂ ಇಲ್ಲ. ರಜಸ್ವಲಾನಂತರ ವಿವಾಹವು ಸಿದ್ಧವೋ ಅಸಿದ್ಧವೋ ಎಂಬುದಾಗಿ ಸ್ವಲ್ಪಮಟ್ಟಿಗಿರುವ ಅನುಮಾನವು ಮಾತ್ರ ಕಳೆದುಹೋಗುವುದು. ಇಂಥ ಅನುಮಾನ ನಿವೃತ್ತಿಯಾದ ಮಾತ್ರದಿಂದಲೇ ರಜಸ್ವಲಾತ್ಪೂರ್ವವೇ ವಿವಾಹಮಾಡಬೇಕೆಂಬ ತಾಯ್ತಂದೆಗಳಿಗೆ ಈ ಶಾಸನದಿಂದ ಪ್ರತಿಬಂಧಕವೇನಿರುವುದು? ಆದರೆ ಸ್ವಲಾಭವನ್ನೇ ಮುಖ್ಯವಾಗೆಣಿಸದೆ, ಕನ್ಯಾಸೌಖ್ಯವನ್ನೇ ಪ್ರಧಾನವಾಗೆಣಿಸಿ, ಆಕೆಯು ರಜಸ್ವಲೆಯಾಗುವವರೆಗೂ ವಿವಾಹವನ್ನು ನಿಲ್ಲಿಸಿರಬೇಕೆಂದು ಅಪೇಕ್ಷಿಸುವ ತಾಯ್ತಂದೆಗಳಿಗೆ ಮಾತ್ರ ಈ ಶಾಸನದಿಂದ ಧೈರ್ಯವುಂಟಾಗುವುದು. ಈಗಲಾದರೋ ಎಲ್ಲಿ ನಮ್ಮ ಹೆಣ್ಣುಮಗುವು ರಜಸ್ವಲೆಯಾಗಿಬಿಡುವಳೋ! ಅಷ್ಟರೊಳಗೇ ಮದುವೆಮಾಡಿಬಿಡಬೇಕಲ್ಲಾ! ಎಂಬ ಭಯದಿಂದ ತಾಯ್ತಂದೆಗಳು ವರನ ತಾಯ್ತಂದೆಗಳ ದಾಸಾನುದಾಸರಾಗಬೇಕಾಗುತ್ತಿದೆ. ಗಂಡಿನ ತಾಯ್ತಂದೆಗಳೋ ಹೆಣ್ಣಿನ ಮನೆಯವರನ್ನು ಹಿಂಡಿಹಿಂಡಿಮಾಡಿಬಿಡುತ್ತಾರೆ. ಈಗಿನ ಶಾಸನವು ಅಂಗೀಕೃತವಾದರೆ, ಕನ್ಯಾದಾತೃಗಳಿಗೆ ಈ ಹಿಂಸೆಯು ಬಹಳಮಟ್ಟಿಗೆ ತಪ್ಪಿಹೋಗುತ್ತದೆ. ವರಶುಲ್ಕದುರಾಚಾರವು ಈಗ ಎಲ್ಲೆಲ್ಲೂ ಮಿತಿಮೀರಿ ಹರಡಿ ಕನ್ಯಾಪಿತೃಗಳಿಗೆ ಪ್ರಾಣಗಂಡವಾಗಿ ಪರಿಣಮಿಸುತ್ತಿದೆ. ರಜಸ್ವಲಾತ್ಪೂರ್ವವೇ ಹೆಮ್ಮಕ್ಕಳಿಗೆ ವಿವಾಹ ಮಾಡದಿದ್ದರೆ ಜಾತಿಯವರು ನಮ್ಮನ್ನು ಬಹಿಷ್ಕರಿಸುವರೆಂಬ ಭಯದಿಂದ ಕನ್ಯಾಪಿತೃಗಳು ಋಣಾದಿಗಳ ಬಂಧಕ್ಕೆ ಬಲಿಯಾಗುತ್ತಿದ್ದಾರೆ. ಪ್ರಾಚೀನಧರ್ಮಶಾಸ್ತ್ರಗಳಲ್ಲಿ ಶುಲ್ಕಗ್ರಹಣವು ನಿಷಿದ್ಧವೆಂದೂ ಶುಲ್ಕಗ್ರಹಣ ಪೂರ್ವಕವಾಗಿ ನಡೆದ ಮದುವೆಗಳು ಆಸುರವಿವಾಹವೆಂದೂ ನಿಷೇಧಿಸಲ್ಪಟ್ಟಿವೆ. ಶಾಸ್ತ್ರಾಭಿಮಾನಿಗಳೆಂದು ಹೇಳಿಕೊಳ್ಳುವ ಇವರುಗಳು ಆ ವರಶುಲ್ಕಗಳನ್ನು ಹೇಗೆ ಆಮೋದಿಸುತ್ತಾರೆ? ಅದುಕಾರಣ, ಪ್ರಭುತ್ವದವರು ಕೇವಲ ಅನುಮಾನನಿವೃತ್ತಿಗೆ ಮಾತ್ರ ಸಾಧಕವಾದ ಈ ಶಾಸನವನ್ನು ಅಂಗೀಕರಿಸುವಲ್ಲಿ ಸಂದೇಹಪಡಬಾರದು.

ಬ್ರಾಹ್ಮಣರಲ್ಲಿರುವ ರಜಸ್ವಲಾತ್ಪೂರ್ವ ವಿವಾಹಪದ್ಧತಿಯಿಂದ ರಜಸ್ವಲಾನಂತರ ವಿವಾಹಗಳು ದೂಷ್ಯವಾದುವುಗಳೆಂದು ಎಷ್ಟುಮಾತ್ರಕ್ಕೂ ತಿಳಿಯಕೂಡದು. ಹಾಗೆ ತಿಳಿಯುವುದು ಮನುವಿನ ನಿರ್ಧಾರಣೆಗೆ ವ್ಯತಿರಿಕ್ತವಾಗುವುದಲ್ಲದೆ, ಸ್ತ್ರೀಸ್ವಾತಂತ್ರ್ಯಕ್ಕೂ ಭಂಗವನ್ನು ತರುವುದಾಗುವುದು. ಸ್ತ್ರೀಯರಲ್ಲಿ ಕೆಲರು ವಿವಾಹವನ್ನು ಮಾಡಿಕೊಳ್ಳದೆಯೇ ಆಜೀವಾಂತವಾಗಿ ಇರಬೇಕೆಂಬ ಸಂಕಲ್ಪವುಳ್ಳವರಾಗಬಹುದು. ರಜಸ್ವಲೆಯರಾಗಿ ಅವರಿಗೆ ಸ್ವತಂತ್ರಬುದ್ಧಿ ಬರುವವರೆಗೂ ಮದುವೆಮಾಡದೆ ಇದ್ದರೆ ಅವರ ಸಂಕಲ್ಪದಂತೆ ನಡೆಯಿಸಲು ಅನುಕೂಲವಾಗುವುದು. ರಜಸ್ವಲಾತ್ಪೂರ್ವವೇ ವಿವಾಹಮಾಡಿಬಿಟ್ಟರೆ ಆ ಸಂಕಲ್ಪಕ್ಕೆ ಅವಕಾಶವೇ ಇಲ್ಲದೆಹೋಗಿ, ಪ್ರತಿಯೊಬ್ಬಸ್ತ್ರೀಯೂ ವಿವಾಹಿತೆಯಾಗಿಯೇ ತೀರಬೇಕೆಂಬ ನಿರ್ಬಂಧಕ್ಕೆ ಅವರನ್ನು ಒಳಪಡಿಸಿದಂತಾಗುವುದು. ಅಂಥ ಪದ್ಧತಿಯು ಸದಾಚಾರವೆನಿಸಿಕೊಳ್ಳುವುದಿಲ್ಲ. ನಾನು ಇದುವರೆಗೆ ಎಷ್ಟುತೆರದ ವಿವಾಹಗಳನ್ನೂ ಎಲ್ಲತರಗತಿಯವರಲ್ಲೂ ಅವು ರಜಸ್ವಲಾತ್ಪೂರ್ವವೇ ನಡೆದಿರಲಿ ಅನಂತರ ನಡೆದಿರಲಿ ಅವೆಲ್ಲಾ ಹಿಂದೂಲಾಕ್ಕೆ ಒಳಪಟ್ಟ ವಿವಾಹಬಂಧಗಳೆಂತಲೇ ಹೇಳಿರುತ್ತೇನೆ. ಈ ವಿವಾಹಗಳನ್ನು ಕುರಿತು ಈಗಿನ ಶಾಸನ ಪ್ರತಿಸ್ಪರ್ಧಿಗಳ ಅಭಿಪ್ರಾಯವೇನೆಂಬುದು ತಿಳಿಯಲಿಲ್ಲ. ಬ್ರಾಹ್ಮಣೇತರರಲ್ಲಿ ನಡೆಯುವ ವಿವಾಹಗಳು ಪೂರ್ವಪದ್ಧತಿಯಂತೆ ನಡೆದುಬರುತ್ತಿವೆಯೋ ಹೊರತು ಹಿಂದೂ ಲಾ ನಿಬಂಧನೆಯು ಬೇರೆ ನಡೆಯುವುದಿಲ್ಲವೆಂಬುದಾಗಿ, ಆಂಗ್ಲಪ್ರಭುತ್ವವು ಈ ದೇಶದಲ್ಲಿ ನೆಲೆಗೊಂಡಾರಭ್ಯ ಎಲ್ಲೂ ಯಾವಾಗಲೂ ತಿಳಿಯಲ್ಪಟ್ಟಿರುವುದಿಲ್ಲ. ಇತರರಲ್ಲಿ ಮಾತ್ರ ರಜಸ್ವಲಾನಂತರ ವಿವಾಹವಾಗಬಹುದು; ಬ್ರಾಹ್ಮಣರಲ್ಲಿ ಮಾತ್ರ ಕೂಡದು ಎಂದು ಯಾವ ಶಾಸ್ತ್ರದಲ್ಲೂ ವಿಧಿಸಲ್ಪಟ್ಟಿರುವುದಿಲ್ಲ. ಆದರೆ ಕನ್ಯಾಶಬ್ದಕ್ಕೆ ರಜಸ್ವಲಾತ್ಪೂರ್ವ ವಯಸ್ಕತೆಯೆಂಬ ಅರ್ಥವೆಂದು ಒಪ್ಪಿಕೊಂಡರೂ ದ್ವಿಜ (ಬ್ರಾಹ್ಮಣ-ಕ್ಷತ್ರಿಯ-ವೈಶ್ಯ) ರಲ್ಲೆಲ್ಲಾ ರಜಸ್ವಲಾನಂತರ ವಿವಾಹವು ಬದ್ಧವಲ್ಲದೆ ಹೋಗಿರಬೇಕು. ಆದರೆ ಕ್ಷತ್ರಿಯರಲ್ಲೂ ವೈಶ್ಯರಲ್ಲೂ ರಜಸ್ವಲಾವಿವಾಹಗಳು ನಡೆದು ಅವು ವಿಧಿಬದ್ಧವೆಂದು ಅಂಗೀಕರಿಸಲ್ಪಟ್ಟೇ ಇವೆ. ಅದುಕಾರಣ, ಇಂಥ ಮುಖ್ಯವಿಷಯದಲ್ಲಿ ಶಾಸನವನ್ನೇರ್ಪಡಿಸುವಾಗ ಅಸಂಬದ್ಧವಾದ ಪ್ರತಿವಾದಗಳನ್ನು ಪ್ರಭುತ್ವದವರು ಪರಿಗಣಿಸುವುದು ಯುಕ್ತವಾದುದಲ್ಲ

ಬೊಂಬಾಯಿಪಟ್ಟಣಕ್ಕೆ ಶ್ರೀಮನ್ ವೈಸ್ರಾಯರು ದಯಮಾಡಿಸಿದ್ದುದು.

ಶ್ರೀಮನ್ ವೈಸರಾಯರವರು ಕಳೆದ ತಾ॥ ೨೩ ರ ಬೆಳಗ್ಗೆ ಬೊಂಬಾಯಿಪಟ್ಟಣಕ್ಕೆ ದಯಮಾಡಿಸಿದರು. ಬೊಂಬಾಯಿ ಗೌರ್ನರು ತಮ್ಮ ಕಾರ್ಯನಿರ್ವಾಹಕ ಸಂಘದ ಸಭ್ಯರೊಡನೆಯೂ, ಸೇನಾಶಾಖಾಧ್ಯಕ್ಷರು, ಪೋಲೀಸು ಶಾಖಾಧ್ಯಕ್ಷರು ಮೊದಲಾದವರೊಡನೆಯೂ, ವಿಕ್ಟೋರಿಯಾಟರ್ಮಿನಸ್ ಎಂಬ ನಿಲ್ದಾಣದಲ್ಲಿ ಕಾದಿದ್ದು ಇದಿರ್ಗೊಂಡರು. ಬಹಿರ್ಭಾಗದಲ್ಲಿ ಸಾವಿರಾರು ಪುರಜನರು ದೊಡ್ಡ ಗುಂಪಾಗಿ ಸೇರಿ ನಿಂತಿದ್ದು ವೈಸ್‌ರಾಯರ ದರ್ಶನವನ್ನು ಮಾಡಿ ಆನಂದಿಸಿದರು. ವೈಸ್‌ರಾಯರು ಬೊಂಬಾಯಿ ಗೌರ್ನರೊಡನೆ ಮೋಟಾರುಬಂಡಿಯಲ್ಲಿ ಕುಳಿತು ಅವರ ಬಂಗಲೆಗೆ ದಯಮಾಡಿಸಿದರು. ಅಂದಿನ ಬೆಳಗ್ಗೆ ಹೈದರಾಬಾದ್ ನೈಜಾಂರವರೂ ಬೊಂಬಾಯಿ ಪಟ್ಟಣವನ್ನು ಸೇರಿದ್ದರು. ಅದಕ್ಕೆ ಹಿಂದಿನದಿನ ವೈಸ್‌ರಾಯರ ೨ ನೆ ಕುಮಾರರಾದ ಆನರಬಲ್ ಇ. ಹಾರ್ಡಿಂಜ್‌ರವರು ಸೀಮೆಯಿಂದ ಬೊಂಬಾಯಿಪಟ್ಟಣಕ್ಕೆ ಬಂದಿಳಿದಿದ್ದರು. ತಾ॥ ೨೩ ರಲ್ಲಿ ಫಲಾಹಾರಾನಂತರ ವೈಸ್‌ರಾಯರು ಶ್ರೀ ನೈಜಾಂರವರಿಗೂ ಶ್ರೀ ಆಗಾಖಾನರವರಿಗೂ ದರ್ಶನವನ್ನಿತ್ತು ಸಂಭಾಷಿಸಿದರು. ಆ ದಿನ ಸಾಯಂಕಾಲ ೬॥ ಗಂಟೆಗೆ ಶ್ರೀಮನ್ ವೈಸ್ರಾಯರು ಬೊಂಬಾಯಿ ಗೌರ್ನರ್ ದಂಪತಿಗಳೊಡನೆಯೂ, ಎ. ಹಾರ್ಡಿಂಜ್‌ರವರೊಡನೆಯೂ, ಸರ್. ವಾಲಂಟೈನ್ ಚಿರೋಲ್‌ರವರೊಡನೆಯೂ ಕೂಡಿ ಲೇಡಿ ಹಾರ್ಡಿಂಜ್‌ರ ಹೆಸರಿನ ಯುದ್ಧ ವೈದ್ಯಾಲಯವನ್ನು ಪರಾಮರಿಸಿದರು. ಅಲ್ಲಿ ಬೊಂಬಾಯಿ ಆಧಿಪತ್ಯದ ಸಾಮ್ರಾಜ್ಯಯುದ್ಧನಿಧಿಯ ಸಂಘದವರೊಡನೆಯೂ, ಸ್ತ್ರೀಶಾಖಾಸಂಘದವರೊಡನೆಯೂ ಸಂಭಾಷಿಸಿ, ಬಳಿಕ ಅಲ್ಲಿದ್ದ ರೋಗಿಗಳನ್ನೆಲ್ಲಾ ಪರಾಮರಿಸಿ, ಕೆಲ

ರೊಡನೆ ಮಾತನಾಡಿ ಅಲ್ಲಿನ ಏರ್ಪಾಟನ್ನೆಲ್ಲಾ ಕಂಡು ಸಂತೋಷಿಸಿದರು. ಮರುದಿನ ಪ್ರಾತಃಕಾಲ ಕೊಲಾಬಾದಲ್ಲಿರುವ ಆಫ್ಗನ್ ಮೆಮೋರಿಯಲ್ ದೇವಾಲಯದ ಸಮೀಪದಲ್ಲೇ ನಡೆದ ಸೇನಾವಿನ್ಯಾಸವನ್ನವಲೋಕಿಸಿ, ಅಲ್ಲಿಂದ ಸೈನಿಕ ವೈದ್ಯಾಲಯಕ್ಕೆ ಹೋಗಿ ಪರಾಮರಿಸಿದರು. ಆ ಮಧ್ಯಾಹ್ನದಲ್ಲಿ ವೈಸ್ರಾಯರು ವರ್ಸೋವಾ ಗ್ರಾಮದಲ್ಲಿರುವ ಶ್ರೀಯುತ ದಾದಾಭಾಯಿ ನವರೋಜಿಯವರ ಮಂದಿರಕ್ಕೆ ಹೋಗಿ ಸಂದರ್ಶಿಸಿ, ಅವರೊಡನೆ ಸ್ವಲ್ಪಹೊತ್ತು ಸಂಭಾಷಿಸಿ ಬಂದರು. ಅಲ್ಲಿಗೆ ಹೋಗುವುದಕ್ಕೆ ಮುಂಚೆ ಪೆರೋಲಿನಲ್ಲಿರುವ ತಾತಾರವರ ಹೈಡ್ರೋಎಲೆಕ್ಟ್ರಿಕ್ ಪವರ್ ಸ್ಟೇಷನನ್ನು ಅವಲೋಕಿಸಿದರು. ಈ ಕಾರ್ಯಾಲಯದಲ್ಲಿ ಮಾಡಿರುವ ಏರ್ಪಾಟಿನಿಂದ ೫೦ ಸಾವಿರ ಕುದುರೆಯ ಬಲವುಳ್ಳ ವಿದ್ಯುಚ್ಛಕ್ತಿಯು ಇಲ್ಲಿ ಉತ್ಪನ್ನವಾಗಿ ಬೊಂಬಾಯಿಗೆ ಸಾಗಿಸಲ್ಪಡುವುದು. ಈಗ ತಂತಿಗಳು ಹಾಕಲ್ಪಡುತ್ತಿವೆ. ತಾ|| ೨೫ ರ ಬೆಳಗ್ಗೆ ವೈಸ್ರಾಯರು ಅಲೆಗ್ಸಾಂಡ್ರಾ ಹಾಕಿನ ಬಳಿಗೆ ಹೋಗಿ ಅದನ್ನೆಲ್ಲಾ ಅವಲೋಕಿಸಿ ಅಪೋಲೋ ಬಂದರಿನಲ್ಲಿ ತಮ್ಮ ಪುತ್ರರ ಸಮೇತ ಹಡಗನ್ನು ಹತ್ತಿ ಕರಾಚಿಯ ಕಡೆಗೆ ದಯಮಾಡಿಸಿದರು. ಗೌರ್ನರ್ ದಂಪತಿಗಳು, ಸೈನಿಕ ನಾವಿಕಾಧಿಪತಿಗಳು, ಹೈದರಾಬಾದು ನೈಜಾಂರವರು ಮೊದಲಾದನೇಕರು ಸಮುದ್ರತೀರಕ್ಕೆ ಹೋಗಿದ್ದು ಸಾಗಗಳುಹಿ ಬಂದರು.

ಮೈಸೂರ್ ಸ್ಟಾರ್.

ಸನ್ ೧೯೧೫ ನೆಯ ಜನವರಿ ತಾ|| ೩೧ ನೆಯ ಭಾನುವಾರ.

ಗ್ರಾಮಾಂತರಗಳಿಗೆ ಸಿಹಿನೀರಿನ ಬಾವಿ.

ರಾಜ್ಯದ ಸಂಪತ್ತಿನ ಮುಕ್ಕಾಲು ಭಾಗಕ್ಕೆಲ್ಲಾ ಗ್ರಾಮಾಂತರದ ಜನರೇ ಆಶ್ರಯಭೂತರು. ಆದರೆ ದೇಶದ ಸೌಖ್ಯದ ಪಾಲಿಗೆ ಮಾತ್ರ ಅವರು ದೂರೀಭೂತರು. ರಾಜಧಾನಿಯ ಪ್ರಜೆಗಳು ಅನುಭವಿಸುವಂಥ ರಾಜಮಾರ್ಗಗಳು, ವಿದ್ಯುಚ್ಛಕ್ತಿದೀಪದ ಬೆಳಕು, ಶೋಧಿಸಿದ ನೀರಿನ ಪಾನ, ಮೊದಲಾದುವುಗಳೆಲ್ಲಾ ಅವರಿಗೆ ಸ್ವಪ್ನೇಪಿದುರ್ಲಭವು. ಇಂಥ ವಿಶೇಷ ಸೌಖ್ಯಗಳನ್ನು ಅನುಭವಿಸುವ ಹಣದ ಬರಹವು ಅವರಿಗಿಲ್ಲವಾದರೂ ಶುಚಿಯಾದ ಕುಡಿಯುವ ನೀರಿಗಾದರೂ ಅವರಿಗೆ ಕೊರತೆಯಿಲ್ಲದಂತೆ ಮಾಡಲ್ಪಡಬಾರದೆ? ಮಳೆಯು ಚೆನ್ನಾಗಿ ನಡೆಯಿಸಿದ ವರ್ಷದಲ್ಲೂ ಬೇಸಗೆಕಾಲದಲ್ಲಿ ಕೆಲಗ್ರಾಮಗಳಲ್ಲಿ ನೀರಿನ ದುರ್ಭಿಕ್ಷವು ಇದ್ದೇಇರುತ್ತದೆ. ಮಳೆಯು ಕಡಿಮೆಯಾದ ವರ್ಷಗಳಲ್ಲಂತೂ ದನಕರುಗಳೂ ಮತ್ತೂ ಮನುಷ್ಯರೂ ನೀರಿಗಾಗಿ ಪಡುವ ಶ್ರಮವು ವಾಚಾಮಗೋಚರವಾಗಿರುತ್ತದೆ. ನೀರಿನ ಕೊರತೆಯಿಂದಲೇ ಮೈಸೂರು ದೇಶದ ಹಲವು ಗ್ರಾಮಗಳಲ್ಲಿ ಬೇಸಗೆಕಾಲದೊಳಗೆ ವಾಂತಿಭೇದಿ ರೋಗವು ಭೀಕರವಾದ ಹಾವಳಿಯನ್ನು ಮಾಡುತ್ತದೆ. ಕೊಚ್ಚೆಯಾದ ನೀರನ್ನು ಸೇವಿಸಿ ಪ್ರಾಣಿಗಳು ನಾನಾ ತರವಾದ ರೋಗಗಳಿಗೆ ತುತ್ತಾಗುತ್ತವೆ. ಈ ವಿಷಯದಲ್ಲಿನ ದೂರು ಬಹುಕಾಲದಿಂದಲೂ ನಮ್ಮ ಸಂಸ್ಥಾನದಲ್ಲಿದ್ದೇ ಇದೆ. ಸರ್ಕಾರದವ[illegible] ಈ ವಿಷಯದಲ್ಲಿ ಮಾಡುತ್ತ ಬಂದ ಏರ್ಪಾಡುಗಳು ಕಾಗದ[illegible]ಲ್ಲಿ ರಂಜಿತವಾಗಿದ್ದಂತೆ ಕಾರ್ಯರೂಪದಲ್ಲಿ ಫಲಕಾರಿಯಾಗಿಲ್ಲ. ಆದರೆ ಈಗ ತಕ್ಕೇರ್ಪಾಟೊಂದನ್ನು ನಮ್ಮ ಗೌರ್ನಮೆಂಟಿನವರು ಮಾಡುವುದರಲ್ಲಿದ್ದಾರೆಂದು ಅರಿತು ಸಂತೋಷಿಸುತ್ತೇವೆ.

ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ನೀರಿನ ಬರವು ಬಹಳ. ಅಲ್ಲಿನ ಗ್ರಾಮಾಂತರಗಳಲ್ಲಿ ಬಾವಿಯನ್ನು ತೆಗೆಸುವುದಕ್ಕಾಗಿ ತಕ್ಕಷ್ಟು ಹಣವನ್ನು ವೆಚ್ಚಮಾಡಲು ಡಿಸ್ಟ್ರಿಕ್ಟ್ ಬೋರ್ಡಿಗೆ ಶಕ್ತಿಯಿಲ್ಲವಾದುದರಿಂದ ವರ್ಷ ೧ಕ್ಕೆ ೨೦ ಸಾವಿರ ರೂ.ನಂತೆ ೫ ವರ್ಷಗಳ ಕಾಲ ಸರ್ಕಾರದಿಂದ ಕೊಡಿಸಿಕೊಡಬೇಕೆಂದು ಆ ಡಿಸ್ಟ್ರಿಕ್ಟು ಡೆ|| ಕಮಿಷನರು ಗೌರ್ನಮೆಂಟಿಗೆ ೧೯೧೨ ನೆಯ ವರ್ಷದಲ್ಲಿ ಬರೆದಿದ್ದರು. ಮೈಸೂರು ದೇಶದ ಎಲ್ಲಾ ಡಿಸ್ಟ್ರಿಕ್ಟುಗಳ ಗ್ರಾಮಗಳಲ್ಲೂ ತಕ್ಕ ಕುಡಿಯುವ ನೀರಿನ ಬಾವಿಗಳನ್ನು ತೋಡಿಸುವುದಕ್ಕೆ ಪ್ರತಿವರ್ಷವೂ ೧ ಲಕ್ಷ ರೂ.ಗಳನ್ನು ಸರ್ಕಾರದಿಂದ ಕೊಡಿಸುತ್ತಾ ಬರಬೇಕೆಂದು ಸ್ಯಾನಿಟರಿ ಕಮಿಷನರವರು ಈಗ್ಗೆ ೧ ವರ್ಷದಲ್ಲಿ ಬರೆದಿದ್ದರು. ಇದೇ ಏರ್ಪಾಟಿನ ವಿಷಯದಲ್ಲಿ ಎಲ್ಲ ಡಿ|| ಕಮಿಷನರುಗಳೂ ತಕ್ಕ ಸೂಚನೆಗಳನ್ನು ಕೊಟ್ಟಿದ್ದರು. ಆ ಸೂಚನೆಗಳನ್ನೆಲ್ಲಾ ನೋಡುವಲ್ಲಿ ಹೊಸದಾಗಿ ಗ್ರಾಮಾಂತರಗಳಲ್ಲಿ ಈಗ ೩ ಸಾವಿರ ಬಾವಿಗಳನ್ನು ತೆಗೆಯಿಸಬೇಕಾಗಿದೆಯೆಂತಲೂ, ಅದಕ್ಕಾಗಿ ೧೧ ಲಕ್ಷ ರೂ.ಗಳು ವೆಚ್ಚವಾಗಬಹುದೆಂತಲೂ ಗೊತ್ತಾಗಿರುತ್ತದೆ. ಇದುವರೆಗೆ ಇದ್ದ ಪದ್ಧತಿಯಮೇರೆ ಡಿಸ್ಟ್ರಿಕ್ಟ್ ಬೋರ್ಡಿನವರು ಮಾಡಿಸುತ್ತಿದ್ದ ಕೆಲಸದಲ್ಲಿ ಕಲ್ಲು ಕೆಲಸದ ವೆಚ್ಚವನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಕೊಡುತ್ತಿದ್ದರು. ಮಣ್ಣಿನ ಕೆಲಸವನ್ನು ಆಯಾ ಗ್ರಾಮಸ್ಥರು ಮಾಡಿಕೊಳ್ಳುತ್ತಿದ್ದರು. ಹೀಗೆ ಮಾಡಿದರೂ ಎಲ್ಲ ಡಿಸ್ಟ್ರಿಕ್ಟು ಬೋರ್ಡುಗಳಿಂದಲೂ ವರ್ಷಕ್ಕೆ ೪೭ ಸಾವಿರ ರೂ.ಗಳಿಗಿಂತ ಹೆಚ್ಚಾಗಿ ಈ ಕೆಲಸಕ್ಕೆ ಉಪಯೋಗಿಸಲಾಗುತ್ತಿರಲಿಲ್ಲ. ಹೆಚ್ಚಾಗಿ ಆಗಬೇಕಾಗಿರುವ ಕೆಲಸಕ್ಕೆ ಇಷ್ಟುಮಟ್ಟಿನ ಸಹಾಯವು ಯಾವಮೂಲೆಗೆಂಬುದು ಕಂಡೇಇದೆ. ಅದರಿಂದಲೇ ಗ್ರಾಮಾಂತರಗಳಲ್ಲಿನ ನೀರಿನ ಕೊರತೆಗೆ ಪರಿಹಾರವೇ ಇಲ್ಲದೆ ಹೋಗಿದ್ದಿತು.

ಅದಕ್ಕಾಗಿ ಈಗ ಗೌರ್ನಮೆಂಟಿನವರು ಮಾಡುವುದಕ್ಕಿರುವ ಏರ್ಪಾಟೇನೆಂದರೆ—ಅವರು ಈಗ ಗ್ರಾಮಗಳ ಅಭಿವೃದ್ಧಿಕಾರ್ಯಕ್ಕೆಂದು ವರ್ಷ ೧ಕ್ಕೆ ೨ ಲಕ್ಷ ರೂ.ಗಳನ್ನು ವಿನಿಯೋಗಿಸುವವರಾಗಿದ್ದಾರಷ್ಟೆ. ಆದರಲ್ಲಿ ಅರ್ಧಲಕ್ಷ ರೂ.ಗಳನ್ನು ಹೊಸ ಬಾವಿಗಳ ಕೆಲಸಕ್ಕೂ ಹಳೆಯ ಬಾವಿಗಳ ಜೀರ್ಣೋದ್ಧಾರದ ಕೆಲಸಕ್ಕೂ ಉಪಯೋಗಿಸುವರು. ಮತ್ತು ಇದುವರೆಗಿನ ಪದ್ಧತಿಯಂತೆ ಸ್ವಲ್ಪ ಹೆಚ್ಚುಕಡಿಮೆ ಡಿಸ್ಟ್ರಿಕ್ಟ್ ಫಂಡಿನಿಂದಲೂ ಅರ್ಧ ಲಕ್ಷ ರೂ. ದೊರೆಯುವುದು. ಇದರ ಜತೆಗೆ ಸರ್ಕಾರದವರು ವರ್ಷ ೧ಕ್ಕೆ ೧ ಲಕ್ಷ ರೂ.ನಂತೆ ಸ್ಪೆಷಲ್ ಗ್ರಾಂಟನ್ನು ಸರ್ಕಾರದ ಬೊಕ್ಕಸದಿಂದ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಕಂಟ್ರಿಬ್ಯೂಷನ್ ರೂಪದಿಂದ ಕೊಡುವರು. ಹೀಗೆ ೨ ಲಕ್ಷ ರೂ.ಗಳು ವರ್ಷೇವರ್ಷೇ ಧನರೂಪವಾಗಿ ಒದಗುವುದು. ಗ್ರಾಮಸ್ಥರು ಇದಕ್ಕೆ ಸಮನಾದ ಹಣವನ್ನೋ ಅಥವಾ ಅದಕ್ಕೆ ತಕ್ಕಷ್ಟು ಕೂಲಿಯನ್ನೋ ಒದಗಿಸಿಕೊಡಬೇಕು.

ಯಾವುದೊಂದು ಗ್ರಾಮದಲ್ಲಿ ಯಾವ ಬಾವಿಯನ್ನು ತೆಗೆಯಿಸಬೇಕಾದರೂ ಅದಕ್ಕೆ ತಗಲುವುದೆಂದು ಮೊದಲೇ ಲೆಕ್ಕಾಚಾರ ಮಾಡಿ ಗೊತ್ತಾದ ಹಣದಲ್ಲಿ ಅರ್ಧಭಾಗದ ವೆಚ್ಚವನ್ನು (ಧನರೂಪವಾಗಿಯೋ ಅಥವಾ ಕೂಲಿಮಾಡುವುದರ ಮೂಲಕವಾಗಿಯೋ) ಒದಗಿಸಿಕೊಟ್ಟಲ್ಲದೆ ಯಾವ ಬಾವಿಯನ್ನೂ ಸರ್ಕಾರದವರು ತೋಡಿಸಲು ಏರ್ಪಡಿಸುವುದಿಲ್ಲ. ಆದರೆ ಯಾವುದಾದರೂ ಗ್ರಾಮದಲ್ಲಿ ಕೀಳ್ಪಟ್ಟ ಜನರಿಗಾಗಿ ಬಾವಿಯನ್ನು ತೋಡಬೇಕಾಗಿದ್ದು, ಅದರ ಅರ್ಧದವೆಚ್ಚವನ್ನು ಹೊರುವ ಸಾಮರ್ಥ್ಯವು ಸಂಪೂರ್ಣವಾಗಿ ಅವರಿಗಿಲ್ಲದ ಸಂದರ್ಭದಲ್ಲಿ ಡಿ|| ಬೋರ್ಡು ಪ್ರೆಸಿಡೆಂಟರು ಆ ನಿರ್ಬಂಧವನ್ನು ಸಡಿಲಮಾಡಬಹುದು.

ಬಾವಿಗಳನ್ನು ತೆಗೆಯಿಸುವ ಕೆಲಸವನ್ನು ಆಯಾ ಗ್ರಾಮದವರಿಗೇ ಕೂಲಿಗೋ ಕಂಟ್ರಾಕ್ಟಿಗೋ ವಹಿಸಿಕೊಡುವರು. ಇದರ ವಿಷಯದಲ್ಲಿ ಮೇಲ್ವಿಚಾರಣೆಗೆ ತಾಲ್ಲೋಕು ಸಬ್ ಡಿವಿಜನ್ ಡಿಸ್ಟ್ರಿಕ್ಟು ಅಧಿಕಾರಿಗಳಿಗೆ ಯಾಜಮಾನ್ಯವನ್ನು ವಹಿಸಿಕೊಡುವರು. ಬಾವಿಗಳ ರಕ್ಷಣೆ, ಅವುಗಳ ವಿಷಯದಲ್ಲಿ ಗ್ರಾಮಸ್ಥರು ಆಚರಿಸಬೇಕಾದ ಏರ್ಪಾಟು, ಮೊದಲಾದುವುಗಳ ವಿಷಯಕವಾದ ತಿಳಿವಳಿಕೆಗಳು ಮುಂದೆ ಕೊಡಲ್ಪಡುವುವು. ಇದರ ಸಂಬಂಧದಲ್ಲಿ ಅವಶ್ಯಕವಾದ ತಿಳಿವಳಿಕೆಯನ್ನು ಕೊಡುವುದಕ್ಕಾಗಿ ಸರ್ಕಾರದವರು ಆಯಾ ಶಾಖೆಯವರಿಗೆ ಸೂಚಿಸಿದ್ದಾರೆ. ಅವನ್ನೆಲ್ಲಾ ಮಾರ್ಚಿ ತಿಂಗಳ ಕೊನೆಯೊಳಗೆ ಬರಮಾಡಿಕೊಂಡು, ಈ ಏರ್ಪಾಟನ್ನು ಬರುವ ಸರ್ಕಾರಿ ವರ್ಷದಿಂದ ವ್ಯವಹರಣೆಗೆ ತರುವುದರಲ್ಲಿರುವಂತೆ ಕಾಣುತ್ತದೆ.

ಸರ್ಕಾರದವರು ಇಷ್ಟು ಉದಾರವಾದ ಸಹಾಯವನ್ನು ಮಾಡುವುದಕ್ಕೆ ಸಿದ್ಧರಾಗಿರುವಾಗ ಕೀಳ್ಪಟ್ಟ ಅಧಿಕಾರಿಗಳು ಅವರ ಉದ್ದೇಶವನ್ನು ಸಾರ್ಥಕಪಡಿಸುವುದಕ್ಕಾಗಿ ಗ್ರಾಮಾಂತರದ ಜನರಲ್ಲಿ ಸೌಹಾರ್ದದಿಂದಲೂ ಕನಿಕರದಿಂದಲೂ ನಡೆದು, ಒಳ್ಳೆಯ ಮಾತಿನಿಂದ ಪ್ರೋತ್ಸಾಹಿಸಿ, ಅವರಿಂದಾಗುವ ಸಹಾಯಗಳನ್ನು ತೆಗೆದುಕೊಂಡು, ಪುಣ್ಯಪ್ರದವಾದ ಈ ಕಾರ್ಯವನ್ನು ಮಮತೆಯಿಂದ ನೆರವೇರಿಸಿ ಕೃತಕೃತ್ಯರಾಗಬೇಕು. ಮಾತುಮಾತಿಗೆ ಲಂಚಕ್ಕೆ ಕೈನೀಡುವ ಸಣ್ಣಜನರ ಪಾರುಪತ್ಯಕ್ಕೆ ಈ ಕೆಲಸವನ್ನು ಬಿಟ್ಟು ಗ್ರಾಮಸ್ಥರು ರೋಸಿಹೋಗುವಂತೆ ಮಾಡಬಾರದು. ಆ ವಿಷಯದಲ್ಲಿ ತಾ|| ಅಧಿಕಾರಿಗಳು ಮೊದಲಾದವರು ಎಷ್ಟು ಎಚ್ಚರುಗೊಂಡಿದ್ದರೆ ಅಷ್ಟೂ ಉದ್ದೇಶಸಾರ್ಥಕ್ಯಕ್ಕೆ ಅನುಕೂಲವಾಗುವುದು. ಅಂತೂ ಈ ಏರ್ಪಾಟು ಬೇಗನೆ ವ್ಯವಹಾರಕ್ಕೆ ಬಂದು ೩-೪ ವರ್ಷಗಳೊಳಗೆ ನಮ್ಮ ಸಂಸ್ಥಾನದ ಗ್ರಾಮಾಂತರಗಳ ನೀರಿನ ದುರ್ಭಿಕ್ಷವು ನಿವಾರಣೆಗೊಳ್ಳಲೆಂದು ಕೋರುವೆವು.

ಒಳದೇಶವೃತ್ತಾಂತಗಳು

ಮೈಸೂರ ನಿಯಮನಿರ್ಮಾಣಸಭೆಯು ಫೆಬ್ರವರಿ ತಾ|| ೧೦ರಲ್ಲಿ ಬೆಂಗಳೂರ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ಕೂಡುವುದು.

ಶ್ರೀಮನ್ ಮಹಾರಾಜರವರ ಸ್ವಾರಿಯು ಈ ತಾ|| ೨೮ರಲ್ಲಿ ಉದಕಮಂಡಲದಿಂದ ರಾಜಧಾನಿಗೆ ಚಿತ್ತೈಸಿ ನಿನ್ನೆಯದಿನ ನಂಜನಗೂಡಿಗೆ ಶ್ರೀ ನಂಜುಂಡೇಶ್ವರನ ಪೂರ್ಣಿಮೆಯಸೇವೆಗಾಗಿ ದಯಮಾಡಿಸಿದ್ದಿತು.

ಬೆಂಗಳೂರಿಂದ ಡಿವಿಜನ್ ಸೆಷನ್ಸ್ ಜಡ್ಜರು ಕೊರಚರಪಾಳ್ಯದ ನಂಜುಂಡನೆಂಬ ೯ ವರ್ಷದ ಹುಡುಗನನ್ನು ಕೊಲೆಮಾಡಿದ್ದ ರಂಗನೆಂಬುವನಿಗೆ ಮರಣದಂಡನೆಯನ್ನು ವಿಧಿಸಿದ್ದುದರಮೇಲೆ ಕಳೆದ ತಾ|| ೨೪ ರ ಬೆಳಗ್ಗೆ ಬೆಂಗಳೂರ ಸೆಂಟ್ರಲ್ ಜೈಲಿನಲ್ಲಿ ಗಲ್ಲಿಗೆ ಹಾಕಲ್ಪಟ್ಟನು.

ಗತಿಸಿದ ಶ್ರೀ ಶೃಂಗಗಿರಿ ನೃಸಿಂಹಭಾರತಿಸ್ವಾಮಿಗಳ ಪ್ರತಿಮೆಯನ್ನು ಅಮೃತಶಿಲೆಯಲ್ಲಿ ಬೊಂಬಾಯಿನ ಮ|| ಮಾತ್ರೆಯವರು ಬಹು ಶ್ಲಾಘ್ಯವಾಗಿ ಮಾಡಿ ಈಗತಾನೇ ಕಳುಹಿಸಿಕೊಟ್ಟಿರುವರು. ಈ ಶಿಲ್ಪಿಗಳೇ ಗತಿಸಿದ ಶ್ರೀ ಚಾಮರಾಜೇಂದ್ರ ಭೂಪರವರ ಪ್ರತಿಮೆಯನ್ನೂ ಮಾಡುತ್ತಿರುವರು.

ರಾಜಧಾನಿಯ ಕಾರಂಜಿಕೆರೆಯ ಪೂರ್ವಭಾಗದಲ್ಲಿರುವ ಕುರುಬರಹಳ್ಳಿಯನ್ನು ತೆಗೆದು ಆ ಪ್ರಾಂತದಲ್ಲಿ ಶ್ರೀಮನ್ಮಹಾರಾಜರವರ ವಾಸಕ್ಕಾಗಿ ಒಂದು ಸಣ್ಣ ಅರಮನೆಯೂ, ಕೆಲ ಪ್ರಮುಖ ರಾಜಬಂಧುಗಳ ಮನೆಗಳೂ ಕಟ್ಟಲ್ಪಡುವುದಾಗಿಯೂ ಈ ಹಳ್ಳಿಯು ಬೇರೆ ಕಡೆ ಕಟ್ಟಲ್ಪಡುವುದೆಂದೂ ತಿಳಿಯಬರುತ್ತದೆ.

ಮಲೆನಾಡುಪ್ರಾಂತದ ಆರೋಗ್ಯವಿಚಾರವನ್ನು ಕೆಲವರ್ಷಗಳವರೆಗೂ ನಡೆಯಿಸಲು ತಕ್ಕೇರ್ಪಾಟು ಮಾಡಲ್ಪಡುತ್ತಿರುವುದಲ್ಲದೆ, ಆಯಾಯಗ್ರಾಮದಲ್ಲಿ ಕುಡಿಯುವ ನೀರಿನ ಹಳೆಯ ಬಾವಿಗಳು ಸರಿಪಡಿಸಲ್ಪಡಬೇಕಾಗಿವೆ ಮತ್ತೂ ಹೊಸದಾಗಿ ತೆಗೆಯಿಸಲ್ಪಡಬೇಕಾಗಿವೆ ಎಂಬುದು ಇಷ್ಟರಲ್ಲೇ ಗೊತ್ತುಮಾಡಲ್ಪಡತಕ್ಕದಾಗಿದೆ.

ಮೈಸೂರು ಕಾರಂಜಿಕೆರೆ ಕೆಳಗಿರುವ ಕಾರಂಜಿಮಠವು ಸರ್ಕಾರಕ್ಕೆ (ಪ್ರಾಣಿಪ್ರದರ್ಶನಾಲಯಕ್ಕೆ ಸೇರಿಸಿಕೊಳ್ಳುವದಕ್ಕೆ) ಬೇಕಾಗಿದೆಯೆಂದು ಸರ್ಕಾರದವರು ಪ್ರಕಟಿಸಿದ್ದಾರೆ. ಇದು ಉರುವುಕೊಂಡೆ ಕರಿಬಸವಸ್ವಾಮಿಗಳ ಪೀಠಕ್ಕೆ ಸೇರಿದುದೆಂದು ಕೇಳಿಕೆಯುಂಟು. ತತ್ಸಂಬಂಧಿಗಳು ಮೈಸೂರು ಡಿವಿಜನ್ ಛಾರ್ಜಿನಲ್ಲಿರುವ ಅ|| ಕಮಿಷನರಲ್ಲಿ ಬಂದು ಪರಿಹಾರವನ್ನು ಹೊಂದಬಹುದು.

ಮೈಸೂರ ಮಹಾರಾಜಾಕಾಲೇಜಿನಿಂದ ಬೆಂಗಳೂರ ಹೈಸ್ಕೂಲಿನ ಹೆಡ್ಮಾಸ್ಟರಾಗಿ ವರ್ಗವಾಗಿ ಹೋಗಿರುವ ಮ|| ಎಚ್. ಆರ್. ಕೃಷ್ಣಮೂರ್ತಿರಾವ್, ಬಿ. ಎ., ಯವರನ್ನು ಕಾಲೇಜಿನ ವಿದ್ಯಾರ್ಥಿಗಳು ನಿನ್ನೆಯದಿನ ಬರಮಾಡಿಕೊಂಡು ಒಂದು ವಿಜ್ಞಾಪನ ಪತ್ರಿಕೆಯನ್ನು ಕೊಟ್ಟು ವಿನೋದೋತ್ಸವಗಳಿಂದ ಹರ್ಷಗೊಳಿಸಿ ತಮ್ಮಗಳಿಗೆ ಅವರ ವಿಚಾರದಲ್ಲಿರುವ ಪ್ರೀತಿಗೌರವವನ್ನು ವ್ಯಕ್ತಗೊಳಿಸಿದರು.

“ ಚಿಕ್ಕಬಳ್ಳಾಪುರದ ವೀರಶೈವಮಂಡಲಿಗೆಲ್ಲಾ ಕಲಶಪ್ರಾಯರೂ, ಬಹುಜನ ಬಡವರಿಗೆ ಆಧಾರಿಗಳೂ, ಸರ್ವಜನ ಹಿತೈಷಿಗಳೂ ಆಗಿರುವ ಹೇಮಾರ್ನಹಳ್ಳಿ ರುದ್ರಪ್ಪನವರ ತಮ್ಮಂದಿರಾದ ಮ|| ರಾ|| ಚಿಕ್ಕವೀರಣ್ಣನವರು ತಾ|| ೨೬-೧-೧೫ ಮಂಗಳವಾರ ರಾತ್ರಿ ೭ ಗಂಟೆಯ ಸಮಯದಲ್ಲಿ ಶಿವಸಾಯುಜ್ಯವನ್ನು ಹೊಂದಿದರೆಂದು ತಿಳಿಸಲು ತುಂಬಾ ವ್ಯಸನಕರವಾಗಿದೆ. ಸ್ವಮತೀಯರಲ್ಲಿ ಇಂಥ ಭಾಗ್ಯವಂತರನ್ನು ಕಳೆದುಕೊಳ್ಳುವುದು ವೀರಶೈವಮಂಡಲಿಗೆಲ್ಲಾ ತುಂಬಾ ಶೋಚನೀಯವಾಗಿರುತ್ತದೆ. “ ಪಾಪೀಚಿರಾಯುಸ್ಸುಕೃತೀಗತಾಯುಃ ” ಎಂಬುದು ಸತ್ಯ.” ಎಂದು ಚಂದಾದಾರ ಹೊಸಹಳ್ಳಿ ರುದ್ರಪ್ಪನವರು ತಿಳಿಸಿರುತ್ತಾರೆ.

ಶ್ರೀ ಉತ್ತರಾದಿಮಠದ ಸ್ವಾಮಿಗಳು ಕಳೆದ ತಾ|| ೨೩ರಲ್ಲಿ ಕಾನಕಾನಹಳ್ಳಿಯಿಂದ ಬೆಂಗಳೂರಿಗೆ ರಾಜಮರ್ಯಾದೆಯಿಂದ ದಯಮಾಡಿಸಿದರು. ಮರ್ಯಾದಾರ್ಥವಾಗಿ ೧೩ ಗುಂಡುಗಳು ಹಾರಿಸಲ್ಪಟ್ಟುವು. ದಿವಾನರು ಮ|| ವಿಶ್ವೇಶ್ವರಯ್ಯನವರು, ಹಿಂದೆ ದಿವಾನರಾಗಿದ್ದ ಮ|| ಟಿ. ಆನಂದರಾಯರು ಮೊದಲಾಗಿ ಸರ್ಕಾರಿಯುದ್ಯೋಗಸ್ಥರೂ, ಭಕ್ತಾದಿಗಳೂ ಇದಿರ್ಗೊಳ್ಳಲು ಹೋಗಿದ್ದರು. ಶ್ರೀಗಳವರು ಜಹಗೀರ್ದಾರ್ ಸರ್ ಕೃಷ್ಣಮೂರ್ತಿಯವರ ಪೂರ್ಣಪ್ರಾಸಾದದಲ್ಲಿ ಇಳಿದುಕೊಂಡು ಮಧ್ವನವಮಿಯದಿವಸ ೧೦೦೦೦ ಬ್ರಾಹ್ಮಣರಿಗೆ ಸಂತರ್ಪಣೆಯನ್ನು ಮಾಡಿಸಿ ಪ್ರತಿನಿತ್ಯದಲ್ಲೂ ಮತವಿಚಾರವಾಗಿ ಉಪನ್ಯಾಸಗಳನ್ನು ನಡೆಸುತ್ತಿರುವರು.

ಶಿವನಸಮುದ್ರದ ಕಾವೇರೀ ಜಲಪ್ರಪಾತದ ವಿದ್ಯುಚ್ಛಕ್ತಿ ಶೇಖರಾಲಯದಲ್ಲಿ ಆಪರೇಟರಾಗಿರುವ ಮ|| ಸಿ. ರಾಮಭದ್ರೇಗೌಡರ ಪತ್ನಿಯವರು ಬಾಣಂತಿರೋಗಗ್ರಸ್ತರಾಗಿದ್ದು ೭ ತಿಂಗಳ ಕೂಸನ್ನು ಬಿಟ್ಟು ಸ್ವರ್ಗಸ್ಥರಾದರೆಂದು ತಿಳುಹಲು ಬಹಳ ವ್ಯಸನವಾಗುತ್ತದೆ. ಇವರು ಬಹಳ ಚಿಕ್ಕವಯಸ್ಸಿನವರಾಗಿದ್ದರೂ ಪತಿಸೇವಾ ಪರಾಯಣರಾಗಿಯೂ, ದೀನಜನರಲ್ಲಿ ದಯಾಪರರಾಗಿಯೂ ಇದ್ದುದರಿಂದ ಇವರ ಪರಿಚಿತಸ್ಥರೆಲ್ಲರೂ ಬಹಳವಾಗಿ ಚಿಂತಿಸುತ್ತಿರುವರು. ಮ|| ರಾಮಭದ್ರೇಗೌಡರಿಗೆ ಅವರ ೩೦ ನೆಯ ವರ್ಷದಲ್ಲಿ ಪತ್ನೀವಿಯೋಗದುಃಖ ಪ್ರಾಪ್ತಿಯಾದುದಕ್ಕಾಗಿ ನಾವು ಚಿಂತಿಸುತ್ತೇವಲ್ಲದೆ, ಇವರಿಗೆ ದುಃಖಶಮನವೂ ಗತಿಸಿದವರ ಆತ್ಮಕ್ಕೆ ಶಾಂತಿಯೂ ಉಂಟಾಗಲೆಂದು ಇಚ್ಛಿಸುತ್ತೇವೆ.

ಯುದ್ಧವಾರ್ತೆಯು.

ಪಶ್ಚಿಮರಣರಂಗ.

ನ್ಯೂಪೋರ್ಟಿನಮೇಲೆ ಜರ್ಮನಿಯವರು ಫಿರಂಗಿಗುಂಡುಗಳನ್ನು ಅಮಿತವಾಗಿ ಹೊಡೆದರು. ಅಲ್ಲಿ ಎರಡು ಕಡೆಯ ಪದಾತಿಗಳಿಗೂ ಕೈಕ್ಕೈ ಕೂಡಿ ಯುದ್ಧವಾಯಿತು. ಸೋಯಿಜನ್ನಿನ ಹತ್ತಿರವೂ ಮರಳಿ ಯುದ್ಧವಾಯಿತು. ವಿಶೇಷದಾದ ಬದಲಾವಣೆಯೇನೂ ಇಲ್ಲ. ಜರ್ಮನರಿಂದ ಶತ್ರುಸೇನಾಪಂಙ್ತಿಯನ್ನು ಭೇದಿಸುವ ಪ್ರಯತ್ನವು ಇನ್ನೂ ಮಾಡಲ್ಪಡುತ್ತಿದ್ದರೂ ಎಲ್ಲೂ ಅವರಿಗೆ ಫಲಪ್ರಾಪ್ತಿಯಾಗಿಲ್ಲ. ಇದು ಮುಖ್ಯವಾಗಿ ಗಮನೀಯವಾಗಿದೆ. ಉಳಿದ ಕಡೆಯಲ್ಲೆಲ್ಲಾ ಸಾಮಾನ್ಯವಾದ ಯುದ್ಧಗಳು ನಡೆಯುತ್ತಲೇ ಇವೆ. ಆಲ್ಸೆಸ್ ಜಿಲ್ಲೆಯಲ್ಲೂ ಆಪ್ರೆಮೋಂಟ್ ಕಾಡಿನಲ್ಲೂ ಜರ್ಮನರು ತೀಕ್ಷ್ಣವಾಗಿ ಕಾದಾಡಿ ಫ್ರೆಂಚರ ಕಂದಕಗಳಲ್ಲಿ ಕೆಲವನ್ನು ವಶಪಡಿಸಿಕೊಂಡರು. ಆದರೆ ಫ್ರೆಂಚರು ಬಹಳ ಸಾಹಸದಿಂದ ಮತ್ತೆ ಅವನ್ನು ವಶಪಡಿಸಿಕೊಂಡರು. ಲೊಂಬಾರ್ಸ್ಜ್ ಜಿಲ್ಲೆಯಲ್ಲಿ ಮಿತ್ರಮಂಡಲಿಯವರು ೧೦೦ ಗಜಗಳದೂರ ಮುಂದಕ್ಕೆ ಸಾಗಿದರು. ಇಲ್ಲೂ ನ್ಯೂಪೋರ್ಟಿನ ಬಳಿಯಲ್ಲೂ ಜರ್ಮನರು ಭಯಂಕರವಾಗಿ ಫಿರಂಗಿ ಕಾಳಗವನ್ನು ಮಾಡಿದರು. ಮಿತ್ರಮಂಡಲಿಯವರ ಫಿರಂಗಿಗಳು ಶತ್ರುಗಳ ಪ್ರಯತ್ನವನ್ನು ಸಾಗಗೊಡಲಿಲ್ಲ. ಎರ್ಗೊನಲ್ಲಿ ಫ್ರೆಂಚರ ಫಿರಂಗಿಗಳು ಜರ್ಮನರ ಹಲವು ಫಿರಂಗಿಗಳನ್ನು ಧ್ವಂಸಮಾಡಿರುವುವು. ಫ್ರೆಂಚರ ಯುದ್ಧಮಂತ್ರಿಯು ಲಂಡನ್ನಿಗೆ ಹೋಗಿ ಜಾರ್ಜ್ ಸಾರ್ವಭೌಮರನ್ನು ಕಂಡು, ಅಲ್ಡರ್ಶಾಟಿನಲ್ಲಿ ಹೊಸದಾಗಿ ಸಿದ್ಧವಾಗಿರುವ ಸೈನ್ಯವನ್ನು ಪರಾಮರಿಸಿ ಸಂತೋಷಿಸಿದರು.

ಪೂರ್ವ ರಣರಂಗ.

ರಷ್ಯನರು ಬಕೋವಿನಾದಲ್ಲಿ ಮುಂದುಮುಂದಕ್ಕೆ ಸಾಗುತ್ತಿದ್ದಾರೆ. ಡೋರ್ನವಿಲ್ಲಾಕ್ಕೆ ಉತ್ತರದಲ್ಲಿ ೭ ಮೈಲಿಗಳ ದೂರದಲ್ಲಿರುವ ಗ್ರಾಮಗಳನ್ನು ಅವರು ಸ್ವಾಧೀನಪಡಿಸಿಕೊಂಡು, ಶತ್ರುಸೈನ್ಯದಲ್ಲಿ ಕೆಲವರನ್ನು ಸೆರೆಯಾಗಿ ಹಿಡಿದುಕೊಂಡರು. ರಷ್ಯನ್ ಸೈನ್ಯಗಳು ಈಗ ಥಾರನ್ನಿಗೆ ೨೫ ಮೈಲಿಗಳ ದೂರದವರೆಗೆ ಹೋಗಿರುತ್ತವೆ. ಅಲ್ಲಿ ರಷ್ಯನ್ ಸೈನ್ಯಗಳು ಜರ್ಮನರೊಡನೆ ಯುದ್ಧಮಾಡುತ್ತಿವೆ. ಬಕೋವಿನಾದಲ್ಲಿ ಆಸ್ಟ್ರಿಯಾಸೈನ್ಯವು ವಿಶೇಷವಾಗಿ ಸೇರುತ್ತಿದೆ. ೪ ಲಕ್ಷ ಆಸ್ಟ್ರಿಯನ್ ಸೈನ್ಯಗಳು ೮೦ ಸಾವಿರ ಜರ್ಮನ್ ಸೈನಿಕರೊಡನೆ ಕೂಡಿ ಸರ್ವಿಯಾದ ಮೇಲೆ ದಂಡೆತ್ತಿಹೋಗಬೇಕೆಂದು ಹಂಗೇರಿಯಲ್ಲಿ ದೊಡ್ಡ ಪ್ರಯತ್ನವು ನಡೆಯುತ್ತಿದೆಯೆಂದು ಬುಕಾರೆಸ್ಟ್ ಪಟ್ಟಣದ ಪತ್ರವ್ಯವಹಾರಕನೊಬ್ಬನು ಲಂಡನ್ ಟೈಮ್ಸ್ ಪತ್ರಿಕೆಗೆ ಬರೆದಿದ್ದಾನೆ. ಬಕೋವಿನಾದಿಂದ ಮುಂದಕ್ಕೆ ಸಾಗುತ್ತಿರುವ ರಷ್ಯನ್ ಸೈನ್ಯಗಳು ಬಿರಟ್ಟಿಜ್ಜಿನಿಂದ ಹಂಗೇರಿಗೂ, ರೋಡ್ನಾದಿಂದ ಟ್ರಾನ್ಸಿಲ್ವೇನಿಯಾಕ್ಕೂ ಹೋಗುವ ಮಾರ್ಗಗಳನ್ನು ತಡೆಗಟ್ಟಿಬಿಟ್ಟಿದ್ದಾರೆ. ಆಸ್ಟ್ರಿಯನ್ ಸೈನ್ಯಗಳು ಯುದ್ಧಮಾಡುತ್ತಲೇ ಹಿಂದಕ್ಕೆ ಹೋಗುತ್ತಿವೆ. ಟ್ರಾನ್ಸಿಲ್ವೇನಿಯಾ ಪ್ರಜೆಗಳು ರಷ್ಯಾದೇಶದ ಎಲ್ಲೆಕಟ್ಟಿನ ಮೇಲಿಂದ ಓಡಿಹೋಗುತ್ತಿದ್ದಾರೆ.

ವಿಸ್ಟುಲಾಪ್ರಾಂತದಲ್ಲಿ ಓಕ್ಲವಿಯಾ ಎಂಬ ಪ್ರದೇಶಕ್ಕೆ ೧೦ ಮೈಲಿಗಳ ದೂರದಲ್ಲಿ ಡೋಬ್ರಿಸ್ಸಿನ ಹತ್ತಿರ ರಷ್ಯನರು ದುರ್ಗಮಾಡಿಕೊಂಡಿದ್ದ ಸ್ಥಾನವನ್ನು ಜರ್ಮನರು ಹಿಡಿದುಕೊಂಡಿರುವರು. ವಿಸ್ಟುಲಾನದಿಗೆ ಉತ್ತರದಲ್ಲಿ ರಷ್ಯನ್ ಸೈನ್ಯಗಳೂ ದಕ್ಷಿಣದಲ್ಲಿ ಜರ್ಮನ್ ಸೈನ್ಯಗಳೂ ನಿಂತಿವೆ. ಈ ನದಿಯ ನೀರು ಚಳಿಗಾಲದಲ್ಲಿ ೨|| ತಿಂಗಳ ತನಕ ಗಡ್ಡೆಕಟ್ಟಿಕೊಂಡಿರುವುದಂತೆ. ಆ ಪ್ರಾಂತದಲ್ಲಿ ಈಗ ಯುದ್ಧಕ್ಕೆ ಅನುಕೂಲವಿಲ್ಲ. ಅಲ್ಲಿ ನಡೆದ ವಾರ್ತೆಗಳೂ ಸ್ಪಷ್ಟವಾಗಿ ತಿಳಿಯಬಂದಿಲ್ಲ. ವಿಸ್ಟುಲಾ ನದಿಗೆ ಉತ್ತರದಲ್ಲಿ ಜರ್ಮನ್ ವೈಮಾನಕರಿಗೂ ರಷ್ಯನ್ ವೈಮಾನಿಕರಿಗೂ ಸಣ್ಣಸಣ್ಣ ಯುದ್ಧಗಳು ನಡೆದಿವೆ. ಬುಕೋವಿನಾದಲ್ಲಿ ರಷ್ಯಾದವರಿಗೂ ಆಸ್ಟ್ರಿಯನ್ನರಿಗೂ ಭಯಂಕರವಾದ ಯುದ್ಧಗಳಾಗಿವೆ. ಆಸ್ಟ್ರಿಯನ್ನರು ತಮ್ಮ ಸೇನೆಗಳನ್ನು ಸೋಫರ್ ಮೀಟ್ ಕಣಿವೆಗಳ ಹತ್ತಿರ ಸೇರಿಸಿದ್ದಾರೆ.

ತುರ್ಕಿ.

ತುರ್ಕಿ ಪ್ರಭುತ್ವದವರು ೩ ಕೋಟಿಯೂ ೯೦ ಲಕ್ಷ ಪೌನುಗಳ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಅಲ್ಲಿನ ಪಾರ್ಲಿಮೆಂಟಿನವರು ಅನುಮತಿಕೊಟ್ಟರು. ಬೋರ್ಸನ್ ಪ್ರಾಂತ್ಯದಲ್ಲಿ ರಷ್ಯನರು ತುರ್ಕಿಯವರ ಮೇಲೆ ಕಾದಾಡಿ, ಬೆಟ್ಟಗಳಮೇಲಿದ್ದ ಅವರ ಫಿರಂಗಿಗಳನ್ನೆಲ್ಲಾ ಹಿಡಿದುಕೊಂಡರು. ತುರ್ಕಿಯವರ ೧೧ ನೇ ನಂ|| ಸೇನೆಯಲ್ಲಿ ೨೩-೨೪ ನೇ ಪಟಾಲಮ್ಮುಗಳು ರಷ್ಯನರಿಗೆ ಸೆರೆಸಿಕ್ಕಿದುವು. ಸಾರಿಕಾಮಿಸ್ ಬಳಿಯಲ್ಲಿ ರಷ್ಯನರು ಆಕ್ರಮಿಸಿದ ಪ್ರದೇಶಗಳನ್ನೆಲ್ಲಾ ಅವರು ಭದ್ರಪಡಿಸುತ್ತಿದ್ದಾರೆ. ತುರ್ಕಿಸೇನೆಯಲ್ಲಿ ತಿರುಗಿಬಿದ್ದ ೧೭ ಮಂದಿ ಸೇನಾಧಿಕಾರಿಗಳನ್ನು ಎನ್ವರ್ ಪಾಷಾರವರ ಅಪ್ಪಣೆಮೇರೆ ತುಪಾಕಿಯಿಂದ ಹೊಡೆದು ಕೊಂದಿರುವರು. ಸುಲ್ತಾನ್ ಸೇಲೀಮ್ ಪರ್ವತ ಪ್ರಾಂತ್ಯದಲ್ಲಿ ತುರ್ಕಿಯವರ ಸ್ಥಾನಗಳನ್ನು ರಷ್ಯನರು ಸ್ವಾಧೀನಪಡಿಸಿಕೊಂಡು, ಅವರಿಗೆ ಬಹಳ ನಷ್ಟವನ್ನುಂಟುಮಾಡಿಯೂ, ಟ್ರಾನ್ಸ್ಪಾರಾಕ್ ದೇಶದಿಂದ ಹಿಂದಕ್ಕೆ ಓಡಿಸುತ್ತಲೂ ರಷ್ಯನರು ಜಯಶೀಲರಾಗಿದ್ದಾರೆ. ಕಕೇಷಿಯಾ ಪ್ರಾಂತದಲ್ಲಿ ಜನವರಿ ತಾ|| ೧೯ ರಲ್ಲಿ ಅನಾಲಿಕ್-ಲಾಫ್ ಸಾ-ಕಿಯಾಗಾನಿಗಳ ಬಳಿಯಲ್ಲಿ ತುರ್ಕಿಸೈನ್ಯದವರಿಗೂ ರಷ್ಯನ್ ಸೈನಿಕರಿಗೂ ಕಡುಕಾಳಗವಾಯಿತು. ಅನೇಕ ಸಾವಿರ ಜನರು ರಷ್ಯನರಿಗೆ ಸೆರೆಯಾಗಿ ಸಿಕ್ಕಿದರು. ತುರ್ಕಿಯವರ ಸೇನಾಶಿಬಿರವನ್ನು ರಷ್ಯನರು ಹಿಡಿದುಕೊಂಡರು. ತಾ|| ೧೮ ರಲ್ಲಿ ಅರ್ದನೆ ಎಂಬ ಪಟ್ಟಣವನ್ನು ಹಿಡಿದುಕೊಂಡರು.

ಜಲಯುದ್ಧ.

ತುರ್ಕಿಸ್ಥಾನದ ಬಳಿಯಣ ಡಾರ್ಡನಲ್ಸ್ ಜಲಸಂಧಿಯಲ್ಲಿ ಸಾಫೆರ್ ಎಂಬ ಒಂದು ಫ್ರೆಂಚರ ಸಬ್ಮೇರಿನ್ನು ಒಂದು ಮದ್ದಿನ ಗೋಳಕ್ಕೆ ತಗುಲಿ ಮುಳುಗಿಹೋಯಿತು. ಅದರಲ್ಲಿದ್ದವರಲ್ಲಿ ೧೦ ಮಂದಿಗಳು ಸಂರಕ್ಷಿಸಲ್ಪಟ್ಟರು.

ಕೀಲ್ ಕಾಲ್ವೆಯಲ್ಲಿದ್ದ ಜರ್ಮನ್ ನೌಕಾದಳದಲ್ಲಿನ ಸ್ವಲ್ಪಭಾಗವು ಉತ್ತರಸಮುದ್ರಕ್ಕೆ ಬರುತ್ತಿರುವುದೆಂಬ ಸಂಗತಿಯು ಹಿಂದೆ ಪ್ರಕಟವಾಗಿದ್ದಿತಷ್ಟೆ. ಇವುಗಳಿಗೂ ಇಂಗ್ಲೆಂಡ್ ನೌಕಾದಳಕ್ಕೂ ಉತ್ತರಸಮುದ್ರದಲ್ಲಿ ಕಳೆದ ತಾ|| ೨೪ ನೆಯ ದಿನ ಯುದ್ಧವು ನಡೆದು ಇಂಗ್ಲೆಂಡ್ಸೈನ್ಯಕ್ಕೆ ಪೂರ್ಣಜಯವು ಲಭಿಸಿದ ವಾರ್ತೆಯು ಕಳೆದವಾರದಲ್ಲಿ ಬಂದಿರುವುದು. ಅದರ ವಿವರವು ಹೇಗೆಂದರೆ—ಇಂಗ್ಲೀಷರ ಕಡೆಯ ಕೆಲವು ಯುದ್ಧದ ಹಡಗುಗಳೂ, ಕೆಲ ಸಣ್ಣ ಹಡಗುಗಳೂ ಸಹ ಉತ್ತರಸಮುದ್ರದಲ್ಲಿ ಕಾವಲಿರುತ್ತಿರುವಾಗ, ಜರ್ಮನರ ೪ ಯುದ್ಧದ ಕ್ರೂಜರುಗಳೂ, ಕೆಲವು ವೇಗಗಾಮಿಗಳಾದ ಸಣ್ಣತೆರದ ಕ್ರೂಜರುಗಳೂ, ಕೆಲವು ಡಿಸ್ಟ್ರಾಯರುಗಳೂ ಸಹ ಬರುತ್ತಿರುವುದು ಕಾವಲಿನ ಆಂಗ್ಲ ನೌಕಾದಳಕ್ಕೆ ಗೋಚರಿಸಿತು. ಇವು ಇಂಗ್ಲೆಂಡ್ ತೀರದಮೇಲೆ ಬೀಳುವುದಕ್ಕೆ ಹಿಂದೆ ಬಂದಿದ್ದಂತೆ ಬರುತ್ತಿದ್ದುವು. ಅವುಗಳಿಗೆ ಇದಿರಾಗಿ ಇಂಗ್ಲೀಷ್ ಹಡಗುಗಳು ಹೊರಟುದನ್ನು ಕಂಡಕೂಡಲೇ ಜರ್ಮನ್ ನೌಕಾದಳವು ಹಿಂದಿರುಗಿ ಓಡುವುದಕ್ಕಾರಂಭಿಸಿದುವು. ಕೂಡಲೇ ಇಂಗ್ಲೀಷರಕಡೆಯ ಲಯನ್-ಟೈಗರ್-ಪ್ರಿನ್ಸೆಸ್ ರಾಯಲ್-ನ್ಯೂಜಿಲ್ಯಾಂಡ್-ಇಂಡಾಮಿಟಬಲ್ ಎಂಬ ಯುದ್ಧದ ಕ್ರೂಯಿಜರುಗಳು ವೇಗದಿಂದ ಹೋಗಿ ಜರ್ಮನರ ಹಡಗುಗಳ ಮೇಲೆ ಬಿದ್ದು ಯುದ್ಧಕ್ಕಾರಂಭಿಸಿದುವು. ಸುಮಾರು ೪|| ಗಂಟೆಯ ಹೊತ್ತಿನಲ್ಲಿ ಯುದ್ಧವು ಉಭಯಪಕ್ಷದವರಿಂದ ತೀಕ್ಷ್ಣವಾಗಿಯೇ ಜರುಗಿತು. ಜರ್ಮನರ ಹಡಗುಗಳು ಹಿಂದಕ್ಕೆ ಓಡಿಹೋಗುತ್ತಲೇ ಯುದ್ಧವನ್ನು ಮಾಡಿದುವು. ಜರ್ಮನರ ಕಡೆಯ ಬ್ಲೂಚರ್ ಎಂಬ ದೊಡ್ಡ ಯುದ್ಧದ ಹಡಗು [illegible]ತಿಂದು ಜಜ್ಜಾಗಿ ತಲೆಕೆಳಗಾಗಿ ಮುಳುಗಿಹೋಯಿತು. ಅವರ ಕಡೆಯ ಇನ್ನೆರಡು ಕ್ರೂಯಿಜರುಗಳಿಗೂ ಫಿರಂಗಿಯೇಟಿನಿಂದ ಬಹಳ ನಷ್ಟವಾಯಿತು. ಅಷ್ಟರಲ್ಲಿ ಉಳಿದ ಹಡಗುಗಳೆಲ್ಲಾ ತಲೆತಪ್ಪಿಸಿಕೊಂಡು ಓಡಿದುವು. ಓಡಿಹೋಗುವಾಗ ಅವು ಉದ್ದಕ್ಕೂ ಮದ್ದಿನ ಗೋಳಗಳನ್ನು ಸಮುದ್ರದಲ್ಲಿ ಬಿಟ್ಟುಕೊಂಡು ಹೋದುವು. ತಮ್ಮನ್ನು ಓಡಿಸಿಕೊಂಡು ಬಂದ ಶತ್ರುಗಳ ಹಡಗುಗಳು ಅವಕ್ಕೆ ಬಡಿದು ಹಾಳಾಗಲಿ ಎಂಬುದೇ ಅವರ ತಂತ್ರ. ಇಂಗ್ಲೀಷ್ ನೌಕಾದಳವು ಶತ್ರುದಳವನ್ನು ಓಡಿಸಿಬಿಟ್ಟು ಹಿಂದಿರುಗಿ ಬಂದುವು. ಆಂಗ್ಲರ ಹಡಗುಗಳಲ್ಲಿ ಯಾವುದಕ್ಕೂ ನಷ್ಟವಾಗಲಿಲ್ಲ. ಒಂದೆರಡಕ್ಕೆ ಸ್ವಲ್ಪ ಏಟುಬಿದ್ದಿತು. ಹಡಗಿನಲ್ಲಿದ್ದವರಲ್ಲಿ ೧೪ಮಂದಿ ಸತ್ತರು; ೩೦ಮಂದಿಗೆ ಏಟುಬಿದ್ದು ಗಾಯವಾಗಿದೆ. ಮುಳುಗಿಹೋದ ಶತ್ರುಗಳ ಬ್ಲೂಚರ್ ಹಡಗಿನಮೇಲಿದ್ದ ೮೮೫ಮಂದಿ ನಾವಿಕರಲ್ಲಿ ೧೨೩ಮಂದಿಗಳು ಸಂರಕ್ಷಿಸಲ್ಪಟ್ಟರು. ಈ ಯುದ್ಧವು ಉತ್ತರಸಮುದ್ರದಲ್ಲಿ ಅಮೇಲಾಂಡು-ಹಿರ್ಗ್ರೋನಿಕೂಬ್ ದ್ವೀಪಗಳಿಗೆ ಬಡಗಲಿನಲ್ಲಿ ನಡೆದಿರುವುದು. ಮೊದಲು ಇಂಗ್ಲೀಷರ ಹಡಗುಗಳು ಫಿರಂಗಿಗಳನ್ನು ಹಾರಿಸಿದಾಗ ಉಭಯಪಕ್ಷದ ಮಧ್ಯದಲ್ಲಿ ೧೫ ಮೈಲಿಗಳ ಅಂತರವಿದ್ದಿತು. ಸಮುದ್ರದೊಳಗೆ ಎರಡುಕಡೆಯ ಹಡಗುಗಳೂ ೧೦೦ ಮೈಲಿಗಳ ವಿಸ್ತಾರಕ್ಕೆ ಹರಡಿಕೊಂಡು ಗಂಟೆಗೆ ೩೦ ಮೈಲಿಗಳ ವೇಗದಲ್ಲಿ ಓಡಾಡುತ್ತ ಬಹುಶಃ ೩ ಗಂಟೆಗಳ ಕಾಲ ಕಾದಾಡಿರುವುವು. ಈ ಇಂಗ್ಲೀಷ್ ದಳಕ್ಕೆ ವೈಸ್ ಅಡ್ಮಿರಲ್ ಸರ್ ಡೇವಿಡ್ ಬಿಯಾಟಿಯವರು ಅಧಿಪತಿಯಾಗಿದ್ದರು. ಇವರ ಸಾಹಸವು ಈಗ ವಿಶೇಷವಾಗಿ ಕೊಂಡಾಡಲ್ಪಡುತ್ತಿದೆ. ಜರ್ಮನ್ ಚಕ್ರವರ್ತಿಯವರ ವರ್ಧಂತಿಯ ದಿವಸ ಇಂಗ್ಲೀಷಿನವರಿಗೆ ಆಶ್ಚರ್ಯವನ್ನುಂಟುಮಾಡುವಂಥ ಕೆಲಸವನ್ನು ಮಾಡುತ್ತೇವೆಂದು ಜರ್ಮನರು ಆಡುತ್ತಿದ್ದರಂತೆ. ಆದರೆ ಇಂಗ್ಲೀಷರ ಜಲಸೈನ್ಯಕ್ಕೆ ೨ ನೆಯ ಮುಖ್ಯಾಧಿಕಾರಿಗಳಾಗಿರುವ ಫಿಷರ್ರವರ ವರ್ಧಂತಿಯ ದಿನವಾದ ಆ ಭಾನುವಾರದಲ್ಲಿ ಜರ್ಮನರಿಗೆ ಜ್ಞಾಪಕದಲ್ಲಿರುವಂಥ ಅಪಜಯವನ್ನು ಇಂಗ್ಲೀಷ್ ನೌಕಾದಳವು ಉಂಟುಮಾಡಿಕೊಟ್ಟಿತೆಂದು ಇಂಗ್ಲೀಷ್ ಪತ್ರಿಕೆಗಳು ಆನಂದಪಡುತ್ತಿವೆ.

ಆಕಾಶವಿಮಾನಗಳು.

ಮೊನ್ನೆಯ ವಾರದಲ್ಲಿ ಜರ್ಮನಿಯ ಆಕಾಶವಿಮಾನಗಳು ಇಂಗ್ಲೆಂಡಿಗೆ ಸೇರಿದ ಯಾರ್ಮತ್ತು-ಕಿಂಗ್ಸ್ಲಿನ್ ಮೊದಲಾದ ಪಟ್ಟಣಗಳ ಮೇಲೆ ರಾತ್ರಿಯಹೊತ್ತು ಸಿಡಿಮದ್ದುಗಳನ್ನು ಹಾಕಿ ಸ್ವಲ್ಪ ಅನರ್ಥವನ್ನು ಮಾಡಿ ಹೋದುವಷ್ಟೆ. ಇದನ್ನು ಕುರಿತು ತಟಸ್ಥರಾಷ್ಟ್ರಗಳವರು ತುಂಬಾ ಅಲ್ಲಗಳೆಯುತ್ತಿದ್ದಾರೆ. ಅಮೇರಿಕಾ ಪತ್ರಿಕೆಗಳು ಈ ಕಾರ್ಯವನ್ನು ಕುರಿತು ಹೀಗೆ ಖಂಡಿಸುತ್ತಿವೆ—“ಇದು ಮಾನವಧರ್ಮವನ್ನು ಬುದ್ಧಿಪೂರ್ವಕವಾಗಿ ತಿರಸ್ಕರಿಸತಕ್ಕದಾಗಿದೆ. ಜರ್ಮನರು ಏನುಮಾಡಿದರೂ ಅವರ ಈ ಕಾರ್ಯವನ್ನು ಕ್ಷಮಿಸಲಾಗುವುದಿಲ್ಲ. ಈ ಕಳಂಕವನ್ನು ಅವರು ಹೋಗಲಾಡಿಸಿಕೊಳ್ಳುವುದಕ್ಕೆ ಬಹಳ ಕಾಲ ಬೇಕಾಗುವುದು. ಸಿಡಿಮದ್ದುಗಳನ್ನು ಹೀಗೆ ಹಾಕುವುದರಿಂದ ಜರ್ಮನರಿಗೆ ಯುದ್ಧಸಂಬಂಧವಾದ ಲಾಭವೇನೂ ಆಗುವುದಿಲ್ಲ. ಅವರು ಬುದ್ಧಿಪೂರ್ವಕವಾಗಿ ನಿರಪರಾಧಿ ಸ್ತ್ರೀಯರನ್ನು ಕೊಲ್ಲುತ್ತಿದ್ದಾರೆ. ಇದರಿಂದ ಜರ್ಮನಿಯವರ ಮೇಲೆ ಪ್ರಪಂಚಕ್ಕೆಲ್ಲಾ ಕೋಪವುಂಟಾಗುತ್ತದೆ. ಸಂಧಿಯನ್ನು ಮಾಡಿಕೊಳ್ಳುವಾಗ ಜರ್ಮನರು ಈ ಚೇಷ್ಟೆಗಳಿಗೆ ತಕ್ಕ ಫಲವನ್ನು ಹೊತ್ತಿಕೊಳ್ಳಬೇಕಾಗುವುದು. ಅವರಿಗೆ ಕೈಲಾಗದೆ ಇಂಥ ಕೆಲಸವನ್ನು ಮಾಡುವ ಹುಚ್ಚು ಹಿಡಿದಿದೆಯೋ, ನಿಜವಾದ ಹುಚ್ಚು ಹಿಡಿದಿದೆಯೋ ತಿಳಿಯಲಿಲ್ಲ” ಇತ್ಯಾದಿಯಾಗಿ ಬರೆದಿದ್ದಾರೆ. ಇವರು ಹಾಕಿದ ಸಿಡಿಮದ್ದುಗಳಲ್ಲಿ ಒಂದು ಒಡೆಯದೆ ಹೋಗಿರಲು, ಅದನ್ನು ತೂಕಮಾಡಿದಾಗ ೭೦ ಪೌನುಗಳ ಭಾರವುಳ್ಳದಾಗಿದ್ದಿತು. ಹೀಗೆ ಇಂಗ್ಲಾಂಡಿನ ಮೇಲೆ ಹೋಗಿ ವೈಮಾನಿಕರು ಮದ್ದನ್ನು ಹಾಕಿ ಬಂದುದು ಜರ್ಮನ್ ದೇಶೀಯರಿಗೆ ಬಹಳ ಸಂತೋಷವನ್ನುಂಟುಮಾಡಿದೆಯಂತೆ. ಇಂಥ ಕೆಲಸವನ್ನು ಮುಂದೆ ಇವರು ಇನ್ನೂ ಬಹಳವಾಗಿ ಮಾಡುವವರಾಗಿದ್ದಾರಂತೆ. ಈಗಿನ ಕೆಲಸವು ಆರಂಭಮಾತ್ರವಾದುದಂತೆ. ಈ ಕೆಲಸವನ್ನು ಮಾಡಿದುವು ಜಪ್ಪಲಿನ್ ವಿಮಾನಗಳಂತೆ. ಆದುಕಾರಣ ಜರ್ಮನ್ ಚಕ್ರವರ್ತಿಯವರು ಕೌಂಟ್ ಜಪ್ಪಲಿನ್ರವರನ್ನು “ ವಿಮಾನ ಸೇನಾನಾಯಕ ” ಎಂಬ ಹೆಸರಿನಿಂದ ಕರೆದು ಗೌರವಿಸಿದರಂತೆ.

ತಾ|| ೨೫ರಲ್ಲಿ ಮತ್ತೊಬ್ಬ ಜರ್ಮನ್ ವೈಮಾನಿಕನು ವಿಟಾಪಿಲೀಸಿನ ಹತ್ತಿರ ಸಿಡಿಮದ್ದುಗಳನ್ನು ಹಾಕಿದುದರಿಂದ ಇಬ್ಬರು ಸೈನಿಕರು ಸತ್ತರು. ತಾ|| ೨೧ರಲ್ಲಿ ಆಂಗ್ಲವೈಮಾನಿಕರು ಜರ್ಮನರ ವಶದಲ್ಲಿರುವ ಆಸ್ಟೆಂಡ್ ಪಟ್ಟಣದ ಮೇಲೆ ಹೋಗಿ ಸಿಡಿಮದ್ದುಗಳನ್ನು ಹಾಕಿ ಬಂದಿವೆ. ಇದರಿಂದ ನಿಲ್ದಾಣದ ಕಟ್ಟಡವು ಸ್ವಲ್ಪ ಹಾಳಾಯಿತು. ಕೆಲವುಮಂದಿ ಸೈನಿಕರು ಹತರಾದರು. ಪ್ರಜೆಗಳಲ್ಲಾರಿಗೂ ಅಪಾಯವಾಗಲಿಲ್ಲ, ಆಂಗ್ಲವೈಮಾನಿಕರು ಜೇಬ್ರೂಜ್ ಪಟ್ಟಣದ ಮೇಲೂ ಸಿಡಿಮದ್ದುಗಳನ್ನು ಹಾಕಿದರು. ಶತ್ರುಗಳ ಗುಂಡಿನೇಟಿನಿಂದ ಒಬ್ಬ ವೈಮಾನಿಕನು ಕೆಳಕ್ಕಿಳಿಯಬೇಕಾಯಿತು. ವಿಮಾನವಿದ್ಯೆಯಲ್ಲಿ ಜರ್ಮನರಿಗಿಂತಲೂ ಫ್ರೆಂಚ್ ಇಂಗ್ಲೀಷ್ ವೈಮಾನಿಕರು ಬಹಳ ಬುದ್ಧಿವಂತರಾಗಿದ್ದಾರೆ. ಆದರೆ ಜರ್ಮನರು ಮಾಡುವಂಥ ದುರಾಗತವನ್ನು ಶಾಂತವಾಗಿರುವ ಪಟ್ಟಣಗಳ ಮೇಲೆ ಮಾಡಿ ಪ್ರಜೆಗಳಿಗೆ ಹಿಂಸೆಕೊಡುವುದು ಇವರುಗಳಿಗೆ ಇಷ್ಟವಾಗಿಲ್ಲ. ಮುಯ್ಯಿಗೆ ಮುಯ್ಯಿಮಾಡಬೇಕಾಗಿದ್ದರೆ ಜರ್ಮನ್ದೇಶದೊಳಗೆಲ್ಲಾ ಇವರು ಇಷ್ಟರಲ್ಲೇ ಬೊಬ್ಬೆಯನ್ನು ಏಳಿಸಬಹುದಾಗಿದ್ದಿತು. ಆದರೆ ವೈಮಾನಿಕರು ಯುದ್ಧರಂಗಕ್ಕೆ ಸೇರಿದ ದೇಶಭಾಗಗಳಲ್ಲಿ ಮಾತ್ರ ಚಲಿಸಿ ಆಗಾಗ್ಗೆ ಸಿಡಿಮದ್ದುಗಳನ್ನು ಹಾಕುತ್ತಿದ್ದಾರೆ. ಜರ್ಮನರ ವೈಮಾನಿಕರ ದುರಾಗತದಿಂದ ಅವರಿಗೆ ಲಾಭವೇನೂ ಆಗದಿದ್ದರೂ ಇಂಗ್ಲೆಂಡ್ ಪ್ರಜೆಗಳ ಮನಸ್ಸು ಮಾತ್ರ ಮತ್ತಷ್ಟು ರೇಗುವುದಕ್ಕೂ, ಅವರುಗಳು ತಾವಾಗಿ ಬಂದು ಸೈನ್ಯದಲ್ಲಿ ಸೇರಿ ಕೆಲಸಮಾಡುವುದಕ್ಕೂ ಹುರಿದುಂಬುವಂತಾಯಿತು. ಇದರಿಂದ ಜರ್ಮನರಿಗೇ ಮತ್ತಷ್ಟು ಕೇಡಾದಂತಾಗಲಿಲ್ಲವೆ?

ಆಂಗ್ಲವೈಮಾನಿಕರು ಕಳೆದ ತಾ|| ೨೨ರಲ್ಲಿ ಜೇಬ್ರೂಜಿನ ಮೇಲೆ ಹೋಗಿ ಅಲ್ಲಿನ ವಿವರಣಗಳನ್ನು ತಿಳಿದುಕೊಂಡು ಬರುವಾಗ ಶತ್ರುಗಳ ೨ ಸಬ್ಮೆರೀನುಗಳ ಮೇಲೂ, ದಡದಮೇಲಿದ್ದ ಫಿರಂಗಿಗಳ ಮೇಲೂ ೨೭ ಸಿಡಿಮದ್ದುಗಳನ್ನು ಹಾಕಿಬಂದರು. ಇದರಿಂದ ೧ ಸಬ್ಮೆರೀನು ಬಹಳ ನಷ್ಟಗೊಂಡಿತೆಂದೂ ಫಿರಂಗಿಗೋಲಂದಾಜ ಜನರಲ್ಲೂ ನಾವಿಕರಲ್ಲೂ ಬಹುಜನರು ಸತ್ತರೆಂದೂ ವಾರ್ತೆಯಿದೆ. ಈ ಆಂಗ್ಲವಿಮಾನಗಳ ಮೇಲೆ ಬೀಳಬೇಕೆಂದು ಶತ್ರುಗಳು ೭ ಸಾರಿ ಸುತ್ತಿಕೊಂಡರೂ, ಡೇವಿಸ್ ಎಂಬ ಆಂಗ್ಲವೈಮಾನಿಕರು ತಪ್ಪಿಸಿಕೊಂಡು ಬಂದರು. ಜೇಬ್ರೂಜ್ಜಿಗೆ ಹೋಗುವಾಗಲೇ ಡೇವಿಸ್ ಎಂಬ ವೈಮಾನಿಕನ ತೊಡೆಗೆ ಶತ್ರುಗಳ ತುಪಾಕಿಯೇಟಿನಿಂದ ಗಾಯವಾಗಿದ್ದರೂ ಆತನು ಲಕ್ಷಿಸದೆ ತನ್ನ ಕೆಲಸವನ್ನು ಮುಗಿಸಿಕೊಂಡು ಬಂದಿರುವನು.

ಜರ್ಮನರ ವಿಮಾನಗಳು ಹಾಲೆಂಡ್ ದೇಶದ ಮೇಲೆ ಹಾದುಹೋಗಿರುವುದು ತಾಟಸ್ಥ್ಯದೇಶದ ನಿಬಂಧನೆಗೆ ಭಂಗಕಾರಿಯಾಯಿತೆಂದು ಡಚ್ ಸರ್ಕಾರದವರು ಜರ್ಮನರಿಗೆ ತಿಳಿಯಪಡಿಸಿದ್ದಾರೆ. ಆ ಜರ್ಮನ್ ವಿಮಾನಗಳು ಸುತ್ತುಮುತ್ತಣ ಗ್ರಾಮಗಳ ಮೇಲೆ ೮ ಸಿಡಿಮದ್ದುಗಳನ್ನು ಹಾಕಲು ೭ ಮಂದಿಗೆ ಏಟುಬಿದ್ದಿರುವುದು. ಒಂದು ಕಾರ್ಯಾಲಯಕ್ಕೆ ಬೆಂಕಿಬಿದ್ದಿತು. ಈ ಜರ್ಮನ್ ವಿಮಾನಗಳನ್ನು ಇಂಗ್ಲೀಷ್ ಫ್ರೆಂಚ್ ವಿಮಾನಗಳು ಮುತ್ತಿ ಹೊಡೆದು ಕೆಳಕ್ಕೆ ಕೆಡಹಿದುವು. ಅವುಗಳಲ್ಲಿದ್ದ ವೈಮಾನಿಕರಿಬ್ಬರನ್ನು ಸೆರೆಹಿಡಿದರು. ಜರ್ಮನಿಗೆ ಸೇರಿದ ಎಸ್ಸೇನಿನಲ್ಲಿ ಆ ಸರ್ಕಾರಕ್ಕೆ ಸೇರಿದ ಮೋಟಾರುಬಂಡಿಗಳನ್ನು ನಿರ್ಮಿಸುವ ಕಾರ್ಯಾಲಯವಿದೆ. ಅದರ ಮೇಲಕ್ಕೆ ಇಂಗ್ಲೀಷ್ ವೈಮಾನಿಕರು ಹೋಗಿ ಸಿಡಿಮದ್ದುಗಳನ್ನು ಹಾಕಿ ೪೦೦ ಬಂಡಿಗಳನ್ನು ಸಂಪೂರ್ಣವಾಗಿ ಧ್ವಂಸಮಾಡಿರುವರು.

ವಿವಿಧವಾರ್ತಾಸಂಗ್ರಹ.

ಕಳೆದವಾರ ಇಂಗ್ಲೆಂಡಿನಲ್ಲಿ ವಿಪರೀತವಾದ ಮಂಜಿನಮಳೆಯು ಸುರಿದಿತು. ಬಹುಕಾಲದಿಂದ ಇಂಥ ಮಳೆಯು ಸುರಿದಿರಲಿಲ್ಲವಂತೆ. ಕೆಲಕಡೆ ೧೩ ಅಂಗುಲದ ಮಂದವಾಗಿ ಮಂಜು ಸುರಿದಿದ್ದಿತು.

ಸ್ವಿಡ್ಜರ್ಲೆಂಡ್ ವಿಶ್ವ ವಿದ್ಯಾಲಯದಲ್ಲಿ ಓದುತ್ತಿರುವ ರೊಮೇನಿಯಾ ದೇಶದ ವಿದ್ಯಾರ್ಥಿಗಳೆಲ್ಲಾ ಅವರವರ ಸೈನ್ಯಗಳಲ್ಲಿ ಬಂದು ಸೇರಿಕೊಳ್ಳಬೇಕೆಂದು ಆ ಪ್ರಭುತ್ವದವರು ತಂತ್ರೀವಾರ್ತೆಯು ಮೂಲಕ ಆಜ್ಞೆಮಾಡಿದ್ದಾರೆ.

ಬೊಂಬಾಯಿಗೆ ಬಂದಿಳಿದಿರುವ ಶ್ರೀ ಆಗಾಖಾನರವರು ತುರ್ಕಿಯವರು ಈಜಿಪ್ಟಿನಮೇಲೆ ಬಂದು ಬೀಳುವುದು ಅಸಾಧ್ಯವೆಂದು ಹೇಳಿದ್ದಾರೆ. ಈಜಿಪ್ಟಿಗೆ ಹೊಸದಾಗಿ ಸುಲ್ತಾನರಾಗಿ ಮಾಡಲ್ಪಟ್ಟಿರುವವರು ಉದಾರಚಿತ್ತರೂ, ಮೇಧಾವಿಗಳೂ, ಜನೋಪಕಾರಿಗಳೂ, ವಿಶೇಷ ಪ್ರಜಾರಂಜಕರೂ ಆಗಿರುವರೆಂದೂ ರಾಜಪುತ್ರರಲ್ಲಿರಬೇಕಾದ ಲಕ್ಷಣವೆಲ್ಲಾ ಅವರಲ್ಲಿರುವುವೆಂದೂ, ಹೇಳಿದರು.

ಯುದ್ಧಾರಂಭವಾದಾಗಿನಿಂದ ಇದುವರೆಗೆ ರಷ್ಯನರು ತಾವು ಶತ್ರುಗಳಿಂದ ಸೆರೆಹಿಡಿದು ತಂದಸಾಮಾಗ್ರಿಗಳಲ್ಲಿ ಕೀಫ್ ಕೋಟೆಯೊಂದಕ್ಕೆ ತಂದಿರುವವುಗಳ ವಿವರವು ಹೇಗೆಂದರೆ— ೯ ಮಂದಿ ಜನರಲ್ಲುಗಳು, ೫೩೦೦ ಮಂದಿ ಉದ್ಯೋಗಿಗಳು, ೧೯೪೭೮೧ ಮಂದಿ ಸೈನಿಕರು, ೫೪ ಫಿರಂಗಿಗಳು, ೧೨೦ ಯಂತ್ರದಫಿರಂಗಿಗಳು, ೯೫೦ ಮದ್ದಿನ ಬಂಡಿಗಳು, ೯ ವಿಮಾನಗಳು, ೧೩೨೦೦೦ ತುಪಾಕಿಗಳು.

ಇಟಲಿ ದೇಶದಲ್ಲಿ ಆದ ಭೂಕಂಪದ ಅನರ್ಥವನ್ನು ಕುರಿತು ಪದ್ಧತಿಯಂತೆ ಆಸ್ಟ್ರಿಯಾ ಚಕ್ರವರ್ತಿಯು ಸಾನುಕಂಪಸಂದೇಶಗಳನ್ನು ಇಟಲಿ ಪ್ರಭುಗಳಿಗೆ ಕಳುಹಿಸಲಿಲ್ಲವಂತೆ. ಇದರಮೇಲೆ ಇಟಾಲಿಯನ್ ಪ್ರಜೆಗಳು ನಾನಾ ವ್ಯಾಖ್ಯಾನವನ್ನು ಮಾಡುತ್ತಿದ್ದಾರೆ. ರಷ್ಯಾಪ್ರಭುಗಳು ಸಾನುತಾಪ ತಂತ್ರೀವಾರ್ತೆಯನ್ನು ಇಟಲಿರಾಜರಿಗೆ ಬರೆದಿದ್ದರು. ಇದರಿಂದ ಇಟಲಿ, ಆಸ್ಟ್ರಿಯಾಗಳ ಮಧ್ಯದ ವಿಮನಸ್ಕತೆಯು ನಿರೂಪಿತವಾಗುವುದು.

ಯುದ್ಧಾಂಗಣದಲ್ಲಿ ಚಿತ್ರವಿಚಿತ್ರವಾದ ಹೊಸಹೊಸ ಶಸ್ತ್ರಾಸ್ತ್ರಗಳು ಉಪಯೋಗಿಸಲ್ಪಡುವವೆಂಬ ವಾರ್ತೆಯು ಬರುತ್ತಲಿದೆ. ಜರ್ಮನರು ನೀರಿನಲ್ಲಿ ಬಿಡುವಂತೆ ಭೂಮಿಯ ಮೇಲೂ ಒಂದು ವಿಧದ ಟಾರ್ಪೆಡೋವನ್ನು ಬಿಡುತ್ತಿರುವರಂತೆ. ಬೆಲ್ಜಿಯಮ್ಮಿನವರು ಒಂದು ಫಿರಂಗಿಯನ್ನು ರಚಿಸಿದ್ದಾರೆ. ಅದರ ಬಳಿಯಲ್ಲಿ ನಿಂತು ಗುಂಡನ್ನು ಹಾರಿಸುವುದು ಯಾರಿಗೂ ಸಾಧ್ಯವಲ್ಲ ಹಾರಿಸತಕ್ಕವನು ಅದಕ್ಕೆ ೫ ಮೈಲಿಗಳ ದೂರದಲ್ಲಿ ನಿಂತು ತಂತಿಯ ಸಹಾಯವಿಲ್ಲದೆ ವಾರ್ತೆ ಕಳುಹಿಸುವ ರೀತಿಯಂತೆ, ತಂತಿಯ ಸಹಾಯವಿಲ್ಲದೆ ಯಂತ್ರದ ಮೂಲಕ ಆ ಫಿರಂಗಿಗೆ ರಂಜಕವನ್ನು ಪ್ರಯೋಗಿಸುವರು ಆ ಫಿರಂಗಿಯಿಂದ ಗುಂಡುಗಳು ಹಾರುವುದಕ್ಕುಪಕ್ರಮಿಸುವುವು. ಫಿರಂಗಿಯು ತನ್ನಷ್ಟಿಗೆ ತಾನೇ ಮೂರೂಕಡೆಗೆ ತಿರುಗುತ್ತ ಗುಂಡುಗಳನ್ನು ಹಾರಿಸುತ್ತಿರುವುದು. ಫ್ರೆಂಚರು ಒಂದು ತರದ ತುಪಾಕಿಗಳನ್ನು ಉಪಯೋಗಿಸುತ್ತಿರುವರು. ಇದರಿಂದ ಗುಂಡುಗಳು ಹೊರಟಕೂಡಲೇ ಸುತ್ತು ಮುತ್ತಣ ಭೂಮಿಯೆಲ್ಲಾ ಬೆಳಕಾಗಿ ಹೋಗುವುದು. ಇವರು ಒಂದು ಹೊಸತರದ ಬಾಂಬನ್ನು ಕೂಡ ರಚಿಸಿದ್ದಾರೆ. ಒಂದೇಟಿಗೆ ೩೦ ಮಂದಿ ಜರ್ಮನರು ಹತರಾಗಿದ್ದಾರೆ.

ಪತ್ರವ್ಯವಹಾರ.

ಕೊಣ್ಣೂರ ಕರ್ನಾಟಕ ನಾಟಕ ಕಂಪನಿಯವರು ರಾಮದುರ್ಗಕ್ಕೆ ಬಂದು ಹೊಸದಾಗಿ ತಯಾರಿಸಿದ ಭವ್ಯ ಥಿಯೇಟರದಲ್ಲಿ ತಾ|| ೨೦-೧-೧೫ ದಿನ ತಮ್ಮ ಲೋಕಪ್ರಸಿದ್ಧವಾದ ಪ್ರಯೋಗಗಳನ್ನು ಮಾಡಿ ತೋರಿಸುವವರಾಗಿದ್ದರು. ರಾಮದುರ್ಗ ನಿವಾಸಿಗಳು ಅತಿ ಆನಂದಭರಿತರಾಗಿರುತ್ತಾರೆ.

ಸಿದ್ದಪ್ಪಾ, ಕೆರೂರ.

ತರೀಕೆರೆ ತಾ|| ಶಿವನಿಗ್ರಾಮದ ಕುರುಬರ ಸಿದ್ಧರಾಮನ ಮೇಲೆಯೂ ಪೋಲೀಸರಮೇಲೆಯೂ ಅತ್ಯಾಚಾರ (ಜುಲುಂ) ನಡೆಸಿದ್ದ ಅದೇ ಗ್ರಾಮದ ೧೫ ಜನರನ್ನು ಕಡೂರು ಡಿ|| ಸಬ್‌ಡಿವಿಜನ್ ಆಫೀಸರ್ ಮ್ಯಾಜಿಸ್ಟ್ರೇಟರು ಈ ತಿಂಗಳ ತಾ|| ೪ರಲ್ಲಿ ಚಿಕ್ಕಮಗಳೂರ ಕೋರ್ಟಿನಲ್ಲಿ ವಿಚಾರಿಸಿ ೧೦ ಜನರಿಗೆ ೨ ತಿಂಗಳು ಮೂವರಿಗೆ ೩ ತಿಂಗಳು ಮತ್ತೊಬ್ಬನಿಗೆ ೬ತಿಂಗಳು ಈ ಪ್ರಕಾರ ಕಾರಾಗೃಹವಾಸಶಿಕ್ಷೆಯನ್ನು ವಿಧಿಸಿದರು. ಈ ಗ್ರಾಮದಲ್ಲಿ ಎರಡುಪಕ್ಷವಾಗಿ ಬಹಳ ಅನರ್ಥವಾಗುತ್ತಿದ್ದಿತು. ಈವರೆಗೆ ಯಾರಿಗೂ ಶಿಕ್ಷೆಯಾಗದಿದ್ದು ಈಗ ಶಿಕ್ಷೆಯಾದುದರಿಂದ ಇತರರಿಗೆ ಎಚ್ಚರಿಕೆಯುಂಟಾಗುವುದೆಂದು ನಿರೀಕ್ಷಿಸುತ್ತೇನೆ.

ಕ್ಷೇಮಾಭಿಲಾಷಿ.

ಹೊನ್ನಾಳಿ ತಾಲ್ಲೂಕು ಸಾಸ್ವೆಹಳ್ಳಿ ಮಾಗಣಿ ರಾಂಪುರದಲ್ಲಿರುವ ಶ್ರೀ ಹಾಲಸ್ವಾಮಿಗಳ ರಥೋತ್ಸವವು ಇದೇ ಮಾಘ ಬಹುಳ ಬಿದಿಗೆ ಮಂಗಳವಾರ ಸಾಯಂಕಾಲ ೮ ಗಂಟೆಯಿಂದ ಬುಧವಾರ ಪ್ರಾತಃಕಾಲ ೮ ಗಂಟೆಯವರೆಗೆ ಬಹು ವಿಜೃಂಭಣೆಯಿಂದ ನಡೆಯುತ್ತಾದುದರಿಂದ ಈ ಲಾಗಾಯಿತು ೧೫ ದಿನಗಳವರೆಗೆ ಜಾತ್ರೆಯು ನಡೆಯುವುದಲ್ಲದೆ ೮೦-೯೦ ಸಾವಿರ ದನಗಳು ಮಾರಾಟಕ್ಕೆ ಬರುತ್ತವೆ. ಮತ್ತೂ ಸಾವಿರಾರುಜನರು ಸೇರುತ್ತಾರೆ. ಬಂದಂಥ ಜನರ ದಾಸೋಹಕ್ಕೆ ತಕ್ಕೇರ್ಪಾಟು ಮಾಡಲ್ಪಟ್ಟಿರುವುದು. ಈ ಜಾತ್ರೆಯನ್ನು ಸಾಂಗವಾಗಿ ನೆರವೇರಿಸಲು ಸಾಸ್ವೆಹಳ್ಳಿಯ ಮ|| ನಾಡಿಗ ಸಿದ್ದಪ್ಪನವರು ಮುಂದರಾಗಿ ನಿಂತಿರುವರಲ್ಲದೆ, ಇದೇ ಸಾಸ್ವೆಹಳ್ಳಿಯ ಮ|| ಗಳಾದ ಕತ್ತಲಗೆರೆ ಸಣ್ಣಮಲ್ಲಪ್ಪನವರೂ ಮತ್ತೂ ಗೌಡರು ಗಡ್ಡಪ್ಪನವರೂ ಕಾರ್ಯದರ್ಶಿಗಳಾಗಿರುವರು.

ಒಬ್ಬ ಭಕ್ತ.

ಶ್ರೀ ವೀರಶೈವ ವಾರದ ಬೋರ್ಡಿಂಗ್.

ಬಾಗಲಕೋಟೆಯಲ್ಲಿ ಶ್ರೀಮಂತ ಅಪ್ಪಾಸಾಹೇಬ ವಾರದ ಇವರ ಸ್ಮಾರಕದ ಬಗ್ಗೆ ೪ ವರ್ಷದ ಹಿಂದೆ ಸ್ಥಾಪಿತವಾದ ಬೋರ್ಡಿಂಗು ದಿನೇದಿನೆ ಊರ್ಜಿತಾವಸ್ಥೆಯನ್ನು ಹೊಂದುತ್ತಲಿರುವುದನ್ನು ವಿಶೇಷವಾಗಿ ನಾವು ಇಲ್ಲಿ ಹೇಳಬೇಕಾಗಿಲ್ಲ. ನಮ್ಮ ವಾರ್ಷಿಕ ರಿಪೋರ್ಟಿನ ಮೇಲಿಂದ ಖಾತ್ರಿಯಾಗುವುದು. ಇಲ್ಲಿ ಇಂಗ್ಲೀಷ್ ಕಲಿಯುವ ವೀರಶೈವ ವಿದ್ಯಾರ್ಥಿಗಳಿಗೆ ಊಟ [illegible] ದೀವಿಗೆ ಮೊದಲಾದುವುಗಳ ಸೋಯಿಮಾಡಿರುತ್ತದೆ. ದರ ತಿಂಗಳಿಗೆ ೩ ರೂ. ಫೀ ಕೊಡಬೇಕಾಗುವುದು. ವಿದ್ಯಾರ್ಥಿಗಳ ದೇಖರೇಖಿಯೆಂದರೆ ಅಭ್ಯಾಸಮಾಡುವುದು ಧರ್ಮದ ಪ್ರಕಾರ ನಡೆಯುವುದೂ ಅವರ ಶರೀರಾರೋಗ್ಯದ ಕಡೆಗೆ ಲಕ್ಷ್ಯಕೊಡುವುದೂ ಬಾಗಲಕೋಟೆ ಶಹರಿನ ಪ್ರಮುಖ ಸಭ್ಯಗೃಹಸ್ಥರಿಂದ ಮಾಡಲ್ಪಡುವುದು. ಈ ಊರಲ್ಲಿ ೬ ನೆ ಇಯತ್ತೆಯವರೆಗೆ ಇಂಗ್ಲೀಷ್ ಶಾಲೆ ಇದ್ದು, ಡಿಸೆಂಬರ ತಿಂಗಳಲ್ಲಿ ಪರೀಕ್ಷೆ ಆಗಿ ಇದೇ ಜನವರಿ ತಿಂಗಳಲ್ಲಿ ಹೊಸ ಕ್ಲಾಸುಗಳು ಆರಂಭಗೊಂಡಿರುತ್ತವೆ. ಇಂಗ್ಲೀಷ್ ಕಲಿಸಬೇಕೆಂಬುವ ಸಭ್ಯಗೃಹಸ್ಥರು ತಮ್ಮ ಮಕ್ಕಳನ್ನು ತೀವ್ರವಾಗಿ ಬೋರ್ಡಿಂಗದ ಸೆಕ್ರೆಟರಿಯವರ ಕಡೆಗೆ ಕಳುಹಿಸಬೇಕು.

ವ್ಯವಸ್ಥಾಪಕ.

ಕಡೂರು ತಾ|| ಗಿರಿಯಾಪುರದಲ್ಲಿ ಕಳೆದ ಡಿಸೆಂಬರ್ ತಾ|| ೧ ರಲ್ಲಿ ದರ್ಬಾರ್‌ಡೆ ಮಹೋತ್ಸವಕ್ಕಾಗಿ ಈ ಗ್ರಾಮದ ಮಹಾನೇಶ್ವರಮಠದ ಮಹಾನಪ್ಪ ಫಕೀರಸ್ವಾಮಿಗಳು, ಮ|| ಗಳಾದ ಶಾ|| ಶಂಕರಪ್ಪನವರು, ಗೋವಿಂದಪ್ಪನವರು, ಚಿಕ್ಕನಲ್ಲೂರು ತಾ|| ವೆಂಕಟಗಿರಿಯಪ್ಪನವರು, ಕೆ. ನಂಜಪ್ಪನವರು ಮೊದಲಾದ ಪ್ರಮುಖರು ಶೇಕದಾರ್ ಪ|| ಟಿ, ಎ. ನಾರಾಯಣಸೆಟ್ಟರ ಅಧ್ಯಕ್ಷತೆಯಲ್ಲಿ ಸಭೆ ಸೇರಿರುವಾಗ್ಗೆ ಪ್ರಾಪಂಚಿಕವ್ಯವಹಾರ ಜ್ಞಾನಕ್ಕೆ ಅತ್ಯಾವಶ್ಯಕವಾದ ಪುಸ್ತಕಭಂಡಾಗಾರ ವಾಚಕಶಾಲಾ ಅನ್ಯೋನ್ಯಸಹಾಯಸಂಘಗಳ ಸ್ಥಾಪನಾವಿಚಾರವಾಗಿ ಬಹಳ ರಸವತ್ತಾದ ಭಾಷಣಗಳು ನಡೆದು, ವಾಚಕಶಾಲೆ ಮತ್ತೂ ಪುಸ್ತಕಭಂಡಾರಗಳನ್ನು ಕೂಡಲೆ ಸ್ಥಾಪಿಸಲು ಒಂದು ಚಂದಾಪಟ್ಟಿಯು ಸಭೆಯಲ್ಲೇ ಏರ್ಪಡಿಸಲ್ಪಟ್ಟಿತಲ್ಲದೆ ವಾಚಕಶಾಲೆಗೆ "ಶ್ರೀ ವೃಷಭೇಂದ್ರವಾಚಕಶಾಲೆ" ಎಂದು ನಾಮಕರಣವು ಸಹ ಮಾಡಲ್ಪಟ್ಟಿತು. ಜ್ಞಾನವಿಕಾಸಕ್ಕೆ ಅನುಕೂಲವಾಗಿ ಪ್ರತಿತಿಂಗಳ ಮೊದಲನೆಯ ಭಾನುವಾರ ಸಭೆ ಸೇರಿ ವಿದ್ವಾಂಸರಿಂದಲೂ ವಿದ್ಯಾರ್ಥಿಗಳಿಂದಲೂ ಉಪನ್ಯಾಸಗಳು ನಡೆಸಲ್ಪಡುವುದಕ್ಕಾಗಿ ವಿದ್ಯಾವರ್ಧಕಸಮಾಜ ಎಂದು ಸ್ಥಾಪಿಸಲ್ಪಟ್ಟು, ಇದಕ್ಕೆ ಪ್ರತಿತಿಂಗಳಲ್ಲೂ ಒಬ್ಬೊಬ್ಬರು ಪೋಷಕರಾಗಿರಬೇಕೆಂದು ಅಧ್ಯಕ್ಷರು ಮಾಡಿದ ಸೂಚನೆಯ ಪ್ರಕಾರ ನಿರ್ಧರಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಕಡೂರು ತಾ|| ಹಿರೇನಲ್ಲೂರು.

ಚೋಳರಿಂದ ಪ್ರತಿಷ್ಠಿತವಾದ ಶ್ರೀ ಮಲ್ಲಿಕಾರ್ಜುನಸ್ವಾಮಿಯ ದೇವಸ್ಥಾನವು ಈಗಲೂ ಬಹಳ ರಮಣೀಯವಾಗಿರುವುದರಿಂದ ಬಹುದೂರದೇಶದ ಜನರು ಬಂದು ಇದನ್ನು ನೋಡಿಕೊಂಡು ಹೋಗುತ್ತಾರೆ. ಇದೇ ದೇವಸ್ಥಾನದಲ್ಲಿ ಕಳೆದ ತಿಂಗಳಲ್ಲಿ ಕಡಲೆ ಉತ್ಸವವು ಸಮೀಪಗ್ರಾಮದ ದೇವರುಗಳೊಡನೆ ಮಂಗಳವಾದ್ಯಸಮೇತ ಬಹಳ ವಿಜೃಂಭಣೆಯಾಗಿ ಗ್ರಾಮಸ್ಥರ ಸಹಾಯದಿಂದ ನಡೆಯಿತು. ಈ ಉತ್ಸವವನ್ನು ನೋಡುವುದಕ್ಕೆ ಅನೇಕ ಗ್ರಾಮಗಳಿಂದ ಜನಗಳು ಬಂದಿದ್ದರು. ಇವರಿಗೆ ಸಂತರ್ಪಣೆ ಮೊದಲಾದುವುಗಳೆಲ್ಲಾ ಸಾಂಗವಾಗಿ ನಡೆದುವು. ಈ ಗ್ರಾಮವು ಪುರಾತನಕಾಲದಲ್ಲಿ ದೊಡ್ಡ ಪಟ್ಟಣವಾಗಿದ್ದಂತೆ ಕಾಣುತ್ತದೆ ಈಗ ೨೦೦ ಮನೆಗಳುಳ್ಳ ಚಿಕ್ಕ ಗ್ರಾಮವಾಗಿದೆ. ಆದರೂ ಇಲ್ಲಿನ ಜನರು ಬಹಳ ದೈವಭಕ್ತಿಯುಳ್ಳವರಾಗಿರುತ್ತಾರೆ. ಈ ದೇವಸ್ಥಾನಕ್ಕೆ ಮುಖ್ಯ ಏಜಂಟರಾಗಿರುವ ಶ್ರೀಮಠದ ಚೆನ್ನಬಸವಯ್ಯನವರೂ ಮ|| ರಾ|| ಹೆಚ್. ಸೋಮಣ್ಣನವರೂ ಬುದ್ಧಿವಂತ ದೊಡ್ಡಯ್ಯನವರೂ ಪ್ರತಿವರುಷವೂ ಕಡಲೆ ಉತ್ಸವವನ್ನು ತಪ್ಪದೆ ನಡೆಸುತ್ತಲಿದ್ದಾರೆ. ಈ ದೇವಸ್ಥಾನದ ಮುಖ್ಯ ಏಜಂಟರಾಗಿರುವ ಮ|| ರಾ|| ದೇವರಮನೆ ಸೋಮಣ್ಣನವರು ಪ್ರತಿವರುಷವೂ ಧನುರ್ಮಾಸದಲ್ಲಿ ಒಂದು ತಿಂಗಳು ಸ್ವಂತಖರ್ಚಿನಿಂದ ಶ್ರೀಮಲ್ಲಿಕಾರ್ಜುನೇಶ್ವರನಿಗೆ ಧನುರ್ಮಾಸದ ಪೂಜೆಯನ್ನು ತಪ್ಪದೆ ನಡೆಸುತ್ತಲಿದ್ದಾರೆ. ಇವರುಗಳಿಗೆ ಭಗವಂತನು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಅತ್ಯುತ್ತಮವಾದ ಸುಖವನ್ನು ಕೊಡಲಿ ಎಂದು ಆ ಭಗವಂತನನ್ನು ಪ್ರಾರ್ಥಿಸುತ್ತೇವೆ.

ಓರ್ವ ದೈವಭಕ್ತ.

ಗದಗ ತಾಲ್ಲೂಕ ಹುಲಕೋಟಿ ಶಾಲೆಗೆ ಗ|| ರಾವಸಾಹೇಬ ಡಿ|| ಎ|| ಇನ್ಸ್‌ಪೆಕ್ಟರ ಧಾರವಾಡ ಇವರು ಬಂದು ವಾರ್ಷಿಕ ಪರೀಕ್ಷೆಯನ್ನು ತೆಗೆದುಕೊಂಡರು. ತಾ|| ೧೧-೧-೧೫ ನೇ ದಿವಸ ಗುರುವರ್ಯ ಬೆಂಡಿಗೇರಿ ಸಾಹೇಬರು ಸುತ್ತುಮುತ್ತಲಿನ ಯಾವತ್ತೂ ಮಾಸ್ತರ ಜನರನ್ನು ನೆರೆಯಿಸಿ ಮ್ಯಾಜಿಕ್‌ಲ್ಯಾಂಟರ್ನದಿಂದ, ಅ|| ಡಿಪ್ಯುಟಿಯವರಾದ ಬಂಡೆಪ್ಪನವರೊಂದಿಗೆ ಸಾದ್ಯಂತವಾಗಿ ಮಾಹಿತಿ ಮಾಡಿಕೊಟ್ಟರು. ಈ ಪ್ರಯೋಗವು ಪ್ರಥಮದಲ್ಲೇ ಹುಲಕೋಟಿ ಶಾಲೆಯಲ್ಲಿ ಆದದ್ದು ಈ ಶಾಲೆಯ ಸುದೈವವೇಸರಿ. ಇದರ ಪರಿಣಾಮದಿಂದ ಮರುದಿವಸ ಪರೀಕ್ಷಿಸಲ್ಪಟ್ಟ ನಿಬಂಧವಿಷಯದಲ್ಲಿ ೩-೪ ಇಯತ್ತೆಯ ವಿದ್ಯಾರ್ಥಿಗಳು ಶೇಕಡಾ ೬೫ಕ್ಕಿಂತ ಹೆಚ್ಚು ಗುಣಗಳನ್ನು ಪಡೆದರು. ಇದರಿಂದ ವಿದ್ಯಾರ್ಥಿಗಳ ಗ್ರಾಹಕಶಕ್ತಿಯು ಸ್ಪಷ್ಟವಾಗಿ, ಪರೀಕ್ಷಕರಿಗೆ ಆನಂದವನ್ನುಂಟುಮಾಡಿತು. ತಾ|| ೧೭-೧-೧೫ ನೇ ದಿವಸ ಪ್ರಾತಃಕಾಲದಲ್ಲಿ ಇನಾಮುಕೊಡುವ ಸಮಾರಂಭವು ಜರುಗಿತು. ಸಭಾಲಯಕ್ಕೆ ಗದಗ ತಾಲ್ಲೂಕಿನ ಶಿರಸ್ತೇದಾರ ಶಿರಾಳೆ ಸಾಹೇಬರೂ ಲೋ|| ಬೋ|| ಮೆಂಬರರು ಊರೊಳಗಿನ ಪ್ರಮುಖಜನರೂ ನೆರಿಹಳ್ಳಿಯ ಮಾಸ್ತರರೂ ಕೂಡಿದ್ದರು. ಮೊದಲು ವಿನಂತಿಮಾಡಿಕೊಂಡ ಸಭಿಕರ ಅಭಿಪ್ರಾಯದ ಪ್ರಕಾರ ರಾವಸಾಹೇಬ ಡೆಪ್ಯೂಟಿ, ಎ. ಇನ್ಸ್‌ಪೆಕ್ಟರು ಬೆಂಡಿಗಿರಿ ಸಾಹೇಬರು, ಎಲ್ಲ ಸಭಿಕರ ಕರತಾಡನದೊಡನೆ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು. ಅನಂತರ ಮೊದಲಿಗೆ ನೇಮಿಸಿದಂತೆ ಕಾರ್ಯಕ್ರಮಗಳು ಜರುಗಹತ್ತಿದವು. ಮೊದಲು ದೇವರ ಸ್ತೋತ್ರ ರಾಜಸ್ತೋತ್ರಗಳನ್ನು ಪೇಟಿಯಾನೊಡನೆ ಇನಿದಾದ ಸ್ವರದಿಂದ ಶಾಲೆಯ ಬಾಲಕರು ಹಾಡಿದರು. ಅನಂತರ ಇಲ್ಲಿಯ ಹೆ|| ಶಾ|| ಹೆ|| ಮಾಸ್ತರು ಮ|| ರುದ್ರಗೌಡ ಶಿವನಗೌಡ ಸಿದ್ದನಗೌಡರ ಇವರು ಸಭೆಯ ಉದ್ದೇಶವನ್ನು ಕುರಿತು ಸರಸವಾದ ಭಾಷಣವನ್ನು ಮಾಡಿದರು. ತರುವಾಯ ಚಿಕ್ಕಚಿಕ್ಕ ಬಾಲಕರು ನೀತಿಪರವಾದ ಸಂಭಾಷಣಗಳನ್ನು ಯಾವತ್ತು ಸಭಿಕರು ತಲೆದೂಗುವಂತೆ ಮಾಡಿ ತೋರಿಸಿದರು. ಆಮೇಲೆ ಇಲ್ಲಿಯ ೧ ನೇ ಅ|| ಮಾಸ್ತರ ನಾಗನೂರ ಇವರು ಮ್ಯಾಜಿಕ್‌ಲಾಂಟರ್ನದಿಂದಾಗುವ ಪರಿಣಾಮಗಳನ್ನೂ ಲಾಭಗಳನ್ನೂ ಕುರಿತು ಸರಸವಾದ ಭಾಷಣಮಾಡಿದರು. ಮತ್ತು ಇಲ್ಲಿಯ ಅಸೋಸಿಯೇಷನ್ ಲೋಕಲ್ ಸೆ|| ಮ|| ಗೋವಿಂದಗೌಡಾ ಪಾಟೀಲ ಇವರು ಆರೋಗ್ಯದ ವಿಷಯಕ್ಕೆ ಅಸ್ಖಲಿತ ವಾಣಿಯಿಂದ ಭಾಷಣಮಾಡಿದರು. ವಿ|| ಎಸ್. ಬಿ. ಪಾಟೀಲ ಇವರು ಪೂರ್ಣಾಡಿನ ಅದ್ಭುತ ಚರಿತ್ರೆಯನ್ನು ಉಪದೇಶಿಸಿದರು. ನಂತರ ಗಂಡುಹುಡುಗರಿಗೂ ಹೆಣ್ಣುಹುಡುಗರಿಗೂ ಅಧ್ಯಕ್ಷರು ಉದಾರಹಸ್ತದಿಂದ ಇನಾಮು ಕೊಡುವದು ಜರಗಿದ ಮೇಲೆ ರಾ|| ರಾವಸಾಹೇಬ ಅ|| ಡೆ|| ಎ|| ಇನ್ಸ್‌ಪೆಕ್ಟರ ಮ|| ರಾ|| ಬಂಡೆಪ್ಪನವರು ನೀತಿಶಿಕ್ಷಣದ ಬಗ್ಗೆ ಮತ್ತು ಸ್ವಚ್ಛತೆಯ ಬಗ್ಗೆ ಮತ್ತು ಇನಾಮು ಕೊಡುವದರಿಂದಾಗುವ ಲಾಭಗಳಬಗ್ಗೆ ಉಪದೇಶವನ್ನು ಮಾಡಿ ನೀತಿಮೂರ್ತಿ ಬೆಂಡಿಗಿರಿ ಸಾಹೇಬರವರ ಅನುಕರಣವನ್ನು ಮಾಡಬೇಕೆಂದೂ ಹೇಳಿದರು. ಇಷ್ಟಾದಮೇಲೆ ಅಧ್ಯಕ್ಷ ಮಹನೀಯರವರು ಸ್ವಚ್ಛತೆ ನೀತಿಶಿಕ್ಷಣಗಳ ಬಗ್ಗೆ ಉಪದೇಶ ಮಾಡಿ, ಊರವರೂ ಶಾಲಾಮಾಸ್ತರರೂ ನಡೆದುಕೊಳ್ಳುವ ಸನ್ಮಾರ್ಗವನ್ನು ಕುರಿತು ಅಸ್ಖಲಿತವಾಣಿಯಿಂದ ಎಲ್ಲಸಭಿಕರೂ ತಲೆದೂಗುವಂತೆ ಉಪದೇಶಮಾಡಿದರು. ಮತ್ತು ಶಾಲೆಯ ವಿಷಯವಾಗಿ ಈ ಶಾಲೆಯಲ್ಲಿ ಈ ವರುಷ ಶೇಕಡಾ ೬೫ ರಂತೆ ಪಾಸಾದದ್ದು ನೋಡಿ ಆನಂದಭರಿತರಾಗಿ ಪ್ರಮಾಣಕ್ಕನುಸರಿಸಿ ಈ ಶಾಲೆಗೆ ಬಹಳ ಇನಾಮುಗಳನ್ನು ಕೊಟ್ಟಿರುತ್ತೇವೆಂದು ಆನಂದಪಟ್ಟು, ಮಾಸ್ತರಜನರು ಹೀಗೆ ಕರ್ತವ್ಯದಕ್ಷರಾಗಿ ಶಾಲೆಯ ಸ್ಥಿತಿಯನ್ನು ಬೆಳೆಸಿ ವರಿಷ್ಠರನ್ನು ಆನಂದಪಡಿಸ್ಯಾರೆಂದು ಆಶಿಸುತ್ತೇನೆಂದು, ಹೇಳಿ ಇಲ್ಲಿ ಸ್ಥಾಪಿತವಾಗಿದ್ದ ಪೂರಕಂಡಿಗೆ ಆಶ್ರಿತರಾಗಿ ಉದಾರಹಸ್ತದಿಂದ ೪ ರೂಪಾಯಿಗಳನ್ನು ಕೊಟ್ಟರು. ಶಿರಸ್ತೇದಾರ ಶಿರಾಳೆಯವರು ೪ ರೂ.ಗಳನ್ನೂ ಅ|| ಡೆ|| ಬಂಡೆಪ್ಪನವರು ೧ ರೂ.ಯನ್ನು ಡೆ|| ಎ|| ಇನಸ್ಪೆಕ್ಟರ ಕ್ಲಾರ್ಕ ಮ|| ವಿರುಪಾಕ್ಷರು ೧ ರೂ.ಯನ್ನು ಇನಾಮಾಗಿ ಕೊಟ್ಟರು. ಅನಂತರ ಹೆ|| ಮಾಸ್ತರರೂ, ಸಭಾಧ್ಯಕ್ಷರೂ, ಉದಾರಮಹನೀಯರೂ ಆದಂಥವರನ್ನು ಆಭಾರ ಮನ್ನಿಸಿದರು. ಕಡೆಗೆ ಸಭಾಧ್ಯಕ್ಷರಿಗೂ ಸಭಿಕರಿಗೂ ತಾಂಬೂಲ ಹಾರ ತುರಾಯಿಗಳನ್ನು ಅರ್ಪಿಸಿದನಂತರ ದರವರುಷಕ್ಕಿಂತ ಈ ವರುಷ ಇನಾಮುಕೊಡುವ ಕೆಲಸಕ್ಕೆ ಹೆಚ್ಚು ಹಣ ಸಿಕ್ಕಿರುವದೆಂಬುದು ನಮ್ಮೆಲ್ಲರ ಸುದೈವವೆಂದು ತಿಳಿದು, ಹೀಗೆ ವಿದ್ಯಾಭಿವೃದ್ಧಿಗೆ ಆಶ್ರಯ ಕೊಟ್ಟಿರುವ ನಮ್ಮ ಶ್ರೀಮನ್ ವೈಭವಶಾಲಿಗಳಾದ ಸಾರ್ವಭೌಮ ಪಂಚಮಜಾರ್ಜರಿಗೂ, ಮಹಾಮೇರಿ ರಾಣಿಯವರಿಗೂ ಜಗದೀಶನು ಸದಾ ಜಯವನ್ನೀಯಲೆಂದು ಯಾವತ್ತು ಆಬಾಲವೃದ್ಧರೊಡನೆ ರಾಷ್ಟ್ರಗೀತವನ್ನು ಹಾಡಿ ಕರ್ತವ್ಯದಕ್ಷರಾದ ಅಧ್ಯಕ್ಷ ಮಹನೀಯರವರಿಗೂ ಇವರ ಕುಟುಂಬಕ್ಕೂ ಆಯುರಾರೋಗ್ಯ ಐಶ್ವರ್ಯವರ್ಧಿಸಲೆಂದು ದೇವರನ್ನು ಪ್ರಾರ್ಥಿಸಿ, ಪ್ರಸ್ತುತದಲ್ಲಿ ನಮ್ಮ ರಾಜಾಂಗ ಜಯವಾಗಲೆಂದು ಕೋರಿ, ನೂರುಸಾರೆ ಜಯಘೋಷದೊಡನೆ ಸಭೆಯು ವಿಸರ್ಜನೆಯಾಯಿತು.

ವಿದ್ಯಾಭಿಮಾನಿ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕಾರ್ಯ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿ ಕೊಡುತ್ತೇವೆ.

ಚೆನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೮-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧-೦-೦ ರೂ. ಕೊಡಬೇಕಾಗುವುದು ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರದ ಬಣ್ಣದಿಂದ ಬಿಳಿ ಗ್ಲೇಜು ಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೧-೨-೦; ಅನಂತರ ಪ್ರತಿ ೧೦೦ ಕ್ಕೂ ೦-೧೦-೦; ಹಳದಿ ಗ್ಲೇಜ್ ಕಾಗದದಮೇಲೆ ಮೊದಲನೇ ೧೦೦ ಕ್ಕೆ ೨-೨-೦; ಅನಂತರ ಪ್ರತಿ ೧೦೦ ಕ್ಕೂ ೦-೧೨-೦; ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೩-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦-೩-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಕಾರ್ಯಪ್ರೆಸ್, ಮೈಸೂರ್.

ನೋಟೀಸು.

ನೈಜಾಮ ಇಲಾಖಾ ಯಲಬುರ್ಗ ತಾ|| ಧರಮುರಡೀ ಹಿರೇಮಠದ ಪಟ್ಟಾಧ್ಯಕ್ಷ ಕೊಟ್ಟೂರ ಬಸವಸ್ವಾಮಿಗಳವರ ಸನ್ನಿಧಿಯಿಂದ—

ಸಮಸ್ತ ವೀರಶೈವ ಜನಂಗಳಿಗೆ ಈ ಸ್ಟಾರ ಮುಖೇನಾ ಶ್ರುತಪಡಿಸುವುದೇನೆಂದರೆ:—ನಾವು ಮದ್ರಾಸ್ ಇಲಾಖೆಯ ಕಡೆಗೆ ಸಂಚಾರಕ್ಕೆ ದಯಮಾಡಿಸುವ ಕಾಲಕ್ಕೆ ಸದರೀ ಮಠದ ಶಾಂತಮರಿ ಎಂಬುವನನ್ನು ಮಠದ ಇಂತಜಾಮ ಸರಿಯಾಗಿಡುವುದಕ್ಕೆ ಯಾವತ್ತು ಸಾಮಾನುಗಳನ್ನು ಅವನ ತಾಬೇಕ್ಕೆ ಕೊಟ್ಟು ದಯಮಾಡಿಸಿದ್ದಿವಿ. ಪುನರಪಿ ಸದರೀ ಮಠಕ್ಕೆ ದಯಮಾಡಿಸಬೇಕಾದರೆ ೪ ತಿಂಗಳು ಬೇಕಾದುವು:—ಅಷ್ಟರೊಳಗಾಗಿಯೇ ಸದರೀ ಮರಿಯು ಸರ್ವ ಸಾಮಾನುಗಳನ್ನೂ ವಗೈರೆ ಬಿಲ್ಲೆಗಳನ್ನೂ ವ ಚಪ್ರಾಶಿ ಬಿಲ್ಲೆ ಸಹಿತ ಚೋರಿಯಿಂದ ತೆಗೆದುಕೊಂಡು ಹೋಗಿ ದೇಶ ಮಧ್ಯದಲ್ಲಿ ಸದರೀ ಮಠದ ಚರಮೂರ್ತಿ ಎಂಬದಾಗಿ ಹೇಳಿಕೊಳ್ಳುತ್ತಾ ಆಚಾರಸ್ಥರಿಗೆ ಧೋಕಾ ಕೊಡುವುದಲ್ಲದೆ ಸದಾಚಾರಕ್ಕೂ ವೃದ್ಧಾಚಾರಕ್ಕೂ ಬಾಹ್ಯನಾಗಿ ಸಂಚರಿಸುತ್ತಿರುತ್ತಾನೆ. ಶಿವಭಕ್ತರಾದವರು ಇಂಥಾ ದುಷ್ಟಮನುಷ್ಯನನ್ನು ಹಿಡಿದು ಸನ್ನಿಧಿಗೆ ಅರಿಕೆ ಮಾಡಿಕೊಳ್ಳದೆ ಇರಲಾರರು.

ಓರಿಯಂಟಲ್ ಫಾರ್ಮಸಿ ಮೈಸೂರು.

ಪ್ರಸಿದ್ಧಿ ಗುಣಕಂಡ ಔಷಧಗಳು.

ಜ್ವರದಮಾತ್ರೆ—ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ ೩೨ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಯುಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮಂದ ಇವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೪ ಡಬ್ಬಿಗೆ ೧ರೂ.

ಗೋರೋಜನದಮಾತ್ರೆ—ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೮೦ಮಾತ್ರೆ ಶೀಷೆಗೆ ೪ ಆಣೆ, ೪ ಶೀಷೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೂಡ್ಲೆ ತಪ್ಪ ಜೀರ್ಣಶಕ್ತಿ ಕೊಡುತ್ತೆ. ಪ್ರಯಾಣಿಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೪ ಶೀಷೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾದಯ ನೋವು ಉಳುಕು ಊತ ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ ೪ ಡಬ್ಬಿಗೆ ೧ ರೂ. ಕೊತ್ತೆ ನಮ್ಮ ಕ್ಯಾಟಲಾಗಿಗೆ ಬರಿಯಿರಿ ಮುಫತ್ತು ಕಳುಹಿಸುತ್ತೇವೆ.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

6

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪುಷ್ಟಿಕಮಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫವುಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. -೮-೦. ೮೦ ತೊಲೆಗೆ ರೂಪಾಯಿ ೩ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠತಮವಾದ

17

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ-ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸುವಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರರಜ್ವರ ನಾಲ್ಕರಜ್ವರ- ಮಲೇರಿಯಾಜ್ವರ- ತಲೆನೋವು- ಮೈಕೈನೋವು ಮತ್ತು ಬಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳೆತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದುವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ. ಪಿ ಛಾರ್ಜು ಪ್ರತ್ಯೇಕ.

ಆಮೋದಿನಿ:—ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರವಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮ, ದಮ್ಮು ಉಬ್ಬಸ, ವಾಂತಿ, ವಾಕರಿಕೆ, ಮಲಬಂಧ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತಕ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಐದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ. ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ||ಡಿ

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೆಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ನ್ಯಾಸನತೆಳೆಸಹಿತ ಆದ ಸಮಾರಂಭ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಸೈಜು ಬಣ್ಣದ್ದು ೧|| ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜೆಮಾಡುತ್ತಿರುವ ಫೋಟೋ ಕ್ರಯ ೧ ಕ್ಕೆ ೧ ರೂಪಾಯಿ. ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ ಕ್ಕೆ ಕ್ರಯ ಫುಲ್ಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಅನಂದಸ್ವಾಮಿಯ ಫೋಟೋ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೋ ಸಿಕ್ಕುತ್ತವೆ. ಫುಲ್ಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.



ಹೊಸಫ್ಯಾಷನ್—ಸಭ್ಯಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚು ಪಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಈಪ್ರಕಾರ ೨ ಫೋಟೋ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ||, |||= , ೧, ೧|, ಪ್ರಕಾರ, ಮತ್ತೂ ಬೆಳ್ಳೀದು ರು ೧|| ರೋಡ್ ಗೋಲ್ಡು ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨||, ೨||| ರೂ.

ಪರೂರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ.

ನಮ್ಮವಿಳಾಸ— ಗಂಗಪ್ಪಾ ಜೇರಿಗೆ,
ಆರ್ಟಿಸ್ಟ್ ಸೊಲ್ಲಾಪುರ.

40

ಬಹುಮಾನ! ಶ್ರೀ ಬಹುಮಾನ !!

ಅತ್ಯಾಶ್ಚರ್ಯಕರವಾದ ಬಹುಮಾನ.

೫೦ ಸಾವಿರ ರೂಪಾಯಿಗಳು ಹಂಚಲ್ಪಡುವವು
ದಿವ್ಯೌಷಧ ಬಳ್ಳಾರಿ. ಸುಪ್ರಸಿದ್ಧೌಷಧ
ಸರ್ವಜನಮನೋಲ್ಲಾಸಿನಿ ಅಂಡ್ ಕೋ ಇವರ

(• ನಾರಸಿಂಹಚೂರ್ಣವು •) 12

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವದು ಸಹಜವಾದುದಷ್ಟೆ. ಆದರೆ ಅನೇಕ ದುರ್ವ್ಯರ್ತನಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವುವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನ ಕಣ್ಣಾರ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವುವಿಧ ಔಷಧಗಳನ್ನು ವಿಶೇಷವಾದ ಬೆಲೆಯನಿಟ್ಟು ವಿಕ್ರಯಿಸಿದರು ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವದು ವಿಷಾದಕರವಾಗಿರುವದು. ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿ (ನಾರಸಿಂಹಚೂರ್ಣವು) ಎಂಬ ಒಂದಾನೊಂದು ಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮನುಷ್ಯನು ೧೫ ದಿನಗಳು ಸೇವಿಸಿದರೆ ಮುದುಕತನ, ಅನೇಕತರಹೆಯ ಮೇಹರೋಗಗಳು, ಪಾಂಡುರೋಗ, ಪೀನಸ, ಹದಿನೆಂಟುಬಗೆಯಾದ ಕುಷ್ಠಗಳು, ಎಂಟುವಿಧ ಉದರರೋಗಗಳು, ಭಗಂಧರವು, ಮೂತ್ರಕೃಛ್ರವು, ಗೃಧ್ರಸೀವಾತವು, ಕಾಮಿಲೆ, ಕ್ಷಯವು ಮಹಾಶ್ವಾಸಗಳು, ದಾರುಣವಾದ ವಿದುಬಗೆಯಾದ ಕಾಸೆಗಳು, ಎಂಭತ್ತು ವಿಧಗಳಾದ ವಾತರೋಗಗಳು, ನಲವತ್ತು ಬಗೆಯಾದ ಪಿತ್ತಗಳು, ಇಪ್ಪತ್ತು ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಕಿಡಿಬಿನಿಂದ ಇಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ, ಚಿನ್ನದಂಥಾ ಕಾಂತಿಯು, ಸಿಹ್ಮನಂತೆ ಪರಾಕ್ರಮವು, ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯಂತೆ ದೃಷ್ಟಿಯು ಅತ್ಯಧಿಕ ವೀರ್ಯವೃದ್ಧಿಯು ನೃಸಿಹ್ಮನಿಗೆ ಸಮಾನರಾದ ಮಕ್ಕಳನ್ನು ಪಡೆಯುವಬಲವೂ ಉಂಟಾಗುವುದು ಇದರಲ್ಲಿ ಯಾವ ವಿಧವಾದರಸಗಳಾಗಲಿ ಮಿಶ್ರವಾಗಿಲ್ಲ, ಇನ್ನಾವ ದೋಷಗಳೂ ಇಲ್ಲ. ನಿರ್ದುಷ್ಟವಾದದ್ದು, ಫಕ್ತ ವನಸ್ಪತಿಗಳಿಂದಲೇ ಸಿದ್ಧಮಾಡಿದದಿವ್ಯವಾದ ಔಷಧ. ಅನೇಕ ಪಂಡಿತರು, ಧನಿಕರು' ಸರ್ಟಿಫಿಕೇಟುಗಳನ್ನು ಕೊಟ್ಟಿರುವರು.

೧೫ ದಿನ ಉಪಯೋಗಕ್ಕೆಬರುವ ಡಬ್ಬಿ ೧ ಕ್ಕೆ ಬೆಲೆ ರೂ. ೧-೦-೦

—(ಬಹುಮಾನಗಳನ್ನು ಹಂಚುವ ವಿಧಾನ)—

೧ ಡಜನ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೧೦೦೦೦ ರೂ. ೬ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೬೦೦೦ ರೂ. ೩ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೪೦೦೦ ರೂ. ೨ ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ ೩೦೦೦ ರೂ. ೧ ಡಬ್ಬಿಯನ್ನು ತರಿಸಿಕೊಳ್ಳುವವರಿಗೆ ೨೦೦೦ ರೂ.

೧೯೧೪ ನೇ ಜುಲೈ ೧ ನೇ ತೇದಿ ಮೊದಲು ೧೯೧೫ ನೇ ಜುಲೈ ೧ ತೇದಿಯವರಿಗೂ ಈ ಔಷಧವು ಒಂದು ಲಕ್ಷ ಡಬ್ಬಿಗಳು ಖರ್ಚಾದಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ. ಒಂದುಪಕ್ಷದಲ್ಲಿ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದು ಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ವಾಯಿದೆಯನ್ನು ಹೆಚ್ಚಿಸದೆ ಎಷ್ಟು ಡಬ್ಬಿಗಳು ಖರ್ಚಾಗಿರುತ್ತವೆಯೋ ಅಷ್ಟಕ್ಕೆ ದಾಮಾಷಾಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಯೊಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡೆಯುವದಲ್ಲದೆ ಬಹುಮಾನವನ್ನು ಸಹಾ ಹೊಂದವದಕ್ಕೆ ಅರ್ಹನಾಗಿರುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರು ಸಂಶಯವಿಲ್ಲ. ಬಹುಮಾನದ ಮೊತ್ತವು ನಿಷ್ಪಕ್ಷಪಾತವಾಗಿ ಒಂದೇ ಸಮನಾಗಿ ಹಂಚಲ್ಪಡುವುವು.-ಇದು ಮೋಸವಲ್ಲ, ಲಾಟರಿಯಲ್ಲ, ಯಾವ ವಿಧವಾದ ಕುಹಕತನವು ಇಲ್ಲ, ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರ ಮಾತುಗಳಿಗೆ ನಿಗಾ ಕೊಡಲಾಗದು, ಜಾಗ್ರತೆ ತರಿಸಿಕೊಳ್ಳಿರಿ. ಔಷಧದ ಗುಣವನ್ನು ಪರೀಕ್ಷಿಸಿರಿ ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳ್ಳಿರಿ.

ಇದಲ್ಲದೆ ನಮ್ಮಲ್ಲಿ ಇನ್ನು ಅನೇಕತರಹೆಯ ಔಷಧಗಳು ಸಿಗುತ್ತವೆ. ರೋಗದಲಕ್ಷಣವನ್ನು ತಿಳಿಸಿದರೆ ಅಮೂಲ್ಯವಾದ ಮತ್ತು ಗುಣಕಾರಿಗಳಾದ ಔಷಧಗಳನ್ನು ಕಳುಹುವೆವು.

ಇದರ ಅನುಪಾನ ಪತ್ರಿಕೆಯನ್ನು ಬಹುಮಾನದ ಟಿಕೀಟನ್ನು ಡಬ್ಬಿಸಂಗಡ ಕಳಿಸುವೆವು. ನಮ್ಮ ಕಂಪೆನಿಯ ಕಾಶಿ ವಿಶ್ವನಾಥ ಮಾರ್ಕು ಇಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು.

ನಮ್ಮ ಅಡ್ರೆಸ್ಸು,
ಸರ್ವಜನಮನೋಲ್ಲಾಸಿನಿ ಅಂಡ್ ಕೋ ಬಳ್ಳಾರಿ.

ವಿಜ್ಞಾಪನೆ.

ಈ ಸಮಯ ಬಿಡಬೇಡಿರಿ. ಮುಂದೆ ದೊರೆಯಲಾರದು. ಮೊಳಕಾಲ್ಮೂರಿನ ಪ್ರಸಿದ್ಧವಾದ ರೇಶ್ಮೆಯವಸ್ತ್ರಗಳು ಬೇಕೋ! ಬೆಲೆಸುಲಭ! ಬಣ್ಣ ಗ್ಯಾರಂಟಿಯಾದದ್ದು. ಒಂದು ಸಲ ತರಿಸಿನೋಡಿರಿ !! ನಮ್ಮಲ್ಲಿ ಹೊದಿಯುವ ವಸ್ತ್ರಗ

ಳೂ, ಮೊಗಟಗಳೂ, ಸೀರೆಗಳೂ, ನಡಕಟ್ಟುಗಳೂ, ಲಿಂಗದವಸ್ತ್ರಗಳೂ, ಕೈ ವಸ್ತ್ರಗಳೂ ಬಹಳ ಚೆನ್ನಾಗಿ ಎಲ್ಲಾ ರಂಗಿನಲ್ಲಿಯೂ ತಯಾರಾಗುತ್ತವೆ. ನಾವು ಮೈಸೂರು, ಮದ್ರಾಸು ಸೀಮೆಗಳ ಎಲ್ಲಾ ಭಾಗಕ್ಕೂ ನಮ್ಮ ಮಾಲನ್ನು ರವಾನಿಸುತ್ತೇವೆ. ನಮ್ಮ ಮಾಲುಗಳಿಗೆ ಬಹುಮಾನಗಳೂ, ಮೆಡಲುಗಳೂ, ಬಂದಿವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಹಿಮಂತಋತುವಿನ ದರಗಳು. ೧ನೆ ನಂ ವಸ್ತ್ರಗಳು ತೊಲೆ ೧ಕ್ಕೆ ೦-೩-೦. ೨ನೆ ನಂ. ವಸ್ತ್ರಗಳು ತೊಲೆ ೧ಕ್ಕೆ ೦-೬-೯. (ಮೊಗಟ) ಅರಳೆಪೇಟ ಸೀರೆಗಳೂ, ನಡಕಟ್ಟು, ಲಿಂಗದವಸ್ತ್ರಗಳು, ೧ನೆ ನಂ. ಮಾಲು ತೊಲೆ ೧ಕ್ಕೆ ೦-೮-೦. ೨ನೆ ನಂ. ಮಾಲು ತೊಲೆ ೧ಕ್ಕೆ ೦-೩-೬.

ನಮ್ಮ ವಿಳಾಸ: —

10 ಎಂ. ಎಸ್. ಮಲಕಣ್ಣ, ಮತ್ತು ಬ್ರದರ್ಸ್,
ರೇಶ್ಮೆ ಜವಳಿ ವ್ಯಾಪಾರಿಗಳು. ಪೋಸ್ಟ್ ಮೊಳಕಾಲ್ಮರು

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕದನಗಳ ಪಟಗಳೂ ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ. ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು ! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ ೨ ಆಣೆ; ವಿ. ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ. ದಿ ಜನರಲ್ ಏಜನ್ಸಿ. ಮೈಸೂರು. 70

ಊದಬತ್ತಿಗಳು.

39

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦; ೯-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ಕ್ಕೆ ೧-೧-೦; ಹಸಿಗಂಧ ತೋಲಾ ೧ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ಕ್ಕೆ ೪ ಆಣೆ ಧೂಪದಗಟ್ಟಿ ೧ಕ್ಕೆ ೨ ಆಣೆ ಬಾಲಗ್ರಹದೂಪರ್ಟಿ ೧ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್ ಸನ್ಸ್
ಸುಗಂಧಕಾರಿ, ಮೈಸೂರು.

ಲೋಕಪ್ರಸಿದ್ಧವಾದ ಪಂಜಾಸಾಲಾಮಿಸ್ರಿ ಮುರಬ್ಬಾ.

11

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವವರನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ „ಪಂಜಾ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ ! ಸೇವಿಸಿರಿ !! ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳಿಗೆಡ್ಡೆ, ಶಾಮಗೆಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾ ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುದು ತಿಳಿದುಬರುತ್ತೆ.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ನೀರಿನಂತಿರುವ ಧಾತುವನ್ನು ಘಟ್ಟಿಪಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿ ಹೋಗುವ ಧಾತುವನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಉರಿಯುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕ್ಷಣಕ್ಷಣಕ್ಕೂ ಮೂತ್ರವಾಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೆದುಳಿಗೆ ಬಲವನ್ನು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವುದು
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ತಾಂಬ್ರಾ ಮತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲ ಬರುವಂತ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವುದು.

ಒಂದು ಡಬ್ಬ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕಂಡುಬರುತ್ತೆ. ೨-೩ ಡಬ್ಬಿಗಳನ್ನು ಉಪಯೋಗಿಸುವದರಿಂದ ಜನ್ಮಾಂತರದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು „ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ
೫೦೦ ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ಕ್ಕೆ ರೂ. ೨-೦-೦. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ ೬ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೋ, ದೊಡ್ಡಪೇಟೆ, ಬೆಂಗಳೂರು ಸಿಟಿ.
ಡಿ. ಮನ್ನಾಲಾಲ್ ದಿಲ್ಲೀವೈದ್ಯರು, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

36

ಶೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ಬಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ಸಜ್ಜುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈ ಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಒಂದು ಬುಡ್ಡಿಯು ನಿಮ್ಮಲ್ಲಿರಲಿ. ಮುಖ್ಯೊಂದು ಸಹಾಯವ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧—೦—೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಗಂಧರಾಜ ನಸ್ಯದಪುಡಿ.

48

ಈ ಪುಡಿಯನ್ನು ಹಾಕಿಕೊಳ್ಳುವದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ) ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದ್ದರೂ ತಪ್ಪದೆ ಗುಣವಾಗುತ್ತದೆ. ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚುಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದಗೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ಡರ್ಜ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಘಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗ್ನು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುತ್ತವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ಡರ್ಜ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಪೂರು, ಹನೂರು ಪೋಸ್ಟ್
ಕೊಳ್ಳೇಗಾಲದ ತಾಲ್ಲೂಕು.

೧೯೧೫ನೆಯ ಇಸವಿ ಜನವರಿ ತಾ॥ ೩೧ರಿಂದ ೧೯೧೫ನೆಯ ಫೆಬ್ರವರಿ ತಾ॥ ೬ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ಮಾಘ ಶು॥ ಪೌರ್ಣಮಿಯಿಂದ ಮಾಘ ಬ॥ ಸಪ್ತಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕ ತೇದಿ
31	¹ಭಾನು	ಪೌ	8-56	ಪುಷ್ಯ	4-0	18
1	²ಸೋ	ಪಾ	8-18	ಆಶ್ಲೇಷ	4-57	19
2	ಮಂಗ	ಬಿದಿ	6-30	ಮಖಾ	4-43	20
3	³ಬುಧ	ತದಿ	3-31	ಉಪರಿ	55-41	21
4	⁴ಗುರು	ಪಂ	55-18	ಹಸ್ತ	[illegible]-12	22
5	ಶುಕ್ರ	ಷಷ್ಠಿ	49-51	ಚಿತ್ತ	54-46	23
6	ಶನಿ	ಸಪ್ತ	44-6	ಸ್ವಾತಿ	50-45	24

(1) ವ್ಯಾಸಪೂರ್ಣಿಮಾ. (2) ತಿರುಮಡಿಶ್ಯೆಯಾಳ್ವಾರ್ ತಿರುನಕ್ಷತ್ರಂ (3) ಅಪಮೃಃ,. ಸಂಕಟಹರ ೪, ದಗ್ಧಯೋಗಃ. (4) ಕೂರತ್ತಾಳ್ವಾರ್ ತಿರುನಕ್ಷತ್ರಂ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಮೈಸೂರ್ ಸ್ಟಾರ್.

ಹಿಶೂರಪುರೀತಾರಾ ವರಮಧಿಗತರಾಜಮಂಡಲಹಿತೈಷಾ ।
ನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ॥

ಶ್ರೀಮತ್ಕೃಷ್ಣನೃಪಾಲನುತ್ತಮಕಲ್ಪ[illegible]ಲಂಸುಧೀಪುಂಗವ ।
ಸ್ತೋಮಾಬ್ಧೀಂದು[illegible]ನಾಕಲಿತ[illegible]ಜ್ಞಾಲವಾಲಂಬಲಂ ॥
ಸಿಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ ।
ಪ್ರೇಮಂ[illegible]ಯುಂಸದಾಪೂರೆಗ[illegible]ಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೧೪—೦

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಸಂಪುಟ ೨೮) ಮೈಸೂರ್ ಸ್ಟಾರ್ ಸರ್ ೧೯೧೫ ನೆಯ ಇಸವಿ ಫೆಬ್ರವರಿ ತಾರೀಖು ೭ ನೆಯ ಭಾನುವಾರ. (ಸಂಚಿಕೆ ೬

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೇಶಿಂತಾನ್.

2

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

೧. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.
೨. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.
೩. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ ಯಾವರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.
೪. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.
೫. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.
೬. ಬೇಸಿಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.
೭. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

೪೫ ಮಾತ್ರೆಗಳ	ಪೊಟ್ಟಣ	೧ಕ್ಕೆ	೨ ಆಣೆ	೮೦ ಮಾತ್ರೆಗಳ	ಟಿನ್	೧ಕ್ಕೆ	೪ ಆಣೆ.
೯೫ ,,	,,	,,	೪ ,,	೧೦೦ ,,	ಶೀಶೆ	,,	೪॥ ,,
೨೦೦ ,,	,,	,,	೭ ,,	೫೦೦ ,,	ಮರದಪೆಟ್ಟಿಗೆ	,,	೧ ರೂ.
೨೦೦ ,,	ಟಿನ್	,,	೯ ,,	೧೨೦೦ ,,	,,	,,	೨ ,,

೧ ರೂ.ಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಭರತಖಂಡ, ಬರ್ಮ ಮತ್ತೂ ಸಿಲೋನ್ ಈ ಪ್ರಾಂತಗಳ ಎಲ್ಲಭಾಗದಲ್ಲೂ ಏಜಂಟರು ಬೇಕಾಗಿದೆ.

ಮೈಸೂರುಸೀಮೆಯ ಏಜಂಟರು:—ಎಂ. ರಾಮಸಂಜೀವ ಸೆಟ್ಟಿ,
ಚೆನ್ನಪಟ್ಟಣ.

ಸೋಲ್ ಏಜಂಟರು:—ಸೆಶಿಂತಾನ್ ಡಿಪೋ,
ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ ೨.

ಮದ್ರಾಸ್ ಏಜಂಟ್:—ಬಿ. ಸಿ. ಷಾ ಅಂಡ್ ಕೊ,
೧೩೨ ಚೇನಾಬಜಾರ್ ರೋಡ್, ಮದ್ರಾಸ್.

20
S.U.N.& CO.
BENARES CITY.
KASHI
VISHWESHWAR.

ದೊಡ್ಡ ಕಂಪೆನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ-ಎಸ್. ಯೂ. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

೧೯೧೫ನೆಯ
ಶ್ರೀ ಸೀತಾರಾಘವ
ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಕಾಯಿ ಇಳಿಯದ ಉತ್ತಮವಾದ ಕಾಗದ ಮುದ್ದಾದ ಮುದ್ರಣ. ಅನೇಕವಾದ ಹೊಸಸಂಗತಿಗಳಿವೆ.

೧ ನಂ—ಸಣ್ಣಸೈಜು ಸಾದಾ	೦-೪-೦
೨ ನಂ—ಪೆನ್‌ಸಲ್‌ಮುಚ್ಚುಳವುಳ್ಳುದು	೦-೬-೦

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ

೩-೪ ನೆಯ ನಂಬರ್ ಡೈರಿಗಳು ಮುಗಿದುಹೋಗಿವೆ.

ಹೆಚ್ಚಾಗಿ ತರಿಸುವವರಿಗೆ ರೂಪಾಯಿ ೧ಕ್ಕೆ ೦-೨-೦ ಕಮಿಷನ್ ದೊರೆಯುವುದು. ವಿಳಾಸ.—

ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.

19

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೧—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತ್ರೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು.

171

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೨೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟಿಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ- ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಬುದ್ಧನ ಭೂತದಯೆ.

ಪ್ರಪಂಚದಲ್ಲಿನ ಯಾವುದೊಂದು ಉತ್ಕೃಷ್ಟಮತದೊಳಗೂ ಭೂತದಯೆಯೆಂಬುದು ಉತ್ತಮಧರ್ಮವಾಗಿ ನಿರೂಪಿಸಲ್ಪಡದೆ ಇಲ್ಲ. ಅಂಥ ಭೂತದಯೆಯ ಪ್ರಭಾವವನ್ನು ಜಗತ್ತಿಗೆಲ್ಲಾ ಮೆರೆಯಿಸಿ ಪ್ರಖ್ಯಾತಿಯನ್ನು ಪಡೆದವರಲ್ಲಿ ಗೌತಮಬುದ್ಧನು ಮೊದಲನೆಯವನೆಂದು ಹೇಳಬಹುದು. ಆತನಲ್ಲಿ ಮೂರ್ತಿಮತ್ತಾಗಿದ್ದ ಭೂತದಯೆಯ ಘನತೆಯನ್ನು ವ್ಯಕ್ತಪಡಿಸುವ ವಿಷಯಗಳು ಅವನ ಜೀವಿತಚರಿತ್ರದಲ್ಲಿ ಅನಂತವಾಗಿರುವುವು. ಅದರಲ್ಲಿ ಒಂದಾನೊಂದು ಸಂಗತಿಯನ್ನು ಇಲ್ಲಿ ನಿರೂಪಿಸುವೆವು:—ಬುದ್ಧನು ರತ್ನಗಿರಿಯ ಗುಹೆಗಳಲ್ಲಿ ವಾಸಮಾಡಿಕೊಂಡಿದ್ದಾಗ ಒಂದಾನೊಂದುದಿವಸ ಒಬ್ಬ ಗೊಲ್ಲರಹುಡುಗನು ಮೇಕೆಗಳನ್ನು ಅಟ್ಟಿಕೊಂಡು ಆ ಬೆಟ್ಟದ ಪಕ್ಕದಲ್ಲಿ ಹೋಗುತ್ತಿದ್ದನು ಆ ಮೇಕೆಗಳಲ್ಲಿ ಒಂದು ಮರಿಯ ಕಾಲಿಗೆ ಗಾಯವಾಗಿದ್ದುದರಿಂದ ಅದು ನಡೆಯಲಾರದೆ ಕುಂಟಿಕೊಂಡು ಮೆಲ್ಲಮೆಲ್ಲನೆ ನಡೆಯುತ್ತಿದ್ದಿತು. ಬುದ್ಧನು ಈ ಮರಿಯನ್ನು ನೋಡಿದಕೂಡಲೇ ಅವನ ಎದೆಯು ಕರಗಿಹೋಯಿತು. ಕೂಡಲೇ ಅದರ ಹತ್ತಿರಕ್ಕೆ ಹೋಗಿ ಅದನ್ನೆತ್ತಿ ತನ್ನ ಹೆಗಲಮೇಲೇರಿಸಿಕೊಂಡು, ಮುಂದೆ ಸಾಗಿಹೋಗಿದ್ದ ಮೇಕೆಗಳ ಮಂದೆಯ ಬಳಿಗೆ ಸೇರಿಕೊಳ್ಳುವುದಕ್ಕಾಗಿ ಬೇಗಬೇಗನೆ ಹೋಗುತ್ತ, ಆ ಗೊಲ್ಲರ ಹುಡುಗನನ್ನು ಕೂಗಿದನು. ಈ ಕೂಗನ್ನು ಕೇಳಿ ಹುಡುಗನು ಹಿಂದಿರುಗಲಾಗಿ, "ಎಲೋ ಹುಡುಗಾ! ಈ ದಿನ ನೀನು ಹೊತ್ತುಮುಳುಗುವುದಕ್ಕೆ ಮೊದಲೇ ಮೇಕೆಗಳ ಮಂದೆಯನ್ನು ಅಟ್ಟಿಕೊಂಡು ಹೋಗುತ್ತೀಯಲ್ಲಾ, ಇದೇಕೆ?" ಎಂದು ಬುದ್ಧನು ಪ್ರಶ್ನೆಮಾಡಲು, ಹುಡುಗನು—"ಅಯ್ಯಾ! ಈ ದಿನ ಮಹಾರಾಜರು ಯಜ್ಞವನ್ನು ಮಾಡುತ್ತಾರೆ; ಅವರಿಗೆ ಒಂದುನೂರು ಮೇಕೆಗಳು ಬೇಕಾಗಿವೆಯಂತೆ; ಅದಕ್ಕಾಗಿ ಬೇಗನೆ ಹೋಗುತ್ತಿದ್ದೇನೆ" ಎಂದು ಉತ್ತರವನ್ನಿತ್ತನು. "ಓಹೋ! ಹಾಗಾದರೆ, ನಾನೂ ಕೂಡ ನಿನ್ನೊಡನೇ ಬರುತ್ತೇನೆ" ಎಂದು ಬುದ್ಧನು ಹೇಳಿ, ಆ ಕುಂಟುಮರಿಯನ್ನು ತನ್ನ ಹೆಗಲಮೇಲೆ ಹೊತ್ತುಕೊಂಡೇ ಆ ಗೊಲ್ಲನ ಜತೆಯಲ್ಲಿ ತಾನೂ ಹೋಗುತ್ತಿದ್ದನು. ಊರನ್ನು ಪ್ರವೇಶಿಸಿದ ಕೂಡಲೇ ಪ್ರಜೆಗಳು ಗುಂಪುಗುಂಪಾಗಿ ಬಂದು ಬುದ್ಧನನ್ನು ನೋಡುತ್ತಿದ್ದರು. ಮನೋಹರವಾದ ಆಕಾರವನ್ನು ಹೊಂದಿ, ಕಾಷಾಯವಸ್ತ್ರಗಳನ್ನು ಧರಿಸಿರುವ ಆ ಯತಿಯು ಹೆಗಲಮೇಲೆ ಮೇಕೆಯ ಮರಿಯನ್ನು ಹೊತ್ತು ಹೋಗುತ್ತಿರುವುದು ನೋಡುವ ಜನರಿಗೆ ಪರಮಾಶ್ಚರ್ಯಕರವಾಗಿದ್ದಿತು. ಆ ಜನರು ಗುಂಪುಗುಂಪಾಗಿ ತನ್ನ ಹಿಂದೆ ಬರುತ್ತಿದ್ದರೂ ಬುದ್ಧನು ಅದೊಂದನ್ನೂ ಲೆಕ್ಕಿಸದೆ ತನ್ನಪಾಡಿಗೆ ತಾನು ಯಜ್ಞಶಾಲೆಗೆ ಪ್ರವೇಶಿಸಿದನು. ಅಲ್ಲಿ ಬ್ರಾಹ್ಮಣರುಗಳು ವೇದಘೋಷವನ್ನು ಮಾಡುತ್ತಿದ್ದರು. ಸೋಮಯಾಜಿಗಳು ಸ್ವಸ್ತಿಗಳನ್ನು ಹಾಡುತ್ತಿದ್ದರು. ಯಜ್ಞಶಾಲೆಯ ಮಧ್ಯಾಂಗಣದಲ್ಲಿದ್ದ ಹೋಮಕುಂಡದಿಂದ ಅಗ್ನಿಜ್ವಾಲೆಗಳು ಪ್ರಸ್ಫುರಿಸುತ್ತಿದ್ದುವು. ಒಬ್ಬ ಋತ್ವಿಕ್ಕು ದಪ್ಪನಾದ ಕೊಂಬುಗಳುಳ್ಳ ಒಳ್ಳೆ ಟೊಣ್ಣೆಯಾದ ಹೋತವೊಂದನ್ನು ಹಗ್ಗದಿಂದ ಯೂಪಸ್ತಂಭಕ್ಕೆ ಕಟ್ಟಿಹಾಕುತ್ತಿದ್ದನು. ಕಟ್ಟಿದಬಳಿಕ, "ಇದು ಬಿಂಬಸಾರ ರಾಜನ ಯಜ್ಞದಲ್ಲಿ ಮುಖ್ಯವಾದುದು, ಇದರ ರಕ್ತವು ಹೋಮಕುಂಡದಲ್ಲಿ ಹೋಮಮಾಡಲ್ಪಡುವುದು. ಮಹಾರಾಜನು ಮಾಡಿದ ಪಾಪವನ್ನೆಲ್ಲಾ ಈ ಹೋತನಮೇಲೆ ಆವಾಹಿಸಿರುವೆವು. ಅಗ್ನಿಯಲ್ಲಿ ಪಕ್ವವಾದ ಇದರ ಮಾಂಸದ ಸುವಾಸನೆಯನ್ನು ನೀವು ಆಘ್ರಾಣಿಸಿ ತೃಪ್ತಿಗೊಳ್ಳಿರಿ" ಎಂದು ದೇವತೆಗಳನ್ನು ಆಹ್ವಾನಿಸಿ ಹೇಳಿ, ತನ್ನ ಕೈಗೆ ಕತ್ತಿಯನ್ನು ತೆಗೆದುಕೊಂಡು ಆ ಪಶುವನ್ನು ಕೊಲ್ಲುವುದಕ್ಕೆ ಯತ್ನಿಸಿದನು. ಆಗ ದಯಾರ್ದ್ರಹೃದಯನಾದ ಆ ಬುದ್ಧನ ಮನಸ್ಸು ಹೇಗಿರಬಹುದು! ಅವನು ಪಟಪಟನೆ ಕಣ್ಣೀರು ಸುರಿಸುತ್ತ, "ಅಯ್ಯಾ! ಅದನ್ನು ಕೊಲ್ಲಬೇಡ" ಎಂದು ಕೂಗಿಕೊಳ್ಳುತ್ತ, ಬಿಂಬಸಾರನ ಕಡೆಗೆ ತಿರುಗಿ, "ಪ್ರಭುವೇ, ಅದನ್ನು ಕೊಲ್ಲಿಸಬೇಡ, ಕೊಲ್ಲಿಸಬೇಡ" ಎಂದು ಗಟ್ಟಿಯಾಗಿ ಕೂಗಿ, ಬೇಡಿಕೊಂಡನು. ಪಶುವಿನಕಡೆಗೇ ಇದ್ದ ಋತ್ವಿಕ್ಕರದೃಷ್ಟಿಯೆಲ್ಲಾ ಈ ಸದ್ದನ್ನು ಕೇಳಿದಕೂಡಲೇ ಬೆರಗಾಗಿ ಇತ್ತ ಪ್ರಸರಿಸಿತು. ಆಗ ಬುದ್ಧನು ತನ್ನ ಸ್ವಭಾವಸಿದ್ಧವಾದ ಮೃದುವಚನದಿಂದಲೂ ಶಾಂತಗಂಭೀರ ದಯಾಮಯಮುಖಭಾವದಿಂದಲೂ ಅವರೆಲ್ಲರನ್ನೂ ಕುರಿತು ಹೀಗೆ ಉಪದೇಶಮಾಡಿದನು—

ಪ್ರಾಣನಂ ಹತಿಸುವುದು ಬಹುಸುಲಭಮೆಲ್ಲರ್ಗೆ ।
ಪ್ರಾಣನಂ ಕೊಡುವುದೆಂದುಮಸಾಧ್ಯಮೆಮಗೆ ॥
ಪ್ರಾಣರಕ್ಷಣಕಾಗಿ ಪಾಟುಪಡದಿರ್ಪವರು ।
ಪ್ರಾಣಿಗಳಮೇಲೆ ದಯೆಯುಳ್ಳರಹರೆ? ॥

ಗೌತಮಬುದ್ಧನು ಸೂತ್ರರೂಪವಾಗಿ ಮಾಡಿದ ಈ ಹಿತೋಪದೇಶದಿಂದ ಋತ್ವಿಕ್ಕುಗಳ ಮನಸ್ಸೆಲ್ಲಾ ತಿರುಗಿಹೋಯಿತು (ಏಕೆಂದರೆ—"ತಿಳಿದಜನವನತಿಸುಖದಿಂದಂತಿಳಿಯಿಸಲಕ್ಕುಂ") ಎಂದು ನೀತಿಯಿರುವುದಲ್ಲವೆ? ಅದರಿಂದ ಅವರು ಈ ಹಿತೋಪದೇಶದಿಂದ ಥಟ್ಟನೆ ಎಚ್ಚತ್ತರು. ಬಿಂಬಿಸಾರನೃಪನಾದರೊ ಕರುಣಾರ್ದ್ರಹೃದಯನಾಗಿಹೋದನು. ಆ ಕೂಡಲೇ ತಾನು ಮಾಡಬೇಕೆಂದಿದ್ದ ಯಜ್ಞವನ್ನು ಅಲ್ಲಿಗೇ ನಿಲ್ಲಿಸಿಬಿಟ್ಟು, ಗೌತಮಬುದ್ಧನಿಂದ ಇನ್ನೂ ಘನತರವಾದ ಉಪದೇಶವನ್ನು ಪಡೆದು, ಇನ್ನುಮುಂದೆ ತನ್ನ ದೇಶದಲ್ಲಿನ ಪ್ರಜೆಗಳಾರೂ ಪ್ರಾಣಿಹಿಂಸೆಯನ್ನು ಮಾಡಕೂಡದೆಂದೂ, ಮಾಂಸವನ್ನು ತಿನ್ನಕೂಡದೆಂದೂ, ಭೂತದಯೆಯು ಪ್ರತಿಯೊಬ್ಬರಿಗೂ ಮುಖ್ಯವಾಗಿ ಆಚರಿಸಲ್ಪಡತಕ್ಕ ಧರ್ಮವೆಂದೂ ಶಾಸನವನ್ನು ಪ್ರಕಟಿಸಿದನು ಆ ವಾಕ್ಯಗಳನ್ನು ಶಿಲೆಗಳಮೇಲೆ ಕೆತ್ತಿಸಿ ದೇಶದಲ್ಲಿ ಅಲ್ಲಲ್ಲಿಗೆ ಸ್ಥಾಪಿಸಿದನು. ಕಾಲುಗಾಯಗೊಂಡ ಮೇಕೆಮರಿಯಮೇಲೆ ದಯೆಯನ್ನು ತೋರಿಸುವುದಕ್ಕೆ ಪ್ರವೃತ್ತನಾದ ಗೌತಮಬುದ್ಧನು ಕಡೆಗೆ ಹೇಗೆ ಬಿಂಬಸಾರನ ರಾಜ್ಯದಲ್ಲೆಲ್ಲಾ ಪ್ರಾಣಿಹಿಂಸೆಯನ್ನು ತಪ್ಪಿಸಿ ಭೂತದಯೆಯು ತಾನೇತಾನಾಗಿ ಮೆರೆಯುವಂತೆ ಮಾಡಲು ಕಾರಣಭೂತನಾದನು. ಆ ಬುದ್ಧಮಹನೀಯನು ಎಂತಹ ಧನ್ಯನು!!

ಬರ್ಮಾಕ್ಕೂ ಭರತಖಂಡಕ್ಕೂ ಲೋಹಮಾರ್ಗ.

ಭರತಖಂಡದ ಪೂರ್ವ್ವಸಮುದ್ರದಲ್ಲಿ ಎಮ್ಡನ್ ಹಡಗು ಮಾಡಿದ ಹಾವಳಿಯಿಂದ ಕೆಲಕಾಲ ಭರತಖಂಡಕ್ಕೂ ಬರ್ಮಾಕ್ಕೂ ಜನಸಂಚಾರವೂ ಸರಕುಗಳ ಗಮನಾಗಮನವೂ ಸಹ ನಿಂತು ಬಹಳ ತೊಂದರೆಯಾಯಿತು. ಅದು ಕಾರಣ, ಇವೆರಡು ಪ್ರದೇಶಗಳಿಗೂ ಅಖಂಡವಾದ ಭೂಸಂಬಂಧವಿದ್ದರೂ ಲೋಹಮಾರ್ಗ ನಿರ್ಮಾಣವಿಲ್ಲದೆ ಜಲಮಾರ್ಗ ಸಂಚಾರವೊಂದನ್ನೇ ನಂಬಿಕೊಂಡಿರಬೇಕಾದುದರಿಂದ ಇಂಥ ತೊಂದರೆಯು ಪ್ರಾಪ್ತವಾಯಿತೆಂಬ ಸಂಗತಿಯು ಪ್ರಜೆಗಳಿಗೂ ಪ್ರಭುತ್ವದವರಿಗೂ ಸಹ ವ್ಯಕ್ತವಾಯಿತು. ಅದರಮೇಲೆ ಈಗ ಇವೆರಡು ದೇಶಗಳ ಮಧ್ಯದಲ್ಲಿ ಲೋಹಮಾರ್ಗವನ್ನೇರ್ಪಡಿಸುವ ಪ್ರಯತ್ನವನ್ನು ಪ್ರಭುತ್ವದವರು ಮಾಡಿದ್ದಾರೆ. ಈ ಮಾರ್ಗವು ಮೂರುಭಾಗವಾಗಿ, ೧ನೆ ಯದು ಅಸ್ಸಾಂ—ಬಂಗಾಳ ಲೋಹಮಾರ್ಗದ ಕೊನೆಯ ನಿಲ್ದಾಣವಾದ ಚಿತ್ತಗಂಗಾದಿಂದ ಹೊರಟು ಆ ಜಿಲ್ಲೆಯ ದಕ್ಷಿಣದಲ್ಲಿರುವ ಪ್ರದೇಶಗಳಮೇಲೆ ತೀರದಲ್ಲೇ ನಡೆದು ೯೪ ಮೈಲಿಗಳ ದೂರದಲ್ಲಿರುವ ಇಂಡ್ಯಾ—ಬರ್ಮಾ ಎಲ್ಲೆಕಟ್ಟನ್ನು ದಾಂಟಿ, ಆರಕಾನ್ ಗದ್ದೆಯ ಬಯಲಿನಮೇಲೆ ೧೫೦ ಮೈಲಿಗಳ ದೂರಹೋಗಿ, ಆಕಿಯಾಬ್ ಡೆಲ್ಟಾದಲ್ಲಿರುವ ದೊಡ್ಡದೊಡ್ಡ ಹೊಳೆಗಳನ್ನೆಲ್ಲಾ ದಾಟಿ, ಟಾಕಫ್‌ರೇವಿಯ ಹತ್ತಿರ ಸೇರುವುದು. ಈ ಮಾರ್ಗವು ಚಿತ್ತಗಂಗಾಕ್ಕೆ ೨೫೦ ಮೈಲಿಗಳ ದೂರವಾಗುವುದು. ಈ ಮಾರ್ಗದಲ್ಲಿ ಮಧ್ಯೆ ೪ ಸಾವಿರ ಅಡಿಗಳೆತ್ತರದ ಕೆಲ ಪರ್ವತಗಳನ್ನು ದಾಟಬೇಕಾಗುವುದು. ಈ ಮಾರ್ಗನಿರ್ಮಾಣಕ್ಕೆ ೧॥ ಕೋಟಿ ರೂ.ಗಳ ವೆಚ್ಚವು ತಗಲುವುದು. ಇದರ ಶಾಖಾಮಾರ್ಗಗಳಿಗೆ ಇನ್ನೂ ೧॥ ಕೋಟಿ ರೂ.ಗಳು ಮುಟ್ಟುವುವು. ೨ನೆ ಭಾಗವು ಮಣಿಪುರದ ದಾರಿಯು. ಇದಕ್ಕೆ ೩॥ ಕೋಟಿ ರೂ.ಗಳು ತಗಲುವುವು. ಈ ಮಾರ್ಗದಲ್ಲಿ ಮುಂದೆ ದೊಡ್ಡದೊಡ್ಡ ಬೆಟ್ಟಗಳಿವೆ. ಅವು ೭ ಸಾವಿರದಿಂದ ೯ ಸಾವಿರ ಅಡಿಯ ಉನ್ನತಿಯವರೆಗೂ ಇರುವುವು. ಅವುಗಳಲ್ಲಿ ೮ ಸಾವಿರ ೫ ಸಾವಿರ ೪ ನೂರು ಅಡಿಗಳುದ್ದದ ಸುರಂಗಗಳನ್ನು ಕೊರೆಯಬೇಕಾಗುತ್ತದೆ. ೩ನೆ ಯದು—ಹೂಕಾಂಗ್ ಕಣಿವೆಯಮಾರ್ಗವು ಇದು ಮೇಲೆ ಸೂಚಿಸಿದ ೨ ಭಾಗಗಳಿಗಿಂತಲೂ ಕಡಿಮೆಯಾದ ವೆಚ್ಚದಿಂದ ಸಾಧ್ಯವಾಗುವುದು. ಎಂದರೆ ಒಟ್ಟು ೫॥ ಕೋಟಿ ರೂ.ಗಳ ವೆಚ್ಚದಿಂದಲೇ ಮುಗಿದುಹೋಗುವುದು. ಈ ಮೂರುಭಾಗದ ಕೆಲಸಗಳೂ ಕ್ರಮವಾಗಿ ಆರಂಭಿಸಲ್ಪಡುವುವು. ಈ ವರ್ಷದಲ್ಲಿ ಸಮುದ್ರದ ದಡದಲ್ಲಿ ಹಾಕಲ್ಪಡುವ ಮಾರ್ಗವೂ, ೧೯೧೫-೧೬ ರಲ್ಲಿ ಮಣಿಪುರದ ದಾರಿಯೂ, ೧೯೧೬-೧೭ ರಲ್ಲಿ ಹೂಕಾಂಗ್ ಕಣಿವೆಯ ದಾರಿಯೂ ಮುಗಿದುಹೋಗುವುವು.

ಜರ್ಮನ್ ಜ್ಯೋತಿಷ್ಕನ ಭವಿಷ್ಯತ್ತು.

ಈಗಿನ ಯೂರೋಪು ಮಹಾಯುದ್ಧವು ಸಂಭವಿಸುವುದಕ್ಕೆ ಮುಂಚೆ ಸೋಮರೋಟೋ ಎಂಬ ಜರ್ಮನ್ ಜೋಯಿಸನು ಈ ಕೆಳಗೆ ಕಾಣಿಸುವಂತೆ ಭವಿಷ್ಯತ್ತನ್ನು ನಿರ್ಣಯಿಸಿ ಪ್ರಕಟಿಸಿದ್ದನಂತೆ—

೧. ಜರ್ಮನಿ-ಯೂರೋಪಿನಲ್ಲಿ ಅಂತಃಕಲಹಗಳು ಹುಟ್ಟುವುವು. ಜರ್ಮನಿಯು ದಿವಾಳಿಯಾಗುವುದು. ಜರ್ಮನ್ ಸಾಮ್ರಾಜ್ಯದಲ್ಲಿನ ವಿವಿಧರಾಷ್ಟ್ರಗಳು ಚೆನ್ನಭಿನ್ನವಾಗುವುವು. ೧೯೧೫ ನೆ ವರ್ಷದ ಫೆಬ್ರವರಿ ತಿಂಗಳೊಳಗೆ ಜರ್ಮನ್‌ಚಕ್ರವರ್ತಿಯು ರಾಜ್ಯಭ್ರಷ್ಟನಾದರೂ ಆಗುವನು, ಅಥವಾ ಪರಲೋಕಗತನಾಗುವನು. ಯುದ್ಧಾನಂತರ ಜರ್ಮನಿಯಲ್ಲಿ ಪ್ರಜಾಸತ್ತಾತ್ಮಕರಾಜ್ಯವು ಏರ್ಪಡುವುದು.

೨. ಇಂಗ್ಲೆಂಡು—ಯೂರೋಪಿನ ಎಲ್ಲರಾಜರುಗಳಿಗಿಂತಲೂ ಜಾರ್ಜ್‌ಪ್ರಭುಗಳು ಬಹಳ ಅದೃಷ್ಟವಂತರು. ಇಂಗ್ಲೆಂಡಿಗೂ ರಷ್ಯಾಕ್ಕೂ ಇರುವ ಮೈತ್ರಿಯು ಕೆಡುವುದಿಲ್ಲ. ಲಂಡನ್ನಿಗೆ ಮುತ್ತಿಗೆ ಹಾಕಲ್ಪಡುವುದಾದರೂ ೧೯೧೪ ನೆಯ ವರ್ಷವು ಕಳೆದಮೇಲೇನೆಯೇ. ಆದರೆ ಸಮುದ್ರದಮೇಲಣ ಆಧಿಪತ್ಯವು ಇಂಗ್ಲೆಂಡಿಗೇ ಇರುವುದು. ಆಂಗ್ಲಪ್ರಭುತ್ವದ ಪರಿಪೂರ್ಣಾಧಿಪತ್ಯದ ಚಿಹ್ನಗಳು ೧೯೨೭ ನೆಯ ವರ್ಷದವರೆಗೆ ಸ್ಪಷ್ಟವಾಗಿ ಕಾಣಬರುವುದಿಲ್ಲ.

೩. ರಷ್ಯಾ—ರಷ್ಯಾಕ್ಕೆ ಮೊದಲು ಜಯವು ಲಭಿಸುವುದು. ಬಳಿಕ ಅಷ್ಟು ಜಯವು ಲಭಿಸಲಾರದು. ಮುಂದಣ ವರ್ಷದ (೧೯೧೫) ಮಾರ್ಚ್ ತಿಂಗಳಿನಿಂದ ಅದೃಷ್ಟರೇಖೆಯು ಮಾಸಿಹೋಗಲಾರಂಭಿಸುವುದು. ಜರ್ಮನರ ಪ್ರಾಬಲ್ಯವೇ ಕಡೆಗೆ ನಿಲ್ಲುವುದು.

೪. ಆಸ್ಟ್ರಿಯಾ—೧೯೧೫ ನೆ ಮಾರ್ಚಿ ತಿಂಗಳಲ್ಲಿಯೋ ಅಥವಾ ಡಿಸೆಂಬರ್ ತಿಂಗಳೊಳಗೋ ಆಸ್ಟ್ರಿಯಾದ ಮುದಿಕದೊರೆಯು ಸತ್ತುಹೋಗುವನು. ಆಸ್ಟ್ರಿಯಾದೇಶದಲ್ಲಿ ಮಾತ್ರ ಅಂಥ ವಿಶೇಷವಾದ ಬದಲಾವಣೆಯೇನೂ ಆಗುವುದಿಲ್ಲ. ಆದರೆ ಕಷ್ಟಗಳು ಮಾತ್ರ ತಪ್ಪುವುದಿಲ್ಲ.

೫. ಫ್ರಾನ್ಸು ಕಡೆಗೆ ಭೂಮಿಯಮೇಲೂ ಜಲದಮೇಲೂ ಫ್ರೆಂಚರಿಗೆ ಜಯವಾಗುವುದು. ಫ್ರೆಂಚರ ಪ್ರೆಸಿಡೆಂಟಿಗೆ ಸ್ವಲ್ಪ ಆಪತ್ತು ಸಂಭವಿಸುವುದು. ಆದರೆ ಪ್ರಾಣಭಯವೇನೂ ಇಲ್ಲ. ಪ್ಯಾರಿಸ್ಸು ಶತ್ರುಗಳಿಂದ ಮುತ್ತಲ್ಪಡುವುದಿಲ್ಲ.

೬. ಜಪಾನ್—೧೯೧೬ ರಿಂದ ೧೯೧೮ ರೊಳಗೆ ಜಪಾನಿಗೆ ದೊಡ್ಡ ವಿಪತ್ತು ಸಂಭವಿಸುವುದು. ೧೯೧೮ ನೆ ವರ್ಷಾನಂತರದಲ್ಲಿ ೨೦ ವರ್ಷಗಳವರೆಗೆ ಜಪಾನು ಒಳ್ಳೆಯ ಶಾಂತಿಯನ್ನನುಭವಿಸುವುದು. ಜಪಾನಿಗೂ ಅಮೇರಿಕಾಕ್ಕೂ ವೈರವು ಹುಟ್ಟುವುದು. ಯುದ್ಧವೇ ಸಂಭವಿಸುವುದಾದರೆ ಜಪಾನಿನ ಗೌರವಕ್ಕೆ ಯಾವ ಚ್ಯುತಿಯೂ ಉಂಟಾಗುವುದಿಲ್ಲ. ಚೀನಾಕ್ಕೂ ಜಪಾನಿಗೂ ವೈರವುಂಟಾಗುವುದಿಲ್ಲ ಚೀನಾದ ಕಷ್ಟಗಳು ಜಪಾನಿನ ಸಹಾಯ್ಯದಿಂದ ತೊಲಗಿಹೋಗುವುವು. ಎಷ್ಟು ಕಷ್ಟಗಳು ಬಂದರೂ ಅದರ ಪ್ರೆಸಿಡೆಂಟಾದ ಯೂನ್ಷಿಕಾಯಿರವರಿಗೇ ಜಯವುಂಟಾಗುವುದು.

ಯುದ್ಧಾಂಗಣದ ಸೈನಿಕೋದ್ಯೋಗಿಯೊಬ್ಬನು ಬರೆದಪತ್ರ.

ಬೊಂಬಾಯಿಯ ಟೈಮ್ಸ್‌ಆಫ್ ಇಂಡಿಯಾ ಪತ್ರಿಕೆಗೆ ಯುದ್ಧಾಂಗಣದಿಂದ ಒಬ್ಬ ಹಿಂದೂಸೈನಿಕೋದ್ಯೋಗಿಯು ಹೀಗೆ ಬರೆದಿರುತ್ತಾನೆ—"ಈ ಯುದ್ಧವು ಸಾವು ಅಥವಾ ಗೆಲವು ಇವೆರಡಕ್ಕೆ ಸಂಬಂಧಿಸಿರುವುದೆಂದು ದೇಶೀಯರೆಲ್ಲರೂ ಗ್ರಹಿಸಬೇಕೆಂದು ಕೋರುತ್ತೇನೆ. ಕಡೆಗೆ ನಮಗೇ ಜಯಪ್ರಾಪ್ತಿಯಾಗುವುದು ಸಿದ್ಧ. ನಾನು ದುಷ್ಟಪರಿಣಾಮವನ್ನು ಕೋರುವವನಲ್ಲ. ಆದರೆ ಕೆಲಸವೆಲ್ಲಾ ಮುಗಿದಿತೆಂದು ತಿಳಿದುಕೊಳ್ಳಕೂಡದು. ಜರ್ಮನಿಯವರು ನಮ್ಮನ್ನು ಹಿಂದಿರುಗಿಸುವ ಸ್ಥಿತಿಯಲ್ಲಿಲ್ಲದೆಹೋದರೂ ಅವರು ಇನ್ನೂ ಶರಣಾಗತರಾಗಿಲ್ಲ. ಇಂಗ್ಲೀಷರಕಡೆಯ ಸೈನಿಕರು ಶತ್ರುಗಳಿಗೆ ಬೆನ್ನುತೋರಿಸದೆ ಅಸಾಧಾರಣವಾಗಿ ಯುದ್ಧಮಾಡುತ್ತಿದ್ದಾರೆ. ನಾನು ಸ್ವತಃ ಮಾಡಬೇಕಾದ ಕೆಲಸವನ್ನು ಎಂದಿನಂತೆ ಮಾಡುತ್ತಲೇ ಇದ್ದೇನೆ. ಆದರೆ ಯಾರೂ ಊಹಿಸದೆ ನಿರೀಕ್ಷಿಸದೆ ಇದ್ದರೀತಿಯಲ್ಲಿ ಇಲ್ಲಿನ ಕೆಲಸಗಳು ಹೆಚ್ಚುತ್ತಲಿವೆ. ಅದು ಕಾರಣ ಎಲ್ಲರೂ ತಮಗೆ ನಿಯಮಿತವಾದ ಕೆಲಸಕ್ಕಿಂತಲೂ ಹೆಚ್ಚಾದ ಕೆಲಸಗಳನ್ನು ಮಾಡಿಯೇ ತೀರಬೇಕಾಗುತ್ತದೆ. ವೈದ್ಯಸಹಾಯಸಂಘದವರು ಮಾಡುತ್ತಿರುವ ಕೆಲಸವು ಅನುಪಮವಾಗಿದೆ. ಯುದ್ಧದಲ್ಲಿ ಗಾಯಗೊಂಡವರು ಈಗ ಎಷ್ಟು ಬೇಗಬೇಗನೆ ಚಿಕಿತ್ಸೆಗೊಂಡು ಗುಣಗೊಳ್ಳುತ್ತಾರೋ ಅಂಥ ರೀತಿಯಲ್ಲಿ ಹಿಂದೆ ಯಾವಾಗಿನ ಯುದ್ಧದಲ್ಲೂ ಗುಣಗೊಂಡುದಿಲ್ಲ. ಇಲ್ಲಿನ ಕೆಲಸಗಳು ಯಂತ್ರದಲ್ಲಿನ ಕೆಲಸಗಳಂತೆ ನಿಯಮಿತವಾಗಿಯೂ ಚುರುಕಾಗಿಯೂ ಅಚ್ಚುಗಟ್ಟಾಗಿಯೂ ನಡೆಯುತ್ತಿವೆ. ಇಲ್ಲಿ ನಡೆಯುತ್ತಿರುವ ಯುದ್ಧದ ರೀತಿಯನ್ನು ವರ್ಣಿಸುವುದಕ್ಕೆ ನನಗೆ ಮಾತುಗಳು ಸಾಲವು ಯುದ್ಧರಂಗಕ್ಕೆ ೧೦ ಮೈಲಿದೂರದಲ್ಲಿರುವವರು ಕೂಡ ಅಕಸ್ಮಾತ್ತಾಗಿ ಧಾಂಧಾಂ ಎಂಬ ಶಬ್ದವನ್ನು ಕೇಳುತ್ತಾರೆ. ಅದರ ಭೀಕರತ್ವವನ್ನು ಅಷ್ಟಿಷ್ಟೆಂದು ವರ್ಣಿಸಲಾಗುವುದಿಲ್ಲ. ಶತ್ರುಗಳು ನಮ್ಮಮೇಲೆ ಹಾಗೆ ಗುಂಡುಗಳನ್ನು ಪ್ರಯೋಗಿಸುತ್ತಿರುವರೆಂದು ಇದರಿಂದ ತಿಳಿದುಕೊಳ್ಳಬೇಕು. ಆ ದುರುಳಶತ್ರುಗಳು ನಾಲ್ಕುನಾಲ್ಕು ಜನರಂತೆ ಪಂಗಡವಾಗಿ ಬರುವರು. ಯಾವುದೋ ಒಂದು ಸ್ಥಳದಲ್ಲಿ ಮದ್ದುಗುಂಡುಗಳ ಬಂಡಿಗಳೋ ಭೋಜನಸಾಮಗ್ರಿಗಳ ಬಂಡಿಗಳೋ ಇರುವುದಾದರೆ, ಅದನ್ನು ಶತ್ರುವೈಮಾನಿಕರು ಅರಿತುಕೊಂಡು ಹೋಗುವರು. ಆ ಸುದ್ದಿಯನ್ನು ತಮ್ಮ ಸೈನಿಕರಿಗೆ ಥಟ್ಟನೆ ತಿಳಿಯಿಸಿಬಿಡುವರು. ಕೂಡಲೇ ಹೀಗೆ ಅಕಸ್ಮಾತ್ತಾಗಿ ಆ ಸ್ಥಳಕ್ಕೆ ಗುರಿಯಿಟ್ಟಂತೆ ಗುಂಡುಗಳು ಬಂದು ಬೀಳುವುವು. ಹೀಗೆ ದೊಡ್ಡದೊಡ್ಡ ಗುಂಡುಗಳು ಬಂದು ಬೀಳುತ್ತಿರುವುದು ಸಾಮಾನ್ಯವಾಗಿ ಹೋಗಿದೆ, ನಾನು ನಮ್ಮ ಕಂದಕಗಳ ತುದಿಯಲ್ಲಿ

ಸೈನ್ಯಾಧಿಕಾರಿಯೊಡನೆ ಮಾತನಾಡುತ್ತ ನಿಂತಿದ್ದೆನು. ಅಲ್ಲಿಗೆ ೫೦ ಗಜಗಳ ದೂರದಲ್ಲಿ ಒಂದು ಗುಂಡು ಬಂದು ಬಿದ್ದಿತು. ಅದನ್ನು ಯಾರೂ ಲಕ್ಷ್ಯಮಾಡಲಿಲ್ಲ. ಅಷ್ಟರಲ್ಲಿ ನನ್ನ ಬೆನ್ನಿನಮೇಲೆ ಒಂದು ಗುಂಡು ಬಿದ್ದಿತು. ನಾನು ನೆಲದಮೇಲೆ ಧೊಪ್ಪನೆ ಬಿದ್ದೆನು. ನನ್ನ ದೇಹಕ್ಕೆ ಗಾಯಗಳಾಯಿತೆಂದು ನಾನು ಊಹಿಸಿದೆನು. ನಿಜವಾಗಿ ನನಗೆ ಒಂದುತೆರದ ಸಂತೋಷವುಂಟಾಯಿತು. ಆದರೆ ನಾನು ಯೋಚಿಸಿದಂತೆ ಆಗಿರಲಿಲ್ಲ. ನನಗೆ ಬಡಿದುದು ಒಂದು ಗುಂಡಾಗಿರದೆ ಎಲ್ಲೋ ಬಿದ್ದು ಒಡೆದ ಒಂದು ಗುಂಡಿನ ಮುಕ್ಕು ಸಿಡಿದು ಬಂದು ನನ್ನ ಬೆನ್ನಿಗೆ ಬಡಿದುದಾಗಿದ್ದಿತು. ಆ ಚೂರನ್ನು ನಾನು ಎಲ್ಲರಿಗೂ ತೋರಿಸಿದೆ.

ಭರತಖಂಡದ ವೃತ್ತಾಂತಗಳು.

ಪ್ರೊಫೆಸರ್ ಗೆಡ್ಡಿಸ್‌ರವರು ಮದ್ರಾಸಿನಲ್ಲಿ ಪುರನಿರ್ಮಾಣಸಂಬಂಧವಾದ ಪ್ರದರ್ಶನಗಳನ್ನೂ ಉಪನ್ಯಾಸಗಳನ್ನೂ ಮಾಡಿ ಮುಗಿಸಿದರು. ಇವರ ಉಪನ್ಯಾಸಾದಿಗಳು ಭರತಖಂಡದ ಇತರ ಆಧಿಪತ್ಯಗಳಲ್ಲೂ ನಡೆಯುವಂತೆ ಏರ್ಪಾಟಾಗುತ್ತಿದೆ.

ಬಂಗಾಳಾಕ್ಕೆ ಸೇರಿದ ರಂಗಪುರದ ಜಿಲ್ಲೆಗೆ ಸೇರಿದ ೧ ಗ್ರಾಮದಲ್ಲಿನ ಒಬ್ಬ ದೊಡ್ಡ ಧನಿಕನ ಮನೆಗೆ ಕಳೆದ ತಿಂಗಳು ೨೨ ರಲ್ಲಿ ೬೦ ಮಂದಿ ಕಳ್ಳರು ತುಪಾಕಿಮೊದಲಾದ ಆಯುಧಗಳ ಸಮೇತ ನುಗ್ಗಿ ೬೦ ಸಾವಿರ ರೂ. ಗಳ ನಗನಾಣ್ಯಗಳನ್ನು ದೋಚಿಕೊಂಡು ಹೋಗಿದ್ದಾರೆ.

ಕಲ್ಕತ್ತಾದಲ್ಲಿ ಇಂಗ್ಲೀಷ್‌ಮನ್ ಎಂಬ ಪತ್ರಿಕೆಯು ಪ್ರಕಟವಾಗುತ್ತಿದೆ. ಇದರಲ್ಲಿರುವ ಮುದ್ರಣಯಂತ್ರವು ಆವಿಯಶಕ್ತಿಯಿಂದ ಅಥವಾ ವಿದ್ಯುಚ್ಛಕ್ತಿಯಿಂದ ಕೆಲಸಮಾಡುತ್ತದೆ. ಅದರಲ್ಲಿ ಗಂಟೆಯೊಂದಕ್ಕೆ ೨೫ ಸಾವಿರ ಪತ್ರಿಕೆಗಳು ಮುದ್ರಿಸಲ್ಪಡುತ್ತಿವೆ.

ಕಳೆದ ತಿಂಗಳು ತಾ॥ ೨೭ ರಲ್ಲಿ ಪಂಜಾಬಿಗೆ ಸೇರಿದ ಲೂಡಿಯಾನಾಜಿಲ್ಲೆಯ ಮನ್ಸೂರ್ ಎಂಬಗ್ರಾಮದಲ್ಲಿ ಲೇವಾದೇವಿಮಾಡುತ್ತಿದ್ದ ಲಲುಮಲ್‌ಕ್ಷೇತ್ರಿಯೆಂಬುವನ ಮನೆಗೆ ಸಾಯುಧರಾದ ಕಳ್ಳರು ಬಿದ್ದು ೩೦ ಸಾವಿರ ರೂ. ಗಳ ನಗನಾಣ್ಯಗಳನ್ನೂ ಲೆಕ್ಕದ ಪುಸ್ತಕಗಳನ್ನೂ ಅಪಹರಿಸಿಕೊಂಡು ಹೋದರು.

ಬೊಂಬಾಯಿಆಧಿಪತ್ಯದಲ್ಲಿ ೧೯೧೩ ನೆ ವರ್ಷಕ್ಕಿಂತಲೂ ೧೯೧೪ ನೆ ವರ್ಷದಲ್ಲಿ ಪಾಠಶಾಲೆಗಳು ೭೯೪ ಹೆಚ್ಚಿದವು. ೧೯೧೩ ರಲ್ಲಿ ೧೩೦೦೦ ಪಾಠಶಾಲೆಗಳಾಗಿದ್ದುವು. ವಿದ್ಯಾರ್ಥಿಗಳ ಸಂಖ್ಯೆಯು ೯೮೩೬೮೪ ರಿಂದ ೧೦೩೯೦೧೩ ಕ್ಕೆ ಹೆಚ್ಚಿತು. ಪ್ರಾರಂಭವಿದ್ಯಾಶಾಲೆಗಳ ಸಂಖ್ಯೆಯು ೧೦೩೦೦ರಿಂದ೧೦೩೬೧ ಕ್ಕೆ ಹೆಚ್ಚಿತು. ಎಲ್ಲತೆರದ ಶಾಲೆಗಳಿಗೂ ವರ್ಷ ೧ ಕ್ಕೆ ೭೦॥ ಲಕ್ಷ ರೂ. ಗಳು ವೆಚ್ಚವಾಗುತ್ತಿವೆ. ಬಾಲವಿದ್ಯಾಶಾಲೆಗಳಿಗೇ ೩॥ ಲಕ್ಷ ರೂ. ಗಳು ವೆಚ್ಚಮಾಡಲ್ಪಡುತ್ತಿವೆ.

ಬೊಂಬಾಯಿ ವಿದ್ಯಾಸಂಘವು ಸ್ಥಾಪಿತವಾಗಿ ಇಂದಿಗೆ ನೂರುವರ್ಷವಾದುದರಿಂದ ಅದರ ಸಾಂವತ್ಸರಿಕೋತ್ಸವವನ್ನು ಕಳೆದ ವಾರ ನೆರವೇರಿಸಿದರು. ಈ ಸಂಘದವರು ಚಂದಾಮೂಲಕವಾಗಿ ಹಣವನ್ನು ಶೇಖರಿಸಿ ವಿದ್ಯಾಪ್ರಸಾರಕಾರ್ಯವನ್ನು ಮಿಷನರಿಗಳಂತೆ ಮಾಡುವುದಕ್ಕೆ ಆರಂಭಿಸಿ ಕಳೆದ ನೂರುವರ್ಷಗಳಿಂದಲೂ ಆ ಕಾರ್ಯವನ್ನು ಶ್ಲಾಘನೀಯವಾಗಿ ಸಾಗಿಸಿಕೊಂಡು ಬಂದಿದ್ದಾರೆ. ಮಿಷನರಿಗಳನ್ನುಬಿಟ್ಟರೆ ನಮ್ಮ ದೇಶದಲ್ಲಿ ವಿದ್ಯಾಪ್ರಸಾರಕ್ಕಾಗಿ ಯತ್ನಿಸಿದ ಪ್ರಜಾಸಂಘಗಳಲ್ಲಿ ಮೊಟ್ಟಮೊದಲನೆಯದು ಇದೇ ಆಗಿರುತ್ತದೆ.

ಬಂಗಾಳಾದಲ್ಲಿ ೧೬ ಮಂದಿ ಡಕಾಯಿತಿಕಳ್ಳರು ಒಂದು ಮನೆಗೆ ನುಗ್ಗಿದರು. ಒಳಗಿದ್ದ ಮನೆ ಯಜಮಾನಿಯು ಕೈಯಲ್ಲಿ ಒಂದು ಮಚ್ಚುಗತ್ತಿಯನ್ನು ಹಿಡಿದುಕೊಂಡು ಕಳ್ಳರನ್ನು ಪ್ರತಿಭಟಿಸಿದಳು. ಕೂಡಲೇ ಮನೆ ಯಜಮಾನನು ಪೆಟ್ಲುಪ್ಪಿನ ದ್ರಾವಕದ ಸೀಸೆಯನ್ನು ತಂದು ಕಳ್ಳರ ಮೇಲೆ ಎರಚುತ್ತ ಬಂದನು.. ಇವೆರಡು ಸಾಧನಗಳಿಂದಲೇ ಆ ದಂಪತಿಗಳು ಕಳ್ಳರನ್ನು ಹೊಡೆದು ಓಡಿಸಿದರು. ಈ ಸಾಹಸಕ್ಕಾಗಿ ಮೆಚ್ಚಿ ಪೋಲೀಸ್ ಸೂಪರಿಂಟೆಂಡೆಂಟರು ಆ ಸ್ತ್ರೀಗೆ ೧ ಬಂಗಾರದ ಪದಕವನ್ನೂ ಗಂಡನಿಗೆ ೧ಚಿನ್ನದಗಡಿಯಾರವನ್ನೂ ಬಹುಮಾನ ಮಾಡಿದರು.

ಬಂಗಾಳಾದಲ್ಲಿ ಡಕಾಯತಿಗಳ ಅವಾಂತರವು ಬರಬರುತ್ತ ವಿಶೇಷವಾಗುತ್ತಿದೆ. ಪೂರ್ವಬಂಗಾಳಾಕ್ಕೆ ಸೇರಿದ ಬಾರಿಸಾಲಿನಲ್ಲಿ ಮೊನ್ನೆವಾರ ೧ ರಲ್ಲೇ ಮೂರುಕಡೆ ಇಂಥ ಡಕಾಯತಿಗಳು ನಡೆದಿವೆ. ಮೊದಲಿನದರಲ್ಲಿ ೩೦ ಮಂದಿ ಕಳ್ಳರು ಸಾಯುಧರಾಗಿ ಬಂದು ಗಿವಾರಿಯಾ ಎಂಬುವರ ಮನೆಗೆ ನುಗ್ಗಿ ೬ ಸಾವಿರ ರೂ. ಗಳನ್ನು ದೋಚಿಕೊಂಡು ಹೋಗಿದ್ದಾರೆ. ೨ ನೆ ದರಲ್ಲಿ ೨೫ ಮಂದಿ ಸಾಯುಧರಾದ ಜನರು ಸೇರಿ ಬಾರಿಯಾ ಗ್ರಾಮದಲ್ಲಿನ ಒಬ್ಬ ಮಹಮ್ಮದೀಯನ ಮನೆಗೆ ನುಗ್ಗಿ ೭ ಸಾವಿರ ರೂ. ಗಳ ಸೊತ್ತನ್ನು ದೋಚಿಕೊಂಡು ಹೋಗಿದ್ದಾರೆ. ೩ ನೆಯದರಲ್ಲಿ ಕಲಿಚಿರಾ ಎಂಬ ಗ್ರಾಮದಲ್ಲಿನ ತಾರಾಪುಸರ್ದಾರ್ ಎಂಬವರ ಮನೆಗೆ ಕಳ್ಳರು ನುಗ್ಗಿದಾಗ ಮನೆಯವರಿಗೂ ಕಳ್ಳರಿಗೂ ಬಡಿದಾಟವಾಗಿ ಮನೆ ಯಜಮಾನನ ಮಗಳು ಸತ್ತಿರುತ್ತಾಳೆ.

ಬೊಂಬಾಯಿಪಟ್ಟಣವು ಏಷ್ಯಾಖಂಡದ ಪ್ಯಾರಿಸ್ ಎಂದು ಎಣಿಸಲ್ಪಡುತ್ತಿದೆ. ಈ ಪಟ್ಟಣವು ಕೆಲವರ್ಷಗಳ ಹಿಂದೆ ಬಹಳ ಅಶುಚಿಯಾಗಿದ್ದಿತು. ಅದನ್ನು ಶುಚೀಕರಿಸುವುದಕ್ಕೂ ಹೊಸಹೊಸ ಕಟ್ಟಡಗಳನ್ನು ನಿರ್ಮಿಸುವುದಕ್ಕೂ ಸಂದಿಗಳನ್ನು ವಿಸ್ತರಿಸುವುದಕ್ಕೂ ಸಹ ಅಲ್ಲಿ ಇಂಪ್ರೂವ್‌ಮೆಂಟ್‌ಟ್ರಸ್ಟ್ ಎಂಬ ಹೆಸರಿನಿಂದ ಒಂದು ಸಂಘವು ಏರ್ಪಟ್ಟಿದೆ. ಆ ಸಂಘದವರು ಪ್ರಸಕ್ತವರ್ಷದಲ್ಲಿ ಮಾಡಬೇಕಾದ ವ್ಯಯಗಳ ಪಟ್ಟಿಯು ಅನುಮೋದಿಸಲ್ಪಟ್ಟಿರುವುದು. ಅದರಲ್ಲಿ ಕಂಡ ಪ್ರಕಾರ ಆ ಪಟ್ಟಣವನ್ನು ಸವಿಶಾಲಗೊಳಿಸುವ ಸೌಂದರ್ಯದ ಏರ್ಪಾಟಿಗಾಗಿ ೫ ಕೋಟಿಯೂ ೫೫ ಲಕ್ಷ ರೂ. ಗಳೂ ಭೂಮಿಗಳನ್ನು ಕೊಳ್ಳುವುದಕ್ಕಾಗಿ ೫ ಕೋಟಿಯೂ ೬೦ ಲಕ್ಷ ರೂ. ಗಳೂ ಕಟ್ಟಡಗಳ ಕಲ್ಪಿಸುವಿಕೆಗೆ ೨೯ ಲಕ್ಷ ರೂ. ಗಳೂ ವಿನಿಯೋಗಿಸಲ್ಪಡುವುವು. ಕಳೆದ ವರ್ಷ ಈ ಸಂಘದವರು ವೆಚ್ಚಮಾಡಬೇಕಾಗಿ ನಿರ್ಧರಿಸಿದ್ದ ೭ ಕೋಟಿಯೂ ೯೨॥ ಲಕ್ಷ ರೂ. ಗಳಲ್ಲಿ ೫ ಕೋಟಿಯೂ ೯ ಲಕ್ಷ ರೂ. ಗಳನ್ನು ಮಾತ್ರ ವೆಚ್ಚಮಾಡಿದ್ದರು. ಬಡಬಗ್ಗರಿಗೂ ಕೂಲಿಜನಗಳಿಗೂ ಅನುಕೂಲಿಸುವ ೫೦ ಮನೆಗಳನ್ನು ಆ ವರ್ಷದಲ್ಲಿ ಈ ಸಂಘದವರು ಕಟ್ಟಿಸಿರುವರು ಬೊಂಬಾಯಿಪಟ್ಟಣದ ಮುನ್ಸಿಪಾಲಿಟಿಯ ಆದಾಯವು ವರ್ಷಕ್ಕೆ ೨ ಕೋಟಿ ರೂ. ಗಳಾಗುತ್ತವೆ.

ಹೈದರಾಬಾದ್‌ಸಂಸ್ಥಾನದಲ್ಲಿ ವಿದ್ಯಾಭ್ಯಾಸವು ಬಹಳ ಮಂದಗತಿಯಲ್ಲಿದೆ. ಆ ಸಂಸ್ಥಾನವು ೮೨೬೯೮ ಚದರಮೈಲಿಗಳ ವಿಸ್ತಾರವೂ ೧೩೩೭೪೬೭೬ ಜನಸಂಖ್ಯೆಯೂ ೫ ಕೋಟಿಯೂ ೨೧ ಲಕ್ಷದ ಆದಾಯವೂ ಉಳ್ಳುದಾಗಿದೆ. ಈ ಕಾರಣದಿಂದ ಭರತಖಂಡದಲ್ಲಿರುವ ಸ್ವದೇಶೀಯ ಸಂಸ್ಥಾನಗಳೊಳಗೆಲ್ಲಾ ಅದೇ ಮೊದಲನೆಯದಾಗಿದೆ. ಆದರೂ ಈ ಸಂಸ್ಥಾನದ ವಿದ್ಯಾಭ್ಯಾಸಕ್ಕಾಗಿ ವರ್ಷ ೧ಕ್ಕೆ ೧೫೯೯೫೮೮ ರೂ. ಗಳೂ ಮಾತ್ರ ವೆಚ್ಚಮಾಡಲ್ಪಡುತ್ತಿವೆ. ಇದರಲ್ಲಿ ಪ್ರೌಢವಿದ್ಯಾಲಯಗಳಿಗಾಗಿ ೧೬೦೪೩೫ ರೂ. ಗಳು ಮಧ್ಯಮತರಗತಿಯ ಶಾಲೆಗಳಿಗಾಗಿ ೪॥ ಲಕ್ಷ ರೂ. ಗಳೂ ಪ್ರಾರಂಭವಿದ್ಯಾಶಾಲೆಗಳಿಗಾಗಿ ೩॥ ಲಕ್ಷ ರೂ. ಗಳೂ ವೆಚ್ಚಮಾಡಲ್ಪಡುತ್ತಿವೆ. ಬರೋಡಾಸಂಸ್ಥಾನವು ೮೧೮೨ ಚದರಮೈಲಿಯ ವಿಸ್ತೀರ್ಣವೂ ೨ ಕೋಟಿ ರೂ. ಗಳ ಉತ್ಪತ್ತಿಯೂ ೨೦ ಲಕ್ಷ ಜನಸಂಖ್ಯೆಯೂ ಉಳ್ಳುದಾಗಿದೆ. ಅಲ್ಲಿ ವರ್ಷ ೧ ಕ್ಕೆ ವಿದ್ಯಾಭ್ಯಾಸಕ್ಕಾಗಿ ೧೬ ಲಕ್ಷ ರೂಪಾಯಿಗಳು ವೆಚ್ಚಮಾಡಲ್ಪಡುತ್ತಿವೆ. ಹೈದರಾಬಾದಿನ ಪ್ರೌಢವಿದ್ಯಾಲಯಗಳಲ್ಲಿ ಒಟ್ಟು ೧೦೯ ಮಂದ ವಿದ್ಯಾರ್ಥಿಗಳಿರುತ್ತಾರೆ, ಬರೋಡಾಕಾಲೇಜುಗಳಲ್ಲಾದರೊ ೪೧೦ ಮಂದಿಗಳಿದ್ದಾರೆ. ಈಗಿನ ಕಾಲದಲ್ಲೂ ಹೈದರಾಬಾದುಸಂಸ್ಥಾನದ ವಿದ್ಯಾಪ್ರಸಾರ ಪದ್ಧತಿಯು ಹೀಗಿರುವುದು ಶೋಚನೀಯವಲ್ಲವೆ?

ಜಾಂಜಾಂಷೆಟ್ ಎಂಬ ಪತ್ರಿಕೆಯಲ್ಲಿ ಪಾರ್ಸಿಯವರ ಜೋರಾಸ್ಟ್ರಿಯನ್ ಮತಶಾಖೆಯ ಕಾನ್ಸರನ್ನೂ ಅದರ ಅಧ್ಯಕ್ಷರನ್ನೂ ಕುರಿತು ಅಪಮಾನಕರವಾದ ಲೇಖನವು ಬರೆಯಲ್ಪಟ್ಟಿತೆಂದು ಅದರ ಸಂಪಾದಕರಮೇಲೆ ಮಾನನಷ್ಟದ ವಿವಾದವು ಬೊಂಬಾಯಿಯ ದಂಡಾಧಿಕಾರಿಯವರಲ್ಲಿ ಹೂಡಲ್ಪಟ್ಟಿದೆ. ಇದರಲ್ಲಿ ಪಿ. ಎ. ವಾಡಿಯಾ ಮೊದಲಾದ ದೊಡ್ಡದೊಡ್ಡ ಪಾರ್ಸಿ ಜನರ ಸಾಕ್ಷ್ಯಗಳು ಕರೆಯಲ್ಪಟ್ಟಿವೆ. ವಾಡಿಯಾರವರ ವಾಜ್ಮೂಲವು ನಡೆಯುವಾಗ ದಂಡಾಧಿಕಾರಿಯು ಅವರನ್ನು ಕುರಿತು—ಪಾರಸಿ ಜನವರ್ಗದವರು ಭರತಖಂಡಕ್ಕೆ ಬಂದಾಗಿನಿಂದಲೂ ಅವರು ಇತರ ಮತಸ್ಥರೊಡನೆ ಕಲಸಿ ಬಳಸದೆ ಇರುವರೆಂಬ ಮಾತು ನಿಜವಾದುದೆ? ಎಂದು ಪ್ರಶ್ನೆಮಾಡಲು, ವಾಡಿಯಾರವರು—ನಿಜವೆಂದು ಹೇಳುವುದಕ್ಕೆ ಅವಕಾಶವಿಲ್ಲ. ಪಾರ್ಸಿಯವರು ಮೊನ್ನೆಮೊನ್ನೆಯವರೆಗೂ ಪರದೇಶೀಯರೊಡನೆ ಕೂಡಿ ಭೋಜನಮಾಡಲು ಅಭ್ಯಂತರಪಟ್ಟಂತೆ ಕಾಣುವುದಿಲ್ಲ. ಈಗ್ಗೆ ೩೦ ವರ್ಷದ ಕೆಳಗೆ ವೈಸ್ರಾಯ ಲಾರ್ಡ್‌ರಿಪ್ಪನ್‌ರವರ ಗೌರವಾರ್ಥವಾಗಿ ಗೌರ್ನಮೆಂಟಿನ ಭವನದಲ್ಲಿ ನಡೆದ ಔತಣಕ್ಕಾಗಿ ಸರ್ ಜೇಮ್ಸ್ ಸೇಟ್ಜಿ ಜೀಜಿಭಾಯಿರವರಿಗೆ ಆಹ್ವಾನಪತ್ರಿಕೆಯನ್ನು ಕಳುಹಿಸಿರಲು, ಅವರು ಬರುವುದಕ್ಕೆ ಅಂಗೀಕರಿಸದೆ ಹೋದರು. ಡಿ. ಡಿ. ತಾತಾ ಎಂಬುವರು ಮದುವೆಯಾದ ಸ್ತ್ರೀಯನ್ನು ಬಳಿಕ ಜೋರಾಸ್ಟ್ರಿಯನ್ ಮತಕ್ಕೆ ಸೇರಿಸಿಕೊಂಡಾಗ ಮತಸ್ಥರೆಲ್ಲರೂ ಗದ್ದಲವನ್ನೆಬ್ಬಿಸಿದ ಮಾತು ನಿಜವು ಎಂದು ಹೇಳಿದರು. ಬಳಿಕ ದಂಡಾಧಿಕಾರಿಗಳು ಈ ವಿಷಯವನ್ನು ನಿಮ್ಮ ಮತದೊಳಗೇ ದೊಡ್ಡವರು ಸೇರಿ ಪರಿಷ್ಕರಿಸುವುದು ಒಳ್ಳೆಯದೆಂದು ಹೇಳಿ ಹಾಗೆ ಮಾಡಿಕೊಳ್ಳುವುದಕ್ಕಾಗಿ ಅವಕಾಶವನ್ನು ಕೊಟ್ಟಿರುವರು.

ವಿದೇಶವೃತ್ತಾಂತಗಳು.

ಇಂಗ್ಲೀಷ್ ಗೌರ್ನಮೆಂಟಿನವರು ರಷ್ಯಾಕ್ಕೆ ೩॥ ಕೋಟಿ ಪೌಂಡುಗಳ ಸಾಲವನ್ನು ಕೊಡಲು ಏರ್ಪಡಿಸಿದ್ದಾರೆ.

ಯುದ್ಧರಂಗದಲ್ಲಿ ಕಾದಾಡಿ ಆಲಸಿದ್ದ ಹಿಂದೂದೇಶದ ಸೇನೆಗೆ ಈ ಮಧ್ಯೆ ೨ ತಿಂಗಳ ವಿಶ್ರಾಂತಿಯು ಕೊಡಲ್ಪಟ್ಟಿದ್ದಿತು. ಈಗ ಅದು ಚೇತರಿಸಿಕೊಂಡು ಮರಳಿ ಯುದ್ಧಕ್ಕೆ ಸನ್ನದ್ಧವಾಗಿದೆ.

ಜರ್ಮನಿಗೆ ಸೇರಿದ ಇತರ ಸಂಸ್ಥಾನಗಳ ಸೈನ್ಯದಹೊರತು ಕೇವಲ ಜರ್ಮನಿಯ ಮೂಲಸೈನ್ಯದಲ್ಲೇ ಕಳೆದ ಜನವರಿ ತಾ॥ ೨೧ ರ ವರೆಗೆ ಸತ್ತಿರುವವರ ಒಟ್ಟು ಸಂಖ್ಯೆ ೯೯೮೯೩೮ ಎಂದು ಪ್ರಕಟವಾಗಿದೆ.

ಲಂಡನ್ ಟೈಮ್ಸ್‌ಪತ್ರಿಕೆಗೆ ಪೆಟ್ರೋಗ್ರೇಡಿನ ಪತ್ರವ್ಯವಹಾರಕನು ಹೀಗೆ ಬರೆದಿರುತ್ತಾನೆ—ತುರ್ಕಿಯವರಿಗೆ ಇದ್ದ ವಿಮಾನಗಳೆಲ್ಲಾ ೧೬. ಇವುಗಳನ್ನೆಲ್ಲಾ ಅವರ ಒಂದು ಹಡಗು ಸಾಗಿಸಿಕೊಂಡು ಹೋಗುತ್ತಿರಲು, ಅದನ್ನು ರಷ್ಯನರು ಸಿನೋಪುವಿನಹತ್ತಿರ ಮುಳುಗಿಸಿಬಿಟ್ಟರು.

ಇಂಗ್ಲೆಂಡಿನವರು ಈಗ ರಷ್ಯಾಕ್ಕೂ ಫ್ರಾನ್ಸಿಗೂ ಕೊಡಬೇಕಾದ ತುಪಾಕಿ, ಮದ್ದುಗುಂಡು ಮೊದಲಾದ ಆಯುಧಸಾಮಗ್ರಿಗಳನ್ನು ಅತಿಶಯವಾಗಿ ಅಣಿಮಾಡಿಸಿ ಒದಗಿಸಿಕೊಡುತ್ತಿದ್ದಾರೆ. ಲಕ್ಷಾಂತರಮಂದಿ ವಿದ್ಯಾರ್ಥಿಗಳು ಓದುವ ಕೆಲಸವನ್ನು ಬಿಟ್ಟು ದೇಶೋದ್ಧರಣಾರ್ಥವಾಗಿ ಕಂಕಣಕಟ್ಟಿ, ಆಯುಧನಿರ್ಮಾಣಶಾಲೆಗಳಲ್ಲಿ ಕೆಲಸಮಾಡುತ್ತಿದ್ದಾರೆ

ಆಸ್ಟ್ರೇಲಿಯಾ ಪ್ರಭುತ್ವದ ವಿದ್ಯಾಶಾಖಾಧ್ಯಕ್ಷ ಮಂತ್ರಿಯವರು ಉಪನ್ಯಾಸಮಾಡುವ ಒಂದಾನೊಂದು ಸಂದರ್ಭದಲ್ಲಿ—"ತುಪಾಕಿಯಿಂದ ಗುರಿಕಟ್ಟಿ ಹೊಡೆಯುವುದನ್ನು ಅಭ್ಯಾಸಮಾಡಿರುವ ೫ ಲಕ್ಷ ಮಂದಿಗಳನ್ನು ನಾವು ಅಣಿಮಾಡಿದ್ದೇವೆ. ಯಾವ ನಿಮಿಷದಲ್ಲಿ ಬೇಕಾದರೂ ಇವರು ಯುದ್ಧಕ್ಕೆ ಹೊರಡಲು ಸಿದ್ಧರಾಗಿದ್ದಾರೆ" ಎಂದು ನುಡಿದಿರುವರು.

ಜರ್ಮನರು ರಷ್ಯನರೊಡನೆ ಬೇರೆ ಸಂಧಿಮಾಡಿಕೊಳ್ಳಲು ಪ್ರಯತ್ನಿಸುತ್ತಿರುವರೆಂದೂ, ಅದಕ್ಕೆ ರಷ್ಯನರು ಇಷ್ಟವುಳ್ಳವರಾಗಿದ್ದಾರೆಂದೂ ಸುದ್ದಿಯು ಹುಟ್ಟಿದೆ. ಈ ವಿಷಯದಲ್ಲಿ ರಷ್ಯಾರಾಯಭಾರಿಯು ರೂಟರ್ ವಾರ್ತಾದಾಯಕನಿಗೆ ತಿಳಿಯಿಸಿರುವುದೇನೆಂದರೆ—ರಷ್ಯಾದವರು ಯಾವಾಗಲೂ ಮಿತ್ರಮಂಡಲಿಯವರನ್ನು ಬಿಟ್ಟು ಪ್ರತ್ಯೇಕವಾಗಿ ಸಂಧಿಮಾಡಿಕೊಳ್ಳುವವರಾಗಿಲ್ಲ. ಆ ವಿಷಯದಲ್ಲಿ ರಷ್ಯಾದವರೊಡನೆ ಸಲಹೆಯು ನಡೆದೂ ಇಲ್ಲ, ನಡೆಯುತ್ತಲೂ ಇಲ್ಲ, ಮುಂದೆ ನಡೆಯುವುದೂ ಇಲ್ಲ. ಎಂಬುದಾಗಿ

ಸುಪ್ರಸಿದ್ಧರಾದ ಪ್ರೊಫೆಸರ್ ಎಡಿಸನ್‌ರವರು ಒಂದು ತೆರದ ಜಲಾಂತರ್ಗಾಮಿ (ಸಬ್‌ಮೆರೀನ್) ಯನ್ನು ಹೊಸದಾಗಿ ಕಂಡುಹಿಡಿದಿದ್ದಾರೆ. ಇದುವರೆಗಿನ ಜಲಾಂತರ್ಗಾಮಿಗಳು ನೀರಿನೊಳಗೆ ಅಖಂಡವಾಗಿ ೩-೪ ಗಂಟೆಗಳ ಹೊತ್ತು ಇದ್ದು ಬಳಿಕ ಗಾಳಿಯನ್ನು ಗ್ರಹಿಸುವುದಕ್ಕಾಗಿ ಹೊರಕ್ಕೆ ಬರಬೇಕಾಗಿದ್ದುವು ಈಗಿನ ಇವರ ರಚನೆಯ ಹಡಗಾದರೊ ಗಾಳಿಗಾಗಿ ಅದು ಹೊರಕ್ಕೆ ಬರಬೇಕಾಗುವುದೇ ಇಲ್ಲ. ೧ ತಿಂಗಳ ಕಾಲವಾದರೂ ಅಖಂಡವಾಗಿ ನೀರಿನೊಳಗೇ ಮುಳುಗಿರಬಲ್ಲುದು. ಒಳಗಿರುವ ಜನರಿಗೆ ಬೇಕಾಗುವ ಗಾಳಿಯನ್ನು ಒದಗಿಸುವುದಕ್ಕೆ ಒಳಗೇ ಒಂದು ಯಂತ್ರವು ನಿರ್ಮಿಸಲ್ಪಟ್ಟಿರುವುದು ನೀರಿನಲ್ಲಿರುವ ಮೀನುಗಳ ಶ್ವಾಸಕೋಶದಲ್ಲಿ ವಾಯುಪರಿಗ್ರಹಣಕ್ಕೆ ಯಾವತೆರದ ಇಂದ್ರಿಯವಿರುವುದೋ ಅದನ್ನನುಸರಿಸಿ ಈ ಯಂತ್ರದಲ್ಲಿ ವಾಯುಪರಿಗ್ರಹಣದ ರಚನೆಯು ಮಾಡಲ್ಪಟ್ಟಿರುವುದಂತೆ.

ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತವಾಗಿರುವ ಘೋರಯುದ್ಧದ ದಶೆಯಿಂದ ಈ ಸಾಮಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದಲೂ ಬೆಲ್ಜಿಯಮ್ಮಿನಿಂದಲೂ ಸುತರಾಂ ಬರುವುದು ಕಟ್ಟಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಆವಶ್ಯಕವಾದ ಕಾಗದ ಮೊದಲಾದ ಸಾಮಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವಧಿಯು ಪೂರೈಸಿರುವವರಿಗೆಲ್ಲಾ ಪತ್ರಿಕೆಯನ್ನು ವಿ. ಪಿ ದ್ವಾರ ಕಳುಹಿಸುತ್ತಿರುವೆವು. ಆದರೆ ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿರುಗಿಸಿ ಕಾಗದದ ಬೆಲೆಯೇರಿಕೆಯಿಂದ ನಷ್ಟಪಡುವುದರ ಜತೆಗೆ ಪೋಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದು ತಿಳುಹಲು ಖೇದವಾಗುತ್ತದೆ. ಇತಃಪರಃ ದಯಾರ್ದ್ರಹೃದಯರಾದ ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ. ಪಿ. ಹಣವನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನವಾಗಿ ನಡೆದುಕೊಂಡು ಹೋಗುವಂತೆ ಮಾಡುವರೆಂದು ಸಂಪೂರ್ಣವಾಗಿ ನಂಬಿರುತ್ತೇವೆ.

ಮ್ಯಾನೇಜರ್.

ಸೂಚನೆ.

ಮಹಾಶಿವರಾತ್ರಿ ಹಬ್ಬದ ಉದ್ದೇಶದಿಂದ ಪದ್ಧತಿಯ ಪ್ರಕಾರ, ಮುಂದಣ ತಾ|| ೧೪-೨-೧೯೧೫ ರ "ಮೈಸೂರ್ ಸ್ಟಾರ್" ಪತ್ರಿಕೆಯು ಹೊರಡುವುದಿಲ್ಲವು.

ಮೈಸೂರ್ ಸ್ಟಾರ್.

ಸನ್ ೧೯೧೫ನೆಯ ಫೆಬ್ರವರಿ ತಾ|| ೭ ನೆಯ ಭಾನುವಾರ.

ಯುದ್ಧವು ಈಗಲೇ ಶಾಂತವಾಗುವಂತಿಲ್ಲ.

ಯೂರೋಪಿನ ಮಹಾಯುದ್ಧವು ಆರಂಭವಾಗಿ ಆರು ತಿಂಗಳು ತುಂಬಿತು. ಸ್ಥಿತಿಗತಿಯನ್ನು ನೋಡಿದರೆ ಇನ್ನೂ ಯಾವಪಕ್ಷವೂ ಹಣ್ಣಿಗೆ ಬಂದಂತೆ ಕಾಣುವುದಿಲ್ಲ. ಸನ್ನಾಹಗಳ ಸುದ್ದಿಯನ್ನು ಕೇಳಿದರೆ ಬರುವ ವಸಂತ ಋತುವಿನಿಂದ ಮಹಾಮಹಾ ಯುದ್ಧಗಳಿಗೆ ಉಪಕ್ರಮವಾಗುವಂತೆ ಕಾಣುತ್ತದೆ. ಇದುವರೆಗೆ ಯುದ್ಧಾಂಗಣಗಳಲ್ಲಿ ಮಳೆ ಮಂಜುಗಳ ಹಾವಳಿಯು ವಿಶೇಷವಾಗಿದ್ದುದರಿಂದ ಯುದ್ಧಕ್ರಿಯೆಗೆ ಪ್ರತಿಬಂಧಕವಾಗಿದ್ದಿತು. ಚಳಿಗಾಲ ಕಳೆದು ಬಿಸಿಲುಗಾಲವಾರಂಭವಾಗುವ ಸಂಧಿಯಲ್ಲಿ ಯುದ್ಧವಿಜೃಂಭಣವು ಬಹಳವಾಗಿ ಆಗುವುದರಲ್ಲಿ ಸಂಶಯವಿಲ್ಲ. ಇದುವರೆಗೆ ಆಗಿರುವ ಯುದ್ಧದ ಫಲಾಫಲಗಳು ಹಿಂದೆ ಚರ್ಚಿಸಲ್ಪಟ್ಟೇ ಇರುತ್ತವೆ. ಅವುಗಳ ಸಿಂಹಾವಲೋಕನ ಮಾಡಿದರೆ ಯಾರೊಬ್ಬರ ಜಯಾಪಜಯಗಳೂ ನಿರ್ಣೀತವಾಗುವಂತಿರುವುದಿಲ್ಲ. ಉಭಯಪಕ್ಷದ ಪ್ರಾಣಧನಹಾನಿಯು ವಾಚಾಮಗೋಚರವಾಗಿರುವುದು ಮಾತ್ರ ನಿಜ. ಪೂರ್ವಪಶ್ಚಿಮ ರಣರಂಗಗಳಲ್ಲಿ ಹತರಾಗಿಹೋದವರು, ಸೆರೆಯಾಗಿಹೋದವರು, ಅನುಪಯೋಗಿಗಳಾದವರು ಹೋಗುತ್ತ, ಈಗಲೂ ಜರ್ಮನರ ಕಡೆಯ ಸೇನೆಯು ಪಶ್ಚಿಮರಣರಂಗದಲ್ಲಿ ೧೩ ಲಕ್ಷವೂ, ಪೂರ್ವರಣರಂಗದಲ್ಲಿ ೧೦ ಲಕ್ಷವೂ ಇರುವುದೆಂದು ಎಣಿಸಲ್ಪಟ್ಟಿದೆ. ಬರುವ ಬೇಸಗೆಯೊಳಗೆ ಅವರು ಹೊಸದಾಗಿ ಪಶ್ಚಿಮಯುದ್ಧಾಂಗಣಕ್ಕೆ ತರಿಸಲು ೨೦ ಲಕ್ಷ ಸೈನ್ಯವನ್ನು ಹವಣಿಸಿರುವರಂತೆ. ಇದನ್ನು ಮಿತ್ರಮಂಡಲಿಯವರು ಆಗಲೇ ತಿಳಿದುಕೊಂಡಿರುವ ಕಾರಣ ಅವರೂ ಸುಮ್ಮನೆ ಕುಳಿತಿಲ್ಲ. ಪ್ರತಿದಿನವೂ ನೂತನ ಸೈನಿಕರನ್ನು ಸೇರಿಸುತ್ತಲೂ ಅವರನ್ನು ಯುದ್ಧಕಲಾಶಿಕ್ಷಿತರನ್ನಾಗಿಮಾಡಿಯೂ ಮಾಡುತ್ತಲೂ ಲಕ್ಷಾಂತರ ಜನರನ್ನು ಅಣಿಮಾಡಿಟ್ಟಿದ್ದಾರೆ. ಮಿತ್ರಮಂಡಲಿಯವರಲ್ಲಿ ಇಂಗ್ಲೀಷರ ಕಡೆ ೨ ಲಕ್ಷ ಸೈನ್ಯವೂ, ಫ್ರೆಂಚರ ಕಡೆ ೧೨ ಲಕ್ಷ ಸೈನ್ಯವೂ, ಈಗ ಪಶ್ಚಿಮರಣರಂಗದಲ್ಲಿ ಕಾದಾಡುತ್ತಿದೆ. ಇನ್ನು ಬರುವ ಬೇಸಗೆ ಕಾಲಕ್ಕೆ ಮತ್ತೆ ೮ ಲಕ್ಷ ನೂತನ ಸೈನ್ಯವನ್ನು ಇಂಗ್ಲೀಷರೂ, ೧೨ ಲಕ್ಷವನ್ನು ಫ್ರೆಂಚರೂ ತಂದು ನಿಲ್ಲಿಸುವವರಾಗಿದ್ದಾರೆ. ಇದರಮೇಲೆ ಬೆಲ್ಜಿಯಮ್ಮಿನವರೂ ನೂತನಸೈನ್ಯವನ್ನು ಹವಣಿಸುತ್ತಿದ್ದಾರೆ. ಅದೂ ಕನಿಷ್ಠಪಕ್ಷ ಅರ್ಧ ಲಕ್ಷದವರೆಗಾದರೂ ಸೇರಬಹುದು. ಈಗಲೇ ಪಶ್ಚಿಮರಣರಂಗದಲ್ಲಿ ಸೇನೆಗಳು ಉತ್ತರನ್ಯೂಪೋರ್ಟಿನಿಂದ ದಕ್ಷಿಣದ ಆಲ್ಸೆಸ್ಸಿನವರೆಗೆ ೩೫೦ ಮೈಲಿಗಳ ದೂರಕ್ಕೆ ವ್ಯಾಪಿಸಿಕೊಂಡು ಪರಸ್ಪರ ಅಭಿಮುಖವಾಗಿ ಕಾದಾ[illegible] ನೂತನ ಸೈನ್ಯವೂ ಸೇರಿದನಂತರ ಸ್ವಲ್ಪ ಹೆಚ್ಚು ಕಡಿಮೆ [illegible]ಕೋಟಿ ಸೈನ್ಯವು ಸೇರಿ ಈ ರಣರಂಗದಲ್ಲಿ ಯುದ್ಧಮಾಡುವಂತಾಗುತ್ತದೆ. ಆಗಳಿನ ಭೀಕರ ಸ್ವರೂಪವು ವರ್ಣನಾತೀತವಾಗುವುದೆಂಬುದಕ್ಕೆ ಸಂಶಯವಿಲ್ಲ. ಮಿತ್ರಮಂಡಲಿಯ ನೂತನಸೈನ್ಯಗಳು ಸಮರಾಂಗಣಕ್ಕೆ ಬಂದಿಳಿಯುವುದರೊಳಗಾಗಿ ಜರ್ಮನರು ತಮ್ಮ ನೂತನಸೈನ್ಯ ೨೫ ಲಕ್ಷವನ್ನು ತಂದು ಎಲ್ಲಾದರೊಂದುಕಡೆ ಮಿತ್ರಮಂಡಲಿಯ ಸೇನಾಪಂಗ್ತಿಮುಖವನ್ನು ಭೇದಿಸಿಕೊಂಡು ಫ್ರಾನ್ಸಿಗೆ ನುಗ್ಗಬೇಕೆಂದೂ, ಸುತ್ತುಗಟ್ಟಿ ಶತ್ರುಸೈನ್ಯವನ್ನು ವಿನಾಶಗೊಳಿಸಬೇಕೆಂದೂ ಬಹಳ ಹವಣಿಸುತ್ತಿದ್ದಾರೆ. ಮಿತ್ರಮಂಡಲಿಯವರಾದರೊ ಉತ್ತರದಲ್ಲಿ ಬೆಲ್ಜಿಯಮ್ಮನ್ನು ನುಗ್ಗಿದ್ದಾರೆ; ದಕ್ಷಿಣದಲ್ಲಿ ಆಲ್ಸೆಸ್ಸು ಜಿಲ್ಲೆಗಳಲ್ಲಿ ಜರ್ಮನಿಯೊಳಕ್ಕೆ ಪ್ರವೇಶಿಸಿದ್ದಾರೆ. ತಮ್ಮ ಕಡೆಯ ಹೊಸಸೈನ್ಯವು ಬಂದು ಕೂಡಿಕೊಂಡಕೂಡಲೇ ಮೇಲೆ ಕೆಳಗಿನ ಎರಡುಕಡೆಯಿಂದಲೂ ಮುಂದೆನುಗ್ಗಿ ಜರ್ಮನರನ್ನು ಸುತ್ತುಗಟ್ಟಿ ಹತಮಾಡಬೇಕು, ಇಲ್ಲವೆ ಓಡಿಸಿಬಿಡಬೇಕು ಎಂದು ನಿರೀಕ್ಷಿಸಿಕೊಂಡಿದ್ದಾರೆ. ಹೀಗೆ ಉಭಯಪಕ್ಷದವರೂ ಮಾಡಿಕೊಂಡಿರುವ ಏರ್ಪಾಟಿನಲ್ಲಿ ಅಗಾಧವಾದ ಯುದ್ಧಗಳು ನಡೆದೇ ತೀರಬೇಕಾಗಿದೆ. ಪರ್ಯವಸಾನವು ಹೇಗಾಗುವುದೋ ನೋಡಬೇಕು. ಅಂತೂ ಮುಂದಣ ಬೇಸಗೆಯ ಯುದ್ಧವು ಬಲುಮಟ್ಟಿಗೆ ಯಾವುದಾದರೊಂದುಪಕ್ಷದ ಜಯದ ಅಥವಾ ಅಪಜಯದ ದ್ಯೋತನಕ್ಕೆ ಮುಖ್ಯ ಚಿಹ್ನವಾಗಿ ಪರಿಣಮಿಸುವುದೆಂದು ನಿರೀಕ್ಷಿಸಬಹುದು.

ಪೂರ್ವರಣರಂಗದಲ್ಲಿಯೂ ಬೇಸಗೆಕಾಲದ ಯುದ್ಧಕ್ಕೆ ಉಭಯಪಕ್ಷದವರೂ ವಿಶೇಷ ಸನ್ನಾಹ ಮಾಡುತ್ತಿದ್ದಾರೆ. ಈಗ ಅಲ್ಲಿ ಜರ್ಮನರಕಡೆ ೧೦ ಲಕ್ಷ ಸೈನ್ಯವೂ ಆಸ್ಟ್ರಿಯನ್ನರಕಡೆ ೧೦ ಲಕ್ಷ ಸೈನ್ಯವೂ, ರಷ್ಯನರಕಡೆ ೨೫ ಲಕ್ಷ ಸೈನ್ಯವೂ, ಕಾಳಗಮಾಡುತ್ತಿವೆ. ಅಲ್ಲಿನ ರಣಾಂಗಣವು ೫೦೦ ಮೈಲಿಗಳವರೆಗೆ ವಿಸ್ತರಿಸಿದೆ. ಜರ್ಮನರು ಆಸ್ಟ್ರಿಯನ್ನರೂ ಸಹ ಮತ್ತೆ ೧೨ ಲಕ್ಷದಮೇಲೆಯೇ ನೂತನಸೈನ್ಯವನ್ನು ಆ ರಣರಂಗಕ್ಕೆ ಸಾಗಿಸುವುದರಲ್ಲಿದ್ದಾರೆ. ರಷ್ಯನರು ೭೫ ಲಕ್ಷ ಸೈನ್ಯವನ್ನು ಹವಣಿಸಿಕೊಂಡಿರುವರೆಂಬ ಸುದ್ದಿಯಿದೆ. ಆದರೆ ಪೂರ್ವಪ್ರಾಚ್ಯಕ್ಕೆ ಸೈನ್ಯವನ್ನು ಸಾಗಿಸುವುದು ಜರ್ಮನರಿಗೆ ಬಹಳ ಸುಲಭ. ಆ ದೇಶದಲ್ಲಿ ಲೋಹಮಾರ್ಗಗಳು ಎಲ್ಲಕಡೆಯೂ ಜೇಡರ ಹುಳುವಿನ ಹಂಜರದಂತೆ ಹೆಣೆದಿರುವುದರಿಂದ ಒಂದು ತುದಿಯಿಂದ ಮತ್ತೊಂದು ದಿಕ್ಕಿಗೆ ೨೪ ಗಂಟೆಯ ಕಾಲದೊಳಗಾಗಿ ಸೈನ್ಯವನ್ನು ಸಾಗಿಸುವುದು ಸಾಧ್ಯವಾಗಿದೆ. ರಷ್ಯಾದೇಶಕ್ಕೆ ಅಷ್ಟು ಅನುಕೂಲ್ಯವಿಲ್ಲ. ಅಲ್ಲಿ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಸೈನ್ಯವನ್ನು ಸಾಗಿಸುವುದಕ್ಕೆ ವಾರಗಟ್ಟಲೆ ತಿಂಗಳುಗಟ್ಟಲೆ ಕಾಲವು ಹಿಡಿಯುತ್ತದೆ. ಆದರೂ ಅವರ ಸೈನ್ಯವು ಶತ್ರುಗಳನ್ನಿದಿರಿಸುವುದಕ್ಕೆ ಸಾಕಾದಷ್ಟು ಕೂಡಿ ಪರಾಕ್ರಮದಿಂದ ಕಾದಾಡಿದ್ದಾರೆ. ರಷ್ಯನರು ಜರ್ಮನಿಯವರಮೇಲೂ ಆಸ್ಟ್ರಿಯಾದವರಮೇಲೂ ತುರ್ಕಿಯವರಮೇಲೂ ಹೀಗೆ ಮೂರುಕಡೆಗೆ ಶತ್ರುಗಳ ಪ್ರತಿಭಟನಕ್ಕೆ ಸಾಕಾಗುವಷ್ಟು ಸೈನ್ಯಗಳನ್ನು ಬಹುದೂರದಿಂದ ಒದಗಿಸಬೇಕಾಗಿದೆ. ಹಾಗೆ ಒದಗಿಸಕೊಂಡೂ ಅವರು ಎಲ್ಲಕಡೆಯೂ ಜಯವನ್ನು ಪಡೆದೇ ಬಂದಿದ್ದಾರೆ. ಇದನ್ನು ನೋಡಿದರೆ ಮುಂದೆಯೂ ಅವರು ತಮ್ಮ ಕೆಲಸವನ್ನು ಶ್ಲಾಘನೀಯವಾಗಿ ನಡೆಯಿಸಿ ಆಸ್ಟ್ರಿಯನ್ನರನ್ನು ಸೋಲಿಸಿ, ಬಳಿಕ ಜರ್ಮನರ ಪಾರುಪತ್ಯವನ್ನು ತೆಗೆದುಕೊಳ್ಳುವುದಕ್ಕೆ ನುಗ್ಗದೆ ಇರಲಾರರೆಂದು ಯೋಚಿಸಬಹುದಾಗಿದೆ.

ತುರ್ಕಿಯ ಪರಾಭವವಂತೂ ರಷ್ಯನರಿಂದ ಚೆನ್ನಾಗಿ ಆಗುತ್ತಲಿದೆ. ಈಜಿಪ್ಟಿನಮೇಲೆ ಅವರ ಕಣ್ಣು ಬಿದ್ದಿದ್ದರೂ ಸುಸಜ್ಜಿತವಾದ ಆಂಗ್ಲಸೈನ್ಯದಿಂದ ಸುರಕ್ಷಿತವಾದ ಆ ದೇಶದಮೇಲೆ ಅಭಿಯೋಗಮಾಡಿ ಫಲವನ್ನು ಪಡೆಯುವ ಯೋಗ್ಯತೆಯು ತುರ್ಕಿಗೆ ಇರುವುದಿಲ್ಲ. ಸೂಯೆಜ್ ಕಾಲ್ವೆಯ ದಡದಲ್ಲಿ ಈಜಿಪ್ಟಿನ ಎಲ್ಲೆಯ ಕೆಲ ಗ್ರಾಮಗಳಲ್ಲಿ ತುರ್ಕಿಯ ಸೇನೆಯ ಸ್ವಲ್ಪ ಗುಂಪುಗಳು ಹಾವಳಿ ನಡೆಯಿಸಿ ಹೋದ ಸುದ್ದಿಯು ಇದುವರೆಗೆ ಬಂದಿದೆಯೇ ಹೊರತು, ದೊಡ್ಡ ಸೇನಾನಿವಹವು ಸಾಂಗವಾದ ಯುದ್ಧಕ್ಕೆ ಉಪಕ್ರಮಿಸಿದ ಸುದ್ದಿಯೇನೂ ಇರುವುದಿಲ್ಲ.

ಸರ್ವಿಯನ್ನರು ಬೆಲ್ಗ್ರೇಡಿನಿಂದ ತಮ್ಮ ಶತ್ರುಗಳನ್ನು ಓಡಿಸಿದಂದಿನಿಂದೀಚೆಗೆ ಯಾವ ಪರಾಕ್ರಮದ ಕೆಲಸಕ್ಕೂ ನುಗ್ಗಿದಂತೆ ತೋರಲಿಲ್ಲ. ಅವರಿಗೆ ಶತ್ರುಗಳ ರಾಷ್ಟ್ರಕ್ಕೆ ನುಗ್ಗುವಷ್ಟು ಸಾಮರ್ಥ್ಯವೂ ಸಂಪನ್ನತೆಯೂ ಉಳಿದಿಲ್ಲವೆಂದು ಕಾಣುತ್ತದೆ. ರಷ್ಯನರ ದಾಳಿಯು ಇಲ್ಲದಿದ್ದರೆ ಆಸ್ಟ್ರಿಯನ್ನರು ಇಷ್ಟರೊಳಗೆ ಸರ್ವಿಯಾವನ್ನು ನುಂಗಿ ನೀರುಕುಡಿದುಬಿಡುತ್ತಿದ್ದರು. ಸದ್ಯಃ ಅದಕ್ಕೆ ಅವಕಾಶವಿಲ್ಲದೇಹೋಗಿರುವುದರಿಂದ ಸರ್ವಿಯಾ, ಆಸ್ಟ್ರಿಯಾಗಳ ಮಧ್ಯದ ಕಾಳಗವೂ ಶಾಂತಸ್ಥಿತಿಗೆ ಬಂದಿರುವುದೆಂದು ಹೇಳಬೇಕಾಗಿದೆ.

ಜರ್ಮನರು ಈಗಿನ ಯುದ್ಧಕ್ಕೆ ನಿಂತಬಳಿಕ ಸಕಲವಿಷಯದಲ್ಲೂ ತಮಗಿದ್ದ ಗೌರವಪ್ರತಿಷ್ಠೆಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಬೆಲ್ಜಿಯಂದೇಶದಲ್ಲಿ ಅವರ ಸೈನ್ಯಾಧಿಪತಿಗಳು ನಡೆಯಿಸಿದ ಅಮಾನುಷಕೃತ್ಯವು ಹೊರಬಿದ್ದಕೂಡಲೇ ಪ್ರಪಂಚದವರೆಲ್ಲಾ ಅವರಮೇಲೆ ಗುರುಗುಟ್ಟುವಂತಾಯಿತು. ಶಾಂತವಾಗಿದ್ದ ಪಟ್ಟಣಗಳಮೇಲೂ ನಿರುಪದ್ರವರಾದ ಪ್ರಜೆಗಳಮೇಲೂ ಅವರ ಕಡೆಯ ವೈಮಾನಿಕರು ಸಿಡಿಮದ್ದುಗಳನ್ನು ಹಾಕುತ್ತ ಬಂದಮೇಲೆ ತಟಸ್ಥರಾಷ್ಟ್ರಗಳೂಕೂಡ ಉರಿಗಣ್ಣನ್ನು ಬಿಡುವಂತಾಯಿತು. ಕಳ್ಳತನದಿಂದ ಅವರ ಹಡಗುಗಳು ಇಂಗ್ಲೆಂಡ್‌ದೇಶದ ಪಟ್ಟಣಗಳಮೇಲೆ ಫಿರಂಗಿ ಗುಂಡುಗಳನ್ನು ಹಾರಿಸಿ ಪುರಗ್ರಾಮವಾಸಿಗಳಿಗೆ ಅನರ್ಥವನ್ನು ಮಾಡಿದಂದಿನಿಂದಲೋ ಲೋಕವೆಲ್ಲಾ ಅವರ ನಾಚಿಗೆಗೇಡಾದ ವರ್ತನವನ್ನು ಕಂಡು ನಿಂದಿಸುವಂತಾಯಿತು. ಈಚೆಗೆ ಅವರು "ವಿವೇಕಭ್ರಷ್ಟಾನಾಂಭವತಿ ವಿನಿಪಾತಶ್ಶತಮುಖಃ" ಎಂಬಂತೆ ಕ್ಷುದ್ರಪ್ರಯತ್ನಗಳಿಗೇ ವಿಶೇಷವಾಗಿ ಗಮನಕೊಡುತ್ತಿರುವಂತೆ ಕಳೆದವಾರದ ವಾರ್ತೆಗಳಿಂದ ಗೊತ್ತಾಗುತ್ತದೆ. ಅದೇನೆಂದರೆ—ಸಮುದ್ರದಲ್ಲಿ ಸಂಚರಿಸುವ ವ್ಯಾಪಾರಿಗಳ ಹಡಗುಗಳನ್ನು ನೀರಿನಲ್ಲಿ ಮುಳುಗಿಸುವ ದುರಾಗತವನ್ನು ಅವರಕಡೆಯ ಯುದ್ಧದ ಹಡಗುಗಳು ಅವ್ಯಾಹತವಾಗಿ ನಡೆಯಿಸುತ್ತಿವೆ. ಎಮ್ಡನ್ ಕ್ರೂಯಿರ್ಸರು ಭರತಖಂಡದ ಪೂರ್ವಪಶ್ಚಿಮಸಮುದ್ರಗಳಲ್ಲಿ ಮಾಡಿದಂಥ ಹಾವಳಿಯನ್ನೇ ಇಂಗ್ಲೀಷ್ ಕಾಲ್ವೆಯಲ್ಲೂ ಐರ್ಲಾಂಡ್ ಸಮುದ್ರದಲ್ಲೂ ಈಗ ಜರ್ಮನರ ಸಬ್‌ಮೆರೀನುಗಳು ಮಾಡುತ್ತಿವೆ. ನಿರಾಯುಧನಾದ ಮನುಷ್ಯನನ್ನು ಕಡಿಯುವುದು ಸಾಯುಧನಾದ ಭಟನಿಗೆ ಹೇಗೆ ಅಧರ್ಮವೋ ಅದರಂತೆಯೇ ಈಕೆಲಸವೂ ಕೇವಲ ಜಘನ್ಯವಾಗಿರುತ್ತದೆ. ಈ ಅಧರ್ಮಬುದ್ಧಿಯು ಅವರ ಪರಿಣಾಮದ ಅಪಜಯಕ್ಕೆ ಸಾಧಕವಾಗಿ ಅವರಿಗೆ ವಕ್ರಿಸಿರುವಂತೆ ಕಾಣುತ್ತದೆ. ಇದರಿಂದ ಜರ್ಮನರು ಪ್ರಪಂಚದಮೇಲಣ ಎಲ್ಲಾ ರಾಷ್ಟ್ರಗಳ ಸಾನುಭೂತಿಯನ್ನೂ ಕಳೆದುಕೊಳ್ಳುತ್ತಿದಾರೆ. ಮುಂದೆ ಅವರ ಸ್ಥಿತಿಯನ್ನು ಕಂಡು ಪಶ್ಚಾತ್ತಾಪಪಡುವವರು ಭೂಮಿಯಮೇಲೆ ಯಾರೂ ಇಲ್ಲದಂತೆಯೇ ಆಗುವ ಸಂಭವವಿರುತ್ತದೆ. ಈ ಅನಿಷ್ಟಪರಿಣಾಮವನ್ನು ತಾವಾಗಿ ತಂದುಕೊಳ್ಳುತ್ತಿದ್ದಾರೆ. ತಮ್ಮ ಶತ್ರುಗಳಿಗೆ ಅನಿಷ್ಟವನ್ನು ಮಾಡುತ್ತೇವೆಂದು ಇವರು ತಿಳಿದುಕೊಂಡು ಈ ದುರಾಗತವನ್ನು ನಡೆಯಿಸುತ್ತಿರಬಹುದು. ಇದರಿಂದ ಅವರಿಗೆ ಒಂದುತೆರದ ಲಾಭವೇ ಆಗುತ್ತಿದೆ. ಲೋಕದ ಸಾನುಭೂತಿಯು ಅವರಕಡೆಗೆ ಉಂಟಾಗುವುದಕ್ಕೂ, ಅವರ ಸ್ವದೇಶದ ಪ್ರಜೆಗಳು ಈಗಿನ ಸ್ವದೇಶಾಭಿಮಾನಪ್ರೇರಿತರಾಗಿ ಜರ್ಮನರನ್ನು ಪ್ರತಿಭಟಿಸಲು ವಿಶೇಷವಾದ ಉತ್ಸಾಹದಿಂದ ಸೈನ್ಯದಲ್ಲಿ ಸೇರುವುದಕ್ಕೂ ಅವಕಾಶವಾಗುತ್ತಿದೆ.

ಇವೆಲ್ಲ ಸ್ಥಿತಿಗತಿಗಳನ್ನು ನೋಡಿದರೆ ಯುದ್ಧದ ಅವಸಾನವು ಸಮೀಪಸ್ಥಿತವಾಗಿರುವಂತೆ ಕಾಣುವುದಿಲ್ಲ. ಪರಸ್ಪರ ಮಸಗಾಟವು ತೀಕ್ಷ್ಣವಾಗಿಯೇ ಇದೆ. ಆದರೆ ಯುದ್ಧವನ್ನು ಬಹುಕಾಲ ಸಾಗಿಸುವುದಕ್ಕೆ ಅತ್ಯವಶ್ಯಕವಾದ ಆಹಾರ್ಯಾದಿ ಸಾಮಗ್ರಿಗಳೂ ಇತರ ಉಪಕರಣಗಳೂ ಸಹ ಮಿತ್ರಮಂಡಲಿಯವರಿಗೆ ದೇಶದೇಶಾಂತರಗಳಿಂದ ಸಾಗಿಬರುವುದಕ್ಕೆ ಇರುವಂಥ ಅನುಕೂಲ್ಯವು ಜರ್ಮನರಿಗೆ ಇರುವುದಿಲ್ಲ. ಇದೊಂದುಕಾರಣದಿಂದ ಅವರು ಮೊದಲು ಹಣ್ಣಿಗೆ ಬರುವ ಸಂಭವವಿರುತ್ತದೆ. ಅಂಥ ಕಾಲವನ್ನು ಜಗದೀಶನು ಬೇಗನೆ ಉಂಟುಮಾಡಿ ನಮ್ಮ ಸಾರ್ವಭೌಮಪಕ್ಷಕ್ಕೆ ಜಯವನ್ನೂ, ಯುದ್ಧದ ಉಪಶಾಂತಿಯನ್ನೂ ಜಗತ್ತಿಗೆ ಕ್ಷೇಮವನ್ನೂ ಉಂಟುಮಾಡಲೆಂದು ಕೋರುತ್ತೇವೆ.

ಒಳದೇಶ ವೃತ್ತಾಂತಗಳು

ಕಳೆದ ಜನ್ ತಿಂಗಳಲ್ಲಿ ಶ್ರೀನಿವಾಸಪುರದ ತಾ|| ಬೂರಗಮಾಕಳಪಲ್ಲಿ ಗ್ರಾಮದ ಮಾಗಳಪ್ಪನೆಂಬುವನನ್ನು ಕೊಂದನೆಂಬಪರಾಧದಮೇಲೆ ಬೆಂಗಳೂರ ಸೆಶನ್ಸುಜಡ್ಜರಿಂದ ಮರಣದಂಡನೆಗೆ ಗುರಿಮಾಡಲ್ಪಟ್ಟಿದ್ದ ಕದಿರನೆಂಬುವನು ಚೀಫ್‌ಕೋರ್ಟಿಗೆ ಅಪೀಲನ್ನು ಮಾಡಿಕೊಂಡಿರುವಲ್ಲಿ ಚೀಫ್‌ಜಡ್ಜರು ಈ ತಾ|| ೪ ರಲ್ಲಿ ಅವನನ್ನು ದೋಷಮುಕ್ತನನ್ನಾಗಿ ಮಾಡಿದರು.

ಸೊಲ್ಲಾಪುರದ ಮ|| ರಾ|| ಮಲ್ಲಿಕಾರ್ಜುನಪ್ಪ ಪಾಟೀಲರವರ ಪತ್ನಿಯವರಾದ ಶ್ರೀಮತಿ ಭಾಗೀರಥಿಬಾಯಿಯವರು ವಿಧಿವಶರಾದರೆಂದು ತಿಳುಹಲು ಅತ್ಯಂತ ವ್ಯಸನವಾಗುತ್ತದೆ. ಇವರು ಎರಡನೆಯ ವೀರಶೈವಮಹಿಳಾಪರಿಷತ್ತಿನ ಅಧ್ಯಕ್ಷೆಯರಾಗಿದ್ದು ಪ್ರಖ್ಯಾತರಾಗಿದ್ದರಲ್ಲದೆ ಪೂರ್ಣವಿದ್ಯಾವತಿಯೂ ಸ್ತ್ರೀಸಮಾಜಸುಧಾರಕರೂ ಆಗಿದ್ದರು. ಇವರ ಅಕಾಲಮರಣದಿಂದ ಇವರ ಪತಿಯವರಿಗೂ ಕುಟುಂಬಕ್ಕೂ ಅಲ್ಲದೆ ಸಮಾಜಕ್ಕೂ ವಿಶೇಷ ನಷ್ಟವಾಯಿತು. ಮೃತರ ಆತ್ಮಕ್ಕೆ ಶಾಂತಿಯೂ ಅವರ ಪತಿಪುತ್ರಾದಿಗಳ ದುಃಖಶಮನವೂ ಉಂಟಾಗಲೆಂದು ಇಚ್ಛಿಸುತ್ತೇವೆ.

ರಾಜಧಾನಿಯಲ್ಲಿ ಬಿಸಿಲಿನತಾಪವು ನಿತ್ಯದಲ್ಲೂ ಹೆಚ್ಚುತ ರಾತ್ರಿಯವೇಳೆಯಲ್ಲಿ ಶಕೆಯು ದುಸ್ಸಹನವಾಗಿದೆ. ಪ್ಲೇಗು ಬಹಳಮಟ್ಟಿಗೆ ಕಡಿಮೆಯಾಗಿ ಎಲ್ಲೋ ಒಂದೊಂದು ಮರಣವು ಅಪೂರ್ವವಾಗಿ ಆಗುತ್ತಿದೆ. ಬೀದಿಗಳಲ್ಲಿ ದೂಳು ವಿಪರೀತವಾಗೇಳುತ್ತ ತಿರುಗಾಡುವವರಿಗೂ ಅಂಗಡಿಯವರಿಗೂ ಬಹಳ ಹಿಂಸೆಯಾಗಿರುವುದಗಮೇಲೆ ಮ್ಯುನಿಸಿಪಾಲಿಟಿಯವರು ಜನರ ಮತ್ತೂ ಬಂಡಿಗಳ ಓಡಾಟವು ಹೆಚ್ಚಿರುವ ಸಯ್ಯಾಜಿರಾವ್‌ರೋಡ್, ಇಲ್ವಾಲದರೋಡ್, ದೊಡ್ಡಪೇಟೆರೋಡ್, ಮೋಟಾರುಗ್ಯಾರೇಜುರೋಡುಗಳಲ್ಲಿ ದಿನಬಿಟ್ಟುದಿನ ನೀರಿನ ಚಳಯವನ್ನು ಮಾಡುವಂತೇರ್ಪಡಿಸಿರುವುದು ಉಪಕಾರವಾಗಿರುತ್ತದೆ. ನೀರಿನ ಅನುಕೂಲ್ಯವು ಹೆಚ್ಚಾಗಿರುವ ಪಕ್ಷದಲ್ಲಿ ಪ್ರತಿನಿತ್ಯದಲ್ಲೂ ನೀರಿನಚಳಯವನ್ನುಮಾಡಿಸುವಂತಾದರೆ ವಿಶೇಷ ಉಪಕಾರವಾಗುವುದು.

ಕಳೆದ ತಾ|| ೨೯ ರಲ್ಲಿ ಶಿವನಸಮುದ್ರದ ವಿದ್ಯುಚ್ಛಕ್ತಿ ಶೇಖರಾಲಯದ ಸಮೀಪದಲ್ಲಿ ಕೆಲ ಕರಡಿಗಳು ಬಂದು ಸುಳಿದಾಡುತ್ತಿದ್ದುದರಮೇಲೆ ಅಲ್ಲಿಯ ಕೆಲಸಗಾರರಲ್ಲಿ ಕೆಲರು ದೊಣ್ಣೆಗಳನ್ನು ತೆಗೆದುಕೊಂಡು ಆ ಸ್ಥಳಕ್ಕೆ ಹೋಗಿ ಅವುಗಳನ್ನು ಪ್ರಹರಿಸಲೆತ್ನಿಸಿದಾಗ, ಒಂದು ಕರಡಿಯು ರೇಗಿ ಒಬ್ಬ ಕೆಲಸಗಾರನನ್ನು ಅಟ್ಟಿಕೊಂಡು ಬರಲು ಅವನು ಸಮೀಪದಲ್ಲಿದ್ದ ಒಂದು ಮರವನ್ನು ಹತ್ತಿ ಅದರ ಒಂದು ರಂಬೆಗೆ ನೇತುಹಾಕಿಕೊಂಡು ಕಾಲುಗಳನ್ನು ಕೆಳಗೆ ಬಿಟ್ಟುಕೊಂಡಿದ್ದನು. ಆ ಕರಡಿಯು ನೇತಾಡುತ್ತಿದ್ದ ಕಾಲುಗಳು ತನ್ನ ಕೈಗೆಟಗಲು ಅವನ್ನು ಹಿಡಿದು ತನ್ನುಗುರುಗಳಿಂದ ಬಗೆದುಬಿಟ್ಟಿತು. ಕಾರ್ಯಾಲಯದ ಚೀಫ್ ಇಂಜನಿಯರು ಈ ವರ್ತಮಾನವನ್ನು ತಿಳಿದು ಮೋಟಾರುಬಂಡಿಯಲ್ಲಿ ಕೂಡಲೆ ಬಂದು ಆ ಕರಡಿಯನ್ನು ಗುಂಡಿನಿಂದ ಸುಟ್ಟು ಆ ಗಾಯವಡೆದವನನ್ನು ಅಲ್ಲಿಯ ಆಸ್ಪತ್ರೆಗೆ ಸಾಗಿಸಿಕೊಂಡು ಹೋಗಿ ಚಿಕಿತ್ಸೆಯನ್ನು ಮಾಡಿಸಿದರು. ಅವನಿಗೀಗ ಗುಣಮುಖವಾಗಿದೆ.

ಯುದ್ಧವಾರ್ತೆಯು.

ಪಶ್ಚಿಮರಣರಂಗ.

ಜರ್ಮನ್ ಚಕ್ರವರ್ತಿಯವರ ವರ್ಧಂತಿಯದಿವಸ ಅಭೂತಪೂರ್ವವಾದ ಕೆಲಸವನ್ನು ಮಾಡುತ್ತೇವೆಂದು ಜರ್ಮನ್ ಸೈನಿಕರು ಮುಂಚೆಯೇ ಪೌರುಷವನ್ನು ಕೊಚ್ಚಿಕೊಂಡಿದ್ದರು; ಏನಾಗುವುದೋ ಎಂದು ಎಲ್ಲರೂ ನಿರೀಕ್ಷಿಸುತ್ತಿದ್ದರು. ಆದರೆ ವರ್ಧಂತಿಯ ದಿನವಾದ ೨೭ ನೆಯ ತಾರೀಖಿನ ದಿವಸ ಅಂಥ ಕಾರ್ಯವಾವುದೂ ಜರ್ಮನರಿಂದ ನಡೆಯಿಸಲ್ಪಡಲಾಗಲಿಲ್ಲ. ಜರ್ಮನ್ ಕೇಸರರೂ ಕೂಡ ಪಶ್ಚಿಮರಣರಂಗದಲ್ಲೇ ಇದ್ದು, ಆ ದಿನವು ಎಂದಿನಂತೆಯೇ ಕಳೆದುಹೋದ ಬಳಿಕ ಈಗ ಮರಳಿ ಅಸ್ವಸ್ಥರಾಗಿ ರಾಜಧಾನಿಗೆ ಹೋಗಿ ಸೇರಿಕೊಂಡರು. ಆ ತಾ|| ೨೭ರ ದಿವಸ ಜರ್ಮನರು ಅಗಾಧವಾದ ಕೆಲಸವನ್ನು ಮಾಡಬೇಕೆಂದು(ಎಂದರೆ ಮಿತ್ರಮಂಡಲಿಯ ಸೇನಾಪಂಗ್ತಿಯನ್ನು ಭೇದಿಸಿ ನುಗ್ಗಬೇಕೆಂದು) ಬಹಳ ಸಾಹಸವನ್ನು ಮಾಡಿದರು. ಆದರೆ ಪರ್ಯವಸಾನದಲ್ಲಿ ಆ ದಿನದ ಕೆಲಸವು ಮಿತ್ರಮಂಡಲಿಯವರಿಗೇ ಅನುಕೂಲವಾಯಿತು. ಮೊದಮೊದಲು ಸೇನಾಮುಖದ ಎಲ್ಲ ಕಡೆಯೂ ಮಿತ್ರಮಂಡಲಿಯವರು ಅವರನ್ನು ಹಿಂದಕ್ಕಟ್ಟಿದರು. ಮತ್ತೂ ಇವರೇ ಅವರಮೇಲೆ ಬಿದ್ದು ಹಿಂದಕ್ಕಟ್ಟಿ ತಾವು ಮುಂದಕ್ಕೆ ಸಾಗಿದರು. ಅವೆರಡು ದಿನಗಳಲ್ಲಿ ಮಿತ್ರಮಂಡಲಿಯವರ ಕಡೆ ೮೦೦ ಮಂದಿಗಳು ಸತ್ತರು. ತಾ|| ೨೫-೨೬-೨೭ ರಲ್ಲಿ ಜರ್ಮನರ ಕಡೆ ೨೦ ಸಾವಿರ ಮಂದಿಗಳು ಸತ್ತರು.

ಕಳೆದ ವಾರದಲ್ಲಿ ಬಂದಿರುವ ವಾರ್ತೆಗಳಲ್ಲಿ ಲಾಬಸ್ಸೆ ಬಳಿಯಣ ಮತ್ತೊಂದು ಘೋರಯುದ್ಧದ ವಿವರಣೆಯು ವಿಶೇಷವಾಗಿದೆ. ಲಾಬಸ್ಸೆ ಕಾಲ್ವೆಯ ಎರಡು ಪಕ್ಕದಲ್ಲೂ ಇದ್ದ ಇಂಗ್ಲೀಷ್ ಸೈನ್ಯದಮೇಲೆ ಜರ್ಮನರು ಬೆಳಗಿನ ಜಾವದ ಹೊತ್ತಿನಲ್ಲಿ ತೀವ್ರವಾಗಿ ಬಿದ್ದರು. ಆಗ ಶತ್ರುಸೈನ್ಯಕ್ಕಿಂತಲೂ ಇವರ ಸೇನೆಯು ಕಡಿಮೆಯಾಗಿದ್ದಿತು. ಮೊದಮೊದಲು ಬಲಭಾಗದ ಮೇಲೆ ಫಿರಂಗಿ ಗುಂಡುಗಳನ್ನು ಹೊಡೆದರು. ಇಂಗ್ಲೀಷರ ಕಡೆಯಿಂದ ಪ್ರತಿಯಾಗಿ ಗುಂಡುಗಳು ಹಾರಿಸಲ್ಪಟ್ಟುವು. ಬೆಳಗಾದ ೮ ಗಂಟೆಯ ಹೊತ್ತಿನಲ್ಲಿ ದಕ್ಷಿಣಭಾಗದ ಇಂಗ್ಲೀಷ್ ಫ್ರೆಂಚ್ ಸೇನೆಗಳ ಮೇಲೆ ಬಿದ್ದು ಭೀಕರವಾಗಿ ಕಾದಾಡಿ ಒಂದು ಕಡೆಯಲ್ಲಿ ಸೈನ್ಯಪಂಗ್ತಿಯನ್ನು ಸ್ವಲ್ಪ ಭೇದಿಸಿದರು. ಆಗಲೇ ಕಾಲ್ವೆಯ ಉತ್ತರ ಭಾಗದಲ್ಲೂ ಗಿವೆಂಚಿಯ ಹತ್ತಿರ ಯುದ್ಧಮಾಡಿ ಮಿತ್ರಮಂಡಲಿಯವರ ಸೇನಾಪಂಗ್ತಿಯ ಮೊದಲಸಾಲಿನಮೇಲೆ ಬಿದ್ದು ಅವರಿದ್ದ ಗ್ರಾಮದ ಸ್ವಲ್ಪ ಭಾಗವನ್ನು ಹಿಡಿದುಕೊಂಡರು. ಆಗ ಜರ್ಮನರ ಕಾಲ್ಬಲವು ತುಮುಲ ಯುದ್ಧವನ್ನು ಮಾಡಿ ಮುಂದಕ್ಕೆ ನುಗ್ಗಲು ಪ್ರಯತ್ನಿಸಿತು. ಮಿತ್ರಮಂಡಲಿಯವರು ಸನೀಪಿನ ಯುದ್ಧವನ್ನು ಮಾಡಿ ಶತ್ರುಗಳ ಕಡೆಯ ನೂರಾರು ಮಂದಿಯನ್ನು ಹತಮಾಡಿ, ಮಧ್ಯಾಹ್ನದ ಹೊತ್ತಿಗೆ ಶತ್ರುಗಳು ಆಕ್ರಮಿಸಿಕೊಂಡಿದ್ದ ಸ್ಥಲಗಳನ್ನೆಲ್ಲಾ (ಆ ಗ್ರಾಮವನ್ನೂ ಅದರ ಸುತ್ತಣ ಪ್ರದೇಶಗಳನ್ನೂ) ಮರಳಿ ಸ್ವಾಧೀನಪಡಿಸಿಕೊಂಡರು. ಗಿವೆಂಚಿಗೆ ಈಶಾನ್ಯಭಾಗದಲ್ಲಿ ಜರ್ಮನರು ೫ ಅವೃತ್ತಿ ಮಿತ್ರಮಂಡಲಿಯವರ ಮೇಲೆ ಬಿದ್ದು ಕಾದಾಡಿದರು. ಆಗ ಬಹುಜನರು ಅವರ ಕಡೆ ಸತ್ತರು. ಕೆಲರು ಓಡಿಬಂದು ಮಿತ್ರಮಂಡಲಿಯವರ ಸೈನ್ಯವನ್ನು ಹೊಕ್ಕರು. ಅವರನ್ನೆಲ್ಲಾ ಇವರು ಧ್ವಂಸಮಾಡಿದರು. ಮಧ್ಯಾಹ್ನದ ಹೊತ್ತಿಗೆ ಹೊಸ ಫ್ರೆಂಚ್ ಸೈನ್ಯವು ಸಹಾಯಕ್ಕೆ ಬಂದಬಳಿಕ ಜರ್ಮನರು ಹಿಂದಾಗುತ್ತ ಬಂದರು. ಈ ಕಾಳಗದಲ್ಲಿ ಮಿತ್ರಮಂಡಲಿಯವರಲ್ಲಿ ಸತ್ತವರಿಗಿಂತ ಸಾವಿರಾರು ಜನ ಹೆಚ್ಚಾಗಿ ಜರ್ಮನರಲ್ಲಿ ಸತ್ತರು. ಈ ಯುದ್ಧದಲ್ಲಿ ಇಂಗ್ಲೀಷರ ಕಡೆ ೩೦೦ ಮಂದಿಗಳು ಸತ್ತರು. ೫೫ ಮಂದಿಗಳು ಶತ್ರುಗಳಿಗೆ ಸೆರೆಸಿಕ್ಕಿದರು.

ಈಪ್ರೆಸ್ಸಿನ ಹತ್ತಿರವೂ ಮರಳಿ ಯುದ್ಧವಾದುದರಲ್ಲಿ ಜರ್ಮನರ ಕಡೆ ೩೫೦ ಮಂದಿಗಳು ಸತ್ತರು. ಇದರಂತೆ ಕ್ರೋನು-ರೀಮ್ಸ್-ವೀನ-ಆರ್ಗೋನ್-ವೇವರು-ಅರ್ರಾಸು-ಆಲ್ಬರ್ಟು-ರೋಯಿನ್-ವಾಸ್ಜೆಸ್ಸು ಮೊದಲಾದ ಹಲವು ಕಡೆಗಳಲ್ಲಿ ಯುದ್ಧವಾಗಿದೆ. ಪರ್ಯವಸಾನದಲ್ಲಿ ವಿಶೇಷವೇನೂ ಇಲ್ಲ. ಈಪ್ರೆಸ್ಸಿಗೆ ಪೂರ್ವದಲ್ಲಿರುವ ಪೆರ್ತ್ತುಸ್ಸಿನ ಹತ್ತಿರ ಜರ್ಮನರು ಮಿತ್ರಮಂಡಲಿಯವರ ಕಂದಕಗಳಮೇಲೆ ಬಿದ್ದು ಯುದ್ಧಮಾಡಿದಾಗ ಅವರ ಕಡೆಯ ಒಂದು ಪಟಾಲಮ್ಮೆಲ್ಲಾ ನಷ್ಟವಾಗಿರುವುದು. ಸೆಂಟ್ ಮಿಹಿಲ್ಲಿನ ಹತ್ತಿರ ಮ್ಯೂಸ್ ನದಿಗೆ ಜರ್ಮನರು ಕಟ್ಟಿದ್ದ ೪ ಸೇತುಗಳನ್ನು ಫ್ರೆಂಚರು ನಾಶಪಡಿಸಿದರು. ಎಯಿನ್ಸಿಗೆ ಉತ್ತರದಲ್ಲೂ, ಲಾಸ್ಸಿಗೆ ದಕ್ಷಿಣದಲ್ಲೂ ತಾ|| ೨೫-೨೬ ರಲ್ಲಿ ನಡೆದ ಮಹಾಯುದ್ಧದಲ್ಲಿ ರಣರಂಗದೊಳಗೆ ಶತ್ರುಗಳು ಸಾವಿರಾರು ಹೆಣಗಳನ್ನು ಬಿಟ್ಟು ಓಡಿಹೋದರು.

ಸೋಯಿಜನ್ಸಿಗೆ ಪೂರ್ವಭಾಗದಲ್ಲಿ ಎಯಿನ್ ನದಿಯನ್ನು ದಾಟಬೇಕೆಂದು ಜರ್ಮನರು ಎರಡಾವೃತ್ತಿ ಪ್ರಯತ್ನಿಸಿ ಹಿಮ್ಮೆಟ್ಟಿಸಲ್ಪಟ್ಟರು.

ಪಶ್ಚಿಮರಣರಂಗದಲ್ಲಿ ಲಾಬಸ್ಸೆ ಮೊದಲಾದ ಕಡೆಗಳಲ್ಲಿ ಮಂಡಿಯುದ್ದದ ಕೆಸರು ನಿಂತಿದೆ. ಎತ್ತೆತ್ತಲೂ ಶೀತದಗಾಳಿ ಮಳೆ. ಇಂಥ ವಿಷಮವಾತಾವರಣದಲ್ಲೂ ಮಿತ್ರಮಂಡಲಿಯ ಸೈನಿಕರು ಬಹು ಉತ್ಸಾಹದಿಂದ ಯುದ್ಧವನ್ನು ಮಾಡುತ್ತಿದ್ದಾರೆ. ಆದುದರಿಂದಲೇ ಸ್ವತಃ ಜರ್ಮನ್ ಚಕ್ರವರ್ತಿಯು ಬಂದು ನಿಂತು ಲಾಬಸ್ಸೆ ಬಳಿಯಣ ಯುದ್ಧವನ್ನು ಮಾಡಿಸಿದ್ದರೂ ಅವರಿಗೆ ಜಯವೇನೂ ಲಭಿಸದೆ ಹೋಗಿದೆ. ವಿಷಮವಾತಾವರಣಸ್ಥಿತಿಯಿದ್ದರೂ ಇಂಗ್ಲೀಷರ ದಂಡಿನಲ್ಲಿ ನೂರಕ್ಕೆ ಮೂವರಿಗಿಂತಲೂ ಹೆಚ್ಚಾಗಿ ಅಸ್ವಸ್ಥರಾಗಿಲ್ಲ. ಹಿಂದೂ ಸೈನಿಕರಲ್ಲಿ ಅಸ್ವಸ್ಥರಾಗಿರುವವರ ಸಂಖ್ಯೆಯು ಅದಕ್ಕಿಂತಲೂ ಕಡಿಮೆ. ಮಿತ್ರಮಂಡಲಿಯ ಸೈನ್ಯವೆಲ್ಲಾ ಒಳ್ಳೆಯ ಆರೋಗ್ಯದಿಂದಲೂ ಉತ್ಸಾಹದಿಂದಲೂ ಇದ್ದಾರೆ. ಅವರಿಗೆ ಒದಗಬೇಕಾದ ಆಹಾರ್ಯಸಾಮಗ್ರಿಗಳ ಮೇಲ್ವಿಚಾರಣೆಯನ್ನು ಶ್ರೀಮದ್ಯುವರಾಜರವರೇ ಸ್ವತಃ ದಕ್ಷತೆಯಿಂದ ನೋಡಿಕೊಳ್ಳುತ್ತಿದ್ದಾರೆ.

ಪೂರ್ವ ರಣರಂಗ.

ಕಾರ್ಪೇತಿಯನ್ ಬೆಟ್ಟಗಳಲ್ಲಿರುವ ಡುಕ್ಲಾ ಕಣಿವೆಗಳ ಆಗ್ನೇಯ ದಿಕ್ಕಿನಲ್ಲಿ ೨ ದಿವಸ ರಷ್ಯನರು ಶತ್ರುಗಳಮೇಲೆ ಭೀಕರವಾಗಿ ಯುದ್ಧಮಾಡಿದುದರಲ್ಲಿ ರಷ್ಯನರಿಗೆ ತುಂಬಾ ವಿಜಯಲಾಭವಾಯಿತು. ಶತ್ರುಗಳು ತಾವು ತಂದಿದ್ದ ಯುದ್ಧ ಸಾಮಗ್ರಿಗಳನ್ನೂ ಕಂದಕಗಳನ್ನು ತೋಡುವ ಸಾಮಗ್ರಿಗಳನ್ನೂ ಅಲ್ಲಲ್ಲೇಬಿಟ್ಟು ಓಡಿಹೋದರು. ಹಲವು ಮಂದಿ ಸೇನೋದ್ಯೋಗಿಗಳೂ ಸೈನಿಕರೂ ಸೆರೆಸಿಕ್ಕಿರುವರು. ವಿಶ್ಚುಲಾನದಿಗೆ ಎಡಪಕ್ಕದಲ್ಲಿ ರಷ್ಯಾದ ಎಲ್ಲೆಕಟ್ಟುಗಳನ್ನು ಕಾಯುತ್ತಿದ್ದ ರಷ್ಯನ್ ಸೈನ್ಯದ ಮೇಲೆ ಜರ್ಮನ್ ಸೈನ್ಯಗಳು ತೀವ್ರವಾಗಿ ಬಿದ್ದುವು. ರಷ್ಯನರು ಅವರಿಗೆ ಬಹಳ ನಷ್ಟವನ್ನುಂಟುಮಾಡಿ ಹಿಂದಕ್ಕೋಡಿಸಿದರು. ಗೆಲೀಷಿಯಾದಲ್ಲೂ ಆಸ್ಟ್ರಿಯನ್ ಸೈನ್ಯಗಳು ಮುಂದುಮುಂದಕ್ಕೆ ನುಗ್ಗಿ ರಷ್ಯನರಮೇಲೆ ಕಾಯುತ್ತಿವೆ. ಆದರೂ ಪರಾಭವಗೊಂಡು ಹಿಂದೆಗೆಯುತ್ತಿವೆ.

ಈಗ ಜರ್ಮನರೂ ಆಸ್ಟ್ರಿಯಾದವರೂ ಕಾರ್ಪೇತಿಯನ್ ಬೆಟ್ಟಗಳ ಪ್ರಾಂತದಲ್ಲಿ ತಮ್ಮ ಸೈನ್ಯವನ್ನೆಲ್ಲಾ ಒಟ್ಟುಗೂಡಿಸಿ ೮೦ ಮೈಲಿಗಳಗಲದಲ್ಲಿ ನಿಲ್ಲಿಸಿರುವರೆಂದು ಪೆಟ್ರೋಗ್ರೇಡಿನಿಂದ ಸುದ್ದಿಬಂದಿದೆ. ಹಂಗೇರಿಗೆ ಸೇರಿದ ಟ್ರಾನ್ಸಿಲ್ವೇನಿಯಾದ ಪಶ್ಚಿಮದ ಎಲ್ಲೆಯಲ್ಲಿ ಬವೇರಿಯಾದ ಮೂರು ಸೈನ್ಯಗಳನ್ನು ನಿಲ್ಲಿಸಿರುವರಂತೆ. ಇವಲ್ಲದೆಯೇ ಅಲ್ಲಿ ಆಸ್ಟ್ರಿಯಾದ ಆರು ಸೇನೆಗಳೂ ಕೂಡ ನಿಲ್ಲಿಸಲ್ಪಟ್ಟಿವೆಯಂತೆ. ಹೀಗೆ ಇಷ್ಟು ಸೈನ್ಯವನ್ನು ಸೇರಿಸಿರುವುದರ ಉದ್ದೇಶವೇನೆಂದರೆ- ಅನುಕೂಲವಾದರೆ ಸರ್ವಿಯಾದ ಮೇಲೆ ನುಗ್ಗಬೇಕು; ಇಲ್ಲವಾದರೆ ಸರ್ವಿಯಾದ ಸಹಾಯಕ್ಕೆ ಬರುವ ರಷ್ಯನ್ ಸೇನೆಯಮೇಲೆ ಹೋರಾಡಬೇಕು ಎಂದಿರುವುದಂತೆ. ಮತ್ತೂ ಜರ್ಮನಿಯವರು ತಮ್ಮ ಸೇನೆಗಳನ್ನು ಸರ್ವಿಯಾದಮೇಲೆ ನುಗ್ಗಿಸಿ ಪಕ್ಕದಿಂದ ಬರುವ ತುರ್ಕಿ ಸೇನೆಯೊಡನೆ ಸೇರಿಸಬೇಕೆಂದು ಯೋಚಿಸುತ್ತಿರುವ ಹಾಗೂ ಕಾಣುತ್ತದೆ.

ಬೆಸ್ಕಿಟ್ ಪ್ರಾಂತದಲ್ಲಿ ಶತ್ರುಸೈನ್ಯಗಳು ಅಪಾರವಾಗಿ ಬಂದು ಮೇಲೆಬಿದ್ದು ರಷ್ಯನರ ಜೂಣಿಯ ಸೇನೆಯನ್ನು ಹಿಂದಕ್ಕಟ್ಟಿದರು. ಆದರೆ ಬಳಿಕ ಉಭಯಪಕ್ಷಕ್ಕೂ ಬಲವಾದ ಯುದ್ಧವಾಗಿ ರಷ್ಯನರಿಗೆ ಶತ್ರುಗಳ ಪಕ್ಷದ ೧೩ ಫಿರಂಗಿಗಳೂ ೨೪೬೦ ಮಂದಿ ಸೈನಿಕರೂ ಸೆರೆ ಸಿಕ್ಕಿದರು.

ತುರ್ಕಿ.

ಪೂರ್ವದಲ್ಲಿ ತುರ್ಕಿಯ ಮಂತ್ರಿಯಾಗಿದ್ದ ಜಮಾಲ್ ಪಾಷಾರವರು ಈಜಿಪ್ಟಿನಮೇಲಿನ ದಂಡಯಾತ್ರೆಗಾಗಿ ಹೊರಟಿರುವ ೩ ಆರ್ಮಿ ಕೋರ್ ೧೨೦೦೦೦ ಸೈನ್ಯಗಳಿಗೆ ಅಧಿಪತಿಯಾಗಿ ಕಳುಹಲ್ಪಟ್ಟಿರುವರೆಂದು ಜನವರಿ ತಾ|| ೨೭ರ ತಂತ್ರಿಯು ತಿಳಿಸುತ್ತದೆ. ಈಜಿಪ್ಟಿನ ಎಲ್ಲೆಕಟ್ಟುಗಳನ್ನು ಕಾಯುತ್ತಿರುವ ಆಂಗ್ಲಸೇನೆಯನ್ನು ತುರ್ಕಿಯಸೇನೆಯು ಸಮೀಪಿಸಿತು. ಎಲ್‌ಕೌಂಟಾರದ ಬಳಿಯಲ್ಲಿ ಉಭಯಸೇನೆಗೂ ಯುದ್ಧವಾಯಿತು. ಆಂಗ್ಲಸೇನೆಯಲ್ಲಿ ಒಬ್ಬ ಉದ್ಯೋಗಿಯೂ ೪ ಮಂದಿ ಸೈನಿಕರೂ ಸತ್ತರು. ಶತ್ರುಗಳಕಡೆ ಬಹಳ ನಷ್ಟವಾಯಿತು. ತುರ್ಕಿಯವರ ಸರ್ವಸೈನ್ಯಾಧಿಪತಿ ಯಾದ ಎನ್ವರ್ ಪಾಷಾರವರು ಇರ್ಜೆರಮ್ಮಿಗೆ ಸೇರಿದ ಬಳಿಕ ಅಲ್ಲಿದ್ದ ೯ ನೇ ನಂ||ಸೇನೆಯ ಸೇನಾಪತಿಯನ್ನೂ, ಇನ್ನೂ ಇತರ ಸೇನಾನಾಯಕರನ್ನೂ ಅಧಿಕಾರದಿಂದ ಬಿಡಿಸಿ, ಅವರ ಸ್ಥಲಕ್ಕೆ ತರುಣ ತುರ್ಕಿಸಂಘದ ಸೈನಿಕೋದ್ಯೋಗಿಗಳನ್ನು ನಿಯಮಿಸಿರುವರು.

ಆಂಗ್ಲನೌಕಾಸೇನೆಯು ಹಡಗಿನಿಂದ ಸಣ್ಣಸಣ್ಣ ಸೇನಾನಿವಹವನ್ನು ರೇವೆಯಲ್ಲಿಳುಹಿಸಿ, ಅಲಗ್ಸಾಂಡ್ರಾ ಪಟ್ಟಣಕ್ಕೆ ಉತ್ತರದಲ್ಲೂ ದಕ್ಷಿಣದಲ್ಲೂ ಇದ್ದ ತಂತಿಯ ಕಂಬಗಳನ್ನು ಮುರಿದುಹಾಕಿ ಬಿಟ್ಟಿತು. ಕಾವಲಿನ ತುರ್ಕಿಸೇನೆಯು ಏನನ್ನೂ ಮಾಡಲಾರದೆ ಹೋಯಿತು, ಮತ್ತೂ ಆಂಗ್ಲಸೇನೆಯು ಸೀಡನ್ನಿನಲ್ಲಿದ್ದ ತುರ್ಕಿಯವರ ತಂತೀವಾರ್ತಾನಿಲಯವನ್ನು ಧ್ವಂಸಮಾಡಿತು. ಅಲಕ್ಸಾಂಡ್ರಾ ಪಟ್ಟಣದಿಂದ ೭-೮ ಸಾವಿರ ಸಿರಿಯನ್ ಜನರು ಟೆನ್ನಿಸಿ ಎಂಬ ಹಡಗಿನಮೇಲೆ ಲಂಡನ್ನಿಗೆ ಹೋಗಿ ಸೇರಿದ್ದಾರೆ. ಅವರಲ್ಲಿ ಅರ್ಧಜನರು ನಿರಾಧಾರರಾಗಿ ಹೊದೆಯಲು ಬಟ್ಟೆಯೂ ಇಲ್ಲದೆ ಇದ್ದಾರೆ. ಇವರ ರಕ್ಷಣೆಗೆ ಪ್ರಭುತ್ವದವರು ಏರ್ಪಾಟನ್ನು ಮಾಡುತ್ತಿದ್ದಾರೆ.

ಈಜಿಪ್ಟಿಗೆ ಸೇರಿದ ಕಂಟಾರಕ್ಕೆ ಈಶಾನ್ಯದಲ್ಲಿ ೨೫ ಮೈಲಿಗಳ ದೂರದಲ್ಲಿರುವ ಕಾಟಿಯಾ ಎಂಬ ಊರನ್ನು ತುರ್ಕಿಯವರು ಸ್ವಾಧೀನ ಪಡಿಸಿಕೊಂಡು ಅದಕ್ಕೆ ೧೨ ಮೈಲಿಗಳ ದೂರದಲ್ಲಿದ್ದ ಬಿರೆರ್‌ಡೂವಿನ ಹತ್ತಿರ ತಮ್ಮ ಕಾವಲು ಸೈನ್ಯವನ್ನು ನಿಲ್ಲಿಸಿದರು. ಚಿತ್ರಸರಸ್ಸಿಗೆ ಪೂರ್ವದಲ್ಲಿ ೨೫ ಮೈಲಿಗಳಲ್ಲಿರುವ ಮೊಲ್‌ಹರಾಜಿನ ಹತ್ತಿರ ಮತ್ತೊಂದು ಸೇನೆಯ ಸ್ತೋಮವನ್ನು ಕಾವಲಿಗಿರಿಸಿದರು. ಸೂಯೇಜ್ ಕಾಲ್ವೆಗೆ ಪೂರ್ವದಲ್ಲಿ ೧೦ ಮೈಲಿಗಳ ದೂರದೊಳಗೆ ಮತ್ತೊಂದು ತುಕಡಿಯನ್ನು ನಿಲ್ಲಿಸಿದರು. ಕಂಟಾರಾಕ್ಕೆ ಪೂರ್ವದಲ್ಲಿ ಆಂಗ್ಲರ ಕಾವಲಿನ ಸ್ಥಲದಲ್ಲಿದ್ದ ಸೈನಿಕರ ಮೇಲೆ ತುರ್ಕಿಯವರು ಬಿದ್ದು ಯುದ್ಧಮಾಡಿದರು. ಅವರ ಕಡೆ ೪ ಮಂದಿ ಸಾಯಲು ಹಿಮ್ಮೆಟ್ಟಿದರು. ಇಂಗ್ಲೀಷ್ ಕಡೆಯ ಸೈನಿಕರಲ್ಲಿ ಒಬ್ಬ ಹಿಂದೂ ಸೈನಿಕನೂ ಒಬ್ಬ ಉದ್ಯೋಗಿಯೂ ಸತ್ತರು. ೫ ಮಂದಿ ಗೂರ್ಕರಿಗೆ ಗಾಯವಾಯಿತು. ಸೂಯೇಜಿಗೆ ಪೂರ್ವದಲ್ಲಿರುವ ಕುಬ್ರಿಯ ಹತ್ತಿರವೂ ಕಾವಲಿನ ಸೈನ್ಯದ ಮೇಲೆ ತುರ್ಕಿಯವರು ಬಿದ್ದು ಹಿಂದಕ್ಕೋಡಿಸಲ್ಪಟ್ಟರು.

ಈ ಸೂಯೇಜ್ ಪ್ರಾಂತದಲ್ಲಿನ ಸ್ಥಿತಿಗತಿಯನ್ನು ತಿಳಿದುಕೊಳ್ಳುವುದಕ್ಕಾಗಿ ತುರ್ಕಿಯ ಸೇನೆಯ ಸ್ವಲ್ಪ ಭಾಗವು ಹೀಗೆ ಅಲ್ಲಲ್ಲಿ ತಲೆಯಿಕ್ಕುತಿರುವುದೇ ಹೊರತು ದೊಡ್ಡ ಸೇನಾಭಾಗವಾವುದೂ ಆಕಡೆಗೆ ಬಂದಿಲ್ಲವೆಂದು ಗೊತ್ತಾಗುತ್ತದೆ. ಈಜಿಪ್ಟಿನ ಪಕ್ಕದಲ್ಲಿ ಸೂಯೇಜ್ ಕಾಲ್ವೆಯ ಮಾರ್ಗದಿಂದಬೇ ಈಗಲೂ ಪಶ್ಚಿಮದೇಶಕ್ಕೂ ಭರತಖಂಡಕ್ಕೂ ಎಲ್ಲ ವಿಧಧ ಹಡಗುಗಳ ತಿರುಗಾಟವು ನಿರಾತಂಕವಾಗಿ ನಡೆಯುತ್ತಲೇ ಇದೆ.

ಜರ್ಮನರ ಸಬ್‌ಮೆರೀನುಗಳ ಹಾವಳಿ.

ಕಳೆದ ತಾ|| ೩೧ರ ಬೆಳಗ್ಗೆ ೯ ಗಂಟೆಯ ಹೊತ್ತಿನಲ್ಲಿ ನ್ಯೂಜಿಲ್ಯಾಂಡಿನಿಂದ ಬರುತ್ತಿದ್ದ ಟೋಕೋಮಾರ್ ಎಂಬ ಹಡಗಿಗೆ ಜರ್ಮನರು ಟಾರ್ಪಿಡೋವನ್ನು ಬಿಟ್ಟು ಸುಟ್ಟು ಮುಳುಗಿಸಿದರು. ಇದರಲ್ಲಿ ಬೆಲ್ಜಿಯಂ ದೇಶದ ಶರಣಾಗತ ಜನರಿಗಾಗಿ ಉಡುಪುಗಳೂ, ೯೭ ಸಾವಿರ ಪ್ರಾಣಿಗಳ ಮಾಂಸವೂ ಸಾಗಿ ಹೋಗುತ್ತಿದ್ದುವು. ಇದರಲ್ಲಿದ್ದ ನಾವಿಕರಿಗೆ ಸೂಚನೆಯನ್ನು ಕೊಡದೆಯೇ ಜರ್ಮನರು ಈ ದುರಾಗತವನ್ನು ಮಾಡಿದ್ದಾರೆ. ಇದರಲ್ಲಿದ್ದ ನಾವಿಕರಲ್ಲಿ ೫೭ ಮಂದಿಯನ್ನು ಫ್ರೆಂಚರ ಒಂದು ಹಡಗು ಕಾಪಾಡಿ ಡೋವರ್ ಪಟ್ಟಣಕ್ಕೆ ತಂದಿಳಿಸಿತು.

ಟಾನ್‌ಕ್ರೂಜನ್ ಎಂಬ ಇಂಗ್ಲೀಷರ ಹಡಗು ಲೂಯಿನದಿಯ ಮುಖದ್ವಾರಕ್ಕೆ ೨೧ ಮೈಲಿಗಳಲ್ಲಿ ಹೋಗುತ್ತಿರುವಾಗ ಜರ್ಮನರ ಒಂದು ಸಬ್‌ಮೆರೀನು ಆ ಹಡಗಿನಲ್ಲಿದ್ದ ೨೮ ಮಂದಿ ನಾವಿಕರನ್ನು ೧೦ ನಿಮಿಷದೊಳಗೆ ದೋಣಿಗಳಿಗೆ ಇಳಿಯುವುದಕ್ಕೆ ಆಜ್ಞೆಮಾಡಿ, ಬಳಿಕ ಆ ಹಡಗನ್ನು ಧ್ವಂಸಮಾಡಿ ಮುಳುಗಿಸಿತು. ಮತ್ತೊಂದು ಕಡೆಯಲ್ಲಿ ಪಿಯೋರಿಯೋ ಎಂಬ ಹಡಗಿಗೆ ಸುದ್ದಿಕೊಡದೆ ಜರ್ಮನರ ಹಡಗು ಟಾರ್ಪಿಡೋವಿನಿಂದ ಹೊಡೆದಿತು. ಆದರೂ ಅದು ಮುಳುಗಲಿಲ್ಲ.

ಸಂಡಾಬ್ಯಾಂಕ್ ಎಂಬ ಮತ್ತೊಂದು ಹಡಗನ್ನು ಟಾರ್ಪಿಡೋವಿನಿಂದ ಹೊಡೆದು ಮುಳುಗಿಸಿದರು. ಮುಳುಗಿಸಲ್ಪಟ್ಟ ಹಡಗಿನಿಂದ ಇಳಿದುಬಂದ ಕಳಾಸಿಗಳಲ್ಲಿ ಒಬ್ಬನು ಹೀಗೆ ಹೇಳಿರುತ್ತಾನೆ—ಐರ್ಲ್ಯಾಂಡು ಸಮುದ್ರದಲ್ಲಿ ೨ ಸಬ್‌ಮೆರೀನುಗಳಿದ್ದಂತೆ ನಮಗೆ ಕಂಡಿತು. ಅವುಗಳಲ್ಲಿ ಒಂದರ ನಂಬರು ಯು ೨೧ ಆಗಿದ್ದಿತು. ೨ ನೆಯದರದು ಯು ೩೧ ಆಗಿದ್ದಿತು. ಇವುಗಳಲ್ಲಿ ಒಂದರಮೇಲೆ ಇಂಗ್ಲಿಷ್ ಧ್ವಜಪತಾಕೆಯು ನಿಲ್ಲಿಸಲ್ಪಟ್ಟಿದ್ದಿತು. "ನಿಮಗೆ ತೊಂದರೆಯನ್ನು ಉಂಟುಮಾಡಬೇಕಾಗಿರುವುದಕ್ಕಾಗಿ ನನಗೆ ವಿಷಾದವಾಗುತ್ತದೆ. ಆದರೆ ಮಾಡುವುದೇನು ? ಇಂಗ್ಲೀಷರ ಹಡಗುಗಳು ಯಾವುವು ಸಿಕ್ಕಿದರೂ ಎಲ್ಲವನ್ನೂ ಮುಳುಗಿಸಿಬಿಡಬೇಕೆಂದು ನನಗೆ ನಮ್ಮ ಅಧಿಕಾರಿಗಳು ಅಪ್ಪಣೆ ಕೊಟ್ಟಿದ್ದಾರೆ" ಎಂದು ಯು ೨೧ ನೆ ನಂ|| ಸಬ್‌ಮೆರೀನಿನ ಅಧಿಪತಿಯು ತಿಳಿಸಿದನು.

ಲಿವರ್ಪೂಲಿನಿಂದ ಬೆಲ್ಫಾಸ್ಟಿಗೆ ಬರುತ್ತಿದ್ದ ಹಿಲ್ನಿಯಾ ಎಂಬ ಹಡಗಿನಬಳಿಗೂ ಒಂದು ಜರ್ಮನರ ಸಬ್‌ಮೆರೀನು ಬಂದು, ಅದರ ನಾಯಕನು ಹಡಗಿನಲ್ಲಿದ್ದವರನ್ನೆಲ್ಲಾ ಕೆಳಕ್ಕೆ ಇಳಿಸಿ, ಅವರಿಗೆಲ್ಲಾ ತೊಂದರೆ ಕೊಡಬೇಕಾಗಿ ಬಂದುದಕ್ಕೆ ತಾನು ಚಿಂತಿಸುತ್ತೇನೆಂದೂ, ಆ ರೀತಿ ಮಾಡಲು ತನಗೆ ಅಪ್ಪಣೆಯಾಗಿರುವುದೆಂದೂ ಹೇಳಿ, ಬಳಿಕ ಆ ಹಡಗನ್ನು ಮುಳುಗಿಸಿದನು.

ಲಿಸ್ಟರ್ ಎಂಬ ಒಂದು ಅಂಚೆಯ ಹಡಗು ಹೋಲಿಹೆಡ್ಡಿನಿಂದ ಹೊರಟುಬರುತ್ತಿರಲು, ಅದನ್ನು ಒಂದು ಸಬ್‌ಮೆರೀನು ೧ ಮೈಲಿ ದೂರದ ವರೆಗೆ ಓಡಿಸಿಕೊಂಡು ಹೋಯಿತು. ಅಪಾಯವೇನೂ ಆಗಲಿಲ್ಲ.

ಇನ್ನೊಂದು ಹಡಗನ್ನು ಜರ್ಮನರ ಸಬ್‌ಮೆರೀನು ಐರ್ಲ್ಯಾಂಡು ಸಮುದ್ರದಲ್ಲಿ ಮುಳುಗಿಸಿರುವುದು. ಅದರ ಹೆಸರು ಇನ್ನೂ ಗೊತ್ತಾಗಿಲ್ಲ.

ಹೀಗೆಲ್ಲಾ ಮಾಡುವುದರಿಂದ ಇಂಗ್ಲೀಷರ ವ್ಯಾಪಾರವು ಕಟ್ಟಾಗಿ, ಹೊರಗಿನಿಂದ ಅವರಿಗೆ ಬಂದೊದಗುತ್ತಿರುವ ಸಾಮಗ್ರಿಗಳಿಗೆ ಅಭಾವವುಂಟಾಗುವುದೆಂಬುದೇ ಜರ್ಮನರ ಉದ್ದೇಶವಂತೆ. ಆದರೂ ಇದರಿಂದ ಇಂಗ್ಲೆಂಡ್ ದೇಶದೊಡನೆ ನಡೆಯುತ್ತಿರುವ ವ್ಯಾಪಾರಕ್ಕೆ ಯಾವ ಭೀತಿಯೂ ಇಲ್ಲದೆ, ಬೀಮಾ ಏರ್ಪಾಡಿನಲ್ಲೂ ಕೂಡ ಏನೂ ವ್ಯತ್ಯಾಸವಿಲ್ಲದೆ, ಎಂದಿನಂತೆ ಎಲ್ಲವೂ ಸಾಗುತ್ತಲೇ ಇದೆ. ಈಚೆಗೆ ಉತ್ತರ ಸಮುದ್ರದಲ್ಲಿ ಜರ್ಮನರ ಯಾವ ಸಬ್‌ಮೇರಿನ್ನೂ ಗೋಚರಿಸುತ್ತಲಿಲ್ಲವಂತೆ.

ವೈಮಾನಿಕರು.

ಜರ್ಮನರ ೨ ವಿಮಾನಗಳು ಡನ್‌ಕರ್ಕಿಯ ಮೇಲೆ ಸಿಡಿಮದ್ದುಗಳನ್ನು ಹಾಕಿವೆ. ಒಂದು ಆಂಗ್ಲವಿಮಾನವು ಜರ್ಮನರ ವಿಮಾನಗಳ ಮೇಲೆ ಬಿದ್ದು ೨ನ್ನು ಓಡಿಸಿ ಬಿಟ್ಟಿತು. ೩ ಇಂಗ್ಲೀಷ್ ವಿಮಾನಗಳು ಜರ್ಮನರ ೧೦ ವಿಮಾನಗಳ ಮೇಲೆ ಬಿದ್ದು ಯುದ್ಧಮಾಡಿದುವು. ಸ್ವಲ್ಪಹೊತ್ತು ಕಾದಾಡಿದ ಬಳಿಕ ಜರ್ಮನರ ವಿಮಾನಗಳು ತಪ್ಪಿಸಿಕೊಂಡು ಓಡಿದುವು. ಪೆಟ್ಟುತಿಂದು ಬಿದ್ದುಹೋದ ಒಂದು ಜರ್ಮನ್ ವಿಮಾನದಲ್ಲಿ ಒಡೆಯದಿದ್ದ ೮ ಮದ್ದಿನ ಗೋಳಗಳಿದ್ದವು. ಅದರಲ್ಲಿನ ವೈಮಾನಿಕನ ಹತ್ತಿರ ೨ ನಳಿಗೆಯ ತುಪಾಕಿ ಯಿದ್ದಿತು. ಈ ಯುದ್ಧದಲ್ಲಿ ಆಂಗ್ಲವೈಮಾನಿಕರಿಗಾದ ನಷ್ಟವು ಬಹಳ ಸ್ವಲ್ಪವಾಗಿದ್ದಿತು.

ಆಂಗ್ಲವಿಮಾನಗಳು ಜರ್ಮನರ ವಶದಲ್ಲಿರುವ ಬ್ರೂಜಸ್ ಪಟ್ಟಣದ ಮೇಲೆ ಮದ್ದಿನ ಗೋಳಗಳನ್ನು ಹಾಕಿದುವು. ಆಗ ಮಂಜು ಮುಸುಕಿ ಗಾಳಿಯು ವಿಪರೀತವಾಗಿ ಬೀಸುತ್ತಿದ್ದಿತು. ಆದರೂ ಇವರು ಹಾಕಿದ ಮದ್ದಿನ ಗೋಳಗಳು ಜರ್ಮನರ ಯುದ್ಧಸಾಮಾಗ್ರಿ ತುಂಬಿದ ನಿವೇಶನಗಳ ಮೇಲೆ ಬಿದ್ದು ಬಹಳ ನಷ್ಟವನ್ನುಂಟುಮಾಡಿದುವು. ತಾ|| ೨೮ ರ ರಾತ್ರಿ ಜರ್ಮನರ ವಿಮಾನಗಳು ಡನ್‌ಕರ್ಕಿಯ ಮೇಲೆ ಸಿಡಿಮದ್ದುಗಳನ್ನು ಹಾಕಿದುದರಿಂದ ಕೆಲರು ಸತ್ತರು ; ಕೆಲವರಿಗೆ ಗಾಯವಾಗಿದೆ. ಸೊತ್ತುಗಳಿಗೆ ಬಹಳ ನಷ್ಟವಾಗಲಿಲ್ಲ. ತಾ|| ೨೦ರ ಬೆಳಗ್ಗೆ ಫ್ರಾನ್ಸ್ ವೈಮಾನಿಕರು ಲೋರನು-ಲಾಫರು-ಸೊಯಿಜನ್ಸ್ ಪ್ರಾಂತದಲ್ಲಿದ್ದ ಶತ್ರುಸೇನಾ ಶಿಬಿರಗಳ ಮೇಲೆ ಹಲವು ಮದ್ದಿನ ಗೋಳಗಳನ್ನು ಹಾಕಿದುವು. ಗೆರ್ಬಿವಿಲ್ಲರಿಗೆ ಪೂರ್ವದಲ್ಲಿ ಒಂದು ಜರ್ಮನ್ ವಿಮಾನವನ್ನು ಕೆಳಕ್ಕೆ ಕೆಡಹಿ ಬಿಟ್ಟುವು. ಒಳಗಿದ್ದ ವೈಮಾನಿಕರು ಸೆರೆಸಿಕ್ಕಿದರು.

ಪತ್ರವ್ಯವಹಾರ.

ಹೆತ್ತೇನಹಳ್ಳಿ ವಾಚಕಶಾಲಾಸ್ಥಾಪನೋತ್ಸವ.

ಈ ಊರಿನಲ್ಲಿ ರೀಡಿಂಗ್‌ರೂಂ ಮಾಡಬೇಕೆಂಬ ಪ್ರಯತ್ನವು ಈ ಸ್ಕೂಲ್‌ಮಾಸ್ಟರು ಕೆ. ವೆಂಕಟರಾಯರವರ ಪ್ರೋತ್ಸಾಹದಿಂದ ಈ ದಿನ ನೆರವೇರುವಂತಾಯ್ತು. ಜನವರಿ ತಾ|| ೨೮ ಆದ ಈ ದಿನ ಮಧ್ಯಾಹ್ನ ೩ ಘಂಟೆಗೆ ಈ ತಾ|| ಅಮಲ್ದಾರ್ ಮ||ಎಸ್. ಶ್ರೀನಿವಾಸಯ್ಯಂಗಾರ್ರವರು ರೀಡಿಂಗ್‌ರೂಂ ಸ್ಥಾಪನೆಗಾಗಿ ದಯಮಾಡಿಸಿದ್ದರು. ಗ್ರಾಮದ ಪ್ರಮುಖರು ಅಮಲ್ದಾರ್ ಮಹಾಸ್ವಾಮಿಯವರನ್ನು ಬಾಜಾಭಜಂತ್ರಿ ಮುಂತಾದ ಮರ್ಯಾದೆಗಳಿಂದ ಇದಿರುಗೊಂಡು ಕರೆತಂದರು. ರೀಡಿಂಗ್‌ರೂಂ ಮುಂಭಾಗದ ವಿಶಾಲವಾದ ಮೈದಾನದಲ್ಲಿ ಚಪ್ಪರವು ಹಾಕಲ್ಪಟ್ಟು ಹಸುರುತೋರಣಗಳಿಂದಲೂ, ಕದಳೀಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟಿದ್ದಿತು. ಸಭಿಕರ ಕೋರಿಕೆಯಂತೆ ಅಮಲ್ದಾರ್ ಮಹಾಸ್ವಾಮಿಯವರು ಅಗ್ರಾಸನವನ್ನು ವಹಿಸಿದರು. ಸಭೆಯು, ಶೇಕ್ದಾರರವರು, ಟ್ಯಾಂಕ್‌ಇನ್ಸ್‌ಪೆಕ್ಟರು, ಗ್ರಾಮಪ್ರಮುಖರು ಮತ್ತು ಆಜುಬಾಜು ಗ್ರಾಮದ ದೊಡ್ಡಮನುಷ್ಯರು-ಇವರಿಂದೆಲ್ಲಾ ತುಂಬಿತ್ತು. ಆ ಸಮಯದಲ್ಲಿ ಇಲ್ಲಿಯ ರೀಡಿಂಗ್‌ರೂಂ ಪ್ರಯತ್ನಕ್ಕೆ ಮೂಲಪುರುಷರಾದ ಸ್ಕೂಲ್‌ಮಾಸ್ಟರ್ ಕೆ. ವೆಂಕಟರಾಯರವರು ರೀಡಿಂಗ್‌ರೂಂನಿಂದ ಉಂಟಾಗುವ ಪ್ರಯೋಜನಗಳನ್ನು ಕುರಿತು ಉಪನ್ಯಾಸಮಾಡಿದರು.

ಅಗ್ರಸನಾಧಿಪತಿಗಳು ಸದರಿ ಉಪನ್ಯಾಸವು ಶ್ಲಾಘ್ಯವಾಗಿದೆಯೆಂದು ಅಪ್ಪಣೆಕೊಡಿಸಿದ್ದಲ್ಲದೆ ಗ್ರಾಮಸ್ಥರಿಗೆಲ್ಲಾ ಸಮಯೋಚಿತವಾಗಿ ಬುದ್ಧಿವಾದಗಳನ್ನು ಅಪ್ಪಣೆಕೊಡಿಸಿ ತಮ್ಮ ಸ್ವಹಸ್ತದಿಂದಲೇ ಪತ್ರಿಕೆಗಳನ್ನೆಲ್ಲಾ ಒಡೆದು ಓದಿಸಿದರು. ಇದು ೧೫೦ ಮನೆಗಳುಳ್ಳ ಸಣ್ಣ ಗ್ರಾಮವಾಗಿದ್ದಾಗ್ಯೂ ಇಲ್ಲಿ ರೀಡಿಂಗ್‌ರೂಂ ಏರ್ಪಮಾಡಿ ಸ್ಥಾಪನೆಯ ಕೆಲಸಕ್ಕಾಗಿ ತಮ್ಮನ್ನು ಬರಮಾಡಿಕೊಂಡದ್ದು ಬಹಳ ಸಂತೋಷವೆಂದು ಅಪ್ಪಣೆಕೊಡಿಸಿದರು. ಈಗ ಈ ರೀಡಿಂಗ್‌ರೂಂಗೆ ಸಾಧ್ವಿ, ವೃ॥ ಪತ್ರಿಕೆ, ಒಕ್ಕಲಿಗರ ಪತ್ರಿಕೆ, ಮೈಸೂರು ಸ್ಟಾರು ಬರುತ್ತಾಯಿವೆ. ಅನಂತರ ಮೀಟಿಂಗ್ ನಡಿಸಲ್ಪಟ್ಟು ಈ ರೀಡಿಂಗ್‌ರೂಮಿಗೆ ಶೇಕ್ದಾರ್ ಮಿ॥ ಮೂರ್ತಿರಾಯರವರನ್ನ ಪ್ರೆಸಿಡೆಂಟರನ್ನಾಗಿಯೂ, ಸ್ಕೂಲ್‌ಮಾಸ್ಟರ್ ಕೆ. ವೆಂಕಟರಾಯರನ್ನ ಸೆಕ್ರೆಟರಿಗಳನ್ನಾಗಿಯೂ, ಎಚ್. ರುದ್ರಯ್ಯನವರನ್ನು ಟ್ರಷರರನ್ನಾಗಿಯೂ, ಶಾ॥ ರಂಗಪ್ಪನವರು ಪಾ॥ ಗುಂಡೇಗೌಡರು, ತಿಮ್ಮೇಗೌಡರು, ಬಿ. ಸಂಜೀವಯ್ಯನವರು, ಚಿಕ್ಕಮಾಯಣ್ಣನವರು, ಗೌಡಯ್ಯನವರು ಇವರುಗಳನ್ನು ಮ್ಯಾನೇಜಿಂಗ್ ಕಮಿಟಿಮೆಂಬರುಗಳನ್ನಾಗಿಯೂ ಚುನಾಯಿಸಿ ಪ್ರೊಸಿಡಿಂಗ್ಸ್ ಮಾಡಿಸಿದರು. ಅನಂತರ ಅಗ್ರಸನಾಧಿಪತಿಗಳಿಗೆ ಹಾರ ತುರಾಯಿಗಳು ಒಪ್ಪಿಸಲ್ಪಟ್ಟವು. ಸಭಿಕರಿಗೆಲ್ಲಾ ಗಂಧ ಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟವು. ತರುವಾಯ ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜಒಡೆಯರ್ ಬಹದ್ದೂರ್ರವರಿಗೂ, ಯುವರಾಜರವರಿಗೂ, ನಮ್ಮ ಚಕ್ರವರ್ತಿ ಸಾರ್ವಭೌಮರಿಗೂ ಸುಖಸಂಪತ್ತುಂಟಾಗಲೆಂಬ ಜಯಧ್ವನಿಯಿಂದ ಸಭೆಯು ಬರಖಾಸ್ತಾಯಿತು. ಅಲ್ಲದೆ ನಮ್ಮ ಅಮಲ್ದಾರ್ ಮಹಾಸ್ವಾಮಿಯವರು ಈ ಊರಿನಲ್ಲಿ ಹೊಸಸ್ಕೂಲ್ ಕಟ್ಟಡವನ್ನು ಕಟ್ಟಿಸಲು ಚಂದಾಪಟ್ಟಿ ತಯಾರ್ಮಾಡಿಸಲಾಗಿ ಹಾಜರಿದ್ದ ದೊಡ್ಡಮನುಷ್ಯರುಗಳಿಂದ ೧೦೦ ರೂ.ವರೆಗೆ ಪಟ್ಟಿ ಆಯಿತು. ಇನ್ನೂ ೧೦೦ ರೂ. ಆಗುವ ಅಂದಾಜಿದೆ. ನಮ್ಮ ಅಮಲ್ದಾರರವರು ಇನ್ನೊಂದುದಿನ ಈ ಊರಲ್ಲಿ ಮೊಕ್ಕಾಂಮಾಡಿಸಿದರೆ ಚಂದಾವೊಬಲಗೆಲ್ಲಾ ವಸೂಲಾಗುವುದೆಂದು ನಂಬುತ್ತೇನೆ.

ನಿವಾಸಿ.

ಶ್ರೀಮಂತ ಚನಬಸಪ್ಪಾ ಪಂಚಪ್ಪಾ ಶೆಟ್ಟರು ದೇವೀಹೊಸೂರ ಇವರು ಪಡೆದ ರಾವಸಾಹೇಬ ಎಂಬ ಬಹುಮಾನದ ಸಮಾರಂಭವು.

(ಲೇಖಕ-ರಾ-ದೇ-ಕುಲಕರ್ಣಿ ಅ॥ ಮಾಸ್ತರ ದೇವೀಹೊಸೂರ):-ಧಾರವಾಡ ಜಿಲ್ಲಾ ಕರ್ಜಗಿ ತಾಲೂಕ ದೇವೀಹೊಸೂರಲ್ಲಿ ಕನ್ನಡ ಶೇತಕೀಶಾಲೆಯು ಸ್ಥಾಪನೆಯಾಗಿರುವದೆಂಬದು ಎಲ್ಲರಿಗೂ ಗೊತ್ತಿರುವದಷ್ಟೆ. ಆ ಶಾಲೆಯ ಸ್ಥಾಪನೆಗೆ ಕಾರಣರಾದ ಶ್ರೀಮಂತ ಚನಬಸಪ್ಪಾ ಪಂಚಪ್ಪಾ ಶೆಟ್ಟರ ಇವರು ಮಾಡಿದ ಸಾರ್ವಜನಿಕ ಸುಧಾರಣೆಯನ್ನೂ ಇವರಲ್ಲಿರುವ ರಾಜನಿಷ್ಠೆ ವಿನಯಶೀಲತ್ವ ಮೊದಲಾದ ಗುಣಗಳನ್ನೂ ನೋಡಿ ನಮ್ಮ ದಯಾಳು ಇಂಗ್ಲಿಷ್ ಸರಕಾರದವರು ಸದರಿಯವರಿಗೆ ರಾವಸಾಹೇಬ ಎಂಬ ಬಹುಮಾನದ ಪದವಿಯನ್ನಿತ್ತರು. ಇದು ಬಹುಜನರಿಗೆ ಗೊತ್ತಿರಬಹುದು. ಆ ಬಗ್ಗೆ ದೇವೀಹೊಸೂರ ಪ್ರಮುಖಜನರು ರಾವಸಾಹೇಬರ ಆಭಾರ ಮನ್ನಣೆಯನ್ನು ಮಾಡಬೇಕೆಂದು ತಮ್ಮಲ್ಲಿ ಗೊತ್ತು ಮಾಡಿಕೊಂಡರು. ಹಾಗೂ ಈ ಸಮಾರಂಭಕ್ಕೆ ಆಗಮಿಸಬೇಕೆಂದು ಶೇತಕೀಶಾಲೆಯ ಡೈರೆಕ್ಟರರಾದ ಮೆಹರ್ಬಾನ ಹಿಲ್ಬರ್ಟಸಾಹೇಬ ಬಹಾದ್ದೂರರವರಿಗೆ ವಿನಂತಿ ಮಾಡಿಕೊಂಡರು. ಅವರು ವಿನಂತಿಗೆ ಮಾನ್ಯಮಾಡಿ ಬರಲೊಪ್ಪಿದನಂತರ ಸದರ ಸಮಾರಂಭವು ತಾ॥ ೧೧-೧-೧೫ ನೇದಿವಸ ಜರುಗಿಸಲ್ಪಡತಕ್ಕದ್ದೆಂದು ನಿರ್ಣಯಿಸಲ್ಪಟ್ಟಿತು. ಆ ಮೇರೆಗೆ ದೂರದೂರದ ಜನರಿಗೆ ಆಮಂತ್ರಣಪತ್ರಿಕೆಗಳನ್ನು ಕಳಿಸಿದರು. ಮುಂದೆ ಗೊತ್ತಾದ ೧೧ ನೇ ತಾರೀಖಿನ ದಿವಸ ಮುಂಜಾನೆ ೮ ಘಂಟೆಗೆ ನೆರೆದ ಜನರ ಫೋಟೋ ತೆಗೆಯಲ್ಪಟ್ಟಿತು. ಆಮೇಲೆ ತಳಿರುತೋರಣಗಳಿಂದಲೂ, ಕದಳೀಸ್ತಂಭಗಳಿಂದಲೂ, ಚಿತ್ರವಿಚಿತ್ರಪಟಗಳಿಂದಲೂ ಅಲಂಕೃತಮಾಡಿ ಕನ್ನಡಶಾಲೆಯಲ್ಲಿ ಸಭೆಯ ಕಾರ್ಯವು ಪ್ರಾರಂಭವಾಯಿತು. ಇದೇವೇಳೆಗೆ ಶಾಲಾಖಾತೆಯ ಅ॥ ಡೆ॥ ಯವರ ಮುಕ್ಕಾಂ ಇಲ್ಲೇಯಿತ್ತು. ಅಲ್ಲದೆ ಈ ಸಭೆಗೆ ಹಾವೇರಿ, ಬ್ಯಾಡಿಗಿ, ಕಾಟೇನಹಳ್ಳಿ, ಆಲೂರು, ತೆವರಮೆಳ್ಳೀಹಳ್ಳಿ ಮೊದಲಾದ ಊರ ದೊಡ್ಡದೊಡ್ಡಜನರೂ, ಸುತ್ತುಮುತ್ತಲಿನ ಹಳ್ಳಿಗಳಜನರೂ, ಇದೇ ಊರ ಶೇತಕೀಶಾಲೆಯ ಮಾಸ್ತರರೂ ತಮ್ಮ ವಿದ್ಯಾರ್ಥಿಗಳೊಡನೆ ಮಿಲಿತರಾಗಿದ್ದರು. ಮುಂದೆ ಮೆಹರ್ಬಾನರವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ ನಂತರ ಕನ್ನಡಶಾಲೆಯ ಇಬ್ಬರು ವಿದ್ಯಾರ್ಥಿಗಳು ತಮ್ಮ ಮಂಜುಲಸ್ವರದಿಂದ ಸ್ವಾಗತಪರಪದ್ಯಗಳನ್ನು ಹಾಡಿದರು. ಆಮೇಲೆ ಈ ಊರ ಕುಲಕರ್ಣಿಯವರಾದ ಶಂಕರಬಾಳಾಜಿ ಇವರು ತಮ್ಮ ಅಸ್ಖಲಿತ ವಾಣಿಯಿಂದ ಸ್ವಾಗತಭಾಷಣವನ್ನು ಮಾಡಿದರು. ಮುಂದೆ ರಾವಸಾಹೇಬ ಅ॥ ಡೆ॥ ಎ॥ ಇನ್ಸ್ಪೆಕ್ಟರರಾದ ಮುದಿಯಪ್ಪಾ ಮಣ್ಣೂರು ಇವರು ರಾವಸಾಹೇಬ ಚನಬಸಪ್ಪಾ ಶೆಟ್ಟರ ಇವರ ಮನೆತನದ ಇತಿಹಾಸವನ್ನೂ ಗುಣವರ್ಣನೆಯನ್ನೂ ಹೇಳಿ, ಈ ಮನೆತನವು ಮೊದಲಿನಿಂದಲೂ ಪ್ರಸಿದ್ಧಿಯನ್ನು ಪಡೆದದ್ದಿರುತ್ತದೆ, ಆದರೆ ನಮ್ಮ ರಾವಸಾಹೇಬರು ಚಿಕ್ಕವರಿರುವಾಗ ಅಂದರೆ-೧೩ ವರ್ಷದವರಿರುವಾಗ ಇವರ ಹಿರಿಯರು ತೀರಿದ್ದರಿಂದ ಮನೆತನದ ಯಾವತ್ತೂ ಭಾರವು ಇವರ ಮೈಮೇಲೆ ಬಿತ್ತು; ಇಂಥ ವಯಸ್ಸಿನಲ್ಲಿಯೇ ಹೀಗಾದುದರಿಂದ ಸದರೀಯವರು ದುಃಖಸಾಗರದಲ್ಲಿ ಬೀಳಬೇಕಾಯಿತು. ಆದರೂ ಅವರು ಸಮಾಧಾನವನ್ನು ತಂದುಕೊಂಡು ತಮ್ಮ ಪ್ರಪಂಚವನ್ನು ಯೋಗ್ಯರೀತಿಯಿಂದ ಸಾಗಿಸಿಕೊಂಡು ವಿಚಾರಶಕ್ತಿಯನ್ನು ಬೆಳೆಸುತ್ತಾ ಬಂದರು. ಮತ್ತೂ ಊರ ಸುಧಾರಣೆಯಲ್ಲಿ ಕೈಹಾಕಹತ್ತಿದರು. ಇಷ್ಟರಲ್ಲಿಯೇ ಲಿಂಗಾಯತ ಸಮಾಜದ ಅಭ್ಯುದಯಕ್ಕೆ ಕಾರಣರಾದ ಶ್ರೀಮಂತ ಶಿರಸಂಗಿಕರರವರು ಸ್ವರ್ಗಸ್ಥರಾಗಲು, ಅವರ ಸ್ಮಾರಕವನ್ನು ಮಾಡುವುದಕ್ಕಾಗಿ ಒಂದು ಇಮಾರತಿಯನ್ನು ಕಟ್ಟಿಸಿದರು. ಇದೇ ಸುಸಂಧಿಗೆ ಸರಕಾರದವರು ಕರ್ನಾಟಕದಲ್ಲಿ ಒಂದು ಒಕ್ಕಲತನದ ಶಾಲೆಯನ್ನು ತೆಗೆಯಬೇಕೆಂಬ ವಿಚಾರದಲ್ಲಿದ್ದದ್ದು ನಮ್ಮ ರಾವಸಾಹೇಬರಿಗೆ ತಿಳಿದಕೂಡಲೆ ಶಿರಸಂಗೀಕರರ ಸ್ಮಾರಕಶಾಲಾ ಎಂಬ ಹೆಸರಿನಿಂದ ಶಾಲೆಯನ್ನು ಸ್ಥಾಪಿಸಿದರೆ ಈಗ ಕಟ್ಟಿಸಿದ ೮ ಸಹಸ್ರ ರೂಪಾಯಿಯ ಇಮಾರತಿಯನ್ನೂ ತಮ್ಮ ಸ್ವತಃ ೧೫ ಎಕರೆ ಜಮೀನನ್ನೂ ಕೊಡುವೆವೆಂಬ ಉದ್ಗಾರವನ್ನು ಸರಕಾರಕ್ಕೆ ತಿಳಿಸಿದರು. ಅವರು ಅದಕ್ಕೆ ಒಪ್ಪಿದನಂತರ ಈಗಿನ ಶೇತಕಿಶಾಲೆಯು ಪ್ರಾರಂಭವಾಯಿತು. ಇವರ ಚಿಕ್ಕವಯಸ್ಸಿನಲ್ಲಿಯೇ ಇಂಥ ಉದಾತ್ತ ವಿಚಾರಗಳು ಇವರಲ್ಲಿ ಮನೆಮಾಡುತ್ತಾ ಬಂದವು. ಈ ರೀತಿ ಸರಕಾರದಲ್ಲಿಯೂ ಕೂಡ ಮುಂದಾಳುಗಳಾಗಿ ರಾವಸಾಹೇಬ ಎಂಬ ಬಹುಮಾನದ ಪದವಿಗೆ ತಕ್ಕವರಾದರು. ಇದು ಪ್ರಶಂಸನೀಯವಾದದ್ದೇಸರಿ. ಯಾಕೆಂದರೆ-ಚಿಕ್ಕಂದಿನಲ್ಲಿಯೇ ಸ್ವತಂತ್ರರಾದ ಶ್ರೀಮಂತರು ಹೀಗೆ ಪ್ರಸಿದ್ಧಿಯನ್ನು ಹೊಂದುವದು ಅಪರೂಪ ಎಂದು ಹೇಳಿ ಭಾಷಣವನ್ನು ಮುಗಿಸಿದರು. ತರುವಾಯ ಇಲ್ಲಿಯ ಶೇತಕಿಶಾಲೆಯ ಹೆ॥ ಮಾಸ್ತರರಾದ ಮ॥ ರಾಮನಗೌಡರು ಹುಲಕೋಟಿ ಇವರು ತಾವು ಬಂದಂದಿನಿಂದ ತಮ್ಮ ಶಾಲೆಗೆ ರಾವಸಾಹೇಬರಿಂದಾದ ಸಹಾಯವನ್ನೂ ಮತ್ತು ಆರಂಭದಲ್ಲಿ ತಮಗಾದ ತೊಂದರೆಗಳನ್ನೂ ದೂರಮಾಡುವದರಲ್ಲಿ ರಾವಸಾಹೇಬರು ವಹಿಸಿದ ಸಹಾನುಭೂತಿಯನ್ನು ಜನರಿಗೆ ಸ್ಪಷ್ಟವಾಗಿ ತಿಳಿಸಿದರು. ಮುಂದೆ ರಾವಸಾಹೇಬರ ಚಿಕ್ಕಂದಿನ ಸ್ನೇಹಿತರಾದ ಮ॥ ಶಿವಜೋಗಪ್ಪಾ ಶೆಟ್ಟಿ ಇವರು ರಾವಸಾಹೇಬರ ಉದಾರತನವನ್ನು ತಮ್ಮ ಮಧುರವಾಣಿಯಿಂದ ವ್ಯಕ್ತಪಡಿಸಿದರು. ಆಮೇಲೆ ರಾವಸಾಹೇಬರ ಭಾಷಣವಾಯಿತು. ಇವತ್ತಿನ ದಿವಸ ಈ ಊರ ಪ್ರಮುಖರು ಮಾಡಿದ ಮನ್ನಣೆಗೆ ನಾನು ಯೋಗ್ಯನಲ್ಲ. ಇದು ಬಾಲಕನಮೇಲೆ ತೋರಿಸಿದ ಮಮತೆಯಾಗಿರುತ್ತದೆಂದು ನಾನು ತಿಳಿಯುತ್ತೇನೆ. ಯಾಕೆಂದರೆ-ನಾನು ಚಿಕ್ಕವನಿರುವಾಗ ನನ್ನ ಹಿರಿಯರು ತೀರಿದ್ದರಿಂದ ಅಪ್ರಬುದ್ಧನಾದ ನನ್ನನ್ನು ಈ ಪ್ರಮುಖರೇ ಮುಂದಕ್ಕೆತಂದರು. ಅಂದಮೇಲೆ ಅವರೇ ನನ್ನ ಹಿರಿಯರಾದರಲ್ಲವೆ? ಅವರ ಮುಂದೆ ನನ್ನ ಪ್ರಶಂಸನೆಯೇನು? ಮತ್ತು ನನಗೆ ಮಿ॥ ಶೇಷಪ್ಪಾ ಕುಲಕರ್ಣಿ ಇವರು ಪ್ರತಿಯೊಂದು ಕೆಲಸದಲ್ಲಿ ಸಹಾಯಮಾಡಿದರು. ಅವರು ಈಗ್ಗೆ ಕೈಲಾಸವಾಸಿಗಳಾದರೂ ನಾನು ಅವರನ್ನು ಎಂದಿಗೂ ಮರೆಯಲಾರೆನು ಈ ಊರಲ್ಲಿ ಆದ ಕೆಲವು ಸಾರ್ವಜನಿಕ ಕೆಲಸಗಳಾದರೂ ಇಲ್ಲಿಯ ಪ್ರಮುಖಜನರಿಂದಲೇ ಆದವು. ಆದರೂ ಅವರು ನನ್ನನ್ನು ಮಾತ್ರ ಮುಂದೆ ಮಾಡಿದ್ದಾರೆ. ಮತ್ತು ಇಲ್ಲಿಯ ಸಿರಸಂಗಿಕರರ ಸ್ಮಾರಕವೆನಿಸಿದ ಇಮಾರತಿಯು ಸ್ಥಾಪಿತವಾಗಲಿಕ್ಕಾಗರೂ ಈ ಊರು, ವೆಂಕಟಾಪೂರ, ಬೆಂಚೀಹಳ್ಳಿ, ತೆವಮೆಳಳೀಹಳ್ಳಿ, ಸಂಗೂರು ಮೊದಲಾದ ಗ್ರಾಮಗಳ ಪ್ರಮುಖಜನರು ಮಾಡಿದ ಧನಸಹಾಯವೇ ಕಾರಣವು. ಮತ್ತೂ ಈ ಊರಲ್ಲಿ ಯಾವದೇ ಒಂದು ಸಮಾರಂಭವಾಗಲಿ ಉತ್ಸವದ ಪ್ರಸಂಗಗಳಾಗಲಿ ಜರುಗಿದರೆ ಅದಕ್ಕೆ ಬ್ಯಾಡಗಿ, ಹಾವೇರಿ, ಆಲೂರ, ತೆವರಮೆಳಳೀಹಳ್ಳಿ ಮೊದಲಾದ ಊರ ಜನರು ಟೊಂಕಕಟ್ಟಿ ನಿಲ್ಲುವರು. ಇದರಿಂದಲೇ ನಮ್ಮಲ್ಲಿ ಕೆಲವು ಸಾರ್ವಜನಿಕಕೆಲಸಗಳಾಗಲಿಕ್ಕೆ ಸಹಾಯವಾಗಿದೆಯೇಹೊರತು ನನ್ನೊಬ್ಬನಿಂದೇನಾಗುವದು. ಇಂಥ ಸಣ್ಣಹಳ್ಳಿಗೆ ಕರ್ನಾಟಕದಲ್ಲಿ ಎಲ್ಲಿಯೂ ಇಲ್ಲದಂಥ ಶೇತಕೀಶಾಲೆಯೆಂಬ ಕಾಮಧೇನುವನ್ನು ನಮ್ಮ ದಯಾಳು ಸರಕಾರದವರು ಕೊಟ್ಟರು. ಇದು ನಮ್ಮ ಸುದೈವವೇಸರಿ, ಇದರಿಂದ ನಾವು ಇಚ್ಛೆಸಿದ ಲೈನಮಾರ್ಗವು, ಸ್ಯಾನೆಟರೀ ಬೋರ್ಡ್, ಸಹಾಯ್ಯಕಾರಿಸಂಘ, ಭಾವಿ ಮುಂತಾದವುಗಳು ಆಗಿರುವವು. ಅಂದಮೇಲೆ ಇದಕ್ಕೆ ಕಾಮಧೇನು ಅನ್ನಲಿಕ್ಕೆ ಏನೂ ಅಡ್ಡಿಯಿಲ್ಲ ಎಂದು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು. ಇಷ್ಟಾದಬಳಿಕ ಅಧ್ಯಕ್ಷರು—ರಾವಸಾಹೇಬ ಚನಬಸಪ್ಪಾ ಶೆಟ್ಟರು ಈಗ ದೊರೆತ ಬಹುಮಾನಕ್ಕೆ ಯೋಗ್ಯರೆಂದೂ, ಇವರಿಂದ ಸಾರ್ವಜನಿಕ ಕೆಲಸಗಳು ಇನ್ನೂ ಹೆಚ್ಚು ಒದಗಲೆಂದೂ ಇಂಗ್ಲೀಷಿನಲ್ಲಿ ಭಾಷಣಮಾಡಿದರು. ಅದರ ಭಾಷಾಂತರವನ್ನು ಶೇತಕಿಶಾಲೆಯ ಹೆಡ್‌ಮಾಸ್ತರರವರು ಕನ್ನಡದಿಂದ ಸ್ಪಷ್ಟವಾಗಿ ತಿಳಿಯುವಂತೆ ಹೇಳಿದರು. ಮುಂದೆ ಪುಷ್ಪಹಾರ ತುರಾಯಿ ಸುಗಂಧದ್ರವ್ಯಗಳ ವಿನಿಯೋಗವಾದನಂತರ ಮಿಠಾಯಿ ತಾಂಬೂಲಾದಿಗಳನ್ನು ಹಂಚುವದರಲ್ಲಿ ಬಂದು, ಕಡೆಗೆ ನಮ್ಮ ಸಾರ್ವಭೌಮರಾದ ಪಂಚಮಜಾರ್ಜ ಬಾದಶಹರವರ ಹೆಸರಿನಿಂದಲೂ ಮೆಹರ್ಬಾನ ಅಧ್ಯಕ್ಷರವರ ಹೆಸರಿನಿಂದಲೂ ಈ ಸಭೆಗೆ ಕಾರಣರಾದ ರಾವಸಾಹೇಬರ ಹೆಸರಿನಿಂದಲೂ ತ್ರಿವಾರಜಯಘೋಷವಾಗಿ ಸಭಾ ವಿಸರ್ಜನೆಯಾಯಿತು. ಅನಂತರ ಬಂದಂಥ ಪರಸ್ಥಳದ ಎಲ್ಲಜನರ ಭೋಜನಸಮಾರಂಭವು ನಡೆಯಿತು

ರಾಮಗಡ್ಡಿ.

ಇಲ್ಲಿಯ ಸಂಸ್ಕೃತಶಾಲಾ ಸಹಾಯಾರ್ಥವಾಗಿ ಧನವನ್ನು ಕೊಡಲೊಪ್ಪಿದ ಮಹಾತ್ಮರ ಹೆಸರನ್ನು ಈ ೩ ನೆಯ ಪ್ರಕಟನೆಯಿಂದ ಸಕಲ ಸಭ್ಯರಿಗೂ ಶ್ರುತಪಡಿಸುತ್ತೇವೆ. ಗುಡಿಬಲ್ಲೂರಲ್ಲಿ- ಮೆ॥ ಗೌ॥ ಸಿದ್ಧರಾಮಪ್ಪ ಈಶ್ವರಯ್ಯನವರು ರೂ. ೩೫, ಮಲ್ಲಾಪುರ ಗೌ॥ ಸಿದ್ಧರಾಮಪ್ಪ ಸಂಗಪ್ಪನವರು ೨೮, ಬಳಿಗಂಗಪ್ಪನವರು ೨೦, ಶೆಟ್ಟಿ ರುದ್ರಪ್ಪನವರು ೧೧, ಶೆಟ್ಟಿ ಅಮರಪ್ಪನವರು ೧೦, ಶೆಟ್ಟಿ ವೀರಭದ್ರಪ್ಪನವರು ೨೦, ಕೋಮಟಿಗರ ಜಂಬಯ್ಯನವರು ೧೫, ಹಲಕರಟಿ ಚನ್ನಬಸಪ್ಪನವರು ೧೧, ಮಠದ ಅಡಿವಪ್ಪನವರು ೧೧, ಕುಲಕರ್ಣಿ ವೆಂಕಪ್ಪನವರು ೩೫, ಅಗಸರ ತಿಮ್ಮಣ್ಣನವರು ೨೫, ಅವಡ್ಲಕ್ಕಿ ವೀರಪ್ಪನವರು ೧೦, ಅಕ್ಕಸಾಲಿಗರ ಬಸಪ್ಪನವರು ೧೫. ಇಂದೂಪುರದಲ್ಲಿ- ಮಠದ ಶಾಂತಮಲ್ಲಪ್ಪನವರು ೧೦, ಪೊ॥ ಗೌ॥ ಲಿಂಗಪ್ಪನವರು ೧೦, ಪೊ॥ ಗೌ॥ ಸಂಗನಬಸಪ್ಪನವರು ೧೦, ಶರಣಪ್ಪನವರು ೧೦, ಪೊ॥ ಗೌ॥ ಬಸಪ್ಪನವರು ೧೫, ಭೀಮಣ್ಣನವರು ೧೦, ಪೊ॥ ಗೌ॥ ಭೀಮಣ್ಣನವರು ೧೦, ಸಿದ್ಧಪ್ಪನವರು ೧೦, ಮ॥ ಗೌ॥ ಭೀಮಣ್ಣನವರು ೧೦, ಪೊ॥ ಗೌ॥ ತಮ್ಮಣ್ಣನವರು ೧೦, ವೆಂಕಣ್ಣ ಪೊ॥ ಗೌ॥ ಗುರ್ಜಾಳಿಯಲ್ಲಿ ೨೦, ಮ॥ ಗೌ॥ ವೀರಪ್ಪನವರು ೪೦, ಪೊ॥ ಗೌ॥ ಕೊಟ್ಟೂರಪ್ಪನವರು ೨೫, ಕೋಣನಹಳ್ಳಿ ಬಸವಪ್ಪನವರು ೩೦. ತಂಗಡಿಯಗಿಲ್ಲಿ- ಪೊ॥ ಗೌ॥ ದೊಡ್ಡಬಸವಪ್ಪ ೧೦, ಗಾಣಿಗರ ಸಂಗಪ್ಪನವರು ೧೦, ದದ್ದಲ ಸಾಯಬಣ್ಣನವರು ೧೦, ಜೋಳದಡಿಗಿ ವೆಂಕಟರಾಯರು ೧೦, ಶಾಂತವೀರಪ್ಪ ಮಾ॥ ಗೌ॥ ೧೦೦. ಬಾನಾಪುರದಲ್ಲಿ- ಶಿವಪ್ಪನವರು ೩೦, ಮಲ್ಲರಡ್ಡಿ ಸಿದ್ಧಪ್ಪ ರಾಮಣ್ಣನವರು ೧೫, ತಿಮ್ಮಣ್ಣನವರು ೧೦. ಆಲಂಪಲ್ಲಿಯಲ್ಲಿ- ಕೇತನಾಳು ಶಿ॥ ರಾಚಯ್ಯನವರು ೧೦, ಮಾ॥ ಗೌ॥ ಸಿದ್ಧರಾಮಪ್ಪ ಅಮರಮ್ಮನವರು ೧೫೦, ಕು॥ ದೊಡ್ಡ ತಿರುಮಲರಾವು ಸಣ್ಣ ತಿರುಮಲರಾವು ೧೦, ಮಂಡರ ಶಿವಲಿಂಗಮ್ಮಬಸಪ್ಪನವರು ೧೦, ಗಾಣಿಗರ ಸಿದ್ಧಪ್ಪನವರು ೧೦, ಶಂಕರಶೆಟ್ಟಿ ಮ. ರೆಪ್ಪನವರು ೧೦, ಖ್ಯಾಟಿ ಮಲ್ಲಪ್ಪನವರು ೧೦, ಯಲೇರಿ ನಾಗಪ್ಪನವರು ೧೦, ಗೊಂಡೆಡಿಗಿ ಮಾ॥ ಗೌ॥ ಚಂದ್ರರಾಯರು ೩೦೦. ಕಣಿಸಿಯಲ್ಲಿ-ಮಾ॥ ಗೌ॥ ಚನ್ನಬಸಪ್ಪನವರು ೨೦೦, ಅಂಗಡಿ ಗಂಗಪ್ಪನವರು ೨೫, ಗಾಣಿಗರ ಸಿದ್ಧರಾಮಪ್ಪನವರು ೧೧, ಗಾಣಿಗರ ಬಸಪ್ಪನವರು ೪೦, ಮಲ್ಲಾಪುರ ಗೌ॥ ಚೋಳಪ್ಪನವರು ೨೦, ಗಡ್ಡಿ ಪಟ್ಟಪ್ಪನವರು ೧೫, ಗಡ್ಡಿ ಶಿವಶೆಟ್ಟಿ ಲಿಂಗಪ್ಪನವರು ೧೦, ಕಂಬಾರ ನರಸಯ್ಯನವರು ೧೦. ನೀರಡಗುಂಭದಲ್ಲಿ- ಚನ್ನಬಸವಪ್ಪ ಗಂಗಮ್ಮ ಚನ್ನಬಸವಮ್ಮ ಮಾ॥ ಗೌ॥ ೧೫೦, ಹುಗ್ಗಿ ನಾಗಪ್ಪನವರು ೨೫, ಸಾಲಿ ವೀರಣ್ಣನವರು ೧೦, ಕೋಮಟಿಗರ ನಾಗಯ್ಯನವರು ೨೫, ಚನ್ನಬಸವಪ್ಪ ಪೊ॥ ಗೌ॥ ೨೫, ಅನಗೊಂಡಿ ಅಲ್ಲಿಸಾಹೇಬರು ೧೦, ತ॥ ಗಂಟಿಪ್ಪನವರು ೧೦, ಲಕ್ಷ್ಮಸಾನಿಯು ೧೦. ಮೊಕ್ತಿಯಲ್ಲಿ- ರೇವಣಸಿದ್ಧಪ್ಪನವರು ೩೫, ಗಲ್ಲೂರು ಚನ್ನಬಸವಪ್ಪನವರು ೧೫, ಗಿರ್ಮಬಸವಪ್ಪನವರು ೨೫, ಕೇಣೇದ ನಾಗಪ್ಪನವರು ೩೫, ಶಕಲಾತಿ ಶಿವಪ್ಪನವರು ೪೦, ಮಿಠಾಯಿ ಬಸವಯ್ಯನವರು ೨೫, ಮನಸಾಲಿ ರಾಮಯ್ಯನವರು ೧೦, ಕೊಠಬಸವಪ್ಪನವರು ೧೫. ವೂಟಕೂರಲ್ಲಿ-ಮಠಪತಿ ಶಿ॥ ಸಂಗಯ್ಯನವರು ೧೫, ಅಳ್ಳಿಪೇಟಿವೈದವರು ೪೫, ಕೋರಿ ತಿಪ್ಪಣ್ಣನವರು ೧೦, ಹುಗ್ಗಿ ಸಕ್ರಪ್ಪನವರು ೧೦, ಗಾಣಿಗರ ತಮ್ಮಣ್ಣನವರು ೧೦, ವಾರದವಿರುಪಣ್ಣನವರು ೧೦, ನಾರಾಯಣಪೇಟೆಯಲ್ಲಿ- ಬಿಬ್ಬಳ್ಳಿ ಶಿ॥ ಮಳೆಪ್ಪನವರು ೧೦೦, ಯಲೇರಿ ಗಾ॥ ನಾಗಣ್ಣನವರು ೧೦೦, ಶಂಕರಪ್ಪ ತಂಬಾಕು ೪೦, ಶೆಟ್ಟಿ ಕೇಶವಪ್ಪನವರು ೧೫, ಇಂಮಡಿ ಹಂಪಯ್ಯನವರು ೧೦, ಬೋಮಲಸಂಗಯ್ಯನವರು ೧೦, ಬಾಲಾದಿ ಭೀಮಯ್ಯನವರು ೧೦, ಭೋಮತಿಪ್ಪಯ್ಯನವರು ೧೦, ರಾಯಚೂರು ವೆಂಕಯ್ಯನವರು ೧೫, ಸುಲೇಗಾವಿ ಗುಂಡಪ್ಪನವರು ೧೫, ಕೇಣೇದ ಗುರಪ್ಪನವರು ೧೫, ನೂನಿ ಭೀಮಯ್ಯನವರು ೧೦, ಸೌದ್ರಿಸಿದ್ಧಪ್ಪನವರು ೧೦, ಭರ್ತನೂರು ಶರಣಯ್ಯನವರು ೧೫, ಕಲ್ಯಾಣಶೆಟ್ಟಿ ಹುಚ್ಚಯ್ಯನವರು ೧೦, ಗಂದಿ ಚನ್ನಬಸವಪ್ಪನವರು ೧೫, ಮೆಂಗಲ ಸಿದ್ಧಪ್ಪನವರು ೧೦, ಹುಣಿಸಿಗಿಡದ ಚನ್ನಮಲ್ಲಯ್ಯನವರು ೧೦, ಮೆಟಿಗಿ ಜೀವಣ್ಣನವರು ೨೦, ಗಣಾಚಾರಿ ನಾಗಪ್ಪನವರು ೧೨, ಸದಾನಂದಪ್ಪನವರು ೧೦, ಸುರಪುರ ಈಶ್ವರಪ್ಪ ಲಕ್ಷ್ಮಯ್ಯನವರು ೨೦, ಕಲ್ಯಾಣಿದೇವಣ್ಣನವರು ೧೫, ದಾಮರಗಿದ್ದಿ ಗುರುಪಾದಪ್ಪನವರು ೨೫, ವೂಟಕೂರು ಸಿದ್ಧಪ್ಪನವರು ೧೦, ಬೆಲ್ಲದ ಸಿದ್ಧಪ್ಪ ಶಂಕರಪ್ಪನವರು ೧೦, ಬೆಲಾಳು ಪಾಂಡುರಂಗಪ್ಪನವರು ೧೨, ಕಡಪಾಶ ಚನ್ನಪ್ಪನವರು ೧೦, ಕುರುಬರ ಶಿವಪ್ಪನವರು ೧೦, ಹಕೀಮರ ಹನುಮಾನಸಿಂಗ್ ೧೦, ಬೋಜಿ ಗೋವಿಂದಪ್ಪನವರು ೩೧, ಅಂಬಾದಾಸ ವಿಠಲರಾಯರು ೨೫, ಪಟ್ಟಣಶೆಟ್ಟಿ ಬಸಪ್ಪನವರು ೧೨, ಪಳ್ಳಿ ದುಕಾನದ ವೀರಣ್ಣ ೧೦, ಪಳ್ಳಿ ಮಾ॥ ಗೌ॥ ರಾಗೋಜಿಯವರು ೧೦, ಉಪ್ಪಗಡ್ಡಿ ವೀರಣ್ಣನವರು ೧೦, ಶಿರೂರು ರುದ್ರಪ್ಪನವರು ೧೦, ಕೊಡ್ಲಿಸಿದ್ಧಪ್ಪನವರು ೨೦, ಶಿಖಾಯಿ ವೀರಪ್ಪನವರು ೧೦, ಜೇರಮಲ್ಲಪ್ಪನವರು ೧೫, ಯಾಲಕ್ಕಿ ಬಸವತೀರ್ಥಪ್ಪನವರು ೨೫, ಇಂಜನೂರು ಶರಣಪ್ಪನವರು ೨೫

ಆರಂಭದಿಂದ ಇಲ್ಲಿಯವರೆಗೂ ಬರೆದಿದ್ದ ಉದಾರಿಗಳ ಪೈಕಿ ಎಷ್ಟೋ ಜನರು ನಗದು ಹಣವನ್ನೇ ಕೊಟ್ಟಿರುತ್ತಾರೆ. ಉಳಿದ ಮಹಾಶಯರು ತಾವು ಬರೆದಿದ್ದ ಹಣವನ್ನು ಕೂಡಲೇ ಕೊಟ್ಟು ವಿದ್ಯಾದಾನಫಲಕ್ಕೆ ಪಾತ್ರರಾಗುವರೆಂದು ನಂಬಿದ್ದೇವೆ. ಶ್ರೀಗಳವರು ಏತತ್ಕಾರ್ಯಸಿದ್ಧಿಗಾಗಿಯೇ ಪ್ರತಿಯೊಂದು ಗ್ರಾಮದ ಭಕ್ತರಲ್ಲಿಗೆ ಬಿಜಯಂಗೈಯುವವರಾಗಿದ್ದಾರೆ.

ವಿಜ್ಞಾಪನೆ.

ಈ ಸಮಯ ಬಿಡಬೇಡಿರಿ. ಮುಂದೆ ದೊರೆಯಲಾರದು. ಮೊಳಕಾಲ್ಮುರುವಿನ ಪ್ರಸಿದ್ಧವಾದ ರೇಶ್ಮೆಯವಸ್ತ್ರಗಳು ಬೇಕೋ? ಬೆಲೆಸುಲಭ! ಬಣ್ಣ ಗ್ಯಾರಂಟಿಯಾದದ್ದು. ಒಂದುಸಲ ತರಿಸಿನೋಡಿರಿ !! ನಮ್ಮಲ್ಲಿ ಹೊದಿಯುವ ವಸ್ತ್ರಗಳೂ, ಮೊಗಟಗಳೂ, ಶೀರೆಗಳೂ, ನಡಕಟ್ಟುಗಳೂ, ಲಿಂಗದವಸ್ತ್ರಗಳೂ, ಕೈ ವಸ್ತ್ರಗಳೂ ಬಹಳ ಚೆನ್ನಾಗಿ ಎಲ್ಲಾ ರಂಗಿನಲ್ಲಿಯೂ ತಯಾರಾಗುತ್ತವೆ. ನಾವು ಮೈಸೂರು, ಮದ್ರಾಸು ಸೀಮೆಗಳ ಎಲ್ಲಾ ಭಾಗಕ್ಕೂ ನಮ್ಮ ಮಾಲನ್ನು ರವಾನಿಸುತ್ತೇವೆ. ನಮ್ಮ ಮಾಲುಗಳಿಗೆ ಬಹುಮಾನಗಳೂ, ಮೆಡಲುಗಳೂ, ಬಂದಿವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಹಿಮಂತಋತುವಿನ ದರಗಳು. ೧ನೆ ನಂ. ವಸ್ತ್ರಗಳು ತೊಲೆ ೧ಕ್ಕೆ ೦-೩-೦. ೨ನೆ ನಂ. ವಸ್ತ್ರಗಳು ತೊಲೆ ೧ಕ್ಕೆ ೦-೬-೯. (ಮೊಗಟು) ಅರಳೆಪೇಟೆ ಶೀರೆಗಳೂ, ನಡಕಟ್ಟು, ಲಿಂಗದವಸ್ತ್ರಗಳು, ೧ನೆ ನಂ. ಮಾಲು ತೊಲೆ ೧ಕ್ಕೆ ೦-೮-೦. ೨ನೆ ನಂ. ಮಾಲು ತೊಲೆ ೧ಕ್ಕೆ ೦-೩-೬. ನಮ್ಮವಿಳಾಸ:—

11 ಎಂ. ಎಸ್. ಮಲಕಣ್ಣ, ಮತ್ತು ಬ್ರದರ್ಸ್,
ರೇಶ್ಮೆ ಜವಳಿ ವ್ಯಾಪಾರಿಗಳು. ಪೋಸ್ಟ್ ಮೊಳಕಾಲ್ಮುರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರಾನ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿ ಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೪—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೦—೦ ರೂ. ಕೊಡಬೇಕಾಗುವುದು ಕೆಂಪು, ಹಸುರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲ ಒಂದೇತರದ ಬಣ್ಣದಿಂದ ಬಿಳಿ ಗ್ಲೇಜು ಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೧—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೦—೦; ಹಳದೀ ಗ್ಲೇಜ್ ಕಾಗದದಮೇಲೆ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦-೬-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ಏಥವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಕ್ರಾನ್‌ಪ್ರೆಸ್, ಮೈಸೂರ್.

ನೋಟೀಸು.

2

ನೈಜಾಮ ಇಲಾಖಾ ಗುಲಬುರ್ಗ ತಾ॥ ಧರಮುರಡೀ ಹಿರೇಮಠದ ಪಟ್ಟಾಧ್ಯಕ್ಷ ಕೊಟ್ಟೂರ ಬಸವಸ್ವಾಮಿಗಳವರ ಸನ್ನಿಧಿಯಿಂದ—

ಸಮಸ್ತ ವೀರಶೈವ ಜನಂಗಳಿಗೆ ಈ ಸ್ಟಾರ ಮುಖೇನಾ ಶ್ರುತಪಡಿಸುವುದೇನೆಂದರೆ:—ನಾವು ಮದ್ರಾಸ್ ಇಲಾಖೆಯ ಕಡೆಗೆ ಸಂಚಾರಕ್ಕೆ ದಯಮಾಡಿಸುವ ಕಾಲಕ್ಕೆ ಸದರೀ ಮಠದ ಶಾಂತಮರಿ ಎಂಬುವವನ್ನು ಮಠದ ಇಂತಿಜಾಮ ಸರಿಯಾಗಿಡುವುದಕ್ಕೆ ಯಾವತ್ತು ಸಾಮಾನುಗಳನ್ನು ಅವನ ತಾಬೇಕ್ಕೆ ಕೊಟ್ಟು ದಯಮಾಡಿಸಿದ್ದಿವಿ. ಪುನರಪಿ ಸದರೀ ಮಠಕ್ಕೆ ದಯಮಾಡಿಸಬೇಕಾದರೆ ೫ ತಿಂಗಳು ಬೇಕಾದುವು:—ಅಷ್ಟರೊಳಗಾಗಿಯೇ ಸದರೀ ಮರಿಯು ಸರ್ವ ಸಾಮಾನುಗಳನ್ನೂ ಮನೈಕಿ ಬಿಲ್ಲಿಗಳನ್ನೂ ಮ ಚಪ್ಪರಾಶಿ ಬಿಲ್ಲಿ ಸಹಿತ ಚೋರಿಯಿಂದ ತೆಗೆದುಕೊಂಡು ಹೋಗಿ ದೇಶ ಮಧ್ಯದಲ್ಲಿ ಸದರೀ ಮಠದ ಚರಮೂರ್ತಿ ಎಂಬದಾಗಿ ಹೇಳಿಕೊಳ್ಳುತ್ತಾ ಆಚಾರಸ್ಥರಿಗೆ ಧೋಕಾ ಕೊಡುವುದಲ್ಲದೆ ಸದಾಚಾರಕ್ಕೂ ವೃದ್ಧಾಚಾರಕ್ಕೂ ಬಾಹ್ಯನಾಗಿ ಸಂಚರಿಸುತ್ತಿರುತ್ತಾನೆ. ಶಿವಭಕ್ತರಾದವರು ಇಂಥಾ ದುಷ್ಟಮನುಷ್ಯನನ್ನು ಹಿಡಿದು ಸನ್ನಿಧಿಗೆ ಅರಿಕೆ ಮಾಡಿಕೊಳ್ಳದೆ ಇರಲಾರರು

ಶುದ್ಧ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

7

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಮದ್ರೇಕವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೋಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ,ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ

ಮಕ್ಕಳಿರುವ ಮನೆಗಳಲ್ಲಿಯೂ ಪ್ರಯಾಣಕಾಲದಲ್ಲಿಯೂ ಛಳಿ ಮಳೆಗಾಲಗಳಲ್ಲಿಯೂ ಮಲೆನಾಡಿನಲ್ಲಿಯೂ ಸೊಂಕುರೋಗ ಸ್ಥಳಗಳಲ್ಲಿಯೂ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠತಮವಾದ

18

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ದೇಶದ ಕಸ್ತೂರಿ—ಅನೇಕ ಪುಟಗಳಿಂದ ತಯಾರಿಸಿದ ಲೋಹಭಸ್ಮ-ಚಿನ್ನದ ರೇಖು ಮೊದಲಾದವುಗಳಿಂದ ಹಿರಿಯರ ಕಾಲದಿಂದಲೂ ತಯಾರಿಸಲ್ಪಡುತ್ತಿರುವ ಈ ಶ್ರೀ ಕರಕಸ್ತೂರಿಮಾತ್ರೆಗಳು ತಾಂಬೂಲವನ್ನು ರಂಜಿಸಿ ಯಂತಹ ಬಲವಾದ ಆಹಾರವನ್ನಾದರೂ ಬೇಗನೆ ಜೀರ್ಣಿಸಿ ಬಹಳ ಹೊತ್ತಿನವರೆಗೆ ಬಾಯಿ ಘಮಘಮಿಸುವಂತೆ ಮಾಡುವುವು.

ಶೀತವಾಯು-ಕೆಮ್ಮು-ನೆಗಡಿ-ದಿನಜ್ವರ-ಮೂರರಜ್ವರ ನಾಲ್ಕರಜ್ವರ- ಮಲೇರಿಯಾಜ್ವರ- ತಲೆನೋವು- ಮೈಕೈನೋವು ಮತ್ತು ಭಾರ-ಅರೋಚಕ ಹಲ್ಲುನೋವು-ಹೊಟ್ಟೆನೋವು-ಮಲಬಂಧ-ಅಜೀರ್ಣಭೇದಿ-ಮಕ್ಕಳಿಗೆ ಸಾಮಾನ್ಯವಾಗಿ ಬರುವ ಪಕ್ಕೆಗಳ ಸೆಳೆತ-ಹೊಟ್ಟೆಯುಬ್ಬರ-ಮಂದಜ್ವರ-ಭೇದಿ ಮುಂತಾದವುಗಳನ್ನು ನಂಬಿಕೆಯಾಗಿ ಗುಣಪಡಿಸುತ್ತವೆ. ಒಂದುವೇಳೆ ಈ ಮಾತ್ರೆಗಳನ್ನು ಪರೀಕ್ಷಿಸಿದರೆ ಯಾವಾಗಲೂ ಇದನ್ನೆ ತರಿಸುವರೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ೨೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ. ಪಿ ಛಾರ್ಜು ಪ್ರತ್ಯೇಕ.

ಆಮೋದಿನಿ:— ಅಮೋಘವಾದ ಸುವಾಸನೆಯಿಂದ ಕೂಡಿ ತಾಂಬೂಲವನ್ನು ರಂಜಿಸಿ ಆಯಾಸ ಪರಿಹಾರಮಾಡುವುದರಲ್ಲಿ ಪ್ರಖ್ಯಾತಿಹೊಂದಿ ಸಂಗೀತಗಾರರಿಂದ ವಿಶೇಷಕೀರ್ತಿಯನ್ನು ಸಂಪಾದಿಸಿ ನಾನಾತರಹಾ ಕೆಮ್ಮು, ದಮ್ಮು ಉಬ್ಬಸ, ವಾಂತಿ, ವಾಕರಿಗೆ, ಮಲಬಂಧ, ಅಗ್ನಿಮಾಂದ್ಯ, ಪಿತ್ತಸಂಕಟ, ಅರೋಚಕ, ಬಾಯಾರಿಕೆಗಳನ್ನು ತತ್ಷಣ ಗುಣಪಡಿಸಿ ಶರೀರಕ್ಕೆ ತೀಕ್ಷ್ಣಮಾಡದೆ ಧಾತುವೃದ್ಧಿಯುಂಟುಮಾಡುವುದರಲ್ಲಿ ಶ್ರೇಷ್ಠವಾದುದೆಂದು ಆ ಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವುದು. ೧೫೦ ಮಾತ್ರೆ ೪ ಆಣೆ. ಇದಕ್ಕೆ ಒಂದು ಇನಾಮು. ವಿ.ಪಿ. ಛಾರ್ಜು ಪ್ರತ್ಯೇಕ.

ವಿಳಾಸ— ಬಿ. ವಿ. ಪಂಡಿತ್,
ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರ್ ॥ಡಿ

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೈಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳುಸಹಿತ ಆದ ಸಮಾರಂಭ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ಮಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೋ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೋ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೋ ಸಿಕ್ಕುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.



ಹೊಸಫ್ಯಾಷನ್—ಸಭ್ಯಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಈಪ್ರಕಾರ ೨ ಫೋಟೋ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ।॥=, ೧, ೧।, ಪ್ರಕಾರ, ಮತ್ತೂ ಬೆಳ್ಳೀದು ರು ೧॥ ರೋಡ್ ಗೋಲ್ಡು ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨।॥ ರೂ.

ಪರಊರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ. ನಮ್ಮವಿಳಾಸ— ಗಂಗಪ್ಪಾ ಜೇರಿಗೆ,
41 ಆರ್ಟಿಸ್ಟ್, ಸೊಲ್ಲಾಪುರ.

ಓರಿಯಂಟಲ್ ಫಾರ್ಮಸಿ ಮೈಸೂರು.

2

ಪ್ರಸಿದ್ಧ ಗುಣಕಂಡ ಔಷಧಗಳು.

ಜ್ವರದಮಾತ್ರೆ—ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಯುಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮುಂ

ದಣಿವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ರೂ.

ಗೋರೋಜನದಮಾತ್ರೆ—ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ಮಾತ್ರೆ ಸೀಸೆಗೆ ೪ ಆಣೆ, ೫ ಸೀಸೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೊಡ್ಲೆ ತಪ್ಪಿ ಜೀರ್ಣಶಕ್ತಿ ಕೊಡುತ್ತೆ. ಪ್ರಯಾಣೀಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಶೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾದ ನೋವು ಉಳುಕು ಊತ ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ ೫ ಡಬ್ಬಿಗೆ ೧ ರೂ. ಕೊಡ್ಲೆ ನಮ್ಮ ಕ್ಯಾಟಲಾಗಿಗೆ ಬರಿಯಿರಿ ಮುಫತ್ತಾ ಕಳುಹಿಸುತ್ತೇವೆ.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕದನಗಳ ಪಟಗಳೂ ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ. ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ ೨ ಆಣೆ; ವಿ. ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ. ದಿ ಜನರಲ್ ಏಜೆನ್ಸಿ, ಮೈಸೂರು. 71

ಊದಬತ್ತಿಗಳು.

40

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧-೦-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹಧೂಪರ್ಟಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್ ಸನ್ಸ್
ಸುಗಂಧಕಾರಿ, ಮೈಸೂರು.

ಗಂಧರಾಜ ನಶ್ಯದಪುಡಿ.

49

ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದ್ದರೂ ತಪ್ಪದೆ ಗುಣವಾಗುತ್ತದೆ. ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚುಟಿಕೆ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ದರ್ಜ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಧಾತು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುತ್ತವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ದರ್ಜ ಡಬ್ಬಿಗಳಿಗೆ ೨-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ—ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್
ಕೊಳ್ಳೇಗಾಲದ ತಾಲ್ಲೂಕು.

೧೯೧೫ನೆಯ ಇಸವಿ ಫೆಬ್ರವರಿ ತಾ॥ ೭ರಿಂದ ೧೯೧೫ನೆಯ ಫೆಬ್ರವರಿ ತಾ॥ ೧೩ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ಮಾಘ ಬ॥ ಅಷ್ಟಮಿಯಿಂದ ಮಾಘ ಬ॥ ಚತುರ್ದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಕ ತೇದಿ
7	[1]ಭಾನು	ಅಷ್ಟ	38-11	ವಿಶಾಖ	46-32	25
8	ಸೋ	ನವ	32-10	ಅನೂ	42-15	26
9	[2]ಮಂಗ	ದಶ	26-24	ಜ್ಯೇಷ್ಠ	40-46	27
10	[3]ಬುಧ	ಏಕಾ	21-9	ಮೂಲ	34-52	28
11	[4]ಗುರು	ದ್ವಾ	16-24	ಪೂಷಾ	32-0	29
12	[5]ಶುಕ್ರ	ತ್ರ	12-29	ಉತ್ತಷಾ	29-58	1
13	[6]ಶನಿ	ಚತು	9-30	ಶ್ರವಣ	28-58	2

(1) ತಿಸ್ರೋಪ್ಯಷ್ಟಕಾ, ಚೆಲುವಾಜಮ್ಮಣ್ಣಿಯವರ ೧ ನೇ ಕುಮಾರ್ತೀ ವರ್ಧಂತೀ. (2) ದಶಮೀಪಾತಿಥಿ. (3) ತಿಥಿದ್ವಯಂ, ಸರ್ವತ್ರೈಕಾದಶೀ. (4) ತ್ರಯೋದಶೀತಿಥಿ, ಪ್ರದೋಷಃ. (5) ಮಹಾಶಿವರಾತ್ರಿಃ, ವಿಷ್ಣುಪದಪುಣ್ಯಕಾಲಃ. (6) ಸರ್ವತ್ರಾಮಾವಾಸ್ಯಾ, ದ್ವಾಪರಯುಗಾದಿಃ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಲೋಕಪ್ರಸಿದ್ಧವಾದ ಪಂಜಾಸಾಲಾಮಿಸ್ರಿ ಮುರಬ್ಬಾ.

12

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ „ಪಂಜಾ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳಿಗೆಡ್ಡೆ, ಶಾಮಗೆಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಪಂಜಾ ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುದು ತಿಳಿದುಬರುತ್ತೆ.

ಪಂಜಾ ಸಾಲಾಮಿಸ್ರೀ ಮುರಬ್ಬಾವು—ನೀರಿನಂತಿರುವ ಧಾತುವನ್ನು ಘಟ್ಟಿಪಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ನಿದ್ರೆಯಲ್ಲಿ ಹೋಗುವ ಧಾತುವನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೂತ್ರದೊಂದಿಗೆ ಉರಿಯುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕ್ಷಣಕ್ಷಣಕ್ಕೂ ಮೂತ್ರವಾಗುವುದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮೆದುಳಿಗೆ ಬಲವನ್ನು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ಉತ್ಸಾಹವು, ಬುದ್ಧಿಕುಶಲತೆಯು, ಶರೀರಕಾಂತಿಯು ಕೊಡುವುದು.
ಪಂಜಾ ಸಾಲಾಮಿಸ್ರೀ ಮುರಬ್ಬಾವು—ತಾಂಬ್ರ ಮತ್ತು ಭಂಗಾರಭಸ್ಮಕ್ಕಿಂತಲೂ ಉತ್ತಮವಾದದ್ದು.

ಈ ಮುರಬ್ಬಾದೊಂದಿಗೆ ಬಲ ಬರುವಂತೆ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವುದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣ ಕಂಡುಬರುತ್ತೆ. ೨-೩ ಡಬ್ಬಿಗಳನ್ನು ಉಪಯೋಗಿಸುವದರಿಂದ ಜನ್ಮಾಂತರದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು „ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ ೫೦೦ ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ಕ್ಕೆ ರೂ. ೨-೦-೦. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ ೬ ಆಣೆ. ಅನುಪಾನಪತ್ರಿಕೆ ಔಷಧದ ಸಂಗಡ ಇರುತ್ತೆ.

ಏಜಂಟರು—ಡಿ. ಸೈಯದ್ ಉಸ್ಮಾನ್ ಅಂಡ್ ಕೋ, ದೊಡ್ಡಪೇಟೆ, ಬೆಂಗಳೂರು ಸಿಟಿ.
ಡಿ. ಮನ್ನಾಲಾಲ್ ಡಿಲ್ಲೀವೈದ್ಯರು, ಅವೆನ್ಯೂ ರೋಡ್, ಬೆಂಗಳೂರು ಸಿಟಿ.

ಬಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

37



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋಕೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯುವ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧-೦-೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

REGISTERED NO. M. 124.

ಮೈಸೂರ್ ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಭುವಪಥಕೃತಾವತಾರಾ ಪಕ್ಷಜ್ಞನಕ್ಷತ್ರಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀರ್ಸ್ವದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸಿನಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಕೆಯಿಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧-೦-೦   ಅಂಚೆವೆಚ್ಚ ಸೇರಿ ೧-೪-೦.

ಸಂಪುಟ ೨೮)   ಮೈಸೂರ್ ಸ್ಟಾರ್ ಸನ್ ೧೯೧೫ ನೆಯ ಇಸವಿ ಫೆಬ್ರವರಿ ತಾರೀಖು ೨೧ ನೆಯ ಭಾನುವಾರ.   (ಸಂಚಿಕೆ ೮

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸಿಶಿಂತಾನ್.

3

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸಿಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

೧. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.
೨. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹೋಪಕಾರವಾಗಿರುವುದು.
೩. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ ಯಾವರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.
೪. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು
೫. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.
೬. ಬೇಸಿಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.
೭. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸಿಶಿಂತಾನದ ಒಂದು ಪೊಟ್ಟಣವನ್ನು ಯಾವಾಗಳೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

೩೫ ಮಾತ್ರೆಗಳ	ಪೊಟ್ಟಣ	೧ಕ್ಕೆ	೨	ಆಣೆ	೮೦ ಮಾತ್ರೆಗಳ	ಟಿನ್	೧ಕ್ಕೆ	೪	ಆಣೆ.
೯೫ ,,	,,	,,	೪	,,	೧೦೦ ,,	ಸೀಸೆ	,,	೪॥	,,
೨೦೦ ,,	,,	,,	೭	,,	೫೦೦ ,,	ಮರದಪೆಟ್ಟಿಗೆ	,,	೧	ರೂ.
೨೦೦ ,,	ಟಿನ್	,,	೯	,,	೧೨೦೦ ,,	,,	,,	೨	,,

೧ ರೂ.ಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಎಲ್ಲಾ ಕಡೆಯೂ ಪ್ರಸಿದ್ಧ ವರ್ತಕರಲ್ಲಿ ವಿಕ್ರಯಿಸಲ್ಪಡುತ್ತದೆ.

ಮೈಸೂರುಸೀಮೆಯ ಏಜಂಟರು:—ಎಂ. ರಾಮಸಂಜೀವ ಸಟ್ಟಿ, ಚನ್ನಪಟ್ಟಣ.
ಸೋಲ್ ಏಜಂಟರು:—ಸಿರ್ಷಿತಾನ್‌ಡಿಪೋ, ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ ೨.
ಮದ್ರಾಸ್ ಏಜಂಟ್:—ಬಿ. ಸಿ. ಷಾ ಅಂಡ್ ಕೊ,
೧೭೩ ಚೇನಾಬಜಾರ್ ರೋಡ್, ಮದ್ರಾಸ್.


S.U.N. & Co.
BENARES CITY.
KASHI
VISHWESHWAR.

21

ದೊಡ್ಡ ಕಂಪೆನಿ! **ಸೊಗಸಾದ ಸರಕುಗಳು!!**

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರಿಸೀರೆ, ಕಣ, ಪೇಟಾ. ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ-ಎಸ್. ಯು. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

೧೯೧೫ನೆಯ ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಕಾಯಿ ಇಳಿಯದ ಉತ್ತಮವಾದ ಕಾಗದ ಮುದ್ದಾದ ಮುದ್ರಣ. ಅನೇಕವಾದ ಹೊಸಸುಗತಿಗಳಿವೆ.

೧ ನಂ—ಸಣ್ಣಸೈಜು ಸಾದಾ	೦-೪-೦
೨ ನಂ—ಪೆನ್ಸಲ್‌ಮುಚ್ಚುಳವುಳ್ಳದು	೦-೬-೦

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಮು.

೩-೪ ನೆಯ ನಂಬರ್ ಡೈರಿಗಳು ಮುಗಿದುಹೋಗಿವೆ. ಹೆಚ್ಚಾಗಿ ತರಿಸುವವರಿಗೆ ರೂಪಾಯಿ ೧ ಕ್ಕೆ ೦-೨-೦ ಕಮಿಷನ್ ದೊರೆಯುವುದು. ವಿಳಾಸ.—

ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.

20

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧-೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಶಿವಪೂಜಾವಿಧಿ	೦-೮-೦
ಚಾರುಶೀಲಚರಿತ್ರೆ	೦-೫-೦
ಸಟೀಕ ನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವಿವೇಕಮಂಜರಿ [೨ನೆಯ ಭಾಗ]	೦-೩-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆಯವೆಚ ಬೇರೆ.

ಹೊಸ ಪುಸ್ತಕಗಳು.

172

ಸಿದ್ಧಾಂತಶಿಖಾಮಣಿ— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ). ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೩೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ನವರಸರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಕ್ರಮದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತೆ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎ. ಆರ್. ಕರಿಬಸವಶಾಸ್ತ್ರಿ, ಮೇಲಿನ [illegible]
ಗ್ರಂಥಪ್ರಕಾಶಕಮಂಡಲಿ, ಮೈಸೂರ್

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕೆ ಅವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತವಾಗಿರುವ ಘೋರಯುದ್ಧದ ದೆಸೆಯಿಂದ ಈ ಸಾಮಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದ ಮತ್ತೂ ಬೆಲ್ಜಿಯಮ್ಮಿನಿಂದ ಸುತರಾಂ ಬರುವುದು ಕಟ್ಟಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಆವಶ್ಯಕವಾದ ಕಾಗದ ಮೊದಲಾದ ಸಾಮಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವಧಿಯು ಪೂರೈಸಿರುವವರಿಗೆಲ್ಲಾ ಪತ್ರಿಕೆಯನ್ನು ವಿ. ಪಿ. ದ್ವಾರ ಕಳುಹಿಸುತ್ತಿರುವೆವು. ಆದರೆ ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿರುಗಿಸಿ ಕಾಗದದ ಬೆಲೆಯೇರಿಕೆಯಿಂದ ನಷ್ಟಪಡುವುದರ ಜತೆಗೆ ಪೋಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದು ತಿಳುಹಲು ಖೇದವಾಗುತ್ತದೆ. ಇತಃಪರಃ ದಯಾರ್ದ್ರಹೃದಯರಾದ ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ. ಪಿ. ಹಣವನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನವಾಗಿ ನಡೆದುಕೊಂಡು ಹೋಗುವಂತೆ ಮಾಡುವರೆಂದು ಸಂಪೂರ್ಣವಾಗಿ ನಂಬಿರುತ್ತೇವೆ.

ಮ್ಯಾನೇಜರ್.

ವೀರಾಬಾಯಿ.

ಒಬ್ಬ ಶೂರಶಿಖಾಮಣಿಯ ಚರಿತ್ರವು.

(ದೇಶಾಯಿ ಶೇಷಗಿರಿರಾವು ನಂದಿ)

ಸಂಗ್ರಾಮೇಸುಭಟೇನ್ದ್ರಾಣಾಂ ಕವೀನಾಂಕವಿಮಣ್ಡಲೇ ।
ದೀಪ್ತಿರ್ವಾದೀಪ್ತಿಹಾನಿರ್ವಾ ಮುಹೂರ್ತಾದೇವಜಾಯತೇ ॥

ಯುದ್ಧದಲ್ಲಿ ವೀರರ ಶೌರ್ಯಾಶೌರ್ಯಗಳೂ ಕವಿಸಂಘದಲ್ಲಿ ಕವಿಗಳ ಚಾತುರ್ಯಾಚಾತುರ್ಯಗಳೂ ಒಂದು ಮುಹೂರ್ತದಲ್ಲಿಯೇ ವಿದಿತವಾಗುವುವು.

ಈ ಶೂರಶಿಖಾಮಣಿಯಾದ ವೀರಾಬಾಯಿ ಚಿತ್ತೂರು ಸಂಸ್ಥಾನಾಧೀಶ್ವರನ ಪತ್ನಿ. ಈಕೆಯು ತನ್ನ ಬಲ ಪರಾಕ್ರಮಗಳಿಂದ ಅಕ್ಬರನನ್ನು ಓಡಿಸಿ ತನ್ನ ಪತಿಯನ್ನು ಕಾರಾಗೃಹವಿಮುಕ್ತನನ್ನಾಗಿ ಮಾಡಿದಳು. ಉದಯಸಿಂಹನು ರಾಜ್ಯವಾಳುತ್ತಿರಲಾಗಿ ಅಕ್ಬರ್ ಬಾದುಷಾನು ಅಮಿತಸೈನ್ಯದಿಂದ ಚಿತ್ತೂರುಮೇಲೆ ದಂಡೆತ್ತಿಬಂದನು. ಉದಯಸಿಂಹನಂತಹ ಹೇಡಿಯಾದ ರಾಜಪುತ್ರನು ಮತ್ತೊಬ್ಬನಿರಲಾರನು. ಅಕ್ಬರು ಬಾದುಷಾನು ದಂಡೆತ್ತಿಬಂದ ಸಂಗತಿಯನ್ನು ಕೇಳಿ ರಾಣಾಯವರಿಗೆ ಭಯದಿಂದ ದೇಹವು ಕಂಪಿಸಲಾರಂಭಿಸಿತು. ಆತನು ವಿಜಯಿಗಳಾದ ತುರುಷ್ಕರ ಸೇನೆಯೊಡನೆ ಹೋರಾಡಲು ಸಾಹಸಮಾಡಲಾರದೆ ಇದ್ದನು. ಆಗ ಆತನ [illegible] ಕಂಭರಾಣಾ ಮೊದಲಾದ ಸರದಾರರೆಲ್ಲರೂ ಉದಯಸಿಂಹ ರಾಣಾಯವರ ಪೂರ್ವಿಕರ ಪ್ರತಾಪವನ್ನು ತಿಳಿಹಿಸಿ ಯುದ್ಧಕ್ಕೆ ಪ್ರಯತ್ನಿಸಲು ಪ್ರೋತ್ಸಾಹಗೊಳಿಸಿದರು. ಆದರೂ ಆತನು ಮಾತ್ರ ಯುದ್ಧಕ್ಕೆ ಹೊರಡಲು ಪ್ರಯತ್ನಿಸಲಿಲ್ಲವು. ಆಗ ಸರದಾರರು ಆಗ್ರಹಿಸಿ “ನೀವು ಹೊರಟು ಯುದ್ಧವನ್ನು ಮಾಡಿ ಶತ್ರುಗಳನ್ನು ಓಡಿಸದೆಯಿದ್ದಲ್ಲಿ ನಿಮ್ಮನ್ನು ರಾಜ್ಯಪದಭ್ರಷ್ಟರನ್ನಾಗಿ ಮಾಡುವೆವು” ಎಂದು ಹೇಳಿದರು. ಹೀಗೆ ಎಲ್ಲರೂ ಒಂದೇವಿಧವಾಗಿ ಹೇಳಿದ್ದರಿಂದ ವಿಧಿಯಿಲ್ಲದೆ ಭಯದಿಂದ ದೇಹವು ನಡುಗುತ್ತಿರಲಾಗಿ ಆ ಅಧೈರ್ಯಶಿರೋಮಣಿಯಾದ ಮಹಾರಾಣಾಯವರು ಶೌರ್ಯವಂತರಾದ ತನ್ನ ಸೈನಿಕರೊಡನೆ ಯುದ್ಧಭೂಮಿಯನ್ನು ಸಮೀಪಿಸಿದರು. ಆದರೆ ಸಾಗರದಂತೆ ನಾಲ್ಕುದಿಕ್ಕುಗಳಲ್ಲಿಯೂ ತುಂಬಿದ್ದ ಯವನ ಸೈನಿಕರನ್ನು ನೋಡಿ ಬೀತಿಯಿಂದ ನಿಶ್ಚೇಷ್ಟಿತನಾಗಿ ನಿಂತಿದ್ದನು. ತದನಂತರ ಹೇಗೋ ಆ ರಾಜನು ತನ್ನ ಸೇನೆಗೆ ಯುದ್ಧಕ್ಕೆ ಅನುಮತಿಯನ್ನು ಕೊಟ್ಟನು. ರಜಪೂತಶೂರಸೈನಿಕರೆಲ್ಲರೂ ಬಹು ಪರಾಕ್ರಮದಿಂದ ಯುದ್ಧಮಾಡಿದರು. ಅವರೆಷ್ಟು ಜಯಕಾಂಕ್ಷೆಯಿಂದ ಹೋರಾಡಿದರೂ, ಮುಖ್ಯನಾಯಕನ ಅಧೈರ್ಯದಿಂದಲೂ ವೈರಿಗಳ ಸಂಖ್ಯೆ ಅಧಿಕವಾದುದರಿಂದಲೂ ಅವರಿಗೆ ಜಯಸೂಚನೆಯು ಕಂಡುಬರಲಿಲ್ಲವು. ಚಿತ್ತೂರಿಗಾಗಿ ಆ ಶೂರರೆಷ್ಟು ಶೌರ್ಯವನ್ನು ತೋರಿಸಿದರೂ ಕೂಡ ಅದೆಲ್ಲವೂ ನಿಷ್ಫಲವಾಗಿ ಉದಯಸಿಂಹನಿಗೆ ಪರಾಭವವುಂಟಾಯಿತು. ಅಕ್ಬರ್ ಬಾದುಷಾನು ತತ್‌ಕ್ಷಣವೇ ಆ ಹೇಡಿಯಾದ ಮಹಾರಾಜನನ್ನು ಹಿಡಿದು ಕಾರಾಗೃಹದಲ್ಲಿ ಬಂಧಿಸಿದನು. ಆಗ ಗತಶೇಷರಾದ ರಜಪೂತವೀರರು ತಮ್ಮ ಗ್ರಾಮಕ್ಕೆ ಹಿಂತಿರುಗಿ ಹೋದರು. ಅವರಲ್ಲಿ ಕೆಲವರು ತಮ್ಮ ಮನೆಗಳಿಗೆ ಹೋಗಲಾಗಿ ಅವರ ಸ್ತ್ರೀಯರು, ಪರಾಭವವನ್ನು ಹೊಂದಿಬಂದ ಪತಿಗಳನ್ನೂ, ಪುತ್ರರನ್ನೂ ಸೋದರರನ್ನೂ ಬಾರದಂತೆ ಬಾಗಿಲುಗಳನ್ನು ಮುಚ್ಚಿ ಅವರನ್ನು ತಿರಸ್ಕರಿಸುತ್ತಾ ಹೀಗೆಂದರು—“ರಜಪೂತಕುಲದಲ್ಲಿ ನೀವೇಕೆ ಜನ್ಮಿಸಿದಿರಿ? ನಾಚಿಕೆಯಿಲ್ಲದೆ ನಿಮ್ಮ ಮುಖಗಳನ್ನು ಮತ್ತೆ ನಮಗೆ ತೋರಿಸಲಾಗದು; ಸಂಗ್ರಾಮದಲ್ಲಿ ಮರಣವಾಗಲಿ ಜಯವಾಗಲಿ ಲಭಿಸಿದರೇನೇ ನಿಮಗೆ ಕೀರ್ತಿಯೂ ಯಶಸ್ಸೂ ಉಂಟಾಗುವುದು.”

ತುರುಷ್ಕರು ಉದಯಸಿಂಹನನ್ನು ಸೆರೆಹಿಡಿದರೆಂಬ ವರ್ತಮಾನವು ತಿಳಿಯುತ್ತಲೇ ರಾಜಭವನದಲ್ಲಿ ಎಲ್ಲನೋಡಿದರೂ ದುಃಖಮಯವಾಗಿಯೇ ಇದ್ದಿತು. ಆಗ ರಜಪೂತವೀರರೆಲ್ಲರೂ ಸಭೆಸೇರಿ “ಉದಯಸಿಂಹ ಮಹಾರಾಜರನ್ನು ಸೆರೆಯಿಂದ ಬಿಡಿಸಿ ತರುವುದು ಹೇಗೆ? ಶತ್ರುಗಳನ್ನು ಓಡಿಸುವುದು ಹೇಗೆ” ಎಂದು ಚಿಂತಿಸುತ್ತಿದ್ದರು. ಹೀಗೆ ಅವರು ಅನೇಕವಿಧಗಳಾಗಿ ಆಲೋಚಿಸಿ ಧೈರ್ಯವಿಲ್ಲದೆ ಚಿಂತಾಕ್ರಾಂತರಾಗಿ ಯಾವುದೊಂದೂ ತೋರದೆ ಸ್ವಲ್ಪಹೊತ್ತು ಹಾಗೆಯೇ ಮೌನವನ್ನು ಧರಿಸಿದ್ದರು. ಆ ಸಮಯದಲ್ಲಿ ಆ ಪಟ್ಟಣವೆಲ್ಲವೂ ವಿಚಾರಸಮುದ್ರದಲ್ಲಿ ಮುಳುಗಿದ್ದಿತು. ಆದರೆ ಮತ್ತೆ ಕ್ಷಣಕಾಲದಲ್ಲಿ ಒಬ್ಬ ಯುವತೀಮಣಿಯು ಅವರನ್ನು ಆನಂದಸಾಗರದಲ್ಲಿ ಈಸಾಡುವಂತೆ ಮಾಡಿದಳು. ಆ ಶೂರಶಿಖಾಮಣಿಯೇ ನಮ್ಮ ಕಥಾನಾಯಿಕೆಯು; ಉದಯ ಸಿಂಹನ ಧರ್ಮಪತ್ನಿಯಾದ ವೀರಾಬಾಯಿಯೇ. ಆಕೆಯು “ನನ್ನ ಪತಿಯನ್ನು ಮ್ಲೇಚ್ಛರು ಸೆರೆ ಹಿಡಿದರು. ರಜಪೂತರು ಓಡಿಹೋದರು. ಚಿತ್ತೂರು ಇನ್ನು ತುರುಕರ ಅಧೀನವಾಗುವುದು. ನಾವುಗಳೆಲ್ಲರೂ ಅವರಿಗೆ ಸ್ವಾಧೀನರಾಗುವೆವು. ನಮಗೆ ನಿಲ್ಲಲು ನೆರಳಿಲ್ಲದೆ ಹೋಗುವುದು” ಎಂಬಿಂತಹ ವಿಚಾರವು ಅನೇಕವಿಧಗಳಾಗಿ ಆಕೆಯ ಮನಸ್ಸಿನಲ್ಲಿ ಉದ್ಭವಿಸಲಾರಂಭಿಸಿದುವು. ರಾಜಭವನದಲ್ಲಿ ನಿರುಪಯೋಗಗಳಾಗಿ ಬಿದ್ದಿದ್ದ ಅನೇಕ ಶಸ್ತ್ರಗಳು ಆಕೆಯ ಕಣ್ಣಿಗೆ ಬೀಳಲಾಗಿ ಆಕೆಯಲ್ಲಿ ಅಡಗಿದ್ದ ಶೌರ್ಯಾಗ್ನಿಯು ಪ್ರಜ್ವಲಿಸಲಾರಂಬಿಸಿತು. ಕೂಡಲೆ ಆ ವೀರಪತ್ನಿಯು ಯುದ್ಧಕ್ಕೆ ತಕ್ಕಂತೆ ಪುರುಷವೇಷಧಾರಿಣಿಯಾಗಿ ಅನೇಕ ಶಸ್ತ್ರಗಳನ್ನು ಧರಿಸಿ ಸಾಕ್ಷಾತ್ಕಾಳಿಕಾದೇವಿಯೋ ಪ್ರತ್ಯಕ್ಷವಾದಳೋ ಎಂಬಂತೆ ರಾಜಪುತ್ರರ ಸಭೆಯೊಳಗೆ ಪ್ರವೇಶಿಸಿದಳು. ಕೋಮಲವಾದ ಶರೀರದಿಂದ ಪುರುಷವೇಷಧಾರಿಣಿಯೂ ಆಯುಧಪಾಣಿಯೂ ಆಗಿಬಂದ ವೀರಾಬಾಯಿಯನ್ನು ನೋಡಿದ ಕೂಡಲೆ ಸಭೆಯಲ್ಲಿನ ರಾಜಪುತ್ರ ಸರದಾರರೆಲ್ಲರೂ ಆಶ್ಚರ್ಯಮಗ್ನಮಾನಸರಾದರು. ಸ್ವಾತಂತ್ರ್ಯೇಚ್ಛೆಯೂ, ಸ್ವಮತಾಭಿಮಾನವೂ ಹೃದಯದಲ್ಲಿದ್ದುದರಿಂದ ಆಕೆಯ ಕಾಂತಿಯು ಪ್ರಜ್ವಲಿಸಿತು. ಆ ವೀರಮಣಿಯು ಬಹು ರೋಷದಿಂದ ಅಲ್ಲಿ ನೆರೆದಿದ್ದ ರಾಜಪುತ್ರರನ್ನು ನೋಡಿ ಹೀಗೆಂದಳು—ಶೂರಾಗ್ರೇಸರರಾದ ರಜಪೂತರೇ! ನೀವು ಹೀಗೆ ಅಧೋಮುಖರಾಗಿ ಚಿಂತಿಸುತ್ತಾ ಯಾರಿಗಾಗಿ ನಿರೀಕ್ಷಿಸುತ್ತಿರುವಿರಿ? ನಿಮ್ಮಲ್ಲಿನ ಶೌರ್ಯಧೈರ್ಯಾದಿ ಕ್ಷತ್ರಿಯ ಗುಣಗಳು ಎಲ್ಲಿ ಹೋದುವು? ಚಿತ್ತೂರುಸಂಸ್ಥಾನವೀಗಲೇ ಪೌರುಷಹೀನವಾಗಿ ಹೋಯಿತೇ? ಅಲ್ಲಿನ ರಜಪೂತರೆಲ್ಲರೂ ಕೇವಲಶ್ವಾಸೋಚ್ಛ್ವಾಸವನ್ನುಳ್ಳ ಹುಳುಗಳಾಗಿ ಹೋದರೆ? ವೀರಮಾತೆಯಾದ ಭಾರತವರ್ಷವು ಈ ದಿನವೇ ನಿಸ್ತೇಜವಾಗಿ ಹೋಯಿತೇ? ನೀವುಗಳು ಶೂರರ ವಂಶದಲ್ಲಿ ಏಕೆ ಜನ್ಮಿಸಿದಿರಿ? ಹಾಗೆ ಜನ್ಮಿಸಿದವರು ವೈರಿಗಳಿಗೆ ಹೆದರಿ ಹಿಂತಿರಿಗಿ ಏಕೆಬಂದಿರಿ? ಈಗ ನೀವುಗಳೆಷ್ಟುಮಂದಿಯೂ ಸೇರಿ ಏನು ಚಿಂತಿಸುತ್ತಿರುವಿರಿ? ಚಿತ್ತೂರನ್ನು ಅಲಂಕರಿಸುವಾತನೂ ನಮ್ಮ ಪ್ರಾಣಸಮಾನನೂ ಆದ ಮಹಾರಾಜರನ್ನು ಶತ್ರುಗಳು ಕಾರಾಗೃಹಬದ್ಧರನ್ನಾಗಿ ಮಾಡಿರುವಲ್ಲಿ ಸ್ತ್ರೀಯರಂತೆ ಕೈಗಳಿಗೆ ಬಳೆಗಳನ್ನು ತೊಟ್ಟುಕೊಂಡು ಮನೆಯಲ್ಲಿರುವುದಕ್ಕೆ ನೀವೇಕೆ ನಾಚಿಕೆಗೊಳ್ಳದೆ ಇರುವಿರಿ? ನಾನು ಹೀಗೆ ಬಹಿರಂಗವಾಗಿ ನಿಮ್ಮನ್ನು ಅವಮಾನಿಸುತ್ತಿರಲಾಗಿ ನೀವು ಕೇಳಿ ಹೇಗೆ ಸಹಿಸುವಿರಿ? ಇದಕ್ಕಿಂತಲೂ ಯುದ್ಧಮಾಡಿ ವೈರಿಗಳಿಂದ ಸಂಹರಿಸಲ್ಪಡುವುದು ಸರ್ವೋತ್ತಮವಲ್ಲವೇ? ಶೂರಾಗ್ರೇಸರರಾದ ಸರದಾರರುಗಳಿರಾ! ನೀವು ಹೀಗೆ ಅಲಕ್ಷ್ಯಮಾಡಲಾಗದು. ನಿಮಗುಂಟಾಗಿರುವ ಪೌರುಷಹೀನತ್ವವೆಂಬ ಕಳಂಕವನ್ನು ಸಂಪೂರ್ಣವಾಗಿ ಹೋಗಲಾಡಿಸಿ ನಿಮಗಿರುವ ಶೌರ್ಯಧೈರ್ಯಾದಿಗುಣಗಳನ್ನು ತೋರಿಸಲು ಇದೇ ತಕ್ಕ ಸಮಯವು ಆದುದರಿಂದ ಏಳಿ; ನಡೆಯಿರಿ; ಮತ್ತೊಬ್ಬರು ಬರುವುದನ್ನು ನಿರೀಕ್ಷಿಸುವುದೇಕೆ? ಒರೆಗಳಿಂದ ನಿಮ್ಮನಿಮ್ಮ ಖಡ್ಗಗಳನ್ನು ಈಚೆಗೆ ತೆಗೆಯಿರಿ “ಜಯಹರ! ಜಯಮಹಾದೇವ!” ಎಂದು ರಣಘೋಷವನ್ನು ಮಾಡಿ, ಬಹು ತ್ವರಿತವಾಗಿ ನಡೆದು, ಸಂಗ್ರಾಮರಂಗದಲ್ಲಿ ನಿಮ್ಮನಿಮ್ಮ ಪ್ರತಾಪಗಳನ್ನು ಪ್ರದರ್ಶಿಸಿರಿ; ನಾನೀಗಲೇ ಯುದ್ಧಕ್ಕೆ ಹೊರಡುತ್ತಿರುವೆನು.” ರೋಷವನ್ನು ಹುಟ್ಟಿಸುವ ಇಂತಹ ನುಡಿಗಳನ್ನು ನುಡಿದು ಆ ವೀರಶಿಖಾಮಣಿಯು ಒಂದು ಕುದುರೆಯನ್ನು ಹತ್ತಿದಳು. ಆಗ ರಜಪೂತರೆಲ್ಲರೂ ತಮ್ಮ ಉದಾಸೀನತೆಯನ್ನು ತ್ಯಜಿಸಿ, ಧೈರ್ಯವನ್ನವಲಂಬಿಸಿ ಯುದ್ಧಕ್ಕೆ ಸನ್ನದ್ಧರಾದರು. ಕುರಿಗಳಂತಿದ್ದ ಆ ರಜಪುತ್ರವೀರರು ವೀರಾಬಾಯಿಯ ಪ್ರೋತ್ಸಾಹದಿಂದ ಹುಲಿಗಳಂತಾಗಿ ಏಕಕಂಠ್ಯದಿಂದ ಜಯಘೋಷವನ್ನು ಮಾಡಿದರು. ಆಗ ಭೀಮಪರಾಕ್ರಮರಾದ ಆ ವೀರರೆಲ್ಲರೂ “ಯುದ್ಧದಲ್ಲಿ ಶತ್ರುಗಳನ್ನು ಸಂಹರಿಸುವೆವು ಅಥವಾ ಅವರಿಂದ ಸಂಹರಿಸಲ್ಪಡುವೆವೇ ಹೊರತು ಶತ್ರುವಿಗೆ ಹೆದರಿ ಹಿಂತಿರಿಗಿ ಬರುವುದಿಲ್ಲ” ವೆಂದು ಪ್ರಮಾಣಗಳನ್ನು ಮಾಡಿದರು. ವೀರಾಬಾಯಿಯು ಅವರ ಆವೇಶವನ್ನೂ, ದೃಢನಿಶ್ಚಯವನ್ನೂ ಕಂಡು ಅಮಿತೋತ್ಸಾಹದಿಂದ ಯುದ್ಧರಂಗಕ್ಕೆ ತೆರಳಿದಳು. ಆ ವೀರಪತ್ನಿಯು ತನ್ನ ಸೈನ್ಯದೊಂದಿಗೆ ಆಕಸ್ಮಿಕವಾಗಿ ಸಿಂಹದಂತೆ ಶತ್ರುಗಳಮೇಲೆ ದಂಡೆತ್ತಿದಳು. ವಿಜಯಾನಂದದಿಂದ ಮೈಮರೆತಿದ್ದ ಅಕ್ಬರ್ ಸೈನ್ಯವು ಈ ಪ್ರಳಯಕ್ಕೆ ತಾಳಲಾರದೆ ನಾಲ್ಕು ದಿಕ್ಕುಗಳಿಗೂ ಓಡಿಹೋಗಲಾರಂಭಿಸಿತು. ಹಾಗೆ ಓಡಿಹೋಗುತಿದ್ದ ಮ್ಲೇಚ್ಛರನ್ನು ವೀರಾಬಾಯಿಯು ತನ್ನ ಖಡ್ಗದಿಂದ ಕಾಳಿಗರ್ಪಣೆಯನ್ನು ಮಾಡುತ್ತಿದ್ದಳು. ವೀರಾಬಾಯಿಯ ಸೈನಿಕರು, ಕಾಲಾಂತ ರುದ್ರರಂತೆ ರೋಷದಿಂದ ತುರುಷ್ಕರನೇಕರನ್ನು ವೀರಸ್ವರ್ಗಕ್ಕೆ ಕಳುಹಿಸುತ್ತಿದ್ದರು. ಪ್ರಳಯಾಗ್ನಿಗೆ ಸಮಾನವಾದ ಆಕೆಯ ಪರಾಕ್ರಮವನ್ನು ನೋಡಿ ಅಕ್ಬರು ಆಶ್ಚರ್ಯವನ್ನು ಹೊಂದಿ ನಿಶ್ಚೇಷ್ಟಿತನಾಗಿ ನಿಂತು ಸುಮ್ಮನಿದ್ದನು. ಆಗ ಕ್ಷತ್ರಿಯ ವೀರರಿಗೆ ಉತ್ಸಾಹವು ದ್ವಿಗುಣವಾಗಿ ಮ್ಲೇಚ್ಛಸೈನ್ಯವನ್ನು ಅನೇಕವಿಧವಾಗಿ ಹಿಂಸಿಸಲಾರಂಭಿಸಿದರು. ಆಗ ಅಕ್ಬರನು ತನಗೆ ಜಯವಾಗುವುದಕ್ಕೆ ಬದುಲು ಅಪಜಯವುಂಟಾದುದಕ್ಕೆ ವಿಚಾರಮನಸ್ಕನಾಗಿ ಏನುಮಾಡುವುದಕ್ಕೂ ತೋರದೆ ಸಂಧಿಸೂಚಕವಾದ ಪತಾಕೆ (ಬಾವುಟ) ಯನ್ನೆತ್ತಿದನು. ತತ್‌ಕ್ಷಣವೇ ಉದಯಸಿಂಹನನ್ನು ಬಂಧವಿಮುಕ್ತನನ್ನಾಗಿ ಮಾಡಿದನು. ಮಹಾ ಪರಾಕ್ರಮವಂತಳಾದ ವೀರಾಬಾಯಿಯಿಂದ ಮಹಾ ಬಲವಂತನಾದ ಅಕ್ಬರನಂತಹ ತುರುಷ್ಕ ಪ್ರಭುವು ಕೂಡ ಜಯಕಾಂಕ್ಷೆಯನ್ನು ತ್ಯಜಿಸಿ ಹತಶೇಷರಾದ ಭಟರಿಂದ ಮತ್ತೆ ತನ್ನ ನಗರಕ್ಕೆ ಹೋಗಬೇಕಾದವನಾದನು. ತದನಂತರ ಆ ರಜಪುತ್ರವೀರರೆಲ್ಲರೂ ವಿಜಯಾನಂದದಿಂದ ಸಿಂಹನಾದವನ್ನು ಮಾಡುತ್ತಾ, ವೀರಾಬಾಯಿಯನ್ನು ಅನೇಕವಿಧವಾಗಿ ಕೊಂಡಾಡುತ್ತ, ವೀರಾಬಾಯಿ ಉದಯಸಿಂಹರೊಡನೆ ಕೂಡಿ ಪುರಪ್ರವೇಶವನ್ನು ಮಾಡಿದರು. ಇದಕ್ಕೆ ಮೊದಲು ತೇಜೋಹೀನವಾಗಿದ್ದ ಚಿತ್ತೂರು ಪಟ್ಟಣವು ರಾಣಿಯವರ ವಿಜಯವಾರ್ತೆಯನ್ನು ಕೇಳಿ ಪುನಃ ತನ್ನ ದಿವ್ಯತೇಜಸ್ಸನ್ನು ಹೊಂದಿತು. ಖಿನ್ನಮನಸ್ಕರಾಗಿದ್ದ ಪುರಜನರೆಲ್ಲರೂ ಪರಮಾನಂದಭರಿತರಾದರು. ವೀರಾಬಾಯಿಯು ಜಯವನ್ನು ಹೊಂದಿ ವಿಶೇಷಕೀರ್ತಿಯನ್ನೂ ತೇಜಸ್ಸನ್ನೂ ಸಂಪಾದಿಸಿದಳು. ಪುರವಾಸಿಗಳೆಲ್ಲರೂ ಆ ರಜಪುತ್ರವೀರರನ್ನೂ, ರಾಣಾಯವರನ್ನೂ ರಾಣಿಯವರನ್ನೂ ಮಂಗಳವಾದ್ಯಗಳಿಂದ ಇದಿರ್ಗೊಂಡು ಅವರಮೇಲೆ ಪುಷ್ಪವೃಷ್ಟಿಯನ್ನು ಸುರಿಸುತ್ತಾ ವೈಭವೋತ್ಸವದಿಂದ ರಾಜಭವನಕ್ಕೆ ಪ್ರವೇಶಗೊಳಿಸಿದರು. ಹೀಗೆ ತನ್ನ ಜನ್ಮದಲ್ಲಿಂದಿಗೂ ಯುದ್ಧವನ್ನು ನೋಡದ ಆ ಸಾಧ್ವೀಮಣಿಯು ಒಂದು ಕ್ಷಣದಲ್ಲಿ ತನ್ನ ಪರಾಕ್ರಮದಿಂದ ವೀರಾಬಾಯಿ “ದೊಡ್ಡ ಶೂರಶಿಖಾಮಣಿ” ಎಂಬ ಬಿರುದನ್ನು ಹೊಂದಿ, ಈ ಚರಿತ್ರೆಯ ಶಿರೋಲೇಖನದಲ್ಲಿರುವ ಶ್ಲೋಕಾರ್ಥವನ್ನೇ ಸ್ಥಿರಪಡಿಸಿದಳು. ಇಂತಹ ಚರಿತ್ರೆಗಳಿಂದ ನಮ್ಮ ಭಾರತಮಾತೆಯು ಗರ್ಭದಲ್ಲಿ ಎಂತಹ ವೀರವನಿತೆಯರುದ್ಭವಿಸಿ ಗತಿಸಿರುವರೆಂಬುದನ್ನು ವಾಚಕಮಹಾಶಯರು ಗ್ರಹಿಸಬಲ್ಲರು.

ಭರತಖಂಡದ ವೃತ್ತಾಂತ.

ತೇವಲ್‌ರಾಮ್ ತಹೇಲ್‌ರಾಮ್ ಎಂಬ ಸಕ್ಕರೆಯ ವ್ಯಾಪಾರಿಯು ಕರಾಚಿಯಲ್ಲಿ ೧೦ ಲಕ್ಷ ರೂ.ಗಳಿಗೆ ದಿವಾಳಿಯಾದನು.

ಹೇಡ್ರೈಅಪ್ಲೇನ್ ಎಂಬ ಜಲವಿದ್ಯುದ್ವಿಮಾನಗಳು ಪ್ರಭುತ್ವದವರಿಂದ ಭರತಖಂಡಕ್ಕೆ ತರಿಸಲ್ಪಟ್ಟಿವೆ. ಅವುಗಳು ಜೋಡಿಸಲ್ಪಟ್ಟು ಕಳೆದವಾರ ಬೊಂಬಾಯಿಯ ಸಮುದ್ರತೀರದಲ್ಲಿ ಪರೀಕ್ಷಾರ್ಥವಾಗಿ ಸಂಚಾರಮಾಡಿಸಲ್ಪಟ್ಟುವು.

ಸೀಮೆಗೆಹೋಗಿದ್ದ ಬಿಕನೀರ್ ಮಹಾರಾಜರೂ ಕೃಷ್ಣಘರ್‌ಮಹಾರಾಜರೂ ಕೂಡ ಬೊಂಬಾಯಿಯನ್ನು ಬಂದು ಸೇರಿದರು. ಈಜಿಪ್ಟಿನಲ್ಲಿ ಇಸ್ಮಾಲಿಯಾಹತ್ತಿರ ತುರ್ಕಿಯವರಮೇಲೆ ಯುದ್ಧವಾಗುವಾಗ ಬಿಕನೀರ್‌ಮಹಾರಾಜರು ಯುದ್ಧಾಂಗಣದಲ್ಲೇ ಇದ್ದರು.

ಶ್ರೀಯುತ ಗಾಂಧಿಯವರು ತಮ್ಮ ಸದ್ವರ್ತನದಿಂದ ಜಗತ್ತಿನಿಂದೆಲ್ಲಾ ಮಾನ್ಯರಾಗಿರುತ್ತಿದ್ದರೂ ಭರತಖಂಡದಲ್ಲಿರುವ ಅವರ ಸಜಾತೀಯರು ಅವರನ್ನು ಸಮುದ್ರಯಾನಮಾಡಿ ಬಂದವರೆಂದು ಬಹಿಷ್ಕರಿಸುವುದರಲ್ಲಿದ್ದಾರಂತೆ. ಇದಲ್ಲವೆ ಮೂರ್ಖತನದ ಪರಾಕಾಷ್ಠವೆಂಬುದು?

ಮೊನ್ನೆವಾರದಲ್ಲಿ ಡಿಲ್ಲಿಯೊಳಗೆ ವಿಪರೀತವಾಗಿ ಅಕಾಲವೃಷ್ಟಿಯು ಆಯಿತು. ಒಂದುದಿನ ಮಧ್ಯಾಹ್ನ ೩ ಗಂಟೆಗೆ ಆರಂಭಿಸಿದ ಮಳೆಯು ರಾತ್ರಿ ೯ ಗಂಟೆಯುವರೆಗೂ ಸುರಿದಿತು. ಆಗ ಗಾಳಿಯೂ ಬಲವಾಗಿ ಬೀಸಿತು. ಎಲ್ಲೆಲ್ಲೂ ಜಲಮಯವಾಗಿಹೋಯಿತು. ಅದರಂತೆ ಫೆಬ್ರವರಿ ತಾ|| ೪ ರಲ್ಲಿ ಅಲಹಾಬಾದು ಮೊದಲಾದ ಕೆಲಕಡೆಗಳಲ್ಲೂ ವಿಪರೀತವೃಷ್ಟಿಯಾಯಿತು.

[೬ ನೆಯ ಪುಟವನ್ನು ನೋಡಿರಿ]

ಶ್ರೀಮತ್ ವೈಸ್ರಾಯರವರ ಸಂಚಾರ.

ಬೊಂಬಾಯಿಗೆ ದಯಮಾಡಿಸಿದ್ದ ವೈಸ್ರಾಯಿ ಲಾರ್ಡ್‌ಹಾರ್ಡಿಂಜ್‌ರವರು ಸಮುದ್ರಮಾರ್ಗವಾಗಿ ಹೊರಟು ಪರ್ಷಿಯನ್ ಕೊಲ್ಲಿಯಲ್ಲಿ ಸಂಚರಿಸಿರುವರು. ಆ ಸಂಚಾರದಲ್ಲಿನ ಮುಖ್ಯವಾರ್ತೆಗಳನ್ನು ಇಲ್ಲಿ ಬರೆದಿರುತ್ತೇವೆ. ಜನವರಿ ತಾ|| ೩೧ ರಲ್ಲಿ ವೈಸ್ರಾಯರು ಕೋವಿಟ್ಟನ್ನು ಸೇರಿದರು. ಅಲ್ಲಿನ ಶೇಕರ ಪ್ರತಿನಿಧಿಯಾಗಿ ಅವರ ಕುಮಾರರು ಬಂದು ಇದಿರ್ಗೊಂಡರು. ಮರುದಿನ ಕೋವಿಟ್ಟಿನ ಶೇಕರೂ, ಬಹರೇನಿನ ಶೇಕರ ಕುಮಾರರೂ ಸಹ ಮರ್ಯಾದಾಸಮೇತ ಬಂದು ವೈಸ್ರಾಯರ ದರ್ಶನವನ್ನು ಪಡೆದರು. ಆಗ ವೈಸ್ರಾಯರು ಮೊದಲನೆಯವರಿಗೆ ಕೆ.ಸಿ.ಎಸ್.ಐ. ಎಂಬ ಬಿರುದನ್ನೂ, ಎರಡನೆಯವರಿಗೆ ಸಿ ಐ ಇ. ಎಂಬ ಬಿರುದನ್ನೂ ಕೊಟ್ಟು, ಮಧ್ಯಾಹ್ನದಮೇಲೆ ಶೇಕರಿಗೆ ಪ್ರತಿದರ್ಶನವನ್ನಿತ್ತು ಊರನ್ನೆಲ್ಲಾ ಮೋಟಾರಿನಲ್ಲಿ ಕುಳಿತು ನೋಡಿಕೊಂಡು ಬಂದರು. ಮರುದಿನ ವೈಸ್ರಾಯರು ಷಟಲ್ ಅರಾಬಿಗೆ ಹೊರಟರು. ಆಬೇಡನ್ ಎಂಬ ದ್ವೀಪದಲ್ಲಿರುವ ಇಂಡೋ ಯೂರೋಪಿಯನ್ ಟೆಲಿಗ್ರಾಫ್ ಶಾಖಾಧಿಕಾರಿಗೆ ಕೇಸರಿ ಹಿಂದ್ ಪದಕವನ್ನಿತ್ತರು. ಪಟ್ಟಣದಲ್ಲಿರುವ ಆಂಗ್ಲೋಪರ್ಷಿಯನ್ ಎಣ್ಣೆಕಂಪೆನಿಯ ಮ್ಯಾನೇಜರು ಈಗಿನ ಯುದ್ಧಸಂದರ್ಭದಲ್ಲಿ ಬಹಳ ಸಾಹಾಯ್ಯಮಾಡಿದವರಾದುದರಿಂದ ವೈಸ್ರಾಯರು ಅವರೊಡನೆ ಫಲಾಹಾರಮಾಡುವಾಗ ಒಂದು ಬಹುಮಾನದ ಹಾರವನ್ನು ಅವರಿಗೆ ಕೊಟ್ಟರು. ಮರುದಿನ ವೈಸ್ರಾಯರು ಕಾರನ್ ನದಿಯಮೇಲೆ ಬಹುದೂರ ಪ್ರಯಾಣಮಾಡಿದಾಗ ಆ ಜಲಮಾರ್ಗವನ್ನು ಕಟ್ಟಬಿಡಬೇಕೆಂದು ತುರ್ಕಿಯವರು ಅದರಲ್ಲಿ ಮುಳುಗಿಸಿಬಿಟ್ಟಿದ್ದ ಈಲಿಟೋನಾ ಎಂಬ ಹಡಗು ಗೋಚರಿಸಿತು. ಆ ನದಿಯಲ್ಲಿ ಪ್ರಯಾಣಮಾಡುತ್ತಿರುವಾಗ ಮಹಮ್ಮರಾ ಸಂಸ್ಥಾನದ ಶೇಕರು ಹಡಗಿಗೆ ಬಂದು ವೈಸ್ರಾಯರ ದರ್ಶನವನ್ನು ತೆಗೆದುಕೊಂಡರು. ಅವರಿಗೆ ಕೆ.ಸಿ.ಎಸ್.ಐ. ಎಂಬ ಬಿರುದು ಕೊಡಲ್ಪಟ್ಟಿತು. ಬಳಿಕ ಇವ್ವರೂ ಸ್ವಲ್ಪಹೊತ್ತು ಏಕಾಂತಭಾಷಣವನ್ನು ಮಾಡಿದರು. ಅಲ್ಲಿಂದ ವೈಸ್ರಾಯರು ಬಸರಾಕ್ಕೆ ಫಿಬ್ರವರಿ ತಾ|| ೫ ರಲ್ಲಿ ಸೇರಿದರು. ಅಲ್ಲಿ ಜನರಲ್ ಬೇರೆಟ್ ಮೊದಲಾದ ಅಧಿಕಾರಿಗಳು ಇದಿರ್ಗೊಂಡರು. ತೀರದಲ್ಲಿದ್ದ ಲಾರೆನ್ಸ್ ಎಂಬ ಯುದ್ಧದ ಹಡಗಿನಲ್ಲಿದ್ದ ಫಿರಂಗಿಗಳಿಂದಲೂ, ದಡದಲ್ಲಿಟ್ಟಿದ್ದ ಫಿರಂಗಿಗಳಿಂದಲೂ ಮರ್ಯಾದಾರ್ಥವಾಗಿ ಗುಂಡುಗಳು ಹಾರಿಸಲ್ಪಟ್ಟುವು. ಫಲಾಹಾರವಾದನಂತರ ಅಲ್ಲಿನ ಯೂರೋಪ್ಯವರ್ತಕ ಪ್ರತಿನಿಧಿಗಳು ಒಂದು ವಿಜ್ಞಾಪನಪತ್ರವನ್ನೊಪ್ಪಿಸಿದರು. ಅದರಲ್ಲಿ ಬಸರಾಕ್ಕೆ ಇಂಗ್ಲೀಷ್ ವೈಸ್ರಾಯರಾಗಿ ಬರುವುದಕ್ಕೆ ನೀವೇ ಮೊದಲನೆಯವರೆಂದು ಹೇಳಲ್ಪಟ್ಟು ಇತರ ಕೆಲಸಂಗತಿಗಳೂ ನಿರೂಪಿಸಲ್ಪಟ್ಟಿದ್ದುವು. ಅದಕ್ಕೆ ವೈಸ್ರಾಯರು ಉತ್ತರವನ್ನು ಕೊಡುವಾಗ—“ಈ ಸ್ಥಲವನ್ನು ಇಂಗ್ಲೀಷ್‌ಸೇನೆಗಳು ವಶಪಡಿಸಿಕೊಂಡುದರಿಂದ ಇದರಲ್ಲಿ ಸಮೀಚೀನವಾದ ಪರಿಪಾಲನಪದ್ಧತಿಯನ್ನು ಏರ್ಪಡಿಸಬೇಕಾಗಿದೆ ಇಲ್ಲಿನ ಸ್ಥಿತಿಗತಿಗಳನ್ನು ಪ್ರತ್ಯಕ್ಷವಾಗಿ ನೋಡಿ ಇದಕ್ಕೆ ತಕ್ಕುದಾದ ಏರ್ಪಾಟನ್ನು ಮಾಡುವುದಕ್ಕಾಗಿಯೇ ನಾನು ಬಂದಿರುವೆನು. ಇಲ್ಲಿನ ಪ್ರಜೆಗಳ ಕ್ಷೇಮಕ್ಕೂ ಸುಖಕ್ಕೂ ಅನುಕೂಲವಾದ ಪರಿಪಾಲನ ವಿಧಾನವು ಏರ್ಪಡಿಸಲ್ಪಡುವುದು. ನಾವು ಈಗ ಮಾಡುತ್ತಿರುವ ಯುದ್ಧವನ್ನು ನಾವು ಒಂಟಿಯಾಗಿ ಮಾಡುತ್ತಲಿಲ್ಲವೆಂಬ ಸಂಗತಿಯು ನಿಮಗೆ ಗೊತ್ತೇಯಿದೆ. ಆದುಕಾರಣ, ಫ್ರಾನ್ಸ್ ರಷ್ಯಾಪ್ರಭುತ್ವಗಳವರ ಅಭಿಪ್ರಾಯವಿಲ್ಲದೆ ನಾವೇ ಸ್ವತಂತ್ರಿಸಿ ಯಾವುದನ್ನೂ ಮಾಡುವುದಕ್ಕೆ ಅವಕಾಶವಿಲ್ಲ ಆದರೆ ಒಂದು ಸಂಗತಿಯನ್ನು ಮಾತ್ರ ಹೇಳಬಹುದು. ಏನೆಂದರೆ—ಬಸರಾಕ್ಕೆ ಇನ್ನು ಮುಂದೆ ಸೌಖ್ಯಕರವಾದ ಪರಿಪಾಲನ ವಿಧಾನವು ಸ್ಥಾಪಿಸಲ್ಪಡುವುದು. ಇಲ್ಲಿ ಅನೇಕ ಪದಾರ್ಥಗಳು ದೊರೆಯುವುವು. ಅದುಕಾರಣ ಇದಕ್ಕೆ ಮರಳಿ ಉತ್ತಮವಾದ ಸಂಪತ್ತಿಯು ಪ್ರಾಪ್ತವಾಗುವುದು. ನಾನು ವೈಸ್ರಾಯಿಯಾಗಿರುವ ಕಾಲದಲ್ಲಿ ಮತ್ತೊಂದಾವೃತ್ತಿ ಇಲ್ಲಿಗೆ ಬಂದು ಹೋಗಲು ಆಗುವುದೋ ಇಲ್ಲವೋ ಹೇಳಲಾರೆ ಆದರೆ ನಾನೆಲ್ಲಿದ್ದರೂ ಇಲ್ಲಿನ ಭವಿಷ್ಯದ್ಭಿತಿಯನ್ನು ಕುರಿತು ಗಮನಿಸುತ್ತಲೇ ಇರುವೆನು. ಯುದ್ಧವು ಮುಗಿದಬಳಿಕ ವರ್ತಕರಾದ ನಿಮ್ಮಗಳ ಮತ್ತು ಶಾಂತವಾಗಿರುವ ಇಲ್ಲಿನ ಪ್ರಜೆಗಳ ಕ್ಷೇಮಲಾಭಕ್ಕಾಗಿ ತಕ್ಕ ಏರ್ಪಾಟುಗಳು ಮಾಡಲ್ಪಡುವುವು. ಇಲ್ಲಿಗೆ ಬಂದು ತಮ್ಮ ಧೈರ್ಯಪರಾಕ್ರಮಗಳಿಂದ ಈ ಪ್ರದೇಶವನ್ನು ಆಕ್ರಮಿಸಿಕೊಂಡ ನಮ್ಮ ಸೈನಿಕರಿಗೂ ಸೇನಾಪತಿಯಾದ ಸರ್ ಬೇರೆಟ್‌ರವರಿಗೂ ನಾನು ವಂದಿಸುತ್ತೇನೆ. ಆ ನಮ್ಮ ಸೈನ್ಯಕ್ಕೆ ಸಾಹಾಯ್ಯಮಾಡಿದ ಬಸರಾ ಪ್ರಜೆಗಳಿಗೂ ನಾನು ವಂದಿಸುತ್ತೇನೆ” ಎಂದು ಅಪ್ಪಣೆಕೊಡಿಸಿದರು. ಬಳಿಕ ವೈಸ್ರಾಯರು ಕುದುರೆಯಮೇಲೆ ಕುಳಿತು ೧೦ ಮೈಲಿ ದೂರದಲ್ಲಿರುವ ಸೈಬಾಕಿಗೆ ಹೋಗಿ ಅಲ್ಲಿ ಶತ್ರುಗಳ ಆಗಮನಕ್ಕೆ ತಡೆಯಾಗಿ ನಿರ್ಮಿಸಿರುವ ದುರ್ಗಸ್ಥಾನಗಳನ್ನು ಪರೀಕ್ಷಿಸಿದರು. ಆಗ ಜಿಯೋಬಿನ ಶೇಕರೂ ಕೂಡ ಜತೆಯಲ್ಲಿದ್ದರು. ಅಲ್ಲಿಂದ ಹಿಂತಿರುಗಿ ಬಸರಾಕ್ಕೆ ಬಂದಮೇಲೆ ಔತಣವಾಯಿತು. ಆಗ ಬಸರಾ ವಾಸಸ್ಥರಾದ ಲಯಲ್‌ಟೈಮ್‌ವೆಲ್ ರವರಿಗೆ ಅವರು ಮಾಡಿದ ಸಹಾಯಕ್ಕಾಗಿ ಒಂದು ಬಹುಮಾನಪತ್ರಿಕೆಯನ್ನು ಕೊಟ್ಟರು. ಶನಿವಾರದದಿನ ನದಿಯ ದಡದಮೇಲೆಯೇ ಕುರ್ನಾದವರೆಗೂ ಹೋಗಿ ಅಲ್ಲಿ ರಚಿಸಿರುವ ರಕ್ಷಕಸ್ಥಾನಗಳನ್ನೆಲ್ಲಾ ಪರೀಕ್ಷಿಸಿ ಬಹಳ ಸಂತೋಷಪಟ್ಟರು. ಅಲ್ಲಿಗೆ ಕೆಲಮೈಲಿಗಳ ದೂರದಲ್ಲಿಯೇ ಇದ್ದ ತುರ್ಕಿ ಸೈನ್ಯಗಳನ್ನು ಕೂಡ ದೂರದರ್ಶಕಯಂತ್ರದಿಂದ ಪರಾಮರಿಸಿದರು. ಭಾನುವಾರದದಿನ ಸಣ್ಣ ಆವಿಯದೋಣಿಯನ್ನೇರಿ ಟೈಗ್ರಿಸ್‌ನದಿಯ ಮಧ್ಯದಲ್ಲಿರುವ “ಇಸ್ಪಿಗಲ್” ಎಂಬ ಇಂಗ್ಲೀಷ್ ಕ್ರೂಯಿಜರನ್ನೂ, ದಡದಲ್ಲಿರುವ ಕೋಟೆಯನ್ನೂ ನೋಡಿ, ಬಳಿಕ ಕುರ್ನಾವನ್ನು ಸಂದರ್ಶಿಸಿ, ಯೂಫ್ರಟಿಸ್-ಟೈಗ್ರಿಸ್‌ನದಿಗಳ ಸಂಗಮಸ್ಥಲದಲ್ಲಿ ಆವ ಸೇನಾವಿನ್ಯಾಸವನ್ನು ಪರಾಮರಿಸಿದರು.

ವೈಸ್ರಾಯರು ಪ್ರಯಾಣಮಾಡಿದ ನಾರ್‌ಬ್ರೂಕ್ ಎಂಬ ಹಡಗಿನಿಂದ ಕರಾಚಿಯಮಾರ್ಗವಾಗಿ ತಂತಿಯಿಲ್ಲದ ವಾಯುವಾರ್ತೆಯ ಮೂಲಕ ಈ ಕೆಳಗಣ ಸುದ್ದಿಯು ದಿಲ್ಲಿಗೆ ಬಂದಿರುತ್ತದೆ—ವೈಸ್ರಾಯರು ಹಿಂದಿರುಗಿ ಬರುವಾಗ ತಾರೀಖು ೧೧ ರಲ್ಲಿ ಮಸ್ಕತ್ತನ್ನು ಸೇರಿದರು. ಅಲ್ಲಿನ ಸುಲ್ತಾನರಿಗೆ ವೈಸ್ರಾಯರು ತಮ್ಮ ಹಡಗಿನಮೇಲೆಯೇ ಸ್ವಾಗತವನ್ನು ಮಾಡಿದರು. ಮಧ್ಯಾಹ್ನದಲ್ಲಿ ವೈಸ್ರಾಯರು ಹಡಗಿನಿಂದಿಳಿದು ಸುಲ್ತಾನರಿಗೆ ಪ್ರತಿದರ್ಶನವನ್ನಿತ್ತರು. ಆಗ ಸುಲ್ತಾನರು ಅರಾಬಿಭಾಷೆಯಲ್ಲಿ ಹೀಗೆ ಭಾಷಣಮಾಡಿದರು—ಆಂಗ್ಲಪ್ರಭುತ್ವದವರು ತೋರಿಸುತ್ತಿರುವ ಸ್ನೇಹಕ್ಕಾಗಿಯೂ ಸದ್ಭಾವಕ್ಕಾಗಿಯೂ ನಾನು ಕೃತಜ್ಞನಾಗಿದ್ದೇನೆ ಈ ಸ್ನೇಹವು ಬರಬರುತ್ತ ವೃದ್ಧಿಯೊಂದುವುದೆಂದು ನಂಬುತ್ತೇನೆ. ಜಾರ್ಜ್‌ಸಾರ್ವಭೌಮರ ಪ್ರತಿನಿಧಿಗಳಾದ ತಾವು ಇಲ್ಲಿಗೆ ದಯಮಾಡಿಸಿದಾಗ್ಗೆ ಉಚಿತರೀತಿಯಿಂದ ತಮ್ಮನ್ನು ಗೌರವಿಸಲು ನಾವುಗಳು ತಕ್ಕ ಏರ್ಪಾಟನ್ನು ಮಾಡುತ್ತಿರುವಷ್ಟರಲ್ಲಿ ಈ ಪ್ರಾಂತದಲ್ಲಾದ ಗದ್ದಲವನ್ನು ಕೇಳಿ ವಿಷಾದಿಸುತ್ತೇನೆ. ಇದಕ್ಕೆ ವೈಸ್ರಾಯರು ಉತ್ತರವನ್ನು ಕೊಡುವಾಗ್ಗೆ—ನೀವು ಆಂಗ್ಲಪ್ರಭುತ್ವವಿಷಯದಲ್ಲಿ ಸ್ನೇಹವನ್ನೂ ಒಳ್ಳೆಯ ಅಭಿಪ್ರಾಯವನ್ನೂ ಹೊಂದಿರುವುದಕ್ಕೂ ಇಂಗ್ಲೀಷರು ಮಾಡಿದ ಸಹಾಯಕ್ಕಾಗಿ ನೀವು ಮೆಚ್ಚಿಕೊಂಡಿರುವುದಕ್ಕೂ ಕೂಡ ನಾನು ಸಂತೋಷಿಸುತ್ತೇನೆ. ಮಸ್ಕತ್ತಿನ ಶಾಂತಿಗೆ ಭಂಗವನ್ನು ತರುತ್ತಲಿರುವವರೊಡನೆ ಪದೇಪದೇ ಯುದ್ಧಮಾಡುವುದರಿಂದ ಪ್ರಯೋಜನವಿಲ್ಲ. ಅವರೊಡನೆ ಯಾವುದೋ ಒಂದುರೀತಿಯಿಂದ ಒಪ್ಪಂದಮಾಡಿಕೊಂಡು, ಇನ್ನು ಮುಂದೆ ಯಾವಾಗಲೂ ಹೋರಾಟವುಂಟಾಗದಂತೆ ಏರ್ಪಾಟುಮಾಡಿಕೊಳ್ಳಬೇಕು. ನಿಮ್ಮೊಡನೆ ನನಗೆ ಪರಿಚಯವುಂಟಾದುದು ಸಂತೋಷಪ್ರದವಾಗಿದೆ. ಈ ಪರಿಚಯವು ಕ್ರಮೇಣ ಸ್ನೇಹಮಯವಾಗಿ ಪರಿಣಮಿಸುವುದೆಂದು ನಂಬುತ್ತೇನೆ” ಬಳಿಕ ವೈಸ್ರಾಯರು ಮಸ್ಕತ್ತಿನಲ್ಲಿರುವ ಇಂಗ್ಲೀಷ್‌ರಾಯಭಾರಿಯ ಕಾರ್ಯಾಲಯಕ್ಕೆ ಹೋಗಿ, ಅಲ್ಲಿ ಆಂಗ್ಲವರ್ತಕರು ಒಪ್ಪಿಸಿದ ಸ್ವಾಗತಪತ್ರವನ್ನು ಗ್ರಹಿಸಿ, ಸಂತೋಷಿಸಿ, ಬಳಿಕ ಹಡಗಿಗೆಹೋಗಿ ಫಲಾಹಾರವನ್ನು ತಮ್ಮ ಮಿತ್ರಬೃಂದದೊಡನೆ ನಡೆಯಿಸಿದರು.

ಯುದ್ಧವಾರ್ತೆಯು.

(ಪಶ್ಚಿಮರಣರಂಗ)

ಕಳೆದ ಎರಡು ವಾರಗಳಲ್ಲಿ ಯುದ್ಧಸಂಬಂಧವಾಗಿ ಬಂದಿರುವ ವಾರ್ತೆಗಳಲ್ಲಿ ಪೂರ್ವರಣರಂಗದ ಮತ್ತು ನೌಕಾದಳದ ಸಂಬಂಧವಾದ ವ್ಯವಹಾರದ ಸುದ್ದಿಗಳೇ ಹೆಚ್ಚು. ಪಶ್ಚಿಮರಣರಂಗದಲ್ಲಿ ಸಾಮಾನ್ಯವಾದ ಯುದ್ಧಗಳಾಗಿವೆ. ಅವುಗಳೊಳಗೆ ಅಸ್ಟೆಂಡಿನ ಹತ್ತಿರವಿದ್ದ ಒಂದು ದೊಡ್ಡ ಸುರಕ್ಷಿತಸ್ಥಾನವಾದ ಮಳಲಗುಡ್ಡೆಯನ್ನು ಮಿತ್ರಮಂಡಲಿಯವರು ಹಿಡಿದುಕೊಂಡ ಸಂಗತಿಯು ವಿಚಿತ್ರವಾಗಿದೆ. ಹೇಗೆಂದರೆ—ಫ್ರೆಂಚರ ಪರವಾಗಿ ಯುದ್ಧಮಾಡುತ್ತಲಿರುವ ಅಲ್ಜೀರಿಯಾ ಸೈನಿಕರು ಇದನ್ನು ಹಿಡಿದವರು. ಇದರಮೇಲೆ ಜರ್ಮನರು ಕಂದಕಗಳನ್ನು ತೋಡಿಕೊಂಡಿದ್ದರು. ಮುಳ್ಳಿನ ಬಲವಾದ ತಂತಿಗಳ ಬೇಲಿಯನ್ನು ಶತ್ರುಗಳಿಗೆ ಅಭೇದ್ಯವಾಗುವಂತೆ ಹಾಕಿದ್ದರು. ಒಂದು ದಿನ ಬೆಳಗ್ಗೆ ಒಳ್ಳೆ ಸೊಗಸಾದ ೬ ಕುದುರೆಗಳು ಆ ಕಂದಕಗಳ ಪಕ್ಕದಲ್ಲೇ ಹೋದುವು. ಜರ್ಮನರು ಅವುಗಳನ್ನು ಹಿಡಿದುಕೊಂಡರು ಅವುಗಳಮೇಲೆ ಸ್ವಾರರು ಇರಲಿಲ್ಲ. ಮರುದಿನ ಸಾಯಂಕಾಲವಾದನಂತರ ೨೪ ಕುದುರೆಗಳು ಆ ಕಂದಕಗಳ ಸಾಲಿನ ಮಧ್ಯದಲ್ಲಿ ಹೋಗುತ್ತಿದ್ದುವು. ಕುದುರೆಗಳ ಮೇಲೆ ಯಾರೂ ಇಲ್ಲದಂತೆ ಕಂಡಿತು. ಜರ್ಮನರು ಇವನ್ನು ಹಿಡಿದುಕೊಳ್ಳಬೇಕೆಂದು ಪ್ರಯತ್ನಿಸಿದರು. ಅಷ್ಟರಲ್ಲಿ ಕುದುರೆಗಳನ್ನು ಯಾರೋ ಕರೆದರು. ಅವು ಬಹು ವೇಗವಾಗಿ ಓಡಿದುವು. ಆ ಸಮಯದಲ್ಲಿ ಕುದುರೆಗಳ ಹೊಟ್ಟೆಯ ಕೆಳಗೆ ಅಂಟಿಕೊಂಡಂತೆ ಇದ್ದ ೨೪ ಮಂದಿ ಅಲ್ಜೀರಿಯನ್ ಸೈನಿಕರು ಓಡಿಬಂದು ಜರ್ಮನರ ಕಂದಕಗಳಮೇಲೆ ಬಿದ್ದರು. ಕೂಡಲೇ ಫ್ರೆಂಚರ ಪದಾತಿಸೈನ್ಯವು ಸಹಾಯಕ್ಕೆ ಬಂದು ಶತ್ರುಗಳಮೇಲೆ ಕಾದಾಡಿ ಸ್ವಲ್ಪಹೊತ್ತಿನೊಳಗಾಗಿ ಆ ದೊಡ್ಡ ದಿಣ್ಣೆಯನ್ನೆಲ್ಲಾ ವಶಪಡಿಸಿಕೊಂಡುಬಿಟ್ಟರು.

ಮತ್ತೊಂದುಕಡೆ ಎಂದರೆ ಲಾಬಸ್ಸಿಯ ಹತ್ತಿರ ಇಟ್ಟಿಗೆಗಳನ್ನು ಮಾಡುವ ವಿಶಾಲವಾದ ಪ್ರದೇಶವನ್ನು ಇಂಗ್ಲೀಷ್‌ಸೇನೆಯು ಹಿಡಿದುಕೊಂಡುದು ಒಂದು ಮುಖ್ಯ ವಿಜಯವಾರ್ತೆಯಾಗಿ ಹೇಳಲ್ಪಟ್ಟಿದೆ. ಈ ಸ್ಥಲದಲ್ಲಿ ಜರ್ಮನರು ಕಂದಕಗಳನ್ನು ತೋಡಿ ಸುರಕ್ಷಿತ ಸ್ಥಲವನ್ನಾಗಿ ಮಾಡಿಕೊಂಡಿದ್ದರು. ಇಲ್ಲಿ ಉಭಯಪಕ್ಷದವರಿಗೂ ಘೋರಯುದ್ಧವಾಯಿತು. ಇಂಗ್ಲೀಷರ ಫಿರಂಗಿಯೇಟಿನಮುಂದೆ ಜರ್ಮನರು ನಿಲ್ಲಲಾರದೆ ಹೋದರು. ಇವರ ಅಭಿಯೋಗವನ್ನು ತಡೆಯಲಾರದೆಯೂ ಹೋದರು. ಆಗ ಅವರ ಕಡೆ ಸತ್ತವರು ಕೆಟ್ಟವರೆಲ್ಲಾ ಸೇರಿ ೧ ಸಾವಿರದ ವರೆಗೆ ಇರಬಹುದು. ಇಂಗ್ಲೀಷ್‌ಸೈನ್ಯದಲ್ಲಿ ನೂರುಮಂದಿಗಳು ಕೂಡ ನಷ್ಟವಾಗಲಿಲ್ಲ. ಈ ಯುದ್ಧದಲ್ಲಿ ಇಂಗ್ಲೀಷ್‌ಸೈನಿಕರು ಜಯಶೀಲರಾಗಿ ಆ ಸ್ಥಲವನ್ನೆಲ್ಲಾ ಹಿಡಿದುಕೊಂಡರು. ಇಲ್ಲೂ ಮತ್ತೂ ಫೆಸ್ಟೂಬರ್ಟ್ ಎಂಬಲ್ಲೂ ನಡೆದ ಯುದ್ಧಕಾಲದಲ್ಲಿ ಸೆರೆ ಸಿಕ್ಕಿರುವ ಜರ್ಮನರನ್ನು ನೋಡುವಲ್ಲಿ ಅವರು ಎಂದೂ ಯುದ್ಧವನ್ನರಿಯದ ಹೊಸಬರಾಗಿದ್ದರು ಕೆಲರು ಬಹಳ ಚಿಕ್ಕವಯಸ್ಸಿನವರಾಗಿದ್ದರು. ಅವರ ಉಡುಪುಗಳು ಸಾಮಾನ್ಯವಾಗಿ ಹೊಸವಾಗಿದ್ದುವು. ಇದರಿಂದ ಜರ್ಮನರಿಗೆ ಆಣಿಯಾದ ಶೂರಸೈನ್ಯಕ್ಕೆ ಅಭಾವವಾಗಿ ಹೊಸಬರನ್ನು ಸಂಖ್ಯೆಯ ಭರ್ತಿಗೆ ಸೇರಿಸಿಕೊಳ್ಳುವ ಹೊತ್ತು ಬಂದಿರಬೇಕೆಂದು ಸ್ಪಷ್ಟವಾಗುತ್ತದೆ. ಆಲ್ಸೇಸ್ ಜಿಲ್ಲೆಯಲ್ಲಿ ಫ್ರೆಂಚರು ಮುಂದೆಮುಂದಕ್ಕೆ ಸಾಗಿ ಹೊಸ ಗ್ರಾಮಗಳನ್ನು ಹಿಡಿದುಕೊಳ್ಳುತ್ತಿದ್ದಾರೆ. ಉಳಿದಕಡೆ ಸಾಮಾನ್ಯ ಯುದ್ಧಗಳಾಗಿವೆ.

ಪೂರ್ವರಣರಂಗ.

ರಷ್ಯನರು ಕಾರ್ಪೇತಿಯನ್ ಪ್ರಾಂತದಲ್ಲಿ ಡುಕ್ಲಾ ಕಣಿವೆ ಮೊದಲಾದ ಮುಖ್ಯಭಾಗಗಳಲ್ಲಿ ಶತ್ರುಗಳಮೇಲೆ ಯುದ್ಧಮಾಡಿ ಹಿಮ್ಮೆಟ್ಟಿಸಿ ತಾವು ಮುಂದಕ್ಕೆ ಸಾಗುತ್ತಿದ್ದಾರೆ. ಈಗ ಅವರು ಹಂಗೇರಿಯ ಕಡೆಗೆ ನುಗ್ಗಿದ್ದಾರೆ. ಅಲ್ಲಿ ಬಹುಮಂದಿ ಶತ್ರುಗಳೂ ಅವರ ಫಿರಂಗಿಗಳೂ ದೊರೆತಿವೆ. ವಿಸ್ಚುಲಾನದಿಯ ಪ್ರಾಂತ್ಯಕ್ಕೆ ಜರ್ಮನರಿಗೆ ಹೊಸದಾಗಿ ೧೪ ರಿಜಿಮೆಂಟುಗಳು ಸಹಾಯಕ್ಕೆ ಬರಲು ಹಗಲೂರಾತ್ರಿಯೂ ಕದನವಾಗಿ ಭಯಂಕರವಾದ ಫಿರಂಗಿಯುದ್ಧಗಳೂ ನಡೆದುವು. ಆದರೆ ಜರ್ಮನರಿಗೆ ಬಹಳ ನಷ್ಟವಾಗಿ, ರಷ್ಯನರು ಜಯಶೀಲರಾದರು. ವಿಸ್ಚುಲಾನದಿಯ ಎಡದಡದ ಮೇಲಿನ ಸ್ಟಂಪಿಗ್ರಾಮವನ್ನು ಜರ್ಮನರಿಂದ ರಷ್ಯನರು ಕಸುಕೊಂಡರು ರಷ್ಯಾವೈಮಾನಿಕರು ಜರ್ಮನರ ಕೆಲವು ಪಟ್ಟಣಗಳ ಮೇಲೂ ಅವರ ರಿಜರ್ವ್ ಸೈನಿಕರು ತುಂಬಿದ್ದ ಹೊಗೆಬಂಡಿಗಳ ಮೇಲೂ ಸಿಡಿಮದ್ದುಗಳನ್ನು ಹಾಕಿ ಅನರ್ಥವನ್ನುಂಟುಮಾಡಿದರು.

ರಷ್ಯನರು ಪೋಲ್ಯಾಂಡಿನಲ್ಲಿ ಶತ್ರುಗಳನ್ನು ಮುಂದಕ್ಕೆ ಸಾಗದಂತೆ ತಡೆದು ಉಳಿದ ಸ್ಥಳಗಳಲ್ಲೆಲ್ಲಾ ಶತ್ರುಗಳ ಮೇಲೆ ತಾವೇ ತೀಕ್ಷ್ಣವಾಗಿ ಬಿದ್ದು ಕಾದು ಮುಂದಕ್ಕೆ ಸಾಗುತ್ತಿದ್ದಾರೆ ರಷ್ಯನರ ಕಡೆ ಅಪರಿಮಿತವಾಗಿ ದೊಡ್ಡದೊಡ್ಡ ಫಿರಂಗಿಗಳೂ ನೂತನ ಸೈನ್ಯಗಳೂ ಬಂದು ಶತ್ರುಗಳನ್ನು ತಲ್ಲಣಪಡಿಸುತ್ತಿವೆ. ಪೋಲಾಂಡಿನಲ್ಲಿನ ಸೀಪೀ ಪ್ರಾಂತದಲ್ಲಿ ಶತ್ರುಗಳು ಭಯಂಕರವಾಗಿ ಕಾದಾಡಿದರು. ಕ್ಯೂರಾಸೀರ್ಸ್‌ನಲ್ಲಿ ಕಾದಾಡಿದ ೭ ಪಟಾಲಮ್ಮುಗಳಲ್ಲಿ ಒಂದು ಭಾಗವನ್ನು ರಷ್ಯನರ ಕಡೆಯ ಕಾಕಸಸ್ ಸೈನಿಕರು ಸಂಪೂರ್ಣವಾಗಿ ನಾಶಗೊಳಿಸಿದರು

ಕಾರ್ಪೇತಿಯನ್ ಬೆಟ್ಟದ ಬೆಸ್ಕಿಡ್ ಕಣಿವೆಯಲ್ಲಿ ನಡೆದ ಯುದ್ಧದಲ್ಲಿ ತಮ್ಮ ಕಡೆಯ ಪಟಾಲಮ್ಮುಗೆ ಪಟಾಲಮ್ಮೇ ನಾಶವಾಯಿತೆಂದು ಜರ್ಮನರು ಒಪ್ಪಿಕೊಂಡಿದ್ದಾರೆ. ಅಲ್ಲಿಗೆ ಜರ್ಮನರು ಹೊಸದಾಗಿ ೭ ಪಟಾಲಮ್ಮುಗಳನ್ನೂ ೧೦ ಫಿರಂಗಿಗಳನ್ನೂ ತಂದಿದ್ದರು. ಉಯಾದ ಹತ್ತಿರ ರಷ್ಯನರು ಜರ್ಮನರ ಮೇಲೆ ಕಾದು ಹಿಮ್ಮೆಟ್ಟಿಸಿ ಅವರ ೩ ಕಂದಕಗಳನ್ನು ಹಿಡಿದರು ೩ ಸಾವಿರ ಮಂದಿಸೈನಿಕರನ್ನೂ ೧೦ ಫಿರಂಗಿಗಳನ್ನೂ ಹಿಡಿದುಕೊಂಡರು.

ವಾರ್ಸಾ ಪ್ರಾಂತದಲ್ಲಿ ರಷ್ಯನ್ ಸೇನಾಮುಖವನ್ನು ಭೇದಿಸಬೇಕೆಂದು ಜರ್ಮನರು ಮತ್ತೆ ಮಹಾಪ್ರಯತ್ನವನ್ನು ಮಾಡಿ ದೊಡ್ಡದೊಡ್ಡ ನೂರಾರು ಫಿರಂಗಿಗಳನ್ನು ತಂದು ಹಗಲೂ ರಾತ್ರಿಯೂ ಹಾರಿಸಿದರು. ಪ್ರತಿಯಾಗಿ ರಷ್ಯನರೂ ಬೇಕಾದಷ್ಟು ಸೇನಾಸ್ತೋಮವನ್ನು ತರಿಸಿ ಶತ್ರುಗಳ ಮೇಲೆ ಫಿರಂಗಿಯುದ್ಧವನ್ನು ಮಾಡಿ ಹಿಮ್ಮೆಟ್ಟಿಸಿ ಅವರ ಕಡೆಗೆ ನಷ್ಟವನ್ನು ಮಾಡಿದರು.

ರಷ್ಯನರ ಸೇನೆಗಳು ಪೂರ್ವಪ್ರಷ್ಯಾದಲ್ಲಿ ಅಂಗೆದಾಪ್ ನದಿಯನ್ನು ದಾಟಿ ಅಲ್ಲಿನ ಗ್ರಾಮಗಳ ಮೇಲೆ ಫಿರಂಗಿಗುಂಡುಗಳನ್ನು ಹಾರಿಸಿ ಅಲ್ಲಿನ ಉನ್ನತವಾದ ರಕ್ಷಕಸ್ಥಾನಗಳನ್ನು ಆಕ್ರಮಿಸಿಕೊಂಡು ಜರ್ಮನಿದೇಶದೊಳಕ್ಕೆ ಆ ಭಾಗದಲ್ಲಿ ಮುಂದುಮುಂದಕ್ಕೆ ನುಗ್ಗಿ ಹೋಗುತ್ತಿದ್ದಾರೆ.

ಥಾರ್ನ್ ಪ್ರಾಂತ್ಯದಲ್ಲೂ ಮುಖ್ಯವಾಗಿ ಕೆಲವು ಕಾಳಗಗಳಾದುವು. ಅಲ್ಲಿ ತಮ್ಮ ಮೇಲೆ ಬಿದ್ದ ಜರ್ಮನರನ್ನು ರಷ್ಯನರು ಹೊಡೆದು ಅವರಿಗೆ ಬಹಳ ನಷ್ಟವನ್ನುಂಟುಮಾಡಿ ಹಿಮ್ಮೆಟ್ಟಿಸಿರುವರು.

ರಷ್ಯನ್ ಸೇನೆಗಳು ಬಜೂರಾ ನದಿಯನ್ನು ದಾಟಿ, ವಿಸ್ಚುಲಾ ಬಜೂರಾ ನದಿಗಳ ಸಂಗಮಸ್ಥಾನಕ್ಕೆ ೪ ಮೈಲಿ ದೂರದಲ್ಲಿರುವ ಮುಖ್ಯವಾದ ವಿಟ್ಕೊವಿಸ್ ಗ್ರಾಮವನ್ನು ಹಿಡಿದಿರುವುವು. ಇಲ್ಲಿ ಜರ್ಮನರು ರಷ್ಯನರ ಸೇನಾಪಂಕ್ತಿಯನ್ನು ಭೇದಿಸುವುದಕ್ಕೆ ಪ್ರಯತ್ನಿಸಿ ಸೋತುಹೋದರು.

ವಿಸ್ಚುಲಾ ನದಿಯ ಮೇಲ್ಗಡೆ ಬೋಜಿಮಾಫ್-ಗ್ಯೂಮಿನ್-ಒಲಿಯಾಶಿಡ್‌ಗಳ ಬಳಿಯಲ್ಲಿ ನಡೆದ ಮಹಾಯುದ್ಧದಲ್ಲಿ ಜರ್ಮನರು ಅನೇಕ ಸಹಸ್ರ ಸೈನಿಕರನ್ನು ಕಳೆದುಕೊಂಡಿರುವರು. ಯುದ್ಧಾಂಗಣದಲ್ಲಿ ಜರ್ಮನರ ಹೆಣಗಳು ಲೆಕ್ಕವಿಲ್ಲದಷ್ಟು ಬಿದ್ದಿದ್ದುವು. ರಷ್ಯನರು ಕಾರ್ಪೇತಿಯನ್ ಕಣಿವೆಯಲ್ಲಿ ಫಿಬ್ರವರಿ ತಾ|| ೮ರಲ್ಲಿ ಶತ್ರುಗಳ ೧೮ ಫಿರಂಗಿಗಳನ್ನೂ ೫,೨೬೯ ಮಂದಿ ಸೈನಿಕರನ್ನೂ ಹಿಡಿದುಕೊಂಡಿರುವರು ಆಪರ್ವತ ಪ್ರಾಂತವೆಲ್ಲಾ ಶತ್ರುಗಳ ಹೆಣಗಳ ಮಯವಾಗಿದೆ. ಒಂದುಕಡೆ ರಷ್ಯನರ ಸೇನೆಯ ಮುಂಗಡೆಯಲ್ಲಿ ಬಹುಶಃ ೧ ಸಾವಿರದ ಮೇಲೆಯೇ ಜರ್ಮನರ ಹೆಣಗಳು ಬಿದ್ದಿದ್ದುವು.

ಈಚೆಗೆ ಜರ್ಮನರು ೪ ಹೊಸ ಸೈನ್ಯಗಳನ್ನು ಪೂರ್ವಪ್ರಷ್ಯಾಕ್ಕೆ ತರಿಸಿದ್ದಾರೆ. ಇವುಗಳಲ್ಲಿ ಕೆಲವು ಫ್ರಾನ್ಸಿನ ರಣರಂಗದಿಂದ ಬಂದಿರುವವುಗಳೂ ಕೆಲವು ಹೊಸದಾಗಿ ತಯಾರಾದವೂ ಆಗಿವೆ. ಕೆಲವು ರಿಜರ್ವ್ ಸೈನ್ಯಗಳು. ಈ ನೂತನ ಸೈನ್ಯದ ಆಗಮನವನ್ನು ಕಂಡು ರಷ್ಯನರು ಸ್ವಲ್ಪ ಹಿಮ್ಮೆಟ್ಟಿ ತಮ್ಮ ಸೇನಾಸ್ತೋಮವನ್ನೂ ಹೆಚ್ಚಿಸಿಕೊಳ್ಳುತ್ತಿದ್ದಾರೆ. ಇಲ್ಲಿ ಸ್ವಲ್ಪ ದಿನದೊಳಗೆ ಮತ್ತೊಂದು ಮಹಾಯುದ್ಧವು ನಡೆಯುವಂತಿದೆ. ಇಲ್ಲಿ ಜರ್ಮನ್ ಚಕ್ರವರ್ತಿಯವರು ತಾವೇ ಸೇನಾಧಿಪತ್ಯವನ್ನು ವಹಿಸಿ ಕಾಳಗ ಪಡಿಸಬೇಕೆಂದು ಉದ್ದೇಶಪಟ್ಟಿರುವರಂತೆ. ಇದರಿಂದ ಜರ್ಮನರ ಗಮನವೆಲ್ಲಾ ತಮ್ಮ ಪೂರ್ವಪ್ರಷ್ಯಾದ ಕಡೆಗೆ ಬಿದ್ದು ಸೇನೆಯೆಲ್ಲಾ ಅಲ್ಲಿ ಕೂಡುತ್ತಿವೆ. ವಾರ್ಸಾದ ಕಡೆಗೂ, ಕಾರ್ಪೇತಿಯನ್ ಪರ್ವತದ ಕಡೆಗೂ ಶತ್ರುಸೈನ್ಯದ ಬಲವು ಕಡಿಮೆ. ಅಲ್ಲಿ ರಷ್ಯನರ ಬಲವೇ ಹೆಚ್ಚಿದೆ.

ಆಕಾಶವಿಮಾನಗಳು.

ಆಂಗ್ಲೇಯರ ೩೪ ವಿಮಾನಗಳೂ ಕೆಲ ಸಮುದ್ರವಿಮಾನಗಳೂ ಸಹ ಸೇರಿ ಜರ್ಮನಿಯರವರ ವಶದಲ್ಲಿರುವ ಬೆಲ್ಜಿಯಂದೇಶಭಾಗವಾದ ಬ್ರೂಜಸ್-ಜಿಬ್ರೂಜ್-ಬ್ಲಾಂಕೆನ್ ಬರ್ಗ್-ಎಂಬ ಪಟ್ಟಣಗಳ ಮತ್ತೂ ಅಸ್ಟೆಂಡಿನ ಹತ್ತಿರವಿರುವ ಭೂಪ್ರದೇಶಗಳ ಮೇಲೆ ಹೋಗಿ ಮುತ್ತಿದುವು ಈ ಪಟ್ಟಣಗಳನ್ನು ಜರ್ಮನರು ತಮ್ಮ ಸಬ್‌ಮೆರೀನುಗಳನ್ನಿಡುವ ಸ್ಥಾನಗಳನ್ನಾಗಿ ಮಾಡಿಕೊಳ್ಳುವುದರಲ್ಲಿದ್ದರು. ಅಷ್ಟರೊಳಗೇ ಈ ವಿಮಾನಗಳು ಹೋಗಿ ಮುತ್ತಿಗೆಹಾಕಿ ಸಿಡಿಮದ್ದಿನ ಗೋಳಗಳನ್ನು ಹಾಕಿದುವು ಆಸ್ಟೆಂಡಿನಹತ್ತಿರ ಬಹಳ ನಷ್ಟವಾಯಿತು ಅಲ್ಲಿನ ಹೊಗೆಬಂಡಿಯ ನಿಲ್ದಾಣಕ್ಕೆ ಬೆಂಕಿಹೊತ್ತಿ ಅದು ಧ್ವಂಸವಾಗಿ ನೆಲಮಟ್ಟವಾಗಿರಬೇಕು. ಅದರಂತೆ ಬ್ಲಾಂಕೆನ್‌ಬರ್ಗ್ ನಿಲ್ದಾಣಕ್ಕೂ ನಷ್ಟವುಂಟಾಯಿತು. ಮಿಡಿಲ್‌ಕರ್ಕ್ ಎಂಬ ಪಟ್ಟಣದಲ್ಲಿ ಜರ್ಮನರು ಫಿರಂಗಿಗಳನ್ನು ಇಟ್ಟುಕೊಂಡಿದ್ದ ಸ್ಥಾನದಮೇಲೂ, ವಾಯುವಾರ್ತಾಸ್ಥಾನದಮೇಲೂ, ಸಮುದ್ರದಲ್ಲಿ ಹಾಕಿರುವ ಮದ್ದಿನ ಗೋಳಗಳನ್ನು ಶೋಧಿಸಿ ತೆಗೆಯುವುದಕ್ಕಾಗಿ ಉಪಯೋಗಿಸುವ ಜೀಬ್ರೂಜ್‌ಪಟ್ಟಣದಲ್ಲಿದ್ದ ದೋಣಿಗಳಮೇಲೂ ಸಿಡಿಮದ್ದಿನ ಗೋಳಗಳನ್ನು ಹಾಕಿದುವು. ಅಲ್ಲೆಲ್ಲಾ ಎಷ್ಟು ನಷ್ಟವಾಯಿತೆಂಬುದರ ವಿವರವು ತಿಳಿದುಬಂದಿಲ್ಲ. ಆಗ ಜರ್ಮನರು ಆಂಗ್ಲವೈಮಾನಿಕರಮೇಲೆ ತೀಕ್ಷ್ಣವಾಗಿ ಫಿರಂಗಿಗುಂಡುಗಳನ್ನು ಹಾರಿಸುತ್ತಿದ್ದರು. ವೈಮಾನಿಕರೆಲ್ಲಾ ಸುರಕ್ಷಿತವಾಗಿಯೇ ಬಂದರು. ೨ ವಿಮಾನಗಳಿಗೆ ಮಾತ್ರ ನಷ್ಟವುಂಟಾಯಿತು. ಈ ವಿಮಾನಸೈನ್ಯವು ಸಾಮ್ಸನ್ ಎಂಬ ಸೇನಾನಾಯಕನ ಆಧಿಪತ್ಯದಲ್ಲಿ ಶ್ಲಾಘ್ಯವಾಗಿ ಕೆಲಸಮಾಡಿ ಬಂದಿರುವುದು. ಈ ೩೪ ವಿಮಾನಗಳು ಇಂಗ್ಲೀಷ್ ಸಮುದ್ರತೀರದಿಂದ ಒಂದೇಆವೃತ್ತಿ ಅಂತರಿಕ್ಷಕ್ಕೆ ಹಾರಿಹೋಗುತ್ತಿರುವುದು ಮಿಡತೆಗಳ ಸಾಲಿನಂತೆ ನೋಡುವವರಿಗೆ ಆಶ್ಚರ್ಯಾನಂದಗಳನ್ನುಂಟುಮಾಡುವಂತೆ

ಮಾಂಟಿನೀಗ್ರೋದೇಶದ ರಾಜಕುಟುಂಬದವರು ಶೀತಕಾಲವಾಸಕ್ಕೆ ಯೋಗ್ಯವಾದ ಭವನದಲ್ಲಿ ವಾಸಮಾಡಿಕೊಂಡಿರುವಾಗ ಅಲ್ಲಿಗೆ ಒಂದು ಆಸ್ಟ್ರಿಯನ್ ವಿಮಾನವು ಬಂದಿತು ಅದಾವುದೋ ಎಂದು ನೋಡುವುದಕ್ಕಾಗಿ ಒಳಗಿದ್ದ ರಾಣಿಯೂ, ರಾಜಕುಮಾರರೂ, ರಾಜಕುಮಾರಿಯೂ ಸಹ ಈಚೆಗೆ ಬಂದು ಅಂತರಿಕ್ಷದಕಡೆಗೆ ನೋಡುತ್ತಿರುವಲ್ಲಿ ವಿಮಾನದಿಂದ ತುಪಾಕಿಗುಂಡುಗಳು ಹೊಡೆಯಲ್ಪಟ್ಟುವು. ಅದರ ರವೆಗಳು ರಾಜಕುಟುಂಬದವರ ಸಮೀಪದಲ್ಲೇ ಬಿದ್ದವು. ಯಾರಿಗೂ ಏಟುಬೀಳಲಿಲ್ಲ.

ನೌಕಾಯುದ್ಧ.

ಜರ್ಮನರ ಒಂದು ಸಬ್‌ಮೆರೀನು ಅಸ್ಟೂರಿಯಾಸ್ ಎಂಬ ಇಂಗ್ಲೀಷರ ಆಸ್ಪತ್ರೆ ಹಡಗಿನ ಮೇಲೆ ಟಾರ್ಪಿಡೋವನ್ನು ಪ್ರಯೋಗಿಸಿತು. ಈ ಹಡಗು ಆಸ್ಪತ್ರೆಯದೆಂದು ತೋರುವುದಕ್ಕೆ ಸ್ಪಷ್ಟವಾದ ಹಲವು ಗುರ್ತುಗಳು ರಾತ್ರಿಯ ಹೊತ್ತೂ ಕೂಡ ಕಾಣುವಂತೆ ಇದ್ದುವು ಇದು ಆಸ್ಪತ್ರೆಯ ಹಡಗೆಂಬ ವಿಷಯವನ್ನು ಮೊದಲೇ ಎಲ್ಲದೇಶದವರಿಗೂ ತಿಳಿಯಪಡಿಸಿರುವರು ೧೯೦೭ನೆಯ ವರ್ಷದಲ್ಲಿ ಹೇಗ್ ಪಟ್ಟಣದಲ್ಲಿ ಎಲ್ಲದೇಶದವರೂ ಕೂಡಿ ಮಾಡಿದ ನಿಬಂಧನೆಗಳ ಪ್ರಕಾರ ಇಂಥ ಹಡಗುಗಳ ತಂಟೆಗೆ ಯಾರೂ ಹೋಗಕೂಡದಾಗಿರುವುದು. ಆಗ ನಡೆದ ನಿಬಂಧನಪತ್ರಕ್ಕೆ ಜರ್ಮನ್ ಕೇಸರರೇ ಮೊದಲನೆಯ ರುಜುವನ್ನು ಹಾಕಿರುವರು ಇದಕ್ಕೆಲ್ಲಾ ಲಕ್ಷ್ಯಕೊಡದೆ ಆಸ್ಪತ್ರೆ ಹಡಗನ್ನು ಧ್ವಂಸಮಾಡಬೇಕೆಂದು ಟಾರ್ಪಿಡೋವನ್ನು ಜರ್ಮನರು ಮನಃಪೂರ್ವಕವಾಗಿ ಬಿಟ್ಟಿರುವುದು ಅವರ ವಿನಾಶಕಾಲದ ವಿಪರೀತಬುದ್ಧಿಯ ದ್ಯೋತಕವಲ್ಲವೇ? ಆದರೆ ಈ ಅನ್ಯಾಯಾಚರಣೆಗೆ ಈಶ್ವರನು ಅಡ್ಡಿಮಾಡಿದನು. ಆ ಟಾರ್ಪಿಡೋವು ಆಸ್ಪತ್ರೆ ಹಡಗಿಗೆ ತಗಲದೆ ತಪ್ಪಿಹೋಯಿತು.

ಆಸ್ಟ್ರೇಲಿಯಾ ಎಂಬ ಆಸ್ಟ್ರೇಲಿಯನ್ ಕ್ರೂಯಿಜರು ಪೆಟಗೋನಿಯಾದ ಹತ್ತಿರ ಒಂದು ಜರ್ಮನ್ ಕ್ರೂಯಿಜರನ್ನು ಮುಳುಗಿಸಿತು.

ಕಪ್ಪುಸಮುದ್ರದಲ್ಲಿ ಜರ್ಮನರ ಬ್ರೆಸ್ಲಾ ಎಂಬ ಯುದ್ಧದ ಹಡಗು ಕ್ರಿಮಿಯಾಕ್ಕೆ ಸೇರಿದ ಯಾಲ್ಟಾ ತೀರಪಟ್ಟಣದ ಮೇಲೆ ಫಿರಂಗಿಗುಂಡಗಳನ್ನು ಹೊಡೆದು ೪ ಅಂಗಡಿಗಳನ್ನು ಹಾಳ್ಮಾಡಿತು ಪ್ರಾಣಾಪಾಯವೇನೂ ಆಗಲಿಲ್ಲ. ರಷ್ಯನರ ಹಡಗುಗಳು ಇದಕ್ಕೆ ಮುಯ್ಯಾಗಿ ಟ್ರಿಬಿಜಾಂಡ್ ಪಟ್ಟಣದಮೇಲೆ ಫಿರಂಗಿಗುಂಡುಗಳನ್ನು ಹೊಡೆದುವು ಅಲ್ಲಿದ್ದ ಫಿರಂಗಿನಿಲಯ ಮೂರರ ಮೇಲೆ ಗುಂಡುಗಳನ್ನು ಹಾರಿಸಿ ನಷ್ಟಪಡಿಸಿದುವು. ಪ್ಲಾಟಿನಾದಲ್ಲೂ ಸ್ಟ್ರೈಜಿನಲ್ಲೂ ಇದ್ದ ಮೂರು ಸೇತುಗಳನ್ನು ನಾಶಪಡಿಸಿದುವು. ಕಪ್ಪುಸಮುದ್ರದಲ್ಲಿದ್ದ ತುರುಕರ ೫೦ ವ್ಯಾಪಾರದ ಹಡಗುಗಳನ್ನು ಮುಳುಗಿಸಿರುವವು

ಲಾರ್ಟಿಸ್ ಎಂಬ ಇಂಗ್ಲೀಷರ ಹಡಗು ಜಾವಾದಿಂದ ಹೊರಟು ಪರದೇಶೀಯ ಪ್ರಯಾಣಿಕರನ್ನು ಏರಿಸಿಕೊಂಡು ಹಾಲೆಂಡ್‌ತೀರದಲ್ಲಿ ಪ್ರಯಾಣ ಮಾಡುತ್ತಿರುವಾಗ ಅದರಮೇಲೆ ಯಾವದೇಶದ ಧ್ವಜಪತಾಕೆಯೂ ಇರಲಿಲ್ಲ. ಆಗ ಜರ್ಮನರ ಯೂ ೨ ನಂಬರಿನ ಒಂದು ಸಬ್‌ಮೆರೀನು ಸಮೀಪಕ್ಕೆ ಬಂದು ನಿನ್ನ ಬಾವುಟವನ್ನು ತೋರಿಸೆಂದು ಕೇಳಿತು. ಆಗ ಅದು ಹಾಲೆಂಡ್ ದೇಶದ ಪತಾಕೆಯನ್ನು ತೋರಿಸಿಬಿಟ್ಟು ಗಂಟೆಗೆ ೧೬ ಮೈಲಿಗಳ ವೇಗದಲ್ಲಿ ಹೊರಟುಹೋಯಿತು ಅದರಮೇಲೆ ಆ ಸಬ್‌ಮೆರೀನು ೨ ಗುಂಡುಗಳನ್ನು ಹಾರಿಸಿತು. ಒಂದು ಟಾರ್ಪೇಡೋವನ್ನು ಬಿಟ್ಟಿತು. ಹಡಗು ಆ ಏಟುಗಳನ್ನು ತಪ್ಪಿಸಿಕೊಂಡು ಸುರಕ್ಷಿತವಾಗಿ ಹಾಲೆಂಡ್‌ದೇಶದ ಮ್ಯೂಕೆನ್ ಪಟ್ಟಣವನ್ನು ಸೇರಿತು. ಇದನ್ನು ಶತ್ರುಗಳ ಏಟಿನಿಂದ ತಪ್ಪಿಸಿತೆಂಬುದಕ್ಕಾಗಿ ಇದರ ಕೇಪ್ಟನಿಗೆ ಲೆಫ್ಟನೆಂಟ್‌ಪದವಿಯನ್ನೂ ಮತ್ತೂ ಡಿ. ಎಸ್ ಇ. ಎಂಬ ಬಿರುದನ್ನೂ ಆಂಗ್ಲಪ್ರಭುತ್ವದವರು ಕೊಟ್ಟಿರುವರು ಈ ಹಡಗಿನ ಮೇಲಿದ್ದ ಉದ್ಯೋಗಿಗಳಿಗೆ ಭಂಗಾರದ ಗಡಿಯಾರಗಳು ಕೊಡಲ್ಪಟ್ಟುವು. ಪ್ರತಿಯೊಬ್ಬ

ನಾವಿಕನಿಗೂ ಮೂರುಪೌನುಗಳಂತೆ ಬಹುಮಾನವನ್ನಿತ್ತರು. ತುರ್ಕಿಯವರ ಯುದ್ಧನೌಕಾಶ್ರಯಸ್ಥಾನವಾದ ಡಾರ್ಡಿನಲ್ಸಿನ ಮೇಲೆ ಮಿತ್ರಮಂಡಲಿಯವರ ೪ ಡಿಸ್ಟ್ರಾಯರುಗಳು ಫಿರಂಗಿಗಳನ್ನು ಹಾರಿಸಿ ೧೭೪ ಗುಂಡುಗಳನ್ನು ಹೊಡೆದರು. ಇದರಿಂದ ತುರ್ಕಿಯವರ ಕೆಲವು ಕಟ್ಟಡ ಮೊದಲಾದುವುಗಳು ಹಾಳಾದುವು.

ತುರ್ಕಿ.

ರಷ್ಯಾ ಮತ್ತು ತುರ್ಕಿಯು ಎಲ್ಲೆಕಟ್ಟುಗಳ ಬಳಿಯಲ್ಲಿದ್ದು ಪಾರ್ಸಿಸ್ಥಾನಕ್ಕೆ ಸೇರಿದ್ದ ತಾಬ್ರಿಜ್ ಎಂಬ ಪಟ್ಟಣವನ್ನು ತುರ್ಕಿಯ ಸೇನೆಗಳು ಹಿಡಿದುಕೊಂಡಿದ್ದುವಷ್ಟೆ. ಅದನ್ನು ಮರಳಿ ರಷ್ಯನ್ ಸೈನ್ಯಗಳು ಬಂದು ತುರುಕರಮೇಲೆ ಬಿದ್ದು ಕಾದಾಡಿ ವಶಪಡಿಸಿಕೊಂಡುವು. ಅಲ್ಲಿದ್ದ ತುರ್ಕಿಯವರ ಫಿರಂಗಿಗಳೆಲ್ಲಾ ಹಾಳಾದುವು. ೨೦೦ ಮಂದಿ ತುರ್ಕಿ ಸೈನಿಕರು ರಷ್ಯನರ ವಶವಾದರು. ಸಾವಿರಮಂದಿಗಳವರೆಗೆ ಸತ್ತರು. ಆ ಹೆಣಗಳನ್ನು ತುರುಕರು ರಣರಂಗದಲ್ಲೇ ಬಿಟ್ಟು ಓಡಿದರು. ರಷ್ಯನರು ಮರಳಿ ಪಟ್ಟಣಪ್ರವೇಶಮಾಡಿದುದಕ್ಕಾಗಿ ಅಲ್ಲಿನ ಪ್ರಜೆಗಳು ಬಹಳ ಸಂತೋಷಪಟ್ಟರು. ಈ ಪಟ್ಟಣವನ್ನು ತುರ್ಕಿಯವರು ಹಿಡಿದುಕೊಂಡಿದ್ದಾಗ ಬೇಕಾದಷ್ಟು ಗಲಾಟೆಮಾಡಿ ಮನೆಗಳಿಗೆ ಬೆಂಕಿಯಿಕ್ಕಿ ತಮಗೆ ಆಹಾರ್ಯಪದಾರ್ಥ ಮೊದಲಾದುವನ್ನು ಕೊಡದಿದ್ದ ಬಹುಮಂದಿ ರಷ್ಯನರನ್ನು ಉರುಲುಹಾಕಿದ್ದರು.

ರಷ್ಯನ್ ಸೈನಿಕರು ಅರ್ಮಿನಿಯಾದ ಕೋಟೆಯ ಹತ್ತಿರ ಬಲವಾದ ಹಿಮವು ಸುರಿಯುತ್ತಿದ್ದರೂ ಬೆಟ್ಟಗಳನ್ನು ದಾಟಿ ತುರ್ಕಿ ಸೈನ್ಯಗಳಮೇಲೆ ಸನೀನಿನ ಯುದ್ಧವನ್ನು ಮಾಡಿ ಗೋಮ್ಸ್ ಎಂಬ ಗ್ರಾಮಕ್ಕೆ ನುಗ್ಗಿ ೧೩ ನೇ ಡಿವಿಜನ್ ತುರ್ಕಿಸೇನೆಯನ್ನು ಅದರ ಸೇನಾಪತಿಯ ಸಮೇತ ಹಿಡಿದುಕೊಂಡರು.

ಈಜಿಪ್ಟ.

ಫೆಬ್ರವರಿ ತಾ|| ೨ ರಲ್ಲಿ ತುರ್ಕಿಯವರು ಇಸ್ಮಾಲಿಯಾ ಹತ್ತಿರ ಸೂಯೆಜ್ ಕಾಲ್ವೆಯನ್ನು ದಾಟುವುದಕ್ಕೆ ಪ್ರಯತ್ನಿಸಿದರು. ಅವರು ಕಾಲ್ವೆಯವರೆಗೆ ಬರುವವರೆಗೂ ಆಂಗ್ಲಸೈನಿಕರು ಸುಮ್ಮನಿದ್ದು ಬಳಿಕ ಒಂದೇಸಮನೆ ಶತ್ರುಗಳಮೇಲೆ ಗುಂಡಿನ ಮಳೆಯನ್ನು ಸುರಿಸಿದರು. ಕಾಲ್ವೆಯನ್ನು ದಾಟುವುದಕ್ಕೆ ತಂದಿದ್ದ ಉಪಕರಣಗಳನ್ನೆಲ್ಲಾ ಅಲ್ಲಲ್ಲೇ ಬಿಟ್ಟು ಶತ್ರುಗಳು ಓಡಿದರು. ಹಲವರು ನೀರಿನಲ್ಲಿ ಮುಳುಗಿದರು. ಅನೇಕರು ಸತ್ತರು. ಈ ಯುದ್ಧಕ್ಕಾಗಿ ೬೦೦ ಮಂದಿ ಸೈನಿಕರನ್ನೂ ೩ ಯಂತ್ರದ ಫಿರಂಗಿಗಳನ್ನೂ, ಆಹಾರ್ಯಸಾಮಗ್ರಿಯನ್ನೂ ಮದ್ದುಗುಂಡುಗಳನ್ನೂ ಹೊತ್ತುಕೊಂಡುಹೋಗುತ್ತಿದ್ದ ೯೦ ಒಂಟೆಗಳನ್ನೂ ಸಹ ಇಂಗ್ಲೀಷ್ ಸೈನಿಕರು ಹಿಡಿದುಕೊಂಡರು. ಇಲ್ಲಿ ನಡೆದ ಯುದ್ಧದಲ್ಲಿ ತುರ್ಕಿಯವರ ಕಡೆ ೨,೪೦೦ ಮಂದಿಗಳು ನಷ್ಟವಾದರು. ಇದರ ಮೇಲೆ ಸೆರೆಸಿಕ್ಕಿದವರು ಬೇರೆ. ಸತ್ತವರಲ್ಲಿ ಒಬ್ಬ ಜರ್ಮನ್ ಉದ್ಯೋಗಿಯೂ ಇದ್ದನು. ಮಾರನೆ ಬೆಳಗ್ಗೆ ಕಟಾರಾದಲ್ಲಿದ್ದ ಇಂಗ್ಲೀಷ್‌ಸೈನ್ಯದ ಮುಂಭಾಗದಮೇಲೆ ತುರುಕರು ಬಂದು ಬಿದ್ದರು. ಆಗ ಯುದ್ಧವಾದುದರಲ್ಲಿ ಇಂಗ್ಲೀಷರ ಕಡೆ ಮೂರುಮಂದಿ ಸತ್ತರು. ಶತ್ರುಗಳಕಡೆ ೧೬ ಮಂದಿ ನಷ್ಟವಾದರು. ೪೦ ಮಂದಿ ಸೆರೆ ಸಿಕ್ಕಿದರು.

ಇದೇದಿನ ಮಧ್ಯಾಹ್ನ ಸುಯೇಜ್‌ಕಾಲ್ವೆಯಹತ್ತಿರ ಮರಳಿ ಯುದ್ಧವಾಯಿತು. ಮತ್ತು ತಾ|| ೪ರಲ್ಲಿ ಟೌಸ್‌ಪಟ್ಟಣದಮೇಲೆ ತುರ್ಕಿಯವರು ಫಿರಂಗಿಗಳನ್ನು ಹಾರಿಸುತ್ತ ಮೇಲೆಬಿದ್ದರು. ಆದರಮೇಲೆ ಇಂಗ್ಲೀಷರ ಹಡಗಿನಫಿರಂಗಿಗಳೂ ದಡದಮೇಲಿದ್ದ ಫಿರಂಗಿಗಳೂ ಗುಂಡುಗಳನ್ನು ಹಾರಿಸಿದುವು. ತೆಪ್ಪವನ್ನು ಕಟ್ಟಿ ಕಾಲ್ವೆಯನ್ನು ದಾಟುವುದರಲ್ಲಿದ್ದ ತುರ್ಕಿ ಸೈನಿಕರೆಲ್ಲಾ ಪಲಾಯನಗೊಂಡರು. ತುರ್ಕಿಯಕಡೆ ೮ ಮಂದಿ ಉದ್ಯೋಗಿಗಳು ನಷ್ಟವಾದರು. ೧೨೮೨ ಮಂದಿ ಸೈನಿಕರು ಸೆರೆಸಿಕ್ಕಿದರು. ಸೈನಿಕರಲ್ಲಿ ಸಾವಿರಾರುಮಂದಿ ಸತ್ತರು. ಮೇಲೆಹೇಳಿದ ಮೂರು ಕಡೆಯಲ್ಲೂ ಬಂದು ಬಿದ್ದ ತುರ್ಕಿಸೈನ್ಯವು ಒಟ್ಟು ೧೨ ಸಾವಿರವಿದ್ದಿತು. ೬ ಫಿರಂಗಿಸೈನ್ಯವಿದ್ದಿತು. ಈ ಮೂರುಕಡೆಯೂ ಅವರಿಗೆ ವಿಶೇಷ ನಷ್ಟವೂ ಅಪಜಯವೂ ಆದುದರಿಂದ ಅವರಿಗೆ ಈಜಿಪ್ಟಿನಮೇಲೆ ಬೀಳಬೇಕೆಂಬ ಆಶೆಯೇ ಕುಗ್ಗಿಹೋಗಿರಬೇಕು. ಆ ಸೈನ್ಯಗಳು ಹೆಡ್ಜಾಜ್ ಲೋಹಮಾರ್ಗದ ನಿಲ್ದಾಣದಿಂದ ಇಳಿದು ಸುಯೇಜ್‌ಕಾಲ್ವೆಯವರೆಗೆ ಬರುವುದಕ್ಕೆ ೨೫ ದಿನಗಳು ಹಿಡಿದಿದ್ದಿತು. ಈ ಸುಯೇಜ್‌ಕಾಲ್ವೆಯಬಳಿಯಲ್ಲಿ ಯುದ್ಧವಾಗುತ್ತಿದ್ದರೂ ಅಲ್ಲಿ ಹೋಗಿಬರುವ ವ್ಯಾಪಾರದ ಹಡಗುಗಳಿಗೆ ಯಾವ ತೊಂದರೆಯೂ ಇಲ್ಲದಂತೆ ವ್ಯವಸ್ಥೆಯು ಮಾಡಲ್ಪಟ್ಟಿದ್ದಿತು. ಈಗ ತುರ್ಕಿಯ ಸೈನ್ಯವು ಸುಯೇಜ್‌ಕಾಲ್ವೆಯ ಆಚೆಗೆ ೨೦ ಮೈಲಿಗಳವರೆಗೂ ಎಲ್ಲೂ ಇಲ್ಲ. ಅದರಾಚೆ ಸ್ವಲ್ಪ ಕಾಣುತ್ತಿದ್ದರೂ ಅದೂ ಹಿಮ್ಮುಖವಾಗಿಯೇ ಇದೆ.

ಜರ್ಮನಿಯಕಷ್ಟ.

ಜರ್ಮನ್ ದೇಶದಲ್ಲಿ ಅವಶ್ಯಕಸಾಮಗ್ರಿಗಳ ಕೊರತೆಯು ದಿನದಿನಕ್ಕೆ ಹೆಚ್ಚುತ್ತಿದೆ. ಸರ್ವಸಮುದ್ರಾಧೀಶರಾದ ಆಂಗ್ಲಪ್ರಭುತ್ವದವರ ಪ್ರಯತ್ನವಿಶೇಷದಿಂದ ಜರ್ಮನ್ ದೇಶಕ್ಕೆ ಅವಶ್ಯಕವಾದ ಸಾಮಗ್ರಿಗಳು ಎತ್ತಣಿಂದಲೂ ಬಂದು ಸೇರುವುದು ಅಸಾಧ್ಯವಾಗಿದೆ. ಅದುಕಾರಣ ಜರ್ಮನರ ಅವಸ್ಥೆಯು ಮುತ್ತಿಗೆಹಾಕಿದ ಒಂದು ಕೋಟೆಯೊಳಗಣ ಪ್ರಜೆಗಳ ಅವಸ್ಥೆಗೆ ಸಮನಾಗಿದೆಯೆಂದು ಹೇಳಬಹುದಾಗಿದೆ. ಮುಖ್ಯವಾಗಿ ಈಗ ಅಲ್ಲಿ ಆಹಾರ್ಯವಸ್ತುಗಳ ಅಭಾವವು ಬಹಳ ಚಿಂತೆಯನ್ನುಂಟುಮಾಡಿದೆ. ಪ್ರಭುತ್ವದವರು ದೇಶದಲ್ಲಿರುವ ಆಹಾರ್ಯಧಾನ್ಯಗಳನ್ನೂ ಹಿಟ್ಟನ್ನೂ ತಮ್ಮ ವಶಕ್ಕೆ ತೆಗೆದುಕೊಂಡು, ಎಲ್ಲಪ್ರಜೆಗಳಿಗೂ ಮಿತವರಿತು ಹಂಚುವ ಪ್ರಯತ್ನದಲ್ಲಿದ್ದಾರಂತೆ! ಅಲ್ಲಿನ ಅಧಿಕಾರಿಗಳು ಪ್ರಕಟನಪತ್ರಿಕೆಗಳ ಮೂಲಕ ತಮ್ಮ ಪ್ರಜೆಗಳಿಗೆಲ್ಲಾ ಅವರವರ ಆಹಾರದ ವಿಷಯದಲ್ಲಿ ಹೀಗೆಯೇ ಮಿತವಾಗಿ ನಡೆದುಕೊಳ್ಳಬೇಕೆಂದು ಎಚ್ಚರಿಸುತ್ತಿರುವರಂತೆ! ರಾಜಧಾನಿಯಲ್ಲಿನ ಪುರಪಾಲಕಸಂಘದವರು ಆ ಪಟ್ಟಣದಲ್ಲಿರುವ ಪ್ರತಿಯೊಂದು ಮನೆಯಲ್ಲೂ ಎಷ್ಟೆಷ್ಟು ಜನರಿರುವರೆಂಬುದನ್ನು ತಿಳಿದುಕೊಂಡು, ಆ ಜನಸಂಖ್ಯೆಗನುಸಾರವಾಗಿ, ರೊಟ್ಟಿಗಳ ಕಂಪೆನಿಯವರು ಅವರವರಿಗೆ ಅಷ್ಟಷ್ಟೇ ರೊಟ್ಟಿಯನ್ನು ಕೊಡಬೇಕೆಂದು ನಿರ್ಬಂಧಿಸಿರುವರು. ಯುದ್ಧವು ಮುಗಿವವರೆಗೂ ವಿದ್ಯಾರ್ಥಿಗಳಾರೂ ಮಧ್ಯಾಹ್ನದಹೊತ್ತು ಮಾಂಸವನ್ನು ಭುಂಜಿಸಕೂಡದೆಂದೂ, ಇಷ್ಟೇತೂಕದ ರೊಟ್ಟಿಯನ್ನು ತಿನ್ನಬೇಕೆಂದೂ ಸಹ ವಿಧಿಸಿರುವರಂತೆ! ಸೈನಿಕರಿಗಂತು ಗೋಧಿಯರೊಟ್ಟಿಯು ಸಿಕ್ಕುವಹಾಗೆಯೇ ಇಲ್ಲ. ಆಲೂಗಡ್ಡೆಯ ಜತೆಗೆ ಒಂದುತೆರದ ಹಿಟ್ಟನ್ನು ಬೆರಸಿ ಮಾಡಿದ ರೊಟ್ಟಿಗಳನ್ನು ಕೊಡುತ್ತಿರುವರು. ಆ ದೇಶದ ಹಂದಿಗಳಿಗೆ ಕೊಡುವುದಕ್ಕೆ ಆಹಾರವು ಸಾಲದೆ ಇರುವುದರಿಂದ ಹಂದಿಗಳನ್ನು ಹೆಚ್ಚುಹೆಚ್ಚಾಗಿ ಕೊಂದು ಅವುಗಳ ಸಂಖ್ಯೆಯನ್ನು ತಗ್ಗಿಸಬೇಕೆಂದು ಯುದ್ಧಸಂಘದವರು ಅಪ್ಪಣೆ ಮಾಡಿರುವರು. ಗೋದುವೆ ಹಿಟ್ಟಿಯ ಅಧಿಕಾರವನ್ನೆಲ್ಲಾ ಸರ್ಕಾರದ ವಶದಲ್ಲೇ ಇಟ್ಟುಕೊಂಡಿದ್ದಾರೆ. ಅದು ಸಾಮಾನ್ಯಪ್ರಜೆಗಳಿಗೆ ಸಿಕ್ಕುವುದೇ ಕಷ್ಟವಾಗಿದೆ. ಇದರಂತೆ ಆ ದೇಶದಲ್ಲಿ ಚಿನ್ನ-ತಾಮ್ರ-ಸೀಸ-ಉಣ್ಣೆಯಬಟ್ಟೆ-ಮೊದಲಾದ ವಸ್ತುಗಳಿಗೂ ಕೊರತೆಯುಂಟಾಗುತ್ತಿದೆ. ಉಣ್ಣೆಯಬಟ್ಟೆ ಹಣ ಮೊದಲಾದುವುಗಳನ್ನು ಪ್ರಜೆಗಳು ಯಾರುಬೇಕಾದರೂ ಪ್ರಭುತ್ವದವರಿಗೆ ಸಹಾಯಮಾಡಬಹುದೆಂದು ಪ್ರಕಟಿಸಿದ್ದಾರೆ. ಕಳೆದವರ್ಷ ಆ ದೇಶದಲ್ಲಿ ಆಗಿರುವ ಬೆಳಸಿನ ಧಾನ್ಯವೆಲ್ಲಾ ಬರುವ ಏಪ್ರಿಲ್ ಮೇ ತಿಂಗಳವರೆಗೆ ಸಾಕಾಗಬಹುದೆಂದು ಎಣಿಸಲ್ಪಟ್ಟಿದೆ. ಅಲ್ಲಿಂದಾಚೆಗೆ ಆ ದೇಶದ ಆಹಾರ್ಯವಸ್ತುಗಳ ತಾಪತ್ರಯವು ವಾಚಾಮಗೋಚರವಾಗುವುದೆಂದು ಪ್ರಕಟವಾಗಿದೆ.

ಮೈಸೂರ್ ಸ್ಟಾರ್.

ಸನ್ ೧೯೧೫ ನೆಯ ಫೆಬ್ರವರಿ ತಾ|| ೨೧ ನೆಯ ಭಾನುವಾರ.

ಮೈಸೂರು ನಿಯಮನಿರ್ಮಾಣಸಭೆಯು.

ಗೊತ್ತಾಗಿದ್ದಮೇರೆಗೆ ಈ ಸಭೆಯು ಬೆಂಗಳೂರಿನಲ್ಲಿ ಕಳೆದ ತಾ|| ೧೦ನೆಯ ಬುಧವಾರ ಮಂತ್ರಿವರ್ಯರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ಸಭಿಕರಲ್ಲಿ ಕೆಲವರು ರಾಜ್ಯಾಡಳಿತದ ಸಂಬಂಧವಾಗಿ ತಮಗೆ ಅವಕಾಶವಿರುವಮಟ್ಟಿಗೆ ಚರ್ಚೆಮಾಡಿದರು. ಸರ್ಕಾರದ ಪಕ್ಷದಿಂದ ಅವಕ್ಕೆ ಸಮಾಧಾನಗಳೂ ಹೇಳಲ್ಪಟ್ಟುವು. ಈ ಪ್ರಶ್ನೋತ್ತರಗಳ ಸಂಖ್ಯೆಯು ಅಲ್ಪವಾಗಿದ್ದರೂ, ಇಂಥ ಚರ್ಚೆಗಳ ಪ್ರಯೋಜನವು ಸಂಸ್ಥಾನಕ್ಕೆ ವಿಶೇಷವಾಗಿ ಆಗದಿರಲಾರದೆಂದು ನಂಬುತ್ತೇವೆ.

ಮ|| ವೆಂಕಟಕೃಷ್ಣಯ್ಯನವರು ಮಾಡಿದ ಪ್ರಶ್ನೆಗಳಲ್ಲಿ ಕಣ್ಣೆಗಾಲದ ದೊಂಬಿವ್ಯಾಜ್ಯದ ಸಂಬಂಧದ ಪ್ರಶ್ನೆಯೊಂದಾಗಿದ್ದಿತು. ಅದಕ್ಕೆ ಸರ್ಕಾರದ ಪಕ್ಷದಿಂದ ಕೊಡಲ್ಪಟ್ಟ ಉತ್ತರದೊಳಗೆ—ಈ ದಂಗೆ ನಡೆಯುವಾಗ್ಗೆ ಸರ್ಕಾರದುದ್ಯೋಗಸ್ಥರ ಕರ್ತವ್ಯದಲ್ಲಿ ಕಂಡುಬಂದ ಲೋಪಗಳಿಗಾಗಿ ಒಬ್ಬರ "ಬಡ್ತಿ" ಯನ್ನು ನಿಲ್ಲಿಸಿದೆಯೆಂತಲೂ, ಇತರರ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೆಂತಲೂ, ಅದರಲ್ಲಿ ಹೆಚ್ಚು ಶ್ರಮಸಾಹಸಗಳನ್ನು ತೋರಿಸಿದವರಾರಿಗೂ ಬಹುಮಾನವು ಕೊಡಲ್ಪಟ್ಟಿಲ್ಲವೆಂತಲೂ ಹೇಳಿರುತ್ತಾರೆ. ಮೈಸೂರು ಸಂಸ್ಥಾನದಲ್ಲಿ ಕಣ್ಣಾಗಾಲದ ದೊಂಬಿಯು ಅಭೂತಪೂರ್ವವಾಗಿ ನಡೆಯಿತು. ತತ್ಸಂಬಂಧವಾದ ವ್ಯಾಜ್ಯದ ವಿಚಾರಣೆ ಮೊದಲಾದುವುಗಳಿಗಾಗಿ ಸರ್ಕಾರದವರು ೨೦ ಸಾವಿರ ರೂ.ಗಳ ಮೇಲೆಯೇ ವ್ಯಯಮಾಡಿದ್ದಾರೆ. ಇಂಥ ಅಗಾಧವಾದ ಉತ್ಪಾತವು ನಡೆಯುವಾಗ್ಗೆ ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡದೆ ತಪ್ಪಿಹೋದ ಉದ್ಯೋಗಿಗಳ ವಿಷಯದಲ್ಲಿ ಸರ್ಕಾರದವರು ಕಠಿನತರವಾದ ಶಾಸನವನ್ನು ನಡೆಯಿಸಿದ್ದರೆ ಉಳಿದ ಅಧಿಕಾರಿಗಳಿಗೆಲ್ಲಾ ಎಚ್ಚರಿಕೆಯನ್ನುಂಟುಮಾಡಿದಂತಾಗಿ ಸರ್ಕಾರದ ದರ್ಪವು ರಕ್ಷಿಸಲ್ಪಡುತ್ತಿದ್ದಿತು. ಮತ್ತೂ ಈ ವ್ಯಾಜ್ಯದ ವಿಚಾರಸಂದರ್ಭದಲ್ಲಿ ಉತ್ಸಾಹದಿಂದ ಕೆಲಸಮಾಡಿದ ಮತ್ತೂ ಸಹಾಯಮಾಡಿದ ಸರ್ಕಾರದ ಉದ್ಯೋಗಿಗಳಿಗೇ ಆಗಲಿ ಸಾಮಾನ್ಯಪ್ರಜೆಗಳಿಗೇ ಆಗಲಿ ತಕ್ಕ ಪ್ರೋತ್ಸಾಹಗಳೇನನ್ನೂ ಇದುವರೆಗೂ ಸರ್ಕಾರದವರು ಅನುಗ್ರಹಿಸದೆಹೋದುದೂ ಸಹ ವಿಷಾದಕರವಾಗಿದೆ. ಇವೆರಡು ಲೋಪಗಳೂ ಸರ್ಕಾರದ ಔದಾಸೀನ್ಯದಿಂದ ಉಂಟಾಗಿದೆಯೇ ಎಂದು ಯೋಚಿಸಬೇಕಾಗುತ್ತದೆ.

ಮ|| ಕರಣಿಕ ಕೃಷ್ಣಮೂರ್ತಿರಾಯರು ಮಾಡಿದ ಪ್ರಶ್ನೆಗಳಲ್ಲಿ—ಕೆರೆಗಳಿಗೆ ನೀರುತುಂಬದೆಹೋದವರ್ಷದಲ್ಲಿ ಅವುಗಳ ಕೆಳಗೆ ವ್ಯವಸಾಯವಾಗದೆಹೋದ ಭೂಮಿಗಳ ಕಂದಾಯವನ್ನು ಮನ್ನಿಸಬಾರದೆ ಎಂಬ ಪ್ರಶ್ನೆಯು ಮುಖ್ಯವಾದುದು. ಇದಕ್ಕೆ ಸರ್ಕಾರದ ಪಕ್ಷದಿಂದ ಉತ್ತರವನ್ನು ಕೊಡುವಾಗ್ಗೆ—"ನೀರು ತುಂಬದೆ ಇರುವ ಕೆರೆಗಳೆಷ್ಟೆಂಬುದನ್ನೂ, ಅವುಗಳ ಕೆಳಗಣ ಭೂಮಿಯ ಕಂದಾಯವನ್ನು ಮನ್ನಿಸಲವಕಾಶವುಂಟೆ ಎಂಬುದನ್ನೂ ವಿಚಾರಮಾಡುತ್ತಿದೆ" ಎಂದು ಹೇಳಲಾಗಿದೆ. ಈ ಪ್ರಶ್ನವು ಪ್ರಜಾಪ್ರತಿನಿಧಿಸಭೆಯಲ್ಲೂ ಕೂಡ ಅನೇಕಾವೃತ್ತಿ ಸರ್ಕಾರದ ಗಮನಕ್ಕೆ ತರಲ್ಪಟ್ಟಿದೆ. ಅವಕ್ಕೆಲ್ಲಾ ತಾತ್ಕಾಲದಲ್ಲಿ ದಾಟಿಸುವ ಇಂಥ ಉತ್ತರಗಳು ಕೊಡಲ್ಪಡುತ್ತಿವೆಯೇ ಹೊರತು ಖಂಡಿತವಾದ ಉತ್ತರವು ದೊರೆಯಲಿಲ್ಲ. ಎಷ್ಟೋ ದುಡ್ಡನ್ನು ಕೊಟ್ಟು ಭೂಮಿಯನ್ನು ಕ್ರಯಕ್ಕೆ ಪಡೆದ ರೈತನು ಆ ಭೂಮಿಯಲ್ಲಿ ನೀರಿನಭಾವದಿಂದ ಬೆಳಸನ್ನು ಕಾಣದೆ ಹೋದವರ್ಷದಲ್ಲಿ ತನಗಾದ ನಷ್ಟದ ಹೊರೆಯನ್ನು ಸಹಿಸುವ ಸಂಕಟದ ಜತೆಗೆ ಕಂದಾಯದ ನಿರ್ಬಂಧದ ಸಂಕಟವನ್ನೂ ಕೂಡ ಹೇಗೆ ಸಹಿಸಬಹುದೆಂಬ ವಿಷಯದಲ್ಲಿ ಸರ್ಕಾರದ ಕರುಣಾದೃಷ್ಟಿಯು ಪ್ರಸರಿಸಿದ್ದರೆ ಈ ವಿಷಯವು ಪದೇಪದೇ ಚರ್ಚೆಗೆ ಬರಬೇಕಾದ ಆವಶ್ಯಕತೆಯೇ ಉಳಿಯುತ್ತಿರಲಿಲ್ಲ. ಸಂಸ್ಥಾನದಲ್ಲಿನ ಕೆರೆಗಳ ಜೀರ್ಣಸ್ಥಿತಿಯು ಸರ್ವತ್ರ ವಿದಿತವಾಗಿದೆ. ಆದರಿಂದ ಅವುಗಳ ಕೆಳಗಣ ಭೂಮಿಯ ರೈತರ ಗೋಳು ದಿಙ್ಮಂಡಲವನ್ನು ಭೇದಿಸುವಷ್ಟಿದೆ. ಅವರ ದೂರಿಗೆ ಪರಿಹಾರವನ್ನು! ಕಲ್ಪಿಸುವುದರಕಡೆಗೆ ಸರ್ಕಾರದವರು ಈಗ ಗಮನಿಸಿದ್ದಾರೆ. ಅದು ಸಂಪೂರ್ಣ ಪರಿಹಾರವಾಗುವವರೆಗೂ ವ್ಯವಸಾಯವಿಲ್ಲದೆಹೋದ ಕೆರೆಕೆಳಗಣ ಭೂಮಿಯ ಕಂದಾಯರೂಪವಾದ (ಅನ್ಯಾಯದ್ರವ್ಯವನ್ನು) ಬೊಕ್ಕಸಕ್ಕೆ ಶೇಖರಿಸುವುದು ಹೇಗೆ? ಈ ವಿಷಯದಲ್ಲಿ ರೈತರಿಗೆ ಹಿತವಾದ ಒಂದು ವ್ಯವಸ್ಥೆಯನ್ನು ಪ್ರಜಾರಂಜನಪರಾಯಣರಾದ ನಮ್ಮ ಸಂಸ್ಥಾನದವರು ಅವಶ್ಯಕವಾಗಿ ಮಾಡಿ, ಮರಳಿ ಇದರ ಚರ್ಚೆಯುಂಟಾಗದಂತೆ ಮಾಡುವವರಾಗಲೆಂದು ಬಿನ್ನಯಿಸುತ್ತೇವೆ.

ಅರ್ಥಸಾಧಕಪತ್ರಿಕೆ.

ಇಂಗ್ಲೀಷು-ಕನ್ನಡ-ಇವೆರಡು ಭಾಷೆಗಳಲ್ಲೂ ಬೇರೆ ಬೇರೆ ಪ್ರಕಟಗೊಂಡಿರುವ ಈ ಮಾಸಪತ್ರದ ಪ್ರಥಮಸಂಚಿಕೆಗಳನ್ನು ನಾವು ಆದರದಿಂದ ಸ್ವೀಕರಿಸಿದೆವು. ಎರಡರಲ್ಲೂ ಇರುವ ವಿಷಯಗಳಲ್ಲಿ ಬಹುಭಾಗವು ಒಂದೇ ಆಗಿದೆ; ಚಿತ್ರಗಳೂ ಹಾಗೆಯೇ. ಅರ್ಥಸಾಧನಕ್ಕೆ ಮುಖ್ಯಾಂಗಗಳು-ಕೃಷಿ-ವಾಣಿಜ್ಯ-ಶಿಲ್ಪಗಳಾಗಿರುತ್ತವೆ. ಅವುಗಳ ವಿಷಯದಲ್ಲಿ ಹೆಚ್ಚಾದ ಜ್ಞಾನವನ್ನೂ, ತನ್ಮೂಲಕ ಪ್ರಜೆಗಳಲ್ಲಿ ಕರ್ತವ್ಯಬುದ್ಧಿಯನ್ನೂ ಉಂಟುಮಾಡಬೇಕೆಂಬುದೇ ಮೈಸೂರು ಸಂಪತ್ಸಾಧಕ ಸಮಾಜದ ಮತ್ತೂ ಅದರ ಅವಲಂಬನೆಯಿಂದ ಅವತರಿಸಿರುವ ಈ ಪತ್ರದ ಉದ್ದೇಶವಾಗಿರುತ್ತದೆ. ಉದ್ದೇಶಸಾಧನೆಗೆ ಅನುಗುಣವಾದ ವಿಷಯಗಳ ಆರಂಭವು ಈ ಪ್ರಥಮಸಂಚಿಕೆಯಲ್ಲಾಗಿದೆ. ಆಂಗ್ಲಭಾಷಾ ಪತ್ರಿಕೆಗಿಂತಲೂ ಕನ್ನಡಭಾಷೆಯ ಪತ್ರಿಕೆಯ ಅವಶ್ಯಕತೆಯೇ ನಮ್ಮ ದೇಶಕ್ಕೆ ಹೆಚ್ಚು. ಮುಖ್ಯವಾಗಿ ಇದರಲ್ಲಿ ಪ್ರತಿಪಾದಿಸಲ್ಪಡಬೇಕಾದ ವಿಷಯಗಳು ನಾನಾ ಶಾಸ್ತ್ರಜ್ಞಾನ ಲೋಕಾನುಭವಗಳ ಪರಿಪಾಕಸಾರವಾಗಿರಬೇಕಾಗಿವೆ. ಹಾಗ ದಿದ್ದರೆ ಇದಕ್ಕಾಗಿ ವೆಚ್ಚಮಾಡಬಹುದಾದ ದ್ರವ್ಯಕ್ಕೆ ಸಾರ್ಥಕತೆಯುಂಟಾಗುವುದಿಲ್ಲ. ಸರ್ಕಾರದವಲಂಬನೆಯಿಂದಲೇ ಇದು ಉದಯಿಸಿರುವುದರಿಂದ ಅಂಥ ಚೈತನ್ಯವು ಇದರಲ್ಲಿ ಪುರ ವ್ಯಕ್ತವಾಗದೆ ಇರಲಾರದೆಂದು ಎಣಿಸುತ್ತೇವೆ.

ವಿದ್ಯೆಯಲ್ಲೂ ವಾಚನಾಭಿರುಚಿಯಲ್ಲೂ ಹಿಂದಾಗಿರು ಕನ್ನಡನಾಡಿನಲ್ಲಿ ಈ ಪತ್ರಿಕಾ ಪ್ರಸಾರವೂ, ಇದರ ಪ್ರಯೋ ನವೂ ಚೆನ್ನಾಗಿ ಆಗಬೇಕೆಂಬುದು ಇದರ ಉತ್ಪಾದಕರ ಸಂ ಲ್ಪವಾಗಿದ್ದರೆ, ಇದರ ವರ್ಗಣಿಯನ್ನು ೧ರೂ.ಗೆ ನಿಲ್ಲಿಸುವು ಅವಶ್ಯವಾಗಿದೆ. ಹಾಗಾದರೆ ದಿನಕ್ರಮೇಣ ಇದಕ್ಕೆ ಸರ್ಕಾ ದುದ್ಯೋಗಸ್ಥರ ನಿರ್ಬಂಧವಿಲ್ಲದಿದ್ದರೂ ಆಶ್ರಯದಾತರ ಸಂ ಯು ತಾನಾಗಿ ಹೆಚ್ಚಿ, ಪತ್ರವು ತನ್ನ ಕಾಲಮೇಲೆ ತಾನು ನಿ ತುಕೊಳ್ಳಲು ಸಮರ್ಥವಾಗಿ, ಚಿರಕಾಲ ದೇಶಸೇವೆಯನ ಮಾಡಿಕೊಂಡಿರಬಹುದು. ಅದರಿಂದ ಆದಿಭಾಗದಲ್ಲಿ ಸ್ವಲ್ಪ ಷ್ಟವು ಕಾಣಬಂದರೂ ಪರಿಣಾಮದಲ್ಲಿ ಫಲವಿಲ್ಲದೆ ಹೋಗಲ ರದಾದುದರಿಂದ, ಅರ್ಥಸಾಧನೋದ್ದೇಶದಲ್ಲಿ ಅದು ಗಣ್ಯವೆನಿ ವುದಿಲ್ಲ.

ಒಳದೇಶ ವೃತ್ತಾಂತಗಳು

ಅ|| ಕಮಿಷನರಾದ ಮ|| ವೈ. ವಿ. ಕೃಷ್ಣಮೂರ್ತಿ ಬಿ. ಎ. ಯವರು ಮೈಸೂರು ಸಿಟಿ ಮ್ಯಾಜಿಸ್ಟ್ರೇಟರಾಗಿ ವರ್ಗಾಯಿಸಲ್ಪಟ್ಟಿದ್ದಾರೆ.

ನಮ್ಮ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಹ್ಯೂ ಡಾಲಿಯವರ ಅಧಿಕಾರದವಧಿಯು ಇನ್ನೂ ೧ ವರ್ಷಕಾಲದ ವರೆಗೆ ಸಾಮ್ರಾಜ್ಯಸರ್ಕಾರದವರಿಂದ ಹೆಚ್ಚಿಸಲ್ಪಟ್ಟಿತೆಂದು ಕೇಳುತ್ತೇವೆ

ಶ್ರೀಮನ್ ಮಹಾರಾಜರವರು ಬೆಂಗಳೂರು ಮ್ಯುನಿಸಿಪಲ್ ಪ್ರೆಸಿಡೆಂಟರಾದ ದಿ|| ಬ|| ಕೆ. ಪಿ. ಪುಟ್ಟಣ್ಣಸೆಟ್ಟರ ಕೂಡ ತಾ|| ೧೧ರಲ್ಲಿ ಊರಿನ ಬಹುಭಾಗದಲ್ಲಿ ಸಂಚರಿಸಿ ಪರಾಮರ್ಶಿಸಿದರು.

ಮೈಸೂರು ಸಿಟಿ ಮ್ಯಾಜಿಸ್ಟ್ರೇಟರಾಗಿದ್ದ ಮಿ|| ಬಸವಾರಾಧ್ಯ ಬಿ.ಎ ಬಿ. ಎಲ್ ರವರು ಬೆಂಗಳೂರು ಪಟ್ಟಣದ ಮ್ಯುನಿಸಿಪಲ್ ಕೌನ್ಸಿಲ್ಲಿನ ಸೀನಿಯರ್ ವೈಸ್‌ಪ್ರೆಸಿಡೆಂಟರಾಗಿ ನಿಯಮಿಸಲ್ಪಟ್ಟಿದ್ದಾರೆ.

ಡಾ|| ಹನುಮನ್ ಸಿಂಗ್‌ರವರು ಪೆನ್‌ಷನ್ ಪಡೆದು ನಿವೃತ್ತರಾಗುವುದರಿಂದ ಅವರ ಸ್ಥಾನಕ್ಕೆ ರಾಜಧಾನಿಯ ಜನರಲ್ ಆಸ್ಪತ್ರೆಯಲ್ಲಿದ್ದ ಡಾ|| ರಾಜಾರಾಮರಾಯರು ಚಿತ್ರದುರ್ಗ ಡಿಸ್ಟ್ರಿಕ್ಟಿನ ಸಿವಿಲ್‌ಸರ್ಜನರಾಗಿ ನಿಯಮಿಸಲ್ಪಟ್ಟಿದ್ದಾರೆ.

ಪ್ರೊಫೆಸರ್ ಗೆಡ್ಡಿಸ್‌ರವರು ಕಳೆದ ಮಂಗಳವಾರ ಹುಜೂರುಸೆಕ್ರೆಟರಿ ಮಿ|| ಮಿರ್ಜಾಯವರ ಸಂಗಡ ರಾಜಧಾನಿಗೆ ಬಂದಿದ್ದು, ಈ ಊರಿನ ಟೌನ್ ಹಾಲಿನಲ್ಲಿ ಕಾಲೇಜ್ ಪ್ರಿನ್ಸಿಪಾಲ್ ಮಿ|| ಡೆನ್‌ಹ್ಯಾಂ ಸಾಹೇಬರ ಅಧ್ಯಕ್ಷತೆಯಿಂದ ನಗರನಿರ್ಮಾಣಕೌಶಲವಿಷಯಕವಾದ ಒಂದು ಉಪನ್ಯಾಸವನ್ನು ಮಾಡಿದರು.

ಆಲ್‌ಇಂಡ್ಯಾ ಶ್ರೀವೈಷ್ಣವ ಕಾನ್‌ಫರೆನ್ಸಿನ ಸ್ಪೆಷಲ್‌ಮೀಟಿಂಗು ಈ ತಾ|| ೨೨-೨೩-೨೪ ರಲ್ಲಿ ಬೃಂದಾವನಕ್ಷೇತ್ರದಲ್ಲಿ ಶ್ರೀ ಸ್ವಾಮಿಜಿ ಮಹಾರಾಜ ಶ್ರೀ ತೋತಾದ್ರಿ ರಾಮಾನುಜಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆಯುವುದು. ಇದೇ ಸಮಯದಲ್ಲಿ ಈ ಕ್ಷೇತ್ರದಲ್ಲಿ ಕುಂಭಮೇಳಾಜಾತ್ರೆಯೂ ಜರುಗುವುದು.

ಕಳೆದ ತಾ|| ೧೬ ರಲ್ಲಿ ಶ್ರೀಮನ್ಮಹಾರಾಜರವರು ಮೋಟಾರುಬಂಡಿಯಲ್ಲಿ ಬೆಂಗಳೂರಿಂದ ಮದ್ರಾಸಿಗೆ ಪ್ರಯಾಣಮಾಡಿದರು, ಮತ್ತೂ ಈ ಗುರುವಾರದೊಳಗೆ ರಾಣೀವಾಸದವರೊಡನೆ ಬೆಂಗಳೂರಿಗೆ ಹಿಂದಿರುಗಿ ತಾ|| ೨೮ರಲ್ಲಿ ರಾಜಧಾನಿಗೆ ಚಿತ್ತೈಸುವುದಾಗಿಯೂ ಯುಗಾದಿಹಬ್ಬವಾದ ಕೂಡಲೆ ಉದಕಮಂಡಲಕ್ಕೆ ತೆರಳುವುದಾಗಿಯೂ ತಿಳಿಯುತ್ತೇವೆ.

ಸೀನಿಯರ್ ಸರ್ಜನುದ್ಯೋಗದಿಂದ ನಿವೃತ್ತರಾಗಿರುವ ಡಾ|| ಪಿ.ಎಸ್. ಅಚ್ಯುತರಾಯರ ಕನಿಷ್ಠ ತಮ್ಮಂದಿರಾದ ಫಾರೆಸ್ಟುಗಳ ಕನ್ಸರ್ವೇಟರಾಫೀಸಿನ ಆಡಿಟರಾಗಿದ್ದ ಮ|| ಪಿ. ಎಸ್. ವಾಸುದೇವರಾಯರು ಕಳೆದ ತಾ|| ೧೧ರಲ್ಲಿ ಯಥಾಪ್ರಕಾರ ಆಫೀಸಿಗೆ ಹೋಗಿ ಬಂದು ಅಕಸ್ಮಿಕವಾಗಿ ಸ್ವಾಶವು ನಿಂತುಹೋಗಿ ವಿಧಿವಶರಾದರೆಂದು ತಿಳುಹಲು ಬಹಳ ವ್ಯಸನವಾಗುತ್ತದೆ. ಇವರು ಇನ್ನೂ ಚಿಕ್ಕವಯಸ್ಸಿನವರೂ, ಗುಣಾಢ್ಯರೂ ಮಕ್ಕಳಿಂದಿಗರೂ ಆಗಿದ್ದರು.

ತುಮಕೂರು ಡಿ|| ಗುಬ್ಬಿಯಲ್ಲಿ ಇದೇ ತಾ|| ೨೪ ರಲ್ಲಿ ಶ್ರೀ ಚೆನ್ನಬಸವೇಶ್ವರಸ್ವಾಮಿಯ ರಥೋತ್ಸವವೂ, ತಾ|| ೨೫ರಲ್ಲಿ ರುದ್ರಾಕ್ಷಿಮಂಟಪೋತ್ಸವವೂ, ತಾ|| ೨೬ ರಲ್ಲಿ ನವರಂಗಪಲ್ಲಕ್ಕಿಯುತ್ಸವವೂ, ೨೭ ರಲ್ಲಿ ಬೆಳ್ಳಿಪಲ್ಲಕ್ಕಿಮಹೋತ್ಸವವೂ, ೨೮ರಲ್ಲಿ ನಕ್ಷತ್ರಮಂಟಪೋತ್ಸವವೂ; ಮಾರ್ಚಿ ತಾ|| ೧ ರಲ್ಲಿ ಬಿಲ್ವವೃಕ್ಷೋತ್ಸವವೂ, ೨ರಲ್ಲಿ ತೆಪ್ಪೋತ್ಸವವೂ ನಡೆಯುವುದಲ್ಲದೆ, ದನಗಳ ಪ್ರದರ್ಶನವೂ ನಡೆದು ಉತ್ತಮವಾದ ರಾಸುಗಳಿಗೆ ಬಹುಮಾನಗಳು ಕೊಡಲ್ಪಡುವುವು.

ಕಳೆದ ೧೬ರಲ್ಲಿ ಕಾನಕಾನಹಳ್ಳಿ ತಾ|| ಕಬ್ಬಾಳದುರ್ಗದಲ್ಲಿ ಕಬ್ಬಾಳಮ್ಮನ ಜಾತ್ರೆಯು ನಡೆಯಿತು. ಆ ದಿವಸ ತಾ|| ಅಮಲ್ದಾರ್ ಮಿ|| ಡಾನ್ ಯವರು ಉತ್ತಮವಾದ ದನಗಳನ್ನೂ, ಕೈಗಾರಿಕೆಯ ಮತ್ತೂ ಬೇಸಾಯದ ವಸ್ತುಗಳನ್ನೂ ಪ್ರದರ್ಶನಕ್ಕಾಗಿ ಬರಮಾಡಿಕೊಂಡು ಡೆ|| ಕಮಿಷನರ್ ಮಿ|| ಚಾಂಡಿಯವರಿಂದ ಅದರ ಆರಂಭೋತ್ಸವವನ್ನು ನಡೆಯಿಸಿದರು. ಸಬ್‌ಡಿವಿಜನಾಫೀಸರೂ, ಪೊಲೀಸ್ ಸೂಪರಿಂಟೆಂಡೆಂಟರೂ, ಡಿ|| ಮೆಡಿಕಲಾಫೀಸರೂ ಬಂದಿದ್ದರು. ಮತ್ತೂ ಪರಿಷೆಗೆ ಜನರು ಬಹಳವಾಗಿ ಸೇರಿದ್ದರು.

ಕಳೆದ ನಿಯಮನಿರ್ಮಾಣ ಸಭೆಯಲ್ಲಿ ನಡೆದ ಚರ್ಚೆಯೊಳಗೆ ಸಂಸ್ಥಾನದಲ್ಲಿ ಹೊಸದಾಗಿ ೨೩೮ ಮೈಲಿಗಳ ಲೋಹಮಾರ್ಗವು ಸ್ಥಾಪಿಸಲ್ಪಡುವುದೆಂದೂ, ಇದರ ವೆಚ್ಚವು ೧೦೦೨೬೨೫೪ ರೂ.ಗಳಾಗುವುವೆಂದೂ, ಹೀಗೆ ಉಪಯೋಗಿಸಿದ ಹಣದ ಮೇಲೆ ಬರುವ ಬಡ್ಡಿಯು ಒಳ್ಳೆಯ ಲಾಭಕರವಾಗಿರುವುದೆಂದೂ, ನಂಜನಗೂಡಿನಿಂದ ಈರೋಡಿನಲ್ಲೋ ಅಥವಾ ಮತ್ತೊಂದು ನಿಲ್ದಾಣದಲ್ಲೋ ದಕ್ಷಿಣಇಂಡ್ಯಾ ಲೋಹಮಾರ್ಗದೊಡನೆ ಸಂಬಂಧವನ್ನು ಕಲ್ಪಿಸುವ ವಿಷಯದಲ್ಲಿ ಇಂಡ್ಯಾ ಗೌರ್ನಮೆಂಟಿನವರೊಡನೆ ಪತ್ರವ್ಯವಹಾರವು ನಡೆಯುತ್ತಿರುವುವೆಂದೂ ಗೊತ್ತಾಗುತ್ತದೆ.

ಪ್ರಜಾಪ್ರತಿನಿಧಿಸಭೆಯ ಮೆಂಬರುಗಳಾಗಲಿಷ್ಟವುಳ್ಳ ಜನರು ತಂತಮ್ಮ ತಾಲ್ಲೋಕು ಅಮಲ್ದಾರರುಗಳಿಗೆ ತಮ್ಮ ಹೆಸರುಗಳನ್ನು ಮೆಂಬರುಗಳನ್ನಾರಿಸುವ ಅವಧಿಗೆ ೧ ತಿಂಗಳ ಮುಂದಾಗಿ ಕಳುಹತಕ್ಕದು. ಅನಂತರ ಆ ಹೆಸರುಗಳು ಮತ (ಓಟು) ಗಳನ್ನು ಕೊಡತಕ್ಕವರಿಗೆ ತಿಳುಹಲ್ಪಡುವುವು. ಪ್ರಜಾಪ್ರತಿನಿಧಿಸಭೆಯು ಆಶ್ವೀಜ ಶುದ್ಧ ೧೧ ರಲ್ಲಿ (ಆದಿವಸ ಭಾನುವಾರವಾದಲ್ಲಿ ಮಾರನೆಯ ದಿನ) ಆರಂಭಿಸಲ್ಪಡುವುದು. ವಿಜ್ಞಾಪನಪತ್ರಿಕೆಗಳನ್ನೊಪ್ಪಿಸಲಿಷ್ಟವುಳ್ಳ ಪ್ರತಿನಿಧಿಗಳು ಅವುಗಳ ೩ ಪ್ರತಿಗಳನ್ನು ಸಭಾರಂಭದಿವಸಕ್ಕೆ ಕನಿಷ್ಠಪಕ್ಷ ೧ ವಾರ ಮುಂದಾಗಿ ಜ|| ಮತ್ತೂ ರೆವಿನ್ಯೂಸೆಕ್ರೆಟರಿಯವರಲ್ಲಿಗೆ ಕಳುಹತಕ್ಕದು. ಇತರ ವಿಜ್ಞಾಪನಗಳೆಲ್ಲಾ ಎಂದಿನಂತೆ ೧ತಿಂಗಳ ಮುಂದಾಗಿ ಗೊತ್ತುಮಾಡಲ್ಪಡುವುವು ಎಂದು ಸರಕಾರದಪ್ಪಣೆಯಾಗಿದೆ. ಇದರ ಪ್ರಕಾರ ಈ ವರ್ಷದ ಪ್ರಜಾಪ್ರತಿನಿಧಿಸಭೆಯು ಬರುವ ಆಕ್ಟೋಬರ್ ತಾ|| ೧೯ ನೆಯ ಮಂಗಳವಾರದ ದಿವಸ ಪ್ರಾರಂಭವಾಗುವುದು.

ರಾಜಧಾನಿಯ ಮುನ್ಸಿಪಲ್‌ಕೌನ್ಸಿಲರೂ, ಲೆ|| ಕೌನ್ಸಿಲ್ ಮೆಂಬರೂ ಆದ ಅಡ್ವೋಕೇಟ್ ಮ|| ಎಂ. ಸಿ. ರಂಗಯ್ಯಂಗಾರರಿಗೆ ಇಂಡ್ಯಾ ಸರಕಾರದಿಂದ ರಾವ್‌ಬಹದ್ದೂರ್ ಪ್ರಶಸ್ತಿಯು ಲಭ್ಯವಾದುದರಿಂದುಂಟಾಗಿರುವ ಸಂತೋಷವನ್ನು ಇಲ್ಲಿಯ ಪುರವಾಸಿಗಳು ಪ್ರದರ್ಶಿಸುವ ಬಗೆಗೆ ಮ|| ಅಯ್ಯಂಗಾರರನ್ನು ಕಳೆದ ತಾ|| ೧೩ ರಲ್ಲಿ ಟೌನ್‌ಹಾಲಿಗೆ ಬರಮಾಡಿಕೊಂಡು ಮ|| ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಭೆಗೂಡಿಸಿ ಅವರ ಗುಣಕಥನವನ್ನು ಮಾಡಿ, ಮ|| ಎಂ.ಡಿ ಕೃಷ್ಣನ್‌ಯವರ ಯಕ್ಷಣಿ, ವೈಣಿಕಶಿಖಾಮಣಿ ಶೇಷಣ್ಣನವರ ವೀಣಾವಾದನ, ವಿದ್ವಾನ್ ಚಿಕ್ಕರಾಮರಾಯರ ಗಾಯನ, ಮತ್ತೂ ಮುಂಮಲ್ಲಪ್ಪನವರ ಹೈಸ್ಕೂಲ್‌ವಿದ್ಯಾರ್ಥಿಗಳ ನಾಟಕಾಭಿನಯನಗಳಿಂದ ಸಂತೋಷಗೊಳಿಸಿದರು ಅಧ್ಯಕ್ಷರ ಭಾಷಣವಾದಮೇಲೆ ಮ|| ಅಯ್ಯಂಗಾರರು ಯುಕ್ತವಾದುತ್ತರವನ್ನು ಕೊಡುವಾಗ್ಗೆ ತಮಗೆ ಪ್ರಾಪ್ತವಾಗಿರುವ ಪ್ರಶಸ್ತಿಯು ಗೌರವಕ್ಕೆ ಶ್ರೀಮನ್ ಮಹಾರಾಜರವರ ಕೃಪೆಯೂ, ತಮ್ಮ ಹಿತೈಷಿಗಳೂ ಸಹೋದ್ಯೋಗಿಗಳೂ ಆದವರ ಸಹಾಯ್ಯವೂ ಕಾರಣವೆಂದು ತಿಳಿಸಿದರು.

ಬೆಂಗಳೂರ ದೊಡ್ಡಪೇಟೆಯಲ್ಲಿರುವ ಊಪಟತ್ತಿನಾವ್ ಮ|| ರಾ|| ಕಳ್ಳಿಪ್ಪನವರು ರಾ|| ಬಾ|| ತೋಟದಪ್ಪನವರ ಮೆಮೋರಿಯಲ್ ಫುಟ್‌ಬಾಲ್ ಕ್ಲಬ್ಬು ಮತ್ತೂ ಇದೇ ಊರಿನ ಎಂಗ್‌ಮೆನ್ಸ್ ವೀರಶೈವ ಅಸೋಸಿಯೇಷನ್ ಫುಟ್‌ಬಾಲ್ ಕ್ಲಬ್ಬುಗಳಲ್ಲಿ ಯಾರು ಪಂದ್ಯದಲ್ಲಿ ಗೆಲ್ಲುವರೋ ಅವರಿಗೆ ಶ್ರೀಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಯವರ ಹೆಸರಿನಿಂದ ಒಂದು ಕಪ್ಪನ್ನು ಕೊಡುವುದಾಗಿ ವಾಗ್ದಾನಮಾಡಿದ್ದಪ್ರಕಾರ ಉಭಯಸಂಘದವರಿಗೂ ಫುಟ್‌ಬಾಲಿನ ಪಂದ್ಯವು ಕಳೆದ ತಾ|| ೧೩ ನೆಯ ಸಾಯಂಕಾಲ ಬೆಂಗಳೂರ ಸೆಂಟ್ರಲ್‌ಕಾಲೇಜಿನ ಆಟದ ಬಯಲಿನಲ್ಲಿ ನಡೆದು, ಅದರಲ್ಲಿ ಜಯಶೀಲರಾದ ರಾ|| ಬಾ|| ಗುಬ್ಬಿತೋಟದಪ್ಪನವರ ಮೆಮೋರಿಯಲ್ ಕ್ಲಬ್ಬಿನವರಿಗೆ ಕಾಲೇಜಿನ ಪ್ರಿನ್ಸಿಪಾಲರಾದ ಮಿ|| ಜೆ. ಜಿ. ಟೇಟ್, ಎಂ. ಎ. ಯವರ ಹಸ್ತದಿಂದ ಕಪ್ಪು ಕೊಡಿಸಲ್ಪಟ್ಟಿತು. ಪ್ರೇಕ್ಷಕರ ಸಂಖ್ಯೆಯು ಬಹಳವಾಗಿದ್ದಿತು. ಪ್ರಿನ್ಸಿಪಾಲ್‌ರವರು ಕಪ್ಪನ್ನು ಕೊಡುವಾಗ್ಗೆ ವ್ಯಾಯಾಮವಿಚಾರದಲ್ಲಿ ಪ್ರೋತ್ಸಾಹಕರವಾದ ವಾಕುಗನ್ನು ಆಡಿದುದಲ್ಲದೆ ಈ ಕಪ್ಪನ್ನೇರ್ಪಡಿಸಿದ ಮ|| ಕಳ್ಳಿಪ್ಪನವರ ಉದಾರಬುದ್ಧಿಯನ್ನು ಶ್ಲಾಘಿಸಿದರು ಎಂದು ಒಬ್ಬ ಪ್ರೇಕ್ಷಕರು ಬರೆದಿರುತ್ತಾರೆ.

ಬೆಂಗಳೂರಲ್ಲಿ -ಮೈಸೂರು ಪ್ರಾವಿನ್‌ಷಿಯಲ್ ಕೋ ಆ|| ಪರೇಟಿವ್‌ಬ್ಯಾಂಕ್ ಲಿಮಿಟೆಡ್ - ಎಂಬ ಹೆಸರಿನ ಪರಸ್ಪರ ಸಹಾಯಸಂಘವು ನೂತನವಾಗೇರ್ಪಡಿಸಲ್ಪಟ್ಟಿರುತ್ತದೆ. ಇದರ ಬಂಡವಾಳವು ೧೨ ಲಕ್ಷ ರೂ.ಗಳು, ಮತ್ತು ಷೇರು ೧ಕ್ಕೆ ೧ ರೂ ನಂತೆ ೧೨೦೦೦೦ ಷೇರುಗಳು. ಸಂಸ್ಥಾನದಲ್ಲಿರುವ ಒಟ್ಟು ೬೫೦ ಪರಸ್ಪರಸಹಾಯಸಂಘಗಳು ಸಾಲವಾಗಿ ಪಡೆಯಲರ್ಹವಾಗಿರುವಂತಹ ೫೦ ಲಕ್ಷ ರೂ ಗಳನ್ನು ಈ ಪ್ರಾವಿನ್‌ಷಿಯಲ್‌ಬ್ಯಾಂಕಿನಲ್ಲಿ ಬಂಡವಾಳನಾಗಿಟ್ಟು, ಬಂದ ಲಾಭದಲ್ಲಿ ಷೇರುದಾರರಿಗೆ ೧೦೦ಕ್ಕೆ ೬ ರೂ.ಗೆ ಮೀರದಂತೆ ನಫೆಯನ್ನು ಹಂಚಿ, ಮಿಕ್ಕ ಹಣವನ್ನು ಪರಸ್ಪರ ಸಹಾಯಪದ್ಧತಿಯನ್ನು ಪ್ರಸಾರಪಡಿಸುವುದಕ್ಕೂ ಈ ಸಂಘಗಳ ಮೇಲ್ವಿಚಾರಣೆಗೆ ತಗಲುವ ವೆಚ್ಚವನ್ನು ಒದಗಿಸಿಕೊಡುವುದಕ್ಕೂ ತನ್ಮೂಲಕ ಸಂಘಗಳ ಸ್ವಾವಲಂಬನಕಾರ್ಯಗಳು ಅಭಿವೃದ್ಧಿಯಾಗುವುದಕ್ಕೂ ಪರಸ್ಪರಸಹಾಯಸಂಘ ಶಾಖೆಗಾಗಿ ಸರ್ಕಾರಕ್ಕೆ ತಗಲುವ ವೆಚ್ಚಗಳನ್ನು ಕಡಿಮೆಮಾಡುವುದಕ್ಕೂ ಅನುಕೂಲವಾಗಿರುವಂತೆ ಈ ಹೊಸ ಸೊಸೈಟಿಯು ಏರ್ಪಟ್ಟಿರುವುದಾಗಿ ಇದರ ಪ್ರಕಟನಪತ್ರಿಕೆಯಲ್ಲಿ ತಿಳುಹಲ್ಪಟ್ಟಿದೆ. ಇದರ ಸಂಬಂಧವಾದ ನಡವಳಿಕೆಗಳನ್ನು ತಿಳಿಯಲಪೇಕ್ಷಿಸುವವರು ಈ ಸೊಸೈಟಿಯ ತತ್ಕಾಲಿಕಡೈರೆಕ್ಟರುಗಳ ಬೋರ್ಡಿನ ಸೆಕ್ರೆಟರಿಯವರಾದ ಬೆಂಗಳೂರು ಎಕ್ಸ್‌ಪ್ರೆಸ್ ಪ್ರೊಪ್ರೈಟರಾದ ಮ|| ಕೆ. ಎನ್. ಎ. ಕೃಷ್ಣಯ್ಯರ್ ಬಿ.ಎ., ಯವರಿಗೆ ಬರೆದುಕೊಳ್ಳುವುದು.

ಕಡೂರು ಡಿ|| ಕೊಪ್ಪದಲ್ಲಿ ಬರುವ ಜುಲೈ ತಾ|| ೧ ರಿಂದ ಒಂದು ಮುನಸೀಫ್‌ಕೋರ್ಟು ಸ್ಥಾಪಿಸಲ್ಪಡುವುದು.

ನಂಜಪ್ಪ ಉರಫ್ ಪುಟ್ಟಕೂಸು ಎಂಬುವನು ತನ್ನ ಹೆಂಡತಿಯ ಕೊರಳನ್ನು ಕೊಡಲಿಯಿಂದ ಕತ್ತರಿಸಿ ಕೊಂದಪರಾಧಕ್ಕಾಗಿ ಮೈಸೂರು ಸೆಷನ್ಸ್ ಜಡ್ಜರಿಂದ ವಿಧಿಸಲ್ಪಟ್ಟಿದ್ದ ಮರಣದಂಡನೆಯ ಚೀಫ್‌ಕೋರ್ಟಿನ ಅಪೀಲಿನಲ್ಲಿ ಸ್ಥಿರಗೊಳಿಸಲ್ಪಟ್ಟಿತು.

ಮೈಸೂರ ಡಿಸ್ಟ್ರಿಕ್ಟ್‌ಬೋರ್ಡು ಮೀಟಿಂಗು ನಿನ್ನೆಯದಿನ ಪಬ್ಲಿಕ್ ಆಫೀಸಿನಲ್ಲಿ ನಡೆದಿತು. ಇದಕ್ಕಾಗಿ ಸ| ಡಿ| ಆಫೀಸರುಗಳೂ ತಾಲ್ಲೋಕು ಅಮಲ್ದಾರರುಗಳೂ ಮೆಂಬರುಗಳೂ ಬಂದಿದ್ದರು. ಇದರ ಹಿಂದಣದಿವಸ ಕೆರೆಗಳ ಜೀರ್ಣೋದ್ಧಾರದ ವಿಚಾರವಾಗಿ ಮೇಲೆಕಂಡ ಅಧಿಕಾರಿಗಳ ಸಭೆಸೇರಿದ್ದು ಪರ್ಯಾಲೋಚನೆಯು ನಡೆದಿತು.

ಕೊಡಗುಸೀಮೆಗೆ ಸೇರಿದ ಆನೆಚೌಕೂರು ಪ್ರಾಂತದಲ್ಲಿ ೧ ಕಾಡಾನೆಯು ಕಳೆದ ೧ ವರ್ಷದಿಂದಲೂ ಗಂಧದಮರಗಳನ್ನು ಹಾಳುಮಾಡುತ್ತಾ ಪ್ರಯಾಣಿಕರಿಗೂ ಬಂಡಿಗಳಿಗೂ ಬಹಳ ತೊಂದರೆಯನ್ನು ಪಡಿಸುತ್ತಿದ್ದಿತು. ಇದನ್ನು ರಾಜಧಾನಿಯ ಥಿಯೊಬಾಲ್ಡ್ ಸಹೋದರರು ಕಳೆದ ತಾ|| ೮ ರಲ್ಲಿ ಗುಂಡಿನಿಂದ ಸುಟ್ಟು ಕೊಂದುಹಾಕಿದರು. ಇದು ೯ ಅಡಿ ೨ ಅಂಗುಲ ಎತ್ತರವಿದ್ದಿತಲ್ಲದೆ ಇದರ ಕೊಂಬುಗಳು ೪ ಅಡಿ ೬ ಅಂಗುಲ ಉದ್ದವಿರುವುವು.

ಕಳೆದ ಡಿಸೆಂಬರಲ್ಲಿ ಕ್ಲೋಸ್‌ಪೇಟೆಗೂ ಬಿಡದಿಗೂ ಮಧ್ಯದಾರಿಯಲ್ಲಿ ರೈಲ್ವೆ ಗಾರ್ಡು ಬಳಿಯಲ್ಲಿದ್ದ ಹಣದ ಪೆಟ್ಟಿಗೆಯು ಮುರಿಯಲ್ಪಟ್ಟು ಹಣವು ಅಪಹರಿಸಲ್ಪಟ್ಟಿದ್ದಿತಷ್ಟೆ. ಈಗ ಪೊಲೀಸಿನವರು ಕಳುವಾಗಿದ್ದ ೩೦೦೦ಸಾವಿರ ರೂ.ಗಳಲ್ಲಿ ೨೦೦೦ ರೂವರೆಗಿನ ನೋಟುಗಳನ್ನೂ ನಗದುಹಣವನ್ನೂ ಕಂಡುಹಿಡಿದು ಬಿಡದಿಯಲ್ಲಿ ಹಿಂದೆ ಪೋರ್ಟರಾಗಿದ್ದ ಸುಬ್ಬನೆಂಬುವನನ್ನು ಹಿಡಿದು ಸೆರೆಯಲ್ಲಿಟ್ಟಿರುತ್ತಾರೆ.

ಬೆಂಗಳೂರಲ್ಲಿರುವ ಶ್ರೀ ಉತ್ತರಾದಿಮಠದ ಸ್ವಾಮಿಗಳು ಶ್ರೀ ವ್ಯಾಸರಾಯಮಠದವರಿಂದ ಬಹಿಷ್ಕೃತರಾಗಿದ್ದ ಕೆಲ ಶಿಷ್ಯಜನರನ್ನು ತಮ್ಮ ಮಠಕ್ಕೆ ಸೇರಿಸಿಕೊಂಡರೆಂದು ಬಹಳ ಗದ್ದಲವೆದ್ದಿರುವುದಲ್ಲದೆ, ಆ ವಿಚಾರವನ್ನು ಚರ್ಚಿಸಿ ಪರ್ಯಾಲೋಚಿಸುವ ಬಗೆಗೆ ವ್ಯಾಸರಾಯಮಠದ ಶಿಷ್ಯರು ಬೆಂಗಳೂರಲ್ಲಿ ಅ|| ಕಂಟ್ರೋಲರಾದ ಮ|| ಟಿ. ಲಕ್ಷ್ಮೀನರಸಿಂಹರಾವ್, ಬಿ.ಎ., ಬಿ.ಎಲ್., ರವರ ಅಧ್ಯಕ್ಷತೆಯಲ್ಲಿ ಈದಿವಸ ಸಭೆ ಸೇರುವವರಾಗಿರುವರು.

ಕಳೆದ ತಾ|| ೧೪ರಲ್ಲಿ ಬೌರಿಂಗ್‌ಪೇಟೆಯ ಕಿಂಗ್ ಎಡ್ವರ್ಡ್ ಹಾಲಿನಲ್ಲಿ ಮೈಸೂರು ಸೀಮೆಯ ವ್ಯವಸಾಯದ ಡೈರೆಕ್ಟರಾದ ಡಾಕ್ಟರ್ ಕೋಲ್ಮನ್ನರ ಅಧ್ಯಕ್ಷತೆಯಲ್ಲಿ ಒಂದು ವ್ಯವಸಾಯ ಸಂಬಂಧವಾದ ಸಭೆಯು ಸೇರಿದ್ದಿತು. ಇದಕ್ಕೆ ಡಿ|| ಬೋರ್ಡು ಮತ್ತೂ ಎಕನಾಮಿಕ್ ಕಮಿಟಿ ಮೆಂಬರುಗಳೂ ತಾ|| ಅಮಲ್ದಾರರುಗಳೂ ಬಂದಿದ್ದರು. ಡಿಪ್ಯುಟಿಡೈರೆಕ್ಟರಾದ ಮ|| ಯಜ್ಞನಾರಾಯಣಯ್ಯರ್‌ರವರು ಬೌರಿಂಗ್‌ಪೇಟೆಯ ಅಮಲ್ದಾರ್ ಮ|| ಸಿದ್ಧರಾಮಪ್ಪನವರಿಂದ ಸಭಿಕರಿಗೆ ಪರಿಚಯಮಾಡಿಸಲ್ಪಟ್ಟಮೇಲೆ ವ್ಯವಸಾಯಸಂಬಂಧವಾಗಿ ಕನಡದಲ್ಲಿ ಉಪನ್ಯಾಸವನ್ನು ಮಾಡಿದರು. ಆಗ್ಗೆ ಕಬ್ಬಿನವ್ಯವಸಾಯಕ್ರಮ, ಅದರ ಪ್ರಯೋಜನ ಎಂತೆಂತಹ ಕಬ್ಬಿನಿಂದ ಎಂತಹ ಮತ್ತೂ ಎಷ್ಟು ಬೆಲ್ಲವಾಗುತ್ತದೆ, ಇದಕ್ಕೆ ಬೇಕಾದ ಯಂತ್ರಸಾಮಗ್ರಿಗಳನ್ನು ಎಚ್ಚರಿಕೆಯಿಂದುಪಯೋಗಿಸಿದರೆ ಅದರಿಂದಾಗುವ ಲಾಭ ಮೊದಲಾದ ವಿಚಾರಗಳನ್ನು ಚೆನ್ನಾಗಿ ತಿಳಿಯಹೇಳಿದುದಲ್ಲದೆ ಮಳೆಯನೀರನ್ನು ಗೊಬ್ಬರವನ್ನು ಹಾಕುವಾಗ್ಗೆ ವೃಥಾ ಹಾಳುಮಾಡದೆ ಮಿತಿಯಾಗಿ ಖರ್ಚುಮಾಡಿ ಕೆರೆ ಕುಂಟೆ ಬಾವಿ ಮೊದಲಾದುವುಗಳಲ್ಲಿ ನೀರನ್ನು ಜೋಪಾನದಿಂದ ಕಾದಿಟ್ಟುಕೊಂಡಿರಬೇಕೆಂದು ಬಹಳ ಒತ್ತಿಹೇಳಿದರು. ತರುವಾಯ ಕಬ್ಬಿಣದನೇಗಿಲುಗಳ ಸ್ವಭಾವ ಅವುಗಳಿಂದಾಗತಕ್ಕ ಪ್ರಯೋಜನ ಆಳವಾಗಿ ಉಳುವುದು, ಹಸರುಗೊಬ್ಬರ ದನಗಳನ್ನು ಸಾಕುವುದು ಅವುಗಳ ಗೊಬ್ಬರ, ಭೂಮಿಯನ್ನು ಹಸನುಮಾಡಿ, ಬಿತ್ತನೆಯನ್ನು ಬಿತ್ತಿ ಮೊಳಕೆಬರುವಾಗ್ಗೆ ಅವುಗಳನ್ನು ಜೋಪಾನದಿಂದ ನೋಡಿಕೊಳ್ಳುವುದು, ಕಟಾವು ಮಾಡಿ ಬೆಳೆಯನ್ನು ರೇಖೆಮಾಡಿ ಕಣಜದಲ್ಲಿ ಶೇಖರಿಸುವುದು ಇವು ಮೊದಲಾದ ವಿಚಾರಗಳನ್ನು ಎಲ್ಲರಿಗೂ ಬೋಧಿಸಿ ಹೊಸಮಾದ್ರಿಯ ನೇಗಿಲುಗಳು ೩ ಪ್ರತಿ ತಾಲ್ಲೋಕು ಕಚೇರಿಯಲ್ಲೂ ಮಾರಾಟಕ್ಕೆ ಮಡಗಲ್ಪಡುವುವು. ಇಷ್ಟವುಳ್ಳವರು ಅಮಲ್ದಾರರಿಂದ ಕ್ರಯಕ್ಕೆ ಪಡೆಯಬಹುದು ಎಂದು ಹೇಳಿದರು. ಅನಂತರ ಕೋಲಾರತಾಲ್ಲೋಕಿನ ಶ್ರೀಮಂತ ಜೋಡಿದಾರರಾದ ಚೀಮಂಗಲದ ಮ|| ಗುಂಡಪ್ಪನವರು ಆಆ ಋತುವಿನ ಮಳೆಯು ಬರುವಂತೆ ಮಾಡಲಿಕ್ಕಾಗುವುದಿಲ್ಲವೆ ? ಕೆರೆಗಳಲ್ಲಿ ನೀರು ಬತ್ತಿಹೋಗದೆ ಯಾವಾಗಲೂ ತುಂಬಿರುವಂತೆ ಸರ್ಕಾರದವರು ಏನಾದರೂ ಉಪಾಯವನ್ನು ಕಂಡುಹಿಡಿಯಬಹುದಲ್ಲವೆ ? ಎಂದು ಉಪನ್ಯಾಸಕರನ್ನು ಕೇಳಿ, ಜಮೀನುಗಳು ಹಳ್ಳತಿಟ್ಟಾಗಿರುವುದರಿಂದ ತಿಟ್ಟಿನಲ್ಲಿ ನೀರುನಿಲ್ಲದೆ ಹಳ್ಳಪ್ರದೇಶಕ್ಕೆ ಹರಿದುಹೋಗುವುದರ ಮೂಲಕ ತಿಟ್ಟಿನ ಭೂಮಿಗಳು ಬೇಗ ಒಣಗಿಹೋಗುತ್ತವೆಂದು ತಿಳಿಸಿದರು. ಕ್ಯಾಸನಹಳ್ಳಿಯ ಮ|| ವೆಂಕಟರಡ್ಡಿಯವರು ತಮ್ಮ ಗ್ರಾಮದಲ್ಲಿ ಒಂದು ಪರೀಕ್ಷಾಕ್ಷೇತ್ರವನ್ನು ಮಾಡುವುದಕ್ಕೆ ಬೇಕಾದಷ್ಟು ಭೂಮಿಯನ್ನು ಕೊಡುತ್ತೇವೆಂದು ಹೇಳಿದರು. ಡಾ|| ಕೋಲ್ಮನ್‌ರವರೂ ಅವರ ಡೆಪ್ಯುಟಿಯವರೂ ರೈತಪ್ರಜೆಗುಪಯೋಗವನ್ನು ಮಾಡುವ ಬಗೆಗೆ ಈ ರೀತಿಯಾಗಿ ಶ್ರಮವನ್ನು ವಹಿಸುತ್ತಿರುವುದಕ್ಕಾಗಿ ಮ|| ಟಿ. ರಾಮಚಂದ್ರರಾಯರು ಅವರುಗಳನ್ನು ವಂದಿಸಿದರು. ಅನಂತರ ಸಭೆಯು ಉಪಸಂಹರಿಸಲ್ಪಟ್ಟಿತು.

[೩ ನೆಯ ಪುಟದಿಂದ ಮುಂದೆ ಸಾಗಿದುದು]

ಸುಪ್ರಸಿದ್ಧ ಗಾಂಧಿದಂಪತಿಗಳು ಕಳೆದ ತಾ॥ ೮ ರಲ್ಲಿ ಪೂನಾ ಪಟ್ಟಣಕ್ಕೆ ಬಂದರು. ಆಗ ಅಲ್ಲಿನ ಪುರಪಾಲಕ ಸಂಘದವರು ನಿಲ್ದಾಣವನ್ನು ಬಹಳ ಚೆನ್ನಾಗಿ ಅಲಂಕರಿಸಿ, ಕಾದು ನಿಂತಿದ್ದು ಬಹು ಮರ್ಯಾದೆಯಿಂದ ಸ್ವಾಗತಮಾಡಿ ಉತ್ಸವಪೂರ್ವಕವಾಗಿ ಪುರಪ್ರವೇಶಮಾಡಿಸಿದರು. ಪಟ್ಟಣದ ಬೀದಿಗಳೆಲ್ಲಾ ಅಲಂಕೃತವಾಗಿದ್ದುವು. ಅಲ್ಲಲ್ಲಿಗೆ ಪುಷ್ಪಹಾರಗಳು ಆ ಮಾನನೀಯದಂಪತಿಗಳಿಗೆ ಪುರಜನರಿಂದ ಅರ್ಪಿಸಲ್ಪಟ್ಟುವು.

ಬಂಗಾಳದಲ್ಲಿ ಅಡ್ವೋಕೇಟಾಗಿದ್ದ ಬೆಲಾಫ್ಟ್ ಹುರ್ಲೆ ಎಂಬಾತನಿಗೆ ದಗಾಮಾಡಿದ ಅಪರಾಧಕ್ಕಾಗಿ ಗಯಾದ ಸಷೆಜಡ್ಜರಿಂದ ೨ ವರ್ಷ ಕಾರಾಗೃಹವಾಸಶಿಕ್ಷೆಯು ವಿಧಿಸಲ್ಪಟ್ಟಿತು. ಅಪರಾಧಿಯು ಹೈಕೋರ್ಟಿಗೆ ಮಾಡಿಕೊಂಡಿದ್ದ ಅಪ್ಪೀಲಿನಿಂದ ಶಿಕ್ಷೆಯಲ್ಲಿ ೯ ತಿಂಗಳು ಕಡಿಮೆಯಾಯಿತು. ನ್ಯಾಯವಾದಿಯಾದಾತನು ಹೀಗೆ ಶಿಕ್ಷಿತನಾದ ಕಾರಣದಿಂದ ಅವನು ವಕೀಲತನದಲ್ಲಿರುವುದಕ್ಕೆ ಅರ್ಹನಲ್ಲನೆಂದು ಹೇಳಿ ಕಲ್ಕತ್ತಾ ಹೈಕೋರ್ಟಿನವರು ಅವನನ್ನು ವಕೀಲರ ಪಟ್ಟಿಯಿಂದ ತೊಲಗಿಸಿಬಿಟ್ಟರು.

ಬೊಂಬಾಯಿಯಲ್ಲಿ ಸಾಮಾನುಗಳನ್ನು ಹೇರುವ ಎತ್ತಿನಬಂಡಿಗಳು ಅನಂತವಾಗಿರುವುವು. ಅವು ೨ ಚಕ್ರದ ಬಂಡಿಗಳು. ಅವಕ್ಕೆ ಹೂಡಿದ ಎತ್ತುಗಳಿಗೆ ಬಂಡಿಯನ್ನು ಎಳೆಯುವಾಗಲೂ ನಿಂತಾಗಲೂ ಸಹ ಹೊರೆಯನ್ನು ಅವಿಚ್ಛಿನ್ನವಾಗಿ ಹೊತ್ತಿರಬೇಕಾಗಿದ್ದುದರಿಂದ ಬಹಳ ಹಿಂಸೆಯಾಗುತ್ತಿದ್ದಿತು. ಅದುಕಾರಣ ಆ ಪಟ್ಟಣದ ಜಂತುಹಿಂಸಾನಿವಾರಕಸಂಘದವರು ಕನಿಕರದಿಂದ ಒಂದು ಹೊಸತರದ ಸಾಮಾನುಬಂಡಿಯನ್ನು ನಿರ್ಮಿಸಿದ್ದಾರೆ. ಈ ಬಂಡಿಗಳಿಗೆ ೪ ಚಕ್ರಗಳಿವೆ. ಆದರೂ ಬಹಳ ಹಗುರವಾಗಿವೆ. ಇದರ ಬೆಲೆಯು ೧೫೦ ರೂ.ಗಳಿಗೆ ಕಡಿಮೆಯಿಲ್ಲ. ಇದರ ಒಟ್ಟು ತೂಕವು ೩೦೦ ಪೌನುಗಳಿಷ್ಟಿರುವುದು. ಇದರಮೇಲೆ ೩೦೦೦ ಪೌನುಗಳ ಭಾರದ ಸಾಮಾನುಗಳನ್ನು ಹೇರಬಹುದು. ಈಗ ಬೊಂಬಾಯಿಯಲ್ಲಿ ಉಪಯೋಗಿಸಲ್ಪಡುತ್ತಿರುವ ಎತ್ತಿನ ಬಂಡಿಗಳು ೮೯೦ ಪೌನುಗಳ ಭಾರವುಳ್ಳವಾಗಿ ೧೫೦೦ ಪೌನು ಭಾರದ ಸಾಮಗ್ರಿಗಳನ್ನು ಹೇರಿಕೊಳ್ಳತಕ್ಕವಾಗಿರುವುವು. ಆ ಬಂಡಿಯ ನೊಗವು ಎತ್ತುಗಳ ಕತ್ತಿನಮೇಲೆ ಒರಟಾಗಿ ಕುಳಿತು ಗಾಯಗಾಣಿಸುತ್ತಿದ್ದಿತು. ಈಗ ನಿರ್ಮಿಸಿರುವ ಬಂಡಿಯ ನೊಗವು ಎತ್ತುಗಳಿಗೆ ಯಾವಮಾತ್ರದ ಹಿಂಸೆಯನ್ನೂ ಮಾಡುವಹಾಗಿಲ್ಲ. ಮತ್ತೂ ಬಂಡಿಯು ನಿಂತಾಗ ಅದರ ಹೊರೆಯು ಎತ್ತುಗಳಮೇಲೆ ಬೀಳುವಂತೆಯೂ ಇಲ್ಲ.

ವಿಶಾರತ್‌ಬ್ಯಾಂಕಿನ ಆಳಾದ ವಾಲಿ ಮಹಮ್ಮದ್ ಎಂಬುವನು ಆ ಬ್ಯಾಂಕಿನ ೭೦ ಸಾವಿರ ರೂ.ಗಳನ್ನು ಕಳವು ಮಾಡಿದನು. ಬ್ಯಾಂಕಿನವರು ಅಷ್ಟು ರೂ.ನ ಅರ್ಧನೋಟುಗಳನ್ನು ಇಟ್ಟು ಅರಗಿನ ಮುದ್ರೆಹಾಕಿ ಕೊಟ್ಟ ಕವರನ್ನು ಈತನು ಪೋಸ್ಟಾಫೀಸಿಗೆ ತೆಗೆದುಕೊಂಡು ಹೋಗುವುದನ್ನು ಬಿಟ್ಟು ಅದನ್ನು ಮನೆಗೆ ತೆಗೆದುಕೊಂಡು ಹೋಗಿ, ಕವರಿನ ಮೇಲಿದ್ದ ಅರಗಿನ ಮುದ್ರೆಯನ್ನು ಚಾಕುವಿನ ಸಹಾಯದಿಂದ ಮೆಲ್ಲಗೆ ಬಿಡಿಸಿ, ಒಳಗಿದ್ದ ನೋಟುಗಳನ್ನೆಲ್ಲಾ ಅಪಹರಿಸಿ ಅದರೊಳಗೆ ಬೇರೆ ಕಾಗದದ ಚೂರನ್ನು ತುಂಬಿ, ಅದೇ ಮುದ್ರೆಯನ್ನಂಟಿಸಿ, ಅದನ್ನು ಪೋಸ್ಟ್‌ಆಫೀಸಿಗೆ ಕೊಟ್ಟು ಭೀಮಾಮಾಡಿಸಿ ಬಂದನು. ಮರುದಿನ ಬ್ಯಾಂಕಿನವರು ಕೊಟ್ಟ ಇನ್ನರ್ಧನೋಟುಗಳ ಕವರನ್ನೂ ಅದೇರೀತಿ ಮಾಡಿದನು. ಈ ಸಂಗತಿಯನ್ನು ವಿಚಾರಣೆ ಕಾಲದಲ್ಲಿ ಆ ವಾಲಿಮಹಮ್ಮದನು ಇಟ್ಟುಕೊಂಡಿದ್ದ ಹೆಂಗುಸೇ ಕೋರ್ಟಿನಲ್ಲಿ ಹೇಳಿರುವಳು. ಈ ಅಪರಾಧಿಯು ೯ ಸಾವಿರ ರೂ.ಗಳ ನೋಟನ್ನು ೪॥ ಸಾವಿರಕ್ಕೆ ಮಾರಿದ್ದನು. ಇವನಿಗೆ ೪ ವರ್ಷ ಕಠಿನಕಾರಾಗೃಹವಾಸಶಿಕ್ಷೆಯೂ, ೩ ತಿಂಗಳು ಏಕಾಂತವಾಸಶಿಕ್ಷೆಯೂ, ೨೦೦೦ ರೂ.ಗಳ ಅರ್ಥದಂಡವೂ ವಿಧಿಸಲ್ಪಟ್ಟಿತು. ಈತನಿಗೆ ಸಹಾಯಕರಾಗಿದ್ದ ಇತರ ಅಪರಾಧಿಗಳಲ್ಲಿ ೧೩ ಸಾವಿರ ರೂ ಗಳು ಸಿಕ್ಕಿದುವು. ಅವರಲ್ಲಿಬ್ಬರಿಗೆ ೨ ವರ್ಷ ಕಠಿನಕಾರಾಗೃಹವಾಸಶಿಕ್ಷೆಯೂ, ೨ ತಿಂಗಳ ಏಕಾಂತವಾಸಶಿಕ್ಷೆಯೂ, ೭೦೦ ರೂ.ಗಳ ಅರ್ಥದಂಡವೂ, ಮತ್ತೊಬ್ಬನಿಗೆ ಮೂರೂಮುಕ್ಕಾಲುವರ್ಷಗಳ ಕಾರಾಗೃಹವಾಸಶಿಕ್ಷೆಯೂ, ೨ ತಿಂಗಳ ಏಕಾಂತವಾಸಶಿಕ್ಷೆಯೂ, ವಿಧಿಸಲ್ಪಟ್ಟಿತು.

ವಿದೇಶವೃತ್ತಾಂತಗಳು.

ಇಂಗ್ಲೀಷರಕಡೆ ಈಗ ಯುದ್ಧರಂಗದಲ್ಲೂ ಇತರ ಅಧಿನಿವೇಶನಗಳಲ್ಲೂ ಇರುವ ಸೈನ್ಯವೆಲ್ಲಾ ಕೂಡಿ ೩೦ ಲಕ್ಷವಾಗಿರುವುದು. ಈ ಸಂಖ್ಯೆಯಲ್ಲಿ ಭರತಖಂಡದ ಸೇನೆಯು ಸೇರಿಲ್ಲ.

ಜರ್ಮಚಕ್ರವರ್ತಿಯವರ ಪ್ರವರ್ತನವನ್ನು ನಿಂದಿಸಿ ಒಂದು ಲೇಖನವನ್ನು ಬರೆದುದಕ್ಕಾಗಿ ಆ ದೇಶದ ಗೋಥಾ ಎಂಬ ಪತ್ರಿಕೆಯ ಪ್ರಕಟನವನ್ನು ಅಲ್ಲಿನ ಸರ್ಕಾರದವರು ನಿಲ್ಲಿಸಿಬಿಟ್ಟರು.

ಜರ್ಮಚಕ್ರವರ್ತಿಯವರಿಗೆ ಪೂರ್ವಪ್ರಷ್ಯಾದಲ್ಲಿ ತಾವೇ ಸೈನ್ಯಾಧಿಪತ್ಯವನ್ನು ವಹಿಸಿ ರಷ್ಯನರಮೇಲೆ ಯುದ್ಧಮಾಡಬೇಕೆಂಬ ಅಭಿನಿವೇಶವಿರುವುದಂತೆ. ಅವರು ಪೋಲಂಡಿನ ಯುದ್ಧರಂಗಕ್ಕೆ ಬಂದಿದ್ದಾರೆ.

ಮೊನ್ನೆತಾನೇ ಲಂಡನ್ನಿನಲ್ಲಿ ಕೂಡಿದ್ದ ಪಾರ್ಲಿಮೆಂಟಿನಲ್ಲಿ ಆಂಗ್ಲಮುಖ್ಯಮಂತ್ರಿಯವರು ಆಡಿದ ಮಾತಿನಿಂದ ಇದ್ದುವರೆಗೆ ನಡೆದ ಯುದ್ಧದಲ್ಲಿ ೧೦೪೦೦೦ ಮಂದಿ ಆಂಗ್ಲಸೈನಿಕರು ಸತ್ತಿರುವರೆಂದು ಗೊತ್ತಾಯಿತು.

ಬಲ್ಗೇರಿಯಾ-ಆಸ್ಟ್ರಿಯಾ-ಜರ್ಮನಿದೇಶಗಳಲ್ಲಿ ದ್ರವ್ಯಸಂಬಂಧವಾದ ಒಡಂಬಡಿಕೆಯನ್ನು ತಮ್ಮತಮ್ಮಲ್ಲಿ ಮಾಡಿಕೊಂಡರೆಂದು ಪ್ರಕಟವಾಗಿದೆ. ಇದರಿಂದ ಬಲ್ಗೇರಿಯಾವು ಜರ್ಮಪಕ್ಷಕ್ಕೆ ಒಲಿದಿರುವಂತೆ ಕಾಣುತ್ತದೆ.

ರಷ್ಯಾದೇಶದ ಸಾಮ್ರಾಜ್ಯಸಭೆಯು ಕೂಡಿದ್ದಾಗ ಅದರಲ್ಲಿ ನಡೆದ ಚರ್ಚೆಯನ್ನು ನೋಡಲಾಗಿ ಆ ಸರ್ಕಾರದವರಿಗೆ ಈಗಿನ ಯುದ್ಧದಲ್ಲಿ ದಿನ ೧ ಕ್ಕೆ ೨ ಕೋಟಿಯೂ ೧ ಲಕ್ಷ ರೂ.ಗಳ ವ್ಯಯವಾಗುತ್ತಿರುವುದೆಂದು ಗೊತ್ತಾಗುತ್ತದೆ.

ಹಂಗೇರಿಯಲ್ಲಿ ಪ್ರಕೃತದ ಯುದ್ಧಸಂಬಂಧದ ಶೋಚನೀಯಾವಸ್ಥೆಯಿಂದ ಕ್ಷಾಮವೂ ವಿಪ್ಲವವೂ ಉಂಟಾಗುವಂತಿರುವುದರಿಂದ ಅದರ ಶಾಂತಿಗಾಗಿ ಥಟ್ಟನೆ ಪ್ರಯತ್ನಿಸಬೇಕೆಂದು ಆ ದೇಶದ ಪ್ರತಿನಿಧಿಗಳು ಮುಖ್ಯಮಂತ್ರಿಯವರನ್ನು ಪ್ರಾರ್ಥಿಸಿಕೊಂಡಿದ್ದಾರೆ.

ವಾರ್ಣಹಾರ್ನ ಎಂಬ ಜರ್ಮದೇಶೀಯನು ಅಮೇರಿಕಾದೇಶಕ್ಕೆ ಸೇರಿದ ಒಂದು ಹೊಳೆಯ ಸೇತುವನ್ನು ಕನ್ನಡಾದೇಶದ ಸೇನೆಯ ಆಗಮನಕ್ಕೆ ವಿಘ್ನವನ್ನು ಮಾಡಬೇಕೆಂಬ ಉದ್ದೇಶದಿಂದ ಸಿಡಿಮದ್ದನ್ನಿಟ್ಟು ಹಾರಿಸಿ ಸ್ವಲ್ಪನಷ್ಟಪಡಿಸಿದುದರಿಂದ ೧ ತಿಂಗಳ ಕಾರಾಗೃಹವಾಸಶಿಕ್ಷೆಗೆ ಗುರಿಯಾದನು.

ಜರ್ಮನಿದೇಶದ ಪ್ರತಿನಿಧಿಸಭೆಯು ಕೂಡಿದ್ದಾಗ ಕೆಲ ಸಭಿಕರು ಈಗಿನ ಪ್ರಭುತ್ವದವರ ಚರ್ಯೆಯನ್ನು ನಾವು ಒಪ್ಪುವುದಿಲ್ಲವೆಂದೂ ದೇಶಹಿತಕ್ಕೆ ಅದು ಸಾಧಕವಲ್ಲವೆಂದೂ, ಅನುಕೂಲವಾದ ಸಂಸ್ಕರಣವನ್ನು ಕೂಡಲೇ ಪ್ರಾರಂಭಿಸಬೇಕೆಂದೂ ವಾದಿಸಲು ತೊಡಗಿದರು. ಸಭೆಯಲ್ಲಿ ತುಂಬಾ ಗದ್ದಲವಾಯಿತು.

ಫ್ರಾನ್ಸಿನ ರಣರಂಗದಲ್ಲಿ ಜರ್ಮನಿಯವರ ಪಕ್ಷದಲ್ಲಿ ನಿಂತು ಫಿರಂಗಿಗಳ್ನ ಹಾರಿಸುತ್ತಿದ್ದ ಆಸ್ಟ್ರಿಯಾಸೈನಿಕರಲ್ಲಿ ೧೧೫೦ ಮಂದಿಗಳೂ, ಬೆಲ್ಜಿಯಮ್ಮಿನ ರಣರಂಗದಲ್ಲಿ ಜರ್ಮನರ ಪಕ್ಷದಲ್ಲಿ ನಿಂತು ಕಾದಾಡುತ್ತಿದ್ದ ಹಂಗೇರಿಯ ಅಶ್ವಸೈನಿಕರಲ್ಲಿ ೪೮೩೦ ಮಂದಿಗಳೂ ೩೧೦೦ ಮಂದಿ ಪದಾತಿಗಳೂ ಸಹ ಜನವರಿ ತಾ॥ ೧೮ ರಿಂದೀಚೆಗೆ ಮೃತರಾಗಿರುತ್ತಾರೆ.

ಆಸ್ಟ್ರಿಯಾ ಯುವರಾಜದಂಪತಿಗಳನ್ನು ಕೊಲ್ಲಲು ಸಹಾಯಮಾಡಿದ ಮೂರುಮಂದಿಗಳನ್ನೂ ಸಹ ಸೆರಾಜೀವೊ ಪಟ್ಟಣದಲ್ಲಿ ಉರುಲುಹಾಕಿದರು. ಯುವರಾಜರನ್ನು ಕೈಯಾರಕೊಂದ ಪ್ರಿನ್‌ಜಿಪ್ ಎಂಬುವನು ಇನ್ನೂ ಕೇವಲ ಯೌವನಸ್ಥನಾಗಿದ್ದುದರಿಂದ ಅವನಿಗೆ ಉರುಲುಹಾಕಲು ಯತ್ನವಿಲ್ಲದೆ ೨೦ ವರ್ಷ ಕಾರಾಗೃಹವಾಸಶಿಕ್ಷೆಯನ್ನು ವಿಧಿಸಿದರು.

ಜರ್ಮನರು ತಮ್ಮದೇಶದ ಪ್ರಜೆಗಳು ತಮ್ಮಲ್ಲಿ ಭಂಗಾರವನ್ನು ಮುಚ್ಚಿಟ್ಟುಕೊಂಡಿರದಂತೆ ಮಾಡಬೇಕೆನ್ನುವುದಕ್ಕಾಗಿ ಒಂದು ಉಪಾಯವನ್ನು ಈಗ ಮಾಡಿದ್ದಾರೆ. ಇನ್ನು ಮುಂದೆ ಅವರು ಹೊಸಭಂಗಾರದ ನಾಣ್ಯಗಳನ್ನು ನಿರ್ಮಿಸುವರು. ಆ ನೂತನಮುದ್ರೆಯ ನಾಣ್ಯಗಳಹೊರತು ಉಳಿದ ಹಳೆಯ ನಾಣ್ಯಗಳಿಗೆಲ್ಲಾ ಬೆಲೆಯು ಕಡಿಮೆಯಾಗಿರುವುದೆಂದು ಪ್ರಕಟಿಸಿರುವರು.

ಅಮೇರಿಕಾದಲ್ಲಿ ಪ್ರಕಟವಾಗುವ „ನ್ಯೂಯಾರ್ಕ್‌ಹೆರಲ್ಡ್” ಎಂಬ ಪತ್ರಿಕೆಯಲ್ಲಿ ಈ ಕೆಳಗೆ ಹೇಳುವ ಸಂಗತಿಯು ಪ್ರಕಟಿಸಲ್ಪಟ್ಟಿದೆ. ಏನೆಂದರೆ—ಬರ್ಲಿನ್‌ಪಟ್ಟಣದಿಂದ ಇಟಲಿಯ ರೋಮ್‌ಪಟ್ಟಣಕ್ಕೆ ಒಂದು ಪತ್ರ ಕಳುಹಿಸಲ್ಪಟ್ಟಿದೆ. ಅದರಲ್ಲಿ—„ಜರ್ಮನಿದೇಶದಲ್ಲಿ ಇಷ್ಟರಲ್ಲೇ ಪ್ರಜಾವಿಪ್ಲವವು ಉಂಟಾಗುವುದರಲ್ಲಿದೆ.” „ಕೇಜರರಿಗೆ ಮರಣವುಂಟಾಗಲಿ” ಎಂಬ ವಾಕ್ಯಗಳು ಪಟ್ಟಣದ ಗೋಡೆಗಳಮೇಲೆ ಬರೆಯಲ್ಪಡುತ್ತಿವೆ.

ಶತ್ರುಗಳನ್ನು ಪ್ರತಿಭಟಿಸುವಾಗ ಜರ್ಮನರ ಮತ್ತೂ ಆಸ್ಟ್ರಿಯನ್ನರ ಸೇನೆಗಳು ಒಬ್ಬರಮೈಗೊಬ್ಬರು ಹತ್ತಿದಂತೆ ದಟ್ಟವಾಗಿರುವುದರಿಂದ ಪ್ರತಿಪಕ್ಷದವರ ಗುಂಡಿನೇಟಿನಿಂದ ಈಸೊಲುಗಳಲ್ಲಿ ಬಹುಜನನಷ್ಟವಾಗುತ್ತಿದೆ. ಈ ಕಾರಣದಿಂದ ಮಿತ್ರಮಂಡಲಿಯವರಲ್ಲಿ ಆಗಿರುವ ಸೇನಾನಷ್ಟಕ್ಕಿಂತಲೂ ಇವರಲ್ಲಿ ಆಗಿರುವ ನಷ್ಟವೇ ಹೆಚ್ಚು. ಅವೆರಡುಸೈನ್ಯಗಳಲ್ಲೂ ಯುದ್ಧಾರಂಭದಿಂದ ಇದುವರೆಗೆ ೩॥ ಲಕ್ಷಮಂದಿಗಳು ನಷ್ಟವಾಗಿರುವರಂತೆ.

ರಾಸಾಯನಿಕವಾಗಿ ಬಣ್ಣಗಳನ್ನು ನಿರ್ಮಿಸುವುದಕ್ಕಾಗಿ ಇಷ್ಟರಲ್ಲೇ 'ಇಂಗ್ಲೆಂಡಿನಲ್ಲಿ ಒಂದು ಕಾರ್ಖಾನೆಯು ಸ್ಥಾಪಿಸಲ್ಪಡುವುದರಲ್ಲಿದೆ. ಅದರ ಮೂಲಧನವು ೨೦ ಲಕ್ಷ ಪೌಂಡುಗಳು. ಇದರಲ್ಲಿ ಅರ್ಧ ಭಾಗವು ಭಾಗಸ್ಥರಿಂದ ಕೂಡಿಸಲ್ಪಡುವುದು. ಉಳಿದರ್ಧವನ್ನು ಸರ್ಕಾರದವರು ನೂರಕ್ಕೆ ೪ ರ ಬಡ್ಡಿಯಮೇರೆ ಸಾಲವಾಗಿ ಕೊಡುವರು. ಭಾಗಸ್ಥರಿಗೆ ನೂರಕ್ಕೆ ೬ ರಂತೆ ಲಾಭವು ಕೊಡಲ್ಪಡುವುದು ಮುಂದೆ ಯಾವಸಂದರ್ಭದಲ್ಲೂ ಅದಕ್ಕಿಂತ ಹೆಚ್ಚಿನಲಾಭವು ಕೊಡಲ್ಪಡುವುದೇ ಇಲ್ಲ.

ಫ್ರಾನ್ಸಿನ ಅಧ್ಯಕ್ಷರಾದ ಪಾಯಿರ್ಕೇರ್‌ರವರು ರಣರಂಗಕ್ಕೆ ಹೋಗಿ ಸಂದರ್ಶಿಸಿ, ನೂತನವಾಗಿ ತಮ್ಮ ಸೈನಿಕರು ಹಿಡಿದಿರುವ ಅಲ್ಸಸ್‌ಜಿಲ್ಲೆಯಲ್ಲಿನ ೨೦ ಗ್ರಾಮಗಳಲ್ಲಿ ಸಂಚರಿಸಿಬಂದರು. (ಆಜಿಲ್ಲೆಯೆಲ್ಲಾ ಪೂರ್ವದಲ್ಲಿ ಫ್ರೆಂಚರಿಗೆ ಸೇರಿದ್ದು ೪೦ವರ್ಷದೀಚೆಗೆ ಜರ್ಮನರ ವಶವಾಯಿತು.) ಅದುಕಾರಣ ಈಗ ಆ ಜನರು ತಮ್ಮ ದೇಶಭಾಗವು ಫ್ರೆಂಚರಿಗೆ ಸೇರಿದುದಕ್ಕಾಗಿ ಸಂತೋಷಿಸಿ ತಮ್ಮಗ್ರಾಮಗಳನ್ನೆಲ್ಲಾ ಅಲಂಕರಿಸಿ ಅಧ್ಯಕ್ಷರನ್ನು ಉತ್ಸಾಹದಿಂದ ಸ್ವಾಗತಮಾಡಿದರು. ಬಾಲಕರು ದೇಶೀಯಕೀರ್ತನವನ್ನು ಹಾಡಿದರು. ಹೆಂಗುಸರು ಮುದಕರು ಸಹ ಆನಂದಬಾಷ್ಪಗಳನ್ನು ಸುರಿಸಿದರು.

ಆಂಗ್ಲೀಯರು ಈಜಿಪ್ಟಿನಲ್ಲಿ ತುರ್ಕಿಯವರಿಗೆ ಸೇರಿದ ಒಂದುತೆರದ ವಿಚಿತ್ರವಾದ ತೆಪ್ಪಗಳನ್ನು ವಶಪಡಿಸಿಕೊಂಡಿದ್ದಾರೆ. ಇವುಗಳಮೇಲೆ ಸೂಯೆಜ್‌ಕಾಲ್ವೆಯನ್ನು ದಾಟಬೇಕೆಂದು ತುರ್ಕಿಯವರು ಯೋಚಿಸಿಕೊಂಡಿದ್ದರಂತೆ. ಇವು ತೂಕದಲ್ಲಿ ಬಲು ಹಗುರವಾಗಿವೆ. ಒಂದಾವೃತ್ತಿಗೆ ೪೦ ಮಂದಿಗಳಂತೆ ಇದರಲ್ಲಿ ಕುಳಿತು ನೀರಿನಮೇಲೆ ಸಾಗಿಹೋಗಬಹುದು. ಇವುಗಳನ್ನು ಭೂಮಾರ್ಗದಲ್ಲೂ ಸಾಗಿಸಿಕೊಂಡು ಹೋಗಬಹುದು. ಮಳಲಕಾಡಿನಮೇಲೆ ಹೋಗುವಾಗ ಇವುಗಳಲ್ಲಿ ಸಮೃದ್ಧಿಯಾಗಿ ನೀರನ್ನು ತುಂಬಿಕೊಂಡು ಹೋಗುವರು. ಸಮಯಬಿದ್ದಾಗ ಇವುಗಳನ್ನು ತಾತ್ಕಾಲಿಕ ಸೇತುನಿರ್ಮಾಣಕ್ಕೂ ಉಪಯೋಗಿಸಿಕೊಳ್ಳುವರು.

ರಷ್ಯಾ-ಫ್ರಾನ್ಸು-ಇಂಗ್ಲೆಂಡುಗಳ ಕೋಶಾಧ್ಯಕ್ಷರುಗಳು ಪ್ಯಾರಿಸ್‌ಪಟ್ಟಣದಲ್ಲಿ ಕೂಡಿದ್ದರು. ಸಂಪೂರ್ಣಜಯವು ತಮಗೆ ದೊರೆಯುವವರೆಗೂ ಯುದ್ಧವನ್ನು ಸಾಗಿಸಬೇಕೆಂದೂ, ಮೂರುದೇಶದವರೂ ಒಟ್ಟಿಗೆ ಹಣವನ್ನು ಕೂಡಿಸಿ, ಯುದ್ಧದ ವೆಚ್ಚಕ್ಕಾಗಿ ಬೇಕಾದ ಹಣವನ್ನು ಆ ಒಟ್ಟಿನ ಹಣದಿಂದ ಉಪಯೋಗಿಸಿಕೊಳ್ಳಬೇಕೆಂದೂ, ಇದುವರೆಗೆ ತಮ್ಮೊಡನೆ ಸೇರಿ ಯುದ್ಧಮಾಡುತ್ತಿರುವ ರಾಷ್ಟ್ರಗಳವರಿಗೂ ಮತ್ತೂ ಮುಂದೆ ಕೂಡಬಹುದಾದ ರಾಷ್ಟ್ರದವರಿಗೂ ಸಹ ಧನಸಹಾಯವನ್ನು ಈ ಹಣದಿಂದಲೇ ಮಾಡಬೇಕೆಂದೂ ಇನ್ನುಮುಂದೆ ಆಗಾಗ್ಗೆ ಈ ಕೋಶಾಧ್ಯಕ್ಷರುಗಳು ಲಂಡನ್‌ಪಟ್ಟಣದಲ್ಲಿ ಸಭೆಗೂಡಬೇಕೆಂದೂ ನಿರ್ಧರಿಸಿದರು. ಈ ಸಮಾವೇಶವು ಆ ಮೂರುದೇಶಗಳ ಪರಸ್ಪರ ಸ್ನೇಹಬಂಧವನ್ನು ಬಲಪಡಿಸಿತೆಂದು ವ್ಯಕ್ತವಾಗಿದೆ.

ಬ್ರಿಟಿಷ್‌ದ್ವೀಪಗಳ ಸುತ್ತಲೂ ಇರುವ ಸಮುದ್ರಭಾಗವೂ ಇಂಗ್ಲೀಷುಕಡಲುಕಾಲ್ವೆಯೂ ಸಹ ಫೆಬ್ರುವರಿ ತಾ॥ ೧೮ ರಿಂದ ಯುದ್ಧಪ್ರದೇಶವಾಗಿ ಎಣಿಸಲ್ಪಡುವುದು. ಆ ತಾರೀಖಿನಿಂದಾಚೆಗೆ ಆ ಸ್ಥಲದಲ್ಲಿ ಸಂಚರಿಸತಕ್ಕ ಯುದ್ಧದ ಅಥವಾ ವ್ಯಾಪಾರದ ಯಾವ ಹಡಗೇಆಗಲಿ ನಮ್ಮ ಕೈಗೆ ಸಿಕ್ಕಿದರೆ ಧ್ವಂಸಮಾಡಲ್ಪಡುವುದು. ಆ ಹಡಗುಗಳಲ್ಲಿರುವ ಪ್ರಯಾಣಿಕರನ್ನೂ ನಾವಿಕರನ್ನೂ ಸಂರಕ್ಷಿಸುವುದು ಸಾಧ್ಯವಲ್ಲವೆಹೋದರೂ ಹಡಗುಗಳು ನಾಶಮಾಡಲ್ಪಡುವುವು. ಈ ಸ್ಥಲದಲ್ಲಿ ತಟಸ್ಥರಾಷ್ಟ್ರಗಳ ಹಡಗುಗಳಿಗೂ ಅಪಾಯವುಂಟಾಗಬಹುದು. ಏಕೆಂದರೆ—„ನೌಕಾಯುದ್ಧ ಸಂದರ್ಭದಲ್ಲಿ ಅಕಸ್ಮಾತ್ಸಭವಗಳುಂಟಾಗದೆ ಇರುವುದು ಅಸಾಧ್ಯ.” ಎಂದು ಜರ್ಮ ನೌಕಾಧಿಕಾರಿಗಳು ಪ್ರಕಟಿಸಿದ್ದಾರೆ. ಇದು ತಟಸ್ಥರಾಷ್ಟ್ರಗಳ ವ್ಯಾಪಾರಕ್ಕೆಲ್ಲಾ ಕುಂದನ್ನು ತರುವ ಪ್ರಕಟನೆಯಾಗಿರುವುದರಿಂದ ಎಲ್ಲದೇಶದವರೂ ಆಗ್ರಹಗೊಂಡಿದ್ದಾರೆ. ಈ ಜರ್ಮನಿಯ ಅಪ್ಪಣೆಯ ಅಸಂಗತತ್ವವನ್ನು ಕುರಿತು ಆಲೋಚಿಸುವುದಕ್ಕೆ ಹೇಗ್‌ಪಟ್ಟಣದಲ್ಲಿ ಪಂಚಾಯಿತರ ಸಭೆಯು ಕೂಡಿತೆಂದು ವರ್ತಮಾನಬಂದಿದೆ. ಜರ್ಮನರ ಈ ಗೊಡ್ಡುಬೆದರಿಕೆಗೆ ಇಂಗ್ಲಾಂಡ್ ಮೊದಲಾದ ಮಿತ್ರರಾಷ್ಟ್ರದವರೇಆಗಲಿ ಇತರ ತಟಸ್ಥರಾಷ್ಟ್ರಗಳವರೇ ಆಗಲಿ ಸೊಪ್ಪುಹಾಕುವಹಾಗಿಲ್ಲ. ಇಂಗ್ಲೀಷರು ತಮ್ಮ ವ್ಯಾಪಾರದ ಹಡಗುಗಳಮೇಲೆ ಫಿರಂಗಿಗಳನ್ನಿಟ್ಟು ಪ್ರಯಾಣಮಾಡಿಸಲು ಏರ್ಪಡಿಸಿದ್ದಾರೆ. ಅಮೇರಿಕನ್ನರು ಜರ್ಮನಿಯೊಡನೆ ಪತ್ರವ್ಯವಹಾರ ನಡೆಯಿಸುತ್ತಿದ್ದಾರೆ. ಜರ್ಮನಿಯು ಈ ಸಂಬಂಧದಲ್ಲಿ ಮಾಡಿರುವ ಪ್ರಕಟನೆಯೊಳಗೆ—ಇಂಗ್ಲೆಂಡು ತನಗೆ ಯಾವದೇಶದಿಂದಲೂ ಆಹಾರ್ಯವಸ್ತುಗಳು ಬಾರದಂತೆ ಮಾಡಿರುವುದೆಂದೂ ತಟಸ್ಥದೇಶದವರು ಅದನ್ನು ನೋಡಿಕೊಂಡು ಸುಮ್ಮನಿರುವರೆಂದೂ, ಯುದ್ಧವನ್ನು ಸಾಧ್ಯವಾದಮಟ್ಟಿಗೆ ಬೇಗನೆ ಮುಗಿಸಿಬಿಡುವಂತೆ ಮಾಡುವುದು ತಟಸ್ಥದೇಶದವರಿಗೆ ಕ್ಷೇಮವಲ್ಲವೆ ? ಎಂದೂ ಬರೆದುಕೊಂಡಿದೆ. ಇದರಿಂದ ಹೇಗಾದರೂಮಾಡಿ ತಟಸ್ಥದೇಶದವರು ಯುದ್ಧವನ್ನು ನಿಲ್ಲಿಸಿಬಿಡುವಂತಾದರೆ ಸಾಕೆಂದು ಜರ್ಮನಿಯು ಈಗ ನೆನೆದಿರುವುದೆಂಬುದು ವ್ಯಕ್ತವಾಗುತ್ತಿದೆ.

ಶ್ರೀ ಉಳಿವೆಯಲ್ಲಿ ನಡೆದ ಧಾರ್ಮಿಕಸಭೆ.

ತಾ॥ ೧-೨-೧೫ ರಿಂದ ಶ್ರೀ ಉಳಿವಿಕ್ಷೇತ್ರದಲ್ಲಿ ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಸ್ವಾಮಿಗಳು ದಯಮಾಡಿಸಿ, ದಾಸೋಹ ನಡೆಸಿ ಜಂಗಮರಿಗೆ ನಾಲ್ಕಾಣೆಯಂತೆ ದಕ್ಷಿಣೆಕೊಟ್ಟು, ಮಠಸ್ಥರಿಗೆ ರೇಷ್ಮೆಮಡಿಧೋತ್ರವನ್ನೂ ಕೆಲವರಿಗೆ ಜರ್ದಿ ಹರ್ದಿಯನ್ನೂ ಈ ಪ್ರಕಾರ ಕೊಡಿಸಿದರು. ಪ್ರತಿದಿನವೂ ಅನ್ನದಾನವು ಬಹಳ ಉದಾರವಾಗಿ ನಡೆಯಿಸಲ್ಪಟ್ಟಿತು. ಶ್ರೀಗಳವರ ಧರ್ಮೋತ್ತೇಜಕ ಸಭೆ ನೆರವೇರಿತು. ಶ್ರೀಮಂತ ಚಚ್ಚಡಿ ವೀರಭದ್ರಪ್ಪ ನಾಯಿಕದೇಸಾಯಿಯವರನ್ನು ಅಧ್ಯಕ್ಷತೆಗೆ, ನೇಮಿಸಿ, ರಾವಸಾ॥ ಮಲ್ಲನಾಯಕ ಪಾಟೀಲ ಬೈಲಹೊಂಗಲ, ರಾಜಶೇಖರ ಪಾಟೀಲ ಸಂಪಗಾಂವ, ನೀಲಕಂಠಗೌಡಾ ಬಸವನಗೌಡಾ ಪಾಟೀಲ ಮದನಭಾವಿ, ಅರ್ಳಿಕಟ್ಟಿ, ಶೆಟ್ಟರು ಪರಪ್ಪಾ ಕಿತ್ತೂರ, ಮಲ್ಲಿಕಾರ್ಜುನಕವಿ ಆಳವಾಡ, ಗೌಡರು ಶಿವಮೂರ್ತೆಪ್ಪ ದಂದಿನ, ಚನ್ನಪ್ಪ ಲಖಮನಹಳ್ಳಿ ಹೊಳಿಕೇರಿ ಇನಾಮದಾರ ಚನಬಸಪ್ಪಾ ಗುರುಸಿದ್ದಪ್ಪ ಕಾರಕೂನ ಮುಂತಾದ ಮುಖ್ಯಜನರುಕೂಡಿ ಸಭಾಕಾರ್ಯ ವ್ಯವಸ್ಥೆ ನಡಿಸಲು, ೪ ದಿವಸ ಸಭೆಯು ಸಲಕ್ಷಣವಾಗಿ ನಡಿಯಿತು. ಗದಿಗೆಪ್ಪನವರು ಪುರಾಣೀಕ ಬೈಲಹೊಂಗಲಯವರು ಯಾವತ್ತರೂ ಕೂಡಿ ಸಭೆಗೆ ವರ್ಗಣಿಮಾಡಿದಪ್ರಕಾರ ಬರತಕ್ಕ ಒಟ್ಟು ರೂಪಾಯಿ ೧೫೪೪ ೩-೬. ರೋಖವಸೂಲ ೫೫೩-೩-೬. ಪ್ರತಿವರ್ಷ ಬರತಕ್ಕ ಚಂದಾ ೨೪೩-೮. ಶ್ರೀಗಳಕಡೆಯಿಂದ ಕಾಯಂಫಂಡಿಗೆ ೫೦೦ ರೂ. ವಾಗ್ದಾನವಾಯಿತು. ಎಕರೆ ೧॥ ಸ್ಥಾವರಜಮೀನನ್ನು ಒಬ್ಬರು ವಾಗ್ದಾನಮಾಡಿದರು. ಉಳಿದುದೆಲ್ಲಾ ತಮ್ಮತಮ್ಮ ಸಂತೋಷದಿಂದ ಕೊಟ್ಟಷ್ಟು ವರ್ಗಣಿಯಾಯಿತು. ದೇವಸ್ಥಾನ ಚಂದ್ರಶಾಲಾ ಜೀರ್ಣೋದ್ಧಾರ ಕಾರ್ಯವನ್ನು ಅಪ್ಪಯ್ಯಣ್ಣಾ ಬೋಳಮಲ್ಲ ಶಹಪೂರ ಮೊದಲಾದ ಕೆಲರು ಒಪ್ಪಿರುವರು. ಮಿಕ್ಕದ್ದೆಲ್ಲಾ ಶ್ರೀಗಳು ಪೂರ್ತಿಮಾಡಿಸುವೆವೆಂದು ವಾಗ್ದಾನಮಾಡಿರುವರು. ಸಭಾಮಂಟಪಕ್ಕೆ ಬೇಕಾದ ಜಾಗವನ್ನು ಫಾರೆಸ್ಟಿನವರ ಕಡೆಯಿಂದ ತೆಗೆದುಕೊಳ್ಳಬೇಕಾಗಿದೆ. ದರವರ್ಷ ಇದರಂತೆ ಸಭಾಮಾಡಿ ಸುಧಾರಣೆ ನಡೆಯಬೇಕೆಂದು ಎಲ್ಲಾ ಸಮಾಜದವರು ಒಪ್ಪಿಕೊಂಡಿದ್ದಾರೆ.

ಶಿವಯೋಗಮಂದಿರದಿಂದ ಬಂದಿದ್ದ ಕೆಂಗಳಗಯ್ಯಗಳು ಮತ್ತೂ ವೇ॥ ಬಸವಲಿಂಗಸ್ವಾಮಿ ದೇವನಕೊಂಡ ಇವರು ಕೀರ್ತನವನ್ನು ಒಳ್ಳೆ ಸೊಗಸಾಗಿ ಮಾಡಿದರು. ಶ್ರೀಗಳು ಭಕ್ತರಮೇಲೆ ಕೃಪಾಮಾಡಿ ಯಾವತ್ತು ಜನರಿಗೆ ದರ್ಶನ ಕೊಟ್ಟು ಉದ್ಧಾರಮಾಡಿದರು. ಪ್ರೆಸಿಡೆಂಟರಾದ ಶ್ರೀಮಂತ ಚಚಡಿದೇಸಾಯರ ತಂಬುದಲ್ಲಿ ತಾ॥ ೩-೨-೧೫ ಈ ದಿವಸ ಮಧ್ಯಾನ್ಹದ ೧ ಘಂಟೆ ಸುಮಾರಕ್ಕೆ ತಂಬುದಲ್ಲಿ ಮಲಗಿದ್ದ ಒಬ್ಬ ಮನುಷ್ಯ ನೇಮಣ್ಣಾ ಭರಮಣ್ಣಾ ಮೋದಗೆ ಬೆಳಗಾಂವ ಈತನ ದೇಹದಮೇಲೆ ನಾಗರಹಾವು ಹತ್ತಿ ಹೆಡಿತೆಗೆದು ಆಡಿ ಓಡಿಹೋಯಿತು. ಇದು ಏನೋ ಒಂದು ಅಸಾಧಾರಣ ಚಿನ್ಹವಾಯಿತು. ಚಮತ್ಕಾರದ ಮಾತಾದುದರಿಂದ ಬರೆದಿದ್ದೇನೆ. ಸಭೆಯ ವಿಶೇಷ ಸಂಗತಿಯನ್ನು ವಾರ್ಷಿಕ ರಿಪೋರ್ಟಿನಿಂದ ತಿಳಿಯಬಹುದು. ಅಳ್ನಾವಾಡದಲ್ಲಿ ಶ್ರೀಯುತ ಪಕೀರಪ್ಪಾ ಕತ್ತಿಶೆಟ್ಟಿ ಇವರು ಶ್ರೀಯುತ ಭೂಪಾಲಪ್ಪಾ ಸವದತ್ತಿ ಇವರು ಬಂದು ಪುಷ್ಕಳ ಸಹಾಯಮಾಡಿದರು. ಶ್ರೀಗಳು ಪ್ರತಿವರ್ಷ ಉಳಿವಿ ಕ್ಷೇತ್ರಕ್ಕೆ ದಯಮಾಡಿಸಿ ಇದರಂತೆ ಕ್ಷೇತ್ರದ ವ್ಯವಸ್ಥೆ ಮಾಡಿಸಿ, ಸಭೆಯವರಿಗೆಲ್ಲಾ ಉತ್ತೇಜನಕೊಟ್ಟು ಅಭಿವೃದ್ಧಿಗೊಳಿಸುವರೆಂದು ಯಾವತ್ತು ಭಕ್ತರ ನಂಬಿಗೆಯಾಗಿದೆ. ಮತ್ತೂ ಮುಂದೆ ಭಕ್ತರು ಒಳ್ಳೆ ಭಕ್ತಿಯಿಂದ ಯಾತ್ರೆಗೆ ಬರಬಹುದು.

ಶ್ರೀ ವೀರಶೈವಮತ ಸಂವರ್ಧಿನೀಸಭಾ.
ಮುಡುಕುಡೊರೆ.

ಈ ಸಭೆಯು ೧೦ ನೆ ಅಧಿವೇಶನವು ಕಳೆದ ತಿಂಗಳು ತಾ॥ ೨೩-೨೮ ರಲ್ಲಿ ಶ್ರೀ ಮುಡುಕುಡೊರೆಯ ಕ್ಷೇತ್ರದಲ್ಲಿ ಪದ್ಧತಿಯಂತೆ ವಿಜೃಂಭಣೆಯಿಂದ ನಡೆಯಿತು. ಈ ಸಭೆಗೆ ಅಧ್ಯಕ್ಷರಾಗಲು ಅನುಮೋದಿಸಿದ್ದ ಬಳ್ಳಾರಿಯ ಮ॥ ರಾ॥ ಶ್ರೀಮಂತ ಜಿ. ವೀರಭದ್ರಪ್ಪನವರು ಸ್ವಸ್ಥಲದ ಪ್ಲೇಗಿನ ಹಾವಳಿಯ ಅನಿವಾರ್ಯದಿಂದ ತಮ್ಮ ಆಗಮನಕ್ಕೆ ಉಂಟಾದ ವಿಘ್ನವನ್ನು ಸೂಚಿಸಿ ವರ್ಕಿಂಗ್ ಕಮಿಟಿ ಅಧ್ಯಕ್ಷರಿಗೆ ಪತ್ರವನ್ನು ಬರೆದಿದ್ದ ಕಾರಣ, ಸಭಿಕರ ಕೋರಿಕೆಯಂತೆ ಮಾಂಬಳ್ಳಿಯ ಮ॥ ರಾ॥ ಶ್ರೀಮಂತ ಚಿಕ್ಕಣ್ಣದೇವರು ತಾತ್ಕಾಲಿಕ ಸಭಾಧ್ಯಕ್ಷತೆಯನ್ನು ವಹಿಸಿದ್ದರು.

ತಾ॥ ೨೭ನೆ ಬುಧವಾರ ಮಧ್ಯಾಹ್ನ ಮುಡುಕುಡೊರೆಯಲ್ಲಿರುವ ಮ॥ ಮಧುವನಹಳ್ಳಿ ಮಣಿಯಂ ಗುರುನಂಜಪ್ಪನವರ ಮಂಟಪದಲ್ಲಿ ಪ್ರಥಮದಿನದ ಸಭೆಯು ಕೂಡಿತು. ಮೈಸೂರು ತಾ॥ ನರಸಿಹ್ಮಪುರ, ಚಾಮರಾಜನಗರ, ಎಳಂದೂರು, ನಂಜನಗೂಡು, ಎಡತೊರೆ, ಬೆಂಗಳೂರು, ಮಂಡ್ಯ, ಮಳವಳ್ಳಿ, ಚೆನ್ನಪಟ್ಟಣ, ಶ್ರೀರಂಗಪಟ್ಟಣ, ಕೊಳ್ಳೆಗಾಲ, ಹೆಂಕಣಿಕೋಟೆ, ಕಾನಕಾನಹಳ್ಳಿ ಮೊದಲಾದ ತಾಲ್ಲೂಕುಗಳಿಂದ ಬಂದಿದ್ದ ವೀರಶೈವ ಮಹಾಜನರು ಸಭೆಯನ್ನಲಂಕರಿಸಿದ್ದರು.

ಈ ವರ್ಷ ಸಭಾಸದರಸತ್ಕಾರ ನಡೆಯಿಸುವ ಕಾರ್ಯವನ್ನು ಆಜೀವಸಭಾಧ್ಯಕ್ಷರು ವಹಿಸಿದ್ದುದರಿಂದ ಅವರು (ವೇ॥ ಪಿ. ಆರ್. ಕರಿಬಸವಶಾಸ್ತ್ರಿಗಳು) ಸತ್ಕಾರಕ ಸಂಘಾಧ್ಯಕ್ಷತೆಯಿಂದ ಸಭಿಕರನ್ನು ಕುರಿತು ಶ್ಲಾಘ್ಯವಾದ ಉಪನ್ಯಾಸ ಮಾಡಿದರು. ಬಳಿಕ ಸಭಾಧ್ಯಕ್ಷರು ಸಮಾಜಕಾರ್ಯದಲ್ಲಿ ಪ್ರತಿಯೊಬ್ಬರಿಗೂ ಅಭಿಮಾನವನ್ನು ಹುಟ್ಟಿಸುವಂತಿದ್ದ ತಮ್ಮ ಭಾಷಣವನ್ನು ಮಾಡಿದರು. ಅನಂತರ ವೇ॥ ಸುತ್ತೂರು ಶಾಂತವೀರಶಾಸ್ತ್ರಿಗಳು ವೀರಶೈವಮತದಲ್ಲಿರುವ ಭಕ್ತಿಪ್ರಶಸ್ತ್ಯವನ್ನು ಕುರಿತು ಸಪ್ರಮಾಣವಾದ ಉಪನ್ಯಾಸವನ್ನು ಮಾಡಿದರು. ಅಲ್ಲಿಗೆ ಆ ದಿನದ ಕಾರ್ಯವು ಸಾಂಗವಾಯಿತು.

ತಾ॥ ೨೮ ಗುರುವಾರಬೆಳಗ್ಗೆ ಮತಾಚಾರವಿಷಯಕವಾದ ಚರ್ಚೆಗಳು ಆಜೀವಸಭಾಧ್ಯಕ್ಷರ ಪ್ರತ್ಯಕ್ಷದಲ್ಲಿ ವಿಸ್ತಾರವಾಗಿ ನಡೆದುವು. ಮಧ್ಯಾಹ್ನಾತ್ಪರ ಮೇಲೆಕಂಡ ಮಂಟಪದಲ್ಲೇ ಬಹುಮಾನಸಭೆಯು ಕೂಡಿತು. ಸಭೆಗೆ ಮೈಸೂರುಡಿಸ್ಟ್ರಿಕ್ಟ್ ಎಕನಾಮಿಕ್ ಸೂಪರಿಂಟೆಂಡೆಂಟ್ ಮ॥ ರಾ॥ ಸಿ. ನರಸಿಹ್ಮಶಾಸ್ತ್ರಿಗಳೂ, ತಾ॥ ಅಮಲ್ದಾರರೂ, ಪೋಲೀಸ್ ಇನ್ಸ್ಪೆಕ್ಟರೂ, ಕೆಲಮಂದಿ ವಕೀಲರುಗಳೂ ಡಾಕ್ಟರೂ ಮೊದಲಾದನೇಕಮಂದಿ ದೊಡ್ಡಮನುಷ್ಯರುಗಳು ದಯಮಾಡಿಸಿದ್ದರು.

ವರ್ಕಿಂಗ್‌ಕಮಿಟಿಯ ಅಧ್ಯಕ್ಷರಾದ ಮ॥ ಜಿ. ಪಿ ಮಲ್ಲಪ್ಪನವರ ಸೂಚನೆಗೆ ಸಭಿಕರು ಅನುಮೋದಿಸಲು, ಮ॥ ನರಸಿಹ್ಮಶಾಸ್ತ್ರಿಗಳು ಸಭಾಧ್ಯಕ್ಷತೆಯನ್ನು ವಹಿಸಿದರು. ಬಳಿಕ ಆಜೀವಸಭಾಧ್ಯಕ್ಷರು ವೇ॥ ಸಿರಸಿ ಗುರುಶಾಂತಶಾಸ್ತ್ರಿಗಳಿಂದ ಬರೆದು ಕಳುಹಿಸಲ್ಪಟ್ಟಿದ್ದ ಕ್ರಿಯಾಜ್ಞಾನವಿಷಯಕವಾದ ಉಪನ್ಯಾಸವನ್ನು ಓದುವಾಗ್ಗೆ—ದ್ವೈತಾದ್ವೈತ ಶಕ್ತಿವಿಶಿಷ್ಟಾದ್ವೈತಮತಗಳ ಪರವಾದ ಬ್ರಹ್ಮಸೂತ್ರಭಾಷ್ಯದ ರೀತಿಯನ್ನು ವಿವರಿಸಿ ಹೇಳಿ, ಸಭಿಕರನ್ನು ಸಂತೋಷಗೊಳಿಸಿದರು. ಅನಂತರ ಸ್ವಲ್ಪ ಹೊತ್ತು ಸಂಗೀತವು ನಡೆದಿತ್ತು. ತದನಂತರ ಉಪಾಧ್ಯಕ್ಷರವರು ಕಳೆದ ವರ್ಷದ ಸಭಾಕಾರ್ಯದ ವರದಿಯನ್ನು ಓದಲು, ಕಡೆಗೆ ಸಭಾಧ್ಯಕ್ಷರಾದ ಮ॥ ನರಸಿಹ್ಮಶಾಸ್ತ್ರಿಗಳು ಅದ್ವೈತಮತಸ್ವರೂಪವನ್ನು ನಿರೂಪಣಮಾಡಿ, ವೀರಶೈವಮತದ ಸಿದ್ಧಾಂತದ ರೀತಿಯನ್ನು ಶ್ಲಾಘಿಸಿ ಸಭಿಕರಿಗೆಲ್ಲಾ ಮತಕಾರ್ಯದಲ್ಲಿ ಅಭಿನಿವೇಶವುಂಟಾಗುವಂತೆ ಪ್ರೋತ್ಸಾಹಿಸಿ, ಶ್ಲಾಘನೀಯವಾದ ತಮ್ಮ ಭಾಷಣವನ್ನು ಮಾಡಿದರು. ಬಳಿಕ ಸಭಾಧ್ಯಕ್ಷರ ಹಸ್ತದಿಂದ ಉಪನ್ಯಾಸಕರು ಮೊದಲಾದವರಿಗೆ ಬಹುಮಾನವಿನಿಯೋಗವಾಗಲು, ಗಂಧಪುಷ್ಪತಾಂಬೂಲಾದಿಗಳ ವಿನಿಯೋಗವು ನಡೆದು ಸಭೆಯು ಮುಗಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರಾನ್ ಮುದ್ರಾಕ್ಷಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿ ಕೊಡುತ್ತೇವೆ.

ಚೆನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೪—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೦—೦ ರೂ. ಕೊಡಬೇಕಾಗುವುದು ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರದ ಬಣ್ಣದಿಂದ ಬಿಳಿ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೧—೧೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೦—೦; ಹಳದೀ ಗ್ಲೇಜ್‌ಕಾಗದದಮೇಲೆ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦-೬-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಕ್ರಾನ್‌ಪ್ರೆಸ್, ಮೈಸೂರ್.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು

72

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕೆದನಗಳ ಪಟಗಳೂ ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ. ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು ! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ ೨ ಆಣೆ; ವಿ. ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ:—ದಿ ಜನರಲ್ ಏಜನ್ಸಿ. ಮೈಸೂರು.

ವಿಜ್ಞಾಪನೆ.

12

ಈ ಸಮಯ ಬಿಡಬೇಡಿರಿ ! ಮುಂದೆ ದೊರೆಯಲಾರದು !!

ಮೊಳಕಾಲ್ಮುರುವಿನ ಪ್ರಸಿದ್ಧವಾದ
ರೇಶ್ಮೆಯವಸ್ತ್ರಗಳು ಬೇಕೋ ? ಬೆಲೆಸುಲಭ !

ಬಣ್ಣ ಗ್ಯಾರಂಟಿಯಾದದ್ದು. ಒಂದುಸಲ ತರಿಸಿನೋಡಿರಿ !!

ನಮ್ಮಲ್ಲಿ ಹೊಡೆಯುವ ವಸ್ತ್ರಗಳೂ, ಮೊಗುಟಗಳೂ, ಶೀರೆಗಳೂ, ನಡಕಟ್ಟುಗಳೂ, ಲಿಂಗದವಸ್ತ್ರಗಳೂ, ಕೈವಸ್ತ್ರಗಳೂ ಬಹಳ ಚೆನ್ನಾಗಿ ಎಲ್ಲಾರಂಗಿನಲ್ಲಿಯೂ ತಯಾರಾಗುತ್ತವೆ. ನಾವು ಮೈಸೂರು, ಮದ್ರಾಸು ಸೀಮೆಗಳ ಎಲ್ಲಾ ಭಾಗಕ್ಕೂ ನಮ್ಮ ಮಾಲನ್ನು ರವಾನಿಸುತ್ತೇವೆ. ನಮ್ಮ ಮಾಲುಗಳಿಗೆ ಬಹುಮಾನಗಳೂ, ಮೆಡಲುಗಳೂ, ಬಂದಿವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಹಿಮಂತಋತುವಿನದರಗಳು. ೧ನೆ ನಂ. ವಸ್ತ್ರಗಳು ತೊಲೆ ೧ಕ್ಕೆ ೦-೩-೦. ೨ನೆ ನಂ. ವಸ್ತ್ರಗಳು ತೊಲೆ ೧ಕ್ಕೆ ೦-೬-೯. (ಮೊಗುಟ) ಅರಳೆಪೇಟೆ ಶೀರೆಗಳೂ, ನಡಕಟ್ಟು, ಲಿಂಗದವಸ್ತ್ರಗಳು, ೧ನೆ ನಂ. ಮಾಲು ತೊಲೆ ೧ಕ್ಕೆ ೦-೮-೦. ೨ನೆ ನಂ. ಮಾಲುತೊಲೆ ೧ಕ್ಕೆ ೦-೩-೬.

ನಮ್ಮವಿಳಾಸ:—
ಎಂ. ಎಸ್. ಮಲಕಣ್ಣ, ಮತ್ತು ಬ್ರದರ್ಸ್,
ರೇಶ್ಮೆ ಜವಳಿ ವ್ಯಾಪಾರಿಗಳು. ಪೋಸ್ಟ್ ಮೊಳಕಾಲ್ಮುರು.

ಬಿಸಿಲುಕಾಲಕ್ಕೆ 19



ಅಮೃತಾಮಲಕತೈಲ:—ವಿವಿಧವಾದ ತಲೆನೋವು, ಶರೀರವು ಬೆಂಕಿಯಂತಿರುವುದು, ತಲೆ ತಿರಗು, ಕಣ್ಣುರಿ, ಕಣ್ಣು ಕೆಂಪು, ಕಣ್ಣು ಮಂಜು, ಕಣ್ಣಿನಲ್ಲಿ ನೀರು ಸುರಿಯುವುದು, ರಾತ್ರಿ ನಿದ್ರೆಬಾರದಿರುವುದು ಇವುಗಳನ್ನು ೧—೨ ಅಭ್ಯಂಗನದಿಂದಲೇ ಗುಣಮಾಡಿ ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ. ಬಿಸಿಲುಕಾಲಕ್ಕೆ ಇದು ಅಮೃತವೇಸರಿ ಎಂಟು ಅಭ್ಯಂಗನಕ್ಕೆ ಆಗುವ ತೈಲ ೦-೮-೦. ೧ ಡಜನ್ ೫-೦-೦.

ಆಮೋದಿನಿ:—ಅಮೋಘವಾದ ಸುವಾಸನೆಯಿಂದ ಕೂಡಿದ ಈ ಮಾತ್ರೆಗಳು ತಾಂಬೂಲವನ್ನು ರಂಜಿಸಿ ಬಾಯಾರಿಕೆಯನ್ನು ತಕ್ಷಣ ನಿಲ್ಲಿಸಿ ಆಯಾಸವನ್ನು ಪರಿಹರಿಸಿ ಕಂಠನಾಳವನ್ನು ಸರಿಪಡಿಸಿ ಕೆಮ್ಮು, ದಮ್ಮು, ಉಬ್ಬಸ, ಮಲಬಂಧಗಳನ್ನು ಗುಣಮಾಡಿ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠವಾದುದು. ಸಂಗೀತಗಾರರಿಗೂ, ವಿದ್ಯಾರ್ಥಿಗಳಿಗೂ, ಪ್ರಯಾಣೀಕರಿಗೂ ಅಮೂಲ್ಯವಾದುದು. ೧೫೦ ಮಾತ್ರೆ ೦—೪—೦. ೫ ಕ್ಕೆ ಒಂದು ಹೆಚ್ಚು.

ಖುತಾಮಲಕರಸಾಯನ:—ತಲೆತಿರಗು, ಕಣ್ಣುಕಗ್ಗತ್ತಲೆ, ಹಸಿವೇ ಇಲ್ಲದಿರುವುದು, ಆಹಾರದಲ್ಲಿ ಅರುಚಿ, ವಾಕರಿಕೆ, ವಾಂತಿ, ಹುಳಿ, ಖಾರ, ಅಥವಾ ಕಿಹಿಯಾದ ತೇಗು, ಹೊಟ್ಟೆಯುಬ್ಬರ, ಹೊಟ್ಟೆನೋವು, ಕಣ್ಣು ಅಥವಾ ಮೈ ಹಳದೀಬಣ್ಣ, ನಿಶ್ಶಕ್ತಿ, ಹಳೇಜ್ವರ, ಎದೆಬಡಿಯುವಿಕೆ, ಪಾಂಡು, ಕಾಮಾಲೆ, ಮೂರ್ಛೆ ಇವುಗಳಪೈಕಿ ಯಾವುದಿದ್ದರೂ ಖಾತರಿ ಗುಣವಾಗಿ ದಿನಕ್ಕೊಂದುವೇಳೆ ಸರೀಸಾಗಿ ಕಾಲಪ್ರವರ್ತಿಯಾಗುತ್ತದೆ. ೧೫ ದಿನಕ್ಕೆ ಆಗುವ ಔಷಧ ಬೆಲೆ ೦-೧೨-೦. ೧ ಡಜನ್ ಡಬ್ಬಿಗಳಿಗೆ ೭-೮-೦.

ಪ್ರತಿಔಷಧಕ್ಕೂ ಟಪಾಲ್ ಮತ್ತು ಪ್ಯಾಕಿಂಗ್ ಛಾರ್ಜ ಪ್ರತ್ಯೇಕ.

ವಿಳಾಸ:—ಬಿ. ವಿ. ಪಂಡಿತ್, ಸದ್ವೈದ್ಯಶಾಲಾ,
ನಂಜನಗೂಡು, ಮೈಸೂರು ಡಿ॥

ಓರಿಯಂಟಲ್ ಫಾರ್ಮಸಿ ಮೈಸೂರು.

3

ಪ್ರಸಿದ್ಧ ಗುಣಕಂಡ ಔಷಧಗಳು.

ಜ್ವರದಮಾತ್ರೆ—ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ. ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಯುಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮುಂದಇವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ರೂ.

ಗೋರೋಜನದಮಾತ್ರೆ—ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಶವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೊಡ್ಲೆ ತಪ್ಪಿ ಜೀರ್ಣಶಕ್ತಿ ಕೊಡುತ್ತೆ. ಪ್ರಯಾಣೀಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾದ ನೋವು ಉಳುಕು ಊತ ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ ೫ ಡಬ್ಬಿಗೆ ೧ ರೂ. ಕೊಡ್ಲೆ ನಮ್ಮ ಕ್ಯಾಟಲಾಗಿಗೆ ಬರಿಯಿರಿ ಮುಫತ್ತು ಕಳುಹಿಸುತ್ತೇವೆ.

ಫಕ್ತು ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

8

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪಿತ್ತೋದ್ರೇಕವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುಗುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೈಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಸಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳಸಹಿತ ಆದ ಸಮಾರಂಭ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ. ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವಿರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೋ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಶಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವನ್ಯೆಗೆ ಫೋಟೊ ಸಿಕ್ಕುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.

ಹೊಸಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವ ಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಈಪ್ರಕಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ॥।= , ೧, ೧।. ಪ್ರಕಾರ, ಮತ್ತೂ ಬೆಳ್ಳಿಯದು ರು ೧॥ ರೋಲ್ಡ್ ಗೋಲ್ಡು ಬಂಗಾರದ್ದು ಪರ್ಷಿಣದ ಗ್ಲಾಸದೂ ಕ್ರಯ ೨॥, ೩ ರೂ.

ಪರಊರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಡಾಣೆ ಟಿಕೇಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ.

ನಮ್ಮವಿಳಾಸ— ಗಂಗಪ್ಪಾ ಜೀರಿಗೆ,
ಆರ್ಟಿಸ್ಟ್ ಸೊಲ್ಲಾಪುರ.

42

ಊದಬತ್ತಿಗಳು.

41

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧-೨-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೧-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪರ್ಟಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್‌ಸನ್ಸ್
ಸುಗಂಧಕಾರಿ, ಮೈಸೂರು.

ಗಂಧರಾಜ ನಶ್ಯದಪುಡಿ.

50



ಈ ಪುಡಿಯನ್ನು ಹಾಕಿಕೊಳ್ಳುವುದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಗಿದ್ದರೂ ತಪ್ಪದೆ ಗುಣವಾಗುತ್ತದೆ. ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚುಟಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ದರ್ಜ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಧಾತು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುತ್ತವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ದರ್ಜ ಡಬ್ಬಿಗಳಿಗೆ ೨-೧೪-೦ ಟಪಾಲ್‌ಖರ್ಚು ಬೇರೆ.

ವಿಳಾಸ—ಕೆ. ಮಲ್ಲಿಕಾರ್ಜುನಶೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್
ಕೊಳ್ಳೇಗಾಲದ ತಾಲ್ಲೂಕು.

೧೯೧೫ನೆಯ ಇಸವಿ ಫೆಬ್ರುವರಿ ತಾ॥೨೧ರಿಂದ ೧೯೧೫ನೆಯ ಫೆಬ್ರುವರಿ ತಾ॥ ೨೭ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ಫಾಲ್ಗುಣ ಶು॥ ಸಪ್ತಮಿಯಿಂದ ಫಾಲ್ಗುಣ ಶು॥ ತ್ರಯೋದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕಂಂ ತೇದಿ
21	[1]ಭಾನು	ಸಪ್ತ	26-37	ಕೃತ್ತಿ	60-0	10
22	ಸೋ	ಅಷ್ಟ	32-5	ಕೃತ್ತಿ	0-13	11
23	ಮಂಗ	ನವ	37-4	ರೋಹಿ	6-35	12
24	[2]ಬುಧ	ದಶ	41-12	ಮೃಗ	12-19	13
25	[3]ಗುರು	ಏಕಾ	44-18	ಆರಿದ್ರಾ	17-10	14
26	[4]ಶುಕ್ರ	ದ್ವಾ	46-12	ಪುನರ್ವ	20-43	15
27	[5]ಶನಿ	ತ್ರ	46-42	ಪುಷ್ಯ	23-22	16

(1) ಸಪ್ತಮೀಶಾತಿಥಿಃ. (2) ತಿರುಕ್ಕಚ್ಚಿನಂಬೀ ತಿರುನಕ್ಷತ್ರಂ, ಶ್ರೀ ಭಾಷ್ಯಕಾರರ್ ತಿರುವಧ್ಯಯನಂ. (3) ಸರ್ವತ್ರೈಕಾದಶೀ, ಜಯಲಕ್ಷ್ಮಮ್ಮಣ್ಣಿಯವರ ವರ್ಧಂತೀ. (4) ಕುಲಶೇಖರಾಳ್ವಾರ್ ತಿರುನಕ್ಷತ್ರಂ. (5) ಪ್ರದೋಷಃ, ತೊಂಡನೂರು ಗೋಪಾಲಕೃಷ್ಣಸ್ವಾಮಿನಾರಥಃ

ಮೈಸೂರ್ ಶ್ರೀ. ವಿರೂಪಾಕ್ಷಯ್ಯನವರಿಂದ ಕ್ರಾರ್ಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಬಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

38

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೊಹೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಸೂತುಶೂಲೆ, ಮಕ್ಕಳ ಎಳವು, ಜ್ವರ, ನ ಚ್ಚು ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೮ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ವಿಶಾರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸನಿಯದಲ್ಲಿ ಇಟ್ಟುಕೊಳ್ಳಬೇಡಿರಿ? ಒಂದೇಪ್ರಂದು ಬುಡ್ಡಿಯು ನಿಮ್ಮಲ್ಲಿರಲಿ. ಮಾತೊಂದು ಸಹಾಯದ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧-೦-೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ERGISTERED NO. M. 124.

ಮೈಸೂರ್ ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಕ್ಷಜ್ಞ ನಕ್ಷತ್ರವೋಹರಾಜೇಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ।
ಸಿಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ವಾರ್ಷಿಕ ಚಂದಾ ೧-೦-೦ ಅಂಚೆವೆಚ್ಚ ಸೇರಿ ೧-೪-೦

ಸಂಪುಟ ೨೮) ಮೈಸೂರ್ ಸ್ಟಾರ್ ಸರ್ಕ ೧೯೧೫ ನೆಯ ಇಸವಿ ಫೆಬ್ರುವರಿ ತಾರೀಖು ೨೮ ನೆಯ ಭಾನುವಾರ. (ಸಂಚಿಕೆ ೯

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

4

(ರಿಜಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

೧. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲಿತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.
೨. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.
೩. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ ಯಾವರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.
೪. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.
೫. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.
೬. ಬೇಸಿಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗನನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.
೭. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

೪೫	ಮಾತ್ರೆಗಳ	ಪೊಟ್ಟಣ	೧ಕ್ಕೆ	೨	ಆಣೆ	೮೦	ಮಾತ್ರೆಗಳ	ಟಿನ್	೧ಕ್ಕೆ	೪	ಆಣೆ.
೯೫	,,	,,	,,	೪	,,	೧೦೦	,,	ಶೀಶೆ	,,	೪॥	,,
೨೦೦	,,	,,	,,	೭	,,	೫೫೦	,,	ಮರದಪೆಟ್ಟಿಗೆ	,,	೧	ರೂ.
೨೦೦	,,	ಟಿನ್	,,	೯	,,	೧,೨೦೦	,,	,,	,,	೨	,,

೧ ರೂ.ಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಎಲ್ಲಾ ಕಡೆಯೂ ಪ್ರಸಿದ್ಧ ವರ್ತಕರಲ್ಲಿ ವಿಕ್ರಯಿಸಲ್ಪಡುತ್ತದೆ.

ಮೈಸೂರುಸೀಮೆಯ ಏಜಂಟರು:—ಎಂ. ರಾಮಸಂಜೀವ ಸೆಟ್ಟಿ,
ಚನ್ನಪಟ್ಟಣ.

ಸೋಲ್ ಏಜಂಟರು:—ಸೆಶಿಂತಾನ್ ಡಿಪೋ,
ಪ್ರಿನ್ಸೆಸ್‌ಸ್ಟ್ರೀಟ್ ಬೊಂಬಾಯಿ ನಂ ೨.

ಮದ್ರಾಸ್ ಏಜಂಟ್:—ಬಿ. ಸಿ. ಷಾ ಅಂಡ್ ಕೊ,
೧೩೩ ಚೇನಾಬಜಾರ್ ರೋಡ್, ಮದ್ರಾಸ್.

22

S.U.N.&Co
BENARES CITY.
KASHI
VISHWESHWAR.

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು !!

ಈ ನಮ್ಮ ಕಂಪೆನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ—ಎಸ್. ಯೂ ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

೧೯೧೫ನೆಯ ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಬೆಲೆಯನ್ನು ತಗ್ಗಿಸಿದೆ. ಕೊಂಚಪ್ರತಿಗಳು ಮಾತ್ರವಿವೆ. ಬೇಗ ಬರೆದು ತರಿಸಿಕೊಳ್ಳಿರಿ. ಉತ್ತಮವಾದಕಾಗದ ಮುದ್ದಾದಮುದ್ರಣ. ಮತ್ತಾವಡೈರಿಗಳಲ್ಲೂ ಇಲ್ಲದ ಅನೇಕ ಉಪಯುಕ್ತವಾದ ಸಂಗತಿಗಳು ಈ ಡೈರಿಯಲ್ಲಿ ಇರುತ್ತವೆ. ಐದು (೫) ಡೈರಿಗಳನ್ನು ಒಂದೇವಿಳಾಸಕ್ಕೆ ತರಿಸಿಕೊಂಡರೆ ೧ ಡೈರಿ ಇನಾಂ.

೧ ನಂ—ಸಣ್ಣಸೈಜು ಸಾದಾ ೦-೨-೬
೨ ನಂ—ಪೆನ್ಸಲ್‌ಮುಚ್ಚುಳವುಳ್ಳದು ೦-೪-೦

ಪೋಸ್ಟೇಜು ಬೇರೆ.

ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.

21

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧-೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಶಿವಪೂಜಾವಿಧಿಃ	೦-೮-೦
ಚಾರುಶೀಲೆಚರಿತ್ರೆ	೦-೫-೦
ಸಟೀಕ ನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವಿವೇಕಮಂಜರಿ [೨ನೆಯ ಭಾಗ]	೦-೩-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು.

173

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೩೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ— ಬೆಲೆ ೧-೮-೦ ದ್ವಿತೀಯಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತೇ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟಿಕ ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಓರಿಯಂಟಲ್ ಫಾರ್ಮಸಿ ಮೈಸೂರು.

3

ಪ್ರಸಿದ್ಧ ಗುಣಕಂಡ ಔಷಧಗಳು.

ಜ್ವರದಮಾತ್ರೆ—ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆನುಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕಸೆಳೆತ ಮಂದಇವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ರೂ.

ಗೋರೋಚನದಮಾತ್ರೆ—ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೂಡ್ಲೆ ತಪ್ಪಿ ಜೀರ್ಣಶಕ್ತಿಕೊಡುತ್ತೆ. ಪ್ರಯಾಣಿಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾದ ನೋವು ಉಳುಕು ಊದು ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ ೫ ಡಬ್ಬಿಗೆ ೧ ರೂ. ಕೂಡ್ಲೆ ನಮ್ಮ ಕ್ಯಾಟಲಾಗಿಗೆ ಬರಿಯಿರಿ ಮುಫತ್ತು ಕಳುಹಿಸುತ್ತೇವೆ.

ಫಕ್ತು ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

8

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪ್ರದ್ರೇಕವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶಗಳ ಮೇಲೆ ಹುಟ್ಟುಗುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ ಒಬ್ಬ ಮನುಷ್ಯನಿಗೆ ೪೦ ತೊಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೊಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಸಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೀಳುಸಹಿತ ಆದ ಸಮಾರಂಭ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೊ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಶಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ಮನೈಗೆ ಫೋಟೊ ಸಿಕ್ಕುತ್ತವೆ ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.



ಹೊಸಫ್ಯಾಷನ್—ಸಭ್ಯಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವ ಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಈಪ್ರಕಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ।॥= , ೧, ೧।. ಪ್ರಕಾರ, ಮತ್ತೂ ಬೆಳ್ಳೀದು ರು ೧॥ ರೋಡ್ ಗೋಲ್ಡು ಬಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨।॥ ರೂ.

ಪರೂರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೇಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ.

ನಮ್ಮವಿಳಾಸ— ಗಂಗಪ್ಪಾ ಜೀರಿಗೆ,
ಆರ್ಟಿಸ್ಟ ಸೊಲ್ಲಾಪುರ .

42

ಊದಬತ್ತಿಗಳು.

41

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧-೨-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೧-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪರ್ತಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್ ಸನ್ಸ್
ಸುಗಂಧಕಾರಿ, ಮೈಸೂರು.

ಗಂಧರಾಜ ನಶ್ಯದಪುಡಿ.

50



ಈ ಪುಡಿಯನ್ನು ಹಾಕಿಕೊಳ್ಳುವದರಿಂದ ಮೂಗಿನಲ್ಲಿ ಚಕ್ಕೆ ಕಟ್ಟುವುದು, ಕೆಟ್ಟವಾಸನೆಬರುವುದು, ಶೀತ, ನೆಗಡಿ, ಉಸಿರುಕಟ್ಟಿಕೊಳ್ಳುವುದು (ಪೀನಸಿ)ಸಂಜೆ ಮತ್ತು ಬೆಳಗಿನವೇಳೆಗಳಲ್ಲಿ ಮಾತ್ರ ತಲೆ ನೋಯುವುದು, ತಲೆಯಲ್ಲಿ ನೀರು ತುಂಬಿ ಧಿಮ್ಮೆನ್ನುವುದು, ಈ ಯಾವುದಾಇದ್ದರೂ ತಪ್ಪದೆ ಗುಣವಾಗುತ್ತದೆ. ಕಣ್ಣುಗಳಿಗಾಗಲಿ ಮೆದುಳಿಗಾಗಲಿ ಕೆಡುಕಿಲ್ಲ. ಒಂದು ಚುಟಿಕಿ ಈ ಪುಡಿಯನ್ನು ಸಾಧಾರಣ ಪುಡಿಯೊಡನೆ ಬೆರಸಿದರೆ ವಾಸನೆಯು ಘಮಘಮಿಸುತ್ತದೆ. ೧ ಡಬ್ಬಿಯ ಬೆಲೆ ೪ ಆಣೆ. ೧ ದರ್ಜ ಡಬ್ಬಿಗೆ ೨-೨-೦

ಉತ್ತಮವಾದ ನಶ್ಯದಪುಡಿ.

ಧಾಟು ಸಹಜವಾದ ವಾಸನೆಗಳಿಂದ ಒಳ್ಳೇ ಹೊಗೆಸೊಪ್ಪಿನಿಂದ ಈ ಪುಡಿಯು ತಯಾರಿಸಲ್ಪಡುತ್ತಿದೆ. ಮೂಗಿನಲ್ಲಿ ಹುಳಿವಾಸನೆ ಬರುವ ಮೂಗು ಕಟ್ಟಿಕೊಳ್ಳುವ ದುರ್ಗುಣಗಳಿಲ್ಲ. ಒಂದೇಒಂದುಸಾರಿ ಪರೀಕ್ಷಿಸಿನೋಡಿದರೆ ನಮ್ಮ ಮಾತಿನ ನಿಜವು ತಿಳಿಯುತ್ತದೆ. ೨೪ ತೊಲೆ ತೂಕದ ಸೇರಿಗೆ ೧೦ ಆಣೆ ೫ ಸೇರಿಗೆ ೨-೮-೦

ಮುಖೋಲ್ಲಾಸಿನೀ ಹೊಗೇಸೊಪ್ಪು.

ಬಾಯಿಯ ವಾಸನೆ, ಹಲ್ಲುನೋವು, ಬಾಯಿಹುಣ್ಣು, ನಾಲಿಗೆ ಅರೋಚಕಗಳು ಹೋಗುತ್ತವೆ. ನೀವುಉಪಯೋಗಿಸುವ ಬರೀ ಹೊಗೇಸೊಪ್ಪಿಗೆಬದಲಾಗಿ ಖಾರ, ರುಚಿ, ಸುವಾಸನೆಗಳಿಂದ ಮೆರೆಯುವ ಈ ಹೊಗೇಸೊಪ್ಪನ್ನು ಉಪಯೋಗಿಸಿರಿ. ೧ ಡಬ್ಬಿಗೆ ೪ ಆಣೆ. ಒಂದು ದರ್ಜ ಡಬ್ಬಿಗಳಿಗೆ ೧-೧೪-೦ ಟಪಾಲ್‌ಖರ್ಚ ಬೇರೆ.

ವಿಳಾಸ— ಕೆ. ಮಲ್ಲಿಕಾರ್ಜುನಸೆಟ್ಟಿ,
ಗೋಪಸೆಟ್ಟಿಪುರ, ಹನೂರು ಪೋಸ್ಟ್
ಕೊಳ್ಳೇಗಾಲದ ತಾಲ್ಲೂಕು.

೧೯೧೫ನೆಯ ಇಸವಿ ಫೆಬ್ರವರಿ ತಾ॥೨೧ರಿಂದ ೧೯೧೫ನೆಯ ಫೆಬ್ರವರಿ ತಾ॥ ೨೭ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ದ ಫಾಲ್ಗುಣ ಶು॥ ಸಪ್ತಮಿಯಿಂದ ಫಾಲ್ಗುಣ ಶು॥ ತ್ರಯೋದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂಭ ತೇದಿ
21	[1]ಭಾನು	ಸಪ್ತ	26-37	ಕೃತ್ತಿ	60-0	10
22	ಸೋ	ಅಷ್ಟ	32-5	ಕೃತ್ತಿ	0-13	11
23	ಮಂಗ	ನವ	37-4	ರೋಹಿ	6-35	12
24	[2]ಬುಧ	ದಶ	41-12	ಮೃಗ	12-19	13
25	[3]ಗುರು	ಏಕಾ	44-18	ಆರಿದ್ರಾ	17-10	14
26	[4]ಶುಕ್ರ	ದ್ವಾ	46-12	ಪುನರ್ವ	20-43	15
27	[5]ಶನಿ	ತ್ರ	46-42	ಪುಷ್ಯ	23-22	16

(1) ಸಪ್ತಮೀತಿಥಿಃ. (2) ತಿರುಕ್ಕಚ್ಚಿನಂಬೀ ತಿರುನಕ್ಷತ್ರಂ, ಶ್ರೀ ಭಾಷ್ಯಕಾರರ್ ತಿರುವಧ್ಯಯನಂ. (3) ಸರ್ವತ್ರೈಕಾದಶೀ, ಜಯಲಕ್ಷಮ್ಮಣ್ಣಿಯವರ ವರ್ಧಂತೀ. (4) ಕುಲಶೇಖರಾಳ್ವಾರ್ ತಿರುನಕ್ಷತ್ರಂ. (5) ಪ್ರದೋಷಃ, ತೊಂಡನೂರು ಗೋಪಾಲಕೃಷ್ಣಸ್ವಾಮಿರಥಃ

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

38



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋಹಿತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೬ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈವಿಶಾರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲಿಯೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇವೊಂದು ಬುಡ್ಡಿಯು ನಿಮ್ಮಲ್ಲಿರಲಿ. [illegible] ಸಹಾಯದ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧—೦—೦

ಟಪಾಲ್‌ಖರ್ಚ ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಶ್ರೀ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ERGISTERED NO. M. 124.

ಮೈಸೂರ್ ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಕ್ಷಜ್ಞನಹೃತ್ತಮೋಹರಾಜೀಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ।
ಸಿಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ।

ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೧೪—೦

ಸಂಪುಟ ೨೮) ಮೈಸೂರ್ ಸ್ಟಾರ್ ಸರ್ ೧೯೧೫ ನೆಯ ಇಸವಿ ಫೆಬ್ರವರಿ ತಾರೀಖು ೨೮ ನೆಯ ಭಾನುವಾರ. (ಸಂಚಿಕೆ ೯

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

4

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

೧. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

೨. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

೩. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ ಯಾವರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

೪. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

೫. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

೬. ಬೇಸಿಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

೭. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೆಶಿತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

೪೫ ಮಾತ್ರೆಗಳ	ಪೊಟ್ಟಣ	೧ಕ್ಕೆ	೨	ಆಣೆ	೮೦ ಮಾತ್ರೆಗಳ	ಟಿನ್	೧ಕ್ಕೆ	೪	ಆಣೆ.
೯೫ ,,	,,	,,	೪	,,	೧೦೦ ,,	ಶೀಶೆ	,,	೪॥	,,
೨೦೦ ,,	,,	,,	೭	,,	೫೫೦ ,,	ಮರದಪೆಟ್ಟಿಗೆ	,,	೧	ರೂ.
೨೦೦ ,,	ಟಿನ್	,,	೯	,,	೧೨೦೦ ,,	,,	,,	೨	,,

೧ ರೂ.ಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಎಲ್ಲಾ ಕಡೆಯೂ ಪ್ರಸಿದ್ಧ ವರ್ತಕರಲ್ಲಿ ವಿಕ್ರಯಿಸಲ್ಪಡುತ್ತದೆ.

ಮೈಸೂರುಸೀಮೆಯ ಏಜಂಟರು:—ಎಂ. ರಾಮಸಂಜೀವ ಸೆಟ್ಟಿ,
ಚನ್ನಪಟ್ಟಣ.

ಸೋಲ್ ಏಜಂಟರು:—ಸೆಶಿತಾನ್ ಡಿಪೋ,
ಪ್ರಿನ್ಸೆಸ್‌ಸ್ಟ್ರೀಟ್ ಬೊಂಬಾಯಿ ನಂ ೨.

ಮದ್ರಾಸ್ ಏಜಂಟ್:—ಬಿ. ಸಿ. ಷಾ ಅಂಡ್ ಕೊ,
೧೩೩ ಚೇನಾಬಜಾರ್ ರೋಡ್, ಮದ್ರಾಸ್.

22


S.U.N.&Co.
BENARES CITY.
KASHI
VISHWESHWAR.

ದೊಡ್ಡ ಕಂಪೆನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟಲ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಲ್ಲಾಗನ್ನು ಕಳುಹಿಸುವೆವು.

ವಿಳಾಸ—ಎಸ್. ಯೂ ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

೧೯೧೫ನೆಯ ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಬೆಲೆಯನ್ನು ತಗ್ಗಿಸಿದೆ. ಕೊಂಚಪ್ರತಿಗಳು ಮಾತ್ರವೆ ಇವೆ. ಬೇಗ ಬರೆದು ತರಿಸಿಕೊಳ್ಳಿರಿ. ಉತ್ತಮವಾದ ಕಾಗದ ಮುದ್ದಾದಮುದ್ರಣ. ಮತ್ತಾವಡೈರಿಗಳಲ್ಲೂ ಇಲ್ಲದ ಅನೇಕ ಉಪಯುಕ್ತವಾದ ಸಂಗತಿಗಳು ಈ ಡೈರಿಯಲ್ಲಿ ಇರುತ್ತವೆ. ಐದು (೫) ಡೈರಿಗಳನ್ನು ಒಂದೇವಿಳಾಸಕ್ಕೆ ತರಿಸಿಕೊಂಡರೆ ೧ ಡೈರಿ ಇನಾಂ.

೧ ನಂ—ಸಣ್ಣಸೈಜು ಸಾದಾ	೦—೨—೬
೨ ನಂ—ಪೆನ್‌ಸಲ್‌ಮುಚ್ಚುಳವುಳ್ಳದು	೦—೪—೦

ಪೋಸ್ಟೇಜು ಬೇರೆ.

ವಿಳಾಸ.—ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.

21

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರಮಾದಿಗಜಾಂಕುಶತಾರಾವಳಿ	೧—೮—೦
ಶಿವಪೂಜಾವಿಧಿಃ	೧—೮—೦
ಚಾರುಶೀಲಿಚರಿತ್ರೆ	೧—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು.

173

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ— ಬೆಲೆ ೧-೮-೦ ದ್ವಿತೀಯಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತೆ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟಿಕ ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ- ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಂ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತವಾಗಿರುವ ಘೋರಯುದ್ಧದ ದೆಸೆಯಿಂದ ಈ ಸಾಮಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದ ಮತ್ತೂ ಬೆಲಜಿಯಮ್ಮಿನಿಂದ ಸುತರಾಂ ಬರುವುದು ಕಟ್ಟಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಆವಶ್ಯಕವಾದ ಕಾಗದ ಮೊದಲಾದ ಸಾಮಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವಧಿಯು ಪೂರೈಸಿರುವವರಿಗೆಲ್ಲಾ ಪತ್ರಿಕೆಯನ್ನು ವಿ. ಪಿ ದ್ವಾರ ಕಳುಹಿಸುತ್ತಿರುವೆವು. ಆದರೆ ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿರುಗಿಸಿ ಕಾಗದದ ಬೆಲೆಯೇರಿಕೆಯಿಂದ ನಷ್ಟಪಡುವುದರ ಜತೆಗೆ ಪೋಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದು ತಿಳುಹಲು ಖೇದವಾಗುತ್ತದೆ. ಇತಃಪರಃ ದಯಾರ್ದ್ರಹೃದಯರಾದ ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ. ಪಿ. ಹಣವನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನವಾಗಿ ನಡೆದುಕೊಂಡು ಹೋಗುವಂತೆ ಮಾಡುವರೆಂದು ಸಂಪೂರ್ಣವಾಗಿ ನಂಬಿರುತ್ತೇವೆ.

ಮ್ಯಾನೇಜರ್.

(ಅರ್ಥಸಾಧನಪತ್ರಿಕೆಯಿಂದ)

ಮೈಸೂರು ಸಂಸ್ಥಾನದ ವ್ಯವಸಾಯಾಭಿವೃದ್ಧಿ.

ಈ ಇಲಾಖೆಯ ಕಾರ್ಯವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. (೧) ಪರೀಕ್ಷೆಯ ಮೂಲಕ ತಾವೇ ಪರಿಶೋಧಿಸುವುದು. (Experiment) (೨) ಅದನ್ನು ಉಪಪಾದನೆಮಾಡಿ ದೃಷ್ಟಾಂತದ ಮೂಲಕ ಇತರರಿಗೆ ತೋರಿಸುವುದು (Demonstration) (೩) ವ್ಯವಸಾಯಶಾಸ್ತ್ರಕ್ಕೆ ಸಂಬಂಧಪಟ್ಟ ವಿದ್ಯೆ. (Agricultural Education)

ಮೊದಲನೆಯ ಭಾಗದಲ್ಲಿ—ಸಾಗುವಳಿಯಲ್ಲಿಯೂ ಗೊಬ್ಬರ ಹಾಕುವುದರಲ್ಲಿಯೂ ವಿಧವಿಧ ಕ್ರಮಗಳನ್ನು ಮಾಡಿನೋಡಿ, ಪರೀಕ್ಷಿಸುವುದು; ಬೇರೆಬೇರೆ ಜಾತಿಯ ಬೆಳೆಗಳನ್ನು ಪೈರು ಮಾಡಿ ನೋಡುವುದು; ಗಿಡಗಳಿಗೆ ಹತ್ತುವ ನಾನಾವಿಧರೋಗಗಳನ್ನೂ, ಹುಳುಗಳ ಬಾಧೆಯನ್ನೂ ನಿವಾರಿಸುವುದಕ್ಕೆ ತಕ್ಕ ಉಪಾಯಗಳನ್ನು ಕಂಡು ಹಿಡಿಯುವುದು. ಆ ಮೂಲಕ, ಸಂಸ್ಥಾನದ ಈಗಿನ ವ್ಯವಸಾಯಪದ್ಧತಿಯನ್ನು ಉತ್ತಮಸ್ಥಿತಿಗೆ ತರುವುದು. ಜೀವನಕ್ಕಾಗಿ ಸಾಗುವಳಿ ಮಾಡುವ ರೈತರು ತಾವಾಗಿಯೇ ಇಷ್ಟು ಕೆಲಸಗಳನ್ನು ಮಾಡಲಾರರು; ಅಲ್ಲದೆ ಅದನ್ನು ಚಾತುರ್ಯದಿಂದ ನಿರ್ವಹಿಸುವುದಕ್ಕೆ ತಕ್ಕ ಶಾಸ್ತ್ರೀಯ ಜ್ಞಾನವೂ ಅವರಲ್ಲಿಲ್ಲ.

ಮೇಲೆ ಕಂಡ ಕೆಲಸಗಳನ್ನು ಸಾಧಿಸುವುದಕ್ಕೆ ವ್ಯವಸಾಯಪರೀಕ್ಷೆಗೆಂದೇ (Farms) ಪ್ರತ್ಯೇಕವಾದ ಜಮೀನುಗಳೂ, ಪ್ರಯೋಗಶಾಲೆಯಂತಹ (Laboratories) ಕಾರಖಾನೆಗಳೂ ಇರಬೇಕು. ಮೈಸೂರು ವ್ಯವಸಾಯದ ಇಲಾಖೆಯಲ್ಲಿ ಕಾರಖಾನೆಗಳು ಚೆನ್ನಾಗಿವೆ. ಪರೀಕ್ಷಾರ್ಥವಾದ ಜಮೀನುಮಾತ್ರ ಒಂದೇಒಂದು ಇದೆ, ಬೆಂಗಳೂರು ಬಳಿ ಹೆಬ್ಬಾಳಿನಲ್ಲಿ. ಸಂಸ್ಥಾನದ ಇತರ ಭಾಗಗಳಲ್ಲಿಯೂ ಇಂತಹ ಜಮೀನುಗಳನ್ನು ಇಡುವ ವಿಷಯದಲ್ಲಿ ಸರ್ಕಾರದವರು ಆಲೋಚನೆಮಾಡುತ್ತಿದ್ದಾರೆ.

ಹೆಬ್ಬಾಳಿನಲ್ಲಿರುವ ವ್ಯವಸಾಯ ಪರೀಕ್ಷಾಕ್ಷೇತ್ರದಲ್ಲಿ ೫೦ ಎಕರೆ ಖುಷ್ಕಿ ಜಮೀನೂ, ೨೦ ಎಕರೆ ತರಿ ಜಮೀನೂ ಇದೆ ಇದರಲ್ಲಿ ರಾಗಿ, ಬತ್ತ, ಕಬ್ಬು ಈ ಮೂರ ಪೈರುಗಳನ್ನು ಮಾತ್ರ ಹಾಕಿ ಪರೀಕ್ಷೆಮಾಡಿದೆ.

ರಾಗಿ.

೧. ಮಾಗಿಯ ಉಳ್ಮೆ ಮಾಡುವುದರಿಂದ, ಎಂದರೆ ಕಟಾವಾದ ಕೂಡಲೆ ಹೊಲವನ್ನು ಉಳುವುದರಿಂದ ಹೆಚ್ಚಿನ ರಾಗಿಯು ಪೈರಾಗುವುದೆಂದು ತಿಳಿದುಬಂದಿದೆ. ಬೇಗ ಬೇಗ ಉಳುವ ಉತ್ತಮರೀತಿಯ ನೇಗಲನ್ನು ಉಪಯೋಗಿಸುವುದು ಅತ್ಯಾವಶ್ಯಕ.

೨ ಆಷಾಢಮಾಸಕ್ಕೆ ಮುಂಚೆ ಪೈರ್ರಾಗಿ ಹಾಕಿದರೆ ಪೈರು ಕಡಿಮೆಯಾಗುವುದು. ಆಶ್ಲೇಷ, ಮಘೆ ಈ ನಕ್ಷತ್ರಗಳ ಮಳೆಯಲ್ಲಿ ಬಿತ್ತುವುದರಿಂದ ಏನೂ ನಷ್ಟವಿಲ್ಲ.

೩ ಹಸುರೆಲೆ ಗೊಬ್ಬರವು ಸಿಕ್ಕುವ ಬೆಳೆಯನ್ನು ಮುಂಗಾರು ಮಳೆಯಲ್ಲಿ ಹಾಕಿ, ಮುಂದೆ ಬಿತ್ತುವ ರಾಗಿಯ ಪೈರಿಗಾಗಿ ಚೆನ್ನಾಗಿ ಉತ್ತು ಜಾಗರೂಕತೆಯಿಂದ ನೋಡಿಕೊಂಡರೆ, ಉತ್ಪತ್ತಿಯು ಬಲುಮಟ್ಟಿಗೆ ಹೆಚ್ಚಿ, ಹೆಚ್ಚಿನ ಖರ್ಚು ಕಳೆದು, ಬೇಕಾದಷ್ಟು ಲಾಭವೂ ಸಿಕ್ಕುತ್ತದೆ.

೪. ಒಳ್ಳೆಯ ಬೀಜಗಳನ್ನು ಆರಿಸಬೇಕಾದರೆ, ಒಂದು ಪಾತ್ರೆಯಲ್ಲಿ ನೀರುಹಾಕಿ, ಅದಕ್ಕೆ ಸ್ವಲ್ಪ ಉಪ್ಪನ್ನು ಬೆರಸಿ, ಆ ನೀರಿನಲ್ಲಿ ಬಿತ್ತನೆಯ ರಾಗಿಯನ್ನು ಹಾಕಿದರೆ, ಜಳ್ಳು, ಲೊಡ್ಡೂ ಮೇಲೆ ತೇಲಿ, ಅಡಿಯಲ್ಲಿ ಸಾರವಾದುದು ನಿಲ್ಲುತ್ತದೆ. ಅದನ್ನು ತೆಗೆದು ಬಿತ್ತಿದರೆ ಒಳ್ಳೆಯ ಹೊರುವಾದ ಬೆಳೆಯಾಗಿ, ಉತ್ಪತ್ತಿ ಯಥೇಷ್ಟ ಹೆಚ್ಚುತ್ತದೆ.

೫. ಜೋಳ ಅಥವಾ ರಾಗಿಯಮೇಲೆ, ರಾಗಿಯನ್ನು ಹಾಕಿ ಪೈರುಮಾಡುವುದಕ್ಕಿಂತ. ಒಂದು ಪೈರು ರಾಗಿ, ಒಂದು ಪೈರು ನೆಲಗಡಲೆ ಈ ರೀತಿ ಮಾಡುವುದು ಉತ್ತಮವೆಂದು ಕಂಡುಬಂದಿದೆ.

ನೆಲ್ಲು.

ಬತ್ತದ ಸಾಗುವಳಿಯಲ್ಲಿ ಪ್ರಯೋಜನವೆಂದು ಕಂಡುಬಂದ ವಿಷಯಗಳು.

೧. ಕಣಬು ಅಥವಾ ಅಲಸಂದಿಯ ಹಸುರೆಲೆ ಗೊಬ್ಬರವನ್ನು ಉಪಯೋಗಿಸುವುದು ಒಳ್ಳೆಯದು.

೨. ಎಲುಬಿನ ಪುಡಿಯು ಭೂಮಿಯ ಸಾರವನ್ನು ಹೆಚ್ಚಿಸುವುದು.

೩. ಹೆಚ್ಚು ಹೆಚ್ಚು ಸಸಿಗಳನ್ನು ಸೇರಿಸಿ ಒಟ್ಟಿಗೆ ನಾಟುವುದಕ್ಕಿಂತ ಒಂದೊಂದು ಅಥವಾ ಎರಡುಮೂರಾಗಿ ಸೇರಿಸಿ ನಾಟಿಹಾಕುವುದು ಒಳ್ಳೆಯದು.

೪. ಪೆಟ್ಲುಪ್ಪಿನ ಗೊಬ್ಬರವು ಲಾಭಕರವಲ್ಲ.

೫. ಉಪ್ಪುನೀರಿನಲ್ಲಿ ನೆನೆಸಿ, ಅಡಿಯಲ್ಲಿ ತಂಗುವ ಬೀಜವನ್ನು ಆರಿಸಿಕೊಂಡು ಬಿತ್ತುವುದು ಉತ್ತಮ.

ಕಬ್ಬು.

ಕಬ್ಬಿನ ಬೆಳೆಯಲ್ಲಿ ತಿಳಿದುಬಂದ ಅಂಶಗಳು.

೧. ಇದಕ್ಕೆ ಹಸುರೆಲೆಯ ಗೊಬ್ಬರವು ಒಳ್ಳೆಯದು.

೨. ಮಾರ್ಗಶಿರಮಾಸ ಹಿಡಿದು ಚೈತ್ರದೊಳಗೆ ನಾಟಬಿದ್ದರೆ ಕಬ್ಬಿನ ಬೆಳೆ ಚೆನ್ನಾಗಿ ಆಗುವುದಿಲ್ಲ.

೩. ಪೈರು ಚೆನ್ನಾಗಿ ಆಗಬೇಕಾದರೆ, ಹಿಂಡಿಯ ಗೊಬ್ಬರವನ್ನು ಹೆಚ್ಚಾಗಿ ಹಾಕಬೇಕು.

ಇದಲ್ಲದೆ ರಾಗಿ, ಬತ್ತ, ಕಬ್ಬು, ನೆಲಗಡಲೆ, ಹತ್ತಿ ಇವು ಒಂದೊಂದರಲ್ಲಿಯೂ ಅನೇಕಜಾತಿಯ ಬೀಜಗಳನ್ನು ಹಾಕಿ, ಪರೀಕ್ಷೆಮಾಡುತ್ತಿದೆ. ಸಂಸ್ಥಾನದ ಪೂರ್ವಪ್ರದೇಶದಲ್ಲಿ ಹತ್ತಿಯ ಬೆಳೆಯ ಹೆಸರೇ ಇಲ್ಲ. ಈ ಯುದ್ಧ ಮುಗಿದು, ಹತ್ತಿಯ ಬೆಲೆ ಮೊದಲಿನಂತೆ ಆದಕೂಡಲೆ, ಅಲ್ಲಿಯೂ (ಬೆಂಗಳೂರು ಕೋಲಾರ ಡಿ॥ ಗಳಲ್ಲಿ) ಒಂದೆರಡು ಜಾತಿಯ ಹತ್ತಿಯನ್ನು ಬೆಳೆಯಿಸಿದರೆ, ಒಳ್ಳೆಯ ಲಾಭವು ಸಿಕ್ಕಬಹುದೆಂದು ತಿಳಿದುಬಂದಿದೆ.

ಪೈರಿನ ವಿಷಯವು ಮಾತ್ರವೇ ಅಲ್ಲ. ಬೇಸಾಯಗಾರರಿಗೆ ಬೇಕಾಗುವ ಒಳ್ಳೊಳ್ಳೆಯ ಕೆಲಸ ಮುಟ್ಟುಗಳನ್ನು ಆರಿಸಿ, ಅವುಗಳ ವಿಕ್ರಯಕ್ಕಾಗಿ ಒಂದು ಕೋಠಿಯನ್ನು ಇಟ್ಟಿದೆ. ಮಾರುವುದಕ್ಕೆ ಸಿದ್ಧವಾಗಿರುವ ಆಯುಧಸಾಮಗ್ರಿಗಳ ಪಟ್ಟಿಯನ್ನು ಯಾರು ಕೇಳಿದರೂ ಕೊಟ್ಟುಕಳುಹಿಸುತ್ತದೆ. ಹೋದವರ್ಷ ಉತ್ತಮರೀತಿಯ ಸುಮಾರು ೫೦೦ ನೇಗಲುಗಳು ಖರ್ಚಾದುವು. ಈ ಕಾರಣದಿಂದ, ಜನಗಳಿಗೆ ಇದರಿಂದ ವಿಶೇಷ ಪ್ರಯೋಜನವಿದೆಯೆಂದು ಗೊತ್ತಾಗುತ್ತದೆ.

ಇನ್ನು ಎರಡನೆಯ ಭಾಗದಲ್ಲಿ—ಇಲಾಖೆಯಲ್ಲಿ ಮಾಡಿರುವ ಪರಿಶೋಧನೆಗಳು ಕ್ರಮವಾಗಿವೆಯೆಂದೂ, ಅದರಂತೆ ರೈತರು ಅನುಸರಿಸಿದರೆ ಬಹು ಉಪಯೋಗವೆಂದೂ ಉಪಪಾದನೆಮಾಡಿ ದೃಷ್ಟಾಂತದ ಮೂಲಕ ಅವರಿಗೆ ತೋರಿಸಿಕೊಡುವುದಕ್ಕಾಗಿ ಅಲ್ಲಲ್ಲಿ ಸಮರ್ಥರಾದ ಇನ್ಸ್‌ಪೆಕ್ಟರುಗಳನ್ನು ಡಿಸ್ಟ್ರಿಕ್ಟಿಗೆ ಒಬ್ಬೊಬ್ಬರಂತೆ ಬೆಂಗಳೂರು, ಕೋಲಾರ, ಮೈಸೂರು, ತುಮಕೂರು, ದಾವಣಗೆರೆ, ಕಡೂರು, ಹಾಸನ, ಶಿವಮೊಗ್ಗ ಈ ಊರುಗಳಲ್ಲಿ ನೇಮಕಮಾಡಿದೆ. ಅಲ್ಲದೆ, ಕಡೆಯ ೪ ಡಿ॥ ಗಳಲ್ಲಿರುವವರಿಗೆ ಮೇಲ್ವಿಚಾರಕರಾಗಿ ಶಿವಮೊಗ್ಗದಲ್ಲಿ ಅ॥ ಡೈರೆಕ್ಟರವರೂ ಇದ್ದಾರೆ. ಸಂಸ್ಥಾನದ ಯಾವ ರೈತರು ಬೇಕಾದರೂ ಮೇಲ್ಕಂಡ ಉದ್ಯೋಗಸ್ಥರುಗಳಿಂದ ತಮಗೆ ಬೇಕಾದ ವ್ಯವಸಾಯದ ವಿಷಯಗಳನ್ನು ಕೇಳಿ ಉಚಿತವಾಗಿ ತಿಳಿದುಕೊಳ್ಳಬಹುದು. ಅವರು ಅಲ್ಲಲ್ಲಿ ಉತ್ತಮರೀತಿಯ ವ್ಯವಸಾಯ ಕ್ರಮಗಳನ್ನೂ ಸಾಧನಸಾಮಗ್ರಿಗಳನ್ನೂ ಉಪಯೋಗಿಸಿ, ಕೈಯಿಂದ ತಾವೇ ಕೆಲಸಮಾಡಿ ತೋರಿಸಿಕೊಡುತ್ತಾರೆ ಸಂತೆಗಳಲ್ಲಿಯೂ ಜಾತ್ರೆಗಳಲ್ಲಿಯೂ ಕೂಡ ಅವರನ್ನು ಕಂಡು ಮಾತನಾಡಬಹುದು. ವ್ಯವಸಾಯಾಭಿವೃದ್ಧಿಯಲ್ಲಿ ಶ್ರದ್ಧೆಯುಳ್ಳ ತಾಲ್ಲೂಕು ಮತ್ತು ಡಿ॥ ಬೋರ್ಡಿನವರಿಗೆ ಕೂಡ ಇವರು ಸಹಾಯಮಾಡುವುದಕ್ಕೆ ಸಿದ್ಧರಾಗಿದ್ದಾರೆ.

ಬೆಂಗಳೂರಿನಲ್ಲಿರುವ ವ್ಯವಸಾಯದ ಡೈರೆಕ್ಟರವರಿಗೆ ಕೂಡ ಸಂಸ್ಥಾನದಲ್ಲಿರುವವರು ಯಾರುಬೇಕಾದರೂ ಬರೆದು ಬೇಕಾದ ಸಂಗತಿಗಳನ್ನು ತಿಳಿದುಕೊಳ್ಳಬಹುದು. ಅವಶ್ಯವಿದ್ದರೆ, ಇಲಾಖೆಯಿಂದ ಯಾರಾದರೊಬ್ಬ ಉದ್ಯೋಗಸ್ಥರನ್ನು ನೇರವಾಗಿ ಕಳುಹಿಸುತ್ತಾರೆ ಅವರು ಆರಂಭಗಾರರ ಭೂಮಿಯನ್ನು ತಾವೇ ಸಮಕ್ಷದಲ್ಲಿ ನೋಡಿ, ಬೇಕಾದ ಸಲಹೆಯನ್ನು ಅಲ್ಲಿಯೇ ಕೊಡುತ್ತಾರೆ.

ಇದಲ್ಲದೆ—ಭೂಗುಣ, ಗೊಬ್ಬರ, ಹುಳುಗಳ ಬಾಧೆ, ಗಿಡಗಳ ರೋಗ ಇವುಗಳ ವಿಷಯದಲ್ಲಿ ರೈತರು ಕೇಳಿದಾಗ ಸಲಹೆಯನ್ನೂ ಸಹಾಯವನ್ನೂ ಕೊಡುವುದಕ್ಕೆ ತಕ್ಕ ಏರ್ಪಾಟುಮಾಡಿದೆ. ಸಂಸ್ಥಾನದ ಆರಂಭಗಾರರು ಕಳುಹಿಸಬಹುದಾದ ಮಣ್ಣನ್ನೂ ಗೊಬ್ಬರವನ್ನೂ ಚೆನ್ನಾಗಿ ಪರೀಕ್ಷೆಮಾಡಿ, ಇದಕ್ಕಾಗಿ ರೈತರಿಂದ ಯಾವ ವಿಧವಾದ ವೆಚ್ಚವನ್ನೂ ತೆಗೆದುಕೊಳ್ಳದೆ, ಮಣ್ಣಿನಲ್ಲಿರುವ ಲೋಪವೇನು, ಸಾರಹೀನತೆಯೇನು, ಗೊಬ್ಬರದಲ್ಲಿರುವ ಗುಣಾವಗುಣವೇನು ಎಂಬ ವಿಷಯಗಳನ್ನು ಪರಿಶೋಧನೆಮಾಡಿ, ಅದರಲ್ಲಿ ತಿಳಿದುಬಂದ ವಿಷಯಗಳನ್ನು ಆಯಾ ವ್ಯವಸಾಯಗಾರರಿಗೆ ಉಚಿತವಾಗಿ ತಿಳಿಸಿಕೊಡುವುದಕ್ಕಾಗಿ ಈ ಇಲಾಖೆಯಲ್ಲಿ "ಕೆಮಿಕಲ್ ಸೆಕ್ಷನ್" (Chemical Section) ಎಂಬ ಒಂದು ರಸಾಯನ ಪ್ರಯೋಗಶಾಲೆಯನ್ನು ಕೂಡ ಏರ್ಪಡಿಸಿದೆ. ಇದರಿಂದ ರೈತರು ಗೊಬ್ಬರವನ್ನು ಕೊಂಡುಕೊಳ್ಳುವಾಗ ಅದರ ಗುಣವನ್ನು ತಿಳಿಯದೆ, ಹೆಚ್ಚಿನ ಬೆಲೆಯನ್ನು ಕೊಡದಂತೆ ನೋಡಿಕೊಳ್ಳಲು ಅನುಕೂಲವಾಗಿದೆ ಮಣ್ಣು ಗೊಬ್ಬರಗಳ ಮಾದರಿಯನ್ನು ಬೆಂಗಳೂರಿನ ವ್ಯವಸಾಯದ ಇಲಾಖೆಗೆ ಹೇಗೆ ತರಿಸಿಕೊಳ್ಳಬೇಕು, ಎಂಬ ವಿಚಾರವನ್ನು ಅಲ್ಲಿಗೆ ಬರೆದು ತಿಳಿದುಕೊಳ್ಳಬಹುದು.

ಸಾಲದುದಕ್ಕೆ, ಗಿಡಗಳಿಗೆ ಹತ್ತುವ ರೋಗವನ್ನು ನಿರ್ಣಯಿಸಿ ಅದನ್ನು ನಿವಾರಿಸುವ ಮಾರ್ಗಗಳನ್ನು ತಿಳಿಸುವುದಕ್ಕಾಗಿ "ಮೈಕೊಲಾಜಿಕಲ್ ಸೆಕ್ಷನ್" (Mycological Section) ಎಂಬ ಶಿಲೀಂಧ್ರಶಾಸ್ತ್ರಸಂಬಂಧದ ಪ್ರತ್ಯೇಕವಾದ ಶಾಖೆಯೂ; ಇದೇರೀತಿ, ಪೈರುಗಳಿಗೆ ಬಾಧೆ ಕೊಡುವ ಹುಳುಗಳ ಹಾವಳಿಯನ್ನು ತಪ್ಪಿಸಲು ತಕ್ಕ ಉಪಾಯಗಳನ್ನು ತಿಳಿಸುವುದಕ್ಕಾಗಿ "ಎಂಟೊಮೊಲಾಜಿಕಲ್ ಸೆಕ್ಷನ್" (Entomolagical Section) ಎಂಬ ಕ್ರಿಮಿಕೀಟಕಶಾಸ್ತ್ರದ ಶಾಖೆಯೂ ಅಲ್ಲಿಯೇ ಏರ್ಪಾಡಾಗಿವೆ. ಈ ಶಾಖೆಗಳಲ್ಲಿ ಇರುವವರು ರೈತರ ಸಹಾಯಕ್ಕೆಂದು ಸದಾ ಸಿದ್ಧವಾಗಿದ್ದಾರೆ ಇದರ ವಿಚಾರದಲ್ಲಿ ಹೆಚ್ಚಿನ ವಿಷಯವನ್ನೂ, ಮೂರನೆಯ ಭಾಗವಾದ ಕೃಷಿವಿದ್ಯೆಯ ವಿಷಯವನ್ನೂ ಮುಂದೆಮುಂದೆ ತಿಳಿಸಲಾಗುವುದು.

ವ್ಯವಸಾಯಶಾಸ್ತ್ರದಲ್ಲಿ ಹೆಚ್ಚು ಹೆಚ್ಚು ಮಂದಿ ತಯಾರಾದಂತೆ ಇನ್ನು ಕೆಲವು ವರ್ಷಗಳಲ್ಲಿ ತಾಲ್ಲೂಕಿನ ಪ್ರತಿಯೊಂದು ಹೋಬಳಿಯಲ್ಲಿಯೂ "ಫಾರಂ" (Farm) ವ್ಯವಸಾಯ ಪರೀಕ್ಷಾಕ್ಷೇತ್ರವನ್ನು ಏರ್ಪಡಿಸಿ, ಆ ಮೂಲಕ ಸಂಸ್ಥಾನದ ರೈತರಿಗೆ ಇನ್ನೂ ಅಧಿಕಪ್ರಯೋಜನವನ್ನು ಮಾಡಿ ಕೊಡಬೇಕೆಂದಿದೆ. ಈಗಲೂ ರೈತರು ಈ ಇಲಾಖೆಯಿಂದ ತಮಗೆ ಬೇಕಾಗುವ ಸಹಾಯವನ್ನು ಅಡಿಗಡಿಗೆ ಅಗತ್ಯವಾಗಿ ಪಡೆಯುವರೆಂದು ನಂಬಿದೆ.

ಗಾಜಿಗೆ ಕ್ಷಾಮ.

ಯುದ್ಧಾರಂಭವಾದ ಬಳಿಕ ಬಣ್ಣದ ಸಾಮಗ್ರಿಗಳಿಗೆ ದುರ್ಭಿಕ್ಷವುಂಟಾಗಿರುವಂತೆಯೇ ಗಾಜಿಗೂ ಕೂಡ ಕ್ಷಾಮವುಂಟಾಗಿದೆ. ಈ ತೊಂದರೆಯು ಗ್ರೇಟ್‌ಬ್ರಿಟನ್ನಿಗೇ ಬಂದಿರುವಾಗ ನಮ್ಮ ಭರತಖಂಡಕ್ಕೆ ಅದರ ಕ್ಷಾಮವು ಪ್ರಾಪ್ತವಾಗುವುದು ಅರಿದಲ್ಲ. ಪ್ರತಿದಿನದಲ್ಲೂ ಉಪಯೋಗಕ್ಕೆ ಬರುವ ಗಾಜಿನ ಸಾಮಾನುಗಳೆಲ್ಲಾ ಗ್ರೇಟ್‌ಬ್ರಿಟನ್ನಿಗೆ ಜರ್ಮನಿಯಿಂದ ಸಾಗಿಹೋಗುತ್ತಿದ್ದಿತು. ಈ ಗಾಜಿನ ಸಾಮಾನುಗಳು ಜರ್ಮನಿಯ ಕರ್ಮಾಗಾರಗಳಲ್ಲಿ ಬಲುಅಗ್ಗವಾಗಿ ನಿರ್ಮಿಸಲ್ಪಡುತ್ತಿದ್ದುವು. ಅಲ್ಲದೆ ಆ ದೇಶದಲ್ಲಿ ಗಾಜಿನ ಪರಿಶ್ರಮವನ್ನರಿತವರು ಮನೆಮನೆಗೂ ಇದ್ದಾರೆ. ಗೃಹಸ್ಥರೆಲ್ಲರೂ ಚಿಕ್ಕಂದಿನಿಂದಲೂ ಅದರ ನಿರ್ಮಾಣವನ್ನು ಅರಿತುಕೊಂಡಿದ್ದಾರೆ. ನಮ್ಮದೇಶದ ಕೋಲಾರ ಡಿಸ್ಟ್ರಿಕ್ಟು ಮೊದಲಾದ ಕೆಲಕಡೆಗಳಲ್ಲಿ ಕೈಬಳೆಯ ಗಾಜನ್ನು ಸಾಮಾನ್ಯಪ್ರಜೆಗಳೂ ಕೂಡ ಹೇಗೆ ನಿರ್ಮಿಸುವರೋ ಹಾಗೆ ಜರ್ಮನಿದೇಶದ ಬಹುಪ್ರಜೆಗಳು ಗಾಜಿನ ನಿರ್ಮಾಣದಲ್ಲಿ ಕುಶಲರಾಗಿದ್ದಾರೆ. ಅದುಕಾರಣ ಈ ಕೆಲಸದ ಕೂಲಿಯು ಇಂಗ್ಲೆಂಡಿಗಿಂತಲೂ ಜರ್ಮನಿಯಲ್ಲಿ ಬಹಳ ಕಡಿಮೆ. ಆದುದರಿಂದಲೇ ಜರ್ಮನಿಯ ಗಾಜು ಅಗ್ಗವಾಗಿರುತ್ತ, ಅದರ ವ್ಯಾಪಾರವು ಪ್ರಪಂಚದಲ್ಲೆಲ್ಲಾ ಹರಡಿಕೊಳ್ಳಲು ಅವಕಾಶವಾಗಿದ್ದಿತು. ಯುದ್ಧವು ಆರಂಭಗೊಂಡಾಗಣಿಂದ ಯೂರೋಪುಖಂಡದಿಂದ ಈ ಸಾಮಾನುಗಳ ಆಯಾತವೇ ನಿಂತುಹೋಗಿದೆ. ಬೆಲ್ಜಿಯಮ್ಮಿನಲ್ಲೂ ಗಾಜಿನ ಸಾಮಗ್ರಿಗಳು ವಿಪುಲವಾಗಿ ನಿರ್ಮಿಸಲ್ಪಡುತ್ತಿದ್ದುವು. ಈಗ ಆ ದೇಶವನ್ನು ಜರ್ಮನರು ಆಕ್ರಮಿಸಿಕೊಂಡುದರಿಂದಲೂ ಅಲ್ಲಿನ ಉದ್ಯೋಗವ್ಯಾಪಾರಾದಿಗಳೆಲ್ಲಾ ಹಾಳಾಗಿಹೋಗಿರುವುದರಿಂದಲೂ ಅಲ್ಲಿನ ಗಾಜೂ ಕೂಡ ಹೊರಕ್ಕೆ ಬರದಂತಾಗಿಹೋಗಿದೆ. ಇದರಮೇಲೆ ಜರ್ಮನ್‌ದೇಶದ ಸಾಮಗ್ರಿಗಳು ಇತರದೇಶಗಳಿಗೆ ಸಾಗಿಬರಲು ಪ್ರತಿಬಂಧಕವಿರುವುದರಿಂದ ಅಲ್ಲಿನವರು ತಮ್ಮ ಸಾಮಗ್ರಿಗಳನ್ನು ಬೆಲ್ಜಿಯಂದೇಶದ ಹೆಸರಿನಿಂದ ಕಳುಹಿಸಿಕೊಡುತ್ತಿದ್ದಾರೆ. ತಟಸ್ಥವಾದ ಹಾಲೆಂಡ್‌ದೇಶದಿಂದ ಬರುವ ಸಾಮಗ್ರಿಗಳ ಸಂಗ

ವಿದ್ಯಾರ್ಥಿಗಳಿಗೆ ಧಾರೆಯೆರೆಯುವ ದೀಕ್ಷೆಯನ್ನು ತಾಳಿದರು. ಕ ಫರ್ಗ್ಯೂಸನ್ ಕಳಾಶಾಲೆಯಲ್ಲಿ ಉಪಾಧ್ಯಾಯರಾಗಿ ನಿಂತರು. ಆಗ ಇವರು ಅನೇಕ ನಗರ ಗ್ರಾಮಗಳಲ್ಲೆಲ್ಲಾ ತಿರುಗಿ ೨ ಲಕ್ಷ ರೂ.ಗಳವರೆಗೆ ದ್ರವ್ಯಾರ್ಜನೆ ಮಾಡಿ, ಅದನ್ನು ಆ ಕಳಾಶಾಲೆಯ ಸ್ಥಿರಜೀವಿತೆಗಾಗಿ ಅರ್ಪಿಸಿದರು. ೧೯೦೧ ನೆಯ ವರ್ಷದಲ್ಲಿ ಎಂದರೆ ತಮ್ಮ ೩೫ನೆಯ ವಯಸ್ಸಿನಲ್ಲಿ ಇವರು ಬೊಂಬಾಯಿ ಪ್ರಾಂತಿಕ ನಿಯಮನಿರ್ಮಾಣಸಭೆಯ ಸಭ್ಯರಾಗಿ ಆರಿಸಲ್ಪಟ್ಟು, ಮರುವರ್ಷವೇ ಸಾಮ್ರಾಜ್ಯಶಾಸನ ಸಭೆಯ ಸಭಿಕರಾಗಿ ಏರ್ಪಟ್ಟು, ಅಂತ್ಯದವರೆಗೂ ಆ ಕೆಲಸವನ್ನು ವಹಿಸಿಯೇ ಇದ್ದರು. ಆ ಸಭೆಯಲ್ಲಿ ಮಾತೃದೇಶಸೇವೆಗಾಗಿ ಇವರು ಸಾಗಿಸಿದ ಕೆಲಸಗಳು ಸ್ಮರಣೀಯವಾದುವುಗಳು. ಪ್ರಾರಂಭವಿದ್ಯೆಯನ್ನು ಉಚಿತವಾಗಿಯೂ ಬಲಾತ್ಕಾರದಿಂದಲೂ ಈ ದೇಶದಲ್ಲಿ ಸಾಗಿಸಬೇಕೆಂಬ ವಿಷಯವನ್ನು ಸರ್ಕಾರದವರ ಗಮನಕ್ಕೆ ನಿಯಮನಿರ್ಮಾಣಸಭೆಯಲ್ಲಿ ತಂದವರೇ ಇವರು. ಅದನ್ನು

ರ್ತನೆಗಾಗಿ ಭರತಖಂಡದಿಂದ ಧನಸಹಾಯವನ್ನು ಮಾಡಿಸುವ ಕಾರ್ಯಕ್ಕೆ ಈ ಮಹನೀಯರೇ ಅಗ್ರೇಸರರಾಗಿದ್ದ ಸಂಗತಿಯು ಸರ್ವವಿದಿತವಾಗಿದೆ. ಇದರಂತೆ ಈ ಮಹನೀಯರು ಸ್ವದೇಶೀಯರ ಹಿತಾರ್ಥವಾಗಿ ಅನಂತಕಾರ್ಯಗಳನ್ನು ಮಾಡಿಯೂ ಮಾಡುವವರಾಗಿಯೂ ಇದ್ದರು. ದೇಶಕಾರ್ಯಕ್ಕಾಗಿಯೇ ಇವರು ಹಲವುಬಾರಿ ವಿದೇಶಗಮನಗಳನ್ನು ಕೂಡ ಮಾಡಿಬಂದರು. ಆ

ಯಾತಾಯಾತಗಳಿಂದಲೂ ಸರ್ವದಾ ವಿಪರೀತವಾದ ಬುದ್ಧಿಕ್ಲೇಶದಿಂದಲೂ ಇವರಿಗೆ ದೇಹದಲ್ಲಿ ಅಸ್ವಸ್ಥತೆಯು ಕಾಲಿಕ್ಕಿತು. ಇವರು ತಮ್ಮ ಅಂತ್ಯಕ್ಷಣದವರೆಗೂ ಆ ದೇಶಸೇವಾಜಪವನ್ನು ಬಿಡಲೇ ಇಲ್ಲ. ತಾವು ಆರಂಭಿಸಿರುವ ದೇಶಸೇವಾ ಕಾರ್ಯಗಳನ್ನು ಕೊನೆಮುಟ್ಟಿಸಲಿಲ್ಲವಲ್ಲಾ ಎಂಬ ಚಿಂತೆಯು ಅಂತ್ಯಕಾಲದಲ್ಲೂ ಅವರನ್ನು ಬಿಡಲಿಲ್ಲ. ಅದನ್ನು ಕೊನೆಗಾಣಿಸಬೇಕೆಂಬ ವಚನವೇ ತಮ್ಮ ಸಹೋದ್ಯೋಗಿಗಳಿಗೂ ಅನುಗಾಮಿಗಳಿಗೂ ಅವರು ಮಾಡಿದ ಅಂತ್ಯನಿರೂಪವಾಗಿದ್ದಿತು. ಇಂಥ ದೇಶಭಕ್ತರು ಭರತಖಂಡಕ್ಕೆ ದೊರೆತಿದ್ದುದು ಈ ದೇಶೀಯರ ಪುಣ್ಯಪ್ರಭಾವವೆಂದು ಅರಿಯಲ್ಪಟ್ಟಿದ್ದಿತು. ರಾಜಕೀಯಾಂದೋಳನದ ಒಂದೊಂದು ವಿಷಮಸಮಯದಲ್ಲಿ ಈ ಧೀರೋದಾತ್ತ ಪುರುಷರ ಸಹಾಯವು ಅತ್ಯುಪಯುಕ್ತವಾಗುತ್ತಿದ್ದಿತು. ಈಗಿನ ಯೂರೋಪುಖಂಡದ ಮಹಾಯುದ್ಧದ ಅಂತ್ಯದವರೆಗಾದರೂ ಈ ಮಹಾಪುರುಷರು

ರೋಗಾಮಿಯೊಬ್ಬನು ಮಧ್ಯವಯಸ್ಸಿನಲ್ಲೇ ಅಸ್ತಂಗತನಾಗಿಹೋದನು! ಈತನಿಗೆ "ರಾಜಕೀಯ ಋಷಿ" ಎಂಬ ಹೆಸರು ಸಾರ್ಥಕವಾಗಿ ಒಪ್ಪುತ್ತದೆ. ೨೫ ವರ್ಷಗಳಿಂದಲೂ ನಾನು ಆ ಮಹನೀಯನೊಡನೆ ಪರಿಚಯರೂಪವಾದ ಭಾಗ್ಯವನ್ನು ಪಡೆದಿದ್ದೆನು. ಈತನಿಗಿಂತಲೂ ಸತ್ಯಪ್ರಿಯನೂ-ಉದಾರಚಿತ್ತನೂ-ಶಾಂತನೂ ಆದ ಮತ್ತೊಬ್ಬನನ್ನು ನಾನೆಲ್ಲೂ ಕಾಣಲಿಲ್ಲ. ಪ್ರಜಾಕಾರ್ಯತತ್ಪರರಾದ ದೇಶೀಯರಲ್ಲಿ ಈ ಮಹನೀಯನಂಥ ಕಾರ್ಯದಕ್ಷನನ್ನೂ ಸ್ವಾರ್ಥತ್ಯಾಗಿಯನ್ನೂ ಪುರುಷಶ್ರೇಷ್ಠನನ್ನೂ ಕಾಣುವುದು ಬಹು ಅಪರೂಪವು" ಎಂದು ಮೊದಲಾಗಿ ಕೊಂಡಾಡಿದರು

ಬೊಂಬಾಯಿ ವಿಶ್ವವಿದ್ಯಾಲಯದಲ್ಲಿ ಪದವೀದಾನ ಸಮಾರಂಭವು ನಡೆದಾಗ ಅಲ್ಲಿನ ವೈಸ್‌ಚಾನ್ಸಲರಾದ ಸರ್ ಜಾರ್ಜ್ ಹೀಟ್‌ರವರು ಗೋಖಲೆಯವರನ್ನು ಕುರಿತು ಪ್ರಸ್ತಾವನ್ನೆತ್ತಿ—"ಬೊಂಬಾಯಿ ವಿಶ್ವವಿದ್ಯಾಲಯದಲ್ಲಿ ಉತ್ತಮರೀತಿಯಿಂದ ಪರೀಕ್ಷೆಯಲ್ಲುತ್ತೀರ್ಣರಾದವರೊಳಗೆ ಗೋಖಲೆಯವರೊಬ್ಬರು. ಹಿಂದೂದೇಶದಲ್ಲಿ ವಿದ್ಯಾಭಿವೃದ್ಧಿಯನ್ನು ಮಾಡಬೇಕೆಂದು ಇವರು ಮಾಡಿದ ಪರಿಶ್ರಮವು ಶ್ಲಾಘನೀಯವಾದುದು. ದೇಶಕ್ಷೇಮಕ್ಕಾಗಿ ಇವರು ಅನೇಕರೀತಿಯಾಗಿ ಪಾಟುಪಟ್ಟರು. ಎಲ್ಲಕ್ಕಿಂತಲೂ ದೇಶಕ್ಷೇಮವೇ ಇವರಿಗೆ ಅತ್ಯಂತೇಷ್ಟ ಲಕ್ಷ್ಯವಾಗಿದ್ದಿತು" ಎಂದು ಹೇಳಿದರು. ಗೋಖಲೆಯವರ ವಿಷಯದಲ್ಲಿ ವಿಶ್ವವಿದ್ಯಾಲಯ ಸಂಘದವರಿಗಿರುವ ಗೌರವವನ್ನು ವ್ಯಕ್ತಪಡಿಸುವುದಕ್ಕಾಗಿ ಆ ದಿನದ ಸಭೆಯನ್ನು ಅಲ್ಲಿಗೇ ಮುಗಿಸುವ ನಿರ್ಧಾರವು ಮಾಡಲ್ಪಟ್ಟಿತು.

ಲಂಡನ್ ಪಟ್ಟಣದಲ್ಲೂ ಒಂದು ಸಾನುಭೂತಿಯ ಸಭೆಯು ನೆರವೇರಿತು. ಲಂಡನ್ ಪಟ್ಟಣದ ಅನೇಕ ಪತ್ರಿಕೆಗಳು ಗೋಖಲೆಯವರ ಅಕಾಲಮೃತಿಗಾಗಿ ವಿಷಾದಪ್ರದರ್ಶಕ ಲೇಖನಗಳನ್ನು ಪ್ರಕಟಿಸಿರುವವು. ಭರತಖಂಡದಲ್ಲಿರುವ ಸ್ವದೇಶೀಯ ವಿದೇಶೀಯ ಪತ್ರಿಕೆಗಳೆಲ್ಲವೂ ಒಂದೇ ಸಮ
ಷಾದವನ್ನು ವ್ಯಕ್ತಪಡಿಸಿ ಸಾನುಭೂತಿ ಲೇಖನಗಳನ್ನು
ದಕ್ಷಿಣಾಫ್ರಿಕಾದ ಬ್ರಿಟಿಷ್ ಇಂಡಿಯನ್ ಸಂಘದ ಪರ
ರವರು ದುಃಖಪ್ರದರ್ಶಕ ತಂತ್ರೀವಾರ್ತೆಯನ್ನು ಕ
ನ ಜೋಹನ್ಸ್‌ಬರ್ಗ್ ಮೊದಲಾದ ಪ್ರತಿಪಟ್ಟಣದಲ್ಲೂ
ಗಳು ಕೂಡಿದ್ದುವು. ಯಾರೊಬ್ಬ ಸಂಸ್ಥಾನಾಧಿಪತಿಯ
ಇಂಥ ಸ್ವದೇಶ ವಿದೇಶೀಯರ ಸಾನುಭೂತಿಯು ವ್ಯಕ್ತ
ವೆಂದು ಹೇಳಬಹುದು.

ಳದೇಶದ ವೃತ್ತಾಂತ.

ಲ್ಲಿದ್ದ ಆನರರಿ ೩ನೆ ತರಗತಿಯ ಅ॥ ಸರ್ಜನ್
ೀನಿವಾಸಯ್ಯಂಗಾರರು ಮೈಸೂರು ಜನರಲ್
ಸಲ್ಪಟ್ಟಿದ್ದಾರೆ.
ತೃಶ್ರೀಯವರೂ ಮಹಾರಾಣಿಯವರೂ ಪರ
ಯದಿನ ರಾತ್ರಿ ಮದ್ರಾಸಿನಿಂದ ಉದಕಮಂ
ಸುವವರಾಗಿದ್ದರು.
ಲ್ಲಿ ಗರ್ಭಿತವಾಗಿರುವ ಧಾರವಾಡ ಡಿ॥ ತಿಳ್ವ
ೂರ ಜಗಜ್ಜ್ಯೋತಿ ಬಕ್‌ಡಿಪೋವಿನ ಪ್ರಕಟ
ಚಕರು ಗಮನಿಸಬೇಕಾಗಿ ಕೋರುತ್ತೇವೆ.
ತಾಲ್ಲೂಕಿನಲ್ಲಿ ಒಂದು ಗುಡ್ಡದಲ್ಲಿ ಒಂದು ಚಿ
ಡು ಆ ಪ್ರಾಂತ ತಿರುಗಾಡುವ ದನಕರುಗಳ
ಮೇಲೆ ಬಿದ್ದು ಬಹಳ ಹಾವಳಿಯನ್ನು ಮಾಡು

ಾರಾಜರವರ ಸ್ವಾರಿಯು ನಿನ್ನೆಯದಿನ ರಾ
ತು. ಮತ್ತೂ ನಾಳೆಯದಿನ ಶ್ರೀ ಶ್ರೀಕಂಠೇ
ರ್ಣಿಮಾಸೇವೆಗಾಗಿ ನಂಜನಗೂಡಿಗೆ ಚಿ
ಉದಕಮಂಡಲಕ್ಕೆ ದಯಮಾಡಿಸುವುದು.
ಫೀಸರು ಮ॥ ಹೀರಾಸಿಂಗ್‌ರವರ ಕಡೆಯ
ತಮ್ಮ ಮನೆಯಲ್ಲೇ ಆಭರಣಗಳನ್ನು ಅಪ
ೊಲೀಸರಿಂದ ಹಿಡಿಯಲ್ಪಟ್ಟು ಡಿ॥ ಮ್ಯಾಜಿ
ಗೆ ಗುರಿಮಾಡಲ್ಪಟ್ಟಿರುವಲ್ಲಿ ಡಿ॥ ಮ್ಯಾಜಿ
ು ಆತನನ್ನು ಒಳ್ಳೆಯ ನಡತೆಗಾಗಿ ಸ್ವಂತ ಹೊಣೆಯ
ರು.
ಲ್ಲಿ ಬಿಸಿಲಿನ ತಾಪವು ಸಹಿಸಲಶಕ್ಯವಾಗಿ
ಗಳಿಂದ ಸ್ವಲ್ಪಸ್ವಲ್ಪ ಮೋಡವಾಡುತ್ತಿದ್ದು
ಗಿ ಸ್ವಲ್ಪ ತುಂತುರುಮಳೆಯು ಆಯಿತು.
ನ್ನೂ ಹೆಚ್ಚುವುದಲ್ಲದೆ ಅಷ್ಟು ಇಷ್ಟು ಜೋ
ವ ಗರುಕೆಗೆ ಗೆದ್ದಲು ಹತ್ತಿ ದನಗಳು ಬಾ
ಶವಿಲ್ಲದಂತಾಗಲು ಕಾರಣವಾಗುವುದು.
ಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂ
ತವಾಗಿರುವ ಮೈಸೂರು ಪಬ್ಲಿಕ್ ಲೈಬ್ರೆ
ು (ರೀಡಿಂಗ್‌ರೂಂ) ಜನಗಳ ಉಯೋಗ
ರಲ್ಲಿ ಆರಂಭಿಸಲ್ಪಟ್ಟಿತು. ಇದು ಪ್ರತಿ
ಟೆಯಿಂದ ರಾತ್ರಿ ೮ ಗಂಟೆಯ ವರೆಗೆ
ಆದರೆ ಸೋಮವಾರದಲ್ಲಿ ಮಾತ್ರ ಮ
ಲ್ಪಡುವುದು.
ುವ ಜರಂಡಿಯ ಏರ್ಪಾಟಿಗೆ ಒಳಪಟ್ಟ
, ವಾಸನೆಹೋಗುವುದಕ್ಕೆ ಹಾಕಿರುವ ಕಂ
ಮೊದಲಾದುವುಗಳನ್ನು ಒಡೆಯುವುದು
ಇತರ ವಿಧದಲ್ಲಿ ಕೆಡಿಸುವುದು ಒಳಗೆ
ರನ್ನು ತೋಟದಕೆಲಸ ಮೊದಲಾದುವುಗಳಿಗೆ
ವುದು—ಈ ತಪ್ಪಿತಗಳನ್ನು ಮಾಡಿದವರಿ
ಗೆ ಮೀರದ ಅರ್ಥದಂಡವು ವಿಧಿಸಲ್ಪಡುವುದೆಂದು
ಪ್ರಕಟವಾಗಿದೆ.
ನ ಡಿಸ್ಟ್ರಿಕ್ಟಿನ ಜನರು ಡೆ॥ ಕಮಿಷನರ ಪದವಿ
ವೃತ್ತರಾಗಿರುವ ಮಿ॥ ವೆದರಾಲ್‌ದಂಪತಿಗಳನ್ನು ಈ
೨೩ ರಲ್ಲಿ ತಳಿರುತೋರಣಗಳಿಂದಲೂ ಧ್ವಜಪತಾಕೆಗಳಿಂ
ಲೂ ನೇತ್ರಾನಂದಕರವಾಗಿ ಶೃಂಗರಿಸಲ್ಪಟ್ಟಿದ್ದ ಜೂಬಿಲಿಹಾಲಿಗೆ ಮರ್ಯಾದಾಪುರಸ್ಸರವಾಗಿ ಬರಮಾಡಿಕೊಂಡು, ಅವರ ಸದ್ಗುಣ, ಪ್ರಜಾಭಿಮಾನ, ಮೊದಲಾದುವುಗಳ ಪ್ರಶಂಸನಪರವಾದ ವಿಜ್ಞಾಪನ ಪತ್ರಿಕೆಗಳನ್ನು ಇಂಗ್ಲೀಷು ಕನ್ನಡ ಮತ್ತೂ ಹಿಂದುಸ್ಥಾನಿ ಭಾಷೆಗಳಲ್ಲೋದಿ ಬೆಂಗಳೂರ ಬಾರ್ಟನ್ ಕಂಪನಿಯವರಿಂದ ಮಾಡಲ್ಪಟ್ಟ ರತ್ನಖಚಿತವಾದ ಬೆಳ್ಳಿಯ ತಟ್ಟೆಯಲ್ಲಿಟ್ಟು ಒಪ್ಪಿಸಿ ತಮ್ಮಗಳಿಗೆ ಅವರಮೇಲೆ ಇರತಕ್ಕ ವಿಶೇಷಗೌರವ ಪ್ರೀತಿಯನ್ನು ಪ್ರದರ್ಶಿಸಿದರು. ಮಿ॥ ಸಾಹೇಬರು ಜನರ ಈ ವಿಧವಾದ ಅಭಿಮಾನಪ್ರದರ್ಶನಕ್ಕಾಗಿ ತಮ್ಮ ದಂಪತಿಗಳ ವಂದನೆಯನ್ನು ತಿಳಿಸಿದರು.

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತವಾಗಿರುವ ಘೋರಯುದ್ಧದ ದಶೆಯಿಂದ ಈ ಸಾಮಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದ ಮತ್ತೂ ಬೆಲಜಿಯಮ್ಮಿನಿಂದ ಸುತರಾಂ ಬರುವುದು ಕಟ್ಟಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಆವಶ್ಯಕವಾದ ಕಾಗದ ಮೊದಲಾದ ಸಾಮಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವಧಿಯು ಪೂರೈಸಿರುವವರಿಗೆ
ಕೆಯನ್ನು ವಿ. ಪಿ ದ್ವಾರ ಕಳುಹಿಸುತ್ತಿರುವ
ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿ
ದದ ಬೆಲೆಯೇರಿಕೆಯಿಂದ ನಷ್ಟಪಡುವುದರ
ಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದ
ಖೇದವಾಗುತ್ತದೆ. ಇತಃಪರಃ ದಯಾರ್ದ್ರ
ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ
ನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನ
ಕೊಂಡು ಹೋಗುವಂತೆ ಮಾಡುವರೆಂದು ಸಂ
ನಂಬಿರುತ್ತೇವೆ.

ಮಾ

(ಅರ್ಥಸಾಧನಪತ್ರಿಕೆಯಿಂದ)

ಮೈಸೂರು ಸಂಸ್ಥಾನದ ವ್ಯವಸಾಯಾ

ಈ ಇಲಾಖೆಯ ಕಾರ್ಯವನ್ನು ಮೂರು
ವಿಂಗಡಿಸಬಹುದು. (೧) ಪರೀಕ್ಷೆಯ ಮೂ
ಶೋಧಿಸುವುದು. (Experiment) (೨)
ಪಾದನೆಮಾಡಿ ದೃಷ್ಟಾಂತದ ಮೂಲಕ ಇ
ಸುವುದು (Demonstration) (೩)
ಸ್ತ್ರಕ್ಕೆ ಸಂಬಂಧಪಟ್ಟ ವಿದ್ಯೆ. (Agric
cation)

ಮೊದಲನೆಯ ಭಾಗದಲ್ಲಿ–ಸಾಗುವಳಿಯ
ಬ್ಬರ ಹಾಕುವುದರಲ್ಲಿಯೂ ವಿಧವಿಧ ಕ್ರಮ
ನೋಡಿ, ಪರೀಕ್ಷಿಸುವುದು; ಬೇರೆಬೇರೆ ಜಾ
ನ್ನು ಪೈರು ಮಾಡಿ ನೋಡುವುದು; ಗಿಡಗಳ
ನಾವಿಧರೋಗಗಳನ್ನೂ, ಹುಳುಗಳ ಬಾಧೆ
ಸುವುದಕ್ಕೆ ತಕ್ಕ ಉಪಾಯಗಳನ್ನು ಕಂ
ದು. ಆ ಮೂಲಕ, ಸಂಸ್ಥಾನದ ಈಗಿನ ವ್ಯವಸಾಯ
ಯನ್ನು ಉತ್ತಮಸ್ಥಿತಿಗೆ ತರುವುದು. ಜ
ಗುವಳಿ ಮಾಡುವ ರೈತರು [illegible] ಗಿಯೇ
ಳನ್ನು ಮಾಡಲಾರರು; [illegible] ಅದನ್ನು
ರ್ವಹಿಸುವುದಕ್ಕೆ ತಕ್ಕ ಶಾಸ್ತ್ರೀಯ ಜ್ಞಾ

ಮೇಲೆಕಂಡ ಕೆಲಸಗಳನ್ನು ಸಾಧಿಸ
ಯಪರೀಕ್ಷೆಗೆಂದೇ (Farms) ಪ್ರತ್ಯೇಕ
ಳೂ, ಪ್ರಯೋಗಶಾಲೆಯಂತಹ (Labo
ಖಾನೆಗಳೂ ಇರಬೇಕು. ಮೈಸೂರು ವ್ಯ
ಖೆಯಲ್ಲಿ ಕಾರಖಾನೆಗಳು ಚೆನ್ನಾಗಿವೆ.
ಜಮೀನುಮಾತ್ರ ಒಂದೇಒಂದು ಇದೆ, ಬೆ
ಬ್ಬಾಳಿನಲ್ಲಿ. ಸಂಸ್ಥಾನದ ಇತರ ಭಾಗಗ
ಜಮೀನುಗಳನ್ನು ಇಡುವ ವಿಷಯದಲ್ಲಿ
ಆಲೋಚನೆಮಾಡುತ್ತಿದ್ದಾರೆ.

ಹೆಬ್ಬಾಳಿನಲ್ಲಿರುವ ವ್ಯವಸಾಯ ಪರಿ
ಎಕರೆ ಖುಷ್ಕಿ ಜಮೀನೂ, ೨೧ ಎಕರೆ ತ
ಇದರಲ್ಲಿ ರಾಗಿ, ಬತ್ತ, ಕಬ್ಬು ಈ ಮೂ
ಮಾತ್ರ ಹಾಕಿ ಪರೀಕ್ಷೆಮಾಡಿದೆ.

ರಾಗಿ.

೧. ಮಾಗಿಯ ಉಕ್ಕೆ ಮಾಡುವುದರಿಂದ,
ವಾದ ಕೂಡಲೆ ಹೊಲವನ್ನು ಉಳುವುದರಿಂದ
ಗಿಯ ಪೈರಾಗುವುದೆಂದು ತಿಳಿದುಬಂದಿದೆ. ಬೇಗ
ಳುವ ಉತ್ತಮರೀತಿಯ ನೇಗಲನ್ನು ಉಪಯೋಗಿ
ಅತ್ಯಾವಶ್ಯಕ.

೨. ಆಷಾಢಮಾಸಕ್ಕೆ ಮುಂಚೆ ಪೈರ್‌ರಾಗಿ ಹಾಕಿ
ಪೈರು ಕಡಿಮೆಯಾಗುವುದು. ಆಶ್ಲೇಷೆ, ಮಘೆ ಈ ನಕ್ಷತ್ರಗಳ ಮಳೆಯಲ್ಲಿ ಬಿತ್ತುವುದರಿಂದ ಏನೂ ನಷ್ಟವಿಲ್ಲ.

೩. ಹಸುರೆಲೆ ಗೊಬ್ಬರವು ಸಿಕ್ಕುವ ಬೆಳೆಯನ್ನು ಮುಂಗಾರು ಮಳೆಯಲ್ಲಿ ಹಾಕಿ, ಮುಂದೆ ಬಿತ್ತುವ ರಾಗಿಯ ಪೈರಿಗಾಗಿ ಚೆನ್ನಾಗಿ ಉತ್ತು ಜಾಗರೂಕತೆಯಿಂದ ನೋಡಿಕೊಂಡರೆ, ಉತ್ಪತ್ತಿಯು ಬಲುಮಟ್ಟಿಗೆ ಹೆಚ್ಚಿ, ಹೆಚ್ಚಿನ ಖರ್ಚು ಕಳೆದು, ಬೇಕಾದಷ್ಟು ಲಾಭವೂ ಸಿಕ್ಕುತ್ತದೆ.

೪. ಒಳ್ಳೆಯ ಬೀಜಗಳನ್ನು ಆರಿಸಬೇಕಾದರೆ, ಒಂದು ಪಾತ್ರೆಯಲ್ಲಿ ನೀರುಹಾಕಿ, ಅದಕ್ಕೆ ಸ್ವಲ್ಪ ಉಪ್ಪನ್ನು ಬೆರಸಿ, ಆ ನೀರಿನಲ್ಲಿ ಬಿತ್ತನೆಯ ರಾಗಿಯನ್ನು ಹಾಕಿದರೆ, ಜಳ್ಳು, ಕೊಡ್ಡು ಮೇಲೆ ತೇಲಿ, ಅಡಿಯಲ್ಲಿ ಸಾರವಾದುದು ನಿಲ್ಲುತ್ತದೆ. ಅದನ್ನು ತೆಗೆದು ಬಿತ್ತಿದರೆ ಒಳ್ಳೆಯ ಹೊರುವಾದ ಬೆಳೆಯಾಗಿ, ಉತ್ಪತ್ತಿ ಯಥೇಷ್ಟ ಹೆಚ್ಚುತ್ತದೆ.

೫. ಜೋಳ ಅಥವಾ ರಾಗಿಯಮೇಲೆ, ರಾಗಿಯನ್ನು ಹಾಕಿ ಪೈರುಮಾಡುವುದಕ್ಕಿಂತ, ಒಂದು ಸ್ವರು ರಾಗಿ, ಒಂದು ಪೈರು ನೆಲಗಡಲೆ ಈ ರೀತಿ ಮಾಡುವುದು ಉತ್ತಮವೆಂದು ಕಂಡುಬಂದಿದೆ.

ನೆಲ್ಲು.

ಬತ್ತದ ಸಾಗುವಳಿಯಲ್ಲಿ ಪ್ರಯೋಜನವೆಂದು ಕಂಡುಬಂದ ವಿಷಯಗಳು.

೧. ಕಣಬು ಅಥವಾ ಅಲಸಂದಿಯ ಹಸುರೆಲೆ ಗೊಬ್ಬ

೩

ಕೂಡ ಸಂಸ್ಥಾನದಲ್ಲಿರುವವರು ಯಾರುಬೇಕಾದರೂ ಬರೆದು ಬೇಕಾದ ಸಂಗತಿಗಳನ್ನು ತಿಳಿದುಕೊಳ್ಳಬಹುದು. ಅವಶ್ಯವಿದ್ದರೆ, ಇಲಾಖೆಯಿಂದ ಯಾರಾದರೊಬ್ಬ ಉದ್ಯೋಗಸ್ಥರನ್ನು ನೇರವಾಗಿ ಕಳುಹಿಸುತ್ತಾರೆ ಅವರು ಆರಂಭಗಾರರ ಭೂಮಿಯನ್ನು ತಾವೇ ಸಮಕ್ಷದಲ್ಲಿ ನೋಡಿ, ಬೇಕಾದ ಸಲಹೆಯನ್ನು ಅಲ್ಲಿಯೇ ಕೊಡುತ್ತಾರೆ.

ಇದಲ್ಲದೆ–ಭೂಗುಣ, ಗೊಬ್ಬರ, ಹುಳುಗಳ ಬಾಧೆ, ಗಿಡಗಳ ರೋಗ ಇವುಗಳ ವಿಷಯದಲ್ಲಿ ರೈತರು ಕೇಳಿದಾಗ ಸಲಹೆಯನ್ನೂ ಸಹಾಯವನ್ನೂ ಕೊಡುವುದಕ್ಕೆ ತಕ್ಕ ಏರ್ಪಾಟುಮಾಡಿದೆ. ಸಂಸ್ಥಾನದ ಆರಂಬಗಾರರು ಕಳುಹಿಸಬಹುದಾದ ಮಣ್ಣನ್ನೂ ಗೊಬ್ಬರವನ್ನೂ ಚೆನ್ನಾಗಿ ಪರೀಕ್ಷೆಮಾಡಿ, ಇದಕ್ಕಾಗಿ ರೈತರಿಂದ ಯಾವ ವಿಧವಾದ ವೆಚ್ಚವನ್ನೂ ತೆಗೆದುಕೊಳ್ಳದೆ, ಮಣ್ಣಿನಲ್ಲಿರುವ ಲೋಪವೇನು, ಸಾರಹೀನತೆಯೇನು, ಗೊಬ್ಬರದಲ್ಲಿರುವ ಗುಣಾವಗುಣವೇನು ಎಂಬ ವಿಷಯಗಳನ್ನು ಪರಿಶೋಧನೆಮಾಡಿ, ಅದರಲ್ಲಿ ತಿಳಿದುಬಂದ ವಿಷಯಗಳನ್ನು ಆಯಾ ವ್ಯವಸಾಯಗಾರರಿಗೆ ಉಚಿತವಾಗಿ ತಿಳಿಸಿಕೊಡುವುದಕ್ಕಾಗಿ ಈ ಇಲಾಖೆಯಲ್ಲಿ “ಕೆಮಿಕಲ್ ಸೆಕ್ಷನ್” (Chemical Section) ಎಂಬ ಒಂದು ರಸಾಯನ ಪ್ರಯೋಗಶಾಲೆಯನ್ನು ಕೂಡ ಏರ್ಪಡಿಸಿದೆ.

ಹೋಗಿರುವುದರಿಂದಲೂ ಅಲ್ಲಿನ ಗಾಜೂ [illegible] ಬರದಂತಾಗಿಹೋಗಿದೆ. ಇದರಮೇಲೆ ಜರ್ಮನ್‌ದೇಶದ ಸಾಮಗ್ರಿಗಳು ಇತರದೇಶಗಳಿಗೆ ಸಾಗಿಬರಲು ಪ್ರತಿಬಂಧಕವಿರುವುದರಿಂದ ಅಲ್ಲಿನವರು ತಮ್ಮ ಸಾಮಗ್ರಿಗಳನ್ನು ಬೆಲ್ಜಿಯಂದೇಶದ ಹೆಸರಿನಿಂದ ಕಳುಹಿಸಿಕೊಡುತ್ತಿದ್ದಾರೆ. ತಟಸ್ಥವಾದ ಹಾಲೆಂಡ್‌ದೇಶದಿಂದ ಬರುವ ಸಾಮಗ್ರಿಗಳ ಸಂಗ

ಲವಲೀವಿಹಾರನಾಟಕ.

ಶ್ರೀ ಶಂಕರನ ಪುತ್ರನಾದ ಷಣ್ಮುಖನಿಗೆ ವಿವಾಹವಾಗಿಲ್ಲೆಂದು ಪ್ರತಿಯೊಬ್ಬರ ತರ್ಕವಿದೆ, ಆದರೆ ಸ್ಕಂಧಪುರಾಣೋಕ್ತ ಶಂಕರಸಂಹಿತೆಯಲ್ಲಿ ಷಣ್ಮುಖನು ಲವಲಿಯನ್ನು ವಿವಾಹ ಮಾಡಿಕೊಂಡಿರುವನೆಂದು ಹೇಳಿದ್ದು ಅದು ಸಂಸ್ಕೃತದಲ್ಲಿರುವದರಿಂದ ಕನ್ನಡಿಗರಿಗೆ ತಿಳಿಯಲು ಅಶಕ್ಯಸಾಧ್ಯವಾಗಿದೆ. ಇನ್ನರಿತು ಕನ್ನಡನಾಡಿನ ಪಂಡಿತರೂ ಪಾಮರರೂ ಸಹ ತಿಳಿಯಲೋಸುಗ ವಚನರೂಪವಾಗಿ ನವರಸಾಲಂಕಾರಯುಕ್ತವಾಗಿ ಬರೆದಿರುವದರಿಂದ ಅಲ್ಪಜ್ಞರು ಸಹಿತ ಓದಿ ತಿಳಿಯುವಂತಿದೆ. ಇದನ್ನು ಓದುವದಕ್ಕೆ ಆರಂಭಿಸಿತೆಂದರೆ ಸಂಪೂರ್ಣ ಮುಗಿಸುವ ಪರ್ಯಂತ ಮನಸ್ಸು ತೃಪ್ತಿಯಾಗಲಾರದು. ಮತ್ತು ಎಂಥಾ ಚಿಂತೆಯಿಂದ ವ್ಯಾಕುಲನಾದವನು ಓದಿದರೂ ಸಂತಸಗೊಳ್ಳದಿರನು. ಕಾದಂಬರಿಯಂತೆ ಕಥಾರೂಪವಾಗಿ ಅಬಾಲವೃದ್ಧರಿಗೆ ವಿಶದವಾಗಿ ತಿಳಿಯುವಂತೆ ಬರೆದಿರುವ ಈ ನಾಟಕದ ಪ್ರತಿ ೧ಕ್ಕೆ ಬೆಲೆ ೮ ಆಣೆ ಅಂಚೆವೆಚ್ಚ ಪ್ರತ್ಯೇಕ.

ಅತ್ಯಪೂರ್ವ ಗ್ರಂಥಗಳು.

ವೀರಶೈವಧರ್ಮಸಿಂಧು :—ವೀರಶೈವರಲ್ಲಿ ಜನಿಸಿದ ಶಿಶುವಿಗೆ ಮಾಡುವ ಲಿಂಗಧಾರಣ ಸಂಸ್ಕಾರ, ೮ ನೇ ವರ್ಷಕ್ಕೆ ಮಾಡುವ ದೀಕ್ಷಾಸಂಸ್ಕಾರ, ವಿವಾಹವಿಧಿ ಮೊದಲಾದ ಅನೇಕ ವಿಷಯಗಳು, ವೀರಶೈವರು ಮೃತಿಹೊಂದಿದಾಗ್ಯೆ ಶ್ರವಕ್ಕೆ ಮಾಡುವ ವಿಭೂತಿ ವೀಳ್ಯೆ ಸಮಾಧಿಮಾಹಿತಿ ಮೊದಲಾದ ಅನಂತ ವಿಷಯಗಳನ್ನೊಳಗೊಂಡಿದೆ. ಪೂರ್ವದಲ್ಲಿ ಮುದ್ರಣವಾದ್ದು ಪೂರ್ವಾರ್ಧ ಮಾತ್ರವಾಗಿತ್ತು. ಈ ಸಾರೆ ಪೂರ್ವಾರ್ಧ ಉತ್ತರಾರ್ಧ ಸೇರಿ ಮುದ್ರಣವಾಗಿರುವದರಿಂದ ವೀರಶೈವರಲ್ಲಿಯ ಪ್ರಭೇದಗೋತ್ರಸೂತ್ರ ಮೊದಲಾದ ಹೇರಳವಾಹಿತಿಯಿಂದ ತುಂಬಿದೆ. ಇಂಥ ಅಮೂಲ್ಯಗ್ರಂಥವನ್ನು ಸರ್ವರೂ ಸಂಗ್ರಹಿಸಲೆಂಬಿರಾದೆಯಿಂದ ಬೆಲೆ ಸುಲಭವಾಗಿ ಪ್ರತಿ ೧ಕ್ಕೆ ೧ರೂ ೮ ಆಣೆ ಇಟ್ಟಿದೆ. ಅಪೇಕ್ಷಕರು ತ್ವರೆಮಾಡಿ !!!

ಬಸವೇಶ ವಿಜಯ:—ಭೀಮಕವಿಗಳಿಂದ ರಚಿತವಾದ ಬಸವ ಪುರಾಣವು ಅಲ್ಪಜ್ಞರಿಗೆ ತಿಳಿಯಲು ದುಸ್ಸಾಧ್ಯವೆಂದು ಕನ್ನಡ ಸುರಸ ವಚನರೂಪವಾಗಿ ವಿರಚಿಸಿರುವದರಿಂದ ಪ್ರತಿಯೊಬ್ಬ ವೀರಶೈವನು ಈ ಗ್ರಂಥವನ್ನು ಓದಿ ವೀರಶೈವ ಶಿವಶರಣರ ಸಚ್ಚರಿತ್ರೆಗಳನ್ನರಿತು ಕೃತಾರ್ಥರಾಗಲು ಸಂದೇಹವಿಲ್ಲಾ. ಅಪೇಕ್ಷಕರು ತ್ವರೆಮಾಡಿ !!! ಬೆಲೆ ೧ ರೂ.

ಶಿವಲೀಲಾಮೃತ:—ಇದು ಗಣೇಶೋಪಾಸಕ ಕವಿಗಳಿಂದ ವಿರಚಿತವಾದ ಗ್ರಂಥವು. ಶಿವವಿನೋದಕಥೆ, ಶಿವಶರಣರಕಥೆ ಓದಲಿಕ್ಕೆ ಮನೋಹರವಿರುತ್ತವೆ. ಇದರ ಬೆಲೆ ೬ ಆಣೆ.

ಶಿವಕಥಾಸಾಗರ:—ಬಸವಪುರಾಣ, ಚನ್ನಬಸವಪುರಾಣ, ಶರಣಲೀಲಾಮೃತ, ಪ್ರೌಢರಾಯನ ಕಾವ್ಯ, ಸಿದ್ಧರಾಮೇಶ್ವರಪುರಾಣ, ರೇವಣಸಾಂಗತ್ಯ, ದೀಪದಕಲಿ, ೬೩ ಪುರಾತನರ ಚರಿತ್ರೆ, ರಾಘವಾಂಕನಕಾವ್ಯ, ಮೊದಲಾದ ಸಕಲ ಪುರಾಣಗಳಲ್ಲಿಯ ಸಕಲ ಶಿವಶರಣರ ಚರಿತ್ರೆಗಳನ್ನು ಕನ್ನಡ ವಚನರೂಪದಿಂದ ಬರೆದು ರಚಿಸಿರುವ ಅತ್ಯುಪಯುಕ್ತ ಗ್ರಂಥ ಬೆಲೆ ೮ ಆಣೆ.

ವಚನರೂಪಜ್ಞಾನಸಿಂಧು:—ಈ ಗ್ರಂಥವು ಮೊದಲು ಕನ್ನಡ ಪದ್ಯರೂಪದಿಂದ ಚಿದಾನಂದಾವಧೂತರು ವಿರಚಿಸಿದ್ದನ್ನು ಹುಬ್ಬಳ್ಳಿ ಶ್ರೀ ಸಿದ್ಧಾರೂಢರ ಅಪ್ಪಣೆ ಪ್ರಕಾರ ಗಣೇಶೋಪಾಸಕ ಕವಿಗಳಿಂದ ಅಚ್ಚ

ಪ್ರತಿಯೊಬ್ಬನ ಜನನಕುಂಡಲಿಯ ಮೇಲಿಂದ ಜಾತಕನು ಇಂಗ್ಲೀಷಾದಿ ಯಾವವಿದ್ಯೆ ಕಲಿಯುವನು ? ಜಾತಕನು ಜಡ್ಜನಾದಾನೆ ? ಮುನ್ಸಫನಾದಾನೆ ? ಕಲೆಕ್ಟರನಾದಾನೆ ? ಮಾಮಲೇದಾರನಾದಾನೆ ? ಪೋಲೀಸ್ ಇನಸ್ಪೆಕ್ಟರನಾದಾನೆ ? ಜಮಾದಾರನಾದಾನೆ ? ಸಿಪಾಯಿಯಾದಾನೆ ? ಡಾಕ್ಟರನಾದಾನೆ ? ಗ್ರಾಮವೈದ್ಯನಾದ್ಯಾನೆ ? ಶಾಲಾಮಾಸ್ತರನಾದಾನೆ ? ಬುಕ್‌ಡಿಪೋ ಮಾಲಕನಾದಾನೆ ? ಛಾಪಖಾನಾಮಾಲಕನಾದಾನೆ ? ವಕೀಲನಾದಾನೆ ? ಕಾರ್ಕೂನನಾದಾನೆ ? ಧನಿಕನಾದಾನೆ ? ಸರಾಫನಾದಾನೆ ? ಪಾಲಖಿಯೊಳಗೆ ಕೂಡ್ರತಕ್ಕವನಾದಾನೆ? ಧರ್ಮಶಾಸ್ತ್ರ ಬೋಧಕನಾದಾನೆ ? ಜೀವನ್ಮುಕ್ತನಾದಾನೆ ? ಜವಳಿವ್ಯಾಪಾರ ಮಾಡತಕ್ಕವನಾದಾನೆ ? ಇತ್ಯಾದಿ ಅನಂತರೀತಿಯಿಂದ ಉಪಜೀವಿಸತಕ್ಕ ಮಾರ್ಗಗಳನ್ನು ಕಂಡುಹಿಡಿಯುವ ಸಪ್ರಮಾಣ ಪ್ರಬಲಸೂತ್ರಗಳಿಂದಲೂ ದ್ವಾದಶರಾಶಿಗಳಲ್ಲಿ ಜನ್ಮಿಸಿದವರ ಗುಣ, ನಡತೆ, ದೇಹಸ್ಥಿತಿ, ಕಂಟಕಸಹಿತ ವಿಶದವಾಗಿ ತಿಳಿಸುವ ರಾಶಿಜಾತಕದಿಂದಲೂ ಕೂಡಿ ವಿರಚಿತವಾಗಿರುವ ಅಮೂಲ್ಯಗ್ರಂಥದ ಪ್ರತಿ ೧ಕ್ಕೆ ಅಂಚೆವೆಚ್ಚ ಸೇರಿ ೬ ಆಣೆ.

ವೃಷ್ಟಿಭಾರ್ಗವ.

ಈ ಅಪೂರ್ವಗ್ರಂಥದ ಸಹಾಯದಿಂದ ಪ್ರತಿವರ್ಷ ಮಳೆ ಹೇಗಾದೀತು ? ಗುಡುಗು ಸಿಡಿಲುಗಳ ಕಡಕಡಾಟ ವಿಶೇಷವಾದೀತೇನು ? ಮನೆಯೊಳಗೆ ಕಪ್ಪೆ ಹಾವು ಚೇಳು ಮೊದಲಾದ ಪ್ರಾಣಿಗಳು ಬೀಳುವದ ಹೇಗೆ ? ಇನ್ನೂ ಅನೇಕ ಮರ್ಮವಿಷಯಗಳನ್ನು ನಿರ್ಣಯಿಸುವ ಸೂತ್ರಗಳಿರುವವಲ್ಲದೆ ಪ್ರತಿಸಂವತ್ಸರದ ನವನಾಯಕರು, ಉಪನಾಯಕರು, ಆದಾಯವ್ಯಯ, ವರ್ಷಧಾನ್ಯಾದಿ ವಿಂಶೋಪಕ, ಮಕರಸಂಕ್ರಮಣದ ಸ್ಥಿತಿಫಲ, ಮಳೆವಾಹನಾದಿಯೋಗ, ಜಲಾಮೃತಾದಿ ಸಪ್ತನಾಡಿ, ಸಕಲ ಪದಾರ್ಥಗಳ ತೇಜಮಾಂದ್ಯ, ಮುಂದೆ ಬರುವ ಗ್ರಹಣಗಳ ಅಧಿಕ ಕ್ಷಯಮಾಸಗಳ ಕೋಷ್ಟಕಾದಿ ಅನೇಕ ಸೂತ್ರಗಳಿರುವದರಿಂದ ಸಮಸ್ತರೂ ಅತ್ಯಗತ್ಯ ಸಂಗ್ರಹಿಸತಕ್ಕದ್ದೆಂದು ಪಂಡಿತರ ಹೊಗಳಿಕೆಗೀಡಾಗಿರುತ್ತದೆ ಅಪೇಕ್ಷಕರು ಆತುರಿಸಿರಿ. ಬೆಲೆ ೮ ಆಣೆ. ಅಂಚೆವೆಚ್ಚ ಪ್ರತ್ಯೇಕ.

ಜಾತಕಾಲಂಕಾರ.

ಜನನಕುಂಡಲಿ ಮೇಲಿಂದ ಜಾತಕನಿಗೆ ಇಷ್ಟಿಷ್ಟು ವಯಸ್ಸಿನಲ್ಲಿ ಇಂಥಿಂಥಾ ಕಂಟಕಗಳು ಜರುಗುತ್ತವೆಂತಲೂ, ಜಾತಕನ ವಿವಾಹ, ಮಾತಾಪಿತೃಗಳ ಕಂಟಕ, ಸೋದರಸಂಖ್ಯೆ, ಭೂಸಂಗ್ರಹ, ಧನಿಕತ್ವ, ದರಿದ್ರತ್ವನಿರ್ಣಯ ಮುಂತಾದ ತನ್ವಾದಿ ದ್ವಾದಶಭಾವ ಫಲಗಳನ್ನು ವಿಸ್ತಾರವಾಗಿ ವಿರಚಿಸಿರುವ ಅಮೂಲ್ಯಗ್ರಂಥ ಪ್ರತಿ ೧ಕ್ಕೆ ೮ ಆಣೆ ಅಂಚೆವೆಚ್ಚ ಪ್ರತ್ಯೇಕ.

ಬೃಹಜ್ಜಾತಕಾಖ್ಯ ಹೋರಾಶಾಸ್ತ್ರಂ.

ಈಗಿನ ಕಾಲದಲ್ಲಿ ಎಷ್ಟೋ ಜನರು ನಮಗೆ ಜಾತಕ ಏತಕ್ಕೆ ಬೇಕು ? ದೈವದಲ್ಲಿದ್ದದ್ದು ತಪ್ಪಿಸುವವರಾರು ? ಹೀಗೆನ್ನುವ ಜನರು ಹೇರಳವಾಗಿರುವರು. ನೋಡಿರಿ ! ಕುರುಡನು ಒಂದೂರಿನಿಂದ ಮತ್ತೊಂದೂರಿಗೆ ದೊಡ್ಡ ರಸ್ತೆಯನ್ನು ಹಿಡಿದುಕೊಂಡು ಹೋಗಬಹುದು. ಆದರೆ ಮಾರ್ಗದಲ್ಲಿ ಸರ್ಪ ಮೊದಲಾದ ವಿಷಜಂತುಗಳಿದ್ದರೆ ಎತ್ತು ಮೊದಲಾದ ಪಶುಪ್ರಾಣಿಗಳು ಬರುತ್ತಿದ್ದರೆ ಗೊತ್ತುಹಿಡಿಯಬಲ್ಲನೋ ? ಎಂಥಾ ಸಂಕ

ವಿದ್ಯಾರ್ಥಿಗಳಿಗೆ ಧಾರೆಯೆರೆಯುವ ದೀಕ್ಷೆಯನ್ನು ತಾಳಿದರು. ಬಳಿಕ ಫರ್ಗ್ಯುಸನ್ ಕಲಾಶಾಲೆಯಲ್ಲಿ ಉಪಾಧ್ಯಾಯರಾಗಿ ನಿಂತರು. ಆಗ ಇವರು ಅನೇಕ ನಗರ ಗ್ರಾಮಗಳಲ್ಲೆಲ್ಲಾ ತಿರುಗಿ ೨ ಲಕ್ಷ ರೂ.ಗಳವರೆಗೆ ದ್ರವ್ಯಾರ್ಜನೆ ಮಾಡಿ, ಅದನ್ನು ಆ ಕಲಾಶಾಲೆಯ ಸ್ಥಿರಜೀವಿತೆಗಾಗಿ ಅರ್ಪಿಸಿದರು. ೧೯೦೧ ನೆಯ ವರ್ಷದಲ್ಲಿ ಎಂದರೆ ತಮ್ಮ ೩೫ನೆಯ ವಯಸ್ಸಿನಲ್ಲಿ ಇವರು ಬೊಂಬಾಯಿ ಪ್ರಾಂತಿಕ ನಿಯಮನಿರ್ಮಾಣಸಭೆಯ ಸಭ್ಯರಾಗಿ ಆರಿಸಲ್ಪಟ್ಟು, ಮರುವರ್ಷವೇ ಸಾಮ್ರಾಜ್ಯಶಾಸನ ಸಭೆಯ ಸಭಿಕರಾಗಿ ಏರ್ಪಟ್ಟು, ಅಂತ್ಯದವರೆಗೂ ಆ ಕೆಲಸವನ್ನು ವಹಿಸಿಯೇ ಇದ್ದರು. ಆ ಸಭೆಯಲ್ಲಿ ಮಾತೃದೇಶಸೇವೆಗಾಗಿ ಇವರು ಸಾಗಿಸಿದ ಕೆಲಸಗಳು ಸ್ಮರಣೀಯವಾದುವುಗಳು. ಪ್ರಾರಂಭ ವಿದ್ಯೆಯನ್ನು ಉಚಿತವಾಗಿಯೂ ಬಲಾತ್ಕಾರದಿಂದಲೂ ಈ ದೇಶದಲ್ಲಿ ಸಾಗಿಸಬೇಕೆಂಬ ವಿಷಯವನ್ನು ಸರ್ಕಾರದವರ ಗಮನಕ್ಕೆ ನಿಯಮನಿರ್ಮಾಣಸಭೆಯಲ್ಲಿ ತಂದವರೇ ಇವರು. ಅದನ್ನು ವಿಧಿಗೊಳಿಸಬೇಕೆಂದು ಅನಂತಸಾಹಸವನ್ನು ಮಾಡಿದರು. ತತ್ಕಾಲಕ್ಕೆ ಫಲಪ್ರದವಾಗದೆ ಹೋದರೂ, ಕಾಲಾನುಕಾಲದಲ್ಲಿ ಅದನ್ನು ಮಾಡಿಸಿಯೇ ತೀರಬೇಕೆಂಬುದು ಇವರ ದೃಢಸಂಕಲ್ಪವಾಗಿದ್ದಿತು. ಸಾಧಾರವಾಗಿಯೂ, ಯುಕ್ತಿಯುಕ್ತವಾಗಿಯೂ, ಇವರು ಸಾಮ್ರಾಜ್ಯಸಭೆಯಲ್ಲಿ ಮಾಡುತ್ತಿದ್ದ ವಿಷಯಪ್ರತಿಪಾದನವು ತತ್ಕಾಲದ ವೈಸ್ರಾಯರು ಮೊದಲಾದ ಸರ್ಕಾರದುದ್ಯೋಗಿಗಳಿಂದಲೂ, ದೇಶೀಯಸಭ್ಯರಿಂದಲೂ ಶಿರಃಕಂಪನಪೂರ್ವಕವಾಗಿ ಅಭಿನಂದಿಸಲ್ಪಡುತ್ತಿದ್ದುವು. ಇವರು ಲಾರ್ಡ್ ಕರ್ಜನ್–ಲಾರ್ಡ್ ಮಿಂಟೋ–ಲಾರ್ಡ್ ಹಾರ್ಡಿಂಜ್ ಈ ತ್ರಿವಿಧ ಸ್ವಭಾವದ ತ್ರಿಮೂರ್ತಿಗಳಿಂದಲೂ ಒಂದೇಸಮನಾಗಿ ಮನ್ನಣೆಗೊಂಡಿದ್ದರು. ಕೆಲರು ಸರ್ಕಾರದ ಮೆಚ್ಚುಗೆಗಾಗಿ ತಮ್ಮ ವಿವೇಕಾದಿಗಳನ್ನು ಮಾರಿ ಪ್ರಜೆಗಳಿಗೆ ಅಪ್ರಿಯರಾಗುವುದೂ, ಪ್ರಜೆಗಳ ಮೆಚ್ಚುಗೆಗಾಗಿ ತಮ್ಮ ವಿವೇಕಾದಿಗಳನ್ನು ಮೀರೆದಷ್ಟು ಉಪಯೋಗಿಸಿ ಸರ್ಕಾರಕ್ಕೆ ಅಪ್ರಿಯರಾಗುವುದೂ ಉಂಟು. ಇವರಲ್ಲಿ ಅಂಥ ನಡತೆಯಿರಲಿಲ್ಲ. ಎರಡುಪಕ್ಷದ ಕೆಲಸವನ್ನೂ “ಚಿಂತಾಲಿನ” ತೂಕದಂತೆ ಲಾಘವಕ್ಕೂ ಪಕ್ಷಪಾತಕ್ಕೂ ಸ್ವಲ್ಪವೂ ಎಡೆಗುಡದೆ ನೆರವೇರಿಸುತ್ತ ಉಭಯರಲ್ಲೂ ಅತ್ಯಂತ ಪ್ರಿಯರಾಗಿದ್ದರು. ಇವರಿಗಿದ್ದ ಯೋಗ್ಯತೆಯಲ್ಲಿ ಸರ್ಕಾರದ ಅಧಿಕಾರವನ್ನಪೇಕ್ಷಿಸಿದ್ದರೆ ಸಾವಿರಾರು ಸಂಬಳದ ಕೆಲಸವು ದೊರೆಯುವುದು ಲೀಲಮಾತ್ರದ ಕಾರ್ಯವಾಗಿದ್ದಿತು. ಆ ಸ್ವಾರ್ಥಪರತೆಯು ಇವರಿಗೆ ಜನ್ಮಾರಭ್ಯ ಅಂಟಿಬರಲಿಲ್ಲ. ಒಂದಾವೃತ್ತಿ ಇವರಿಗೆ ಸಾಮ್ರಾಜ್ಯಪ್ರಭುತ್ವದಿಂದ “ಸರ್” ಎಂಬ ಪ್ರಶಸ್ತಿಯು ಕೊಡಲ್ಪಡುವ ಪ್ರಯತ್ನವು ನಡೆಯಲಾಗಿ, ಅದಕ್ಕೆ ಕೈಮುಗಿದು, ಆ ಹಂಗಿಗೂ ತನ್ನನ್ನು ಬದ್ಧನನ್ನಾಗಿ ಮಾಡಿಕೊಳ್ಳದೆ ನುಣುಚಿಕೊಂಡರು. ಈ ನಿಸ್ಪೃಹತೆಯೂ ಘನವೈರಾಗ್ಯವೂ ಯಾವ ಸನ್ಯಾಸಿಗೆತಾನೇ ಇರುವುದು ? ಇವರಿಗೆ ತ್ರಿಕರಣದಲ್ಲೂ ಸರ್ವಾವಸ್ಥೆಯಲ್ಲೂ ಮಾತೃದೇಶಸೇವೆಯೊಂದೇ ಪೂರ್ಣತಪಸ್ಸಾಗಿ ತೋರುತ್ತಿದ್ದಿತು. ಅದಕ್ಕಾಗಿ ದೇಹವನ್ನೇ ಒಪ್ಪಿಸಲು ಸಿದ್ಧರಾಗಿದ್ದುದರಿಂದ, ಉಳಿದ ಲೌಕಿಕ ಜಾತಿ ಕುಲ ಸಂಪತ್ತಿಗಳೆಲ್ಲಾ ತೃಣಗಣಾಯಮಾನವಾಗಿದ್ದುವು.

ಭರತಖಂಡದ ಸಾರ್ವಜನಿಕ ಮಹಾಸಭೆಯ ಮುಂದಾಳುಗಳಲ್ಲಿ ಇವರೊಬ್ಬರಾಗಿದ್ದರು. ಕಡೆಕಡೆಗೆ ಇವರು ಅದರ ಮುಖ್ಯಸೂತ್ರಚಾಲಕರಲ್ಲಿ ಒಬ್ಬರಾಗುತ್ತ ಬಂದರು. ಆ ಸಭೆಯು ಸರ್ಕಾರದ ವಕ್ರದೃಷ್ಟಿಪಥದಿಂದ ತಪ್ಪಿಸಿಕೊಂಡು ಈಗಿನ ಪ್ರಭುತ್ವ ಲಾಲಸೀಯ ಸ್ಥಿತಿಗೆ ಬರುವಂತೆ ಮಾಡುವ ಸಾಹಸದಲ್ಲಿ ಇವರ ಅಂಗವು ವಿಶೇಷವಾಗಿದ್ದಿತು. ರಾಜಕೀಯ ಕಾರ್ಯದ ಮುಂದಾಳುಗಳಲ್ಲಿ ಉಗ್ರಸೌಮ್ಯವೆಂಬ ಪಕ್ಷದ್ವಯಗಳೇರ್ಪಟ್ಟಾಗ, ಆ ಉಭಯಪಕ್ಷದ ಮಸಗಾಟದಿಂದ ಹುಟ್ಟಿದ ಅಗ್ನಿಯಲ್ಲಿ ಆ ಮಹಾಸಭೆಯು ಹೋಮಗೊಂಡು ಹೋಗುವ ಸ್ಥಿತಿಯು ಬಂದಿದ್ದರೂ, ಅದಕ್ಕೆ ಸ್ಥಿತಿಸ್ಥಾಪಕತ್ವವನ್ನುಂಟುಮಾಡಲು ಈ ಮಹನೀಯರು ದೂರಾಲೋಚನೆಯಿಂದ ಸಾಹಸಪಟ್ಟು ಕೃತಕೃತ್ಯರಾದರು. ಕಾಶೀಪಟ್ಟಣದಲ್ಲಿ ನಡೆದ ರಾಷ್ಟ್ರೀಯ ಸಭೆಯ ಅಧ್ಯಕ್ಷತೆಯು ಇವರಿಗೆ ವಹಿಸಲ್ಪಟ್ಟಿದ್ದಿತು. ಈಚೀಚೆಗೆ ಭರತಖಂಡದ ರಾಜಕೀಯ ಪ್ರಮುಖ ಕಾರ್ಯಗಳಾವುದರಲ್ಲೂ ಈ ಮಹನೀಯರ ಸಂಬಂಧವಿಲ್ಲದ ಕಾರ್ಯವೊಂದೂ ಇಲ್ಲವೆಂಬ ಸ್ಥಿತಿಯು ಉಂಟಾಗುತ್ತಿದ್ದಿತು. ಈ ದೇಶದ ರಾಜಕೀಯೋದ್ಯೋಗನಿರ್ಣಾಯಕ ಸಂಘ “ಪಬ್ಲಿಕ್ ಸರ್ವೀಸ್ ಕಮಿಷನ್” ನಲ್ಲಿ ಸಭ್ಯರಾಗಿ ಇವರು ಸೇರಿಸಲ್ಪಟ್ಟಿದ್ದರು. ಅದರಲ್ಲಿ ಬಲು ಮುತುವರ್ಜಿಯಿಂದ ಕೆಲಸಮಾಡುತ್ತಿದ್ದರು. ಅಲ್ಲಿ ಇವರು ಮಾಡಿದ ಶ್ರಮಕ್ಕೆ ತಕ್ಕ ಫಲವು ಭರತಖಂಡಕ್ಕೆ ಉಂಟಾಗದೆ ಹೋಗುವುದಿಲ್ಲವೆಂದು ಭಾರತೀಯರೆಲ್ಲರೂ ನಂಬಿರುವರು. ಆದರೆ ಆ ಸಭೆಯ ವರದಿಯು ಕೂಡ ಸಿದ್ಧವಾಗುವುದಕ್ಕೆ ಮುಂಚೆಯೇ ಭರತಖಂಡದ ಹತವಿಧಿಯ ಪ್ರಭಾವದಿಂದ ಇವರೇ ದಿವಂಗತರಾದರು. ದಕ್ಷಿಣಾಫ್ರಿಕಾದಲ್ಲಿ ಭಾರತೀಯರಿಗುಂಟಾಗಿದ್ದ ಅಪಮಾನ ಹಿಂಸೆಗಳ ಸುದ್ದಿಯನ್ನು ಕೇಳಿ ಪ್ರತ್ಯಕ್ಷವಾಗಿ ನೋಡಿಬರುವುದಕ್ಕಾಗಿ ಈ ಮಹನೀಯರು ದಯಮಾಡಿಸಿದ್ದರು. ಅಲ್ಲಿನ ಅನಿಷ್ಟನಿವೃತ್ತಿಗಾಗಿ ಸುಪ್ರಸಿದ್ಧ ಗಂಧಿಯವರೇ ಮೊದಲಾದವರು ಕೈಗೊಂಡಿದ್ದ ಸಾತ್ವಿಕತಪಸ್ಸಿನನಿರ್ವರ್ತನೆಗಾಗಿ ಭರತಖಂಡದಿಂದ ಧನಸಹಾಯವನ್ನು ಮಾಡಿಸುವ ಕಾರ್ಯಕ್ಕೆ ಈ ಮಹನೀಯರೇ ಅಗ್ರೇಸರರಾಗಿದ್ದ ಸಂಗತಿಯು ಸರ್ವವಿದಿತವಾಗಿದೆ. ಇದರಂತೆ ಈ ಮಹನೀಯರು ಸ್ವದೇಶೀಯರ ಹಿತಾರ್ಥವಾಗಿ ಅನಂತಕಾರ್ಯಗಳನ್ನು ಮಾಡಿಯೂ ಮಾಡುವವರಾಗಿಯೂ ಇದ್ದರು. ದೇಶಕಾರ್ಯಕ್ಕಾಗಿಯೇ ಇವರು ಹಲವುಬಾರಿ ವಿದೇಶಗಮನಗಳನ್ನು ಕೂಡ ಮಾಡಿಬಂದರು. ಆ ಯಾತಾಯಾತಗಳಿಂದಲೂ ಸರ್ವದಾ ವಿಪರೀತವಾದ ಬುದ್ಧಿಕ್ಲೇಶದಿಂದಲೂ ಇವರಿಗೆ ದೇಹದಲ್ಲಿ ಅಸ್ವಸ್ಥತೆಯು ಕಾಲಿಕ್ಕಿತು. ಇವರು ತಮ್ಮ ಅಂತ್ಯಕ್ಷಣದವರೆಗೂ ಆ ದೇಶಸೇವಾಜಪವನ್ನು ಬಿಡಲೇ ಇಲ್ಲ. ತಾವು ಆರಂಭಿಸಿರುವ ದೇಶಸೇವಾ ಕಾರ್ಯಗಳನ್ನು ಕೊನೆಮುಟ್ಟಿಸಲಿಲ್ಲವಲ್ಲಾ ಎಂಬ ಚಿಂತೆಯು ಅಂತ್ಯಕಾಲದಲ್ಲೂ ಅವರನ್ನು ಬಿಡಲಿಲ್ಲ. ಅದನ್ನು ಕೊನೆಗಾಣಿಸಬೇಕೆಂಬ ವಚನವೇ ತಮ್ಮ ಸಹೋದ್ಯೋಗಿಗಳಿಗೂ ಅನುಗಾಮಿಗಳಿಗೂ ಅವರು ಮಾಡಿದ ಅಂತ್ಯನಿರೂಪವಾಗಿದ್ದಿತು. ಇಂಥ ದೇಶಭಕ್ತರು ಭರತಖಂಡಕ್ಕೆ ದೊರೆದಿದ್ದುದು ಈ ದೇಶೀಯರ ಪುಣ್ಯಪ್ರಭಾವವೆಂದು ಅರಿಯಲ್ಪಟ್ಟಿದ್ದಿತು. ರಾಜಕೀಯಾಂದೋಳನದ ಒಂದೊಂದು ವಿಷಮಸಮಯದಲ್ಲಿ ಈ ಧೀರೋದಾತ್ತ ಪುರುಷರ ಸಹಾಯವು ಅತ್ಯುಪಯುಕ್ತವಾಗುತ್ತಿದ್ದಿತು. ಈಗಿನ ಯೂರೋಪುಖಂಡದ ಮಹಾಯುದ್ಧದ ಅಂತ್ಯದವರೆಗಾದರೂ ಈ ಮಹಾಪುರುಷರು ನಮ್ಮ ಮಧ್ಯದಲ್ಲಿರುತ್ತಿದ್ದರೆ, ದೇಶಕ್ಷೇಮಕಾರ್ಯಕ್ಕೆ ಬಹಳ ಸಾಧಕವಾಗುತ್ತಿದ್ದಿತು. ಇನ್ನು ಕೆಲಕಾಲ ಅವರನ್ನುಳಿಸಿಕೊಂಡಿರುವ ಭಾಗ್ಯವು ನಮಗಿಲ್ಲವಾಯಿತು ! ಇಂಥ ಸತ್ಪುತ್ರರತ್ನವನ್ನು ಭಾರತಮಾತೆಯು ಇನ್ನೆಂದಿಗೆ ಪಡೆಯುವಳೋ ಹೇಳಲಾಗದು. ವರ್ಧಿಷ್ಣುಗಳಾದ ಭಾರತ ಯುವಕರೆಲ್ಲರೂ ದಿವಂಗತರಾದ ಈ ಪುಣ್ಯಪುರುಷರ ಜೀವನಚರಿತ್ರವನ್ನು ಆದರ್ಶವನ್ನಾಗಿಟ್ಟುಕೊಂಡು ನಡೆಯುವವರಾಗಿರಲಿ, ಅವರಂಥವರನ್ನು ಕಾಣುವ ಸುಯೋಗವು ಭರತಖಂಡಕ್ಕೆ ಪುರತಃ ವಿರಳವಾಗಿಯಾದರೂ ಉಂಟಾಗಲಿ. ಆದರಿಂದ ಶ್ರೀ ಗೋಖಲೆಯವರ ಮೃತಿಯಿಂದ ಉಂಟಾದ ಮಹಾನಷ್ಟದಲ್ಲಿ ಯತ್ಕಿಂಚಿದ್ಭಾಗವಾದರೂ ತುಂಬಿರಲಿ. ಮೃತಮಹನೀಯರ ಸಾತ್ವಿಕ ತಪಶ್ಚರ್ಯೆಗೆ ಅನುಗುಣವಾದ ಶಾಶ್ವತಪಾರಮಾರ್ಥಿಕಸೌಖ್ಯವನ್ನು ಜಗದೀಶನು ಅವರಿಗೆ ಅನುಗ್ರಹಿಸಲಿ.

ಅನುತಾಪ ಪ್ರದರ್ಶನವು.

ಅಕಾಲಮೃತರಾದ ಈ ಮಹನೀಯರ ವಿಷಯದಲ್ಲಿ ಭಾರತೀಯರೆಲ್ಲರಿಗೂ ಎಷ್ಟು ಪೂಜ್ಯಬುದ್ಧಿಯಿದ್ದಿತೆಂಬ ವಿಷಯವು ಈಗ ಈ ದೇಶದ ಪ್ರತಿಯೊಂದು ನಗರಗಳಲ್ಲಿನ ಸಭೆಗಳ ಮೂಲಕವಾಗಿಯೂ ವೃತ್ತಪತ್ರಿಕೆಗಳ ಮೂಲಕವಾಗಿಯೂ ಏಕಕಂಠ್ಯವಾಗಿ ಧ್ವನಿತವಾಗುತ್ತಿರುವ ಅನುತಾಪಗಳಿಂದ ವ್ಯಕ್ತವಾಗುತ್ತಿರುವುದು. ಕಲ್ಕತ್ತಾ-ಬೊಂಬಾಯಿ-ಮದರಾಸು-ಲಾಹೋರು-ಲಕ್ನೋ-ಅಲಹಾಬಾದು-ಬಂಕೀಪುರ-ರಂಗೂನು-ಕೊಯಮುತ್ತೂರು ಮಧುರೆ ಮೊದಲಾದ ಅನೇಕ ಪಟ್ಟಣಗಳಲ್ಲಿ ಮಹಾಜನ ಸಭೆಗಳು ನೆರೆದು ಗತಿಸಿದವರ ಗುಣಾತಿಶಯಗಳನ್ನು ಸ್ಮರಿಸಿ, ಕಣ್ಣೀರು ಸುರಿಸಿ, ಅನುತಾಪಪ್ರದರ್ಶನ ನಿರ್ಧಾರಗಳನ್ನು ಮಾಡುತ್ತಿರುವರು.

ಡಿಲ್ಲಿಯಲ್ಲಿ ತಾ|| ೨೨ರಲ್ಲಿ ನೆರೆದಿದ್ದ ಸಾಮ್ರಾಜ್ಯಶಾಸನ ಸಭೆಯಲ್ಲಿ ವೈಸ್ರಾಯರು ಈ ಮಹನೀಯರ ಯೋಗ್ಯತಾವಿಶೇಷವನ್ನು ಮನಮುಟ್ಟಿ ಕೊಂಡಾಡುವಾಗ “ ಈ ಶಾಸನಸಭೆಯಲ್ಲಿ ಅವರು ವ್ಯಕ್ತಪಡಿಸಿದ ಸಾಮರ್ಥ್ಯವೂ ವಾಗ್ಮಿತ್ವವೂ ಎಲ್ಲರಿಗೂ ಗೊತ್ತು. ದೇಶಕಾರ್ಯನಿರ್ವಾಹದಲ್ಲಿ ಉತ್ಸಾಹಪೂರಿತತ್ವವೂ, ಅತಿಶಯವಾದ ಯುಕ್ತಾಯುಕ್ತ ವಿವೇಚನವೂ, ಸಾಮರ್ಥ್ಯವೂ ಅವರಲ್ಲಿದ್ದುದರಿಂದ ದೇಶೀಯರಾದ ಪ್ರಜಾನಾಯಕರಲ್ಲಿ ಅವರಿಗೆ ಸರ್ವಪೂಜ್ಯವಾದ ಸ್ಥಾನವು ಲಭಿಸಿತು ಅವರು ಆಂಗ್ಲಪ್ರಭುತ್ವದಲ್ಲಿ ಅತ್ಯಂತ ರಾಜಭಕ್ತಿಭರಿತರು ಆದರೂ ಪ್ರಭುತ್ವದವರ ಪರಿಪಾಲನಾ ವಿಧಾನವನ್ನು ಕುರಿತು ತಮಗೆ ತೋಚಿದ ಭಾವವನ್ನು ಹಲವುಬಾರಿ ನಿರ್ಭಯವಾಗಿ ವಿಮರ್ಶೆ ಮಾಡಿರುವರು. ಮುಖ್ಯವಾಗಿ ಆರ್ಥಿಕ ವಿಷಯಲ್ಲಿ ಅವರು ಮಾಡುತ್ತಿದ್ದ ವಾದಗಳು ಬಹು ತೀಕ್ಷ್ಣವಾಗಿಯೂ ಅಮೋಘವಾಗಿಯೂ ಇರುತ್ತಿದ್ದುದರಿಂದ ಅವಕ್ಕೆ ಸಮುಚಿತ ರೀತಿಯಿಂದ ಉತ್ತರವನ್ನು ಹೇಳುವುದರಲ್ಲಿ ಪೂರ್ವಪಕ್ಷವನ್ನು ಮಾಡುವವರಿಗೆ ಬಹಳ ಶ್ರಮವಾಗಿಹೋಗುತ್ತಿದ್ದಿತು. ಅವರ ಉಪನ್ಯಾಸವು ಶ್ರೋತೃಗಳ ಮನಸ್ಸನ್ನು ಸೆಳೆದುಬಿಡುತ್ತಿದ್ದಿತು. ನಾನು ಈ ದೇಶಕ್ಕೆ ಬಂದಬಳಿಕ ಗೋಖಲೆಯವರು ಬದ್ಧದೀಕ್ಷರಾಗಿ ಚರ್ಚಿಸಿದ ಪ್ರಶ್ನೆಗಳೊಳಗೆ ಪ್ರಾರಂಭ ವಿದ್ಯಾವ್ಯಾಪನ ಶಾಸನದ ವಿಷಯವು ಮುಖ್ಯವಾಗಿದ್ದಿತು. ದಕ್ಷಿಣಾಫ್ರಿಕಾ ವಿಷಯದಲ್ಲಿ ಅವರು ಪಟ್ಟ ಶ್ರಮವು ಅನುಕೂಲಫಲಪ್ರದವಾಯಿತು ಅವರು ಈ ಸಭಿಕರಿಗೆಲ್ಲರಿಗೂ ಅಲ್ಲದೆ ನನಗೂ ಅತ್ಯಂತ ಪ್ರಿಯಮಿತ್ರರಾಗಿದ್ದರು. ಅವರು ಎಷ್ಟೋಸಾರಿ ನನಗೆ ಹಿತೋಪದೇಶವನ್ನು ಮಾಡಿದ್ದರು. ಅವು ಯುಕ್ತಿಯುಕ್ತವೂ ಉಪಯುಕ್ತವೂ ಆದುವೆಂದು ನಾನು ಗ್ರಹಿಸಿದೆನು. ಗೋಖಲೆಯವರಿಗೆ ಕೆ.ಸಿ.ಐ.ಇ. ಬಿರುದನ್ನು ಕೊಡಿಸುವುದಕ್ಕಾಗಿ ನಾನು ಶ್ರೀ ಚಕ್ರವರ್ತಿಯವರಿಗೆ ಬಿನ್ನಯಿಸಿ ಇನ್ನೂ ಆರುತಿಂಗಳು ತುಂಬಿಲ್ಲ. ಆದರೆ ನಿಸರ್ಗವಿನಯಸಂಪನ್ನರಾದ ಗೋಖಲೆಯವರು ಆ ಸೂಚನೆಯಲ್ಲಿದ್ದ ಸದ್ಭಾವವನ್ನು ಮಾತ್ರ ಗ್ರಹಿಸಿ, ಆ ಬಿರುದನ್ನು ಸ್ವೀಕರಿಸುವುದಕ್ಕೆ ಮಾತ್ರ ಅಂಗೀಕರಿಸದೆ ಹೋದರು. ಅಂಥ ಮಹನೀಯನು ಈಗ ನಮ್ಮುಗಳನ್ನು ಬಿಟ್ಟು ತೆರಳಿದನು ! ನಿಜವಾಗಿಯೂ ಆತನ ಸ್ಥಾನವನ್ನು ಆಕ್ರಮಿಸಬಲ್ಲವರು ಬಹಳ ದುರ್ಲಭವೆಂದೇ ಹೇಳಬಹುದು ” ಎಂದು ಅಪ್ಪಣೆ ಕೊಡಿಸಿದರು ಬಳಿಕ ಆ|| ಸರ್ ಜಿ. ಚಿಟ್ನಾವೀಸ್‌ರವರು ಕೂಡ ಅದೇ ವಿಷಯವಾಗಿ ಸ್ವಲ್ಪ ಭಾಷಣಮಾಡಿದ ಬಳಿಕ ಆ ಸಭೆಗೆ ಗೋಖಲೆಯವರ ವಿಷಯದಲ್ಲಿದ್ದ ಗೌರವಬುದ್ಧಿಯ ಸೂಚಕವಾಗಿ ಅಂದಿನ ಸಭೆಯು ಅಷ್ಟಕ್ಕೇ ಉಪಸಂಹರಿಸಲ್ಪಟ್ಟಿತು.

ಕಲ್ಕತ್ತಾದಲ್ಲಿ ತಾ|| ೨೦ರಲ್ಲಿ ಕೂಡಿದ್ದ ಸಭೆಯೊಳಗೆ ಆ|| ಸುರೇಂದ್ರನಾಥ ಬಾನರ್ಜಿಯವರು ಉಪನ್ಯಾಸಿಸುವಾಗ್ಗೆ—“ ಆ|| ಗೋಖಲೆ ಮಹಾಶಯರು ನಿನ್ನೆಯ ರಾತ್ರಿ ಗತಿಸಿದರು. ಅದರಿಂದ ನಮಗೆಲ್ಲಾ ಉಂಟಾಗಿರುವ ದುಸ್ಸಹವಾದ ಮಹಾಪತ್ತನ್ನು ಹೊರಲಾರದೆ ನಾವು ಇಲ್ಲಿ ಕೂಡಿರುತ್ತೇವೆ. ಅವರ ವಿಯೋಗದಿಂದ ಈ ದೇಶವೆಲ್ಲಾ ಕೋಲಾಹಲವಾಗಿದೆ. ಒಬ್ಬ ಮಹಾರಾಜನೂ ಒಬ್ಬ ಮಹನೀಯನೂ ಭೂಶಯ್ಯೆಯಲ್ಲೊರಗಿದನು. ಹಿಂದೂದೇಶದಲ್ಲಿ ಪ್ರಸ್ತುತ ಕಾಲದಲ್ಲಿ ರಾಜಕೀಯ ಪ್ರಪಂಚವನ್ನು ಬೆಳಗುತ್ತಿದ್ದ ಒಂದಾನೊಂದು ಮಹಾಮೂರ್ತಿಯು ಅಂತರ್ಹಿತವಾಗಿಹೋಯಿತು! ಭರತಖಂಡದ ಸ್ವಾತಂತ್ರ್ಯಕ್ಕಾಗಿ ತೀವ್ರವಾಗಿ ವಾದಿಸುತ್ತಿದ್ದ ಪುರೋಗಾಮಿಯೊಬ್ಬನು ಮಧ್ಯವಯಸ್ಸಿನಲ್ಲೇ ಅಸ್ತಂಗತನಾಗಿಹೋದನು! ಈತನಿಗೆ “ ರಾಜಕೀಯ ಋಷಿ ” ಎಂಬ ಹೆಸರು ಸಾರ್ಥಕವಾಗಿ ಒಪ್ಪುವುದು. ೨೫ ವರ್ಷಗಳಿಂದಲೂ ನಾನು ಆ ಮಹನೀಯನೊಡನೆ ಪರಿಚಯರೂಪವಾದ ಭಾಗ್ಯವನ್ನು ಪಡೆದಿದ್ದೆನು. ಈತನಿಗಿಂತಲೂ ಸತ್ಯಪ್ರಿಯನೂ-ಉದಾರಚಿತ್ತನೂ-ಶಾಂತನೂ ಆದ ಮತ್ತೊಬ್ಬನನ್ನು ನಾನೆಲ್ಲೂ ಕಾಣಲಿಲ್ಲ. ಪ್ರಜಾಕಾರ್ಯತತ್ಪರರಾದ ದೇಶೀಯರಲ್ಲಿ ಈ ಮಹನೀಯನಂಥ ಕಾರ್ಯದಕ್ಷನನ್ನೂ ಸ್ವಾರ್ಥತ್ಯಾಗಿಯನ್ನೂ ಪುರುಷಶ್ರೇಷ್ಠನನ್ನೂ ಕಾಣುವುದು ಬಹು ಅಪರೂಪವು ” ಎಂದು ಮೊದಲಾಗಿ ಕೊಂಡಾಡಿದರು

ಬೊಂಬಾಯಿ ವಿಶ್ವವಿದ್ಯಾಲಯದಲ್ಲಿ ಪದವೀದಾನ ಸಮಾರಂಭವು ನಡೆದಾಗ ಅಲ್ಲಿನ ವೈಸ್‌ಚಾನ್ಸಲರಾದ ಸರ್ ಜಾರ್ಜ್ ಹೀರ್ಟರವರು ಗೋಖಲೆಯವರನ್ನು ಕುರಿತು ಪ್ರಸ್ತಾವವನ್ನೆತ್ತಿ—“ ಬೊಂಬಾಯಿ ವಿಶ್ವವಿದ್ಯಾಲಯದಲ್ಲಿ ಉತ್ತಮರೀತಿಯಿಂದ ಪರೀಕ್ಷೆಯಲ್ಲುತ್ತೀರ್ಣರಾದವರೊಳಗೆ ಗೋಖಲೆಯವರೊಬ್ಬರು. ಹಿಂದೂದೇಶದಲ್ಲಿ ವಿದ್ಯಾಭಿವೃದ್ಧಿಯನ್ನು ಮಾಡಬೇಕೆಂದು ಇವರು ಮಾಡಿದ ಪರಿಶ್ರಮವು ಶ್ಲಾಘನೀಯವಾದುದು. ದೇಶಕ್ಷೇಮಕ್ಕಾಗಿ ಇವರು ಅನೇಕರೀತಿಯಾಗಿ ಪಾಟುಪಟ್ಟರು. ಎಲ್ಲಕ್ಕಿಂತಲೂ ದೇಶಕ್ಷೇಮವೇ ಇವರಿಗೆ ಅತ್ಯಂತೇಷ್ಟ ಲಕ್ಷ್ಯವಾಗಿದ್ದಿತು ” ಎಂದು ಹೇಳಿದರು. ಗೋಖಲೆಯವರ ವಿಷಯದಲ್ಲಿ ವಿಶ್ವವಿದ್ಯಾಲಯ ಸಂಘದವರಿಗಿರುವ ಗೌರವವನ್ನು ವ್ಯಕ್ತಪಡಿಸುವುದಕ್ಕಾಗಿ ಆ ದಿನದ ಸಭೆಯನ್ನು ಅಲ್ಲಿಗೇ ಮುಗಿಸುವ ನಿರ್ಧಾರವು ಮಾಡಲ್ಪಟ್ಟಿತು.

ಲಂಡನ್ ಪಟ್ಟಣದಲ್ಲೂ ಒಂದು ಸಾನುಭೂತಿಯ ಸಭೆಯು ನೆರವೇರಿತು. ಲಂಡನ್ ಪಟ್ಟಣದ ಅನೇಕ ಪತ್ರಿಕೆಗಳು ಗೋಖಲೆಯವರ ಅಕಾಲಮೃತಿಗಾಗಿ ವಿಷಾದಪ್ರದರ್ಶಕ ಲೇಖನಗಳನ್ನು ಪ್ರಕಟಿಸಿರುವವು. ಭರತಖಂಡದಲ್ಲಿರುವ ಸ್ವದೇಶೀಯ ವಿದೇಶೀಯ ಪತ್ರಿಕೆಗಳೆಲ್ಲವೂ ಒಂದೇ ಸಮನಾಗಿ ತಂತಮ್ಮ ವಿಷಾದವನ್ನು ವ್ಯಕ್ತಪಡಿಸಿ ಸಾನುಭೂತಿ ಲೇಖನಗಳನ್ನು ಪ್ರಕಟಿಸುತ್ತಿರುವುವು ದಕ್ಷಿಣಾಫ್ರಿಕಾದ ಬ್ರಿಟಿಷ್ ಇಂಡಿಯನ್ ಸಂಘದ ಪರವಾಗಿ ಜನರಲ್ ಸ್ಮಟ್ಸ್‌ರವರು ದುಃಖಪ್ರದರ್ಶಕ ತಂತಿವಾರ್ತೆಯನ್ನು ಕಳುಹಿಸಿರುವರು. ಅಲ್ಲಿನ ಜೋಹನ್ಸ್‌ಬರ್ಗ್ ಮೊದಲಾದ ಪ್ರತಿಪಟ್ಟಣದಲ್ಲೂ ದುಃಖಪ್ರದರ್ಶಕ ಸಭೆಗಳು ಕೂಡಿದ್ದುವು. ಯಾರೊಬ್ಬ ಸಂಸ್ಥಾನಾಧಿಪತಿಯ ಮೃತಿಯಲ್ಲೂ ಕೂಡ ಇಂಥ ಸ್ವದೇಶ ವಿದೇಶೀಯರ ಸಾನುಭೂತಿಯು ವ್ಯಕ್ತವಾಗುವುದು ದುರ್ಲಭವೆಂದು ಹೇಳಬಹುದು.

ಒಳದೇಶದ ವೃತ್ತಾಂತ.

ದಾವಣಗೆರೆಯಲ್ಲಿದ್ದ ಆನರರಿ ೩ನೆ ತರಗತಿಯ ಅ|| ಸರ್ಜನ್ ಮ|| ಎಂ. ಡಿ. ಶ್ರೀನಿವಾಸಯ್ಯಂಗಾರರು ಮೈಸೂರು ಜನರಲ್ ಆಸ್ಪತ್ರೆಗೆ ವರ್ಗಾಯಿಸಲ್ಪಟ್ಟಿದ್ದಾರೆ.

ಮಹಾ ಮಾತೃಶ್ರೀಯವರೂ ಮಹಾರಾಣಿಯವರೂ ಪರಿವಾರದೊಡನೆ ನಿನ್ನೆಯದಿನ ರಾತ್ರಿ ಮದ್ರಾಸಿನಿಂದ ಉದಕಮಂಡಲಕ್ಕೆ ದಯಮಾಡಿಸುವವರಾಗಿದ್ದರು.

ಈ ಪತ್ರಿಕೆಯಲ್ಲಿ ಗರ್ಭಿತವಾಗಿರುವ ಧಾರವಾಡ ಡಿ|| ತಿಳ್ಳಿಪೋಸ್ಟ್ ಕೂಸನೂರ ಜಗಜ್ಜ್ಯೋತಿ ಬುಕ್‌ಡಿಪೋವಿನ ಪ್ರಕಟನಪತ್ರಿಕೆಯನ್ನು ವಾಚಕರು ಗಮನಿಸಬೇಕಾಗಿ ಕೋರುತ್ತೇವೆ.

ದೇವನಹಳ್ಳಿ ತಾಲ್ಲೂಕಿನಲ್ಲಿ ಒಂದು ಗುಡ್ಡದಲ್ಲಿ ಒಂದು ಚಿರತೆಯು ಸೇರಿಕೊಂಡು ಆ ಪ್ರಾಂತ ತಿರುಗಾಡುವ ದನಕರುಗಳ ಮತ್ತೂ ಮನುಷ್ಯರಮೇಲೆ ಬಿದ್ದು ಬಹಳ ಹಾವಳಿಯನ್ನು ಮಾಡುತ್ತಿರುವುದು.

ಶ್ರೀಮನ್ ಮಹಾರಾಜರವರ ಸ್ವಾರಿಯು ನಿನ್ನೆಯದಿನ ರಾಜಧಾನಿಗೆ ಚಿತ್ತೈಸಿತು. ಮತ್ತೂ ನಾಳೆಯದಿನ ಶ್ರೀ ಶ್ರೀಕಂಠೇಶ್ವರಸ್ವಾಮಿಯ ಪೂರ್ಣಿಮಾಸೇವೆಗಾಗಿ ನಂಜನಗೂಡಿಗೆ ಚಿತ್ತೈಸಿ ಮಂಗಳವಾರ ಉದಕಮಂಡಲಕ್ಕೆ ದಯಮಾಡಿಸುವುದು.

ಡಿ|| ಫಾರೆಸ್ಟಾಫೀಸರು ಮ|| ಹೀರಾಸಿಂಗ್‌ರವರ ಕಡೆಯ ಮಗ ಜೇನ್‌ಸಿಂಗನು ತಮ್ಮ ಮನೆಯಲ್ಲೇ ಆಭರಣಗಳನ್ನು ಅಪಹರಿಸಿದ್ದುದಕ್ಕಾಗಿ ಪೋಲೀಸರಿಂದ ಹಿಡಿಯಲ್ಪಟ್ಟು ಡಿ|| ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಲ್ಪಟ್ಟಿರುವಲ್ಲಿ ಡಿ|| ಮ್ಯಾಜಿಸ್ಟ್ರೇಟರು ಆತನನ್ನು ಒಳ್ಳೆಯ ನಡತೆಗಾಗಿ ಸ್ವಂತ ಹೊಣೆಯ ಮೇಲೆ ಬಿಟ್ಟುಕೊಟ್ಟರು.

ರಾಜಧಾನಿಯಲ್ಲಿ ಬಿಸಿಲಿನ ತಾಪವು ಸಹಿಸಲಶಕ್ಯವಾಗಿದೆ. ಆದರೆ ೧–೨ ದಿನಗಳಿಂದ ಸ್ವಲ್ಪಸ್ವಲ್ಪ ಮೋಡವಾಡುತ್ತಿದ್ದು ನಿನ್ನೆಯ ಬೆಳಗ್ಗೆ ಗುಡುಗಿ ಸ್ವಲ್ಪ ತುಂತುರುಮಳೆಯು ಆಯಿತು. ಇದರಿಂದ ಸೆಕೆಯು ಇನ್ನೂ ಹೆಚ್ಚುವುದಲ್ಲದೆ ಅಷ್ಟುಇಷ್ಟು ಜೋಗಿನ ಸ್ಥಳದಲ್ಲಿ ನಿಂತಿರುವ ಗರುಕೆಗೆ ಗೆದ್ದಲು ಹತ್ತಿ ದನಗಳು ಬಾಯಾಡಲಿಕ್ಕೂ ಅವಕಾಶವಿಲ್ಲದಂತಾಗಲು ಕಾರಣವಾಗುವುದು.

ಮೈಸೂರು ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಕಟ್ಟಡದಲ್ಲಿ ಸ್ಥಾಪಿತವಾಗಿರುವ ಮೈಸೂರು ಪಬ್ಲಿಕ್ ಲೈಬ್ರರಿಯ ವಾಚಕಶಾಲೆಯು (ರೀಡಿಂಗ್‌ರೂಂ) ಜನಗಳ ಉಪಯೋಗಕ್ಕಾಗಿ ಇದೇ ತಾ|| ೧೧ ರಲ್ಲಿ ಆರಂಭಿಸಲ್ಪಟ್ಟಿತು. ಇದು ಪ್ರತಿದಿನವೂ ಬೆಳಗ್ಗೆ ೮ ಗಂಟೆಯಿಂದ ರಾತ್ರಿ ೮ ಗಂಟೆಯ ವರೆಗೆ ತೆರೆಯಲ್ಪಟ್ಟಿರುವುದು. ಆದರೆ ಸೋಮವಾರದಲ್ಲಿ ಮಾತ್ರ ಮಧ್ಯಾಹ್ನಾತ್ಪರ ಮುಚ್ಚಲ್ಪಡುವುದು.

ರಾಜಧಾನಿಯಲ್ಲಿರುವ ಜರಂಡಿಯ ಏರ್ಪಾಟಿಗೆ ಒಳಪಟ್ಟ ಗುಂಡಿಗಳು, ನಲ್ಲಿಗಳು, ವಾಸನೆಹೋಗುವುದಕ್ಕೆ ಹಾಕಿರುವ ಕಂಬಗಳು, ತೊಟ್ಟಿಗಳು ಮೊದಲಾದುವುಗಳನ್ನು ಒಡೆಯುವುದು ತೂತುಕೊರೆಯುವುದು ಇತರ ವಿಧದಲ್ಲಿ ಕೆಡಿಸುವುದು ಒಳಗೆ ಹೋಗುವ ಬಚ್ಚಲನೀರನ್ನು ತೋಟದಕೆಲಸ ಮೊದಲಾದುವುಗಳಿಗೆ ಉಪಯೋಗಿಸಿಕೊಳ್ಳುವುದು—ಈ ತಪ್ಪಿತಗಳನ್ನು ಮಾಡಿದವರಿಗೆ ೫೦ ರೂ. ಗೆ ಮೀರದ ಅರ್ಥದಂಡವು ವಿಧಿಸಲ್ಪಡುವುದೆಂದು ಸರ್ಕಾರದಿಂದ ಪ್ರಕಟವಾಗಿದೆ.

ಹಾಸನ ಡಿಸ್ಟ್ರಿಕ್ಟಿನ ಜನರು ಡೆ|| ಕಮಿಷನರ ಪದವಿಯಿಂದ ನಿವೃತ್ತರಾಗಿರುವ ಮಿ|| ವೆದರಾಲ್‌ದಂಪತಿಗಳನ್ನು ಈ ತಾ|| ೨೩ ರಲ್ಲಿ ತಳಿರುತೋರಣಗಳಿಂದಲೂ ಧ್ವಜಪತಾಕೆಗಳಿಂದಲೂ ನೇತ್ರಾನಂದಕರವಾಗಿ ಶೃಂಗರಿಸಲ್ಪಟ್ಟಿದ್ದ ಜೂಬಿಲಿಹಾಲಿಗೆ ಮರ್ಯಾದಾಪುರಸ್ಸರವಾಗಿ ಬರಮಾಡಿಕೊಂಡು, ಅವರ ಸದ್ಗುಣ, ಪ್ರಜಾಭಿಮಾನ, ಮೊದಲಾದುವುಗಳ ಪ್ರಶಂಸನಪರವಾದ ವಿಜ್ಞಾಪನ ಪತ್ರಿಕೆಗಳನ್ನು ಇಂಗ್ಲೀಷು ಕನ್ನಡ ಮತ್ತೂ ಹಿಂದುಸ್ಥಾನಿ ಭಾಷೆಗಳಲ್ಲೋದಿ ಬೆಂಗಳೂರ ಬಾರ್ಟನ್ ಕಂಪನಿಯವರಿಂದ ಮಾಡಲ್ಪಟ್ಟ ರತ್ನಖಚಿತವಾದ ಬೆಳ್ಳಿಯ ತಟ್ಟೆಯಲ್ಲಿಟ್ಟು ಒಪ್ಪಿಸಿ ತಮ್ಮಗಳಿಗೆ ಅವರಮೇಲೆ ಇರತಕ್ಕ ವಿಶೇಷಗೌರವ ಪ್ರೀತಿಯನ್ನು ಪ್ರದರ್ಶಿಸಿದರು. ಮಿ|| ಸಾಹೇಬರು ಜನರ ಈ ವಿಧವಾದ ಅಭಿಮಾನಪ್ರದರ್ಶನಕ್ಕಾಗಿ ತಮ್ಮ ದಂಪತಿಗಳ ವಂದನೆಯನ್ನು ತಿಳಿಸಿದರು.

ಪತ್ರವ್ಯವಹಾರ.

೧೯೧೩ ನೆ ಇಸ್ವಿ ಮಾರ್ಚ್ ತಾ॥ ೧ ರಲ್ಲು ಚಿಕ್ಕಮಗಳೂರು ತಾಲ್ಲೋಕು ಜಾಬಲಿಪುರಿ ಶ್ರೀ ಮಠದಲ್ಲಿ ಶ್ರೀ ಮರ್ಣನಿರಂಜನ ಗುರುವರ್ಯ ಚಂದ್ರಶೇಖರಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಎಲಹಂಕದ ಶ್ರೀ ಮಠದ ಸ್ವಾಮಿಗಳವರ ಸನ್ನಿಧಿರೂಬರೂಬು ಸೇರಿದ ಮಹಾಜನಂಗಳು ಚರ್ಚಿಸಿ ತೀರ್ಗಡೆ ಮಾಡಿರತಕ್ಕ ಸಂಗತಿಗಳ ವಿವರ — ೧. ವಿದ್ಯಾಫಂಡಿಗಾಗಿ ನಿಮ್ಮನಿಮ್ಮ ಶಕ್ತಿ ವಿಚಾರಿ ಧರ್ಮಸಹಾಯಮಾಡಬೇಕೆಂತಲೂ — ೨. ವರ್ಷಂಪ್ರತಿ ಫಂಡಿಗೋಸ್ಕರ ನಿಮ್ಮನಿಮ್ಮ ಮನೆಗಳಲ್ಲಿ ನಡೆಯತಕ್ಕ ಲಗ್ನ ಕಾರ್ಯದಲ್ಲಿ ಗಂಡಿನವರಿಂದ ಮೂರು ರೂಪಾಯಿ, ಹೆಣ್ಣಿನವರಿಂದ ಎರಡುರೂಪಾಯಿಗಳು ಸಹ ಕೊಡಬೇಕೆಂತಲೂ — ೩. ನಿಮ್ಮನಿಮ್ಮ ಮನೆಗಳಲ್ಲಿ ಜನ್ಮಿಸಿದ ಗಂಡುಮಗುವಿಗೆ ಒಂದು ರೂಪಾಯಿಯಂತೆಯೂ ಹೆಣ್ಣುಮಗುವಿಗೆ ಎಂಟುಆಣೆಯಂತೆಯೂ, ಕೊಡಬೇಕೆಂತಲೂ — ೪. ವರ್ಷವೊಂದಕ್ಕೆ ಮನೆಗೆ ೪ ಸೇರಿಗೆ ಕಡಿಮೆಯಿಲ್ಲದಂತೆ ನಿಮ್ಮನಿಮ್ಮ ಶಕ್ತ್ಯನುಸಾರ ದವಸಕೊಡಬೇಕೆಂತಲೂ — ೫. ನಿಮ್ಮನಿಮ್ಮ ಮನೆಗಳಲ್ಲಿ ನಡೆಯುವ ಮದುವೆಕಾಲದಲ್ಲಿ ದುಂದುವೆಚ್ಚ ಮಾಡುವುದನ್ನು ನಿಲ್ಲಿಸಿ ಶಕ್ತಿಗೆ ಮೀರದಂತೆ ನಡಿಸಬೇಕೆಂತಲೂ, ಅಂದರೆ ಸಾಮಾನ್ಯವಾಗಿ ಪ್ರವರ್ತಿಸಬೇಕೆಂತಲೂ ಅಧ್ಯಕ್ಷರು ಅಪ್ಪಣೆಕೊಡಿಸಿದ ಪ್ರಕಾರ ಸರ್ವರೂ ಒಪ್ಪಿಕೊಂಡಿರುವಂತೆ ಶಿಷ್ಯಮಂಡಲಿಯವರೆಲ್ಲ ಮೇಲೆಕಂಡಂತೆ ಮಹನೀಯರು ನಿರ್ಣಯಿಸಿರುವಂತೆ ಕೊಟ್ಟು ಚಿಕ್ಕಮಗಳೂರಲ್ಲಿ ಸ್ಥಾಪಿಸಲ್ಪಟ್ಟಿರುವ ವಿದ್ಯಾಫಂಡನ್ನು ಅಭಿವೃದ್ಧಿಪಡಿಸಬೇಕಾಗಿ ಪ್ರಾರ್ಥಿಸುತ್ತೇನೆ.

ವಿದ್ಯಾಭಿಮಾನಿ.

ಧರ್ಮಾಸಕ್ತರು.

ನೈಜಾಂಇಲಾಖಾ ರಾಯಿಚೂರ ಜಿಲ್ಲಾ ಸಂಸ್ಥಾನ ಗೆಜ್ಜಲಗಟ್ಟೆಯ ಶ್ರೀಮಂತ ರಾಜಾವೆಂಕಟರಾವ ಬಹದ್ದೂರ ದೇಶಾಯಿಗಳವರು "ಧರ್ಮಸ್ಯತ್ವರಿತಾಗತಿಃ" ಎಂಬ ಮಹೋಕ್ತಿಯನ್ನರಿತು ನೈಜಾಂ ಇಲಾಖೆಯಲ್ಲಿ ಆಸುಪಾಸು ವಿದ್ಯಾಭಾಯ ಇಲ್ಲದ್ದನ್ನು ನೋಡಿ "ಶ್ರೀ ಅಮರೇಶ್ವರಪ್ರಾಸಾದಿಕ" ಸಂಸ್ಕೃತಪಾಠಶಾಲೆಯನ್ನು ಸ್ಥಾಪಿಸಿರುವರೆಂದು ಸ್ಟಾರಪತ್ರಿಕೆಯ ಮೂಲಕ ತಿಳಿಸಿದೆವಷ್ಟೆ. ನಮ್ಮ ದಯಾಳು ಶ್ರೀಮನ್ಮಹಾರಾಜರವರು ಈಗ ೧॥ ವರ್ಷಗಳ ಲಾಗಾಯಿತು ೧೩ ಜನ ವಿದ್ಯಾರ್ಥಿಗಳಿಗೆ ಅಶನವಸನಾದಿಗಳನ್ನಿತ್ತು ಪೆತ್ತಬಾಲರ ಸಮಾನ ಪೋಷಿಸುತ್ತಿರುವರು. ಮತ್ತು ರಾಜವಾಡೆಯಲ್ಲಿ ಆಗಾಗ್ಗೆ ಧರ್ಮಸಭೆಗಳನ್ನು ನೆರೆಯಿಸಿ, ಮತತತ್ವಗಳನ್ನು ಬೋಧಿಸುತ್ತ ಧರ್ಮಸುಧಾರಕ ಪಥದಲ್ಲಿಯೇ ತೊಡಗಿರುವರು. ಈ ಮಹನೀಯರು ಲೋಕಪಾವನವೆನಿಸಿದ ಶ್ರೀ ಅಮರೇಶ್ವರ ಸುಕ್ಷೇತ್ರದಲ್ಲಿ ಅನ್ನಸತ್ರವನ್ನಿಟ್ಟು, ಬಂದ ಜಂಗಮಾತಿಥಿಗಳಿಗೆ ಭೋಜನಸಂಗ್ರಹವನ್ನು ಭೂರಿವರ್ಷಗಳಿಂದಲೂ, ನಡೆಸುತ್ತ ಬಂದಿರುವರು. ಮತ್ತು ರಾ॥ ಬ॥ ರವರು ಸಿಂಧನೂರಲ್ಲಿ ಮೊಗಲಾಯಿ ಸರಕಾರದವರು ಏರ್ಪಡಿಸಿದ ಯುದ್ಧಫಂಡಿಗೆ ತಮ್ಮ ಉದಾರಹಸ್ತದಿಂದ ೫೦ ರೂಪಾಯಿಗಳನ್ನು ಕಳಿಸಿರುವರು. ಹಾಗೂ ರಾ॥ ಬ॥ ರವರ ಪ್ರತಿನಿಧಿಗಳಾದ ರಾವಸಾಹೇಬ ರಂಗನಗೌಡ ಜಹಗೀರದಾರರವರು ಪಾಠಶಾಲೆಯ ಉತ್ತೇಜನಕ್ಕಾಗಿ ಸತತ ಪ್ರಯತ್ನ ನಡೆಸುತ್ತಿರುವರು. ಈ ಉಭಯರಲ್ಲಿ ಧರ್ಮಸಾಹಸತ್ವ, ಉದಾರತ್ವ, ಪರೋಪಕಾರತ್ವವೇ ಮೊದಲಾದ ಸುಗುಣಗಳು ಮನೆಮಾಡಿಕೊಂಡಿವೆ. ಇಂಥ ದಯಾಶಾಲಿಗಳಿಗೆ ಜಗಚ್ಚಾಲಕನಾದ ಪರಮೇಶ್ವರನು ಸ್ಥಿರಸೌಖ್ಯವನ್ನಿತ್ತು ಸದಾ ಕಾಪಾಡಲೆಂದು ನಾವು ಆಶಿಸುತ್ತೇವೆ.

ಧರ್ಮಾಭಿಮಾನಿ.

ಬೀರೂರು ಶ್ರೀ ಮಂಜುನಾಥ ಅನಾಥಾಲಯ.

ಸ್ವಾಮಿ ಕೀರ್ತಿಶೇಷರಾಗಿರುವ ಮ॥ ರಾ॥ ಖರೀದಿ ಗೋವಿಂದಪ್ಪನವರು ಅನಾಥರಾಗಿರುವ ಬ್ರಾಹ್ಮಣ ಮತ್ತೂ ವೈಶ್ಯ ಬಾಲಕರನ್ನು ಪೋಷಿಸಿ ವಿದ್ಯಾವಂತರನ್ನಾಗಿ ಮಾಡಲು "ಶ್ರೀ ಮಂಜುನಾಥ ಅನಾಥಾಲಯ" ವೆಂಬ ಆಲಯವನ್ನು ಸ್ಥಾಪಿಸಿ ಇದರ ನಿರ್ವಾಹಕ್ಕಾಗಿ ನಮ್ಮ ಸರ್ಕಾರದವರಲ್ಲಿ ೩೦,೦೦೦ ರೂ. ಗಳನ್ನು ಮೂಲಧನವಾಗಿಟ್ಟು, ಅದರ ಬಡ್ಡಿಯ ಮೊಬಲಗಿನಿಂದ ಸರ್ಕಾರದವರ ಮೇಲ್ವಿಚಾರಣೆಯ ಮೂಲಕ ನಡೆಯಿಸಲ್ಪಡುವಂತೆ ಏರ್ಪಾಡಾಗಿರುವ ಸಂಗತಿಯು ಸರ್ವ ವಿದಿತವೇ ಆಗಿದೆ. ಈಗ ಮ್ಯಾನೇಜಿಂಗ್‌ಕಮಿಟಿಯವರ ಮತ್ತೂ ಸ್ಥಾಪಕರಪರವಾಗಿಯೂ ಮ॥ ರಾ॥ ಬಿ. ಎಸ್. ಕೇಶವರಾಯಿಶೆಟ್ಟರವರು ಬಡ್ಡಿಯ ಮೊಬಲಗನ್ನು ತೆಗೆದು ಇದನ್ನು ನಡಿಸಲು ಅಧಿಕೃತರಾಗಿ ಸರಿಯಾದ ಸ್ಥಿತಿಯಲ್ಲಿ ನಡೆಯಿಸುತ್ತಿರುವರು. ಪ್ರಕೃತ ೬ ಜನ ಬ್ರಾಹ್ಮಣಬಾಲಕರೂ ೩ ಮಂದಿ ವೈಶ್ಯಬಾಲಕರೂ ಪೋಷಿಸಲ್ಪಡುತ್ತ ವಿದ್ಯಾಭ್ಯಾಸಹೊಂದುತ್ತಲಿರುವರು. ಇದಲ್ಲದೆ ಈ ಆಲಯಕ್ಕೆ ಸೇರಿದಂತೆಯೇ "ಶ್ರೀ ಉಪಾಸನಾಸಮಾಜ" ವೆಂಬ ಭಜನಾಕೂಟವು ಪ್ರತಿ ಶನಿವಾರ ಕ್ರಮವಾಗಿ ನಡೆಯಿಸಲ್ಪಡುತ್ತಿದೆ. ಈ ಆಲಯವನ್ನು ಪರಾಂಬರಿಸಲು ದಯಮಾಡಿಸಿದ ಮಹನೀಯರೆಲ್ಲರೂ ಒಂದು ವಾಚಕಶಾಲೆಯನ್ನೂ, ಪುಸ್ತಕಭಂಡಾರವನ್ನೂ ಏರ್ಪಡಿಸಿ, ತನ್ಮೂಲಕ ಅನಾಥಬಾಲಕರಿಗೂ, ಸಮಾಜದವರಿಗೂ ಅನುಕೂಲವನ್ನುಂಟುಮಾಡುವುದು ಉತ್ತಮವೆಂಬ ಸಲಹೆಗಳನ್ನು ಅನುಗ್ರಹಿಸಿರುವರು. ಈಗ ಮೂಲಧನಕ್ಕೆ ಸರ್ಕಾರದವರಿಂದ ಬರುತ್ತಲಿರುವ ಬಡ್ಡಿಯ ಮೊಬಲಗಿನಿಂದ ಪ್ರಕೃತ ಆಲಯದ ಖರ್ಚನ್ನು ನಿರ್ವಹಿಸಲು ಸಾಧ್ಯವಾಗದೆ ಯಿರುವುದರಿಂದ ಲೋಕೋಪಕಾರಿಗಳೂ ಉದಾರಿಗಳೂ ಆದ ವಿದ್ಯಾಭಿಮಾನಿಗಳು ತಂತಮ್ಮ ಶಕ್ತ್ಯನುಸಾರ ದ್ರವ್ಯಸಹಾಯ ಮಾಡಿ ಕೀರ್ತಿಭಾಜನರಾಗಬೇಕೆಂದು ಈ ಮೂಲಕ ಪ್ರಾರ್ಥಿಸುವ,

ಆನರರಿಸೆಕ್ರೆಟರಿ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್‌ಸಭೆಗೆ ತಾ॥ ೨೫-೧೦-೧೯೧೪ ರಿಂದ ೧೯-೨-೧೯೧೫ ರವರೆಗೆ ಲಗ್ನ ಮೊದಲಾದವುಗಳಿಂದ ಜಮಾಬಂದ ತಪ್ಸೀಲ್.

೧. ಮ॥ ರಾ॥ ಗಳಾದ ಎಡೆಹಳ್ಳಿ ಯಂ॥ ಶಾಂತಪ್ಪಶೆಟ್ಟರು ವೀರಪ್ಪಶೆಟ್ಟರು ಇವರಿಂದ ಜಮಾ ಇವರು ಎಡೆಹಳ್ಳಿಯಲ್ಲಿ ಧರ್ಮಸತ್ರ, ರೀಡಿಂಗ್‌ರೂಮ್, ಭಾವಿಗಳನ್ನು ಕಟ್ಟಿಸಿರುವುದನ್ನು ತಾ॥ ೧೯-೧-೧೯೧೫ ರಲ್ಲಿ ಶ್ರೀಮತ್ H. H ಯುವರಾಜರವರಿಂದ ಆರಂಭಸಮಾರಂಭ ಮಾಡಿಸಿದ ಕಾಲದಲ್ಲಿ ಫಂಡ್‌ಸಭೆಗೆ ಜ್ಞಾಪಕಾರ್ಥವಾಗಿ ಕೊಟ್ಟ ಬಾಬತು ೧೦-೦-೦, ೨. ಗುಬ್ಬಿ ಶೆಟ್ಟರ ಕಪ್ಪಣ್ಣಶೆಟ್ಟರ ಮೂಲಕ ನೆಟಗುಂಟೆ ವೀರಪ್ಪನವರ ಪುತ್ರಿಯವರ ಲಗ್ನಗಳಲ್ಲಿ ತೆಗೆದ ಬಾಬತು ೧೦-೦-೦, ೩. ಬೆಂಗಳೂರು ಅರಳೆಪೇಟೆ ದೇಶದಯಜಮಾನ ಬಸಪ್ಪನವರ ಮೂಲಕ ಅತ್ತಿಬೆಲೆ ಮಾದಪ್ಪನವರ ಮನೆಯಲ್ಲಿ ನಡೆದ ಬೆಂಗಳೂರು ಅಪ್ಪಯ್ಯಶೆಟ್ಟರ ಪುಟ್ಟಪ್ಪನವರ ಲಗ್ನದಲ್ಲಿ ಕನ್ಯಾಪರವಾಗಿ ಮಾದಪ್ಪನವರಿಂದ ವರನಪರವಾಗಿ ಅಪ್ಪಯ್ಯಶೆಟ್ಟರ ಹೊನ್ನಗಂಗಪ್ಪನವರಿಂದ ಬಂದದ್ದು ೫-೦-೦, ಬೆಂಗಳೂರು ಅರಳೆಪೇಟೆ ಅಂಗಡಿ ಪುಟ್ಟಣ್ಣನವರು ಮೈಸೂರು ದ್ಯಾವಪ್ಪನವರು ಇವರಿಂದ ಇವರ ಮನೆಲಗ್ನದಲ್ಲಿ ಬಂದದ್ದು ೫-೦-೦, ಬೆಂಗಳೂರು ಗಂಡಿಗೆ ಅಂಗಡಿ ಉಸ್ಕೂರು ಚನ್ನಬಸಪ್ಪನವರ ಮನೆಯಲ್ಲಿನ ನಿಷೇಕಪ್ರಸ್ತದಲ್ಲಿ ಬಂದದ್ದು ೨-೦-೦, ಬೆಂಗಳೂರು ದಂಡು ಪಂಡಿತ ಬಸವಲಿಂಗಪ್ಪನವರಿಂದ ಇವರ ಮನೆ ಲಗ್ನದಲ್ಲಿ ಬಂದದ್ದು ೨-೦-೦, ಬೆಂಗಳೂರು ಚಿಕ್ಕಪೇಟೆ ಚಿಕ್ಕಣ್ಣಯ್ಯನವರಿಂದ ಇವರ ನೂತನಗೃಹಪ್ರವೇಶಕಾಲದಲ್ಲಿ ಬಂದದ್ದು ೩-೦-೦, ಜುಮ್ಲಾ ೧೭-೦-೦, ೪. ಗುಂಡ್ಲುಪೇಟೆ ಗುರುಕಾರ್ ನಂಜಪ್ಪನವರ ಮೂಲಕ ಗುಂಡ್ಲುಪೇಟೆ ತಾ॥ ಕೆಲ್ಲಹಳ್ಳಿ ಪಟೇಲ್ ಚಿಕ್ಕಮಲ್ಲಪ್ಪನವರಿಂದ ಇವರ ಬಾಬತು ನೂತನ ಕೂಪಪ್ರತಿಷ್ಠಾಮಹೋತ್ಸವದಲ್ಲಿ ತೆಗೆದದ್ದು ೨-೦-೦, ೫. ತುಮಕೂರು ತಾ॥ ಬೆಳ್ಳಾವಿ ಮಂಡಿ ಗ. ವಿ. ಚನ್ನಪ್ಪನವರ ಮೂಲಕ ಬೆಳ್ಳಾವಿ ಮುರುಡಪ್ಪನವರ ಅಡಿವಪ್ಪನವರ ಲಗ್ನದಲ್ಲಿ ತೆಗೆದಬಾಬತು ೨-೦-೦, ನಾಮು ಗುಂಡ್ಲು ರುದ್ರಣ್ಣನವರ ಲಗ್ನದಲ್ಲಿ ತೆಗೆದ ಬಾಬತು ೨-೦-೦ ತಾವರೆಕೆರೆ ಕಿಡಿ ಬಸಪ್ಪನವರ ಲಗ್ನದಲ್ಲಿ ತೆಗೆದಬಾಬತು ೨-೦-೦, ಜುಮ್ಲಾ ೬-೦-೦, ೬. ಬೆಂಗಳೂರು ಜವಳಿಅಂಗಡಿ ಜಿ. ಸಿದ್ದೀರಪ್ಪನವರ ಮೂಲಕ ಬೌರಿಂಗ್‌ಪೇಟೆ ಕಗ್ಗದಾಸ್ ನಂಜಪ್ಪನವರಿಂದ ಇವರ ಪುತ್ರೀ ವಿವಾಹಕಾಲದಲ್ಲಿ ತೆಗೆದ ಬಾಬತು ೧೦-೦-೦, ಜುಮ್ಲಾ ೫೫-೦-೦ ರೂಪಾಯಿ.

ಜಿ. ಕೆ. ರುದ್ರಾರ್ಯ, ಆಕ್ಟಿಂಗ್ ಸೆಕ್ರಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ
ಫಂಡ್ ಸಭೆ, ಬೆಂಗಳೂರು.

ತುಮಕೂರು ಡಿ॥ ಸಿರಾ ತಾ॥ ಪಂಜಿಗನಹಳ್ಳಿ.

ಸಿರಾ ತಾಲ್ಲೋಕು ಕಸಬಾ ಸಮ್ಮತು ಪಂಜಿಗನಹಳ್ಳಿ ಗ್ರಾಮದಲ್ಲಿ ಈವರೆಗೂ ಒಂದು ಶಿವಾಲಯವಿಲ್ಲದೆ ಯಿದ್ದುದು ಬಹಳ ವಿಷಾದಕರವಾಗಿತ್ತು. ಇಲ್ಲಿನ ಮಹನೀಯರುಗಳು ಇದನ್ನು ತಿಳಿದು ಈಗ್ರಾಮದಲ್ಲಿ ನವೀನವಾಗಿ ಶಿವಾಲಯವನ್ನು ಕಟ್ಟಿಸಿದರು. ಅನಂತರ ಪ್ರತಿಷ್ಠೆ ಮಾಡಿಸುವುದಕ್ಕೆ ಚಂಗಾವಾರದ ಮಠದ ಶ್ರೀ ಶಂಕರಪ್ಪಯ್ಯನವರು ಮ॥ ವಿ. ಜಯಪ್ಪನವರ ಪುತ್ರ ವಿರುಪಣ್ಣನವರು ಮ॥ ಗಿರಿಯಪ್ಪನವರು ಮ॥ ಸೆಟ್ಟಿ ಲಿಂಗಪ್ಪನವರು ಮ॥ ಯರಗುಂಟಪ್ಪನವರು ಮ॥ ಮುರಿಗಪ್ಪನವರು ಮ॥ ಗುಡ್ಲು ಮಲ್ಲಪ್ಪನವರು ಮ॥ ಡಿ॥ ಲಿಂಗಪ್ಪನವರು ಮ॥ ಜುಂಜೇಗೌಡರು ಇವರುಗಳು ಈ ನೂತನ ಶಿವಾಲಯದ ಪ್ರತಿಷ್ಠೆಗಾಗಿ ಅನೇಕಕಡೆಯಿಂದ ಬರತಕ್ಕ ಪಟ್ಟಚರಮೂರ್ತಿಗಳು ಭಕ್ತಮಾಹೇಶ್ವರರುಗಳನ್ನು ಗೌರವಿಸಲು ಕಂಕಣಬದ್ಧರಾಗಿ ನಿಂತಿದ್ದರು. ಈ ನೂತನಕಾರ್ಯಕ್ಕೆ ಶಿರಾದೈವದವರು ಮಡಕಶಿರಾ ಮದ್ದಗಿರಿ ಹಿರಿಯೂರು ಗುಬ್ಬಿ ಚಳ್ಳಕೆರೆ ಚಿಕ್ಕನಾಯ್ಕನಹಳ್ಳಿ ಈ ತಾಲ್ಲೋಕುಗಳಿಂದ ಪಟ್ಟಚರಮೂರ್ತಿಗಳೂ ಭಕ್ತಮಾಹೇಶ್ವರರು ಸಹ ದಯಮಾಡಿಸಿದ್ದರು. ಮತ್ತೂ ತಾವರಗೆರೆ ನಂದಿಧ್ವಜವು ಚಂಗಾವಾರದ ನಂದಿಧ್ವಜವು ಮುದ್ರೆಗಳಿಂದ ಈ ತಾರೀಖು ೧ ನೆ ಮಾಘ ಬ॥ ೧ ಸೋಮವಾರ ೧೦ ಘಂಟೆಗೆ ಆಗಮಿಸಿದರು. ನಂತರ ಚೇಳೂರು ಗವಿಮಠದ ಗವಿಸ್ವಾಮಿಗಳು ಕ್ರಿಯಾಮೂರ್ತಿಗಳಾಗಿಯೂ ವೇ॥ ಅಳಲಗಟ್ಟದ ಚನ್ನಬಸವಶಾಸ್ತ್ರಿಗಳು ಮದಲೂರು ಉಂಡೆ ಮಠದ ಪಟ್ಟಾಧ್ಯಕ್ಷ ರುದ್ರದೇವರು ಆಗಮಿಕರಾಗಿಯೂ ಆಗಮಿಸಿದ್ದರು. ಅಭಿಜಿನ್ಮುಹೂರ್ತದಲ್ಲಿ ಸ್ವಸ್ತಿವಾಚನವೇ ಮೊದಲಾಗಿ ೧೦-೩-೪ ವರೆಗೂ ಪ್ರತಿಷ್ಠಾಂಗವಾದ ಕಾರ್ಯಗಳನ್ನು ನಡಿಸಿದರು. ಬ॥ ೫ ಗುರುವಾರ ೧೦-೫ ರ ಲಾಗಾಯ್ತು ೧೩-೫ ಘಳಿಗೆಯಲ್ಲಿಸಲ್ಲುವ ಮೇಷಲಗ್ನದಲ್ಲಿ ಶ್ರೀ ಚಂದ್ರಮೌಳೀಶ್ವರ ಪ್ರತಿಷ್ಠೆ ಚರವಿಗ್ರಹಪ್ರತಿಷ್ಠೆ ನಂದಿಧ್ವಜಪ್ರತಿಷ್ಠೆ ಮೊದಲಾದ ಕಾರ್ಯಗಳನ್ನು ಸಮಾಪ್ತಿಗೊಳಿಸಿದರು. ತಾ॥ ಭೃಗುವಾರ ಮಹಾಗಣಾರಾಧನೆ ನಡೆದು ನೆರೆದಿದ್ದ ಭಕ್ತಮಾಹೇಶ್ವರರಿಗೆ ತಾಂಬೂಲ ಸಮಾರಂಭ ನಡೆಯುವ ಕಾಲದಲ್ಲಿ ಮ॥ ಉ॥ ಪ॥ ರುದ್ರದೇವರು ವಿದ್ಯಾಭಿವೃದ್ಧಿ ಫಂಡಿಗೂ ಈ ವೀರಶೈವ ಮತಕ್ಕೆ ತನುಮನೋಧನಗಳನ್ನು ಸೂರೆಮಾಡಿ ಕೈಲಾಸವಾಸಿಗಳಾಗಿರುವ ವೀರಸಂಗಪ್ಪನವರ ಜ್ಞಾಪನಾರ್ಥವಾಗಿ ತಾಂಬೂಲವನ್ನು ತೆಗೆಯಬೇಕೆಂತ ಸೂಚಿಸಿದ ಮೇರೆಗೆ ಫಂಡಿಗೆ ೫ರೂ. ತಾಂಬೂಲಕ್ಕೆ ೧ ರೂ. ಜುಮ್ಲಾ ೬ ರೂಪಾಯಿ ಮ॥ ಉ॥ ರುದ್ರದೇವರ ವಶಕ್ಕೆ ಕೊಡಲ್ಪಟ್ಟಿತು. ನಂತರ ರಾತ್ರಿ ೧೦ ಘಂಟೆವರೆಗೂ ಚಂದ್ರಮೌಳೀಶ್ವರಸ್ವಾಮಿ ಉತ್ಸವವು ಸ್ಥಲದ ಧ್ವಜ-ಪೇಟಿ ಧ್ವಜಗಳಿಂದಲೂ ವಾದ್ಯಘೋಷಗಳಿಂದಲೂ ಬಹಳ ವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು. ಈ ಮಹತ್ಕಾರ್ಯವನ್ನು ಇದರಂತೆ ಮುಂದೆಯೂ ಸಾಂಗವಾಗಿ ನಡಿಸುವುದಕ್ಕೆ ಮೇಲಿನಮೂದಿರುವ ಮಹನೀಯರುಗಳಿಗೆ ಶ್ರೀಚಂದ್ರಮೌಳೀಶ್ವರನು ಆಯುರಾರೋಗ್ಯವನ್ನು ಕೊಟ್ಟು ಕಾಪಾಡಬೇಕೆಂದು ಪ್ರಾರ್ಥಿಸುತ್ತೇವೆ.

ಕಿತ್ತೂರು.

ಮುಂಬಯಿ ಇಲಾಖೆಯ ಡಾಯರೆಕ್ಟರ ಸಾಹೇಬ ಬ॥ ರವರಾದ ಮೆ॥ ಶಾರ್ಪದೊರೆಗಳವರು ನಮ್ಮ ಕಿತ್ತೂರ ಕನ್ನಡ ೧ ನೇ ನಂಬರ ಶಾಲೆಯನ್ನು ನೋಡುವುದಕ್ಕಾಗಿ ತಾ॥ ೧೧-೨-೧೯೧೫ ನೆಯ ಗುರುವಾರ ಮುಂಜಾನೆ ೯॥ ಘಂಟೆಯ ಸುಮಾರಕ್ಕೆ ಮೊಟಾರಕಾರದಿಂದ ದಯಮಾಡಿಸಿದರು. ಧಾರವಾಡ ಬೆಳಗಾವ ರಸ್ತೆಯಿಂದ ಶಾಲೆಯವರೆಗೆ ಧ್ವಜಪತಾಕೆಗಳು ದೊರೆಗಳವರ ಆಗಮನ ಮಾರ್ಗವನ್ನು ತೋರಿಸುತ್ತಿದ್ದವು. ಪೋಲೀಸ ಅಧಿಕಾರಿಗಳು ಅಲ್ಲಲ್ಲಿಗೆ ಮಾರ್ಗದಲ್ಲಿ ಫುಲ್‌ಡ್ರೆಸ್ಸುಗಳಿಂದ ತಮ್ಮ ಭದ್ರತೆಯ ಕಾರ್ಯದಲ್ಲಿ ದಕ್ಷರಾಗಿ ನಿಂತಿದ್ದರು. ತಳಿರ್ತೋರಣ ರಂಭಾಸ್ತಂಭ ಧ್ವಜಪತಾಕೆಗಳಿಂದಲೂ, ಭವ್ಯವಾದ ಕಮಾನುಗಳಿಂದಲೂ, ಚಿತ್ರಪಟಗಳಿಂದಲೂ, ಕನ್ನಡಿಗಳಿಂದಲೂ, ಕಲಾಕೌಶಲ್ಯದೊಡವೆಗಳಿಂದಲೂ, ಪೂಮಾಲೆಗಳಿಂದಲೂ ಶಾಲೆಯು ಹಿಂದೆ ಎಂದೂ ಹೊಂದದೆ ಇದ್ದಂಥ ವಿಶೇಷತರದ ಶೋಭೆಯಿಂದ ಅಲಂಕೃತವಾಗಿತ್ತು. ದೊರೆಗಳವರ ಆಗಮನವಾದ ಕೂಡಲೆ ವಿದ್ಯಾರ್ಥಿಗಳ ಕರತಾಡನರವದಿಂದ ಆನಂದಪ್ರದರ್ಶನ ಮಾಡಲ್ಪಟ್ಟಿತು. ಸಭೆಗೆ ಅ॥ ಡೆಪುಟಿ ಇನ್ಸ್‌ಪೆಕ್ಟರರಾದ ರಾವಸಾ॥ ಆರ್. ಎಸ್. ಮನೋಳಿಯವರೂ, ಪೋಲೀಸ ಸಬ್‌ಇನ್ಸ್‌ಪೆಕ್ಟರರೂ, ಸ್ಕೂಲ ಕಮಿಟಿದಾರರೂ, ಇನ್ನೂ ಅನೇಕ ಸಭ್ಯಗೃಹಸ್ಥರು ದಯಮಾಡಿಸಿದ್ದರು. ಯೋಗ್ಯ ಆಸನದಲ್ಲಿ ದೊರೆಗಳವರು ವಿಶ್ರಮಿಸಿದೊಡನೆ ಕಾರ್ಯಕ್ರಮಕ್ಕನುಸರಿಸಿ ಆರಂಭಕ್ಕೆ ಸ್ವಾಗತಪದವೂ, ವಿದ್ಯಾರ್ಥಿಗಳ ಸಂಭಾಷಣಗಳೂ, ದೊರೆಗಳವರ ಅಭಿನಂದನಪರಪದವೂ ಚೆನ್ನಾಗಿ ಹೇಳಲ್ಪಟ್ಟನಂತರ ಮೆ॥ ರವರು ಎದ್ದು ಎಲ್ಲ ಕ್ಲಾಸುಗಳಿಗೂ ಹೋಗಿ ಅಲ್ಲಿಯ ವ್ಯವಸ್ಥೆಯನ್ನು ನೋಡಿ, ೬-೭ ಇಯತ್ತೆಗಳ ವಿದ್ಯಾರ್ಥಿಗಳ ಜಾತಿಗಳನ್ನೂ, ಆಯಾವಿದ್ಯಾರ್ಥಿಗಳ ತಂದೆಗಳು ಮಾಡುತ್ತಿರುವ ಉದ್ಯೋಗಗಳನ್ನೂ ವಿಚಾರಿಸಿದರು. ಅಲ್ಲಿ ತಯಾರಿಸಲ್ಪಟ್ಟಿದ್ದ ಶಿಕ್ಷಣದ(ಶಾಸ್ತ್ರೀಯವಿಷಯದ) ಉಪಕರಣಗಳನ್ನು ನೋಡಿ ಆನಂದಪಟ್ಟರು. ಒಕ್ಕಲಿಗನ ಮಗನಾದ ೧೨-೧೩ ವರ್ಷ ವಯಸ್ಸುಳ್ಳ ಒಬ್ಬ ವಿದ್ಯಾರ್ಥಿಯು ೭ ನೇ ಇಯತ್ತೆಯಲ್ಲಿ ಇದ್ದುದನ್ನು ಕಂಡು ಮೆ॥ ರವರು ಆ ಹುಡುಗನ ಹತ್ತರ ಹೋಗಿ ಪ್ರೇಮದೃಷ್ಟಿಯಿಂದ ಅವನ ಗಲ್ಲಗಳನ್ನು ಹಿಡಿದು ಬೆನ್ನ ಮೇಲೆ ಚಪ್ಪರಿಸಿದರು. ಇದರ ಮೇಲಿಂದ ವಿದ್ಯೆಯಲ್ಲಿ ಹಿಂದುಳಿದ ಜನಾಂಗವನ್ನು ಮುಂದೆ ತರುವ ಬಗ್ಗೆ ದೊರೆಗಳವರ ಅಭಿಲಾಷೆಯು ಎಷ್ಟು ಜಾಗ್ರತವಾಗಿರುತ್ತದೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಶಾಲೆಯ ಸ್ಥಿತಿಗತಿ ಶಿಕ್ಷಣಾದಿಗಳ ಅವಲೋಕನವಾದನಂತರ ಕಡೆಗೆ ಹಾರ ತುರಾಯಿ ಪರಿಮಳ ತಾಂಬೂಲಗಳ ಸಮಾರಂಭವಾದನಂತರ ಶ್ರೀ ಪಂಚಮಜಾರ್ಜ ಬಾದಶಹರವರ ಹೆಸರಿನಿಂದ ತ್ರಿವಾರ ಜಯಘೋಷವಾಗಿ ಸಭಾವಿಸರ್ಜನವಾಯಿತು. ಬಳಿಕ ಮೆ॥ ರವರ ಹಾಗೂ ರಾವಸಾ॥ ಡೆಪ್ಯೂಟಿ ಇನಸ್ಪೆಕ್ಟರರ ಮತ್ತು ಮಾಸ್ತರ ಜನರ ಫೋಟೋ ತೆಗೆದುಕೊಳ್ಳಲ್ಪಟ್ಟಿತು. ಭೋಜನಾನಂತರ ಮೆ॥ ರವರು ೨-೩ ತಾಸು ಶಾಲೆಯಲ್ಲಿಯೇ ವಿಶ್ರಮಿಸಿದರು. ವೇಳೆಯ ಅನನುಕೂಲತೆಯ ಮೂಲಕ ದೊರೆಗಳವರಿಗೆ ಉಳಿದ ಶಾಲೆಗಳನ್ನು ನೋಡುವ ಅವಕಾಶವಾಗಲಿಲ್ಲ. ಬಳಿಕ ೧ ಘಂಟೆಯ ಸುಮಾರಕ್ಕೆ ಮೆ॥ ರವರು ಮೋಟಾರಕಾರದಲ್ಲಿ ಮಂಡಿಸಿ ಪ್ರಯಾಣಾಭಿಮುಖರಾದರು. ಕೂಡಲೆ ವಿದ್ಯಾರ್ಥಿಗಳು ಮಾಡುವ ಪುಷ್ಪವೃಷ್ಟಿಯಲ್ಲಿಯೂ, ಜಯಜಯಕಾರದಲ್ಲಿಯೂ ಮೋಟಾರಕಾರವು ವೇಗದಿಂದ ಸಾಗಿತು. ಇಂಥ ಶಾಲೆಗಳಿಗೆ ಮಹನೀಯರ ಆಗಮನವಾಗುವದೆಂದರೆ ಬಡವರ ಮನೆಗೆ ಭಾಗ್ಯದೇವತೆಯು ಬಂದಂತೆಯೇ ಸರಿ.

ಪ್ರತ್ಯಕ್ಷದರ್ಶಿ.

ದವೂ ಜರ್ಮನರು ಇಂಥ ತಮ್ಮ ಮೋಸಗಾರಿಕೆಯ ವ್ಯಾಪಾರವನ್ನು ನಡೆಯಿಸುತ್ತಿರುವರೆಂಬ ಸಂದೇಹದಿಂದ, ಅಲ್ಲಿಂದ ಹೊರಕ್ಕೆ ಸಾಗಿಹೋಗುವ ಸಾಮಗ್ರಿಗಳನ್ನು ಕೂಡ ಶೋಧಿಸಿ ಕಳುಹುವಂತಾಗಿದೆ. ಸೈನಿಕಾಲಯ ಮೊದಲಾದವುಗಳಿಗೂ, ವೈದ್ಯದಕೆಲಸಕ್ಕೂ ಈಗ ಗಾಜಿನ ಅವಶ್ಯಕತೆಯು ಬಹಳವಾಗಿದೆ. ಅದುಕಾರಣ ಗ್ರೇಟ್‌ಬ್ರಿಟನ್ನಿನಲ್ಲಿ ನಿರ್ಮಿಸಲ್ಪಡುವ ಗಾಜೆಲ್ಲಾ ಅಲ್ಲಿಗೇ ಸಾಕುಸಾಲದಂತಾಗಿಹೋಗುತ್ತಿದೆ. ಈ ಕಾರಣದಿಂದ ಗಾಜಿನ ಬೆಲೆಯು ಒಂದಕ್ಕೆರಡರಷ್ಟಾಗಿದೆ. ಫ್ರಾನ್ಸ್ ದೇಶದಲ್ಲಿರುವ ಗಾಜಿನ ಕಾರ್ಯಾಲಯಗಳೆರಡು ರಣರಂಗದಲ್ಲಿ ಸಿಕ್ಕಿಹೋಗಿರುವುದರಿಂದ ಅಲ್ಲಿಂದಲೂ ಗಾಜಿನ ಸಾಮಗ್ರಿಗಳು ಹೊರಕ್ಕೆ ಸಾಗಿಬರುವಂತಿಲ್ಲ. ಅದುಕಾರಣ ಸದ್ಯದ ಪರಿಸ್ಥಿತಿಯಲ್ಲಿ ಗಾಜಿನ ಬೆಲೆಯು ಇಳಿಯುವುದಕ್ಕೆ ಮಾರ್ಗವಿಲ್ಲದಂತೆಯೇ ಕಾಣುತ್ತದೆ.

ಆ॥ ಗೋಖಲೆಯವರ ಅಂತ್ಯ.

ಪೂನಾನಗರಕ್ಕೆ ಶ್ರೀಮಾನ್ ಗಂಧಿಯವರು ದಯಮಾಡಿಸಿದ್ದುದರಿಂದ ಅವರ ಗೌರವಾರ್ಥವಾಗಿ ಆ॥ ಗೋಖಲೆಯವರು ಕಳೆದ ತಾ॥ ೧೩ನೆಯ ಶನಿವಾರ ಸಾಯಂಕಾಲ ಒಂದು ಔತಣವನ್ನೇರ್ಪಡಿಸಿದ್ದರು. ಆಗಲೇ ಶ್ರೀಮಾನ್ ಗೋಖಲೆಯವರಿಗೆ ಹೃದಯದೌರ್ಬಲ್ಯದಿಂದ ಕೂಡಿದ ಉಬ್ಬಸದ ರೋಗವು ಕಾಣಿಸಿಕೊಂಡಿತು. ಈ ರೋಗದಿಂದ ಅವರು ಆಗಾಗ್ಗೆ ಶ್ರಮಪಡುತ್ತಲೇ ಇದ್ದರು. ಆ ದಿನದ ಔತಣದ ಸಮಯಕ್ಕೆ ಗೋಖಲೆಯವರು ಬಹಳ ಪ್ರಯಾಸದಿಂದ ಬಂದಿದ್ದರು. ಅಲ್ಲಿಂದೀಚೆಗೆ ರೋಗವು ಹೆಚ್ಚುತ್ತಲೂ, ತಗ್ಗುತ್ತಲೂ ಇದ್ದಿತು. ಕಡೆಗೆ ಬಲುಬೇಗನೆ ಅಪಾಯಕರವಾದ ಸ್ಥಿತಿಗೆ ಬಂದಿತು. ಆ ಮಧ್ಯೆ ಬುಧವಾರದದಿವಸ ಸ್ವಲ್ಪ ಸ್ವಸ್ಥತೆಯು ತೋರಲು, ಆ ದಿನವೂ ಗೋಖಲೆಯವರು ೮ ಗಂಟೆಯಕಾಲ ಕೆಲಸಮಾಡಿದರು. ಬಳಿಕ ಮತ್ತೆ ರೋಗವು ಮರುಕಳಿಸಿಕೊಂಡಿತು. ವೈದ್ಯರು ಮಾಡಬೇಕಾದ ಚಿಕಿತ್ಸೆಯನ್ನೆಲ್ಲಾ ಅತಿಶಯವಾಗಿ ಮಾಡಿದರು. ಆದರೂ ಗುಣಮುಖವು ತೋರಲಿಲ್ಲ. ಗುರುವಾರ ಸಾಯಂಕಾಲವೇ ತಮಗೆ ಅವಸಾನದಶೆಯು ಪ್ರಾಪ್ತವಾಯಿತೆಂಬುದನ್ನು ಗೋಖಲೆಯವರು ತಿಳಿದುಕೊಂಡರು. ತಾವು ಕೆಲಸಮಾಡುತ್ತಿದ್ದ ರಾಯಲ್‌ಕಮಿಷನ್ನಿನ ವಿಷಯವನ್ನು ಕುರಿತೂ ಹಿಂದೂದೇಶ ಸೇವಕಸಂಘವನ್ನು ಕುರಿತೂ ಅವರು ಆಗಲೂ ಸಮೀಪದಲ್ಲಿದ್ದವರೊಡನೆ ವಿಶೇಷವಾಗಿ ಮಾತನಾಡುತ್ತಲೇ ಇದ್ದರು. ತಾವು ಆರಂಭಿಸಿರುವ ದೇಶೋಪಕಾರಕಾರ್ಯಗಳನ್ನು ಕೊನೆಮುಟ್ಟಿಸಬೇಕೆಂದು ದೇಶಸೇವಕಸಂಘದವರೆಲ್ಲರನ್ನೂ ಕೋರಿಕೊಂಡರು. ಕಡೆಗಾಲದಲ್ಲಿ ಅವರ ಮಿತ್ರರೆಲ್ಲರೂ ಅವರಸುತ್ತಲೂ ಸುತ್ತಿಕೊಂಡೇ ಕುಳಿತಿದ್ದರು. ಇನ್ನು ಕಾಲುಗಂಟೆಯಲ್ಲಿ ಪ್ರಾಣವು ಹೋಗಲಿಕ್ಕಿರುವಾಗ ಅವರು ಆ ತಮ್ಮ ಮಿತ್ರಬೃಂದದವರೆಲ್ಲರನ್ನೂ ಒಬ್ಬೊಬ್ಬರನ್ನಾಗಿ ಹೆಸರುಹಿಡಿದು ಕೂಗಿ, ತಮ್ಮ ಸ್ವರ್ಗಲೋಕಪ್ರಯಾಣಕ್ಕೆ ಅನುಮತಿಯನ್ನು ಕೇಳಿದರು. ಕಡೆಗೆ ೧೯ ನೆಯ ತಾ॥ ಶುಕ್ರವಾರ ರಾತ್ರಿ ೧೦। ಗಂಟೆಗೆ ಪರಮಶಾಂತಸ್ಥಿತಿಯಿಂದ ಪಾರ್ಥಿವ ಶರೀರವನ್ನು ತ್ಯಜಿಸಿದರು. ಮರುದಿನ ಬೆಳಗಿನಿಂದಲೂ ಆ ಮಹನೀಯರ ಅಂತ್ಯದರ್ಶನವನ್ನು ಮಾಡುವುದಕ್ಕಾಗಿ ಸಾವಿರಾರು ಪ್ರಜೆಗಳು, ಅವರು ಸ್ಥಾಪಿಸಿದ್ದ ಹಿಂದೂದೇಶ ಸೇವಕಸಂಘಭವನಕ್ಕೆ ಬಂದು ಸೇರುತ್ತಿದ್ದರು. ಹಾಗೆ ಬಂದು ಹೋದವರೊಳಗೆ ಸರ್ ರಾಮಕೃಷ್ಣ ಭಂಡಾರ್ಕರ್‌ರವರು, ಆ॥ ಚೌಬಲರವರು, ಸರ್ದಾರ್ ನೌರೋಜಿಪದಮ್‌ರವರು, ಸ್ವರ್ಗವಾಸಿ ರಾನಡೆಯವರ ಧರ್ಮಪತ್ನಿಯವರು, ಆ॥ ಪ್ರಿನ್ಸಿಪಾಲ್ ಪರಂಜಪೆಯವರು, ಬಾಲಕರಾಮ್ ಐ. ಸಿ. ಎಸ್‌ರವರು, ಪರ್ಗ್ಯುಸನ್ ಕಳಾಶಾಲೆಯ ಪಂಡಿತರುಗಳು, ದಕ್ಕನ ಕಳಾಶಾಲೆಯ ಪಂಡಿತರುಗಳು, ವ್ಯವಸಾಯಕಲಾಶಾಲೆಯ ಅಧ್ಯಾಪಕರುಗಳು, ಪುನಾಪುರಪಾಲಕಸಂಘದ ಸಭ್ಯರುಗಳು, ಸೇವಾಸದನದ ಮಹಿಳೆಯರು, ಎಲ್ಲಾ ಪಾಠಶಾಲೆಗಳ ಅನೇಕ ವಿದ್ಯಾರ್ಥಿಗಳು, ಮುಖ್ಯಮುಖ್ಯ ವರ್ತಕರುಗಳು, ಇವರೆಲ್ಲಾ ಆ ಮಂದಿರದಲ್ಲಿ ಕೂಡಿದ್ದರು. ಸಿಹ್ಮಗಡದಲ್ಲಿದ್ದ ಶ್ರೀಮಾನ್ ಬಾಲಗಂಗಾಧರ ತಿಲಕರವರು ಕೂಡ ಈ ಆಕಸ್ಮಿಕವಾದ ಸುದ್ದಿಯನ್ನು ಕೇಳಿದಕೂಡಲೇ ಅಪರಕರ್ಮಕಾಲಕ್ಕೆ ಬಂದು ಸೇರಿದರು. ಎಚ್ ಎಚ್ ಆಗಾಖಾನರೇ ಮೊದಲಾದ ಅನೇಕ ಘನಪುರುಷರು ಮಾಲಿಕೆಗಳನ್ನು ಕಳುಹಿಸಿಕೊಟ್ಟರು. ಶನಿವಾರ ಮಧ್ಯಾಹ್ನ ಅಂತ್ಯಕರ್ಮವು ನಡೆಯುವುದಕ್ಕೆ ಏರ್ಪಡಿಸಲ್ಪಟ್ಟಿದ್ದಿತು. ಶವವನ್ನು ಹಗಲು ೧ಗಂಟೆಗೆ ಮಂದಿರದಿಂದ ಹೊರಕ್ಕೆ ಹೊರಡಿಸಬೇಕೆಂದು ನಿರ್ಧರಿಸಲ್ಪಟ್ಟಿದ್ದರೂ ೧॥ ಗಂಟೆಯವರೆಗೂ ಹೊರಡಿಸಲು ಸಾಧ್ಯವಾಗಲಿಲ್ಲ. ೨೦ ಸಾವಿರಕ್ಕೆ ಮಿಗಿಲಾಗಿಯೇ ಜನಸ್ತೋಮವು ಸೇರಿಬಿಟ್ಟಿತು. ಅಷ್ಟುಜನರೂ ಶವದಜತೆಯಲ್ಲಿ ಸ್ಮಶಾನಕ್ಕೆ ಹೊರಟರು. ಸ್ಮಶಾನವನ್ನು ಸೇರುವುದರಲ್ಲಿ ೨। ಗಂಟೆಯಾಯಿತು. ಬೀದಿಯುದ್ದಕ್ಕೂ ಪ್ರಜಾಸ್ತೋಮವು ಕಿಕ್ಕಿರಿದು ನಿಂತು ನೋಡಿ ಕಣ್ಣೀರು ಸುರಿಸುತ್ತಿದ್ದಿತು. ಶವದಜತೆಯಲ್ಲಿ ಹೋಗುತ್ತಿದ್ದವರ ಬೀದಿಗಳಲ್ಲಿ ನಿಂತು ನೋಡುತ್ತಿದ್ದವರ ಬಾಯಲ್ಲೆಲ್ಲಾ ಮೃತಪುರುಷರ ಸಾದ್ಗುಣ್ಯಾಘನತೆಯ ಪ್ರಸ್ತಾಪದ ಹೊರತು ಮತ್ತೊಂದಿರಲಿಲ್ಲ. ಸ್ಮಶಾನದಲ್ಲಿ ಪ್ರೊ॥ ದೇವಧರ್‌ರವರೂ, ಡಾ॥ ಭಂಡಾರ್ಕರ್‌ರವರೂ, ಶ್ರೀಮಾನ್ ತಿಲಕರವರೂ ಮೃತಮಹನೀಯರ ಗುಣಾತಿಶಯಗಳನ್ನು ಕುರಿತು ಚಿಕ್ಕಚಿಕ್ಕ ಉಪನ್ಯಾಸಗಳನ್ನು ಮಾಡಿದರು. ಗೋಖಲೆಯವರ ಜೀವಿತಚರಿತ್ರದ ಮುಖ್ಯಾಂಶಗಳನ್ನೆಲ್ಲಾ ಡಾ॥ ಭಂಡಾರ್ಕರ್‌ರವರು ವಿವರಿಸಿದರು. ಬಳಿಕ ಅಂತ್ಯಕ್ರಿಯೆಯು ಯಥಾವಿಧಿಯಾಗಿ ಜರುಗಿತು. ಆ ದಿವಸ ಪೂನಾನಗರದ ಎಲ್ಲಾ ಪಾಠಶಾಲೆಗಳೂ, ಕಲಾಶಾಲೆಗಳೂ, ಸರ್ಕಾರದ ಕಾರ್ಯಾಲಯಗಳೂ, ಮ್ಯುನಿಸಿಪಲ್ ಆಫೀಸುಗಳೂ, ವರ್ತಕಸಂಘಗಳೂ ಸಹ ಮೃತರ ಗೌರವಾರ್ಥವಾಗಿ ಮುಚ್ಚಲ್ಪಟ್ಟಿದ್ದವು. ದುಃಖೋಪಶಮನ ತಂತೀವಾರ್ತೆಗಳು ಎಲ್ಲದಿಕ್ಕುಗಳಿಂದಲೂ ಗೋಖಲೆಯವರ ಕುಟುಂಬದವರಿಗೂ, ಹಿಂದೂದೇಶ ಸೇವಕಸಂಘದವರಿಗೂ ಬಂದು ಸುರಿದುವು. ಈ ಮಹಾಪುರುಷರ ಮೃತಿಯಿಂದ ಅವರ ಯೋಗ್ಯತಾವಿಷಯ ಪರಿಚಯವುಳ್ಳ ಭಾರತೀಯರೆಲ್ಲರೂ ವಿಶೇಷವಾಗಿ ದುಃಖಿಸುತ್ತಿರುವರು. ಅವರ ಕುಟುಂಬದಲ್ಲಿ ಈ ವಿಯೋಗದುಃಖಭರವನ್ನು ಹೊರಲು ಇನ್ನೂ ಮದುವೆಯಾಗದಿರುವ ಅವರ ಇಬ್ಬರು ಪುತ್ರಿಯರೂ, ಅವರ ಸಹೋದರರ ಜ್ಯೇಷ್ಠಕುಟುಂಬವೂ ಸಹ ಇರುವರು. ಈ ಮಹಾಶಯರಿಗೆ ಪತ್ನೀವಿಯೋಗವಾಗಿ ೮-೧೦ ವರ್ಷಗಳಾಯಿತು. ಈಚೆಗೆ ಬೇರೆ ಲಗ್ನವನ್ನು ಮಾಡಿಕೊಳ್ಳಲಿಲ್ಲ. ದೇಶೋಪಕೃತಿಯೇ ಆ ಮಹಾಪುರುಷರಿಗೆ ಮುಖ್ಯ ಕುಟುಂಬಕಾರ್ಯವಾಗಿದ್ದಿತು.

ಭರತಖಂಡದ ವೃತ್ತಾಂತ.

ಬಂಗಾಳದಲ್ಲಿ ಈ ವರ್ಷ ಒಟ್ಟು ೩೪೧೧೦೦ ಬೇಲುಗಳ ಹತ್ತಿಯು ಬೆಳೆಯುವುದೆಂದು ನಿರೀಕ್ಷಿಸಲ್ಪಟ್ಟಿದೆ. ಕಳೆದ ವರ್ಷ ೩೩೧೧೦೦ ಬೇಲುಗಳ ಉತ್ಪತ್ತಿಯಾಗಿದ್ದಿತು.

ವೈಸ್ರಾಯರು ಬರುವ ಮಾರ್ಚಿ ತಿಂಗಳ ಮೊದಲವಾರದಲ್ಲಿ ಕಲ್ಕತ್ತಾಕ್ಕೆ ದಯಮಾಡಿಸುವರು. ಆಗ್ಗೆ ಅಲ್ಲಿನ ಸಾರಾಸೇತು ಸ್ಥಾಪನ, ಲಾರ್ಡ್‌ರಿಪ್ಪನ್ ಲಾರ್ಡ್‌ಮಿಂಟೋರವರ ಪ್ರತಿಮಾಪ್ರಕಾಶನ ಮೊದಲಾದ ಕಾರ್ಯಗಳನ್ನು ನಡೆಯಿಸಿ ತಾ॥ ೫ ಸಾಯಂಕಾಲ ದಿಲ್ಲಿಗೆ ತೆರಳುವರು.

ಈಗ ಭರತಖಂಡಕ್ಕೆ ಸಕ್ಕರೆಯು ಸಾಕಾದಷ್ಟು ಬರದೆ ಇರುವುದರಿಂದ ಅದರ ಬೆಲೆಯು ವಾರವಾರಕ್ಕೆ ಹೆಚ್ಚುತ್ತಿದೆ. ಅದರಮೇಲೆ ಈಗ ಈಜಿಪ್ಟಿನಿಂದ ಭರತಖಂಡಕ್ಕೆ ಸಕ್ಕರೆಯು ಸಾಗಿಬರುತ್ತಿದೆ. ಇದರಮೇಲೆ ಸರ್ಕಾರದವರು ೧ ಹಂಡ್ರೆಡ್‌ವೇಟಿಗೆ ೯॥ ರೂ. ನಂತೆ ಸುಂಕವನ್ನು ವಿಧಿಸಿದ್ದಾರೆ.

ಹುಚ್ಚುನಾಯಿಗಳಿಂದ ಕಡಿಯಲ್ಪಟ್ಟವರಿಗೆ ಚಿಕಿತ್ಸೆಯನ್ನು ನಡೆಯಿಸುವುದಕ್ಕಾಗಿ ಬೊಂಬಾಯಿ ಮ್ಯುನಿಸಿಪಾಲಿಟಿಯವರು ತಮ್ಮಲ್ಲಿ ಒಂದು ವೈದ್ಯಶಾಲೆಯನ್ನು ಸ್ಥಾಪಿಸಬೇಕೆಂದು ಪ್ರಯತ್ನಿಸಿದ್ದಾರೆ. ಈ ವಿಷಯವಾಗಿ ಅಲ್ಲಿನ ಪತ್ರಿಕೆಗಳಲ್ಲಿ ಚರ್ಚೆಯು ನಡೆಯುವ ಸಂದರ್ಭದಲ್ಲಿ ಬೊಂಬಾಯಿಯ ಡಾಕ್ಟರಾದ ಹಾರಿ ಎ. ಡಿ. ರವರು ಒಂದು ಲೇಖನವನ್ನು ಬರೆದು ಅದರಲ್ಲಿ ಪ್ಯಾಶ್ಚರ್ ಪದ್ಧತಿಯ ಚಿಕಿತ್ಸೆಯು ಇದಕ್ಕೆ ಶಾಸ್ತ್ರೀಯವಲ್ಲವೆಂತಲೂ ಆ ಚಿಕಿತ್ಸೆಯಿಂದ ಕಡೆಗೆ ಅನೇಕ ನಷ್ಟಗಳು ಸಂಭವಿಸುವುವೆಂತಲೂ ತಿಳಿಸಿದ್ದಾರೆ. ಈಗ ಕೂನೂರಿನಲ್ಲೂ ಕಾಸೋಲಿಯಲ್ಲೂ ನಡೆಯುತ್ತಿರುವ ಚಿಕಿತ್ಸೆಯೆಲ್ಲಾ ಪ್ಯಾಶ್ಚರ್ ವಿಧಾನದುದೇ ಆಗಿದೆ.

ಕಳೆದ ನವಂಬರ್ ಡಿಸೆಂಬರ್ ತಿಂಗಳಲ್ಲಿ ದಕ್ಷಿಣದೇಶದಲ್ಲಿ ಆದ ವಿಪರೀತ ವೃಷ್ಟಿಯಿಂದ ತಿರುನಲ್ವೇಲಿಯ ಹತ್ತಿರ ಹೊಳೆಯಲ್ಲಿ ವಿಪರೀತ ಪ್ರವಾಹ ಬಂದು ಉಂಟಾದ ಅನರ್ಥದ ವರದಿಯು ಈಗ ಸರ್ಕಾರದವರಿಂದ ಪ್ರಕಟಿಸಲ್ಪಟ್ಟಿದೆ. ಅದರಪ್ರಕಾರ ೧೩೩ ಕೆರೆಗಳೂ ೧೦೩ ಕಾಲ್ವೆಗಳೂ ಕಿತ್ತುಹೋದುವೆಂದೂ, ಇವುಗಳ ಜೀರ್ಣೋದ್ಧಾರಕ್ಕೆ ೪೫ ಸಾವಿರ ರೂ.ಗಳು ಹಿಡಿಯುವುವೆಂದೂ, ಪ್ರಜೆಗಳ ೬೫೬೩ ಮನೆಗಳೂ ೨೪೯೬೯ ರೂ.ಗಳ ಆಸ್ತಿಯೂ, ದನ ಕುರಿ ಮೊದಲಾದ ೬೩೧ ಪಶುಗಳೂ, ೩೦ ಮಂದಿ ಪ್ರಜೆಗಳೂ ನಾಶವಾದರೆಂದೂ, ಪುರಾತನವಾದ ಒಂದು ವಿಷ್ಣು ದೇವಾಲಯವು ಧ್ವಂಸವಾಯಿತೆಂದೂ, ಕೆಟ್ಟುಹೋಗಿರುವ ಮಾರ್ಗಗಳ ಜೀರ್ಣೋದ್ಧಾರಕ್ಕೆ ೧ ಲಕ್ಷ ರೂ. ಗಳ ವೆಚ್ಚ ಮಾಡಬೇಕಾಗಿರುವುದೆಂದೂ ಗೊತ್ತಾಗುತ್ತದೆ.

ಕಳೆದ ತಾ॥ ೧೩ ರಾತ್ರಿ ಬಂಗಾಳಕ್ಕೆ ಸೇರಿದ ರಾಮಪುರದ ಅಡಿಷನಲ್ ಪೋಲೀಸ್ ಸೂಪರಿಂಟೆಂಡೆಂಟರಾದ ರಾಯಸಾಹೇಬ್ ನಂದಲಾಲ್ ಬೋಸ್‌ರವರನ್ನು ಕೊಲ್ಲಬೇಕೆಂದು ಕೆಲರು ಪ್ರಯತ್ನಪಟ್ಟರು. ಅದಿನ ಸಾಯಂಕಾಲ ಯಾರೋ ಇಬ್ಬರು ಬೋಸ್‌ರವರ ಮನೆಗೆ ಬಂದು ಅವರನ್ನು ಕಾಣಬೇಕೆಂದು ಕಾವಲಿನ ಇಬ್ಬರು ಪೋಲೀಸರನ್ನು ಕೇಳಿ ಅವರು ಒಳಕ್ಕೆ ಕರೆದುಕೊಂಡು ಹೋಗಲಾಗಿ ಬೋಸರು ಯಾತಕ್ಕಾಗಿಬಂದಿರಿ? ಕೆಲಸವೇನು? ಎಂದು ಆ ಆಗಂತುಕರನ್ನು ಕೇಳುವಷ್ಟರಲ್ಲಿ ಅವರು ಜೇಬಿನಲ್ಲಿಟ್ಟಿದ್ದ ಪಿಸ್ತೋಲುಗಳನ್ನು ತೆಗೆದು ಬೋಸರಿಗೆ ಗುಂಡು ಹೊಡೆದರು. ಆದರೆ ದೈವವಶದಿಂದ ಗುರಿತಪ್ಪಿಹೋಯಿತು. ಸಮೀಪದಲ್ಲಿದ್ದ ಪೋಲೀಸಾಳು ಮತ್ತೊಬ್ಬ ಮನೆಯಾಳು ಸಹ ಆ ಹಂತಕರನ್ನು ಹಿಡಿದುಕೊಳ್ಳಲು ಪ್ರಯತ್ನಿಸಿದಾಗ ಅವರಿಗೆ ಗುಂಡಿನೇಟು ಬಿದ್ದಿತು. ಒಬ್ಬನು ವೈದ್ಯಶಾಲೆಯಲ್ಲಿ ಸತ್ತನು. ಘಾತುಕರು ಓಡಿದರು. ಅವರಲ್ಲೊಬ್ಬನು ರೈಲ್ವೇಸ್ಟೇಷನ್ನಿನಲ್ಲಿ ಸಿಕ್ಕಿದನು. ಈ ಸಂಬಂಧದಲ್ಲಿ ೬ ಮಂದಿಗಳನ್ನು ಪೋಲೀಸರು ಹಿಡಿದಿದ್ದಾರೆ.

ವೈದ್ಯವೃತ್ತಿಯನ್ನವಲಂಬಿಸಿರುವ ಯೂರೋಪ್ಯರೇ ಆಗಲಿ ಭಾರತೀಯರೇ ಆಗಲಿ ರಣರಂಗಕ್ಕೆ ಹೋಗಿ ಸೇನೆಯೊಡನೆ ಈಗ ಇರುತ್ತಿರುವವರಿಗೂ ಮುಂದೆ ಹೋಗಿ ಇರುವವರಿಗೂ ಸಹ ಕೊಡುವ ವೇತನಗಳ ವಿಷಯವು ಸ್ಟೇಟ್ ಸೆಕ್ರಟರಿಯವರ ಅನುಮತಿ ಪ್ರಕಾರ ಈ ಕೆಳಗೆ ಕಂಡಮೇರೆಗೆಂದು ನಿರ್ಧರಿಸಲ್ಪಟ್ಟಿದೆ. ಅಂಥ ಡಾಕ್ಟರುಗಳ ಉದ್ಯೋಗದ ಪರಮಾವಧಿಯು ೧ ವರ್ಷವು. ಇವರಿಗೆ ದಿನ ೧ಕ್ಕೆ ೧ ಪೌನು ೪ ಷಿಲ್ಲಿಂಗು ಸಂಬಳವಾಗಿ ಕೊಡಲ್ಪಡುವುದು. ಆಹಾರವು ಉಚಿತವಾಗಿ ಕೊಡಲ್ಪಡುವುದು. ವಸತಿಯ ಸ್ಥಲವು ದೊರೆದ ಪಕ್ಷದಲ್ಲಿ ಉಚಿತವಾಗಿಯೇ ಕೊಡಲ್ಪಡುವುದು. ಇಲ್ಲದಪಕ್ಷದಲ್ಲಿ ಅದಕ್ಕಾಗಿ ಬೇರೆ ಹಣವು ಕೊಡಲ್ಪಡುವುದಿಲ್ಲ. ಬೇಕಿದ್ದರೆ ಮೂರುತಿಂಗಳ ಸಂಬಳವು ಮುಂದಾಗಿ ಕೊಡಲ್ಪಡುವುದು. ಭರತಖಂಡದಲ್ಲಿ ೪೦ ಪೌನುಗಳ ಸಾಮಗ್ರಿಯನ್ನು ಅವರಿಗೆ ತೆಗೆದುಕೊಡುವರು. ವೈದ್ಯಶಾಖೆಯಲ್ಲಿ ಲೆಫ್ಟಿನೆಂಟ್‌ಪದವಿಯಲ್ಲಿ ಅವರು ತಾತ್ಕಾಲಿಕವಾಗಿ ಕೆಲಸಮಾಡಬೇಕು. ಕೆಲಸವು ಮುಗಿದ ಬಳಿಕ ಅವರಿಗೆ ೬೦ ಪೌನುಗಳು ಒಂದೇಸಲ ಉಪಕಾರಧನವಾಗಿ ಕೊಡಲ್ಪಡುವುದು.

ಬಂಗಾಳಕ್ಕೆ ಸೇರಿದ ಮದಾರಿಪುರಂ ಎಂಬ ಗ್ರಾಮದಲ್ಲಿರುವ ದೇವೇಂದ್ರಚಕ್ರವರ್ತಿಯೆಂಬುವನಮನೆಗೆ ಕಳ್ಳರು ಬೀಳಬೇಕೆಂದು ಯತ್ನಿಸುತ್ತಿರಲು ಪೋಲೀಸರು ಚಮತ್ಕಾರದಿಂದ ಆ ಕಳ್ಳರ ಗುಂಪನ್ನು ಹಿಡಿದರು. ಹೇಗೆಂದರೆ—ಆ ಮನೆಗೆ ಕಳ್ಳರು ಬೀಳುವರೆಂಬ ಸುದ್ದಿಯು ಹೇಗೋ ಮುಂದಾಗಿ ಪೋಲೀಸರಿಗೆ ತಿಳಿಯಲು, ಅಲ್ಲಿನ ಅಸಿಸ್ಟೆಂಟ್ ಪೋಲೀಸುಸೂಪರಿಂಟೆಂಡೆಂಟರೂ ಸಬ್‌ಡಿವಿಜನಲ್ ಮ್ಯಾಜಿಸ್ಟ್ರೇಟರು ಸಹ ಕೆಲ ಪೋಲೀಸಾಳುಗಳ ಕೂಡ ಕೂಲಿಯವರ ವೇಷವನ್ನು ಧರಿಸಿಕೊಂಡು ದೇವೇಂದ್ರಚಕ್ರವರ್ತಿಯ ಮನೆಯ ಸಮೀಪದಲ್ಲಿ ಅವಿತುಕೊಂಡಿದ್ದರು. ಬಳಿಕ ಕಳ್ಳರು ಬಂದು ಮನೆಗೆ ನುಗ್ಗಿದರು. ಅ॥ ಸೂಪರಿಂಟೆಂಡೆಂಟರು ಸಿಳ್ಳುಹಾಕಿದರು. ಪೋಲೀಸಾಳುಗಳೆಲ್ಲಾ ಮನೆಗೆ ನುಗ್ಗಿ ೫ ಮಂದಿ ಕಳ್ಳರನ್ನು ಹಿಡಿದರು. ಅವರಲ್ಲಿ ಪೂರ್ಣದಾಸು ಎಂಬುವನೊಬ್ಬನಿದ್ದನು. ಇವನೇ ಆ ಕಳ್ಳರ ಗುಂಪಿನ ನಾಯಕನು. ಉಳಿದ ಕಳ್ಳರೆಲ್ಲಾ ತಪ್ಪಿಸಿಕೊಂಡು ಕಾಡಿನ ಕಡೆಗೆ ಓಡಿದರು. ಪೋಲೀಸರು ಅಡವಿಗೂ ನುಗ್ಗಿ ಹುಡುಕಿ ಇನ್ನು ಕೆಲರನ್ನು ಹಿಡಿದರು. ಇದುವರೆಗೆ ೧೩ ಮಂದಿಗಳು ಹಿಡಿಯಲ್ಪಟ್ಟಿರುವರು. ಇವರಲ್ಲಿ ಕೆಲಮಂದಿ ವಿದ್ಯಾರ್ಥಿಗಳಾಗಿದ್ದಾರಂತೆ.

ವಿದೇಶವೃತ್ತಾಂತಗಳು.

ಪೂರ್ವರಣರಂಗದಲ್ಲಿ ಈಗ ರಷ್ಯಾಸೇನೆಯು ೩೦೦ ಮೈಲಿಗಳ ದೂರ ವ್ಯಾಪಿಸಿಕೊಂಡು ಯುದ್ಧಮಾಡುತ್ತಿರುವುದು.

ಜರ್ಮನಿಯಲ್ಲಿ ಉಣ್ಣೆಯ ಅರಳೆಯ ಗಿರಣಿಗಳಲ್ಲಿ ಕೆಲಸಮಾಡುವುದಕ್ಕೆ ಸಾಮಗ್ರಿಯಿಲ್ಲದೆ ಅವೆಲ್ಲಾ ಮುಚ್ಚಲ್ಪಡುತ್ತಿವೆ.

ಜರ್ಮನಿದೇಶಕ್ಕೆ ಅನ್ಯದೇಶಗಳಿಂದ ಸಾಗಿಹೋಗುವ ಸಾಮಾನುಗಳನ್ನು ತಡೆಯುತ್ತಿರುವುದನ್ನು ಇಂಗ್ಲೀಷರು ತಪ್ಪಿಸದೆ ಹೋದಪಕ್ಷದಲ್ಲಿ ಜರ್ಮನರು ಎಲ್ಲಾ ಸಮುದ್ರಮಾರ್ಗಗಳಲ್ಲೂ ಮದ್ದಿನಗೋಳಗಳನ್ನು ತುಂಬಿಬಿಡುವರೆಂದು ಅಮೇರಿಕಾದಲ್ಲಿರುವ ಜರ್ಮನರಾಯಭಾರಿಯು ಹೇಳಿರುವನು.

ಕೋಪನ್‌ಹೇಗನ್ನಿನಲ್ಲಿ ಕೆಲವು ಸಕ್ಕರೆಯ ಪೀಪಾಯಿಗಳು ಹಡಗಿಗೆ ಎತ್ತಲ್ಪಡುತ್ತಿರುವಾಗ್ಗೆ ಬಹುಭಾರವಾಗಿ ಕಂಡುಬಂದುವು. ಅದರಮೇಲೆ ಅನುಮಾನವು ಹುಟ್ಟಿ ಅಧಿಕಾರಿಗಳು ಪರೀಕ್ಷೆಮಾಡಿಸಿದಾಗ ಒಳಗೆ ತಾಮ್ರವು ಬಚ್ಚಿಡಲ್ಪಟ್ಟಿದ್ದುದು ಗೋಚರಿಸಿತು. ಆ ಸರಕನ್ನು ತುಂಬಿದ್ದವನನ್ನು ಹಿಡಿದಿರುವರು.

ರಷ್ಯಾಪ್ರಭುತ್ವದವರು ತಮಗೆ ೧ ಕೋಟಿ ಪೌನುಗಳ ಸಾಲವು ಬೇಕೆಂದು ಮೊನ್ನೆವಾರದಲ್ಲಿ ಲಂಡನ್‌ಪಟ್ಟಣದೊಳಗೆ ಪ್ರಕಟಿಸಲು, ಒಂದುದಿನದೊಳಗಾಗಿ ೧ ಕೋಟಿಗಿಂತ ಎಷ್ಟೋ ಹೆಚ್ಚಾಗಿ ಸಾಲಕೊಡುವವರು ಸಿದ್ಧರಾದರು. ನೂರಕ್ಕೆ ೧೦ ಷಿಲ್ಲಿಂಗಿನಷ್ಟು ಹೆಚ್ಚಾಗಿಯೂ ಕೊಟ್ಟು ನೂರಕ್ಕೆ ಪತ್ರವನ್ನು ಪಡೆದಿರುವರು.

ಅಮೇರಿಕಾದಿಂದ ಇತರದೇಶಗಳಿಗೆ ಸಾಗಿಸಲ್ಪಡುತ್ತಿದ್ದ ಹತ್ತಿಯ ಮೂಟೆಗಳಲ್ಲಿ ಪ್ರತಿಯೊಂದರಲ್ಲೂ ೪ ಪೌನಿನ ರಬ್ಬರು ಅಡಗಿಸಲ್ಪಟ್ಟಿದ್ದಿತು. ಇದನ್ನು ಅಮೇರಿಕಾದ ಮತ್ತೂ ಇಂಗ್ಲೀಷರ ಅಧಿಕಾರಿಗಳು ಅಂತರ್ಗತವಸ್ತುಛಾಯಾಗ್ರಹಣಯಂತ್ರ (ಎಕ್ಸ್‌ರೈಸ್) ಸಾಹಾಯ್ಯದಿಂದ ಕಂಡುಹಿಡಿದು, ಆ ೧೭೮ರ ಮೂಟೆಯ ಹತ್ತಿಯನ್ನೂ ಸಾಗುವುದಕ್ಕೆ ತಡೆಮಾಡಿ ನಿಲ್ಲಿಸಿಬಿಟ್ಟರು.

ಉರಲುಗಡ್ಡೆ ಮೊದಲಾದ ಪದಾರ್ಥಗಳ ಮಾರಾಟದ ವಿಷಯದಲ್ಲಿ ಜರ್ಮನರು ಬಹಳ ನಿರ್ಬಂಧವನ್ನು ಕಲ್ಪಿಸಿದ್ದರು. ಅದರಿಂದ ಬಹಳ ದೂರು ಉಂಟಾಗಲು, ಬಹಿರಂಗವಾಗಿ ಮಾರಬಹುದೆಂದು ಅಪ್ಪಣೆಮಾಡಿದರು. ಆ ಸುದ್ದಿಯನ್ನು ಕೇಳಿದಕೂಡಲೆ ಪ್ರಜೆಗಳು ತಂಡೋಪತಂಡವಾಗಿ ಮಾರಕಟ್ಟೆಗಳಿಗೆ ಒಬ್ಬರಮೇಲೊಬ್ಬರು ನುಗ್ಗಿ ಹೋದರು. ಮಾರಾಟಕ್ಕಾಗಿ ಸುಂಕವನ್ನು ಸಲ್ಲಿಸಿದ ರಸೀದಿಯನ್ನು ತೋರಿಸಬೇಕೆಂದು ಅಧಿಕಾರಿಗಳು ಪ್ರಜೆಗಳನ್ನು ಕೇಳಿದಾಗ ಜನರು ಅಧಿಕಾರಿಗಳ ಮೇಲೆಬಿದ್ದು ಹೊಡೆದು ಬೇಕಾದಷ್ಟು ಗದ್ದಲವನ್ನು ಮಾಡಿದರು. ಇದರಿಂದ ಆ ದೇಶದಲ್ಲಿ ಆಹಾರ್ಯವಸ್ತುಗಳು ಎಷ್ಟು ಪ್ರಿಯವಾಗಿವೆಯೆಂಬುದು ಗೊತ್ತಾಗುವುದು.

ಹಿಂದೂಸೇನಾಸಂಬಂಧವಾದ ಯುದ್ಧವಾರ್ತೆಯನ್ನು ಹಿಂದೂಸ್ಥಾನಕ್ಕೆ ಪ್ರತ್ಯೇಕವಾಗಿ ಕಳುಹಿಸಿಕೊಡಬೇಕೆಂದು ಲಾರ್ಡ್ ಕರ್ಜನ್‌ರವರು ಪಾರ್ಲಿಮೆಂಟಿನಲ್ಲಿ ಸೂಚಿಸಿದಾಗ್ಗೆ ಸ್ಟೇಟ್‌ಸೆಕ್ರಟರಿಯವರಾದ ಲಾರ್ಡ್‌ಕ್ರ್ಯೂರವರು—“ ರಣರಂಗದಲ್ಲಿ ಹಿಂದೂದೇಶದ ಸೈನಿಕರು ಯಾವವಿಧವಾಗಿ ಯುದ್ಧಮಾಡುತ್ತಿರುವರೆಂಬುದನ್ನು ಅಲ್ಲಿನ ಪ್ರಜೆಗಳು ನಿಜವಾಗಿ ತಿಳಿದುಕೊಳ್ಳುವುದಕ್ಕಾಗಿ ತಡಮಾಡದೆ ಆಗಾಗಿನ ಯುದ್ಧವಾರ್ತೆಗಳನ್ನು ಅಲ್ಲಿಗೆ ಕಳುಹಿಸಿಕೊಡಬೇಕಾಗಿದೆ. ಭಾರತೀಯಸೈನಿಕರು ಚೆನ್ನಾಗಿ ಯುದ್ಧಮಾಡುತ್ತಿರುವುದಕ್ಕಾಗಿ ಬಹುಳವಾಗಿ ಮೆಚ್ಚಲ್ಪಡತಕ್ಕವರಾಗಿದ್ದಾರೆ ಎಂದು ಲಾರ್ಡ್‌ಕರ್ಜನ್‌ರವರು ಸೂಚಿಸಿದ ಮಾತಿನಂತೆ ನಾವೆಲ್ಲರೂ ಅವರನ್ನು ಮನಃಪೂರ್ವಕವಾಗಿ ಮೆಚ್ಚುತ್ತೇವೆ’’ ಎಂದು ಹೇಳಿದರು.

ಈಗಿನ ಯುದ್ಧದಲ್ಲಿ ಇಂಗ್ಲೀಷರ ಕಡೆಯ ಸರ್ವಸೇನಾಪತಿಯಾಗಿರುವ ಸರ್ ಜಾನ್ ಫ್ರೆಂಚ್‌ರವರು ಕಳೆದ ನವಂಬರ್ ತಿಂಗಳ ಮಧ್ಯಭಾಗದಿಂದ ಜನವರಿ ತಿಂಗಳ ಕಡೆಯವರೆಗೂ ರಣಾಂಗಣದಲ್ಲಿ ನಡೆದಿರುವ ಎಲ್ಲ ವಿಷಯಗಳ ವರದಿಯನ್ನೂ ದೀರ್ಘವಾಗಿ ಬರೆದಿರುವುದರಲ್ಲಿ ಹಿಂದೂದೇಶದಸೈನಿಕರು ತೋರಿದ ಪರಾಕ್ರಮಗಳನ್ನು ವಿವರಿಸಿ ಇವರ ಗುಣಾತಿಶಯಗಳನ್ನು ಕೊಂಡಾಡುವಾಗ್ಗೆ—“ ಸಮಯಬಿದ್ದಾಗಲೆಲ್ಲಾ ಇವರು ಅಸದೃಶವಾದ ಧೈರ್ಯಸ್ಥೈರ್ಯಗಳಿಂದ ಯುದ್ಧಮಾಡಿದ್ದಾರೆ. ಡಿಶಂಬರ್ ತಾ|| ೧೮ರಲ್ಲಿ ಗಿವೆಂಚಿಯ ಸುತ್ತುಮುತ್ತಲೂ ಯದ್ಧವು ನಡೆದು ಮುಗಿದ ಬಳಿಕ ನಾನು ಈ ಸೈನಿಕರನ್ನು ಪರೀಕ್ಷಿಸಿದೆನು. ಇವರಲ್ಲಿ ಯಾವ ಲೋಪವೂ ಕಂಡುಬರಲಿಲ್ಲ. ನೋಡುವುದಕ್ಕೆ ಎಷ್ಟೋ ಸೊಗಸಾಗಿದ್ದರು. ರಣರಂಗದಲ್ಲಿ ನೇರ್ಪಿನಿಂದ ಯುದ್ಧಮಾಡುವ ಸಾಮರ್ಥ್ಯವು ಇವರಿಗೆ ಸ್ವತಸಿದ್ಧವಾದ ಗುಣವಾಗಿದೆ. ಇದು ಪೂರ್ಣವಾಗಿ ವಿಕಾಸಗೊಳ್ಳುವ ನಿಮಿತ್ತವಾಗಿಯೇ ಈ ನೂತನಸ್ಥಲದಲ್ಲಿ ಸ್ವಲ್ಪ ಪರಿಶ್ರಮವೂ ವಿಶ್ರಾಂತಿಯೂ ಆಗಬೇಕಾಗಿದ್ದಿತು. ಹಿಂದೂದೇಶದ ಪದಾತಿ ಸೈನ್ಯವೆಲ್ಲವೂ ಅವರ ದೇಶದಿಂದ ಇಲ್ಲಿಗೆ ಬಂದಿಳಿದೊಡನೆಯೇ ನಾನು ಅವರನ್ನು ನೋಡಿದೆನು. ಇವರೆಲ್ಲರೂ ವೀರರಸವನ್ನು ಹೊರಗೆಡಹುತ್ತಿದ್ದರು. ಆ ಕೂಡಲೇ ಅವರ ಕೋರಿಕೆಯ ಪ್ರಕಾರವೇ ಯುದ್ಧವು ಜರುಗುತ್ತಿದ್ದ ಕಂದಕಗಳೊಳಕ್ಕೆ ಅವರನ್ನು ಕಳುಹಿದೆವು. ಇವರೆಲ್ಲರೂ ಬಹು ಪ್ರಯೋಜಕವೂ ಪ್ರಶಸ್ತವೂ ಆದ ಕೆಲಸವನ್ನು ಮಾಡಿದರು’’ ಎಂದು ಬರೆದಿರುತ್ತಾರೆ. ಮತ್ತೂ ಹಿಂದೂಸೈನಿಕರು ಯಾವಯಾವ ಎಡೆಯಲ್ಲಿ ಎಂಥೆಂಥ ಸಾಹಸದ ಕಾರ್ಯಗಳನ್ನು ಮಾಡಿ ಜಯಶೀಲರಾಗಿದ್ದಾರೆಂಬುದನ್ನೆಲ್ಲಾ ವರ್ಣಿಸಿದ್ದಾರೆ.

ಯುದ್ಧವಾರ್ತೆಯು.

(ಪಶ್ಚಿಮರಣರಂಗ)

ಈಚೆಗೆ ಮಿತ್ರಮಂಡಲಿಯವರು ಮುಂದುಮುಂದಕ್ಕೆ ಸಾಗುತ್ತಲೂ ಶತ್ರುಗಳ ಅಭಿಯೋಗವನ್ನು ತಡೆದು ಹಿಮ್ಮೆಟ್ಟಿಸಿ ಅವರ ಕಂದಕಗಳನ್ನು ಹಿಡಿಯುಕೊಳ್ಳುತ್ತಲೂ ಬಂದಿರುವುದರಿಂದ ಜರ್ಮನರು ಬಹಳ ರೇಗಿದ್ದಾರೆ. ಅವರು ಶಾಂತವಾದ ಪಟ್ಟಣಗಳ ಮೇಲೆಫಿರಂಗಿಗಳನ್ನು ಹಾರಿಸಿ ಆ ಸಿಟ್ಟನ್ನು ತೀರಿಸಿಕೊಳ್ಳುತ್ತಿರುವಂತೆ ಕಾಣುತ್ತದೆ. ರೀಮ್ಸ್ ಪಟ್ಟಣದಮೇಲೆ ಅವರು ಕಳೆದವಾರ ಹಲವುಬಾರಿ ಫಿರಂಗಿಗಳನ್ನು ಹಾರಿಸಿದ್ದಾರೆ. ಇದರಿಂದ ಅಲ್ಲಿನ ಪ್ರಜೆಗಳಲ್ಲಿ ೨೦ ಮಂದಿಗಳವರೆಗೆ ಸತ್ತಿದ್ದಾರೆ. ಅವರ ಬಹುಶಃ ೧೫೦೦ ಫಿರಂಗಿಗುಂಡುಗಳು ಪಟ್ಟಣದ ಎಲ್ಲಭಾಗಗಳಲ್ಲೂ ಬಿದ್ದಿದ್ದುವು. ಇದುವರೆಗೆ ಶಿಥಿಲವಾಗಿದ್ದ ದೇವಾಲಯದಮೇಲೆ ಮರಳಿಯೂ ಅನೇಕ ಗುಂಡುಗಳು ಪ್ರಯೋಗಿಸಲ್ಪಟ್ಟಿರುವುವು. ಗಿವೆಂಚಿಯಹತ್ತಿರ ಮಿತ್ರಮಂಡಲಿಯವರು ಶತ್ರುಗಳ ಕಂದಕಗಳ ಮೇಲೆ ಫಿರಂಗಿಗಳನ್ನು ಹಾರಿಸಿ, ಅವನ್ನು ವಶಪಡಿಸಿಕೊಂಡರು. ಟ್ಚಿಡಿ-ಲಿಸ್-ಲಾಬಸ್ಸಿ-ಎರ್ರಿನ್—ಸೋವೆರ್ರಿನ್-ಬೀಸೆಜನ್-ಈಪ್ರೆಸ್-ಮ್ಯೂಜು-ಪ್ರಾಂತಗಳಲ್ಲಿ ನಡೆದ ಯುದ್ಧಗಳೆಲ್ಲಾ ಮಿತ್ರಮಂಡಲಿಯವರಿಗೇ ಅನುಕೂಲವಾಗಿವೆ. ಹಲವರು ಜರ್ಮನ್ ಸೈನಿಕರು ನಮ್ಮವರಿಗೆ ಸಿಕ್ಕಿದ್ದಾರೆ. ಅವರ ಸೇನೆಯಲ್ಲಿ ಬಹಳ ನಷ್ಟವೂ ಆಗಿದೆ. ಲಾಪಾರ್ಜೆಸ್ಸಿನ ಪ್ರಾಂತದಲ್ಲಿ ಶತ್ರುಗಳು ಆಕ್ರಮಿಸಿದ್ದ ಸ್ಥಾನಗಳೆಲ್ಲವೂ ಮಿತ್ರಮಂಡಲಿಯವರಿಗೆ ಸೇರಿದಂತೆಯೇ ಆಯಿತು. ವರ್ಡನ್ನಿಗೆ ದಕ್ಷಿಣದಲ್ಲಿರುವ ಲಾಪಾರ್ಜೆಸ್ಸಿನ ಹತ್ತಿರ ೬ ನೆ ಯಾವೃತ್ತಿ ನಡೆದ ಯುದ್ಧದಲ್ಲಿ ಮೇಲೆಬಿದ್ದ ಶತ್ರುಗಳನ್ನು ಮಿತ್ರಮಂಡಲಿಯವರು ಹಿಮ್ಮೆಟ್ಟಿಸಿದುದೇ ಅಲ್ಲದೆ, ಅವರಮೇಲೆ ಇವರೇಬಿದ್ದು, ಅವರಿದ್ದ ಸ್ಥಲಗಳನ್ನು ಆಕ್ರಮಿಸಿಕೊಂಡರು. ಆಗ ಶತ್ರುಗಳ ಮೂರು ಫಿರಂಗಿಗಳೂ ಸಿಡಿಮದ್ದುಗಳನ್ನು ಹಾಕುವ ಕೆಲ ಯಂತ್ರಗಳೂ ೨೨೦೦ ಮಂದಿ ಸೈನಿಕರೂ ಕೆಲಮಂದಿ ಉದ್ಯೋಗಸ್ಥರುಗಳೂ ನಮ್ಮವರಿಗೆ ಸೆರೆಸಿಕ್ಕಿದರು. ಪೆರ್ತ್ತಿಸ್ಸಿನಹತ್ತಿರ ನಡೆದ ಯುದ್ಧದಲ್ಲಿ ಮಿತ್ರಮಂಡಲಿಯವರು ಶತ್ರುಗಳಲ್ಲಿ ೪೦೦ ಮಂದಿಯನ್ನು ಸೆರೆಹಿಡಿದುಕೊಂಡು ಅವರಿದ್ದ ಸ್ಥಲವನ್ನೂ ಆಕ್ರಮಿಸಿದರು. ಕಳೆದವಾರವೆಲ್ಲಾ ಆದ ಯುದ್ಧದಲ್ಲಿ ಶತ್ರುಗಳಕಡೆ ೧ ಪಟಾಲಮ್ಮಿನಷ್ಟು ಜನರು ಸತ್ತಿರುವರೆಂದು ಸೆರೆಸಿಕ್ಕಿದ ಜರ್ಮನರ ಮಾತಿನಿಂದಲೇ ಗೊತ್ತಾಗಿದೆ.

ಪೂರ್ವರಣರಂಗ.

ಈಚೆಗೆ ಜರ್ಮನ್‌ದೇಶಕ್ಕೆ ಆಸ್ಟ್ರಿಯಾಮಂತ್ರಿಯು ಹೋಗಿ ತಮಗೆ ಇದುವರೆಗೆ ಆಗಿರುವ ಯುದ್ಧದ ಪರಿಣಾಮವನ್ನು ಹೇಳಿಕೊಂಡು, ಯುದ್ಧಶಾಂತಿಪ್ರಯತ್ನವನ್ನು ಸೂಚಿಸಲು, ಜರ್ಮನರು ಅವರನ್ನು ಹುರಿದುಂಬಿಸುವುದಕ್ಕಾಗಿ ಮರಳಿ ಅವರಕಡೆಗೆ ೪-೬ ಲಕ್ಷ ಸೈನ್ಯವನ್ನು ಕಳುಹಿಸಿಕೊಡಲೂ, ಪೂರ್ವಪ್ರಸ್ಯಾದಲ್ಲಿ ರಷ್ಯನರಮೇಲೆ ಹೊಸದಾಗಿ ೧೦ ಲಕ್ಷ ಸೈನ್ಯಗಳನ್ನು ಕಳುಹಿಸಿಕೊಟ್ಟು ಶತ್ರುಗಳನ್ನು ಹಿಮ್ಮೆಟ್ಟಿಸಲೂ ವಾಗ್ದಾನಮಾಡಿ, ಅದೇ ಪ್ರಕಾರ ನೂತನಸೈನ್ಯಗಳನ್ನು ಕಳುಹಿಸುತ್ತಿದ್ದಾರೆ. ಪಶ್ಚಿಮದ ಕಡೆಯಿಂದ ನವೀನಸೈನ್ಯಗಳು ಬಂದು ದುಮಿಕುತ್ತಿರುವುದನ್ನೂ ಅದಕ್ಕೆ ಸಾಟಿಯಾಗಿ ತಮ್ಮಕಡೆ ಆ ಪ್ರಾಂತದಲ್ಲಿ ಸೈನ್ಯಗಳು ಸಾಲದಿದ್ದುದನ್ನೂ ರಷ್ಯನರು ತಿಳಿದು, ಸ್ವಲ್ಪ ಹಿಮ್ಮೆಟ್ಟಿ, ತಮ್ಮ ಎಲ್ಲೆಕಟ್ಟಿನಲ್ಲಿ ನಿಂತು ಹೊಸಸೈನ್ಯಗಳನ್ನು ಸೇರಿಸಿಕೊಂಡು ಯುದ್ಧವನ್ನು ಕೊಡುತ್ತಲಿದ್ದಾರೆ. ಈಗ ಪೂರ್ವಪ್ರಸ್ಯಾದಲ್ಲಿ ೩ನೆಯ ಮಹಾಯುದ್ಧವು ಇಷ್ಟರಲ್ಲೇ ನಡೆಯುವಂತೆ ಕಾಣುತ್ತದೆ. ಕಾರ್ಪೇತಿಯನ್ ಕಣಿವೆಗಳಕಡೆ ಶತ್ರುಸೈನಿಕರು ಮೇಲೆಬೀಳುತ್ತಿದ್ದರೂ ರಷ್ಯನರು ತಾವಾಕ್ರಮಿಸಿರುವ ಸ್ಥಾನಗಳಿಂದ ಕದಲದೆ ದೃಢವಾಗಿದ್ದಾರೆ.

ಆಸ್ಟ್ರಿಯನ್ ಸೈನಿಕರು ಸರ್ವಿಯಾದ ರಾಜಧಾನಿಯಾದ ಬಲ್ಗ್ರೇಡ್‌ಪಟ್ಟಣಕ್ಕೆ ಮುತ್ತಿ, ಮರಳಿ ಫಿರಂಗಿಗಳನ್ನು ಹಾರಿಸುತ್ತಿರುವರು. ಹಲವು ಮನೆಗಳನ್ನು ಕೆಡಹಿ, ಕೆಲವರನ್ನು ಕೊಂದಿರುತ್ತಾರೆ. ಸರ್ವಿಯನ್ನರು ಆಸ್ಟ್ರಿಯನ್ನರ ಸಮ್ಲಿನ್ ಪಟ್ಟಣದ ಮೇಲೆ ಫಿರಂಗಿ ಹೊಡೆಯುತ್ತಿದ್ದಾರೆ.

ಇಟಲಿದೇಶದ ಪ್ರಜೆಗಳು ಮಿತ್ರಮಂಡಲಿಯವರ ಪಕ್ಷದಲ್ಲಿ ನಿಂತು ಯುದ್ಧಮಾಡಬೇಕೆಂದು ತಮ್ಮ ಸರ್ಕಾರದವರಿಗೆ ಪ್ರೋತ್ಸಾಹಿಸುತ್ತಿದ್ದಾರೆ. ರೋಮ್‌ನಗರದಲ್ಲೂ ವೆನಿಸ್‌ಪಟ್ಟಣದಲ್ಲೂ ಪ್ರಜೆಗಳು ಸಭಾಮೂಲಕ ಈ ತಮ್ಮ ಅಭಿಪ್ರಾಯವನ್ನು ನಿರ್ಧರಿಸಿ ಬಿನ್ನಯಿಸಿಕೊಂಡಿದ್ದಾರೆ. ಇಟಲಿ ಆಸ್ಟ್ರಿಯನ್ ಪ್ರಜೆಗಳಲ್ಲಿ ಪರಸ್ಪರ ವೈರಭಾವವು ಹೆಚ್ಚುತ್ತಿದೆ: ವೆನ್ನಿಸ್‌ಪಟ್ಟಣದಲ್ಲಿ ಸಭೆ ಮುಗಿದಬಳಿಕ ಬಹಿರಂಗವಾಗಿ ಆಸ್ಟ್ರಿಯಾ ಧ್ವಜಪತಾಕೆಯನ್ನು ಸುಟ್ಟುಬಿಟ್ಟರು.

ಜಲಸೇನೆ.

ದಿನೋರ ಎಂಬ ಫ್ರಾನ್ಸ್ ಹಡಗನ್ನು ಇಂಗ್ಲಿಷ್ ಕಾಲ್ವೆಯಲ್ಲಿ ಜರ್ಮನರ ಒಂದು ಸಬ್‌ಮೇರೀನು ಟಾರ್ಪೆಡೋವಿನಿಂದ ಹೊಡೆದಿತು. ದೈವಾಧೀನದಿಂದ ಆ ಏಟನ್ನು ಹಡಗು ತಪ್ಪಿಸಿಕೊಂಡಿತು.

ಬೆಲ್‌ರಿಡ್ಜಿಯೆಂಬ ಎಣ್ಣೆ ತುಂಬಿದ್ದ ಹಡಗನ್ನು ಜರ್ಮನರ ಸಬ್‌ಮೇರೀನು ಟಾರ್ಪೆಡೋವಿನಿಂದ ಹೊಡೆದಿತು. ಒಳಗಿದ್ದ ಕಲಾಸಿಗಳು ದೋಣಿಗಳನ್ನೇರಿ ಬದುಕಿಕೊಂಡರು.

ಕಾಂಬಾಂಕ್ ಎಂಬ ಮತ್ತೊಂದು ಹಡಗಿನಮೇಲೆ ಜರ್ಮನರ ಸಬ್‌ಮೇರೀನು ಟಾರ್ಪೆಡೋವನ್ನು ಬಿಟ್ಟು ಧ್ವಂಸಮಾಡಿತು. ಒಳಗಿದ್ದ ಉದ್ಯೋಗಿಗಳಲ್ಲಿ ಮೂವರು ಸತ್ತರು, ಮತ್ತೊಬ್ಬನು ದುಮಿಕಿ ನೀರಿನಲ್ಲಿ ಮುಳುಗಿ ಸತ್ತನು. ಉಳಿದವರು ರಕ್ಷಿಸಲ್ಪಟ್ಟರು.

ಡೌನ್‌ಷೈರ್ ಎಂಬ ಮತ್ತೊಂದು ಹಡಗನೊಳಗಿದ್ದ ಜನರು ದೋಣಿಗಳಲ್ಲಿಳಿದು ಹೋಗುವುದಕ್ಕೆ ೫ ನಿಮಿಷಗಳ ಕಾಲ ಮಾತ್ರ ಅವಕಾಶಕೊಟ್ಟು, ಅದಗಮೇಲೆ ಜರ್ಮನರ ಸಬ್‌ಮೇರೀನು ಫಿರಂಗಿ ಗುಂಡುಗಳನ್ನು ಮೂರಾವೃತ್ತಿ ಹಾರಿಸಿ ಮುಳುಗಿಸಿಬಿಟ್ಟಿತು. ಅಟ್ಲಾಂಟಿಕ್ ಸಮುದ್ರದಲ್ಲಿ ಜರ್ಮನರ ಒಂದು ಯುದ್ಧದ ಹಡಗು ಪೊಟಾರೋ, ಹೈಲಾಂಡ್‌ಬ್ರಾಯಿ, ಹೆಮಿಸ್ಫಿಯರ್ ಎಂಬ ವ್ಯಾಪಾರದ ಹಡಗುಗಳನ್ನು ಮುಳುಗಿಸಿತು. ಮತ್ತೂ ಸೆಮಂತಾ ಎಂಬ ನಾರ್ವೆದೇಶದ ಸ್ಟೀಮರೂ ಕೂಡ ಹೀಗೆಯೇ ಮುಳುಗಿಸಲ್ಪಟ್ಟಿರುವುದು. ಎವೆಲಿನ್ ಎಂಬ ಅಮೇರಿಕಾದ ವ್ಯಾಪಾರದ ಹಡಗನ್ನು ಕೂಡ ಜರ್ಮನರು ಹೀಗೆಯೇ ಮುಳುಗಿಸಿರುವರು.

ತಾ|| ೨೩ ನೆ ಬೆಳಗ್ಗೆ ರೆಜಿನ್‌ಷಲ್ಟ್‌ನ್ ಎಂಬ ನಾರ್ವೆದೇಶದ ವ್ಯಾಪಾರ ಹಡಗು ಫ್ರಾನ್ಸ್‌ದೇಶದ ಬೋರ್ಡೋವಿಗೆ ಹೋಗುತ್ತಿರಲು ಅದು ಡೋವರ್ ಜಲಸಂಧಿಯ ಹತ್ತಿರ ಮುಳುಗಿಸಲ್ಪಟ್ಟಿದೆ.

ತಟಸ್ಥರಾಷ್ಟ್ರಗಳ ವ್ಯಾಪಾರ ಹಡಗುಗಳಿಗೆ ಜರ್ಮನರ ನೌಕಾದಳವು ಮಾಡಿದ ಈ ವಿಪತ್ತಿನಿಂದ ಅವರಿಗೆಲ್ಲಾ ಜರ್ಮನರ ಮೇಲೆ ತುಂಬಾ ಆಗ್ರಹವುಂಟಾಗಿದೆ. ಈ ವಿಷಯದಲ್ಲಿ ಅವರವರಿಗೆ ಕಾಗದಪತ್ರಗಳು ನಡೆಯುತ್ತಿವೆ.

ಆಕಾಶವಿಮಾನಗಳು.

ಜರ್ಮನರ ಆಕಾಶವಿಮಾನಗಳು ಫ್ರಾನ್ಸ್-ಇಂಗ್ಲೆಂಡ್ ದೇಶಗಳ ಕಡೆಗೆ ಪದೇಪದೇ ಸಂಚರಿಸಿ ಸಿಡಿಮದ್ದುಗಳನ್ನು ಹಾಕುತ್ತಲಿವೆ. ಫ್ರಾನ್ಸಿನ ಪಶ್ಚಿಮದಲ್ಲಿ ಉತ್ತರಕ್ಕೆ ಹೋಗುತ್ತಿದ್ದ ೨ ಜಪ್ಪಲಿನ್ ವಿಮಾನಗಳಲ್ಲಿ ಒಂದು ದೊಡ್ಡ ವಿಮಾನದ ಯಂತ್ರವು ಕೆಟ್ಟು ಸುಟ್ಟುಹೋಗಿ ಸಮುದ್ರತೀರದಲ್ಲಿಳಿದಿತು. ಅದರಲ್ಲಿದ್ದ ೧೪ ಮಂದಿಗಳನ್ನೂ ಫ್ರೆಂಚರು ಹಿಡಿದು ಸೆರೆಹಾಕಿದರು. ಮತ್ತೊಂದು ಜಪ್ಪಲಿನ್ ವಿಮಾನವು ಡೆನ್ಮಾರ್ಕ್ ದೇಶದ ಜಿಡ್ಲ್ಯಾಂಡಿಗೆ ಪಶ್ಚಿಮದಲ್ಲಿ ಕೆಳಕ್ಕಿಳಿದಿತು. ೪ ಮಂದಿ ವೈಮಾನಿಕರು ನೀರಿನಲ್ಲಿ ಬಿದ್ದುಹೋದರು. ಉಳಿದವರು ದಡದ ಮೇಲೆ ಕಾವಲಿದ್ದವರ ವಶವಾದರು.

ಡನ್‌ಕರ್ಕಿನ ಹತ್ತಿರ ಹಾರಿಹೋಗುತ್ತಿದ್ದ ಒಂದು ಜರ್ಮನ್ ವಿಮಾನವು ತುಪಾಕಿಯೇಟಿನಿಂದ ಕೆಳಕ್ಕೆ ಬಿದ್ದಿತು. ಒಳಗಿದ್ದ ವೈಮಾನಿಕರಿಬ್ಬರೂ ಸತ್ತರು.

ಫ್ರೆಂಚ್ ವೈಮಾನಿಕನೊಬ್ಬನು ಆಸ್ಟೆಂಡ್ ಪಟ್ಟಣದ ಮೇಲಕ್ಕೆ ಹಾರಿಹೋಗಿ ಸೇನಾಗೃಹದ ಮೇಲೆ ಸಿಡಿಮದ್ದನ್ನು ಹಾಕಿದನು. ಬಹಳ ಗದ್ದಲವೆದ್ದಿತು. ನಷ್ಟವೇನಾಯ್ತೆಂಬುದು ಗೊತ್ತಾಗಲಿಲ್ಲ.

ಜರ್ಮನರ ಕೆಲವಿಮಾನಗಳು ಕಳೆದ ತಾ|| ೨೧ರ ರಾತ್ರಿ ಇಂಗ್ಲೀಷ್‌ಪಟ್ಟಣವಾದ ಎಸ್ಸೆಕ್ಸಿನ ಮೇಲೆ ಹೋಗಿ ಕೆಲ ಸಿಡಿಮದ್ದುಗಳನ್ನು ಹಾಕಿದುದರಲ್ಲಿ ಒಂದುಮನೆಗೆ ಸ್ವಲ್ಪ ಹಾನಿಯಾಯಿತು. ಜರ್ಮನರ ಮತ್ತೆರಡು ಜಪ್ಪಲಿನ್ ವಿಮಾನಗಳು ಗಾಳಿಮಳೆಯ ಬಡಿತಕ್ಕೆ ಸಿಕ್ಕಿ ಡಚ್‌ದೇಶದ ಸಮುದ್ರತೀರದಲ್ಲಿ ಬಿದ್ದು ಹಾಳಾದುವು. ಜರ್ಮನರ ಮತ್ತೊಂದು ವಿಮಾನವು ಕಲೆಪಟ್ಟಣದ ಮೇಲೂ ಸಿಡಿಮದ್ದನ್ನು ಹಾಕಿ ಸ್ವಲ್ಪ ಅನರ್ಥವನ್ನುಂಟುಮಾಡಿರುವುವು.

ತುರ್ಕಿ.

ಮಿತ್ರಮಂಡಲಿಯವರ ಯುದ್ಧನಾವೆಗಳು ಕಳೆದ ವಾರದಲ್ಲಿ ೨ದಿವಸ ಡಾರ್ಡನಲ್ಸಿನ ಮೇಲೆ ಬಲವಾಗಿ ಫಿರಂಗಿಗಳನ್ನು ಹಾರಿಸಿ ಕೋಟೆಗಳಿಗೆ ಬಹಳ ನಷ್ಟವನ್ನುಂಟುಮಾಡಿರುವುವು. ಆ ಜಲಸಂಧಿಯ ಎರಡುಪಕ್ಕದಲ್ಲೂ ಇರುವ ಕೋಟೆಗಳ ಮೇಲಿನಿಂದ ತುರುಕರು ಫಿರಂಗಿಗುಂಡುಗಳನ್ನು ಈ ಹಡಗುಗಳ ಮೇಲೆ ಹಾರಿಸಿದುವು. ಕಡೆಗೆ ಪಶ್ಚಿಮದಿಕ್ಕಿನ ಫಿರಂಗಿಗಳ ಸದ್ದೆಲ್ಲಾ ಅಡಗಿಹೋಯಿತು. ಬಳಿಕ ಪೂರ್ವದಿಕ್ಕಿನ ಕೋಟೆಗಳ ಮೇಲೂ ನೌಕಾದಳವು ಅಗ್ನಿವರ್ಷವನ್ನು ಕರೆದು ಅಲ್ಲಿನ ಫಿರಂಗಿಗಳ ಬಾಯನ್ನೂ ಮುಚ್ಚಿಸಿದುವು. ಈ ಯುದ್ಧಸಮಯದಲ್ಲಿ ಮಿತ್ರಮಂಡಲಿಯವರ ನೌಕಾವಿಮಾನಿಕರು ಮೇಲಕ್ಕೆ ಹಾರಿ ಶತ್ರುಸೈನ್ಯದ ಸ್ಥಿತಿಗತಿಯನ್ನು ತಿಳಿಯುತ್ತಿದ್ದರು. ಈ ಯುದ್ಧದಲ್ಲಿ ಮಿತ್ರಮಂಡಲಿ ನೌಕೆಗಳೊಳಗೆ ಯಾವ ನಷ್ಟವೂ ಆಗಲಿಲ್ಲ.

ಅರ್ಮೇನಿಯಾದ ಟ್ರಾನ್ಸ್‌ಚೋಕ್ ಜಿಲ್ಲೆಯಲ್ಲಿ ರಷ್ಯನರಿಗೂ ತುರ್ಕಿಯವರಿಗೂ ಆದ ಯುದ್ಧದಲ್ಲಿ ರಷ್ಯನರ ತುರ್ಕಿಸೈನ್ಯವನ್ನು ಇನ್‌ಪಾಟ್ಸ್ ನದಿಯನ್ನು ದಾಟಿ ಓಡಿಹೋಗುವಂತೆ ಮಾಡಿರುವರು.

ಮೈಸೂರ್ ಸ್ಟಾರ್.

ಸನ್ ೧೯೧೫ ನೆಯ ಫೆಬ್ರುವರಿ ತಾ|| ೨೮ ನೆಯ ಭಾನುವಾರ.

ಮಹನೀಯ ಶ್ರೀ ಗೋಪಾಲಕೃಷ್ಣ ಗೋಖಲೆ ಸಿ. ಐ. ಇ., ಯವರು ಸ್ವರ್ಗಸ್ಥರಾದರು.

ಭರತಖಂಡದಲ್ಲಿ ಈ ಪುಣ್ಯಪುರುಷರ ನಾಮಖ್ಯಾತಿಯನ್ನು ಕೇಳದಿರುವ ವಿದ್ಯಾವಂತರಾರೂ ಇರಲಾರರು. ಇವರು ಕಳೆದ ತಾ||೧೯ರಲ್ಲಿ ಪೂನಾನಗರದಲ್ಲಿ ವಿಧಿವಶರಾದರೆಂಬ ವಾರ್ತೆಯನ್ನು ತಿಳಿಯಿಸುವುದಕ್ಕೆ ಅತಿಶಯ ಸಂತಾಪವಾಗುತ್ತದೆ. ಭರತಖಂಡದಲ್ಲಿ ವಿದ್ಯಾವಂತರೂ, ರಾಜತಂತ್ರಜ್ಞರೂ,ದೇಶಭಕ್ತರೂ, ದೂರದರ್ಶಿಗಳೂ, ಸ್ವಾರ್ಥತ್ಯಾಗಿಗಳೂ, ರಾಜಕಾರ್ಯ ಧುರಂಧರರೂ ಆದ ಮಹನೀಯರು ಅನೇಕರಿರಬಹುದು. ಆದರೆ ಅಂಥವರ ಯೋಗ್ಯತಾಂಶಗಳೆಲ್ಲಾ ಒಂದೇ ಕಡೆ ಕೂಡಿದ್ದ ವ್ಯಕ್ತಿಯೆಂದರೆ ಪವಿತ್ರಚರಿತರಾದ ಆ|| ಗೋಖಲೆಯವರೇ ಸರಿಯೆಂದು ಹೇಳಬೇಕಾಗುತ್ತದೆ. ಇವರ ನಿಗರ್ವಶೀಲತೆಯು ಅನ್ಯಾದೃಶ್ಯವಾದುದು. ಇವರ ಸ್ವಾರ್ಥತ್ಯಾಗವು ಅನನ್ಯಸುಲಭವಾದುದು. ಇವರ ಶಾಂತಸ್ವಭಾವವು ಗಾಢತರವಾದುದು. ಇವರ ವಿವೇಕಶಕ್ತಿಯು ಅದ್ಭುತವಾದುದು. ಇವರ ವಿಷಯಪರಿಶೋಧನನಿರೂಪಣಸಾಮರ್ಥ್ಯವು ಅಚುಂಬಿತವಾದುದು. ಇವರು ೧೮೬೬ನೆಯ ವರ್ಷದಲ್ಲಿ ಕೊಲ್ಲಾಪುರದಲ್ಲಿ ಒಂದು ಬಡಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ತಮ್ಮ ೧೮ನೆಯ ವಯಸ್ಸಿನಲ್ಲಿ ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಸ್ವರ್ಗವಾಸಿ ಸುಪ್ರಸಿದ್ಧ ಮಹಾದೇವ ಗೋವಿಂದರ್ಯಾನಡೆಯವರು ಇವರಿಗೆ ಮುಖ್ಯಗುರುಗಳು. ಆ ಮಹನೀಯರ ಹಿತೋಪದೇಶವೂ ಮಾರ್ಗದರ್ಶನವೂ ಈ ಪುಣ್ಯಪುರುಷರ ಜನ್ಮವನ್ನು ಪಾವನತರ ಸುಪ್ರತೀತವನ್ನಾಗಿ ಮಾಡುವುದಕ್ಕೆ ಸಾಧಕವಾದುವು. ಇವರು ತಮ್ಮ ೨೧ನೆಯ ವಯಸ್ಸಿನಲ್ಲಿ ಪುನಾನಗರದಲ್ಲಿ ಸಾರ್ವಜನಿಕ ಸಭೆಯವರಿಂದ ಪ್ರಕಟಿಸಲ್ಪಡುತ್ತಿದ್ದ ಒಂದು ಪತ್ರಿಕೆಗೆ ಸಂಪಾದಕರಾದರು. ಬಳಿಕ ಸುಧಾರಕ-ಜ್ಞಾನಪ್ರಕಾಶಿಕಾ ಎಂಬ ಪತ್ರಿಕೆಗಳಿಗೂ ಕೆಲಕಾಲ ಸಂಪಾದಕರಾಗಿದ್ದು ತಮ್ಮ ದೇಶಸೇವಾ ವ್ರತವನ್ನು ಬಳೆಯಿಸುತ್ತಬಂದರು. ಇವರು ಕೊಟ್ಟಪರೀಕ್ಷೆಯಲ್ಲುತ್ತೀರ್ಣರಾದವರ್ಷವೇ ದಕ್ಷಿಣ ವಿದ್ಯಾವರ್ಧಕ ಸಂಘದ ಸಭ್ಯರಾಗಿ ಏರ್ಪಡಿಸಲ್ಪಟ್ಟರು. ಆ ಸಂಘದಿಂದ ಸ್ಥಾಪಿತವಾಗಿರುವ ವಿದ್ಯಾಲಯದಲ್ಲಿಯೇ ೭೫ ರೂಪಾಯಿಗಳ ಮಾಸವೇತನವನ್ನು ಮಾತ್ರ ಪಡೆದು ತಮ್ಮ ವಿದ್ಯಾವಿವೇಕನೈತಿಕಸಂಪತ್ತಿಗಳನ್ನೆಲ್ಲಾ ಸಾವಿರಾರು ಮಂದಿ

ವೀರಶೈವಮಹಾಜನಂಗಳಿಗೆ ವಿನಂತಿ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಗಾಗಿ ಲಗ್ನ ವಗೈರೆ ಕಾಲಗಳಲ್ಲಿ ತೆಗೆದ ವೊಬಲಗನ್ನು ಈ ಕೆಳಗಿನ ವಿಳಾಸಕ್ಕೆ ದಯಾವಿಟ್ಟು ಕಳುಹಿಸಿಕೊಡಬೇಕಾಗಿ ಕೋರಿಕೆ.

ಜಿ. ಕೆ. ರುದ್ರಾರ್ಯ,
ಆಕ್ಟಿಂಗ್ ಸೆಕ್ರಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್‌ಸಭೆ
ರೋಪರ್ಟಬಾಗ್‌ರೋಡ್ ಬೆಂಗಳೂರು.

೧೯೧೫ ನೆಯ ಜನವರಿ ತಾ|| ೩೦ ರಲ್ಲಿ ಮಾಗಡಿ ತಾ|| ಸಾವನದುರ್ಗದಲ್ಲಿ ಶ್ರೀ ವೀರಭದ್ರೇಶ್ವರಸ್ವಾಮಿಯವರ ರಥೋತ್ಸವವು ಬಹಳ ವಿಜೃಂಭಣೆಯಿಂದ ನಡೆದಿತು. ವೀರೇ

ವದೊಡನೆ ಸರ್ವಭಕ್ತರೂ ಪಾಠಶಾಲೆಯವರೆಗೂ ಕಳುಹಿಸಿಬಂದರು.

ಸ್ಥಳನಿವಾಸಿ

ಕೊರಟಗೆರೆ.

ಈ ಕೊರಟಗೆರೆಯಲ್ಲಿ ಅಮಲ್ದಾರರಾಗಿದ್ದು ಗುಬ್ಬಿ ತಾಲ್ಲೂಕಿಗೆ ವರ್ಗವಾದ ವೆ|| ಸುಬ್ಬರಾಯರವರು ಹೊರಡುವ ದಿವಸ ಮುನಿಸಿಪಲ್ ಮೆಂಬರುಗಳು, ವರ್ತಕರುಂಡಳಿಯುವರೇ ಮೊದಲಾದ ದೊಡ್ಡಮನುಷ್ಯರುಸೇರಿ ಪೇಟೆಯ ಮಧ್ಯದಲ್ಲಿ ತಳಿರುತೋರಣಗಳಿಂದ ಚಪ್ಪರವನ್ನು ಹಾಕಿಸಿದ್ದರು. ಹೊಸದಾಗಿ ಬಂದಿರುವ ಅಮಲ್ದಾರರು ವೆ|| ಸಂತಾನಂ ಅಯ್ಯಂಗಾರ್‌ರವರಿಗೂ, ವೆ|| ಸುಬ್ಬರಾಯರವರಿಗೂ ಸಹ ೧೦-೧-೧೯೧೫ ನೆ ಭಾನುವಾರದದಿವಸ ಸುವರ್ಣಮುಖೀ ನದಿಯದಡದಲ್ಲಿರುವ ಅಮಲ್ದಾರ್ ವೆ|| ಲಿಂಗೇ

ವಂತೆ ನಮ್ಮ ಪ್ರಾಂತ್ಯದಲ್ಲೂ ಈ ಆಚರಣೆಯನ್ನು ತರಬೇಕೆಂಬ ಉದ್ದೇಶವನ್ನು ಸಹ ಕುರಿತು ಸೂಚಿಸಿದರು. ಅದಕ್ಕೆ ಸದರಿ ಚಿಕ್ಕಮಲ್ಲಪ್ಪನವರು ಅನುಮೋದಿಸಿದ ಕೂಡಲೆ ಸಂಘಕ್ಕಾಗಿ ೩ ರೂ. ಸಮೇತ ತಾಂಬೂಲವನ್ನು ತೆಗೆದು ಗುಂಡ್ಲುಪೇಟೆ ವೆ|| ಗುರುಕಾರ್ ನಂಜಪ್ಪನವರ ವಶಕ್ಕೆ ಕೊಟ್ಟು, ಇದನ್ನು ಸಂಘದ ಸಕ್ರೆಟರಿಯವರಿಗೆ ಮನಿಯಾರ್ಡರ್ ಮೂಲಕ ಕಳುಹಿಸಿಕೊಡಬೇಕೆಂದು ಹೇಳಿದರು. ಅದರಂತೆ ಸದರಿ ಗುರುಕಾರರು ಅದನ್ನು ಸ್ವೀಕರಿಸಿ ಸದರಿ ಚಿಕ್ಕಮಲ್ಲಪ್ಪನವರು ಫಂಡಿನ ವಿಷಯದಲ್ಲಿ ನಡೆಸಿರುವಂತೆ ನಮ್ಮ ಪ್ರಾಂತ್ಯದ ಇತರರೂ ಅನುಸರಿಸಿ ಮತಾಭಿಮಾನಿಗಳಾದ ಸರ್ವರೂ ಇದರಂತೆ ತಮ್ಮತಮ್ಮ ಮನೆಗಳಲ್ಲಿ ನಡೆಯುವ ಮದುವೆ ವಗೈರೆ ಶುಭಕಾರ್ಯಗಳಲ್ಲಿ ನಡೆಸಬೇಕೆಂದು ಗುರುಕಾರರು ಸೂಚಿಸಿದರು. ಅದಕ್ಕೆ ಮತಾಭಿಮಾನಿಗಳಾದ ಸಭಾಸದರೆಲ್ಲರೂ ಅನುಮೋದಿಸಿದರು. ಅನಂತರ ನೆರೆದಿದ್ದ ಸರ್ವರಿಗೂ ಗಂಧ ಪುಷ್ಪಹಾರತಾಂಬೂ



ಈ ಸಂಚಿಕೆಯ ಪುರವಣಿ.

ಕೂಸನೂರ ಬ್ರಹ್ಮಶ್ರೀ ಸಿದ್ಧಾಂತಿ ಮಲ್ಲೇಶಶಾಸ್ತ್ರಿಗಳಿಂದ ಸ್ಥಾಪಿತವಾಗಿರುವ

ಜಗಜ್ಜ್ಯೋತಿ ಬುಕ್‌ಡಿಪೋ.

ಸ್ಥಳ ಕೂಸನೂರು, ಪೋಸ್ಟ ತಿಳ್ವಳ್ಳಿ, ಜಿಲ್ಲಾ ಧಾರವಾಡ.

ತಿಳಿಗನ್ನಡ **ಜಗಜ್ಜ್ಯೋತಿ !!!** ಮಾಸಪತ್ರಿಕೆ.

ವಾಚಕಮಹಾಶಯರೇ !

ಜಗಜ್ಜ್ಯೋತಿಯು ಜ್ಯೋತಿಷದಲ್ಲಿಯ ಮುಹೂರ್ತಭಾಗ, ಪ್ರಶ್ನಭಾಗ, ಜಾತಕಭಾಗ, ಪಂಚಾಂಗ ಸಿದ್ಧಾಂತಭಾಗಗಳನ್ನು ತಮ್ಮ ತಮ್ಮ ಮನೆಯಲ್ಲಿದ್ದು ಕಲಿಯಲಪೇಕ್ಷಿಸುವವರಿಗೆ ಕೇವಲ ಕಾಮಧೇನುವೇ !! ಇದರಲ್ಲಿ ಜಾತಕಭಾಗ, ಪಂಚಾಂಗಸಿದ್ಧಾಂತಭಾಗಗಳನ್ನಂತು ಅಚ್ಚಗನ್ನಡದ ಸೂತ್ರೋದಹಾರಣೆಗಳೊಡನೆ ಬರೆಯುತ್ತ ಬರುತ್ತಿರುವದರಿಂದ ಸ್ಕೂಲ್‌ಮಾಸ್ತರರೂ, ಗಣಿತಜ್ಞರಾದ ವಿದ್ಯಾರ್ಥಿಗಳೂ ಈ ಮಾಸಿಕದ ಸಹಾಯದಿಂದ ಅತ್ಯಲ್ಪಕಾಲದಲ್ಲಿಯೇ ಜಾತಕಬರೆಯಲಿಕ್ಕೂ, ಪಂಚಾಂಗ ಗುಣಿಸಲಿಕ್ಕೂ ನಿಸ್ಸಂದೇಹವಾಗಿ ಬರುವವೆಂದು ಸಾರಿ! ಸಾರಿ!! ಹೇಳುತ್ತೇವೆ ಇಷ್ಟೇಕೆ!!! ಜಗಜ್ಜ್ಯೋತಿಯು ಕಡುಚಿಂತೆಯಿಂದ ಕೂಡಿದ ಮನುಜನನ್ನಾದರೂ ಓದುತ್ತಿದಂತೆ ಆನಂದ ಉಕ್ಕೇರುವಂಥ ಮನೋಹರವಾದ ಕಾದಂಬರಿಗಳಿಂದಲೂ, ಸನ್ಮಾರ್ಗವನ್ನು ಸಬ್ಬೋಧಿಸುವ ನೀತಿವಚನಗಳಿಂದಲೂ ಕೂಡಿ ಹೊರಡುವದರಿಂದ ಜಗಜ್ಜ್ಯೋತಿಯು ಯಾರಿಗೆತಾನೇ ಬೇಡ !!!

ಜಗಜ್ಜ್ಯೋತಿಯು ಉದಯವಾದ ಒಂದೇ ತಿಂಗಳಲ್ಲಿ ೪೦೦ ಜನ ಚಂದಾದಾರರನ್ನು ಕೂಡಿಸಿಕೊಂಡಿರುವದಲ್ಲದೆ ಪರೋಪಕಾರಿಗಳಾದ ಚಂದಾದಾರರನೇಕರು ಜಗಜ್ಜ್ಯೋತಿಯನ್ನು ತಮ್ಮ ಆಪ್ತಮಿತ್ರಮಂಡಳಿಗೆ ತೋರಿಸಿ ಚಂದಾದಾರರನ್ನು ಕೂಡಿಸಿಕೊಡುತ್ತಿರುವದರಿಂದ ಇಂಥಾ ಸದ್ಗುಣಗಳ ಬಗ್ಗೆ ಜಗಜ್ಜ್ಯೋತಿಯು ಋಣಿಯಾಗಿರುವದು.

ಪ್ರಾಜ್ಞಶಿಖಾಮಣಿಗಳಾದ - ಜಗಜ್ಜ್ಯೋತಿಯ ಪ್ರಭೆಯು ಅತ್ಯಲ್ಪಕಾಲದಲ್ಲಿ ಕನ್ನಡನಾಡನ್ನೇ ನಿಬ್ಬೆರಗುಪಡಿಸುವದೆಂದು ಒಂದುಸಾರೆಯಾಕೆ ಸಾವಿರಾರುಬಾರಿ ನಿಸ್ಸಂದೇಹವಾಗಿ ಆಡುತ್ತೇವೆ - ಇಂಥಾ ಸದಭಿಪ್ರಾಯದ ಪತ್ರಿಕೆಗಳು ಹೇರಳವಾಗಿ ಬಂದಿರುತ್ತವೆ.

ಜಗಜ್ಜ್ಯೋತಿಯ ಗುಣಕಥನವನ್ನು ಜಾಹೀರಾತಿನಲ್ಲಿ ವಿಶಕ್ಕೆ ವರ್ಣಿಸುವದು ? ಒಂದು ಕಾರ್ಡನ್ನು ಬರೆದವರಿಗೆ ಒಂದು ಮಾದರಿಸಂಚಿಕೆಯನ್ನು ಪುಕಟ ರವಾನಿಸುತ್ತೇವೆ. ಜಗಜ್ಜ್ಯೋತಿಯನ್ನು ಪರಿಪೂರ್ತಿ ಓದಿದಲ್ಲಿ ಕನ್ನಡದೊಳಗೆ ಇಂಥಾ ಪತ್ರಿಕೆಗಳು ಇದುಪರ್ಯಂತ ಪ್ರಕಟವಾಗಿರುವದಿಲ್ಲೆಂಬುವದೂ ಜಗಜ್ಜ್ಯೋತಿಗೆ ನಾನೋರ್ವನೇ ಚಂದಾದಾರನಾಗುವದು ಹಾಗಿರಲಿ, ಪರೋಪಕಾರಕ್ಕಾಗಿ ಹೊರಟಿರುವ ಜಗಜ್ಜ್ಯೋತಿಗೆ ಚಂದಾದಾರರನ್ನು ಕೈಲಾದಮಟ್ಟಿಗೆ ಕೂಡಿಸಿಕೊಡಬೇಕೆಂಬುವದೂ ಪ್ರತಿಯೊಬ್ಬರ ಮನಸ್ಸಿನಲ್ಲಿ ಬಿಂಬಿರದು !!!

ಜಗಜ್ಜ್ಯೋತಿಯ ವಾರ್ಷಿಕಚಂದಾ—ಅಂಚೆವೆಚ್ಚ ಸೇರಿ ೨ ರೂಪಾಯಿ.
ವಿಳಾಸ:—ಎಡಿಟರ್, “ ಜಗಜ್ಜ್ಯೋತಿ ’’ ಕೂಸನೂರು

ಟಕ್ಕೊಳಗಾಗಬಹುದು ? ಅಂತೆಯೇ ಜಾತಕ ಇಲ್ಲದವನು ಮುಂದಿನ ಸುಖದುಃಖ ಕಂಟಕಗಳನ್ನರಿಯದೆ ಮಹದನರ್ಥಕ್ಕೊಳಗಾಗಬಹುದು. ಇದನ್ನರಿತು ಅಕ್ಷರಜ್ಞರಾದ ಸಕಲ ಕನ್ನಡಿಗರು ಈ ಬೃಹಜ್ಜಾತಕದ ಸಹಾಯದಿಂದ ತಮಗೆ ಮುಂದೊದಗಬಹುದಾದ ಸುಖದುಃಖಗಳನ್ನು ಮೊದಲೇ ಅರಿತು ತಚ್ಛಾಂತಿಯನ್ನಾಚರಿಸಿ ಸುಖಭಾಜನರಾಗಬಹುದು. ಈ ಬೃಹಜ್ಜಾತಕದ ಬಗ್ಗೆ ಎಷ್ಟೋ ಪಂಡಿತರು ಈ ಬೃಹಜ್ಜಾತಕವನ್ನವಲೋಕಿಸಿ ಜಾತಕದ ಮರ್ಮವನ್ನರಿಯಬೇಕೆಂದು ಸಹಸ್ರಾವಧಿ ಗ್ರಂಥಗಳನ್ನು ಸಂಗ್ರಹಿಸುವದಕ್ಕಿಂತಲೂ ಇದೊಂದು ಗ್ರಂಥ ಇದ್ದರೆ ಸಾಕು- ಸ್ವಲ್ಪ ಓದುಬರಹ ಬಲ್ಲ ಮನುಜನಾದರೂ ಪರರ ಸಹಾಯವಿಲ್ಲದೆ ಜಾತಕ ಬರೆಯಲಿಕ್ಕೆ ನಿಸ್ಸಂದೇಹವಾಗಿ ಬರುವದೆಂಬ ಸದಭಿಪ್ರಾಯದ ಶಿಫಾರಸ ಪತ್ರಿಕೆಗಳು ಬಂದಿರುವವು ಪ್ರತಿಗಳಾದರೂ ಸ್ವಲ್ಪ ಉಳಿದಿರುತ್ತವೆ. ಅಪೇಕ್ಷಕರು ತ್ವರೆಗಯ್ಯಿರಿ ! ಬೆಲೆ ಪ್ರತಿ ೧ಕ್ಕೆ ೪ ರೂಪಾಯಿ. ಟಪ್ಪಾಲುಖರ್ಚು ೮ ಆಣೆ.

ಟೀಕಾತಾತ್ಪರ್ಯಸಹಿತವಾದ

ಕರ್ನಾಟಕ ಜೈಮುನಿಭಾರತವು.

ಇದು ಪದ್ಯ, ಪ್ರತಿಪದಾರ್ಥ, ತಾತ್ಪರ್ಯ, ಅವಯವಾರ್ಥ, ಸಂಧಿ, ಸಮಾಸ, ಅಲಂಕಾರ, ಛಂದೋವಿವರಣೆ ಮೊದಲಾದವುಗಳಿಂದೊಡಗೂಡಿ, ಸ್ಕೂಲಿನಲ್ಲಿ ಓದುವ ವಿದ್ಯಾರ್ಥಿಗಳು ಮೊದಲುಮಾಡಿ ಪ್ರೌಢವಿದ್ವಾಂಸರವರೆಗಿನ ಎಲ್ಲ ಸ್ತ್ರೀ ಪುರುಷರೂ ಓದಲು ಅನುಕೂಲವಾಗಿರುತ್ತದೆ. ಕರ್ನಾಟಕಭಾಷೆಯ ಕವಿಸಾರ್ವಭೌಮನಾದ ಲಕ್ಷ್ಮೀಶಕವಿಯ ಜೈಮಿನಿಭಾರತವು ಪದ ಲಾಲಿತ್ಯ, ಅರ್ಥಗಾಂಭೀರ್ಯ, ಮಾಧುರ್ಯ ಶೈಲಿ, ಸರಸತೆ, ಅರ್ಥಚಮತ್ಕೃತಿ, ಭಾವವೈಚಿತ್ರ್ಯ, ಅಲಂಕಾರವೈಖರಿ, ಶ್ರಾವ್ಯತೆ, ಮುಂತಾದವುಗಳಿಂದೊಡಗೂಡಿ ಸರಸಸಮ್ಮಿಳಿತವಾಗಿರುವುದೆಂಬುದು ಕನ್ನಡನಾಡಿಗೆ ಗೊತ್ತಾಗಿರುವುದರಿಂದ ವಿಶೇಷ ಬರೆಯುವದನಾವಶ್ಯಕ. ಮುಖ್ಯವಾಗಿ ಇದನ್ನು ವಿಶೇಷ ಪರಿಶೋಧಿಸಿ ಅಚ್ಚುಹಾಕಿಸಿರುವದರಿಂದ ಇದರಲ್ಲಿ ದೋಷಗಳೇ ಇಲ್ಲ. ಸಂಪೂರ್ಣವಾಗಿ ಅಂದರೆ ೩೪ ಸಂಧಿಗಳನೊಳಗೊಂಡು ಈ ಶುದ್ಧ ಪ್ರತಿ ೧ಕ್ಕೆ ಬೆಲೆ ೪ ರೂಪಾಯಿ, ಟಪ್ಪಾಲ್ ಹಾಸಲು ೮ ಆಣೆ.

ವೀರಶೈವಾಚಾರ ನಿರ್ಣಯ ಚಿಂತಾಮಣಿ.

ಈ ಗ್ರಂಥವು ರಾವ್‌ಬಹದ್ದೂರ. ಆನರಬಲ್ ರುದ್ರಗೌಡರವರ ಪ್ರೋತ್ಸಾಹದಿಂದ ದಡ್ಡಿ ರಾಘಪ್ಪಶೆಟ್ಟರು ವಿರಚಿಸಿರುವರು. ಇದರಲ್ಲಿ ನಿರಾಭಾರಿ ವೀರಶೈವರುತ್ಪತ್ತಿ, ವಿಶೇಷ ವೀರಶೈವರುತ್ಪತ್ತಿ, ಸಾಮಾನ್ಯವೀರಶೈವರುತ್ಪತ್ತಿ, ಈ ತ್ರಿವಿಧವೀರಶೈವಾಂತರ್ಗತವಾದ ಮಠಗಳೂ ಅವುಗಳುತ್ಪತ್ತಿಯೂ ಸಪ್ರಮಾಣದಿಂದ

ಪುರಾಣಗಳನ್ನು ಹೇಳಿಸುವುದು ಅಷ್ಟು ಪ್ರಯೋಜನಕರವಲ್ಲವೆಂಬದಾಗಿ ೧ ಘಂಟೆಯಕಾಲ ಸುಂದರಭಾಷಣಮಾಡಿ ಸಭಿಕರನ್ನಾನಂದಗೊಳಿಸಿದರು. ಬಳಿಕ ನೆರೆದ ಸಭಿಕರಿಗೆ ಪೂವಾಳೆಗಳಿಂದಲೂ ಗಂಧತಾಂಬೂಲದಿಂದಲೂ ಸತ್ಕರಿಸಿ ಕೂಡಲೆ ಸದರಿ ಶಾಸ್ತ್ರಿಗಳನ್ನು ಬ್ಯಾಂಡು ಮೊದಲಾದ ವಾದ್ಯರ

ಪ್ರಸ್ತಾಪಿಸಿ ... ರ್ಯಗಳಲ್ಲಿ ಮರ್ಯಾದಾಪೂರ್ವಕ ದ್ರವ್ಯಸಹಾಯಮಾಡುತ್ತಿರುವಂತೆ ನಮ್ಮ ಕಡೆಯೂ ಆಚರಣೆಯು ಇಲ್ಲದಿರುವುದನ್ನೂ ಈ ಫಂಡಿನಿಂದ ನಮ್ಮ ವೀರಶೈವವರ್ತಕ್ಕೆ ಉಂಟಾಗತಕ್ಕ ಮಹದುಪಕಾರಗಳನ್ನೂ ಇತರಕಡೆ ನಡೆಯು

ತೀಯವರೇ ಮೊದಲಾದ ಸುಂದರವಾದ ಪಠಗಳು. ಕ್ರಯ ೨ ಆಣೆ; ವಿ. ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ:—ಬಿ ಜನರಲ್ ಏಜನ್ಸಿ, ಮೈಸೂರು.

ಅಮೇರಿಕಾದಿಂದ ಇತರದೇಶಗಳಿಗೆ ಸಾಗಿಸಲ್ಪಡುತ್ತಿದ್ದ ಹತ್ತಿಯ ಮೂಟೆಗಳಲ್ಲಿ ಪ್ರತಿಯೊಂದರಲ್ಲೂ ೪ ಪೌನಿನ ರಬ್ಬರು ಅಡಗಿಸಲ್ಪಟ್ಟಿದ್ದಿತು. ಇದನ್ನು ಅಮೇರಿಕಾದ ಮತ್ತೂ ಇಂಗ್ಲೀಷರ ಅಧಿಕಾರಿಗಳು ಅಂತರ್ಗತವಸ್ತುಛಾಯಾಗ್ರಹಣಯಂತ್ರ (ಎಕ್ಸ್‌ರೈಸ್) ಸಾಹಾಯ್ಯದಿಂದ ಕಂಡುಹಿಡಿದು, ಆ ೧೭೭೮ ಮೂಟೆಯ ಹತ್ತಿಯನ್ನೂ ಸಾಗುವುದಕ್ಕೆ ತಡೆಮಾಡಿ ನಿಲ್ಲಿಸಿಬಿಟ್ಟರು.

ಉರಲುಗಡ್ಡೆ ಮೊದಲಾದ ಪದಾರ್ಥಗಳ ಮಾರಾಟದ ವಿಷಯದಲ್ಲಿ ಜರ್ಮನರು ಬಹಳ ನಿರ್ಬಂಧವನ್ನು ಕಲ್ಪಿಸಿದ್ದರು. ಅದರಿಂದ ಬಹಳ ದೂರು ಉಂಟಾಗಲು, ಬಹಿರಂಗವಾಗಿ ಮಾರಬಹುದೆಂದು ಅಪ್ಪಣೆಮಾಡಿದರು. ಆ ಸುದ್ದಿಯನ್ನು ಕೇಳಿದಕೂಡಲೆ ಪ್ರಜೆಗಳು ತಂಡೋಪತಂಡವಾಗಿ ಮಾರಕಟ್ಟೆಗಳಿಗೆ ಒಬ್ಬರಮೇಲೊಬ್ಬರು ನುಗ್ಗಿ ಹೋದರು. ಮಾರಾಟಕ್ಕಾಗಿ ಸುಂಕವನ್ನು ಸಲ್ಲಿಸಿದ ರಸೀದಿಯನ್ನು ತೋರಿಸಬೇಕೆಂದು ಅಧಿಕಾರಿಗಳು ಪ್ರಜೆಗಳನ್ನು ಕೇಳಿದಾಗ ಜನರು ಅಧಿಕಾರಿಗಳ ಮೇಲೆಬಿದ್ದು ಹೊಡೆದು ಬೇಕಾದಷ್ಟು ಗದ್ದಲವನ್ನು ಮಾಡಿದರು. ಇದರಿಂದ ಆ ದೇಶದಲ್ಲಿ ಆಹಾರ್ಯವಸ್ತುಗಳು ಎಷ್ಟು ಪ್ರಿಯವಾಗಿವೆಯೆಂಬುದು ಗೊತ

ಹಿಂದೂ

ದೂಸ್ಥಾನಕ್ಕೆ

ಕರ್ಜನ್ ರವರ

ಕ್ರೆಟರಿಯವರ

ಹಿಂದೂದೇಶ

ರುವರೆಂಬುದ

ವುದಕ್ಕಾಗಿ ತ

ಗೆ ಕಳುಹಿಸಿಕೆ

ಯುದ್ಧಮಾಡ

ವರಾಗಿದ್ದಾರೆ

ತಿನಂತೆ ನಾವೇ

ವೆ'' ಎಂದು

ಈಗಿನ

ಯಾಗಿರುವ ಸ

ಗಳ ಮಧ್ಯಭಾ

ಗಣದಲ್ಲಿ ನಡೆ

ವಾಗಿ ಬರೆದಿರು

ಕ್ರಮಗಳನ್ನು

ಡುವಾಗ್ಗೆ—

ಧೈರ್ಯಸ್ಥೈರ್ಯಗ

೧೮ರಲ್ಲಿ ೧೯ನೇ

ಮುಗಿದ ಬಳಿಕ

ರಲ್ಲಿ ಯಾವ ಲೆ

ಪ್ಪೋ ಸೊಗಸ

ಮಾಡುವ ಸಾ

ಗಿದೆ. ಇದು

ಯೇ ಈ ನೂತ

ಆಗಬೇಕಾಗಿದ್ದ

ಅವರ ನೇಮಕ

ನೋಡಿದೆನು.

ರು. ಆ ಕೂಡ

ಜರುಗುತ್ತಿದ್ದ ಕ

ರೆಲ್ಲರೂ ಬಹು

ಮಾಡಿದರು''

ರು ಯಾವಯಾ

ಮಾಡಿ ಜಯಶೀ

ಈಚೆಗೆ ಮಿ

ಗುತ್ತಲೂ ಶತ್ರು

ಅವರ ಕಂದಕಗಳ

ಜರ್ಮನರು ಬಹಳ

ಮೇಲೆಫಿರಂಗಿಗಳನ್ನ

ವಂತೆ ಕಾಣುತ್ತದೆ.

ಹಲವುಬಾರಿ ಫಿರಂಗಿ

ಜೆಗಳಲ್ಲಿ ೩೦ ಮಂದಿಗಳ

೧೫೦೦ ಫಿರಂಗಿಗುಂಡು

ದ್ದುವು. ಇದುವರೆಗೆ

ರಳಿಯೂ ಅನೇಕ ಗುಂ

ವೆಂಚಿಯಹತ್ತಿರ

ಮೇಲೆ ಫಿರಂಗಿಗಳ

ಟ್ಜೆ-ಡಿ-ಲಿಸ್-ಲಾಬ

ಪ್ರೆಸ್-ಮ್ಯೂಜು-

ಮಂಡಲಿಯವರಿಗೇ

ಕರು ನಮ್ಮವರಿಗೆ ಸಿಕ್ಕಿದ್ದಾರೆ. ಅವರ ಸೇನೆಯಲ್ಲಿ ಬಹಳ ನಷ್ಟವೂ ಆಗಿದೆ. ಲಾಪಾರ್ಜಿಸ್ಸಿನ ಪ್ರಾಂತದಲ್ಲಿ ಶತ್ರುಗಳು ಆಕ್ರಮಿಸಿದ್ದ ಸ್ಥಾನಗಳೆಲ್ಲವೂ ಮಿತ್ರಮಂಡಲಿಯವರಿಗೆ ಸೇರಿದಂತೆಯೇ ಆಯಿತು. ವರ್ಡನ್ನಿಗೆ ದಕ್ಷಿಣದಲ್ಲಿರುವ ಲಾಪಾರ್ಜಿಸ್ಸಿನ

ಹತ್ತಿರ ೭ ನೆ ಯಾವೃತ್ತಿ ನಡೆದ ಯುದ್ಧದಲ್ಲಿ ಮೇಲೆಬಿದ್ದ ಶತ್ರುಗಳನ್ನು ಮಿತ್ರಮಂಡಲಿಯವರು ಹಿಮ್ಮೆಟ್ಟಿಸಿದುದೇ ಅಲ್ಲದೆ, ಅವರಮೇಲೆ ಇವರೇಬಿದ್ದು, ಅವರಿದ್ದ ಸ್ಥಲಗಳನ್ನು ಆಕ್ರಮಿಸಿಕೊಂಡರು. ಆಗ ಶತ್ರುಗಳ ಮೂರು ಫಿರಂಗಿಗಳೂ ಸಿಡಿಮದ್ದುಗಳನ್ನು ಹಾಕುವ ಕೆಲ ಯಂತ್ರಗಳೂ ೨೨೦೦ ಮಂದಿ ಸೈನಿಕರೂ ಕೆಲಮಂದಿ ಉದ್ಯೋಗಸ್ಥರುಗಳೂ ನಮ್ಮವರಿಗೆ ಸೆರೆಸಿಕ್ಕಿದರು. ಸೆರ್ನ್ಯಸ್ಸಿನಹತ್ತಿರ ನಡೆದ ಯುದ್ಧದಲ್ಲಿ ಮಿತ್ರಮಂಡಲಿಯವರು ಶತ್ರುಗಳಲ್ಲಿ ೪೦೦ ಮಂದಿಯನ್ನು ಸೆರೆಹಿಡಿದುಕೊಂಡು ಅವರಿದ್ದ ಸ್ಥಲವನ್ನೂ ಆಕ್ರಮಿಸಿದರು. ಕಳೆದವಾರವೆಲ್ಲಾ ಆದ ಯುದ್ಧದಲ್ಲಿ ಶತ್ರುಗಳಕಡೆ ೧ ಪಟಾಲಮ್ಮಿನಷ್ಟು ಜನರು ಸತ್ತಿರುವರೆಂದು ಸೆರೆಸಿಕ್ಕಿದ ಜರ್ಮನರ ಮಾತಿನಿಂದಲೇ ಗೊತ್ತಾಗಿದೆ.

ಪೂರ್ವರಣರಂಗ.

ಈಚೆಗೆ ಜರ್ಮನ್‌ದೇಶಕ್ಕೆ ಆಸ್ಟ್ರಿಯಾಮಂತ್ರಿಯು ಹೋಗಿ ತಮಗೆ ಇದುವರೆಗೆ ಆಗಿರುವ ಯುದ್ಧದ ಪರಿಣಾಮವನ್ನು ಹೇಳಿಕೊಂಡು, ಯುದ್ಧಶಾಂತಿಪ್ರಯತ್ನವನ್ನು ಸೂಚಿಸಲು, ಜರ್ಮನರು ಅವರನ್ನು ಹುರಿದುಂಬಿಸುವುದಕ್ಕಾಗಿ ಮರಳಿ

…ಯುತ್ತವೆ.

ಆಕಾಶವಿಮಾನಗಳು.

ಜರ್ಮನರ ಆಕಾಶವಿಮಾನಗಳು ಫ್ರಾನ್ಸ್-ಇಂಗ್ಲೆಂಡ್ ದೇಶಗಳ ಕಡೆಗೆ ಪದೇಪದೇ ಸಂಚರಿಸಿ ಸಿಡಿಮದ್ದುಗಳನ್ನು ಹಾಕುತ್ತಲಿವೆ. ಫ್ರಾನ್ಸಿನ ಪಶ್ಚಿಮದಲ್ಲಿ ಉತ್ತರಕ್ಕೆ ಹೋಗುತ್ತಿದ

೨ ಜಪ್ಪಲಿನ್ ವಿಮಾನಗಳಲ್ಲಿ ಒಂದು ದೊಡ್ಡ ವಿಮಾನದ ಯಂತ್ರವು ಕೆಟ್ಟು ಸುಟ್ಟುಹೋಗಿ ಸಮುದ್ರತೀರದಲ್ಲಿಳಿದಿತು. ಅದರಲ್ಲಿದ್ದ ೧೪ ಮಂದಿಗಳನ್ನೂ ಫ್ರೆಂಚರು ಹಿಡಿದು ಸೆರೆಹಾಕಿದರು. ಮತ್ತೊಂದು ಜಪ್ಪಲಿನ್ ವಿಮಾನವು ಡೆನ್ಮಾರ್ಕ್ ದೇಶದ ಜಿಡ್ಲ್ಯಾಂಡಿಗೆ ಪಶ್ಚಿಮದಲ್ಲಿ ಕೆಳಕ್ಕಿಳಿದಿತು. ೪ ಮಂದಿ ವೈಮಾನಿಕರು ನೀರಿನಲ್ಲಿ ಬಿದ್ದುಹೋದರು. ಉಳಿದವರು ದಡದ ಮೇಲೆ ಕಾವಲಿದ್ದವರ ವಶವಾದರು.

ಡನ್‌ಕರ್ಕಿನ ಹತ್ತಿರ ಹಾರಿಹೋಗುತ್ತಿದ್ದ ಒಂದು ಜರ್ಮನ್ ವಿಮಾನವು ತುಪಾಕಿಯೇಟಿನಿಂದ ಕೆಳಕ್ಕೆ ಬಿದ್ದಿತು. ಒಳಗಿದ್ದ ವೈಮಾನಿಕರಿಬ್ಬರೂ ಸತ್ತರು.

ಫ್ರೆಂಚ್ ವೈಮಾನಿಕನೊಬ್ಬನು ಆಸ್ಟೆಂಡ್ ಪಟ್ಟಣದ ಮೇಲಕ್ಕೆ ಹಾರಿಹೋಗಿ ಸೇನಾಗೃಹದ ಮೇಲೆ ಸಿಡಿಮದ್ದನ್ನು ಹಾಕಿದನು. ಬಹಳ ಗದ್ದಲವೆದ್ದಿತು. ನಷ್ಟವೇನಾಯ್ತೆಂಬುದು ಗೊತ್ತಾಗಲಿಲ್ಲ.

ಜರ್ಮನರ ಕೆಲವಿಮಾನಗಳು ಕಳೆದ ತಾ|| ೨೧ರ ರಾತ್ರಿ

…ತ್ತಿಬಂದರು. ಇವರು ಕೊಟ್ಟಪರೀಕ್ಷೆಯಲ್ಲುತ್ತೀರ್ಣರಾದವರ್ಷವೇ ದಕ್ಷಿಣ ವಿದ್ಯಾವರ್ಧಕ ಸಂಘದ ಸಭ್ಯರಾಗಿ ಏರ್ಪಡಿಸಲ್ಪಟ್ಟರು. ಆ ಸಂಘದಿಂದ ಸ್ಥಾಪಿತವಾಗಿರುವ ವಿದ್ಯಾಲಯದಲ್ಲಿಯೇ ೭೫ ರೂಪಾಯಿಗಳ ಮಾಸವೇತನವನ್ನು ಮಾತ್ರ ಪಡೆದು ತಮ್ಮ ವಿದ್ಯಾವಿವೇಕನೈತಿಕಸಂಪತ್ತಿಗಳನ್ನೆಲ್ಲಾ ಸಾವಿರಾರು ಮಂದಿ

ಗನ್ನಡ ವಚನರೂಪವಾಗಿ ರಚಿಸಲ್ಪಟ್ಟಿರುವದರಿಂದ ಅಲ್ಪಜ್ಞರಾದ ಮುಮುಕ್ಷುಗಳು ಓದಿ ತಿಳಿದು ಕೃತಾರ್ಥರಾಗಲು ತಕ್ಕದ್ದೆಂದು ಪಂಡಿತರ ಹೊಗಳಿಕೆಗೀಡಾಗಿರುವ ಅತ್ಯಪೂರ್ವಗ್ರಂಥ ಪ್ರತಿ ೧ಕ್ಕೆ ಕ್ರಯ ೨-೮-೦

ಕೈವಲ್ಯಪದ್ಧತಿ (ನಿಜಗುಣರಕೃತ):—ಈ ಕೈವಲ್ಯಪದ್ಧತಿಗೆ ಅನೇಕರು ಟೀಕಾತಾತ್ಪರ್ಯಗಳನ್ನು ಬರೆದಿದ್ದರೂ ಪ್ರೌಢರಿಗೆ ಅರ್ಥಗ್ರಾಹ್ಯವೇ ಹೊರ್ತು ಅಲ್ಪಜ್ಞರಿಗೆ ದುಸ್ಸಾಧ್ಯವೆಂದರಿತು ಮೂಢಪ್ರೌಢರಿಗೆ ಸರಿಯಾಗಿ ತಿಳಿಯುವಂತೆ ತಾತ್ಪರ್ಯವನ್ನು ಬರೆದು ರಚಿಸಿರುವ ಅಪೂರ್ವಗ್ರಂಥ ಪ್ರತಿ ಒಂದಕ್ಕೆ ೧೨ ಆಣೆ

ಕೈವಲ್ಯಕಲ್ಪವಲ್ಲರಿ (ಸರ್ಪಭೂಷಣ ಸಿದ್ಧಲಿಂಗಶಿವಯೋಗಿಕೃತ):—ಈ ಗ್ರಂಥಕ್ಕೆ ಸುಲಭಕನ್ನಡಭಾಷೆಯಲ್ಲಿ ತಾತ್ಪರ್ಯವನ್ನು ಬರೆದು ಅತ್ಯುತ್ತಮ ಕಾಗದಗಳಲ್ಲಿ ಸ್ಫುಟವಾದಕ್ಷರಗಳಿಂದ ನೂತನವಾಗಿ ಮುದ್ರಣವಾಗಿದೆ. ಕ್ರಯ ಪ್ರತಿ ೧ಕ್ಕೆ ೧೨ ಆಣೆ.

ಸಟೀಕಾಪರಮಾನುಭವಬೋಧೆ:—ಈ ಗ್ರಂಥಕ್ಕೆ ಸುಲಭ ಕನ್ನಡಭಾಷೆಯಲ್ಲಿ ತಾತ್ಪರ್ಯವನ್ನು ಬರೆದು ದೊಡ್ಡಸೈಜು ದಪ್ಪಕಾಗದದಲ್ಲಿ ಮುದ್ರಿಸಿರುತ್ತದೆ. ಇದರ ಕ್ರಯ ೧೨ ಆಣೆ.

ಸಟೀಕಾ ಅನುಭವಸಾರ:—ಈ ಗ್ರಂಥಕ್ಕೆ ಸುಲಭಕನ್ನಡ ಭಾಷೆಯಲ್ಲಿ ತಾತ್ಪರ್ಯವನ್ನು ಬರೆದು ಮುದ್ರಿಸಿರುತ್ತದೆ. ಚಿಕ್ಕಸೈಜು ಕ್ರಯ ೮ ಆಣೆ.

ಶ್ರೀನಿಜಗುಣ ಶಿವಯೋಗಿ ವಿರಚಿತ ಆರುಶಾಸ್ತ್ರ:—ಇದರಲ್ಲಿ ಕೈವಲ್ಯಪದ್ಧತಿ ಟೀಕಾತಾತ್ಪರ್ಯಸಹಿತ ೧, ವಿವೇಕಚಿಂತಾಮಣಿ ವಚನರೂಪ ೨, ಪರಮಾನುಭವಬೋಧೆ ಟೀಕಾತಾತ್ಪರ್ಯಸಹಿತ ೩, ಪರಮಾರ್ಥಪ್ರಕಾಶಿಕೆ ವಚನರೂಪ ೪, ಅನುಭವಸಾರ ಟೀಕಾತಾತ್ಪರ್ಯ ಸಹಿತ ೫, ಪರಮಾರ್ಥಗೀತೆ ಟೀಕಾತಾತ್ಪರ್ಯಸಹಿತ ೬ ಈ ಆರು ಗ್ರಂಥಗಳು ಒಂದೇ ಬುಕ್ಕಿನಲ್ಲಿ ಅಡಕವಾಗಿವೆ. ದೊಡ್ಡಸೈಜು ದಪ್ಪಕಾಗದ ಕ್ರಯ ೧ಕ್ಕೆ ೩ ರೂ. ೮ ಆಣೆ.

ನಿಜಗುಣಶಿವಯೋಗಿಗಳ ಪಂಚರತ್ನವು:—ಇದರಲ್ಲಿ ಕೈವಲ್ಯಪದ್ಧತಿ, ಪರಮಾನುಭವಬೋಧೆ, ಪರಮಾರ್ಥಪ್ರಕಾಶಿಕೆ, ಅನುಭವಸಾರ, ಪರಮಾರ್ಥಗೀತೆ, ಈ ಐದು ಗ್ರಂಥಗಳನ್ನು ಒಂದರಲ್ಲಿ ಸೇರಿಸಿ ಗ್ಲೇಜಕಾಗದಲ್ಲಿ ಮುದ್ರಿಸಿದೆ ಮೂಲಪ್ರತಿ ಕ್ರಯ ಪ್ರತಿ ಒಂದಕ್ಕೆ ೧ ರೂ. ೮ ಆಣೆ.

ದೇವೀಮಹಾತ್ಮ ಕಥಾಸಂಗ್ರಹ:—ಈ ಗ್ರಂಥವು ಮೊದಲು ಚಿದಾನಂದಾವಧೂತರಿಂದ ಕನ್ನಡಪದ್ಯರೂಪವಾಗಿ ರಚಿಸಲ್ಪಟ್ಟಿದ್ದು ಈಗ ಸರ್ವಜನರಿಗೂ ಸುಲಭವಾಗಿರುವಂತೆ ಕಥಾರೂಪವಾಗಿ ದಪ್ಪಕಾಗದದಲ್ಲಿ ಮುದ್ರಣವಾಗಿರುತ್ತದೆ ಕ್ರಯ ಪ್ರತಿ ೧ಕ್ಕೆ ೬ ಆಣೆ.

ಬಸವಣ್ಣನವರವಚನ:—ವೀರಶೈವಮತೋದ್ಧಾರಕ್ಕಾಗಿ ಅವತರಿಸಿದ ಬಸವಣ್ಣನವರು ಜಗದುಪಕಾರಕ್ಕಾಗಿ ಲಿಂಗಾಂಗಸಾಮರಸ್ಯದ ವಚನವನ್ನು ವಿರಚಿಸಿರುವರು. ಪ್ರತಿಯೊಬ್ಬ ವೀರಶೈವರೂ ಸಂಗ್ರಹಿಸತಕ್ಕದು. ಬೆಲೆ ೬ ಆಣೆ.

ಅಂಬಿಗರ ಚೌಡಯ್ಯನವರ ವಚನ:—ವೀರಶೈವರಲ್ಲಿ ವೀರಭದ್ರದೇವರ ಭಕ್ತರಾದ ಜನರು ಗುಗ್ಗಳವೆಂದು ಮಾಡುವಾಗ್ಗೆ ಪಡಬುಅಂತಾ ನೀತಿವಚನಗಳನ್ನು ಹೇಳುತ್ತಿರುವರಷ್ಟೆ. ಇದಕ್ಕೆ ಅಂಬಿಗರ ಚೌಡಯ್ಯನವರ ವಚನವು ಉಪಯುಕ್ತವಾದದ್ದು. ಬೆಲೆ ೬ ಆಣೆ.

ಅಖಂಡೇಶ್ವರನ ವಚನ:—ಶ್ರೀ ಅಖಂಡೇಶ್ವರಸ್ವಾಮಿಗಳವರಿಂದ ಜ್ಞಾನಾಪೇಕ್ಷಿಗಳಿಗತ್ಯಂತೋಪಯುಕ್ತವಾಗಿರುವಂತೆ ವೇದಾಂತರಹಸ್ಯಗಳೆಲ್ಲವನ್ನು ಸಂಗ್ರಹಿಸಿ ವಿವರವಾಗಿ ವಚನರೂಪದಿಂದ ರಚಿಸಲ್ಪಟ್ಟು ಪಂಡಿತರಿಗೂ ಪಾಮರರಿಗೂ ಸಾಧಾರಣವಾಗಿ ತಿಳಿಯುವಂತೆ ಮುದ್ರಿಸಲ್ಪಟ್ಟಿದೆ. ಬೆಲೆ ೬ ಆಣೆ.

ಪತಿವ್ರತಾಮಹಾತ್ಮ್ಯಕಥೆ:—ಈ ಗ್ರಂಥವನ್ನು ಮನಮುಟ್ಟಿ ಓದಿದ ಸ್ತ್ರೀಯಳು ಎಂಥಾ ಜಾರಿಣಿ ಇದ್ದಾಗ್ಯೂ ಕೂಡ ವ್ಯಭಿಚಾರ ಮೊದಲಾದ ದುರ್ನಡತೆಗಳನ್ನು ಬಿಟ್ಟು ಪತಿಯೇ ದೇವರೆಂದು ತುಂಬಾ ನಂಬಿ ನಡೆಯುವಂತೆ ಸದ್ಬೋಧಿಸುವುದು. ಬೆಲೆ ೬ ಆಣೆ.

ಸುಕವಾಣಿ:—ಪ್ರತಿಯೊಂದು ಕುಟುಂಬದಲ್ಲಿರತಕ್ಕ ವಿನೋದಯುಕ್ತ ಸ್ತ್ರೀನೀತಿಪರವಾದ ಮನೋಹರವಾದ ಚಿಕ್ಕಚಿಕ್ಕ ಕಥೆಗಳೂ ಪ್ರತಿ ಕಥೆಗೆ ಅನೇಕ ಉಪಕಥೆಗಳೂ ಓದಹತ್ತಿದಂತೆ ಕಥೆ ಓದಿ ಸಂಪೂರ್ಣ ಮುಗಿಸಿದ ಒಂದೆರಡು ದಿವಸವಾದರೂ ನಗುವದು ತಪ್ಪುವದಿಲ್ಲೆಂದು ಧಾರಾಳವಾಗಿ ಹೇಳಬಹುದು. ಬೆಲೆ ೮ ಆಣೆ.

ಮಂಜುಘೋಷ:—ಈ ಸುರಸಕಾದಂಬರಿಯನ್ನು ಓದಹತ್ತಲು ಎಂಥಾ ಚಿಂತೆಯಿಂದ ಕೂಡಿದ ಮನುಜನಿಗಾದರೂ ಸಂತೋಷ ಉಕ್ಕೇರದಿರದು. ಸ್ತ್ರೀಯರು ಎಂಥಾ ಗೈಯ್ಯಾಳಿಗಳಾಗಿದ್ದರೂ ಸನ್ಮಾರ್ಗಕ್ಕೆ ಹಚ್ಚಲು ಜ್ಞಾನದರ್ಪಣ. ಕ್ರಯ ೧೨ ಆಣೆ.

ಹಾತಿಮತಾಯಿ:—ಈ ಚರಿತ್ರೆಯನ್ನು ಓದುವುದರಿಂದ ಸಕಲ ಪ್ರಾಣಿಗಳಲ್ಲಿ ದಯೆಯನ್ನಿಡುವ ಸನ್ಮಾರ್ಗವನ್ನು ತೋರಿಸುವದಲ್ಲದೆ ಪ್ರಾಣಿಗಳ ಹಿಂಸಾ ಮಾಡಬಾರದೆಂದು ಎಂಥಾ ಕಠಿಣಹೃದಯದವನಿಗಾದರೂ … ಸದ್ಬೋಧಿಸುವ ಸತ್ಪುರುಷನ ಚರಿತ್ರೆ.

…ದ್ವರ್ತನಜ್ಞಾನದರ್ಪಣ. ಇದನ್ನು ಪ್ರತಿಯೊಬ್ಬ ಕುಟುಂಬಿಯು ಸಂಗ್ರಹಿಸಲು ತಕ್ಕದಾಗಿರುತ್ತದೆ. ಕ್ರಯ ಪ್ರತಿ ೧ಕ್ಕೆ ೮ ಆಣೆ. ಅಂಚೆವೆಚ್ಚ ಪ್ರತ್ಯೇಕ. ಇದು ಇನ್ನೂ ಮುದ್ರಣದಲ್ಲಿದೆ. ಪತ್ರಬರೆದವರಿಗೆ ಮುದ್ರಣ ಪೂರೈಸಿದೊಡನೆ ಕಳುಹಿಸುತ್ತೇವೆ. ಅಪೇಕ್ಷಕರು ತ್ವರೆಗೈಯಿರಿ!

ಕೆ. ಎಸ್. ಮಲ್ಲೇಶಶಾಸ್ತ್ರಿಗಳ ಹೊಸಪಂಚಾಂಗ.

ಕನ್ನಡ ನಾಡಿನಲ್ಲಿ ಪ್ರಸಿದ್ಧಿಯನ್ನು ಪಡೆದಿರುವ ಬ್ರ|| ಶ್ರೀ|| ಸಿದ್ಧಾಂತಿ ಮಲ್ಲೇಶಶಾಸ್ತ್ರಿಗಳ ಪಂಚಾಂಗಗಳ ಪ್ರಚಾರವು ಅತ್ಯಧಿಕವಾದಂತೆ ದರವನ್ನು ಸುಲಭವಾಗಿ ಪಂಚಾಂಗ ೧ಕ್ಕೆ ೩ ಆಣೆ, ೫ಕ್ಕೆ ೮ ಆಣೆ, ೧೨ಕ್ಕೆ ೧ ರೂಪಾಯಿ ಮಾಡಿದೆ. ಅಂಚೆವೆಚ್ಚ ಪ್ರತ್ಯೇಕ. ಅಪೇಕ್ಷಕರು ಜಾಗ್ರತೆ ತರಿಸಿಕೊಳ್ಳಿರಿ!!!

ಇವಲ್ಲದೆ ನಮ್ಮ ಡಿಪೋದಲ್ಲಿ ವೇದಾಂತ, ಜ್ಯೋತಿಷ, ಪುರಾಣ, ವೈದ್ಯಕೀ, ಕಥೆ, ಕಾದಂಬರೀ, ನಾಟಕ ಮೊದಲಾದ ಅನೇಕ ಗ್ರಂಥಗಳು ಸುಲಭ ಬೆಲೆಯಿಂದ ದೊರೆಯುತ್ತವೆ. ಅಪೇಕ್ಷಕರು ತ್ವರೆಮಾಡಿ!

ವಿಳಾಸ:—ಕೂಸನೂರು ''ಜಗಜ್ಜ್ಯೋತಿ ಬುಕ್‌ಡಿಪೋ''
ಪೋಸ್ಟ ತಿಳ್ವಳ್ಳಿ, ಜಿಲ್ಲಾ ಧಾರವಾಡ.

ಬಲಭೀಮಚೂರ್ಣ.

ಈ ಚೂರ್ಣಸೇವನೆಯಿಂದ ಹೆಚ್ಚು ಸ್ತ್ರೀಸಂಗಮಾಡುವದರಿಂದ ಬಂದ ನಪುಂಸಕತ್ವ, ಅಜೀರ್ಣತೆ, ಅಗ್ನಿಮಾಂದ್ಯ, ಅಸ್ಥಿಜ್ವರ, ರಕ್ತೋದ್ರೇಕ, ಉಷ್ಣವ್ಯಾಧಿ, ಕಟಿಶೂಲೆ, ಶಿರೋಬಾಧೆ, ಕಣ್ಣುರಿ, ಸ್ವಪ್ನೇಂದ್ರಿಯ ನಷ್ಟತೆ, ಪಿತ್ತೋದ್ರೇಕ, ತಲೆತಿರುಗುವಿಕೆ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲತರದ ಬೊಕ್ಕೆ, ತುರಿಕು ಕಜ್ಜಿ ಮೊದಲಾದ ತ್ವಚರೋಗ ಇನ್ನೂ ಅನೇಕ ವ್ಯಾಧಿಗಳನ್ನು ನಿರ್ಮೂಲಮಾಡಿ ಶರೀರವನ್ನು ರೋಗರಹಿತ ಮಾಡುವದಲ್ಲದೆ ದೇಹಕ್ಕೆ ಕಾಂತಿಯೂ, ವೀರ್ಯವರ್ಧನವೂ, ಧಾತುಪುಷ್ಟಿಕವೂ, ರಕ್ತಶುದ್ಧಿಯೂ, ಮನೋತ್ಸಾಹವೂ, ಉಂಟಾಗುವದರಿಂದ ಈ ಚೂರ್ಣಕ್ಕೆ ಬಲಭೀಮಚೂರ್ಣವೆಂಬ ನಾಮವು ಸಾರ್ಥಕವಾಗಿರುವದೆಂದು ನಿಶ್ಚಗಟ್ಟಿ ಸಾವಿರಾರು ಆರ್ಡರುಗಳೂ, ಶಿಫಾರಸ ಪತ್ರಿಕೆಗಳೂ ಬರುತ್ತಿರುವವು. ಒಂದುಸಾರಿ ಈ ಚೂರ್ಣವನ್ನು ಸೇವಿಸಿ ಅನುಭವವನ್ನು ಹೊಂದಿರಿ.

ಈ ಚೂರ್ಣವು ಒಬ್ಬ ಮನುಷ್ಯನಿಗೆ ೨೦ ತೊಲೆಯಿಂದ ೪೦ ತೊಲೆಯವರೆಗೆ ಬೇಕಾಗುವದು. ೨೦ ತೊಲೆ ಚೂರ್ಣವುಳ್ಳ ಡಬ್ಬಿ ೧ಕ್ಕೆ ಬೆಲೆ ೨ ರೂಪಾಯಿ. ಅಂಚೆವೆಚ್ಚ ೪ ಆಣೆ. ಅನುಪಾನಪತ್ರಿಕೆ ಡಬ್ಬಿಯ ಸಂಗಡ ಕಳುಹಲ್ಪಡುತ್ತೆ.

ವಿಳಾಸ:—''ವೈದ್ಯಾಮಂದಿರ'' ಕೂಸನೂರು
ಪೋಸ್ಟ ತಿಳ್ವಳ್ಳಿ, ಜಿಲ್ಲಾ ಧಾರವಾಡ.

ವೀರಶೈವರಿಗಲಭ್ಯಸಂಧಿ.

ಶ್ರೀಮದ್ವೀರಶೈವಮತಬಾಂಧವರೇ!

ದಾವಣಗೆರೆ ಲಿಂಗದ ಕರಡಿಗೆಗಳೆಂದರೆ ಅತ್ಯುತ್ತಮವಾದವೆಂದು ಸಕಲ ವೀರಶೈವರು ಬಲ್ಲರಷ್ಟೆ. ಈ ಲಿಂಗದ ಕಾಯಿಗಳು ದಾವಣಗೆರೆಯಲ್ಲಿ ದೊರೆಯುತ್ತಿದ್ದರೂ ಇವುಗಳನ್ನು ಮಾಡತಕ್ಕವರು ಮೂಡಿ ಶೀಲವಂತರೆಂಬುವದು ಹಲಕೆಲವರಿಗೆಮಾತ್ರ ಗೊತ್ತಿರುತ್ತದೆ. ದಾವಣಗೆರೆಯಿಂದ ಸಕಲಕಡೆಗೆ ಬಿಕರಿಯಾಗುತ್ತಿರುವದರಿಂದ ದಾವಣಗೆರೆ ಲಿಂಗದ ಕಾಯಿಗಳೆನ್ನುವರೇ ಹೊರ್ತು ಹುಟ್ಟತಕ್ಕದ್ದು ಮೂಡಿಗ್ರಾಮದಲ್ಲಿಯೇ. ಈ ಮೂಡಿ ಲಿಂಗದ ಕಾಯಿಗಳಲ್ಲಿ ಬೆಳ್ಳಿ ಅನುಮಾನವಾಗಿ ಕಂಡರೆ ಆ ಕೂಡಲೆ ಮುರಿದು ಕರಗಿಸಿ ಒರೆಗಲ್ಲಿಗೆ ಖುರೆಬೆಳ್ಳಿಯ ಮಸರಿಹಚ್ಚಿ ನೋಡಿದರೆ ಕುಂದುಬಂದಲ್ಲಿ ಸಹಸ್ರರೂಪಾಯಿ ಹಾನಿ ತುಂಬಿಕೊಡುತ್ತೇವೆಂದು ಬಾಂಡ್ ಬರೆಯಿಸಿಕೊಂಡು ಖಾತ್ರಿಯಿಂದ ಮಹಲುಮಾಡಿಸಿ ಮಾರಾಟಕ್ಕೆ ಇಟ್ಟಿರುತ್ತೇವೆ. ಸಕಲರೂ ಒಂದುಸಾರೆ ನಮ್ಮ ಕಂಪೆನಿಯ ಶುದ್ಧ ಖುರೆಬೆಳ್ಳಿಯಿಂದ ತಯಾರಾದ ನಂಬುಗೆಯ ಲಿಂಗದ ಕಾಯಿಗಳನ್ನು … ಬೆಲೆಯ ಶುದ್ಧತೆ!! ಮನಗಾಣುವದು. ಲಿಂಗದ ಕಾಯಿಗಳ ಬೆಲೆ

ವೀರಶೈವಮಹಾಜನಂಗಳಿಗೆ ವಿನಂತಿ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಗಾಗಿ ಲಗ್ನ ವಗೈರೆ ಕಾಲಗಳಲ್ಲಿ ತೆಗೆದ ಮೊಬಲಗನ್ನು ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಕಳುಹಿಸಿಕೊಡಬೇಕಾಗಿ ಕೋರಿಕೆ.

ಜಿ. ಕೆ. ರುದ್ರಾರ್ಯ,
ಆಕ್ಟಿಂಗ್ ಸೆಕ್ರಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್‌ಸಭೆ
ಕೋರ್ಟುಬಾಗ್‌ರೋಡ್ ಬೆಂಗಳೂರು.

೧೯೧೫ ನೆಯ ಜನವರಿ ತಾ|| ೨೦ ರಲ್ಲಿ ಮಾಗಡಿ ತಾ|| ಸಾವನದುರ್ಗದಲ್ಲಿ ಶ್ರೀ ವೀರಭದ್ರೇಶ್ವರಸ್ವಾಮಿಯವರ ರಥೋತ್ಸವವು ಬಹಳ ವಿಜೃಂಭಣೆಯಿಂದ ನಡೆದಿತು. ವೀರೇಗೌಡನ ದೊಡ್ಡಿ, ಆಲಿಶೆಟ್ಟಿಹಳ್ಳಿ, ಮಾಗನಪುರ ಮೊದಲಾದ ಗ್ರಾಮದ ಪ್ರಮುಖಜನರು ಈ ಕಾರ್ಯಕ್ಕೆ ಮುಂದಾಳುಗಳಾಗಿ ನಿಂತಿದ್ದರು. ಸಾವಿರಾರು ಭಕ್ತಾದಿಗಳು ಕೂಡಿದ್ದರು. ವೀರೇಗೌಡನದೊಡ್ಡಿಯ ಸ್ಕೂಲ್‌ಮಾಸ್ಟರ್ ಆಗಮಿಕ ಮ|| ರಾಚಾರಾಧ್ಯರು ಆಗಮೋಕ್ತ ಕಾರ್ಯವನ್ನೆಲ್ಲಾ ವಿಧ್ಯುಕ್ತವಾಗಿ ಪ್ರತಿಫಲಾಪೇಕ್ಷೆಯಿಲ್ಲದೆ ವಿಶೇಷಭಕ್ತಿಯಿಂದ ನೆರವೇರಿಸಿದರಲ್ಲದೆ ಭಗವದ್ಭಕ್ತಿಯಮೇಲೆ ಬಹಳ ರಸವತ್ತಾದ ಉಪನ್ಯಾಸವನ್ನು ಮಾಡಿ, ನೆರೆದಿದ್ದ ಜನರಮನಸ್ಸಿನಲ್ಲೆಲ್ಲಾ ನಿಜವಾಗಿಯೂ ಭಕ್ತಿಯನ್ನುಂಟುಮಾಡಿದರು. ಕುಣಿಗಲ್ ಮಾಗನಪುರದ ಪ|| ಸಾವಂದಪ್ಪಗೌಡರು, ಚಿಕ್ಕಸಾವಂದಪ್ಪನವರು ದೊಡ್ಡಮನೆ ವೀರಪ್ಪನವರು ಚನ್ನಪ್ಪನವರು ಮತ್ತೂ ಭದ್ರಪ್ಪನವರು ಸಹ ೮-೩ ಖಂಡಗದ ದವಸವನ್ನು ಶೇಖರಿಸಿ ಯಾತ್ರಿಕರಿಗೆಲ್ಲಾ ದಾಸೋಹವನ್ನು ಮಾಡಿಸಿದರು. ಈ ಸುಕ್ಷೇತ್ರದಲ್ಲಿ ಈ ರೀತಿ ಅನ್ನದಾನಮಾಡುವುದರಿಂದ ಕಾಡುಪ್ರದೇಶವಾದರೂ ಭಕ್ತಾದಿಗಳ ಸಂಖ್ಯೆಯು ಹೆಚ್ಚಾಗಿ ಸೇರಲು ಕಾರಣವಾಗಿದೆ. ಈ ಉಪಕಾರಿಗಳಿಗೆ ಶ್ರೀ ವೀರಭದ್ರೇಶನು ಅನಂತಸುಖವನ್ನುಂಟುಮಾಡಲಿ.

ಒಬ್ಬಾನೊಬ್ಬ ಪ್ರತ್ಯಕ್ಷದರ್ಶಿ.

ಯಾದಗಿರಿ.

ಈ ಗ್ರಾಮದಲ್ಲಿ ಆಗರ್ಭ ಶ್ರೀಮಂತರೂ ಕಾರ್ಯದಕ್ಷರೂ, ಸ್ವಮತ ಹಿತಚಿಂತಕರೂ, ಪರೋಪಕಾರ ನಿರತರೂ ಆದ ಪಳೇಕಡಲಪ್ಪನವರು ಕನ್ನಡನಾಡಿನ ಸಕಲವೀರಶೈವರೂ ಕನ್ನಡದ ಬಸವಾದಿಪುರಾಣಗಳನ್ನೇ ಹೇಳಿಸುತ್ತಿದ್ದು ಸಂಸ್ಕೃತ ಮೂಲಪುರಾಣಗಳನ್ನು ಯಾರೂ ಬಹುಶಃ ಹೇಳಿಸಿರುವುದಿಲ್ಲವಾಗಿ ಅದನ್ನು ಕಂಡು ಮತತತ್ವಬೋಧಕವಾದ ಶಿವಾಧಿಕ್ಯ ಲಿಂಗಪೂಜಾದಿವಿಷಯಗಳನ್ನ ವ್ಯಕ್ತಿಗೊಳಿಸುವ ವ್ಯಾಸೋಕ್ತ ಅಷ್ಟಾದಶಮಹಾಪುರಾಣಗಳಲ್ಲಿ ಹನ್ನೊಂದನೆಯದಾದ ಲಿಂಗಮಹಾಪುರಾಣವನ್ನು ತಮ್ಮ ಹೊಸಮನೆಯಲ್ಲಿ ಈ ಗ್ರಾಮದ ಸಂಸ್ಕೃತ ಪಾಠಶಾಲಾಧ್ಯಾಪಕರಾದ ಗುಳೇದಗುಡ್ಡದ ಪುರಾಣಮಠದ ವೇ|| ವಿರೂಪಾಕ್ಷಶಾಸ್ತ್ರಿಗಳವರಿಂದ ಇದೇಸಂವತ್ಸರದ ಶ್ರಾವಣ ಬ|| ೮ ಸೋಮವಾರದಲ್ಲಿ ಹೇಳಿಸಲಿಕ್ಕಾರಂಭಗೊಳಿಸಿ, ಮಾಘ ಶುದ್ಧ ೧೦ ಬುಧವಾರ ಯಥಾಕ್ರಮವಾಗಿ ಪರಿಸಮಾಪ್ತಿಗೊಳಿಸಿ, ಆ ದಿನವೇ ಮಂಗಲಗಣಾರಾಧನೆಯನ್ನು ಮಾಡಿದರು. ಸಾವಿರಾರು ಜನಮಾಹೇಶ್ವರರಿಗೆ ನಾಲ್ಕು ಆಣೆಯಂತೆ ಪ್ರತಿಯೊಬ್ಬರಿಗೂ ದಕ್ಷಿಣೆಯನ್ನಿತ್ತು ರಾತ್ರಿ ೧೦ ಘಂಟೆಯವರೆಗೂ ಗ್ರಾಮದ ಸಮಸ್ತಜನರಿಗೂ ಭೋಜನವು ಜರಿಗಿತು. ಕೂಡಲೆ ಉತ್ಸವಕ್ಕಾಗಿ ತಳಿರುತೋರಣಗಳಿಂದಲೂ, ರಂಭಾಸ್ತಂಭಾದಿ ಶಾಖೆಗಳಿಂದಲೂ, ಚಿತ್ರಪಟ ದರ್ಪಣಗಳಿಂದಲೂ, ಝುಮುರುಬಿಜಲ ಮೊದಲಾದ ದಿವ್ಯದೀಪಪ್ರಭೆಯಿಂದಲೂ ರಮಣೀಯವಾದ ನೂತನಗೃಹದಲ್ಲಿ ಪುರಾಣಸಮಾಪ್ತಿ ಸಂತೋಷಕ್ಕಾಗಿ ಗಾನವು ನಡೆದು ಕೂಡಲೆ ಸೂರ್ಯೋದಯಕ್ಕೆ ಪುರಾಣದ ಕಿರಿಯಪಠವನ್ನು ಮಾಡಿ ನೂರಿನ್ನೂರು ಜನಕ್ಕೆ ಸುಭೋಜನವನ್ನಿತ್ತು ಮಧ್ಯಾಹ್ನಕ್ಕೆ ಮೇಲ್ಕಂಡ ಗೃಹದಲ್ಲಿ ಸಭೆಸೇರಿ ಪುರಾಣಹೇಳಿದ ಶಾಸ್ತ್ರಿಗಳವರಿಗೆ ಸುವರ್ಣಕಂಕಣದಿಂದಲೂ, ಪಟ್ಟವಸ್ತ್ರಗಳಿಂದಲೂ ಮರ್ಯಾದಿಸಿದರು. ಆ ಕಾಲಕ್ಕೆ ಇದೇಗ್ರಾಮದ ಮಾಧ್ವಮತಾನುಯಾಯಿಗಳಾದ ಬಿಂದುಮಾಧವಾಚಾರ್ಯರು ಆಗಮಿಸಿದ್ದು, ಸದರಿ ಶ್ರೀಮಂತರು ಇಂಥ ವ್ಯಾಸೋಕ್ತಗಳಾದ ಪುರಾಣವನ್ನು ಹೇಳಿಸಿದುದಕ್ಕೆ ಸಂತೋಷಪಟ್ಟು ಪುನಃ ಇಂಥ ಪುರಾಣಗಳನ್ನೇ ಆರಂಭಿಸಬೇಕಲ್ಲದೆ ಕನ್ನಡ ಪುರಾಣಗಳನ್ನು ಹೇಳಿಸುವದು ಅಷ್ಟು ಪ್ರಯೋಜಕರವಲ್ಲವೆಂಬದಾಗಿ ೧ ಘಂಟೆಯಕಾಲ ಸುರಸಭಾಷಣಮಾಡಿ ಸಭಿಕರನ್ನಾನಂದಗೊಳಿಸಿದಮೇಲೆ ನೆರೆದ ಸಭಿಕರಿಗೆ ಪೂಮಾಲೆಗಳಿಂದಲೂ ಗಂಧತಾಂಬೂಲದಿಂದಲೂ ಸತ್ಕರಿಸಿ ಕೂಡಲೆ ಸದರಿ ಶಾಸ್ತ್ರಿಗಳನ್ನು ಬ್ಯಾಂಡು ಮೊದಲಾದ ವಾದ್ಯರವದೊಡನೆ ಸರ್ವಭಕ್ತರೂ ಪಾಠಶಾಲೆಯವರೆಗೂ ಕಳುಹಿಸಿಬಂದರು.

ಸ್ಥಳನಿವಾಸಿ

ಕೊರಟಗೆರೆ.

ಈ ಕೊರಟಗೆರೆಯಲ್ಲಿ ಅಮಲ್ದಾರರಾಗಿದ್ದು ಗುಬ್ಬಿ ತಾಲ್ಲೂಕಿಗೆ ವರ್ಗವಾದ ಮೆ|| ಸುಬ್ಬರಾಯರವರು ಹೊರಡುವ ದಿವಸ ಮುನಿಸಿಪಲ್ ಮೆಂಬರುಗಳು, ವರ್ತಕವರ್ಗದವರೇ ಮೊದಲಾದ ದೊಡ್ಡಮನುಷ್ಯರುಸೇರಿ ಪೇಟೆಯ ಮಧ್ಯದಲ್ಲಿ ತಳಿರುತೋರಣಗಳಿಂದ ಚಪ್ಪರವನ್ನು ಹಾಕಿಸಿದ್ದರು. ಹೊಸದಾಗಿ ಬಂದಿರುವ ಅಮಲ್ದಾರರು ಮೆ|| ಸಂತಾನಂ ಅಯ್ಯಂಗಾರ್‌ರವರಿಗೂ, ಮೆ|| ಸುಬ್ಬರಾಯರವರಿಗೂ ಸಹ ೧೦-೧-೧೯೧೫ ನೆ ಭಾನುವಾರದದಿವಸ ಸುವರ್ಣಮುಖೀ ನದಿಯದಡದಲ್ಲಿರುವ ಅಮಲ್ದಾರ್ ಮೆ|| ಲಿಂಗೇಗೌಡರವರ ಸತ್ರದಲ್ಲಿ ಮಧ್ಯಾಹ್ನ ೩ ಗಂಟೆಗೆ ಫಲಾಹಾರ ವಗೈರೆ ನಡೆಯಿತು. ಅನಂತರ ಉಭಯ ಅಮಲ್ದಾರರುಗಳನ್ನೂ ಬ್ಯಾಂಡ್‌ವಾದ್ಯದೊಡನೆ, ಚಪ್ಪರದಬಳಿಗೆ ಕರೆತಂದರು. ಅಲ್ಲಿ ರಾತ್ರಿ ಸುಮಾರು ೮-೯ ಘಂಟೆಯವರೆಗೆ ಸಂಗೀತ ವಗೈರೆ ನಡೆದು ಪುಷ್ಪತಾಂಬೂಲಗಳು ಹಂಚಿದಬಳಿಕ ಸಭೆಯು ನಿಂತಿತು. ಈ ಮಧ್ಯೆ ಇದೇ ಕೊರಟಗೆರೆಯಲ್ಲಿರುವ ವಸ್ತಾದ್ ಜನಾರ್ದನ ನಾಗಲಿಂಗಪ್ಪನವರು ಬಹಳ ದಿವಸಗಳಿಂದ ಗೋಕಾಯಿಗಳನ್ನು ಭಕ್ಷಿಸಿ ಕೊಬ್ಬಿದ್ದ ಒಂದು ಹುಲಿಯನ್ನು ಕೊಂದು ಸಭೆಯು ನಡೆಯುವ ವೇಳೆಗೆ ಸರಿಯಾಗಿ ಚಪ್ಪರದಬಳಿಗೆ ಗಾಡಿಯಮೇಲೆ ತಂದರು. ಇದನ್ನು ನೋಡಿ ಮೇಲ್ಕಂಡ ಉಭಯ ಅಮಲ್ದಾರರುಗಳು ಮುಂತಾಗಿ ನೆರೆದಿದ್ದ ಜನರೆಲ್ಲರೂ ಸಂತೋಷಪಟ್ಟರು. ಮತ್ತೂ ಈ ಊರಲ್ಲಿ ಪಂಚಮರಿಗೋಸ್ಕರ ಒಂದು ಸ್ಕೂಲು ಸ್ಥಾಪಿತವಾಗಿ ಈಗ್ಗೆ ಸುಮಾರು ೨೦ ವರುಷಗಳಾಗಿರಬಹುದು. ಈಗ ಹೊಸದಾಗಿ ಬಂದಿರುವ ಮಾಸ್ಟರು ಮ|| ಟಿ. ಕೆಂಬಯ್ಯನವರು ಬಂದಲಾಗಾಯಿತು, ಪಂಚಮರನ್ನು ಪ್ರೋತ್ಸಾಹಿಸಿ ೪೦ ಮಂದಿ ಬಾಲಕರನ್ನು ಜಮಾಯಿಸಿ ಸ್ಕೂಲನ್ನು ಅಭಿವೃದ್ಧಿಗೆ ತಂದಿರುತ್ತಾರೆ. ಇಷ್ಟುಮಂದಿ ಹುಡುಗರು ಸ್ಕೂಲು ಸ್ಥಾಪಿತವಾದಾರಾಭ್ಯ ಸೇರಿರಲಿಲ್ಲ. ಕಳೆದ ಮಾಹೆ ೧೩ ನೆ ತಾ|| ನ ದಿನ ಸ್ಕೂಲುಗಳ ಅ|| ಡೆಪ್ಟಿ ಇನ್ಸ್‌ಪೆಕ್ಟರ್ ಸಾಹೇಬರವರು ಸ್ಕೂಲಿಗೆ ದಯಮಾಡಿಸಿ ಬಾಲಕರನ್ನೂ, ಅಭಿವೃದ್ಧಿಯನ್ನೂ ಪರಾಂಬರಿಸಿ ಸಂತೋಷಪಟ್ಟರು. ಅಲ್ಲದೆ ಪಂಚಮರ ನೈಟ್‌ಸ್ಕೂಲ್ ಇರುತ್ತದೆ. ಸದರಿ ಸ್ಕೂಲ್‌ಗಳಿಂದ "ಇಂಪೀರಿಯಲ್ ಇಂಡಿಯನ್ ರಿಲೀಫ್‌ಫಂಡಿಗೆ" ಭಕ್ತಿಯಿಂದ ಬಾಲಕರೂ, ಮತ್ತು ಹಗಲು ಸ್ಕೂಲ್‌ಮಾಸ್ಟರೂ, ನೈಟ್‌ಸ್ಕೂಲ್ ಅ|| ಮಾ|| ರಾಮಹನುಮಯ್ಯನೂ ಸಹ ಕೊಟ್ಟ ೨-೧೩-೦ ಆಣೆಗಳನ್ನು ಡಿ|| ಇನ್ಸ್‌ಪೆಕ್ಟರ್ ಸಾಹೇಬರವರ ಆಫೀಸಿಗೆ ಮನಿಯಾರ್ಡರು ಮೂಲಕ ಹಗಲು ಸ್ಕೂಲ್‌ಮಾಸ್ಟರ್ ಮ|| ಟಿ. ಕೆಂಬಯ್ಯನವರು ರವಾನೆ ಮಾಡಿದರು.

ಪ್ರತ್ಯಕ್ಷದರ್ಶಿ

ನೂತನವಾಪೀ ಪ್ರತಿಷ್ಠೆಯು.

ಗುಂಡ್ಲುಪೇಟೆ ತಾಲ್ಲೂಕು ಕಲ್ಲಹಳ್ಳಿಗ್ರಾಮದ ಮ|| ಶ್ರೀ ಪಟೇಲ್ ಚಿಕ್ಕಮಲ್ಲಪ್ಪನವರು ಸದರಿ ಗ್ರಾಮಮಧ್ಯದಲ್ಲಿ ಸರ್ವಜನಗಳಿಗೂ ಉಪಯುಕ್ತವಾಗುವಂತೆ ಮನೋಹರವಾದ ಬಾವಿಯೊಂದನ್ನು ತಯಾರ್ಮಾಡಿಸಿ ಅದರ ಪ್ರತಿಷ್ಠಾಕಾರ್ಯವನ್ನು ಈ ಫಿಬ್ರವರಿ ಮಾಹೆ ೪ ನೇ ಗುರುವಾರದದಿವಸ ಮಲೆಯೂರುಮಠದ ಶ್ರೀ ಚಿಕ್ಕಸ್ವಾಮಿಗಳವರಿಂದ ವಿಧ್ಯುಕ್ತವಾಗಿ ನಡಿಸಿದರು. ಆಗ್ಗೆ ಬಾವಿಸುತ್ತಣ ಪ್ರದೇಶವನ್ನೆಲ್ಲಾ ಅಲಂಕಾರಯುಕ್ತವಾದ ಚಪ್ಪರದಿಂದ ಶೃಂಗರಿಸಿದ್ದರು. ಪತ್ರಿಕಾಮುಖೇನ ಆಹೂತರಾಗಿದ್ದ ವೀರಶೈವ ಪ್ರಮುಖಜನಗಳೇ ಆದಿಯಾಗಿ ಅನೇಕಜನರು ಸಭೆಯನ್ನು ಅಲಂಕರಿಸಿದ್ದರು. ಆ ಕಾಲಕ್ಕೆ ಸರಿಯಾಗಿ ತಾ|| ಅಮಲ್ದಾರ್ ಎ|| ಜಿ. ಮಲ್ಲಿಕಾರ್ಜುನಯ್ಯ ಬಿ. ಎ ಯವರು ದಯಮಾಡಿಸಿ ಸದರಿ ಸಭೆಯಲ್ಲಿ ಗ್ರಾಮಾಭಿವೃದ್ಧಿಸಂಘದ ಏರ್ಪಾಡುಗಳನ್ನೂ ಜನಗಳ ಐಕಮತ್ಯದಿಂದ ಉಂಟಾಗತಕ್ಕ ಪ್ರಯೋಜನವನ್ನೂ ಸಹ ಸರ್ವಜನಗಳಿಗೂ ಹಿತವಾಗುವಂತೆ ಅಪ್ಪಣೆಕೊಡಿಸಿ, ಸದರಿ ಚಿಕ್ಕಮಲ್ಲಪ್ಪನವರು ಮಾಡಿಸಿರತಕ್ಕ ಧರ್ಮಕಾರ್ಯವನ್ನು ನೋಡಿ ಶ್ಲಾಘಿಸಿದರು. ಅದೇ ಕಾಲದಲ್ಲಿ ಶ್ರೀ ಚಿಕ್ಕಸ್ವಾಮಿಗಳು ಮೈಸೂರು ವೀರಶೈವ ವಿದ್ಯಾವರ್ಧಕಸಂಘದ ಫಂಡಿನ ವಿಷಯವನ್ನು ಕುರಿತು ಪ್ರಸ್ತಾಪಿಸುವಾಗ್ಗೆ ಈ ಫಂಡಿಗೆ ಇತರಕಡೆ ಶುಭಕಾರ್ಯಗಳಲ್ಲಿ ಮರ್ಯಾದಾಪೂರ್ವಕ ದ್ರವ್ಯಸಹಾಯಮಾಡುತ್ತಿರುವಂತೆ ನಮ್ಮಕಡೆಯೂ ಆಚರಣೆಯು ಇಲ್ಲದಿರುವುದನ್ನೂ ಈ ಫಂಡಿನಿಂದ ನಮ್ಮ ವೀರಶೈವಮತಕ್ಕೆ ಉಂಟಾಗತಕ್ಕ ಮಹದುಪಕಾರಗಳನ್ನೂ ಇತರಕಡೆ ನಡೆಯುವಂತೆ ನಮ್ಮ ಪ್ರಾಂತ್ಯದಲ್ಲೂ ಈ ಆಚರಣೆಯನ್ನು ತರಬೇಕೆಂಬ ಉದ್ದೇಶವನ್ನು ಸಹ ಕುರಿತು ಸೂಚಿಸಿದರು. ಅದಕ್ಕೆ ಸದರಿ ಚಿಕ್ಕಮಲ್ಲಪ್ಪನವರು ಅನುಮೋದಿಸಿದ ಕೂಡಲೆ ಸಂಘಕ್ಕಾಗಿ ೨ ರೂ. ಸಮೇತ ತಾಂಬೂಲವನ್ನು ತೆಗೆದು ಗುಂಡ್ಲುಪೇಟೆ ಮ|| ಗುರುಕಾರ್ ನಂಜಪ್ಪನವರ ವಶಕ್ಕೆ ಕೊಟ್ಟು, ಇದನ್ನು ಸಂಘದ ಸೆಕ್ರೆಟರಿಯವರಿಗೆ ಮನಿಯಾರ್ಡರ್ ಮೂಲಕ ಕಳುಹಿಸಿಕೊಡಬೇಕೆಂದು ಹೇಳಿದರು. ಅದರಂತೆ ಸದರಿ ಗುರುಕಾರರು ಅದನ್ನು ಸ್ವೀಕರಿಸಿ ಸದರಿ ಚಿಕ್ಕಮಲ್ಲಪ್ಪನವರು ಫಂಡಿನ ವಿಷಯದಲ್ಲಿ ನಡೆಸಿರುವಂತೆ ನಮ್ಮ ಪ್ರಾಂತ್ಯದ ಇತರರೂ ಅನುಸರಿಸಿ ಮತಾಭಿಮಾನಿಗಳಾದ ಸರ್ವರೂ ಇದರಂತೆ ತಮ್ಮತಮ್ಮ ಮನೆಗಳಲ್ಲಿ ನಡೆಯುವ ಮದುವೆ ವಗೈರೆ ಶುಭಕಾರ್ಯಗಳಲ್ಲಿ ನಡೆಸಬೇಕೆಂದು ಗುರುಕಾರರು ಸೂಚಿಸಿದರು. ಅದಕ್ಕೆ ಮತಾಭಿಮಾನಿಗಳಾದ ಸಭಾಸದರೆಲ್ಲರೂ ಅನುಮೋದಿಸಿದರು. ಅನಂತರ ನೆರೆದಿದ್ದ ಸರ್ವರಿಗೂ ಗಂಧಪುಷ್ಪಹಾರತಾಂಬೂಲಾದಿಗಳು ಹಂಚಲ್ಪಟ್ಟವು. ಸರ್ವರನ್ನೂ ಮಧುರವಾದ ಆಹಾರದಿಂದ ತೃಪ್ತಿಪಡಿಸಿದರು. ರಾತ್ರಿ ಶ್ರೀ ಭ್ರಮರಾಂಬಿಕಾಸಮೇತ ಶ್ರೀ ಮಲ್ಲಿಕಾರ್ಜುನಸ್ವಾಮಿಯ ಉತ್ಸವವು ನಂದಿಧ್ವಜಗಳೇ ಆದಿಯಾದ ಅನೇಕ ಬಿರುದಾವಳಿಗಳಿಂದ ಬಹುವಿಜೃಂಭಣೆಯಾಗಿ ನಡೆಯಿತು. ಇಂಥಾ ಧರ್ಮಕಾರ್ಯವನ್ನು ಮೊಹನತ್ತು ವಹಿಸಿ ನಡೆಸಿದ ಕೀರ್ತಿವಂತರಾದ ಪಟೇಲ್ ಚಿಕ್ಕಮಲ್ಲಪ್ಪನವರು ತುಂಬಾ ಶ್ಲಾಘನೀಯರು.

ಪ್ರತ್ಯಕ್ಷದರ್ಶಿ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕಾರ್ಯ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನು ಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿ ಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೮-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧-೦-೦ ರೂ. ಕೊಡಬೇಕಾಗುವುದು ಕೆಂಪು, ಹಸುರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಬಂಗಾರದ ಬಣ್ಣದಿಂದ ಬಿಳಿ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೧-೪-೦; ಅನಂತರ ಪ್ರತಿ ೧೦೦ ಕ್ಕೂ ೦-೧೦-೦; ಹಳದೀ ಗ್ಲೇಜ್ ಕಾಗದದಮೇಲೆ ಮೊದಲನೇ ೧೦೦ ಕ್ಕೆ ೨-೨-೦; ಅನಂತರ ಪ್ರತಿ ೧೦೦ ಕ್ಕೂ ೦-೧೪-೦; ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦-೬-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಏಕೈಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಕಾರ್ಯಪ್ರೆಸ್, ಮೈಸೂರ್.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು

73

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕದನಗಳ ಪಟಗಳೂ ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ ೨ ಆಣೆ; ವಿ. ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ:—ದಿ ಜನರಲ್ ಏಜೆನ್ಸಿ. ಮೈಸೂರು.

ಓರಿಯಂಟಲ್ ಫಾರ್ಮಸಿ ಮೈಸೂರು.

4

ಪ್ರಸಿದ್ಧಿ ಗುಣಕೆಂಡ ಔಷಧಗಳು.

ಜ್ವರದಮಾತ್ರೆ—ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ. ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳೆವು, ಹೊಟ್ಟೆಯುಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮಂದಿಷವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ರೂ.

ಗೋರೋಜನದಮಾತ್ರೆ—ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೂಡ್ಲೆ ತಪ್ಪಿ ಜೀರ್ಣಶಕ್ತಿ ಕೊಡುತ್ತೆ. ಪ್ರಯಾಣೀಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾಯು ನೋವು ಉಳುಕು ಊದು ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ ೫ ಡಬ್ಬಿಗೆ ೧ ರೂ. ಕೂಡ್ಲೆ ನಮ್ಮ ಕ್ಯಾಟಲಾಗಿಗೆ ಬರಿಯಿರಿ ಮುಫತ್ತು ಕಳುಹಿಸುತ್ತೇವೆ.

ಶುದ್ಧ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

9

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ವಪಸ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗಪೀಡಿತರು, ರಕ್ತಪ್ರದ್ರೇಕವಾದವರು, ತೃಷೆಪೀಡಿತರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯುಳ್ಳವರು, ವಾಂತಿಯಾಗುವವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ. ಜಿಲ್ಲ ಉತ್ತರಕನಡಾ.

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೈಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೀಳುಸಹಿತ ಆದ ಸಮಾರಂಭ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ. ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಹಿತವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೋ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವಿರಶೈವ ಸತ್ಪುರುಷಮಾಲಾ, ಹಾಳಕೇರಿ ಅನಂದಸ್ವಾಮಿಯ ಫೋಟೋ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೋ ಸಿಕ್ಕುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.



ಹೊಸಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವ ಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಈಪ್ರಕಾರ ೨ ಫೋಟೋ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದ ॥, ।।।= , ೧, ೧।. ಪ್ರಕಾರ, ಮತ್ತೂ ಬೆಳ್ಳಿಯದು ರು ೧॥ ರೋಡ್ ಗೋಲ್ಡು ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨।॥ ರೂ.

ಪರೂರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ.

ನಮ್ಮವಿಳಾಸ— ಗಂಗಪ್ಪಾ ಜೇರಿಗೆ,
43 ಆರ್ಟಿಸ್ಟ ಸೊಲ್ಲಾಪುರ

ಊದಬತ್ತಿಗಳು.

42

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪರ್ಟಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್ ಸನ್ಸ್
ಸುಗಂಧಕಾರಿ, ಮೈಸೂರು.

ಬಿಸಿಲುಕಾಲಕ್ಕೆ 20

ಎಲ್ಲರಿಗೂಬೇಕು.

ಅಮೃತಾಮಲಕತೈಲ:—ವಿವಿಧವಾದ ತಲೆನೋವು, ಶರೀರವು ಬೆಂಕಿಯಂತಿರುವುದು, ತಲೆ ತಿರಗು, ಕಣ್ಣುರಿ, ಕಣ್ಣು ಕೆಂಪು, ಕಣ್ಣು ಮಂಜು, ಕಣ್ಣಿನಲ್ಲಿ ನೀರು ಸುರಿಯುವುದು, ರಾತ್ರಿ ನಿದ್ರೆಬಾರದಿರುವುದು ಇವುಗಳನ್ನು ೧-೨ ಅಭ್ಯಂಗನದಿಂದಲೇ ಗುಣಮಾಡಿ ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ. ಬಿಸಿಲುಕಾಲಕ್ಕೆ ಇದು ಅಮೃತವೇಸರಿ ಎಂಬ ಅಭ್ಯಂಗನಕ್ಕೆ ಆಗುವ ತೈಲ ೦-೮-೦. ೧ ಡರ್ಜ ೫-೦-೦.

ಅಮೋದಿನಿ:—ಅಮೋಘವಾದ ಸುವಾಸನೆಯಿಂದ ಕೂಡಿದ ಈ ಮಾತ್ರೆಗಳು ತಾಂಬೂಲವನ್ನು ರಂಜಿಸಿ ಬಾಯಾರಿಕೆಯನ್ನು ತತ್ಷಣ ನಿಲ್ಲಿಸಿ ಆಯಾಸವನ್ನು ಪರಿಹರಿಸಿ ಕಂಠನಾಳವನ್ನು ಸರಿಪಡಿಸಿ ಕೆಮ್ಮು, ದಮ್ಮು, ಉಬ್ಬಸ, ಮಲಬಂಧಗಳನ್ನು ಗುಣಮಾಡಿ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠವಾದುದು. ಸಂಗೀತಗಾರರಿಗೂ, ವಿದ್ಯಾರ್ಥಿಗಳಿಗೂ, ಪ್ರಯಾಣೀಕರಿಗೂ ಅಮೂಲ್ಯವಾದುದು. ೧೫೦ ಮಾತ್ರೆ ೦—೪—೦. ೫ ಕ್ಕೆ ಒಂದು ಹೆಚ್ಚು.

ಖುಡಾಮಲಕರಸಾಯನ:—ತಲೆತಿರಗು, ಕಣ್ಣುಕಗ್ಗತ್ತಲೆ, ಹಸಿವೇ ಇಲ್ಲದಿರುವುದು, ಆಹಾರದಲ್ಲಿ ಅರುಚಿ, ವಾಕರಿಕೆ, ವಾಂತಿ, ಹುಳಿ, ಖಾರ, ಅಥವಾ ಕಿಹಿಯಾದ ತೇಗು, ಹೊಟ್ಟೆಯುಬ್ಬರ, ಹೊಟ್ಟೆನೋವು, ಕಣ್ಣು ಅಥವಾ ಮೈ ಹಳದೀಬಣ್ಣ, ನಿಶ್ಶಕ್ತಿ, ಹಳೇಜ್ವರ, ಎದೆಬಡಿಯುವಿಕೆ, ಪಾಂಡು, ಕಾಮಾಲೆ, ಮೂರ್ಛೆ ಇವುಗಳಪೈಕಿ ಯಾವುದಿದ್ದರೂ ಖಾತರಿ ಗುಣವಾಗಿ ದಿನಕ್ಕೊಂದುವೇಳೆ ಸಲೀಸಾಗಿ ಕಾಲಪ್ರವರ್ತಿಯಾಗುತ್ತದೆ. ೧೫ ದಿನಕ್ಕೆ ಆಗುವ ಔಷಧ ಬೆಲೆ ೦-೧೨-೦. ೧ ಡರ್ಜ ಡಬ್ಬಿಗಳಿಗೆ ೭-೮-೦.

ಪ್ರತಿಔಷಧಕ್ಕೂ ಟಪಾಲ್ ಮತ್ತು ಪ್ಯಾಕಿಂಗ್ ಭಾರ್ಜ ಪ್ರತ್ಯೇಕ.

ವಿಳಾಸ:—ಬಿ. ವಿ. ಪಂಡಿತ್, ಸದ್ವೈದ್ಯಶಾಲಾ,
ನಂಜನಗೂಡು, ಮೈಸೂರು ಡಿ॥

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

39

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋಹಿತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳೆವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮಿಾರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಳೊಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸ್ವಹಾಯದ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧—೦—೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

೧೯೧೫ನೆಯ ಇಸವಿ ಫೆಬ್ರವರಿ ತಾ॥ ೨೮ರಿಂದ ೧೯೧೫ನೆಯ ಮಾರ್ಚಿ ತಾ॥ ೬ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ಫಾಲ್ಗುಣ ಶು॥ ಚತುರ್ದಶಿಯಿಂದ ಫಾಲ್ಗುಣ ಬ॥ ಪಂಚಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕುಂ ತೇದಿ
28	[1]ಭಾನು	ಚತು	46-3	ಆಶ್ಲೇ	24-37	17
1	[2]ಸೋ	ಪೂ	44-1	ಮಖಾ	24-32	18
2	ಮಂಗ	ಪಾ	40-52	ಪುಬ್ಬಾ	23-39	19
3	[3]ಬುಧ	ಬಿದಿ	36-38	ಉತ್ತ	21-30	20
4	[4]ಗುರು	ತದಿ	31-54	ಹಸ್ತ	18-39	21
5	[5]ಶುಕ್ರ	ಚೌ	26-30	ಚಿತ್ತ	15-8	22
6	[6]ಶನಿ	ಪಂಚ	20-40	ಸ್ವಾತಿ	11-15	23

(1) ಚಂದ್ರಪುರದ ಚಂದ್ರಮೌಳೀಶ್ವರಸ್ವಾಮಿಾರಥಃ, ಚಾಮರಾಜೇಶ್ವರರಥಃ. (2) ಕಾಮದಹನ, ಹೋಳಿಹಬ್ಬ, ಪ್ರಸನ್ನನಂಜುಂಡೇಶ್ವರಸ್ವಾಮಿಾರಥಃ. (3) ಪರಂದೇವೀತಿರುನಕ್ಷತ್ರಂ, ಕರೀಘಟ್ಟದ ಶ್ರೀನಿವಾಸಸ್ವಾಮಿಾರಥಃ. (4) ವಾದರಾಜಸ್ವಾಮಿಗಳ ಪುಣ್ಯದಿನ. (5) ಚತುರ್ಥೀತಿಥಿಃ, ವ್ಯಾಸರಾಯಸ್ವಾಮಿಗಳ ಪುಣ್ಯದಿನ. (6) ತಿಥಿದ್ವಯಂ, ಬೆಟ್ಟದಲ್ಲಿ ಮಹಾಬಲೇಶ್ವರಸ್ವಾಮಿಾರಥಃ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ERGISTERED NO. M. 124.

ಮೈಸೂರ್ ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾನತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಭಕ್ತಿಕೆಯಿಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೧೪—೦

ಸಂಪುಟ ೨೮) ಮೈಸೂರ್ ಸ್ಟಾರ್ ೧೯೧೫ ನೆಯ ಇಸವಿ ಮಾರ್ಚಿ ತಾರೀಖು ೭ ನೆಯ ಭಾನುವಾರ. (ಸಂಚಿಕೆ ೧೦

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೇಶಿಂತಾನ್.

5

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೇಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

೧. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

೨. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

೩. ಊಟವಾದನಂತರ ಅಥವಾ ತಾಂಬೂಲವನ್ನು ಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ ಯಾವರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

೪. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು

೫. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

೬. ಬೇಸಿಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

೭. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೇಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

೪೫	ಮಾತ್ರೆಗಳ	ಪೊಟ್ಟಣ	೧ಕ್ಕೆ	೨	ಆಣೆ	೮೦	ಮಾತ್ರೆಗಳ	ಟಿನ್	೧ಕ್ಕೆ	೪ ಆಣೆ.
೯೫	,,	,,	,,	೪	,,	೧೦೦	,,	ಶೀಶೆ	,,	೪॥ ,,
೨೦೦	,,	,,	,,	೬	,,	೫೫೦	,,	ಮರದಪೆಟ್ಟಿಗೆ	,,	೧ ರೂ.
೨೦೦	,,	ಟಿನ್	,,	೯	,,	೧೨೦೦	,,	,,	,,	೨ ,,

೧ ರೂ.ಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಎಲ್ಲಾ ಕಡೆಯೂ ಪ್ರಸಿದ್ಧ ವರ್ತಕರಲ್ಲಿ ವಿಕ್ರಯಿಸಲ್ಪಡುತ್ತದೆ.

ಮೈಸೂರುಸೀಮೆಯ ಏಜಂಟರು:—ಎಂ. ರಾಮಸಂಜೀವ ಸೆಟ್ಟಿ,
ಚನ್ನಪಟ್ಟಣ.

ಸೋಲ್ ಏಜಂಟರು:—ಸೇಶಿಂತಾನ್ ಡಿಪೋ,
ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ ೨.

ಮದ್ರಾಸ್ ಏಜಂಟ್:—ಬಿ ಸಿ. ಷಾ ಅಂಡ್ ಕೊ,
೧೭೩ ಬೇನಾಬಜಾರ್ ರೋಡ್, ಮದ್ರಾಸ್.

S.U.N.&CO.
BENARES CITY.
KASHI
VISHWESHWAR.

23

ದೊಡ್ಡ ಕಂಪೆನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರಿಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ-ಎಸ್. ಯೂ. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

೧೯೧೫ನೆಯ
ಶ್ರೀ ಸೀತಾರಾಘವ
ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಬೆಲೆಯನ್ನು ತಗ್ಗಿಸಿದೆ. ಕೊಂಚಪ್ರತಿಗಳು ಮಾತ್ರವೆ ಇವೆ. ಬೇಗ ಬರೆದು ತರಿಸಿಕೊಳ್ಳಿರಿ. ಉತ್ತಮವಾದ ಕಾಗದ ಮುದ್ದಾದಮುದ್ರಣ. ಮತ್ತಾವ ಡೈರಿಗಳಲ್ಲೂ ಇಲ್ಲದ ಅನೇಕ ಉಪಯುಕ್ತವಾದ ಸಂಗತಿಗಳು ಈ ಡೈರಿಯಲ್ಲಿ ಇರುತ್ತವೆ. ಐದು (೫) ಡೈರಿಗಳನ್ನು ಒಂದೇವಿಳಾಸಕ್ಕೆ ತರಿಸಿಕೊಂಡರೆ ೧ ಡೈರಿ ಇನಾಂ.

೧ ನಂ—ಸಣ್ಣಸೈಜು ಸಾದಾ	೦—೨—೬
೨ ನಂ—ಪೆನ್ಸಿಲ್‌ಮುಚ್ಚುಳವುಳ್ಳದು	೦—೪—೦

ಪೋಸ್ಟೇಜು ಬೇರೆ.

ವಿಳಾಸ.—ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.

22

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು.

174

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೫೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ.—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ—ಬೆಲೆ ೧-೨-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿ— ಬೆಲೆ ೧-೨-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತೆ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦.

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಶಂಭುಶಾಸ್ತ್ರೀ,
ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕೆ ಅವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತವಾಗಿರುವ ಘೋರಯುದ್ಧದ ದೆಸೆಯಿಂದ ಈ ಸಾಮಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದ ಮತ್ತೂ ಬೆಲಜಿಯಮ್ಮಿನಿಂದ ಸುತರಾಂ ಬರುವುದು ಕಟ್ಟಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಆವಶ್ಯಕವಾದ ಕಾಗದ ಮೊದಲಾದ ಸಾಮಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವಧಿಯು ಪೂರೈಸಿರುವವರಿಗೆಲ್ಲಾ ಪತ್ರಿಕೆಯನ್ನು ವಿ. ಪಿ ದ್ವಾರ ಕಳುಹಿಸುತ್ತಿರುವೆವು. ಆದರೆ ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿರುಗಿಸಿ ಕಾಗದದ ಬೆಲೆಯೇರಿಕೆಯಿಂದ ನಷ್ಟಪಡುವುದರ ಜತೆಗೆ ಪೋಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದು ತಿಳಿಸಲು ಖೇದವಾಗುತ್ತದೆ. ಇತಃಪರಃ ದಯಾರ್ದ್ರಹೃದಯರಾದ ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ. ಪಿ. ಹಣವನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನವಾಗಿ ನಡೆದುಕೊಂಡು ಹೋಗುವಂತೆ ಮಾಡುವರೆಂದು ಸಂಪೂರ್ಣವಾಗಿ ನಂಬಿರುತ್ತೇವೆ.

ಮ್ಯಾನೇಜರ್.

ಪ್ರಕೃತಿ ಪರಮಾತ್ಮ.

(ದೇಶಾಯಿ ಶೇಷಗಿರಿರಾವು ನಂದಿ)

ಪರಮಾತ್ಮನ ಗುಣಾತಿಶಯಗಳನ್ನು ಪ್ರಕಟಿಸುವ ಮಹಾ ಗ್ರಂಥವಾಗಿ ಪ್ರಕೃತಿ ಆವಾಗಲೂ ನಮ್ಮ ನೇತ್ರಗಳಿಗೆದಿರಾಗಿ ನಿಂತಿದೆ. ಈ ಪುಸ್ತಕ ರಾಜದ ಪ್ರತಿಪುಟದಲ್ಲಿಯೂ ಪರಮೇಶ್ವರನ ಗುಣಗಾನವೇ ಕಾಣಬರುತ್ತಿರುವುದು. ಪ್ರತಿದಿವಸವೂ ವೀಕ್ಷಿಸುತ್ತಿರುವುದರಿಂದ ಚಿರಪರಿಚಯಗಳಾದ ಈ ಸೃಷ್ಟಿ ವೈಚಿತ್ರ್ಯಗಳು ನಮ್ಮ ದೃಷ್ಟಿಯನ್ನು ಈಶ್ವರನ ಕಡೆಗೆ ತಿರುಗಿಸಲಾರದೆ ಇವೆ. ಶ್ರದ್ಧೆಯನ್ನು ವಹಿಸಿ ಪ್ರಕೃತಿಯನ್ನು ಪರಿಶೀಲಿಸುವ ಆವ ಮಾನವನಾದರು ಸರ್ವೇಶ್ವರನ ಮಹಿಮಾಧಿಕ್ಯತೆಯನ್ನು ಗ್ರಹಿಸಲಾರದೆ ಇರನು. ನೋಡಿ! ಭಾಸ್ಕರನು ತನ್ನ ಅಖಂಡವಾದ ತೇಜಸ್ಸಿನಿಂದಲೂ, ತನ್ನ ಅಧಿಕವಾದ ಉಷ್ಣದಿಂದಲೂ ಪ್ರಪಂಚವೆಲ್ಲವನ್ನೂ ಚೈತನ್ಯವಂತವಾದುದನ್ನಾಗಿ ಮಾಡುತ್ತಿರುವನು. ನದಿ ಸರೋವರಾದಿಗಳಲ್ಲಿರುವ ಜಲವನ್ನು ಆತನು ತನ್ನ ಕಿರಣಜ್ವಾಲೆಯಿಂದ ಮೇಲಕ್ಕೆ ಸೇರ್ಚೆ (ತೆಗೆದುಕೊಂಡು) ಮೇಘಪಙ್ಕ್ತಿಗಳನ್ನೇರ್ಪಡಿಸಿ ಅನೇಕ ಯೋಜನಗಳ ದೂರ ಮಳೆಯನ್ನು ಸುರಿಯುವಂತೆ ಮಾಡುತ್ತಿರುವನು. ಆ ಸೂರ್ಯನಿಂದಲೇ ಚಿತ್ರವಿಚಿತ್ರವರ್ಣ ಪರಿಶೋಭಿತವಾದ ಈ ಪ್ರಕೃತಿಯೆಲ್ಲವೂ ಏರ್ಪಡುತ್ತಿರುವುದು. ಸುಧಾಕರನು ತನ್ನ ಕಿರಣಗಳನ್ನು ಭೂಮಂಡಲದಮೇಲೆ ಹರಡಿ ಬೆಳ್ಳಿಯ ನೀರು ಲೇಪಿಸಿದಂತೆ ಸಕಲ ಪ್ರದೇಶವನ್ನೂ ಶ್ವೇತವಂತವಾದುದನ್ನಾಗಿ ಮಾಡಿ ಸಕಲ ಜನರನ್ನೂ ಸಂತೋಷ ಸಮುದ್ರದಲ್ಲಿ ಈಸುಲಾಡುವಂತೆ ಮಾಡುತ್ತಿರುವನು. ಚಂದ್ರನು ತನ್ನ ಪ್ರಭಾವದಿಂದ ಸಮುದ್ರವೆಲ್ಲವು ಉಕ್ಕಿಬರುವಂತೆ ಮಾಡಿ ನಾವಕಾವ್ಯಾಪಾರಾನುಕೂಲಗಳಾಗಿ ಮಹತ್ತರಗಳಾದ ತರಂಗಗಳು ಬಯಲಿಗೆ ಬರುವಂತೆ ಮಾಡುತ್ತಿರುವನು. ನಕ್ಷತ್ರಗಳು ಮಿಣಕುಮಿಣಕೆಂದು ಪ್ರಕಾಶಿಸುತ್ತಾ ನಿಶೀಸಮಯಗಳಲ್ಲಿ ತಮ್ಮ ಕೈಲಾದಮಟ್ಟಿಗು ಕತ್ತಲನ್ನು ನಿವಾರಿಸುತ್ತಿರುವುವು. ಖಗೋಳಮಹಿಮೆಯು ಇಷ್ಟಕ್ಕೇ ಪೂರ್ತಿಆಯಿತೆಂದು ತಿಳಿದಿರಾ! ಇಂದ್ರಜಾಲಕನು ಎರಡು ಮೂರು ಚೆಂಡುಗಳನ್ನು ಕೈಲಿ ಹಿಡಿದು ಒಂದರಸುತ್ತಲು ಮತ್ತೊಂದನ್ನು ತಿರುಗುವಂತೆ ಎಗರಿಸಿದಲ್ಲಿ ಅವನ ನೈಪುಣ್ಯಾತಿಶಯವನ್ನು ನಾವುಗಳು ಸಾವಿರ ವಿಧಗಳಲ್ಲಿ ಶ್ಲಾಘಿಸುತ್ತಿರುವೆವು. ಇನ್ನು ಆಕಾಶದಲ್ಲಿನ ವಿಚಿತ್ರಗಳನ್ನು ಗಮನಿಸಿ. ಭೂಮ್ಯಾದಿ ಗ್ರಹಗಳು ತಮ್ಮ ಗತಿಯನ್ನು ಅಣುಮಾತ್ರವು ತಪ್ಪದೆ ಕ್ಷಣವಾದರು ಕಾಲವಿಲಂಬವಿಲ್ಲದೆ ಸೂರ್ಯನ ಸುತ್ತಲು ಆವಾಗಲೂ ಪ್ರದಕ್ಷಿಣೆ ಮಾಡುತ್ತಿರುವವು. ನಿರಾಧಾರವಾದ ಗಗನಮಂಡಲದಲ್ಲಿ ಲಕ್ಷಾನುಗಟ್ಟಲೆ ಚದರ ಮೈಲಿಗಳ ವೈಶಾಲ್ಯವನ್ನುಳ್ಳ ನಕ್ಷತ್ರಗಳನ್ನು ತನ್ನ ಮನಸ್ಸಿಗೆ ಬಂದಂತೆ ಅತ್ಯಧಿಕವಾದ ತ್ವರಿತದಿಂದ ಚಿತ್ರವಿಚಿತ್ರ ರೀತಿಗಳಲ್ಲಿ ತಿರಿಗಿಸುತ್ತಾ ಮಾನವಲೋಕವೆಲ್ಲವನ್ನು ಆಶ್ಚರ್ಯಪಡುವಂತೆ ಮಾಡುತ್ತಿರುವ ಆ ಮಹೇಂದ್ರಜಾಲಕನ ಅಖಂಡಬುದ್ಧಿ ಚಾತುರ್ಯವನ್ನು ಆರು ವರ್ಣಿಸಬಲ್ಲರು! ಆಕಾಶಮಂಡಲದ ವಿಶೇಷಗಳು ಹೀಗಿರುವಲ್ಲಿ ಭೂಲೋಕದಲ್ಲಿನ ವಿಷಯಗಳೂ ಅಧಿಕವಾದ ಅದ್ಭುತವನ್ನೇ ಉಂಟುಮಾಡುತ್ತಿರುವುವು. ಗುಹೆಗಳಿಂದೊಪ್ಪುತ್ತಿರುವ ಮಹೋನ್ನತಪರ್ವತಗಳಾವಾಗಲು ನಮಗೆ ಅಪಾರವಾದ ಸುಖಸಂತೋಷಗಳನ್ನುಂಟುಮಾಡುತ್ತಿರುವವರುವುವು. ಐಹಿಕವ್ಯಾಪಾರನಿಮಗ್ನನಾಗಿ ಬಹು ಬೇಸರಿಕೆಯನ್ನು ಹೊಂದಿದ ಮನುಷ್ಯನು ಸ್ವಲ್ಪಕಾಲ ಪರ್ವತೋಪರಿಭಾಗದಲ್ಲಿ ವಿಹರಿಸಿದಲ್ಲಿ ಶಾಂತಾತ್ಮನಾಗುವನೆಂಬುದರಲ್ಲಿ ಎಷ್ಟುಮಾತ್ರವು ಸಂದೇಹವಿಲ್ಲವು. ನಾನಾ ವಿಧರುಚ್ಯಫಲಭರಿತಗಳಾದ ವೃಕ್ಷಗಳಿಂದಲೂ, ತಮ್ಮ ಸುವಾಸನೆಯನ್ನು ಚತುರ್ದಿಕ್ಕುಗಳಿಗೂ ಹರಡುವ ಪುಷ್ಪವಂತಗಳಾದ ಲತಾವಿಶೇಷಗಳಿಂದಲೂ, ಅಲ್ಲಲ್ಲಿ ಒಂದರಮೇಲೊಂದರಂತೆ ಚಮತ್ಕಾರವಾಗಿ ಮಿಳಿತವಾದ ಸೊಪ್ಪುಸೆದೆಗಳ ಮನೆಗಳಿಂದಲೂ ತುಂಬಿರುವ ಮಹಾರಣ್ಯಗಳು ನಮ್ಮಗಳನ್ನು ಆನಂದಪರವಶರನ್ನಾಗಿ ಮಾಡುತ್ತಿರುವುವು. ಆವ ಭೂಧರಶಿಖಾಗ್ರದಲ್ಲಿಯೋ ಜನ್ಮಿಸಿ ನೂರಾರು ಮೈಲಿಗಳ ದೂರ ಪ್ರವಹಿಸಿ ಪ್ರವಹಿಸಿದ ಪ್ರದೇಶವನ್ನೆಲ್ಲಾ ಸಂಪೂರ್ಣಫಲವಂತವಾದುದನ್ನಾಗಿ ಮಾಡುವ ನದಿಗಳೂ, ನಾನಾವಿಧವಾಗಿ ಶೃಂಗಾರವಾಗಿರುವ ಸರೋವರಗಳೂ ನಿರಂತರ ತರಂಗಗಳಿಂದ ಭಯಂಕರವಾಗಿರುವ ಮಹಾ ಸಮುದ್ರವೂ ಮಾನವರಿಗೆ ಆಶ್ಚರ್ಯಭಯವನ್ನುಂಟುಮಾಡುತ್ತಿರುವವು. ಮೃದುಮಧುರ ಧ್ವನಿಗಳನ್ನು ಮಾಡುವ ಪಕ್ಷಿಗಳೂ, ಬಹುವಿಧ ಪ್ರಯೋಜನಕಾರಿಗಳಾದ ಜಂತುಗಳೂ ನಮ್ಮ ಪ್ರಪಂಚಕ್ಕೆ ಅಲಂಕಾರಪ್ರಾಯವಾಗಿ ಒಪ್ಪುತ್ತಿರುವುವು. ಅಸದೃಶಗಳಾದ ಈ ಸೃಷ್ಟಿವಿಶೇಷಗಳನ್ನವಲೋಕಿಸಿದ ಆವ ಮಾನವನು ಈಶ್ವರನ ಅಸ್ತಿತ್ವವನ್ನು ಒಪ್ಪಿಕೊಳ್ಳದೆ ಇರುವನು? ಈ ಮಹಾ ವಿಶ್ವವೆಲ್ಲವು ತನ್ನಷ್ಟಕ್ಕೆ ತಾನುದ್ಭವವಾಯಿತೆಂದು ಆರಾದರು ಸಾಹಸಮಾಡಿ ಹೇಳಲಾಗುವಿರಾ? ಒಂದುವೇಳೆ ಸಾಹಸಮಾಡಿದಲ್ಲಿ ಅದು ಜ್ಞಾನವಂತರಿಂದ ಅಂಗೀಕರಿಸಲ್ಪಡುವುದೆ? ಪ್ರಾಗ್ದೇಶದಲ್ಲೇನು, ಪಾಶ್ಚಾತ್ಯದೇಶದಲ್ಲೇನು ನಾಸ್ತಿಕಮತಗಳೆಷ್ಟೋ ಹುಟ್ಟಿದವಾದರೂ ಅವುಗಳೆಲ್ಲವು ಜನಸಾಮಾನ್ಯದ ಅಂಗೀಕಾರಕ್ಕೆ ಪಾತ್ರಗಳಾಗದೆ ಹೇಗೆ ಉದಯಿಸಿದವೋ ಹಾಗೆಯೇ ಅಸ್ತಮಿಸಬೇಕಾಗಿ ಬಂದುವು. ತನ್ನ ಅವಕ್ರ ಪರಾಕ್ರಮದಿಂದ ಯೂರೋಪುಖಂಡವೆಲ್ಲವನ್ನೂ ಗಡಗಡನೆ ನಡಗುವಂತೆ ಮಾಡಿದ ನೆಪೋಲಿಯನ್ನೆಂಬ ಯೋಧಾಗ್ರೇಸರನೊಬ್ಬನು ಪೂರ್ವದಲ್ಲಿ ಫ್ರಾನ್ಸ್‌ದೇಶದಲ್ಲಿದ್ದನು. ಈತನು ಒಂದುಸಾರಿ ಈಜಿಪ್ಟ ದೇಶದಮೇಲೆ ದಂಡಯಾತ್ರೆ ಹೊರಡುತ್ತಾ ತನ್ನ ಜತೆಯಲ್ಲಿ ಕೆಲವರು ತತ್ವವೇತ್ತರನ್ನು ಕರೆದುಕೊಂಡು ಹೋದನು. ಈ ತತ್ವವಿಶಾರದರು ಈಶ್ವರನಿರುವನೇ, ಇಲ್ಲವೇ? ಎಂಬ ವಿಷಯವನ್ನು ಕುರಿತು ಒಂದುದಿನ ಸಾಯಂಕಾಲದಲ್ಲಿ ಚರ್ಚಿಸಿ ದೇವರಿಲ್ಲವೆಂದು ಕಡೆಗೆ ನಿರ್ಧರಿಸಿದರು. ಈ ಚರ್ಚೆಯನ್ನು ಕೇಳುತ್ತಲಿದ್ದ ನೆಪೋಲಿಯನ್ ಅವರನ್ನು ನೋಡಿ "ನಿಮ್ಮ ಬುದ್ಧಿ ಕುಶಲತೆಯು ಬಹು ಚನ್ನಾಗಿದೆ, ಆದರೆ ಈ ನಕ್ಷತ್ರಗಳನ್ನು ಆರು ಸೃಷ್ಟಿಸಿದರು?" ಎಂದು ಕೇಳಿದನು. ಈ ಪ್ರಶ್ನೆಯು ಆ ತತ್ವವೇತ್ತರೆಲ್ಲರನ್ನೂ ತಲೆ ಕೆಳಗುಮಾಡಿತು. ಕಣ್ಣುಗಳಿಗೆ ಹಬ್ಬವನ್ನುಂಟುಮಾಡುತ್ತಿದ್ದ ಆ ನಕ್ಷತ್ರಗಳ ಮುಂದೆ ಅವರ ತತ್ವವೆಲ್ಲವೂ ಬದಲಾಯಿಸಿಹೋಯಿತು. ಶ್ರದ್ಧಾಪೂರ್ವಕವಾಗಿ ಯೋಚಿಸುವ ಎಂತಹ ಅಲ್ಪಬುದ್ಧಿವಂತನಾದರು ಜ್ಞಾನಮಯವೂ, ಗುಣಮಯವೂ, ಕರುಣಾಮಯವೂ ಆದ ಅಖಂಡ ಶಕ್ತಿ ಒಂದು ಈ ವಿಶ್ವವೆಲ್ಲಕ್ಕೂ ಆಧಾರಭೂತವಾಗಿ ಒಪ್ಪುತ್ತಿರುವುದೆಂದು ಸಮ್ಮತಿಸದೆ ತಪ್ಪದು. "ಏಕಮೇವಾದ್ವಿತೀಯಂ ಬ್ರಹ್ಮ" ಎಂಬ ಉಪನಿಷದ್ವಾಕ್ಯರತ್ನದ ಯಥಾರ್ಥವನ್ನು ಎಲ್ಲರೂ ಗ್ರಹಿಸಿ ಆ ಅಖಂಡ ಪರಬ್ರಹ್ಮನಲ್ಲಿ ವಿಶ್ವಾಸವನ್ನಿರಿಸಿ ಶಾಶ್ವತಾನಂದಸಾಮ್ರಾಜ್ಯವನ್ನನುಭವಿಸತಕ್ಕವರಾಗುವ.

ಮುಂಬಯಿಯಲ್ಲಿ ಮೈಸೂರ ಯುವರಾಜರ ಸನ್ಮಾನವು.

ಮೊದಲೇ ಗೊತ್ತಾದಮೇರೆಗೆ ಕಳೆದ ತಾ|| ೨೫ ರಲ್ಲಿ ಲ್ಯಾಮಿಂಗಟನ್ ರೋಡದಲ್ಲಿರುವ ಸರ್ ಮಂಗಳದಾಸರವರ ಸುಂದರವಾದ ಹಾಲಿನಲ್ಲಿ ಕರ್ನಾಟಕ ಸಭೆಯು ಮತ್ತೂ ಕರ್ನಾಟಕ ವ್ಯಾಪಾರಿಗಳವತಿಯಿಂದ "ಮೈಸೂರ ಶ್ರೀ|| ಯುವರಾಜರ" ಸನ್ಮಾನಾರ್ಥವಾಗಿ ಒಂದು ಸಮಾರಂಭವು ಮಾಡಲ್ಪಟ್ಟಿತು. ಸಮಾರಂಭಕ್ಕೆ ನಾ|| ವಿ|| ಪಟ್ವಣೆ, ನಾ|| ರಾ|| ಬ|| ರೊದ್ದ, ಎ|| ಅಯ್ಯರ್, ರಾ|| ಸಾ|| ಪೈ|| ವಿ|| ಸೆಟಲೂರ ವಿ|| ನರೋತ್ತಮ ಮುರಾರ್ಜಿ ಗೋಕುಳದಾಸ, ವಿ|| ನಾರಾಯಣ ವಿಶ್ವನಾಥಮಂಡಲಿಕ, ಡಾ|| ನಾಡಗೀರ, ಸರದಾರ ಮೆಹಂದಳೆ ಎ|| ಗುಮಾಸ್ತೆ, ವಿ|| ಶಿರೂರ, ವಿ|| ತರ್ಖಡ, ವಿ|| ರೊದ್ದ, ವಿ|| ಲಜಮಿ, ವಿ|| ಹರಪನಹಳ್ಳಿ, ವಿ|| ಮುಜುಮದಾರ, ಎ|| ದೇಶಪಾಂಡೆ, ವಿ|| ದಿನಕರ ಸಖಾರಾಮಪರ್ವೆ ವಕೀಲ, ವಿ|| ಜಹಾಗೀರದಾರ ವಿ|| ಕೌಶಿಕ, ವಿ|| ಕೈಕಿಣಿ, ಡಾ|| ಟಂಭೆ, ವಿ|| ಗಂಗಾಧರಪ್ಪಾ ಸಾಬೋಜಿ, ವಿ|| ಶಿರೋಳ, ವಿ|| ಬೆಕ್ಕೋಡಿ, ವಿ|| ಲಿಂಗಪ್ಪಾ ಮೋಟಗಿ, ಮುಂತಾದ ಜನರು ಬಂದಿದ್ದರು. ಶ್ರೀ|| ಯುವರಾಜರವರ ಸ್ವಾರಿಯು ಮೋಟಾರಗಾಡಿಯೊಳಗಿಂದ ಬಂದಕೂಡಲೆ ಕೂಡಿದ ಎಲ್ಲ ಮಂಡಳಿಯವರೂ ಸನ್ಮಾನಪೂರ್ವಕ ಸ್ವಾಗತ ಮಾಡಿ ಎಲ್ಲರ ಭಾವಚಿತ್ರವನ್ನು ತೆಗೆದನಂತರ ಎಲ್ಲರೂ ಒಳ್ಳೇ ಉತ್ಕೃಷ್ಟರೀತಿಯಿಂದ ಶೃಂಗರಿಸಿದ ಮಂದಿರದಲ್ಲಿ ಪ್ರವೇಶಗೊಂಡಕೂಡಲೆ ಶ್ರೀ ಯುವರಾಜರ ಸ್ವಾಗತಪರ ಗಾಯನವಾಯಿತು. ಆಮೇಲೆ ಡಾ|| ನಾಡಗೀರರವರು ಯೋಗ್ಯಶಬ್ದಗಳಿಂದ ಯುವರಾಜರವರ ಸ್ವಾಗತ ಮಾಡಿದರು. ಅನಂತರದಲ್ಲಿ ಅವರು, ಮೈಸೂರ ಸಂಸ್ಥಾನವು ಕರ್ನಾಟಕದಲ್ಲಿ ಒಳ್ಳೇ ದೊಡ್ಡದಾಗಿಯೂ, ಮೊದಲನೆ ದರ್ಜೆಯುಳ್ಳದ್ದಾಗಿಯೂ ಇರುವುದಲ್ಲದೆ ಅಲ್ಲಿಯ ಸದ್ಗುಣಿ ಸಂಸ್ಥಾನಿಕರ ಸುಪ್ರಜಾದಕ್ಷಪಾಲನದಿಂದ ಭರತಖಂಡದಲ್ಲಿಯೇ ಮಕುಟಮಣಿಯಾಗಿರುತ್ತದೆ. ಇದಕ್ಕೆಲ್ಲ ಅಲ್ಲಿಯ ಸುಧಾರಣೆಯೇ ಕಾರಣವಾಗಿರುತ್ತದೆಂದು ಹೇಳಿದರು. ಮತ್ತೂ ಹೊಸದಾಗಿ ಆ ಸಂಸ್ಥಾನದಲ್ಲಿ ಪ್ರವೇಶಗೊಂಡ ಸದ್ಗೃಹಸ್ಥರಿಗೆ ಅಲ್ಲಿ ನಾಲ್ಕು ಕಡೆಯಿಂದ ಉಂಟಾದ ಸುಧಾರಣೆಯು ದೃಗ್ಗೋಚರವಾಗುವುದು. ಬೆಂಗಳೂರ ಮತ್ತೂ ಮೈಸೂರ ಪಟ್ಟಣಗಳಲ್ಲಿರುವ ಪ್ರಾಚ್ಯಕಲೆಯಿಂದ್ಯುಕ್ತವಾದ ಎಲ್ಲ ಸುಧಾರಣೆಗಳಿಂದಲೂ ಪರಿಪೂರ್ಣವಾದ ಔಷಧಾಲಯಗಳೇ ಈ ಸಂಗತಿಗೆ ಸಾಕ್ಷಿಯಾಗಿರುತ್ತವೆ. ಈ ಹಾಸ್ಪಿಟಲಗಳು ಇಡೀ ಭರತಖಂಡದಲ್ಲಿಯೇ ಅನುಕರಣೀಯವಾಗಿರುತ್ತವಲ್ಲದೆ ಮಿಂಟೊ ಆಫ್‌ಥಾಲಮಿಕ್ ಹಾಸ್ಪಿಟಲವು ಇಡೀ ಜಗತ್ತಿನಲ್ಲಿಯೇ ಶ್ರೇಷ್ಠತರವಾದುದಾಗಿದೆ. ಈವತ್ತಿನ ಸಮಾರಂಭದ ಮಕುಟಮಣಿಗಳಾದ ಮೈಸೂರ ಸಂಸ್ಥಾನದ ಯುವರಾಜರು ಸಂಸ್ಥಾನದ ಪ್ರಗತಿಯ ವಿಷಯವಾಗಿ ವಿಶೇಷ ಶ್ರಮ ತಕ್ಕೊಳ್ಳುವುದಲ್ಲದೆ, ಸಂಸ್ಥಾನದ ಪ್ರತಿಯೊಂದು ಬಾಬಿನಲ್ಲಿಯೂ ಅವರು ಸ್ವತಃ ಮನಸು ಹಾಕುತ್ತಾರೆ. ಇಷ್ಟೇಅಲ್ಲ. ಸಂಸ್ಥಾನದೊಳಗಿನ ಒಬ್ಬ ಅಧಿಕಾರಿಯು ಮಾಡಲಾರದಷ್ಟು ಅಥವ ಅವನ ಸರಿಯಾದ ಕೆಲಸ ಮಾಡುತ್ತಾರೆ. ಸಂಸ್ಥಾನದೊಳಗಿನ ಬೇರೆಬೇರೆ ಖಾತೆಗಳ ಪೂರ್ಣಮಾಹಿತಿಯು ಯುವರಾಜರಿಗೆ ಇದ್ದು ಜ್ಞಾನಸಂಗ್ರಹದ ಅವರ ಉತ್ಕಟ ಅಪೇಕ್ಷೆಯು ಅತಿ ತೀವ್ರವಾಗಿರುವುದರಿಂದಲೇ ಹೋದವರ್ಷ ಅವರು ವಿಲಾಯತಿಪ್ರವಾಸ ಮಾಡಿ ಅದನ್ನು ಪೂರ್ಣಮಾಡುವ ಮತ್ತೂ ಉತ್ತಮವಾದ ಪಾಶ್ಚಿಮಾತ್ಯ ಸಂಸ್ಥೆಗಳ ಸಂಬಂಧದ ಇಂಗಿತವನ್ನು ತಿಳಿಯುವ ಪ್ರಯತ್ನಮಾಡಿದರು. ಸಾಮಾಜಿಕಸುಧಾರಣೆಯಲ್ಲಂತೂ ಯುವರಾಜರು ಎಷ್ಟು ಮುಂದೆ ಬಂದಿರುವರೆಂಬುದು ಹೋದವರ್ಷ ಮದ್ರಾಸದಲ್ಲಿ ಕೂಡಿದ ಸಾಮಾಜಿಕ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ವಹಿಸಿದರಮೇಲಿಂದಲೇ ವ್ಯಕ್ತವಾಗುತ್ತದೆ. ನಮ್ಮ ಸಾರ್ವಭೌಮ ಬಾದಶಾಹರವರು ಯುವರಾಜರ ಕೌಶಲ್ಯವನ್ನರಿತು ಜಿ. ಸಿ. ಐ. ಇ, ಎಂಬ ಕಿತಾಬುಕೊಟ್ಟಿರುತ್ತಾರೆ. ಈ ಬಿರುದು ಮೈಸೂರ ಯುವರಾಜರಿಗಷ್ಟೇ ಮರ್ಯಾದೆಯುಳ್ಳದ್ದಾಗಿ ತೋರದೆ ಇಡೀ ಕರ್ನಾಟಕಕ್ಕೆಲ್ಲ ಇದರಿಂದ ಅಭಿಮಾನ ಗೌರವ ಕೌತುಕಗಳುಂಟಾಗಿರುತ್ತವೆ. ನಾ|| ರಾ|| ಬ|| ರೊದ್ದರವರು, ಡಾ|| ನಾಡಗೀರವರ ಮೇಲಿನ ಭಾಷಣ ಆದನಂತರ ಭಾಷಣಮಾಡಿದರು. ಮೈಸೂರಸಂಸ್ಥಾನವು ಸರ್ವ ಶ್ರೇಷ್ಠ ದರ್ಜೆಯುಳ್ಳದ್ದಾಗಿ ಹೇಗೆ ಇರುವುದೆಂಬುದನ್ನು ಹೇಳಿದರು. ಕರ್ನಾಟಕದ ಎಷ್ಟೋ ಭಾಗಗಳುಆಗಿರುತ್ತವೆ. ಆದರೆ ಭಾಷೆಯು ಪ್ರಾಂತಗಳನ್ನು ಜೋಡಿಸುವಂಥ ಕನ್ನಡವು ಮಾತ್ರ ಸ್ಥಿರವಾಗಿದೆ. ಕನ್ನಡ ವಾಙ್ಮಯವು ಹೇಗೇಗೆ ಬೆಳೆಯುತ್ತ ನಡೆಯಿತೆಂಬುದನ್ನು ಹೇಳಿ ನಾ|| ರವರು ತಮ್ಮ ಭಾಷಣವನ್ನು ಮುಗಿಸಿದರು. ಆಮೇಲೆ ಮೈಸೂರ ಯುವರಾಜರವರು ಉತ್ತರಾರ್ಥ ಭಾಷಣ ಮಾಡುವಾಗ್ಗೆ ಮೈಸೂರ ಮಹರಾಜರ ಸಂಬಂಧವಾಗಿಯೂ ಮೈಸೂರಸಂಸ್ಥಾನ ಸಂಬಂಧವಾಗಿಯೂ ಮತ್ತೂ ತಮ್ಮ ಸಂಬಂಧವಾಗಿಯೂ ಹೊರಟಂಥ ಉದ್ಗಾರಗಳಿಗೆಲ್ಲ ತಮ್ಮ ಆನಂದವನ್ನು ವ್ಯಕ್ತಪಡಿಸಿದರು. ಮತ್ತೂ ಜಿ. ಸಿ. ಐ. ಇ. ಎಂಬ ಹೊಸದಾಗಿ ದೊರೆದ ಕಿತಾಬಿನಬಗ್ಗೆ ತಾವೆಲ್ಲರೂ ಮಾಡಿದ ಅಭಿನಂದನಕ್ಕಾಗಿ ತಮ್ಮೆಲ್ಲರ ಆ ಭಾರವನ್ನು ಮನ್ನಿಸುತ್ತೇನೆಂದು ಹೇಳಿ ಕರ್ನಾಟಕಜನರ ಪ್ರಾಂತವಾರಿಯಿಂದ ಬೇರೆಬೇರೆ ಭಾಗಗಳಾಗಿದ್ದರೂ ನಮ್ಮ ಮಾತೃಭಾಷೆಯಾದ ಕರ್ನಾಟಕಭಾಷೆ ಸುಸಹಾಯದಿಂದ ನಮ್ಮೆಲ್ಲರ ವಿಚಾರಗಳು ಬಹಳವಾಗಿ ಸರಿಯಾದವುಗಳೂ ಸಂಘಶಕ್ತಿಯಿಂದ ಒಗ್ಗಟ್ಟಾದಂಥವೂ ಆಗಿರುತ್ತವೆಂದು ಈ ಮುಂಚೆ ಹೇಳಿದ ಸಂಗತಿಯು ನಿಜವಾಗಿರುವುದು. ಈ ಪಟ್ಟಣದಲ್ಲಿ ಕನ್ನಡಭಾಷೆಯನ್ನಾಡುವ ಎಲ್ಲ ಜನರನ್ನು ಒಂದೆಡೆಯಲ್ಲಿ ಕೂಡಿಸುವುದಕ್ಕಾಗಿ ನಡೆದ ಪ್ರಯತ್ನವು ಅಭಿನಂದನೀಯವಾಗಿದೆ. ಮತ್ತೂ ಆರಾರಿಗೆ ತಮ್ಮ ದೇಶದಬಗ್ಗೆ ಪ್ರೇಮ ಮತ್ತೂ ಅಭಿಮಾನಗಳು ಇರುವವೋ ಅವರವರು ಈ ಬಾಬಿನಲ್ಲಿ ಅವಶ್ಯವಾಗಿ ಕರ್ನಾಟಕ ಸಭೆಗೆ ಸಹಾಯಮಾಡತಕ್ಕದ್ದು. ಈವತ್ತಿನ ದಿವಸ ತಾವೆಲ್ಲರೂ ಕೂಡಿ ನನ್ನ ಸನ್ಮಾನಮಾಡಿದ್ದಕ್ಕಾಗಿ ನಾನು ತಮ್ಮೆಲ್ಲರ ಆಭಾರಿಯಾಗಿರುವುದಲ್ಲದೆ ನಮ್ಮ ಮಾತೃಭಾಷೆಯನ್ನಾಡುವ ಜನರ ಸಭೆಗೆ ಈವತ್ತಿನ ದಿವಸ ನನಗೆ ಬರಲಿಕ್ಕೆ ಅತ್ಯಾನಂದವಾಯಿತು. ಈ ಪ್ರಕಾರವಾಗಿ ಶ್ರೀ ಯುವರಾಜ ಸಾಹೇಬರ ಭಾಷಣವಾದನಂತರ ಅವರ ಕೊರಳಿಗೆ ಪುಷ್ಪಹಾರವನ್ನು ಹಾಕಿದರು. ಆಮೇಲೆ ಸಭೆಯು ಕೆಲಸವು

ಪೂರೈಸಿದ ನಂತರ ಮೆ|ಸರ್ಸ್ ಗುಮಾಸ್ತೆ, ಜಹಾಗೀರದಾರ್, ರೊದ್ದ, ಪಿ. ಆರ್. ಬೆಕೋಡಿ, ಲಿಂಗಪ್ಪಾ ಮೋಟಗಿ, ಸಾಬೋಜಿ, ವೆಂಕಟರಾವ ಲಜಮಿ, ಬಿ. ಎಸ್. ಸಾವುಕಾರ್ ರಾ|| ಸಾ|| ಪೈ. ಡಾ|| ನಾಡಗೀರ ಮತ್ತೂ ನಾ|| ವಿ|| ರೊದ್ದ ಮತ್ತೂ ಶ್ರೀನಿವಾಸರಾವ್ ಮುಂತಾದವರ ಪರಿಚಯವು ಯುವರಾಜರಿಗೆ ಮಾಡಿಸಲ್ಪಟ್ಟಿತು. ಕರ್ನಾಟಕ ಅಡತಿ ವ್ಯವಹಾರಮಾಡುವ ಅಂಗಡಿಗಳ ತರ್ಫೆನಿಂದ ಎಷ್ಟೋ ಜನರು ಸಮಾರಂಭಕ್ಕೆ ಬಂದಿದ್ದರು. ಅಂತೂ ಸಮಾರಂಭವು ಉತ್ತಮರೀತಿಯಿಂದ ನೆರವೇರಿಸಲ್ಪಟ್ಟಿತು. ಶ್ರೀ ಯುವರಾಜರವರ ಆಗಮನದಿಂದ ಕನ್ನಡ ಭಾಷೆಯನ್ನಾಡುವ ಜನರು ಒಟ್ಟುಗೂಡಲಿಕ್ಕೆ ಸಹಾಯವಾದಂತೆ ಇಲ್ಲಿ ಕರ್ನಾಟಕದ ಅಡತಿಯ ವ್ಯವಹಾರವನ್ನು ಮಾಡುವ ಅಂಗಡಿಕಾರರಲ್ಲಿ ಐಕ್ಯವನ್ನುಂಟುಮಾಡುವುದರಲ್ಲಿ ಆದೀತೇನು?

ತಾ|| ೨೫-೨-೧೯೧೫ ಓರ್ವ ಕರ್ನಾಟಕ ವ್ಯಾಪಾರಿ.

ಆಂಗ್ಲನೌಕಾದಳ ಸಾಮರ್ಥ್ಯ.

ಸೀಮೆಯಲ್ಲಿ ಈಗ ನಡೆಯುತ್ತಿರುವ ಪಾರ್ಲಿಮೆಂಟಿನಲ್ಲಿ ಕಳೆದ ತಾ|| ೧೫ ನೆಯ ರಾತ್ರಿ ಆಂಗ್ಲನೌಕಾದಳಾಂಗ ಮಂತ್ರಿಯವರಾದ ವಿನ್ಸ್ಟನ್ ಚರ್ಚಿಲ್‌ರವರು ತಮ್ಮ ನೌಕಾದಳದವರ ಸಾಮರ್ಥ್ಯವನ್ನೂ ಕರ್ತವ್ಯವನ್ನೂ ಕುರಿತು ಒಂದು ಘನತರವಾದ ಉಪನ್ಯಾಸವನ್ನು ಮಾಡಿದರು. ಅದರಲ್ಲಿನ ಕೆಲ ಮುಖ್ಯಭಾಗಗಳನ್ನು ಇಲ್ಲಿ ಕೊಟ್ಟಿರುತ್ತೇವೆ.

ನಮ್ಮದೇಶರಕ್ಷಣೆಗೆ ನಾವು ನೌಕಾದಳವನ್ನೇ ನಂಬಿಕೊಂಡಿದ್ದೇವೆ. ಯುದ್ಧಾರಂಭಕಾಲದಲ್ಲಿದ್ದ ಸ್ಥಿತಿಗಿಂತಲೂ ಈಗಿನ ನಮ್ಮ ನೌಕಾದಳದ ಪರಿಸ್ಥಿತಿಯು ಬಹಳ ಸಮರ್ಪಕವಾಗಿಯೂ ಸಮೃದ್ಧವಾಗಿಯೂ ಇದೆ. ಮೂರುತಿಂಗಳ ಹಿಂದೆ ನಮ್ಮಲ್ಲಿ ನೌಕಾವಿಮಾನಗಳಿರಲಿಲ್ಲ. ಈಗ ಅವು ಕೂಡ ಸಿದ್ಧವಾಗಿವೆ. ಈಗ ನೌಕಾವಿಮಾನ ಸೈನ್ಯವು ಪ್ರಬಲಿಸುತ್ತಿದೆ. ಹೊಸದಾಗಿ ಎಷ್ಟೋ ಯುದ್ಧದ ಹಡಗುಗಳು ಅಣಿಯಾಗಿವೆ; ಇನ್ನೂ ರಚಿಸಲ್ಪಡುತ್ತಲೂ ಇವೆ. ಇತರ ದೇಶಗಳ ಮೇಲೆ ಬಿದ್ದು ಯುದ್ಧಮಾಡುವುದಕ್ಕಾಗಿ ಜರ್ಮನರ ಸೇನೆಗಳು ಹೇಗೆ ಸಿದ್ಧವಾಗಿರುವುವೋ ಹಾಗೆ ನಮ್ಮದೇಶರಕ್ಷಣೆಗಾಗಿ ನಮ್ಮ ನೌಕಾಸೇನೆಯೂ ಸಿದ್ಧವಾಗಿದೆ.

ಇದುವರೆಗೆ ಜರ್ಮನರಿಗೂ ನಮಗೂ ೨ ಕಡೆಯಲ್ಲಿ ೨ ಆವೃತ್ತಿ ನಡೆದ ನೌಕಾಯುದ್ಧಗಳಲ್ಲಿ ನಮ್ಮ ನೌಕಾದಳವು ಪಡೆದಿರುವ ಜಯವು ಸಂತೋಷಪ್ರದವಾಗಿರುವುದು ಮಾತ್ರವೇ ಅಲ್ಲದೆ ಮುಂದಣ ಮಹಾವಿಜಯಕ್ಕೆ ಸೂಚಕವಾಗಿದೆ. ಫಾಕ್‌ಲಾಂಡ್‌ದ್ವೀಪದ ಹತ್ತಿರ ಜರುಗಿದ ಯುದ್ಧದಲ್ಲಿ ನಾವು ಜಯಶೀಲರಾದುದರಿಂದ ಪ್ರಪಂಚದಮೇಲಿರುವ ಸಮುದ್ರತಳದಿಂದಲೇ ಜರ್ಮನಿಯ ಪತಾಕೆಯು ಮಾಯವಾಗಿ ಹೋಗುವಂತಾಯಿತು. ಶತ್ರುಗಳ ವ್ಯಾಪಾರದಹಡಗುಗಳು ಹೊರಕ್ಕೆ ತಲೆ ಯಿಕ್ಕದಂತೆ ಮಾಡಿರುವುದು. ಸಿಂಗ್‌ಟೋವುಕೋಟೆಯು ವಶವಾಗಿ ಹೋದುದು ಕೋಯ್ನಸ್‌ಬರ್ಗ್ ಎಂಬ ಜರ್ಮನರ ಕ್ರೂಯಿಜರು ಬಂಧಿತವಾಗಿಹೋದುದು, ಎಮ್ಡೆನ್ ಕ್ರೂಯಿಜರು ಧ್ವಂಸವಾದುದು ಈ ಕಾರ್ಯಗಳೆಲ್ಲವೂ ಕ್ರಮವಾಗಿ ಅಡ್ಮಿರಲ್‌ಸ್ಟರ್ಡಿಯವರು ಪಡೆದ ವಿಜಯಪಥದ ಪಾವುಟಿಗೆಗಳಾದುವು.

ನಮ್ಮ ವ್ಯಾಪಾರದ ಹಡಗುಗಳಮೇಲೆ ಬಿದ್ದು ನಾಶ ಮಾಡಬೇಕೆಂದು ಜರ್ಮನರು ಮಾಡಿದ ವಿಶ್ವಪ್ರಯತ್ನಗಳೊಳಗೆಲ್ಲಾ ಅವರ ೨ ಸಣ್ಣ ಯುದ್ಧದ ಹಡಗುಗಳೂ ೨ ಆಯುಧಸಮೇತವಾದ ವ್ಯಾಪಾರದ ಹಡಗುಗಳೂ ಮಾತ್ರ ತಪ್ಪಿಸಿಕೊಂಡು ಇನ್ನೂ ಅಲೆದಾಡುತ್ತಿವೆ. ಅವು ಕೂಡ ಬಹಿರಂಗವಾಗಿ ಕಾಣಿಸಿಕೊಳ್ಳದೆ ಎಲ್ಲೋ ಅವಿತುಕೊಂಡಿವೆ. ಈಗ ಬಹುಶಃ ೮೦೦೦ ಇಂಗ್ಲೀಷ್‌ಹಡಗುಗಳು ಸಮುದ್ರಗಳಮೇಲೆ ತಿರುಗಾಡುತ್ತಿವೆ. ಕಳೆದ ಮೂರುತಿಂಗಳಿಂದಲೂ ಇಂಗ್ಲೀಷ್‌ದ್ವೀಪಗಳಿಗೆ ೪೪೬೫ ಹಡಗುಗಳು ಹೊರಗಿನಿಂದ ಬಂದಿರುತ್ತವೆ. ಅಲ್ಲಿಂದ ೩೩೦೦ ಹಡಗುಗಳು ಇತರ ಸ್ಥಲಗಳಿಗೆ ಪ್ರಯಾಣಮಾಡಿ ಹೋಗಿರುತ್ತವೆ. ಇಷ್ಟಕ್ಕೆ ೧೯ ಹಡಗುಗಳು ಮಾತ್ರ ಶತ್ರುಗಳಿಂದ ಮುಳುಗಿಸಲ್ಪಟ್ಟವೆ. ೧೭೯೩ ನೆ ವರ್ಷದಿಂದ ೧೮೧೪ ನೆ ವರ್ಷದವರೆಗಿನ ಮಧ್ಯಕಾಲದಲ್ಲಿ ನಡೆದ ೭ ಯುದ್ಧಗಳಲ್ಲೂ ಇಂಗ್ಲೀಷರ ವ್ಯಾಪಾರದ ಹಡಗುಗಳು ೧೦೮೩೧ಕ್ಕೆ ಕಡಿಮೆಯಿಲ್ಲದೆ ಶತ್ರುಗಳಿಂದ ಹಿಡಿಯಲ್ಪಟ್ಟಿದ್ದುವು. ಅದಕ್ಕೆ ಈಗಿನ ಸ್ಥಿತಿಯನ್ನು ಹೋಲಿಸಿ ನೋಡಿದರೆ ಈ ಯುದ್ಧದಲ್ಲಿ ನಮಗೆ ಆಗಿರುವ ನಷ್ಟವು ನಷ್ಟವೇ ಅಲ್ಲ. ಟ್ರಫಾಲ್ಗರ್ ಯುದ್ಧವಾದ ಬಳಿಕವೂ ಕೂಡ ನಮಗೆ ವರ್ಷ ೧ ಕ್ಕೆ ೫೦೦ ಹಡಗಿನಂತೆ ನಷ್ಟವಾಗುತ್ತಿದ್ದುವು. ಈಗಿನ ಯುದ್ಧದಲ್ಲಿ ಮೊದಲಿನ ೬ ತಿಂಗಳೊಳಗೆ ನಮಗೆ ೬೩ ಹಡಗುಗಳು ಮಾತ್ರ ನಷ್ಟವಾಗಿವೆ. ಜರ್ಮನರ ಯುದ್ಧದ ಹಡಗುಗಳು ಸಮುದ್ರದಲ್ಲಿ ಜಯವನ್ನು ಪಡೆಯುವ ಸಂಭವವು ಗೋಚರಿಸುವಂತಿರದಿದ್ದರೂ ನಮ್ಮ ವ್ಯಾಪಾರದ ಮಾರ್ಗದಮೇಲೆ ಶತ್ರುಗಳು ಬೀಳದಂತೆ ಮಾಡುವುದಕ್ಕಾಗಿ ನಾವು ಕಾದಿರಬೇಕು. ಇಂಡ್ಯಾ—ದಕ್ಷಿಣಾಫ್ರಿಕಾ—ಈಜಿಪ್ಟ ಆಸ್ಟ್ರೇಲಿಯಾ-ನ್ಯೂಜಿಲ್ಯಾಂಡು ಚೀನಾ ಮೊದಲಾದ ನಮ್ಮ ಸಾಮ್ರಾಜ್ಯಕ್ಕೊಳಪಟ್ಟ ದೇಶಾಂತರಗಳಿಂದೆಲ್ಲಾ ಬಹುಶಃ ೧೦ ಲಕ್ಷ ಸೈನ್ಯವನ್ನು ಅದರಲ್ಲಿ ಒಂದು ಪಿಳ್ಳೆಯಾದರೂ ನಷ್ಟವಾಗದಂತೆ ಈ ದೇಶಕ್ಕೆ ಸಾಗಿಸಿ ತಂದಿರುವುದು ಮಾತ್ರವಲ್ಲದೆ ಯುದ್ಧಕ್ಕೆ ಸ್ವಲ್ಪಮಾತ್ರವೇ ಕಾಲವಿರುವುದೆಂದು ತಿಳಿದಿದ್ದರೂ ಶತ್ರುಗಳ ಸಬ್‌ಮೆರೀನುಗಳು ಸಮುದ್ರಗಳಲ್ಲಿ ತುಂಬಿದ್ದರೂ ಅವರ ಯುದ್ಧದ ಹಡಗುಗಳು ಬೆದರಿಸುತ್ತಿದ್ದರೂ ಕೂಡ ಇಂಗ್ಲೀಷ್‌ಕಡಲುಕಾಲ್ವೆಯಿಂದ ಫ್ರಾನ್ಸ್‌ದೇಶಕ್ಕೆ ಸೈನ್ಯಗಳನ್ನು ಸಾಗಿಸಿಕೊಂಡು ಹೋದುದು ಸಹ ನಮ್ಮ ನೌಕಾದಳಸಂಘದವರು ಮಾಡಿರುವ ಪ್ರಶಂಸನೀಯವಾದ ಕಾರ್ಯಗಳಾಗಿರುತ್ತವೆ.

ಇಂಗ್ಲೀಷ್‌ವ್ಯಾಪಾರ ನೌಕೆಗಳಲ್ಲಿ ೫ನೆಯ ೧ ಭಾಗದಷ್ಟನ್ನು ನೌಕಾಸಂಘದವರು ಅಧೀನಪಡಿಸಿಕೊಂಡು ಅವುಗಳ ಸಾಹಾಯ್ಯದಿಂದ ಸಾಮಗ್ರಿಮೊದಲಾದುವುಗಳನ್ನು ಸಾಗಿಸುವ ಕೆಲಸವನ್ನು ಮಾಡಿಕೊಳ್ಳುತ್ತಿದ್ದಾರೆ. ಇವುಗಳ ಸಹಾಯದಿಂದಲೇ ಗಾಯವನ್ನು ಪಡೆದ ಸೈನಿಕರನ್ನು ಸಾಗಿಸಿ ತರುವುದು, ಅವರ ಸ್ಥಾನಕ್ಕೆ ನೂತನಸೈನಿಕರನ್ನು ತೆಗೆದುಕೊಂಡುಹೋಗಿ ಸೇರಿಸುವುದು, ಮದ್ದು ಗುಂಡು ಮೊದಲಾದ ಸಾಮಾನುಗಳನ್ನು ಸಾಗಿಸುವುದು ಇವೇ ಮೊದಲಾದ ಕಾರ್ಯಗಳು ನೆರವೇರುತ್ತಲಿವೆ. ಜರ್ಮನಿಯವರಿಗಿರುವ ವಿಲ್‌ಹೇಮ್ಸ್‌ಹಾವನ್ನಿಗೆ ಸದೃಶವಾದ ನೌಕಾಸ್ಥಾನದಲ್ಲಿ ಅಡಗಿಕೊಂಡು ನಾವು ಜೀವಿಸುತ್ತಿರುವುದಿಲ್ಲ. ಅದುಕಾರಣ ಯಾವಾಗ ಎಂಥ ಉಪದ್ರವು ತಟ್ಟಿದರೂ ಅದನ್ನು ಇದಿರಿಸಲು ಸಿದ್ಧರಾಗಿಯೇ ಇರಬೇಕಾಗಿದೆ. ನಮ್ಮ ನೌಕಾದಳಸಂಘದವರು ಅಸಮರ್ಥರೇನೂಅಲ್ಲ ಅವರು ಸೋಂಬೇರಿಗಳೂ ಅಲ್ಲ. ಸಂಭವಿಸುವುದಕ್ಕಿರುವ ವಿಪತ್ತುಗಳನ್ನೆಲ್ಲಾ ಇದಿರಿಸುವುದಕ್ಕೆ ಅವಶ್ಯಕವಾದ ಜಾಗರೂಕಪದ್ಧತಿಗಳನ್ನು ಅವರು ಅವಲಂಬಿಸಿಯೇ ಇದ್ದಾರೆ. ಫಾಕ್‌ಲಾಂಡ್‌ದ್ವೀಪದ ಹತ್ತಿರ ನಮ್ಮ ನೌಕಾದಳದವರು ಪಡೆದ ಜಯವು ಎಷ್ಟು ಫಲಪ್ರದವಾದುದೆಂಬುದನ್ನು ಅದರ ಸ್ವರೂಪವನ್ನು ಬಲ್ಲವರು ಹೊರತು ಇತರರು ತಿಳಿಯಲಾರರು. ಅಲ್ಲೂಡಾಗರ್‌ಬ್ಯಾಂಕಿನಹತ್ತಿರವೂ ನಡೆದ ಕಾಳಗದಲ್ಲಿ ನಮ್ಮ ನೌಕಾನಿರ್ಮಾಣ ಪದ್ಧತಿಯೂ ನಮ್ಮ ಫಿರಂಗಿಗಳ ಏಟೂ ಬಹಳ ಪ್ರಶಂಸನೆಗೆ ಪಾತ್ರವಾದುವೆಂಬುದು ಆಗಿನ ಪರೀಕ್ಷಾ ಪರಿಣಾಮದಿಂದ ಸಿದ್ಧವಾಗಿರುವುದು. ಈ ಪರಿಣಾಮವು ಉತ್ತರೋತ್ತರ ಧೈರ್ಯವನ್ನು ನಮಗೆ ಮತ್ತಷ್ಟು ಹೆಚ್ಚಿಸಿದೆ. ನಮ್ಮ ಹಡಗಿನ ಫಿರಂಗಿಗಳು ಜರ್ಮನಿಯವರ ಫಿರಂಗಿಗುಂಡುಗಳಿಗಿಂತ ಹೆಚ್ಚು ದೂರ ಹೋಗುತ್ತಿವೆ. ಫಿರಂಗಿಏಟಿನಲ್ಲಿ ಜರ್ಮನ್‌ಸೈನಿಕರು ಸಮರ್ಥರೆಂಬ ನಂಬುಗೆ ಯಿದ್ದಿತು. ಆದರೆ ಆಂಗ್ಲಸೈನಿಕರ ಗುರಿಯೂ ಸಾಮರ್ಥ್ಯವೂ ಶತ್ರುಗಳಿಗಿಂತ ಕಡಿಮೆಯಾದುದಲ್ಲವೆಂಬುದು ನಿಸ್ಸಂಶಯವಾಯಿತು. ನಮ್ಮಲ್ಲಿರುವ ೧೩.೫ ಅಂಗುಲ ವ್ಯಾಸದ ಫಿರಂಗಿಗಳಿಗೆ ಸಮಾನವಾದ ಫಿರಂಗಿಗಳೂ ಕೂಡ ಜರ್ಮನರ ಯುದ್ಧನೌಕೆಗಳಲ್ಲಿರುವುದಿಲ್ಲ. ನಮ್ಮ ಹಡಗುಗಳಲ್ಲಾದರೋ ೧೫ ಅಂಗುಲ ವ್ಯಾಸದ ಫಿರಂಗಿಗಳು ಇರುತ್ತ ಅವು ಬಹು ಬಲಾಢ್ಯವಾಗಿವೆ.

ಜರ್ಮನರ ಸಬ್‌ಮೆರೀನುಗಳಿಂದ ನಮ್ಮ ನಾವಿಕರಲ್ಲಿ ೫೫೦೦ ಮಂದಿಗಳು ಇದುವರೆಗೆ ಸತ್ತಿರುವರು. ಜರ್ಮನರಲ್ಲೂ ಬಹುಶಃ ಅಷ್ಟೇಮಂದಿ ಸತ್ತಿರಬೇಕು. ಅವರನ್ನು ನಮ್ಮ ಫಿರಂಗಿಗುಂಡಿನೇಟಿನಿಂದ ಕೊಂದಿರುತ್ತೇವೆ. ಎಂದರೆ ಅವರ ನೌಕಾಸೇನೆಯಲ್ಲಿ ಬಹುಭಾಗವು ನಮ್ಮ ಫಿರಂಗಿಯೇಟಿನಿಂದ ಧ್ವಂಸವಾಗಿದೆ. ನಾವು ನೌಕಾಯುದ್ಧದಲ್ಲಿ ೮೨ ಮಂದಿ ಜರ್ಮನ್‌ಅಧಿಕಾರಿಗಳನ್ನೂ ೯೩೮ ಮಂದಿ ನಾವಿಕರನ್ನೂ ಸೆರೆಯಾಗಿ ಹಿಡಿದಿದ್ದೇವೆ. ಆದರೆ ಜರ್ಮನರು ನೌಕಾಯುದ್ಧದಲ್ಲಿ ಒಬ್ಬ ಇಂಗ್ಲೀಷ್ ನಾವಿಕನನ್ನು ಕೂಡ ಸೆರೆಯಾಳಾಗಿ ಹಿಡಿದಿರುವುದಿಲ್ಲ. ಆಂಗ್ಲನಾವಿಕರು ಅಮೂಲ್ಯವಾದ ತಮ್ಮ ಪ್ರಾಣಗಳನ್ನು ದೇಶರಕ್ಷಣೆಗಾಗಿ ಧಾರೆಯೆರೆಯುವವರಾದುದರಿಂದಲೇ ಯುದ್ಧಾರಂಭವಾಗಿ ೬ ತಿಂಗಳು ತುಂಬಿದ್ದರೂ ನಾವು ಕ್ಷೇಮವಾಗಿಯೂ ಸೌಖ್ಯವಾಗಿಯೂ ಬದುಕಿದ್ದೇವೆ. ನಾವು ಸಮುದ್ರದಮೇಲೆ ಇದುವರೆಗೆ ಯಾವಾಗಲೂ ಅನುಭವಿಸದೆಇದ್ದಂತಹ ಅಧಿಕಾರವನ್ನು ಪಡೆದಿದ್ದೇವೆ.

ನಮ್ಮ ನೌಕಾದಳವು ಮುಂದೆಮುಂದೆ ಭಯಂಕರವಾದ ಕಾರ್ಯಗಳನ್ನು ನೆರವೇರಿಸಬೇಕಾಗಿದೆ. ನಾಗರಿಕ ರಾಷ್ಟ್ರಗಳು ಇದುವರೆಗೆ ಯಾವಾಗಲೂ ಅರಿಯದಿದ್ದಂತಹ ನೌಕಾಯುದ್ಧಗಳಿಗೆ ನಾವು ಸಿದ್ಧವಾಗಿರಬೇಕಾಗಿದೆ. ವ್ಯಾಪಾರದ ಹಡಗುಗಳನ್ನು ಪರಿಶೋಧಿಸದೇನೆಯೇ ಸಬ್‌ಮೇರಿನುಗಳಿಂದ ಅವನ್ನು ಮುಳುಗಿಸಿಬಿಡುವುದು ಇದುವರೆಗೆ ಎಲ್ಲೂ ನಡೆಯದಿದ್ದಂತಹ ಸಂಗತಿಯಾಗಿದೆ. ಇಂಥ ಸಂಭವಗಳುಂಟಾಗುವುವೆಂದು ಯುದ್ಧಕ್ಕೆ ಮುಂಚೆ ಯಾರೂ ನೆನೆದಿರಲಿಲ್ಲ. ಈ ಸಂಗತಿಗಳು ಅಗಲೇ ತಿಳಿದಿದ್ದ ಪಕ್ಷದಲ್ಲಿ ಪ್ರಪಂಚವೆಲ್ಲವೂ ಇದನ್ನು ಖಂಡಿಸಿ ಅದನ್ನು ಅನುಮತಿಸದೆ ಹೋಗುತ್ತಿದ್ದಿತು. ಆದರೆ ಈಗಲೂ ಭಯವೇನೂ ಇಲ್ಲ. ಯಾವಾಗಲೂ ಕಾಣದಿದ್ದಂಥ ನೂತನಪದ್ಧತಿಯನ್ನು ಶತ್ರುಗಳು ಅವಲಂಬಿಸಿದರೂ ಅದರ ಬಾಧೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಮಾರ್ಗವಾವುದೂ ಇಲ್ಲವೆಂದು ತಿಳಿಯಬೇಕಾಗಿಲ್ಲ.

ಆಂಗ್ಲಯುದ್ಧನಾವೆಗಳು ಜರ್ಮನಿಗೆ ಕೆಲ ಸಾಮಗ್ರಿಗಳು ಸಾಗಿಹೋಗದಂತೆ ತಡೆ ಮಾಡಿರುವುದರಿಂದ ಜರ್ಮನಿಯು ಪಡಲಾಗದ ತೊಂದರೆಯನ್ನು ಅನುಭವಿಸುತ್ತಿದೆ ಯೆಂಬುದಕ್ಕೆ ಸಂದೇಹವಿಲ್ಲ. ಯುದ್ಧಸಾಮಗ್ರಿಗಳನ್ನು ಅಣಿಮಾಡುವುದಕ್ಕೆ ಬೇಕಾದ ತಾಮ್ರ—ಸೀಮೆಯೆಣ್ಣೆ—ರಬ್ಬರು ನಿಕೆಲ್ ಲೋಹ ಮ್ಯಾಂಗನೀಸು ಆಂಟಿಮನಿ—ಇವು ಮೊದಲಾದ ಪದಾರ್ಥಗಳು ಜರ್ಮನಿಗೆ ಸಾಗಿಹೋಗದಂತೆ ಮಾಡುತ್ತಿದ್ದೇವೆ. ನಾವು ಉಂಟುಮಾಡುತ್ತಿರುವ ಈ ತೊಂದರೆಯಿಂದಲೇ ಜರ್ಮನಿಯು ಈಗ ನಮ್ಮಮೇಲೆ ಅತ್ಯಾಗ್ರಹವನ್ನು ತೋರಿಸುತ್ತಿದೆಯೆಂದು ಅರಿಯಬೇಕು. ಜರ್ಮನಿಗೆ ಮಿತಿಯಿಲ್ಲದಷ್ಟು ತೊಂದರೆಯನ್ನು ಉಂಟುಮಾಡುವುದಕ್ಕೆ ನಾವು ಇದಕ್ಕಿಂತಲೂ ಹೆಚ್ಚಾಗಿ ಪ್ರಯತ್ನಿಸಬೇಕು.

ಪಟ್ಟಣ ನಿರ್ಮಾಣಕಾರ್ಯದಲ್ಲಿ ಪ್ರವೀಣರೆಂದು ಪ್ರಸಿದ್ಧರಾಗಿರುವ ಪ್ರೊಫೆಸರ್ ಗಿಡ್ಡಿಸ್‌ರವರು ಕಳೆದ ಫೆಬ್ರುವರಿ ತಾ|| ೨ರಲ್ಲಿ ಹುಜೂರ್ ಸೆಕ್ರಟರಿ ಮಿ|| ಮಿರ್ಜಾ ಸಾಹೇಬರ ಕೂಡ ರಾಜಧಾನಿಗೆ ಬಂದಿದ್ದು ರಾಜಧಾನಿಯಲ್ಲಿಭಿವೃದ್ಧಿಯಾಗಿರುವ ಭಾಗಗಳನ್ನೂ ಚಾಮುಂಡೇಶ್ವರೀ ಬೆಟ್ಟವನ್ನೂ ಪರಾಮರ್ಶಿಸಿಕೊಂಡು ತಾ|| ೧೬ರ ಸಾಯಂಕಾಲ ಟವರ್‌ಹಾಲಿನಲ್ಲಿ ಮಹಾರಾಜ ಕಾಲೇಜಿನ ಪ್ರಿನ್ಸಿಪಾಲರಾದ ಮಿ|| ಟೆನ್ನಾಂಟರವರ ಅಧ್ಯಕ್ಷತೆಯಲ್ಲಿ ಪುರರಚನೆ ಮತ್ತು ಅಲಂಕಾರದ ವಿಚಾರವಾಗಿ ಒಂದು ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಅದರ ಮುಖ್ಯಾಂಶವನ್ನು ವೃ. ಪ. ದಿಂದೆತ್ತಿ ಉದ್ಧರಿಸಿರುತ್ತೇವೆ.

ರಾಜಧಾನಿಯೊಳಕ್ಕೆ ಪ್ರವೇಶಮಾಡುವಾಗ ಒಂದುಕಡೆ ಬಂದೀಖಾನೆಯೂ, ಇನ್ನೊಂದುಕಡೆ ಪ್ಲೇಗ್ ಗುಡಿಸಲುಗಳೂ ಇರುವುದು ಹೊಸದಾಗಿ ಬರತಕ್ಕವರ ಕಣ್ಣಿಗೂ ಮನಸ್ಸಿಗೂ ಆಹ್ಲಾದಕರವಾಗಿಲ್ಲ; ಅಸಹ್ಯವಾಗುತ್ತದೆ. ಇದು ಇಂಜನಿಯರುಗಳ ತಪ್ಪೆಂದು ಹೇಳಬಹುದು. ಪಟ್ಟಣದ ಬಾಗಲಿಗೆ ಬರುವಾಗ್ಗೆ ನೇತ್ರಾನಂದಕರವಾದ ಸಾಲುಗಿಡಗಳೂ, ವನಗಳೂ ಇದ್ದು ಎಲ್ಲಾ ಕಡೆಯೂ ಕಸ ಮುಂತಾದದ್ದಿಲ್ಲದೆ ಚೊಕ್ಕಟವಾಗಿರಬೇಕು. ಇದಕ್ಕೆ ಬಹಳ ಹಣ ಖರ್ಚಾಗಬೇಕಾದ ಅಗತ್ಯವಿಲ್ಲ. ಅನೇಕ ಮನೆಗಳನ್ನು ಒಟ್ಟೊಟ್ಟಾಗಿ ಒಡೆಯಬಾರದು. ಹೊಸ ರಸ್ತೆಗಳಿಗೋಸ್ಕರ ಮನೆಗಳನ್ನು ಒಡೆದುಹಾಕುವುದಕ್ಕಿಂತ ಮನೆಗಳಿರುವ ಕಡೆ ರಸ್ತೆಗಳನ್ನು ಹಾಕಬೇಕು. ಈಗ ರಸ್ತೆಗಳು ನೆಟ್ಟಗಿರಬೇಕೆಂದು ಹೇಳಿ ಮನೆಗಳನ್ನು ಒಡೆದುಹಾಕುವುದು ಸಮನಲ್ಲ. ಚಾಮುಂಡಿಬೆಟ್ಟದ ಮೇಲಿನಿಂದ ನೋಡಿದರೆ ರಾಜಧಾನಿಯು ಬಹು ನೇತ್ರಾನಂದಕರವಾಗಿ ಕಾಣುವುದು. ಅಭಿವೃದ್ಧಿ ಕಾರ್ಯಗಳೂ, ಬಡಾವಣೆಗಳೂ ಬಹಳ ಸ್ಪಷ್ಟವಾಗಿ ಕಂಡುಬರುತ್ತವೆ. ಪಟ್ಟಣದೊಳಗಿರುವ ದೇವರಾಜ ಮಾರ್ಕೆಟ್ಟೂ ಚೌಕವೂ ಅಂಗಡಿಮುಂಗಟ್ಟುಗಳಿಂದ ಬಹಳ ಒತ್ತೊತ್ತಾಗಿ ಮುಚ್ಚಿಕೊಂಡಿವೆ. ಇದು ಅಂಗಡಿಯವರ ತಪ್ಪಲ್ಲ. ಆ ಚೌಕವನ್ನು ಬಹಳ ಖರ್ಚಿಲ್ಲದೆ ಅಲಂಕಾರವಾಗಿ ಮಾಡಿಡಬಹುದು. ಇದಕ್ಕೋಸ್ಕರ ಮ್ಯುನಿಸಿಪಲ್ ಪ್ರೆಸಿಡೆಂಟರು ಮಾಡಿರುವ ಪ್ಲಾನನ್ನು ನೋಡಿದೆನು. ಅದು ದಿವ್ಯವಾಗಿದೆ. ಆದರೆ ಮಾರ್ಕೆಟ್ಟಿನ ಉತ್ತರಪಾರ್ಶ್ವದ ಮೈದಾನದಲ್ಲಿ ಮ್ಯುನಿಸಿಪಲ್ ಆಫೀಸನ್ನು ಕಟ್ಟಬೇಕೆಂದು ಯೋಚಿಸಿರುವುದು ಚೆನ್ನಾಗಿಲ್ಲ. ಮುಂದಕ್ಕೆ ಪಟ್ಟಣವು ಇನ್ನೂ ಅಭಿವೃದ್ಧಿಯಾಗುವಾಗ್ಗೆ ಮಾರ್ಕೆಟ್ಟನ್ನು ಆ ಕಡೆ ಬಡಾವಣೆ ಮಾಡಬೇಕಾಗುವುದು. ಮ್ಯುನಿಸಿಪಲ್ ಆಫೀಸನ್ನು ಅಲ್ಲಿ ಕಟ್ಟದೆ ಬೇರೆ ಇನ್ನಾವ ನಿವೇಶನದಲ್ಲಾದರೂ ಕಟ್ಟುವುದು ಒಳ್ಳೇದು.

ಪಾಶ್ಚಾತ್ಯದೇಶಗಳಲ್ಲಿ ಕಾರ್ಖಾನೆಗಳೂ ಕಸುಬುಗಳೂ ಹೆಚ್ಚಿ ಕೂಲಿಮಾಡತಕ್ಕ ಪ್ರಜೆಗಳು ಅನೇಕ ಸಂಕಟಗಳಿಗೆ ಗುರಿಯಾದರು. ಈಗ ಅದರ ಪರಿಹಾರಕ್ಕೆ ಅಂಥಾ ಪ್ರಜೆಗಳ ಕ್ಷೇಮಚಿಂತನೆ ಹುಟ್ಟಿದೆ. ಅವರ ವಾಸಕ್ಕೂ ಜೀವನಕ್ಕೂ ವಿಹಾರಕ್ಕೂ ಒಳ್ಳೊಳ್ಳೆ ಏರ್ಪಾಡುಗಳು ನಡೆದಿರುವುವು. ಕೊಳಕಾದ ಭಾಗಗಳಲ್ಲಿ ವಾಸಮಾಡುವವರ ಆರೋಗ್ಯವನ್ನು ವೃದ್ಧಿಮಾಡಿ ಚೆನ್ನಾಗಿ ಬದುಕುವಂತೆ ಮಾಡುತ್ತಿದ್ದಾರೆ. ಕೊಳಕು ಜನಗಳು ವಾಸಮಾಡುವುದಕ್ಕೆಂದು ಬೇರೆ ಪ್ರದೇಶವನ್ನು ವಿಂಗಡಿಸುವುದೂ, ಕೂಲಿಯವರಿಗೂ ಪೋಲೀಸಿನವರಿಗೂ ಲೈನ್‌ಮನೆಗಳನ್ನು ಕಟ್ಟಿಸುವುದೂ ಯೋಗ್ಯವಾಗಿ ಕಾಣುವುದಿಲ್ಲ. ಚೌಕನಾಗಿಯೂ, ನೆಟ್ಟಗೂ, ವಿಸ್ತಾರವಾಗಿಯೂ ಇರುವಂತೆ ರಸ್ತೆಗಳನ್ನು ಹಾಕುವುದೂ, ಇದಕ್ಕೋಸ್ಕರ ಮನೆಗಳನ್ನು ಒಡೆದುಹಾಕುವುದೂ ಸಹಜವಲ್ಲ. ಪಟ್ಟಣದಲ್ಲಿ ಆರೋಗ್ಯಜನಕವಾದ ಮನೆಗಳು ಇರಬೇಕಾದದ್ದೇ ಪ್ರಥಮ ಕರ್ತವ್ಯವಾಗಿದೆ. ಅರಮನೆ ಮೊದಲುಗೊಂಡು ಆಳಿನ ಮನೆಯತನಕ ಪ್ರತಿಯೊಂದು ವಾಸದ ಮನೆಯೂ ವಾಸಮಾಡತಕ್ಕವರಿಗೆ ಆರೋಗ್ಯವನ್ನೂ ಸಂತೋಷವನ್ನೂ ಉಂಟುಮಾಡುವಂಥಾದ್ದಾಗಿರಬೇಕು. ಭವಿಷ್ಯತ್‌ಕಾಲದಲ್ಲಿ ಪಟ್ಟಣವು ಹೇಗೆ ಹೇಗೆ

ಇರಬೇಕೆಂದು ಈಗ ಪ್ಲಾನು ಹಾಕಿಕೊಂಡು ಕಾರ್ಯಗಳನ್ನು ನಡಿಸುತ್ತಾ ಬರುವುದು ಸಹಜವಲ್ಲ. ಈಗಿನ ಕಾಲಕ್ಕೆ ತಕ್ಕಂತೆ ಪ್ರಜೆಗಳಿಗೆ ಆರೋಗ್ಯವಾಗಿರುವಂಥಾ ಮನೆಗಳನ್ನು ಕಲ್ಪಿಸಬೇಕು ಸರ್ಕಾರದಿಂದ ಮನೆಗಳನ್ನು ಕಟ್ಟಿಸಬಹುದು. ಮನೆ ಕಟ್ಟುವುದಕ್ಕೆ ಸುಲಭವಾದ ಬಡ್ಡಿಯಲ್ಲಿ ಸಾಲಗಳನ್ನು ಕೊಡಬಹುದು. ಬಾಡಿಗೆ ಮನೆಗಳು ಹೆಚ್ಚದಂತೆ ನೋಡಿಕೊಳ್ಳಬೇಕು ಇದರಿಂದ ಜನರ ಆರೋಗ್ಯಭಾಗ್ಯವಾಗಲಿ ಐಶ್ವರ್ಯವಾಗಲಿ ಹೆಚ್ಚುವುದಿಲ್ಲ ಸ್ವಲ್ಪ ಬದಲಾವಣೆ ಮಾಡಿ ಸಂಪಡಿಸಿಕೊಳ್ಳಬಹುದಾದ ಮನೆಗಳನ್ನು ಕೂಡ ಒಡೆದು ಹಾಳುಕೆಡುವಬಾರದು. ಅಂಥಾ ಭಾಗಗಳಲ್ಲಿ ಒಂದೆರಡು ಮನೆಗಳನ್ನು ಒಡೆದು ಬಯಲುಮಾಡಿ ಅಲಂಕಾರವೂ ಆರೋಗ್ಯಜನಕವೂ ಆದ ಗಿಡಗಳನ್ನು ಹಾಕಿಸಬೇಕು ಮನೆಗಳನ್ನು ಒಡೆದುಹಾಕಿದ ಹಾಗೆ ಹೊಸಮನೆಗಳು ನಿರ್ಮಾಣವಾಗದಿದ್ದರೆ ನಾನಾ ಸಂಕಟಗಳಿಗೆ ಕಾರಣವಾಗುತ್ತದೆ. ಈಗ ದಕ್ಷಿಣದೇಶದಲ್ಲಿ ಪ್ರಜೆಗಳ ಯೋಗಕ್ಷೇಮವನ್ನು ನೋಡದೆ ಒಟ್ಟೊಟ್ಟಾಗಿ ಮನೆಗಳನ್ನು ಒಡೆದುಹಾಕುವುದು ರೂಢಿಗೆ ಬಂದಿದೆ, ಇದರಿಂದ ಮನೆಗಳಿಗಿಂತ ಪ್ರಜೆಗಳ ಸಂಖ್ಯೆ ಹೆಚ್ಚಿರುವುದು. ಪ್ರಜೆಗಳಿಗಿಂತ ಮನೆಗಳ ಸಂಖ್ಯೆಯೇ ಹೆಚ್ಚಾಗಿರುವಂತೆ ನೋಡಿಕೊಳ್ಳಬೇಕು ಇದನ್ನು ಕಲ್ಪಿಸುವುದು ಹೇಗೆನ್ನಬಹುದು? ಪ್ರಜೆಗಳಿಗೇ ಬಿಟ್ಟರೆ ಇದು ಸಾಧ್ಯವಲ್ಲ. ಸರ್ಕಾರದವರು ಕಟ್ಟಿ 10-15-20 ವರುಷಗಳಲ್ಲಿ ಅವುಗಳ ಕ್ರಯವನ್ನು ಉತ್ಪತ್ತಿ ಮಾಡಿಕೊಳ್ಳುವುದು ಕ್ಷೇಮ. ಇಲ್ಲವೇ ಮನೆಗಳನ್ನು ಕಟ್ಟುವುದಕ್ಕಾಗಿ ಸಂಘಗಳನ್ನು ಕಲ್ಪಿಸಿ ಅವುಗಳ ಮೂಲಕ ಪ್ರಜೆಗಳು ಮನೆಕಟ್ಟಿಕೊಳ್ಳುವಂತೆ ಮಾಡಬೇಕು. ಈ ಕಾರ್ಯವನ್ನು ಲಾಭಸಂಪಾದನೆಯ ಮೇಲೆ ದೃಷ್ಟಿಯುಳ್ಳ ಹಣಗಾರರಿಗೆ ವಹಿಸಬಾರದು.

ಅಗಾಧವಾದ ಏರ್ಪಾಟುಗಳೂ ಪ್ಲಾನುಗಳೂ ಕೆಲವೇನೋ ಇರಬೇಕು. ಇವು ಚಿಕ್ಕದರಿಂದ ಬೆಳೆದು ದೊಡ್ಡವಾಗಬೇಕಾಗಿದೆ. ಈ ಸೀಮೆಗಳು ಬಡತನದಲ್ಲಿವೆ. ಜನರಿಗೆ ತಿರುವಳಿಕೆ ಸಾಲದೆ ಒಳ್ಳೊಳ್ಳೆ ಗೊಬ್ಬರಗಳನ್ನು ಒಲೆಗೆ ಹಾಕಿ ಉರಿಸುತ್ತಾರೆ. ಜಮೀನು ಒಳ್ಳೆಯದಾಗಿದ್ದರೂ ಅದನ್ನು ಕೆಡಿಸಿಕೊಳ್ಳುವರು. ಮೊದಲು ಆರೋಗ್ಯಕರವಾದ ಸಣ್ಣ ಮನೆಗಳು ಹೆಚ್ಚಬೇಕು ಆರೋಗ್ಯವಿಚಾರಕ್ಕೆ ಮೊದಲು ಗಮನಕೊಡಬೇಕು ತರುವಾಯ ಅಲಂಕಾರವನ್ನು ನೋಡಿಕೊಳ್ಳಬಹುದು ಪ್ರತಿ ಮನೆಯಲ್ಲೂ ಸಂಸಾರ ಮಾಡತಕ್ಕವರು ಅಭಿವೃದ್ಧಿ ಹೊಂದುವುದಕ್ಕೆ ತಕ್ಕ ಸಲಕರಣೆಗಳು ಇರಬೇಕು ತರಕಾರಿ ಫಲಪುಷ್ಪಗಳನ್ನು ಅವರವರೇ ಬೆಳೆದುಕೊಳ್ಳುವುದಕ್ಕೆ ಮನೆಗಳಲ್ಲಿ ಹಿತ್ತಲುಗಳೂ, ಸುತ್ತಲೂ ವಿಶಾಲವಾದ ಆವರಣಗಳೂ ಇರಬೇಕು. ಮನೆಗಳೆಲ್ಲಾ ಒಂದೇ ಆಕೃತಿಯಲ್ಲಿರುವುದು ಅಲಂಕಾರವೆನಿಸಲಾರದು. ಪ್ರಾಚೀನ ಕಾಲದಿಂದಲೂ ಮನೆಗಳು ಯಾವ ಯಾವ ಆಕೃತಿಗಳಲ್ಲಿದ್ದವೋ ಅಂಥಾ ಜಾತಿಗಳ ಮನೆಗಳೆಲ್ಲಾ ಒಂದು ನಗರದಲ್ಲಿ ಇರುವಂತೆ ಏರ್ಪಾಡಾಗಬೇಕು. ಮುಖ್ಯವಾಗಿ ಬಡವರು ವಾಸಮಾಡುವಂಥಾ ಮನೆಗಳು ವಿಸ್ತಾರವಾಗಿಯೂ ಅನುಕೂಲವಾಗಿಯೂ ಆರೋಗ್ಯಕರವಾಗಿಯೂ ಇರಬೇಕೆಂಬ ಭಾಗವನ್ನು ಪುರಾಧ್ಯಕ್ಷರೂ ಪಾಲಕರೂ ವಿಶೇಷವಾಗಿ ಗಮನಕೊಟ್ಟು ನೋಡಿಕೊಳ್ಳಬೇಕಾಗಿದೆ.

ಮಕ್ಕಳ ದೃಷ್ಟಿಪಾಟವೂ ಅವರ ಮನೋವೃತ್ತಿಯೂ ಬುದ್ಧಿಶಕ್ತಿಯೂ ವಿಕಸನ ಹೊಂದಿ ಅವರು ಅಭಿವೃದ್ಧಿಗೆ ಬರುವುದಕ್ಕೆ ಪಾಠಶಾಲೆಗಳಲ್ಲಿ ಸಣ್ಣಸಣ್ಣ ತೋಟಗಳಿರಬೇಕು. ಇದರಲ್ಲಿ ಮಕ್ಕಳಿಗೆ ಸಂತೋಷ ಹೆಚ್ಚು. ಅವರು ಗಿಡವನ್ನು ಹಾಕಿ ಬೆಳಸಿ ಅದರ ಬೆಳವಣಿಗೆಯನ್ನು ನೋಡಿಕೊಳ್ಳುತ್ತಾ ಬರುವುದರಲ್ಲಿ ಅವರ ಮನೋಧರ್ಮವೇ ರೂಪಕ್ಕೆ ಬರುವುದು. ಪಟ್ಟಣದ ಎಲ್ಲಾ ಕಡೆಗಳಲ್ಲೂ ಒಳ್ಳೊಳ್ಳೆಯ ದಿನಸಾವರಿ ಫಲವೃಕ್ಷಗಳನ್ನು ಬೆಳಸಿದರೆ ಪ್ರಜೆಗಳು ನಾನಾ ಬಗೆಯ ಹಣ್ಣುಗಳನ್ನು ತಿನ್ನುವುದಕ್ಕೆ ಸಹಾಯವಾದೀತು. ಇದರಿಂದ ಪ್ರಜೆಗಳ ಆರೋಗ್ಯವೂ ಅವರ ಮನೋವೃತ್ತಿಯೂ ಬಹಳ ಚೆನ್ನಾಗುತ್ತದೆ ಎರಡನೆಯದಾಗಿ ರೇಷ್ಮೆ ವ್ಯವಸಾಯವನ್ನು ಇನ್ನೂ ಹೆಚ್ಚಾಗಿ ಹರಡಬೇಕು. ಈಗ ಕಸಬನ್ನು ಅಭಿವೃದ್ಧಿಗೆ ತರಬೇಕೆಂದು ಸರ್ಕಾರದವರು ಮಾಡಿರುವ ಕಾರ್ಯಗಳು ಸಂತೋಷಪ್ರದವಾಗಿವೆ. ಈ ಸೀಮೆಯ ರೇಷ್ಮೆಯು ಬಹಳ ಉತ್ತಮವಾದದ್ದು; ತುಂಬಾ ಬಾಳಿಕೆಯಾದದ್ದು, ಪ್ರಪಂಚದಲ್ಲಿ ಹೆಸರುವಾಸಿಗೆ ಬಂದಿರುವಂಥಾದ್ದು. ಈಗ ಈ ಕಸಬನ್ನು ಯಾವುದೋ ಒಂದು ಪಂಗಡದ ಜನರು ಮಾಡುತ್ತಾರೆ. ಈ ಕಸಬಿನಿಂದ ಜನರಲ್ಲಿ [illegible], ದೃಷ್ಟಿಶಕ್ತಿಯೂ, ಬುದ್ಧಿಕುಶಲತೆಯೂ ವೃದ್ಧಿಯಾಗುವುವು. ಉತ್ತಮಜಾತಿಯವರು ಕೂಡ ಈ ಕಸಬನ್ನು ಮನೆಗಳಲ್ಲಿ ಮಾಡಿದ ಪಕ್ಷದಲ್ಲಿ ಶ್ರೇಯಸ್ಸುಂಟಾಗುತ್ತದೆ ಹೆಂಗಸರು ಮಕ್ಕಳು ರೇಷ್ಮೆಯಲ್ಲಿ ನೇಯುವುದನ್ನೂ ಜರತಾರಿ ಕಟ್ಟುವುದನ್ನೂ ಸುಲಭವಾಗಿ ಕಲಿತು ಮಾಡಬಹುದು

ಈ ಸೀಮೆಯಲ್ಲಿ ಪ್ರಜೆಗಳು ಸುಲಭವಾಗಿ ಜೀವನ ಮಾಡಿಕೊಳ್ಳುವರು; ಬುದ್ಧಿಕುಶಲತೆಯು ಚೆನ್ನಾಗಿದೆ ಇಲ್ಲಿಗೆ ಪ್ರತ್ಯೇಕವಾದ ಯೂನಿವರ್ಸಿಟಿಯನ್ನು ಇಟ್ಟುಕೊಳ್ಳುವುದೇ ಕ್ಷೇಮ. ಇಲ್ಲಿನ ವಿದ್ಯಾಶಾಲೆಗಳನ್ನು ಹೊರಗಿನ ಯೂನಿವರ್ಸಿಟಿಗೆ ಜಂಟಿಸುವುದರಲ್ಲಿ ನಾನಾ ಕಷ್ಟಗಳುಂಟು. ಅದರಿಂದ ಪ್ರಯೋಜನವಿಲ್ಲ. ಬೋಧನಾಕ್ರಮಗಳನ್ನೂ ಕಲೆಗಳನ್ನೂ ಸ್ವತಂತ್ರವಾಗಿ ರೂಪಿಸಿ ನಡಿಸಿಕೊಳ್ಳುವುದೇ ಉತ್ತಮ. ಪಾಶ್ಚಾತ್ಯರಾಜ್ಯಗಳಲ್ಲೂ ಈಗೀಗ ಇದೇ ರೂಢಿಗೆ ಬಂದಿದೆ

ಮೃಗಾಲಯವನ್ನು ನೋಡಿ ತುಂಬಾ ಸಂತೋಷಪಟ್ಟೆನು. ಆಯಾ ಮೃಗಪ್ರಾಣಿಗಳಿಗೆ ಸಹಜವಾದ ಏರ್ಪಾಡುಗಳನ್ನು ಬಹು ಮನೋಹರವಾಗಿ ಮಾಡಿಟ್ಟಿದ್ದಾರೆ ಮನುಷ್ಯರಿಗೂ, ಮೃಗಗಳಿಗೂ, ಪ್ರಾಣಿಗಳಿಗೂ ಸ್ವಭಾವಜನ್ಯವಾಗಿರುವಂಥಾ ಅನುಕೂಲಗಳನ್ನೂ ಸೌಲಭ್ಯಗಳನ್ನೂ ಒದಗಿಸಿಕೊಡಬೇಕೆಂಬುವುದೇ ನನ್ನ ಮುಖ್ಯ ಅಭಿಪ್ರಾಯವಾಗಿದೆ

ಮೈಸೂರ್ ಸ್ಟಾರ್.

ಸನ್ ೧೯೧೫ ನೆಯ ಮಾರ್ಚಿ ತಾ|| ೭ ನೆಯ ಭಾನುವಾರ.

ಯುದ್ಧಸ್ವರೂಪವು

ಯುದ್ಧಾರಂಭವಾಗಿ ೭ ತಿಂಗಳು ಮುಗಿದುಹೋದುವು. ಈಗ ಪಶ್ಚಿಮರಣರಂಗಕ್ಕಿಂತ ಪೂರ್ವರಣರಂಗದಲ್ಲಿ ಪ್ರಬಲವಾದ ಯುದ್ಧಗಳು ನಡೆಯುತ್ತಿವೆ. ಸೇನಾ ವಿನಾಶವು ಉಭಯಪಕ್ಷದಲ್ಲೂ ವಿಶೇಷವಾಗಿ ಆಗುತ್ತಿದೆ. ಬಿಸಿಲ ಬೇಗೆಯು ಹೆಚ್ಚುತ್ತ ಬರುವಂತೆ ರಣಾಂಗಣದಲ್ಲೂ ತೀಕ್ಷ್ಣತೆಯು ಹೆಚ್ಚುತ್ತಿದೆ. ನೂತನಸನ್ನದ್ಧವಾಗಿರುವ ಇಂಗ್ಲಿಷ್ ಮಹಾ ವಾಹಿನಿಯು ಇನ್ನು ಮುಂದೆ ಯುದ್ಧಾಂಗಣಕ್ಕೆ ಕಾಲಿಕ್ಕುವುದರಲ್ಲಿದೆ. ಅದು ಸೇರಿದಮೇಲೆ ಯುದ್ಧದ ಬೇಗೆಯು ವಿಪರೀತವಾಗುವುದರಲ್ಲಿ ಸಂಶಯವಿಲ್ಲ. ಆಗ್ಗೆ ಪಶ್ಚಿಮರಣರಂಗದ ಚರಿತ್ರವು ಜಗತ್ತಿನ ದೃಷ್ಟಿಯನ್ನೆಲ್ಲಾ ಆಕರ್ಷಿಸುವಂತಾಗುವುದರಲ್ಲಿ ಸಂದೇಹವಿಲ್ಲ. ಏಕೆಂದರೆ ಜರ್ಮನರನ್ನು ಬೆಲ್ಜಿಯಮ್ಮಿನಿಂದ ಓಡಿಸುವ ಸಾಹಸವು ಅಲ್ಲಿಂದಾಚೆಗೆ ವಿಶೇಷವಾದ ಒತ್ತರದಿಂದ ನಡೆಯಿಸಲ್ಪಡಬಹುದೆಂಬ ನಿರೀಕ್ಷೆಯು ಇದೆ.

ಪೂರ್ವರಣರಂಗಕ್ಕೆ ಜರ್ಮನರು ಹೊಸದಾಗಿ ಲಕ್ಷ ಸೈನ್ಯವನ್ನು ಆಕಸ್ಮಾತ್ತಾಗಿ ನುಗ್ಗಿಸಿ ತಮ್ಮ ದೇಶದೊಳಕ್ಕೆ ನುಗ್ಗಿ ಬಂದಿದ್ದ ರಷ್ಯನರನ್ನು ಹಿಂದಕ್ಕೆ ಓಡಿಸಿಬಿಟ್ಟಿರುವರು. ಆ ಪ್ರಾಂತದಲ್ಲಿ ಜರ್ಮನರು ರಷ್ಯಾದೇಶದಲ್ಲಿರುವ ನೀಮೆನ್ ಪ್ರಾಂತದವರೆಗೂ ತಾವೇ ನುಗ್ಗಿಹೋಗಿದ್ದಾರೆ. ರಷ್ಯನ್ ಸೈನ್ಯಗಳು ಒಸೋವಿಸಿ-ಲೋಮ್ಜ ಕೋಟೆಗಳ ಹತ್ತಿರ ನಿಂತು ಯುದ್ಧವನ್ನು ಮಾಡಿದುವು. ಜರ್ಮನರು ಫೆಬ್ರುವರಿ ತಾ|| ೨೭ ರಲ್ಲಿ ವಶಪಡಿಸಿಕೊಂಡಿದ್ದ ರಷ್ಯನರ ಪ್ರಿಜನ್ಸ್ನಿಜ್ ಕೋಟೆಯನ್ನು ರಷ್ಯನರು ಮರಳಿ ತಾ|| ೨೮ ರಲ್ಲಿ ವಶಪಡಿಸಿಕೊಂಡರು. ಆಗ ರಷ್ಯನರಿಗೆ ಜರ್ಮನರ ಕಡೆಯ ಮದ್ದುಗುಂಡು ಮೊದಲಾದ ಸಾಮಗ್ರಿಗಳು ವಿಶೇಷವಾಗಿ ಸಿಕ್ಕಿರುವುವು. ಈಚೆಗೆ ಜರ್ಮನರು ರಷ್ಯನ್ ಸೇನಾಮುಖವನ್ನು ಭೇದಿಸಿ ನುಗ್ಗಿ ಅವರ ಹಿಂದೆ ಇರುವ ವಾರ್ಸಾಪಟ್ಟಣಕ್ಕೆ ಹೋಗಿಬರುವ ಮುಖ್ಯ ಲೋಹಮಾರ್ಗವನ್ನು ವಶಪಡಿಸಿಕೊಳ್ಳಬೇಕೆಂದು ಬಹಳ ಸಾಹಸಮಾಡಿ ರಷ್ಯನರ ಪರಾಕ್ರಮದಿಂದ ಜರ್ಮನರು ವಿಫಲಮನೋರಥರಾದರು. ಮತ್ತೂ ಈಗ ಅವರು ರಷ್ಯನರಿಂದ ತಮ್ಮ ಎಲ್ಲೆಕಟ್ಟುಗಳವರೆಗೆ ಓಡಿಸಲ್ಪಟ್ಟಿರುವರು. ಈ ಯುದ್ಧಗಳಲ್ಲಿ ರಷ್ಯನರ ಕಡೆ ವಿಶೇಷವಾದ ನಷ್ಟವಾಯಿತು; ಜರ್ಮನರ ಕಡೆಯೂ ಅದಕ್ಕಿಂತಲೂ ಹೆಚ್ಚಾದ ನಷ್ಟವಾಗಿದೆ. ಇದುವರೆಗೆ ಜರ್ಮನ್ ಸೈನ್ಯಗಳು ಜನರಲ್ ಹಿಂಡೆನ್‌ಬರ್ಗರವರ ಆಧಿಪತ್ಯದಿಂದ ಪೂರ್ವಪ್ರಷ್ಯಾಕ್ಕೆ ೨ ಆವೃತ್ತಿ ನುಗ್ಗಿದ್ದ ರಷ್ಯನ್ ಸೇನೆಗಳನ್ನು ಹಿಮ್ಮೆಟ್ಟಿಸಿದಂತಾಯಿತು. ಇದರಿಂದ ಜರ್ಮನರು ಪೂರ್ವರಣರಂಗದಲ್ಲೂ ಕೂಡ ತಮ್ಮ ಶತ್ರುಗಳು ಜರ್ಮನಿ ದೇಶದೊಳಕ್ಕೆ ನುಗ್ಗಿ ಹಾನಿಮಾಡುವ ಕಾರ್ಯವನ್ನು ತಪ್ಪಿಸಿದಂತಾಯಿತು. ಸ್ವದೇಶವನ್ನು ಯುದ್ಧಾಂಗಣವನ್ನಾಗಿ ಮಾಡಿಸಕೂಡದೆಂಬ ತಮ್ಮ ಯುದ್ಧತಂತ್ರವನ್ನು ಇದುವರೆಗೂ ಜರ್ಮನರು ಈ ವಿಧದಿಂದ ಸಾಗಿಸಿಕೊಂಡು ಬಂದಿದ್ದಾರೆ. ಮುಂದೆ ಈ ಸಂಕಲ್ಪವು ಹೇಗೆ ಉಳಿಯುವುದೆಂಬುದನ್ನು ನೋಡಬೇಕು.

ಇದುವರೆಗೆ ರಷ್ಯನರು ಮಾಡಿದ ಸಾಹಸದಿಂದ ಪಶ್ಚಿಮರಣರಂಗದಲ್ಲಿ ಮಿತ್ರಮಂಡಲಿಯ ಸೈನ್ಯಗಳು ಮುಂದೊತ್ತರಿಸಿ ಬರುವುದಕ್ಕೆ ವಿಶೇಷಾವಕಾಶವನ್ನು ಮಾಡಿಕೊಟ್ಟಂತಾಯಿತು. ಹೇಗೆಂದರೆ:—ಇವರು ಪೂರ್ವಪ್ರಷ್ಯಾದಲ್ಲಿ ಜರ್ಮನಿಯೊಳಕ್ಕೆ ನುಗ್ಗುತ್ತಾ ಬಂದುದರಿಂದ ಜರ್ಮನರು ಅದರ ತಡೆಯುವಿಕೆಗಾಗಿ ತಮ್ಮ ವಿಶೇಷ ಗಮನವನ್ನು ಇತ್ತಕೊಡಬೇಕಾಯಿತು. ಇದರಿಂದ ಪಶ್ಚಿಮರಣರಂಗದಲ್ಲಿ ಅವರ ಸೇನಾ ಸಾಹಸಗಳು ಸಡಿಲವಾಗುವಂತಾಯಿತು. ಪೂರ್ವರಣರಂಗದಲ್ಲಿ ಯಶಸ್ವಿಗಳಾದ ಜನರಲ್ ಹಿಂಡೆನ್‌ಬರ್ಗರವರನ್ನೇ ಇನ್ನು ಮುಂದೆ ಪಶ್ಚಿಮರಣಾಂಗಣಕ್ಕೆ ಕಳುಹಿಸಿಕೊಡಬೇಕೆಂದು ಈಗ ಜರ್ಮನರು ಆಲೋಚಿಸಿರುವರಂತೆ. ಪೂರ್ವದಿಕ್ಕಿನಲ್ಲಿ ಇವರಿಗೆ ಅನುಕೂಲವಾಗಿದ್ದ ಗ್ರಹಕೂಟವು ಪಶ್ಚಿಮಕ್ಕೂ ಅನುಕೂಲಿಸುವುದೋ ಎಂಬುದನ್ನು ಮುಂದೆ ನೋಡಬೇಕು. ರಷ್ಯನರ ಸೈನ್ಯಗಳು ಉತ್ತರದಿಕ್ಕಿನಲ್ಲಿ ಸಮರ್ಥವೂ ಪ್ರಬಲವೂ ಆದ ಜರ್ಮನ್ ಸೈನ್ಯದೊಡನೆಯೂ, ಮಧ್ಯಭಾಗದಲ್ಲಿ ಬಲವತ್ತರವಾಗಿರುವ ಜರ್ಮನ್ ಆಸ್ಟ್ರಿಯಾಸೇನೆಗಳೆರಡರಮೇಲೆಯೂ, ದಕ್ಷಿಣದಲ್ಲಿ ತುರ್ಕಿಯವರೊಡನೆಯೂ ಕಾದಾಡುತ್ತಿದ್ದಾರೆ. ದಿನಕ್ರಮೇಣ ರಷ್ಯನರ ಸೇನಾ ಸ್ತೋಮವು ಬಹಳ ವೃದ್ಧಿಯಾಗುತ್ತಲೇ ಇದೆ. ಮಿತ್ರಮಂಡಲಿತ್ರಯದವರೆಲ್ಲರೂ ಸೇರಿ ಪಶ್ಚಿಮರಣರಂಗದಲ್ಲಿ ಶತ್ರುಗಳನ್ನು ಹಿಮ್ಮೆಟ್ಟಿಸುತ್ತಿದ್ದಾರೆ. ರಷ್ಯನರೊಬ್ಬರೇ ಪೂರ್ವರಣರಂಗದಲ್ಲಿ ಶತ್ರುಗಳಿಗೆ ಇದಿರಾಗಿ ಹೆಣಗುತ್ತಿರುವುದು ಅವರ ಪರಾಕ್ರಮಕ್ಕೆ ಭೂಷಣವಾದುದಲ್ಲವೆ? ತುರ್ಕಿಯವರೊಡನೆ ಹೋರಾಡುತ್ತಿರುವ ರಷ್ಯನ್ ಸೈನ್ಯಗಳು ಕಾಕಸಸ್ ಪ್ರಾಂತದಲ್ಲಿರುವ ತುರ್ಕಿಯವರ ಮುಖ್ಯ ಸೇನಾ ಶಿಬಿರವನ್ನು ವಶಪಡಿಸಿಕೊಂಡವೆಂಬ ವಾರ್ತೆಯು ನೆನ್ನೆತಾನೆ ಬಂದಿದೆ.

ಇತ್ತ ತುರ್ಕಿಯಕಡೆ ಡಾರ್ಡನೆಲ್ಸ್ ಜಲಸಂಧಿಯಲ್ಲಿ ಇಂಗ್ಲಿಷ್ ಫ್ರೆಂಚ್ ಹಡಗುಗಳು ಶ್ಲಾಘನೀಯವಾದ ಕೆಲಸವನ್ನು ಮಾಡಿರುತ್ತವೆ. ಇವುಗಳು ಡಾರ್ಡನೆಲ್ಸ್ ಜಲಸಂಧಿಯಲ್ಲಿ ೪ ಮೈಲಿಗಳ ದೂರದವರೆಗೂ ಹೋಗಿ ಮುಂಭಾಗದ ವರಸೆಯ ೪ ಕೋಟೆಗಳನ್ನು ತಮ್ಮ ಫಿರಂಗಿಗುಂಡುಗಳ ಹೊಡೆತದಿಂದ ನಾಶಗೊಳಿಸಿವೆ. ಆ ಸಮಯದಲ್ಲಿ ತುರ್ಕಿ ಕೋಟೆಯ ಫಿರಂಗಿಗಳು ಸ್ವಲ್ಪ ಬಡಬಡಿಸಿದರೂ ಸ್ವಲ್ಪಕಾಲದೊಳಗೇ ಅವುಗಳು ಬಾಯ್ಮುಚ್ಚಿಕೊಳ್ಳಬೇಕಾಯಿತು. ಮಿತ್ರನೌಕಾ ವಾಹಿನಿಯು ತುರ್ಕಿಯವರ ಇತರ ಕೋಟೆಗಳನ್ನು ಹಾಳ್ಮಾಡುವ ಸಾಹಸದಲ್ಲಿದೆ. ಈ ಡಾರ್ಡನೆಲ್ಸ್ ಯುದ್ಧದಲ್ಲಿ ಇಂಗ್ಲಿಷರ ಕಡೆಯ ಹಡಗುಗಳಲ್ಲಿ ಕ್ವೀನ್ ಎಲಿಜಬೆತ್ ಎಂಬ ಘನತರವಾದ ಯುದ್ಧನೌಕೆಯು ಅದ್ಭುತವಾದ ಕೆಲಸವನ್ನು ಮಾಡಿದೆ. ಇಂಗ್ಲಿಷ್ ಯುದ್ಧನಾವೆಗಳಲ್ಲೆಲ್ಲಾ ಇದಕ್ಕೆ ಸಮನಾದ ಶಕ್ತಿಯುಳ್ಳ ಹಡಗು ಮತ್ತೊಂದಿಲ್ಲ. ಇದರಮೇಲೆ ೧೫ ಅಂಗುಲ ವ್ಯಾಸದ ಬಾಯುಳ್ಳ ಫಿರಂಗಿಗಳು ಇಡಲ್ಪಟ್ಟಿವೆ. ಇದರ ಪ್ರತಿಯೊಂದು ಗುಂಡೂ ೧ ಟನ್ನಿನಷ್ಟು ಭಾರವಾಗಿರುತ್ತ ಅದು ಪ್ರಯೋಗಿಸಲ್ಪಟ್ಟಾಗ ೧೨ ಮೈಲಿಗಳ ದೂರಕ್ಕೆ ಹೋಗಿ ಬಡಿಯುವುದು. ಮತ್ತೂ ಈ ಫಿರಂಗಿಗಳ ಗುರಿಯೂ ಬಹಳ ಶ್ಲಾಘ್ಯವಾಗಿರುವುದು. ಇಂಥ ಹಡಗುಗಳನ್ನೇ ಇಂಗ್ಲೀಷರು ಇನ್ನು ನಾಲ್ಕನ್ನು ಅಣಿಮಾಡುತ್ತಿರುವರು. ಡಾರ್ಡನೆಲ್ಸ್ ಯುದ್ಧಕ್ಕೆ ನಿಂತಿರುವ ಹಡಗುಗಳಲ್ಲಿ ೯ ಇಂಗ್ಲಿಷರ ಕಡೆಯವು; ೪ ಫ್ರೆಂಚರ ಕಡೆಯವು. ಈ ಹಡಗುಗಳಿಗೆ ತುರ್ಕಿಯವರ ಫಿರಂಗಿಯೇಟಿನಿಂದ ಯಾವಮಾತ್ರದ ನಷ್ಟವೂ ಆಗಿಲ್ಲ. ಇನ್ನುಮುಂದೆ ಇಷ್ಟರಲ್ಲೇ ಮಿತ್ರಮಂಡಲಿಯ ನೌಕಾಸೈನ್ಯಗಳು ಉಳಿದ ಕೋಟೆಗಳನ್ನು ಧ್ವಂಸಮಾಡಿ ಕಪ್ಪುಸಮುದ್ರದೊಳಕ್ಕೆ ಪ್ರವೇಶಿಸಿಬಿಟ್ಟರೆ, ಯೂರೋಪು ತುರ್ಕಿಯು ನಾಮಾವಶೇಷವಾಗುವ ಕಾಲವು ಸಮೀಪಿಸಿತೆಂತಲೇ ಹೇಳಬಹುದು. ಇದುವರೆಗೆ ಡಾರ್ಡನೆಲ್ಸಿನಲ್ಲಿ ಉಂಟಾಗಿರುವ ಪರಿಣಾಮದಿಂದಲೇ ತುರ್ಕಿಯವರು ಎದೆಗೆಟ್ಟು ಹೋಗಿರಬೇಕು; ಜರ್ಮನರೂ ಕೂಡ ಚಿಂತಾಕುಲರಾಗಿರಬೇಕು.

ಜರ್ಮನರು ಅಸೂಯೆಯಿಂದ ಕೆಟ್ಟು ಮೇಲುಬಿದ್ದವರಂತೆ ಜಲಮಾರ್ಗಗಳಲ್ಲೆಲ್ಲಾ ಸಿಡಿಮದ್ದುಗಳನ್ನು ಹಾಕಿ ವ್ಯಾಪಾರದ ಹಡಗುಗಳಿಗೆ ನಷ್ಟವನ್ನುಂಟುಮಾಡುತ್ತೇವೆಂದು ಬೆದರಿಸಿ, ತಮ್ಮ ಕಿಡುಕಾಟವನ್ನು ನಡೆಯಿಸುತ್ತಿದ್ದರೂ ಅದರಿಂದ ಇದುವರೆಗೆ ೧೦-೧೫ ಹಡಗುಗಳಿಗಿಂತ ಹೆಚ್ಚಿಗೆ ನಷ್ಟವಾದುದೇನೂ ಇಲ್ಲ. ಇಂಗ್ಲೀಷ್ ತೀರಗಳಲ್ಲಿ ಎಂದಿನಂತೆ ಹಡಗುಗಳ ಯಾತಾಯಾತವು ನಡೆಯುತ್ತಲೇ ಇದೆ.

ಬಂಗಾಳಾದ ಅತ್ಯಾಚಾರಗಳು.

ಭರತಖಂಡದ ಆದ್ಯಂತದಲ್ಲೂ ರಾಜಭಕ್ತಿಯ ಸುಗಂಧವು ಘಮಘಮಿಸುತ್ತಿದ್ದರೂ ಬಂಗಾಳಾದಲ್ಲಿ ಮಾತ್ರ ಕೆಲ ದುಶ್ಚಾರಿಗಳು ಆಗಾಗ್ಗೆ ಮಾಡುತ್ತಿರುವ ದುರಾಚಾರ ರೂಪವಾದ ದುರ್ಗಂಧವು ದುಸ್ಸಹವಾಗಿ ಭಾರತಮಾತೆಗೆ ತಲೆನೋವನ್ನು ಉಂಟುಮಾಡತಕ್ಕದಾಗಿದೆ. ಆ ದೇಶದಲ್ಲಿ ಕಳವು ಸುಲಿಗೆ ಕೊಳ್ಳೆಗಳು ನಿತ್ಯಕ್ರಿಯೆಗಳಾಗಿ ಹೋಗಿವೆಯೆಂಬ ಸಂಗತಿಯು ಆಗಾಗ್ಗೆ ನಾವು ಪ್ರಕಟಿಸುತ್ತಬಂದಿರುವ ಸುದ್ದಿಗಳಿಂದ ವ್ಯಕ್ತವಾಗುತ್ತಲೇಇದೆಯಷ್ಟೆ. ಈ ಅಪರಾಧಗಳ ಜತೆಗೆ ಸರ್ಕಾರದುದ್ಯೋಗಿಗಳನ್ನು ಕೊಲ್ಲಲು ಮಾಡುತ್ತಿರುವ ಪ್ರಯತ್ನಗಳೂಕೂಡ ಸೇರಿ ಅಲ್ಲಿನ ವಾತಾವರಣಸ್ಥಿತಿಯು ಕಲುಷಿತವಾಗುತ್ತಲಿದೆ. ಯಾವುದೋ ಕಾರಣದಿಂದ ಯಾವುದೋಒಂದು ಕಾಲದಲ್ಲಿ ಬಂಗಾಳಾದೊಳಗೆ ರಾಜಕೀಯವಾದ ಅಸಂತುಷ್ಟಿಯು ಹುಟ್ಟಿತು. ಈಗಿನ ಲಾರ್ಡ್‌ಹಾರ್ಡಿಂಜ್‌ರವರ ವೈಸ್ರಾಯಿಗಿರಿಯಲ್ಲೂ, ಲಾರ್ಡ್ ಕಾರ್ಮಿಕೆಲ್‌ರಂಥ ಪ್ರಜಾರಂಜಕರ ಗೌರ್ನರ್‌ಗಿರಿಯಲ್ಲೂ ಪ್ರಜೋಪದ್ರವ ಪ್ರಭುತ್ವೋಪದ್ರವಕರಗಳಾದ ಕೃತ್ಯಗಳು ನಡೆಸಲ್ಪಡುತ್ತಿರುವುದು ಪರಮಾನ್ಯಾಯವು. ತತ್ರಾಪಿ ಇಂಥ ದುಷ್ಟಕೃತ್ಯಗಳಲ್ಲಿ ವರ್ಧಿಷ್ಣುಗಳಾದ ಯುವಕವಿದ್ಯಾರ್ಥಿಗಳೂ ಸಂಪನ್ನರಾದವರ ಮಕ್ಕಳುಗಳೂ ಸಹ ಸೇರಿರುವರೆಂಬುದನ್ನು ಕೇಳುವುದು ಮತ್ತಷ್ಟು ವಿಷಾದಸ್ಥಾನವು. ಅಲ್ಪರೂ ಅದೂರದರ್ಶಿಗಳೂ ಆದ ಕೆಲಜನರ ಈ ದುರಾಗತಗಳು ಮತ್ತಾವ ವಿಪರೀತಭಾವವನ್ನು ಪಾಲ್ಯಪಾಲಕರ ಮಧ್ಯದಲ್ಲಿ ಉಂಟುಮಾಡಲಾರವಾಗಿದ್ದರೂ ವಿಷ್ಪಾನ್ನಕಬಳದ ಮಧ್ಯೆ ಕಾಣಿಸಿಕೊಳ್ಳುವ ಶಿಲಾಕಣಗಳಂತೆ ಪಾಲ್ಯಪಾಲಕರೀರ್ವರ ಮನಸ್ಸಿಗೂ ಜಿಗುಪ್ಸೆಯನ್ನು ಹುಟ್ಟಿಸದೆಇಲ್ಲ. ಈ ಸ್ಥಿತಿಯನ್ನು ಹೋಗಲಾಡಿಸುವುದರಲ್ಲಿ ಸರ್ಕಾರಕ್ಕೆ ಎಷ್ಟು ಅವಶ್ಯಕತೆಯಿರುವುದೋ ಅಷ್ಟು ಅವಶ್ಯಕತೆಯನ್ನು ಪ್ರಜೆಗಳೂ ಹೊಂದಿ ಒಗ್ಗಟ್ಟಿನಿಂದ ಕೆಲಸಮಾಡಿದರೆ ನಂದನವನದ ಮಧ್ಯದಲ್ಲಿ ಆನೆನೆಗ್ಗಿಲಂತೆ ಹಬ್ಬುತ್ತಿರುವ ಈ ಅತ್ಯಾಚಾರಗಳನ್ನು ನಿರ್ಮೂಲಮಾಡಲು ಅಸಾಧ್ಯವಾಗಲಾರದು. ಅತ್ಯಾಚಾರಿಗಳು ಸರ್ಕಾರಕ್ಕೆ ಮಾತ್ರವೇ ಕಂಟಕರಲ್ಲ. ಪ್ರಜಾಸಮುದಾಯಕ್ಕೂ ಅವರು ಕಂಟಕರೂಪರೇ ಸರಿ. ಅದುಕಾರಣ, ತಮ್ಮ ಮಧ್ಯದಲ್ಲಿ ಅತ್ಯಾಚಾರಿಗಳ ಸುಳಿವು ಇದೆಯೆಂಬುದನ್ನು ಅರಿತಕೂಡಲೇ ಅವರನ್ನು ಸರ್ಕಾರದವರ ವಶಪಡಿಸುವುದಕ್ಕೆ ಪ್ರಜೆಗಳು ಪ್ರಯತ್ನಿಸಬೇಕು. ಇಂಥ ಕಾರ್ಯವನ್ನು ಪ್ರಜೆಗಳು ಬಹುಮಾನಾಪೇಕ್ಷೆಯಿಂದಲಾದರೂ ಮಾಡಲಿ ಎಂಬ ಭಾವದಿಂದ ಬಂಗಾಳಾದ ಪೊಲೀಸು ಶಾಖೆಯವರು ಒಂದು ಪ್ರಕಟನವನ್ನು ಮಾಡಿ, ಅದರಲ್ಲಿ—ಆಯುಧಪಾಣಿಗಳಾಗಿ ಬಂದು ಮನೆಗೆನುಗ್ಗಿ ಕೊಳ್ಳೆಮಾಡುವ ಯಾವೊಬ್ಬ ಅಪರಾಧಿಯನ್ನು ಹಿಡಿದುಕೊಟ್ಟವರಿಗೆ ೧|| ಸಾವಿರ ರೂ. ಗಳೂ ನಿರಾಯುಧರಾದ ಕೊಳ್ಳೆಗಾರನನ್ನು ಹಿಡಿದು ಕೊಟ್ಟವರಿಗೆ ೫೦೦ ರೂ. ಗಳೂ, ಕಳ್ಳರನ್ನು ಗುರ್ತಿಸಿ ತೋರಿಸಿಕೊಟ್ಟವರಿಗೆ ಯಥೋಚಿತವಾದ ಬಹುಮಾನವೂ ಕೊಡಲ್ಪಡುವುವೆಂದು ತಿಳಿಯಿಸಿದ್ದಾರೆ. ಮತ್ತೂ ಈ ಅತ್ಯಾಚಾರಿಗಳ ಭೀತಿಯಿಂದ ಪ್ರಜೆಗಳು ಆತ್ಮಸಂರಕ್ಷಣೆಯನ್ನು ಮಾಡಿಕೊಂಡಿರುವುದಕ್ಕಾಗಿ ಅವರುಗಳು ದೊಣ್ಣೆಗಳು ಬಿಲ್ಲು ಬಾಣಗಳು ಇಟಿಗಳು ಕಲ್ಲಿನ ರಾಸಿಗಳು—ಇತ್ಯಾದಿಗಳನ್ನು ಅಣಿಮಾಡಿಟ್ಟುಕೊಂಡಿರಬೇಕೆಂದು ತಿಳಿಯಪಡಿಸಿದ್ದಾರೆ.

ಕಳೆದ ಫೆಬ್ರುವರಿ ತಾ|| ೨೮ರಲ್ಲಿ ಕಲ್ಕತ್ತಾದಲ್ಲಿ ನಡೆದ ಒಂದು ಭಯಂಕರ ಕೃತ್ಯವು ಅಲ್ಲಿ ವಿಶೇಷವಾದ ಸಂಕ್ಷೋಭವನ್ನುಂಟುಮಾಡುತ್ತದಲ್ಲದೆ ಅಲ್ಲಿನ ಅತ್ಯಾಚಾರಗಳು ಇನ್ನೂ ಪ್ರಬಲಿಸುತ್ತಲೇ ಇವೆ ಎಂಬುದನ್ನು ದೃಷ್ಟಾಂತಪಡಿಸಿದೆ. ಅದೇನೆಂದರೆ—ಕಲ್ಕತ್ತಾಪಟ್ಟಣದ ಕಾರ್ನ್ವಾಲೀಸ್‌ಬೀದಿಯ ಚೌಕದಲ್ಲಿ ಬೆಳಗಿನ ೭|| ಗಂಟೆಯ ಹೊತ್ತಿನಲ್ಲಿ ‘‘ಪತ್ತೇದಾರಿ’’ ಪೊ|| ಇನ್ಸ್‌ಪೆಕ್ಟರ್ ಸುರೇಶಚಂದ್ರಮುಖರ್ಜಿ ಎಂಬುವರು ಸಬ್‌ಇನ್ಸ್‌ಪೆಕರು ವನವಿಹಾರಮುಖರ್ಜಿಯವರೊಡನೆಯೂ ೪ಮಂದಿ ಪೊಲೀಸಾಳುಗಳೊಡನೆಯೂ ತಮ್ಮ ಕೆಲಸದಮೇಲೆ ಹೋಗುತ್ತ, ಟ್ರಾಂವೆಬಂಡಿಯಿಂದಿಳಿದುಸುತ್ತಲೂ ನೋಡುವಲ್ಲಿ ೫ಮಂದಿ ಯುವಕರು ಗುಂಪಾಗಿ ನಿಂತು ಗುಸುಗುಸನೆ ಮಾತನಾಡಿಕೊಳ್ಳುತ್ತಿದ್ದುದು ಅನುಮಾನಕರವಾಗಿಕಂಡಿತು. ವನವಿಹಾರಮುಖರ್ಜಿಯವರು ಸುರೇಶಚಂದ್ರಮುಖರ್ಜಿಯವರಿಗೆ ಆ ಗುಂಪನ್ನು ತೋರಿಸಿ ಏನೋ ಹೇಳಿದರು. ಸುರೇಶಚಂದ್ರರ ಅಪ್ಪಣೆ ಪ್ರಕಾರ ಪೊಲೀಸಾಳುಗಳು ಆ ಗುಂಪಿನವರ ಬಳಿಗೆ ಹೋಗಿ ಅವರ ನಾಯಕನನ್ನು ಹಿಡಿದರು. (ಇವನು ಮದಾರಿಪುರದಲ್ಲಿ ಕೊಲೆಮಾಡಿದ ಅಪರಾಧಿಗಳಲ್ಲಿ ಸೇರಿ ತಲೆತಪ್ಪಿಸಿಕೊಂಡವನಾಗಿರಬೇಕೆಂತ ಊಹಿಸಲ್ಪಟ್ಟಿದ್ದಾನೆ.) ಈತನನ್ನು ಹಿಡಿದ ಕೂಡಲೇ ತನ್ನಲ್ಲಿ ಬಚ್ಚಿಟ್ಟುಕೊಂಡಿದ್ದ ರಿವಾಲ್ವರಿನಿಂದ ಪೊಲೀಸರ ಮೇಲೆ ಗುಂಡು ಹೊಡೆದನು. ಆಪೊಲೀಸಾಳುಗಳ ಹಿಂದೆಯೇ ಸುರೇಶಚಂದ್ರಮುಖರ್ಜಿಯವರೂ ಬಂದಿರಲು ಅವರಿಗೂ ಗುಂಡಿನೇಟು ಬಿದ್ದಿತು. ಆ ಗುಂಪಿನ ಇತರ

ಯುವಕರು ಸಹ ಪೊಲೀಸರ ಮೇಲೆ ಹಲವು ಗುಂಡುಗಳನ್ನು ಹಾರಿಸಿದರು. ಸುರೇಶಚಂದ್ರರು ಗುಂಡಿನೇಟಿನಿಂದ ಅಲ್ಲೇ ಬಿದ್ದು ಸತ್ತರು. ಪೊಲೀಸಾಳಿಗೂ ಕೂಡ ಗಾಯವಾಯಿತು. ವನವಿಹಾರಮುಖರ್ಜಿಯು ಸ್ವಲ್ಪ ದೂರದಲ್ಲಿದ್ದುದರಿಂದ ಗುಂಡಿನೇಟಿಗೆ ತಪ್ಪಿಸಿಕೊಂಡರು. ಇಷ್ಟಾಗುವುದರೊಳಗಾಗಿ ಆ ಚೌಕದಲ್ಲಿದ್ದ ಅಂಗಡಿಯವರೊಳಗೂ ಪಥಿಕರಲ್ಲೂ ಬಹಳ ದಿಗಿಲೂ ದಿಗ್ಭ್ರಾಂತಿಯೂ ಉಂಟಾಯಿತು. ಅವರಾರೂ ಹಂತಕರ ಬಳಿಗೆ ಹೋಗಲಾರದೆ ಹೋದರು. ಇದರಿಂದ ಹಂತಕರು ನಿರ್ಭೀತಿಯಿಂದ ದಿಕ್ಕುದಿಕ್ಕಿಗೆ ತಮ್ಮ ತುಪಾಕಿಗಳನ್ನು ತೋರಿಸಿ ಬೆದರಿಸುತ್ತ ಎತ್ತಲೋ ಮಾಯವಾಗಿ ಓಡಿದರು.

ಈ ಸುದ್ದಿ ತಿಳಿದ ಕೂಡಲೇ ಪೊಲೀಸ್ ಕಮಿಷನರು ಮೊದಲಾದಧಿಕಾರಿಗಳು ಆ ಸ್ಥಳಕ್ಕೆ ಬಂದು ಸ್ಥಿತಿಯನ್ನೆಲ್ಲಾ ಅವಲೋಕಿಸಿ, ರಕ್ತಮಯವಾಗಿದ್ದ ಇನ್ಸ್‌ಪೆಕ್ಟರ ಶವವನ್ನು ಸಾಗಿಸಿ, ಏಟುತಿಂದು ಬಿದ್ದಿದ್ದ ಪೊಲೀಸಾಳನ್ನು ವೈದ್ಯಶಾಲೆಗೆ ಸಾಗಿಸಿದರು. (ಅವನೂ ಬದುಕುವ ಹಾಗಿಲ್ಲ.) ಅಪರಾಧಿಗಳು ಕಲ್ಕತ್ತಾ ಪಟ್ಟಣವನ್ನು ಬಿಟ್ಟು ಓಡಿಹೋಗದಂತೆ ಮಾಡುವುದಕ್ಕಾಗಿ ಎಲ್ಲ ಮಾರ್ಗಗಳಲ್ಲೂ ಕಾವಲಿಟ್ಟರು. ಹಂತಕರ ಉಡುಪು ಮೊದಲಾದುವುಗಳ ಗುರ್ತು ಪೊಲೀಸರಿಗೆ ಚೆನ್ನಾಗಿದೆ. ಅವರಲ್ಲಿ ಒಬ್ಬನು ೧೮ ವರ್ಷ ವಯಸ್ಸಿನ ವಿದ್ಯಾರ್ಥಿಯಂತೆ. ಅಪರಾಧಕ್ಕೆ ಸಂಬಂಧಪಟ್ಟವರೆಂದು ಇದುವರೆಗೆ ಪೊಲೀಸರು ೫ ಮಂದಿಗಳನ್ನು ಹಿಡಿದಿದ್ದಾರೆ.

ಮೃತರಾದ ಇನ್ಸ್‌ಪೆಕ್ಟರ್ ಸುರೇಶಚಂದ್ರ ಮುಖರ್ಜಿಯವರಿಗೆ ೪೦ ವರ್ಷ ವಯಸ್ಸು. ಇವರು ಪೊಲೀಸ್ ಸೂಪರಿಂಟೆಂಡೆಂಟ್ ಪದವಿಯಿಂದ ವಿಶ್ರಾಂತಿಯನ್ನು ಪಡೆದುಕೊಂಡ ವ್ರಜೇಂದ್ರನಾಥ ಭಟರ್ಜಿಯವರ ಭಾವಮೈದುನರು. ಇವರು ತಮ್ಮ ಕೆಲಸವನ್ನು ಸಮರ್ಥತೆಯಿಂದ ನಿರ್ವಹಿಸುವುದರಲ್ಲಿ ಅಧಿಕಾರಿಗಳ ಮನ್ನಣೆಗೆ ಪಾತ್ರರಾಗಿ ಮುಂದೆ ಬಹಳ ವೃದ್ಧಿಗೊಳ್ಳುವವರಾಗಿದ್ದರು. ಕೆಲಕಾಲದಿಂದ ಇವರು ಪತ್ತೇದಾರಿ ಕೆಲಸದಲ್ಲಿ ನಿಯೋಗಿಸಲ್ಪಟ್ಟು, ಹಂತಕರು ಮೊದಲಾದ ರಾಜಕೀಯಾಪರಾಧಿಗಳನ್ನು ತಡೆಯುವುದರಲ್ಲಿ ಸಾಹಸಮಾಡುತ್ತಿದ್ದರು. ತಮಗೆ ಕ್ರೂರಗ್ರಹದಂತೆ ವಕ್ರಿಸಿದ್ದ ಇಂಥವರನ್ನು ಕೊಲೆಮಾಡುವ ಸಂಕಲ್ಪವನ್ನು ಹಿಡಿದಿರುವ ಹಂತಕರ ಕೈಯಿಂದಲೇ ಇವರ ಅಂತ್ಯವಾಯಿತು!

ಈ ಕೊಲೆಗೆ ಸಂಬಂಧಪಟ್ಟವರೆಂದು ಹಿಡಿಯಲ್ಪಟ್ಟಿರುವ ೫ ಮಂದಿಗಳೂ ಪೊಲೀಸ್ ಕಮಿಷನರ ಇದಿರಿಗೆ ನಿಲ್ಲಿಸಿದಾಗ ಇವರನ್ನು ಹೊಣೆಯಮೇಲೆ ಬಿಡಬೇಕೆಂದು ಅವರಕಡೆಯ ವಕೀಲರು ಕೇಳಿದರು. ಅದಕ್ಕೆ ಕಮಿಷನರು ಒಪ್ಪಲಿಲ್ಲ. ಮುಂದಣವಿಚಾರಣೆಗೆ ಗುರಿಮಾಡಲ್ಪಟ್ಟಿದ್ದಾರೆ. ಇವರಜತೆಗೆ ಇನ್ನಿಬ್ಬರನ್ನೂ ಪೊಲೀಸರು ಹಿಡಿದು ಚೀಫ್‌ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ವಿಚಾರಣೆಗೊಳಪಡಿಸಿದ್ದಾರೆ. ಅವರೂ ಕೂಡ ಅಪರಾಧಿಗಳನ್ನು ಹೊಣೆಯಮೇಲೆ ಬಿಡಲು ಅಪ್ಪಣೆಕೊಡಲಿಲ್ಲ. ಇವರಲ್ಲಿ ೭ ಮಂದಿಗೆ ಮದಾರಿಪುರದಲ್ಲಿ ನಡೆದ ಕೊಳ್ಳೆಯ ಅಪರಾಧದಲ್ಲಿ ಸಂಬಂಧವಿದೆಯೆಂದೂ, ಇನ್ಸ್‌ಪೆಕ್ಟರ್ ಸುರೇಶಚಂದ್ರರನ್ನು ಕೊಂದ ಯುವಕನು ಇನ್ನೂ ಸಿಕ್ಕಿಲ್ಲವೆಂದೂ ಸರ್ಕಾರಿಪಕ್ಷವಾಗಿ ನಿಂತಿರುವ ವಕೀಲರು ಮ್ಯಾಜಿಸ್ಟ್ರೇಟರಿಗೆ ಬಿನ್ನಯಿಸಿರುವರು.

ಸ್ವದೇಶಬಾಂಧವರೆಂಬುದನ್ನು ಲೆಕ್ಕಿಸದೆ ಬಂಗಾಳಾದೇಶದ ತಲೆತಿರುಗಿದ ಯುವಕರು ಇಂಥ ಕೊಲೆಗಳನ್ನೂ, ಸುಲಿಗೆಗಳನ್ನೂ, ಕೊಳ್ಳೆಗಳನ್ನೂ ನಡೆಯಿಸಿ ದೇಶದ ಶಾಂತಿಪ್ರವೃದ್ಧಿಗೆ ವಿಘ್ನಕಾರಿಗಳಾಗುತ್ತಿರುವುದು ಬಹಳ ಅನ್ಯಾಯವು.

ಗೋಪಾಲಕೃಷ್ಣ ಗೋಖಲೆ.

ವರಗುಣ ಭೂಷಿತ ನೀತಂ |
ಪರಹಿತದೊಳೆ ತನ್ನ ಹಿತವ ಕಂಡವ ನೀತಂ ||
ಗುರುವೀತಂ ನಮಗೆಂಬುದ |
ಮರೆವುದೆ ? ಹಾ ! ವಿಧಿಯೆ ನೀನದೇಂ ನಿರ್ದಯನೈ ||
ಧೀರಾಗ್ರಣಿಯಹ ಸುತನಂ |
ಬೇರೊಂದಂ ಬೇಡದಿರ್ದ ಭಕ್ತಾಗ್ರಣಿಯಂ ||
ಕ್ರೂರಯಮಂ ಕರೆದೊಯ್ದಿರೆ |
ಭಾರತ ಭೂಮಾತೆ ಯೆಂತು ಸೈಸುವಳಕಟಾ ! ||
ಮನ್ನಣೆಯಂ ಸ್ವಾತಂತ್ರ್ಯಮ |
ನುನ್ನತಿಯಂ ಭ್ರಾತೃಭಾವಮಂ ವಿದ್ಯೆಯುಮಂ ||
ನಿನ್ನವರೊಳ್ ನೆಲೆಗೊಳಿಪಾ |
ಜನ್ನದ ದೀಕ್ಷೆಯನು ಬಿಟ್ಟು ಪೋದೆಯ ಸಖನೇ ! ||
ತ್ಯಜಿಸಿದೊಡಂ ನಿಜತನುವಂ |
ಸುಜನರ್ ಸತ್ಕೀರ್ತಿಕಾಯರಾಗಿರ್ಪುದರಿಂ ||
ನಿಜರೂಪಮದಿಲ್ಲದೊಡಂ |
ನಿಜಯಶದಿಂ ಬಾಳ್ವನಲ್ತೆ ಗೋಖಲೆಯೆಂದುಂ ? ||
ದಿನಮಣಿ ಯಸ್ತಮಿಸಿದೊಡಂ |
ಪುನರುದಯವನೊಂದಿ ಲೋಕವಂ ಬೆಳಗುವ ಪೋಲ್ ||
ಘನನಹ ಗೋಖಲೆಯುಂ ತಾಂ |
ಪುನರುದಯಮನೊಂದಿ ಬಾರದಿರ್ಪನೆ ನಮ್ಮೊಳ್ ? ||

‘‘ ಕರ್ನಾಟಕ ’’

ದೇಶಸೇವಾಸಂಘದ ಅಧ್ಯಕ್ಷಸ್ಥಾನಕ್ಕೆ ಕೈ|| ಗೋಖಲೆಯವರ ಬದಲು ಆನರಬಲ್ ಶ್ರೀನಿವಾಸಶಾಸ್ತ್ರಿಯವರು ನಿಯಮಿಸಲ್ಪಟ್ಟಿರುವರು.

ಒಳದೇಶ ವೃತ್ತಾಂತಗಳು

ಶ್ರೀಮನ್ಮಹಾರಾಜರವರು ಕಳೆದ ಬುಧವಾರ ಬೆಳಗ್ಗೆ ಉದಕಮಂಡಲಕ್ಕೆ ಮೋಟಾರು ಬಂಡಿಯಲ್ಲಿ ಚಿತ್ತೈಸಿದರು.

ಹಾಸನದಿಸ್ಟ್ರಿಕ್ಟಿನಲ್ಲಿ ಪ್ರಬೇಷನರಿ ಅಸಿಸ್ಟೆಂಟ್ ಕಮಿಷನರಾಗಿರುವ ಮ|| ಪಿ. ಗೋಪಾಲರಾಜ ಅರಸಿನವರು ೧ ತಿಂಗಳವರೆಗೆ ಕೋ ಆಪರೇಟೀವ್ ಸೊಸೈಟಿಗಳ ರೆಜಿಸ್ಟ್ರಾರರ ಕೈಕೆಳಗೆ ಉದ್ಯೋಗಮಾಡಲು ನಿಯಮಿಸಲ್ಪಟ್ಟಿರುವರು.

ಕಳೆದ ತಾ|| ೨ ರಲ್ಲಿ ರಾಜಧಾನಿಯಲ್ಲಿ ಮೋಡವು ವಿಶೇಷವಾಗಿ ಕವಿದುಕೊಂಡು ಅರ್ಧಅಂಗುಲದವರೆಗೆ ಮಳೆಯು ಆಯಿತು. ಇದೇದಿವಸ ಬೆಂಗಳೂರಲ್ಲೂ ೭೮ ಸೆಂಟ್ ಮಳೆಯಾಯಿತಲ್ಲದೆ ಬಹುಕಡೆ ಆಗಿರುವುದಾಗಿ ತಿಳಿಯಬಂದಿದೆ. ಇದರಿಂದ ರಾಗಿ ಒಕ್ಕಣೆ ಮಾಡುತ್ತಿದ್ದವರಿಗೆ ವಿಶೇಷ ನಷ್ಟ ಸಂಭವಿಸಿತು.

ಬಾಬಾಬುಡನ್ ಬೆಟ್ಟ ಮೊದಲಾದ ಕೆಲ ಪ್ರದೇಶಗಳಲ್ಲಿ ಕಬ್ಬಿಣವು ದೊರಕುವುದೆಂಬುದನ್ನು ಶೋಧಿಸುವ ಬಗೆಗೆ ಭೂಗರ್ಭಶೋಧನಶಾಸ್ತ್ರ ನಿಪುಣರಾದ ಮಿ|| ನೆರ್ಕ್ ಎಂಬುವರನ್ನು ನಮ್ಮ ಸರ್ಕಾರದವರು ನಿಯಮಿಸಿಕೊಂಡಿರುವರು. ಇವರಿಗೆ ದಿನವೊಂದಕ್ಕೆ ೫೦೦ ರೂ. ಸಂಬಳವೂ, ಪ್ರಯಾಣದ ಖರ್ಚೂ ಕೊಡಲ್ಪಡುವುದಾಗಿ ಗೊತ್ತಾಗಿರುವುದಲ್ಲದೆ ಇವರು ಈ ಸೀಮೆಯಲ್ಲಿ ೧೫ ದಿನಗಳ ವರೆಗಿದ್ದು ಶೋಧನೆಯನ್ನು ನಡೆಯಿಸಲೊಪ್ಪಿರುವುದಾಗಿ ತಿಳಿಯಬರುತ್ತದೆ.

ಈ ಬೇಸಗೆಯಕಾಲದಲ್ಲಿ ಉದಕಮಂಡಲಕ್ಕೆ ಹೋಗಿ ವಾಸಮಾಡಿಕೊಂಡಿರಲು ಬಹಳ ಉಪಪನ್ನರಾದವರಿಗೆ ಸಾಧ್ಯವಲ್ಲದೆ ಮಧ್ಯತರಗತಿಯ ಜನರಿಗೆ ಸಾಧ್ಯವಲ್ಲವಾದುದರಿಂದ ಚಿಕ್ಕಬಳ್ಳಾಪುರಕ್ಕೆ ಸಮೀಪವಾಗಿರುವ ನಂದಿಬೆಟ್ಟಕ್ಕೆ ಜನರು ಹೋಗಿ ಬೇಸಗೆಯಕಾಲವನ್ನು ಕಳೆದುಕೊಂಡು ಬರಲನುಕೂಲಿಸುವಂತೆ ಮಾಡಬೇಕೆಂಬ ಸಂಕಲ್ಪವು ನಮ್ಮ ಸರ್ಕಾರದವರಿಗೆ ಬಹಳವಾಗಿದ್ದಿತು. ಈಗ ಅಲ್ಲಿ ಜನರ ವಾಸಕ್ಕೆ ಹೆಚ್ಚು ಬಂಗಲೆಗಳನ್ನೂ, ಕುಡಿಯುವ ನೀರಿಗೆ ತಕ್ಕೇರ್ಪಾಟನ್ನೂ ಮಾಡಲು ಸರ್ಕಾರದವರುಪಕ್ರಮಿಸಿರುವರೆಂದು ತಿಳಿಯುತ್ತೇವೆ. ಇದರಿಂದ ಉದಕಮಂಡಲಕ್ಕೆ ಹೋಗಿ ವಿಶೇಷ ದ್ರವ್ಯವನ್ನು ವೆಚ್ಚಮಾಡಿಕೊಂಡಿರಲು ಸಾಧ್ಯವಿಲ್ಲದ ಜನರಿಗೆ ಮಹೋಪಕಾರವಾಯಿತೆನ್ನುವುದರಲ್ಲಿ ಸಂದೇಹವಿಲ್ಲವು.

ಬೆಂಗಳೂರ ನಿವಾಸಿಗಳು ಶ್ರೀಯುತ ಗೋಪಾಲಕೃಷ್ಣ ಗೋಖಲೆಯವರ ಮರಣದಿಂದ ತಮ್ಮಗಳಿಗುಂಟಾದ ದುಃಖವನ್ನು ಪ್ರದರ್ಶನಮಾಡುವ ಬಗೆಗೆ ಆಚೆವಾರ ಚೀಫ್ ಇಂಜನಿಯರ್ ಮ|| ಕರ್ಪೂರ ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದರು. ಆಗ ದಿವಾನರಾದ ಮ|| ವಿಶ್ವೇಶ್ವರಯ್ಯನವರು ಕೈ|| ಗೋಖಲೆಯವರ ಗುಣಕಥನವನ್ನು ತಮ್ಮ ಸ್ವಾನುಭವಪೂರ್ವಕವಾಗಿ ಪ್ರೇಕ್ಷಕರ ಹೃದಯದ್ರಾವಕವಾಗುವಂತೆ ತಿಳಿಸಿದರು. ಅಲ್ಲದೆ ಅಧ್ಯಕ್ಷರು ಮೊದಲಾದವರು ಅವರ ಲೋಕವಿಖ್ಯಾತವಾದ ಅನಂತ ಸುಗುಣಾವಳಿಗಳನ್ನು ಕುರಿತು ಭಾಷಣಮಾಡಿದರು. ಈ ಮಹನೀಯರ ಸ್ಮರಣಾರ್ಥವಾಗಿ ಬೆಂಗಳೂರ ಮಧ್ಯಭಾಗದಲ್ಲಿ ಒಂದು ನಿಲಯವನ್ನು ಕಟ್ಟುವ ಆಲೋಚನೆಯು ನಡೆದು ಕೆಲರು ಚಂದಾಹಣವನ್ನು ವಾಗ್ದಾನಮಾಡಿರುವರು.

ರಾಜಧಾನಿಯ ಶ್ರೀಮಂತ ಮೋತೀಖಾನೆ ವರ್ಧಮಾನಯ್ಯನವರು ಸ್ವಜನವಿದ್ಯಾಭಿವೃದ್ಧಿಗೆ ತಕ್ಕವಕಾಶವಿಲ್ಲದಿದ್ದುದರ ಮೇಲೆ ತಮ್ಮ ತಂದೆಯವರ ಸ್ಮರಣಾರ್ಥವಾಗಿ ಒಂದು ಜೈನ ಬೋರ್ಡಿಂಗ್ ಹೋಮನ್ನು ಸ್ಥಾಪಿಸಿ ಸ್ವಂತ ಮೇಲ್ವಿಚಾರಣೆಯಿಂದ ನಡೆಯಿಸಿಕೊಂಡು ಬರುತ್ತಿರುವುದು ಸರ್ವಶ್ರುತವಿದೆಯಷ್ಟೆ. ಸಂಸ್ಕೃತದಲ್ಲಿ ವ್ಯಾಕರಣ, ತರ್ಕ ಮತ್ತೂ ಕಾವ್ಯಪಾಠವನ್ನು ಹೇಳಲು ೩ ಜನ ಪಂಡಿತರನ್ನು ನಿಯಮಿಸಿ, ತಮ್ಮ ಜನರಲ್ಲದೆ ಇತರ ಮತಸ್ಥರೂ ವ್ಯಾಸಂಗಮಾಡಲವಕಾಶವನ್ನುಂಟುಮಾಡಿಕೊಟ್ಟಿರುವರು. ಪ್ರತಿಯೊಬ್ಬ ವಿದ್ಯಾರ್ಥಿಗೂ ಮಂಚ-ಹಾಸುಗೆ-ಒಳ್ಳೆಯ ಉಡುಪುಗಳನ್ನು ಕೊಟ್ಟು ಸುಖಭೋಜನಮಾಡಿಸುತ್ತ ಪುತ್ರನಿರ್ವಿಶೇಷವಾಗಿ ಕಾಪಾಡುತ್ತಿರುವುದು ಸಣ್ಣವಯಸ್ಕರಾದ ಈ ಶ್ರೀಮಂತರಿಗೆ ಅತ್ಯಂತ ಭೂಷಣವಾಗಿರುವುದು. ಕೆಲ ತಿಂಗಳ ಕೆಳಗೆ ಶ್ರೀಮದ್ಯುವರಾಜರೂ, ದಿವಾನರೂ ಈ ಹೋಮನ್ನು ಪರಾಮರ್ಶಿಸಿ ತಮ್ಮ ಸಂತೋಷವನ್ನು ಪ್ರದರ್ಶಿಸಿರುವರು. ಈ ಧರ್ಮಿಷ್ಠರು ತಮ್ಮ ಮಾತೃಶ್ರೀಯವರ ಹೆಸರಿನಲ್ಲಿ ಒಂದು ಅಗ್ರಹಾರವನ್ನು ಕಟ್ಟಿಸಿ ತಮ್ಮ ಮತೀಯರಲ್ಲಿ ರಿಕ್ತರಾಗಿರುವವರಿಗೆ ಕೊಡುವ ಆಲೋಚನೆಮಾಡಿರುವುದಾಗಿ ಕೇಳಿ ಸಂತೋಷಿಸುತ್ತೇವೆ. ಈ ಬಾಲ್ಯವಯಸ್ಸಿನಲ್ಲಿ ಇಂತಹ ಧರ್ಮಬುದ್ಧಿಯು ಹುಟ್ಟುವುದು ಅಪೂರ್ವವು. ದೇವರು ಇವರಿಗೆ ದೀರ್ಘಾಯುರಾರೋಗ್ಯವನ್ನೂ, ಸಂಪತ್ತನ್ನೂ, ಅಧಿಕ ಕೀರ್ತಿಯನ್ನೂ ಕೊಡಲೆಂದು ಪ್ರಾರ್ಥಿಸುತ್ತೇವೆ, ಮತ್ತೂ ಇವರ ಮೇಲ್ಪಂತಿಯನ್ನು ವಿದ್ಯೆಯಲ್ಲಿ ಹಿಂದುಳಿದಿರುವ ಎಲ್ಲಜನವರ್ಗದವರೂ ಗಮನಿಸಿ ತಮ್ಮ ತಮ್ಮವರ ಉದ್ಧಾರಕ್ಕೆ ಶಾಶ್ವತವಾದ ಸ್ಥಾಪನೆಗಳನ್ನು ಮಾಡಿಕೊಳ್ಳಲು ಮನಸ್ಕರಿಸುವವರಾಗಲೆಂದು ಕೋರುತ್ತೇವೆ.

ಬೆಂಗಳೂರ ಡಿಸ್ಟ್ರಿಕ್ಟ್ ಚೆನ್ನಪಟ್ಟಣದಲ್ಲಿ ಮಹಮ್ಮದೀಯರ ಸಂಖ್ಯೆಯು ಹೆಚ್ಚಾಗಿರುವುದು. ಇವರಲ್ಲಿ ಕೆಲರು ಚರ್ಮದ ಮಂಡಿಗಳನ್ನಿಟ್ಟುಕೊಂಡು ಪರದೇಶಗಳಿಗೆ ವಿಶೇಷವಾಗಿ ಚರ್ಮವನ್ನು ಸಾಗಿಸುವುದರ ಮೂಲಕ ಹೆಚ್ಚು ಆದಾಯವನ್ನು ಹೊಂದುತ್ತಿರುವರು. ಅಲ್ಲಿ ದುಡ್ಡಿನಾಸೆಯಿಂದ ಗೋವಧೆಗೆ ಪ್ರೋತ್ಸಾಹವು ಹೆಚ್ಚಿದೆ. ಅಂದರೆ ಉತ್ತಮವಾದ ಮತ್ತೂ ಬಹುಬೆಲೆ ಬಾಳುವ ದನಗಳು ಕಳವುಮಾಡಲ್ಪಟ್ಟು ವಧಿಸಲ್ಪಡುತ್ತಿವೆ. ಇದರ ನಿರೋಧಕ್ಕಾಗಿ ಸರ್ಕಾರದವರಿಂದಲೂ ಯಾವ ಏರ್ಪಾಟೂ ಮಾಡಲ್ಪಟ್ಟಿರಲಿಲ್ಲವು. ಆದರೆ ಈಗ್ಗೆ ಎರಡುವರ್ಷಗಳ ಕೆಳಗೆ ಚೆನ್ನಪಟ್ಟಣಕ್ಕೆ ಬಂದು ಮಹಮ್ಮದೀಯ ಜನರನ್ನು ವಿದ್ಯಾವಂತರನ್ನಾಗಿಯೂ ವಿವೇಕಿಗಳನ್ನಾಗಿಯೂ ಮಾಡಲು ಉಪನ್ಯಾಸಾದಿಗಳಿಂದ ಬೋಧೆಮಾಡುತ್ತಿರುವ ಹ|| ಮೌಲ್ವಿ ಸಯ್ಯದ್ ಮುರ್ತುಜಾಸಾಹೇಬರು ಈ ಗೋವಧೆಯ ವಿಚಾರದಲ್ಲಿ ಕನಿಕರಪಟ್ಟು ಈ ನೀಚಕೃತ್ಯದಲ್ಲಿ ತೊಡಗಿರುವ ಹಿಂದೂ ಮಹಮ್ಮದೀಯ ಜನರಿಗೆ ಬೋಧಿಸಿ ಅನೇಕರು ಈ ದುಷ್ಟಕಾರ್ಯವನ್ನು ಬಿಡುವಂತೆ ಮಾಡಿರುವರಲ್ಲದೆ ಹಿಂದೂ ಮಹಮ್ಮದೀಯ ದೊಡ್ಡಮನುಷ್ಯರ ಸಹಾಯದಿಂದ ಒಂದು ಗೋರಕ್ಷಣಶಾಲೆಯು ಏರ್ಪಾಟಾಗುವಂತೆ ಮಾಡಿರುವರೆಂದು ತಿಳುಹಲು ಆನಂದವಾಗುತ್ತದೆ. ಈ ಗೋರಕ್ಷಣಶಾಲೆಗೆ ತಾವೇ ಪ್ರೆಸಿಡೆಂಟರಾಗಿಯೂ, ಮ|| ಗಳಾದ ಪಿ. ಆರ್. ಬಸವರಾಜಪ್ಪನವರು ಮತ್ತೂ ಸಿ. ಎ. ಕೃಷ್ಣಮೂರ್ತಿಯವರು ಸೆಕ್ರೆಟರಿಗಳಾಗಿಯೂ, ತಿರುಮಲಸೆಟ್ಟರ ತಮ್ಮ ನರಸಿಂಹಯ್ಯನವರು ಖಜಾಂಚಿಗಳಾಗಿಯೂ ಇರುವರು. ಈ ಮಹನೀಯರುಗಳು ತಾವು ಕೈಕೊಂಡಿರುವ ಶ್ಲಾಘ್ಯತಮವಾದ ಈ ಕಾರ್ಯವನ್ನು ಎಷ್ಟು ವಿಘ್ನ ಬಂದಾಗ್ಯೂ ಬಿಡದೆ ನಡೆಯಿಸಿಕೊಂಡು ಬಂದು ಮನುಷ್ಯರ ಜೀವನಾಧಾರಭೂತವಾದ ಈ ಪಶುವರ್ಗವನ್ನು ಅಕಾಲಮೃತ್ಯುವಿನ ಬಾಯಿಂದ ಬಿಡುಗಡೆಮಾಡಿ ಇಹದಲ್ಲಿ ಕೀರ್ತಿಯನ್ನೂ ಪರದಲ್ಲಿ ಸದ್ಗತಿಯನ್ನೂ ಪಡೆಯುವವರಾಗಲೆಂದು ಕೋರುತ್ತೇವೆ.

ಕೈ|| ಶ್ರೀಚಾಮರಾಜೇಂದ್ರ ಒಡೆಯರ್ ಜಿ.ಸಿ.ಎಸ್.ಐ., ರವರು ವಿದ್ಯೆಯಲ್ಲಿ ಬಹಳ ಹಿಂದುಳಿದಿದ್ದ ತಮ್ಮ ಅರಸುಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಲು ರಾಜಧಾನಿಯಲ್ಲಿ ಒಂದು ಬೋರ್ಡಿಂಗ್ ಸ್ಕೂಲನ್ನು ಸ್ಥಾಪಿಸಿ, ಪರಸ್ಥಳಗಳಿಂದಲೂ ಅರಸುಮಕ್ಕಳನ್ನು ಬರಮಾಡಿಕೊಂಡು ಸ್ಕೂಲಿಗೆ ಸೇರಿಸಿ, ಇಂಗ್ಲೀಷು-ಕನ್ನಡ ವಿದ್ಯಾಭ್ಯಾಸವನ್ನು ಮಾಡಿಸಲು ವಿಶೇಷ ಶ್ರದ್ಧಾಭಿಮಾನವನ್ನು ವಹಿಸಿದ್ದುದರಿಂದಲೂ, ಅವರ ತರುವಾಯ ನಮ್ಮ ಶ್ರೀಕೃಷ್ಣರಾಜ ಪ್ರಭುಗಳು ಅದೇ ಮೇಲ್ಪಂತಿಯನ್ನನುಸರಿಸಿ ಮೊದಲಿಗಿಂತಲೂ ಅತಿಶಯವಾಗಿ ನಡೆಯಿಸಿಕೊಂಡು ಬರುತ್ತಿರುವುದರಿಂದಲೂ ಮೂರು ಜನ ಅರಸುಮಕ್ಕಳು ಬಿ.ಎ., ಬಿ.ಎಲ್., ಪ್ರಶಸ್ತಿಯನ್ನು ಪಡೆದು ಅವರಲ್ಲೊಬ್ಬರು ಅಸಿಸ್ಟೆಂಟ್ ಕಮಿಷನರಾಗಿಯೂ, ಮತ್ತಿಬ್ಬರು ಅಡ್ವೋಕೇಟರಾಗಿಯೂ ಇರುವರು. ಅಲ್ಲದೆ ಈಗಲೂ ಬಿ.ಎ., ತರಗತಿಯ ವರೆಗೆ ಕೆಲರು ಓದುತ್ತಿರುವರು. ಸಜಾತೀಯರ ವಿದ್ಯಾಭಿವೃದ್ಧಿಯ ವಿಚಾರದಲ್ಲಿ ಮ|| ಸಿ. ಬಾಳರಾಜಅರಸ್, ಬಿ. ಎ., ಯವರೂ, ಅಮೃತಮಹಲ್ ಸೂಪರಿಂಟೆಂಡೆಂಟರಾದ ಮ|| ಎಚ್. ನಂಜುಂಡರಾಜ ಅರಸಿನವರೂ ವಿಶೇಷ ಶ್ರದ್ಧೆಯನ್ನು ವಹಿಸಿರುವರು. ಗಂಡುಹುಡುಗರನ್ನು ವಿದ್ಯಾವಂತರನ್ನಾಗಿ ಮಾಡುತ್ತಿರುವಂತೆ ತಮ್ಮ ರಾಜವರ್ಗದ ಬಾಲಿಕೆಯರನ್ನೂ ವಿದ್ಯಾವತಿಯರನ್ನಾಗಿ ಮಾಡಲು ಕೆಲದಿನಗಳ ಕೆಳಗೆ ಒಂದು ಸ್ಕೂಲು ಏರ್ಪಡಿಸಲ್ಪಟ್ಟಿದ್ದು ಈಗ ಅದನ್ನು ನಜರ್‌ಬಾದಿನಲ್ಲಿರುವ ಡಾಕ್ಟರ ಬಂಗಲೆಗೆ ವರ್ಗಾಯಿಸಿ ಬೋರ್ಡಿಂಗ್‌ಸ್ಕೂಲನ್ನಾಗಿ ಮಾಡಿರುವರು. ಇದರಲ್ಲಿ ಈಗ ಪರಸ್ಥಳದ ಬಾಲಿಕೆಯರು ೭-೮ ರ ವರೆಗಿರುವರು. ಮತ್ತೂ ಸ್ಥಳದ ಮಕ್ಕಳೂ ಯುವತಿಯರೂ ವ್ಯಾಸಂಗಮಾಡುತ್ತಿರುವರು. ಇವರ ಆಟಪಾಟ ಮೊದಲಾದ ವ್ಯಾಯಾಮಗಳಿಗೆ ತಕ್ಕೇರ್ಪಾಟು ಮಾಡಲ್ಪಟ್ಟಿರುವುದು. ಇದರ ಮೇಲ್ವಿಚಾರಣೆಯು ಮ|| ನಂಜುಂಡರಾಜ ಅರಸಿನವರಿಗೆ ವಹಿಸಲ್ಪಟ್ಟಿರುತ್ತದೆ. ಶ್ರೀಮನ್ಮಹಾರಾಜರವರು ಕಳೆದ ಭಾನುವಾರ ಈ ಸ್ಕೂಲಿಗೆ ದಯಮಾಡಿಸಿದ್ದು ಅಲ್ಲಿಯ ಕಾರ್ಯಕ್ರಮವನ್ನು ಪರಾಮರ್ಶಿಸಿಕೊಂಡು ಬಂದರು.

ವರ್ತಮಾನಸಂಗ್ರಹ.

ಗೋಖಲೆಯವರ ಅಸ್ಥಿಯು ತ್ರಿವೇಣೀ ಸಂಗಮದಲ್ಲಿ ಬಿಡಲು ತೆಗೆದುಕೊಂಡು ಹೋದ ದಿವಸ ಲಕ್ನೋಪಟ್ಟಣದವಿದ್ಯಾರ್ಥಿಗಳೆಲ್ಲರೂ ಗೋಮತೀ ನದೀತೀರಕ್ಕೆ ಬರೀ ಕಾಲಿನಲ್ಲಿ ನಡೆದುಕೊಂಡು ಹೋಗಿ ಸ್ನಾನಮಾಡಿ ಬಂದರು.

ರಷ್ಯಾದ ವಾರ್ಸಾಪಟ್ಟಣದಲ್ಲಿರುವ ಜರ್ಮನಿಯವರ ಒಂದು ಕಾರ್ಯಾಲಯವನ್ನು ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಂಡು ಅದನ್ನು ಶೋಧಿಸಿದಾಗ್ಗೆ ಒಂದು ಕಬ್ಬಿಣದ ಪೆಟ್ಟಿಗೆಯಲ್ಲಿ ೧೩|| ಲಕ್ಷ ರೂ. ಬೆಲೆಬಾಳುವ ಭಂಗಾರದ ನಾಣ್ಯಗಳು ಜರ್ಮನಿಗೆ ಕಳುಹಲ್ಪಡುವುದಕ್ಕಾಗಿ ಇಡಲ್ಪಟ್ಟಿದ್ದುದು ದೊರೆದುವು.

ಸ್ವಿಟ್ಜರ್ಲೆಂಡಿನಲ್ಲಿ ಒಂದು ಕಂಪೆನಿಯವರು ತೂಕದಲ್ಲಿ ಕಾಲು ತೊಲೆಯೂ, ಅಗಲದಲ್ಲಿ ಅರ್ಧಂಗುಲವೂ ಇರುವ ಒಂದು ಶ್ರೇಷ್ಠವಾದ ಮುತ್ತನ್ನು ಕೈಬೆರಲಿಗೆ ಉಂಗುರವಾಗಿಟ್ಟುಕೊಳ್ಳುವಂತೆ ಕೊರೆದು ಅದರ ಮೇಲುಭಾಗದಲ್ಲಿ ಗೂಡನ್ನು ಮಾಡಿ ಒಂದು ಸಣ್ಣ ಗಡಿಯಾರವನ್ನಿರಿಸಿ, ೧೮೦೦೦ ರೂ. ಬೆಲೆಯಿಟ್ಟಿರುವರಂತೆ. ಈ ಮುತ್ತನ್ನು ಕೊರೆದು ಅದರೊಳಗೆ ಗಡಿಯಾರದ ಯಂತ್ರಸಾಮಗ್ರಿಗಳನ್ನಿರಿಸಲು ೧೫ ತಿಂಗಳ ಕಾಲವು ಹಿಡಿದಿತಂತೆ.

ಪತ್ರವ್ಯವಹಾರ.

ಚಿಕ್ಕಮಗಳೂರು ತಾ|| ಕುನ್ನಾಳು.

ಈ ಗ್ರಾಮವು ಸುಮಾರು ೪೦ ಮನೆಗಳುಳ್ಳದಾಗಿದ್ದಾಗ್ಯೂ ಇದಕ್ಕೆ ಒಂದು ಸ್ಕೂಲೂ ಇಲ್ಲದೆ ತುಂಬಾ ತೊಂದರೆಯಾಗಿತ್ತು. ಅಲ್ಲದೆ ಈ ಗ್ರಾಮದಲ್ಲಿ ೪-೫ ಜಾತ್ರೆಗಳುಂಟಾ

ಗಿದ್ದುದರಿಂದ ಯಾವಗ್ರಾಮಾಭಿವೃದ್ಧಿ ಕಾರ್ಯವನ್ನು ಮಾಡುವುದಕ್ಕು ಬಹಳ ಅಡಚಣೆಯುಂಟಾಗಿತ್ತು. ಆದರೆ ಕಡೂರು ತಾ|| ಅನೇಕಗ್ರಾಮಗಳಲ್ಲಿ ಸಂಚಾರಮಾಡಿ ಪ್ರತಿ ದೊಡ್ಡ ಗ್ರಾಮದಲ್ಲಿಯೂ ಸ್ಕೂಲ್ಲಿನ ಏರ್ಪಾಡಿಟ್ಟು ಕಟ್ಟಡದ ಬಗ್ಗೆ ಆ ಗ್ರಾಮದಲ್ಲಿ ೩೦೦ ರೂ. ನಂತೆ ಗೌರ್ನಮೆಂಟಿಗೆ ಡಿಪಾಜಿಟ್ ಮಾಡಿಸಿ ಗ್ರಾಮಾಭಿವೃದ್ಧಿ ಮತ್ತೂ ವಿದ್ಯಾಭಿವೃದ್ಧಿ ವಿಷಯದಲ್ಲಿಯೂ ತುಂಬಾ ಮುತುವರ್ಜಿಯನ್ನು ವಹಿಸಿರುವ ಪಿಳ್ಳೇನಹಳ್ಳಿ ಸ್ಕೂಲ್‌ಮಾಸ್ಟರ್ ಮ|| ರಾ|| ಚನ್ನಬಸಪ್ಪನವರು ಈದಿನ ನಮ್ಮ ಗ್ರಾಮಕ್ಕೆ ಬಂದು ಗ್ರಾಮಸ್ಥರೆನ್ನೆಲ್ಲಾ ಸೇರಿಸಿಕೊಂಡು ವಿದ್ಯಾನಾಗರಿಕತೆಯಸುಧಾರಣೆಯಲ್ಲಿ ಜನಗಳಿಗೆ ವಿವೇಕಉಂಟಾಗುವಂತೆ ಬೋಧಿಸಿ ಗ್ರಾಮಪಾರ್ಟಿಯನ್ನು ಒಡೆದು ಸ್ಕೂಲ್‌ಕಟ್ಟಡದ ಬಗ್ಗೆ ಗೌರ್ನಮೆಂಟಿನಲ್ಲಿ ಡಿಪಾಜಿಟ್ ಮಡಗಿಸಲು ೩೦೦ ರೂ. ಗಳ ಚಂದಾಪಟ್ಟಿಯನ್ನು ಹಾಕಿ ಹಣ ವಸೂಲಿಗೆ ಮತ್ತೊಂದು ಭಾನುವಾರ ಬರುವುದಾಗಿ ಹೇಳಿ ಹೊರಟುಹೋದರು. ಈ ಗ್ರಾಮಕ್ಕೆ ಸ್ಕೂಲಾಗುವುದರಿಂದ ಇದರ ಸುತ್ತಮುತ್ತಲೂ ೩-೪ ಫರ್ಲಾಂಗಿನೊಳಗಿರುವ ೫-೬ ಗ್ರಾಮಗಳಿಗೂ ತುಂಬಾ ಪ್ರಯೋಜನವಾಗುವುದಲ್ಲದೆ ಒಂದು ಸೊಸೈಟಿಯನ್ನು ಏರ್ಪಡಿಸಲು ಆಲೋಚನೆ ನಡೆಸಲ್ಪಟ್ಟಿರುವುದು,

ವಿದ್ಯಾಭಿಮಾನಿ.

ಶ್ರೀ ದೇವತಾಪ್ರತಿಷ್ಠಾಮಹೋತ್ಸವ.

ಆನಂದನಾಮಸಂವತ್ಸರದ ಮಾಘ ಬಹುಳ ೫ ಗುರುವಾರ ಅರಸೀಕೆರೆ ತಾಲ್ಲೋಕ್ ಹಲ್ಕೂರು ಸಾ|| ಮರುಳಸಿದ್ದಪ್ಪಶೆಟ್ಟರು ಒಂದು ಪುರಾತನ ಶಿವಾಲಯವನ್ನು ಬಹು ಅಂದವಾಗಿ ಜೀರ್ಣೋದ್ಧಾರಮಾಡಿ ಪ್ರಾಕಾರದಲ್ಲಿ ಹೊಸದಾಗಿ ಚಿಕ್ಕ ದೇವಸ್ಥಾನ ಕಟ್ಟಿಸಿ ಅಮ್ಮನವರ ವಿಗ್ರಹವನ್ನು ಮತ್ತೊಂದು ಮಂಟಪದಲ್ಲಿ ನವಗ್ರಹಮೂರ್ತಿಗಳನ್ನು ನಾಗದೇವತಾ ಪ್ರತಿಮೆಗಳನ್ನು ವಿನಾಯಕಸ್ವಾಮಿ ಮತ್ತು ನಂದೀಶ್ವರರನ್ನು ಸಹಾ ವೇ|| ಬೆಂಗಳೂರು ಆಗಮಿಕ ಗುರುಲಿಂಗಶಾಸ್ತ್ರಿಗಳವರು ಮತ್ತೂ ನಂಜುಂಡಶಾಸ್ತ್ರಿಗಳವರ ಮೂಲಕ ವಿಧ್ಯುಕ್ತಪ್ರಕಾರ ಸಕಲ ಭಕ್ತಿವಿಶ್ವಾಸ ಪೂರ್ವಕವಾಗಿ ವಿಶೇಷ ವೈದಾರ್ಯದೊಡನೆ ೫-೬ ದಿವಸಗಳವರೆಗೆ ಅನೇಕ ದೊಡ್ಡಮನುಷ್ಯರನ್ನೂ ಗುರುಚರಮೂರ್ತಿಗಳನ್ನೂ ಬರಮಾಡಿಕೊಂಡು ಮಹಾವಿಜೃಂಭಣೆಯಿಂದ ನಿಯತವಾದ ಮುಹೂರ್ತದಲ್ಲಿ ಪ್ರತಿಷ್ಠಾಕಾರ್ಯವನ್ನು ಪೂರೈಸಿ ೧ ದಿವಸ ಶಿವಕಥಾ ಹಂ|| ಶಿವಪ್ಪಶಾಸ್ತ್ರಿಗಳಿಂದ ಗಿರಿಜಾಕಲ್ಯಾಣ ಕೀರ್ತನದಿಂದ ಕೂಡಿದ ಸಮಸ್ತರಿಗೂ ಮಹದಾನಂದಗೊಳಿಸಿ ಮಹತ್ತರವಾದ ಧರ್ಮಖ್ಯಾತಿಗಳನ್ನು ಸಂಪಾದಿಸಿಕೊಂಡರು. ಈ ಕಾರ್ಯದ ಮೇಲ್ವಿಚಾರಣೆಗೆಲ್ಲಾ ಇವರ ಮಾವಂದಿರಾದ ಮ|| ಯಡೆಹಳ್ಳಿ ಶ್ರೀಮಂತ ಶಾಂತಪ್ಪಶೆಟ್ಟರವರು ಇದ್ದುದರಿಂದ ನಿರಾಕ್ಷೇಪವಾಗಿ ಜರುಗಿತು. ಅಲ್ಲದೆ ಇದೇ ಸಮಾರಂಭದಲ್ಲಿ ವೀರಶೈವ ವಿದ್ಯಾವರ್ಧಕ ಫಂಡಿಗೋಸ್ಕರವಾಗಿ ೫ ರೂಪಾಯಿಗಳು ಬೆಂಗಳೂರಿಗೆ ಸಮರ್ಪಿಸಲ್ಪಟ್ಟಿರುತ್ತದೆ. ಕುಪ್ಪೂರಗದ್ದುಗೆಯ ಮಠಕ್ಕೂ ೫ ರೂಪಾಯಿ ಸಲ್ಲಿ[illegible].

ಚಂದಾದಾರ.

ತುಮಕೂರು ತಾ|| ಶ್ರೀ ಸಿದ್ಧಗಂಗಾಮಹಾಕ್ಷೇತ್ರ.

ಈ ಮಹಾಕ್ಷೇತ್ರದಲ್ಲಿ ಕಳೆದ ತಾ|| ೧೨-೨-೧೫ ರ ಲಾಗಾಯ್ತು ೨೦-೨-೧೫ ರವರವಿಗೆ ಶ್ರೀ ಸಿದ್ಧಲಿಂಗೇಶ್ವರಸ್ವಾಮಿಯ ಜಾತ್ರೆಯು ಮಹಾ ವಿಜೃಂಭಣೆಯಿಂದ ನಡೆಯಿತು. ಆಗ ಎತ್ತುಗಳ ಪರಿಶೆಯೂ ಸಹ ಸೇರಿತ್ತು. ಈ ಪರಿಶೆಗೆ ಬಂದಿದ್ದ ನಾನಾವರ್ಣದ ಜನಗಳಿಗೂ ಕೂಡ ಈ ಮಠಾಧ್ಯಕ್ಷರಾದ ಶ್ರೀ ಉದ್ಧಾನಸ್ವಾಮಿಗಳವರು ಜಾತ್ರೆ ಪೂರೈಸುವವರೆಗೂ ಅನ್ನ ಹಾಕಿಸಿದರು. ಈ ಮಹಾಕ್ಷೇತ್ರಕ್ಕೆ ತಾ|| ೧೫-೨-೧೫ ನೇ ಸೋಮವಾರದ ದಿವಸ ಮೈಸೂರ್ ಸಂಸ್ಥಾನದ ರೆಸಿಡೆಂಟ್ ಸಾಹೇಬರವರು ಪತ್ನಿಸಮೇತರಾಗಿ ದಯಮಾಡಿಸಿ ಈ ಮಠದಲ್ಲಿ ನಡೆಯತಕ್ಕ ದಾಸೋಹಾದಿಕಾರ್ಯಗಳನ್ನು ನೋಡಿ ಬಹಳ ಸಂತೋಷಪಟ್ಟು ಶ್ರೀ ಸ್ವಾಮಿಗಳವರು ಕೊಟ್ಟ ಫಲಪುಷ್ಪತಾಂಬೂಲ ಹಾರ ತುರಾಯಿ ಮೊದಲಾದುವನ್ನು ಸ್ವೀಕರಿಸಿ ಆ ದಿವಸ ಬೆಂಗಳೂರಿಗೆ ದಯಮಾಡಿಸಿದರು. ಆ ದಿವಸವೇ ಈ ಕ್ಷೇತ್ರಕ್ಕೆ ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರ್ ಸಾಹೇಬರವರೂ, ಪೊಲೀಸ್ ಸೂಪರಿಂಟೆಂಟ್ ಸಾಹೇಬರವರೂ ಮೊದಲಾದ ಆಫೀಸರುಗಳೆಲ್ಲಾ ದಯಮಾಡಿಸಿದ್ದರು. ಇವರುಗಳಿಗೂ ಫಲಪುಷ್ಪ ತಾಂಬೂಲಾದಿಗಳು ಕೊಡಲ್ಪಟ್ಟವು. ಈ ಮಠದಲ್ಲಿ ಜಾತ್ರೆಯ ಕಾಲದಲ್ಲಿಯಲ್ಲದೆ ಯಾವಾಗಲೂ ಕೂಡ ಇಲ್ಲಿಗೆ ಬರತಕ್ಕ ನಾನಾವರ್ಣದ ಭಕ್ತಾದಿಗಳಿಗೂ ಕೂಡ ದಾಸೋಹವು ನಡೆಯುವುದು ಮತ್ತೂ ಒಂದು ಸಂಸ್ಕೃತಪಾಠಶಾಲೆಯು ಸಹ ಇದೆ. ಧರ್ಮೋಪಕಾರಿಯಾದ ಈ ಕ್ಷೇತ್ರವು ಇನ್ನೂ ಅಭಿವೃದ್ಧಿಸ್ಥಿತಿಗೆ ಬರಲೆಂದು ಯಾವಾಗಲೂ ದೇವರನ್ನು ಪ್ರಾರ್ಥಿಸುತ್ತೇನೆ.

ಓರ್ವ ಪ್ರತ್ಯಕ್ಷದರ್ಶಿ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಗೆ ತಾ|| ೨೩-೧೦-೧೪ ರಿಂದ ತಾ|| ೨೫-೧೨-೧೪ ರವರಿಗೆ ಲಗ್ನ ಮೊದಲಾದವುಗಳಿಂದ ಜಮಾಖಂದ ತಪ್ಸೀಲ್.

೧. ಮ|| ಗಳಾದ ಯಡೆಹಳ್ಳಿ ಯಂ|| ನಿ|| ಶಾಂತಪ್ಪಶೆಟ್ಟರ ಮೂಲಕ ಹೊನ್ನಾಳಿ ತಾ|| ದೊಡ್ಡಯತ್ತಿನಹಳ್ಳಿ ಶಿವಪೂಜಿ ಗುರುಶಾಂತಪ್ಪನವರ ಮನೆ ಲಗ್ನದಲ್ಲಿ ತೆಗೆದ ಬಾಬತು ೨-೦-೦, ಚುರುಚೋಣಿ ವೀರಬಸಪ್ಪನವರ ಮನೆ ಲಗ್ನದಲ್ಲಿ ತೆಗೆದ ಬಾಬತು ೨-೦-೦, ಜುಮ್ಲ ೪-೦-೦, ೨. ಚಿಕ್ಕಕೆರೆ ತಾ|| ತಿಮ್ಮಣ್ಣನಾಯಕನಕೋಟೆ ಮಠದ ಚನ್ನಬಸವಶಾಸ್ತ್ರಿಗಳಿಂದ ಆ ಗ್ರಾಮದಲ್ಲಿ ಆನಂದಸ|| ಆಶ್ವೀಜಮಾಸದ ಲಾಗಾಯಿತು ಕಾರ್ತೀಕ ಶು|| ೧೫ ವರಿಗೆ ನಡಿಸಿದ ಪುರಾಣಶ್ರವಣದ ಶುಭಕಾಲದಲ್ಲಿ ತೆಗೆದ ಬಾಬತು ೩-೦-೦. ೩. ಕಂಪಿ ತಾ|| ಅಯನೂರು ಶ್ರೀ ಕೋಹಳ್ಳಿಮಠದ ಕೋಟಪ್ಪಯ್ಯನವರಿಗೆ ಪುತ್ರೋತ್ಸವವಾದ ಸಂತೋಷಕ್ಕೋಸ್ಕರ ತೆಗೆದ ಬಾಬತು ೨-೦-೦, (ಇವರಂತೆಯೇ ಅನೇಕರು ಜನನಕಾಲದಲ್ಲಿಯೂ ಫಂಡ್ ಸಭೆಗೆ ಮೊಬಲಗನ್ನು ತೆಗೆಸಿ ದಾಖಲೆಯನಿಸಿ ಕಳುಹಿಸಿಕೊಟ್ಟರೆ, ಉತ್ತರೋತ್ತರ ಜಂತಕ ವಗೈರೆ ಬರೆಸುವದಕ್ಕೂ, ಲೈಫ್ ಇನ್ಶ್ಯೂರೆನ್ಸ್ ದಾಖಲೆಗೂ, ಇತರ ಸಂದರ್ಭಗಳಿಗೂ ಫಂಡ್ ಸಭೆಗೆ ಕಾಗದಬರದು ದಾಖಲೆ ತರಿಸಿಕೊಳ್ಳುವದಕ್ಕೆ ಅನುಕೂಲತೆಯಿರುತ್ತೆ.) ೪. ತಮಕೂರು ತಾ|| ಗೂಳೂರು ಯ|| ದೊಡ್ಡಬಸಪ್ಪನವರ ಮೂಲಕ ವಿಭೂತಿ ಕರಿಬಸಪ್ಪನವರ ಮಗನ ಲಗ್ನದಲ್ಲಿ ೨-೨-೦, ನಡುವಲಮಠದ ಚನ್ನವೀರದೇವರ ಮಗಳ ಲಗ್ನದಲ್ಲಿ ೨-೨-೦, ಶಿಲಾಮಠದ ಚನ್ನವೀರದೇವರ ಮಗನ ಲಗ್ನದಲ್ಲಿ ೨-೨-೦, ಬಳೆ ಸಿದ್ಧಬಸಪ್ಪನವರ ಮಗಳ ಲಗ್ನದಲ್ಲಿ ೩-೨-೦, ವೀ|| ಚನ್ನಮಲ್ಲಪ್ಪನವರ ಲಗ್ನದಲ್ಲಿ ೨-೧೦-೦, ಶಿದ್ಧಲಿಂಗಪ್ಪನವರ ಲಗ್ನದಲ್ಲಿ ೨-೦-೦, ಗುಂಡಾಭಕ್ತರ ಕೆಂಚಯ್ಯನವರ ಲಗ್ನದಲ್ಲಿ ೨-೦-೦, ವೀ|| ಕೆಂಪಯ್ಯನವರ ಲಗ್ನದಲ್ಲಿ ೨-೨-೦, ಕೆಂಚಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ೨-೦-೦, ಜುಮ್ಲ ೨೦-೪-೦ ಗೆ ಮಣಿಆರ್ಡರ್ ಕಮಿಷನ್ ವಜಾ ಜಾತಾ ಬಂದದ್ದು ೨೦-೦-೦. ೫. ಬೆಳಗಾಂಜಿಲ್ಲಾ ಗೋಕಾಕ ತಾ|| ಸಿಂದಿ ಕುರಬೇಟದಲ್ಲಿನ ದುಂಡಪ್ಪ ಮಲ್ಲಪ್ಪದಂಡಿಗಿ ಇವರಿಂದ ಜಮ ೨-೦-೦, ೬. ಶಿಡ್ಲಘಟ್ಟದ ತಾ|| ವೇಲೂರು ಅಂಗಡಿ ನಂಜುಂಡಪ್ಪನವರು ಚನ್ನವೀರಭದ್ರಪ್ಪನವರು ಇವರಿಂದ ಇವರು ಬೆಂಗಳೂರಲ್ಲಿ ನಡೆದ ೨ ನೇ ವೀರಶೈವ ಮಹಾಸಭಾಕಾಲದಲ್ಲಿ ವಾಗ್ದಾನಮಾಡಿದ್ದ ೩೫-೦-೦, ಜೆಜ್ಜೆಗೆ ಕಳುಹಿಸಿರುವದು ೧೫-೦-೦, ಜುಮ್ಲ ೫೦-೦-೦, ಒಟ್ಟು ಜುಮ್ಲ ೮೧-೦-೦ ರೂಪಾಯಿ.

ಜಿ. ಕೆ. ರುದ್ರಾರ್ಯ,
ಆಕ್ಟಿಂಗ್ ಸೆಕ್ರೆಟರಿ.

ಒಬ್ಬರು ಹೆಡ್‌ಮಾಸ್ಟರಿಗೆ ನಡೆದ ಎನ್‌ಟರ್‌ಟೇನ್‌ಮೆಂಟ್.

ತುಮಕೂರು ಡಿಸ್ಟ್ರಿಕ್ಟ್ ಚಿಕ್ಕನಾಯಕನಹಳ್ಳಿ ತಾಲ್ಲೂಕ್ ಯಳನಡುವಿಲ್ಲೇಜ್ ಎಲಿಮೆನ್‌ಟರೀ ಸ್ಕೂಲ್ ಹೆಡ್‌ಮಾಸ್ಟರ್ ಎಚ್. ಗೋವಿಂದರಾಯರವರು ಈ ಊರಿಗೆ ವರ್ಗಪಟ್ಟು ಬಂದು ೨೦-೨೨ ವರ್ಷಗಳಾಯ್ತು. ಇವರು ಈ ಊರಿಗೆ ಬಂದಕಾಲದಲ್ಲಿ ಈ ಸ್ಕೂಲ್ ಬಹಳ ಹೀನಸ್ಥಿತಿಯಲ್ಲಿತ್ತು. ಇಂಥಾ ಸ್ಕೂಲನ್ನು ಹೆಡ್‌ಮಾಸ್ಟರವರು ೬-೭ ತಿಂಗಳವಳಗಾಗಿಯೇ ತಮ್ಮ ಟೀಚಿಂಗ್ ಫೋರ್ಸ್ನಿಂದಲೂ ಗ್ರಾಮಸ್ಥರಿಗೆ ಪ್ರೋತ್ಸಾಹಮೂಲಕವಾಗಿಯೂ ಬಾಲಕರ ಸಂಖ್ಯೆಯನ್ನು ೮-೧೦ ರಿಂದ ೮೦-೯೦ ರವರವಿಗೂ ಹೆಚ್ಚಿಸಿ, ತಮ್ಮ ಸಹಾಯಕ್ಕೆ ಅಸಿಸ್ಟೆಂಟ್ ಮಾಸ್ಟರನ್ನೂ ಸಹ ಬರಮಾಡಿಕೊಂಡರು. ಆ ಲಾಗಾಯ್ತುನಿಂದಲು ಲೋವರ್‌ಸೆಕೆನ್‌ಡರೀ ಕ್ಲಾಸ್ ಇಟ್ಟು ಪ್ರತಿವರ್ಷವೂ ಪರೀಕ್ಷೆಗೆ ಬಾಲಕರನ್ನು ಕಳುಹಿಸುತ್ತಲೂ ಕಳುಹಿಸಿದ ಬಾಲಕರ ಪೈಕಿ ಒಬ್ಬ ಬಾಲಕನೂ ಕೂಡ ಫೇಲಾಗದಂತೆ ಆ ಲಾಗಾಯ್ತು ದರವರ್ಷವು ಪ್ಯಾಸಾಗುತ್ತಾ ಬಂದಿರುತ್ತಾರೆ. ಇವರು ಈ ಗ್ರಾಮಕ್ಕೆ ಬರುವದಕ್ಕೆ ಮುಂಚೆ ಶೇಕಡ ೫ ರಂತೆ ವಿದ್ಯಾವಂತರು ದೊರಿಯುವದು ಕಷ್ಟವಾಗಿತ್ತು. ಈಗ ಶೇಕಡ ೩೫ ಕ್ಕಿಂತಲೂ ಹೆಚ್ಚಾಗಿ ವಿದ್ಯಾವಂತರು ದೊರಿಯುವಂತೆ ಆಗಿರುತ್ತೆ. ಈ ಗ್ರಾಮಕ್ಕೆ ಇಷ್ಟು ಅತಿಶಯವಾದ ವಿದ್ಯಾದಾನಮಾಡಿದ ಹೆಡ್‌ಮಾಸ್ಟರ್‌ರವರ ಮೆಹನತ್ತುಘನವಾದ ಗವರನ್‌ಮೆಂಟಿನವರಿಗೆ ತಿಳಿದು ಇವರನ್ನು ಬತ್ತಿಮೋಲೆ ತಾಲ್ಲೂಕ್ ಮಜ್ಕೂರ್ ಶೆಟ್ಟಿಕೇರಿ ವಿಲ್ಲೇಜ್ ಎಲಿಮೆನ್‌ಟರೀ ಬಾಯ್ಸ್‌ಸ್ಕೂಲ್ ಹೆಡ್‌ಮಾಸ್ಟರ್‌ರವರಾಗಿ ವರ್ಗಾಯಿಸಿದ ಆರ್ಡರನ್ನು ಅವರಿಂದ ಸುಶಿಕ್ಷಿತರಾದ ಕೆಲವರು ತಿಳಿದು ೧೩-೨-೧೫, ೧೪-೨-೧೫ ಈ ಉಭಯದಿನಗಳೂ ಗುರುಭಕ್ತಿಯನ್ನು ಮತ್ತು ಸಂತೋಷವನ್ನು ಸಹ ತೋರ್ಪಡಿಸುವದಕ್ಕೋಸ್ಕರ ತಳಿರುತೋರಣ ರಂಭಾಸ್ತಂಭಗಳಿಂದಲಂಕೃತವಾದ ಸ್ಕೂಲ್ ಕಟ್ಟಡದಲ್ಲಿ ಹೊಸದುರ್ಗ ತಾಲ್ಲೂಕ್ ಬೆಲಗೂರ್ ಸಾಹುಕಾರ್ ಮರುಳಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಎನ್‌ಟರ್‌ಟೈನ್‌ಮೆಂಟ್ ಕೂಟವನ್ನು ನಡೆಸಿದರು. ಅಗ್ಗಿ ಪುರಪ್ರಮುಖರಾದ ಸಾಹುಕಾರ್ ಎಸ್. ಶಿವನಂಜಪ್ಪಶೆಟ್ಟರು, ಶ್ಯಾನುಭೋಗ ನರಸಿಹಯ್ಯನವರು, ಪಟೇಲ್ ಸಿದ್ದೇಗೌಡರು, ಯಡೇಗೌ ಸಿದ್ದೇಗೌಡರು, ಸ್ಥಾನೀಕ ಸಿದ್ಧರಾಮಯ್ಯನವರು, ಗುರು ವಣ್ಣನವರ ಗುರಪ್ಪನವರು, ಅಲುಮತದ ಗೌಡರು ಸ ಹಾಜರಾಗಿದ್ದರು. ಅಗ್ಗಿ ಸ್ಕೂಲ್ ಮಜ್ಕೂರ್ ಲೋವ ಸೆಕೆನ್‌ಡರೀ ಕ್ಲಾಸಿನ ೧೪ ವರ್ಷ ವಯಸ್ಸಿನ ಎ. ಎಮ್ ಶಿವಲಿಂಗಾರಾಧ್ಯರೆಂಬುವ ವಿದ್ಯಾರ್ಥಿಯು ವಿದ್ಯಾಭ್ಯಾಸ ವಿಷಯದಲ್ಲಿ ಲೆಕ್ಚರನ್ನೂ, ಹೆಡ್‌ಮಾಸ್ಟರವರ ಗುಣ ಥನವನ್ನೂ ಸಹ ಸಭಿಕರಿಗೆಲ್ಲ ಕರ್ಣಾನಂದವಾಗುವಂತೆ ಮಾಡಿದರು. ನಂತರ ಹಾರ್ಮೋನಿಯಂ ಫಿಟಿಲ್ ತಬಲಗಳೊಂದಿಗೆ ಸಂಗೀತವೂ ಸಹ ನಡೆದು ಹೆಡ್ಮಾಸ್ಟರವರಿಗೆ ಹಾರ, ತುರಾಯಿ, ಹೂ, ಗಂಧ, ತಾಂಬೂಲ ವಗೈರೆ ಗೌರವಗಳನ್ನೆಲ್ಲಾ ನಡೆಸಿ, ನಂತರ ಸಭಿಕರಿಗೆಲ್ಲಾ ಹೂ, ಗಂಧ, ತಾಂಬೂಲ ಮಕ್ಕಳಿಗೆಲ್ಲಾ ಸಕ್ಕರೆ ವಗೈರೆ ಹಂಚಲ್ಪಟ್ಟವು. ಹೆಡ್‌ಮಾಸ್ಟರವರು ವರ್ಗಪಟ್ಟು ಹೋಗಿರತಕ್ಕ ಸ್ಥಳದಲ್ಲಿಯೂ ಕೂಡ ಇದೇರೀತಿಯಾದ ಗೌರವವನ್ನು ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಗಳನ್ನೂ ಸಹ ಶ್ರೀ ಗೌರೀವಲ್ಲಭನಾದ ಶಂಕರನು ದಯಪಾಲಿಸಿ ಕಾಪಾಡಲೆಂದು ಸರ್ವರ ಕರತಾಡನದಿಂದ ಸಭೆಯು ಭರಕಾಸ್ತಾಯಿತು.

ಓರ್ವಪ್ರತ್ಯಕ್ಷದರ್ಶಿ.

ಶ್ರೀ ರಾಮಗಡ್ಡೆಯ ಶಿವರಾತ್ರಿಮಹೋತ್ಸವ.

ಈ ಸಂವತ್ಸರದ ಮಾಘ ಬ|| ೧೪ ಶಿವರಾತ್ರಿಯ ಸಮಾರಂಭಕ್ಕೆ ಪದ್ಧತಿಯಂತೆ ಅನೇಕ ಭಕ್ತಮಾಹೇಶ್ವರರು ಕೂಡಿದ್ದರು. ಸೊಲ್ಲಾಪುರದಿಂದ ವೇ|| ಸೂಗೂರಪ್ಪಶಾಸ್ತ್ರಿಗಳು, ವಿಜಾಪುರಜಿಲ್ಲೆಯ ವೇ|| ವಿರೂಪಾಕ್ಷಶಾಸ್ತ್ರಿಗಳು, ಹರಪನಹಳ್ಳಿ ಸಿದ್ಧಾಂತಿ ಆರ್. ಶಾಂತಪ್ಪಾಜಿಯವರು, ಕೆಲವು ಸಂಗೀತದವರು, ಮತ್ತು ಕೀರ್ತನಕಾರರೂ ಅಭಿಮಾನ ವಿಶೇಷದಿಂದಾಗಮಿಸಿದ್ದರು. ಇಲ್ಲಿಯ ವಿರಕ್ತ ಮಠಾಧ್ಯಕ್ಷ ಶ್ರೀ ಸಿದ್ಧಲಿಂಗಮಹಾಸ್ವಾಮಿಗಳು ಸಂಸ್ಕೃತಶಾಲೆಯನ್ನು ಏರ್ಪಡಿಸಿರುವದಲ್ಲದೆ ನಿಜಾಮ ಇಲಾಖೆಯ ವೀರಶೈವರಿಗೆ ಶ್ರೀ ಶಿವಯೋಗಮಂದಿರದ ಪ್ರಭಾವವು ಚೆನ್ನಾಗಿ ಗುರ್ತಾಗದೆ ಇರುವದರಿಂದ ತಮ್ಮ ಮಠಕ್ಕೆ ತಕ್ಕಷ್ಟು ದೂರವಾಗಿ ನಿರುತಿದಿಕ್ಕಿನಲ್ಲಿ ಮನೋಜ್ಞವಾದ ಕೆಲವು ಮಂದಿರಗಳನ್ನು ಕಟ್ಟಿಸಿ ಮಹಾಶಿವರಾತ್ರಿಯದಿನ ಸಾಯಂಕಾಲಾನಂತರ ತಳಿರುತೋರಣಾದಿಗಳಿಂದಲಂಕರಿಸಲ್ಪಟ್ಟ ಆ ಮಂದಿರಗಳ ಪೂಜಾಸಮಾರಂಭವಂಗೈಸಿ ನಿಜಾಮ ಇಲಾಖೆಯ ಶ್ರೀ ಶಿವಯೋಗಮಂದಿರವೆಂಬ ಅಭಿದಾನವಂ ನಿತ್ತು ಶಿವಾರ್ಚನಗಣಸಂತರ್ಪಣಾದಿ ಕಾರ್ಯಗಳಂ ನಡೆಸಿದರು. ತರುವಾಯ ಶಿವಕೀರ್ತನಗಳಿಂದಜಾಗರಣೆಯಾಯ್ತು. ಮಾರನೇದಿನ ರಾತ್ರಿ ಸಭೆಗೆ ಕೆಲವು ಸಂಸ್ಥಾನದವರೂ, ಸರಕಾರದುದ್ಯೋಗಸ್ಥರೂ ಬಂದಿದ್ದರು. ಮತ್ತು ಸಂಗೀತಕೀರ್ತನಕಾರರ ಕೌಶಲ್ಯಗಳು ನಡೆದವು. ಬ|| ೩೦ ಆದಿತ್ಯವಾರ ಹಗಲು ೪ ಘಂಟೆಗೆ ನೆರೆದ ಸಭೆಯಲ್ಲಿ ಮಠದ ಶ್ರೀಗಳವರು ಸಿಂಹಾಸನಾಸೀನರಾಗಿರಲು, ಆರಂಭಕ್ಕೆ ವಿದ್ಯಾರ್ಥಿಗಳ ಪರೀಕ್ಷೆಯೂ, ಉಪನ್ಯಾಸಗಳೂ ಬಹು ಸ್ವಾರಸ್ಯವಾಗಿ ಜರುಗಿದವು. ಆಗ ರಾಯಚೂರು ಮ|| ಸಂಗನಸಿದ್ಧರಾಮಪ್ಪನವರು ಎಲ್ಲಾ ವಿದ್ಯಾರ್ಥಿಗಳಿಗೆ ಸುತ್ತುವದಕ್ಕೂ, ತೊಡುವದಕ್ಕೂ, ಹೊದಿಯುವದಕ್ಕೂ ಅನುಕೂಲವಾದ ಕಾಷಾಯಾಂಬರಗಳನ್ನು ರುದ್ರಾಕ್ಷ ಕಂಠಮಾಲಿಕೆಗಳನ್ನು ಬಹುಮಾನವಾಗಿತ್ತು ತಮಗಿರುವ ವಿದ್ಯಾಭಿಮಾನವನ್ನು ವ್ಯಕ್ತಪಡಿಸಿದರು. ಕೂಡಲೇ ಸಭಿಕರೆಲ್ಲರೂ ವಿದ್ಯಾರ್ಥಿಗಳ ಬಹುಮಾನದಿಂದ ತಮಗುಂಟಾದ ಆನಂದವನ್ನು ಕರತಾಡನಗಳಿಂದ ಸೂಚಿಸಿದರು. ತರುವಾಯ ಹೆಗಸನಹಳ್ಳಿ ಪೋ|| ಪಾ|| ರಾಮನಗೌಡರಿಂದ ಶಾಲಾಸಂಬಂಧವಾದ ರಿಪೋರ್ಟಿನ ಸಂಗ್ರಹವು ಸರ್ವರಿಗೂ ಓದಿ ಹೇಳಲ್ಪಟ್ಟಿತು. ಆ ಬಳಿಕ ಪಂಡಿತರು ವಿದ್ಯಾ-ಐಕಮತ್ಯ-ಸದಾಚಾರ-ಶಿವಯೋಗ-ಮುಂತಾದ ವಿಷಯಗಳನ್ನು ಕುರಿತು ಸಪ್ರಮಾಣವಾಗಿ ಜನರ ಹೃದಯದಲ್ಲಿ ನೆಲೆಗೊಳ್ಳುವಂತೆ ಹೇಳಿದರು. ಅಷ್ಟಕ್ಕೆ ರಾತ್ರಿ ೧೧ ಘಂಟೆಯಾಯಿತು. ನೂತನ ಶ್ರೀ ಶಿವಯೋಗಮಂದಿರ ಸಂಬಂಧವಾದ ಪ್ರಕಟನಪತ್ರಿಕೆಗಳನ್ನು ಹಂಚಿ ಮಂಗಲರವದೊಡನೆ ಸಭೆಯು ವಿರಮಿಸಲ್ಪಟ್ಟಿತು.

ಇಲ್ಲಿಯ ಧರ್ಮಕಾರ್ಯಗಳ ವಿಶೇಷಸೂಚನೆಯು.

ನಾರಾಯಣಪೇಟೆ ಹುಂಡೀಕಾರ ಮ|| ಶರಣಪ್ಪನವರು ಪ್ರತಿತಿಂಗಳಲ್ಲಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಬೇಕಾಗುವ ಗ್ರಂಥಗಳನ್ನು ಧರ್ಮಾರ್ಥವಾಗಿ ತರಿಸಿಕೊಡಲು ಒಪ್ಪಿಕೊಂಡು ಶಾಲಾಪ್ರಾರಂಭವಾದಂದಿನಿಂದ ಪುಸ್ತಕಗಳನ್ನು ಕೊಡುತ್ತ ಬಂದಿರುವರು. ಇವರ ಉದಾರಗುಣವು ಚಿರಸ್ಮರಣೀಯವಾಗಿದೆ. ಮತ್ತು ಈ ಕ್ಷೇತ್ರದಲ್ಲಿ ನಡೆಯುವ ಸಕಲ ಧರ್ಮಕಾರ್ಯಗಳಿಗೂ ಸಹಾಯಕರಾಗಿ ನಿಂತಿದ್ದ ಮಾ|| ರಾ|| ಮಾನಸಗಲ್ಲು ಬಾಜನಗೌ|| ಅಬಕಾರಿಗುತ್ತೇದಾರ ರಾಯಚೂರು ಇವರ ಧರ್ಮಬುದ್ಧಿಯು ಲೋಕೋತ್ತರವಾದದ್ದು. ಶಾಲೆಯಲ್ಲಿ ೧೨ ಜನ ವಿದ್ಯಾರ್ಥಿಗಳಿದ್ದು ವಿದ್ಯಾಭ್ಯಾಸವು ಚೆನ್ನಾಗಿ ಜರಗುತ್ತಿದೆ. ಶಿವಯೋಗಮಂದಿರದಲ್ಲಿ ಪ್ರಕೃತಕ್ಕೆ ೩ ಜನ ಶಿವಯೋಗಿಗಳಿದ್ದಾರೆ. ಇವರಿಗೆ ಶಿವಾರ್ಚನಾಕ್ರಮವು, ಶಿವಯೋಗವು, ಶಿವಾನುಭಾವಶಾಸ್ತ್ರಾದಿ

ಮನೋಹರವೂ ಮೋಹಕರವೂ ಆದ

ಚಂದ್ರಪ್ರಭಾವತಿ ಹೇರಾಯಿಲ್.

ಈ ತೈಲದ ಸುವಾಸನೆಯು ಮೂರು ದಿನಗಳ ವರಿವಿಗೂ ಹೋಗದೆ ಘಮಘಮಿಸುತ್ತಿರುವದು. ಇದರ ಸುವಾಸನೆಯು ಮೂರುದಿನಗಳಲ್ಲಿ ಹೋದರೆ ೧೦೦ ರೂಪಾಯಿಗಳು ಬಹುಮಾನವಾಗಿ ಕೊಡುತ್ತೇವೆ.

ಕಡಮೆ ತರದ ಹೇರಾಯಿಲ್‌ಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳುಮಾಡಿಕೊಳ್ಳಬೇಡಿರಿ. ಸುಂದರವಾದ ಕೇಶರಾಶಿಯೂ, ಅಂದವಾದ ಕೂದಲುಗಳೂ ಇವೇ ಪ್ರತಿಯೊಬ್ಬ ಸ್ತ್ರೀಪುರುಷರಿಗೂ ಸೌಭಾಗ್ಯವಾದ ಅಲಂಕಾರವಾಗಿದೆ. ಕೂದಲುಗಳು ಸುಂದರವಾಗಿ ಕಾಣಬೇಕಾದರೆ ಅವು ರೇಷ್ಮೆಯಂತೆ ಮೃದುವಾಗಿ ಕಂಗೊಳಿಸುತ್ತಿರಬೇಕು. ಇದಲ್ಲದೆ ತುರುಬನ್ನು ಯಾವ ರೀತಿಯಿಂದಲಾದರೂ ಕಟ್ಟುವಂತೆ ನಯವಾಗಿರಬೇಕು.

ಈ ತೈಲವನ್ನು ಉಪಯೋಗಿಸುತ್ತಲೆ ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವುದು. ನಿದ್ರಾಭಂಗವನ್ನು ಪರಿಹರಿಸುವುವರಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಕೂದಲುಗಳಿಗೆ ಈ ತೈಲವನ್ನು ಸವರುವದರಿಂದ ಎಂದಿಗೂ ಬಿದ್ದುಹೋಗಲಾರವು. ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವುವು. ಇದರ ಸುಗಂಧವಾದರೋ ಮನೋಹರವೂ ಮೋಹಕರವೂ ಆಗಿ ಮನಸ್ಸನ್ನು ಉಲ್ಲಾಸಪಡಿಸುತ್ತದೆ. ಈ ಚಂದ್ರಪ್ರಭಾವತಿ ಹೇರಾಯಿಲನ್ನು ಉಪಯೋಗಿಸುತ್ತಲೇ ಮೆದುಳಿಗೆ ಬಲವನ್ನು ಕೊಡುವದು. ಕೂದಲನ್ನು ಕೆಂಚಾಗಿಡದೆ ಕಪ್ಪು ಬಣ್ಣದಿಂದೊಡಗೂಡಿಸಿ ಗುಂಗುರು ಗುಂಗುರಾಗಿ ಬೆಳೆಯಿಸುವುದು. ಕಣ್ಣಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವದು. ಈ ತೈಲವನ್ನು ತಲೆಗೆ ಸವರುವದರಿಂದ ತಲೇನೋವನ್ನು ತಕ್ಷಣವೇ ಹೋಗಲಾಡಿಸುವದು. ಮೆದುಳಿಗೆ ತಂಪನ್ನುಂಟುಮಾಡುವುದು. ನಿದ್ರೆಯು ಚೆನ್ನಾಗಿ ಬರುವದು. ಈ ಚಂದ್ರಪ್ರಭಾವತಿ ತೈಲವು ಔಷಧಕ್ಕೆ ಔಷಧವೂ, ಸುಗಂಧ ದ್ರವ್ಯಕ್ಕೆ ಸುಗಂಧದ್ರವ್ಯವೂ ಆಗಿರುವದು. ಈ ತೈಲವು ಸ್ತ್ರೀಪುರುಷರಿಗೆ ಬಹಳ ಉಪಕಾರಿಯಾದದ್ದು. ಒಂದು ಚಂದ್ರಪ್ರಭಾವತಿ ತೈಲದ ಶೀಸೆಯು ಬಹು ದಿನಗಳ ವರಿವಿಗೂ ಬರುವದು.

ಕ್ರಯ ಶೀಸೆ ೧ ಕ್ಕೆ ೧ ರೂಪಾಯಿ. ಟಪಾಲು ಖರ್ಚು ೪ ಅಣೆ.

ನರೆಕೂದಲನ್ನಿಟ್ಟುಕೊಂಡು ಮುದುಕರಾಗಿ ಕಾಣುವುದೇಕೆ?

ದರ್ಬಾರ್ ರಂಗು.

ಒಂದುಸಲ ಹಚ್ಚಿದರೆ ೨೫ ವರುಷದ ಪ್ರಾಯಸಮರ್ಥರಂತೆ ಕಾಣಿಸುತ್ತೀರಿ. ಈ ರಂಗು ಹಚ್ಚಿಕೊಂಡರೆ ಕೂದಲು ಕಪ್ಪಾಗಿ ಹೊಳೆಯುತ್ತೆ. ಈಗ ಮಾರಾಟಕ್ಕೆ ಬಂದಿರುವ ಅಲ್ಪತರದ ಕೂದಲು ರಂಗುಗಳು ತುಂಬಾ ಕೀಳುಜಾತಿಯವು. ಹಚ್ಚಿದಕೂಡಲೇ ಕೂದಲು ಕೆಂಚಾಗಿ ಅಸಹ್ಯವಾಗಿ ಕಾಣುತ್ತದೆ, ನಮ್ಮ ದರ್ಬಾರ್ ರಂಗು ಅಂಥಾದ್ದಲ್ಲ, ಬಹು ಮೇಲಾದದ್ದು, ಒಂದಾವರ್ತಿ ಹಚ್ಚಿದರೆ ಕೂದಲು ಕಪ್ಪಾಗಿ ರೇಷ್ಮೆಯಹಾಗೆ ಕಂಗೊಳಿಸುವುವು.

ಕ್ರಯ ಬುರುಸು ಸಮೇತ ೧-೪-೦ ರೂ.

ಉಪಯೋಗಿಸುವ ವಿಧಾನ ಬಾಟ್ಲಿಯ ಜೊತೆಯಲ್ಲಿರುತ್ತೆ.

ಖೂಬ್—ಸೂರತ್.

ಮುಖಕಾಂತಿ.

ಇದು ಒಂದೇ ೧,೦೦,೦೦೦ ರೂಪಾಯಿಗಳು ಬಾಳುವುದು.

ಅಂದಗೆಡಿಸಿ ಎಲ್ಲರೆದುರಿಗೂ ಮುಖವು ಮುಚ್ಚಿಕೊಳ್ಳುವಂತೆ ಮಾಡುತ್ತಾ ಹೇಗೂ ವಾಸಿಯಾಗದ ಅಸಹ್ಯದ ಗುರುತುಗಳು, ಮಚ್ಚೆಗಳು, ಗಂಧೆಗಳು ಎಂಬಲು ಹುಣ್ಣುಗಳು, ಚೆಬ್ಬು, ಇನ್ನೂ ಇತರ ವಿಧವಾದ ಮಚ್ಚೆಗಳು, ನವೆ ಮುಂತಾದವುಗಳಿಗೆ ಈ ಔಷಧವನ್ನು ೧೫ ದಿನಗಳು ಹಚ್ಚುವದರಿಂದ ಗುಣವಾಗಿ ಮುಖಕ್ಕೆ ಕಾಂತಿಯನ್ನು ಕೊಟ್ಟು ಕರನ್ನುಖಳಾಗಿ ಮಾಡುವುದು

ಕ್ರಯ ಡಬ್ಬಿ ೧ ಕ್ಕೆ ೮ ಅಣೆ.

ವಜ್ರಾಂಗಚೂರ್ಣ—ಧಾತುವು ನೀರಿನಂತಿದ್ದರೂ, ಮೂತ್ರದಲ್ಲಿಯೂ, ನಿದ್ರೆಯಲ್ಲಿಯೂ ಧಾತುವು ಹೋಗುತ್ತಿದ್ದರೂ, ಸೊಂಟದನೋವು, ಮೂತ್ರದಲ್ಲಿ ಉರಿ, ಹಸಿವು ಇಲ್ಲದೆ ಇರುವುದು, ಕೈಕಾಲುಗಳಲ್ಲಿ ನೋವಿದ್ದರೂ, ಶರೀರದಲ್ಲಿ ನಿಶ್ಶಕ್ತಿ ಆಗಿದ್ದರೂ, ತಲೆ ತಿರುಗುವುದು, ನಡೆಯುವಾಗ ಶ್ವಾಸ ಬರುವುದು ಸಹ ಇದನ್ನು ಉಪಯೋಗಿಸಿದರೆ ಇಲ್ಲದೆ ಹೋಗುವುದು ನಿಜವೆಂದು ವ್ಯಕ್ತವಾಗುವುದು. ಇದರ ಗುಣದ ಪ್ರಖ್ಯಾತಿಯಿಂದ ಇದರ ಬೆಲೆಯು ೧೦ ರೂಪಾಯಿಗ ಇಟ್ಟರೂ ಬಹಳ ಸುಲಭವೆಂದರಿಯಬೇಕು. ಈ ಬೆಲೆಯನ್ನು ಇಡುವದರಿಂದ ಬಡವರು ಕೊಳ್ಳಲಾರರು. ಅದ್ದರಿಂದ ಇದರ ಬೆಲೆಯು ಡಬ್ಬಿ ೧ ಕ್ಕೆ ೧೨ ಅಣೆ ಇಟ್ಟಿರುತ್ತೆ.

ಪಂಡಿತ್ ಡಿ. ಎಂ. ರವರ ಭಸ್ಮವು—ಉಷ್ಣದಿಂದ ಮೂತ್ರದಲ್ಲಿ ಉರಿ, ಮೂತ್ರದಲ್ಲಿ ರೇವು ಹೋಗುವದು, ಇದು ಹಳೆಯದಾಗಲಿ ನೂತನವಾಗಲಿ ಆಗಿದ್ದರೂ ೨೪ ಗಂಟೆಯೊಳಗಾಗಿ ನಿವಾರಣೆಯಾಗುತ್ತವೆ.

ಕ್ರಯ ಡಬ್ಬಿ ೧ ಕ್ಕೆ ೧೨ ಅಣೆ.

ಉಷ್ಣಕಾರಕಕ್ಕೆ ಮಾತ್ರೆಗಳು—ಉಷ್ಣಕಾರಕದಿಂದ ಶರೀರದಲ್ಲಿ ಪಡೆಗಳಿದ್ದರೂ, ಗಾಯಗಳಿದ್ದರೂ, ಈ ದೆಸೆಯಿಂದ ಶರೀರವನ್ನೇ ತ್ಯಜಿಸಲುದ್ಯುಕ್ತವಾದ ರೋಗವಾದರೂ ಸಹ ಈ ಔಷಧವನ್ನು ಸೇವಿಸುವದರಿಂದ ಖಂಡಿತವಾಗಿಯೂ ಗುಣವಾಗುವವು, ಕ್ರಯ ಡಬ್ಬಿ ೧ ಕ್ಕೆ ೧ ರೂ.

ದಿಲ್‌ಖುಷ್ ತೈಲವು—ಅನೇಕರಿಗೆ ಕೂದಲನ್ನು ಬೆಳೆಸುವ ಇಚ್ಛೆಯಿರುವದು. ಈ ತೈಲವನ್ನು ೧೦-೧೫ ದಿನಗಳು ಹಚ್ಚುವದರಿಂದ ಕೂದಲು ಬಹಳವಾಗಿ ಬೆಳೆಯುವವು. ತೈಲವು ಬಹಳ ಸುವಾಸನೆಯಾಗಿರುವುದು. ಮೆದುಳಿಗೆ ತಂಪನ್ನುಂಟುಮಾಡುವದು. ಕ್ರಯ ಶೀಸೆ ೧ ಕ್ಕೆ ೧೨ ಅಣೆ.

ಆಶ್ಚರ್ಯಕರವಾದ ದ್ರಾವಕ—ಇದನ್ನು ಸ್ವಲ್ಪ ಮೂಸಿನೋಡುವದರಿಂದ ಒಂದು ನಿಮಿಷದಲ್ಲಿ ತಲೆನೋವು ನಿಲ್ಲುತ್ತೆ. ಔಷಧವು ಖರ್ಚಾಗದೆ ಹಾಗೆಯೇ ಇರುವದು. ಚೇಳು, ಹಾವು, ಇತ್ಯಾದಿ ವಿಷಜಂತುಗಳ ಕಡಿತಕ್ಕೆ ಹಚ್ಚಿದರೆ ಗುಣಪಡಿಸುತ್ತೆ. ಕ್ರಯ ಶೀಸೆ ೧ ಕ್ಕೆ ೮ ಅಣೆ.

ವೀರ್ಯಸ್ತಂಭಕವೂ, ಕಾಮೋತ್ತೇಜಕವೂ ಆದ ಗುಳಿಗೆ—ತನಗೆ ಅಪೇಕ್ಷೆ ಇರುವಾಗ ಒಂದು ಗುಳಿಗೆಯನ್ನು ತಣ್ಣೀರಿನಲ್ಲಿ ಸೇವಿಸಲು ವೀರ್ಯಸ್ತಂಭನವಾಗುವದು. ಒಂದು ಗಂಟೆಯಕಾಲ ತಡೆದು ಸ್ತ್ರೀಸಂಗಮಾಡಲು ಆನಂದವಾಗುವದು. ಕ್ರಯ ಡಬ್ಬಿ ೧ ಕ್ಕೆ ೮ ಅಣೆ.

ರೋಮನಾಶಕ, ವೃಶ್ಚಿಕ ದಂಷ್ಟ್ರ—ಈ ಔಷಧವು ಬೇಕಿನ ಹೊಡತಕ್ಕೂ, ಕೂದಲು ತೆಗೆಯುವದಕ್ಕೂ ಬಹಳ ಅನುಕೂಲವಾಗಿರುವದು. ಇದು ಪ್ರತಿಯೊಬ್ಬರಲ್ಲಿಯೂ ಇರಬೇಕಾದ ಔಷಧವು. ಕ್ರಯ ಶೀಸೆ ೧ ಕ್ಕೆ ೪ ಅಣೆ.

ವಾತನಿವಾರಣ ತೈಲವು—ಎದೆಯಲ್ಲಿಯೂ, ಪಕ್ಕೆಗಳಲ್ಲಿಯೂ, ಸೊಂಟದಲ್ಲಿಯೂ, ಕೈಕಾಲುಗಳಲ್ಲಿಯೂ ನೋವಿದ್ದರೆ ಈ ತೈಲವನ್ನು ಉಪಯೋಗಿಸುವದರಿಂದ ತಕ್ಷಣ ಗುಣವಾಗುವದು. ಕ್ರಯ ಶೀಸೆ ೧ ಕ್ಕೆ ೪ ಅಣೆ.

ಅದ್ಭುತಗೊಂಡ ಮೂಲವ್ಯಾಧಿಔಷಧ	ಶೀಸೆ	೧ ಕ್ಕೆ	೧೨	ಅಣೆ
ಕಣ್ಣಿಗೆ ಸುರ್ಮ	„	„	೪	„
ದಂತ ಚೂರ್ಣ ...	ಡಬ್ಬಿ	„	೪	„
ಕಜ್ಜಿ, ಹುಳುಕಡ್ಡಿ ಔಷಧ ...	„	„	೪	„
ಹೊಟ್ಟೇನೋವಿಗೆ ಔಷಧ ...	ಶೀಸೆ	„	೪	„
ತಲೇನೋವಿಗೆ ತೈಲವು ...	„	„	೪	„
ಕೆಮ್ಮಲು ರೋಗಕ್ಕೆ ಔಷಧವು	ಡಬ್ಬಿ	„	೪	„

ಗಾಯಕ್ಕೆ ಔಷಧ—ಇದನ್ನು ದಿನಕ್ಕೆರಡಾವರ್ತಿಯಂತೆ ೮-೧೦ ದಿನಗಳು ಹಚ್ಚುವದರಿಂದ ಹಳೇ ಮತ್ತು ಹೊಸಗಾಯಗಳು ನಾಯದಲ್ಲಿ ಉರಿಯುತ್ತಿದ್ದರೂ ಗುಣಪಡಿಸುವದು. ಕ್ರಯ ಡಬ್ಬಿ ೧ ಕ್ಕೆ ೮ ಅಣೆ.

ಅನುಪಾನಪತ್ರಿಕೆಯು ಔಷಧದ ಜೊತೆಯಲ್ಲಿರುವದು.

ಒಂದು ರೂಪಾಯಿಗಿಂತಲೂ ಕಡಮೆಯಾಗಿ ವಿ. ಪಿ ಯಲ್ಲಿ ಕಳುಹಿಸುವದಿಲ್ಲ.

ವಿಳಾಸ:—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
೫, ಅವೆನ್ಯೂ ರೋಡ್ ಬೆಂಗಳೂರು ಸಿಟಿ.

ಚಾರವು ಅಭ್ಯಾಸಿಸಲ್ಪಡುತ್ತವೆ. ಇವರ ಭೋಜನ ಉಡುವುಗಳು ಯೋಗ್ಯರೀತಿಯಿಂದ ನಡೆಯುವಂತೆ ನಿರ್ಣಯಿಸಲ್ಪಟ್ಟಿದೆ. ಚರಪಟ್ಟಾಧ್ಯಕ್ಷ ದೇಶಿಕ ವಿರಕ್ತರಾಗತಕ್ಕ ಮರಿಗಳು ಅಧಿಕಾರಿಗಳಾಗಿದ್ದವರಾದರೂ ತಕ್ಕಷ್ಟು ವಯಸ್ಸಿನಲ್ಲಿದ್ದು ಸಂಸ್ಕೃತದಲ್ಲಿ ಅಥವಾ ಕನ್ನಡದಲ್ಲಿ ಸರಿಯಾದ ಯೋಗ್ಯತೆಯನ್ನು ಪಡೆದಿದ್ದಲ್ಲಿ ಅವಪ್ರಾಂತದವರಾದರೂ ಬಂದು ಈ ನಿಜಾಮ ಇಲಾಖೆಯ ಶ್ರೀ ಶಿವಯೋಗಮಂದಿರಲ್ಲಿ ಸೇರಿ ಇಲ್ಲಿಯ ಪದ್ಧತಿಗಳನ್ನನುಸರಿಸಿರತಕ್ಕದು. ಈ ಮಧ್ಯೆ ವಿವಾಹಾದಿಗಳಲ್ಲಿ ಬಂದಹಣವು—ಚನ್ನೂರಲ್ಲಿ ರಾ|| ದೊಡ್ಡಪ್ಪನವರು ೫ ರೂ. ರಾ|| ಚನ್ನಬಸಪ್ಪನವರು ೨, ಕೊಡ್ಲೂರಲ್ಲಿ ಗೋಸಲವೀರಣ್ಣನವರು ೨, ಶಾಸ್ತ್ರೋಜಿ ವೀರಪ್ಪನವರು ೧, ಕಡಬೂರ ರಾಮಲಿಂಗಪ್ಪನವರು ೨, ಗಣೇಕಲ್ಲು ಮೇಟಿ ಗೌಡ ಶಿವಬಸಪ್ಪನವರು ೫, ಮಟಮರಿ ಚನ್ನಬಸಪ್ಪನವರು ೨, ಹೆಗ್ಗಸನಹಳ್ಳಿ ಕುಂಬಾರ ವೆಂಕಟನರಸಪ್ಪನವರು ೨, ಮಾಮಡಿ ವಡ್ಡಿ ಶರಣಪ್ಪನವರು ೧, ಕನ್ಯಾನಿಶ್ಚಯ ತಾಂಬೂಲಕಾಲಗಳಲ್ಲಿ ಗೊಂದೆದಿಗಿ ಶಿ|| ಸಿದ್ಧರಾಮಯ್ಯನವರು ೧|, ಕೊಡ್ಲೂರು ಮ|| ವಿರೂಪಾಕ್ಷಯ್ಯನವರು.೧, ಗಣೇಕಲ್ಲು ಮೇಟಿ ಗೌಡ ಶಿವಬಸಪ್ಪನವರು ೧|, ಕಡಬೂರ ರಾಮಲಿಂಗಪ್ಪನವರು ೧, ಮುಡಮಾಲಿ ಚೆಂಪಿಗರ ರಾಚಪ್ಪನವರು ೧, ಪುತ್ರೋತ್ಸವಕಾಲದಲ್ಲಿ ಹೆಗ್ಗಸನಹಳ್ಳಿ ಮ|| ಚನ್ನಯ್ಯನವರು ೧, ಚೌಲಕರ್ಮದಲ್ಲಿ ಚನ್ನೂರು ಗೌ|| ದೊಡ್ಡಬಸಪ್ಪನವರು ೩ ರೂ. ಇಂತಹ ಧರ್ಮಕಾರ್ಯಗಳಲ್ಲಿ ಹಣವನ್ನು ತಾವು ತೆಗೆದು ಕಳುಹಿಸಲು ಅಲ್ಲಲ್ಲಿ ಪ್ರೋತ್ಸಾಹಿಸಲು ಕೊಡ್ಲೂರ ಭಕ್ತರು ಮುಂದಾಳುಗಳಾಗಿದ್ದಾರೆ. ಇದರಂತೆ ಪ್ರತಿಯೊಂದು ಗ್ರಾಮದ ಸಭ್ಯರು ಸಹಾಯಮಾಡುವರೆಂದು ನಂಬಿಕೆಯುಂಟು.

ಓರ್ವ ಪ್ರತ್ಯಕ್ಷದರ್ಶಿ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ಲಾರ್ಕ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನು ಪಯೋಗಿಸಿ ಕ್ಲಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿ ಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧-೦-೦ ರೂ. ಕೊಡಬೇಕಾಗುವುದು ಕೆಂಪು, ಹಸುರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರದ ಬಣ್ಣದಿಂದ ಬಿಳಿ ಗ್ಲೇಜು ಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೧-೧೨-೦; ಅನಂತರ ಪ್ರತಿ ೧೦೦ ಕ್ಕೂ ೦-೧೦-೦; ಹಳದೀ ಗ್ಲೇಜ್ ಕಾಗದದಮೇಲೆ ಮೊದಲನೇ ೧೦೦ ಕ್ಕೆ ೨-೨-೦; ಅನಂತರ ಪ್ರತಿ ೧೦೦ ಕ್ಕೂ ೦-೧೪-೦; ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦-೬-೦ ಆಣೆಯಂತೆ ಕಳುಹಬೇಕು. ಕ್ಲಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಕ್ಲಾರ್ಕ್‌ಪ್ರೆಸ್, ಮೈಸೂರ್.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು

74

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕದನಗಳ ಪಟಗಳೂ ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತವೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ ೨ ಆಣೆ; ವಿ. ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ:—ದಿ ಜನರಲ್ ಏಜನ್ಸಿ, ಮೈಸೂರು.

ಓರಿಯಂಟಲ್ ಫಾರ್ಮಸಿ ಮೈಸೂರು.

5

ಪ್ರಸಿದ್ಧಿ ಗುಣಕೊಂಡ ಔಷಧಗಳು.

ಜ್ವರದಮಾತ್ರೆ—ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ. ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಯುಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮಂದಷವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ರೂ.

ಗೋರೋಜನದಮಾತ್ರೆ—ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೊಡ್ಲೆ ತಪ್ಪಿ ಜೀರ್ಣಶಕ್ತಿ ಕೊಡುತ್ತೆ. ಪ್ರಯಾಣೀಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾದ ನೋವು ಉಳುಕು ಊದು ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ ೫ ಡಬ್ಬಿಗೆ ೧ ರೂ. ಕೊಡ್ಲೆ ನಮ್ಮ ಕ್ಯಾಟಲಾಗಿಗೆ ಬರೆಯಿರಿ ಮುಫತ್ತಾ ಕಳುಹಿಸುತ್ತೇವೆ.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

10

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ವಾಪಸ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪುದ್ರೇಕವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೆಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳುಸಹಿತ ಆದ ಸಮಾರಂಭ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೊ (ರಾಮಾಡಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧|| ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವಿರಶೈವ ಸತ್ಪುರುಷಮಾಲಾ, ಹಾಳಕೇರಿ ಅನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಶಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೊ ಸಿಕ್ಕುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.



ಹೊಸಫ್ಯಾಷನ್—ಸಭ್ಯಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವ ಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಈಪ್ರಕಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ||, |||=, ೧, ೧|, ಪ್ರಕಾರ, ಮತ್ತೂ ಬೆಳ್ಳಿಯದು ರು ೧|| ...ತ್ ಗೋಲ್ಡ ಭಂಗಾರದ್ದು ದುರ್ಬಿಣದ ಗ್ಲಾಸದೂ ...ಸು ೨||, ೨||| ರೂ.

ಪರಊರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣಿ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ.

ನಮ್ಮವಿಳಾಸ— ಗಂಗಪ್ಪಾ ಜೀರಿಗೆ,
44 ಆರ್ಟಿಸ್ಟ ಸೊಲ್ಲಾಪುರ.

ಊದಬತ್ತಿಗಳು.

43

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦; ೫ ೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪರ್ಟಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್‌ಸನ್ಸ್
ಸುಗಂಧಕಾರಿ, ಮೈಸೂರು.

ಬಿಸಿಲುಕಾಲಕ್ಕೆ 21

ಬಿಲ್ಲಿಗೋಬೀಕಾ

ಅಮೃತಾಮಲಕತೈಲ:—ವಿಧವಿಧವಾದ ತಲೆನೋವು, ಶರೀರವು ಬೆಂಕಿಯಂತಿರುವುದು, ತಲೆತಿರಗು, ಕಣ್ಣುರಿ, ಕಣ್ಣು ಕೆಂಪು, ಕಣ್ಣು ಮಂಜು, ಕಣ್ಣಿನಲ್ಲಿ ನೀರು ಸುರಿಯುವುದು, ರಾತ್ರಿ ನಿದ್ರೆಬಾರದಿರುವುದು ಇವುಗಳನ್ನು ೧-೨ ಅಭ್ಯಂಗನದಿಂದಲೇ ಗುಣಮಾಡಿ ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ. ಬಿಸಿಲುಕಾಲಕ್ಕೆ ಇದು ಅಮೃತವೇಸರಿ. ಎಂಟು ಅಭ್ಯಂಗನಕ್ಕೆ ಆಗುವ ತೈಲ ೦-೮-೦. ೧ ಡಜನ್ ೫-೦-೦.

ಆಮೋದಿನಿ:—ಅಮೋಘವಾದ ಸುವಾಸನೆಯಿಂದ ಕೂಡಿದ ಈ ಮಾತ್ರೆಗಳು ತಾಂಬೂಲವನ್ನು ರಂಜಿಸಿ ಬಾಯಾರಿಕೆಯನ್ನು ತಕ್ಷಣ ನಿಲ್ಲಿಸಿ ಆಯಾಸವನ್ನು ಪರಿಹರಿಸಿ ಕಂಠನಾಳವನ್ನು ಸರಿಪಡಿಸಿ ಕೆಮ್ಮು, ದಮ್ಮು, ಉಬ್ಬಸ, ಮಲಬಂಧಗಳನ್ನು ಗುಣಮಾಡಿ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠವಾದುದು. ಸಂಗೀತಗಾರರಿಗೂ, ವಿದ್ಯಾರ್ಥಿಗಳಿಗೂ, ಪ್ರಯಾಣೀಕರಿಗೂ ಅಮೂಲ್ಯವಾದುದು. ೧೫೦ ಮಾತ್ರೆ ೦—೪—೦. ೫ ಕ್ಕೆ ಒಂದು ಹೆಚ್ಚು.

ಖಂಡಾಮಲಕರಸಾಯನ:—ತಲೆತಿರಗು, ಕಣ್ಣು ಕಗ್ಗತ್ತಲೆ, ಹಸಿವೇ ಇಲ್ಲದಿರುವುದು, ಆಹಾರದಲ್ಲಿ ಅರುಚಿ, ವಾಕರಿಕೆ, ವಾಂತಿ, ಹುಳಿ, ಖಾರ, ಅಥವಾ ಶಿಹಿಯಾದ ತೇಗು, ಹೊಟ್ಟೆಯುಬ್ಬರ, ಹೊಟ್ಟೆನೋವು, ಕಣ್ಣು ಅಥವಾ ಮೈ ಹಳದೀಬಣ್ಣ, ನಿಶ್ಶಕ್ತಿ, ಹಳೇಜ್ವರ, ಎದೆಬಡಿಯುವಿಕೆ, ಪಾಂಡು, ಕಾಮಾಲೆ, ಮೂರ್ಛೆ ಇವುಗಳಲ್ಲೈಕಿ ಯಾವುದಿದ್ದರೂ ಖಾತರಿ ಗುಣವಾಗಿ ದಿನಕ್ಕೊಂದುವೇಳೆ ಸಳೀಸಾಗಿ ಕಾಲಪ್ರವರ್ತಿಯಾಗುತ್ತದೆ. ೧೫ ದಿನಕ್ಕೆ ಆಗುವ ಔಷಧ, ಬೆಲೆ ೦-೧೨-೦. ೧ ಡಜನ್ ಡಬ್ಬಿಗಳಿಗೆ ೭-೮-೦.

ಪ್ರತಿಔಷಧಕ್ಕೂ ಟಪಾಲ್ ಮತ್ತು ಪ್ಯಾಕಿಂಗ್ ಛಾರ್ಜ ಪ್ರತ್ಯೇಕ.

ವಿಳಾಸ:—ಬಿ. ವಿ. ಪಂಡಿತ್, ಸದ್ವೈದ್ಯಶಾಲಾ,
ನಂಜನಗೂಡು, ಮೈಸೂರು ಡಿ||

೧೯೧೫ನೆಯ ಇಸವಿ ಮಾರ್ಚಿ ತಾ|| ೭ ರಿಂದ ೧೯೧೫ನೆಯ ಮಾರ್ಚಿ ತಾ|| ೧೩ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೭ ನೆಯ ಆನಂದನಾಮ ಸಂ|| ದ ಫಾಲ್ಗುಣ ಬ|| ಷಷ್ಠಿಯಿಂದ ಫಾಲ್ಗುಣ ಬ|| ತ್ರಯೋದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕು ತೇ
7	[1] ಭಾನು	ಷಷ್ಠಿ	14-44	ವಿಶಾಖ	7-6	24
8	[2] ಸೋ	ಸಪ್ತ	9-41	ಅನೂ	3-9	2
9	[3] ಮಂಗ	ಅಷ್ಟ	3-0	ಉಪರಿ	54-26	2
10	ಬುಧ	ದಶ	52-40	ಪೂಷಾ	51-49	2
11	[4] ಗುರು	ಏಕಾ	48-43	ಪ್ತ್ರಷಾ	50-1	2
12	[5] ಶುಕ್ರ	ದ್ವಾ	46-0	ಶ್ರವಣ	48-41	2
13	[6] ಶನಿ	ತ್ರ	43-48	ಧನಿಷ್ಠ	48-22	3

(1) ಸಪ್ತಮಿತಿಥಿಃ (2) ತಿಸ್ರೋಷ್ಟಕಾಃ. (3 ಅವಮಃ. (4) ಸರ್ವತ್ರೈಕಾದಶೀ. (5) ಜೋಯರ್ತಿ ವರ್ಧ್ಯಯನಂ. (6) ಪ್ರದೋಷಃ, ಮಾಸಶಿವರಾತ್ರಿಃ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಪಾಳ್ಯದವಂಕಟಾಚಲಪಂಡಿತರಸಿದ್ಧೌಷಧಗಳು.

40

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಣೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಸುತುಶೂಲೆ, ಮಕ್ಕಳ ಎಳವು, ಜ್ವರ, ನ ಚ್ಚು ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಪೊಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವು ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧—೦—೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ERGISTERED NO. M. 124.

REGISTERED NO. M. 124.

ಮೈಸೂರ್ ಸ್ಟಾರ್

ಪ್ರತಿಭಾನುವಾರಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸಿಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೧೪—೦

ಸಂಪುಟ ೨೮) ಮೈಸೂರ್ ಸ್ಟಾರ್ ಸರ್ ೧೯೧೫ ನೆಯ ಇಸವಿ ಮಾರ್ಚಿ ತಾರೀಖು ೧೪ ನೆಯ ಭಾನುವಾರ. (ಸಂಚಿಕೆ ೧೧

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

6

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

೧. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.
೨. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹೋಪಕಾರವಾಗಿರುವುದು.
೩. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ ಯಾವರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.
೪. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು
೫. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.
೬. ಬೇಸಿಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.
೭. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಳೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

೪೫ ಮಾತ್ರೆಗಳ	ಪೊಟ್ಟಣ	೧ಕ್ಕೆ	೨	ಆಣೆ	೮೦ ಮಾತ್ರೆಗಳ	ಟಿನ್	೧ಕ್ಕೆ	೪	ಆಣೆ.
೯೫	,,	,,	೪	,,	೧೦೦	,, ಶೀಶೆ	,,	೪||	,,
೨೦೦	,,	,,	೭	,,	೫೫೦	,, ಮರದಪೆಟ್ಟಿಗೆ	,,	೧	ರೂ.
೨೦೦	,, ಟಿನ್	,,	೯	,,	೧೨೦೦	,,	,,	೨	,,

೧ ರೂ.ಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಎಲ್ಲಾ ಕಡೆಯೂ ಪ್ರಸಿದ್ಧ ವರ್ತಕರಲ್ಲಿ ವಿಕ್ರಯಿಸಲ್ಪಡುತ್ತದೆ.

ಮೈಸೂರುಸೀಮೆಯ ಏಜಂಟರು:-ಎಂ. ರಾಮಸಂಜೀವ ಸೆಟ್ಟಿ,
ಚನ್ನಪಟ್ಟಣ.

ಸೋಲ್‌ಏಜಂಟರು:-ಸೆಶಿಂತಾನ್‌ಡಿಪೋ,
ಪ್ರಿನ್ಸೆಸ್‌ಸ್ಟ್ರೀಟ್ ಬೊಂಬಾಯಿ ನಂ ೨.

ಮದ್ರಾಸ್ ಏಜಂಟ್:—ಬಿ ಸಿ. ಷಾ ಅಂಡ್‌ಕೊ,
೧೨೩ ಜೇನಾಬಜಾರ್ ರೋಡ್, ಮದ್ರಾಸ್.

S.U.N.& CO
BENARES CITY.
KASHI
VISHWESHWAR.

24

ದೊಡ್ಡ ಕಂಪೆನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಚಾಗಟಿ, ರುದ್ರಾಕ್ಷಿ ಮುಂತಾದ ಅನುಪಮ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ-ಎಸ್. ಯೂ ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

೧೯೧೫ ನೆಯ ಶ್ರೀ ಸೀತಾರಾಘವ ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.



ಬೆಲೆಯನ್ನು ತಗ್ಗಿಸಿದೆ. ಕೊಂಚಪ್ರತಿಗಳು ಮಾತ್ರವಿವೆ. ಬೇಗ ಬರೆದು ತರಿಸಿಕೊಳ್ಳಿರಿ. ಉತ್ತಮವಾದ ಕಾಗದ ಮುದ್ದಾದಮುದ್ರಣ. ಮತ್ತಾವಡೈರಿಗಳಲ್ಲೂ ಇಲ್ಲದ ಅನೇಕ ಉಪಯುಕ್ತವಾದ ಸಂಗತಿಗಳು ಈ ಡೈರಿಯಲ್ಲಿ ಇರುತ್ತವೆ. ಐದು (೫) ಡೈರಿಗಳನ್ನು ಒಂದೇವಿಳಾಸಕ್ಕೆ ತರಿಸಿಕೊಂಡರೆ ೧ ಡೈರಿ ಇನಾಂ.

೧ ನಂ.—ಸಣ್ಣಸೈಜು ಸಾದಾ ೦—೨—೬
೨ ನಂ.—ಪೆನ್ಸಲ್‌ಮುಚ್ಚುಳವುಳ್ಳದು ೦—೪—೦

ಪೋಸ್ಟೇಜು ಬೇರೆ.

ವಿಳಾಸ.—ಶ್ರೀ ಸೀತಾರಾಘವ ವೈದ್ಯಶಾಲಾ,
23 ಮೈಸೂರು

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತೆ	೦—೫—೦
ಸಟೀಕ ನಂದೀವ್ರತ	೦—೪—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು.

175

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೫೫ ಪುಟಗಳ ಉದ್ಗ್ರಂಥ ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ.— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.— ಬೆಲೆ ೧-೮-೦ ದ್ವಿತೀಯಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಕ್ರಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟಿಕ ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ.- ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿ ಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗ ಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತವಾಗಿರುವ ಘೋರಯುದ್ಧದ ದೆಸೆಯಿಂದ ಈ ಸಾಮಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದ ಮತ್ತೂ ಬೆಲಜಿಯಮ್ಮಿನಿಂದ ಸುತರಾಂ ಬರುವುದು ಕಟ್ಟಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಅವಶ್ಯಕವಾದ ಕಾಗದ ಮೊದಲಾದ ಸಾಮಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವಧಿಯು ಪೂರೈಸಿರುವವರಿಗೆಲ್ಲಾ ಪತ್ರಿಕೆಯನ್ನು ವಿ. ಪಿ ದ್ವಾರ ಕಳುಹಿಸುತ್ತಿರುವೆವು. ಆದರೆ ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿರುಗಿಸಿ ಕಾಗದದ ಬೆಲೆಯೇರಿಕೆಯಿಂದ ನಷ್ಟಪಡುವುದರ ಜತೆಗೆ ಪೋಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದು ತಿಳುಹಲು ಖೇದವಾಗುತ್ತದೆ. ಇತಃಪರಃ ದಯಾರ್ದ್ರಹೃದಯರಾದ ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ. ಪಿ. ಹಣವನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನವಾಗಿ ನಡೆದುಕೊಂಡು ಹೋಗುವಂತೆ ಮಾಡುವರೆಂದು ಸಂಪೂರ್ಣವಾಗಿ ನಂಬಿರುತ್ತೇವೆ.

ಮ್ಯಾನೇಜರ್.

ರಣರಂಗದ ವಿಶೇಷಗಳು.

ಈಗಿನ ಮಹಾಯುದ್ಧದಲ್ಲಿ ಪ್ರತಿಕ್ಷಣವೂ ಹೃದಯಭೇದಕವೂ ವೀರರಸೋತ್ಪಾದಕವೂ ಅತ್ಯಾಶ್ಚರ್ಯಜನಕವೂ ಆದ ಅನಂತಸಂಗತಿಗಳು ಜರುಗುತ್ತಲೇ ಇರುತ್ತವೆ. ಅವುಗಳನ್ನೆಲ್ಲಾ ಗಮನಿಸುವುದೂ ಸಂಗ್ರಹಿಸಿ ಬರೆಯುವುದೂ ಸಹ ಅಸಾಧ್ಯ. ಆದರೂ ಕೆಲ ಕೆಲರಿಗೆ ಸಂಧಿಯು ದೊರೆತಾಗ ಅವರು ಕಂಡ ವಿಷಯಗಳನ್ನು ಪತ್ರಿಕೆಗಳಿಗೆ ಬರೆದು ಕಳುಹಿಸುತ್ತಿರುವುದುಂಟು. ಅಂಥವುಗಳಲ್ಲಿ ಒಂದೆರಡನ್ನು ನಮ್ಮ ವಾಚಕರ ಸಲುವಾಗಿ ಇಲ್ಲಿ ಬರೆದು ರಣಾಂಗಣದ ವೈಚಿತ್ರ್ಯದ ದಿಗ್ದರ್ಶನವನ್ನು ಇಲ್ಲಿ ಮಾಡಿರುತ್ತೇವೆ. ಈ ಕೆಳಗಣ ಸಂಗತಿಯನ್ನು ರಣಾಂಗಣದಲ್ಲಿದ್ದು ಪ್ರತ್ಯಕ್ಷವಾಗಿ ನೋಡಿದವನೊಬ್ಬನು ಬರೆದಿರುತ್ತಾನೆ.

" ವಾರ್‌ಸೆಸ್ಟರ್ ಷಯರಿನಿಂದ ಸೈನಿಕನಾಗಿ ಬಂದಿದ್ದ ಯುವಕನೊಬ್ಬನು ನಮ್ಮ ಸೈನ್ಯದಲ್ಲಿದ್ದವನು. ಇವನಿಗೆ ಮದುವೆಯಾಗಿ ಒಂದು ವರ್ಷವಾಗುತ್ತಿದ್ದಿತು. ಈತನು ಬಂದು ಸೈನ್ಯಕ್ಕೆ ಸೇರಿಕೊಳ್ಳುವಾಗ್ಗೆ ಇವನ ಹೆಂಡತಿಗೆ ಹೆರಿಗೆಯ ದಿನವಾಗಿದ್ದಿತು. ಇಂಥ ಸ್ಥಿತಿಯಲ್ಲಿ ಇವನು ಸೈನ್ಯಕ್ಕೆ ಸೇರಿಕೊಳ್ಳುವಾಗ್ಗೆ ಇವನ ಮನೋಭಾವವು ಹೇಗಿರಬಹುದು ಎಂಬುದನ್ನು ಊಹಿಸಿಕೊಳ್ಳಬಹುದು. ಇವನು ರಣಾಂಗಣದಲ್ಲಿದ್ದಾಗ ಅಂಚೆಯವನು ಬಂದಾಗಲೆಲ್ಲಾ ತನ್ನ ಹೆಂಡತಿಯ ಕಡೆಯ ಕಾಗದವನ್ನೇ ಆತುರದಿಂದ ಕೇಳುತ್ತಿದ್ದನು. ಬಂದಿಲ್ಲವೆಂದು ತಿಳಿದಾಗ ಮುಖವನ್ನು ಸೊಪ್ಪಗೆ ಮಾಡಿಕೊಂಡು ಹೊರಟುಹೋಗುತ್ತಿದ್ದನು. ಕಡೆಗೆ ಒಂದಾನೊಂದು ಭಾನುವಾರದ ದಿವಸ ಒಂದು ಕಾಗದವು ಬಂದಿತು. ಇವನ ಹೆಂಡತಿಯು ಗಂಡುಮಗುವನ್ನು ಹೆತ್ತು, ಮಗು ಬಾಣಂತಿಯರು ಕ್ಷೇಮವಾಗಿರುವರೆಂಬ ಸಂಗತಿಯು ಅದರಲ್ಲಿ ಬರೆಯಲ್ಪಟ್ಟಿದ್ದಿತು. ಆದಿನ ಅವನು ಪಟ್ಟ ಸಂತೋಷಕ್ಕೆ ಪಾರವಿಲ್ಲ. ಅವನ ಆನಂದವಿಭ್ರಮವನ್ನು ನೋಡಿದವರಿಗೆ ಗೊತ್ತೇ ಹೊರತು ಬರೆದು ತಿಳಿಯಿಸುವುದು ಸಾಧ್ಯವಲ್ಲ. ಅದನ್ನು ನೋಡಿ ನಾವೆಲ್ಲರೂ ಹೊಟ್ಟೆ ಹುಣ್ಣಾಗುವಷ್ಟು ನಕ್ಕೆವು. ಆ ಹುಟ್ಟಿದ ಮಗುವಿನ ಶುಭವನ್ನು ಕೋರಿ ನಾವೆಲ್ಲರೂ ಟೀಪಾನವನ್ನು ಮಾಡಿದೆವು. ಆ ದಿನವೆಲ್ಲಾ ಅವನು ಬಹು ಸಂತೋಷದಿಂದ ಕಾಲವನ್ನು ಕಳೆದನು. ಮತ್ತೊಂದು ದಿನ ನನ್ನೊಡನೆ ಮಾತನಾಡುವಾಗ್ಗೆ—"ನಾನು ಬಹುಶಃ ಕ್ಷೇಮವಾಗಿ ಮನೆಗೆ ಸೇರಿ ನನ್ನ ಮಗುವಿನ ಮುಖವನ್ನು ನೋಡಬಹುದೆಂದು ನಂಬುತ್ತೇನೆ" ಎಂದು ಎಷ್ಟೋ ಆನಂದದಿಂದ ನುಡಿದನು. ಆದರೆ ತಾನೊಂದನ್ನು ಯೋಚಿಸಿದರೆ ದೈವವೊಂದನ್ನೆಣಿಸಿರುವುದು. ಆ ಮಾತನ್ನು ಆಡಿ ಮುಗಿಸಿದ ೧ ಗಂಟೆಯೊಳಗಾಗಿ ರಣಾಂಗಣದಲ್ಲಿದ್ದ ಆತನಿಗೆ ಶತ್ರುಗಳ ಕಡೆಯ ಗುಂಡು ಬಂದ ಬಡಿದಿತು. ಒಡನೆಯೇ ಅವನು ನೆಲಕ್ಕುರುಳಿ ಸತ್ತನು!

" ಏಟುತಿಂದು ಚಿಕಿತ್ಸೆಗೊಳ್ಳುವವರಿಗಾಗಿ ಏರ್ಪಟ್ಟಿರುವ ಒಂದು ಮನೆಯಲ್ಲಿ ಒಂದು ದಿನ ನಾನಿರುವಾಗ್ಗೆ ಒಬ್ಬ ಸೈನಿಕನನ್ನು ಬಟ್ಟೆಯ ತೊಟ್ಟಿಲಲ್ಲಿ ಮಲಗಿಸಿ ಹೊತ್ತುಕೊಂಡು ಬಂದರು. ಅವನ ತಲೆಗೆ ಬಲವಾದ ಏಟುಬಿದ್ದಿದ್ದುದರಿಂದ ಬಹಳ ನರಳುತ್ತಿದ್ದನು. ಆಗ ಸರಿರಾತ್ರಿಯಾಗಿದ್ದಿತು. ವೈದ್ಯರು ಮಾಡಬೇಕಾದ ಚಿಕಿತ್ಸೆಯನ್ನೆಲ್ಲಾ ಮಾಡಿದರು. ಆದರೂ ಅವನು ಪಡುತ್ತಿದ್ದ ಹಿಂಸೆಯು ಅಪಾರವಾಗಿದ್ದಿತು. ನಾನು ಅವನ ಬಳಿಗೆ ಹೋಗಿ "ನಿನಗೆ ಬಹಳ ಬಾಧೆಯಾಗಿರುವುದೆ?" ಎಂದು ಕೇಳಿದೆನು. ಅದಕ್ಕಾತನು— ನನಗೆ ಮಹತ್ತಾದಬಾಧೆಯೂ ಇಲ್ಲ; ನಾನು ನಮ್ಮ ಸ್ನೇಹಿತರ ಹತ್ತಿರ ಇರುವುದರಿಂದ ಎಷ್ಟೋ ಸುಖಕರವಾಗಿದೆ; ಆಂಗ್ಲೇಯರ ಹತ್ತಿರ ಇರುವಾಗ್ಗೆ ನನಗೆ ಯಾವ ಬಾಧೆ ಯಿರುವುದು? ಎಂದು ಧೈರ್ಯವಾಗಿ ನುಡಿದನು. ಈ ಮಾತನ್ನು ಆಡುವಾಗ್ಗೆ ಅವನ ಮುಖದಲ್ಲೂ ನೇತ್ರಗಳಲ್ಲೂ ಕೃತಜ್ಞತೆಯು ತುಂಬಿ ತುಳುಕುತ್ತಿದ್ದಿತು. ಇವನು ಬೆಳಗಾಗುವುದರೊಳಗೆ ಬದುಕುವನೋ ಇಲ್ಲವೋ ಎಂದು ನನಗೆ ಸಂಶಯವಾದುದರಿಂದ ಆ ರಾತ್ರಿಯನ್ನು ನಾನು ಅವನ ಬಳಿಯಲ್ಲಿಯೇ ಕಳೆದೆನು. ನಾನು ಊಹಿಸಿದಂತೆ ಬೆಳಗಾಗುವುದರೊಳಗೇ ಅವನು ಸತ್ತನು. ಇನ್ನೇನು ಪ್ರಾಣ ಹೋಗುತ್ತದೆ ಎನ್ನುವಾಗ ನನ್ನನ್ನು ಕೂಗಿ ಆತನು ಹೇಳಿದುದೇನೆಂದರೆ— ಅಯ್ಯಾ! ನಾನು ಇನ್ನು ಮನೆಯನ್ನು ಸೇರುವೆನೆಂಬ ಮಾತು ಸುಳ್ಳು; ತಾಯಿತಂದೆಗಳನ್ನೂ ಹೆಂಡತಿಯನ್ನೂ ನೋಡುವ ಭಾಗ್ಯವು ನನಗಿಲ್ಲ. ಜಯವನ್ನು ಪಡೆವುದಕ್ಕಾಗಿ ನಮ್ಮಲ್ಲಿ ಅನೇಕರು ಸಾಯದೆ ತಪ್ಪದು. ಬಹುಮಂದಿ ಪ್ರಾಣವನ್ನರ್ಪಿಸಬೇಕಾಗಿದೆ. ನಾನು ಚಿಕ್ಕವನಾದಾಗ್ಯೂ ನನ್ನ ಜನ್ಮಭೂಮಿಯಾದ ಫ್ರಾನ್ಸಿನ ನಿಮಿತ್ತವಾಗಿ ನಾನು ಪ್ರಾಣವನ್ನು ಅರ್ಪಿಸಿದೆನಲ್ಲಾ! ಎಂಬ ಸಂತೋಷವು ನನ್ನಲ್ಲಿ ಉಕ್ಕೇರುತ್ತಿದೆ. ಇದಕ್ಕಿಂತಲೂ ಉತ್ಕೃಷ್ಟವಾದ ಕಾರ್ಯವಿನ್ನೇನನ್ನು ನಾನು ಮಾಡಬಲ್ಲೆನು? "ಫ್ರಾನ್ಸು! ಫ್ರಾನ್ಸು" ಎಂದು ಕನವರಿಸುತ್ತ ಹಾಗೆಯೇ ಕಣ್ಣುಮುಚ್ಚಿದನು. ಮರಳಿ ತೆರೆಯಲಿಲ್ಲ!! ಆಹಾ! ಇದೆಂತಹ ಪವಿತ್ರದೇಶಭಕ್ತಿ! ಇದನ್ನು ಕಣ್ಣಾರ ನೋಡಿದ ನನ್ನ ಸಂತೋಷಕ್ಕೆ ಪಾರವುಂಟೆ? ಈ ಫ್ರಾನ್ಸಿನಲ್ಲಿರುವ ವೈದ್ಯಾಲಯಗಳೆಲ್ಲವೂ ಇಂತಹ ದೇಶಭಕ್ತರೂ ವೀರಾಗ್ರಣಿಗಳೂ ಆದ ಪವಿತ್ರಾತ್ಮರು ಬಿಡುತ್ತಿರುವ ಉತ್ಕೃಷ್ಟವಾದ ನಿಶ್ವಾಸಗಳಿಂದಲೇ ಪರಿಪೂರ್ಣವಾಗಿವೆ.

ಆಂಗ್ಲಮುಖ್ಯಮಂತ್ರಿಯವರ ಭಾಷಣ.

ಈಗಿನ ಪಾರ್ಲಿಮೆಂಟಿನಲ್ಲಿ ಯುದ್ಧವಿಷಯವೇ ಮುಖ್ಯವಾಗಿ ಗಮನಿಸಿ ಚರ್ಚಿಸಲ್ಪಡತಕ್ಕ ಸಂಗತಿಯಾಗಿದೆ. ಮುಖ್ಯಮಂತ್ರಿಯವರಾದ ಅಸ್ಕ್ವಿತ್‌ರವರು ಕಾಮನ್ಸ್‌ಸಭೆಯಲ್ಲಿ ಯುದ್ಧದ ವೆಚ್ಚದ ಸಂಬಂಧವಾಗಿ ಮಾತನಾಡುವಾಗ್ಗೆ ಹೀಗೆ ಹೇಳಿದರು—"ಯುದ್ಧದ ವೆಚ್ಚಕ್ಕಾಗಿ ಆಂಗ್ಲೇಯರು ಇದುವರೆಗೆ ಸಾಲವನ್ನು ಮಾಡಿರುವುದರ ಹೊರತು ಇನ್ನೂ ೩ ಕೋಟಿ ೭ ಲಕ್ಷ ಪೌನುಗಳನ್ನೂ ಮತ್ತೆ ೫೫ ಕೋಟಿ ಪೌನುಗಳನ್ನೂ ಸಾಲವಾಗಿ ತೆಗೆದುಕೊಳ್ಳಬೇಕಾಗಿದೆ. ೧೯೧೪-೧೫ ನೆ ವರ್ಷದಲ್ಲಿ ಒಟ್ಟಿಗೆ ನಾವು ೩೩ ಕೋಟಿಯೂ ೭೦ ಲಕ್ಷ ಪೌನುಗಳ ಸಾಲವನ್ನು ತೆಗೆಯುವವರಾಗಿದ್ದೇವೆ. ಯುದ್ಧವು ಇಲ್ಲದಿದ್ದಾಗಲೂ ಯುದ್ಧವು ಜರುಗುತ್ತಿರುವಾಗಲೂ ನಮಗೆ ಆಗುವ ವೆಚ್ಚಗಳ ವ್ಯತ್ಯಾಸವು ಇದರಿಂದ ತಿಳಿದುಬರುತ್ತದೆ. ಆ ವೆಚ್ಚದ ವಿವರವನ್ನೆಲ್ಲಾ ನಾನು ಈಗ ತಿಳಿಸುವುದು ಅವಶ್ಯಕವಿಲ್ಲ. ಈ ಸಾಲದ ಹಣದಲ್ಲಿ ಭೂಜಲಸೈನ್ಯಗಳಿಗಾಗಿ ೧೭೫ ಕೋಟಿ ರೂ. ಗಳು ವ್ಯಯವಾಗಿವೆ. ನಮ್ಮ ಅಧಿನಿವೇಶನಗಳಿಗೆ ಯುದ್ಧದ ವೆಚ್ಚಕ್ಕಾಗಿ ಮುಂದಾಗಿ ೧ ಕೋಟಿಯೂ ೪೦ಲಕ್ಷ ಪೌನುಗಳು ಕೊಡಲ್ಪಟ್ಟುವು. ಮತ್ತೂ ಬೆಲ್ಜಿಯಮ್ಮಿಗೆ ೧ ಕೋಟಿ ಸರ್ವಿಯಾಕ್ಕೆ ೪ ಲಕ್ಷ ಪೌನುಗಳೂ ಸಾಲವಾಗಿ ಕೊಡಲ್ಪಟ್ಟಿವೆ. ಇದಲ್ಲದೆ ಮಿತ್ರಮಂಡಲಿಯವರಿಗೋಸುಗ ಇನ್ನು ಕೆಲ ಹಣವನ್ನು ಕೊಡಬೇಕೆಂಬ ಯೋಚನೆ ನಡೆದಿದೆ. ೧೯೧೪-೧೫ ನೆ ವರ್ಷದಲ್ಲಿ ನಡೆಯುವ ಯುದ್ಧದಲ್ಲಿ ದಿನಕ್ಕೆ ೧೦ ಲಕ್ಷ ಪೌನಿನಂತೆ ವೆಚ್ಚವು ಹಿಡಿಯುವುದು. ಒಂದೇಸಾರಿ ೫೫ ಕೋಟಿ ರೂ. ಗಳನ್ನು ಸಾಲವಾಗಿ ತೆಗೆಯಬೇಕೆಂದು ಇದುವರೆಗೆ ಯಾವಾಗಲೂ ಪಾರ್ಲಿಮೆಂಟಿನವರನ್ನು ಕೇಳಿದುದಿಲ್ಲ. ಈ ಸಾಲದ ಹಣವೂ ಕೂಡ ಬರುವ ಜುಲೈತಿಂಗಳ ೨ ನೆ ವಾರದವರೆಗೆ ಸರಿಹೋಗುವುದೆಂದು ಯುದ್ಧಕಾರ್ಯಾಲಯದವರು ಲೆಕ್ಕ ಹಾಕಿದ್ದಾರೆ. ಬರುವ ಏಪ್ರಿಲ್‌ತಿಂಗಳಿಂದ ದಿನ ೧ ಕ್ಕೆ ೧೫ ಲಕ್ಷ ಪೌನುಗಳು (೨ ಕೋಟಿ ರೂ. ಗಳು) ವೆಚ್ಚವಾಗುವುವೆಂದು ಯುದ್ಧಶಾಖೆಯವರು ಲೆಕ್ಕ ಹಾಕಿದ್ದಾರೆ. ನೌಕಾದಳಕ್ಕಾಗಿ ದಿನ ೧ ಕ್ಕೆ ೪ ಲಕ್ಷ ಪೌನು (೬೦ ಲಕ್ಷ ರೂ. ಗಳು) ವೆಚ್ಚವಾಗುತ್ತಿವೆ. ಭೂಜಲಸೈನ್ಯಗಳೆರಡಕ್ಕೂ ಸೇರಿ ದಿನ ೧ ಕ್ಕೆ ೨೦ ಲಕ್ಷ ಪೌನುಗಳು (೩ ಕೋಟಿ ರೂ.) ವೆಚ್ಚವಾಗುತ್ತಿವೆ. ಇದುವರೆಗೆ ಯುದ್ಧವಾರಂಭಗೊಂಡು ೭ ತಿಂಗಳು ತುಂಬಿದವು. ಇದುವರೆಗೆ ನಮಗೆ ಆಗಿರುವ ಅನುಭವದಿಂದ ಕಡೆಗೆ ಮಿತ್ರಮಂಡಲಿಯವರೇ ಜಯಶೀಲರಾಗುವರೆಂದು ನಿಶ್ಚಯಿಸಿಕೊಂಡಿದ್ದಾರೆ. ಫ್ರಾನ್ಸಿನಲ್ಲೂ ಫ್ಲಾಂಡರ್ಸಿನಲ್ಲೂ ಡಾರ್ಡಿನಲ್ಸಿನಲ್ಲೂ ಹೋರಾಡುತ್ತಿರುವ ನಮ್ಮ ಸೇನೆಯ ಸ್ಥಿತಿಯು ಸಮರ್ಪಕವಾಗಿದೆ. ಆ ಸೈನ್ಯಗಳಿಗೆ ಬೇಕಾದ ಸಹಾಯವನ್ನೆಲ್ಲಾ ಮಾಡುತ್ತಿದ್ದೇವೆ. ಡಾರ್ಡಿನಲ್ಸಿಗೆ ನಮ್ಮ ಯುದ್ಧನಾವೆಗಳು ಹೋಗಿರುವುದರಿಂದ ನಮ್ಮ ನೌಕಾದಳದಲ್ಲಿ ಬಲಹೀನತೆಯೇನು ಉಂಟಾಗಿಲ್ಲ. ಡಾರ್ಡಿನಲ್ಸಿನಲ್ಲಿ ಹೂಡಿರುವ ಯುದ್ಧವನ್ನು ರಾಜಕೀಯವಾಗಿಯೂ ಆರ್ಥಿಕವಾಗಿಯೂ ಸಾಂಗ್ರಾಮಿಕವಾಗಿಯೂ ಹೀಗೆ ನಾನಾ ಮುಖವಾಗಿ ಆಲೋಚಿಸಿ ಏರ್ಪಡಿಸಿದ್ದೇವೆ. ಅಲ್ಲಿನ ಸ್ಥಿತಿಯನ್ನು ನೋಡಲಾಗಿ ಮಿತ್ರಮಂಡಲಿಯವರೆಲ್ಲರೂ ಪರಸ್ಪರ ಸಹಾಯವಾಗಿ ಚೆನ್ನಾಗಿ ನಡೆಯಿಸುತ್ತಿದ್ದಾರೆಂದು ಗೊತ್ತಾಗುವುದು. ಫ್ರಾನ್ಸಿನವರು ಅಲ್ಲಿಗೆ ಸಮರ್ಥವಾದ ತಮ್ಮ ನೌಕಾಸೇನೆಯನ್ನು ಕಳುಹಿಸಿ ಕೀರ್ತಿ ಪಡೆದಿದ್ದಾರೆ.

ಜರ್ಮನಿಯವರು ನಮ್ಮ ಸಮುದ್ರಮಾರ್ಗಗಳನ್ನು ಪ್ರತಿಬಂಧಿಸಿರುವ ವಿಷಯವಾಗಿ ನಾನು ಸ್ವಲ್ಪ ಮಾತನಾಡುತ್ತೇನೆ. ಇದರ ವಿಷಯವಾಗಿ ನಾನು ಗುಟ್ಟನ್ನು ಬಿಟ್ಟು ಕೆಲ ಮಾತನ್ನಾಡಬೇಕಾಗಿದೆ. ಯುದ್ಧದಿಂದುಂಟಾಗುವ ಅನರ್ಥಗಳನ್ನು ಸಂಭವಿಸದೆ ಇರುವಂತೆ ಮಾಡುವುದಕ್ಕಾಗಿ ಎಲ್ಲದೇಶದವರೂ ಕೂಡಿ ಏರ್ಪಡಿಸಿಕೊಂಡಿರುವ ನಿಬಂಧನೆಗಳನ್ನು ಜರ್ಮನಿಯವರು ಲಕ್ಷ್ಯಮಾಡದೆ ಹೋಗಿರುವುದು ಆಶ್ಚರ್ಯವೇನೂಅಲ್ಲ. ಇದುವರೆಗೆ ಅವರು ಅನೀತಿಯ ಕ್ರೂರಾಚರಣೆಗಳನ್ನು ಎಷ್ಟೋ ಮಾಡಿರುವರು. ಈಗ ಅವರು ಹಡಗಿನ ಕಳ್ಳತನ ಸುಲಿಗೆಗಳಿಗೂ ಕೂಡ ಆರಂಭಿಸಿರುವರು. ಸರಿಯಾದ ಯುದ್ಧಕ್ಕೆ ಬರಲಾರದೆ ಹೀಗೆ ಜಲಮಾರ್ಗಕ್ಕೆ ಪ್ರತಿಬಂಧಕವನ್ನು ಮಾಡುವುದು ಹೇಡಿತನವು ಮತ್ತೂ ಹಾಸ್ಯಾಸ್ಪದವು. ಜರ್ಮನಿಯವರ ನೌಕಾದಳವು ಏನಾಗಿದೆ? ಯುದ್ಧಾರಂಭವಾದಬಳಿಕ ಅದು ೨ ಆವೃತ್ತಿ ಮಾತ್ರ ಹೊರಕ್ಕೆ ತಲೆಹಾಕಿತು. ಜರ್ಮನಿಯು ನಮ್ಮ ಸಮುದ್ರಮಾರ್ಗವನ್ನು ತಾನು ತಡೆದುಬಿಡುವೆನೆಂದು ಹೇಳಿಕೊಂಡುದೇನೋ ಆಯಿತು. ವಸ್ತುಸ್ಥಿತಿಯಲ್ಲಿ ಅದರ ನೌಕಾದಳವು ಆ ಕೆಲಸವನ್ನೇನೂ ಮಾಡಿದುದಿಲ್ಲ. ಅದಕ್ಕೆ ಹಾಗೆ ಮಾಡುವ ಸಾಮರ್ಥ್ಯವು ಇಲ್ಲ. ಬರಬಹುದಾದ ಆರ್ಥಿಕ ವಿಪತ್ತುಗಳಿಗೆಲ್ಲಾ ಮಿತ್ರಮಂಡಲಿಯವರು ಎದೆಗೊಟ್ಟುಕೊಂಡೇ ಇದ್ದಾರೆ. ಆದರೆ ತಟಸ್ಥದೇಶೀಯರಿಗೆ ಇದರಿಂದ ಉಂಟಾಗಬಹುದಾದ ತೊಂದರೆಗಳಿಗಾಗಿ ಮಿತ್ರಮಂಡಲಿಯವರು ಚಿಂತಿಸುತ್ತಾರೆ. ಆದರೆ ಈ ತೊಂದರೆಗಳನ್ನು ಉಂಟುಮಾಡುವವರು ಮಿತ್ರಮಂಡಲಿಯವರಲ್ಲವೆಂಬುದನ್ನು ಆ ತಟಸ್ಥದೇಶೀಯರು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ನಾವು ತಟಸ್ಥದೇಶೀಯರ ಹಡಗುಗಳನ್ನು ಧ್ವಂಸಮಾಡಬೇಕೆಂದೇ ಆಗಲಿ ಅವುಗಳಲ್ಲಿರುವ ನಾವಿಕರನ್ನು ಕೊಲ್ಲಬೇಕೆಂದೇ ಆಗಲಿ ಆಲೋಚಿಸುವುದಿಲ್ಲ. ನಮ್ಮ ಶತ್ರುದೇಶಗಳಿಗೆ ಸಾಮಾನುಗಳನ್ನು ಸಾಗಿಸಿಕೊಂಡು ಹೋಗುತ್ತಿವೆಯೆಂದಾಗಲಿ ಶತ್ರುದೇಶಗಳಿಂದ ಬರುತ್ತಿವೆಯೆಂದಾಗಲಿ ಅನುಮಾನವು ತೋರಿದಾಗ ಅಂಥ ಹಡಗುಗಳನ್ನು ನಾವು ಹಿಡಿದು ನಮ್ಮ ತೀರಗಳಿಗೆ ಸಾಗಿಸಿಕೊಂಡು ಹೋಗುವುದಕ್ಕೆ ಫ್ರಾನ್ಸ್ ಇಂಗ್ಲೀಷು ಪ್ರಭುತ್ವಗಳವರು ಅಧಿಕಾರವನ್ನು ಹೊಂದಿದ್ದಾರೆ. ಮೇಲೆ ಹೇಳಿದ ರೀತಿಯಲ್ಲಿ ಸಾಗಿಹೋಗುತ್ತಿರುವ ಹಡಗುಗಳನ್ನು ನಮ್ಮ ಸೊತ್ತುಗಳಂತೆ ಭಾವಿಸುವುದಕ್ಕೆ ತಕ್ಕಷ್ಟು ಕಾರಣಗಳಿಲ್ಲದಿದ್ದರೆ ನಾವು ಹಾಗೆ ಮಾಡುವುದಿಲ್ಲ. (ಎಂದರೆ ಶತ್ರುದೇಶಕ್ಕೆ ಸೇರಿದುವು ಎಂದು ದೃಢಪಡದಹೊರತು ನಾವು ಅವುಗಳನ್ನು ವಶಪಡಿಸಿಕೊಳ್ಳುವುದಿಲ್ಲ) ಯುದ್ಧವು ನಿಂತು ಸಂಧಿಯು ಜರುಗುವುದೆಂದು ಕೆಲರು ಆಡಿಕೊಳ್ಳುತ್ತಾರೆ. ಆ ಸಂಧಿಯ ಮಾತು ಈವಾಗಲ್ಲ. ಬೇಗನೆ ಸಂಧಿಯು ಜರುಗುವುದೆಂದು ಆಡಿಕೊಳ್ಳುವವರು ಸದಭಿಪ್ರಾಯದಿಂದ ಹಾಗೆ ಹೇಳುತ್ತಿದ್ದರೂ ಅಂಥ ಸಂಧಿಯು ಜರುಗುವುದೆಂದು ಹೇಳುವುದು ಬರಿಯ ಭ್ರಾಂತಿಯು. ಮಿತ್ರಮಂಡಲಿಯು ಸಂಕಲ್ಪಿಸಿರುವ ಕಾರ್ಯಗಳೆಲ್ಲಾ ಜರುಗದ ಹೊರತು ಸಂಧಿಯ ಮಾತನ್ನೆತ್ತುವುದಕ್ಕೆ ಅವಕಾಶವಿಲ್ಲ. ಸಂಧಿಯ ವಿಷಯವಾಗಿ ಕಳೆದ ನವಂಬರ್ ತಿಂಗಳಲ್ಲಿ ನಾನು ಗಿಲ್ಡ್‌ಹಾಲ್ ಸಭೆಯಲ್ಲಿ ಆಡಿದ ಮಾತುಗಳೇ ಈಗಲೂ ವರ್ತಿಸುವುವು.

ಯುದ್ಧದೊಡನೆ ಯಾವವಿಧವಾದ ಸಂಬಂಧವೂ ಇಲ್ಲದೆ ವ್ಯಾಪಾರವನ್ನು ಮಾಡಿಕೊಳ್ಳುತ್ತಿರುವ ವರ್ತಕರಿಗೂ ಯುದ್ಧದೊಡನೆ ಯಾವಸಂಬಂಧವೂ ಇಲ್ಲದ ನಾವಿಕರಿಗು ಸಹ ಭಯವನ್ನು ಹುಟ್ಟಿಸಿ, ಅದರಿಂದ ಹಡಗುಗಳ ಸಂಚಾರವನ್ನು ನಿಲ್ಲಿಸಿ, ಬ್ರಿಟಿಷ್ ದ್ವೀಪಗಳಲ್ಲಿರುವ ಪ್ರಜೆಗಳಿಗೂ ಉತ್ತರ ಫ್ರಾನ್ಸಿನಲ್ಲಿರುವ ಪ್ರಜೆಗಳಿಗೂ ಯಾವ ವಿಧವಾದ ಸಾಮಾನೂ ಹೋಗಿ ಸೇರದಂತೆ ಮಾಡಬೇಕೆಂದೂ ಆ ದೇಶಗಳಿಂದ ಇತರದೇಶಗಳಿಗೂ ಯಾವ ಸರಕೂ ಹೋಗದಂತೆ ಮಾಡಬೇಕೆಂದೂ ಸಹ ಜರ್ಮನರು ಕಪಟತಂತ್ರವನ್ನು ಮಾಡಿದ್ದಾರೆ. ಜರ್ಮನಿಯವರು ಇಂಥ ಪದ್ಧತಿಯನ್ನವಲಂಬಿಸಿದುದರಿಂದ ಅವರಿಗೆ ವಿರೋಧಿಗಳಾದ ನಾವೂ ಕೂಡ ಅವರಿಗೆ ವ್ಯತಿರಿಕ್ತವಾದ ಪದ್ಧತಿಗಳನ್ನವಲಂಬಿಸಿ ಜರ್ಮನಿಗೆ ಹೊರಗಣಿಂದ ಯಾವ ಸರಕುಗಳೂ ಹೋಗದಂತೆಯೂ ಅಲ್ಲಿಂದ ಹೊರಕ್ಕೆ ಯಾವ ಸರಕೂ ಸಾಗಿಹೋಗದಂತೆಯೂ ಮಾಡುವುಕ್ಕೆ ಪ್ರಯತ್ನಿಸಿದ್ದೇವೆ. ಆದರೆ ಈ ಪದ್ಧತಿಯನ್ನು ನಾವು ನೆರವೇರಿಸುವಾಗ ತಟಸ್ಥದೇಶದ ಹಡಗುಗಳಿಗೂ ಜನರಿಗೂ ಯಾವ ವಿಧವಾದ ತೊಂದರೆಯೂ ಸಂಭವಿಸದಂತೆಯೂ ಮಾನವಧರ್ಮವನ್ನು ಅನುಲಕ್ಷಿಸಿಯೂ ಕೆಲಸಮಾಡುತ್ತೇವೆ.

ಅದುಕಾರಣ, ಅನುಮಾನವಾಗಿ ಕಂಡ ಹಡಗುಗಳನ್ನು ಇಂಗ್ಲೀಷ್ ಫ್ರಾನ್ಸು ಪ್ರಭುತ್ವದವರು ತಮ್ಮ ರೇವೆಗಳಿಗೆ ಹಿಡಿದುಕೊಂಡು ಹೋಗುವುದಕ್ಕೆ ಅಧಿಕಾರವನ್ನು ಪಡೆದಿರುತ್ತಾರೆ. ಅಲ್ಲಿಗೆ ತೆಗೆದುಕೊಂಡುಹೋದಬಳಿಕ ಸರಿಯಾದ ವಿಚಾರಣೆ ನಡೆಯಿಸಿ ಶತ್ರುಸಂಬಂಧವುಳ್ಳವುಗಳನ್ನು ಮಾತ್ರ ತಮ್ಮ ಸ್ವಾಧೀನಪಡಿಸಿಕೊಳ್ಳುತ್ತಾರೆ" ಎಂದು ಭಾಷಣಮಾಡಿದುದಲ್ಲದೆ ಜರ್ಮನಿಗೆ ಯಾವ ಪದಾರ್ಥವನ್ನೂ ಸಾಗಗೊಡಿಸದಂತೆ ಮಾಡುವ ವಿಷಯದಲ್ಲಿ ತಾವು ಆಚರಿಸುವ ಪದ್ಧತಿಯನ್ನು ಕುರಿತ ಪ್ರಕಟನಪತ್ರವನ್ನು ಮಹಾಸಭೆಯಲ್ಲಿ ಓದಿ ಹೇಳಿದರು. ಸಾಲವನ್ನು ತೆಗೆಯಬೇಕೆಂದು ಮಂತ್ರಿವರ್ಯರು ಶ್ರುತಿಪಡಿಸಿದ ಸೂಚನೆಗೆ ಸಭಿಕರೆಲ್ಲಾ ಅತ್ಯುತ್ಸಾಹದಿಂದ ಸಮ್ಮತಿಯನ್ನಿತ್ತರು.

ಆಕಾಶಯಾನಗಳು.

ಇವುಗಳಲ್ಲಿ ೨ ತೆರನಾದುವುಗಳುಂಟು. ಒಂದಕ್ಕೆ ಗಗನನಾವೆಯೆಂತಲೂ, ಮತ್ತೊಂದಕ್ಕೆ ಗಗನವಿಮಾನವೆಂತಲೂ, ಹೆಸರು. ಈ ಹೆಸರು ಅವುಗಳ ರಚನಾವೈಲಕ್ಷಣ್ಯವನ್ನು ಅನುಸರಿಸಿ ಬಂದಿದೆ. ಗಗನವಿಮಾನಕ್ಕಿಂತಲೂ ಗಗನನಾವೆಗಳಿಗೆ ಬೆಲೆಹೆಚ್ಚು. ೧ ಗಗನವಿಮಾನಕ್ಕೆ ಬಹುಶಃ ೨೦ಸಾವಿರ ರೂ. ಗಳಾಗುವುವು. ೧ ಗಗನನಾವೆಯನ್ನು ನಿರ್ಮಿಸಲು ೬ ಲಕ್ಷ ರೂ. ಗಳು ಮುಟ್ಟುವುವು. ಜರ್ಮನರು ಬಹುಳವಾಗಿ ಆಕಾಶನಾವೆಗಳನ್ನೇ ವಿಶೇಷವಾಗಿ ಉಪಯೋಗಿಸುತ್ತಾರೆ. ಇವು ೫೦೦ ಅಡಿಗಳ ಉದ್ದವಾಗಿಯೂ ೫೦ ಅಡಿಗಳ ಅಗಲವುಳ್ಳವಾಗಿಯೂ ಇರುತ್ತವೆ. ಇವು ಒಂದಾವೃತ್ತಿಗೆ ೬೦ ಗಂಟೆಗಳ ಕಾಲ ಅಖಂಡವಾಗಿ ಸಂಚರಿಸಿಕೊಂಡು ಬರಬಲ್ಲವು, ಆಕಾಶವಿಮಾನದಲ್ಲಿ ಅಷ್ಟುದೂರ ಸಂಚರಿಸಲಾಗುವುದಿಲ್ಲ. ಇಂಗ್ಲೀಷ್ ಫ್ರೆಂಚ್ ಸೈನಿಕರು ವಿಶೇಷವಾಗಿ ಆಕಾಶವಿಮಾನಗಳನ್ನೇ ಉಪಯೋಗಿಸುತ್ತಾರೆ. ಆಕಾಶನಾವೆಯು ಗಂಟೆ ೧ ಕ್ಕೆ ೫೦ ಮೈಲಿಯಂತೆ ಸಂಚರಿಸಬಲ್ಲುದು. ಆಕಾಶವಿಮಾನವಾದರೊ ೭೫ ಮೈಲಿಯಂತೆ ಸಂಚರಿಸಬಲ್ಲುದು. ಸೇನಾಕಾರ್ಯಕ್ಕೆ ಗಗನವಿಮಾನಗಳೇ ಬಹೂಪಯೋಗಕಾರಿಗಳು. ಇವು ಬಹಳ ಹಗುರವಾಗಿರುವುವು. ಆಕಾಶನಾವೆಗಳಲ್ಲಿ ಒಂದಾವೃತ್ತಿಗೆ ೩೦ ಟನ್ನುಗಳಷ್ಟು ಭಾರದ ಸಾಮಗ್ರಿಗಳನ್ನು ಸಾಗಿಸಿಕೊಂಡು ಹೋಗಬಹುದು. ಅವುಗಳಲ್ಲಿ ಕೆಲವು ಶಸ್ತ್ರಗಳನ್ನೂ ಸಿಡಿಮದ್ದು ಮೊದಲಾದುವುಗಳನ್ನೂ ಇಟ್ಟುಕೊಂಡು ಹೋಗಬಹುದು. ಫ್ರೆಂಚರೂ, ಇಂಗ್ಲೀಷರೂ, ತಮ್ಮ ಆಕಾಶವಿಮಾನಗಳಲ್ಲಿ ಸಿಡಿಮದ್ದುಗಳ ಜತೆಗೆ ೫ ಅಂಗುಲದ ಹಲ್ಲಿಯಬಾಣಗಳನ್ನೂ ಇಟ್ಟುಕೊಂಡು ಉಪಯೋಗಿಸುವರು. ಒಂದೊಂದು ಆಕಾಶವಿಮಾನಗಳಲ್ಲಿ ಇಂಥ ಬಾಣಗಳು ೧೫೦೦ನ್ನು ಇಟ್ಟುಕೊಂಡು ಹೋಗಬಹುದು. ಇಂಥ ಬಾಣಗಳು ಇಂಗ್ಲೀಷರಲ್ಲಿ ೫ ಕೋಟಿ ಇರುವುವು. ಈಗ ನಡೆಯುತ್ತಿರುವ ಯುದ್ಧದಲ್ಲಿ ಇಂಗ್ಲೀಷ್ ಫ್ರೆಂಚರ ವಿಮಾನಗಳೇ ಜರ್ಮನರ ಆಕಾಶನಾವೆಗಳಿಗಿಂತ ಹೆಚ್ಚಿನ ಕೆಲಸವನ್ನು ಮಾಡಿರುವುವೆಂದು ಶ್ಲಾಘಿಸಲ್ಪಟ್ಟಿವೆ.

ಭರತಖಂಡದ ವೃತ್ತಾಂತ.

ಬೊಂಬಾಯಿಯ ಪ್ರಸಿದ್ಧ ಬ್ಯಾರಿಸ್ಟರಾದ ಸರ್. ಫಿರೋಜ್‌ಷಾ ಮೇಥಾರವರು ಬೊಂಬಾಯಿ ವಿಶ್ವವಿದ್ಯಾಲಯಕ್ಕೆ ವೈಸ್‌ಚಾನ್ಸಲರಾಗಿ ನಿಯಮಿಸಲ್ಪಟ್ಟಿದ್ದಾರೆ.

ಭರತಖಂಡದಿಂದ ಹೊರಕ್ಕೆ ಗೋದುವೆಯನ್ನು ಸಾಗಿಸಕೂಡದೆಂದು ಇಂಡ್ಯಾ ಪ್ರಭುತ್ವದವರು ಅಪ್ಪಣೆಮಾಡಿದುದರಿಂದ ಈಗ ಅದರ ಬೆಲೆಯು ಇಳಿಮುಖವಾಗಿ ಬಡಬಗ್ಗರಿಗೆ ಸಹಾಯವಾಗುವಂತಿದೆ.

ರಂಗೂನಿನಲ್ಲಿ ಬಾರ್ ಎಂಬಾತನು ಈಗಿನ ಯುದ್ಧವಿಷಯವಾಗಿ ಸುಳ್ಳುಸುದ್ದಿಗಳನ್ನು ಹರಡುತ್ತಿದ್ದುದರಿಂದ ಅವನನಿಂದ ೧ ವರ್ಷದವರೆಗೆ ೧ ಸಾವಿರ ರೂಪಾಯಿಯ ಹೊಣೆಯನ್ನು ತೆಗೆದುಕೊಂಡು ಬಿಟ್ಟಿದ್ದಾರೆ.

ತಾ|| ೪ರಲ್ಲಿ ಕಲ್ಕತ್ತಾದ ಕ್ಲೈವ್‌ಬೀದಿಯಲ್ಲಿರುವ ಒಬ್ಬ ಮಾರ್ವಾಡಿಯ ಬಳಿಗೆ ಹಗಲುಹೊತ್ತಿನಲ್ಲೇ ಕೆಲ ಯುವಕರು ಹೋಗಿ ಸದ್ದುಮಾಡಿದರೆ ತುಪಾಕಿಯಿಂದ ಸುಡುತ್ತೇವೆಂದು ಬೆದರಿಸಿ ೭ ಸಾವಿರ ರೂ.ಗಳ ನೋಟನ್ನು ಅಪಹರಿಸಿಕೊಂಡು ಬಂಡಿಯನ್ನೇರಿ ಓಡಿದರು.

ಮದ್ರಾಸು ವಿಶ್ವವಿದ್ಯಾಲಯದವರು ಇಂಟರ್ಮೀಡಿಯಟ್ ತರಗತಿಗೆ ಗೊತ್ತುಮಾಡಿದ್ದ ಪಠ್ಯಪುಸ್ತಕಗಳ ಹೊರೆಯನ್ನು ಸ್ವಲ್ಪ ಕಡಿಮೆಮಾಡಿಯೂ, ಪರೀಕ್ಷೆಗೆ ವಿದ್ಯಾರ್ಥಿಗಳು ಹೋಗಬೇಕಾದ ಮೂರುವರ್ಷಕಾಲದ ನಿರ್ಬಂಧವನ್ನು ಸಹ ತಪ್ಪಿಸಿಯೂ ವಿದ್ಯಾರ್ಥಿ ವೃಂದಕ್ಕೆ ಉಪಕಾರ ಮಾಡಿದ್ದಾರೆ.

ಮಧ್ಯಮತರಗತಿಗಳಲ್ಲೆಲ್ಲಾ ವಿದ್ಯಾರ್ಥಿಗಳಿಗೆ ಎಲ್ಲಪಾಠಗಳನ್ನೂ ದೇಶಭಾಷೆಯಲ್ಲಿ ಬೋಧಿಸುವಂತೆಯೂ ಇಂಗ್ಲೀಷನ್ನು ಉಪಭಾಷೆಯನ್ನಾಗಿ ಗಣಿಸುವಂತೆಯೂ ಮಾಡಬೇಕೆಂಬ ವಿಷಯವನ್ನು ಸಾಮ್ರಾಜ್ಯಶಾಸನಸಭೆಯಲ್ಲಿ ಪ್ರಸ್ತಾಪಿಸಲು ಆ|| ಪಾ|| ರಾಮಾರಾಯನಿಯವರು ಅಪ್ಪಣೆ ಹೊಂದಿದ್ದಾರೆ.

ಬಂಗಾಳಾ ಸರ್ಕಾರದ ಸೆಕ್ರೆಟರಿಯೇಟ್ ಭವನಕ್ಕೆ ಹಾಡುಹಗಲೇ ಒಂದಾನೊಂದು ರಜಾದಿವಸ ಕಳ್ಳರು ನುಗ್ಗಿ ಕಬ್ಬಿಣದ ಪೆಟ್ಟಿಗೆಯನ್ನೊಡೆದು ೩೦೦ ರೂ.ಗಳ ಚೆಕ್ಕನ್ನು ಅಪಹರಿಸಿಕೊಂಡು ಹೋದರು. ಅವರನ್ನು ಗುಮಾಸ್ತರಾಗಿರಬೇಕೆಂದು ಯೋಚಿಸಿ ಕಾವಲಿನವನು ಸುಮ್ಮನೆ ನೋಡಿಕೊಂಡಿದ್ದನಂತೆ !

ವೈಸ್ರಾಯರು ಕಳೆದ ತಾ|| ೪ ರಲ್ಲಿ ಕಲ್ಕತ್ತಾದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವ ಲಾರ್ಡ್‌ರಿಪ್ಪನ್—ಲಾರ್ಡ್‌ಮಿಂಟೋ— ಈ ಮಹನೀಯರ ಪ್ರತಿಮೆಗಳ ಮುಸುಕನ್ನು ತೆರೆಯುವ ಸಮಾರಂಭವನ್ನು ಮಾಡಿ ತಮ್ಮ ವಿಶಾಲಹೃದಯ ಭಾವವನ್ನು ವ್ಯಕ್ತಪಡಿಸುವ ಒಂದು ಉತ್ತಮಭಾಷಣವನ್ನು ಆ ಸಮಯದಲ್ಲಿ ಮಾಡಿದರು.

ಕೀರ್ತಿಶೇಷರಾದ ಗೋಖಲೆಯವರು ಅರ್ಥಶಾಸ್ತ್ರಪಾರಂಗತರಾಗಿದ್ದುದರಿಂದ ಅವರ ಹೆಸರಿನ ಮೇಲೆ ಭಾರತೀಯರಿಗೆ ಅರ್ಥಶಾಸ್ತ್ರಾಭ್ಯಾಸಪ್ರೋತ್ಸಾಹವನ್ನು ಮಾಡುವುದಕ್ಕಾಗಿ ಮದ್ರಾಸಿನ ಎಸ್. ಶ್ರೀನಿವಾಸಯ್ಯಂಗಾರರು ೪೦೦೦ ರೂ.ಗಳನ್ನು ಮದ್ರಾಸು ವಿಶ್ವವಿದ್ಯಾಲಯದವರ ವಶಕ್ಕೆ ಒಪ್ಪಿಸುವವರಾಗಿದ್ದಾರೆ.

ಭರತಖಂಡದಲ್ಲಿ ಈ ವರ್ಷ ೯೨೦೦೦ ಟನ್ನುಗಳಷ್ಟು ನೆಲಗಡಲೆಕಾಯಿಯು ಫಸಲಾಗಿದೆ. ಇದು ಕಳೆದವರ್ಷಕ್ಕಿಂತ ಸೇಕಡಾ ೪೨ ರಷ್ಟು ಹೆಚ್ಚು. ಆದರೆ ಯುದ್ಧಕಾರಣದಿಂದ ಇದು ಹೊರಕ್ಕೆ ಸಾಗಿಹೋಗುವುದು ನಿಂತುಹೋಗಿರುವುದರಿಂದ ಬೆಲೆಯು ಬಹಳ ಕಡಿಮೆಯಾಗಿ, ಅದರ ಎಣ್ಣೆಗೂ ಮಾರಾಟವಿಲ್ಲದೆ ಬೆಳೆದವರು ನಷ್ಟಪಟ್ಟಿದ್ದಾರೆ.

ಮೊನ್ನೆವಾರದಲ್ಲಿ ಭರತಖಂಡದ ದಕ್ಷಿಣಭಾಗದಲ್ಲಿ ಹಲವುಕಡೆ ವಿಶೇಷ ವೃಷ್ಟಿಯಾಗಿ, ಕೆರೆ ಕಟ್ಟೆಗಳಿಗೆ ನೀರುಬಂದಿದೆ. ವ್ಯವಸಾಯಕ್ಕೆ ಅನರ್ಥವನ್ನುಂಟುಮಾಡಿದರೂ, ಸ್ನಾನಪಾನಾದಿಗಳಿಗೆ ಉಂಟಾಗಿದ್ದ ತೊಂದರೆಯನ್ನು ಹಲವುಕಡೆ ನಿವಾರಣೆಮಾಡಿದೆ. ನೀಲಗಿರಿ ಲೋಹಮಾರ್ಗದಲ್ಲಿ ಗುಡ್ಡವು ಈ ಮಳೆಯಿಂದ ಕುಸಿದುಬಿದ್ದು ಪ್ರಯಾಣಕ್ಕೆ ೨ ದಿನ ಅಡ್ಡಿಯಾಗಿದ್ದು ಈಗ ಸರಿಪಡಿಸಲ್ಪಟ್ಟಿರುವುದು.

ಕೀರ್ತಿಶೇಷರಾದ ಗೋಖಲೆಯವರ ಮೃತಿಯ ವಿಷಯದಲ್ಲಿ ತಮ್ಮ ಅನುತಾಪವನ್ನು ತೋರಿಸುವ ಸಭೆಗಳು ಪೂನಾದಲ್ಲೂ ಬೊಂಬಾಯಿಯಲ್ಲೂ ಕೂಡಿದ್ದಾಗ ಅವೆರಡರಲ್ಲೂ ಬೊಂಬಾಯಿ ಗೌರ್ನರು ಅಧ್ಯಕ್ಷರಾಗಿದ್ದರು. ಅವರ ಸ್ಮಾರಕಪ್ರತಿಮೆಯನ್ನು ಸ್ಥಾಪಿಸುವ ನಿರ್ಧಾರವು ಮಾಡಲ್ಪಟ್ಟಿತು. ವರ್ಗಣಿಯನ್ನು ಕೂಡಿಸಲು ಸಂಘಗಳೇರ್ಪಟ್ಟಿವೆ. ಮದ್ರಾಸಿನ ಮಹಾಜನರೂ ಹೀಗೆಯೇ ಮಹಾಸಭೆಗೂಡಿ ಅವರೂ ಅದೇತೆರದ ಏರ್ಪಾಟನ್ನು ಮಾಡಿದ್ದಾರೆ.

ಈ ತಿಂಗಳು ತಾ|| ೧೩ ನೆ ಶನಿವಾರದದಿನ ಸೂರ್ಯ—ರಾಹು—ಅಂಗಾರಕ—ಬುಧ—ಗುರು—ಈ ಪಂಚಗ್ರಹಗಳ ಕೂಡ ಚಂದ್ರನು ಸೇರುವುದರಿಂದ ಈ ಯೋಗವು ಜರ್ಮನಿಗೆ ಅಪಾಯಕರವಾಗಿಯೂ ನಮ್ಮ ಆಂಗ್ಲಚಕ್ರವರ್ತಿಯವರಿಗೆ ವಿಜಯಕರವಾಗಿಯೂ ಪರಿಣಮಿಸುವುದೆಂತಲೂ, ಈ ಯೋಗದಲ್ಲಿ ರಾಹುವು ಸಂಬಂಧಿಸಿರುವುದರಿಂದ ಯುದ್ಧವು ಬಹಳ ತೀವ್ರವಾಗಿ ಜರುಗುವುದೆಂತಲೂ, ಅಲ್ಲಿಂದ ೧೪ ತಿಂಗಳುಗಳೊಳಗೆ ಜರ್ಮನರು ಪರಾಜಿತರಾಗಿ ಮಿತ್ರಮಂಡಲಿಯವರು ದಿಗ್ವಿಜಯವನ್ನು ಪಡೆಯಲು ಅಭ್ಯಂತರವಿಲ್ಲವೆಂತಲೂ ಸಹ ಬಂಕೀಪುರದ ಪಂಡಿತ ರಾಮಪ್ರಸಾದ ಋಷಿಯವರು ಪ್ರಕಟಿಸಿರುತ್ತಾರೆ.

ಲೋಕಪ್ರಿಯರಾದ ಈಗಿನ ನಮ್ಮ ವೈಸ್ರಾಯರು ಯುದ್ಧಾಂತ್ಯದವರೆಗೂ ಅವರ ಅಧಿಕಾರದಲ್ಲಿಡಲ್ಪಡುವರೆಂಬ ವಾರ್ತೆಯಿದ್ದಿತು. ಅವರ ಅಧಿಕಾರದವಧಿಯನ್ನು ಹೆಚ್ಚಿಸಿಕೊಡಬೇಕೆಂಬುದು ಭಾರತೀಯರ ಪ್ರಾರ್ಥನೆಯೂ ಆಗಿದ್ದಿತು. ಆದರೆ ಈ ಮಧ್ಯೆ ಬಂಗಾಳಾ ಗೌರ್ನರಾಗಿರುವ ಲಾರ್ಡ್ ಕಾರ್ಮೈಕೇಲ್‌ರವರು ವೈಸ್‌ರಾಯರಾಗಿ ಏರ್ಪಡುವರೆಂಬ ಸುದ್ದಿ ಹುಟ್ಟಿದೆ. ಇವರೂ ಕೇವಲ ಪ್ರಜಾಪ್ರಿಯರೆಂಬ ಖ್ಯಾತಿಯನ್ನು ಈ ಮೊದಲೇ ತಾವು ವಹಿಸಿದ ಮದ್ರಾಸು ಬಂಗಾಳಾ ಗೌರ್ನರ್‌ಗಿರಿಗಳ ಕಾಲದಲ್ಲಿ ಚೆನ್ನಾಗಿ ಪಡೆದಿದ್ದಾರೆ. ಅದುಕಾರಣ ಅವರು ರಾಜಪ್ರತಿನಿಧಿಗಳಾಗಿ ಬರುವುದೂ ಭಾರತೀಯರಿಗೆ ಇಷ್ಟವೇ. ಆದರೂ ಅಂಥ ಪ್ರಭುಗಳಿಬ್ಬರೂ ಏಕಕಾಲದಲ್ಲಿ ಇರುವುದಕ್ಕೆ ಪ್ರತಿಯಾಗಿ ಒಬ್ಬರೇ ಇರುವಂತಾಗುವುದು ಕೊರತೆಯೇ ಸರಿ,

ಬೊಂಬಾಯಿಯಲ್ಲಿ ಮೀನುಹಿಡಿಯುವ ಕೆಲ ಬೆಸ್ತರು ತಮ್ಮ ಮರಗಳ ತುಂಡಿನ ದೋಣಿಯಮೇಲೇರಿ ಬೇಟೆಗಾಗಿ ಸಮುದ್ರದಲ್ಲಿ ಹೋಗುತ್ತಿರಲು ಒಂದು ದೊಡ್ಡ ಕತ್ತಿಯಮೀನು ಬಲವಾದ ಏಟನ್ನು ಬಡಿದು ದೋಣಿಯನ್ನು ಎರಡುತುಂಡು ಮಾಡಿತು. ಒಳಗಿದ್ದ ಬೆಸ್ತರು ಹೆದರದೆ ಮುರಿದುಹೋದ ಮರದ ತುಂಡುಗಳನ್ನೇ ಸೇರಿಸಿ ತಮ್ಮತಮ್ಮ ನಡುಗಳಿಗೆ ಕಟ್ಟಿಕೊಂಡು ಅದರಮೇಲೆ ಕುಳಿತು ತೇಲಾಡುತ್ತ, ಯಾವುದಾದರೂ ಹಡಗು ಆ ದಾರಿಯಲ್ಲಿ ಬಂದರೆ ಪ್ರಾಣರಕ್ಷಣೆ ಮಾಡಿಕೊಳ್ಳೋಣವೆಂದು ಏಳುವರೆದಿನಗಳವರೆಗೂ ಅನ್ನಪಾನಗಳಿಲ್ಲದೆ ದೇಹಧಾರಣೆಮಾಡಿಕೊಂಡಿದ್ದರು. ಮಧ್ಯೆ ೧ ದಿನ ಬಲವಾದ ಮಳೆಬಂದು ತಮ್ಮ ತಲೆಯಮೇಲೆ ಸುತ್ತಿದ್ದ ಬಟ್ಟೆಯೆಲ್ಲಾ ನೆನೆದುಹೋದುದರಿಂದ ಅದನ್ನು ಹಿಂಡಿ ಸ್ವಲ್ಪ ನೀರನ್ನು ಕುಡಿದರು. ಕಡೆಗೆ ಒಂದು ಹಡಗು ಇವರನ್ನು ಕಂಡು ಕಾಪಾಡಿತು. ಆಗ ಇವರುಗಳು ಅನ್ನವನ್ನು ತಿನ್ನುವುದಕ್ಕೂ ಶಕ್ತಿಯಿಲ್ಲದೆ ಮಂಕಾಗಿದ್ದರು. ವೈದ್ಯರು ಚಿಕಿತ್ಸೆಮಾಡಿದನಂತರ ಬದುಕಿದರು.

ಮದ್ರಾಸ್ ಪಾರ್ಲಿಮೆಂಟ್ ಎಂಬ ಹೆಸರಿನಿಂದ ಒಂದು ಸಭೆಯನ್ನು ಶ್ರೀಮತಿ ಆನಿಬೆಸೆಂಟಮ್ಮನವರು ಕೆಲವು ನಿಬಂಧನೆಗಳಮೇಲೆ ಸ್ಥಾಪಿಸಿದ್ದಾರೆ. ಇದರ ಪ್ರಥಮಸಮಾವೇಶವು ಕಳೆದ ತಾ|| ೬ ನೆ ಶನಿವಾರದದಿವಸ ಜರುಗಿತು. ೧೦೦ ಮಂದಿ ಸಭಿಕರೂ ಅನೇಕಮಂದಿ ಪ್ರೇಕ್ಷಕರೂ ನೆರೆದಿದ್ದರು. ಜಡ್ಜಿ ಸದಾಶಿವಯ್ಯರ್‌ರವರು ಅಧ್ಯಕ್ಷಪೀಠವನ್ನು ಅಲಂಕರಿಸಿದ್ದರು. ಪ್ರಧಾನಕಾರ್ಯನಿರ್ವಾಹಕಿಯರಾದ ಆನಿಬೆಸೆಂಟಮ್ಮನವರು ಮೊದಲು ಕೀರ್ತಿಶೇಷರಾದ ಗೋಖಲೆಯವರ ಮೃತಿಗಾಗಿಸಂತಾಪಪ್ರದರ್ಶನವನ್ನು ಮಾಡುವಾಗ್ಗೆ— ತಾವು ಪೂನಾಪಟ್ಟಣಕ್ಕೆ ಹೋಗಿ ಅವರ ಸಂದರ್ಶನವನ್ನು ಮಾಡಿದಾಗ ಈ ಪಾರ್ಲಿಮೆಂಟಿನ ವಿಷಯವನ್ನು ಅವರೊಡನೆ ಪ್ರಸ್ತಾಪಿಸಿದ್ದೆನೆಂತಲೂ, ಅದಕ್ಕೆ ಅವರು ಅನುಮೋದಿಸಿ, ವೃದ್ಧಿಹೊಂದಲಿ ಎಂದು ಆಶೀರ್ವದಿಸಿದ್ದಾರೆಂತಲೂ, ಸಕಲಭಾರತೀಯ ಶಿರೋಮಣಿಯಾದ ಆ ಮಹನೀಯನ ಆಶೀರ್ವಾದಬಲದಿಂದ ಈಸಭೆಯು ಆರಂಭಿಸಲ್ಪಡುವುದೆಂತಲೂ ಹೇಳಿದರು. ಬಳಿಕ ಈ ಪಾರ್ಲಿಮೆಂಟಿನಲ್ಲಿ ಜರುಗಬೇಕಾದ ಕಾರ್ಯಗಳ ವಿಧಾನವನ್ನು ಸಹ ವಿವರಿಸಿದರು. ಬಳಿಕ ಕೆಲಮಂದಿ ಸಭಿಕರು ಮುಂದೆ ಇಂಥಿಂಥ ದಿನದಲ್ಲಿ ಇಂಥಿಂಥ ವಿಷಯಕವಾದ ವಿಧಿಗಳ ಚರ್ಚೆಯನ್ನು ನಡೆಯಿಸಬೇಕೆಂಬ ವಿಷಯದಲ್ಲಿ ಸಭಿಕರ ಅನುಮತಿಯನ್ನು ಕೇಳಿದರು. ಅಲ್ಲಿಗೆ ಸಭಾಕಾರ್ಯವು ಮುಗಿದಿತು.

ಕಾಶ್ಮೀರದ ಶಾಲುಗಳೆಂದರೆ ಪೂರ್ವದಲ್ಲಿ ಜಗತ್ಪ್ರಸಿದ್ಧವಾಗಿದ್ದುವು. ಯೂರೋಪು ಖಂಡದಲ್ಲೂ ಕೂಡ ಇದರ ಕೀರ್ತಿಯು ವ್ಯಾಪಿಸಿದ್ದಿತು. ಫ್ರಾನ್ಸಿನಲ್ಲಿ ಮದುವೆಯ ಕಾಲದೊಳಗೆ ದಂಪತಿಗಳಿಗೆ ಈ ಶಾಲುಗಳನ್ನು ಬಹುಮಾನವಾಗಿ ಹೊದಿಸುವ ಸಂಪ್ರದಾಯವಿದ್ದಿತು. ಆ ಕಾಲದಲ್ಲಿ ಕಾಶ್ಮೀರಿನ ಶಾಲಿನ ವರ್ತಕರು ತಮ್ಮ ಹುಕ್ಕಾಗಳಿಗೆ ನೀರಿಗೆ ಬದಲಾಗಿ ಹಾಲನ್ನು ತುಂಬಿ ಸೇವಿಸುವಷ್ಟು ಧನಿಕರಾಗಿದ್ದರು. ಈಗ ಆ ವೈಭವವೆಲ್ಲಾ ಮಣ್ಣುಗೂಡಿಹೋಗಿದೆ. ಜರ್ಮನಿಯವರು ಬಂದು ನಮ್ಮ ಶಾಲಿನ ವ್ಯಾಪಾರವನ್ನೆಲ್ಲಾ ಮೂಲೆಗೊತ್ತಿದರು. ೪-೫ ರೂ.ಗಳಿಗೂ ಅವರ ಶಾಲುಗಳು ದೊರೆಯುತ್ತಿರುವುವು. ಕಾಶ್ಮೀರದ ಶಾಲಿನ ಯೋಗ್ಯತೆಯಲ್ಲಿ ೧೦೦ನೇ ೧ಭಾಗವು ಇವಕ್ಕಿಲ್ಲದಿದ್ದರೂ ಈಗ ನಮ್ಮ ದೇಶದ ಪಂಡಿತ ಪಾಮರರುಗಳೆಲ್ಲಾ ಇವನ್ನೇ ಉಪಯೋಗಿಸುತ್ತಿದ್ದಾರೆ. ಪೂರ್ವದಲ್ಲಿ ಕಾಶ್ಮೀರದೊಳಗೆ ಈ ಶಾಲಿನ ಕೈಗಾರಿಕೆಯವರು ೬೦೦೦೦ ಮಂದಿ ಇದ್ದರಂತೆ. ಅವರು ವರ್ಷ೧ಕ್ಕೆ ೫೦ಲಕ್ಷ ರೂ.ನ ಸರಕುಗಳನ್ನು ವಿಕ್ರಯಿಸುತ್ತಿದ್ದರು. ಅತ್ಯುತ್ತಮವಾದ ಒಂದೊಂದು ಶಾಲನ್ನು ನೆಯ್ಯುವುದಕ್ಕೆ ೬೫೦೦ರೂ.ಗಳ ವೆಚ್ಚ ಮುಟ್ಟುತ್ತಿದ್ದಿತು. ಅಂಥ ಶಾಲು ಫ್ರಾನ್ಸಿನಲ್ಲಿ ೨ಸಾವಿರ ರೂ.ಗೆ ಮಾರಲ್ಪಡುತ್ತಿದ್ದಿತು. ಈಗಲೂ ೧೮೪೬ನೆಯ ವರ್ಷದಲ್ಲಿ ನಡೆದಿರುವ ಸಂಧಿಯ ಪ್ರಕಾರ ಕಾಶ್ಮೀರ ದೇಶದವರು ಪ್ರತಿವರ್ಷವೂ ಆಂಗ್ಲಸಾರ್ವಭೌಮರಿಗೆ ಒಂದೊಂದು ಶಾಲನ್ನೂ ಮೂರು ಶಿರೋವೇಷ್ಟನಗಳನ್ನೂ ಕಳುಹಿಸಿಕೊಡುತ್ತಾರೆ. ಇವುಗಳ ನೆಯ್ಗೆಗೆ ೪ಸಾವಿರ ರೂ.ಗಳು ಮುಟ್ಟುವುವಂತೆ.

ವಿದೇಶವೃತ್ತಾಂತಗಳು.

ಪೋರ್ಚುಗಲ್‌ದೇಶದಲ್ಲಿ ಉತ್ತರಭಾಗದ ಪ್ರಜೆಗಳು ಈಗಿನ ಪ್ರಭುತ್ವದಲ್ಲಿ ಅಸಮಾಧಾನಪಟ್ಟು ಪ್ರಜಾಪ್ರಭುತ್ವವನ್ನು ಸ್ಥಾಪಿಸಿಕೊಳ್ಳಬೇಕೆಂದು ಯತ್ನಿಸುತ್ತಿದ್ದಾರೆ.

ಇದುವರೆಗೆ ಯಾವ ಇಂಗ್ಲೀಷ್‌ಸೈನಿಕನಿಗೂ ಕೊಡದಿದ್ದಂತಹ ಬಹುಮಾನಪತಕವನ್ನು ಫ್ರೆಂಚ್‌ಪ್ರಭುತ್ವದವರು ಆಂಗ್ಲಸೇನಾಪತಿಯಾಗಿರುವ ಸರ್-ಜಾನ್-ಫ್ರೆಂಚರಿಗೆ ಕೊಟ್ಟು ಬಹುಮಾನಿಸಿದರು.

ಪಾರ್ಪಿ ಎಂಬ ಸರ್ವಿಯಾದೇಶದ ವಿದ್ಯುದ್ಯಂತ್ರಕಲಾಪ್ರವೀಣನು ಕೊಲಂಬಿಯಾ ಸರ್ವಕಲಾಶಾಲೆಯ ಪಂಡಿತನಾಗಿದ್ದಾನೆ. ಈತನು ೫ ಸಾವಿರ ಮೈಲಿಗಳವರೆಗೆ ಪ್ರತಿಧ್ವನಿ ಕೊಡುವ ಟೆಲಿಫೋನನ್ನು ಕಂಡು ಹಿಡಿದಿದ್ದಾನೆ.

ಈಗಿನ ಯುದ್ಧಸಂದರ್ಭದಲ್ಲಿ ಗ್ರೀಸ್‌ದೇಶದವರು ಹೇಗೆ ನಡೆದುಕೊಳ್ಳಬೇಕೆಂಬ ವಿಷಯದಲ್ಲಿ ಕಳೆದವಾರ ಒಂದು ಸಭೆಗೂಡಿ ಚರ್ಚಿಸಿದರು. ಪ್ರಭುಗಳ ಅಭಿಪ್ರಾಯವೂ ಮಂತ್ರಿಗಳ ಅಭಿಪ್ರಾಯವೂ ಏಕೀಭವಿಸದೆ ಹೋದುದರಿಂದ ಮಂತ್ರಿಮಂಡಲದವರೆಲ್ಲಾ ರಾಜೀನಾಮೆಕೊಟ್ಟರು.

ಹೌಸ್‌ಆಫ್‌ಕಾಮನ್ಸ್ ಸಭೆಯವರು ಯುದ್ಧದ ವೆಚ್ಚಕ್ಕಾಗಿ ೩೭೦೦ ಲಕ್ಷ ಪೌಂ (೫೫೫ ಕೋಟಿ ರೂ.ಗಳನ್ನು) ಸಾಲವಾಗಿ ತೆಗೆದುಕೊಳ್ಳಲು ಅನುಮತಿಕೊಟ್ಟಿದ್ದಾರೆ. ಇದುವರೆಗೆ ಯಾವದೇಶವೂ ಯುದ್ಧದ ವೆಚ್ಚಕ್ಕಾಗಿ ಇಷ್ಟು ಸಾಲವನ್ನು ತೆಗೆದುಕೊಳ್ಳಲು ಅಂಗೀಕರಿಸಿದುದಿಲ್ಲ.

ಯುದ್ಧವಾರ್ತೆಯು.

(ಪಶ್ಚಿಮರಣರಂಗ)

ಈ ರಣರಂಗದಲ್ಲಿ ವಿಶೇಷವಾದ ವಾರ್ತೆಗಳೇನೂ ಇಲ್ಲ. ಎಂದಿನಂತೆ ಸಾಮಾನ್ಯವಾಗಿ ಫಿರಂಗಿಯುದ್ಧಗಳು ಹಲವುಕಡೆ ನಡೆದಿವೆ. ಮಿತ್ರಮಂಡಲಿಯವರು ಹಲವುಕಡೆ ಶತ್ರುಗಳ ಕಂದಕಗಳನ್ನು ವಶಪಡಿಸಿಕೊಂಡು ಮುಂದಕ್ಕೆ ಸಾಗುತ್ತಲೇ ಇದ್ದಾರೆ. ಪೆರ್ತ್ಸ್‌ಜಿಲ್ಲೆಯಲ್ಲಿ ಬಹಳದೂರ ನಮ್ಮವರು ಮುಂದಕ್ಕೆ ಸಾಗಿಹೋಗಿದ್ದಾರೆ. ಜರ್ಮನರು ರೀಮ್ಸ್‌ಪಟ್ಟಣದಮೇಲೆ ಇನ್ನೂ ಗುಂಡುಗಳನ್ನು ಹೊಡೆಯುತ್ತಲೇ ಇದ್ದಾರೆ.

ಪೂರ್ವರಣರಂಗ.

ಜರ್ಮನರು ಪೂರ್ವಪ್ರಷ್ಯಾದಲ್ಲಿರುವ ತಮ್ಮ ಸೇನೆಯನ್ನು ರಷ್ಯಾದಮೇಲೆ ನುಗ್ಗಿಸಬೇಕೆಂದು ಬಹುದಿನದಿಂದಾಲೋಚಿಸಿಕೊಂಡಿದ್ದಂತೆ ಮೊನ್ನೆವಾರದಿಂದ ಕೆಲಕೆಲ ಸೈನ್ಯಗಳನ್ನು ಪೋಲಾಂಡಿನೊಳಕ್ಕೆ ನುಗ್ಗಿಸಿದರಷ್ಟೆ. ಈ ಸೈನ್ಯದಮೇಲೆ ರಷ್ಯನರು ಉತ್ತರಭಾಗದಲ್ಲಿ ಕಾದಾಡುತ್ತಿದ್ದಾರೆ. ಈಗ ಆ ಪ್ರಾಂತ್ಯದಲ್ಲಿ ಮಂಜಿನ ಹಾವಳಿಯು ಅಡಗಿ ಬಿಸಿಲಕಾಲವು ಆರಂಭಿಸಿದೆ. ನೆಲವು ಇನ್ನೂ ಆರಿಲ್ಲ. ಪ್ರಯಾಣಾದಿಗಳಿಗೆ ಇನ್ನೂ ಅನುಕೂಲವಿಲ್ಲ. ಜರ್ಮನರು ವಾರ್ಸಾದಕಡೆಗೆ ನುಗ್ಗಬೇಕೆಂದು ಅದರ ನೈಋತ್ಯದಿಕ್ಕಿನಲ್ಲಿ ಈಗ ಭಯಂಕರಯುದ್ಧವನ್ನು ಮಾಡುತ್ತಿದ್ದಾರೆ. ಅಲ್ಲಿನ ಸ್ಥಿತಿಯು ರಷ್ಯನರಿಗೇ ಅನುಕೂಲವಾಗಿದೆ. ಪೂರ್ವಪ್ರಷ್ಯಾದಲ್ಲೂ, ಪೋಲಾಂಡಿನಲ್ಲೂ ಜರ್ಮನರು ಕಳೆದೊಂದು ತಿಂಗಳಿಂದ ಮಾಡಿದ ಯುದ್ಧದಲ್ಲಿ ೨|| ಲಕ್ಷ ಸೈನಿಕರು ನಷ್ಟವಾದರೆಂದು ಪ್ರಕಟವಾಗಿದೆ.

ಪೋಲಾಂಡಿನಲ್ಲಿ ನುಗ್ಗಿದ ಜರ್ಮನ್‌ಸೇನೆಯು ಲೋಮ್ಜು-ಒಸೋವಿಯಸ್-ಕೋಟೆಗಳವರೆಗೂ ರಷ್ಯನರನ್ನು ಅಟ್ಟಿಕೊಂಡು ಹೋಗಿದ್ದಿತು. ಅವರು ಬೇಕಾಗಿ ತಾವು ಕೊಟ್ಟುಕೊಂಡು ಹೋಗಿ, ಅಲ್ಲಿ ಜರ್ಮನರಮೇಲೆ ತಿರುಗಿಬಿದ್ದು ಪ್ರಳಯಕಾಲಾವತಾರದಿಂದ ಶತ್ರುಗಳನ್ನು ಧ್ವಂಸಮಾಡಲು ಆರಂಭಿಸಿದರು. ಲೋಮ್ಜ ಕೋಟೆಯಿಂದಾಚೆಗೂ ಜರ್ಮನರು ನುಗ್ಗುಹೋಗಲು ಪ್ರಯತ್ನಿಸಿದುದರಿಂದ ಅಲ್ಲಿ ಅವರಿಗೆ ವಿಪರೀತ ನಷ್ಟವಾಯಿತು. ಅಲ್ಲಿದ್ದ ರಷ್ಯನ್‌ಸೇನೆಯು ಕೋಟೆಯೊಳಗಿನಸೇನೆಯೊಡನೆ ಕೂಡಿ ಬಹುದಿನಗಳವರೆಗೆ ಜರ್ಮನರಮೇಲೆ ಕಾದಾಡಿ ಆ ಸುತ್ತಿನಲ್ಲಿ ಜರ್ಮನರು ಹಿಡಿದುಕೊಂಡಿದ್ದ ಬೆಟ್ಟಗಳನ್ನೆಲ್ಲಾ ವಶಪಡಿಸಿಕೊಂಡರು. ೧ ಸಾವಿರ ಮಂದಿ ಜರ್ಮನರು ಸೆರೆಸಿಕ್ಕಿದರು. ಕೆಲಫಿರಂಗಿಗಳು ಅವರಿಗೆ ವಶವಾದುವು. ಆ ಬೆಟ್ಟಗಳನ್ನು ರಕ್ಷಿಸಿಕೊಂಡಿದ್ದ ಜರ್ಮನರ ೨೧ ನೆ ನಂ|| ಸೇನೆಯಲ್ಲಿ ೧೨ ಸಾವಿರ ಮಂದಿಗಳು ಹತರಾದರು. ಜರ್ಮನರ ಎಲ್ಲಸೇನೆಗಳಲ್ಲೂ ಈ ಸೇನೆಯು ಬಹಳ ಪ್ರಶಸ್ತವಾದುದಂತೆ. ಮುಂದಕ್ಕೆ ಬರುತ್ತಲಿದ್ದ ಜರ್ಮನ್‌ಸೈನ್ಯವನ್ನು ರಷ್ಯನರು ಅಲ್ಲಿಗೇ ತಡೆದುಬಿಟ್ಟರು. ಕಡೆಗೆ ಜರ್ಮನರು ರಷ್ಯನರಮೇಲೆ ಬೀಳುವುದನ್ನು ಬಿಟ್ಟು ಆತ್ಮರಕ್ಷಣೆಯ ಪ್ರಯತ್ನವನ್ನು ಕಷ್ಟದಿಂದ ಮಾಡಬೇಕಾಗಿ ಬಂದಿತು. ಆ ಸುತ್ತಿನಲ್ಲಿ ಜರ್ಮನರು ಆಕ್ರಮಿಸಿಕೊಂಡಿದ್ದ ಅನೇಕ ಗ್ರಾಮಗಳನ್ನು ರಷ್ಯನರು ವಶಪಡಿಸಿಕೊಂಡರು. ಒಸೋವಿಯಸ್ ಕೋಟೆಯ ಹತ್ತಿರವೂ ಜರ್ಮನರಿಗೆ ಹೀಗೆಯೇ ಪರಾಭವವಾಯಿತು. ಅಲ್ಲಿದ್ದ ತಮ್ಮ ಹವಿಟ್ಜರ್ ಎಂಬ ಫಿರಂಗಿಗಳನ್ನು ರಷ್ಯನರು ಎಲ್ಲಿ ಹಿಡಿದುಕೊಳ್ಳುವರೋ ಎಂಬ ಭಯದಿಂದ ಅವನ್ನು ಹಿಂದಕ್ಕೆ ಸಾಗಿಸಿಕೊಂಡರು.

ವಾರ್ಸಾಕ್ಕೆ ಉತ್ತರದಲ್ಲಿ ರಷ್ಯನರು ಜರ್ಮನರನ್ನು ಹೀಗೆ ತಡೆದು ಪರಾಭವಗೊಳಿಸಿದುದಲ್ಲದೆ ದಕ್ಷಿಣದಲ್ಲಿ ಕಾರ್ಪೇತಿಯನ್ ಪ್ರಾಂತದಲ್ಲೂ ಕೂಡ ಡೂಕ್ಲಾ ಕಣಿವೆಯಹತ್ತಿರವೂ, ಟುಬೋಲ್ಕಾಕಣಿವೆಯ ಹತ್ತಿರವೂ ಜರ್ಮನರನ್ನೂ ಆಸ್ಟ್ರಿಯನ್ನರನ್ನೂ ಸಹ ಮುಂದಕ್ಕೆ ಸಾಗಗೊಡದೆ, ತಾವು ಹಿಡಿದುಕೊಂಡಿರುವ ಗೆಲೀಷಿಯಾಜಿಲ್ಲೆಯನ್ನು ಕಾಪಾಡಿಕೊಂಡಿದ್ದಾರೆ. ಮತ್ತೂ ಪೂರ್ವಗೆಲೀಷಿಯಾದಲ್ಲಿ ತಾವೇ ಮುಂದಕ್ಕೆ ಸಾಗಿಹೋಗುತ್ತ ಲಾಮ್ನಿಕಾನದಿಯನ್ನು ದಾಟಿ ೬ ಸಾವಿರ ಮಂದಿ ಆಸ್ಟ್ರಿಯನ್ ಸೈನಿಕರನ್ನೂ ೬೪ ಮಂದಿ ಉದ್ಯೋಗಿಗಳನ್ನೂ ಸೆರೆಹಿಡಿದಿದ್ದಾರೆ. ಮತ್ತೂ ಲೂಕ್ವಾನದಿಯನ್ನು ದಾಟುವಾಗ ಸ್ಟಾನಿಸ್ಲಾದ ಹತ್ತಿರ ಭಯಂಕರವಾದ ಕಾಳಗವು ನಡೆದು ಆಸ್ಟ್ರಿಯನ್ನರು ಪರಾಜಿತರಾಗಿದ್ದಾರೆ. ಫೆಬ್ರವರಿ ತಾ|| ೨೧ ರಿಂದ ಮಾರ್ಚಿ ತಾ|| ೩ ರವರೆಗೆ ಆ ಸ್ಥಲದಲ್ಲಿ ರಷ್ಯನರು ನಡೆಯಿಸಿದ ಯುದ್ಧದಲ್ಲಿ ೧೮೬೨೫ ಮಂದಿ ಸೈನಿಕರೂ, ೫ ದೊಡ್ಡ ಫಿರಂಗಿಗಳೂ, ೬೨ ಸಣ್ಣ ಫಿರಂಗಿಗಳೂ, ೧೫೩ ಮಂದಿ ಉದ್ಯೋಗಸ್ಥರೂ, ಹಲವು ಹೊಗೆಬಂಡಿಗಳೂ ಸಹ ರಷ್ಯನರಿಗೆ ಸಿಕ್ಕಿಹೋಗಿವೆ. ಈ ಸ್ಟಾನಿಸ್ಲಾ ಎಂಬುದು ಮುಖ್ಯವಾದ ರೈಲ್ವೆಜಂಕ್ಷನ್ ಸ್ಥಲವು. ಇದುಕೂಡ ರಷ್ಯನರ ವಶವಾಗಿಹೋಯಿತು. ಇಲ್ಲಿ ಆಸ್ಟ್ರಿಯನ್ನರು ರಷ್ಯನರನ್ನು ಮುಂದಕ್ಕೆ ಬರಗೊಡಿಸದಂತೆ ಮಾಡಬೇಕೆಂದು ಬಹಳ ಹಠದಿಂದ ಕಾದಾಡಿ ತಡೆಯುತ್ತಿದ್ದಾರೆ. ಅದರಿಂದ ಈಗ ಪೂರ್ವರಣರಂಗದಲ್ಲಿ ಕಾರ್ಪೇತಿಯನ್ ಪ್ರಾಂತದ ಯುದ್ಧವು ಬಹು ಭಯಂಕರವಾಗಿದೆ. ಈಚೆಗೆ ರಷ್ಯನರು ಟಾರ್ನೊ ಎಂಬ ಸ್ಥಲದಕೆಳಗೆ ಡುನಜೆನದೀತೀರದಲ್ಲಿರುವ ಜರ್ಮನರ ರಕ್ಷಕಸ್ಥಾನವನ್ನು ಕೂಡ ಹಿಡಿದಿರುವರೆಂದು ಗೊತ್ತಾಗುತ್ತದೆ. ಕ್ಲಾಜು ಎಂಬ ಸ್ಥಲದಲ್ಲಿ ರಷ್ಯನ್‌ಸೇನೆಯು ಆಸ್ಟ್ರಿಯನ್‌ಸೇನೆಯಮೇಲೆ ಬಿದ್ದು ಕಾದಾಡಿದಾಗ ಒಂದು ಪಟಾಲಮ್ಮಿಗೆ ಪಟಾಲಮೇ ರಷ್ಯನರಿಗೆ ಶರಣಾಗತವಾಗಿಹೋಯಿತು.

ಜರ್ಮನ್‌ಸೇನೆಯ ನಷ್ಟ.

ತಮ್ಮ ಸೈನಿಕರಲ್ಲಿ ಆಗಿರುವ ನಷ್ಟವನ್ನು ಕುರಿತು ಜರ್ಮನರು ಪ್ರಕಟಿಸಿರುವ ಸಂಗತಿಗಳನ್ನು ಪರಿಶೀಲಿಸಿದರೆ ಅವರಲ್ಲಿ ಗಾಯಗೊಂಡು ನಿರುಪಯುಕ್ತರಾದವರೂ ಸತ್ತವರುಗಳು ಸಹ ಸೇರಿ ಇದುವರೆಗೆ ೩೦ ಲಕ್ಷ ಮಂದಿಗಳು ನಷ್ಟವಾದರೆಂದು ಗೊತ್ತಾಗುತ್ತದೆ. ಜನರಲ್ ಹಿಂಡೆನ್‌ಬರ್ಗ್‌ರವರ ಅಧಿಪತ್ಯದ ಕೆಳಗೆ ರಷ್ಯಾದವರಮೇಲೆ ಹೋರಾಡುತ್ತಿರುವ ಜರ್ಮನ್ ಸೈನಿಕರಲ್ಲಿ ೨|| ಲಕ್ಷ ಮಂದಿಗಳು ಸತ್ತಿರುವರೆಂದು ಪ್ರಕಟವಾಗಿದೆ. ಇವರಲ್ಲಿ ೧ ಲಕ್ಷ ಮಂದಿಗಳು ವಿಶ್ಚುಲಾರಣರಂಗದಲ್ಲೇ ಸತ್ತಿರುವರಂತೆ. ಪೂರ್ವಪ್ರಷ್ಯಾದಲ್ಲಿ ೧೫ ಸಾವಿರ ಮಂದಿಗಳು ರಷ್ಯನರಿಗೆ ಸೆರೆಸಿಕ್ಕಿಹೋಗಿದ್ದಾರೆ. ಪ್ರಜಾಸ್ನಿಜ್ ಬಳಿಯಣ ಯುದ್ಧದಲ್ಲಿ ೩ ಸಾವಿರ ಮಂದಿ ಸತ್ತಿದ್ದಾರೆ. ಇನ್ನು ಮುಂದೆ ಥಾರ್ನ್‌ಪಟ್ಟಣಕ್ಕೂ ಮಸೂರಿಯಾಸರಸ್ಸಿನ ತೀರದ ಬಳಿಯಣ ಜರ್ಮನ್‌ಸೇನೆಗೂ ಮಧ್ಯದಲ್ಲಿರುವ ಸ್ಥಲವನ್ನು ಹಿಡಿದುಕೊಳ್ಳುವ ವಿಷಯದಲ್ಲಿ ಉಭಯಪಕ್ಷಕ್ಕೂ ಘೋರಸಂಗ್ರಾಮ ವಾಗುವಂತಿದೆ. ಆಗಲೂ ಎಷ್ಟೋ ಸೇನೆ ನಾಶವಾಗುವುದರಲ್ಲಿ ಸಂಶಯವಿಲ್ಲ.

ಜರ್ಮನರ ಸಬ್‌ಮೆರೀನುಗಳು.

ತಮ್ಮ ಕಡೆಯ ಸಬ್‌ಮೆರೀನುಗಳ ಸಾಮರ್ಥ್ಯದಿಂದ ಇಂಗ್ಲೀಷ್ ಸಮುದ್ರವನ್ನೆಲ್ಲಾ ಬಂಧಿಸಿಬಿಡುತ್ತೇವೆಂದು ಜರ್ಮನರು ಜಂಭವನ್ನು ಕೊಚ್ಚಿಕೊಂಡಿದ್ದರಷ್ಟೆ. ಇವುಗಳಿಂದಾಗಿರುವ ಪರಿಣಾಮವನ್ನು ಇಂಗ್ಲೀಷ್ ನೌಕಾಸಂಘದವರು ಈಗ ಪ್ರಕಟಿಸಿದ್ದಾರೆ. ಅವರ ಪ್ರಕಾರ ಫೆಬ್ರವರಿ ತಾ|| ೨೫ ರಿಂದ ಮಾರ್ಚಿ ತಾ|| ೩ರವರೆಗೆ ಯಾವುದೊಂದು ವ್ಯಾಪಾರದ ಹಡಗೂ ಶತ್ರುಗಳ ಏಟಿಗೆ ಬಲಿಯಾಗಲಿಲ್ಲ. ಮಾರ್ಚಿ ತಾ|| ೨ರಿಂದ ೫ನೇ ತಾರೀಖಿನ ವರೆಗೆ ಮೂರಾವೃತ್ತಿ ಹಡಗುಗಳನ್ನು ಮುಳುಗಿಸುವುದಕ್ಕೆ ಶತ್ರುಗಳ ಸಬ್‌ಮೆರೀನುಗಳು ಸಾಹಸಮಾಡಿದುವು. ಆದರೆ ನಿಷ್ಫಲವಾಯಿತು. ಒಟ್ಟಿಗೆ ಜನವರಿ ತಾ|| ೨೧ ರಿಂದ ಇದುವರೆಗೆ ೧೧ ವ್ಯಾಪಾರಿ ಹಡಗುಗಳನ್ನು ಮಾತ್ರ ಜರ್ಮನರು ನಷ್ಟಪಡಿಸಿದ್ದಾರೆ. ೨೯ ಮಂದಿ ಅವುಗಳಲ್ಲಿ ಸತ್ತರು'' ಎಂಬುದಾಗಿ. ಫೆಬ್ರವರಿ ತಾ|| ೧೮ರಿಂದ ಇದುವರೆಗೆ ಜರ್ಮನರ ಸಬ್‌ಮೆರೀನುಗಳು ೬ ನಾಶಮಾಡಲ್ಪಟ್ಟಿವೆ. ಇದನ್ನು ನೋಡಲಾಗಿ ಈ ಪ್ರಯತ್ನದಿಂದ ಜರ್ಮನರಿಗೇ ಹೆಚ್ಚು ನಷ್ಟವಾಯಿತೆಂದು ಹೇಳಬಹುದು. ಈಗಲೂ ಇಂಗ್ಲೀಷ್ ತೀರಗಳಿಗೆ ವಾರಕ್ಕೆ ೧|| ಸಾವಿರ ಹಡಗುಗಳು ಹೋಗಿಬರುತ್ತಲಿವೆ.

ಈ ಮಧ್ಯದಲ್ಲಿ ಒಂದು ಅಂಚೆ ಹಡಗನ್ನೂ, ಒಂದು ಆಸ್ಪತ್ರೆಹಡಗನ್ನೂ ಸಹ ಜರ್ಮನರ ಸಬ್‌ಮೆರೀನುಗಳು ಬೆನ್ನುಹತ್ತಿದುವು. ಅಪಾಯವೇನೂ ಆಗಲಿಲ್ಲ. ಅಂಚೆಹಡಗಿಗೆ ಪ್ರಯೋಗಿಸಲ್ಪಟ್ಟ ಟಾರ್ಪಿಡೋವು ೮೦ ಅಡಿ ದೂರದಲ್ಲಿ ಹೋಯಿತು. ಇಂಗ್ಲೀಷರ ಒಂದು ಕಲ್ಲಿದ್ದಲ ಹಡಗು ಜರ್ಮನರ ಒಂದು ಸಬ್‌ಮೆರೀನಿನ ಮೇಲ್ಕೊಳವೆಯನ್ನು ಕಂಡು ಅದರ ಮೇಲೆ ತಾನು ಹಾದುಹೋಗಿ ಅದಿಮಿದುದರಿಂದ ಅದು ಜಲಸಮಾಧಿಗೊಂಡಿತು. ವ್ಯಾಪಾರದ ಹಡಗುಗಳ ಮೇಲೆ ಈಗ ಫಿರಂಗಿಗಳನ್ನೇ ಇರಿಸಿರುವುದರಿಂದ ಅವುಗಳೇ ಕೆಲ ಸಬ್‌ಮೆರೀನುಗಳನ್ನು ಧ್ವಂಸಮಾಡಿರುತ್ತವೆ. ಫ್ರೆಂಚರ ಒಂದು ಹಡಗು ಕೂಡ ಜರ್ಮನರ ಒಂದು ಸಬ್‌ಮೆರೀನನ್ನು ಹೊಡೆದು ನಾಶಮಾಡಿದೆ.

ಆಕಾಶಯಾನಗಳು.

ಜರ್ಮನರ ಆಕಾಶನಾವೆಯು ಯಾರ್ಮತ್ತಿಗೆ ಸಮೀಪದಲ್ಲಿ ಹೋಗುತ್ತಿದ್ದ ಒಂದು ಇಂಗ್ಲೀಷರ ಎಣ್ಣೆತುಂಬಿದ ಹಡಗಿನ ಮೇಲೆ ಮೂರು ಸಿಡಿಮದ್ದುಗಳನ್ನು ಹಾಕಿತು. ಆದರೆ ಹಡಗಿನ ಅಧ್ಯಕ್ಷನು ಅದನ್ನು ಮೊದಲೇ ಕಂಡುದರಿಂದ ಹಡಗಿನ ಗತಿಯನ್ನು ಅಡ್ಡಡ್ಡಲಾಗಿ ಮಾಡಿ ಚಪಲಪಡಿಸಿದುದರಿಂದ ಅಪಾಯವು ತಪ್ಪಿತು.

ಫ್ರಾನ್ಸ್ ವೈಮಾನಿಕನೊಬ್ಬನು ಜರ್ಮನರ ಒಂದು ಮದ್ದಿನ ಕೊಟ್ಟಾರದಮೇಲೆ ಸಿಡಿಮದ್ದನ್ನು ಹಾಕಿ ಸುರಕ್ಷಿತವಾಗಿ ಬಂದನು.

ಇಂಗ್ಲೀಷ್ ವೈಮಾನಿಕರು ಕಳೆದವಾರದಲ್ಲಿ ಎರಡಾವೃತ್ತಿ ಶತ್ರುಶಿಬಿರಗಳಮೇಲೆ ಹೋಗಿ, ಅವರ ವಿಮಾನಗಳಮೇಲೆ ಯುದ್ಧಮಾಡಿ, ಅವನ್ನು ಕೆಳಕ್ಕೆ ಬೀಳಿಸಿರುತ್ತಾರೆ.

ಜರ್ಮನರ ವಿಮಾನಗಳನ್ನು ಧ್ವಂಸಪಡಿಸಿದುದಕ್ಕಾಗಿ ಪಿಗಾಡ್ ಎಂಬ ಪ್ರಸಿದ್ಧ ಫ್ರೆಂಚ್‌ವೈಮಾನಿಕನಿಗೆ ಸೈನಿಕಪದಕವು ಬಹುಮಾನಿಸಲ್ಪಟ್ಟಿತು.

ಫ್ರೆಂಚರ ವೈಮಾನಿಕನೊಬ್ಬನು ಜರ್ಮನಿದೇಶದಲ್ಲಿ ರಾಟ್ವೀಲ್ ಹತ್ತಿರವಿರುವ ಮದ್ದುಗುಂಡು ತುಪಾಕಿಗಳನ್ನು ಮಾಡುವ ಒಂದು ಮುಖ್ಯ ಕರ್ಮಾಗಾರದಮೇಲೆ ಒಳ್ಳೆ ಗುರಿಯಿಟ್ಟು ೪ ಸಿಡಿಮದ್ದುಗಳನ್ನು ಹಾಕಿದನು. ಇವುಗಳಲ್ಲಿ ಮೊದಲನೆಯದು ದ್ರಾವಕತುಂಬಿದ್ದ ತೊಟ್ಟಿಯಲ್ಲಿ ಬಿದ್ದಿತು. ಅದರಿಂದ ದೊಡ್ಡ ಉರಿಯೆದ್ದು ಮೇಲಿದ್ದ ವಿಮಾನದವರೆಗೆ ಚಾಚಿತು. ಆ ಆಲಯದ ಇತರ ಭಾಗಗಳಮೇಲೆ ೩ ಸಿಡಿಮದ್ದುಗಳು ಬಿದ್ದು ಎಲ್ಲಕಡೆಯೂ ಬೆಂಕಿಯನ್ನು ಹಚ್ಚಿಸಿ ಧ್ವಂಸಮಾಡಿತು.

ಇಂಗ್ಲೀಷ್ ಫ್ರೆಂಚ್ ವೈಮಾನಿಕರು ಬೆಕ್ಯೂಸಿನ ಹತ್ತಿರ ಜರ್ಮನರ ಒಂದು ಜಪ್ಪಲಿನ್ ಆಕಾಶನಾವೆಯಮೇಲೆ ಸಿಡಿಮದ್ದನ್ನು ಹಾಕಿ ಕೆಳಕ್ಕೆ ಕೆಡಹಿಸಿದರು.

ಜರ್ಮನರ ಒಂದು ದೊಡ್ಡ ಆಕಾಶನಾವೆಯು ರಾತ್ರಿಯ ಹೊತ್ತು ಟೆರ್ಲ್ಲಿಮಾಂಟಿಯ ಹತ್ತಿರ ಕಾಡಿನ ಗಿಡಗಳ ಮಧ್ಯದಲ್ಲಿ ಬಿದ್ದು ಸಂಪೂರ್ಣವಾಗಿ ನಾಶವಾಯಿತು. ಒಳಗಿದ್ದ ೪೨ ಮಂದಿಯಲ್ಲಿ ೧೭ ಜನರು ಸತ್ತರು.

ಕಳೆದ ತಾ|| ೮ ರಲ್ಲಿ ಮಿತ್ರಮಂಡಲಿಯ ೬ ಯಾನಗಳು ಆಸ್ಟೆಂಡ್‌ಪಟ್ಟಣದಮೇಲೆ ಹೋಗಿ ಅಲ್ಲಿ ಜರ್ಮನರ ಸಬ್‌ಮೆರೀನುಗಳನ್ನು ಸರಿಪಡಿಸುವ ಕರ್ಮಾಗಾರದಮೇಲೆ ೧೧ ಸಿಡಿಮದ್ದುಗಳನ್ನೂ, ಸೈನಿಕರ ಮುಖ್ಯವಾದ ತಾಣದಮೇಲೆ ೪ ಮದ್ದಿನ ಗೋಳಗಳನ್ನೂ ಹಾಕಿ ಬಹಳ ನಷ್ಟಮಾಡಿ ಸೈನಿಕರೆಲ್ಲಾ ವಿಮಾನಗಳಸಮೇತ ಸುರಕ್ಷಿತವಾಗಿ ಬಂದರು.

ಮಿತ್ರಮಂಡಲಿಯ ವಿಮಾನಸೇನಾಶಾಖೆಯವರು ಪ್ರಕಟಮಾಡಿರುವ ವರದಿಯಪ್ರಕಾರ ಇಂಗ್ಲೀಷ್ ಫ್ರೆಂಚ್ ವೈಮಾನಿಕರು ಯುದ್ಧಾರಂಭಕಾಲದಿಂದ ಹಿಡಿದು ಇದುವರೆಗೆ ಶತ್ರುಗಳ ಸ್ಥಿತಿಗತಿಗಳನ್ನರಿತು ಬರುವುದಕ್ಕಾಗಿ ೧೦ ಸಾವಿರ ಆವೃತ್ತಿ ಹಾರಿಹೋಗಿ ಸಂಚರಿಸಿಕೊಂಡು ಬಂದಿರುವರೆಂದೂ, ಒಟ್ಟಿಗೆ ಅವರ ಪ್ರಯಾಣವು ೧೮ ಸಾವಿರ ಗಂಟೆಗಳಕಾಲ ಜರುಗಿರುವುದೆಂದೂ, ಅವುಗಳು ಮಾಡಿದ ಪ್ರಯಾಣದದೂರವು ೧೨೨೫೦೦೦ ಮೈಲಿಗಳು (ಎಂದರೆ ೪೯ ಆವೃತ್ತಿ ಭೂಪ್ರದಕ್ಷಿಣವನ್ನು ಮಾಡಿದಷ್ಟು) ಆಗಿರುವುದೆಂದು ಗೊತ್ತಾಗುತ್ತದೆ.

ತುರ್ಕಿ

ಅರೇಬಿಯಾದಲ್ಲಿ ಮಾರ್ಚಿ ತಾ|| ೩ರಲ್ಲಿ ಇಂಗ್ಲೀಷ್ ಪಕ್ಷದ ಸೈನಿಕರು ಹವಾಸಿನಿಂದ ಪಶ್ಚಿಮಕ್ಕೆ ೧೦ ಮೈಲಿಗಳ ದೂರ ಹೋಗಲಾಗಿ ಅಲ್ಲಿದ್ದ ಅರೇಬಿಯನ್ನರೊಡನೆ ತುರ್ಕಿಯವರು ಸೇರಿ ನಮ್ಮವರ ಮೇಲೆ ಯುದ್ಧಮಾಡಿದರು. ಅರಬ್ಬಿಯವರಲ್ಲಿ ೩೦೦ ಮಂದಿ ಸತ್ತರು; ೫೦೦ ಮಂದಿಗಳಿಗೆ ಏಟುಬಿದ್ದಿರುವುದು. ಇಂಗ್ಲೀಷ್ ಸೈನ್ಯದಲ್ಲಿ ೬೨ ಮಂದಿ ಸತ್ತರು; ೧೨೩ ಮಂದಿಗಳಿಗೆ ಗಾಯವಾಯಿತು. ಮರುದಿನ ನಮ್ಮ ಅಶ್ವಸೈನ್ಯದವರು ಹೋಗಿ ನೋಡುವಲ್ಲಿ ಶತ್ರುಗಳಕಡೆ ಯುದ್ಧೋತ್ಸವವೆಲ್ಲಾ ಅಡಗಿ ತಣ್ಣಗಾಗಿದ್ದಿತು.

ಇತ್ತ ಏಷ್ಯಾಮೈನರಿಗೆ ಸೇರಿದ ಸಮುದ್ರತೀರಪಟ್ಟಣವಾದ ಸ್ಮರ್ನಾದಕಡೆಗೆ ಇಂಗ್ಲೀಷರ ಹಡಗುಗಳು ಫಿರಂಗಿಗುಂಡುಗಳನ್ನು ಹೊಡೆದು ಕೋಟೆಗಳ ಮೇಲಣ ಫಿರಂಗಿಗಳ ಸದ್ದನ್ನಡಗಿಸಿ ಕೋಟೆಗಳಿಗೆ ಬಹಳ ನಷ್ಟವನ್ನುಂಟುಮಾಡಿದುವು. ಒಳಗಿದ್ದ ೨ ಮದ್ದಿನ ಕೋಣೆಗಳು ಸುಟ್ಟುಹೋದುವು. ರಷ್ಯನರ ಯುದ್ಧದ ಹಡಗುಗಳು ಸೈನ್ಯಸಮೇತವಾಗಿ ಕಪ್ಪುಕಡಲಿನಿಂದ ಬಾಸ್ಫರಸ್ಸಿನ ಕಡೆಗೆ ಬರುತ್ತಿರುವುವೆಂದು ಗೊತ್ತಾಗುತ್ತದೆ. ಬಾಸ್ಫರಸ್ ಎಂಬುದು ಕಪ್ಪುಸಮುದ್ರದ ಬಾಯಿಯಲ್ಲಿ ಕಾನ್‌ಸ್ಟಾಂಟಿನೋಪಲ್ಲಿಗೆ ಹೋಗುವ ದ್ವಾರದಲ್ಲಿದೆ. ಈ ಕಪ್ಪುಸಮುದ್ರದಲ್ಲಿನ ರಷ್ಯನ್ ಯುದ್ಧನಾವೆಗಳು ತುರ್ಕಿಗೆ ಎಜ್ಜರ್-ಗುಲ್ಡಾಕ್ ಎರೆಗ್ಲಿ-ಮೊದಲಾದ ೫-೬ ಸ್ಥಳಗಳ ಮೇಲೆ ಗುಂಡುಗಳನ್ನು ಹೊಡೆದು ಅವುಗಳಲ್ಲಿದ್ದ ಫಿರಂಗಿಗಳ ಸದ್ದನ್ನು ಅಡಗಿಸಿ ಆ ಪ್ರದೇಶದಲ್ಲಿದ್ದ ಕೆಲ ರೇವೆಗಳನ್ನು ಧ್ವಂಸಮಾಡಿ, ತೀರಗಳಲ್ಲಿದ್ದ ೮ ಹಡಗುಗಳನ್ನು ಕೂಡ ಮುಳುಗಿಸಿವೆ.

ಡಾರ್ಡನೆಲ್ಸ್.

ಈ ಜಲಸಂಧಿಯೊಳಗೆ ವಾತಾವರಣಸ್ಥಿತಿಯು ಅನುಕೂಲವಾಗಿದ್ದುದರಿಂದ ಇಲ್ಲಿನ ಯುದ್ಧವನ್ನು ಕಳೆದ ತಾ|| ೩ ರಿಂದ ಮಿತ್ರಮಂಡಲಿಯವರು ಅಖಂಡವಾಗಿ ನಡೆಯಿಸುತ್ತಿದ್ದಾರೆ. ಇಲ್ಲಿ ಕೂಡಿರುವ ಹಡಗುಗಳೆಲ್ಲಾ ಒಟ್ಟು ೫೨ ಇವೆ. ನೌಕಾವಿಮಾನಗಳು ಮೇಲಕ್ಕೆ ಹಾರಿ ಶತ್ರುಗಳ ಬಲಾಬಲಸ್ಥಿತಿಗಳನ್ನು ತಿಳಿಯುತ್ತಲೂ, ಕೆಲ ಕ್ರೂಯಿಸರುಗಳು ಮುಂದಾಗಿ ಹೋಗಿ ನೀರಿನಲ್ಲಿ ಶತ್ರುಗಳು ಬಿಟ್ಟಿರುವ ಸಿಡಿಮದ್ದಿನ ಗೋಳಗಳನ್ನೆಲ್ಲಾ ಸೆಳೆದುಹಾಕಿ ಮಾರ್ಗವನ್ನು ನಿರುಪದ್ರವಗೊಳಿಸುತ್ತಲೂ ಇವೆ. ಪ್ರಸಿದ್ಧವಾದ ಕ್ವೀನ್‌ಎಲಿಜ್‌ಬೆತ್ ಹಡಗಿಗೆ ಸಮನಾದ ಮತ್ತೊಂದು ಹಡಗು ಈಗ ಡಾರ್ಡನೆಲ್ಸಿಗೆ ಬಂದು ಸೇರಿರುತ್ತದೆ. ಪಶ್ಚಿಮದಕಡೆಯಿಂದ ಈ ಜಲಸಂಧಿಗೆ ನುಗ್ಗಿದ ಮಿತ್ರಮಂಡಲಿಯ ನೌಕೆಗಳು ಉಭಯಪಾರ್ಶ್ವದಲ್ಲೂ ದಡಗಳ ಮೇಲೆ ಎತ್ತರವಾಗಿಯೂ ಸಾಯುಧವಾಗಿಯೂ ಇರುವ ತುರ್ಕಿಯವರ ಕೋಟೆಗಳ ಮೇಲೆ ಫಿರಂಗಿಗಳನ್ನು ಹಾರಿಸಿ ಒಂದೊಂದನ್ನಾಗಿ ಧ್ವಂಸಮಾಡುತ್ತ ಇದುವರೆಗೆ ಕಾಲುಭಾಗಕ್ಕಿಂತ ಹೆಚ್ಚಾಗಿ ನುಗ್ಗಿಹೋಗಿವೆ. ಶತ್ರುಗಳು ಅಲ್ಲಲ್ಲಿಗೆ ಕೋಟೆಯಮೇಲಿಂದ ಫಿರಂಗಿಗಳನ್ನು ಹಾರಿಸುತ್ತಲೇಬಂದಿದ್ದಾರೆ. ಮೇಲಕ್ಕೆ ಹಾರಿದ ಆಕಾಶನಾವೆಗಳಮೇಲೂ ಗುಂಡನ್ನು ಹೊಡೆಯುತ್ತಿದ್ದಾರೆ. ನಮ್ಮವರ ಹಡಗುಗಳಲ್ಲಿ ಅನೇಕ ಸೈನಿಕರು ಯುದ್ಧಾಯತ್ತರಾಗಿದ್ದಾರೆ. ಅನುವಾದಾಗ ಇವರು ದಡಗಳಲ್ಲಿಳಿಸಲ್ಪಟ್ಟು ಶತ್ರುಗಳಮೇಲೆಬಿದ್ದು ಯುದ್ಧಮಾಡುತ್ತಿದ್ದಾರೆ. ಜಲಸಂಧಿಯ ಮುಖದ್ವಾರದಲ್ಲಿ ಇಂಥ ಕೆಲ ಸೈನಿಕರು ಇಳಿದು ಅಲ್ಲಿದ್ದ ತುರ್ಕಿಯವರೊಡನೆ ಚಿಕ್ಕ ಯುದ್ಧವನ್ನು ಮಾಡಿ ಓಡಿಸಿದರು. ಆಗ ಇಂಗ್ಲೀಷ್ ಸೈನಿಕರಲ್ಲಿ ೧೯ ಮಂದಿ ಸತ್ತರು; ಮೂವರು ಕಾಣದೆ ಹೋಗಿದ್ದಾರೆ; ೨೫ ಮಂದಿಗೆ ಏಟು ಬಿದ್ದಿತು. ಕ್ವೀನ್‌ಎಲಿಜ್‌ಬೆತ್ ಮೊದಲಾದ ಅನೇಕ ಹಡಗುಗಳು ಬಲವಾದ ಗುಂಡುಗಳನ್ನು ೨೦-೨೧ ಸಾವಿರ ಗಜಗಳ ದೂರದಿಂದ ಶತ್ರುಗಳ ಕೋಟೆಗಳಮೇಲೂ ಸೇನಾಭವನಗಳಮೇಲೂ ಮದ್ದಿನ ಕೋಣೆಗಳಮೇಲೂ ಫಿರಂಗಿಗಳಮೇಲೂ ಭೀಕರವಾಗಿ ಹೊಡೆದು ಧ್ವಂಸಮಾಡಿರುತ್ತವೆ. ತುರ್ಕಿಯವರು ಜರ್ಮನರ ಹವಿಟ್ಜರ್ ಎಂಬ ೩ ದೊಡ್ಡ ಫಿರಂಗಿಗಳನ್ನು ಕೋಟೆಯಮೇಲೆ ತಂದಿಟ್ಟು ಕ್ವೀನ್‌ಎಲಿಜ್‌ಬೆತ್ತಿನಮೇಲೆ ಗುಂಡು ಹೊಡೆಯಿಸಿದರು. ಆ ಗುಂಡುಗಳು ಬಹುದೂರಕ್ಕೆ ಹೋಗುವವಾದುದರಿಂದ ಎಲಿಜ್‌ಬೆತ್ತಿಗೆ ತಗುಲಿದರೂ ಯಾವ ನಷ್ಟವನ್ನೂ ಉಂಟುಮಾಡಲಿಲ್ಲ. ಫ್ರೆಂಚರ ಕೆಲ ಹಡುಗುಗಳು ಗುಂಡುಗಳನ್ನು ಹಾರಿಸುತ್ತಿದ್ದ ಇಂಗ್ಲೀಷರ ಹಡಗುಗಳ ಪಕ್ಕಲಲ್ಲಿ ಅಡ್ಡಲಾಗಿ ನಿಂತು ಶತ್ರುಗಳ ಗುಂಡಿನೇಟುಗಳು ಅವಕ್ಕೆ ತಗುಲದಂತೆ ಮಾಡಿ ನಿಂತಿದ್ದುವು. ಆದರೂ ಇಂಗ್ಲೀಷರ ಫ್ರೆಂಚರ ಕೆಲವು ಹಡಗುಗಳಿಗೆ ಶತ್ರುಗಳ ಗುಂಡಿನೇಟು ತಗುಲಿ, ಸ್ವಲ್ಪ ನಷ್ಟಮಾತ್ರ ಆಯಿತು. ಒಂದು ಹಡಗಿನಲ್ಲಿದ್ದ ಮೂರುಮಂದಿಗೆ ಏಟುಬಿದ್ದಿತು. ಹಾರುತ್ತಿದ್ದ ಆಕಾಶವಿಮಾನಗಳಲ್ಲಿ ವಾತಾವರಣದ ವಿಷಮಸ್ಥಿತಿಯಿಂದ ಒಂದೆರಡು ಕೆಳಕ್ಕೆ ಬಿದ್ದುವು. ಎರಡಕ್ಕೆ ಶತ್ರುಗಳ ಗುಂಡಿನೇಟು ಬಿದ್ದುವು. ಒಳಗಿದ್ದ ಲೆಫ್ಟನೆಂಟ್ ಡಗ್ಲಸ್ ಎಂಬುವರಿಗೆ ಏಟುಬಿದ್ದಿತು. ಆದರೂ ಅವರು ಬದುಕಿ ದಡವನ್ನು ಸೇರಿದರು. ಕರ್ಸಾನ್ ಎಂಬ ವೈಮಾನಿಕನು ವಿಮಾನದಲ್ಲಿ ಹಾರಿಹೋಗುತ್ತಿರುವಾಗ ತುರ್ಕಿಯವರ ಫಿರಂಗಿಗುಂಡುಗಳ ಏಟು ಬಿದ್ದಿತು. ಮಿತ್ರಮಂಡಲಿಯವರ ಹಡಗುಗಳು ಮುಂದುಮುಂದಕ್ಕೆ ಸಾಗಿಹೋಗುತ್ತಲಿವೆ. ಅಲ್ಲಿನ ಸ್ಥಿತಿಗಳು ಬಹಳ ಅಪಾಯಕರವಾಗಿವೆ. ಜಲಸಂಧಿಯ ಉತ್ತರಪಾರ್ಶ್ವದಲ್ಲಿ ದ್ವೀಪಸದೃಶವಾದ ಒಂದು ಸಣ್ಣ ಭೂಪ್ರದೇಶವಿದೆ. ಇದಕ್ಕೆ ಗಲ್ಲಿಪೋಲಿ ಎಂದು ಹೆಸರು. ಜಲಸಂಧಿಯಲ್ಲಿ ಪೂರ್ವಕ್ಕೆಹೋಗುತ್ತ ಬಂದಂತೆ ಮುಖ್ಯ ಭೂಭಾಗದೊಡನೆ ಸೇರುವ ಕಡೆಯ ಸ್ಥಲವು ಬಹಳ ಇಕ್ಕಟ್ಟಾಗಿದೆ. ಈ ಭಾಗದ ಸಮುದ್ರಮಾರ್ಗಕ್ಕೆ ನೆರ್ರಾಸ್ ಜಲಸಂಧಿಯೆಂದು ಹೆಸರು. ಇಲ್ಲಿಯವರೆಗೆ ಈಗ ಮಿತ್ರಮಂಡಲಿಯವರ ಹಡಗುಗಳು ನುಗ್ಗಿರುತ್ತವೆ. ಇಲ್ಲಿ ನಿಂತಿರುವ ಹಡುಗುಗಳ ಮೇಲಿನ ಫಿರಂಗಿಗಳಿಂದ ಹೊಡೆಯಲ್ಪಟ್ಟ ಗುಂಡುಗಳು ಆ ದ್ವೀಪಕಲ್ಪದ ಭೂಭಾಗವನ್ನು (ಅದರಲ್ಲಿರುವ ಗಿಡಗೆಂಟೆಗಳನ್ನು ಸಹ) ದಾಟಿ, ಜಲಸಂಧಿಯನ್ನೂ ದಾಟಿ ಅದರ ಆಚೆದಡದಲ್ಲಿ ತುರ್ಕಿಯವರು ಕಟ್ಟಿಕೊಂಡಿರುವ ಕೋಟೆಗಳಿಗೆ ಹೋಗಿ ಬಡಿದು ಹಾಳುಮಾಡಿರುತ್ತಿವೆ. ಈ ಗುಂಡುಗಳು ಮೇಲುಗಡೆಯಲ್ಲಿ ಹಾದು ಹೋಗುತ್ತಿರುವಾಗ ಮಿತ್ರಮಂಡಲಿಯವರ ಕೆಲ ಹಡುಗುಗಳು ಅದೇ ಜಲಸಂಧಿಯಲ್ಲಿ ನಿಂತುಕೊಂಡು ಗುಂಡುಗಳು ಅಗ್ನಿಗೋಳಗಳಂತೆ ಹೋಗುತ್ತಿರುವ ಅದ್ಭುತವನ್ನು ನೋಡುತ್ತಿದ್ದುವು. ಭೂಭಾಗದ ಅರಣ್ಯವನ್ನೂ ಅದರ ಮುಂದಣ ಜಲಸಂಧಿಯನ್ನೂ ದಾಟಿಕೊಂಡು ಹೋಗುತ್ತಲಿರುವ ತಮ್ಮ ಗುಂಡುಗಳು ಮಧ್ಯದಲ್ಲಿ ಅಡ್ಡಲಾಗಿರುವ ತಮ್ಮ ಕಡೆಯ ಹಡಗುಗಳಿಗೆ ಲೇಶಮಾತ್ರವೂ ತಗುಲದೆ ಇದಿರಿಗೆ ದೂರದಲ್ಲಿರುವ ಶತ್ರುಗಳ ಕೋಟೆ ಮೊದಲಾದುವುಗಳನ್ನು ಮಾತ್ರ ಭೇದಿಸುವಂತೆ ಇಂಗ್ಲೀಷ್ ನೌಕಾದಳದವರು ಗುರಿಕಟ್ಟಿ ಪ್ರಯೋಗಿಸುತ್ತಿರುವುದು ಅತ್ಯದ್ಭುತವಲ್ಲವೆ? ಹೀಗೆ ಮಾಡುತ್ತ ಈಗ ಮಿತ್ರಮಂಡಲಿಯ ನೌಕಾದಳವು ಜಲಸಂಧಿಯನ್ನು ಬಹು ಜಾಗರೂಕತೆಯಿಂದ ಆತ್ಮಹಾನಿಗೆ ವಿಶೇಷಾವಕಾಶವಿಲ್ಲದಂತೆ ಕಾರ್ಯಸಾಧನೆಯನ್ನು ಮಾಡುತ್ತಲಿದಾರೆ. ಮುಂದೆ ಇದರ ತುದಿಯಲ್ಲಿ ತುರ್ಕಿಯವರು ಭೂಯುದ್ಧವನ್ನು ಕೊಡುವುದಕ್ಕೆ ಇನ್ವೆರ್‌ಪಾಷಾನ ಆಧಿಪತ್ಯದಿಂದ ೧ಲಕ್ಷ ಸೈನ್ಯವನ್ನು ಅಣಿಮಾಡಿರುವರೆಂಬ ವಾರ್ತೆಯಿದೆ. ಅದನ್ನಿದಿರಿಸುವುದಕ್ಕಾಗಿ ಮಿತ್ರಮಂಡಲಿಯವರು ತಕ್ಕ ಪ್ರಯತ್ನವನ್ನು ಮಾಡಿದ್ದಾರೆ. ಫ್ರೆಂಚರು ಉತ್ತರಾಫ್ರಿಕಾದಲ್ಲಿ ಸೈನ್ಯವನ್ನು ಅಣಿಮಾಡಿದ್ದಾರೆ. ತುರ್ಕಿಯವರ ಹಾವಳಿಯು ಸೂಯೇಜ್‌ಕಾಲ್ವೆಯ ಹತ್ತಿರ ಇನ್ನುನಡೆಯುವಂತೆ ತೋರುವುದಿಲ್ಲವಾದ ಕಾರಣ ಅಲ್ಲಿನ ಸೇನೆಯೂ ಮತ್ತೂ ಈಜಿಪ್ಟಿಗೆ ಹೊಸದಾಗಿ ಕಳುಹಿಸಲ್ಪಡುತ್ತಿರುವ ಇಂಗ್ಲೀಷ್‌ಸೈನ್ಯವೂ ಕೂಡ ಅಲ್ಲಿಗೆ ಬಂದೊದಗುವುದಾಗಿದೆ. ಪೂರ್ವದ ಕಡೆಯಿಂದ ಕಪ್ಪುಸಮುದ್ರ ಮಾರ್ಗವಾಗಿ ರಷ್ಯನ್ ಸೈನ್ಯವು ಸಾಗಿಬರುತ್ತಿದೆ. ದಿನಕ್ರಮೇಣ ಡಾರ್ಡನೆಲ್ಸಿನ ಉಭಯಪಾರ್ಶ್ವಗಳೂ ಮಿತ್ರಮಂಡಲಿಯವರ ವಶವಾಗಿ ಇಕ್ಕಡೆಯ ಸೇನೆಯೂ ಒಟ್ಟುಗೂಡಿದನಂತರ ತುರ್ಕಿಯ ಪರಿಣಾಮವು ಶೋಚನೀಯವಾಗುವುದರಲ್ಲಿ ಸಂಶಯವಿಲ್ಲ. ಭವಿಷ್ಯತ್ತನ್ನು ಈ ಮುಂಚೆಯೆ ಯೋಚಿಸಿಕೊಂಡು ತುರ್ಕಿ ಸುಲ್ತಾನರನ್ನೂ ಅವರ ರಾಣಿವಾಸದವರನ್ನೂ ಸಮಯಬಿದ್ದರೆ ಥಟ್ಟನೆ ರಾಜಧಾನಿಯಿಂದ ಹೊರಕ್ಕೆ ಸಾಗಿಸುವುದಕ್ಕಾಗಿ ಕಾನ್‌ಸ್ಟಾಂಟಿನೋಪಲ್ಲಿನಲ್ಲಿ ಹೊಗೆಬಂಡಿಗಳನ್ನು ಕೂಡ ಅಣಿಮಾಡಿಕೊಂಡಿರುವರೆಂದು ವಾರ್ತೆಯುಂಟಾಗಿದೆ.

ಮೈಸೂರ್ ಸ್ಟಾರ್.

ಸನ್ ೧೯೧೫ ನೆಯ ಮಾರ್ಚಿ ತಾ|| ೧೪ ನೆಯ ಭಾನುವಾರ.

ನೂತನವರ್ಷವು.

ನಾಳೆಗೆ ಆನಂದನಾಮಸಂವತ್ಸರವು ಮುಗಿಯುವುದು. ರಾಕ್ಷಸ ಸಂವತ್ಸರವು ಮಂಗಳವಾರದಿಂದ ಆರಂಭವಾಗುವುದು. ಜಗದೀಶನ ಆಜ್ಞೆಯಂತೆ ಕಾಲಚಕ್ರಪರಿವರ್ತನ ಕ್ರಮದಲ್ಲಿ ಒಂದು ಆವೃತ್ತಿಯು ಮುಗಿದಂತಾಯಿತು. ಅದರ ಹಿಂದೆಯೇ ಮತ್ತೊಂದು ಸುತ್ತು ಆರಂಭಿಸುವುದರಲ್ಲಿದೆ. ತರುಗುಲ್ಮಲತಾದಿಗಳು ಹಿಂದಿನ ವರ್ಷದ ಹಣ್ಣೆಲೆಗಳ ಸಂಬಂಧವನ್ನೆಲ್ಲಾ ಕಳೆದುಕೊಂಡು ಚಕಚಕಿಸುವ ನವೀನ ಪಲ್ಲವಕುಸುಮಾದಿಗಳನ್ನು ತಳೆದು ನೂತನ ವರ್ಷದ ವಸಂತಾಗಮನವನ್ನು ಸ್ವಾಗತಿಸುತ್ತಿವೆ. ಮಾನವವರ್ಗದವರೂ ಸಹ ಕಳೆದವರ್ಷದ ಕಷ್ಟಗಳನ್ನೆಲ್ಲಾ ಮರೆತು, ನವೀನವರ್ಷದ ಸುಖವನ್ನು ಬಯಸಿ, ನೂತನಾಂಬರಾದಿಗಳಿಂದಲಂಕೃತರಾಗಿ ನೂತನವರ್ಷವನ್ನು ಸ್ವಾಗತ ಮಾಡುವುದರಲ್ಲಿದ್ದಾರೆ. ಆರಗುಲ್ಮಾದಿಗಳು ವಸಂತಾಗಮದಲ್ಲಿ ಬಹಿರಂಕೃತವಾಗುತ್ತಿವೆ. ಮಾನವರೂ ಈ ಕಾಲದಲ್ಲಿ ನೂತನವಸ್ತ್ರಾಲಂಕೃತರಾಗುತ್ತಾರೆ. ಆ ತರುಜಾತಿಯಿಂದ ಆಗುವಷ್ಟು ಪರೋಪಕಾರವನ್ನು ಕೂಡ ಯಾವ ಮಾನವರು ಮಾಡಲಾರದೆ ಹೋಗುವರೋ ಅಂಥವರು ಕೇವಲ ಬಹಿರಲಂಕರಣ ಮಾತ್ರದಿಂದ ನೂತನವರ್ಷಾಗಮೋತ್ಸವವನ್ನು ಕಳೆದುಬಿಟ್ಟರೆ ಪ್ರಯೋಜನವೇನು? ಮಾನವಜನ್ಮಕ್ಕೆ ಸಾರ್ಥಕತೆಯೇನು? ಕಳೆದುಹೋದ ವರ್ಷವು ಹೆಸರಿನಲ್ಲಿ ಆನಂದನಾಮಕವಾಗಿದ್ದರೂ ಕಾರ್ಯದಲ್ಲಿ ರಾಷ್ಟ್ರಕ್ಕೆ ಆನಂದಫಲಗಳನ್ನು ಉಂಟುಮಾಡಲಿಲ್ಲವಾದಕಾರಣ, ಕಾಲಫಲಾಫಲವು ವರ್ಷದ ನಾಮವನ್ನು ಅನುಸರಿಸಿಕೊಂಡಿರುವುದಿಲ್ಲವೆಂಬುದನ್ನು ಮನಗಂಡಿರುವ ಪ್ರಜಾವರ್ಗವು, ಬರುವ ರಾಕ್ಷಸ ವರ್ಷದ ನಾಮಶ್ರವಣ ಮಾತ್ರದಿಂದಲೇ ಅದು ಭೀಕರಫಲಪ್ರದವಾದುದೆಂಬ ಅಂಜಿಕೆಯನ್ನು ಪಡೆಯಬೇಕಾದುದಿಲ್ಲ. ಗತಿಸಿಹೋಗುವುದು ಕಾಲಧರ್ಮವಾಗಿದೆ. ಅದನ್ನು ಉಪಯೋಗಿಸಿಕೊಂಡು ಧನ್ಯರಾಗುವುದು ಮಾನವರವಶದಲ್ಲಿದೆ. ಆದುಕಾರಣ ತಮ್ಮ ಜೀವಮಾನದ ಕರ್ತವ್ಯವೇನೆಂಬುದನ್ನು ಸದ್ವಿಚಾರದಿಂದಲೂ ಸತ್ಪುರುಷರ ಆದರ್ಶದಿಂದಲೂ ಅರಿತು, ಸದ್ವರ್ತನ-ಸದ್ಭಕ್ತಿ-ಸದಾಲೋಚನೆಗಳಿಂದ ಮುಂದಣವರ್ಷದ ಕಾಲವನ್ನು ಕಳೆಯಲು ಕೃತಸಂಕಲ್ಪರಾಗಿ, ನಮ್ಮ ವಾಚಕವರ್ಗವು ಆ ವರ್ಷದ ಕಾಲವನ್ನು ಸಾರ್ಥಕಪಡಿಸಿಕೊಳ್ಳುವಂತೆ ಜಗದೀಶನು ಅನುಗ್ರಹಿಸಲಿ.

ಈಗ ಆರಂಭಿಸಲಿಕ್ಕಿರುವ ರಾಕ್ಷಸನಾಮ ಸಂವತ್ಸರದಲ್ಲಿ ರಾಜತ್ವ ಮಂತ್ರಿತ್ವಗಳೆರಡೂ ಅಂಗಾರಕನಿಗೆ ಪ್ರಾಪ್ತವಾಗಿವೆ. ಸಸ್ಯಾಧಿಪತ್ಯ-ಧಾನ್ಯಾಧಿಪತ್ಯ-ಮೇಘಾಧಿಪತ್ಯಗಳು ಸೌಮ್ಯಗ್ರಹಗಳಿಗೆ ಲಭಿಸಿವೆ. ಮಳೆಬೆಳೆಗಳ ಸ್ಥಿತಿಯು ಸಾಮಾನ್ಯವೆಂದು ಪಂಚಾಂಗಗಳಲ್ಲಿ ಹೇಳಲ್ಪಟ್ಟಿದೆ. ಮುಂಗಾರಿಗಿಂತ ಹಿಂಗಾರಿನ ಬೆಳಸುಗಳು ಚೆನ್ನಾಗಾಗುವವೆಂದೂ ಶ್ವೇತಭೂಮಿಗಳೂ ಶ್ವೇತಧಾನ್ಯಗಳೂ ಉತ್ತಮವಾಗಿ ಫಲಿಸುವುವೆಂದೂ, ಈ ವರ್ಷದಲ್ಲಿ ಗ್ರಹಣಗಳು ಸಂಭವಿಸುವುದಿಲ್ಲವೆಂದೂ, ಚೈತ್ರಶುದ್ಧ ಪಾಡ್ಯಮಿಯಿಂದ ಶ್ರಾವಣಶುದ್ಧ ತದಿಗೆಯ ಪರ್ಯಂತ ಕಾಲಸರ್ಪನಾಮಕ ಯೋಗವಿರುವುದರಿಂದ ರಾಜರಾಜರಲ್ಲಿ ಯುದ್ಧಸಂಭವವು ಅಧಿಕವಾಗಿರುವುದೆಂದೂ ಹೇಳಲ್ಪಟ್ಟಿದೆ. ಈ ವರ್ಷದಲ್ಲಿ ವೈಶಾಖಮಾಸವು ಅಧಿಕವಾಗಿರುವುದು. ವರ್ಷಾರಂಭಕಾಲದಲ್ಲಿ ಗುರುವು ಕುಂಭರಾಶಿಗತನಾಗಿರುವುದರಿಂದ ದೇಶದಲ್ಲಿ ಜಲಸಮೃದ್ಧಿಯುಂಟಾಗುವುದೆಂದು ಹಿರಿಯರ ಹೇಳಿಕೆ.

ಜಗದೀಶನ ಅನುಗ್ರಹದಿಂದ ಲೋಕವಿನಾಶಕರವಾದ ಈಗಿನ ಯುದ್ಧವು ಬೇಗನೆ ಶಾಂತವಾಗಲೆಂದೂ, ಪ್ರಜೆಗಳ ಸರ್ವವ್ಯಾಪಾರಗಳೂ ಶಾಂತಿಯಿಂದ ನಡೆದು ಸುಖಸಂಪತ್ತಿಗಳು ನೆಲಸುವಂತೆ ಆಗಲೆಂದೂ, ನಮ್ಮ ಭರತಖಂಡವು ಆಂಗ್ಲಸಾರ್ವಭೌಮರ ಶಾಶ್ವತಾಶ್ರಯದಲ್ಲಿ ಇತೋಪ್ಯತಿಶಯವಾದ ಸಂಪದ್ವೈಭವ ಸೌಖ್ಯಾತಿಶಯದಿಂದ ಮೆರೆಯುವಂತೆ ಆಗಲೆಂದೂ ಸಹ ಈ ನೂತನ ವರ್ಷಾರಂಭಕಾಲದಲ್ಲಿ ನೂತನ ಭಕ್ತ್ಯುತ್ಸಾಹಗಳಿಂದ ನಮ್ಮ ವಾಚಕವರ್ಗವೆಲ್ಲವೂ ಆ ಜಗದೀಶನನ್ನು ಪ್ರಾರ್ಥಿಸುವವರಾಗಲೆಂದೂ ಕೋರಿ ಅವರೊಡನೆ ನಾವೂನೂತನ ವರ್ಷವನ್ನು ಸ್ವಾಗತಿಸುತ್ತೇವೆ.

ಒಳದೇಶದ ವೃತ್ತಾಂತ.

ಚೆನ್ನಪಟ್ಟಣದ ಮ್ಯುನಿಸಿಪಲ್ ಕೌನ್ಸಿಲರುಗಳ ಅವಧಿಯು ಈ ದಿವಸಕ್ಕೆ ಮುಗಿಯುವುದರಿಂದ ಬರುವ ಜೂನ್ ಕಡೆಯವರೆಗೂ ಈಗಿರುವ ಕೌನ್ಸಿಲರುಗಳೇ ಇರಬೇಕೆಂದು ಸರ್ಕಾರದಪ್ಪಣೆಯಾಗಿದೆ.

ರಾಜಧಾನಿಯಲ್ಲೂ ಬೆಂಗಳೂರಿನಲ್ಲೂ ಬ್ರಾಹ್ಮಣ ವಿಧವೆಯರಿಗೆ ಅವರವರ ಮನೆಯಲ್ಲೇ ಪಾಠವನ್ನು ಹೇಳಿಕೊಡುವುದಕ್ಕಾಗಿ ಇಬ್ಬರು ಬೋಧಕರು ೬ ತಿಂಗಳ ಕಾಲದವರೆಗೆ ಸರ್ಕಾರದಿಂದ ನಿಯಮಿಸಲ್ಪಡುವುದಾಗಿ ತಿಳಿಯಬರುತ್ತದೆ.

ಬೆಳಗಾಮಿನ ಶ್ರೀಮತಿ ಮಥುರಾಬಾಯಿ, ಎಲ್. ಎಂ. ಅಂಡ್ ಎಸ್ ರವರು ಕಡೇತರಗತಿಯ ಅಸಿಸ್ಟೆಂಟ್ ಸರ್ಜನರಾಗಿ ಮೈಸೂರ ಸರ್ಕಾರದವರಿಂದ ನಿಯಮಿಸಲ್ಪಟ್ಟು ಬೆಂಗಳೂರ ಹೆಂಗಸಾಸ್ಪತ್ರೆಯಲ್ಲಿ ಕೆಲಸಮಾಡಲು ನಿಯೋಜಿಸಲ್ಪಟ್ಟಿರುವರು.

ಶ್ರೀಮನ್ಮಹಾರಾಜರ ಸ್ವಾರಿಯು ರಾಣೀವಾಸದವರೊಡನೆ ನಿನ್ನೆಯದಿನ ರಾಜಧಾನಿಗೆ ಬರುವುದಾಗಿದ್ದಿತು. ಮತ್ತು ಈ ತಾ|| ೨೬ರಲ್ಲಿ ವೈರಮುಡಿಯುತ್ಸವಕ್ಕಾಗಿ ಮೇಲುಕೋಟೆಗೂ ತಾ|| ೨೮ರಲ್ಲಿ ದೊಡ್ಡಜಾತ್ರೆಗಾಗಿ ನಂಜನಗೂಡಿಗೂ ಚಿತ್ತೈಸುವುದಾಗಿ ತಿಳಿಯುತ್ತೇವೆ.

ಬೆಂಗಳೂರಲ್ಲಿ ಮನೆಗಳ ಬಾಡಿಗೆಯು ಈಚೆಗೆ ಬಹಳವಾಗಿ ಹೆಚ್ಚಿರುವುದರಿಂದ ಸಿಟಿ ಮ್ಯುನಿಸಿಪಾಲಿಟಿಯವರು ತೆರಿಗೆಯನ್ನು ಪುನರ್ವಿಮರ್ಶೆಯಿಂದ ಹೆಚ್ಚಿಸುವ ಯೋಚನೆಯಲ್ಲಿರುವರು. ರಾಜಧಾನಿಯ ಮ್ಯುನಿಸಿಪಾಲಿಟಿಯವರೂ ಅದೇ ಅಭಿಪ್ರಾಯದಿಂದ ತೆರಿಗೆಯನ್ನು ಹೆಚ್ಚಿಸತಕ್ಕವರಾಗಿರುವರು.

ಈ ತಾ|| ೬ರಲ್ಲಿ ಬೆಂಗಳೂರ ಮಾರ್ವಾಡಿಗಳಲ್ಲಿ ೩೦-೪೦ ಜನರು ವನಭೋಜನಕ್ಕಾಗಿ ಗವಿಪುರಕ್ಕೆ ಹೋಗಿದ್ದು ರಾತ್ರಿ ೯|| ಗಂಟೆಯಲ್ಲಿ ಹಿಂದಿರುಗಿ ಊರಿಗೆ ಬರುತ್ತಿರುವಾಗ್ಗೆ ೩೦-೪೦ ಜನ ಕಳ್ಳರು ಮಾರ್ವಾಡಿಗಳ ಮೇಲೆ ಬಿದ್ದು ಅವರನ್ನು ಪ್ರಹರಿಸಿ ಅವರ ಮೈಮೇಲಿದ್ದ ೧೦೦ ರೂ. ಬೆಲೆಯ ಆಭರಣಗಳನ್ನಪಹರಿಸಿಕೊಂಡರು. ಮಾರ್ವಾಡಿಯವರ ಕೂಗನ್ನು ಕೇಳಿ ಹಳ್ಳಿಯ ಜನರು ಬರಲು, ಕಳ್ಳರು ಕಾಲಿಗೆ ಬುದ್ಧಿಯನ್ನು ಹೇಳಿದರು.

ದರ್ಬಾರ್ ಸರ್ಜನರೂ ಮತ್ತು ಜನರಲ್ ಆಸ್ಪತ್ರೆಯ ಇನ್‌ಛಾರ್ಜ್ ಆಫೀಸರೂ ಆದ ಲೆ|| ಕರ್ನಲ್ ಫೋರ್ಕ್ಸ್ ಸಾಹೇಬರು ಯುದ್ಧಭೂಮಿಯಲ್ಲಿ ವೈದ್ಯೋಪಚಾರಮಾಡುವುದಕ್ಕಾಗಿ ಕಳೆದವಾರ ಪ್ರಯಾಣಮಾಡಿದರು. ಇವರ ಪತ್ನೀಪುತ್ರರುಗಳು ಇಲ್ಲೇ ಇರುವರು.

ಈಗ ಬೆಂಗಳೂರಲ್ಲಿರುವ ಶ್ರೀ ಉತ್ತರಾದಿ ಮಠದ ಸ್ವಾಮಿಗಳು ಶ್ರೀಮನ್ಮಹಾರಾಜರವರ ಪ್ರಾರ್ಥನೆಯಮೇರೆ ಈ ದಿವಸ ಸಾಯಂಕಾಲ ೫ಗಂಟೆಯಲ್ಲಿ ಮಲ್ಲೇಶ್ವರದಿಂದ ರಾಜಧಾನಿಗೆ ಪ್ರಯಾಣಮಾಡುವರು. ಈ ಸಂದರ್ಭದಲ್ಲಿ ಮ್ಯುನಿಸಿಪಲ್ ಅ|| ಪ್ರೆಸಿಡೆಂಟರು ಕೌನ್ಸಿಲರುಗಳು, ಶೆಟ್ಟಿ ವರ್ತಕರುಗಳು ಮೊದಲಾದವರೊಡನೆ ಮಲ್ಲೇಶ್ವರದಲ್ಲಿರುವ ಶ್ರೀ ಕೃಷ್ಣದೇವರ ದೇವಸ್ಥಾನದ ಬಳಿ ಇದ್ದು ಮರ್ಯಾದೆಯಿಂದ ಇದಿರ್ಗೊಂಡು ಉತ್ಸವದೊಡನೆ ಮಲ್ಲೇಶ್ವರದಿಂದ ಹೊರಟು ಬಳೆಪೇಟೆ-ಚಿಕ್ಕಪೇಟೆ-ದೊಡ್ಡಪೇಟೆ ಕೋಟೆಗಳನ್ನು ಹಾದು ಬಸವನಗುಡಿಯಲ್ಲಿ ಆಂಜನೇಯಸ್ವಾಮಿ ದೇವಸ್ಥಾನದವರೆಗೂ ಬಂದು ಅಲ್ಲಿ ಶ್ರೀಗಳವರನ್ನು ಸಾಗಕಳುಹುವರು. ಸಿಲೇದಾರರ ಒಂದು ದಳದಾರಿಯೂ, ಸಿಪಾಯಿಗಳೂ ಮಲ್ಲೇಶ್ವರದಿಂದ ಬಸವನಗುಡಿಯ ಆಂಜನೇಯದೇವಸ್ಥಾನದವರೆಗೂ ಉತ್ಸವದೊಡನೆ ಹೊರಟು ಶ್ರೀಗಳವರಿಗೆ ಮರ್ಯಾದೆಯನ್ನು ಮಾಡಲೂ, ೫ ಗಂಟೆಯ ಹೊತ್ತಿನಲ್ಲಿ ೧೩ ಗುಂಡುಗಳನ್ನು ಹಾರಿಸಲೂ ಏರ್ಪಡಿಸುವಂತೆ ಚೀಫ್ ಕಮ್ಯಾಂಡೆಂಟರಿಗೂ ಉತ್ಸವ ಹೊರಡುವ ಮಾರ್ಗಗಳಲ್ಲಿ ಪೊಲೀಸರ ಕಾವಲು ಕ್ರಮವಾಗಿರುವಂತೇರ್ಪಡಿಸಲು ಡಿ|| ಕಮಿಷನರಿಗೂ ಸರ್ಕಾರದಪ್ಪಣೆಯಾಗಿದೆ.

ದಿವಾನರು ತಾ|| ೧೨ ರಲ್ಲಿ ಬೆಂಗಳೂರ ತಾ|| ಕಚೇರಿಗೆ ಹೋಗಿದ್ದು ಅಲ್ಲಿಯ ಕಾರ್ಯಕ್ರಮವನ್ನು ಪರಾಮರ್ಶಿಸಿಕೊಂಡು ಬಂದರು. ಬೆಳಗ್ಗೆ ಮೋಟಾರುಬಂಡಿಯಲ್ಲಿ ಕ್ಲೋಸ್‌ಪೇಟೆಗೆ ದಯಮಾಡಿ ಅಲ್ಲಿಯ ಕೆಲ ಗ್ರಾಮಗಳನ್ನು ನೋಡಿಕೊಂಡು ಅದೇಸಾಯಂಕಾಲ ಹಿಂದಿರುಗುವವರಾಗಿದ್ದರು. ಈ ತಾ|| ೨೦ರ ಬೆಳಗ್ಗೆ ಮೋಟಾರುಬಂಡಿಯಲ್ಲಿ ಚೆನ್ನಪಟ್ಟಣಕ್ಕೆ ಬಂದು ಅಲ್ಲಿಯ ತಾ|| ಕಚೇರಿ ಇಂಡಸ್ಟ್ರಿಯಲ್‌ಸ್ಕೂಲು ರೇಷ್ಮೆಯ ವ್ಯವಸಾಯ ಮೊದಲಾದುವುಗಳನ್ನು ನೋಡಿಕೊಂಡು ಅದೇ ದಿನ ಸಾಯಂಕಾಲ ಬೆಂಗಳೂರಿಗೆ ಹಿಂದಿರುಗಿ ಮಾರನೆಯ ದಿನದ ಬೆಳಗ್ಗೆ ಅನೇಕಲ್ಲಿಗೆ ಚಿತ್ತೈಸಿ ಅಲ್ಲಿಯ ಕೆಲ ಗ್ರಾಮಗಳನ್ನು ನೋಡಿಕೊಂಡು ಆ ದಿನ ಸಾಯಂಕಾಲವೇ ಬೆಂಗಳೂರಿಗೆ ಹಿಂದಿರುಗಿ ಬಂದು ತಾ|| ೨೩ ರಲ್ಲಿ ಮಾಗಡಿಗೆ ಹೋಗಿ ಕೆಲ ಗ್ರಾಮಗಳನ್ನು ನೋಡಿಕೊಂಡು ಆ ಸಾಯಂಕಾಲವೇ ಬೆಂಗಳೂರನ್ನು ಸೇರಿ ತಾ|| ೨೭ ರ ಮಧ್ಯಾಹ್ನ ೩ ಗಂಟೆಯಲ್ಲಿ ಮೋಟಾರುಬಂಡಿಯಲ್ಲಿ ಹೊರಟು ಕಾನಕಾನಹಳ್ಳಿಯ ಮಾರ್ಗವಾಗಿ ಸಾತನೂರನ್ನು ಸಾಯಂಕಾಲ ೬ ಗಂಟೆಗೆ ಸೇರಿ ಆ ರಾತ್ರಿ ಅಲ್ಲಿದ್ದು ತಾ|| ೨೮ ರ ಬೆಳಗ್ಗೆ ಮೇಕೆದಾಟಿಗೆ ಹೋಗಿ ಅದನ್ನು ನೋಡಿಕೊಂಡು ಸಾಯಂಕಾಲ ಸಾತನೂರಿಗೆ ಬಂದು ತಾ|| ೨೯ ರಲ್ಲಿ ಕಾನಕಾನಹಳ್ಳಿಗೆ ಪ್ರಯಾಣಮಾಡಿ ಅಲ್ಲಿಯ ಕೆಲ ಗ್ರಾಮಗಳನ್ನು ಪರಾಮರ್ಶಿಸಿಕೊಂಡು ಅದೇ ಸಾಯಂಕಾಲ ೬ ಗಂಟೆಗೆ ಬೆಂಗಳೂರನ್ನು ಸೇರುವುದಾಗಿ ಗೊತ್ತಾಗಿರುವುದು.

ದಿವಾನರು ತಮ್ಮ ಪ್ರೈವೇಟ್ ಸೆಕ್ರೆಟರಿಯವರು ಬೆಂಗಳೂರ ಡಿ|| ಕಮಿಷನರು ಮೊದಲಾದ ಅಧಿಕಾರಿಗಳೊಡನೆ ಕಳೆದ ತಾ|| ೫ ರಲ್ಲಿ ಹುಣಸಮಾರನಹಳ್ಳಿಗೆ ದಯಮಾಡಿಸಿ ಅಲ್ಲಿರುವ ಹುಣಸಮಾರನಹಳ್ಳಿ ಮಠದ ಏಜಂಟರಾದ ಮ|| ಗುರುನಂಜಪ್ಪೊಡೆಯರವರು ಗದ್ದೆ ತೋಟಗಳಿಗೆ ನೀರನ್ನು ಎತ್ತಿ ಹಾಯಿಸಲು ಹೊಸದಾಗಿ ತರಿಸಿರುವ ಯಂತ್ರವನ್ನು ಅವರು ತಮ್ಮ ಅಣ್ಣಂದಿರಾದ ಕೈ|| ಚೆನ್ನಬಸವಪ್ಪೊಡೆಯರ ಸ್ಮಾರಕವಾಗಿ ಕಟ್ಟಿಸಿರುವ ಸ್ಕೂಲನ್ನೂ ಪರಾಮರ್ಶಿಸಿಕೊಂಡು, ಅನಂತರ ಪ್ರಸಿದ್ಧ ಜ್ಯೋತಿಷ್ಕರಾದ ಮ|| ಬಿ. ಸೂರ್ಯನಾರಾಯಣರಾಯರನ್ನು ಕಂಡು ಅವರ ಕೂಡ ಮಾತನಾಡಿ ಅಲ್ಲಿಂದ ವಡೇರಹಳ್ಳಿಗೆ ಹೋಗಿ ಅಲ್ಲಿಯ ಪುರವಾಸಿಗಳಿಂದ ಮರ್ಯಾದಾಪುರಸ್ಸರವಾಗಿ ಬರಮಾಡಿಕೊಳ್ಳಲ್ಪಟ್ಟು ಅವರುಗಳು ತಮ್ಮ ಗ್ರಾಮಾಭಿವೃದ್ಧಿಗವಶ್ಯಕವಾದ ಎ. ವಿ. ಸ್ಕೂಲು, ಪೋಸ್ಟಾಫೀಸು ಮತ್ತು ಟೆಲಿಗ್ರಾಫ್ ಆಫೀಸುಗಳನ್ನು ಸ್ಥಾಪಿಸಿಕೊಟ್ಟು, ಮಾರ್ಗಗಳನ್ನು ಅಭಿವೃದ್ಧಿಗೊಳಿಸಬೇಕೆಂದು ಪ್ರಾರ್ಥಿಸಿ ಒಪ್ಪಿಸಿದ ವಿಜ್ಞಾಪನಪತ್ರಿಕೆಯನ್ನು ಸ್ವೀಕರಿಸಿ, ಅದಕ್ಕೆ ತಕ್ಕುತ್ತರವನ್ನಿತ್ತು, ಅಲ್ಲಿಂದ ದೇವನಹಳ್ಳಿಗೆ ಬಂದು ಗೋಪಾಲಕೃಷ್ಣಸ್ವಾಮಿಯ ದೇವಸ್ಥಾನ ಮತ್ತು ಟಿಪ್ಪುವಿನ ಜನ್ಮಸ್ಥಲಗಳನ್ನು ಪರಾಮರಿಸಿಕೊಂಡು, ತಾಲ್ಲೋಕು ಕಚೇರಿಗೆ ದಯಮಾಡಿ, ಅಲ್ಲಿಯ ಕಾರ್ಯಕ್ರಮಗಳನ್ನೆಲ್ಲಾ ಪರಾಮರ್ಶಿಸಿ ಪುರಪ್ರಮುಖರನ್ನು ಬರಮಾಡಿಕೊಂಡು, ಒಂದು ದರ್ಬಾರನ್ನು ನಡೆಯಿಸಿ ಆ ಸ್ಥಳದ ಕುಂದುಕೊರತೆಗಳೇನೆಂದು ವಿಚಾರಿಸಿದರು. ಆಗ ಮ್ಯು|| ಕೌನ್ಸಿಲರೂ, ರೆಪ್ರೆಜೆಂಟೆಟಿವ್ ಮೆಂಬರರೂ ಆದ ಮ|| ಡಿ. ಶ್ರೀಕಂಠರಾಯರು " ಶುಚಿಯಾದ ಕುಡಿಯುವ ನೀರಿಗೆ ಅಭಾವವಾಗಿದೆ. ಕೆರೆಗೆ ನೀರು ಬರುವ ಸ್ಥಲಗಳಲ್ಲಿ ಕಶ್ಮಲವಾಗಿ ಕುಡಿಯಲನರ್ಹವಾಗಿರುವುದರಿಂದ ಕಟ್ಟೆಯ ಮೇಲುಗಡೆಯ ಪ್ರದೇಶವನ್ನು ಕ್ರಯಕ್ಕೆ ತೆಗೆದುಕೊಂಡು ಶುಚಿಯಾಗಿಡಬೇಕು. ಇದಕ್ಕಾಗಿ ೪೦೦೦ ರೂ. ಅಂದಾಜು ಹಾಕಲ್ಪಟ್ಟಿದೆ. ಇಷ್ಟು ಹಣವನ್ನು ಕೊಡಲು ಮ್ಯುನಿಸಿಪಾಲಿಟಿಗೆ ಚೈತನ್ಯವು ಸಾಲದು." ಎಂದು ತಿಳಿಸಿದರು. ಈ ವಿಚಾರದಲ್ಲಿ ಬಹಳ ಚರ್ಚೆಯು ನಡೆದಮೇಲೆ ಸಾಹುಕಾರರಾದ ಮ|| ಎಲೆ ಕೃಷ್ಣಪ್ಪನವರೆದ್ದು ಈ ಕಾರ್ಯಕ್ಕಾಗಿ ಮ್ಯುನಿಸಿಪಾಲಿಟಿಯವರು ೧೦೦೦, ಸರ್ಕಾರದವರು ೨೦೦೦ ರೂ. ಗಳನ್ನು ಕೊಡುವುದಾದಲ್ಲಿ ತಾವು ೧೦೦೦ ರೂ. ಯನ್ನು ಕೊಡುತ್ತೇನೆಂದು ವಾಗ್ದಾನಮಾಡಲು ದಿವಾನರವರೊಪ್ಪಿ, ಅವರುದಾರಗುಣಕ್ಕಾಗಿ ಅವರನ್ನು ವಂದಿಸಿದರು. ಇನ್ನೂ ಕೆಲ ವಿಷಯಗಳ ಮೇಲೆ ಚರ್ಚೆಯು ನಡೆಯಿತು.

ವರ್ತಮಾನಸಂಗ್ರಹ.

ಯುದ್ಧದಲ್ಲಿ ಮಡಿದಂಥವರ ಪತ್ನಿಯರಿಗೆ ಜಾರ್ಜ್ ಸಾರ್ವಭೌಮರ ಅನುತಾಪವು ಮುದ್ರಣಮಾಡಿಸಲ್ಪಟ್ಟು ಕಳುಹಲ್ಪಡುತ್ತಿರುವುದು.

ಒಬ್ಬ ವೃದ್ಧನು ಒಬ್ಬ ಅಧಿಕಾರಿಯನ್ನು ನಿಲ್ಲಿಸಿ—ಕಳೆದ ೨೧ ವರ್ಷಗಳಿಂದ ಬಹಳ ಪ್ರಯಾಸಪಡುತ್ತಿರುವ ನನಗೇನಾದರೂ ದ್ರವ್ಯಸಹಾಯಮಾಡಬಾರದೆ?—ಎಂದು ಕೇಳಲು, ಆ ಅಧಿಕಾರಿಯು ಕನಿಕರಪಟ್ಟು ಅವನಿಗೆ ಅರ್ಧಸವರನನ್ನು ಕೊಟ್ಟು " ನೀನೇನು ಸೈನ್ಯದಲ್ಲಿದ್ದೆಯಾ ? '' ಎಂದು ಕೇಳಲು, " ನಾನು ನನ್ನ ೧೪ ನೆಯ ವರ್ಷದಿಂದ ಚೋರವೃತ್ತಿಯಲ್ಲಿದ್ದೆನು.'' ಎಂದು ಆ ವೃದ್ಧನುತ್ತರವನ್ನು ಕೊಟ್ಟನು.

ಜರ್ಮನರು ಫ್ರೆಂಚರಿಗೆ ಸೇರಿದ್ದ ತಾಬೇಕ್ಸ್, ಟಾರ್‌ಕಾಯಿಂಗ್ ಮತ್ತೂ ಲಿಲ್ಲಿ ಪಟ್ಟಣಗಳನ್ನು ಸ್ವಾಧೀನಪಡಿಸಿಕೊಂಡಾರಭ್ಯ ಅಲ್ಲಿದ್ದ ನೂಲು, ಉಣ್ಣೆ, ಚರ್ಮ, ಲೋಹ ಮೊದಲಾದುವುಗಳನ್ನು ತೆಗೆದುಕೊಂಡು ೬೦೦೦೦೦೦೦ ರೂ. ಬೆಲೆಯ ಪದಾರ್ಥಗಳನ್ನು ಕೊಟ್ಟಿರುವುದಾಗಿಯೂ, ಲಿಲ್ಲಿಯಲ್ಲಿ ಸೇನೆಗೋಸ್ಕರ ಹೊಸದಾಗಿ ವಿಶೇಷವಾಗಿ ಮಾಡಲ್ಪಟ್ಟಿದ್ದ ಬಟ್ಟೆಗಳನ್ನು ಜರ್ಮನರು ಕಿತ್ತುಕೊಂಡು ತಮ್ಮ ಸೈನಿಕರು ಹೊದಿಯಲು ಕಂಬಳಿಯಾಗಿ ಕೊಟ್ಟರೆಂದೂ ಆ ಪ್ರಾಂತ ಸಂಚರಿಸಿಬಂದ ಒಬ್ಬಾತನು ತಿಳಿಸುತ್ತಾನೆ.

ಗೋಧಿಯು ಭರತಖಂಡದಿಂದ ಪರದೇಶಗಳಿಗೆ ಸಾಗಿಹೋಗುವುದರಿಂದ ಇಲ್ಲಿ ಅದರಬೆಲೆಯು ಹೆಚ್ಚಿ ಜನರಿಗೆ ತೊಂದರೆಯಾಗುವುದೆಂಬುದರಮೇಲೆ ಗೋಧಿಯು ಭರತಖಂಡದಿಂದ ಹೊರಗೆ ಕಳುಹಲ್ಪಡಕೂಡದೆಂದು ಸರ್ಕಾರದಪ್ಪಣೆಯಾಗಿದೆ. ಈ ವರ್ಷ ಇದರ ಬೆಳೆಯು ಇಲ್ಲಿ ವಿಶೇಷವಾಗಿ ಆಗಿರುವುದರಿಂದ ಪರದೇಶಗಳಿಗೆ ಸಾಗಿಹೋಗದಿದ್ದಲ್ಲಿ ವರ್ತಕರಿಗೂ ಬೇಸಾಯಗಾರರಿಗೂ ಬಹಳ ನಷ್ಟವಾಗುತ್ತದೆಂದು ಬಹು ದೂರುಂಟಾಗಿರುವುದರಿಂದ ಇದರ ಸಂಬಂಧವಾಗಿ ದಿಲ್ಲಿಯಲ್ಲಿ ಈ ತಾ|| ೪ ಮತ್ತೂ ೬ ರಲ್ಲಿ ಸರ್ಕಾರಿಯಧಿಕಾರಿಗಳ ಮತ್ತೂ ಪ್ರಸಿದ್ಧವರ್ತಕಮಂಡಲಿಯವ ಪ್ರತಿನಿಧಿಗಳ ಎರಡು ಸಭೆಗಳು ಸೇರಿದ್ದು ಸಾಧಕಬಾಧಕಗಳು ಪರ್ಯಾಲೋಚಿಸಲ್ಪಟ್ಟುವು. ಸರ್ ಪಾವೂರ್ಜಿಬ್ರೂಚಾಯವರು ಭರತಖಂಡದಿಂದ ಗೋಧಿಯು ಪರದೇಶಗಳಿಗೆ ಕಳುಹಲ್ಪಡದಂತೆ ಅಡ್ಡಿಮಾಡಲ್ಪಟ್ಟಿರುವುದು ರಾಜಕೀಯ ಸಂಬಂಧದಿಂದಾಗಲಿ ಅಥವಾ ಅಗತ್ಯದಿಂದಾಗಲಿ ಅಲ್ಲವು. ಈ ವರ್ಷದಲ್ಲಿ ಅತಿಶಯವಾಗಿ ಬೆಳೆದು ಆದಾಯಕರವಾಗಿರುವುದು ಗೋಧಿಯ ಬೆಳೆಯಾಗಿದೆ. ಗೋಧಿಯು ಸಾಗಿಸಲ್ಪಡದಂತೆ ಅಡ್ಡಿಮಾಡಲ್ಪಟ್ಟಿರುವುದರಿಂದ ಅಕ್ಕಿಗೆ ತೊಂದರೆಯೇನೂ ಆಗುವುದಿಲ್ಲವು. ಗೋಧಿಯನ್ನು ಪರದೇಶಗಳಿಗೆ ಸಾಗಿಸುವುದರಿಂದ ಪಂಜಾಬು ಮತ್ತೂ ಪಶ್ಚಿಮೋತ್ತರ ಪ್ರಾಂತಗಳಿಗೆ ಪ್ರತ್ಯಕ್ಷವಾಗಿಯೂ ಭರತಖಂಡಕ್ಕೆಲ್ಲಾ ಪರೋಕ್ಷವಾಗಿಯೂ ಮಿತಿಮೀರಿ ಆದಾಯ ಪ್ರಾಪ್ತವಾಗತಕ್ಕದಾಗಿದೆ'' ಎಂದು ಟೈಮ್ಸ್‌ಆಫ್ ಇಂಡ್ಯಾಪತ್ರಿಕೆಗೆ ಬರೆದಿರುತ್ತಾರೆ.

ವಿದೇಶವೃತ್ತಾಂತಗಳು.

ಜರ್ಮನ್ಸೈನಿಕರು ಒಂದುಕಡೆ ತಮ್ಮ ಕಂದಕಗಳ ಹತ್ತಿರ ಒಂದು ಸುರಂಗವನ್ನು ತೋಡಿ ಅದನ್ನು ತಮ್ಮ ಫಲಾಹಾರದ ಮಂದಿರವನ್ನಾಗಿ ಮಾಡಿಕೊಂಡಿದ್ದರು. ಜರ್ಮನ್ ಚಕ್ರವರ್ತಿಯವರು ಒಂದಾವೃತ್ತಿ ಅಲ್ಲಿಗೆ ಬಂದಾಗ ಸೈನಿಕರು ಮರ್ಯಾದಿಸಿ ಆ ಸುರಂಗದೊಳಕ್ಕೆ ಕರೆದುಕೊಂಡುಹೋಗಿ ಉಪಾಹಾರಾರ್ಥವಾಗಿ ಪಾನೀಯವನ್ನು ಕೊಟ್ಟರು. ಅದನ್ನು ಚಕ್ರವರ್ತಿಯವರು ಸ್ವೀಕರಿಸಿ ಸಂತೋಷಪಟ್ಟು ಹೊರಕ್ಕೆ ಬರುವಷ್ಟರಲ್ಲಿ ಫ್ರೆಂಚ್‌ಸೈನಿಕರು ನಿಂತಿದ್ದುದನ್ನು ಕಂಡು ದಿಗ್ಭ್ರಮೆಗೊಂಡರು. ಅಷ್ಟರಲ್ಲಿ ಹತ್ತಿರವಿದ್ದವರು ಅವರು ಶತ್ರುಸೈನಿಕರೇ ಅಹುದಾದರೂ ಸೆರೆಯಾಗಿ ಸಿಕ್ಕಿರತಕ್ಕ ನಿರಾಯುಧರೆಂದು ಹೇಳಿದಮೇಲೆ ಧೈರ್ಯಗೊಂಡು ಹೊರಕ್ಕೆ ಬಂದರಂತೆ.

ಕಾಮನ್ಸ್ ಸಭೆಯಲ್ಲಿ ಮುಖ್ಯಮಂತ್ರಿಯವರು ಉಪನ್ಯಾಸಿಸುವಾಗ್ಗೆ ಜರ್ಮನಿಯ ವ್ಯಾಪಾರ ವಿಷಯವನ್ನು ಕುರಿತು ಮಾತನಾಡುವುದಕ್ಕಾರಂಭಿಸಿ ಹೀಗೆ ಹೇಳಿರುವರು. ಜರ್ಮನಿಯಿಂದ ಇತರ ದೇಶಗಳಿಗಾಗಲೀ, ಇತರ ದೇಶಗಳಿಂದ ಜರ್ಮನಿಗಾಗಲೀ ಯಾವ ವ್ಯಾಪಾರವೂ ನಡೆಯದಂತೆ ಮಾಡುವುದಕ್ಕೆ ತಕ್ಕ ಏರ್ಪಾಡನ್ನು ಮಾಡುತ್ತೇವೆ. ಮಾನವಧರ್ಮಕ್ಕೆ ಲೋಪಬರದಂತೆಯೂ, ತಟಸ್ಥರಾಷ್ಟ್ರಗಳವರಿಗೆ ತೊಂದರೆ ಸಂಭವಿಸದಂತೆಯೂ ನಾವು ಈ ಕೆಲಸವನ್ನು ಮಾಡುತ್ತೇವೆ. ಈ ರೂಪವಾಗಿ ಜರ್ಮನಿಗೆ ಎಷ್ಟು ತೊಂದರೆಯನ್ನು ಮಾಡಲು ಅವಕಾಶವಿರುವುದೋ ಅಷ್ಟನ್ನೆಲ್ಲಾ ನಾವು ಮಾಡುತ್ತೇವೆ. ನಾವು ಕೈಕೊಂಡಿರುವ ಕಾರ್ಯವು ಬಹಳ ದೊಡ್ಡದು. ತಿಂಗಳುಗಳು ಕಳೆಯುತ್ತ ಬಂದಂತೆ ನಮಗೆ ಈಗಿಗಿಂತಲೂ ಸೇನೆಯು ಅಧಿಕವಾಗಿ ಬೇಕಾಗುತ್ತದೆ. ಈ ಯುದ್ಧವು ಕೇವಲ ಸೇನಾಯುದ್ಧವು ಮಾತ್ರವೇ ಅಲ್ಲ. ಇದಕ್ಕೆ ಯುದ್ಧೋಪಕರಣಗಳು ಎಷ್ಟೋ ಬೇಕಾಗುತ್ತವೆ. ಇದುವರೆಗೆ ಪ್ರಪಂಚದ ಮೇಲೆ ಯಾವ ಯುದ್ಧಕ್ಕೂ ತಗಲದಿದ್ದಷ್ಟು ಯುದ್ಧದ ವೆಚ್ಚವು ಈಗಿನ ಯುದ್ಧ ಸಾಮಗ್ರಿಗಳಾಗಿ ಮುಟ್ಟಿರುತ್ತದೆ. ಊಹಿಸಿದ್ದುದಕ್ಕಿಂತಲೂ ಬಹಳ ಹೆಚ್ಚಾಗಿಯೇ ವ್ಯಯವಾಗಿದೆ. ಮನುಷ್ಯಶಾಂತಿಗಿಂತಲೂ ಶುಭಪ್ರದವಾದ ವಸ್ತುವು ಮತ್ತೊಂದಿಲ್ಲ. ಆದರೆ ಆ ಶಾಂತಿಯು ಪ್ರಸ್ತಾಪನವನ್ನೆತ್ತುವುದಕ್ಕೆ ಇದು ಸಮಯವಲ್ಲ. ನಾನು ಗಿಲ್ಡ್‌ಹಾಲಿನಲ್ಲಿ ಮಾಡಿದ ಉಪನ್ಯಾಸವನ್ನು ಸ್ಮರಿಸಿಕೊಳ್ಳಿರಿ. ಬೆಲ್ಜಿಯಮ್ಮು ಹೊಂದಿರುವ ನಷ್ಟಕ್ಕಿಂತ ಹೆಚ್ಚಾದ ಲಾಭವು ಅದಕ್ಕೆ ತುಂಬಿಬರುವವರೆಗೂ ಶತ್ರುಗಳು ಬಂದು ನಮ್ಮ ದೇಶದಮೇಲೆ ಬೀಳುವರೆಂಬ ಭಯವು ಸಂಪೂರ್ಣ ನಾಶವಾಗುವವರೆಗೂ ಯೂರೋಪಿನಲ್ಲಿರುವ ಸಣ್ಣ ಸಣ್ಣ ರಾಜ್ಯಗಳ ಸ್ವಾತಂತ್ರ್ಯವನ್ನು ದೃಢತರಗೊಳಿಸುವ ಹದಿಯು ಹಾಕಲ್ಪಡುವವರೆಗೂ, ಜರ್ಮನಿಯವರ ಕ್ಷಾತ್ರಶಕ್ತಿಯು ಧ್ವಂಸವಾಗುವವರೆಗೂ ನಾವು ಹಿಡಿದಿರುವ ಕತ್ತಿಯನ್ನು ಒರೆಯೊಳಕ್ಕೆ ಇರಿಸುವುದಕ್ಕೆ ಅವಕಾಶವಿಲ್ಲವೆಂದು ನಾನೂ ಫ್ರೆಂಚ್ ಮುಖ್ಯಮಂತ್ರಿಯವರೂ ಕೂಡ ಹೇಳಿರುವೆವು" ಎಂದು ಭಾಷಣಮಾಡಿದರು. ಇದರಿಂದ ಮಿತ್ರಮಂಡಲಿಯವರ ದೃಢಸಂಕಲ್ಪವು ಎಷ್ಟುಮಟ್ಟಿಗಿದೆಯೆಂಬುದೂ ಈಗಿನ ಯುದ್ಧಶಾಂತಿಯು ಇನ್ನೂ ಎಷ್ಟುದೂರದಲ್ಲಿದೆಯೆಂಬುದೂ ಸಹ ಊಹಿಸಲ್ಪಡಬಹುದು.

ಪತ್ರವ್ಯವಹಾರ.

ಅಯ್ಯಾ! ಈಗ ಕಾಲಸ್ಥಿತಿಯು ಬಹಳ ಕಷ್ಟಜೀವಿತಕ್ಕಾಕರವಾಗಿರುವ ಅಂಶವು ಸರ್ವರಿಗೂ ವಿದಿತವೇ ಆಗಿದೆ. ಈ ವಿಚಾರದಲ್ಲಿ ನಮ್ಮ ಸರಕಾರದವರು ಕೇವಲ ಬಡಮಾಸ್ಟರುಗಳಿಗೆಲ್ಲಾ ಪ್ರಮೋಷನ್ ದಯಪಾಲಿಸುವರೆಂಬುದನ್ನು ಹೋದ ಸಾಲಿನಲ್ಲಿ ಕೇಳಿ ತದಾರಭ್ಯ ಅವರು ಸಂತೋಷದಿಂದ ನಿರೀಕ್ಷಿಸುತ್ತಾ ಇರುವರು. ಆದರೆ ಸ್ಟೇಟುಫಂಡು ಎ.ವಿ. ಸ್ಕೂಲುಗಳಿಗೆ ಮಾತ್ರ ಹೋದಸಾಲಿನಲ್ಲಿ ಲಭಿಸಿತು. ಲೋಕಲ್ ಫಂಡಿನ ಎ. ವಿ. ಮತ್ತು ವಿ. ಇ. ಸ್ಕೂಲುಗಳ ಮಾಸ್ಟರುಗಳಿಗೆ ಈ ವರೆಗೂ ದೀರ್ಘಕಾಲವಾಗಿ ಪರಿಣಮಿಸಿರುವುದಕ್ಕೆ ಬಹಳ ಜನಗಳು ಚಕೋರಪಕ್ಷಿಗಳಂತೆ ಪ್ರಮೋಷನ್ ಎಂಬ ಮಳೆ ಹನಿಯನ್ನು ಕಾಯುತ್ತಿರುವುದರಿಂದ ತಮ್ಮ ಪತ್ರಿಕಾ ಮೂಲಕ ದಯವಿಟ್ಟು ಪ್ರಕಟಿಸಿ ಯಾವಾಗ ಬರಬಹುದೆಂಬುದನ್ನಾದರೂ ತಿಳಿಸಿದಲ್ಲಿ ಸ್ವಲ್ಪ ಸಮಾಧಾನವನ್ನುಂಟುಮಾಡಿದಂತೆ ಆಗುವುದಾಗಿ ಯೋಚಿಸುತ್ತೇವೆ.

ಬಡಮಾಸ್ಟರು.

ಗದಗ ತಾ॥ ಹುಲಿಕೋಟಿ ಬಾಲಿಕಾಶಾಲಾ.

ತಾ॥ ೨೬-೨-೧೯೧೫ ನೆ ದಿವಸ ಸ್ತ್ರೀಯರ ಸಭೆಯು ತಳಿರುತೋರಣಗಳಿಂದ ಶೋಭಿಸುತ್ತಿದ್ದ ಶಾಲೆಯ ಮನೆಯಲ್ಲಿ ಕೂಡಿತ್ತು. ಸಭೆಯ ಆರಂಭದಲ್ಲಿ ಬಾಲಕಿಯರು ಸಭಿಕರಸ್ವಾಗತವನ್ನೂ ದೇವರಸ್ತೋತ್ರ ರಾಜರಸ್ತೋತ್ರಗಳನ್ನೂ ಕಿವಿಗಿಂಪಾಗುವಂತೆ ಪಾಡಿದರು. ಆಮೇಲೆ ಕನ್ನಡಶಾಲೆಯ ೭ನೆ ಇಯತ್ತೆಯ ವಿದ್ಯಾರ್ಥಿಗಳು ಸ್ತ್ರೀಶಿಕ್ಷಣದ ಬಗ್ಗೆ ತಾವು ಬರೆದ ನಿಬಂಧವನ್ನು ಓದಿ ಹೇಳಿದರು. ತರುವಾಯ ಕಸೂತಿಬಾಯಿ ವೀರಮ್ಮಾ ಇವರೂ ಅಸಿಷ್ಟೆಂಟ ಮಾಸ್ತರ ಸಿದ್ಧಯ್ಯಾ ಇವರೂ, ಸ್ತ್ರೀಶಿಕ್ಷಣದಬಗ್ಗೆ ಸರಸವಾಗಿ ಭಾಷಣವನ್ನು ಮಾಡಿದರು. ನಂತರ ಗರ್ಲಶಾಲಾ ಹೆಡ್ಮಾಸ್ತರ ಗುರುಮಯ್ಯಾ ಅಲ್ಲಯ್ಯಾ ಶಿಂದೋಗಿ ಇವರು ನೀತಿಪರವಾಗಿಯೂ ಭಾವಬೋಧಕವಾಗಿಯೂ ಅಸ್ಖಲಿತವಾಣಿಯಿಂದ ಭಾಷಣ ಮಾಡಿದರು. ತರುವಾಯ ಶಾಲೆಯಲ್ಲಿ ಯೋಗ್ಯಸ್ಥಳದಲ್ಲಿ ಕ್ರಮವಾಗಿಟ್ಟ ವಿದ್ಯಾರ್ಥಿನಿಯರ ಹಸ್ತಕೌಶಲ್ಯದ ಒಡವೆಗಳನ್ನು ನೋಡಿ ಆನಂದಭರಿತರಾದರು. ನಂತರ ಯಾವತ್ತು ಸಭಿಕರನ್ನು ತಾಂಬೂಲ ಹಾರ ತುರಾಯಿ ಅತ್ತರ ಗುಲಾಬಿಗಳಿಂದ ಮನ್ನಿಸಿದರು. ಆಮೇಲೆ ಬಾಲಕಿಯರೊಡನೆ ಯಾವತ್ತು ಸಭಿಕರು ಇಂಥ ದಯಾಳು ಸರಕಾರದವರ ಆಳುವಿಕೆಯು ಚಿರಕಾಲವಿರಲೆಂದು ದೇವರನ್ನು ಪ್ರಾರ್ಥಿಸಿದನಂತರ, ತ್ರಿವಾರ ಜಯಘೋಷದೊಡನೆ ಸಭಾವಿಸರ್ಜನೆಯಾಯಿತು.

ಓರ್ವಪ್ರೇಕ್ಷಕಿ.

ಬೀರೂರು.

ಸ್ವಾಮೀ? ಈ ಆಲಯದಲ್ಲಿರುವ ಅನಾಥಬಾಲಕರ ಮತ್ತು ಆಲಯಕ್ಕೆ ಸೇರಿ ಇರುವ "ಶ್ರೀ ಉಪಾಸನಾಸಮಾಜ" ವೆಂಬ ಭಜನಾಕೂಟದ ಸಾಮಾಜಿಕರುಗಳಿಗೂ, ಇತರ ಮಹನೀಯರುಗಳಿಗೂ ಅನುಕೂಲಿಸುವಂತೆ ಒಂದು ಧರ್ಮವಾಚಕಮಂದಿರವನ್ನು ಸ್ಥಾಪಿಸಬೇಕೆಂದು ಉದ್ದೇಶಿಸಿ ಅದಕ್ಕಾಗಿ ತಮ್ಮ ಸಹಾಯವನ್ನು ಅಪೇಕ್ಷಿಸಿ ಪ್ರಾರ್ಥಿಸಿಕೊಂಡಿದ್ದ ಪ್ರಕಾರ ತಾವು ತಮ್ಮ ಶ್ಲಾಘ್ಯವಾದ ಮತ್ತು ಹೆಚ್ಚು ಪ್ರಚುರತೆಯನ್ನು ಹೊಂದಿರುವ ಪತ್ರಿಕೆಯಲ್ಲಿ ಅವಕಾಶವಿತ್ತು ಪ್ರಕಟಪಡಿಸಿರುವುದನ್ನು ನೋಡಿ ತಮ್ಮ ಉಪಕಾರಕ್ಕಾಗಿ ಬಹಳ ಕೃತಜ್ಞನಾಗಿರುವೆನು. ಮ॥ ಖರೀಟ ಗೋವಿಂದಪ್ಪನವರು ಇಪ್ಪತ್ತುಸಾವಿರ (೨೦೦೦೦) ರೂ. ಮಾತ್ರ ಮೂಲಧನವನ್ನಾಗಿ ನಮ್ಮ ಸರ್ಕಾರದವರಲ್ಲಿ ಅರ್ಪಿಸಿರುವರು. (೩೦೦೦೦) ರೂ. ಅಲ್ಲ. ಮೂಲಧನಕ್ಕೆ ಬರುತ್ತಲಿರುವ ಬಡ್ಡಿಯ ಮೊಬಲಗು ಆಲಯದ ಖರ್ಚಿಗೆ ಸಾಲದಿದ್ದರೂ ಆಲಯದ ಏಜಂಟರವರು ಹೆಚ್ಚು ಖರ್ಚಾದುದನ್ನು ತಮ್ಮ ಸ್ವಂತದಿಂದ ನಿರ್ವಹಿಸುತ್ತಿರುವರು. ಸಮಾಜಕ್ಕಾಗಲೀ, ಆಲಯಕ್ಕಾಗಲೀ, ಯಾವ ದ್ರವ್ಯಸಹಾಯವೂ ಅಪೇಕ್ಷಿತವಾಗಿಲ್ಲ. ಅನಾಥಬಾಲಕರೇ ಮೊದಲಾದವರಿಗೆ ಅನುಕೂಲಿಸುವಂತೆ ಒಂದು ಪುಸ್ತಕಭಂಡಾರವನ್ನೂ, ಧರ್ಮವಾಚಕಶಾಲೆಯನ್ನೂ ಸ್ಥಾಪಿಸಬೇಕಾಗಿರುವುದರಿಂದ ಲೋಕೋಪಕಾರಿಗಳಾದ ಮತ್ತು ಅನಾಥಹಿತೈಷಿಗಳೂ ವಿದ್ಯಾಭಿಮಾನಿಗಳೂ ಆಗಿರುವ ತಮ್ಮಂತಹ ಪತ್ರಕರ್ತರುಗಳೂ, ಗ್ರಂಥಕರ್ತರುಗಳೂ, ತಮ್ಮತಮ್ಮ ಪತ್ರಿಕೆಗಳನ್ನೂ, ಗ್ರಂಥಗಳನ್ನೂ ಈ ಧರ್ಮವಾಚಕಮಂದಿರಕ್ಕೆ ಉಚಿತವಾಗಿ ಕಳುಹಿಸಿಕೊಡುವುದರ ಮೂಲಕ ಸಹಾಯಮಾಡಬೇಕಾಗಿರುವುದೇ ಮುಖ್ಯ ಪ್ರಾರ್ಥನೆಯಾಗಿದೆ.

ದಾವಣಗೆರೆ.

ಹಾಳಾದ ಜರ್ಮನಿಯ ಅತ್ಯಾಸೆಯಿಂದ ಇಲ್ಲಿಯ ವ್ಯಾಪಾರಸ್ಥರಿಗೆಲ್ಲಾ ಅತ್ಯಂತ ನಷ್ಟವಾಗಿ ಸಾಲಾಕೊಟ್ಟ ಮಾರ್ವಾಡಿಗಳ ಕಾಟವನ್ನು ತಡೆಯಲಾರದೆ ಅನೇಕರು ದೇಶಾಂತರಗತರಾಗಿ ತಲೆತಪ್ಪಿಸಿಕೊಂಡಿರುತ್ತಾರೆ. ಇಲ್ಲಿಯ ಪೋ॥ ಇ॥ ಮ॥ ನಾಗೇಶರಾಯರು ಬೆಂಗಳೂರು ಟ್ರೈನಿಂಗ್‌ಸ್ಕೂಲಿನ ವಿದ್ಯಾರ್ಥಿಗಳ ತಿಳುವಳಿಕೆ ಬಗ್ಗೆ ಹೋದ ಶನಿವಾರದದಿವಸ ದರೋಡೆಗಳು ನಡೆಯಲು ಕಾರಣಗಳನ್ನೂ, ಯಾವ ಯಾವ ಜಾತಿಯ ಜನಗಳು ಹೇಗೆ ಮಾಡುತ್ತಾರೆಂಬುದನ್ನೂ, ಇವುಗಳು ನಡೆಯದಂತೆ ತಡೆಮಾಡುವ ವಿಧಾನಗಳನ್ನೂ, ನಡೆದಮೇಲೆ ಪತ್ತೇಮಾಡುವ ರೀತಿಯನ್ನೂ ಬಹಳ ವಿಸ್ತಾರವಾಗಿ ೧॥ ಘಂಟೆ ಹೊತ್ತು ಯಶವಂತಪುರದ ಬೈಲಿನಲ್ಲಿ ಭಾಷಣಮಾಡಿದರೆಂತಲೂ, ತರುವಾಯ ಸಭಾಧ್ಯಕ್ಷರಾದ ಬೆಂಗಳೂರು ಸೂಪರಿಂಟೆಂಡೆಂಟ್ ಸಾಹೇಬರವರು ಕಳೆದ ಮೂರು ಉಪನ್ಯಾಸಗಳಿಗಿಂತಲೂ ಈ ದಿವಸದ ಉಪನ್ಯಾಸವು ಬಹಳ ಸ್ತೋತ್ರಾರ್ಹವಾಗಿರೋಣದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಇದರಂತೆ ಮುಂದೆ ನಡೆಸಬೇಕೆಂತಲೂ, ಸೂಚಿಸಿದರೆಂದು ಕೇಳಿ ನಾವು ಬಹಳ ಸಂತೋಷಪಟ್ಟೆವು. ಸದರಿ ಪೋ॥ ಇ॥ ರು ಬಹಳ ಅನುಭವಶಾಲಿಗಳೂ ಮತ್ತು ಅತ್ಯಂತ ಮೇಧಾಶಕ್ತಿಯುಳ್ಳವರು. ಆದ್ದರಿಂದ ನಮ್ಮ ಡಿ॥ ಪೋ॥ ಸೂಪರಿಂಟೆಂಡೆಂಟ್ ಸಾಹೇಬರವರು ಪ್ರತಿಯೊಂದು ತಾಲ್ಲೋಕಿನ ಪೋ॥ ಇನ್‌ಸ್ಪೆಕ್ಟರುಗಳನ್ನು ಒಂದು ಸ್ಥಳಕ್ಕೆ ಬರಮಾಡಿಕೊಂಡು ಅನುಭವಶಾಲಿಗಳಿಂದ ಲೆಕ್ಚರ್‌ಕೊಡಿಸುತ್ತಲೂ, ತಮ್ಮ ಅನುಭವವನ್ನು [illegible] ವರಿಗೆ ತಿಳಿಸುತ್ತಲೂ ಬಂದಲ್ಲಿ ಈ ಡಿಸ್ಟ್ರಿಕ್ಟಿನಲ್ಲಿ ನಡೆಯುವ ಕಳವು, ದರೋಡೆ, ಸುಲಿಗೆ, ಪಾರ್ಟಿವ್ಯಾಜ್ಯ ಇವೇ ಮೊದಲಾದುವುಗಳ ಹಾವಳಿಗಳು ಕಡಿಮೆಯಾಗಲು ಯಾವ ಅಭ್ಯಂತರವೂ ಇರುವುದಿಲ್ಲ. ಆದಪ್ರಯುಕ್ತ ಡಿ॥ ಸೂಪರಿಂಟೆಂಡೆಂಟ್ ಸಾಹೇಬರು ಇದನ್ನು ಕ್ಷಿಪ್ರದಲ್ಲಿಯೇ ಜಾರಿಗೆ ತರುವರೆಂದು ನಂಬಿದ್ದೇವೆ.

ಹಿತೈಷಿಗಳು.

ಗುಬ್ಬಿ.

ಕಳೆದ ತಾರೀಖು ೨೮ ನೇ ಭಾನುವಾರ ಇಲ್ಲಿನ ಶ್ರೀ ಚೆನ್ನಬಸವೇಶ್ವರಸ್ವಾಮಿಯ ಬೆಳ್ಳಿಪಾಲಕಿ ಉತ್ಸವಕ್ಕೆ ಈ ದೇಶದ ಅನೇಕಕಡೆಗಳಿಂದ ಭಕ್ತಾದಿಗಳು ಬಂದು ನೆರೆದಿದ್ದರು. ಈ ಸಂದರ್ಭದಲ್ಲಿ ಸರ್ಕಾರದವರ ಪ್ರೋತ್ಸಾಹದಿಂದ ಒಂದು ದನಗಳ ಪ್ರದರ್ಶನವು ಆ ದಿನ ನಡೆಯಿತು. ಸುಮಾರು ೫೦೦ ದನಗಳಿಗೆ ಮೇಲ್ಪಟ್ಟು ಉತ್ತಮವಾದ ರಾಸುಗಳು ಕೂಡಿದ್ದುವು. ಇವುಗಳಲ್ಲಿ ಶ್ರೇಷ್ಠವಾದವುಗಳಿಗೆ ನೂರಾರು ರೂಪಾಯಿಗಳವರೆಗೆ ಬಹುಮಾನವೂ, ಅನೇಕ ಯೋಗ್ಯತಾಪತ್ರಿಕೆಗಳೂ ಡೆಪ್ಯುಟಿಕಮಿಷನರ್ ಸಾಹೇಬರವರ ಸ್ವಹಸ್ತದಿಂದ ಹಂಚಲ್ಪಟ್ಟುವು. ಪ್ರದರ್ಶನಕಾಲದಲ್ಲಿ ಸಬ್‌ಡಿವಿಜನ್ ಸಾಹೇಬರು, ಟ್ರೆಜರಿ ಅಸಿಸ್ಟೆಂಟರು, ಡಿ॥ ಮೆಡಿಕಲ್ ಆಫೀಸರು ಮೊದಲಾಗಿ ಅನೇಕ ಸರ್ಕಾರಿ ಅಧಿಕಾರಿಗಳು ಹಾಜರಿದ್ದರು. ನಮ್ಮ ಹೊಸ ಅಮಲ್ದಾರ್ರವರಾದ ಮೆ॥ ಸುಬ್ಬರಾಯರು ಬಹು ಮುತುವರ್ಜಿ ವಹಿಸಿ, ಪ್ರದರ್ಶನವನ್ನು ಆರಂಭಿಸಿ ಕಡೆಯವರೆಗೂ ತೃಪ್ತಿಕರವಾಗಿ ನಡೆಸಿದರು. ಪ್ರದರ್ಶನಕ್ಕಾಗಿ ಏರ್ಪಡಿಸಲ್ಪಟ್ಟಿದ್ದ ದಿವ್ಯವಾದ ಚಪ್ಪರದಲ್ಲಿಯೂ, ಹೊರಗೂ ಸಹಸ್ರಾರುಜನರು ಸೇರಿದ್ದಾಗ ದೇಶೋನ್ನತಿಗೆ ಮುಖ್ಯಸಾಧನವಾದ ವ್ಯವಸಾಯಾಭಿವೃದ್ಧಿಗೆ ದನಗಳ ಪಾಲನೆಯೇ ಅತ್ಯವಶ್ಯಕವಾದುದೆಂತಲೂ, ನೂತನ ವ್ಯವಸಾಯಸಾಧನಗಳ ಉಪಯೋಗವೂ, ಶ್ರೇಷ್ಠತರದ ಬೀಜಗಳ ಚುನಾವಣೆಯೂ ಸಹ ಮುಖ್ಯವಾದ ಕರ್ತವ್ಯಗಳೆಂತಲೂ, ಇವುಗಳ ವಿಷಯದಲ್ಲಿ ರೈತರು ತುಂಬಾ ಶ್ರಮವನ್ನು ವಹಿಸುವುದರಿಂದಲೂ, ಅಂಥವರಿಗೆ ಸರ್ಕಾರದವರೂ ಪ್ರಜೆಗಳೂ ಪ್ರೋತ್ಸಾಹ ಕೊಡುವುದರಿಂದಲೂ, ರೈತರ ಸ್ಥಿತಿಗತಿಗಳು ಏಳಿಗೆಗೆ ಬರುವವೆಂಬದಾಗಿಯೂ, ಪ್ರಜಾಹಿತಚಿಂತಕರಾದ ನಮ್ಮ ಡೆಪ್ಯುಟಿಕಮಿಷನರ್ ಸಾಹೇಬರವರು ಅಪ್ಪಣೆ ಕೊಡಿಸಿದರು. ಇಲ್ಲಿನ ಎ. ವಿ. ಸ್ಕೂಲ್ ಹೆಡ್ಮಾಸ್ಟರು ಮೆ॥ ಮುರಿಗಪ್ಪನವರು ಜಾತ್ರೆಯು, ದೇವಸ್ಥಾನ, ಮತ್ತು ಬೆಳ್ಳಿ ಪಾಲಕಿಯ ವಿಷಯವಾಗಿ ಬಹು ರಮ್ಯವಾಗಿ ಉಪನ್ಯಾಸ ಮಾಡಿದರು. ಹೀಗೆಯೇ ಸರ್ಕಾರದವರೂ ಪ್ರಜೆಗಳೂ ಏಕೀಭವಿಸಿ ಪ್ರೋತ್ಸಾಹಿಸುವುದರಿಂದ ವರ್ಷಂಪ್ರತಿ ದನಗಳ ಪ್ರದರ್ಶನವು ಇಲ್ಲಿ ನಡೆಯುತ್ತಾ ಏಳಿಗೆಗೆ ಬರುವುದರಲ್ಲಿ ಸಂದೇಹವಿಲ್ಲ.

ಪ್ರತ್ಯಕ್ಷದರ್ಶಿ.

ಶ್ರೀರಂಗಪಟ್ಟಣದ ಕಸಬಾ ಗಂಜಾಂ.

ಬೆಳಗಿನಲ್ಲಿ ಕೊಂಚ ಚಳಿಯೂ, ಆಮೇಲೆ ಬಿಸಿಲಿನ ದಗೆಯೂ ತಡೆಯುವುದು ಅಸಾಧ್ಯ. ಟವನ್ನಿನ ಕೆಲವು ಮುಖ್ಯ ಬೀದಿಗಳಲ್ಲಿ ಮೋಹರಿಗಳಮೇಲೆ ಹಾಸಿರುವ ಕಲ್ಲುಗಳು ಸಡಿಲವಾಗಿ ಗಾಡಿಗಳೂ ಜನಗಳೂ ತಿರುಗಾಡಲು ತೊಂದರೆಯಾಗುತ್ತಿದೆ. ಟವನ್ನಿನಲ್ಲಿ ದನಕರುಗಳ ದೊಡ್ಡರೋಗವು ಇರುತ್ತದೆ. ಇದಕ್ಕಾಗಿ ಇಲ್ಲಿರುವ ಮ॥ ಶ್ಯಾ॥ ಕೃಷ್ಣಪ್ಪನವರು, ಮತ್ತು ಗ॥ ಕನ್ನಡ ಬಾಯ್ಸ್‌ಸ್ಕೂಲ್ ಆ॥ ಹೆ॥ ಮಾ॥, ಮ॥ ಅಪ್ರಮೇಯಶಾಸ್ತ್ರಿಗಳವರೂ ಸಹ ಇಲ್ಲಿನ ರೈತಾಪಿಜನಗಳಿಗೆ ಪ್ರೋತ್ಸಾಹಿಸಿ ಈ ಡಿಸ್ಟ್ರಿಕ್ಟ್‌ವೆಟರ್ನರಿ ಇನ್ಸ್‌ಪೆಕ್ಟರವರಿಂದ ದನಕರುಗಳಿಗೆ ಸಿಡುಬುಹಾಕಿಸಿದ ದನಗಳು ಆರೋಗ್ಯವಾಗಿರುವುದನ್ನು ನೋಡಿ ವೆಟರ್ನರಿ ಇನ್ಸ್‌ಪೆಕ್ಟರವರು ಪುನಃ ಬರಬೇಕೆಂದು ರೈತರು ಅಪೇಕ್ಷಿಸುತ್ತಿರುವ ಭಾಗ ಸಂತೋಷವೇಸರಿ. ಈ ಮಾಹೆ ತಾ॥ ೩ನೇ ಬುಧವಾರ ಈ ಸಮೀಪವಿರುವ ಕಿರೀಘಟ್ಟದ ಶ್ರೀ ಶ್ರೀನಿವಾಸದೇವರ ರಥೋತ್ಸವವು ನಡೆಯಿತು. ಹಾಲಿ ತಾ॥ ಅಮಲ್ದಾರಾದ ಮ॥ ಮಲ್ಲರಾಜ ಅರಸಿನರು ಹೊಸಬರಾಗಿದ್ದರೂ ರಥೋತ್ಸವದ ಕೆಲಸವು ತುಂಬಾ ಸಮರ್ಪಕವಾಗಿ ನಡೆಯಿತು. ಆದರೆ ಸ್ಥಳದ ಕೆಲವು ಜನಗಳ ಧೋರಣೆಯಿಂದ ಮಾಮೂಲಿಗಿಂತ ಕೊಂಚ ಹೊತ್ತಾಗಿ ರಥಾರೋಹಣವಾಗಬೇಕಾಯಿತು. ಆದರೆ ಧೋರಣೆ ಮಾಡಿದ ಸ್ಥಳಕರಿಗೆ ಸರ್ಕಾರದವರು ತಕ್ಕ ನಿಗಾಕೊಟ್ಟು ತಪ್ಪಿತಸ್ಥರಿಗೆ ಬಂದೋಬಸ್ತು ಮಾಡುವ ವಿಷಯದಲ್ಲಿ ಮುತವರ್ಜಿ ವಹಿಸಿರುವುದು ತುಂಬಾ ಸ್ತೋತ್ರಾರ್ಹವಾಗಿದೆ. ಅಲ್ಲದೆ ರಥೋತ್ಸವಕಾಲದಲ್ಲಿ ಮಾಮೂಲಾಗಿ ಚಿಕ್ಕ ದೇವರಾಜಸಾಗರ ನಾಲೆಯಲ್ಲಿ ನೀರು ಬಿಡುತ್ತಿದ್ದುದನ್ನು ಈ ವರ್ಷ ಬಿಡದೆಹೋದ್ದರಿಂದ ಜನಗಳಿಗೂ ಪ್ರದರ್ಶನದ ದನಗಳಿಗೂ ತುಂಬಾ ಅನಾನುಕೂಲವಾಯಿತು. ೩ನೇ ದಿನ ಅಂದರೆ ಈ ಮಾಹೆ ತಾ॥ ೪ ನೇ ಗುರುವಾರ ರಥೋತ್ಸವದ ಪ್ರಯುಕ್ತ ಸೇರುವ ದನಗಳ ಪ್ರದರ್ಶನದಲ್ಲಿ ನಮ್ಮ ಅಮಲ್ದಾರ್ರವರು, ಮೆ॥ ಮಲ್ಲರಾಜೇಅರಸಿನವರು ಅಗ್ರಾಸನವನ್ನು ವಹಿಸಿದ್ದರು. ಆ ಕಾಲದಲ್ಲಿ ನೆರೆದಿದ್ದ ಅನೇಕ ರೈತಜನಗಳಿಗೆ ಚೆನ್ನಾಗಿ ತಿಳುವಳಿಕೆ ಆಗುವಂತೆ ಗಂಜಾಂ ಕಸಬಾ ಸ್ಕೂಲ್ ಆ॥ ಹೆ॥ ಮಾ॥ ರಾಗಿರುವ ಅಗ್ರಿಕಲ್ಚರ್ ಮತ್ತು ವೆಟರ್ನರಿ ಟ್ರೈನಿಂಗ್ ಪ್ಯಾಸಾಗಿರುವ ಮ॥ ಅಪ್ರಮೇಯಶಾಸ್ತ್ರಿಗಳು ದನಕರುಗಳನ್ನು ಕಾಪಾಡಿಕೊಂಡಿರುವದು, ಖಾಯಿಲೆ ಬಂದಾಗ ರೈತರು ಸ್ವತಂತ್ರಿಸಿ ಇಲಾಜು ನಡೆಸಿಕೊಳ್ಳುವುದು, ಮತ್ತು ಖಾಯಿಲೆ ಬಂದಾಗ ಉಪಚರಿಸತಕ್ಕ ಕ್ರಮ—ಇವುಗಳನ್ನು ಉಪನ್ಯಾಸಮಾಡಿದರು. ಮೈಸೂರು ಅಡ್ವೋಕೇಟ್ ಮೆ॥ ಎ. ರಾಮಣ್ಣನವರು ವ್ಯವಸಾಯಕ್ಕನುಕೂಲವಾದ ಗೊಬ್ಬರವನ್ನು ತಯಾರ್ಮಾಡುವ ಸಂಗತಿಗಳನ್ನು ಉಪನ್ಯಾಸಮಾಡಿದರು. ಅನಂತರ ನಮ್ಮ ಅಮಲ್ದಾರ್ರವರು ಇವುಗಳ ಜೊತೆಗೆ ರೈತರ ತಿಳುವಳಿಕೆಗೆ ಅತ್ಯವಶ್ಯಕವಾದ ವ್ಯವಸಾಯಕ್ರಮವನ್ನು ಮನಸ್ಸಿಗೆ ಹಿಡಿಯುವಂತೆ ಉಪನ್ಯಾಸಮಾಡಿದರು. ತರುವಾಯ ದನಗಳ ಪ್ರದರ್ಶನೋತ್ಸವಕ್ಕಾಗಿ ನಿಯಮಿಸಲ್ಪಟ್ಟ ಬಹುಮಾನ ಮತ್ತು ಯೋಗ್ಯತಾಪತ್ರಗಳನ್ನು ಕೊಡಿಸಿದರು. ಅನಂತರ ಶ್ರೀಮನ್ಮಹಾರಾಜರವರಿಗೂ, ಯುವರಾಜರವರಿಗೂ, ಇವರುಗಳ ಕುಟುಂಬವರ್ಗಕ್ಕೂ ಭಗವಂತನು ಚಿರಕಾಲ ಆಯುರಾರೋಗ್ಯವನ್ನು ದಯಪಾಲಿಸಬೇಕೆಂಬ ಪ್ರಾರ್ಥನೆಗಳಿಂದ ಪ್ರದರ್ಶನೋತ್ಸವವು ಬರಖಾಸ್ತಾಯಿತು.

ಬಾ॥ ಬಾಲೈಯ್ಯ,
ಶಾರದ ರೀಡಿಂಗ್‌ರೂಂ, ವೈಸ್‌ಪ್ರಿಸಿಡೆಂಟ್.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕಾರ್ಡ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೀಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿ ಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೪—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೦—೦ ರೂ. ಕೊಡಬೇಕಾಗುವುದು ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರದ ಬಣ್ಣದಿಂದ ಬಿಳಿ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೧—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೦—೦; ಹಳದೀ ಗ್ಲೇಜ್‌ಕಾಗದದಮೇಲೆ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೩-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦-೩-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಕಾರ್ಡ್‌ಪ್ರೆಸ್, ಮೈಸೂರ್.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು

75

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕದನಗಳ ಪಟಗಳೂ ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ ಕ್ರಯ ೪ ಆಣೆ; ವಿ. ಪಿ. ಮೂಲಕ ೬ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ ೨ ಆಣೆ; ವಿ. ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ:—ದಿ ಜನರಲ್ ಏಜನ್ಸಿ. ಮೈಸೂರು.

ಮನೋಹರವೂ ಮೋಹಕರವೂ ಆದ

ಚಂದ್ರಪ್ರಭಾವತಿ ಹೇರಾಯಿಲ್.

ಮೂರುದಿನಗಳಲ್ಲಿ ಸುವಾಸನೆಯು ಹೋದರೆ 100 ರೂಪಾಯಿಗಳು ಬಹುಮಾನ ಕೊಡುತ್ತೇವೆ.

2

ಈ ತೈಲದ ಸುವಾಸನೆಯು ಮೂರು ದಿನಗಳ ವರಿವಿಗೂ ಹೋಗದೆ ಘಮಘಮಿಸುತ್ತಿರುವದು. ಇದರ ಸುವಾಸನೆಯು ಮೂರುದಿನಗಳಲ್ಲಿ ಹೋದರೆ ೧೦೦ ರೂಪಾಯಿಗಳು ಬಹುಮಾನವಾಗಿ ಕೊಡುತ್ತೇವೆ.

ಕಡಿಮೆ ತರದ ಹೇರಾಯಿಲ್‌ಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳುಮಾಡಿಕೊಳ್ಳಬೇಡಿರಿ. ಸುಂದರವಾದ ಕೇಶರಾಶಿಯೂ, ಅಂದವಾದ ಕೂದಲುಗಳೂ ಇವೇ ಪ್ರತಿಯೊಬ್ಬ ಸ್ತ್ರೀಪುರುಷರಿಗೂ ಸೌಭಾಗ್ಯವಾದ ಅಲಂಕಾರವಾಗಿದೆ. ಕೂದಲುಗಳು ಸುಂದರವಾಗಿ ಕಾಣಬೇಕಾದರೆ ಅವು ರೇಷ್ಮೆಯಂತೆ ಮೃದುವಾಗಿ ಕಂಗೊಳಿಸುತ್ತಿರಬೇಕು. ಇದಲ್ಲದೆ ತುರುಬನ್ನು ಯಾವ ರೀತಿಯಿಂದಲಾದರೂ ಕಟ್ಟುವಂತೆ ನಯವಾಗಿರಬೇಕು.

ಈ ತೈಲವನ್ನು ಉಪಯೋಗಿಸುತ್ತಲೆ ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವುದು. ನಿದ್ರಾಭಂಗವನ್ನು ಪರಿಹರಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಕೂದಲುಗಳಿಗೆ ಈ ತೈಲವನ್ನು ಸವರುವದರಿಂದ ಎಂದಿಗೂ ಬಿದ್ದುಹೋಗಲಾರವು. ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವುವು. ಇದರ ಸುಗಂಧವಾದರೋ ಮನೋಹರವೂ ಮೋಹಕರವೂ ಆಗಿ ಮನಸ್ಸನ್ನು ಉಲ್ಲಾಸಪಡಿಸುತ್ತದೆ. ಈ ಚಂದ್ರಪ್ರಭಾವತಿ ಹೇರಾಯಿಲನ್ನು ಉಪಯೋಗಿಸುತ್ತಲೇ ಮೆದುಳಿಗೆ ಬಲವನ್ನು ಕೊಡುವದು. ಕೂದಲನ್ನು ಕೆಂಚಾಗಿಡದೆ ಕಪ್ಪು ಬಣ್ಣದಿಂದೊಡಗೂಡಿಸಿ ಗುಂಗುರು ಗುಂಗುರಾಗಿ ಬೆಳೆಯಿಸುವುದು. ಕಣ್ಣಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವದು. ಈ ತೈಲವನ್ನು ತಲೆಗೆ ಸವರುವದರಿಂದ ತಲೆನೋವನ್ನು ತತ್ಷಣವೇ ಹೋಗಲಾಡಿಸುವದು. ಮೆದುಳಿಗೆ ತಂಪನ್ನುಂಟುಮಾಡುವುದು ನಿದ್ರೆಯು ಚೆನ್ನಾಗಿ ಬರುವದು. ಈ ಚಂದ್ರಪ್ರಭಾವತಿ ತೈಲವು ಔಷಧಕ್ಕೆ ಔಷಧವೂ, ಸುಗಂಧ ದ್ರವ್ಯಕ್ಕೆ ಸುಗಂಧದ್ರವ್ಯವೂ ಆಗಿರುವದು. ಈ ತೈಲವು ಸ್ತ್ರೀಪುರುಷರಿಗೆ ಬಹಳ ಉಪಕಾರಿಯಾದದ್ದು. ಒಂದು ಚಂದ್ರಪ್ರಭಾವತಿ ತೈಲದ ಶೀಸೆಯು ಬಹು ದಿನಗಳ ವರಿವಿಗೂ ಬರುವದು.

ಕ್ರಯ ಶೀಸೆ ೧ ಕ್ಕೆ ೧ ರೂಪಾಯಿ. ಟಪಾಲು ಖರ್ಚು ೪ ಆಣೆ.

ನರೆಕೂದಲನ್ನಿಟ್ಟುಕೊಂಡು ಮುದುಕರಾಗಿ ಕಾಣುವುದೇಕೆ?

ದರ್ಬಾರ್ ರಂಗು.

ಒಂದುಸಲ ಹಚ್ಚಿದರೆ ೨೫ ವರುಷದ ಪ್ರಾಯಸಮರ್ಥರಂತೆ ಕಾಣಿಸುತ್ತೀರಿ. ಈ ರಂಗು ಹಚ್ಚಿಕೊಂಡರೆ ಕೂದಲು ಕಪ್ಪಾಗಿ ಹೊಳೆಯುತ್ತೆ. ಈಗ ಮಾರಾಟಕ್ಕೆ ಬಂದಿರುವ ಅಲ್ಪತರದ ಕೂದಲು ರಂಗುಗಳು ತುಂಬಾ ಕೀಳುಜಾತಿಯವು. ಹಚ್ಚಿದಕೂಡಲೇ ಕೂದಲು ಕೆಂಚಾಗಿ ಅಸಹ್ಯವಾಗಿ ಕಾಣುತ್ತದೆ, ನಮ್ಮ ದರ್ಬಾರ್ ರಂಗು ಅಂಥಾದ್ದಲ್ಲ, ಬಹು ಮೇಲಾದದ್ದು, ಒಂದಾವರ್ತಿ ಹಚ್ಚಿದರೆ ಕೂದಲು ಕಪ್ಪಾಗಿ ರೇಷ್ಮೆಯಹಾಗೆ ಕಂಗೊಳಿಸುವುವು.

ಕ್ರಯ ಬುರುಸು ಸಮೇತ ೧—೪—೦ ರೂ.

ಉಪಯೋಗಿಸುವ ವಿಧಾನ ಬಾಟ್ಲಿಯ ಜೊತೆಯಲ್ಲಿರುತ್ತೆ.

ಖೂಬ್—ಸೂರತ್.

ಮುಖಕಾಂತಿ.

ಇದು ಒಂದೇ ೧,೦೦,೦೦೦ ರೂಪಾಯಿಗಳು ಬಾಳುವುದು.

ಅಂದಗೆಡಿಸಿ ಎಲ್ಲರಿದುರಿಗೂ ಮುಖವು ಮುಚ್ಚಿಕೊಳ್ಳುವಂತೆ ಮಾಡುತ್ತಾ ಹೇಗೂ ವಾಸಿಯಾಗದ ಅಸಹ್ಯದ ಗುರುತುಗಳು, ಮಚ್ಚೆಗಳು, ಗಂಧೆಗಳು ಎಂಜಲು ಹುಣ್ಣುಗಳು, ಚಿಬ್ಬು, ಇನ್ನೂ ಇತರ ವಿಧವಾದ ಮಚ್ಚೆಗಳು, ನವೆ ಮುಂತಾದವುಗಳಿಗೆ ಈ ಔಷಧವನ್ನು ೧೫ ದಿನಗಳು ಹಚ್ಚುವುದರಿಂದ ಗುಣವಾಗಿ ಮುಖಕ್ಕೆ ಕಾಂತಿಯನ್ನು ಕೊಟ್ಟು ಹಸನ್ಮುಖವಾಗಿ ಮಾಡುವುದು

ಕ್ರಯ ಡಬ್ಬಿ ೧ ಕ್ಕೆ ೮ ಆಣೆ.

ವಜ್ರಾಂಗಚೂರ್ಣ—ಧಾತುವು ನೀರಿನಂತಿದ್ದರೂ, ಮೂತ್ರದಲ್ಲಿಯೂ, ನಿದ್ರೆಯಲ್ಲಿಯೂ ಧಾತುವು ಹೋಗುತ್ತಿದ್ದರೂ, ಸೊಂಟದನೋವು, ಮೂತ್ರದಲ್ಲಿ ಉರಿ, ಹಸಿವು ಇಲ್ಲದೆ ಇರುವುದು, ಕೈಕಾಲುಗಳಲ್ಲಿ ನೋವಿದ್ದರೂ, ಶರೀರದಲ್ಲಿ ನಿಶ್ಶಕ್ತಿ ಆಗಿದ್ದರೂ, ತಲೆ ತಿರುಗುವುದು, ನಡೆಯುವಾಗ ಮೇಲುಬ್ಬಸ ಬರುವುದು ಸಹ ಇದನ್ನು ಉಪಯೋಗಿಸಿದರೆ ಇಲ್ಲಿ ಹೇಳುವುದು ನಿಜವೆಂದು ವ್ಯಕ್ತವಾಗುವುದು. ಇದರ ಗುಣಗಳ ಪ್ರಖ್ಯಾತಿಯಿಂದ ಇದರ ಬೆಲೆಯು ೧೦ ರೂಪಾಯಿಗಳು ಇಟ್ಟರೂ ಬಹಳ ಸುಲಭವೆಂದರಿಯಬೇಕು ಈ ಬೆಲೆಯನ್ನು ಇಡುವದರಿಂದ ಬಡವರು ಕೊಳ್ಳಲಾರರು. ಆದ್ದರಿಂದ ಇದರ ಬೆಲೆಯು ಡಬ್ಬಾ ೧ ಕ್ಕೆ ೧೨ ಆಣೆ ಇಟ್ಟಿರುತ್ತೆ.

ಪಂಡಿತ್ ಡಿ. ಎಂ. ರವರ ಭಸ್ಮವು—ಉಷ್ಣದಿಂದ ಮೂತ್ರದಲ್ಲಿ ಉರಿ, ಮೂತ್ರವಲ್ಲ ರೇವು ಹೋಗುವದು, ಇದು ಹಳೆದಾಗಲಿ ನೂತನವಾಗಲಿ ಆಗಿದ್ದರೂ ೨೪ ಗಂಟೆಯೊಳಗಾಗಿ ನಿವಾರಣೆಯಾಗುತ್ತವೆ.

ಕ್ರಯ ಡಬ್ಬಿ ೧ ಕ್ಕೆ ೧೨ ಆಣೆ.

ಉಷ್ಣಕಾರಕಕ್ಕೆ ಮಾತ್ರೆಗಳು—ಉಷ್ಣಕಾರಕದಿಂದ ಶರೀರದಲ್ಲಿ ಪಡೆಗಳಿದ್ದರೂ, ಗಾಯಗಳಿದ್ದರೂ, ಈ ದೆಸೆಯಿಂದ ಶರೀರವನ್ನೇ ತ್ಯಜಿಸಲುದ್ಯುಕ್ತವಾದ ರೋಗವಾದರೂ ಸಹ ಈ ಔಷಧವನ್ನು ಸೇವಿಸುವದರಿಂದ ಖಂಡಿತವಾಗಿಯೂ ಗುಣವಾಗುವದು, ಕ್ರಯ ಡಬ್ಬಿ ೧ ಕ್ಕೆ ೧ ರೂ.

ದಿಲ್‌ಖುಷ್ ತೈಲವು—ಅನೇಕರಿಗೆ ಕೂದಲನ್ನು ಬೆಳೆಸುವ ಇಚ್ಛೆಯಿರುವದು. ಈ ತೈಲವನ್ನು ೧೦-೧೫ ದಿನಗಳು ಹಚ್ಚುವದರಿಂದ ಕೂದಲು ಬಹಳವಾಗಿ ಬೆಳೆಯುವವು. ತೈಲವು ಬಹಳ ಸುವಾಸನೆಯಾಗಿರುವುದು. ಮೆದುಳಿಗೆ ತಂಪನ್ನುಂಟುಮಾಡುವದು. ಕ್ರಯ ಶೀಸೆ ೧ ಕ್ಕೆ ೧೨ ಆಣೆ.

ಆಶ್ಚರ್ಯಕರವಾದ ದ್ರಾವಕ—ಇದನ್ನು ಸ್ವಲ್ಪ ಮೂಸಿ ನೋಡುವದರಿಂದ ಒಂದು ನಿಮಿಷದಲ್ಲಿ ತಲೆನೋವು ನಿಲ್ಲುತ್ತೆ. ಔಷಧವು ಖರ್ಚಾಗದೆ ಹಾಗೆಯೇ ಇರುವದು. ಚೇಳು, ಹಾವು, ಇತ್ಯಾದಿ ವಿಷಜಂತುಗಳ ಕಡಿತಕ್ಕೆ ಹಚ್ಚಿದರೆ ಗುಣಪಡಿಸುತ್ತೆ. ಕ್ರಯ ಶೀಸೆ ೧ ಕ್ಕೆ ೮ ಆಣೆ.

ವೀರ್ಯಸ್ತಂಭಕವೂ, ಕಾಮೋತ್ತೇಜಕವೂ ಆದ ಗುಳಿಗೆ—ತನಗೆ ಅಪೇಕ್ಷೆ ಇರುವಾಗ ಒಂದು ಗುಳಿಗೆಯನ್ನು ತಣ್ಣೀರಿನಲ್ಲಿ ಸೇವಿಸಲು ವೀರ್ಯಸ್ತಂಭನವಾಗುವದು. ಒಂದು ಗಂಟೆಯಕಾಲ ತಡೆದು ಸ್ತ್ರೀಸಂಗಮಾಡಲು ಆನಂದವಾಗುವದು. ಕ್ರಯ ಡಬ್ಬಿ ೧ ಕ್ಕೆ ೮ ಆಣೆ.

ರೋಮನಾಶಿಕ, ವೃಶ್ಚಿಕ ದಂಷ್ಟ್ರ—ಈ ಔಷಧವು ಬೇಳಿನ ಹೊಡತಕ್ಕೂ, ಕೂದಲು ತೆಗಿಯುವದಕ್ಕೂ ಬಹಳ ಅನುಕೂಲವಾಗಿರುವದು. ಇದು ಪ್ರತಿಯೊಬ್ಬರಲ್ಲಿಯೂ ಇರಬೇಕಾದ ಔಷಧವು. ಕ್ರಯ ಶೀಶೆ ೧ ಕ್ಕೆ ೪ ಆಣೆ.

ವಾತನಿವಾರಣೆ ತೈಲವು—ಎದೆಯಲ್ಲಿಯೂ, ಪಕ್ಕೆಗಳಲ್ಲಿಯೂ, ಸೊಂಟದಲ್ಲಿಯೂ, ಕೈಕಾಲುಗಳಲ್ಲಿಯೂ ನೋವಿದ್ದರೆ ಈ ತೈಲವನ್ನು ಉಪಯೋಗಿಸುವದರಿಂದ ತತ್ಷಣ ಗುಣವಾಗುವದು. ಕ್ರಯ ಶೀಸೆ ೧ ಕ್ಕೆ ೪ ಆಣೆ.

ಅದ್ಭುತಗೊಂಡ ಮೂಲವ್ಯಾಧಿಔಷಧ	ಶೀಸೆ	೧ ಕ್ಕೆ	೧೨	ಆಣೆ
ಕಣ್ಣಿಗೆ ಸುರ್ಮ	"	"	೪	"
ದಂತ ಚೂರ್ಣ	ಡಬ್ಬಿ	"	೪	"
ಕಬ್ಜ, ಹುಳುಕಡ್ಡಿ ಔಷಧ ...	"	"	೪	"
ಹೊಟ್ಟೆನೋವಿಗೆ ಔಷಧ ...	ಶೀಸೆ	"	೪	"
ತಲೆನೋವಿಗೆ ತೈಲವು ...	"	"	೪	"
ಕೆಮ್ಮಲು ರೋಗಕ್ಕೆ ಔಷಧವು	ಡಬ್ಬಿ	"	೪	"

ಗಾಯಕ್ಕೆ ಔಷಧ—ಇದನ್ನು ದಿನಕ್ಕೆರಡಾವರ್ತಿಯಂತೆ ೮-೧೦ ದಿನಗಳು ಹಚ್ಚುವದರಿಂದ ಹಳೇ ಮತ್ತು ಹೊಸಗಾಯಗಳು ಗಾಯದಲ್ಲಿ ಉರಿಯುತ್ತಿದ್ದರೂ ಗುಣಪಡಿಸುವದು. ಕ್ರಯ ಡಬ್ಬಿ ೧ ಕ್ಕೆ ೮ ಆಣೆ.

ಅನುಪಾನಪತ್ರಿಕೆಯು ಔಷಧದ ಜೊತೆಯಲ್ಲಿರುವದು.

ಒಂದು ರೂಪಾಯಿಗಿಂತಲೂ ಕಡಿಮೆಯಾಗಿ ವಿ. ಪಿ ಯಲ್ಲಿ ಕಳುಹಿಸುವದಿಲ್ಲ.

ವಿಳಾಸ:—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
೫, ಅವೆನ್ಯೂ ರೋಡ್ ಬೆಂಗಳೂರು ಸಿಟಿ.

ಓರಿಯಂಟಲ್ ಫಾರ್ಮಸಿ ಮೈಸೂರು.

6

ಪ್ರಸಿದ್ಧ ಗುಣಕಂಡ ಔಷಧಗಳು.

ಜ್ವರದಮಾತ್ರೆ—ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ. ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಯುಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮುಂದಿವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ರೂ.

ಗೋರೋಚನದಮಾತ್ರೆ—ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಕಫದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲುಮೈನೋವುಗಳು ಕೂಡ್ಲೆ ತಪ್ಪಿ ಜೀರ್ಣಶಕ್ತಿಕೊಡುತ್ತೆ. ಪ್ರಯಾಣೀಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾದ ನೋವು ಉಳುಕು ಊತು ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ ೫ ಡಬ್ಬಿಗೆ ೧ ರೂ ಕೂಡ್ಲೆ ನಮ್ಮ ಕ್ಯಾಟಲಾಗಿಗೆ ಬರಿಯಿರಿ ಮುಫತ್ತು ಕಳುಹಿಸುತ್ತೇವೆ.

ಫಕ್ತ್ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

11

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತವುದ್ರೇಕವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರಿತಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿ [illegible] ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆ [illegible] ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತ್ತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೈಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳುಸಹಿತ ಆದ ಸಮಾರಂಭ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೊ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವಿರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೊ ಸಿಕ್ಕುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.



ಹೊಸಫ್ಯಾಷನ್—ಸಭ್ಯಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಈಪ್ರಕಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ।।।= , ೧, ೧।. ಪ್ರಕಾರ, ಮತ್ತೂ ಬೆಳ್ಳೀದು ರು ೧॥ ರೋಲ್ಡ್ ಗೋಲ್ಡ್ ಭಂಗಾರದ್ದು ದುರ್ಬೀಣದ ಗ್ಲಾಸದೂ ಕ್ರಯ ೨॥, ೨।।। ರೂ.

ಪರೂರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ.

ನಮ್ಮವಿಳಾಸ— ಗಂಗಪ್ಪಾ ಜೇರಿಗೆ,
ಆರ್ಟಿಸ್ಟ್ ಸೊಲ್ಲಾಪುರ.

45

ಊದಬತ್ತಿಗಳು.

44

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದಪೌಡರ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್‌ಸನ್ಸ್
ಸುಗಂಧಕಾರಿ, ಮೈಸೂರು.

ಬಿಸಿಲುಕಾಲಕ್ಕೆ

22

ಬಲ್ಲರಿಗೂಬೇಕು.

ಅಮೃತಾಮಲಕತೈಲ:—ವಿಧವಿಧವಾದ ತಲೆನೋವು, ಶರೀರವು ಬೆಂಕಿಯಂತಿರುವುದು, ತಲೆತಿರಗು, ಕಣ್ಣುರಿ, ಕಣ್ಣು ಕೆಂಪು, ಕಣ್ಣು ಮಂಜು, ಕಣ್ಣಿನಲ್ಲಿ ನೀರು ಸುರಿಯುವುದು, ರಾತ್ರಿ ನಿದ್ರೆಬಾರದಿರುವುದು ಇವುಗಳನ್ನು ೧-೨ ಅಭ್ಯಂಗನದಿಂದಲೇ ಗುಣಮಾಡಿ ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ. ಬಿಸಿಲುಕಾಲಕ್ಕೆ ಇದು ಅಮೃತಮೇಸರಿ. ಎಂಟು ಅಭ್ಯಂಗನಕ್ಕೆ ಆಗುವ ತೈಲ ೦-೮-೦. ೧ ಡಜನ್ ೫-೦-೦.

ಆಮೋದಿನಿ:—ಅಮೋಘವಾದ ಸುವಾಸನೆಯಿಂದ ಕೂಡಿದ ಈ ಮಾತ್ರೆಗಳು ತಾಂಬೂಲವನ್ನು ರಂಜಿಸಿ ಬಾಯಾರಿಕೆಯನ್ನು ತತ್ಕ್ಷಣ ನಿಲ್ಲಿಸಿ ಆಯಾಸವನ್ನು ಪರಿಹರಿಸಿ ಕಂಠನಾಳವನ್ನು ಸರಿಪಡಿಸಿ ಕೆಮ್ಮು, ದಮ್ಮು, ಉಬ್ಬಸ, ಮ[illegible]ಧಗಳನ್ನು ಗುಣಮಾಡಿ ಆರೋಗ್ಯವನ್ನು ಕಾಪಾಡ[illegible]ರಲ್ಲಿ ಶ್ರೇಷ್ಠವಾದುದು. ಸಂಗೀತಗಾರರಿಗೂ, ವಿ[illegible]ರ್ಥಿಗಳಿಗೂ, ಪ್ರಯಾಣೀಕರಿಗೂ ಅಮೂಲ್ಯವಾದುದು. [illegible]೦ ಮಾತ್ರೆ ೦-೪-೦. ೫ ಕ್ಕೆ ಒಂದು ಡಜ್ಜು.

ಖಂಡಾಮಲಕರಸಾಯನ:—ತಲೆತಿರಗು, ಕಣ್ಣುಕಗ್ಗತ್ತಲೆ, ಹಸಿವೇ ಇಲ್ಲದಿರುವುದು, ಆಹಾರದಲ್ಲಿ ಅರುಚಿ, ವಾಕರಿಕೆ, ವಾಂತಿ, ಹುಳಿ, ಖಾರ, ಅಥವಾ ಶಿಹಿಯಾದ ತೇಗು, ಹೊಟ್ಟೆಯುಬ್ಬರ, ಹೊಟ್ಟೆನೋವು, ಕಣ್ಣು ಅಥವಾ ಮೈ ಹಳದೀಬಣ್ಣ, ನಿಶ್ಶಕ್ತಿ, ಹಳೇಜ್ವರ, ಎದೆಬಡಿಯುವಿಕೆ, ಪಾಂಡು, ಕಾಮಾಲೆ, ಮೂರ್ಛೆ ಇವುಗಳಪೈಕಿ ಯಾವುದಿದ್ದರೂ ಖಾತರಿ ಗುಣವಾಗಿ ದಿನಕ್ಕೊಂದುವೇಳೆ ಸಲೀಸಾಗಿ ಕಾಲಪ್ರವರ್ತಿಯಾಗುತ್ತದೆ. ೧೫ ದಿನಕ್ಕೆ ಆಗುವ ಔಷಧ, ಬೆಲೆ ೦-೧೨-೦. ೧ ಡಜನ್ ಡಬ್ಬಿಗಳಿಗೆ ೭-೮-೦.

ಪ್ರತಿಔಷಧಕ್ಕೂ ಟಪಾಲ್ ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ.

ವಿಳಾಸ:—ಬಿ. ವಿ. ಪಂಡಿತ್, ಸದ್ವೈದ್ಯಶಾಲಾ,
ನಂಜನಗೂಡು, ಮೈಸೂರು ಡಿ॥

೧೯೧೫ನೆಯ ಇಸವಿ ಮಾರ್ಚಿ ತಾ॥ ೧೪ರಿಂದ ೧೯೧೫ನೆಯ ಮಾರ್ಚಿ ತಾ॥ ೨೦ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ಆನಂದನಾಮ ಸಂ॥ ದ ಫಾಲ್ಗುಣ ಬ॥ ಚತುರ್ದಶಿಯಿಂದ ಶಕೆ ೧೮೩೭ ನೆಯ ರಾಕ್ಷಸಸಂವತ್ಸರದ ಚೈತ್ರ ಶು॥ ಪಂಚಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೀನ ತೇದಿ
14	[1]ಭಾನು	ಚತು	43-6	ಶತಭಿಷ	49-17	1
15	[2]ಸೋ	ಅಮಾ	43-35	ಪೂಭಾ	51-30	2
16	[3]ಮಂಗ	ಪಾ	45-26	ಉತ್ತಭಾ	55-3	3
17	[4]ಬುಧ	ಬಿದಿ	48-31	ರೇವತಿ	60-0	4
18	[5]ಗುರು	ತದಿ	52-36	ರೇವತಿ	0-9	5
19	[6]ಶುಕ್ರ	ಚೌ	57-28	ಅಶ್ವಿನಿ	5-44	6
20	[7]ಶನಿ	ಪಂಚ	60-0	ಭರಣಿ	11-58	7

(1) ಷಡಶೀತಿಪುಣ್ಯಕಾಲಃ, ಕಾರಗಾಲಹಬ್ಬ (2) ಸರ್ವತ್ರಾಮಾವಾಸ್ಯಾ, ರೈವತಮನ್ವಾದಿಃ, ಪದ್ಮಕಃ. (3) ಪಾತಾಭಾವಃ, ಚಾಂದ್ರಸಂವತ್ಸರಾರಂಭಃ, ಆರೋಗ್ಯಪ್ರತಿಪತ್. (4) ವೇದವ್ಯಾಸತೀರ್ಥರ ಪುಣ್ಯದಿನ, ಚಂದ್ರೋದಯಃ, ಜವಾದಿಲವಲ್ ಚಂ ೧. (5) ಸೌಭಾಗ್ಯಗೌರೀವ್ರತಂ, ಲಕ್ಷ್ಮೀವಿಲಾಸದವರ ವರ್ಧಂತಿ. (6) ವರಗಣಪತಿವ್ರತಂ. (7) ಲಕ್ಷ್ಮೀಪಂಚಮಿ, ಕೂರ್ಮಕಲ್ಪಾದಿಃ

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಪಾಳ್ಯದವೆಂಕಟಾಚಲಪಂಡಿತರಸಿದ್ಧೌಷಧಗಳು.

41

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನೆಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈವಿಪಾರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ ಒಂದೇಒಂದು ಬುದ್ದಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುದ್ದಿಯ ಬೆಲೆ ೧-೦-೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ERGISTERED NO. M. 124.

ಮೈಸೂರ್ ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಕ್ಷ್ಯಜ್ಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಪ್ಸದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸಿಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬತ್ತಿಕೆಯಿಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧-೦-೦
ಅಂಚೆವೆಚ್ಚ ಸೇರಿ ೧-೧೪-೦

ಸಂಪುಟ ೨೮) ಮೈಸೂರ್ ಸ್ಟಾರ್ ಸನ್ ೧೯೧೫ ನೆಯ ಇಸವಿ ಮಾರ್ಚಿ ತಾರೀಖು ೨೧ ನೆಯ ಭಾನುವಾರ. (ಸಂಚಿಕೆ ೧೨

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

7

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸರ್ಷಿತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

೧. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.
೨. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.
೩. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ ಯಾವರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.
೪. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು
೫. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.
೬. ಬೇಸಿಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.
೭. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೆರ್ಷಿತಾನದ ಒಂದು ಪೊಟ್ಟಣವನ್ನು ಯಾವಾಗಳೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

೪೫	ಮಾತ್ರೆಗಳ	ಪೊಟ್ಟಣ	೧ಕ್ಕೆ	೨ ಆಣೆ		೮೦	ಮಾತ್ರೆಗಳ	ಟಿನ್	೧ಕ್ಕೆ	೪ ಆಣೆ.
೯೫	,,	,,	,,	೪ ,,		೧೦೦	,,	ಶೀಶೆ	,,	೪॥ ,,
೨೦೦	,,	,,	,,	೭ ,,		೫೫೦	,,	ಮರದಪೆಟ್ಟಿಗೆ	,,	೧ ರೂ.
೨೦೦	,,	ಟಿನ್	,,	೯ ,,		೧೨೦೦	,,	,,	,,	೨ ,,

೧ ರೂ.ಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಎಲ್ಲಾ ಕಡೆಯೂ ಪ್ರಸಿದ್ಧವರ್ತಕರಲ್ಲಿ ವಿಕ್ರಯಿಸಲ್ಪಡುತ್ತದೆ.

ಮೈಸೂರುಸೀಮೆಯ ಏಜಂಟರು:-ಎಂ. ರಾಮಸಂಜೀವ ಸೆಟ್ಟಿ,
ಚನ್ನಪಟ್ಟಣ.

ಸೋಲ್‌ಏಜಂಟರು:-ಸೆರ್ಷಿತಾನ್‌ಡಿಪೋ,
ಪ್ರಿನ್ಸೆಸ್‌ಸ್ಟ್ರೀಟ್ ಬೊಂಬಾಯಿ ನಂ ೨.

ಮದ್ರಾಸ್ ಏಜಂಟ್:—ಬಿ. ಸಿ. ಷಾ ಅಂಡ್‌ಕೊ,
೧೩೩ ಚೇನಾಬಜಾರ್ ರೋಡ್, ಮದ್ರಾಸ್.



25

ಹೊಸ ಕಂಪೆನಿ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ. ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ—ಎಸ್. ಯು. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

೧೯೧೫ ನೆಯ
ಶ್ರೀ ಸೀತಾರಾಘವ
ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.



ಬೆಲೆಯನ್ನು ತಗ್ಗಿಸಿದೆ. ಕೊಂಚಪ್ರತಿಗಳು ಮಾತ್ರವೆ ಇವೆ. ಬೇಗ ಬರೆದು ತರಿಸಿಕೊಳ್ಳಿರಿ. ಉತ್ತಮವಾದ ಕಾಗದ ಮುದ್ದಾದಮುದ್ರಣ. ಮತ್ತಾವಡೈರಿಗಳಲ್ಲೂ ಇಲ್ಲದ ಅನೇಕ ಉಪಯುಕ್ತವಾದ ಸಂಗತಿಗಳು ಈ ಡೈರಿಯಲ್ಲಿ ಇರುತ್ತವೆ. ಐದು (೫) ಡೈರಿಗಳನ್ನು ಒಂದೇವಿಳಾಸಕ್ಕೆ ತರಿಸಿಕೊಂಡರೆ ೧ ಡೈರಿ ಇನಾಂ.

೧ ನಂ—ಸಣ್ಣಸೈಜು ಸಾದಾ	೦-೨-೬
೨ ನಂ—ಪೆನ್ಸಲ್‌ಮುಚ್ಚುಳವುಳ್ಳುದು	೦-೪-೦

ಪೋಸ್ಟೇಜು ಬೇರೆ.

ವಿಳಾಸ.—ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು

24

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧-೦-೦
ಪರವಾದಿಗಜಾಂಕುಶರತ್ನಾವಳಿ	೦-೮-೦
ಶಿವಪೂಜಾವಿಧಿಃ	೦-೮-೦
ಚಾರುಶೀಲಚರಿತೆ	೦-೫-೦
ಸಟೀಕ ನಂದೀವ್ರತ	೦-೪-೦
ಸಟೀಕ ವಿವಾಹವಿಧಿ	೦-೬-೦
ವಿವೇಕಮಂಜರಿ [೨ನೆಯ ಭಾಗ]	೦-೩-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆಯವೆಚ್ಚ ಬೇರೆ.

ಹೊಸ ಪುಸ್ತಕಗಳು.

176

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೩೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ- ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವಿಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತವಾಗಿರುವ ಘೋರಯುದ್ಧದ ದೆಸೆಯಿಂದ ಈ ಸಾಮಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದ ಮತ್ತೂ ಬೆಲಜಿಯಮ್ಮಿನಿಂದ ಸುತರಾಂ ಬರುವುದು ಕೆಟ್ಟಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಅವಶ್ಯಕವಾದ ಕಾಗದ ಮೊದಲಾದ ಸಾಮಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವಧಿಯು ಪೂರೈಸಿರುವವರಿಗೆಲ್ಲಾ ಪತ್ರಿಕೆಯನ್ನು ವಿ. ಪಿ. ದ್ವಾರ ಕಳುಹಿಸುತ್ತಿರುವೆವು. ಆದರೆ ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿರುಗಿಸಿ ಕಾಗದದ ಬೆಲೆಯೇರಿಕೆಯಿಂದ ನಷ್ಟಪಡುವುದರ ಜತೆಗೆ ಪೋಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದು ತಿಳುಹಲು ಖೇದವಾಗುತ್ತದೆ. ಇತಃಪರಃ ದಯಾರ್ದ್ರಹೃದಯರಾದ ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ. ಪಿ. ಹಣವನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನವಾಗಿ ನಡೆದುಕೊಂಡು ಹೋಗುವಂತೆ ಮಾಡುವರೆಂದು ಸಂಪೂರ್ಣವಾಗಿ ನಂಬಿರುತ್ತೇವೆ.

ಮ್ಯಾನೇಜರ್.

ಪ್ರಕಟಣೆ.

ಬೆಂಗಳೂರ ಸೆಂಟರಿಗೆ ಲೋವರ್‌ಸೆಕೆಂಡರಿ ಪರೀಕ್ಷೆಗಾಗಿ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೆ ಎಂದಿನಂತೆ ಭೋಜನಕ್ಕೂ, ವಾಸಕ್ಕೂ ತಕ್ಕೇರ್ಪಾಟನ್ನು ಮಾಡಿದೆ. ಆದುದರಿಂದ ವಿದ್ಯಾರ್ಥಿಗಳೆಲ್ಲರೂ ತಾವು ಬರತಕ್ಕ ಕಾಲ ಮತ್ತೂ ತಮ್ಮ ಹೆಸರು ವಿಳಾಸವನ್ನು ನನ್ನ ಅಡ್ರಸ್ಸಿಗೆ ಬರೆದು ತಿಳಿಸುವುದು.

ಎಸ್. ಕಳ್ಳಪ್ಪ ಊದಬತ್ತಿ ಷಾಪ್,
ದೊಡ್ಡಪೇಟೆ ಬೆಂಗಳೂರಸಿಟಿ.

ಅರ್ಜಿಗಳನ್ನು ಕುರಿತ ನಿಯಮಗಳು.

ನಂ. ಜ. ೮೭೦೧–೭೦–ಎ. ಆ. ೩೩–೧೪–೧, ತಾರೀಖು
೧೧ ನೆಯ ಫೆಬ್ರುವರಿ ೧೯೧೫.

ಶ್ರೀಮನ್ ಮಹಾರಾಜ ರಾಜಾಸಾಹೇಬ್ಬಹಾದುರವರ
ಸರ್ಕಾರೀ ಹುಕುಂಗಳು.

ಜನರಲ್ ಮತ್ತು ರೆವಿನ್ಯೂ ಇಲಾಖೆಗಳು.

ನಂ. ಜ. ೮೭೦೧ ೭೦–ಎ. ಆ. ೩೩–೧೪–೧, ತಾರೀಖು
೧೧ ನೆಯ ಫೆಬ್ರುವರಿ ೧೯೧೫.

ಹುಕುಂ—ಸಂಸ್ಥಾನದ ಸರ್ಕಾರಿ ಆಫೀಸುಗಳಲ್ಲಿ ಅರ್ಜಿಗಳನ್ನು ಇತ್ಯರ್ಥ ಮಾಡತಕ್ಕ ವಿಧಾನವನ್ನು ಇನ್ನೂ ಚೆನ್ನಾಗಿ ಕ್ರಮಪಡಿಸಬೇಕೆಂಬ ಉದ್ದೇಶದಿಂದ, ಶ್ರೀಮನ್ ಮಹಾರಾಜರವರ ಸರ್ಕಾರದವರು ಈ ವಿಷಯದಲ್ಲಿ ಈಗಿರುವ ನಿಯಮಗಳನ್ನು ರದ್ದುಮಾಡಿ, ಇದಕ್ಕೆ ಜಂಟಿಸಿರುವ ನಿಯಮಗಳನ್ನು ಸಾದರ್ ಮಾಡಲು ಅಪ್ಪಣೆ ದಯಪಾಲಿಸಿರುತ್ತಾರೆ.

ಡಿ. ಎಂ. ನರಸಿಂಗರಾವ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ
ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ನಂ. ಜ. ೮೭೦೧–೭೦–ಎ. ಆ. ೩೩–೧೪–೧, ತಾರೀಖು
೧೧ ನೆಯ ಫೆಬ್ರುವರಿ ೧೯೧೫.

ಅರ್ಜಿಗಳನ್ನು ತೆಗೆದುಕೊಳ್ಳುವುದಕ್ಕಾಗಿಯೂ ಇತ್ಯರ್ಥ ಮಾಡುವುದಕ್ಕಾಗಿಯೂ ನಿಯಮಗಳು.

೧ ಪ್ರತ್ಯೇಕವಾದ ಯಾವುದಾದರೂ ತರಹ ಅರ್ಜಿಗಳಿಗಾಗಿ, ಕಾನೂನಿನಿಂದಾಗಲೀ ಅಥವಾ ಸಮರ್ಥವಾದ ಹುಕುಮಿನಿಂದಲಾಗಲೀ ಯಾವುದಾದರೂ ನಡೆವಳಿಕೆಯು ಏರ್ಪಟ್ಟಿದ್ದರೆ, ಅಂಥ ನಡೆವಳಿಕೆಗೆ ಈ ನಿಯಮಗಳಲ್ಲಿರುವ ಯಾವ ಅಂಶದಿಂದಲೂ ಬಾಧಕವಾಗುವುದಿಲ್ಲ.

೨. ಪ್ರತಿಯೊಂದು ಅರ್ಜಿಯನ್ನೂ, ಅರ್ಜಿ ಬರೆಯುವುದಕ್ಕಾಗಿ ವಿಧಾಯಕವಾದ ಮೂರು ಕಾಸಿನ ಕಾಗದದ ಮೇಲೆ ಅಥವಾ ಕೊನೆಗೆ ಅದೇ ಪ್ರಮಾಣವುಳ್ಳ ಒಳ್ಳೆ ಗಟ್ಟಿ ಕಾಗದದಮೇಲೆ ಎಡಗಡೆಯಲ್ಲಿ ಕಾಲುಭಾಗ ಅಂಚನ್ನು (ಮಾರ್ಜಿನ) ಬಿಟ್ಟು ಬರೆಯಬೇಕು. ಕೋರ್ಟ್ ಫೀ ಸ್ಟಾಂಪು ಏನಾದರೂ ಇದ್ದಲ್ಲಿ, ಅದನ್ನು ಆ ಎಡಗಡೆಯ ಕಾಲುಭಾಗದ ಅಂಚಿನಲ್ಲಿ ಅಂಟಿಸಕೂಡದು.

೩. ಪ್ರತಿ ಅರ್ಜಿಯೂ ಪೂರ್ತಿಯಾದುದಾಗಿರಬೇಕು ಮತ್ತು ಒಂದೇ ವಿಷಯಕ್ಕೆ ಸಂಬಂಧಪಟ್ಟುದಾಗಿರಬೇಕು. ಅದರಲ್ಲಿ ಅರ್ಜಿದಾರನು ನಂಬಿರುವ ಎಲ್ಲಾ ಮುಖ್ಯ ಸಂಗತಿಗಳನ್ನೂ ಅವುಗಳಿಗೆ ಉಪಪತ್ತಿಗಳನ್ನೂ ನಮೂದು ನೂಡಬೇಕು. ಅದನ್ನು ಪಿಲೆ ಮಾಡುವುದಕ್ಕೆ ಅವಶ್ಯಕವಾದ ಮತ್ತು ಅರ್ಜಿದಾರನ ವಶದಲ್ಲಿರುವ ಎಲ್ಲಾ ಕಾಗದ ಪತ್ರಗಳನ್ನೂ ಅಥವಾ ಅವುಗಳ ನಕಲುಗಳನ್ನು ಅರ್ಜಿಗಳೊಡನೆ ರವಾನಿಸಬೇಕು. ಅಪ್ಪೀಲ್ ಅರ್ಜಿಗಳೊಡನೆ, ಯಾವ ಆರ್ಡರುಗಳ ಮೇಲೆ ಅಪ್ಪೀಲ್ ತರಲಾಗುತ್ತದೆಯೋ ಆ ಆರ್ಡರುಗಳ ನಿಜವಾದ (ಸರಿಯಾದ ಅಧಿಕಾರಿಗಳಿಂದ ರುಜುವಾಗಿರುವ) ನಕಲುಗಳನ್ನು ಅಥವಾ ಅರ್ಜಿದಾರನಿಗೆ ಕೊಟ್ಟಿರುವ ಎಂಡಾರ್ಸ್‌ಮೆಂಟುಗಳ ನಕಲುಗಳನ್ನು ಕಳುಹಿಸಬೇಕು.

೪. ಪ್ರತಿಯೊಂದು ಅರ್ಜಿಯನ್ನು ಸ್ಪಷ್ಟವಾಗಿ ತಿಳಿಯುವಂತೆ ಬರೆಯಬೇಕಲ್ಲದೆ ಆಯಾ ಸಂಗತಿಯ ಸ್ವಭಾವಕ್ಕೆ ಅವಕಾಶವಿರುವಷ್ಟು ಸಂಗ್ರಹವಾಗಿ ಬರೆಯಬೇಕು. ಅದನ್ನು ಅನವಶ್ಯಕವಾಗಿ ವಿಸ್ತರಿಸಕೂಡದು; ಅಥವಾ ಅರ್ಥವಾಗದ ಮಾತುಗಳಿಂದಲಾಗಲೀ, ಅತಿಶಯೋಕ್ತಿರೂಪವಾದ ಮಾತುಗಳಿಂದಲಾಗಲೀ ಅವಮಾನಕರವಾದ ಮಾತುಗಳಿಂದಲಾಗಲೀ ಬರೆಯಲೂ ಕೂಡದು.

೫. ಅರ್ಜಿಗಳು ಯಾವ ವಿಷಯಕ್ಕೆ ಸಂಬಂಧಪಡುತ್ತವೆಯೋ ಆ ವಿಷಯಕ್ಕೆ ಸ್ಟಾಂಪ್ ನಿಯಮವೇನಾದರೂ ಅನ್ವಯಿಸುವುದಾದರೆ, ಅದನ್ನು ಅನುಸರಿಸಿದವುಗಳಾಗಿರಬೇಕು.

೬. ಕೇಳಿಕೊಳ್ಳುವ ಪರಿಹಾರವನ್ನು ಕೊಡಲು ಅರ್ಹರಾದ ಕೆಳಗಣ ಅಧಿಕಾರಿಗಳ ಹೆಸರಿಗೆ ಬರೆದುಕೊಳ್ಳದೇ ಇರುವ ಅರ್ಜಿಗಳನ್ನು ಅಂಥ ಅಧಿಕಾರಿಗಳ ಬಳಿಗೆ ಕಳುಹಿಸಲಾಗುವುದು. ಮತ್ತು ಆ ಸಂಗತಿಯನ್ನು ಅರ್ಜಿದಾರನಿಗೆ ತಿಳಿಸಲಾಗುವುದು.

೭. ಸರ್ಕಾರಿ ನೌಕರಿಯಲ್ಲಿರುವ ಜನಗಳು ತಮ್ಮ ಸರ್ಕಾರೀ ಸ್ಥಿತಿಗೆ ಸಂಬಂಧಪಡುವ ಯಾವ ಸಂಗತಿಯನ್ನಾದರೂ ತಿಳಿಸುವ ಅರ್ಜಿಗಳನ್ನು ತಮಗೆ ಮೇಲ್ಪಟ್ಟ ಸರ್ಕಾರೀ ಅಧಿಕಾರಿಗಳ ಮೂಲಕವಾಗಿಯೇ ರವಾನಿಸಬೇಕು.

೮. ಒಂದು ಅರ್ಜಿಯನ್ನು ಮೇಲಿನ ನಿಯಮಗಳಿಗನುಸಾರವಾಗಿ ಬರೆಯದೇ ಅಥವಾ ಹಾಜರ್ಮಾಡದೇ ಇರುವಾಗ, ನಿಯಮಗಳಲ್ಲೊಂದು ಯಾವ ನಿಯಮವನ್ನು ಉಲ್ಲಂಘಿಸಲಾಗಿದೆ ಎಂಬುದನ್ನು ವಿಶೇಷವಾಗಿ ನಮೂದುಮಾಡಿ ಎಂಡಾರ್ಸ್‌ಮೆಂಟಿನೊಡನೆ ಆ ಅರ್ಜಿಯನ್ನು ವಾಪಸ್ ಮಾಡಲಾಗುವುದು.

೯. ಅರ್ಜಿಗಳನ್ನು ರೂಬರೂಬ್ ಕೊಡಬಹುದು; ಅಥವಾ, ಆಫಿಸರ ಅಡ್ರೆಸ್ಸಿಗೆ ಪೋಸ್ಟಿನಮೇಲೆ ಕಳುಹಿಸಬಹುದು; ಅಥವಾ ಪ್ರತಿಯೊಂದು ಆಫಿಸಿನಲ್ಲಿಯೂ ಇದಕ್ಕಾಗಿ ಇಟ್ಟಿರುವ ಪೆಟ್ಟಿಗೆಯಲ್ಲಿ ಹಾಕಬಹುದು. ತಂತೀಮೂಲಕ ಕಳುಹಿಸುವ ಅರ್ಜಿಗಳಿಗೆ ಸಾಧಾರಣವಾಗಿ ನಿಗ ಕೊಡುವುದಿಲ್ಲ.

೧೦. ಅರ್ಜಿದಾರನು ತನ್ನ ಅರ್ಜಿಗೆ ರಸೀತಿ ಬೇಕೆಂದು ಅಪೇಕ್ಷಿಸುವುದಾದರೆ, ಒಂದಾಣೆ ಕೋರ್ಟ್ ಫೀ ಸ್ಟಾಂಪ್ ಹಚ್ಚಿದ ಒಂದು ರಸೀತಿಯನ್ನು ಅರ್ಜಿಗೆ ಜಂಟಿಸಬಹುದು. ಯಾರಿಗೆ ಅರ್ಜಿ ಕೊಡಲಾಗುತ್ತದೆಯೋ ಆ ಆಫಿಸರಿಂದಲಾಗಲೀ, ಅಥವಾ ಅವರ ಆಫಿಸಿನಲ್ಲಿ ಈ ಬಗ್ಗೆ ಅಪ್ಪಣೆ ಪಡೆದಿರುವ ಯಾರಾದರೂ ಒಬ್ಬ ಅಧಿಕಾರಿಯಿಂದಲಾಗಲೀ ರುಜು ಮಾಡಲ್ಪಟ್ಟು ಸದರಿ ರಸೀತಿಯು ಅರ್ಜೀದಾರನಿಗೆ ವಾಪಸ್ ಕಳುಹಿಸಲ್ಪಡಲಾಗುವುದು.

೧೧. ಈ ನಿಯಮಗಳಿಗೆ ಅನುಸಾರವಾಗಿ ತಯಾರ್ಮಾಡಿ ರೂಬ್ ರೂಬ್ ಕೊಟ್ಟ ಅಥವಾ ಪೋಸ್ಟ್ ಮೂಲಕ ರವಾನಿಸಿದ ಪ್ರತಿಯೊಂದು ಅರ್ಜಿಯ ವಿಷಯದಲ್ಲಿಯೂ, ಆಖೈರ್ ಹುಕುಮನ್ನು ನಮೂದುಮಾಡಿ ಬರವಣಿಗೆಯ ಮೂಲಕ ಒಂದು ಸಂಪೂರ್ಣವಾದ ಎಂಡಾರ್ಸ್‌ಮೆಂಟನ್ನು ಕೊಡಬೇಕು.

೧೨. ಅರ್ಜಿಯನ್ನು ರೂಬ್‌ರೂಬ್ ಕೊಟ್ಟ ದಿನದಲ್ಲಿಯೇ ಹುಕುಂ ಮಾಡುವುದಕ್ಕೆ ಆಗದಿದ್ದರೆ, ಪ್ರಾಯಶಃ ಎಷ್ಟು ಕಾಲದೊಳಗಾಗಿ ಹುಕುಂ ಆಗಬಹುದು ಎಂಬ ಸಂಗತಿಯನ್ನು ತತ್‌ಕ್ಷಣ ಅರ್ಜಿದಾರನಿಗೆ ತಿಳಿಸಬೇಕು. ಹುಕುಮಿಗಾಗಿ ಅವನನ್ನು ಆಫಿಸನ ಬಳಿ ಕಾಯುವಂತೆ ಮಾಡಕೂಡದು. ಬೇರೆ ವಿಧವಾಗಿ ಬಂದ ಅರ್ಜಿಗಳನ್ನು ಒಂದು ವಾರದೊಳಗಾಗಿ ಫೈಸಲ್ ಮಾಡುವುದಕ್ಕೆ ಆಗದೇಹೋದರೆ, ಯಾವಾಗ ಆಖೈರಾಗಿ ಫೈಸಲಾದೀತೆಂದು ನಿರೀಕ್ಷಿಸಬಹುದೆಂಬ ಸಂಗತಿಯನ್ನು ತಿಳಿಸಿ ಅರ್ಜಿದಾರನಿಗೆ ಪೋಸ್ಟ್ ಮೂಲಕ ಒಂದು ಅಕ್ನಾಲೆಡ್ಜ್‌ಮೆಂಟನ್ನು ಕಳುಹಿಸಿಕೊಡಬೇಕು.

೧೩. ನಿಜವಾದ ಅವಶ್ಯಕತೆ ಇದ್ದಲ್ಲದೆ, ಅರ್ಜಿಗಳನ್ನು ರಿಪೋರ್ಟ್ ಬಗ್ಗೆ ತಾಬೇದಾರಿ ಆಫಿಸರುಗಳ ಬಳಿಗೆ ಕಳುಹಿಸಕೂಡದು. ರಿಪೋರ್ಟುಗಳು ಬೇಕಾದಾಗ, ಯಾವ ಅಂಶದಲ್ಲಿ ತಿಳಿವಳಿಕೆ ಬೇಕೆಂಬುದನ್ನು ಸ್ಪಷ್ಟವಾಗಿ ನಮೂದ್ ಮಾಡಬೇಕು.

೧೪. ಅರ್ಜಿಗಳ ಮೇಲೆ ಹುಕುಂ ಮಾಡತಕ್ಕ ಆಫಿಸರುಗಳು ಹುಕುಂ ನಕಲುಗಳನ್ನು ಕೊಟ್ಟ ತಾರೀಖನ್ನು ಹುಕುಮಿನಲ್ಲಿ ನಮೂದು ಮಾಡಿಕೊಂಡು ಅಂಥ ನಕಲುಗಳನ್ನು ಅರ್ಜಿದಾರರಿಗೆ ಸಾಧ್ಯವಾದಮಟ್ಟಿಗೂ ಸಮಕ್ಷದಲ್ಲಿ ಕೊಡಬೇಕು. ಇದು ಸಾಧ್ಯವಲ್ಲದ ಸಂದರ್ಭದಲ್ಲಿ ಸದರಿ ಹುಕುಮಿನ ದ್ವಿಪ್ರತಿಗಳನ್ನು ತಾಬೇದಾರೀ ಆಫಿಸರಿಗೆ ಕಳುಹಿಸಿಕೊಡಬೇಕು. ಅವರು ಒಂದು ಕಾಪಿಯನ್ನು ಸಂಬಂಧಪಟ್ಟವರಿಗೆ ತಲಪಿಸಿ, ಹಾಗೆ ವಾಸ್ತವವಾಗಿ ತಲಪಿಸಿದ ತಾರೀಖನ್ನು ಮತ್ತೊಂದು ಕಾಪಿಯಮೇಲೆ ತಮ್ಮ ರುಜು ನಿಶಿ ದಾಖಲ್ಮಾಡಬೇಕು.

೧೫. ಪ್ರತಿಯೊಬ್ಬ ಅರ್ಜಿದಾರನಿಗೂ, ಯಾವ ಆಫಿಸಿಗೆ ಅರ್ಜಿ ಕೊಡಲಾಯಿತೋ ಆ ಆಫಿಸಿನಿಂದಲೇ ಸೀದಾ ಅವನ ಅರ್ಜಿಯಮೇಲೆ ಆದ ಆಖೈರ್ ಹುಕುಂ ಸಂಗತಿಯನ್ನು ತಿಳಿಯಪಡಿಸಬೇಕೇಹೊರತು ೬ನೆಯ ನಿಯಮದಲ್ಲಿ ಕಂಡ ಸಂದರ್ಭಗಳಲ್ಲಿ ವಿನಾ, ಅವನ ಅರ್ಜಿಗೆ ಉತ್ತರ ಕೊಡುವಂತೆ ತಾಬೇದಾರೀ ಆಫಿಸಿಗೆ ಕಳುಹಿಸಿಕೊಡಕೂಡದು.

೧೬. ಆಖೈರ್ ಹುಕುಂ ಮಾಡಿದ ಮೇಲೆ, ವಿಶೇಷವಾದ ಪರ್ಯಾಲೋಚನೆಗೆ ಅವಕಾಶವಿರುವ ಹೊಸ ಸಂಗತಿ ಇದ್ದಲ್ಲದೆ ಅದೇ ವಿಷಯವನ್ನು ಕುರಿತು ಬರುವ ಎರಡನೇ ಅರ್ಜಿಗೆ ನಿಗ ಕೊಡುವುದಿಲ್ಲ.

೧೭. ಅರ್ಜಿಗಳನ್ನು ಪ್ರತಿದಿನವೂ ಆಫಿಸ್ ಕಾಲದಲ್ಲಿ ಒಂದು ಕ್ಲುಪ್ತವಾದ ಕಾಲದಲ್ಲಿ ಆಫಿಸರು ತಾವೇ ತೆಗೆದುಕೊಳ್ಳಬೇಕು; ಗುಮಾಸ್ತೆಯರು ತೆಗೆದುಕೊಳ್ಳಕೂಡದು. ಅವರು ತಮಗೆ ಕಾರ್ಯಾವಸರವು ಅವಕಾಶ ಕೊಡುವಷ್ಟುಮಟ್ಟಿಗೂ ಆ ಕಾಲವನ್ನೇ ಅನುಸರಿಸಿ ನಡೆಯಬೇಕು.

೧೮. ಯಾವ ಯಾವ ಕಾಲಗಳ ಮಧ್ಯದಲ್ಲಿ ಅರ್ಜಿಗಳನ್ನು ಕೊಡಬೇಕು ಎಂಬ ಸಂಗತಿಯನ್ನು ಜನಗಳಿಗೆ ತಿಳಿಯಪಡಿಸುವ ಒಂದು ನೋಟೀಸನ್ನು ಆಫಿಸಿನ ಹೊರಭಾಗದಲ್ಲಿ ಒಂದು ನೋಟೀಸ್ ಬೋರ್ಡಿಗೆ ತಗಲುಹಾಕಬೇಕು.

೧೯. ಒಂದು ಅರ್ಜಿಯನ್ನು ಸಮಜಾಯಿಷಿ, ಯಾ, ರಿಪೋರ್ಟ್ ಬಗ್ಗೆ ಒಂದು ತಾಬೇದಾರೀ ಆಫಿಸಿಗೆ ಕಳುಹಿಸಿದಾಗ, ಬೇಕಾದ ಸಮಾಚಾರವು ರಿಕಾರ್ಡುಗಳಿಂದಲೇ ದೊರೆಯಬಹುದಾದರೆ, ಅದು ತಲಪಿದ ಹತ್ತು ದಿನಗಳೊಳಗಾಗಿ ಜವಾಬನ್ನು ಕಳುಹಿಸಿಕೊಡಬೇಕು. ಆದರೆ ಅರ್ಜಿಯಲ್ಲಿ ನಮೂದಾದ ಸಂಗತಿಗಳನ್ನು ಬೇರೆ ಬೇರೆ ಜನಗಳನ್ನು ತನಿಖೆಮಾಡಿಯಾಗಲೀ ಅಥವಾ ದೂರದಲ್ಲಿರುವ ತಾಬೇದಾರೀ ಆಫಿಸರುಗಳಿಗೆ ಕಳುಹಿಸಿಕೊಡುವುದರ ಮೂಲಕವಾಗಿಯಾಗಲೀ ವಿಚಾರಿಸಿ ತಿಳಿದುಕೊಳ್ಳುವುದು ಅವಶ್ಯಕವಾದರೆ, ರಿಪೋರ್ಟನ್ನು ಒಂದು ತಿಂಗಳೊಳಗಾಗಿ ಸಾಧ್ಯವಾದಮಟ್ಟಿಗೂ ಜಾಗ್ರತೆಯಾಗಿ ಕಳುಹಿಸಿಕೊಡಬೇಕು. ಇನ್ನೂ ಹೆಚ್ಚಾದ ಕಾಲವು ಅವಶ್ಯಕವಾಗಿ ಬೇಕಾಗಿದ್ದಲ್ಲಿ, ಒಂದು ಮಧ್ಯಕಾಲದ ರಿಪೋರ್ಟನ್ನು ಕಳುಹಿಸಿಕೊಟ್ಟು ಹೆಚ್ಚು ಕಾಲವನ್ನು ಪಡೆಯಬೇಕು.

೨೦. ಒಂದು ವರ್ಷದಲ್ಲಿ ಸರಾಸರಿ ಐವತ್ತಕ್ಕಿಂತಲೂ ಹೆಚ್ಚಾಗಿ ಅರ್ಜಿಗಳು ಬರುವ ಎಲ್ಲಾ ಆಫಿಸುಗಳಲ್ಲಿಯೂ, ಅರ್ಜಿಗಳನ್ನು ದಾಖಲ್ಮಾಡುವುದಕ್ಕೆ ಒಂದು ಬೇರೆ ರಿಜಿಸ್ಟರನ್ನು ಇಡಬೇಕು. ಪ್ರತ್ಯೇಕವಾಗಿ ಇಟ್ಟಿರುವ ರಿಜಿಸ್ಟರುಗಳಲ್ಲಿ ದಾಖಲಾಗುತ್ತಿರುವ ಕಾಪಿ ಅಪ್ಲಿಕೇಷನುಗಳನ್ನೂ, ದರಖಾಸ್ತುಗಳನ್ನೂ, ಇತರ ವಿಧವಾದ ಅರ್ಜಿಗಳನ್ನೂ, ಅರ್ಜಿ ರಿಜಿಸ್ಟರಿನಲ್ಲಿಯೂ ಸಹ ದಾಖಲ್ಮಾಡಕೂಡದು.

೨೧. ಅರ್ಜಿ ದಾಖಲಾತಿಯ ಕೆಳಭಾಗದಲ್ಲಿ, ರಿಮೈಂಡರ್ ಅರ್ಜಿಗಳು ಏನಾದರೂ ಬಂದರೆ ಅವುಗಳನ್ನು ದಾಖಲ್ ಮಾಡುವುದಕ್ಕೆ ಸಾಕಾದಷ್ಟು ಸ್ಥಳವನ್ನು ಬಿಟ್ಟಿರಬೇಕು.

ರಣಾಂಗಣದಲ್ಲಿ ನಾಯಿಗಳ ಉಪಕಾರ.

ಯುದ್ಧಾಂಗಣದಲ್ಲಿ ಹಾಲು, ಮಾಂಸ, ರೊಟ್ಟಿ ಮೊದಲಾದ ಆಹಾರ್ಯವಸ್ತುಗಳನ್ನು ತುಂಬಿಕೊಂಡು ಹೋಗುವ ಸಣ್ಣ ಸಣ್ಣ ಬಂಡಿಗಳಿಗೆ ನಾಯಿಗಳನ್ನು ಕಟ್ಟಿ ಎಳೆಯಿಸುವುದು ಸಾಮಾನ್ಯವಾದ ವಾಡಿಕೆಯಾಗಿದೆ. ಒಂದೊಂದು ಬಂಡಿಗೆ ಅದರ ಭಾರವನ್ನನುಸರಿಸಿ ಒಂದು ಜತೆ ಅಥವಾ ೨ ಜತೆ ಇಲ್ಲವೆ ಮುಂದೆ ೧ ಹಿಂದೆ ೨ ಹೀಗೆ ನಾಯಿಗಳನ್ನು ಕಟ್ಟುವುದುಂಟು. ಇಷ್ಟೇ ಅಲ್ಲದೆ ಯುದ್ಧಾಂಗಣದಲ್ಲಿ ಈ ನಾಯಿಜಾತಿಯಿಂದ ಆಗುವ ಸಹಾಯವು ಅಮೂಲ್ಯವಾಗಿದೆ. ಸಣ್ಣ ಸಣ್ಣ ಫಿರಂಗಿಗಳನ್ನೂ, ಹಗುರವಾದ ಆಯುಧ ಮೊದಲಾದ ಸಾಮಾನುಗಳನ್ನೂ ಸಹ ಲೀಲಾಜಾಲವಾಗಿ ಎಷ್ಟು ದೂರದವರೆಗಾದರೂ ಸಾಗಿಸಿಕೊಂಡು ಹೋಗುವುವು. ಇಂಥ ಸಾಮಾನುಗಳನ್ನು ಹೇರುವ ಬಂಡಿಗಳು ಬಹಳ ಹಗುರವಾಗಿ ಬೈಸಿಕಲ್ ಬಂಡಿಗಳಿಗೆ ಹಾಕಿರುವಂಥ ರಬ್ಬರಿನ ಸಣ್ಣ ಗಾಲಿಗಳಿಂದ ಕೂಡಿರುವುವು. ಈ ನಾಯಿಗಳನ್ನು ಹೀಗೆ ಬಂಡಿಗಳಿಗೆ ಕಟ್ಟುವುದು ಮಾತ್ರವೇ ಅಲ್ಲದೆ ಎಷ್ಟೋ ಕಡೆ ಕಾವಲಿಗಾಗಿಯೂ ನಿಯಮಿಸುವರು. ಈ ಪದ್ಧತಿಯು ಬಹುಕಾಲದಿಂದ ನಡೆದುಬಂದಿದೆ. ಪೂರ್ವದಲ್ಲಿ ಕೋಮ್‌ನಗರದಲ್ಲಿ ಸೇನಾಶಿಬಿರವನ್ನು ಕಾಯುವುದಕ್ಕಾಗಿ ಗಟ್ಟಿಯಾಗಿ ಅರಚುವ ನಾಯಿಗಳನ್ನು ಇಡುತ್ತಿದ್ದರು. ಇವುಗಳ ಅಪ

ಯೋಗವನ್ನು ಸುಪ್ರಸಿದ್ಧರಾದ ಫ್ರೆಡರಿಕ್‌ದಿಗ್ರೇಟನೂ, ನೆಪೋಲಿಯನ್ ಬೋನಾಪಾರ್ಟೂ ಸಹ ಮೆಚ್ಚಿಕೊಂಡಿದ್ದರು. ಹಿಂದಿನ ಮಾತೇಕೆ? ಈಗಿನ ಮಹಾಯುದ್ಧದಲ್ಲೂ ಕೂಡ ಪಶ್ಚಿಮರಣರಂಗದ ಪಾಂಟ್ಸ್‌ಕೋಟೆಯ ಹತ್ತಿರ ಮಿತ್ರಮಂಡಲಿಯವರ ಸೇನೆಗಳು ಇಳಿದಿರುವಾಗ ಶತ್ರುಸೇನೆಗಳು ಬರುತ್ತಿರುವುದನ್ನು ಒಂದು ನಾಯಿಯು ತಿಳಿದು, ಬಲವಾಗಿ ಕೂಗಲಾರಂಭಿಸಿತು. ಅದರಿಂದ ಈ ಸೇನೆಯವರು ಎಚ್ಚತ್ತು, ಆಗ ಸಂಭವಿಸಲಿಕ್ಕಿದ್ದ ಮಹಾವಿಪತ್ತಿನಿಂದ ತಪ್ಪಿಸಿಕೊಂಡರು. ಮನುಷ್ಯರಾದರೂ ಕೃತಘ್ನರೂ ವಿಶ್ವಾಸಹೀನರೂ ಆಗುವುದುಂಟು. ನಾಯಿಮಾತ್ರ ಹಾಗೆಂದಿಗೂ ಆಗುವುದಿಲ್ಲವಲ್ಲವೆ?

ಜರ್ಮನಿಯವರು ಈಗಿನ ಯುದ್ಧದಲ್ಲಿ ೪ ಸಾವಿರ ನಾಯಿಗಳನ್ನು ಉಪಯೋಗಿಸುತ್ತಿರುವರಂತೆ. ರಷ್ಯಾದವರು ಕಕೇಷಿಯಾಜಾತಿಯ ನಾಯಿಗಳನ್ನೂ, ಆಸ್ಟ್ರಿಯಾದವರು ಡಾಕವೇಟಿ ಎಂಬ ಜಾತಿಯ ನಾಯಿಗಳನ್ನೂ, ತುರ್ಕಿಯವರು ಮಂದೆನಾಯಿಗಳನ್ನೂ, ಫ್ರಾನ್ಸು–ಬೆಲ್ಜಿಯಂದೇಶೀಯರು ಮತ್ತೊಂದುಜಾತಿಯ ನಾಯಿಗಳನ್ನೂ ಯುದ್ಧದಲ್ಲಿ ಉಪಯೋಗಿಸುತ್ತಾರೆ.

ಫ್ರಾನ್ಸಿನವರು ಅಲ್ಜೀರಿಯಾ ಯುದ್ಧದಲ್ಲಿ ಒಂದು ನಾಯಿಯು ಮಾಡಿದ ಅದ್ಭುತಕಾರ್ಯಕ್ಕಾಗಿ ಮೆಚ್ಚಿ ಅದಕ್ಕೆ ಒಂದು ಕಾರ್ಪೋರಲ್ ಬಿರುದನ್ನೂ, ಬಳಿಕ ಸಾರ್ಜೆಂಟ್‌ಬಿರುದನ್ನೂ ಕೊಟ್ಟರು. ಆ ನಾಯಿಯು ಹೋಗುವಾಗಲೆಲ್ಲಾ ಈ ಬಿರುದಾಂಕನಗಳನ್ನು ಎದೆಯಮೇಲೆ ಧರಿಸಿಕೊಂಡು ಹೋಗುತ್ತಿದ್ದಿತು. ರಷ್ಯಕ್ಕೂ ಜಪಾನಿಗೂ ಯುದ್ಧವು ಸಂಭವಿಸಿದಾಗ, ಜಪಾನರು ಬಂದು ತಮ್ಮ ಲೋಹಮಾರ್ಗಗಳಮೇಲೆ ಬೀಳದಂತೆ ಮಾಡುವುದಕ್ಕೆ ರಷ್ಯನರ ಈ ನಾಯಿಗಳನ್ನೇ ಕಾವಲಿಗೆ ಇಟ್ಟಿದ್ದರು. ಶತ್ರುಗಳನ್ನು ಕಂಡಕೂಡಲೇ ಇವು ಗಟ್ಟಿಯಾಗಿ ಅರಚುವುದರಿಂದ ಆ ಶತ್ರುಗಳಿಂದ ಇವುಗಳಿಗೇ ಅಪಾಯಸಂಭವಿಸುವುದಲ್ಲವೆ? ಎಂದು ಕೆಲರು ಆಕ್ಷೇಪಿಸಬಹುದು. ಗಟ್ಟಿಯಾಗಿ ಅರಚುವುದರಿಂದ ಇವಕ್ಕೆ ಕೇಡು ಸಂಭವಿಸುವುದೇನೋ ನಿಜ. ಆದರೆ ಶ್ರೇಷ್ಠವಾದಜಾತಿಯ ನಾಯಿಗಳು ಗಟ್ಟಿಯಾಗಿ ಅರಚುವುದಿಲ್ಲ. ಶತ್ರುಗಳನ್ನು ಕಂಡಕೂಡಲೇ ದೇಹವನ್ನು ಬಿಗಿಹಿಡಿದು ಮೆಲ್ಲಗೆ ಬಗುಳುವುವು. ಅದರಿಂದಲೇ ಅವುಗಳ ಕಡೆಯ ಸೈನಿಕರು ಎಚ್ಚರುಗೊಳ್ಳುವರು. ಈ ನಾಯಿಗಳು ಕಾವಲು ಕಾಯುವುದು ಮಾತ್ರವೇ ಅಲ್ಲದೆ ಒಂದು ಕಡೆಯಿಂದ ಮತ್ತೊಂದುಸ್ಥಲಕ್ಕೆ ಕಾಗದಗಳನ್ನೂ ಸಾಗಿಸಿಕೊಂಡು ಹೋಗಿ ಕೊಡುವುವು. ಕೆಲಸೈನಿಕರು ತಮ್ಮ ಶತ್ರುಗಳ ಚಲನವಲನವನ್ನು ತಿಳಿದುಕೊಳ್ಳುವುದಕ್ಕಾಗಿ ಮೊಟಾರಿನಲ್ಲಿ ಕುಳಿತು ಹೋಗುವುದುಂಟು. ಅಂಥ ಕಾಲದಲ್ಲಿ ತಮ್ಮ ಜತೆಯೊಳಗೆ ನಾಯಿಗಳನ್ನೂ ಕುಳ್ಳಿರಿಸಿಕೊಂಡು ಹೋಗುತ್ತಾರೆ. ತಾವು ತಿಳಿದ ಸಂಗತಿಗಳನ್ನು ಬರೆದ ಕಾಗದಗಳನ್ನು ಈ ನಾಯಿಗಳ ಮೂಲಕ ತಮ್ಮ ಶಿಬಿರಗಳಿಗೆ ಕಳುಹಿಸಿಕೊಡುತ್ತಾರೆ. ಇಂಥ ಕಾಗದಗಳು ಇತರರ ಕಣ್ಣಿಗೆ ಬೀಳದಂತೆ ಆ ನಾಯಿಗಳ ಕೊರಲ ಪಟ್ಟಿಯೊಳಗೆ ಅಡಕಮಾಡಿ ಕಳುಹಿಸಲ್ಪಡುವುವು. ಅವು ಶತ್ರುಗಳಿರುವ ದಾರಿಯಲ್ಲಿ ಹೋದರೂ ಯಾವುದಾದರೊಂದು ಉಪಾಯದಿಂದ ಅವರ ಕಣ್ಣಿಗೆ ಬೀಳದೆ ತಪ್ಪಿಸಿಕೊಂಡೇ ಗಮ್ಯಸ್ಥಾನವನ್ನು ಸೇರುವುವು. ಮತ್ತೂ ಈ ನಾಯಿಗಳು ಇನ್ನೂ ಉತ್ಕೃಷ್ಟವಾದ ಕೆಲಸಗಳನ್ನು ಮಾಡುವುವುಂಟು. ಅದೇನೆಂದರೆ—ಏಟನ್ನು ತಿಂದು ನರಳುತ್ತಿರುವವರಿಗೆ ಸಹಾಯಮಾಡುವುದರಲ್ಲಿ ರೆಡ್‌ಕ್ರಾಸ್ ಸಂಘದವರಿಂದ ಇವು ಉಪಯೋಗಿಸಲ್ಪಡುತ್ತವೆ. ಏಟುತಿಂದು ಎಲ್ಲೋ ಹಳ್ಳಕೊಳ್ಳಗಳಲ್ಲಿ ಬಿದ್ದುಹೋಗಿ ಕಾಣಿಸದಿರುವ ಸೈನಿಕರನ್ನು ಈ ನಾಯಿಗಳು ತಡಕಿ ಗೊತ್ತುಮಾಡಿಕೊಂಡು ಬರುವುವು. ಈ ಕೆಲಸಕ್ಕಾಗಿ ಅಣಿಮಾಡಲ್ಪಟ್ಟಿರುವ ನಾಯಿಗಳ ನಡುವಿಗೆ ಕೆಲ ಔಷಧಗಳನ್ನೂ ಸ್ವಲ್ಪ ಆಹಾರ್ಯವಸ್ತುವನ್ನೂ ಏಟುಬಿದ್ದು ಗಾಯವಾಗಿರುವ ಸ್ಥಲಕ್ಕೆ ಕಟ್ಟುವ ನಿಮಿತ್ತವಾಗಿ ಸ್ವಲ್ಪ ಅರಳೆಯನ್ನೂ ಬಟ್ಟೆಯ ಚೂರನ್ನೂ ಸುತ್ತಿ, ಈ ನಾಯಿಗಳನ್ನು ಕಳುಹಿಸಿಕೊಡುವರು. ಇವು ಏಟುತಿಂದು ಹಳ್ಳಕೊಳ್ಳಗಳಲ್ಲಿ ಬಿದ್ದಿರುವ ಸೈನಿಕರನ್ನು ಹುಡುಕಿಕೊಂಡು ಹೋಗಿ ಅಂಥವರನ್ನು ಕಂಡಕೂಡಲೇ ಬಲವಾಗಿ ಅರಚುವುವು. ಇತರರಾರಾದರೂ ಸಹಾಯಕ್ಕೆ ಬರುವವರೆಗೂ ಅಲ್ಲಿಯೇ ಇದ್ದು, ಆ ಗಾಯಗೊಂಡವರ ದೇಹಕ್ಕೆ ಸೇಕವಾಗಿರುವಂತೆ ಅವರ ದೇಹಕ್ಕೆ ತಮ್ಮ ದೇಹವನ್ನು ಒತ್ತರಿಸಿಕೊಂಡು ಮಲಗಿರುವುವು. ಸಾಧಾರಣವಾಗಿ ಒಂದು ಸ್ಥಲವನ್ನು ಸೈನಿಕರು ಬಿಟ್ಟು ಹೋಗುವಾಗ, ತಮ್ಮ ಕಡೆ ಏಟುತಿಂದು ಬಿದ್ದುಹೋದವರನ್ನೆಲ್ಲಾ ಸಾಗಿಸಿಕೊಂಡು ಹೋಗುವುದು ಬಹಳ ಕಷ್ಟವಾಗುವುದು. ಆ ಗಡಬಿಡಿಯಲ್ಲಿ ಕೆಲರು ಹಿಂದೆಯೇ ಉಳಿದುಹೋಗುವುದುಂಟು, ಇಂಥ ಸ್ಥಿತಿಯು ಕಾಡಿನಲ್ಲಿ ಸಂಭವಿಸಿದಾಗ, ಹಿಂದೆ ಉಳಿದುಹೋದ ತಮ್ಮವರನ್ನು ಕಂಡು ಹಿಡಿಯುವುದು ಅತ್ಯಂತ ದುರ್ಲಭ. ಇಂಥವರನ್ನು ಕಂಡುಹಿಡಿಯುವುದಕ್ಕಾಗಿಯೂ, ಅವರುಗಳಿಗೆ ಸಹಾಯ ಮಾಡುವುದಕ್ಕಾಗಿಯೂ ಸಹ ಮೇಲೆ ಹೇಳಿದಂತೆ ನಾಯಿಗಳು ಉಪಯೋಗಿಸಲ್ಪಟ್ಟು ಅನರ್ಘವಾದ ಸಹಾಯವನ್ನು ಅವು ಮಾಡುತ್ತವೆ.

ಇಂಥ ಸಹಾಯವನ್ನು ಮಾಡುವ ನಾಯಿಗಳ ನಡುಗಳ ಮೇಲೆ ರೆಡ್‌ಕ್ರಾಸ್ (+) ಇಂಥ ಗುರುತುಗಳ ಪದಾರ್ಥವು ಕಟ್ಟಲ್ಪಟ್ಟಿರುವುದು. ಇಂಥ ಪರೋಪಕಾರಿಗಳಾದ ಪ್ರಾಣಿಗಳನ್ನೂ ಕೂಡ ಜರ್ಮನರು ಎಷ್ಟನ್ನು ಕೊಂದಿರುವರೋ ಇನ್ನೂ ತಿಳಿದುಬಂದಿಲ್ಲ. ಶತ್ರುಗಳ ಏಟಿನಿಂದ ಇಂಥ ನಾಯಿಗಳನೇಕವಾಗಿ ಯುದ್ಧರಂಗದಲ್ಲಿ ಸತ್ತುಹೋಗುತ್ತವೆ. ನಾಮೂರಿಗೆ ಯಂತ್ರದ ಸಣ್ಣ ಫಿರಂಗಿಗಳನ್ನು ಎಳೆದುಕೊಂಡುಹೋದ ೪೦ ನಾಯಿಗಳಲ್ಲಿ ೧ ಮಾತ್ರ ಪ್ರಾಣಸಹಿತವಾಗಿ ಹಿಂದಿರುಗಿ ಬಂದಿತಂತೆ! ಹಿಂದೆ ಮಾಂಚೂರಿಯಾದಲ್ಲಿ ಏಟುತಿಂದು ಹಿಂದೆ ಬಿದ್ದುಹೋಗಿದ್ದ ಸೈನಿಕರನ್ನು ಇಂಥ ನಾಯಿಗಳೇ ಹುಡುಕಿ ಅವರ ಸಂಗತಿಯನ್ನು ತಿಳಿಯಿಸಿದ ಅಂಶವು ಪ್ರಸಿದ್ಧವಾಗಿದೆ. ಮತ್ತೊಂದು ಯುದ್ಧದಲ್ಲಿ ಗಾಯಗೊಂಡ ೨೩ ಮಂದಿ ಸೈನಿಕರನ್ನು ಈ ನಾಯಿಗಳು ರಕ್ಷಿಸಿರುತ್ತವೆ. ಜರ್ಮನರು ತಮ್ಮ ಕೋಟೆಗಳ ಕಾವಲಿಗಾಗಿ ನಾಯಿಗಳನ್ನೇ ಉಪಯೋಗಿಸುತ್ತಾರೆ. ಹೀಗೆ ದೇಶರಕ್ಷಣಾರ್ಥವಾಗಿ ದೇಶೀಯರಾದ ಮಾನವರು ಮಾತ್ರವೇ ಅಲ್ಲದೆ ನಾಯಿಜಾತಿಯೂ ಕೂಡ ಅಮೂಲ್ಯವಾದ ಸಹಾಯವನ್ನು ಮಾಡುತ್ತಿವೆಯೆಂಬ ಸಂಗತಿಯು ಎಷ್ಟು ಶ್ಲಾಘನೀಯವು!

ವ್ಯಾಪಾರ ಸಂಬಂಧದ ವಾರ್ತೆಗಳು.

ಕಾಬುಲಿನಲ್ಲಿ ಉಣ್ಣೆಯ ಬಟ್ಟೆಗಳನ್ನು ನೆಯ್ಯುವ ಯಂತ್ರಾಲಯವೊಂದು ಮೊನ್ನೆತಾನೇ ಸ್ಥಾಪಿಸಲ್ಪಟ್ಟಿತು. ಇದರ ಪ್ರಾರಂಭಮಹೋತ್ಸವವನ್ನು ಅಫ್ಗಾನಿಸ್ಥಾನದ ಅಮೀರರು ಮಾಡಿದರು. “ಕಾಬೂಲಿನಲ್ಲಿ ನೆಯ್ಯಲ್ಪಡುವ ಕಾಶ್ಮೀರದ ಬಟ್ಟೆಗೆ ಗಜ ೧ ಕ್ಕೆ ೩-೪ ರೂ ಗಳಷ್ಟು ಹೆಚ್ಚು ಬೆಲೆಯಾಗುತ್ತದೆ. ಇಂಥ ಪದಾರ್ಥವೇ ಸೀಮೆಯಿಂದ ಬಂದರೆ ಗಜ ೧ ಕ್ಕೆ ೧೦-೧೨ ರೂ ಗಳಿಗೆ ಕಡಿಮೆಯಾಗಿ ದೊರೆಯುವುದಿಲ್ಲ. ಅದು ಕಾರಣ ಪ್ರಜೆಗಳೆಲ್ಲರೂ ಪ್ರೋತ್ಸಾಹಿಸಿ ಈ ಕೈಗಾರಿಕೆಯನ್ನು ಪೋಷಿಸಬೇಕು” ಎಂದು ಆ ಕಾಲದಲ್ಲಿ ಅಮೀರರು ಅಪ್ಪಣೆ ಕೊಡಿಸಿ ಪ್ರೋತ್ಸಾಹಿಸಿದರು.

ಈಗಿನ ಯುದ್ಧದ ಪ್ರಸಕ್ತಿಯಿಂದ ನಮ್ಮ ದೇಶದ ನೆಲಗಡಲೆಯ ವ್ಯಾಪಾರಕ್ಕೆ ನಷ್ಟವುಂಟಾಗಿದೆ. ಅದು ಈ ದೇಶದಿಂದ ಹೊರಕ್ಕೆ ಸಾಗಿಹೋಗುವುದೇ ನಿಂತುಹೋಗಿದೆ. ಫೆಬ್ರವರಿ ತಾ ೧೩ ರಲ್ಲಿ ಪ್ರಕಟಿತವಾಗಿರುವ ಒಂದು ತಂತ್ರೀವಾರ್ತೆಯನ್ನು ನೋಡಿದರೆ ಈ ವ್ಯಾಪಾರಕ್ಕೆ ಮರಳಿ ಒಳ್ಳೆಯ ದಿನವು ಪ್ರಾಪ್ತವಾಗುವುದೆಂದು ಗೊತ್ತಾಗುತ್ತದೆ. ಪುದುಚೇರಿಗೆ ಈ ಹಡಗುಗಳು ಬಂದು ನೆಲಗಡಲೆ ಬತ್ತವನ್ನೂ ಅದರ ಎಣ್ಣೆ ಹಿಂಡಿಗಳನ್ನೂ ಸಹ ತುಂಬಿಕೊಂಡು ಫ್ರಾನ್ಸಿಗೂ ಫ್ರೆಂಚ್ ಅಧಿನಿವೇಶನಗಳಿಗೂ ಹೋದುವಂತೆ. ಆದರೂ ಈ ಸರಕುಗಳನ್ನು ಹೊರಕ್ಕೆ ಸಾಗಿಸಲು ವ್ಯಾಪಾರದ ಹಡಗುಗಳು ದೊರಕುವುದಿಲ್ಲ. ಅದು ಕಾರಣ ಈ ಸರಕಿಗೆ ಹಿಂದಿನಷ್ಟು ಬೆಲೆಯು ಬರಲು ಅವಕಾಶವುಂಟಾಗಿಲ್ಲ.

ಕಳೆದ ಡಿಸೆಂಬರ್ ತಿಂಗಳಲ್ಲಿ ನಮ್ಮ ದೇಶಕ್ಕೆ ೧೧೦೪೧೩೮ ಪೌನುಗಳ ಬೆಲೆಯ ಔಷಧಗಳೂ, ಬಣ್ಣಗಳೂ, ಅನ್ಯದೇಶದಿಂದ ಬಂದಿರುತ್ತವೆ. ೧೯೧೩ ನೇ ವರ್ಷದ ಅದೇ ಒಂದು ತಿಂಗಳಲ್ಲಿ ಬಂದಿದ್ದ ಅದೇ ಸರಕಿಗಿಂತ ಇದು ಬೆಲೆಯಲ್ಲಿ ೩೬೦೦೪ ಪೌನುಗಳಷ್ಟು ಕಡಿಮೆಯಾಗಿದ್ದಿತು. ಎಣ್ಣೆ-ಎಣ್ಣೆಬಿತ್ತ-ಕೊಬ್ಬು-ಮೇಣ ಮೊದಲಾದವುಗಳು ಅದೇ ತಿಂಗಳಲ್ಲಿ ನಮ್ಮ ದೇಶದಿಂದ ಹೊರಕ್ಕೆ ೩೪೪೪೯೩ ಪೌನುಗಳ ಬೆಲೆಯಷ್ಟು ಸಾಗಿಹೋಗಿರುತ್ತವೆ. ಈಗ ನಮ್ಮ ದೇಶದಲ್ಲಿ ಉತ್ತಮವಾದ ಗಂಧದ ಎಣ್ಣೆಗೆ ಗಿರಾಕಿಯು ಇಲ್ಲವಾಗಿದೆ. ಬೆಲೆಯು ಹೆಚ್ಚಿರುವುದರಿಂದ ಮಾರಾಟವಾಗುವುದಿಲ್ಲ. ಜರ್ಮನಿ ದೇಶಕ್ಕೆ ಈ ಸರಕುಗಳು ಹೋಗುವುದಿಲ್ಲ. ಅಲ್ಲಿನದು ಇಲ್ಲಿಗೂ ಬರುತ್ತಿಲ್ಲ. ಆದರೂ ಬೆಲೆಯು ಇಳಿದಿಲ್ಲ. ಇಂಗ್ಲಿಷ್ ಗಂಧದ ಎಣ್ಣೆಯು ೧ ಪೌನಿಗೆ ೨೩ ಷಿಲಿಂಗ್ ೯ ಪೆನ್ನಿಗಳ ಬೆಲೆಯುಳ್ಳುದಾಗಿದೆ.

ಆಂಗ್ಲರಾಜ್ಯದ ಅಧಿನಿವೇಶನಗಳಿಂದ ಜರ್ಮನಿಗೆ ವಿಶೇಷವಾಗಿ ಕೊಬರಿಯೂ, ಎಣ್ಣೆಯೂ ಸಹ ಹೋಗುತ್ತಿದ್ದಿತು. ಜರ್ಮನಿ ದೇಶದೊಳಗೆ ಕೊಬರಿಗೆ ಸಂಬಂಧಪಟ್ಟ ಕೈಗಾರಿಕೆಯನ್ನು ನಡೆಯಿಸುವುದರಲ್ಲಿ ಪ್ರಸಿದ್ಧವಾದ ಪಟ್ಟಣವು ಹಾಂಬರ್ಗ್ ಎಂಬುದಾಗಿರುತ್ತದೆ. ನಮ್ಮ ದೇಶದ ಕೊಬ್ಬರಿಯ ಸರಕೆಲ್ಲವೂ ವಿಶೇಷವಾಗಿ ಅಲ್ಲಿಗೇ ಹೋಗುತ್ತಿದ್ದಿತು. ೧೯೧೩ ನೆಯ ವರ್ಷದಲ್ಲಿ ಹಾಂಬರ್ಗ್ಗಿಗೆ ೧೨೪೪೩೪ ಪೌನುಗಳ ಕೊಬರಿಯೂ ಆಸ್ಟ್ರಿಯಾಹಂಗೇರಿಗೆ ೯೧೩೩ ಪೌನುಗಳ ಕೊಬ್ಬರಿಯೂ, ಆಂಗ್ಲರ ಅಧಿನಿವೇಶನಗಳಿಂದ ಸಾಗಿಹೋಗಿದೆ. ಅವರು ಈ ಕೊಬರಿಯಿಂದ ಎಣ್ಣೆಯನ್ನು ತೆಗೆದು, ಅದನ್ನೂ ಹಿಂಡಿಯನ್ನೂ ನಾನಾವಿಧವಾಗಿ ಉಪಯೋಗಿಸಿಕೊಳ್ಳುವರು. ಅದೇ ವರ್ಷದಲ್ಲಿ ಹಾಂಬರ್ಗ್ಗಿನಿಂದ ೪೯೬೩ ಪೌನುಗಳ ಎಣ್ಣೆಯನ್ನು ಇತರ ದೇಶಗಳಿಗೆ ಕಳುಹಿಸಿರುವರು. ಅದರಲ್ಲಿ ೩೯೨೦೩ ಟನ್ನುಗಳ ಎಣ್ಣೆಯು ಇಂಗ್ಲಾಂಡಿಗೆ ಹೋಗಿರುವುದು. ನಮ್ಮ ದೇಶದಲ್ಲಿ ಲಂಕಾದ್ವೀಪವೂ ಮಲಯಾಳದೇಶವೂ ಗೋದಾವರೀ ಜಿಲ್ಲೆಯೂ ಸಹ ತೆಂಗಿನ ತೋಟಗಳಿಗೆ ಪ್ರಸಿದ್ಧವಾದವುಗಳು. ಈ ಸ್ಥಳಗಳಲ್ಲಿ ಕೊಬರಿಯ ಎಣ್ಣೆಯನ್ನೂ ತೆಗೆಯುವರು. ಈ ಎಣ್ಣೆಯನ್ನೂ ಸಹ ಜರ್ಮನಿಗೆ ತರಿಸಿಕೊಂಡು ಅವರು ಶುದ್ಧಿಗೊಳಿಸಿ ಇತರ ದೇಶಗಳಿಗೆ ಕಳುಹಿಸಿಕೊಡುತ್ತಿದ್ದರು. ಆದರೆ ಈಗ ಯುದ್ಧವು ಸಂಭವಿಸಿರುವುದರಿಂದ ಹಾಗೆ ಹೊರಕ್ಕೆ ಸಾಗಿಸುವುದೆಲ್ಲಾ ನಿಂತುಹೋಗಿದೆ. ಈ ಕೊಬ್ಬರಿಯನ್ನೂ ಅದರ ಎಣ್ಣೆಯನ್ನೂ ಭರತಖಂಡದಿಂದ ಜರ್ಮನಿಗೆ ಕಳುಹಿಸಿ ಅಲ್ಲಿಂದ ಇಂಗ್ಲೆಂಡಿಗೆ ಬರುವಂತೆ ಏತಕ್ಕೆ ಮಾಡಬೇಕು? ಭರತಖಂಡದಿಂದ ನೇರವಾಗಿ ಇಂಗ್ಲೆಂಡಿಗೆ ಏತಕ್ಕೆ ತರಿಸಿಕೊಳ್ಳಕೂಡದು? ಎಂದು ಆಂಗ್ಲವರ್ತಕರು ಆಕ್ಷೇಪಿಸುತ್ತಿದ್ದಾರೆ. ಈಗಿನ ಯುದ್ಧ ಸಂಬಂಧದಿಂದ ಜರ್ಮನಿಗೆ ಸಾಗಿಹೋಗುವುದೇ ಕಟ್ಟಾಗಿ ಕೊಬ್ಬರಿಗೆ ಬೆಲೆಯು ಇಳಿದುಹೋಗಿರುವುದರಿಂದ ಇದರ ಪರಿಶ್ರಮವನ್ನು ಭರತಖಂಡದಲ್ಲೇ ಸ್ಥಾಪಿಸಿ ಏತಕ್ಕೆ ನಡೆಯಿಸಕೂಡದೆಂದು ಭಾರತೀಯರಲ್ಲೂ ವಿಚಾರವುಂಟಾಗಿದೆ. ಇದೊಂದು ಕೊಬರಿಯ ವಿಷಯದಲ್ಲೇ ಅಲ್ಲ; ಅವಶ್ಯ ಪದಾರ್ಥಗಳನ್ನು ನಮ್ಮ ಭರತಖಂಡವು ವಿಪುಲವಾಗಿ ಬೆಳೆಯುತ್ತಿದ್ದು, ಅವನ್ನು ಕಡಿಮೆ ಬೆಲೆಗೆ ಅನ್ಯದೇಶಗಳಿಗೆ ಕಳುಹಿಸಿ, ಅವನ್ನೇ ರೂಪಾಂತರದಿಂದ ಅವರು ಇಲ್ಲಿಗೆ ಕಳುಹಿಸಿ ಕೊಟ್ಟರೆ ಅವಕ್ಕೆ ಹೆಚ್ಚು ಬೆಲೆಯನ್ನು ಕೊಟ್ಟು ತೆಗೆದುಕೊಳ್ಳುವುದು ನಮ್ಮ ದೇಶೀಯರಿಗೆ ಪದ್ಧತಿಯಾಗಿ ಹೋಗಿದೆ. ನಮ್ಮ ದೇಶದಿಂದ ಹೋದ ಕೊಬ್ಬರಿಯನ್ನು ಜರ್ಮನಿಯವರೋ, ಅಮೇರಿಕಾದವರೋ ಫ್ರಾನ್ಸಿನವರೋ ಅಥವಾ ಮತ್ತಾವದೇಶದವರೋ ಕೊಂಡು, ಅದರಿಂದ ಎಣ್ಣೆ ಬೆಣ್ಣೆಗಳನ್ನು ತೆಗೆದು, ಬಿಸ್ಕತ್ತು, ಸಾಬೂನು ಮೊದಲಾದ ಸಾಮಗ್ರಿಗಳಿಗೆ ಉಪಯೋಗಿಸಿ ನಿರ್ಮಿಸಿ, ನಮಗೆ ಕಳುಹಿಸಿಕೊಡುತ್ತಾರೆ. ಹೇಳಿದ ಬೆಲೆಯನ್ನು ನಾವು ಸಂತೋಷದಿಂದ ಕೊಟ್ಟು ತೆಗೆದುಕೊಂಡು ೨ ತರದ ನಷ್ಟವನ್ನು ಮಾಡಿಕೊಳ್ಳುತ್ತಿದ್ದೇವೆ. ಇವುಗಳಿಂದಾಗುವ ಪರಿಶ್ರಮಾಲಯಗಳನ್ನು ಈ ದೇಶದಲ್ಲೇ ಏತಕ್ಕೆ ಸ್ಥಾಪಿಸಕೂಡದು; ಅದಕ್ಕೆ ಬೇಕಾದ ಶಾಸ್ತ್ರೀಯಜ್ಞಾನವೂ, ಧನಸಹಾಯವೂ, ಹತ್ತುಮಂದಿ ಕೂಡಿ ಏಕಮತ್ಯದಿಂದ ಕಾರ್ಯವನ್ನು ಸಾಧಿಸುವ ಸಹನಶೀಲತೆಯೂ, ಮಹಾಕಾರ್ಯಗಳನ್ನು ಚಿರಕಾಲ ನಿರ್ವಹಿಸುವ ಸಾಮರ್ಥ್ಯವೂ ನಮ್ಮಲ್ಲಿ ಉಂಟಾದರೆ, ನಮ್ಮ ಭರತಖಂಡದ ಸಂಪತ್ತಿನ ಪ್ರವಾಹವು ಪರದೇಶಗಳಿಗೆ ಹೋಗುವುದನ್ನು ತಪ್ಪಿಸುವುದು ಮಾತ್ರವಲ್ಲದೆ ಪರದೇಶದ ಸಂಪತ್ತಿಯೇ ಇಲ್ಲಿಗೆ ದುಮ್ಮಿಕ್ಕುವಂತೆಯೂ ಕೂಡ ಮಾಡಬಹುದು. ಹಾಗಾಗಬೇಕಾದರೆ ನಮ್ಮ ದೇಶಾಭಿಮಾನಿಗಳಲ್ಲಿನ ವಚನಶೂರತೆಯು ನಿಂತು, ಕಾರ್ಯಶೂರತೆಯು ಕಾಣಿಸಿಕೊಳ್ಳಬೇಕು. ಅದರ ಶುಭಸೂಚನೆಯು ಈಗೀಗ ಭರತಖಂಡದಲ್ಲಿ ಕಾಣಿಸಿಕೊಳ್ಳುತ್ತಿರುವುದು ಸಂತೋಷಕರವಾಗಿದೆ.

ಯುದ್ಧರಂಗದ ವೈಚಿತ್ರ್ಯ.

ಫ್ರಾನ್ಸಿನಲ್ಲಿ ಒಂದು ಲೋಹಮಾರ್ಗದ ಸೇತುವಿನ ಹತ್ತಿರ ಜರ್ಮನರು ತಮ್ಮ ಸೈನ್ಯವನ್ನು ತಂದು ನಿಲ್ಲಿಸಿದರು. ಆ ಸೇತುವಿನ ಎರಡು ಪಕ್ಕದಲ್ಲೂ ದೊಡ್ಡದೊಡ್ಡ ಫಿರಂಗಿಗಳನ್ನು ಇಟ್ಟರು. ಈ ಸೇತುವಿನ ಆಚೆಪಕ್ಕದಲ್ಲಿ ೮೦ ಗಜದ ದೂರದಲ್ಲಿ ಫ್ರಾನ್ಸಿನಸೇನೆಯು ಕಂದಕಗಳಿದ್ದುವು. ಲೋಹಮಾರ್ಗದ ಪಕ್ಕದ ಸ್ಥಲವೆಲ್ಲಾ ಕೆಸರಿನ ಮಯವಾಗಿ ಕಾಲನ್ನಿಟ್ಟರೆ ಹೂತುಹೋಗುತ್ತಿದ್ದಿತು. ಸೇತುವಿನ ಸಮೀಪಕ್ಕೆ ಹೋದರೆ ಜರ್ಮನರು ಫಿರಂಗಿಗುಂಡುಗಳನ್ನು ಹೊಡೆಯುತ್ತಿದ್ದರು. ಹೀಗಿದ್ದರೂ ಧೈರ್ಯಶಾಲಿಗಳಾದ ಫ್ರೆಂಚ್ ಸೈನಿಕರು ೬ ಆವೃತ್ತಿ ಆ ಕಟ್ಟೆಯ ಮೇಲಕ್ಕೆ ಹತ್ತಿಹೋದರು. ಆದರೆ ಆ ಅಪಾಯಕರವಾದ ಮಹಾಕಾರ್ಯದಲ್ಲಿ ಬಹುಜನರು ಪ್ರಾಣವನ್ನು ಕಳೆದುಕೊಂಡರು. ಕಡೆಗೆ ಡಿಸೆಂಬರ್ ತಾ|| ೧೩ ನೆಯ ಹಗಲು ೧೧ ಗಂಟೆಗೆ ಫ್ರೆಂಚರು ಮಹಾಶೌರ್ಯದಿಂದ ಕಡೆಯಸಾರಿ ಅದರಮೇಲೇರಿ ಹೋಗಿ ಸೇತುವನ್ನು ದಾಟಿ, ಅಲ್ಲಿದ್ದ ಶತ್ರುಗಳ ಕಂದಕವನ್ನೂ ದಾಟಿಹೋಗಿ, ಅವರ ರಕ್ಷಕಸ್ಥಾನದ ಕೋಟೆ ಗೋಡೆಯನ್ನು ಹತ್ತಲುಪಕ್ರಮಿಸಿದರು. ಹೀಗೆ ಹತ್ತಲಾರಂಭಿಸಿದವರಲ್ಲಿ ಹೆಲ್‌ಮಾಟೆ ಎಂಬುವವನೊಬ್ಬನಾಗಿದ್ದನು. ಈತನು ಕೋಟೆಯ ಪ್ರಾಕಾರದಮೇಲೆ ಹತ್ತುತ್ತಿರುವಾಗ ೧ ಫಿರಂಗಿಯ ಗುಂಡು ಬಂದು ಹಾರಿ, ಇವನನ್ನು ನೆಲಕ್ಕೆ ಅಪ್ಪಳಿಸಿಬಿಟ್ಟಿತು. ಇವನ ಪಕ್ಕದಲ್ಲೇ ಇನ್ನು ಮೂವರು ಸೈನಿಕರೂ ಸಹ ಇದ್ದರು. ಅವರಲ್ಲಿ ಒಬ್ಬನಿಗೆ ಸ್ವಲ್ಪವಾಗಿಯೂ, ಇನ್ನಿಬ್ಬರಿಗೆ ಬಲವಾಗಿಯೂ ಏಟುಗಳು ಬಿದ್ದಿದ್ದುವು. ಉಳಿದವರೇನಾದರೋ ಗೊತ್ತಾಗಲಿಲ್ಲ. ಇವರು ಬಿದ್ದುಕೊಂಡ ಸ್ಥಲದಲ್ಲಿ ೧೪ ಅಡಿಗಳ ಎತ್ತರದ ಕೋಟೆಯ ಗೋಡೆಯಿದ್ದಿತು. ಮೇಲಿದ್ದ ಜರ್ಮನ್ ಕಾವಲುಗಾರರು ಪ್ರತಿಕ್ಷಣದಲ್ಲೂ ಆ ಗೋಡೆಯಮೇಲೆ ಅಡ್ಡಾಡುತ್ತಿದ್ದರು. ಆ ಸುತ್ತುಮುತ್ತಿನಲ್ಲೆಲ್ಲಾ ಜರ್ಮನರ ಮತ್ತೂ ಫ್ರೆಂಚರ ಹೆಣಗಳೇ ಕಾಣ

ಬರುತ್ತಿದ್ದುವು. ಡೆಲ್ಮಾಟಿಯು ತಾನು ಬಿದ್ದ ಸ್ಥಲದಲ್ಲೇ ೫ ದಿನಗಳ ವರೆಗೆ ತನ್ನ ಮಿತ್ರರೊಡನೆ ಆ ಸಂದಿಗ್ಧಸ್ಥಿತಿಯಲ್ಲೇ ಕಾಲಯಾಪನೆ ಮಾಡಿದನು. ತಮ್ಮ ಸುತ್ತುಮುತ್ತಣಶವಗಳ ಮೇಲಿನ ಅಂಗಿಗಳ ಜೇಬನ್ನು ತಡಕಿ ಅದರಲ್ಲಿದ್ದ ಕೆಲ ಬಿಸ್ಕತ್ತುಗಳನ್ನೂ ನೀರಿನ ತಿದಿಗಳಲ್ಲಿದ್ದ ನೀರನ್ನೂ ಸೇವಿಸಿ ನಾಲ್ಕುದಿನಗಳ ವರೆಗೆ ಇವರು ಪ್ರಾಣವನ್ನುಳುಹಿಸಿಕೊಂಡರು. ೫ ನೆಯ ದಿನದಲ್ಲಿಯಾವ ಆಹಾರವೂ ದೊರೆಯಲಿಲ್ಲ. ಹೊಟ್ಟೆಹಸಿವು ಬಹಳವಾಯಿತು. ಮಂಜು ಒಂದುಕಡೆ ವಿಪರೀತವಾಗಿಸುರಿಯುತ್ತಿದ್ದಿತು. ಚಳಿಯಿಂದ ಕಾಲು ಬಿರಿದು ಬೆಂಡಾಗಿ ಹೋಗಿದ್ದಿತು. ಆ ದಿನ ರಾತ್ರಿ ಹೇಗಾದರೂ ಮಾಡಿ ತಮ್ಮ ಕಂದಕಗಳಿಗೆ ಹೋಗಿ ಸೇರಿಕೊಳ್ಳಬೇಕೆಂದು ಡೆಲ್ಮಾಟಿಯು ನಿಶ್ಚಯಿಸಿದನು. ಡಿಶಂಬರ್ ತಾ|| ೨೧ರಲ್ಲಿ ಎರಡು ಪಕ್ಷದವರ ಫಿರಂಗಿಗಳೂ ಸ್ವಲ್ಪ ತಟಸ್ಥವಾದುವು. ಆಗ ಡೆಲ್ಮಾಟಿಯು ಮೆಲ್ಲಗೆ ಎದ್ದನು. ಆದರೆ ಕಾಲುಗಳು ಅವನ ಅಧೀನಕ್ಕೆ ಬರವು. ಕೈಗಳೂ ಆಡದಂತಾಗಿದ್ದುವು. ಹೀಗಿದ್ದರೂ ತೆವಳಿಕೊಂಡಾದರೂ ತಮ್ಮ ಕಂದಕಗಳ ಬಳಿಗೆ ಹೋಗಬೇಕೆಂದು ನಿಶ್ಚಯಿಸಿದನು. ಅಷ್ಟರಲ್ಲಿ ತನ್ನ ಮೂವರು ಮಿತ್ರರಲ್ಲಿ ಇಬ್ಬರು ಸತ್ತುಹೋಗಿದ್ದರು. ಮೂರನೆಯವನು "ನಾನು ಬರಲಾರೆನು, ನೀನು ಬೇಕಿದ್ದರೆ ಹೋಗು" ಎಂದು ಹೇಳಿಬಿಟ್ಟನು. ಆ ರಾತ್ರಿ ಡೆಲ್ಮಾಟಿಯು ಒಬ್ಬನೇ ತೆವಳುತ್ತ ಸ್ವಲ್ಪದೂರ ಕುಂಟಿಕೊಂಡು ನಡೆಯುತ್ತ ಸಾಗುತ್ತಿದ್ದನು. ಎಷ್ಟು ಸದ್ದಿಲ್ಲದಂತೆ ಇವನು ಸಾಗುತ್ತಿದ್ದರೂ ದಾರಿಯಲ್ಲಿ ಹೆಣಗಳ ರಾಶಿ; ಅವನ್ನು ದಾಟುವಾಗ ಅಲ್ಪಸ್ವಲ್ಪ ಸದ್ದು ಆಗುತ್ತಲೇ ಇದ್ದಿತು. ಅಂಥ ಸಂದರ್ಭದಲ್ಲಿ ಜರ್ಮನ್ ಭಟರು ಸದ್ದನ್ನು ಕೇಳಿ ತುಪಾಕಿಗುಂಡುಗಳನ್ನು ಆ ಕತ್ತಲೆಯಲ್ಲೇ ಹೊಡೆಯುತ್ತಿದ್ದರು. ಆದರೆ ಡೆಲ್ಮಾಟಿಯ ಅದೃಷ್ಟವು ಚೆನ್ನಾಗಿದ್ದುದರಿಂದ ಆ ಗುಂಡುಗಳಲ್ಲಿ ಒಂದಾದರೂ ಇವನಿಗೆ ತಗುಲಲಿಲ್ಲ. ಹೀಗೆ ಸ್ವಲ್ಪ ದೂರವನ್ನು ಸಾಗಿಹೋದನು—ಬಳಿಕ ಅವನಿಗೆ ಮತ್ತೊಂದು ವಿಪತ್ತು ಸಂಭವಿಸಿತು. ಏನೆಂದರೆ—ಜರ್ಮನರ ಶಿಬಿರದ ಎಲ್ಲೆಯನ್ನು ದಾಟಿ ಫ್ರೆಂಚರ ಪಾಳಯದ ಎಲ್ಲೆಗೆ ಹೋದ ಕೂಡಲೇ ಅಲ್ಲಿನ ಕಾವಲಿನವರು ಕತ್ತಲೆಯಲ್ಲಿ ಶತ್ರುಭೀತಿಯಿಂದ ತುಪಾಕಿಗಳನ್ನು ಹಾರಿಸುತ್ತಿದ್ದರು. ಆ ಏಟುಗಳು ತನಗೆಲ್ಲಿ ಬೀಳುವುವೋ ಎಂಬ ಭಯದಿಂದ ಇವನು ಫ್ರಾನ್ಸು! ಫ್ರಾನ್ಸು! ಎಂದು ಬಲವಾಗಿ ಅರಚಿಕೊಂಡು ಸಾಗುವುದಕ್ಕುಪಕ್ರಮಿಸಿದನು. ಆಗ ಫ್ರೆಂಚ್ ಕಾವಲುಗಾರರು ತಮ್ಮ ತುಪಾಕಿಗಳನ್ನು ನಿಲ್ಲಿಸಿದರು. ಕಡೆಗೆ ಈ ಡೆಲ್ಮಾಟಿಯು ತನ್ನ ಶಿಬಿರವನ್ನು ಸೇರಿದನು. ಕೂಡಲೇ ತಮ್ಮವರು ಬೇಕಾದಷ್ಟು ಶೈತ್ಯೋಪಚಾರವನ್ನು ಮಾಡಿ ಬಳಿಯಲ್ಲಿದ್ದ ವೈದ್ಯಾಲಯಕ್ಕೆ ಸಾಗಿಸಿಕೊಂಡು ಹೋದರು.

ಯುದ್ಧವಾರ್ತೆಯು.

ಪಶ್ಚಿಮರಣರಂಗ.

ಈ ರಣರಂಗದಲ್ಲಿ ಕಳೆದವಾರ ಸಂಭವಿಸಿದ ಸಂಗತಿಗಳೊಳಗೆ ಮಿತ್ರಮಂಡಲಿಯವರಿಗೆ ಆ ಕಡೆಗಳಲ್ಲಿ ಎರಡು ವಿಶೇಷ ಜಯಲಾಭವಾದ ಸಂಗತಿಯು ಮುಖ್ಯವಾಗಿರುತ್ತವೆ. ಇಂಗ್ಲೀಷ್ ಸೈನಿಕರು ೩ ದಿನಗಳ ವರೆಗೆ ಜರ್ಮನರ ಮೇಲೆ ಘೋರಯುದ್ಧವನ್ನು ಮಾಡಿ ನ್ಯೂವೇಚಾಪಲ್ ಎಂಬ ಗ್ರಾಮವನ್ನು ಸ್ವಾಧೀನಪಡಿಸಿಕೊಂಡು ಜಯಶೀಲರಾಗಿದ್ದಾರೆ. ಮತ್ತೂ ಫ್ರೆಂಚ್ ಸೈನಿಕರು ೨ ದಿನಗಳವರೆಗೆ ಕಾದಾಡಿ ಆರ್ಗೋನಿನಲ್ಲಿರುವ ವಾರ್ಕ್ವೊ ಎಂಬ ಗ್ರಾಮದ ಸ್ವಲ್ಪಭಾಗವನ್ನೂ ಅದರ ಹತ್ತಿರದ ಅತ್ಯಂತ ಮುಖ್ಯಸ್ಥಲವೊಂದನ್ನೂ ವಶಪಡಿಸಿಕೊಂಡಿದ್ದಾರೆ.

ಇಂಗ್ಲೀಷರು ಪಡೆದ ಜಯದ ವಿವರವು ಹೇಗೆಂದರೆ— ಮಾರ್ಚಿ ತಾ|| ೧೦ನೆ ಬುಧವಾರ ಬೆಳಗಿನ ೭|| ಗಂಟೆಗೆ ಉಭಯಪಕ್ಷದವರೂ ಮೊದಲು ದೊಡ್ಡ ದೊಡ್ಡ ಫಿರಂಗಿ ಯುದ್ಧವನ್ನಾರಂಭಿಸಿದರು. ಆಗ ಕೇಳಿಸಿದ ಫಿರಂಗಿಗಳ ಧ್ವನಿಯು ಅಭೂತಪೂರ್ವವೆಂಬಂತೆ ತೋರುತ್ತಿದ್ದಿತು. ಉಭಯ ಪಕ್ಷದಲ್ಲೂ ಅಮಿತನಷ್ಟವಾಯಿತು. ಹಾಗೆ ಅರ್ಧಗಂಟೆ ಯುದ್ಧವಾದ ಬಳಿಕ ಇಂಗ್ಲೀಷ್ ಸೈನಿಕರಿಗೆ ಶತ್ರುಗಳ ಮೇಲೆ ಹೋಗಿ ಬೀಳಲು ಅಪ್ಪಣೆ ಮಾಡಲ್ಪಟ್ಟಿತು. ಇವರು ಸಿಂಹನಾದವನ್ನು ಮಾಡಿಕೊಂಡು ಅರ್ಧಗಂಟೆ ಹೊತ್ತಿನೊಳಗಾಗಿ ಶತ್ರುಗಳ ಮೇಲೆ ಬಿದ್ದು ಭೀಕರವಾಗಿ ಕಾದಾಡಿ ಆ ಗ್ರಾಮದ ಸುತ್ತಲೂ, ಗ್ರಾಮದೊಳಗೂ ಸೇರಿ, ಜರ್ಮನರು ನಿರ್ಮಿಸಿಕೊಂಡಿದ್ದ ಕಂದಕಗಳನ್ನು ಸ್ವಾಧೀನಪಡಿಸಿಕೊಂಡರು. ಆಗ ನಡೆದ ಯುದ್ಧದಲ್ಲಿ ಕೆಲಕಂದಕಗಳ ತುಂಬಾ ಜರ್ಮನರ ಹೆಣಗಳೇ ತುಂಬಿಹೋದುವು. ಕಾಲಿಕ್ಕುವುದಕ್ಕೂ ಸ್ಥಲವಿಲ್ಲದಂತಾಯಿತು. ಕೆಲರು ಸಾಯುತ್ತಿದ್ದರು. ಕೆಲರ ಮೇಲೆ ಕಂದಕಗಳ ದಡದಮಣ್ಣು ಕುಸಿದುಬಿದ್ದು ಹದಗಿಹೋದರು. ಗ್ರಾಮದ ಈಶಾನಭಾಗದಲ್ಲಿ ಕೆಲ ಜರ್ಮನ್ ಸೈನಿಕರು ಅಡಗಿಕೊಂಡಿದ್ದು ಸ್ವಲ್ಪಹೊತ್ತು ಹೋರಾಡುತ್ತಿದ್ದರು. ಅಷ್ಟರಲ್ಲಿ ಇಂಗ್ಲೀಷರಿಗೆ ಹೊಸಸೇನೆಯು ಸಹಾಯಕ್ಕೆ ಬರಲು ಶತ್ರುಗಳಕಡೆ ಉಳಿದಿದ್ದವರನ್ನೆಲ್ಲಾ ಮಧ್ಯಾಹ್ನದ ಹೊತ್ತಿಗೆ ಓಡಿಸಿಬಿಟ್ಟು ಗ್ರಾಮವನ್ನು ಪೂರ್ಣವಾಗಿ ವಶಪಡಿಸಿಕೊಂಡರು. ಈ ನ್ಯೂವೇಚಾಪೆಲ್ಲಿಗೆ ಅಗ್ನಿದಿಕ್ಕಿನಲ್ಲಿ ಬೋಯಿಸ್‌ಡೂಬಿಜ್ ಎಂಬ ಒಂದು ಅಡವಿಯಿದೆ. ಈ ಮಧ್ಯದಲ್ಲಿ ಆ ಅಡವಿಯ ಕಡೆಗೆ ಕೆಲ ಇಂಗ್ಲೀಷ್ ಸೈನಿಕರು ಹೋದರು. ಅಲ್ಲಿದ್ದ ಜರ್ಮನರು ನಮ್ಮವರನ್ನು ತಡೆದರು. ಅಲ್ಲೂ ನಮ್ಮವರು ಜರ್ಮನರನ್ನು ಸೋಲಿಸಿದರು. ನ್ಯೂವೇಚಾಪೆಲ್ಲಿಗೆ ಆಚೆಗೂ ೪೦೦ ಗಜಗಳ ದೂರ ನಮ್ಮ ಸೈನಿಕರು ಸಾಗಿಹೋದರು. ಕತ್ತಲಾದ ಮೇಲೆ ಮರಳಿ ಯುದ್ಧವಾಯಿತು. ಆಗಲೂ ಶತ್ರುಗಳು ಸೋತರು. ಈ ನ್ಯೂವೇಚಾಪೆಲ್ ಎಂಬ ಗ್ರಾಮವು ಲಾಬಸ್ಸಿಗೆ ಉತ್ತರದಲ್ಲಿ ೪ ಮೈಲಿ ದೂರದಲ್ಲಿದೆ. ಕಳೆದ ಅಕ್ಟೋಬರ್ ತಾ|| ೨೬ ರಲ್ಲಿ ಜರ್ಮನರು ಈ ಗ್ರಾಮವನ್ನು ಹಿಡಿದುಕೊಂಡಿದ್ದರು. ಮಿತ್ರಮಂಡಲಿಯವರು ಅದೇ ತಾ|| ೨೮ರಲ್ಲಿ ಅಸ್ಥಲದೊಳಗೆಶತ್ರುಗಳ ಮೇಲೆ ಬಿದ್ದು ಕಾದಾಡಿದಾಗ ಹಿಂದೂದೇಶದಸೈನಿಕರು ಶೌರ್ಯದಿಂದಕಾದಾಡಿ ಬಹಳ ಪ್ರಸಿದ್ಧಿಗೆ ಬಂದರು. ಆಗಿನಿಂದಲೂ ಆ ಬಳಿಯಲ್ಲಿ ಹಲವು ಯುದ್ಧವು ನಡೆಯುತ್ತಲೇ ಬಂದಿದೆ. ಈಗಣಕಡೆಯ ಯುದ್ಧದಲ್ಲಿ ಮಿತ್ರಮಂಡಲಿಯವರ ಸೇನೆಯ ಜತೆಯಲ್ಲಿ ಹಿಂದೂದೇಶದ ಸೈನಿಕರು ೪೦ಸಾವಿರಮಂದಿ ಹೋರಾಡಿದರೆಂದು ಪ್ರಕಟವಾಗಿದೆ. ಈ ಯುದ್ಧದಲ್ಲಿ ಶತ್ರುಗಳ ಕಡೆಯ ೧ ಸಾವಿರಮಂದಿ ಸೈನಿಕರು ಸೆರೆಯಾಗಿ ಸಿಕ್ಕಿದರು. ೨ ಸಾವಿರದ ಮೇಲೆಯೇ ಹತವಾದರು. ಹಲವು ಯಂತ್ರಫಿರಂಗಿಗಳು ನಮ್ಮವರಿಗೆ ಸಿಕ್ಕಿದುವು. ಯುದ್ಧಕಾರ್ಯಕ್ಕೆ ಈ ಸ್ಥಲವು ಅತಿ ಮುಖ್ಯವಾದುದರಿಂದ ಇದನ್ನು ಮಿತ್ರಮಂಡಲಿಯವರು ಬಹಳ ಸಾಹಸದಿಂದ ವಶಪಡಿಸಿಕೊಂಡುದು ದೊಡ್ಡ ಜಯಲಾಭವೆಂದು ಗಣಿಸಲ್ಪಟ್ಟಿದೆ. ಇದರಿಂದ ಪ್ಯಾರಿಸ್ ಪಟ್ಟಣದ ಪ್ರಜೆಗಳು ಬಹಳ ಸಂತೋಷಪಟ್ಟಿದ್ದಾರೆ ಇದನ್ನು ನಮ್ಮವರು ಹಿಡಿದುಕೊಂಡುದರಿಂದ ಆ ಪ್ರದೇಶದ ನಮ್ಮವರ ಸೇನಾಪಂಕ್ತಿಯು ಬಹಳ ಬಲಪಟ್ಟಂತಾಯಿತು. ಈ ಬಳಿಯಲ್ಲಿ ನಮ್ಮವರು ಯುದ್ಧಮಾಡುತ್ತಿರುವಾಗ ನಮ್ಮ ವೈಮಾನಿಕರಲ್ಲಿ ಒಬ್ಬಾತನು ಮೇನಿನ್ನಿನ ಹತ್ತಿರವಿದ್ದ ಒಂದು ಮುಖ್ಯವಾದ ಲೋಹಮಾರ್ಗದ ಸೇತುವಿನ ಮೇಲೆ ೧೫೦ ಅಡಿಗಳ ಮೇಲಿಂದ ಸಿಡಿಮದ್ದುಗಳನ್ನು ಹಾಕಿ ಧ್ವಂಸಮಾಡಿದನು. ಮತ್ತೊಬ್ಬ ವೈಮಾನಿಕನು ಕೌಟ್ರೋಯಿ ಎಂಬ ರೈಲ್ವೆಜಂಕ್ಷನನ್ನು ಸಿಡಿಮದ್ದುಗಳಿಂದ ಪೂರ್ಣವಾಗಿ ನಾಶಮಾಡಿದನು. ಇವು ಜರ್ಮನಿಗೆ ಆಹಾರ ಮೊದಲಾದ ಪದಾರ್ಥಗಳನ್ನು ಸಾಗಿಸಿಕೊಂಡುಹೋಗುವ ಸ್ಥಲಗಳಲ್ಲಿ ಅತ್ಯಂತ ಮುಖ್ಯವಾದುವು.

ನ್ಯೂವೇಚಾಪೆಲ್ಲು ವಶವಾಗಿ ಹೋದುದರಿಂದ ಜರ್ಮನರು ಬಹಳ ಆಗ್ರಹಗೊಂಡಿದ್ದಾರೆ. ದೊಡ್ಡ ದೊಡ್ಡ ಫಿರಂಗಿಗಳನ್ನು ತಂದಿಟ್ಟು ಈಗ ಅದರ ಮೇಲೆ ಗುಂಡುಗಳನ್ನು ಹೊಡೆಯುತ್ತಿದ್ದಾರೆ. ಮತ್ತೂ ಆ ಸುತ್ತಿಗೆ ಹೊಸದಾಗಿ ಬಹಳ ಪದಾತಿ ಸೈನ್ಯವನ್ನು ಮೋಟಾರುಗಳ ಮೇಲೆ ಸಾಗಿಸಿ ಕಳುಹಿಸುತ್ತಿದ್ದಾರೆ.

ಆರ್ಗೋನಿನಲ್ಲಿ ಫ್ರೆಂಚರು ಪಡೆದುಕೊಂಡ ಜಯದ ವಿವರ ಹೇಗೆಂದರೆ-ಆರ್ಗೋನಿನ ಪೂರ್ವಭಾಗದಲ್ಲಿ ೨ ದಿನಗಳವರೆಗೆ ಉಭಯಪಕ್ಷದವರಿಗೂ ಯುದ್ಧವಾದ ಬಳಿಕ ಫ್ರಾನ್ಸಿನವರು ಒಂದು ಉನ್ನತಭೂಮಿಯನ್ನೂ ವಾರ್ಕ್ವೊ ಎಂಬ ಗ್ರಾಮದ ಸ್ವಲ್ಪಭಾಗವನ್ನೂ ಹಿಡಿದುಕೊಂಡರು. ಈ ಸ್ಥಲವು ಯುದ್ಧಕಾರ್ಯಕ್ಕೆ ಅತಿ ಮುಖ್ಯವಾದುದು. ಜರ್ಮನರು ಸೆಪ್ಟೆಂಬರ್ ತಿಂಗಳಲ್ಲಿ ವರ್ಡನ್ನನ್ನು ಮುತ್ತಿದ ಸಂದರ್ಭದಲ್ಲಿ ಇದನ್ನು ವಶಪಡಿಸಿಕೊಂಡಿದ್ದರು. ಈ ಗ್ರಾಮವು ಒಂದು ಗುಡ್ಡದಮೇಲಿದೆ. ಈ ಗುಡ್ಡದಲ್ಲಿ ದೊಡ್ಡ ದೊಡ್ಡ ಸುರಂಗಗಳಿವೆ. ಅವುಗಳಲ್ಲಿ ಜರ್ಮನರು ಅಡಗಿಕೊಂಡಿದ್ದುದರಿಂದ ಎಷ್ಟು ಫಿರಂಗಿಗುಂಡುಗಳನ್ನು ಹೊಡೆದರೂ ಅವರಿಗೆ ತಗಲುತ್ತಿರಲಿಲ್ಲ. ಅದುಕಾರಣ ಜರ್ಮನರು ಈ ಪ್ರದೇಶವನ್ನು ಒಂದು ದುರ್ಗವನ್ನಾಗಿ ಮಾಡಿಕೊಂಡಿದ್ದರು. ಒಳಗೆ ಇದ್ದ ಸುರಂಗಗಳಲ್ಲಿ ಒಂದರಿಂದೊಂದಕ್ಕೆ ಒಳಗೇ ಮಾರ್ಗಗಳನ್ನು ಏರ್ಪಡಿಸಿಕೊಂಡಿದ್ದರು. ಫ್ರಾನ್ಸಿನವರು ಮೊದಲನೆಯಾವೃತ್ತಿ ಫೆಬ್ರವರಿ ತಾ|| ೧೭ರಲ್ಲಿ ಇದರ ಪಾರುಪತ್ಯವನ್ನು ತೆಗೆದುಕೊಳ್ಳುವುದಕ್ಕೆ ಉಜ್ಜುಗಿಸಿ, ಇದರ ಸ್ಥಿತಿಗತಿಗಳನ್ನೆಲ್ಲಾ ಅರಿತುಕೊಂಡರು. ಬಳಿಕ ತಾ|| ೨೮ರಲ್ಲಿ ಇದನ್ನು ಮುತ್ತುವುದಕ್ಕಾಗಿ ಬಹಳ ಸೇನೆಯನ್ನು ಅಣಿಮಾಡಿಕೊಂಡು ಬಂದರು. ಮೊದಲು ದೊಡ್ಡ ದೊಡ್ಡ ಫಿರಂಗಿಗುಂಡಗಳನ್ನು ಅವಿಚ್ಛಿನ್ನವಾಗಿ ಸುರಿಯಿಸಿ ಶತ್ರುಗಳನ್ನು ಈಚೆಗೆ ತಲೆಯಿಕ್ಕದಂತೆ ಮಾಡಿ ತಾವು ಮುಂದುಮುಂದಕ್ಕೆ ಹೋಗಲು ಮಾರ್ಗಮಾಡಿಕೊಂಡರು. ಅನಂತರ ಮೆಲ್ಲಮೆಲ್ಲಗೆ ಗ್ರಾಮಪ್ರವೇಶವನ್ನು ಮಾಡಿದರು. ಆಗ ಗ್ರಾಮವು ಪಾಳುಬಿದ್ದಿದ್ದಿತು. ಕಲ್ಲಿನಿಂದ ನಿರ್ಮಿಸಿಕೊಂಡಿದ್ದ ಗುಹೆಗಳ ಮೇಲೆಲ್ಲಾ ಫಿರಂಗಿಗುಂಡುಗಳು ಬಡಿದು ಅವು ಕುಸಿದುಹೋಗಿದ್ದುವು. ಆಗ ಮಧ್ಯಾಹ್ನದ ವೇಳೆಯಲ್ಲಿ ಒಳಗೆ ಅಡಗಿದ್ದ ಜರ್ಮನರು ಹೊರಬಿದ್ದು ಭೀಕರವಾಗಿ ೧ ಗಂಟೆಯ ಹೊತ್ತು ಕಾದಾಡಿದರು. ಬಳಿಕ ಫ್ರೆಂಚರು ದೊಡ್ಡ ಫಿರಂಗಿಗಳ ಗುಂಡುಗಳನ್ನು ಶತ್ರುಗಳ ಮೇಲೆ ಪ್ರಯೋಗಿಸಿ, ಅವರನ್ನೆಲ್ಲಾ ಗ್ರಾಮದ ದಕ್ಷಿಣ ಪಾರ್ಶ್ವದಿಂದ ಪೂರ್ವಕ್ಕೆ ಓಡಿಸಿಬಿಟ್ಟರು. ಗ್ರಾಮದಲ್ಲಿ ಒಂದು ಭಾಗವನ್ನು ಫ್ರೆಂಚರು ಆಕ್ರಮಿಸಿದರು. ಮಧ್ಯದಲ್ಲಿ ಒಂದು ಅಡ್ಡಬೀದಿಯು ಮಾತ್ರ ತಡೆಯಾಗಿದ್ದು ಆಚೆಪಕ್ಕದಲ್ಲಿ ಜರ್ಮನರು ನೆಲಸಿರುವರು. ಅಲ್ಲಿನ ಜರ್ಮನರು ಮತ್ತೆ ೨ ಆವೃತ್ತಿ ವಿಜೃಂಭಿಸಿ ಯುದ್ಧಮಾಡಿದರು. ಆದರೆ ಬಹಳ ನಷ್ಟಪಟ್ಟು ಹಿಮ್ಮೆಟ್ಟಿದರು. ಆ ರಾತ್ರಿ ನಡೆದ ಯುದ್ಧದಲ್ಲಿ ಜರ್ಮನರ ಗುಂಡಿನೇಟಿನಿಂದ ಫ್ರೆಂಚರಲ್ಲೂ ಬಹಳ ನಷ್ಟವಾಯಿತು. ಮರುದಿವಸ ೪ ಆವೃತ್ತಿ ಫ್ರೆಂಚ್‌ಸೈನಿಕರು ಜರ್ಮನರ ಮೇಲೆ ಯುದ್ಧಮಾಡಿದಾಗ ಬಹಳ ನಷ್ಟಪಟ್ಟು ಹಿಂದೆಗೆದರು. ಅದರ ಮರುದಿವಸವೂ ಫ್ರೆಂಚರ ಮೂರು ಪಟಾಲಮ್ಮುಗಳು ತಮ್ಮ ಕಂದಕಗಳಿಂದ ಹೊರಟು ಬೆಟ್ಟದ ಉನ್ನತಭಾಗವನ್ನೇರಲು ಪ್ರಯತ್ನಿಸಿ ಆಗಲೂ ಶತ್ರುಗಳಿಂದ ಬಹಳ ನಷ್ಟವನ್ನನುಭವಿಸಿದರು. ಆದರೂ ಸೈನಿಕರಲ್ಲಿ ಜಯಕಾಂಕ್ಷೆಯು ವಿಶೇಷವಾಗಿದ್ದುದರಿಂದ ಹತಾಶರಾಗದೆ ೨೪ ಗಂಟೆಗಳವರೆಗೆ ಪಟ್ಟನ್ನು ಬಿಡದೆ ಅಖಂಡವಾಗಿ ಶತ್ರುಗಳ ಮೇಲೆ ಬಿದ್ದು ಕಾದಾಡಿದುದರಿಂದ ಶತ್ರುಗಳು ಬಹಳ ನಷ್ಟಗೊಂಡು ಎದೆಗೆಟ್ಟುಹೋದರು. ತಮ್ಮ ಕಂದಕಗಳನ್ನು ಬಿಟ್ಟು ಗ್ರಾಮಕ್ಕೆ ಹೊಕ್ಕಿಕೊಂಡರು. ಮಧ್ಯಾಹ್ನದ ಹೊತ್ತಿಗೆ ಆ ಪ್ರದೇಶವನ್ನು ಫ್ರೆಂಚ್ ಸೈನಿಕರು ವಶಪಡಿಸಿಕೊಂಡರು. ಗ್ರಾಮದೊಳಕ್ಕೆ ನುಗ್ಗಿದಾಗ ಮನೆಮನೆಯಲ್ಲಿದ್ದ ಜರ್ಮನ್ ಸೈನಿಕರೆಲ್ಲಾ ಈಚೆಗೆ ಬಂದು ೪ ಆವೃತ್ತಿ ಯುದ್ಧಮಾಡಿದರು. ಬಹಳ ನಷ್ಟಪಟ್ಟು ಹಿಂದೆಗೆದರು. ಆ ಊರಿನ ಮುಖ್ಯವೀಥಿಯು ಫ್ರೆಂಚರ ಅಧೀನವಾಯಿತು. ಇದರಿಂದ ಆ ಗ್ರಾಮದಲ್ಲಿ ೨ ಭಾಗವಾಗಿದೆ. ಒಂದು ಭಾಗದಲ್ಲಿ ಜರ್ಮನರೂ, ಮತ್ತೊಂದು ಭಾಗದಲ್ಲಿ ಫ್ರೆಂಚರೂ ಇರುವಂತಾಯಿತು. ತಾವಿರುವ ಸ್ಥಲದ ಒಂದು ದೇವಾಲಯದಲ್ಲಿ ಜರ್ಮನ್ ಸೈನಿಕರು ಸೇರಿ ಶತ್ರುಗಳ ಮೇಲೆ ಗುಂಡುಗಳನ್ನು ಸುರಿಸುತ್ತಿದ್ದಾರೆ. ಆ ದೇವಾಲಯವನ್ನು ಮುತ್ತಿ ಶತ್ರುಗಳನ್ನು ಧ್ವಂಸಮಾಡುವುದಕ್ಕಾಗಿ ಫ್ರೆಂಚರು ಮರುದಿವಸ ೨ ಆವೃತ್ತಿ ಪ್ರಯತ್ನಿಸಿದರು. ಆದರೆ ಸಫಲವಾಗಲಿಲ್ಲ. ಬಳಿಕ ೨೪ ಗಂಟೆಗಳ ವರೆಗೆ ಜರ್ಮನರು ಶಾಂತರಾಗಿದ್ದರು. ಅಷ್ಟರಲ್ಲಿ ಅವರಿಗೆ ಹೊಸಸೈನ್ಯಗಳು ಸಹಾಯಕ್ಕೆ ಬರಲು ಫ್ರೆಂಚ್‌ಸೈನಿಕರ ಮೇಲೆ ಬೀಳಲು ಯತ್ನಿಸಿದರು. ಇವರು ಉತ್ತಮವಾದ ರಕ್ಷಕಸ್ಥಾನದಲ್ಲಿ ನಿಂತು ಯುದ್ಧವನ್ನು ಕೊಟ್ಟುದರಿಂದ ಅವರು ಭಗ್ನಮನೋರಥರಾಗಿ ಸುಮ್ಮನಾದರು.

ಜರ್ಮನಿಯವರು ಈಪ್ರೆಸ್ಸಿಗೆ ದಕ್ಷಿಣದಲ್ಲಿದ್ದ ಇಂಗ್ಲೀಷ್ ಸೇನೆಯ ಮೇಲೆ ಬಿದ್ದು ಕಾದು ಅವರನ್ನು ಸೆಂಟ್‌ಲಾಯಿ ಎಂಬ ಗ್ರಾಮವನ್ನು ಬಿಟ್ಟುಹೋಗುವಂತೆ ಮಾಡಿದ್ದರು. ಆದರೆ ಇವರು ಮರಳಿ ಶತ್ರುಗಳ ಮೇಲೆ ಭೀಕರವಾಗಿ ಬಿದ್ದು ಕಾದಾಡಿ ಆ ಗ್ರಾಮವನ್ನೂ ಅದರ ಸುತ್ತುಮುತ್ತಣ ಜರ್ಮನರ ಕಂದಗಳನ್ನೂ ಸಹ ವಶಪಡಿಸಿಕೊಂಡರು. ಉಳಿದ ಕಡೆಗಳಲ್ಲೆಲ್ಲಾ ಯುದ್ಧವು ಎಂದಿನಂತೆ ನಡೆಯುತ್ತಲೇ ಇದೆ. ಮಿತ್ರಮಂಡಲಿಯವರು ಸಾವಧಾನದಿಂದ ಮುಂದಕ್ಕೆ ಸಾಗುತ್ತಲೇ ಇದ್ದಾರೆ. ಈಗ ಪಶ್ಚಿಮರಣರಂಗಕ್ಕೆ ಇಂಗ್ಲೀಷರು ತಮ್ಮ ನೂತನ ಸೈನ್ಯಗಳನ್ನು ತಂದಿಳಿಸಿದ್ದಾರೆ. ಜರ್ಮನರು ಈಪ್ರೆಸ್ಸಿನ ಮೇಲೆ ಫಿರಂಗಿಗಳ ಗುಂಡುಗಳನ್ನು ಬಲವಾಗಿ ಹೊಡೆದುದರಿಂದ ಬಹುಜನರು ಸತ್ತಿರುವರು. ಸೊಯಿಸನ್ಸ್ ಪಟ್ಟಣದ ದೇವಾಲಯದ ಮೇಲೂ ಮನೆಗಳ ಮೇಲೂ ನ್ಯೂಪೋರ್ಟಿನ ಮೇಲೂ ಗುಂಡುಗಳನ್ನು ಹಾರಿಸಿರುವರು. ರೀಮ್ಸ್ ಪಟ್ಟಣದ ಮೇಲೂ ಫಿರಂಗಿಗಳನ್ನು ಹೊಡೆಯುತ್ತಲೇ ಇರುವರು. ಲೋರೈನ್ ಜಿಲ್ಲೆಯಲ್ಲಿ ಫ್ರೆಂಚ್‌ಸೈನ್ಯವು ಎಂಬರ್‌ಮೇನ್‌ಸಿಲ್ ಎಂಬ ಸ್ಥಲವನ್ನು ಆಕ್ರಮಿಸಿತು. ತಾ|| ೧೫ರಲ್ಲಿ ಆ ಸ್ಥಲದೊಳಗೆ ನಡೆದ ಯುದ್ಧದಲ್ಲಿ ಜರ್ಮನರಿಗೆ ಬಹಳ ನಷ್ಟವು ಸಂಭವಿಸಿತು. ೧೭೨೦ ಮಂದಿಗಳು ಸೆರೆಸಿಕ್ಕಿರುವರು. ಬಹುಶಃ ೧೦ಸಾವಿರ ಮಂದಿಗಳು ನಷ್ಟವಾಗಿರುವರು.

ಪೂರ್ವರಣರಂಗ.

ಜರ್ಮನರು ರಷ್ಯನರಮೇಲೆ ಮತ್ತೊಂದುಸಲ ಘೋರಯುದ್ಧವನ್ನು ಮಾಡಿ ಅವರಿಗೆ ಪೂರ್ಣಪರಾಭವವನ್ನುಂಟುಮಾಡಬೇಕೆಂದು ಈಗ ಬಹಳ ಸಾಹಸಮಾಡುತ್ತಿದ್ದಾರೆ. ಈಗ ಪೂರ್ವರಣರಂಗದಲ್ಲಿ ವಾರ್ಸಾದಕಡೆ ಅವರ ೬ ಸೈನ್ಯಗಳು ಯುದ್ಧಮಾಡುತ್ತಿವೆ. ಅವರು ರಷ್ಯನ್ ಸೈನ್ಯವನ್ನು ೪ ಕಡೆಯಿಂದಲೂ ಮುತ್ತಿ ಮಧ್ಯಸೇನೆಯಮೇಲೆ ಬೀಳುತ್ತಿದ್ದಾರೆ. ಇದು ನೆಪೋಲಿಯನ್ ಬೋನಾಪಾರ್ಟನು ಅನುಸರಿಸಿದ್ದ ಯುದ್ಧಪದ್ಧತಿ. ಇದನ್ನು ಜರ್ಮನರು ಮಧ್ಯೇಮಧ್ಯೇ ಅವಲಂಬಿಸುತ್ತಿದ್ದಾರೆ. ಇದುವರೆಗೂ ಜರ್ಮನರು ಬಕೋವಿನಾದಲ್ಲೂ ಪೂರ್ವಪ್ರಷ್ಯಾದಲ್ಲೂ ಒಂದು ಪಕ್ಕದಿಂದ ಒಂದು ರಷ್ಯನರಮೇಲೆ ಬೀಳಲು ಯತ್ನಿಸುತ್ತಿದ್ದರು. ಅದರಿಂದ ಸರಿಯಾದ ಲಾಭವಾಗದಿದ್ದಕಾರಣ ಈ ಸುತ್ತುಗಟ್ಟುವ ಪದ್ಧತಿಯನ್ನು ಹಿಡಿದಿದ್ದಾರೆ. ವಸಂತಋತುವಿನ ಆರಂಭದೊಳಗೇ ವಾರ್ಸಾಕ್ಕೆಬರುವ ಲೋಹಮಾರ್ಗವನ್ನು ಹಿಡಿದುಕೊಂಡು ರಷ್ಯನರಿಗೆ ಅವರದೇಶದಿಂದ ಆ ಮಾರ್ಗವಾಗಿ ಸಾಗಿಬರುತ್ತಿರುವ ಸಹಾಯ ಸಾಮಗ್ರಿಗಳನ್ನು ಬರಗೊಡದಂತೆ ಮಾಡಬೇಕೆಂಬುದು ಇವರ ಸಂಕಲ್ಪವಾಗಿದೆ.

ನೀಮನ್-ವಿಶ್ಚುಲಾನದಿಗಳ ಮಧ್ಯದಲ್ಲಿ ಉಭಯಪಕ್ಷಕ್ಕೂ ತೀಕ್ಷ್ಣವಾದ ಯುದ್ಧವಾಗಿದೆ. ಸಿಮ್ನೋ ಪ್ರಾಂತದಲ್ಲೂ ಪ್ರಾಸ್ನಿಜ್ಜಿನ ಬಳಿಯಲ್ಲೂ ಕಾರ್ಪೇತಿಯನ್ ಪರ್ವತದ ಪ್ರಾಂತದಲ್ಲೂ ಭೀಕರಯುದ್ಧಗಳಾಗಿ ಶತ್ರುಗಳ ಪ್ರಯತ್ನವೆಲ್ಲಾ ವ್ಯರ್ಥವಾಗಿದೆ. ಎಲ್ಲಕಡೆಯೂ ಕಳೆದವಾರದಲ್ಲಿ ನಡೆದ ಯುದ್ಧದಲ್ಲಿ ಜರ್ಮನರು ಹತಾಶರಾಗಿದ್ದಾರೆ.

ಕಾರ್ಪೇತಿಯನ್ ಪ್ರಾಂತದ ಗಾರ್ಲಿ ಕುಲಸ್ಕೊ ಕಣಿವೆಗಳ ಮಧ್ಯದಲ್ಲಿ ರಷ್ಯನರು ಹಲವುಸಾರಿ ಆಸ್ಟ್ರಿಯನ್ ಸೈನ್ಯದ ಮೇಲೆ ಬಿದ್ದು ಸೋಲಿಸಿದ್ದಾರೆ. ಆ ಪ್ರಾಂತದಲ್ಲಿ ಶತ್ರುಗಳ ೩ ಕಂಪನಿಸೈನ್ಯವು ಶರಣಾಗತವಾಯಿತು. ಒಂದುಕಡೆ ಆಸ್ಟ್ರಿಯನ್ ಸೈನ್ಯವು ಮಹತ್ತರವಾಗಿ ನುಗ್ಗುತ್ತಿರಲು ರಷ್ಯನರು ಅವರ ಪಕ್ಕದಲ್ಲಿ ಹೊರಳಿ ಕೆಲವು ಗ್ರಾಮಗಳನ್ನು ವಶಪಡಿಸಿಕೊಂಡಿರುವರು. ಅಲ್ಲಿ ೪ ಸಾವಿರಮಂದಿ ಸೈನಿಕರೂ ೨ ಹವಿಟ್ಜರ್ ಫಿರಂಗಿಗಳೂ ಇನ್ನೂ ಕೆಲ ಸಾಮಗ್ರಿಗಳೂ ರಷ್ಯನರಿಗೆ ದೊರಕಿದುವು.

ರಷ್ಯನ್ ಸೈನ್ಯವು ದಕ್ಷಿಣದಲ್ಲಿ ಆಸ್ಟ್ರಿಯನ್ನರ ಮೇಲೆ ಯುದ್ಧಮಾಡಿ ಅವರ ಕೆಲವು ರಕ್ಷಕಸ್ಥಾನಗಳನ್ನೂ ೨ ಸಾವಿರ ಮಂದಿ ಸೈನಿಕರನ್ನೂ ಹಿಡಿದುಕೊಂಡು ಈಚೆಗೆ ಅವರ ಜೇಂಸಿಲ್ ಎಂಬ ಪಟ್ಟಣಕ್ಕೆ ಮುತ್ತಿರುವರು. ಅದು ಇಷ್ಟರಲ್ಲೇ ರಷ್ಯನರ ಅಧೀನವಾದೀತೆಂದು ಸುದ್ದಿ ಬಂದಿದೆ.

ಪೂರ್ವಗೆಲಿಷಿಯಾದಲ್ಲಿ ಕೊಸಾಕ್ ಸೈನಿಕರು ಜರ್ಮನರ ಹುಸಾರ್‌ಸೈನಿಕರಲ್ಲಿ ೩ ಸ್ಕ್ವಾಡ್ರನ್ನುಗಳಷ್ಟನ್ನು ನಾಶಪಡಿಸಿರುವರು. ಅವರಲ್ಲಿ ೩೫ ಮಂದಿ ಮಾತ್ರ ಪ್ರಾಣಸಹಿತ ಉಳಿದು ಅವರೂಕೂಡ ಸೆರೆ ಸಿಕ್ಕಿದರು. ಈಗ ಗೆಲೀಷಿಯಾದಲ್ಲೂ ಕಾರ್ಪೇತಿಯನ್ ಪ್ರಾಂತದಲ್ಲೂ ಮಂಜು ವಿಶೇಷವಾಗಿ ಸುರಿಯುತ್ತಿದೆ. ಯುದ್ಧಕಾರ್ಯಕ್ಕೆ ತೊಂದರೆಯಾಗಿದೆ.

ಜರ್ಮನರು ಪ್ರಾಸ್ನಿಜ್ಜಿಗೆ ಉತ್ತರದಲ್ಲೂ ಈಶಾನ್ಯದಲ್ಲೂ ಬಲವಾದ ಸೈನ್ಯವನ್ನು ಸೇರಿಸುತ್ತಿದ್ದಾರೆ. ಕಳೆದ ೧೫ ದಿನಗಳಿಂದ ರಷ್ಯನರು ಜರ್ಮನರ ೩ ಸೇನೆಯನ್ನು ವಾರ್ಸಾದ ಉತ್ತರದ ಕಡೆಯಿಂದ ಹೊಡೆದೋಡಿಸಿದರು. ಅವರು ಮತ್ತೆ ೮-೧೦ ಸೈನ್ಯಗಳನ್ನು ಅಲ್ಲಿ ಸೇರಿಸಿ ಪ್ರಾಸ್ನಿಜ್ಜಿನಮೇಲಕ್ಕೆ ಸಾಗಿಸುತ್ತಿದ್ದಾರೆ. ಕಳೆದೆರಡುವಾರಗಳಲ್ಲಿ ಮಾಡಿದ ಯುದ್ಧದಲ್ಲಿ ಪೂರ್ವರಣರಂಗದಲ್ಲಿ ಜರ್ಮನರ ಹೆಣಗಳು ೧೦ ಸಾವಿರದವರೆಗೆ ಕಾಣಬಂದಿರುವುವು.

ತುರ್ಕಿ.

ಇನ್ನಷ್ಟು ಸೇನೆಯನ್ನೂ ಕೆಲ ಯುದ್ಧನಾವೆಗಳನ್ನೂ ಸಹಾಯಮಾಡಬೇಕೆಂದು ತುರ್ಕಿಯು ಮರಳಿ ಜರ್ಮನಿಯನ್ನು ಕೋರಿರಲಾಗಿ ಅದು ಸಾಧ್ಯವಲ್ಲವೆಂದು ಜರ್ಮನಿಯು ನಿರಾಕರಿಸಿತಂತೆ. ತುರ್ಕಿ ಜರ್ಮನರುಗಳು ಡಾರ್ಡಿನಲ್ಸ್ ಕೋಟೆಗಳ ಮೇಲೆ ಸೇರಿಸಿಟ್ಟಿರುವ ೧೪ ಅಂಗುಲದ ಬಾಯಿಯ ಕ್ರುಪ್‌ಕಾರ್ಖಾನೆಯ ಫಿರಂಗಿಗಳು, ಅವರು ಸ್ವಪ್ನದಲ್ಲೂ ಯೋಚಿಸಿರದಂಥ ಕ್ವೀನ್‌ಎಲಿಜಬೆತ್ ನೌಕೆಯ ೧೫ ಅಂಗುಲದ ಬಾಯಿಯ ಫಿರಂಗಿಗಳ ಏಟಿನಮುಂದೆ ಏನೂ ಕೆಲಸಮಾಡಲಾರದೆ ಹೋದುವು. ಇದರಿಂದ ತುರ್ಕಿ ಜರ್ಮನರು ಮಾಡಿಕೊಂಡಿದ್ದ ಯುದ್ಧದ ಅಂದಾಜುಗಳೆಲ್ಲಾ ತಲೆಕೆಳಗಾದುವು. ಕ್ರುಪ್‌ಫಿರಂಗಿಗಳಿರುವುದರಿಂದ ಡಾರ್ಡಿನಲ್ಸಿಗೆ ಭಯವೇನೂ ಇಲ್ಲವೆಂದು ಅವರು ನಂಬಿದ್ದರು. ಅದು ವ್ಯರ್ಥವಾಯಿತು. ಈಗಲೂ ಮಿತ್ರಮಂಡಲಿಯವರ ನೌಕೆಗಳು ಡಾರ್ಡಿನೆಲ್ಸಿನಲ್ಲಿ ಉತ್ತಮ ಸಾಹಸಗಳನ್ನು ಮಾಡುತ್ತಿವೆ. ಭಯಂಕರವಾಗಿ ನೀರಿನಲ್ಲಿ ಹುಗಿದಿರುವ ಮದ್ದಿನ ಗೋಳಗಳನ್ನೆಲ್ಲಾ ಉಪಾಯದಿಂದ ತೆಗೆದುಹಾಕುತ್ತಿವೆ. ಕೋಟೆಗಳಮೇಲೆ ಫಿರಂಗಿಗಳನ್ನು ಹೊಡೆದು ಶತ್ರುಗಳ ಸದ್ದನ್ನು ಅಡಗಿಸುತ್ತಿವೆ. ಮಿತ್ರಮಂಡಲಿಯವರು ಈಜಲಸಂಧಿಯನ್ನೆಲ್ಲಾ ತೆರವು ಮಾಡುವುದಕ್ಕೆ ಕನಿಷ್ಠಪಕ್ಷ ಇನ್ನೂ ಒಂದು ತಿಂಗಳಾದರೂ ಬೇಕಾದೀತೆಂದು ಹೇಳಲ್ಪಡುತ್ತಿದೆ. ಏಸ್ಯಾಖಂಡದ ಆಯಾ ಭಾಗದಲ್ಲಿದ್ದ ತಮ್ಮ ಸೈನ್ಯವನ್ನೆಲ್ಲಾ ತುರ್ಕಿಯವರು ತಮ್ಮ ರಾಜಧಾನಿಗೆ ಸೇರಿಸುತ್ತಿದ್ದಾರೆ. ಶತ್ರುಸೇನೆಯನ್ನು ಸ್ಮರ್ನಾದ ಹತ್ತಿರ ಇಳಿಯಗೊಡದಂತೆ ಮಾಡುವುದಕ್ಕೆ ಸ್ವಲ್ಪವನ್ನು ಕಳುಹಿಸಿದ್ದಾರೆ. ಕಪ್ಪುಸಮುದ್ರದಲ್ಲಿ ತುದಿಯ ತೀರಪಟ್ಟಣಗಳ ಮೇಲೆ ರಷ್ಯನರ ಯುದ್ಧನಾವೆಗಳು ಮಾಡುತ್ತಿರುವ ಹೊಡೆತಕ್ಕೆ ಪ್ರತ್ಯುತ್ತರವನ್ನು ಕೊಡುವುದರಲ್ಲಿ ಶತ್ರುಗಳ ಫಿರಂಗಿಗಳು ಸೋತುಹೋಗಿವೆ. ಶತ್ರುಗಳ ಚಲನವಲನವನ್ನು ತಿಳಿಯುವುದಕ್ಕೆ ತುರ್ಕಿಯವರಲ್ಲಿ ವಿಮಾನಗಳು ಇಲ್ಲ. ಇದರ ಮೇಲೆ ಅವರ ಕಡೆ ಮದ್ದು ಗುಂಡು ಮೊದಲಾದ ಉಪಕರಣಗಳೂ ಸಮೃದ್ಧವಾಗಿಲ್ಲ. ಮೊದಲಿನಂತೆ ಈಗ ಅವರಿಗೆ ಬೇಕಾದ ಸಾಮಗ್ರಿಗಳನ್ನೆಲ್ಲಾ ಒದಗಿಸಲು ಜರ್ಮನರಿಗೂ ಅಸಾಧ್ಯವಾಗಿದೆ. ಏಕೆಂದರೆ ತಮ್ಮ ಸೈನ್ಯಗಳಿಗೆ ತಕ್ಕಷ್ಟು ಸಾಮಗ್ರಿಗಳನ್ನು ಒದಗಿಸುವುದೇ ಅವರಿಗೆ ದುಸ್ತರವಾಗಿದೆ. ಗೋಬೆನ್ ಎಂಬ ಯುದ್ಧದ ಹಡಗು ಶಿಥಿಲವಾದುದರಿಂದ ಅದರ ಮೇಲಕ್ಕೆ ೧೦-೧೧ ಅಂಗುಲದ ಬಾಯಿಯ ಫಿರಂಗಿಗಳನ್ನಿಳಿಯಿಸಿ, ಡಾರ್ಡಿನಲ್ಸಿನ ರಕ್ಷಣೆಗಾಗಿ ತುರ್ಕಿಯವರು ಇಟ್ಟುಕೊಂಡಿರುವರು. ಡಾರ್ಡಿನಲ್ಸಿನ ಪಕ್ಕದಲ್ಲಿರುವ ಗಲಿಪೋಲಿ ಭೂಭಾಗವು ತುರ್ಕಿ ರಾಜಧಾನಿಯಿಂದ ಬೇರಾಗಿ ಹೋಗುವಂತೆ ಮಿತ್ರಮಂಡಲಿಯ ನೌಕಾದಳವು ಮಾಡಿರುತ್ತದೆ. ಇದರಿಂದ ಆ ದ್ವೀಪಕಲ್ಪದಲ್ಲಿರುವ ತುರ್ಕಿ ಸೈನ್ಯವು ಕಾನ್‌ಸ್ಟಾಂಟಿನೋಪಲನ್ನು ರಕ್ಷಿಸುವ ಕಾರ್ಯದಲ್ಲಿ ಸಹಾಯಕವಾಗದಿರುವಂತೆ ಪರಿಣಮಿಸಿರುತ್ತದೆ. ಇಲ್ಲಿ ಬಹುಶಃ ೧|| ಲಕ್ಷ ಸೈನ್ಯದ ಮೇಲೆಯೇ ಇರಬಹುದೆಂದು ಎಣಿಸಲ್ಪಟ್ಟಿದೆ.

ಈ ಜಲಸಂಧಿಯ ಕಡೆಯಲ್ಲಿ ಮುಂದೆ ತುರ್ಕಿಯವರೊಡನೆ ನಡೆಯಬಹುದಾಗಿರುವ ಯುದ್ಧಕ್ಕಾಗಿ ಮಿತ್ರ ಮಂಡಲಿಯವರು ಉತ್ತರಆಫ್ರಿಕಾದಲ್ಲಿ ಒಂದು ಸೈನ್ಯವನ್ನು ಸೇರಿಸಿರುವರಷ್ಟೆ. ಇದಕ್ಕೆ ಜನರಲ್ ಡಾಮೆಡೇಯವರು ಅಧ್ಯಕ್ಷರಾಗಿದ್ದಾರೆ. ಈ ಸೇನೆಯಲ್ಲಿ ಸ್ವಲ್ಪ ಭಾಗವು ಆಗಲೇ ಡಾರ್ಡಿನಲ್ಸಿಗೆ ಪ್ರಯಾಣಮಾಡಿದೆ. ಫಿರಂಗಿ ಯೇಟಿನಿಂದ ಶಿಥಿಲವಾದ ತಮ್ಮ ಕೋಟೆಗಳನ್ನು ಸರಿಪಡಿಸಿಕೊಳ್ಳುವುದಕ್ಕೇ ಆಗಲಿ ಹೊಸ ಸನ್ನಾಹಗಳನ್ನು ಮಾಡಿಕೊಳ್ಳುವುದಕ್ಕೇ ಆಗಲಿ ತುರ್ಕಿಯವರಿಗೆ ಅವಕಾಶ ಕೊಡದಂತೆ ಮಿತ್ರಮಂಡಲಿಯ ನೌಕಾದಳವು ಡಾರ್ಡಿನಲ್ಸ್ ಕೋಟೆಗಳಮೇಲೆ ಫಿರಂಗಿ ಗುಂಡುಗಳನ್ನು ಹೊಡೆಯುತ್ತಲೇ ಇವೆ. ಈ ಏಟಿನಿಂದ ೧ ಗ್ರಾಮಕ್ಕೆ ಹೋಗಿಬರುವ ಮುಖ್ಯವಾದ ಸೇತುವೊಂದು ಧ್ವಂಸವಾಯಿತು. ತುರ್ಕಿಯವರ ಕೋಟೆಗಳ ಮೇಲಣ ಫಿರಂಗಿಗಳನ್ನು ಈಗ ಜರ್ಮನ್ ಸೈನಿಕರು ಹಾರಿಸುತ್ತಿರುವರು. ಅದರಿಂದ ಗುರಿಯಿಟ್ಟು ಹೊಡೆಯುವುದು ಚೆನ್ನಾಗಿದ್ದರೂ ಮದ್ದುಗುಂಡು ಮೊದಲಾದ ಸಾಮಗ್ರಿಗಳು ಚೆನ್ನಾಗಿರುವುದಿಲ್ಲ. ಮಿತ್ರಮಂಡಲಿಯವರ ಹಡಗುಗಳು ಇನ್ನೂ ಕೆಲ ಹಡಗುಗಳನ್ನು ಸಹಾಯಕ್ಕೆ ತೆಗೆದುಕೊಂಡು ಸ್ಮರ್ನಾಕೋಟೆಯ ಮೇಲೆ ಗುಂಡುಗಳನ್ನು ಹೊಡೆಯುತ್ತಿವೆ. ಒಂದು ಹಡಗಿಗೆ ಶತ್ರುಗಳ ಗುಂಡಿನೇಟು ಬಿದ್ದರೂ ನಷ್ಟವೇನೂ ಆಗಲಿಲ್ಲ. ಆ ತೀರಪಟ್ಟಣದ ಪ್ರಜೆಗಳೆಲ್ಲ ಅಧಿಕಾರಿಗಳ ಅಪ್ಪಣೆ ಪ್ರಕಾರ ಊರನ್ನು ಬಿಟ್ಟು ಹೊರಟುಹೋಗುತ್ತಿದ್ದಾರೆ.

ಹಾಲೆಂಡ್ ದೇಶದ ಒಂದು ಪತ್ರಿಕೆಗೆ ತುರ್ಕಿ ರಾಜಧಾನಿಯ ಪತ್ರಿಕಾವಿಲೇಖಕನು ಬರೆದಿರುವುದರಲ್ಲಿ ಹೀಗೆ ತಿಳಿಯಿಸಿರುತ್ತಾನೆ—"ಈ ರಾಜಧಾನಿಯ ಸುತ್ತಲೂ ಬೇರೆ ಹೊಸ ದುರ್ಗಗಳು ಕಟ್ಟಿಸಲ್ಪಡುತ್ತಿವೆ. ಏಸ್ಯಾಖಂಡದ ಪಕ್ಕದ ದುರ್ಗಗಳಲ್ಲಿ ೨|| ಲಕ್ಷ ಮಂದಿ ಸೈನಿಕರಿದ್ದಾರೆ. ಆವಶ್ಯಕಬಿದ್ದರೆ ಒಂದು ದಿನದೊಳಗಾಗಿ ಕಾನ್‌ಸ್ಟಾಂಟಿನೋಪಲ್ಲಿನ ಸುತ್ತಲೂ ೪ ಲಕ್ಷ ಮಂದಿ ಸೈನಿಕರನ್ನು ಸೇರಿಸುವವರಾಗಿದ್ದಾರೆ. ಈ ರಾಜಧಾನಿಯಲ್ಲಿ ಬೇಕಾದಷ್ಟು ಆಹಾರ್ಯಸಾಮಗ್ರಿಗಳನ್ನು ಸೇರಿಸಿಟ್ಟಿದ್ದಾರೆ. ಪ್ರಜೆಗಳಿಗೆ ಬೇಕಾದ ಆಹಾರವನ್ನು ಪ್ರಭುತ್ವದವರೇ ಒಂದು ನಿಯಮವನ್ನನುಸರಿಸಿ ಹಂಚಿಕೊಡುತ್ತಿದ್ದಾರೆ."

ಕಾನ್‌ಸ್ಟಾಂಟಿನೋಪಲ್ಲಿನಲ್ಲಿ ಪ್ರಭುತ್ವದವರಮೇಲೆ ಕೆಲರು ದ್ರೋಹಾಲೋಚನೆಯಿಂದ ಕಾರ್ಯಮಾಡುತ್ತಿರುವರೆಂಬುದು ಗೊತ್ತಾಗಿ ಆ ಸಂಬಂಧದಲ್ಲಿ ೨೦೦ ಮಂದಿಗಳು ಹಿಡಿಯಲ್ಪಟ್ಟರು. ಅವರಲ್ಲಿದ್ದ ಆಯುಧಗಳನ್ನೂ ಸಿಡಿಮದ್ದುಗಳನ್ನೂ ಕೂಡ ವಶಪಡಿಸಿಕೊಂಡರು.

ಆರ್ಮೇನಿಯಾಕ್ಕೆ ಸೇರಿದ ಭೋರಕ್‌ಜಿಲ್ಲೆಯಲ್ಲಿ ವಿಸ್ತಾರವಾದ ರಣರಂಗದಮೇಲೆ ತುರ್ಕಿಸೈನ್ಯಕ್ಕೂ ರಷ್ಯನರಿಗೂ ಯುದ್ಧವಾದುದರಲ್ಲಿ ಹಲವುಸಾರಿ ತುರ್ಕಿಯವರು ಪರಾಜಿತರಾಗಿ ಓಡಿಹೋದರು. ಅಲಾಷ್‌ಕೇರ್ಟ್‌ಲೋವಲ್ಲಿ ರಷ್ಯನರು ಕುರ್ದುಸೈನಿಕರೊಡನೆ ಯುದ್ಧಮಾಡಿ ಅವರನ್ನೆಲ್ಲಾ ದಕ್ಷಿಣದಕಡೆಗೆ ಓಡಿಸಿಬಿಟ್ಟಿದ್ದಾರೆ.

ಮೈಸೂರ್ ಸ್ಟಾರ್.

ಸನ್ ೧೯೧೫ ನೆಯ ಮಾರ್ಚಿ ತಾ|| ೨೧ನೆಯ ಭಾನುವಾರ.

ಮತ್ತೊಂದು ಕಾನ್‌ಫರೆನ್ಸು.

ಮೈಸೂರು ದೇಶದ ಲೋಕಲ್ ಬೋರ್ಡುಗಳ ಮತ್ತೂ ಮ್ಯುನಿಸಿಪಲ್ ಕೌನ್ಸಿಲ್ಲುಗಳ ಪ್ರತಿನಿಧಿಗಳು ಸೇರಿ ಒಂದಾನೊಂದು ಕಾನ್‌ಫರೆನ್ಸನ್ನು ನಡೆಯಿಸುವ ವಿಷಯದಲ್ಲಿ ನಮ್ಮ ಸರ್ಕಾರದವರು ಈಗತಾನೇ ಒಂದು ಅಪ್ಪಣೆಯನ್ನು ಕೊಟ್ಟಿರುತ್ತಾರೆ. ಕಳೆದ ಪ್ರಜಾಪ್ರತಿನಿಧಿಸಭೆಯಲ್ಲಿ ನಂಜನಗೂಡು ಮ್ಯುನಿಸಿಪಲ್ ಪ್ರತಿನಿಧಿಗಳು ಇಂಥ ಕಾನ್‌ಫರೆನ್ಸನ್ನು ನಡೆಯಿಸುವ ವಿಷಯಕವಾದ ಒಂದು ಸೂಚನೆಯನ್ನು ಸಭೆಗೆ ತಂದಿದ್ದರು. ಅದು ಪ್ರಶಸ್ತವಾದುದೆಂದು ಮಂತ್ರಿವರ್ಯರಿಗೆ ತೋರಿ ಅನುಕೂಲವಾದ ಉತ್ತರವನ್ನಿತ್ತಿದ್ದರು. ಈಚೆಗೆ ನಮ್ಮ ರಾಜಧಾನಿಯ ಮ್ಯುನಿಸಿಪಲ್ ಪ್ರೆಸಿಡೆಂಟರು ಈ ಕಾರ್ಯದಲ್ಲಿ ಬದ್ಧಕುತೂಹಲರಾಗಿ ನಿಂತು, ಇಲ್ಲಿನ ಮ್ಯುನಿಸಿಪಲ್ ಕೌನ್ಸಿಲಿನ ವಿಚಾರಣೆಗೊಳಪಟ್ಟ ಇಂಥ ಸಭೆಯೊಂದನ್ನು ಜರುಗಿಸುವುದಕ್ಕೆ ಸರ್ಕಾರದ ಅಪ್ಪಣೆಯನ್ನು ಕೇಳಿದರು.

ಇದರಮೇಲೆ ಸರ್ಕಾರದವರು ಪರ್ಯಾಲೋಚನೆಯನ್ನು ಮಾಡಿ, ಇಂಥ ಸಭೆಯು ಜರುಗುವುದರಿಂದ ಮ್ಯುನಿಸಿಪಲ್ ರೆಗ್ಯುಲೇಷನ್ನಿನ ಈಗಿನ ನಿಯಮಗಳಂತೆ ಆಚರಿಸುವುದರಲ್ಲಿ ತೋರಿಬಂದಿರುವ ತೊಂದರೆಗಳನ್ನೂ, ಅವಕ್ಕೆ ಪರಿಹಾರವನ್ನೂ ಕುರಿತು ಚರ್ಚಿಸಿ ನಿರ್ಧರಿಸಿಕೊಳ್ಳುವುದಕ್ಕೆ ಡಿಸ್ಟ್ರಿಕ್ಟ್ ಬೋರ್ಡು ಮ್ಯುನಿಸಿಪಲ್ ಕೌನ್ಸಿಲ್ಲುಗಳ ಪ್ರತಿನಿಧಿಗಳಿಗೆ ಅವಕಾಶವುಂಟಾಗುತ್ತದೆಯೆಂದೂ, ಅದರಿಂದ ಆ ಸಂಘಗಳಿಗೆ ವಿಶೇಷ ಲಾಭವುಂಟಾಗಲು ಮಾರ್ಗವಾದೀತೆಂದೂ ನಂಬಿ, ಇದನ್ನು ಬರುವ ಶ್ರೀಮನ್ಮಹಾರಾಜರವರ ವರ್ಧಂತಿಯ ಕಾಲದಲ್ಲಿ ರಾಜಧಾನಿಯೊಳಗೆ ನೆರವೇರಿಸುವುದಕ್ಕೆ ಅನುಮತಿಯನ್ನು ಕೊಟ್ಟಿರುತ್ತಾರೆ.

ಈ ಕಾನ್‌ಫರೆನ್ಸಿನಲ್ಲಿ ಲೋಕಲ್ ಬೋರ್ಡುಗಳೂ, ಮ್ಯುನಿಸಿಪಾಲಿಟಿಗಳೂ ನಡೆಯಿಸಬೇಕಾದ ಆಡಳಿತದ ಯೋಗ್ಯತೆಯನ್ನು ಅಭಿವೃದ್ಧಿಪಡಿಸುವುದು, ಅದಕ್ಕೆ ತಕ್ಕ ವರಮಾನವನ್ನು ಹೆಚ್ಚಿಸಿಕೊಳ್ಳುವ ಮಾರ್ಗದ ನಿರ್ಣಯ, ನಗರನಿರ್ಮಾಣದ ಏರ್ಪಾಟು, ಗ್ರಾಮನಗರಾದಿಗಳ ಆರೋಗ್ಯಾಭಿವೃದ್ಧಿ, ಅವುಗಳ ಶುಚೀಕರಣ, ಮತ್ತೂ ಜಲಾಧಾರಕಲ್ಪನೆ, ಗ್ರಾಮಮಾರ್ಗಗಳನ್ನೂ, ಡಿಸ್ಟ್ರಿಕ್ಟು ಲೋಹಮಾರ್ಗಗಳನ್ನೂ ಸ್ಥಾಪಿಸುವ ಕ್ರಮ, ಪ್ರಜೆಗಳ ಸುಖಕ್ಕೆ ಸಾಧಕವಾದ ಇದೇ ತೆರದ ಇತರ ವಿಷಯಗಳು ಸಹ ಚರ್ಚಿತವಾಗಿ ನಿರ್ಧಾರಗೊಳ್ಳಬಹುದೆಂದು ಸರ್ಕಾರದವರು ನಿರೀಕ್ಷಿಸುತ್ತಾರೆ.

ಇದಕ್ಕಾಗಿ ಮೈಸೂರು ಬೆಂಗಳೂರು ಮ್ಯುನಿಸಿಪಲ್ ಕೌನ್ಸಿಲುಗಳಿಂದ ೪-೪ ಮಂದಿಗಳೂ, ಇತರ ೬ ಡಿಸ್ಟ್ರಿಕ್ಟು ಕಸಬಾ ಮ್ಯುನಿಸಿಪಾಲಿಟಿಗಳಿಂದ ಪ್ರತಿಯೊಂದಕ್ಕೂ ಇಬ್ಬಿಬ್ಬರಂತೆ ೧೨ ಮಂದಿಗಳೂ, ೬೦೦೦ ಅಥವಾ ಅದಕ್ಕಿಂತ ಹೆಚ್ಚಿದ ಪ್ರಜಾಸಂಖ್ಯೆಯುಳ್ಳ ಬೇರೆ ೬ ಮ್ಯುನಿಸಿಪಾಲಿಟಿಗಳಿಂದ ಪ್ರತಿಯೊಂದಕ್ಕೂ ಒಬ್ಬೊಬ್ಬರಂತೆ ೬ ಮಂದಿಯೂ, ಇದರಮೇಲೆ ಪ್ರತಿ ಡಿಸ್ಟ್ರಿಕ್ಟಿನ ಇತರ ಮ್ಯುನಿಸಿಪಾಲಿಟಿಯಿಂದ ಡಿಸ್ಟ್ರಿಕ್ಟಿಗೆ ಒಬ್ಬೊಬ್ಬರಂತೆ ೮ ಮಂದಿಯೂ, ಎಂಟು ಡಿಸ್ಟ್ರಿಕ್ಟ್ ಬೋರ್ಡಿನಿಂದ ಪ್ರತಿಯೊಂದಕ್ಕೂ ಮೂವರಂತೆ ೨೪ ಮಂದಿಗಳೂ, ಕೋಲಾರ ಚಿನ್ನದಗಣಿಯ ಸ್ಯಾನಿಟರಿ ಬೋರ್ಡಿನಿಂದ ಮೂವರೂ, ಅಂತೂ ೬೧ ಮಂದಿ ಪ್ರತಿನಿಧಿಗಳು ಈ ಸಭೆಗೆ ಸಭಾಸದರಾಗಿ ಬರಲು ಅಪ್ಪಣೆಯಾಗಿದೆ. ಈ ಸಭೆಯ ನಿರ್ವರ್ತನಕ್ಕೆ ತಗಲುವ ವೆಚ್ಚದಲ್ಲಿ ೫೦೦ ರೂ. ನೊಳಗೆ ಆಗಬಹುದಾದ ಅರ್ಧಭಾಗ ವ್ಯಯವನ್ನು ಸರ್ಕಾರದವರು ವಹಿಸಿಕೊಂಡು, ಉಳಿದುದನ್ನು ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲ್ ಫಂಡಿನಿಂದ ಒದಗಿಸಿಕೊಳ್ಳಬೇಕೆಂತಲೂ, ಇದರಲ್ಲಿ ಅಂಗವಾಗಿ ಸೇರುವ ಸಂಸ್ಥಾನದ ಇತರ ಲೋಕಲ್ ಬೋರ್ಡು-ಮ್ಯುನಿಸಿಪಲ್ ಕೌನ್ಸಿಲ್ಲುಗಳೂ ಸಹ ಇದರ ವೆಚ್ಚಕ್ಕಾಗಿ ೬೦ ರೂ. ಗೆ ಮೀರದಷ್ಟು ಹಣವನ್ನು ಪ್ರತಿಯೊಂದೂ ಸಹಾಯಮಾಡಬಹುದೆಂತಲೂ ಸರಕಾರದವರು ತಿಳಿಯಿಸಿರುತ್ತಾರೆ.

ಪ್ರತಿನಿಧಿಗಳಾಗಿ ಬರತಕ್ಕವರು ಸಾಧ್ಯವಾದಮಟ್ಟಿಗೂ ಸರಕಾರದ ಉದ್ಯೋಗಿಗಳಲ್ಲದವರೇ ಆಗಿರಬೇಕೆಂದು ಹೇಳಲ್ಪಟ್ಟಿದೆ. ಇಂಥ ಪ್ರತಿನಿಧಿಗಳು ತಮ್ಮ ಪ್ರಯಾಣದ ವೆಚ್ಚವನ್ನು ಅವರೇ ವಹಿಸಿಕೊಳ್ಳುವಂತೆ ಆಗಿರಬೇಕೆಂದೂ, ಆದರೆ ಅಸಾಧ್ಯವಾದಕಡೆ ಮಿತವಾಗಿ ಧನಸಹಾಯವನ್ನು ಆಯಾ ಸಂಘಗಳವರು ಮಾಡಿಕೊಡಬೇಕೆಂದೂ ಅಪ್ಪಣೆಮಾಡಿದ್ದಾರೆ.

ಈ ಮೇಲೆಕಂಡ ಪ್ರಯತ್ನವು ವಿವೇಕಪೂರ್ವಕವೂ ಆವಶ್ಯಕವೂ ಆದುದೆಂಬುದನ್ನು ಹೇಳಬೇಕಾಗಿಲ್ಲ. ಮೈಸೂರು ದೇಶದಲ್ಲೂ ಕೂಡ ಭರತಖಂಡದ ಇತರ ಪಟ್ಟಣಗಳಲ್ಲಿನಂತೆ ಪುರಪಾಲಕ ಸಂಘಗಳೂ ಡಿಸ್ಟ್ರಿಕ್ಟುಬೋರ್ಡು ತಾಲ್ಲೋಕು ಬೋರ್ಡು ಮೊದಲಾದುವುಗಳೂ ಸ್ಥಾಪಿಸಲ್ಪಟ್ಟಿದ್ದರೂ, ಇವುಗಳಲ್ಲಿ ಅನೇಕ ಸಂಘಗಳ ಕಾರ್ಯಗಳು ಪ್ರಜಾಪ್ರತಿನಿಧಿಗಳಿಂದಲೇ ಸ್ವಸಾಮರ್ಥ್ಯದಿಂದ ನಡೆಯಿಸಲ್ಪಡುವಷ್ಟರ ಸ್ಥಿತಿಯಲ್ಲಿಲ್ಲ. ಅಂಥ ಹಲವು ಸಂಘಗಳು ಸರ್ಕಾರದಧಿಕಾರಿಗಳ ಸೂಚನೆ ಹೇಗಿದ್ದರೆ ಹಾಗೆ ತಲೆದೂಗುವ ಕಾರ್ಯವೆಷ್ಟೋ ಅಷ್ಟನ್ನು ಮಾತ್ರ ಮಾಡಲು ಸಮರ್ಥವಾಗಿರುತ್ತಿವೆ. ಇದರಿಂದ ಆಯಾ ಸ್ಥಲದ ಪ್ರಜೆಗಳಿಗೆ ಮುಖ್ಯವಾಗಿ ಮೊದಲು ಆಗಬೇಕಾದ ಕಾರ್ಯಗಳು ಹಿಂದೆ ಬಿದ್ದು ಎಷ್ಟೋ ತೊಂದರೆಗಳು ಪ್ರಾಪ್ತವಾಗುತ್ತಲಿವೆ. ಇತರ ವಿಷಯದಲ್ಲಿ ಮೈಸೂರುದೇಶದ ಪ್ರಜೆಗಳು ಹಿಂದುಳಿದಿರುವಂತೆಯೇ ಸ್ಥಾನಿಕ ಪರಿಪಾಲನಾಕ್ರಮದ ವಿಷಯವೂ ಅಜ್ಞತೆಯಲ್ಲೇ ಇದೆ. ಇಂಥ ಕಾನ್‌ಫರೆನ್ಸಿನ ಏರ್ಪಾಟಿನಿಂದ ಅನುದ್ಯೋಗಿಕ ಸಭಾಸದರಲ್ಲಿ ತಮ್ಮ ಕರ್ತವ್ಯ ಪರಿಜ್ಞಾನವು ವೃದ್ಧಿಯಾಗುತ್ತ ಬಂದರೆ ಅದರಿಂದ ದೇಶದ ಕ್ಷೇಮಕ್ಕೆ ವಿಶೇಷ ಸಹಾಯವಾಗುವುದು. ಈ ಪ್ರಥಮ ಸಮಾವೇಶವು ಯಶಸ್ವಿಯಾಗಿ ನೆರವೇರಲೆಂದೂ, ಅದರ ಫಲಿತಾಂಶವು ಪ್ರತಿಡಿಸ್ಟ್ರಿಕ್ಟಿನಲ್ಲೂ ಇಂಥ ಕಾನ್‌ಫರೆನ್ಸೊಂದೊಂದನ್ನು ಪ್ರತಿವರ್ಷವೂ ನಡೆಯಿಸಬೇಕೆಂಬ ಆವಶ್ಯಕತೆಯನ್ನು ಉಂಟುಮಾಡಿಕೊಡುವಂತಾಗಲೆಂದೂ ನಾವು ಕೋರುತ್ತೇವೆ.

ಒಳದೇಶ ವೃತ್ತಾಂತಗಳು

ಮದ್ರಾಸಿನ ಕೆ. ಆ. ಗಣೇಶನ್ ಮತ್ತೂ ಸಿ. ಎ. ನಟೇಶನ್ ಬುಕ್‌ಡಿಪೋಗಳ ಪ್ರಕಟನ ಪತ್ರಿಕೆಗಳು ಇದರಲ್ಲಿ ಗರ್ಭೀಕರಿಸಲ್ಪಟ್ಟಿವೆ.

ಶ್ರೀ ಉತ್ತರಾದಿ ಮಠದ ಸ್ವಾಮಿಗಳು ಕಳೆದ ತಾ|| ೧೮ರ ಬೆಳಗಿನ ೯-೧೦ ಗಂಟೆಯಲ್ಲಿ ಆನೆಯಮೇಲಿನಂಬಾರಿಯಮೇಲೆ ಕುಳಿತು ರಾಜಮರ್ಯಾದೆಯಿಂದ ರಾಜಧಾನಿಗೆ ದಯಮಾಡಿ ನಂಜರಾಜಬಹದ್ದೂರ್ರವರ ಸತ್ರದಲ್ಲಿಳಿದುಕೊಂಡಿರುವರು. ಅರಮನೆಯ ಕಂಟ್ರೋಲರು ದರ್ಬಾರ್‌ಭಕ್ಷಿಯರು ಡೆ|| ಕಮಿಷನರು ಮೊದಲಾದ ಅಧಿಕಾರಿಗಳೂ ವೈದಿಕಮಂಡಲಿಯೂ ವರ್ತಕರು ಮೊದಲಾದವರೂ ಊರಿನಹೊರಗಡೆ ನಿರೀಕ್ಷಿಸಿಕೊಂಡಿದ್ದು ಇದಿರ್ಗೊಂಡು ಕರೆದುಕೊಂಡು ಬಂದರು. ಸ್ವಾಮಿಗಳು ನಿನ್ನೆಯ ಪ್ರಾತಃಕಾಲ ಅರಮನೆಗೆ ದಯಮಾಡಿಸಿ ಶ್ರೀಮನ್ಮಹಾರಾಜರವರ ಸತ್ಕಾರವನ್ನು ಕೈಕೊಂಡು ಬಂದರು. ಮಠದಲ್ಲಿ ನಿತ್ಯದಲ್ಲೂ ಬ್ರಾಹ್ಮಣ ಸಂತರ್ಪಣೆಯು ನಡೆಯುತ್ತಿದೆ.

ಏಪ್ರಿಲ್ ತಾ|| ೨ ರ ರಾತ್ರಿ ಹೊಗೆಬಂಡಿಯಲ್ಲಿ ಪ್ರಯಾಣಮಾಡಿ ಮಾರನೆಯ ಬೆಳಗಿನ ೬ ಗಂಟೆಗೆ ಶಿವಮೊಗ್ಗೆಯನ್ನು ತಲುಪಿ ಅಲ್ಲಿ ಅರ್ಧಗಂಟೆಯಕಾಲ ವಿಶ್ರಮಿಸಿಕೊಂಡು ಅನಂತರ ಮೋಟಾರುಬಂಡಿಯಲ್ಲಿ ಹೊರಟು ಹೊನ್ನಾಳಿಯನ್ನು ೯|| ಗಂಟೆಗೆ ಸೇರಿ ಅಲ್ಲಿಯ ಕಚೇರಿಗಳನ್ನು ಪರಾಮರಿಸಿಕೊಂಡು ಪುರನಿವಾಸಿಗಳನ್ನು ಕಂಡು ಅವರ ಕಷ್ಟಸುಖಗಳನ್ನು ವಿಚಾರಿಸುವರು. ಅಲ್ಲಿಂದ ತಾ|| ೪ ರಲ್ಲಿ ಬೆಳಗ್ಗೆ ಮೋಟಾರುಬಂಡಿಯಲ್ಲಿ ಹೊರಟು ಶಿಕಾರಿಪುರವನ್ನು ೬ ಗಂಟೆಗೆ ತಲುಪಿ ಗ್ರಾಮಗಳನ್ನು ನೋಡಿಕೊಂಡು ಸಾಯಂಕಾಲ ೬ ಗಂಟೆಗೆ ಹೊನ್ನಾಳಿಗೆ ಹಿಂದಿರುಗಿ ಬಂದು ಅಲ್ಲಿ ೨ ದಿನಗಳವರೆಗಿದ್ದು ತಾ|| ೬ ರ ಬೆಳಗಿನ ೬ ಗಂಟೆಯಲ್ಲಿ ಮೋಟಾರುಬಂಡಿಯಲ್ಲಿ ಶಿವಮೊಗ್ಗೆಯ ಮಾರ್ಗವಾಗಿ ಚೆನ್ನಗಿರಿಯನ್ನು ೯ ಗಂಟೆಗೆ ಸೇರುವರು. ಅಲ್ಲಿ ಎಲ್ಲವನ್ನೂ ಪರಾಮರಿಸಿಕೊಂಡು ಮಧ್ಯಾಹ್ನ ೩ ಗಂಟೆಯಲ್ಲಿ ಅಲ್ಲಿಂದ ಹೊರಟು ಸಾಯಂಕಾಲ ಸಾಂತವೇರಿಯನ್ನು ತಲುಪುವರು. ತಾ|| ೮ ರಲ್ಲಿ ಮೋಟಾರುಬಂಡಿಯಲ್ಲಿ ಕಾಳಹಟ್ಟಿಗೆ ದಯಮಾಡಿಸಿ ಅದೇ ಮಧ್ಯಾಹ್ನ ೫ ಗಂಟೆಯಲ್ಲಿ ಸಾಂತವೇರಿಗೆ ಹಿಂದಿರುಗಿ ಬರುವರು. ತಾ|| ೯ ರ ಬೆಳಗ್ಗೆ ಸಾಂತವೇರಿಯನ್ನು ಬಿಟ್ಟು ೮ ಗಂಟೆಗೆ ಚಿಕ್ಕಮಗಳೂರನ್ನು ತಲುಪಿ ಅಲ್ಲಿಂದ ಅದೇಮಧ್ಯಾಹ್ನ ೩ ಗಂಟೆಯಲ್ಲಿ ಹೊರಟು ಕಡೂರನ್ನು ೪ ಗಂಟೆಗೆ ಸೇರಿ ಆ ದಿನ ರಾತ್ರಿ ೧೧|| ಗಂಟೆಯಲ್ಲಿ ರೈಲುಬಂಡಿಯನ್ನು ಹತ್ತಿ ಮಾರನೆಯ ಬೆಳಗಿನ ೫| ಗಂಟೆಗೆ ಬೆಂಗಳೂರನ್ನು ಸೇರುವರು.

ವಕೀಲರು.

ಎಲ್ಲಾ ಸಂಸ್ಥೆಗಳಲ್ಲಿಯೂ ವಕೀಲರು ಮುಂದಾಳುಗಳಾಗಿರುತ್ತಾರೆ. ರಾಜಕೀಯಗಳಿಗೆ ಸಂಬಂಧವಾದ ವಿದ್ಯಾ ಸಂಬಂಧವಾದ ಮತ್ತು ಸುಧಾರಣೆ ಸಂಬಂಧವಾದ ಸರ್ವಕಾರ್ಯಗಳಲ್ಲಿಯೂ ವಕೀಲರ ಚಟುವಟಿಕೆ ವಿಶೇಷವಾಗಿ ಕಾಣುವುದು. ಕೆಲವರು ವಿಶೇಷ ಹಣ ಸಂಪಾದಿಸುತ್ತಾರೆ. ಬಹುಮಂದಿಗೆ ಜೀವನಕ್ಕೆ ಸಾಕಷ್ಟು ಸಿಕ್ಕುವುದು ಪ್ರಯಾಸವು. ಸರ್ವರ ಉದ್ದೇಶವು ಹಣ ಸಂಪಾದನೆ ಮಾಡುವುದೇ ಆಗಿರುವುದರಿಂದ ಯಾವುದಾದರೂ ಲೋಕೋಪಕಾರದ ಕಾರ್ಯ ಮಾಡುವುದಾದರೆ ಪೂರ್ಣ ಮನಸ್ಸು ಕೊಟ್ಟು ಮಾಡುವುದಿಲ್ಲ. ಕೀರ್ತಿ ಸಿಕ್ಕಬೇಕೆಂಬ ಆಶೆಯಿಂದ ಅಥವಾ ಕುಶಾಲಿನ ಬಗ್ಗೆ ಮಾತ್ರ ಮಾಡುತ್ತಾರೆ. ಕಾರ್ಯಗಳಲ್ಲಿ ಶ್ರದ್ಧೆಯೂ ಅಸ್ವಾರ್ಥದ ಸಾಧನೆಯೂ ಇಲ್ಲದರಿಂದ ಲೋಕೋಪಕಾರದ ಯಾವ ಸಂಸ್ಥೆ ನಿರ್ಮಿಸಿದರೂ ಅದು ಪ್ರಬಲವಾಗಿ ಬೆಳೆಯುವುದಿಲ್ಲ. ಒಂದು ಸಂಸ್ಥೆ ಇದ್ದರೆ ಕಾರ್ಯಗಳಲ್ಲಿ ಮುಖ್ಯ ಮನುಷ್ಯನೊಡನೆ ಇತರರು ಸಹಭಾಗಿಗಳಾಗಿ ಕೂಡುವುದೂ, ಅಥವ ಆತನ ಒಳಗಾಗಿ ವಿಧೇಯತ್ವದಿಂದ ಕಾರ್ಯ ನಿರ್ವಹಿಸುವುದೂ ನಮ್ಮ ಜನರ ಸ್ವಭಾವದಲ್ಲೇ

ಇಲ್ಲ. ಪ್ರತಿ ಒಬ್ಬನೂ ತಾನು ಮುಖ್ಯ ಮನುಷ್ಯನಾಗಬೇಕೆಂತ ಬಯಸುತ್ತಾನೆ. ಆದುದರಿಂದ ನಮ್ಮ ದೇಶದಲ್ಲಿ ಲೋಕೋಪಕಾರದ ಸಂಸ್ಥೆ ಇಷ್ಟರೂ ಪ್ರಬಲವಾಗಿ ಬೆಳೆಯದು. ರಜಾ ಕಾಲದಲ್ಲಿ ವಕೀಲರು ಸ್ವಲ್ಪ ಚಟುವಟಿಗೆ ತೋರಿಸುವುದುಂಟು. ರಜೆ ಮುಗಿಯುತ್ತಲೆ ಹಣ ಸಂಪಾದನೆಯ ಸಾಧನೆ ಪುನಃ ಶುರುವಾಗುತ್ತದೆ. ತನ್ನ ಜನ್ಮದ ಉದ್ದೇಶವೇನು, ಯಾವ ಉತ್ತಮ ಲಕ್ಷಣಗಳನ್ನು ತಾನು ತನ್ನಲ್ಲಿ ವೃದ್ಧಿಸಬೇಕು, ತನ್ನ ಆರೋಗ್ಯದ ಸ್ಥಿತಿ ಹೇಗುಂಟು ಎಂಬ ಯಾವ ಚಿಂತನೆಯೂ ಇಲ್ಲದೆ ದಿವಾರಾತ್ರಿ ಹಣ ಸಂಪಾದನೆ ಕಾರ್ಯಗಳಲ್ಲೇ ಪ್ರವೃತ್ತರಾಗಿ ಸರಕಾರದ ನೌಕರರಂತೆ ೫೦ ವರುಷ ವಯಸ್ಸಾಗುವ ಮೊದಲೆ ಮುದುಕರಾಗಿ ತೋರುತ್ತಾರೆ; ಯಾವುದಾದರೂ ವ್ಯಾಧಿ ಹಿಡಿದು ಸಾಯುತ್ತಾರೆ. ಎಷ್ಟು ಹಣ ಸಂಪಾದಿಸಿದರೂ ಒಬ್ಬ ಹಿಂದು ಗೃಹಸ್ಥನಿಗೆ ಸುಖ ಜೀವನವೆಂಬುದು ಸಿಕ್ಕುವುದಿಲ್ಲ. ಶರೀರದಲ್ಲಿ ಆರೋಗ್ಯವಿಲ್ಲದಿದ್ದರೆ, ಅಂತರ್ಯದಲ್ಲಿ ಶಾಂತಿ ಇಲ್ಲದಿದ್ದರೆ, ಪರೋಪಕಾರ ಮತ್ತು ದೇಶಸೇವೆ ಮೊದಲಾದ ಉತ್ತಮ ಉದ್ದೇಶಗಳಕಡೆಗೆ ಮನಸ್ಸಿಗೆ ಆಕರ್ಷಣೆ ಇಲ್ಲದಿದ್ದರೆ, ಅಂಥವನಿಗೆ ಜೀವನದಲ್ಲಿ ಸುಖವೆಂಬುದು ಎಲ್ಲಿ? ಬಹುಮಂದಿ ವೃತ್ತಿಬಿಟ್ಟರೆ ಸಾಯುವೆವು ಎಂದು ಭಾವಿಸಿ ವೃತ್ತಿಯ ಕಾರ್ಯಗಳನ್ನು ಮಾಡುತ್ತಾ ನಡೆಸುತ್ತಾ ವೃತ್ತಿಯ ಕ್ರಮದಿಂದಲೇ ಸಾಯುತ್ತಾರೆ ಎಂಬದಾಗಿ ಮಾಡರ್ನರಿವ್ಯೂ ಎಂಬ ಮಾಸೀಕ ಗ್ರಂಥದಲ್ಲಿ ಪಂಡಿತ ಲಾಲಾ ವೈಜ್ಯನಾಥ ಎಂಬವರು ಬರದಿರುವರು.

ಪತ್ರವ್ಯವಹಾರ.

ಪರೀಕ್ಷೆಗೆ ಬರುವವರಿಗೆ.

ಬರುವ ಏಪ್ರಿಲ್ ತಿಂಗಳಲ್ಲಿ ಜರುಗುವ ಲೋವರ್‌ಸೆಕೆಂಡರೀ ಪರೀಕ್ಷೆಗೆ ಕಡೂರು ಸೆಂಟರಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೂ, ಅ. ಮಾಸ್ಟರುಗಳಿಗೂ, ಮತ್ತು ವೀರಶೈವರಲ್ಲಿ ಭೋಜನ ಮಾಡತಕ್ಕ ಇತರ ಮತಸ್ಥರಿಗೂ ಸಹ ಕಡೂರಿನ ಶ್ರೀ|| ವೀರಭದ್ರದೇವರ ದೇವಸ್ಥಾನದ ಹಿಂಭಾಗದಲ್ಲಿ ಭೋಜನದ ಏರ್ಪಾಡನ್ನು ಡಿಸ್ಟ್ರಿಕ್ಟ್ ಬೋರ್ಡು ಮತ್ತು ಎಕನಾಮಿಕ್ ಕಾನ್ಫರೆನ್ಸು ಮೆಂಬರರಾದ ಬೀರೂರಿನ ಮ|| ರ್ಜ. ಯಂ. ಶಿವಲಿಂಗಪ್ಪಯ್ಯನವರು ಮಾಡಿರುತ್ತಾರಾದ್ದರಿಂದ ಅಲ್ಲಿಗೆ ಬರತಕ್ಕವರು ಮುಂಚಿತವಾಗಿಯೇ ಅವರಿಗೆ ತಿಳಿಸಬೇಕೆಂತ ಕೋರುತ್ತಾರೆ.

ವಿಪನ್ನರಿಗೆ ಸಹಾಯ.

ನಮ್ಮ ಊರ ಇನಾಮದಾರ ಶ್ರೀಮಂತ ಅಣ್ಣಾ ಸಾ|| ಮತ್ತು ಶ್ರೀಮಂತ ಝುಂಗ್ರಾಬಾಯಿ ಸಾ|| ಜಹಗೀರದಾರ ಗಂಜೀಹಾಳ ಇವರ ಗ್ರಾಮದಲ್ಲಿ ಮಲಪ್ರಭಾನದಿಯ ಮಹಾಪೂರದಿಂದ ಎಷ್ಟೋ ಹೊಲೆಯ, ಮಾದಿಗ, ಕಂಬಾರ, ನೇಕಾರ, ಕೊರವ ಮೊದಲಾದ ಬಡಜನರ ಮನೆಗಳು ಸಮೂಲ ನಾಶವಾದವು. ಇದನ್ನು ನೋಡಿ ಉಭಯ ಇನಾಮದಾರರೂ ಉದಾರಮನಸ್ಸಿನಿಂದ ರಾವಸಾ|| ಮಾಮಲೇದಾರ ತಾ|| ಹುನಗುಂದ ಇವರ ಯೋಗ್ಯಹೇಳಿಕೆಯ ಪ್ರಕಾರ ಸರಕಾರೀ ಖಾಲಸಾಗ್ರಾಮದಲ್ಲಿ ಸರಕಾರದವರು ನದಿಯಿಂದ ಹಾಳಾದ ಮನೆಗಳ ಬಡಜನರಿಗೆ ಮದ್ದತಮಾಡಿದಂತೆ ಸದರ ಉಭಯ ಜಹಗೀರದಾರರೂ ತಮ್ಮ ಸ್ವಂತ ಎಷ್ಟೋ ಮನೆಗಳು ಬಂಗ್ಲೇ ವಸ್ತೈರೆ ಮಹಾಪೂರದಿಂದ ಬಿದ್ದು ಲುಕಸಾನವಾದುದನ್ನೂ ಲಕ್ಷಿಸದೆ ಮೇಲೆ ಬರೆದ ಬಡಜನರಿಗೆ ಈ ಕಾಲಕ್ಕೆ ಮನೆಮಾರು ಕಟ್ಟಿಕೊಳ್ಳುವ ಬಗ್ಗೆ ಯೋಗ್ಯ ಸಹಾಯ ಮಾಡಿದರು. ಈ ಸತ್ಕಾರ್ಯದ ಬಗ್ಗೆ ದೇವರು ಅವರಿಗೆ ಸರ್ವದಾ ಕಲ್ಯಾಣಮಾಡಲೆಂದು ಇಚ್ಛಿಸುತ್ತೇನೆ. ಪ್ರ. ದ

ಶ್ರೀ ವೀರಶೈವ ಮತಸಂವರ್ಧಿನೀಸಭಾ ; ಮುಂಡುಗತೊರೆ.

ಬರುವ ರಾಕ್ಷಸನಾಮಸಂವತ್ಸರದ ಮಾಘಮಾಸದಲ್ಲಿ ನಡೆಯುವ ವಾರ್ಷಿಕಸಭೆಯಲ್ಲಿ ಪಂಚಸೂತಕ, ಪಂಚಾಚಾರ, ಕ್ರಿಯಾಜ್ಞಾನೋಭಯಾವಶ್ಯಕತೆ, ಅಪ್ರಾಕೃತ ವರ್ಣಾಶ್ರಮವಿಚಾರ—ಈ ವಿಷಯವಾಗಿ ಪ್ರಬಲವಾದ ಉಪನ್ಯಾಸಗಳು ಬೇಕಾಗಿರುವುದರಿಂದ ಸಂಸ್ಕೃತಭಾಷಾಪಂಡಿತರಾಗಿಯೂ, ಮತಸಿದ್ಧಾಂತ ಪ್ರವೀಣರಾಗಿಯೂ ಇರುವ ಮತಾಭಿಮಾನಿಗಳು ಪೂರ್ವೋಕ್ತ ವಿಷಯಗಳೊಡನೆ ತಾವು ಆರಿಸಿಕೊಂಡ ಭಾಗಕ್ಕೆ ವೀರಶೈವಮತ ಸಿದ್ಧಾಂತಕ್ಕನುಗುಣವಾಗಿಯೂ, ಗೌರವಾವಹವಾಗಿಯೂ ಇರುವಂತೆ ಯುಕ್ತಿ ಪ್ರಮಾಣಗಳೊಡನೆ ಸಮರ್ಥನಮಾಡಿ, ತಮ್ಮ ಹೆಸರು ವಾಸಸ್ಥಳ ಮೊದಲಾದುವುಗಳನ್ನು ವಿಶದವಾಗಿ ತಿಳಿಸಿ ಕೊಳ್ಳೇಗಾಲದಲ್ಲಿರುವ ವರ್ಕಿಂಗ್ ಕಮಿಟಿ ಅಧ್ಯಕ್ಷರಾದ ಶ್ರೀಯುತ ಜಿ. ಪಿ. ಮಲ್ಲಪ್ಪನವರ ಹೆಸರಿಗೆ ಪುಷ್ಯಶುಕ್ಲ ಪೌರ್ಣಿಮಾಸಿಯೊಳಗಾಗಿ ಕಳಿಸಿಕೊಡಬೇಕು. ಪಂಚಸೂತಕ ವಿಷಯಕವಾದ ಉಪನ್ಯಾಸದ ಉತ್ತಮತರಗತಿಗೆ ೩೦ ರೂಪಾಯಿಗಳೂ, ಪಂಚಾಚಾರ ವಿಷಯಕವಾದ ಉಪನ್ಯಾಸದ ಉತ್ತಮತರಗತಿಗೆ ೧೫ ರೂಪಾಯಿಗಳೂ, ಕ್ರಿಯಾಜ್ಞಾನೋಭಯಾವಶ್ಯಕತಾವಿಷಯಕವಾದ ಉಪನ್ಯಾಸದ ಉತ್ತಮ ತರಗತಿಗೆ ೨೦ ರೂಪಾಯಿಗಳೂ, ವರ್ಣಾಶ್ರಮ ವಿಚಾರೋಪನ್ಯಾಸದ ಉತ್ತಮ ತರಗತಿಗೆ ೧೫ ರೂಪಾಯಿಗಳೂ ಬಹುಮಾನದ್ರವ್ಯವಾಗಿ ಕೊಡುವಂತೆ ನಿರ್ಧರಿಸಲ್ಪಟ್ಟಿದೆ. ಉಳಿದ ಉಪನ್ಯಾಸಗಳಿಗೆ ಉಚಿತವರಿತು ಬಹುಮಾನಗಳು ಕೊಡಲ್ಪಡುತ್ತವೆ.

ಬರುವ ಏಪ್ರಿಲ್ ತಿಂಗಳಲ್ಲಿ ನಡೆಯುವ ಗೌರ್ನಮೆಂಟು ಲೋವರ್‌ಸೆಕೆಂಡರಿ ಪರೀಕ್ಷೆಗಾಗಿ ಮೈಸೂರಿಗೆ ಬರುವ ವೀರಶೈವಮತದ ವಿದ್ಯಾರ್ಥಿಗಳಿಗೆ ಮೈಸೂರು ಹಳೇಅಗ್ರಹಾರದಲ್ಲಿರುವ ಬಾರ್‌ಕಚೇರಿ ಲೇಟ್‌ಭಕ್ಷಿ ಚನ್ನಬಸಪ್ಪನವರ ಮಕ್ಕಳು ಶ್ರೀಯುತ ಸೋಮಶೇಖರಪ್ಪನವರು ಸಭೆಗೆ ಬರೆದುಕೊಂಡ ವಿಜ್ಞಾಪನಾನುಸಾರವಾಗಿ ಪರೀಕ್ಷೆ ಮುಗಿಯುವತನಕ ಉಚಿತವಾಗಿ ವಾಸಸ್ಥಳವನ್ನು ಕೊಟ್ಟು ಭೋಜನಮಾಡಿಸುತ್ತಾರೆ. ಸೋಸಲೆ ಮ|| ರಾ|| ನಾಗಲಿಂಗಪ್ಪನವರು ಮಧ್ಯಾಹ್ನಾತ್ಪರ ಫಲಾಹಾರಕ್ಕೆ ಅನುಕೂಲಪಡಿಸುತ್ತಾರೆ. ಇವರಿಗೆ ವಿದ್ಯಾರ್ಥಿಗಳು ಮುಂಚಿತವಾಗಿ ತಿಳಿಸಿಕೊಳ್ಳಬೇಕು.

ಪಗಡವಿನ್ನಿ ವೇ|| ಚಂದ್ರಶೇಖರಶಾಸ್ತ್ರಿಗಳ ಉಪನ್ಯಾಸಕ್ಕೆ ಬಹುಮಾನರೂಪವಾಗಿ ಸಭೆಯಿಂದ ಕಳಿಸಲ್ಪಟ್ಟ ೬ ರೂಪಾಯಿಗಳೂ, ಕೊಡಗು ಜಿಲ್ಲಾ ಮ|| ಸೋಮಪ್ಪನವರ ಉಪನ್ಯಾಸಕ್ಕಾಗಿ ಬಹುಮಾನರೂಪವಾಗಿ ಕಳಿಸಲ್ಪಟ್ಟ ಎರಡು ರೂಪಾಯಿಗಳೂ ವಾಪಸು ಬಂದವು. ಅವರಿಬ್ಬರಿಗೆ ಕಳಿಸಲ್ಪಟ್ಟಿದ್ದ ಬಹುಮಾನದ ಪುಸ್ತಕಗಳು ವಾಪಸು ಬಾರಲಿಲ್ಲ. ಈಗಲೂ ಅವರುಗಳು ತಮ್ಮಗಳ ಸರಿಯಾದ ಅಡ್ರೆಸ್ಸನ್ನು ಕೋಶಾಧ್ಯಕ್ಷರಿಗೆ ತಿಳಿಸಿ, ಮೊಬಲಗನ್ನು ತರಿಸಿಕೊಳ್ಳಬಹುದು.

ಪಿ. ಆರ್. ಕರಿಬಸವಶಾಸ್ತ್ರಿ,
ಆಜೀವಸಭಾಧ್ಯಕ್ಷ.

ಭೂಕೈಲಾಸ ಶ್ರೀ ಕಾಶೀ ಕ್ಷೇತ್ರದಲ್ಲಿ ಜರುಗಿದ ಮಹಾಶಿವರಾತ್ರಿಯ ಸಮಾರಂಭವು.

ಮಹಾಶಿವರಾತ್ರಿಯ ಸಮಾರಂಭದ ವಿಷಯವಾಗಿ ನಮ್ಮಿಂದ ಪ್ರಕಟಿತವಾದ ಲೇಖನವು ಸರ್ವರಿಗೂ ವಿದಿತವಾದದ್ದಷ್ಟೇ. ಅದರಂತೆಯೇ ಶುಕ್ರವಾರ ಪ್ರಾತಃಕಾಲದಲ್ಲಿ ನಮ್ಮ ಸಂಸ್ಥಾನದ ವಿದ್ವನ್ಮಂಡಲಿಯವರು ಗಂಗಾಸ್ನಾನಾದಿ ತಮ್ಮ ನಿತ್ಯಕರ್ಮಗಳನ್ನು ತೀರಿಸಿಕೊಂಡು ಶುಚಿರ್ಭೂತರಾಗಿ ಕೈಲಾಸ ಮಂಟಪದಲ್ಲಿ ಶ್ರೀಮಜ್ಜಗದ್ಗುರು ವಿಶ್ವಾರಾಧ್ಯರ ರುದ್ರಾಭಿಷೇಕವನ್ನು ವಿಧ್ಯುಕ್ತವಾಗಿ ಪ್ರಾರಂಭಿಸಲು, ಆ ಕಾಲದಲ್ಲಿ ಯಾತ್ರಾರ್ಥಿಗಳಾಗಿ ಬಂದ ತಮ್ಮ ಶಿಷ್ಯ ಸಮೂಹದಿಂದಲೂ ಪುರದ ಆಬಾಲವೃದ್ಧರಿಂದಲೂ ಕೈಲಾಸಮಂಟಪವು ಬಹು ರಮಣೀಯವಾಗಿತ್ತು. ಅಷ್ಟರಲ್ಲಿ ಶ್ರೀ ಜಗದಾಚಾರ್ಯರ ಪೂಜೆಯನ್ನು ತೀರಿಸಿಕೊಂಡು ಛತ್ರ ಚಾಮರಾದ್ಯನೇಕ ಬಿರುದಾವಳಿಗಳೊಡನೆ ಶ್ರೀ ವಿಶ್ವಾರಾಧ್ಯರ ಉತ್ಸವಕ್ಕೆ ೧೦೮ ಶ್ರೀಮಜ್ಜಗದ್ಗುರು ಶ್ರೀ ಶಿವಲಿಂಗ ಶಿವಾಚಾರ್ಯರು ಆಂದೋಲನವನ್ನಾರೋಹಣ ಮಾಡುವುದಕ್ಕಾಗಿ ಶೃಂಗರಿಸಿದ ಮಹಾ ದ್ವಾರದಲ್ಲಿ ಹೊರಡಲು, ಸೊಲ್ಲಾಪುರದ ಶ್ರೀಮಂತ ರಾಮಪ್ಪಣ್ಣ ಭೋಗಡೆ ಎಂಬವರು ಶ್ರೀ ಉತ್ಸವದ ಭಾವಚಿತ್ರವನ್ನು ತೆಗೆಸಿಕೊಂಡ ನಂತರ ರಂಭಾಸ್ತಂಭಗಳಿಂದಲಂಕರಿಸಲ್ಪಟ್ಟ ರಾಜವೀಧಿಯಲ್ಲಿ ಬ್ಯಾಂಡ ಮೊದಲಾದ ಅನೇಕ ವಾದ್ಯಧ್ವನಿಗಳಿಂದಲೂ ವೇದ ಘೋಷಗಳಿಂದಲೂ ಉತ್ಸವವು ಹೊರಡಲು, ಪುರದ ಸ್ತ್ರೀ ಪುರುಷರು ಅಲ್ಲಲ್ಲಿಗೆ ಮಲ್ಲಿಗೆಯ ಪುಷ್ಪಗಳನ್ನೂ ಬತ್ತದ ಲಾಜಗಳನ್ನೂ ಸುರಿಸುತ್ತಿದ್ದರು. ಉತ್ಸವವು ಮಧ್ಯ ಮಾರ್ಗಕ್ಕೆ ಬರಲು ಆಂಗ್ಲೇಯ ಚಿತ್ರಕಲಾಕೋವಿದರು ಅತ್ಯಂತ ಸಂತೋಷದಿಂದ ಭಾವಚಿತ್ರವನ್ನು ತೆಗೆದುಕೊಂಡರು. ಹೀಗೆ ಶ್ರೀ ವಿಶ್ವನಾಥ ದೇವಾಲಯದ ಮಾರ್ಗದಿಂದ ಹೊರಟು ೧೦ ಘಂಟೆಗೆ ಸರಿಯಾಗಿ ಶ್ರೀ ಗಂಗಾನದಿಯನ್ನು ಸೇರಿ, ಅಲ್ಲಿ ಮಾಡತಕ್ಕ ಕರ್ಮಾದಿಗಳನ್ನು ನೆರವೇರಿಸಿಕೊಂಡು, ಮಧ್ಯಾಹ್ನದ ೨ ಘಂಟೆಗೆ ಮಹಾ ಸಂಸ್ಥಾನವನ್ನು ಪ್ರವೇಶಿಸಿತು. ಪುನಃ ೪ ಘಂಟೆಗೆ ಶಿವಪೂಜಾ ಪ್ರಾರಂಭವಾಗಿ ರಾತ್ರಿ ೧೦ ಘಂಟೆಗೆ ಒಳ್ಳೇ ವೈಭವದಿಂದ ಪೂಜಾಕಾರ್ಯಗಳನ್ನು ತೀರಿಸಿಕೊಂಡ ನಂತರ ನಮ್ಮ ಸಂಸ್ಥಾನದಿಂದ ಶಿಷ್ಯಮಂಡಳಿಗೆಲ್ಲ ಫಲಾಹಾರವು ಮಾಡಿಸಲ್ಪಟ್ಟಿತು. ಬಳಿಕ ಶ್ರೀ ಸನ್ನಿಧಿಯ ಸಮ್ಮುಖವಾಗಿ ಹಿಂದುಸ್ಥಾನಿ ಮಹಾರಾಷ್ಟ್ರ-ಕರ್ನಾಟಕ-ಭಾಷೆಗಳಿಂದ ಸೂರ್ಯೋದಯವಾಗುವ ವರೆಗೂ ಶಿವಕೀರ್ತನ ಶಿವಭಜನೆಗಳು ನಡೆಯಿಸಲ್ಪಟ್ಟವು. ಮರುದಿವಸ ಎಲ್ಲರೂ ತಮ್ಮ ನಿತ್ಯಕರ್ಮಗಳನ್ನು ತೀರಿಸಿಕೊಂಡು ಶ್ರೀ ಸನ್ನಿಧಿಯ ಅಪ್ಪಣೆಯ ಮೇರೆಗೆ ನೆರೆದಿದ್ದ ಸರ್ವ ಶಿಷ್ಯವರ್ಗದವರು ಮಠದಲ್ಲಿಯೇ ಭೋಜನವನ್ನು ತೀರಿಸಿಕೊಂಡರು. ಮೂರನೇ ದಿನ ರವಿವಾರ ಶ್ರೀ ಜಗದ್ಗುರುಗಳ ಅಧ್ಯಕ್ಷತೆಯ ಕೆಳಗೆ ಸಭೆಯಲ್ಲಿ ನಾನಾ ಭಾಷೆಗಳನ್ನು ಬಲ್ಲ ಸ್ತ್ರೀ ಪುರುಷರು ೧ ಸಹಸ್ರದವರೆಗೆ ಕೂಡಿದ್ದರು. ಆ ಸಭೆಯಲ್ಲಿ ಶಾಸ್ತ್ರಾರ್ಥಪರೀಕ್ಷೆಗಳಲ್ಲಿ ಉತ್ತೀರ್ಣರಾದವರು ಶ್ರೀ ಸನ್ನಿಧಿಯ ಬಹುಮಾನಕ್ಕೆ ಪಾತ್ರರಾದರು. ತದನಂತರ ಸರ್ವಾಧಿಕಾರಿ ಪಂಡಿತ ಫಾಲಾಕ್ಷಶಾಸ್ತ್ರಿಗಳೇ ಮೊದಲಾದ ವಕ್ತೃತ್ವಕಲೆಯುಳ್ಳ ವಿದ್ವಾಂಸರಿಂದ ಧರ್ಮ-ಧರ್ಮೋನ್ನತಿಗಳ ವಿಷಯಕವಾಗಿ ಸಂಸ್ಕೃತ-ಮಹಾರಾಷ್ಟ್ರ-ಕರ್ನಾಟಕ-ಹಿಂದುಸ್ಥಾನಿ-ಮುಂತಾದ ಬಾಷೆಗಳಿಂದ ಸುಶ್ರಾವ್ಯವಾಗಿ ಭಾಷಣಗಳು ಮಾಡಲ್ಪಟ್ಟ ನಂತರ ನಮ್ಮ ಮಠದಲ್ಲಿ ಸ್ಥಾಪಿತವಾದ 'ವಿದ್ಯಾಧರ್ಮಾಭಿವೃದ್ಧಿ' ಫಂಡಿಗೆ ವಿದ್ಯಾಭಿಮಾನಿಗಳಾದ ರಾ||ರಾ|| ವಿಶ್ವನಾಥಶೇಟ. ವ ಲಕ್ಷ್ಮಣಶೇಟ. ತಾ|| ಪೇಠ ಜಿ|| ನಾಸಿಕ ರಾ||ರಾ|| ಮಹಾರುದ್ರಪ್ಪ ವೀರಭದ್ರಪ್ಪಶೆಟ್ಟರ ಅಥಣಿ ರಾ||ರಾ|| ಚೆನ್ನಬಸಪ್ಪ ಮಹಾಲಿಂಗಪ್ಪ ಹಂಜಿ ಅಥಣಿ ರಾ|| ವೀರಪ್ಪ-ಅಯ್ಯಪ್ಪವಾಲಿ ಸಾ|| ಎಡೂರ ಜಿ|| ಬೆಳಗಾಂವ. ರಾ|| ಅಣ್ಣಪ್ಪ ಗುರುಸಿದ್ದಪ್ಪ ಪುರಾಣಿ ಎಡೂರ. ರಾ|| ನಾಗಪ್ಪ ಹಂಪಣ್ಣ. ಎಲಿಹಳ್ಳಿ. ಮು|| ನಾರಾಯಣಪೇಠಜಿ|| ವೈಬುಗನಗರ ರಾ|| ಸಿದ್ದಪ್ಪ ರಾಘವಪ್ಪ ನಾಗಪೂರ ಇವರುಗಳು ತಮ್ಮ ಶಕ್ತ್ಯನುಸರವಾಗಿ ವರ್ಷಾಶನವನ್ನು ಕೊಡಲೊಪ್ಪಿದರು. ಮತ್ತು ರಾ|| ರಾಜಪ್ಪಫಾನಸೆ ಮು|| ಮಹಲಿಂಗಪೂರ. ಶ್ರೀ. ಶಿವಬಸವಸ್ವಾಮಿಗಳು ಬನ್ನೂರಮಠ ಮಹಲಿಂಗಪೂರ. ಶ್ರೀಮತೀ ತಂಗೆವ್ವ ಸುಣ್ಣದಹಳ್ಳಿ, ಶ್ರೀಮತೀ ಲಿಂಬವ್ವ ಮಹಾಲಿಂಗಪುರ ಶ್ರೀಮತೀ ಮುಂಗೆವ್ವ ಮಹಾಲಿಂಗಪುರ. ಶ್ರೀಮತೀ ತಾಯಮ್ಮ ಮಹಾಲಿಂಗಪುರ ಶ್ರೀಮತೀ ಬಸವಲಿಂಗಮ್ಮ ಶಿರಗುಪ್ಪಿ ಇಂತಿಷ್ಟು ಜನರು ತಮ್ಮ ಉದಾರ ಮನಸ್ಸಿನಿಂದ ಶಕ್ತ್ಯನುಸಾರವಾಗಿ ಧನಸಹಾಯವನ್ನು ಮಾಡಿದರು. ಆಮೇಲೆ ಶ್ರೀಗಳವರ ಅಪ್ಪಣೆಯ ಮೇರೆಗೆ ತಾಂಬೂಲಾದಿಗಳು ಹಂಚಲ್ಪಟ್ಟು ಶ್ರೀ ವಿಶ್ವಾರಾಧ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಒಬ್ಬ ಉತ್ಸವಭಾಗಿ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕಾರ್ಯ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿ ಕೊಡುತ್ತೇವೆ.

ಚೆನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೪—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೦—೦ ರೂ. ಕೊಡಬೇಕಾಗುವುದು ಕೆಂಪು, ಹಸರು, ನೀಲಿ, ಬ್ರೌಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರದ ಬಣ್ಣದಿಂದ ಬಿಳಿ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೧—೧೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೦—೦; ಹಳದೀ ಗ್ಲೇಜ್ ಕಾಗದದಮೇಲೆ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦-೬-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಕಾರ್ಯಪ್ರೆಸ್, ಮೈಸೂರು.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದಪಠಗಳು

76

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಠಗಳೂ, ವಿವಿಧ ಕದನಗಳ ಪಠಗಳೂ ಯುದ್ಧದ ಹಡಗುಗಳ ಪಠಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಠಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಠಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಠಗಳು. ಕ್ರಯ ೨ ಆಣೆ; ವಿ. ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ:—ದಿ ಜನರಲ್ ಏಜನ್ಸಿ. ಮೈಸೂರು.

ತಿರಸಂಗೀಕರ ಸ್ಮಾರಕ.

ಕನ್ನಡ ಒಕ್ಕಲತನದ ಶಾಲೆ ದೇವೀಹೊಸೂರ.

ಈ ಶಾಲೆಯು ಧಾರವಾಡ ಜಿಲ್ಹೆಯಲ್ಲಿರುವ ಹಾವೇರಿ ಸ್ಟೇಶನ್ನದಿಂದ ೫ ಮೈಲು ದೂರವಿರುವ ದೇವೀಹೊಸೂರ ಎಂಬಲ್ಲಿ ಸ್ಥಾಪಿತವಾಗಿದ್ದು ಅದರ ಹೊಸಕ್ಲಾಸುಗಳು ಇದೇ ಮೇ ತಿಂಗಳು ೨೪ ನೇ ತಾರೀಖಿನಿಂದ ಶುರು ಆಗುವವು. ಇದು ಕೇವಲ ಒಕ್ಕಲಿಗರ ಮಕ್ಕಳ ದೆಸೆಯಿಂದ ಇರುತ್ತದೆ. ಇದರಲ್ಲಿ ಸೇರಲಿಚ್ಛಿಸುವ ವಿದ್ಯಾರ್ಥಿಗಳ ಸಂಬಂಧದ ನಿಯಮಗಳು ಕೆಳಗೆ ಕೊಟ್ಟಂತೆ ಇರುತ್ತವೆ.

(೧) ಹುಡುಗರು ಸ್ವತಃ ಒಕ್ಕಲತನ ಮಾಡುವಂಥ ಒಕ್ಕಲಿಗರ ಮಕ್ಕಳಾಗಿರಬೇಕು. ಮತ್ತು ಆ ಹುಡುಗರು ಸ್ವಲ್ಪ ಮಟ್ಟಿಗಾದರೂ ಒಕ್ಕಲತನದ ಕೆಲಸದಲ್ಲಿ ಮಾಹಿತಿಯುಳ್ಳವರಿರಬೇಕು.

(೨) ಇಲ್ಲಿ ಕಲಿತು ಒಕ್ಕಲತನದ ಉದ್ಯೋಗವನ್ನು ನಡೆಯಿಸಬೇಕೆನ್ನುವವರನ್ನೇ ಈ ಶಾಲೆಯಲ್ಲಿ ತಕ್ಕೊಳ್ಳುವದರಲ್ಲಿ ಬರುವದು. ಸರಕಾರೀ ನೌಕರಿಯನ್ನು ಇಚ್ಛಿಸುವಂಥ ವಿದ್ಯಾರ್ಥಿಗಳು ಇಲ್ಲಿ ಬರಕೂಡದು.

(೩) ಹುಡುಗರು ಕನಿಷ್ಠಪಕ್ಷಕ್ಕೆ ಕನ್ನಡ ೫ನೇ ಇಯತ್ತೆಯಲ್ಲಿಯಾದರೂ ಪಾಸಾಗಿರಲಿಕ್ಕೆ ಬೇಕು. ಮತ್ತು ಅವರು ಯಾವ ಶಾಲೆಯಲ್ಲಿ ಕಲಿತಿರುವರೋ ಆ ಶಾಲೆಯ ಹೆಡ್ಡಮಾಸ್ತರರ ಲೀವ್ಹಿಂಗ ಸರ್ಟಿಫಿಕೇಟನ್ನು ಅರ್ಜಿ ಲಗತ ಕಳುಹಿಸಬೇಕು.

(೪) ಹುಡುಗರ ವಯಸ್ಸು ೧೪ ವರ್ಷದಿಂದ ೧೭ ವರ್ಷದ ಒಳಗಿರಬೇಕು. ಮತ್ತು ವಯಸ್ಸಿನ ದಾಖಲೆ ಅರ್ಜಿ ಲಗತ ಕಳುಹಿಸಬೇಕು.

(೫) ಹುಡುಗರ ಅಭ್ಯಾಸಕ್ರಮವು ಎರಡು ವರ್ಷದ್ದಿರುವದು; ಈ ಶಾಲೆಯಲ್ಲಿ ತೆಗೆದುಕೊಂಡ ಪ್ರತಿಯೊಬ್ಬ ಹುಡುಗನಿಗೆ ಅವನ ಶಾಲೆಯ ಫೀಗೂ ಊಟದ ವೆಚ್ಚಕ್ಕೂ ಸಾಲುವಷ್ಟು ಸ್ಕಾಲರಶಿಪ್ ಕೊಡಲ್ಪಡುವದು.

(೬) ಒಮ್ಮೆ ಶಾಲೆಯಲ್ಲಿ ಸೇರಿದನಂತರ ಶಾಲೆಯ ಅಭ್ಯಾಸ ಕ್ರಮವು ಪೂರ್ಣ ಮುಗಿಯುವವರೆಗೆ ಶಾಲೆಯನ್ನು ಬಿಡಕೂಡದು. ಒಂದು ವೇಳೆ ಮಧ್ಯದಲ್ಲಿ ಬಿಟ್ಟರೆ ಅವರು ಶಾಲೆಯಲ್ಲಿ ಇದ್ದಷ್ಟು ದಿವಸಗಳ ಖರ್ಚನ್ನು ಕೆಳಗೆ ಸಹಿಮಾಡಿದವರು ನಿರ್ಣೈಯಿಸಿದಷ್ಟು ಕೊಡಬೇಕಾಗುವದು.

ಪ್ರತಿವರ್ಷ ೧೫-೨೦ ಹುಡುಗರನ್ನು ತೆಗೆದುಕೊಳ್ಳುವದರಲ್ಲಿ ಬರುವದು. ಬೇರೆ ಶಾಲೆಗಳಂತೆ ಈ ಶಾಲೆಗೂ ಯಾವತ್ತೂ ಸೂಟಿಗಳು ದೊರೆಯುವವು. ಇದಲ್ಲದೆ ವರ್ಷಕ್ಕೆ ಎರಡಾವರ್ತಿ ಒಮ್ಮೆ ದೀಪಾವಳಿ ಸುಮಾರಕ್ಕೆ, ಮತ್ತೊಮ್ಮೆ ಬೇಸಿಗೆ ಸಮಯಕ್ಕೆ ಒಂದೊಂದು ತಿಂಗಳದ ಸತತ ಸೂಟಿಗಳು ಸಿಕ್ಕುವವು. ಇವೆರಡು ಸೂಟಿಗಳಲ್ಲಿ ಮಾತ್ರ ಹುಡುಗರನ್ನು ಮನೆಗೆ ಕಳುಹಿಸುವದರಲ್ಲಿ ಬರುವದು. ಈ ಶಾಲೆಯ ಮುಖ್ಯ ಉದ್ದೇಶವೆಂದರೆ ಒಕ್ಕಲಿಗರ ಮಕ್ಕಳಿಗೆ ಸುಧಾರಿಸಿದ ಪ್ರಕಾರದ ಒಕ್ಕಲತನದ ಶಿಕ್ಷಣವನ್ನು ಕೊಟ್ಟು ಅವರನ್ನು ಅವರ ತಾಯಿತಂದೆಗಳಿಗೆ ಹೆಚ್ಚಿಗೆ ಉಪಯುಕ್ತರನ್ನಾಗಿ ಮಾಡಿಕೊಡುವದು ಅದೆ. ಈ ಶಾಲೆಗೆ ಬರಲಿಚ್ಛಿಸುವವರು ಅರ್ಜಿಯನ್ನು ಇದೇ ಮೇ ತಿಂಗಳ ೧ನೇ ತಾರೀಖಿನ ಒಳಗಾಗಿ ಕೆಳಗೆ ಸಹಿಮಾಡಿದವರ ಕಡೆಗೆ ಕಳುಹಿಸತಕ್ಕದ್ದು.

ಆ ಅರ್ಜಿ ವಿಚಾರಣೆಮಾಡಿ ನಮ್ಮ ಶಾಲೆಯಲ್ಲಿ ತೆಗೆದುಕೊಳ್ಳತಕ್ಕಂಥ ವಿದ್ಯಾರ್ಥಿಗಳಿಗೆ ಪತ್ರದ್ವಾರದಿಂದ ಬರಲಿಕ್ಕೆ ತಿಳಿಸುವೆವು; ಅರ್ಜಿ ನಿಕಾಲಿ ಮಾಡುವ ಕಾಲಕ್ಕೆ ವತನದಾರ ಪಾಟೀಲ ಕುಲಕರ್ಣಿಯವರ ಮಕ್ಕಳಿಗೂ, ಸುಸ್ಥಿತಿಯ ಒಕ್ಕಲಿಗರ ಮಕ್ಕಳಿಗೂ, ಹೆಚ್ಚು ಸವಲತ ಸಿಗುವದು. ಅರ್ಜಿಯಲ್ಲಿ ಹೆಸರು, ತಂದೆಯ ಹೆಸರು, ಅಡ್ಡಹೆಸರು, ಜಾತಿ. ಇರುವ ಊರು, ತಾಲೂಕು, ಜಿಲ್ಲಾ ಖಾತೇದ ಹೊಲವು ಎಷ್ಟು, ಮತ್ತು ಅದು ಎಲ್ಲಿರುವದು ಸರಕಾರಕ್ಕೆ ದರವರ್ಷ ಕೊಡಬೇಕಾದ ತೆರಿಗೆ ತೋಟಪಟ್ಟಿಗಳನ್ನು ಮಾಡಲಿಕ್ಕೆ ನೀರಿನ ಅನುಕೂಲತೆ ಇರುವದೇ ಹ್ಯಾಗೆ? ಮತ್ತು ಹೊಲಗಳನ್ನು ಮನೆಯಿಂದ ಮಾಡುವರೋ ಹ್ಯಾಗೆ? ಮೊದಲಾದ ಮಾಹಿತಿಯನ್ನು ತುಂಬಿ ಆಯಾ ಊರ ಗ್ರಾಮಸ್ಥರ ದಾಖಲೆಯನ್ನು ಲಗತಿಟ್ಟು ಅರ್ಜಿ ಕಳಿಸಬೇಕು; ಮತ್ತು ಅರ್ಜಿಯನ್ನು ಶಾಲೆಗೆ ಬರಲಿಚ್ಛಿಸುವ ವಿದ್ಯಾರ್ಥಿಗಳೇ ಸ್ವಹಸ್ತದಿಂದ ತುಂಬಿ ಕಳಿಸಬೇಕು. ಮೇಲೆ ಹೇಳಿದ ನಿಯಮಗಳಂತೆ ನಡೆಯುಲಿಕ್ಕೆ ಅನುಮತಿಯುಂಟೆಂದು ತಮ್ಮ ಪಾಲಕರ ಕಡೆಯಿಂದ ಒಂದು ಸಹಿನಿಸಿ ದಾಖಲೆ ತಕ್ಕೊಂಡು ಅರ್ಜಿ ಲಗತ ಇಟ್ಟು ಕಳಿಸಬೇಕು.

ಧಾರವಾಡ } ಸಹಿ ಟಿ. ಗಿಲ್ಬರ್ಟ
ತಾ|| ೫-೩-೧೯೧೫ } ಡಿ. ಡಾಯರೆಕ್ಟರ ಶೆತಕೀ ಖಾತೆ,
ದಕ್ಷಿಣಭಾಗ,

ಮನೋಹರವೂ ಮೋಹಕರವೂ ಆದ

ಚಂದ್ರಪ್ರಭಾವತಿ ಹೇರಾಯಿಲ್.

ಮೂರುದಿನಗಳಲ್ಲಿ ಸುವಾಸನೆಯು ಹೋದರೆ 100 ರೂಪಾಯಿಗಳು ಬಹುಮಾನ ಕೊಡುತ್ತೇವೆ.

3

ಈ ತೈಲದ ಸುವಾಸನೆಯು ಮೂರು ದಿನಗಳ ವರಿವಿಗೂ ಹೋಗದೆ ಘಮಘಮಿಸುತ್ತಿರುವದು. ಇದರ ಸುವಾಸನೆಯು ಮೂರುದಿನಗಳಲ್ಲಿ ಹೋದರೆ ೧೦೦ ರೂಪಾಯಿಗಳು ಬಹುಮಾನವಾಗಿ ಕೊಡುತ್ತೇವೆ.

ಕಡಮೆ ತರದ ಹೇರಾಯಿಲ್‌ಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳುಮಾಡಿಕೊಳ್ಳಬೇಡಿರಿ. ಸುಂದರವಾದ ಕೇಶರಾಶಿಯೂ, ಅಂದವಾದ ಕೂದಲುಗಳೂ ಇವೇ ಪ್ರತಿಯೊಬ್ಬ ಸ್ತ್ರೀಪುರುಷರಿಗೂ ಸೌಭಾಗ್ಯವಾದ ಅಲಂಕಾರವಾಗಿದೆ. ಕೂದಲುಗಳು ಸುಂದರವಾಗಿ ಕಾಣಬೇಕಾದರೆ ಅವು ರೇಷ್ಮೆಯಂತೆ ಮೃದುವಾಗಿ ಕಂಗೊಳಿಸುತ್ತಿರಬೇಕು. ಇದಲ್ಲದೆ ತುರುಬನ್ನು ಯಾವ ರೀತಿಯಿಂದಲಾದರೂ ಕಟ್ಟುವಂತೆ ನಯವಾಗಿರಬೇಕು.

ಈ ತೈಲವನ್ನು ಉಪಯೋಗಿಸುತ್ತಲೆ ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವುದು. ನಿದ್ರಾಭಂಗವನ್ನು ಪರಿಹರಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಕೂದಲುಗಳಿಗೆ ಈ ತೈಲವನ್ನು ಸವರುವದರಿಂದ ಎಂದಿಗೂ ಬಿದ್ದುಹೋಗಲಾರವು. ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವುವು. ಇದರ ಸುಗಂಧವಾದರೋ ಮನೋಹರವೂ ಮೋಹಕರವೂ ಆಗಿ ಮನಸ್ಸನ್ನು ಉಲ್ಲಾಸಪಡಿಸುತ್ತದೆ. ಈ ಚಂದ್ರಪ್ರಭಾವತಿ ಹೇರಾಯಿಲನ್ನು ಉಪಯೋಗಿಸುತ್ತಲೇ ಮೆದುಳಿಗೆ ಬಲವನ್ನು ಕೊಡುವದು. ಕೂದಲನ್ನು ಕೆಂಚಾಗಡದೆ ಕಪ್ಪು ಬಣ್ಣದಿಂದೊಡಗೂಡಿಸಿ ಗುಂಗುರು ಗುಂಗುರಾಗಿ ಬೆಳೆಯಿಸುವುದು. ಕಣ್ಣಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವದು. ಈ ತೈಲವನ್ನು ತಲೆಗೆ ಸವರುವದರಿಂದ ತಲೇನೋವನ್ನು ತಕ್ಷಣವೇ ಹೋಗಲಾಡಿಸುವದು. ಮೆದುಳಿಗೆ ತಂಪನ್ನುಂಟುಮಾಡುವುದು. ನಿದ್ರೆಯು ಚೆನ್ನಾಗಿ ಬರುವದು. ಈ ಚಂದ್ರಪ್ರಭಾವತಿ ತೈಲವು ಔಷಧಕ್ಕೆ ಔಷಧವೂ, ಸುಗಂಧ ದ್ರವ್ಯಕ್ಕೆ ಸುಗಂಧದ್ರವ್ಯವೂ ಆಗಿರುವದು. ಈ ತೈಲವು ಸ್ತ್ರೀಪುರುಷರಿಗೆ ಬಹಳ ಉಪಕಾರಿಯಾದದ್ದು. ಒಂದು ಚಂದ್ರಪ್ರಭಾವತಿ ತೈಲದ ಶೀಸೆಯು ಬಹು ದಿನಗಳ ವರಿವಿಗೂ ಬರುವದು.

ಕ್ರಯ ಶೀಸೆ ೧ ಕ್ಕೆ ೧ ರೂಪಾಯಿ. ಟಪಾಲು ಖರ್ಚು ೪ ಆಣೆ.

ನರೆಕೂದಲನ್ನಿಟ್ಟುಕೊಂಡು ಮುದುಕರಾಗಿ ಕಾಣುವುದೇಕೆ?

ದರ್ಬಾರ್ ರಂಗು.

ಒಂದುಸಲ ಹಚ್ಚಿದರೆ ೨೫ ವರುಷದ ಪ್ರಾಯಸಮರ್ಥರಂತೆ ಕಾಣಿಸುತ್ತೀರಿ. ಈ ರಂಗು ಹಚ್ಚಿಕೊಂಡರೆ ಕೂದಲು ಕಪ್ಪಾಗಿ ಹೊಳೆಯುತ್ತೆ. ಈಗ ಮಾರಾಟಕ್ಕೆ ಬಂದಿರುವ ಅಲ್ಪತರದ ಕೂದಲು ರಂಗುಗಳು ತುಂಬಾ ಕೀಳುಜಾತಿಯವು. ಹಚ್ಚಿದಕೂಡಲೇ ಕೂದಲು ಕೆಂಚಾಗಿ ಅಸಹ್ಯವಾಗಿ ಕಾಣುತ್ತದೆ, ನಮ್ಮ ದರ್ಬಾರ್ ರಂಗು ಅಂಥಾದ್ದಲ್ಲ, ಬಹು ಮೇಲಾದದ್ದು, ಒಂದಾವರ್ತಿ ಹಚ್ಚಿದರೆ ಕೂದಲು ಕಪ್ಪಾಗಿ ರೇಷ್ಮೆಯಹಾಗೆ ಕಂಗೊಳಿಸುವುವು.

ಕ್ರಯ ಬುರುಸು ಸಮೇತ ೧—೪—೦ ರೂ.

ಉಪಯೋಗಿಸುವ ವಿಧಾನ ಚಾಟ್ಲಿಯ ಜೊತೆಯಲ್ಲಿರುತ್ತೆ.

ಖೂಬ್—ಸೂರತ್.

ಮುಖಕಾಂತಿ.

ಇದು ಒಂದೇ ೧,೦೦,೦೦೦ ರೂಪಾಯಿಗಳು ಬಾಳುವುದು.

ಅಂದಗೆಡಿಸಿ ಎಲ್ಲರೆದುರಿಗೂ ಮುಖವು ಮುಚ್ಚಿಕೊಳ್ಳುವಂತೆ ಮಾಡುತ್ತಾ ಹೇಗೂ ವಾಸಿಯಾಗದ ಅಸಹ್ಯದ ಗುರುತುಗಳು, ಮಚ್ಚೆಗಳು, ಗಂಧೆಗಳು ಎಂಜಲು ಹುಣ್ಣುಗಳು, ಬೆಬ್ಬು, ಇನ್ನೂ ಇತರ ವಿಧವಾದ ಮಚ್ಚೆಗಳು, ನವೆ ಮುಂತಾದವುಗಳಿಗೆ ಈ ಔಷಧವನ್ನು ೫ ದಿನಗಳು ಹಚ್ಚುವುದರಿಂದ ಗುಣವಾಗಿ ಮುಖಕ್ಕೆ ಕಾಂತಿಯನ್ನು ಕೊಟ್ಟು ಹಸನ್ಮುಖಿಯಾಗಿ ಮಾಡುವುದು

ಕ್ರಯ ಡಬ್ಬಿ ೧ ಕ್ಕೆ ೮ ಆಣೆ.

ವಜ್ರಾಂಗಚೂರ್ಣ—ಧಾತುವು ನೀರಿನಂತಿದ್ದರೂ, ಮೂತ್ರದಲ್ಲಿಯೂ, ನಿದ್ರೆಯಲ್ಲಿಯೂ ಧಾತುವು ಹೋಗುತ್ತಿದ್ದರೂ, ಸೊಂಟದನೋವು, ಮೂತ್ರದಲ್ಲಿ ಉರಿ, ಹಸಿವು ಇಲ್ಲದೆ ಇರುವುದು, ಕೈಕಾಲುಗಳಲ್ಲಿ ನೋವಿದ್ದರೂ, ಶರೀರದಲ್ಲಿ ನಿಶ್ಶಕ್ತಿ ಆಗಿದ್ದರೂ, ತಲೆ ತಿರುಗುವುದು, ನಡೆಯುವಾಗ ಮೇಲುಬ್ಬಸ ಬರುವುದು ಸಹ ಇದನ್ನು ಉಪಯೋಗಿಸಿದರೆ ಇಲ್ಲಿ ಹೇಳುವುದು ನಿಜವೆಂದು ವ್ಯಕ್ತವಾಗುವುದು. ಇದರ ಗುಣಗಳ ಪ್ರಖ್ಯಾತಿಯಿಂದ ಇದರ ಬೆಲೆಯು ೧೦ ರೂಪಾಯಿಗಳು ಇಷ್ಟರೂ ಬಹಳ ಸುಲಭವೆಂದರಿಯಬೇಕು ಈ ಬೆಲೆಯನ್ನು ಇಡುವದರಿಂದ ಬಡವರು ಕೊಳ್ಳಲಾರರು. ಆದ್ದರಿಂದ ಇದರ ಬೆಲೆಯು ಡಬ್ಬಾ ೧ ಕ್ಕೆ ೧೨ ಆಣೆ ಇಟ್ಟಿರುತ್ತೆ.

ಪಂಡಿತ್ ಡಿ. ಎಂ. ರವರ ಭಸ್ಮವು—ಉಷ್ಣದಿಂದ ಮೂತ್ರದಲ್ಲ ಉರಿ, ಮೂತ್ರದಲ್ಲ ರೇವು ಹೋಗುವದು, ಇದು ಹಳೆದಾಗಲಿ ನೂತನವಾಗಲಿ ಆಗಿದ್ದರೂ ೨೪ ಗಂಟೆಯೊಳಗಾಗಿ ನಿವಾರಣೆಯಾಗುತ್ತವೆ.

ಕ್ರಯ ಡಬ್ಬ ೧ ಕ್ಕೆ ೧೨ ಆಣೆ.

ಉಷ್ಣಕಾರಕಕ್ಕೆ ಮಾತ್ರೆಗಳು—ಉಷ್ಣಕಾರಕದಿಂದ ಶರೀರದಲ್ಲಿ ಪಡೆಗಳಿದ್ದರೂ, ಗಾಯಗಳಿದ್ದರೂ, ಈ ದೆಸೆಯಿಂದ ಶರೀರವನ್ನೇ ತ್ಯಜಿಸಲುದ್ಯುಕ್ತವಾದ ರೋಗವಾದರೂ ಸಹ ಈ ಔಷಧವನ್ನು ಸೇವಿಸುವದರಿಂದ ಖಂಡಿತವಾಗಿಯೂ ಗುಣವಾಗುವದು, ಕ್ರಯ ಡಬ್ಬಿ ೧ ಕ್ಕೆ ೧ ರೂ.

ದಿಲ್‌ಖುಷ್ ತೈಲವು—ಅನೇಕರಿಗೆ ಕೂದಲನ್ನು ಬೆಳೆಸುವ ಇಚ್ಛೆಯಿರುವದು. ಈ ತೈಲವನ್ನು ೧೦-೧೫ ದಿನಗಳು ಹಚ್ಚುವದರಿಂದ ಕೂದಲು ಬಹಳವಾಗಿ ಬೆಳೆಯುವವು. ತೈಲವು ಬಹಳ ಸುವಾಸನೆಯಾಗಿರುವುದು. ಮೆದುಳಿಗೆ ತಂಪನ್ನುಂಟುಮಾಡುವದು. ಕ್ರಯ ಶೀಸೆ ೧ ಕ್ಕೆ ೧೨ ಆಣೆ.

ಆಶ್ಚರ್ಯಕರವಾದ ದ್ರಾವಕ—ಇದನ್ನು ಸ್ವಲ್ಪ ಮೂಸಿನೋಡುವದರಿಂದ ಒಂದು ನಿಮಿಷದಲ್ಲಿ ತಲೆನೋವು ನಿಲ್ಲುತ್ತೆ. ಔಷಧವು ಖರ್ಚಾಗದೆ ಹಾಗೆಯೇ ಇರುವದು. ಚೇಳು, ಹಾವು, ಇತ್ಯಾದಿ ವಿಷಜಂತುಗಳ ಕಡಿತಕ್ಕೆ ಹಚ್ಚಿದರೆ ಗುಣಪಡಿಸುತ್ತೆ. ಕ್ರಯ ಶೀಸೆ ೧ ಕ್ಕೆ ೮ ಆಣೆ.

ವೀರ್ಯಸ್ತಂಭಕವೂ, ಕಾಮೋತ್ತೇಜಕವೂ ಆದ ಗುಳಿಗೆ—ತನಗೆ ಅಪೇಕ್ಷೆ ಇರುವಾಗ ಒಂದು ಗುಳಿಗೆಯನ್ನು ತಣ್ಣೀರಿನಲ್ಲಿ ಸೇವಿಸಲು ವೀರ್ಯಸ್ತಂಭನವಾಗುವದು. ಒಂದು ಗಂಟೆಯಕಾಲ ತಡೆದು ಸ್ತ್ರೀಸಂಗಮಾಡಲು ಆನಂದವಾಗುವದು. ಕ್ರಯ ಡಬ್ಬಿ ೧ ಕ್ಕೆ ೮ ಆಣೆ.

ರೋಮನಾಶಿಕ, ವೃಶ್ಚಿಕ ದಂಷ್ಟ್ರ—ಈ ಔಷಧವು ಚೇಳಿನ ಹೊಡತಕ್ಕೂ, ಕೂದಲು ತೆಗಿಯುವದಕ್ಕೂ ಬಹಳ ಅನುಕೂಲವಾಗಿರುವದು. ಇದು ಪ್ರತಿಯೊಬ್ಬರಲ್ಲಿಯೂ ಇರಬೇಕಾದ ಔಷಧವು. ಕ್ರಯ ಶೀಶೆ ೧ ಕ್ಕೆ ೪ ಆಣೆ.

ವಾತನಿವಾರಣ ತೈಲವು—ಎದೆಯಲ್ಲಿಯೂ, ಪಕ್ಕೆಗಳಲ್ಲಿಯೂ, ಸೊಂಟದಲ್ಲಿಯೂ, ಕೈಕಾಲುಗಳಲ್ಲಿಯೂ ನೋವಿದ್ದರೆ ಈ ತೈಲವನ್ನು ಉಪಯೋಗಿಸುವದರಿಂದ ತಕ್ಷಣ ಗುಣವಾಗುವದು. ಕ್ರಯ ಶೀಸೆ ೧ ಕ್ಕೆ ೪ ಆಣೆ.

ಅದ್ಭುತಗೊಂಡ ಮೂಲವ್ಯಾಧಿಔಷಧ	ಶೀಸೆ	೧ ಕ್ಕೆ	೧೨	ಆಣೆ
ಕಣ್ಣಿಗೆ ಸುರ್ಮ	"	"	೪	"
ದಂತ ಚೂರ್ಣ ...	ಡಬ್ಬಿ	"	೪	"
ಕಜ್ಜಿ, ಹುಳುಕಡ್ಡಿ ಔಷಧ ...	"	"	೪	"
ಹೊಟ್ಟೇನೋವಿಗೆ ಔಷಧ ...	ಶೀಸೆ	"	೪	"
ತಲೇನೋವಿಗೆ ತೈಲವು ...	"	"	೪	"
ಕೆಮ್ಮಲು ರೋಗಕ್ಕೆ ಔಷಧವು	ಡಬ್ಬಿ	"	೪	"

ಗಾಯಕ್ಕೆ ಔಷಧ—ಇದನ್ನು ದಿನಕ್ಕೆರಡಾವರ್ತಿಯಂತೆ ೮-೧೦ ದಿನಗಳು ಹಚ್ಚುವದರಿಂದ ಹಳೇ ಮತ್ತು ಹೊಸಗಾಯಗಳು ಗಾಯದಲ್ಲಿ ಉರಿಯುತ್ತಿದ್ದರೂ ಗುಣಪಡಿಸುವದು. ಕ್ರಯ ಡಬ್ಬಿ ೧ ಕ್ಕೆ ೮ ಆಣೆ.

ಅನುಪಾನಪತ್ರಿಕೆಯು ಔಷಧದ ಜೊತೆಯಲ್ಲಿರುವದು.

ಒಂದು ರೂಪಾಯಿಗಿಂತಲೂ ಕಡಮೆಯಾಗಿ ವಿ. ಪಿ ಯಲ್ಲಿ ಕಳುಹಿಸುವದಿಲ್ಲ.

ವಿಳಾಸ:—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
೫, ಅವೆನ್ಯೂ ರೋಡ್ ಬೆಂಗಳೂರು ಸಿಟಿ.

ಓರಿಯಂಟಲ್ ಫಾರ್ಮಸಿ ಮೈಸೂರು.

7

ಪ್ರಸಿದ್ಧ ಗುಣಕಂಡ ಔಷಧಗಳು.

ಜ್ವರನಮಾತ್ರೆ—ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಉಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮಂದಇವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ ರೂ.

ಗೋರೋಚನದಮಾತ್ರೆ—ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೂಡ್ಲೆ ತಪ್ಪಿ ಜೀರ್ಣಶಕ್ತಿಕೊಡುತ್ತೆ. ಪ್ರಯಾಣೀಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾಯು ನೋವು ಉಳುಕು ಊತ ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ ೫ ಡಬ್ಬಿಗೆ ೧ ರೂ. ಕೂಡ್ಲೆ ನಮ್ಮ ಕ್ಯಾಟಲಾಗಿಗೆ ಬರಿಯಿರಿ ಮುಫತ್ತು ಕಳುಹಿಸುತ್ತೇವೆ.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

12

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗಪುಷ್ಟವರು, ರಕ್ತಪುದ್ರೇಕವಾದವರು, ತೃಷೆಪುಷ್ಟವರು, ದಮ್ಮಿನವರು, ಕೆಮ್ಮಿನವರು, ಕಫಉಂಟಾದವರು, ಮೂಲವ್ಯಾಧಿಯುವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. [illegible] ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೆಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೊಳುಸಹಿತ ಆದ ಸಮಾರಂಭ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೊ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ

ಶ್ರೀವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವಿರಶೈವ ಸತ್ಪುರುಷಮಾಲಾ, ಹಾಳಕೇರಿ ಅನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ, ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೊ ಸಿಕ್ಕುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.



ಹೊಸಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಈಪ್ರಕಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ॥।= , ೧, ೧।. ಪ್ರಕಾರ, ಮತ್ತೂ ಬೆಳ್ಳೀದು ರು ೧॥ ರೋಲ್ಡ್ ಗೋಲ್ಡು ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨॥। ರೂ.

ಪರೂರಿಗೆ ಏಜಂಟರು ಬೇಕಾಗಿರುತ್ತಾರೆ ಅರ್ಧಾಣಿ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ.

ನಮ್ಮವಿಳಾಸ— ಗಂಗಪ್ಪಾ ಜೇರಿಗೆ,
ಆರ್ಟಿಸ್ಟ ಸೊಲ್ಲಾಪುರ.

46

ಊದಬತ್ತಿಗಳು.

45

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧-೨-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪರ್ಟಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್ ಸನ್ಸ್
ಸುಗಂಧಕಾರಿ, ಮೈಸೂರು.

ಬಿಸಿಲುಕಾಲಕ್ಕೆ 23

ಎಲ್ಲರಿಗೂಬೇಕು

ಅಮೃತಾಮಲಕತೈಲ:—ವಿಧವಿಧವಾದ ತಲೆನೋವು, ಶರೀರವು ಬೆಂಕಿಯಂತಿರುವುದು, ತಲೆತಿರಗು, ಕಣ್ಣುರಿ, ಕಣ್ಣು ಕೆಂಪು, ಕಣ್ಣು ಮಂಜು, ಕಣ್ಣಿನಲ್ಲಿ ನೀರು ಸುರಿಯುವುದು, ರಾತ್ರಿ ನಿದ್ರೆಬಾರದಿರುವುದು ಇವುಗಳನ್ನು ೧-೨ ಅಭ್ಯಂಗನದಿಂದಲೇ ಗುಣಮಾಡಿ ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ. ಬಿಸಿಲುಕಾಲಕ್ಕೆ ಇದು ಅಮೃತವೇಸರಿ. ಎಂಟು ಅಭ್ಯಂಗನಕ್ಕೆ ಆಗುವ ತೈಲ ೦-೮-೦. ೧ ತರ್ಪ ೫-೦-೦.

ಆಮೋದಿನಿ:—ಅಮೋಘವಾದ ಸುವಾಸನೆಯಿಂದ ಕೂಡಿದ ಈ ಮಾತ್ರೆಗಳು ತಾಂಬೂಲವನ್ನು ರಂಜಿಸಿ ಬಾಯಾರಿಕೆಯನ್ನು ತಕ್ಷಣ ನಿಲ್ಲಿಸಿ ಆಯಾಸವನ್ನು ಪರಿಹರಿಸಿ ಕಂಠನಾಳವನ್ನು ಸರಿಪಡಿಸಿ ಕೆಮ್ಮು, ದಮ್ಮು, ಉಬ್ಬಸ, ಮೇಹಬಂಧಗಳನ್ನು ಗುಣಮಾಡಿ ಆರೋಗ್ಯವನ್ನು ಕಾಪಾಡುವವರಲ್ಲಿ ಶ್ರೇಷ್ಠವಾದುದು. ಸಂಗೀತಗಾರರಿಗೂ, ವಿದ್ಯಾರ್ಥಿಗಳಿಗೂ, ಪ್ರಯಾಣೀಕರಿಗೂ ಅಮೂಲ್ಯವಾದುದು. ೧೦೦ ಮಾತ್ರೆ ೦—೪—೦. ೫ ಕ್ಕೆ ಒಂದು ಹೆಚ್ಚು.

ಖಂಡಾಮಲಕರಸಾಯನ:—ತಲೆತಿರಗು, ಕಣ್ಣು ಕಗ್ಗತ್ತಲೆ, ಹಸಿವೇ ಇಲ್ಲದಿರುವುದು, ಆಹಾರದಲ್ಲಿ ಅರುಚಿ, ವಾಕರಿಕೆ, ವಾಂತಿ, ಹುಳಿ, ಖಾರ, ಅಥವಾ ಸಿಹಿಯಾದ ತೇಗು, ಹೊಟ್ಟೆಯುಬ್ಬರ, ಹೊಟ್ಟೆನೋವು, ಕಣ್ಣು ಅಥವಾ ಮೈ ಹಳದೀಬಣ್ಣ, ನಿಶ್ಶಕ್ತಿ, ಹಳೇಜ್ವರ, ಎದೆಬಡಿಯುವಿಕೆ, ಪಾಂಡು, ಕಾಮಾಲೆ, ಮೂರ್ಛೆ ಇವುಗಳಪೈಕಿ ಯಾವುದಿದ್ದರೂ ಖಾತರಿ ಗುಣವಾಗಿ ದಿನಕ್ಕೊಂದುವೇಳೆ ಸಲೀಸಾಗಿ ಕಾಲಪ್ರವರ್ತಿಯಾಗುತ್ತದೆ. ೧೫ ದಿನಕ್ಕೆ ಆಗುವ ಔಷಧ, ಬೆಲೆ ೦-೧೨-೦. ೧ ಡರ್ಜ ಡಬ್ಬಿಗಳಿಗೆ ೭-೮-೦.

ಪ್ರತಿಔಷಧಕ್ಕೂ ಟಪಾಲ್ ಮತ್ತು ಪ್ಯಾಕಿಂಗ್ ಛಾರ್ಜ ಪ್ರತ್ಯೇಕ.

ವಿಳಾಸ:—ಬಿ. ವಿ. ಪಂಡಿತ್, ಸದ್ವೈದ್ಯಶಾಲಾ,
ನಂಜನಗೂಡು, ಮೈಸೂರು ಡಿ॥

೧೯೧೫ನೆಯ ಇಸವಿ ಮಾರ್ಚಿ ತಾ॥ ೨೧ರಿಂದ ೧೯೧೫ನೆಯ ಮಾರ್ಚಿ ತಾ॥ ೨೭ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೭ ನೆಯ ರಾಕ್ಷಸಸಂವತ್ಸರದ ಸಂ॥ ದ ಚೈತ್ರ ಶು॥ ಪಂಚಮಿಯಿಂದ ಚೈತ್ರ ಶು॥ ಏಕಾದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಾಸ ತೇದಿ
21	ಭಾನು	ಪಂಚ	3-6	ಕೃತ್ತಿಕ	18-30	8
22	[1]ಸೋ	ಷಷ್ಠಿ	8-18	ರೋಹಿ	25-1	9
23	[2]ಮಂಗ	ಸಪ್ತ	13-4	ಮೃಗ	30-54	10
24	[3]ಬುಧ	ಅಷ್ಟ	17-1	ಆರಿದ್ರಾ	36-4	11
25	[4]ಗುರು	ನವ	19-54	ಪುನ	40-4	12
26	[5]ಶುಕ್ರ	ದಶ	21-38	ಪುಷ್ಯ	42-57	13
27	[6]ಶನಿ	ಏಕಾ	22-0	ಆಶ್ಲೇಷ	44-24	14

(1) ಮೇಲುಕೋಟೆಯಲ್ಲಿ ಕಲ್ಯಾಣೋತ್ಸವಃ. (2) ಶನಿಚಂದ್ರಯೋಸ್ಸಾಮ್ಯಂ. (3) ನವಮೀತಿಥಿಃ, (ವಾಕ್ಯರೀತ್ಯಾ ಶೂನ್ಯತಿಥಿಃ). (4) ದಶಮೀತಿಥಿಃ, (ವಾಕ್ಯನವಮೀತಿಥಿಃ) ಶ್ರೀರಾಮನವಮಿ, ನಂಜನಗೂಡಿನಲ್ಲಿ ಶ್ರೀಕಂಠಮುಡೀವುತ್ಸವಃ, (5) ಶೂನ್ಯತಿಥಿಃ, (ವಾಕ್ಯರೀತ್ಯಾ ದಶಮೀತಿಥಿಃ) ಮೇಲುಕೋಟೆಯಲ್ಲಿ ವೈರಮುಡೀವುತ್ಸವಃ. (6) ಏಕಾದಶೀತಿಥಿಃ, ಸರ್ವತ್ರೈಕಾದಶೀ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

42



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಣೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಯೊಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧—೦—೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ERGISTERED NO. M. 124.

ಮೈಸೂರ್ ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

REGISTERED NO. M. 124.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಪಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೧೪—೦

ಸಂಪುಟ ೨೮) ಮೈಸೂರ್ ಸ್ಟಾರ್ ಸರ್ ೧೯೧೫ ನೆಯ ಇಸವಿ ಮಾರ್ಚಿ ತಾರೀಖು ೨೮ ನೆಯ ಭಾನುವಾರ. (ಸಂಚಿಕೆ ೧೩

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

8

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆರ್ಷಿತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

೧. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.
೨. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.
೩. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ್ತ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ್ತ ಯಾವರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.
೪. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು
೫. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.
೬. ಬೇಸಿಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗಗಳನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.
೭. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೆರ್ಷಿತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

೪೫ ಮಾತ್ರೆಗಳ	ಪೊಟ್ಟಣ	೧ಕ್ಕೆ	೨	ಆಣೆ	೮೦ ಮಾತ್ರೆಗಳ	ಟಿನ್	೧ಕ್ಕೆ	೪	ಆಣೆ.
೯೫ "	"	"	೪	"	೧೦೦ "	ಶೀಶೆ	"	೪॥	"
೨೦೦ "	"	"	೭	"	೫೫೦ "	ಮರದಪೆಟ್ಟಿಗೆ	"	೧	ರೂ.
೨೦೦ "	ಟಿನ್	"	೯	"	೧೨೦೦ "	"	"	೨	"

೧ ರೂ.ಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ. ಬೀಳುವುದು.

☞ ಎಲ್ಲಾ ಕಡೆಯೂ ಪ್ರಸಿದ್ಧ ವರ್ತಕರಲ್ಲಿ ವಿಕ್ರಯಿಸಲ್ಪಡುತ್ತದೆ.

ಮೈಸೂರುಸೀಮೆಯ ಏಜಂಟರು:—ಎಂ. ರಾಮಸಂಜೀವ ಸೆಟ್ಟಿ,
ಚನ್ನಪಟ್ಟಣ.

ಸೋಲ್ ಏಜಂಟರು:—ಸೆರ್ಷಿತಾನ್ ಡಿಪೋ,
ಪ್ರಿನ್ಸೆಸ್‌ಸ್ಟ್ರೀಟ್ ಬೊಂಬಾಯಿ ನಂ ೨.

ಮದ್ರಾಸ್ ಏಜಂಟ್:—ಬಿ ಸಿ. ಷಾ ಅಂಡ್ ಕೊ,
೧೩೩ ಚೈನಾಬಜಾರ್ ರೋಡ್, ಮದ್ರಾಸ್.

26

ಉತ್ತಮ ಕಂಪೆನಿ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, [illegible] ಶಾಲು, ದುಪ್ಪಟ, ಮುಗಟ, ಜಗನ್ನಾಥ[illegible], [illegible] ಮುಂತಾದ ಅನುಪಮ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ—ಎಸ್. ಯೂ ಏನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

೧೯೧೫ನೆಯ
ಶ್ರೀಸೀತಾರಾಘವ
ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.



ಬೆಲೆಯನ್ನು ತಗ್ಗಿಸಿದೆ. ಕೊಂಚಪ್ರತಿಗಳು ಮಾತ್ರವೆ ಇವೆ. ಬೇಗ ಬರೆದು ತರಿಸಿಕೊಳ್ಳಿರಿ. ಉತ್ತಮವಾದ ಕಾಗದ ಮುದ್ದಾದ ಮುದ್ರಣ. ಮತ್ತಾವ ಡೈರಿಗಳಲ್ಲೂ ಇಲ್ಲದ ಅನೇಕ ಉಪಯುಕ್ತವಾದ ಸಂಗತಿಗಳು ಈ ಡೈರಿಯಲ್ಲಿ ಇರುತ್ತವೆ. [illegible] (೫) ಡೈರಿಗಳನ್ನು ಒಂದೇವಿಳಾಸಕ್ಕೆ ತರಿಸಿಕೊಂಡರೆ ೧ ಡೈರಿ ಇನಾಂ.

೧ ನಂ—ಸಣ್ಣಸೈಜು ಸಾದಾ	೦-೨-೬
೨ ನಂ—ಪೆನ್ಸಲ್‌ಮುಚ್ಚಳವುಳ್ಳದು	೦-೪-೦

ಪೋಸ್ಟೇಜು ಬೇರೆ.

ವಿಳಾಸ.—ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.

25

ತಿರಸಂಗೀಕರ ಸ್ಮಾರಕ.

ಕನ್ನಡ ಒಕ್ಕಲತನದ ಶಾಲೆ ದೇವೀಹೊಸೂರ.

2

ಈ ಶಾಲೆಯು ಧಾರವಾಡ ಜಿಲ್ಹೆಯಲ್ಲಿರುವ ಹಾವೇರಿ ಸ್ಟೇಶನ್ನದಿಂದ ೫ ಮೈಲು ದೂರವಿರುವ ದೇವೀಹೊಸೂರ ಎಂಬಲ್ಲಿ ಸ್ಥಾಪಿತವಾಗಿದ್ದು ಅದರ ಹೊಸಕ್ಲಾಸುಗಳು ಇದೇ ಮೇ ತಿಂಗಳು ೨೪ ನೇ ತಾರೀಖಿನಿಂದ ಶುರು ಆಗುವವು. ಇದು ಕೇವಲ ಒಕ್ಕಲಿಗರ ಮಕ್ಕಳ ದೆಸೆಯಿಂದ ಇರುತ್ತದೆ. ಇದರಲ್ಲಿ ಸೇರಬಿಚ್ಛಿಸುವ ವಿದ್ಯಾರ್ಥಿಗಳ ಸಂಬಂಧದ ನಿಯಮಗಳು ಕೆಳಗೆ ಕೊಟ್ಟಂತೆ ಇರುತ್ತವೆ.

(೧) ಹುಡುಗರು ಸ್ವತಃ ಒಕ್ಕಲತನ ಮಾಡುವಂಥ ಒಕ್ಕಲಿಗರ ಮಕ್ಕಳಾಗಿರಬೇಕು. ಮತ್ತು ಆ ಹುಡುಗರು ಸ್ವಲ್ಪ ಮಟ್ಟಿಗಾದರೂ ಒಕ್ಕಲತನದ ಕೆಲಸದಲ್ಲಿ ಮಾಹಿತಿಯುಳ್ಳವರಿರಬೇಕು.

(೨) ಇಲ್ಲಿ ಕಲಿತು ಒಕ್ಕಲತನದ ಉದ್ಯೋಗವನ್ನು ನಡೆಯಿಸಬೇಕೆನ್ನುವವರನ್ನೇ ಈ ಶಾಲೆಯಲ್ಲಿ ತಕ್ಕೊಳ್ಳುವದರಲ್ಲಿ ಬರುವದು. ಸರಕಾರೀ ನೌಕರಿಯನ್ನು ಇಚ್ಛಿಸುವಂಥ ವಿದ್ಯಾರ್ಥಿಗಳು ಇಲ್ಲಿ ಬರಕೂಡದು.

(೩) ಹುಡುಗರು ಕನಿಷ್ಠಪಕ್ಷಕ್ಕೆ ಕನ್ನಡ ೫ನೇ ಇಯತ್ತೆಯಲ್ಲಿಯಾದರೂ ಪಾಸಾಗಿರಲಿಕ್ಕೆ ಬೇಕು ಮತ್ತು ಅವರು ಯಾವ ಶಾಲೆಯಲ್ಲಿ ಕಲಿತಿರುವರೋ ಆ ಶಾಲೆಯ ಹೆಡ್ಡಮಾಸ್ತರರ ಲೀವ್ಹಿಂಗ ಸರ್ಟಿಫಿಕೇಟನ್ನು ಅರ್ಜಿ ಲಗತ ಕಳುಹಿಸಬೇಕು.

(೪) ಹುಡುಗರ ವಯಸ್ಸು ೧೪ ವರ್ಷದಿಂದ ೧೭ ವರ್ಷದ ಒಳಗಿರಬೇಕು. ಮತ್ತು ವಯಸ್ಸಿನ ದಾಖಲೆ ಅರ್ಜಿ ಲಗತ ಕಳುಹಿಸಬೇಕು.

(೫) ಹುಡುಗರ ಅಭ್ಯಾಸಕ್ರಮವು ಎರಡು ವರ್ಷದ್ದಿರುವದು; ಈ ಶಾಲೆಯಲ್ಲಿ ತೆಗೆದುಕೊಂಡ ಪ್ರತಿಯೊಬ್ಬ ಹುಡುಗನಿಗೆ ಅವನ ಶಾಲೆಯ ಫೀಗೂ ಊಟದ ವೆಚ್ಚಕ್ಕೂ ಸಾಲುವಷ್ಟು ಸ್ಕಾಲರಶಿಪ್ ಕೊಡಲ್ಪಡುವದು.

(೬) ಒಮ್ಮೆ ಶಾಲೆಯಲ್ಲಿ ಸೇರಿದನಂತರ ಶಾಲೆಯ ಅಭ್ಯಾಸ ಕ್ರಮವು ಪೂರ್ಣ ಮುಗಿಯುವವರೆಗೆ ಶಾಲೆಯನ್ನು ಬಿಡಕೂಡದು. ಒಂದು ವೇಳೆ ಮಧ್ಯದಲ್ಲಿ ಬಿಟ್ಟರೆ ಅವರು ಶಾಲೆಯಲ್ಲಿ ಇದ್ದಷ್ಟು ದಿವಸಗಳ ಖರ್ಚನ್ನು ಕೆಳಗೆ ಸಹಿಮಾಡಿದವರು ನಿರ್ಣೈಯಿಸಿದಷ್ಟು ಕೊಡಬೇಕಾಗುವದು.

ಪ್ರತಿವರ್ಷ ೧೫-೨೦ ಹುಡುಗರನ್ನು ತೆಗೆದುಕೊಳ್ಳುವದರಲ್ಲಿ ಬರುವದು. ಬೇರೆ ಶಾಲೆಗಳಂತೆ ಈ ಶಾಲೆಗೂ ಯಾವತ್ತೂ ಸೂಟಿಗಳು ದೊರೆಯುವವು. ಇದಲ್ಲದೆ ವರ್ಷಕ್ಕೆ ಎರಡಾವರ್ತಿ ಒಮ್ಮೆ ದೀಪಾವಳಿ ಸುಮಾರಕ್ಕೆ, ಮತ್ತೊಮ್ಮೆ ಬೇಸಿಗೆ ಸಮಯಕ್ಕೆ ಒಂದೊಂದು ತಿಂಗಳದ ಸತತ ಸೂಟಿಗಳು ಸಿಕ್ಕುವವು. ಇವೆರಡು ಸೂಟಿಗಳಲ್ಲಿ ಮಾತ್ರ ಹುಡುಗರನ್ನು ಮನೆಗೆ ಕಳುಹಿಸುವದರಲ್ಲಿ ಬರುವದು. ಈ ಶಾಲೆಯ ಮುಖ್ಯ ಉದ್ದೇಶವೆಂದರೆ ಒಕ್ಕಲಿಗರ ಮಕ್ಕಳಿಗೆ ಸುಧಾರಿಸಿದ ಪ್ರಕಾರದ ಒಕ್ಕಲತನದ ಶಿಕ್ಷಣವನ್ನು ಕೊಟ್ಟು ಅವರನ್ನು ಅವರ ತಾಯಿತಂದೆಗಳಿಗೆ ಹೆಚ್ಚಿಗೆ ಉಪಯುಕ್ತರನ್ನಾಗಿ ಮಾಡಿಕೊಡುವದು ಅದೆ. ಈ ಶಾಲೆಗೆ ಬರಲಿಚ್ಛಿಸುವವರು ಅರ್ಜಿಯನ್ನು ಇದೇ ಮೇ ತಿಂಗಳ ೧ನೇ ತಾರೀಖಿನ ಒಳಗಾಗಿ ಕೆಳಗೆ ಸಹಿಮಾಡಿದವರ ಕಡೆಗೆ ಕಳುಹಿಸತಕ್ಕದ್ದು.

ಆ ಅರ್ಜಿ ವಿಚಾರಣೆಮಾಡಿ ನಮ್ಮ ಶಾಲೆಯಲ್ಲಿ ತೆಗೆದುಕೊಳ್ಳತಕ್ಕಂಥ ವಿದ್ಯಾರ್ಥಿಗಳಿಗೆ ಪತ್ರದ್ವಾರದಿಂದ ಬರಲಿಕ್ಕೆ ತಿಳಿಸುವೆವು; ಅರ್ಜಿ ನಿಕಾಲಿ ಮಾಡುವ ಕಾಲಕ್ಕೆ ವತನದಾರ ಪಾಟೀಲ ಕುಲಕರ್ಣಿಯವರ ಮಕ್ಕಳಿಗೂ, ಸುಸ್ಥಿತಿಯ ಒಕ್ಕಲಿಗರ ಮಕ್ಕಳಿಗೂ, ಹೆಚ್ಚು ಸವಲತ ಸಿಗುವದು. ಅರ್ಜಿಯಲ್ಲಿ ಹೆಸರು, ತಂದೆಯ ಹೆಸರು, ಅಡ್ಡಹೆಸರು, ಜಾತಿ,

ಇರುವ ಊರು, ತಾಲೂಕು, ಜಿಲ್ಲಾ ಖಾತೇದ ಹೊಲವು ಎಷ್ಟು, ಮತ್ತು ಅದು ಎಲ್ಲಿರುವದು ಸರಕಾರಕ್ಕೆ ದರವರ್ಷ ಕೊಡಬೇಕಾದ ತೆರಿಗೆ ತೋಟಪಟ್ಟಿಗಳನ್ನು ಮಾಡಲಿಕ್ಕೆ ನೀರಿನ ಅನುಕೂಲತೆ ಇರುವದೇ ಹ್ಯಾಗೆ? ಮತ್ತು ಹೊಲಗಳನ್ನು ಮನೆಯಿಂದ ಮಾಡುವರೋ ಹ್ಯಾಗೆ? ಮೊದಲಾದ ಮಾಹಿತಿಯನ್ನು ತುಂಬಿ ಆಯಾ ಊರ ಗ್ರಾಮಸ್ಥರ ದಾಖಲೆಯನ್ನು ಲಗತಿಟ್ಟು ಅರ್ಜಿ ಕಳಿಸಬೇಕು; ಮತ್ತು ಅರ್ಜಿಯನ್ನು ಶಾಲೆಗೆ ಬರಲಿಚ್ಛಿಸುವ ವಿದ್ಯಾರ್ಥಿಗಳೇ ಸ್ವಹಸ್ತದಿಂದ ತುಂಬಿ ಕಳಿಸಬೇಕು. ಮೇಲೆ ಹೇಳಿದ ನಿಯಮಗಳಂತೆ ನಡೆಯಲಿಕ್ಕೆ ಅನುಮತಿಯುಂಟೆಂದು ತಮ್ಮ ಪಾಲಕರ ಕಡೆಯಿಂದ ಒಂದು ಸಹಿನಿಸಿ ದಾಖಲೆ ತಕ್ಕೊಂಡು ಅರ್ಜಿ ಲಗತ ಇಟ್ಟು ಕಳಿಸಬೇಕು.

ಧಾರವಾಡ | ಸಹಿ ಟಿ. ಗಿಲ್ಬರ್ಟ
ತಾ|| ೪-೩-೧೯೧೫ | ಡಿ. ಡಾಯರೆಕ್ಟರ ಶೆತಕೀ ಖಾತೆ,
ದಕ್ಷಿಣಭಾಗ.

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತವಾಗಿರುವ ಘೋರಯುದ್ಧದ ದೆಸೆಯಿಂದ ಈ ಸಾಮಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದ ಮತ್ತು ಬೆಲಜಿಯಮ್ಮಿನಿಂದ ಸುತರಾಂ ಬರುವುದು ಕಟ್ಟಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಆವಶ್ಯಕವಾದ ಕಾಗದ ಮೊದಲಾದ ಸಾಮಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವಧಿಯು ಪೂರೈಸಿರುವವರಿಗೆಲ್ಲಾ ಪತ್ರಿಕೆಯನ್ನು ವಿ. ಪಿ ದ್ವಾರ ಕಳುಹಿಸುತ್ತಿರುವೆವು. ಆದರೆ ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿರುಗಿಸಿ ಕಾಗದದ ಬೆಲೆಯೇರಿಕೆಯಿಂದ ನಷ್ಟಪಡುವುದರ ಜತೆಗೆ ಪೋಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದು ತಿಳುಹಲು ಖೇದವಾಗುತ್ತದೆ. ಇತಃಪರಃ ದಯಾರ್ದ್ರಹೃದಯರಾದ ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ. ಪಿ. ಹಣವನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನವಾಗಿ ನಡೆದುಕೊಂಡು ಹೋಗುವಂತೆ ಮಾಡುವರೆಂದು ಸಂಪೂರ್ಣವಾಗಿ ನಂಬಿರುತ್ತೇವೆ.

ಮ್ಯಾನೇಜರ್.

ವಿದ್ಯಾರ್ಥಿಗಳ ಸತ್ಕಾರ.

ತುಮಕೂರಿನಲ್ಲಿ ನಡೆಯುವ ಇಂಗ್ಲೀಷ್ ಕನ್ನಡ ಲೋವರ್‌ಸೆಕೆಂಡರಿ ಪರೀಕ್ಷೆಗೆ ಕಟ್ಟಿರತಕ್ಕ ವೀರಶೈವ ವಿದ್ಯಾರ್ಥಿಗಳಿಗು ಮತ್ತೂ ವೀರಶೈವರಲ್ಲಿ ಊಟಮಾಡುವ ಇತರ ಮತಸ್ಥರಿಗು ಸಹ ಎಪ್ರೀಲ್ ೪-೫ ಲಾಗಾಯಿತು ೯ರ ವರೆಗೆ ಹಗಲುರಾತ್ರಿ ಭೋಜನಕ್ಕೆ ಶ್ರೀ ಊರುಕೆಂಚೆ ಕರಿಬಸವಸ್ವಾಮಿಗಳ ಮಠದಲ್ಲಿ ಅನುಕೂಲಮಾಡಿದ್ದೇವೆ. ಬರತಕ್ಕ ವಿದ್ಯಾರ್ಥಿಗಳು ೨ ದಿವಸ ಮುಂದಾಗಿ ಇಷ್ಟು ಜನ ಬರುತ್ತೇವೆಂತ ತಿಳಿಸಬೇಕು. ಅವರು ಮಲಗುವುದಕ್ಕೆ ಹಾಸಿಗೆ ವಗೈರೆ ತರಬೇಕು. ಶೆಟ್ರು ಕಪ್ಪಣ್ಣ ನಿ. ಚನ್ನಂಜಪ್ಪ
ಮಂಡಿಮರ್ಚೆಂಟ್ಸ್, ಗುಬ್ಬಿ.

ಮುಂದಿನ ಎಪ್ರೀಲ್‌ತಿಂಗಳಲ್ಲಿ ನಡೆಯುವ ಲೋ|| ಸೆ|| ಪರೀಕ್ಷೆಗೋಸ್ಕರ ಚಿತ್ರದುರ್ಗದ ಸೆಂಟರಿಗೆ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೂ ಮತ್ತೂ ಇವರಲ್ಲಿ ಊಟಮಾಡತಕ್ಕ ಇತರ ಎಲ್ಲಾ ವಿದ್ಯಾರ್ಥಿಗಳಿಗೂ ಅವರ ಸಹಾಯಕರಿಗೂ ಎಂಬಿನಂತೆ ಮೆ|| ಸಾಹುಕಾರ್ ಕಾಡಪ್ಪನವರು ತಮ್ಮ ಸ್ವಗೃಹದಲ್ಲಿ ಪರೀಕ್ಷಾಪ್ರಾರಂಭದ ದಿನದ ಲಾಗಾಯಿತು ಆಖೈರುವರೆಗೆ ೪ದಿನಗಳೂ ಎರಡುಹೊತ್ತು ಭೋಜನಕ್ಕೂ ಮಧ್ಯಾಹ್ನ ಫಲಾಹಾರಕ್ಕೂ ಏರ್ಪಾಡುಮಾಡಿದ್ದಾರೆ. ಬರತಕ್ಕ ವಿದ್ಯಾರ್ಥಿಗಳಸಂಖ್ಯೆ ತಿಳಿಯಲು ೧ವಾರ ಮುಂಚಿತವಾಗಿ ಅವರ ನಂಬರು ಹೆಸರು ಜಾತಿ ವಾಸಸ್ಥಲ ಮುಂತಾದುದನ್ನು ತಪಶೀಲ್ ಲಿಸ್ಟು ತಯಾರಿಯಿಂದ ಅವರವರ ಉಪಾಧ್ಯಾಯರ ದ್ವಾರಾ ಈ ಕೆಳಗಿನ ಅಡ್ರೆಸ್ಸಿಗೆ ರವಾನಿಸಬೇಕಾಗಿ ಕೋರಲ್ಪಟ್ಟಿದೆ. ಸೊಟೆ ಹಾಲಪ್ಪ, ಚಿತ್ರದುರ್ಗ.

ಪ್ರಸಿದ್ಧಪತ್ರಿಕೆ.

ಕಳೆದ ಜೂನ ತಿಂಗಳಲ್ಲಿ ನಡೆದ ಸಂಪದಭ್ಯುದಯ ಸಮಾಜದ ವಿದ್ಯಾಭ್ಯಾಸದ ಕಮಿಟಿಯ ಒಂದು ಸಭೆಯಲ್ಲಿ ಕನ್ನಡಭಾಷೆಯಲ್ಲಿ ಪ್ರಜಾಸಾಮಾನ್ಯಕ್ಕೆ ಉಪಯೋಗಕರವಾದ ಗ್ರಂಥಗಳ ಪ್ರಾಚುರ್ಯವನ್ನು ನಡಿಸುವುದಕ್ಕೋಸ್ಕರವೂ ಈಗಿನ ಕಾಲದ ಪ್ರಪಂಚಜ್ಞಾನವನ್ನು ಕನ್ನಡಿಗರಲ್ಲೆಲ್ಲಾ ಹರಡುವುದಕ್ಕೋಸ್ಕರವೂ ಈ ಭಾಷೆಯಲ್ಲಿ ಯಾವಯಾವ ಬದಲಾವಣೆಗಳನ್ನು ರೂಢಿಗೆ ತರಬಹುದು ಎಂಬ ವಿಚಾರವು ಚರ್ಚೆಯಾಗಿ, ಈ ವಿಷಯವನ್ನು ಇತ್ಯರ್ಥಪಡಿಸುವುದಕ್ಕೋಸ್ಕರ ಮೈಸೂರು ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್ ಜನರಲ್ ಮ|| ರಾ|| ರಾವ್‌ಬಹದ್ದೂರ್ ಎಂ. ಶ್ಯಾಮರಾವ್ ಎಂ. ಎ. ಯವರು, ಮೈಸೂರು ಸೀಮೆಯ ಚೀಫ್ ಇಂಜನಿಯರ್ ಮ|| ರಾ|| ಕರ್ಪೂರ್ ಶ್ರೀನಿವಾಸರಾವ್ ಬಿ ಎಸ್. ಸಿ. ಎಲ್. ಸಿ. ಇ. ಯವರು, ರಿಟೈರ್ಡ್ ಸೀನಿಯರ್ ಸರ್ಜನ್ ಮ|| ರಾ|| ಪಿ. ಎಸ್. ಅಚ್ಯುತರಾವ್ ಎಲ್ ಎಂ. ಅಂಡ್. ಎಸ್. ಯವರುಗಳನ್ನು ಒಳಗೊಂಡ ಒಂದು ಸಭೆಯು ಏರ್ಪಡಿಸಲ್ಪಟ್ಟಿತು. ಈ ಸಭೆಯವರು ಈ ವಿಷಯವನ್ನು ಚೆನ್ನಾಗಿ ವಿಚಾರಮಾಡುವುದಕ್ಕೋಸ್ಕರ ಕನ್ನಡಿಗರ ಸಮ್ಮೇಳನವನ್ನು ಇದೇ ಮೇ ತಿಂಗಳು ೩-೪ನೆ ತಾರೀಖುಗಳಲ್ಲಿ ಬೆಂಗಳೂರು ಪಟ್ಟಣದಲ್ಲಿ ನಡೆಯಿಸಬೇಕೆಂದು ತೀರ್ಮಾನ ಮಾಡಿದಾರೆ. ಇದಕ್ಕೆ ಬೊಂಬಾಯಿ ಮದರಾಸು ಧಾರ್ವಾಡ ಮೊದಲಾದ ಕಡೆಗಳಿಂದ ಪ್ರತಿನಿಧಿಗಳು ದಯಮಾಡುವರು. ಈ ಸಮ್ಮೇಳನದಲ್ಲಿ:—

೧. ಕನ್ನಡಭಾಷೆಯು ಪ್ರಚಾರದಲ್ಲಿರುವ ಪ್ರದೇಶಗಳಲ್ಲೆಲ್ಲಾ ಇರುವ ಕನ್ನಡಗ್ರಂಥಕರ್ತರುಗಳಲ್ಲಿ ಐಕಮತ್ಯವನ್ನು ಹೆಚ್ಚಿಸುವಿಕೆ;

೨. ಅಂಥಾ ಭಾಗಗಳಲ್ಲೆಲ್ಲಾ ಕಾಣಬರುವ ಗ್ರಾಂಥಿಕ ಭಾಷೆಯನ್ನು ಏಕರೂಪಕ್ಕೆ ತರುವಿಕೆ;

೩. ಅಂಥಾ ಪ್ರದೇಶಗಳಲ್ಲೆಲ್ಲಾ ಇರುವ ಕನ್ನಡಪಾಠಶಾಲೆಗಳಲ್ಲಿ ಒಂದೇವಿಧವಾದ ಪಠ್ಯಪುಸ್ತಕಗಳನ್ನು ಬಳಸುವಿಕೆ;

೪ ಕನ್ನಡಿಗರ ಪ್ರಜಾಸಾಮಾನ್ಯದಲ್ಲೆಲ್ಲಾ ಪ್ರಯೋಜನಕರವಾದ ಜ್ಞಾನವನ್ನು ಹರಡುವುದಕ್ಕಾಗಿ ಸಣ್ಣಸಣ್ಣ ಗ್ರಂಥಗಳನ್ನು ಪ್ರಚುರಪಡಿಸುವಿಕೆ;

೫. ಕನ್ನಡಗ್ರಂಥಗಳಲ್ಲಿ ಉಪಯೋಗಿಸಬೇಕಾದ ಪಾರಿಭಾಷಿಕ ಶಬ್ದಗಳನ್ನು ನಿರ್ಣಯಪಡಿಸುವಿಕೆ;

ಎಂಬ ಈ ಉದ್ದೇಶಗಳನ್ನು ಸಾಧಿಸುವ ಅತ್ಯಂತ ಸುಲಭಮಾರ್ಗಗಳು, ಮತ್ತೂ ಕರ್ನಾಟಕಭಾಷಾಭಿವೃದ್ಧಿಯನ್ನು ಕುರಿತು ಇತರ ವಿಷಯಗಳು;-ಈ ವಿಚಾರದಲ್ಲಿ ಉಪನ್ಯಾಸಗಳೂ ಚರ್ಚೆಗಳೂ ನಡೆಯುವುವು.

ಕನ್ನಡಭಾಷೆಯ ಅಭಿವೃದ್ಧಿಯಲ್ಲಿ ಆಸಕ್ತರಾದ ಮಹನೀಯರುಗಳೆಲ್ಲ ಈ ಸಮ್ಮೇಳನವನ್ನು ಕುರಿತು ಹೆಚ್ಚು ಸಂಗತಿಗಳನ್ನು ತಿಳಿಯಬೇಕೆಂದಿರುವವರು ಈ ಕೆಳಗೆ ರುಜುಮಾಡಿರುವವರ ಮೇಲ್ವಿಳಾಸಕ್ಕೆ ಕಾಗದ ಬರೆದು ತಿಳಿದುಕೊಳ್ಳಬಹುದು. ಸಮ್ಮೇಳನದ ಉದ್ದೇಶಗಳನ್ನು ಸಾಧಿಸುವ ವಿಷಯದಲ್ಲಿ ಕೊಡಬಹುದಾದ ಸಲಹೆಗಳೂ, ಮೇಲೆ ಸೂಚಿಸಿದ ವಿಷಯಗಳನ್ನು ಕುರಿತು ಬರೆದ ಉಪನ್ಯಾಸಗಳೂ ಸಹ ಅತ್ಯಂತ ಕೃತಜ್ಞತೆಯಿಂದ ಅಂಗೀಕರಿಸಲ್ಪಡುವುವು. ಸಲಹೆಗಳನ್ನೂ ಉಪನ್ಯಾಸಗಳನ್ನೂ ಕಳುಹಿಸಬೇಕೆಂದಿರುವವರು ದಯವಿಟ್ಟು ೧೯೧೫ ನೆ ಏಪ್ರಿಲ್ ೧೫ ರೊಳಗಾಗಿ ಕಳುಹಿಸಿಕೊಡಬೇಕೆಂದು ಕೋರಿದೆ.

ಬಿ. ಕೃಷ್ಣಪ್ಪ, ಪ್ರೋ. ಸೆಕ್ರಟರಿ
ಕನ್ನಡಿಗರ ಸಮ್ಮೇಳನ.
ವಿದ್ಯಾಭ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ್
ಜನರಲ್‌ರವರ ಆಫೀಸು. ೨೨-೩-೧೫

ಪಂಚಮರು.

(ದೇಶಾಯಿ ಶೇಷಗಿರಿರಾವ್, ನಂದಿ.)

ನಮ್ಮ ದೇಶದಲ್ಲಿರುವ ನೀಚಜಾತಿಗಳೊಳಗೆಲ್ಲಾ ಪಂಚಮರು ನಮ್ಮಿಂದ ಬಹು ನೀಚವಾಗಿ ನೋಡಲ್ಪಡುತ್ತಿರುವರು. ಹೊಲೆಮಾದಿಗ ಮೊದಲಾದವರು ಪಂಚಮರೆಂದು ಹೇಳಲ್ಪಡುತ್ತಿರುವರು. ಆರ್ಯರು ಈ ದೇಶಕ್ಕೆ ಬರುವ ವೇಳೆಗೆ ಅನಾಗರಿಕ ಜಾತಿಯವರು ಬೆಟ್ಟಗಳಲ್ಲಿ ವಾಸವಾಗಿದ್ದರೆಂದೂ ಬೆಟ್ಟಗಳಿಗೆ ಪುಲಿಗಳೆಂದು ಹೆಸರಿದ್ದುದರಿಂದ ಬೆಟ್ಟಗಳಲ್ಲಿದ್ದ ಇವರಿಗೆ ಹೊಲೆಯರೆಂಬದಾಗಿ ಹೆಸರು ಬಂದಿದೆಯೆಂದೂ ಚರಿತ್ರಜ್ಞರು ಹೇಳುವರು. ಸಂಕರರು ಪಂಚಮಜಾತಿಯೆಂದು ಮನುವು ಹೇಳಿರುವುದರಿಂದಲೂ, ಮತಂಗನು ಸಂಕರನೆಂದು ಪುರಾಣಾದಿಗಳಿಂದ ತಿಳಿಯಬರುತ್ತಿರುವುದರಿಂದಲೂ ಮತಂಗನ ಸಂತತಿಗೆ ಮಾತಂಗ (ಮಾದಿಗ) ರೆಂದು ಹೆಸರು ಬಂದಂತೆ ಹೇಳುವರು.

ಪಂಚಮರಲ್ಲಿ ಕೆಲವರು ಶ್ವಮಾಂಸವನ್ನು (ನಾಯಿಯ ಮಾಂಸವನ್ನು) ತಿನ್ನುವುದರಿಂದ ಶ್ವಪಚರೆಂದೂ ಶ್ವಪಾತಕರೆಂದೂ ಅಪರಿಶುದ್ಧತೆಯಿಂದಲೇ ಅಂಟ (ಮುಟ್ಟ) ಬಾರದವರೆಂದೂ, ನೀಚರಾದುದರಿಂದ ಹೇಳಬಾರದವರೆಂದೂ ಗ್ರಾಮಕ್ಕೆ ಅಂತ್ಯ (ದೂರ) ದಲ್ಲಿ ವಾಸಮಾಡುತ್ತಿರುವುದರಿಂದ ಅಂತ್ಯವಾಸರೆಂದೂ ಕೋಪಸ್ವಭಾವವನ್ನುಳ್ಳವನು ಚಂಡಾಲನೆಂದೂ ಶಾಸ್ತ್ರಗಳು ಹೇಳುತ್ತಿರುವುದರಿಂದಲೂ, ಮತಂಗಋಷಿ ಕೋಪಿಷ್ಠನಾದುದರಿಂದಲೂ ಆತನಿಗೆ ಚಂಡಾಲನೆಂದು ಹೆಸರುಂಟಾಗಿ ಆ ಮೂಲಕ ಮಾತಂಗರಿಗೂ ಚಂಡಾಲರೆಂಬ ಹೆಸರು ಬಂದಿತೆಂದೂ ತಿಳಿದುಬರುತ್ತಿರುವುದು.

ಈ ರೀತಿಯಾಗಿ ಏರ್ಪಟ್ಟ ಪಂಚಮಜಾತಿಯು ವಿದ್ಯಾವಿಹೀನತ್ವದಿಂದಲೂ ಅಪರಿಶುಭ್ರತ್ವದಿಂದಲೂ ಅನಾಗರಿಕತೆಯಿಂದಲೂ ಆರ್ಯರಿಂದ ಅತಿಹೇಯವಾಗಿ ನೋಡಲ್ಪಡುತ್ತಾ ತುಂಬಾ ಶೋಚನೀಯವಾದ ಸ್ಥಿತಿಗೆ ಬರಬೇಕಾದುದಾಯಿತು. ಆರ್ಯರಿಂದ ನೀಚಜಂತುಗಳೆಂದು ಹೇಳಲ್ಪಟ್ಟ ನಾಯಿ, ಕೋಳಿ, ಬೆಕ್ಕು, ಮೊದಲಾದವುಗಳಿಗಿಂತಲೂ ನೀಚವಾಗಿ ಪಂಚಮರನ್ನು ನೋಡುತ್ತಿರುವೆವು. ಹಿಂದೂಜಾತಿಯೊಳಗಿನ ಅಗ್ರವರ್ಣಸ್ಥರ ಬಾಗಿಲುಗಳಲ್ಲಿ ಸಹಿತ ಕೋಳಿಗಳು ಸಂಚರಿಸುತ್ತಲೇ ಇರುವುವು. ನಾಯಿಗಳನ್ನು ಬಹುಮಂದಿ ಬ್ರಾಹ್ಮಣರೇ ಸಾಕುತ್ತಾ ಮನೆಯೊಳಕ್ಕೆ ಬರಗೊಡಿಸುತ್ತಲಿರುವರು. ತಮ್ಮೊಡನೆ ಹಾಸುಗೆಯಲ್ಲಿ ಮಲಗಿಸಿಕೊಳ್ಳುತ್ತಲೂ ಇರುವರು. ಬೆಕ್ಕುಗಳು ಸ್ವೇಚ್ಛೆಯಾಗಿ ಪ್ರತಿಮನೆಯಲ್ಲಿಯೂ ವಾಸಮಾಡುತ್ತಲಿವೆ. ಆದರೆ ತಮಗೆ ಸಮಾನಮನುಷ್ಯರಾದ ಪಂಚಮರನ್ನು ಮಾತ್ರ ದೂರವಾಗಿ ತಳ್ಳಿಹಾಕುತ್ತಿರುವರು. ಕಾಗೆಗಳು ಬೆಕ್ಕುಗಳು ಹಿಂದುಗಳ ಭೋಜನ ಪದಾರ್ಥಗಳನ್ನು ಮುಟ್ಟಿ ಮೈಲಿಗೆಮಾಡುತ್ತಿರುವುವಲ್ಲದೆ ಎಂಜಲುಮಾಡಿಬಿಡುತ್ತಿರುವುವು. ಆದರೆ ಅದನ್ನು ಮಾತ್ರ ಅಷ್ಟು ಅಸಹ್ಯವಾಗಿ ನೋಡುತ್ತಿರುವುದಿಲ್ಲವು. ಪಂಚಮರು ಸಮೀಪದಲ್ಲಿ ಬರುವುದಕ್ಕಾದರೂ ಯೋಗ್ಯರಲ್ಲವು. ಅವರ ಗಾಳಿಯಾದರೂ ತಗಲ (ಸೋಕ) ಬಾರದು. ಅವರ ನೆಳಲನ್ನು ಸಹಿತ ತುಳಿಯಬಾರದು. ಅವರು ನೋಡಿದ ಮಾತ್ರದಿಂದಲೇ ಭೋಜನಪದಾರ್ಥಗಳು ಮೈಲಿಗೆಯಾಗುತ್ತಿರುವುವು. ಇವು ತುಂಬಾ ಪರಿಹಾಸಪಾತ್ರವಾದ ಸಂಗತಿಗಳು. ಪಂಚಮರಲ್ಲಿದ್ದಷ್ಟು ಅಪರಿಶುದ್ಧತೆಯಾದರೂ ಕಾಗೆ, ನಾಯಿ, ಬೆಕ್ಕು ಮೊದಲಾದುವುಗಳಲ್ಲಿ ಇಲ್ಲವೇ?

ಪಕ್ಷಿಗಳು ಮೃಗಗಳು ಮೊದಲಾದ ಪ್ರಾಣಿಗಳಲ್ಲಿ ತೋರಿಸುವಷ್ಟು ದಯೆಯನ್ನಾದರೂ ಪಂಚಮರಲ್ಲಿ ನಾವುಗಳು ತೋರಿಸುತ್ತಿರುವುದಿಲ್ಲವು. ಬಹು ಬಡವರೂ ಅಂಗಹೀನರೂ ವ್ಯಾಧಿಗ್ರಸ್ತರೂ ಆದ ಪಂಚಮರಿಗೆ ಸಹಿತ ದಾನಧರ್ಮಗಳನ್ನು ಮಾಡುವುದಕ್ಕೆ ನಾವು ಸಮ್ಮತಿಸುವುದಿಲ್ಲವು. ಅವರಿಗೆ ಸಹಾಯಮಾಡುವುದರಿಂದ ಪುಣ್ಯವಿಲ್ಲವೆಂದು ಹೇಳುವುದರಲ್ಲಿ ಹಿಂಜರಿಯುತ್ತಿರುವುದಿಲ್ಲವು. ಪಂಚಮರು ಕಲರಾ ಮೊದಲಾದ ಭಯಂಕರ ರೋಗಗಳಿಂದ ಪೀಡಿತರಾಗಿ ಮಡಿಯುತ್ತಿದ್ದರೂ ವೈದ್ಯಸಹಾಯ ಮಾಡದೆಯೂ ಆರೋಗ್ಯಧರ್ಮಗಳನ್ನು ಬೋಧಿಸದೆಯೂ ನಿರ್ದಯಹೃದಯರಾಗಿ ಸುಮ್ಮನೆ ನೋಡುತ್ತಾ ನಿರ್ಲಕ್ಷ್ಯವಾಗಿರುವೆವು. ಅಯ್ಯೋ! ಇದಕ್ಕಿಂತಲೂ ಪಾಪಕೃತ್ಯವೂ ವಿರುದ್ಧಧರ್ಮವೂ ಇರುವುದೇ?

ಪಂಚಮರ ಸಹಾಯವಿಲ್ಲದೆ ನಮಗೆ ಯಾವ ಕೆಲಸವೂ ಜರುಗುತ್ತಿರುವುದಿಲ್ಲವು. ಕಷ್ಟಬಿದ್ದು ವ್ಯವಸಾಯವನ್ನು ಮಾಡಿ ಬೆಳೆಯನ್ನು ಬೆಳೆಸುವವರು ಪಂಚಮರು. ಗ್ರಾಮಪರಿಶುದ್ಧಿಕ್ಕೆ ಸಹಾಯಮಾಡುವವರು ಪಂಚಮರು. ಪಾದರಕ್ಷೆಗಳನ್ನು ಅನುಕೂಲಪಡಿಸುವವರು ಪಂಚಮರು. ರಾತ್ರಿಕಾಲದಲ್ಲಿ ಗಸ್ತುತಿರುಗಿ ಗ್ರಾಮರಕ್ಷಣೆಯನ್ನು ಮಾಡುವವರು ಪಂಚಮರು. ಕಂದಾಯದ ಹಣವನ್ನು ಭದ್ರವಾಗಿ ತಾಲ್ಲೂಕುಗಳಿಗೆ ತೆಗೆದುಕೊಂಡು ಹೋಗುವ ನಂಬಿಕೆಯ ನೌಕರರು ಪಂಚಮರು. ಅನಾಥಪ್ರೇತಸಂಸ್ಕಾರವನ್ನು ಮಾಡುವ ಪುಣ್ಯಾತ್ಮರು ಪಂಚಮರು. ಪಶುಗಳು ಮೊದಲಾದುವುಗಳ ಮೃತಕಳೇಬರಗಳನ್ನು ಗ್ರಾಮಗಳಿಂದ ತೊಲಗಿಸುವವರು ಪಂಚಮರು. ಇದು ಅದು ಎಂದು ಹೇಳುವುದೇಕೆ? ಪ್ರತಿ ಗ್ರಾಮದಲ್ಲಿಯೂ ಹಗಲೆನ್ನದೆ ರಾತ್ರಿಯೆನ್ನದೆ ಯಂತ್ರಗಳಂತೆ ಶ್ರಮೆಯೆನ್ನದೆ ವಿಶ್ರಾಂತಿಯಿಲ್ಲದೆ ಕೆಲಸಮಾಡುವ ಮಾನವಸೇವಾಪರಾಯಣರು ಪಂಚಮರು. ಇಂತಹ ಪಂಚಮರನ್ನು ನಾವು ಹೇಳಬಾರದವರೆಂದು ಕರೆಯುತ್ತಾ ಹೇಳಲಾಗದಷ್ಟು ಬಾಧೆಗಳನ್ನಿಡುತ್ತಾ ಪಾನಿಸರಿಗಿಂತಲೂ ಅಧಮಾಧಮರನ್ನಾಗಿ ನೋಡುತ್ತಿರುವುದು ಕೃತಘ್ನತೆಯೂ ಕ್ರೂರತ್ವವೂ ಕೃಪಣತ್ವವೂ ಅಲ್ಲವೇ?

ಈ ದೇಶದಲ್ಲಿ ಅನಾದಿಯಿಂದಲೂ ಇದ್ದು ಹಿಂದುಗಳಾಗಿ ನಮ್ಮ ಮತದಲ್ಲಿಯೇ ಇದ್ದು ನಮ್ಮ ಆಚಾರಗಳನ್ನೇ ಅವಲಂಬಿಸಿ ನಮ್ಮ ದೇವತೆಗಳನ್ನೇ ಆರಾಧಿಸುತ್ತ ನಮಗೆ ವಿಧೇಯರಾಗಿ ದಾಸರಾಗಿ ಸಹಾಯಕರಾಗಿಇರುವ ಪಂಚಮರನ್ನು ದಯಾ ಧರ್ಮ ದಾಕ್ಷಿಣ್ಯಗಳನ್ನು ತ್ಯಜಿಸಿ ದೈವಭೀತಿಯಿಲ್ಲದೆ ಹಿಂಸಿಸುತ್ತಿದ್ದೂ ಪರದೇಶಗಳ ಅನ್ಯಜಾತಿಗಳವರಾರೋ ನಮ್ಮ ದೇಶೀಯರನ್ನು ಹಿಂಸಿಸುತ್ತಿರುವರೆಂದು ನಿಂದಿಸುತ್ತಿರುವುದೂ ಪರಿತಪಿಸುತ್ತಿರುವುದೂ ಪರಿಹಾಸಾಸ್ಪದವಾಗಿರುವುದಿಲ್ಲವೇ?

ಹಿಂದುಗಳೇ! ಮತ್ತೊಂದು ವಿಚಿತ್ರವು!! ವಿಚಿತ್ರವಲ್ಲ ವಿರುದ್ಧವು!!! ಈ ಪಂಚಮರೇ ಈ ಹೇಳಬಾರದವರೇ ಮಹಮ್ಮದೀಯ ಕ್ರೈಸ್ತಮತಗಳನ್ನು ಸ್ವೀಕರಿಸಿದ ಮಾತ್ರದಿಂದಲೇ ಇತರ ಹಿಂದುಗಳಿಗೆ ಸರಿಸಮಾನವಾಗಿ ಗೌರವಿಸಲ್ಪಡುತ್ತಿರುವರು! ಅವರೊಡನೆ ಮಿಳಿತವಾಗಿ ತಿರುಗುತ್ತಿರುವೆವು!! ಇದರಿಂದಲೇ ಬಹುಮಂದಿ ಪಂಚಮರು ಪರಮತಗಳಲ್ಲಿ ಸೇರಿಹೋಗುತ್ತಲಿರುವರು. ಬರಬರುತ್ತಾ ಹಿಂದುಗಳ ಸಂಖ್ಯೆಯು ತಗ್ಗಿಹೋಗುತ್ತಿರುವುದು. ಇದು ನಮ್ಮ ಜಾತೀಯ ಬಲಕ್ಕೆ ಲೋಪವಲ್ಲವೇ? ಇನ್ನಾದರೂ ಈ ನಷ್ಟವನ್ನೂ ಈ ಅನರ್ಥವನ್ನೂ ಗ್ರಹಿಸಿ ಅವರನ್ನು ಸಂಸ್ಕರಿಸಿ ಆದರಿಸುವುದು ಕರ್ತವ್ಯವಲ್ಲವೆ? ಪಂಚಮರಿಗುಂಟಾದ ಈ ದೀನತ್ವ ಹೀನತ್ವಗಳೆಲ್ಲಕ್ಕೂ ವಿದ್ಯಾವಿಹೀನತ್ವವೇ ಹೇತುವು. ವಿದ್ಯೆಯೇ ಸಕಲಸಂಪತ್ತುಗಳಿಗೂ ಮೂಲವು. ಅದೇ ಸರ್ವೋನ್ನತ್ಯಸಾಧನವು. ಆದುದರಿಂದ ಪಂಚಮರಿಗೆಲ್ಲ ವಿದ್ಯೆಯನ್ನು ಕಲಿಸಿ ಜ್ಞಾನವಂತರನ್ನಾಗಿ ಮಾಡಬೇಕು. ಒಂದೇಸಾರಿ ಕೋಟ್ಯನುಕೋಟಿಗಟ್ಟಲೆಯಿರುವ ಇಷ್ಟು ಮಂದಿಗೆ ವಿದ್ಯಾದಾನವನ್ನು ಮಾಡುವುದು ಕಷ್ಟಸಾಧ್ಯವು. ಅವರೆಲ್ಲರೂ ಕಲಿತುಕೊಳ್ಳುವುದೂ ಅದಕ್ಕಾಗಿ ಅವರಿಗವಕಾಶದೊರಕುವುದೂ ಕಷ್ಟಸಾಧ್ಯವೇ. ಆದುದರಿಂದ ಕೈಲಾದಮಟ್ಟಿಗೂ ಪಾಠಶಾಲೆಗಳನ್ನು ಸ್ಥಾಪಿಸಿ ಮಿಕ್ಕವರಿಗೆ ಉಪನ್ಯಾಸಗಳ ಮೂಲಕವಾಗಿ ಜ್ಞಾನವನ್ನುಂಟುಮಾಡಬೇಕು. ಶುಚಿತ್ವವನ್ನು ಕಲಿಸಬೇಕು. ಲೋಕಜ್ಞಾನವನ್ನು ತಿಳಿಸಬೇಕು. ದುರಾಚಾರಗಳನ್ನು ಬಿಡಿಸಬೇಕು.

ಆವಾಗ ನಾವು ಹೀನಜಾತಿಯವರ ವಿಷಯದಲ್ಲಿ ಕರುಣೆಯನ್ನುಂಟಾಗಿ ಅವರನ್ನು ಉದ್ಧರಿಸುವೆವೋ ಆಗಲೇ ಹಿಂದೂದೇಶವು ಉದ್ಧರಿಸಲ್ಪಡುವುದು. ಭಾರತಜಾತಿಯು ಇತರ ಸಮಾನವಾದ ಜಾತಿಗಳಲ್ಲಿ ಅತ್ಯಧಿಕೌನ್ನತ್ಯಸ್ಥಿತಿಯನ್ನು ಹೊಂದುವುದು. ಆಗಲೇ ನಾವುಗಳು ನಿಜವಾದ ಹಿಂದುಗಳಾಗುವೆವು.

ಅಮೇರಿಕಾದಲ್ಲಿ ಹಿಂದೂದೇವಾಲಯ ಧ್ವಂಸ.

ಅಮೇರಿಕಾಕ್ಕೆ ಸೇರಿದ ಕಾಲಿಫೋರ್ನಿಯಾದ ಸ್ಯಾನ್ ಫ್ರಾನ್ಸಿಸ್ಕೋ ಪಟ್ಟಣದಲ್ಲಿ ಶ್ರೀರಾಮಕೃಷ್ಣ ಸಂಘದವರು ೧ ದೊಡ್ಡ ಕೃಷ್ಣದೇವಾಲಯವನ್ನು ಕಟ್ಟಿಸಿದ್ದಾರೆ. ಸ್ವಾಮಿ ವಿವೇಕಾನಂದರಿಂದೀಚೆಗೆ ಅಲ್ಲಿ ಹಿಂದೂಮತತತ್ತ್ವಗಳು ಪ್ರಚಾರದಲ್ಲಿ ಬರುತ್ತಿರುವ ಸಂಗತಿಯು ಸುಪ್ರಸಿದ್ಧವಷ್ಟೆ. ಈಗ ಅಲ್ಲಿ ಸ್ವಾಮಿ ತ್ರಿಗುಣಾತೀತರವರು ವೇದಾಂತ ವಿದ್ಯಾಪ್ರಸಾರವನ್ನು ಮಾಡುತ್ತ ವಾಸವಾಗಿದ್ದರು. ಆ ದೇವಾಲಯದಲ್ಲಿ ಈ ಸ್ವಾಮಿಗಳು ಆಗಾಗ್ಗೆ ಮಾಡುವ ಉಪನ್ಯಾಸಗಳನ್ನು ಕೇಳುವುದಕ್ಕೆ ಅನೇಕಮಂದಿ ಅಮೇರಿಕನ್ ಸ್ತ್ರೀಪುರುಷರು ಅಲ್ಲಿಗೆ ಬರುತ್ತಿರುವುದುಂಟು. ಕಳೆದ ಜನವರಿ ತಾ|| ೧೦ ರ ಹಗಲು ಸ್ವಾಮಿಗಳು ಯಥಾಪ್ರಕಾರ ಉಪನ್ಯಾಸ ಮಾಡುತ್ತಿರುವಾಗ್ಗೆ ಒಬ್ಬ ಮನುಷ್ಯನು ಬುದ್ಧಿಭ್ರಂಶಗೊಂಡವನಂತೆ ಉಪನ್ಯಾಸವೇದಿಕೆಯ ಬಳಿಗೆ ಲಗುಬಗೆಯಿಂದ ಬಂದು, ತನ್ನ ಟೊಪ್ಪಿಗೆಯನ್ನು ತೆಗೆದು ಮೂರಾವೃತ್ತಿ ವೇದಿಕೆಯಮೇಲೆ ಬಡಿದನು. ೩ ನೆಯಾವೃತ್ತಿ ಏಟುಬಿದ್ದಾಗ್ಗೆ ಮಹಾಭಯಂಕರವಾದ ಶಬ್ದದೊಡನೆ ಭಗ್ಗನೆ ಉರಿಯೆದ್ದಿತು. ದೇವಾಲಯದಲ್ಲೆಲ್ಲಾ ಜ್ವಾಲೆಯು ಕಾಣಿಸಿಕೊಂಡಿತು. ಕುಳಿತಿದ್ದವರೆಲ್ಲಾ ದಿಗ್ಭ್ರಾಂತರಾಗಿ ಹಾಹಾಕಾರಮಾಡುತ್ತ ಹೊರಕ್ಕೆ ಓಡಲು ಆತುರಿಸಿದರು. ಅದಕ್ಕೆ ೨ ಪಕ್ಕದಲ್ಲಿ ೨ ಬಾಗಿಲಿದ್ದುವು. ಜನರೆಲ್ಲಾ ಒಂದೇ ಕಡೆ ನುಗ್ಗಿದರು. ಅನೇಕರಿಗೆ ಮೈಕೈಗಾಯಗಳಾದುವು. ಬೆಂಕಿಯನ್ನಾರಿಸುವ ಯಂತ್ರಸಾಧನಗಳನ್ನು ತಂದು ಆರಿಸಿದ ಬಳಿಕ ಒಳಕ್ಕೆ ಹೋಗಿ ನೋಡುವಲ್ಲಿ ಸ್ವಾಮಿಗಳು ಆ ಸಿಡಿಮದ್ದಿನ ಬಡಿತದಿಂದ ಎಷ್ಟೋದೂರ ಬಿಸುಡಲ್ಪಟ್ಟು ಸ್ಮೃತಿತಪ್ಪಿದ್ದರು. ೨ ಕಾಲುಗಳೂ ಸೀಳಿ ಹೋಗಿದ್ದುವು. ಆ ಸಿಡಿಮದ್ದನ್ನು ಹಾಕಿದ ಲೂಯಿಸ್‌ವೇವ್ರಾ ಎಂಬಾತನ ಹೆಣವು ಅರೆಬೆಂದು, ಏಟುತಿಂದು ನರಳುತ್ತಿದ್ದವರ ಮಧ್ಯದಲ್ಲಿ ಬಿದ್ದಿದ್ದಿತು. ೪ ಮಂದಿ ಹೆಂಗುಸರಿಗೂ ಇಬ್ಬರು ಗಂಡುಸರಿಗೂ ಏಟು ಬಲವಾಗಿ ತಗುಲಿದ್ದಿತು. ದೇವಾಲಯದ ಗೋಡೆಗಳಹೊರತು ಮರದ ಸಾಮಗ್ರಿಗಳೆಲ್ಲಾ ಸುಟ್ಟುಹೋಗಿದ್ದುವು. ಹೊಗೆಯು ದೇವಾಲಯದ ತುಂಬಾ ದಟ್ಟವಾಗಿ ವ್ಯಾಪಿಸಿದ್ದಿತು. ಒಳಗಿದ್ದ ಪುಸ್ತಕಗಳ ಬೀರುಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಬಿದ್ದುಹೋಗಿದ್ದುವು. ಶ್ರೀ ಸ್ವಾಮಿ ವಿವೇಕಾನಂದರವರ ದೊಡ್ಡ ಭಾವಚಿತ್ರಪಟವು ಪುಡಿಪುಡಿಯಾಗಿದ್ದಿತು. ೨ ಗಡಿಯಾರಗಳೂ ನಿಂತುಹೋಗಿದ್ದುವು. ವೈದ್ಯರುಗಳೂ ಪೋಲೀಸರುಗಳೂ ಕೂಡಲೇ ಬಂದು ಒಳಗಿದ್ದವರನ್ನು ವೈದ್ಯಶಾಲೆಗೆ ಸಾಗಿಸಿದರು. ಸ್ವಾಮಿಗಳಿಗೆ ನೋವು ಅಪರಿಮಿತವಾಗಿದ್ದುದರಿಂದ ನಡೆದ ವೃತ್ತಾಂತವನ್ನೆಲ್ಲಾ ಸಾಂಗವಾಗಿ ಹೇಳಲಾರದೆ ಹೋದರು. ಕಡೆಗೆ ವೈದ್ಯಶಾಲೆಯಲ್ಲಿ ಅವರು ಆದಿನವೇ ನಿರ್ಯಾಣಹೊಂದಿದರು. ಈ ಸ್ವಾಮಿಗಳು ಬಂಗಾಳಾದವರು. ಇವರು ಇಲ್ಲಿದ್ದಾಗಲೇ ಭಾಷೆಯಲ್ಲೂ ವೇದಾಂತವಿದ್ಯೆಯಲ್ಲೂ ಒಳ್ಳೆಯ ಪಾಂಡಿತ್ಯವನ್ನು ಸಂಪಾದಿಸಿದ್ದರು. ಪ್ರಜಾಸೇವಾಕಾರ್ಯದಲ್ಲಿ ಅವರಿಗಿದ್ದ ಅಮಿತಾಸಕ್ತಿಯನ್ನು ಕಂಡು ಜನರೆಲ್ಲಾ ಅವರನ್ನು ಬಹಳವಾಗಿ ಗೌರವಿಸುತ್ತಿದ್ದರು. ಇವರು „ ಉದ್ಬೋಧ" ಎಂಬ ವಿಜ್ಞಾನಸಂಬಂಧವಾದ ಪತ್ರಿಕೆಯೊಂದನ್ನು ಸ್ಥಾಪಿಸಿದ್ದರು., ಸ್ವಾಮಿವಿವೇಕಾನಂದರವರ ಹಿಂದೂಮತಗ್ರಂಥಗಳನ್ನು ವಂಗಭಾಷೆಯಲ್ಲಿ ಪ್ರಕಟಪಡಿಸಿದವರು ಇವರೇ. ಇವರು ಅಮೇರಿಕಾದಲ್ಲಿ ವೇದಾಂತಸ್ಥಾಪನೆಗಾಗಿ ಬಹಳ ಶ್ರಮಪಡುತ್ತಿದ್ದರು. ಆ ದೇಶದಲ್ಲಿ ಒಂದು ತೆರದ ವಿಪ್ಲವಕಾರರು ಯಾವಾಗಲೂ ಹೀಗೆ ದೇವಾಲಯಗಳಲ್ಲೂ ಸಭಾಸ್ಥಲಗಳಲ್ಲೂ ಬ್ಯಾಂಕುಗಳಲ್ಲೂ ಶ್ರೀಮಂತರ ಮನೆಗಳಮೇಲೂ ನ್ಯಾಯಾಲಯಗಳಲ್ಲೂ ಸಿಡಿಮದ್ದುಗಳನ್ನು ಹಾಕುವುದು ಸಾಮಾನ್ಯಪದ್ಧತಿಯಾಗಿದೆಯೆಂದು ಗೊತ್ತಾಗುತ್ತವೆ. ವೇವ್ರಾಎಂಬಾತನೂಕೂಡ ಅಂಥವರ ಗುಂಪಿಗೆ ಸೇರಿದವನಾಗಿದ್ದು ಮತಿಗೆಟ್ಟು ಈ ಅನ್ಯಾಯಾಚರಣೆಯನ್ನು ಮಾಡಿದನೆಂದು ಪ್ರಕಟವಾಗಿದೆ. ಪೋಲೀಸರು ಆ ದುಷ್ಟಸಂಘದ ನಿರ್ಮೂಲನದಲ್ಲಿ ತೊಡಗಿದ್ದಾರೆ.

ಚೀನಾದಲ್ಲಿ ವಿಪ್ಲವ.

ಜರ್ಮನಿಯವರು ಚೀನಾದಲ್ಲಿ ಸೇರಿ ಅಲ್ಲಿನ ಪ್ರಭುತ್ವದವರ ಮೇಲೆ ಪ್ರಜೆಗಳೂ ಸೈನಿಕರೂ ತಿರುಗಿಬೀಳುವಂತೆ ದುರ್ಬೋಧೆಯನ್ನು ಮಾಡುತ್ತಿರುವರೆಂಬ ಸುದ್ದಿಯು ಸ್ವಲ್ಪಕಾಲದಿಂದ ಇದ್ದಿತು. ಅದಕ್ಕನುಸಾರವಾಗಿ ಈಗ ಆ ದೇಶದ ಸೈನಿಕರು ಪ್ರಭುತ್ವದವರಮೇಲೆ ತಿರುಗಿ ಉಪಪ್ಲವಗಳನ್ನು ಡೆಯಿಸುತ್ತಿರುವರೆಂದು ಗೊತ್ತಾಗುತ್ತದೆ. ಜೀರ್ಖಾ ಯೂವಾರ್ ಜಿಲ್ಲೆಗಳಲ್ಲಿರುವ ಚೀನಾ ಸೈನಿಕರು ಹೀಗೆ ತಿರುಗಿಬಿದ್ದು ೨ ಸ್ಥಲಗಳನ್ನು ಆಕ್ರಮಿಸಿಕೊಂಡಿರುವರು. ಅವುಗಳಲ್ಲಿ ಟಿಚೆರ್ಲೂಎಂಬಲ್ಲಿದ್ದ ವಿದೇಶೀಯರು ಸುರಕ್ಷಿತವಾಗಿದ್ದಾರೆ. ಒಂದುವೇಳೆ ಅವರಿಗೇನಾದರೂ ಅಪಾಯವು ಸಂಭವಿಸುವಂತೆ ತೋರಿದರೆ ಮೇಲಿನ ಬರ್ಮಾಕ್ಕೆ ಹೊರಟುಹೋಗುವ ಏರ್ಪಾಟು ನಡೆದಿದೆ. ಈ ಏರ್ಪಾಟಿಗೆ ಆ ವಿಪ್ಲವಕಾರಕರ ನಾಯಕರೇ ಸಹಾಯಕರಾಗಿದ್ದಾರಂತೆ. ಚೀನಾದೇಶವು ಮೊನ್ನೆತಾನೇ ಪ್ರಜಾಸತ್ತಾಕರಾಜ್ಯವಾಗಿ ಮಾರ್ಪಟ್ಟಿತು. ಹಲವುತೆರದಲ್ಲಿ ಅದರ ಸುಧಾರಣೆಗೆ ಆರಂಭವಾಗಿರುವುದು. ಇಂಥ ಸುಚಿಹ್ನವು ತಲೆದೋರಿ ಸ್ವಲ್ಪಕಾಲವಾಗಿರುವಾಗಲೇ ಇಂಥ ಕಲ್ಲೋಲವು ಅಲ್ಲಿ ಹುಟ್ಟಿರುವುದು ವಿಷಾದಕರವಾಗಿದೆ. ಇದು ಜರ್ಮನರ ಮೂಲಕವೇ ಸಂಭವಿಸಿರುವುದು ನಿಜವಾದರೆ ಆ ನರನಿಶಾಚರರ ಅಸೂಯಾಳುತ್ವಕ್ಕೆ ಮಿತಿಯೇ ಇಲ್ಲವೆಂದು ಹೇಳಬೇಕಾಗುವುದು.

ಭರತಖಂಡದ ವೃತ್ತಾಂತಗಳು.

ಅಲ್ವಾರ್ ಮಹಾರಾಜರು ಹಿಂದೂ ವಿಶ್ವವಿದ್ಯಾಲಯಕ್ಕಾಗಿ ೨ ಲಕ್ಷ ರೂ.ಗಳನ್ನು ಕೊಟ್ಟರು,

ಕಲ್ಕತ್ತಾ ಪಟ್ಟಣದಲ್ಲಿ ೯೯ ಮಂದಿ ಆನರರಿ ಮ್ಯಾಜಿಸ್ಟ್ರೇಟರಿರುವರು. ಅವರು ಕಳೆದ ವರ್ಷ ೩೦ ಸಾವಿರ ವ್ಯಾಜ್ಯಗಳನ್ನು ಹಿಡಿದು ತೀರ್ಮಾನಿಸಿರುವರು,

ಸಾಮ್ರಾಜ್ಯಶಾಸನಸಭೆಯಲ್ಲಿನ ಕೀರ್ತಿಶೇಷರಾದ ಆ|| ಗೋಖಲೆಯವರ ಸ್ಥಾನಕ್ಕೆ ಬೊಂಬಾಯಿಯ ನಿಯಾಮನಿರ್ಮಾಣಸಭೆಯಿಂದ ಬೊಂಬಾಯಿ ಹೈಕೋರ್ಟು ಅಡ್ವೋಕೇಟರಾದ ಆ|| ಚಿಮ್ಮನಲಾಲ್ ಹೀರಾಲಾಲ್ ಸೆಟಲ್ವಾಡರವರು ಆರಿಸಲ್ಪಟ್ಟಿರುವರು.

ಸುಪ್ರಸಿದ್ಧ ಗಂಧಿದಂಪತಿಗಳು ಹಿಂದೂಸೇವಕಸಂಘಪಕ್ಷದಿಂದ ಕೆಲಸಮಾಡುವುದಕ್ಕಾಗಿ ಕಲ್ಕತ್ತಾದಿಂದ ರಂಗೂನಿಗೆ ಹೋಗಿರುತ್ತಾರೆ. ಅಲ್ಲಿನ ಪ್ರಜೆಗಳು ಇವರಿಗೆ ಅಸಾಧಾರಣವಾದ ಮರ್ಯಾದೆಯನ್ನು ಮಾಡಿ ಸತ್ಕರಿಸುತ್ತಿದ್ದಾರೆ. ಇವರು ಕುಳಿತಿದ್ದ ರಥವನ್ನು ವಿದ್ಯಾರ್ಥಿಗಳೇ ಎಳೆದುಕೊಂಡು ಬಿಡಾರಕ್ಕೆ ಸೇರಿಸಿದರು.

ಸಿಂಹಳ ದ್ವೀಪದಲ್ಲಿರುವ ಒಬ್ಬ ಬೌದ್ಧನು ಒಂದುದಿನ ಮೀನುಹಿಡಿಯುತ್ತಿದ್ದ ಒಬ್ಬ ಕೂಲಿಯವನನ್ನು ಕಂಡು, ಅವನು ಮಾಡುವ ಪ್ರಾಣಿಹಿಂಸೆಯನ್ನು ನೋಡಿ ಸೈರಿಸಲಾರದೆ ಒಂದು ಕತ್ತಿಯಿಂದ ಅವನ ಮುಂಗೈಯನ್ನು ಕತ್ತರಿಸಿಬಿಟ್ಟನು. ದಂಡಾಧಿಕಾರಿಯೆದುರಿಗೆ ಬೌದ್ಧನು ವಿಚಾರಣೆಗೆ ಗುರಿಮಾಡಲ್ಪಟ್ಟಾಗ ಅವನು ಮಾಡಿದ ಕೃತ್ಯಕ್ಕೆ ಬೇರೆ ಸಾಕ್ಷ್ಯವಿಲ್ಲದೆ ಹೋದುದರಿಂದ ಬಿಡುಗಡೆ ಹೊಂದಿದನು.

ಮದ್ರಾಸ್ ಗೌರ್ನಮೆಂಟಿನವರು ಪರ್ಯಾಲೋಚನೆಗಿಟ್ಟುಕೊಂಡಿರುವ ನೂತನಲೋಹಮಾರ್ಗ ಕಲ್ಪನೆಗಳಲ್ಲಿ ಬಳ್ಳಾರಿಜಿಲ್ಲೆಯ ಹೊಸಪೇಟೆ ಕೊಟ್ಟೂರು ಲೋಹಮಾರ್ಗವನ್ನು ಹರಿಹರಕ್ಕೆ ತಂದು ಸೇರಿಸುವುದೂ, ಮಂಗಳೂರಿನಿಂದ ಉಡುಪಿಯವರೆಗೂ ಮಾರ್ಗವನ್ನು ಬೆಳೆಯಿಸುವುದೂ ಸಹ ಸೂಚಿತವಾಗಿದೆ. ಈ ಮಾರ್ಗಕಲ್ಪನೆಯಿಂದ ಆದಾಯವೇ ನಷ್ಟವೇ ಎಂಬುವದನ್ನು ವಿಚಾರಮಾಡಿ ವರದಿಮಾಡುವುದಕ್ಕೆ ಆ ಸರ್ಕಾರದವರು ಅಪ್ಪಣೆಮಾಡಿದ್ದಾರೆ.

ಧಾರವಾಡ ಜಿಲ್ಲೆಯಲ್ಲಿ ಆವಿಶಕ್ತಿಯಿಂದ ಉಳುವ ಯಂತ್ರದ ನೇಗಲನ್ನು ಸರ್ಕಾರದವರು ತರಿಸಿ ಕೆಲಸಕ್ಕೆ ಬಾರದಂತಿದ್ದ ಸಾವಿರಾರು ಎಕರೆ ಭೂಮಿಯನ್ನೆಲ್ಲಾ ಉಳಿಸಿ ತೋರಿಸಿಕೊಟ್ಟುದರಿಂದ ಸುತ್ತುಮುತ್ತಣ ಗ್ರಾಮದ ವ್ಯವಸಾಯಗಾರರು ಅದರ ಪ್ರಯೋಜನವನ್ನು ತಿಳಿದು ಈಗ ೪೦ ಸಾವಿರ ರೂ.ಗಳ ವ್ಯಯದಿಂದ ಮತ್ತೊಂದು ಅಂಥ ಯಂತ್ರಸಾಧನವನ್ನು ತರಿಸಿದ್ದಾರಂತೆ. ಇದುವರೆಗೆ ಉಳುವುದಕ್ಕಾಗದುದೆಂದು ಬಿದ್ದಿದ್ದ ೪೩ ಸಾವಿರ ಎಕರೆ ಭೂಮಿಯನ್ನು ಮುಂದೆ ಈ ನೇಗಲಿನಿಂದ ಉತ್ತು ಹತ್ತಿಯ ಬೆಳೆಯನ್ನು ಮಾಡಬೇಕೆಂದಿರುವರು.

ನಮ್ಮ ಭರತಖಂಡದಲ್ಲಿ ಅನೇಕ ಲೋಹಮಾರ್ಗಗಳು ಬೇರೆಬೇರೆ ಕಂಪನಿಯವರಿಂದ ಸ್ಥಾಪಿತವಾಗಿ ನಡೆಯಿಸಲ್ಪಡುತ್ತಿವೆ. ಇನ್ನುಮುಂದೆ ಇವನ್ನೆಲ್ಲಾ ಸಾಮ್ರಾಜ್ಯಸರ್ಕಾರದವರೇ ವಹಿಸಿಕೊಂಡು ನಡೆಯಿಸುವವರಾಗಿದ್ದಾರೆಂದು ರೈಲ್ವೇಸ್ ಎಂಬ ಪತ್ರಿಕೆಯು ಹೇಳುತ್ತದೆ. ಹೀಗೆ ಒಮ್ಮುಖವಾಗಿ ನಡೆಯುವುದರಿಂದ ಪ್ರಜೆಗಳಿಗೆ ಹಲವುತೆರದಲ್ಲಿ ಹಿತವುಂಟು. ಹೊಗೆಬಂಡಿಗಳಲ್ಲಿ ಪ್ರಯಾಣಿಕರಿಗೂ ವ್ಯಾಪಾರಸ್ಥರಿಗೂ ಉಂಟಾಗುತ್ತಿರುವ ತೊಂದರೆಗಳನ್ನು ಪಾಲಕರಾದ ಸರ್ಕಾರದವರು ಆದರದಿಂದ ಕೇಳಿ ಬೇಗನೆ ನಿವಾರಿಪುದಕ್ಕೆ ಅನುಕೂಲವಾದೀತು ಆದರೆ ನಾನಾವಿಧದ ಒಪ್ಪಂದದಮೇಲೆ ಸ್ಥಾಪಿತವಾಗಿರುವ ಕಂಪೆನಿಗಳಿಂದೆಲ್ಲಾ ಅದನ್ನು ಸರ್ಕಾರದವರು ವಶಪಡಿಸಿಕೊಳ್ಳಲು ಹೇಗೆ ಏರ್ಪಡಿಸಿಕೊಳ್ಳುವರೆಂಬುದು ಆಶ್ಚರ್ಯಕರವಾಗಿದೆ.

ವಿದೇಶವೃತ್ತಾಂತಗಳು.

ಜರ್ಮನರಕಡೆ ಇದುವರೆಗೆ ಯುದ್ಧದಲ್ಲಿ ೩೦ ಲಕ್ಷ ಜನರು ನಷ್ಟವಾಗಿರುವರೆಂದು ಫ್ರೆಂಚರು ಮಾಡಿದ ಲೆಕ್ಕವು ಸರಿಯಾಗಿದೆಯೆಂದು ಎಲ್ಲರೂ ಒಪ್ಪುತ್ತಾರೆ. ಈಗ ಜರ್ಮದೇಶದಲ್ಲಿ ಮುದಿಕರು ಹೊರತು ಉಳಿದವರೆಲ್ಲಾ ಸೇನೆಗೆ ಸೇರುತ್ತಿದ್ದಾರೆ

ಜರ್ಮದೇಶದಲ್ಲಿ ಆಹಾರ್ಯಪದಾರ್ಥಗಳ ಬರವು ವಿಶೇಷವಾಗುತ್ತಲಿವೆ. ಆಸ್ಟ್ರಿಯಾದವರಿಗೂ ಆಹಾರ್ಯಪದಾರ್ಥಗಳ ಕೊರತೆಯಾಗಿ, ತಮಗೆ ಅದನ್ನು ಒದಗಿಸಿಕೊಡಬೇಕೆಂದು ಜರ್ಮನರನ್ನು ಕೇಳಿದರಂತೆ. ಅವರೇ ತರಗನ್ನು ತಿನ್ನುತ್ತಿರುವಾಗ ಇವರಿಗೆ ಅವರು ಹಪ್ಪಳವನ್ನೆಲ್ಲಿತಂದುಕೊಟ್ಟಾರು? ಅದ ಕಾರಣ ನಾಸ್ತಿಯೆಂದು ಹೇಳಿರುವರಂತೆ.

ಸಿಂಗಪೂರಿನಲ್ಲಿ ಸೈನಿಕರು ಉದ್ರೇಕಗೊಂಡು ಬಹಳ ಹಾವಳಿಯನ್ನು ಮಾಡಿ ಹಲವರನ್ನು ಕೊಂದು ಅನೇಕರು ತಲೆತಪ್ಪಿಸಿಕೊಂಡು ಹೋಗಿದ್ದವರು ಸಿಕ್ಕಿಬಿದ್ದು ವಿಚಾರಣೆಯಲ್ಲಿರುವರು. ಈಗ ಅಲ್ಲಿ ಮಿಲಿಟರಿಪ್ರಭುತ್ವವು ಸ್ಥಾಪಿಸಲ್ಪಟ್ಟಿರುವುದು. ೧೮ ವರ್ಷ ವಯಸ್ಸಿಗೆ ಮೀರಿದ ಹಿಂದೂಪುರುಷರಾರೂ ಪೋಲೀಸರ ಅಪ್ಪಣೆಯಿಲ್ಲದೆ ಆ ಊರನ್ನು ಬಿಟ್ಟುಹೊರಕ್ಕೆಹೋಗಕೂಡದೆಂದೂ, ಆ ಆಜ್ಞೆಯನ್ನತಿಕ್ರಮಿಸಿಹೋದವರು ಶಿಕ್ಷಿಸಲ್ಪಡುವರೆಂದೂ ಪ್ರಕಟಿಸಲ್ಪಟ್ಟಿದೆ.

ಚೀನಾದವರು ಸೂಚಿಸಿದ ಸಂಧಿನಿಬಂಧನೆಗಳು ತಿಬೆಟ್ಟಿನವರಿಗೆ ಒಪ್ಪಿತವಾಗದೆ ಹೋಗಲಾಗಿ ಅವೆರಡು ರಾಜ್ಯಗಳಿಗೂ ಮರಳಿ ಯುದ್ಧಾರಂಭವಾಗಿದೆಯೆಂದು ತಿಬೆಟ್ಟಿನಿಂದ ಭರತಖಂಡಕ್ಕೆ ಬಂದ ವರ್ತಕರು ಹೇಳುತ್ತಲಿದ್ದಾರೆ. ಇದುವರೆಗೆ ಆದ ಯುದ್ಧದಲ್ಲಿ ತಿಬೆಟ್‌ಸೈನ್ಯಕ್ಕೇ ಬಹಳ ನಷ್ಟವಾಗಿದೆಯಂತೆ. ಯುದ್ಧವು ಖಾಮಂಡ್‌ಪ್ರಾಂತ್ಯದಲ್ಲಿ ಜರುಗುತ್ತಿದೆ. ಅಲ್ಲಿಗೆ ಹೊಸಸೈನ್ಯವನ್ನು ತಿಬೆಟ್ಟಿನವರು ಕಳುಹಿಸುತ್ತಿದ್ದಾರೆ. ಲಾಸಾ-ಗಿಯಾಟ್ ಜಿಲ್ಲೆಗಳಲ್ಲಿ ಪ್ರಜೆಗಳನ್ನು ಹೊಸಹೊಸದಾಗಿ ಸೈನ್ಯಕ್ಕೆ ಸೇರಿಸಿಕೊಳ್ಳುತ್ತಿದ್ದಾರೆ.

ಮೊನ್ನೆತಾನೇ ನಡೆದ ಜರ್ಮಚಕ್ರವರ್ತಿಯವರ ವರ್ಧಂತಿದಿನದಲ್ಲಿ ಅಮೇರಿಕಾದ ಪ್ರೆಸಿಡೆಂಟರಾದ ವಿಲ್ಸನ್‌ರವರು ಜರ್ಮಚಕ್ರವರ್ತಿಯವರಿಗೆ ತಮ್ಮ ಸಂತೋಷಾಭಿನಂದನವನ್ನು ತಂತ್ರೀದ್ವಾರಾ ತಿಳಿಯಿಸಿದರಂತೆ. ಹೀಗೆ ಮಾಡಿದುದು ಅನುಚಿತವಾದುದೆಂದು ಆ ದೇಶದ ಪತ್ರಿಕೆಗಳು ಕಠಿನವಾಗಿ ಖಂಡಿಸಿ ಲೇಖನಗಳನ್ನು ಬರೆದಿರುತ್ತವೆ ನ್ಯೂಯಾರ್ಕ್ ಟೈಮ್ಸ್‌ಪತ್ರಿಕೆಯಲ್ಲಿ ಒಬ್ಬ ವಿಲೇಖನು ಹೀಗೆ ಬರೆದಿರುತ್ತಾನೆ—„ ಅಮೇರಿಕಾ ಪ್ರೆಸಿಡೆಂಟರು ಹೀಗೆ ಮಾಡಿದುದು ಕೋಟ್ಯಾಂತರ ಅಮೇರಿಕಾ ಪ್ರಜೆಗಳಿಗೆ ಆಗ್ರಹವನ್ನು ಹುಟ್ಟಿಸಿದೆ. ಬೆಲ್ಜಿಯನ್ನಿನ ವಿಷಯದಲ್ಲಿ ಕಡಿಕರಂತೆ ಪ್ರವರ್ತಿಸಿರುವ ಜರ್ಮಚಕ್ರವರ್ತಿಯನ್ನು ಅಮೇರಿಕಾದೇಶೀಯರು ಅಸೂಯೆಯಿಂದಲೂ ಆಗ್ರಹದಿಂದಲೂ ಅನಿಷ್ಟವಾಗಿ ಕಾಣುತ್ತಿದ್ದಾರೆ."

ಜಪಾನರು ಜರ್ಮನರಿಂದ ಹಿಡಿದುಕೊಂಡ ಸಿಂಗ್‌ಟೋವು ಕೋಟೆಯಲ್ಲಿ ಅನೇಕ ಜರ್ಮನರು ಸೆರೆಯಲ್ಲಿಡಲ್ಪಟ್ಟಿರುವರು. ಅವರಲ್ಲಿ ಪಾರ್ವೆಹೇಂ ಎಂಬ ಜರ್ಮಸೈನಿಕೋದ್ಯೋಗಿಯೂ ಇನ್ನು ೪ ಮಂದಿ ಸೈನಿಕರೂ ಸಹ ಕೋಟೆಯಿಂದ ತಪ್ಪಿಸಿಕೊಂಡು ಓಡಿಹೋಗಿದ್ದಾರೆ. ಇವರು ಚೀನಾದೇಶಕ್ಕೆ ನುಗ್ಗಿದಾಗ್ಗೆ ಆ ದೇಶದ ಯಾವುದೋಭಾಗದಲ್ಲಿ ಬೇಟೆಯಾಡುವುದಕ್ಕೆ ಬಂದಿದ್ದೇವೆಂದು ಹೇಳಿ ಅಪ್ಪಣೆಚೀಟಿಯನ್ನು ಪಡೆದುಕೊಂಡು ಹೋದರಂತೆ ಇವರ ಹತ್ತಿರ ೬೦ ಒಂಟೆಗಳೂ ಸಿಡಿಮದ್ದಿನ ಬಹಳ ಸಾಮಗ್ರಿಯೂ ಇದೆಯಂತೆ. ಇವರಿಗೆ ರಷ್ಯಾದೇಶದ ಬೆಟ್ಟದ ಕಣಿವೆಯಮಾರ್ಗಗಳನ್ನು ಹಾಳ್ಮಾಡಬೇಕೆಂಬ ಉದ್ದೇಶವಿದೆಯಂತೆ. ಪ್ರಕೃತದಲ್ಲಿ ಇವರು ಮಾಂಚೂರಿಯಾಪ್ರಾಂತಕ್ಕೆ ಹೋಗುತ್ತಿರುವರೆಂಬ ಗಾಳಿವಾರ್ತೆಯಿದೆ. ರಷ್ಯ ಅಧಿಕಾರಿಗಳು ಇವರನ್ನು ಹಿಡಿಯಲು ಪ್ರಯತ್ನಿಸಿರುವರು. ತಮಗೆ ಸಹಾಯಮಾಡಿದರೆ ೪೦ ಸಾವಿರ ನಾಣ್ಯಗಳನ್ನು ಕೊಡುತ್ತೇವೆಂದು ಇವರು ಒಂದುಕಡೆ ಒಬ್ಬ ಚೀನಾಧಿಕಾರಿಗೆ ಶ್ರುತಪಡಿಸಿಕೊಂಡರಂತೆ.

ಯುದ್ಧವಾರ್ತೆಯು.

(ಪಶ್ಚಿಮರಣರಂಗ)

ನ್ಯೂಪಾಪೆಲ್ ಗ್ರಾಮವನ್ನು ಮಿತ್ರಮಂಡಲಿಯವರು ವಶಪಡಿಸಿಕೊಳ್ಳುವಾಗ್ಗೆ ನಡೆದ ಮಹಾಯುದ್ಧದಲ್ಲಿ ಜರ್ಮನರಕಡೆ ೧೮ ಸಾವಿರ ಮಂದಿಗೆ ಕಡಿಮೆಯಿಲ್ಲದೆ ಸತ್ತಿರುವರೆಂದು ಗೊತ್ತಾಗಿದೆ. ಮಿತ್ರಮಂಡಲಿಯವರು ಎಲ್ಲಕಡೆಯೂ ಮುಂದಕ್ಕೆ ಸಾಗುತ್ತಿದ್ದಾರೆ. ಜರ್ಮನರು ತಮಗಾದ ಅಪಜಯದಿಂದ ರೇಗಿ ಪ್ಯಾರಿಸ್ಸಿನಮೇಲೂ, ರೀಮ್ಸ್ ಮೊದಲಾದ ಕೆಲನಗರಗಳಮೇಲೂ ಆಕಾಶಯಾನಗಳ ಮೂಲಕ ಹೋಗಿ ಸಿಡಿಮದ್ದುಗಳನ್ನು ಹಾಕಿ ಅನರ್ಥಮಾಡುತ್ತಿದ್ದಾರೆ. ಪ್ಯಾರಿಸ್ಸಿನಲ್ಲಿ ಹಾಕಿದ ೧೪ ಸಿಡಿಮದ್ದುಗಳಿಂದ ೬ ಮಂದಿಗೆ ಗಾಯವಾಗಿ ಒಬ್ಬನು ಸತ್ತನು. ಸ್ವಲ್ಪ ಕಟ್ಟಡದ ನಾಶವಾಯಿತು. ಇದಕ್ಕೆ ಪ್ರತಿಯಾಗಿ ಫ್ರಾನ್ಸ್ ವೈಮಾನಿಕರನೇಕರು ಹಗಲೂ ರಾತ್ರಿಯೂ ಜರ್ಮನರ ಸೇನಾಶಿಬಿರದಮೇಲೂ, ಹೊಗೆಬಂಡಿಗಳಮೇಲೂ, ಮದ್ದಿನಮನೆಗಳಮೇಲೂ ಸಿಡಿಮದ್ದುಗಳನ್ನು ಹಾಕಿ ನಷ್ಟಪಡಿಸುತ್ತಿದ್ದಾರೆ.

ಪೂರ್ವರಣರಂಗ.

ವಾರ್ಸಾವನ್ನು ಸೇರಬೇಕೆಂದು ಜರ್ಮನರು ಮಾಡಿದ ಪ್ರಯತ್ನವೆಲ್ಲಾ ವ್ಯರ್ಥವಾಯಿತು. ರಷ್ಯನರೇ ಈಗ ೨ ನೆಯ ಬಾರಿ ಪರ್ಷ್ಯಾದೇಶ (ಜರ್ಮನಿ) ದೊಳಕ್ಕೆ ಈಶಾನಭಾಗದಲ್ಲಿ ನುಗ್ಗಿ ಮೆಮೋಲಿನಕಡೆಗೆ ಸಾಗುತ್ತ ದಾರಿಯಲ್ಲಿದ್ದ ಕೆಲ ಗ್ರಾಮಗಳನ್ನು ಹಿಡಿದಿದ್ದಾರೆ. ಮತ್ತೂ ಉತ್ತರಸಮುದ್ರತೀರದಲ್ಲಿರುವ ಮೆಮೋಲೆಂಬ ರೇವೆಪಟ್ಟಣವನ್ನೂ ವಶಪಡಿಸಿಕೊಂಡಿದ್ದಾರೆ. ಇದನ್ನು ೨ ಜರ್ಮನ್ ಪಟಾಲಮುಗಳು ರಕ್ಷಿಸುತ್ತಿದ್ದುವು. ಅಲ್ಲಿದ್ದ ಜರ್ಮನರನ್ನೆಲ್ಲಾ ಹಿಂದಕ್ಕೆ ಅಟ್ಟಿದ್ದಾರೆ. ಈಗ್ಗೆ ೩ ವಾರಗಳ ಕೆಳಗೆ ಜರ್ಮನರು ರಷ್ಯಾದೇಶದೊಳಗಿನ ಪೋಲಂಡಿಗೆ ನುಗ್ಗಿದ್ದಾಗ್ಗೆ ೯೫ ಪಟ್ಟಣಗಳನ್ನೂ ೪೫೦೦ ಗ್ರಾಮಗಳನ್ನೂ ಧ್ವಂಸಮಾಡಿರುವರಂತೆ. ಇದರಿಂದ ಆ ದೇಶಕ್ಕೆ ೧೫೦ ಕೋಟಿ ರೂ.ಗಳಷ್ಟು ನಷ್ಟವಾಗಿದೆ.

ರಷ್ಯನರು ದಕ್ಷಿಣದಲ್ಲಿ ಆಸ್ಟ್ರಿಯನ್ನರ ಮೇಲೆ ಯುದ್ಧಮಾಡುತ್ತಿರುವ ಎಲ್ಲಕಡೆಯೂ ಅವರಿಗೆ ಜಯಲಾಭವೇ ಆಗಿದೆ. ಕಳೆದ ೬ ತಿಂಗಳಿಂದಲೂ ಪ್ರಿಜೆಮ್ಸ್ಲಿಲ್ ಎಂಬ ಕೋಟೆಗೆ ರಷ್ಯನರು ಮುತ್ತಿಗೆ ಹಾಕಿ ಯುದ್ಧಮಾಡುತ್ತಿದ್ದರು. ಒಳಗೆ ೨೫ ಸಾವಿರ ಆಸ್ಟ್ರಿಯನ್ ಸೈನಿಕರಿದ್ದರು. ಅವರಿಗೆ ಆಹಾರಕ್ಕಭಾವವಾಯಿತು. ಆಕಾಶವಿಮಾನಗಳ ಮೇಲೆ ಕೆಲಕಾಲ ಸಾಮಗ್ರಿಗಳು ಒದಗಿಸಲ್ಪಟ್ಟುವು. ಕಡೆಗೆ ಕೋಟೆಯೊಳಗಿನವರೆಲ್ಲಾ ಕಳೆದವಾರ ಹೊರಬಿದ್ದು ರಷ್ಯನರಮೇಲೆ ಭೀಕರಯುದ್ಧವನ್ನು ಮಾಡಿದರು. ಬಲವಾದ ಪೆಟ್ಟನ್ನು ತಿಂದು ಬಹು ಸೈನ್ಯವನ್ನು ಕಳೆದುಕೊಂಡು ಒಳಹೊಕ್ಕಿಕೊಂಡರು. ಕಡೆಗೆ ಒಳಗಿದ್ದ ಸಾಮಗ್ರಿಯನ್ನೆಲ್ಲಾ ನಾಶಪಡಿಸಿ, ಉಳಿದಿದ್ದ ಸೈನಿಕರು ತಮ್ಮ ಸಹಿತ ಕೋಟೆಯನ್ನು ರಷ್ಯನರಿಗೆ ಒಪ್ಪಿಸಿಕೊಟ್ಟರು. ಇದು ರಷ್ಯನರಿಗೆ ಆದ ವಿಶೇಷ ಜಯಲಾಭವಾಗಿದೆ. ಈ ಜಯದಿಂದ ರಷ್ಯಾದೇಶದಲ್ಲಿ ಸಂತೋಷೋತ್ಸವವು ನಡೆದಿತು. ಈ ಕಾರ್ಯದಲ್ಲಿ ಜಯಶೀಲರಾದ ಸೇನಾಪತಿಗಳಿಗೆ ರಷ್ಯಾಚಕ್ರವರ್ತಿಯವರು ಬಹುಮಾನಬಿರುದುಗಳನ್ನಿತ್ತರು. ಈ ಕೋಟೆಯಲ್ಲಿ ಮೊದಲು ೧೭೦೦೦೦ ಸೈನಿಕರಿದ್ದರಂತೆ. ಅವರಲ್ಲಿ ೪೦೦೦೦ ಮಂದಿಗಳು ಹತರಾದರು. ಇನ್ನು [illegible] ಸಾವಿರ ಮಂದಿಗೆ ಗಾಯವಾಯಿತು. ೯ ಮಂದಿ ಜನರಲ್ಲುಗಳೂ, ೯೩ ಮಂದಿ ಲೆಫ್ಟನೆಂಟುಗಳೂ, ೨|| ಸಾವಿರ ಇತರ ಉದ್ಯೋಗಿಗಳೂ, ೧೧೭೬೦ ಮಂದಿ ಸಾಮಾನ್ಯ ಭಟರೂ, ಅನೇಕ ಮದ್ದುಗುಂಡು ಫಿರಂಗಿ ಮೊದಲಾದ ಸಾಮಗ್ರಿಗಳೂ ಸಹ ರಷ್ಯನರಿಗೆ ಸಿಕ್ಕಿದುವು. ಈ ಕೋಟೆಯ ಮುತ್ತಿಗೆಗೆ ೧|| ಲಕ್ಷ ಮಂದಿ ರಷ್ಯನ್ ಸೈನಿಕರು ನಿಯುಕ್ತರಾಗಿದ್ದರು. ಈ ಕೋಟೆಯ ಮುತ್ತಿಗೆಯಲ್ಲಿ ತೊಡಗಿದ್ದ ರಷ್ಯನ್ ಸೈನ್ಯವು ಕ್ರಾಕೋಪಟ್ಟಣದ ಕಡೆಗೆ ಹೊರಡುವುದಾಗಿದೆ. ಕಾರ್ಪೇತಿಯನ್ ಕಣಿವೆಯ ಪ್ರಾಂತದಲ್ಲೂ ರಷ್ಯನರು ಮುಂದುವರಿಯುತ್ತಿದ್ದಾರೆ. ಅಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ರಷ್ಯನರು ಕಳೆದ ಸೋಮವಾರ ಒಂದರಲ್ಲೇ ೨|| ಸಾವಿರ ಮಂದಿ ಆಸ್ಟ್ರಿಯನ್ ಸೈನಿಕರನ್ನು ಸೆರೆಹಿಡಿದರು.

ಡಾರ್ಡಿನಲ್ಸಿನ ಯುದ್ಧ.

ಕೆಲ ದಿನಗಳಿಂದ ಡಾರ್ಡಿನಲ್ಸಿನ ಬಳಿಯಲ್ಲಿ ಸಮುದ್ರವು ಅಲ್ಲೋಲಕಲ್ಲೋಲವಾಗಿದ್ದುದರಿಂದ ಯುದ್ಧಕಾರ್ಯಕ್ಕೆ ಸ್ವಲ್ಪ ಪ್ರತಿಬಂಧಕವಾಗಿದ್ದಿತು. ಈಗ ಸಮುದ್ರವು ಶಾಂತವಾಗಿರುವುದರಿಂದ ಕೇಪೇಜ್‌ಬರ್ರಿನವರೆಗೂ ಮಿತ್ರಮಂಡಲಿಯ ಹಡಗುಗಳು ಹೋಗಿಬರುತ್ತಿವೆ. ಈ ಜಲಸಂಧಿಯಲ್ಲಿ ಶತ್ರುಗಳು ಮುಳುಗಿಸಿದ್ದ ಮದ್ದಿನ ಗೋಳಗಳನ್ನು ಕಳೆದ ೮-೧೦ ದಿನಗಳಿಂದಲೂ ಮಿತ್ರಮಂಡಲಿಯ ನಾವೆಗಳು ಶೋಧಿಸಿ ತೆಗೆಯುತ್ತಲೇ ಇವೆ. ಆದರೂ ಸಮುದ್ರವು ಅಲ್ಲೋಲಕಲ್ಲೋಲವಾಗಿದ್ದಾಗ ಕೆಲ ಗೋಳಗಳು ನೀರಿನಲ್ಲೇ ಕೊಚ್ಚಿಬಂದು ಇಕ್ಕಟ್ಟಾದ ಸ್ಥಲಗಳಲ್ಲಿ ಮರಳಿ ಸೇರಿಕೊಂಡಿವೆ. ಕಳೆದ ತಾ|| ೧೫ ರ ಬೆಳಗಿನ ೧೦||| ಗಂಟೆಗೆ ಕ್ವೀನ್ ಎಲಿಜಬೆತ್ ಮೊದಲಾದ ೪ ಹಡಗುಗಳು ತುರ್ಕಿಯವರ ೫ ಕೋಟೆಗಳ ಮೇಲೂ ಇನ್ನೆರಡು ಹಡಗುಗಳು ತುರ್ಕಿಯವರ ಮೂರು ಫಿರಂಗಿಸೇನೆಯ ಮೇಲೂ ಫಿರಂಗಿಗುಂಡುಗಳನ್ನು ವೇಗವಾಗಿ ಹೊಡೆಯಲುಪಕ್ರಮಿಸಿದುವು. ಇದಕ್ಕೆ ಪ್ರತಿಯಾಗಿ ತುರ್ಕಿಯವರೂ ಬಲವಾಗಿ ಗುಂಡುಗಳನ್ನು ಹಾರಿಸಿದರು. ೧೨|| ಗಂಟೆಯ ಹೊತ್ತಿಗೆ ಸಫಸಾ-ಗುಲೋಸು ಮೊದಲಾದ ಫ್ರೆಂಚರ ೪ ಹಡಗುಗಳು ಇನ್ನಷ್ಟು ಮುಂದಕ್ಕೆ ಹೋಗಿ ಕೋಟೆಗಳ ಮೇಲೆ ಅತಿ ಸಮೀಪದಿಂದ ಗುಂಡುಗಳನ್ನು ಹೊಡೆಯಲುಪಕ್ರಮಿಸಿದುವು. ಆಗ ತುರ್ಕಿಯವರೂ ಕೂಡ ನಾಲ್ಕು ಕೋಟೆಗಳಿಂದ ಪ್ರತಿಗುಂಡುಗಳನ್ನು ಹಾರಿಸಿದರು. ಆದರೆ ಮಿತ್ರಮಂಡಲಿಯವರ ಕಡೆ ಹತ್ತು ಹಡಗುಗಳು ಒಟ್ಟಿಗೆ ಕೋಟೆಗಳ ಮೇಲೆ ಅಖಂಡವಾಗಿ ಗುಂಡುಗಳ ಮಳೆಯನ್ನು ಸುರಿಸುತ್ತ ಬಂದುದರಿಂದ ತುರ್ಕಿಯ ಕೋಟೆಗಳ ಫಿರಂಗಿಗಳ ಸದ್ದು ಅಡಗಿಹೋಯಿತು. ಈ ಯುದ್ಧದಲ್ಲಿ ತೊಡಗಿದ್ದ ಹಡಗುಗಳಿಗೆಲ್ಲಾ ತುರ್ಕಿಯವರ ಗುಂಡಿನೇಟುಗಳು ಬಿದ್ದಿದ್ದುವು. ಇವುಗಳಿಗೆಲ್ಲಾ ಸ್ವಲ್ಪ ವಿಶ್ರಾಂತಿಯನ್ನು ಕೊಡುವುದಕ್ಕಾಗಿ ವೆಂಜೆನ್ಸ್ ಮೊದಲಾದ ೬ ಹಡಗುಗಳು ಹೋದುವು. ಅತಿ ಸಾಮರ್ಥ್ಯದಿಂದ ಗುಂಡುಗಳನ್ನು ಹೊಡೆದು ಜಯಶೀಲವಾಗಿ ಫ್ರೆಂಚರ ಹಡಗುಗಳು ಹಿಂದಿರುಗಿ ಬರುತ್ತಿದ್ದಾಗ ಬವೇಟ್ ಎಂಬ ಹಡಗು ನೀರಿನಲ್ಲಿದ್ದ ಮದ್ದಿನ ಗೋಳಕ್ಕೆ ಬಡಿದು ಸ್ವಲ್ಪಹೊತ್ತಿನೊಳಗೆ ಮುಳುಗಿಹೋಯಿತು. ಅದರಲ್ಲಿದ್ದ ನಾವಿಕರಲ್ಲಿ ೬೪ ಮಂದಿ ಸಂರಕ್ಷಿಸಲ್ಪಟ್ಟರು. ಗುಲೋಸ್ ಎಂಬ ಮತ್ತೊಂದು ಫ್ರೆಂಚರ ಹಡಗು ತುರ್ಕಿಯವರ ಗುಂಡಿನೇಟಿನಿಂದ ಸದ್ಯಃ ಯುದ್ಧಕ್ಕೆ ನಿರುಪಯೋಗ್ಯವಾಯಿತು. ಮುಳುಗಿಹೋದ ಬವೇಟ್ ಹಡಗಿಗೆ ಪ್ರತಿಯಾಗಿ ಫ್ರೆಂಚರು ಸಿರಿಯಾದಲ್ಲಿರುವ ತಮ್ಮ ಹೆನ್ರೀಕ್ವಾರ್ಟರ್ ಎಂಬ ಹಡಗನ್ನು ಕಳುಹಿಸಲು ಅಪ್ಪಣೆಮಾಡಿದ್ದಾರೆ.

ಅದೇದಿನ ಮೂರುಜಾವದ ೪ ಗಂಟೆಗೆ ಇಂಗ್ಲೀಷ್ ಹಡಗುಗಳಲ್ಲಿ ಇರಿಜಿಸ್ಟಬಿಲ್ ಎಂಬುದೂ, ೬ ಗಂಟೆಯ ಹೊತ್ತಿನಲ್ಲಿ ಓಷನ್ ಎಂಬುದೂ ಸಹ ಅದೇರೀತಿಯಲ್ಲಿ ಮದ್ದಿನ ಗೋಳಗಳಿಗೆ ಬಡಿದು ಮುಳುಗಿಹೋದುವು. ಇವು ಮುಳುಗಿದ ಸ್ಥಲದಲ್ಲಿ ನೀರು ಬಹಳ ಆಳವಾಗಿದ್ದಿತು. ಮತ್ತೊಂದು ಇನ್‌ಪ್ಲೆಕ್ಸಿಬಲ್ ಎಂಬ ಹಡಗಿನ ಮುಂಭಾಗಕ್ಕೆ ೧ ದೊಡ್ಡ ಫಿರಂಗಿ ಗುಂಡಿನೇಟು ಬಡಿದಿದೆ. ಅದುಕಾರಣ ಅದನ್ನು ಸುಪಡಿಸಬೇಕಾಯಿತು. ಅಷ್ಟರಲ್ಲಿ ಸಾಯಂಕಾಲವಾದುದರಿಂದ ಗುಂಡನ್ನು ಹಾರಿಸುವಿಕೆಯೂ ಮದ್ದಿನ ಗೋಳಗಳನ್ನು ತೆಗೆದುಹಾಕುವ ಕೆಲಸವೂ ನಿಲ್ಲಿಸಲ್ಪಟ್ಟಿತು. ಇವು ಮುಳುಗಿಹೋದುದು ತಾ|| ೧೫ ರಲ್ಲಿ.

ಅದರಿಂದೀಚೆಗೆ ಮತ್ತೆ ಮಿತ್ರಮಂಡಲಿಯವರ ೧೬ ಹಡಗುಗಳು ಮಾಂಡೇರಿ, ಹಾಮಿಸೆ, ಕಿಲಿಡ್ಬಹಾರ್, ಮೆಡ್ಜಿಡೆ, ಪಜೆಮೆನ್ಲಿ–ಎಂಬ ಕೋಟೆಗಳಮೇಲೆ ಬಲವಾಗಿ ಗುಂಡುಗಳನ್ನು ಹಾರಿಸಿದುವು. ಆ ಕೋಟೆಗಳಿಂದಲೂ ಪ್ರತಿಗುಂಡುಗಳು ಹಾರಿಸಲ್ಪಟ್ಟುವು. ಆದರೆ ಪ್ರಯೋಜನವೇನೂ ಇಲ್ಲ. ಮಧ್ಯಾಹ್ನ ೨ ಗಂಟೆಯ ಹೊತ್ತಿಗೆ ಡಾರ್ಡಿನಲ್ಸಿನಮೇಲೆಯೂ ಒಂದು ಪಟ್ಟಣದ ಸಮೀಪದಲ್ಲಿರುವ ಒಂದು ಕೋಟೆಯಿಂದಲೂ ವಿಪರೀತವಾಗಿ ಹೊಗೆಯೆದ್ದಿತು. ಇದರಿಂದ ಕೋಟೆಯಲ್ಲಿದ್ದ ಮದ್ದಿನ ಸಾಮಗ್ರಿಯು ಸುಟ್ಟುಹೋಗಿರಬೇಕೆಂದು ಊಹಿಸಲಾಗಿದೆ.

ಇಂಗ್ಲೀಷರಕಡೆ ಮುಳುಗಿಹೋದ ೨ ಹಡಗುಗಳಿಗೆ ಪ್ರತಿಯಾಗಿ ಕ್ವೀನ್–ಎಪ್ಲಕೇಬಿಲ್ ಎಂಬ ೨ ಯುದ್ಧದ ಹಡಗುಗಳು ಹೊರಟು ಇಷ್ಟರಲ್ಲೇ ಸೇರುವುದರಲ್ಲಿವೆ. ಮತ್ತೊಂದು ಇಂಗ್ಲೀಷರ ಸಣ್ಣ ಯುದ್ಧದ ಹಡಗು ಜಲಸಂಧಿಯ ಇಕ್ಕಟ್ಟಾದ ಭಾಗಕ್ಕೆ ಹೋಗಿ ಶತ್ರುಗಳು ಗುಂಡುಗಳನ್ನು ಹಾರಿಸುತ್ತಿದ್ದರೂ ತಪ್ಪಿಸಿಕೊಂಡು ನೀರಿನಲ್ಲಿದ್ದ ವಿದ್ಯುದ್ವಾರ್ತಾತಂತ್ರಿಯನ್ನು ಕತ್ತರಿಸಿಬಿಟ್ಟು ಬಂದಿದೆ. ಈ ಜಲಸಂಧಿಯಲ್ಲಿ ಮುಂದಿನ ಭಾಗವು ಬಹಳ ಇಕ್ಕಟ್ಟಾಗಿಯೂ ವಿಪರೀತವಾಗಿ ಮದ್ದಿನ ಗೋಳಗಳಿಂದ ನಿಬಿಡವಾಗಿಯೂ ಇರುವುದರಿಂದ ಸಾವಧಾನವಾಗಿ ಕೆಲಸವನ್ನು ಮಾಡಬೇಕೆಂದು ಅಲ್ಲಿನ ನೌಕಾವಾಹಿನಿಗೆ ಅಪ್ಪಣೆಯಾಗಿದೆ. ಇಲ್ಲಿನ ಯುದ್ಧಕಾರ್ಯವು ಅಪಾಯಕರವಾದುದೆಂಬುದನ್ನು ಮಿತ್ರಮಂಡಲಿಯವರು ತಿಳಿಯದೆ ಇಲ್ಲ. ಆದರೂ ಅವರು ಹೆಚ್ಚುನಷ್ಟಕ್ಕೆ ಅವಕಾಶವಿಲ್ಲದಂತೆ ಇದುವರೆಗೆ ಎಷ್ಟೋ ಜಯಲಾಭಗೊಂಡಿರುವುದು ಅವರ ಯುದ್ಧಕೌಶಲ್ಯಕ್ಕೆ ಭೂಷಣವಾಗಿದೆ. ಮುಂದೆ ಎಷ್ಟು ನಷ್ಟವಾದರೂ ಜಲಸಂಧಿಯನ್ನು ವಶಪಡಿಸಿಕೊಳ್ಳುವ ಕೆಲಸವನ್ನು ಮುಗಿಸಿಯೇ ತೀರಬೇಕೆಂದು ಅವರು ಶಪಥಮಾಡಿದ್ದಾರೆ. ಈಚೆಗೆ ೨-೩ ದಿನಗಳಿಂದ ಅಲ್ಲಿನ ಸಮುದ್ರವು ಅಶಾಂತವಾಗಿರುವುದರಿಂದ ಯುದ್ಧಕಾರ್ಯವು ನಿಂತಿದೆ. ಈ ಸಂಧಿಯನ್ನು ಸಾಧಿಸಿ ತುರ್ಕಿಯವರು ಶಿಥಿಲವಾಗಿದ್ದ ತಮ್ಮ ಕೋಟೆಗಳನ್ನು ಸುಪಡಿಸಿ ಫಿರಂಗಿಗಳನ್ನು ಮತ್ತೆ ಇಡುತ್ತಿದ್ದಾರೆ.

ಅತ್ತ ರಷ್ಯನರ ನೌಕಾಸೇನೆಯು ಬಾಸ್ಪರಸ್ಸಿನ ಸಮೀಪಕ್ಕೆ ಬಂದಿತೆಂದು ವಾರ್ತೆಯಿದೆ. ಇದರಿಂದ ಕಾನ್‌ಸ್ಟಾಂಟಿನೋಪಲ್ಲಿನ ಪ್ರಜೆಗಳು ಆಗಲೇ ಕಳವಳಗೊಂಡಿದ್ದಾರೆ.

ಜರ್ಮನ್ ಸಬ್‌ಮೆರೀನುಗಳ ಹಾವಳಿ.

ನೌಕಾಧಿಕಾರಿಗಳು ಪ್ರಕಟಿಸಿರುವಮೇರೆಗೆ ಈ ಕೆಳಗೆಕಂಡ ಹಡಗುಗಳು ಜರ್ಮನ್ ಸಬ್‌ಮೆರೀನುಗಳಿಂದ ಮುಳುಗಿಸಲ್ಪಟ್ಟಿರುತ್ತವೆ.—‘ಇಂಡಿಯನ್ ಸಿಟಿ’ ಎಂಬ ಹಡಗು ಸಿಸಿಲಿದ್ವೀಪದ ಹತ್ತಿರ ಮುಳುಗಿಸಲ್ಪಟ್ಟಿತು. ಇದರಲ್ಲಿದ್ದ ನಾವಿಕರು ಬದುಕಿಸಲ್ಪಟ್ಟರು. ‘ಇನ್‌ವೇರ್‌ಗಾಯಲ್’ ಎಂಬ ಹಡಗು ಕ್ರೇಸ್‌ವೆಲ್ ಬಳಿಯಲ್ಲಿ ಮುಳುಗಿಸಲ್ಪಟ್ಟಿತು. ನಾವಿಕರು ರಕ್ಷಿಸಲ್ಪಟ್ಟರು. ‘ಎಡೆನ್‌ವೇ’ ಎಂಬುದು ಇಂಗ್ಲೀಷ್ ಕಾಲುವೆಯಲ್ಲಿ ಮುಳುಗಿಸಲ್ಪಟ್ಟಿತು. ನಾವಿಕರು ರಕ್ಷಿಸಲ್ಪಟ್ಟರು. ‘ಫ್ಲೊರಾಜಾನ್’ ಎಂಬುದು ಬ್ರಿಸ್ಟಲ್‌ಕಾಲುವೆಯಲ್ಲಿ ಮುಳುಗಿಸಲ್ಪಟ್ಟಿತು. ಇದರಲ್ಲಿ ಫೈರ್‌ಮೆನ್ ಒಬ್ಬನು ಸತ್ತನು. ಉಳಿದವರು ರಕ್ಷಿಸಲ್ಪಟ್ಟರು. ‘ಹೆಡ್‌ಲ್ಯಾಂಡ್ಸ್’ ಎಂಬುದು ಸಿಸಿಲಿದ್ವೀಪದ ಹತ್ತಿರ ಟಾರ್ಪೆಡೋವಿನಿಂದ ಹೊಡೆಯಲ್ಪಟ್ಟು ಮುಳುಗಿತು. ನಾವಿಕರು ರಕ್ಷಿಸಲ್ಪಟ್ಟರು. ‘ಎಂಡ್‌ಲೂಸಿಯಸ್’ ಎಂಬುದು ಸಹ ಸಿಸಿಲಿದ್ವೀಪದ ಹತ್ತಿರ ಟಾರ್ಪೆಡೋವಿನಿಂದ ಹೊಡೆಯಲ್ಪಟ್ಟು ಮುಳುಗಿತು. ನಾವಿಕರು ರಕ್ಷಿಸಲ್ಪಟ್ಟರು. ‘ಹಾರ್ಡುಡೇಲ್’ ಎಂಬುದು ಟಾರ್ಪೆಡೋವಿನಿಂದ ಹೊಡೆಯಲ್ಪಟ್ಟು ಮುಳುಗಿತು. ೪ ಮಂದಿ ರಕ್ಷಿಸಲ್ಪಟ್ಟರು. ಇಬ್ಬರುನಾವಿಕರು ಸತ್ತರು. ‘ಡ್ರಸ್‌ಡೆನ್’ ಎಂಬ ಜರ್ಮನರ ಯುದ್ಧನಾವೆಯು ಕಾನ್ವೆಕೇಸಿಲ್ ಎಂಬ ಹಡಗನ್ನು ಮುಳುಗಿಸಿತು. ಅದರ ನಾವಿಕರೆಲ್ಲಾ ರಕ್ಷಿಸಲ್ಪಟ್ಟರು. ಕ್ರೌನ್ ಪ್ರಿನ್ಸ್ ಎಂಬ ಜರ್ಮನರ ಯುದ್ಧದ ಹಡಗು ಗುಡೇಲೋಪ್ ಎಂಬ ಫ್ರೆಂಚರ ಹಡಗನ್ನು ಬ್ರೆಜಿಲ್ ಪ್ರಾಂತದಲ್ಲಿ ಮುಳುಗಿಸಿತು. ಇದರಲ್ಲಿದ್ದ ೧೪೩ ಮಂದಿ ಪ್ರಯಾಣಿಕರನ್ನೂ ನಾವಿಕರನ್ನೂ ಸಹ ಚರ್ಚಿಲ್ ಎಂಬ ಇಂಗ್ಲೀಷ್ ಹಡಗು ರಕ್ಷಿಸಿತು. ಸ್ಕಾರ್‌ಬರೋ ಪ್ರಾಂತದಲ್ಲಿ ಸ್ವೀಡನ್ ದೇಶದ ಒಂದು ಹಡಗು ಜರ್ಮನರ ಸಬ್‌ಮೆರೀನ್ ಟಾರ್ಪೆಡೋವಿನಿಂದ ಹೊಡೆಯಲ್ಪಟ್ಟಿತು. ಅದರಲ್ಲಿದ್ದವರೊಳಗೆ ೬ ಮಂದಿಯು ನೀರಿನಲ್ಲಿ ಮುಳುಗಿ ಸತ್ತರು. ಬಯಾನೋ ಎಂಬ ಇಂಗ್ಲೀಷ್ ಕ್ರೂಯಿಝರು ಕ್ಲಯಿಡ್ ಫರ್ತಿನಹತ್ತಿರ ಕಾವಲಾಗಿ ತಿರುಗುತ್ತಿರಲು ಒಂದು ಟಾರ್ಪೆಡೋವಿನಿಂದ ಹೊಡೆಯಲ್ಪಟ್ಟು ಮುಳುಗಿತು.

ಒಂದು ಜರ್ಮನ್ ಕ್ರೂಯಿಝರು ಪಸಿಫಿಕ್ ಸಮುದ್ರದಲ್ಲಿ ಮೂರು ಇಂಗ್ಲೀಷ್ ಹಡಗುಗಳನ್ನೂ, ಮೂರು ಫ್ರೆಂಚ್ ಹಡಗುಗಳನ್ನೂ, ಒಂದು ಅಮೇರಿಕನ್ನರ ಹಡಗನ್ನೂ, ಒಂದು ರಷ್ಯನರ ಹಡಗನ್ನೂ ಸಹ ಮುಳುಗಿಸಿತು. ಆ ಹಡಗುಗಳಲ್ಲಿದ್ದ ನಾವಿಕರೂ ೩೦೦ ಮಂದಿ ಪ್ರಯಾಣಿಕರೂ ಸಹ ರಕ್ಷಿಸಲ್ಪಟ್ಟರು. ಅಟ್ಲಾಂಟಾ ಎಂಬ ಇಂಗ್ಲೀಷ್ ಹಡಗು ಟಾರ್ಪೆಡೋವಿನಿಂದ ಹೊಡೆಯಲ್ಪಟ್ಟು ನೌಕಾಶ್ರಯಕ್ಕೆ ಸೇರಿಸಲ್ಪಟ್ಟಿತು. ಅದರಲ್ಲಿದ್ದ ನಾವಿಕರು ರಕ್ಷಿಸಲ್ಪಟ್ಟರು. ಫಂಗಾಲ್ ಎಂಬ ಮತ್ತೊಂದು ಇಂಗ್ಲೀಷ್ ಹಡಗು ಟಾರ್ಪೆಡೋ ಏಟಿನಿಂದ ಮುಳುಗಿಸಲ್ಪಟ್ಟಿತು. ಒಳಗಿದ್ದ ನಾವಿಕರಲ್ಲಿ ೬ ಮಂದಿ ಮುಳುಗಿ ಸತ್ತರು. ೨೦ ಮಂದಿ ರಕ್ಷಿಸಲ್ಪಟ್ಟರು. ಲಿವಾರ್ಡೆನ್ ಎಂಬ ಮತ್ತೊಂದು ಹಡಗು ಜರ್ಮನ್ ಸಬ್‌ಮೆರೀನಿನಿಂದ ಮುಳುಗಿಸಲ್ಪಟ್ಟಿತು. ಅದರ ನಾವಿಕರು ರಕ್ಷಿಸಲ್ಪಟ್ಟರು. ಕೇಯರ್ನ್ ಓರನ್–ಕಂಕಾರ್ಡ್ ಎಂಬ ಹಡಗುಗಳೂ ಕೂಡ ಹೀಗೆಯೇ ಮುಳುಗಿಸಲ್ಪಟ್ಟುವು. ಗೋದುವೆಯನ್ನು ತುಂಬಿ ತರುತ್ತಿದ್ದ ಒಂದು ಇಂಗ್ಲೀಷ್ ಹಡಗಿನ ಮೇಲೆ ಶತ್ರುವೈಮಾನಿಕರು ಸಿಡಿಮದ್ದನ್ನು ಬಹಳವಾಗಿ ಹಾಕಿದರು. ಎಲ್ಲವೂ ಸಮುದ್ರಕ್ಕೆ ಬಿದ್ದುದರಿಂದ ಅಪಾಯವಾಗಲಿಲ್ಲ. ಹಾಲೆಂಡ್ ದೇಶದ ಒಂದು ಹಡಗನ್ನು ಜರ್ಮನರು ಹಿಡಿದುದರಿಂದ ಅವರಿಗೆ ಆಗ್ರಹವುಂಟಾಗಿದೆ. ಮತ್ತೊಂದು ಅವರ ಹಡಗಿಗೆ ಜರ್ಮನರು ಟಾರ್ಪೆಡೋವಿನಿಂದ ಹೊಡೆದಿರುವರು.

ಕಳೆದ ತಾರೀಖು ೧೪ರ ಬೆಳಗ್ಗೆ ಗ್ಲಾಸ್ಗೊ–ಕೆಂಟ್ ಎಂಬ ಇಂಗ್ಲೀಷರ ಕ್ರೂಯಿಝರುಗಳೂ, ಒರಾನಾ ಎಂಬ ಸಾಯುಧವಾದ ಇಂಗ್ಲೀಷ್ ವ್ಯಾಪಾರದ ಹಡಗೂ ಸಹ ಚಿಲೀ ತೀರದಲ್ಲಿರುವ ಜಾನ್ ಫರ್ನಾಂಡಿಸ್ ದ್ವೀಪದ ಹತ್ತಿರ ಡ್ರೆಸ್‌ಡೆನ್ ಎಂಬ ಜರ್ಮನ್ ಕ್ರೂಯಿಝರನ್ನು ಸುತ್ತುಗಟ್ಟಿದುವು. ಎರಡು ಕಡೆಗೂ ೫ ನಿಮಿಷಕಾಲ ಯುದ್ಧವಾಯಿತು. ಬಳಿಕ ಡ್ರೆಸ್‌ಡೇನು ತನ್ನ ಧ್ವಜಪಟವನ್ನು ಇಳಿಯಿಸಿ, ಶರಣಾಗತನಾಗುತ್ತೇನೆಂಬ ಸೂಚನೆಯ ಬಿಳಿಯಬಾವುಟವನ್ನು ಎತ್ತಿಕಟ್ಟಿತು. ಅಷ್ಟರಲ್ಲಿ ಆ ಡ್ರೆಸ್‌ಡೇನಿಗೆ ಬಹಳ ಏಟುಬಿದ್ದು ಒಳಗಿದ್ದ ಮದ್ದಿನ ಕೋಣೆಯು ಹೊತ್ತಿಕೊಂಡು ಹಡಗು ಮುಳುಗಿಹೋಯಿತು. ಅದರಲ್ಲಿದ್ದ ನಾವಿಕರು ರಕ್ಷಿಸಲ್ಪಟ್ಟರು. ೧೫ ಮಂದಿಗೆ ಬಹಳ ಭಯಂಕರವಾದ ಏಟುಗಳು ಬಿದ್ದಿರುವುವು. ಈ ಯುದ್ಧದಲ್ಲಿ ಇಂಗ್ಲೀಷ್ ಹಡಗುಗಳಿಗೆ ಏಟುಗಳೂ ಬೀಳಲಿಲ್ಲ. ನಾವಿಕರಿಗೂ ಯಾವ ನಷ್ಟವೂ ಇಲ್ಲ. ಈಡ್ರೆಸ್‌ಡೆನ್ ಎಂಬ ಜರ್ಮನರ ಹಡಗು ಫಾಕ್ಲಾಂಡ್ ಯುದ್ಧದಲ್ಲಿ ತಪ್ಪಿಸಿಕೊಂಡು ಹೋಗಿದ್ದಿತು. ಮತ್ತು ಕಾರ್ಲೇಷೂ ಎಂಬ ಜರ್ಮನ್ ಕ್ರೂಯಿಝರು ಸಹ ಧ್ವಂಸವಾಯಿತೆಂದು ಸುದ್ದಿ ಬಂದಿದೆ.

ಮಿತ್ರಮಂಡಲಿಯವರ ಉಪಾಯ ಅವರ ಜಯಲಾಭ.

ಪೂರ್ವರಣರಂಗದಲ್ಲಿ ಶತ್ರುಗಳ ಸೆಣಸಾಟವು ತೀಕ್ಷ್ಣವಾಗುತ್ತಿದ್ದುದರಿಂದ ಅವರಿಗೆ ಪಶ್ಚಿಮರಣರಂಗದ ಸೇನೆಯ ಸಹಾಯವೂ ಕೂಡ ಒದಗಿದರೆ ರಷ್ಯನರಿಗೆ ಯುದ್ಧವು ದುರ್ಘರವಾಗುವುದೆಂದೂ, ಅದುಕಾರಣ ಪಶ್ಚಿಮರಣರಂಗದ ಜರ್ಮನ್ ಸೈನ್ಯವು ಪೂರ್ವರಣರಂಗಕ್ಕೆ ಹೋಗದಂತೆ ಮಾಡಬೇಕೆಂದೂ, ಮಿತ್ರಮಂಡಲಿಯವರು ಪ್ರಯತ್ನಿಸಿ, ಆ ರಣರಂಗದಲ್ಲಿ ಕಳೆದ ೩-೪ ವಾರಗಳಿಂದ ಶತ್ರುಗಳ ಮೇಲೆ ವಿಪರೀತವಾಗಿ ಬಿದ್ದು ಕಾಳಗಗಳನ್ನು ಕೊಡುತ್ತ ಬಂದರು. ಈ ಕಾರ್ಯದಲ್ಲಿ ಫ್ರೆಂಚರ ಸೈನ್ಯವು ೪ ಮೈಲಿಗಳ ಉದ್ದವೂ ೨ ಮೈಲಿಗಳ ಅಗಲವೂ ಆದ ಶತ್ರುಗಳ ಕಂದಕಗಳನ್ನು ಕೆಲಕಡೆ ಹಿಡಿದುಕೊಂಡಿತು. ಇದಲ್ಲದೆ ಹಲವುಸ್ಥಲಗಳಲ್ಲಿನ ಉನ್ನತಪ್ರದೇಶಗಳು ಫ್ರೆಂಚರಿಗೆ ವಶವಾದುವು. ಇದರಿಂದ ಫ್ರೆಂಚರಿಗೆ ಜರ್ಮನರಮೇಲೆ ಬೀಳುವುದಕ್ಕೆ ಒಳ್ಳೇ ಸ್ಥಲಗಳು ಸಿಕ್ಕಿದಂತಾಯಿತು. ಜರ್ಮನಿಯವರಿಗೆ ದೊಡ್ಡದೊಡ್ಡ ನಷ್ಟಗಳು ಸಂಭವಿಸಲವಕಾಶವಾಯಿತು. ಅವರ ಕಡೆಯ ೨ ರಿಜಿಮೆಂಟುಗಳು ಸಂಪೂರ್ಣವಾಗಿ ನಾಶವಾದುವು. ಶತ್ರುಗಳು ಆ ಪ್ರಾಂತದಲ್ಲಿ ತಮ್ಮ ಕಡೆಯ ೪-೫ ಸೇನೆಗಳನ್ನು ಯುದ್ಧಕ್ಕಾಗಿ ನಿಯೋಜಿಸಿದ್ದರು. ಪರ್ಯವಸಾನದಲ್ಲಿ ಜರ್ಮನರಕಡೆಯ ೧೦ ಸಾವಿರ ಹೆಣಗಳು ಯುದ್ಧಾಂಗಣದಲ್ಲೇ ಗೋಚರಿಸಿದುವು. ೨ ಸಾವಿರ ಮಂದಿಗಳು ಸೆರೆಯಾಳುಗಳಾಗಿ ಸಿಕ್ಕಿದರು. ಜರ್ಮನರು ಹಳೆಯ ಕಂದಕಗಳನ್ನು ಬಿಟ್ಟು ಹೊಸವುಗಳನ್ನು ತೋಡಿಕೊಂಡು ನಿಂತು, ಅದನ್ನೂ ಬಿಟ್ಟು ಓಡಿಹೋಗುವುದೇ ಅವರ ಕೆಲಸವಾಯಿತು. ಫೆಬ್ರವರಿ ತಾ|| ೧೬ ರಲ್ಲಿ ಚಾಂಪೆಯಿನ್ನಿನಲ್ಲಿ ಜರ್ಮನರಕಡೆಗೆ ೧೧೯ ಬೆಟಾಲಿಯನ್ನುಗಳೂ, ೩೧ ಸ್ಕ್ವಾಡ್ರನ್ನುಗಳೂ, ೬೪ ಫೀಲ್ಡ್‌ಬ್ಯಾಟರಿಗಳೂ, ೨೦ ಹೆವೀಬ್ಯಾಟರಿಗಳೂ ಇದ್ದುವು. ಇವಲ್ಲದೆ ಮಾರ್ಚಿ ತಾ|| ೧೨ ರಲ್ಲಿ ಮತ್ತೆ ೨೦ ಬೆಟಾಲಿಯನ್ನುಗಳು ಹೊಸದಾಗಿ ಸಹಾಯಕ್ಕೆ ಬಂದುವು. ಶತ್ರುಗಳ ಇಷ್ಟು ದೊಡ್ಡಸೇನೆಯಮೇಲೆ ಮಿತ್ರಮಂಡಲಿಯು ಬಿದ್ದು ಕಾ

ಯುತ್ತ ಅದರಲ್ಲಿ ಸ್ವಲ್ಪಭಾಗವಾದರೂ ಪೂರ್ವರಣರಂಗಕ್ಕೆ ಹೋಗಲವಕಾಶವಿಲ್ಲದಂತೆ ಮಾಡಿ, ತಾವು ಎಷ್ಟೋಕಡೆ ಜಯಲಾಭಗೊಂಡಿರುವರು. ಮತ್ತೂ ಹೀಗೆ ಇವರು ಪಶ್ಚಿಮರಣರಂಗದಲ್ಲಿ ಶತ್ರುಗಳನ್ನು ಯುದ್ಧಕಾರ್ಯದಲ್ಲಿ ಮಗ್ನರನ್ನು ಮಾಡಿ ತಡೆದುಕೊಂಡುದರಿಂದಲೇ ಪೂರ್ವರಣರಂಗದಲ್ಲಿ ಫೆಬ್ರವರಿ ತಾ|| ೨೫ ರಿಂದ ಮಾರ್ಚಿ ತಾ|| ೨೦ ರ ವರೆಗೆ ಶತ್ರುಗಳ ಬಲವು ಕಡಿಮೆಯಾಗಿ ರಷ್ಯನರಿಗೆ ವಿಜಯವು ಲಭಿಸುವುದಕ್ಕೆ ಮಾರ್ಗವಾಯಿತು. ಮಿತ್ರಮಂಡಲಿಯವರ ಈ ಪ್ರಕಾರವಾದ ಪರಸ್ಪರ ಸಹಾಯಗಳು ಅವರಿಗೆ ಇಷ್ಟು ಅನುಕೂಲವನ್ನು ಮಾಡಿಕೊಡುತ್ತಿವೆ.

ಮೈಸೂರ್ ಸ್ಟಾರ್.

ಸನ್ ೧೯೧೫ ನೆಯ ಮಾರ್ಚಿ ತಾ|| ೨೮ ನೆಯ ಭಾನುವಾರ.

ದೇಶಭಾಷೆಯಲ್ಲಿ ವಿದ್ಯಾಭ್ಯಾಸ.

ಮೊನ್ನೆತಾನೇ ದಿಲ್ಲಿಯಲ್ಲಿ ಕೂಡಿದ್ದ ಸಾಮ್ರಾಜ್ಯಶಾಸನವಿಧಾಯಕಸಭೆಯಲ್ಲಿ ಕೆಲ ಮುಖ್ಯವಿಷಯಗಳು ಚರ್ಚಿತವಾದುವು. ಅವುಗಳೊಳಗೆ ಮಧ್ಯಮತರಗತಿಯ ಶಾಲೆಗಳಲ್ಲಿ ದೇಶಭಾಷೆಯನ್ನು ಮುಖ್ಯಭಾಷೆಯನ್ನಾಗಿಯೂ ಇಂಗ್ಲೀಷ್ ಭಾಷೆಯನ್ನು ಉಪಭಾಷೆಯನ್ನಾಗಿಯೂ ಏರ್ಪಡಿಸಿ ಬೋಧಿಸುವುದರಿಂದ ದೇಶಭಾಷೆಗಳಿಗೆ ಪುನರುಜ್ಜೀವನ ಉಂಟಾಗುವುದೆಂಬ ಸೂಚನೆಯು ಒಬ್ಬ ಸಭಿಕರಿಂದ ಮಾಡಲ್ಪಟ್ಟಿತು. ಸಭಿಕರಲ್ಲಿ ಇದಕ್ಕೆ ಅನುಕೂಲವಾಗಿ ಅಭಿಪ್ರಾಯಪಟ್ಟವರು ಸ್ವಲ್ಪ ಮಂದಿಯಾಗಿಯೂ ವ್ಯತಿರಿಕ್ತವಾಗಿ ಮಾತನಾಡಿದವರು ಅನೇಕರಾಗಿಯೂ ಇದ್ದುದರಿಂದ ಇದು ಅಂಗೀಕೃತವಾಗದೆ ಹೋಯಿತು.

ಈ ವಿಷಯವಾಗಿ ನಡೆದಿರುವ ಚರ್ಚೆಯನ್ನೆಲ್ಲಾ ನೋಡುವಲ್ಲಿ ಕೆಲರಿಗೆ ಆಂಗ್ಲಭಾಷೆಯೇ ಭರತಖಂಡದ ಸಾಮಾನ್ಯಭಾಷೆಯಾಗಿ ಪರಿಣಮಿಸುವುದೆಂಬ ಭ್ರಮೆಯೂ, ಕೆಲವರಿಗೆ ಈ ದೇಶದಲ್ಲಿರುವ ನೂರಾರು ದೇಶಭಾಷೆಗಳಲ್ಲಿ ಯಾವುದು ಗಣ್ಯವಾಗಿ ಸಾಮಾನ್ಯಭಾಷೆಯಾಗಬಹುದೆಂಬ ಸಂಶಯವೂ, ಇನ್ನು ಕೆಲರಿಗೆ ಈ ಏರ್ಪಾಟಿನಿಂದ ಆಂಗ್ಲಭಾಷೆಯ ಪ್ರಾಶಸ್ತ್ಯಕ್ಕೆ ಎಲ್ಲಿ ಕುಂದುಬರುವುದೋ ಎಂಬ ಭೀತಿಯೂ ಇದ್ದಂತೆ ವ್ಯಕ್ತವಾಗುವುದು. ಆದರೆ ಈ ಸೂಚನೆಯನ್ನು ತಂದವರಿಗೇ ಆಗಲಿ, ಅದನ್ನನುಮೋದಿಸುವವರಿಗೇ ಆಗಲಿ ಭರತಖಂಡದ ಯಾವುದೊಂದು ದೇಶಭಾಷೆಯೂ ಸಾಮಾನ್ಯಭಾಷೆಯಾಗಿ ಪರಿಣಮಿಸಬೇಕೆಂಬ ಉದ್ದೇಶವು ಇದ್ದು ಈ ಸೂಚನೆಗೆ ಕಾರಣವಾಗಿಲ್ಲ. ಆಯಾ ದೇಶದಲ್ಲಿ ಆಯಾ ದೇಶಭಾಷೆಯು ಮಧ್ಯಮತರಗತಿಯ ಶಾಲೆಗಳ ಬೋಧನಸಾಧನವಾಗಿದ್ದರೆ ಆಯಾದೇಶಭಾಷೆಗೆ ಪ್ರೋತ್ಸಾಹವುಂಟಾಗುವುದೆಂದು ಮಾತ್ರವೇ ಅವರ ಆಶಯವಾಗಿರುತ್ತದೆ. ಕಳೆದ ೧೯೧೧ನೆಯ ವರ್ಷದ ಜನಪರಿಗಣನೆಯನ್ನು ನೋಡಿದರೆ ಭರತಖಂಡದಲ್ಲೆಲ್ಲಾ ೧೦ಲಕ್ಷ ಜನರು ಮಾತ್ರ ಆಂಗ್ಲಭಾಷೆಯನ್ನರಿತವರಿದ್ದಾರೆಂದು ವ್ಯಕ್ತವಾಗುತ್ತದೆ. ೩೩ ಕೋಟಿ ಜನರಿರುವ ದೇಶದಲ್ಲಿ ಈ ಸಂಖ್ಯೆಯು ಯಾವಮೂಲೆಗೆ? ಹೀಗಿರುವಲ್ಲಿ ಆಂಗ್ಲಭಾಷೆಯು ಈ ದೇಶದ ಸಾಮಾನ್ಯಭಾಷೆಯಾಗುವುದು ಸಾಧ್ಯವೆ? ನಮ್ಮ ದೇಶ-ನಮ್ಮ ಭಾಷೆಯೆಂಬ ಅಭಿಮಾನವಿರುವವರು ಸರ್ವವಿಧದಲ್ಲೂ ಅದರ ಪೋಷಣೆಗೆ ಅವಶ್ಯಕವಾದ ಸಾಧನಗಳನ್ನು ಸಮಯಬಿದ್ದಾಗ ಕಲ್ಪಿಸಿಕೊಳ್ಳಬೇಡವೆ? ಬರೋಡಾ ಸಂಸ್ಥಾನದಲ್ಲಿ ಶಾಸ್ತ್ರೀಯವಿಷಯಗಳನ್ನೆಲ್ಲಾ ಸ್ವದೇಶಭಾಷೆಗೆ ಪರಿವರ್ತಿಸಿ, ಶಾಲೆಗಳಲ್ಲಿ ಆ ಗ್ರಂಥಗಳಮೇಲೆಯೇ ಪಾಠವನ್ನು ನಡೆಯಿಸುವುದಕ್ಕೆ ಏರ್ಪಡಿಸಿದ್ದಾರೆ. ಜಪಾನ್ ದೇಶೀಯರು ಪಾಶ್ಚಾತ್ಯದೇಶದ ಸಕಲ ಶಾಸ್ತ್ರಗ್ರಂಥಗಳನ್ನೂ ಸ್ವದೇಶಭಾಷೆಗೇ ಪರಿವರ್ತಿಸಿ ಬೋಧಿಸುತ್ತಿದ್ದಾರೆ. ದೇಶಾಭಿಮಾನಕ್ಕೆ ಇದು ಭೂಷಣವೂ ಫಲಕಾರಿಯೂ ಆದುದಲ್ಲವೆ? ಭರತಖಂಡದಲ್ಲಿ ಪೂರ್ವದೊಳಗೆ ಆಯಾದೇಶಭಾಷಾಪಂಡಿತರಿಗೆ ವಿಶೇಷವಾದ ಗೌರವಪ್ರೋತ್ಸಾಹಗಳು ಪ್ರಭುತ್ವದವರಿಂದ ತೋರಿಸಲ್ಪಡುತ್ತಿದ್ದುದರಿಂದಲೇ ಅನಂತಗ್ರಂಥಗಳು ಆ ಕಾಲದಲ್ಲಿ ಹುಟ್ಟಿ ಈಗಲೂ ದೇಶೋಪಕಾರವನ್ನು ಮಾಡುತ್ತಿರುವುವು. ಈಗ ಅಂಥ ಗ್ರಂಥಗಳು ಹುಟ್ಟುವಹಾಗೂ ಇಲ್ಲ. ರಚಿಸತಕ್ಕ ಸಾಮರ್ಥ್ಯವಂತರೂ ತಲೆಯೆತ್ತುವುದಿಲ್ಲ. ಏತಕ್ಕೆ?-ಪ್ರೋತ್ಸಾಹಾಭಾವದಿಂದಲ್ಲವೆ? ಈಗಿನಕಾಲಕ್ಕೆ ಬೇಕಾದ ಪಾಶ್ಚಾತ್ಯತಂತ್ರಗ್ರಂಥಗಳು ಇತರ ಶಾಸ್ತ್ರೀಯಗ್ರಂಥಗಳು ಮೊದಲಾದುವುಗಳನ್ನೆಲ್ಲಾ ದೇಶಭಾಷೆಗಳಲ್ಲಿ ಪರಿವರ್ತಿಸಿ ತಮ್ಮ ದೇಶೀಯರಿಗೆ ಹೇಳಿಸಬೇಕೆಂದು ಅಲ್ಲಿನ ಪ್ರಭುತ್ವದವರು ಪ್ರಯತ್ನಿಸಿದರೆ ಅದೊಂದು ಅಸಾಧ್ಯವೆ? ನಮ್ಮ ದೇಶದ ಅನೇಕ ವೇದಶಾಸ್ತ್ರಾದಿ ಗ್ರಂಥಗಳನ್ನು ಪಾಶ್ಚಾತ್ಯರು ತಮ್ಮ ಜನರ ಹಿತಕ್ಕಾಗಿ ಆಂಗ್ಲಭಾಷೆಯಲ್ಲಿ ಪರಿವರ್ತಿಸಿಕೊಂಡಿರುವುದಿಲ್ಲವೆ? ಅದರಂತೆಯೇ ನಮ್ಮ ದೇಶದಲ್ಲೂ ಏತಕ್ಕೆ ಮಾಡಬಾರದು?

ಈ ವಿಷಯದಲ್ಲಿ ವಿದ್ಯಾಶಾಖಾಧ್ಯಕ್ಷರು ಆ ಸಭೆಯೊಳಗೆ ಅಪ್ಪಣೆಕೊಡಿಸಿದ ಮಾತು, ನಮ್ಮ ದೇಶೀಯರೆನಿಸಿಕೊಂಡಿರುವ ಕೆಲ ಸಭಿಕರ ಮಾತಿಗಿಂತಲೂ ಎಷ್ಟೋಮಟ್ಟಿಗೆ ದೇಶಭಾಷೆಯ ಮೇಲಣ ಪ್ರೀತಿಯನ್ನು ವ್ಯಕ್ತಪಡಿಸುತ್ತಿದ್ದಿತು. ಮಧ್ಯಮಶಾಲೆಗಳ ಮೇಲಣ ೨-೩ ತರಗತಿಗಳ ಹೊರತು ಉಳಿದ ತರಗತಿಗಳಲ್ಲಿ ದೇಶಭಾಷೆಯಲ್ಲೇ ವಿದ್ಯಾಭ್ಯಾಸವು ನಡೆಯುತ್ತಿದೆಯೆಂತಲೂ, ದೇಶಭಾಷೆಯಲ್ಲಿ ಕೆಲವರ್ಷಗಳಕಾಲ ಅಭ್ಯಾಸಮಾಡಿಸುವುದರಿಂದಲೇ ವಿಶೇಷ ಪ್ರಯೋಜನವಿದೆಯೆಂದು ತಮ್ಮ ಅನುಭವಕ್ಕೆ ಬಂದಿದೆಯೆಂತಲೂ ಅವರು ಅಪ್ಪಣೆಕೊಡಿಸಿದರು.

ಕಡೆಗೆ, ಈಗಿನ ಯುದ್ಧವು ಮುಗಿದಬಳಿಕ ಈ ವಿಷಯದ ವಿಮರ್ಶೆಯನ್ನು ಮಾಡಬಹುದೆಂತಲೂ, ಅಷ್ಟರೊಳಗೆ ಆಯಾ ಪ್ರಾಂತಿಕ ಸರ್ಕಾರಗಳ ಅಭಿಪ್ರಾಯವನ್ನು ಕೇಳಿ ತಿಳಿದುಕೊಳ್ಳಬೇಕೆಂತಲೂ ನಿರ್ಧರಿಸಿ, ಆ ವಿಷಯವನ್ನು ವಿರಮಿಸಿಬಿಟ್ಟರು. ಮುಂದಾದರೂ ದೇಶಭಾಷಾಭಿಮಾನವು ಆಯಾಪ್ರಾಂತದ ಪ್ರತಿನಿಧಿಗಳ ಸ್ಫೂರ್ತಿಗೆ ಬಂದು ಇದರ ವಿಷಯದಲ್ಲಿ ಅನುಕೂಲವಾದ ಪ್ರೋತ್ಸಾಹವುಂಟಾಗಲು ಅವಕಾಶಮಾಡಿಕೊಡುವಂತಾಗಲೆಂಬುದು ನಮ್ಮ ಆಶೆ.

ಸದ್ಯಃ ಈ ವಿಷಯವು ನಮ್ಮ ದೇಶಕ್ಕೂ ಸಂಬಂಧಪಡದೆ ಇಲ್ಲ. ನಮ್ಮ ದೇಶದಲ್ಲಿ ಆಂಗ್ಲಭಾಷೆಯು ಸಾಮಾನ್ಯಭಾಷೆಯಾಗಬೇಕೆಂಬ ಇಷ್ಟವು ಯಾರಿಗೂ ಇರುವುದಿಲ್ಲ. ನಮ್ಮದು ಕರ್ನಾಟಕದೇಶ. ನಮ್ಮ ಪ್ರಭುಗಳು ಕರ್ನಾಟಕಸಿಂಹಾಸನಾಧೀಶ್ವರರು. ಇಂಥಕಡೆಯಲ್ಲಿ ಒಂದು ಸ್ವತಂತ್ರವಾದ ವಿಶ್ವವಿದ್ಯಾಲಯವನ್ನು ಸ್ಥಾಪಿಸಿಕೊಳ್ಳಬೇಕೆಂಬ ಪ್ರಯತ್ನವೂ ನಡೆಯುತ್ತಿದೆ. ಹೀಗಿರುವಾಗ ಸ್ವದೇಶಭಾಷೆಯ ಉದ್ಧಾರಕ್ಕೆ ಆವಶ್ಯಕವಾದ ಸಕಲಪ್ರಯತ್ನಗಳೂ ನೂತನ ವಿಶ್ವವಿದ್ಯಾಲಯಕಲ್ಪನೆಯ ಸಮಯದಲ್ಲಿ ಮಾಡಲ್ಪಡುವುದಕ್ಕೆ ಅಡ್ಡಿಯೇನುಂಟು? ವಿಶ್ವವಿದ್ಯಾಲಯ ರಚನೆಯ ವಿಷಯದಲ್ಲಿ ಅಭಿಪ್ರಾಯಕೊಡಲು ಸರ್ಕಾರದಿಂದ ಏರ್ಪಡಿಸಲ್ಪಟ್ಟಿದ್ದ ಪಂಡಿತ ಪ್ರಮುಖರು ಕೂಡ ದೇಶಭಾಷಾಪ್ರೋತ್ಸಾಹಕ್ಕೆ ಆವಶ್ಯಕವಾದ ಸೂಚನೆಗಳನ್ನು ಅದರಲ್ಲಿ ಯುಕ್ತಿಯುಕ್ತವಾಗಿ ನಿರೂಪಿಸಿದ್ದಾರೆಂದು ಕೇಳಿ ಸಂತೋಷಿಸುತ್ತೇವೆ. ಅದನ್ನು ನಮ್ಮ ಶ್ರೀಮನ್ಮಹಾರಾಜರೂ ಅವರ ಸರ್ಕಾರದವರೂ ಸಹ ಚೆನ್ನಾಗಿ ಗಮನಿಸದೆ ಇರಲಾರರೆಂದು ನಂಬುತ್ತೇವೆ. ಮತ್ತೂ ಬರುವ ಮೇ ತಿಂಗಳಲ್ಲಿ ನಮ್ಮ ಸರ್ಕಾರದವರು ಬೆಂಗಳೂರಿನಲ್ಲಿ ನಡೆಯಿಸುವುದಕ್ಕಿರುವ ಕರ್ನಾಟಕಗ್ರಂಥಕರ್ತರ ಸಮ್ಮೇಳನದಲ್ಲೂ ಕೂಡ ಪ್ರಸಕ್ತವಿಷಯವು ಗೌರ್ನಮೆಂಟಿನವರ ಗಮನಕ್ಕೆ ತರಲ್ಪಡದೆ ಇರಲಾರದೆಂದೂ ಆಶಿಸುತ್ತೇವೆ.

ದಿವಾನರು ಚೆನ್ನಪಟ್ಟಣಕ್ಕೆ ದಯಮಾಡಿಸಿದ್ದುದು.

ದಿವಾನರವರು ತಮ್ಮ ಸೆಕ್ರೆಟರಿಗಳು ಮತ್ತೂ ಡಿಸ್ಟ್ರಿಕ್ಟ ಅಧಿಕಾರಿಗಳು–ಇವರೊಡನೆ ಕಳೆದ ತಾ|| ೨೦ರಲ್ಲಿ ಚೆನ್ನಪಟ್ಟಣಕ್ಕೆ ದಯಮಾಡಿ ಅಲ್ಲಿಯ ರೇಷ್ಮೆ ಪರೀಕ್ಷಾಕ್ಷೇತ್ರ, ಪರ್ನಾವಾಡಿ, ಅಂಜುಮನ್‌ಸಂಘ, ಸಾಹುಕಾರ್ ಮಸ್ತಾನ್ ಸಾಹೇಬರ ಮನೆ, ಹಿಂದೂಮಹಮ್ಮದೀಯ ಬಾಲಕಬಾಲಿಕೆಯರುಗಳ ಪಾಠಶಾಲೆಗಳು, ಆಸ್ಪತ್ರೆ—ಇವುಗಳಿಗೆ ದಯಮಾಡಿಸಿದ್ದು ಅಲ್ಲಿಂದ ತಾಲ್ಲೂಕು ಕಚೇರಿಗೆ ಬಂದು ಅಲ್ಲಿ ಪುರನಿವಾಸಿಗಳನ್ನು ಬರಮಾಡಿಕೊಂಡು ಒಂದು ದರ್ಬಾರನ್ನು ನಡೆಯಿಸಿದರು. ಪುರನಿವಾಸಿಗಳ ಪರವಾಗಿ ಸಾಹುಕಾರ್ ಮಿ|| ಅಬ್ದುಲ್‌ಖುದುಸ್ ಸಾಹೇಬರು ಒಂದು ವಿಜ್ಞಾಪನ ಪತ್ರಿಕೆಯನ್ನು ಓದಿ ಒಪ್ಪಿಸಿದರು. ಇದರಲ್ಲಿ ಮೈಸೂರ್ ದೇಶದೊಳಗೆ ಈಚೆಗೆ ನಡೆಯಿಸಿರುವ ಪ್ರಜಾಹಿತಕಾರ್ಯಗಳನ್ನು ಕೊಂಡಾಡಿ, ಬೆಂಗಳೂರಲ್ಲಿರುವ ೨ನೆಯ ಮುನಸೀಫ್ ಕೋರ್ಟನ್ನು ತಮ್ಮೂರಿಗೆ ವರ್ಗಾಯಿಸಿ ಕೊಡಬೇಕು., ಸರ್ಕಾರಿಯ ಹೈಸ್ಕೂಲಿನ ವಿದ್ಯಾರ್ಥಿಗಳಿಗಾಗಿ ಒಂದು ನಿಲಯವನ್ನು ಕಟ್ಟಿಸಿಕೊಡಬೇಕು, ದಾನವಾರದ ಬಳಿ ಹರಿಯುವ ಕಣ್ವನದಿಗೆ ಒಂದು ಅಣೆಯನ್ನು ಕಟ್ಟಿಸಿ ಊರಿನ ಕುಡಿಯುವ ನೀರಿಗಿರುವ ಕೊರತೆಯನ್ನು ಕೂಡಲೇ ತಪ್ಪಿಸಿಕೊಡಬೇಕು, ಇಲ್ಲಿಯ ಕೈಗಾರಿಕೆಯಸ್ಕೂಲಿನಲ್ಲಿ ಬಟ್ಟೆನೇಯುವುದನ್ನು ಬೋಧಿಸಲೇರ್ಪಡಿಸಬೇಕು, ಹೆರಿಗೆಗಾಗಿ ಒಂದಾಸ್ಪತ್ರೆಯನ್ನು ಸ್ಥಾಪಿಸಬೇಕು, ಮತ್ತೂ ಹೆಂಚಿನ ಕಾರ್ಯಾಲಯವನ್ನು ಸ್ಥಾಪಿಸಲು ತಕ್ಕಾನುಕೂಲ್ಯಗಳನ್ನು ಮಾಡಿಕೊಡಬೇಕು, ಎಂದು ಮೊದಲಾಗಿ ಪ್ರಾರ್ಥಿಸಲ್ಪಟ್ಟಿದ್ದಿತು. ಅನಂತರ ಮಸ್ತಾನ್ ಸಾಹೇಬರ ಕುಟುಂಬದ ಪರವಾಗಿ ಸಾಹುಕಾರ್ ಮಿ|| ಮಹಮದ್ ಹೈದರ್‌ಸಾಹೇಬರೂ, ರೇಷ್ಮೆವ್ಯಾಪಾರಸಂಘದ ಪರವಾಗಿ ಮಿ|| ಹಾಮದ್ ದರ್ವಿಷ್ ಸಾಹೇಬರೂ, ಸುನ್ನಿಮಹಮ್ಮದೀಯ ಅಂಜುಮನ್ ಸಂಘದವರೂ, ಮಹಮ್ಮದೀಯಸಂಘದ ಸೆಕ್ರೆಟರಿಯವರೂ, ಹಿಂದೂಸ್ಥಾನಿ ಸ್ಕೂಲಿನ ಉಪಾಧ್ಯಾಯರೂ ವಿದ್ಯಾರ್ಥಿಗಳೂ ವಿಜ್ಞಾಪನ ಪತ್ರಿಕೆಗಳನ್ನೊಪ್ಪಿಸಿದರು. ದಿವಾನರು ಇವೆಲ್ಲಕ್ಕೂ ಒಟ್ಟಿಗೆ ಉತ್ತರವನ್ನು ಕೊಡುವಾಗ್ಗೆ ಈಪ್ರಾಂತದಲ್ಲಿ ರೇಷ್ಮೆಯ ವ್ಯವಸಾಯಾಭಿವೃದ್ಧಿಯ ವಿಚಾರವು ಬಹಳ ಮುಖ್ಯವಾದುದಾಗಿದೆ. ಈ ವಿಚಾರದಲ್ಲಿ ಸರ್ಕಾರದವರು ಬಹಳ ಲವಲವಿಕೆಯಿಂದ ಕೆಲಸಮಾಡುತ್ತಿರುವರೆಂಬಂಶವು ನಿಮಗೆ ತಿಳಿದೇಇದೆ. ಮತ್ತೂ ಕೈಗಾರಿಕೆಯಭಿವೃದ್ಧಿಕಾರ್ಯಗಳಲ್ಲಿ ಉತ್ಸಾಹಶೀಲರಾದ ಮಿ|| ಅಬ್ದುಲ್ ಖುದುಸ್ ಸಾಹೇಬರ ಯಾಜಮಾನ್ಯದಲ್ಲಿ ಒಂದು ಪ್ರಬಲವಾದ ಸಂಘವನ್ನೇರ್ಪಡಿಸಿಕೊಂಡಿರುವುದು ಸಂತೋಷಸ್ಥಾನವಾಗಿದೆ. ಹೆಂಚಿನ ಕಾರ್ಯಾಲಯವನ್ನು ಸ್ಥಾಪಿಸಲು ನೀವು ಮಾಡುತ್ತಿರುವ ಪ್ರಯತ್ನವು ಕೂಡಲೇ ಸಿದ್ಧಿಸುವುದೆಂದು ನಿರೀಕ್ಷಿಸುತ್ತೇವೆ. ಕುಡಿಯುವ ನೀರಿಗಿರುವ ತೊಂದರೆಯನ್ನು ತಪ್ಪಿಸಿ ಅನುಕೂಲ್ಯವನ್ನು ಮಾಡಿಕೊಡಬೇಕೆಂದು ಮೊದಲಾಗಿ ಪ್ರತಿಯೊಂದು ವಿಜ್ಞಾಪನಪತ್ರಿಕೆಯಲ್ಲಿಯೂ ಮಾಡಿರುವ ಪ್ರಾರ್ಥನೆಗಳು ವಿಚಾರಿಸಲ್ಪಡುವುವು. ನಿಮ್ಮಲ್ಲಿ ಸಾಹಸಕಾರ್ಯಾಸಕ್ತಿಯೂ, ಚಟುವಟಿಕೆಯೂ, ಸ್ವಾವಲಂಬನೆಯೂ ಸಂಪೂರ್ಣವಾಗಿರುವುವೆಂಬುದು ನಿಮ್ಮ ವಿಜ್ಞಾಪನಪತ್ರಿಕೆಗಳಿಂದ ವ್ಯಕ್ತವಾಗುತ್ತದೆ. ನಿಮ್ಮಲ್ಲಿಯಹಿಂದೂಮಹಮ್ಮದೀಯರುಗಳಲ್ಲಿ ಒಳ್ಳೆ ಉದ್ಯೋಗಶಾಲಿಗಳೂ, ಶ್ರೀಮಂತರೂ ಆದ ವರ್ತಕರುರುವರು. ಅಲ್ಲದೆ ಅನೇಕ ಶಕ್ತರಾದ ಮುಂದಾಳುಗಳಿರುವರು. ಮತ್ತು ಈ ತಾಲ್ಲೋಕು ಯಾವ ಭಾಗದಲ್ಲೂ ಕೊರತೆಗೊಂಡಿಲ್ಲವು. ನಿಮ್ಮೂರು ಕೈಗಾರಿಕೆಗೂ ವ್ಯಾಪಾರಕ್ಕೂ ಪ್ರಸಿದ್ಧವಾಗಿದೆ. ಈ ಊರಿನ ಮತ್ತು ತಾಲ್ಲೂಕಿನ ನಿವಾಸಿಗಳಿಗೆ ಆದಾಯಕರವಾದ ರೇಷ್ಮೆಯ ಮತ್ತೆ ಕೆಲಕೈಗಾರಿಕೆಗಳ ಅಭಿವೃದ್ಧಿಯ ಕಡೆಗೆ ನೀವೆಲ್ಲರೂ ಗಮನಕೊಟ್ಟು ಪ್ರಯತ್ನಿಸುವಿರೆಂಬದಾಗಿ ನಿರೀಕ್ಷಿಸುತ್ತೇನೆ. ಯಾವಾಗಲೂ ನಿಮ್ಮಗಳ ಕ್ಷೇಮಚಿಂತನೆಯಲ್ಲಿರುವ ಶ್ರೀಮನ್ ಮಹಾರಾಜರವರಲ್ಲಿ ನಿಮ್ಮ ರಾಜಭಕ್ತಿ ವಿಶ್ವಾಸಗಳನ್ನು ಅರಿಕೆಮಾಡುತ್ತೇನೆ. ಶ್ರೀಮನ್ ಯುವರಾಜರವರು ನಿಮ್ಮಗಳ ಕ್ಷೇಮಚಿಂತಾಸಕ್ತರಾಗಿರುವರೆಂದೂ ಸಂಸ್ಥಾನಾಭಿವೃದ್ಧಿಕಾರ್ಯಗಳಲ್ಲಿ ನಾನಾ ಪ್ರಯತ್ನಶೀಲರಾಗಿರುವರೆಂದೂ ನೀವು ತಿಳಿದಿರುವುದು ಸಂತೋಷಪ್ರದವಾಗಿದೆ ಎಂದು ಅಪ್ಪಣೆ ಕೊಡಿಸಿದರು. ಇಲ್ಲಿನ ಕುಡಿಯುವ ನೀರಿನೇರ್ಪಾಡಿಗೆ ೩೦ ಸಾವಿರ ರೂ.ಗಳನ್ನು ಮ್ಯುನ್ಸಿಪಾಲಿಟಿಯವರು ಒದಗಿಸಿಕೊಡುವೆನೆಂದು ಅರಿಕೆಮಾಡಿಕೊಂಡರು.

ಒಳದೇಶದ ವೃತ್ತಾಂತ.

ಮೈಸೂರು ಮತ್ತು ಕೊಡಗುಸೀಮೆಗಳಲ್ಲಿ ಇಂಡಿಯಾ ಇಂಪೀರಿಯಲ್ಲಿ ರಿಲೀಫ್ ಫಂಡಿಗೆ ಕೂಡುತ್ತಿರುವ ಹಣವು ಈವರೆಗೆ ೧೧೯,೦೮೮ ರೂ. ಆಗಿರುತ್ತದೆ.

ಅರ್ಥಸಾಧಕ ಪತ್ರಿಕೆಯ ೨ನೆಯ ಸಂಚಿಕೆಯನ್ನೂ ನಾವು ಆದರದಿಂದ ಸ್ವೀಕರಿಸಿರುವೆವು. ಉದ್ದೇಶಕ್ಕನುಸರಿಸಿದ ಉಪಯುಕ್ತ ವಿಷಯಗಳು ಇದರಲ್ಲಿ ಅನೇಕವಾಗಿವೆ.

ಮೈಸೂರ ಸರ್ಕಾರದವರು ಗಾಂಜಾಮೇಲಿನ ಸುಂಕವನ್ನು ಬರುವ ಜುಲೈ ತಾ|| ೧ ರಿಂದ ೮೦ ತೊಲಾ ತೂಕದ ೧ ಸೇರಿಗೆ ೧೦ ರೂ. ಇಂದ ೧೨|| ರೂ. ವರೆಗೆ ಹೆಚ್ಚಿಸಿರುತ್ತಾರೆ.

ದಿವಾನರು ಬೆಂಗಳೂರ ಡಿಸ್ಟ್ರಿಕ್ಟಿನ ಸಂಚಾರವನ್ನು ಈ ತಾ|| ೨೯ ರಲ್ಲಿ ಪೂರೈಸಿ, ಬರುವ ಏಪ್ರಿಲ್ ತಿಂಗಳಲ್ಲಿ ಶಿವಮೊಗ್ಗ ಮತ್ತೂ ಕಡೂರು ಡಿ|| ಗಳಲ್ಲಿ ಸಂಚರಿಸಿಕೊಂಡು ಬರುವರು.

ಚಾಮುಂಡಿಬೆಟ್ಟ–ನಂದಿದುರ್ಗ–ಕಲ್ಹತ್ತಗಿರಿ–ದೇವರಾಯದುರ್ಗಗಳನ್ನು ಬೇಸಗೆಕಾಲದಲ್ಲಿ ನಿವಾಸಯೋಗ್ಯವನ್ನಾಗಿ ಮಾಡುವ ವಿಷಯದಲ್ಲಿ ಸರ್ಕಾರದವರು ಅಪ್ಪಣೆಮಾಡಿದ್ದಾರೆ. ಅದರ ವಿಷಯವನ್ನು ಮುಂದಣಸಂಚಿಕೆಯಲ್ಲಿ ಪ್ರಕಟಿಸುತ್ತೇವೆ.

ತುಮಕೂರಿನಲ್ಲಿ ಬರುವ ಮೇ ತಾ|| ೨೪ ರಿಂದ ೨ ನೆಯ ಮುನ್ಸಿಫ್‌ಕೋರ್ಟು ಸ್ಥಾಪಿಸಲ್ಪಟ್ಟು, ಈಗಿರುವ ಕೋರ್ಟು ೧ನೆಯ ಮುನ್ಸಿಫ್‌ಕೋರ್ಟೆಂದು ಕರೆಯಲ್ಪಡುವುದು. ಈ ಹೊಸಕೋರ್ಟಿಗೆ ೧ ನೆಯ ಕೋರ್ಟಿಗಿರುವ ಅಧಿಕಾರವೆಲ್ಲವೂ ಇರುವುದು.

ಈ ತಾ|| ೨೬ ರಲ್ಲಿ ಮೇಲುಕೋಟೆಯಲ್ಲಿ ವೈರಮುಡಿಯುತ್ಸವವು ನಡೆಯುವುದಷ್ಟೆ. ಈ ಸಂದರ್ಭದಲ್ಲಿ ಪಂಚಮರ ಕಾನ್‌ಫರೆನ್ಸೂ ವಸ್ತುಪ್ರದರ್ಶನವೂ ತಾ|| ೨೯ ರಲ್ಲಿ ಪ್ರಾರಂಭವಾಗುವುವು. ಶ್ರೀಮದ್ಯುವರಾಜರು ೫೦೦ ರೂ.ಗಳನ್ನು ಇದಕ್ಕೆ ಸಹಾಯಮಾಡುವರು.

ಕೆಲ ಕಾಲದಿಂದ ನಿಂತುಹೋಗಿದ್ದ ರಾಜಹಂಸವೆಂಬ ಧಾರವಾಡದ ಸಾಪ್ತಾಹಿಕ ಪತ್ರವು ಈಗ ಮರಳಿ ಆರಂಭಗೊಂಡು ಅದರ ಪ್ರಥಮ ಸಂಚಿಕೆಯ ನಮ್ಮ ಕಡೆಗೆ ಬಂದಿರುವುದನ್ನು ನಾವು ಆದರದಿಂದ ಸ್ವೀಕರಿಸಿರುತ್ತೇವೆ. ರಸವತ್ತಾದ ವಿಷಯವಿಚಾರವುಳ್ಳ ಈ ಪತ್ರವು ಚಿರಾಯುವಾಗಿರಲೆಂದು ಕೋರುತ್ತೇವೆ.

ಕೆಲ ದಿನಗಳ ಕೆಳಗೆ ಬಿಡದಿಯ ಸಮೀಪದಲ್ಲಿ ರೈಲುಬಂಡಿಯು ಹೋಗುತ್ತಿರುವಾಗ್ಗೆ ಗಾರ್ಡಿನ ಬಂಡಿಯಲ್ಲಿದ್ದ ಹಣದ ಪೆಟ್ಟಿಗೆಯನ್ನೊಡೆದು ೨೦೦೦ ರೂ.ವರೆಗೆ ಅಪಹರಿಸಿದ್ದ ಸುಬ್ಬ ಎಂಬುವನನ್ನು ಕ್ಲೋಸ್‌ಪೇಟೆಯ ಸ|| ಮ್ಯಾಜಿಸ್ಟ್ರೇಟರು ವಿಚಾರಿಸಿ ೨ ವರ್ಷ ಕಠಿಣ ಸಜವನ್ನು ವಿಧಿಸಿ ಗಾರ್ಡ್ ಷಲ್ ಎಂಬಾತನನ್ನು ನಿರ್ದೋಷಿಯೆಂದು ತೀರ್ಮಾನಿಸಿದರು.

ಸೋಸಲೆ ವ್ಯಾಸರಾಯಮಠದ ಮುಪ್ಪಿನ ವಿದ್ಯಾ ಶ್ರೀರತ್ನಾಕರ ತೀರ್ಥಸ್ವಾಮಿಗಳು ಕೆಲಕಾಲದಿಂದ ವ್ಯಾಧಿಪೀಡಿತರಾಗಿರುತ್ತ, ತಮ್ಮ ಉತ್ತರಾಧಿಕಾರವನ್ನು ತಮ್ಮ ಗುರುಗಳ ಪೂರ್ವಾಶ್ರಮದ ಕುಮಾರರಾದ ರಾಮಾಚಾರ್ಯರೆಂಬುವರಿಗೆ ಕಳೆದ ತಾ|| ೧೪ ರಲ್ಲಿ ವಹಿಸಿ ಆಶ್ರಮವನ್ನಿತ್ತರು. ಅವರಿಗೆ ಶ್ರೀಮದ್ವಿದ್ಯಾಶ್ರೀ ವಾರಿಧಿತೀರ್ಥಸ್ವಾಮಿಗಳೆಂದು ನಾಮಕರಣವಾಯಿತು.

ನೂತನವರ್ಷದ ಪಂಚಾಂಗವನ್ನು ರಾಜಧಾನಿಯ ಸಿದ್ಧಾಂತಿ ಸುಬ್ರಹ್ಮಣ್ಯ ಸಚ್ಚಿದಾನಂದ ಜ್ಯೋತಿಷ್ಕರು ಪದ್ಧತಿಯಂತೆ ತಮ್ಮ ಮುದ್ರಾಲಯದಲ್ಲಿ ಉಪಯುಕ್ತವಿಷಯಗಳೊಡನೆ ಮುದ್ರಿಸಿ ನಮ್ಮಲ್ಲಿಗೆ ಕಳುಹಿಸಿಕೊಟ್ಟಿರುವದನ್ನೂ ಬಿಜಾಪುರದ ಮಿ|| ಕರಂದೀಕರ ಬ್ರದರ್ಸ್‌ರವರು ಕಳುಹಿಸಿಕೊಟ್ಟಿರುವ ಮರಾಟೀಭಾಷೆಯ ಪಂಚಾಂಗವನ್ನೂ ಆದರದಿಂದ ಸ್ವೀಕರಿಸಿರುತ್ತೇವೆ.

ಈ ಸರ್ಕಾರಿ ವರ್ಷದ ಕೊನೆಯಲ್ಲಿ ಒಂದನೆಯ ಕೌನ್ಸಿಲರಾದ ಮ|| ಹೆಚ್. ವಿ. ನಂಜುಂಡಯ್ಯನವರು ಉದ್ಯೋಗದಿಂದ ನಿವೃತ್ತರಾಗುವರೆಂದೂ ಮ|| ಎಂ. ಕಾಂತರಾಜ ಅರಸಿನವರು ಒಂದನೆಯ ಕೌನ್ಸಿಲರಾಗಿಯೂ ಪ್ರೊ|| ಇ|| ಜನರಲ್ ದಿ|| ಬ|| ಶ್ರೀಕಂಠೇಶ್ವರಯ್ಯರ್‌ರವರು ಎರಡನೆಯ ಕೌನ್ಸಿಲರಾಗಿಯೂ, ಬೆಂಗಳೂರು ಡಿ||ಕ|| ಮಿ|| ಕೆ. ಚಾಂಡಿಯವರು ಪೊಲೀಸ್ ಇ|| ಜನರಲ್‌ರವರಾಗಿಯೂ ನಿಯಮಿಸಲ್ಪಡುವರೆಂದೂ ವದಂತಿಯಿದೆ.

ಶ್ರೀ ಉತ್ತರಾದಿಮಠದ ಸ್ವಾಮಿಗಳು ಬೆಂಗಳೂರಿನಲ್ಲಿ ಒಂದು ಸಂಸ್ಕೃತಪಾಠಶಾಲೆಯನ್ನು ಸ್ಥಾಪಿಸಲು ನಿಶ್ಚಯಿಸಿ ಅದಕ್ಕೆ ಸ್ಥಲವನ್ನು ಮೈಸೂರು ಸರ್ಕಾರದವರಿಂದ ಪಡೆಯುವುದರಲ್ಲಿದ್ದಾರೆ. ಶಾಲೆಯು ಕಟ್ಟಲ್ಪಡುವವರೆಗೂ ಚೀಫ್ ಇಂಜನಿಯರ್ ಮ|| ಕರ್ಪೂರ ಶ್ರೀನಿವಾಸರಾಯರು ಬೆಂಗಳೂರು ಚಾಮರಾಜಪೇಟೆಯಲ್ಲಿರುವ ತಮ್ಮ ಮನೆಯನ್ನು ಪಾಠಶಾಲೆಯನ್ನು ಮಾಡುವುದಕ್ಕಾಗಿ ಸ್ವಾಮಿಗಳವರಿಗೆ ಅರ್ಪಿಸಿದ್ದಾರೆಂದು ಕೇಳುತ್ತೇವೆ. ಪಂಡಿತ ಎಲ್ಲತ್ತೂರು ಕೃಷ್ಣಾಚಾರ್ಯರು ಆ ಶಾಲೆಯ ಅಧ್ಯಕ್ಷರಾಗಿ ನಿಯಮಿಸಲ್ಪಟ್ಟಿದ್ದಾರೆ. ಶಿಷ್ಯಾದಿಗಳಿಂದಾರ್ಜಿಸಿದದ್ರವ್ಯಕ್ಕೆ ಇಂಥ ಸದ್ವಿನಿಯೋಗವುಯುಕ್ತವಾಗಿರುತ್ತದೆ. ಮಠಾಧಿಪತಿಗಳೆನಿಸಿಕೊಂಡವರಿಗೆಲ್ಲಾ ಇಂಥ ಉಚಿತೌದಾರ್ಯವು ಮಾರ್ಗದರ್ಶಕವಾದುದು.

ಬಂಗಾಳಾದಲ್ಲಿ ಸಂಸ್ಕೃತ ಪರೀಕ್ಷೆಯಲ್ಲಿ ಪಾಸಾದವರಿಗೆ ಬಿರುದುಗಳನ್ನು ಕೊಡುವ ಸಂದರ್ಭದಲ್ಲಿ ಅಲ್ಲಿನ ಗೌರ್ನರಾದ ಕಾರ್ಮಿಕೇಲ್ ಪ್ರಭುಗಳವರು ಅಧ್ಯಕ್ಷರಾಗಿದ್ದು ಬಂಗಾಳಿ ಭಾಷೆಯಲ್ಲಿಯೇ ಭಾಷಣವನ್ನು ಕೊಟ್ಟರು. "ಸಂಸ್ಕೃತ ಭಾಷೆಯು ಹಿಂದೂಸ್ಥಾನದ ವೈಭವವಾಗಿದೆ. ಕಲ್ಕತ್ತಾ ಸಂಸ್ಕೃತಬೋರ್ಡಿನಲ್ಲಿ ಪ್ರಾಚೀನ ಮತ್ತು ಬಹು ರಮ್ಯವಾದ ಈ ಭಾಷೆಯನ್ನು ಉನ್ನತಿಗೆತರಲು ಪ್ರಯತ್ನಪಡುವ ಈ ಮಾನ್ಯಉಪಾಧ್ಯಾಯರು ಸರಕಾರದಿಂದ ಮಾತ್ರವಲ್ಲ; ಹಿಂದುಸ್ಥಾನದ ಎಲ್ಲಾ ಜನಸಮುದಾಯದಿಂದಲೂ ಮನ್ನಣೆಯನ್ನು ಹೊಂದಲು ಅರ್ಹರಾಗಿದ್ದಾರೆ. ನನ್ನ ಸರಕಾರವು ಈ ಬಗ್ಗೆ ೧೦,೦೦೦ ರೂ. ಕೊಡಲು ನಿರ್ಣಯಿಸಿರುವುದು" ಎಂಬಿತ್ಯಾದಿ ಮಾತುಗಳನ್ನು ಆ ಪ್ರಭುಗಳವರು ಹೇಳಿರುವರು.

ಆಮೆಗೆ ಹಲ್ಲುಗಳಿಲ್ಲ. ಮೆಲುಕುಹಾಕುವ ಪ್ರಾಣಿಗಳ ಗೊರಸುಗಳು ಇಬ್ಭಾಗವಾಗಿರುವುವು ಗಿಳಿಯ ಕೊಕ್ಕಿನ ಎರಡು ಭಾಗಗಳೂ ಅಲುಗಾಡುವುವು. ಆದರೆ, ಇತರ ಪಕ್ಷಿಗಳಿಗೆ ಕೆಳಗಿನ ಕೊಕ್ಕು ಮಾತ್ರವೇ ಅಲುಗಾಡುವುದು. ಕುದುರೆಗೆ ಹುಬ್ಬುಗಳಿಲ್ಲ. ಕಪ್ಪೆಗಳು ಬಾಯ್ದೆರೆದು ಶ್ವಾಸೋಚ್ಛ್ವಾಸಕ್ರಿಯೆಯನ್ನು ಮಾಡಲಾರವು; ಬಲಾತ್ಕಾರದಿಂದ ಬಾಯಿಯನ್ನು ತೆರೆದು ಹಿಡಿದೆವಾದರೆ, ಅವು ಉಸಿರು ಕಟ್ಟಿ ಸಾಯುವುವೇ ಸರಿ. ಮೊಲಗಳಿಗೆ ಕಣ್ಣನ್ನು ಮುಚ್ಚಿಕೊಳ್ಳುವುದಕ್ಕೆ ಬರುವುದಿಲ್ಲ; ಏಕೆಂದರೆ, ಅವುಗಳಿಗೆ ರೆಪ್ಪೆಗಳಿಲ್ಲ. ಆದರೆ, ರೆಪ್ಪೆಗಳ ಸ್ಥಾನದಲ್ಲಿ ತೆಳ್ಳಗಾದ ಒಂದು ಚರ್ಮವಿರುವುದರಿಂದ, ಅವು ಮಲಗಿದ್ದಾಗ, ಆ ಚರ್ಮವು ಕಣ್ಣಿಗೆ ಅಡ್ಡವಾಗಿ ಬಂದು ನಿಲ್ಲುವುದು. ಗೂಬೆಯ ಕಣ್ಣಾಲಿಗಳು ಚಂಚಲವಾದುವಲ್ಲ; ಅವು ಎಲುಬುಗಳಲ್ಲಿ ಒಳ್ಳೆಯ ಗಟ್ಟಿಯಾಗಿ ನಿಂದಿರುವುವು. ಪರಂತು, ನಾಲ್ಕು ಕಡೆಗೂ ನೋಡಲಾಗುವಂತೆ, ಅವು ತಮ್ಮ ಕತ್ತನ್ನು ಬೇಕಾದಹಾಗೆ ತಿರುಗಿಸಬಲ್ಲವು.

ಪತ್ರವ್ಯವಹಾರ.

ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿ ಚಿನ್ಮೂಲಾದ್ರಿ ಬೃಹನ್ಮಠ (ಚಿತ್ರದುರ್ಗ) ಮಹಾಸಂಸ್ಥಾನ ಶ್ರೀಗಳವರ ಸ್ವಾರೀ ಮುಕ್ಕಾಮು ಶ್ರೀ ಉಳವೀಕ್ಷೇತ್ರಕ್ಕೆ ಸರ್ವ ಸರಂಜಾಮುಸಹಿತವಾಗಿ ತಾ॥ ೨೯-೧-೧೯೧೫ ಶುಕ್ರವಾರ ಮಧ್ಯಾಹ್ನದ ೪ ಘಂಟೆಯ ಸುಮಾರಕ್ಕೆ ಆಯಿತು. ಆರಂಭಕ್ಕೆ ಸ್ವಾಗತ ಸಮಾರಂಭವಾದನಂತರ ಶ್ರೀಗಳವರು ಶ್ರೀ ಚೆನ್ನಬಸವೇಶ್ವರ ದೇವರ ದರ್ಶನವನ್ನು ತೆಗೆದುಕೊಂಡರು. ತಾ॥ ೩೦-೧-೧೫ ಶನಿವಾರದ ಸಾಯಂಕಾಲದ ೬ ಘಂಟೆಯ ಸುಮಾರಕ್ಕೆ ಶ್ರೀ ಎತ್ತುಕಾಯುವ ಬಸವೇಶ್ವರನ ಗುಡಿಯಹತ್ತಿರ ಎತ್ತರದಪ್ರದೇಶದಲ್ಲಿ ಮೊದಲೇ ನಿರ್ಮಿಸಿದ ಭವ್ಯವೂ ರಮ್ಯವೂ ಆದ ಪರ್ಣಶಾಲೆಯಲ್ಲಿ (ಸಭಾಮಂಟಪದಲ್ಲಿ) ಶ್ರೀಮಂತ ವೀರಭದ್ರಪ್ಪ ಗುಣಪ್ಪ ನಾಯಕಬಹಾದ್ದೂರ ದೇಸಾಯರು ಚಚಡಿ ಇವರ ಅಧ್ಯಕ್ಷತೆಯ ಕೆಳಗೆ ಶ್ರೀಮದ್ವೀರಶೈವ ಧಾರ್ಮಿಕಸಭೆಯು ಸೇರಿಸಲ್ಪಟ್ಟಿತು ಶಿವಪೀಠದಲ್ಲಿ ಶಿವಮೂರ್ತಿಯು ವಿಶ್ರಮಿಸಿದಂತೆ ಶ್ರೀಗಳವರು ಉಚ್ಚಸ್ಥಾನದಲ್ಲಿ ಅಲಂಕೃತರಾಗಿದ್ದರು ಶ್ರೀಗಳವರಮೇಲೆ ಛತ್ರಚಾಮರಾಪ್ತಾಗಿರಿ ಮೊದಲಾದ ಬಿರುದಾವಳಿಗಳು ಶೋಭಾಯಮಾನವಾಗಿದ್ದವು. ಎಡಬಲಕ್ಕೆ ವೇತ್ರಧಾರಿಗಳು ಸಜ್ಜಿತರಾಗಿ ನಿಂತಿದ್ದರು. ಆರಂಭಕ್ಕೆ ವೇ॥ ಮಹಾಂತಶಾಸ್ತ್ರಿಗಳು ಬೆಂಗಳೂರ, ವೇ॥ ವಿರೂಪಾಕ್ಷಶಾಸ್ತ್ರಿಗಳು ಮೈಸೂರ, ಇವರ ವೇದಾಧ್ಯಯನವೂ, ಅನಂತರ ವೇ॥ ರಾಚಯ್ಯ ಹಿರೇಮಠ ಹಿರೇಮುನವಳ್ಳಿ ಇವರ ಮಂಗಲಪದವೂ, ಬಳಿಕ ಕಿತ್ತೂರ ಶಾಲಾ ವಿದ್ಯಾರ್ಥಿಗಳಾದ ಚೆನ್ನಬಸವ ಮತ್ತು ಶಿವಯೋಗಿ ಇವರ ಸ್ವಾಗತಪದವೂ ಆದವು. ಕೂಡಲೆ ಮಿ॥ ಪರಪ್ಪಸೆಟ್ಟರು ಅರಳೀಕಟ್ಟಿ ಇವರು ಶ್ರೀಮಂತ ಚಚಡೀಕರ ಇವರು ಅಧ್ಯಕ್ಷರಾಗಬೇಕೆಂಬದಾಗಿ ಸಭೆಯು ವಿದ್ಯಮಾನ ಸೂಚನೆಯನ್ನು ತರಲು, ಅದಕ್ಕೆ ಮಿ॥ ದೊಡ್ಡಬಸಪ್ಪನವರು ಅಣ್ಣಾ ತಟ್ಟಿ ಲಕ್ಷ್ಮೇಶ್ವರ ಇವರು ಅನುಮೋದನಕೊಟ್ಟರು. ಆಮೇಲೆ ಸಭಾಸದರ ಕರತಾಡನರವದಲ್ಲಿ ಶ್ರೀಮಂತರು ಅಧ್ಯಕ್ಷಸ್ಥಾನವನ್ನಲಂಕರಿಸಿದರು. ಅಲ್ಲಿಂದ ಮಿ॥ ಸಂಪಗಾವಿಯ ರಾಜಶೇಖರಗೌಡರು ಈ ಉಳವೀಕ್ಷೇತ್ರದಲ್ಲಿ ಒಂದು ಶಾಶ್ವತ ಧಾರ್ಮಿಕಸಂಸ್ಥೆಯನ್ನು ಸ್ಥಾಪಿಸುವುದು ಅವಶ್ಯವಿರುವುದೆಂತಲೂ, ಈ ಪುಣ್ಯಕಾರ್ಯಕ್ಕಾಗಿ ಸರ್ವಸಭಾಸದರೂ ಯಾವತ್ತು ಯಾತ್ರಿಕರೂ ಸಹಾಯವನ್ನು ತ್ರಿಕರಣಪೂರ್ವಕವಾಗಿ ಮಾಡಬೇಕೆಂತಲೂ ಸಮಂಜಸವಾಗಿ ಭಾಷಣ ಮಾಡಿದರು. ಕಡೆಗೆ ಮಂಗಳಕಾರ್ಯವಾಗಿ ಆ ದಿವಸದ ಸಭೆಯು ಸಾಂಗವಾಯಿತು. ಮರುದಿವಸ ಮುಂಜಾನೆ ೯ ಘಂಟೆಯ ಸುಮಾರಕ್ಕೆ ಶ್ರೀಮಂತ ಚಚಡೀಕರರ ಶಿಬಿರದಲ್ಲಿ ಶ್ರೀಗಳವರ ಸಾನ್ನಿಧ್ಯದಲ್ಲಿ ಆಲೋಚನಾ ಕಮಿಟಿ ನಡೆದು ಮಧ್ಯಾಹ್ನದ ೩ ಘಂಟೆಯ ಸುಮಾರಕ್ಕೆ ಪುನಃ ಸಭೆ ಸೇರಿ ಪೂರ್ವದಿನದಂತೆ ವೇದಾಧ್ಯಯನ-ಮಂಗಳ-ಸ್ತುತಿಪದಗಳು-ಎನ್ನಲ್ಪಟ್ಟವು. ಅಲ್ಲಿಂದ ಮಿ॥ ಮಲ್ಲಪ್ಪಶೆಟ್ಟರು ಹಿರೇಮುನವಳ್ಳಿ, ವೇ॥ ಬಸವಾರ್ಯ ಶಾಸ್ತ್ರಿ ಕಿತ್ತೂರ, ಮಿ॥ ಎಮ್. ಮದಲಿಂಗಪ್ಪ ಹರ್ಡೀಕರ-ಈ ಮೂವರು ಶ್ರೀ ಉಳವೀಕ್ಷೇತ್ರದ ಸಂಕ್ಷಿಪ್ತಚರಿತ್ರೆ ಮತ್ತು ಕ್ಷೇತ್ರಮಹಿಮೆ ಈ ವಿಷಯಸಂಬಂಧವಾಗಿಯೂ, ಶ್ರೀ ಹಾವೇರಿ ವಿರಕ್ತಮಠದ ಸಂಚಾಕ್ಷರಸ್ವಾಮಿಗಳು ಭಕ್ತಿಯವಿಷಯವಾಗಿಯೂ, ಕೊಲ್ಹಾಪುರ ವಾರದ ಪಾಠಶಾಲಾಧ್ಯಾಪಕರಾದ ಶ್ರೀ ಶಿವಲಿಂಗಸ್ವಾಮಿಗಳು ಹುಕ್ಕೇರಿ ಇವರು ಲಿಂಗಧಾರಣ ವಿಷಯವಾಗಿಯೂ ಸರಸವಾಗಿ ಭಾಷಣಮಾಡಿದರು. ಬಳಿಕ ಮಿ॥ ಸಂಪಗಾವಿಯ ರಾಜಶೇಖರಗೌಡರು ಶ್ರೀ ಕ್ಷೇತ್ರದಲ್ಲಿ ಧರ್ಮಸಂಸ್ಥಾಪನೆಯ ಸ್ಥಳವನ್ನು ಸಂಪಾದನೆಮಾಡುವ ಕುರಿತು ಮತ್ತು ಆ ಸ್ಥಳದಲ್ಲಿ ಸಭಾಗೃಹವನ್ನು ರಚಿಸುವ ಕುರಿತು ಠರಾವನ್ನು ತರಲು ಅದು ಬಹುಮತದಿಂದ ಪಾಸುಮಾಡಲ್ಪಟ್ಟಿತು. ಬಳಿಕ ವೇ॥ ಗುರುಸಿದ್ಧಯ್ಯನವರು ಬೆಳವಣಿಕಿ ಇವರ ಶಿವಕೀರ್ತನವಾಗಿ ಆ ದಿವಸದ ಸಭೆಯು ಮುಗಿಸಲ್ಪಟ್ಟಿತು. ತಾ॥ ೧-೨-೧೫ ದಿವಸ ಮಧ್ಯಾಹ್ನದ ೩ ಘಂಟೆಯ ಸುಮಾರಕ್ಕೆ ರಥೋತ್ಸವವಿದ್ದುದರಿಂದ ಸಭೆಯು ಸಂಜೆಯ ೬ ಘಂಟೆಗೆ ಪ್ರಾರಂಭವಾಯಿತು. ಪ್ರತ್ಯಹದಂತೆ ವೇದಾಧ್ಯಯನ ಮಂಗಲಪದಗಳಾದ ನಂತರ ಆರಂಭಕ್ಕೆ ಮಿ॥ಎಮ್. ಮದಲಿಂಗಪ್ಪ ಹರ್ಡೀಕರ ದಾವಣಗೆರೆ ಇವರು ಸಭಾಗೃಹವನ್ನು ಕಟ್ಟುವದಕ್ಕಾಗಿ ಹಣದ ಆವಶ್ಯಕತೆಯ ವಿಷಯವಾಗಿ ಉಪನ್ಯಾಸಮಾಡಿ, ಯಾವತ್ತರೂ ಯೋಗ್ಯತಾನುಸಾರ ಚಂದಾಹಣವನ್ನು ಕೊಡುವದಲ್ಲದೆ ಸಂಸ್ಥೆಯ ಸ್ಥಿರತೆಯಬಗ್ಗೆ ವರ್ಷಾಶನವನ್ನು ಕೊಡುವ ಬಗ್ಗೆ ವಿನಂತಿಮಾಡಿಕೊಂಡರು. ಅನಂತರ ಮಿ॥ ಹಿರೇಮುನವಳ್ಳಿ ಮಲ್ಲಪ್ಪಸೆಟ್ಟರು (ಮಲ್ಲಿನಾಥಕವಿ) ಮಾಹೇಶ್ವರರ ಸುಧಾರಣೆ ಈ ವಿಷಯವಾಗಿ ಒಳ್ಳೇ ಸರಸವಾಗಿ ಭಾಷಣಮಾಡಿದರು. ಬಳಿಕ ಚಂದಾವಸೂಲಿಯ ಬಗ್ಗೆ ಸಂಪಗಾವಿಯ ರಾಜಶೇಖರಗೌಡರು ಪುನಃ ಸೂಚಿಸಲಾಗಿ, ವರ್ಗಣಿಯಕೆಲಸವು ನಡೆದು ಸುಮಾರು ೮ ಘಂಟೆಯ ಸುಮಾರಕ್ಕೆ ವಿಜಾಪುರಜಿಲ್ಲಾ ದ್ಯಾಮಪುರದ ಪ್ರಸಿದ್ಧ ವೇ॥ ಬಸವಲಿಂಗಶಾಸ್ತ್ರಿಗಳವರ ವೇದಾಂತವಿಷಯಾತ್ಮಕ ಶಿವಕೀರ್ತನೆಯಾಗಿ ೧೦ ಘಂಟೆಯ ಸುಮಾರಕ್ಕೆ ಸಭೆಯು ಹರಿಯಿತು.

ತಾ॥ ೨-೨-೧೯೧೫ ಮಂಗಳವಾರದ ದಿವಸ ಸಾಯಂಕಾಲಕ್ಕೆ ಪುನಃ ಸಭೆ ಸೇರಿ ಚಂದಾಕೂಡಿಸುವ ಕಾರ್ಯವು ನಡೆಯಿತು. ನಂದಗಡದ ಶ್ರೀಮನ್ನಿರಂಜನ ಮಹಾಂತ ದೇಶಿಕೇಂದ್ರರು ಈ ಸಂಸ್ಥೆಗೆ ೫೧ ರೂ ವರ್ಗಣಿ ಕೊಡುವುದಾಗಿಯೂ ೧೧ ರೂ. ಯಂತೆ ವರ್ಷಾಶನ ಕೊಡುವುದಾಗಿಯೂ ವಾಗ್ದಾನಮಾಡಿದ್ದಲ್ಲದೆ, ಪ್ರತಿವರ್ಷವೂ ತಪ್ಪದೆ ಶ್ರೀ ಉಳವೀಕ್ಷೇತ್ರಕ್ಕೆ ದಯಮಾಡಿಸಿ ಭಕ್ತಾದಿಗಳನ್ನು ಪ್ರೋತ್ಸಾಹಿಸಿ ಈ ಧಾರ್ಮಿಕಸಂಸ್ಥೆಯ ಕಾರ್ಯಕ್ಕೆ ಮನಃಪೂರ್ವಕವಾಗಿ ಸಹಾಯ ಮಾಡುವೆವೆಂದು ನಿವೇದಿಸಿದರು. ಶ್ರೀ ದಾವಣಗೆರೆ ಮೃತ್ಯುಂಜಯಸ್ವಾಮಿಗಳು ೧೫೦ ರೂ. ಬೆಲೆಯುಳ್ಳ ೬೦ ಕಬ್ಬಿಣದ ತಗಡುಗಳನ್ನು ಸಭಾಗೃಹಕ್ಕಾಗಿ ದಯಪಾಲಿಸಿದರು. ಮತ್ತೂ ಮಲ್ಲಿನಾಥಕವಿವಿರಚಿತ ಶ್ರೀಗಳವರ ಸ್ತೋತ್ರ ಪದ್ಯಗಳನ್ನು ಒಳ್ಳೆ ಇಂಪಾಗಿ ಸಭಿಕರು ತಲೆದೂಗುವಂತೆ ಗಾನಮಾಡಿದರು. ತಾಲ್ಲೂಕ ಹುಬ್ಬಳ್ಳಿ ಶಹರದ ಓರ್ವ ಭಕ್ತಾಗ್ರೇಸರರು ಈ ಸಂಸ್ಥೆಗಾಗಿ ತಮ್ಮ ೧॥ ಎಕರೆಯ ಫಲವದ್ರೂಪಭೂಮಿಯನ್ನು ಸಮರ್ಪಣೆಮಾಡಿದರು. ವೇ॥ ಬೀಳಗಿಯ ರಾಜಶೇಖರಶಾಸ್ತ್ರಿಗಳು ಪ್ರತಿವರ್ಷ ಕ್ಷೇತ್ರಕ್ಕೆ ದಯಮಾಡಿಸಿ ಸಂಸ್ಥೆಯ ಸೇವೆಯನ್ನು ಗೆಯ್ಯುವೆವೆಂದೂ, ಒಂದುವೇಳೆ ತಪ್ಪಿದರೆ ಆ ವರ್ಷ ನನ್ನ ಧರ್ಮೋದ್ದೇಶದ ಕಾರ್ಯಕ್ಕೋಸುಗ ಬೇರೊಬ್ಬ ಶಾಸ್ತ್ರಿಗಳನ್ನು ನೇಮಿಸಿಕೊಳ್ಳಲಿಕ್ಕೆ ೨೫ ರೂ. ಕೊಟ್ಟು ಕಳಿಸುವೆವೆಂದೂ, ನನ್ನ ಅವಸಾನಕಾಲದಲ್ಲಿ ಈ ಸಂಸ್ಥೆಗಾಗಿ ಒಂದು ಜಮೀನನ್ನು ಸಮರ್ಪಿಸುವೆವೆಂದೂ ವಾಗ್ದಾನಮಾಡಿದರು. ಇವರಂತೆ ಎಷ್ಟೋಜನ ಮಹನೀಯರು ಸಭಾಗೃಹದ ಚಂದಾಹಣ ಹಾಗು ವರ್ಷಾಶನಗಳ ಬಗ್ಗೆ ವಾಗ್ದಾನಮಾಡಿ ತಮ್ಮತಮ್ಮ ಭಕ್ತ್ಯೌದಾರ್ಯಗಳನ್ನು ವ್ಯಕ್ತಪಡಿಸಿದರು ಬಳಿಕ ಕಿತ್ತೂರ ಶಾಲೆಯ ವಿದ್ಯಾರ್ಥಿ ಚೆನ್ನಬಸವ ಬಸವಾರ್ಯ ಪಾರಿಶವಾಡ ಎಂಬ ೯ ವರ್ಷದ ಬಾಲಕನು ವಿದ್ಯಾವಿಷಯವಾಗಿ ಒಳ್ಳೇ ದಿಟ್ಟತನದಿಂದ ಭಾಷಣಮಾಡಿದನು. ಈ ಬಾಲಕನ ಭಾಷಣಕ್ಕೆ ಆನಂದಿತರಾಗಿ ಶ್ರೀಗಳವರು ತಮ್ಮ ಸಂಸ್ಥಾನದಿಂದ ೪ ರೂ.ಗಳನ್ನೂ ಅರಳೀಕಟ್ಟಿಯ ಪರಪ್ಪಸೆಟ್ಟರು ಮತ್ತು ಉಳವಪ್ಪಣ್ಣಾ ಇಟ್ಟಗಿ ಇವರು ೨ ರೂ.ಗಳನ್ನೂ ಉಚಿತ ಕೊಟ್ಟದ್ದಲ್ಲದೆ, ಶ್ರೀಮಂತ ಚಚಡೀಕರ ಇವರು ಒಂದು ಬೆಳ್ಳಿಯ ಪದಕವನ್ನೂ, ಅಳ್ಣಾವರದ ಮಿ॥ ಫಕೀರಪ್ಪಣ್ಣಾ ಕತ್ತಿಸೆಟ್ಟಿ ಇವರು ಒಂದು ಪದಕವನ್ನೂ ಬಹುಮಾನಾರ್ಥವಾಗಿ ಕೊಡುವುದಾಗಿ ವಾಗ್ದಾನಮಾಡಿರುವರು. ಶ್ರೀಗಳವರು ಕಿತ್ತೂರಿನ ಬೇರೆ ಇಬ್ಬರು ವಿದ್ಯಾರ್ಥಿಗಳಿಗೆ ಎರಡೆರಡು ರೂ. ಉಚಿತ ಕೊಟ್ಟರು. ಆ ಸಮಯದಲ್ಲಿ ಹಿರೇಮುನವಳ್ಳಿಯ ಮಿ॥ ಮಲ್ಲಪ್ಪಸೆಟ್ಟರು ರಚಿಸಿದ ಶ್ರೀಗಳವರ ಸ್ತೋತ್ರಪದಗಳು ಮುದ್ರಿಸಿ ಹಂಚಲ್ಪಟ್ಟವು. ಅವರ ಕವಿತ್ವಗಳನ್ನು ಕಂಡು ಸಂತೋಷಿತರಾಗಿ ಶ್ರೀಗಳವರು ಮಲ್ಲಪ್ಪಸೆಟ್ಟರಿಗೆ 'ಮಲ್ಲಿನಾಥಕವಿ' ಎಂಬ ಅಭಿಧಾನವನ್ನು ಕೊಟ್ಟರು. ಮತ್ತು ಸರ್ಟಿಫಿಕೇಟು ಆಶೀರ್ವದಿಸಿದ್ದಾರೆ. ಬಳಿಕ ವೇ॥ ಬಸವಲಿಂಗಶಾಸ್ತ್ರಿಗಳವರು ಭಕ್ತಿಯ ವಿಷಯವಾಗಿ ಶಿವಕೀರ್ತನೆಯನ್ನುಮಾಡಿ, ಸಭಾಗೃಹದ ಚಂದಾಸಂಬಂಧವಾಗಿ ಅಸ್ಖಲಿತವಾಣಿಯಿಂದ ಉಪನ್ಯಾಸಮಾಡಿದರು. ಇವರ ಉಪನ್ಯಾಸದಿಂದ ಎಷ್ಟೋ ಸದ್ಭಕ್ತರು ವರ್ಗಣಿಯನ್ನೂ ವರ್ಷಾಶನವನ್ನೂ ಕೊಡುವುದಾಗಿ ವಾಗ್ದಾನಮಾಡಿದರು. (ಒಟ್ಟುವರ್ಗಣಿ ಹಾಗು ವರ್ಷಾಶನಗಳ ರಕಮೂ ಮತ್ತು ನಗದು ವಸೂಲಾದ ರಕಮೂ ತಾ॥ ೨೧ ನೇ ಸಂಚಿಕೆಯಲ್ಲಿ ಕೊಡಲ್ಪಟ್ಟಿದ್ದರಿಂದ ಇಲ್ಲಿ ಪುನಃ ಚರ್ವಿತಚರ್ವಣ ಮಾಡುವ ಕಾರಣವಿಲ್ಲ.) ವೇ॥ ಬಸವಲಿಂಗಶಾಸ್ತ್ರಿಗಳವರ ಶಿವಕೀರ್ತನೆಗೆ ಶ್ರೀಗಳೂ ಸಭೆಯೂ ತಲೆದೂಗಹೋಯಿತು. ಇವರ ಶಿವಕೀರ್ತನೆಗೆ ಸಂತೋಷಪಟ್ಟು ಶ್ರೀಗಳವರು ಸಂಸ್ಥಾನದಿಂದ ೫೫ ರೂ.ಗಳ ಬಹುಮಾನವನ್ನೂ ಶ್ರೀಮಂತ ಚಚಡೀಕರರು ಒಂದು ಭಂಗಾರ ಪದಕದ ಬಹುಮಾನವನ್ನೂ, ಎಷ್ಟೋ ಸಭಾಸದರು ತಮ್ಮತಮ್ಮ ಯೋಗ್ಯತಾನುಸಾರ ಬಹುಮಾನಗಳನ್ನೂ ಸಮರ್ಪಿಸಿದರು. ವೇ॥ ಬಸವಲಿಂಗಶಾಸ್ತ್ರಿಗಳಾದರೂ, ಪ್ರತಿವರ್ಷ ಶ್ರೀ ಕ್ಷೇತ್ರಕ್ಕೆ ದಯಮಾಡಿಸಿ ಸಂಸ್ಥೆಯ ಸೇವೆಯನ್ನು ತನು-ಮನ-ಧನಪೂರ್ವಕವಾಗಿ ಮಾಡುತ್ತೇವೆಂದು ಆತ್ಮಸಂತೋಷದಿಂದ ಸಾಷ್ಟಾಂಗಹಾಕಿದರು. ಪ್ರತಿವರ್ಷ ಈ ಶಾಸ್ತ್ರಿಗಳಿಗೆ ಶಿವಕೀರ್ತನಕ್ಕಾಗಿ ಕ್ಷೇತ್ರಕ್ಕೆ ಬಂದಲ್ಲಿ ಸಂಸ್ಥೆಯಿಂದ ೨೫ ರೂ.ಗಳ ವೇತನವೂ ವೇ॥ ಗುರುಸಿದ್ಧಯ್ಯನವರು ಬೆಳವಣಿಕಿ ಇವರಿಗೆ ೧೦ ರೂ.ಗಳ ವೇತನವೂ ಕೊಡುವುದಾಗಿ ನಿರ್ಧರಿಸಲ್ಪಟ್ಟು ಪದ್ಧತಿಪ್ರಕಾರ ಶ್ರೀಗಳವರ ಹಾಗು ಪ್ರೆಸಿಡೆಂಟರ ಮತ್ತೂ ಸಮಾಜಸೇವಾಬದ್ಧರಾದ ಸರ್ವಸಭಾಸದರ ಆಭಾರಮನ್ನಿಸಲ್ಪಟ್ಟು ಹಾರ ತುರಾಯಿ ಪರಿಮಳ ತಾಂಬೂಲಾದಿಗಳ ವಿನಿಯೋಗವಾದನಂತರ ಶ್ರೀಜಾರ್ಜ್ ಬಾದಶಹರವರ ಪರವಾಗಿ ತ್ರಿವಾರಜಯಘೋಷವಾಗಿ ಸಭಾವಿಸರ್ಜನವಾಯಿತು. ತಾ॥ ೩-೨-೧೫ ದಿವಸ ಮುಂಜಾನೆ ೯ ಘಂಟೆಯಿಂದ ಆಲೋಚನಾಕಮಿಟಿಯು ಸೇರಿ ಸದರೀ ಸಂಸ್ಥೆಯ ಚೇರಮನ್-ಸೆಕ್ರೆಟರಿ-ಆಡಿಟರ-ಮ್ಯಾನೇಜಿಂಗ್ ಕಮಿಟಿ ಮೆಂಬರ್ಸ-ಜನರಲ್‌ಕಮಿಟಿಮೆಂಬರ್ಸ ಮೊದಲಾದವರು ಶ್ರೀಗಳವರ ಅನುಮೋದನಪ್ರಕಾರ ಆರಿಸಲ್ಪಟ್ಟರು ಸಂಸ್ಥೆಯ ಚಂದಾಹಣವು ಶ್ರೀಗಳವರ ಸಂಸ್ಥಾನದಲ್ಲಿಡಲ್ಪಟ್ಟು ೧೦೦ ಕ್ಕೆ ೪॥ ಯಂತೆ ಬಡ್ಡಿ ಕೊಡುವುದಾಗಿ ಗೊತ್ತುಮಾಡಲ್ಪಟ್ಟಿತು. ಇದೇದಿವಸ ಮಧ್ಯಾಹ್ನದಲ್ಲಿ ಶ್ರೀಗಳವರ ದಾಸೋಹಮಂಟಪದಲ್ಲಿ ಪ್ರೆಸಿಡೆಂಟರೇ ಸರ್ವ ಸಭಾಸದರಿಗೂ, ಯಾವತ್ತು ಯಾತ್ರಿಕರಿಗೂ ಆ ಮಂತ್ರಣ ಕೊಡಲ್ಪಟ್ಟ ಪ್ರಕಾರ ಭೋಜನಸಮಾರಂಭ ನೆರವೇರಿತು. ಶ್ರೀಗಳವರು ಕ್ಷೇತ್ರಕ್ಕೆ ದಯಮಾಡಿಸಿದಂದಿನಿಂದ ಕಡೆತನಕ ಬಡಬಗ್ಗರು, ಅನಾಥರು, ಭಿಕ್ಷುಕರು ಮೊದಲಾದ ಅನೇಕಜನರಿಗೆ ಅವರ ದಾಸೋಹಮಂಟಪದಲ್ಲಿ ಮುಕ್ತದ್ವಾರವಾಗಿ ಅನ್ನಸಂತರ್ಪಣೆಯು ನಡಿಸಲ್ಪಟ್ಟಿತು. ಈ ದಾಸೋಹದ ಸರ್ವ ವ್ಯವಸ್ಥೆಗಾಗಿ ಶ್ರೀ ಸಿದ್ಧಸಮುದ್ರದ ಪಟ್ಟದ ದೇವರುಗಳು ಮತ್ತೂ ಶ್ರೀ ದಾವಣಗೆರೆಯ ಮೃತ್ಯುಂಜಯಸ್ವಾಮಿಗಳೂ ನೇಮಿಸಲ್ಪಟ್ಟಿದ್ದು ಉಭಯಸ್ವಾಮಿಗಳು ತಮ್ಮ ಕಾರ್ಯದಲ್ಲಿ ಅವಿಶ್ರಾಂತವಾಗಿ ಬಹಳೇ ದಕ್ಷರಾಗಿದ್ದರು. ಮತ್ತೂ ಶ್ರೀಗಳವರ ಮಂಟಪದಲ್ಲಿ ಕೆಲ ಜಂಗಮವಟುಗಳ ಉಪನಯನಕಾರ್ಯವು (ಅಯ್ಯಾಚಾರವಿಧಿಯು) ಸುಪ್ರಸಿದ್ಧಶಾಸ್ತ್ರಿಗಳವರಿಂದ ವೇದೋಕ್ತವಿಧಾನಪ್ರಕಾರ ನೆರವೇರಿಸಲ್ಪಟ್ಟಿತು. ತಾ॥ ೪-೨-೧೫ ಗುರುವಾರದದಿವಸ ಶುಭಮುಹೂರ್ತದಲ್ಲಿ ಶ್ರೀಗಳವರ ಅನುಗ್ರಹದ ಆಜ್ಞೆಯಮೇರೆಗೆ ಶ್ರೀ ಬಸವೇಶ್ವರ ದೇವಾಲಯದ ಪ್ರಾಕಾರದಲ್ಲಿಯೇ ಉತ್ತರಾಭಿಮುಖವಾಗಿ ಸಭಾಗೃಹದ ಅಸ್ತಿವಾರದ ಮೊದಲನೇ ಕಲ್ಲು ಪ್ರೆಸಿಡೆಂಟರ ಹಸ್ತದಿಂದ ಕೂಡಿಸಲ್ಪಟ್ಟಿತು ಸಭೆಯು ಮೊದಲನೇದಿವಸ ಸರಕಾರದಿಂದ ಸಂಸ್ಥೆಗಾಗಿ ಸ್ಥಳಪಡಕೊಂಡು ಅಲ್ಲಿ ಸಭಾಗೃಹ ರಚಿಸಬೇಕೆಂದು ಗೊತ್ತುಮಾಡಲ್ಪಟ್ಟದ್ದನ್ನು ರಹಿತಮಾಡಿ, ಬಹುಭಕ್ತರ ಪ್ರಾರ್ಥನೆಯಮೇರೆಗೆ (ದೇವಸ್ಥಾನದ ಚಂದ್ರಶಾಲೆಯ ಜೀರ್ಣೋದ್ಧಾರವೂ ಕೂಡ ಆಗುವದೆಂಬ ಭಾವನೆಯಮೇರೆಗೆ) ಆ ಪ್ರಾಕಾರದಲ್ಲಿಯೇ ಶ್ರೀಗಳವರ ಆಜ್ಞೆ ಪ್ರಕಾರ ನಿರ್ಮಿಸಲ್ಪಡುವದಾಯಿತು. ಈ ಮೇರೆಗೆ ಈ ವರ್ಷದ ಯಾತ್ರೆಗಾಗಿ ಶ್ರೀಗಳವರ ಆಗಮನಮಾತ್ರದಲ್ಲಿ ದೇವಸ್ಥಾನದಲ್ಲಿ ಮಹತ್ಕಾರ್ಯವು ನೆರವೇರಿತೆಂದು ಹೇಳಬಹುದು. ಈ ಧರ್ಮಸಂಸ್ಥೆಗಾಗಿ ಶ್ರೀಗಳವರು ತಮ್ಮ ಸಂಸ್ಥಾನದಿಂದ ೫೦೦ ರೂಪಾಯಿ ಕೊಡಿಸುವುದಾಗಿ ಅಪ್ಪಣೆ ದಯಪಾಲಿಸಿದರು. ಸಭಾಕಾರ್ಯಕ್ಕಾಗಿ ರಾವಸಾಹೇಬ ದೇಶಪಾಂಡೆ ಮಹಾಲಕರಿಯವರು ಸುಬಾಶೇತ ಇವರು ಮೆ॥ ಪೋಲೀಸ್ ಸಬ್‌ಇನಸ್ಪೆಕ್ಟರ ಮೊದಲಾದ ಅನೇಕ ಸರ್ಕಾರಿ ಅಧಿಕಾರಿಗಳು ಬಹಳ ಸಹಾಯಮಾಡಿದ್ದರಿಂದ ಅವರು ಸಮಾಜದ ಆಭಾರಕ್ಕೆ ಪಾತ್ರರಿದ್ದಾರೆ. ಸಭೆಯಲ್ಲಿ ಶ್ರೀಗಳವರ ಸಾನ್ನಿಧ್ಯದಲ್ಲಿ ಇನ್ನೂ ಹೇಳತಕ್ಕಂಥ ಮಹತ್ಕಾರ್ಯಗಳು ನೆರವೇರಿದವು. ಅವೆಲ್ಲ ಕ್ಷೇತ್ರದ ವಾರ್ಷಿಕರಿಪೋರ್ಟಿನಲ್ಲಿ ಸಮಗ್ರವಾಗಿ ವಿವರಿಸಲ್ಪಡುವುವು. ಮತ್ತೂ ಅದರಲ್ಲಿ ಸರ್ವ ಚಂದಾದಾರರಾದ ಮಹನೀಯರ ಹಾಗು ಮೆಂಬರ ಜನರ ಹೆಸರುಗಳು ಕೊಡಲ್ಪಡುವುವು.

ತಾ॥ ೫-೨-೧೯೧೫ ಶುಕ್ರವಾರದಿವಸ ಶ್ರೀಗಳವರ ಸಂಸ್ಥಾನವತಿಯಿಂದ ಶ್ರೀ ಚೆನ್ನಬಸವೇಶ್ವರ ದೇವರಿಗೆ ವಿಧಾನೋಕ್ತವಾಗಿ ರುದ್ರಾಭಿಷೇಕ ಮಾಡಲ್ಪಟ್ಟಿತು. ಅದೊಂದು ದಿವಸ ಶ್ರೀಗಳು ದೇವಸ್ಥಾನದಲ್ಲಿದ್ದು ಮರುದಿವಸ ಅಂದರೆ ತಾ॥ ೬ ಶನಿವಾರದದಿವಸ ಉಷಃಕಾಲದ ಶಿವಾರ್ಚನೆಯನ್ನು ತೀರಿಸಿಕೊಂಡು ಪ್ರಯಾಣೋನ್ಮುಖರಾದರು. ಈ ವಿಧವಾಗಿ ಈ ವರ್ಷದ ಉಳವಿಯ ಮಹಾಯಾತ್ರೆಯು ಬಹು ವಿಜೃಂಭಣೆಯಿಂದ ಸಾಂಗವಾಗುವುದಾಯಿತು.

ಪ್ರತ್ಯಕ್ಷದರ್ಶಿ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ಯಾರೀ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳೆಲ್ಲ ಅಪೇಕ್ಷಿತವಾದುವುಗಳನ್ನು ಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿ ಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧-೦-೦ ರೂ. ಕೊಡಬೇಕಾಗುವುದು ಕೆಂಪು, ಹಸುರು, ನೀಲಿ, ಬ್ರೌಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರದ ಬಣ್ಣದಿಂದ ಬಿಳಿ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೧-೨-೦; ಅನಂತರ ಪ್ರತಿ ೧೦೦ ಕ್ಕೂ ೦-೧೦-೦; ಹಳದೀ ಗ್ಲೇಜ್‌ಕಾಗದದಮೇಲೆ ಮೊದಲನೇ ೧೦೦ ಕ್ಕೆ ೨-೨-೦; ಅನಂತರ ಪ್ರತಿ ೧೦೦ ಕ್ಕೂ ೦-೧೪-೦; ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦-೬-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಕ್ಯಾರೀಪ್ರೆಸ್, ಮೈಸೂರ್.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು

77

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕದನಗಳ ಪಟಗಳೂ ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ ೨ ಆಣೆ; ವಿ. ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ:—ದಿ ಜನರಲ್ ಏಜನ್ಸಿ. ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧-೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಶಿವಪೂಜಾವಿಧಿಃ	೦-೮-೦
ಚಾರುಶೀಲೆಚರಿತೆ.	೦-೫-೦
ಸಟೀಕ ವಿವಾಹವಿಧಿ	೦-೬-೦
ವಿವೇಕಮಂಜರಿ [೨ನೆಯ ಭಾಗ]	೦-೩-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆಯವೆಚ್ಚ ಬೇರೆ.

ಮನೋಹರವೂ ಮೋಹಕರವೂ ಆದ

ಚಂದ್ರಪ್ರಭಾವತಿ ಹೇರಾಯಿಲ್.

ಮೂರುದಿನಗಳಲ್ಲಿ ಸುವಾಸನೆಯು ಹೋದರೆ 100 ರೂಪಾಯಿಗಳು ಬಹುಮಾನ ಕೊಡುತ್ತೇವೆ.

4

ಈ ತೈಲದ ಸುವಾಸನೆಯು ಮೂರು ದಿನಗಳ ವರಿವಿಗೂ ಹೋಗದೆ ಘಮಘಮಿಸುತ್ತಿರುವದು. ಇದರ ಸುವಾಸನೆಯು ಮೂರುದಿನಗಳಲ್ಲಿ ಹೋದರೆ ೧೦೦ ರೂಪಾಯಿಗಳು ಬಹುಮಾನವಾಗಿ ಕೊಡುತ್ತೇವೆ.

ಕಡಮೆ ತರದ ಹೇರಾಯಿಲ್‌ಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳುಮಾಡಿಕೊಳ್ಳಬೇಡಿರಿ. ಸುಂದರವಾದ ಕೇಶರಾಶಿಯೂ, ಅಂದವಾದ ಕೂದಲುಗಳೂ ಇವೇ ಪ್ರತಿಯೊಬ್ಬ ಸ್ತ್ರೀಪುರುಷರಿಗೂ ಸೌಭಾಗ್ಯವಾದ ಅಲಂಕಾರವಾಗಿದೆ. ಕೂದಲುಗಳು ಸುಂದರವಾಗಿ ಕಾಣಬೇಕಾದರೆ ಅವು ರೇಷ್ಮೆಯಂತೆ ಮೃದುವಾಗಿ ಕಂಗೊಳಿಸುತ್ತಿರಬೇಕು. ಇದಲ್ಲದೆ ತುರುಬನ್ನು ಯಾವ ರೀತಿಯಿಂದಲಾದರೂ ಕಟ್ಟುವಂತೆ ನಯವಾಗಿರಬೇಕು.

ಈ ತೈಲವನ್ನು ಉಪಯೋಗಿಸುತ್ತಲೆ ಕೂದಲನ್ನು ಚೆನ್ನಾಗಿಯೂ ತ್ವರೆಯಾಗಿಯೂ ಬೆಳೆಯಿಸಿ ಶಿರಸ್ಸಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವುದು. ನಿದ್ರಾಭಂಗವನ್ನು ಪರಿಹರಿಸುವುದರಲ್ಲಿ ಇದಕ್ಕೆ ಸಮಾನವಾದದ್ದು ಬೇರೊಂದಿಲ್ಲ. ಕೂದಲುಗಳಿಗೆ ಈ ತೈಲವನ್ನು ಸವರುವದರಿಂದ ಎಂದಿಗೂ ಬಿದ್ದುಹೋಗಲಾರವು ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವುವು. ಇದರ ಸುಗಂಧವಾದರೋ ಮನೋಹರವೂ ಮೋಹಕರವೂ ಆಗಿ ಮನಸ್ಸನ್ನು ಉಲ್ಲಾಸಪಡಿಸುತ್ತದೆ. ಈ ಚಂದ್ರಪ್ರಭಾವತಿ ಹೇರಾಯಿಲನ್ನು ಉಪಯೋಗಿಸುತ್ತಲೇ ಮೆದುಳಿಗೆ ಬಲವನ್ನು ಕೊಡುವದು. ಕೂದಲನ್ನು ಕೆಂಚಾಗಿಡದೆ ಕಪ್ಪು ಬಣ್ಣದಿಂದೊಡಗೂಡಿಸಿ ಗುಂಗುರು ಗುಂಗುರಾಗಿ ಬೆಳೆಯಿಸುವುದು. ಕಣ್ಣಿನ ಸರ್ವ ವ್ಯಾಧಿಗಳನ್ನೂ ಹೋಗಲಾಡಿಸುವದು. ಈ ತೈಲವನ್ನು ತಲೆಗೆ ಸವರುವದರಿಂದ ತಲೇನೋವನ್ನು ತಕ್ಷಣವೇ ಹೋಗಲಾಡಿಸುವದು. ಮೆದುಳಿಗೆ ತಂಪನ್ನುಂಟುಮಾಡುವುದು ನಿದ್ರೆಯು ಚೆನ್ನಾಗಿ ಬರುವದು. ಈ ಚಂದ್ರಪ್ರಭಾವತಿ ತೈಲವು ಔಷಧಕ್ಕೆ ಔಷಧವೂ, ಸುಗಂಧ ದ್ರವ್ಯಕ್ಕೆ ಸುಗಂಧದ್ರವ್ಯವೂ ಆಗಿರುವದು. ಈ ತೈಲವು ಸ್ತ್ರೀಪುರುಷರಿಗೆ ಬಹಳ ಉಪಕಾರಿಯಾದದ್ದು. ಒಂದು ಚಂದ್ರಪ್ರಭಾವತಿ ತೈಲದ ಶೀಸೆಯು ಬಹು ದಿನಗಳ ವರಿವಿಗೂ ಬರುವದು.

ಕ್ರಯ ಶೀಸೆ ೧ ಕ್ಕೆ ೧ ರೂಪಾಯಿ. ಟಪಾಲು ಖರ್ಚು ೪ ಆಣೆ.

ನರೆಕೂದಲನ್ನಿಟ್ಟುಕೊಂಡು ಮುದುಕರಾಗಿ ಕಾಣುವುದೇಕೆ?

ದರ್ಬಾರ್ ರಂಗು.

ಒಂದುಸಲ ಹಚ್ಚಿದರೆ ೨೫ ವರುಷದ ಪ್ರಾಯಸಮರ್ಥರಂತೆ ಕಾಣಿಸುತ್ತೀರಿ. ಈ ರಂಗು ಹಚ್ಚಿಕೊಂಡರೆ ಕೂದಲು ಕಪ್ಪಾಗಿ ಹೊಳೆಯುತ್ತೆ. ಈಗ ಮಾರಾಟಕ್ಕೆ ಬಂದಿರುವ ಅಲ್ಪತರದ ಕೂದಲು ರಂಗುಗಳು ತುಂಬಾ ಕೀಳುಜಾತಿಯವು. ಹಚ್ಚಿದಕೂಡಲೇ ಕೂದಲು ಕೆಂಚಾಗಿ ಅಸಹ್ಯವಾಗಿ ಕಾಣುತ್ತದೆ, ನಮ್ಮ ದರ್ಬಾರ್ ರಂಗು ಅಂಥಾದ್ದಲ್ಲ, ಬಹು ಮೇಲಾದದ್ದು, ಒಂದಾವರ್ತಿ ಹಚ್ಚಿದರೆ ಕೂದಲು ಕಪ್ಪಾಗಿ ರೇಷ್ಮೆಯಹಾಗೆ ಕಂಗೊಳಿಸುವುವು.

ಕ್ರಯ ಬುರುಸು ಸಮೇತ ೧-೪-೦ ರೂ.

ಉಪಯೋಗಿಸುವ ವಿಧಾನ ಚೀಟಿಯು ಜೊತೆಯಲ್ಲಿರುತ್ತೆ.

ಖೂಬ್—ಸೂರತ್.

ಮುಖಕಾಂತಿ.

ಇದು ಒಂದೇ ೧,೦೦,೦೦೦ ರೂಪಾಯಿಗಳು ಬಾಳುವುದು.

ಅಂದಗೆಡಿಸಿ ಎಲ್ಲರೆದುರಿಗೂ ಮುಖವು ಮುಚ್ಚಿಕೊಳ್ಳುವಂತೆ ಮಾಡುತ್ತಾ ಹೇಗೂ ವಾಸಿಯಾಗದ ಅಸಹ್ಯದ ಗುರುತುಗಳು, ಮಚ್ಚೆಗಳು, ಗಂಧೆಗಳು ಎಂಜಲು ಹುಣ್ಣುಗಳು, ಚಿಬ್ಬು, ಇನ್ನೂ ಇತರ ವಿಧವಾದ ಮಚ್ಚೆಗಳು, ನವೆ ಮುಂತಾದವುಗಳಿಗೆ ಈ ಔಷಧವನ್ನು ೧೫ ದಿನಗಳು ಹಚ್ಚುವುದರಿಂದ ಗುಣವಾಗಿ ಮುಖಕ್ಕೆ ಕಾಂತಿಯನ್ನು ಕೊಟ್ಟು ಹಸನ್ಮುಖಳಾಗಿ ಮಾಡುವುದು

ಕ್ರಯ ಡಬ್ಬಿ ೧ ಕ್ಕೆ ೮ ಆಣೆ.

ವಜ್ರಾಂಗಚೂರ್ಣ—ಧಾತುವು ನೀರಿನಂತಿದ್ದರೂ, ಮೂತ್ರದಲ್ಲಿಯೂ, ನಿದ್ರೆಯಲ್ಲಿಯೂ ಧಾತುವು ಹೋಗುತ್ತಿದ್ದರೂ, ಸೊಂಟದನೋವು, ಮೂತ್ರದಲ್ಲಿ ಉರಿ, ಹಸಿವು ಇಲ್ಲದೆ ಇರುವುದು, ಕೈಕಾಲುಗಳಲ್ಲಿ ನೋವಿದ್ದರೂ, ಶರೀರದಲ್ಲಿ ನಿಶ್ಶಕ್ತಿ ಆಗಿದ್ದರೂ, ತಲೆ ತಿರುಗುವುದು, ನಡೆಯುವಾಗ ಮೇಲುಬ್ಬುಸ ಬರುವುದು ಸಹ ಇದನ್ನು ಉಪಯೋಗಿಸಿದರೆ ಇಲ್ಲಿ ಹೇಳುವುದು ನಿಜವೆಂದು ವ್ಯಕ್ತವಾಗುವುದು. ಇದರ ಗುಣಗಳ ಪ್ರಖ್ಯಾತಿಯಿಂದ ಇದರ ಬೆಲೆಯು ೧೦ ರೂಪಾಯಿಗಳು ಇಟ್ಟರೂ ಬಹಳ ಸುಲಭವೆಂದರಿಯಬೇಕು ಈ ಬೆಲೆಯನ್ನು ಇಡುವದರಿಂದ ಬಡವರು ಕೊಳ್ಳಲಾರರು. ಆದ್ದರಿಂದ ಇದರ ಬೆಲೆಯು ಡಬ್ಬಾ ೧ ಕ್ಕೆ ೧೦ ಆಣೆ ಇಟ್ಟಿರುತ್ತೆ.

ಪಂಡಿತ್ ಡಿ. ಎಂ. ರವರ ಭಸ್ಮವು—ಉಷ್ಣದಿಂದ ಮೂತ್ರದಲ್ಲಿ ಉರಿ, ಮೂತ್ರದಲ್ಲಿ ರೇವು ಹೋಗುವದು, ಇದು ಹಳೆದಾಗಲಿ ನೂತನವಾಗಲಿ ಆಗಿದ್ದರೂ ೨೪ ಗಂಟೆಯೊಳಗಾಗಿ ನಿವಾರಣೆಯಾಗುತ್ತವೆ.

ಕ್ರಯ ಡಬ್ಬ ೧ ಕ್ಕೆ ೧೨ ಆಣೆ.

ಉಷ್ಣಕಾರಕಕ್ಕೆ ಮಾತ್ರೆಗಳು—ಉಷ್ಣಕಾರಕದಿಂದ ಶರೀರದಲ್ಲಿ ಪಡೆಗಳಿದ್ದರೂ, ಗಾಯಗಳಿದ್ದರೂ, ಈ ದೆಸೆಯಿಂದ ಶರೀರವನ್ನೇ ತ್ಯಜಿಸಲುದ್ಯುಕ್ತವಾದ ರೋಗವಾದರೂ ಸಹ ಈ ಔಷಧವನ್ನು ಸೇವಿಸುವದರಿಂದ ಖಂಡಿತವಾಗಿಯೂ ಗುಣವಾಗುವದು, ಕ್ರಯ ಡಬ್ಬಿ ೧ ಕ್ಕೆ ೧ ರೂ.

ದಿಲ್‌ಖುಷ್ ತೈಲವು—ಅನೇಕರಿಗೆ ಕೂದಲನ್ನು ಬೆಳೆಸುವ ಇಚ್ಛೆಯಿರುವದು. ಈ ತೈಲವನ್ನು ೧೦-೧೫ ದಿನಗಳು ಹಚ್ಚುವದರಿಂದ ಕೂದಲು ಬಹಳವಾಗಿ ಬೆಳೆಯುವವು. ತೈಲವು ಬಹಳ ಸುವಾಸನೆಯಾಗಿರುವುದು. ಮೆದುಳಿಗೆ ತಂಪನ್ನುಂಟುಮಾಡುವದು ಕ್ರಯ ಶೀಸೆ ೧ ಕ್ಕೆ ೧೨ ಆಣೆ.

ಆಶ್ಚರ್ಯಕರವಾದ ದ್ರಾವಕ—ಇದನ್ನು ಸ್ವಲ್ಪ ಮೂಸಿ ನೋಡುವದರಿಂದ ಒಂದು ನಿಮಿಷದಲ್ಲಿ ತಲೆನೋವು ನಿಲ್ಲುತ್ತೆ. ಔಷಧವು ಖರ್ಚಾಗದೆ ಹಾಗೆಯೇ ಇರುವದು ಚೇಳು, ಹಾವು, ಇತ್ಯಾದಿ ವಿಷಜಂತುಗಳ ಕಡಿತಕ್ಕೆ ಹಚ್ಚಿದರೆ ಗುಣಪಡಿಸುತ್ತೆ. ಕ್ರಯ ಶೀಸೆ ೧ ಕ್ಕೆ ೮ ಆಣೆ.

ವೀರ್ಯಸ್ತಂಭಕವೂ, ಕಾಮೋತ್ತೇಜಕವೂ ಆದ ಗುಳಿಗೆ—ತನಗೆ ಅಪೇಕ್ಷೆ ಇರುವಾಗ ಒಂದು ಗುಳಿಗೆಯನ್ನು ತಣ್ಣೀರಿನಲ್ಲಿ ಸೇವಿಸಲು ವೀರ್ಯಸ್ತಂಭನವಾಗುವದು. ಒಂದು ಗಂಟೆಯಕಾಲ ತಡೆದು ಸ್ತ್ರೀಸಂಗಮಾಡಲು ಆನಂದವಾಗುವದು. ಕ್ರಯ ಡಬ್ಬಿ ೧ ಕ್ಕೆ ೮ ಆಣೆ.

ರೋಮನಾಶಕ, ವೃಶ್ಚಿಕ ದಂಷ್ಟ್ರ—ಈ ಔಷಧವು ಚೇಳಿನ ಹೊಡತಕ್ಕೂ, ಕೂದಲು ತೆಗಿಯುವದಕ್ಕೂ ಬಹಳ ಅನುಕೂಲವಾಗಿರುವದು. ಇದು ಪ್ರತಿಯೊಬ್ಬರಲ್ಲಿಯೂ ಇರಬೇಕಾದ ಔಷಧವು. ಕ್ರಯ ಶೀಶೆ ೧ ಕ್ಕೆ ೪ ಆಣೆ.

ವಾತನಿವಾರಣ ತೈಲವು—ಎದೆಯಲ್ಲಿಯೂ, ಪಕ್ಕೆಗಳಲ್ಲಿಯೂ, ಸೊಂಟದಲ್ಲಿಯೂ, ಕೈಕಾಲುಗಳಲ್ಲಿಯೂ ನೋವಿದ್ದರೆ ಈ ತೈಲವನ್ನು ಉಪಯೋಗಿಸುವದರಿಂದ ತಕ್ಷಣ ಗುಣವಾಗುವದು. ಕ್ರಯ ಶೀಸೆ ೧ ಕ್ಕೆ ೪ ಆಣೆ.

ಅದ್ಭುತಗೊಂಡ ಮೂಲವ್ಯಾಧಿಔಷಧ	ಶೀಸೆ	೧ ಕ್ಕೆ	೧೨ ಆಣೆ
ಕಣ್ಣಿಗೆ ಸುರ್ಮ	"	"	೪ "
ದಂತ ಚೂರ್ಣ	ಡಬ್ಬಿ	"	೪ "
ಕಜ್ಜಿ, ಹುಳುಕಡ್ಡಿ ಔಷಧ ...	"	"	೪ "
ಹೊಟ್ಟೇನೋವಿಗೆ ಔಷಧ ...	ಶೀಸೆ	"	೪ "
ತಲೇನೋವಿಗೆ ತೈಲವು ...	"	"	೪ "
ಕೆಮ್ಮಲು ರೋಗಕ್ಕೆ ಔಷಧವು	ಡಬ್ಬಿ	"	೪ "

ಗಾಯಕ್ಕೆ ಔಷಧ—ಇದನ್ನು ದಿನಕ್ಕೆರಡಾವರ್ತಿಯಂತೆ ೮-೧೦ ದಿನಗಳು ಹಚ್ಚುವದರಿಂದ ಹಳೇ ಮತ್ತು ಹೊಸಗಾಯಗಳು ಗಾಯದಲ್ಲಿ ಉರಿಯುತ್ತಿದ್ದರೂ ಗುಣಪಡಿಸುವದು. ಕ್ರಯ ಡಬ್ಬಿ ೧ ಕ್ಕೆ ೮ ಆಣೆ.

ಅನುಪಾನಪತ್ರಿಕೆಯು ಔಷಧದ ಜೊತೆಯಲ್ಲಿರುವದು.

ಒಂದು ರೂಪಾಯಿಗಿಂತಲೂ ಕಡಮೆಯಾಗಿ ವಿ. ಪಿ ಯಲ್ಲಿ ಕಳುಹಿಸುವದಿಲ್ಲ.

ವಿಳಾಸ:—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
೫, ಅವೆನ್ಯೂ ರೋಡ್ ಬೆಂಗಳೂರು ಸಿಟಿ.

ಓರಿಯಂಟಲ್ ಫಾರ್ಮಸಿ ಮೈಸೂರು.

8

ಪ್ರಸಿದ್ಧ ಗುಣಕಂಡ ಔಷಧಗಳು.

ಜ್ವರದಮಾತ್ರೆ—ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ. ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಯುಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮಂದಿಶವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ರೂ.

ಗೋರೋಜನದಮಾತ್ರೆ—ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಕಫಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೊಡ್ಲೆ ತಪ್ಪಿ ಜೀರ್ಣಶಕ್ತಿಕೊಡುತ್ತೆ. ಪ್ರಯಾಣೀಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾಯು ನೋವು ಉಳುಕು ಊದು ಮುಂತಾದುವಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ ೫ ಡಬ್ಬಿಗೆ ೧ ರೂ. ಕೊಡ್ಲೆ ನಮ್ಮ ಕ್ಯಾಟಲಾಗಿಗೆ ಬರಿಯಿರಿ ಮುಫತ್ತು ಕಳುಹಿಸುತ್ತೇವೆ.

ಫಕ್ತ್ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

13

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯು ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗಪೀಡಿತರು, ರಕ್ತಪ್ರದ್ರೇಕವಾದವರು, ತೃಷೆಪೀಡಿತರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩–೮–೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಪ್ರಕಟಣೆ.

ಬೆಂಗಳೂರ ಸೆಂಟರಿಗೆ ಲೋಯರ್ ಸೆಕೆಂಡರಿ ಪರೀಕ್ಷೆಗಾಗಿ ಬರತಕ್ಕ ವೀರಶೈವ ವಿದ್ಯಾರ್ಥಿಗಳಿಗೆ ಎಂದಿನಂತೆ ಭೋಜನಕ್ಕೂ, ವಾಸಕ್ಕೂ ತಕ್ಕೇರ್ಪಾಟನ್ನು ಮಾಡಿದೆ. ಆದುದರಿಂದ ವಿದ್ಯಾರ್ಥಿಗಳೆಲ್ಲರೂ ತಾವು ಬರತಕ್ಕ ಕಾಲ ಮತ್ತೂ ತಮ್ಮ ಹೆಸರು ವಿಳಾಸವನ್ನು ನನ್ನ ಅಡ್ರಸ್ಸಿಗೆ ಬರೆದು ತಿಳಿಸುವುದು.

ಎಸ್. ಕಳ್ಳೆಪ್ಪ ಊದಬತ್ತಿಷಾಪ್,
2 ದೊಡ್ಡಪೇಟೆ ಬೆಂಗಳೂರಸಿಟಿ.

ಹೊಸ ಪುಸ್ತಕಗಳು.

177

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೫೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧–೮–೦.

ರೇವಣಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ.— ಬೆಲೆ ೧–೪–೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ಬೆಲೆ ೧–೮–೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಳಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ.—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ–ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧–೩–೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿ.— ಬೆಲೆ ೧–೩–೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ ಪಂಚಶ್ಲೋಕೀ.—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ.—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧–೩–೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧–೩–೦

ಸೌಂದರಪುರಾಣಂ.— ೧–೩–೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧–೨–೦; ೫–೦–೦; ೩–೦–೦; ೨–೮–೦; ೧–೪–೦; ಕಸ್ತೂರಿಬಿಲ್ಲೆ ತೋಲಾ ೧ಕ್ಕೆ ೧–೦–೦; ಹಸಿಗಂಧ ತೋಲಾ ೧ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ಕ್ಕೆ ೪ ಆಣೆ ಧೂಪದಗಟ್ಟಿ ೧ಕ್ಕೆ ೨ ಆಣೆ ಬಾಲಗ್ರಹದೂಪರ್ಟಿ ೧ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್ ಸನ್ಸ್ 46
ಸುಗಂಧಕಾರಿ, ಮೈಸೂರು.

ಬಿಸಿಲುಕಾಲಕ್ಕೆ 24

ಎಲ್ಲರಿಗೂ ಬೇಕು.

ಅಮೃತಾಮಲಕತೈಲ:—ವಿಧವಿಧವಾದ ತಲೆನೋವು, ಶರೀರವು ಬೆಂಕಿಯಂತಿರುವುದು, ತಲೆತಿರಗು, ಕಣ್ಣುರಿ, ಕಣ್ಣು ಕೆಂಪು, ಕಣ್ಣು ಮಂಜು, ಕಣ್ಣಿನಲ್ಲಿ ನೀರು ಸುರಿಯುವುದು, ರಾತ್ರಿ ನಿದ್ರೆಬಾರದಿರುವುದು ಇವುಗಳನ್ನು ೧–೨ ಅಭ್ಯಂಗನದಿಂದಲೇ ಗುಣಮಾಡಿ ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ. ಬಿಸಿಲುಕಾಲಕ್ಕೆ ಇದು ಅಮೃತವೇಸರಿ. ಎಂಟು ಅಭ್ಯಂಗನಕ್ಕೆ ಆಗುವ ತೈಲ ೦–೮–೦. ೧ ಡಜನ್ ೫–೦–೦.

ಆಮೋದಿನಿ:—ಅಮೋಘವಾದ ಸುವಾಸನೆಯಿಂದ ಕೂಡಿದ ಈ ಮಾತ್ರೆಗಳು ತಾಂಬೂಲವನ್ನು ರಂಜಿಸಿ ಬಾಯಾರಿಕೆಯನ್ನು ತಕ್ಷಣ ನಿಲ್ಲಿಸಿ ಆಯಾಸವನ್ನು ಪರಿಹರಿಸಿ ಕಂಠನಾಳವನ್ನು ಸರಿಪಡಿಸಿ ಕೆಮ್ಮು, ದಮ್ಮು, ಉಬ್ಬಸ, ಮುಂತಾದ ದುರ್ಗಂಧಗಳನ್ನು ಗುಣಮಾಡಿ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠವಾದುದು. ಸಂಗೀತಗಾರರಿಗೂ, ವಿದ್ಯಾರ್ಥಿಗಳಿಗೂ, ಪ್ರಯಾಣೀಕರಿಗೂ ಅಮೂಲ್ಯವಾದುದು. ೧೦ ಮಾತ್ರೆ ೦–೪–೦. ೫ಕ್ಕೆ ಒಂದು ಹೆಚ್ಚು.

ಖುತಾಮಲಕರಸಾಯನ:—ತಲೆತಿರಗು, ಕಣ್ಣುಕತ್ತಲೆ, ಹಸಿವೇ ಇಲ್ಲದಿರುವುದು, ಆಹಾರದಲ್ಲಿ ಅರುಚಿ, ವಾಕರಿಕೆ, ವಾಂತಿ, ಹುಳಿ, ಖಾರ, ಅಥವಾ ಶಿಹಿಯಾದ ತೇಗು, ಹೊಟ್ಟೆಯುಬ್ಬರ, ಹೊಟ್ಟೆನೋವು, ಕಣ್ಣು ಅಥವಾ ಮೈ ಹಳದಿಬಣ್ಣ, ನಿಶ್ಯಕ್ತಿ, ಹಳೇಜ್ವರ, ಎದೆಬಡಿಯುವಿಕೆ, ಪಾಂಡು, ಕಾಮಾಲೆ, ಮೂರ್ಛೆ ಇವುಗಳಪೈಕಿ ಯಾವುದಿದ್ದರೂ ಖಾತರಿ ಗುಣವಾಗಿ ದಿನಕ್ಕೊಂದುವೇಳೆ ಸರಿಯಾಗಿ ಕಾಲಪ್ರವರ್ತಿಯಾಗುತ್ತದೆ. ೧೫ ದಿನಕ್ಕೆ ಆಗುವ ಔಷಧ, ಬೆಲೆ ೦–೧೨–೦. ೧ ಡಜನ್ ಡಬ್ಬಿಗಳಿಗೆ ೭–೮–೦.

ಪ್ರತಿಔಷಧಕ್ಕೂ ಟಪಾಲ್ ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ.

ವಿಳಾಸ:—ಬಿ. ವಿ. ಪಂಡಿತ್, ಸದ್ವೈದ್ಯಶಾಲಾ,
ನಂಜನಗೂಡು, ಮೈಸೂರು ಡಿ॥

೧೯೧೫ನೆಯ ಇಸವಿ ಮಾರ್ಚಿ ತಾ॥ ೨೮ರಿಂದ ೧೯೧೫ನೆಯ ಏಪ್ರಿಲ್ ತಾ॥ ೩ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೭ ನೆಯ ರಾಕ್ಷಸಸಂವತ್ಸರದ ಸಂ॥ ದ ಚೈತ್ರ ಶು॥ ದ್ವಾದಶಿಯಿಂದ ಚೈತ್ರ ಬ॥ ತದಿಗೆವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವಿವಾನ ತೇದಿ
28	[1] ಭಾನು	ದ್ವಾ	21-9	ಮಖಾ	44-47	15
29	[2] ಸೋ	ತ್ರ	19-1	ಪುಬ್ಬಾ	43-54	16
30	[3] ಮಂಗ	ಚತು	15-48	ಉ	42-3	17
31	[4] ಬುಧ	ಪೌ	11-40	ಹಸ್ತ	39-47	18
1	[5] ಗುರು	ಪಾ	6-49	ಚಿತ್ತ	35-50	19
2	[6] ಶುಕ್ರ	ಬಿದಿ	1-23	ಉಪರಿ	54-22	20
3	[7] ಶನಿ	ತದಿ	49-32	ವಿಶಾಖ	27-53	21

(1) ಪ್ರದೋಷಃ, ನಂಜನಗೂಡಿನಲ್ಲಿ ಶ್ರೀಕಂಠೇಶ್ವರಸ್ವಾಮಿ ಪಂಚರಥಃ, ತಿರುಮಕೂಡ್ಲಿನಲ್ಲಿ ಅಗಸ್ತ್ಯೇಶ್ವರ ರಥಃ, ಬೇಲೂರು ಚೆನ್ನಕೇಶ್ವರಸ್ವಾಮಿ ಗರುಡೋತ್ಸವಃ, ದಗ್ಧಯೋಗಃ (2) ಚತುರ್ದಶೀ ತಿಥಿಃ, (ವಾಕ್ಯರೀತ್ಯಾ ತಿಥಿದ್ವಯಂ) ಅನಂಗ ೧೩, ಮೇ॥ ಚಲುವರಾಯಸ್ವಾಮಿ ರಥಃ, ಬೇಲೂರು ಚೆನ್ನಕೇಶ್ವರಸ್ವಾಮಿ ರಥಃ, ನರಶೀಪುರದಲ್ಲಿ ಪ್ರಹ್ಲಾದೋತ್ಸವಃ. (3) ಮಾಗಡಿ ರಂಗಸ್ವಾಮಿ ರಥಃ, ಪಂಗುನ್ಯುತ್ತರಾ, ಬುಧಗುರ್ವೋಸ್ಸಾನ್ನಿಧ್ಯಂ. (4) ನರಶೀಪುರದಲ್ಲಿ ಗುಂ॥ ನೃ॥ ರಥಃ, ಚಿತ್ರಾ ೧೫, ಶ್ರೀರಂಗದಲ್ಲಿ ಗೋ॥ ರಥಃ (5) ಮೇಲುಕೋಟೆಯಲ್ಲಿ ಮಹಾಭಿಷೇಕಃ. (6) ಅವಮಃ, ವಾಗ್ವೇಶ್ವರತೀರ್ಥರ ಪುಣ್ಯದಿನ, ಶುಭಪ್ರದಗೌರೀವ್ರತಂ, ಕಳಲೆ ಲಕ್ಷ್ಮೀಕಾಂತಸ್ವಾಮಿ ರಥಃ (7) ಸಂಕಟಹರಚತುರ್ಥೀ, ಬುಧಕುಜಯೋಸ್ಸಾನ್ನಿಧ್ಯಂ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

43

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಾಯಿ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಹುತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇವೊಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸರಾಯಿಪ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧–೦–೦

ಟಪಾಲ್ ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ERGISTERED NO. M. 124.

ಮೈಸೂರ್ ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಕ್ಷ್ಮಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಪಲಂ ॥
ಸಿಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚಿತ್ತೇ ಕಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧–೦–೦
ಅಂಚೆವೆಚ್ಚ ಸೇರಿ ೧–೧೪–೦

ಸಂಪುಟ ೨೮) ಮೈಸೂರ್ ಸ್ಟಾರ್ ಸರ್ ೧೯೧೫ ನೆಯ ಇಸವಿ ಏಪ್ರೆಲ್ ತಾರೀಖು ೪ ನೆಯ ಭಾನುವಾರ. (ಸಂಚಿಕೆ ೧೪

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

9

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

೧. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.
೨. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.
೩. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ ಯಾವರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.
೪. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.
೫. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.
೬. ಬೇಸಿಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.
೭. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಳೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

೪೫ ಮಾತ್ರೆಗಳ	ಪೊಟ್ಟಣ	೧ಕ್ಕೆ	೨	ಆಣೆ	೮೦ ಮಾತ್ರೆಗಳ	ಟಿನ್	೧ಕ್ಕೆ	೪	ಆಣೆ.
೬೫ „	„	„	೪	„	೧೦೦ „	ಶೀಶೆ	„	೪॥	„
೨೦೦ „	„	„	೩	„	೫೫೦ „	ಮರದಪೆಟ್ಟಿಗೆ	„	೧	ರೂ.
೨೦೦ „	ಟಿನ್	„	೬	„	೧೨೦೦ „	„	„	೨	„

೧ ರೂ.ಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಎಲ್ಲಾ ಕಡೆಯೂ ಪ್ರಸಿದ್ಧವರ್ತಕರಲ್ಲಿ ವಿಕ್ರಯಿಸಲ್ಪಡುತ್ತದೆ.

ಮೈಸೂರುಸೀಮೆಯ ಏಜಂಟರು:–ಎಂ. ರಾಮಸಂಜೀವ ಸೆಟ್ಟಿ,
ಚನ್ನಪಟ್ಟಣ.

ಸೋಲ್ ಏಜಂಟರು:–ಸೆಶಿಂತಾನ್ ಡಿಪೋ,
ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ ೨.

ಮದ್ರಾಸ್ ಏಜಂಟ್:—ಬಿ. ಸಿ. ಷಾ ಅಂಡ್ ಕೊ,
೧೩೩ ಚೇನಾಬಜಾರ್ ರೋಡ್, ಮದ್ರಾಸ್.

N.&Co
ARES CITY.
KASHI
VISHWESHWAR.

27

ಡ್ಡ ಕಂಪೆನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರಿಸೀರೆ, ಕಣ, ಪೇಟಾ. ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ–ಎಸ್. ಯೂ ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

೧೯೧೫ನೆಯ ಶ್ರೀಸೀತಾರಾಘವ ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಬೆಲೆಯನ್ನು ತಗ್ಗಿಸಿದೆ. ಕೆಲವೇಪ್ರತಿಗಳು ಮಾತ್ರವೆ ಇವೆ. ಬೇಗ ಬರೆದು ತರಿಸಿಕೊಳ್ಳಿರಿ. ಉತ್ತಮವಾದಕಾಗದ ಮುದ್ದಾದಮುದ್ರಣ. ಮತ್ತಾವಡೈರಿಗಳಲ್ಲೂ ಇಲ್ಲದ ಅನೇಕ ಉಪಯುಕ್ತವಾದ ಸಂಗತಿಗಳು ಈ ಡೈರಿಯಲ್ಲಿ ಇರುತ್ತವೆ. ಐದು (೫) ಡೈರಿಗಳನ್ನು ಒಂದೇವಿಳಾಸಕ್ಕೆ ತರಿಸಿಕೊಂಡರೆ ೧ ಡೈರಿ ಇನಾಮ್.

೧ ನಂ—ಸಣ್ಣಸೈಜು ಸಾದಾ ೦–೨–೬
೨ ನಂ—ಪೆನ್ಸಿಲ್ ಮುಚ್ಚುಳವುಳ್ಳುದು ೦–೪–೦

ಪೋಸ್ಟೇಜು ಬೇರೆ.

ವಿಳಾಸ.—ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.

26

ತಿರಸಂಗೀಕರ ಸ್ಮಾರಕ.

ಕನ್ನಡ ಒಕ್ಕಲತನದ ಶಾಲೆ ದೇವೀಹೊಸೂರ.

3

ಈ ಶಾಲೆಯು ಧಾರವಾಡ ಜಿಲ್ಹೆಯಲ್ಲಿರುವ ಹಾವೇರಿ ಸ್ಟೇಶನ್ನಿಂದ ೫ ಮೈಲು ದೂರವಿರುವ ದೇವೀಹೊಸೂರ ಎಂಬಲ್ಲಿ ಸ್ಥಾಪಿತವಾಗಿದ್ದು ಅದರ ಹೊಸಕ್ಲಾಸುಗಳು ಇದೇ ಮೇ ತಿಂಗಳು ೨೪ ನೇ ತಾರೀಖಿನಿಂದ ಶುರು ಆಗುವವು. ಇದು ಕೇವಲ ಒಕ್ಕಲಿಗರ ಮಕ್ಕಳ ದೆಶೆಯಿಂದ ಇರುತ್ತದೆ. ಇದರಲ್ಲಿ ಸೇರಬಿಚ್ಛಿಸುವ ವಿದ್ಯಾರ್ಥಿಗಳ ಸಂಬಂಧದ ನಿಯಮಗಳು ಕೆಳಗೆ ಕೊಟ್ಟಂತೆ ಇರುತ್ತವೆ.

(೧) ಹುಡುಗರು ಸ್ವತಃ ಒಕ್ಕಲತನ ಮಾಡುವಂಥ ಒಕ್ಕಲಿಗರ ಮಕ್ಕಳಾಗಿರಬೇಕು ಮತ್ತು ಆ ಹುಡುಗರು ಸ್ವಲ್ಪ ಮಟ್ಟಿಗಾದರೂ ಒಕ್ಕಲತನದ ಕೆಲಸದಲ್ಲಿ ಮಾಹಿತಿಯುಳ್ಳವರಿರಬೇಕು.

(೨) ಇಲ್ಲಿ ಕಲಿತು ಒಕ್ಕಲತನದ ಉದ್ಯೋಗವನ್ನು ನಡೆಯಿಸಬೇಕೆನ್ನುವವರನ್ನೇ ಈ ಶಾಲೆಯಲ್ಲಿ ತಕ್ಕೊಳ್ಳುವದರಲ್ಲಿ ಬರುವದು. ಸರಕಾರೀ ನೌಕರಿಯನ್ನು ಇಚ್ಛಿಸುವಂಥ ವಿದ್ಯಾರ್ಥಿಗಳು ಇಲ್ಲಿ ಬರಕೂಡದು.

(೩) ಹುಡುಗರು ಕನಿಷ್ಠಪಕ್ಷಕ್ಕೆ ಕನ್ನಡ ೫ನೇ ಇಯತ್ತೆಯಲ್ಲಿಯಾದರೂ ಪಾಸಾಗಿರಲಿಕ್ಕೆ ಬೇಕು. ಮತ್ತು ಅವರು ಯಾವ ಶಾಲೆಯಲ್ಲಿ ಕಲಿತಿರುವರೋ ಆ ಶಾಲೆಯ ಹೆಡ್ಡಮಾಸ್ತರರ ಲೀವ್ಹಿಂಗ ಸರ್ಟಿಫಿಕೇಟನ್ನು ಅರ್ಜಿ ಲಗತ ಕಳುಹಿಸಬೇಕು.

(೪) ಹುಡುಗರ ವಯಸ್ಸು ೧೪ ವರ್ಷದಿಂದ ೧೭ ವರ್ಷದ ಒಳಗಿರಬೇಕು. ಮತ್ತು ವಯಸ್ಸಿನ ದಾಖಲೆ ಅರ್ಜಿ ಲಗತ ಕಳುಹಿಸಬೇಕು.

(೫) ಹುಡುಗರ ಅಭ್ಯಾಸಕ್ರಮವು ಎರಡು ವರ್ಷದ್ದಿರುವದು; ಈ ಶಾಲೆಯಲ್ಲಿ ತೆಗೆದುಕೊಂಡ ಪ್ರತಿಯೊಬ್ಬ ಹುಡುಗನಿಗೆ ಅವನ ಶಾಲೆಯ ಫೀಗೂ ಊಟದ ವೆಚ್ಚಕ್ಕೂ ಸಾಲುವಷ್ಟು ಸ್ಕಾಲರಶಿಪ್ ಕೊಡಲ್ಪಡುವದು.

(೬) ಒಮ್ಮೆ ಶಾಲೆಯಲ್ಲಿ ಸೇರಿದನಂತರ ಶಾಲೆಯ ಅಭ್ಯಾಸ ಕ್ರಮವು ಪೂರ್ಣ ಮುಗಿಯುವವರೆಗೆ ಶಾಲೆಯನ್ನು ಬಿಡಕೂಡದು. ಒಂದು ವೇಳೆ ಮಧ್ಯದಲ್ಲಿ ಬಿಟ್ಟರೆ ಅವರು ಶಾಲೆಯಲ್ಲಿ ಇದ್ದಷ್ಟು ದಿವಸಗಳ ಖರ್ಚನ್ನು ಕೆಳಗೆ ಸಹಿ ಮಾಡಿದವರು ನಿರ್ಣಯಿಸಿದಷ್ಟು ಕೊಡಬೇಕಾಗುವದು.

ಪ್ರತಿವರ್ಷ ೧೫–೨೦ ಹುಡುಗರನ್ನು ತೆಗೆದುಕೊಳ್ಳುವದರಲ್ಲಿ ಬರುವದು. ಬೇರೆ ಶಾಲೆಗಳಂತೆ ಈ ಶಾಲೆಗೂ ಯಾವ ತರ್ಹ ಸೂಟಿಗಳು ದೊರೆಯುವವು. ಇದಲ್ಲದೆ ವರ್ಷಕ್ಕೆ ಎರಡಾವರ್ತಿ ಒಮ್ಮೆ ದೀಪಾವಳಿ ಸುಮಾರಕ್ಕೆ, ಮತ್ತೊಮ್ಮೆ ಬೇಸಿಗೆ ಸಮಯಕ್ಕೆ ಒಂದೊಂದು ತಿಂಗಳದ ಸತತ ಸೂಟಿಗಳು ಸಿಕ್ಕುವವು. ಇವೆರಡು ಸೂಟಿಗಳಲ್ಲಿ ಮಾತ್ರ ಹುಡುಗರನ್ನು ಮನೆಗೆ ಕಳುಹಿಸುವದರಲ್ಲಿ ಬರುವದು. ಈ ಶಾಲೆಯ ಮುಖ್ಯ ಉದ್ದೇಶವೆಂದರೆ ಒಕ್ಕಲಿಗರ ಮಕ್ಕಳಿಗೆ ಸುಧಾರಿಸಿದ ಪ್ರಕಾರದ ಒಕ್ಕಲತನದ ಶಿಕ್ಷಣವನ್ನು ಕೊಟ್ಟು ಅವರನ್ನು ಅವರ ತಾಯಿತಂದೆಗಳಿಗೆ ಹೆಚ್ಚಿಗೆ ಉಪಯುಕ್ತರನ್ನಾಗಿ ಮಾಡಿಕೊಡುವದು ಅದೆ. ಈ ಶಾಲೆಗೆ ಬರಬಿಚ್ಛಿಸುವವರು ಅರ್ಜಿಯನ್ನು ಇದೇ ಮೇ ತಿಂಗಳ ೧ನೇ ತಾರೀಖಿನ ಒಳಗಾಗಿ ಕೆಳಗೆ ಸಹಿಮಾಡಿದವರ ಕಡೆಗೆ ಕಳುಹಿಸತಕ್ಕದ್ದು.

ಆ ಅರ್ಜಿ ವಿಚಾರಣೆಮಾಡಿ ನಮ್ಮ ಶಾಲೆಯಲ್ಲಿ ತೆಗೆದುಕೊಳ್ಳತಕ್ಕಂಥ ವಿದ್ಯಾರ್ಥಿಗಳಿಗೆ ಪತ್ರದ್ವಾರದಿಂದ ಬರಲಿಕ್ಕೆ ತಿಳಿಸುವೆವು; ಅರ್ಜಿ ನಿಕಾಲಿ ಮಾಡುವಕಾಲಕ್ಕೆ ವತನದಾರ ಪಾಟೀಲ ಕುಲಕರ್ಣಿಯವರ ಮಕ್ಕಳಿಗೂ, ಸುಸ್ಥಿತಿಯ ಒಕ್ಕಲಿಗರ ಮಕ್ಕಳಿಗೂ, ಹೆಚ್ಚು ಸವಲತ ಸಿಗುವದು. ಅರ್ಜಿಯಲ್ಲಿ ಹೆಸರು, ತಂದೆಯ ಹೆಸರು, ಅಡ್ಡಹೆಸರು, ಜಾತಿ,

ಇರುವ ಊರು, ತಾಲೂಕು, ಜಿಲ್ಲಾ ಖಾತೇದ ಹೊಲವು ಎಷ್ಟು, ಮತ್ತು ಅದು ಎಲ್ಲಿರುವದು ಸರಕಾರಕ್ಕೆ ದರವರ್ಷ ಕೊಡಬೇಕಾದ ತೆರಿಗೆ ತೋಟಪಟ್ಟಿಗಳನ್ನು ಮಾಡಲಿಕ್ಕೆ ನೀರಿನ ಅನುಕೂಲತೆ ಇರುವದೇ ಹ್ಯಾಗೆ? ಮತ್ತು ಹೊಲಗಳನ್ನು ಮನೆಯಿಂದ ಮಾಡುವರೋ ಹ್ಯಾಗೆ? ಮೊದಲಾದ ಮಾಹಿತಿಯನ್ನು ತುಂಬಿ ಆಯಾ ಊರ ಗ್ರಾಮಸ್ಥರ ದಾಖಲೆಯನ್ನು ಲಗತಿಟ್ಟು ಅರ್ಜಿ ಕಳಿಸಬೇಕು; ಮತ್ತು ಅರ್ಜಿಯನ್ನು ಶಾಲೆಗೆ ಬರಲಿಚ್ಛಿಸುವ ವಿದ್ಯಾರ್ಥಿಗಳೇ ಸ್ವಹಸ್ತದಿಂದ ತುಂಬಿ ಕಳಿಸಬೇಕು. ಮೇಲೆ ಹೇಳಿದ ನಿಯಮಗಳಂತೆ ನಡೆಯಲಿಕ್ಕೆ ಅನುಮತಿಯುಂಟೆಂದು ತಮ್ಮ ಪಾಲಕರ ಕಡೆಯಿಂದ ಒಂದು ಸಹಿನಿಸಿ ದಾಖಲೆ ತರ್ಕೊಂಡು ಅರ್ಜಿ ಲಗತ ಇಟ್ಟು ಕಳಿಸಬೇಕು

ಧಾರವಾಡ
ತಾ॥ ೫-೩-೧೯೧೫

ಸಹಿ ಟಿ. ಗಿಲ್ಬರ್ಟ
ಡಿ. ಡಾಯರೆಕ್ಟರ ಶೆತಕೀ ಖಾತೆ,
ದಕ್ಷಿಣಭಾಗ.

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತವಾಗಿರುವ ಘೋರಯುದ್ಧದ ದೆಸೆಯಿಂದ ಈ ಸಾಮಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದ ಮತ್ತೂ ಬೆಲಜಿಯಮ್ಮಿನಿಂದ ಸುತರಾಂ ಬರುವುದು ಕಟ್ಟಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಆವಶ್ಯಕವಾದ ಕಾಗದ ಮೊದಲಾದ ಸಾಮಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವಧಿಯು ಪೂರೈಸಿರುವವರಿಗೆಲ್ಲಾ ಪತ್ರಿಕೆಯನ್ನು ವಿ. ಪಿ. ದ್ವಾರ ಕಳುಹಿಸುತ್ತಿರುವೆವು. ಆದರೆ ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿರುಗಿಸಿ ಕಾಗದದ ಬೆಲೆಯೇರಿಕೆಯಿಂದ ನಷ್ಟಪಡುವುದರ ಜತೆಗೆ ಪೋಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದು ತಿಳುಹಲು ಖೇದವಾಗುತ್ತದೆ. ಇತಃಪರಃ ದಯಾರ್ದ್ರಹೃದಯರಾದ ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ. ಪಿ. ಹಣವನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನವಾಗಿ ನಡೆದುಕೊಂಡು ಹೋಗುವಂತೆ ಮಾಡುವರೆಂದು ಸಂಪೂರ್ಣವಾಗಿ ನಂಬಿರುತ್ತೇವೆ.

ಮ್ಯಾನೇಜರ್.

ಸಂಘವು—ಸೇವೆಯು.

(ದೇಶಾಯಿ ಶೇಷಗಿರಿರಾವು, ನಂದಿ.)

ಈಚೆಗೆ ಕೊಂಚಕಾಲದಿಂದ ನಮ್ಮ ದೇಶದಲ್ಲಿ, ಸಾಂಘಿಕಸೇವೆಯಲ್ಲಿ ಅಭಿಮಾನವು ಗಾಢವಾಗಿ ಏರ್ಪಡುತ್ತಿರುವುದು. ಸಂಘಾಭಿವೃದ್ಧಿಗೆ ಸಹಾಯವಾಗುವ ನಾನಾವಿಷಯಗಳಲ್ಲಿ ಜನರು ಅಧಿಕವಾದ ಉತ್ಸಾಹವನ್ನು ತೋರಿಸುತ್ತಿರುವರು. ರಾಜಕೀಯಾಭಿವೃದ್ಧಿಗೆ ಕೆಲವರು ಶ್ರದ್ಧೆಯಿಂದ ಕೆಲಸಮಾಡುತ್ತಿರುವರು. ದೇಶವನ್ನು ದುರಾಚಾರಬಂಧನಗಳಿಂದ ಬಿಡಿಸಲು ಕೆಲವರು ಕೃಷಿಮಾಡುತ್ತಿರುವರು. ಮತ್ತೆ ಕೆಲವರು ಪರಿಶ್ರಮೆಗಳನ್ನು ಅಭಿವೃದ್ಧಿಗೊಳಿಸಲು ಯತ್ನಿಸುತ್ತಿರುವರು ಜನಸಾಮಾನ್ಯದಲ್ಲಿ ವಿದ್ಯೆಯನ್ನು ಹರಡುವುದಕ್ಕೆ ಕೆಲವರು ಪ್ರಯತ್ನಿಸುತ್ತಿರುವರು. ದೇಶದಲ್ಲಿ ನೂತನವಾಗಿ ಅಂಕುರಿಸಿದ ಈ ಸೇವಾಭಿಮಾನವು ಪುರುಷರಲ್ಲಿ ಮಾತ್ರವೇ ಇರುವುದೆಂದು ಎಣಿಸಲಾಗದು. ನಾರೀಮಣಿಯರು ಕೂಡ ತಮ್ಮ ಜಾತ್ಯಭಿವೃದ್ಧಿಗೆ ಕೃಷಿಮಾಡದೆ ಸುಮ್ಮನಿರುತ್ತಿರುವುದಿಲ್ಲವು. ಸ್ತ್ರೀಜನಸಮಾಜಗಳು ಅಲ್ಲಲ್ಲಿ ಉದಯಿಸಲಾರಂಭಿಸಿರುವುವು. ಯುವತೀಮಣಿಯರ ಉಪಯೋಗಕ್ಕೋಸ್ಕರವಾಗಿಯೇ ಉದ್ದೇಶಿಸಲ್ಪಟ್ಟ ಭಾಂಡಾಗಾರಗಳೂ, ವಿದ್ಯಾಲಯಗಳೂ ಅಲ್ಲಲ್ಲಿರುವುವು.

ಇಂದ್ರಜಾಲಕನು ಒಂದುಸಾರಿ ತನ್ನ ದಂಡವನ್ನು ತಿರಿಗಿಸಿದ ಮಾತ್ರದಿಂದಲೇ ವಸ್ತುಗಳಲ್ಲಿ ಚಿತ್ರವಿಚಿತ್ರವಾದ ಬದಲಾವಣೆಗಳುಂಟಾಗುವಂತೆ, ಪರಮೇಶ್ವರನ ಇಚ್ಛಾಧೀನವಾಗಿ ನಮ್ಮ ದೇಶದಲ್ಲಿ ಇಂತಹ ಅಮೋಘಗಳಾದ ಪರಿವರ್ತನೆಗಳು ಉಂಟಾಗುತ್ತಿರುವುವು. ಈಶ್ವರಾಜ್ಞೆಯೇ ಆಗದಿದ್ದಲ್ಲಿ ನಮ್ಮದೇಶದಲ್ಲಿ ಇಂತಹ ಬದಲಾವಣೆಗಳುಂಟಾಗುವುದಕ್ಕೆ ಏನುಕಾರಣವೆಂದು ಹೇಳಬಲ್ಲೆವು? ಶತಾಬ್ದಗಳಿಂದಲೂ ನಮ್ಮದೇಶವು ಸಂಘಾಭಿವೃದ್ಧಿಗೆ ಪ್ರತಿಬಂಧಕವಾಗಿರುವ ವಿಪರೀತಸಿದ್ಧಾಂತ ಒಂದಕ್ಕೆ ಕಟ್ಟುಬಿದ್ದಿರುವುದು. „ ಜನ್ಮವು ದುಃಖ ಬಹುಳವು. ಕರ್ಮವೇ ದುಃಖಕ್ಕೆ ಕಾರಣವು. ಕರ್ಮಾನುಷ್ಠಾನವೇ ಜನ್ಮಪರಂಪರೆಗೆ ಕಾರಣವಾದುದರಿಂದ ಕರ್ಮಪರಿತ್ಯಾಗವು ಕರ್ತವ್ಯವು." ಎಂದು ನಮ್ಮ ಮತಗ್ರಂಥಗಳು ಬೋಧಿಸಿದ್ದರಿಂದ ಜನಗಳು ಪ್ರಾಪಂಚಿಕವಿಷಯಗಳಲ್ಲಿ ತಕ್ಕಷ್ಟು ಶ್ರದ್ಧೆಯನ್ನು ತೋರಿಸಿದವರಾಗಲಿಲ್ಲವು ದೇಶಕ್ಷೇಮಕರಗಳಾದ ಉದ್ಯಮಗಳ ವಿಷಯದಲ್ಲಿ ತಕ್ಕಷ್ಟು ಉತ್ಸಾಹವನ್ನು ಜನರು ತೋರಿಸದೇ ಇದ್ದುದಕ್ಕಿದೇ ಮೂಲಹೇತುವಾಗಿದ್ದಿತು. ಪಾಶ್ಚಾತ್ಯನಾಗರಿಕತೆಯಿಂದಲೂ, ಆಂಗ್ಲವಿದ್ಯಾಪ್ರಭಾವದಿಂದಲೂ, ಮತ್ತಿತರ ಕಾರಣಗಳಿಂದಲೂ ನಮ್ಮ ಭರತಖಂಡದಲ್ಲಿ ಸೇವಾಭಿಮಾನವು ಉದಯಿಸಿರುವುದು. ಓಹೋ! ಮಾನವಸ್ವಭಾವಿಕವಾದ ಪರೋಪಕಾರಬುದ್ಧಿಯು ಎಷ್ಟುಕಾಲ ಅಡಗಿಕೊಂಡಿರುವುದು?

ಮನುಷ್ಯನು ಋಣಗ್ರಸ್ತನು. ತನ್ನ ಋಣವನ್ನು ತೀರಿಸುವವರೆಗೂ ಮನುಷ್ಯನು ಸೌಖ್ಯವನ್ನನುಭವಿಸಲಾರನು. ತನ್ನ ಜನ್ಮಕ್ಕೆ ಕಾರಣಭೂತರಾದ ಜನನೀಜನಕರಿಗಾತನು ಋಣಬಿದ್ದಿರುವವನು. ಅನುರಾಗಪಾಶಗಳಿಂದ ತಾನು ಬಂಧಿಸಲ್ಪಟ್ಟಿರುವ ಬಂಧುಕೋಟಿಗಾತನು ಋಣಬಿದ್ದಿರುವನು. ತನ್ನ ಪೋಷಣೆಗೂ, ತನ್ನ ವಿದ್ಯಾಸಂಪತ್ತಿಗೂ, ತನ್ನ ಭೋಗಗಳಿಗೂ ಸಹಾಯವಾಗುವ ಸಂಘಕ್ಕೆ ಆತನು ಋಣಬಿದ್ದಿರುವನು ಈ ಋಣವೆಲ್ಲವನ್ನೂ ಒಪ್ಪಿಸುವುದು ಪ್ರತಿಮನುಷ್ಯನಿಗೂ ಮುಖ್ಯಕರ್ತವ್ಯವು. ಸಾಲಗಳ ಪಾಲಾದವನು ಸಂತೋಷದೂರನಾಗುವುದು ನಿಶ್ಚಯವಾದುದರಿಂದ, ಮನುಷ್ಯನು ತಾನು ನಿರ್ವಹಿಸಬೇಕಾದ ನಾನಾವಿಧವಿಧಾಯಕಕೃತ್ಯಗಳನ್ನು ನಿರ್ವಹಿಸದೆ ಸುಮ್ಮನಿದ್ದು, ಸ್ವಲಾಭವನ್ನೇ ನೋಡಿಕೊಳ್ಳುತ್ತಿದ್ದಲ್ಲಿ ಯಥಾರ್ಥವಾದ ಸಂತೋಷವನ್ನು ಅನುಭವಿಸಲಾರನು. „ ಸ್ವಾರ್ಥಪರ " ನಾಗಿ ಅವನಾದರೂ ಒಂಟಿಯಾಗಿ ಸೌಖ್ಯವನ್ನನುಭವಿಸಲು ಎಣಿಸಿದರೂ, ಅದು ಅಸಂಭವವು. ಸಂಘದೊಂದಿಗೆ ಮನುಷ್ಯನು ಬಿಡಲಾರದ ಸಂಬಂಧವನ್ನುಂಟಾಗಿರುವನು. ಶರೀರವು ಸುಖಸ್ಥಿತಿಯಲ್ಲಿಲ್ಲದೆ ಇರುವಾಗ ತದಂಗವು ಆರೋಗ್ಯವನ್ನನುಭವಿಸಲಾರದೆ ಇರುವ ವಿಧದಲ್ಲಿ ಸಂಘವು ಸುಖಸ್ಥಿತಿಯಲ್ಲಿಲ್ಲದೆ ಇದ್ದಪಕ್ಷದಲ್ಲಿ ಯಾವ ಮಾನವನಾದರೂ ಒಂಟಿಯಾಗಿ ಸುಖವಾಗಿರಲಾರನು. ತನ್ನ ಸುತ್ತುಮುತ್ತಲೂ ಕಲರಾಜಾಡ್ಯವು ಪ್ರಬಲಿಸಿ ನೂರಾರುಜನರು ಮೃತ್ಯುವಿನಬಾಯಿಗೆ ತುತ್ತಾಗುತ್ತಿದ್ದಲ್ಲಿ ಯಾವನಾದರೂ ನೆಮ್ಮದಿಯಾಗಿರಲಾಗುವುದೆ? ಪಕ್ಕದಲ್ಲಿದ್ದ ಗೃಹವು ಅಗ್ನಿದೇವನ ಪಾಲಾಗಿ ಧಗಧಗನೆ ಉರಿಯುತ್ತಿರುವಲ್ಲಿ ಯಾವ ಗೃಹಸ್ಥನಾದರೂ ತನ್ನ ಗೃಹವನ್ನು ಮಾತ್ರ ಭದ್ರವಾಗಿ ಕಾಪಾಡಿಕೊಳ್ಳಲು ಎಣಿಸಿದಲ್ಲಿ ಅನುಕೂಲಿಸುವುದೇ? ಸಂಘದಲ್ಲಿರುವ ಎಲ್ಲರೂ ಒಬ್ಬರೊಡನೆ ಒಬ್ಬರು ಸಂಬಂಧವನ್ನುಂಟಾಗಿರುವರು. ಯಾವನು ಪರರ ಸೌಖ್ಯದಲ್ಲಿಯೇ ತನ್ನ ಸೌಖ್ಯವನ್ನು ಕಾಣುವನೋ, ಯಾವನು ಪರರ ಕಷ್ಟಗಳನ್ನೇ ತನ್ನ ಕಷ್ಟಗಳೆಂದು ಭಾವಿಸಿಕೊಳ್ಳುವನೋ ಆತನದೇ ಪರಮಸೌಖ್ಯವು. ಆತನೇ ಪರಮಪೂಜ್ಯನು. ಆತನ ಜನ್ಮವೇ ಸಾರ್ಥಕವು.

ನಮ್ಮ ದೇಶದಲ್ಲಿ ಈಗಲೀಗ ಮಾನವಸೇವೆಯಲ್ಲಿ ಗೌರವಬುದ್ಧಿಯು ಉಂಟಾಗಿರುವುದು. ಇದನ್ನು ತಕ್ಕರೀತಿಯಲ್ಲಿ ಸಂರಕ್ಷಿಸಬೇಕಾಗಿರುವುದು. ಉಪಯೋಗಿಸದ ಖಡ್ಗವು ತುಕ್ಕು (ಕಿಲುಬು) ಹಿಡಿದು ನಿರುಪಯೋಗವಾಗುವಂತೆ ಸೇವಾನುರಾಗವುಕೂಡ ಅನುಭವಕ್ಕೆಬಾರದೆಹೋದಲ್ಲಿ ಕಾಲಕ್ರಮದಲ್ಲಿ ಇಲ್ಲದೇನೇ ಹೋಗುವುದರಲ್ಲಿ ಸಂದೇಹವಿಲ್ಲವು. ಮಾಡಿದ ಮಹತ್ಕಾರ್ಯಗಳನ್ನೇ ಮಾಡಬೇಕೆಂದು ಮನಸ್ಸಿನಲ್ಲೆಣಿಸಿ ಉಪೇಕ್ಷೆ ಮಾಡದೆ ಪ್ರತಿ ಮನುಷ್ಯನೂ ತನ್ನ ಕೈಲಾದಮಟ್ಟಿಗೂ ಪರಕ್ಷೇಮಕ್ಕಾಗಿ ಕೃಷಿಮಾಡಲು ಯತ್ನಿಸಬೇಕು ಅನೇಕ ವಿಧಗಳಲ್ಲಿ ಹೀನಸ್ಥಿತಿಯಲ್ಲಿದ್ದು ನಮ್ಮ ದೇಶವು ಸ್ವಾರ್ಥತ್ಯಾಗಶೀಲರಾದ ಸೇವಕರಿಗಾಗಿ ನಿರೀಕ್ಷಿಸುತ್ತಿರುವುದು ಈಶ್ವರಾನುಗ್ರಹದಲ್ಲಿ ವಿಶ್ವಾಸವನ್ನಿರಿಸಿ ಸೇವಾದೀಕ್ಷೆಯನ್ನು ಕೈಕೊಂಡು ಮಾನವಕೋಟಿಯ ಕ್ಷೇಮಕ್ಕೋಸ್ಕರವಾಗಿ ಕೃಷಿಮಾಡುವವರು ಧನ್ಯರು.

ಗ್ರೀಸ್‌ದೇಶವು.

ಈ ದೇಶದ ಮಂತ್ರಿಮಂಡಲದವರ ಅಭಿಮಾನವು ಮಿತ್ರಮಂಡಲಿಯವರ ಪಕ್ಷಕ್ಕೂ, ಪ್ರಭುವಿನ ಅಭಿಮಾನವು ಜರ್ಮನಿಯ ಪಕ್ಷಕ್ಕೂ ಇರುವ ಕಾರಣದಿಂದ ಹಿಂದಣ ಮಂತ್ರಿಮಂಡಲದವರೆಲ್ಲಾ ರಾಜೀನಾಮೆಯನ್ನು ಕೊಟ್ಟರೆಂಬ ಸಂಗತಿಯನ್ನು ಹಿಂದೆ ತಿಳಿಯಿಸಿರುವೆವಷ್ಟೆ. ಈಗ ಈ ರಾಜ್ಯದ ಸ್ಥಿತಿಯು ಡೋಲಾಯಮಾನವಾಗಿರುವುದು.

ಈ ರಾಜ್ಯವು ಯೂರೋಪುಖಂಡದಲ್ಲಿನ ಪ್ರಾಚೀನರಾಷ್ಟ್ರಗಳಲ್ಲೆಲ್ಲಾ ಅಗ್ರೇಸರವಾದುದು. ಇದು ನಾಗರಿಕತೆಗೆ ಜನ್ಮಭೂಮಿಯೆಂದೂ, ಸ್ವಾತಂತ್ರ್ಯಕ್ಕೆ ತವರ್ಮನೆಯೆಂದೂ ಪ್ರಸಿದ್ಧವಾದುದು. ಇಲ್ಲಿ ಪ್ರಾಚೀನಾಚಾರಗಳು ಇನ್ನೂ ಕೆಲಕೆಲವು ಇದ್ದೇ ಇವೆ. ಪಾಶ್ಚಾತ್ಯದೇಶದ ಇತರ ರಾಷ್ಟ್ರಗಳಲ್ಲಿರುವಂತೆ ಈ ದೇಶದ ಸ್ತ್ರೀಯರಿಗೆ ಅಷ್ಟು ಸ್ವಾತಂತ್ರ್ಯವಿರುವುದಿಲ್ಲ. ಗವಸಣಿಗೆಯ ಪದ್ಧತಿಯೂ ಬಾಲ್ಯವಿವಾಹಪದ್ಧತಿಯೂ ಇಲ್ಲಿಲ್ಲ. ವರಶುಲ್ಕದುರಾಚಾರವು ಮಾತ್ರ ಇದೆ. ಹೆಂಡತಿಗೆ ಗಂಡನು ಯಜಮಾನನಾಗಿರುವುದರಿಂದ ಅವನ ಮಾತನ್ನು ಮೀರಿ ಹೆಂಡತಿಯು ನಡೆಯಕೂಡದು. ಪ್ರಪಂಚದಮೇಲೆ ಎಲ್ಲೆಲ್ಲಿಯೂ ಸ್ತ್ರೀಯರು ಪುರುಷರಿಗಿಂತಲೂ ಸೌಂದರ್ಯದಲ್ಲಿ ಪ್ರಖ್ಯಾತರಾಗಿರುವುದುಂಟಷ್ಟೆ. ಈ ದೇಶದಲ್ಲಾದರೋ ಸ್ತ್ರೀಯರಿಗಿಂತಲೂ ಪುರುಷರೇ ಸೌಂದರ್ಯಕ್ಕೆ ಪ್ರಖ್ಯಾತರು. ಇಲ್ಲಿನ ಪುರುಷರು ಎತ್ತರವಾಗಿಯೂ ಕೋಮಲಾಂಗರಾಗಿಯೂ ಇರುವರು. ಆದರೂ ಯುದ್ಧಕಾರ್ಯಕ್ಕೆ ತಕ್ಕ ಶೌರ್ಯಗಾಂಭೀರ್ಯಕಷ್ಟಸಹಿಷ್ಣುತೆಗಳು ಅವರಲ್ಲಿದ್ದೇ ಇರುವುವು. ಇಲ್ಲಿನ ಭೋಜನಪದ್ಧತಿಯೂ, ಹಾಸುಗೆಹೊದಿಕೆಗಳ ರೀತಿಯೂ ಪೂರ್ವದೇಶರೀತಿಯನ್ನನುಸರಿಸಿರುವುವು ಈ ದೇಶೀಯರಿಗೆ ಗ್ರೀಕು ಮಾತೃಭಾಷೆಯು. ಈಗ ವ್ಯವಹಾರದಲ್ಲಿರುವ ಗ್ರೀಕ್‌ಭಾಷೆಗೂ, ಸಾವಿರವರ್ಷದ ಹಿಂದೆ ಇದ್ದ ಪ್ರಾಚೀನ ಗ್ರೀಕ್‌ಭಾಷೆಗೂ ವಿಶೇಷ ತಾರತಮ್ಯವೇನೂ ಇಲ್ಲದಿದ್ದರೂ ಆಗಿನ ಗ್ರಾಂಥಿಕಭಾಷೆಯೊಡನೆ ಈಗಿನ ತಮ್ಮ ಭಾಷೆಯನ್ನು ಸಮಾನವನ್ನಾಗಿ ಮಾಡಬೇಕೆಂಬುದು ಈಗಿನ ಗ್ರೀಕರ ಅಭಿಲಾಷೆಯಾಗಿದೆ. ಈಗಲೂ ಗ್ರೀಕರಲ್ಲಿ ಸ್ವಭಾಷಾಸ್ವದೇಶಚಾರಿತ್ರಗಳ ವಿಷಯದಲ್ಲಿರುವ ಅಭಿಮಾನವು ಅವರ ಜಾತಿಬಂಧಗಳಿಗಿಂತಲೂ ಅತಿಶಯವಾಗಿರುತ್ತದೆ. ಈ ದೇಶದಮೇಲೆ ಹಲವುಸಲ ಅನ್ಯದೇಶೀಯರು ಅಭಿಯೋಗವನ್ನು ಮಾಡುತ್ತ ಬಂದಿದ್ದರೂ ಇದು ತನ್ನ ಪ್ರಾಚೀನನಾಗರಿಕತೆಯನ್ನು ಕಳೆದುಕೊಳ್ಳದೆ ಬಂದಿದೆ. ೧೮೩೦ ನೆಯ ವರ್ಷದವರೆಗೆ ಇದು ತುರ್ಕಿಗೆ ಅಧೀನವಾಗಿದ್ದಿತು. ಆ ವರ್ಷ ಇದಕ್ಕೆ ಪರಾಧೀನತೆಯು ತಪ್ಪಿ ಸ್ವತಂತ್ರವಾಯಿತು. ಆ ಕೂಡಲೇ ದೂರಸ್ಥವಾಗಿಯೂ, ತಟಸ್ಥವಾಗಿಯೂ ಇದ್ದ ಗ್ರೀಕುದ್ವೀಪಗಳಿಂದ ಮರಳಿ ಪ್ರಾಚೀನವಿಕಸನವು ವಿಜೃಂಭಿಸಿ, ಈಗ ಆ ಗ್ರೀಕಿನ ನೂತನಸೌಭಾಗ್ಯವು ಹಳೆಯಗ್ರೀಕಿನ ತಳಪಾಯದಮೇಲೆ ನಿಲ್ಲಿಸಲ್ಪಟ್ಟಿದೆ.

೧೯೧೨–೧೩ ನೆಯ ವರ್ಷದಲ್ಲಿ ಜರುಗಿದ ಬಾಲ್ಕನ್ ಯುದ್ಧದಿಂದ ಗ್ರೀಸ್‌ದೇಶಕ್ಕೆ ಕೆಲ ಹೊಸಹೊಸ ಭೂಭಾಗಗಳು ಸೇರಿದುವು. ಮೆಸಿಡೋನಿಯಾ–ಅಲ್ಬೇನಿಯಾ–ಗ್ರೀಸು ಮೊದಲಾದುವುಗಳೂ, ತುರ್ಕಿಗೆ ಸೇರಿದ್ದ ಕ್ರೀಟ್ ಮೊದಲಾದ ದ್ವೀಪಗಳೂ ಸಹ ಹಾಗೆ ಸೇರಿದುವುಗಳಲ್ಲಿ ಮುಖ್ಯವಾದುವುಗಳು. ಈಗ ಈ ದೇಶದ ಒಟ್ಟು ವೈಶಾಲ್ಯವು ಬಹುಶಃ ೪೬೪೦೦ ಚದರಮೈಲುಗಳಷ್ಟಾಗುವುದು. ಜನಸಂಖ್ಯೆ ೪೦ ಲಕ್ಷ. ಆದಾಯವು ೧೮ ಕೋಟಿ. ದೇಶಕ್ಕಿರುವ ಸಾಲವು ೪೮ ಕೋಟಿ. ಈ ದೇಶದಲ್ಲಿ ವಿದ್ಯೆಯನ್ನು ನಿರ್ಬಂಧವಾಗಿಯೂ ಉಚಿತವಾಗಿಯೂ ಅಭ್ಯಾಸಮಾಡಿಸುವರು. ರಾಜಧಾನಿಯಾದ ಅಥೆನ್ಸಿನಲ್ಲಿ ವಿಶ್ವವಿದ್ಯಾಲಯವಿರುವುದು ಅಲ್ಲಿಗೆ ತುರ್ಕಿ ವಿದ್ಯಾರ್ಥಿಗಳು ವಿಶೇಷವಾಗಿ ಹೋಗುತ್ತಿರುವ ಪದ್ಧತಿಯುಂಟು. ಇಲ್ಲಿನ ಭೂಸೈನ್ಯ ಜಲಸೈನ್ಯಗಳೆರಡೂ ಆಂಗ್ಲಸೇನಾಪತಿಗಳ ಮೇಲ್ವಿಚಾರಣೆಯಿಂದ ತಿದ್ದಲ್ಪಟ್ಟು ವೃದ್ಧಿಗೊಂಡಿವೆ. ಪ್ರತಿಯೊಬ್ಬ ಯೌವನಸ್ಥನೂ ತನಗೆ ೨೧ ನೆಯ ವಯಸ್ಸು ಪ್ರಾಪ್ತವಾದೊಡನೆಯೇ ಸೇನೆಯಲ್ಲಿ ಸೇರಿ ಯುದ್ಧಕಲೆಯನ್ನು ಅಭ್ಯಾಸಮಾಡಬೇಕೆಂಬ ಕಟ್ಟಪ್ಪಣೆಯುಂಟು. ೪೩ ನೆಯ ವಯಸ್ಸು ತುಂಬುವವರೆಗೂ ಯಾವಾಗಕರೆದರೂ ರಣರಂಗಕ್ಕೆ ಹೋಗಲು ಸಿದ್ಧರಾಗಿರಬೇಕು. ಈ ದೇಶದ ನೌಕಾದಳದಲ್ಲಿ ೧೯೧೩ ನೆಯ ವರ್ಷದ ಜುಲೈ ತಿಂಗಳಲ್ಲಿ ೪ ದೊಡ್ಡ ಯುದ್ಧನಾವೆಗಳೂ, ಆಧುನಿಕ ರೀತಿಯ ಕ್ರೂಯಿಸರು ಒಂದೂ, ಡಿಸ್ಟ್ರಾಯರುಗಳು ಹದಿನಾಲ್ಕೂ, ಸಬ್‌ಮೆರೀನುಗಳು ಎರಡೂ, ಇತರ ಯುದ್ಧನಾವೆಗಳು ನಾಲ್ಕೂ ಇದ್ದುವು. ಯುದ್ಧರಂಗದಲ್ಲಿ ನಿಲ್ಲಲು ಅಣಿಯಾದ ಸೈನಿಕರು ೨ ಲಕ್ಷ ಮಂದಿಯಿರುವರು. ಈ ದೇಶಕ್ಕೆ ದೊರೆಯೇ ಅಧಿಪತಿಯು. ಈತನನ್ನು ಸಿಂಹಾಸನದಮೇಲೆ ಕುಳ್ಳಿರಿಸಿದವರು ಇಂಗ್ಲೆಂಡು-ಫ್ರಾನ್ಸ್-ರಷ್ಯಾಪ್ರಭುಗಳಾಗಿರುವರು. ಅದರಲ್ಲೂ ಇಂಗ್ಲೆಂಡು ಅತ್ಯಂತ ಮುಖ್ಯತಮವಾಗಿದ್ದಿತು. ಅದುಕಾರಣ, ಗ್ರೀಕಿನ ರಾಜ್ಯಾಂಗನಿರ್ಣಯವು ಆಂಗ್ಲಪದ್ಧತಿಯನ್ನನುಸರಿಸಿದೆ. ಈ ದೇಶದಲ್ಲಿ ಒಂದು ಪ್ರಜಾಪ್ರತಿನಿಧಿಸಭೆಯಿದೆ. ಇದಕ್ಕೆ ಪ್ರತಿನಿಧಿಗಳಾಗತಕ್ಕವರು ೩೦ ವಯಸ್ಸಿಗೆ ಮೇಲ್ಪಟ್ಟವರಾಗಿರಬೇಕು ಪ್ರಜೆಗಳಿಂದ ಆರಿಸಲ್ಪಟ್ಟ ಇಂಥ ಪ್ರತಿನಿಧಿಗಳ ಸಮೂಹದಿಂದ ಮಂತ್ರಿಮಂಡಲವನ್ನು ರಾಜನು ಏರ್ಪಡಿಸಿಕೊಳ್ಳುವನು. ಈ ದೇಶದಲ್ಲಿ ಕಾರ್ಯಪದ್ಧತಿಗಳ ಮೇಲೆ ಪಕ್ಷಗಳೇನೂ ಏರ್ಪಡದೆ ಮನುಷ್ಯರ ಮಾತುಗಾರಿಕೆಯ ಬಲಾಬಲದ ಮೇಲೆ ಪಕ್ಷಗಳು ಏರ್ಪಡುವುದರಿಂದ, ಒಂದು ಮಂತ್ರಿಮಂಡಲವು ದೊರೆಗೆ ನಿರುಪಯೋಗ್ಯವೆಂದು ತೋರಿದಾಗ ಮತ್ತೊಂದನ್ನು ತನ್ನಿಷ್ಟಾನುಸಾರವಾಗಿ ಏರ್ಪಡಿಸಿಕೊಳ್ಳುವುದುಂಟು. ರಾಜ್ಯಕಾರ್ಯವೆಲ್ಲವನ್ನೂ ಮಂತ್ರಿಮಂಡಲದವರೇ ನಿರ್ವಹಿಸತಕ್ಕವರು. ಎಲ್ಲ ಉತ್ತರವಾದಿತ್ವವೂ ಅವರಿಗೆ ಸೇರಿರುವುದೇಹೊರತು ದೊರೆಗೆ ಯಾವಮಾತ್ರವೂ ಇರುವುದಿಲ್ಲ. ಆದರೋ ಮಂತ್ರಿಮಂಡಲಕ್ಕೆ ಸ್ಥಿರತ್ವವು ಇಲ್ಲವಾದುದರಿಂದ ದೊರೆಯ ಮನಸ್ಸುಬಂದಾಗ ಹೊಸಹೊಸ ಮಂತ್ರಿಮಂಡಲವು ಕಟ್ಟಲ್ಪಡುವ ಪದ್ಧತಿಯುಂಟು ಈಗಲೂ ಒಂದು ನೂತನಮಂತ್ರಿಮಂಡಲವು ಏರ್ಪಟ್ಟಿದೆ ಈಗಿನ ಆ ದೇಶದ ಪ್ರಜಾಮತವು ಬಹುತರವಾಗಿ ಮಿತ್ರಮಂಡಲಿಯವರ ಕಡೆಗೇ ಇದೆ. ಸೇನಾಭಿಪ್ರಾಯವೂ ಅತ್ತಕಡೆಯೇ ಇದೆ. ಹಿಂದೆ ಮಿತ್ರಮಂಡಲಿಯವರ ಕಡೆಯಿಂದಲೇ ಗ್ರೀಸಿಗೆ ಎಷ್ಟೋ ಲಾಭವಾಗಿದೆ. ಅದುಕಾರಣ ಈಗಿನ ಮಹಾಯುದ್ಧದಲ್ಲಿ ಗ್ರೀಸಿನಪಕ್ಷವು ಮಿತ್ರಮಂಡಲಿಯಕಡೆಗೆ ಇರುವುದೇ ಯುಕ್ತವಾಗಿದೆ. ಆದರೂ ಈಗಿನ ಗ್ರೀಸ್‌ರಾಜನಿಗೆ ಜರ್ಮಚಕ್ರವರ್ತಿಯು ಸ್ವಂತ ಸಹೋದರಿಯನ್ನೇ ಕೊಟ್ಟು ಮದುವೆಯಾಗಿರುವುದರಿಂದ ಆ ಪಾಶವು ದೇಶದ ಪ್ರಭುವನ್ನು ಮಾತ್ರ ಜರ್ಮನಿಯಕಡೆಗೆ ಎಳೆಯುತ್ತಿದೆ. ಇದರಿಂದ ಸದ್ಯಃ ಗ್ರೀಸಿನ ಸ್ಥಿತಿಯು ಡೋಲಾಯಮಾನವಾಗಿದೆ

ವಾಣಿಜ್ಯ.

ಪರದೇಶಗಳಿಂದ ಭರತಖಂಡಕ್ಕೆ ಸೀಸವೂ, ಸೀಸದಕಡ್ಡಿಗಳೂ ಬಹಳವಾಗಿ ಬರುವುವು. ಈ ಪದಾರ್ಥಗಳು ಜರ್ಮನಿಯಿಂದಲೂ, ಆಸ್ಟ್ರಿಯಾದಿಂದಲೂ ಬಹಳವಾಗಿ ಬರುತ್ತಿದ್ದುವು. ಈಗಿನ ಯುದ್ಧದಿಂದ ಅವು ಬರುವುದು ಕಟ್ಟಾಗಿದೆ. ಸೀಸವೂ ಸೀಸದಕಡ್ಡಿಯೂ ಅತ್ಯವಶ್ಯಕವಾದ ಸಾಮಗ್ರಿಗಳು. ಮೃದುವಾದ ಸೀಸವು ಸಿಕ್ಕುವ ಗಣಿಗಳೂ, ಮೃದುವಾದ ಮರವೂ ಸಿಕ್ಕುವ ಕಡೆಗಳಲ್ಲಿ ಸೀಸದಕಡ್ಡಿಗಳ ನಿರ್ಮಾಣವು ಚೆನ್ನಾಗಿ ನಡೆಯುವುದು. ಜರ್ಮನಿ ಆಸ್ಟ್ರಿಯಾಗಳಲ್ಲಿ ಅವೆರಡೂ ಸಮೃದ್ಧವಾಗಿರುವುವು. ಭರತಖಂಡದಲ್ಲಿ ಮೃದುವಾದ ಸೀಸವೂ, ಮೆದುವಾದ ಮರದಜಾತಿಯೂ ಸಿಕ್ಕುವುದು ಪ್ರಯಾಸ. ತಿರುವಾಂಕೂರಿನಲ್ಲಿ ಮೃದುವಾದ ಸೀಸವು ತಕ್ಕಷ್ಟು ಸಿಕ್ಕುವುದಾದರೂ ಅದು ಉತ್ಕೃಷ್ಟವಾದುದಲ್ಲವಂತೆ. ಇನ್ನು ಕೆಲಕಡೆ ಸೀಸದ ಗಣಿಗಳು ಸಿಕ್ಕಿದರೂ ಪೆನ್ಸಿಲ್ಲಿಗೆ ಉಪಯೋಗಿಸುವಷ್ಟು ಉತ್ಕೃಷ್ಟವೂ ಮೃದುವೂ ಆದುದಲ್ಲ. ಮೈಸೂರುದೇಶದ ಕೆಲಕಾಡುಗಳಲ್ಲಿ ಪೆನ್ಸಿಲ್ಲಿಗೆ ಉಪಯೋಗಿಸಲಾಗುವ ಕೆಲ ಜಾತಿಯ ಮರಗಳಿರುವುವು. ಪರಿಪಾಕಾದಿಗಳಿಂದ ಸೀಸದಲ್ಲಿ ಉತ್ಕೃಷ್ಟತೆಯನ್ನುಂಟುಮಾಡಿಕೊಳ್ಳುವುದು ಸಾಧ್ಯವಾದರೆ, ಅದನ್ನು ಬಲ್ಲ ಶಾಸ್ತ್ರಜ್ಞರ ಸಹಾಯದಿಂದ ದಕ್ಷಿಣಹಿಂದೂಸ್ಥಾನದಲ್ಲಿ ಯಾವುದಾದರೊಂದುಕಡೆ ಪೆನ್ಸಿಲ್ಲಿನ ಕರ್ಮಾಗಾರವನ್ನು ಸ್ಥಾಪಿಸಿ ಲಾಭಗೊಳ್ಳಬಹುದು.

ನಮ್ಮ ದೇಶದಲ್ಲಿ ಉತ್ಪನ್ನವಾಗುವ ಎಣ್ಣೆಯಬೀಜ-ಮತ್ತೂ ಕಾಳುಗಳಲ್ಲಿ ಎಳ್ಳು-ಹರಳು-ನೆಲಗಡಲೆ-ಹತ್ತಿಬಿತ್ತ-ಗಸಗಸೆ-ಹಿಪ್ಪೆ-ಹೊಂಗೆ ಇವು ಮುಖ್ಯವಾದುವುಗಳು. ಕಳೆದವರ್ಷ ಈ ಪದಾರ್ಥಗಳೆಲ್ಲಾ ಅನ್ಯದೇಶಗಳಿಗೆ ೮ ಕೋಟಿ ರೂ.ನಷ್ಟು ಸಾಗಿಹೋಗಿದ್ದಿತು. ಈ ಪದಾರ್ಥಗಳನ್ನೆಲ್ಲಾ ಹೊರಕ್ಕೆ ಕಳುಹಿಸದೆ ಸ್ವದೇಶದಲ್ಲೇ ಎಣ್ಣೆಯನ್ನು ಯಂತ್ರಗಳಿಂದ ತೆಗೆಯಿಸಿ ಮಾರಿದರೆ ಬಹಳ ಲಾಭಬರುವುದಲ್ಲದೆ ಹಿಂಡಿಯು ನಮ್ಮಲ್ಲಿ ಉಳಿದು ಪಶುಗಳಮೇವಿಗೂ, ಭೂಮಿಯಗೊಬ್ಬರಕ್ಕೂ ಉಪಯುಕ್ತವಾಗಿ ಆ ಮೂಲಕವೂ ಪ್ರಯೋಜನವಾಗುವುದೆಂದು ಹಲವರು ನಾನಾಮುಖವಾಗಿ ಬೋಧಿಸುತ್ತಿದ್ದರೂ, ಆ ಬೋಧೆಗೆ ತಕ್ಕಷ್ಟು ಫಲವಾಗದಿರುವುದು ವಿಷಾದವು.

ನಮ್ಮ ದೇಶದಲ್ಲಿ ಮಕ್ಕಳು ಆಡುವ ಬೊಂಬೆಯ ಸಾಮಗ್ರಿಗಳೂ ಕೂಡ ವಿದೇಶದಿಂದಲೇ ಬರುತ್ತಿವೆ. ಇವುಗಳು ಜರ್ಮನಿಯ ನ್ಯೂರೆಂಬರ್ಗ್–ಸಾನೀಬರ್ಗ್ ಪಟ್ಟಣಗಳಿಂದಲೇ ವರ್ಷ ೧ ಕ್ಕೆ ೪೦ ಲಕ್ಷ ರೂ. ನಷ್ಟು ಬೆಲೆಯವು ನಮ್ಮ ದೇಶಕ್ಕೆ ಬರುತ್ತಿದ್ದುವು. ಇದರಿಂದ ಭರತಖಂಡವು ಹಣವನ್ನು ತೆರುವುದರಲ್ಲೂ ವಿದೇಶಗಳು ಆರ್ಜಿಸುವುದರಲ್ಲೂ ಎಷ್ಟು ಗಟ್ಟಿಮುಟ್ಟಾಗಿವೆಯೆಂಬುದು ಚೆನ್ನಾಗಿ ಗೊತ್ತಾಗುವುದಿಲ್ಲವೆ? ನಮ್ಮ ದೇಶಗಳಲ್ಲೂ ಮಣ್ಣಿನ–ಬೆಂಡಿನ–ಬಚ್ಚರಣೆಯ ಹಲವುತೆರದ ಆಟದ ಸಾಮಾನುಗಳು ಆಗುತ್ತವೆ. ಆದರೇನು? ಮಾಟವು ಚೆನ್ನಾಗಿಲ್ಲ. ಅದುಕಾರಣ ಜನರಿಗೆ ಮೋಹಕರವಾಗುವುದಿಲ್ಲ. ಕೈಗಾರಿಕೆಯ ಕೌಶಲ್ಯವನ್ನು ವೃದ್ಧಿಗೊಳಿಸಬೇಕೆಂದು ಉಪನ್ಯಾಸಗಳ ವೃಷ್ಟಿಯಾಗುತ್ತಿರುವ ಈ ಕಾಲದಲ್ಲಿ ನಮ್ಮ ದೇಶದ ಕೈಗಾರಿಕೆಯವರಿಗೆ ವಿದೇಶವಸ್ತುಗಳ ಸೊಗಸುಗಾರಿಕೆಯ ಮರ್ಮವನ್ನು ತಿಳಿಯಿಸಿಕೊಡುವಂತೆ ಏರ್ಪಡಿಸಿಕೊಟ್ಟರೆ ಪ್ರಯೋಜನವಾದೀತು.

ಜರ್ಮನಿಯವರು ನಿರ್ಮಿಸುವ ಗೊಂಬೆಗಳಂಥವುಗಳನ್ನು ಇಂಗ್ಲೆಂಡಿನವರು ಕೂಡ ನಿರ್ಮಿಸಲಾರರಂತೆ. ಚಿತ್ರಪಟಗಳಿಗೆ ಬಣ್ಣಗಳನ್ನು ಅಚ್ಚುಮಾಡುವ ರಹಸ್ಯವು ಜರ್ಮನರಿಗೆ ತಿಳಿದಿರುವಷ್ಟಿಗೆ ಪ್ರಪಂಚದಲ್ಲಿ ಮತ್ತಾರಿಗೂ ತಿಳಿದಿಲ್ಲವಂತೆ. ಜರ್ಮನರು ಮಾಡಿರುವ ಒಂದು ತೆರದ ಗೊಂಬೆಗಳು ನೆಲದಮೇಲೆ ಮಲಗಿಸಿದ ಕೂಡಲೇ ತಾವಾಗಿ ಕಣ್ಣನ್ನು ಮುಚ್ಚಿಕೊಳ್ಳುವುವಂತೆ. ಇದರ ಮರ್ಮವನ್ನು ಇಂಗ್ಲೆಂಡಿನವರು ಮೊನ್ನೆತಾನೇ ತಿಳಿದುಕೊಂಡರಂತೆ. ಈಚೆಚೆಗೆ ಜರ್ಮನಿಯವರು ಭರತಖಂಡದ ದೇವತಾವಿಗ್ರಹಗಳನ್ನೂ ಲೋಹದಲ್ಲಿ ನಿರ್ಮಿಸಿ ಕಳುಹಿಸುವುದಕ್ಕೂ ದೇವತಾ ಚಿತ್ರಪಟಗಳನ್ನು ರಚಿಸಿ ಕಳುಹಿಸುವುದಕ್ಕೂ ಆರಂಭಿಸಿದ್ದರು. ಆ ದೇಶದವರ ಉನ್ನತ್ಯಾಕಾಂಕ್ಷೆಯೇ ಅವರನ್ನು ಅಂಥ ವ್ಯಾಪಕತೆಗೆ ತಂದಿತು. ನಮ್ಮ ದೇಶವನ್ನು ಅಸ್ಥಿತಿಗೆ ತರುವ ಭಾಗದಲ್ಲಿ ವಿಶೇಷಭಾರವು ಪ್ರಭುತ್ವದವರ ಮೇಲೆ ಬಿದ್ದಿದೆ.

ನಾವು ವಿದೇಶೀಯರೊಡನೆ ಸ್ಪರ್ಧಿಸಿ ಈ ಕೆಲಸಗಳಲ್ಲಿ ಜಯಶೀಲರಾಗುವುದು ಅಸಾಧ್ಯವು. ಏಕೆಂದರೆ–ನಮ್ಮಲ್ಲಿ ತಕ್ಕಷ್ಟು ಹಣವಿಲ್ಲ; ಅಭಿಮಾನವಿಲ್ಲ; ಏಕಮತ್ಯವಿಲ್ಲ; ಶಾಸ್ತ್ರಜ್ಞಾನವಿಲ್ಲ. ಇವೆಲ್ಲ ಕೂಡಿ ಕಾರ್ಯ ಪರಿಪಾಕವಾದರೂ ಪ್ರಭುತ್ವದವರು ಪರದೇಶ ವ್ಯಾಪಾರದ ವಿಷಯದಲ್ಲಿ ಏರ್ಪಡಿಸಿರುವ ಅನಿರ್ಬಂಧಪದ್ಧತಿಯು ನಮ್ಮ ಕೈಗಾರಿಕೆಯು ತಲೆಯೆತ್ತುವಿಕೆಗೆ ಪೋಷಕವಾಗಿರುವುದಿಲ್ಲ.

ನಮ್ಮ ದೇಶವು ರೇಶ್ಮೆಯ ಉತ್ಪತ್ತಿಗೆ ಚಿರಕಾಲದಿಂದ ಪ್ರಸಿದ್ಧವಾಗಿದ್ದರೂ ನಮಗೆ ಬೇಕಾದ ರೇಶ್ಮೆಯ ಬಟ್ಟೆಗಳಲ್ಲಿ ಬಹಳವನ್ನು ನಾವು ಪರದೇಶಗಳಿಂದಲೇ ತರಿಸಿಕೊಳ್ಳುತ್ತಿದ್ದೇವೆ. ಕಳೆದ ಮಾರ್ಚಿ ತಿಂಗಳ ಕೊನೆಗೆ ಕಡೆಯಾದ ೧ ವರ್ಷದ ಕಾಲದೊಳಗೆ ಜಪಾನಿನಿಂದ ೯೩೩೩೦ ಪೌನುಗಳ ಬೆಲೆಬಾಳುವ ರೇಶ್ಮೆಬಟ್ಟೆಯು ಜಪಾನಿನಿಂದ ಈ ದೇಶಕ್ಕೆ ಬಂದಿದೆ. ಮತ್ತೂ ಇಂಗ್ಲಾಂಡಿನಿಂದ ೧೮೫೪೦ ಪೌನಿನ ಜರ್ಮನಿಯಿಂದ ೧೪೧೬೩ ಪೌನಿನ ಬೆಲೆಬಾಳುವ ರೇಶ್ಮೆ ಬಟ್ಟೆಗಳು ಸಹ ಅದೇವರ್ಷದಲ್ಲಿ ನಮ್ಮ ದೇಶಕ್ಕೆ ಬಂದಿರುತ್ತವೆ.

ಈಗಿನ ಯುದ್ಧದಿಂದ ಭರತಖಂಡದಲ್ಲಿ ಜರ್ಮ ಆಸ್ಟ್ರಿಯಾ ದೇಶದ ವ್ಯಾಪಾರವು ನಿಂತುಹೋಗಿರುವುದಷ್ಟೆ. ಇಂಥ ಸಂಧಿಯಲ್ಲಿ ಈ ದೇಶದೊಡನೆ ತಮ್ಮ ದೇಶದ ಸರಕುಗಳ ವ್ಯಾಪಾರವನ್ನು ಅಭಿವೃದ್ಧಿಪಡಿಸಬೇಕೆಂಬ ಪ್ರಯತ್ನವನ್ನು ಜಪಾನರು ಮಾಡಿದ್ದಾರೆ. ಇದಕ್ಕಾಗಿ ಅಲ್ಲಿನ ಪ್ರಭುತ್ವದವರು, ಈ ದೇಶಕ್ಕೆ ಪ್ರಿಯವಾದ ಮತ್ತೂ ಅವಶ್ಯಕವಾದ ವಸ್ತುಗಳಾವುವು, ಇಲ್ಲಿನ ಸ್ಥಿತಿಗತಿಯೇನು ಎಂಬಿತ್ಯಾದಿವಿಷಯಗಳನ್ನು ಅರಿತು ಕೊಳ್ಳುವುದಕ್ಕಾಗಿ ಒಬ್ಬ ಅಧಿಕಾರಿಯನ್ನು ಭರತಖಂಡಕ್ಕೆ ಕಳುಹಿಸಿಕೊಟ್ಟಿದ್ದಾರೆ. ಆತನು ಬೊಂಬಾಯಿಗೆಹೋಗಿ ಅಲ್ಲಿನ ವರ್ತಕರಲ್ಲಿ ವಿಚಾರ ನಡೆಯಿಸುತ್ತಿರುವನು. ಕೆಲ ವರ್ತಕರು ಸ್ವತಃ ಬೊಂಬಾಯಿಗೇ ಹೋಗಿ ಅಲ್ಲಿನ ಏಜನ್ಸಿಗಳನ್ನು ಪಡೆದು ಬರಬೇಕೆಂದು ಹೊರಟಿದ್ದಾರೆ. ಇದರಿಂದ ಇನ್ನು ಮುಂದೆ ಜಪಾನಿನ ಸರಕುಗಳು ಬಹಳವಾಗಿ ಭರತಖಂಡಕ್ಕೆ ಬಂದುವ್ಯಾಪಿಸುವುದರಲ್ಲಿ ಸಂಶಯವಿಲ್ಲ. ಎಲ್ಲ ದೇಶದ ಸರಕುಗಳ ದುಮುಕುವಿಕೆಗೂ ಭರತಖಂಡವು ತೆರೆದಿಟ್ಟಬಾಗಿಲಾಗಿ ಇನ್ನೆಷ್ಟು ಕಾಲವಿರುವುದೋ ತಿಳಿಯದು.

ಭರತಖಂಡದ ವೃತ್ತಾಂತಗಳು.

ಬಾರಿಸಾಳಿಗೆ ಸೇರಿದ ಅಂತಾಲಿ ತಾಲ್ಲೂಕ್‌ದಾರನ ಮನೆಗೆ ಆಯುಧಪಾಣಿಗಳಾದ ೪೦ ಮಂದಿ ಕಳ್ಳರು ನುಗ್ಗಿ ಕಬ್ಬಿಣದ ಪೆಟ್ಟಿಗೆಯನ್ನೊಡೆದು ೫೪ ಸಾವಿರ ರೂ.ನ ಸೊತ್ತನ್ನು ಅಪಹರಿಸಿಕೊಂಡು ಹೋಗಿರುವರು.

ಕಳೆದ ತಾ॥ ೨೩ ರಲ್ಲಿ ಬೊಂಬಾಯಿಯಿಂದ ಸೀಮೆಗೆ ಟಪ್ಪಾಲನ್ನು ತೆಗೆದುಕೊಂಡು ಹೊರಟ ಸಾಲ್‌ಸೆಟಿ ಎಂಬ ಹಡಗಿನಲ್ಲಿ ೧೫೦ ಮಂದಿ ಪ್ರಯಾಣಿಕರು ಇರುವರು. ಅವರಲ್ಲಿ ಹೆಚ್. ಹೆಚ್. ಆಗಾಖಾನರು ಒಬ್ಬರಾಗಿರುವರು.

ಸಿಯಾಲ್ಕೋಟಜಿಲ್ಲೆಯ ಬುರಾಅಕ್ ಎಂಬ ಸ್ಥಳದಲ್ಲಿ ಆಯುಧಪಾಣಿಗಳಾದ ೬೦ ಮಂದಿ ಕಳ್ಳರು ಒಬ್ಬ ಶ್ರೀಮಂತನ ಮನೆಗೆನುಗ್ಗಿ ೧ ಲಕ್ಷ ರೂ.ನ ಆಸ್ತಿಗಳನ್ನು ದೋಚಿಕೊಂಡು, ಅವನ ಲೆಕ್ಕದ ಪುಸ್ತಕಗಳನ್ನೂ ಕಾಗದಪತ್ರಗಳನ್ನೂ ಬಾವಿಗೆ ಹಾಕಿಹೋಗಿರುವರು.

ಸಿಟಿ ಆಫ್ ಮೈಸೂರ್ (ಮೈಸೂರು ರಾಜಧಾನಿ) ಎಂಬ ಹೆಸರಿನ ವ್ಯಾಪಾರದ ಹಡಗು ಕನ್ಯಾಕುಮಾರಿಯಹತ್ತಿರ ದಡಕ್ಕೆ ಹತ್ತಿ ನಾಟಿಕೊಂಡಿತು. ಒಳಗಿದ್ದ ಸರಕನ್ನು ತೆಗೆಯುತ್ತಿರುವರು. ಅದರಿಂದ ಹೊರಟ ದುರ್ವಾಸನೆಯಿಂದ ಮೂವರು ಕೂಲಿಯಾಳುಗಳು ಸತ್ತರು.

ಮೈಮನ್‌ಸಿಂಗ್ ಜಿಲ್ಲಾಕ್ಕೆ ಸೇರಿದ ಶೈಲತಿ ಎಂಬ ಗ್ರಾಮದಲ್ಲಿ ಒಂದು ಪುಟ್ಟಿಯೊಳಗೆ ಸಿಡಿಮದ್ದಿರುವುದೆಂಬ ಸಂಗತಿಯು ಗೊತ್ತಾಗಿ, ಅದನ್ನು ಒಂದು ದೋಣಿಯಿಂದ ಹೊರಕ್ಕೆ ತೆಗೆಯಲು ಪ್ರಯತ್ನಿಸಿದಾಗ ಅದು ಧಮ್ಮನೆ ಹಾರಿ, ಸುತ್ತಲೂ ನೋಡುತ್ತ ನಿಂತಿದ್ದ ಗ್ರಾಮಸ್ಥರಲ್ಲಿ ೬ ಮಂದಿಯನ್ನು ಆಹುತಿಗೊಂಡಿತು. ಇನ್ನು ೧೨ ಮಂದಿಗೆ ಬಲವಾದ ಗಾಯವಾಯಿತು.

ಪ್ರೊ॥ ಗೆಡ್ಡಿಸ್‌ರವರು ಬೊಂಬಾಯಿಪಟ್ಟಣದ ಟೌನ್‌ಹಾಲಿನಲ್ಲಿ ಕಳೆದೆರಡು ವಾರಗಳಿಂದ ನಗರನಿರ್ಮಾಣ ವಿಷಯದ ಉಪನ್ಯಾಸಗಳನ್ನು ಮಾಡುತ್ತಿರುವರು. ಅದರ ಸಾರವೆಲ್ಲಾ ಮದ್ರಾಸಿನಲ್ಲಿ ಮಾಡಿದ ಉಪನ್ಯಾಸದಂತೆಯೇ ಇದ್ದಿತು. ಬೊಂಬಾಯಿನಗರವಿಷಯವನ್ನು ಮಾತನಾಡುವಾಗ್ಗೆ ಇತರ ನಗರಗಳವರು ಚಟುವಟಿಕೆಯಿಂದ ಕೆಲಸಮಾಡುತ್ತಿರುವಷ್ಟಿಗೂ ಅಲ್ಲಿನವರು ಮಾಡುತ್ತಲಿಲ್ಲವೆಂದು ಹೇಳಿದರು.

೨೦೦ ಎಕರೆಗಿಂತಲೂ ಹೆಚ್ಚಿನಭೂಮಿಯೂ, ೧೦೦೦ ಮಣಗಳಿಗಿಂತಲೂ ಹೆಚ್ಚಿನ ಗೋದುಮೆಯೂ ಇರುವ ಪ್ರಜೆಗಳೆಲ್ಲರೂ ಈ ಏಪ್ರಿಲ್ ತಾ॥ ೧೫ ರಿಂದ ತಮ್ಮ ಹತ್ತಿರ ಎಷ್ಟು ಧಾನ್ಯವು ನಿಂತಿರುವುದೆಂಬುದನ್ನು ಸರ್ಕಾರದವರಿಗೆ ತಿಳಿಯಿಸಬೇಕೆಂದೂ ಅದರಿಂದಾಚೆಗೆ ಮತ್ತೊಂದಪ್ಪಣೆಯಾಗುವವರೆಗೂ ಪ್ರತಿತಿಂಗಳ ೧ ನೇ ತಾರೀಖಿನಲ್ಲೂ ೧೫ ನೆ ತಾರೀಖಿನಲ್ಲೂ ಹಾಗೆಯೇ ತಿಳಿಯಿಸುತ್ತಿರಬೇಕೆಂದೂ ಪಂಜಾಬ್‌ಸರ್ಕಾರದವರು ಅಲ್ಲಿನ ಕೆಲವು ಜಿಲ್ಲೆಗಳ ವರ್ತಕರಿಗೆ ಅಪ್ಪಣೆಮಾಡಿದ್ದಾರೆ.

ಅಮೇರಿಕಾಕ್ಕೆ ಹೋಗಿಬಂದ ಪಂಜಾಬಿಗಳಲ್ಲಿ ಕೆಲರು ರಾಜದ್ರೋಹಕೂಟಗಳಲ್ಲಿ ಸೇರಿರಬಹುದೆಂಬ ಸಂಶಯದಿಂದ ಪೋಲೀಸರು ಪರಿಶೋಧಿಸುತ್ತಿದ್ದರು. ಮೀರತ್ತಿನಲ್ಲಿ ಕಳೆದ ತಾ॥ ೨೩ ರಲ್ಲಿ ಹೀಗೆ ಪರಿಶೋಧಿಸುತ್ತಿರುವಾಗ ವಿಷ್ಣುಗಣೇಶಪಿಂಗಳೆಯೆಂಬ ಮಹಾರಾಷ್ಟ್ರಬ್ರಾಹ್ಮಣನ ಹತ್ತಿರ ೧೦ ಸಿಡಿಮದ್ದುಗಳೂ ಕೆಲವು ಸ್ಫೋಟಕವಸ್ತುಗಳೂ ದೊರೆದುವು. ಒಡನೆಯೇ ಅವನನ್ನು ಹಿಡಿದರು. ಇವನು ಕೆಲದಿನಗಳೀಚೆಗೆ ಅಮೇರಿಕಾದಿಂದ ಬಂದವನಾಗಿದ್ದನು. ಇವನನ್ನು ಹಿಡಿಯಬೇಕೆಂದು ಪೋಲೀಸರು ಬಹುದಿನಗಳಿಂದ ಪ್ರಯತ್ನಿಸುತ್ತಿದ್ದರಂತೆ.

ಕಲ್ಕತ್ತಾಕ್ಕೆ ಉತ್ತರದಲ್ಲಿ ಬಾರಾನಗರದ ಸಮೀಪದಲ್ಲಿ ನೌಪರಾ ಎಂಬ ಗ್ರಾಮದೊಳಗೆ ಬಹುಶಃ ೧೨ ಮಂದಿ ಕಳ್ಳರು ಆಯುಧಸಮೇತರಾಗಿ ರಾತ್ರಿ ೨ ನೆ ಜಾವದಲ್ಲಿ ಒಬ್ಬ ವರ್ತಕನಮನೆಗೆ ಬೀದಿಬಾಗಿಲನ್ನೊಡೆದು ಒಳಕ್ಕೆನುಗ್ಗಿ ಗಂಡುಸರನ್ನು ಕಂಬಕ್ಕೆಕಟ್ಟಿ ಸೊತ್ತುಗಳನ್ನು ಅಪಹರಿಸಲು ಪ್ರಯತ್ನಿಸಿದರು. ಅಷ್ಟರಲ್ಲಿ ಗ್ರಾಮಸ್ಥರು ದೊಣ್ಣೆಗಳನ್ನು ಹಿಡಿದು ಬರಲು, ಎರಡುಪಕ್ಷಕ್ಕೂ ಯುದ್ಧವಾಗಿ ಎಲ್ಲರಿಗೂ ಗಾಯಗಳಾದುವು. ಕೆಲಕಳ್ಳರು ಬಲವಾದ ಏಟನ್ನುತಿಂದು ಅಲ್ಲೇ ಬಿದ್ದಿದ್ದರು. ಸೊತ್ತುಗಳನ್ನೆಲ್ಲಾ ಅಲ್ಲೇ ಬಿಟ್ಟು ಉಳಿದವರು ಓಡಿಹೋದರು.

ಭರತಖಂಡದ ಸರ್ಕಾರದವರು ೧೯೧೪ ನೆ ವರ್ಷದ ಏಪ್ರಿಲ್ ತಿಂಗಳಿಂದ ೧೯೧೫ ನೆ ವರ್ಷದ ಮಾರ್ಚಿ ಕಡೆಯವರೆಗೆ ಈ ದೇಶದಿಂದ ಹೊರಕ್ಕೆ ಕಳುಹಿಸಲ್ಪಡುವ ಗೋದುಮೆಯ ವ್ಯಾಪಾರದ ಯಜಮಾನ್ಯವನ್ನೆಲ್ಲಾ ತಾವೇ ವಹಿಸಿಕೊಂಡಿರುತ್ತಾರೆ. ಇತರ ವರ್ತಕರಾರೂ ಅದನ್ನು ಪರದೇಶಕ್ಕೆ ಕಳುಹಿಸಿಕೊಡದಂತೆ ಮಾಡಿದ್ದಾರೆ ಹೀಗೆ ಮಾಡುವುದರಲ್ಲಿ ಗೋದುಮೆಯನ್ನು ಬೆಳೆಯುವ ರೈತರಿಗೂ ಅದನ್ನು ಕೊಂಡುತಿನ್ನುವ ಪ್ರಜೆಗಳಿಗೂ ತೊಂದರೆಯುಂಟಾಗದಂತೆ ನೋಡಿಕೊಳ್ಳುವರು. ಸರ್ಕಾರದವರಿಗೆ ಗೋದುಮೆಯನ್ನು ಒದಗಿಸಿಕೊಡುವ ವರ್ತಕರಿಗೆ ಕಮಿಷನ್ನನ್ನು ಕೊಡುವರು.

ವಿಕ್ಟೋರಿಯಾ ಕ್ರಾಸ್‌ಬಿರುದನ್ನು ಪಡೆದ ದರ್ವಾನ್‌ಸಿಂಗ್ ನಾಗಿಯೆಂಬತಾನು ಯುದ್ಧರಂಗದಿಂದ ಹಿಂದಿರಿಗಿ ಸ್ವದೇಶಕ್ಕೆ ಬಂದು ಕಳೆದ ತಿಂಗಳು ತಾ॥ ೮ ರಲ್ಲಿ ಕಾಶ್ಮೀರದ ಶ್ರೀನಗರವನ್ನು ಸೇರಿದನು. ಈ ವೀರಶಿಖಾಮಣಿಯನ್ನು ಪುರನಿವಾಸಿಗಳು ತಂಡೋಪತಂಡವಾಗಿ ಇದಿರ್ಗೊಂಡು ಅಟ್ಟಹಾಸವಾಗಿ ಮೇಳತಾಳಗಳಿಂದ ಉತ್ಸವಪೂರ್ವಕವಾಗಿ ಸೇನಾಧಿಪತಿಯ ಗೌರವದಿಂದ ಪುರಪ್ರವೇಶ ಮಾಡಿಸಿದರು. ದಾರಿಯುದ್ದಕ್ಕೂ ಪುರಜನರೆಲ್ಲರೂ ನಿಂತು ನೋಡಿ, ಸ್ತ್ರೀಯರು ಪುಷ್ಪವೃಷ್ಟಿಯನ್ನು ಮಾಡಿದರು. ಅಲಂಕೃತವಾದ ಮಂದಿರಕ್ಕೆ ಸೇರಿದಕೂಡಲೇ ನಾಗಿಯವರು ತಮಗೆ ವಿಕ್ಟೋರಿಯಾಕ್ರಾಸ್ ಬಿರುದು ಲಭಿಸುವುದಕ್ಕೆ ತಾವು ಮಾಡಿದ ಸಾಹಸದ ಸ್ವರೂಪವೇನೆಂಬುದನ್ನು ವಿವರಿಸಿ ಹೇಳಿ ಸಭಿಕರ ಕರ್ಣಾನಂದಗೊಳಿಸಿದರು.

ಕಳೆದ ಸಾಮ್ರಾಜ್ಯಶಾಸನಸಭೆಯಲ್ಲಿ ಹಲವುಮಂದಿ ಸಭಿಕರು ಈಗಿನ ಹಾರ್ಡಿಂಜ್‌ಪ್ರಭುಗಳನ್ನೇ ಇನ್ನೂ ಒಂದೆರಡುವರ್ಷಕಾಲ ವೈಸ್ರಾಯಿಗಿರಿಯಲ್ಲಿ ಇರಗೊಡಿಸುವಂತೆ ಮಾಡಿಕೊಡಬೇಕೆಂದು ಸಾರ್ವಭೌಮರನ್ನು ಪ್ರಾರ್ಥಿಸಬೇಕೆಂಬವಿಷಯವನ್ನು ಪ್ರಸ್ತಾಪಿಸಿದರು. ವೈಸ್ರಾಯರು ಸಭಾಸಮಾಪ್ತಿಮಾಡುವಾಗ್ಗೆ ಮಾಡಿದ ಭಾಷಣದಲ್ಲಿ „ ನಾನು ಭರತಖಂಡವನ್ನು ಎಷ್ಟೇ ಪ್ರೀತಿಸುತ್ತಿದ್ದರೂ, ಈ ದೇಶದಲ್ಲೇ ಇದ್ದು ಇನ್ನೂ ಸ್ವಲ್ಪಕಾಲ ನನ್ನ ಕರ್ತವ್ಯವನ್ನು ಕೊನೆಗಾಣಿಸಬೇಕೆಂದಿದ್ದರೂ ಸಹ ನಾನು ಈ ದೇಶದಲ್ಲಿ ಇನ್ನೂ ಸ್ವಲ್ಪ ಹೆಚ್ಚು ಕಾಲ ನಿಂತಿರುವ ವಿಷಯವು ನನ್ನ ಕೈಯಲ್ಲಿರುವುದಿಲ್ಲ" ಎಂದು ಅಪ್ಪಣೆಕೊಡಿಸಿದರು. ಇದರಿಂದ ಇನ್ನು ಕೆಲಕಾಲ ಬೇಕಾದರೂ ಭರತಖಂಡದ ಹಿತಾರ್ಥವಾಗಿ ಲಾರ್ಡ್‌ಹಾರ್ಡಿಂಜ್‌ರವರು ನಿಲ್ಲುವ ಕೃಪೆಮಾಡಲು ಹಿಂಜರಿಯುವಂತೆ ತೋರುವುದಿಲ್ಲ. ಆದರೆ ಭರತಖಂಡವೆಲ್ಲವೂ ಸಾರ್ವಭೌಮರಲ್ಲಿ ಮೊರೆಯಿಟ್ಟು ಅದಕ್ಕೆ ಅಪ್ಪಣೆಮಾಡಿಸುವುದು ಮಾತ್ರ ಅವಶ್ಯಕವಾಗಿರುವುದು.

ವಿದೇಶವೃತ್ತಾಂತಗಳು.

ಹತ್ತುಮಂದಿ ಜಪಾನ್ಸೈನ್ಯಾಧಿಕಾರಿಗಳು ರಷ್ಯಸೈನ್ಯಾಧಿಕಾರಿಯೊಬ್ಬನೊಡನೆ ಪ್ಯಾರಿಸ್ಸಿಗೆ ಹೋಗಿದ್ದು ಅಲ್ಲಿಂದ ರಣರಂಗಕ್ಕೆ ಹೋಗಿರುತ್ತಾರೆ.

ಕೆನಡಾದೇಶದವರು ತಮ್ಮ ಪಾರ್ಲಿಮೆಂಟಿನಲ್ಲಿ ಕೆಲವು ನಿಮಿಷಮಾತ್ರ ಚರ್ಚಿಸಿ ಯುದ್ಧದ ನಿಮಿತ್ತವಾಗಿ ೬೦ ಕೋಟಿ ರೂ.ಗಳ ಸಾಲವನ್ನು ಮಾಡಲು ತೀರ್ಮಾನಿಸಿದರು.

ಪಶ್ಚಿಮರಣರಂಗದ ಯುದ್ಧಕಾರ್ಯವನ್ನು ಕುರಿತು ಆಲೋಚಿಸುವುದಕ್ಕಾಗಿ ಲಿಲ್ಲಿಯಹತ್ತಿರ ಜರ್ಮಅಧಿಕಾರಿಗಳು ಒಂದು ಸಭೆಮಾಡಿದ್ದರು. ಈ ಸಭೆಗೆ ಜರ್ಮಚಕ್ರವರ್ತಿಯವರೂ, ಜನರಲ್ ವಾರ್‌ಫಾಲ್ಕ್‌ಹೇರವರೂ, ಜರ್ಮಯುವರಾಜರೂ, ಬವೇರಿಯಾ ಯುವರಾಜರೂ, ಅನೇಕಮಂದಿ ಕಮ್ಯಾಂಡರುಗಳೂ ಸೇರಿದ್ದರಂತೆ.

ಯುದ್ಧವಾರ್ತೆಯು.

(ಪಶ್ಚಿಮರಣರಂಗ)

ಇಲ್ಲಿನ ಯುದ್ಧದಲ್ಲಿ ವಿಶೇಷ ವಾರ್ತೆಗಳೇನೂ ಇಲ್ಲ. ಯಥಾಪ್ರಕಾರ ಅಲ್ಲಲ್ಲಿ ಫಿರಂಗಿಕಾಳಗಗಳು ಸಾಮಾನ್ಯವಾಗಿ ನಡೆದಿವೆ. ಸಾಧ್ಯವಾದೆಡೆಯಲ್ಲೆಲ್ಲಾ ಮಿತ್ರಮಂಡಲಿಯವರು ಮುಂದಕ್ಕೆ ಸಾಗಿದ್ದಾರೆ. ಉಭಯಪಕ್ಷದ ವೈಮಾನಿಕರೂ ಚುರುಕಾಗಿ ಕೆಲಸವನ್ನು ಮಾಡುತ್ತಿದ್ದಾರೆ.

ಜರ್ಮನ್ ಸಬ್‌ಮೆರೀನುಗಳು.

ಕಳೆದವಾರವೂ ೩-೪ ಕಡೆ ಹಡಗುಗಳನ್ನು ಮುಳುಗಿಸಿವೆ. ಪಶ್ಚಿಮಾಫ್ರಿಕಾದಿಂದ ೧೪೦ ಮಂದಿ ಪ್ರಯಾಣಿಕರನ್ನು ಕುಳ್ಳಿರಿಸಿಕೊಂಡು ಬರುತ್ತಿದ್ದ ಅಂಚೆಯಹಡಗೊಂದನ್ನು ಮುಳುಗಿಸಿರುತ್ತಾರೆ. ಒಟ್ಟಿಗೆ ಅದರಲ್ಲಿದ್ದ ೨೬೦ ಮಂದಿಗಳಲ್ಲಿ ೧೪೫ ಮಂದಿ ಬದುಕಿದರು.

ಜರ್ಮನರು ಡಚ್ಚರ ೨ ಹಡಗುಗಳನ್ನು ಈ ಮೊದಲೇ ಹಿಡಿದುಕೊಂಡಿರುವುದರಿಂದ ಅವರಿಗೂ ಜರ್ಮನರಿಗೂ ಪತ್ರವ್ಯವಹಾರವು ನಡೆಯುತ್ತಿರುವುದು. ಈಚೆಗೆ ಕಳೆದವಾರದಲ್ಲಿ ಜರ್ಮನರ ೧ ಸಬ್‌ಮೆರೀನು ಡಚ್ಚರ ಮೀಡಿಯಾ ಎಂಬ ಹಡಗನ್ನು ಮುಳುಗಿಸಿದುದರಿಂದ ಆ ದೇಶದವರು ಜರ್ಮನರಮೇಲೆ ಬಹಳ ಆಗ್ರಹಗೊಂಡು ಸಮಾಧಾನವನ್ನು ಕೇಳಿದ್ದಾರೆ.

ಪೂರ್ವರಣರಂಗ.

ರಷ್ಯನರು ಕಾರ್ಪೇತಿಯನ್ ಪರ್ವತಪ್ರಾಂತದಲ್ಲಿ ಮುಂದಕ್ಕೆ ಸಾಗುತ್ತಿದ್ದಾರೆ. ಬಾರ್ಟ್‌ಫಲ್ಡ್-ಉಸ್ಜಾಯಿಗಳ ಮಧ್ಯದಲ್ಲಿ ಮಾಡಿದ ಯುದ್ಧದಲ್ಲಿ ರಷ್ಯನರು ಶತ್ರುಪಕ್ಷದ ೪ ಸಾವಿರ ಮಂದಿ ಸೈನಿಕರನ್ನೂ ಕೆಲಫಿರಂಗಿಗಳನ್ನೂ ಹಿಡಿದುಕೊಂಡರು. ಉತ್ತರಪೋಲಂಡಿನಲ್ಲಿ ಜರ್ಮನರಿಗೂ ರಷ್ಯನರಿಗೂ ತೀಕ್ಷ್ಣ ಯುದ್ಧಗಳು ನಡೆಯುತ್ತಲೇ ಇವೆ. ಅವರು ನೂತನ ಸೈನ್ಯಗಳನ್ನು ತರುತ್ತಿದ್ದಾರೆ. ಶತ್ರುಗಳ ಪ್ರಯತ್ನವೆಲ್ಲಾ ವ್ಯರ್ಥವಾಗುತ್ತಲೇ ಇದೆ. ಜರ್ಮನರ ಕೆಲ ಯುದ್ಧದಹಡಗುಗಳು ಉತ್ತರಸಮುದ್ರತೀರದಲ್ಲಿ ಹೊರಟು ರಷ್ಯನರ ತೀರಪಟ್ಟಣಗಳಮೇಲೆ ಗುಂಡುಗಳನ್ನು ಹಾರಿಸಿರುತ್ತವೆ.

ರಷ್ಯನರು ಉಜ್ಜಕ್ಕ-ಉಸ್ಕಾಕ್ ಮೊದಲಾದ ಕಣಿವೆಗಳ ಪ್ರಾಂತದ ಯುದ್ಧಗಳಲ್ಲೆಲ್ಲಾ ಜಯಶೀಲರಾಗಿ ಮುಂದುವರಿಯುತ್ತಿದ್ದಾರೆ. ರಷ್ಯನರ ಸೇನಾಪಙ್ಕ್ತಿಯು ಕ್ರಾಕೋಪಟ್ಟಣದ ಕಡೆಗೆ ತಿರುಗಿರುವುದರಿಂದ ಆಸ್ಟ್ರಿಯನ್ನರು ಅಲ್ಲಿರುವ ತಮ್ಮ ಪ್ರಜೆಗಳಿಗೆಲ್ಲಾ ಪಟ್ಟಣವನ್ನು ಬಿಟ್ಟು ಆತ್ಮಸಂರಕ್ಷಣೆಮಾಡಿಕೊಳ್ಳಲು ಅಪ್ಪಣೆಮಾಡಿದ್ದಾರೆ. ಕಾರ್ಪೇತಿಯನ್ ಪರ್ವತಗಳಿಂದ ಮುಂದಕ್ಕೆ ಸಾಗುವ ರಷ್ಯನ್ ಸೈನಿಕರನ್ನು ತಡೆಯಬೇಕೆಂದು ಆಸ್ಟ್ರಿಯನ್ನರು ಮಾಡಿದ ಅಗಣಿತಪ್ರಯತ್ನದಲ್ಲಿ ೨ ಲಕ್ಷ ಸೈನ್ಯವು ಅವರಕಡೆಯಲ್ಲಿ ಹತವಾಗಿದೆ. ೧ ಲಕ್ಷ ಮಂದಿಗಳು ಸೆರೆಯಾಗಿ ಹೋಗಿದ್ದಾರೆ. ಪ್ರಿಜೆಮ್ಸಿಲ್‌ಕೋಟೆಯು ರಷ್ಯನರ ವಶವಾಗಿಹೋದುದರಿಂದ ಆಸ್ಟ್ರಿಯಾದೇಶೀಯರು ಎದೆಗೆಟ್ಟು ಹೋಗಿದ್ದಾರೆ.

ರಷ್ಯನರು ಜರ್ಮನ್‌ದೇಶದ ತೀರಪಟ್ಟಣವಾದ ಮೆಮೆಲನ್ನು ವಶಪಡಿಸಿಕೊಂಡಿದ್ದರಷ್ಟೆ. ಜರ್ಮನ್ ರಾಜಕುಮಾರನು ನೂತನಸೈನ್ಯಗಳನ್ನು ತೆಗೆದುಕೊಂಡುಹೋಗಿ ರಷ್ಯನರ ಮೇಲೆಬಿದ್ದು ಕಾದಾಡಿ ಅವರನ್ನು ಅಲ್ಲಿಂದ ಬಿಡಿಸಿ ಓಡಿಸಿರುವನು.

ರಷ್ಯನರು ಬಾಲ್ಟಿಕ್‌ಸಮುದ್ರದಲ್ಲಿದ್ದ ತಮ್ಮ ನೌಕಾಸೈನ್ಯಕ್ಕೆ ಇನ್ನು ಕೆಲ ಹೊಸಹಡಗುಗಳನ್ನು ನಿರ್ಮಿಸಿ ಸೇರಿಸಿ ಅದನ್ನು ಮತ್ತಷ್ಟು ಬಲಪಡಿಸಿದ್ದಾರೆ.

ಆಕಾಶಯಾನಗಳು.

ಆಂಗ್ಲವೈಮಾನಿಕರು ಶತ್ರುಗಳ ವಶದಲ್ಲಿರುವ ಬೆಲ್ಜಿಯಂ ಪಟ್ಟಣಗಳ ಮೇಲೆ ಪದೇ ಪದೇ ಹಾರಿಹೋಗಿ, ಅವರು ಫಿರಂಗಿಗುಂಡುಗಳನ್ನು ಅವಿಚ್ಛಿನ್ನವಾಗಿ ಹಾರಿಸುತ್ತಿದ್ದರೂ ಹಿಂದೆಗೆಯದೆ, ಸಿಡಿಮದ್ದುಗಳನ್ನು ಹಾಕಿ ಅನರ್ಥವನ್ನುಂಟುಮಾಡಿ ಬರುತ್ತಿದ್ದಾರೆ. ಜರ್ಮನ್ ಸಬ್‌ಮೆರೀನುಗಳ ಕರ್ಮಾಗಾರದಲ್ಲಿ ಹೀಗೆ ಹಾಕಿದ ಸಿಡಿಮದ್ದಿನಿಂದ ೪ ಮಂದಿ ಜರ್ಮನರು ಹತರಾದರು. ತೀರದಲ್ಲಿ ಕೆಲ ಸಬ್‌ಮೆರೀನುಗಳು ಜೋಡಿಸಲ್ಪಡುತ್ತಿರುವಾಗಲೇ ನಾಶಮಾಡಲ್ಪಟ್ಟುವು. ಒಂದು ಸಬ್‌ಮೆರೀನು ೨ ತುಂಡಾಯಿತು. ೩೦೦ ಮಂದಿ ಕೂಲಿಯವರಿಗೆ ಏಟುಬಿದ್ದಿತು. ಮತ್ತೊಂದು ಕಡೆ ಜರ್ಮನ್ ಆಕಾಶನಾವೆಯು ಬರುತ್ತಿರಲು ಅದಕ್ಕೆ ಮಿತ್ರಮಂಡಲಿಯವರು ಫಿರಂಗಿಗುಂಡನ್ನು ಹೊಡೆದು ಕೆಳಕ್ಕಿಳಿಯಿಸಿ, ಒಳಗಿದ್ದವರನ್ನು ಸೆರೆಹಿಡಿದರು. ಇನ್ನೊಂದು ಜರ್ಮನ್ ಆಕಾಶನಾವೆಯು ಮಿಲ್ಲರ್ ಎಂಬ ಗ್ರಾಮದ ಮೇಲೆ ಹೋಗಿ ಸಿಡಿಮದ್ದನ್ನು ಹಾಕಿ ಮೂವರು ಸಣ್ಣ ಹುಡುಗರನ್ನು ಕೊಂದಿರುವುದು. ಫ್ರೆಂಚ್ ವೈಮಾನಿಕರು ಮೆಟ್ಜಿನ ಹತ್ತಿರವಿರುವ ರೈಲ್ವೆ ಸ್ಟೇಷನ್ ಮೇಲೂ ಆಕಾಶನಾವೆಗಳಾಲಯದ ಮೇಲೂ ಇನ್ನೊಂದು ಕಡೆಯಲ್ಲಿದ್ದ ಜರ್ಮನ್ ಸೇನಾಶಿಬಿರದ ಮೇಲೂ ಸಿಡಿಮದ್ದುಗಳನ್ನಿಟ್ಟು ಅನರ್ಥವನ್ನು ಮಾಡಿದರು. ಆಗ ಶತ್ರುಗಳು ಇವರ ಯಾನಗಳ ಮೇಲೆ ವಿಪರೀತವಾಗಿ ಗುಂಡುಗಳನ್ನು ಹಾರಿಸಿದರೂ ಏಟಿನಿಂದ ತಪ್ಪಿಸಿಕೊಂಡು ಸುರಕ್ಷಿತವಾಗಿ ಬಂದರು.

ತುರ್ಕಿ

ಸೂಯೆಜ್ ಕಾಲ್ವೆಯ ಹತ್ತಿರ ಎಲ್‌ಕೂಬ್ರಯ ಹತ್ತಿರ ಕೆಲ ಶತ್ರುಸೈನಿಕರು ಕಾವಲಿನವರ ಕಣ್ಣಿಗೆ ಬೀಳಲು, ಅವರ ಮೇಲೆ ಫಿರಂಗಿಗುಂಡುಗಳನ್ನು ಪ್ರಯೋಗಿಸಲಾಗಿ, ಶತ್ರುಗಳು ೮ ಮೈಲಿಗಳ ದೂರದಲ್ಲಿರುವ ತಮ್ಮ ಶಿಬಿರಕ್ಕೆ ಓಡಿಹೋದರು. ನಮ್ಮವರು ವಾಯುವಿಮಾನಗಳನ್ನೇರಿ ನೋಡಲಾಗಿ ಆ ಶಿಬಿರದಲ್ಲಿ ೧ ಸಾವಿರ ಮಂದಿಯವರೆಗೆ ಸೈನಿಕರಿರುವಂತೆ ಗೊತ್ತಾಯಿತು. ಜನರಲ್ ಎಂಗ್‌ಹಸ್ಬೆಂಡ್‌ರವರು ತಮ್ಮ ಸೇನಾಸಮೇತ ಹೋಗಿ ಆ ಸೈನಿಕರನ್ನು ಹೊಡೆದೋಡಿಸಿ ಬಂದರು.

ಡಾರ್ಡಿನಲ್ಸ್ ಜಲಸಂಧಿಯಲ್ಲಿ ಈಚೆಗೆ ಸಮುದ್ರವು ಶಾಂತವಾದುದರಿಂದ ನೀರಿನೊಳಗಣ ಸುರಂಗಗಳನ್ನು ತೆಗೆಯುವ ಕೆಲಸವು ಸಮರ್ಪಕವಾಗಿ ನಡೆಯುತ್ತಿದೆ. ಮತ್ತೆ ಯುದ್ಧದ ಹಡಗುಗಳು ಜಲಸಂಧಿಯೊಳಕ್ಕೆ ನುಗ್ಗಿರುತ್ತವೆ. ಸುರಂಗಗಳನ್ನು ರಾತ್ರಿಯಹೊತ್ತು ತೆಗೆದು ಹಾಕುತ್ತಿದ್ದ ಹಡಗುಗಳ ಮೇಲೆ ತುರ್ಕಿಯವರು ಫಿರಂಗಿಗುಂಡುಗಳನ್ನು ಹಾರಿಸಿದರು. ಅವಕ್ಕೆ ಪ್ರತಿಯಾಗಿ ಯುದ್ಧದ ಹಡಗುಗಳು ಫಿರಂಗಿಯನ್ನು ಹೊಡೆದುದರಿಂದ ಸದ್ದುನಿಂತಿತು. ಸುರಂಗಗಳನ್ನು ತೆಗೆಯುವ ದೋಣಿಗಳ ಸಹಾಯಕ್ಕಾಗಿಯೇ ೮ ಯುದ್ಧದ ಹಡಗುಗಳು ಜಲಸಂಧಿಗೆ ಹೋಗಿವೆ. ಡಾರ್ಡಿನಲ್ಸ್ ಪಟ್ಟಣದ ವರೆಗೂ ನೀರಿನಲ್ಲಿದ್ದ ಸುರಂಗಗಳನ್ನೆಲ್ಲಾ ತೆಗೆಯುವ ಕೆಲಸವು ಪೂರ್ಣವಾಗಿದೆ. ಈಚೆಗೆ ಕ್ವೀನ್ ಎಲಿಜಬೆತ್ತು ಹಡಗು ಮುಂದಣ ತುರ್ಕಿ ಕೋಟೆಗಳ ಮೇಲೆ ಮರಳಿ ಫಿರಂಗಿಗುಂಡುಗಳನ್ನು ಹೊಡೆದಿರುವುದು. ತುರ್ಕಿಯವರು ದೊಡ್ಡದೊಡ್ಡ ಫಿರಂಗಿಗಳನ್ನು ಸ್ಮರ್ನಾ ಪಟಣಕ್ಕೆ ಸಾಗಿಸಿ, ಅಲ್ಲಿನ ಕೋಟೆಗಳನ್ನು ಬಲಪಡಿಸುತ್ತಿರುವರು. ಕಾನ್‌ಸ್ಟಾಂಟಿನೋಪಲಿನಲ್ಲಿ ಕಲ್ಲಿದ್ದಲು ಮುಗಿದುಹೋಗಿರುವುದರಿಂದ ರಾತ್ರಿಯ ಹೊತ್ತು ದೀಪವನ್ನು ಹೊತ್ತಿಸಲು ಗ್ಯಾಸಿಲ್ಲದೆ ಪಟ್ಟಣವು ಅಂಧಕಾರಮಯವಾಗಿರುವುದಂತೆ. ಡಾರ್ಡಿನಲ್ಸಿನಲ್ಲುಂಟಾಗಿರುವ ಅವಸ್ಥೆಯನ್ನು ಕಂಡು ತುರ್ಕಿಮಂತ್ರಿಯವರು ಭಯಪಟ್ಟು ಮಿತ್ರಮಂಡಲಿಯವರೊಡನೆ ಸಂಧಿಮಾಡಿಕೊಳ್ಳಬೇಕೆಂದು ನಿಶ್ಚಯಿಸಿ ಅಮೇರಿಕಾ ರಾಯಭಾರಿಯನ್ನು ಪ್ರಾರ್ಥಿಸಿದರಂತೆ. ಈ ವಿಷಯವಾಗಿ ತುರ್ಕಿ ಪ್ರಭುತ್ವದವರು ಆಲೋಚಿಸುತ್ತಿದ್ದ ಸಭೆಗೆ ಜರ್ಮನ್ ಜನರಲ್ ವಾನ್ ಕಾಂಡಿರ್ಸ್‌ರವರು ಬಂದು ಯಾರಾದರೂ ಸಂಧಿಮಾಡಿಕೊಳ್ಳುವ ವಿಷಯದಲ್ಲಿ ಮಿತ್ರಮಂಡಲಿಯವರೊಡನೆ ರಾಯಭಾರವನ್ನು ನಡೆಯಿಸುತ್ತಿರುವರೆಂಬುದು ಗೊತ್ತಾದರೆ ಅವರನ್ನು ತುಪಾಕಿಯಿಂದಲೇ ಸುಟ್ಟುಬಿಡುವೆನೆಂದು ಬೆದರಿಸಿದನೆಂದು ಪಯೋನಿಯರ್ ಪತ್ರದ ಲಂಡನ್ ಪತ್ರವ್ಯವಹಾರಕನು ಬರೆದಿರುತ್ತಾನೆ.

ತುರ್ಕಿಯವರ ನೌಕಾದಳವೆಲ್ಲಾ ಒಟ್ಟಾಗಿ ಕಪ್ಪುಸಮುದ್ರದಲ್ಲಿ ಬರುತ್ತಿರುವ ರಷ್ಯನ್ ನೌಕಾದಳದ ಮೇಲೆ ಪ್ರತಿಘಟಿಸಬೇಕೆಂದು ನಿಶ್ಚಯಿಸಿರುವುದಂತೆ. ತುರ್ಕಿಯ ಹಡಗುಗಳು ಕಪ್ಪುಸಮುದ್ರದಲ್ಲಿ ತಲೆಯಿಕ್ಕಲು ಆರಂಭಿಸಿದ ಕೂಡಲೇ ರಷ್ಯನರ ಫಿರಂಗಿಯೇಟುಗಳು ಅವುಗಳ ಮೇಲೆ ಅವಿಚ್ಛಿನ್ನವಾಗಿ ಬಿದ್ದುವು. ಆದರಿಂದ ಅವು ಅಲ್ಲಿಗೇ ತಲೆಯನ್ನು ಹಿಂದೆಗೆದುವು. ಮತ್ತೊಂದು ಹಡಗು ಬಾಸ್ಪರಸ್ಸಿಗೆ ತಲೆಯಿಕ್ಕಿದ ಕೂಡಲೇ ರಷ್ಯನರ ಫಿರಂಗಿಯೇಟಿನಿಂದ ತಲೆಕೆಳಗಾಗಿ ಪಾತಾಳಕಂಡಿತು. ಬಾಸ್ಪರಸ್ ಜಲಸಂಧಿಯ ಎರಡುಪಕ್ಕದಲ್ಲಿರುವ ಕೋಟೆಗಳ ಮೇಲೆಯೂ ರಷ್ಯನರ ನೌಕಾದಳವು ಫಿರಂಗಿಗಳನ್ನು ಪ್ರಯೋಗಿಸುತ್ತಿವೆ. ಶತ್ರುಗಳು ಗೋವೆನ್ ಎಂಬ ಯುದ್ಧನಾವೆಯನ್ನು ಜೀರ್ಣೋದ್ಧಾರ ಮಾಡಿ ಯುದ್ಧಕ್ಕೆ ಅಣಿಮಾಡಿದ್ದಾರೆ.

ತುರ್ಕಿಯವರಿಗೆ ಸಹಾಯಮಾಡುವುದಕ್ಕಾಗಿ ಜರ್ಮನ್ ಸೈನ್ಯವನ್ನು ನಿಮ್ಮ ದೇಶದ ಮೇಲೆ ಸಾಗಿಹೋಗುವುದಕ್ಕೆ ಅಪ್ಪಣೆಯನ್ನು ಕೊಡಬೇಕೆಂದು ರುಮೇನಿಯಾದವರನ್ನು ಜರ್ಮನರು ಕೇಳಿದರಂತೆ. ಅದಕ್ಕೆ ಅವರು ತಿರಸ್ಕಾರದ ಉತ್ತರವನ್ನು ಕೊಟ್ಟಿರುವರು.

ಮೈಸೂರ್ ಸ್ಟಾರ್.

ಸನ್ ೧೯೧೫ ನೆಯ ಏಪ್ರಿಲ್ ತಾ|| ೪ ನೆಯ ಭಾನುವಾರ.

ದೇಶರಕ್ಷಣ ನೂತನಶಾಸನ.

ನಿನ್ನೆಯಸಲ ಕೂಡಿದ್ದ ಸಾಮ್ರಾಜ್ಯಶಾಸನ ಸಭೆಯಲ್ಲಿ ಒಂದು ಕಠಿನತರವಾದ ಶಾಸನವು ಒಂದುದಿನದೊಳಗೇ ಸೂಚಿತವೂ ಅನುಮೋದಿತವೂ ಆಗಿ ವ್ಯವಹಾರಕ್ಕೆ ಬರುವಂತಾಯಿತು. ಸದ್ಯದ ಯುದ್ಧಸಮಯದಲ್ಲಿ ಸರ್ಕಾರದ ಸೇನಾಶಾಖೆಗೆ ಸಂಬಂಧಪಟ್ಟ ಕೆಲ ಅವಶ್ಯಕವಿಷಯಗಳಿಗಾಗಿಯೂ ಈಗ ಭರತಖಂಡದಲ್ಲಿ ಪಂಜಾಬಿನಲ್ಲೂ ಪೂರ್ವಬಂಗಾಳಾದಲ್ಲೂ ವಿಪರೀತವಾಗಿ ಕೊಲೆ ಸುಲಿಗೆ ಕಳ್ಳತನಗಳೂ ರಾಜದ್ರೋಹಾತ್ಯಾಚಾರಗಳೂ ನಡೆಯುತ್ತಿರುವುದರಿಂದ ಅವುಗಳ ನಿರೋಧಾರ್ಥವಾಗಿ ಈ ನೂತನಶಾಸನವನ್ನು ಪ್ರಭುತ್ವದವರು ದೇಶಕ್ಷೇಮಾರ್ಥವಾಗಿಯೇ ಮಾಡಬೇಕಾಗಿ ಬಂದಿತು. ಇಂಥ ಶಾಸನವು ಇಂಗ್ಲೆಂಡಿನಲ್ಲಿ ಯುದ್ಧಾರಂಭವಾದಕೂಡಲೇ ಏರ್ಪಡಿಸಲ್ಪಟ್ಟಿತು. ೮ ತಿಂಗಳ ನಂತರ ನಮ್ಮ ದೇಶದಲ್ಲಿ ಅದೇತರದ ಈ ವಿಧಿಯು ವ್ಯವಹಾರಕ್ಕೆ ಬರುವಂತೆ ಮಾಡಲ್ಪಟ್ಟಿರುವುದನ್ನು ನೋಡಿದರೆ ನಮ್ಮ ದೇಶದ ಸೌಮ್ಯರಾಜನಿಷ್ಠಸ್ಥಿತಿಗೆ ಅಭಿಮಾನಪಡುವಂತೆ ಇರುತ್ತಿದ್ದರೂ ಸದ್ಯದ ಯುದ್ಧಪ್ರಸಕ್ತಿಯು ಭರತಖಂಡದ ಭವಿಷ್ಯತ್ ಶುಭೋದಯ ಸುಗಂಧಿಮಾರುತವನ್ನು ಬೀಸುತ್ತಿರುವಾಗ ರಾಜದ್ರೋಹದ ಅಂಕುರದ ನಿರೋಧಕ್ಕಾಗಿ ಇಂಥ ವಿಧಿಕಲ್ಪನೆಯ ಅವಶ್ಯಕತೆಯು ಉಂಟಾಯಿತೆಂದು ಹೇಳಿಸಿಕೊಳ್ಳುವಂತಾಗಿರುವುದು ದೇಶಾಭಿಮಾನಿಗಳಿಗೆಲ್ಲಾ ವಿಷಾದಕರವಾಗಿರುವುದು. ಇಂಥ ಸ್ಥಿತಿಯು ಕೆಲ ದುರ್ಜನರಿಂದ ಭರತಖಂಡಕ್ಕೆ ಉಂಟಾಗಿರುವುದನ್ನು ಪ್ರಭುತ್ವದವರು ಕಂಡು ಬಹಳವಾಗಿ ವ್ಯಥೆಪಡುತ್ತಿದ್ದಾರೆ.

ದೇಶದಲ್ಲಿ ದುಷ್ಟನಿಗ್ರಹವನ್ನು ಮಾಡಿ ಶಿಷ್ಟರಕ್ಷಣವನ್ನುಂಟುಮಾಡುವುದು ಯಾರಿಗೆತಾನೇ ಇಷ್ಟವಲ್ಲ? ಅದುಕಾರಣವೇ ಈ ನೂತನ ವಿಧಿಯು ಭೀಕರವಾಗಿದ್ದರೂ ಇದಕ್ಕೆ ಸಭೆಯಲ್ಲಿ ಪೂರ್ಣಾನುಮೋದನವು ದೊರೆದಿತು. ಅಂಟುರೋಗವನ್ನು ಆರಂಭದಲ್ಲೇ ಅಣಗಿಸುವುದು ಸರ್ಕಾರಕ್ಕೆ ಅವಶ್ಯಕವಾಗಿರುವಂತೆಯೇ ಅಲ್ಪಸ್ವಲ್ಪವಾಗಿ ತಲೆಯಿಕ್ಕಿರುವ ಅರಾಜಕಕೃತ್ಯಗಳು ದೇಶದಲ್ಲೆಲ್ಲಾ ವ್ಯಾಪಿಸಿಕೊಳ್ಳುವುದಕ್ಕೆ ಮುಂಚೆಯೇ ತೀಕ್ಷ್ಣವಾದ ಪದ್ಧತಿಯಿಂದ ಅದನ್ನು ಮೂಲೋತ್ಪಾಟನ ಮಾಡಿಬಿಡುವುದು ಅವಶ್ಯಕವೆಂದು ಸರ್ಕಾರದವರು ಯೋಚಿಸಿರುವುದು ಯುಕ್ತವಾಗಿರುತ್ತದೆ. ಈಗಿನ ಯುದ್ಧಸಂಧಿಯನ್ನು ಸಾಧಿಸಿ ಕೆಲರು ದೇಶದಲ್ಲಿ ಅಶಾಂತಿಯನ್ನುಂಟುಮಾಡಬೇಕೆಂದು ಹವಣಿಸುತ್ತಿರುವರಂತೆ. ಅಮೇರಿಕಾ ಚೀನಾ ಜಪಾನ್ ದೇಶಗಳಲ್ಲಿರುವ ಅನಾಯಕಸಂಘಗಳವರು ಪತ್ರವ್ಯವಹಾರಗಳಿಂದಲೂ ಗೂಢಚಾರರಿಂದಲೂ ಈ ದೇಶದಲ್ಲಿ ಅಶಾಂತಿಯನ್ನು ಹುಟ್ಟಿಸಲು ಪ್ರಯತ್ನಿಸಿರುವರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯಂತೆ. ಅದುಕಾರಣ ಅಂಥ ಅನರ್ಥಮೂಲವುದೇಶದಲ್ಲಿ ನಾಟಿಕೊಳ್ಳುವಂತೆಅವಕಾಶಕೊಟ್ಟಿರುವುದು ಪ್ರಭುತ್ವದವರ ಧರ್ಮವಲ್ಲವೆಂದು ಈ ಸಂದರ್ಭದಲ್ಲಿ ಅವರುಹೇಳಿರುವುದು ಒಪ್ಪತಕ್ಕ ಮಾತಾಗಿದೆ.

ಶತ್ರುಗಳ ಸಂಗಡ ಪತ್ರವ್ಯವಹಾರ ನಡೆಯಿಸುವುದು, ಸುಳ್ಳುಸುದ್ದಿಗಳನ್ನು ಹರಡಿ ದೇಶದ ಶಾಂತಿಯನ್ನು ಭಂಗಪಡಿಸುವುದು ಜಾತಿಜಾತಿಗಳಲ್ಲಿ ದ್ವೇಷಾಸೂಯೆಗಳನ್ನು ಹುಟ್ಟಿಸುವುದು, ಮದ್ದುಗುಂಡು ಮೊದಲಾದ ಸಾಮಗ್ರಿಗಳನ್ನು ವಶದಲ್ಲಿಟ್ಟುಕೊಂಡಿರುವುದು, ಸೈನಿಕರಿಗೆ ದುರ್ಬೋಧೆಮಾಡುವುದು, ಅವರ ಕಾರ್ಯಕ್ಕೆ ಪ್ರತಿಬಂಧಕಮಾಡುವುದು, ಸರ್ಕಾರದ ಸುರಕ್ಷಿತತೆಗೆ ಭಂಗತರುವ ಕಾರ್ಯವನ್ನು ಮಾಡುವುದು, ಇತ್ಯಾದಿ ಅಪರಾಧಕಾರ್ಯಗಳನ್ನು ನಡೆಯಿಸಿದವರನ್ನು ಸ್ಪೆಷಲ್ ಕಮಿಷನರುಗಳಮೂಲಕ ಬೇಗಬೇಗನೆ ವಿಚಾರಮಾಡಿಸಿ, ತೀರ್ಪುಗೊಳಿಸುವುದು ಈ ವಿಧಿಯ ಉದ್ದೇಶವಾಗಿದೆ. ಮೇಲೆಕಂಡ ರೀತಿಯ ಅಪರಾಧಮಾಡಿದವನಿಗೆ ಉಚಿತಾನುಸಾರವಾಗಿ ದೇಶಾಂತರವಾಸ, ಅರ್ಥದಂಡ, ಕಾರಾಗೃಹವಾಸ, ಮರಣದಂಡನೆಗಳು ವಿಧಿಸಲ್ಪಡುವುವು. ಈ ವಿಧಿಯು ಯುದ್ಧಸಮಾಪ್ತಿಯಾದನಂತರ ೬ ತಿಂಗಳಕಾಲದವರೆಗೂ ವ್ಯವಹಾರದಲ್ಲಿರುವುದು. ದೇಶದಲ್ಲಿ ಯಾವಯಾವಭಾಗಕ್ಕೆ ಈ ವಿಧಿಯನ್ನು ವ್ಯವಹಾರಕ್ಕೆ ತರಬೇಕೆಂದು ತೋರುವುದೋ ಅಲ್ಲಲ್ಲಿಗೆಮಾತ್ರ ಅನ್ವಯಿಸಿಕೊಳ್ಳುವರು.

ಇಂಥ ವಿಧಿಯು ವ್ಯವಹಾರಕ್ಕೆ ಬರುವಂತಾದುದರಿಂದ ಈ ದೇಶದ ಸತ್ಪ್ರಜೆಗಳಾದವರಾರಿಗೂ ಚಿಂತೆಯಿಲ್ಲ. ಇದು ಅವರ ಕ್ಷೇಮಕ್ಕೆ ಸಾಧಕವೇ ಆಗಿದೆ. ಇದನ್ನು ವ್ಯವಹಾರಕ್ಕೆ ತರುವುದೂ ತರದಂತೆ ಮಾಡುವುದೂ ಸಹ ಪ್ರಜೆಗಳ ಪ್ರವರ್ತನೆಯನ್ನನುಸರಿಸಿಕೊಂಡಿರುವುದೆಂದು ವೈಸ್ರಾಯರು ಈ ವಿಧಿಕಲ್ಪನೆಯ ಸಮಯದಲ್ಲಿ ಅಪ್ಪಣೆಕೊಡಿಸಿರುವುದು ಸತ್ಯವಾಗಿದೆ. ದುರುಳರ ದುರಾಚಾರಗಳು ಇಲ್ಲಿಗೇ ಮುಕ್ತಾಯಗೊಂಡರೆ ಈ ವಿಧಿಯ ಅನುಷ್ಠಾನಕ್ಕೆ ದೇಶದಲ್ಲಿ ಎಡೆಯೇ ಇರಲಾರದು. ಅಂಥ ಗೌರವಫಲವನ್ನು ಈ ದೇಶಕ್ಕೆ ಉಂಟುಮಾಡಲು ದೇಶೀಯರೆಲ್ಲರೂಪ್ರಯತ್ನಿಸಿ ಕೃತಕೃತ್ಯರಾಗಲೆಂದು ನಾವು ಕೋರುವೆವು.

ಗೌರ್ನಮೆಂಟಿನವರು ದೇಶಹಿತಸಾಧನದೃಷ್ಟಿಯಿಂದ ಇಂಥ ವಿಧಿಕಲ್ಪನೆಯನ್ನು ಮಾಡುತ್ತಿದ್ದರೂ ಅದನ್ನು ಅನುಷ್ಠಾನಕ್ಕೆ ತರುವಾಗ್ಗೆ ಕೆಳಗಣ ಅಧಿಕಾರಿಗಳು ಉದಾರಚಿತ್ತವಿಲ್ಲದೆ ಸ್ವಚ್ಛಂದವಾಗಿ ಆಚರಿಸಿ ಉಜ್ಜುಗಿಸುವುದರಿಂದ ನಿರಪರಾಧಿ ಪ್ರಜೆಗಳಿಗೆಲ್ಲಾ ಅನಂತವಿಧದ ಕಷ್ಟೋಪಭೋಗಮಾಡುವ ಅವಸ್ಥೆಯು ಪ್ರಾಪ್ತವಾಗುವುದೆಂಬುದು ಹಿಂದೆ ಹಲವುಬಾರಿ ದೃಷ್ಟಾಂತಗೊಂಡಿದೆ. ಅದುಕಾರಣ ಈಗಿನ ವಿಧಿಯಿಂದ ಅಂಥ ಅನರ್ಥವು ಮತ್ತಷ್ಟು ಅಧಿಕವಾಗಬಾರದೆಂಬುದೇ ದೇಶಾಭಿಮಾನಿಗಳ ಕೋರಿಕೆ. ಮುಖ್ಯವಾಗಿ ಪೊಲೀಸುಶಾಖೆಯವರು ಉಚ್ಚಾಧಿಕಾರಿಗಳ ಸದುದ್ದೇಶವನ್ನು ಗಮನದಲ್ಲಿಟ್ಟುಕೊಂಡು ತಮ್ಮ ಶಾಖೆಗೆ ಗೌರವ ತರಬೇಕೆಂಬ ಆಸೆಯನ್ನಿಟ್ಟುಕೊಂಡು ಕೆಲಸಮಾಡಿದರೆ ಇಂಥ ವಿಧಿಗಳು ನೂರಾರು ಹುಟ್ಟಿದರೂ ಸತ್ಪ್ರಜೆಗಳು ಚಿಂತಿಸಲಾರರು.

ಬಂಗಾಳಾ ಪಂಜಾಬುಗಳಲ್ಲಿನ ಅತ್ಯಾಚಾರಗಳು.

ಕ್ರೂರತರವಾದ ನೂತನಶಾಸನಗಳನ್ನು ಏರ್ಪಡಿಸಬೇಕೆಂಬ ಅವಶ್ಯಕತೆಯುಂಟಾಗುವಂತೆ ಮಾಡಿದ ಅಪರಾಧಗಳಲ್ಲಿ ಪೂರ್ವಬಂಗಾಳಾ ಮತ್ತು ಪಶ್ಚಿಮ ಪಂಜಾಬು ಭಾಗಗಳ ಅತ್ಯಾಚಾರಗಳು ಗಣ್ಯವಾಗಿರುತ್ತವೆ. ಬಂಗಾಳಾದಲ್ಲಿ ಸುಲಿಗೆ ಕಳ್ಳತನಗಳೂ ಕೊಲೆಗಳೂ ನಿತ್ಯಕ್ರಿಯೆಗಳಾಗಿವೆಯೆಂಬ ಸಂಗತಿಯು ಆಗಾಗ್ಗೆ ನಾವು ಪ್ರಕಟಿಸುತ್ತಬಂದಿರುವ ವರ್ತಮಾನಗಳಿಂದಲೇ ವಾಚಕರಿಗೆ ಗೊತ್ತಿರಬಹುದು. ಪಂಜಾಬಿನ ವಿಷಯವನ್ನು ಈಗ ವಿವರಿಸುತ್ತೇವೆ.—ಅಲ್ಲಿನ ಜಾಂಗ್ ಜಿಲ್ಲೆಯೊಳಗೆ ಜನವರಿ ತಿಂಗಳಲ್ಲಿ ಪ್ಲೇಗು ಪ್ರಾರಂಭವಾದುದರಿಂದ ಅನೇಕ ವರ್ತಕರೂ ಶ್ರೀಮಂತರೂ ತಮ್ಮ ತಮ್ಮ ಅಂಗಡಿಮುಂಗಟ್ಟುಗಳಿಗೆ ಬೀಗಗಳನ್ನು ಹಾಕಿಬಿಟ್ಟು ಹೊರಟುಹೋದರು. ಅಂಥ ಸಮಯದಲ್ಲಿ ದುರುಳರು ಅಂಗಡಿಗಳ ಬಾಗಿಲುಗಳನ್ನೊಡೆದು ಒಳಗಿದ್ದ ದವಸಗಳನ್ನೂ ಇತರ ಸೊತ್ತುಗಳನ್ನೂ ದೋಚಿಕೊಂಡು ಹೋದರು. ಇಂಥ ಸಮಯದಲ್ಲಿ ಕೆಲ ಕಳ್ಳರು ಕದಿಯುತ್ತಿದ್ದಾಗಲೇ ಪೊಲೀಸರಿಗೆ ಸಿಕ್ಕಿಬಿದ್ದು ಶಿಕ್ಷಿತರಾದರು. ಕೆಲಕಡೆ ದುರುಳರು ಮನೆಗಳಿಗೆ ಬೆಂಕಿಯನ್ನೂ ಇಕ್ಕಿರುವರು. ಈ ದುರುಳರ ಗುಂಪುಗಳು ದಿನದಿನಕ್ಕೆ ಹೆಚ್ಚಿ ಹಲವು ಗ್ರಾಮಗಳಲ್ಲಿ ಇಂಥ ಅಪರಾಧಗಳು ವಿಶೇಷವಾಗಿ ನಡೆಯಲಾರಂಭವಾದುವು. ಇದುವರೆಗೆ ಇಂಥ ಸುಲಿಗೆಕಳ್ಳತನಗಳು ಒಂದುನೂರರವರೆಗೆ ನಡೆದಿರುತ್ತವೆಂದು ಸರ್ಕಾರದವರು ಪ್ರಕಟಿಸಿದ್ದಾರೆ. ಆ ಸುತ್ತಿನ ಪೋಲೀಸಾಳುಗಳಲ್ಲಿ ಹಲವರು ಯುದ್ಧಾಂಗಣಕ್ಕೆ ಹೋಗಿಬಿಟ್ಟಿರುವುದರಿಂದ, ದುರುಳರ ಪುಂಡಾಟವುಹೆಚ್ಚಲು ಮತ್ತಷ್ಟು ಅನುಕೂಲವಾಯಿತು. ಈಚೆಗೆ ಆ ಸ್ಥಲಗಳಿಗೆ ಹೊಸ ಪೋಲೀಸಾಳುಗಳನ್ನೂ ಮೇಲಧಿಕಾರಿಗಳನ್ನೂ ಕೆಲ ಸೈನಿಕರನ್ನೂ ಸರ್ಕಾರದವರು ಕಳುಹಿಸಿಕೊಟ್ಟುದರಿಂದ ಮಾರ್ಚಿ ತಾ|| ೪ ರಿಂದೀಚೆಗೆ ಕಳ್ಳತನದ ಸುದ್ದಿಯು ಇಲ್ಲವಾಗಿದೆ. ಮುಜಫರ್‌ಘರಿನಲ್ಲಿ ಮಾತ್ರ ಕಳೆದ ತಾ|| ೧೬ರಲ್ಲಿ ಮತ್ತೊಂದು ಸುಲಿಗೆಗಳ್ಳತನವಾಗಿದೆ. ಪೋಲೀಸರ ಸಾಹಸದಿಂದ ಇದುವರೆಗೆ ನೂರಾರುಮಂದಿ ಅಪರಾಧಿಗಳೂ ಅವರು ಕದ್ದಿದ್ದ ಅನೇಕ ಸೊತ್ತುಗಳೂ ಸಿಕ್ಕಿಬಿದ್ದು ವಿಚಾರಣೆ ನಡೆಯುತ್ತಿದೆ. ಇಂಥ ಅಪರಾಧಗಳನ್ನೆಲ್ಲಾ ಈಗಿನ ನೂತನದೇಶರಕ್ಷಣಶಾಸನದ ನಿಯಮಪ್ರಕಾರ ವಿಚಾರಣೆ ನಡೆಯಿಸಬೇಕೆಂದು ಸರ್ಕಾರದವರು ಏರ್ಪಡಿಸುತ್ತಿದ್ದಾರೆ. ಈಗಾಗಲೇ ಆ ಶಾಸನವು ಲಾಹೋರ್ ಡಿವಿಜನ್ನಿನ ಅಮೃತಸರ, ಗುರುದಾಸಪುರ, ಸಿಯಾಲ್ಕಲ್, ಗುಜರಾನ್ವಾಲ ಜಿಲ್ಲೆಗಳಲ್ಲೂ, ಜಲಂಧರಡಿವಿಜನ್ನಿನ ಕಾಂಗ್ರಾ, ಹೋಷಿಯಾರ್ಪೂರ್, ಲೂಧಿಯಾನ, ಜಲಂಧರ್, ಫಿರೋಜ್‌ಪೂರ್ ಜಿಲ್ಲೆಗಳಲ್ಲೂ, ಮುಲ್ತಾನ್ ಡಿವಿಜನ್ನಿನ ಮುಲ್ತಾನ್, ಜಾಂಗ್, ರಾಯಲ್‌ಪೂರ್, ಮಾಂಟೆಗೊಮರಿ, ರಾಪಾಜೇಚಾನ್, ಮುಜಪುರ್‌ನಗರ ಜಿಲ್ಲೆಗಳಲ್ಲೂ ವ್ಯವಹಾರಕ್ಕೆ ತರಲ್ಪಟ್ಟಿದೆ. ಈ ನೂತನ ಶಾಸನವು ಎಷ್ಟುಮಟ್ಟಿಗೆ ಫಲಪ್ರದವಾಗುವುದೆಂಬುದು ನಿರೀಕ್ಷಣೀಯವಾಗಿದೆ.

ಸದ್ಯದ ಸಂದರ್ಭವನ್ನನುಸರಿಸಿ ಒಂದು ಉಪಯುಕ್ತಸೂಚನೆಯನ್ನು ಬರ್ದ್ವಾನ್ ಮಹಾರಾಜರು ಮಾಡಿರುತ್ತಾರೆ. ಅದು ಸರ್ವರಿಗೂ ಶ್ರೋತವ್ಯವಾಗಿದೆ. ಏನೆಂದರೆ—

ಬ್ರಿಟಿಷ್ ಇಂಡಿಯನ್ ಅಸೋಸಿಯೇಷನ್ನಿನವರ ವಾರ್ಷಿಕೋತ್ಸವವು ಕಲ್ಕತ್ತಾ ಪಟ್ಟಣದಲ್ಲಿ ಕಳೆದ ತಾ|| ೨೯ ರಲ್ಲಿ ನೆರವೇರಿತು. ಆಗ್ಗೆ ಬರದ್ವಾನ್ ಮಹಾರಾಜರು ಅಧ್ಯಕ್ಷರಾಗಿದ್ದು ಬಂಗಾಳಾದ ಅರಾಜಕಪ್ರವೃತ್ತಿಯನ್ನು ಕುರಿತು ಹೀಗೆ ಮಾತನಾಡಿದರು—ಬಂಗಾಳಾದಲ್ಲಿ ಈಗ ವಿಪರೀತವಾಗಿ ನಡೆಯುತ್ತಿರುವ ರಾಜಕೀಯವಾದ ಕೊಲೆ ಸುಲಿಗೆಯನ್ನೂ ಇತರ ಅಪರಾಧಕೃತ್ಯಗಳನ್ನೂ ನೋಡಿ ಕೆಲರು ಭಯಪಡುತ್ತಿರುವರು. ನಾನು ಅದಕ್ಕೆ ಅಂಜುವುದಿಲ್ಲವಾದರೂ ಅವು ಹೀಗೆ ನಡೆಯುತ್ತಿರುವುದಕ್ಕಾಗಿ ವಿಷಾದಿಸುತ್ತೇನೆ. ಇದರ ನಿರೋಧಕ್ಕಾಗಿ ಕ್ರೂರ ಶಾಸನಗಳು ಏರ್ಪಡುವಂತಾಗಿರುವುದಕ್ಕಾಗಿ ನಾಚಿಕೆಗೊಳ್ಳುತ್ತೇನೆ. ಆದರೆ ಇಂಥ ಅಪರಾಧಗಳು ಮುಂದೆ ನಡೆಯದಂತೆ ಮಾಡುವುದಕ್ಕಾಗಿ ಉತ್ತಮವಾದ ಪದ್ಧತಿಗಳಿಲ್ಲವೆ ಎಂಬುದನ್ನು ಪ್ರಜಾನಾಯಕರು ಆಲೋಚಿಸಬೇಕಾಗಿದೆ. ಪಾಠಶಾಲೆಗಳೂ ಪ್ರೌಢವಿದ್ಯಾಲಯಗಳೂ ಇರುವ ಪಟ್ಟಣಗಳಿಗೆ ಹೋಗಿ, ಅರಾಜಕಕೃತ್ಯಗಳಿಂದ ಭರತಖಂಡಕ್ಕೆ ಸ್ವರಾಜ್ಯವು ದೊರೆತು ಇದು ಇತರ ಆಂಗ್ಲಸ್ವಾಸ್ಥ್ಯಗಳಂತೆ ಗೌರವ ಪದವನ್ನು ಪಡೆದುಕೊಳ್ಳಲಾರದೆಂತಲೂ ಈಗ ವಿದ್ಯಾರ್ಥಿಗಳಾಗಿರುವವರೇ ಮುಂದೆ ಪ್ರಜಾನಾಯಕರಾಗಿ ಈಗಿನವರ ಕೋರಿಕೆಯ ಫಲವನ್ನು ಅವರು ಅನುಭವಿಸುವರೆಂತಲೂ, ವಿದ್ಯಾರ್ಥಿಗಳಿಗೂ ಅವರ ಬೋಧಕರಿಗೂ ಉಪದೇಶಿಸಬೇಕು. ದೇಶಕ್ಕೆ ಸ್ವಾತಂತ್ರ್ಯವನ್ನೂ ವಿಮುಕ್ತಿಯನ್ನೂ ಉಂಟುಮಾಡಬೇಕೆಂಬ ದುರಭಿಪ್ರಾಯವನ್ನು ಯೌವನಸ್ಥರು ಬಿಟ್ಟುಬಿಡಬೇಕು. ರಾಜಕೀಯ ನಾಯಕರು ಒಂದು ಸಂಗತಿಯನ್ನು ಮುಖ್ಯವಾಗಿ ಗಮನಿಸಬೇಕು. ಏನೆಂದರೆ—ನಾವು ಎಷ್ಟು ವಿದ್ಯಾವಂತರಾದರೂ ಎಷ್ಟು ನಾಗರಿಕರಾದರೂ ನಮ್ಮ ದೇಶದಲ್ಲಿ ಎದುವರೆಗೆ ಇಂಥ ಘೋರಕೃತ್ಯಗಳು ಜರುಗುತ್ತಿರುವುವೋ ಅಲ್ಲಿಯವರೆಗೂ, ಇಂಗ್ಲೆಂಡು ಎಷ್ಟು ಸ್ವಾತಂತ್ರ್ಯಪ್ರಿಯವೂ ಉದಾರಚಿತ್ತವುಳ್ಳದೂ ಆಗಿದ್ದರೂ ಈಗಿನ ಯುದ್ಧವು ಮುಗಿದಬಳಿಕ ನಮ್ಮ ದೇಶಕ್ಕೆ ನೂತನ ಸ್ವಾತಂತ್ರ್ಯವನ್ನು ಅದು ಕೊಡದು. ಈ ವಿಷಯವನ್ನು ಪ್ರಜಾನಾಯಕರು ಗ್ರಹಿಸಿಕೊಳ್ಳಬೇಕು. ಮತ್ತೊಂದು ಮುಖ್ಯವಿಷಯವೇನೆಂದರೆ-ಪ್ರಜೆಗಳಿಗೂ ಪೊಲೀಸಿನವರಿಗೂ ಸ್ನೇಹವು ನೆಲಸುವವರೆಗೂ ಇಂಥ ಅಪರಾಧಾಚರಣೆಗಳು ತಗ್ಗಲಾರವು; ಅಪರಾಧಿಗಳು ಸಿಕ್ಕರು. ಪೊಲೀಸರುಗಳಿಗೂ ಪ್ರಜೆಗಳಿಗೂ ಪರಸ್ಪರ ವಿಶ್ವಾಸಉಂಟಾದ ಹೊರತು ಎಷ್ಟು ಕಠಿನಶಾಸನಗಳನ್ನೇರ್ಪಡಿಸಿದರೂ ಎಷ್ಟು ಅಟ್ಟಹಾಸವನ್ನು ಮಾಡಿದರೂ ಪತ್ರಿಕೆಗಳಲ್ಲಿ ಎಷ್ಟು ಲೇಖನವನ್ನು ಬರೆದರೂ ಸಭೆಗಳಲ್ಲಿ ರಾಜಭಕ್ತಿಪ್ರೇರಕವಾದ ಉಪನ್ಯಾಸಗಳೆಷ್ಟನ್ನು ಮಾಡಿದರೂ ನಾವು ಕೋರುವ ಫಲವು ಲಭಿಸಲಾರದು. ಅದುಕಾರಣ ಪೊಲೀಸರಿಗೂ ಪ್ರಜೆಗಳಿಗೂ ಪರಸ್ಪರ ಮನೋವೈಷಮ್ಯಗಳಿರುವುದಕ್ಕೆ ಕಾರಣವೇನೆಂಬುದನ್ನು ವಿಚಾರಿಸಿ ತಿಳಿಯುವುದಕ್ಕಾಗಿ ಅಧಿಕಾರಿಗಳೂ ಅನಧಿಕಾರಿಗಳೂ ಯೂರೋಪ್ಯರೂ ಸಹ ಸೇರಿರುವ ಒಂದು ಸಂಘವನ್ನೇರ್ಪಡಿಸಬೇಕೆಂದು ಈ ಸಂಘದವರು ಬಂಗಾಳಾ ಗೌರ್ನಮೆಂಟಿಗೆ ಒಂದು ಮಹಜರನ್ನು ಕಳುಹಿಸಿಕೊಡಬೇಕು. ಹೀಗೆ ವಿಚಾರಣೆಗಾಗಿ ಏರ್ಪಡುವ ಸಂಘವು ಒಳ್ಳೆಯ ಧೈರ್ಯವುಳ್ಳದಾಗಿಯೂ, ಪೊಲೀಸು ಶಾಖೆಯಲ್ಲಿನ ಲೋಪವನ್ನು ನಿರ್ಭೀತಿಯಿಂದ ಹೊರಹಾಕಲು ಸಮರ್ಥವಾಗಿಯೂ ಇರಬೇಕು. ಪ್ರಜೆಗಳು ಹಿಂಸೆಪಡುತ್ತಿದ್ದರೂ ಪೊಲೀಸರಿಗೆ ಸಹಾಯಮಾಡಿ ಅಪರಾಧಿಗಳನ್ನು ತೋರಿಸಿಕೊಡುವಲ್ಲಿ ಏತಕ್ಕೆ ಮುಂದಾಗುವುದಿಲ್ಲವೆಂಬುದರ ಕಾರಣವನ್ನು ಅವರು ಕಂಡುಹಿಡಿದು ಹೊರಪಡಿಸುವವರಾಗಬೇಕು.''

ಈ ಪ್ರತಿಯೊಂದು ಸೂಚನೆಯೂ ಅತ್ಯಂತ ಪ್ರಶಸ್ತವಾಗಿ ಗಮನೀಯವಾಗಿದೆಯೆಂಬುದರಲ್ಲಿ ಸಂಶಯವಿಲ್ಲ.

೩ ನೆ ತರಗತಿಯ ಪ್ರಯಾಣಿಕರು ಗಮನಿಸಬೇಕಾದುದು.

ಮದ್ರಾಸ್‌ರೇಲ್ವೆಯಲ್ಲಿ ಪ್ರಯಾಣಮಾಡುತ್ತಿದ್ದಾತನೊಬ್ಬನು ಕಂಪಾರ್ಟ್ಮೆಂಟಿನಲ್ಲಿ ಇಂತಿಷ್ಟೇ ಜನರನ್ನು ಕೂಡಿಸಬೇಕೆಂದಿರುವ ಆಜ್ಞೆಗೆ ವಿರುದ್ಧವಾಗಿ ಕಂಪೆನಿಯ ಕೆಲಸಗಾರರೇ ಸಮಯಾನುಸಾರ ಹೆಚ್ಚು ಜನಗಳನ್ನು ಕುರಿಗಳಂತೆ ಕೂಡುವುದನ್ನು ಸೈರಿಸಲಾರದೆ, ಸಂಖ್ಯೆಗೆ ಮೀರಿ ಒಳಕ್ಕೆ ನುಗ್ಗುತ್ತಿದ್ದವರನ್ನು ತಡೆಯಲಾಗಿ ಸ್ಟೇಷನ್‌ಮ್ಯಾಸ್ಟರು ಮೊದಲಾದ ಉದ್ಯೋಗಿಗಳು ಬಂದು ಆ ತಡೆಮಾಡಿದ ಪ್ರಯಾಣಿಕನನ್ನು ಹೊರಕ್ಕೆಳೆದುಹಾಕಿ ಅವನು ತಂಟೆಮಾಡಿದುದರಿಂದ ಪ್ರಯಾಣಿಕರಿಗೆ ತೊಂದರೆಕೊಟ್ಟನೆಂಬ ವಾದದಿಂದ ವ್ಯಾಜ್ಯವನ್ನು ಹೂಡಿ ೨೫ ರೂ. ಅರ್ಥದಂಡ ಮಾಡಿಸಿದರು. ಆತನು ಹಠವಾದಿಯಾಗಿ ನ್ಯಾಯವನ್ನು ಬಲ್ಲವನಾಗಿದ್ದುದರಿಂದ ಅಪೀಲ್‌ಮಾಡಲಾಗಿ ಅಲ್ಲಿ ಅವನು ನಿರ್ದೋಷಿಯೆಂದೂ ಹೆಚ್ಚು ಜನಸಂಖ್ಯೆಯನ್ನು ಕಂಪಾರ್ಟ್ಮೆಂಟಿನಲ್ಲಿ ಸೇರಗೊಡಿಸದಂತೆ ಅವನು ಮಾಡಿದ ತಡೆಯು ತಪ್ಪಲ್ಲವೆಂದೂ ತೀರ್ಮಾನವಾಗಿ ಅವನ ಅರ್ಥದಂಡವು ಹಿಂದಿರಿಗಿಸಲ್ಪಟ್ಟಿತು. ಇದು ನಡೆದು ೧ ತಿಂಗಳು ತುಂಬುವುದರೊಳಗೇ ಮತ್ತೊಂದು ಅನುಕೂಲವಾದ ಸಂಗತಿಯು ಬೊಂಬಾಯಿ ಲೋಹಮಾರ್ಗದಲ್ಲಿ ಸಂಭವಿಸಿರುವುದು ಏನೆಂದರೆ—ಒಬ್ಬ ವಕೀಲನು ೩ ನೆ ತರಗತಿಯ ಬಂಡಿಯೊಂದರಲ್ಲಿ ಕುಳಿತು ಪ್ರಯಾಣಮಾಡುತ್ತಿರಲು ಮುಂದಣ ಒಂದು ನಿಲ್ದಾಣದಲ್ಲಿ ಇವನು ಕುಳಿತಿದ್ದ ಕಂಪಾರ್ಟ್‌ಮೆಂಟಿನೊಳಕ್ಕೆ ಮಿತಿಮೀರಿ ಜನರು ನುಗ್ಗಲು ಪ್ರಯತ್ನಿಸಿದರು. ಅವರನ್ನು ಒಳಕ್ಕೆ ಬಿಡದೆ ಈತನು ತಂಟೆಮಾಡಿದಾಗ ಪರಸ್ಪರ ವಾಕ್ಕಲಹವಾಯಿತು. ಈ ಗದ್ದಲದಿಂದ ನೂತನಪ್ರಯಾಣಿಕರು ಸ್ಟೇಷನ್ ಮಾಸ್ಟರನ್ನು ಕರೆದರು. ಆತನು ಇವರನ್ನೆಲ್ಲಾ ಅದೇ ಕಂಪಾರ್ಟ್‌ಮೆಂಟಿನೊಳಕ್ಕೆ ಬಲಾತ್ಕಾರವಾಗಿ ತುಂಬಿ ತಾನು ಹೊರಟುಹೋದನು. ಬಳಿಕ ವಕೀಲನು ಸುಮ್ಮನಾಗಲಿಲ್ಲ; ಅವನಿಗೊಂದು ಉಪಾಯವು ಹೊಳೆದಿತು. ಪ್ರತಿಯೊಂದು ಬಂಡಿಯಲ್ಲೂ ಅಪಾಯಕಾಲದಲ್ಲಿ ಬಂಡಿಯನ್ನು ನಿಲ್ಲಿಸಬೇಕೆಂಬ ಸೂಚನೆಯನ್ನುಗಾರ್ಡಿಗೆ ಕೊಡುವುದಕ್ಕಾಗಿ ಗಂಟೆಯನ್ನುಬಾಜಿಸುವ ಸರಪಳಿಯು ಅಡ್ಡಲಾಗಿರುವುದಷ್ಟೆ. ಅದನ್ನು ಈ ವಕೀಲನು ಎಳೆದನು. ಕೂಡಲೆ ಬಂಡಿಯು ನಿಂತುಹೋಯಿತು. ಗಾರ್ಡು ಮೊದಲಾದವರು ಬಂದರು. ಏಕೆಂದು ವಕೀಲನನ್ನು ಕೇಳಲಾಗಿ, ತಾನು ಕುಳಿತಿರುವ ಕಂಪಾರ್ಟ್ಮೆಂಟಿನಲ್ಲಿ ಕಂಪೆನಿಯ ವಿಧಿಗನುಸಾರವಾದಷ್ಟು ಪ್ರಯಾಣಿಕರನ್ನು ಮಾತ್ರ ಕುಳಿತುಕೊಳ್ಳುವಂತೆ ಮಾಡದಿದ್ದರೆ ತಾನು ಬಂಡಿಯನ್ನು ಮುಂದಕ್ಕೆ ಹೋಗಗೊಡಲಾರೆನೆಂದು ನುಡಿದನು. ಬೇರೆ ಸ್ಥಳವಿಲ್ಲದುದರಿಂದ ಹಾಗೆ ಮಾಡಲಾಗುವುದಿಲ್ಲವೆಂದು ಉದ್ಯೋಗಿಗಳು ಹೇಳಿ ಬಂಡಿಯನ್ನು ಮುಂದಕ್ಕೆ ನಡೆಯಿಸಿದರು. ವಕೀಲನು ಮತ್ತೆ ಸರಪಣಿಯನ್ನು ಸೆಳೆದನು. ಮತ್ತೆ ಬಂಡಿಯು ನಿಂತಿತು. ಅಕ್ರಮವಾಗಿ ಬಂಡಿಯನ್ನು ನಿಲ್ಲಿಸಿದ ತಪ್ಪಿತಕ್ಕಾಗಿ ಶಿಕ್ಷೆಮಾಡಿಸುವೆನೆಂದು ವಕೀಲನನ್ನು ಹೆದರಿಸಿ ಅವನ ಹೆಸರು ವಿಳಾಸ ಮೊದಲಾದುವುಗಳನ್ನು ಉದ್ಯೋಗಿಗಳು ಬರೆದುಕೊಂಡರು. ವಕೀಲನು ಜೇವಾಳವನ್ನು ಬಲ್ಲವನಾದುದರಿಂದ ಅದಕ್ಕೆ ಲೇಶಮಾತ್ರವೂ ಹೆದರಲಿಲ್ಲ. ಕಡೆಗೆ ಉದ್ಯೋಗಿಗಳೇ ಸೋತು, ಆ ಹೆಚ್ಚುಮಂದಿ ಪ್ರಯಾಣಿಕರನ್ನು ಆ ಕಂಪಾರ್ಟ್‌ಮೆಂಟಿನಿಂದ ಹೊರಕ್ಕೆ ಇಳಿಸಿ ಬೇರೆಕಡೆ ಸ್ಥಲವನ್ನು ಮಾಡಿಕೊಟ್ಟು ಬಂಡಿಯನ್ನು ಮುಂದಕ್ಕೆ ಸಾಗಿಸಿದರು. ಪ್ರಜೆಗಳಲ್ಲಿ ಹೀಗೆ ಕರ್ತವ್ಯಜಾಗರೂಕತೆಯುಂಟಾಗುತ್ತ ಬಂದಲ್ಲದೆ, ಸಣ್ಣ ಉದ್ಯೋಗಿಗಳ ಅಲಕ್ಷ್ಯ-ಬಲಾತ್ಕಾರಗಳಿಂದ ಉಂಟಾಗುವ ಕಷ್ಟಗಳು ಸಾಮಾನ್ಯಪ್ರಜೆಗಳಿಗೆ ತಪ್ಪಲಾರವು.

ನೂತನಹಿಂದೂವಿಶ್ವವಿದ್ಯಾಲಯ.

ಭರತಖಂಡದ ಸ್ಥಿತಿಗತಿಗೆ ಅನುಸಾರವಾದ ವಿದ್ಯಾಭ್ಯಾಸವನ್ನು ಮಾಡಿಸಲು ಅನುಕೂಲವಾದ ಒಂದು ಸ್ವತಂತ್ರವಿದ್ಯಾಪೀಠವನ್ನು ಭರತಖಂಡದಲ್ಲಿ ಸ್ಥಾಪಿಸುವಂತೆ ಮಾಡಬೇಕೆಂದು ಆ|| ಮದನಮೋಹನಮಾಳವೀಯರು, ಶ್ರೀಮನ್ ದರ್ಭಾಂಗ ಮಹಾರಾಜರು ಮೊದಲಾದ ದೇಶಭಕ್ತಾಗ್ರೇಸರರನೇಕರು ಕಳೆದ ಹತ್ತುವರ್ಷಗಳಿಂದ ಪ್ರಯತ್ನಪಟ್ಟಿರುವುದೂ, ಅದಕ್ಕಾಗಿ ಉದಾರಿಗಳಾದ ಮಹನೀಯರನೇಕರು ಲಕ್ಷಾಂತರ ರೂ. ಗಳನ್ನೊಬ್ಬೊಬ್ಬರೇ ಸಹಾಯಮಾಡಿರುವುದೂ ಸಹ ನಮ್ಮ ವಾಚಕವರ್ಗಕ್ಕೆ ತಿಳಿದಿರುವುದಷ್ಟೆ. ಇದಕ್ಕೆ ಸಂಬಂಧಪಟ್ಟ ನಿಯಮಗಳನ್ನೇರ್ಪಡಿಸುವ ವಿಷಯದಲ್ಲಿ ಪ್ರಜಾನಾಯಕರ ಮತ್ತೂ ಸರ್ಕಾರದ ಮಧ್ಯದಲ್ಲಿ ದೀರ್ಘಕಾಲಚರ್ಚೆಯು ನಡೆಯುತ್ತಬಂದಿತು. ಈಗ ತತ್ಸಂಬಂಧವಾದ ಮಸೂದೆಯು ಕಳೆದ ಸಾಮ್ರಾಜ್ಯಶಾಸನಸಭೆಯಲ್ಲಿ ಸರ್ಕಾರದ ವಿದ್ಯಾಶಾಖಾಮಂತ್ರಿಗಳಿಂದ ನಿರೂಪಿಸಲ್ಪಟ್ಟಿತು. ಅದನ್ನು ಆದ್ಯಂತವಾಗಿ ನೋಡುವಲ್ಲಿ ಬಹುಮಟ್ಟಿಗೆ ಪ್ರಜಾಭಿಪ್ರಾಯವನ್ನನುಸರಿಸಿದ ಸ್ವಾತಂತ್ರ್ಯವೇ ಇದರ ವಿಷಯದಲ್ಲಿ ಸರ್ಕಾರದಿಂದ ಅನುಗ್ರಹಿಸಲ್ಪಟ್ಟಿರುವುದೆಂದು ವ್ಯಕ್ತವಾಗುತ್ತದೆ. ಈ ವಿಶ್ವವಿದ್ಯಾಲಯವು ಕಾಶೀಕ್ಷೇತ್ರದಲ್ಲಿ ಸ್ಥಾಪಿಸಲ್ಪಡುವುದು. ಇದಕ್ಕೆ ಸೇರಿದಂತೆ ಒಂದು ದೊಡ್ಡವಿದ್ಯಾರ್ಥಿನಿಲಯವು ಇರುವುದು. ಈ ವಿದ್ಯಾಪೀಠದಮೇಲೆ ಸರ್ವಸ್ವತಂತ್ರವಾದ ಅಧಿಕಾರವನ್ನು ನಡೆಯಿಸಲು ವೈಸ್ರಾಯರಿಗೆ ಅಧಿಕಾರವಿರುವುದು. ಸಂಯುಕ್ತಾಧಿಪತ್ಯದ ಲೆ|| ಗೌರ್ನರಿಗೆ ಇದರ ಮೇಲ್ವಿಚಾರಣೆಯ ಅಧಿಕಾರವಿರುವುದು. ಇದರ ಕಾರ್ಯನಿರ್ವಾಹಕ ಸಭಿಕರಿಗೆ ಅಂತರ್ವ್ಯವಸ್ಥೆಯನ್ನು ಉಚಿತಾನುಸಾರವಾಗಿ ನಡೆಯಿಸಲು ಸ್ವಾತಂತ್ರ್ಯವಿರುವುದು. ಇದರ ಪರೀಕ್ಷಾನಿಯಮ-ವ್ಯಾಪ್ತಿ ಮೊದಲಾದ ಕೆಲ ವಿಷಯಗಳಲ್ಲಿ ಇನ್ನೂ ಅಭಿಪ್ರಾಯಭೇದವಿದೆ. ಈಗ ಈ ಮಸೂದೆಯು ಪ್ರಜಾಭಿಪ್ರಾಯ ಪರಿಜ್ಞಾನಾರ್ಥವಾಗಿ ಇಡಲ್ಪಟ್ಟಿರುವುದು. ಬರುವ ಸೆಪ್ಟಂಬರ್ ತಿಂಗಳೊಳಗಾಗಿ ಈಗಿನ ವೈಸ್ರಾಯರೂ, ವಿದ್ಯಾಶಾಖಾಮಂತ್ರಿಗಳೂ ತಮ್ಮತಮ್ಮ ಅಧಿಕಾರದಲ್ಲಿರುವಾಗಲೇ ಇದನ್ನು ಅನುಷ್ಠಾನಕ್ಕೆ ತಂದುಬಿಡಬೇಕೆಂದು ನಿರ್ಧರಿಸಿರುವರು. ಈ ವಿದ್ಯಾಪೀಠದಲ್ಲಿ ಪರೀಕ್ಷೆ-ಬೋಧನ ಇವೆರಡುಕಾರ್ಯಗಳೂ ನಡೆಯುವುವು. ಇಲ್ಲಿ ಉತ್ತೀರ್ಣರಾದವರನ್ನು ಸರ್ಕಾರದ ಸ್ವಂತ ವಿದ್ಯಾಪೀಠಗಳ ಪರೀಕ್ಷೆಯಲ್ಲಿ ಉತ್ತೀರ್ಣರಾದವರಂತೆಯೇ ಸರ್ಕಾರದವರಿಂದ ಗಣಿಸಲ್ಪಡುವರು. ಇಲ್ಲಿಗೆ ಮತಭೇದವಿಲ್ಲದೆ ಯಾವಜಾತಿಯ ವಿದ್ಯಾರ್ಥಿಗಳನ್ನಾದರೂ ಸೇರಿಸಿಕೊಳ್ಳುವರು. ಸ್ವದೇಶೀಸಂಸ್ಥಾನಗಳಿಂದ ಇಲ್ಲಿಗೆ ಬಂದುಸೇರುವ ವಿದ್ಯಾರ್ಥಿಗಳು ಆ ಸಂಸ್ಥಾನದವರ ಅಂಗೀಕಾರಕ್ಕೆ ಒಳಪಟ್ಟ ಶಾಲೆಗಳಿಂದ ಬಂದು ಸೇರುವವರಾಗಬೇಕು. ಈ ವಿದ್ಯಾಪೀಠಕ್ಕೆ ಸರ್ಕಾರದವರೂ ಸ್ವಲ್ಪ ದ್ರವ್ಯಸಹಾಯವನ್ನು ಮಾಡುವವರಾಗಿದ್ದಾರೆ. ಇಲ್ಲಿ ಪೌರ್ವಾತ್ಯ ಪಾಶ್ಚಾತ್ಯಪದ್ಧತಿಯನ್ನನುಸರಿಸಿದ ಶಿಕ್ಷಣಗಳು ನಡೆಯುವುದಲ್ಲದೆ ಹಿಂದೂಗಳಿಗೆ ಧಾರ್ಮಿಕಶಿಕ್ಷಣವೂ ಕೊಡಲ್ಪಡುವುದು.

ಒಳದೇಶದ ವೃತ್ತಾಂತ.

ಶ್ರೀಮನ್ ಮಹಾರಾಜರವರು ನಂಜನಗೂಡಿನ ಶ್ರೀ ನಂಜುಂಡೇಶ್ವರಸ್ವಾಮಿಯ ಪೂರ್ಣಮಾಸೇವೆಗಾಗಿ ಕಳೆದ ಮಂಗಳವಾರ ರಾಜಧಾನಿಗೆ ದಯಮಾಡಿದ್ದು ಗುರುವಾರ ಪುನಃ ಉದಕಮಂಡಲಕ್ಕೆ ಚಿತ್ತೈಸಿದರು.

ದಿವಾನರು ಈ ತಾ|| ೧೨ ರಲ್ಲಿ ರಾಜಧಾನಿಗೆ ಬಂದು ಈ ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಕಮಿಷನರುಗಳನ್ನೆಲ್ಲಾ ಬರಮಾಡಿಕೊಂಡು ಒಂದು ಸಭೆಯನ್ನು ನಡೆಸಿ ಆಫೀಸ್ ರಿಕಾರ್ಡುಗಳನ್ನಿಡುವ ಕ್ರಮವನ್ನು ಸಂಪಡಿಸುವುದನ್ನು ಕುರಿತು ಆಲೋಚಿಸುವುದಾಗಿ ತಿಳಿಯುತ್ತೇವೆ.

೧ ನೆಯ ಕೌನ್ಸಿಲರ್ ಮ|| ಎಚ್. ವಿ. ನಂಜುಂಡಯ್ಯನವರು ಹುಣಸೂರು, ಹೆಗ್ಗಡದೇವನಕೋಟೆ ಈ ಪ್ರಾಂತಗಳಲ್ಲಿ ಸಂಚರಿಸಿಕೊಂಡು ಬುಧವಾರ ರಾಜಧಾನಿಗೆ ಬಂದು ಇಲ್ಲಿಯ ಪಬ್ಲಿಕ್ ಲೈಬ್ರರಿಯನ್ನು ಪರಾಮರ್ಶಿಸಿಕೊಂಡು ಗುರುವಾರ ಬೆಂಗಳೂರಿಗೆ ಪ್ರಯಾಣಮಾಡಿದರು.

ದನಗಳ ಕಾಲು ಬಾಯಿಜ್ವರಗಳನ್ನಡಗಿಸಲು ತಕ್ಕ ಪ್ರಯತ್ನವನ್ನು ಮಾಡುವ ಬಗೆಗೆ ಪಶುವೈದ್ಯಶಾಖೆಯಲ್ಲಿ ತಿಂಗಳೊಂದಕ್ಕೆ ೩೦ರೂ ಸಂಬಳದ ಮೇಲೆ ೪ ಅಸಿಸ್ಟೆಂಟ್ ವೆಟರ್ನರಿ ಇನ್ಸ್‌ಪೆಕ್ಟರುಗಳೂ, ೧೫ ರೂ. ಸಂಬಳದ ಮೇಲೆ ೪ ಸಾಲತ್ರಿಗಳೂ ೨ ವರ್ಷಗಳ ಪರ್ಯಂತ ನಿಯಮಿಸಲ್ಪಟ್ಟಿರುವರು. ಇವರುಗಳಲ್ಲಿ ಒಬ್ಬ ಇನ್ಸ್‌ಪೆಕ್ಟರೂ, ಒಬ್ಬ ಸಾಲಂತ್ರಿಯೂ, ಬೆಂಗಳೂರು, ಮೈಸೂರು, ಶಿವಮಗ್ಗ, ಮತ್ತೂ ಚಿಕ್ಕಮಗಳೂರ ಪಶುವೈದ್ಯಶಾಲೆಗಳಲ್ಲಿ ಕೆಲಸಮಾಡತಕ್ಕುದಾಗಿದೆ.

ಇನಾಂಗ್ರಾಮಗಳಲ್ಲಿ ರೈತರು ತಮ್ಮ ಹಿಡುವಳಿ ಜಮೀನಿನಲ್ಲಿರುವ ಗಂಧದ ಮರಗಳನ್ನು ಕಾಪಾಡಿಕೊಂಡು ಬರುವುದಕ್ಕಾಗಿ ಪರಿಹಾರದ್ರವ್ಯವು ಸರ್ಕಾರದಿಂದ ಹಿಡುವಳಿದಾರರಿಗೆ ಸಲ್ಲತಕ್ಕುದೆಂದು ಇನಾಂದಾರರು ಬರೆದುಕೊಟ್ಟಹೊರತು ಇನಾಂಗ್ರಾಮವು ಸರ್ಕಾರದ ಮೇಲ್ವಿಚಾರಣೆಯಲ್ಲಿರುವುದರ ಮಾತ್ರದಿಂದಲೇ ಪರಿಹಾರವು ದೊರೆಯಲಾರದು, ಮತ್ತೂ ಫಾರೆಸ್ಟ್ ಶಾಖೆಯವರು ಹಿಡುವಳಿದಾರರಿಗೆ ಯಾವಕಾರಣದಿಂದಲೂ ಪರಿಹಾರದ್ರವ್ಯವನ್ನು ಕೊಡಕೂಡದೆಂದು ಸರ್ಕಾರದಪ್ಪಣೆಯಾಗಿದೆ.

ಕಳೆದ ತಾ|| ೩೦ ರಲ್ಲಿ ರಾಜಧಾನಿಯ ಟೌನ್‌ಹಾಲಿನಲ್ಲಿ ಕೊಡಗನೂರು ಸ್ಟೇಷನ್‌ಮಾಸ್ಟರ್ ಮ|| ಜಯರಾಮಾಚಾರ್ಯ ಕೊಪ್ಪಳ ಇವರು ಮ|| ಎಂ. ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಫೈಸಾಫಂಡನ್ನು ಏರ್ಪಡಿಸುವುದರಾವಶ್ಯಕತೆಯ ಬಗೆಗೆ ಒಂದುಪನ್ಯಾಸವನ್ನು ಮಾಡಿದರು. ಶ್ರೀಮಂತ ಮೋತಿಖಾನೆ ವರ್ಧಮಾನಯ್ಯನವರು, ಮ|| ಎ ವಿ. ವರದಾಚಾರರು ಮೊದಲಾದ ದೊಡ್ಡ ಮನುಷ್ಯರು ಬಂದಿದ್ದರು. ಅಧ್ಯಕ್ಷರು ಈ ಉಪನ್ಯಾಸಕರ ಅಭಿಪ್ರಾಯವನ್ನು ಅನುಮೋದಿಸಿ ಮಾತನಾಡಿದಮೇಲೆ ರಾಜಧಾನಿಯಲ್ಲಿ ಈ ಫಂಡಿನ ಹೆಡ್ಡಾಫೀಸಿರಬೇಕೆಂದು ನಿರ್ಧರವಾದುದಾಗಿ ಒಬ್ಬ ಸಭಿಕರು ತಿಳಿಸಿರುತ್ತಾರೆ.

ಈಗ್ಗೆ ೩೦ ವರ್ಷಗಳ ಹಿಂದೆ ಮರಿಮಲ್ಲಪ್ಪನವರ ಸ್ಕೂಲಿನಲ್ಲಿ ಸಹೋಪಾಧ್ಯಾಯರಾಗಿದ್ದು ಈಗ ಅರಮನೆಯಲ್ಲಿ ಶಿರಸ್ತೇದಾರರಾಗಿರುವ ಮ|| ಎಂ. ವಿ ಸುಬ್ಬರಾಯರು ಕನಡ ಸ್ಕೂಲುಗಳಲ್ಲೋದುವ ವಿದ್ಯಾರ್ಥಿಗಳಿಗೆ ಅನುಕೂಲವಾಗಿರುವಂತೆ ಹಿಂದೂದೇಶದ ಸಂಕ್ಷಿಪ್ತಚರಿತ್ರೆಯನ್ನು ರಚಿಸಿ, ಅದರ ಪ್ರತಿಯೊಂದನ್ನು ನಮ್ಮಲ್ಲಿಗೆ ಕಳುಹಿಸಿರುತ್ತಾರೆ. ನಾವು ಅದನ್ನು ವಿಶ್ವಾಸದಿಂದ ಸ್ವೀಕರಿಸಿರುತ್ತೇವೆ. ಇದು ಪರೀಕ್ಷೆಗಳಿಗೋದತಕ್ಕ ವಿದ್ಯಾರ್ಥಿಗಳಿಗೆ ಬಹಳ ಸಹಕಾರಿಯಾಗಿರುವುದರಿಂದ ವಿದ್ಯಾರ್ಥಿಗಳು ಇದನ್ನು ಕೊಂಡು ಗ್ರಂಥಕರ್ತರ ಶ್ರಮೆಯನ್ನು ಸಾರ್ಥಕ ಪಡಿಸುವರೆಂದು ನಿರೀಕ್ಷಿಸುತ್ತೇವೆ. ಇದರ ಬೆಲೆ ೪ ಆಣೆ.

ಬೆಂಗಳೂರ ಮ್ಯುನಿಸಿಪಾಲಿಟಿಯವರು ಕಬ್ಬನ್ ಪಾರ್ಕಿನಲ್ಲೇರ್ಪಡಿಸಿರುವ ಪ್ರದರ್ಶನೋತ್ಸವವು ದಿವಾನರಿಂದ ಕಳೆದ ತಾ|| ೩೧ ರಲ್ಲಿ ಆರಂಭಿಸಲ್ಪಟ್ಟಿತು. ಆ ಕಾಲದಲ್ಲಿ ಮ್ಯುನಿಸಿಪಲ್ ಆ|| ಪ್ರೆಸಿಡೆಂಟರು ೧ ವಿಜ್ಞಾಪನಪತ್ರಿಕೆಯನ್ನೋದಿ ದಿವಾನರಿಗೊಪ್ಪಿಸಲು ಅವರು ಈ ವಿಧವಾದ ಪ್ರದರ್ಶನಗಳಿಂದಾಗತಕ್ಕ ಪ್ರಯೋಜನಗಳನ್ನು ಕುರಿತು ಕಾಲೋಚಿತವಾದುತ್ತರವನ್ನು ಕೊಟ್ಟು ಅನಂತರ ಫಲಪುಷ್ಪಗಳ, ನಾಯಿ, ಕೋಳಿ, ಬಾತು ಮೊದಲಾದವುಗಳ ಪ್ರದರ್ಶನವನ್ನೂ ವಿನೋದಕೂಟಗಳನ್ನೂ ಪರಾಮರ್ಶಿಸಿ ದಯಮಾಡಿದಮೇಲೆ ಇತರಜನರು ಬಿಡಲ್ಪಟ್ಟರು. ಇಲ್ಲಿ ಕುಸ್ತಿಗಳು, ದೊಂಬರಾಟ, ಹಾವಾಡಿಗರ ಗಾರುಡಿವಿದ್ಯೆ, ಲಂಬಾಣಿಗರ ಮತ್ತೂ ಒಡ್ಡರ ಕುಣಿತ, ಬಯಾಸ್ಕೋಪು, ಹರಿಕಥೆ ಇತ್ಯಾದಿಗಳು ಏರ್ಪಡಿಸಲ್ಪಟ್ಟಿರುವುವು.

ದಿವಾನರು ಕಳೆದ ತಾ|| ೨೭ ರಲ್ಲಿ ಕ್ಲೋಸ್‌ಪೇಟೆಯಿಂದ ಕಾನಕಾನಹಳ್ಳಿ ತಾಲ್ಲೂಕು ಪ್ರಾಂತ ಹೊರಡುವಾಗ್ಗೆ ಮಧ್ಯಮಾರ್ಗದಲ್ಲಿ ಶ್ರೀ ರೇವಣಸಿದ್ಧೇಶ್ವರಸ್ವಾಮಿಯ ಬೆಟ್ಟಕ್ಕೆ ಹೋಗುವ ಮಾರ್ಗವು ಕೂಡುವಸ್ಥಳದಲ್ಲಿ ಬೆಟ್ಟದ ಪಾರುಪತ್ತೇಗಾರ್ ಮ|| ರುದ್ರಪ್ಪನವರು, ತಾಲ್ಲೋಕು ಬೋರ್ಡು ಮೆಂಬರುಗಳು, ಗ್ರಾಮಾಭಿವೃದ್ಧಿ ಸಂಘದ ಮೆಂಬರುಗಳು, ಪಟೇಲ್ ಶಾನುಭೋಗರು, ಮುಖಂಡರೈತರು, ದೇವಸ್ಥಾನದ ಅರ್ಚಕರು ಮೊದಲಾದವರೊಡನೆ ಮನೋಹರವಾಗಲಂಕರಿಸಿದ್ದ ಚಪ್ಪರದಬಳಿ ನಿರೀಕ್ಷಿಸಿಕೊಂಡಿದ್ದು ದಿವಾನರು ದಯಮಾಡುತಲೆ ದೇವರ ಪ್ರಸಾದವನ್ನು ಅರ್ಚಕರಿಂದ ಕೊಡಿಸಿ ಫಲಪುಷ್ಪಹಾರಗಳನ್ನೊಪ್ಪಿಸಿ ಪ್ರತಿಯೊಬ್ಬ ಮೆಂಬರುಗಳ ಪರಿಚಯವನ್ನು ಹೇಳಿ ದೇವಸ್ಥಾನಕ್ಕೆ ಚಿತ್ತೈಸಿ ದೇವರ ದರ್ಶನವನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳಲು ದಿವಾನರು ಸದ್ಯದಲ್ಲಿ ವಿರಾಮವಿಲ್ಲವಾದುದರಿಂದ ಮತ್ತೊಂದುವೇಳೆ ಬರುವುದಾಗಿ ಅಪ್ಪಣೆ ಕೊಡಿಸಿದುದಲ್ಲದೆ ಪ್ರಜೆಗಳ ಐಕಮತ್ಯದಿಂದಾಗುವ ಪ್ರಯೋಜನವನ್ನು ಒಂದುಮಟ್ಟಿಗೆ ತಿಳಿಸಿ ದಯಮಾಡಿಸಿದರು. ಎಂದು ಒಬ್ಬ ಪ್ರೇಕ್ಷಕರು ಬರೆದಿರುತ್ತಾರೆ.

ಜಪಾನರು ಜರ್ಮನರಿಗೆ ಹಾಕಿಕೊಟ್ಟ ಮೇಲ್ಪಂಕ್ತಿ.

ಜರ್ಮನರು ಪಶ್ಚಿಮರಣರಂಗದಲ್ಲಿ ಅಂದರೆ ಬೆಲ್ಜಿಯಮ್ಮಿನಲ್ಲಿ ಬೆಲ್ಜಿಯನರನ್ನು ನಡಿಸುತ್ತಿರುವ ರೀತಿಯನ್ನೂ ಜಪಾನರು ತಮ್ಮ ದೇಶದಲ್ಲಿ ಮತ್ತೂ ತಿಂಗ್ಸ್ಟಾವ್ರೋದಲ್ಲಿ ಜರ್ಮನರನ್ನು ನಡಿಸಿದ ರೀತಿಯನ್ನೂ ಹೋಲಿಸಿ „ ಡೈಲಿ ನ್ಯೂಸ್ " ಎಂಬ ಪತ್ರಿಕೆಗೆ ಒಬ್ಬ ಬಾತ್ಮಿದಾರರು ಬರೆದ ಲೇಖನದಿಂದ ಜಪಾನರ ಸದ್ಗುಣಗಳು ತೋರಿ ಬರುವವು. ಜರ್ಮನರು ಯುದ್ಧ ಪ್ರಾರಂಭಿಸಿದಂದಿನಿಂದ ಬೆಲ್ಜಿಯನರನ್ನು ನಡಿಸುತ್ತಿರುವ ಅಮಾನುಷರೀತಿಯು ವಾಚಕರೆಲ್ಲರಿಗೆ ಗೊತ್ತೇ ಇರುವುದರಿಂದ ಇಲ್ಲಿ ಪ್ರತ್ಯೇಕ ಪುನಃ ಅದನ್ನು ಬರೆಯುವುದು ಅವಶ್ಯವಿರದು.

ಜಪಾನಿಯು ಜರ್ಮನಿಗೆ ತನ್ನ ಕಡೆಯ ಪತ್ರವನ್ನು ಕಳುಹಿಸಿದ ಕೂಡಲೇ ಜಪಾನ್ ವಿದೇಶ ಮಂತ್ರಿಯಾದ ಬೆರನ್ ಕಾಟೋರವರು ಬಹಿರಂಗವಾಗಿ ಜಪಾನಿನಲ್ಲಿ ವ್ಯಾಪಾರಮಾಡುತ್ತಿದ್ದ ಜರ್ಮನರನ್ನು ತನ್ನಲ್ಲಿಗೆ ಕರೆಯಿಸಿ ಹಿಂದಿನಂತೆಯೇ ತಮ್ಮ ಕೆಲಸಗಳನ್ನು ಸಾಗಿಸಿಕೊಂಡಿರಬಹುದೆಂತ ತಿಳಿಸಿದರು. ಜರ್ಮನ್ ಪ್ರಜೆಗಳಿಗೆ ಶತ್ರುಭಾವವನ್ನು ತೋರಿಸಕೂಡದೆಂದು ಅದೇ ಸಮಯ ಪ್ರತಿ ಒಬ್ಬ ಜಪಾನನಿಗೂ ತಿಳಿಸಿದರು. ಮಂತ್ರಿ ಒಜಾಕಿಯವರು ಜಪಾನಿನಲ್ಲಿರುವ ಜರ್ಮನರ ದೇಹಕ್ಕಾಗಲೀ ಆಸ್ತಿಗಾಗಲೀ ಯಾವುದೊಂದು ನಷ್ಟ ಕಷ್ಟವೂ ಬಾರದಂತೆ ಪೂರ್ಣ ಜಾಗ್ರತೆ ತೆಗೆದುಕೊಳ್ಳಲ್ಪಡುವುದೆಂದು ತಿಳಿಸಿದರು. ಪೋಲೀಸ್ ಮೇಲಧಿಕಾರಿಗಳು ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿ ಜರ್ಮನರು ಏನೊಂದು ತಡೆಬಡೆಯಿಲ್ಲದೆ ನಡೆಯುವಂತೆ ಏರ್ಪಾಡು ಮಾಡಿದರು. ಪ್ರಧಾನಮಂತ್ರಿಯಾಗಿರುವ ಓಕುಮಾರವರ ಸಹ ಪ್ರತಿಯೊಂದು ಸಂಸ್ಥಾನದ ಗವರ್ನರರಿಗೆ ಸಂದೇಶವನ್ನು ಕಳುಹಿಸಿ ಜರ್ಮನ ಪ್ರಜೆಗಳು ಸುರಕ್ಷಿತವಾಗಿರುವಂತೆ ನೋಡಿಕೊಳ್ಳಬೇಕೆಂದು ಅಪ್ಪಣೆಮಾಡಿದರು. ಜಪಾನನ್ನು ಬಿಟ್ಟುಹೋಗಲು ಮನಸ್ಸುಳ್ಳವರು ಹೋಗಬಹುದೆಂದೂ ಜಪಾನಿಗೆ ಬರಲಿಚ್ಛಿಸುವವರು ಬರಬಹುದೆಂದೂ ಆಜ್ಞಾ ಮಾಡಿದರು. ಮಿಲಿಟರಿಯ ಮತ್ತೂ ನೌಕಾವಳಿಯ ಸಂಬಂಧವಾಗಿ ಕೆಲವು ಜರ್ಮನರಿಗೆ ಮಾತ್ರ ಸ್ವಾತಂತ್ರ್ಯವು ಕೊಡತಕ್ಕದಾಗಲಿಲ್ಲ.

ಕಾನೂನಿಗೆ ವಿರೋಧವಾಗಿ ನಡೆಯದ ಪ್ರತಿಒಬ್ಬ ಜರ್ಮನನೂ ಸ್ವಾತಂತ್ರನಾಗಿರುವಂತೆ ಸರಕಾರದವರು ಆದಷ್ಟು ಪ್ರಯತ್ನ ತೆಗೆದುಕೊಳ್ಳಬೇಕು ಎಂಬದಾಗಿ ಪ್ರಧಾನ ಮಂತ್ರಿಯವರು ಕಟ್ಟುಮಾಡಿ ಪ್ರತಿ ಒಬ್ಬ ಜಪಾನನೂ ಈ ಆಜ್ಞೆಯನ್ನು ಮನದಲ್ಲಿಟ್ಟು ಜಪಾನಿನಲ್ಲಿರುವ ಜರ್ಮನರು ಸ್ವತಂತ್ರರಾಗಿ ನಡೆಯುವಂತೆ ನೋಡಿಕೊಳ್ಳಬೇಕೆಂದು ಜನಸಮುದಾಯವನ್ನು ಕೇಳಿಕೊಂಡರು.

ವಿದ್ಯಾಖಾತೆಯ ಮಂತ್ರಿಯವರೂ ಕಾಲೇಜುಗಳ ಅಧಿಕಾರಿಗಳಿಗೆ ಒಂದು ಸರ್ಕಿಲಾರನ್ನು ಕಳುಹಿಸಿ ಜರ್ಮನರಿಗೆ ವಿರೋಧವಾಗಿ ನಡೆಯದ ಹಾಗೆ ವಿದ್ಯಾರ್ಥಿಗಳನ್ನು ಎಚ್ಚರಿಸಬೇಕೆಂದು ಆಜ್ಞಾಪಿಸಿದರು.

ಆಯಾ ಇಲಾಖೆಯ ಮೇಲಧಿಕಾರಿಗಳು ಕಳುಹಿಸಿದ ಆಜ್ಞೆಗಳನ್ನು ನೋಡುವಾಗ ಬೆರನ್ ಕಾಟೋರವರು ಪ್ರಾರಂಭದಲ್ಲಿ ಜರ್ಮನರಿಗೆ ಕೊಟ್ಟ ಮಾತು ಬಿದ್ದುಹೋಗಲಿಲ್ಲ ಎಂಬುದು ತಿಳಿದುಬರುತ್ತದೆ. ಜಪಾನಿನಲ್ಲಿರುವ ಜರ್ಮನರು ಇಂಗ್ಲಾಂಡಿನಲ್ಲಿರುವ ಜರ್ಮನರಂತಿರದೆ ಆಯಾ ರಾಷ್ಟ್ರೀಯರುಗಳು ಒಟ್ಟುಕೂಡಿ ಉಂಟಾದ ಜರ್ಮನರಾಗಿರುವರು. ಜಪಾನ್ ಅಧಿಕಾರಿಗಳಿಂದ ಈ ಜರ್ಮನರಿಗೆ ಕೊಡತಕ್ಕದಾದ ಅಭಯವಚನಗಳಲ್ಲಿ ಪ್ರತಿಯೊಂದೂ ಈಡೇರಿದವು. ಆದರೆ ಯೋಕೊಹಾಮದಲ್ಲಿ ಇಂಗ್ಲೀಷ್ ಭಾಷಾ ವರ್ತಮಾನಪತ್ರಿಕೆಯ ಸಂಪಾದಕನಾದ ಒಬ್ಬ ಜರ್ಮನನು ತನ್ನ ಪತ್ರಿಕೆಯಲ್ಲಿ ಜಪಾನರಿಗೆ ವಿರೋಧವಾದ ಲೇಖನವನ್ನು ಬರೆದುದರಿಂದ ಅವನನ್ನು ಮಾತ್ರ ನಿರ್ವಾಹವಿಲ್ಲದೆ ದೇಶದಿಂದ ಹೊರಡಿಸಬೇಕಾಯಿತು.

ಜಪಾನಿನ ಟೋಕಿಯೋ ಮತ್ತೂ ಬಂದರುಗಳಲ್ಲಿರುವ ಜರ್ಮನ ಕಂಪೆನಿಗಳು ಹಿಂದಿನಂತೆಯೇ ಸರಾಗವಾಗಿ ವ್ಯಾಪಾರ ನಡಿಸುತ್ತಲಿವೆ. ಕೋರ್ಟು ಕಚೇರಿಗಳಲ್ಲಿಯೂ ಜರ್ಮನರ ದಾವೆಗಳು ಇತ್ಯರ್ಥವಾಗುತ್ತಿವೆ. ಈಚೆಗೆ ಒಂದು ಜರ್ಮನ್ ಕಂಪೆನಿಯು ಜಪಾನ್ ಕಂಪೆನಿಯಮೇಲೆ ತಂದ ದಾವೆಯು ಜರ್ಮನ್ ಕಂಪೆನಿಗೆ ಗುಣವಾಗಿಯೇ ತೀರಿತು. ಬ್ಯಾಂಕಿನಲ್ಲಿ ಕೂಡ ಜರ್ಮನರ ಲೇವಾದೇವಿ ನಡೆಯುತ್ತಿದೆ.

ಸರ್ಕಾರಿ ಕೆಲಸದಲ್ಲಿರುವ ಜರ್ಮನರೂ, ಜರ್ಮನ್ ಪ್ರೊಫೆಸರರೂ, ಉಪಾಧ್ಯಾಯರೂ, ಹಿಂದಿನಂತೆಯೇ ಕೆಲಸದಲ್ಲಿರುವರು. ಆಯಾ ಇಲಾಖೆಯ, ಕಾಲೇಜುಗಳ ಅಧಿಕಾರಿಗಳೂ, ವಿದ್ಯಾರ್ಥಿಗಳೂ, ಉದ್ಯೋಗಿಗಳೂ ಸಹ ಹಿಂದಿನಂತೆಯೇ ಈ ಜರ್ಮನರನ್ನು ಮಾನಿಸುತ್ತಿರುವರು. ಪೋಲೀಸಿನವರಿಗೆ ತಮ್ಮನ್ನು ತೋರಿಸಿಕೊಳ್ಳುವ, ಮನೆಯನ್ನೂ ಊರನ್ನೂ ಬಿಟ್ಟುಹೋಗಲು ಅಪ್ಪಣೆಕೇಳುವ ಅಗತ್ಯವೇ ಈ ಜರ್ಮನರಿಗಿರದು.

ಯುದ್ಧದಲ್ಲಿ ಸೆರೆಯಾಗಿ ಹಿಡಿಯಲ್ಪಟ್ಟ ಜರ್ಮನರನ್ನು ಕೂಡ ಜಪಾನರು ಬಹು ಮನ್ನಣೆಯಿಂದ ಕಾಣುತ್ತಿರುವರು. ಬುದ್ಧ ಮತಸ್ಥರ ದೇವಸ್ಥಾನದಲ್ಲಿ ಈವರಿಗೆ ಸ್ಥಳವನ್ನು ಒದಗಿಸಿಕೊಟ್ಟಿರುವರು. ಆಫೀಸರರಿಗೆ ಹೊರಗೆ ಹೋಗಿ ತಿರುಗಾಡಲು ಅಪ್ಪಣೆಇದೆ. ಇವರು ಕಾವಲು ಇಲ್ಲದೆಯೇ ತಮ್ಮ ಸ್ನೇಹಿತರನ್ನು ನೋಡಬಹುದಾಗಿದೆ. ವಿದೇಶಿ ಆಹಾರಗಳು ಇವರಿಗೆ ಒದಗಿಸಲ್ಪಡುತ್ತಿವೆ.

ತಿಂಗ್ಸ್ಟಾವ್ರೋವು ಜಪಾನರ ವಶವಾದಾಗ ಅಲ್ಲಿಯ ಜರ್ಮನ್ ಗವರ್ನರರಾದ ಮೆಯರ್ ವಾಲ್ಡೆಕರ ಮತ್ತೂ ಅವರ ಪರಿವಾರದ ಖಡ್ಗಗಳನ್ನು ಜಪಾನರು ತೆಗೆದುಕೊಳ್ಳಲಿಲ್ಲ. ಜಪಾನ್ ಸೇನೆಯು ತಿಂಗ್ಸ್ಟಾವ್ರೋಕ್ಕೆ ಪ್ರಥಮ ಸಾರಿ ಪ್ರವೇಶಿಸುವಾಗ ಅದರ ಗವರ್ನರರು ತಾವು ವಶವಾಗಿದ್ದೇವೆಂಬದಾಗಿ ತಿಳಿಸುವ ಒಂದು ವಿಜ್ಞಾಪನಾ ಪತ್ರಿಕೆಯನ್ನು ಓದಲು ತಯಾರಿಸಿದ್ದರು. ಆದರೆ ಜಪಾನ್ ಜನರಲ್ ಕಾಮಿಯೋರವರು ಇದು ಅನಾವಶ್ಯವಾದುದರಿಂದ ಬೇಡವೆಂದು ಹೇಳಿದರು. ಜರ್ಮನ್ ಆಸ್ಪತ್ರೆಗೆ ಜಪಾನರ ಒಂದು ಗುಂಡು ಬಿದ್ದಾಗ ಜರ್ಮನರು ಜಪಾನ್ ನೌಕಾವಳಿಯ ಅಡ್ಮಿರಲರಿಗೆ ಇದನ್ನು ತಿಳಿಸಿದಾಕ್ಷಣ ಜಪಾನರು ಗುಂಡು ಹೊಡೆಯುವುದನ್ನು ನಿಲ್ಲಿಸಿದರು.

ತಿಂಗ್ಸ್ಟಾವ್ರೋವು ಜಪಾನರ ಕೈವಶವಾದ ಸಂತೋಷಸೂಚಕ ಉತ್ಸವವು ಜಪಾನಿನಲ್ಲಿ ನಡೆದಾಗ ಜರ್ಮನರು ವಾಸವಾಗಿದ್ದ ದಾರಿಗಳಲ್ಲಿ ಜಪಾನರು ದೀಪಾವಳಿಯ ಮೆರವಣಿಗೆಯನ್ನು ಮಾಡಿದರೆ ಜರ್ಮನರ ಮನಸ್ಸಿಗೆ ನೋವಾದೀತೆಂದುಭಾವಿಸಿ ಅಂಥ ಸ್ಥಳಗಳಲ್ಲಿ ಮೆರವಣಿಗೆ ಮಾಡಲಿಲ್ಲ.

ಜರ್ಮನಿಯು ಬೆಲ್ಜಿಯಮ್ಮಿನಲ್ಲಿ ನಡಿಸುತ್ತಿರುವ ಕ್ರೂರಕೃತ್ಯಗಳು ಜಪಾನ್ ಸರಕಾರಕ್ಕೂ ಜನರಿಗೂ ಚೆನ್ನಾಗಿ ಗೊತ್ತಿದ್ದರೂ, ಮುಯ್ಯಿಗೆ ಮುಯ್ಯಿ ಕೊಡುವ ಆಲೋಚನೆಯು ಜಪಾನರಲ್ಲಿ ಇಲ್ಲದೆ ಇದ್ದುದರಿಂದ ಜಪಾನರುಸರ್ವಜನಾಂಗಗಳ ಹೊಗಳಿಕೆಗೆ ಪಾತ್ರರಾಗಿರುವರು. ಸ್ವ

ಹಸುಗೂಸುಗಳ ಅಕಾಲಮರಣ.

ಹಿಂದೂಸ್ಥಾನದಲ್ಲಿ ಮೃತರಾಗುವ ಹಸುಗೂಸುಗಳ ಸಂಖ್ಯೆಯು ದಿನೇದಿನೇ ಹೆಚ್ಚುತ್ತಲಿರುವುದರಿಂದ ಹಿಂದೂಸ್ಥಾನದ ಮುಂದಾಳುಗಳೂ, ಸರಕಾರದವರೂ ಹಸುಗೂಸುಗಳ ಮರಣ ಸಂಖ್ಯೆಯು ಹೆಚ್ಚಾಗಲು ಕಾರಣವೇನೆಂಬುದನ್ನು ತಿಳಿದುಕೊಳ್ಳುವ ವಿಷಯಕ್ಕೆ ಈಗಲೀಗ ಹೆಚ್ಚಿನ ಗಮನ ಕೊಡುತ್ತಿದ್ದಾರೆ. ಹಿಂದೂಸ್ಥಾನದಲ್ಲಿ ಮೃತರಾಗುವ ಶಿಶುಗಳಲ್ಲಿ ಹೆಚ್ಚಿನವು ಒಂದು ತಿಂಗಳೊಳಗಾಗಿಯೇ ಮೃತಪಡುವವು. ಅದಲ್ಲದೆ ಈ ಮರಣ ಸಂಖ್ಯೆಯನ್ನು ನೋಡುವುದಾದರೆ ಹೆಮ್ಮಕ್ಕಳಿಗಿಂತಲೂ ಮೃತರಾಗುವ ಗಂಡುಮಕ್ಕಳ ಸಂಖ್ಯೆಯೇ ಹೆಚ್ಚಾಗಿರುವದು. ಕಲ್ಕತ್ತೆಯಲ್ಲಿ ಒಂದುವರ್ಷ ವಯಸ್ಸಿನೊಳಗೆ ಮೃತಪಟ್ಟ ೭೨೦೦ ಮಕ್ಕಳಲ್ಲಿ ಶೇಕಡಾ ೫೦ ರಂತೆ ಕಾಲತಪ್ಪಿ ಜನಿಸಿದುದರಿಂದಲೂ, ೧೦೦೦ ಮಕ್ಕಳು ಧನುರ್ವಾತ ಮತ್ತು ಮಕ್ಕಳ ಚೇಷ್ಟೆಯಿಂದಲೂ ಮೃತವಾಗಿರುವುದು ಕಲ್ಕತ್ತೆಯಲ್ಲಿ ಹೆಲ್ತ್ ಆಫೀಸರರಾಗಿದ್ದ ಡಾಕ್ಟರ್ ಪಿಯರ್ಸನ್‌ರವರು ಹೇಳುವರು. ಇಂಥ ಬಾಲಮೃತ್ಯುಗೆ ಹೆತ್ತವರ ಅನಾರೋಗ್ಯವೂ ಮಗುವಿನ ಜನನಕಾಲದಲ್ಲಿ ಹೆತ್ತವರು ವಾಸಿಸುವ ಅನಾರೋಗ್ಯ ಸ್ಥಿತಿಯ ಮನೆಗಳೂ ಕಾರಣವಾಗಿರುವವು. ಹೆತ್ತವರ ಅನಾರೋಗ್ಯಕ್ಕೆ ಬಾಲವಿವಾಹವೇ ಕಾರಣವಾಗಿದೆ. ಮುಖ್ಯವಾಗಿ ಹೆಂಗಸರಿಗೆ ಬಾಲ್ಯದಲ್ಲಿ ವಿವಾಹ ಮಾಡುವುದರಿಂದ ಅವರ ಆರೋಗ್ಯವು ಕೆಟ್ಟುಹೋಗುವದು. ಇವೂ ಇತರ ಸಾಮಾಜಿಕ ಪದ್ಧತಿಗಳೂ ಮಕ್ಕಳ ಮರಣ ಸಂಖ್ಯೆಯು ಹೆಚ್ಚಾಗುವುದಕ್ಕೆ ಕಾರಣವಾಗಿರುವುದರಿಂದ ಈ ಮರಣ ಸಂಖ್ಯೆಯನ್ನು ತಗ್ಗಿಸುವುದು ಕಷ್ಟಸಾಧ್ಯವಾಗಿದೆ. ವಿದ್ಯಾಭ್ಯಾಸವನ್ನು ಜನಸಾಮಾನ್ಯರೊಳಗೆ ಹರಡಿಸುವುದರಿಂದ ಮಾತ್ರ ಈ ಮರಣಸಂಖ್ಯೆಗೆ ತಡೆಕಟ್ಟಬಹುದಾಗಿದೆ. ಹಿಂದೂಸ್ಥಾನದಲ್ಲಿ ಮಲಗುವ ಕೋಣೆಗಳು ಕಿಡಿಕಿ ಬಾಗಲುಗಳಿಲ್ಲದೆ ಗಾಳಿ ಸಂಚಾರಕ್ಕೆ ಎಡೆ ಇಲ್ಲದಂತಿರುವವು. ಮನೆಯ ಮೂಲೆಯಲ್ಲಿರುವ ಕಿಡಿಕಿಗಳಿಲ್ಲದ ಕೋಣೆಗಳನ್ನು ಮಲಗಲಿಕ್ಕೆ ಉಪಯೋಗಿಸುವ ವಾಡಿಕೆಯು ಹೆಚ್ಚಾಗಿರುವದು. ಕತ್ತಲೆ ಕವಿದಿರುವ, ಗಾಳಿ ಸಂಚಾರಕ್ಕೆ ಎಡೆಯಿಲ್ಲದ ಸಣ್ಣ ಕೋಣೆಯನ್ನು ಆರಿಸುವ, ಕಿಡಿಕಿಗಳಿದ್ದರೂ ತಾಯಿಗೆ ಯಾ ಮಗುವಿಗೆ ಶೀತ ತಗಲುತ್ತದೆಂಬ ಭಾವನೆಯಿಂದ ಮುಚ್ಚಿಕೊಳ್ಳುವ ಸೂತ್ರವನ್ನು „ ಅಪ್ಪನೆಟ್ಟ ಗೋಣಿಮರ " ವೆಂಬಂತೆ ಮಕ್ಕಳ ತಾಯಂದಿರು ಭಾವಿಸಿರುವರು. ಆದರೆ ಇಂಥ ಭಾವನೆಯು ಈಗಲೀಗ ಕಮ್ಮಿಯಾಗುತ್ತಿದೆಯೆಂದು ಸಂತೋಷದಿಂದ ಹೇಳಬಹುದಾದರೂ ತಾಯಿಯು ಮಲಗುವ ಹಾಸಿಗೆ ಚಾಪೆ ಇತ್ಯಾದಿಗಳ ಸ್ಥಿತಿಯು ಮತ್ತಷ್ಟು ಹೇಯವಾಗಿರುವುದು. ಚಾಕಿಯಮೇಲೆ ತುಂಬಾ ಮೈಲಿಗೆಯಾದ ವಸ್ತ್ರಗಳನ್ನು ಹಾಸುವರು. ಹರಿದುಹೋದ, ಕುಂಬಾದ ಚಾಪೆಯಲ್ಲಿ ಮಲಗುವರು. ಮಲಗುವಂಥ ಚಾಪೆ ಇತ್ಯಾದಿಗಳು ನಿರ್ಮಲವಾದುವಾಗಿರಬೇಕೆಂಬ ಭಾವನೆಯೇ ತಾಯಂದಿರಲ್ಲಿ ಇರದು. ಬಾಣಂತಿಯಾಗುವ ಕಾಲವು ಇತರ ಅಂಟುರೋಗಗಳ ಸೋಂಕಿಗೆ ವಿಶೇಷ ಎಡೆ ಇರುವಂಥಾ ಕಾಲವಾಗಿರುವುದರಿಂದ ಇಂಥ ಸಮಯದಲ್ಲಿ ತಾಯಂದಿರು ಗಾಳಿ ಸಂಚಾರವಿಲ್ಲದ ಕೋಣೆಗಳಲ್ಲಿ ಅಶುದ್ಧವಾದ ಚಾಪೆಗಳಲ್ಲಿ ಮಲಗುವುದರಿಂದ ಸಣ್ಣ ಪುಟ್ಟ ಕೂಸುಗಳಿಗೆ ಒಡನೆ ಅಂಟುರೋಗಗಳು ಸೋಂಕುವವು.

ಶಿಶುಗಳ ಮರಣಕ್ಕೆ ಇನ್ನೂ ಅನೇಕ ಕಾರಣಗಳಿರುವವು. ಆದರೆ ಬಂಗಾಳದ ಖಾನೇಷುಮಾರಿ ಸುಪರಿಂಟೆಂಡೆಂಟರಾಗಿದ್ದ ಮಿ॥ ಎಲ್. ಎಸ್. ಎಸ್. ಮೊಲ್ಲಿಯವರು ಬಾಲ್ಯವಿವಾಹ ಪದ್ಧತಿ ಅಥವಾ ಹೆತ್ತವರ ಅಚೇತನವೂ, ಮುಖ್ಯವಾಗಿ ಮಲೇರಿಯಾಜ್ವರದ ಸೋಂಕು ಇರುವ ಪ್ರಾಂತ್ಯದ ಹೆತ್ತವರ ಅಶಕ್ತಿಯೂ ಮಕ್ಕಳ ಮರಣ ಸಂಖ್ಯೆಯು ಹೆಚ್ಚಲು ಕಾರಣವೆಂದು ಹೇಳುವರು. ಕೂಲಿಗಾರರ ತರಗತಿಯನ್ನು ನೋಡುವುದಾದರೆ ಹೆಚ್ಚಿನ ಹೆಂಗಸರು ಬಾಣಂತಿಯಾಗುವ ಕಡೇ ಗಳಿಗೆಯ ವರೆಗೆ ರಾತ್ರಿ ಹಗಲು ಗಾಳಿ ಮಳೆಯಲ್ಲಿ ಕಾಯಕಷ್ಟಮಾಡುವರು. ಇಂಥವರು ಅಕಾಲ ಬಾಣಂತಿಯರಾಗುವುದೂ, ಬಲಹೀನವಾದ ಮಕ್ಕಳನ್ನು ಹೆರುವುದೂ ಹೆಚ್ಚಾಗಿದೆ. ಇಂಥ ಮಕ್ಕಳು ಬೇಗನೆ ಸಾಯುವವು ಎಂಬದಾಗಿ ಈ ಆಫೀಸರರ ವಾದವಾಗಿರುವುದು. ಒಟ್ಟಾರೆ ಹೆಂಗಸರಿಗೆ ಆರೋಗ್ಯಸಂಬಂಧವಾದ ತಕ್ಕ ತಿಳುವಳಿಕೆಯೂ, ಮಕ್ಕಳ ರೋಗ ಸಂಬಂಧವಾದ ಅರಿವೂ ಇಲ್ಲದಿರುವದೇ ಮಕ್ಕಳ ಮರಣಸಂಖ್ಯೆಯು ಹೆಚ್ಚಲು ಕಾರಣವಾಗಿದೆಯೆಂದು ಹೇಳಬಹುದಾಗಿದೆ.

ಆದಕಾರಣ ಮಲಗುವ ಕೋಣೆಯ ಸಂಬಂಧವಾದ ಅರಿವು, ಶುದ್ಧತೆಯ ಪ್ರಯೋಜನ, ಬಾಣಂತಿಯಾಗುವ ಕಾಲದಲ್ಲಿ ತೆಗೆದುಕೊಳ್ಳಬೇಕಾದ ಮುಂಜಾಗ್ರತೆ ಇತ್ಯಾದಿಗಳ ಬೋಧನೆಯನ್ನು ಜನಸಾಮಾನ್ಯರಲ್ಲಿ—ಮುಖ್ಯವಾಗಿ ಹೆಂಗಸರನ್ನು ಈ ವಿಷಯದಲ್ಲಿ ವಿದ್ಯಾವತಿಗಳಾಗಮಾಡುವುದು ದೇಶಬಾಂಧವರ, ಮುನ್ಸಿಪಾಲಿಟಿಯವರ, ಮತ್ತು ಸರಕಾರದವರ ಕರ್ತವ್ಯವಾಗಿರುವುದು. ಹೀಗೆ ಮಾಡಿದರೆ ಮಕ್ಕಳ ಮರಣಸಂಖ್ಯೆಯು ಕಡಿಮೆಯಾಗುವದರಲ್ಲಿ ಸಂದೇಹವಿಲ್ಲ.

ಈ ಸಂದರ್ಭದಲ್ಲಿ ಮುಂಬಾಯಿ ಗವರ್ನರ್ ಪ್ರಭುಗಳ ಪತ್ನಿಯವರಾದ ಲೇಡಿ ವಿಲ್ಲಿಂಗ್ಡನರವರು ಹೆಂಗಸರಿಗೆ ಹೆರುವ ಕಾಲದಲ್ಲಿ ಬೇಕಾದ ಅನುಭವವನ್ನು ಅಲ್ಲಿಯ ವಿದ್ಯಾಹೀನರಾದ ಹೆಂಗಸರಿಗೆ ಬೋಧಿಸುವ ಬಗ್ಗೆ ಮಾಡಿದ ಏರ್ಪಾಡನ್ನು ಪ್ರತಿ ಯೊಂದುಸ್ಥಳದ ವಿದ್ಯಾವಂತ ಹೆಂಗಸರೂ ಕೈಕೊಂಡರೆ ದೇಶಕ್ಕೆ ಹೆಚ್ಚಿನ ಉಪಕಾರವಾಗುವದರಲ್ಲಿ ಅನುಮಾನವಿರದು. ಸ್ವದೇಶಾಭಿಮಾನಿ.

ಪತ್ರವ್ಯವಹಾರ.

ಬೆಂಗಳೂರ ಮ॥ ಊದಬತ್ತಿ ಪಾಪ್ ಕಳ್ಳಪ್ಪನವರು ಕಳೆದ ತಾ॥ ೨೩ ರಲ್ಲಿ ತಮ್ಮ ಕುಮಾರನ ಶಿವದೀಕ್ಷಾಸಂಸ್ಕಾರವನ್ನೂ ಮೊಮ್ಮಗ ಅಂದರೆ ಗುಂಡ್ಲಪೇಟೆ ತಾಲ್ಲೂಕು ಅಮಲ್ದಾರ್ ಮ॥ ಜಿ. ಮಲ್ಲಿಕಾರ್ಜುನಯ್ಯ ಬಿ. ಎ, ಯವರ ಮಗನ ಚೌಲಕರ್ಮವನ್ನೂ ವಿಧ್ಯುಕ್ತವಾಗಿ ಬಹುವಿಜೃಂಭಣೆಯಿಂದ ಮಾಡಿದರು. ಈ ಮಹೋತ್ಸವಕ್ಕೆ ಕೆಳದಿ ಶ್ರೀ ಪಟ್ಟದ ದೇವರು ಶಿವಯೋಗಮಂದಿರದಲ್ಲಿರುವ ಒಬ್ಬ ಶಿವಯೋಗಿಗಳು ಮತ್ತೊಬ್ಬ ಶಾಸ್ತ್ರಿಗಳೊಡನೆ ದಯಮಾಡಿಸಿದ್ದರು. ಬೆಂಗಳೂರ ವೇ॥ ಗುರುಲಿಂಗಶಾಸ್ತ್ರಿಗಳು ನಂಜಯ್ಯಶಾಸ್ತ್ರಿಗಳು, ಮಹಂತಶಾಸ್ತ್ರಿಗಳು ಮಾಗಡಿ ವೀರಪ್ಪಶಾಸ್ತ್ರಿಗಳು ಸಹ ವೇದಘೋಷದೊಡನೆ ಈ ಕರ್ಮಗಳನ್ನು ನೆರವೇರಿಸಿದರು ಜಿ॥ ಬ॥ ಕೆ. ಪಿ. ಪುಟ್ಟಣ್ಣಸೆಟ್ಟರು ಮ॥ಗಳಾದ ಸೆಟ್ಟರು ವೀರಭದ್ರಸೆಟ್ಟರು ಸೋಸಲೆ ಸಿದ್ಧಲಿಂಗಮರಿದೇವರು ಹುಣಸಮಾರನಹಳ್ಳಿ ಮಠದಗುರುನಂಜೇದೇವರು ಮೊದಲಾದ ದೊಡ್ಡಮನುಷ್ಯರು ದಯಮಾಡಿಸಿದ್ದರು. ಮ॥ ಕಳ್ಳಪ್ಪನವರು ಮೈಸೂರ ವೀರಶೈವ ವಿದ್ಯಾಭಿವೃದ್ಧಿಫಂಡಿಗೆ ೧೦೮ ರೂಪಾಯಿಗಳನ್ನೂ ಕೈ॥ ವೈ. ವೀರಸಂಗಪ್ಪನವರ ಸ್ಮರಣಾರ್ಥವಾಗಿ ಅಗ್ರತಾಂಬೂಲದ ಬಗೆಗೆ ೨ ರೂ. ಗಳನ್ನೂ ಮುದುಕದೊರೆ ವೀರಶೈವ ಮತಸಂವರ್ಧನೀ ಸಭೆಗೆ ೧೦ ರೂ. ಗಳನ್ನೂ, ಹರಪನಹಳ್ಳಿಯ ಧರ್ಮಾರ್ಥ ಜ್ಯೋತಿಷಪಾಠಶಾಲೆಗೆ ೧೦ ರೂ. ಗಳನ್ನೂ ಕೊಟ್ಟರಲ್ಲದೆ ಅಮಲ್ದಾರ್ ಮ॥ ಮಲ್ಲಿಕಾರ್ಜುನಯ್ಯನವರು ತಮ್ಮ ಕುಮಾರನ ಚೌಲದ ಬಗೆಗೆ ಮೈಸೂರ ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ೨ ರೂ. ಗಳನ್ನು ಸಲ್ಲಿಸಿದರು. ಇಂತಹ ಮಹೋತ್ಸವ ಕಾಲದಲ್ಲಿ ವಿದ್ಯಾಭಿವೃದ್ಧಿ ಫಂಡಿಗೆ ಇಷ್ಟು ಹೆಚ್ಚು ಮೊಬಲಗನ್ನು ಈವರೆಗೆ ಯಾರೂ ಕೊಟ್ಟಿರಲಿಲ್ಲವಾದುದರಿಂದ ಮ॥ ಕಳ್ಳಪ್ಪನವರು ಮೇಲುಪಂಕ್ತಿಯನ್ನು ಹಾಕಿಕೊಟ್ಟುದು ಸ್ತೋತ್ರಾರ್ಹವಾಗಿದೆ. ಈ ಮಹೋತ್ಸವಕ್ಕೆ ಸ್ಥಳ ಪರಸ್ಥಳಗಳಿಂದ ಬಂದಿದ್ದ ಬಂಧುಮಿತ್ರಮಂಡಳಿಗೆ ೨-೩ ದಿವಸ ದಿವ್ಯಭೋಜನ ಮಾಡಿಸಿ ಜಂಗಮರಿಗೂ ವೈದಿಕರಿಗೂ ದಕ್ಷಿಣೆಯನ್ನು ಕೊಟ್ಟು ತೃಪ್ತಿಪಡಿಸಿದರಲ್ಲದೆ ತಮ್ಮ ಗುರುಗಳಾದ ಕೆಳದಿ ಶ್ರೀ ಪಟ್ಟದದೇವರಿಗೆ ಬೆಳ್ಳಿಯ ತಂಬಿಗೆ ಪಂಚಪಾತ್ರೆ ಇತ್ಯಾದಿ ಪದಾರ್ಥಗಳನ್ನರ್ಪಿಸಿದರು ಮತ್ತೂ ಪೌರೋಹಿತ್ಯಕ್ಕೆ ಬಂದಿದ್ದ ಶಾಸ್ತ್ರಿಗಳನ್ನು ಉಚಿತವಾಗಿ ಸನ್ಮಾನಿಸಿದರು. ಪ್ರತ್ಯಕ್ಷದರ್ಶಿ.

ಕೊಣ್ಣೂರ ಕರ್ನಾಟಕ ಸಂಗೀತ ನಾಟಕಮಂಡಲಿಯು.

ಪತ್ರಕರ್ತರೆ, ಸದರಿ ನಾಟಕ ಮಂಡಲಿಯು ನಮ್ಮ ಗ್ರಾಮಕ್ಕೆ ಅಂದರೆ ಇಲಕಲ್ಲಿಗೆ ಬಂದು ಅಂದಾಜು ಎರಡುತಿಂಗಳಾಯಿತು. ಪ್ರಥಮತಃ ೨೦೦೦ ರೂಪಾಯಿಗೆ ೧೦ ಅಖ್ಯಾನವನ್ನು ನಂತರ ೧೯ ಆಟವನ್ನು ೫೦೦೦ ರೂಪಾಯಿಗಳಿಗೂ ನಮ್ಮ ಗ್ರಾಮದ ವೀರಶೈವ ಸಮಾಜದವರೇ ಗುತ್ತೇಹಿಡರು. ಇದರಲ್ಲಿ ಮೊದಲಿನ ೧೧ ಆಟದಲ್ಲಿ ೪೦೦ ರೂಪಾಯಿ ಲಾಭವಾಯಿತು. ಇದನ್ನು ಶ್ರೀ ಮಹಾಂತಸ್ವಾಮಿಗಳ ಗದ್ದುಗೆಯ ಉದ್ದಿಶ್ಯ ಧರ್ಮಾರ್ಥ ಕೊಟ್ಟರು. ಮತ್ತೂ ನಾಳೆ ಸೋಮವಾರ ತಾ॥ ೨೯-೩-೧೫ ರ ದಿವಸ ನಾಟಕಕಂಪನಿಯವರೇ ಸದರಿ ಶ್ರೀ॥ ಮಹಾಂತಸ್ವಾಮಿಗಳ ಗದ್ದುಗೆಯ ದೆಸೆಯಿಂದ ಉಚಿತವಾಗಿ ಕೊಡುವರು. ಪ್ರಯೋಗಗಳು ಬಹಳ ಸಮಾಚೀನವಾಗಿದ್ದು ಪ್ರೇಕ್ಷಕರ ಚಿತ್ತಾಕರ್ಷಣಮಾಡುತ್ತಿರುವುದರಿಂದ ಪ್ರತಿಯೊಂದು ಆಖ್ಯಾನಕ್ಕೂ ಥಿಯಟರ ತುಂಬೇಯಿರುತ್ತದೆ. ನಂತರ ಶ್ರೀ॥ ಸಂಗಮೇಶ್ವರನ ಜಾತ್ರೆಗೆ ಹೋಗುತ್ತಾರೆ. ಸದರಿ ಕ್ಷೇತ್ರದಲ್ಲಿ ಒಕ್ಕಲತನದ ವಿಷಯ ಪ್ರದರ್ಶವು ಇರೋಣದರಿಂದ ರಾ॥ ಸಾ॥ ಶಿವಮೂರ್ತಿಸ್ವಾಮಿ ಕಣಬುರಗಿಮಠ ಇವರು ಆಗಮಿಸುವಂತೆ ತೋರುತ್ತದೆ. ನಾಟಕಮಂಡಲಿಯೂ ಬಂದಿರುತ್ತದೆ ಆದರೆ ಕೊಣ್ಣೂರ ಕಂಪನಿಯವರಲ್ಲಿ ಎಲಿಕ್ಟ್ರಿಕ್ ದೀಪಗಳೂ ನವೀನ ಸೀನರಿಗಳೂ ಇರೋಣದರಿಂದ ಪ್ರೇಕ್ಷಕರು ಅತ್ತಕಡೆಗೆ ಹೆಚ್ಚು ಗಮನಿಸುತ್ತಿರುವರು

ಪ್ರಸಿದ್ಧಿಪತ್ರಿಕೆ.

2

ಕಳೆದ ಜರ್ಮ ತಿಂಗಳಲ್ಲಿ ನಡೆದ ಸಂಪದಭ್ಯುದಯ ಸಮಾಜದ ವಿದ್ಯಾಭ್ಯಾಸದ ಕಮಿಟಿಯ ಒಂದು ಸಭೆಯಲ್ಲಿ ಕನ್ನಡಭಾಷೆಯಲ್ಲಿ ಪ್ರಜಾಸಾಮಾನ್ಯಕ್ಕೆ ಉಪಯೋಗಕರವಾದ ಗ್ರಂಥಗಳ ಪ್ರಾಚುರ್ಯವನ್ನು ನಡಿಸುವುದಕ್ಕೋಸ್ಕರವೂ ಈಗಿನ ಕಾಲದ ಪ್ರಪಂಚಜ್ಞಾನವನ್ನು ಕನ್ನಡಿಗರಲ್ಲೆಲ್ಲಾ ಹರಡುವುದಕ್ಕೋಸ್ಕರವೂ ಈ ಭಾಷೆಯಲ್ಲಿ ಯಾವಯಾವ ಬದಲಾವಣೆಗಳನ್ನು ರೂಢಿಗೆ ತರಬಹುದು ಎಂಬ ವಿಚಾರವು ಚರ್ಚೆಯಾಗಿ, ಈ ವಿಷಯವನ್ನು ಇತ್ಯರ್ಥಪಡಿಸುವುದಕ್ಕೋಸ್ಕರ ಮೈಸೂರು ವಿದ್ಯಾಭ್ಯಾಸದ ಇಲಾಖೆಯ ಇನ್ಸ್ಪೆಕ್ಟರ್ ಜನರಲ್ ಮ॥ ರಾ॥ ರಾವ್‌ಬಹದ್ದೂರ್ ಎಂ. ಶ್ಯಾಮರಾವ್ ಎಂ. ಎ. ಯವರು, ಮೈಸೂರು ಸೀಮೆಯ ಚೀಫ್ ಇಂಜಿನಿಯರ್ ಮ॥ ರಾ॥ ಕರ್ಪೂರ್ ಶ್ರೀನಿವಾಸರಾವ್ ಬಿ. ಎಸ್. ಸಿ. ಎಲ್. ಸಿ. ಇ. ಯವರು, ರಿಟೈರ್ಡ್ ಸೀನಿಯರ್ ಸರ್ಜನ್ ಮ॥ ರಾ॥ ಪಿ. ಎಸ್. ಅಚ್ಯುತರಾವ್ ಎಲ್. ಎಂ. ಅಂಡ್. ಎಸ್. ಯವರುಗಳನ್ನು ಒಳಗೊಂಡು ಒಂದು ಸಭೆಯು ಏರ್ಪಡಿಸಲ್ಪಟ್ಟಿತು ಈ ಸಭೆಯವರು ಈ ವಿಷಯವನ್ನು ಚೆನ್ನಾಗಿ ವಿಚಾರಮಾಡುವುದಕ್ಕೋಸ್ಕರ ಕನ್ನಡಿಗರ ಸಮ್ಮೇಳನವನ್ನು ಇದೇ ಮೇ ತಿಂಗಳು ೩-೪ ನೆ ತಾರೀಖುಗಳಲ್ಲಿ ಬೆಂಗಳೂರು ಪಟ್ಟಣದಲ್ಲಿ ನಡೆಯಿಸಬೇಕೆಂದು ತೀರ್ಮಾನ ಮಾಡಿದಾರೆ. ಇದಕ್ಕೆ ಬೊಂಬಾಯಿ ಮದರಾಸು ಧಾರ್ವಾಡ ಮೊದಲಾದ ಕಡೆಗಳಿಂದ ಪ್ರತಿನಿಧಿಗಳು ದಯಮಾಡುವರು. ಈ ಸಮ್ಮೇಳನದಲ್ಲಿ:—

೧. ಕನ್ನಡಭಾಷೆಯು ಪ್ರಚಾರದಲ್ಲಿರುವ ಪ್ರದೇಶಗಳಲ್ಲೆಲ್ಲಾ ಇರುವ ಕನ್ನಡಗ್ರಂಥಕರ್ತರುಗಳಲ್ಲಿ ಐಕಮತ್ಯವನ್ನು ಹೆಚ್ಚಿಸುವಿಕೆ;

೨. ಅಂಥಾ ಭಾಗಗಳಲ್ಲೆಲ್ಲಾ ಕಾಣಬರುವ ಗ್ರಾಂಥಿಕ ಭಾಷೆಯನ್ನು ಏಕರೂಪಕ್ಕೆ ತರುವಿಕೆ;

೩. ಅಂಥಾ ಪ್ರದೇಶಗಳಲ್ಲೆಲ್ಲಾ ಇರುವ ಕನ್ನಡಪಾಠಶಾಲೆಗಳಲ್ಲಿ ಒಂದೇವಿಧವಾದ ಪಠ್ಯಪುಸ್ತಕಗಳನ್ನು ಬಳಸುವಿಕೆ;

೪. ಕನ್ನಡಿಗರ ಪ್ರಜಾಸಾಮಾನ್ಯದಲ್ಲೆಲ್ಲಾ ಪ್ರಯೋಜನಕರವಾದ ಜ್ಞಾನವನ್ನು ಹರಡುವುದಕ್ಕಾಗಿ ಸಣ್ಣ ಸಣ್ಣ ಗ್ರಂಥಗಳನ್ನು ಪ್ರಚುರಪಡಿಸುವಿಕೆ;

೫. ಕನ್ನಡಗ್ರಂಥಗಳಲ್ಲಿ ಉಪಯೋಗಿಸಬೇಕಾದ ಪಾರಿಭಾಷಿಕ ಶಬ್ದಗಳನ್ನು ನಿರ್ಣಯಪಡಿಸುವಿಕೆ;

ಎಂಬ ಈ ಉದ್ದೇಶಗಳನ್ನು ಸಾಧಿಸುವ ಅತ್ಯಂತ ಸುಲಭಮಾರ್ಗಗಳು, ಮತ್ತೂ ಕರ್ನಾಟಕಭಾಷಾಭಿವೃದ್ಧಿಯನ್ನು ಕುರಿತು ಇತರ ವಿಷಯಗಳು:—ಈ ವಿಚಾರದಲ್ಲಿ ಉಪನ್ಯಾಸಗಳೂ ಚರ್ಚೆಗಳೂ ನಡೆಯುವುವು.

ಕನ್ನಡಭಾಷೆಯ ಅಭಿವೃದ್ಧಿಯಲ್ಲಿ ಆಸಕ್ತರಾದ ಮಹನೀಯರುಗಳಲ್ಲ ಈ ಸಮ್ಮೇಳನವನ್ನು ಕುರಿತು ಹೆಚ್ಚು ಸಂಗತಿಗಳನ್ನು ತಿಳಿಯಬೇಕೆಂದಿರುವರು. ಈ ಕೆಳಗೆ ರುಜು ಮಾಡಿರುವವರ ಮೇಲ್ವಿಳಾಸಕ್ಕೆ ಕಾಗದ ಬರೆದು ತಿಳಿದುಕೊಳ್ಳಬಹುದು. ಸಮ್ಮೇಳನದ ಉದ್ದೇಶಗಳನ್ನು ಸಾಧಿಸುವ ವಿಷಯದಲ್ಲಿ ಕೊಡಬಹುದಾದ ಸಲಹೆಗಳೂ, ಮೇಲೆ ಸೂಚಿಸಿದ ವಿಷಯಗಳನ್ನು ಕುರಿತು ಬರೆದ ಉಪನ್ಯಾಸಗಳೂ ಸಹ ಅತ್ಯಂತ ಕೃತಜ್ಞತೆಯಿಂದ ಅಂಗೀಕರಿಸಲ್ಪಡುವುವು. ಸಲಹೆಗಳನ್ನೂ ಉಪನ್ಯಾಸಗಳನ್ನೂ ಕಳುಹಿಸಬೇಕೆಂದಿರುವವರು ದಯವಿಟ್ಟು ೧೯೧೫ ನೆ ಏಪ್ರಿಲ್ ೧೫ ರೊಳಗಾಗಿ ಕಳುಹಿಸಿಕೊಡಬೇಕೆಂದು ಕೋರಿದೆ.

ಬಿ. ಕೃಷ್ಣಪ್ಪ, ಪ್ರೋ. ಸೆಕ್ರಟರಿ,
ಕನ್ನಡಿಗರ ಸಮ್ಮೇಳನ.
ವಿದ್ಯಾಭ್ಯಾಸದ ಇಲಾಖೆಯ ಇನ್ಸ್ಪೆಕ್ಟರ್,
ಜನರಲ್‌ರವರ ಆಫೀಸು, ೨೩-೩-೧೫.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕಾರ್ಯ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿ ಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧-೦-೦ ರೂ. ಕೊಡಬೇಕಾಗುವುದು ಕೆಂಪು, ಹಸುರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರದ ಬಣ್ಣದಿಂದ ಬಿಳಿ ಗ್ಲೇಜು ಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೧-೨-೦; ಅನಂತರ ಪ್ರತಿ ೧೦೦ ಕ್ಕೂ ೦-೧೦-೦; ಹಳದೀ ಗ್ಲೇಜ್ ಕಾಗದದಮೇಲೆ ಮೊದಲನೇ ೧೦೦ ಕ್ಕೆ ೨-೨-೦; ಅನಂತರ ಪ್ರತಿ ೧೦೦ ಕ್ಕೂ ೦-೧೪-೦; ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೩-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦-೬-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, [illegible] ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಕಾರ್ಯಪ್ರೆಸ್, ಮೈಸೂರ್.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು

78

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕದನಗಳ ಪಟಗಳೂ ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ ೨ ಆಣೆ; ವಿ ಪಿ. ಯಲ್ಲಿ ೪ ಆಣೆ

ನಮ್ಮ ವಿಳಾಸ:—ದಿ ಜನರಲ್ ಏಜನ್ಸಿ. ಮೈಸೂರು.

೫೦೦ ರೂಪಾಯಿಗಳ ಬಹುಮಾನ
ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ „ ಸಾಲಾಮಿಸ್ರೀ ಮುರಬ್ಬಾವನ್ನು " ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್‌ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಸಾಲಾಮಿಸ್ರಿಯ ಧಾರಣೆಯು ಜಾಸ್ತಿಯಾಗಿರುವದರಿಂದ ಅನೇಕರು ಉರುಳುಗಡ್ಡೆ, ಕಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುವದು ತಿಳಿದುಬರುತ್ತದೆ.

ಸಾಲಾಮಿಸ್ರಿ ಮುರಬ್ಬಾವು—ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಸ್ತ್ರೀ ಸಂಗಕ್ಕೆ ಮೊದಲೆ ಧಾತು ಸ್ಖಲನವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಧಾತುಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕ್ಷಣ ಕ್ಷಣಕ್ಕೆ ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೆಟ್ಟುಹೋಗಿರುವ ರಕ್ತವನ್ನು ಶುದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ವೃದ್ಧಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಳೆತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು.
ಸಾಲಾಮಿಸ್ರಿ ಮುರಬ್ಬಾವು—ಉತ್ಸಾಹ, ಧೈರ್ಯ, ಬುದ್ಧಿಕುಶಲತೆ, ಶರೀರಕಾಂತಿಯನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು—ತಾಂಬು, ಬೆಳ್ಳಿ, ಮತ್ತು ಭಂಗಾರ ಭಸ್ಮಕ್ಕಿಂತಲೂ ಉತ್ತಮವಾದುದು.
ಸಾಲಾಮಿಸ್ರಿ ಮುರಬ್ಬಾವು—ಹೊಟ್ಟೆಯಲ್ಲಿರುವ ಜ್ವರದಗಡ್ಡೆಯನ್ನು ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಶ್ವಾಸಕಾಸ ರೋಗಗಳನ್ನು ನಾಶಪಡಿಸುವದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪುರಾ ಗುಣಕೊಡುತ್ತದೆ. ೨-೩ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು „ ಸಾಲಾಮಿಸ್ರಿ " ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

೫೦೦ ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ಇದಕ್ಕೋಸ್ಕರವಾಗಿ ನಾವು ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ ಮೇಲ್ಕಂಡ ೫೦೦ ರೂಪಾಯಿಗಳನ್ನು ೧೯೧೫ನೆ ಇಸವಿ ಮಾರ್ಚಿ ತಾ॥ ೧೫ ರಲ್ಲಿ ಡಿಪಾಜಿಟ್ಟು ಇಟ್ಟಿರುತ್ತೇವೆ.

೧೫ ತೊಲೆ ಮುರಬ್ಬಾವಿನ ಡಬ್ಬಿ ೧ ಕ್ಕೆ ಕ್ರಯ ೭-೦-೦ ರೂಪಾಯಿ. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ ೬ ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ವಿಳಾಸ:—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
೫, ಅವೆನ್ಯೂ ರೋಡ್ ಬೆಂಗಳೂರು ಸಿಟಿ.

ಓರಿಯಂಟಲ್ ಫಾರ್ಮಸಿ ಮೈಸೂರು.

9

ಪ್ರಸಿದ್ಧಿ ಗುಣಕಂಡ ಔಷಧಗಳು.

ಜ್ವರದಮಾತ್ರೆ—ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ. ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಉಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮುಂದಣವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ ರೂ.

ಗೋರೋಜನದಮಾತ್ರೆ—ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲುಮೈನೋವುಗಳು ಕೊಡ್ಲೆ ತಪ್ಪಿ ಜೀರ್ಣಶಕ್ತಿಕೊಡುತ್ತೆ. ಪ್ರಯಾಣೀಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾದ ನೋವು ಉಳುಕು ಊದು ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ ೫ ಡಬ್ಬಿಗೆ ೧ ರೂ. ಕೂಡ್ಲೆ ನಮ್ಮ ಕ್ಯಾಟಲಾಗಿಗೆ ಬರಿಯಿರಿ ಮುಫತ್ತು ಕಳುಹಿಸುತ್ತೇವೆ.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

14

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಮುದ್ರೇಕವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುಗುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯೆಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪರ್ಟಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್‌ಸನ್ಸ್ 47
ಸುಗಂಧಕಾರಿ, ಮೈಸೂರು.

ಹೊಸ ಪುಸ್ತಕಗಳು.

178

ಸಿದ್ಧಾಂತಶಿಖಾಮಣಿ.—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೩೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ—ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಳಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ—ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟಿಕ ೧ ನೆ ಪ್ರಕರಣಕ್ಕೆ ೧-೩-೦ ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ—೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

44



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ.

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಕೇಳಾಡಬೇಡಿರಿ. ಒಂದೇವೊಂದು ಬುಡ್ಡಿಯು ನಿಮ್ಮಲ್ಲಿರಲಿ. ಜೊತೆಯ್ಲೊಂದು ಸಹಾಯದ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧—೦—೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೧—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತೆ	೦—೫—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಬಿಸಿಲುಕಾಲಕ್ಕೆ 25

☞ ಬಲ್ಲರಿಗೂಬೇಕು

ಅಮೃತಾಮಲಕತೈಲ:—ವಿಧವಿಧವಾದ ತಲೆನೋವು, ಶರೀರವು ಬೆಂಕಿಯಂತಿರುವುದು, ತಲೆತಿರಗು, ಕಣ್ಣುರಿ, ಕಣ್ಣು ಕೆಂಪು, ಕಣ್ಣು ಮಂಜು, ಕಣ್ಣಿನಲ್ಲಿ ನೀರು ಸುರಿಯುವುದು, ರಾತ್ರಿ ನಿದ್ರೆಬಾರದಿರುವುದು ಇವುಗಳನ್ನು ೧-೨ ಅಭ್ಯಂಗನದಿಂದಲೇ ಗುಣಮಾಡಿ ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ. ಬಿಸಿಲುಕಾಲಕ್ಕೆ ಇದು ಅಮೃತವೇಸರಿ. ಎಂಟು ಅಭ್ಯಂಗನಕ್ಕೆ ಆಗುವ ತೈಲ ೦-೮-೦. ೧ ಡಜನ್ ೫-೦-೦.

ಆಮೋದಿನಿ:—ಅಮೋಘವಾದ ಸುವಾಸನೆಯಿಂದ ಕೂಡಿದ ಈ ಮಾತ್ರೆಗಳು ತಾಂಬೂಲವನ್ನು ರಂಜಿಸಿ ಬಾಯಾರಿಕೆಯನ್ನು ತಕ್ಷಣ ನಿಲ್ಲಿಸಿ ಆಯಾಸವನ್ನು ಪರಿಹರಿಸಿ ಕಂಠನಾಳವನ್ನು ಸರಿಪಡಿಸಿ ಕೆಮ್ಮು, ದಮ್ಮು, ಉಬ್ಬಸ, ಮೇಧಗಳನ್ನು ಗುಣಮಾಡಿ ಆರೋಗ್ಯವನ್ನು ಕಾಪಾಡುವದರಲ್ಲಿ ಶ್ರೇಷ್ಠವಾದುದು. ಸಂಗೀತಗಾರರಿಗೂ, ವಿದ್ಯಾರ್ಥಿಗಳಿಗೂ, ಪ್ರಯಾಣೀಕರಿಗೂ ಅಮೂಲ್ಯವಾದುದು. ೧೫೦ ಮಾತ್ರೆ ೦—೪—೦. ೫ ಕ್ಕೆ ಒಂದು ಹೆಚ್ಚು.

ಖಂಡಾಮಲಕರಸಾಯನ:—ತಲೆತಿರಗು, ಕಣ್ಣುಕಗ್ಗತ್ತಲೆ, ಹಸಿವೇ ಇಲ್ಲದಿರುವುದು, ಆಹಾರದಲ್ಲಿ ಅರುಚಿ, ವಾಕರಿಕೆ, ವಾಂತಿ, ಹುಳಿ, ಖಾರ, ಅಥವಾ ಸಿಹಿಯಾದ ತೇಗು, ಹೊಟ್ಟೆಯುಬ್ಬರ, ಹೊಟ್ಟೆನೋವು, ಕಣ್ಣು ಅಥವಾ ಮೈ ಹಳದೀಬಣ್ಣ, ನಿಶ್ಶಕ್ತಿ, ಹಳೇಜ್ವರ, ಎದೆಬಡಿಯುವಿಕೆ, ಪಾಂಡು, ಕಾಮಾಲೆ, ಮೂರ್ಛೆ ಇವುಗಳಪೈಕಿ ಯಾವುದಿದ್ದರೂ ಖಾತರಿ ಗುಣವಾಗಿ ದಿನಕ್ಕೊಂದುವೇಳೆ ಸಲೀಸಾಗಿ ಕಾಲಪ್ರವರ್ತಿಯಾಗುತ್ತದೆ. ೧೫ ದಿನಕ್ಕೆ ಆಗುವ ಔಷಧ, ಬೆಲೆ ೦-೧೨-೦. ೧ ಡಜನ್ ಡಬ್ಬಗಳಿಗೆ ೩-೮-೦.

ಪ್ರತಿಔಷಧಕ್ಕೂ ಟಪಾಲ್ ಮತ್ತು ಪ್ಯಾಕಿಂಗ್ ಛಾರ್ಜ ಪ್ರತ್ಯೇಕ.

ವಿಳಾಸ:—ಬಿ. ವಿ. ಪಂಡಿತ್, ಸದ್ವೈದ್ಯಶಾಲಾ,
ನಂಜನಗೂಡು, ಮೈಸೂರು ಡಿ॥

೧೯೧೫ನೆಯ ಇಸವಿ ಏಪ್ರಿಲ್ ತಾ॥ ೪ ರಿಂದ ೧೯೧೫ನೆಯ ಏಪ್ರಿಲ್ ತಾ॥ ೧೦ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೩೮ ನೆಯ ರಾಕ್ಷಸಸಂವತ್ಸರದ ಸಂ॥ ದ ಚೈತ್ರ ಬ॥ ಪಂಚಮಿಯಿಂದ ಚೈತ್ರ ಬ॥ ಏಕಾದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೀನ ತೇದಿ
4	[1]ಭಾನು	ಪಂ	43-26	ಅನೂ	23-40	22
5	ಸೋ	ಷಷ್ಠಿ	37-34	ಜ್ಯೇಷ್ಠ	19-38	23
6	ಮಂಗ	ಸಪ್ತ	32-14	ಮೂಲ	16-0	24
7	ಬುಧ	ಅಷ್ಟ	27-27	ಪೂಷಾ	12-46	25
8	[2]ಗುರು	ನವ	23-27	ಉಷಾ	10-28	26
9	[3]ಶುಕ್ರ	ದಶ	20-26	ಶ್ರವಣ	9-1	27
10	[4]ಶನಿ	ಏಕಾ	18-25	ಧನಿಷ್ಠ	8-34	28

(1) ಮತ್ಸ್ಯಜಯಂತೀ, ವ್ಯತ್ಯಯೋಗಃ. (2) ಸರ್ವತ್ರನವಮೀತಿಥಿಃ, ಹಿಮವದ್ಯೋಗೇಪ ಲಸ್ಯಾವಿಚಾರಥಃ, (3) ತಿಥಿದ್ವಯಂ, (ವಾಕ್ಯರೀತ್ಯಾದಶಮೀತಿಥಿಃ) (4) ದ್ವಾದಶೀತಿಥಿಃ, ಸರ್ವತ್ರೈಕಾದಶೀ, (ವಾಕ್ಯರೀತ್ಯಾತಿಥಿದ್ವಯಂ)

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ERGISTERED NO. M. 124

ಮೈಸೂರ್ ✻ ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಕ್ಷ್ಮಜ್ಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾಧುಗ್ನ್ಯಾಲವಾಲಂವಲಂ ॥
ಸಿಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿ ಕೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೧೪—೦

ಸಂಪುಟ ೨೮) ಮೈಸೂರ್ ಸ್ಟಾರ್ ಸರ್ ೧೯೧೫ ನೆಯ ಇಸವಿ ಏಪ್ರೆಲ್ ತಾರೀಖು ೧೧ ನೆಯ ಭಾನುವಾರ. (ಸಂಚಿಕೆ ೧೪

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

10

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

೧. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.
೨. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.
೩. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ ಯಾವರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.
೪. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.
೫. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.
೬. ಬೇಸಿಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.
೭. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

೪೫ ಮಾತ್ರೆಗಳ	ಪೊಟ್ಟಣ	೧ಕ್ಕೆ	೨	ಆಣೆ	೮೦ ಮಾತ್ರೆಗಳ	ಟಿನ್	೧ಕ್ಕೆ	೪	ಆಣೆ.
೯೫ ,,	,,	,,	೪	,,	೧೦೦ ,,	ಶೀಶೆ	,,	೪॥	,,
೨೦೦ ,,	,,	,,	೬	,,	೫೫೦ ,,	ಮರದಪೆಟ್ಟಿಗೆ	,,	೧	ರೂ.
೨೦೦ ,,	ಟಿನ್	,,	೯	,,	೧೨೦೦ ,,	,,	,,	೨	,,

೧ ರೂ.ಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಎಲ್ಲಾ ಕಡೆಯೂ ಪ್ರಸಿದ್ಧವರ್ತಕರಲ್ಲಿ ವಿಕ್ರಯಿಸಲ್ಪಡುತ್ತದೆ.

ಮೈಸೂರುಸೀಮೆಯ ಏಜಂಟರು:—ಎಂ. ರಾಮಸಂಜೀವ ಸೆಟ್ಟಿ,
ಚನ್ನಪಟ್ಟಣ.

ಸೋಲ್‌ಏಜಂಟರು:—ಸೆಶಿಂತಾನ್‌ಡಿಪೋ,
ಪ್ರಿನ್ಸೆಸ್‌ಸ್ಟ್ರೀಟ್ ಬೊಂಬಾಯಿ ನಂ. ೨.

ಮದ್ರಾಸ್ ಏಜಂಟ್:—ಬಿ. ಸಿ. ಷಾ ಅಂಡ್‌ಕೊ,
೧೩೩ ಚೇನಾಬಜಾರ್ ರೋಡ್, ಮದ್ರಾಸ್.

KASHI
VISHWESHWAR.

28

ದೊಡ್ಡಕಂಪೆನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಲಾಗನ್ನು ಕಳುಹಿಸುವೆವು.

ವಿಳಾಸ-ಎಸ್. ಯು. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

೧೯೧೫ನೆಯ ಶ್ರೀಸೀತಾರಾಘವ ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಬೆಲೆಯನ್ನು ತಗ್ಗಿಸಿದೆ. ಕೊಂಚಪ್ರತಿಗಳು ಮಾತ್ರವೆ ಇವೆ. ಬೇಗ ಬರೆದು ತರಿಸಿಕೊಳ್ಳಿರಿ. ಉತ್ತಮವಾದ ಕಾಗದ ಮುದ್ದಾದಮುದ್ರಣ. ಮತ್ತಾವ ಡೈರಿಗಳಲ್ಲೂ ಇಲ್ಲದ ಅನೇಕ ಉಪಯುಕ್ತವಾದ ಸಂಗತಿಗಳು ಈ ಡೈರಿಯಲ್ಲಿ ಇರುತ್ತವೆ. ಐದು (೫) ಡೈರಿಗಳನ್ನು ಒಂದೇವಿಳಾಸಕ್ಕೆ ತರಿಸಿಕೊಂಡರೆ ೧ ಡೈರಿ ಇನಾಂ.

೧ ನಂ—ಸಣ್ಣಸೈಜು ಸಾದಾ	೦—೨—೬
೨ ನಂ—ವೆಲ್‌ವೆಟ್‌ಮುಚ್ಚುಳವುಳ್ಳುದು	೦—೪—೦

ಪೋಸ್ಟೇಜು ಬೇರೆ.

ವಿಳಾಸ.—ಶ್ರೀ ಸೀತಾರಾಘವ ವೈದ್ಯಶಾಲಾ,
ಮೈಸೂರು.

27

ತಿರಸಂಗೀಕರ ಸ್ಮಾರಕ.

ಕನ್ನಡ ಒಕ್ಕಲುತನದ ಶಾಲೆ ದೇವೀಹೊಸೂರ.

4

ಈ ಶಾಲೆಯು ಧಾರವಾಡ ಜಿಲ್ಲೆಯಲ್ಲಿರುವ ಹಾವೇರಿ ಸ್ಟೇಶನ್ನದಿಂದ ೫ ಮೈಲು ದೂರವಿರುವ ದೇವೀಹೊಸೂರ ಎಂಬಲ್ಲಿ ಸ್ಥಾಪಿತವಾಗಿದ್ದು ಅದರ ಹೊಸ ಕ್ಲಾಸುಗಳು ಇದೇ ಮೇ ತಿಂಗಳು ೨೪ ನೇ ತಾರೀಖಿನಿಂದ ಶುರು ಆಗುವವು. ಇದು ಕೇವಲ ಒಕ್ಕಲಿಗರ ಮಕ್ಕಳ ದೆಸೆಯಿಂದ ಇರುತ್ತದೆ. ಇದರಲ್ಲಿ ಶೇರಲಿಚ್ಛಿಸುವ ವಿದ್ಯಾರ್ಥಿಗಳ ಸಂಬಂಧದ ನಿಯಮಗಳು ಕೆಳಗೆ ಕೊಟ್ಟಂತೆ ಇರುತ್ತವೆ.

(೧) ಹುಡುಗರು ಸ್ವತಃ ಒಕ್ಕಲತನ ಮಾಡುವಂಥ ಒಕ್ಕಲಿಗರ ಮಕ್ಕಳಾಗಿರಬೇಕು ಮತ್ತು ಆ ಹುಡುಗರು ಸ್ವಲ್ಪ ಮಟ್ಟಿಗಾದರೂ ಒಕ್ಕಲತನದ ಕೆಲಸದಲ್ಲಿ ಮಾಹಿತಿಯುಳ್ಳವರಿರಬೇಕು.

(೨) ಇಲ್ಲಿ ಕಲಿತು ಒಕ್ಕಲತನದ ಉದ್ಯೋಗವನ್ನು ನಡೆಯಿಸಬೇಕೆನ್ನುವವರನ್ನೇ ಈ ಶಾಲೆಯಲ್ಲಿ ತಕ್ಕೊಳ್ಳುವದರಲ್ಲಿ ಬರುವದು. ಸರಕಾರೀ ನೌಕರಿಯನ್ನು ಇಚ್ಛಿಸುವಂಥ ವಿದ್ಯಾರ್ಥಿಗಳು ಇಲ್ಲಿ ಬರಕೂಡದು.

(೩) ಹುಡುಗರು ಕನಿಷ್ಠಪಕ್ಷಕ್ಕೆ ಕನ್ನಡ ೫ನೇ ಇಯತ್ತೆಯಲ್ಲಿಯಾದರೂ ಪಾಸಾಗಿರಲಿಕ್ಕೆ ಬೇಕು. ಮತ್ತು ಅವರು ಯಾವ ಶಾಲೆಯಲ್ಲಿ ಕಲಿತಿರುವರೋ ಆ ಶಾಲೆಯ ಹೆಡ್ಡಮಾಸ್ತರರ ಲೀವ್ಹಿಂಗ ಸರ್ಟಿಫಿಕೇಟನ್ನು ಅರ್ಜಿ ಲಗತ ಕಳುಹಿಸಬೇಕು.

(೪) ಹುಡುಗರ ವಯಸ್ಸು ೧೪ ವರ್ಷದಿಂದ ೧೬ ವರ್ಷದ ಒಳಗಿರಬೇಕು. ಮತ್ತು ವಯಸ್ಸಿನ ದಾಖಲೆ ಅರ್ಜಿ ಲಗತ ಕಳುಹಿಸಬೇಕು.

(೫) ಹುಡುಗರ ಅಭ್ಯಾಸಕ್ರಮವು ಎರಡು ವರ್ಷದ್ದಿರುವದು; ಈ ಶಾಲೆಯಲ್ಲಿ ತೆಗೆದುಕೊಂಡ ಪ್ರತಿಯೊಬ್ಬ ಹುಡುಗನಿಗೆ ಅವನ ಶಾಲೆಯ ಫೀಗೂ ಊಟದ ವೆಚ್ಚಕ್ಕೂ ಸಾಲುವಷ್ಟು ಸ್ಕಾಲರಶಿಪ್ ಕೊಡಲ್ಪಡುವದು.

(೬) ಒಮ್ಮೆ ಶಾಲೆಯಲ್ಲಿ ಶೇರಿದನಂತರ ಶಾಲೆಯ ಅಭ್ಯಾಸಕ್ರಮವು ಪೂರ್ಣ ಮುಗಿಯುವವರೆಗೆ ಶಾಲೆಯನ್ನು ಬಿಡಕೂಡದು. ಒಂದು ವೇಳೆ ಮಧ್ಯದಲ್ಲಿ ಬಿಟ್ಟರೆ ಅವರು ಶಾಲೆಯಲ್ಲಿ ಇದ್ದಷ್ಟು ದಿವಸಗಳ ಖರ್ಚನ್ನು ಕೆಳಗೆ ಸಹಿಮಾಡಿದವರು ನಿರ್ಣಯಿಸಿದಷ್ಟು ಕೊಡಬೇಕಾಗುವದು.

ಪ್ರತಿವರ್ಷ ೧೫-೨೦ ಹುಡುಗರನ್ನು ತೆಗೆದುಕೊಳ್ಳುವದರಲ್ಲಿ ಬರುವದು. ಬೇರೆ ಶಾಲೆಗಳಂತೆ ಈ ಶಾಲೆಗೂ ಯಾವತ್ತೂ ಸೂಟಿಗಳು ದೊರೆಯುವವು. ಇದಲ್ಲದೆ ವರ್ಷಕ್ಕೆ ಎರಡಾವರ್ತಿ ಒಮ್ಮೆ ದೀಪಾವಳಿ ಸುಮಾರಕ್ಕೆ, ಮತ್ತೊಮ್ಮೆ ಬೇಸಿಗೆ ಸಮಯಕ್ಕೆ ಒಂದೊಂದು ತಿಂಗಳದ ಸತತ ಸೂಟಿಗಳು ಸಿಕ್ಕುವವು. ಇವೆರಡು ಸೂಟಿಗಳಲ್ಲಿ ಮಾತ್ರ ಹುಡುಗರನ್ನು ಮನೆಗೆ ಕಳುಹಿಸುವದರಲ್ಲಿ ಬರುವದು. ಈ ಶಾಲೆಯ ಮುಖ್ಯ ಉದ್ದೇಶವೆಂದರೆ ಒಕ್ಕಲಿಗರ ಮಕ್ಕಳಿಗೆ ಸುಧಾರಿಸಿದ ಪ್ರಕಾರದ ಒಕ್ಕಲತನದ ಶಿಕ್ಷಣವನ್ನು ಕೊಟ್ಟು ಅವರನ್ನು ಅವರ ತಾಯಿತಂದೆಗಳಿಗೆ ಹೆಚ್ಚಿಗೆ ಉಪಯುಕ್ತರನ್ನಾಗಿ ಮಾಡಿಕೊಡುವದು ಅದೆ. ಈ ಶಾಲೆಗೆ ಬರಲಿಚ್ಛಿಸುವವರು ಅರ್ಜಿಯನ್ನು ಇದೇ ಮೇ ತಿಂಗಳ ೧ನೇ ತಾರೀಖಿನ ಒಳಗಾಗಿ ಕೆಳಗೆ ಸಹಿಮಾಡಿದವರ ಕಡೆಗೆ ಕಳುಹಿಸತಕ್ಕದ್ದು.

ಆ ಅರ್ಜಿ ವಿಚಾರಣೆಮಾಡಿ ನಮ್ಮ ಶಾಲೆಯಲ್ಲಿ ತೆಗೆದುಕೊಳ್ಳತಕ್ಕಂಥ ವಿದ್ಯಾರ್ಥಿಗಳಿಗೆ ಪತ್ರದ್ವಾರದಿಂದ ಬರಲಿಕ್ಕೆ ತಿಳಿಸುವೆವು; ಅರ್ಜಿ ನಿಕಾಲೆ ಮಾಡುವ ಕಾಲಕ್ಕೆ ವತನದಾರ ಪಾಟೀಲ ಕುಲಕರ್ಣಿಯವರ ಮಕ್ಕಳಿಗೂ, ಸುಸ್ಥಿತಿಯ ಒಕ್ಕಲಿಗರ ಮಕ್ಕಳಿಗೂ, ಹೆಚ್ಚು ಸವಲತ ಸಿಗುವದು. ಅರ್ಜಿಯಲ್ಲಿ ಹೆಸರು, ತಂದೆಯ ಹೆಸರು, ಅಡ್ಡಹೆಸರು, ಜಾತಿ,

ಇರುವ ಊರು, ತಾಲೂಕು, ಜಿಲ್ಲಾ ಖಾತೇದ ಹೊಲವು ಎಷ್ಟು, ಮತ್ತು ಅದು ಎಲ್ಲಿರುವದು ಸರಕಾರಕ್ಕೆ ದರವರ್ಷ ಕೊಡಬೇಕಾದ ತೆರಿಗೆ ತೋಟಪಟ್ಟಿಗಳನ್ನು ಮಾಡಲಿಕ್ಕೆ ನೀರಿನ ಅನುಕೂಲತೆ ಇರುವದೇ ಹ್ಯಾಗೆ? ಮತ್ತು ಹೊಲಗಳನ್ನು ಮನೆಯಿಂದ ಮಾಡುವರೋ ಹ್ಯಾಗೆ? ಮೊದಲಾದ ಮಾಹಿತಿಯನ್ನು ತುಂಬಿ ಆಯಾ ಊರ ಗ್ರಾಮಸ್ಥರ ದಾಖಲೆಯನ್ನು ಲಗತಿಟ್ಟು ಅರ್ಜಿ ಕಳಿಸಬೇಕು; ಮತ್ತು ಅರ್ಜಿಯನ್ನು ಶಾಲೆಗೆ ಬರಲಿಚ್ಛಿಸುವ ವಿದ್ಯಾರ್ಥಿಗಳೇ ಸ್ವಹಸ್ತದಿಂದ ತುಂಬಿ ಕಳಿಸಬೇಕು. ಮೇಲೆ ಹೇಳಿದ ನಿಯಮಗಳಂತೆ ನಡೆಯಲಿಕ್ಕೆ ಅನುಮತಿಯುಂಟೆಂದು ತಮ್ಮ ಪಾಲಕರ ಕಡೆಯಿಂದ ಒಂದು ಸಹಿನಿಸಿ ದಾಖಲೆ ತಕ್ಕೊಂಡು ಅರ್ಜಿ ಲಗತ ಇಟ್ಟು ಕಳಿಸಬೇಕು

ಧಾರವಾಡ
ತಾ॥ ೫-೩-೧೯೧೫
ಸಹಿ ಟಿ. ಗಿಲ್ಬರ್ಟ
ಡಿ. ಡಾಯರೆಕ್ಟರ ಶೆತಕೀ ಖಾತೆ,
ದಕ್ಷಿಣಭಾಗ

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತವಾಗಿರುವ ಘೋರಯುದ್ಧದ ದಶೆಯಿಂದ ಈ ಸಾಮಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದ ಮತ್ತೂ ಬೆಲಜಿಯಮ್ಮಿನಿಂದ ಸುತರಾಂ ಬರುವುದು. ಕಟ್ಟಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಆವಶ್ಯಕವಾದ ಕಾಗದ ಮೊದಲಾದ ಸಾಮಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವಧಿಯು ಪೂರೈಸಿರುವವರಿಗೆಲ್ಲಾ ಪತ್ರಿಕೆಯನ್ನು ವಿ. ಪಿ ದ್ವಾರ ಕಳುಹಿಸುತ್ತಿರುವೆವು. ಆದರೆ ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿರುಗಿಸಿ ಕಾಗದದ ಬೆಲೆಯೇರಿಕೆಯಿಂದ ನಷ್ಟಪಡುವುದರ ಜತೆಗೆ ಪೋಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದು ತಿಳುಹಲು ಖೇದವಾಗುತ್ತದೆ. ಇತಃಪರಃ ದಯಾರ್ದ್ರಹೃದಯರಾದ ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ. ಪಿ. ಹಣವನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನವಾಗಿ ನಡೆದುಕೊಂಡು ಹೋಗುವಂತೆ ಮಾಡುವರೆಂದು ಸಂಪೂರ್ಣವಾಗಿ ನಂಬಿರುತ್ತೇವೆ.

ಮ್ಯಾನೇಜರ್.

ಸದ್ಗೃಹವು.

(ದೇಶಾಯಿ ಶೇಷಗಿರಿರಾವು, ನಂದಿ).

ಮನುಷ್ಯನ ಪ್ರವರ್ತನೆಯನ್ನು ಆತನ ಗೃಹಸ್ಥಿತಿಯನ್ನು ನೋಡಿ ನಿಶ್ಚಯಿಸಬಹುದು. “ನಿನ್ನ ಸ್ನೇಹಿತರಾರೋ ಹೇಳು; ನೀನೆಂಥವನೆಂಬುದನ್ನು ಹೇಳುವೆನು.” ಎಂದು ಆಂಗ್ಲಭಾಷೆಯಲ್ಲಿ ಲೋಕೋಕ್ತಿ ಒಂದುಂಟು. ಈ ವಿಧವಾಗಿಯೇ “ನಿಮ್ಮ ಕುಟುಂಬ ವಾವುದೋ ಹೇಳು; ನೀನೆಂಥವನೆಂಬುದನ್ನು ಹೇಳುವೆನು.” ಎಂದು ಕೂಡ ನಾವು ನುಡಿಯಬಹುದು. ಒಬ್ಬನು ಸನ್ಮಾರ್ಗನಾಗುವುದಕ್ಕಾಗಲಿ, ದುರ್ಮಾರ್ಗನಾಗುವುದಕ್ಕಾಗಲಿ ಸಾಮಾನ್ಯವಾಗಿ ಗೃಹಶಿಕ್ಷೆಯನ್ನನುಸರಿಸಿಯೇ ಇರುವುದು. ಸದ್ಗೃಹವು ಸತ್ಸಂತಾನಕ್ಕೆ ನಿಲಯವು. ಉತ್ತಮ ಶಿಕ್ಷಾಬದ್ಧವಾದ ಗೃಹದಲ್ಲಿಯೇ ಉತ್ತಮ ಪುರುಷರೂ, ಉತ್ತಮ ನಾರೀಮಣಿಯರೂ, ಉದಯಿಸುತ್ತಿರುವರು. ತಮ್ಮ ಮಕ್ಕಳು ಸದ್ಗುಣಶೀಲರೂ, ಸದಾಚಾರ ಸಂಪನ್ನರೂ ಆಗಬೇಕೆಂದು ಅಭಿಲಾಷಿಸುವವರು ತಮ್ಮ ಗೃಹವನ್ನು ಅದಕ್ಕೆ ತಕ್ಕರೀತಿಯಲ್ಲಿ ತಪ್ಪದೆ ಸಂಸ್ಕರಿಸಿ ಕೊಳ್ಳಬೇಕು.

ಗೃಹ ಯಾಜಮಾನ್ಯವೆಲ್ಲವೂ ಸಾಧಾರಣವಾಗಿ ಸ್ತ್ರೀ ಅಧೀನವು. ಆದುದರಿಂದಲೇ ಆಕೆಯು ಗೃಹಕ್ಕೆ ರಾಣಿಯೆಂದು ಹೇಳಬಹುದು. ಶಿಶುಗಳ ನುಡಿಗಳೂ ಚೇಷ್ಟೆಗಳೂ, ಆಲೋಚನೆಗಳೂ, ಅಭ್ಯಾಸಗಳೂ ತಾಯಿಯನ್ನನುಸರಿಸಿಯೇ ಇರುವುವು. ಮಹಾಪುರುಷರ ಜೀವಿತ ಚರಿತ್ರೆಗಳನ್ನು ಪರಿಶೀಲಿಸಿದಲ್ಲಿ, ತಾಯಿಗಳು ಯಾವವಿಧವಾಗಿ ಅವರ ಜೀವನೋನ್ನತಿಗೆ ಸಹಾಯವಾಗಿದ್ದರೆಂಬುದು ನಮಗೆ ಸುಬೋಧಿತವಾಗುವುದು. ಕೆಲವರು ಕವೀಶ್ವರರಾದುದು ತಾಯಿಯ ಕವಿತಾಭಿರುಚಿಯಿಂದಲೇ. ಕೆಲವರು ಭಗವದ್ಭಕ್ತರಾದುದು ತಾಯಿಯ ಭಗವದ್ಭಕ್ತಿಯಿಂದಲೇ. ಕೆಲವರು ಸಂಘಸಂಸ್ಕರಣ ಪರಾಯಣರಾದುದು ತಾಯಿಯ ಸಂಸ್ಕರಣಾಸಕ್ತಿಯಿಂದಲೇ. ಕೆಲವರು ಶೌರ್ಯವಂತರಾದುದು ತಾಯಿಯ ಶೌರ್ಯಶೀಲತೆಯಿಂದಲೇ. ಕೆಲವರು ದೇಶಭಕ್ತರಾದುದು ತಾಯಿಯ ದೇಶಭಕ್ತಿಯಿಂದಲೇ. ಕೆಲವರು ವಿತರಣಶೀಲರಾದುದು ತಾಯಿಯ ವಿತರಣಭಾವದಿಂದಲೇ. ಕೆಲವರು ಪರೋಪಕಾರ ಪರಾಯಣರಾದುದು ತಾಯಿಯ ಪರೋಪಕಾರ ಬುದ್ಧಿಯಿಂದಲೇ. ಕವಿತಾನುರಾಗವು ಗೃಹದಲ್ಲಿಯೇ ಅಂಕುರಿಸುವುದು. ಈಶ್ವರ ಭಕ್ತಿಯು ಗೃಹದಲ್ಲಿಯೇ ಉದಯಿಸುವುದು. ಪರಾಕ್ರಮಶೀಲವು ಗೃಹದಲ್ಲಿಯೇ ಪ್ರಭವಿಸುವುದು. ದೇಶಾಭಿಮಾನವು ಗೃಹದಲ್ಲಿಯೇ ಆರಂಭವಾಗುವದು. ಜನೋಪಕಾರಬುದ್ಧಿಯು ಗೃಹದಲ್ಲಿಯೇ ಜನ್ಮಿಸುವುದು. ಇವು ಅವು ಎಂದು ಹೇಳುವುದೇಕೆ? ಸಕಲಸದ್ಗುಣಾಂಕುರಗಳೂ ಗೃಹಾರಾಮದಲ್ಲಿಯೇ ಹುಟ್ಟಿ ಬೆಳೆದು ಅಭಿವೃದ್ಧಿಯನ್ನು ಹೊಂದುವುವು. ಸುಗುಣವಂತರಾದ ತಾಯಿಗಳು ತಮ್ಮ ಶಿಶುಗಳನ್ನು ಗುಣವಂತರನ್ನಾಗಿ ಮಾಡಿದಂತೆ ದೇಶಚರಿತ್ರೆಗಳಲ್ಲಿ ನಿದರ್ಶನಗಳು ಅನೇಕವಾಗಿರುವುವು. ಹಾಗೆಯೇ ದುಷ್ಟಶೀಲರಾದ ತಾಯಿಗಳ ಮೂಲಕವಾಗಿ ಭ್ರಷ್ಟರಾದವರೂ ಕೂಡ ಸಾವಿರಾರು ಮಂದಿ ಇರುವರು. ದುರ್ಭಾಷೆಯನಾಡುವ ಸ್ತ್ರೀಯ ಮಗನು ಸಹಿತ ದುರ್ಭಾಷೆಗಳನ್ನಾಡುವುದರಲ್ಲಿ ಗಟ್ಟಿಗನಾಗುವನು. ಕೋಪಸ್ವಭಾವದವಳ ಶಿಶುವು ಕೋಪಸ್ವಭಾವವನ್ನುಳ್ಳುದೇ ಆಗುವುದು. ಧನಾಶಾಪರಳಾದ ಯುವಯುವತಿಯರ ಪುತ್ರನು ಧನಾಶಾಪರನೇ ಆಗುವನು. ತಾಯಿಯ ಲಕ್ಷಣಗಳೆಲ್ಲಾ ಮಕ್ಕಳ ಜೀವನ ಧರ್ಮಗಳಲ್ಲಿ ಪ್ರತಿಫಲಿಸುವುವು. ಸಂತಾನದ ಸುಗತಿಯಾಗಲಿ, ದುರ್ಗತಿಯಾಗಲಿ ಮಾನಿನೀ ಮಣಿಯರ ಮೇಲೆ ಆಧಾರವಾಗಿರುವುದರಿಂದ ಅವರನ್ನು ಒಳ್ಳೆಯವರನ್ನಾಗಿ ಮಾಡುವ ಬಾಧ್ಯತೆ (ಜವಾಬ್ದಾರಿ) ಯು ಪುರುಷರನ್ನು ವಹಿಸುವುದು.

ಆವವಿಧವಾಗಿ ಸ್ತ್ರೀಯರನ್ನು ಸರಿಯಾದ ಸ್ಥಿತಿಗೆ ತರಬಹುದು?-ಗೃಹನಿರ್ವಹಣವು ಅವರ ಮುಖ್ಯ ಕರ್ತವ್ಯವಾದುದರಿಂದ ಗೃಹಕೃತ್ಯಗಳನ್ನು ನಿಪುಣತೆಯಿಂದ ನೆರವೇರಿಸುವಹಾಗೆ ಅವರನ್ನು ಸರಿಯಾದ ಸ್ಥಿತಿಗೆ ತರಬೇಕೆಂದು ಹೇಳುವರು. ಸರಿ, ಈ ಪ್ರತ್ಯುತ್ತರವು ಸಮಂಜಸವಾಗಿಯೇ ಇರುವುದು. ಆದರೆ ಗೃಹನಿರ್ವಹಣವು ಸಾಮಾನ್ಯವಾದ ಕಾರ್ಯವಲ್ಲವು. ಗೃಹವೊಂದು ವಿದ್ಯಾಲಯವು; ಸ್ತ್ರೀ ಉಪಾಧ್ಯಾಳು. ಗೃಹವೊಂದು ವೈದ್ಯಶಾಲೆ, ಸ್ತ್ರೀ ವೈದ್ಯಳು. ಗೃಹವೊಂದು ನ್ಯಾಯಸಭೆ; ಸ್ತ್ರೀ ನ್ಯಾಯಾಧಿಪಳು. ಗೃಹವೊಂದು ಚಕ್ರರಾಜ್ಯವು; ಸ್ತ್ರೀ ರಾಣಿ. ಈ ವಿಧವಾಗಿ ಅಸಾಧ್ಯವಾದ ಅನೇಕವಿಧಾಯಕ ಕೃತ್ಯಗಳು ಆಕೆಗೆ ಸಂಬಂಧಪಟ್ಟಿವೆ. ಆಕೆ ವಿದ್ಯಾವತಿಯೂ ಗುಣವತಿಯೂ ಶಾಸ್ತ್ರಜ್ಞಳೂ ಆಗದೆ ಇದ್ದಲ್ಲಿ ತನ್ನ ವಿಧಾಯಕ ಕೃತ್ಯಗಳನ್ನು ಹೇಗೆ ನಿರ್ವಹಿಸಬಲ್ಲಳು? ಶಿಶುಗಳನ್ನು ಕ್ರಮವಾದ ಮಾರ್ಗದಲ್ಲಿ ಕಾಪಾಡುವುದು ಬಹುಕಠಿನ ಕಾರ್ಯವು. ಒಂದುವೇಳೆ ಪಾಠಗಳನ್ನು ಹೇಳಬೇಕಾಗಿರುವುದು. ಮತ್ತೊಂದುವೇಳೆ ಶಿಕ್ಷೆಯನ್ನು ವಿಧಿಸಬೇಕಾಗಿರುವುದು. ಮಗದೊಂದುವೇಳೆ ಧರ್ಮವನ್ನು ಬೋಧಿಸಬೇಕಾಗಿರುವುದು. ಇನ್ನೊಂದುವೇಳೆ ಶಾಸ್ತ್ರರಹಸ್ಯಗಳನ್ನು ತಿಳಿಸಬೇಕಾಗಿರುವುದು. ಬಾಲಕರಿಗೆ ಸಂಶಯಗಳು ಹೆಚ್ಚು. ಲೋಕಮರ್ಮವೆಲ್ಲವನ್ನೂ ತಿಳಿದುಕೊಳ್ಳಬೇಕೆಂದು ಮಕ್ಕಳು ಶರಪರಂಪರೆಯಾಗಿ ಪ್ರಶ್ನೆಗಳನ್ನು ಹಾಕಿ ತಮ್ಮ ತಾಯಿಗಳನ್ನು ಬಾಧಿಸುತ್ತಿರುವರು. ತಿಳುವಳಿಕೆಯಿಲ್ಲದ ತಾಯಿಗಳು ಅವರ ಅನುಮಾನಗಳನ್ನು ಪರಿಹಾರ ಮಾಡಲಾರದೆ ಶಿಕ್ಷಿಸುತ್ತಿರುವರು. ಶಿಶುಗಳನ್ನು ನೋಡಿಕೊಳ್ಳುತ್ತಿರುವುದೇ ಅಲ್ಲದೆ, ಗೃಹಿಣಿಯು ದಾಸದಾಸೀ ಜನಗಳನ್ನೂ ಪಾಲಿಸಬೇಕಾಗಿರುವುದು. ಒಂದುವೇಳೆ ಪ್ರಸನ್ನಮುಖಿಯಾಗಿ ಅವರನ್ನು ಆದರಿಸುತ್ತಿರಬೇಕು. ಮತ್ತೊಂದುವೇಳೆ ಕಠಿನತ್ವವನ್ನು ವಹಿಸಿ ಕೆಲಸಗಳನ್ನು ಮಾಡಿಸುತ್ತಿರಬೇಕು. ಈ ಕುಟುಂಬರಾಜ್ಯಭಾರವನ್ನು ಸಮರ್ಥತೆಯಿಂದ ನಿರ್ವಹಿಸುವುದಕ್ಕೆ ಸ್ತ್ರೀಯಲ್ಲಿ ನಾನಾವಿಧ ಯೋಗ್ಯತೆಗಳಿರಬೇಕಾದುದು ಆವಶ್ಯಕವು. ಮಾಡಬೇಕಾದ ಕಾರ್ಯಗಳು ಹೀಗೆ ನಾನಾವಿಧಗಳಾಗಿರುವುದರಿಂದಲೇ ಸ್ತ್ರೀಯರಿಗೆ ಕೂಡ ಪುರುಷರಿಗೆ ಸಮಾನವಾಗಿ ಬುದ್ಧಿಯು ಅನುಗ್ರಹಿಸಲ್ಪಟ್ಟಿರುವುದು. ಕೆಲವರು ಭಾವಿಸುವಂತೆ ಸ್ತ್ರೀಯರ ವಿಧಿಗಳೆಲ್ಲವೂ ಅಡುಗೆಮನೆಯಿಂದಲೂ, ಮಕ್ಕಳನ್ನು ಆವುದೋ ಒಂದು ವಿಧವಾಗಿ ನೋಡಿಕೊಳ್ಳುವುದರಿಂದಲೂ ಪೂರ್ತಿಯಾಗುವ ಪಕ್ಷದಲ್ಲಿ ಆಕೆಗೆ ವಿವಿಧ ವಿಧಗಳಲ್ಲಿ ವಿಕಾಸವನ್ನು ಹೊಂದುವಂತಹ ಅಮೂಲ್ಯವಾದ ಬುದ್ಧಿಯು ಆವಶ್ಯಕವೇ ಇಲ್ಲವು. ಅದ್ಭುತವಾದ ಇಂತಹ ಬುದ್ಧಿಯು ಆವಶ್ಯಕತೆಇಲ್ಲದೇನೇ ಪಕ್ಷಿಗಳು ತಮ್ಮ ಮೊಟ್ಟೆಗಳನ್ನು ಸಂರಕ್ಷಿಸಿಕೊಳ್ಳುತ್ತಿರುವುದಿಲ್ಲವೆ? ಪಶುಗಳು ತಮ್ಮ ಸಂತಾನವನ್ನು ಕಾಪಾಡಿಕೊಳ್ಳುತ್ತಿರುವುದಿಲ್ಲವೆ? ತಮ್ಮನ್ನು ತಾವು ಸಂರಕ್ಷಿಸಿಕೊಳ್ಳುತ್ತಿರುವುದಿಲ್ಲವೇ? ಸ್ತ್ರೀಯರಿಗೆ ಬುದ್ಧಿಯು ಪ್ರಸಾದಿಸಲ್ಪಟ್ಟಿರುವುದು ಸರ್ವ ವಿಧಗಳಲ್ಲಿಯೂ ಅಭಿವೃದ್ಧಿಯನ್ನು ಹೊಂದಬೇಕೆಂದೇ ಹೊರತು ಶಿಕ್ಷೆಯಿಲ್ಲದೆ ಕ್ಷಯಿಸುವುದಕ್ಕಲ್ಲವು. ಆದುದರಿಂದ ಪುರುಷರ ಬುದ್ಧಿಗೆ ಸರಿಯಾಗಿ ಸ್ತ್ರೀಯರ ಬುದ್ಧಿಯು ಸಂಪೂರ್ಣವಿಕಾಸವನ್ನು ಹೊಂದಬೇಕು. ಆಕೆಯು ಸರ್ವ ಶಾಸ್ತ್ರಗಳನ್ನೂ ಕಲಿಯಬೇಕು. ಆಗಲೇ ಆಕೆಯು ಗೃಹವನ್ನು ಸರಿಯಾಗಿ ಪರಿಪಾಲಿಸಬಲ್ಲಳು. ಸರ್ವಾಂಗಶಿಕ್ಷೆಯನ್ನು ಹೊಂದಿದ ನಾರೀಮಣಿಯು ಪಾಲನೆಯಲ್ಲಿರುವ ಗೃಹವೇ ಸದ್ಗೃಹವು. ಅಂತಹ ಸದ್‌ಗೃಹಗಳಿಂದಲೇ ಉತ್ತಮ ಧರ್ಮಗಳು ಉದಯಿಸುತ್ತಿರುವುವು. ಅಂತಹ ಸದ್‌ಗೃಹಗಳಿಂದ ಉತ್ತಮಜಾತಿಗಳುದ್ಭವಿಸುವುವು. ಅಂತಹ ಸದ್‌ಗೃಹಗಳೇ ಭೂಲೋಕವನ್ನು ಸ್ವರ್ಗಕ್ಕೆ ಸಮಾನವಾಗಿ ಮಾಡಿಬಿಡುವುವು. ಎಂದಿಗೆ ಅಂತಹ ಸದ್‌ಗೃಹಗಳು ನಮ್ಮ ಹಿಂದೂದೇಶದಲ್ಲಿ ಪ್ರಕಾಶಿಸುವವೋ!

ಪೋಲೆಂಡದ ಹೃದಯದ್ರಾವಕ ಸ್ಥಿತಿಯು.

ಪೆಟ್ರೋಗ್ರಾಡಿನಿಂದ ರೂಟರ ಕಂಪನಿಯ ಸ್ಪೆಶಲ ತಾರು ಬಂದದ್ದು ಇದರಡಿ ಕೊಟ್ಟಂತಿರುತ್ತದೆ.

“ಜರ್ಮನರು ರಶಿಯಾದ ಪೋಲೆಂಡದಲ್ಲಿ ಮಾಡಿದ ದಾಳಿಯಿಂದ ೧೯೫ ಪಟ್ಟಣಗಳೂ ೮೫ ಹಳ್ಳಿಗಳೂ ನಾಶವಾಗಿದ್ದು, ಒಂದು ಖರ್ವ ೫೦ ಅಬ್ಜ ರೂಪಾಯಿಗಳ ಹಾನಿಯಾಗಿರುತ್ತದೆ”

ಇಷ್ಟರಿಂದಲೇ ಇದರ ಹೃದಯದ್ರಾವಕ ಸ್ಥಿತಿಯು ತಿಳಿಯುವುದಿಲ್ಲ. ಆದುದರಿಂದ ಕೆಲಮಟ್ಟಿಗೆ ವಿಸ್ತೃತವಾಗಿ ಬರೆಯಬೇಕಾಗಿರುತ್ತದೆ. ಪೋಲೆಂಡವು ಮೂರು ತುಂಡಾಗಿ ಒಂದೊಂದು ತುಂಡು, ರಶಿಯಾ—ಜರ್ಮನಿ ಮತ್ತೂ ಆಸ್ಟ್ರಿಯಾದ ವಶದಲ್ಲಿರುತ್ತದೆ. ಜರ್ಮನರು ರಶಿಯಾದ ಪೋಲೆಂಡದಲ್ಲಿ ದಾಳಿಯಿಟ್ಟಿದ್ದು, ರಶಿಯರು ಆಸ್ಟ್ರಿಯರ ಪೋಲೆಂಡದಲ್ಲಿ ದಂಡೆತ್ತಿ ಬಂದಿದ್ದಾರೆ. ಜರ್ಮನೀ ಮತ್ತೂ ಆಸ್ಟ್ರಿಯಾಗಳ ಪೋಲೆಂಡುಗಳು ತಮ್ಮ ಪೋಲೆಂಡಕ್ಕೆ ಕೊಡಬೇಕೆಂದು ರಶಿಯರು ಪೋಲೆಂಡದ ಪೂರ್ಣದೇಶಕ್ಕೆ ಸ್ವರಾಜ್ಯವನ್ನು ಕೊಟ್ಟಂತೆ ಯುದ್ಧಾರಂಭದಲ್ಲಿ ಜಾಹೀರುಮಾಡಿದರು.

ವಾಸ್ತವಿಕವಾಗಿ ನೋಡಿದರೆ ಪೋಲೆಂಡವು ಕುರುಕ್ಷೇತ್ರವಾಗತಕ್ಕದ್ದಲ್ಲ. ಯಾಕೆಂದರೆ—ಇದನ್ನು ಮೂವರು ಗೆದ್ದು ಹಂಚಿಕೊಂಡಿದ್ದಲ್ಲದೆ ಪ್ರಜರು ಇವರ ದಾಸಾನುದಾಸರಾಗಿದ್ದಾರೆ. ಈ ದಾಸ್ಯತ್ವದ ಮೂಲಕ ಪೋಲಿಶ ಪ್ರಜರು ತಾವು ಅಧಿಕಾರಕ್ಕೊಳಪಟ್ಟ ರಾಜನ ಸೈನ್ಯದಲ್ಲಿ ತುಂಬಲ್ಪಟ್ಟವರಾಗಿ ಪರಸ್ಪರ ಹೋರಾಡಿ, ಯಾದವರ ಯುದ್ಧದಂತೆ ಭ್ರಾತೃದ್ರೋಹಿಗಳಾಗುತ್ತಿರುವರು. ಕೈಗೆ ಕೈಹತ್ತಿ ಕಾಳಗಮಾಡುವ ಸಮಯಬಂದಾಗ, ಜರ್ಮನ ಸೈನಿಕನ ಅರಿವೆಗಳನ್ನು ತೊಟ್ಟ ಪೋಲೀಶನು, ರೂಸ ವಸ್ತ್ರಾಂಕಿತನಾದ ದೇಶಬಂಧುವಿನೊಡನೆ ಹೋರಾಡಿ, ರಕ್ತಸ್ರಾವ ಮಾಡಬೇಕಾಗಿರುತ್ತದೆ. ಈ ರೀತಿಯಾಗಿ ಇವರ ದೇಶಾಭಿಮಾನ, ಜನಾಭಿಮಾನವು ನಷ್ಟವಾಗಿರುತ್ತದೆ. ಒಂದೊಂದು ಪಕ್ಷಕ್ಕೆ ಎಂಟೆಂಟು ಲಕ್ಷ ಜನರು ನಿಂತು ಹೋರಾಡುವುದು ಸುಧಾರಿಸಿದ ಜಗತ್ತಿನ ಇತಿಹಾಸದಲ್ಲಿ ಅಭೂತಪೂರ್ವವೇಸರಿ.

ರಶಿಯಾದ ಪೋಲೆಂಡದಲ್ಲಿ ಹತ್ತು ಜಿಲ್ಲೆಗಳಿರುತ್ತವೆ. ಇವುಗಳಲ್ಲಿ ಒಂಭತ್ತನ್ನು ಜರ್ಮನರು ಆಕ್ರಮಿಸಿದ್ದಾರೆ. ಇದರ ಕ್ಷೇತ್ರಫಲವು ೪೨೦೦೦ ಚೌರಸ ಮೈಲಾಗುತ್ತದೆ. ಇದರಲ್ಲಿ ೩೫೦೦೦ ಕ್ಷೇತ್ರದಷ್ಟು ಪ್ರದೇಶವನ್ನು ಜರ್ಮನರು ಆಕ್ರಮಿಸಿದ್ದಾರೆ. ಈ ಸೀಮಾಂತರದಲ್ಲಿ ಸಿಕ್ಕಿ ಎಲ್ಲ ಪಟ್ಟಣಗಳೂ, ಗ್ರಾಮಗಳೂ ಹೇಳಲಿಕ್ಕೆ ಹೆಸರಿಲ್ಲದೆ ಹೋಗಿವೆ. ಹೇನ್ರಿ ಸಿನಕಿವಿಜರೆಂಬ ರಶಿಯದ ಹೆಸರಾದ ಗ್ರಂಥಕಾರರು ಈ ನಾಶನವನ್ನು ಹೃದಯಭೇದಕವಾಗಿ ಹೇಳುತ್ತಾರೆ:—

“ಪೋಲೆಂಡದ ರಾಜ್ಯದಲ್ಲಿ ೧೫೦೦೦ ಹಳ್ಳಿಗಳು ಸುಡಲ್ಪಟ್ಟಿವೆ. ಅಥವಾ ನಾಶವಾಗಿರುತ್ತವೆಂದು ತಿಳಿಯತಕ್ಕದು. ಒಂದುಸಾವಿರ ಗುಡಿ—ಮಠಗಳು ನೆಲಸಮವಾಗಿವೆ. ಜರ್ಮನರು ಇಲ್ಲಿಯ ಪ್ರತಿಯೊಂದು ಪದಾರ್ಥವನ್ನೂ ಸುಲಿದಿದ್ದಾರೆ. ಬಡ ರೈತನ ಕೋಳಿಯನ್ನು ಸಹ ಬಿಡಲಿಲ್ಲ. ನಿರಾಶ್ರಿತರಾದ ಸ್ತ್ರೀಯರು ಅಡವಿಯಪಾಲಾಗಿದ್ದು, ಚಳಿ ಮತ್ತೂ ಕ್ಷುಧೆಯಿಂದ ಪೀಡಿತರಾಗಿ ಸಾವಿರಾರು ಜನರು ಸಾಯುತ್ತಿರುವರು. “ಅವ್ವಾ ಅನ್ನವೆಂದು ಕಂದಮ್ಮಗಳು ಅಳುವಾಗ, ದುಃಖದಿಂದ ಕಣ್ಣೀರನ್ನು ಮಕ್ಕಳಮೇಲೆ ಹಾಕುವ ಹೊರ್ತು ತಾಯಿಯ ಹತ್ತಿರ ಇನ್ನೇನೂ ಇರುವುದಿಲ್ಲ”

ಮೇಲೆ ಹೇಳಿದಂತೆ ಹೃದಯದ್ರಾವಕ ಸ್ಥಿತಿಯುಂಟಾಗಲಿಕ್ಕೆ ಜರ್ಮನರೂ ಯುದ್ಧವೂ ಸರಿಯಾಗಿ ಕಾರಣವಾಗಿರುತ್ತವೆ. ಜರ್ಮನರು ಇಲ್ಲಿಂದ ಹತ್ತುಲಕ್ಷ ಕುದುರೆಗಳನ್ನೂ ಇಪ್ಪತ್ತುಲಕ್ಷ ದನಗಳನ್ನೂ ಹಿಡಿದೊಯ್ದಿರುತ್ತಾರೆ. ಧಾನ್ಯ ಮಾಂಸ ಮತ್ತೂ ಒಂದು ಹನಿ ಹಾಲನ್ನು ಸಹ ಬಿಟ್ಟಿರುವುದಿಲ್ಲ. ಅರ್ಥ ಹಾನಿಯು ಹತ್ತುಲಕ್ಷ ರೂ. ಬೆಲೆಳಿದೆ. ೮ ಲಕ್ಷ ಕೂಲಿಕಾರರಿಗೆ ಜೀವನವಿಲ್ಲವೆಂಬದೊಂದೇ ಸಂಗತಿಯಿಂದ ಅಲ್ಲಿಯ ಕೆಲಸಗಳ ಕೇಡನ್ನು ಕಲ್ಪಿಸಬಹುದು.

ಜರ್ಮನರ ದುಷ್ಕೃತವು ಅಲ್ಪಸ್ವಲ್ಪವಾಗಿಲ್ಲ. ಮೊದಲು ಇವರು ದೌಡುಮಾಡಿ ಬಂದಾಗ ಕಲ್ಲಿದ್ದಲಿಯ ಖನಿಗಳೂ, ಎಣ್ಣೆಯ ಖನಿಗಳೂ ಕೈವಶವಾದುವು. ಮುಂದೆ ರಶಿಯರ ಪೆರ್ಬಡೆಯು ಬಂದು ಹಿಂದಕ್ಕೆ ಸರಿಯುವಾಗ, ಇವರು ಸುರಂಗ ತುಂಬಿ ಎಲ್ಲ ಖನಿಗಳನ್ನು ಧ್ವಂಸಮಾಡಿದರು. ತಿರುವಾಯ ಪುನಃ ಯುದ್ಧಮಾಡಿ ಈ ಪ್ರಾಂತವನ್ನು ಗೆದ್ದರು. ಆದರೆ ಖನಿಗಳ ಉತ್ಪತ್ತಿ ಮಾತ್ರ ಹೋಯಿತು. ತಿಂಗಳೊಂದಕ್ಕೆ ೩೦ ಸಾವಿರ ಬಂಡಿ ಕಲ್ಲಿದ್ದಲಿಯು ಹೊರಡುತ್ತಿದ್ದುದು ಈಗ ಬಹಳವಾದರೆ ನೂರು ಬಂಡಿ ಹೊರಡುತ್ತಿದೆ. ಒಂದು ಬಂಡಿ ಯೆಂದರೆ ಒಂದು ವ್ಯಾಗನು.

ಪೋಲೆಂಡದ ಜನಸಂಖ್ಯೆಯು ಒಂದುಕೋಟಿ ಇದ್ದು ೪೦ ಲಕ್ಷ ಜನರು ಅನ್ನಾನ್ನಗತಿಯಾಗಿ ಸಾಯುವ ಪಂಥದಲ್ಲಿರುತ್ತಾರೆ.

ರಾಜಹಂಸ.

ವಾಣಿಜ್ಯ.

(ಚರ್ಮದ ವ್ಯಾಪಾರವು.)

ಈಗಿನ ಮಹಾಯುದ್ಧದಲ್ಲಿ ತೊಡಗಿರುವ ಜರ್ಮನಿ ದೇಶದಲ್ಲೂ ಅದರ ಮಿತ್ರರಾಷ್ಟ್ರಗಳಲ್ಲೂ ಸಹ ಚರ್ಮಕ್ಕೆ ಬಹಳ ಕ್ಷಾಮವುಂಟಾಗಿದೆಯೆಂದು ಪತ್ರಿಕೆಗಳ ಮೂಲಕ ಗೊತ್ತಾಗುತ್ತದೆ. ನಮ್ಮ ಭರತಖಂಡದಿಂದ ಪ್ರತಿವರ್ಷವೂ ವಿದೇಶಗಳಿಗೆ ಹೋಗುತ್ತಿದ್ದ ತೆರತೆರದ ಚರ್ಮಗಳ ಬೆಲೆಯೆಲ್ಲಾ ಒಟ್ಟು ಬಹುಶಃ ೮ ಕೋಟಿ ರೂ. ಗಳಷ್ಟಾಗುತ್ತಿದ್ದಿತು. ಇಷ್ಟು ಚರ್ಮದಲ್ಲಿ ಬಹುಭಾಗವು ಜರ್ಮನಿ ಆಸ್ಟ್ರಿಯಾಗಳಿಗೇ ಸಾಗಿಹೋಗುತ್ತಿದ್ದಿತು. ಜರ್ಮನಿ ದೇಶದಲ್ಲಿ ತಾಮ್ರಕ್ಕೂ ಆಹಾರ್ಯವಸ್ತುಗಳಿಗೂ ವಿಶೇಷವಾದ ಕ್ಷಾಮವುಂಟಾಗಿದೆಯೆಂಬ ಸಂಗತಿಯು ಈ ಮೊದಲೇ ನಮ್ಮ ವಾಚಕರಿಗೆಲ್ಲಾ ತಿಳಿದಿರುವುದಷ್ಟೆ. ಆ ಪದಾರ್ಥಗಳ ಕ್ಷಾಮದಲ್ಲಿ ಬಿದ್ದು ಪೇಚಾಡುತ್ತಿರುವ ಆ ದೇಶಕ್ಕೆ ಈಗ ಚರ್ಮದ ಕ್ಷಾಮವೂ ಬಂದು ಒದಗಿದೆಯೆಂಬ ಸಂಗತಿಯು ಈಚೆಗೆ ಗೊತ್ತಾಗುತ್ತದೆ. ಅವರು ಈಗ ಚರ್ಮಕ್ಕೆ ಪ್ರತಿಯಾಗಿ ಒಂದು ಕೃತಕ ಚರ್ಮ (ಚರ್ಮದಂತೆಯೇ ಇರುವ ಒಂದು ವಸ್ತು) ವನ್ನು ನಿರ್ಮಿಸಿದ್ದಾರಂತೆ. ಅದನ್ನೇ ತಮ್ಮ ಟೋಪಿಗಳ ಮೇಲಣ ಹೊದಿಕೆಗೆ ಪ್ರತಿಯಾಗಿ ಉಪಯೋಗಿಸುತ್ತಿದ್ದಾರೆ. ಈ ಕೃತಕ ಚರ್ಮದ ಉಪಯೋಗವು ಪರೀಕ್ಷಾರೂಪದಲ್ಲದೆ. ಇದು ನಿಜಚರ್ಮದಂತೆಯೇ ಕೆಲಸಮಾಡುವುದಾದರೆ, ಆ ದೇಶದವರು ಇದನ್ನು ಯಥೇಚ್ಛವಾಗಿ ನಿರ್ಮಿಸಿ ಪಾದರಕ್ಷೆ ಮೊದಲಾದ ಪದಾರ್ಥಗಳನ್ನು ಕೂಡ ಅದರಿಂದಲೇ ನಿರ್ಮಿಸಬೇಕೆಂದು ಕುತೂಹಲವುಳ್ಳವರಾಗಿದ್ದಾರಂತೆ. ನೋಡಿದಿರಾ! ವಿದೇಶೀಯರ ಸಾಹಸವನ್ನು! ಹಸಿಯ ಮೂಲಪದಾರ್ಥಗಳು ವಿದೇಶಗಳಿಂದ ಬರುವುದು ತಪ್ಪಿದರೆ ಕೃತಕರೂಪದಿಂದ ಅಂಥ ವಸ್ತುಗಳನ್ನೇ ನಿರ್ಮಿಸಿ ಲೋಕೋಪಯೋಗಿ ಪದಾರ್ಥಗಳನ್ನು ನಿರ್ಮಿಸಿ ಧನಾರ್ಜನೆ ಮಾಡಲು ವಿದೇಶೀಯರು ತಮ್ಮ ಬುದ್ಧಿಶಕ್ತಿ ದ್ರವ್ಯಶಕ್ತಿ ಶಾಸ್ತ್ರಜ್ಞಾನಾದಿಗಳನ್ನು ಉಪಯೋಗಿಸುತ್ತಿರುವಾಗ, ನಮ್ಮ ದೇಶದವರು ತಮ್ಮಲ್ಲಿ ಯಥೇಚ್ಛವಾಗಿ ಹುಟ್ಟುವ ಮೂಲವಸ್ತುಗಳ ಉಪಯೋಗವನ್ನೇ ಸರಿಯಾಗಿ ಮಾಡಿಕೊಳ್ಳಲಾರದೆ ಆರರದನ್ನು ಮೂರಕ್ಕೆ ಮಾರಿ, ಪರರ ಕೈಯನ್ನು ಕಾಯ್ದುಕೊಂಡು ದಾರಿದ್ರ್ಯದಲ್ಲಿ ನರಳುತ್ತಿದ್ದಾರೆ. ಇನ್ನಾದರೂ ನಮ್ಮ ದೇಶದವರು ಎಚ್ಚತ್ತು ಕಣ್ದೆರೆದು ದೇಶೋದ್ಧಾರಕ್ಕಾಗಿಯೂ ಆತ್ಮೋದ್ಧಾರಕ್ಕಾಗಿಯೂ ತಮ್ಮ ವಿದ್ಯಾ ದ್ರವ್ಯ ಬುದ್ಧಿ ಮೊದಲಾದುವುಗಳನ್ನು ವಿನಿಯೋಗಿಸಿಕೊಳ್ಳುವವರಾಗಲಿ.

ಗೋದುವೆ.

ಕಳೆದ ಸಾಮ್ರಾಜ್ಯಶಾಸನ ಸಭೆಯಲ್ಲಿ ಭರತಖಂಡದ ಗೋದುವೆಯ ವ್ಯಾಪಾರವೆಲ್ಲಾ ಸರ್ಕಾರದ ಅಧೀನದಲ್ಲೇ ಇಟ್ಟುಕೊಳ್ಳಲ್ಪಡುವುದೆಂಬ ವಿಷಯವು ಹೇಳಲ್ಪಟ್ಟಿತಷ್ಟೆ, ಹಾಗೆ ಪ್ರಕೃತ ಸಮಯದಲ್ಲಿ ಸರ್ಕಾರದವರು ಮಾಡಬೇಕಾದುದಕ್ಕೆ ತಕ್ಕ ಕಾರಣವಿಲ್ಲದೆ ಇಲ್ಲ. ಭರತಖಂಡದ ಉತ್ತರಭಾಗದ ಪ್ರಜೆಗಳಲ್ಲನೇಕರಿಗೆ ಗೋದುವೆಯ ಹಿಟ್ಟೇ ಮುಖ್ಯಾಹಾರ್ಯವಸ್ತುವಾಗಿದೆ. ಅಲ್ಲಿನವರು ಅಕ್ಕಿಯನ್ನವನ್ನು ತಿಂದೇ ಅರಿಯರು. ಆದರೆ ಆ ದೇಶದಲ್ಲಿ ಗದ್ದೆಯ ಭೂಮಿಗಳಿಲ್ಲದೆ ಇಲ್ಲ. ಮಹಾಮಹಾನದಿಗಳ ಕಾಲ್ವೆಗಳು ವಿಸ್ತಾರವಾಗಿರುತ್ತ ಅವುಗಳ ಕೆಳಗೆ ಲಕ್ಷಾಂತರ ಎಕರೆಯ ತರಿ ಭೂಮಿಗಳು ಸಾಗುವಳಿಯಾಗುತ್ತಿವೆ. ಆದರೆ ಆ ಭೂಮಿಗಳಲ್ಲಿ ಬೆಳೆಯುವುದೆಲ್ಲಾ ಗೋದುವೆಯೇ ಆಗಿರುತ್ತದೆ.

ಈಗ ಯೂರೋಪುದೇಶಕ್ಕೆ ಗೋದುವೆಯ ಆವಶ್ಯಕತೆಯು ಬಹಳವಾಗಿದೆ. ಗ್ರೇಟ್ ಬ್ರಿಟನ್ನಿನವರಿಗೂ ಫ್ರಾನ್ಸಿನವರಿಗೂ ಗೋದುವೆಯ ರೊಟ್ಟಿಯೇ ಮುಖ್ಯಾಹಾರವು. ಈಗಿನ ಯುದ್ಧದಲ್ಲಿ ತೊಡಗಿರುವ ಇಂಗ್ಲೀಷ್ ಫ್ರೆಂಚ್ ಸೈನಿಕರಿಗೇ ಅಲ್ಲದೆ ನಮ್ಮ ದೇಶದ ಪಂಜಾಬಿ-ಗೂರ್ಖಾ ಸೈನಿಕರಿಗೂ ಕೂಡ ಗೋದುವೆಯ ರೊಟ್ಟಿಯೇ ಮುಖ್ಯಾಹಾರ್ಯವು. ಈಗಲಾದರೊ ಭರತಖಂಡದ ಗೋದುವೆಯನ್ನೇ ಎಲ್ಲರೂ ಇದಿರುನೋಡುತ್ತಿದ್ದಾರೆ. ಈಗ ಮಿತ್ರಮಂಡಲಿಯವರಿಗೆ ಬೇಕಾದ ಮುಖ್ಯವಸ್ತುಗಳನ್ನು ಒದಗಿಸಿಕೊಡುವ ದೇಶಗಳಲ್ಲಿ ಭರತಖಂಡವು ಒಂದು ಮುಖ್ಯಸ್ಥಾನವಾಗಿ ಗಣಿಸಲ್ಪಟ್ಟಿದೆ. ಸಾಧಾರಣಕಾಲದಲ್ಲಿ ಗ್ರೇಟ್ ಬ್ರಿಟನ್ನಿಗೂ ಫ್ರಾನ್ಸಿಗೂ ರಷ್ಯಾದೇಶದಿಂದ ಬಹಳ ಗೋದುವೆಯು ಸಾಗಿ ಬರುತ್ತಿದ್ದಿತು. ಈಗ ಯುದ್ಧವು ಪ್ರಾಪ್ತವಾಗಿ ಡಾರ್ಡಿನಲ್ಸ್ ಜಲಸಂಧಿಯು ಕಟ್ಟಾಗಿ ಹೋಗಿರುವುದರಿಂದ ರಷ್ಯಾದೇಶದ ಸಾಮಗ್ರಿಗಳು ಜಲಮಾರ್ಗವಾಗಿ ಆ ದೇಶಗಳಿಗೆ ಬರುವುದಕ್ಕೆ ಅವಕಾಶವಿಲ್ಲದೆ ಹೋಗಿದೆ. ಡಾರ್ಡಿನಸಲ್ಸಿನ ಹೊರತು ರಷ್ಯಾ ಹಡಗುಗಳಿಗೆ ಪಶ್ಚಿಮರಾಷ್ಟ್ರಗಳಿಗೆ ಹೋಗಲು ಬೇರೆ ಮಾರ್ಗವಿಲ್ಲ. ಉತ್ತರದ ಬಾಲ್ಟಿಕ್ ಸಮುದ್ರದಲ್ಲಿ ಹಿಮಾಧಿಕ್ಯದಿಂದ ನೀರು ಗಟ್ಟಿಕಟ್ಟಿಕೊಂಡು ಪ್ರಯಾಣಕ್ಕೆ ಅವಕಾಶಕೊಡುತ್ತಲಿಲ್ಲ. ಈಗಿನ ಡಾರ್ಡಿನೆಲ್ಸ್ ಬಾಸ್ಪರಸ್ ಜಲಸಂಧಿಗಳ ಯುದ್ಧವು ಮುಗಿದು ಆ ದಾರಿಯು ಬಿಡಿಸಲ್ಪಟ್ಟರೆ ರಷ್ಯಾದೇಶದಿಂದ ಮಿತ್ರಮಂಡಲಿಯವರಿಗೆ ಅನಂತ ಸಾಮಗ್ರಿಗಳು ಬಂದು ಒದಗುವುವು. ಬಿಸಿಲು ಹೆಚ್ಚಿ ಉತ್ತರಸಮುದ್ರದ ಹಿಮದ ಗಡ್ಡೆಗಳು ಕರಗಿದ ಬಳಿಕ ಅತ್ತಣಿಂದಲೂ ಸ್ವಲ್ಪ ಧಾನ್ಯಾದಿಗಳು ರಷ್ಯಾದೇಶದಿಂದ ಮಿತ್ರಮಂಡಲಿಯವರಿಗೆ ಬಂದೊದಗಬಹುದು. ಆದರೆ ಸದ್ಯಕ್ಕೆ ರಷ್ಯಾದ ಧಾನ್ಯಗಳು ಒದಗದೆ ಹೋಗಿವೆ. ಇದಲ್ಲದೆ ಅರ್ಜಂಟೈನ್ ಎಂಬ ಮತ್ತೊಂದು ದೇಶದಿಂದಲೂ ಗೋದುವೆಯು ಇಂಗ್ಲೆಂಡ್ ಫ್ರಾನ್ಸ್‌ಗಳಿಗೆ ಸಾಗಿಬರುತ್ತಿದ್ದಿತು. ಈಗ ಅಲ್ಲೂ ಕಾಲಸ್ಥಿತಿಯು ಸರಿಯಾಗಿಲ್ಲದುದರಿಂದ, ಅದೂ ಧಾನ್ಯವನ್ನು ಹೊರಕ್ಕೆ ಒದಗಿಸಿಕೊಡಲಾರದು. ಆಸ್ಟ್ರೇಲಿಯಾದಲ್ಲೂ ಕೂಡ ಗೋದುವೆಯು ಬೆಳೆಯು ಇನ್ನೂ ಕೈಸೇರದಿರುವುದರಿಂದ ಅವರೂ ಪರದೇಶದ ಧಾನ್ಯವನ್ನೇ ತಮ್ಮಲ್ಲಿಗೆ ತರಿಸಿಕೊಳ್ಳುವುದರಲ್ಲಿದ್ದಾರೆ. ಇವೆಲ್ಲ ಕಾರಣಗಳಿಂದ ಇಂಗ್ಲೆಂಡ್ ಫ್ರಾನ್ಸುಗಳಿಗೂ ಯುದ್ಧಾಂಗಣಕ್ಕೂ ಈಗ ಭರತಖಂಡದ ಗೋದುವೆಯೇ ಮುಖ್ಯ ಗತಿಯಾಗಿದೆ. ಈ ಸಂದನ್ನು ತಿಳಿದು ವ್ಯಾಪಾರಿಗಳು ಗೋದುವೆಯ ಬೆಲೆಯನ್ನು ಆತ್ಮಲಾಭದೃಷ್ಟಿಯಿಂದ ಹೆಚ್ಚಿಸಿಬಿಟ್ಟರೆ, ಇಲ್ಲೂ ಹೊರಗೂ ಕೊಂಡು ತಿನ್ನುವ ಬಡವರಿಗೆ ಬಹಳ ಕಷ್ಟವಾಗುವುದೆಂಬ ಯೋಚನೆಯಮೇಲೆ ಸರ್ಕಾರದವರು ಅದರ ವ್ಯಾಪಾರದ ವಿಷಯದಲ್ಲಿ ತಾವು ಕೈಹಾಕಿ ಅದರ ಮಾರಾಟವನ್ನು ಬೆಳೆದವರಿಗೂ ಕೊಂಡುತಿನ್ನುವವರಿಗೂ ನಷ್ಟಕಷ್ಟಗಳಿಗೆ ಆಕರವಾಗದಂತೆ ಮಾಡಬೇಕೆಂದು ಪ್ರಯತ್ನಿಸಿದ್ದಾರೆ. ಅದುಕಾರಣ ಈ ಏರ್ಪಾಡು ಭರತಖಂಡಕ್ಕೇ ಕ್ಷೇಮಕರವೇ ಹೊರತು ನಷ್ಟಕರವಾದುದಲ್ಲ. ಮತ್ತೂ ವಿದೇಶದ ಯುದ್ಧಾಂಗಣಕ್ಕೆ ಗೋದುವೆಯ ಆವಶ್ಯಕತೆಯುಂಟೆಂದು ತಿಳಿದ ವಣಿಕ ವರ್ತಕರು ತಮ್ಮ ಗಿರಾಕಿಯ ಬಲವನ್ನು ನೋಡಿಕೊಂಡು ಯಥೇಚ್ಛವಾಗಿ ಹೊರಕ್ಕೆ ಸಾಗಿಸಿಬಿಡಲು ಹಿಂದೆಗೆಯುತ್ತಿರಲಿಲ್ಲ. ಬೆಳೆದ ರೈತನು ಸ್ವದೇಶದ ಹಾನಿಯನ್ನೇನೂ ಗಣಿಸುವವರಲ್ಲ ತಮ್ಮ ಆದಾಯವೊಂದನ್ನು ನೋಡಿಕೊಂಡು ಬೆಳೆದುದನ್ನೆಲ್ಲಾ ಪರದೇಶಗಳಿಗೆ ಸಾಗಿಸಿಬಿಡಲು ಅವರೂ ಹಿಂದೆಗೆಯುತ್ತಿರಲಿಲ್ಲ. ಈಗ ಸರ್ಕಾರದವರು ಇದರಲ್ಲಿ ಕೈಹಾಕಿದುದರಿಂದ ಅವರಿಗೆ ಭರತಖಂಡದ ಪ್ರಜೆಗಳ ಕ್ಷೇಮವನ್ನು ಮೊದಲುನೋಡಿಕೊಂಡು ಬಳಿಕ ವಿದೇಶದವರ ಕ್ಷೇಮಚಿಂತನೆಯನ್ನು ಮಾಡುವ ವಿವೇಕವಿರುವುದರಿಂದ, ನಂಟುಗಂಟುಗಳೆರಡೂ ಉಳಿಯುವಂಥ ಕೆಲಸವನ್ನು ಅವರು ಮಾಡುವವರಾಗಿದ್ದಾರೆ. ಅದು ಕಾರಣ, ಈಗಿನ ಗೌರ್ನಮೆಂಟಿನ ಪ್ರವರ್ತನದಲ್ಲಿ ಈ ವ್ಯಾಪಾರದ ಮೂಲಕ ಧನಾರ್ಜನೆಯನ್ನು ಮಾಡಬೇಕೆಂಬ ಉದ್ದೇಶವು ಲೇಶಮಾತ್ರವೂ ಇರುವುದಿಲ್ಲವೆಂದೂ ದೇಶಹಿತಾರ್ಥವಾಗಿಯೇ ಕೃಪಾಪೂರ್ವಕವಾಗಿ ಅವರು ಆ ವ್ಯಾಪಾರದ ಉದ್ಯಮಕ್ಕೆ ಕೈಹಾಕಿರುವರೆಂದೂ ತಿಳಿದು ಭಾರತೀಯರೆಲ್ಲರೂ ಸಮಾಧಾನಪಡಬೇಕಾಗಿದೆ,

---

ಇಟಲಿ,

ಈಗಿನ ಯುದ್ಧದಲ್ಲಿ ಇಟಲಿಯು ತೊಡಗುವುದೊ? ಅಥವಾ ತಟಸ್ಥವಾಗಿರುವುದೊ? ಒಂದುವೇಳೆ ತೊಡಗಿದರೆ ಮಿತ್ರಮಂಡಲಿಯವರ ಕಡೆಗೆ ಸೇರುವುದೊ? ಎಂಬ ಸಂದೇಹವು ಪ್ರಪಂಚಕ್ಕೆಲ್ಲಾ ಉಂಟಾಗಿದೆ. ಅದು ಮಿತ್ರಮಂಡಲಿಯೊಡನೆಕೂಡಿಕೊಂಡರೆ ಈ ಪಕ್ಷಕ್ಕೆ ಹೊಸದಾಗಿ ೮೬೦೦೦೦ ಮಂದಿ ಸೈನಿಕರ ಸಹಾಯವು ಲಭಿಸಿದಂತಾಗುವುದು. ಇಟಲಿಯವರಲ್ಲಿರುವ ಅಷ್ಟು ಸೈನಿಕರಲ್ಲಿ ೧೬೦೦೦೦ ಮಂದಿಯು ಮೊದಲಿನ ತರಗತಿಗೆ ಸೇರಿದವರು. ಸಕಲ ವಿಧದ ಸೌಕರ್ಯಗಳೂ ಈ ಸೈನಿಕರಿಗಿರುವುವು. ಇನ್ನುಳಿದ ೩೦ ಲಕ್ಷ ಸೈನ್ಯವು ಸಹ ಸುಶಿಕ್ಷಿತವಾಗಿರುವ ರಿಜರ್ವ್‌ಸೈನ್ಯವಾಗಿರುವುದು. ಇಟಲಿದೇಶಕ್ಕೆ ಇಂಥ ಉತ್ತಮವಾದ ಭೂಸೈನ್ಯ ಬಲವು ಮಾತ್ರವೇ ಅಲ್ಲದೆ ನೌಕಾಸೈನ್ಯವು ಕೂಡ ಇರುವುದು. ಆ ದಳದಲ್ಲಿ ೧೯ ಯುದ್ಧದ ಹಡಗುಗಳೂ ೩೧ ಕ್ರೂಯಿಜರುಗಳೂ ೪೫ ಡಿಸ್ಟ್ರಾಯರುಗಳೂ ೨೩ ಸಬ್‌ಮೆರೀನುಗಳೂ ಇರುವುವು. ಕಳೆದ ೬ ತಿಂಗಳಿಂದೀಚೆಗೆ ಆ ದೇಶದಲ್ಲಿ ಹೊಸದಾಗಿ ಮತ್ತೆ ೨೦ ಸಬ್‌ಮೆರೀನುಗಳನ್ನು ಕಟ್ಟಿರುವರು. ಇದಲ್ಲದೆ ಈ ದೇಶದಲ್ಲಿ ೨೦೦ ವಿಮಾನಗಳೂ ಕೂಡ ಇರುವುವು. ಅವುಗಳಲ್ಲಿ ಸಂಚರಿಸುವ ಶಿಕ್ಷಣವನ್ನು ಹೊಸದಾಗಿ ಹೊಂದಿರುವವರು ೨೯ ಮಂದಿಗಳಿರುವರು.

ಈ ದೇಶದಲ್ಲಿರುವವರೆಲ್ಲರೂ ಸೈನ್ಯದಲ್ಲಿ ಸೇರಿ ಕೆಲಸವನ್ನು ಮಾಡಬೇಕೆಂಬ ನಿರ್ಬಂಧವಿಧಿಯಿರುವುದು. ೨೧ ವರ್ಷ ವಯಸ್ಸಿನಿಂದ ೩೯ ನೆಯ ವಯಸ್ಸಿನವರೆಗೂ ಪುರುಷರು ಸೈನ್ಯದಲ್ಲಿ ಸೇರಿ ಶಿಕ್ಷಣವನ್ನು ಹೊಂದಬೇಕೆಂಬ ಕಟ್ಟುಪ್ಪಣೆಯಿರುವುದು. ಇಟಲಿಯ ರಾಜನು ಕೂಡ ಒಳ್ಳೆಯ ಶೂರಯೋಧನಾಗಿರುವನು. ಗುರಿಹಿಡಿದು ಗುಂಡುಹೊಡೆಯುವುದರಲ್ಲಿ ಬಹು ನಿಪುಣನು. ತನ್ನ ದೇಶದ ಸೈನ್ಯವನ್ನು ಒಳ್ಳೆಯ ಉತ್ತಮಸ್ಥಿತಿಗೆ ತಂದಿಡುವಲ್ಲಿ ಆ ರಾಜನು ಬಹಳ ಶ್ರಮಪಟ್ಟಿದ್ದಾನೆ. ಈ ಇಟಲಿ ರಾಜನಿಗೆ ರಷ್ಯಾದ ಕಡೆ ಬಹಳ ಅಭಿಮಾನವಿರುವುದು. ಈತನ ಪತ್ನಿಯು ಮೊಂಟಿನೀಗ್ರೊ ರಾಜನ ಮಗಳು. ಈಕೆಯು ವೈದ್ಯಸಹಾಯವನ್ನು ಮಾಡಿ ರೋಗಿಗಳನ್ನು ಉಪಚರಿಸುವುದರಲ್ಲಿ ಬಹಳ ಉತ್ಸಾಹಶೀಲಳು. ೧೮೯೬ ನೆಯ ವರ್ಷದಲ್ಲಿ ಈಕೆಯ ವಿವಾಹವಾಯಿತು. ಈ ದೇಶದ ರಾಜ್ಯವ್ಯವಹಾರವನ್ನು ೨ ಸಭೆಗಳು ನಿರ್ವಹಿಸುತ್ತಿರುವುವು. ಒಂದನೆಯದು ಸೆನೇಟ್‌ಸಭೆ ೨ ನೆಯದು ಪ್ರಜಾಪ್ರತಿನಿಧಿಸಭೆ. ಮೊದಲನೆ ಸಭೆಯಲ್ಲಿ ರಾಜಕುಟುಂಬಿಕರು ಮಾತ್ರವೇ ಸಭಿಕರಾಗಿರುವರು ೨ ನೆಯ ಪಾರ್ಲಿಮೆಂಟ್ ಮಹಾಸಭೆಯು ವರ್ಷಕ್ಕೊಂದುಸಲ ಕೂಡುವುದು. ಒಂದುಸಲ ಸಭಿಕರಾಗಿ ಏರ್ಪಟ್ಟವರು ೫ ವರ್ಷಗಳ ಕಾಲ ಕಾರ್ಯನಿರ್ವಾಹ ಮಾಡುವರು ಈ ಮಧ್ಯದಲ್ಲಿ ರಾಜನಿಗೆ ಇಷ್ಟಬಂದಾಗ ಈ ಸಭೆಯನ್ನು ನಿಯಮಿಸಿಕೊಳ್ಳಬಹುದು.

ಈ ದೇಶದ ಜನಸಂಖ್ಯೆಯು ೩೩೦೦೦೦೦೦. ವಿಸ್ತೀರ್ಣವು ೧೧೦೬೫೫ ಚದರಮೈಲಿಗಳು. ಈ ಪ್ರಜೆಗಳಲ್ಲಿ ೧೧ ಸಾವಿರ ಮಂದಿ ಜರ್ಮನರಿರುವರು. ೧೨ ಸಾವಿರಮಂದಿ ಆಸ್ಟ್ರಿಯನ್ನರಿರುವರು. ಒಟ್ಟುಪ್ರಜೆಗಳಲ್ಲಿ ೩೬೦೦೦೦ ಮಂದಿ ಕೆಥೋಲಿಕ್ ಕ್ರೈಸ್ತಪಂಗಡಕ್ಕೆ ಸೇರಿದವರು.

ಈ ದೇಶವು ಮೂರುಕಡೆಯಲ್ಲೂ ಸಮುದ್ರದಿಂದ ಸುತ್ತಲ್ಪಟ್ಟಿದೆ. ಮೆಡಿಟರೇನಿಯನ್ ಅಡ್ರಿಯಾಟಿಕ್ ಇಂಡಿಯನ್ ಸಮುದ್ರಗಳು ಇದರ ಮೂರುಕಡೆಯೂ ಇವೆ. ಇದಕ್ಕೆ ಎಲ್ಲಕಡೆಯಲ್ಲೂ ಇರುವ ರೇವುಗಳಲ್ಲಿ ನೇಪಲ್ಸ್‌ಪಟ್ಟಣವು ಅತ್ಯಂತ ಮುಖ್ಯವಾದುದು. ಇಲ್ಲಿ ಸಮುದ್ರವ್ಯಾಪಾರದ ಆಯಾತನಿರ್ಯಾತವು ಬಹಳವಾಗಿ ನಡೆಯುತ್ತದೆ. ೧೮೭೦ ನೆಯ ವರ್ಷದಿಂದ ಈ ದೇಶಕ್ಕೆ ರೋಮ್‌ಪಟ್ಟಣವು ರಾಜಧಾನಿಯಾಗಿದೆ. ಇಲ್ಲಿರುವಷ್ಟು ವಿಶ್ವವಿದ್ಯಾಲಯಗಳು ಪ್ರಪಂಚದ ಮತ್ತಾವ ದೇಶದಲ್ಲೂ ಇರುವುದಿಲ್ಲ. ಈ ವಿದ್ಯಾಲಯಗಳಲ್ಲಿ ೨೧ ಸಾವಿರ ಮಂದಿ ವಿದ್ಯಾರ್ಥಿಗಳು ಅಭ್ಯಾಸಮಾಡುತ್ತಾರೆ. ಈ ದೇಶದ ಪ್ರಜೆಗಳಲ್ಲಿ ಬಹು ಜನಕ್ಕೆ ವ್ಯವಸಾಯವೂ ರೇಷ್ಮೆಯ ಪರಿಶ್ರಮವೂ ಮುಖ್ಯಜೀವನಾಧಾರಗಳಾಗಿವೆ. ಈ ದೇಶದಲ್ಲಿ ವರ್ಷ ೧ ಕ್ಕೆ ೧೧೮೩೦೦೦೦೦ ಪೌನುಗಳ ರೇಷ್ಮೆಯ ಉತ್ಪತ್ತಿಯಾಗುತ್ತದೆ.

ಭರತಖಂಡದ ವೃತ್ತಾಂತಗಳು.

ಭರತಖಂಡದಲ್ಲಿ ವರ್ಷ ೧ ಕ್ಕೆ ಸಾಮಾನ್ಯವಾದ ಚಳಿಜ್ವರದ ರೋಗದಿಂದ ೧೩ ಲಕ್ಷ ಮಂದಿಗಳು ಸಾಯುತ್ತಿರುವರು.

ಈಗ ಗೋದುವೆಯ ಬೆಲೆಯು ಬಹಳ ಇಳಿದುಹೋಗಿದೆ, ಜಬ್ಬಲ್‌ಪೂರ್ ಮೊದಲಾದ ಪ್ರದೇಶಗಳಲ್ಲಿ ರೂ. ೧ಕ್ಕೆ ೭ ಸೇರಿನಂತೆ ಮಾರಲ್ಪಡುತ್ತಿದೆ.

ಉತ್ತರ ತಿರುವಾಂಕೂರಿನ ಒಂದು ಗ್ರಾಮದಲ್ಲಿ ೧೨೩ ವರ್ಷ ವಯಸ್ಸಿನ ಪುರುಷನೊಬ್ಬನು ಒಳ್ಳೆಯ ಆರೋಗ್ಯಸ್ಥಿತಿಯಲ್ಲಿ ಜೀವಿಸಿಕೊಂಡಿರುವನಂತೆ.

ಪಂಜಾಬಿನ ಮುಲ್ತಾನ್ ಡಿವೀಜನ್ನಿನಲ್ಲಿ ನಡೆಯುತ್ತಿರುವ ಕಳವು ಸುಲಿಗೆ ಮೊದಲಾದ ಅಪರಾಧದ ವ್ಯಾಜ್ಯಗಳನ್ನು ವಿಚಾರಿಸುವುದಕ್ಕಾಗಿ ನೂತನ ದೇಶರಕ್ಷಕ ವಿಧಿಯನ್ನನುಸರಿಸಿ ಇಬ್ಬರು ಯೂರೋಪ್ಯರನ್ನೂ ಒಬ್ಬ ಮಹಮ್ಮದೀಯರನ್ನೂ ಕಮಿಷನರನ್ನಾಗಿ ನಿಯಮಿಸಿದ್ದಾರೆ.

ಮದ್ಯಪಾನವು ಯಾವಯಾವ ಪ್ರಾಂತದಲ್ಲಿ ಹೆಚ್ಚಿಕೊಂಡಿದೆಯೋ ಅಲ್ಲಿ ದೇಶೀಯ ಮದ್ಯಗಳ ಮೇಲಿನ ಕಂದಾಯವನ್ನು ಹೆಚ್ಚಿಸಿ, ಅಲ್ಲಿನ ಮದ್ಯಪಾನಪ್ರಾಬಲ್ಯವನ್ನಡಗಿಸಬೇಕೆಂದು ಬೊಂಬಾಯಿ ಸರ್ಕಾರದವರು ಪ್ರಯತ್ನಿಸಿರುವರು. ೧೫ ಜಿಲ್ಲೆಗಳ ಅನೇಕ ತಾಲ್ಲೂಕುಗಳಲ್ಲಿ ಈ ಕೆಲಸವು ಆರಂಭಿಸಲ್ಪಟ್ಟಿರುವುದು.

ಕಲ್ಕತ್ತಾ ಪಟ್ಟಣದಲ್ಲಿ ಒಂದಾನೊಂದು ಸಂಸ್ಕೃತ ವಿದ್ಯಾಶಾಲೆಯಲ್ಲಿ ಬಹುಮಾನಪ್ರದಾನ ಸಭೆಯು ಕೂಡಿದ್ದಾಗ ಆ ಶಾಲೆಯ ಕಮಿಟಿಯ ಅಧ್ಯಕ್ಷರಾದ ಬಾಬುಗಳೊಬ್ಬರು ಆಂಗ್ಲಭಾಷೆಯಲ್ಲಿ ಉಪನ್ಯಾಸಮಾಡಿ ಕುಳಿತ ಬಳಿಕ ಸಭಾಧ್ಯಕ್ಷರಾಗಿದ್ದ ಬಂಗಾಳಾ ಗೌರ್ನರ್ ಕಾರ್ಮೈಕಲ್ ಪ್ರಭುಗಳು ತಮ್ಮ ಭಾಷಣವನ್ನು ಸಂಸ್ಕೃತ ಭಾಷೆಯಲ್ಲೇ ಮಾಡಿದರಂತೆ.

ವಿದೇಶವೃತ್ತಾಂತಗಳು.

ಆಸ್ಟ್ರಿಯಾದವರು ರಷ್ಯನರೊಡನೆ ಸಂಧಿಮಾಡಿಕೊಳ್ಳಲು ಆ ಪ್ರಭುತ್ವದವರೊಡನೆ ತಟಸ್ಥ ದೇಶೀಯರ ದ್ವಾರಾ ಆಲೋಚಿಸುತ್ತಿರುವರೆಂದು ರಷ್ಯಾದದೇಶದ ಒಂದು ಪತ್ರಿಕೆಯು ಬರೆದಿರುತ್ತದೆ.

ಕಳೆದ ವಾರದಲ್ಲಿ ಮಿತ್ರಮಂಡಲಿಯವರ ಯುದ್ಧದ ಹಡಗುಗಳು ಜರ್ಮನಿಯಿಂದ ಸಾಮಾನುಗಳನ್ನು ತರುತ್ತಲೂ ಹೊರಗಣಿಂದ ಜರ್ಮನಿಗೆ ಸಾಮಾನನ್ನು ಸಾಗಿಸುತ್ತಲೂ ಇದ್ದ ೫ ಹಡಗುಗಳನ್ನೂ ೩೦೦ ಬಾಂಗಿಗಳನ್ನೂ ಹಿಡಿದು ಕೊಂಡಿದ್ದಾರೆ.

ಯುದ್ಧರಂಗಕ್ಕೆ ಹೋದ ಒಬ್ಬಾನೊಬ್ಬ ಫ್ರೆಂಚ್ ಸೈನಿಕನ ಜತೆಯಲ್ಲಿ ಅವನ ನಾಯಿಯೂ ಕೂಡ ಹೋಗಿದ್ದಿತು

ಆ ಸೈನಿಕನು ಗುಂಡಿನೇಟನ್ನು ತಿಂದು ಬಿದ್ದುಕೊಂಡಾಗ ಅದು, ಅವನಮೇಲೆ ತುಂಬಿಕೊಂಡಿದ್ದ ಮಣ್ಣನ್ನೆಲ್ಲಾ ಕೆರೆದು ಬಿಡಿಸಿ, ಉಸಿರಾಡುವಂತೆ ಮಾಡಿ, ತಮ್ಮ ಕಡೆಯವರು ಬಂದು ಅವನನ್ನು ಸಾಗಿಸಿಕೊಂಡು ಹೋಗುವವರೆಗೂ ಅದು ಆತನ ಹತ್ತಿರದಲ್ಲೇ ಕಾವಲಾಗಿ ಕುಳಿತಿದ್ದಿತಂತೆ.

ಜರ್ಮನರು ಯುದ್ಧಕ್ಕಾಗಿ ಮತ್ತೆ ೪೫ ಕೋಟಿಯೂ ೪೦ ಲಕ್ಷ ಪೌನುಗಳನ್ನು ಸಾಲ ತೆಗೆದರು. ಹೀಗೆ ತೆಗೆದುದಕ್ಕೆ ಇದು ೨ ನೆಯ ಸಾರಿ. ಇದರಲ್ಲಿ ಬಹುಭಾಗವನ್ನು ಬ್ಯಾಂಕುಗಳಿಂದಲೂ ಸೇವಿಂಗ್ಸ್‌ಬ್ಯಾಂಕುಗಳಿಂದಲೂ ತೆಗೆದಿರುತ್ತಾರೆ. ೪ ಕೋಟಿಯೂ ೬೦ ಲಕ್ಷವು ಜನರಿಂದ ಸಾಲವಾಗಿ ಕೊಡಲ್ಪಟ್ಟಿದೆ.

ಯುದ್ಧವಾರ್ತೆಯು.

ಪಶ್ಚಿಮ ರಣರಂಗ.

ಪಶ್ಚಿಮ ರಣರಂಗದ ಕಡೆಗೆ ಬಂದಿದ್ದ ಜರ್ಮನ್ ಸೇನೆಯಲ್ಲಿ ಯುದ್ಧಾರಂಭದಿಂದ ಜನವರಿ ತಿಂಗಳ ಮಧ್ಯಕಾಲದವರೆಗೆ ೧೮ ಲಕ್ಷ ಸೈನಿಕರು ನಷ್ಟವಾಗಿರುವರೆಂದೂ, ಎಲ್ಲ ಕಡೆಯಲ್ಲೂ ಅವರಲ್ಲಾಗಿರುವ ಸೇನಾನಷ್ಟವು ೨೬ ಲಕ್ಷವೆಂದೂ, ಅವರಲ್ಲಿದ್ದ ಒಟ್ಟು ಸೈನ್ಯವು ೯೦ ಲಕ್ಷವೆಂದು ಹೇಳಲ್ಪಡುತ್ತಿದ್ದರೂ ೧೯೧೫ ನೆಯ ವರ್ಷದ ಕೊನೆಯಲ್ಲಿ ಪೂರ್ಣವಾಗಿ ತಿದ್ದಲ್ಪಟ್ಟವರು ೫೨ ಲಕ್ಷವೂ, ಸಾಮಾನ್ಯವಾದವರು ೨೦ ಲಕ್ಷ ಮಂದಿಗಳೂ ಇದ್ದಿರಬೇಕೆಂದೂ, ಈಗ ಉಳಿದಿರುವ ಅವರ ಸೈನ್ಯವೆಲ್ಲಾ ಇನ್ನೂ ೧೦ ತಿಂಗಳುಕಾಲದ ವರೆಗೆ ಯುದ್ಧಕ್ಕೆ ಒದಗಬಹುದೆಂದೂ ಫ್ರಾನ್ಸಿನವರು ಹೇಳುತ್ತಿದ್ದಾರೆ.

ಮಿತ್ರಮಂಡಲಿಯ ಸೇನೆಯು ಈಜರ್‌ನದಿಯ ದಡದ ಮೇಲೆ ಜರ್ಮನ್ ಸೇನಾಮುಖವನ್ನು ಭೇದಿಸಿ ನುಗ್ಗಿ ಶತ್ರುಪಕ್ಷಕ್ಕೆ ವಿಶೇಷ ನಷ್ಟವನ್ನುಂಟುಮಾಡಿರುವುದೆಂದು ಸುದ್ದಿ ಬಂದಿದೆ. ಆರ್ಗೋನಿನಲ್ಲಿ ಶತ್ರುಗಳ ಕೆಲ ಕಂದಕಗಳನ್ನು ಫ್ರಾನ್ಸಿನವರು ವಶಪಡಿಸಿಕೊಂಡರು. ಅಲ್ಲಿದ್ದ ಕೆಲ ಫಿರಂಗಿಗಳೂ ಇವರಿಗೆ ಸಿಕ್ಕಿದುವು.

ಈ ರಣರಂಗದಲ್ಲಿ ಯುದ್ಧಾರಂಭ ಕಾಲದಲ್ಲಿದ್ದುದಕ್ಕಿಂತಲೂ ಈಗ ಫ್ರಾನ್ಸಿನವರ ಮದ್ದುಗುಂಡು ಮೊದಲಾದ ಸಾಮಾನುಗಳು ೬೦೦ ಭಾಗದಷ್ಟು ವೃದ್ಧಿಯಾಗಿದೆಯೆಂತಲೂ, ಇಷ್ಟರಲ್ಲೇ ಅದು ೯೦೦ ಭಾಗದಷ್ಟು ವೃದ್ಧಿಯಾಗುವುದರಲ್ಲಿದೆಯೆಂತಲೂ ಹೇಳುತ್ತಾರೆ ನೂತನ ಯಂತ್ರಗಳಿಂದ ಫಿರಂಗಿಗುಂಡುಗಳೂ ಹಾರುವ ಮದ್ದಿನ ಗೋಳಗಳೂ ಅವರಿಂದ ಹೊಸತರವಾಗಿ ರಚಿಸಲ್ಪಡುತ್ತಿವೆ.

ಜರ್ಮನರು ಫ್ರಾನ್ಸ್ ದೇಶದಲ್ಲಿ ಆಕ್ರಮಿಸಿಕೊಂಡಿರುವ ಸ್ಥಳವು ಬಹಳವಾಗಿ ಏನೂ ಇಲ್ಲ. ಆದರೂ ಆ ಸ್ಥಳದಲ್ಲಿ ವಾಸಮಾಡಿಕೊಂಡಿರುವ ಫ್ರೆಂಚ್‌ಪ್ರಜೆಗಳೊಳಗೆ ಯುದ್ಧಭಟರಾಗಿರುವುದಕ್ಕೆ ಅರ್ಹರಲ್ಲದೆ ಇರುವವರನ್ನೆಲ್ಲಾ ಅವರು ಹೊರಕ್ಕೆ ಓಡಿಸಿಬಿಡುತ್ತಿರುವರಂತೆ. ಇದರಿಂದ ನಾನ್ಸಿ ಮೊದಲಾದ ಪಟ್ಟಣಗಳ ಕಡೆಗೆ ಸಾವಿರಾರು ಮಂದಿ ಪ್ರಜೆಗಳು ದೀನಸ್ಥಿತಿಯಲ್ಲಿ ಸಾಗಿ ಬರುತ್ತಿದ್ದಾರೆ.

ಹಿಂದೆ ಜರ್ಮನರು ಮಿತಿಮೀರಿ ತಮ್ಮ ಮೇಲೆ ಬಂದು ಬೀಳುತ್ತಿದ್ದುದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಬೆಲ್ಜಿಯಂ ಸೈನಿಕರು ಈಜರ್ ನದಿಯ ಕಾಲ್ವೆಯ ಪ್ರವಾಹವನ್ನು ಅಡ್ಡಲಾಗಿ ಹರಿಯಿಸಿ, ತಡೆಮಾಡಿಸುತ್ತಿದ್ದರಷ್ಟೆ. ಈಗ ತಮ್ಮ ಮೇಲೆ ಮಿತಿಮೀರಿ ಬೀಳುತ್ತಿರುವ ಮಿತ್ರಮಂಡಲಿಯ ಸೈನ್ಯವನ್ನು ತಡೆಯುವುದಕ್ಕಾಗಿ ಜರ್ಮನರು ಈಜರ್ ನದಿಯ ಪ್ರಾಂತದಲ್ಲಿ ಅದೇ ಪದ್ಧತಿಯನ್ನು ಅವಲಂಬಿಸಿದ್ದಾರೆ. ಆದರೆ ಈ ಉಪಾಯವು ಜರ್ಮನರಿಗೆ ಸಾಧ್ಯವಾಗದಂತೆ ಮಾಡುವುದಕ್ಕಾಗಿ ಮಿತ್ರಮಂಡಲಿಯವರು ಆ ಕಟ್ಟೆಯನ್ನೊಡೆದು ನೀರನ್ನು ಹೊರಗೆಡಹಿಬಿಡಬೇಕೆಂದು ಯೋಚಿಸುತ್ತಿದ್ದಾರೆ ಆಂಟ್ವರ್ಪಿನ ವಾಯವ್ಯ ಭಾಗದಲ್ಲೂ ದೇಶವನ್ನು ಜಲಮಯ ಮಾಡಬೇಕೆಂದು ಜರ್ಮನರು ಯೋಚಿಸಿದ್ದಾರೆ.

ಪೂರ್ವರಣರಂಗ.

ರಷ್ಯನರು ಕಾರ್ಪೇತಿಯನ್ ಕಣಿವೆಗಳಲ್ಲಿ ಮುಂದಕ್ಕೆ ಸಾಗುತ್ತಿದ್ದಾರೆ. ಮಾರ್ಚಿ ತಾ|| ೨೦ ರಿಂದ ೮-೯ ದಿನಗಳೊಳಗಾಗಿ ರಷ್ಯನರು ಈ ಪರ್ವತ ಪ್ರಾಂತಗಳಲ್ಲಿ ಮಾಡಿದ ಯುದ್ಧದೊಳಗೆ ೧೬೪೦೦ ಮಂದಿ ಶತ್ರುಸೈನಿಕರನ್ನೂ ಅವರ ೬೦ ಫಿರಂಗಿಗಳನ್ನೂ ಹಿಡಿದುಕೊಂಡಿದ್ದಾರೆ. ಮತ್ತು ಏಪ್ರಿಲ್ ತಾ|| ೨ರಲ್ಲಿ ಈ ಪರ್ವತದ ಬಳಿಯಣ ಬಾರ್ಟುಫೆಲ್ಡ್-ಮಸೋಲಾಬಾರ್ಜಿಗಳ ಸುತ್ತಿನಲ್ಲಿ ನಡೆದ ಯುದ್ಧದಲ್ಲಿ ೨ ಸಾವಿರ ಮಂದಿಗಳನ್ನು ಸೆರೆ ಹಿಡಿದರು. ನೀಮನ್ ಪ್ರಾಂತ್ಯದಲ್ಲೂ ರಷ್ಯನರು ಜಯಶೀಲರಾಗಿ ಮುಂದಕ್ಕೆ ಸಾಗುತ್ತಿದ್ದಾರೆ. ಉಜುಕ್ ಕಣಿವೆ ಹತ್ತಿರ ನಡೆಯುತ್ತಿರುವ ಯುದ್ಧದಲ್ಲೂ ೨ ಸಾವಿರದ ಮೇಲೆಯೇ ಸೈನಿಕರನ್ನು ಸೆರೆಹಿಡಿದಿದ್ದಾರೆ. ಜಿರ್ನೋಟಿಕ್ಕಿಗೆ ಉತ್ತರದಲ್ಲಿ ಒಂದುಸಾವಿರಮಂದಿ ಸೆರೆಸಿಕ್ಕಿದ್ದಾರೆ. ಕಾರ್ಪೇತಿಯನ್ ಪರ್ವತಪ್ರಾಂತದ ಎಲ್ಲ ಯುದ್ಧಗಳಲ್ಲೂ ಆಸ್ಟ್ರಿಯನ್ನರು ಬಹಳ ಅಪಜಯವನ್ನು ಪಡೆದು ಹಿಮ್ಮೆಟ್ಟುತ್ತಿದ್ದಾರೆ. ಈ ಸಂದರ್ಭದಲ್ಲಿ ರಷ್ಯನ್ ಸೇನಾಬಲವನ್ನು ನೋಡಿ ಆಸ್ಟ್ರಿಯನ್ನರು ದಿಗಿಲುಗೊಂಡಿದ್ದಾರೆ. ಆ ದೇಶದ ಒಬ್ಬಾನೊಬ್ಬ ಪತ್ರಿಕಾಲೇಖಕನು ಪ್ರತ್ಯಕ್ಷವಾಗಿ ಅಲ್ಲಿನ ಸ್ಥಿತಿಗತಿಯನ್ನು ನೋಡಿ ಹೀಗೆ ಬರೆಯುತ್ತಾನೆ.—ರಷ್ಯನರು ಅವಿಚ್ಛಿನ್ನವಾಗಿ ಯುದ್ಧಾಂಗಣಕ್ಕೆ ತಮ್ಮ ಸೇನೆಯನ್ನು ಹೊಸಹೊಸದಾಗಿ ಕಳುಹಿಸುತ್ತಲೇ ಇದ್ದಾರೆ. ರಷ್ಯನ್ ಸೇನೆಯು ನಮ್ಮ ಸೇನಾಮಧ್ಯದಲ್ಲಿ ಬಿದ್ದು ಭೇದಿಸಬೇಕೆಂದು ಪ್ರಯತ್ನಿಸುತ್ತಿದೆ. ಸುಮಾರು ೪೪ ಮೈಲುಗಳ ಉದ್ದದ ಪ್ರದೇಶದಲ್ಲಿ ನಮಗೂ ಅವರಿಗೂ ಘೋರಯುದ್ಧವು ನಡೆಯುತ್ತಿದೆ. ಇಷ್ಟುದಿವಸ ಯುದ್ಧ ನಡೆಯುತ್ತಿದ್ದರೂ ರಷ್ಯನ್ ಸೇನೆಯು ಕಡಿಮೆಯಾಗುವ ಸೂಚನೆಯೇ ಇಲ್ಲ.''

ಕಾರ್ಪೇತಿಯನ್ ಪರ್ವತಪ್ರಾಂತದಲ್ಲಿ ಒಂದು ಗುಡ್ಡದ ಮೇಲೆ ನಿಂತು ಆಸ್ಟ್ರಿಯನ್ನರು ಅಗ್ನಿವರ್ಷವನ್ನು ಸುರಿಸುತ್ತಿದ್ದರೂ ರಷ್ಯನರು ಲಕ್ಷ್ಯಮಾಡದೆ ನಡುವಿನ ಮಟ್ಟದ ಮಂಜಿನಲ್ಲಿ ಹಾದುಹೋಗಿ ಶತ್ರುಗಳ ಮೇಲೆ ಬಿದ್ದು ಸನೀನಿಂದ ಯುದ್ಧಮಾಡಿ, ಅವರು ನಿಂತಿದ್ದ ಗುಡ್ಡವನ್ನು ಆಕ್ರಮಿಸಿಕೊಂಡಿದ್ದಾರೆ. ಈ ಪರ್ವತಪ್ರಾಂತದ ಯುದ್ಧದ ಸ್ಥಿತಿಗತಿ ಹೇಗೆಂದರೆ—ರಷ್ಯನ್ ಸೈನ್ಯದಲ್ಲಿ ಕೆಲಭಾಗವು ಡೂಕ್ಲಾ ಕಣಿವೆಯ ಆಚೆಪಕ್ಕದಲ್ಲೂ ಸಲ್ಪಭಾಗವು ಈಚೆಭಾಗದಲ್ಲೂ ಇದೆ. ಇವುಗಳಲ್ಲಿ ಒಂದುಕಡೆಯ ಸೇನೆಯು ಆಸ್ಟ್ರಿಯಾ ದೇಶದ ಬಾರ್ಲೇಫೀಲ್ಡ್ ಎಂಬ ಆರೋಗ್ಯಸ್ಥಾನವನ್ನು ಸಮೀಪಿಸುತ್ತಿದೆ. ಈ ಕಣಿವೆಯನ್ನು ದಾಟಿಹೋಗುವುದು ಸುಲಭವೇ ಆಗಿದ್ದರೂ ಅಲ್ಲಿಗೆ ಲೋಹಮಾರ್ಗ ಸಂಬಂಧವು ಇಲ್ಲ. ರಷ್ಯನರು ಆ ಸುತ್ತಿನಲ್ಲಿರುವ ಆಸ್ಟ್ರಿಯನ್ನರನ್ನು ಹಿಡಿದುಕೊಂಡು ಇಲ್ಲವೆ ಅಟ್ಟಿಕೊಂಡು ಲುಪ್‌ಕೋ ಕಣಿವೆಯ ಕಡೆಗೂ ಆ ಕಣಿವೆಯನ್ನು ದಾಟಿಹೋಗುವ ಲೋಹಮಾರ್ಗದ ಕಡೆಗೂ ಸಾಗಿಹೋಗುತ್ತಿದ್ದಾರೆ. ಮತ್ತು ಲುಪ್ಕೋ ಕಣಿವೆಯ ಆಚೆಗಿರುವ ಯುಜಾಕ್ ಕಣಿವೆಯ ಕಡೆಗೂ ಹೋಗುತ್ತಿದ್ದಾರೆ. ಈ ಕಣಿವೆಯ ಬಳಿಗೆ ಅವರನ್ನು ಸೇರಗೊಡಿಸಬಾರದೆಂದು ಆಸ್ಟ್ರಿಯನ್ನರು ಬಹಳ ಸಾಹಸದಿಂದ ಅಡ್ಡಿಮಾಡುತ್ತಿದ್ದಾರೆ. ಆದರೆ ಅದು ಸಾಧ್ಯವಾಗುವಂತಿಲ್ಲ. ಈ ಕಣಿವೆಯ ಪ್ರಾಂತದಲ್ಲಿರುವ ಆಸ್ಟ್ರಿಯನ್ನರನ್ನೆಲ್ಲಾ ಪೂರ್ಣವಾಗಿ ಓಡಿಸಿಬಿಡುವುದಕ್ಕೆ ರಷ್ಯನರಿಗೆ ಇನ್ನೂ ಕೆಲಕಾಲ ಬೇಕಾಗುವುದು. ಆದರೆ ಹಾಗೆ ಮಾಡಿ ರಷ್ಯನರು ಆ ಪರ್ವತಪ್ರಾಂತದಲ್ಲಿ ಚೆನ್ನಾಗಿ ನೆಲೆಗೊಂಡ ಪಕ್ಷದಲ್ಲಿ ಬಳಿಕ ಅವರು ಹಂಗೇರಿಯನ್ನು ಸುಲಭವಾಗಿ ವಶಪಡಿಸಿಕೊಳ್ಳುವರು. ಉತ್ತರದಲ್ಲಿ ಪೋಲ್ಯಾಂಡಿನೊಳಗೆ ರಷ್ಯನರ ಮೇಲೆ ವಿಪರೀತವಾದ ಕಾಳಗವನ್ನು ತಾವು ಮಾಡುತ್ತಿರುವುದರಿಂದ ಜರ್ಮನರು ದಕ್ಷಿಣ ಪ್ರಾಂತಕ್ಕೆ ಆಸ್ಟ್ರಿಯಾದವರ ಸಹಾಯಕ್ಕಾಗಿ ತಮ್ಮ ಸೇನೆಯನ್ನು ವಿಶೇಷವಾಗಿ ಕಳುಹಿಸಲಾರದೆ ಎಲ್ಲೋ ಸ್ವಲ್ಪವನ್ನು ಕಳುಹಿಸಿಕೊಡುತ್ತಿದ್ದಾರೆ. ಮತ್ತು ಪಶ್ಚಿಮ ರಣರಂಗದ ಸ್ಥಿತಿಗತಿಯೂ ಮಿತ್ರಮಂಡಲಿಯವರಿಗೆ ಅನುಕೂಲವಾಗಿರುವುದರಿಂದ ಅಲ್ಲಿನ ಜರ್ಮನ್ ಸೈನ್ಯವೂ ಈ ಕಡೆಗೆ ಬರಲವಕಾಶವಿಲ್ಲವಾಗಿದೆ. ಇತ್ತ ಬಕೋವಿನಾವು ಇನ್ನೂ ಆಸ್ಟ್ರಿಯನ್ನರ ವಶದಲ್ಲಿಯೇ ಇದೆ.

ಉತ್ತರ ಪೋಲ್ಯಾಂಡಿನಲ್ಲಿ ರಷ್ಯನರಿಗೂ ಜರ್ಮನರಿಗೂ ಯುದ್ಧವಾಗುತ್ತಲೇ ಇದೆ. ಅದು ರಷ್ಯನರಿಗೆ ಅನುಕೂಲವಾಗಿರುವಂತೆ ಅತ್ತಣ ಸುದ್ದಿಗಳಿಂದ ತಿಳಿಯುತ್ತಿದೆ.

ತುರ್ಕಿ.

ಬಹುಜನ ಜರ್ಮನ್ ಉದ್ಯೋಗಿಗಳು ಕಾನ್‌ಸ್ಟಾಂಟಿನೋಪಲ್ ಪಟ್ಟಣವನ್ನು ಬಿಟ್ಟು ಉತ್ತರಕ್ಕೆ ಹೊರಟುಹೋಗುತ್ತಿದ್ದಾರಂತೆ. ರಷ್ಯಾದವರ ನೌಕಾಬಲವು ಬಾಸ್ಪರಸ್ ಕೋಟೆಗಳ ಹತ್ತಿರಕ್ಕೆ ಹೋಗಿ ಫಿರಂಗಿ ಗುಂಡುಗಳನ್ನು ಹೊಡೆದು ಯೆಲ್ಮಾಸ್‌ಕೇಲ್ಸ್ ಎಂಬ ಕೋಟೆಗಳಿಗೆ ಬಹಳ ನಷ್ಟವನ್ನುಂಟುಮಾಡಲು ಅಲ್ಲಿದ್ದ ಸೈನಿಕರು ಓಡಿಹೋಗಿರುವರಂತೆ. ಮತ್ತು ಕಪ್ಪುಸಮುದ್ರದಲ್ಲಿರುವ ರಷ್ಯನ್ ಯುದ್ಧನೌಕೆಗಳು ಜಂಗುಲ್ಡಾಕ್-ಕೋಂಜ್ಲ-ಎಂಗ್ಲೆ ಎಂಬ ತುರ್ಕಿಯ ತೀರಪಟ್ಟಣಗಳ ಮೇಲೆ ಫಿರಂಗಿಗುಂಡುಗಳನ್ನು ಹೊಡೆದಿರುವುವು. ಅನೇಕ ಸ್ಥಲಗಳಲ್ಲಿ ಯುದ್ಧಮಾಡುತ್ತಿರುವ ತುರ್ಕಿಸೈನ್ಯಗಳಿಗೆ ಈಗ ಸರಿಯಾಗಿ ಆಹಾರ ಮೊದಲಾದ ಸಾಮಗ್ರಿಗಳು ಒದಗದೆ ಇರುವುದರಿಂದ ಸೇನೆಯಲ್ಲಿ ಅಸಂತುಷ್ಟಿಯುಂಟಾಗಿದೆಯಂತೆ. ರಾಜಧಾನಿಯಲ್ಲಿದ್ದ ಸೇನೆಯಲ್ಲಿ ಬಹುಭಾಗವು ಡಾರ್ಡಿನಲ್ಸಿನ ಪಕ್ಕದಲ್ಲಿರುವ ಗಾಲಿಪೋಲಿಗೆ ಹೋಗಿರುವುದು. ಈ ಪಟ್ಟಣದ ಹೊರಗಿರುವ ನೌಕಾಶಯದಲ್ಲಿ ಹಮಿಡಿಯಾ ಎಂಬ ಯುದ್ಧದ ಹಡಗೂ, ಅಲ್ಲಿನ ನೌಕಾನಿರ್ಮಾಣಸ್ಥಳದಲ್ಲಿ ಗೋಬೆನ್ ಎಂಬ ಯುದ್ಧದ ಹಡಗೂ ಕಾವಲಾಗಿರುವುವಂತೆ. ಉಳಿದ ಹಡಗುಗಳೆಲ್ಲವೂ ಗೋಲ್ಡನ್ ಹಾರನ್ ಎಂಬ ಕಡೆಯಲ್ಲಿವೆಯಂತೆ. ಅತ್ತ ಬಾಲ್ಟಿಕ್ ಸಮುದ್ರದಿಂದ ಹಿಡಿದು ಬಾಸ್ಪರಸ್ಸಿನವರೆಗೂ ಅಲ್ಲಲ್ಲಿಗೆ ಯುದ್ಧಕಾರ್ಯಗಳು ನಡೆಯುತ್ತಲೇ ಇವೆ. ಏಷ್ಯಾಮೈನರಿನಲ್ಲೂ ಸ್ವಲ್ಪಮಟ್ಟಿಗೆ ಯುದ್ಧವು ನಡೆಯುತ್ತಿದೆ. ಪ್ರತಿಯೊಂದು ಸ್ಥಲಕ್ಕೂ, ರಷ್ಯನರಕಡೆಗೆ ನೂತನಸಹಾಯಸೈನ್ಯವು ಬರುತ್ತಲೇ ಇದೆ. ಇದರಿಂದ ರಷ್ಯನರು ತುರ್ಕಿಯಮೇಲೆ ಅವಿಚ್ಛಿನ್ನವಾಗಿ ಅಭಿಯೋಗವನ್ನು ಬಲವಾಗಿ ಮಾಡುತ್ತಲೇ ಇದ್ದಾರೆ. ಇದುವರೆಗೆ ಜರ್ಮನರು ಮಾಡಿದ ಯತ್ನಗಳೆಲ್ಲಾ ವ್ಯರ್ಥವಾದುದರಿಂದ ಈಗ ಅವರು ತುರ್ಕಿಯ ವಿಷಯದಲ್ಲಿ ಅದರಗತಿ ಅದಕ್ಕಾಯಿತು ಎಂದು ಕೈಬಿಟ್ಟು ಆತ್ಮರಕ್ಷಣೆಯಲ್ಲಿ ನಿರತರಾಗುವುದರಲ್ಲಿದ್ದಾರೆಂದು ಸುದ್ದಿಯಿದೆ. ಕಳೆದ ಮಾರ್ಚಿ ತಿಂಗಳಲ್ಲಿ ಜರ್ಮನರು ತುರ್ಕಿಯವರಿಗಾಗಿ ಕೆಲ ಆಕಾಶವಿಮಾನಗಳನ್ನು ಕೊಟ್ಟರಂತೆ. ಆ ವಿಮಾನಗಳು ಈಗ ಬಾಸ್ಪರಸ್ ಡಾರ್ಡಿನಲ್ಸ್ ಪ್ರಾಂತಗಳಲ್ಲಿ ಹಾರಿ ತಮ್ಮ ಶತ್ರುಗಳ ಚಲನವಲನವನ್ನು ತಿಳಿಯುತ್ತಿವೆ. ತುರ್ಕಿಯವರ ಮಿಡ್ಜಿಡಾ ಎಂಬ ಕ್ರೂಯಿಸ್ಸರು ಗಣೆಗಳನ್ನು ನೀರಿನೊಳಗೆ ಬಿಡುತ್ತಿದ್ದ ರಷ್ಯನರ ಹಡಗುಗಳನ್ನು ಅಟ್ಟಿಕೊಂಡು ಹೋಗುವಾಗ ಒಡೆಸ್ಸಾ ರೇವೆಯಬಳಿಗೆ ಹೋಗಲು ಅಲ್ಲಿ ರಷ್ಯನರಿಂದ ಬಿಡಲ್ಪಟ್ಟಿದ್ದ ಒಂದು ಮದ್ದಿನ ಸುರಂಗಕ್ಕೆ ಬಡಿದು ಮುಳುಗಿಹೋಯಿತು. ಇದು ನಿಜವೆಂದು ತುರ್ಕಿಯವರು ಒಪ್ಪಿಕೊಂಡಿದ್ದಾರೆ. ಮುಳುಗಿಹೋದ ಮೆಡ್ಜಿಡಾವನ್ನು ರಷ್ಯನರು ಮೇಲಕ್ಕೆತ್ತಿ ವಶಪಡಿಸಿಕೊಳ್ಳುವಂತಾಗಬಾರದೆಂದು ತುರ್ಕಿ ನೌಕಾಸೈನಿಕರು ಆ ಮೆಡ್ಜಿಡಾವಿನಮೇಲೆ ಟಾರ್ಪೆಡೋವನ್ನು ಬಿಟ್ಟು ಧ್ವಂಸಮಾಡಿಬಿಟ್ಟರು. ಕಳೆದ ತಾ|| ೩ರಲ್ಲಿ ಗೂಬೆರ್ಯೆನ್-ಬ್ರೆಸ್ಲಾ ಎಂಬ ಯುದ್ಧದ ಹಡಗುಗಳು ಕ್ರಿಮಿಯಾದಹತ್ತಿರ ರಷ್ಯನರ ನೌಕಾದಳದಮೇಲೆ ಗುಂಡುಗಳನ್ನು ಹಾರಿಸಿದುವು. ರಷ್ಯನರ ಹಡಗುಗಳು ಪ್ರತಿ ಗುಂಡುಗಳನ್ನು ಹಾರಿಸುತ್ತ ಅಟ್ಟಿಕೊಂಡು ಸಾಯಂಕಾಲವಾಗುವವರೆಗೆ ಹೋದುವು. ಆ ರಾತ್ರಿ ಬಾಸ್ಪರಸ್ಸಿಗೆ ನೂರುಮೈಲಿಗಳ ದೂರದಲ್ಲಿ ಕಣ್ಣಿಗೆ ಬಿದ್ದಾಗ ಅವುಗಳು ಬಲವಾಗಿ ಗುಂಡುಗಳನ್ನು ಹಾರಿಸುತ್ತಾ ವೇಗದಿಂದ ತಪ್ಪಿಸಿಕೊಂಡು ಹೋದುವು.

ಈ ಮಧ್ಯೆ ಡಾರ್ಡಿನಲ್ಸಿನ ಬಳಿಯಲ್ಲಿ ಗಾಳಿಯು ಸರಿಯಾಗಿಲ್ಲದಿದ್ದುದರಿಂದಲೂ, ಇತರಕಾರಣಗಳಿಂದಲೂ ಮಿತ್ರಮಂಡಲಿಯವರು ಸ್ವಲ್ಪಕಾಲ ಯುದ್ಧವನ್ನು ನಿಲ್ಲಿಸಿರಬೇಕಾಯಿತಷ್ಟೆ. ಈ ಸಂದಿನಲ್ಲಿ ತುರ್ಕಿಯವರೂ ಜರ್ಮನಿಯವರೂ ಸೇರಿ ಡಾರ್ಡಿನಲ್ಸಿನ ಪಕ್ಕದ ಸಮೀರ ಕೋಟೆಗಳನ್ನು ಬಲಪಡಿಸಿದರು. ಈಗ ಅವರಿಗೆ ಅನುಕೂಲವಾದ ಫಿರಂಗಿಗಳು ಅಲ್ಲಿ ಏರಿಸಲ್ಪಟ್ಟಿವೆ. ಅವರು ಈಗ ಫಿರಂಗಿಗಳನ್ನೇರಿಸಿಟ್ಟಿರುವ ಕೋಟೆಗಳ ಬಳಿಗೆ ಮಿತ್ರಮಂಡಲಿಯವರ ಹಡಗುಗಳಿಂದ ಹೊಡೆಯುವ ಗುಂಡುಗಳು ಹೋಗಲಾರವೆಂದು ಎಣಿಸಲ್ಪಡುತ್ತಿದೆ. ಇದನ್ನು ನೋಡಿದರೆ ಮರಳಿ ಆ ಪ್ರಾಂತದಲ್ಲಿ ಘೋರಯುದ್ಧವು ನಡೆಯುವಂತೆ ಕಾಣುತ್ತದೆ.

ನೌಕಾದಳವು.

ಮಿತ್ರಮಂಡಲಿಯ ನೌಕಾದಳವು ಜರ್ಮನರ ವಶದಲ್ಲಿರುವ ಜೀಬ್ರೂಜ್ ಪಟ್ಟಣದ ಕೋಟೆಯಮೇಲೂ ಅದರ ಹತ್ತಿರವಿರುವ ವಿಮಾನ ನಿರ್ಮಾಣಾಲಯದಮೇಲೂ ಫಿರಂಗಿ ಗುಂಡುಗಳನ್ನು ಹೊಡೆದಿರುವುದು. ಅದರಿಂದಾದ ಅನರ್ಥವು ಇಷ್ಟೇ ಎಂದು ಇನ್ನೂ ಗೊತ್ತಾಗಿಲ್ಲ.

ಅಮೇರಿಕದವರ ಪ್ರಿನ್ಸ್ ಈಟಲ್ ಫ್ರೆಡ್ರಿಕ್-ವಿಲಿಯಂಫ್ರೈ ಎಂಬ ಹಡಗುಗಳನ್ನು ಜರ್ಮನರು ಮುಳುಗಿಸಿಬಿಟ್ಟುದರಿಂದ ತಮಗೆ ೨೨೮೦೬೦ ಡಾಲರುಗಳ ನಷ್ಟ ಪರಿಹಾರವನ್ನು ಕೊಡಬೇಕೆಂದು ಅಮೇರಿಕದವರು ಜರ್ಮನರನ್ನು ಕೇಳಿದ್ದಾರೆ.

ಸ್ವೀಡನ್ ದೇಶದಿಂದ ಜರ್ಮನಿಗೆ ಕಬ್ಬಿಣವನ್ನು ಸಾಗಿಸಿಕೊಂಡು ಹೋಗುತ್ತಿದ್ದ ಒಂದು ಜರ್ಮನರ ಹಡಗು ಬಾಲ್ಟಿಕ್ ಸಮುದ್ರದಲ್ಲಿ ಸುರಂಗಕ್ಕೆ ಬಡಿದು ತನ್ನಲ್ಲಿದ್ದ ೩೫ ಮಂದಿಗಳ ಸಮೇತ ಮುಳುಗಿಹೋಯಿತು.

ಅಮೇರಿಕಾದವರ ಗ್ರೇಲ್‌ಬಿಯರ್ಕ್ ಎಂಬ ಮತ್ತೊಂದು ಹಡಗು ಉತ್ತರಸಮುದ್ರದಲ್ಲಿ ಮುಳುಗಿಹೋಯಿತು.

ಲಾಂಡ್ಸೆರ್ ಸಮೀಪದಲ್ಲಿ ಸಿಟಿ ಆಫ್ ಬ್ರೇಮೆನ್ ಎಂಬ ಹಡಗು ಜರ್ಮನ್ ಸಬ್‌ಮೆರೀನ್ ಟಾರ್ಪೆಡೊ ಏಟಿನಿಂದ ಮುಳುಗಿಹೋಯಿತು. ಒಳಗಿದ್ದವರಲ್ಲಿ ನಾಲ್ಕುಮಂದಿ ಮುಳುಗಿಹೋಗಿ ೧೩ ಮಂದಿ ರಕ್ಷಿಸಲ್ಪಟ್ಟರು.

ಕಾರ್ಡಿಫ್ ಎಂಬ ಮತ್ತೊಂದು ಹಡಗನ್ನು ಜರ್ಮನರು ಸಬ್‌ಮೆರೀನಿನ ಟಾರ್ಪೆಡೋ ಹೊಡೆತದಿಂದ ಮುಳುಗಿಸಿರುವರು.

ಬಾಲ್ಟಿಕ್ ಸಮುದ್ರದಲ್ಲಿ ಜರ್ಮನರು ಇಂಗ್ಲೆಂಡ್ ಎಂಬ ಸ್ವೀಡನ್ ದೇಶದ ಹಡಗನ್ನು ಹಿಡಿದುಕೊಂಡಿರುವರು. ಇದರಲ್ಲಿ ಮುಸುಗಿನಜೋಳವನ್ನು ತುಂಬಿ ದಕ್ಷಿಣಅಮೆರಿಕದಿಂದ ಸ್ವೀಡನ್ ರಾಜಧಾನಿಗೆ ಸಾಗಿಹೋಗುತ್ತಿದ್ದಿತು. ಒಲಿವಿನ್ ಎಂಬ ಸಣ್ಣ ಗ್ಲಾಸ್ಗೊ ಹಡಗಿನಮೇಲೂ, ಹಾರ್ಮೆಸ್ ಎಂಬ ರಷ್ಯನ್ ಹಡಗಿನಮೇಲೂ ಇಂಗ್ಲೀಷ್ ಚಾನಲಿನಲ್ಲಿ ಜರ್ಮನರು ಟಾರ್ಪೆಡೋವನ್ನು ಬಿಟ್ಟು ಮುಳುಗಿಸಿದರು. ಅವುಗಳಲ್ಲಿದ್ದ ನಾವಿಕರು ರಕ್ಷಿಸಲ್ಪಟ್ಟರು.

ಫ್ರೆಂಚರ ಒಂದು ಯುದ್ಧನಾವೆಯು ಜರ್ಮನರ ಸಬ್‌ಮೆರೀನೊಂದನ್ನು ಕಂಡು ಅದರಮೇಲೆ ಫಿರಂಗಿಗುಂಡನ್ನು ಹೊಡೆಯಲಾಗಿ ಅದು ಮುಳುಗಿ ಧ್ವಂಸವಾಗಿರಬೇಕು. ಏಕೆಂದರೆ ಬಳಿಕ ಸ್ವಲ್ಪಹೊತ್ತಿನಮೇಲೆ ಅದು ಮುಳುಗಿದ ಸ್ಥಲದಿಂದ ಬಹಳ ಎಣ್ಣೆಯು ಮೇಲಕ್ಕೆ ಬಂದಿತು.

ಓಡೆನ್‌ವಾಲ್ಡು ಎಂಬ ಜರ್ಮನ್ ಹಡಗನ್ನು ಅಮೇರಿಕದವರು ತಮ್ಮ ದೇಶದ ಪೋರ್ಟೋರಿಕೊ ಎಂಬ ರೇವೆಯಲ್ಲಿ ಹಿಡಿದು ನಿಲ್ಲಿಸಿಕೊಂಡರು. ಹೀಗೆ ನಿಲ್ಲಿಸಿಕೊಂಡುದು ಸರಿಯಲ್ಲವೆಂದು ಜರ್ಮನರು ಅಮೇರಿಕಾ ಪ್ರಭುತ್ವದವರಿಗೆ ಬರೆದಿದ್ದಾರೆ.

ತಟಸ್ಥರಾಷ್ಟ್ರ ನಾವಿಕಾಪ್ರಚಾರ ನಿರೋಧದ ವಿಷಯದಲ್ಲಿ ಇಂಗ್ಲೀಷ್ ಪ್ರಭುತ್ವದವರು ಮಾಡಿದ್ದ ಪ್ರಕಟನೆಯ ವಿಷಯದಲ್ಲಿ ಅಮೇರಿಕದವರು ತಿಳಿಯಿಸಿರುವ ಅಭಿಪ್ರಾಯವು ಪರಸ್ಪರ ಸ್ನೇಹ ಗೌರವವಾಗಿರುತ್ತಿದೆ.

ದಕ್ಷಿಣಆಫ್ರಿಕಾ.

ಇಲ್ಲಿನ ಸಂಯುಕ್ತ ಪ್ರಭುತ್ವಪಕ್ಷದ ಸೈನಿಕರು ಪ್ಲಾಟ್ಟೆ ಹತ್ತಿರವಿರುವ ಜರ್ಮನ್ ಸೇನಾ ಶಿಬಿರವನ್ನು ಹಿಡಿದುಕೊಂಡು ವಿಶೇಷ ಜಯವನ್ನು ಪಡೆದಿರುವರು. ಇಲ್ಲಿ ಬಹಳ ಮದ್ದುಗುಂಡು ಆಹಾರಸಾಮಗ್ರಿ ಮೊದಲಾದವುಗಳು ಅವರಿಗೆ ದೊರೆದುವು. ಹುಲ್ಲು ನೀರು ಮೊದಲಾದ ವಸ್ತುಗಳು ಸಮೃದ್ಧವಾಗಿರುವ ಈ ದೇಶವು ಸಂಯುಕ್ತಪ್ರಭುತ್ವದ ಸೈನಿಕರಿಗೆ ದೊರೆದುದರಿಂದ ಈ ಭಾಗದಲ್ಲಿ ಅವರಿಗಿದ್ದ ಕೊರತೆಯು ನೀಗಿ ಅವರು ಮುಂದಣ ಯುದ್ಧವನ್ನು ಹುರುಪಿನಿಂದ ಮಾಡಲು ಪ್ರೋತ್ಸಾಹ ಸಿಕ್ಕಿದಂತಾಯಿತು.

ಸರ್ವಿಯಾ ಬಲ್ಗೇರಿಯಾ.

ಸರ್ವಿಯಾ ಎಲ್ಲೆಕಟ್ಟಿನಲ್ಲಿದ್ದ ಕೆಲ ಪ್ರಜೆಗಳು ಪ್ರಭುತ್ವದ ಮೇಲೆ ತಿರುಗಿಬಿದ್ದು ಬಲ್ಗೇರಿಯಾ ರಾಜ್ಯದೊಳಕ್ಕೆ ನುಗ್ಗಿಹೋಗಲಾಗಿ, ಅಲ್ಲಿ ಗಲಭೆಯೆದ್ದಿತು. ಆಗ ಬಲ್ಗೇರಿಯಾದ ೧ ಪಟಾಲಮ್ಮಿನವರು ಬಂದು ಸರ್ವಿಯಾದ ಎಲ್ಲೆಕಟ್ಟಿನ ಸೈನಿಕರಮೇಲೆ ಬಿದ್ದು ಓಡಿಸಿದರು. ಅಷ್ಟರಲ್ಲಿ ಸರ್ವಿಯಾದ ಬೇರೆ ಪಟಾಲಮು ಅಲ್ಲಿಗೆ ಬಂದು ಬಲ್ಗೇರಿಯಾದ ಪಟಾಲಮ್ಮಿನಮೇಲೆ ಹೋರಾಡಿ ಹಿಂದಕ್ಕೋಡಿಸಿತು. ಈ ಸಣ್ಣ ಯುದ್ಧದಲ್ಲಿ ಬಲ್ಗೇರಿಯಾದಕಡೆ ೮೦ ಮಂದಿಯೂ ಸರ್ವಿಯಾದಕಡೆ ೬೦ ಮಂದಿಯೂ ಹತರಾದರು. ಇನ್ನೂ ಬಹುಜನಕ್ಕೆ ಏಟುಬಿದ್ದಿರುವುದು. ಬಲ್ಗೇರಿಯನ್ನರು ಸರ್ವಿಯಾದ ೨ ಹಳೆಯತರದ ಫಿರಂಗಿಗಳನ್ನು ಹಿಡಿದುಕೊಂಡರು. ಈಚೆಗೆ ಆ ವಿಷಯವಾಗಿ ಸರ್ವಿಯಾ ಬಲ್ಗೇರಿಯಾ ಪ್ರಭುತ್ವಗಳೆರಡೂ ಪತ್ರವ್ಯವಹಾರ ನಡೆಯಿಸಿ ಸಮಾಧಾನಪಟ್ಟುಕೊಂಡರೆಂದು ಸುದ್ದಿ ಬಂದಿದೆ. ಬಲ್ಗೇರಿಯಾದವರು ತಮ್ಮ ಕಡೆಯ ಅಪರಾಧಿಗಳನ್ನು ವಿಚಾರಿಸಿ ಶಿಕ್ಷಿಸುವುದಕ್ಕೆ ಒಪ್ಪಿಕೊಂಡರು. ತಮ್ಮ ಪ್ರಭುತ್ವದಮೇಲೆ ತಿರುಗಿಬಿದ್ದಿದ್ದ ಜನರಲ್ಲಿನ ಆಯುಧಗಳನ್ನೆಲ್ಲಾ ವಶಪಡಿಸಿಕೊಳ್ಳಲು ಸರ್ವಿಯಾದವರು ಏರ್ಪಡಿಸಿದರು.

ಆಕಾಶವಿಮಾನಗಳು.

ಆಂಗ್ಲವೈಮಾನಿಕರು ಬೆಲ್ಜಿಯಮ್ಮಿನಲ್ಲಿ ಜರ್ಮನರು ಸಬ್‌ಮೆರೀನುಗಳನ್ನು ಕಟ್ಟುತ್ತಿದ್ದ ಸ್ಥಲದಮೇಲೆ ಸಿಡಿಮದ್ದುಗಳನ್ನು ಹಾಕಿ ಅನರ್ಥವನ್ನುಂಟುಮಾಡಿಬಂದಿರುವರು. ಡಿಕ್ಸ್‌ಮೂಡಿನ ಹತ್ತಿರ ಒಬ್ಬ ವೈಮಾನಿಕನು ತನ್ನಲ್ಲಿದ್ದ ಸಣ್ಣ ಫಿರಂಗಿಗುಂಡಿನಿಂದ ಜರ್ಮನರ ವಿಮಾನವೊಂದಕ್ಕೆ ಹೊಡೆದು ಕೆಳಕ್ಕೆ ಬೀಳಿಸಿದನು. ರೀಮ್ಸ್ ಪಟ್ಟಣದಮೇಲೆ ಸಿಡಿಮದ್ದುಗಳನ್ನು ಹಾಕುತ್ತಿದ್ದ ಒಂದು ಶತ್ರುವಿಮಾನವನ್ನು ಫ್ರಾನ್ಸ್ ಸೈನಿಕರು ಧ್ವಂಸಮಾಡಿದರು. ಬೆಲ್ಜಿಯಮ್ಮಿನಲ್ಲಿರುವ ಹೊಬೇರೇನ್ ಎಂಬ ಸ್ಥಲದಲ್ಲಿ ಜರ್ಮನರು ಸಬ್‌ಮೆರೀನುಗಳನ್ನು ನಿರ್ಮಿಸುತ್ತಿದ್ದರು. ಈ ಸ್ಥಲದಮೇಲೆ ಲೆಫ್ಟನೆಂಟ್ ಆಂಡ್ರಿಯಾ ಎಂಬ ಆಂಗ್ಲವೈಮಾನಿಕನು ನಾಲ್ಕು ಸಿಡಿಮದ್ದುಗಳನ್ನು ಹಾಕಿ ಜಯಶೀಲನಾಗಿ ಬಂದಿರುವನು. ಲೆ|| ಜೆ. ವಿ. ವಿಲಿಯಂ ಎಂಬಾತನು ಜೀಬ್ರೂಜಿನಮೇಲೆ ಹಾರಿಹೋಗಿ ಅಲ್ಲಿ ಕಣ್ಣಿಗೆ ಬಿದ್ದ ಎರಡು ಜರ್ಮನ್ ಸಬ್‌ಮೆರೀನುಗಳಮೇಲೆ ನಾಲ್ಕು ಸಿಡಿಮದ್ದುಗಳನ್ನು ಹಾಕಿ ಬಂದಿರುವನು.

ಮೈಸೂರ್ ಸ್ಟಾರ್.

ಸನ್ ೧೯೧೫ ನೆಯ ಏಪ್ರಿಲ್ ತಾ|| ೧೧ ನೆಯ ಭಾನುವಾರ.

ವಿವಾಹ.

ಪ್ರೌಢಾವಿವಾಹ ವಿಷಯಕವಾದ ಸೂಚನೆಯನ್ನು ಮದ್ರಾಸುನಿಯಮನಿರ್ಮಾಣಸಭೆಗೆ ಅ|| ಶ್ರೀನಿವಾಸಶಾಸ್ತ್ರಿಯವರು ತಂದೀಚೆಗೆ ದಕ್ಷಿಣಹಿಂದೂಸ್ಥಾನದಲ್ಲೆಲ್ಲಾ ತದ್ವಿಷಯವಾದ ವಾದಾನುವಾದಗಳು ಅವಿಚ್ಛಿನ್ನವಾಗಿ ನಡೆಯುತ್ತಲಿವೆ. ಶ್ರೀ|| ಉತ್ತರಾದಿಮಠದಸ್ವಾಮಿಗಳು ನಮ್ಮ ದೇಶಕ್ಕೆ ಬಂದಿರುವುದರಿಂದ ಅವರ ಕಡೆಯ ವೈದಿಕಮಂಡಲಿಯವರಿಂದ ಇಲ್ಲೂ ಆದರ ವಿಷಯಕವಾದ ಚರ್ಚೆಯು ಪ್ರಬಲವಾಗಿದೆ. ರಾಜಧಾನಿಯಲ್ಲಿ ಕಳೆದೆರಡುವಾರಗಳಿಂದಲೂ ಇದರ ಕೋಲಾಹಲವೇ ಆಗಿದೆ. ಪ್ರೌಢಾವಿವಾಹವನ್ನು ಖಂಡಿಸಿ, ಕನ್ಯಾವಿವಾಹವನ್ನು ಮಂಡಿಸುವ ಉಪನ್ಯಾಸಗಳು ಮೂರು ನಾಲ್ಕು ಈ ಊರಿನ ಟವನ್ ಹಾಲಿನಲ್ಲಿ ಉತ್ತರಾದಿಮಠದ ವೈದಿಕಪಂಡಿತರೊಬ್ಬರಿಂದ ಮಾಡಲ್ಪಟ್ಟುವು. ಈ ಮಧ್ಯೆ ಪ್ರೌಢಾವಿವಾಹಾಭಿಮಾನಿಗಳಿಂದಲೂ ಒಂದುದಿವಸ ಉಪನ್ಯಾಸ ನಡೆದಿತು. ಸಭೆಗಳಿಗೆ ಸಾವಿರಾರು ಜನರು ಪ್ರತಿದಿನವೂ ಸೇರುತ್ತಿದ್ದರು.

ಕನ್ಯಾವಿವಾಹವು ಮಧ್ಯಕಾಲೋಪಸ್ಥಿತವಾದುದೆಂದೂ ವೈದಿಕಕಾಲದಲ್ಲಿ ಪ್ರೌಢಾವಿವಾಹವೇ ವ್ಯವಹಾರದಲ್ಲಿದ್ದಿತೆಂದೂ ಈಗಿನ ದೇಶದ ಸ್ಥಿತಿಗತಿಯನ್ನು ನೋಡಿದರೆ ಪ್ರೌಢಾವಿವಾಹವನ್ನು ಮಾಡುವುದೇ ಅತ್ಯವಶ್ಯಕವೆಂದೂ, ಕನ್ಯಾವಿವಾಹದಿಂದ ಬಾಲವಿಧವೆಯರ ಸಂಖ್ಯೆಯು ಹೆಚ್ಚಿರುವುದಲ್ಲದೆ, ಪುಷ್ಟವಾದ ಸಂತಾನಗಳ ಅಭಿವೃದ್ಧಿಗವಕಾಶವಿಲ್ಲದೆ ಹೋಗಿರುವುದೆಂದೂ, ವಿಧುರರು ಎಷ್ಟುವೇಳೆ ವಿವಾಹವಾಗುವುದಕ್ಕೂ ಅವಕಾಶವನ್ನು ಮಾಡಿಕೊಂಡಿರುವಂತೆ, ಇಷ್ಟಪಟ್ಟ ವಿಧವೆಯರಿಗೂ ಪುನರ್ವಿವಾಹಕ್ಕೆ ಅವಕಾಶವಿರಬೇಕೆಂದೂ, ವಿವಾಹವು ನಿರ್ಬಂಧವಿಧಿಯಾಗಿರದೆ ಐಚ್ಛಿಕಕರ್ಮವಾಗಿರಬೇಕೆಂದೂ, ಪ್ರೌಢಾವಿವಾಹಕ್ಕೆ ಶ್ರುತಿ ಸ್ಮೃತೀತಿಹಾಸಾದಿಗಳ ಆಧಾರಗಳು ಇರುವುವೆಂದೂ ಪ್ರೌಢಾವಿವಾಹಪಕ್ಷದವರು ವಾದಿಸುತ್ತಿರುವುದು ಗೊತ್ತೇಇದೆಯಷ್ಟೆ. ಆದರಂತೆಯೇ ಈ ವಿಷಯವಾಗಿ ಕೆಲ ಗ್ರಂಥಗಳಾದರೂ ಮುದ್ರಿಸಲ್ಪಟ್ಟು ಪ್ರಕಟವಾಗಿರುತ್ತವೆ. ಅದೇಪ್ರಕಾರವಾದ ಉಪನ್ಯಾಸಗಳು ಈಗಲೂ ಡಾ|| ವೆಂಕೋಬರಾಯರು ಮೊದಲಾದವರಿಂದ ಮಾಡಲ್ಪಟ್ಟುವು.

ಕನ್ಯಾವಿವಾಹಪಕ್ಷದ ವೈದಿಕಮಂಡಲಿಯವರಾದರೊ—ಕನ್ಯಾವಿವಾಹವು ವೇದಕಾಲದಲ್ಲೂ ಪ್ರಚಾರದಲ್ಲಿದ್ದಿತು. ಕನ್ಯಾವಿವಾಹವು ಶ್ರುತಿಸ್ಮೃತಿಗೃಹ್ಯಸೂತ್ರಾದಿಗಳಲ್ಲಿ ವಿಧಿವಚನಗಳಿಂದ ಚೋದಿತವಾದ ಒಂದು ಸಂಸ್ಕಾರವಾಗಿರುತ್ತದೆ. ವಿವಾಹವು ಐಚ್ಛಿಕವಾದುದಲ್ಲ. ಪ್ರೌಢಾವಿವಾಹವು ಯಾವ ಶಾಸ್ತ್ರದಲ್ಲೂ ಲಬ್‌ಲೋಟ್ ತನ್ಮಪ್ರತ್ಯಯಘಟಿತವಾದ ವಿಧಿವಚನದಿಂದ ಶಾಸಿಸಲ್ಪಟ್ಟಿರುವುದಿಲ್ಲ; ಬಾಲ್ಯವಿವಾಹದಿಂದಲೇ ವಿಧವಾಸಂಖ್ಯೆಯು ಹೆಚ್ಚಿರುವುದೆಂದು ಹೇಳುವುದು ಯುಕ್ತಿಯುಕ್ತವಲ್ಲ. ಪ್ರೌಢಾವಿವಾಹದಿಂದಲೂ ಅಂಥ ವಿಪತ್ತಿನ ನಿವಾರಣೆಗೆ ಅವಕಾಶವಾಗುವುದಿಲ್ಲ. ಪ್ರೌಢಾವಿವಾಹದಿಂದ ಸ್ತ್ರೀಯರ ಸಚ್ಚರಿತ್ರರಕ್ಷಣೆಗೆ ವಿಶೇಷಾವಕಾಶವಾಗಲಾರದು. ಕನ್ಯಾತ್ವದಲ್ಲಿ ವಿವಾಹವನ್ನು ಮಾಡಿ, ಅವರ ಶರೀರಾವಯವಗಳೆಲ್ಲಾ ಪುಷ್ಟಿಗೊಂಡು, ಪ್ರೌಢೆಯರಾಗುವವರೆಗೂ, ತಮಗೆ ಇಷ್ಟವಾದ ಕಾಲವು ಬರುವವರೆಗೂ ನಿಷೇಕಮಾಡಿಕೊಳ್ಳದಂತೆ ಪುರುಷರು ಏರ್ಪಡಿಸಿಕೊಂಡರೆ ಬಾಲ್ಯದಲ್ಲಿ ಸಂತಾನವಾಗುವ ದೋಷವನ್ನು ತಪ್ಪಿಸಕೊಳ್ಳಬಹುದು. ಪುರುಷನು ಹಲವುಮಂದಿ ಸ್ತ್ರೀಯರನ್ನು ವಿವಾಹಮಾಡಿಕೊಳ್ಳುವುದರಿಂದ ಅನರ್ಥವಿರುವುದಿಲ್ಲ. ಸ್ತ್ರೀಯು ಪುನರ್ವಿವಾಹಮಾಡಿಕೊಳ್ಳುವುದರಿಂದ (ಆಕೆಯು ಕ್ಷೇತ್ರರೂಪಳಾಗಿರುವುದರಿಂದ) ಹಲವರ ದೇಹಸಾರವನ್ನು ತಾನು ವಹಿಸಬೇಕಾಗಿ, ದೇಹಧರ್ಮವು ಕೆಡುವುದಕ್ಕೂ ಅದರಿಂದ ಆಗುವ ಸಂತಾನವು ರುಜ್ಮಯವಾಗುವುದಕ್ಕೂ ಅವಕಾಶವಾಗುವುದು. ಶಾಸ್ತ್ರವಚನ-ಬಹುಕಾಲಾನುಭವ-ರೂಪವಾದ ಈ ಆಧಾರದಿಂದ ಕನ್ಯಾವಿವಾಹವು ಕರ್ತವ್ಯವೆಂದು ಸಿದ್ಧಾಂತವಾಗುವುದೇಹೊರ್‍ತು ಪ್ರೌಢಾವಿವಾಹವು ಯುಕ್ತಿಯುಕ್ತವೂ ಶಾಸ್ತ್ರಸಿದ್ಧವೂ ಆಗುವುದಿಲ್ಲವೆಂಬುದು ಇವರ ವಾದವಾಗಿರುತ್ತದೆ.

ಸಭಾಸ್ಥಿತಿಯನ್ನು ನೋಡುವಲ್ಲಿ ಜನವರ್ಗದೊಳಗೆ ಕನ್ಯಾವಿವಾಹಪಕ್ಷವೇ ಹೆಚ್ಚಾಗಿದೆಯೆಂದು ವ್ಯಕ್ತವಾಯಿತು. ವಿಚಾರಮಾಡಿನೋಡಿದರೆ ಎರಡುಪಕ್ಷದ ವಾದದಲ್ಲೂ ಗುಣಾಂಶಗಳಿದ್ದೇ ಇವೆ. ಸ್ವಾರ್ಥಕ್ಕಾಗಿ ಈ ವಾದವನ್ನು ಯಾರೂಮಾಡುವುದಿಲ್ಲ. ಸ್ತ್ರೀಯರನ್ನು ದುಶ್ಚರಿತೆಯರನ್ನಾಗಿ ಮಾಡಬೇಕೆಂಬ ಉದ್ದೇಶದಿಂದ ಯಾವೊಬ್ಬ ಪ್ರೌಢಾವಿವಾಹಾಭಿಮಾನಿಯೂ ಈ ವಾದವನ್ನು ಮಾಡುತ್ತಲಿಲ್ಲ. ಕನ್ಯಾವಿವಾಹದಲ್ಲಿ ಅಭಿಮಾನವಿರುವವರುಕೂಡ ಕಡ್ಡಾಯವಾಗಿ ಪ್ರೌಢಾವಿವಾಹವನ್ನು ಮಾಡುವಂತಾಗಬೇಕೆಂದು ಇವರು ಬಯಸುವುದಿಲ್ಲ. ಕನ್ಯಾವಿವಾಹವು ಅನಿರ್ಬಂಧಿತವಾಗಿರುವಂತೆಯೇ ಪ್ರೌಢಾವಿವಾಹವೂಕೂಡ ಅಪೇಕ್ಷಕರಿಗೆ ಅನಿರ್ಬಂಧವಾಗಿ ನಡೆಯುವಂತಿರಬೇಕೆಂಬುದೇ ಇವರ ಅಪೇಕ್ಷೆಯಾಗಿರುತ್ತದೆ. ಮತ್ತೂ ಕಾಲನಿರ್ಬಂಧವು ವಿವಾಹಸಂಸ್ಕಾರಕ್ಕಿರುವುದರಿಂದ ವರಶುಲ್ಕಬಾಧೆಯು ಸಮಾಜದಲ್ಲಿ ಬಳೆದುಹೋಗಿ, ಬಹಳಾನರ್ಥವಾಗುತ್ತಿರುವುದನ್ನು ಗಮನಿಸಿದರೆ, ಅದರ ನಿರೋಧಕ್ಕಾಗಿ ವಯೋನಿರ್ಬಂಧವನ್ನು ತಪ್ಪಿಸಿದಲ್ಲದೆ ಸಮಾಜೋದ್ಧಾರವಾಗುವಂತಿಲ್ಲವೆಂಬ ಸಂಗತಿಯು ಯಾರೊಬ್ಬರಿಗೂ ಗೊತ್ತಾಗುವಂತಿರುತ್ತದೆ. ಇಂಥ ಸಂದರ್ಭಗಳಲ್ಲಿ ಸಮಾಜಹಿತದೃಷ್ಟಿಯಿಂದ ಶಾಸ್ತ್ರವಚನಾದಿಗಳನ್ನವಲೋಕಿಸುವುದು ಪ್ರಯೋಜಕವೇ ಹೊರತು, ಪಕ್ಷಾಂಧತೆಯಿಂದ, ದೇಶಹಿತವನ್ನು ಗೌಣವಾಗಿಯೂ, ಶಾಸ್ತ್ರರಕ್ಷಣೆಯನ್ನು ಮುಖ್ಯವಾಗಿಯೂ ಎಣಿಸುವುದು ಹಿತಕರವಲ್ಲ. ಶಾಸ್ತ್ರಗಳು ಸಮಾಜರಕ್ಷಣೆಗಾಗಿ ತತ್ತತ್ಕಾಲಾನುಗುಣವಾಗಿ ಬರೆಯಲ್ಪಟ್ಟಿವೆ. ಸಮಾಜಧರ್ಮಕರ್ಮ ನಿರ್ವಾಹವಿಷಯದಲ್ಲಿ ವೈದಿಕಮಂಡಲಿಯಿಂದ ಲೋಕಕ್ಕೆ ಸಾಹಾಯ್ಯವಾಗುವುದೆಂಬ ದೃಷ್ಟಿಯಿಂದಲೇ ಲೌಕಿಕರು ವೈದಿಕರನ್ನು ಪುರಸ್ಕರಿಸಿ ಪ್ರೋತ್ಸಾಹಿಸುತ್ತಾರೆ. ಅಂಥ ಸಹಾಯವು ವೈದಿಕಮಂಡಲಿಯಿಂದ ಆಗದೆ ಅವರ ಅದೂರದೃಷ್ಟಿಯಿಂದಲೂ ಹಠದಿಂದಲೂ ವಾದಾನುವಾದಗಳೇ ಹೆಚ್ಚುತ್ತಬಂದರೆ ಪರಸ್ಪರಸಂಬಂಧ ಸೌಹಾರ್ದಗಳು ಶಿಥಿಲವಾಗುತ್ತ ಬರುತ್ತವೆ. ಇದೇಕಾರಣದಿಂದಲೇ ಬರೋಡಾಮಹಾರಾಜರು ಮೊನ್ನೆತಾನೇ ತಮ್ಮ ಸಂಸ್ಥಾನದಲ್ಲಿ ಸಂಸ್ಕೃತವಿದ್ಯಾಪ್ರೋತ್ಸಾಹನ ವಿಷಯಕವಾದ ಒಂದು ಸಭೆಯನ್ನು ನಡೆಯಿಸಿದಾಗ್ಗೆ: "ಈ ವೈದಿಕಮಂಡಲಿಗಾಗಿ ನಮ್ಮ ಬೊಕ್ಕಸದಿಂದ ಲಕ್ಷಾಂತರ ರೂ. ಗಳನ್ನು ವ್ಯಯಮಾಡಿದ್ದರೂ ದೇಶಹಿತಕ್ಕೆ ಸಾಧಕವಾದ ಯಾವುದೊಂದು ನೂತನಶೋಧವೂ ಇವರಿಂದ ಮಾಡಲ್ಪಟ್ಟಿಲ್ಲ; ಸಮಾಜಕ್ಕೆ ಯಾವ ಪ್ರಯೋಜನವೂ ಇವರ ವಿದ್ಯಾಬುದ್ಧಿಗಳಿಂದಾಗಲಿಲ್ಲ. ಬರಿಯ ಶಾಬ್ದಿಕತರ್ಕಕ್ಕೆ ಮಾತ್ರವೇ ಇವರ ಪಾಂಡಿತ್ಯವು ಸಾಧಕವಾಗಿರುತ್ತದೆ'' ಎಂದು ಹೇಳಿರುವರು. ಇಂಥ ಭಾವವು ಸರ್ವತ್ರ ದಿನಕ್ರಮೇಣ ಉಂಟಾಗಲು ವೈದಿಕಮಂಡಲಿಯವರು ಅವಕಾಶಕೊಡಬಾರದೆಂಬುದೇ ನಮ್ಮ ಕೋರಿಕೆ.

ಮೈಸೂರಿನಲ್ಲಿ ನಡೆದ ವೈದಿಕಮಂಡಲಿಯವರ ಉಪನ್ಯಾಸದಲ್ಲಿ ಉದ್ದೇಶಕ್ಕೆ ಸಂಬಂಧಪಡದ ಕೆಲವು ವಿಷಯಗಳಿಗೆ ಆಗ್ರಹದಿಂದ ಉತ್ತರಕೊಡುವುದಕ್ಕೆ ಪ್ರವರ್ತಿಸಿದ ಭಾಗದಹೊರತು ಉಳಿದ ಭಾಗವೆಲ್ಲಾ ರಸವತ್ತಾಗಿ ಶ್ರೋತವ್ಯವಾಗಿದ್ದಿತು.

ಒಳದೇಶ ವೃತ್ತಾಂತಗಳು.

ಮೈಸೂರುದೇಶದ ಸಿವಿಲ್ ಸರ್ವೀಸ್‌ಪರೀಕ್ಷೆಯು ಈ ವರ್ಷ ಮುಂದಣ ನವೆಂಬರ್ ತಿಂಗಳಲ್ಲಿ ನಡೆಯಲು ಏರ್ಪಾಟಾಗಿದೆ.

ತಿರುಮಕೂಡಲು ನರಸೀಪುರದ ತಾ|| ರಂಗಸಮುದ್ರದ ಹೋಬಳಿ ಲಕ್ಷ್ಮೀಪುರವು ಇತಃಪರಃ ರಂಗನಾಥಪುರವೆಂದು ಕರೆಯಲ್ಪಡುತಕ್ಕದಾಗಿ ಸರ್ಕಾರದಪ್ಪಣೆಯಾಗಿದೆ.

ಮೈಸೂರು ಡಿಸ್ಟ್ರಿಕ್ಟ್‌ಬೋರ್ಡಿನವರು ನಂಜನಗೂಡಿನಿಂದ ತಿ|| ನರಸಿಮ್ಹಪುರದಮೇಲೆ ಸಂತೆಮರಹಳ್ಳಿಯವರೆಗೆ ರೈಲ್ವೆಯನ್ನು ಹಾಕಿಸುವ ವಿಷಯವಾಗಿ ಆಲೋಚಿಸಿ, ತಗಲಬಹುದಾದ ವೆಚ್ಚದ ಅಂದಾಜನ್ನು ರೈಲ್ವೆಶಾಖೆಯವರಿಂದ ತಿಳಿಯಬೇಕೆಂದು ಗೊತ್ತುಮಾಡಿದ್ದಾರೆ.

ರಾಜಧಾನಿಯ ಮ್ಯುನ್ಸಿಪಾಲಿಟಿಯವರು ಬೆಣ್ಣೆ-ತುಪ್ಪ-ಎಲೆ-ತೆಂಗಿನಕಾಯಿ-ಮೊದಲಾದ ಕೆಲ ವಸ್ತುಗಳ ಮೇಲಣ ಸುಂಕವನ್ನು ತೆಗೆದುಬಿಟ್ಟು, ಬಟ್ಟೆ ಮೊದಲಾದ ಕೆಲ ವಸ್ತುಗಳ ಸುಂಕವನ್ನು ಹೆಚ್ಚಿಸುವ ಯೋಚನೆಯನ್ನು ಮಾಡಿ ಗೌರ್ನಮೆಂಟಿಗೆ ಬರೆದುಕೊಳ್ಳುವುದರಲ್ಲಿದ್ದಾರೆ.

ಬೆಂಗಳೂರು ನಗರ್ತಪೇಟೆಯಲ್ಲಿ ೭ ಕಾಲುಗಳುಳ್ಳ ಒಂದು ಆಡು ಪ್ರದರ್ಶಿಸಲ್ಪಟ್ಟಿದೆ. ಇದಕ್ಕೆ ಸ್ವಭಾವವಾದ ೪ ಕಾಲುಗಳಲ್ಲದೆ ಎಡದ ಕೌಂಕುಳಲ್ಲಿ ೩ ಕಾಲುಗಳು ನೇತುಬಿದ್ದಿರುವುವು. ಜನರು ಗುಂಪುಗುಂಪಾಗಿ ಹೋಗಿ ನೋಡಿ ಆಶ್ಚರ್ಯಪಡುತ್ತಿರುವರು. ಇದರಿಂದ ಪ್ರದರ್ಶಕರಿಗೆ ಒಳ್ಳೆಯುತ್ಪನ್ನವಾಗುತ್ತಿದೆ.

ಬರುವ ಜುಲೈತಿಂಗಳಾರಂಭದಿಂದ ಮೈಸೂರುದೇಶದ ಬೆಂಗಳೂರು-ಮೈಸೂರು-ಹಾಸನ-ಶಿವಮೊಗ್ಗಾ-ಕಡೂರು-ಚಿತ್ರದುರ್ಗ-ಈ ಆರು ಡಿಸ್ಟ್ರಿಕ್ಟುಗಳಲ್ಲಿನ ಕೆಲಕೆಲ ಮುಖ್ಯಗ್ರಾಮಗಳಲ್ಲಿ ಗ್ರಾಮಪಂಚಾಯತಿ ಕೋರ್ಟುಗಳನ್ನು ಸ್ಥಾಪಿಸಲು ನಿಶ್ಚಯಿಸಿ, ಆ ಗ್ರಾಮಗಳ ಪಟ್ಟಿಯನ್ನು ಗೆಜೆಟ್ಟಿನಲ್ಲಿ ಪ್ರಕಟಿಸಿದ್ದಾರೆ.

ಗುರುದೈವಭಕ್ತಿ ನಿರತರಾದ ಮೈಸೂರು ಲಾಡರಪೇಟೆಯ ಸಾ|| ಜವಳಿ ಅಂಗಡಿ ಕಾಡಯ್ಯನವರ ಮನೆತನದವರು ಕಳೆದ ೩೦ ವರ್ಷಗಳಿಂದಲೂ ಶ್ರೀರಾಮೋತ್ಸವವನ್ನು ನಡೆಯಿಸಿಕೊಂಡು ಬರುತ್ತಿರುವಂತೆ ಈ ವರ್ಷವೂ ತಮ್ಮ ಧರ್ಮಸತ್ರದಲ್ಲಿ ಪದ್ಧತಿಯಂತೆ ರಾಮೋತ್ಸವವನ್ನು ಗಾನಶ್ರವಣ ಸಂತರ್ಪಣ ಸಮಾರಾಧನಾದಿಗಳಿಂದ ವಿತರಣಪೂರ್ವಕವಾಗಿ ನಡೆಯಿಸುತ್ತಿರುವರು.

ಪ್ರೌಢಾವಿವಾಹಖಂಡನವಿಷಯದಲ್ಲಿ ವೈದಿಕಮಂಡಲಿಯ ಉಪನ್ಯಾಸವಾದ ದಿವಸ ಪ್ರೌಢಾವಿವಾಹವು ವಿಧಿವಚನದಿಂದ ವೇದಶಾಸ್ತ್ರಾದಿಗಳಲ್ಲಿ ವಿಹಿತವಾಗಿರುವುದೆಂಬುದನ್ನು ಯಾರಾದರೂ ತೋರಿಸಿಕೊಟ್ಟರೆ ಅವರಿಗೆ ತಾವು ೧ ಸಹಸ್ರ ರೂ. ಗಳನ್ನು ಕೊಡುವೆವೆಂದೂ, ಈಗ ಬಂದಿರುವ ಶ್ರೀ ಉತ್ತರಾದಿಮಠದ ಸ್ವಾಮಿಗಳು ೪ ಸಹಸ್ರ ರೂ. ಗಳನ್ನು ಕೊಡಲು ವಾಗ್ದಾನಮಾಡಿರುವರೆಂದೂ ಸಹ ಮಂ|| ರಾಮಾಶಾಸ್ತ್ರಿಗಳು ಸಭಾಮಧ್ಯದಲ್ಲಿ ತಿಳಿಯಿಸಿರುವರು.

ಮೈಸೂರಿನಲ್ಲಿ ಸುಪ್ರಸಿದ್ಧರಾದ ಅರಮನೆಯ ಆಸ್ಥಾನ ಸಂಗೀತ ವಿದ್ವಾಂಸರು ವೇ|| ಕೆ. ವಾಸುದೇವಾಚಾರ್ಯರವರು ಸಂಗೀತದಲ್ಲಿ ಪಡೆದಿರುವ ವಿದ್ವತ್ತನ್ನು ಸೋಸಲೆಯ ಶ್ರೀ ವ್ಯಾಸರಾಯಮಠದ ಶ್ರೀ ವಿದ್ಯಾರತ್ನಾಕರ ತೀರ್ಥಂಗಳವರು ಚಿತ್ತಕ್ಕೆ ತಂದುಕೊಂಡು ಥೋಡಾ, ಬಂಗಾರದ ಗಂಟೆ ಮತ್ತು "ಸರಸಗಾನ ಶಿರೋಮಣಿ" ಎಂಬ ಬಿರುದನ್ನು ಸಹ ಮೇಲೆ ಕಂಡ ವಿದ್ವಾಂಸರಿಗೆ ದಯಪಾಲಿಸಿರುತ್ತಾರೆ. ಎಂದು ಈ ಪತ್ರಿಕಾವಾಚಕರೊಬ್ಬರು ತಿಳಿಸುತ್ತಾರೆ.

ಚಿತ್ರದುರ್ಗತಾ|| ಭೀಮಸಮುದ್ರದಲ್ಲಿ ಸ್ವಪರಿಶ್ರಮದಿಂದ ಶ್ರೀಮಂತರಾಗಿ, ಮೈಸೂರು ಪ್ರಜಾಪ್ರತಿನಿಧಿ ಸಭಾ ಸಭಿಕರೂ ಡಿಸ್ಟ್ರಿಕ್ಟ್ ತಾಲ್ಲೋಕು ಬೋರ್ಡುಸಭಿಕರೂ ಆಗಿದ್ದು ಅನೇಕ ಪರೋಪಕಾರ ಕೃತ್ಯಗಳನ್ನು ಮಾಡಿ, ಈ ಸುತ್ತಿನಲ್ಲಿ ಮಾನ್ಯರಾಗಿದ್ದ ಪಟೇಲ್ ಕೆಂಚವೀರಪ್ಪನವರು ಮಾರ್ಚಿ ತಾ|| ೭ ರಲ್ಲಿ ತಿವಾಥೀನರಾದರೆಂದೂ, ಅವರ ಉತ್ತರಕ್ರಿಯೆಯನ್ನು ಅವರ ಕುಮಾರರು ಬಹಳ ಉದಾರವಾಗಿಯೂ ವಿಜೃಂಭಣೆಯಿಂದಲೂ ನೆರವೇರಿಸಿ ೧ ರೂ. ಸಂತೆ ಭೂರಿದಕ್ಷಿಣೆಯನ್ನು ಕೊಟ್ಟರೆಂತಲೂ ಅಪರಕ್ರಿಯೆಯ ಕಾಲಕ್ಕೆ ಸುತ್ತುಮುತ್ತಣ ಗ್ರಾಮದ ಎಲ್ಲ ಜಾತಿಯ ಪ್ರಮುಖಜನರೂ ಸೇರಿದ್ದರೆಂತಲೂ ನಮ್ಮ ಚಂದಾದಾರರೊಬ್ಬರು ತಿಳಿಯಿಸಿರುತ್ತಾರೆ.

ದಿವಾನರು ತಮ್ಮ ಸೆಕ್ರೆಟರಿಗಳೊಡನೆ ಕಳೆದ ತಾ|| ೭ ರಲ್ಲಿ ಕಡೂರು ಮಾರ್ಗವಾಗಿ ಸಾಂತವೇರಿಗೆ ಬಂದು ತಾ|| ೮ ರಲ್ಲಿ ಕಲ್ಹತ್ತಗಿರಿಯನ್ನು ಪರಾಮರಿಸಿಕೊಂಡು ತಾ|| ೯ ರ ಬೆಳಿಗ್ಗೆ ಚಿಕ್ಕಮಗಳೂರಿಗೆ ಬಂದು ಅಲ್ಲಿಯ ಟವನ್ ಹಾಲಿಗೆ ಪ್ರಜಾಮುಖಂಡರು, ಲಾಯರುಗಳು, ವರ್ತಕರು, ಅಧಿಕಾರಿಗಳು ಮೊದಲಾದವರನ್ನು ಬರಮಾಡಿಕೊಂಡು ಒಂದು ಸಭೆಯನ್ನು ನಡೆಸಿ ಕಡೂರಿಂದ ಚಿಕ್ಕಮಗಳೂರಿಗೆ ಲೋಹಮಾರ್ಗವನ್ನು ಹಾಕುವುದು, ಚಿಕ್ಕಮಗಳೂರಿನಲ್ಲಿ ಕುಡಿಯುವ ನೀರನ್ನೊದಗಿಸಿಕೊಡುವುದು, ಕೈಗಾರಿಕೆ, ಬೇಸಾಯ, ವಿದ್ಯಾಭ್ಯಾಸ- ಮೊದಲಾದ ಪ್ರಯೋಜನಯುಕ್ತ ವಿಚಾರಗಳಲ್ಲಿ ಜನರಭಿಪ್ರಾಯವನ್ನು ತಿಳಿದುಕೊಂಡು ಅದೇ ಸಾಯಂಕಾಲ ಕಡೂರಿಗೆ ಬಂದು ಆ ರಾತ್ರಿ ರೈಲುಬಂಡಿಯನ್ನು ಹತ್ತಿ ಬೆಂಗಳೂರಿಗೆ ಹಿಂದಿರುಗಿ ಬಂದರು.

ರಾಜಧಾನಿಯ ರೈಲ್ವೆಸ್ಟೇಷನ್ನಿನೊಳಕ್ಕೆ ಪ್ರಯಾಣಿಕರಲ್ಲದವರು ೧ ಆಣೆಯನ್ನು ಕೊಟ್ಟು ಟಿಕೆಟ್ಟನ್ನು ತೆಗೆದುಕೊಂಡು ಹೋಗುವಂತೇರ್ಪಡಿಸಬೇಕೆಂದು ಇಲ್ಲಿಯ ಸ್ಟೇಷನ್‌ಮಾಸ್ಟರು ಮೇಲ್ಪಟ್ಟ ರೈಲ್ವೆಯಧಿಕಾರಿಗಳಿಗೆ ಸೂಚಿಸಿರುವಲ್ಲಿ, ಈ ಏರ್ಪಾಟು ಸದ್ಯದಲ್ಲಿ ಅವಶ್ಯಕವಿಲ್ಲವೆಂದು ಅಧಿಕಾರಿಗಳು ಅಭಿಪ್ರಾಯಪಟ್ಟಿರುವುದಾಗಿ ತಿಳಿಯುತ್ತೇವೆ. ಬೊಂಬಾಯಿ, ಮದರಾಸು ಮೊದಲಾದ ದೊಡ್ಡ ಪಟ್ಟಣಗಳ ಸ್ಟೇಷನುಗಳಂತೆಯೇ ಪ್ರಯಾಣಿಕರ ವಿಶೇಷ ಗದ್ದಲವಿರುವ ಬೆಂಗಳೂರು ಸ್ಟೇಷನ್ನಿನಲ್ಲಿ ಹೋಗಿರುವ ಜನಗಳಿಗೆ ಯಾವ ಭಾಗದಲ್ಲೂ ತೊಂದರೆಯಿಲ್ಲದೆ ಇರುವಾಗ್ಯೆ ಅಲ್ಲಿಯ ಗದ್ದಲದ ೩೦ನೆಯ ಒಂದು ಭಾಗದಷ್ಟೂ ಇಲ್ಲದಿರುವ ಈ ಸಣ್ಣ ಸ್ಟೇಷನ್ನಿನಲ್ಲಿ ಪ್ರಯಾಣಿಕರಿಗೂ ಅವರನ್ನು ಇದಿರ್ಗೊಳ್ಳಲು ಅಥವಾ ಸಾಗಕಳುಹಲು ಬರುವ ಜನರಿಗೂ ಇಷ್ಟೊಂದು ನಿರ್ಬಂಧವನ್ನು ಕಲ್ಪಿಸಬೇಕಾದಾವಶ್ಯಕತೆಯೇನಿರುವುದೋ ತಿಳಿಯದು.

ಪತ್ರವ್ಯವಹಾರ.

ಶ್ರೀ ಬಸವೇಶ್ವರ ಜಯಂತಿ.

(ದಾವಣಗೆರೆ)

ಈ ಮೂಲಕ ಸಮಸ್ತ ವೀರಶೈವರಿಗೆ ಶ್ರುತಗೊಳಿಸುವುದೇನೆಂದರೆ:— ಈ ರಾಕ್ಷಸನಾಮ ಸಂವತ್ಸರದ ನಿಜ ವೈಶಾಖ ಶುದ್ಧ ೧ ಶನಿವಾರ (ತಾ॥ ೧೫-೫-೧೯೧೫) ರೋಹಿಣಿ ನಕ್ಷತ್ರವಿರುವುದರಿಂದ ವೀರಶೈವ ಮತೋದ್ಧಾರಕನಾದ ಶ್ರೀ ಬಸವೇಶ್ವರನ ಜಯಂತ್ಯುತ್ಸವವು ಪದ್ಧತಿಯ ಪ್ರಕಾರ ನಡೆಯಬೇಕಾಗಿರುವ ಪ್ರಯುಕ್ತ ಅವರವರ ಮನೆಗಳಲ್ಲಿ ಶ್ರೀ ಜಂಗಮಾರಾಧನೆಯನ್ನಾಚರಿಸಬೇಕಲ್ಲದೆ ತಮ್ಮ ತಮ್ಮ ಗ್ರಾಮದಲ್ಲಿನ ಮಠಾದಿ ಪೂಜ್ಯಸ್ಥಲಗಳಲ್ಲಿ ಸಭೆ ಸೇರಿ ಉಪನ್ಯಾಸ, ಪುರಾಣ, ಶಿವಕೀರ್ತನಗಳಿಂದ ಕಾಲಯಾಪನ ಮಾಡಬೇಕಾಗಿ ಕೋರಿಕೆ, ಈ ಜಯಂತ್ಯುತ್ಸವವನ್ನು ಜರುಗಿಸಿದ ಮಹಾಶಯರು ತಮ್ಮಲ್ಲಿ ನಡೆದ ವಿಷಯವನ್ನು ಪ್ರಕಟನೆಗಾಗಿ ಇಲ್ಲಿನ " ಧನುರ್ಧಾರಿ " ಪತ್ರಿಕೆಯ ಸಂಪಾದಕರ ಕಡೆಗೆ ಬರೆದು ಕಳುಹಿಸುವರೆಂದು ತುಂಬಾ ನಂಬುಗೆ ಇದೆ.

ಕಾರ್ಯದರ್ಶಿ,
ವೀರಶೈವ ಹಿತೋಪದೇಶಕ ಸಂಘ,

ದಕ್ಷಿಣಕಾಶಿ.

ಶಿವಗಂಗೆ, ನೆಲಮಂಗಲ ತಾ॥

ಕಳೆದ ಯುಗಾದಿ ಹಬ್ಬದ ಮಾರನೆಯ ದಿವಸ ಈ ಗ್ರಾಮದಲ್ಲಿ ವೀರಶೈವ ಮಂಡಲಿಯವರು ಗ್ರಾಮಮಧ್ಯಸ್ಥಳದಲ್ಲಿರುವ ಶ್ರೀ ಮಕ್ಕಳ ಬಸವೇಶ್ವರಸ್ವಾಮಿಯ ದೇವಾಲಯವನ್ನು ಚಪ್ಪರ, ತಳಿರುತೋರಣಗಳಿಂದಲಂಕರಿಸಿ, ಮಂಗಳವಾದ್ಯದೊಡನೆ ಶ್ರೀ ಸ್ವಾಮಿಯ ಉತ್ಸವವನ್ನು ಪೇಟೆಯಲ್ಲೆಲ್ಲಾ ಬಹಳ ವಿಜೃಂಭಣೆಯಿಂದ ನೆರವೇರಿಸಿ ದೇವಾಲಯಕ್ಕೆ ಬಿಜಮಾಡಿಸಿದರು. ಪುನಃ ಸದ್ಧತಿಪ್ರಕಾರ ವೀರಶೈವ ಬಾಲಕಿಯರೆಲ್ಲರೂ ಮಡಿಯಿಂದ ಆರತಿಯೊಡನೆ ಶ್ರೀ ಬಸವೇಶ್ವರಸ್ವಾಮಿಯ ದೇವಾಲಯಕ್ಕೆ ಬಂದನಂತರ ಪುರುಷರೆಲ್ಲರೂ ಶ್ರೀ ಸ್ವಾಮಿಯ ಅಗ್ನಿಕುಂಡವನ್ನು ಹಾಯ್ದು ಬಳಿಕ ಸರ್ವರಿಗೂ ಗಂಧಪುಷ್ಪತಾಂಬೂಲಾದಿಗಳು ಹಂಚಲ್ಪಟ್ಟವು. ಇದರಂತೆಯೇ ಪ್ರತಿಸಂವತ್ಸರವೂ ಸ್ವಾಮಿಯ ಆಶೀರ್ವಾದದಿಂದ ವಿಚಕ್ಷಣೆಯಾಗಿ ನೆರವೇರಲೆಂದು ಕೋರುತ್ತೇನೆ

ಪ್ರತ್ಯಕ್ಷದರ್ಶಿ.

ಬಬಲೇಶ್ವರದ ಬಸವೇಶ್ವರ ವ್ಯವಸ್ಥಾಪಕ ಕಮಿಟಿಯ ಪತಿಯಿಂದ—

ಕನ್ನಡಭಾಷೆಯಲ್ಲಿ ಕೆಳಗೆ ತೋರಿಸಿದ ವಿಷಯದ ಪೈಕಿ ತಮ್ಮತಮ್ಮ ಇಚ್ಛಾನುಸಾರವಾಗಿ ಉಪನ್ಯಾಸಗಳನ್ನು ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಬೇರೆಬೇರೆ ಪಂಡಿತರು ಬರೆದು ಕಳುಹಿಸಬೇಕು. ಅವು ಇಲ್ಲಿನ ಪಂಡಿತರಿಂದಲೂ ಮತ್ತು ಶಾಸ್ತ್ರಿಗಳಿಂದಲೂ ಪರೀಕ್ಷಿಸಲ್ಪಟ್ಟು ಅವುಗಳಲ್ಲಿ ೫ ನಿಬಂಧಗಳು ಪಾಸು ಮಾಡಲ್ಪಡುವುವಲ್ಲದೆ ಅವುಗಳಿಗೆ ಅನುಕ್ರಮದಿಂದ ೫, ೪, ೩, ೨, ೧ ರೂ. ಗಳಂತೆ ಬಕ್ಷೀಸ ಕೊಡಲ್ಪಡುವುದು ಆದುದರಿಂದ ತಮ್ಮ ವಿದ್ಯದ ಕೀರ್ತಿಯೆಂಬ ಪ್ರಕಾಶದಿಂದ ಭರತಭೂಮಿಯ ಅಜ್ಞಾನವೆಂಬ ಕತ್ತಲೆಯನ್ನು ದೂರಮಾಡಬೇಕೆಂಬ ಕುತೂಹಲವುಳ್ಳವರು ಈ ಕಾರ್ಯದಲ್ಲಿ ಎಂದೂ ಉದಾಸೀನರಾಗದೆ ಕೆಳಗಿನ ವಿಷಯಗಳ ಪೈಕಿ ಒಂದು ವಿಷಯವನ್ನು ಬರೆದು ಕಳುಹಿಸುವರೆಂದು ಕೋರುತ್ತೇನೆ. ಇಂಥ ವಿಷಯಗಳನ್ನು ಅಂಧರು ಮತ್ತು ಹಸ್ತಹೀನರು ಕೂಡ ಪರರಿಗೆ ಹೇಳಿ ಅವರಿಂದಾದರೂ ಬರೆಸಿ ಕಳುಹಿಸದೆ ಎಂದೂ ಬಿಡಲಿಕ್ಕಿಲ್ಲ. ಏಕೆಂದರೆ-ಭರತಭೂಮಿಗೆ ಕಳಂಕವನ್ನು ತಂದ ದೋಷವು ತಮ್ಮಮೇಲೆ ಬರುವುದೆಂಬ ಅಂಜಿಕೆಯಿಂದ ಮತ್ತು ತಾವು ಕಲಿತ ವಿದ್ಯೆಯನ್ನು ಈ ನಿಬಂಧರೂಪದಿಂದಾದರೂ ದಾನಮಾಡದೇ ಇರಬಾರದೆಂಬ ಆಶೆಯಿಂದಲೂ ಬರೆದು ಕಳಿಸದೆ ಇರಲಿಕ್ಕಿಲ್ಲವೆಂದು ನಾನು ಆಶಿಸುತ್ತೇನೆ.

ವಿಷಯಗಳು:— (೧) ಶ್ರೀ ಬಸವೇಶ್ವರನ ವಿಷಯದಲ್ಲಿ ಅತ್ಯುತ್ತಮವಾದ ದೊಡ್ಡಚರಿತ್ರೆ, (೨) ರಾಜನಿಷ್ಠೆ, (೩) ವಿದ್ಯದಿಂದುಂಟಾಗುವ ಲಾಭಗಳು (೪) ಕಲಾಕೌಶಲ್ಯ, (೫) ಒಕ್ಕಲತನ, (೬) ಧೈರ್ಯ, (೭) ವೈರಾಗ್ಯ, (೮) ಸ್ತ್ರೀಶಿಕ್ಷಣ, (೯) ಪರೋಪಕಾರ, (೧೦) ಉದ್ಯೋಗ. ಅಂತೂ ಈ ಹತ್ತರ ಪೈಕಿ ಒಂದನ್ನು ಬರೆದು ಮೇ ತಿಂಗಳ ೧೫ ನೆಯ ತಾರೀಖಿನೊಳಗಾಗಿ ನಮಗೆ ಮುಟ್ಟುವಂತೆ ಕಳಿಸುವುದಾಗಬೇಕು ಉಪನ್ಯಾಸದಲ್ಲಿ ರಾಜನೀತಿಗೂ, ಧರ್ಮಕ್ಕೂ ಭಂಗಬರುವ ವಿಷಯಗಳನ್ನು ಬರಿಯಬಾರದು.

ಬಸಪ್ಪಾ ರಾಚಪ್ಪಾ ಮಂಗಳವೇಡೆ,
ಬಬಲೇಶ್ವರ ಪೋಸ್ಟ್, ಬಿಜಾಪುರ ಡಿ॥

ಹಾಲೆಂಡಿಗೂ ಜರ್ಮನಿಗೂ ಸಾಮಾನಿನ ಹಡಗುಗಳ ಯಾತಾಯಾತವು ಪೂರ್ಣವಾಗಿ ಕಟ್ಟಾಗಿರುವುದರಿಂದ ಜರ್ಮನಿಗೆ ಕಲ್ಲಿದ್ದಲು ಸಾಗಹೋಗುವುದಕ್ಕಿಲ್ಲದೆ ಅಲ್ಲಿನ ಯಂತ್ರಾಲಯಗಳ ಮತ್ತೂ ನೌಕಾಶಾಖೆಯ ಕೆಲಸಗಳಿಗೆ ಬಹಳ ತೊಂದರೆಯುಂಟಾಗಿದೆ.

ಜರ್ಮನಿಯವರ. ಫೆಬ್ರುವರಿ ತಾ॥ ೧೮ ರಿಂದ ಇಂಗ್ಲೆಂಡಿನ ಸುತ್ತಣ ಸಮುದ್ರವನ್ನೆಲ್ಲಾ ಯುದ್ಧಾಂಗಣವನ್ನಾಗಿ ಮಾಡುತ್ತೇವೆಂದು ಪ್ರಕಟಿಸಿದ ಮೊದಲು ೬ ವಾರಗಳ ವರೆಗೆ ಮಾಡಿರುವ ಅನರ್ಥವೆಂದರೆ- ೨೩ ಹಡಗುಗಳನ್ನು ಅವರು ಮುಳುಗಿಸಿರುತ್ತಾರೆ. ಆ ಕಾಲದಲ್ಲಿ ಇಂಗ್ಲೀಷ್ ರೇವೆಗಳಿಗೆ ಬಂದು ಹೋಗಿರುವ ವ್ಯಾಪಾರದ ಹಡಗುಗಳ ಸಂಖ್ಯೆಯು ೮೯೬೦, ಮಾರ್ಚಿ ತಾ॥ ೩೧ ಕ್ಕೆ ಕಡೆಯಾದ ೧ ವಾರಕಾಲದಲ್ಲೇ ಹಾಗೆ ಬಂದು ಹೋಗಿರುವ ಹಡಗುಗಳ ಸಂಖೆಯು ೧೫೫೯. ಎಂದಬಳಿಕ ಜರ್ಮನರ ಭೀತಿಯಿಂದ ಸಮುದ್ರದ ಮೇಲಣ ವ್ಯಾಪಾರವು ಎಷ್ಟುಮಾತ್ರಕ್ಕೂ ಕಟ್ಟಾಗಿಲ್ಲವೆಂಬುದು ವ್ಯಕ್ತವಾಗುತ್ತಿದೆ.

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅಂತ್ಯಂತ ಸುಂದರವಾಗಿ ಕಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲಾಪುರದಲ್ಲಿ ವ್ಯಾಸನತೋಳು ಸಹಿತ ಆದ ಸಮಾರಂಭ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೊ (ರಾಮರಾದಿಗಳ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲುಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ. ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ.

ಶ್ರೀ ವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಅನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ. ಸೊಲ್ಲಾಪುರ ಶ್ರೀ ಶಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೊ ಸಿಕ್ಕುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.



ಹೊಸಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರ್ವಳಿಗೆ ಹಚ್ಚುವಲಾಕೇಟುಗಳು, ಇದರಲ್ಲಿ ಹಿಂದೆ ಮುಂದೆ ಈ ಪ್ರಕಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ॥, ।।।=, ೧, ೧।, ಪ್ರಕಾರ, ಮತ್ತೂ ಬೆಳ್ಳಿಯದು ೧॥ ಗೋಲ್ಡ ಗೋಲ್ಡ ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨।।। ರೂ.

ಊರೂರಿಗೆ ಏಜಂಟರು ಬೇಕಾಗಿರುತ್ತಾರೆ. ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ.

ನಮ್ಮ ವಿಳಾಸ:—ಗಂಗಪ್ಪಾ ಜೇರಿಗೆ,
47 ಆರ್ಟಿಸ್ಟ್ ಸೊಲಾಪುರ.

ದಿನಗಳು ಸವಿಾಪಿಸಿದವು ಅತ್ಯಾಶ್ಚರ್ಯಕರವಾದ ಬಹುಮಾನ
ಔಷಧ ಪ್ರಸಿದ್ಧಿಯಹೊಂದಿದೆ.
೨೫ ಸಾವಿರ ರೂಪಾಯಿಗಳು ಹಂಚಲ್ಪಡುವುವು.
ಬಳ್ಳಾರಿ.
ಅನೇಕ ಸರ್ಟಿಫಿಕೇಟುಗಳು ಬಂದಿವೆ
ಇಂಥಾಸಮಯ ಮುಂದೆ ಸಿಕ್ಕಲಾರದು.
ಸರ್ವಜನಮನೋಲ್ಲಾಸಿನಿ ಅಂಡ್ ಕೋ. ಇವರ
(ನಾ ರ ಸಿಂ ಹ ಚೂ ರ್ಣ ವು.)

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವುದು ಸಹಜವಾದುದಷ್ಟೆ ಆದರೆ ಅನೇಕ ದುರ್ವ್ಯಸನಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವು ವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನು ಕಣ್ಣಾರ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವು ಔಷಧಗಳನ್ನು ವಿಶೇಷವಾದ ಬೆಲೆಯನ್ನಿಟ್ಟು ವಿಕ್ರಯಿಸಿದರು ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವುದು ವಿಷಾದಕರವಾಗಿರುವುದು. ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿ [ನಾರಸಿಂಹ ಚೂರ್ಣವು] ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ ಅನೇಕತರಹೆಯ ಮೇಹರೋಗಗಳು, ಪಾಂಡುರೋಗ, ಹದಿನೆಂಟುಬಗೆಯಾದ ಕುಷ್ಠಗಳು, ಎಂಟುವಿಧ ಉದರರೋಗಗಳು, ಭಗಂಧರವು, ಮೂತ್ರಕೃಛ್ರವು, ಗೃಧ್ರಸೀವಾಡತ ಕಾಮಿಲೆ, ಕ್ಷಯವು, ಮಹಾಶ್ವಾಸಗಳು, ದಾರುಣಮಾದ ಐದು ಬಗೆಯಾದ ಕಾಸೆಗಳು, ಎಂಭತ್ತು ವಿಧಗಳಾದ ವಾತರೋಗಗಳು, ನಲವತ್ತು ಬಗೆಯಾದ ಪಿತ್ತಗಳು, ಇಪ್ಪತ್ತು ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಶಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ ಚಿನ್ನದಂಥಾ ಕಾಂತಿಯು, ಸಿಹ್ಮನಂತೆ ಪರಾಕ್ರಮವು, ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯು ಉಳ್ಳವರಾಗಿ ನೂರುಮಂದಿ ಯುವತಿಯರೊಂದಿಗೆ ಸುರತಮಂ ಮಾಡುವಂಥಾ ಅತ್ಯಧಿಕ ವೀರ್ಯವೃದ್ಧಿಯುಂಟಾಗಿ ನೃಸಿಹ್ಮನಿಗೆ ಸಮಾನರಾದ ಮಕ್ಕಳನ್ನು ಹುಟ್ಟಿಸುವ ಪ್ರಬಲ ಬಲವಿರುವುದು. ಇದರಲ್ಲಿ ಯಾವವಿಧವಾದ ರಸಗಳಾಗಲಿ ಮಿಶ್ರವಾಗಿಯಿಲ್ಲ ಇನ್ನಾವದೋಷಗಳೂ ಯಿಲ್ಲ ನಿರ್ದುಷ್ಟವಾದದ್ದು ಫಕ್ತವನಸ್ಪತಿಗಳಿಂದಲೇ ಸಿದ್ಧಮಾಡಿದ ದಿವ್ಯವಾದ ಔಷಧ. ಅನೇಕಪಂಡಿತರು, ಧನಿಕರು, ಸರ್ಟಿಫಿಕೇಟುಗಳನ್ನು ಕೊಟ್ಟಿರುವರು.

೧೪ ದಿನ ಉಪಯೋಗಕ್ಕೆ ಬರುವ ಡಬ್ಬಿ ೧ಕ್ಕೆ ಬೆಲೆ ರೂ. ೧

(ಬಹುಮಾನಗಳನ್ನು ಹಂಚುವ ವಿಧಾನ)

೧	ದರ್ಜೆ	ಡಬ್ಬಿಗಳನ್ನು ತರಿಸಿಕೊಳ್ಳುವವರಿಗೆ		೧೦೦೦೦ ರೂ.
೬	,,	,,	...	೬೦೦೦ ರೂ.
೩	,,	,,	...	೪೦೦೦ ರೂ.
೨	,,	,,	...	೩೦೦೦ ರೂ.
೧	,,	,,	...	೨೦೦೦ ರೂ.

೧೯೧೪ ನೆ ಜುಲೈ ೧ ನೆ ತೇದಿ ಮೊದಲು ೧೯೧೫ ನೆ ಜುಲೈ ೧ ನೆ ತೇದಿ ವರಿಗು ಈ ಔಷಧವು ಒಂದುಲಕ್ಷ ಡಬ್ಬಿಗಳು ಖರ್ಚಾದ ಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ. ಒಂದುಲಕ್ಷದಲ್ಲಿ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದುಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ಮತ್ತೂ ವಾಯಿದೆಯನ್ನು ಹೆಚ್ಚಿಸದೆ ಯೆಷ್ಟುಡಬ್ಬಿಗಳು ಖರ್ಚಾಗುತ್ತವೆಯೋ ಅಷ್ಟಕ್ಕೆ ದಾಮಾಷಾಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಒಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡಿಯುವುದಲ್ಲದೆ ಬಹುಮಾನವನ್ನು ಸಹಾ ಹೊಂದುವುದಕ್ಕೆ ಅರ್ಹನಾಗಿರುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರು ಸಂಶಯವಿಲ್ಲ. ಬಹುಮಾನದ ಮೊತ್ತವು ನಿಷ್ಪಕ್ಷಪಾತವಾಗಿ ಒಂದೇಸಮನಾಗಿ ಹಂಚಲ್ಪಡುವುದು. ಇದು ಮೋಸವಲ್ಲ, ಲಾಟರಿಯಲ್ಲ. ಯಾವ ವಿಧವಾದ ಕುಹಕತನವು ಇಲ್ಲ ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರಮಾತುಗಳಿಗೆ ನಿಗಾಕೊಡಲಾಗದು ಜಾಗ್ರತೆಯಾಗಿ ತರಿಸಿಕೊಳ್ಳಿರಿ ಔಷದಗುಣವನ್ನು ಪರೀಕ್ಷಿಸಿರಿ. ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳಿರಿ.

ಇದರ ಅನುಪಾನಪತ್ರಿಕೆಯನ್ನು ಬಹುಮಾನದ ಟಿಕೀಟನ್ನು ಡಬ್ಬಿಸಂಗಡ ಕಳಿಸುವೆವು. ನಮ್ಮ ಕಂಪಿನಿಯ ಕಾಶಿ ವಿಶ್ವನಾಥ ಮಾರ್ಕು ಯಿಲ್ಲದ ಡಬ್ಬಿಯನ್ನ ತೆಗೆದುಕೊಳ್ಳಲಾಗದು.

ವಿಳಾಸ:—ಸರ್ವಜನಮನೋಲ್ಲಾಸಿನಿ
ಅಂಡ್ ಕೋ ಬಳ್ಳಾರಿ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕಾರ್ಯ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿ ಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೪—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೦—೦ ರೂ. ಕೊಡಬೇಕಾಗುವುದು ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರದ ಬಣ್ಣದಿಂದ ಬಿಳಿ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೧—೧೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೦—೦; ಹಳದೀ ಗ್ಲೇಜ್‌ಕಾಗದದಮೇಲೆ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೧-೬-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್, ಕಾರ್ಯಪ್ರೆಸ್, ಮೈಸೂರ್.

ಶ್ರೇಷ್ಠವಾದ ವಾಚ್ ! ನೂತನವಾದ ವಾಚ್ ! ನಾಜೂಕಾದ ವಾಚ್ !

ಸ್ಪ್ರಿಂಗ್ ಪಾಕೆಟ ಲೀವರ್‌ವಾಚ್.

ಇದರ ಕ್ರಯ ೭ ಬಹುಮಾನಗಳ ಸಮೇತ ರೂ. ೩-೮-೦

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ.



ಧನವಂತರೇ ಈ:—ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತೂ ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತೂ ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗ ತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗ್ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್ ಬರೀ ಮಾತುಗಳಿಂದಲೇನುಃ ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ ೭ ಬಹುಮಾನಗಳ ·ತಪಶೀಲ್ : —(೧) ಸುಂದರವಾದ ವಾಚ್ ಸರಪಣಿ, (೨) ದಿಕ್ಕುಗಳನ್ನು ತೋರಿಸುವ ಉತ್ತರಮುಖ, (೩) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (೪) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆದಾರ, (೫) ವಾಚ್ ಗೆಟ್ಟಿಗೆ (ಬಹು ಸುಂದರವಾದದ್ದು), (೬) ಪರಿಮಳವುಳ್ಳ ಸುವಾಸನೆ ಶೀಷೆ, (೭) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—
ಎಸ್. ಎಮ್. ಸ್ವಾಮಿ ಅಂಡ್ ಕಂಪೆನಿ,
ನಂ. ೪೪, ನಂಬುಳಯ್ಯರ ಬೀದಿ, ಮದರಾಸು.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಠಗಳು

79

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಠಗಳೂ, ವಿವಿಧ ಕದನಗಳ ಪಠಗಳೂ ಯುದ್ಧದ ಹಡಗುಗಳ ಪಠಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಠಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ ಕ್ರಯ ೪ ಅಣೆ; ವಿ. ಪಿ. ಮೂಲಕ ೬ ಅಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಠಗಳು ! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಠಗಳು. ಕ್ರಯ ೨ ಅಣೆ; ವಿ. ಪಿ. ಯಲ್ಲಿ ೪ ಅಣೆ.

ನಮ್ಮ ವಿಳಾಸ:—ದಿ ಜನರಲ್ ಏಜನ್ಸಿ. ಮೈಸೂರು.

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಳ ಕೂದಲು ಬೆಳೆಯುವ ಪರಿಮಳ ತೈಲವು.

ಡಬ್ಬಿ ೧ ಕ್ಕೆ ೩೬ ವಿಧವಾದ ಇನಾಂ ಸಾಮಾನುಗಳ ಸಮೇತ ೧೫ ತೊಲೆ ಎಣ್ಣೆಯ ಕ್ರಯ ರೂ. ೧-೦-೦



ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೇಇರುವ ಕೂದಲು ಬೆಳೆಯುವುದು. ಒರಟಾಗಿರುವ ಕೂದಲು ಮೃದುವಾಗುವುದು. ನೇರಳೇಹಣ್ಣಿನಂತೆ ಕಪ್ಪಾಗಿ ಥಳಥಳಿಸುವುದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವುದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಮೊದಡನ್ನು ಸರಿಮಾಡುವುದು. ಕಣ್ಣಿನಲ್ಲಿ ಮಂಜನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವುದಲ್ಲದೆ ಜವ್ವಾಜಿ ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತೂ ಜಾಜಿ, ಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರೂಪಾಕ್ಷಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವುದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

೧೫ ತೋಲ ತೈಲವುಳ್ಳ ಡಬ್ಬಿ ೧ ಕ್ಕೆ ಕ್ರಯ ೩೬ ಇನಾಂ ಸಾಮಾನುಗಳ ಸಮೇತ ರೂ. ೧-೦-೦

ಇನಾಂ ಸಾಮಾನುಗಳ ತಪ್ಸೀಲು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ ೧, ದಂತದ ಬಾಚಣಿಗೆ ೧, ನೋಡಿಕೊಳ್ಳುವ ಕನ್ನಡಿ ೧, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ ೧, ಅತ್ತರುಬಿಲ್ಲೆ ೧, ವಾಸನೆಯುಳ್ಳ ಸೋಪು ೧ ತಾಂಬೂಲಮಾತ್ರೆ ೨೨ ಕೊಂಡೆ ಗುಣಿಗಳು ೬ ಕಾರೊನೇಷನ್ ಬ್ರೂಚ್ ೧, ಜವಾದುಡಬ್ಬಿ ೧, ಈ ತರಹ ೩೬ ಇನಾಂ ಕೊಡಲ್ಪಡುತ್ತವೆ.

ನಮ್ಮ ವಿಳಾಸ:—ಧನಲಕ್ಷ್ಮಿ ಅಂಡ್ ಕಂಪನಿ ೧-೬
ವೆಂಕಟೇಶಮೇಸ್ತ್ರಿ ಬೀದಿ, ಸಾಹುಕಾರ್ ಪೇಟೆ ಮದರಾಸು.

೫೦೦ ರೂಪಾಯಿಗಳ ಬಹುಮಾನ
ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ " ಸಾಲಾಮಿಸ್ರೀ ಮುರಬ್ಬಾವನ್ನು " ಸೇವಿಸಿರಿ ! ಸೇವಿಸಿರಿ !! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್‌ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಸಾಲಾಮಿಸ್ರಿಯ ಧಾರಣೆಯು ಜಾಸ್ತಿಯಾಗಿರುವದರಿಂದ ಅನೇಕರು ಉರುಳುಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹಾದ್ದೋ ಎಂಬುವದು ತಿಳಿದುಬರುತ್ತದೆ.

ಸಾಲಾಮಿಸ್ರಿ ಮುರಬ್ಬಾವು—ನೀರಿನಂತಿರುರ ಧಾತುವನ್ನು ಗಟ್ಟಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಸ್ತ್ರೀ ಸಂಗಕ್ಕೆ ಮೊದಲೆ ಧಾತು ಸ್ಖಲನವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಧಾತುಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕ್ಷಣ ಕ್ಷಣಕ್ಕೆ ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೆಟ್ಟುಹೋಗಿರುವ ರಕ್ತವನ್ನು ಶುದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ವೃದ್ಧಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಳೆತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು.
ಸಾಲಾಮಿಸ್ರಿ ಮುರಬ್ಬಾವು—ಉತ್ಸಾಹ, ಧೈರ್ಯ, ಬುದ್ಧಿಕುಶಲತೆ, ಶರೀರಕಾಂತಿಯನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು—ತಾಂಬ್ರ, ಬೆಳ್ಳಿ, ಮತ್ತು ಭಂಗಾರ ಭಸ್ಮಕ್ಕಿಂತಲೂ ಉತ್ತಮವಾದುದು.
ಸಾಲಾಮಿಸ್ರಿ ಮುರಬ್ಬಾವು—ಹೊಟ್ಟೆಯಲ್ಲಿರುವ ಜ್ವರದಗೆಡ್ಡೆಯನ್ನು ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಶ್ವಾಸಖಾಸ ರೋಗಗಳನ್ನು ನಾಶಪಡಿಸುವದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪುರಾ ಗುಣಕೊಡುತ್ತದೆ. ೨-೩ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು " ಸಾಲಾಮಿಸ್ರಿ " ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

೫೦೦ ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ಇದಕ್ಕೋಸ್ಕರವಾಗಿ ನಾವು ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ ಮೇಲ್ಕಂಡ ೫೦೦ ರೂಪಾಯಿಗಳನ್ನು ೧೯೧೫ನೆ ಇಸವಿ ಮಾರ್ಚಿ ತಾ॥ ೧೫ ರಲ್ಲಿ ಡಿಪಾಜಟ್ಟು ಇಟ್ಟಿರುತ್ತೇವೆ.

೧೫ ತೊಲೆ ಮುರಬ್ಬಾವಿನ ಡಬ್ಬಿ ೧ ಕ್ಕೆ ಕ್ರಯ ೨—೦—೦ ರೂಪಾಯಿ. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ ೬ ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ವಿಳಾಸ:—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
೫, ಅವೆನ್ಯೂ ರೋಡ್ ಬೆಂಗಳೂರು ಸಿಟಿ.

ಓರಿಯಂಟಲ್ ಫಾರ್ಮಸಿ ಮೈಸೂರು.

10

ಪ್ರಸಿದ್ಧ ಗುಣಕಂಡ ಔಷಧಗಳು.

ಜ್ವರದಮಾತ್ರೆ—ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳೆವು, ಹೊಟ್ಟೆಯುಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮಂದಇವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ರೂ.

ಗೋರೋಜನದಮಾತ್ರೆ—ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೂಡ್ಲೆ ತಪ್ಪಿ ಜೀರ್ಣಶಕ್ತಿಕೊಡುತ್ತೆ. ಪ್ರಯಾಣಿಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾಯು ನೋವು ಉಳುಕು ಊದು ಮುಂತಾದುದಕ್ಕೆ ರಾಮಬಾಣ. ೧ ಡಬ್ಬಿಗೆ ೪ ಆಣೆ ೫ ಡಬ್ಬಿಗೆ ೧ ರೂ ಕೂಡ್ಲೆ ನಮ್ಮ ಕ್ಯಾಟಲಾಗಿಗೆ ಬರಿಯಿರಿ ಮುಫತ್ತು ಕಳುಹಿಸುತ್ತೇವೆ.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

15

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಮರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪ್ರಮೇಹವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲಿ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನ್ನಡ.

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧-೨-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ಕ್ಕೆ ೧-೦-೦; ಹಸಿಗಂಧ ತೋಲಾ ೧ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ಕ್ಕೆ ೪ ಆಣೆ ಧೂಪದಗಟ್ಟಿ ೧ಕ್ಕೆ ೨ ಆಣೆ ಬಾಲಗ್ರಹಚೂರ್ಣ ೧ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್‌ಸನ್ಸ್ 48
ಸುಗಂಧಕಾರಿ, ಮೈಸೂರು.

ಹೊಸ ಪುಸ್ತಕಗಳು.

179

ಸಿದ್ಧಾಂತಶಿಖಾಮಣಿ—ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೦೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ—ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ

ಬಸವರಾಜವಿಜಯಂ—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ—ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ, ಶಿವ ಪಂಚವಿಂಶತಿಲೀಲೆಗಳು. ಅನೇಕ ಶಿವಶರಣರ ಚರಿತ್ರೆಗಳು ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ—ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ—ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ

ಪಂಚಶ್ಲೋಕೀ—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ—೧-೩-೦; ಸಟೀಕ ತತ್ತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗ ಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಳಿ, ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

45



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋಹಿತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲಿ, ಮಕ್ಕಳ ಎಳವು, ಜ್ವರ, ಸಜ್ಜುಪ್ಪರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೩ ಆಣೆ

ವೈಶಮ್ಯಾನಲಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶಮ್ಯಾನಲಾಸವವು ಸಂಜೀವನವಾಗಿದೆ. ಬೈಮಾರಿಕೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರನು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಮೋಸಹೋಗಬೇಡಿರಿ. ಒಂದೇಒಂದು ಬುದ್ಧಿಯು ನಿಮ್ಮಲ್ಲಿರಲಿ ಮತ್ತೊಂದು ಸಹಾಯವ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುದ್ಧಿಯ ಬೆಲೆ ೧—೦—೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೦—೬—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತೆ	೦—೫—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಬಿಸಿಲುಕಾಲಕ್ಕೆ 26

ಬಳ್ಳಿಗುಚ್ಛಕಂ

ಅಮೃತಾಮಲಕತೈಲ:—ವಿಧವಿಧವಾದ ತಲೆನೋವು, ಶರೀರವು ಬೆಂಕಿಯಂತಿರುವುದು, ತಲೆತಿರಗು, ಕಣ್ಣುರಿ, ಕಣ್ಣು ಕೆಂಪು, ಕಣ್ಣು ಮಂಜು, ಕಣ್ಣಿನಲ್ಲಿ ನೀರು ಸುರಿಯುವುದು, ರಾತ್ರಿ ನಿದ್ರೆಬಾರದಿರುವುದು ಇವುಗಳನ್ನು ೧-೨ ಅಭ್ಯಂಗನದಿಂದಲೇ ಗುಣಮಾಡಿ ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ. ಬಿಸಿಲುಕಾಲಕ್ಕೆ ಇದು ಅಮೃತಮೇಸರಿ. ಎಂಟು ಅಭ್ಯಂಗನಕ್ಕೆ ಆಗುವ ತೈಲ ೦-೮-೦. ೧ ದರ್ಜ ೫-೦-೦.

ಆಮೋದಿನಿ:—ಅಮೋಘವಾದ ಸುವಾಸನೆಯಿಂದ ಕೂಡಿದ ಈ ಮಾತ್ರೆಗಳು ತಾಂಬೂಲವನ್ನು ರಂಜಿಸಿ ಬಾಯಾರಿಕೆಯನ್ನು ತತ್ಷಣ ನಿಲ್ಲಿಸಿ ಆಯಾಸವನ್ನು ಪರಿಹರಿಸಿ ಕಂಠನಾಳವನ್ನು ಸರಿಪಡಿಸಿ ಕೆಮ್ಮು, ದಮ್ಮು, ಉಬ್ಬಸ, [illegible]ಧಗಳನ್ನು ಗುಣಮಾಡಿ ಆರೋಗ್ಯವನ್ನು ಕಾಪಾಡುವದರಲ್ಲಿ ಶ್ರೇಷ್ಠವಾದುದು. ಸಂಗೀತಗಾರರಿಗೂ, ವಿದ್ಯಾರ್ಥಿಗಳಿಗೂ, ಪ್ರಯಾಣಿಕರಿಗೂ ಅಮೂಲ್ಯವಾದುದು. ೧೫೦ ಮಾತ್ರೆ ೦—೪—೦. ೫ಕ್ಕೆ ಒಂದು ಹೆಚ್ಚು.

ಖುಂಟಾಮಲಕರಸಾಯನ:—ತಲೆತಿರಗು, ಕಣ್ಣು ಕಗ್ಗತ್ತಲೆ, ಹಸಿವೇ ಇಲ್ಲದಿರುವುದು, ಆಹಾರದಲ್ಲಿ ಅರುಚಿ, ವಾಕರಿಕೆ, ವಾಂತಿ, ಹುಳಿ, ಖಾರ, ಅಥವಾ ಕಹಿಯಾದ ತೇಗು, ಹೊಟ್ಟೆಯುಬ್ಬರ, ಹೊಟ್ಟೆನೋವು, ಕಣ್ಣು ಅಥವಾ ಮೈ ಹಳದೀಬಣ್ಣ, ನಿಶ್ಶಕ್ತಿ, ಹಳೇಜ್ವರ, ಎದೆಬಡಿಯುವಿಕೆ, ಪಾಂಡು, ಕಾಮಾಲೆ, ಮೂರ್ಛೆ ಇವುಗಳಲ್ಲೈಕಿ ಯಾವುದಿದ್ದರೂ ಖಾತರಿ ಗುಣವಾಗಿ ದಿನಕ್ಕೊಂದುವೇಳೆ ಸಲೀಸಾಗಿ ಕಾಲಪ್ರವರ್ತಿಯಾಗುತ್ತದೆ. ೧೫ ದಿನಕ್ಕೆ ಆಗುವ ಔಷಧ, ಬೆಲೆ ೦-೧೨-೦. ೧ ದರ್ಜ ಡಬ್ಬಿಗಳಿಗೆ ೨-೮-೦.

ಪ್ರತಿಔಷಧಕ್ಕೂ ಟಪಾಲ್ ಮತ್ತು ಪ್ಯಾಕಿಂಗ್ ಖರ್ಚು ಪ್ರತ್ಯೇಕ.

ವಿಳಾಸ:—ಬಿ. ವಿ. ಪಂಡಿತ್, ಸದ್ವೈದ್ಯಶಾಲಾ,
ನಂಜನಗೂಡು, ಮೈಸೂರು ಡಿ॥

೧೯೧೫ನೆಯ ಇಸವಿ ಏಪ್ರಿಲ್ ತಾ॥ ೧೧ರಿಂದ ೧೯೧೫ನೆಯ ಏಪ್ರಿಲ್ ತಾ॥ ೧೭ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೭ನೆಯ ರಾಕ್ಷಸನಾಮ ಸಂವತ್ಸರದ ಚೈತ್ರ ಬ॥ ದ್ವಾದಶಿಯಿಂದ ಅಧಿಕವೈಶಾಖ ಶು॥ ತದಿಗೆವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ತೇದಿ
11	[1]ಭಾನು	ದ್ವಾ	17-42	ಶತ್ತಭಿಷ	9-17	29
12	[2]ಸೋ	ತ್ರ	18-11	ಪೂಭಾ	11-14	30
13	[3]ಮಂಗ	ಚ	12-59	ಉತ್ತಭಾ	14-24	1
14	[4]ಬುಧ	ಅ	22-57	ರೇವತಿ	18-47	2
15	ಗುರು	ಪಾ	26-57	ಅಶ್ವಿನಿ	24-13	3
16	ಶುಕ್ರ	ಬಿ	31-41	ಭರಣಿ	30-20	4
17	ಶನಿ	ತ	36-57	ಕೃತ್ತಿಕ	36-53	5

(1) ಪ್ರದೋಷಃ, ದಗ್ಧಯೋಗಃ, ಗುರುಚಂದ್ರಯೋಸ್ಸ್ವಪ್ನಃ. (2) ಮಾಸಶಿವರಾತ್ರಿಃ, ಕುಜಚಂದ್ರಯೋಸ್ಸ್ವಪ್ನಂ. (3) ಸರ್ವತ್ರ ಕರಗದ ಅಮಾವಾಸ್ಯೆ. (4) ಚಂದ್ರೋದಯಃ, ಜಮಾದಿಸಾನಿ ಚಂ. ೧, ಗುರು ಶುಕ್ರಯೋಸ್ಸ್ವಪ್ನಃ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಕ್ರಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ERGISTERED NO. M. 124.

REGISTERED NO. M. 124.

ಮೈಸೂರ್ ಸ್ಟಾರ್

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಕ್ಷ್ಯಜ್ಞನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸಿನಮಾಶೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿಭ್ರತೀಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೧೪—೦

ಸಂಪುಟ ೨೮) ಮೈಸೂರ್ ಸ್ಟಾರ್ ಸನ್ ೧೯೧೫ ನೆಯ ಇಸವಿ ಏಪ್ರಿಲ್ ತಾರೀಖು ೧೮ ನೆಯ ಭಾನುವಾರ. (ಸಂಚಿಕೆ ೧೫

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

11

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ

೧. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.
೨. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.
೩. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ ಯಾವರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.
೪. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.
೫. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.
೬. ಬೇಸಿಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗನನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.
೭. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

೪೫ ಮಾತ್ರೆಗಳ	ಪೊಟ್ಟಣ	೧ಕ್ಕೆ	೨	ಆಣೆ	೮೦ ಮಾತ್ರೆಗಳ	ಟಿನ್	೧ಕ್ಕೆ	೪	ಆಣೆ.
೯೫ ,,	,,	,,	೪	,,	೧೦೦ ,,	ಶೀಶೆ	,,	೪॥	,,
೨೦೦ ,,	,,	,,	೩	,,	೫೫೦ ,,	ಮರದಪೆಟ್ಟಿಗೆ	,,	೧	ರೂ.
೨೦೦ ,,	ಟಿನ್	,,	೯	,,	೧೨೦೦ ,,	,,	,,	೨	,,

೧ ರೂ.ಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಎಲ್ಲಾ ಕಡೆಯೂ ಪ್ರಸಿದ್ಧವರ್ತಕರಲ್ಲಿ ವಿಕ್ರಯಿಸಲ್ಪಡುತ್ತದೆ.

ಮೈಸೂರುಸೀಮೆಯ ಏಜಂಟರು:—ಎಂ. ರಾಮಸಂಜೀವ ಸೆಟ್ಟಿ,
ಚನ್ನಪಟ್ಟಣ.

ಸೋಲ್ ಏಜಂಟರು:—ಸೆಶಿಂತಾನ್ ಡಿಪೋ,
ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ ೨.

ಮದ್ರಾಸ್ ಏಜಂಟ್:—ಬಿ. ಸಿ. ಷಾ ಅಂಡ್ ಕೊ,
೧೩೩ ಬೇನಾಬಜಾರ್ ರೋಡ್, ಮದ್ರಾಸ್.

J.U.N. & Co
BENARES CITY.
KASHI
VISHWESHWAR.

29

ದೊಡ್ಡಕಂಪೆನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ. ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ—ಎಸ್. ಯು. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ಓರಿಯಂಟಲ್ ಫಾರ್ಮಸಿ ಮೈಸೂರು.

11

ಪ್ರಸಿದ್ಧ ಗುಣಕಂಡ ಔಷಧಗಳು.

ಜ್ವರದಮಾತ್ರೆ—ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳೆವು, ಹೊಟ್ಟೆಯುಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮಂದಇವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ರೂ.

ಗೋರೋಜನದಮಾತ್ರೆ—ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೂಡ್ಲೆ ತಪ್ಪಿ ಜೀರ್ಣಶಕ್ತಿಕೊಡುತ್ತೆ. ಪ್ರಯಾಣಿಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾಯು ನೋವು ಉಳುಕು ಊದು ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ ರೂ. ಕೂಡ್ಲೆ ನಮ್ಮ ಕ್ಯಾಟಲಾಗಿಗೆ ಬರಿಯಿರಿ ಮುಫತ್ತು ಕಳುಹಿಸುತ್ತೇವೆ.

ತಿರಸಂಗೀಕರ ಸ್ಮಾರಕ.

ಕನ್ನಡ ಒಕ್ಕಲುತನದ ಶಾಲೆ ದೇವೀಹೊಸೂರ.

5

ಈ ಶಾಲೆಯು ಧಾರವಾಡ ಜಿಲ್ಹೆಯಲ್ಲಿರುವ ಹಾವೇರಿ ಸ್ಟೇಶನ್ನಿಂದ ೫ ಮೈಲು ದೂರವಿರುವ ದೇವೀಹೊಸೂರ ಎಂಬಲ್ಲಿ ಸ್ಥಾಪಿತವಾಗಿದ್ದು ಅದರ ಹೊಸಕ್ಲಾಸುಗಳು ಇದೇ ಮೇ ತಿಂಗಳು ೨೪ ನೇ ತಾರೀಖಿನಿಂದ ಶುರು ಆಗುವವು. ಇದು ಕೇವಲ ಒಕ್ಕಲಿಗರ ಮಕ್ಕಳ ದೆಸೆಯಿಂದ ಇರುತ್ತದೆ. ಇದರಲ್ಲಿ ಸೇರಲಿಚ್ಛಿಸುವ ವಿದ್ಯಾರ್ಥಿಗಳ ಸಂಬಂಧದ ನಿಯಮಗಳು ಕೆಳಗೆ ಕೊಟ್ಟಂತೆ ಇರುತ್ತವೆ.

(೧) ಹುಡುಗರು ಸ್ವತಃ ಒಕ್ಕಲತನ ಮಾಡುವಂಥ ಒಕ್ಕಲಿಗರ ಮಕ್ಕಳಾಗಿರಬೇಕು ಮತ್ತು ಆ ಹುಡುಗರು ಸ್ವಲ್ಪ ಮಟ್ಟಿಗಾದರೂ ಒಕ್ಕಲತನದ ಕೆಲಸದಲ್ಲಿ ಮಾಹಿತಿಯುಳ್ಳವರಿರಬೇಕು.

(೨) ಇಲ್ಲಿ ಕಲಿತು ಒಕ್ಕಲತನದ ಉದ್ಯೋಗವನ್ನು ನಡೆಯಿಸಬೇಕೆನ್ನುವವರನ್ನೇ ಈ ಶಾಲೆಯಲ್ಲಿ ತಕ್ಕೊಳ್ಳುವದರಲ್ಲಿ ಬರುವದು. ಸರಕಾರೀ ನೌಕರಿಯನ್ನು ಇಚ್ಛಿಸುವಂಥ ವಿದ್ಯಾರ್ಥಿಗಳು ಇಲ್ಲಿ ಬರಕೂಡದು.

(೩) ಹುಡುಗರು ಕನಿಷ್ಠಪಕ್ಷಕ್ಕೆ ಕನ್ನಡ ೫ನೇ ಇಯತ್ತೆಯಲ್ಲಿಯಾದರೂ ಪಾಸಾಗಿರಲಿಕ್ಕೆ ಬೇಕು. ಮತ್ತು ಅವರು ಯಾವ ಶಾಲೆಯಲ್ಲಿ ಕಲಿತಿರುವರೋ ಆ ಶಾಲೆಯ ಹೆಡ್ಡಮಾಸ್ತರರ ಲೀವ್ವಿಂಗ ಸರ್ಟಿಫಿಕೇಟನ್ನು ಅರ್ಜಿ ಲಗತ ಕಳುಹಿಸಬೇಕು.

(೪) ಹುಡುಗರ ವಯಸ್ಸು ೧೪ ವರ್ಷದಿಂದ ೧೭ ವರ್ಷದ ಒಳಗಿರಬೇಕು. ಮತ್ತು ವಯಸ್ಸಿನ ದಾಖಲೆ ಅರ್ಜಿ ಲಗತ ಕಳುಹಿಸಬೇಕು.

(೫) ಹುಡುಗರ ಅಭ್ಯಾಸಕ್ರಮವು ಎರಡು ವರ್ಷದ್ದಿರುವದು; ಈ ಶಾಲೆಯಲ್ಲಿ ತೆಗೆದುಕೊಂಡ ಪ್ರತಿಯೊಬ್ಬ ಹುಡುಗನಿಗೆ ಅವನ ಶಾಲೆಯ ಫೀಗೂ ಊಟದ ವೆಚ್ಚಕ್ಕೂ ಸಾಲುವಷ್ಟು ಸ್ಕಾಲರಶಿಪ್ ಕೊಡಲ್ಪಡುವದು.

(೬) ಒಮ್ಮೆ ಶಾಲೆಯಲ್ಲಿ ಸೇರಿದನಂತರ ಶಾಲೆಯ ಅಭ್ಯಾಸ ಕ್ರಮವು ಪೂರ್ಣ ಮುಗಿಯುವವರೆಗೆ ಶಾಲೆಯನ್ನು ಬಿಡಕೂಡದು. ಒಂದು ವೇಳೆ ಮಧ್ಯದಲ್ಲಿ ಬಿಟ್ಟರೆ ಅವರು ಶಾಲೆಯಲ್ಲಿ ಇದ್ದಷ್ಟು ದಿವಸಗಳ ಖರ್ಚನ್ನು ಕೆಳಗೆ ಸಹಿ ಮಾಡಿದವರು ನಿರ್ಣೈಯಿಸಿದಷ್ಟು ಕೊಡಬೇಕಾಗುವದು.

ಪ್ರತಿವರ್ಷ ೧೫-೨೦ ಹುಡುಗರನ್ನು ತೆಗೆದುಕೊಳ್ಳುವದರಲ್ಲಿ ಬರುವದು. ಬೇರೆ ಶಾಲೆಗಳಂತೆ ಈ ಶಾಲೆಗೂ ಯಾವತ್ತೂ ಸೂಟಿಗಳು ದೊರೆಯುವವು. ಇದಲ್ಲದೆ ವರ್ಷಕ್ಕೆ ಎರಡಾವರ್ತಿ ಒಮ್ಮೆ ದೀಪಾವಳಿ ಸುಮಾರಕ್ಕೆ, ಮತ್ತೊಮ್ಮೆ ಬೇಸಿಗೆ ಸಮಯಕ್ಕೆ ಒಂದೊಂದು ತಿಂಗಳದ ಸತತ ಸೂಟಿಗಳು ಸಿಕ್ಕುವವು. ಇವೆರಡು ಸೂಟಿಗಳಲ್ಲಿ ಮಾತ್ರ ಹುಡುಗರನ್ನು ಮನೆಗೆ ಕಳುಹಿಸುವದರಲ್ಲಿ ಬರುವದು. ಈ ಶಾಲೆಯ ಮುಖ್ಯ ಉದ್ದೇಶವೆಂದರೆ ಒಕ್ಕಲಿಗರ ಮಕ್ಕಳಿಗೆ ಸುಧಾರಿಸಿದ ಪ್ರಕಾರದ ಒಕ್ಕಲತನದ ಶಿಕ್ಷಣವನ್ನು ಕೊಟ್ಟು ಅವರನ್ನು ಅವರ ತಾಯಿತಂದೆಗಳಿಗೆ ಹೆಚ್ಚಿಗೆ ಉಪಯುಕ್ತರನ್ನಾಗಿ ಮಾಡಿಕೊಡುವದು ಅದೆ. ಈ ಶಾಲೆಗೆ ಬರಲಿಚ್ಛಿಸುವವರು ಅರ್ಜಿಯನ್ನು ಇದೇ ಮೇ ತಿಂಗಳ ೧ನೇ ತಾರೀಖಿನ ಒಳಗಾಗಿ ಕೆಳಗೆ ಸಹಿಮಾಡಿದವರ ಕಡೆಗೆ ಕಳುಹಿಸತಕ್ಕದ್ದು.

ಆ ಅರ್ಜಿ ವಿಚಾರಣೆಮಾಡಿ ನಮ್ಮ ಶಾಲೆಯಲ್ಲಿ ತೆಗೆದುಕೊಳ್ಳತಕ್ಕಂಥ ವಿದ್ಯಾರ್ಥಿಗಳಿಗೆ ಪತ್ರದ್ವಾರದಿಂದ ಬರಲಿಕ್ಕೆ ತಿಳಿಸುವೆವು; ಅರ್ಜಿ ನಿಕಾಲಿ ಮಾಡುವ ಕಾಲಕ್ಕೆ ವತನದಾರ ಪಾಟೀಲ ಕುಲಕರ್ಣಿಯವರ ಮಕ್ಕಳಿಗೂ, ಸುಸ್ಥಿತಿಯ ಒಕ್ಕಲಿಗರ ಮಕ್ಕಳಿಗೂ, ಹೆಚ್ಚು ಸವಲತ್ತ ಸಿಗುವದು. ಅರ್ಜಿಯಲ್ಲಿ ಹೆಸರು, ತಂದೆಯ ಹೆಸರು, ಅಡ್ಡಹೆಸರು, ಜಾತಿ,

ಇರುವ ಊರು, ತಾಲೂಕು, ಜಿಲ್ಹಾ ಖಾತೇದ ಹೊಲವು ಎಷ್ಟು, ಮತ್ತು ಅದು ಎಲ್ಲಿರುವದು ಸರಕಾರಕ್ಕೆ ದರವರ್ಷ ಕೊಡಬೇಕಾದ ತೆರಿಗೆ ತೋಟಪಟ್ಟಿಗಳನ್ನು ಮಾಡಲಿಕ್ಕೆ ನೀರಿನ ಅನುಕೂಲತೆ ಇರುವದೇ ಹ್ಯಾಗೆ? ಮತ್ತು ಹೊಲಗಳನ್ನು ಮನೆಯಿಂದ ಮಾಡುವರೋ ಹ್ಯಾಗೆ? ಮೊದಲಾದ ಮಾಹಿತಿಯನ್ನು ತುಂಬಿ ಆಯಾ ಊರ ಗ್ರಾಮಸ್ಥರ ದಾಖಲೆಯನ್ನು ಲಗತಿಟ್ಟು ಅರ್ಜಿ ಕಳಿಸಬೇಕು; ಮತ್ತು ಅರ್ಜಿಯನ್ನು ಶಾಲೆಗೆ ಬರಲಿಚ್ಛಿಸುವ ವಿದ್ಯಾರ್ಥಿಗಳೇ ಸ್ವಹಸ್ತದಿಂದ ತುಂಬಿ ಕಳಿಸಬೇಕು. ಮೇಲೆ ಹೇಳಿದ ನಿಯಮಗಳಂತೆ ನಡೆಯಲಿಕ್ಕೆ ಅನುಮತಿಯುಂಟೆಂದು ತನ್ನ ಪಾಲಕರ ಕಡೆಯಿಂದ ಒಂದು ಸಹಿನಿಸಿ ದಾಖಲೆ ತಕ್ಕೊಂಡು ಅರ್ಜಿ ಲಗತ ಇಟ್ಟು ಕಳಿಸಬೇಕು

ಧಾರವಾಡ | ಸಹಿ ಟಿ. ಗಿಲ್ಬರ್ಟ
ತಾ॥ ೫-೩-೧೯೧೫ | ಡಿ. ಡಾಯರೆಕ್ಟರ ಶೆತಕೀ ಖಾತೆ,
ದಕ್ಷಿಣಭಾಗ

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮುಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತವಾಗಿರುವ ಘೋರಯುದ್ಧದ ದೆಸೆಯಿಂದ ಈ ಸಾಮುಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದ ಮತ್ತು ಬೆಲಜಿಯಮ್ಮಿನಿಂದ ಸುತರಾಂ ಬರುವುದು ನಿಲ್ಲಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಅವಶ್ಯಕವಾದ ಕಾಗದ ಮೊದಲಾದ ಸಾಮುಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವಧಿಯು ಪೂರೈಸಿರುವವರಿಗೆಲ್ಲಾ ಪತ್ರಿಕೆಯನ್ನು ವಿ. ಪಿ ದ್ವಾರ ಕಳುಹಿಸುತ್ತಿರುವೆವು. ಆದರೆ ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿರುಗಿಸಿ ಕಾಗದದ ಬೆಲೆಯೇರಿಕೆಯಿಂದ ನಷ್ಟಪಡುವುದರ ಜತೆಗೆ ಪೋಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದು ತಿಳುಹಲು ಖೇದವಾಗುತ್ತದೆ. ಇತಃಪರಃ ದಯಾರ್ದ್ರಹೃದಯರಾದ ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ. ಪಿ. ಹಣವನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನವಾಗಿ ನಡೆದುಕೊಂಡು ಹೋಗುವಂತೆ ಮಾಡುವರೆಂದು ಸಂಪೂರ್ಣವಾಗಿ ನಂಬಿರುತ್ತೇವೆ.

ಮ್ಯಾನೇಜರ್.

ಪುರುಷಾರ್ಥವು.

ಪುರುಷನಾರು, ಅವನ ಸ್ವರೂಪವೇನು? ಅವನಿಗೆ ಬೇಕಾದ ಅರ್ಥವಾವುದು? ಎಂಬ ಸಂಗತಿಗಳನ್ನು ವಿಚಾರಿಸದೆ ಕಣ್ಣು ಮುಚ್ಚಿಕೊಂಡು ಏನೇನೋ ಮಾಡಿ ಏನೇನೋ ಅನುಭವಿಸುವುದಕ್ಕಿಂತ ನಾವಾರು, ಯಾತಕ್ಕೆ ಹುಟ್ಟಿರುವೆವು? ಏನು ಮಾಡಬೇಕು ಎಂಬ ಸಂಗತಿಗಳನ್ನು ವಿಚಾರಿಸಿ ತಿಳಿದು ಅದಕ್ಕೆ ಅನುಸಾರವಾಗಿ ಕೆಲಸಮಾಡುವುದು ಅತ್ಯುತ್ತಮವು.

ನಾವಾರು?

ಶಾಶ್ವತರಾದ ಪುರುಷರಾದ ನಾವು ಪುರುಷೋತ್ತಮನಾದ ಭಗವಂತನ ಮಕ್ಕಳು. ಆತನ ಅಂಶಸಂಭೂತರಾದ ಜೀವರು ನಾವು. ನಾವು ಯಾವಾಗಲೂ ಇರತಕ್ಕವರು. ಈ ದೇಹಗಳು ನಾವಲ್ಲವು. ನಾವು ಹಾಕಿಕೊಳ್ಳುವ ಅಂಗಿಗಳ ಹಾಗೆ ಇರತಕ್ಕವು ಈ ದೇಹಗಳು. ಇವು ಶಾಶ್ವತವಲ್ಲವು. ನಾವು ಭಗವಂತನೆಂಬ ಸಿಂಹದ ಮರಿಗಳು. ದೇಹಗಳೆಂಬ ಕುರಿಯ ಮರಿಗಳಲ್ಲವು. ಇದಕ್ಕೊಂದು ಕಥೆಯುಂಟು.

ಸಿಂಹದ ಮರಿಯ ಕಥೆ.

ಒಂದಾನೊಂದು ಹೆಣ್ಣುಸಿಂಹವು ಮರಿಯನ್ನು ಹಾಕಿ ಸತ್ತುಹೋಯಿತು. ಯಾರೂ ಪಾಲಕರಿಲ್ಲದೆ ಆ ಸಿಂಹದ ಮರಿಯು ಕುರಿಗಳ ಮಂದೆಯೊಳಗೆ ಸೇರಿ ಅವುಗಳ ಜತೆಯಲ್ಲಿ ಬೆಳೆಯುತ್ತಾ ಬಂತು. ಒಂದಾನೊಂದುದಿನ ಒಂದು ದೊಡ್ಡಸಿಂಹವು ಆ ಮಾರ್ಗವಾಗಿ ಹೋಗುತ್ತಾ ಕುರಿಗಳೊಡನೆ ಆಡುತ್ತಿರುವ ಸಿಂಹದ ಮರಿಯನ್ನು ಕಂಡು ಆಶ್ಚರ್ಯಗೊಂಡು ಅದನ್ನು ಕುರಿತು, ಅಯ್ಯಾ ಮೃಗರಾಜನೇ ನೀನು ಸಿಂಹದಮರಿಯು, ಕುರಿಗಳ ಜತೆಯಲ್ಲಿ ಕುರಿಯಂತೆ ಹೀಗೆ ಇರಬಹುದೆ? ಎಂದಿತು. ಅದಕ್ಕಾ ಸಿಂಹದಮರಿಯು ಸಿಂಹವನ್ನು ಕುರಿತು, ಅಯ್ಯಾ ನಾನು ಕುರಿಯಮರಿಯು, ಸಿಂಹದಮರಿಯಲ್ಲ. ನೋಡು ಕುರಿಯಂತೆಯೇ ಹುಲ್ಲುಮೇಯುವೆನು, ನೀರುಕುಡಿಯುವೆನು, ತಿರುಗಾಡುವೆನು ಎಂದಿತು. ಆ ಮಾತನ್ನು ಕೇಳಿ ಸಿಂಹವು ಕನಿಕರಗೊಂಡು, ಅದನ್ನು ಒಂದು ಕೆರೆಯಬಳಿಗೆ ಕರೆದುಕೊಂಡುಹೋಗಿ ನೀರಿನೊಳಗೆ ಇಣಿಕಿನೋಡೆಂದಿತು. ಸಿಂಹದಮರಿಯು ಕೆಳಗಡೆ ನೀರಿನಲ್ಲಿ ಬಗ್ಗಿನೋಡಿತು. ಕುರಿಯಮರಿಯು ಕಾಣಲಿಲ್ಲ. ಸಿಂಹದ ಮರಿಯನ್ನು ಕಂಡಿತು. ಕೂಡಲೇ ಮಹಾಸಂತೋಷದಿಂದ ಒಂದು ಸಿಂಹನಾದವನ್ನು ಮಾಡಿತು. ಆ ಘರ್ಜನೆಯನ್ನು ಕೇಳಿದೊಡನೆಯೇ ಕುರಿಮರಿಗಳೆಲ್ಲವೂ ಮಹಾಭಯದಿಂದ ಓಡಿಹೋದುವು. ಅಂದಿನಿಂದ ಸಿಂಹದಮರಿಯು ತಾನು ಸಿಂಹವೆಂದರಿತು ವನದಲ್ಲಿ ಸ್ವತಂತ್ರವಾಗಿ ಆನಂದದಿಂದ ವಿಹರಿಸಲು ಪ್ರಾರಂಭಿಸಿತು.

ಇದೇಮೇರೆಗೆ ನಾವೂ ಸಹ ಭಗವಂತನೆಂಬ ಸಿಂಹದ ಮರಿಗಳೆಂಬುದನ್ನು ಅನೇಕವೇಳೆ ಮರೆತು ಕುರಿಮರಿಗಳಂತಿಹ ದೇಹೇಂದ್ರಿಯಾದಿಗಳನ್ನೇ ನಾವೆಂದು ಭಾವಿಸಿ ಕೆಲಸಮಾಡುತ್ತಿರುವೆವು. ಆದುದರಿಂದ ಶಾಶ್ವತರಾದ ಭಗವದಂಶರಾದ "ನಿಜವಾದ ನಮಗೆ" ಬೇಕಾದದ್ದು ಏನೆಂಬುದನ್ನು ವಿಚಾರಿಸುವುದೂ ಕೂಡ ಇಲ್ಲದೆ, ಅನೇಕವೇಳೆ ನಮ್ಮ ಅಂಗಿಗಳಂತಿಹ ಈ ದೇಹಗಳ ಯೋಗಕ್ಷೇಮ ವಿಚಾರಣೆಯಲ್ಲಿ ಮಗ್ನರಾಗಿ ನಿಜವಾದ ನಮ್ಮನ್ನೂ, ನಮ್ಮ ಯೋಗಕ್ಷೇಮವನ್ನೂ ಮರೆತು ನರಕುರಿಗಳಂತೆ ವರ್ತಿಸುತ್ತಿರುವೆವು.

ನಮ್ಮ ಸ್ವರೂಪವೇನು?

ಭಗವಂತನು ದೊಡ್ಡ ಜ್ವಾಲೆಯಂತೆ ಇರುವನು; ನಾವು ಅದರಲ್ಲಿನ ಕಿಡಿಗಳಂತೆ ಇರುವೆವು. ಆತನು ವೃಕ್ಷದಂತೆ ಇರುವನು; ನಾವು ಬೀಜದಂತೆ ಇರುವೆವು. ಆತನು ತಂದೆಯು; ನಾವು ಆತನ ಮಕ್ಕಳು. ಆತನು ಸಚ್ಚಿದಾನಂದಸ್ವರೂಪನು; ಸತ್-ಇರುವವನು, ಚಿತ್-ಜ್ಞಾನಸ್ವರೂಪನು, ಆನಂದ-ಸುಖಸ್ವರೂಪನು, ಅಂದರೆ ಯಾವಾಗಲೂ ಎಲ್ಲದರಲ್ಲಿಯೂ ಇರುವವನು, ಎಲ್ಲವನ್ನೂ ಬಲ್ಲವನು, ಅನಂತಸುಖಮಯನು, ನಾವಾದರೊ ಆತನ ಅಂಶರು. ಆದುದರಿಂದ ನಾವೂ ಸಹ ಸಚ್ಚಿದಾನಂದಸ್ವರೂಪಅಂಶರೇ, ಆತನಲ್ಲಿರುವ ಶಕ್ತಿಗಳೆಲ್ಲವೂ ನಮ್ಮಲ್ಲಿ ಬೀಜರೂಪದಲ್ಲಿ ಅಡಗಿರುವುವು.

ಜ್ವಾಲೆಯಲ್ಲಿ ಎಲ್ಲಕೆಲಸಗಳನ್ನೂ ಮಾಡುವ ಶಕ್ತಿಯು ಈಗ ಇರುವುದು. ಕಿಡಿಯು ಅಷ್ಟು ಕೆಲಸವನ್ನು ಈಗ ಮಾಡಲಾರದು. ಆದರೆ ಹುಲ್ಲು ಎಲೆ ಕಡ್ಡಿಗಳನ್ನು ಹಾಕಿ ಉರಿಯನ್ನು ದೊಡ್ಡದುಮಾಡುತ್ತಾ ಬಂದರೆ ಕಾಲಕ್ರಮದಲ್ಲಿ ಕಿಡಿಯೂ ಕೂಡ ದೊಡ್ಡ ಜ್ವಾಲೆಯಾಗಿ ಅಷ್ಟು ಕೆಲಸವನ್ನೂ ಮಾಡುವುದು. ಭಗವಂತನು ದೊಡ್ಡ ಜ್ವಾಲೆಯಂತೆಯೂ, ನಾವು ಅದರೊಳಗಿನ ಕಿಡಿಗಳಂತೆಯೂ ಇರುವೆವು. ಅದರಂತೆಯೇ ನಾವೂ ಕೂಡ ಕ್ರಮಕ್ರಮವಾಗಿ ಬೆಳೆದು ಒಳಗಿರುವ ಶಕ್ತಿಗಳನ್ನೆಲ್ಲಾ ಬೆಳೆಸಿಕೊಂಡು ಭಗವಂತನಂತೆ ಕೆಲಸಮಾಡತಕ್ಕವರಾಗುವೆವು. ಸಾಮಾನ್ಯವಾದ ಬೆಂಕಿಯ ಕಿಡಿಯು ಆರಿಹೋಗಬಹುದು. ಆದರೆ ಶಾಶ್ವತವಾದ ಭಗವಂತನ ಕಿಡಿಗಳು ನಾವಾದುದರಿಂದ ನಾವು ಆರಿಹೋಗತಕ್ಕವರಲ್ಲ ಎಂದೋಒಂದುದಿನ ಅಷ್ಟು ದೊಡ್ಡವರಾಗಲೇಬೇಕು.

ಮರದಲ್ಲಿರುವ ಶಕ್ತಿಯೆಲ್ಲವೂ ಬೀಜದಲ್ಲಿ ಅಡಗಿರುವುದು ಬೀಜವನ್ನು ಒಡೆದು ಚೆನ್ನಾಗಿ ನೋಡಿದರೆ ಮುಂದೆ ಆಗುವ ಮರವೆಲ್ಲವೂ ಅದರಲ್ಲಿ ಸೂಕ್ಷ್ಮರೂಪದಲ್ಲಿ ಅಡಗಿರುವುದನ್ನು ನೋಡಬಹುದು. ಭೂಮಿಯಲ್ಲಿ ಬಿತ್ತಿ ಅದನ್ನು ಸರಿಯಾಗಿ ಬೆಳೆಸಿದರೆ ಕಾಲಕ್ರಮದಲ್ಲಿ ಆ ಬೀಜವು ದೊಡ್ಡಮರವಾಗಿ ಬೆಳೆದು ತಾಯಿಮರದಂತೆಯೇ ಹೇಗೆ ಫಲದಾಯಕವಾಗುವುದೋ ಹಾಗೆಯೇ ಭಗವದ್ಬೀಜರಾದ ನಾವು ಈ ಲೋಕಗಳೆಂಬ ಭೂಮಿಯಲ್ಲಿ ಬಿತ್ತಲ್ಪಟ್ಟು ತಾಯಿಮರವಾದ ಭಗವಂತನಂತೆ ಬೆಳೆಯಲು ಬಂದಿರುವೆವು. ಹೊರಗಿನ ಬೀಜವು ಹುಳುಕೊಳೆತು ಕೆಟ್ಟುಹೋಗಬಹುದು. ಆದರೆ ಶಾಶ್ವತಬೀಜರಾದ ನಾವು ಎಂದಿಗೂ ನಾಶವಾಗತಕ್ಕವರಲ್ಲ ಎಂದೋ ಒಂದುದಿನ ಅಷ್ಟು ದೊಡ್ಡದಾಗಿ ಬೆಳೆದೇತೀರಬೇಕು.

ಮಗುವು ಸರಿಯಾಗಿ ಬೆಳೆದರೆ ಕೊನೆಗೆ ತಂದೆಯಂತೆ ಆಗಿ ಆತನಂತೆ ಕಾರ್ಯನಿರ್ವಾಹಕನಾಗುವನು. ಭಗವಂತನು ತಂದೆಯು, ನಾವು ಆತನ ಮಕ್ಕಳು. ನಾವೂ ಕೂಡ ಬೆಳೆದು ಆತನಂತಾಗಿ ಆತನ ಕಾರ್ಯನಿರ್ವಾಹಕರಾಗಬೇಕು. ಇಲ್ಲಿನ ತಂದೆಯು ಲೋಪದೋಷಯುತನು. ಆದರೆ ಭಗವಂತನಾದ ತಂದೆಯು ನಿರ್ದೋಷಿಯು, ಸಕಲಕಲ್ಯಾಣಗುಣಪರಿಪೂರ್ಣನು, ಆದುದರಿಂದ ಎಂದೋಒಂದುದಿನ ನಾವು ಅಂತಹ ಕಲ್ಯಾಣಗುಣಪೂರ್ಣರಾಗಲೇಬೇಕು

ನಾವು ಹುಟ್ಟಿದುದೇಕೆ?

ಎಂದಾದರೂ ಒಂದುದಿನ ಪೂರ್ಣರಾಗಿ ಬೆಳೆಯುವ ಪಕ್ಷದಲ್ಲಿ ಸುಖವಾಗಿ ಸುಮ್ಮನಿರುವುದನ್ನು ಬಿಟ್ಟು ಏಕೆ ಕಷ್ಟಪಟ್ಟು ಕೆಲಸಮಾಡಬೇಕೆಂದು ಕೇಳಬಹುದು. ಎಷ್ಟು ಕಷ್ಟಪಟ್ಟು ನಾವು ಕೆಲಸಮಾಡುವೆವೋ ಅಷ್ಟುಬೇಗ ನಾವು ಬೆಳೆಯುವೆವು. ಎಷ್ಟು ಜಾಗ್ರತೆಯಾಗಿ ಬೆಳೆಯುವೆವೋ ಅಷ್ಟು ಹೆಚ್ಚಾಗಿ ಇತರರಿಗೆ ಸಹಾಯಮಾಡಬಹುದು. ನಾವು ಭಗವದಂಶರಾದುದರಿಂದ ಅದೇ ನಮ್ಮ ನಿಜವಾದ ಸ್ವಭಾವವು. ಆತನು ಯಾವಾಗಲೂ ಲೋಕಹಿತಕ್ಕಾಗಿ ಕೆಲಸಮಾಡುತ್ತಿರುವನು. ಆತನ ಮಕ್ಕಳಾದ ನಾವೂ ಸಹ ಬೆಳೆದ ಹಾಗೆಲ್ಲಾ ಹೆಚ್ಚುಹೆಚ್ಚಾಗಿ ಲೋಕಹಿತಕ್ಕಾಗಿ ಭೂತಸೇವೆಯನ್ನು ಮಾಡುವುದೇ ಜೀವರಾದ ನಮ್ಮ ಸಹಜಸ್ವಭಾವವಲ್ಲವೆ? ನಾವು ಮಾತ್ರ ಯಾವಾಗಲೂ ಇತರರಿಂದ ಜ್ಞಾನವನ್ನೂ, ಸುಖವನ್ನೂ, ಸಹಾಯವನ್ನೂ ಹೊಂದಲು ಅಪೇಕ್ಷಿಸುತ್ತಾ ಇತರರಿಗೆ ಮಾತ್ರ ನಾವು ಅವುಗಳನ್ನು ಕೊಡುವುದಿಲ್ಲವೆಂಬುದು ಸಹಜವೆ? ತನ್ನ ಸುಖವನ್ನು ತಾನು ಎಷ್ಟರಮಟ್ಟಿಗೆ ಮರೆತು ಇತರರ ಹಿತಕ್ಕಾಗಿ (ಪರಾರ್ಥಕ್ಕಾಗಿ) ಕೆಲಸಮಾಡುವನೋ ಆತನು ಅಷ್ಟು ದೊಡ್ಡವನು. ಲೋಕದಲ್ಲಿ ಇಷ್ಟು ಜನರು ಇಷ್ಟು ದಾರಿದ್ರ್ಯ ರೋಗ ಅಜ್ಞಾನಗಳಿಂದ ದುಃಖಪಡುತ್ತಿರುವುದನ್ನು ನೋಡಿ ಮನಕರಗಿ ಅವುಗಳ ನಿವಾರಣೆಗಾಗಿ ಕೆಲಸಮಾಡುತ್ತಾ ಮಾಡುತ್ತಾ ಕೊನೆಗೆ ತನ್ನ ಸುಖದುಃಖಗಳೆಲ್ಲವನ್ನೂ ಮರೆತು ಲೋಕಸಂಗ್ರಹ ಕಾರ್ಯವೊಂದರಲ್ಲೇ ಮಗ್ನನಾಗಿ ಐಕ್ಯಹೊಂದುವನು. ಭಗವಂತನ ಜ್ಞಾನದಲ್ಲಿ ಐಕ್ಯಹೊಂದಿ, ಆ ಜ್ಞಾನವನ್ನು ಲೋಕದ ಅಜ್ಞಾನವನ್ನು ಹೋಗಲಾಡಿಸುವುದಕ್ಕೆ ಉಪಯೋಗಿಸುತ್ತಾ ಜ್ಞಾನಿಯೆನಿಸಿಕೊಳ್ಳುವನು. ಅನಂತಶಕ್ತಿಯಲ್ಲಿ ಸೇರಿ ಆ ಶಕ್ತಿಯನ್ನು ಲೋಕದ ದಾರಿದ್ರ್ಯನಿವಾರಣೆಗಾಗಿ ಉಪಯೋಗಿಸುತ್ತಾ ಯೋಗಿಯಾಗುವನು. ಪೂರ್ಣಾನಂದದಲ್ಲಿ ಐಕ್ಯಹೊಂದಿ ಆ ಪ್ರೀತಿ ಎಲ್ಲವನ್ನೂ ಲೋಕದ ದುಃಖನಿವಾರಣೆಗಾಗಿ ಉಪಯೋಗಿಸುತ್ತಾ ಭಕ್ತನಾಗುವನು. ಕೊನೆಗೆ ಭಕ್ತಿಜ್ಞಾನ ವೈರಾಗ್ಯಗಳಿಂದ ಪರಿಪೂರ್ಣನಾಗಿ ಭಗವಂತನಂತೆ ಆಗುವನು, ಅಥವಾ ಭಗವಂತನಲ್ಲಿ ಸೇರಿಹೋಗುವನು. ಇಲ್ಲವೇ ಭಗವಂತನೇ ಆಗುವನು. ಯಾವವಿಧದಲ್ಲಿ ಹೇಳಿದರೂ ಸರಿ, ಪೂರ್ಣನಾಗುವನು. ಇದೇ ಪುರುಷಾರ್ಥವು. ಮನುಷ್ಯನಾಗಿ ಹುಟ್ಟಿದುದಕ್ಕೆ ಸಾರ್ಥಕವು.

ಕೆ. ನರಹರಿಶಾಸ್ತ್ರಿ,

ತಿರುವಾಂಕೋಡು ಸಂಸ್ಥಾನದ ನಿರಾಶ್ರಿತ ಜನರು.

ಪಂಚಮರೇ ಮೊದಲಾದ ಹೀನಸ್ಥಿತಿಯಲ್ಲಿರುವ ನಿರಾಶ್ರಿತರು ಬಹಳವಾಗಿರುವ ಈ ಪ್ರಾಂತ್ಯದಲ್ಲಿ ತಿರುವಾಂಕೋಡು ಸಂಸ್ಥಾನದ ನಿರಾಶ್ರಿತ ಜನರ ಉದ್ಧರಣೆಯು ಹೇಗೆ ಸಾಗುತ್ತಿರುವುದೆಂಬುದನ್ನು ತಿಳಿಯ ಹೇಳುವುದು ಅಗತ್ಯವಾಗಿದೆ. ಇಲ್ಲಿ ನಿರಾಶ್ರಿತರ ಬಗ್ಗೆ ಹೇಚಾಡುವಂಥವರು ಇನ್ನೂ ಜನಸಮುದಾಯದಲ್ಲಿ ಹಲವರ ನಿಂದೆಗೆ ಗುರಿಯಾಗುತ್ತಿರುವರು. ನಿರಾಶ್ರಿತರ ಉದ್ಧರಣೆಯು ದೇಶೋದ್ಧರಣೆಗೆ ಅಗತ್ಯವೆಂತ ಆ ಸಂಸ್ಥಾನದ ಮಹಾಜನರು ತಿಳಿದುಕೊಂಡದ್ದರಿಂದ ತಿರುವಾಂಕೋಡು ಸಂಸ್ಥಾನದಲ್ಲಿ ಸರ್ವರೂ ಅಲ್ಲಿಯ ಸರಕಾರದವರೊಂದಿಗೆ ನಿರಾಶ್ರಿತರ ಉದ್ಧರಣೆ ಬಗ್ಗೆ ಮಾಡುವ ಪ್ರಯತ್ನಗಳು ನೆರವೇರುತ್ತ ಬರುತ್ತಿವೆ. ದೀನರ ಏಳಿಗೆಯ ಪ್ರಯತ್ನಗಳು ತುಚ್ಛವಲ್ಲವೆಂತ ಅಲ್ಲಿಯವರು ತಿಳಿದುಕೊಂಡಿದ್ದಾರೆ. ಸರಕಾರದವರ ಶಾಲೆಗಳಲ್ಲಿ 'ಪುಲಿಯಾ' (ಇಲ್ಲಿಯ ಹೊಲೆಯರ ಜಾತಿಯ) ಮಕ್ಕಳಿಗೆ ಇತರ ಜಾತಿಯವರಿಗೆ ಪ್ರವೇಶ ದೊರಕುವ ರೀತಿಯಲ್ಲಿಯೇ ಪ್ರವೇಶವು ಸರಕಾರದವರಿಂದ ಇತ್ತಲಾಗೆ ಕೊಡೋಣಾಗಿರುವುದು. ಹೀಗೆ ಹೊಲೆಯರ ಮಕ್ಕಳಿಗೆ ಸಹ ಶಾಲೆಗಳಲ್ಲಿ ಎಲ್ಲರೊಂದಿಗೆ ಸೇರಿಸಿಕೊಳ್ಳುವುದು ಆಕ್ಷೇಪಕರವೆಂತ ಆ ಸಂಸ್ಥಾನದಲ್ಲಿ ಕೆಲವರು ಏನೋ ಗಲಭೆಯನ್ನು ಮಾಡಿದರು. ಹೀಗೆ ಗಲಭೆ ಮಾಡಿದ್ದರಿಂದ ಸರಕಾರದವರು ಕೊಟ್ಟ ಅಪ್ಪಣೆಯು ಹಿಂತೆಗೆಯಲ್ಪಡುವುದೆಂಬ ಅಂಜಿಕೆಯು ಆ ಸಂಸ್ಥಾನದಲ್ಲಿ ಹಲವರಲ್ಲಿತ್ತು. ಆದರೆ ಪ್ರಜಾಹಿತವನ್ನೂ ಪ್ರಜಾಜನರ ಅಭಿಪ್ರಾಯವನ್ನೂ ಅಲ್ಲಿಯ ಸರಕಾರದವರು ಸರಿಯಾಗಿ ತಿಳಿದುಕೊಂಡದ್ದರಿಂದ ದೀನರ ಒಳ್ಳಿತಕ್ಕಾಗಿ ಒಮ್ಮೆ ಕೊಡೋಣಾದ ಆಜ್ಞೆಯು ಹಿಂತೆಗೆಯೋಣಾಗಲಿಲ್ಲ. ತಿರುವನಂತಪುರದಲ್ಲಿ ವಿಕ್ಟೋರಿಯಾ ಜೂಬಿಲಿ ಸಭಾಮಂದಿರದಲ್ಲಿ ಹೊಲೆಯರ ಮಹಾಸಭೆಯೊಂದು ಜರುಗಿತ್ತು. ಸಂಸ್ಥಾನದ ಸರಕಾರದ ದಿವಾನರಾದ ಕೃಷ್ಣಸ್ವಾಯರರವರು ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡಿದ್ದರು. ನಿರಾಶ್ರಿತರ ಉದ್ಧರಣೆಯನ್ನು ಕೈಕೊಂಡಿರುವ ಮೇಲು ಜಾತಿಯವರಲ್ಲಿ ಹಲವರು ಈ ಸಭೆಯಲ್ಲಿ ಸರಕಾರದವರ ಸಹಕಾರವನ್ನು ನಿರೀಕ್ಷಿಸಿ ಮಾತಾಡಿದರು. ಹೊಲೆಯರ ಸ್ತ್ರೀಯಲೊಬ್ಬಳು ಸಭಿಕರೆಲ್ಲರಿಗೆ ಹೃದ್ಗತವಾಗುವಂತೆ ತಮ್ಮ ಕಷ್ಟಗಳನ್ನೆಲ್ಲ ವಿವರಿಸಿ ಹೇಳಿದಳು. ದಿವಾನರು ಈ ಸಂಕಷ್ಟಗಳನ್ನೆಲ್ಲ ಕೇಳಿಕೊಂಡು ಇವಕ್ಕೆಲ್ಲಾ ಬೇಕಾದ ನಿವಾರಣೆಯನ್ನು ಕಲ್ಪಿಸಿಕೊಡುವೆನೆಂತ ಅಭಯವಿತ್ತರು. ತಿರುವನಂತಪುರದ ಹೊಲತಿಯು ಸಭೆಯಲ್ಲಿ ಹೇಳಿದ ನಿರಾಶ್ರಿತರ ಸಂಕಷ್ಟಗಳನ್ನು ಇಲ್ಲಿ ವಿವರಿಸಬೇಕೆಂತಿಲ್ಲ. ಈ ಸಂಸ್ಥಾನದ ಸಾಧಾರಣ ಎಲ್ಲಾ ಭಾಗಗಳಲ್ಲಿಯೂ ಇವು ಒಂದೇ ತರವಾಗಿವೆ. ಹೊಲತಿಯ ರೋದನೆಯು ತಿರುವಾಂಕೋಡು ಸಂಸ್ಥಾನದಲ್ಲಿ ಕೇಳಿಸಿತು. ಸರಕಾರದವರೂ ಪ್ರಜಾಜನರೂ ಈ ರೋದನೆಗೆ ಕಿವಿಗೊಟ್ಟರು. ಆದರೆ ಈ ಪ್ರಾಂತ್ಯಗಳಲ್ಲಿ ಇಂಥ ರೋದನೆಗೆ ಕಿವಿಕೊಟ್ಟು ಕೇಳುವ ಕಾಲವು ಇನ್ನೂ ಬಹಳ ದೂರವಿರುವುದೇ? ದೀನರ ಉದ್ಧರಣೆಯನ್ನು ಸಾಧಿಸಿದ್ದರಿಂದ ಅವರಿಗೆ ಒಳ್ಳಿತನ್ನು ಮಾಡಿದ್ದರಿಂದ ಮೇಲು ಜಾತಿಯವರು ತಮ್ಮ ಪದವಿಯನ್ನು ಎಂದೂ ಕಳಕೊಳ್ಳರೆಂಬುದನ್ನು ಇಲ್ಲಿ ನಾವೆಲ್ಲರೂ ಪದೇ ಪದೇ ತಿಳಿದುಕೊಳ್ಳಬೇಕಾಗಿದೆ.

ಸ್ವದೇಶಾಭಿಮಾನಿ.

ಭರತಖಂಡದ ವೃತ್ತಾಂತಗಳು.

ಮದ್ರಾಸಿನ ಜಸ್ಟಿಸ್ ಶಂಕರನ್ ನಾಯರ್‌ರವರು ವೈಸ್ರಾಯರ ಕೌನ್ಸಿಲ್ಲಿನ ಒಬ್ಬ ಸಭಿಕರಾಗಿ ನಿಯಮಿಸಲ್ಪಟ್ಟರೆಂದು ಕೇಳಿ ಸಂತೋಷಿಸುತ್ತೇವೆ.

ಬರೋಡಾಮಹಾರಾಣಿಯವರು ಮಕ್ಕಳಸಮೇತ ಇದಕ್ಕೆ ಮೊದಲೇ ನೀಲಗಿರಿಗೆ ಹೋಗಿದ್ದಾರೆ. ಬರೋಡಾಮಹಾರಾಜರೂ ಕೂಡ ಈ ವಾರದಲ್ಲಿ ಅಲ್ಲಿಗೆ ಹೋಗುವವರಾಗಿದ್ದಾರೆ.

ಕಲ್ಕತ್ತಾಬಳಿಯಣ ಹೌರಾದಲ್ಲಿ ಒಬ್ಬ ಹೆಂಗುಸು ಭಯಂಕರವಾದ ಕಣ್ಣುಗುಡ್ಡೆಗಳುಳ್ಳವಳಾಗಿದ್ದು, ಒಂದುದಿನ ೨ ಮಕ್ಕಳನ್ನು ಗಾಯಮಾಡಿ ರಕ್ತವನ್ನು ಹೀರುತ್ತ ಕುಳಿತಿದ್ದದನ್ನು ಪೋಲೀಸರು ಕಂಡು ಹಿಡಿದು ಸೆರೆಯಲ್ಲಿಟ್ಟಿರುವರು.

ಕಳೆದ ತಿಂಗಳಲ್ಲಿ ಹೈದರಾಬಾದ್ ಸಂಸ್ಥಾನದೊಳಗೆ ವಿದ್ಯಾವಿಷಯಕ ಸಭೆಯೊಂದು ಕೂಡಿದ್ದಾಗ್ಗೆ ಶಾಲೆಗಳೊಳಗೆ ಉರ್ದುಭಾಷೆಯಲ್ಲೇ ಎಲ್ಲಾ ವಿದ್ಯೆಯನ್ನೂ ಅಭ್ಯಾಸಮಾಡಿಸಬೇಕೆಂದೂ, ಶಾಸ್ತ್ರೀಯಗ್ರಂಥಗಳನ್ನು ದೇಶಭಾಷೆಗೆ ಪರಿವರ್ತನಮಾಡಿಸಬೇಕೆಂದೂ ತೀರ್ಮಾನಿಸಿರುವರು.

ಲಾರ್ಡ್ ಹಾರ್ಡಿಂಜ್‌ರನ್ನು ಈಗಿನ ಯುದ್ಧಸಮಾಪ್ತಿಕಾಲದವರೆಗೂ ವೈಸ್ರಾಯಗಿರಿಯಲ್ಲಿ ಇರಿಸಿಕೊಡಬೇಕೆಂದು ಸಾರ್ವಭೌಮರನ್ನು ಪ್ರಾರ್ಥಿಸಿಕೊಳ್ಳುವುದಕ್ಕಾಗಿ ಮುಖ್ಯಮುಖ್ಯ ಪಟ್ಟಣಗಳಲ್ಲಿ ಸಭೆಗಳಾಗಲುಪಕ್ರಮಿಸಿವೆ. ಈಗ ದಿಲ್ಲಿ-ಬೊಂಬಾಯಿ-ಲಾಹೋರ್ ಪಟ್ಟಣಗಳಲ್ಲಿ ಸಭೆಗೂಡಿ ನಿರ್ಧಾರಗಳಾಗಿವೆ.

ಕುಂಭಮೇಳವೆಂಬುದು ೧೨ ವರ್ಷಕ್ಕೊಂದುಸಲ ಸಂಧಿಸುವುದು. ಈ ಮೇಳವು ಈ ವರ್ಷದಲ್ಲಿ ಪ್ರಾಪ್ತವಾಗಲಾಗಿ ಆ ಕಾಲದಲ್ಲಿ ಪದ್ಧತಿಯಂತೆ ಹರಿದ್ವಾರದೊಳಗೆ ಲಕ್ಷಾಂತರ ಜನ ಯಾತ್ರಿಕರು ತೀರ್ಥಸ್ನಾನಕ್ಕಾಗಿ ಬರುವರು. ಈ ಸಂಧಿಯನ್ನನುಸರಿಸಿ, ಸಕಲ ಭಾರತಹಿಂದೂಸಭೆಯು ಈ ವರ್ಷ ಕಾಶಿಂಬಜಾರ್ ಮಹಾರಾಜರ ಅಧ್ಯಕ್ಷತೆಯಿಂದ ಕಳೆದ ತಾ॥ ೯ ರಿಂದ ನೆರವೇರಿತು.

ಬಂಗಾಳದ ನಿಯಮನಿರ್ಮಾಣಸಭೆಯಲ್ಲಿ ಸಭಿಕರಾಗಿದ್ದ ಆ॥ ಷಮ್ಸುಲ್ ಉಲ್ಮಾಖಾ ಬಹದ್ದೂರ್ ಮೌಲ್ವಿಮಹಮ್ಮದ್ ಯೂಸುಫ್‌ಖಾನರವರು ಕಳೆದ ತಾ॥ ೬ ರಲ್ಲಿ ತಮ್ಮ ೩೦ ನೆಯ ವಯಸ್ಸಿನಲ್ಲಿ ಕಾಲವಾದರು. ಇವರು ಒಂದು ಬ್ರಾಹ್ಮಣಕುಟುಂಬದಲ್ಲಿ ಜನಿಸಿದವರು. ಚಿಕ್ಕಂದಿನಲ್ಲೇ ಜನನೀಜನಕರು ತೀರಿಕೊಳ್ಳಲಾಗಿ, ಒಬ್ಬ ಮಹಮ್ಮದೀಯೋಪಾಧ್ಯಾಯನ ಕೈಗೆ ಸಿಕ್ಕಿ ಪರಿಪೋಷಿತರಾಗಿ ಮಹಮ್ಮದೀಯಮತಕ್ಕೆ ಆತನಿಂದ ಸೇರಿಸಿಕೊಳ್ಳಲ್ಪಟ್ಟವರಂತೆ.

ಕಳೆದ ತಾ॥ ೫ ರ ರಾತ್ರಿಯಲ್ಲಿ ಬಂಗಾಳಕ್ಕೆ ಸೇರಿದ ಮುಚಿಕೊಲಾಯಿ ಎಂಬ ಗ್ರಾಮದಲ್ಲಿರುವ ದೊಡ್ಡ ಜಮೀನ್ದಾರರಾದ ಗೋಪಾಲಚಂದ್ರ ಸರ್ದಾರರ ಮನೆಗೆ ಆಯುಧಪಾಣಿಗಳಾದ ಬಹುಶಃ ೩೦ ಮಂದಿ ಕಳ್ಳರು ನುಗ್ಗಿ ಹಾವಳಿ ಮಾಡುವಷ್ಟರೊಳಗೆ ಗ್ರಾಮಸ್ಥರೂ ಆಯುಧಪಾಣಿಗಳಾಗಿ ಬರಲು, ತಮಗಿಂತಲೂ ಗ್ರಾಮಸ್ಥರ ಸಂಖ್ಯೆಯು ಹೆಚ್ಚಾಗಿದ್ದುದನ್ನು ಕಂಡು ಕಳ್ಳರು ಓಡಿಹೋದರು. ಆಗ ಆದ ಜಗಳದಲ್ಲಿ ಎರಡುಪಕ್ಷದಲ್ಲೂ ಕೆಲಕೆಲರಿಗೆ ಗಾಯಗಳಾದುವು. ಕಳ್ಳರೆಲ್ಲರೂ ತಪ್ಪಿಸಿಕೊಂಡರು.

ಬೊಂಬಾಯಿ ಸ್ಪೀಷಿಬ್ಯಾಂಕು ಕಳೆದವರ್ಷ ದಿವಾಳಿಯಾದ ಸಂಗತಿಯು ವಾಚಕರಿಗೆ ಗೊತ್ತುಂಟಷ್ಟೆ. ಇದರಲ್ಲಿ ಮ್ಯಾನೇಜರು ಮಾಡಿದ ಕೆಲಸವನ್ನು ಡೈರೆಕ್ಟರುಗಳು ಸರಿಯಾಗಿ ಮೇಲ್ವಿಚಾರಣೆ ತೆಗೆದುಕೊಳ್ಳದೆ ಹೋದುದರಿಂದ ಬ್ಯಾಂಕಿಗೆ ೧ ಕೋಟಿಯೂ ೩೦ ಲಕ್ಷ ರೂ. ಗಳ ನಷ್ಟವುಂಟಾಯಿತಾದಕಾರಣ, ಈ ಹಣವನ್ನು ಡೈರೆಕ್ಟರುಗಳು ತೆರಬೇಕೆಂದು, ಸರ್ ವಿಠಲದಾಸ್ ಥಾಕರ್ಸೆ, ಸರ್ ಜಗಮೋಹನದಾಸ್ ವರ್ಜೀವನ್‌ದಾಸ್, ಸರ್ ಜೇಂಸೇಟ್ಜಿ ಜೀಜಿಭಾಯಿ ಮೊದಲಾದ ಡೈರೆಕ್ಟರುಗಳಮೇಲೆ ಬೊಂಬಾಯಿ ಹೈಕೋರ್ಟಿನಲ್ಲಿ ವ್ಯಾಜ್ಯವು ಹೂಡಲ್ಪಟ್ಟಿದೆ.

ಡಾಕ್ಟರ್ ಅಯ್ಯರ್-ಡಾಕ್ಟರ್ ಸುಂದರಲಾಲ್-ಡಾಕ್ಟರ್ ಮಣಿ ಎಂಬ ಬೇರೆಬೇರೆ ಹೆಸರುಗಳನ್ನಿಟ್ಟುಕೊಂಡು, ತಾನು ಎಡಿಂಬರೋ ವಿಶ್ವವಿದ್ಯಾಲಯದ ಎಂ. ಆರ್. ಸಿ. ಎಸ್. ಪಟ್ಟಾಂಕನವನ್ನು ಹೊಂದಿದವನೆಂದೂ, ಕಲ್ಕತ್ತಾದ ಹಿಂದೂಸ್ಥಾನ್ ಇನ್ಷೂರೆನ್ಸ್ ಕಂಪೆನಿಯ ವೈದ್ಯಪರೀಕ್ಷಾಧಿಕಾರಿಯಾಗಿದ್ದೆನೆಂದೂ ಹೇಳಿಕೊಂಡು ಹೈದರಾಬಾದ್-ಬೊಂಬಾಯಿ-ಬರೋಡಾ-ಜಬ್ಬಲಪುರ-ಲಾಹೋರು-ನಾಗಪುರ-ಅಜ್ಮೀರು-ಮೊದಲಾದ ಸ್ಥಲಗಳಲ್ಲಿ ಮೋಸಮಾಡಿ ತಿರುಗುತ್ತಾ ಬೊಂಬಾಯಿಯ ಒಬ್ಬ ವರ್ತಕನಿಗೆ ಸುಳ್ಳುಚೆಕ್ಕನ್ನು ಬರೆದುಕೊಟ್ಟು ಮೋಸಮಾಡಿ ಬಂದಿದ್ದು ಬೆಂಗಳೂರು ಫ್ರೇಜರ್‌ಪೇಟೆಯಲ್ಲಿ ಸಿಕ್ಕಿಬಿದ್ದನು. ಇವನು ಬೊಂಬಾಯಿಗೆ ವಿಚಾರಣೆಗಾಗಿ ಸಾಗಿಸಲ್ಪಟ್ಟನು.

ಪೂರ್ವಬಂಗಾಳಾದಲ್ಲಿ ಆಗಾಗ್ಗೆ ಬಿರುಗಾಳಿಯು ಸಂಭವಿಸುವುದುಂಟು. ಇದಕ್ಕಾಗಿ ಆ ದೇಶದ ಹಂಚಿನಮನೆಗಳಿಗೆ ಹಂಚಿನಕೆಳಗೊಂದು ಹಂಚಿನಮೇಲೊಂದು ಹೀಗೆ ಎರಡುಪರಸೆಯ ಹಂದರಗಳನ್ನು ಬಿಗಿದಿರುವುದುಂಟು. ಕಳೆದವಾರದಲ್ಲಿ ಸಂಭವಿಸಿದ ಒಂದು ಬಿರುಗಾಳಿಯಿಂದ ಎಷ್ಟೋಮರಗಳು ಉರುಳಿಬಿದ್ದಿದ್ದುವು. ಮನೆಮೇಲಣ ಹಂದರಗಳೇ ಹಾರಿಹೋಗಿರುವುವು. ಒಬ್ಬ ಹೆಂಗುಸು ಗಾಳಿಯಿಂದ ತೂರಿಹೋಗಿ ಮರಕ್ಕೆ ಅಪ್ಪಳಿಸಲ್ಪಟ್ಟಳು. ಅವಳ ತಲೆಯಮೇಲೆ ಒಂದು ಮನೆಯಮೇಲಿನ ಹೊದಿಕೆಯ ತಗಡು ಬಂದು ಬೀಳಲು ಆಕೆಯು ಸತ್ತಳು. ಎಷ್ಟೋಮನೆಗಳು ಉರುಳಿದುವು. ಡಂಗಾಬಜಾರಿನಲ್ಲಿ ನೂರು ಅಂಗಡಿಗಳು ನೆಲಸಮನಾದುವು. ಕಾಳೀಗಂಜಿನಲ್ಲಿ ಇಬ್ಬರೂ, ರೂಪಗಂಜಿನಲ್ಲಿ ೮ ಮಂದಿಗಳೂ ಸತ್ತರು. ಬಹುಜನಕ್ಕೆ ಪೆಟ್ಟುಬಿದ್ದಿದೆ.

ವಿದೇಶವೃತ್ತಾಂತಗಳು.

ಇದುವರೆಗೆ ರಷ್ಯನರು ಹಿಡಿದು ತಮ್ಮ ಸೆರೆಯಾಳುಗಳನ್ನಾಗಿ ಇಟ್ಟುಕೊಂಡಿರುವ ಆಸ್ಟ್ರಿಯಾಸೈನಿಕರ ಸಂಖ್ಯೆಯು ೮ ಲಕ್ಷ ವಾಗಿರುವುದಂತೆ.

ಈಗಿನ ಘೋರಯುದ್ಧವು ಆರಂಭವಾದ ಬಳಿಕ ಜರ್ಮನಿದೇಶದಲ್ಲಿ ೮೬೮ ವರ್ತಮಾನಪತ್ರಿಕೆಗಳು ನಿಂತುಹೋಗಿರುವುವಂತೆ. ಇನ್ನು ಉಳಿದ ಉದ್ಯೋಗಾದಿಗಳು ಎಷ್ಟು ಹಾಳಾಗಿರಬಹುದು!

ಜರ್ಮನರು ರೋಮ್‌ಪಟ್ಟಣದಲ್ಲಿರುವ ಕ್ರೈಸ್ತ ಜಗದ್ಗುರುವನ್ನು ಕಂಡು ಮಾತನಾಡಿ, ಅವರು ಅಮೇರಿಕಾದವರೊಡನೆ ಮಾತನಾಡಿ ಈಗಿನ ಯುದ್ಧವನ್ನು ಬೇಗನೆ ಮುಗಿಸುವುದಕ್ಕೆ ಮಧ್ಯಸ್ತಿಗೆ ಮಾಡಬೇಕೆಂದು ಪತ್ರವ್ಯವಹಾರವನ್ನು ನಡೆಸುವಹಾಗೆ ಮಾಡಿರುವರೆಂದು ಅಮೇರಿಕಪತ್ರಿಕೆಗಳು ಬರೆದಿರುತ್ತವೆ.

ಫ್ರಾನ್ಸ್‌ದೇಶದವರು ಕೂಡ ಮದದ್ರವ್ಯಸೇವನೆಯನ್ನು ನಿಷೇಧಿಸಿದ್ದಾರೆ. ಯುದ್ಧಾಂಗಣದಲ್ಲಿರುವ ಅವರ ಸೈನಿಕರಾರಿಗೂ ಈಗ ಮದದ್ರವ್ಯವನ್ನು ಕೊಡುತ್ತಲಿಲ್ಲ. ಇದರಿಂದ ಆ ಸೈನಿಕರು ಮುಂಚೆಗಿಂತ ಆರೋಗ್ಯಶಾಲಿಗಳಾಗಿಯೂ ಧೈರ್ಯಶಾಲಿಗಳಾಗಿಯೂ ಇರುವರೆಂದು ಮೇಲ್ಪಟ್ಟ ಅಧಿಕಾರಿಗಳೂ, ವೈದ್ಯರೂ ಹೇಳುತ್ತಿರುವರು.

ಕಳೆದ ತಾ॥ ೮ ರ ಮಧ್ಯಾಹ್ನದಲ್ಲಿ ಈಜಿಪ್ಟಿನ ಹೊಸ ಸುಲ್ತಾನರು ತಮ್ಮ ಅರಮನೆಯಿಂದ ಹೊರಟು ಯಾರನ್ನೋ ಕಾಣುವುದಕ್ಕೆ ಹೋಗುತ್ತಿರುವಾಗ ಒಬ್ಬಾನೊಬ್ಬನು ಸುಲ್ತಾನರ ಮೇಲೆ ತುಪಾಕಿಯ ಗುಂಡನ್ನು ಹಾರಿಸಿದನು. ಆದರೆ ಗುರಿತಪ್ಪಿತು. ಹಂತಕನು ಪೋಲೀಸರಿಗೆ ಸಿಕ್ಕಿಬಿದ್ದನು. ಸುಲ್ತಾನರು ತಮ್ಮ ಕೆಲಸಕ್ಕೆ ಹೋಗಿದ್ದು ಮರಳಿ ಅರಮನೆಗೆ ಯಥಾಪ್ರಕಾರ ಬರುವಾಗ ಪ್ರಜೆಗಳು ಸಾಲಾಗಿ ನಿಂತು ಸಂತೋಷದಿಂದ ಕರತಾಡನವನ್ನು ಮಾಡಿದರು.

ಜರ್ಮನೀದೇಶದಲ್ಲಿರುವ ಒಂದು ಸಂಘದವರು “ತಮಗೆ ಇನ್ನುಮುಂದೆ ಯುದ್ಧ ನಡೆಯಿಸುವುದು ಇಷ್ಟವಿಲ್ಲವೆಂದೂ, ಬರಬರುತ್ತ ಪ್ರಜೆಗಳು ಇದರ ವಿಷಯದಲ್ಲಿ ಅಸಮಾಧಾನಗೊಳ್ಳುತ್ತಿರುವರೆಂದೂ ಯುದ್ಧಮಾಡತಕ್ಕ ೨ ಪಕ್ಷದವರು ತಾವು ಕೋರುವ ಸಂಧಿನಿಬಂಧನಗಳನ್ನು ವಾರ್ತಾಪತ್ರಿಕೆಗಳಲ್ಲಿ ಪ್ರಕಟಿಸಿದರೆ ಅದರಮೇಲೆ ಚರ್ಚೆ ನಡೆಯಿಸಬಹುದೆಂದೂ, ಕೆಲವರು ಯುದ್ಧವನ್ನು ಕೋರುತ್ತಿರುವರಾದರೂ ಜರ್ಮನರು ಯುದ್ಧವನ್ನು ಕೋರುವುದಿಲ್ಲವೆಂದೂ” ಮುದ್ರಿಸಿದ ಕರಪತ್ರಗಳನ್ನು ಪ್ರಕಟಿಸಿದ್ದಾರಂತೆ.

ಜರ್ಮನಿಯವರು ಯುದ್ಧಕ್ಕೆಮುಂಚೆಯೇ ಅಮೇರಿಕಾದ ಒಂದು ಕಂಪೆನಿಯವರಿಗೆ ೮ ಸಾವಿರ ಮೋಟಾರುಬಂಡಿಗಳನ್ನು ನಿರ್ಮಿಸಿ ಕಳುಹಿಸಬೇಕೆಂದು ಬರೆದಿದ್ದರಂತೆ. ಸೈನಿಕರನ್ನು ಯುದ್ಧಾಂಗಣದಲ್ಲಿ ಒಂದುಕಡೆಯಿಂದ ಮತ್ತೊಂದುಕಡೆಗೆ ವೇಗವಾಗಿ ಸಾಗಿಸಲು ಇವುಗಳನ್ನು ಉಪಯೋಗಿಸಿಕೊಳ್ಳಬೇಕೆಂಬುದೇ ಅವರ ಉದ್ದೇಶವಾಗಿದ್ದಿತು. ಆದರೆ ಮಿತ್ರಮಂಡಲಿಯವರ ನೌಕಾದಳಸಾಮರ್ಥ್ಯದಿಂದುಂಟಾಗಿರುವ ಕಡೆಯಿಂದ ಈ ಮೋಟಾರುಬಂಡಿಗಳು ಇನ್ನೂ ಜರ್ಮನರ ಕೈಸೇರದಂತಾಗಿವೆ. ಆದರೂ ಜರ್ಮನರು ೧ ಲಕ್ಷ ಮೋಟಾರುಬಂಡಿಗಳನ್ನು ಯುದ್ಧಕಾರ್ಯದಲ್ಲಿ ಉಪಯೋಗಿಸಿರುವರೆಂದು ಸುದ್ದಿಬಂದಿದೆ.

ಜರ್ಮನರ ಇಷ್ಟದಮೇರೆಗೆ ಆಸ್ಟ್ರಿಯಾದವರು ತಮಗೆ ಇಷ್ಟಬಂದಂತೆ ಸಂಧಿಮಾಡಿಕೊಳ್ಳಲು ಯೋಚಿಸಿರುವರಂತೆ. ಹೀಗೆ ಅವರು ಸಂಧಿಯನ್ನು ಮಾಡಿಕೊಳ್ಳದೆ ಹೋದರೆ ಈಗ ಇಟಲಿಯನ್ನು ಯುದ್ಧದಲ್ಲಿ ಸೇರದಂತೆ ತಡೆಯುವುದು ಅಸಾಧ್ಯವಾಗಿಬಂದಿದೆ. ಮೇಲೆ ಹಾಯ್ದು ಬರುತ್ತಿರುವ ರಷ್ಯನ್ನರನ್ನು ತಡೆಯುವುದಕ್ಕೆ ಜರ್ಮನರು ಕಾರ್ಪೇತಿಯನ್ ಬೆಟ್ಟಗಳ ಬಳಿಗೆ ನೂತನಸೈನ್ಯಗಳನ್ನು ಕಳುಹಿಸಲಾರದವರಾಗಿದ್ದಾರೆ ಜರ್ಮನರಿಗೆ ತಮ್ಮದೇಶದ ಎಲ್ಲೆಗಳ ರಕ್ಷಣೆಯನ್ನು ಮಾಡಿಕೊಳ್ಳುವ ಕಷ್ಟವೇ ಈಗ ಹೆಚ್ಚಾಗಿದೆ. ಅದು ಕಾರಣ ಅವರು ಆಸ್ಟ್ರಿಯಾಕ್ಕೆ ಮರಳಿ ಸಹಾಯಸೈನ್ಯವನ್ನು ಕಳುಹಿಸುವಹಾಗಿಲ್ಲ. ಎಂಬುದಾಗಿ ನ್ಯೂಯಾರ್ಕಿನ ಒಂದು ಪತ್ರಿಕೆಗೆ ರೋಮ್‌ನಗರದಿಂದ ಸುದ್ದಿ ಹೋಗಿದೆಯಂತೆ.

ನಾವು ಸರ್ವಿಯಾದಮೇಲೂ ಬಲ್ಗೇರಿಯಾದಮೇಲೂ ದಂಡೆತ್ತಿ ಬರುವೆವೆಂದು ಅವರನ್ನು ಅಂಜಿಸಿ, ಇದರಿಂದ ಆ ದೇಶಗಳಮೇಲೆ ತುರ್ಕಿಗೆ ಜರ್ಮನಿಯಿಂದ ಯುದ್ಧಸಾಮುಗ್ರಿಗಳನ್ನು ನಿರಾತಂಕವಾಗಿ ಸಾಗಿಸಿಕೊಳ್ಳುವುದಕ್ಕೆ ದಾರಿಮಾಡಿಕೊಳ್ಳಬೇಕಾಗಿದೆಯೆಂತಲೂ, ಇದಕ್ಕಾಗಿ ೩ ಲಕ್ಷ ಸೇನೆಯನ್ನು ಕೂಡಲೇ ತಮಗೆ ಕಳುಹಿಸಿಕೊಡಬೇಕೆಂತಲೂ ಯೌವನ ತುರುಷ್ಕಸಂಘದವರು ಜರ್ಮನಿಯನ್ನು ಕೇಳಿದ್ದಾರಂತೆ. ಈ ವಿಷಯವಾಗಿ ಮಾತನಾಡಲು ಜನರಲ್ ವಾಂಡರ್ ಗಾಲ್ಟ್ಜರವರೂ, ಹಲೀಲ್‌ಬೇರವರೂ ಜರ್ಮನಿರಾಜಧಾನಿಗೆ ಹೋಗಿದ್ದಾರಂತೆ. ಜರ್ಮನಿಯವರು ತುರ್ಕಿಗೆ ಈ ಸಹಾಯ್ಯವನ್ನು ಮಾಡಲು ನಿರಾಕರಿಸಿದ ಪಕ್ಷದಲ್ಲಿ ತಾವು ಮಿತ್ರಮಂಡಲಿಯವರೊಡನೆ ಸಂಧಿಮಾಡಿಕೊಳ್ಳುವೆವೆಂದು ಯೌವನ ತುರುಷ್ಕರು ಜರ್ಮನಿಯನ್ನು ಹೆದರಿಸುತ್ತಿರುವರಂತೆ. ಈ ಸುದ್ದಿಯು ಲಂಡನ್ ಟೈಮ್ಸ್‌ಪತ್ರಿಕೆಗೆ ಬಲ್ಗೇರಿಯಾರಾಜಧಾನಿಯಿಂದ ತಂತಿದ್ವಾರಾ ತಿಳಿಯಿಸಲ್ಪಟ್ಟಿದೆ.

ಇಂಗ್ಲೆಂಡ್‌ದೇಶದಲ್ಲಿ ಚಕ್ರವರ್ತಿ ದಂಪತಿಗಳು ಈ ಯುದ್ಧವು ಮುಗಿಯುವವರೆಗೆ ತಮ್ಮ ಅರಮನೆಯೊಳಗೆ ಯಾರೊಬ್ಬರೂ ಮದದ್ರವ್ಯಸೇವನೆಯನ್ನು ಮಾಡಕೂಡದೆಂದು ಅಪ್ಪಣೆಮಾಡಿ ತಾವುಗಳೂ ಸಂಪೂರ್ಣವಾಗಿ ತ್ಯಜಿಸಿಬಿಟ್ಟಿದ್ದಾರೆ ಲಾರ್ಡ್ ಕಿಚನರ್ ಮೊದಲಾದ ಅನೇಕಮಂದಿ ದೊಡ್ಡಮನುಷ್ಯರು ಹಾಗೆಯೇಮಾಡಿದ್ದಾರೆ. ಈಗ ಆ ದೇಶದಲ್ಲಿ ಮದದ್ರವ್ಯನಿಷೇಧ ವಿಷಯದಲ್ಲಿ ಪ್ರಜಾಭಿಪ್ರಾಯವು ಹೇಗಿರುವುದೆಂದರೆ—೧೦೦ ಕ್ಕೆ ೩೧ ರಂತೆ ನಿಷೇಧಕ್ಕೆ ಒಡಂಬಡುವವರೂ, ೧೦೦ ಕ್ಕೆ ೪೧ ರಂತೆ ಸೇವಿಸುತ್ತಲೇ ಇರಬೇಕೆನ್ನುವವರೂ, ೧೦೦ ಕ್ಕೆ ೧೫ ರಂತೆ ನೈಮಿತ್ತಿಕವಾಗಿ ಮಾತ್ರ ಅಲ್ಪಪ್ರಮಾಣದಿಂದ ಸೇವಿಸಬೇಕೆನ್ನುವವರೂ, ೧೦೦ ಕ್ಕೆ ೧೦ ರಂತೆ ಮತ್ತೇರಿಸುವ ಸಾರಾಯನ್ನು ಮಾತ್ರ ನಿಷೇಧಿಸಬೇಕೆನ್ನುವವರೂ ಇದ್ದಾರೆ. ಬ್ರಿಟಿಷ್‌ದ್ವೀಪಗಳಲ್ಲಿರುವ ಸಾರಾಯಿ ವರ್ತಕರುಗಳು ಇಂಗ್ಲೆಂಡ್ ಕೋಶಾಧ್ಯಕ್ಷರನ್ನು ಕಂಡು ಯುದ್ಧವು ಜರುಗುತ್ತಿರುವಷ್ಟುದಿವಸವೂ ಸರಾಯಿಯನ್ನು ಸಂಪೂರ್ಣವಾಗಿ ನಿಷೇಧಿಸುವುದಕ್ಕಿಂತ ಗ್ಯಾಲನ್ ೧ ಕ್ಕೆ ೪ ಷಿಲ್ಲಿಂಗಿನಂತೆ ಕಂದಾಯವನ್ನು ವಿಧಿಸಬಹುದೆಂದು ಹೇಳಿಕೊಂಡರು.

ಮಿತ್ರಮಂಡಲಿಯವರೊಡನೆ ಸಂಧಿಮಾಡಿಕೊಳ್ಳಲು ನಿಬಂಧನೆಗಳನ್ನೇರ್ಪಡಿಸುವ ವಿಷಯದಲ್ಲಿ ಚರ್ಚಿಸುವುದಕ್ಕೆ ತಮಗೆ ಇಷ್ಟವಿದೆಯೆಂದು ಜರ್ಮನಿಯವರು ಅಮೇರಿಕಾದವರಿಗೆ ತಂತಿದ್ವಾರಾ ತಿಳಿಯಿಸಿರುವರಂತೆ. ಯುದ್ಧಾರಂಭಕ್ಕೆ ಪೂರ್ವದಲ್ಲಿ ಯಾರು ಹೇಗಿದ್ದರೋ ಈಗಲೂ ಹಾಗೆಯೇ ಇದ್ದುಕೊಳ್ಳುವುದಕ್ಕೂ, ಬೆಲ್ಜಿಯಂದೇಶವನ್ನೆಲ್ಲಾ ಜರ್ಮನರು ಬಿಟ್ಟುಕೊಡುವುದಕ್ಕೂ, ಆಫ್ರಿಕಾದಲ್ಲಿ ಎರಡುಪಕ್ಷದವರಿಗೂ ಇದ್ದ ಅಧಿನಿವೇಶಗಳನ್ನು ಅವರವರು ಹಂಚಿಕೊಳ್ಳುವುದಕ್ಕೂ, ಗ್ರೇಟ್‌ಬ್ರಿಟನ್ನು ಮೊದಲಾದವರೆಲ್ಲರೂ ಯುದ್ಧಸಮಯದಲ್ಲಿ ವ್ಯಾಪಾರದ ಹಡಗುಗಳನ್ನು ನಿರ್ಬಂಧಿಸದೆ ಸ್ವೇಚ್ಛೆಯಿಂದ ಪ್ರಯಾಣಮಾಡಗೊಡಿಸುವುದಕ್ಕೆ ಅವಕಾಶಕೊಡುವೆವೆಂದು ಒಡಂಬಡಿಕೆಮಾಡಿಕೊಳ್ಳುವುದಕ್ಕೂ ಜರ್ಮನಿಯವರು ಒಪ್ಪಿಕೊಳ್ಳುತ್ತಾರಂತೆ. ಈಗಿನ ಯುದ್ಧದಿಂದ ಉಂಟಾಗಿರುವ ನಷ್ಟವನ್ನು ಕಟ್ಟಿಕೊಡುವುದಕ್ಕೆ ಮಾತ್ರ ಜರ್ಮನರು ಒಪ್ಪಿಕೊಳ್ಳುವುದಿಲ್ಲವಂತೆ. ಕಾಂಗೋದೇಶವನ್ನು ಅವರು ಪ್ರತಿಫಲವನ್ನು ಕೊಟ್ಟ ಕೊಂಡುಕೊಳ್ಳುವರಂತೆ. ಈ ಸುದ್ದಿಗಳೆಲ್ಲಾ ಜರ್ಮನರಿಗೆ ಮಾಡಿದ ತಪ್ಪಿನ ನೆನಪಾಗಿರುವುದೆಂಬುದನ್ನು ಸೂಚಿಸುತ್ತಿವೆ. ಆದರೆ ಈ ಸುದ್ದಿಗಳು ಎಷ್ಟರಮಟ್ಟಿಗೆ ನಿಜವೆಂಬುದು ಗೊತ್ತಾಗುವುದಿಲ್ಲ.

ಭರತಖಂಡಕ್ಕೆ ಜರ್ಮನಿಯಿಂದಲೂ, ಆಸ್ಟ್ರಿಯಾದಿಂದಲೂ ಯಾವಯಾವ ಸರಕುಗಳು ವಿಶೇಷವಾಗಿ ಬರುತ್ತಿದ್ದುವೋ ಅಂಥ ಸರಕುಗಳನ್ನೆಲ್ಲಾ ಇಟ್ಟು ಲಂಡನ್‌ಪಟ್ಟಣದಲ್ಲಿ ಒಂದು ಪ್ರದರ್ಶನವನ್ನು ನೆರವೇರಿಸಿದರು. ಇವನ್ನು ನೋಡಿದವರು ಇನ್ನುಮುಂದೆ ಇಂಥವುಗಳನ್ನೇ ಇಂಗ್ಲೆಂಡಿನಲ್ಲಿ ನಿರ್ಮಿಸಿ, ಭರತಖಂಡಕ್ಕೆ ಕಳುಹಿಸಿಕೊಡುವಂತೆ ಮಾಡಬೇಕೆಂಬುದೇ ಆ ಪ್ರದರ್ಶನದ ಉದ್ದೇಶವಾಗಿದ್ದಿತು. ಮುಂದಿನತಿಂಗಳಲ್ಲೂ ಇಂತಹುದೇ ಮತ್ತೊಂದು ಪ್ರದರ್ಶನವು ಆಗುವುದು. ಇದುವರೆಗೆ ನಡೆದ ಪ್ರದರ್ಶನಗಳಲ್ಲಿನ ವಸ್ತುಗಳನ್ನು ನೋಡಿ ಅದರಂತೆ ಬ್ರಿಟಿಷ್‌ದ್ವೀಪಗಳಲ್ಲಿ ನಿರ್ಮಿಸಲ್ಪಟ್ಟಿರುವ-ಆಟದಸಾಮಾನು-ಪೆನ್ಸಿಲು-ಕಾಗದ-ಗುಂಡಿ-ಚಾಕು-ಸೂಜಿ-ಗಡಿಯಾರ-ಮೊದಲಾದ ಸಾಮಾನುಗಳು ಮುಂದಿನ ಪ್ರದರ್ಶನಕ್ಕೆ ಇಡಲ್ಪಡುವುವು. ಈ ಪ್ರದರ್ಶನಕ್ಕೆ ಕಸಬುದಾರರಹೊರತು ವರ್ತಕರ ಪ್ರವೇಶಕ್ಕೆ ಅವಕಾಶವಿಲ್ಲದಂತೆ ಮಾಡಲ್ಪಟ್ಟಿರುವುದು. ಇನುವರೆಗೆ ಜರ್ಮನಿ ಆಸ್ಟ್ರಿಯಾ ಕಂಪನಿಗಳಿಗೆ ಬರೆದು ಸಾಮಾನುಗಳನ್ನು ತರಿಸಿಕೊಳ್ಳುತ್ತಿದ್ದ ಭರತಖಂಡದ ವರ್ತಕರು ಇನ್ನುಮುಂದೆ ಲಂಡನ್ನಿನಲ್ಲಿರುವ ತಮ್ಮ ಕಡೆಯ ಏಜಂಟರುಗಳಿಗೆ ಬರೆದು ಬೇಕಾದ ಸರಕುಗಳನ್ನು ತರಿಸಿಕೊಳ್ಳಬಹುದಾಗಿರುವುದು

ಯುದ್ಧವಾರ್ತೆಯು.

ಪಶ್ಚಿಮರಣರಂಗ.

ನ್ಯೂಚಾಪಲ್ ಯುದ್ಧವಾದನಂತರ ಜರ್ಮನರು ಈಚೆಗೆ ೧ ತಿಂಗಳಾದಾಗ್ಯೂ ಆ ಸುತ್ತಿನಲ್ಲಿ ಇಂಗ್ಲೀಷ್ ಸೈನ್ಯವನ್ನು ಪ್ರತಿಭಟಿಸಲು ಬಂದಿಲ್ಲ. ಎಲ್ಲ ಕಡೆಯೂ ಜರ್ಮನರು ಈಗ ಆತ್ಮರಕ್ಷಣೋಪಾಯದ ಯುದ್ಧವನ್ನು ಮಾಡುತ್ತಿರುವರೇ ಹೊರತು ತಾವಾಗಿ ಮೇಲೆ ಬೀಳುವ ಯುದ್ಧವನ್ನು ಬಿಟ್ಟುಬಿಟ್ಟಂತೆ ಕಾಣುತ್ತದೆ.

ಫ್ರೆಂಚ್ ಸರ್ಕಾರದವರು ಪ್ರಕಟಿಸಿರುವ ಪ್ರಕಾರ ಮಾರ್ಚಿ ತಾ|| ೧೫ರ ವರೆಗೆ ಜರ್ಮನ್ ಸೈನ್ಯದಲ್ಲಿ ೩೧೨೭೭ ಮಂದಿ ಆಫೀಸರು ಏಟುತಿಂದು ನಿರುಪಯೋಗಿಗಳಾಗಿರುವರು, ಅಥವಾ ಸತ್ತಿರುವರು, ಇಲ್ಲವೆ ಕಾಣದೆಹೋಗಿರುವರು. ಈ ಸಂಖ್ಯೆಯಲ್ಲಿ ೧೦ ಸಾವಿರ ಮಂದಿ ಸತ್ತವರೇ ಆಗಿರುವರು.

ಫ್ರಾನ್ಸ್ ದೇಶದ ವರ್ಡನ್ನಿಗೆ ದಕ್ಷಿಣದಲ್ಲಿರುವ ಮ್ಯೂಜ-ಮಾಸೆಲ್ಲುಗಳ ಮಧ್ಯದಲ್ಲಿ ಫ್ರೆಂಚರು ಜರ್ಮನರನ್ನು ಹಿಂದಕ್ಕೋಡಿಸಬೇಕೆಂದು ತೀವ್ರವಾದ ಯುದ್ಧವನ್ನು ಮಾಡಿ ಕೆಲ ಗ್ರಾಮಗಳನ್ನು ಹಿಡಿದುಕೊಂಡು, ಜರ್ಮನರ ಒಂದು ಲೋಹಮಾರ್ಗವನ್ನು ಸಮೀಪಿಸುತ್ತಿರುವರು. ಇಲ್ಲಿ ಕಳೆದುಕೊಂಡ ಭಾಗವನ್ನೂ ಕಂದಕಗಳನ್ನೂ ಮರಳಿ ಹಿಡಿದುಕೊಳ್ಳಬೇಕೆಂದು ಜರ್ಮನರು ಬಹಳ ಸಾಹಸಪಟ್ಟು ಬಹುಜನ ಸೈನಿಕರನ್ನೂ ಕೆಲ ಫಿರಂಗಿಗಳನ್ನೂ ಕಳೆದುಕೊಂಡರು. ಈ ಸ್ಥಳದಲ್ಲಿ ಫ್ರೆಂಚರು ಮುಂದಕ್ಕೆ ಹೋಗಿ ಒಂದು ಗುಡ್ಡವನ್ನು ಹಿಡಿದುಕೊಂಡರು. ಇದರ ಮೇಲೆ ನಿಂತು ಫಿರಂಗಿಗಳನ್ನು ಹಾರಿಸುತ್ತಿದ್ದರೆ, ಸುತ್ತಲೂ ೨ ಮೈಲುಗಳ ದೂರದವರೆಗೆ ಶತ್ರುಗಳನ್ನು ಬರಗೊಡಿಸದಂತೆ ಮಾಡಬಹುದು.

ಈಜರ್ ಕಾಲ್ವೆಯ ಪಶ್ಚಿಮದಲ್ಲಿರುವ ಜರ್ಮನ್ ಸೈನ್ಯದ ಮೇಲೆ ಬೆಲ್ಜಿಯಂ ಸೈನಿಕರು ಬಿದ್ದು ಕಾದಾಡಿ ಅಲ್ಲಿಂದ ದಿಕ್ಕುದಿಕ್ಕಿಗೆ ಓಡಿಸಿಬಿಟ್ಟರು. ಜರ್ಮನರ ೧ ಫಿರಂಗಿಯನ್ನೂ ಕೆಲವು ಮದ್ದುಗುಂಡು ಮೊದಲಾದ ಸಾಮಗ್ರಿಗಳನ್ನೂ ಹಿಡಿದುಕೊಂಡರು.

ಎಪಾರ್ಜೆಸ್ಸಿನ ಹತ್ತಿರವೂ ಎಯಿಲಿ ಅಡವಿಯಲ್ಲೂ ಆದ ಯುದ್ಧದಲ್ಲಿ ಮಿತ್ರಮಂಡಲಿಯವರು ಶತ್ರುಗಳನ್ನು ಓಡಿಸಿ ತಾವು ಮುಂದಕ್ಕೆ ಸಾಗಿದ್ದಾರೆ.

ಪೂರ್ವ ರಣರಂಗದಲ್ಲಿ ಕಾರ್ಪೇತಿಯನ್ ಯುದ್ಧವು ಹೇಗೆ ಪ್ರಾಮುಖ್ಯವನ್ನೈದಿದೆಯೋ ಹಾಗೆ ಪಶ್ಚಿಮ ರಣರಂಗದಲ್ಲಿ ಸೆಂಟ್ ಮಿಹೀಲಿನ ಬಳಿಯಣ ಯುದ್ಧವೂ ಪ್ರಾಮುಖ್ಯವನ್ನೈದುತ್ತಿದೆ. ಇಲ್ಲಿನ ಮುಖ್ಯಸ್ಥಾನಗಳೆಲ್ಲಾ ಜರ್ಮನರ ವಶದಲ್ಲಿವೆ. ಇವುಗಳ ಮೇಲೆ ಬೀಳುವುದಕ್ಕೆ ಫ್ರೆಂಚ್ ಸೈನ್ಯಗಳು ಎರಡು ಪಕ್ಕದಿಂದಲೂ ಹೋಗುತ್ತಿವೆ. ಮಟ್ಜಿನಿಂದ ಸೆಂಟ್ ಮಿಹೀಲಿಗೆ ಹೋಗುವ ಲೋಹಮಾರ್ಗದ ಮೇಲೆ ಫಿರಂಗಿಗಳನ್ನು ಹೊಡೆಯುವುದಕ್ಕೆ ಅನುಕೂಲವಾದ ಸ್ಥಾನದಲ್ಲಿ ಫ್ರೆಂಚರು ಇದ್ದಾರೆ. ಇಲ್ಲಿ ಘೋರಯುದ್ಧವಾಗುತ್ತಲಿದೆ. ಇದರ ಬಳಿಯಲ್ಲಿರುವ ಎಪರ್ಜೆಸ್ ಎಂಬುದನ್ನು ಜರ್ಮನರು ಬಹಳ ಸಾಮರ್ಥ್ಯದಿಂದ ರಕ್ಷಿಸುತ್ತಿದ್ದರು. ಏಕೆಂದರೆ ಇದು ಬಹಳ ಆಯಕಟ್ಟಿನ ಸ್ಥಳ. ಇಲ್ಲಿ ಬಹಳ ಕಠಿನವಾದ ಯುದ್ಧವನ್ನು ಮಾಡಿ ಜರ್ಮನರ ಹೆಣಗಳನ್ನು ಕಂದಕಗಳ ತುಂಬಾ ತುಂಬಿಸಿ, ಫ್ರೆಂಚರು ಇದನ್ನು ವಶಪಡಿಸಿಕೊಂಡುಬಿಟ್ಟರು. ಬಹುದಿನದಿಂದ ಮಾಡಿಕೊಂಡಿದ್ದ ಉದ್ದೇಶವು ಇದರ ವಿಜಯದಿಂದ ಸಫಲವಾಯಿತೆಂದು ಫ್ರೆಂಚರು ಬಹಳ ಸಂತೋಷಪಟ್ಟರು. ಇಲ್ಲಿ ಫ್ರೆಂಚರ ಮೇಲೆ ಯುದ್ಧಮಾಡಿದ ಜರ್ಮನ್ ಸೈನಿಕರೆಲ್ಲಾ ಬವೇರಿಯಾ ದೇಶದವರು. ತಮ್ಮ ಕಡೆ ೧ ಲಕ್ಷ ಸೈನ್ಯವು ನಷ್ಟವಾದರೂ ಸರಿ; ಈ ಸ್ಥಲವನ್ನು ಫ್ರೆಂಚರಧೀನ ಮಾಡಲಾಗದೆಂದು ಜರ್ಮನ್ ಸೈನ್ಯಾಧಿಪತಿಯು ಈ ಸ್ಥಲದ ವಿಷಯದಲ್ಲಿ ಆಜ್ಞೆಮಾಡಿದ್ದನೆಂದು ಸೆರೆಸಿಕ್ಕಿದ ಜರ್ಮನ್ ಸೈನಿಕರು ಅನಂತರ ತಿಳಿಸಿರುವರು. ಈ ಬಲವಾದ ಎಪರ್ಜೆಸ್ ಕೋಟೆಯು ಫ್ರೆಂಚರಧೀನವಾದುದರಿಂದ ಮುಂದಣ ಯುದ್ಧಕ್ಕೆ ಫ್ರೆಂಚರಿಗೆ ಬಹಳ ಅನುಕೂಲವಾಯಿತು. ಇಲ್ಲಿಗೆ ಸೋತುಹೋಗಿದ್ದರೆ ಅವರು ಬಹಳ ಹಿಂದಕ್ಕೆ ಓಡಿಹೋಗಬೇಕಾಗಿ, ಅವರ ಅಂದಾಜುಗಳೆಲ್ಲಾ ಕೆಟ್ಟುಹೋಗುತ್ತಿದ್ದುವು.

ಸಮುದ್ರತೀರದಿಂದ ಎಯಿಸ್ನಿನ ವರೆಗೆ ಹಲವು ಕಡೆ ಸಾಮಾನ್ಯವಾದ ಫಿರಂಗಿ ಯುದ್ಧವು ಆಗುತ್ತಲೇ ಇದೆ.

ಕಳೆದ ೨ತಿಂಗಳ ಕಾಲದಲ್ಲಿ ಫ್ರಾನ್ಸಿನಲ್ಲಿ ನಡೆದ ಯುದ್ಧಗಳಲ್ಲಿ ಜರ್ಮನರ ಕಡೆ ೩೦ ಸಾವಿರ ಮಂದಿ ನಷ್ಟಪಟ್ಟಿರುವರೆಂದು ಪ್ರಕಟವಾಗಿದೆ.

ಪೂರ್ವರಣರಂಗ.

ಈ ಕಡೆಯ ಯುದ್ಧಗಳಲ್ಲಿ ಕಾರ್ಪೇತಿಯನ್ ಪ್ರಾಂತದ ಯುದ್ಧಕ್ಕೇ ಈಗ ಪ್ರಾಮುಖ್ಯವುಂಟಾಗಿದೆ. ಇಲ್ಲಿ ಶತ್ರುವನ್ನು ನಿರೋಧಿಸುವುದಕ್ಕಾಗಿ ಆಸ್ಟ್ರಿಯನ್ನರೂ ಜರ್ಮನರೂ ಕಡೇಸಲದ ಮಹಾಪ್ರಯತ್ನವನ್ನು ಮಾಡುತ್ತಿದ್ದಾರೆಂದು ಹೇಳಬಹುದು. ಇಲ್ಲಿ ೭ಲಕ್ಷದಷ್ಟು ಜರ್ಮನ್ ಆಸ್ಟ್ರಿಯನ್ ಸೈನ್ಯಗಳು ರಷ್ಯನರನ್ನು ತಡೆದು ಯುದ್ಧಮಾಡುತ್ತಬಂದಿವೆ. ಆದರೂ ರಷ್ಯನರು ಮಹಾ ಶೌರ್ಯಸಾಹಸಗಳಿಂದ ಶತ್ರುಗಳನ್ನು ಹಿಂದಕ್ಕಟ್ಟಿ ತಾವು ಮುಂದಕ್ಕೆ ಸಾಗುತ್ತಲೇ ಇದ್ದಾರೆ. ಹೀಗೆಮಾಡುವಲ್ಲಿ ರಷ್ಯನರು ಬಹಳ ಕಷ್ಟಪಟ್ಟಿದ್ದಾರೆ. ಅನೇಕ ಸ್ಥಳಗಳಲ್ಲಿ ಪರ್ವತಶಿಖರಗಳಮೇಲೆ ಮೂರುನಾಲ್ಕು ಸಾಲು ಕಂದಕಗಳು ಶತ್ರುಗಳಿಂದ ತೋಡಲ್ಪಟ್ಟಿವೆ. ಈ ಬೆಟ್ಟಗಳು ಬಹು ಕಡಿದಾಗಿವೆ. ಹತ್ತುವುದಕ್ಕೆ ಸ್ವಲ್ಪ ಅನುವಾಗಿರುವ ಪರ್ವತಭಾಗಗಳಲ್ಲೆಲ್ಲಾ ಮುಳ್ಳಿನ ತಂತಿಗಳನ್ನು ಕಟ್ಟಿ ಅದಕ್ಕೆ ಬಿಳಿಯ ಬಣ್ಣವನ್ನು ಬಳಿದಿರುವುದರಿಂದ ಮಂಜುಗವಿದಿರುವ ಆ ಬೆಟ್ಟಗಳಲ್ಲಿ ಈ ತಂತಿಗಳಿರುವುದೇ ಗೊತ್ತಾಗುವುದಿಲ್ಲ. ಆದರೂ ರಷ್ಯನರು ಈ ದುರ್ಗಮಸ್ಥಾನಗಳನ್ನೆಲ್ಲಾ ಒಂದೊಂದನ್ನಾಗಿ ವಶಪಡಿಸಿಕೊಳ್ಳುತ್ತಾಬಂದಿದ್ದಾರೆ. ಈ ಸ್ಥಲದಲ್ಲಿ ಆಸ್ಟ್ರಿಯನ್ನರು ತಮ್ಮ ರಿಸರ್ವ್ ಸೈನ್ಯವೆಲ್ಲವನ್ನೂ ಕೂಡ ಉಪಯೋಗಿಸುತ್ತಿದ್ದಾರಂತೆ. ಒಂದುವೇಳೆ ಇಲ್ಲಿ ಪರಾಜಿತರಾಗಿಬಿಟ್ಟರೆ ರಷ್ಯನರು ಮುಂದೆ ಹಂಗೇರಿಯ ಬಯಲುಸೀಮೆಗೆ ನುಗ್ಗುವುದು ತಡವಾಗುವುದಿಲ್ಲ. ಆಗ ಈ ದಕ್ಷಿಣಪ್ರಾಂತದ ಬಯಲಿನಲ್ಲಿ ರಷ್ಯನರನ್ನು ತಡೆಗಟ್ಟುವಷ್ಟು ಸೈನ್ಯವನ್ನು ಆಸ್ಟ್ರಿಯನ್ನರು ಹವಣಿಸುವುದು ದುಸ್ತರವೇ ಸರಿ. ಕಾರ್ಪೇತಿಯನ್ ಪ್ರಾಂತದಲ್ಲಿರುವ ಆಸ್ಟ್ರಿಯನ್ ಸೈನಿಕರಲ್ಲಿ ಒಂದೊಂದು ಕಂದಕಗಳೊಳಗೆ ಸಾವಿರಾರುಮಂದಿಗಳು ಶೀತಾಧಿಕ್ಯಗಳಿಂದ ಹೆಣಗಳಂತೆ ನೆಡತುಕೊಂಡು ಬಿದ್ದಿರುವರಂತೆ.

ಈಚೆಗೆ ಈ ಪ್ರಾಂತ್ಯದಲ್ಲಿರುವ ರಷ್ಯನ್ ಸೈನ್ಯವು ಡುಕ್ಲಾ ಕಣಿವೆಗೆ ದಕ್ಷಿಣದಲ್ಲಿರುವ ಬೆರ್ಟ್‌ಫೀಲ್ಡ್ ಎಂಬ ಸ್ಥಲದಲ್ಲಿ ಘೋರ ಯುದ್ಧವನ್ನು ನಡೆಯಿಸಿ ಜಯಶೀಲರಾಗಿ ಲುಪ್ ಕೋ ಉಜಾಕ್ ಕಣಿವೆಗಳ ಮಧ್ಯದಲ್ಲಿ ಮುಂದಕ್ಕೆ ಸಾಗಿದೆ. ಅಲ್ಲಿ ಇವರೆಗೆ ಶತ್ರುಗಳ ಹಲವು ಇಂಜನ್ನುಗಳು ಕುದುರೆಗಳು ಬಂಡಿಗಳು ಮದ್ದುಗುಂಡುಗಳು ಮೊದಲಾದ ಅನೇಕ ಸಾಮಗ್ರಿಗಳು ಸಿಕ್ಕಿದುವು. ಮತ್ತು ಆಸ್ಟ್ರಿಯಾದೇಶಕ್ಕೆ ಸೇರಿದ ಎಕೋವಿನಾ ರಾಷ್ಟ್ರದ ರಾಜಧಾನಿಯಾದ ಜೆರ್ನೋವಿಟ್ಜಿಗೆ ಉತ್ತರದಲ್ಲೂ ಮತ್ತೊಂದು ಘೋರಯುದ್ಧವಾಗಿ ಅಲ್ಲೂ ರಷ್ಯನರು ಶತ್ರುಗಳನ್ನು ಹಿಮ್ಮೆಟ್ಟಿಸಿ ತಾವು ಜಯಶೀಲರಾಗಿದ್ದಾರೆ. ಆ ಭಾಗದಲ್ಲಿ ರಷ್ಯನ್ ಸೈನ್ಯವು ಬಾರ್ಟ್‌ಫೆಲ್ಟಿಗೆ ಸೇರಿದ ಭಾರ್ಟ್‌ಫಾದ ಹತ್ತಿರವಿರುವ ಲೋಹಮಾರ್ಗದ ಉತ್ತರಕ್ಕೆ ೫ ಮೈಲಿಗಳ ದೂರದಿಂದ ಹಿಡಿದು ಸಿಸ್ನಾದಮಾರ್ಗವಾಗಿ ಪೂರ್ವದಕಡೆಗೆ ೮೦ ಮೈಲಿಗಳ ದೂರದವರೆಗೂ ಅವಿಚ್ಛಿನ್ನವಾಗಿ ಹರಡಿಕೊಂಡಿದೆ. (ಸಿಸ್ನಾ ಎಂಬುದು ಮತ್ತೊಂದು ಲೋಹಮಾರ್ಗಸಂಧಿ) ಇಲ್ಲೇ ರಷ್ಯನರಿಗೆ ಹಲವು ಇಂಜನ್ನುಗಳೂ ಬಂಡಿಗಳೂ ಸಿಕ್ಕಿರುವುವು. ಬಾರ್ಟ್‌ಫೆಲ್ಟಿಗೆ ದಕ್ಷಿಣದಲ್ಲಿ ಈ ಲೋಹಮಾರ್ಗದ ಮೇಲೆಯೇ ಎಪರ್ಜೆಸ್ ಎಂಬ ಪಟ್ಟಣವಿದೆ. ಇಲ್ಲಿಂದ ಡುಕ್ಲಾ ಕಣಿವೆಯ ದಕ್ಷಿಣಭಾಗಕ್ಕೆ ಹೋಗುವ ಲೋಹಮಾರ್ಗವು ಸಂಬಂಧಿಸಿರುತ್ತದೆ. ಆ ಮಾರ್ಗವು ೨೦ ಮೈಲಿಗಳ ಅಂತರವುಳ್ಳದಾಗಿದೆ. ಅದುಕಾರಣ ಈ ಭಾಗದಲ್ಲಿ ರಷ್ಯನರು ಕಣಿವೆಗಳಿಂದಿಳಿದು ಹಂಗೇರಿಯ ಬಯಲುಸೀಮೆಗೆ ನುಗ್ಗುವವರಾಗಿದ್ದಾರೆ. ಪ್ರಿಜೆಮ್ಸಿಲ್ ಕೋಟೆಯನ್ನು ಹಿಡಿದುಕೊಂಡ ರಷ್ಯನ್ ಸೈನ್ಯವು ಕೂಡ ಈ ಪ್ರಾಂತಕ್ಕೆ ಬಂದಿರುವುದರಿಂದ ರಷ್ಯನ್ ಸೈನ್ಯವು ಬಹಳ ಬಲವತ್ತರವಾಗಿ ಶತ್ರುಗಳಿಗೆ ವಿಶ್ರಾಂತಿಯಿಲ್ಲದಂತೆಮಾಡಿ ಹಿಮ್ಮೆಟ್ಟಿಸುತ್ತಿದ್ದಾರೆ. ಈ ಸ್ಥಿತಿಯನ್ನು ಆಸ್ಟ್ರಿಯನ್ನರೇ ಒಪ್ಪಿಕೊಂಡಿದ್ದಾರೆ. ಈಚೆಗೆ ಬಂದಿರುವ ಸುದ್ದಿಯನ್ನು ನೋಡಿದರೆ ಬೆಸ್ಕಿಡ್ ಪರ್ವತಪಂಕ್ತಿಯಲ್ಲಿ ಮುಖ್ಯಶಿಖರಗಳೆಲ್ಲಾ ರಷ್ಯನರ ಅಧೀನವಾಗಿರುವಂತೆಯೂ ಹಲಿಯಾಮಿ ಭೋವಾ ಎಂಬ ಬೆಟ್ಟವೊಂದುಮಾತ್ರ ಆಸ್ಟ್ರಿಯನ್ನರ ವಶದಲ್ಲಿರುವಂತೆಯೂ ಗೊತ್ತಾಗುವುದು. ಮುಂದೆಮುಂದೆಹೋಗುತ್ತ ರಷ್ಯನರನ್ನು ಶತ್ರುಗಳು ಬಹು ಭಯಂಕರವಾಗಿ ಪ್ರತಿಭಟಿಸುತ್ತಿದ್ದಾರೆ. ಅದುಕಾರಣ ರಷ್ಯನರು ಹಿಂದಣಿಂದ ಪ್ರತಿದಿನವೂ ಹೊಸಹೊಸ ಸೈನ್ಯಗಳನ್ನೂ ಫಿರಂಗಿಗಳನ್ನೂ ಅನಂತವಾಗಿ ಸಹಾಯಕ್ಕೆ ತರಿಸಿಕೊಳ್ಳುತ್ತಿದ್ದಾರೆ. ಈ ಕಾರ್ಪೇತಿಯನ್ ಯುದ್ಧದಲ್ಲಿ ಇದುವರೆಗೆ ಆಸ್ಟ್ರಿಯನ್ನರ ಕಡೆ ಮೂರು ಲಕ್ಷ ಮಂದಿ ಹತರಾಗಿರುವರೆಂದು ಗೊತ್ತಾಗಿದೆ. ಈಗ ಕಾರ್ಪೇತಿಯನ್ ಪ್ರಾಂತದಲ್ಲೇ ೭೦ ಮೈಲಿಗಳಷ್ಟು ವಿಸ್ತಾರವಾದ ಭಾಗವು ರಷ್ಯನರ ಅಧೀನದಲ್ಲಿದೆ. ಇಲ್ಲಿಂದ ಹಂಗೇರಿಯ ಬಯಲುಸೀಮೆಗೆ ಇನ್ನು ೨೦ಮೈಲಿಗಳಷ್ಟು ದೂರ ಮಾತ್ರವೇ ಇರುವುದು. ಈಗ ರಷ್ಯನರ ಹೂಣೆಯ ಅಶ್ವಸೈನ್ಯವು ಕಣಿವೆಯ ಮುಖದ್ವಾರದವರೆಗೆ ಹೋಗಿ ಸೇರಿರುವುದಂತೆ. ಇಲ್ಲಿಂದ ಮುಂದೆ ನುಗ್ಗುವುದಕ್ಕೆ ಯಾವ ದೊಡ್ಡ ಬೆಟ್ಟಗಳಾಗಲಿ ಹೊಳೆಗಳಾಗಲಿ ಅಡ್ಡಲಾಗಿಲ್ಲ. ಉಜಾಕ್ ಕಣಿವೆಯೊಂದು ಮಾತ್ರ ಪೂರ್ಣವಾಗಿ ದಾಟಲ್ಪಟ್ಟು ಹೋದರೆ ತೀರಿತು. ಇಲ್ಲೇ ಜರ್ಮನರೂ ಆಸ್ಟ್ರಿಯನ್ನರೂ ಇನ್ನೂ ಮಹತ್ತರ ಪ್ರಯತ್ನದಿಂದ ಪ್ರತಿಭಟಿಸಿ ಯುದ್ಧಮಾಡುತ್ತಿದ್ದಾರೆ. ಜರ್ಮನ್ ಚಕ್ರವರ್ತಿಯೇ ಇಲ್ಲಿಗೆ ಬಂದು ಸೈನ್ಯಾಧಿಪತಿಯಾಗಿ ಸೇನೆಗಳ ಹಿಂದೆ ನಿಂತು ಅವನ್ನು ಶತ್ರುಗಳ ಮೇಲೆ ನುಗ್ಗಿಸುತ್ತಿರುವರೆಂದು ವಾರ್ತೆಬಂದಿದೆ. ಈ ಕಾರ್ಪೇತಿಯನ್ ಬೆಟ್ಟಗಳನ್ನು ದಾಟಿ ಇಳಿಯುತ್ತಿರುವ ರಷ್ಯನ್ ಸೈನ್ಯವು ೨ ಭಾಗವಾಗಿದೆ. ಒಂದು ಬಾರ್ಟ್‌ಫೀಲ್ಡನ್ನು ಆಧಾರಮಾಡಿಕೊಂಡು ಪಶ್ಚಿಮದಿಕ್ಕಿನಲ್ಲಿದೆ ಮತ್ತೊಂದು ನೈಋತ್ಯಭಾಗದಲ್ಲಿದೆ. ಇವುಗಳಲ್ಲಿ ಮೊದಲಭಾಗವು ಸೀಡಾ ನದಿಯಿಂದ ಹಿಡಿದು ಗಾರ್ಲಿಸ್ ವರೆಗೂ ಆಸ್ಟ್ರಿಯಾದ ಸೈನ್ಯದ ಪಕ್ಕವನ್ನು ಸಂಧಿಸುವುದಕ್ಕೆ ಅನುಕೂಲಸ್ಥಿತಿಯಲ್ಲಿದೆ ಮತ್ತೊಂದು ಸೈನ್ಯವು ಈ ಪರ್ವತದ ಪೂರ್ವಭಾಗಕ್ಕೆ ಯುದ್ಧಸಾಮಗ್ರಿಗಳನ್ನು ಸಾಗಿಸಿಕೊಂಡು ಹೋಗುವ ಲೋಹಮಾರ್ಗದಲ್ಲಿ ಮುಖ್ಯಸ್ಥಲವನ್ನು ವಶಪಡಿಸಿಕೊಳ್ಳುತ್ತಿದೆ. ಹೀಗಿರುವಲ್ಲಿ ಜರ್ಮನ್ ಆಸ್ಟ್ರಿಯಾ ಸೈನ್ಯಗಳು ತಮ್ಮ ಕಡೆಯ ಸುತ್ತುಮುತ್ತಣ ಸೈನ್ಯವನ್ನೆಲ್ಲಾ ಸೇರಿಸಿಕೊಂಡು ರಷ್ಯನರ ಎಡಪಕ್ಕದ ಸೈನ್ಯವನ್ನು ಸುತ್ತುಗಟ್ಟಿಹಾಕಬೇಕೆಂದು ಮಹಾಪ್ರಯತ್ನವನ್ನು ಮಾಡುತ್ತಿವೆ. ಇದರಿಂದ ರಷ್ಯನರಿಗೆ ಸಾಧನಸಾಮಗ್ರಿಗಳು ಬಂದು ಕೂಡದಂತೆ ಮಾಡಿ ಹಣ್ಣಿಗೆ ತಂದು ಸೋಲಿಸಿಬಿಡಬೇಕೆಂಬುದೂ, ಬಳಿಕ ರಷ್ಯನರು ಇದುವರೆಗೆ ಗೆದ್ದುಕೊಂಡಿರುವ ಗಲೀಷಿಯಾದಮೇಲೆ ದಂಡೆತ್ತಿ ಹೋಗಬೇಕೆಂಬುದೂ ಅವರ ಉದ್ದೇಶ. ಇದರ ಮೇಲೆ ಅವೆರಡು ಸೈನ್ಯಗಳೂ ಸ್ಟ್ರಿಜ್ ಪಟ್ಟಣದವರೆಗೆ ನುಗ್ಗಿ ಹೋಗಿವೆ. ರಷ್ಯನರ ಎಡಪಕ್ಕದ ಸೇನೆಯಾದರೊ ಅತ್ಯಂತ ಸಾಮರ್ಥ್ಯದಿಂದ ಆ ಶತ್ರುಸೈನ್ಯವನ್ನು ತಾನೇ ಸುತ್ತುಗಟ್ಟಬೇಕೆಂದು ಸಾಹಸಮಾಡುತ್ತಿದೆ. ಅಂತೂ ಈ ಕಾರ್ಪೇತಿಯನ್ ಪರ್ವತದ ಉಳಿದ ಭಾಗಗಳೆಲ್ಲಾ ರಷ್ಯನರ ವಶವಾಗುವುದಕ್ಕೆ ಇನ್ನೂ ಸ್ವಲ್ಪ ಕಾಲವು ಹಿಡಿಯಬಹುದು. ಅವೆಲ್ಲಾ ವಶವಾಗಿ ಹೋದರೆ ಆಸ್ಟ್ರಿಯಾಕ್ಕೆ ಮುಖ್ಯಾಧಾರವಾದ ಹಂಗೇರಿಯು ರಷ್ಯನರಿಗೆ ಬಲಿಯಾಗುವ ಕಾಲವು ಸಮೀಪಿಸುತ್ತ ಬಂದಿತೆಂದು ಹೇಳಬಹುದು. ಇದುವರೆಗಿನ ಕಾರ್ಪೇತಿಯನ್ ಯುದ್ಧದಲ್ಲಿ ರಷ್ಯನರು ಶತ್ರುಗಳ ಕಡೆಯ ಸೈನ್ಯದಲ್ಲಿ ವಾರ ೧ ಕ್ಕೆ ೧೫ ಸಾವಿರದಂತೆ ಸೆರೆ ಹಿಡಿದಿದ್ದಾರಂತೆ. ಇದರಹಾಗೆಯೇ ಮದ್ದುಗುಂಡು ತುಪಾಕಿ ಮೊದಲಾದ ಸಾಮಗ್ರಿಗಳೂ ರಷ್ಯನರಿಗ ಅನಂತವಾಗಿ ಸಿಕ್ಕಿಹೋಗಿವೆ. ಜರ್ಮನರು ಉತ್ತರಪೋಲೆಂಡಿನಲ್ಲೂ ಪೂರ್ವಪ್ರಷ್ಯಾದಲ್ಲೂ ಅವಿಚ್ಛಿನ್ನವಾಗಿ ಯುದ್ಧವನ್ನು ನಡೆಯಿಸುತ್ತಲೇ ಇದ್ದಾರೆ. ಆದರೆ ಹೇಳಿಸಿಕೊಳ್ಳುವಂಥ ಜಯಲಾಭವೇನೂ ಅವರಿಗಾಗಿಲ್ಲ. ಅಲ್ಲೂ ರಷ್ಯನರು ಶತ್ರುಗಳನ್ನು ಪ್ರತಿಭಟಿಸಿ ಹಿಮ್ಮೆಟ್ಟಿಸುತ್ತಿದ್ದಾರೆ. ಈಗಿನಂತೆಯೇ ಜರ್ಮನ್ ಆಸ್ಟ್ರಿಯನ್ ಸೈನ್ಯಗಳಲ್ಲಿ ನಷ್ಟವಾಗುತ್ತಾಬಂದರೆ ಮುಂದೆ ಇನ್ನು ೬ ತಿಂಗಳ ಕಾಲವನ್ನು ಮೀರಿ ಅವರು ಯುದ್ಧವನ್ನು ಮಾಡಲಾರರೆಂದು ಯುದ್ಧಕಲಾಪ್ರವೀಣರು ಊಹಿಸುತ್ತಾರೆ.

ನೌಕಾದಳ.

ಜರ್ಮನ್ ಸಬ್‌ಮೆರೀನುಗಳ ಹಾವಳಿಯಿಂದ ಈಚೆಗೆ ಮತ್ತೆ ಕೆಲವು ಹಡಗುಗಳು ಮುಳುಗಿಸಲ್ಪಟ್ಟಿವೆ. ಇದುವರೆಗೆ ಹೀಗೆ ಅವರು ಮುಳುಗಿಸಿದ ಹಡಗುಗಳ ಲೆಕ್ಕವನ್ನೆಲ್ಲಾ ನೋಡಿದರೆ ದಿನಕ್ಕೆ ೧ ರಂತೆ ಮುಳುಗಿಸಿದ್ದಾರೆಂದು ಗೊತ್ತಾಗುತ್ತದೆ. ನೌಕಾದಳ ಸಂಘದವರ ಪ್ರಕಟನವನ್ನು ನೋಡಲಾಗ ಈಚೆಗೆ ಇಂಗ್ಲೆಂಡಿಗೆ ಹೋಗಿಬರುವ ಹಡಗುಗಳಸಂಖ್ಯೆಯು ಕಡಿಮೆಯಾಗಿರುವಂತೆಯೂ ಹೀಗಾಗುವುದಕ್ಕೆ ಈಸ್ಟರ್ ಹಬ್ಬವೇ ಕಾರಣವೆಂತಲೂ ಗೊತ್ತಾಗುತ್ತದೆ. ಜರ್ಮನರ ಕ್ರೌನ್‌ಪ್ರಿನ್ಸ್ ವಿಲ್ಹೆಲ್ಮ್ ಎಂಬ ಹಡಗು ಅಮೇರಿಕಾ ತೀರದಲ್ಲಿ ತಡೆದು ನಿಲ್ಲಿಸಲ್ಪಟ್ಟಿದೆ. ಪ್ರಿನ್ಸ್ ಇಟೆಲ್ ಎಂಬ ಕ್ರುಯಿಝರು ಕೂಡ ಬಂಧಿಸಲ್ಪಟ್ಟಿದೆ. ಒಂದು ಜರ್ಮನ್ ಸಬ್‌ಮೆರೀನು ಪೋರ್ಚುಗೀಸರ ಹಡಗಿನ ಮೇಲೆ ಟಾರ್ಪಿಡೋವನ್ನು ಬಿಟ್ಟು ಮುಳುಗಿಸಿರುತ್ತದೆ.

ಆಕಾಶಯಾನಗಳು.

ಜರ್ಮನರ ಆಕಾಶವಿಮಾನಗಳು ನೆರುಲಾ ಎಂಬ ಹಡಗಿನ ಮೇಲೆ ಸಿಡಿಮದ್ದುಗಳನ್ನು ಹಾಕಿದುವು. ಆ ಹಡಗಿನ ಕೇಪ್ಟನ್ನು ಒಳ್ಳೆಗುರಿಯಿಟ್ಟು ತುಪಾಕಿಯನ್ನು ಹಾರಿಸಲಾಗಿ ಏಟನ್ನು ತಿಂದು ಅವುಗಳು ಜಿಬ್ರೂಲ್ ಕಡೆಗೆ ಓಡಿದುವು. ಹಡಗಿಗೆ ಯಾವ ಏಟೂ ಬೀಳಲಿಲ್ಲ. ಜರ್ಮನರ ವಿಮಾನಗಳೊಳಗೆ ಸಣ್ಣವು ಸಮುದ್ರವನ್ನು ದಾಟಿಹೋಗಿರಲಾರವೆಂದು ಕೇಪ್ಟನ್ನನ ಹೇಳಿಕೆ.

ಜರ್ಮನರ ವಿಮಾನಗಳು ನಾನ್ಸಿಯ ಮೇಲೆ ೬ ಸಿಡಿಮದ್ದುಗಳನ್ನು ಹಾಕಿದುವು. ಅದರಿಂದ ೨ ಕಡೆ ಬೆಂಕಿಹೊತ್ತಿಕೊಂಡು ಒಡನೆಯೇ ಆರಿಸಲ್ಪಟ್ಟಿತು.

ಹಾಲೆಂಡ್ ದೇಶದಲ್ಲಿ ಜರ್ಮನರ ಆಕಾಶವಿಮಾನವೊಂದು ಹಾರುತ್ತಿರಲು ಅದಕ್ಕೆ ಗುಂಡನ್ನು ಹೊಡೆದು ಕೆಳಕ್ಕೆ ಇಳಿಯಿಸಿ ಒಳಗಿದ್ದ ಇಬ್ಬರು ವೈಮಾನಿಕರನ್ನು ಸೆರೆ ಹಿಡಿದರು.

ತುರ್ಕಿ.

ತಾ|| ೮ರ ತಂತ್ರೀವಾರ್ತೆಯಿಂದ ಮಿತ್ರಮಂಡಲಿಯ ನೌಕಾದಳವು ಡಾರ್ಡಿನಲ್ಸ್ ಮುಖದ್ವಾರದಲ್ಲೂ ಚಾನಕ್ಕಿಗೆ ಹೋಗುವ ದಾರಿಯಲ್ಲೂ ನೀರಿನೊಳಗೆ ಸುರಂಗಗಳನ್ನು ಇಡುತ್ತಿರುವುದೆಂದು ಗೊತ್ತಾಗುತ್ತದೆ.

ಸೆಂಟ್ ಲೂಯಿ ಎಂಬ ಯುದ್ಧದ ಹಡಗೂ ಕೆಲವು ಸಮುದ್ರವಿಮಾನಗಳೂ ಗಾಜಾಯರ್ ಎಂಬಲ್ಲಿಗೆ ಸಮೀಪದಲ್ಲಿರುವ ತುರ್ಕಿ ಸೇನಾಶಿಬಿರದಮೇಲೆ ಗುಂಡುಗಳನ್ನುಹಾಕಿ ನಷ್ಟಪಡಿಸಿವೆ.

ಡಾರ್ಡಿನಲ್ಸಿನಲ್ಲಿ ಮಿತ್ರಮಂಡಲಿಯವರ ರೆಸಾರ್ಡ್‌ಲಂಡ್ ಎಂಬ ಹಡಗುಗಳು ಬಂದರಹಿಂದೊಂದು ೧೧ ಮೈಲುಗಳ ವರೆಗೂ ಶೋಧನಾರ್ಥವಾಗಿ ಹೋಗಿದ್ದುವು. ತುರುಕರು ಇವುಗಳಮೇಲೆ ಗುಂಡು ಹೊಡೆದರು. ಈ ಗುಂಡು ಆಸ್ಯಾಖಂಡದ ಪಕ್ಕದಿಂದ ಹೊಡೆಯಲ್ಪಟ್ಟುವು. ಯೂರೋಪುಖಂಡದ ಪಾರ್ಶ್ವದ ಕೋಟೆಗಳಿಂದ ಗುಂಡಿನೇಟು ಬಲವಾದುದರಿಂದ ಆ ದಿಕ್ಕಿನ ಫಿರಂಗಿಗಳನ್ನೆಲ್ಲಾ ತುರುಕರು ಈ ಕಡೆಗೆ ತಂದು ಸೇರಿಸಿಕೊಂಡಿರುವಂತೆ ಕಾಣುತ್ತದೆ. ತುರ್ಕಿಯರ ಏಟುಗಳು ಹಡಗುಗಳಿಗೆ ಬೀಳಲಿಲ್ಲ. ಟ್ರಯಂಫ್ ಎಂಬ ನಮ್ಮವರ ಒಂದಾಯುಧದ ಹಡಗು ಶತ್ರುಗಳ ಫಿರಂಗಿದಳದಮೇಲೆ ಗುಂಡುಗಳನ್ನು ಹೊಡೆದಿತು. ಅಲ್ಲಿ ಈಗ ಮಳೆಯು ಸುರಿಯುತ್ತಿರುವುದರಿಂದ ವೈಮಾನಿಕರು ಹೋಗಿ ಸ್ಥಿತಿಗತಿಗಳನ್ನು ತಿಳಿಯಲು ಅವಕಾಶವಾಗಿದೆ.

ಡಾರ್ಡಿನಲ್ಸ್ ಜಲಸಂಧಿಯ ಬಳಿಗೆ ಮಿತ್ರಮಂಡಲಿಯವರು ಈಜಿಪ್ಟಿನಲ್ಲಿ ತಮ್ಮ ಸೇನೆಯನ್ನು ಸಹಾಯಕ್ಕೆ ಕಳುಹಿಸಿಕೊಡದಂತೆ ಮಾಡಬೇಕೆಂಬ ಉದ್ದೇಶದಿಂದ ತುರ್ಕಿಯವರು ತಮ್ಮ ಸ್ವಲ್ಪ ಅಶ್ವಸೇನೆಯನ್ನು ಸೂಯೆಜ್ ಕಾಲ್ವೆಯ ಮೇಲೆ ಬೀಳುವುದಕ್ಕೆ ಕಳುಹಿಸುತ್ತಿರುವರಂತೆ. ಈ ಗೊಡ್ಡು ಬೆದರಿಕೆಗೆ ಮಿತ್ರಮಂಡಲಿಯವರು ದಿಗಿಲುಬಿದ್ದು ತಮ್ಮ ಯಾವ ಏರ್ಪಾಡನ್ನೂ ವ್ಯತ್ಯಸ್ತಮಾಡಿಕೊಳ್ಳುವವರಾಗಿಲ್ಲ.

ಈಜಿಪ್ಟಿನಲ್ಲಿ ಕೆಲಸವಿಲ್ಲದೆ ಇದ್ದ ತಮ್ಮ ಸೈನ್ಯವನ್ನು ಫ್ರೆಂಚರು ಸ್ವದೇಶಕ್ಕೆ ಕರೆಯಿಸಿಕೊಂಡಿದ್ದಾರೆ. ಇದರಿಂದ ಈಜಿಪ್ಟ್ ಸೂಯೆಜ್ ಪ್ರಾಂತದ ವಿಷಯದಲ್ಲಿ ಮಿತ್ರಮಂಡಲಿಯವರು ಎಷ್ಟು ನಿರ್ಭೀತರಾಗಿರುವರೆಂಬುದು ಗೊತ್ತಾಗುವುದು.

ಯುದ್ಧಸ್ಥಿತಿಯನ್ನು ಕುರಿತ ಸಮಾಲೋಚನೆ.

ಲಂಡನ್ ಟೈಮ್ಸ್ ಪತ್ರಿಕೆ ಯುದ್ಧಾಂಗಣದಿಂದ ಅದರ ಪತ್ರಿಕಾವಿಲೇಖಕನೊಬ್ಬನು ಹೀಗೆ ಬರೆದಿರುತ್ತಾನೆ:—ಮಿತ್ರಮಂಡಲಿಯವರ ಸೇನಾಸ್ಥಿತಿಯು ಈಗ ಮುಂಚೆಗಿಂತಲೂ ಬಹಳ ಚೆನ್ನಾಗಿದೆ. ಕಳೆದ ಚಳಿ ತಿಂಗಳಲ್ಲಿ ೩೦ ಲಕ್ಷ ಮಂದಿ ಜರ್ಮನ್ ಆಸ್ಟ್ರಿಯನ್ ಸೈನಿಕರು ರಷ್ಯಾಸೈನ್ಯದಮೇಲೆ ಬಿದ್ದು ಏನನ್ನೂ ಮಾಡಲಾರದೆ ಹೋದರು. ಅವರಿಗೆ ಯಾವ ಜಯಲಾಭವೂ ಆಗಲಿಲ್ಲ. ಇದರಲ್ಲಿ ೫ ಲಕ್ಷ ಸೇನೆಗೆ ಕಡಿಮೆಯಿಲ್ಲದೆ ತಾವೇ ನಷ್ಟಪಟ್ಟುಕೊಂಡರು. ರಷ್ಯನರು ಪ್ರಿಜೆಮ್ಸಿಲ್ ಕೋಟೆಯನ್ನು ಹಿಡಿದುಕೊಂಡಾಗ ಕೋಟೆಯಲ್ಲಿದ್ದ ಆಸ್ಟ್ರಿಯನ್ ಸೈನ್ಯವನ್ನೇ ಅಲ್ಲದೆ ಇನ್ನೂ ಕೆಲ ಸೈನ್ಯಗಳನ್ನು ಹೊರಗೂ ಹಿಡಿದುಕೊಂಡರು. ಕಕೇಷಿಯಾದಲ್ಲಿ ರಷ್ಯನರು ದೃಢವಸತಿಯನ್ನು ಮಾಡಿಕೊಂಡಿರುವರು. ಬಾಲ್ಟಿಕ್ ಸಮುದ್ರದಲ್ಲೂ ಕಪ್ಪುಸಮುದ್ರದಲ್ಲೂ ರಷ್ಯನರ ನೌಕಾದಳವು ಮುಂದೆ ಮಾಡುವುದಕ್ಕಿರುವ ಯುದ್ಧಕ್ಕೆ ತಕ್ಕ ಮಾರ್ಗವನ್ನು ಸರಿಪಡಿಸಿಕೊಳ್ಳುತ್ತಿದೆ. ಪೂರ್ವರಣರಂಗಕ್ಕೆ ಕಳುಹಿಸಲ್ಪಟ್ಟ ಜರ್ಮನ್ ಸೈನಿಕರಲ್ಲಿ ಯಾರೊಬ್ಬರೂ ಮರಳಿ ಪಶ್ಚಿಮರಣರಂಗಕ್ಕೆ ಬಂದಿರುವಂತೆ ನಮಗೆ ಇದುವರೆಗೂ ತಿಳಿದುಬಂದಿಲ್ಲ. ಬರುವ ಬೇಸಗೆಯಲ್ಲಿ ರಷ್ಯನರು ಶತ್ರುಗಳಮೇಲೆ ತೀವ್ರವಾಗಿ ಬೀಳಬೇಕೆಂದಿದ್ದಾರೆ. ಆಗ ಅವರಿಗೆ ಲಾಭವುಂಟಾಗುವುದೆಂದು ಹೇಳಬಹುದಾಗಿದೆ. ಈಗ ಫ್ರೆಂಚ್‌ಸೈನಿಕರು ೨೫ ಲಕ್ಷ ಮಂದಿ ಸೇನಾಮುಖದಲ್ಲಿದ್ದಾರೆ. ಇದ್ದಲ್ಲದೆ ಇನ್ನೂ ೧೨|| ಲಕ್ಷ ಸೇನೆಯು ಬೇರೆಬೇರೆಕಡೆ ಅವರಿಗೆ ಸಹಾಯ ಸೈನ್ಯವು ಸಿದ್ಧವಾಗಿದೆ. ಇದಲ್ಲದೆ ಆಂಗ್ಲಸೈನ್ಯವೂ ಬೆಲ್ಜಿಯಂ ಸೈನ್ಯವೂ ಸಮಾನಸಂಖ್ಯೆಯಿಂದ ಶತ್ರುಗಳನ್ನು ಪ್ರತಿಭಟಿಸುತ್ತಿವೆ. ಪಶ್ಚಿಮರಣರಂಗದಲ್ಲಿ ಬಹುಶಃ ಜರ್ಮನ್ ಸೈನ್ಯವು ೧೫ ಲಕ್ಷ ಇರಬಹುದು. ಇದರಿಂದ ಮಿತ್ರಮಂಡಲಿಯವರ ಸೇನಾಸಂಖ್ಯೆಯು ಶತ್ರುಬಲಕ್ಕಿಂತ ಕನಿಷ್ಠಪಕ್ಷ ೧೦ ಲಕ್ಷದಷ್ಟಾದರೂ ಹೆಚ್ಚಾಗಿರುವುದು. ಇಂಗ್ಲೆಂಡಿನಲ್ಲೂ ಫ್ರಾನ್ಸಿನಲ್ಲೂ ರಷ್ಯಾದಲ್ಲೂ ಅಣಿಮಾಡಿಟ್ಟುಕೊಂಡಿರುವ ಸೈನಿಕರುಗಳನ್ನು ಈ ಮೇಲಿನ ಸಂಖ್ಯೆಯೊಡನೆ ಕೂಡಿಸಿದರೆ ಜರ್ಮನಿ ಆಸ್ಟ್ರಿಯಾಗಳ ಎಲ್ಲಾ ಸೈನ್ಯಕ್ಕಿಂತಲೂ ಎರಡರಷ್ಟು ಅಧಿಕವಾಗಿ ಮಿತ್ರಮಂಡಲಿಯವರಲ್ಲಿರುವುದೆಂದು ಹೇಳಬಹುದು.

ಮೈಸೂರ್ ಸ್ಟಾರ್.

ಸನ್ ೧೯೧೫ ನೆಯ ಏಪ್ರಿಲ್ ತಾ|| ೧೮ ನೆಯ ಭಾನುವಾರ.

ಅಖಿಲ ಹಿಂದೂ ಮಹಾಸಭೆ.

ಈ ಸಭೆಯು ಗೊತ್ತಾಗಿದ್ದಮೇರೆ ಕಳೆದ ತಾ|| ೮-೧೦ ರಲ್ಲಿ ಹರಿದ್ವಾರದೊಳಗೆ ನೆರವೇರಿತು. ಕಾಶಿಂಬಜಾರು ಮಹಾರಾಜ ಮಣೀಂದ್ರಚಂದ್ರನಂದಿ ಬಹದ್ದೂರರವರು ಅಧ್ಯಕ್ಷರಾಗಿದ್ದರು. ಅಧ್ಯಕ್ಷರ ಭಾಷಣವನ್ನೂ ಸಭೆಯ ಉಳಿದ ನಡವಳಿಕೆಗಳನ್ನೂ ಓದಿ ನೋಡಲಾಗಿ, ಪರಮತದವರನ್ನು ಪ್ರಾಯಶ್ಚಿತ್ತಾದಿಗಳಿಂದ ಹಿಂದೂಮತಕ್ಕೆ ಸೇರಿಸಿಕೊಂಡು ಮತವನ್ನು ವೃದ್ಧಿಪಡಿಸಬೇಕೆಂಬುದು ಸಭೆಯ ಉದ್ದೇಶವಲ್ಲ; ಆದರೆ ಮತಸ್ಥರ ಸಂಖ್ಯೆಯು ತಗ್ಗಿಹೋಗದಂತೆ ನೋಡಿಕೊಳ್ಳಬೇಕು; ನಿಮ್ನಜಾತಿಯವರೆನ್ನಿಸಿಕೊಳ್ಳುತ್ತಿರುವ ಹಿಂದೂಗಳನ್ನು ಉಪೇಕ್ಷಿಸದೆ ಸರ್ವವಿಧದಿಂದಲೂ ಆದರಿಸಿ ಉದ್ಧರಿಸಬೇಕು; ಹಿಂದೂದೇಶದಲ್ಲಿರುವ ಜೈನ-ಬೌದ್ಧ-ಸಿಕ್-ಬ್ರಹ್ಮಸಮಾಜದವರು ಮೊದಲಾದ ಹಿಂದುಗಳೆನಿಸಿಕೊಳ್ಳುವ ಪ್ರಭೇದದವರೆಲ್ಲಾ ಈ ಸಭಾನಿಯಮಪ್ರಕಾರ ಹಿಂದೂಗಳೇ ಆಗಿರುವರು; ಅದುಕಾರಣ ಇದು ಸಕಲ ಹಿಂದೂಗಳಿಗೂ ಸಾಮಾನ್ಯವಾಗಿ ಸಂಬಂಧಿಸಿದುದು ಎಂಬುದು ಸಭೆಯ ಉದ್ದೇಶವಾಗಿದೆಯೆಂದು ಕಂಡುಬರುತ್ತದೆ. ಹಿಂದೂಸಾಮಾನ್ಯಕ್ಕೂ ಧಾರ್ಮಿಕವಿಷಯವಾಗಿಯೂ ರಾಜಕೀಯ ವಿಷಯವಾಗಿಯೂ ಉಂಟಾಗಬೇಕಾದ ಹಿತವನ್ನು ಸಾಧಿಸಿಕೊಡಬೇಕೆಂಬುದೇ ಈ ಸಭೆಯ ಮುಖ್ಯೋದ್ದೇಶವಾಗಿದೆ. ಇದಕ್ಕಾಗಿ ರಾಷ್ಟ್ರೀಯಸಭೆ ಪ್ರಾಂತಿಕಸಭೆಗಳಂತಹವು ಮಾಡುತ್ತಲಿರುವಂಥ ಎಷ್ಟೋ ನಿರ್ಧಾರಗಳು ಈ ಸಭೆಯಲ್ಲೂ ಮಾಡಲ್ಪಟ್ಟಿವೆ.

ಹಿಂದೂಗಳು ಎಲ್ಲೆಲ್ಲಿದ್ದಾರೋ ಅಲ್ಲೆಲ್ಲಾ ಸಭೋದ್ದೇಶವನ್ನು ನೆರವೇರಿಸುವುದಕ್ಕೆ ಒಂದೊಂದು ಶಾಖಾಸಭೆಗಳನ್ನು ಸ್ಥಾಪಿಸಬೇಕೆಂದೂ, ಮುಖ್ಯವಾದ ಸಭಾಕಾರ್ಯಸ್ಥಾನವು ದಿಲ್ಲಿಪಟ್ಟಣದಲ್ಲಿರಬೇಕೆಂದೂ ಸಭಿಕರು ಗೊತ್ತುಮಾಡಿದರು. ೨೧ ವರ್ಷಕ್ಕೆ ಮೇಲ್ಪಟ್ಟ ಪ್ರತಿಯೊಬ್ಬ ಹಿಂದುವೂ ಸಭಿಕನಾಗಿದ್ದುಕೊಂಡು ವರ್ಷ ೧ಕ್ಕೆ ೬ ರೂ. ನಂತೆ ಚಂದಾಕೊಡುತ್ತಿರಬೇಕೆಂದು ನಿಶ್ಚಿತವಾಗಿರುವುದು. ಕಾರ್ಯನಿರ್ವಾಹಕ ಸಭೆಗೆ ಆ|| ಮದನಮೋಹನಮಾಲವ್ಯ, ಸುರೇಂದ್ರನಾಥ ಬಾನರ್ಜಿ, ಅಂಬಿಕಾಚರಣಮಜುಂದಾರ್, ಸರ್ ಗುರುದಾಸ್ ಬಾನರ್ಜಿ, ಸರ್ ನಾರಾಯಣಗಣೇಶಚಂದ್ರಾವಾರ್ಕರ್ ಮೊದಲಾದ ಅನೇಕಮಂದಿ ದೇಶಭಕ್ತರುಗಳು ಸಭಾಸದರಾಗಿ ಆರಿಸಲ್ಪಟ್ಟಿರುವರು. ಈ ಲೌಕಿಕರ ಜತೆಗೆ ಶಂಕರಾಚಾರ್ಯ ಸಂಪ್ರದಾಯದ ೪ ಮಠಗಳ ಅಧಿಪತಿಗಳೂ ಸಭ್ಯರಾಗಿ ಸೇರಿಸಲ್ಪಟ್ಟಿರುವರು. ಒಂದೇ ಸಂಪ್ರದಾಯದ ೪ ಪೀಠಾದಿಗಳನ್ನು ಮಾತ್ರ ಸೇರಿಸಿಕೊಂಡು ಹಿಂದೂಮತದಲ್ಲಿರುವ ಇತರ ಪ್ರಬಲಮತಾಚಾರ್ಯ ಪೀಠದ ಅಧಿಪತಿಗಳನ್ನು ಯಾತಕ್ಕೆ ಈ ಸಭಿಕರು ಕೈಬಿಟ್ಟರೋ ತಿಳಿಯದು. ಈ ಕಾರ್ಯನಿರ್ವಾಹಕ ಸಭಿಕರು ಪ್ರತಿಯೊಂದು ಅಧಿಪತ್ಯಕ್ಕೂ ಇಷ್ಟಿಷ್ಟು ಮಂದಿಯೆಂಬ ನಿಯಮದಮೇರೆ ಆರಿಸಲ್ಪಡುವರು.

ಕಡೆಕಡೆಗೆ ಈ ಸಭಿಕರು ಮಾಡಿರುವ ತೀರ್ಮಾನದ ರಾಶಿಗಳನ್ನು ನೋಡಿದರೆ ಇದುವರೆಗೆ ಭರತಖಂಡದಲ್ಲಿ ದೇಶಾಭ್ಯುದಯಕ್ಕಾಗಿ ಚರ್ಚಿಸಲ್ಪಡುತ್ತಿರುವ ವಿಷಯಗಳಲ್ಲಿ ಒಂದನ್ನೂ ಬಿಡದಂತೆ ಇವರು ನಿರ್ಧಾರಗಳನ್ನು ಮಾಡಿರುವಂತೆ ಕಾಣುತ್ತದೆ. ಯಾವುದಾದರೂ ಹಿತವಾದ ಕಾರ್ಯವನ್ನು ಬಿಡದೆ ಸಮರ್ಥಿಸುವುದಕ್ಕೆ ಈ ಸಭೆಯ ಮುಂದಾಳುಗಳು ನಡುಕಟ್ಟಿ, ಅದಕ್ಕಾಗಿ ೧೨ ತಿಂಗಳಕಾಲವೂ ಕೆಲಸಮಾಡುವುದನ್ನು ಬಿಟ್ಟು ಬರಿಯ ನಿರ್ಧಾರಗಳನ್ನು ನೂರಾರುಗಟ್ಟಲೆಯಾಗಿ ಸಭಾಮುಖದಲ್ಲಿ ಮಾಡಿ, ಇಷ್ಟರಿಂದಲೇ ಯಾವದ್ಭಾರತ ಹಿಂದೂಮಹಾಸಭೆಯ ಕಾರ್ಯವು ನೆರವೇರಿತೆನಿಸಿಬಿಟ್ಟರೆ ಹಿಂದೂಗಳಿಗೆ ನಿಜವಾದ ಯಾವಫಲವೂ ಈಸಭೆಯಿಂದ ಆಗುವಹಾಗಿಲ್ಲ.

ಭರತಖಂಡದಲ್ಲಿ ಆರ್ಯಸಮಾಜದವರು ಉಪಯುಕ್ತವಾದ ಕೆಲಸವನ್ನು ಮಾಡುತ್ತಿದ್ದಾರೆ. ಹಿಂದೂ ಮತದಿಂದ ಪತಿತರಾಗಿ ಹೋಗಿದ್ದವರನ್ನು ಪ್ರಾಯಶ್ಚಿತ್ತಗಳಿಂದ ಉದ್ಧರಿಸಿ, ಹಿಂದೂಮತ ರಕ್ಷಣೆಯನ್ನು ಮಾಡುತ್ತಲಿದ್ದಾರೆ. ಅಂಥ ಕೆಲಸಕ್ಕೂ ಈ ಸಭೆಯು ಕೈಹಾಕುವುದಿಲ್ಲ ಎಂದಬಳಿಕ, ನಿಜವಾಗಿ ಈ ಸಭೆಯು ಇನ್ನಾವ ಸಭೆಗಳಿಂದಲೂ ಆಗದಿರುವ ಕಾರ್ಯವನ್ನು ತಾನು ಮಾತ್ರವೇ ಮಾಡುವುದೇನು ?

ಈಗಳಾದರೊ ಭರತಖಂಡದಲ್ಲಿ ಹಿಂದೂಗಳ ಸಂಖ್ಯೆಯು ಕ್ಷೀಣಿಸಿಹೋಗುತ್ತಿದೆ. ಕ್ರೈಸ್ತ ಮಹಮ್ಮದೀಯರ ಸಂಖ್ಯೆಯು ವೃದ್ಧಿಯಾಗುತ್ತಿದೆ. ಬಾಲವಿಧವೆಯರ ಸಂಖ್ಯೆಯು ನಮ್ಮಲ್ಲಿ ಹೆಚ್ಚುತ್ತಿರುವುದೂ, ನಿಮ್ನಜಾತಿಯವರನ್ನು ಉಪೇಕ್ಷಿಸುತ್ತಿರುವುದೂ, ಕ್ಷಾಮಡಾಮರಗಳಿಂದ ದೀನಜನರು ಅನ್ನಾಕಾಂಕ್ಷೆಯಿಂದ ಪರಮತಗಳ ಪಾಲಾಗುತ್ತಿರುವುದೂ ಸಹ ಹಿಂದೂಗಳ ಕ್ಷೀಣತೆಗೆ ಕಾರಣವೆಂದು ಗೊತ್ತಾಗಿದೆ. ೧೮೯೧ನೆಯ ಜನಪರಿಗಣತಿಯ ಕಾಲದಿಂದ ಮುಂದಣ ೧೦ ವರ್ಷದ ಪರಿಗಣತಿಯ ಕಾಲದೊಳಗಾಗಿ ಹಿಂದೂಗಳ ಸಂಖ್ಯೆಯು ೨೦ ಕೋಟಿಯೂ ೬೬ ಲಕ್ಷದಿಂದ ೨೦ ಕೋಟಿಯೂ ೬೧ ಲಕ್ಷಕ್ಕೆ ಇಳಿದುಹೋಗಿರುವುದೆಂದು ಗೊತ್ತಾಗಿದೆ. ೧೦ವರ್ಷಕಾಲದಲ್ಲಿ ೬ಲಕ್ಷ ಜನವು ಕಡಿಮೆಯಾಗಿಹೋಯಿತೆಂಬುದು ಸಾಮಾನ್ಯವಾದ ಮಾತಲ್ಲ. ಇದು ದೇಶಾಭಿಮಾನಿಗಳಿಗೆಲ್ಲಾ ಭಯಂಕರವಾಗಿ ತೋರುತ್ತಲಿದೆ. ಇಂಥ ಕ್ಷೀಣಗತಿಯ ನಿವಾರಣೋಪಾಯವನ್ನು ಈ ಸಭೆಯವರು ಕಂಡುಹಿಡಿದು ಅವಶ್ಯಕವಾಗಿ ಸಾಧಿಸಬೇಕಾಗಿದ್ದಿತು. ಆದರೆ ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ಹಿಂದೂ ಮತವು ಕ್ಷಯಿಸಿಹೋಗುವುದೆಂದು ತಾವು ಭಯಪಡುವುದಿಲ್ಲವೆಂದೂ, ಇದು ಹಿಂದೆ ಎಷ್ಟೋವಿಧವಾದ ಭೀಕರ ಉಪಟಲಗಳ ಆಘಾತಕ್ಕೆ ಸಿಕ್ಕಿಬಿದ್ದರೂ ಅಚ್ಯುತವಾಗಿಯೇ ನಿಂತಿರುವುದೆಂದೂ ಮೊದಲಾಗಿ ಹೇಳಿ, ಆ ವಿಷಯವನ್ನು ಮಾತಿನಲ್ಲಿಯೇ ಕೊನೆಗಾಣಿಸಿಬಿಟ್ಟುದು ಮಾತ್ರ ಸಮಾಧಾನಕರವಾಗಿಲ್ಲ.

ಒಳದೇಶ ವೃತ್ತಾಂತಗಳು.

ರಾಜಧಾನಿಯಲ್ಲಿ ಕಳೆದ ಗುರುವಾರ ಸಾಯಂಕಾಲ ಒಂದು ಹದ ಮಳೆಯಾಯಿತು. ರೋಗಾದಿಗಳೇನೂ ಇಲ್ಲವು.

ಬರುವ ಪ್ರಜಾಪ್ರತಿನಿಧಿ ಸಭೆಯು ಅಕ್ಟೋಬರ್ ತಾ|| ೧೯ನೆಯ ಮಂಗಳವಾರ ಹಗಲು ೧೨ ಗಂಟೆಗೆ ರಾಜಧಾನಿಯ ಪಬ್ಲಿಕ್‌ಆಫೀಸ್ ಸಭಾಮಂದಿರದಲ್ಲಿ ಆರಂಭವಾಗುವುದು.

ಬರೋಡಾಮಹಾರಾಜರವರು ಕಳೆದ ತಾ|| ೧೩ ರಲ್ಲಿ ಬೆಂಗಳೂರಿಗೆ ಬಂದು ಅಲ್ಲಿಯ ಅರಮನೆಯಲ್ಲಿ ವಿಶ್ರಮಿಸಿಕೊಂಡು ಅಲ್ಲಿಂದ ರಾಜಧಾನಿಗೆ ಬಂದು ಇಲ್ಲಿಂದ ಸೀಗೂರುಘಟ್ಟದ ಮಾರ್ಗವಾಗಿ ಉದಕಮಂಡಲಕ್ಕೆ ದಯಮಾಡಿಸಿದರು.

ಬೆಂಗಳೂರ ಧರ್ಮರಾಯ ದೇವಸ್ಥಾನದ ಹಿಂಭಾಗದ ಒಂದು ಬಾವಿಯಲ್ಲಿ ೨೫ ವರ್ಷ ವಯಸ್ಸಿನ ದೇವಮ್ಮನೆಂಬುವಳ ಮೃತದೇಹವು ತೇಲುತ್ತಿದ್ದುದನ್ನು ಪೋಲೀಸರು ಹೊರಗೆ ತೆಗೆಸಿ ಆತ್ಮಹತ್ಯದಿಂದಾದ ಕೃತ್ಯವೆಂದು ನಿರ್ಧರಿಸಿದರು.

ಹೊಸದುರ್ಗ, ಮಾಗಡಿ, ದೊಡ್ಡಬಳ್ಳಾಪುರ, ಆನೇಕಲ್ ಮತ್ತೂ ನೆಲಮಂಗಲ ಇವುಗಳ ಮ್ಯುನಿಸಿಪಾಲಿಟಿಗಳಿಗೆ ಸೇರಿದ ಪ್ರದೇಶಗಳಲ್ಲಿ ಇನ್ನೂ ೨ ವರ್ಷಗಳ ಕಾಲದವರೆಗೆ ಸಿಡುಬನ್ನು ಬಲವಂತದಿಂದ ಹಾಕಲು ಸರ್ಕಾರದಪ್ಪಣೆಯಾಗಿದೆ.

ಓರಿಯಂಟಲ್ ಲೈಬ್ರೆರಿಯ ಪಂಡಿತರಾದ ವೇ|| ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು ಟವನ್ ಹಾಲಿನಲ್ಲಿ ಪ್ರೌಢಾವಿವಾಹವು ವೇದವಿಹಿತವಾದುದೆಂಬ ವಿಷಯದಲ್ಲಿ ಸಪ್ರಮಾಣವಾದ ಉಪನ್ಯಾಸವೊಂದನ್ನು ಕಳೆದ ಬುಧವಾರದ ದಿವಸ ಮಾಡಿದರು.

ಲೋಕಲ್ ಸರ್ವಿಸ್ ರೆಜಿಮೆಂಟಿನ ದಫೇದಾರ್ ಮ|| ವೆಂಕಟರಾವ್ ಬಾಬರ್‌ರವರನ್ನು ಶ್ರೀಮನ್ ಮಹಾರಾಜರವರು ಇಂಪೀರಿಯಲ್ ಸರ್ವಿಸ್ ಲ್ಯಾನ್ಸರ್ಸಿನಲ್ಲಿ ೫ನೆಯ ತರಗತಿಯ ಜಮಾದಾರ್ ಟ್ರೂಪ್‌ಕಮಾಂಡರ್ ಪದವಿಗೆ ಅಭಿವೃದ್ಧಿಗೊಳಿಸಿರುತ್ತಾರೆ.

ಕಾನಕಾನಹಳ್ಳಿ ತಾ|| ಕೋಡಿಹಳ್ಳಿ ಹೋಬಳಿ ಬನ್ನಿಮುಕೊಡ್ಲು ಎಂಬ ಗ್ರಾಮದಲ್ಲಿ ಕಳೆದ ತಾ|| ೧೩ರಲ್ಲಿ ಒಂದು ಮನೆಯ ಜಗತಿಯ ಮೇಲೆ ಗಿರಿಜೆ ಎಂಬುವಳ ಶರೀರವು ತಲೆಕತ್ತರಿಸಲ್ಪಟ್ಟು ಬಿದ್ದಿದ್ದಿತು. ಕಾನಕಾನಹಳ್ಳಿಯ ಪೋಲೀಸರು ಈ ಕೊಲೆಯನ್ನು ನಡೆಸಿದವರನ್ನು ಕಂಡುಹಿಡಿಯ ಯತ್ನಿಸಿರುವರು.

ಉತ್ತರಾದಿ ಮಠದ ಪಂಡಿತರಾದ ಕೃಷ್ಣಮಾಚಾರ್ಯರು ಟವನ್ ಹಾಲಿನಲ್ಲಿ ಪ್ರೌಢಾವಿವಾಹವು ವೇದವಿರುದ್ಧವೆಂದು ೪-೫ ಉಪನ್ಯಾಸಮಾಡಿದುದಕ್ಕಾಗಿ ಅದನ್ನನುಮೋದಿಸತಕ್ಕವರೆಲ್ಲರೂ ಅವರ ಪಾಂಡಿತ್ಯಕ್ಕೆ ಮೆಚ್ಚಿ ಒಂದು ಭಂಗಾರದ ಪದಕವನ್ನು ಬಹುಮಾನಿಸಲು ಚಂದಾಹಣವನ್ನು ಎತ್ತುತ್ತಿರುವುದಾಗಿ ತಿಳಿಯುತ್ತೇವೆ.

ದಿವಾನರು ನಿನ್ನೆಯ ದಿನ ಬೆಳಿಗ್ಗೆ ರಾಜಧಾನಿಗೆ ದಯಮಾಡಿಸಿ ಇಲ್ಲಿಯ ಪಬ್ಲಿಕ್ ಆಫೀಸ್ ಸಭಾಮಂದಿರದಲ್ಲಿ ಪ್ರಮುಖವರ್ತಕರುಗಳನ್ನು ಬರಮಾಡಿಕೊಂಡು ಮೈಸೂರು ಸೀಮೆಯ ವ್ಯಾಪಾರ ಮತ್ತೂ ಕೈಗಾರಿಕೆಯ ಅಭಿವೃದ್ಧಿ ಸಂಬಂಧವಾಗಿ ಚರ್ಚೆಯನ್ನು ನಡೆಸಿ ಅವರಭಿಪ್ರಾಯಗಳನ್ನು ತಿಳಿದುಕೊಳ್ಳಲೇರ್ಪಾಟಾಗಿದ್ದಿತು.

ಮೈಸೂರು ಸೀಮೆಯ ಚೀಫ್‌ಕೋರ್ಟು ಮೊದಲುಗೊಂಡು ಎಲ್ಲಾ ಸಿವಿಲ್ ಕೋರ್ಟುಗಳೂ ಬೇಸಗೆಯ ರಜದುದ್ದೇಶದಿಂದ ಕಳೆದ ಸೋಮವಾರದಾರಭ್ಯ ೬ ವಾರಗಳ ವರೆಗೆ ಮುಚ್ಚಲ್ಪಟ್ಟಿರುವುವು. ಈ ರಜದ ಕಾಲದಲ್ಲಿ ಚೀಫ್‌ಕೋರ್ಟಿನ ಕೆಲಸವನ್ನು ಮೊದಲು ೩ ವಾರದವರೆಗೆ ಚೀಫ್‌ಜಡ್ಜರೂ ಅನಂತರ ೩ ವಾರದವರೆಗೆ ಜಸ್ಟಿಸ್ ಚಂದ್ರಶೇಖರಯ್ಯರ್‌ರವರೂ ನೋಡಿಕೊಳ್ಳುವುದಾಗಿ ಗೊತ್ತಾಗಿರುವುದು.

ಜಿ ಆರ್. ಮೊಕಾಸಿ ಎಂಬುವರು ಈಗ್ಗೆ ೧ ತಿಂಗಳ ಕೆಳಗೆ ಸಾಧ್ವೀ ಪತ್ರಿಕೆಗೆ ಒಂದು ಲೇಖನವನ್ನು ಬರೆದು, ಅದರಲ್ಲಿ-ಭಾಗವತದ ಕಥೆಯು ಅಸಂಭವನೀಯವಾದ ಅನೇಕ ವಿಷಯಗಳಿಂದ ಕೂಡಿರುವಕಾರಣ, ಅದು ಕಲ್ಪಿತಕಾದಂಬರಿಯಲ್ಲದೆ ವಾಸ್ತವವಾದ ಇತಿಹಾಸವಲ್ಲ; ಶ್ರೀಕೃಷ್ಣನಿದ್ದುದೇ ಸುಳ್ಳು; ಎಂದು ಮೊದಲಾಗಿ ಬರೆದು, ಇದನ್ನು ಸಪ್ರಮಾಣವಾಗಿ ಖಂಡಿಸಿ ಭಾಗವತದ ಶ್ರೀಕೃಷ್ಣಜನ್ಮಚರಿತ್ರವನ್ನು ಯಥಾರ್ಥವಾದುದೆಂದು ಶ್ರೀ ಉತ್ತರಾದಿಮಠದ ಸ್ವಾಮಿಗಳು ಸ್ಥಾಪಿಸುವುದಾದರೆ ನಾನು ಅನ್ನವಸ್ತ್ರಗಳನ್ನು ಕೇಳದೆ ಯಾವಜ್ಜೀವ ಅವರ ಶಿಷ್ಯನಾಗಿ ಸೇವೆಯನ್ನು ಮಾಡಿಕೊಂಡಿರುವೆನೆಂದೂ, ಇದುವರೆಗೂ ಈ ವಿಷಯವಾಗಿ ಅನೇಕ ವಿದ್ವಜ್ಜನರಲ್ಲಿ ತಾವು ಈ ವಿಷಯವನ್ನು ಕುರಿತು ಪ್ರಶ್ನೆಮಾಡಿದಾಗ ಯಾರಿಂದಲೂ ಸಮಾಧಾನವು ಹೇಳಲ್ಪಡಲಿಲ್ಲವೆಂದೂ ಬರೆದಿದ್ದರು. ಈಚೆಗೆ ಒಂದು ತಿಂಗಳಾದರೂ ಆ ಸ್ವಾಮಿಗಳಾಗಲೀ ಅವರ ಶಿಷ್ಯಕೋಟಿಯ ಪಂಡಿತರೇ ಆಗಲೀ ಯಾರೂ ಈ ವಿಷಯದಲ್ಲಿ ಉತ್ತರವನ್ನು ಕೊಡಲಾರದೆಹೋಗಿರುವುದರಿಂದ, ತಾವು ಬರೆದಿರುವ ಸಂಗತಿಯೇ ನಿಜವಾದುದೆಂದೂ ಶ್ರೀಕೃಷ್ಣ ಪ್ರತಿಮಾಪೂಜನಾದಿಗಳು ವ್ಯರ್ಥವಾದುದೆಂದೂ, ಶ್ರೀಕೃಷ್ಣನವಿಷಯವಾಗಿ ಸ್ವಾಮಿಗಳು ಬೋಧಿಸುವ ಧರ್ಮಗಳು ಸುಳ್ಳೆಂದೂ ಮತ್ತೊಂದು ಲೇಖನವನ್ನು ಬರೆದಿದ್ದಾರೆ. ಶ್ರೀಕೃಷ್ಣಭಕ್ತರಾರೂ ಈ ಕೋಲಾಹಲವನ್ನು ಅಡಗಿಸಲಾರರೆ?

ಅಮಲ್ದಾರರುಗಳಾದ ಮೆಸರ್ಸ್. ಸಯ್ಯದ್ ಯಾಕೂಬ್‌ರವರು ಒಂದನೇತರಗತಿಯ ಆಕ್ಟಿಂಗಿನಿಂದ ಒಂದನೇ ತರಗತಿ ಸಬ್‌ಪ್ರೋಟೆಂಗೂ, ವಿ. ಎಸ್. ರಾಜಗೋಪಾಲಾಚಾರ್ಯರು, ಕೆ. ಹನುಮಂತರಾಯರು, ಜಿ. ಎಂ. ಮೆಕ್ಕೆಯವರು, ಜಿ. ನಾರಾಯಣರಾಯರು, ಷೇಕ್-ಅಬ್ದುಲ್ಲಾರವರು, ೨ನೇ ತರಗತಿಯ ಆಕ್ಟಿಂಗಿನಿಂದ ೨ ನೇ ತರಗತಿಯ ಸಬ್‌ಪ್ರೋಟೆಂಗೂ, ಸಿ. ಆರ್. ನಾರಾಯಣಸ್ವಾಮಿಮೊದಲಿಯಾರ್‌ರವರು, ಕೆ. ಕೇಶವಾಚಾರ್ಯರು ೩ನೇ ತರಗತಿಯಿಂದ ೨ ನೇ ತರಗತಿಯ ಆಕ್ಟಿಂಗಿಗೂ, ಲಿಂಗೋಪಂತ್ ಬಾದಾಮಿಯವರೂ, ಎ. ಅಬ್ದುಲ್-ಖಾದರ್‌ರವರೂ, ಟಿ. ಹನುಮಂತರಾಯರೂ, ಎಸ್. ಧರ್ಮರಾಯರೂ, ಬಿ. ಕೃಷ್ಣರಾಯರೂ, ಜಿ. ಮುರುಡಯ್ಯನವರೂ, ಎಚ್. ಬಸವರಾಜೇ ಅರಸಿನವರೂ, ಎಂ. ಎಸ್. ಹಯಗ್ರೀವರಾಯರೂ, ೩ ನೇ ತರಗತಿಯ ಆಕ್ಟಿಂಗಿನಿಂದ ೩ ನೇ ತರಗತಿಯ ಸಬ್‌ಪ್ರೋಟೆಂಗೂ, ಮಹಮದ್ ಸಯ್ಯದ್ ಷರೀಫ್‌ರವರೂ, ಸಿ. ಸೂರ್ಯನಾರಾಯಣಶಾಸ್ತ್ರಿಗಳೂ, ಬಿ. ಟಿ. ಸೀತಾರಾಮಯ್ಯನವರೂ ೪ನೇ ತರಗತಿಯಿಂದ ೩ ನೇ ತರಗತಿಯ ಸಬ್‌ಪ್ರೋಟೆಂಗೂ, ಕೆ. ನಾರಣಯ್ಯರ್‌ರವರೂ, ವಿ. ಎಸ್. ವಾಸುದೇವರಾಯರೂ, ಎಂ. ರಾಮರಾಯರೂ, ಸಿ. ಬಿ. ಲಕ್ಷ್ಮಣರಾಯರೂ, ಸಿ. ಎಸ್. ರಾಮಸ್ವಾಮಯ್ಯಂಗಾರ್ಯರವರೂ, ಎ. ರಾಜಾರಾಮರಾಯರವರೂ, ಎಸ್. ಮೊಹದೀನ್ ಷರೀಫ್ ರವರೂ, ಎಚ್. ವೆಂಕಟನರಸಯ್ಯನವರೂ, ೪ನೇ ತರಗತಿಯಿಂದ ೩ನೇ ತರಗತಿಯ ಆಕ್ಟಿಂಗಿಗೂ, ಬಿ. ಮೊಹದೀನ್ ಷರೀಫ್‌ರವರೂ, ಹೈದರಲ್ಲಿಖಾನ್‌ರವರೂ, ಅಬ್ದುಲ್-ಹಕ್‌ರವರೂ, ಅಬ್ದುಲ್-ಅಜೀಜ್‌ಖಾನ್‌ರವರೂ, ಟಿ. ವಿ. ಎ. ಈಶ್ವರನ್‌ರವರೂ, ಮಲ್ಲಿಕಾರ್ಜುನಯ್ಯನವರೂ, ಪಿ. ಎಸ್. ಪೂರ್ಣಯ್ಯನವರೂ, ಕೆ. ಕೇಶವಯ್ಯನವರೂ, ಎಂ. ಎನ್. ಶ್ರೀನಿವಾಸಯ್ಯಂಗಾರ್ಯರವರೂ, ಟಿ. ಕೆ. ಸೋಮೇಶ್ವರಯ್ಯನವರೂ, ಎನ್. ಸುಬ್ಬರಾಯರೂ, ಜಿ. ಶಾಂತವೀರಪ್ಪನವರೂ ೪ನೇ ಕ್ಲಾಸ್ ಆಕ್ಟಿಂಗಿನಿಂದ ೪ ನೇ ಕ್ಲಾಸ್ ಸಬ್‌ಪ್ರೋಟೆಂಗೂ ಬಡತಿಮಾಡಲ್ಪಟ್ಟಿರುವರು.

ಯುದ್ಧಸಂಬಂಧದ ಕಾರ್ಯವನ್ನು ಮಾಡುವುದಕ್ಕೆ ಸೇನೆಯಲ್ಲಿ ೩ ಸಾವಿರ ಮಂದಿ ಆಂಗ್ಲಸ್ತ್ರೀಯರು ಸೇರಿರುವರು.

ಕಳೆದ ತಾ|| ೧೨ ರಲ್ಲಿ ಹರಿದ್ವಾರದಲ್ಲಿ ನಡೆದ ಕುಂಭಮೇಳಕ್ಕೆ ಬಹುಜನ ಯಾತ್ರಾರ್ಥಿಗಳು ಬಂದಿದ್ದರು. ಈ ಜನಸಮ್ಮರ್ದದಲ್ಲಿ ೪೦ ಜನರು ಸಿಕ್ಕಿ ಹತರಾದರೆಂದು ಪಿಶಾವರಿನ ರಾಯಬಹದ್ದೂರ್ ಷರಬಿಮಾಲ್ ಎಂಬುವರು ತಿಳಿಸಿರುತ್ತಾರೆ.

ಯೂರೋಪ್ ಖಂಡದಲ್ಲಿ ಆಯಾ ದೇಶೀಯರು ಅವರವರ ರಾಜರ ಅಭ್ಯುದಯವನ್ನು ಕೋರುವುದಕ್ಕಾಗಿ ನೆರೆಯಿಸಿದ ಸಭೆಯಲ್ಲಿ ಶ್ರೇಯಃಪ್ರಾರ್ಥನೆಯನ್ನು ಮಾಡಿ ಒಂದೊಂದು ಪಂಚಪಾತ್ರೆಯ ಮದ್ಯವನ್ನು ಸೇವಿಸುವವಾಡಿಕೆಯುಂಟು. ಈಗಿನ ಯುದ್ಧವು ಮುಗಿಯುವ ವರೆಗೂ ಅಂಥ ಸಂದರ್ಭದಲ್ಲಿ ಮದ್ಯಕ್ಕೆ ಪ್ರತಿಯಾಗಿ ನೀರನ್ನು ಕುಡಿಯಬೇಕೆಂದು ನಮ್ಮ ಜಾರ್ಜ್ ಸಾರ್ವಭೌಮರವರು ಅಪ್ಪಣೆಮಾಡಿದ್ದಾರೆ.

ಪತ್ರವ್ಯವಹಾರ.

ಅಯ್ಯಾ ಪತ್ರಕರ್ತರೆ!

ಬೆಂಗಳೂರ ಊದಬತ್ತಿಷಾಪ್ ಮ॥ ರಾ॥ ಎಸ್. ಕಳ್ಳಪ್ಪನವರ ಮನೆಯಲ್ಲಿ ಕಳೆದ ತಾ॥ ೬ ರಲ್ಲಿ ನಡೆದ ಇವರ ಮಗನ ಶಿವದೀಕ್ಷಾಮಹೋತ್ಸವ ಸಂಬಂಧವಾಗಿ ಒಂದು ಲೇಖನವು ಈ ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಿತವಾಗಿರುವುದಷ್ಟೆ. ಅದರಲ್ಲಿ ಕೆಲ ಮುಖ್ಯಾಂಶವನ್ನು ಲೇಖಕರು ಬಿಟ್ಟಿರುವುದರಿಂದ ಅದನ್ನು ಸಂಕ್ಷೇಪವಾಗಿ ತಿಳಿಸಲು ಅವಕಾಶಕೊಡಬೇಕಾಗಿ ಪ್ರಾರ್ಥನೆ.—ಈ ಮಹೋತ್ಸವಕ್ಕೆ ಚೆನ್ನಪಟ್ಟಣದ ಶ್ರೀ ವಿರಕ್ತಮಠದ ಶಿವರುದ್ರಮಹಾಸ್ವಾಮಿಗಳು, ಕೆಳದಿ ಸಂಸ್ಥಾನ ಮಠದ ಪಟ್ಟಾಧ್ಯಕ್ಷರು, ಶಿವಯೋಗಮಂದಿರದಿಂದ ಶಿವಯೋಗಿ ಬಿದರೆಶ್ರೀ ಪಟ್ಟಾಧ್ಯಕ್ಷರು, ಪಂಡಿತ ಸೋಮನಾಥಶಾಸ್ತ್ರಿಗಳು, ಪಂಡಿತ ಶಂಕರಶಾಸ್ತ್ರಿಗಳು ಸಹ ದಯಮಾಡಿದ್ದರು. ಮ॥ ರಾ॥ ಕಳ್ಳಪ್ಪನವರು ವಿಧ್ಯುಕ್ತವಾಗಿ ದೀಕ್ಷಾಕರ್ಮವನ್ನು ನಡೆಸಿ ೪ ೫ ದಿನಗಳವರೆಗೆ ಸುಖಭೋಜನದಿಂದ ಗಣತೃಪ್ತಿಯನ್ನು ಮಾಡಿಸಿದುದಲ್ಲದೆ, ರಾ॥ ಬ॥ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಸತ್ರದ, ಮ॥ ಗೌಡರ ವೀರಭದ್ರಪ್ಪನವರ ಸಂಸ್ಕೃತ ಪಾಠಶಾಲೆಯ ಮತ್ತು ವೀರಶೈವಾಶ್ರಮದ ವಿದ್ಯಾರ್ಥಿಗಳೆಲ್ಲರಿಗೂ ೨ ದಿವಸ ಭೋಜನಮಾಡಿಸಿದರು. ಇತರ ವಿಷಯಗಳೆಲ್ಲವೂ ಹಿಂದಣ ಸಂಚಿಕೆಯಲ್ಲಿ ತಿಳಿಸಲ್ಪಟ್ಟಿದೆ. ಮ॥ ಕಳ್ಳಪ್ಪನವರು ದುಂದು ವೆಚ್ಚ ಮತ್ತು ಆಡಂಬರಗಳಿಗವಕಾಶಕೊಡದೆ ಉದಾರಬುದ್ಧಿಯಿಂದ ಗಣತೃಪ್ತಿ, ವಿದ್ಯಾಪ್ರೋತ್ಸಾಹ ಅಂದರೆ ವಿದ್ವತ್ಸಭೆಗಳಿಗೂ, ವಿದ್ವಾಂಸರುಗಳಿಗೂ ತಕ್ಕ ಸಂಭಾವನೆ ವಿದ್ಯಾರ್ಥಿಗಳ ಸತ್ಕಾರಗಳನ್ನು ನಡೆಸಿದುದು ಸ್ತೋತ್ರಾರ್ಹವಾಗಿದೆ.

ಗುಣಗ್ರಾಹಿ.

ಬಸವಜಯಂತಿ.

ಈಗ ೨ ವರ್ಷಗಳಿಂದ ಬಸವಜಯಂತಿಯು ಕಾಲವು ನಿರ್ಧರಿಸಲ್ಪಟ್ಟ ಪ್ರಕಾರ ಎಲ್ಲಕಡೆಯ ವೀರಶೈವರಿಂದ ಆ ಬಗ್ಗೆ ಉತ್ಸವ, ಪುಸ್ತಕಪ್ರಯೋಜನ, ಪುರಾಣ, ಪುಣ್ಯಕಥೆ, ಸಭಾ ಮೊದಲಾದ ಸಮಾರಂಭವು ಮಾಡಲ್ಪಟ್ಟಿದ್ದು ಸ್ಟಾರ ಪತ್ರದ್ವಾರಾ ಸರ್ವರಿಗೂ ವಿದಿತವಾಗಿರುವುದಷ್ಟೆ? ಆ ಪ್ರಕಾರ ಈ ವರ್ಷವಾದರೂ ಎಲ್ಲಕಡೆಗೂ ಬಸವಜಯಂತಿಯ ದಿವಸವನ್ನು ಹಬ್ಬದಂತೆ ಪರಿಭಾವಿಸಿ ಹೆಚ್ಚಿಗೆ ಮಂಗಲೋತ್ಸವಗಳಿಂದ ಅಲಂಕರಿಸಬೇಕಾಗಿ ಸಮಸ್ತ ವೀರಶೈವರನ್ನು ಬೇಡಿಕೊಳ್ಳುತ್ತೇನೆ. ಆ ದಿವಸ ಗಳೆ ಮೊದಲಾದ ಹೊಲದ ಕೆಲಸಕ್ಕೂ, ಚಕ್ಕಡಿಗಳಿಗೂ ಎತ್ತುಗಳನ್ನು ಹೂಡದೆ ಅದೊಂದುದಿವಸ ಅವುಗಳಿಗೆ ವಿಶ್ರಾಂತಿ ಕೊಡಬೇಕಾಗಿ ನಮ್ಮ ಆಗ್ರಹದ ಸೂಚನೆಯಿದೆ. ಹೋದವರ್ಷ ಇತ್ತಕಡೆಯ ಬಸಾಪುರ, ಕಿತ್ತೂರ ಮೊದಲಾದ ಕೆಲವು ಸ್ಥಳಗಳಲ್ಲಿ ಈ ನಡವಳಿಕೆಯು ರೂಢಿಯಲ್ಲಿ ತರಲ್ಪಟ್ಟಿದೆ. ಒಕ್ಕಲತನದವರು ಸೋಮವಾರ ದಿವಸಗಳೆ ಹೂಡುವುದನ್ನು ಬಿಡುತ್ತಿರುವ ಪರಿಪಾಠವು ಬಹುಶಃ ಎಲ್ಲಕಡೆಗೂ ಉಂಟು. ಆ ಪ್ರಕಾರ ಶ್ರೀ ಬಸವಜಯಂತಿಯ ದಿವಸವಾದರೂ ಎತ್ತುಗಳಿಗೆ ವಿಶ್ರಾಂತಿ ಕೊಡತಕ್ಕದ್ದು ನಿಹಿತವಾಗಿದೆ. ಈ ವರ್ಷ ಅಧಿಕವೈಶಾಖವು ಬಂದಿರುವುದರಿಂದ ಈ ತಿಂಗಳಲ್ಲಿ ಬಸವಜಯಂತಿಯನ್ನು ಮಾಡದೆ ನಿಜವೈಶಾಖದಲ್ಲಿ ಮಾಡತಕ್ಕದ್ದು ಯೋಗ್ಯವು. ಆದರೆ ನಿಜವೈಶಾಖದ ಶುದ್ಧ ತೃತೀಯೆಯು ಸೋಮವಾರ ವಿದ್ದು ರೋಹಿಣೀನಕ್ಷತ್ರವು ರವಿವಾರವಿರುವುದರಿಂದ ಸದರೀ ಬಸವಜಯಂತಿಯನ್ನು ಸೋಮವಾರ ಮಾಡಬೇಕೋ ಅಥವಾ ರವಿವಾರ ಮಾಡಬೇಕೋ ಏನೆಂಬ ನಿರ್ಧಾರವನ್ನು ಬಲ್ಲವರು ನಿರ್ಧರಿಸಿ ಸ್ಟಾರ ಪತ್ರದ್ವಾರಾ ತೀವ್ರ ಪ್ರಕಟಗೊಳಿಸುವರೆಂದು ಪೂರ್ಣ ನಂಬಿರುವೆವು.

ಮಹಾಂತಪ್ಪ, ದುಂಡಪ್ಪ, ಸಂಗೋಜಿ,
ಪೋಷ್ಟ-ಕಿತ್ತೂರ, ಜಿಲ್ಲಾ-ಬೆಳಗಾವ.

ಶ್ರೀಮದ್ರಂಭಾಪುರೀ ವೀರಸಿಂಹಾಸನದ ಸಮಸ್ತಬಿರುದಾನ್ವಿತ ಶ್ರೀಮಜ್ಜಗದ್ಗುರು ಪಂಚಾಕ್ಷರೀರಾಜದೇಶಿಕೇಂದ್ರ ಮಹಾಸ್ವಾಮಿಗಳವರಸನ್ನಿಧಾನದಿಂದ

ಶಿವಾಯಿ ಬಾಬು ನಂಬರು ೩೩.

ಶಕೆ ೧೮೩೭ ನೆಯ ರಾಕ್ಷಸಸಂ॥ ರದ ಚೈತ್ರ ಬಹುಳ ೮ ಮಿತಿಯಲ್ಲು ಮೈಸೂರುಸೀಮೆ ಸಮಸ್ತ ತಾಲ್ಲೂಕುಗಳಲ್ಲಿರತಕ್ಕ ಪಟ್ಟ, ಚರಂತರು, ಮಠಸ್ಥರು, ಪ್ಯಾಟಿಮನೆ ಶೆಟ್ಟಿ, ಯಜಮಾನರು, ಹರದೇಗ್ರಾಮಗಳ ಗೌಡರ, ಬುದ್ಧಿವಂತರು ಇನ್ನು ಮುಂತಾದ ವೀರಶೈವ ಭಕ್ತಮಾಹೇಶ್ವರರಿಗೆ ಬರೆಸಿದಾಶೀರ್ವಾದ:—ಈ ಮೊದಲು ತಾ॥ ...... ರಲ್ಲಿ ಸಾದರಾಗಿರುವ ಶಿವಾಯಿಬಾಬು ನಂಬರು ...... ನೆ ನಿರೂಪದ ಪ್ರಕಾರ ಬೆಂಗಳೂರಲ್ಲಿ ಸ್ಥಾಪಿತವಾಗಿರುವ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ತಮ್ಮತಮ್ಮ ಗೃಹಗಳಲ್ಲಿ ನಡೆಯುವ ಶುಭಶೋಭನಾದಿ ಕಾರ್ಯಗಳಲ್ಲಿ ಸ್ವಶಕ್ತ್ಯನುಸಾರ ದ್ರವ್ಯವನ್ನ ತೆಗೆಸಿ ಫಂಡ್ ಸೆಕ್ರೆಟರಿಗಳ ವಶಕ್ಕೆ ಕಳುಹಿಸುವಂತೆ ಸಾದರಾಗಿರುವ ನಿರೂಪದಪ್ರಕಾರ ಈಗಲೂ ಪ್ರತಿಗ್ರಾಮದಲ್ಲಿಯೂ ಲಗ್ನ ಮೊದಲಾದ ಕಾರ್ಯಗಳಲ್ಲಿ ಫಂಡಿಗೆ ದ್ರವ್ಯವನ್ನ ತೆಗೆದು ಮೊಲ್ಕಂಡ ಮೇರೆ ಖಂಡಿತವಾಗಿಯೂ ರವಾನಿಸುತ್ತಾ ಬರುವದು. ಅಲ್ಲದೆ ಕೈ. ಯಜಮಾನ ವೀರಸಂಗಪ್ಪನವರ ಅಗ್ರತಾಂಬೂಲವನ್ನು ಮೇಲ್ಕಂಡ ಕಾರ್ಯಗಳಲ್ಲಿ ತೆಗೆದು ಅವರ ಸಂತತಿಯವರಾದ ಮೈ. ವಿರೂಪಾಕ್ಷಪ್ಪನವರಲ್ಲಿಗೆ ರವಾನಿಸುತ್ತಾ ಬರುವದು. ಮೇಲ್ಕಂಡಮೇರೆ ನಡೆಯದೆ ತಪ್ಪಿದಲ್ಲಿ ಈ ವಿಚಾರದಲ್ಲಿ ತಾಲ್ಲೂಕು ಇಲಾಖಾದಾರರು ಕ್ರಮವರಿತು ರಿಕಾರ್ಡುಮಾಡಿ ರವಾನಿಸುತ್ತಾ ಬರುವದರಲ್ಲಿ ಗಮನಕೊಡಲುದೀತಾಗಿ ಬಾಹುಲ್ಯವಾಗಿ ಅಪ್ಪಣೆಕೊಡಿರುವುದಾವುದಿದ್ದೀತು? ಬತಾರೀಖು ೩ನೆ ಮಾಹೆ ಏಪ್ರಿಲ್ ಸನ ೧೯೧೫ನೆ ಇಸವಿ ಮೊಕ್ಕಾಂ ದರ್ಜಾಗ ಸಂಸ್ಥಾನ ಬಾಳೇಹೊನ್ನೂರು.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್‌ಸಭೆಗೆ ತಾ॥ ೧೯-೨-೧೫ ರಿಂದ ತಾ॥ ೧೦-೪-೧೫ ರ ವರಿಗೆ ಜಮಾಬಂದ ತಪ್ಸೀಲ್.

೧. ಮ॥ ರಾ॥ ಗಳಾದ ಅರಸಿಕೆರೆ ತಾ॥ ಹಲ್ಕೂರು ಸಾಹುಕಾರ್ ಮರುಳಸಿದ್ಧಪ್ಪನವರಿಂದ ನಾಗರಪ್ರತಿಷ್ಠಾ ಮಾಡಿಸಿದ ಕಾಲದಲ್ಲಿ ತೆಗೆದುದು ೫-೦-೦, ೨. ದೊಡ್ಡಬಳ್ಳಾಪುರದ ಹೆಚ್. ಜಿ ರುದ್ರಪ್ಪನವರ ಮೂಲಕ ದೊಡ್ಡಬಳ್ಳಾಪುರದ ಹೊಸಅಂಗಡಿ ರುದ್ರಪ್ಪನವರ ಮಕ್ಕಳ ಲಗ್ನದಲ್ಲಿ ವಧೂವರರಕಡೆಯಿಂದ ತೆಗೆದುದು ೩-೦-೦, ೩. ಬೆಂಗಳೂರು ದೊಡ್ಡಪೇಟೆ ಊದಬತ್ತಿಷಾಪ್ ಕಳ್ಳಪ್ಪನವರಿಂದ ಇವರ ಪುತ್ರನ ಶಿವದೀಕ್ಷಾಮಹೋತ್ಸವ ಕಾಲದಲ್ಲಿ ಶಿವಾಷ್ಟೋತ್ತರಶತ ನಾಮಾವಳಿ ಪೂರ್ವಕ ಶ್ರೀಮದ್ವೀರಶೈವ ಮಹಾಸಭಾ ಕಾಲದಲ್ಲಿ ವಾಗ್ದಾನಮಾಡಿದ್ದ ಬಾಬತು ಬಾಕಿಯಿದ್ದ ೧೦೦ ರೂ ಈ ಮಹೋತ್ಸವದ ಜ್ಞಾಪಕಾರ್ಥವಾಗಿ ೮ ರೂ. ಜುಮ್ಲಾ ೧೦೮ ರೂ. ಯನ್ನು ತೆಗೆದ ಬಾಬತು ಜಮ ೧೦೮-೦-೦, ೪. ಗುಂಡ್ಲುಪೇಟೆ ತಾ॥ ಅಮಲ್ದಾರ್ ಜಿ ಮಲ್ಲಿಕಾರ್ಜುನಯ್ಯ ಬಿ. ಎ. ಯವರಿಂದ ಇವರ ಪುತ್ರನ ಚೌಲಪ್ರುಕ್ತದಕಾಲದಲ್ಲಿ ತೆಗೆದುದು ೨-೦-೦, ೫. ಬೆಂಗಳೂರು ಅರಳೆಪೇಟೆ ದೇಶದ ಶೆಟ್ಟರು ವೀರಭದ್ರಶೆಟ್ಟರು, ದೇಶದ ಯಜಮಾನ ಬಸಪ್ಪನವರು ಇವರ ಮೂಲಕ ಬೆಂಗಳೂರು ಲಿಂಗದಗುಡಿ ಮಠದ ನಂಜಯ್ಯಶಾಸ್ತ್ರಿಗಳ ಪುತ್ರಿಯ ಲಗ್ನದಲ್ಲಿ ವರನಕಡೆಯಿಂದ ೫ ರೂ, ವಧುವಿನಕಡೆಯಿಂದ ೨ ರೂ, ಮತ್ತು ದೊಡ್ಡಬಳ್ಳಾಪುರದ ಗಣಾಂಕೆರೆಮಠದ ಮಲ್ಲಿಕಾರ್ಜುನಯ್ಯನವರ ಲಗ್ನದಲ್ಲಿ ತೆಗೆದಬಾಬತು ೨ ರೂ, ಜುಮ್ಲಾ ೯-೦-೦, ೬. ಬೆಂಗಳೂರು ಅರಳೆಪೇಟೆ ದೇಶದ ಯಜಮಾನ ಬಸಪ್ಪನವರಿಂದ ಇವರ ಪುತ್ರನ ಶಿವದೀಕ್ಷಾಮಹೋತ್ಸವದಲ್ಲಿ ತೆಗೆದ ಬಾಬತು ಜಮ ೨-೦-೦, ಜುಮ್ಲಾ ೧೨೯ ೦-೦ ರೂಪಾಯಿ.

ಜಿ. ಕೆ. ರುದ್ರಾರ್ಯ, ಆಕ್ಟಿಂಗ್‌ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ
ಫಂಡ್‌ಸಭೆ, ಬೆಂಗಳೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿ ಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೦—೦ ರೂ. ಕೊಡಬೇಕಾಗುವುದು. ಕೆಂಪು, ಹಸುರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರದ ಬಣ್ಣದಿಂದ ಬಿಳಿ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೧—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೦—೦; ಹಳದೀ ಗ್ಲೇಜ್‌ಕಾಗದದಮೇಲೆ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦-೬-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್, ಸ್ಟಾರ್‌ಪ್ರೆಸ್, ಮೈಸೂರ್.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು

80

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕಡಗಳ ಪಟಗಳೂ ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ನೋಡಲಾದ ಸುಂದರವಾದ ಪಟಗಳು. ಕ್ರಯ ೨ ಆಣೆ; ವಿ. ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ:—ದಿ ಜನರಲ್ ಏಜೆನ್ಸಿ. ಮೈಸೂರು.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

16

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪುದ್ರೇಕವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರ, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳು ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾತರದ ಬಕ್ಕಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ

ಬಿಸಿಲುಕಾಲಕ್ಕೆ 27

ಎಲ್ಲರಿಗೂಬೇಕು

ಅಮೃತಾಮಲಕತೈಲ:—ವಿಧವಿಧವಾದ ತಲೆನೋವು, ಶರೀರವು ಬೆಂಕಿಯಂತಿರುವುದು, ತಲೆತಿರಗು, ಕಣ್ಣುರಿ, ಕಣ್ಣು ಕೆಂಪು, ಕಣ್ಣು ಮಂಜು, ಕಣ್ಣಿನಲ್ಲಿ ನೀರು ಸುರಿಯುವುದು, ರಾತ್ರಿ ನಿದ್ರೆಬಾರದಿರುವುದು ಇವುಗಳನ್ನು ೧-೨ ಅಭ್ಯಂಗನದಿಂದಲೇ ಗುಣಮಾಡಿ ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ. ಬಿಸಿಲುಕಾಲಕ್ಕೆ ಇದು ಅಮೃತಮೇಸರಿ. ಎಂಟು ಅಭ್ಯಂಗನಕ್ಕೆ ಆಗುವ ತೈಲ ೦-೮-೦. ೧ ದರ್ಜ ೫-೦-೦.

ಆಮೋದಿನಿ:—ಅಮೋಘವಾದ ಸುವಾಸನೆಯಿಂದ ಕೂಡಿದ ಈ ಮಾತ್ರೆಗಳು ತಾಂಬೂಲವನ್ನು ರಂಜಿಸಿ ಬಾಯಾರಿಕೆಯನ್ನು ತಕ್ಷಣ ನಿಲ್ಲಿಸಿ ಆಯಾಸವನ್ನು ಪರಿಹರಿಸಿ ಕಂಠನಾಳವನ್ನು ಸರಿಪಡಿಸಿ ಕೆಮ್ಮು, ದಮ್ಮು, ಉಬ್ಬಸ, ಮೇ[illegible]ಧಗಳನ್ನು ಗುಣಮಾಡಿ ಆರೋಗ್ಯವನ್ನು ಕಾಪಾಡುವದರಲ್ಲಿ ಶ್ರೇಷ್ಠವಾದುದು. ಸಂಗೀತಗಾರರಿಗೂ, ವಿದ್ಯಾರ್ಥಿಗಳಿಗೂ, ಪ್ರಯಾಣಿಕರಿಗೂ ಅಮೂಲ್ಯವಾದುದು. ೧೫೦ ಮಾತ್ರೆ ೦—೪—೦. ೫ ಕ್ಕೆ ಒಂದು ಹೆಚ್ಚು.

ಖಂಡಾಮಲಕರಸಾಯನ:—ತಲೆತಿರಗು, ಕಣ್ಣುಕಗ್ಗತ್ತಲೆ, ಹಸಿವೇ ಇಲ್ಲದಿರುವುದು, ಆಹಾರದಲ್ಲಿ ಅರುಚಿ, ವಾಕರಿಕೆ, ವಾಂತಿ, ಹುಳಿ, ಖಾರ, ಅಥವಾ ಸಿಹಿಯಾದ ತೇಗು, ಹೊಟ್ಟೆಯುಬ್ಬರ, ಹೊಟ್ಟೆನೋವು, ಕಣ್ಣು ಅಥವಾ ಮೈ ಹಳದೀಬಣ್ಣ, ನಿಶ್ಶಕ್ತಿ, ಹಳೇಜ್ವರ, ಎದೆಬಡಿಯುವಿಕೆ, ಪಾಂಡು, ಕಾಮಾಲೆ, ಮೂರ್ಛೆ ಇವುಗಳಪೈಕಿ ಯಾವುದಿದ್ದರೂ ಖಾತರಿ ಗುಣವಾಗಿ ದಿನಕ್ಕೊಂದುವೇಳೆ ಸಲೀಸಾಗಿ ಕಾಲಪ್ರವರ್ತಿಯಾಗುತ್ತದೆ. ೧೫ ದಿನಕ್ಕೆ ಆಗುವ ಔಷಧ, ಬೆಲೆ ೦-೧೨-೦. ೧ ದರ್ಜ ಡಬ್ಬಿಗಳಿಗೆ ೭-೮-೦.

ಪ್ರತಿಔಷಧಕ್ಕೂ ಟಪಾಲ್ ಮತ್ತು ಪ್ಯಾಕಿಂಗ್ ಖರ್ಚು ಪ್ರತ್ಯೇಕ.

ವಿಳಾಸ:—ಬಿ. ವಿ. ಪಂಡಿತ್, ಸದ್ವೈದ್ಯಶಾಲಾ,
ನಂಜನಗೂಡು, ಮೈಸೂರು ಪಿ.

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಹಾಪುರದಲ್ಲಿ ವ್ಯಾಸನತೋಳು ಸಹಿತ ಆದ ಸಮಾರಂಭ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲುಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ. ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ.

ಶ್ರೀ ವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೋ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಅನಂದಸ್ವಾಮಿಯ ಫೋಟೋ ಬಣ್ಣದ್ದು ಮತ್ತೂ ಸಾದಾ. ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೋ ಸಿಕ್ಕುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.



ಹೊಸಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರ್ಪಣಿಗೆ ಹಚ್ಚುವ ಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಈ ಪ್ರಕಾರ ೨ ಫೋಟೋ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ॥, ।।।=, ೧, ೧।, ಪ್ರಕಾರ, ಮತ್ತೂ ಬೆಳ್ಳಿಯದು ರು ೧॥ ರೋಲ್ಡ್ ಗೋಲ್ಡ್ ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨।।। ರೂ.

ಊರೂರಿಗೆ ಏಜಂಟರು ಬೇಕಾಗಿರುತ್ತಾರೆ. ಅರ್ಧಾಣೆ ಟಿಕೇಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ.

ನಮ್ಮ ವಿಳಾಸ:—ಗಂಗಪ್ಪಾ ಜೇರಿಗೆ,
48 ಆರ್ಟಿಸ್ಟ ಸೊಲಾಪುರ.

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪರ್ಟಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್‌ಸನ್ಸ್ 49
ಸುಗಂಧಕಾರಿ, ಮೈಸೂರು.

ಹೊಸ ಪುಸ್ತಕಗಳು.

ಸಿದ್ಧಾಂತಶಿಖಾಮಣಿ— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೩೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತೆಗಳು ಷಟ್ಸ್ಥಲ-ಶರಣಸಗೆ-ಪಂಚೀಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಪುರಸ್ಸರದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು ಸವ್ಯಾಖ್ಯಾನ.

ಪಂಚಶ್ಲೋಕೀ—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ-೧-೩-೦; ಸಟೀಕ ತತ್ತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗ ಕಂದಂ ೧ ಆಣೆ.

ಎಂ. ಆರ್. ಕರಿಬಸವಶಾಸ್ತ್ರಿ,
180 ಗ್ರಂಥಪ್ರಕಾರಕಮಂಡಲಿ, ಮೈಸೂರು.

ದಿನಗಳು ಸಮಾಪಿಸಿದವು ಅತ್ಯಾಶ್ಚರ್ಯಕರವಾದ ಬಹುಮಾನ
ಔಷಧ ಪ್ರಸಿದ್ಧಿಹೊಂದಿದೆ. 2
೨೫ ಸಾವಿರ ರೂಪಾಯಿಗಳು ಹಂಚಲ್ಪಡುವುವು.
ಬಳ್ಳಾರಿ.
ಅನೇಕ ಸರ್ಟಿಫಿಕೇಟುಗಳು ಬಂದಿವೆ
ಇಂಥಾಸಮಯ ಮುಂದೆ ಸಿಕ್ಕಲಾರದು.
ಸರ್ವಜನಮನೋಲ್ಲಾಸಿನಿ ಅಂಡ್ ಕೋ. ಇವರ

(ನಾರಸಿಂಹ ಚೂರ್ಣವು.)

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವುದು ಸಹಜವಾದುದಷ್ಟೆ? ಆದರೆ ಅನೇಕ ದುರ್ವರ್ತನೆಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವು ವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನು ಕಣ್ಣಾರ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವು ಔಷಧಗಳನ್ನು ವಿಶೇಷವಾದ ಬೆಲೆಯನ್ನಿಟ್ಟು ವಿಕ್ರಯಿಸಿದರು ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವುದು ವಿಷಾದಕರವಾಗಿರುವುದು. ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿ [ನಾರಸಿಂಹ ಚೂರ್ಣವು] ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಿಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ ಅನೇಕತರಹೆಯ ಮೇಹರೋಗಗಳು, ಪಾಂಡುರೋಗ, ಹದಿನೆಂಟುಬಗೆಯಾದ ಕುಷ್ಠಗಳು, ಎಂಟುವಿಧ ಉದರರೋಗಗಳು, ಭಗಂಧರವು, ಮೂತ್ರಕೃಚ್ಛ್ರವು, ಗೃಧ್ರಸೀವಾತ ಕಾಮಿಲೆ, ಕ್ಷಯವು, ಮಹಾಶ್ವಾಸಗಳು, ದಾರುಣವಾದ ಐದು ಬಗೆಯಾದ ಕಾಸೆಗಳು, ಎಂಭತ್ತು ವಿಧಗಳಾದ ವಾತರೋಗಗಳು, ನಲವತ್ತು ಬಗೆಯಾದ ಪಿತ್ತಗಳು, ಇಪ್ಪತ್ತು ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಸಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇದರ ಸೇವನೆಯಿಂದ ಚಿನ್ನದಂಥಾ ಕಾಂತಿಯು, ಸಿಹ್ಮನಂತೆ ಪರಾಕ್ರಮವು, ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯು ಉಳ್ಳವರಾಗಿ ನೂರುಮಂದಿ ಯುವತಿಯರೊಂದಿಗೆ ಸುರತವಂ ಮಾಡುವಂಥಾ ಅತ್ಯಧಿಕ ವೀರ್ಯವೃದ್ಧಿಯುಂಟಾಗಿ ನೃಸಿಹ್ಮನಿಗೆ ಸಮಾನರಾದ ಮಕ್ಕಳನ್ನು ಹುಟ್ಟಿಸುವ ಪ್ರಬಲ ಬಲವಿರುವುದು. ಇದರಲ್ಲಿ ಯಾವವಿಧವಾದ ರಸಗಳಾಗಲಿ ಮಿಶ್ರವಾಗಿಯಿಲ್ಲ ಇನ್ನಾವದೋಷಗಳೂ ಯಿಲ್ಲ ನಿರ್ದುಷ್ಟವಾದದ್ದು ಫಕ್ತವನಸ್ಪತಿಗಳಿಂದಲೇ ಸಿದ್ಧಮಾಡಿದ ದಿವ್ಯವಾದ ಔಷಧ. ಅನೇಕಪಂಡಿತರು, ಧನಿಕರು, ಸರ್ಟಿಫಿಕೇಟುಗಳನ್ನು ಕೊಟ್ಟಿರುವರು.

೧೪ ದಿನ ಉಪಯೋಗಕ್ಕೆ ಬರುವ ಡಬ್ಬಿ೧ಕ್ಕೆ ಬೆಲೆ ರೂ. ೧

(ಬಹುಮಾನಗಳನ್ನು ಹಂಚುವ ವಿಧಾನ)

೧ ದರ್ಜ	ಡಬ್ಬಿಗಳನ್ನು	ತರಿಸಿಕೊಳ್ಳುವವರಿಗೆ		೧೦೦೦೦ ರೂ.
೬	,,	,,	...	೬೦೦೦ ರೂ.
೩	,,	,,	...	೪೦೦೦ ರೂ.
೨	,,	,,	...	೩೦೦೦ ರೂ.
೧	,,	,,	...	೨೦೦೦ ರೂ.

೧೯೧೪ ನೆ ಜುಲೈ ೧ನೆ ತೇದಿ ಮೊದಲು ೧೯೧೫ ನೆ ಜುಲೈ ೧ ನೆ ತೇದಿ ವರಿಗು ಈ ಔಷಧವು ಒಂದುಲಕ್ಷ ಡಬ್ಬಿಗಳು ಖರ್ಚಾದ ಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ. ಒಂದುಲಕ್ಷದಲ್ಲಿ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದುಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ಮತ್ತೂ ವಾಯಿದೆಯನ್ನು ಹೆಚ್ಚಿಸದೆ ಯೆಷ್ಟುಡಬ್ಬಿಗಳು ಖರ್ಚಾಗುತ್ತವೆಯೋ ಅಷ್ಟಕ್ಕೆ ದಾಮಾಷಾಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಒಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯೌಷಧವನ್ನು ಪಡಿಯುವುದಲ್ಲದೆ ಬಹುಮಾನವನ್ನು ಸಹಾ ಹೊಂದುವುದಕ್ಕೆ ಅರ್ಹನಾಗಿರುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರು ಸಂಶಯವಿಲ್ಲ. ಬಹುಮಾನದ ಮೊತ್ತವು ನಿಷ್ಪಕ್ಷಪಾತವಾಗಿ ಒಂದೇಸಮನಾಗಿ ಹಂಚಲ್ಪಡುವುದು. ಇದು ಮೋಸವಲ್ಲ, ಲಾಟರಿಯಲ್ಲ. ಯಾವ ವಿಧವಾದ ಕುಹಕತನವು ಇಲ್ಲ ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರಮಾತುಗಳಿಗೆ ನಿಗಾಕೊಡಲಾಗದು ಜಾಗ್ರತೆಯಾಗಿ ತರಿಸಿಕೊಳ್ಳಿರಿ ಔಷದಗುಣವನ್ನು ಪರೀಕ್ಷಿಸಿರಿ. ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳಿರಿ.

ಇದರ ಅನುಪಾನಪತ್ರಿಕೆಯನ್ನು ಬಹುಮಾನದ ಟಿಕೀಟನ್ನು ಡಬ್ಬಿಸಂಗಡ ಕಳಿಸುವೆವು. ನಮ್ಮ ಕಂಪೆನಿಯ ಕಾಶಿವಿಶ್ವನಾಥ ಮಾರ್ಕ್ ಯಿಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು.

ವಿಳಾಸ:—ಸರ್ವಜನಮನೋಲ್ಲಾಸಿನಿ
ಅಂಡ್ ಕೋ ಬಳ್ಳಾರಿ.

ಪಾಳ್ಯದ ವೆಂಕಟಾಚಲಪಂಡಿತರಸಿದ್ಧೌಷಧಗಳು.

46



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಪ್ಯಾರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿಗೆ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಕಾಲಿಗೆ [illegible] ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅ[illegible] ಸೇರಿಲ್ಲ. ಹೊಟ್ಟೆಯುಬ್ಬುರಿಸಿದೆ, ಮೂತ್ರವು ಕಟ್ಟಿದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣ ಕಾಣುತ್ತದೆ. [illegible] ಒಂದೆಳೆಂದು ಬುದ್ಧಿಯ ನಿಮ್ಮಲ್ಲಿರಲಿ. [illegible] ಅನುಪಾನಪತ್ರವು ಔಷಧದೊಡನೆ ಬರುವದು. ಒಂದು ಬುದ್ದಿಯ ಬೆಲೆ ೧ ರೂ.

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಳ ಕೂದಲು ಬೆಳೆಯುವ ಪರಿಮಳ ತೈಲವು.

2

ಡಬ್ಬಿ ೧ ಕ್ಕೆ ೩೬ ವಿಧವಾದ ಇನಾಂ ಸಾಮಾನುಗಳ ಸಮೇತ ೧೫ ತೊಲೆ ಎಣ್ಣೆಯ ಕ್ರಯ ರೂ. ೧-೦-೦

SAKUNTHALA HAIR OIL
REGISTERED TRADE MARK

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೇ ಇರುವ ಕೂದಲು ಬೆಳೆಯುವುದು. ಒರಟಾಗಿರುವ ಕೂದಲು ಮೃದುವಾಗುವುದು. ನೇರಳೇಹಣ್ಣಿನಂತೆ ಕಪ್ಪಾಗಿ ಥಳಥಳಿಸುವುದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವುದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಮೆದಡನ್ನು ಸರಿಮಾಡುವುದು. ಕಣ್ಣಿನಲ್ಲಿ ಮಂಜನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವುದಲ್ಲದೆ ಜವ್ವಾಜಿ ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತೂ ಜಾಜಿ, ಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರೂಪಾಕ್ಷಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವುದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

೧೫ ತೊಲ ತೈಲವುಳ್ಳ ಡಬ್ಬಿ ೧ ಕ್ಕೆ ಕ್ರಯ ೩೬ ಇನಾಂ ಸಾಮಾನುಗಳ ಸಮೇತ ರೂ. ೧-೦-೦

ಇನಾಂ ಸಾಮಾನುಗಳ ತಪ್ಸೀಲು:—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ ೧, ದಂತದ ಬಾಚಣಿಗೆ ೧, ನೋಡಿಕೊಳ್ಳುವ ಕನ್ನಡಿ ೧, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ ೧, ಅತ್ತರುಬುಡ್ಡಿ ೧, ವಾಸನೆಯುಳ್ಳ ಸೋಪು ೧ ತಾಂಬೂಲಪಾತ್ರೆ ೨೦ ಕೊಂಡೆ ಗುಣಿಗಳು ೬ ಕಾರೊನೇಷನ್ ಬ್ರೂಚ್ ೧, ಜವಾದುಡಬ್ಬಿ ೧, ಈ ತರಹ ೩೬ ಇನಾಂ ಕೊಡಲ್ಪಡುತ್ತವೆ.

ನಮ್ಮ ವಿಳಾಸ:—ಧನಲಕ್ಷ್ಮಿ ಅಂಡ್ ಕಂಪನಿ ೧-೬
ವೆಂಕಟೇಶಮೇಸ್ತ್ರಿ ಬೀದಿ, ಸಾಹುಕಾರ್ ಪೇಟೆ ಮದರಾಸು.

೫೦೦ ರೂಪಾಯಿಗಳ ಬಹುಮಾನ

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ “ಸಾಲಾಮಿಸ್ರೀ ಮುರಬ್ಬಾವನ್ನು” ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್‌ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಸಾಲಾಮಿಸ್ರಿಯ ಧಾರಣೆಯು ಜಾಸ್ತಿಯಾಗಿರುವದರಿಂದ ಅನೇಕರು ಉರುಳೆಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುವದು ತಿಳಿದುಬರುತ್ತದೆ.

3

ಸಾಲಾಮಿಸ್ರಿ ಮುರಬ್ಬಾವು—ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಸ್ತ್ರೀ ಸಂಗಕ್ಕೆ ಮೊದಲೆ ಧಾತು ಸ್ಖಲನವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಧಾತುಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕ್ಷಣ ಕ್ಷಣಕ್ಕೆ ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೆಟ್ಟುಹೋಗಿರುವ ರಕ್ತವನ್ನು ಶುದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ವೃದ್ಧಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಳೆತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು.
ಸಾಲಾಮಿಸ್ರಿ ಮುರಬ್ಬಾವು—ಉತ್ಸಾಹ, ಧೈರ್ಯ, ಬುದ್ಧಿಕುಶಲತೆ, ಶರೀರಕಾಂತಿಯನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು—ತಾಂಬು, ಬೆಳ್ಳಿ, ಮತ್ತು ಭಂಗಾರ ಭಸ್ಮಕ್ಕಿಂತಲೂ ಉತ್ತಮವಾದುದು.
ಸಾಲಾಮಿಸ್ರಿ ಮುರಬ್ಬಾವು—ಹೊಟ್ಟೆಯಲ್ಲಿರುವ ಜ್ವರದಗಡ್ಡೆಯನ್ನು ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಶ್ವಾಸಖಾಸ ರೋಗಗಳನ್ನು ನಾಶಪಡಿಸುವದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪುರಾ ಗುಣಕೊಡುತ್ತದೆ. ೨-೩ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು “ಸಾಲಾಮಿಸ್ರಿ” ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

೫೦೦ ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ಇದಕ್ಕೋಸ್ಕರವಾಗಿ ನಾವು ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ ಮೇಲ್ಕಂಡ ೫೦೦ ರೂಪಾಯಿಗಳನ್ನು ೧೯೧೫ನೆ ಇಸವಿ ಮಾರ್ಚಿ ತಾ॥ ೧೫ ರಲ್ಲಿ ಡಿಪಾಜಿಟ್ಟು ಇಟ್ಟಿರುತ್ತೇವೆ.

೧೫ ತೊಲೆ ಮುರಬ್ಬಾವಿನ ಡಬ್ಬಿ ೧ ಕ್ಕೆ ಕ್ರಯ ೨—೦—೦ ರೂಪಾಯಿ. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ ೬ ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ವಿಳಾಸ:—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
೫, ಅವೆನ್ಯೂ ರೋಡ್ ಬೆಂಗಳೂರು ಸಿಟಿ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿ	೦—೮—೦
ಚಾರುಶೀಲಚರಿತೆ	೦—೫—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಣ್ಯವಾದ ವಾಚ್!

ಸ್ಟ್ರಾಂಗ್ ಪಾಕೆಟ್ ಲೀವರ್‌ವಾಚ್.

ಇದರ ಕ್ರಯ ೭ ಬಹುಮಾನಗಳ ಸಮೇತ ರೂ. ೩-೮-೦
ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ. 2



☞ ಧನವಂತರೇ ಈ:—ನೂತನ ನಮೂನೆ ವಾಚ್ ಈಗತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತೂ ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತೂ ನಾಣ್ಯವಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗ್ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್ ಬರೀ ಮಾತುಗಳಿಂದಲೇನು? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ ೭ ಬಹುಮಾನಗಳ ತಪಸೀಲ್:—(೧) ಸುಂದರವಾದ ವಾಚ್ ಸರಪಣಿ, (೨) ಟಿಕ್ಕುಗಳನ್ನು ತೋರಿಸುವ ಉತ್ತರಮುಖಿ, (೩) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (೪) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆದಾರ, (೫) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (೬) ಪರಿಮಳವುಳ್ಳ ಸುವಾಸನೆ ಶೀಷೆ, (೭) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—
ಎಸ್. ಎಮ್. ಸ್ವಾಮಿ ಅಂಡ್ ಕಂಪೆನಿ,
ನಂ. ೪೪, ನಂಬುಳಯ್ಯರ ಬೀದಿ, ಮದರಾಸು.

೧೯೧೫ನೆಯ ಇಸವಿ ಏಪ್ರಿಲ್ ತಾ॥ ೧೮ರಿಂದ ೧೯೧೫ನೆಯ ಏಪ್ರಿಲ್ ತಾ॥ ೨೪ರವರೆಗೆ ಸಲ್ಲುವ ಶಾಲೀವಾಹನಶಕ ೧೮೩೭ ನೆಯ ರಾಕ್ಷಸನಾಮಸಂವತ್ಸರದ ಅಧಿಕವೈಶಾಖ ಶು॥ ಚಾತಿಯಿಂದ ಅಧಿಕವೈಶಾಖ ಶು॥ ದಶಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ತೇದಿ
18	ಭಾನು	ಚಾ	2-12	ರೋಹಿ	43-28	6
19	[1]ಸೋ	ಪಂ	46-56	ಮೃಗಶಿ	49-41	7
20	[2]ಮಂಗ	ಷಷ್ಠಿ	51-2	ಆರಿದ್ರಾ	55-5	8
21	[3]ಬುಧ	ಸಪ್ತ	54-2	ಪುನ	59-27	9
22	[4]ಗುರು	ಅಷ್ಟ	55-27	ಪುಷ್ಯ	60-0	10
23	[5]ಶುಕ್ರ	ನವ	55-48	ಪುಷ್ಯ	2-1	11
24	ಶನಿ	ದಶ	54-54	ಆಶ್ಲೇ	3-49	12

(1) ಶ್ರೀ ಭಾಷ್ಯಕಾರರ ರಥಃ, ಶನಿಚಂದ್ರಯೋಗಸ್ನಾನಂ, ಶ್ರೀರಂಗದಲ್ಲಿ ಕೊಡುತ್ತಿರುನಾಳ್ ಉತ್ಸವಾರಂಭಃ. (2) ಶ್ರೀ ಭಾಷ್ಯಕಾರರ್ ತಿರುನ॥, ಸಾಲಿಗ್ರಾಮದ ಯೋಗಾನೃಸಿಂಹರಥಃ. (3) ಶ್ರೀರಂಗಪಟ್ಟಣದ ಶ್ರೀ ರಂಗನಾಥ ಜಯಂತಿ. (4) ಅಮೃತಸಿದ್ಧಿಯೋಗಃ. (5) ಸೌರ ಶ್ರೀರಾಮನವಮೀ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಶ್ರೀ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ERGISTERED NO. M. 124.

ಮೈಸೂರ್ ✶ ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಕ್ಷ್ಮಜ್ಞನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲನಾಕಲಿತಸಾದ್ಗುಣ್ಯಾಲವಾಲಂ ಪಲಂ ॥
ಸಿಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಶ್ರೀಮಂಚಿತ್ತ್ರಶ್ರಿಯಂ ಸದಾ ಪೊರೆಗೆ ಗೌರೀಶಾನುಕಂಪೋಜ್ವಲಂ ॥
ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೪—೦

ಸಂಪುಟ ೨೮) ಮೈಸೂರ್ ಸ್ಟಾರ್ ಸನ್ ೧೯೧೫ ನೆಯ ಇಸವಿ ಏಪ್ರೆಲ್ ತಾರೀಖು ೨೫ ನೆಯ ಭಾನುವಾರ. (ಸಂಚಿಕೆ ೧೬

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೇಶಿಂತಾನ್.

12

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೇಷಿತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

೧. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.
೨. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು
೩. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ ಯಾವರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.
೪. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು
೫. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ಜೊತ್ತ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.
೬. ಬೇಸಿಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.
೭. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೇಷಿತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

೩೫ ಮಾತ್ರೆಗಳ	ಪೊಟ್ಟಣ	೧ಕ್ಕೆ	೨	ಆಣೆ	೮೦ ಮಾತ್ರೆಗಳ	ಟಿನ್	೧ಕ್ಕೆ	೪	ಆಣೆ.
೯೫ "	"	"	೪	"	೧೦೦ "	ಶೀಶೆ	"	೪॥	"
೨೦೦ "	"	"	೭	"	೫೫೦ "	ಮರದಪೆಟ್ಟಿಗೆ	"	೧	ರೂ.
೨೦೦ "	ಟಿನ್	"	೯	"	೧,೦೦೦ "	"	"	೨	"

೧ ರೂ.ಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಎಲ್ಲಾ ಕಡೆಯೂ ಪ್ರಸಿದ್ಧ ವರ್ತಕರಲ್ಲಿ ವಿಕ್ರಯಿಸಲ್ಪಡುತ್ತದೆ.

ಮೈಸೂರು ಸೀಮೆಯ ಏಜಂಟರು:—ಎಂ. ರಾಮಸಂಜೀವ ಸೆಟ್ಟಿ,
ಚನ್ನಪಟ್ಟಣ.

ಸೋಲ್ ಏಜಂಟರು:—ಸೇಷಿತಾನ್ ಡಿಪೋ,
ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ ೨.

ಮದ್ರಾಸ್ ಏಜಂಟ್:—ಬಿ. ಸಿ. ಷಾ ಅಂಡ್ ಕೊ,
೧೨೩ ಚೇನಾಬಜಾರ್ ರೋಡ್, ಮದ್ರಾಸ್.

S.U.N.&Co
BENARES CITY.
KASHI
VISHWESHWAR.

30

ಹೊಸ್ತ ಕಂಪನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರಿಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಂಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ—ಎಸ್. ಯೂ ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶಿ)

ಓರಿಯಂಟಲ್ ಫಾರ್ಮಸಿ ಮೈಸೂರು.

12

ಪ್ರಸಿದ್ಧ ಗುಣಕಂಡ ಔಷಧಗಳು.

ಜ್ವರದಮಾತ್ರೆ—ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಉಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸಳೆತ ಮಂದ ಇವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ ರೂ.

ಗೋರೋಚನದಮಾತ್ರೆ—ಮಕ್ಕಳಿಗೆ ಸುಖಭೇದಿ ಮಾಡಿಸುತ್ತೆ. ೪೦ ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೂಡ್ಲೆ ತಪ್ಪಿ ಜೀರ್ಣಶಕ್ತಿ ಕೊಡುತ್ತೆ ಪ್ರಯಾಣಿಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

[illegible]—ಎಲ್ಲಾ ವಿಧವಾಯು ನೋವು [illegible] ಕೆ ಉಬ್ಬು ಮುಂತಾದುದಕ್ಕೆ [illegible], [illegible] ಆಣೆ. ೫ ಡಬ್ಬಿಗೆ ೧ ರೂ. ಕೊಟ್ಲೆ ನಮ್ಮ [illegible] ಉಚಿತವಾಗಿ ಕಳುಹಿಸುತ್ತೇವೆ.

ತಿರಸಂಗೀಕರ ಸ್ಮಾರಕ.

ಕನ್ನಡ ಒಕ್ಕಲುತನದ ಶಾಲೆ ದೇವೀಹೊಸೂರ.

6

ಈ ಶಾಲೆಯು ಧಾರವಾಡ ಜಿಲ್ಲೆಯಲ್ಲಿರುವ ಹಾವೇರಿ ಸ್ಟೇಶನ್ನಿಂದ ೫ ಮೈಲು ದೂರವಿರುವ ದೇವೀಹೊಸೂರ ಎಂಬಲ್ಲಿ ಸ್ಥಾಪಿತವಾಗಿದ್ದು ಅದರ ಹೊಸ ಕ್ಲಾಸುಗಳು ಇದೇ ಮೇ ತಿಂಗಳು ೨೪ ನೇ ತಾರೀಖಿನಿಂದ ಶುರು ಆಗುವವು. ಇದು ಕೇವಲ ಒಕ್ಕಲಿಗರ ಮಕ್ಕಳ ವೆಶೆಯಿಂದ ಇರುತ್ತದೆ. ಇದರಲ್ಲಿ ಸೇರಲಿಚ್ಛಿಸುವ ವಿದ್ಯಾರ್ಥಿಗಳ ಸಂಬಂಧದ ನಿಯಮಗಳು ಕೆಳಗೆ ಕೊಟ್ಟಂತೆ ಇರುತ್ತವೆ.

(೧) ಹುಡುಗರು ಸ್ವತಃ ಒಕ್ಕಲತನ ಮಾಡುವಂಥ ಒಕ್ಕಲಿಗರ ಮಕ್ಕಳಾಗಿರಬೇಕು. ಮತ್ತು ಆ ಹುಡುಗರು ಸ್ವಲ್ಪ ಮಟ್ಟಿಗಾದರೂ ಒಕ್ಕಲತನದ ಕೆಲಸದಲ್ಲಿ ಮಾಹಿತಿಯುಳ್ಳವರಿರಬೇಕು.

(೨) ಇಲ್ಲಿ ಕಲಿತು ಒಕ್ಕಲತನದ ಉದ್ಯೋಗವನ್ನು ನಡೆಯಿಸಬೇಕೆನ್ನುವವರನ್ನೇ ಈ ಶಾಲೆಯಲ್ಲಿ ತಕ್ಕೊಳ್ಳುವದರಲ್ಲಿ ಬರುವದು. ಸರಕಾರೀ ನೌಕರಿಯನ್ನು ಇಚ್ಛಿಸುವಂಥ ವಿದ್ಯಾರ್ಥಿಗಳು ಇಲ್ಲಿ ಬರಕೂಡದು.

(೩) ಹುಡುಗರು ಕನಿಷ್ಠಪಕ್ಷಕ್ಕೆ ಕನ್ನಡ ೫ನೇ ಇಯತ್ತೆಯಲ್ಲಿಯಾದರೂ ಪಾಸಾಗಿರಬೇಕು. ಮತ್ತು ಅವರು ಯಾವ ಶಾಲೆಯಲ್ಲಿ ಕಲಿತಿರುವರೋ ಆ ಶಾಲೆಯ ಹೆಡ್ಡಮಾಸ್ತರರ ಲೀವ್ಹಿಂಗ ಸರ್ಟಿಫಿಕೇಟನ್ನು ಅರ್ಜಿ ಲಗತ ಕಳುಹಿಸಬೇಕು.

(೪) ಹುಡುಗರ ವಯಸ್ಸು ೧೪ ವರ್ಷದಿಂದ ೧೭ ವರ್ಷದ ಒಳಗಿರಬೇಕು. ಮತ್ತು ವಯಸ್ಸಿನ ದಾಖಲೆ ಅರ್ಜಿ ಲಗತ ಕಳುಹಿಸಬೇಕು.

(೫) ಹುಡುಗರ ಅಭ್ಯಾಸಕ್ರಮವು ಎರಡು ವರ್ಷದ್ದಿರುವದು; ಈ ಶಾಲೆಯಲ್ಲಿ ತೆಗೆದುಕೊಂಡ ಪ್ರತಿಯೊಬ್ಬ ಹುಡುಗನಿಗೆ ಅವನ ಶಾಲೆಯ ಫೀಗೂ ಊಟದ ವೆಚ್ಚಕ್ಕೂ ಸಾಲುವಷ್ಟು ಸ್ಕಾಲರಶಿಪ್ ಕೊಡಲ್ಪಡುವದು.

(೬) ಒಮ್ಮೆ ಶಾಲೆಯಲ್ಲಿ [illegible]ನಂತರ ಶಾಲೆಯ ಅಭ್ಯಾಸ ಕ್ರಮವು ಪೂರ್ಣ ಮುಗಿಯುವವರೆಗೆ ಶಾಲೆಯನ್ನು ಬಿಡಕೂಡದು. ಒಂದು ವೇಳೆ ಮಧ್ಯದಲ್ಲಿ ಬಿಟ್ಟರೆ ಅವರು ಶಾಲೆಯಲ್ಲಿ ಇದ್ದಷ್ಟು ದಿವಸಗಳ ಖರ್ಚನ್ನು ಕೆಳಗೆ ಸಹಿ ಮಾಡಿದವರು ನಿರ್ಣೈಯಿಸಿದಷ್ಟು [illegible] ಕೊಡಬೇಕಾಗುವದು.

ಪ್ರತಿವರ್ಷ ೧೫-೨೦ ಹುಡುಗರನ್ನು ತೆಗೆದುಕೊಳ್ಳುವದರಲ್ಲಿ ಬರುವದು. ಬೇರೆ ಶಾಲೆಗಳಂತೆ ಈ ಶಾಲೆಗೂ ಯಾವತ್ತೂ ಸೂಟಿಗಳು ದೊರೆಯುವವು. ಇದಲ್ಲದೆ ವರ್ಷಕ್ಕೆ ಎರಡಾವರ್ತಿ ಒಮ್ಮೆ ದೀಪಾವಳಿ ಸುಮಾರಕ್ಕೆ, [illegible] ಸಿಗೆ ಸಮಯಕ್ಕೆ ಒಂದೊಂದು ತಿಂಗಳದ ಸತತ ಸೂಟಿಗಳು ಸಿಕ್ಕುವವು. ಇವೆರಡು ಸೂಟಿಗಳಲ್ಲಿ ಮಾತ್ರ ಹುಡುಗರನ್ನು ಮನೆಗೆ ಕಳುಹಿಸುವದರಲ್ಲಿ ಬರುವದು. ಈ ಶಾಲೆಯ ಮುಖ್ಯ ಉದ್ದೇಶವೆಂದರೆ ಒಕ್ಕಲಿಗರ ಮಕ್ಕಳಿಗೆ ಸುಧಾರಿಸಿದ ಪ್ರಕಾರದ ಒಕ್ಕಲತನದ ಶಿಕ್ಷಣವನ್ನು ಕೊಟ್ಟು ಅವರನ್ನು ಅವರ ತಾಯಿತಂದೆಗಳಿಗೆ ಹೆಚ್ಚಿಗೆ [illegible]ರನ್ನಾಗಿ ಮಾಡಿಕೊಡುವದು ಅದೆ. ಈ ಶಾಲೆಗೆ [illegible]ವವರು ಅರ್ಜಿಯನ್ನು ಇದೇ ಮೇ ತಿಂಗಳ ೧೫ನೇ ತಾರೀಖಿನ ಒಳಗಾಗಿ ಕೆಳಗೆ ಸಹಿಮಾಡಿದವರ ಕಡೆಗೆ ಕಳುಹಿಸತಕ್ಕದ್ದು.

ಆ ಅರ್ಜಿ ವಿಚಾರಣೆಮಾಡಿ ನಮ್ಮ ಶಾಲೆಯಲ್ಲಿ ತೆಗೆದುಕೊಳ್ಳತಕ್ಕಂಥ ವಿದ್ಯಾರ್ಥಿಗಳಿಗೆ ಪತ್ರದ್ವಾರದಿಂದ [illegible] ತಿಳಿಸುವೆವು; ಅರ್ಜಿ ನಿಕಾಲಿ ಮಾಡುವ ಕಾಲಕ್ಕೆ ವತನದಾರ ಪಾಟೀಲ ಕುಲಕರ್ಣಿಯವರ ಮಕ್ಕಳಿಗೂ, ಸುಸ್ಥಿತಿಯ ಒಕ್ಕಲಿಗರ ಮಕ್ಕಳಿಗೂ, ಹೆಚ್ಚು ಸವಲತ ಸಿಗುವದು. ಅ[illegible]ಯಲ್ಲಿ ಹೆಸರು, ತಂದೆಯ ಹೆಸರು, ಅಡ್ಡ ಹೆಸರು, ಜಾತಿ

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಳ ಕೂದಲು ಬೆಳೆಯುವ ಪರಿಮಳ ತೈಲವು. 2

ಡಬ್ಬಿ ೧ ಕ್ಕೆ ೩೬ ವಿಧವಾದ ಇನಾಂ ಸಾಮಾನುಗಳ ಸಮೇತ ೧೫ ತೊಲೆ ಎಣ್ಣೆಯ ಕ್ರಯ ರೂ. ೧-೦-೦

SAKUNTHALA HAIR OIL
REGISTERED TRADE MARK

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೇ ಇರುವ ಕೂದಲು ಬೆಳೆಯುವುದು. ಒರಟಾಗಿರುವ ಕೂದಲು ಮೃದುವಾಗುವುದು. ನೇರಳೇಹಣ್ಣಿನಂತೆ ಕಪ್ಪಾಗಿ ಥಳಥಳಿಸುವುದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವುದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಹೊಡಡನ್ನು ಸರಿಮಾಡುವುದು. ಕಣ್ಣಿನಲ್ಲಿ ಮಂಜನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಒದುವವರಿಗೆ ಆಹ್ಲಾದವನ್ನು ಉಂಟುಮಾಡುವುದಲ್ಲದೆ ಜವ್ವಾಜಿ ಪುನುಗು, ಅಂಬರ್, ಕೇಸರ್, ಪಚ್ಚ ಕರ್ಪೂರ ಮತ್ತೂ ಜಾಜಿ, ಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರೂಪಾಕ್ಷಿ, ದವನ, ಮರುಗ, ಇತ್ಯಾದಿ ಪುಷ್ಪ ಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವುದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

೧೫ ತೋಲ ತೈಲವುಳ್ಳ ಡಬ್ಬಿ ೧ ಕ್ಕೆ ಕ್ರಯ ೩೬ ಇನಾಂ ಸಾಮಾನುಗಳ ಸಮೇತ ರೂ. ೧-೦-೦

ಇನಾಂ ಸಾಮಾನುಗಳ ತಪ್ಸೀಲು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ ೧, ದಂತದ ಬಾಚಣಿಗೆ ೧, ನೋಡಿಕೊಳ್ಳುವ ಕನ್ನಡಿ ೧, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ ೧, ಅತ್ತರುಬಿಲ್ಲೆ ೧, ವಾಸನೆಯುಳ್ಳ ಸೋಪು ೧ ತಾಂಬೂಲಮಾತ್ರೆ ೨೦ ಕೊಂಡೆ ಗಿಣಿಗಳು ೬ ಕಾರೊನೇಷನ್ ಬ್ರೂಚ್ ೧, ಜವಾದುಡಬ್ಬಿ ೧, ಈ ತರಹ ೩೬ ಇನಾಂ ಕೊಡಲ್ಪಡುತ್ತವೆ.

ನಮ್ಮ ವಿಳಾಸ:—ಧನಲಕ್ಷ್ಮಿ ಅಂಡ್ ಕಂಪನಿ ೧-೬
ವೆಂಕಟೇಶಮೇಸ್ತ್ರಿ ಬೀದಿ, ಸಾಹುಕಾರ್ ಪೇಟೆ ಮದರಾಸು.

---

೫೦೦ ರೂಪಾಯಿಗಳ ಬಹುಮಾನ
ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ « ಸಾಲಾಮಿಸ್ರೀ ಮುರಬ್ಬಾವನ್ನು " ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್‌ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಸಾಲಾಮಿಸ್ರಿಯ ಧಾರಣೆಯು ಜಾಸ್ತಿಯಾಗಿರುವದರಿಂದ ಅನೇಕರು ಉರುಳಿಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುವದು ತಿಳಿದುಬರುತ್ತದೆ.

8

ಸಾಲಾಮಿಸ್ರಿ ಮುರಬ್ಬಾವು—ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಸ್ತ್ರೀ ಸಂಗಕ್ಕೆ ಮೊದಲೆ ಧಾತು ಸ್ಖಲನವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಧಾತುಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕ್ಷಣ ಕ್ಷಣಕ್ಕೆ ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೆಟ್ಟುಹೋಗಿರುವ ರಕ್ತವನ್ನು ಶುದ್ಧಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ವೃದ್ಧಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಳೆತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು.
ಸಾಲಾಮಿಸ್ರಿ ಮುರಬ್ಬಾವು—ಉತ್ಸಾಹ, ಧೈರ್ಯ, ಬುದ್ಧಿಕುಶಲತೆ, ಶರೀರಕಾಂತಿಯನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು—ತಾಂಬ್ರ, ಬೆಳ್ಳಿ, ಮತ್ತು ಭಂಗಾರ ಭಸ್ಮಕ್ಕಿಂತಲೂ ಉತ್ತಮವಾದುದು.
ಸಾಲಾಮಿಸ್ರಿ ಮುರಬ್ಬಾವು—ಹೊಟ್ಟೆಯಲ್ಲಿರುವ ಜ್ವರದಗಡ್ಡೆಯನ್ನು ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಶ್ವಾಸಖಾಸ ರೋಗಗಳನ್ನು ನಾಶಪಡಿಸುವದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪುರಾ ಗುಣಕೊಡುತ್ತದೆ. ೨-೩ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದವರಿಗೂ ಗುಣಕೊಡುತ್ತೆ.

ಈ ಮುರಬ್ಬಾವು « ಸಾಲಾಮಿಸ್ರಿ " ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

೫೦೦ ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ಇದಕ್ಕೋಸ್ಕರವಾಗಿ ನಾವು ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ ಮೇಲ್ಕಂಡ ೫೦೦ ರೂಪಾಯಿಗಳನ್ನು ೧೯೧೫ನೆ ಇಸವಿ ಮಾರ್ಚಿ ತಾ॥ ೧೫ ರಲ್ಲಿ ಡಿಪಾಜಿಟ್ಟು ಇಟ್ಟಿರುತ್ತೇವೆ.

೧೫ ತೊಲೆ ಮುರಬ್ಬಾವಿನ ಡಬ್ಬಿ ೧ ಕ್ಕೆ ಕ್ರಯ ೨—೦—೦ ರೂಪಾಯಿ. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ ೬ ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ವಿಳಾಸ:—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
೫, ಅವೆನ್ಯು ರೋಡ್ ಬೆಂಗಳೂರು ಸಿಟಿ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೧—೦
ಪರವಾದಿಗಜಾಂಕುಶತಾರಾವಳಿ	೧—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತೆ	೦—೫—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಜೂಕಾದ ವಾಚ್!

ಸ್ಟ್ರಿಂಗ್ ಪಾಕೆಟ್ ಲೀವರ್‌ವಾಚ್.

ಇದರ ಕ್ರಯ ೭ ಬಹುಮಾನಗಳ ಸಮೇತ ರೂ. ೩-೮-೦
ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ. 2



ಘನವಂತರೇ ಈ:—ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತೂ ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತೂ ನಾಜೂಕಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗ್ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್ ಬರೀ ಮಾತುಗಳಿಂದಲೇನು? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ ೭ ಬಹುಮಾನಗಳ ತಪಶೀಲ್ :—(೧) ಸುಂದರವಾದ ವಾಚ್ ಸರಪಣಿ, (೨) ದಿಕ್ಕುಗಳನ್ನು ತೋರಿಸುವ ಉತ್ತರಮುಖ, (೩) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (೪) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆದಾರ, (೫) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (೬) ಪರಿಮಳವುಳ್ಳ ಸುವಾಸನೆ ಶೀಷೆ, (೭) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—
ಎಸ್. ಎಮ್. ಸ್ವಾಮಿ ಅಂಡ್ ಕಂಪೆನಿ,
ನಂ. ೪೪, ನಂಬುಳಯ್ಯರ ಬೀದಿ, ಮದರಾಸು.

೧೯೧೫ನೆಯ ಇಸವಿ ಏಪ್ರಿಲ್ ತಾ॥ ೧೮ರಿಂದ ೧೯೧೫ನೆಯ ಏಪ್ರಿಲ್ ತಾ॥ ೨೪ರವರೆಗೆ ಸಲ್ಲುವ ಶಾಲೀವಾಹನಶಕೆ ೧೮೩೭ ನೆಯ ರಾಕ್ಷಸನಾಮಸಂವತ್ಸರದ ಅಧಿಕವೈಶಾಖ ಶು॥ ಚಾತಿಯಿಂದ ಅಧಿಕವೈಶಾಖ ಶು॥ ದಶಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ತೇದಿ
18	ಭಾನು	ಚಾ	2-12	ರೋಹಿ	43-28	6
19	[1] ಸೋ	ಪಂ	46-56	ಮೃಗಶಿ	49-41	7
20	[2] ಮಂಗ	ಷಷ್ಠಿ	51-2	ಆರಿದ್ರಾ	55-5	8
21	[3] ಬುಧ	ಸಪ್ತ	54-2	ಪುನ	59-27	9
22	[4] ಗುರು	ಅಷ್ಟ	55-27	ಪುಷ್ಯ	60-0	10
23	[5] ಶುಕ್ರ	ನವ	55-48	ಪುಷ್ಯ	2-1	11
24	ಶನಿ	ದಶ	54-54	ಆಶ್ಲೇ	3-49	12

(1) ಶ್ರೀ ಭಾಷ್ಯಕಾರರ ರಥಃ, ಶನಿಚಂದ್ರಯೋಗಸ್ನಾನಂ, ಶ್ರೀರಂಗದಲ್ಲಿ ಕೊಡುತ್ತಿರುನಾಳ್ ಉತ್ಸವಾರಭಃ. (2) ಶ್ರೀ ಭಾಷ್ಯಕಾರರ್ ತಿರುನ॥, ಸಾಲಿಗ್ರಾಮದ ಯೋಗಾನೃಸಿಂಹರಥಃ. (3) ಶ್ರೀರಂಗಪಟ್ಟಣದ ಶ್ರೀ ರಂಗನಾಥ ಜಯಂತಿ. (4) ಅಮೃತಸಿದ್ಧಿಯೋಗಃ. (5) ಸಾರ ಶ್ರೀರಾಮನವಮಿ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ERGISTERED NO. M. 124.

ಮೈಸೂರ್ ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಕ್ಷ್ಯಜ್ಜನಹೃತ್ತಮೋಹರಾಜೇಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಪಲಂ ॥
ಸಿಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯುಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೧೪—೦

ಸಂಪುಟ ೨೮) ಮೈಸೂರ್ ಸ್ಟಾರ್ ಸನ್ ೧೯೧೫ ನೆಯ ಇಸವಿ ಏಪ್ರೆಲ್ ತಾರೀಖು ೨೫ ನೆಯ ಭಾನುವಾರ. (ಸಂಚಿಕೆ ೧೬

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

12

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಷಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

೧. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.
೨. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು
೩. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ ಯಾವರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.
೪. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.
೫. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.
೬. ಬೇಸಿಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.
೭. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೆಷಿಂತಾನದ ಒಂದು ಪೊಟ್ಟಣವನ್ನು ಯಾವಾಗಳೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

೪೫	ಮಾತ್ರೆಗಳ	ಪೊಟ್ಟಣ	೧ ಕ್ಕೆ	೨ ಆಣೆ		೮೦	ಮಾತ್ರೆಗಳ	ಟಿನ್	೧ ಕ್ಕೆ	೪ ಆಣೆ.
೯೫	,,	,,	,,	೪ ,,		೧೦೦	,,	ಶೀಶೆ	,,	೪॥ ,,
೨೦೦	,,	,,	,,	೭ ,,		೫೫೦	,,	ಮರದಪೆಟ್ಟಿಗೆ	,,	೧ ರೂ.
೨೦೦	,,	ಟಿನ್	,,	೯ ,,		೧೨೦೦	,,	,,	,,	೨ ,,

೧ ರೂ.ಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಎಲ್ಲಾ ಕಡೆಯೂ ಪ್ರಸಿದ್ಧವರ್ತಕರಲ್ಲಿ ವಿಕ್ರಯಿಸಲ್ಪಡುತ್ತದೆ.

ಮೈಸೂರುಸೀಮೆಯ ಏಜಂಟರು:—ಎಂ. ರಾಮಸಂಜೀವ ಸೆಟ್ಟಿ,
ಚನ್ನಪಟ್ಟಣ.
ಸೋಲ್‌ಏಜಂಟರು:—ಸೆಷಿಂತಾನ್‌ಡಿಪೋ,
ಪ್ರಿನ್ಸೆಸ್‌ಸ್ಟ್ರೀಟ್ ಬೊಂಬಾಯಿ ನಂ ೨.
ಮದ್ರಾಸ್ ಏಜಂಟ್:—ಬಿ. ಸಿ. ಷಾ ಅಂಡ್ ಕೊ,
೧೩೩ ಚೀನಾಬಜಾರ್ ರೋಡ್, ಮದ್ರಾಸ್.

S.U.N.&Co.
BENARES CITY.
KASHI
VISHWESHWAR.

30

ಹೊಡ್ಡಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ—ಎಸ್. ಯೂ ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶಿ)

ಓರಿಯಂಟಲ್ ಫಾರ್ಮಸಿ ಮೈಸೂರು.

12

ಪ್ರಸಿದ್ಧಿ ಗುಣಕಂಡ ಔಷಧಗಳು.

ಜ್ವರದಮಾತ್ರೆ—ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಡುಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮುಂತಾದವುಗಳೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ ರೂ.

ಗೋರೋಚನದಮಾತ್ರೆ—ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೂಡ್ಲೆ ತಪ್ಪಿ ಜೀರ್ಣಶಕ್ತಿ ಕೊಡುತ್ತೆ. ಪ್ರಯಾಣಿಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

[illegible]—ಎಲ್ಲಾ ವಿಧವಾಯುರೋಗ [illegible] ಅದು ಮುಂತಾದುದಕ್ಕೆ [illegible], ೧ ಡಬ್ಬಿಗೆ ೪ ಆಣೆ. ೫ ಡಬ್ಬಿಗೆ ೧ ರೂ. ಕೂಡ್ಲೆ ನಮ್ಮ [illegible] ಮುಖತಃ [illegible].

ತಿರಸಂಗೀಕರ ಸ್ಮಾರಕ.

ಕನ್ನಡ ಒಕ್ಕಲುತನದ ಶಾಲೆ ದೇವೀಹೊಸೂರ.

6

ಈ ಶಾಲೆಯು ಧಾರವಾಡ ಜಿಲ್ಲೆಯಲ್ಲಿರುವ ಹಾವೇರಿ ಸ್ಟೇಶನ್ನದಿಂದ ೫ ಮೈಲು ದೂರವಿರುವ ದೇವೀಹೊಸೂರ ಎಂಬಲ್ಲಿ ಸ್ಥಾಪಿತವಾಗಿದ್ದು ಅದರ ಹೊಸ ಕ್ಲಾಸುಗಳು ಇದೇ ಮೇ ತಿಂಗಳು ೨೪ ನೇ ತಾರೀಖಿನಿಂದ ಶುರು ಆಗುವವು. ಇದು ಕೇವಲ ಒಕ್ಕಲಿಗರ ಮಕ್ಕಳ ಸಲುವಾಗಿ ಇರುತ್ತದೆ. ಇದರಲ್ಲಿ ಸೇರಲಿಚ್ಛಿಸುವ ವಿದ್ಯಾರ್ಥಿಗಳ ಸಂಬಂಧದ ನಿಯಮಗಳು ಕೆಳಗೆ ಕೊಟ್ಟಂತೆ ಇರುತ್ತವೆ.

(೧) ಹುಡುಗರು ಸ್ವತಃ ಒಕ್ಕಲತನ ಮಾಡುವಂಥ ಒಕ್ಕಲಿಗರ ಮಕ್ಕಳಾಗಿರಬೇಕು. ಮತ್ತು ಆ ಹುಡುಗರು ಸ್ವಲ್ಪ ಮಟ್ಟಿಗಾದರೂ ಒಕ್ಕಲತನದ ಕೆಲಸದಲ್ಲಿ ಮಾಹಿತಿಯುಳ್ಳವರಿರಬೇಕು.

(೨) ಇಲ್ಲಿ ಕಲಿತು ಒಕ್ಕಲತನದ ಉದ್ಯೋಗವನ್ನು ನಡೆಯಿಸಬೇಕೆನ್ನುವವರನ್ನೇ ಈ ಶಾಲೆಯಲ್ಲಿ ತಕ್ಕೊಳ್ಳುವದರಲ್ಲಿ ಬರುವದು. ಸರಕಾರೀ ನೌಕರಿಯನ್ನು ಇಚ್ಛಿಸುವಂಥ ವಿದ್ಯಾರ್ಥಿಗಳು ಇಲ್ಲಿ ಬರಕೂಡದು.

(೩) ಹುಡುಗರು ಕನಿಷ್ಠಪಕ್ಷಕ್ಕೆ ಕನ್ನಡ ೫ನೇ ಇಯತ್ತೆಯಲ್ಲಿಯಾದರೂ ಪಾಸಾಗಿರಬೇಕು. ಮತ್ತು ಅವರು ಯಾವ ಶಾಲೆಯಲ್ಲಿ ಕಲಿತಿರುವರೋ ಆ ಶಾಲೆಯ ಹೆಡ್ಡಮಾಸ್ತರರ ಲೀವ್ಹಿಂಗ ಸರ್ಟಿಫಿಕೇಟನ್ನು ಅರ್ಜಿ ಲಗತ ಕಳುಹಿಸಬೇಕು.

(೪) ಹುಡುಗರ ವಯಸ್ಸು ೧೪ ವರ್ಷದಿಂದ ೧೭ ವರ್ಷದ ಒಳಗಿರಬೇಕು. ಮತ್ತು ವಯಸ್ಸಿನ ದಾಖಲೆ ಅರ್ಜಿ ಲಗತ ಕಳುಹಿಸಬೇಕು.

(೫) ಹುಡುಗರ ಅಭ್ಯಾಸಕ್ರಮವು ಎರಡು ವರ್ಷದ್ದಿರುವದು; ಈ ಶಾಲೆಯಲ್ಲಿ ತೆಗೆದುಕೊಂಡ ಪ್ರತಿಯೊಬ್ಬ ಹುಡುಗನಿಗೆ ಅವನ ಶಾಲೆಯ ಫೀಗೂ ಊಟದ ವೆಚ್ಚಕ್ಕೂ ಸಾಲುವಷ್ಟು ಸ್ಕಾಲರಶಿಪ್ ಕೊಡಲ್ಪಡುವದು.

(೬) ಒಮ್ಮೆ ಶಾಲೆಯಲ್ಲಿ [illegible]ನಂತರ ಶಾಲೆಯ ಅಭ್ಯಾಸ ಕ್ರಮವು ಪೂರ್ಣ ಮುಗಿಯುವವರೆಗೆ ಶಾಲೆಯನ್ನು ಬಿಡಕೂಡದು. ಒಂದು ವೇಳೆ ಮಧ್ಯದಲ್ಲಿ ಬಿಟ್ಟರೆ ಅವರ ಶಾಲೆಯಲ್ಲಿ ಇದ್ದಷ್ಟು ದಿವಸಗಳ ಖರ್ಚನ್ನು ಕೆಳಗೆ ಸಹಿ ಮಾಡಿದವರು ನಿರ್ಣಯಿಸಿದಷ್ಟು [illegible] ಆಗುವದು.

ಪ್ರತಿವರ್ಷ ೧೫-೨೦ ಹುಡುಗರನ್ನು ತೆಗೆದುಕೊಳ್ಳುವದರಲ್ಲಿ ಬರುವದು. ಬೇರೆ ಶಾಲೆಗಳಂತೆ ಈ ಶಾಲೆಗೂ ಯಾವತ್ತೂ ಸೂಟಿಗಳು ದೊರೆಯುವವು. ಇದಲ್ಲದೆ ವರ್ಷಕ್ಕೆ ಎರಡಾವರ್ತಿ ಒಮ್ಮೆ ದೀಪಾವಳಿ ಸುಮಾರಕ್ಕೆ [illegible] ಸಿಗೆ ಸಮಯಕ್ಕೆ ಒಂದೊಂದು ತಿಂಗಳದ ಸತತ ಸೂಟಿಗಳು ಸಿಕ್ಕುವವು. ಇವೆರಡು ಸೂಟಿಗಳಲ್ಲಿ ಮಾತ್ರ ಹುಡುಗರನ್ನು ಮನೆಗೆ ಕಳುಹಿಸುವದರಲ್ಲಿ ಬರುವದು. ಈ ಶಾಲೆಯ ಮುಖ್ಯ ಉದ್ದೇಶವೆಂದರೆ ಒಕ್ಕಲಿಗರ ಮಕ್ಕಳಿಗೆ ಸುಧಾರಿಸಿದ ಪ್ರಕಾರದ ಒಕ್ಕಲತನದ ಶಿಕ್ಷಣವನ್ನು ಕೊಟ್ಟು ಅವರನ್ನು ಅವರ ತಾಯಿತಂದೆಗಳಿಗೆ ಹೆಚ್ಚಿಗೆ [illegible]ನ್ನಾಗಿ ಮಾಡಿಕೊಡುವದು ಅದೆ. ಈ ಶಾಲೆಗೆ [illegible] ವವರು ಅರ್ಜಿಯನ್ನು ಇದೇ ಮೇ ತಿಂಗಳ [illegible] ಒಳಗಾಗಿ ಕೆಳಗೆ ಸಹಿಮಾಡಿದವರ ಕಡೆಗೆ ಕಳುಹಿಸತಕ್ಕದ್ದು.

ಆ ಅರ್ಜಿ ವಿಚಾರಣೆಮಾಡಿ ನಮ್ಮ ಶಾಲೆಯಲ್ಲಿ ತೆಗೆದುಕೊಳ್ಳತಕ್ಕಂಥ ವಿದ್ಯಾರ್ಥಿಗಳಿಗೆ ಪತ್ರದ್ವಾರದಿಂದ [illegible] ತಿಳಿಸುವೆವು; ಅರ್ಜಿ ನಿಕಾಲಿ ಮಾಡುವ ಕಾಲಕ್ಕೆ ವತನದಾರ ಪಾಟೀಲ ಕುಲಕರ್ಣಿಯವರ ಮಕ್ಕಳಿಗೂ, ಸುಸ್ಥಿತಿಯ ಒಕ್ಕಲಿಗರ ಮಕ್ಕಳಿಗೂ, ಹೆಚ್ಚು ಸವಲತ್ತ ಸಿಗುವದು. ಅ[illegible]ಯಲ್ಲಿ ಹೆಸರು, ತಂದೆಯ ಹೆಸರು, ಅಡ್ಡ ಹೆಸರು, ಜಾತಿ

ಇರುವ ಊರು, ತಾಲೂಕು, ಜಿಲ್ಲಾ ಖಾತೇದ ಹೊಲವು ಎಷ್ಟು, ಮತ್ತು ಅದು ಎಲ್ಲಿರುವದು ಸರಕಾರಕ್ಕೆ ದರವರ್ಷ ಕೊಡಬೇಕಾದ ತೆರಿಗೆ ತೋಟಪಟ್ಟಿಗಳನ್ನು ಮಾಡಲಿಕ್ಕೆ ನೀರಿನ ಅನುಕೂಲತೆ ಇರುವದೇ ಹ್ಯಾಗೆ? ಮತ್ತು ಹೊಲಗಳನ್ನು ಮನೆಯಿಂದ ಮಾಡುವರೋ ಹ್ಯಾಗೆ? ಮೊದಲಾದ ಮಾಹಿತಿಯನ್ನು ತುಂಬಿ ಆಯಾ ಊರ ಗ್ರಾಮಸ್ಥರ ದಾಖಲೆಯನ್ನು ಲಗತಿಟ್ಟು ಅರ್ಜಿ ಕಳಿಸಬೇಕು; ಮತ್ತು ಅರ್ಜಿಯನ್ನು ಶಾಲೆಗೆ ಬಂಶಿಟ್ಟುಸುವ ವಿದ್ಯಾರ್ಥಿಗಳೇ ಸ್ವಹಸ್ತದಿಂದ ತುಂಬಿ ಕಳಿಸಬೇಕು. ಮೇಲೆ ಹೇಳಿದ ನಿಯಮಗಳಂತೆ ನಡೆಯಲಿಕ್ಕೆ ಅನುಮತಿಯುಂಟೆಂದು ತಮ್ಮ ಪಾಲಕರ ಕಡೆಯಿಂದ ಒಂದು ಸಹಿನಿಸಿ ದಾಖಲೆ ತಕ್ಕೊಂಡು ಅರ್ಜಿ ಲಗತ ಇಟ್ಟು ಕಳಿಸಬೇಕು

ಧಾರವಾಡ	ಸಹಿ ಟಿ. ಗಿಲ್ಬರ್ಟ
ತಾ|| ೫-೩-೧೯೧೫	ಡಿ. ಡಾಯರೆಕ್ಟರ ಶೆತಕೀ ಖಾತೆ, ದಕ್ಷಿಣಭಾಗ

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕೆ ಅವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತವಾಗಿರುವ ಘೋರಯುದ್ಧದ ದೆಸೆಯಿಂದ ಈ ಸಾಮಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದ ಮತ್ತೂ ಬೆಲ್‌ಜಿಯಮ್ಮಿನಿಂದ ಸುತರಾಂ ಬರುವುದು ಕಟ್ಟಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಅವಶ್ಯಕವಾದ ಕಾಗದ ಮೊದಲಾದ ಸಾಮಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವಧಿಯು ಪೂರೈಸಿರುವವರಿಗೆಲ್ಲಾ ಪತ್ರಿಕೆಯನ್ನು ವಿ. ಪಿ ದ್ವಾರ ಕಳುಹಿಸುತ್ತಿರುವೆವು. ಆದರೆ ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿರುಗಿಸಿ ಕಾಗದದ ಬೆಲೆಯೇರಿಕೆಯಿಂದ ನಷ್ಟಪಡುವುದರ ಜತೆಗೆ ಪೋಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದು ತಿಳುಹಲು ಖೇದವಾಗುತ್ತದೆ. ಇತಃಪರಃ ದಯಾರ್ದ್ರಹೃದಯರಾದ ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ. ಪಿ. ಹಣವನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನವಾಗಿ ನಡೆದುಕೊಂಡು ಹೋಗುವಂತೆ ಮಾಡುವರೆಂದು ಸಂಪೂರ್ಣವಾಗಿ ನಂಬಿರುತ್ತೇವೆ.

ಮ್ಯಾನೇಜರ್.

ಗೃಹಛಿದ್ರವು.

(ದೇಶಾಯಿ—ಶೇಷಗಿರಿರಾವ್—ನಂದಿ)

ಸರಸ್ವತಿಯು ಎಷ್ಟು ಪುಣ್ಯವನ್ನು ಮಾಡಿಯೋ ಉತ್ತಮರಾದ ಜನನೀಜನಕರ ಗರ್ಭದಲ್ಲಿ ಜನಿಸಿದಳು. ನಮ್ಮ ದೇಶದಲ್ಲಿ ಮಾತಾಪಿತೃಗಳು, ಹೆಣ್ಣುಮಕ್ಕಳೆಂದರೆ ಕಡೆಗಣ್ಣಿಂದ ನೋಡುವರು. ಸರಸ್ವತಿಯ ತಂದೆತಾಯಿಗಳು ಹಾಗೆ ಮಾಡದೆ ಕುಮಾರನಿಗಂತೆ ವಿದ್ಯೆಯನ್ನು ಹೇಳಿಸಿದರು. ಈ ಕುಟುಂಬವು ವೈದಿಕ (ಆರ್ಯ) ಧರ್ಮಾವಲಂಬನೆಯುಳ್ಳದಾದುದರಿಂದ ಸರಸ್ವತಿಯನ್ನು ಹದಿನೆಂಟುವರ್ಷಗಳವರೆಗೂ ಓದಿಸಿದರು. ಮತ್ತು ಸುಶೀಲತೆ ಸುಯೋಗ್ಯತೆಯುಳ್ಳವಳನ್ನಾಗಿಯೂ ಮಾಡಿದ್ದರು. ವೇದಮತಪ್ರಕಾರವಾಗಿ ಆರ್ಯರಲ್ಲಿ ವಿವಾಹಬಂಧವು ತಂದೆತಾಯಿಗಳ ಅಧೀನಕ್ಕಿಂತಲೂ ಕನ್ನಿಕೆಯಲ್ಲಿ ಹೆಚ್ಚಾಗಿ ಅಧೀನವಾಗಿರುವುದರಿಂದ, ರೈಲ್ವೆ ಉದ್ಯೋಗಿಯಾದ, ೨೫ ವರ್ಷಗಳ ವಯಸ್ಸಿನ ರಾಮರಾಯರನ್ನು ಸರಸ್ವತಿವರಿಸಿದಳು. ವಿವಾಹವಾಯಿತು. ಸರಸ್ವತಿಯು ಅತ್ತೆಯವರ ಮನೆಗೆಹೊರಟಳು. ಅತ್ತೆಯಾದ ಭವಾನಿಯು ಕರ್ಕಶನಿಧಿಯಾಗಿದ್ದಳು. ಆದುದರಿಂದ ತನ್ನ ಪ್ರತಾಪವನ್ನು ತೋರಿಸಲಾರಂಭಿಸಿದಳು. ರಾಮರಾಯರು ತುಂಬಾ ಮಾತೃಭಕ್ತಿಯುಳ್ಳವರು. ತಂದೆಯು ಆರ್ಯಸಂಘೀಯನು. ಆದುದರಿಂದ ಉತ್ತಮಬುದ್ಧಿವಂತನಾಗಿದ್ದನು. ಸರಸ್ವತಿಯು ಮನೆಕೆಲಸಗಳೆಲ್ಲವನ್ನೂ ಮುಗಿಯಿಸಿಕೊಂಡು ಓದುವುದು, ಬರೆಯುವುದು ಮೊದಲಾದ ವಿದ್ಯಾವ್ಯಾಸಂಗ ಮಾಡುತ್ತಿರುವುದನ್ನು ನೋಡಿ, ಭವಾನಿಯು "ಓಹೋ! ನೀನು ನೌಕರಿ ಚಾಕರಿ ಮಾಡಲು ಹೋಗುವಿಯೇನು? ನಮ್ಮ ಕಾಲದಲ್ಲಿ ಈ ವಿಧವಾಗಿ ಹೆಂಗಸರು ಓದುವುದನ್ನೂ, ಬರೆಯುವುದನ್ನೂ ಕೇಳಿಯೂ ನೋಡಿಯೂ ಇಲ್ಲವು. ನಮ್ಮ ಮನೆಯಲ್ಲಿ ಹೆಂಗುಸರು ಪುಸ್ತಕವನ್ನಾಗಲಿ ಗ್ರಂಥವನ್ನಾಗಲಿ ಮುಟ್ಟಕೊಡದು" ಎಂದಾಜ್ಞಾಪಿಸಿದಳು. ಸರಸ್ವತಿಯು ಗೃಹಾಶ್ರಮವನ್ನು ಅತ್ಯಂತಾನಂದದಿಂದ ಕಳೆಯಬೇಕೆಂದು ಭಾವಿಸಿದ್ದಳು. ಅತ್ತೆಯ ಸ್ವಭಾವವನ್ನು ನೋಡಿ ನಿರಾಶಳಾದಳು. ಪುಸ್ತಕಗಳನ್ನು ಕಟ್ಟುಕಟ್ಟಿ ಇರಿಸಿಬಿಟ್ಟಳು. ರಾಮರಾಯರಿಗೆ ತನ್ನ ಗೃಹದೇವಿಯು ವಿದ್ಯಾವತಿಯಾಗಿರುವುದು ಬಹಳ ಸಂತೋಷವಾದುದರಿಂದ ಹೊಸಹೊಸ ಗ್ರಂಥಗಳನ್ನು ತರಿಸಿಕೊಡುತ್ತಿದ್ದರು. ಆದರೆ ಸರಸ್ವತಿಗೆ ಮತ್ತೊಂದುಪಿಶಾಚಿಯು ಹಿಂದೆಬಿದ್ದಿದ್ದಿತು. ಅತ್ತೆಯ ತಂಗಿಯಾದ—ಗಂಡನನ್ನು ಕಳೆದುಕೊಂಡಿರುವ—ಜಾನಕಮ್ಮ ಎಂಬುವಳು ಸರಸ್ವತಿಯ ಮೇಲೆ ಚಾಡಿಯನ್ನು ಹೇಳುತ್ತಾ ತನ್ನ ಅಕ್ಕನನ್ನು ಸಂತೋಷಪಡಿಸುತ್ತಿದ್ದಳು. ಇದರಿಂದ ಮರೆಯಲ್ಲಾದರೂ ಗ್ರಂಥಪಠನಕ್ಕೆ ಅವಕಾಶವಿಲ್ಲದೆ ಹೋಯಿತು. ಮಾವ ಶೋಭನಾದ್ರಿಯವರು ತನ್ನ ಪತ್ನಿಯ ಕ್ರೂರಸ್ವಭಾವಕ್ಕೆ ವ್ಯಾಕುಲಪಡುತ್ತಿದ್ದನು. ಒಂದುದಿನ ಭವಾನಿಯು ಸ್ನಾನಮಾಡುತ್ತಿದ್ದು ತನ್ನ ಮೂಗುಬೊಟ್ಟನ್ನು ಕಳೆದುಕೊಂಡಳು. ಅದನ್ನು ಜಾನಕಮ್ಮನು ಬಚ್ಚಿಟ್ಟುಕೊಂಡಳು. ಅಲ್ಲಲ್ಲಿ ಹುಡುಕಿದರೂ ಸಿಕ್ಕಲಿಲ್ಲವು. ಸರಸ್ವತಿಯು ತೆಗೆದುಕೊಂಡಳೆಂದು ಜಾನಕಮ್ಮನು ಸೂಚಿಸಿದಳು. ನಾನು ನೋಡಲಿಲ್ಲವೆಂದು ಸರಸ್ವತಿಯು ಹೇಳಿದಳು. ಅತ್ತೆ—ನೀನು ತೆಗೆದುಕೊಳ್ಳದಿದ್ದರೆ ಮತ್ತಾರು ತೆಗೆದುಕೊಂಡರೋ ತೋರಿಸು. ಪರಾಯಿ ಕಳ್ಳರು ಯಾರಿರುವರು? ಸೊಸೆ—ಜಾನಕಮ್ಮನನ್ನು ಕೇಳಿ ನೋಡಿ.

ಜಾನಕಿ—ಅತ್ತೇರಿ! ನಾನು ಕಳುವುಮಾಡಿದೆನಾ? ನನ್ನನ್ನು ಕೇಳು ಎಂಬುದಕ್ಕೆ ಅರ್ಥವೇನು? ನಾನು ತೆಗೆದುಕೊಂಡುದ್ದನ್ನು ನೀನು ನೋಡಿದೆಯಾ?

ಸರಸ್ವತಿ—ನನ್ನನ್ನು ಮಾತ್ರ ಕೇಳಬಲ್ಲಿರೇ? ನಾನು ತೆಗೆದುಕೊಂಡುದನ್ನು ಯಾರು ನೋಡಿದರು? ಕೇಳಿದ ಮಾತ್ರಕ್ಕೇನೇ ಕಳ್ಳರೆಂದೆಣಿಸಲಾಗುವದೇ?

ಜಾನಕಿ—ನಿನ್ನನ್ನು ಕೇಳೆಂದು ನಾನು ಹೇಳಿಲ್ಲವು.

ಸರಸ್ವತಿ—ನನ್ನದು ಅಪರಾಧವಾದಲ್ಲಿ ಕ್ಷಮಿಸಬೇಕು.

ಭವಾನಿ—(ರಾಮರಾಯನನ್ನು ನೋಡಿ) ಎಲಾ! ರಾಮಾ!! ನೀನು ನನ್ನ ಮನೆಗೆ ರಾಕ್ಷಸಿಯನ್ನು ತಂದುಬಿಟ್ಟೆ!!! ಅಕ್ಕಿಗೆ ಅಕ್ಕಿ, ಬೇಳೆಗೆ ಬೇಳೆ, ಒಡವೆಗೆ ಒಡವೆ ಮಾಯವಾಗಿ ಹೋಗುತ್ತಿದೆ. ಈ ಹಾಳು ಮನೆ ನನಗೇತಕ್ಕೆ? ನಾನೂ ನನ್ನ ತಂಗಿಯೂ ದಾದಿಗಳಂತೆ ಕೆಲಸಮಾಡಬೇಕು. ನಿನ್ನ ಹೆಂಡತಿ ಪುಸ್ತಕಗಳನ್ನು ಓದುತ್ತಾ ಕುಲುಕುತ್ತಿರಬೇಕಲ್ಲವೆ?

ರಾಮ—ಮೂಗುಬಟ್ಟು ಎಲ್ಲಿಯಾದರೂ ಬಿದ್ದಿರಬಹುದು; ಅದನ್ನು ಇಂಥವರೇ ಎತ್ತಿರುವರೆಂದು ಹೇಳುವುದಕ್ಕೆ ಹೇಗಾಗುವುದು?

ಭವಾನಿ—(ಗಟ್ಟಿಯಾಗಿ) ನಾನು ಮಾಡುವುದೇನು? ಹೋಗಲಿ; ಎಲ್ಲಾ ಹಾಳಾಗಿಹೋಗಲಿ; ನಾಶನವಾಗುವ ಕಾಲಬಂದಿದೆ. ಮನೆಯಲ್ಲಿ ದಿವಾಳಿದೀಪವು ಬೆಳಗುತ್ತಿದೆ. ನಿನ್ನನ್ನು ಹೆತ್ತು ಹೊತ್ತು ಸಾಕಿದ್ದಕ್ಕೆ ಇಷ್ಟು ಸುಖವು ಲಭಿಸಿತು. (ಎಂದು ಭೋರೆಂದು ಅಳುವಳು; ಜಾನಿಕಮ್ಮನು ದುಃಖಿಸುತ್ತಿರುವಳು)

ಶೋಭನಾದ್ರಿ—(ಮಗನನ್ನು ನೋಡಿ) ನೀನು ಮೂಗುಬಟ್ಟಿನ ವಿಷಯವನ್ನು ಜಾಗರೂಕತೆಯಿಂದ ವಿಚಾರಿಸಬೇಕು. ಅದು ವಜ್ರವು ಹಾಕಲ್ಪಟ್ಟುದು. ಆದುದರಿಂದ ಭಾರೀಬೆಲೆಯುಳ್ಳುದು (ರಹಸ್ಯವಾಗಿ) ನೀನೀಗಲೇ ನಿನ್ನ ಪತ್ನಿಯನ್ನು ಕರೆದುಕೊಂಡು ಹೋಗು. ಈ ವಿಷಯದಲ್ಲಿ ಯಥಾರ್ಥವನ್ನು ವಿಚಾರಿಸು. ನಾನು ಇಲ್ಲಿನ ಕೆಲಸವನ್ನು ನೋಡಿಕೊಳ್ಳುವೆನು.

ರಾಮ—ಆಹಾ! ಅವಿದ್ಯಾಗ್ರಸ್ತ ಕರ್ಕಶಸ್ತ್ರೀಯರು ಗೃಹಾಶ್ರಮಕ್ಕೆ ಎಂತಹ ಶತ್ರುಗಳಾಗಿರುವರು!

ಶೋಭನಾದ್ರಿ—ನಮ್ಮ ದೇಶದಲ್ಲಿ ಯಾವಗೃಹದಲ್ಲಿ ಆಶ್ರಮಧರ್ಮಗಳು ಸರಿಯಾಗಿ ನಡೆಯುತ್ತಿರುವವೋ ಗೊತ್ತಿಲ್ಲ. ನನಗೆ ಅನುಮಾನವಾಗುತ್ತಿರುವುದು. ನೀನು ತ್ವರಿತವಾಗಿ ಪ್ರಯಾಣವನ್ನು ಬೆಳಸು. (ರಾಮರಾಯನು ಹೊರಟುಹೋದನು) ರಾಮರಾಯನೂ ಸರಸ್ವತಿಯೂ ಹೋದತರುವಾಯ ಶೋಭನಾದ್ರಿರಾಯರು ಬಹಳ ಚಮತ್ಕಾರದಿಂದ ಬೀಗದಕೈಯನ್ನು ಸಂಪಾದಿಸಿ, ಜಾನಕಮ್ಮನ ಪೆಟ್ಟಿಗೆಯ ಬೀಗವನ್ನು ತೆಗೆದು ನೋಡಲಾಗಿ, ಅದರಲ್ಲಿ ಮೂಗುಬೊಟ್ಟು ಸಿಕ್ಕಿತು. ಆಗ ಜಾನಕಮ್ಮನನ್ನು ನೋಡಿ ಈಗ ಏನು ಹೇಳುತ್ತೀಯೆ ಎಂದು ಕೇಳಿದನು

ಜಾನಕಮ್ಮ—ನಿನ್ನ ಮಗನೂ ಸೊಸೆಯೂ ಹೋಗುವಾಗ ನಾನು ಸ್ವಲ್ಪದೂರ ಹಿಂದೆ ಹೋಗಿದ್ದೆನಷ್ಟೆ? ಮೂಗುಬೊಟ್ಟನ್ನು ಕೊಡಬೇಕೆಂದು ಬೇಡಿ ಈಸಿಕೊಂಡು, ಬುದ್ಧಿಯನ್ನು ಹೇಳಿ, ಯಾರಿಗೂ ಈ ರಹಸ್ಯವನ್ನು ತಿಳಿಯಿಸುವುದಿಲ್ಲವೆಂದು ಪ್ರಮಾಣಮಾಡಿ ತೆಗೆದುಕೊಂಡೆನು. ಆಕೆಯು ನನ್ನ ಕೈಗೆ ಕೊಡುವಾಗ—ಹೋದಕೂಡಲೇ ಮೂಗುಬೊಟ್ಟನ್ನು ಕೊಡಕೂಡದೆಂದೂ, ಕೆಲವು ದಿನಗಳವರೆಗೂ ನಿನ್ನಲ್ಲಿಯೇ ಇರಿಸಿಕೊಂಡಿದ್ದು, ನನ್ನಮೇಲೆ ಅನುಮಾನವಿಲ್ಲದಂತೆ ಒಂದು ಸ್ಥಳದಲ್ಲಿ ಸಿಕ್ಕಿತೆಂದು ಹೇಳಿ ಕೊಡಬೇಕೆಂದೂ ಹೇಳಿದುದರಿಂದ ಪ್ರಮಾಣಮಾಡಿ ಆಕೆಯಿಂದ ತೆಗೆದುಕೊಂಡೆನು; ಸಮಯವನ್ನು ನಿರೀಕ್ಷಿಸುವುದರೊಳಗಾಗಿಯೇ ನೀವು ಪೆಟ್ಟಿಗೆಯನ್ನು ತೆಗೆದು ನೋಡಿದಿರಿ.

ಭವಾನಿ—(ಮೂತಿಯಮೇಲೆ ಕೈಯನ್ನಿರಿಸಿಕೊಂಡು) ಅಮ್ಮಮ್ಮಾ! ಎಂತಹ ಹೆಂಗಸು!! ಕೊಂಬೆಗಳನ್ನು ಮುರಿಗಿಸುವುದರಲ್ಲಿ ಸಂದೇಹವೇನು!!! (ಗಂಡನನ್ನು ನೋಡಿ) ನೋಡಿದಿರಾ! ನಿಮ್ಮ ಸೊಸೆಯ ವಿದ್ಯೆಯನ್ನು ……… ಎಂದು ಹೇಳುತ್ತಿರಲಾಗಿ, ಶೋಭನಾದ್ರಿರಾಯರು ಕೋಪವನ್ನು ನಿಲ್ಲಿಸಲಾರದೆ ಛಳೀರೆಂದು, ಕೆನ್ನೆಗೆ ದಬ್ಬೆಗಳನ್ನು ಸಮರ್ಪಿಸಿ, "ಜಾನಕಮ್ಮಾ! ನೀನು ಈ ಕ್ಷಣ ನಮ್ಮ ಮನೆಯನ್ನು ಬಿಟ್ಟು ಹೊರಟುಹೋಗಬೇಕು" ಎಂದಾಜ್ಞಾಪಿಸಿ, ನಡೆದ ಸಂಗತಿಯೆಲ್ಲವನ್ನೂ ಮಗನಿಗೆ ಬರೆದು ಸರಸ್ವತಿಗೆ ನೀನೇನೂ ತೊಂದರೆ ಕೊಡಕೂಡದೆಂಬ ವಿಷಯದಲ್ಲಿ ಒತ್ತಿ ಹೇಳುತ್ತಿರುವೆನೆಂದು ಕೂಡ ಪತ್ರದಲ್ಲಿ ಸೂಚಿಸಿದನು.

ಮೈಸೂರಿನಲ್ಲಿ ಸ್ಥಾಪಿಸಬಹುದಾದ ಕೈಗಾರಿಕೆಗಳು.

ಮ|| ಎಂ. ಜಿ. ರಾಮರಾವ್, ಬಿ. ಎ.—ಇವರಿಂದ

ಮೈಸೂರು ಸಂಸ್ಥಾನದಲ್ಲಿ ಭೂವ್ಯವಸಾಯವೇ ಮುಖ್ಯವೃತ್ತಿಯಾಗಿದೆ. ದೊಡ್ಡದೆಂದು ಹೇಳಿಸಿಕೊಳ್ಳುವ ಕೈಗಾರಿಕೆಗಳೇ ಇಲ್ಲ. ಇರುವ ಅಲ್ಪಸ್ವಲ್ಪ ಕೈಗಾರಿಕೆಗಳನ್ನು ವಿಚಾರಮಾಡಿ ನೋಡಿದರೆ, ಅವಕ್ಕೂ ಮನೆ ಕಸಬುಗಳಿಗೂ (cottage industries) ವ್ಯತ್ಯಾಸ ತೋರುವುದಿಲ್ಲ. ಎಲ್ಲವೂ ಹಿಂದಿನ ಕಾಲದ ಪದ್ಧತಿಗಳನ್ನೇ ಅನುಸರಿಸಿ ನಡೆಯುತ್ತಿವೆ. ಇದಕ್ಕೆ ಮುಖ್ಯಕಾರಣವೇನೆಂದರೆ, ಈಗ ಸಾಧಾರಣವಾಗಿ ಈ ಕೈಗಾರಿಕೆಗಳೆಲ್ಲವೂ ಅಜ್ಞಾನಿಗಳೂ ನಿರಕ್ಷರಕುಕ್ಷಿಗಳೂ ಆದ ಜನಗಳ ಕೈಯ್ಯಲ್ಲಿಯೇ ನಿಂತಿದೆ. ಅವರಾದರೋ ಕಾಲಕ್ಕೆ ತಕ್ಕ ಹೊಸ ಪದ್ಧತಿಗಳನ್ನು ಅವಲಂಬಿಸಿ ಕೆಲಸ ಮಾಡಬೇಕೆಂದರೆ ಹಿಂಜೆಗೆಯುತ್ತಾರೆ. ಈ ಪ್ರಕಾರ ಸ್ವದೇಶದ ಕೈಗಾರಿಕೆಗಳಲ್ಲಿ ಲೋಪವಿರುವುದರಿಂದ, ಕೈಗಾರಿಕೆಗೆ ಬೇಕಾದ ಎಲ್ಲಾ ವಿಧವಾದ ಹಸಿಯ ಪದಾರ್ಥಗಳೂ (raw products) ಪರದೇಶಗಳಿಗೆ ಹೊರಟುಹೋಗಿ, ಆ ಪದಾರ್ಥಗಳೇ ಅಲ್ಲಿ ನಯವಾಗಿ ತಯಾರುಮಾಡಿದ ವಸ್ತುಗಳಾಗಿ ಬೇರೆ ರೂಪಿನಿಂದ ಮತ್ತೆ ನಮ್ಮ ಉಪಯೋಗಕ್ಕೋ ಅಲ್ಲಿಂದ ಬಂದು ಸೇರುತ್ತವೆ. ಯೂರೋಪ್ ಖಂಡವನ್ನೇ ನಡುನಡುಗಿಸುತ್ತಿರುವ ಈಗಿನ ಭಯಂಕರ ಯುದ್ಧದಿಂದ ನಮ್ಮ ಪಾಡು ಶೋಚನೀಯವಾಗಿದೆ. ಏಕೆಂದರೆ, ಹಸಿಯ ಪದಾರ್ಥಗಳು ಇಲ್ಲಿಂದ ಶತ್ರುರಾಜ್ಯಕ್ಕೆ ಹೋಗುವುದಕ್ಕಿಲ್ಲ, ಅಥವಾ ಅವುಗಳನ್ನು ಇಲ್ಲಿಯೇ ಕೈಗಾರಿಕೆಗಳಿಗೆ ಉಪಯೋಗಿಸುಕೊಳ್ಳುವಷ್ಟು ಸಾಮರ್ಥ್ಯವೂ ಇಲ್ಲ. ಅದರಿಂದ ನಮ್ಮ ದೇಶದಲ್ಲೆಲ್ಲ ವ್ಯಾಪಾರವು ನಿಂತುಹೋಗಿ, ನಮ್ಮೆಲ್ಲರ ಜೀವನಕ್ಕೇ ಆಧಾರಭೂತರಾಗಿರುವ ಬೇಸಾಯಗಾರರಿಗೆ ಕಷ್ಟವು ಪ್ರಾಪ್ತವಾಗಿದೆ. ಇದರಿಂದ ಉಂಟಾಗುವ ಅನರ್ಥಗಳನ್ನು ಸಾಧ್ಯವಾದಮಟ್ಟಿಗೆ ನಿವಾರಿಸುವುದಕ್ಕೆ ತಕ್ಕ ಉಪಾಯಗಳನ್ನು ದಯಾಳುಗಳಾದ ಸರ್ಕಾರದವರು ಆಗಿಂದಾಗಿಗೆ ಮಾಡುತ್ತಿರುವರು.

ಆ ಕಾರಣದಿಂದ ನಮ್ಮಲ್ಲಿಯ ವಿದ್ಯಾವಂತರೂ ಧನವಂತರೂ ಎಚ್ಚತ್ತು ಈಗಿನ ಸ್ಥಿತಿಯನ್ನು ಕಣ್ಣುತೆರೆದು ನೋಡಿ, ದೇಶಕ್ಷೇಮಕ್ಕೆ ಅವಶ್ಯವಾದ ಏರ್ಪಾಡುಗಳನ್ನು ಮಾಡಬೇಕು. ಈ ವಿಷಯದಲ್ಲಿ ನಮ್ಮ ಸರ್ಕಾರದವರು ಚಿಂತಾಕುಲರಾಗಿ ಉತ್ಸಾಹಶಾಲಿಗಳಿಗೆ ಬಂಡವಾಳವನ್ನು ಒದಗಿಸಬೇಕೆಂಬ ಉದ್ದೇಶದಿಂದ (ಬ್ಯಾಂಕಿನ ಎಂದರೆ) ಕುಸೀದಾಲಯದ ಕೆಲಸಗಳನ್ನು ಆರಂಭಿಸಿ ಅಭಿವೃದ್ಧಿ ಮಾಡುವುದಕ್ಕೆ ತಕ್ಕ ಪ್ರೋತ್ಸಾಹವನ್ನು ಕೊಟ್ಟು, ಅರ್ಥಸಾಧಕ ಸಭೆಯ ಮೂಲಕ ಸಂಸ್ಥಾನದಲ್ಲಿ ಅಭಿವೃದ್ಧಿ ಪಡಿಸಬಹುದಾದ ಕೈಗಾರಿಕೆಗಳ ಸ್ಥಿತಿಯನ್ನು ಚೆನ್ನಾಗಿ ಪರಿಶೋಧಿಸಿ, ಅವುಗಳಿಗೆ ಸಂಬಂಧಪಟ್ಟ ವಿಷಯಗಳನ್ನೆಲ್ಲಾ ಚೆನ್ನಾಗಿ ವಿಚಾರಮಾಡಿ ತಿಳಿದು, ಎಲ್ಲೆಲ್ಲಿ ಬೇಕೋ ಅಲ್ಲಲ್ಲಿ ಅನುಭವಜ್ಞರಾದ ಸಮರ್ಥರಿಂದ ತಕ್ಕ ಹಿತೋಕ್ತಿಗಳನ್ನು ಕೊಡಿಸುತ್ತಿರುವರು. ನಮ್ಮ ಸಂಸ್ಥಾನದಲ್ಲಿ ಅಭಿವೃದ್ಧಿಗೊಳಿಸಬಹುದಾದ ಕೈಗಾರಿಕೆಗಳು ಎಷ್ಟೋ ಇವೆ. ಇದಕ್ಕೆ ಅಲ್ಲಿನ ಜನಗಳು ಒಟ್ಟಾಗಿ ಕಲೆತು ಕೆಲಸಮಾಡಬೇಕು. ಈ ವಿಧವಾದ ಸಹಕರಣವಿದ್ದರೆ (ಕೊ-ಆಪರೇಷನ್) ನಮ್ಮಲ್ಲಿಯ ಕೈಗಾರಿಕೆಗಳನ್ನು ದೊಡ್ಡ ದೊಡ್ಡ ಕಾರ್ಖಾನೆಗಳಂತೆ ಮಾಡಿ ವಿಸ್ತರಿಸಬಹುದು. ಈವರೆಗೆ ವಿಚಾರಮಾಡಿ ಕಂಡುಹಿಡಿದ ವಿಷಯಗಳನ್ನು ಪರಿಶೀಲಿಸಿದರೆ, ಬರಿಯ ಕಾಡಿಗೆ ಸಂಬಂಧಪಡುವ ವಸ್ತುಗಳಿಂದಲೇ ಎಷ್ಟೊಂದು ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಸಾಧ್ಯವಿದೆ, ಎಂಬ ವಿಷಯವು ಗೊತ್ತಾಗುವುದು.

ಸೀಸದ ಕಡ್ಡಿ, ಬೆಂಕಿ ಕಡ್ಡಿ—ಇವುಗಳನ್ನು ತಯಾರುಮಾಡುವುದಕ್ಕೆ ಯೋಗ್ಯವಾಗಿರುವ ಮೃದುವಾದ ಒಣಮರಗಳು ಶಿವಮೊಗ್ಗ ಡಿಸ್ಟ್ರಿಕ್ಟಿನ ಕಾಡುಗಳಲ್ಲಿ ಹೇರಳವಾಗಿ ಸಿಕ್ಕುತ್ತವೆಂದು ಅನುಭವಜ್ಞರು ಕಂಡುಹಿಡಿದು ತೀರ್ಮಾನಮಾಡಿದ್ದಾರೆ. ಆದರೆ ಅವುಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳುವುದಕ್ಕೆ ತಕ್ಕ ಬಂಡವಾಳವುಳ್ಳವರು ಬೇಕು, ಮುಂದೆ ಬಂದು ಕೆಲಸಮಾಡಬೇಕು. ಕಾರ್ಖಾನೆಗಳನ್ನು ಸ್ಥಾಪಿಸುವುದಕ್ಕೆ ಶಿವಮೊಗ್ಗ ಪಟ್ಟಣವು ಬಹು ಅನುಕೂಲವಾಗಿದೆ. ಏಕೆಂದರೆ ಅಲ್ಲಿ ನೀರಿನ ವಸತಿ ಚೆನ್ನಾಗಿದೆ; ಬೇಕಾದಷ್ಟು ಮರ, ಚಕ್ಕೆ ಮೊದಲಾದ ಹಸಿಯ ಪದಾರ್ಥಗಳು ಸಿಕ್ಕುತ್ತವೆ; ಸಮೀಪದಲ್ಲಿ ಮರದಕೊರಡುಗಳನ್ನು ಕಟ್ಟುವುದಕ್ಕೆ ತಕ್ಕ ಸ್ಥಳವಿದೆ; ಅಲ್ಲಿಯೇ ರೈಲಿದೆ. ಸೀಸದ ಕಡ್ಡಿಯ ಕಾರ್ಖಾನೆಗೆ ಸುಮಾರು ೧ ಲಕ್ಷದ ೧೫ ಸಾವಿರ ರೂಪಾಯಿ ಬಂಡವಾಳವು ಬೇಕಾಗುವುದು. ಬೆಂಕಿಕಡ್ಡಿಯ ಕಾರ್ಖಾನೆಗೆ ಸುಮಾರು ೪ ಲಕ್ಷ ರೂಪಾಯಿ ಬೇಕಾಗುವುದು ಇದರಿಂದ ೧೦೦-ಕ್ಕೆ ಕನಿಷ್ಠಪಕ್ಷ ೧೩ ರಿಂದ ೨೦ ರೂಪಾಯಿಗಳವರೆಗೆ ಲಾಭಸಿಕ್ಕುತ್ತದೆ. ಇಷ್ಟೇ ಅಲ್ಲ. ನಮ್ಮ ಸಂಸ್ಥಾನದಲ್ಲಿ ಕಾಗದದ ಉಪಯೋಗವೂ ವಿಶೇಷವಾಗಿದೆ. ಈ ಕಾಗದವನ್ನು ಮಾಡುವುದಕ್ಕೆ ಬೇಕಾದ ಬಿದಿರು, ಮೃದುವಾದ ಒಣಮರಗಳು, ಇನ್ನೂ ನಾನಾ ಜಾತಿಯ ಹುಲ್ಲುಗಳು ಇವೇ ಮೊದಲಾದುವು ಮೈಸೂರು ಮತ್ತು ಶಿವಮೊಗ್ಗ ಡಿ|| ಗಳಲ್ಲಿ ಯಥೇಷ್ಟವಾಗಿ ಸಿಕ್ಕುತ್ತವೆ. ಇವುಗಳನ್ನು ತಕ್ಕ ಸಂಸ್ಕಾರದಿಂದ ಮುದ್ದೆಮಾಡಿಕೊಂಡು ಕಾಗದವನ್ನು ಮಾಡುವುದಕ್ಕೆ ಉಪಯೋಗಿಸಿಕೊಳ್ಳಬಹುದು. ಈ ಕೈಗಾರಿಕೆಗೆ ಸುಮಾರು ೧೯ ಲಕ್ಷ ರೂಪಾಯಿ ಬಂಡವಾಳ ಹಾಕಿದರೆ, ವೆಚ್ಚವೆಲ್ಲವೂ ಕಳೆದು ವರ್ಷದಲ್ಲಿ ೧೦೦-ಕ್ಕೆ ೧೦-ರಿಂದ ೧೩ ರೂ. ವರೆಗೆ ಲಾಭ ಸಿಕ್ಕುತ್ತದೆ. ಇದೇ ರೀತಿ ನಮ್ಮ ಸಂಸ್ಥಾನದಲ್ಲಿ ಗಂಧದ ಎಣ್ಣೆಯ ಕಾರ್ಖಾನೆಯನ್ನು ಸ್ಥಾಪಿಸಬಹುದು. ಅದಕ್ಕೆ ನಮ್ಮ ಸೀಮೆಯಲ್ಲಿ ವಿಶೇಷ ಅನುಕೂಲವಿದೆ. ಗಂಧದ ಎಣ್ಣೆಯನ್ನು ಬಟ್ಟಿಯಿಳಿಸುವ ಕೆಲಸದಿಂದ ಲಾಭವು ಹೆಚ್ಚಾಗಿ ಸಿಕ್ಕುತ್ತದೆ. ಇದಕ್ಕೆ ಯೂರೋಪ್, ಅಮೇರಿಕಾ ಖಂಡಗಳಲ್ಲಿ ಹೆಚ್ಚಾಗಿ ಗಿರಾಕಿಯಿದೆ. ಏಕೆಂದರೆ ಅವರು ಈ ಎಣ್ಣೆಯನ್ನು ಔಷಧ ಪ್ರಕ್ರಿಯೆಗಳಿಗೂ, ಪರಿಮಳದ್ರವ್ಯ, ಸಾಬೂನು ಇವೇ ಮೊದಲಾದ ಕೈಗಾರಿಕೆಗಳಿಗೂ ಉಪಯೋಗಿಸುವರು. ಆದರೆ ಅಲ್ಲಿ ಈಗ ಯುದ್ಧದ ಹಾವಳಿಯಿಂದ ಈ ವಿಧವಾದ ಕೈಗಾರಿಕೆಗಳು, ಕೇಳುವವರು ದಿಕ್ಕಿಲ್ಲದೆ, ತೂಕಡಿಸುತ್ತ ಬಿದ್ದಿವೆ. ಆದಕಾರಣ ಇಂತಹ ಒಳ್ಳೆಯ ಸಮಯವನ್ನು ಬಿಟ್ಟುಬಿಡದೆ ನಮ್ಮವರು ಈ ಕೈಗಾರಿಕೆಗಳಿಗೆ ಆದಷ್ಟು ಜಾಗ್ರತೆ ಮನಸ್ಸುಕೊಟ್ಟರೆ ವಿಶೇಷ ಆದಾಯಕರವಾಗಿರುತ್ತದೆ; ಅರ್ಥಸಾಧನೆಯು ಚೆನ್ನಾಗಿ ನಡೆಯುತ್ತವೆ. ಇದಕ್ಕೆ ಬೇಕಾದ ಗಂಧದ ಮರ ಮೊದಲಾದ ಹಸಿಯ ಪದಾರ್ಥಗಳಿಗೆ ನಮ್ಮ ಸಂಸ್ಥಾನದಲ್ಲಿ ಕ್ಷಾಮವಿಲ್ಲ; ಎಷ್ಟುಕಾಲದವರೆಗೆ ಬೇಕಾದರೂ ಹೇರಳವಾಗಿ ಸಿಕ್ಕುವುದು. ಇದಕ್ಕೆ ಕಡೆಯ ಪಕ್ಷ ೨ ಲಕ್ಷದ ೩೦ ಸಾವಿರ ರೂಪಾಯಿ ಬಂಡವಾಳವಾದರೆ ಸಾಕು. ಇದರಿಂದ ವರ್ಷಕ್ಕೆ ೪೪ ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದೆ ಲಾಭದೊರೆಯುತ್ತದೆ. ಇನ್ನೂ ಹೀಗೆಯೇ ನೋಡುತ್ತ ಹೋದರೆ, ನಮ್ಮ ಕಾಡುಗಳಲ್ಲಿ ಉತ್ಪತ್ತಿಯಾಗುವ ಪದಾರ್ಥಗಳಿಂದ ಎಷ್ಟೋವಿಧವಾದ ಕೈಗಾರಿಕೆಗಳನ್ನು ಹೂಡಿ, ಬೇಕಾದಷ್ಟು ಹಣವನ್ನು ಸಂಪಾದಿಸಬಹುದು; ಅನ್ಯದೇಶದವರಿಗೆ ನಾವು ಅನ್ಯಾಯವಾಗಿ ಕೊಡುತ್ತಿರುವ ಹಣವನ್ನೂ ಉಳಿಸಿಕೊಳ್ಳಬಹುದು. ದೃಷ್ಟಾಂತಕ್ಕೆ ಕೆಲವುಗಳ ಹೆಸರನ್ನು ತಿಳಿಸುತ್ತದೆ:—ಇದ್ದಲನ್ನು ತಯಾರುಮಾಡುವುದು, ಮರದಿಂದ ಎಣ್ಣೆತೆಗೆಯುವುದು, ನಿಕೃಷ್ಟವಾದ ಮರದ ತೊಲೆಗಳನ್ನು ಹದಗೊಳಿಸುವುದು, ವಿಧವಿಧವಾದ ಪೆಟ್ಟಿಗೆ, ಬೀರು, ಬೆಂಚು, ಕುರ್ಚಿ, ಮಂಚ, ಮೊದಲಾದ ಸಾಮಾನುಗಳನ್ನು ಕೌಶಲ್ಯದಿಂದ ಮಾಡುವುದು, ತಕ್ಕ ಮರಗಳಿಂದ ಬಗೆಬಗೆಯ ಗೋಂದುಗಳನ್ನು ಎತ್ತುವುದು, ಅರಗನ್ನು ತಯಾರುಮಾಡುವುದು, ಬೆತ್ತದ ಕೆಲಸವನ್ನು ಮಾಡುವುದು—ಇವೇ ಮೊದಲಾದ ಎಷ್ಟೋ ಕೆಲಸಗಳಿವೆ. ಈಗ ನಡೆಯುತ್ತಿರುವ ಕನ್ನಂಬಾಡಿ ಏರಿಯ ಕೆಲಸಕ್ಕೆ ಇದ್ದಲೇ ಒಂದು ವರ್ಷಕ್ಕೆ ಸುಮಾರು ೩೦-೩೩ ಲಕ್ಷ ಮಣಗಳು ಬೇಕಾಗುತ್ತಿದೆ. ಅಲ್ಲಿನ ಯಂತ್ರಕಾರ್ಯಗಳು ಹೆಚ್ಚಿದಹಾಗೆ ಇನ್ನೂ ಅಧಿಕವಾಗಿ ಬೇಕಾಗಬಹುದು. ಇಷ್ಟು ಇದ್ದಲನ್ನೂ ಬರಿಯ ಬೆಂಗಳೂರು ಡಿಸ್ಟ್ರಿಕ್ಟಿನ ಕಾಡುಗಳೊಂದರಿಂದಲೇ ಒದಗಿಸಿಕೊಡಬಹುದು.

ಅಂತೂ ಯಾವುದಕ್ಕೂ ಬಂಡವಾಳವುಳ್ಳವರು ಮುಂದೆ ಬರಬೇಕು. ಮೂಲೆಯಲ್ಲಿ ಮುಗ್ಗುತ್ತಿರುವ ಹಣವನ್ನು ಲಾಭಕರವಾದ ಕಾರ್ಯಗಳಿಗೆ ಹಾಕಬೇಕು. ಆ ಮೂಲಕ ಆದಾಯವನ್ನು ಹೆಚ್ಚಿಸಿಕೊಳ್ಳಬೇಕು. ಇದಕ್ಕಾಗಿ ಹತ್ತುಮಂದಿ ಒಟ್ಟಾಗಿ ಕಲೆತು, ಬಂಡವಾಳವನ್ನು ಕೂಡಿಸುವ ಪ್ರಯತ್ನ ಮಾಡಿ, ಕೆಲಸಕ್ಕೆ ತೊಡಗಬೇಕು. ಸಹಕಾರಕ್ರಮದಿಂದ (ಕೊ—ಆಪರೇಟಿವ್ ಸಿಸ್ಟಂ) ಮಾಡುವ ಯಾವ ಕೆಲಸವಾಗಲಿ ಬೇಗನೆ ಮುಂದಕ್ಕೆ ಬರುತ್ತದೆ. ಬುದ್ಧಿಶಾಲಿಗಳೂ, ಸಾಹಸಿಗಳೂ ಮನಸ್ಸುಮಾಡಿ ಒಟ್ಟಾಗಿ ಬಂಡವಾಳವನ್ನು ಕೂಡಿಸಿ, (ಜಾಯಿಂಟ್ ಸ್ಟಾಕ್ ಎಂದರೆ) ಸಂಯುಕ್ತ ಮೂಲಧನಕ್ರಮದಿಂದ ಕೆಲಸಕ್ಕೆ ಆರಂಭಿಸಿದರೆ ಯಾವ ಕಷ್ಟವೂ ಇರುವುದಿಲ್ಲ. ಇಂತಹ ಘನವಾದ ಕೆಲಸಗಳನ್ನು ಕಾರ್ಯಶೀಲರೂ, ವ್ಯವಹಾರದಕ್ಷರೂ, ಸಮರ್ಥರೂ ಅನುಭವಜ್ಞರೂ ಆದ ಉತ್ಸಾಹಶಾಲಿಗಳು ವಹಿಸಿಕೊಂಡು ಮಾಡಿದರೆ, ಯಾವ ವಿಧವಾದ ಕೈಗಾರಿಕೆಯಾದರೂ ದಿನೇ ದಿನೇ ಅಭಿವೃದ್ಧಿಯಾಗಿ ಭಾಗಸ್ಥರಿಗೆ ಆದಾಯವು ಹೆಚ್ಚುವುದರಲ್ಲಿ ಸಂದೇಹವಿಲ್ಲ. ನಮ್ಮ ಮೈಸೂರು ಕಾಡುಗಳಿಗೆ ಸಂಬಂಧಪಟ್ಟ ಕೈಗಾರಿಕೆಗಳನ್ನು ಇಷ್ಟುದೂರ ಒಂದೆರಡು ಮಾತಿನಲ್ಲಿಯೇ ಸ್ಥೂಲವಾಗಿ ತಿಳಿಸಿದೆ. ಇದರಿಂದ ಜನಗಳು ಈ ವಿಷಯಗಳನ್ನು ಏನು, ಎತ್ತ, ಎಂದು ಚೆನ್ನಾಗಿ ವಿಚಾರಮಾಡಿ, ಆಸಕ್ತಿಯಿಂದ ಕಾರ್ಯತಃ ಏನನ್ನಾದರೂ ಮಾಡಿದರೆ ನಿಜವಾಗಿಯೂ ಪ್ರಯೋಜನವಿರುವುದು. ಇದರಿಂದ ಬಂಡವಾಳ ಹಾಕುವವರಿಗೆಲ್ಲರಿಗೂ ಆದಾಯವಿರುವುದಲ್ಲದೆ, ಸಹೋದರಪ್ರಾಯರಾದ ಬಡಜನಗಳಿಗೂ ಕೆಲಸ ಉಂಟುಮಾಡಿಕೊಟ್ಟು ಸುಖಜೀವನವನ್ನು ತೋರಿಸಿ ಆ ಮೂಲಕ ದೇಶಕ್ಷೇಮಕ್ಕೆ ಸರ್ವತೋಮುಖದಿಂದ ಮಾರ್ಗ ಮಾಡಿದಂತಾಗುವುದು. ನಿಜವಾದ ದೇಶಾಭಿಮಾನಿ ಎನ್ನಿಸಿಕೊಳ್ಳುವುದಕ್ಕೆ ಇದಕ್ಕಿಂತ ಘನತರವಾದ ಕಾರ್ಯವು ಖಂಡಿತವಾಗಿಯೂ ಮತ್ತೊಂದಿಲ್ಲ.

ಅರ್ಥಸಾಧಕ ಪತ್ರಿಕೆ.

ಭರತಖಂಡದ ವೃತ್ತಾಂತಗಳು.

ಮೊನ್ನೆತಾನೇ ಹರಿದ್ವಾರದಲ್ಲಿ ನಡೆದ ಕುಂಭಮೇಳಾ ಯಾತ್ರೆಗೆ ೫ ಲಕ್ಷ ಮಂದಿ ಯಾತ್ರಿಕರು ಸೇರಿದ್ದರಂತೆ.

ಬೇಸಗೆಯನ್ನು ಕಳೆಯುವುದಕ್ಕಾಗಿ ತಿರುವಾಂಕೂರು ಮಹಾರಾಜರು ನೀಲಗಿರಿಯನ್ನು ಇಷ್ಟರಲ್ಲಿಯೇ ಸೇರುವವರಾಗಿದ್ದಾರೆ.

ಈಗ ಮದರಾಸಿಗೆ ಪ್ರಸಿದ್ಧ ದೇಶಭಕ್ತರಾದ ಗಂಧಿ ದಂಪತಿಗಳು ಬಂದಿರುವರು. ಪುರನಿವಾಸಿಗಳು ಅಭೂತಪೂರ್ವವಾದ ಗೌರವವನ್ನು ತೋರಿಸಿ ಸತ್ಕರಿಸುತ್ತಿರುವರು.

ಮದರಾಸಿನ ಆಸ್ಪತ್ರೆ ಹಡಗು ಕಳೆದ ತಾರೀಖು ೧೫ ರಲ್ಲಿ ಮದರಾಸು ತೀರಕ್ಕೆ ಬಂದು ನಿಂತಿತು. ಅದರಲ್ಲಿ ದಕ್ಷಿಣ ಆಫ್ರಿಕಾ ಯುದ್ಧದಲ್ಲಿ ಏಟುತಿಂದ ಬಹುಶಃ ೩೦ ಮಂದಿ ಸೈನಿಕರಿದ್ದರು. ಇವರನ್ನು ಅದೇದಿನ ಸಾಯಂಕಾಲ ೬ ಗಂಟೆಯಲ್ಲಿ ಸ್ಪೆಷಲ್ ಹೊಗೆಬಂಡಿಯ ಮೂಲಕ ಬೆಂಗಳೂರಿಗೆ ಕಳುಹಿಸಿಕೊಟ್ಟರು. ಹಡಗು ಅದೇದಿನ ಮರಳಿ ಬೊಂಬಾಯಿಕಡೆಗೆ ಹೊರಟಿತು.

ಮುಲ್ತಾನ್ ದೇಶದಲ್ಲಿ ಇತ್ತೀಚೆಗೆ ನಡೆಯುತ್ತಾ ಬಂದಿರುವ ಕಳವು ಸುಲಿಗೆ ಮೊದಲಾದ ಅಪರಾಧಗಳಿಗೆ ಗುರಿಯಾದ ಜನರು ೧೫೦ ಮಂದಿ ಇದ್ದಾರೆ. ಇವರುಗಳ ವಿಚಾರಣೆಯು ಕಳೆದ ತಾರೀಖು ೧೯ ರಿಂದ ಆರಂಭಿಸಲ್ಪಟ್ಟಿದೆ. ಹಿಂದೂ ದೇಶರಕ್ಷಣ ನೂತನ ಶಾಸನದ ಪ್ರಕಾರ ಸ್ಪೆಷಲ್ ಕಮಿಷನರಿಂದ ಇವರ ವಿಚಾರಣೆಯು ನಡೆಯುವಂತೆ ಏರ್ಪಡಿಸಲ್ಪಟ್ಟಿದೆ.

ಕಟಕ್ಕಿನ ನಿವಾಸಿಗಳಾದ ಆ|| ಎಂ. ಎಸ್. ದಾಸ್ ರವರು ಯುದ್ಧರಂಗದಲ್ಲಿರುವ ಭಾರತೀಯ ಸೈನಿಕರ ಉಪಯೋಗಕ್ಕಾಗಿ ಬೇಕಾಗುವ ಹುಕ್ಕಾಗಳನ್ನೂ, ಹೊಗೇಸೊಪ್ಪನ್ನೂ ಸಹಾಯಮಾಡಲು ಒಪ್ಪಿಕೊಂಡು ಈ ವಾರದಲ್ಲಿ ೧೦೦೦ ಹುಕ್ಕಾಗಳನ್ನೂ ಅವಕ್ಕೆ ಬೇಕಾಗುವಷ್ಟು ಹೊಗೇಸೊಪ್ಪನ್ನೂ ಕಳುಹಿಸಿಕೊಡುವರು. ಇನ್ನು ಒಂದು ಪಕ್ಷದೊಳಗೆ ಇನ್ನಷ್ಟನ್ನು ಕಳುಹಿಸಿ ಕೊಡುವರು

ಬಂಗಾಳಾಕ್ಕೆ ಸೇರಿದ ಡೈಮಂಡ್ ಹಾರ್ಬರ್ ಸಬ್‌ಡಿವಿಜನ್ನಿಗೆ ಸೇರಿದ ಧೋರಾ ಎಂಬ ಗ್ರಾಮಕ್ಕೆ ಮೊನ್ನೆಯ ಶನಿವಾರ ರಾತ್ರಿ ಕಳ್ಳರು ಹೋಗಿ ಅಲ್ಲಿನ ಗ್ರಾಮ ಪಂಚಾಯಿತಿಯ ಅಧಿಪತಿಯಾದ ಬಾಬೂ ಮಹಾದೇವ ಭಟರ್ಜಿ ಎಂಬುವರ ಮನೆ ಬಳಿಗೆ ಹೋಗಿ ಅವರನ್ನು ಪೋಲೀಸ್ ಸಬ್ ಇನ್ಸ್‌ಪೆಕ್ಟರು ಕರೆಯುವುದಕ್ಕೆ ಬಂದಿರುವರೆಂದು ಕೂಗಿಸಿದರು. ಮಹಾದೇವ ಭಟರ್ಜಿಯು ನಿಜವೆಂದು ತಿಳಿದು ಹೊರಕ್ಕೆ ಬಂದಕೂಡಲೇ ಕಳ್ಳರು ೬-೭ ಮಂದಿಗಳು ಆತನ ಮೇಲೆ ಬಿದ್ದು ಹಿಡಿದು ಒಳಕ್ಕೆಳೆದುಕೊಂಡು ಹೋದರು. ಹೊರಗಿದ್ದ ಕೆಲವು ಕಳ್ಳರು ಸಿಡಿಮದ್ದುಗಳನ್ನಿಡುತ್ತಿದ್ದರು. ತಾವು ಜರ್ಮನರೆಂದೂ ಗ್ರಾಮವನ್ನು ಸುಲಿಯುವುದಕ್ಕೆ ಬಂದಿದ್ದೇವೆಂದೂ ಹೇಳುತ್ತಾ ಕಳ್ಳರು ಮಹಾದೇವ ಭಟರ್ಜಿಯನ್ನು ಕಬ್ಬಿಣದ ಪೆಟ್ಟಿಗೆಯ ಬೀಗದ ಕೈ ಕೊಡೆಂದು ಕೇಳಿ ಈಸಿಕೊಂಡು ಪೆಟ್ಟಿಗೆಯನ್ನು ತೆಗೆದು ಬಹಳ ಆಸ್ತಿಯನ್ನು ದೋಚಿಕೊಂಡು ಹೋಗಿರುವರು.

ಬಂಗಾಳದ ಬಾಕರ್ಗಂಜ್ ಜಿಲ್ಲೆಗೆ ಸೇರಿದ ಡೋರ್‍ಗಾಬರಿ ಎಂಬ ಗ್ರಾಮದಲ್ಲಿರುವ ಒಂದು ಮನೆಗೆ ಸಾಯುಧರಾದ ಕಳ್ಳರು ಬಾಗಿಲನ್ನೊಡೆದು ನುಗ್ಗಿದರು. ಮನೆಯವರು ದಿಗಿಲುಬಿದ್ದು ಹಿತ್ತಲ ಬಾಗಿಲಿನಿಂದ ಪ್ರಾಣರಕ್ಷಣೆಗಾಗಿ ಓಡಿಹೋದರು. ಮನೆಯೊಳಗಿನ ಆಸ್ತಿಯು ಇಂಥಾಕಡೆ ಇದೆಯೆಂದು ತೋರಿಸಿಕೊಡುವುದಕ್ಕೆ ಮನೆಯಲ್ಲಿ ಯಾರೂ ಉಳಿದಿಲ್ಲವೆಂಬ ಕೋಪದಿಂದ ಕಳ್ಳರು ಆ ಮನೆಗೆ ಬೆಂಕಿಯನ್ನಿಕ್ಕಿಬಿಟ್ಟರು. ಹೊರಬಾಗಿಲಿಗೆ ಚಿಲುಕವನ್ನು ಹಾಕಿಕೊಂಡರು. ಒಳಗೆ ಉಳಿದಿದ್ದ ಎರಡು ಮಕ್ಕಳೂ ಅವುಗಳ ತಾಯಿಯೂ ಹೊರಕ್ಕೆ ಬರಲವಕಾಶವಿಲ್ಲದೆ ಬೆಂಕಿಯಲ್ಲಿ ಉರಿದುಹೋದರು. ಇನ್ನೊಂದು ಮಗುವನ್ನು ಅದರ ತಾಯಿಯ ಕಾಂಕುಳಿನಿಂದ ಸೆಳೆದು ತಂದು ಕಳ್ಳರು ಬೆಂಕಿಯೊಳಕ್ಕೆ ಎಸೆದುಬಿಟ್ಟರಂತೆ. ಅಷ್ಟರಲ್ಲಿ ಗ್ರಾಮಸ್ಥರೆಲ್ಲಾ ಉರಿಯುತ್ತಿದ್ದ ಮನೆಯ ಬಳಿಗೆ ಬಂದರು. ಆದರೆ ಕಳ್ಳರು ಆಯುಧಪಾಣಿಗಳಾಗಿದ್ದುದರಿಂದ ತಾವು ಅವರಮೇಲೆ ಏನನ್ನೂ ಮಾಡಲಾರದೆಹೋದರು. ಕಳ್ಳರು ಆಸ್ತಿಯು ಸಿಕ್ಕಲಿಲ್ಲವೆಂಬ ಕೋಪದಿಂದ ಹಲ್ಲುಕಡಿಯುತ್ತ ತಲೆ ತಪ್ಪಿಸಿಕೊಂಡು ಹೋದರು.

ವಿದೇಶವೃತ್ತಾಂತಗಳು.

ಯುದ್ಧಾರಂಭ ಕಾಲದಿಂದ ಏಪ್ರೆಲ್ ತಾ|| ೧೧ ರ ವರೆಗೆ ಆಂಗ್ಲ ಸೇನೆಯೊಳಗೆ ೧,೩೯,೩೪೭ ಮಂದಿಗಳು ನಷ್ಟವಾಗಿರುವುದೆಂದು ಕಾಮನ್ಸ್ ಸಭೆಯಲ್ಲಿ ಹೇಳಲ್ಪಟ್ಟಿರುವುದು.

ಈಜಿಪ್ಟಿನಲ್ಲಿ ಸುಲ್ತಾನರನ್ನು ಕೊಲ್ಲುವುದಕ್ಕೆ ಪ್ರಯತ್ನಿಸಿದ ಖಲೀಲ್ ಎಂಬ ವರ್ತಕನನ್ನು ಕಳೆದ ಸೋಮವಾರದಿಂದ ಮಿಲಿಟರಿ ಕೋರ್ಟಿನವರು ವಿಚಾರಣೆ ಮಾಡುತ್ತಿರುವರು

ಇಟಲಿ-ಆಸ್ಟ್ರಿಯಾ ಎಲ್ಲೆ ಕಟ್ಟುಗಳಲ್ಲಿ ಆಸ್ಟ್ರಿಯಾದ ಕೆಲವು ಸೈನಿಕರು ಇಟಲಿಯ ಕಾವಲಿನ ಸೈನಿಕರ ಮೇಲೆ ಬೀಳಲು ಇಟಲಿಯವರು ಆಸ್ಟ್ರಿಯನ್ನರನ್ನು ಅವರ ದೇಶದೊಳಕ್ಕೆ ೨೦೦ ಗಜಗಳ ದೂರ ದಬ್ಬಿಕೊಂಡು ಹೋದರೆಂತಲೂ, ಆಗ ನಡೆದ ಯುದ್ಧದಲ್ಲಿ ಎರಡು ಪಕ್ಷದಲ್ಲೂ ಬಹುಶಃ ೧೦೦ ಮಂದಿಗಳ ವರೆಗೆ ಹತರಾಗಿರುವರೆಂತಲೂ ಸುದ್ದಿ ಬಂದಿದೆ.

ಆಸ್ಟ್ರಿಯಾದ ೧೫ ಮಂದಿ ಸೈನಿಕರು ಇಟಲಿ ದೇಶದೊಳಕ್ಕೆ ಲೋರೆರೋ ಕಣಿವೆಯ ಮಾರ್ಗವಾಗಿ ೨ ಮೈಲಿಗಳ ದೂರ ನುಗ್ಗಿಹೋದರು. ಅಲ್ಲಿನ ಇಟಲಿಯ ಸುಂಕದ ಕಟ್ಟೆಯ ಉದ್ಯೋಗಿಗಳು ಅವರ ಅಕ್ರಮಪ್ರವೇಶವನ್ನು ಕಂಡು ರೇಗಿ ಹಿಡಿದುಕೊಳ್ಳಲು ಪ್ರಯತ್ನಿಸಿದಾಗ ಪರಸ್ಪರ ಯುದ್ಧವಾಗಿ ಎರಡು ಕಡೆಯವರಿಗೂ ತುಪಾಕಿಯ ಗುಂಡಿನೇಟುಬಿದ್ದಿರುವುದೆಂದು ರೋಮ್ ನಗರದಿಂದ ಸುದ್ದಿ ಬಂದಿರುವುದು.

ಆಸ್ಟ್ರಿಯಾದವರಿಂದ ಇಟಲಿಯವರು ಕೋರುವ ಸ್ವಲ್ಪ ದೇಶಭಾಗವನ್ನು ಕೊಡಿಸಿಬಿಟ್ಟು ಅವರವರಿಗೆ ಮನಃಕಷಾಯವನ್ನು ತೊಲಗಿಸಿಬಿಡಬೇಕೆಂದು ಜರ್ಮನರು ಬಹಳ ಪ್ರಯತ್ನಪಟ್ಟರು. ಆದರೂ ಅವರ ಸಾಹಸವೆಲ್ಲಾ ವ್ಯರ್ಥವಾದುವೆಂದು ಪ್ರಕಟವಾಗಿದೆ. ಬಹುಶಃ ಇಟಲಿಯವರು ಮಿತ್ರಮಂಡಲಿಯವರೊಡನೆ ಕೂಡಿ ಆಸ್ಟ್ರಿಯಾದಮೇಲೆ ತಮಗಿರುವ ರೋಷವನ್ನು ಶಮನ ಮಾಡಿಕೊಳ್ಳಬಹುದು.

ಆಸ್ಟ್ರಿಯಾ ಪ್ರಭುತ್ವದವರು ಈಗ ಹೊಸದಾಗಿ ಒಂದು ಪ್ರಕಟನವನ್ನು ಮಾಡಿ ಅದರಲ್ಲಿ ತಿಳಿಸಿರುವುದೇನೆಂದರೆ— "ಇದುವರೆಗೆ ೧೯ ವರ್ಷದಿಂದ ೪೨ ವರ್ಷ ವಯಸ್ಸಿನೊಳಗಿರುವ ಪುರುಷರೆಲ್ಲಾ ಸೇನೆಯಲ್ಲಿ ಸೇರಬೇಕೆಂಬ ವಿಧಿ ಇದ್ದಿತಷ್ಟೆ. ಈಗಿನ ಯುದ್ಧವು ಬಹಳಕಾಲ ನಡೆಯುವುದೆಂದು ತೋರುವ ಕಾರಣ ಇನ್ನು ಮುಂದೆ ೧೮ ವರ್ಷ ಮೊದಲುಗೊಂಡು ೫೦ ವಯಸ್ಸಿನೊಳಗಿನವರೆಲ್ಲಾ ಸೇನೆಯಲ್ಲಿ ಸೇರಿ ಕೆಲಸ ಮಾಡಬೇಕು."

ಲೋಕಪ್ರಸಿದ್ಧ ಗ್ಲಾಡ್‌ಸ್ಟನ್ ಮಂತ್ರಿವರ್ಯರ ಮೊಮ್ಮಕ್ಕಳಾದ ಗ್ಲಾಡ್‌ಸ್ಟನ್ ರವರು ಈಗಿನ ಯುದ್ಧದಲ್ಲಿ ಹತರಾದರೆಂಬ ವಿಷಾದಕರವಾದ ವಾರ್ತೆಯು ಬಂದಿರುವುದು ಇವರು ಲಿಬರಲ್ ಪಕ್ಷದ ಸಭಿಕರಾಗಿ ಪಾರ್ಲಿಮೆಂಟನ್ನು ಸೇರಿ ಕೆಲಸಮಾಡುತ್ತಿದ್ದರು. ಇವರ ಪರಂಪರೆಯೇ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಹೆಸರಾದುದು. ಇವರಿಗೆ ಅಂತ್ಯಕಾಲದಲ್ಲಿ ೪೦ ವರ್ಷಗಳು ಮಾತ್ರವೇ ಆಗಿದ್ದುವು. ಇವರು ವೇಲ್ಸ್ ಪುಸಲೀರ್ ಪಟಾಲಮ್ಮಿನೊಡನೆ ಯುದ್ಧಾಂಗಣಕ್ಕೆ ಹೋಗಿದ್ದರು. ಕಳೆದ ತಾ|| ೧೩ ನೇ ಮಂಗಳವಾರದ ದಿನ ತಮ್ಮ ಕಂದರಗಳ ಗೋಡೆಯಹತ್ತಿರ ನಿಂತುಕೊಂಡು ಶತ್ರುಗಳು ಸಿಡಿಮದ್ದನ್ನು ಹಾರಿಸುತ್ತಿರುವ ಯಂತ್ರವನ್ನು ನೋಡುತ್ತಿದ್ದರು. ಅಷ್ಟರಲ್ಲಿ ಶತ್ರುಗಳ ಕಡೆಯ ಒಂದು ತುಪಾಕಿ ಗುಂಡು ಇವರಿಗೆ ಬಡಿದು ಅಂತ್ಯಗೊಳಿಸಿತು.

ಶಿಲ್ಪವಾಣಿಜ್ಯ.

(ಗೋಣಿನಾರು)

ಪ್ರಪಂಚದಮೇಲೆ ಗೋಣಿಚೀಲಗಳು ಎಲ್ಲೆಲ್ಲಿ ಮಾರಲ್ಪಡುತ್ತವೋ ಅಲ್ಲಲ್ಲಿಗೆ ಬೇಕಾದಷ್ಟು ಗೋಣಿಯನಾರೆಲ್ಲಾ ನಮ್ಮ ಬಂಗಾಳಾದೇಶದಿಂದಲೇ ಸಾಗಿಹೋಗುತ್ತಿದ್ದಿತು. ಯುದ್ಧವು ಪ್ರಾಪ್ತವಾದುದರಿಂದ ಜರ್ಮನಿಗೆ ಹೋಗುತ್ತಿದ್ದ ಗೋಣಿಯನಾರು ನಿಂತುಹೋದುದರಿಂದ, ಈಗ ಆ ದೇಶದಲ್ಲಿ ಈ ನಾರಿಗೆ ಕ್ಷಾಮಪ್ರಾಪ್ತವಾಗಿದೆ. ಅಲ್ಲಿ ಅಷ್ಟು ಇಷ್ಟು ದೊರೆಯುವ ಗೋಣಿಚೀಲಗಳನ್ನೆಲ್ಲಾ ಸೈನ್ಯಶಾಖೆಯವರೇ ತೆಗೆದುಕೊಂಡು ಹೋಗುತ್ತಿರುವುದರಿಂದ ಟೆಕ್ಸಿಲೋಸ್ ಎಂಬ ಮತ್ತೊಂದುತೆರದ ನಾರಿನಿಂದ ಜರ್ಮನರು ಚೀಲ ಮೊದಲಾದ ಸಾಮಾನುಗಳನ್ನು ನಿರ್ಮಿಸುವ ಪದ್ಧತಿಯನ್ನು ಅಭಿವೃದ್ಧಿಗೊಳಿಸುತ್ತಿದ್ದಾರೆ. ಈ ಟೆಕ್ಸಿಲೋಸಿನ ಕರ್ಮಾಗಾರಗಳು ಇದಕ್ಕೆ ಮುಂಚೆ ಆ ದೇಶದಲ್ಲಿ ಅಲ್ಲಲ್ಲಿಗೆ ಸಾಮಾನ್ಯವಾಗಿದ್ದುವು. ಯುದ್ಧಾರಂಭವಾದೀಚೆಗೆ ಅವು ಬಹಳ ಅಭಿವೃದ್ಧಿಗೊಳಿಸಲ್ಪಟ್ಟಿವೆ ಈ ಟೆಕ್ಸಿಲೋಸ್ ಎಂಬುದು ವಿದ್ಯುಚ್ಛಕ್ತಿಗೆ ಸಂಬಂಧಿಸಿದ ಕೆಲ ಮುಟ್ಟುಗಳನ್ನು ಮಾಡುವುದಕ್ಕೂ, ತಂತಿಗಳನ್ನು ಮಾಡುವುದಕ್ಕೂ, ಚೀಲಗಳನ್ನು ಹೊಲಿಯುವುದಕ್ಕೂ ಉಪಯೋಗಿಸಲ್ಪಡುತ್ತಲಿದೆ.

ಮೈಸೂರ್ ಸ್ಟಾರ್.

ಸನ್ ೧೯೧೫ ನೆಯ ಏಪ್ರಿಲ್ ತಾ|| ೨೫ ನೆಯ ಭಾನುವಾರ.

ವರ್ಣಾಶ್ರಮಭೇದ ನಿರಸನ.

ಭರತಖಂಡದಲ್ಲಿ ಎಷ್ಟೋ ಸಹಸ್ರಾರು ವರ್ಷಗಳಿಂದ ವರ್ಣ ಜಾತಿ ಆಶ್ರಮ ಮೊದಲಾದ ಭೇದಗಳು ಏರ್ಪಟ್ಟಿರುತ್ತವೆ. ಈ ಭೇದಗಳು ಈ ದೇಶದ ಹೊರತು ಪ್ರಪಂಚದಮೇಲೆ ಮತ್ತಾವದೇಶದಲ್ಲೂ ಕಾಣುವುದಿಲ್ಲ. ಇದನ್ನು ಮೊಟ್ಟಮೊದಲು ಈ ದೇಶದಲ್ಲಿ ಏರ್ಪಡಿಸಿದವರ ಉದ್ದೇಶವು, ಈ ಭೇದಗಳಿಂದ ದೇಶಕ್ಕೆ ಒಂದು ವಿಧದ ಹಿತವುಂಟಾಗಬೇಕೆಂಬುದೇ ಆಗಿದ್ದಿತು. ಒಂದೊಂದು ವೃತ್ತಿಗಳನ್ನವಲಂಬಿಸಿದವರು ಒಂದೊಂದು ಹೆಸರಿನಿಂದ ಕರೆಯಲ್ಪಡುತ್ತಲೂ, ಇತರರು ಬೇರೆ ವೃತ್ತಿಗಳಲ್ಲಿ ವ್ಯಭಿಚರಿಸದಂತೆಯೂ ಮಾಡಲ್ಪಟ್ಟಿದ್ದಿತು. ವರ್ಣಾಶ್ರಮವಿಭೇದಗಳು ಪರಸ್ಪರ ಉಚ್ಚನೀಚಭಾವಗಳನ್ನು ಸಿದ್ಧಾಂತಿಸುವುದಕ್ಕಾಗಿ ಏರ್ಪಟ್ಟವುಗಳಾಗಿರಲಿಲ್ಲ. ಆದುದರಿಂದ ವರ್ಣಜಾತ್ಯಾಶ್ರಮಾದಿನಾಮಗಳು ಭಿನ್ನಭಿನ್ನವಾಗಿದ್ದರೂ, ಅವುಗಳನ್ನು ಹೊಂದಿದ ಜನರಲ್ಲಿ ಐಕಮತ್ಯಕ್ಕೂ ಪರಸ್ಪರ ಹಿತೈಷಿತೆಗೂ ಯಾವ ನ್ಯೂನತೆಯೂ ಇರಲಿಲ್ಲ. ಬರಬರುತ್ತ ಈ ವರ್ಣಾದಿವಿಭಾಗಗಳು ದೇಶದಲ್ಲಿ ಜನವರ್ಗದ ಉಚ್ಚನೀಚಭಾವನೆಗೆ ಸಾಧಕವಾಗಿ, ಅದರಿಂದ ವಿಪರೀತವಾದ ಮನಃಕಾಲುಷ್ಯಗಳುಂಟಾಗುತ್ತಿರುವುವೆಂಬುದು ಸರ್ವತ್ರ ವಿದಿತವಾಗಿರುತ್ತದೆ.

ಇದರಮೇಲೆ ದೇಶಹಿತೇಚ್ಛುಗಳಾದ ಹಲವರು ಮುಂದಾಳುಗಳು ಭರತಖಂಡದಲ್ಲಿ ವರ್ಣ ಜಾತಿ ಮೂಲಕವಾದ ಭೇದಗಳನ್ನೇ ನಿರ್ಮೂಲಮಾಡಿಬಿಡಬೇಕೆಂದೂ, ಈ ಸಾಂಘಿಕಭೇದಗಳು ದೇಶದ ಸಕಲವಿಧ ಶ್ರೇಯಸ್ಸಿಗೂ ವಿಘ್ನವನ್ನು ತರುತ್ತಿರುವುವೆಂದೂ, ಪರಸ್ಪರ ಪ್ರೇಮಾಭಿವೃದ್ಧಿಗೆ ಇದು ಮಹತ್ತರ ಕಂಟಕವಾಗಿರುವುದೆಂದೂ, ಎಂಥ ಉದಾರಚಿತ್ತರನ್ನೂ, ಪಂಡಿತಪಾಮರರನ್ನೂ ಸಹ ಈ ಜಾತಿ ವರ್ಣಾಶ್ರಮ ಭೇದಭಾವವು ಒಂದೊಂದುಸಲ ಸ್ವಾರ್ಥಪರತೆಗೆ ಸೆಳೆದು ತಮ್ಮನ್ನು ಉತ್ತಮರನ್ನಾಗಿಯೂ, ಇತರರನ್ನು ನೀಚರನ್ನಾಗಿಯೂ ಕಾಣುವಂತೆ ಪ್ರೇರಿಸದೆ ಬಿಡುವುದಿಲ್ಲವೆಂದೂ, ಇಂಥ ಭಾವವು ಹಾಳಾಗುವವರೆಗೂ ಹಿಂದೂಗಳಲ್ಲಿ ಜನಾಂಗತೆಯು ಸಮನಿಸಲಾರದೆಂದೂ, ಐಕಮತ್ಯದಿಂದುಂಟಾಗುವ ಲೌಕಿಕಪುರುಷಾರ್ಥವು ಈ ದೇಶಕ್ಕೆ ಸಿದ್ಧಿಸಲಾರದೆಂದೂ ನಿರ್ಧರಿಸಿಕೊಂಡಿರುತ್ತಾರೆ. ಮತ್ತೂ ಆ ನಿರ್ಧಾರವನ್ನು ಮನಸ್ಸಿನಲ್ಲಿ ಮಾತ್ರವೇ ಮಾಡಿಕೊಂಡಿರುವುದು ಪ್ರಯೋಜಕರವಲ್ಲವೆಂದರಿತು ಸಾಧ್ಯವಾದೆಡೆಗಳಲ್ಲೆಲ್ಲಾ ಕಾರ್ಯರೂಪದಿಂದಲೂ ಆಚರಿಸುವುದಕ್ಕುಪಕ್ರಮಿಸಿದ್ದಾರೆ. ಇದಕ್ಕುದಾಹರಣೆಯಾಗಿ ಮೊದಮೊದಲು ಉತ್ತಮವರ್ಣದವರೇ ಒಂದು ಮತದಲ್ಲಿರುವ ಬೇರೆಬೇರೆ ಬೆಡಗುಗಳಲ್ಲಿ ವಿವಾಹಸಂಬಂಧಕ್ಕುಪಕ್ರಮಿಸಿದರು. ಬಳಿಕ ಭಿನ್ನಮತಗಳಲ್ಲಿ ದೇಹಸಂಬಂಧವನ್ನು ಮಾಡುವುದಕ್ಕೂ ಪ್ರಯತ್ನಿಸಿದರು. ಈಚೀಚೆಗೆ ಸರ್ವಭ್ರಾತೃತ್ವವನ್ನು ಬೆಳೆಸಬೇಕೆಂಬ ಉದ್ದೇಶದಿಂದ ಸಂಘಸಂಸ್ಕಾರಾಭಿಮಾನಿಗಳು ವಿವಿಧಮತಜಾತಿಗಳೊಡನೆಲ್ಲಾ ಪಙ್ಕ್ತಿಭೋಜನಕ್ಕೆ ಉದ್ಯುಕ್ತರಾಗಿರುವರು.

ಇಂಥ ಭಾವಗಳಿಗೆಲ್ಲಾ ಧರ್ಮಶಾಸ್ತ್ರದ ಕಟ್ಟು ಅವಕಾಶಕೊಡದಿರುವುದರಿಂದ, ಈ ನೂತನಸಂಪ್ರದಾಯಗಳಿಗೆ ಸಂಪೋಷಣವನ್ನುಂಟುಮಾಡುವುದಕ್ಕಾಗಿ ಬ್ರಹ್ಮೋಪಂಥ ಮೊದಲಾದುವುಗಳು ಹೊಸಹೊಸದಾಗಿ ಭರತಖಂಡದಲ್ಲಿ ಉದಯಿಸಿ ಇರುವುವು. ಕರ್ನಲ್ ಆಲ್ಕಾಟ್-ಅನಿಬಿಸೆಂಟಮ್ಮ ಮೊದಲಾದವರುಗಳಿಂದ ಪ್ರವರ್ತಿಸಲ್ಪಟ್ಟಿರುವ ದಿವ್ಯಜ್ಞಾನಸಮಾಜವೆಂಬುದೊಂದು ಇತ್ತೀಚೆಗೆ ನಮ್ಮ ದೇಶದಲ್ಲಿ ಹರಡುತ್ತಿದೆಯಷ್ಟೆ. ಆ ಸಮಾಜದ ತತ್ತ್ವಗಳೂ ಕೂಡ ವರ್ಣಾಶ್ರಮಭೇದನಿರಸನಕ್ಕೆ ಸಹಾಯಕವಾಗಿ ಏರ್ಪಟ್ಟವೆಯೆಂಬುದು ಮೊನ್ನೆತಾನೇ ಮದ್ರಾಸಿನಲ್ಲಿ ನಡೆದ ಒಂದು ಸಂಗತಿಯಿಂದ ವ್ಯಕ್ತವಾಗಿರುತ್ತದೆ.

ಈ ದಿವ್ಯಜ್ಞಾನಸಮಾಜಕ್ಕೆ ನಮ್ಮ ದೇಶದ ಎಲ್ಲವರ್ಗದ ಜನರೂ ಸೇರಿರುತ್ತಾರೆ. ಅವರಲ್ಲಿ ಪರಸ್ಪರ ಪಙ್ಕ್ತಿಭೋಜನಾದಿಗಳು ನಡೆಯುವ ಸಂಪ್ರದಾಯವುಂಟೆಂಬುದು ಇದುವರೆಗೆ ಕೇಳಿಬಂದಿರಲಿಲ್ಲ. ಕಳೆದ ಮಾರ್ಚಿ ತಾ||೩೦ರಲ್ಲಿ ಮದ್ರಾಸುಪಟ್ಟಣದ ಅಡ್ಯಾರಿನಲ್ಲಿರುವ ಈ ಸಮಾಜದ ಮುಖ್ಯಕಾರ್ಯಾಲಯದಲ್ಲಿ ಕಲ್ಲಿಕೋಟೆಯ ಮ|| ಎಂ. ರಾಮಯ್ಯನವರು ಒಂದು ಔತಣವನ್ನು ನಡೆಯಿಸಿದಾಗ, ಆ ಸಮಾಜಕ್ಕೆ ಸೇರಿರುವ ಬ್ರಾಹ್ಮಣರೂ, ಪಾರ್ಸಿಯವರೂ, ಯೂರೋಪ್ಯರೂ, ಅನೇಕವರ್ಗದ ಇತರಹಿಂದೂಗಳೂ ಬಹುಶಃ ೪೦ ಮಂದಿಯವರೆಗೆ ಸೇರಿ ಸಹ ಪಙ್ಕ್ತಿಭೋಜನವನ್ನು ಮಾಡಿರುವರು. ಈ ಪಙ್ಕ್ತಿಯಲ್ಲಿ ಹೆಂಗಸರು ಮಕ್ಕಳೂ ಸಹ ಸೇರಿದ್ದರು. ಎಂದೂ ಅಭ್ಯಾಸವಿಲ್ಲದ ಯೂರೋಪ್ಯರೂ ಪಾರ್ಸಿಯವರೂ ಕೂಡ ಕಾಲುಮಣೆಗಳಮೇಲೆ ಪದ್ಮಾಸನದಲ್ಲಿ ಕುಳಿತು ಕೈ ತುತ್ತುಗಳನ್ನು ಮಾಡಿ ೫ ಬೆರಳುಗಳಿಂದಲೂ ಭೋಜನಮಾಡುವುದನ್ನು ಹೊಸದಾಗಿ ಕಲಿತುಕೊಂಡು ಭುಂಜಿಸಿದುದು ವಿಚಿತ್ರವಾಗಿದ್ದಿತು. ಈ ಭೋಜನಕ್ಕೆ ಬಂದಿದ್ದವರು ಸಾಮಾನ್ಯರಲ್ಲ. ಮದ್ರಾಸಿನ ಜಡ್ಜಿ ಸದಾಶಿವಯ್ಯರ್‌ರವರೂ, ಸ್ಥಲಪರಸ್ಥಲದ ಹಲವರು ಬಿ.ಎ. ಬಿ.ಎಲ್., ಪದವೀಧರರಾದ ಬ್ರಾಹ್ಮಣರುಗಳೂ, ಅವರಂತೆಯೇ ಹೆಸರ್ಗೊಂಡ ಪಿಳ್ಳೆಗಳೂ, ರೆಡ್ಡಿಗಳೂ, ನಾಯರುಗಳೂ, ಪಾರ್ಸಿಯವರೂ, ದೊರೆಸಾನಿಗಳೂ, ಶಾಸ್ತ್ರಿಗಳೂ ಸಹ ಸೇರಿದ್ದರು. ಇದರಿಂದ ಈ ಸಮಾಜಕ್ಕೆ ಸೇರಿರುವವರ ದೃಢನಿಷ್ಠೆಯವು ಎಷ್ಟುಮಟ್ಟಿಗಿದೆಯೆಂಬುದು ಲೋಕಕ್ಕೆ ವಿದಿತವಾದಂತಾಯಿತು. ದೇಹವು ಭಿನ್ನಗಳಾದಾಗ್ಯೂ ಎಲ್ಲರಲ್ಲಿರುವ ಆತ್ಮವೂ ಒಂದೇ ಎಂಬುದು ಈ ಸಮಾಜದ ಸಿದ್ಧಾಂತವು,

ಈ ತೆರದ ಭಾವವು ಈಗಿನ ನಾಗರಕರಲ್ಲಿ ತೀವ್ರವಾಗಿ ವೃದ್ಧಿಹೊಂದುತ್ತಲಿದೆ. ಇದನ್ನು ಅಂತರಂಗದಲ್ಲಿ ಆಚರಿಸುವವರು ಬಹುಜನರುದ್ದಾರೆ. ಬಹಿರಂಗದಲ್ಲಿ ನಿರ್ಭೀತಿಯಿಂದ ಆಚರಿಸುವವರ ಸಂಖ್ಯೆಯು ಕಡಿಮೆಯಾಗಿದೆ. ಸಮಾಜದಲ್ಲಿ ವೃದ್ಧಿಹೊಂದುತ್ತಿರುವ ಈ ಭಾವಗಳೂ ಇವುಗಳ ಸುದ್ದಿಗಳೂ ಪ್ರಾಚೀನಸಂಪ್ರದಾಯಾಭಿಮಾನಿಗಳಿಗೆ ತಲೆನೋವನ್ನು ಹುಟ್ಟಿಸುತ್ತಲಿವೆ.

ವರ್ಣಾಶ್ರಮಭೇದರೂಪವಾದ ಸಮಾಜವಿಭಾಗವು ಇಲ್ಲದ ದೇಶಗಳಲ್ಲಿ ಸಂಪತ್ತಿನ ಅಂತಸ್ತುಗಳ ರೂಪವಾದ ತಾರತಮ್ಯವು ವಿಶೇಷವಾಗಿರುವುದು; ಆ ಭೇದಗಳಿಗೆಲ್ಲಾ ವಿಶೇಷವಾಗಿ ಐಹಿಕಭೋಗ ಗೌರವಗಳೇ ಲಕ್ಷ್ಯವಾಗಿರುವುದು. ಆದುದರಿಂದಲೂ ವಾಚಾಮಗೋಚರವಾದ ಅನರ್ಥಗಳು ಆ ದೇಶದಲ್ಲಿ ಉಂಟಾಗುತ್ತಲಿರುವುದನ್ನು ಕೇಳಿ ಯಾವುದೇ ತೆರದ ಭೇದಗಳಿದ್ದರೂ ಅನರ್ಥವಾಗುವುದು ತಪ್ಪುವುದಿಲ್ಲವೆಂದು ಸಿದ್ಧಾಂತವಾಗುತ್ತದೆ. ಭೇದಗಳಿಲ್ಲದ ದೇಶವು ಪ್ರಪಂಚದಲ್ಲಿ ಯಾವುದೂ ಇರುವಂತೆ ತೋರುವುದಿಲ್ಲ. ಅದುಕಾರಣ, ಭೇದಗಳೇ ದೇಶದಲ್ಲಿಲ್ಲದಂತೆ ಮಾಡುವುದು ಅಸಾಧ್ಯ. ಅದಕ್ಕಿಂತ ವರ್ಣಾಶ್ರಮಭೇದಗಳು ಉಚ್ಚನೀಚ ಭಾವನೆಗೆ ಸಾಧಕವಾಗಿರದಂತೆ ಮಾಡಲು ವರ್ಣಾಶ್ರಮಾಭಿಮಾನಿಗಳು ಪ್ರಯತ್ನಪಟ್ಟರೆ ಮಾತ್ರ ದೇಶಕ್ಕೆ ಕ್ಷೇಮವಾಗಬಹುದು.

ಒಳದೇಶ ವೃತ್ತಾಂತಗಳು.

ಬೌರಿಂಗ್‌ಪೇಟೆಯ ಮ್ಯುನಿಸಿಪಾಲಿಟಿಯು ಸ್ಥಿರಗೊಳಿಸಲ್ಪಟ್ಟಿರುವುದಾಗಿ ಸರ್ಕಾರದಪ್ಪಣೆಯಾಗಿದೆ.

ಉತ್ತರಾದಿ ಮಠದ ಸ್ವಾಮಿಗಳು ಕಳೆದ ತಾ|| ೨೧ ರಲ್ಲಿ ನಂಜರಾಜ ಬಹದ್ದೂರ್ ಸತ್ರವನ್ನು ಬಿಟ್ಟು ಹಳೇ ಅಗ್ರಹಾರದಲ್ಲಿರುವ ತಮ್ಮ ಮಠಕ್ಕೆ ಬಂದಿದ್ದು ನೆನ್ನೆಯ ದಿನ ನಂಜನಗೂಡಿಗೆ ಪ್ರಯಾಣಮಾಡಿದರು.

ಮೂಡಗೆರೆಯಲ್ಲಿ ನೂತನವಾಗಿ ಕಟ್ಟಲ್ಪಟ್ಟಿರುವ ಕಾರೊನೇಷನ್ ಮೆಮೋರಿಯಲ್ ಹಾಲಿನ ಪ್ರವೇಶೋತ್ಸವವು ಕಳೆದ ತಾ|| ೧೭ ರಲ್ಲಿ ಡೆ|| ಕ|| ಮ|| ಕೆ. ಕೃಷ್ಣಯ್ಯರ್‌ರವರಿಂದ ನಡೆಸಲ್ಪಟ್ಟಿತು.

ನಾವು ಹಿಂದೆ ತಿಳುಹಿಸಿದ್ದಂತೆ ಉತ್ತರಾದಿ ಮಠದ ಪಂಡಿತರಾದ ವೇ|| ಕೃಷ್ಣಾಚಾರ್ಯರಿಗೆ ಕಳೆದ ತಾ|| ೧೦ ರಲ್ಲಿ ಟವರ್ ಹಾಲಿನಲ್ಲಿ ಮ|| ಅಂಬಲೆ ಅಣ್ಣಯ್ಯಪಂಡಿತರ ಅಧ್ಯಕ್ಷತೆಯಲ್ಲಿ ನೆರೆದಿದ್ದ ಸಭೆಯಲ್ಲಿ ಆಚಾರ್ಯರ ಪಾಂಡಿತ್ಯಪ್ರಶಂಸೆಯು ಮಾಡಲ್ಪಟ್ಟು ಒಂದು ಭಂಗಾರದ ತೋಡಾವು ಬಹುಮಾನಿಸಲ್ಪಟ್ಟಿತು.

ಕರ್ನಾಟಕ ಬ್ರಹ್ಮವಿದ್ಯಾಸಮಾಜದ ೭ನೆಯ ಅಧಿವೇಶನವು ಶ್ರೀಯುತ ಜಿನರಾಜದಾಸ ಎಂ.ಎ., ಯವರ ಅಧ್ಯಕ್ಷತೆಯಲ್ಲಿ ನೆನ್ನೆಯ ದಿನ ನಂಜನಗೂಡಿನಲ್ಲಿ ಆರಂಭಗೊಂಡು ಈ ದಿವಸ ಮುಗಿಯುವುದು. ಈ ಮಹಾಸಭೆಗೆ ಸಂಸ್ಥಾನದ ನಾನಾ ಭಾಗದ ಬ್ರಹ್ಮವಿದ್ಯಾಸಮಾಜಗಳಿಂದ ಪ್ರತಿನಿಧಿಗಳೂ, ಪ್ರೇಕ್ಷಕರೂ ಬಹಳವಾಗಿ ಬಂದಿರುವರು. ಪ್ರತಿನಿಧಿಗಳ ಸ್ವಾಗತಕ್ಕಾಗಿ ಆನರೆರಿ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರಾದ ಮ|| ವೆಂಕಟಶಾಮಯ್ಯ, ಬಿ. ಎ., ಬಿ. ಎಲ್., ರವರ ಅಧ್ಯಕ್ಷತೆಯಲ್ಲಿ ಒಂದು ಸಂಘವೇರ್ಪಟ್ಟಿದ್ದು ಅತಿಥಿಗಳ ಸತ್ಕಾರವು ಬಹುವಿಚಕ್ಷಣೆಯಿಂದ ನಡೆಸಲ್ಪಡುವುದಾಗಿದೆ.

ಕೋಲಾರದ ಡಿ|| ಬೌರಿಂಗ್‌ಪೇಟೆಯಲ್ಲಿ ಬರುವ ಜೂನ್ ತಿಂಗಳಲ್ಲಿ ಶ್ರೀ ಕೋದಂಡರಾಮ ಸ್ವಾಮಿಯ ಜಾತ್ರೆಯು ನಡೆಯುತ್ತದೆ. ಇದರ ಜತೆಯಲ್ಲಿ ಕೋಲಾರ ಡಿಸ್ಟ್ರಿಕ್ಟಿನ ವ್ಯವಸಾಯ, ಕೈಗಾರಿಕೆಯ ವಸ್ತುಗಳ, ಫಲಪುಷ್ಪಗಳ ಮತ್ತೂ ದನಗಳ ಪ್ರದರ್ಶನವು ಜೂನ್ ತಾ|| ೩ರಿಂದ ೫ರ ವರೆಗೆ ನಡೆಯಲು ಗೊತ್ತುಮಾಡಲ್ಪಟ್ಟು ಇದರ ಸಂಬಂಧವಾದ ಪ್ರಕಟನಪತ್ರಿಕೆಗಳು ಹಂಚಲ್ಪಟ್ಟಿವೆ. ಉತ್ಕೃಷ್ಟವಾದ ಪದಾರ್ಥಗಳನ್ನು ಪ್ರದರ್ಶಿಸುವವರಿಗೆ ಬಹುಮಾನಗಳು ಕೊಡಲ್ಪಡುವುದರಿಂದ ಕರ್ಷಕರೂ ಶಿಲ್ಪಗಾರರೂ ಉತ್ಕೃಷ್ಟವೂ ಆಶ್ಚರ್ಯಕರವೂ ಆದ ಪದಾರ್ಥಗಳನ್ನು ಮಾಡಿ ಪ್ರದರ್ಶನಕ್ಕೆ ಕಳುಹಿಸಿ ಕೊಡುವವರಾಗಲೆಂದು ಕೋರುತ್ತೇವೆ.

ಮಂಜ್ರಾಬಾದ್ ತಾಲ್ಲೂಕಿನ ನಿವಾಸಿಗಳು ಹಾಸನ ಡೆಪ್ಯುಟಿ ಕಮಿಷನರ ಪದವಿಯಿಂದ ನಿವೃತ್ತರಾಗಿರುವ ಮಿ|| ವೆದರಾಲ್ ಸಾಹೇಬರವರನ್ನು ಬೀಳ್ಕೊಡುವ ಉದ್ದೇಶದಿಂದ ಕಳೆದ ತಾ|| ೧೯ರಲ್ಲಿ ಸಕಲೇಶಪುರದ ಎ.ವಿ. ಸ್ಕೂಲ್ ಕಟ್ಟಡದಲ್ಲಿ ಒಂದು ವಿನೋದೋತ್ಸವವನ್ನು ನೆರವೇರಿಸಿದರು. ಈ ಉತ್ಸವಕ್ಕೆ ಅನೇಕ ಯೂರೋಪ್ಯ ದಂಪತಿಗಳೂ, ಡೆ|| ಕಮಿಷನರು ಮೊದಲಾದ ಅಧಿಕಾರಿಗಳೂ, ಇತರ ದೊಡ್ಡ ಮನುಷ್ಯರುಗಳೂ ಬಂದಿದ್ದರು. ಮಿ|| ವೆದರಾಲ್ ಸಾಹೇಬರ ಗುಣಪ್ರಶಂಸೆಯನ್ನು ಮಾಡುವ ವಿಜ್ಞಾಪನ ಪತ್ರಿಕೆಗಳು ಸಂಸ್ಕೃತದಲ್ಲಿ ಮ|| ಸೂರ್ಯನಾರಾಯಣ ಶಾಸ್ತ್ರಿಗಳಿಂದಲೂ, ಕನ್ನಡದಲ್ಲಿ ಮ|| ದೋಣಿಗಾಲ್ ನಂಜೆಗೌಡರಿಂದಲೂ, ಹಿಂದೂಸ್ಥಾನಿಯಲ್ಲಿ ಮಿ|| ಎಚ್. ಅಬ್ದುಲ್ ರಹಿಮಾನ್ ಸಾಬರಿಂದಲೂ, ಇಂಗ್ಲೀಷಿನಲ್ಲಿ ಅಡ್ವೋಕೇಟ್ ಮ|| ಎಸ್. ವೆಂಕಟೇಶಯ್ಯನವರಿಂದಲೂ ಓದಿಒಪ್ಪಿಸಲ್ಪಟ್ಟುವು ಮತ್ತೂ ಮಿ|| ವೆದರಾಲ್ ಸಾಹೇಬರು ಅವುಗಳಿಗೆ ತಕ್ಕುತ್ತರವನ್ನು ಕೊಟ್ಟರು. ನೆರೆದಿದ್ದ ಸಭಿಕರಿಗೆಲ್ಲಾ ಅವರವರ ಮತಾನುಸಾರ ಬೇರೆಬೇರೆ ಸ್ಥಳಗಳಲ್ಲಿ ಅಲ್ಪಾಹಾರವು ನಡೆದು ಸುಗ್ಗಿಕುಣಿತ ಮತ್ತೂ ಕೋಲಾಟಗಳು ಆದುವು.

ಸಿರಾತಾಲ್ಲೋಕಿನ ಪರಸ್ಪರಸಹಾಯಸಂಘಗಳ ಮಹಾಸಭೆಯು ಕಳೆದ ತಾ|| ೧೫ ರಲ್ಲಿ ಸಿರಾದಲ್ಲಿ ಡೆ|| ಕಮಿಷನರ್ ಮ|| ಕೆ. ಆರ್. ಶ್ರೀನಿವಾಸಯ್ಯಂಗಾರರ ಅಧ್ಯಕ್ಷತೆಯಲ್ಲಿ ಕೂಡಿದ್ದಿತು. ಈ ಸಭೆಗೆ ೧೮ ಸಂಘಗಳಿಂದ ೬೦ ಪ್ರತಿನಿಧಿಗಳೂ, ೧೫೦ ಗ್ರಾಮಗಳಿಂದ ೮೦೦ ಜನರೂ ಬಂದಿದ್ದರು. ಅಲ್ಲದೆ ಪರಸ್ಪರಸಹಾಯಸಂಘಗಳ ರೆಜಿಸ್ಟ್ರಾರರಾದ ಮ|| ನಾರಣಯ್ಯಂಗಾರರು, ಸಬ್‌ಡಿವಿಜನ್ ಆಫೀಸರು, ಪೋಲೀಸ್ ಸೂಪರಿಂಟೆಂಡೆಂಟರು ಮೊದಲಾದ ಅಧಿಕಾರಿಗಳು ಬಂದಿದ್ದರು. ಈ ಸಭೆಯನ್ನು ಸೇರಿಸಲು ಅಮಲ್ದಾರ್ ಮ|| ಶ್ರೀನಿವಾಸರಾಯರು ಬಹಳ ಶ್ರದ್ಧೆಯನ್ನು ವಹಿಸಿದ್ದರು. ಈ ಸಂಘಗಳ ಪುರೋಭಿವೃದ್ಧಿ ಮೊದಲಾದ ವಿಚಾರಗಳನ್ನು ಕುರಿತು ಪ್ರತಿನಿಧಿಗಳ ಅಧ್ಯಕ್ಷರ ಮತ್ತೂ ರೆಜಿಸ್ಟ್ರಾರರ ಭಾಷಣಗಳಾದುವು. ಮಾರನೆಯ ಬೆಳಿಗ್ಗೆ ಗ್ರಾಮಾಭಿವೃದ್ಧಿ ಸಂಘದವರ ಸಭೆಯು ಡೆ|| ಕ|| ರವರ ಅಧ್ಯಕ್ಷತೆಯಲ್ಲಿ ಸೇರಿದ್ದು ಆ ತಾಲ್ಲೋಕಿನ ಗ್ರಾಮಾಭಿವೃದ್ಧಿ ಸಂಘಗಳು ಮಾಡಿರತಕ್ಕ ಕಾರ್ಯದ ವರದಿಯು ಅಮಲ್ದಾರರಿಂದ ಓದಲ್ಪಟ್ಟು ಗ್ರಾಮಾಭಿವೃದ್ಧಿಯ ವಿಚಾರದಲ್ಲಿ ಸ್ವತಃ ಕೆಲಸ ಮಾಡದೆ, ಅಥವಾ ದ್ರವ್ಯಸಹಾಯಮಾಡದೆ ಇರುವ ಜನಗಳ ವಿಚಾರದಲ್ಲಿ ಯಾವೇರ್ಪಾಟನ್ನು ಮಾಡಬೇಕೆಂಬ ಬಗೆಗೆ ಬಹಳ ಚರ್ಚೆಯು ನಡೆದಿತು.

ಯುದ್ಧವಾರ್ತೆಯು.

ಪಶ್ಚಿಮರಣರಂಗ.

ಅರ್ರಾಸು-ಲಾಬಸ್ಸಿಗಳಿಗೆ ಮಧ್ಯದಲ್ಲಿರುವ ಒಂದು ಉನ್ನತಪ್ರದೇಶವನ್ನು ಫ್ರೆಂಚರು ಘೋರಯುದ್ಧವನ್ನು ಮಾಡಿ ಜರ್ಮನರಿಂದ ಕಿತ್ತುಕೊಂಡರು. ಇದಕ್ಕಾಗಿ ಇವರು ೬ ತಿಂಗಳಿಂದಲೂ ಸಾಹಸಮಾಡುತ್ತಿದ್ದರು.

ಜರ್ಮನರು ಈಪ್ರೆಸ್ಸನ್ನು ದಾಟಿ ಈಜರ್ ನದಿಯ ಹತ್ತಿರ ಬೆಲ್ಜಿಯಂ ಸೈನಿಕರ ಮೇಲೆಬಿದ್ದು ಅವರನ್ನು ಹತಮಾಡಿಬಿಡುತ್ತಿರುವಷ್ಟರಲ್ಲಿ ಫ್ರಾನ್ಸ್-ಇಂಗ್ಲೆಂಡ್ ಸೈನ್ಯಗಳು ಸಹಾಯಕ್ಕೆ ಹೋಗಿ ಜರ್ಮನರನ್ನು ಹೊಡೆದು ಒಂದು ಮೈಲಿಯ ಹಿಂದಕ್ಕೆ ಓಡಿಸಿ ಆ ಭಾಗವನ್ನು ತಾವು ಆಕ್ರಮಿಸಿಕೊಂಡರು.

ಆಲ್ಸೆಸ್ ಜಿಲ್ಲೆಯಲ್ಲಿ ಫ್ರೆಂಚರ ಸೈನ್ಯಗಳಿಗೆ ಜಯದಮೇಲೆ ಜಯವು ಲಭಿಸುತ್ತಿದೆ. ಈಚೆಗೆ ಅವರು ಫೆಚ್ಟಲೋದಲ್ಲಿ ೪೦೦೦ ಅಡಿಗಳ ಎತ್ತರವಾದ ಒಂದು ಗುಡ್ಡವನ್ನೂ ಇನ್ನೊಂದು ಪ್ರಮುಖವಾದ ಗುಡ್ಡವನ್ನೂ ಕೂಡ ವಶಪಡಿಸಿಕೊಂಡರು.

ಪೂರ್ವ ರಣರಂಗ.

ಕಾರ್ಪೇತಿಯನ್ ಬೆಟ್ಟಗಳಲ್ಲಿ ಕಳೆದ ತಾ|| ೧೧-೧೨ ರಲ್ಲಿ ಬಹಳ ಭಯಂಕರವಾದ ಯುದ್ಧವಾಯಿತು. ಇಲ್ಲಿ ರಷ್ಯನರ ದಾಳಿಯನ್ನು ತಡೆಯುವುದಕ್ಕಾಗಿ ಜರ್ಮನ್ ಚಕ್ರವರ್ತಿಯೂ ಅವರ ಕಡೆಯ ಮುಖ್ಯಸೇನಾಧಿಪತಿಗಳೂ ಆಸ್ಟ್ರಿಯಾದ ಮುಖ್ಯ ಸೇನಾಧಿಪತಿಗಳೂ ಸಹ ನಡುಕಟ್ಟಿ ನಿಂತಿದ್ದಾರೆ. ಇಲ್ಲಿ ಜರ್ಮನ್ ಆಸ್ಟ್ರಿಯಾದ ಒಟ್ಟು ಸೇನೆಯು ೧೨|| ಲಕ್ಷದವರೆಗೆ ಇರಬಹುದೆಂದು ಎಣಿಸಲ್ಪಟ್ಟಿದೆ. ಇಷ್ಟು ಸನ್ನಾಹದಿಂದ ಶತ್ರುಗಳು ಪ್ರತಿಭಟಿಸುತ್ತಿದ್ದರೂ ರಷ್ಯನರು ಮುಂದಕ್ಕೆ ಹಂಗೇರಿಯಾದ ಕಡೆಗೆ ನುಗ್ಗುತ್ತಲೇ ಇದ್ದಾರೆ. ಉಜುಕ್ ಕಣಿವೆಯ ಹತ್ತಿರ ಅವರಿಗೆ ಜಯಪರಂಪರೆಯೇ ಉಂಟಾಗುತ್ತಿದೆ. ಉಜುಕ್ ಕಣಿವೆಯು ಪೂರ್ಣವಾಗಿ ರಷ್ಯನರ ಅಧೀನವಾಗಿಲ್ಲ. ವಿಶೇಷಭಾಗವು ಇನ್ನೂ ಆಸ್ಟ್ರಿಯನ್ನರ ವಶದಲ್ಲೇ ಇದೆ. ಸ್ಥಿತಿಗತಿಯು ರಷ್ಯನರಿಗೆ ಅನುಕೂಲವಾಗಿದೆ. ಕಳೆದ ವಾರದಲ್ಲಿ ರಷ್ಯನರು ಉಜುಕ್ ಕಣಿವೆಯ ಉತ್ತರದಲ್ಲಿ ೪ ಮೈಲಿಯೊಳಗೆ ಇರುವ ಒಂದು ಎತ್ತರವಾದ ಪರ್ವತಶಿಖರವನ್ನು ಹಿಡಿದುಕೊಂಡು ಜಯಶೀಲರಾಗಿದ್ದಾರೆ. ಇದರಿಂದ ಒಂದು ಲೋಹಮಾರ್ಗವು ಇವರ ಸ್ವಾಧೀನವಾದಂತಾಯಿತು. ಈಗ ಆ ಸುತ್ತಿನಲ್ಲಿ ಬಿಸಿಲಿನಿಂದ ಮಂಜಿನ ಗಡ್ಡೆಗಳು ಕರಗಿ ಹರಿಯುತ್ತ ಪ್ರಯಾಣಕ್ಕೆ ತೊಂದರೆಯನ್ನು ಮಾಡುತ್ತಿವೆ. ಈ ಕಾರ್ಪೇತಿಯನ್ ಬೆಟ್ಟಗಳ ೭೦ ಮೈಲಿ ವಿಸ್ತಾರವುಳ್ಳ ಮುಖ್ಯ ಸಂಗ್ತಿಗಳನ್ನು ಹಿಡಿದುಕೊಳ್ಳುವುದಕ್ಕಾಗಿ ರಷ್ಯನರು ೧೮ ದಿನಗಳ ವರೆಗೆ ಅಹೋರಾತ್ರಿ ಯುದ್ಧಮಾಡಿರುವರು. ಮಾರ್ಚಿ ತಾ|| ೧೯ ರಿಂದ ಏಪ್ರಿಲ್ ತಾರೀಖು ೧೨ ರ ವರೆಗೆ ಇಲ್ಲಿ ನಡೆಯಿಸಿದ ಯುದ್ಧದಲ್ಲಿ ರಷ್ಯನರು ಶತ್ರುಪಕ್ಷದ ೭೦ ಸಾವಿರ ಮಂದಿ ಸೈನಿಕರನ್ನು ಸೆರೆಹಿಡಿದಿರುವರು. ಅವರಲ್ಲಿ ೯ ಸಾವಿರ ಮಂದಿಗಳು ಸೈನಿಕೋದ್ಯೋಗಿಗಳು. ಇದಲ್ಲದೆ ೩೦ ದೊಡ್ಡ ಫಿರಂಗಿಗಳನ್ನೂ ೨೦೦ ಸಣ್ಣ ಫಿರಂಗಿಗಳನ್ನೂ ಕೂಡ ವಶಪಡಿಸಿಕೊಂಡಿರುವರು. ಈ ಸುತ್ತಿನಲ್ಲಿ ರಷ್ಯನರು ಹಿಡಿದುಕೊಂಡಿರುವ ಟಿಲಿಪೋಟಿಸ್ಸಿಗೆ ಉತ್ತರದಲ್ಲಿರುವ ಉನ್ನತಪ್ರದೇಶವನ್ನು ಮರಳಿ ವಶಪಡಿಸಿಕೊಳ್ಳಬೇಕೆಂಬುದಕ್ಕಾಗಿ ಕಳೆದ ತಾ|| ೧೬ ರಲ್ಲಿ ಒಂದುದಿನವೇ ಶತ್ರುಸೈನಿಕರು ರಷ್ಯನರ ಮೇಲೆ ೧೬ ಆವೃತ್ತಿ ಮೇಲೆಬಿದ್ದು ಕಾಳಗಮಾಡಿಯೂ ಹಿಮ್ಮೆಟ್ಟಿಸಲ್ಪಟ್ಟರು ಎಂದು ಸುದ್ದಿಬಂದಿದೆ. ಇದರಿಂದಲೇ ಈ ಪ್ರಾಂತದ ಯುದ್ಧವು ಈಗ ಎಷ್ಟು ಭೀಕರವಾಗಿ ನಡೆಯುತ್ತಿರುವುದೆಂಬುದನ್ನು ಊಹಿಸಿಕೊಳ್ಳಬಹುದು.

ಜರ್ಮನರು ಅತ್ತ ಪೋಲ್ಯಾಂಡಿನಲ್ಲಿ ಮಾಡುವ ಯುದ್ಧಕಾರ್ಯವು ಗಮನೀಯವಾಗಿಲ್ಲ. ಮುಖ್ಯವಾಗಿ ಅವರು ಊರುಕೇರಿಗಳ ಮೇಲೆ ವಿಮಾನಗಳ ಮುಖೇನ ಸಿಡಿಮದ್ದನ್ನು ಹಾಕುವ ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ಅದರಿಂದ ಆಗುತ್ತಿರುವ ನಷ್ಟವು ಮಾತ್ರ ಸಾಮಾನ್ಯವಾಗಿದೆ.

ಜಲಯಾನಗಳು.

ಜರ್ಮನರ ಸಬ್‌ಮೆರೀನುಗಳು ಕಳೆದ ವಾರದಲ್ಲಿ ೨ ಹಡಗುಗಳನ್ನು ಮುಳುಗಿಸಿವೆ. ೧೪೩೨ ಹಡಗುಗಳು ಇಂಗ್ಲೀಷ್ ತೀರಗಳಿಗ ಬಂದು ಹೋಗಿರುತ್ತವೆ. ಜರ್ಮನರು ಡಚ್ಚರ ೪ ಹಡಗುಗಳನ್ನು ಹಿಡಿದು ಕಕ್ಸ್ ಹಾವೆನ್ನಿಗೆ ತೆಗೆದುಕೊಂಡು ಹೋಗಿದ್ದಾರೆ.

ತುರ್ಕಿ.

ತುರ್ಕಿಯವರೂ ಕುರ್ಡು ಎಂಬ ಜನರೂ ಅರಬ್ಬಿಜನರೂ ಸೇರಿ ಬಹುಶಃ ೨೩ ಸಾವಿರ ಮಂದಿ ಸೈನಿಕರು ಮೆಸಪೊಟೋಮಿಯಾಕ್ಕೆ ಸೇರಿದ ಶೈಬಾಡ್ ಹತ್ತಿರ ಕಳೆದ ತಾ|| ೧೨-೧೩ ರಲ್ಲಿ ಇಂಗ್ಲೀಷ್ ಸೈನಿಕರಮೇಲೆ ಬಿದ್ದರು. ಅವರ ಬಳಿಯಲ್ಲಿ ೨೮ ಫಿರಂಗಿಗಳಿದ್ದುವು. ಇವರವರಿಗೆ ಯುದ್ಧವಾದುದರಲ್ಲಿ ಶತ್ರುಗಳ ಕಡೆಯ ೩೦೦ ಸೈನಿಕರನ್ನೂ, ೨ ಫಿರಂಗಿಗಳನ್ನೂ ಹಿಡಿದುಕೊಂಡು ಅವರನ್ನೆಲ್ಲಾ ನಮ್ಮವರು ಉತ್ತರದಿಕ್ಕಿಗೆ ಓಡಿಸಿದರು. ಇಂಗ್ಲೀಷರ ಕಡೆ ನಾಲ್ಕು ಮಂದಿ ಉದ್ಯೋಗಿಗಳಿಗೂ ೨೩ ಸೈನಿಕರಿಗೂ ೬೫ ಮಂದಿ ಹಿಂದೂ ಸೈನಿಕರಿಗೂ ಗಾಯಗಳಾಗಿರುವುವು. (ಈ ಶಾಬಾ ಎಂಬುದು ಬಸಾರಾ ಪಟ್ಟಣದ ದಕ್ಷಿಣಕ್ಕೆ ೯ ಮೈಲಿಗಳ ದೂರದಲ್ಲಿದೆ.) ಅವರು ಬಲವಾದ ಕಂದಕಗಳನ್ನು ತೋಡಿಕೊಂಡಿದ್ದುದು ಗೋಚರಿಸಿತು. ಈ ಯುದ್ಧದಲ್ಲಿ ತುರ್ಕಿಯವರು ಪರಾಕ್ರಮದಿಂದ ಕಾದಾಡಿದರೆಂದೂ ಆದರೂ ಸೋತು ಪಲಾಯನಗೊಂಡರೆಂದೂ ಗೊತ್ತಾಗುತ್ತದೆ. ಓಡಿಹೋದ ತುರುಕರ ಮೂಲ ಶಿಬಿರದಲ್ಲಿ ೬ ಪಟಾಲಂ ಸೈನಿಕರೂ, ೬ ಫಿರಂಗಿಗಳೂ ಕಂದಕದಲ್ಲಿದ್ದುವು. ಒಟ್ಟಿಗೆ ಅಲ್ಲಿದ್ದ ಶತ್ರುಸೈನಿಕರು ೧೫ ಸಾವಿರದವರೆಗಿರಬಹುದು. ಅವರ ಕಂದಕಗಳು ಒಳ್ಳೆ ಸುರಕ್ಷಿತವಾದ ಒಂದುಗುಡ್ಡದ ಆಚೆಯಿಳಿಜಾರಿನಲ್ಲಿದ್ದುವು. ನಮ್ಮವರು ಆ ಗುಡ್ಡದ ಮೇಲಕ್ಕೇರಿ ಯುದ್ಧಮಾಡಿದಾಗ ಬಹಳ ನಷ್ಟಪಟ್ಟುಕೊಂಡರು. ಆದರೂ ಶತ್ರುಗಳನ್ನು ಅವರ ಕಂದಕಗಳಿಂದ ಬಿಡಿಸಿ ಓಡಿಸಿದರು. ಆ ರಾತ್ರಿಯೇ ಅವರು ಅದರಿಂದಾಚೆಗೆ ೧೬ ಮೈಲಿಗಳ ದೂರಕ್ಕೆ ಓಡಿಹೋದರು. ಆಗ ಶತ್ರುಗಳಕಡೆಯ ೨೦೦ ಸೈನಿಕರೂ ಕೆಲ ಫಿರಂಗಿಗಳೂ ನಮ್ಮವರ ವಶವಾದುವು. ಈ ಯುದ್ಧದಲ್ಲಿ ಒಟ್ಟು ಶತ್ರುಗಳ ಕಡೆ ೨||ಸಾವಿರ ಮಂದಿಗಳೂ, ನಮ್ಮವರ ಕಡೆ ೭೦೦ ಮಂದಿಗಳೂ ನಷ್ಟವಾದರೆಂದು ಗೊತ್ತಾಗುತ್ತದೆ.

ತುರ್ಕಿಗೆ ಸೇರಿದ ಸಿರಿಯಾದಲ್ಲಿ ಸೆಂಟ್ ಜೆಂಡಿಆಕರ್‌ನಿಂದ ಹೋಗುವ ಲೋಹಮಾರ್ಗದಲ್ಲಿರುವ ಸೇತುವನ್ನು ಫ್ರೆಂಚರ ಯುದ್ಧದ ಹಡಗುಗಳು ಹಾಳುಮಾಡಿರುತ್ತವೆ. ಫ್ರೆಂಚರ ವಿಮಾನಕ್ಕೆ ಸಹಾಯಕವಾಗಿ ಹೋಗುತ್ತಿದ್ದ ಒಂದು ಫ್ರೆಂಚರ ಯುದ್ಧದ ಹಡಗು ಸಿರಿಯಾಕ್ಕೆ ಸೇರಿದ ಎಲ್ ಆರಿಷ್ ಪಟ್ಟಣದ ಮೇಲೆ ಫಿರಂಗಿ ಗುಂಡುಗಳನ್ನು ಹಾರಿಸಿತು. ಮತ್ತೂ ಅಲ್ಲಿದ್ದ ತುರ್ಕಿ ಸೇನೆಯ ಮೇಲೂ ಗುಂಡುಗಳನ್ನು ಹಾರಿಸಿತು. ತುರ್ಕಿಗೆ ಸೇರಿದ ಈನಸ್ ಎಂಬ ರೇವೆಯ ಬಳಿಗೆ ಮಿತ್ರಮಂಡಲಿಯವರ ೨೦ ಹಡಗುಗಳು ಬಂದು, ಅವುಗಳಲ್ಲಿ ಎರಡು ಒಳನುಗ್ಗಿ ತುರ್ಕಿಯವರು ಬಲಪಡಿಸಿಕೊಂಡಿದ್ದ ಸ್ಥಾನಗಳನ್ನು ನಾಶಪಡಿಸಿದುವು. ಅಲ್ಲಿನ ಮೈಟಿಲೇನು ಸ್ಕಿಯೋ ಎಂಬ ತೀರಪಟ್ಟಣಗಳನ್ನು ಮಿತ್ರಮಂಡಲಿಯವರು ಆಕ್ರಮಿಸಿಕೊಳ್ಳುವುದು ಖಂಡಿತವೆಂದು ಆ ಸುತ್ತಣ ಸುದ್ದಿಗಳು ತಿಳಿಯಿಸುತ್ತವೆ. ಕಳೆದ ತಾ|| ೧೫ ರಲ್ಲಿ ಆಂಗ್ಲ ಯುದ್ಧ ನಾವೆಗಳು ತುರ್ಕಿದೇಶದ ಗಬಾಟ್ಕೆಪೇಟ್ ಎಂಬ ರೇವೆಯಮೇಲೆ ಫಿರಂಗಿ ಗುಂಡುಗಳನ್ನು ಹಾರಿಸಿರುವುವು.

ರಷ್ಯನರ ಯುದ್ಧದ ಹಡಗುಗಳು ಕಪ್ಪುಸಮುದ್ರದಲ್ಲಿನ ಆನಟೋಲಿಯಾ ತೀರಸಮೀಪದಲ್ಲಿ ತುರುಕರ ಹಡಗುಗಳನ್ನೂ ದೋಣಿಗಳನ್ನೂ ಮುಳುಗಿಸಿದುದಲ್ಲದೆ, ಸೌಂಗೌಲ್ಡಕ್ಕಿನ ಬಳಿಯಲ್ಲಿದ್ದ ತುರ್ಕಿ ಫಿರಂಗಿ ಸೈನ್ಯದ ಮೇಲೆ ಗುಂಡುಗಳನ್ನು ಹೊಡೆದಿರುವುವು.

ಇತ್ತ ಸ್ಮರ್ನಾ ಪಟ್ಟಣವನ್ನು ಮಿತ್ರಮಂಡಲಿಯವರು ಮುತ್ತಿ ಗುಂಡುಗಳನ್ನು ಹಾರಿಸುತ್ತ ಅದನ್ನು ವಶಪಡಿಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಒಳಗಿರುವ ತುರ್ಕಿ ಸೈನಿಕೋದ್ಯೋಗಿಗಳು ಪ್ರಜೆಗಳಿಂದ ಹಣವನ್ನು ಸುಲಿದುಕೊಳ್ಳುತ್ತಿದ್ದಾರೆಂತಲೂ ಆ ಪಟ್ಟಣದ ಪ್ರಜೆಗಳು ಊರನ್ನು ಬಿಟ್ಟುಬಿಟ್ಟು ಹೊರಟುಹೋಗುತ್ತಿರುವರೆಂತಲೂ ಗೊತ್ತಾಗುತ್ತದೆ.

ಡಾರ್ಡಿನಲ್ಸಿನಲ್ಲಿ ಮಿತ್ರಮಂಡಲಿಯುವರ ನೌಕಾದಳವು ಮುಂದೆ ನುಗ್ಗುತ್ತಾ ಪಕ್ಕದಲ್ಲಿರುವ ತುರ್ಕಿ ಕೋಟೆಗಳ ಮೇಲೆ ಗುಂಡುಹೊಡೆಯುವ ಕೆಲಸವನ್ನು ಮರಳಿ ಆರಂಭಿಸಿರುತ್ತವೆ. ಈ ಸಂದರ್ಭದಲ್ಲಿ ಟೆನೆಡಾಸಿನ ಹತ್ತಿರ ಇದ್ದ ಯುದ್ಧದ ಹಡಗುಗಳ ಮೇಲೆ ತುರ್ಕಿ ವೈಮಾನಿಕರು ಸಿಡಿಮದ್ದುಗಳನ್ನು ಹಾಕಿದರು. ಆದರೆ ಅವು ಗುರಿತಪ್ಪಿಹೋದುವು. ಬಳಿಕ ಮಿತ್ರಮಂಡಲಿಯವರ ಸಮುದ್ರ ವಿಮಾನಗಳು ತುರ್ಕಿ ವಿಮಾನಗಳನ್ನು ಓಡಿಸಿಬಿಟ್ಟುವು. ಈ. ೧೫ ನಂ|| ಇಂಗ್ಲಿಷ್ ಸಬ್‌ಮೆರೀನು ಡಾರ್ಡನೆಲ್ಸಿನೊಳಗೆ ಎಲ್ಲೆಲ್ಲಿ ಮದ್ದಿನ ಸುರಂಗಳಿವೆಯೋ ಎಂಬುದನ್ನು ಶೋಧಿಸುತ್ತಿದ್ದಾಗ ಕೆಪೇಹೆಚ್ಚಿನ ಹತ್ತಿರ ದಡಕ್ಕೆ ಹೋಗಿ ನಾಟಿಕೊಂಡುಬಿಟ್ಟಿತು.

ಏಪ್ರಿಲ್ ತಾ|| ೧೭ ರಲ್ಲಿ ಇಂಗ್ಲೀಷ್ ಸೈನ್ಯಗಳನ್ನು ಸಾಗಿಸಿಕೊಂಡು ಹೋಗುತ್ತಿದ್ದ ಮಾನಿಟಾ ಎಂಬ ಹಡಗಿನಮೇಲೆ ಈಜಿಯನ್ ಸಮುದ್ರದಲ್ಲಿ ತುರ್ಕಿಯವರು ಟಾರ್ಪೆಡೋವನ್ನು ಪ್ರಯೋಗಿಸಿದರು, ಆದರೆ ಅದು ಬಡಿಯಲಿಲ್ಲ. ಮಾನಿಟಾದಲ್ಲಿದ್ದವರಲ್ಲಿ ಕೆಲರು ತಮ್ಮ ಹಡಗಿಗೆ ಅಪಾಯವಾದೀತೆಂಬ ಭಯದಿಂದ ದೋಣಿಗಿಳಿಯುವ ಗಡಬಿಡಿಯಲ್ಲಿ ಆ ದೋಣಿಯು ಮಗುಚಿಕೊಂಡು ೫೧ ಮಂದಿ ಸತ್ತರು. ಬಳಿಕ ಇಂಗ್ಲೀಷು ಕ್ರುಯಿಝರು ತುರ್ಕಿಯವರ ಟಾರ್ಪೆಡೋ ದೋಣಿಯನ್ನು ಅಟ್ಟಿಕೊಂಡು ಹೋಗುತ್ತಿರುವಲ್ಲಿ ತುರ್ಕಿ ಟಾರ್ಪೆಡೋ ದೋಣಿಯು ಥಿಯಾಸ್ ಎಂಬ ಗ್ರೀಕ್ ದ್ವೀಪದ ಹತ್ತಿರ ದಡಕ್ಕೆ ನಾಟಿಕೊಂಡಿತು. ಅದರಲ್ಲಿದ್ದ ಕಳಾಸಿಗಳನ್ನೂ ಜರ್ಮನ್ ಸೈನಿಕೋದ್ಯೋಗಿಗಳನ್ನೂ ಹಿಡಿದು ಥಿಯಾಸ್ ದ್ವೀಪದಲ್ಲಿ ಗ್ರೀಕರು ಸೆರೆಹಾಕಿರುವರು.

ತುರ್ಕಿಯ ಒಂದು ಸೇನೆಯು ಇತ್ತ ಅರೇಬಿಯಾ ದೇಶದಲ್ಲಿರುವ ಓಡೆಯಿಡ್ ಪಟ್ಟಣದ ಮೇಲೆ ಬಿದ್ದಿತು. ಅಲ್ಲಿದ್ದ ಸೈನಿಕರ ಹತ್ತಿರ ಇದ್ದ ಮದ್ದುಗುಂಡು ಮೊದಲಾದ ಸಾಮಗ್ರಿಗಳೆಲ್ಲಾ ಮುಗಿದುಹೋಗಿದ್ದುದರಿಂದ ಇವರು ತುರ್ಕಿಯ ಸೈನಿಕರಿಗೆ ವಶವಾಗಿ ಹೋಗಬೇಕಾಯಿತು. ಆಗ ತುರ್ಕಿಯವರು ಆ ಪಟ್ಟಣದಲ್ಲಿ ಗೋದುವೆ ಜೋಳ ಮೊದಲಾದ ಆಹಾರ್ಯಧಾನ್ಯಗಳನ್ನು ತುಂಬಿದ್ದ ಉಗ್ರಾಣಗಳನ್ನೆಲ್ಲಾ ವಶಪಡಿಸಿಕೊಂಡುದಲ್ಲದೆ ಅಲ್ಲಿದ್ದ ಕೆಲ ಅರಬ್ಬಿ ಷೇಕುಗಳಿಂದ ೩ ಲಕ್ಷ ರೂ. ಗಳನ್ನು ಬಲಾತ್ಕಾರದಿಂದ ಸುಲಿದುಕೊಂಡರು. ಇದಲ್ಲದೆ ಅವರು ಪ್ರತಿತಿಂಗಳಿಗೂ ೩ ಲಕ್ಷ ರೂ. ಗಳಂತೆ ತಮಗೆ ಕೊಡುತ್ತಿರಬೇಕೆಂದು ಏರ್ಪಾಡು ಮಾಡಿಕೊಂಡರಂತೆ. (ಈ ಸುದ್ದಿಯನ್ನು ಏಡನ್ನಿನಿಂದ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಗೆ ಒಬ್ಬ ಪತ್ರವ್ಯವಹಾರಕನು ಬರೆದಿದ್ದಾನೆ, ಸರ್ಕಾರಿಯಾಗಿ ಈ ಸಂಬಂಧದ ಸುದ್ದಿಯೇನೂ ಬಂದಿಲ್ಲ.) ಮೇಲೆ ಕಂಡ ಓಡೆಯಿಡ್ ಪಟ್ಟಣವು ಇಂಗ್ಲೀಷರ ವಶದಲ್ಲಿರುವ ಏಡನ್‌ಪ್ರೊಟೆಕ್ಟೊರೇಟಿಗೆ ೫೦ ಮೈಲಿಗಳ ದೂರದಲ್ಲಿದೆ.

ಸೂಯಜ್ ಕಾಲ್ವೆಯ ಹತ್ತಿರ ೩ ವಿಮಾನಗಳು ಆಕಾಶಕ್ಕೇರಿ ಎಲ್ ಅರಿಷ್ಸಿಗೆ ದಕ್ಷಿಣದಲ್ಲಿ ೨೫ ಮೈಲಿಗಳ ಅಂತರದಲ್ಲಿರುವ ಎಲ್‌ಸಿರ್ ಎಂಬ ಸ್ಥಲಕ್ಕೆ ಹೋದುವು. (ಈ ಎಲ್‌ಸಿರ್ ಎಂಬುದು ಸಿನ್ಯೆ ದ್ವೀಪಕಲ್ಪದಲ್ಲಿದೆ; ಇಲ್ಲಿ ಅನೇಕ ಲೋಹಮಾರ್ಗಗಳು ಕೂಡುವುವು.) ಇಲ್ಲಿ ನೂರಿನ್ನೂರು ಗುಡಾರಗಳಿದ್ದುದನ್ನು ವೈಮಾನಿಕರು ಕಂಡು ಅವುಗಳಮೇಲೆ ಸಿಡಿಮದ್ದುಗಳನ್ನು ಹಾಕಿದರು. ಬಳಿಕ ಈ ವೈಮಾನಿಕರು ತುರ್ಕಿ ಸೇನೆಯಿರುವ ಶಿಬಿರವನ್ನು ಗೊತ್ತುಮಾಡಿ, ಸಂಜ್ಞೆಯ ಮೂಲಕ ತಿಳಿಯಿಸಿಕೊಡಲು, ಫ್ರೆಂಚ್ ಕ್ರುಯಿಝರು ಅತ್ತಕಡೆಗೆ ಹೋಗಿ ಆ ಶಿಬಿರದಮೇಲೆ ಫಿರಂಗಿ ಗುಂಡುಗಳನ್ನು ಹೊಡೆದಿತು.

ಕಾನ್‌ಸ್ಟಾಂಟಿನೋಪಲ್ಲಿನಲ್ಲಿ ಕೂಡಿದ್ದ ಸಭೆಯೊಳಗೆ ತುರ್ಕಿ ಸುಲ್ತಾನರು ಹೀಗೆ ನುಡಿದರೆಂದು ಫ್ರೆಂಚ್ ಇಂಗ್ಲಿಷ್ ಪತ್ರಿಕೆಗಳಿಗೆ ವಾರ್ತಾದಾಯಕರು ಹೀಗೆ ಬರೆದಿದ್ದಾರೆ. ಹೇಗೆಂದರೆ— “ನನ್ನನ್ನು ತುರ್ಕಿ ಯುವಜನ ಸಂಘದವರು ಸುಲ್ತಾನನನ್ನಾಗಿ ಮಾಡಿದರು, ಆದರೆ ಮುಂದಣ ಅವರ ರಾಜ್ಯಾಂಗ ಪದ್ಧತಿಯು ದೇಶಕ್ಕೆ ಹಿತಕರವಾಗಿ ಪರಿಣಮಿಸಲಿಲ್ಲ. ಅದರಿಂದಲೇ ಈಗಿನ ದುರವಸ್ಥೆಯು ದೇಶಕ್ಕೆ ಪ್ರಾಪ್ತವಾಗಿದೆ. ಕಾನ್‌ಸ್ಟಾಂಟಿನೋಪಲ್ ಪಟ್ಟಣಕ್ಕೆ ವಿಪತ್ತೇನಾದರೂ ಸಂಘಟಿಸಿದರೆ ನಾನು ರಾಜ್ಯವನ್ನು ಬಿಟ್ಟು ಹೊರಟುಹೋಗುತ್ತೇನೆ. ಏಕೆಂದರೆ ಆ ದುರ್ದಶೆಯನ್ನು ಕಣ್ಣಿನಿಂದ ನೋಡುವುದಕ್ಕಿಂತಲೂ ಅಂಥ ರಾಜ್ಯವನ್ನು ಪರಿಪಾಲನೆ ಮಾಡದೆ ಬಿಟ್ಟು ಹೋಗುವುದೇಲೇಸು.”

ಆಕಾಶಯಾನಗಳು.

ಕಳೆದವಾರ ಬಂದಿರುವ ಸುದ್ದಿಗಳಲ್ಲಿ ಆಕಾಶಯಾನ ಸಂಬಂಧಕಾರ್ಯಗಳ ವಿವರಣವು ವಿಶೇಷವಾಗಿದೆ. ಅವುಗಳಲ್ಲಿ ಮುಖ್ಯವಾದುವುಗಳಾವುವೆಂದರೆ—ಜರ್ಮನರ ಒಂದು ಆಕಾಶನಾವೆಯು ಈಪ್ರೆಸ್ಸಿನ ಹತ್ತಿರ ಗೋಚರಿಸಲು, ಮಿತ್ರಮಂಡಲಿಯವರು ಗುಂಡುಗಳನ್ನು ಹೊಡೆದು ಶಿಥಿಲಗೊಳಿಸಿ, ಅದನ್ನು ಬೆಲ್ಜಿಯಮ್ಮಿನಲ್ಲಿ ಇಂಗ್ಲಿಷ್ ಸೇನಾಶಿಬಿರದಿದಿರಿಗೆ ಬೀಳುವಂತೆ ಮಾಡಿದರು. ಕಳೆದ ತಾ|| ೧೫ರಲ್ಲಿ ಜರ್ಮನರ ಒಂದು ಆಕಾಶನಾವೆಯು ಇಂಗ್ಲಾಂಡ್ ಪೂರ್ವ ತೀರಪಟ್ಟಣಗಳಕಡೆಗೆ ಹೋಗಿ ಗಣಿಗಳಿದ್ದ ಪ್ರದೇಶದಲ್ಲಿ ೨೦ ಸಿಡಿಮದ್ದುಗಳನ್ನು ಹಾಕಿರುವುದು. ಇದರಿಂದ ನಷ್ಟವೇನೂ ಆಗಲಿಲ್ಲ. ಕೆಲಕಡೆ ಬೆಂಕಿಹತ್ತಿ ಕೂಡಲೇ ಆರಿಸಲ್ಪಟ್ಟಿತು. ಒಂದು ಸೈಕಲ್ ಬಂಡಿಯು ಮಾತ್ರ ಹಾಳಾಯಿತು; ಮನುಷ್ಯರಾರೂ ಸಾಯಲಿಲ್ಲ. ಬಳಿಕ ಅದು ಸಮುದ್ರಮಾರ್ಗವಾಗಿ ಹೋಯಿತು. ಊರುಗಳಲ್ಲೆಲ್ಲಾ ದೀಪವು ಆರಿಸಲ್ಪಟ್ಟಿತು. ಇನ್ನೆರಡುಪಟ್ಟಣಗಳಮೇಲೂ ಸಿಡಿಮದ್ದನ್ನು ಹಾಕಿತು. ಪ್ರಜೆಗಳು ದಿಗಿಲುಬೀಳದೆ ಮುಂಜಾಗ್ರತೆಯಿಂದ ದೀಪವನ್ನಾರಿಸಿದ್ದುದರಿಂದ ಯಾವ ಪ್ರಮಾದವೂ ಸಂಭವಿಸಲಿಲ್ಲ. ಮತ್ತೆರಡು ಆಕಾಶನಾವೆಗಳು ತಾ|| ೧೬ರಲ್ಲಿ ಇನ್ನೆರಡುಪಟ್ಟಣಗಳ ಮೇಲೆ ಸಿಡಿಮದ್ದುಗಳನ್ನು ಹಾಕಿದುದರಿಂದ ಕೆಲವು ಮನೆಗಳು ಸುಟ್ಟುಹೋದವು. ಇದರಂತೆ ಜಪಿಂಗ್ಟನ್-ಬೆಡ್ಲಿಂಗ್‌ಟನ್-ಸ್ವೀಜನ್ ಮೊದಲಾದ ಅನೇಕ ಪಟ್ಟಣಗಳಮೇಲೆ ಸಿಡಿಮದ್ದುಗಳನ್ನು ಜರ್ಮನ್ ವೈಮಾನಿಕರು ಹಾಕಿದರು. ಆದರೂ ಒಂದೆರಡು ಮನೆಗಳು ಸುಟ್ಟುದರ ಹೊರತು ಇನ್ನಾವನಷ್ಟವೂ ಆಗಲಿಲ್ಲ. ಇದರಿಂದ ಆದ ಪ್ರಯೋಜನವೇನೆಂದರೆ—ಆ ಸುತ್ತಿನಲ್ಲಿನ ಪ್ರಜೆಗಳಲ್ಲಿ ಜರ್ಮನರಮೇಲೆ ವಿಶೇಷಾಗ್ರಹವುಂಟಾಗಿ, ಅವರುಗಳು ವಿಶೇಷ ಕುತೂಹಲದಿಂದ ಸೈನ್ಯಕ್ಕೆ ಬಂದು ಸೇರುವಂತಾಯಿತು.

೧ ಜರ್ಮನರ ಆಕಾಶನಾವೆಯು ನಾನ್ಸಿ ಪಟ್ಟಣದಮೇಲೆ ಸಿಡಿಮದ್ದುಗಳನ್ನು ಹಾಕಿದುದಕ್ಕೆ ಮುಯ್ಯಿಮಾಡುವುದಕ್ಕಾಗಿ ಮಿತ್ರಮಂಡಲಿಯವರ ವಿಮಾನಗಳು ಜರ್ಮನರ ಮೆಜೀರ್ಸು ಬಾರ್ಲೆವಿಲ್ಲಿಗಳಲ್ಲಿರುವ ಅರಮನೆಗಳಮೇಲೆ ೬ ಸಿಡಿಮದ್ದುಗಳನ್ನು ಹಾಕಿದುವು. ಮತ್ತೂ ಆಸ್ಟೆಂಡಿನಮೇಲೆ ೧೫ ವಿಮಾನಗಳು ಹೋಗಿ ಸಿಡಿಮದ್ದುಗಳನ್ನು ಹಾಕಿ ಬಂದಿರುವುವು. ಮತ್ತೊಂದು ಜರ್ಮನರ ಆಕಾಶನಾವೆಯು ಅಲ್ಬೆರ್ಟ್‌ಬ್ರುಜ್ಜಿನ ಹತ್ತಿರದ ಮರಗಳಮೇಲೆ ಇಳಿಯಲು, ಅಲ್ಲಿದ್ದ ಮಿತ್ರಮಂಡಲಿಯವರು ತುಪಾಕಿಗುಂಡುಗಳನ್ನು ಹೊಡೆದು ನಾವೆಯೊಳಗಿದ್ದ ಜರ್ಮನರನ್ನು ಕೊಂದುಬಿಟ್ಟರು.

ಇದಲ್ಲದೆ ಹಲವುಬಾರಿ ಶತ್ರುವಿಮಾನಗಳಮೇಲೆ ನಮ್ಮ ವೈಮಾನಿಕರು ಅಭಿಯೋಗಮಾಡಿ, ಪ್ರತಿಸಲವೂ ಅವರನ್ನು ಸೋಲಿಸಿ, ಓಡಿಸಿ, ಅಥವಾ ಅವರ ಆಕಾಶನಾವೆಗಳನ್ನು ಕೆಳಕ್ಕೆ ಬೀಳಿಸಿ, ತಾವು ಜಯಶೀಲರಾಗಿ ಬಂದಿರುತ್ತಾರೆ.

ಒಂದು ಆಂಗ್ಲ ವಿಮಾನವು ಬಾರ್‌ಸಿಂಘಿಯ ಹತ್ತಿರ ಜರ್ಮನ್ ವಿಮಾನವೊಂದನ್ನು ಕೆಳಕ್ಕೆ ಬೀಳಿಸಿ, ಒಳಗಿದ್ದ ಇಬ್ಬರಲ್ಲಿ ಒಬ್ಬನನ್ನು ಕೊಂದು ಮತ್ತೊಬ್ಬನನ್ನು ಸೆರೆಹಿಡಿದಿತು.

ಫ್ರಾನ್ಸ್‌ವೈಮಾನಿಕರು ಬಹಳ ಸಮರ್ಥತೆಯಿಂದ ಹೋಗಿ ಜರ್ಮನರ ಮೆಟ್ಜ್‌ನಗರಕ್ಕೆ ವಿದ್ಯುಚ್ಛಕ್ತಿಯನ್ನು ಕಳಿಯಿಸಿಕೊಡುವ ಪವರ್‌ಹೌಸಿನಮೇಲೆ ೪೦ ಸಿಡಿಮದ್ದುಗಳನ್ನು ಹಾಕಿದುವು. ಆಗ ಮಧ್ಯದ ಮನೆಯಿಂದ ದಟ್ಟವಾಗಿ ಹೊಗೆಹೊರಟಿತು. ಮೆಟ್ಜಿನಕೋಟೆಯಲ್ಲಿದ್ದ ಫಿರಂಗಿಗಳು ಈ ವಿಮಾನಗಳಮೇಲೆ ಫಿರಂಗಿಗುಂಡುಗಳನ್ನು ಹಾರಿಸಿದುವು, ಆದರೂ ವೈಮಾನಿಕರೆಲ್ಲರೂ ಸುರಕ್ಷಿತರಾಗಿ ಹಿಂದಿರಿಗಿ ಬಂದರು. ಆಗ ಶತ್ರುಗಳ ೩ ವಿಮಾನಗಳು ಇವರ ಕಣ್ಣಿಗೆ ಬಿದ್ದುವು. ಅವುಗಳಮೇಲೆ ಈ ಫ್ರೆಂಚ್‌ವೈಮಾನಿಕರು ಬಿದ್ದು ತುಪಾಕಿಗುಂಡಿನಿಂದ ಹೊಡೆದು ಅವುಗಳನ್ನು ಕೆಳಕ್ಕೆ ಬೀಳುವಂತೆ ಮಾಡಿದರು.

ಇದೇ ಫ್ರೆಂಚ್‌ವೈಮಾನಿಕರು ರಾತ್ವೆಲ್ಲಿನ ಹತ್ತಿರವಿರುವ ಶತ್ರುಗಳ ಮದ್ದಿನ ಕೊಟ್ಟಾರದಮೇಲೆ ೧೦ ಸಿಡಿಮದ್ದುಗಳನ್ನು ಹಾಕಿದರು. ಆಗ ದೊಡ್ಡದಾಗಿ ಹೊಗೆಯೆದ್ದಿತು. ಅದರಿಂದ ಮದ್ದು ಸುಟ್ಟುಹೋಗಿರಬೇಕೆಂದು ಕಂಡಿತು. ಮತ್ತೂ ಬೇಡನ್ನಿನಲ್ಲಿ ಶತ್ರುಗಳು ಸಿಡಿಮದ್ದನ್ನು ಮಾಡುವ ಲಿಯೋಪಾಲ್ಟ್ ಕರ್ಮಾಗಾರದಮೇಲೆ ೧೦ ಸಿಡಿಮದ್ದುಗಳನ್ನು ಹಾಕಿರುವರು. ಮತ್ತೂ ಇದೇ ಫ್ರೆಂಚ್‌ವೈಮಾನಿಕರು ಆಸ್ಟೆಂಡ್‌ಪಟ್ಟಣದಲ್ಲಿರುವ ಸೈನಿಕಾಧಿಕಾರಿಗಳ ಭವನದಮೇಲೆ ಕಳೆದ ೧೫ ದಿನಗಳಿಂದಲೂ ಹಲವುಬಾರಿ ಸಿಡಿಮದ್ದುಗಳನ್ನು ಹಾಕಿ ಸುರಕ್ಷಿತವಾಗಿ ಬಂದಿರುವರು.

ಇಂಗ್ಲಿಷ್ ವೈಮಾನಿಕನೊಬ್ಬನು ಕಳೆದ ಏಪ್ರಿಲ್ ತಾ|| ೧ ರಲ್ಲಿ ಅಲ್ಲಿಯ ಹತ್ತಿರವಿದ್ದ ಜರ್ಮನ್ ಸೇನೆಯ ಇದಿರಿಗೆ ಒಂದು ದಪ್ಪನಾದ ರಬ್ಬರ್ ಕಾಲುಚಂಡನ್ನಿಟ್ಟನು. ಅದು ಭೂಮಿಯ ಮೇಲೆ ಬೀಳುತ್ತಿರುವುದನ್ನು ಜರ್ಮನ್‌ಸೈನಿಕರು ನೋಡಿ, ಸಿಡಿಮದ್ದು ಬೀಳುತ್ತಿರುವುದೆಂದು ಭಯಪಟ್ಟರು. ಆದರೆ ಅದು ನೆಲದಮೇಲೆ ಬಿದ್ದಾಗ ಏನೂ ಮಾಡಲಿಲ್ಲ. ಸೈನಿಕರು ಸಮಾಧಾನಗೊಂಡು ಹತ್ತಿರಕ್ಕೆ ಬಂದು ಅದನ್ನು ಉರುಳಿಸಿ ನೋಡುವಲ್ಲಿ ಅದರಮೇಲೆ “ಏಪ್ರಿಲ್‌ಫೂಲ್” ಎಂದು ಬರೆದಿದ್ದಿತು. (ಏಪ್ರಿಲ್ ತಿಂಗಳಲ್ಲಿ ಪಾಶ್ಚಾತ್ಯರು ಇಂಥ ಪರಿಹಾಸಗಳನ್ನು ಮಾಡುವುದು ಪದ್ಧತಿ)

ಆಲ್ಸಸ್‌ಲೋರೈನ್ ಜಿಲ್ಲೆಯಲ್ಲಿ ಜರ್ಮನರ ಅಧೀನದಲ್ಲಿರುವ ಸ್ಟ್ರಾಸ್‌ಬರ್ಗಿನಮೇಲೆ ಒಂದು ವಿಮಾನವು ಹೋಗಿ ೧೨ ಸಿಡಿಮದ್ದುಗಳನ್ನು ಹಾಕಿ ಉತ್ತರದಿಕ್ಕಿಗೆ ಹೋಯಿತು. ಅದನ್ನು ಸರ್ಚ್‌ಲೈಟ್ ಎಂಬ ದೀಪದ ಸಹಾಯದಿಂದ ನೋಡಿ ಫಿರಂಗಿ ಗುಂಡುಗಳನ್ನು ವಿಮಾನದಮೇಲೆ ಪ್ರಯೋಗಿಸಿದರು. ವಿಮಾನವು ಹಾಕಿದ ಸಿಡಿಮದ್ದಿನಿಂದ ಪಟ್ಟಣದಲ್ಲಿ ಇಬ್ಬರಿಗೆ ಏಟುಬಿದ್ದಿತು. ಬಹಳ ನಷ್ಟವಾಯಿತು.

ಒಬ್ಬ ಆಂಗ್ಲವೈಮಾನಿಕನು ಜರ್ಮನರಿಗೆ ಸೇರಿದ ಹಾರ್ಡಿಂಜನ್ನಿನ ಹತ್ತಿರವಿರುವ ರೈಲ್ವೆಸ್ಟೇಷನ್ನಿನಮೇಲೆ ಹಾಕಿದ ಸಿಡಿಮದ್ದಿನಿಂದ ನೂರು ಗಜಗಳದೂರದ ಲೋಹಮಾರ್ಗವೆಲ್ಲಾ ಹಾಳಾಯಿತು. ವಿಮಾನವು ಶತ್ರುಗಳ ೫ ಕೋಟೆಯನ್ನು ದಾಟಿ, ಯಾವ ಪ್ರಮಾದವನ್ನೂ ಹೊಂದದೆ ತಪ್ಪಿಸಿಕೊಂಡು ಬಂದಿತು.

ಕಳೆದ ತಾ|| ೧೯ ರಲ್ಲಿ ಮಿತ್ರಮಂಡಲಿಯ ವೈಮಾನಿಕರು ೨ ಜರ್ಮನ್ ವಿಮಾನಗಳನ್ನು ಹೊಡೆದು ಕೆಳಕ್ಕೆ ಕೆಡಹಿಸಿದರು. ತಾ|| ೧೫ ರಿಂದ ೧೯ ರ ವರೆಗೆ ಜರ್ಮನರ ೫ ವಿಮಾನಗಳನ್ನು ನಷ್ಟಪಡಿಸಿದರು.

ಬೆಲ್ಜಿಯಂದೇಶದಲ್ಲಿ ಫ್ರೆಂಚ್‌ವೈಮಾನವೊಂದು ನಿರ್ವಾಹವಿಲ್ಲದೆ ಇಳಿದುಹೋಗಬೇಕಾಯಿತು. ಅದನ್ನು ಜರ್ಮನರು ಹಿಡಿದುಕೊಂಡರು.

ಭರತಖಂಡದ ಎಲ್ಲೆಕಟ್ಟಿನಲ್ಲಿ ಯುದ್ಧ.

ಲಕ್ಸರ್ ಎಂಬ ಹೆಸರಿನ ೪ ಸಾವಿರ ಮಂದಿ ಮಹಮ್ಮದೀಯರು ಕಳೆದ ತಾ|| ೧೮ ರಲ್ಲಿ ಭರತಖಂಡದ ವಾಯುವ್ಯಭಾಗದಿಂದ ಬ್ರಿಟಿಷ್ ಇಂಡ್ಯಾದಮೇಲೆ ಬಿದ್ದು ಕಾಳಗಮಾಡಬೇಕೆಂಬ ಅಭಿನಿವೇಶದಿಂದ ನುಗ್ಗಿ ಹಾಫಜ್ ಎಂಬ ಸ್ಥಳದವರೆಗೆ ಬಂದರು. ಅಲ್ಲಿ ಕಾವಲುಮಾಡುತ್ತಿದ್ದ ಸೈನಿಕರಮೇಲೆ ಇವರು ತುಪಾಕಿಗಳನ್ನು ಹಾರಿಸಿದರು. ಆ ದಿನ ಮಧ್ಯಾಹ್ನದ ಹೊತ್ತಿಗೆ ಪ್ರಭುತ್ವದವರಕಡೆಯ ಸ್ವಲ್ಪ ಸೈನ್ಯವು ಹೋಗಿ ಆ ಲಕ್ಸರ್ ಜನರೊಡನೆ ಯುದ್ಧಮಾಡಿ ಅವರಿಗೆ ಬಹಳ ನಷ್ಟವನ್ನುಂಟುಮಾಡಿದರು ; ಕೆಲರು ಸತ್ತರು. ೧೫೦ ಮಂದಿಗೆ ಏಟುಬಿದ್ದಿತು. ಅಷ್ಟರಲ್ಲಿ ಉಳಿದವರು ಕಣ್ಣಿಗೆಕಾಣಿಸದಂತೆ ಪಲಾಯನಗೊಂಡರು.

ಈಚೆಗೆ ಆ ಸುತ್ತಿನಲ್ಲಿರುವ ಬಹುಮಂದಿ ಖಾನರುಗಳೂ, ಪೆಷಾವರ್‌ಜಿಲ್ಲೆಯ ಪ್ರಮುಖರೂ ತಾವು ಇಂಥ ಸಮಯದಲ್ಲಿ ಪ್ರಭುತ್ವದವರಿಗೆ ಸರ್ವಸಹಾಯವನ್ನು ಮಾಡಲು ಸಿದ್ಧರಾಗಿದ್ದೇವೆಂದು ಅಲ್ಲಿನ ಚೀಫ್‌ಕಮಿಷನರಿಗೆ ಬರೆದುಕೊಂಡಿರುವರು. ಆ ಸುತ್ತಿನಲ್ಲಿರುವ ಮುಲ್ಲಾ ಜನಗಳ ಪ್ರಮುಖರು ಮೇಲೆ ಕಂಡ ಹಾವಳಿಗಾರರೊಡನೆ ತಾವು ಯಾರೂ ಸೇರತಕ್ಕವರಲ್ಲವೆಂದು ಶ್ರುತಪಡಿಸಿಕೊಂಡಿರುವರು. ಮತ್ತೂ ಅಫ್ಘಾನ್‌ಸ್ಥಾನದ ಮಹಮ್ಮದೀಯರಾರೂ ಆ ಜನರೊಡನೆ ಸಂಬಂಧವಿಡದಿರುವಂತೆ ನೋಡಿಕೊಳ್ಳುವುದಾಗಿ ಅಫ್ಘಾನ್‌ಸ್ಥಾನದ ಅಧಿಕಾರಿಗಳು ಹೇಳಿರುವರು.

ದಕ್ಷಿಣಾಫ್ರಿಕಾ.

ಇಲ್ಲಿನ ಸಂಯುಕ್ತಪ್ರಭುತ್ವದವರ ಸೇನೆಯು ಜರ್ಮನರ ಮೇಲೆ ಬಿದ್ದು ಯುದ್ಧಮಾಡಿ ಓಡಿಸಿ, ಒಂದು ಮುಖ್ಯಪಟ್ಟಣವನ್ನೂ ಕೀಟುಮಾನ್‌ಷೂಪ್ ಎಂಬ ಸ್ಥಳವನ್ನೂ ಹಿಡಿದುಕೊಂಡಿರುವರು. ಈ ಸ್ಥಳವು ಅನೇಕ ಲೋಹಮಾರ್ಗಗಳು ಕೂಡುವ ಮುಖ್ಯಪ್ರದೇಶವಾಗಿರುವುದು.

ಪತ್ರವ್ಯವಹಾರ.

ಶ್ರೀ ಬಸವೇಶ್ವರ ಜಯಂತಿ

ಶ್ರೀ ಬಸವೇಶ್ವರ ಜಯಂತಿಯನ್ನಾಚರಿಸುವ ಅಭಿಲಾಷೆಯು ವೀರಶೈವ ಸಮಾಜದಲ್ಲಿ ದಿನೇ ದಿನೇ ಅಧಿಕವಾಗುತ್ತಿರುವುದು ತುಂಬಾ ಶ್ಲಾಘ್ಯವಾಗಿದೆ. ಕಳೆದ ಮಾರ್ಚಿ ೩೦ ನೇ ತಾರೀಖಿನ "ಧನುರ್ಧಾರಿ" ಪತ್ರಿಕೆಯಲ್ಲಿಯೂ, ಏಪ್ರಿಲ್ ೧೧ ನೇ ತಾರೀಖಿನ ಮೈಸೂರು ಸ್ಟಾರ್ ಪತ್ರಿಕೆಯಲ್ಲಿಯೂ, ಈ ವರ್ಷದ ಜಯಂತ್ಯುತ್ಸವವನ್ನು ನಿಜವೈಶಾಖ ಶುದ್ಧ ೧ ಶನಿವಾರ ರೋಹಿಣಿ ನಕ್ಷತ್ರ ಬಹುಕಾಲವಿರುವುದರಿಂದ ಆ ದಿವಸವೇ ಆಚರಿಸಬೇಕೆಂದು ಪ್ರಕಟಿಸಲ್ಪಟ್ಟಿದೆಯಷ್ಟೆ. ಆದಾಗ್ಯೂ ಅನೇಕ ಮಹಾಶಯರು ಈ ವರ್ಷ ಆಚರಿಸಬೇಕಾದ ದಿವಸವನ್ನು ಕುರಿತು ಅನೇಕ ಪ್ರಶ್ನೆಗಳನ್ನು ಮಾಡುತ್ತಿರುವುದರಿಂದ ಮತ್ತೊಮ್ಮೆ ಈ ವಿಷಯಾಗಿ ವಿವರಿಸುವುದು ಆವಶ್ಯಕವಾಯಿತು. ಈ ಜಯಂತ್ಯುತ್ಸವವು ವ್ಯಾಸಕೃತ ನಂದೀಶ್ವರ ಪುರಾಣದಲ್ಲಿನ ಶ್ಲೋಕದ ಆಧಾರದಿಂದ ೧೯೧೩ ನೆಯ ಸಂವತ್ಸರದಲ್ಲಿ ಆಚರಣೆಗೆ ತರಲ್ಪಟ್ಟಿತು. ಆ ಶ್ಲೋಕದಲ್ಲಿರುವ ವಿಷಯಗಳಿಂದ ಶ್ರೀ ಬಸವೇಶ್ವರನವತರಿಸಿದ ತಿಥಿಯ ವಿಷಯವಾಗಿ ಜ್ಯೋತಿಷಜ್ಞರಲ್ಲಿ ಭಿನ್ನಾಭಿಪ್ರಾಯಗಳುಂಟಾದುದರಿಂದ "ರೋಹಿಣೀ" ನಕ್ಷತ್ರವು ವೈಶಾಖ ಶುದ್ಧ ಯಾವ ತಿಥಿಯಲ್ಲಿರುತ್ತದೆಯೋ ಆ ದಿವಸ ಆಚರಿಸಬೇಕೆಂದು ಸಂಘದವರು ತೀರ್ಮಾನಮಾಡಿ ಆ ವಿಷಯವನ್ನು ಪತ್ರಿಕೆಯಲ್ಲಿ ಪ್ರಕಟಿಸಿ ಈ ವರೆಗೂ ಅದೇ ರೀತಿಯಾಗಿ ಆಚರಿಸುತ್ತಾ ಬಂದಿರುತ್ತಾರೆ. ಈ ವರ್ಷ ರೋಹಿಣೀ ನಕ್ಷತ್ರವು ೧ ನೇ ದಿವಸವೇ ಬಹುಕಾಲವಿರುವುದರಿಂದ ಆ ದಿವಸ ಆಚರಿಸಬೇಕೆಂದು ಪ್ರಕಟಿಸಲ್ಪಟ್ಟಿತು. ಪ್ರತಿ ವರ್ಷದಲ್ಲಿಯೂ ಈ ಪ್ರಕಾರ "ರೋಹಿಣಿ" ನಕ್ಷತ್ರವನ್ನನುಸರಿಸಿಯೇ ಆಚರಿಸುತ್ತಿರಬೇಕಾಗಿ ಪ್ರಾರ್ಥನೆ. ಸೆಕ್ರೆಟರಿ,

"ವೀರಶೈವ ಹಿತೋಪದೇಶಕ ಸಂಘ"

ವಿದ್ಯಾಭಿವೃದ್ಧಿ ಫಂಡ್‌ಸಭೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಯ ಮ್ಯಾನೇಜಿಂಗ್ ಕಮಿಟಿ ಮೀಟಿಂಗು ೧೯೧೫ ನೇ ಫೆಬ್ರವರಿ ತಾ॥ ೭ ನೇ ಭಾನುವಾರ ಸಾಯಂಕಾಲ ೫ ಗಂಟೆಯಲ್ಲಿ ರಾವ್‌ಬಹದ್ದೂರ್ ಧರ್ಮಪ್ರವೃತ್ತ ಗುಬ್ಬಿ ತೋಟದಪ್ಪನವರ ಧರ್ಮಸತ್ರದ ಮಹಡಿಯಲ್ಲಿ ಮ॥ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಯಲ್ಲಿ ನಡೆದ ಪ್ರೊಸಿಡಿಂಗ್ಸ್:—

ಹಾಜರಿದ್ದ ಮೆಂಬರುಗಳು.

೧ ಮ॥ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರವರು, (ಪ್ರೆಸಿಡೆಂಟ್). ೨. ಶೆಟ್ಟರ ವೀರಭದ್ರಶೆಟ್ಟರು, ೩. ಯಜಮಾನ್ ಬಸಪ್ಪನವರು, ೪. ಜಿ. ರುದ್ರಪ್ಪನವರು, ಬಿ. ಎ. ಬ್ಯಾರಿಸ್ಟರ್ ಅಟ್-ಲಾ, ೫. ಶಂಕರಣ್ಣನವರ ಶಿವಪ್ಪನವರು, ೬. ಯು. ಯಮ್. ಕಾಳಪ್ಪನವರು, ೭. ಎಲಿ ಸಿದ್ಧಲಿಂಗಪ್ಪಶೆಟ್ಟರು, ೮. ಜಿ. ಕೆ. ರುದ್ರಾರ್ಯರು, (ಆಕ್ಟಿಂಗ್ ಸೆಕ್ರೆಟರಿ)

೧. ತಾ॥ ೧-೮-೧೯೧೪ ರಲ್ಲಿ ನಡೆದ ಮ್ಯಾನೇಜಿಂಗ್ ಕಮಿಟಿ ಮೀಟಿಂಗಿನ ಮಿನೀಟುಗಳು ಓದಲ್ಪಟ್ಟು ಒಪ್ಪಲ್ಪಟ್ಟವು. ೨. ತಾ॥ ೨ ೮-೧೯೧೪ ರಿಂದ ತಾ॥ ೩-೨-೧೯೧೫ ರ ವರೆಗಿನ ಜಮಾ ಖರ್ಚು ಮಂಜೂರು ಮಾಡಲ್ಪಟ್ಟವು ೩. ಫಂಡ್ ಸಭೆಯಪರವಾಗಿ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಮೆಂಬರಾಗಿ ಹೋಗಿದ್ದ ಮ॥ ಎಂ. ಬಸವಯ್ಯ ಬಿ. ಎ. ಬಿ. ಎಲ್. ಯವರು ಖರ್ಚುಮಾಡಿದ ರೂ. ೫೩-೬-೦ ಮಂಜೂರು ಮಾಡಲ್ಪಟ್ಟಿತು. ೪. ಡಿ. ಮಲ್ಲಪ್ಪ ಫೋರ್ತ್ ಫಾರಂ ವಿದ್ಯಾರ್ಥಿ, ಎ. ಎಚ್. ಪ್ರಭುಮಾರಾಧ್ಯ ಫಿಫ್ತ್ ಫಾರಂ ವಿದ್ಯಾರ್ಥಿ ಸಹಾ ಅಭ್ಯಾಸ ಮಾಡುವುದನ್ನು ಬಿಟ್ಟಿದ್ದರಿಂದ ಸ್ಕಾಲರ್‌ಷಿಪ್ ವಜಾ ಮಾಡಲ್ಪಟ್ಟಿತು. ಎ. ಎಚ್. ರುದ್ರಾರ್ಯ ಸಿಕ್ಸ್ತ್ ಫಾರಂ ವಿದ್ಯಾರ್ಥಿಗೆ ೧೯೧೫ನೇ ಫೆಬ್ರವರಿ ತಿಂಗಳಿಗೆ ಮಾತ್ರ ರೂ ೧-೨-೦ ಸ್ಕಾಲರ್‌ಷಿಪ್ ಮಂಜೂರು ಮಾಡಲ್ಪಟ್ಟಿತು ೫. ಹರಪನಹಳ್ಳಿ ಜ್ಯೋತಿಷ ಪಾಠಶಾಲೆಯಲ್ಲಿ ಅಭ್ಯಾಸಮಾಡುವ ಎಂ. ಎಚ್. ಚನ್ನವೀರಯ್ಯ, ಎಂ ಬಸವಯ್ಯ ಈ ಎರಡು ಜನ ವಿದ್ಯಾರ್ಥಿಗಳಿಗೆ ಅವರ ಮುಂದಿನ ಅಭ್ಯಾಸಗಳ ಸಹಾಯಕ್ಕಾಗಿ ಬೃಹಜ್ಜಾತಕವೆಂಬ ಗ್ರಂಥವನ್ನು ಒಬ್ಬೊಬ್ಬರಿಗೆ ಒಂದೊಂದನ್ನು ಬಹುಮಾನವಾಗಿ ಕೊಡುವಂತೆ ಮಂಜೂರು ಮಾಡಲ್ಪಟ್ಟಿತು. ೬. ಶ್ರೀ ಬಾಳೆಹೊನ್ನೂರು ಸಿಂಹಾಸನ ಮಠದ ಶ್ರೀ ಮಹಾಸ್ವಾಮಿಗಳಿಂದ ಫಂಡ್ ಸಭೆಗೆ ಲಗ್ನ ಮೊದಲಾದವುಗಳಲ್ಲಿ ಶಕ್ತ್ಯನುಸಾರ ಕಾಣಿಕೆ ತೆಗೆದು ಕಳುಹಿಸಿ ಕೊಡುವಂತೆ ಸಾದರಾಗಿರುವ ಶ್ರೀಮುಖವನ್ನು ಸ್ಟಾರ್ ಪತ್ರಿಕೆಯಲ್ಲಿ ವೀರಶೈವ ಜನಾಂಗದವರ ತಿಳುವಳಿಕೆ ಬಗೆಗೆ ೪-೫ ದಫಾ ಪಬ್ಲಿಷ್ ಮಾಡುವಂತೆ ನಿರ್ಧರಿಸಲ್ಪಟ್ಟಿತು, ೭. ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಯ ಮ್ಯಾನ್ಯುಯಲ್ ಪುಸ್ತಕ ೧೦೦೦ ಕಾಪಿಗಳನ್ನು ಪ್ರಿಂಟು ಮಾಡಿಸಿ ಜನರಲ್ ಕಮಿಟಿ ಮೆಂಬರುಗಳಿಗೂ, ಫಂಡ್ ಸಭೆಗೆ ವಾಗ್ದಾನಮಾಡಿದವರಿಗೂ ಹಂಚುವಂತೆ ನಿರ್ಧರಿಸಲ್ಪಟ್ಟಿತು. ೮. ಮೇ॥ ಎಂ. ಆರ್ ಕರಿಬಸವಶಾಸ್ತ್ರಿಗಳಿಂದ ಪ್ರಕಟಿಸಲ್ಪಡುವ ವೀರಶೈವ ಗ್ರಂಥಪ್ರಕಾಶಿಕೆ ಎಂಬ ಮಾಸಪತ್ರಿಕೆಗೆ ಫಂಡ್ ಸಭೆಯ ಜನರಲ್ ಕಮಿಟಿ ಮೆಂಬರುಗಳು ಒಂದು ಮತ್ತು ಹೆಚ್ಚಾದ ಪತ್ರಿಕೆಗಳಿಗೆ ಚಂದಾದಾರರಾಗಿ ಪ್ರೋತ್ಸಾಹ ಮಾಡುವಂತೆ ನಿರ್ಧರಿಸಲ್ಪಟ್ಟಿತು ೯. ಫಂಡ್ ಸಭೆಗಾಗಿ ಲಗ್ನ ಮೊದಲಾದವುಗಳಲ್ಲಿ ಮೊಬಲಗನ್ನು ವಸೂಲುಮಾಡಿ ತಮ್ಮಲ್ಲಿಯೇ ಇಟ್ಟುಕೊಂಡು ಕಳುಹಿಸಿಕೊಡದಿರುವವರ ವಿಷಯದಲ್ಲಿ ಅದರ ವಸೂಲಾತಿ ಬಗೆಗೆ ತಕ್ಕ ಏರ್ಪಾಡು ಜರುಗಿಸುವಂತೆ ನಿರ್ಧರಿಸಲ್ಪಟ್ಟಿತು. ೧೦. ಪ್ರೆಸಿಡೆಂಟರವರಿಗೆ ವಂದನೆಯನ್ನರ್ಪಿಸಿ ಮೀಟಿಂಗು ವಿಸರ್ಜಿಸಲ್ಪಟ್ಟಿತು.

ಜಿ. ಕೆ. ರುದ್ರಾರ್ಯ, ಆಕ್ಟಿಂಗ್‌ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ
ಫಂಡ್‌ಸಭೆ, ಬೆಂಗಳೂರು.

ಶ್ರೀಮದ್ರಂಭಾಪುರೀ ವೀರಸಿಂಹಾಸನದ ಸಮಸ್ತಬಿರುದಾ
ನ್ವಿತ ಶ್ರೀಮಜ್ಜಗದ್ಗುರು ಪಂಚಾಕ್ಷರೀರಾಜದೇಶಿ
ಕೇಂದ್ರ ಮಹಾಸ್ವಾಮಿಗಳವರಸನ್ನಿಧಾನದಿಂದ
ಶಿವಾಯಿ.ಬಾಬು ನಂಬರು ೩೩.

ಶಕೆ ೧೮೩೭ ನೆಯ ರಾಕ್ಷಸಸಂ॥ ರದ ಚೈತ್ರ ಬಹುಳ ೮ ಮಿತಿಯಲ್ಲು ಮೈಸೂರುಸೀಮೆ ಸಮಸ್ತ ತಾಲ್ಲೂಕುಗಳಲ್ಲಿರತಕ್ಕ ಪಟ್ಟ, ಚರಂತರು, ಮಠಸ್ಥರು, ಪ್ಯಾಟಿಮನೆ ಶೆಟ್ಟಿ, ಯಜಮಾನರು, ಹರದೇಶಿಗ್ರಾಮಂಗಳ ಗೌಡರ , ಬುದ್ಧಿವಂತರು ಇನ್ನೂ ಮುಂತಾದ ವೀರಶೈವ ಭಕ್ತಮಾಹೇಶ್ವರರಿಗೆ ಬರೆಸಿದಾಶೀರ್ವಾದ:—ಈ ಮೊದಲು ತಾ॥ ...... ರಲ್ಲಿ ಸಾದರಾಗಿರುವ ಶಿವಾಯಿಬಾಬು ನಂಬರು ...... ನೆ ನಿರೂಪದ ಪ್ರಕಾರ ಬೆಂಗಳೂರಲ್ಲಿ ಸ್ಥಾಪಿತವಾಗಿರುವ ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡಿಗೆ ತಮ್ಮತಮ್ಮ ಗೃಹಗಳಲ್ಲಿ ನಡೆಯುವ ಶುಭಶೋಭನಾದಿ ಕಾರ್ಯಗಳಲ್ಲಿ ಸ್ವಶಕ್ತ್ಯನುಸಾರ ದ್ರವ್ಯವನ್ನ ತೆಗೆಸಿ ಫಂಡ್ ಸೆಕ್ರೆಟರಿಗಳ ವಶಕ್ಕೆ ಕಳುಹಿಸುವಂತೆ ಸಾದರಾಗಿರುವ ನಿರೂಪದಪ್ರಕಾರ ಈಗಲೂ ಪ್ರತಿಗ್ರಾಮದಲ್ಲಿಯೂ ಲಗ್ನ ಮೊದಲಾದ ಕಾರ್ಯಗಳಲ್ಲಿ ಫಂಡಿಗೆ ದ್ರವ್ಯವನ್ನ ತೆಗೆದು ಮೇಲ್ಕಂಡ ಮೇರೆ ಖಂಡಿತವಾಗಿಯೂ ರವಾನಿಸುತ್ತಾ ಬರುವದು. ಅಲ್ಲದೆ ಕೈ. ಯಜಮಾನ ವೀರಸಂಗಪ್ಪನವರ ಅಗ್ರತಾಂಬೂಲವನ್ನು ಮೇಲ್ಕಂಡ ಕಾರ್ಯಗಳಲ್ಲಿ ತೆಗೆದು ಅವರ ಸಂತತಿಯವರಾದ ವೈ. ವಿರೂಪಾಕ್ಷಯ್ಯನವರಲ್ಲಿಗೆ ರವಾನಿಸುತ್ತಾ ಬರುವದು. ಮೇಲ್ಕಂಡಮೇರೆ ನಡೆಯದೆ ತಪ್ಪಿದಲ್ಲಿ ಈ ವಿಚಾರದಲ್ಲಿ ತಾಲ್ಲೂಕು ಇಲಾಖಾದಾರರು ಕ್ರಮವರಿತು ರಿಕಾರ್ಡುಮಾಡಿ ರವಾನಿಸುತ್ತಾ ಬರುವದರಲ್ಲಿ ಗಮನಕೊಡಲಾದೀತಾಗಿ ಬಾಹುಲ್ಯವಾಗಿ ಅಪ್ಪಣೆಕೊಡಿಸುವುದಾವುದಿದ್ದೀತು? ಬತಾರೀಖು ೭ನೆ ಮಾಹೆ ಏಪ್ರೆಲ್ ಸನ ೧೯೧೫ನೆ ಇಸವಿ ಮೊಕ್ಕಾಂ ದರ್ಜಾಗ ಸಂಸ್ಥಾನ ಬಾಳೇಹೊನ್ನೂರು.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕಾರ್ನ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನ ಪತ್ರಿಕೆಯನ್ನು ಅಚ್ಚುಮಾಡಿಸಿ ಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧-೦-೦ ರೂ. ಕೊಡಬೇಕಾಗುವುದು ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರದ ಬಣ್ಣದಿಂದ ಬಿಳಿ ಗ್ಲೇಜು ಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೧-೨-೦; ಅನಂತರ ಪ್ರತಿ ೧೦೦ ಕ್ಕೂ ೦-೧೦-೦; ಹಳದೀ ಗ್ಲೇಜ್ ಕಾಗದದಮೇಲೆ ಮೊದಲನೇ ೧೦೦ ಕ್ಕೆ ೨-೨-೦; ಅನಂತರ ಪ್ರತಿ ೧೦೦ ಕ್ಕೂ ೦-೧೪-೦; ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦-೬-೦ ಆಣೆಯಂತೆ ಕಳುಹಬೇಕು. ಕ್ಲಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು. ಮ್ಯಾನೇಜರ್, ಕಾರ್ನ್‌ಪ್ರೆಸ್, ಮೈಸೂರ್.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು

81

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕದನಗಳ ಪಟಗಳೂ ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯಿಲ್ಲ. ಜಾಗತೆ ಬರೆದು ತರಿಸಿಕೊಳ್ಳಿ ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ ೨ ಆಣೆ; ವಿ. ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ:—ಬಿ ಜನರಲ್ ಏಜನ್ಸಿ. ಮೈಸೂರು.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

17

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪಿತ್ತೋದ್ರೇಕವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವವರು, ಮೇಹಸಂಬಂಧರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ. ಜಿಲ್ಲ ಉತ್ತರಕನಡಾ

ಬಿಸಿಲುಕಾಲಕ್ಕೆ 28

ಎಲ್ಲರಿಗೂಬೇಕು

ಅಮೃತಾಮಲಕತೈಲ:—ವಿಧವಿಧವಾದ ತಲೆನೋವು, ಶರೀರವು ಬೆಂಕಿಯಂತಿರುವುದು, ತಲೆತಿರಗು, ಕಣ್ಣುರಿ, ಕಣ್ಣು ಕೆಂಪು, ಕಣ್ಣು ಮಂಜು, ಕಣ್ಣಿನಲ್ಲಿ ನೀರು ಸುರಿಯುವುದು, ರಾತ್ರಿ ನಿದ್ರೆಬಾರದಿರುವುದು ಇವುಗಳನ್ನು ೧-೨ ಅಭ್ಯಂಗನದಿಂದಲೇ ಗುಣಮಾಡಿ ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ. ಬಿಸಿಲುಕಾಲಕ್ಕೆ ಇದು ಅಮೃತವೇಸರಿ. ಎಂಟು ಅಭ್ಯಂಗನಕ್ಕೆ ಆಗುವ ತೈಲ ೦-೮-೦. ೧ ಡಜನ್ ೫-೦-೦.

ಆಮೋದಿನಿ:—ಅಮೋಘವಾದ ಸುವಾಸನೆಯಿಂದ ಕೂಡಿದ ಈ ಮಾತ್ರೆಗಳು ತಾಂಬೂಲವನ್ನು ರಂಜಿಸಿ ಬಾಯಾರಿಕೆಯನ್ನು ತಕ್ಷಣ ನಿಲ್ಲಿಸಿ ಆಯಾಸವನ್ನು ಪರಿಹರಿಸಿ ಕಂಠನಾಳವನ್ನು ಸರಿಪಡಿಸಿ ಕೆಮ್ಮು, ದಮ್ಮು, ಉಬ್ಬಸ, [illegible]ಗಳನ್ನು ಗುಣಮಾಡಿ ಆರೋಗ್ಯವನ್ನು ಕಾಪಾಡುವದರಲ್ಲಿ ಶ್ರೇಷ್ಠವಾದುದು. ಸಂಗೀತಗಾರರಿಗೂ, ವಿದ್ಯಾರ್ಥಿಗಳಿಗೂ, ಪ್ರಯಾಣಿಕರಿಗೂ ಅಮೂಲ್ಯವಾದುದು. ೧೫೦ ಮಾತ್ರೆ ೦-೪-೦. ೫ ಕ್ಕೆ ಒಂದು ಹೆಚ್ಚು.

ಖುತಾಮಲಕರಸಾಯನ:—ತಲೆತಿರಗು, ಕಣ್ಣುಕಗ್ಗತ್ತಲೆ, ಹಸಿವೇ ಇಲ್ಲದಿರುವುದು, ಆಹಾರದಲ್ಲಿ ಅರುಚಿ, ವಾಕರಿಕೆ, ವಾಂತಿ, ಹುಳಿ, ಖಾರ, ಅಥವಾ ಕಹಿಯಾದ ತೇಗು, ಹೊಟ್ಟೆಯುಬ್ಬರ, ಹೊಟ್ಟೆನೋವು, ಕಣ್ಣು ಅಥವಾ ಮೈ ಹಳದೀಬಣ್ಣ, ನಿಶ್ಶಕ್ತಿ, ಹಳೇಜ್ವರ, ಎದೆಬಡಿಯುವಿಕೆ, ಪಾಂಡು, ಕಾಮಾಲೆ, ಮೂರ್ಛೆ ಇವುಗಳಪೈಕಿ ಯಾವುದಿದ್ದರೂ ಖಾತರಿ ಗುಣವಾಗಿ ದಿನಕ್ಕೊಂದುವೇಳೆ ಸಲೀಸಾಗಿ ಕಾಲಪ್ರವರ್ತಿಯಾಗುತ್ತದೆ. ೧೫ ದಿನಕ್ಕೆ ಆಗುವ ಔಷಧ, ಬೆಲೆ ೦-೧೨-೦. ೧ ಡಜನ್ ಡಬ್ಬಿಗಳಿಗೆ ೨-೮-೦.

ಪ್ರತಿಔಷಧಕ್ಕೂ ಟಪಾಲ್ ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ.

ವಿಳಾಸ:—ಬಿ. ವಿ. ಪಂಡಿತ್, ಸದ್ವೈದ್ಯಶಾಲಾ,
ನಂಜನಗೂಡು, ಮೈಸೂರು ಪಿ॥

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕಯ್ಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲ್ಲಾಪುರದಲ್ಲಿ ವ್ಯಾಸನತೋಳು ಸಹಿತ ಆದ ಸಮಾರಂಭ ಫೋಟೊ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೊ (ರಾಮಾಡಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲುಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ. ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ.

ಶ್ರೀ ವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೊ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೊ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀ ಜಗದ್ಗುರು ತೋಂಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಆನಂದಸ್ವಾಮಿಯ ಫೋಟೊ ಬಣ್ಣದ್ದು ಮತ್ತೂ ಸಾದಾ, ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೊ ಸಿಕ್ಕುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.



ಹೊಸಫ್ಯಾಷನ್—ಸಭ್ಯಗೃಹಸ್ಥರು ಗಡಿಯಾರದ ಸರ್ಪಳಿಗೆ ಹಚ್ಚುವ ಲಾಕೇಟುಗಳೂ, ಇದರಲ್ಲಿ ಹಿಂದೆ ಮುಂದೆ ಈ ಪ್ರಕಾರ ೨ ಫೋಟೊ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ||, |||=, ೧, ೧|, ಪ್ರಕಾರ. ಮತ್ತೂ ಬೆಳ್ಳಿಯದು ರು ೧॥ ರೋಲ್ಡ್ ಗೋಲ್ಡ್ ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೨||| ರೂ.

ಊರೂರಿಗೆ ಏಜಂಟರು ಬೇಕಾಗಿರುತ್ತಾರೆ. ಅರ್ಧಾಣೆ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ.

ನಮ್ಮ ವಿಳಾಸ:—ಗಂಗಪ್ಪಾ ಜೀರಿಗೆ,
49 ಆರ್ಟಿಸ್ಟ್ ಸೊಲಾಪುರ.

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪರ್ಟಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್‌ಸನ್ಸ್ 50
ಸುಗಂಧಕಾರಿ, ಮೈಸೂರು.

ಹೊಸ ಪುಸ್ತಕಗಳು.

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೫೫ ಪುಟಗಳ ಉದ್ಗ್ರಂಥ ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ

ಚೆನ್ನಬಸವೇಶ ವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು. ಅನೇಕ ಶಿವಶರಣರ ಚರಿತೆಗಳು. ಷಟ್ಸ್ಥಲ-ಕರಣಹಸುಗೆ-ಮಂಚೇಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ. ಎಂ. ಆರ್. ಕರಿಬಸವಶಾಸ್ತ್ರಿ,

180 ಗ್ರಂಥಪ್ರಚಾರಕಮಂಡಲಿ, ಮೈಸೂರು.

ದಿನಗಳು ಸಮಾಪಿಸಿದವು ಅತ್ಯಾಶ್ಚರ್ಯಕರವಾದ ಬಹುಮಾನ
ಔಷಧ ಪ್ರಸಿದ್ಧಿಹೊಂದಿದೆ. 8
೨೫ ಸಾವಿರ ರುಪಾಯಿಗಳು ಹಂಚಲ್ಪಡುವುವು.
ಬಳ್ಳಾರಿ.
ಅನೇಕ ಸರ್ಟಿಫ್‌ಕೇಟುಗಳು ಬಂದಿವೆ
ಇಂಥಾಸಮಯ ಮುಂದೆ ಸಿಕ್ಕಲಾರದು.
ಸರ್ವಜನಮನೋಲ್ಲಾಸಿನಿ ಅಂಡ್ ಕೋ. ಇವರ

(ನಾರಸಿಂಹ ಚೂರ್ಣವು.)

ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಆರೋಗ್ಯಭಾಗ್ಯವನ್ನು ಬಯಸುತ್ತಾನೆ ಎಂಬುವುದು ಸಹಜವಾದುದಷ್ಟೆ? ಆದರೆ ಅನೇಕ ದುರ್ವೃತ್ತನೆಗಳಿಂದ ಮೂಲಕಾರಣವಾದ ಧಾತುವನ್ನು ನಷ್ಟಪಡಿಸಿಕೊಂಡು ಹಲವು ವಿಧ ರೋಗಗಳನ್ನು ತಂದಿಟ್ಟುಕೊಂಡಿರುವವರನೇಕರನ್ನು ಕಣ್ಣಾರ ನೋಡುತ್ತಿರುವೆವು. ಈ ನಷ್ಟಧಾತುವಿಗಾಗಿ ಅನೇಕಾನೇಕ ವೈದ್ಯರು ಹಲವು ಔಷಧಗಳನ್ನು ವಿಶೇಷವಾದ ಬೆಲೆಯನ್ನಿಟ್ಟು ವಿಕ್ರಯಿಸಿದರು ಪ್ರಯೋಜನವು ಮಾತ್ರ ಕಡಿಮೆಯಾಗುತ್ತಿರುವುದು ವಿಷಾದಕರವಾಗಿರುವುದು. ಈ ಲೋಪವನ್ನು ಹೋಗಲಾಡಿಸುವುದಕ್ಕಾಗಿ [ನಾರಸಿಂಹ ಚೂರ್ಣವು] ಎಂಬ ಒಂದಾನೊಂದು ಸಶಾಸ್ತ್ರೀಯವಾದ ಚೂರ್ಣವನ್ನು ಸಿದ್ಧಿಪಡಿಸಿರುವೆವು. ಈ ಚೂರ್ಣವನ್ನು ಒಬ್ಬ ಮನುಷ್ಯನು ೧೪ ದಿನಗಳು ಸೇವಿಸಿದರೆ ಮುದುಕತನ ಅನೇಕತರದ ಮೇಹರೋಗಗಳು, ಪಾಂಡುರೋಗ, ಹದಿನೆಂಟುಬಗೆಯಾದ ಕುಷ್ಠಗಳು, ಎಂಟುವಿಧ ಉದರರೋಗಗಳು, ಭಗಂಧರವು, ಮೂತ್ರಕೃಛ್ರವು, ಗೃಧ್ರಸೀವಾತ, ಕಾಮಿಲೆ, ಕ್ಷಯವು, ಮಹಾಶ್ವಾಸಗಳು, ದಾರುಣವಾದ ಐದು ಬಗೆಯಾದ ಕಾಸೆಗಳು, ಎಂಭತ್ತು ವಿಧಗಳಾದ ವಾತರೋಗಗಳು, ನಲವತ್ತು ಬಗೆಯಾದ ಪಿತ್ತಗಳು, ಇಪ್ಪತ್ತು ಶ್ಲೇಷ್ಮರೋಗಗಳು, ದ್ವಂದ್ವಸನ್ನಿಪಾತರೋಗಗಳು, ಮೂಲರೋಗಗಳು ಇವೇ ಮುಂತಾದ ಸಮಸ್ತ ರೋಗಗಳು ಸಿಡಿಲಿನಿಂದ ಗಿಡಗಳು ನಾಶವಾಗುವಂತೆ ನಾಶವಾಗುತ್ತಿವೆ. ಇವರ ಸೇವನೆಯಿಂದ ಚಿನ್ನದಂಥಾ ಕಾಂತಿಯು, ಸಿಹ್ಮನಂತೆ ಪರಾಕ್ರಮವು, ಕುದುರೆಯಂಥಾ ವೇಗವು, ಹಕ್ಕಿಗಳ ದೃಷ್ಟಿಯು ಉಳ್ಳವರಾಗಿ ನೂರುಮಂದಿ ಯುವತಿಯರೊಂದಿಗೆ ಸುರತವಂ ಮಾಡುವಂಥಾ ಅತ್ಯಧಿಕ ವೀರ್ಯವೃದ್ಧಿಯುಂಟಾಗಿ ನೃಸಿಹ್ಮನಿಗೆ ಸಮಾನರಾದ ಮಕ್ಕಳನ್ನು ಹುಟ್ಟಿಸುವ ಪ್ರಬಲ ಬಲವಿರುವುದು. ಇದಗಲ್ಲಿ ಯಾವವಿಧವಾದ ರಸಗಳಾಗಲಿ ಮಿಶ್ರವಾಗಿಯಿಲ್ಲ ಇನ್ನಾವದೋಷಗಳೂ ಯಿಲ್ಲ ನಿರ್ದುಷ್ಟವಾದದ್ದು ಫಕ್ತವನಸ್ಪತಿಗಳಿಂದಲೇ ಸಿದ್ಧಮಾಡಿದ ದಿವ್ಯವಾದ ಔಷಧ. ಅನೇಕಪಂಡಿತರು, ಧನಿಕರು, ಸರ್ಟಿಫಿಕೇಟುಗಳನ್ನು ಕೊಟ್ಟಿರುವರು.

೧೪ ದಿನ ಉಪಯೋಗಕ್ಕೆ ಬರುವ ಡಬ್ಬಿ ೧ಕ್ಕೆ ಬೆಲೆ ರೂ. ೧

(ಬಹುಮಾನಗಳನ್ನು ಹಂಚುವ ವಿಧಾನ)

೧ ದರ್ಜೆ	ಡಬ್ಬಿಗಳನ್ನು	ತರಿಸಿಕೊಳ್ಳುವವರಿಗೆ		೧೦೦೦೦ ರೂ.
೬	,,	,,	...	೬೦೦೦ ರೂ.
೩	,,	,,	...	೪೦೦೦ ರೂ.
೨	,,	,,	...	೩೦೦೦ ರೂ.
೧	,,	,,	...	೨೦೦೦ ರೂ.

೧೯೧೪ ನೆ ಜುಲೈ ೧ ನೆ ತೇದಿ ಮೊದಲು ೧೯೧೫ ನೆ ಜುಲೈ ೧ ನೆ ತೇದಿ ವರಿಗು ಈ ಔಷಧವು ಒಂದುಲಕ್ಷ ಡಬ್ಬಿಗಳು ಖರ್ಚಾದ ಕೂಡಲೇ ಈ ಲೆಕ್ಕವನ್ನು ಅಲ್ಲಿಗೆ ಸಂಕ್ಷೇಪಮಾಡಿ ಬಹುಮಾನಗಳನ್ನು ಹಂಚುತ್ತೇವೆ. ಒಂದುಲಕ್ಷದಲ್ಲಿ ಮೇಲಣ ನಿಯಮಿತ ದಿನಕ್ಕೆ ಸರಿಯಾಗಿ ಒಂದುಲಕ್ಷ ಡಬ್ಬಿಗಳು ಖರ್ಚಾಗದಿದ್ದರೆ ಮತ್ತೂ ವಾಯಿದೆಯನ್ನು ಹೆಚ್ಚಿಸದೆ ಯೆಷ್ಟುಡಬ್ಬಿಗಳು ಖರ್ಚಾಗುತ್ತವೆಯೋ ಅಷ್ಟಕ್ಕೆ ದಾಮಾಷಾಪ್ರಕಾರ ಆಗತಕ್ಕಷ್ಟು ಬಹುಮಾನವನ್ನು ಮಾತ್ರ ಹಂಚುತ್ತೇವೆ. ಪ್ರತಿಒಬ್ಬ ಮನುಷ್ಯನು ತಾನು ಕೊಡುವ ಹಣಕ್ಕೆ ಸರಿಯಾಗಿ ದಿವ್ಯಾಷಧವನ್ನು ಪಡಿಯುವುದಲ್ಲದೆ ಬಹುಮಾನವನ್ನು ಸಹಾ ಹೊಂದುವುದಕ್ಕೆ ಅರ್ಹನಾಗಿರುತ್ತಾನೆ. ಈ ವಿಷಯದಲ್ಲಿ ತಿಲಮಾತ್ರವಾದರು ಸಂಶಯವಿಲ್ಲ. ಬಹುಮಾನದ ಮೊತ್ತವು ನಿಷ್ಪಕ್ಷಪಾತವಾಗಿ ಒಂದೇಸಮನಾಗಿ ಹಂಚಲ್ಪಡುವುದು. ಇದು ಮೋಸವಲ್ಲ, ಲಾಟರಿಯಲ್ಲ. ಯಾವ ವಿಧವಾದ ಕುಹಕತನವು ಇಲ್ಲ ಸತ್ಯವಾಗಿ ಬಹುಮಾನವನ್ನು ಹಂಚುತ್ತೇವೆ. ಅಸೂಯಾಂಧರವಾತುಗಳಿಗೆ ನಿಗಾಕೊಡಲಾಗದು ಜಾಗ್ರತೆಯಾಗಿ ತರಿಸಿಕೊಳ್ಳಿರಿ- ಔಷದಗುಣವನ್ನು ಪರೀಕ್ಷಿಸಿರಿ. ಅಪೇಕ್ಷಕರು ಈ ಕೆಳಗಣ ನಮ್ಮ ಅಡ್ರೆಸ್ಸಿಗೆ ಬರೆದು ತರಿಸಿಕೊಳಿರಿ.

ಇದರ ಅನುಪಾನಪತ್ರಿಕೆಯನ್ನು ಬಹುಮಾನದ ಟಿಕೀಟನ್ನು ಡಬ್ಬಿಸಂಗಡ ಕಳಿಸುವೆವು. ನಮ್ಮ ಕಂಪಿನಿಯ ಕಾಶಿವಿಶ್ವನಾಥ ಮಾರ್ಕು ಯಿಲ್ಲದ ಡಬ್ಬಿಯನ್ನು ತೆಗೆದುಕೊಳ್ಳಲಾಗದು.

ವಿಳಾಸ:—ಸರ್ವಜನಮನೋಲ್ಲಾಸಿನಿ
ಅಂಡ್ ಕೋ ಬಳ್ಳಾರಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

47



ಲೋಕಾಮೃತಪುರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಷ್ಟೊಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯಕ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧-೦-೦

ಟಪಾಲ್‌ಖರ್ಚ್ ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಳ ಕೂದಲು ಬೆಳೆಯುವ ಪರಿಮಳ ತೈಲವು.

3

ಡಬ್ಬಿ ೧ ಕ್ಕೆ ೩೬ ವಿಧವಾದ ಇನಾಂ ಸಾಮಾನುಗಳ ಸಮೇತ ೧೫ ತೊಲೆ ಎಣ್ಣೆಯ ಕ್ರಯ ರೂ. ೧-೦-೦

SAKUNTHALA
HAIR OIL
REGISTERED TRADE MARK

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆಇರುವ ಕೂದಲು ಬೆಳೆಯುವುದು. ಒರಟಾಗಿರುವ ಕೂದಲು ಮೃದುವಾಗುವುದು. ನೇರಳೇಹಣ್ಣಿನಂತೆ ಕಪ್ಪಾಗಿ ಥಳಥಳಿಸುವುದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವುದು. ಕಣ್ಣಿಗೆ ತಂಪು ಕೊಡುವದು. ತಲೆಯಲ್ಲಿರುವ ಮೆದಡನ್ನು ಸರಿಮಾಡುವುದು. ಕಣ್ಣಿನಲ್ಲಿ ಮಂಜನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವುದಲ್ಲದೆ ಜವ್ವಾಜಿ ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತೂ ಜಾಜಿ, ಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರೂಪಾಕ್ಷಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವುದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

೧೫ ತೊಲ ತೈಲವುಳ್ಳ ಡಬ್ಬಿ ೧ ಕ್ಕೆ ಕ್ರಯ ೩೬ ಇನಾಂ ಸಾಮಾನುಗಳ ಸಮೇತ ರೂ. ೧-೦-೦

ಇನಾಂ ಸಾಮಾನುಗಳ ತಪ್ಸೀಲು:—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ ೧, ದಂತದ ಬಾಚಣಿಗೆ ೧, ನೋಡಿಕೊಳ್ಳುವ ಕನ್ನಡಿ ೧, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ ೧, ಅತ್ತರುಬಿಲ್ಲೆ ೧, ವಾಸನೆಯುಳ್ಳ ಸೋಪು ೧ ತಾಂಬೂಲಮಾತ್ರೆ ೨೦ ಕೊಂಡೆ ಗಿಣಿಗಳು ೬ ಕಾರೊನೇಷನ್ ಬ್ರೂಚ್ ೧, ಜವಾದುಡಬ್ಬಿ ೧, ಈ ತರಹ ೩೬ ಇನಾಂ ಕೊಡಲ್ಪಡುತ್ತವೆ.

ನಮ್ಮ ವಿಳಾಸ:—ಧನಲಕ್ಷ್ಮಿ ಅಂಡ್ ಕಂಪನಿ ೧-೬
ವೆಂಕಟೇಶಮೇಸ್ತ್ರಿ ಬೀದಿ, ಸಾಹುಕಾರ್ ಪೇಟೆ ಮದರಾಸು.

---

೫೦೦ ರೂಪಾಯಿಗಳ ಬಹುಮಾನ
ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್‌ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಸಾಲಾಮಿಸ್ರಿಯ ಧಾರಣೆಯು ಜಾಸ್ತಿಯಾಗಿರುವದರಿಂದ ಅನೇಕರು ಉರುಳಿಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುವದು ತಿಳಿದುಬರುತ್ತದೆ.

4

ಸಾಲಾಮಿಸ್ರಿ ಮುರಬ್ಬಾವು—ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಸ್ತ್ರೀ ಸಂಗಕ್ಕೆ ಮೊದಲೆ ಧಾತು ಸ್ಖಲನವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಧಾತುಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕ್ಷಣ ಕ್ಷಣಕ್ಕೆ ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೈ, ಕಾಲು. ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೆಟ್ಟುಹೋಗಿರುವ ರಕ್ತವನ್ನು ಶುದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ವೃದ್ಧಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಳೆತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು.
ಸಾಲಾಮಿಸ್ರಿ ಮುರಬ್ಬಾವು—ಉತ್ಸಾಹ, ಧೈರ್ಯ, ಬುದ್ಧಿಕುಶಲತೆ, ಶರೀರಕಾಂತಿಯನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು—ತಾಂಬ್ರ, ಬೆಳ್ಳಿ, ಮತ್ತು ಭಂಗಾರ ಭಸ್ಮಕ್ಕಿಂತಲೂ ಉತ್ತಮವಾದುದು.
ಸಾಲಾಮಿಸ್ರಿ ಮುರಬ್ಬಾವು—ಹೊಟ್ಟೆಯಲ್ಲಿರುವ ಜ್ವರದಗಡ್ಡೆಯನ್ನು ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಶ್ವಾಸಖಾಸ ರೋಗಗಳನ್ನು ನಾಶಪಡಿಸುವದು.

ಈ ಮುರಬ್ಬಾಬೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪುರಾ ಗುಣಕೊಡುತ್ತದೆ. ೨-೩ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಸಾಲಾಮಿಸ್ರಿ" ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

೫೦೦ ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ಇದಕ್ಕೋಸ್ಕರವಾಗಿ ನಾವು ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ ಮೇಲ್ಕಂಡ ೫೦೦ ರೂಪಾಯಿಗಳನ್ನು ೧೯೧೫ನೆ ಇಸವಿ ಮಾರ್ಚಿ ತಾ॥ ೧೫ ರಲ್ಲಿ ದಿವಾಜಟ್ಟು ಇಟ್ಟಿರುತ್ತೇವೆ.

೧೫ ತೊಲೆ ಮುರಬ್ಬವಿನ ಡಬ್ಬಿ ೧ ಕ್ಕೆ ಕ್ರಯ ೨—೧—೦ ರೂಪಾಯಿ. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೩ ಡಬ್ಬಿಗಳ ವರೆಗೆ ೬ ಆಣೆ. ಅನುಪಾನ ಪತ್ರಿಕೆ ಔಷದದ ಸಂಗಡ ಇರುತ್ತೆ.

ವಿಳಾಸ:—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
೫, ಅವೆನ್ಯೂ ರೋಡ್ ಬೆಂಗಳೂರು ಸಿಟಿ.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೧—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತೆ.	೦—೫—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [ಎನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಣ್ಯವಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್‌ವಾಚ್.

ಇದರ ಕ್ರಯ ೭ ಬಹುಮಾನಗಳ ಸಮೇತ ರೂ.೩-೮-೦
ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ. 3



ಘನವಂತರೇ ಈ:—ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತೂ ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತೂ ನಾಣ್ಯವಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗ್ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್ ಬರೀ ಮಾತುಗಳಿಂದಲೇನುಳಿ? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ ೭ ಬಹುಮಾನಗಳ ತಪಶೀಲ್:—(೧) ಸುಂದರವಾದ ವಾಚ್ ಸರಪಣಿ, (೨) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (೩) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (೪) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆದಾರ, (೫) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (೬) ಪರಿಮಳವುಳ್ಳ ಸುವಾಸನೆ ಶೀಷೆ, (೭) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—
ಎಸ್. ಎಮ್. ಸ್ವಾಮಿ ಅಂಡ್ ಕಂಪೆನಿ,
ನಂ. ೪೪, ನಂಬುಳಯ್ಯರ ಬೀದಿ, ಮದರಾಸು.

೧೯೧೫ನೆಯ ಇಸವಿ ಏಪ್ರಿಲ್ ತಾ॥ ೨೫ರಿಂದ ೧೯೧೫ನೆಯ ಮೇ ತಾ॥ ೧ ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೭ ನೆಯ ರಾಕ್ಷಸನಾಮಸಂವತ್ಸರದ ಅಧಿಕವೈಶಾಖ ಶು॥ ಏಕಾದಶಿಯಿಂದ ಅಧಿಕವೈಶಾಖ ಬ॥ ಬಿದಿಗೆ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ತೇದಿ
25	^{1}ಭಾನು	ಏಕಾ	52-39	ಮಖಾ	4-22	13
26	^{2}ಸೋ	ದ್ವಾ	49-19	ಪುಬ್ಬಾ	3-46	14
27	^{3}ಮಂಗ	ತ್ರ	45-13	ಉತ್ತರ	2-5	15
28	^{4}ಬುಧ	ಚತು	39-58	ಚಿತ್ತ	56-46	16
29	^{5}ಗುರು	ಪೌ	34-24	ಸ್ವಾತಿ	52-58	17
30	^{6}ಶುಕ್ರ	ಪ್ರ	28-28	ವಿಶಾಖ	48-47	18
1	^{7}ಶನಿ	ಬಿದಿ	22-20	ಅನೂ	44-29	19

(1) ಸ್ಮಾರ್ತವೈಷ್ಣವ ಏ॥, ಮಂ॥ ಚಿ॥ ರಥಃ (2) ವೈಷ್ಣವೈಕಾದಶೀ, ಹರಿವಾಸರಃ (3) ಪ್ರದೋಷಃ, ಮಳೂರು ಅಪ್ರಮೇಯಸ್ವಾಮಿರಥಃ, ತೊಂಡನೂರು ಶ್ರೀ ಲಕ್ಷ್ಮೀನಾರಾಯಣಸ್ವಾಮಿರಥಃ. (4) ಮಧುರಕವಿಯಾಳ್ವಾರ್ ತಿರು॥, ಬಿಳಿಗಿರಿ ರಂಗಸ್ವಾಮಿರಥಃ. (5) ಸೌರಚಿತ್ರಾಪೂರ್ಣಿಮಾ (6) ಶ್ರೀರಂಗನಾಥ ಬ್ರ॥ ಪಾ॥ ತಿರುನಕ್ಷತ್ರಂ. (7) ಶ್ರೀ ಲಕ್ಷ್ಮೀರಮಣಸ್ವಾಮಿರಥಃ, ಗಾಧಾಸ್ತಂಭಃ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರ್ ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಕ್ಷಿಜ್ಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ನಿಸ್ಸಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿಕೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೪—೦

ಸಂಪುಟ ೨೮) ಮೈಸೂರ್ ಸ್ಟಾರ್ ಸರ್ ೧೯೧೫ ನೆಯ ಇಸವಿ ಮೇ ತಾರೀಖು ೨ ನೆಯ ಭಾನುವಾರ. (ಸಂಚಿಕೆ ೧೭

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

13

(ರಿಜಿಸ್ಟರ್ಡ್) ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

೧. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

೨. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

೩. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ ಯಾವರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

೪. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು

೫. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

೬. ಬೇಸಿಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

೭. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

೪೫ ಮಾತ್ರೆಗಳ	ಪೊಟ್ಟಣ	೧ ಕ್ಕೆ	೨	ಆಣೆ	೮೦ ಮಾತ್ರೆಗಳ	ಟಿನ್	೧ ಕ್ಕೆ	೪	ಆಣೆ.
೯೫ ,,	,,	,,	೪	,,	೧೦೦ ,,	ಶೀಷೆ	,,	೪॥	,,
೨೦೦ ,,	,,	,,	೭	,,	೫೫೦ ,,	ಮರದಪೆಟ್ಟಿಗೆ	,,	೧	ರೂ.
೨೦೦ ,,	ಟಿನ್	,,	೯	,,	೧೨೦೦ ,,	,,	,,	೨	,,

೧ ರೂ.ಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಎಲ್ಲಾ ಕಡೆಯೂ ಪ್ರಸಿದ್ಧ ವರ್ತಕರಲ್ಲಿ ವಿಕ್ರಯಿಸಲ್ಪಡುತ್ತದೆ.

ಮೈಸೂರುಸೀಮೆಯ ಏಜಂಟರು:—ಎಂ. ರಾಮಸಂಜೀವ ಸೆಟ್ಟಿ, ಚನ್ನಪಟ್ಟಣ.
ಸೋಲ್ ಏಜಂಟರು:—ಸೆಶಿಂತಾನ್ ಡಿಪೋ, ಪ್ರಿನ್ಸೆಸ್‌ಸ್ಟ್ರೀಟ್ ಬೊಂಬಾಯಿ ನಂ ೨.

ಮದ್ರಾಸ್ ಏಜಂಟ್:—ಬಿ. ಸಿ. ಷಾ ಅಂಡ್‌ಕೊ,
೧೭೩ ಬೇನಾಬಜಾರ್ ರೋಡ್, ಮದ್ರಾಸ್.

31

S.U.N.& CO.
BENARES CITY.
KASHI
VISHWESHWAR.

ಹೊಸ್ಸ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ. ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ—ಎಸ್. ಯು. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ಓರಿಯಂಟಲ್ ಫಾರ್ಮಸಿ ಮೈಸೂರು.

13

ಪ್ರಸಿದ್ಧ ಗುಣಕಂಡ ಔಷಧಗಳು.

ಜ್ವರದಮಾತ್ರೆ—ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಉಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮಂದಷವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ರೂ.

ಗೋರೋಜನದಮಾತ್ರೆ—ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೊಡ್ಲೆ ತಪ್ಪಿ ಜೀರ್ಣಶಕ್ತಿಕೊಡುತ್ತೆ. ಪ್ರಯಾಣೀಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾದ ನೋವು ಉಳುಕು ಊದು ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ. ೫ ಡಬ್ಬಿಗೆ ೧ ರೂ. ಕೊಡ್ಲೆ ನಮ್ಮ ಕ್ಯಾಟಲಾಗಿಗೆ ಬರಿಯಿರಿ ಮುಫತ್ತು ಕಳುಹಿಸುತ್ತೇವೆ.

ತಿರಸಂಗೀಕರ ಸ್ಮಾರಕ.

ಕನ್ನಡ ಒಕ್ಕಲುತನದ ಶಾಲೆ ದೇವೀಹೊಸೂರ.

7

ಈ ಶಾಲೆಯು ಧಾರವಾಡ ಜಿಲ್ಹೆಯಲ್ಲಿರುವ ಹಾವೇರಿ ಸ್ಟೇಶನ್ನದಿಂದ ೫ ಮೈಲು ದೂರವಿರುವ ದೇವೀಹೊಸೂರ ಎಂಬಲ್ಲಿ ಸ್ಥಾಪಿತವಾಗಿದ್ದು ಅದರ ಹೊಸ ಕ್ಲಾಸುಗಳು ಇದೇ ಮೇ ತಿಂಗಳು ೨೪ ನೇ ತಾರೀಖಿನಿಂದ ಶುರು ಆಗುವವು. ಇದು ಕೇವಲ ಒಕ್ಕಲಿಗರ ಮಕ್ಕಳ ದೆಶೆಯಿಂದ ಇರುತ್ತದೆ. ಇದರಲ್ಲಿ ಸೇರಲಿಚ್ಛಿಸುವ ವಿದ್ಯಾರ್ಥಿಗಳ ಸಂಬಂಧದ ನಿಯಮಗಳು ಕೆಳಗೆ ಕೊಟ್ಟಂತೆ ಇರುತ್ತವೆ.

(೧) ಹುಡುಗರು ಸ್ವತಃ ಒಕ್ಕಲತನ ಮಾಡುವಂಥ ಒಕ್ಕಲಿಗರ ಮಕ್ಕಳಾಗಿರಬೇಕು. ಮತ್ತು ಆ ಹುಡುಗರು ಸ್ವಲ್ಪ ಮಟ್ಟಿಗಾದರೂ ಒಕ್ಕಲತನದ ಕೆಲಸದಲ್ಲಿ ಮಾಹಿತಿಯುಳ್ಳವರಿರಬೇಕು.

(೨) ಇಲ್ಲಿ ಕಲಿತು ಒಕ್ಕಲತನದ ಉದ್ಯೋಗವನ್ನು ನಡೆಯಿಸಬೇಕೆನ್ನುವವರನ್ನೇ ಈ ಶಾಲೆಯಲ್ಲಿ ತಕ್ಕೊಳ್ಳುವದರಲ್ಲಿ ಬರುವದು. ಸರಕಾರೀ ನೌಕರಿಯನ್ನು ಇಚ್ಛಿಸುವಂಥ ವಿದ್ಯಾರ್ಥಿಗಳು ಇಲ್ಲಿ ಬರಕೂಡದು.

(೩) ಹುಡುಗರು ಕನಿಷ್ಠಪಕ್ಷಕ್ಕೆ ಕನ್ನಡ ೫ನೇ ಇಯತ್ತೆಯಲ್ಲಿಯಾದರೂ ಪಾಸಾಗಿರಲಿಕ್ಕೆ ಬೇಕು. ಮತ್ತು ಅವರು ಯಾವ ಶಾಲೆಯಲ್ಲಿ ಕಲಿತಿರುವರೋ ಆ ಶಾಲೆಯ ಹೆಡ್ಡಮಾಸ್ತರರ ಲೀವ್ಹಿಂಗ ಸರ್ಟಿಫಿಕೇಟನ್ನು ಅರ್ಜಿ ಲಗತ ಕಳುಹಿಸಬೇಕು.

(೪) ಹುಡುಗರ ವಯಸ್ಸು ೧೪ ವರ್ಷದಿಂದ ೧೭ ವರ್ಷದ ಒಳಗಿರಬೇಕು. ಮತ್ತು ವಯಸ್ಸಿನ ದಾಖಲೆ ಅರ್ಜಿ ಲಗತ ಕಳುಹಿಸಬೇಕು.

(೫) ಹುಡುಗರ ಅಭ್ಯಾಸಕ್ರಮವು ಎರಡು ವರ್ಷದ್ದಿರುವದು; ಈ ಶಾಲೆಯಲ್ಲಿ ತೆಗೆದುಕೊಂಡ ಪ್ರತಿಯೊಬ್ಬ ಹುಡುಗನಿಗೆ ಅವನ ಶಾಲೆಯ ಫೀಗೂ ಊಟದ ವೆಚ್ಚಕ್ಕೂ ಸಾಲುವಷ್ಟು ಸ್ಕಾಲರಶಿಪ್ ಕೊಡಲ್ಪಡುವದು.

(೬) ಒಮ್ಮೆ ಶಾಲೆಯಲ್ಲಿ ಸೇರಿದನಂತರ ಶಾಲೆಯ ಅಭ್ಯಾಸ ಕ್ರಮವು ಪೂರ್ಣ ಮುಗಿಯುವವರೆಗೆ ಶಾಲೆಯನ್ನು ಬಿಡಕೂಡದು. ಒಂದು ವೇಳೆ ಮಧ್ಯದಲ್ಲಿ ಬಿಟ್ಟರೆ ಅವರು ಶಾಲೆಯಲ್ಲಿ ಇದ್ದಷ್ಟು ದಿವಸಗಳ ಖರ್ಚನ್ನು ಕೆಳಗೆ ಸಹಿ ಮಾಡಿದವರು ನಿರ್ಣಯಿಸಿದಷ್ಟು ಕೊಡಬೇಕಾಗುವದು.

ಪ್ರತಿವರ್ಷ ೧೫-೨೦ ಹುಡುಗರನ್ನು ತೆಗೆದುಕೊಳ್ಳುವದರಲ್ಲಿ ಬರುವದು. ಬೇರೆ ಶಾಲೆಗಳಂತೆ ಈ ಶಾಲೆಗೂ ಯಾವತ್ತೂ ಸೂಟಿಗಳು ದೊರೆಯುವವು. ಇದಲ್ಲದೆ ವರ್ಷಕ್ಕೆ ಎರಡಾವರ್ತಿ ಒಮ್ಮೆ ದೀಪಾವಳಿ ಸುಮಾರಕ್ಕೆ, ಮತ್ತೊಮ್ಮೆ ಬೇಸಿಗೆ ಸಮಯಕ್ಕೆ ಒಂದೊಂದು ತಿಂಗಳದ ಸತತ ಸೂಟಿಗಳು ಸಿಕ್ಕುವವು. ಇವೆರಡು ಸೂಟಿಗಳಲ್ಲಿ ಮಾತ್ರ ಹುಡುಗರನ್ನು ಮನೆಗೆ ಕಳುಹಿಸುವದರಲ್ಲಿ ಬರುವದು. ಈ ಶಾಲೆಯ ಮುಖ್ಯ ಉದ್ದೇಶವೆಂದರೆ ಒಕ್ಕಲಿಗರ ಮಕ್ಕಳಿಗೆ ಸುಧಾರಿಸಿದ ಪ್ರಕಾರದ ಒಕ್ಕಲತನದ ಶಿಕ್ಷಣವನ್ನು ಕೊಟ್ಟು ಅವರನ್ನು ಅವರ ತಾಯಿತಂದೆಗಳಿಗೆ ಹೆಚ್ಚಿಗೆ ಉಪಯುಕ್ತರನ್ನಾಗಿ ಮಾಡಿಕೊಡುವದು ಅದೆ. ಈ ಶಾಲೆಗೆ ಬರಲಿಚ್ಛಿಸುವವರು ಅರ್ಜಿಯನ್ನು ಇದೇ ಮೇ ತಿಂಗಳ ೧೫ನೇ ತಾರೀಖಿನ ಒಳಗಾಗಿ ಕೆಳಗೆ ಸಹಿಮಾಡಿದವರ ಕಡೆಗೆ ಕಳುಹಿಸತಕ್ಕದ್ದು.

ಆ ಅರ್ಜಿ ವಿಚಾರಣೆಮಾಡಿ ನಮ್ಮ ಶಾಲೆಯಲ್ಲಿ ತೆಗೆದುಕೊಳ್ಳತಕ್ಕಂಥ ವಿದ್ಯಾರ್ಥಿಗಳಿಗೆ ಪತ್ರದ್ವಾರದಿಂದ ಬರಲಿಕ್ಕೆ ತಿಳಿಸಲಾಗುವದು. ಅರ್ಜಿ ನಿಕಾಲಿ ಮಾಡುವಕಾಲಕ್ಕೆ ವತನದಾರ ಪಾಟೀಲ ಕುಲಕರ್ಣಿಯವರ ಮಕ್ಕಳಿಗೂ, ಸುಸ್ಥಿತಿಯ ಒಕ್ಕಲಿಗರ ಮಕ್ಕಳಿಗೂ, ಹೆಚ್ಚು ಸವಲತ್ತ ಸಿಗುವದು. ಅರ್ಜಿಯಲ್ಲಿ ಹೆಸರು, ತಂದೆಯ ಹೆಸರು, ಅಡ್ಡ ಹೆಸರು, ಜಾತಿ,

ಇರುವ ಊರು, ತಾಲ್ಲೂಕು, ಜಿಲ್ಲಾ ಖಾತೇದ ಹೊಲವು ಎಷ್ಟು, ಮತ್ತು ಅದು ಎಲ್ಲಿರುವದು ಸರಕಾರಕ್ಕೆ ವರವರ್ಷ ಕೊಡಬೇಕಾದ ತೆರಿಗೆ ತೋಟಪಟ್ಟಿಗಳನ್ನು ಮಾಡಲಿಕ್ಕೆ ನೀರಿನ ಅನುಕೂಲತೆ ಇರುವದೇ ಹ್ಯಾಗೆ? ಮತ್ತು ಹೊಲಗಳನ್ನು ಮನೆಯಿಂದ ಮಾಡುವರೋ ಹ್ಯಾಗೆ? ಮೊದಲಾದ ಮಾಹಿತಿಯನ್ನು ತುಂಬಿ ಆಯಾ ಊರ ಗ್ರಾಮಸ್ಥರ ದಾಖಲೆಯನ್ನು ಲಗತಿಟ್ಟು ಅರ್ಜಿ ಕಳಿಸಬೇಕು; ಮತ್ತು ಅರ್ಜಿಯನ್ನು ಶಾಲೆಗೆ ಬರಲಿಚ್ಛಿಸುವ ವಿದ್ಯಾರ್ಥಿಗಳೇ ಸ್ವಹಸ್ತದಿಂದ ತುಂಬಿ ಕಳಿಸಬೇಕು. ಮೇಲೆ ಹೇಳಿದ ನಿಯಮಗಳಂತೆ ನಡೆಯಲಿಕ್ಕೆ ಅನುಮತಿಯುಂಟೆಂದು ತಮ್ಮ ಪಾಲಕರ ಕಡೆಯಿಂದ ಒಂದು ಸಹಿನಿಸಿ ದಾಖಲೆ ತಕ್ಕೊಂಡು ಅರ್ಜಿ ಲಗತ ಇಟ್ಟು ಕಳಿಸಬೇಕು

ಧಾರವಾಡ
ತಾ॥ ೪-೩-೧೯೧೫

ಸಹಿ ಟಿ. ಗಿಲ್ಬರ್ಟ
ಡಿ. ಡಾಯರೆಕ್ಟರ ಶೇತಕೀ ಖಾತೆ,
ದಕ್ಷಿಣಭಾಗ

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕೆ ಅವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮುಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತವಾಗಿರುವ ಘೋರಯುದ್ಧದ ದೆಸೆಯಿಂದ ಈ ಸಾಮುಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದ ಮತ್ತೂ ಬೆಲಜಿಯಮ್ಮಿನಿಂದ ಸುತರಾಂ ಬರುವುದು ಕಟ್ಟಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಆವಶ್ಯಕವಾದ ಕಾಗದ ಮೊದಲಾದ ಸಾಮುಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವಧಿಯು ಪೂರೈಸಿರುವವರಿಗೆಲ್ಲಾ ಪತ್ರಿಕೆಯನ್ನು ವಿ. ಪಿ ದ್ವಾರ ಕಳುಹಿಸುತ್ತಿರುವೆವು. ಆದರೆ ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿರುಗಿಸಿ ಕಾಗದದ ಬೆಲೆಯೇರಿಕೆಯಿಂದ ನಷ್ಟಪಡುವುದರ ಜತೆಗೆ ಪೋಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದು ತಿಳುಹಲು ಖೇದವಾಗುತ್ತದೆ. ಇತಃಪರಃ ದಯಾರ್ದ್ರಹೃದಯರಾದ ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ. ಪಿ. ಹಣವನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನವಾಗಿ ನಡೆದುಕೊಂಡು ಹೋಗುವಂತೆ ಮಾಡುವರೆಂದು ಸಂಪೂರ್ಣವಾಗಿ ನಂಬಿರುತ್ತೇವೆ.

ಮ್ಯಾನೇಜರ್.

ಕೋಲಾರ ಡಿಸ್ಟ್ರಿಕ್ಟು ಕೈಗಾರಿಗೆ ಮತ್ತು ವ್ಯವಸಾಯವಸ್ತುಗಳ ಫಲಪುಷ್ಪಗಳ ಮತ್ತು ರಾಸುಗಳ ಪ್ರದರ್ಶನದ

ಪ್ರಕಟನಪತ್ರಿಕೆ.

ಬೌರಿಂಗ್‌ಪೇಟೆ—1915 ನೇ ಜೂನ್ 3 ರ ಲಗಾಯ್ತು 5 ರ ವರಿವಿಗೆ.

ಪ್ರದರ್ಶನಾರಂಭ.

1. ಪ್ರದರ್ಶನವು ಜೂನ್ 3 ನೇ ತಾರೀಖಿನಲ್ಲಿ ಶುರುವಾಗಿ 5 ನೇ ತಾರೀಖು ಸಾಯಂಕಾಲದವರೆಗೂ ನಡೆಯುತ್ತದೆ ಇದಕ್ಕಾಗಿ ಚುನಾಯಿಸಲ್ಪಟ್ಟ ಕಮಿಟಿಯವರಿಂದ ಕಾರ್ಯಭಾಗವೆಲ್ಲಾ ನಡೆಸಲ್ಪಡುವುದು.

ಪ್ರದರ್ಶನದ ಉದ್ದೇಶ.

2. ಸಮಸ್ತರಿಗೂ ತಿಳುವಳಿಕೆಯನ್ನು ಉಂಟುಮಾಡುವುದು ಮತ್ತು ರೈತರಿಗೂ, ಶಿಲ್ಪಗಾರರಿಗೂ, ಇತರ ಕೈಗಾರಿಕೆ ಕೆಲಸದವರಿಗೂ ಅವಶ್ಯಕವಾಗಿ ತಿಳಿಯಬೇಕಾದಂಥಾ ಪದಾರ್ಥಗಳನ್ನೂ ಯಂತ್ರವಗೈರೆಗಳನ್ನೂ ಒಂದು ಕಡೆ ಸೇರಿಸಿ ಅವುಗಳನ್ನು ಉಪಯೋಗಿಸುವ ವಿಧಾನವನ್ನು ತಿಳಿಯಪಡಿಸುವುದು ಕಮಿಟಿಯವರ ಮುಖ್ಯ ಉದ್ದೇಶವಾಗಿದೆ. ಪ್ರದರ್ಶನಕ್ಕೆ ಮಾತ್ರ ಒಂದೊಂದು ಸಾಮಾನುಗಳನ್ನು ತಂದರೆ ನೋಟಕರಿಗೆ ಎಲ್ಲ ವಿಷಯವೂ ತಿಳಿಯದೇ ಹೋಗಬಹುದಾದುದರಿಂದ ವ್ಯಾಪಾರಮಾಡುವುದಕ್ಕೂ ಕೂಡ ಸಾಮಾನುಗಳನ್ನು ಪ್ರದರ್ಶನಕ್ಕಾಗಿ ತರಬಹುದು.

ಜಾನ್ವಾರುಗಳನ್ನು ಒಳ್ಳೇ ಸ್ಥಿತಿಗೆ ತಂದು ಅವುಗಳಲ್ಲಿ ಶ್ರೇಷ್ಠವಾದುವುಗಳು ಹೇಗೆ ಇರುವುವೆಂಬುದನ್ನು ಜನರಿಗೆ ತಿಳಿಯಪಡಿಸುವುದಕ್ಕೋಸ್ಕರ ದನಗಳು ಆಡು ಮತ್ತು ಮೇಕೆ, ಕೋಳಿ ವಗೈರೆವು, ನಾಯಿ ಮತ್ತು ಕುದುರೆ ಪಟ್ಟುಗಳ ಪ್ರದರ್ಶನವೂ ಕೂಡ ನಡೆಯುವುದು.

3. ಅಪಾಯಕರವಾದ ವಸ್ತುಗಳಾಗಲಿ, ಮದ್ದು ಅಥವಾ ಗುಂಡಿನ ಪದಾರ್ಥಗಳಾಗಲಿ, ಅಥವಾ ಕಮಿಟಿಯವರಿಂದ ಅಪಾಯಕರವೆಂದು ತೀರ್ಮಾನಿಸಲ್ಪಡಬಹುದಾದ ಇನ್ನಾವ ವಸ್ತುವಾಗಲಿ ಪ್ರದರ್ಶನಕ್ಕೆ ಬಿಡಲ್ಪಡುವುದಿಲ್ಲ.

4. ವಸ್ತುಗಳನ್ನು ಪ್ರದರ್ಶಿಸಲು ಅಪೇಕ್ಷಿಸುವಂಥಾವರು ಪ್ರದರ್ಶನವು ಶುರುವಾಗುವುದಕ್ಕೆ 15 ದಿವಸ ಮುಂಚಿತವಾಗಿಯೇ ಕಮಿಟಿಯ ಸೆಕ್ರೆಟರಿಯವರಿಗೆ ಬರೆದುಕೊಳ್ಳಬೇಕು. ಹಾಗೆ ಬರೆಯುವಾಗ್ಗೆ ಪ್ರದರ್ಶಕರ ಅಡ್ರೆಸ್ ವಗೈರೆ ತಪಶೀಲ್ ನಮೂದು ಇರಬೇಕು

5 ಕೋಲಾರ ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಿಂದಲೂ ಮತ್ತು ಹೊರಗಡೆಯಿಂದಲೂ ಸಾಮಾನುಗಳನ್ನು ಪ್ರದರ್ಶನಕ್ಕೆ ಕಳುಹಬಹುದು.

6. ಜಾನ್ವಾರುಗಳ ಶಿವಾಯಿ ಪ್ರದರ್ಶನಕ್ಕೆ ತರುವ ಇತರ ಎಲ್ಲಾ ಸಾಮಾನುಗಳಿಗಾಗಲಿ, ಸಾಮಾನುಗಳನ್ನು ಇಟ್ಟುಕೊಳ್ಳುವ ಜಾಗಕ್ಕಾಗಲಿ ಸುಂಕ ಯಾ ಬಾಡಿಗೆ ಕೊಡಬೇಕಾದ ಅವಶ್ಯಕತೆಯೇನೂ ಇಲ್ಲ. ಪ್ರತಿಯೊಂದು ಪ್ರದರ್ಶನ ವಸ್ತುವಿಗೂ ಒಂದು ಫ್ರೀ ಅಂದರೆ ಮಾಫಿ ಪ್ಯಾಸ್ ಕೊಡಲಾಗುತ್ತದೆ.

7. ಪ್ರದರ್ಶನಕ್ಕಾಗಿ ತರಲ್ಪಟ್ಟ ವಸ್ತುಗಳನ್ನು ಅಂಗೀಕರಿಸುವುದಕ್ಕೂ ಅಥವಾ ತಿರಸ್ಕರಿಸುವ ಭಾಗದಲ್ಲೂ, ಛಾವಣಿಹಾಕಿದ ಅಥವಾ ಬೈಲು ಜಾಗವನ್ನ ಪ್ರದರ್ಶನಗಳ ಉಪಯೋಗಕ್ಕಾಗಿ ಏರ್ಪಾಡು ಮಾಡುವುದರಲ್ಲೂ, ಪ್ರದರ್ಶನಕ್ಕೆ ಸಂಬಂಧಪಟ್ಟ ಇತರ ಎಲ್ಲಾ ವಿಷಯದಲ್ಲೂ ಕಮಿಟಿಯವರ ತೀರ್ಮಾನವೇ ಆಖೈರಾದದ್ದಾಗಿರುತ್ತದೆ.

8. ಪ್ರದರ್ಶಕರಾಗುವ ಪ್ರತಿಯೊಬ್ಬರೂ, ಈ ನಿಬಂಧನೆಗಳನ್ನೂ ಕಮಿಟಿಯವರು ಇವಕ್ಕೆ ವಿರೋಧವಿಲ್ಲದಂತೆ ಇತಃಪರಃ ಏರ್ಪಾಡು ಮಾಡಬಹುದಾದಂಥಾ ಇತರ ನಿಬಂಧನೆಗಳನ್ನೂ ಅನುಮೋದಿಸಿ ಅಂಗೀಕರಿಸಿದ್ದಾರೆಂದು ಭಾವಿಸಲ್ಪಡುತ್ತದೆ.

9. ಪ್ರದರ್ಶನಕ್ಕಲ್ಲದೆ ವ್ಯಾಪಾರಕ್ಕಾಗಿ ಮಾತ್ರ ತರಲ್ಪಡುವ ಸಾಮಾನುಗಳನ್ನು ಇಡಲು ಬೇಕಾಗುವ ಜಾಗಕ್ಕೆ (ಅಂದರೆ ಛಾವಣಿ ಇರಲಿ, ಇಲ್ಲದಿರಲಿ) ಯುಕ್ತತೋರುವ ಬಾಡಿಗೆ ವಸೂಲ್ಮಾಡಲ್ಪಡುತ್ತೆ. ಛಾವಣಿ ಜಾಗಕ್ಕೆ ಪ್ರದರ್ಶನಕಾಲಕ್ಕೆಲ್ಲ ಸೇರಿ

9 × 12 ಅಡಿ ಜಾಗಕ್ಕೆ 3—0—0 ರೂಪಾಯಿ.
9 × 6 ಅಡಿ ಜಾಗಕ್ಕೆ 1—8—0 ರೂಪಾಯಿ.

ಛಾವಣಿಯಿಲ್ಲದೆ ಇದ್ದರೆ, ಬೇಕಾಗುವಷ್ಟು ಜಾಗಕ್ಕೆ ತಲ್ಕಂತೆ 1 ರೂಪಾಯಿ ಲಗಾಯತು 10 ರೂಪಾಯಿವರಿವಿಗೂ ಕೊಡಬೇಕಾಗುತ್ತದೆ ವಿಶೇಷ ವಿಸ್ತಾರವಾದ ಜಾಗಾವನ್ನು ಅಪೇಕ್ಷಿಸುವವರು ಸಕಾಲದಲ್ಲಿ ಸೆಕ್ರೆಟರಿಯವರಿಗೆ ಬರೆದುಕೊಳ್ಳಬೇಕು.

10. ಸಾಮಾನುಗಳನ್ನು ಹೊತ್ತುಕೊಂಡು ಬರುವುದು ಅವುಗಳನ್ನು ಸರಿಯಾಗಿ ಇಟ್ಟುಕೊಳ್ಳುವುದು ವಾಪಸ್ಸು ತೆಗೆದುಕೊಂಡು ಹೋಗುವುದು ವಗೈರೆ ಖರ್ಚುಗಳನ್ನೆಲ್ಲಾ ಪ್ರದರ್ಶಕರೇ ವಹಿಸಬೇಕು. ಈ ಕೆಲಸಗಳನ್ನೆಲ್ಲಾ ಅವರೇ ಖುದ್ದಾಗಿಯಾಗಲಿ ಅಥವಾ ಅವರ ಏಜಂಟರ ಮುಖಾಂತರವಾಗಲಿ ನಡೆಸಿಕೊಳ್ಳಬೇಕು.

11. ಪ್ರದರ್ಶನದ ವಸ್ತುಗಳಿಗೆ ಯಾವರೀತಿಯಿಂದಲಾದರೂ ಉಂಟಾಗಬಹುದಾದಂಥಾ ಯಾವ ವಿಧವಾದ ಜಖಂ ಯಾ ನಷ್ಟಕ್ಕೆ ಕಮಿಟಿಯವರು ಜವಾಬ್ದಾರರಲ್ಲ.

12. ಪ್ರದರ್ಶಕರು ಯಾವುದಾದರೂ ಯಂತ್ರಗಳನ್ನಾಗಲಿ ಅಥವಾ ಕೈಗಾರಿಕೆ ಕೆಲಸವನ್ನಾಗಲಿ ಪ್ರತ್ಯಕ್ಷ ಉಪಯೋಗ ಅಥವಾ ತಯಾರಿಯಿಂದ ತೋರ್ಪಡಿಸಲು ಅಪೇಕ್ಷಿಸುವುದಾದರೆ ಈ ಸಂಗತಿಯನ್ನು ಅವರ ಅಪ್ಲಿಕೇಷನ್ನಿನಲ್ಲಿ ಮೊದಲೇ ಬರೆದುಕೊಳ್ಳಬೇಕು, ಮತ್ತು ಅವರು ಪ್ರತ್ಯಕ್ಷ ತೋರಿಸುವ ಅಂಶವು ಯಾವ ರೀತಿಯಲ್ಲಿರುತ್ತೆಂಬುದನ್ನೂ, ಯಂತ್ರ ವಗೈರೆವುಗಳನ್ನು ಸ್ಥಾಪಿಸುವುದಕ್ಕೆ ಸಲಕರಣೆಗಳು ಏನಾದರೂ ಬೇಕೆಂಬುವುದನ್ನೂ ಬರೆದುಕೊಳ್ಳಬೇಕು. ಇವಕ್ಕೆ ತಗಲಬಹುದಾದ ಖರ್ಚನ್ನು ಪ್ರದರ್ಶಕರು ಕೊಟ್ಟಲ್ಲಿ ಕಮಿಟಿಯವರು ಪಕ್ಕಾ ಅಥವಾ ಕಚ್ಚಾ ಕೂಲಿಗಾರರನ್ನು ಸಾಧ್ಯವಾದ ಮಟ್ಟಿಗೆ ಒದಗಿಸಿ ಕೊಡುತ್ತಾರೆ.

13. ವ್ಯಾಪಾರಕ್ಕಾಗಿ ಮಾತ್ರ ಹೆಚ್ಚಾಗಿ ತರಲ್ಪಡುವ ಎಲ್ಲಾ ಸಾಮಾನುಗಳನ್ನು ಪ್ರತ್ಯೇಕವಾದ ಸ್ಟಾಲಿನಲ್ಲಿ ಇಡಬೇಕು, ಮತ್ತು ಪ್ರದರ್ಶಕರಾಗಲಿ ಅವರ ಕಡೆಯವರಾಗಲಿ ಅವುಗಳನ್ನು ನೋಡಿಕೊಳ್ಳಬೇಕು ಪ್ರದರ್ಶಿಸಲ್ಪಟ್ಟ ವಸ್ತುಗಳನ್ನು ಮಾರಲು ಅಭ್ಯಂತರವೇನೂ ಇಲ್ಲ. ಆದರೆ ಪ್ರದರ್ಶನವು ಆಖೈರಾಗುವವರೆಗೂ ಅವುಗಳನ್ನು ಹೊರಗೆ ತೆಗೆದುಕೊಂಡು ಹೋಗಕೂಡದು. ವ್ಯಾಪಾರಕ್ಕಾಗಿ ಮಾತ್ರ ತರಲ್ಪಟ್ಟ ಸಾಮಾನುಗಳನ್ನು ಕೊಂಡುಕೊಂಡವರು ಒಂದು ಗೇಟ್ ಪ್ಯಾಸ್‌ನಿಂದ ಹೊರಗೆ ತೆಗೆದುಕೊಂಡು ಹೋಗಬಹುದು

14. ತಾವೇ ಖುದ್ದಾಗಿಯಾಗಲಿ ಅಥವಾ ತಮ್ಮ ಆಳು ಯಾ ಏಜಂಟರಾಗಲಿ ಬರುವುದಕ್ಕೆ ಅನಾನುಕೂಲವಾಗುವ ಪ್ರದರ್ಶಕರು ತಮ್ಮ ಪ್ರದರ್ಶನ ವಸ್ತುಗಳನ್ನು ಕಮಿಟಿಯವರ ವಶಕ್ಕೆ ಅಡ್ವಾನ್ಸಾಗಿ ಐದು (5) ರೂಪಾಯಿ ಜಾಸ್ತಿಕೊಡುವುದರ ಮೂಲಕ ಸುಪರ್ದುಮಾಡಬಹುದು. ಅಂದರೆ ಇಂಥಾ ಸಾಮಾನುಗಳು ಇತರ ಸಾಮಾನುಗಳೊಂದಿಗೆ ಒಂದು ಜನರಲ್ ಸ್ಟಾಲಿನಲ್ಲಿ ಇಡುವಂತೆ ಅನುಕೂಲವಾಗಿರಬೇಕು. ತಮ್ಮ ಸಾಮಾನಿಗೇನೇ ಪ್ರತ್ಯೇಕವಾಗಿ ಒಂದು ಸ್ಟಾಲ್ ಬೇಕಾಗುವುದಾದರೆ ಆ ಸಾಮಾನುಗಳನ್ನು ನೋಡಿಕೊಳ್ಳುವ ಅಟೆಂಡರಿಗೆ ಬೇರೆ ಛಾರ್ಜು ಕೊಡಬೇಕಾಗುತ್ತದೆ.

15. ಈ ಜಾತ್ರೆಯ ಕಾಲದಲ್ಲಿ ಬರುವ ಜಾನ್ವಾರುಗಳಿಗೆ ಅವುಗಳ ಮಾಲೀಕರಿಂದಾಗಲಿ ಅವರ ಏಜಂಟರಿಂದಾಗಲಿ ಇದರಡಿ ಕಂಡಂತೆ ತೆರಿಗೆ ವಸೂಲ್ಮಾಡಲಾಗುತ್ತದೆ.

	ತಲೆ ಮೇರೆ
ಎತ್ತುಗಳು ಹೋರಿಕರುಗಳು ಹಸುಗಳು ಮತ್ತು ಎಮ್ಮೆ ಯಾ ಕೋಣಗಳು	0—1—0
ಕರಾವಿನ ಹಸುಗಳು (ಕರುಸಹಿತ)	0—2—0
ನಾಯಿಗಳು	0—1—0
ಕುರಿ ಮತ್ತು ಮೇಕೆ	0—1—0
ಕುದುರೆ ಪಟ್ಟುಗಳು	0—2—0
ಕೋಳಿ	0—0—6

16. ಬಹುಮಾನಕ್ಕಾಗಿ ಪ್ರದರ್ಶಿಸಲ್ಪಡುವ ಮೇಲ್ಕಂಡ ಪ್ರತಿಯೊಂದು ರಾಸಿಗೂ ದ್ವಿಗುಣ ಛಾರ್ಜು ಮಾಡಲಾಗುತ್ತದೆ.

17. ಬಹುಮಾನಕ್ಕಾಗಿ ಪ್ರದರ್ಶಿಸಲ್ಪಡುವ ಪ್ರತಿಯೊಂದು ಜಾನ್ವಾರು ಅಥವಾ ಒಂದು ಜಾನುವಾರು ಗುಂಪಿಗೆ ಉಸ್ತುವಾರಿ ನೋಡಿಕೊಳ್ಳತಕ್ಕ ಬಗ್ಗೆ ಒಬ್ಬೊಬ್ಬ ಮನುಷ್ಯನಿರಬೇಕು. ಮತ್ತು ಅವನು ಕಮಿಟಿಯವರು ಅಪೇಕ್ಷಿಸಿದಲ್ಲಿ ಆ ಜಾನ್ವಾರು ಅಥವಾ ಗುಂಪನ್ನು ಕೂಡಲೆ ಹೊರಗೆ ತೆಗೆದುಕೊಂಡು ಹೋಗಲು ಸಿದ್ಧನಾಗಿರಬೇಕು. ಅವನಿಗೆ ಪ್ರತಿಯೊಬ್ಬನಿಗೂ ಒಂದು ಮಾಫಿ ಪ್ಯಾಸು ಕೊಡಲಾಗುತ್ತದೆ.

18. ಹಣ್ಣು ತರಕಾರಿ ಮತ್ತು ಹುವ್ವುಗಳ ಪ್ರದರ್ಶನವು ಶುರು ಅಂದರೆ 3ನೇ ತಾರೀಖಿನಲ್ಲಿ ಜರುಗಿ ಮಾರನೇದಿವಸ ಆಖೈರು ಆಗುತ್ತದೆ.

19 ಜಾಗ್ರತೆ ಕೆಡುವ ಪದಾರ್ಥಗಳ ಶಿವಾಯಿ ಇತರ ವಸ್ತುಗಳನ್ನು ಪ್ರದರ್ಶಕರು ಶುರು ತಾರೀಖಿಗೆ ಎರಡುದಿವಸಕ್ಕಾದರೂ ಮುಂಚೆ ತಲಪುವಂತೆ ತರಬೇಕು, ಅಥವಾ ಕಳುಹಿಸಿಕೊಡಬೇಕು. ತರಕಾರಿ ಹಣ್ಣು ಮತ್ತು ಇತರ ಬಾಡಿಹೋಗುವ ಪದಾರ್ಥಗಳನ್ನು ಮಾತ್ರ ಪ್ರದರ್ಶನ ಜಾಗಕ್ಕೆ ಶುರು ತಾರೀಖಿನ ಹಿಂದಿನ ದಿವಸ ಸಾಯಂಕಾಲದವರಿವಿಗೂ ತರಬಹುದು.

20. ಉಳುವುದರಲ್ಲೂ, ನೆಯಿಗೆಯಲ್ಲೂ, ದರ್ಜಿಕೆಲಸದಲ್ಲೂ, ಕುಂಬಾರಕೆಲಸದಲ್ಲೂ, ಪಂದ್ಯವನ್ನು ಇಡುವುದಕ್ಕೆ ಪ್ರದರ್ಶನ ಜಾಗದಲ್ಲಿ ಅಥವಾ ಸಮೀಪದಲ್ಲಿ ಏರ್ಪಾಡು ಮಾಡಲ್ಪಡುವುದು. ಹಳೇತರಹವಾದ ಮತ್ತು ಹೊಸ ನಮೂನೆಯ ನೇಗಲುಗಳಿಂದ ಉಳುವುದನ್ನೂ, ಮಗ್ಗಗಳಿಂದ ನೆಯ್ಯುವುದನ್ನೂ ಪ್ರತ್ಯಕ್ಷವಾಗಿ ಪ್ರದರ್ಶಿಸಲು ಏರ್ಪಾಡು ನಡೆಯುತ್ತದೆ.

21. ಉಳುಮೆಯ ಎತ್ತುಗಳನ್ನು ಪಂಚಾಯತರು ಅಪೇಕ್ಷಿಸಿದಲ್ಲಿ ನೇಗಲಿಗೆ ಕಟ್ಟಿ ಉಳುವುದೂ, ಭಾರಗಳನ್ನು ಎಳೆಯುವುದೂ ಮುಂತಾದ ರೀತಿಯಾಗಿ ಪರೀಕ್ಷೆ ಮಾಡಬಹುದು.

ಪಂಚಾಯತರು.

22. ಮುಖ್ಯಸ್ಥರಾದ ರೈತರುಗಳನ್ನು ಸರ್ಕಾರಿ ಮತ್ತು ಖಾಸಗಿ ದೊಡ್ಡಮನುಷ್ಯರುಗಳನ್ನು ಪಂಚಾಯತರನ್ನಾಗಿ ನಿಯಮಿಸಿ, ಪ್ರದರ್ಶನ ವಸ್ತುಗಳ ಯೋಗ್ಯತೆಗಳನ್ನು ತಿಳಿಯಲಾಗುತ್ತದೆ.

23. ಪಂಚಾಯತರಿಂದ ತೀರ್ಮಾನವಾಗುವ ಶ್ರೇಷ್ಠವಾದ ವಸ್ತುಗಳಿಗೆ ಮೆಡಲುಗಳನ್ನೂ ರೂಪಾಯಿಗಳ ಇನಾಮನ್ನೂ ಮತ್ತು ಸರ್ಟಿಫಿಕೇಟುಗಳನ್ನೂ ಕೊಡಲಾಗುತ್ತದೆ.

24 ಜಾನ್ವಾರುಗಳ ಸ್ಥಿತಿಯನ್ನು ಅಭಿವೃದ್ಧಿಪಡಿಸುವುದರಲ್ಲೂ ಕೈಗಾರಿಕೆ ಮತ್ತು ವ್ಯವಸಾಯವನ್ನು ಊರ್ಜಿತಪಡಿಸುವುದರಲ್ಲೂ ಆಸಕ್ತಿಯುಳ್ಳ ದೊಡ್ಡಮನುಷ್ಯರುಗಳಾಗಲೀ, ಸಂಘಗಳಾಗಲೀ ಬಹುಮಾನಗಳನ್ನು ಕೊಡುವುದಕ್ಕೆ ದ್ರವ್ಯಸಹಾಯಮಾಡಿದರೆ ಕಮಿಟಿಯವರು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸುತ್ತಾರೆ.

25. ಪ್ರದರ್ಶನವನ್ನು ನೋಡಲು ಬರುವ ಪ್ರತಿಯೊಂದೂ ಇಸಮಿಗೂ ತಲೆ 1ಕ್ಕೆ 2 ಆಣೆಯಂತೆ ಫೀ ವಸೂಲ್ಮಾಡಲಾಗುತ್ತೆ. 12 ವರುಷಗಳಿಗೆ ಒಳಪಟ್ಟು ಇರುವ ಹುಡುಗರಿಗೆ ಮಾತ್ರ ಅರ್ಧಛಾರ್ಜು.

26. ಕಮಿಟಿ ಮೆಂಬರುಗಳಾಗಲೀ ಅವರಿಂದ ನೇಮಿಸಲ್ಪಡುವ ಇತರರಾಗಲೀ ಪ್ರದರ್ಶನದ ಯಾವಭಾಗದಲ್ಲಾದರೂ ಎಲ್ಲಾ ಕಾಲದಲ್ಲಿಯೂ ಧಾರಾಳವಾಗಿ ಪ್ರವೇಶಿಸಲು ಅಧಿಕಾರವುಳ್ಳವರಾಗಿರುತ್ತಾರೆ.

27. ಪ್ರದರ್ಶನವು ಮುಗಿದ 3 ದಿವಸಗಳ ಒಳಗಾಗಿ ಎಲ್ಲಾ ಸಾಮಾನುಗಳನ್ನೂ ತೆಗೆದುಕೊಂಡು ಹೋಗಬೇಕು ತದನಂತರ ನಿಲ್ಲುವ ವಸ್ತುಗಳನ್ನು ಕಮಿಟಿಯವರು ಅವರಿಗೆ ತೋಚಿದಂತೆ ವಿಲೇವಾರಿ ಮಾಡುತ್ತಾರೆ.

28. ಫಲಾಹಾರದ ಸಾಮಾನುಗಳನ್ನಾಗಲೀ ಪಾನದ ಸಾಮಾನುಗಳನ್ನಾಗಲೀ ಚುಟ್ಟಾ ಬೀಡಿ ವಗೈರೆಗಳನ್ನಾಗಲೀ ಕಮಿಟಿಯವರ ಬರಹಮೂಲಕವಾದ ಅಪ್ಪಣೆಯಿಲ್ಲದೆ ಪ್ರದರ್ಶನದ ಯಾವಜಾಗದಲ್ಲಾದರೂ ಮಾರಕೂಡದು.

ಪ್ರದರ್ಶನದ ಪ್ರಶಂಸೆಯ ವಿಷಯಗಳು.

29. ವ್ಯವಸಾಯ, ಕೈಗಾರಿಕೆ, ಪ್ರಜೆಗಳ ಆರೋಗ್ಯ, ಪರಸ್ಪರಸಹಾಯಸಂಘಗಳು ಮುಂತಾದ ವಿಷಯಗಳಮೇಲೆ ಅನುಭವಸ್ಥರಾದ ದೊಡ್ಡಮನುಷ್ಯರಿಂದ ಕನ್ನಡದಲ್ಲಿ ಉಪನ್ಯಾಸಗಳು ಪ್ರದರ್ಶನಕಾಲದಲ್ಲಿ ಕೊಡಲ್ಪಡುತ್ತವೆ. ವಿಧವಿಧವಾದ ತಮಾಷೆ ಆಟಗಳು ನೋಟಗಳು ನಡೆಯಲು ಏರ್ಪಾಡು ಮಾಡಲ್ಪಡುತ್ತದೆ. ಆಟ ಮತ್ತು ನಕಲಿಗಳನ್ನು ಮಾಡುವವರೂ ಫಲಾಹಾರದ ಸಾಮಾನುಗಳನ್ನು ಮಾರಲು ಅಪೇಕ್ಷಿಸುವವರೂ ಸಕಾಲದಲ್ಲಿ ಕಮಿಟಿಯವರಿಗೆ ಬರೆದುಕೊಳ್ಳಬಹುದು

30. ಸಾಧ್ಯವಾದಷ್ಟುಮಟ್ಟಿಗೆ ಜಾನ್ವಾರುಗಳಿಗೆ ಹುಲ್ಲು ಮಾರುವವರನ್ನು ಏರ್ಪಾಟುಮಾಡಲಾಗುತ್ತದೆ. ಆದರೆ ಮಾಲೀಕರುಗಳು ತಮ್ಮ ಜಾನ್ವಾರುಗಳಿಗೆ ಹುಲ್ಲು ದೊರಕಲು ಸ್ವಂತ ಅನುಕೂಲಗಳನ್ನು ಏರ್ಪಾಟುಮಾಡಿಕೊಂಡು ಬರುವುದು ಉತ್ತಮ. ಕುಡಿಯುವ ನೀರಿಗೆ ತಕ್ಕಷ್ಟು ಅನುಕೂಲವಿರುತ್ತದೆ.

31. ಈ ಪ್ರದರ್ಶನಕಾಲದಲ್ಲಿ ಶ್ರೀ ಕೋದಂಡರಾಮಸ್ವಾಮಿಯವರ ಜಾತ್ರೆಯು ನಡೆಯುವುದರಿಂದ ವಿಶೇಷ ಜನರು ಸೇರಲು ಅವಕಾಶವಾಗಿದೆ. ಪ್ರದರ್ಶನಕ್ಕೆ ಕೋಲಾರದ ಚಿನ್ನದಗಣಿಯು ಸಮೀಪವಾಗಿ, ಗಣಿಯ ಯೂರೋಪಿಯನ್ಸ್ ಮತ್ತು ನಮ್ಮ ದೇಶದ ವಿಶೇಷ ಪ್ರಜೆಗಳು ಬಂದು ಸೇರುತ್ತಾರೆ. ಪ್ರದರ್ಶನದ ಜಾಗವೂ ಕೂಡ ರೈಲ್ವೇಸ್ಟೇಷನ್ನಿಗೆ 1 ಫರಲಾಂಗಿನೊಳಗೆ ಅತಿ ಸಮೀಪವಾಗಿ ಇರುತ್ತದೆ. ಈ ಕಾರಣಗಳಿಂದ ಪ್ರದರ್ಶಕರ ಸಾಮಾನುಗಳಿಗೂ ಜಾನುವಾರುಗಳಿಗೂ ಒಳ್ಳೆಯ ವ್ಯಾಪಾರಕಾಲವಾಗಿದೆ.

32. ಜನಗಳ ಮತ್ತು ಸಾಮಾನುಗಳ ಉಸ್ತುವಾರಿಗಾಗಿ ತಕ್ಕಷ್ಟು ಪೋಲೀಸ್ ಸಿಬ್ಬಂದಿಯು ಏರ್ಪಾಡಾಗಿರುತ್ತದೆ.

33. ಕಮಿಟಿಯವರ ಖುದ್ದು ಅಪ್ಪಣೆಯಿಲ್ಲದೆ ಪ್ರದರ್ಶಿಸಲ್ಪಟ್ಟ ಯಾವ ವಸ್ತುವನ್ನಾಗಲಿ ಕಾಪಿಮಾಡಕೂಡದು, ಅಥವಾ ಫೋಟೋಗ್ರಾಫ್ ವಗೈರೆ ತೆಗೆಯಕೂಡದು. ಆದರೆ ಕಮಿಟಿಯವರ ಬರಹಮೂಲಕವಾದ ಅಪ್ಪಣೆ ಪಡೆದು ಸ್ಟಾಲ್‌ಗಳ ಒಟ್ಟು ಫೋಟೋವನ್ನು ಮಾತ್ರ ತೆಗೆಯಬಹುದು.

34. ಪ್ರದರ್ಶನಕಾಲದಲ್ಲಿ ನಡೆಯುವ ವಿನೋದ ವಗೈರೆಗಳ ತಪಶೀಲ್ ಪ್ರಕಟನೆಗಳು ಸೆಕ್ರೆಟರಿಯವರಲ್ಲಿ ದೊರೆಯುತ್ತವೆ.

35. ಎಲ್ಲಾ ಕಾಗದಪತ್ರಗಳನ್ನು ‘ಕೋಲಾರ ಡಿಸ್ಟ್ರಿಕ್ಟು ಕೈಗಾರಿಕೆ ವ್ಯವಸಾಯ ಹಣ್ಣು, ಹುವ್ವು ಮತ್ತು ರಾಸುಗಳ ಪ್ರದರ್ಶನದ ಸೆಕ್ರೆಟರಿಯವರಿಗೆ, ಬವರಿಂಗ್‌ಪೇಟೆಗೆ’ ಎಂದು ಬರೆದುಕೊಳ್ಳಬೇಕು.

M. G Shama Rao,
Honorary President.

ಅಲ್ಯೂಮಿನಿಯಂ

ಈ ನೂತನ ಲೋಹದ ಬೆಲೆಯು ೧೮೮೯ ನೆಯ ವರ್ಷದಲ್ಲಿ ಟನ್ ೧ಕ್ಕೆ ೩೪೩೩೦ ರೂ. ಗಳಾಗಿದ್ದಿತು. ಈಗ ಇದರ ಬೆಲೆಯು ಟನ್ ೧ಕ್ಕೆ ೨೦೦ ರೂ. ಗಳಾಗಿವೆ. ವಿದ್ಯುಚ್ಛಕ್ತಿಯು ಯಾವ ಯಾವ ಕೆಲಸಗಳಿಗೆ ಉಪಯೋಗಿಸಲ್ಪಡುತ್ತದೋ ಆಯಾ ಕೆಲಸಕ್ಕೆಲ್ಲಾ ಈ ಲೋಹವು ಬಹಳವಾಗಿ ಉಪಯೋಗಿಸಲ್ಪಡುತ್ತಿದೆ. ಈಚೆಗೆ ಈ ಲೋಹದ ಉತ್ಪತ್ತಿಯು ಬಹಳ ಹೆಚ್ಚಾಗಿದೆ. ಇದರ ಉಪಯೋಗವೂ ಹೆಚ್ಚಿದೆ. ಇದರಲ್ಲಿ ಕಿಲುಬು ಹಿಡಿಯದಿರುವುದೂ ತುಕ್ಕು ಹಿಡಿಯದಿರುವುದೂ ಸಹ ಇದರ ವ್ಯಾಪಕತೆಯನ್ನು ಹೆಚ್ಚಿಸಲು ಕಾರಣವಾಗಿದೆ ಈಚೆಗೆ ಜರ್ಮನರು ಈ ಅಲ್ಯೂಮಿನಿಯಮ್ಮಿಗಿಂತಲೂ ಹಗುರವಾದ ಲೋಹವೊಂದನ್ನು ರಚಿಸಿ ಅದನ್ನು ಆಕಾಶವಿಮಾನಗಳ ಮೇಲುಹೊದಿಕೆಗೆ ವಿಶೇಷವಾಗಿ ಉಪಯೋಗಿಸುತ್ತಿರುವರಂತೆ.

ದೇವದಾರು ಮರ.

ನಮ್ಮ ದೇಶದಲ್ಲಿ ಗೊಂಬೆಯ ಸಾಮಾನುಗಳಿಗೂ ಪಟಗಳ ಚೌಕಟ್ಟಿಗೂ ಒಂದು ಜಾತಿಯ ಮರಗಳು ವಿಶೇಷವಾಗಿ ಉಪಯೋಗಿಸಲ್ಪಡುತ್ತಿವೆಯಷ್ಟೆ. ಈ ಮರದಲ್ಲಿ ವಿಶೇಷಭಾಗವು ನಮಗೆ ವಿದೇಶೀಯರುಗಳಿಂದ ಬರುತ್ತಿವೆ. ಕಳೆದ ೧೯೧೪ ನೆಯ ವರ್ಷದಲ್ಲಿ ಇಂಥ ಮರವು ಜರ್ಮನಿಯಿಂದ ೪೩೩೦೭ ರೂ. ಗಳಷ್ಟು, ಅಮೇರಿಕಾದಿಂದ ೩೯೭೩೦ ರೂ. ಗಳಷ್ಟು, ಗ್ರೇಟ್‌ಬ್ರಿಟನ್ನಿನಿಂದ ೨೩೧೮೭ ರೂ. ಗಳಷ್ಟು ನಮ್ಮಲ್ಲಿಗೆ ಬಂದಿದೆ. ಜರ್ಮನಿಯಿಂದ ಬರುವ ಚೌಕಟ್ಟಿನ ಮರಗಳು ಬಹಳ ಅಗ್ಗವಾದವು. ದೇವದಾರು ಮರದಮೇಲೆ ಅನೇಕತರದ ಬಣ್ಣಗಳನ್ನೂ, ಮಿರುಗನ್ನೂ, ಇಲ್ಲನ್ನೂ

ಕಟ್ಟಿ ಭರತಖಂಡಕ್ಕೆ ಕಳುಹಿಸಿಕೊಡುತ್ತಾರೆ ಈ ಮರವನ್ನು ಜರ್ಮನರು ನಾರ್ವೆ ಸ್ವೀಡನ್ ಪೋಲಾಂಡ್ ದೇಶಗಳಿಂದ ಬಹಳ ಅಗ್ಗವಾಗಿ ತರಿಸಿಕೊಂಡು ಅದಕ್ಕೆ ಕೈಗಾರಿಕೆಯನ್ನು ಮಾಡಿ ಬಹಳ ಅಗ್ಗವಾಗಿ ಮಾರುತ್ತಾರೆ. ಇತರ ದೇಶಗಳ ಪದಾರ್ಥಗಳಿಗಿಂತ ಜರ್ಮನ್‌ದೇಶದಿಂದ ಸರಕುಗಳು ಅಗ್ಗವಾಗಿ ಮಾರಲ್ಪಡುವುದಕ್ಕೆ ಅಲ್ಲಿನ ಪ್ರಭುತ್ವದವರು ರೈಲ್ವೆ ಬಾಡಿಗೆಗಳನ್ನು ವರ್ತಕರ ಉಪಯೋಗಕ್ಕೋಸ್ಕರವಾಗಿ ಬಹಳ ಕಡಿಮೆಮಾಡಿರುವುದೇ ಕಾರಣವು. ೧೮ ಅಡಿಗಳ ಚೌಕಟ್ಟಿನ ಮರಕ್ಕೆ ಅದರ ಕೆಲಸಗಾರಿಕೆ ಮೊದಲಾದುವುಗಳ ಯೋಗ್ಯತೆಯನ್ನನುಸರಿಸಿ ೧-೭-೦ ಮೊದಲು ೪೩ ರೂ. ನ ವರೆಗೂ ಬೆಲೆಯಾಗುವುದು. ಕಲ್ಕತ್ತೆಗೆ ಆ ಮರದ ಚೌಕಟ್ಟುಗಳು ೯ ಅಡಿಗಳ ಉದ್ದದವುಗಳಾಗಿ ೨ ರಿಂದಹಿಡಿದು ೧೨ ರ ವರೆಗೆ ಸೇರಿಸಿ ಒಂದೊಂದು ಕಟ್ಟಾಗಿ ಮಾಡಿ, ಮಾರಾಟಕ್ಕೆ ಬರುವುವು. ಈ ದೇಶದ ಬೆಲೆಯು ಕೆಲವು ಸಮಯಗಳಲ್ಲಿ ಮೂಲ ಬೆಲೆ ೧ ಕ್ಕೆ ೨-೩ ರಷ್ಟಕ್ಕಿಂತಲೂ ಹೆಚ್ಚಾಗಿರುವುದುಂಟು.

(ಹತ್ತಿಯ ನೂಲು)

ನಮ್ಮ ಭರತಖಂಡದಲ್ಲಿರುವ ಎಲ್ಲಾ ಕಾರ್ಖಾನೆಗಳಲ್ಲೂ ಕಳೆದ ೧೯೧೪ ನೇ ವರ್ಷದ ಏಪ್ರಿಲ್ ತಿಂಗಳಿನಿಂದ ಅಕ್ಟೋಬರ್ ತಿಂಗಳ ಕೊನೆಯವರೆಗೆ ೩೮೮೦೦೦೦೦ ಪೌನುಗಳ ನೂಲು ಅಣಿ ಮಾಡಲ್ಪಟ್ಟಿತು. ಅದರಲ್ಲಿ ೧೪೭೦೦೦೦೦ ಪೌನಿನ ನೂಲು ಈ ದೇಶದಲ್ಲೇ ಬಟ್ಟೆಯಾಗಿ ನೇಯ್ಯಲ್ಪಟ್ಟಿರುವುದು.

ಭರತಖಂಡದ ವೃತ್ತಾಂತಗಳು.

ರಾವಲ್ಪಿಂಡಿಯಲ್ಲಿ ಈಗ ಗೋಧುಮೆಯು ರೂ.೧ಕ್ಕೆ ೯ ಸೇರಿನಂತೆ ಮಾರಲ್ಪಡುತ್ತಿದೆ.

ಕಳೆದ ತಾ॥ ೧೩ಕ್ಕೆ ಕಡೆಯಾದ ಒಂದು ವಾರದಲ್ಲಿ ಭರತಖಂಡದೊಳಗೆ ೩೧೧೩೮ ಮಂದಿಗೆ ಪ್ಲೇಗ್ ತಗುಲಿ ೨೪೪೧೩ ಮಂದಿಗಳು ಅದರಿಂದ ಸತ್ತಿರುತ್ತಾರೆ.

ಶ್ರೀಯುತ ಗಂಧಿ ದಂಪತಿಗಳಿಗೆ ಮದ್ರಾಸಿನಲ್ಲಿ ನಾನಾ ಸಂಘಗಳವರು ಮಾಡುತ್ತಿರುವ ಮರ್ಯಾದೆಯು ಯಾವೊಬ್ಬ ಪ್ರಭುವಿಗೂ ಕೂಡ ನಡೆದಿಲ್ಲವೆನ್ನಿಸಿಕೊಳ್ಳುತ್ತಲಿರುವುದು.

ವಿಧವಾ ವಿವಾಹ ಪ್ರೋತ್ಸಾಹಕ್ಕಾಗಿಯೂ ಹಿಂದೂ ವಿಧವಾ ಪಾಲನೆಗಾಗಿಯೂ ಲಾಹೋರಿನಲ್ಲಿ ಸ್ಥಾಪಿತವಾಗಿರುವ ಸಂಘಕ್ಕಾಗಿ ರಾ॥ ಬ॥ ಗಂಗಾರಾಮರವರು ೩೦ ಸಾವಿರ ರೂ.ಗಳನ್ನು ದಾನಮಾಡಿದರು.

ಭರತಖಂಡದ ದಕ್ಷಿಣಭಾಗದಲ್ಲಿ ಈಗ ಹೆಚ್ಚು ಮಳೆಯಾಗುತ್ತಿದೆ. ಕಳೆದ ವಾರದೊಳಗೆ ವಿಪರೀತ ವೃಷ್ಟಿಯಾಗಿ ಆಲಿಕಲ್ಲುಗಳು ಬಿದ್ದು, ಬಲವಾಗಿ ಗಾಳಿ ಬೀಸಿದುದರಿಂದ ರಬ್ಬರ್ ಮರಗಳು ಬಹಳ ಉರುಳಿಕೊಂಡು ತೋಟಗಾರರಿಗೆ ವಿಶೇಷ ನಷ್ಟವಾಗಿದೆ.

ಬಾಕರ್‌ಗಂಜ್ ಜಿಲ್ಲೆಯಲ್ಲಿ ಪ್ರತಿದಿನವೂ ಯಾವುದಾದರೊಂದು ಸ್ಥಳದಲ್ಲಿ ಕೊಲೆ ಅಥವಾ ಸುಲಿಗೆಯು ನಡೆದ ಸುದ್ದಿಯು ಹರಡುತ್ತಿರುವುದರಿಂದ ಆ ಪ್ರಾಂತ್ಯದ ಪ್ರಜೆಗಳು ಕಳವಳಗೊಂಡಿದ್ದಾರೆ. ಈ ತಿಂಗಳು ತಾ॥ ೧೯ ರೊಳಗಾಗಿ ೪ ಕಡೆ ದೊಡ್ಡ ಕೊಲೆ ಸುಲಿಗೆಗಳು ನಡೆದಿವೆಯಂತೆ.

ಕಳೆದ ತಾ॥ ೧೩ರಲ್ಲಿ ಲೂಧಿಯಾನಾದೊಳಗೆ ಆರ್ಯಸಮಾಜದ ಆಧಿಪತ್ಯದ ಕೆಳಗೆ ಒಂದು ಬ್ರಾಹ್ಮಣ ವಿಧವಾವಿವಾಹವಾಯಿತು. ವಧೂವರರೀರ್ವರೂ ಉಪಾಧ್ಯಾಯ ವೃತ್ತಿಯಲ್ಲಿರುವರು. ಈ ಮದುವೆಗೆ ಪೂರ್ವಾಚಾರ ಪರಾಯಣರೂ ಸಂಘಸಂಸ್ಕರಣ ಪಕ್ಷದವರೂ ಸೇರಿ ೪೦೦ ಮಂದಿಯವರೆಗೆ ಬಂದಿದ್ದರು.

ಹಿಂದೂದೇಶ ರಕ್ಷಣಶಾಸನವನ್ನು ಈ ಕೆಳಗಣ ದೇಶಭಾಗಗಳಲ್ಲೂ ವ್ಯವಹರಣೆಗೆ ತರಬೇಕೆಂದು ಪ್ರಭುತ್ವದವರು ಪ್ರಕಟಿಸಿದ್ದಾರೆ. ಬಂಗಾಳದ ಬರದ್ವಾನ್ ಡಿವಿಜನ್ನಿಗೆ ಸೇರಿದ ಮಿಡ್ನಾಪುರ-ಹೌರಾ ಜಿಲ್ಲೆಗಳಲ್ಲಿ; ಢಕ್ಕಾ ಡಿವಿಜನ್ನಿಗೆ ಸೇರಿದ ಢಕ್ಕಾ-ಫರೀದ್ಪುರ-ಮೈಮನ್‌ಸಿಂಗ್ ಜಿಲ್ಲೆಗಳಲ್ಲಿ; ರಾಜಷಾಹಿ ಡಿವೀಜನ್ನಿಗೆ ಸೇರಿದ ದಿನಾಜಪುರ-ರಂಗಪುರ-ಜಾಲ್‌ಪೈಗೂರಿ-ಬೋಗ್ರಾ ಜಿಲ್ಲಾಗಳಲ್ಲಿ; ಚಿತ್ತಗಂಗಾ ಡಿವೀಜನ್ನಿಗೆ ಸೇರಿದ ತಿಪ್ಪೆರಾ-ನೌಕಾಹಾಲಿ-ಚಿತ್ತಗಂಗಾ ಜಿಲ್ಲೆಗಳಲ್ಲಿ.

ಬೊಂಬಾಯಿ ನಿಯಮನಿರ್ಮಾಣ ಸಭಾಸಭಿಕರಾಗಿದ್ದ ಆ॥ ಸೆಟಲ್ವಾಡರವರು ಕೈ॥ ಗೋಖಲೆಯವರ ಸ್ಥಾನಕ್ಕೆ ಸಾಮ್ರಾಜ್ಯ ನಿಯಮನಿರ್ಮಾಣಸಭೆಗೆ ಆರಿಸಲ್ಪಟ್ಟು ಹೋದುದರಿಂದ, ಅವರ ಸ್ಥಾನದಲ್ಲಿ ಬೊಂಬಾಯಿ ಶಾಸನ ಸಭೆಯ ಸಭಿಕರಾಗಲು ಬೊಂಬಾಯಿ ವಿಶ್ವವಿದ್ಯಾಲಯದವರು ಮೂರು ಮಂದಿಗಳ ಹೆಸರನ್ನು ಸೂಚಿಸಿದ್ದಾರೆ. ಅವರಲ್ಲಿ ಹೆಚ್. ಜಿ. ಬಾಬಾರವರು ಒಬ್ಬರಾಗಿದ್ದಾರೆ ಇವರು ಹಿಂದೆ ಮೈಸೂರು ಸಂಸ್ಥಾನದಲ್ಲಿ ವಿದ್ಯಾಭ್ಯಾಸ ಶಾಖಾಧಿಕಾಧಿಕಾರಿಗಳಾಗಿದ್ದವರು.

ಡಾಕ್ಟರ್ ಸುಂದರಂ ಅಯ್ಯರು ಮೊದಲಾದ ಹಲವು ಹೆಸರುಗಳಿಂದ ಹಲವುಕಡೆ ಮೋಸಮಾಡಿ ಕಡೆಗೆ ಬೆಂಗಳೂರಿನಲ್ಲಿ ಸಿಕ್ಕಿಬಿದ್ದ ಮೋಸಗಾರನ ನಿಜವಾದ ಹೆಸರು ಪಿ. ಎಂ. ಶೇಷಾಚಾರಿಯೆಂತಲೂ, ಅವನ ತಂದೆಯ ಹೆಸರು ತಿರುವೆಂಕಟಾಚಾರಿಯೆಂತಲೂ ಗೊತ್ತಾಗಿ ಈತನ ಮೇಲೆ ಬೊಂಬಾಯಿಯಲ್ಲಿ ಹೂಡಲ್ಪಟ್ಟಿರುವ ವ್ಯಾಜ್ಯಕ್ಕಾಗಿ ಬೆಂಗಳೂರು ಪೋಲೀಸರು ಬೊಂಬಾಯಿಗೆ ಕರೆದುಕೊಂಡುಹೋಗುವುದರಲ್ಲಿದ್ದಾರೆ. ಇವನ ಮೇಲೆ ಬೆಂಗಳೂರು ತಂಜಾವೂರು-ಜಬ್ಬಲ್‌ಪೂರ್ ಮೊದಲಾದ ಅನೇಕ ಸ್ಥಳಗಳಲ್ಲಿ ವ್ಯಾಜ್ಯವು ಹೂಡಲ್ಪಟ್ಟಿದೆಯಂತೆ.

ಶ್ರೀಮಾನ್ ಗಂಧಿದಂಪತಿಗಳು ಬಿಲ್ಲ ಎಕ್ಸ್‌ಪ್ರೆಸ್ ಟ್ರೇನಿನಲ್ಲಿ ಮದ್ರಾಸಿಗೆ ಬಂದಾಗ್ಗೆ ನಿಲ್ದಾಣದಲ್ಲಿ ಸಕಲ ವರ್ಣಾಶ್ರಮದವರೂ ದೊಡ್ಡ ಗುಂಪಾಗಿ ನೆರೆದು ಇದಿರ್ಗೊಳ್ಳುವುದಕ್ಕೆ ಕಾದಿದ್ದರು. ಬಂಡಿಯು ನಿಂತಕೂಡಲೇ ಜನರೆಲ್ಲರೂ ೧-೨ ನೆ ತರಗತಿಯ ಬಂಡಿಗಳಲ್ಲಿ ಗಂಧಿ ದಂಪತಿಗಳನ್ನು ತಡಕಿ, ಅಲ್ಲಿ ಕಾಣದೆ ನಿರುತ್ಸಾಹರಾದರು. ಅಷ್ಟರಲ್ಲಿ ಅವರು ಸಾಮಾನ್ಯ ಕುಟುಂಬದವರಂತೆ ಕಡೆಯಲ್ಲಿದ್ದ ಮೂರನೆಯ ತರಗತಿಯ ಬಂಡಿಯಲ್ಲಿರುವರೆಂಬುದನ್ನು ಗಾರ್ಡಿನ ಮುಖೇನ ತಿಳಿದು ಜನಪ್ರವಾಹವೆಲ್ಲಾ ಅತ್ತಸಾಗಿ ಆ ಪುಣ್ಯದಂಪತಿಗಳನ್ನು ನೋಡಿ ಆಶ್ಚರ್ಯಪಟ್ಟು ಅಭೂತಪೂರ್ವವಾದ ಸಂಭ್ರಮಾನಂದಗಳಿಂದ ಮರ್ಯಾದಿಸಿದರು. ಅವರು ಕುಳಿತು ಹೊರಟ ಬಂಡಿಯ ಕುದುರೆಗಳನ್ನು ಬಿಚ್ಚಿ ವಿದ್ಯಾರ್ಥಿಗಳೇ ಎಳೆದುಕೊಂಡು ಹೋಗಿ ಅವರ ಬಿಡಾರಕ್ಕೆ ಸೇರಿಸಿದರು.

ಮದ್ರಾಸಿನಲ್ಲಿ ಅನ್ನದಾನ ಸಮಾಜವೆಂಬುದೊಂದು ಸ್ಥಾಪಿಸಲ್ಪಟ್ಟು ೨೪ ವರ್ಷಗಳಾದುವು. ಇಲ್ಲಿ ಜಾತಿಭೇದ ಪಕ್ಷಪಾತಗಳಿಲ್ಲದೆ ವಿಕಲಾಂಗರು ರೋಗಿಷ್ಠರು ಆದವರಿಗೆಲ್ಲಾ ಅನ್ನದಾನವು ಮಾಡಿಸಲ್ಪಡುತ್ತದೆ. ಶ್ರೀಮಂತರೂ ಧರ್ಮಾತ್ಮರೂ ಆದ ಜನರುಗಳು ತಮ್ಮ ಮನೆಯ ಶುಭಾಶುಭ ಕರ್ಮಗಳ ಸಮಯದಲ್ಲಿ ಈ ಅನ್ನದಾನ ಸಮಾಜದವರ ದ್ವಾರಾ ಅವರವರ ಯೋಗ್ಯತಾನುಸಾರ ಇಷ್ಟಿಷ್ಟು ಮಂದಿಗೆಂದು ದೀನಜನರಿಗೆ ಭೋಜನ ಮಾಡಿಸುವರು. ಮತ್ತು ಹಲವರು ಮರಣಶಾಸನ ಮೊದಲಾದವುಗಳ ದ್ವಾರಾ ಈ ಸಮಾಜಕ್ಕೆ ಮೂಲಧನವನ್ನು ಕೊಟ್ಟಿರುವರು. ಈ ಮೂಲಧನವು ಇಲ್ಲಿಯವರೆಗೆ ಅರ್ಧಲಕ್ಷ ರೂ.ನ ವರೆಗೆ ಕೂಡಿರುತ್ತದೆ. ಕಳೆದ ವರ್ಷ ಒಂದರಲ್ಲೇ ೬೧೧೪ ರೂ.ಗಳ ಆದಾಯವಾಗಿ ೪೩೩೮ ರೂ.ಗಳ ವ್ಯಯವಾಗಿದೆ. ಇಲ್ಲಿನ ರಕ್ಷಣೆಗೆ ಒಳಪಟ್ಟ ದೀನಜನರಿಂದ ಪರೀಕ್ಷಾರ್ಥವಾಗಿ ಸಣ್ಣಪುಟ್ಟ ಕೈಗಾರಿಕೆಗಳನ್ನು ಮಾಡಿಸಲು ಕಳೆದ ವರ್ಷದಿಂದ ಆರಂಭಿಸಿದ್ದಾರೆ.

ಬಂಗಾಳದ ಡೈಮಂಡ್ ಹಾರ್ಬರ್ ಸಬ್ ಡಿವೀಜನ್ನಿಗೆ ಸೇರಿದಒಂದು ಗ್ರಾಮದಲ್ಲಿರುವ ಬಾಬು ಪರಮ ಕೃಷ್ಣ ಮೈತ್ರಿಯೆಂಬ ಲೇವಾದೇವಿಗಾರನ ಮನೆಗೆ ಕಳ್ಳರು ಬೀಳುವರೆಂಬ ಸುದ್ದಿಯು ಪೋಲೀಸರಿಗೆ ಮುಂದಾಗಿ ತಿಳಿಯಲು ಅವರು ಹೆಚ್ಚು ಪೋಲೀಸಾಳುಗಳನ್ನು ಕೂಡಿಸಿಕೊಂಡು ಸಾಯುಧರಾಗಿ, ಆ ಗ್ರಾಮದಲ್ಲಿ ಬೇರೆಬೇರೆ ಕಡೆ ಕೆಲರೂ, ಕೃಷ್ಣ ಮೈತ್ರಿಯ ಮನೆಯಲ್ಲಿ ಕೆಲರೂ ಸಾಯಂಕಾಲಕ್ಕೆ ಮುಂಚೆಯೇ ಹೋಗಿ ಅಡಗಿಕೊಂಡರು. ರಾತ್ರಿ ೧೦॥ ಗಂಟೆಯ ಹೊತ್ತಿಗೆ ೩೪ಮಂದಿ ಕಳ್ಳರು ಆಯುಧಪಾಣಿಗಳಾಗಿ ಬಂದು ಆ ಮನೆಯನ್ನು ಮುತ್ತಿದರು. ಪೋಲೀಸರು ಸಿಳ್ಳನ್ನು ಹಾಕಿ ಒಟ್ಟುಗೂಡಿದರು. ಕಳ್ಳರಿಗೂ ಅವರಿಗೂ ಜಗಳವಾದುದರಲ್ಲಿ ಬಹುಮಂದಿಗೆ ಏಟುಬಿದ್ದಿತು. ಗಾಯಗೊಂಡವರನ್ನು ಹೆಗಲಮೇಲೆ ಹೊತ್ತುಕೊಂಡು ಕಳ್ಳರು ಓಡಿಹೋದರು. ಅದೇ ರಾತ್ರಿ ಅದೇಹೊತ್ತಿನಲ್ಲಿ ಗುಪುಗೋರು ಎಂಬ ಮತ್ತೊಂದು ಗ್ರಾಮದಲ್ಲಿರುವ ಇನ್ನೊಬ್ಬಶ್ರೀಮಂತನ ಮನೆಗೆ ೪೦ ಮಂದಿ ಕಳ್ಳರು ನುಗ್ಗಿ ಒಳಗಿದ್ದವರನ್ನು ಬಲವಾಗಿ ಹೊಡೆದು ಬಹಳ ಆಸ್ತಿಯನ್ನು ಅಪಹರಿಸಿಕೊಂಡು ಹೋದರು.

ಗ್ವಾಲಿಯರ್ ಸಂಸ್ಥಾನದಲ್ಲಿ ಚಾಂದೇರಿ ಎಂಬ ಒಂದು ಹಾಳು ಪಟ್ಟಣವಿದೆ. ಅದರಲ್ಲಿನ ನೆಯ್ಗೆಯವರು ತಮ್ಮ ಉದ್ಯೋಗದಲ್ಲಿ ಬಹಳ ಹೆಸರಾದವರು. ಅವರುಗಳ ಜನಸಂಖ್ಯೆಯು ೧೪೦೦ ಇದ್ದುದು ಈಚೆಗೆ ದಾರಿದ್ರ್ಯವಶದಿಂದ ಕ್ಷೀಣಿಸಿಹೋಗಿ ೧೯೦೯ ನೆಯ ವರ್ಷದ ಹೊತ್ತಿಗೆ ೯೦೦ ಮಂದಿಗಳು ಮಾತ್ರ ಉಳಿದಿದ್ದರು. ಅವರ ಪರಿತಾಪಕರವಾದ ಸ್ಥಿತಿಯನ್ನು ಗ್ವಾಲಿಯರ್ ಪ್ರಭುತ್ವದವರು ಅವಲೋಕಿಸಿ, ಕನಿಕರದಿಂದ ಅವರನ್ನುದ್ಧರಿಸಬೇಕೆಂದು ಪ್ರಯತ್ನಿಸಿ, ಅವರಿಗಾಗಿ ಒಂದು ಪರಸ್ಪರ ಸಹಾಯಕ ಸಂಘವನ್ನು ಸ್ಥಾಪಿಸಿಕೊಟ್ಟು ಊರುಬಿಟ್ಟು ಹೋಗುತ್ತಿದ್ದವರನ್ನೆಲ್ಲಾ ನಿಲ್ಲಿಸಿ, ಅವರ ನೆಯ್ಗೆಯ ಉದ್ಯೋಗಕ್ಕೆ ಸಂಬಂಧಪಟ್ಟ ವಿದ್ಯೆಯನ್ನು ಸಾಂಗವಾಗಿ ಕಲಿಸಿಕೊಡುವ ಶಾಲೆಯನ್ನು ಸ್ಥಾಪಿಸಿಕೊಟ್ಟು ಪಶ್ಚಿಮ ಪೂರ್ವದೇಶೀಯ ಸರ್ಪ್ರಾಕಗಳೆರಡನ್ನೂ ಸಮನ್ವಯಮಾಡಿ ಶ್ಲಾಘನೀಯವಾದ ನೆಯ್ಗೆಯು ಅವರಿಂದ ಸಾಗುವಂತೆ ಮಾಡಿದರು. ಇದರಿಂದ ಈಗ ಆ ಊರಿನಲ್ಲಿ ನೆಯ್ಗೆಯವರು ವೃದ್ಧಿಗೊಂಡು ಅವರ ಸಂಖ್ಯೆಯು ೧೪೦೦ರ ವರೆಗೆ ಬೆಳೆದಿರುತ್ತದೆ. ಈಗ ಅಲ್ಲಿ ಅದ್ಭುತವಾದ ಬೂಟಿದಾರಿ ಕೆಲಸದಿಂದ ಹಿಡಿದು ಒರಟು ಬಟ್ಟೆಗಳವರೆಗಿನ ಕೆಲಸವೆಲ್ಲಾ ಸಮರ್ಪಕವಾಗಿ ನಡೆಯುತ್ತಿದೆ. ನಮ್ಮ ದೇಶದ ಆಯಾ ಭಾಗದಲ್ಲಿ ಮಸುಳಿಸಿ ಹೋಗುತ್ತಿರುವ ಕೈಗಾರಿಕೆಗಳಿಗೆಲ್ಲಾ ಇಂಥ ಪ್ರೋತ್ಸಾಹವು ಅಲ್ಲಲ್ಲಿನ ಪ್ರಭುತ್ವದವರಿಂದ ದೊರೆಯುವುದಾದರೆ ದೇಶವು ಸಂಪದ್ಯುಕ್ತವಾಗುವುದರಲ್ಲಿ ಅಭ್ಯಂತರವೇನುಂಟು?

ಯುದ್ಧಕ್ಕೆ ಜ್ಯೋತಿಷ್ಕರ ಸಹಾಯ.

ಜರ್ಮನ್ ದೇಶವು ಶಾಸ್ತ್ರೀಯಶೋಧನೆಗಳಲ್ಲಿ ಪ್ರಪಂಚದ ಎಲ್ಲಾ ದೇಶಗಳಿಗೂ ಮುಂದಾದುದೆಂಬ ಪ್ರಖ್ಯಾತಿಯನ್ನು ಪಡೆದಿರುವುದು. ಹಾಗೆ ದೈವಕಟಾಕ್ಷದಿಂದ ಅವರಿಗೆ ಒದಗಿರುವ ಶಕ್ತಿಯು ಇಗ ಪ್ರಪಂಚ ವಿನಾಶಕ್ಕೆ ಹೇತುವಾದಯುದ್ಧದ ಸಾಧನೆಗೆ ಉಪಯೋಗಿಸಲ್ಪಡುತ್ತಿರುವುದನ್ನು ನೋಡಿ “ವಿನಾಶಕಾಲೇ ವಿಪರೀತಬುದ್ಧಿಃ” ಎಂದು ಸಜ್ಜನರೆಲ್ಲರೂ ಆಡಿಕೊಳ್ಳುತ್ತಿರುವರು ಜರ್ಮನ್ ದೇಶದಲ್ಲಿ ಖಗೋಳಶಾಸ್ತ್ರ ಸಂಬಂಧವಾದ ಪಾಂಡಿತ್ಯವುಳ್ಳ ಜನರು ವಿಶೇಷವಾಗಿರುವರು. ಅಲ್ಲಿನ ಚಕ್ರವರ್ತಿಯವರು ಪ್ರಕೃತದ ಯುದ್ಧಸಂಬಂಧವಾಗಿ ಅವರಿಂದಲೂ ಆಗಬಹುದಾದ ಸಹಾಯವನ್ನು ಪಡೆದುಕೊಳ್ಳುತ್ತಿರುವರೆಂಬ ಸುದ್ದಿಯು ಈಗ ಪ್ರಕಟವಾಗಿರುವುದು ಯುದ್ಧಾರಂಭಕ್ಕೆ ಮೊದಲು ಆ ದೇಶದ ಪ್ರಸಿದ್ಧಜ್ಯೋತಿಷ್ಕರನ್ನೆಲ್ಲಾ ಚಕ್ರವರ್ತಿಯವರು ಕೂಡಿಸಿ, ಯುದ್ಧಕ್ಕೆ ನಿಮ್ಮಿಂದ ಯಾವಯಾವ ಸಹಾಯವಾಗುವುದು ಸಾಧ್ಯವೋ ಅದನ್ನೆಲ್ಲಾ ಮಾಡಿಕೊಡಬೇಕೆಂದು ಬೆಸಸಿದರಂತೆ. ಅಂದಿನಿಂದ ಅವರು ನಾನಾವಿಧದ ಸಹಾಯಗಳನ್ನು ಮಾಡುತ್ತಿರುವರು. ಈಗಲೂ ಆ ಜ್ಯೋತಿಷ್ಕಮಂಡಲಿಯಲ್ಲಿ ಕೆಲರು ಬೆಲ್ಜಿಯಂ ದೇಶದ ಲೀಜ್ ಕೋಟೆಯಲ್ಲೂ ಎಯಿಲ್ ಷಾಪೆಲ್ಲಿ ನಗರದಲ್ಲೂ ಕೆಲಸವನ್ನು ಮಾಡುತ್ತಿರುವರಂತೆ. ಬ್ರಸಲ್ಸ್ ಪಟ್ಟಣದಲ್ಲಿ ಬೆಲ್ಜಿಯಮ್ಮಿನವರು ಒಂದು ಜಗತ್ಪ್ರಸಿದ್ಧ ನಕ್ಷತ್ರಶಾಲೆಯನ್ನು ಸ್ಥಾಪಿಸಿದ್ದರು. ಅದನ್ನು ಈಗ ಜರ್ಮನ್ ಖಗೋಳಶಾಸ್ತ್ರಜ್ಞರು ವಶಪಡಿಸಿಕೊಂಡಿರುವರು. ಇಲ್ಲಿದ್ದ ಯಂತ್ರೋಪಕರಣಗಳ ಜತೆಗೆ ಜರ್ಮನಿ ದೇಶದಿಂದ ಇನ್ನು ಕೆಲವನ್ನು ತಂದು ಕೂಡಿಸಿರುವರು. ಅದರಿಂದ ಈಗ ಬ್ರಸಲ್ಸಿನ ನಕ್ಷತ್ರಶಾಲೆಯು ಲೋಕೋತ್ತರವೆನಿಸಿಕೊಂಡಿರುವುದಂತೆ. ಇಲ್ಲಿ ಜ್ಯೋತಿಷ್ಕರು ಈಗ ಅದ್ಭುತವಾದ ಖಗೋಳ ಪರಿಶೀಲನ ಕ್ರಮಗಳನ್ನು ನಡೆಯಿಸುತ್ತಿರುವರು. ಅವರು ಮಾಡುತ್ತಿರುವ ಪರಿಶೋಧನದಿಂದ ಆಕಾಶದ ವಾಯುಮಂಡಲದಲ್ಲಿ ನಡೆಯುತ್ತಿರುವ ಅದ್ಭುತವಾದ ವೈಚಿತ್ರ್ಯಗಳನ್ನು ಕಂಡುಹಿಡಿಯುತ್ತಿರುವರಂತೆ. ಈಗ ಫ್ರಾನ್ಸ್ ದೇಶದ ಮೇಲೆ ಹಲವುಕಡೆ ವಾತಾವರಣದಲ್ಲಿ ಸಣ್ಣಸಣ್ಣ ಅಗ್ನಿಗೋಳಗಳು ಗೋಚರಿಸುತ್ತಿರುವುವಂತೆ. ಅವೆಲ್ಲವೂ ಮೇಲೆ ಹೇಳಿದ ಜರ್ಮನ್ ಜ್ಯೋತಿಷ್ಕರಿಂದ ವಾಯುಮಂಡಲದ ಪರೀಕ್ಷಾರ್ಥವಾಗಿ ಪ್ರಯೋಗಿಸಲ್ಪಟ್ಟಿರಬೇಕೆಂದು ಊಹಿಸಲ್ಪಡುತ್ತಿದೆ. ಮಿತ್ರಮಂಡಲಿಯವರ ಕಡೆಯಲ್ಲಿರುವ ದೊಡ್ಡ ದೊಡ್ಡ ವಿದ್ವಾಂಸರೂ ಕೂಡ ಜರ್ಮನರಲ್ಲಿರುವ ವಾಯುಶಾಸ್ತ್ರಪರಿಜ್ಞಾನ ಪ್ರಾಬಲ್ಯವನ್ನು ಕುರಿತು ಶ್ಲಾಘಿಸುವುದಲ್ಲದೆ ಅವರುಗಳ ಆ ಪರಿಜ್ಞಾನದಿಂದ ಅವರ ಯುದ್ಧಪ್ರಯೋಗಕ್ಕೆ ಬಹಳ ಸಹಾಯವಾಗುವುದೆಂದು ಒಪ್ಪಿಕೊಳ್ಳುತ್ತಿದ್ದಾರೆ. ಜರ್ಮನರ ಲೋಕೋತ್ತರವಾದ ವೈದುಷ್ಯಗಳು ಲೋಕೋದ್ಧಾರಕ್ಕೆ ಸಹಾಯವಾಗಿರದೆ ಹೀಗೆ ಪ್ರಪಂಚದ ಪರಿಪೀಡನಕಾರ್ಯಕ್ಕೆ ಸಾಧಕವಾಗಿ “ಯಶಕ್ತಿಃ ಪರೇಷಾಂ ಪರಿಪೀಡನಾಯ” ಎಂಬ ನೀತಿವಚನದಲ್ಲಿ ಕಂಡಿರುವಂತೆ ಜರ್ಮನರ ತಲೆಯಮೇಲೆ ದೌರ್ಜನ್ಯ ಕಿರೀಟವನ್ನು ಹೊರಿಸುವುದಕ್ಕೆ ಹೇತುವಾಗಿ ಪರಿಣಮಿಸಿದುದು ವಿಷಾದಕರವಲ್ಲವೆ?

ಉಪಯುಕ್ತ ವಿಷಯ.

ಪ್ಲೇಗು ಮೊದಲಾದ ಯಾವ ಜ್ವರವೇ ಆಗಲೀ ರುದ್ರಾಕ್ಷಿಯ ತೀರ್ಥವನ್ನು ಕುಡಿಸಿದರೆ ಬಹುಮಂದಿಗಳು ಗುಣವಾಗುರೆಂಬುವದು ಅನುಭವಸಿದ್ಧ ವಿಷಯವೆಂದು ಆಂಧ್ರದೇಶೀಯರಾದ ದೊಡ್ಡಮನುಷ್ಯರೊಬ್ಬರು ದೇಶೋಪಕಾರೀ ಪತ್ರಿಕೆಯಿಂದ ಪ್ರಕಟಿಸಿದ್ದಾರೆ. ಸೇವನೆಯ ರೀತಿಯು ಹೇಗೆಂದರೆ-ನಾಲ್ಕು ರುದ್ರಾಕ್ಷಿಗಳನ್ನು ಅರಪಾವು ನೀರಿನಲ್ಲಿ ನೆನೆಹಾಕಿ ೧ ರಾತ್ರಿ ಇಟ್ಟಿದ್ದು ಮರುದಿನ ಬೆಳಿಗ್ಗೆ ಅದರಲ್ಲಿ ೨-೩ ಉದ್ಧರಣೆಯಷ್ಟು ತೀರ್ಥವನ್ನು ಸೇವಿಸಬೇಕು. ಹಾಗೆಯೇ ಬೆಳಗಿನಹೊತ್ತು ನೆನೆಹಾಕಿ ಇಟ್ಟ ರುದ್ರಾಕ್ಷಿಯ ತೀರ್ಥವನ್ನು ಸಾಯಂಕಾಲಕ್ಕೆ ಅದೇ ಪ್ರಮಾಣದಿಂದ ಸೇವಿಸಬೇಕು. ಅವಶ್ಯಕತೆಯುಳ್ಳವರು ಪರೀಕ್ಷಿಸಬಹುದಾಗಿದೆ.

ಯುದ್ಧವಾರ್ತೆಯು.

ಪಶ್ಚಿಮರಣರಂಗ.

ಈ ರಣರಂಗದಲ್ಲಿ ಈಪ್ರೆಸ್ಸಿನ ಹತ್ತಿರ ಜರ್ಮನರು ತಮ್ಮ ಚಕ್ರವರ್ತಿಯ ಸಮೇತ ನಿಂತು ಬಹು ಶೌರ್ಯದಿಂದ ಕಾದಾಡಿದರೂ ಕೃತಾರ್ಥರಾಗದೆ ಹೋದ ವಿಷಯವನ್ನು ಹಿಂದೆ ನಮ್ಮ ಪತ್ರಿಕಾವಾಚಕರು ಓದಿ ಮರೆದಿರಲಾರರು. ಆದೇ ಈಪ್ರೆಸ್ಸಿನ ಬಳಿಯಲ್ಲಿ ಎಷ್ಟೋ ತಿಂಗಳಿಂದಲೂ ಜರ್ಮನರು ಇನ್ನೂ ಸೆಣಸಾಡುವುದನ್ನು ಬಿಟ್ಟಿಲ್ಲ. ನಮ್ಮವರು ಆ ಬಳಿಯಲ್ಲಿ ಒಂದು ವಿಶೇಷವಾದ ಜಯವನ್ನು ಪಡೆದುಕೊಂಡರೆಂಬ ವಾರ್ತೆಯು ಕಳೆದ ವಾರ ಬಂದಿದೆ. ಈ ಈಪ್ರೆಸ್ಸಿಗೆ ಆಗ್ನೇಯದಿಕ್ಕಿನಲ್ಲಿ ೩ ಮೈಲಿಯೊಳಗೆ ಇರುವ ೬೦ ನೇ ನಂಬರು ಗುಡ್ಡವನ್ನು ಹಿಡಿದುಕೊಳ್ಳಬೇಕೆಂದು ನಮ್ಮವರು ಕಳೆದ ತಾ|| ೧೭ರಲ್ಲಿ ಯುದ್ಧವನ್ನಾರಂಭಿಸಿದರು. ಘೋರವಾದ ಯುದ್ಧವು ನಡೆದನಂತರ ಆ ಗುಡ್ಡವೂ ಅದರ ಉತ್ತರಕ್ಕೂ ನೈಋತ್ಯ ದಿಕ್ಕಿಗೂ ಇದ್ದ ಪ್ರದೇಶಗಳು ಸಹ ನಮ್ಮವರ ವಶವಾದುವು. ಈ ಸ್ಥಳಗಳಿಂದ ನಮ್ಮವರನ್ನು ಬಿಡಿಸಿ ಓಡಿಸಬೇಕೆಂದು ಜರ್ಮನರು ಗುಂಪುಗುಂಪಾಗಿ ಬಂದು ಅನೇಕಾವೃತ್ತಿ ನಮ್ಮವರ ಮೇಲೆ ಬಿದ್ದರು. ಆಗ ನಮ್ಮವರು ಸುರಿಸಿದ ಫಿರಂಗಿಗುಂಡುಗಳ ಮಳೆಯೇಟಿಗೆ ಜರ್ಮನರು ಅನೇಕರು ರಣಾಂಗಣದಲ್ಲಿಯೇ ಸತ್ತುರುಳಿದರು. ಉಳಿದವರು ಹಿಮ್ಮೆಟ್ಟಿಹೋದರು. ಈ ಪ್ರಯತ್ನದಲ್ಲಿ ಜರ್ಮನರು ಮಾಡಬಾರದ ಸಾಹಸವನ್ನೆಲ್ಲಾ ಮಾಡಿದರು. ಯುದ್ಧಮಾಡುವಾಗ್ಗೆ ಉಪಯೋಗಿಸತಕ್ಕ ಶಸ್ತ್ರಾಸ್ತ್ರಗಳ ಸಂಬಂಧವಾಗಿ ಹೇಗ್ ಪಟ್ಟಣದಲ್ಲಿ ಸಕಲ ಪ್ರಭುತ್ವದವರುಗೂ ನಡೆದಿರುವ ಒಡಂಬಡಿಕೆಗೆ ವಿರುದ್ಧವಾಗಿ ಜರ್ಮನರು ವಿಷದ ಹೊಗೆಯಿಂದ ತುಂಬಿದ ಒಂದು ತೆರದ ಗುಂಡುಗಳನ್ನು ತಮ್ಮ ಶತ್ರುಗಳ ಮೇಲೆ ಉಪಯೋಗಿಸಿದರು. ಇವು ಫಿರಂಗಿಗಳಿಂದ ಹಾರಿಸಲ್ಪಟ್ಟು ಹೊರಕ್ಕೆಬಂದು ಬಿದ್ದು ಒಡೆದ ಕೂಡಲೇ ಅದರೊಳಗಿನಿಂದ ಹೊರಟ ಹೊಗೆಯು ಗಾಳಿಯಿಂದ ಕೊಚ್ಚಿ ಶತ್ರುಗಳ ಮೇಲೆ ಹರಡಿದಾಗ, ಅವರು ಕ್ಲೋರೋಫಾರಮನ್ನು ಆಘ್ರಾಣಿಸಿದವರಂತೆ ದೇಹದಮೇಲೆಯೇ ಸ್ಮೃತಿಯಿಲ್ಲದೆ ಬಿದ್ದುಹೋಗುವರು. ಅವರ ಉಸುರಾಟವು ಕಟ್ಟಾಗುವುದು. ಇಂಥ ದುಷ್ಟಪ್ರಯೋಗವನ್ನು ಜರ್ಮನರು ಮಿತ್ರಮಂಡಲಿಯ ಸೇನೆಯ ಮೇಲೆ ಕಳೆದ ವಾರದಲ್ಲಿ ಬಹಳವಾಗಿ ಮಾಡಿದರು. ಆದರೂ ಆಂಗ್ಲಸೈನ್ಯವು ಎದೆಗುಂದಲಿಲ್ಲ. ಒಂದು ಕಡೆ ಫ್ರೆಂಚರ ಸೇನಾಮುಖವು ಈ ರಾಕ್ಷಸ ಪ್ರಯೋಗದಿಂದ ವಿಚ್ಛೇದಿತವಾಗಿ ಶತ್ರುಗಳಿಗೆ ಸ್ವಸ್ಥಾನವನ್ನು ಬಿಟ್ಟುಕೊಟ್ಟರು. ಆದರೂ ಉತ್ತರಕ್ಷಣದಲ್ಲಿ ನೂತನಸೈನ್ಯವು ಬಂದು ಜರ್ಮನರ ಮೇಲೆ ಬಿದ್ದು ಸೆಣಸಿ ಆ ಸ್ಥಲವನ್ನು ಮತ್ತೆ ವಶಪಡಿಸಿಕೊಂಡಿತು. ಕ್ರಿಂನೆಸುಂ ಬೆಟ್ಟವನ್ನು ಮಿತ್ರಮಂಡಲಿಯವರು ಸಂಪಾದಿಸಿದುದರಿಂದ ಮುಂದೆ ನಡೆಯಿಸಬೇಕಾದ ಯುದ್ಧಕ್ಕೆ ಬಹಳ ಸಹಾಯಕವಾಯಿತು. ಈ ಯುದ್ಧದಲ್ಲಿ ನಮ್ಮವರ ಕಡೆ ವಿಶೇಷ ನಷ್ಟವಾಯಿತು; ಅದಕ್ಕಿಂತಲೂ ಹೆಚ್ಚಾಗಿ ಜರ್ಮನರ ಕಡೆಗೆ ನಷ್ಟವಾಗಿರುವುದು.

ಇದೇ ಈಪ್ರೆಸ್ಸಿನ ಹತ್ತಿರ ತಾ|| ೨೨-೨೩-೨೪ರಲ್ಲಿ ನಡೆದ ಮಹಾ ಯುದ್ಧಗಳಲ್ಲಿ ಕನಡಾದ ಸೈನ್ಯವು ಒಂದು ಘೋರ ಯುದ್ಧವನ್ನು ಮಾಡಿ ಜಯಶೀಲವಾಯಿತು. ಆಗ ಕನಡಾ ಸೈನಿಕರಲ್ಲಿ ಒಬ್ಬೊಬ್ಬನ ಹತ್ತಿರ ೪೦೦ ತುಪಾಕಿ ಗುಂಡುಗಳಿದ್ದುವು. ಮತ್ತು ಅವರಿಗೆ ಕಳೆದ ೨-೩ ದಿನಗಳಿಂದ ಆಹಾರವೂ ಸಿಕ್ಕಿರಲಿಲ್ಲ. ಅಂಥ ೨|| ಸಾವಿರ ಸೈನ್ಯವನ್ನು ಆರಾತ್ರಿಯಲ್ಲಿ ೬೦೦೦ ಮಂದಿ ಜರ್ಮನರ ಮೇಲೆ ಯುದ್ಧಕ್ಕೆ ಬಿಟ್ಟರು. ದೊಡ್ಡದೊಡ್ಡ ಫಿರಂಗಿಯ ಸಮೇತ ಅಡವಿಯಲ್ಲಿದ್ದ ಜರ್ಮನರ ಮೇಲೆ ಇವರು ಬೀಳಬೇಕಾಯಿತು. ಆಗ ಇವರ ಸುತ್ತಲೂ ಜರ್ಮನ್ ಸೈನ್ಯವು ಇದ್ದಿತು. ಅದರಿಂದ ಇವರು ಎತ್ತಣಿಂದಲೂ ಹೊರಕ್ಕೆ ತಪ್ಪಿಸಿಕೊಂಡು ಹೋಗಲಾರದೆ ಅಡವಿಯೊಳಗೇ ಕಂದಕವನ್ನು ತೋಡಿಕೊಂಡು ಗುರು ಶುಕ್ರವಾರಗಳೆರಡರಲ್ಲೂ ಅಲ್ಲೇ ಇದ್ದರು. ಜರ್ಮನರು ಇವರಿದ್ದ ಸ್ಥಲದ ಮೇಲೆ ಗುಂಡಿನ ಮಳೆಯನ್ನು ಅವಿಚ್ಛಿನ್ನವಾಗಿ ಕರೆಯುತ್ತಿದ್ದರು. ಆದರೂ ಕನಡಾ ಸೈನಿಕರು ಅಧೈರ್ಯಪಡದೆ ಸನೀನುಗಳನ್ನು ಹಿಡಿದುಕೊಂಡು ಶತ್ರುಗಳಮೇಲೆ ಬಿದ್ದು ಹೋರಾಡಿ, ಫ್ರೆಂಚರಿಂದ ಅದಕ್ಕೆ ಮುಂಚೆಯೇ ಜರ್ಮನರು ಕಿತ್ತುಕೊಂಡಿದ ಮೂರು ಹವಿಟ್ಜರ್ ಎಂಬ ಫಿರಂಗಿಗಳನ್ನು ಅವರಿಂದ ಕಿತ್ತುಕೊಂಡು, ಅವನ್ನು ನಾಶಪಡಿಸಿಬಿಟ್ಟರು. ಬಳಿಕ ತಾವು ಕಳೆದುಕೊಂಡಿದ್ದ ೪ ಫಿರಂಗಿಗಳನ್ನೂ ವಶಪಡಿಸಿಕೊಂಡರು. ಅಷ್ಟಕ್ಕೇ ಕನಡಾ ಸೈನಿಕರು ಸಾಕುಸಾಕಾಗಿ ಹೋಗಿದ್ದರು. ಅಂಥ ಸಮಯಕ್ಕೆ ಹಿಂದುಸ್ಥಾನದ ಸೈನಿಕರೂ ಇಂಗ್ಲಿಷ್ ಸೈನಿಕರೂ ಸಹಾಯಕ್ಕೆ ಹೋಗಿ ಕನಡಾದವರಿಗೆ ಸ್ವಲ್ಪ ವಿಶ್ರಾಂತಿಯನ್ನು ಕೊಟ್ಟು ಜರ್ಮನರಿದ್ದ ಆ ಅಡವಿಯ ಪ್ರದೇಶವನ್ನೆಲ್ಲಾ ಸ್ವಾಧೀನಪಡಿಸಿಕೊಂಡರು. ಕೆಲ ಜರ್ಮನ್ ಸೈನಿಕರನ್ನೂ ಸೆರೆಹಿಡಿದರು. ಈ ಯುದ್ಧದಲ್ಲಿ ಕನಡಾ ಸೈನಿಕರಲ್ಲಿ ಬಹುಮಂದಿ ನಷ್ಟಪಟ್ಟರು. ಆದರೂ ಅವರು ತೋರಿಸಿದ ಧೈರ್ಯಪರಾಕ್ರಮಗಳಿಂದ ಅವರಿಗೆ ಜಯವುಂಟಾಯಿತು. ಇದಕ್ಕಾಗಿ ಜಾರ್ಜ್ ಸಾರ್ವಭೌಮರು ಮೊದಲಾದನೇಕರು ಅವರನ್ನು ಅಭಿನಂದಿಸಿರುತ್ತಾರೆ. ಈಚೆಗೆ ಜರ್ಮನರು ಈಪ್ರೆಸ್ಸಿಗೆ ೩ ಮೈಲಿಗಳ ದೂರದಲ್ಲಿರುವ ಒಂದು ಪ್ರದೇಶವನ್ನು ತಾವು ಹಿಡಿದುಕೊಂಡಂತೆ ಪ್ರಕಟಿಸಿಕೊಂಡಿದ್ದಾರೆ. ಅಂತೂ ಈ ಭಾಗದಲ್ಲಿ ಮಿತ್ರಮಂಡಲಿಯವರು ತಮ್ಮ ಸೇನಾಮುಖವನ್ನು ಭೇದಿಸುವ ಪ್ರಯತ್ನದಲ್ಲಿದ್ದಾರೆಂಬುದನ್ನು ಜರ್ಮನರು ಅರಿತುಕೊಂಡು ತಾವೇ ಮಿತ್ರಮಂಡಲಿಯ ಸೇನಾಮುಖವನ್ನು ಭೇದಿಸಲು ಪ್ರಯತ್ನಪಟ್ಟಿದಾರೆ. ಇದನ್ನು ನಿರೋಧಿಸುವುದಕ್ಕಾಗಿ ಮಿತ್ರಮಂಡಲಿಯವರು ಬಹಳ ಸಾಹಸ ಪರಾಕ್ರಮಗಳನ್ನು ತೋರಿಸುತ್ತಿದಾರೆ.

ಇತ್ತ ಅಲ್ಸಸ್ ಜಿಲ್ಲೆಯೊಳಗೆ ಫ್ರೆಂಚ್‌ಸೇನೆಯು ಮುಂದಕ್ಕೆ ಸಾಗುತ್ತಲೇ ಇದೆ. ಆ ಸುತ್ತಿನಲ್ಲಿ ಎತ್ತರವಾದ ಗುಡ್ಡಗಳ ಪ್ರದೇಶಗಳಲ್ಲಿ ಹಲವು ಇವರ ಸ್ವಾಧೀನವಾಗಿವೆ. ಈ ಅಲ್ಸಸ್ ಜಿಲ್ಲೆಯಲ್ಲಿರುವ ತಮ್ಮ ಸೈನಿಕರನ್ನು ಪ್ರೋತ್ಸಾಹಿಸುವುದಕ್ಕಾಗಿ ಜರ್ಮನ್ ಚಕ್ರವರ್ತಿಯವರೇ ಇಲ್ಲಿಗೆ ಬಂದಿರುವರೆಂದು ಸುದ್ದಿಯುಂಟಾಗಿರುವುದು.

ಈ ರಣರಂಗದಲ್ಲಿ ಹಲವು ಕಡೆ ಫಿರಂಗಿಗಳ ಯುದ್ಧವು ನಡೆಯುತ್ತಲೇ ಇರುವುದು. ಮಿತ್ರಮಂಡಲಿಯವರು ಸರ್ವಸನ್ನಾಹವನ್ನೂ ಸಮಗ್ರಮಾಡಿಕೊಂಡು ಮುಂದಣ ತಿಂಗಳಲ್ಲಿ ಬೆಲ್ಜಿಯಂ ದೇಶದೊಳಕ್ಕೆ ನುಗ್ಗಿಹೋಗುವುದರಲ್ಲಿರುವಂತೆ ಕಾಣುತ್ತದೆ. ೬೦ನೆ ನಂ|| ಗುಡ್ಡಕ್ಕೆ ಸ್ವಲ್ಪದೂರದಲ್ಲಿ ಮೆಸೀನಿನ ಹತ್ತಿರ ಮತ್ತೊಂದು ದೊಡ್ಡ ಗುಡ್ಡವಿದೆ. ಈ ಸುತ್ತಿನ ಎಲ್ಲ ಗುಡ್ಡಗಳಿಗೂ ಇದೇ ಎತ್ತರವಾಗಿ ಪ್ರಮುಖವಾಗಿರುವುದು. ಈಪ್ರೆಸ್ಸನ್ನು ಧ್ವಂಸಮಾಡುವುದಕ್ಕಾಗಿ ೧೭ ಅಂಗುಲದ ಬಾಯಿಯ ದೊಡ್ಡದೊಡ್ಡ ಫಿರಂಗಿಗಳನೇಕವನ್ನು ಜರ್ಮನರು ಈ ಗುಡ್ಡದ ಮೇಲೆ ಇಟ್ಟಿರುವರು. ಇದೊಂದು ಗುಡ್ಡವೂ ಮಿತ್ರಮಂಡಲಿಯವರ ವಶವಾಗಿಬಿಟ್ಟರೆ ಬಳಿಕ ಬೆಲ್ಜಿಯಮ್ಮಿಗೆ ಸೇರಿದ ಫ್ಲಾಂಡರ್ಸ್ ಜಿಲ್ಲೆಗೆ ಜರ್ಮನರು ಶರಣುಹೊಡೆದು ಬಿಟ್ಟುಹೋಗುವುದೇ ಖಂಡಿತವೆಂದು ಊಹಿಸಲ್ಪಟ್ಟಿದೆ. ಈಗ ಮಿತ್ರಮಂಡಲಿಯವರ ಸೇನೆಯು ಪಶ್ಚಿಮ ರಣರಂಗದಲ್ಲಿ ವಿಪರೀತವಾಗಿಯೂ ಬಲವತ್ತರವಾಗಿಯೂ ಇರುವುದನ್ನು ಕಂಡು ಜರ್ಮನರು ನಾನಾ ದಿಕ್ಕುಗಳಿಂದ ಸೈನ್ಯವನ್ನು ಕೂಡಿಸಿ ದೊಡ್ಡದೊಡ್ಡ ಫಿರಂಗಿಗಳನ್ನು ಬೆಲ್ಜಿಯಂ ಎಲ್ಲೆಕಟ್ಟಿನ ಗುಡ್ಡಗಳ ಮೇಲೆ ನಿಲ್ಲಿಸುತ್ತಿದ್ದಾರೆ. ಅಲ್ಲಿ ಅವರು ಮಹಾ ಯುದ್ಧವನ್ನು ಮಾಡುವಂತೆ ಕಾಣುತ್ತಿದೆ. ಪಶ್ಚಿಮ ರಣರಂಗದಲ್ಲಿ ಇದುವರೆಗೆ ಎಲ್ಲೂ ನಡೆಯದಿದ್ದಂತಹ ಘೋರಯುದ್ಧವು ಇಷ್ಟರಲ್ಲೇ ಈಪ್ರೆಸ್ಸಿಗೆ ಉತ್ತರ ದಿಕ್ಕಿನಲ್ಲಿ ನಡೆಯುವುದರಲ್ಲಿದೆಯೆಂದು ಹಾಲಂಡಿನ ಪತ್ರಿಕೆಗಳು ಹೇಳುತ್ತಿವೆ. ಈಚೆಗೆ ಜರ್ಮನಿಯ ಕಡೆಯಿಂದ ಬೆಲ್ಜಿಯಮ್ಮಿನ ಕಡೆಗೆ ೮೦ ಸಾವಿರ ಸೈನ್ಯವು ಬಂದಿರುವುದೆಂದು ಪ್ರಕಟವಾಗಿದೆ. ಉತ್ತರದಲ್ಲಿ ಡಿಕ್ಸ್‌ಮೂಡಿಗೂ ಬಿಕ್ಸ್‌ಷೂಟಿಗೂ ಮಧ್ಯದಲ್ಲಿ ಜರ್ಮನರಿಗೂ ಬೆಲ್ಜಿಯಮ್ಮಿನವರಿಗೂ ಯುದ್ಧವಾಗುತ್ತಿದೆ. ಅಲ್ಲಿ ಮೃತರಾದ ಜರ್ಮನರ ಹೆಣಗಳು ಬ್ರೂಜಸ್ಸಿನ ಕಡೆಯಿಂದ ಹೊಗೆಬಂಡಿಗಳ ಮೇಲೆ ಸಾಗಿಹೋಗುತ್ತಿವೆಯೆಂದು ಸುದ್ದಿಬಂದಿರುವುದರಿಂದ ಅಲ್ಲೂ ಜರ್ಮನರಿಗೆ ವಿಶೇಷ ನಷ್ಟವಾಗುತ್ತಿದೆಯೆಂದು ಗೊತ್ತಾಗುತ್ತದೆ.

ಕಲೆ ಪಟ್ಟಣದ ಕಡೆಯ ಅಭಿಯೋಗವನ್ನು ಈ ಮಧ್ಯೆ ಕೆಲದಿನಗಳಿಂದ ಜರ್ಮನರು ಬಿಟ್ಟಿದ್ದರು. ಈಚೆಗೆ ಅವರು ಮತ್ತೆ ಅದರ ಹವ್ಯಾಸಕ್ಕೆ ಬಿದ್ದಿರುವಂತೆ ಕಾಣುತ್ತದೆ. ಇಂಗ್ಲಿಷ್ ಫ್ರೆಂಚ್ ಸೇನಾಮುಖವನ್ನು ಭೇದಿಸಿಕೊಂಡು ಕಲೆಪಟ್ಟಣದ ಕಡೆಗೆ ಅವರು ಹೊರಡುವ ಅಭಿನಿವೇಶದಲ್ಲಿರುವರೆಂಬ ಸುದ್ದಿಯುಂಟಾಗಿದೆ.

ಈ ಮಧ್ಯೆ ಜರ್ಮನರು ಈಜರ್ ಕಾಲ್ವೆಯನ್ನು ದಾಟಿ ವಿಷದ ಹೊಗೆಯ ಪ್ರಯೋಗದ ಮೂಲಕ ಬೆಲ್ಜಿಯಂ ಸೈನಿಕರನ್ನು ಹಿಮ್ಮೆಟ್ಟಿಸಿ, ಲಿಜರ್ನ್ ಎಂಬ ಗ್ರಾಮವನ್ನು ಹಿಡಿದಿದ್ದರು. ಆದರೆ ಮರಳಿ ಬೆಲ್ಜಿಯಂ ಫ್ರೆಂಚ್ ಸೈನಿಕರು ಒಟ್ಟಾಗಿ ಮೇಲೆ ಬಿದ್ದು ಶತ್ರುಗಳಿಂದ ಆ ಗ್ರಾಮವನ್ನು ಕಿತ್ತುಕೊಂಡರು. ಮತ್ತು ಕಾಲ್ವೆಯ ಮೇಲಿದ್ದ ಶತ್ರುಗಳ ಕಂದಕಗಳನ್ನೂ ಸ್ವಾಧೀನಪಡಿಸಿಕೊಂಡರು.

ಈಗಿನ ಯುದ್ಧದಲ್ಲಿ ಮದ್ದುಗುಂಡಿನ ವೆಚ್ಚವು ಅತ್ಯಂತವಾಗಿ ನಡೆಯುತ್ತದೆ. ಆದಕಾರಣ ಅದು ಯಾರಪಕ್ಷದಲ್ಲಿ ಹೆಚ್ಚಾಗಿದೆಯೋ ಆ ಪಕ್ಷದಲ್ಲಿ ಪ್ರಾಣಹಾನಿಯು ಕಡಿಮೆಯಾಗುವುದಲ್ಲದೆ ಜಯಲಕ್ಷ್ಮಿಯ ಕಟಾಕ್ಷವೂ ಆ ಕಡೆಗೇ ಪ್ರಸರಿಸುವುದೆಂಬುದು ಅನುಭವದಮೂಲಕ ಸಿದ್ಧಾಂತಿತವಾಗಿದೆ. ಇಂಗ್ಲೀಷ್‌ಸೈನ್ಯದವರು ಕಳೆದ ತಿಂಗಳ ಕೊನೆಯೊಳಗೆ ನ್ಯೂಚಾಪಲ್ಲಿನ ಬಳಿಯಲ್ಲಿ ಜಯಶೀಲರಾದರಷ್ಟೆ. ಆ ಯುದ್ಧವು ಆದ್ಯಂತವಾಗಿ ೩ ದಿನಗಳವರೆಗೆ ನಡೆದಿತು. ಅದಕ್ಕಾಗಿ ಆಗಿರುವ ಮದ್ದುಗುಂಡಿನ ವೆಚ್ಚವು ಹಿಂದೆ ಬೂವರ ಯುದ್ಧವು ೨||| ವರ್ಷಕಾಲ ನಡೆದಾಗ್ಗೆ ಎಷ್ಟು ಮದ್ದುಗುಂಡು ವೆಚ್ಚವಾಯಿತೋ ಅಷ್ಟು ಈ ಮೂರುದಿನಗಳಲ್ಲೇ ವೆಚ್ಚವಾಗಿರುವುದೆಂಬುದನ್ನು ಕೇಳಿದರೆ ಈಗಿನ ಯುದ್ಧದ ತೀಕ್ಷ್ಣತೆಯು ಅಪ್ರತಿಮವಾದದ್ದೆಂದು ಗೊತ್ತಾಗದೆ ಇರದು. ಅದುಕಾರಣ, ಇಂಗ್ಲೀಷ್ ಮಂತ್ರಿಮಂಡಲದವರೆಲ್ಲರೂ ತಮ್ಮ ದೇಶದೊಳಗೆ ಮದ್ದುಗುಂಡುಗಳನ್ನು ಅಪರಿಮಿತವಾಗಿ ಅಣಿಮಾಡಿಸುವುದಕ್ಕೆ ಅನಂತಾನಂತ ಪ್ರೋತ್ಸಾಹ ಪ್ರಯತ್ನಗಳನ್ನು ಮಾಡುತ್ತಿರುವರು. ಅದರಿಂದ ಪ್ರತಿದಿನವೂ ಸರ್ವತೋಮಾನವಾಗಿ ಮದ್ದುಗುಂಡುಗಳು ಸಿದ್ಧವಾಗುತ್ತಿರುವುವು. ಈಗ ಮಿತ್ರಮಂಡಲಿಗೆ ಇದರ ಕೊರತೆಯು ಸ್ವಲ್ಪವೂ ಇರುವುದಿಲ್ಲ. ಇಂಗ್ಲೆಂಡ್ ಕೋಶಾಧ್ಯಕ್ಷರು ಪ್ರಕಟಿಸಿರುವ ಪ್ರಕಟನೆಯನ್ನು ನೋಡಲಾಗಿ ಕಳೆದ ವರ್ಷದ ಸೆಪ್ಟಂಬರ್ ತಿಂಗಳಲ್ಲಿ ಅಣಿಯಾದ ಈ ಸಾಮಾನುಗಳನ್ನು ೨೦ ರಷ್ಟು ಎಂದು ಇಟ್ಟುಕೊಂಡರೆ ಆಕ್ಟೋಬರಿನಲ್ಲಿ ಅದು ೯೦ ರಷ್ಟು ಹೆಚ್ಚಿತು. ನವಂಬರಿನಲ್ಲಿ ೯೦, ಡಿಸೆಂಬರಿನಲ್ಲಿ ೧೫೬, ಜನವರಿಯಲ್ಲಿ ೧೮೬, ಫೆಬ್ರವರಿಯಲ್ಲಿ ೨೫೬, ಮಾರ್ಚಿಯಲ್ಲಿ ೩೩೮ ಭಾಗದಷ್ಟು ಹೆಚ್ಚಾಗಿ ಅಣಿಯಾಗಿರುವುದು. ಈ ಏಪ್ರಿಲ್ ತಿಂಗಳಲ್ಲಿ ಇನ್ನು ಹೆಚ್ಚಾಗಿ ಸಿದ್ಧವಾಗುವುದೆಂದು ಎಣಿಸಲ್ಪಟ್ಟಿದೆ. ಈಗ ೩ ಸಾವಿರ ಕಂಪೆನಿಗಳಲ್ಲಿ ಈ ಸಾಮಗ್ರಿಗಳು, ಅಣಿಮಾಡಲ್ಪಡುತ್ತಿರುವುವು. ಯುದ್ಧಕ್ಕೆ ಮುಖ್ಯವಾದ ಸಾಧನಗಳಲ್ಲಿ ಮದ್ದುಗುಂಡುಗಳನ್ನು ಬಿಟ್ಟರೆ ಧನಸಹಾಯವು ಎರಡನೆಯದು. ಇದೂಕೂಡ ಆಂಗ್ಲ ಕೋಶದಲ್ಲಿ ಸಮರ್ಪಕವಾಗಿರುವುದು. ೧೯೧೪ ನೇ ವರ್ಷದಲ್ಲಿ ಬೊಕ್ಕಸದೊಳಗೆ ೮೧೦೫೦೦೦ ಪೌನುಗಳು ಮಾತ್ರವೇ ಉಳಿದಿದ್ದುವು. ಈಗಲಾದರೊ ೧೦೨೦೯೦೦೦ ಪೌನುಗಳು ಉಳಿದಿರುತ್ತವೆ. ಇದರ ಮೇಲೆ ಸರ್ಕಾರದವರು ಎಷ್ಟು ಸಾಲಮಾಡಲು ಪ್ರಯತ್ನಿಸಿದರೂ ಥಟ್ಟನೆ ಆ ದೇಶದ ಪ್ರಜೆಗಳೇ ಕೊಡುವುದಕ್ಕೆ ಸಿದ್ಧರಾಗಿದ್ದಾರೆ. ಇದರ ಮೇಲೆ ಸೇನಾಬಲವು ೩ ನೆಯ ಸಾಧನವು. ಇದಕ್ಕಾಗಿ ಮಂತ್ರಿಮಂಡಲದವರೂ ಇತರ ವಾಗ್ಮಿಗಳೂ ಸಹ ದೇಶದಮೇಲೆ ಹೋಗಿ ಭಾಷಣಗಳನ್ನು ಮಾಡುತ್ತಿದ್ದಾರೆ. ಅದರಿಂದಲೂ ಸ್ವದೇಶಾಭಿಮಾನಪ್ರೇರಣೆಯಿಂದಲೂ ಆಂಗ್ಲ ದೇಶೀಯರು ಪ್ರತಿದಿನವೂ ಸಾವಿರಾರುಗಟ್ಟಲೆಯಾಗಿ ಸೇನೆಗೆ ಬಂದು ಸೇರುತ್ತಿದ್ದಾರೆ. ಹೀಗೆ ಬಂದು ಸೇರಿದವರಲ್ಲಿ ಯಾವಯಾವ ವರ್ಗದವರು ಎಷ್ಟೆಷ್ಟುಮಂದಿ ಎಂಬುದು ಒಂದು ಪಟ್ಟಿಯಿಂದ ಹೀಗೆ ಗೊತ್ತಾಗುತ್ತದೆ. ಗಣಿಗಳನ್ನು ತೋಡುವ ಕೂಲಿಕಾರರು ೨೧೬೦೦೦ ಮಂದಿ, ಗುಮಾಸ್ತೆಯರು ೨೦೦೦೦೦ ಮಂದಿ, ಇಂಜನಿಯರಿಂಗು ಕೆಲಸಗಳಲ್ಲಿದ್ದವರು೩೦೦೦೦೦ ಮಂದಿ, ವಿದ್ಯಾಭ್ಯಾಸ ವೃತ್ತಿಯಲ್ಲಿದ್ದವರು ೧೦೦೦೦೦ ಮಂದಿ. ಹೀಗೆ ನೂತನ ಸೈನ್ಯವನ್ನು ೩೦ ಲಕ್ಷದವರೆಗೆ ಸೇರಿಸಬೇಕೆಂದು ಪಾರ್ಲಿಮೆಂಟಿನವರು ಗೊತ್ತುಮಾಡಿದ್ದಾರೆ. ಅಷ್ಟನ್ನು ಸೇರಿಸುವುದು ಕಷ್ಟವಾಗೇನೂ ಇಲ್ಲ. ಈ ಸೈನಿಕರಿಗೆಲ್ಲಾ ಬೇಕಾಗುವ ಉಡುಪು ಆಯುಧವೇ ಮೊದಲಾದುವುಗಳೆಲ್ಲಾ ಸಮೃದ್ಧವಾಗಿವೆ. ಆಹಾರಗಳೂ ಕೊರತೆಯಿಲ್ಲದೆ ಒದಗಿಸಲ್ಪಡುತ್ತಿವೆ. ಇದರಮೇಲೆ ಅಧಿನಿವೇಶಗಳ ಸಹಾಯವು ಪದೇಪದೇ ಬರುತ್ತಲೇ ಇದೆ. ಇದರಿಂದ ಇನ್ನುಮುಂದೆ ಮಿತ್ರಮಂಡಲಿಯವರ ಪುರೋಗಮನವೂ ಯುದ್ಧಕಾರ್ಯವೂ ವಿಶೇಷ ಗಮನೀಯವಾಗಿ ನಡೆಯುವುದರಲ್ಲಿವೆಯೆಂದು ಇಂಗ್ಲೀಷ್ ಫ್ರೆಂಚ್ ಪತ್ರಿಕೆಗಳು ಹೇಳುತ್ತಿವೆ.

ಪೂರ್ವರಣರಂಗ

ಇಲ್ಲಿನ ಯುದ್ಧವಾರ್ತೆಯಲ್ಲಿ ವಿಶೇಷವೇನೂ ಇಲ್ಲ. ಕಾರ್ಪೇತಿಯನ್ ಬೆಟ್ಟದ ಉಜುಕ್ ಕಣಿವೆಯ ಹತ್ತಿರ ಜರ್ಮನ್ ಆಸ್ಟ್ರಿಯಾ ಸೇನೆಗೂ ರಷ್ಯನ್ ಸೇನೆಗೂ ಯುದ್ಧವಾಗುತ್ತಲೇ ಇದೆ. ರಷ್ಯನರನ್ನು ಶತ್ರುಪಕ್ಷದವರು ಹಿಮ್ಮೆಟ್ಟಿಸಿಲ್ಲ. ಉಜುಕ್ ಕಣಿವೆಗೆ ೨ ಮೈಲಿ ದೂರದಲ್ಲಿರುವ ಒಂದು ಮುಖ್ಯವಾದ ಉನ್ನತಸ್ಥಾನವನ್ನು ರಷ್ಯಾದವರು ಹಿಡಿದುಕೊಂಡಿದ್ದಾರೆ. ಆಸ್ಟ್ರಿಯಾದವರಿಗೆ ಸಹಾಯ ಮಾಡುವುದಕ್ಕೆ ಜರ್ಮನರು ಹೊಸ ಸೈನ್ಯವನ್ನು ಬಹಳವಾಗಿ ಕಳುಹಿಸಿಕೊಡುತ್ತಿದ್ದಾರೆ.

ತುರ್ಕಿ.

ಕಪ್ಪು ಸಮುದ್ರದಲ್ಲಿರುವ ರಷ್ಯನ್ ಯುದ್ಧ ನಾವೆಗಳು ಬಾಸ್‌ಪರಸ್ ಬಳಿಯಲ್ಲಿರುವ ತುರ್ಕಿ ಕೋಟೆಗಳ ಮೇಲೂ ಅಲ್ಲಿನ ಫಿರಂಗಿಗಳ ಮೇಲೂ ಫಿರಂಗಿ ಗುಂಡುಗಳನ್ನು ಹೊಡೆದು ಕೋಟೆಯಲ್ಲಿ ದೊಡ್ಡ ಬೆಂಕಿಯನ್ನು ಹುಟ್ಟಿಸಿದುವು. ಬಾಸ್‌ಪರಸ್ ಜಲಸಂಧಿಯಲ್ಲಿರುವ ತುರ್ಕಿ ಯುದ್ಧದ ಹಡಗುಗಳ ಮೇಲೂ ರಷ್ಯನರು ಫಿರಂಗಿ ಗುಂಡುಗಳನ್ನು ಹಾರಿಸಲು, ಆ ಹಡಗುಗಳು ಹಿಮ್ಮೆಟ್ಟಿಹೋದುವು. ಟಾರ್‌ಗಡ್ ಎಂಬ ತುರ್ಕಿ ಹಡಗು ತಿರುಗಿಬಂದು ರಷ್ಯನರ ಹಡಗುಗಳ ಮೇಲೆ ಫಿರಂಗಿ ಗುಂಡುಗಳನ್ನು ಹಾರಿಸಿದರೂ ಇವಕ್ಕೆ ಯಾವ ನಷ್ಟವನ್ನೂ ಉಂಟುಮಾಡಲಾರದೆ ಹೋಯಿತು. ತುರ್ಕಿಯವರ ಟಾರ್ಪಿಡೊ ದೋಣಿಗಳು ರಷ್ಯನರ ಯುದ್ಧನಾವೆಗಳ ಕಡೆಗೆ ಬರುತ್ತಿರಲು ಅವನ್ನು ಹೊಡೆದು ಹಿಂದಕ್ಕಟ್ಟಿದರು. ಈ ಯುದ್ಧದ ಸಮಯದಲ್ಲಿ ರಷ್ಯನರ ನೌಕಾ ವಿಮಾನಗಳು ಆಕಾಶದಲ್ಲಿ ನಿಂತು, ಸ್ಥಿತಿಗತಿಯನ್ನೆಲ್ಲಾ ತಿಳಿಯುತ್ತಿದ್ದುವು. ರಷ್ಯನರ ಫಿರಂಗಿ ಏಟುಗಳು ಗುರಿತಪ್ಪದೆ ಬೀಳುತ್ತಿದ್ದುದನ್ನು ಅವು ಗೊತ್ತುಮಾಡಿದುವು. ಆ ವಿಮಾನಗಳ ಮೇಲೆ ತುರ್ಕಿಯವರು ಫಿರಂಗಿ ಗುಂಡುಗಳನ್ನು ಹಾರಿಸಿದರೂ ಫಲವಾಗಲಿಲ್ಲ. ಅನಾಟೋಲಿಯನ್ನಿನ ಹತ್ತಿರ ಕಾವಲು ಕಾಯುತ್ತಿದ್ದ ರಷ್ಯನರ ಟಾರ್ಪಿಡೊ ಹಡಗುಗಳು ತುರ್ಕಿಯವರ ೧೦ ಹಡಗುಗಳನ್ನು ಮುಳುಗಿಸಿದುವು. ಇವುಗಳಲ್ಲಿ ತುಂಬಾ ಆಯುಧಸಾಮಗ್ರಿಗಳಿದ್ದುವು. ಬಳಿಕ ಆ ಟಾರ್ಪಿಡೋ ಹಡಗುಗಳು ತುರ್ಕಿ ಸೈನ್ಯವಿದ್ದ ಸ್ಥಾನದ ಮೇಲೆ ಫಿರಂಗಿ ಗುಂಡುಗಳನ್ನು ಹೊಡೆದು ಬಹಳ ನಷ್ಟಪಡಿಸಿರುವುವು.

ಡಾರ್ಡನಲ್ಸ್.

ಈಚೆಗೆ ಮರಳಿ ಡಾರ್ಡನಲ್ಸಿನಲ್ಲಿ ಯುದ್ಧ ಕ್ರಿಯೆಯು ಆರಂಭವಾಗಿದೆ. ಟ್ರಯಂಫ್ ಎಂಬ ಇಂಗ್ಲಿಷ್ ಯುದ್ಧನಾವೆಯು ಡಾರ್ಡನಲ್ಸಿನೊಳಕ್ಕೆ ನುಗ್ಗಿ ಗಲ್ಲಿಪೋಲಿ ದ್ವೀಪದ ಪಶ್ಚಿಮದಲ್ಲಿ ತುರ್ಕಿಯವರು ತೋಡಿಕೊಂಡಿದ್ದ ಕಂದಕಗಳ ಮೇಲೆ ೬ ಸಾವಿರ ಗಜಗಳ ದೂರದಿಂದ ಗುಂಡುಗಳನ್ನು || ಘಂಟೆಯವರೆಗೆ ಹಾರಿಸಿತು. ಬಳಿಕ ಇನ್ನೆಲ್ಲಾದರೂ ಶತ್ರುಗಳ ಕಂದಕವಿದೆಯೇ ಎಂಬುದನ್ನು ನೋಡುವುದಕ್ಕಾಗಿ ಇನ್ನಷ್ಟು ಒಳಗಡೆಗೆ ನುಗ್ಗಿಹೋಯಿತು. ಆಗ ತುರ್ಕಿಯವರು ಆಸ್ಯಾಖಂಡದ ಕಡೆಯ ತಮ್ಮ ಕೋಟೆಗಳಲ್ಲಿದ್ದ ಹವಿಟ್ಜರ್ ಫಿರಂಗಿಗಳಿಂದ ಈ ಹಡಗಿನ ಮೇಲೆ ಗುಂಡುಗಳನ್ನು ಹೊಡೆದರು. ಅವುಗಳಲ್ಲಿ ೩ಗುಂಡುಗಳು ಹಡಗಿಗೆ ಬಡಿದು ಸ್ವಲ್ಪ ನಷ್ಟವನ್ನುಂಟುಮಾಡಿದುವು. ಇಬ್ಬರಿಗೆ ಏಟು ತಗುಲಿತು. ಬಳಿಕ ಆ ಫಿರಂಗಿಗಳಿದ್ದ ಕೋಟೆಯ ಮೇಲೆ ಟ್ರಯಂಫ್ ಹಡಗು ಫಿರಂಗಿ ಗುಂಡುಗಳನ್ನು ತೀವ್ರವಾಗಿ ಹೊಡೆದು ಆ ಫಿರಂಗಿಗಳನ್ನೆಲ್ಲಾ ಹಾಳ್ಮಾಡಿತು. ಬಳಿಕ ತುರ್ಕಿಯವರ ಕಂದಕಗಳ ಮೇಲೂ ಫಿರಂಗಿ ಗುಂಡುಗಳನ್ನು ಹಾರಿಸಿತು. ಯುದ್ಧದ ಹಡಗುಗಳಲ್ಲಿ ಹೋಗಿರುವ ಮಿತ್ರಮಂಡಲಿಯವರ ಸೈನ್ಯವು ಗಲ್ಲಿಪೋಲಿಯ ಹತ್ತಿರ ಭೂಮಿಯ ಮೇಲೆ ಇಳಿದಿತು. ಅಲ್ಲಿನ ಕಂದಕಗಳಲ್ಲಿದ್ದ ತುರ್ಕಿ ಸೈನಿಕರು ಇವರನ್ನು ಹಡಗಿನಿಂದ ಇಳಿಯಗೊಡಿಸದಂತೆ ಮಾಡಬೇಕೆಂದು ಬಹಳ ಕಾದಾಡಿದರು. ಆದರೆ ಸಮುದ್ರದಲ್ಲಿ ನಿಂತಿದ್ದ ಯುದ್ಧದ ಹಡಗುಗಳು ಅವರ ಮೇಲೆ ಫಿರಂಗಿ ಗುಂಡುಗಳನ್ನು ಹಾರಿಸುತ್ತಿದ್ದುದರಿಂದ ಅವರಾಟವು ಸಾಗದೆಹೋಯಿತು. ನಮ್ಮ ಸೇನೆಯೆಲ್ಲಾ ಅಲ್ಲಿಳಿದಿತು. ಒಂದು ದಿನ ಬೆಳಗಿನ ಜಾವದಿಂದ ಸಾಯಂಕಾಲವಾಗುವುದರೊಳಗಾಗಿ ಎಲ್ಲ ಸೈನ್ಯವೂ ಇಳಿದು, ಮುಂದುಮುಂದಕ್ಕೆ ಸಾಗಿ ಆ ಗಲ್ಲಿಪೋಲಿಯ ತೀರದುದ್ದಕ್ಕೂ ಸ್ಥಾನಬಲವನ್ನು ಮಾಡಿಕೊಂಡು ನೆಲಸಿರುವುವು, ಮತ್ತು ಅಲ್ಲಿ ಒಂದು ಗ್ರಾಮವನ್ನು ಹಿಡಿದುಕೊಂಡಿರುವುವು. ಇನ್ನುಮೇಲೆ ಈ ಸೇನೆಯು ತುರ್ಕಿಯವರ ಮೇಲೆ ಭೂಯುದ್ಧವನ್ನು ಆರಂಭಿಸುವುದರಲ್ಲಿದೆ.

ಸಾಬಾ.

ಈ ಪ್ರಾಂತ್ಯದಲ್ಲಿ ಯುದ್ಧಮಾಡಿ ಸೋತುಹೋದ ತುರ್ಕಿಯ ಸೈನಿಕರು ೯೦ ಮೈಲಿಗಳಾಚೆಗೆ ಓಡಿಹೋಗಿರುವರು. ಅವರನ್ನಟ್ಟಿಕೊಂಡು ಹೋದಾಗ ನಮ್ಮ ಅಶ್ವಸೈನಿಕರಿಗೆ ತುರ್ಕಿಯವರ ಮದ್ದುಗುಂಡುಗಳನ್ನು ತುಂಬಿದ ೬ ಹೊಗೆ ಬಂಡಿಗಳೂ, ಕೆಲಮೋಟಾರುಗಳೂ ಸಿಕ್ಕಿದುವು. ಏಪ್ರಿಲ್ ತಾ|| ೧೨-೧೩-೧೪ರಲ್ಲಿ ಆ ಸುತ್ತಿನೊಳಗೆ ನಡೆದ ಯುದ್ಧದಲ್ಲಿ ತುರ್ಕಿಯವರ ಕಡೆ ೬೦೦೦ ಮಂದಿ ನಷ್ಟವಾಗಿರುವರೆಂದು ಪ್ರಕಟವಾಗಿದೆ. ಅವರಲ್ಲಿ ಮೂವರು ಜರ್ಮನ್ ಆಫೀಸರಾಗಿರುವರು. ತಾ|| ೧೪ ನೇ ದಿನದ ಯುದ್ಧದಲ್ಲಿ ತುರ್ಕಿ ಕಡೆಯ ಒಬ್ಬ ದೊಡ್ಡ ಸೈನಿಕೋದ್ಯೋಗಿಯು ಹತನಾಗಿರುವನು. ಇಂಗ್ಲೀಷರ ಕಡೆ ಒಟ್ಟು ೭೦೦ ಮಂದಿ ನಷ್ಟವಾದರು.

ಆಕಾಶಯಾನಗಳು.

ಉಭಯಪಕ್ಷದ ಆಕಾಶಯಾನಗಳ ಕೆಲಸವು ಬಹಳ ವಿಶೇಷವಾಗಿ ನಡೆಯುತ್ತಿದೆ. ಜರ್ಮನರ ವಿಮಾನಗಳು ಸಿಡಿಮದ್ದುಗಳನ್ನು ಹಾಕಿ ಮಿತ್ರಮಂಡಲಿಯವರ ಕಡೆಯ ಕೆಲವು ಮದ್ದಿನ ಕೊಟ್ಟಾರಗಳನ್ನು ಸುಟ್ಟುಹಾಕಿವೆ. ರೀಮ್ಸ್ ಪಟ್ಟಣದ ಮೇಲೆ ಶತ್ರುವೈಮಾನಿಕರು ಹಲವು ಸಿಡಿಮದ್ದುಗಳನ್ನು ಹಾಕಿದ್ದಾರೆ. ಒಂದುಕಡೆ ಆಂಗ್ಲ ವೈಮಾನಿಕರಿಗೂ, ಜರ್ಮನ್ ವೈಮಾನಿಕರಿಗೂ ೧|| ಘಂಟೆಯ ಹೊತ್ತು ಆಕಾಶಯುದ್ಧವಾಯಿತು ಎರಡುಕಡೆಯ ವಿಮಾನಗಳಿಂದಲೂ ಸಣ್ಣ ಫಿರಂಗಿ ಗುಂಡುಗಳು ಪರಸ್ಪರ ಹೊಡೆಯಲ್ಪಟ್ಟುವು. ಕಡೆಗೆ ಆಂಗ್ಲ ವೈಮಾನಿಕರು ಶತ್ರು ವಿಮಾನಗಳನ್ನು ಆಂಗ್ಲಸೇನಾ ಶಿಬಿರದ ಕಡೆಗೆ ಅಟ್ಟಿಕೊಂಡು ಹೋಗಿ ಅಲ್ಲಿ ಅವನ್ನು ಕೆಳಕ್ಕೆ ಬೀಳುವಂತೆ ಮಾಡಿದರು. ಇದನ್ನು ನೋಡಿದ ಒಬ್ಬ ಅಮೆರಿಕನ್ ಪತ್ರವ್ಯವಹಾರಕನು ಆಂಗ್ಲ ವೈಮಾನಿಕರ ಯುದ್ಧಕೌಶಲ್ಯವನ್ನು ಹೊಗಳಿದ್ದಾನೆ. ಬೆಲ್ಜಿಯಂ ವೈಮಾನಿಕರು ಬ್ರೂಜಸ್ಸಿನಲ್ಲಿರುವ ಜರ್ಮನರ ಮದ್ದಿನ ಕೋಣೆಗಳ ಮೇಲೂ, ಅವರ ವಿಮಾನನಿಲಯದ ಮೇಲೂ ಸಿಡಿಮದ್ದುಗಳನ್ನು ಹಾಕಿ ಬಂದಿದ್ದಾರೆ. ಆಂಗ್ಲ ವೈಮಾನಿಕರು ಘೆಂಟ್ ಪಟ್ಟಣದಲ್ಲಿರುವ ಜರ್ಮನರ ವಿಮಾನನಿಲಯದ ಮೇಲೆ ಬಹಳ ಸಾಹಸದಿಂದ ಸಿಡಿಮದ್ದುಗಳನ್ನು ಹಾಕಿ ಬಂದರು. ಅದರಿಂದ ಆ ನಿಲಯದಲ್ಲಿ ದೊಡ್ಡ ಶಬ್ದದಿಂದ ಏನೋ ಹಾರಿ ಒಡೆದಿತು. ರಯರ್ನ್ ನದಿಯ ದಡದಲ್ಲಿ ಸರ್ವಜನರೂ ನೆರೆದು ನೋಡುವಂತೆ ೨ ಗಂಟೆಯ ಹೊತ್ತು ಆಕಾಶದಲ್ಲಿ ವಿಮಾನಯುದ್ಧವು ನಡೆದಿರುವುದು. ಮಿತ್ರಮಂಡಲಿಯವರ ೪ ವಿಮಾನಗಳ ಮೇಲೆ ಜರ್ಮನರ ಅನೇಕ ವಿಮಾನಗಳು ಬಂದು ಬಿದ್ದವು. ಯುದ್ಧಮಾಡುವಾಗ್ಗೆ ಮಿತ್ರಮಂಡಲಿಯವರ ವಿಮಾನಗಳು ಸ್ವಲ್ಪವಾಗಿದ್ದುದರಿಂದ ಅವು ಹಿಮ್ಮೆಟ್ಟಬೇಕಾಯಿತು. ಅಷ್ಟರಲ್ಲಿ ಸಹಾಯಕ್ಕೆ ಅನೇಕ ವಿಮಾನಗಳು ಬಂದುದರಿಂದ ಜರ್ಮನ್ ವಿಮಾನಗಳು ಏಟುತಿಂದು ಓಡಿದವು. ಜರ್ಮನರ ಕೆಲವು ವಿಮಾನಗಳು ಬಿಲೋಸ್ಟಾಕ್ ಪಟ್ಟಣದ ಮೇಲೆ ಬಹುಶಃ ಒಂದುನೂರು ಸಿಡಿಮದ್ದುಗಳನ್ನು ಹಾಕಿವೆ. ತಾ|| ೨೪ರಲ್ಲಿ ಮಿತ್ರಮಂಡಲಿಯವರು ೨ ಜರ್ಮನ್ ವಿಮಾನಗಳ ಮೇಲೆ ಗುಂಡನ್ನು ಹೊಡೆದು ಕೆಳಕ್ಕೆ ಬೀಳಿಸಿದುವು. ಫ್ರೆಂಚ್‌ವೈಮಾನಿಕರು ಜರ್ಮನರ ೪-೫ ರೈಲ್ವೆ ಜಂಕ್ಷನ್ ಸ್ಥಳಗಳ ಮೇಲೆ ಸಿಡಿಮದ್ದುಗಳನ್ನು ಹಾಕಿ ಅವನ್ನು ಹಾಳುಮಾಡಿದ್ದಾರೆ. ಇಂಗ್ಲೀಷ್ ಫ್ರೆಂಚ್ ಯುದ್ಧನಾವೆಗಳ ಫಿರಂಗಿ ಗುಂಡಿನೇಟನ್ನು ತಿಂದ ೨ ತುರ್ಕಿ ವಿಮಾನಗಳು ಏಷ್ಯಾ ಮೈನರಿನಲ್ಲಿರುವ ಟೆನೆಡಾಸ್ ದ್ವೀಪದಲ್ಲಿಳಿದುಹೋದುವು. ಕೆಲವು ಫ್ರೆಂಚ್ ವಿಮಾನಗಳು ಮೆಯಡ್ಸಿನಲ್ಲಿರುವ ಮದ್ದಿನ ಕೊಟ್ಟಾರದ ಮೇಲೆ ಸಿಡಿಮದ್ದನ್ನು ಹಾಕಿದುವು.

ಜಲಯಾನಗಳು.

ಕಳೆದ ೨೧ನೇ ತಾರೀಖಿಗೆ ಕಡೆಯಾದ ಒಂದು ವಾರದಲ್ಲಿ ಜರ್ಮನರ ಸಬ್‌ಮೆರೀನುಗಳು ಒಂದು ವ್ಯಾಪಾರದ ಹಡಗನ್ನೂ ಒಂದು ಬೆಸ್ತರ ದೋಣಿಯನ್ನೂ ಮುಳುಗಿಸಿದುವು. ಆ ವಾರದಲ್ಲಿ ಇಂಗ್ಲೀಷ್ ತೀರಗಳಿಗೆ ಒಟ್ಟು ೧೫೧೯ ಹಡಗುಗಳು ಬಂದು ಹೋಗಿರುತ್ತವೆ.

ಮೈಸೂರು ಸ್ಟಾರ್.

ಸನ್ ೧೯೧೫ ನೆಯ ಮೇ ತಾ|| ೨ ನೆಯ ಭಾನುವಾರ.

ಕನ್ನಡಿಗರ ಸಂಮೇಳನ.

ಈ ಸಂಮೇಳನವು ನಾಳೆ ಸೋಮವಾರದಿಂದ ಮೂರು ದಿವಸಗಳವರೆಗೆ ಬೆಂಗಳೂರಿನ ಸ್ಕ್ವಾರಿ ಹೈಸ್ಕೂಲ್ ಸಭಾಂಗಣದಲ್ಲಿ ಪ್ರತಿದಿನ ಮಧ್ಯಾಹ್ನಾತ್ಪರ ೩ ಗಂಟೆಯ ಮೇಲೆ ನಡೆಯುವಂತೆ ಏರ್ಪಡಿಸಲಾಗಿದೆಯೆಂದೂ ರಾಜಮಂತ್ರ ಪ್ರವೀಣ ಹೆಚ್. ವಿ. ನಂಜುಂಡಯ್ಯ ಎಂ.ಎ. ಎಂ.ಎಲ್., ಸಿ.ಐ.ಇ. ಯವರು ಇದನ್ನು ಪ್ರಾರಂಭಿಸುವರೆಂದೂ ಕೇಳುತ್ತೇವೆ. ಇದಕ್ಕೆ ಸಂಬಂಧಪಟ್ಟ ಪ್ರಸಿದ್ಧಿ ಪತ್ರಿಕೆಯನ್ನು ನಮ್ಮ ಹಿಂದಣ ೧-೨ ಸಂಚಿಕೆಗಳಲ್ಲಿ ಮುದ್ರಿಸಿರುವುದರಿಂದ ಸಂಮೇಳನದ ಉದ್ದೇಶವು ಎಂತಹುದೆಂಬುದು ವಾಚಕರಿಗೆಲ್ಲಾ ಗೊತ್ತೇ ಆಗಿದೆ. ನೆರೆಹೊರೆಯ ದೇಶಭಾಷೆಗಳ ಮಧ್ಯದಲ್ಲಿ ಸದ್ಯಃಕಾಲದೊಳಗೆ ಕನ್ನಡಭಾಷೆಗುಂಟಾಗಿರುವಷ್ಟು ದೀನಾವಸ್ಥೆಯು ಮತ್ತಾವುದಕ್ಕೂ ಇಲ್ಲ. ಸ್ವದೇಶಾಭಿವೃದ್ಧಿಚಿಂತನೆಗಾಗಿ ಹೆಸರಾಂತ ಕರ್ನಾಟಕ ಸಂಸ್ಥಾನದಲ್ಲಿ ಇಂಥಹ ಒಂದು ಸಂಮೇಳನವು ನಡೆಯುವಂತಾದುದು ಭಾಷಾಭಿಮಾನಿಗಳಿಗೆಲ್ಲಾ ಎಷ್ಟೋ ಆನಂದದಾಯಕವಾಯಿತು. ಅದರೊಳಗೂ ಮೈಸೂರು ಸಂಸ್ಥಾನದಲ್ಲಿ ಯಾವ ಮಹನೀಯರ ಕರ್ನಾಟಕ ಭಾಷೋಜ್ಜೀವಿನೀ ಪಾಠಶಾಲಾ ಸ್ಥಾಪನರೂಪ ಪ್ರಯತ್ನ ವಿಶೇಷದಿಂದ ಕಳೆದ ೨೫ ವರ್ಷಗಳಿಂದೀಚೆಗೆ ದೇಶಭಾಷೆಯ ಅಭಿವೃದ್ಧಿಗೆ ವಿಶೇಷ ಸಹಾಯ್ಯವಾಯಿತೋ ಅಂಥ ರಾ|| ಬ|| ಎಂ. ಶ್ಯಾಮರಾವ್, ಎಂ.ಎ., ರವರೇ ಪ್ರಮುಖರಾಗುಳ್ಳ ಸಬ್ ಕಮಿಟಿಯು ಈಗಿನ ಕಾರ್ಯಕ್ಕೂ ಸೂತ್ರಧಾರಕವಾಗಿರುವ ಮೈಸೂರಿನ ಸಂಪದಭ್ಯುದಯ ಸಮಾಜದ ವಿದ್ಯಾಭ್ಯಾಸಶಾಖೆಯವರು ಏರ್ಪಡಿಸಿರುವುದರಿಂದ, ಈ ಸಮ್ಮೇಳನವು ಭಾಷೆಯ ಅಭಿವೃದ್ಧಿಗೂ ಪರಿಪುಷ್ಟಿಗೂ ಸಾಧಕವಾದ ಪ್ರಯತ್ನಗಳನ್ನು ಚಿರಕಾಲ ನಡೆಯಿಸುವಂಥ ಪರಿಣಾಮವನ್ನುಂಟುಮಾಡದೆ ಪರಿಸಮಾಪ್ತಿಗೊಳ್ಳಲಾರದೆಂದು ನಿರೀಕ್ಷಿಸಬಹುದಾಗಿದೆ.

ನಮ್ಮ ಭಾಷಾಸೇವೆಗೆ ಅವಶ್ಯಕವಾದ ಸಂಘವನ್ನೂ ಸಮ್ಮೇಳನವನ್ನೂ ಮೊದಲು ಸ್ಥಾಪಿಸಿದವರು ಧಾರ್ವಾಡದವರು. ಈಗಿನ ನಮ್ಮ ದೇಶದ ಸಮ್ಮೇಳನದ ಉದಯಕ್ಕೂ ಅವರೇ ಸ್ವಲ್ಪದೂರದವರೆಗೆ ಕಾರಣೀಭೂತರೆಂದು ಆ ದೇಶದ ಪತ್ರಿಕೆಗಳ ಮಾತಿನಿಂದ ಗೊತ್ತಾಗುತ್ತದೆ. ಅದು ಹೇಗಾದರೂ ಇರಲಿ. ಅವರೂ ಕನ್ನಡಿಗರೇ. ನಾವೂ ಕನ್ನಡಿಗರೇ. ಸಮ್ಮೇಳನದಿಂದಾಗುವ ಫಲವನ್ನು ಕನ್ನಡಿಗರೆಲ್ಲರೂ ಅನುಭವಿಸುವರು. ಇದರ ಉತ್ಪಾದನಕ್ಕೆ ಯಾರು ಕಾರಣೀಭೂತರೋ ಅವರು ಕನ್ನಡಿಗರೆಲ್ಲರ ವಂದನೆಗೆ ಪಾತ್ರರು.

ಇನ್ನು ಸಮ್ಮೇಳನವನ್ನು ಸಾರ್ಥಕವಾಗುವಂತೆ ಮಾಡುವ ಭಾರವು ಅದಕ್ಕೆ ಬಂದು ನೆರೆವ ವಿದ್ವಜ್ಜನರಮೇಲಿರುವುದು. ದೇಶಭಾಷೆಯನ್ನು ನೆರೆಯ ದ್ರಾವಿಡಭಾಷೆಗಳಿಗೆ ಸಮನಾಗಿ ಅಥವಾ ಅವಕ್ಕಿಂತ ಹೆಚ್ಚಾಗಿ ಸರ್ವಾಂಗಪುಷ್ಟಿಯುಳ್ಳದನ್ನಾಗಿ ಮಾಡುವುದಕ್ಕೆ ಯಾವ ಯಾವ ಕಾರ್ಯಗಳನ್ನು ಮಾಡಬೇಕೋ ಅವನ್ನೆಲ್ಲಾ ಸಭಾಸದರು ಕೂಲಂಕಷವಾಗಿ ಚರ್ಚಿಸಬೇಕಾಗಿರುವುದು. ಧಾರವಾಡ ಮಂಗಳೂರು ಮೊದಲಾದ ಪ್ರಾಂತದ ನಮ್ಮ ಸಹೋದರರಲ್ಲಿ ಎಲ್ಲ ಭಾಗದ ಭಾಷೆಗೂ ಏಕರೂಪತೆಯನ್ನು ತರಿಸಬೇಕೆಂಬ ಕಾಂಕ್ಷೆಯು ವಿಶೇಷವಾಗಿರುತ್ತದೆ. ಗ್ರಾಂಥಿಕಭಾಷೆಯಲ್ಲಿ ಅಂಥ ಏಕರೂಪತೆಯನ್ನು ತರುವುದು ಕ್ರಮೇಣ ಸಾಧ್ಯವಲ್ಲದೆ ಹೋಗುವ ಕೆಲಸವೇನೂ ಅಲ್ಲ. ಎಲ್ಲ ಭಾಗದ ಪ್ರತಿನಿಧಿಗಳೂ ಕೂಡಿದ ಒಂದು ಉಪಸಂಘದವರು ಚರ್ಚಿಸಿ ನಿರ್ಧರಿಸಿದ ಸಂಧಿಗ್ಧಶಬ್ದವಾಕ್ಯಪ್ರಯೋಗಗಳನ್ನು ಎಲ್ಲ ಕಡೆಯವರೂ ಒಂದೇಸಮನಾಗಿ ಉಪಯೋಗಿಸುತ್ತಾ ಬಂದರೆ ಅದು ತಾನಾಗಿ ಸಿದ್ಧವಾಗುವುದು. ಕಳೆದ ೧೦-೨೦ ವರ್ಷಗಳಿಂದೀಚೆಗೆ ಧಾರವಾಡ-ಮಂಗಳೂರು ಕಡೆಯ ವಿದ್ಯಾವಂತರು ಮೈಸೂರಿನ ಭಾಷಾಶೈಲಿಯನ್ನು ನೋಡಿ ತಾವೇ ನೇರ್ಪನ್ನು ಉಂಟುಮಾಡಿಕೊಳ್ಳುತ್ತ ಬಂದಿದ್ದಾರೆ. ಮೈಸೂರಿನವರ ಭಾಷೆಯಲ್ಲೂ ಸಂಶಯಗ್ರಸ್ತವಾದ ಪ್ರಯೋಗಗಳು ಅನೇಕವಾಗಿವೆ. ಅವನ್ನೂ ಒಂದು ಉಪಸಂಘದವರು ಚರ್ಚಿಸಿ ಸಿದ್ಧಾಂತಿಸಬೇಕಾಗಿದೆ. ಭಾಷೆಯ ಉಪಯೋಗದಲ್ಲಿ ಕಾಣುವ ಲಾಕ್ಷಣಿಕ ದೋಷಗಳನ್ನು ಸರಿಪಡಿಸಿಬಿಟ್ಟ ಮಾತ್ರದಿಂದಲೇ ಭಾಷಾರಕ್ಷಣೆಯಾದಂತಾಗುವುದಿಲ್ಲ. ಅದರಿಂದ ಭಾಷಾಮಾತೆಯ ಮೈಯ್ಯೊಗಲಿನ ಮೇಲಿನ ಮಾಲಿನ್ಯವು ಮಾತ್ರ ನಿವಾರಿತವಾಗಬಹುದು. ಆದರೆ ಭಾಷಾಮಾತೆಯ ದೇಹದೊಳಗೇ ಈಗ ರಕ್ತಮಾಂಸ ಪರಿಪುಷ್ಟಿಯು ಸಾಲದು. ರಾಸಾಯನ-ಭೌತಿಕ-ಭೂಗರ್ಭ-ವಿದ್ಯುತ್ತು-ಕೃಷಿ-ಖಗೋಳ-ಯಾಂತ್ರಿಕ-ಲೋಕವ್ಯವಹಾರ-ಆರ್ಥಿಕ-ಶಿಲ್ಪ-ವನಸ್ಪತಿ-ಮೊದಲಾದುವುಗಳಿಗೆ ಸಂಬಂಧಪಟ್ಟ ಈಗಿನ ಕಾಲಕ್ಕೆ ಅತ್ಯುಪಯುಕ್ತವಾದ ಶಾಸ್ತ್ರೀಯ ಗ್ರಂಥಗಳು ಕನ್ನಡಭಾಷೆಯಲ್ಲಿಲ್ಲವೇ ಇಲ್ಲ. ಆಯಾ ಶಾಸ್ತ್ರಗಳ ಮರ್ಮವನ್ನು ತಿಳಿಯಬೇಕೆಂಬ ಅಭಿಲಾಷೆಯುಳ್ಳ (ಇಂಗ್ಲೀಷನ್ನರಿಯದ) ಕನ್ನಡಿಗರಿಗೆ ಈ ಜನ್ಮದಲ್ಲಿ ಅದರ ಲಾಭವಾಗುವ ಹಾಗೆಯೇ ಇಲ್ಲ. ಪರಭಾಷಾವಲಂಬನೆಯಲ್ಲೇ ಕನ್ನಡಿಗರೆಲ್ಲಾ ಇರುವಂತೆ ಮಾಡಿಡುವುದು ಭಾಷಾಭಿಮಾನಿಗಳಾದ ಪ್ರಭುತ್ವದವರಿಗೇ ಆಗಲಿ ವಿದ್ಯಾವಂತರಿಗೇ ಆಗಲಿ ಗೌರವವಲ್ಲ. ಅದುಕಾರಣ, ಈ ಲೋಪವನ್ನು ಪರಿಹರಿಸುವ ಮಹಾಪ್ರಯತ್ನಕ್ಕೆ ಈ ಸಮ್ಮೇಳನವು ದಾರಿಯನ್ನು ಮಾಡಿಡಬೇಕು.

ಮತ್ತೂ ನಮ್ಮ ಭಾಷೆಯಲ್ಲಿ ಸರ್ವಾಂಗಸಮಗ್ರವಾದ ಕೋಶವಿಲ್ಲದಿರುವುದು ಒಂದು ದೊಡ್ಡ ಕೊರತೆಯಯಗಿದೆ. ಅದನ್ನು ಮೊಟ್ಟಮೊದಲು ನಿವಾರಿಸುವುದಕ್ಕೆ ಈ ಸಮ್ಮೇಳನವು ತಕ್ಕ ಅಸ್ತಿವಾರವನ್ನು ಹಾಕಿದರೆ ಚಿರಸ್ಮರಣೀಯವಾದ ಚರಿತಾರ್ಥವು ಈ ಪ್ರಥಮ ಸಮ್ಮೇಳನದಿಂದಲೇ ಆಯಿತೆಂದು ಭಾಷಾಭಿಮಾನಿಗಳು ಸಂತೋಷಿಸುವರು. ಇನ್ನೂ ವಿಚಾರಾರ್ಹವಾದ ವಿಷಯಗಳು ಅನೇಕವಾಗಿರುವುವು. ವೃತ್ತಪತ್ರಚಾಲಕರಿಂದ ಇಂಥ ಸಮ್ಮೇಳನಗಳಿಗೂ ಭಾಷೆಗೂ ಯಾವಲಾಭವೂ ಆಗುವಹಾಗಿಲ್ಲವೆಂದು ಭಾವಿಸಿಯೋ ಏನೋ ಈ ದೇಶದ ವೃತ್ತಪತ್ರ ಚಾಲಕರನ್ನು ಈ ಸಮ್ಮೇಳನದ ಕರ್ತೃಗಳು ಬೆರಳಸಂದಿಯಲ್ಲಿ ಬಿಟ್ಟುಬಿಟ್ಟಿದ್ದರೂ, ಇದು ನಮ್ಮ ದೇಶಭಾಷೆಯ ಹಿತದ ಸಭೆಯೊದುದರಿಂದಲೂ, ಅಲ್ಲಿ ಸೇರುವವರೆಲ್ಲಾ ನಮ್ಮ ಭಾಷಾಬಂಧುಗಳಾದುದರಿಂದಲೂ, ಅವರು ಮಾಡುವ ಕೆಲಸವೆಲ್ಲಾ ನಮ್ಮದೇ ಎಂದು ಭಾವಿಸಿ, ಅದರ ಶ್ರೇಯಸ್ಸನ್ನು ಸರ್ವವಿಧದಿಂದಲೂ ಕೋರುತ್ತ, ನಮಗೆ ತೋರಿರುವುವುಗಳಲ್ಲಿ ಮುಖ್ಯವಾದ ಒಂದೆರಡು ವಿಷಯಗಳನ್ನು ಮುಂದಾಗಿ ಇಲ್ಲಿ ವಿಜ್ಞಾಪಿಸಿರುತ್ತೇವೆ.

ಒಳದೇಶ ವೃತ್ತಾಂತಗಳು.

ದಿವಾನರು ತಮ್ಮ ಸೆಕ್ರಿಟರಿಗಳೊಡನೆ ಕಳೆದ ತಾ|| ೩೦ ರ ಬೆಳಗ್ಗೆ ರಾಜಧಾನಿಗೆ ದಯಮಾಡಿಸಿ ನೆನ್ನೆಯದಿನ ಹಿಂದಿರುಗುವವರಾಗಿದ್ದರು.

ಪ್ರೌಢಾವಿವಾಹವು ಶಾಸ್ತ್ರಸಮ್ಮತವೆಂದು ಪುಸ್ತಕಗಳನ್ನು ಬರೆದು, ಮತ್ತು ಉತ್ತರಾದಿಮಠದ ಶ್ರೀಗಳವರ ಕೂಡಲೂ, ಪಂಡಿತರ ಕೂಡಲೂ ಬಹಳವಾಗಿ ಜಿಜ್ಞಾಸೆಮಾಡುತ್ತಿದ್ದ ರಾಜಧಾನಿಯ ಆಯುರ್ವೇದ ಕಾಲೇಜಿನ ಮುಖ್ಯೋಪಾಧ್ಯಾಯರಾದ ಡಾ|| ವೆಂಕೋಬರಾಯರು ಶ್ರೀಗಳವರನ್ನು ತಮ್ಮ ಮನೆಗೆ ಬರಮಾಡಿಕೊಂಡು ಭಿಕ್ಷೆಯನ್ನು ಮಾಡಿಸಿ ಮುದ್ರಾಧಾರಣೆಯನ್ನು ಮಾಡಿಸಿಕೊಂಡರು.

೧೯೧೩-೧೪ರಲ್ಲಿ ಸಂಸ್ಥಾನದಲ್ಲೆಲ್ಲಾ ಒಟ್ಟು ೧೧೯೦೦೦ ಭಾಷಾಕಾಗದಗಳು ರಿಜಿಸ್ಟರಾಗಿರುತ್ತವೆ. ಈವರೆಗೆ ಯಾವ ವರ್ಷದಲ್ಲೂ ಇಷ್ಟು ಹೆಚ್ಚು ಸಂಖ್ಯೆಯ ಪತ್ರಗಳು ರಿಜಿಸ್ಟರಾಗಿರಲಿಲ್ಲವು. ಚರಸ್ವತ್ತಿನ ರಿಜಿಸ್ಟ್ರೇಷನ್ ಫೀ ಕಡಿಮೆ ಮಾಡಿದುದರಿಂದ ಇವುಗಳ ರಿಜಿಸ್ಟ್ರೇಷನ್ ಸಂಖ್ಯೆಯು ೫೧೯ ರ ವರೆಗೆ ಹೆಚ್ಚಿರುತ್ತದೆಯಂತೆ. ಈ ಶಾಖೆಯಲ್ಲಿ ೧೮೨೦೩೩ ರೂ. ಉತ್ಪನ್ನವಾಗಿಯೂ ೨೬೫೫-೧೦-೬ರೂ. ವ್ಯಯವಾಗಿಯೂ ಇದೆ.

ಬೆಂಗಳೂರು ಮ್ಯುನಿಸಿಪಾಲಿಟಿಯ ಕಂದಾಯದ ಮತ್ತು ಮುತ್ಸದ್ದಿ ರಂಗನಾಥಾಚಾರ್ ಎಂಬುವರು ರೆವ್. ಮಿ|| ಫಿಲಿಫ್ ಎಂಬವರ ಬಂಗಲೆಗೆ ಕಂದಾಯವನ್ನು ಕೇಳಲು ಹೋಗಿರುವಾಗ್ಗೆ ತಮ್ಮನ್ನು ಒಂದು ಕೊಠಡಿಯಲ್ಲಿ ಸೇರಿಸಿ ಹಣಸಂದ ರಸೀತಿಯನ್ನು ಬರೆದು ಅದಕ್ಕೆ ತನ್ನ ರುಜುವನ್ನು ಬಲವಂತದಿಂದ ಮಾಡಿಸಿಕೊಂಡರೆಂದು ಆ ರೆವರೆಂಡರ ಮೇಲೆ ಪೊಲೀಸಿನವರಲ್ಲಿ ದೂರುಹೇಳಿರುತ್ತಾರೆ. ಇದರ ಮೇಲೆ ಪೊಲೀಸಿನವರು ಅದನ್ನು ವಿಚಾರಿಸುತ್ತಿರುವರು.

ಕೋಲಾರ ಡಿಸ್ಟ್ರಿಕ್ಟ್ ಡೆ|| ಕ|| ಮಿ|| ಬೌರಿಂಗ್ ಸಾಹೇಬರು ಈ ತಾ|| ೧ ರಿಂದ ೩ ವಾರಗಳ ಪ್ರಿವಿಲೆಜ್ ರಜವನ್ನು ಪಡೆದುಕೊಂಡಿರುವ ಪ್ರಯುಕ್ತ ಅವರು ಬರುವವರೆಗೆ ನಂಜನಗೂಡು ಸಬ್ ಡಿವಿಜನಾಫೀಸರಾದ ಮೆ|| ಎನ್. ಸುಬ್ಬರಾಯರು ಕೋಲಾರ ಡಿ|| ಆಕ್ಟಿಂಗ್ ಡೆ|| ಕ|| ರವರಾಗಿಯೂ, ನಂಜನಗೂಡಿನಲ್ಲಿ ಸ್ಪೆಷಲ್ ಕೆಲಸದ ಮೇಲಿರುವ ಅ|| ಕ|| ಮ|| ವೈ. ವಿ. ಕೃಷ್ಣಮೂರ್ತಿಯವರು ತಮ್ಮ ಕೆಲಸದ ಜತೆಗೆ ಸ|| ಡಿವಿಜನ್ ಆಫೀಸರಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ.

ಬರುವ ಶ್ರೀಮನ್ ಮಹಾರಾಜರವರ ವರ್ಧಂತ್ಯುತ್ಸವಕ್ಕೆ ಆಹೂತರಾಗಿ ಬರತಕ್ಕ ದೇಶೀಯ ದೊಡ್ಡ ಮನುಷ್ಯರುಗಳನ್ನು ಉಪಚರಿಸುವುದಕ್ಕೆ ಜ|| ಮತ್ತು ರೆ|| ಸೆಕ್ರಿಟೆರಿಯಟ್ಟಿನ ರೆಜಿಸ್ಟ್ರಾರರಾದ ಮ|| ಬಿ. ನಾರಾಯಣಸ್ವಾಮಿಯ್ಯಂಗಾರ್ ಬಿ.ಎ., ಬಿ.ಎಲ್, ರವರು ನಿಯಮಿಸಲ್ಪಟ್ಟಿರುವರು. ಅತಿಥಿಗಳು ತಮ್ಮ ಬಿಡಾರ ಮೊದಲಾದ ವಿಚಾರವಾಗಿ ಈ ಅಧಿಕಾರಿಗಳಿಗೆ ಬರೆದು ತಿಳಿಯಬಹುದೆಂದೂ, ಮೈಸೂರು ಡೆ|| ಕ|| ರವರೂ, ಮ್ಯುನಿಸಿಪಲ್ ಪ್ರೆಸಿಡೆಂಟರೂ, ಅರಮನೆಯ ಕಂಟ್ರೋಲರೂ ಎಕ್ಸಿಕ್ಯುಟಿವ್ ಇಂಜನೀಯರೂ ಅವರಿಗೆ ಬೇಕಾದ ಸಹಾಯ್ಯವನ್ನು ಮಾಡಬೇಕೆಂದೂ ಸರ್ಕಾರದಪ್ಪಣೆಯಾಗಿದೆ.

ಬೆಂಗಳೂರಲ್ಲಿ ಸೇರುವ ಕನ್ನಡಿಗರ ಸಂಮೇಳನಕ್ಕೆ ಸಂಬಂಧಪಟ್ಟ ಆಹ್ವಾನಪತ್ರಿಕೆ ಮೊದಲಾದುವುಗಳು ಇಂಗ್ಲೀಷಿನಲ್ಲಿ ಅಚ್ಚುಮಾಡಿಸಿ ಕಳುಹಲ್ಪಟ್ಟಿವೆ. ಆಹ್ವಾನ ಮಾಡಲ್ಪಟ್ಟವರಲ್ಲಿ ಬರಿಯ ಕನ್ನಡವನ್ನು ಬಲ್ಲವರು ಅವನ್ನು ಓದಿಸಿಕೊಳ್ಳುವುದಕ್ಕಾಗಿ ಇಂಗ್ಲೀಷ್ ಪ್ಯಾಸ್ ಮಾಡಿದವರಲ್ಲಿಗೆ ಹೋಗಬೇಕಾಯಿತು. ಸಂಮೇಳನವನ್ನು ಕೂಡಿಸುವವರು ಕನ್ನಡಿಗರು, ಅಲ್ಲಿ ಸೇರುವವರು ಕನ್ನಡಿಗರು, ಅಲ್ಲಿ ಪಡೆವಲಾಭವು ಕನ್ನಡದ ಏಳ್ಗೆಯಾಗಿರುವಾಗ ಇಂಗ್ಲೀಷಿನ ಮಧ್ಯಸ್ಥಿಕೆ ಯಾತಕ್ಕೆ? ಇದು ಪ್ರಥಮ ಕಬಳದಲ್ಲೇ ಮಕ್ಷಿಕಾಪಾತವಾದಂತಲ್ಲವೆ? ಇದು ಸ್ವಭಾಷಾಭಿಮಾನದ ಲಕ್ಷಣವೆ? ಇಂಥ ಪರಭಾಷಾಪ್ರೇಮದಿಂದಲೇ ಅಲ್ಲವೆ ನಮ್ಮ ಸ್ವಭಾಷಾಮಾತೆಯು ಮೂಲೆಮುಟ್ಟಾಗಿರುವುದು? ಆ ಹೀನಸ್ಥಿತಿಯನ್ನು ನಿವಾರಣೆಮಾಡುವ ಪ್ರಯತ್ನದಲ್ಲೂ ಇಂಥ ನಡೆಯಾದರೆ ಮುಂದಣ ಸಭೆಯ ಕೆಲಸವೂ, ಅದರ ಚರಿತಾರ್ಥವೂ, ಎಷ್ಟುಮಟ್ಟಿಗೆ ನಮ್ಮ ಭಾಷೆಗೆ ಹಿತವನ್ನು ಮಾಡುವುದೋ ನೋಡಬೇಕೆಂದು ನಮ್ಮ ಪತ್ರವ್ಯವಹಾರಕರೊಬ್ಬರು ಬರೆದಿರುತ್ತಾರೆ.

೧೯೧೩-೧೪ರಲ್ಲಿ ಸಂಸ್ಥಾನದ ಎಲ್ಲಾ ಮ್ಯಾಜಿಸ್ಟ್ರೇಟರುಗಳಲ್ಲಿ ನಿವೇದಿಸಲ್ಪಟ್ಟ ೨೦೮೮ ಅಪರಾಧಗಳಲ್ಲಿ ೩೮೪೯೬ ಜನರು ವಿಚಾರಿಸಲ್ಪಟ್ಟರು. ಇದರ ಹಿಂದಣವರ್ಷ ೧೯೪೬೪ ಅಪರಾಧಗಳು ವರದಿಯಾಗಿದ್ದು ೩೮೮೦೮ ಜನರು ವಿಚಾರಿಸಲ್ಪಟ್ಟಿದ್ದರು. ಇದರಲ್ಲಿ ಶಿಕ್ಷೆಯನ್ನು ಹೊಂದಿದವರ ಸಂಖ್ಯೆಯು ಶೇಕಡಾ ಹಿಂದಿನ ವರ್ಷಕ್ಕಿಂತ ಕಡಿಮೆ. ಕೆಳಕೋರ್ಟುಗಳಲ್ಲಿ ಸಾಕ್ಷಿಗಳನ್ನು ೩ ದಿನಗಳಿಗಿಂತ ಹೆಚ್ಚಾಗಿ ನಿಲ್ಲಿಸಿಕೊಳ್ಳುವ ಪದ್ಧತಿಯು ಬಹಳ ಅಸಮರ್ಪಕವಾಗಿದೆ. ಡಿ|| ಮ್ಯಾಜಿಸ್ಟ್ರೇಟರುಗಳು ಇದರ ಹಿಂದಣ ವರ್ಷದಲ್ಲಿ ೬೪ ವಿವಾದಗಳನ್ನು ವಿಚಾರಿಸಿದ್ದು ಈ ವರ್ಷದಲ್ಲಿ ೨೬ ವಿವಾದಗಳನ್ನು ವಿಚಾರಿಸಿರುವುದು ತೃಪ್ತಿಕರವಾಗಿಲ್ಲ. ಆನರು ಮ್ಯಾಜಿಸ್ಟ್ರೇಟರುಗಳು ಇದರ ಹಿಂದಣ ವರ್ಷದಲ್ಲಿ ೫೬೦ ವಿವಾದಗಳನ್ನು ಇತ್ಯರ್ಥಮಾಡಿದ್ದು ಈ ವರ್ಷದಲ್ಲಿ ೧೧೦೬ ವಿವಾದಗಳನ್ನು ಇತ್ಯರ್ಥಮಾಡಿರುವುದು ತೃಪ್ತಿಕರವಾಗಿದೆ. ಚೀಫ್ ಕೋರ್ಟು ಜಡ್ಜಿಗಳೂ, ಸೆಷನ್ಸ್ ಜಡ್ಜಿಗಳೂ, ಡಿ|| ಮ್ಯಾಜಿಸ್ಟ್ರೇಟರುಗಳೂ ಹೆಚ್ಚು ಕೋರ್ಟುಗಳನ್ನು ಪರೀಕ್ಷಿಸಿರುವುದು ಸಂತೋಷಕರವಾಗಿದೆ. ಎಂದು ಕ್ರಿಮಿನಲ್ ಕೋರ್ಟುಗಳ ವರದಿಯ ಮೇಲೆ ಸರ್ಕಾರದವರು ಅಭಿಪ್ರಾಯಪಟ್ಟಿರುತ್ತಾರೆ.

ಪತ್ರವ್ಯವಹಾರ.

ರಾಣೆಬೆನ್ನೂರು ತಾಲ್ಲೂಕು ಪೈಕಿ ಮೋಟೆಬೆನ್ನೂರು ಗ್ರಾಮಕ್ಕೆ ದಾವಣಗೇರಿ ಶ್ರೀ ಮೃತ್ಯುಂಜಯ ಸ್ವಾಮಿಗಳವರು ಶನಿವಾರ ತಾ॥ ೧೭-೪-೧೯೧೫ ದಿವಸ ಪ್ರಾತಃಕಾಲಕ್ಕೆ ೮ ಘಂಟೆಗೆ ದಯಮಾಡಿಸಿದ್ದು ಭಕ್ತಸಮೂಹವೆಲ್ಲವೂ ಆನಂದಭರಿತರಾಗಿ ಆ ದಿನವೇ ಮಧ್ಯಾಹ್ನ ೩ ಘಂಟೆಗೆ ಕೋಡಿ ಬಸವೇಶ ದೇವರ ಗುಡಿಯಲ್ಲಿ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನೆರವೇರಿಸಿದರು. ಶ್ರೀಗಳವರು ಜನರ ಚಿತ್ತಾಕರ್ಷಣವಾಗುವಂತೆ ವೀರಶೈವ ಸಮಾಜದ ಉನ್ನತಿಯ ವಿಷಯವಾಗಿ ೨ ತಾಸಿನ ವರೆಗೆ ಭಾಷಣವನ್ನು ಮಾಡಿದರು. ಮತ್ತು ಉನ್ನತಿಯ ಮೂಲಾಧಾರವಾದ ಹಿತೋಪದೇಶವೆಂಬ ಸಂಘವು ನಿಮ್ಮಲ್ಲಿ ಸ್ಥಾಪನೆಯಾಗಿ ಪ್ರತಿಸೋಮವಾರವೂ ನೀವುಗಳೆಲ್ಲರೂ ಸಭೆಗೆ ಸೇರಿ ಮತೋನ್ನತಿಗೆ ಮೂಲಾಧಾರವಾದ ವಿಷಯಗಳ ಬಗ್ಗೆ ಭಾಷಣಗಳನ್ನು ಮಾಡತಕ್ಕದೆಂದು ಶ್ರೀಗಳವರು ಅಪ್ಪಣೆಕೊಡಿಸಲು ಭಕ್ತರೆಲ್ಲರೂ ಆನಂದದಿಂದ ಕರತಾಡನಗೈದು ಒಪ್ಪಿಗೆಯನ್ನಿತ್ತರು. ಮೂವತ್ತು ಜನ ಸಭಿಕರು ಸೇರಿದ್ದು ಚನ್ನಬಸಪ್ಪ ಗುರಪ್ಪನವರು ಪ್ರೆಸಿಡೆಂಟರಾಗಿಯೂ ಗುಡ್ಡಪ್ಪ ಮೈಲಾರದ ಇವರು ಸೆಕ್ರಿಟರಿಯರಾಗಿಯೂ ಚುನಾಯಿಸಲ್ಪಟ್ಟರು. ನಂತರ ೧ ತಾಸಿನವರೆಗೆ ಸಂಗೀತ ಮೇಳದವರ ಇಂಪಾದ ಧ್ವನಿಯಲ್ಲಿ ಪ್ರಾರ್ಥನೆಯು ಮಾಡಲ್ಪಟ್ಟು ಸಭಾ ವಿಸರ್ಜನೆಯಾಯಿತು.

ಮಾನಂದವಾಡಿ ರೋಡು, ಅಪಾಯಸ್ಥಳ.

ಮೈಸೂರು ರಾಜಧಾನಿಯಿಂದ ಮಾನಂದವಾಡಿಗೆ ಹೋಗತಕ್ಕ ರಸ್ತೆಯಲ್ಲಿ ಪರಸೈಯ್ಯನ ಹುಂಡಿ ಹತ್ತಿರ ಗಾರೆ ಬಚ್ಚಲು ಸೇತುವೆ ಮತ್ತು ಎಣ್ಣೆಹೊಳೆ ಸೇತುವೆ ಮಂಡನಹಳ್ಳಿ ಕೆರೆ ಏರಿ ಈ ಸ್ಥಳಗಳಲ್ಲಿ ರಾತ್ರಿಕಾಲ ಪ್ರಯಾಣದ ಜನರುಗಳಿಗೆ ಸಮಯಾನುಸಾರ ಅಪಾಯನಡೆಯತಕ್ಕದಾಗಿರುತ್ತದೆ.

ತಾ॥ ೨೬-೩-೧೯೧೫ ರ ರಾತ್ರಿ ಒಬ್ಬ ದರ್ಜಿಯವನು ಗಾಡಿಯಲ್ಲಿ ನಿದ್ದೆಹೋಗಿ ಬರುತ್ತಾ ಮಂಡನಹಳ್ಳಿ ಕೆರೆ ಏರಿಯಲ್ಲಿ ಯಾವ ರೀತಿಯಿಂದಲೋ ಎತ್ತುಗಳು ಬೆದರಿ ಗಾಡಿಯು ಕೆಳಕ್ಕೆ ಮಗುಚಿಕೊಂಡಿತು.

ಜಗದೀಶನ ಕೃಪೆಯಿಂದ ಪ್ರಾಣಾಪಾಯವೇನೂ ಆಗಲಿಲ್ಲ. ಮೂಖ ಪ್ರಾಣಿಗಳಿಗೆ ಮಾತ್ರ ಕೊಂಚ ಪೆಟ್ಟು ತಗುಲಿದೆ. ಮೇಲೆಕಂಡ ಮೂರು ಸ್ಥಳದ ಎಡಬಲ ಪಕ್ಕಗಳಲ್ಲಿ ಕಟಕಟಿ ಕಟ್ಟಿಸಿಕೊಡಬೇಕೆಂತ ತಾ॥ ೬-೪-೧೯೧೫ ರ ಸ್ಟಾರ್ ಪತ್ರಿಕೆಯ ಮೂಲಕ ಸರ್ಕಾರಕ್ಕೆ ಪ್ರಾರ್ಥಿಸಿಕೊಂಡಿತ್ತು.

ಮೈಸೂರು ಸರ್ಕಾರಕ್ಕೆ ಮತ್ತೊಂದಾವೃತ್ತಿ ಪ್ರಾರ್ಥಿಸಿಕೊಳ್ಳುವುದೇನೆಂದರೆ— ಪರಸೈಯ್ಯನ ಹುಂಡಿ ಹತ್ತಿರವಿರುವ ಗಾರೆ ಬಚ್ಚಲು ಮತ್ತು ಎಣ್ಣೆಹೊಳೆ ಸೇತುವೆಗೆ ಕಟ್ಟಿಸಿರುವಂತೆಯೇ ಈ ಮಂಡನಹಳ್ಳಿ ಕೆರೆ ಏರಿಗೂ ಉಭಯ ಪಾರ್ಶ್ವಗಳಲ್ಲಿ ಕಟಕಟಿ ಕಟ್ಟಿಸಿಕೊಟ್ಟು ಪ್ರಯಾಣಿಕರ ಕ್ಷೇಮಲಾಭಗಳನ್ನು ಕಾಪಾಡಿಕೊಡಬೇಕೆಂದು ಕೋರುತ್ತೇನೆ.

ಆರ್. ಕುಮಾರಾರಾಧ್ಯ.

ವಿದ್ಯಾರ್ಥಿಗಳ ಸತ್ಕಾರ.

ಈಸಲ ಕಡೂರ ಸೆಂಟರಿಗೆ ಲೋವರ್ ಸೆಕೆಂಡರಿ ಪರೀಕ್ಷೆಗಾಗಿ ಬಂದಿದ್ದ ೨೯ ಜನ ವೀರಶೈವ ವಿದ್ಯಾರ್ಥಿಗಳಿಗೂ ಅವರ ಮಾಸ್ಟರು ಮೊದಲಾದವರಿಗೂ, ಡಿ॥ ಬೋರ್ಡ್, ಎಕನಾಮಿಕ್ ಕಾನ್ಫರೆನ್ಸಿನ ಮೆಂಬರರಾದ ಮ॥ ರಾ॥ ಉಬ್ರಾಣಿ ಮಠದ ಶಿವಲಿಂಗಯ್ಯನವರು ಪರೀಕ್ಷೆ ತೀರುವವರೆಗೂ ನಿತ್ಯದಲ್ಲೂ ಎರಡುವೇಳೆ ಭೋಜನವನ್ನೂ, ಬೆಳಗ್ಗೆ ಮತ್ತೂ ಮಧ್ಯಾಹ್ನಗಳಲ್ಲಿ ಫಲಾಹಾರವನ್ನೂ ಬಹಳ ಔದಾರ್ಯದಿಂದಲೂ ವಿಚಕ್ಷಣೆಯಿಂದಲೂ ಮಾಡಿಸಿದರು. ತಾ॥ ಅಮಲ್ದಾರರೂ, ಸ್ಕೂಲ್ ಹೆಡ್ಮಾಸ್ಟರೂ, ಸ್ಯಾನಿಟರಿ ಇನ್ಸ್ಪೆಕ್ಟರೂ ನಿತ್ಯದಲ್ಲೂ ಬಂದು ಭೋಜನದೇರ್ಪಾಟನ್ನು ನೋಡಿ ಸಂತೋಷಪಟ್ಟುಕೊಂಡು ದಯಮಾಡಿಸುತ್ತಿದ್ದರು. ಈ ವಿದ್ಯಾಭಿಮಾನಿಗಳಾದ ಮ॥ ಶಿವಲಿಂಗಪ್ಪಯ್ಯನವರು ಎಲ್ಲಾ ಮಠದ ವಿದ್ಯಾರ್ಥಿಗಳಿಗೂ ಸ್ಕೂಲಿನ ಉಪಾಧ್ಯಾಯರುಗಳಿಗೂ ಈ ಡಿನ ಸ್ಕೂಲ್ ಇಲಾಖಾಧಿಕಾರಿಗಳಿಗೂ ಒಂದು ವನವಿಹಾರೋತ್ಸವವನ್ನು ನಡೆಸಬೇಕೆಂದೆಣಿಸಿದ್ದರು. ಆದರೆ ಅವರ ಅಣ್ಣಂದಿರು ಮ॥ ರುದ್ರಪ್ಪಯ್ಯನವರು ಬಹಳ ದಿನಗಳಿಂದ ರೋಗಗ್ರಸ್ತರಾಗಿದ್ದು ತಾ॥ ೧೩ ರಲ್ಲಿ ಶಿವೈಕ್ಯರಾದುದರಿಂದ ಅವರ ಸಂಕಲ್ಪಕ್ಕೆ ಭಂಗಬಂದಿತೆಂದು ತಿಳುಹಲು ವಿಷಾದವಾಗುತ್ತದೆ. ವೀರಶೈವ ವಿದ್ಯಾರ್ಥಿಗಳೂ ಅವರ ಉಪಾಧ್ಯಾಯರೂ ಸಂಗಡಿಗರೂ ಮ॥ ಶಿವಲಿಂಗಯ್ಯನವರ ಸತ್ಕಾರಕ್ಕಾಗಿ ಅವರನ್ನು ಕೊಂಡಾಡಿ ದೇವರು ಅವರಿಗೆ ಇತೋಪ್ಯತಿಶಯವಾದ ಸಂಪತ್ತನ್ನು ಕೊಡಲೆಂದು ಭಗವಂತನನ್ನು ಪ್ರಾರ್ಥಿಸುತ್ತಾರೆ.

ಓರ್ವ ವೀರಶೈವ ವಿದ್ಯಾರ್ಥಿ.

ಈಗಿನ ಕಾಲದಲ್ಲಿ ಸಾಬೂನನ್ನು ಉಪಯೋಗಿಸುವ ಪಾಠಿಕೆಯು ಹಳ್ಳಿಗಳಲ್ಲೂ ಕೂಡ ಉಂಟಾಗಿದೆ. ಈ ಸಾಬೂನೆಂಬುವ ವಸ್ತುವು ಪ್ರಾಣಾಪಾಯಕರವಾದುದೆಂಬುದನ್ನು ಯಾರೂ ಕಾಣರು. ಇಬ್ಬರು ಹುಚ್ಚರು ಈ ಸಾಬೂನನ್ನು ತಿಂದುದರಿಂದ ಹೃದಯಕೋಶದಲ್ಲಿ ಶ್ವಾಸೋಚ್ಛ್ವಾಸವು ಕಟ್ಟಾಗಿ ಸ್ವಲ್ಪ ಹೊತ್ತಿನೊಳಗೇ ಸತ್ತುಹೋದುದನ್ನು ಒಬ್ಬ ಜರ್ಮನ್ ಡಾಕ್ಟರು ಗೊತ್ತುಮಾಡಿರುವನಂತೆ. ಮೃದುವಾಗಿಯೂ ನೋಡುವುದಕ್ಕೆ ಅಂದವಾಗಿಯೂ ಇರುವ ಈ ಸಾಬೂನು ಬಿಲ್ಲೆಯನ್ನು ಮಕ್ಕಳುಮರಿಗಳ ಕೈಗೆ ಸಿಕ್ಕದಂತೆ ಮಾಡಿಡುವುದು ಅವಶ್ಯಕ.

ನಿಜಾಮು ಇಲಾಖೆಯಲ್ಲಿ ವೀರಶೈವ ಜನರು ಇತರ ಜನರ ಊರ್ಜಿತಸ್ಥಿತಿಯನ್ನು ಕಂಡು ಎಚ್ಚರಿಕೆ ಹೊಂದದೇ ತಮ್ಮ ಗಾಢನಿದ್ರೆಯಲ್ಲಿ ಮುಳುಗಿ ವಿದ್ವತ್ತಿನ ಕಡೆಗೆ ಬಹಳೇ ಅಲಕ್ಷ್ಯಮಾಡಿರುವುದರಿಂದ ಇವರು ಪ್ರತಿಯೊಂದು ಕೆಲಸದಲ್ಲಿಯೂ ಹಿಂದೆ ಬಿದ್ದಿರುವರು. ಮತ್ತು ತಮ್ಮ ಪ್ರತಿಯೊಂದು ಕೆಲಸದಲ್ಲಿಯೂ ಎರಡನೆ ಜನರಮೇಲೆ ಅವಲಂಬಿಸಿರುವರು. ನೂರಕ್ಕೆ ಹತ್ತು ಜನರಾದರೂ ಉಚ್ಚ ಪ್ರತಿಯ ಶಿಕ್ಷಣದೊರೆತವರು ಸಿಗುವುದಿಲ್ಲ. ಹೀಗಾದರೆ ಮತವು ಊರ್ಜಿತಸ್ಥಿತಿಗೆ ಹೇಗೆ ಬರುವುದು? ಅಲ್ಲಲ್ಲಿ ಕೆಲ ಮಹನೀಯರು ಸಂಸ್ಕೃತಪಾಠಶಾಲೆಗಳನ್ನು ಸ್ಥಾಪಿಸಿರುವರು. ಇದರಿಂದ ವಿದ್ವತ್ತು ಹಬ್ಬಿ ನಮ್ಮ ವೀರಶೈವರು ಊರ್ಜಿತಸ್ಥಿತಿಗೆ ಬರುವರೆಂಬುದು ಅಶಕ್ಯ. ಏಕೆಂದರೆ— ರಾಜಭಾಷೆಗೆ ಎಷ್ಟು ಮಟ್ಟಿನ ಗೌರವವಿರುವುದೋ ಇತರ ಭಾಷೆಗಳಿಗೆ ಅಷ್ಟು ವರ್ಚಸ್ಸು ಬರಲಾರದು. ಸಂಸ್ಕೃತದಲ್ಲಿ ಎಷ್ಟು ಪಂಡಿತರಾದಾಗ್ಯೂ ಭಿಕ್ಷಬೇಡದ ವಿನಾ ಅವರ ಉದರಪೋಷಣೆಯಾಗುವುದು ದುರ್ಲಭ. ಇಂಗ್ಲೀಷಿನ ಸಂಗಡ ಸಂಸ್ಕೃತವನ್ನೂ ತೆಗೆದುಕೊಂಡರೆ ಎರಡು ಭಾಷಾಜ್ಞಾನವಾಗುವುದು. ಈ ಪ್ರಕಾರ ಪಾಸಾದ ಜನರಿಗೆ ಈಗಿನ ಕಾಲಕ್ಕೆ ಬಹಳೇ ಮರ್ಯಾದೆ ದೊರಕವುದು. ಇಲ್ಲಿಯ ಜನರಿಗೆ ರಾಜಭಾಷೆಯೆಂದರೇನು? ಮತ್ತು ಅದರ ಮಹತ್ವವೆಂಥಾದ್ದು? ಎಂಬ ಜ್ಞಾನವೇ ಇಲ್ಲಾ. ಈ ಸದರಿ ವಿಷಯಗಳನ್ನು ಕುರಿತು ವಿಚಾರಮಾಡಿ ನಮ್ಮ ಮತಹಿತೈಷಿಗಳಾದ ಶ್ರೀ ನಾಗಭೂಷಣಸ್ವಾಮಿ ಸುರಪೂರ, ಶ್ರೀ ಚನಮಲ್ಲಪ್ಪ ಸ್ವಾಮಿ ಪರಶಿಮಠ ಮತ್ತು ವೇ॥ ನಿರಂಜನಶಾಸ್ತ್ರಿ) ಈ ಮೂವರೂ ಕೂಡಿ ಕಲಬುರ್ಗ ಮಠದಲ್ಲಿ ಇಂಗ್ಲೀಷ ಅಭ್ಯಾಸಮಾಡತಕ್ಕ ಅನಾಥ ವೀರಶೈವ ವಿದ್ಯಾರ್ಥಿಗಳ ಸಲುವಾಗಿ ಚೈತ್ರ ಶು॥ ೧ ದಿಂದ ಬೋರ್ಡಿಂಗ ಸ್ಥಾಪಿಸುವವರಾಗಿದ್ದರಲ್ಲದೆ ಈ ಬೋರ್ಡಿಂಗಿನ ಖರ್ಚನ್ನು ಸದರೀ ಮಹನೀಯರೇ ನಡೆಸುವೆವು ಎಂದು ವಚನಕೊಟ್ಟಿದ್ದರೆಂದು ತಿಳುಹಲು ಆನಂದವಾಗುತ್ತದೆ.

ಶರಣಬಸಪ್ಪ ಅಪ್ಪ, ಸಾಧುಸಂಸ್ಥಾನ

ದಾವಣಗೆರೆ.

ಮೈಸೂರಲ್ಲಿ ಪ್ರಸಿದ್ಧಿ ಪಡೆದ ಜಯರಾಯಾಚಾರ್ಯ ಕೊಪ್ಪಳ, ಪ್ರಚಾರಕ, ದಿ ಪೈಸಾ ಫಂಡ್, ಕಮಿಟಿ ಹೆಡ್ ಆಫೀಸ್, ಮೈಸೂರು. ಇವರು ಇಲ್ಲಿಗೆ ಬಂದಿದ್ದು ಅನೇಕ ವ್ಯಾಖ್ಯಾನಗಳನ್ನು ಕೊಡುತ್ತಿದ್ದಾರೆ. ಪೈಸಾಫಂಡಿನ ಹಣವನ್ನು ಕೈಗಾರಿಕೆಗೂ ಪರದೇಶಕ್ಕೆ ಹೋಗತಕ್ಕ ವಿದ್ಯಾರ್ಥಿಗಳ ಅನುಕೂಲಕ್ಕೂ ಕರ್ನಾಟಕ ದೇಶದಲ್ಲಿ ಭಾಷೆ ವಿದ್ಯೆ ಜ್ಞಾನಗಳನ್ನು ಹೆಚ್ಚಿಸುವುದಕ್ಕೂ ಅನೇಕ ಉಪನ್ಯಾಸಕರನ್ನು ಕಲಿಸಿ ಗ್ರಾಮಾಂತರಗಳಿಗೆ ಕಳುಹಿಸಬೇಕೆಂಬುದು ಇವರ ಉದ್ದೇಶವಾಗಿದೆ. ದಾವಣಗೆರೆಯಲ್ಲಿ ದೊಡ್ಡ ದೊಡ್ಡ ವ್ಯಾಪಾರಸ್ಥರೂ ಸರಕಾರಿ ನೌಕರರೂ ಸ್ಕೂಲ್‌ಮಾಸ್ಟರುಗಳೂ ಇದಕ್ಕೆ ತುಂಬಾ ಶ್ರದ್ಧೆಯುಳ್ಳವರಾಗಿ ಕೆಲಸಮಾಡಬೇಕೆಂದು ನಿರ್ಧಾರಮಾಡಿದ್ದಾರೆ. ೧೦-೧೫ ಜನ ಸದ್ಗೃಹಸ್ಥರು ಲೆಕ್ಚರರಾಗಿ ಡಿಸ್ಟ್ರಿಕ್ಟ್‌ಗಳಿಗೆ ಹೋಗಬೇಕೆಂದು ನಿರ್ಣಯಿಸಿದ್ದಾರೆ. ಅದರಲ್ಲಿ ಎಂ. ಕೆ. ರಾಘವೇಂದ್ರರಾವ ದತ್ತಾತ್ರಯರಾವ ನಾಡಗೀರ ಹರಿಹರ, ಮಂಜಪ್ಪಾ ಹರ್ಡೀಕರ ಎಡಿಟರ ಧನುರ್ಧಾರಿ, ಮತ್ತು ವಿರೂಪಾಕ್ಷಶಾಸ್ತ್ರಿ ಬಿ. ಎ., ಪಂಚಾಕ್ಷರಯ್ಯ ಕೊಣ್ಣೂರ-ಮುಂತಾದವರು ಲೆಕ್ಚರರಾಗಿ ಆರಿಸಲ್ಪಟ್ಟಿದ್ದಾರೆ. ಎಲ್ಲರೂ ಹೀಗೆ ಶ್ರದ್ಧೆಯಿಂದ ಕೆಲಸಮಾಡಿದರೆ ನಮ್ಮ ಕನ್ನಡಿಗರ ಅಭ್ಯುದಯವಾಗುವುದು. ಅದರಲ್ಲಿ ಜಯರಾಯಾಚಾರ್ಯರಂಥ ಸ್ವಯಂ ಸೇವಕರು ತಮ್ಮ ಸ್ವಾರ್ಥವನ್ನು ಬಿಟ್ಟು ಮನೆ ಬಾಗಿಲುಗಳನ್ನು ತ್ಯಜಿಸಿ ದೇಶೋನ್ನತಿಗಾಗಿ ಅನೇಕ ಗ್ರಾಮಗಳಲ್ಲಿ ತಿರಿಗಿ ಲೆಕ್ಚರ್ ಹೇಳಿ ಅಜ್ಞಜನರನ್ನು ಎಚ್ಚರಗೊಳಿಸುವುದರಿಂದ ಅವರಿಗೆ ನಾವು ತುಂಬಾ ಕೃತಜ್ಞತೆಯನ್ನು ತೋರಿಸಬೇಕು. ಅವರ ಸಂಗಡ ಬಂದಿದ್ದ ಶಿಷ್ಯರಲ್ಲಿ ೮-೯ ವರ್ಷದ ಹುಡುಗರೂ ಚಿಕ್ಕಚಿಕ್ಕ ಬಾಲಿಕೆಯರೂ ಕೂಡ ಅಸ್ಖಲಿತವಾಗಿಯೂ, ಮಧುರವಾಗಿಯೂ, ಜನರಿಗೆ ಆನಂದವಾಗುವಂತೆಯೂ ಉಪನ್ಯಾಸಮಾಡುತ್ತಾರೆ. ಇಂಥ ಸಾಹಸಿಗಳಾದ ಆಚಾರ್ಯರಿಗೆ ಕನ್ನಡಪತ್ರಿಕಾಕಾರರು ತುಂಬಾ ಸಹಾಯ ಮಾಡಿದರೆ ನಿಶ್ಚಯವಾಗಿ ಅವರ ಉದ್ದೇಶವು ನೆರವೇರುವುದು.

ಒಬ್ಬ ಅಭಿಮಾನಿ.

ಬ್ರಿಟಿಷ್ ಕೊಲಂಬಿಯಾದ ರೇವೆ ಪಟ್ಟಣಗಳಿಗೆ ಏಷ್ಯಾಖಂಡದ ಯಾವ ಭಾಗದಿಂದಲೂ ಕೈಗಾರಿಕೆಯ ಕೌಶಲ್ಯವುಳ್ಳ ಜನರಾರೂ ಬರಕೂಡದೆಂದು ಕೆನ್ನಡಾ ಪ್ರಭುತ್ವದವರು ಆಜ್ಞೆ ಮಾಡಿದ್ದಾರೆ. ಇದು ಬರುವ ಸೆಪ್ಟಂಬರ್ ತಿಂಗಳ ಕೊನೆಯವರೆಗೆ ವ್ಯವಹಾರದಲ್ಲಿರುವುದಂತೆ.

ಪ್ರಪಂಚದಲ್ಲಿ ವೃತ್ತಪತ್ರಿಕೆಗಳಿಗೆ ದೇಶದ ಮೇಲಣ ವಿಶೇಷ ವಾರ್ತೆಗಳನ್ನು ತಂತಿಯದ್ವಾರಾ ತಿಳುಹುಪಡಿಸುವ ಸಂಘಕ್ಕೆ ಮೂಲಸ್ಥಾಪಕರಾದ ರೂಟರ್‌ರವರು ತಮ್ಮ ಪತ್ನಿಯು ಮೃತಳಾದ ಕೂಡಲೇ ತಾವೂ ಆತ್ಮಹತ್ಯೆಯನ್ನು ಮಾಡಿಕೊಂಡು ತಮ್ಮ ೬೦ ನೆಯ ವಯಸ್ಸಿನಲ್ಲಿ ಕ್ರಿಸ್ತಲೋಕವನ್ನೈದಿದರು. ಲಂಡನ್ ಪಟ್ಟಣದ ಕಿಂಗ್ಸ್‌ಉಡ್ ಸ್ಮಶಾನದಲ್ಲಿ ದಂಪತಿಗಳಿಬ್ಬರ ಶವವೂ ಒಂದೇ ಹಳ್ಳದಲ್ಲಿ ನಿಕ್ಷೇಪಿಸಲ್ಪಟ್ಟಿತು. ಹೀಗೆ ಮಾಡಬೇಕೆಂದು ರೂಟರ್‌ರವರು ತಮ್ಮ ಅಂತ್ಯ ಲೇಖನದಲ್ಲಿ ಬರೆದಿಟ್ಟಿದ್ದರು.

ನರಸಿಂಹರಾಜಪುರ.

ಈ ಟವನ್ನಿಗೆ ನಮ್ಮ ಶ್ರೀಮನ್ ಯುವರಾಜರವರ ಸ್ವಾರಿಯು ನಮ್ಮ ಸಂಸ್ಥಾನದ ದಿವಾನಸಾಹೇಬರವರೊಂದಿಗೆ ತಾ॥ ೧೯-೧-೧೯೧೫ ರಲ್ಲು ದಯಮಾಡಿಸಿದಾಗ್ಗೆ ಈ ಸಬ್ ತಾಲ್ಲೂಕು ಪ್ರಜೆಗಳು ಪ್ರಾರ್ಥಿಸಿಕೊಂಡ ಅಹವಾಲುಗಳಲ್ಲಿ ಈ ಟವನ್ನಿಗೆ "ಎಡೇಹಳ್ಳಿ" ಎಂಬ ನಾಮಧೇಯದಿಂದ ಈ ಊರಿನ ಅಭಿವೃದ್ಧಿಗೆ ಕಂಟಕ ಉಂಟಾಗಿದೆ ಎಂದೂ ಶ್ರೀಮನ್ ಯುವರಾಜರವರ ನಾಮವೇ ಅಂಕಿತವಾಗಿ ಉಳ್ಳ "ನರಸಿಂಹರಾಜಪುರ" ವೆಂಬ ಹೆಸರನ್ನು ಈ ಸಬ್ ತಾಲ್ಲೂಕು ಮತ್ತು ಟವನ್ನಿಗೆ ದಯಪಾಲಿಸಿ ತನ್ಮೂಲಕ ಪ್ರಜೆಗಳಿಗೆ ಸಂತೋಷವನ್ನುಂಟುಮಾಡಿ ಈ ಟವರ್ನ ಅಭಿವೃದ್ಧಿಗೆ ತರಬೇಕೆಂದೂ ಕೇಳಿಕೊಂಡಿದ್ದರು. ಶ್ರೀಮನ್ ಯುವರಾಜರವರು ತಾ॥ ೨೦-೧-೧೯೧೫ ನೇ ಸಾಯಂಕಾಲ ನಮ್ಮ ದಿವಾನ್ ಸಾಹೇಬರವರೊಂದಿಗೆ ಈ ಟವನನ್ನು ಆದ್ಯಂತವಾಗಿ ಖುದ್ದಾಗಿ ಪರಾಮರಿಸಿದ್ದರು.

ಪ್ರಜೆಗಳು ಕೇಳಿಕೊಂಡ ಅಹವಾಲು ಯುಕ್ತವಾದುದೆಂದು ನಮ್ಮ ಶ್ರೀಮನ್ ಯುವರಾಜರವರೂ ನಮ್ಮ ದಿವಾನ್ ಸಾಹೇಬರವರೂ ಯೋಚಿಸಿ ಅದಕ್ಕೆ ಅನುಸಾರವಾದ ಸಲಹೆಗಳನ್ನು ನಮ್ಮ ಶ್ರೀಮನ್ ಮಹಾರಾಜಾ ರಾಜಾಸಾಹೇಬ್ ಬಹದ್ದೂರರವರ ಸರ್ಕಾರಕ್ಕೆ ಕೊಟ್ಟದ್ದರಿಂದ ನಮ್ಮ ಸರ್ಕಾರದವರು ತಮ್ಮ ಘನವಾದ ಚಿತ್ತದಲ್ಲಿ ತಂದು ಈ ಟವನ್ನಿಗೆ "ನರಸಿಂಹರಾಜಪುರ" ಎಂಬ ನಾಮಧೇಯವನ್ನು ದಯಪಾಲಿಸಿದ್ದು, ಪ್ರಜೆಗಳಿಗೆ ಬಹಳ ಆನಂದವನ್ನುಂಟುಮಾಡಿದೆ. ಈ ನಾಮಧೇಯವನ್ನು ದಯಪಾಲಿಸಿದ ಸಂತೋಷಕ್ಕಾಗಿ ಈ ಟವರ್ನ ನಿವಾಸಿಗಳೆಲ್ಲರೂ ಈ ಟವರ್ನ ಮಧ್ಯದಲ್ಲಿ ನಮ್ಮ ಶ್ರೀಮದಿಂಡಿಯಾ ಚಕ್ರವರ್ತಿಗಳಾದ ೫ ನೇ ಜಾರ್ಜ್ ಮಹಾ ಪ್ರಭುಗಳವರ ಕಿರೀಟಧಾರಣಾ ಮಹೋತ್ಸವ ಜ್ಞಾಪಕಾರ್ಥವಾಗಿ ಮ॥ ಇಂಗಳಗೊಂದಿ ನಿ॥ ಶಾಂತಪ್ಪಶೆಟ್ಟರು ವೀರಪ್ಪಶೆಟ್ಟರು ಇವರುಗಳಿಂದ ನೂತನವಾಗಿ ನಿರ್ಮಿತವಾದ ನಮ್ಮ ಶ್ರೀಮನ್ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಬಹದೂರ್. ಜಿ.ಸಿ ಐ.ಇ. ಯವರಿಂದಲೇ ಓಪನ್‌ಮಾಡಲ್ಪಟ್ಟ.... ನರಸಿಂಹರಾಜ ರೀಡಿಂಗ್ ರೂಮಿನಲ್ಲಿ ತಾ॥ ೨೪-೪-೧೫ ರಲ್ಲಿ ಸಭೆ ಸೇರಿದ್ದರು. ಮ॥ ಡೆ॥ ಅಮಲ್ದಾರ್ ಅಹೋಬಲ ಶಾಸ್ತ್ರಿಗಳವರು ಪ್ರೆಸಿಡೆಂಟರಾಗಿದ್ದರು. ಪ್ರಜೆಗಳೆಲ್ಲರೂ ಪ್ರೆಸಿಡೆಂಟರವರಿಂದ ಈ ಟವರ್ನಗೆ ನಮ್ಮ ಶ್ರೀಮನ್ ಮಹಾರಾಜಾ ಸರ್ಕಾರದವರು ದಯಪಾಲಿಸಿದ "ನರಸಿಂಹರಾಜಪುರ" ವೆಂಬ ಹೆಸರನ್ನು ಕೇಳಿ ತಿಳಿದುಕೊಂಡು ಸಂತೋಷಪಟ್ಟರು. ಅನಂತರ ನಮ್ಮ ಶ್ರೀಮನ್ ಮಹಾರಾಜಾ ರಾಜಾಸಾಹೇಬ್ ಶ್ರೀಕೃಷ್ಣರಾಜ ವಡೆಯರ್ ಬಹದೂರ್ ಜಿ.ಸಿ. ಎಸ್. ಐ. ಯವರಿಗೂ ಶ್ರೀಮನ್ ಯುವರಾಜ ಕಂಠೀರವ ನರಸಿಂಹರಾಜ ವಡೆಯರ್ ಬಹದೂರ್ ಜಿ.ಸಿ.ಐ.ಇ. ಯವರಿಗೂ ಮತ್ತು ಮಂತ್ರಿಶ್ರೇಷ್ಠರಾದ ಮ॥ ಮೋಕ್ಷಗುಂಡಂ ವಿಶ್ವೇಶ್ವರಯ್ಯ ಬಿ.ಎ., ಎಂ.ಐ.ಸಿ.ಇ., ಸಿ.ಐ.ಇ. ಯವರಿಗೂ ಇವರುಗಳ ಸಪರಿವಾರಕ್ಕೂ ಆಯುರಾರೋಗ್ಯಾದಿ ಐಶ್ವರ್ಯ ಸಂಪತ್ತುಗಳನ್ನು ದಯಪಾಲಿಸಲೆಂದು ಭಗವಂತನನ್ನು ಪ್ರಾರ್ಥಿಸಿ ಸಂತೋಷಧ್ವನಿಯಿಂದ ಉದ್ಘೋಷಿಸಿದರು. ಸೇರಿದ ಸಭಿಕರೆಲ್ಲರಿಗೂ ಗಂಧ ಪುಷ್ಪ ತಾಂಬೂಲಗಳು ಹಂಚಲ್ಪಟ್ಟವು. ಸಭಾಧ್ಯಕ್ಷರಿಗೆ ವಂದನೆಗಳು ಸಮರ್ಪಿಸಿದ ಮೇಲೆ ಸಭೆ ಬರಖಾಸ್ತಾಯಿತು.

ಒಬ್ಬ ಸ್ಥಳಿಕ.

ಶ್ರೀಮದ್ರಂಭಾಪುರೀ ವೀರಸಿಂಹಾಸನದ ಸಮಸ್ತಬಿರುದಾನ್ವಿತ ಶ್ರೀಮಜ್ಜಗದ್ಗುರು ಪಂಚಾಕ್ಷರೀರಾಜದೇಶಿಕೇಂದ್ರ ಮಹಾಸ್ವಾಮಿಗಳವರಸನ್ನಿಧಾನದಿಂದ

ಶಿವಾಯಿಬಾಬು ನಂಬರು ೩೩.

ಶಕೆ ೧೮೩೭ ನೆಯ ರಾಕ್ಷಸಸಂ॥ ರದ ಚೈತ್ರಬಹುಳ ೮ ಮಿತಿಯಲ್ಲು ಮೈಸೂರುಸೀಮೆಯ ಸಮಸ್ತ ತಾಲ್ಲೂಕುಗಳಲ್ಲಿರತಕ್ಕ ಪಟ್ಟ, ಚರಂತರು, ಮಠಸ್ತರು, ಪ್ಯಾಟೆಮನೆ ಸೆಟ್ಟಿ, ಯಜಮಾನರು, ಹರದೇಗ್ರಾಮಗಳ ಗೌಡರು, ಬುದ್ಧಿವಂತರು ಇನ್ನೂ ಮುಂತಾದ ವೀರಶೈವ ಭಕ್ತಮಾಹೇಶ್ವರರಿಗೆ ಬರೆಸಿದಾಶೀರ್ವಾದ:- ಈ ಮೊದಲು ತಾ॥ ...... ರಲ್ಲಿ ಸಾದರಾಗಿರುವ ಶಿವಾಯಿಬಾಬು ನಂಬರು ...... ನೆ ನಿರೂಪದ ಪ್ರಕಾರ ಬೆಂಗಳೂರಲ್ಲಿ ಸ್ಥಾಪಿತವಾಗಿರುವ ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡಿಗೆ ತಮ್ಮತಮ್ಮ ಗೃಹಗಳಲ್ಲಿ ನಡೆಯುವ ಶುಭಶೋಭನಾದಿ ಕಾರ್ಯಗಳಲ್ಲಿ ಸ್ವಶಕ್ತ್ಯಾನುಸಾರ ದ್ರವ್ಯವನ್ನ ತೆಗೆಸಿ ಫಂಡ್ ಸೆಕ್ರಿಟರಿಗಳ ವಶಕ್ಕೆ ಕಳುಹಿಸುವಂತೆ ಸಾದರಾಗಿರುವ ನಿರೂಪದಪ್ರಕಾರ ಈಗಲೂ ಪ್ರತಿಗ್ರಾಮದಲ್ಲಿಯೂ ಲಗ್ನ ಮೊದಲಾದ ಕಾರ್ಯಗಳಲ್ಲಿ ಫಂಡಿಗೆ ದ್ರವ್ಯವನ್ನ ತೆಗೆದು ಮೇಲ್ಕಂಡ ಮೇರೆ ಖಂಡಿತವಾಗಿಯೂ ರವಾನಿಸುತ್ತಾ ಬರುವುದು. ಅಲ್ಲದೆ ಕೈ. ಯಜಮಾನ ವೀರಸಂಗಪ್ಪನವರ ಅಗ್ರತಾಂಬೂಲವನ್ನು ಮೇಲ್ಕಂಡ ಕಾರ್ಯಗಳಲ್ಲಿ ತೆಗೆದು ಅವರ ಸಂತತಿಯವರಾದ ಮೈ. ವಿರೂಪಾಕ್ಷಯ್ಯನವರಲ್ಲಿಗೆ ರವಾನಿಸುತ್ತಾ ಬರುವದು. ಮೇಲ್ಕಂಡಮೇರೆ ನಡೆಯದೆ ತಪ್ಪಿದಲ್ಲಿ ಈ ವಿಚಾರದಲ್ಲಿ ತಾಲ್ಲೂಕು ಇಲಾಖಾದಾರರು ಕ್ರಮವರಿತು ರಿಕಾರ್ಡುಮಾಡಿ ರವಾನಿಸುತ್ತಾ ಬರುವುದರಲ್ಲಿ ಗಮನಕೊಡಲಾದೀತಾಗಿ ಬಾಹುಳ್ಯವಾಗಿ ಅಪ್ಪಣೆಕೊಡಿರುವುದಾವುದಿದ್ದೀತು ? ಬತಾರೀಖು ೨೬ನೇ ಮಾಹೆ ಏಪ್ರಿಲ್ ಸನ ೧೯೧೫ನೇ ಇಸವಿ ಮೊಕ್ಕಾಂ ದರ್ಜಾಗ ಸಂಸ್ಥಾನ ಬಾಳೆಹೊನ್ನೂರು.

"ಮಾರಾಟಕ್ಕೆ ಸಿದ್ಧವಾದ ಪುಸ್ತಕವು"

ಇಂಗ್ಲೀಷಶಿಕ್ಷಕ—ಈ ಪುಸ್ತಕದ ಅಭ್ಯಾಸದಿಂದ ಕನ್ನಡಿಗರಿಗೆ ನಾಲ್ಕಾರು ತಿಂಗಳಲ್ಲಿ. ಶಿಕ್ಷಕನ ಸಹಾಯವಿಲ್ಲದೆ ಸ್ವತಃ ಇಂಗ್ಲೀಷಮಾತು ಕಲಿಯಲಿಕ್ಕೆ ಬರುವದು. ಬೆಲೆ ೧೦ ಆಣೆ ವಿ. ಪಿ. ಬೇರೆ ಒಮ್ಮೆಲೆ ೧೦ ಪ್ರತಿಗಳನ್ನು ತರಿಸಿಕೊಂಡರೆ, ಒಂದು ಪ್ರತಿ ಕಮಿಷನ್ ದೊರೆಯುವದು. ಪ್ರತಿಗಳು ತೀರ ಸ್ವಲ್ಪ ಉಳಿದಿವೆ. ಗ್ರಾಹಕರು ತೀವ್ರ ತರಿಸಿಕೊಳ್ಳತಕ್ಕದ್ದು.

ವಿಳಾಸ--ನ. ಸು. ಬಾಗಲ, ಬನ್ನಿಕೊಪ್ಪ, ಪೋ. ಮುಂಡರಿಗಿ ಜಿಲ್ಲಾ-ಧಾರವಾಡ.

ನೋಟೀಸ್.

ರಾವ್‌ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಧರ್ಮ ಸತ್ರದಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನಕ್ಕೆ ಏರ್ಪಾಟಾಗಿದೆ. ವಿದ್ಯಾರ್ಥಿಗಳು ಮೈಸೂರ್ ದೇಶೀಯರಾಗಿಯೂ, ವೀರಶೈವರಾಗಿಯೂ, ಇಂಗ್ಲೀಷ್ ಲೋವರ್‌ಸೆಕೆಂಡರಿಗೆ ಕಡಿಮೆ ಯಿಲ್ಲದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿಯೂ ಇರಬೇಕು. ಮತ್ತು ಪ್ರೌಢವಿದ್ಯಾಭ್ಯಾಸ ಮಾಡಲು ಚೈತನ್ಯವಿಲ್ಲದವರಿಗೆ ಮಾತ್ರ ಅವಕಾಶ ದೊರಿಯುವುದು. ಚೈತನ್ಯವಿಲ್ಲವೆಂಬುದಕ್ಕೆ ಸ್ಥಳೀಯ ಪ್ರಮುಖರಿಂದ ಸರ್ಟಿಫಿಕೇಟ್ ತರಬೇಕಲ್ಲದೆ, ತಾವು ಹಿಂದೆ ಓದಿದ ಸ್ಕೂಲ್ ಯಾ ಕಾಲೇಜ್ ಮುಖ್ಯೋಪಾಧ್ಯಾಯರಿಂದಲೂ ಸಹ ತಮ್ಮ ಯೋಗ್ಯತಾವಿಚಾರವಾಗಿ ಸರ್ಟಿಫಿಕೇಟ್ ತರತಕ್ಕದ್ದು. ಗತವರ್ಷದಲ್ಲಿ ಸತ್ರದಲ್ಲಿದ್ದ ವಿದ್ಯಾರ್ಥಿಗಳ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರಿಗೆ ಮೊದಲು ಅವಕಾಶಕೊಟ್ಟು ನಂತರ ಇತರರಿಗೆ ಅವರ ಯೋಗ್ಯತಾ ಪ್ರಕಾರ ಸಾಧ್ಯವಾದಷ್ಟು ಕ್ಲುಪ್ತವಾಗಿ ಸ್ಥಳದೊರಿಯುತ್ತೆ. ಇಚ್ಛೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ೧೯೧೫ನೇ ಮೇ ತಿಂಗಳ ಆಖೈರ್‌ಒಳಗಾಗಿ ಅಪ್ಲಿಕೇಷನ್ ಹಾಕತಕ್ಕದ್ದು.

(Sd) ಕಂ. ಶಿವಪ್ಪ ಆನರರಿ ಸೆಕ್ರೆಟರಿ
ರಾವ್‌ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ
ತೋಟದಪ್ಪನವರ ಸತ್ರ ಬೆಂಗಳೂರು ಸಿಟಿ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕಾರ್ಯ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿ ಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೪—೦ ರೂ. ಆಗುತ್ತದೆ. ನೂರಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೦—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರದ ಬಣ್ಣದಿಂದ ಬಿಳಿ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೧—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೦—೦; ಹಳದೀ ಗ್ಲೇಜ್‌ಕಾಗದದಮೇಲೆ ಮೊದಲನೇ ೧೦೦ ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಸಾದಾ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧—೬—೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦—೬—೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧—೦—೦ ರೂ. ನ್ನು ಹೆಚ್ಚಾಗಿ ಕೊಡಬೇಕು. ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಕಾರ್ಯಪ್ರೆಸ್, ಮೈಸೂರ್.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು

82

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕದನಗಳ ಪಟಗಳೂ ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ. ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ ೨ ಆಣೆ; ವಿ. ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ:—ದಿ ಜನರಲ್ ಏಜೆನ್ಸಿ. ಮೈಸೂರು.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

18

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪ್ರದ್ರೇಕವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲಿಯವರೆಗೆ ಬೇಕಾಗುವದು. ಕಿಮ್ಮತ್ತು ೪೦ ತೋಲೆಗೆ ರೂ ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ

ಬಿಸಿಲುಕಾಲಕ್ಕೆ 29

ಬಿಲ್ಲಿಗಾಜೀಕಂ

ಅಮೃತಾಮಲಕತೈಲ:—ವಿಧವಿಧವಾದ ತಲೆನೋವು, ಶರೀರವು ಬೆಂಕಿಯಂತಿರುವುದು, ತಲೆತಿರಗು, ಕಣ್ಣುರಿ, ಕಣ್ಣು ಕೆಂಪು, ಕಣ್ಣು ಮಂಜು, ಕಣ್ಣಿನಲ್ಲಿ ನೀರು ಸುರಿಯುವುದು, ರಾತ್ರಿ ನಿದ್ರೆಬಾರದಿರುವುದು ಇವುಗಳನ್ನು ೧—೨ ಅಭ್ಯಂಗನದಿಂದಲೇ ಗುಣಮಾಡಿ ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ. ಬಿಸಿಲುಕಾಲಕ್ಕೆ ಇದು ಅಮೃತವೇಸರಿ. ಎಂಟು ಅಭ್ಯಂಗನಕ್ಕೆ ಆಗುವ ತೈಲ ೦-೮-೦. ೧ ದರ್ಜ ೫-೦-೦.

ಆಮೋದಿನಿ:—ಅಮೋಘವಾದ ಸುವಾಸನೆಯಿಂದ ಕೂಡಿದ ಈ ಮಾತ್ರೆಗಳು ತಾಂಬೂಲವನ್ನು ರಂಜಿಸಿ ಬಾಯಾರಿಕೆಯನ್ನು ತಕ್ಷಣ ನಿಲ್ಲಿಸಿ ಆಯಾಸವನ್ನು ಪರಿಹರಿಸಿ ಕಂಠನಾಳವನ್ನು ಸರಿಪಡಿಸಿ ಕೆಮ್ಮು, ದಮ್ಮು, ಉಬ್ಬಸ, ಮಂಧಗಳನ್ನು ಗುಣಮಾಡಿ ಆರೋಗ್ಯವನ್ನು ಕಾಪಾಡುವವರಲ್ಲಿ ಶ್ರೇಷ್ಠವಾದುದು. ಸಂಗೀತಗಾರರಿಗೂ, ವಿದ್ಯಾರ್ಥಿಗಳಿಗೂ, ಪ್ರಯಾಣಿಕರಿಗೂ ಅಮೂಲ್ಯವಾದುದು. ೧೫೦ ಮಾತ್ರೆ ೦—೪—೦. ೫ ಕ್ಕೆ ಒಂದು ಹೆಚ್ಚು.

ಚಿಂತಾಮಲಕರಸಾಯನ:—ತಲೆತಿರಗು, ಕಣ್ಣು ಕಗ್ಗತ್ತಲೆ, ಹಸಿವೇ ಇಲ್ಲದಿರುವುದು, ಆಹಾರದಲ್ಲಿ ಅರುಚಿ, ವಾಕರಿಕೆ, ವಾಂತಿ, ಹುಳಿ, ಖಾರ, ಅಥವಾ ಸಿಹಿಯಾದ ತೇಗು, ಹೊಟ್ಟೆಯುಬ್ಬರ, ಹೊಟ್ಟೆನೋವು, ಕಣ್ಣು ಅಥವಾ ಮೈ ಹಳದೀಬಣ್ಣ, ನಿಶ್ಶಕ್ತಿ, ಹಳೇಜ್ವರ, ಎದೆಬಡಿಯುವಿಕೆ, ಪಾಂಡು, ಕಾಮಾಲೆ, ಮೂರ್ಛೆ ಇವುಗಳಲ್ಲಿ ಯಾವುದಿದ್ದರೂ ಖಾತರಿ ಗುಣವಾಗಿ ದಿನಕ್ಕೊಂದುವೇಳೆ ಸಲೀಸಾಗಿ ಕಾಲಪ್ರವರ್ತಿಯಾಗುತ್ತದೆ. ೧೫ ದಿನಕ್ಕೆ ಆಗುವ ಔಷಧ, ಬೆಲೆ ೦-೧೨-೦. ೧ ದರ್ಜ ಡಬ್ಬಿಗಳಿಗೆ ೭-೮-೦.

ಪ್ರತಿಔಷಧಕ್ಕೂ ಟಪಾಲ್ ಮತ್ತು ಪ್ಯಾಕಿಂಗ್ ಛಾರ್ಜ ಪ್ರತ್ಯೇಕ.

ವಿಳಾಸ:—ಬಿ. ವಿ. ಪಂಡಿತ್, ಸದ್ವೈದ್ಯಶಾಲಾ,
ನಂಜನಗೂಡು, ಮೈಸೂರು ಡಿ॥

ಶ್ರೀಜಗದ್ಗುರು

ಚಿತ್ರದುರ್ಗದ ಮಹಾಸ್ವಾಮಿಗಳ ಅತ್ಯಂತ ಸುಂದರವಾಗಿ ಕೈಯಿಂದ ಬಣ್ಣ ಕೊಟ್ಟಿರುವ ಫೋಟೋ ೧ ಕ್ಕೆ ಕ್ರಯ ೧೨ ಆಣೆ; ಶ್ರೀಗಳ ಸೊಲ್ಲಾಪುರದ ಪಂಚಕಲಶ ಯುಕ್ತ ಅಡ್ಡಪಲ್ಲಕ್ಕಿ ಉತ್ಸವದ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ ಕೊಲಾಪುರದಲ್ಲಿ ವ್ಯಾಸನತೋಳು ಸಹಿತ ಆದ ಸಮಾರಂಭ ಫೋಟೋ ೧ ಕ್ಕೆ ಕ್ರಯ ೧ ರೂಪಾಯಿ.

ಶ್ರೀಬಸವೇಶ್ವರ

ಇವರ ಖಾಸಾ ಫೋಟೋ (ರಾಮಾದಿಕರ ಚಿತ್ರದಂತೆ, ಕಲ್ಪಿತವಲ್ಲಾ) ಕ್ರಯ ಫುಲ್ಲುಸೈಜು ಬಣ್ಣದ್ದು ೧॥ ರೂ. ಸಾದಾ ೧ ರೂ. ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದಾ ೮ ಆಣೆ.

ಶ್ರೀ ವಿಷ್ಣು ಸುದರ್ಶನ ಚಕ್ರಸಲವಾಗಿ ತನ್ನ ನೇತ್ರವನ್ನು ವಹಿಸಿ ಶ್ರೀ ಶಿವನ ಪೂಜಾಮಾಡುತ್ತಿರುವ ಫೋಟೋ ಕ್ರಯ ೧ ಕ್ಕೆ ೧ ರೂಪಾಯಿ ಶ್ರೀ ನಾರಸಿಂಹನ ವಧೆಯನ್ನು ಮಾಡಿರುವ ಶ್ರೀ ಶರಭಾವತಾರದ ಫೋಟೋ ೧ ಕ್ಕೆ ಕ್ರಯ ಫುಲ್ಲಸೈಜು ೧ ರೂಪಾಯಿ ಕ್ಯಾಬಿನೇಟ್ ಸೈಜು ಬಣ್ಣದ್ದು ೧೨ ಆಣೆ ಸಾದ ೮ ಆಣೆ.

ಶ್ರೀ ಜಗದ್ಗುರು ತೋಟದಾರ್ಯ ಗದಗ, ಶ್ರೀಜಗದ್ಗುರು ಮೂರುಸಾವಿರ ಹುಬ್ಬಳ್ಳಿ ಶ್ರೀ ವೀರಶೈವ ಸತ್ಪುರುಷಮಾಲಾ, ಹಾಳಕೇರಿ ಅನಂದಸ್ವಾಮಿಯ ಫೋಟೋ ಬಣ್ಣದ್ದು ಮತ್ತೂ ಸಾದಾ. ಸೊಲ್ಲಾಪುರ ಶ್ರೀ ಸಿದ್ಧರಾಮೇಶ್ವರ, ಹಂಪೆ ವಿರೂಪಾಕ್ಷೇಶ್ವರ, ಶಿವಯೋಗಮಂದಿರದಲ್ಲಿರುವ ಶಿವಯೋಗಿಗಳೂ ಬಳ್ಳಾರಿ ಸ್ತ್ರೀ ಸಭಾ ವಗೈರೆ ಫೋಟೋ ಸಿಕ್ಕುತ್ತವೆ. ಫುಲ್ಲಸೈಜು ಕ್ರಯ ೧ ಕ್ಕೆ ೧ ರೂಪಾಯಿ ಕ್ಯಾಬಿನೇಟ್ ಸೈಜು ೮ ಆಣೆ.

ಹೊಸಫ್ಯಾಷನ್—ಸದ್ಗೃಹಸ್ಥರು ಗಡಿಯಾರ ಸರ್ಪಳಿಗೆ ಹಚ್ಚುವಲಾಕೇಟುಗಳು, ಇದರಲ್ಲಿ ಹಿಂದೆ ಮುಂದೆ ಈ ಪ್ರಕಾರ ೨ ಫೋಟೋ ಬೇಕಾದ ಸತ್ಪುರುಷರ ದೇವರದೂ ಹಾಕಿ ಕೆಳಗಿನ ಕ್ರಯಕ್ಕೆ ಕೊಡುವೆವು. ಕ್ರಯ ಗಿಲ್ಟದೂ ।, ।।।=, ೧, ೧।, ಪ್ರಕಾರ, ಮತ್ತೂ ಬೆಳ್ಳೀದು ರು ೧॥ ಗೋಲ್ಡ ಗೋಲ್ಡ ಭಂಗಾರದ್ದು ದುರ್ಬಿಣದ ಗ್ಲಾಸದೂ ಕ್ರಯ ೨॥, ೩॥ ರೂ.

ಊರೂರಿಗೆ ಏಜಂಟರು ಬೇಕಾಗಿರುತ್ತಾರೆ. ಆರ್ಡರ್ ಟಿಕೀಟು ಕಳುಹಿಸಿ ಕ್ಯಾಟಲಾಗು ಬೇಕಾದವರು ತರಿಸಿಕೊಳ್ಳಿರಿ.

ನಮ್ಮ ವಿಳಾಸ:—ಗಂಗಪ್ಪಾ ಹೇರಿಗೆ,
ಅರ್ಬ್ಬಾ ಸೊಲಾಪುರ.

50

ಹೊಸ ಪುಸ್ತಕಗಳು.

181

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೫೫ ಪುಟಗಳ ಉದ್ಗ್ರಂಥ ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ.— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಶರಣಹಸುಗೆ-ಪಂಚೀಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟಿಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕೋತ್ತಕಾಲಿರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಪಾಳ್ಯದವೆಂಕಟಾಚಲಪಂಡಿತರಸಿದ್ಧೌಷಧಗಳು.

48



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಂಜುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರನಾ ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯದ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧—೦—೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡ್) ಶಕುಂತಳೆ ಕೂದಲು ಬೆಳೆಯುವ ಪರಿಮಳ ತೈಲವು.

4

ಡಬ್ಬಿ ೧ ಕ್ಕೆ ೩೬ ವಿಧವಾದ ಇನಾಂ ಸಾಮಾನುಗಳ ಸಮೇತ ೧೫ ತೊಲೆ ಎಣ್ಣೆಯ ಕ್ರಯ ರೂ. ೧-೦-೦

SAKUNTHALA HAIR OIL
REGISTERED TRADE MARK

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೇ ಇರುವ ಕೂದಲು ಬೆಳೆಯುವುದು. ಒರಟಾಗಿರುವ ಕೂದಲು ಮೃದುವಾಗುವುದು. ನೇರಳೇಹಣ್ಣಿನಂತೆ ಕಪ್ಪಾಗಿ ಥಳಥಳಿಸುವುದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವುದು. ಕಣ್ಣಿಗೆ ತಂಪುಕೊಡುವದು. ತಲೆಯಲ್ಲಿರುವ ಹೊಡವನ್ನು ಸರಿಮಾಡುವುದು. ಕಣ್ಣಿನಲ್ಲಿ ಮಂಜನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವುದಲ್ಲದೆ ಜವ್ವಾಜಿ ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತೂ ಜಾಜಿ, ಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರೂಪಾಕ್ಷಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವುದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

೧೫ ತೊಲ ತೈಲವುಳ್ಳ ಡಬ್ಬಿ ೧ ಕ್ಕೆ ಕ್ರಯ ೩೬ ಇನಾಂ ಸಾಮಾನುಗಳ ಸಮೇತ ರೂ. ೧-೦-೦

ಇನಾಂ ಸಾಮಾನುಗಳ ತಪ್ಸೀಲು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ ೧, ದಂತದ ಬಾಚಣಿಗೆ ೧, ನೋಡಿಕೊಳ್ಳುವ ಕನ್ನಡಿ ೧, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ ೧, ಅತ್ತರುಬಿಲ್ಲೆ ೧, ವಾಸನೆಯುಳ್ಳ ಸೋಪು ೧ ತಾಂಬೂಲಮಾತ್ರೆ ೨೨ ಕೊಂಡೆ ಗಿಣಿಗಳು ೬ ಕಾರೊನೇಷನ್ ಬ್ರೂಚ್ ೧, ಜವಾದುಡಬ್ಬಿ ೧, ಈ ತರಹ ೩೬ ಇನಾಂ ಕೊಡಲ್ಪಡುತ್ತವೆ.

ನಮ್ಮ ವಿಳಾಸ:—ಧನಲಕ್ಷ್ಮಿ ಅಂಡ್ ಕಂಪನಿ ೧-೬
ವೆಂಕಟೇಶಮೇಸ್ತ್ರಿ ಬೀದಿ, ಸಾಹುಕಾರ್ ಪೇಟೆ ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತೆ	೦—೫—೦
ಸಟೀಕ ವಿವಾಹವಿಧಿ	೦—೬—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಣ್ಯವಾದ ವಾಚ್!

ಸ್ಟ್ರಿಂಗ್ ಪಾಕೆಟ್ ಲೀವರ್‌ವಾಚ್.

ಇದರ ಕ್ರಯ ೭ ಬಹುಮಾನಗಳ ಸಮೇತ ರೂ. ೩-೮-೦

ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ. 4



ಧನವಂತರೇ ಈ:—ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತೂ ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತೂ ನಾಣ್ಯವಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್ ಬರೀ ಮಾತುಗಳಿಂದಲೇನು? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ ೭ ಬಹುಮಾನಗಳ ತಪಶೀಲ್ :—(೧) ಸುಂದರವಾದ ವಾಚ್ ಸರಪಣಿ, (೨) ದಿಕ್ಕುಗಳನ್ನು ತೋರಿಸುವ ಉತ್ತರಮುಖ, (೩) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (೪) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆದಾರ, (೫) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (೬) ಪರಿಮಳವುಳ್ಳ ಸುವಾಸನೆ ಶೀಷೆ, (೭) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—
ಎಸ್. ಎಮ್. ಸ್ವಾಮಿ ಅಂಡ್ ಕಂಪೆನಿ,
ನಂ. ೪೪, ನಂಬುಳಯ್ಯರ ಬೀದಿ, ಮದರಾಸು.

೧೯೧೫ ನೆಯ ಇಸವಿ ಮೇ ತಾ|| ೨ ರಿಂದ ೧೯೧೫ ನೆಯ ಮೇ ತಾ|| ೮ ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೩೭ ನೆಯ ರಾಕ್ಷಸನಾಮಸಂವತ್ಸರದ ಅಧಿಕವೈಶಾಖ ಬ|| ತದಿಗೆ ಯಿಂದ ಅಧಿಕವೈಶಾಖ ಬ|| ದಶಮಿ ವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ಕೇದಿ
2	[1] ಭಾನು	ತದಿ	16-18	ಜ್ಯೇಷ್ಠ	40-22	20
3	[2] ಸೋ	ಚೌ	10-22	ಮೂಲ	36-37	21
4	[3] ಮಂಗ	ಪಂ	4-55	ಪೂಷಾ	33-21	22
5	ಬುಧ	ಷಷ್ಠಿ	0-3	ಉಷಾ	55-38	28
6	ಗುರು	ಅಷ್ಟ	52-28	ಶ್ರವಣ	29-0	24
7	ಶುಕ್ರ	ನವ	50-22	ಧನಿಷ್ಠ	28-20	25
8	ಶನಿ	ದಶ	49-31	ಶತಭಿಷ	28-48	26

(1) ಚತುರ್ಥೀತಿಥಿಃ, ಸಂಕಟಹರಚತುರ್ಥೀ. (2) ಶ್ರೀರಂಗದಲ್ಲಿ ಚೈತ್ರೋತ್ಸವಾರಂಭಃ. (3) ಅಗ್ನಿನಕ್ಷತ್ರಪ್ರವೇಶಃ, ಮದ್ದೂರು ನೃಸಿಂಹಸ್ವಾಮಿರಥಃ, ಧಗ್ಧಯೋಗಃ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಕ್ಲಾರ್ಕ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರ್ ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ | ಘನಪಥಕೃತಾವತಾರಾ ಪಶ್ಯಜ್ಜನಹೃತ್ ಪ್ರಮೋಹರಾಜೀಯಾತ್ ||
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ | ಸ್ತೋಮಾಭೀಷ್ಟದಶೀಲ ನಾಕಲಿತಸಾ[illegible]ಲವಾಲಂನಲ್ಲಂ |
ಸಿಮಾಶೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ | ಪ್ರೇಮಂಬೆತ್ತಿಳೆಯುಂಸದಾಪೊರೆಗೆ ಗೌರೀಕಾ[illegible]ಕೃಪೋಜ್ವಲಂ ||

ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೪—೦

ಸಂಪುಟ ೨೮) ಮೈಸೂರ್ ಸ್ಟಾರ್ ಸರ್ ೧೯೧೫ ನೆಯ ಇಸವಿ ಮೇ ತಾರೀಖು ೯ ನೆಯ ಭಾನುವಾರ. (ಸಂಚಿಕೆ ೧೮

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

14

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

೧. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

೨. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

೩. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ ಯಾವರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

೪. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

೫. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

೬. ಬೇಸಿಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

೭. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಳೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

೪೫ ಮಾತ್ರೆಗಳ ಪೊಟ್ಟಣ	೧ಕ್ಕೆ	೨ ಆಣೆ			೮೦ ಮಾತ್ರೆಗಳ	ಟಿನ್	೧ಕ್ಕೆ	೪ ಆಣೆ.
೯೫ ,, ,,	,,	೪ ,,			೧೦೦ ,,	ಶೀಶೆ	,,	೪॥ ,,
೨೦೦ ,, ,,	,,	೭ ,,			೫೫೦ ,,	ಮರದಪೆಟ್ಟಿಗೆ	,,	೧ ರೂ.
೨೦೦ ,, ಟಿನ್	,,	೯ ,,			೧೨೦೦ ,,	,,	,,	೨ ,,

೧ ರೂ.ಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಎಲ್ಲಾ ಕಡೆಯೂ ಪ್ರಸಿದ್ಧ ವರ್ತಕರಲ್ಲಿ ವಿಕ್ರಯಿಸಲ್ಪಡುತ್ತದೆ.

ಮೈಸೂರುಸೀಮೆಯ ಏಜಂಟರು:—ಎಂ. ರಾಮಸಂಜೀವ ಸೆಟ್ಟಿ, ಚನ್ನಪಟ್ಟಣ.
ಸೋಲ್ ಏಜಂಟರು:—ಸೆಶಿತಾನ್ ಡಿಪೋ, ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ ೨.
ಮದ್ರಾಸ್ ಏಜಂಟ್:—ಬಿ. ಸಿ. ಷಾ ಅಂಡ್ ಕೊ,
೧೩೩ ಬೇನಾಬಜಾರ್ ರೋಡ್, ಮದ್ರಾಸ್.

S.U.N.& CO
BENARES CITY.
KASHI
VISHWESHWAR.

32

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ-ಎಸ್. ಯು. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ಒರಿಯಂಟಲ್ ಫಾರ್ಮಸಿ ಮೈಸೂರು.

14

ಪ್ರಸಿದ್ಧ ಗುಣಕಂಡ ಔಷಧಗಳು.

ಜ್ವರದಮಾತ್ರೆ - ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ. ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಉಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮಂದಷವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ ರೂ.

ಗೋರೋಚನದಮಾತ್ರೆ — ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲುಮೈನೋವುಗಳು ಕೂಡಲೆ ತಪ್ಪಿ ಜೀರ್ಣಶಕ್ತಿ ಕೊಡುತ್ತೆ. ಪ್ರಯಾಣೀಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ —ಎಲ್ಲಾ ವಿಧವಾಯುನೋವು ಉಳುಕು ಊದು ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ. ೫ ಡಬ್ಬಿಗೆ ೧ ರೂ. ಕೂಡಲೆ ನಮ್ಮ ಕ್ಯಾಟಲಾಗಿಗೆ ಬರಿಯಿರಿ ಮುಫತ್ತು ಕಳುಹಿಸುತ್ತೇವೆ.

ತಿರಸಂಗೀಕರ ಸ್ಮಾರಕ.

ಕನ್ನಡ ಒಕ್ಕಲತನದ ಶಾಲೆ ದೇವೀಹೊಸೂರ.

8

ಈ ಶಾಲೆಯು ಧಾರವಾಡ ಜಿಲ್ಹೆಯಲ್ಲಿರುವ ಹಾವೇರಿ ಸ್ಟೇಶನ್ನದಿಂದ ೫ ಮೈಲು ದೂರವಿರುವ ದೇವೀಹೊಸೂರ ಎಂಬಲ್ಲಿ ಸ್ಥಾಪಿತವಾಗಿದ್ದು ಅದರ ಹೊಸಕ್ಲಾಸುಗಳು ಇದೇ ಮೇ ತಿಂಗಳು ೨೪ ನೇ ತಾರೀಖಿನಿಂದ ಶುರು ಆಗುವವು.

ಇದು ಕೇವಲ ಒಕ್ಕಲಿಗರ ಮಕ್ಕಳ ಬೆಸೆಯಿಂದ ಇರುತ್ತದೆ. ಇದರಲ್ಲಿ ಸೇರಲಿಚ್ಛಿಸುವ ವಿದ್ಯಾರ್ಥಿಗಳ ಸಂಬಂಧದ ನಿಯಮಗಳು ಕೆಳಗೆ ಕೊಟ್ಟಂತೆ ಇರುತ್ತವೆ.

(೧) ಹುಡುಗರು ಸ್ವತಃ ಒಕ್ಕಲತನ ಮಾಡುವಂಥ ಒಕ್ಕಲಿಗರ ಮಕ್ಕಳಾಗಿರಬೇಕು. ಮತ್ತು ಆ ಹುಡುಗರು ಸ್ವಲ್ಪ ಮಟ್ಟಿಗಾದರೂ ಒಕ್ಕಲತನದ ಕೆಲಸದಲ್ಲಿ ಮಾಹಿತಿಯುಳ್ಳವರಿರಬೇಕು.

(೨) ಇಲ್ಲಿ ಕಲಿತು ಒಕ್ಕಲತನದ ಉದ್ಯೋಗವನ್ನು ನಡೆಯಿಸಬೇಕೆನ್ನುವವರನ್ನೇ ಈ ಶಾಲೆಯಲ್ಲಿ ತಕ್ಕೊಳ್ಳುವದರಲ್ಲಿ ಬರುವದು. ಸರಕಾರೀ ನೌಕರಿಯನ್ನು ಇಚ್ಛಿಸುವಂಥ ವಿದ್ಯಾರ್ಥಿಗಳು ಇಲ್ಲಿ ಬರಕೂಡದು.

(೩) ಹುಡುಗರು ಕನಿಷ್ಠ ಪಕ್ಷಕ್ಕೆ ಕನ್ನಡ ೫ನೇ ಇಯತ್ತೆಯಲ್ಲಿಯಾದರೂ ಪಾಸಾಗಿರಲಿಕ್ಕೆ ಬೇಕು. ಮತ್ತು ಅವರು ಯಾವ ಶಾಲೆಯಲ್ಲಿ ಕಲಿತಿರುವರೋ ಆ ಶಾಲೆಯ ಹೆಡ್ಡಮಾಸ್ತರರ ಲೀವ್ಹಿಂಗ ಸರ್ಟಿಫಿಕೇಟನ್ನು ಅರ್ಜಿ ಲಗತ ಕಳುಹಿಸಬೇಕು.

(೪) ಹುಡುಗರ ವಯಸ್ಸು ೧೪ ವರ್ಷದಿಂದ ೨೩ ವರ್ಷದ ಒಳಗಿರಬೇಕು. ಮತ್ತು ವಯಸ್ಸಿನ ದಾಖಲೆ ಅರ್ಜಿ ಲಗತ ಕಳುಹಿಸಬೇಕು.

(೫) ಹುಡುಗರ ಅಭ್ಯಾಸಕ್ರಮವು ಎರಡು ವರ್ಷದ್ದಿರುವದು; ಈ ಶಾಲೆಯಲ್ಲಿ ತೆಗೆದುಕೊಂಡ ಪ್ರತಿಯೊಬ್ಬ ಹುಡುಗನಿಗೆ ಅವನ ಶಾಲೆಯ ಫೀಗೂ ಊಟದ ವೆಚ್ಚಕ್ಕೂ ಸಾಲುವಷ್ಟು ಸ್ಕಾಲರಶಿಪ್ ಕೊಡಲ್ಪಡುವದು.

(೬) ಒಮ್ಮೆ ಶಾಲೆಯಲ್ಲಿ ಸೇರಿದನಂತರ ಶಾಲೆಯ ಅಭ್ಯಾಸ ಕ್ರಮವು ಪೂರ್ಣ ಮುಗಿಯುವವರೆಗೆ ಶಾಲೆಯನ್ನು ಬಿಡಕೂಡದು. ಒಂದು ವೇಳೆ ಮಧ್ಯದಲ್ಲಿ ಬಿಟ್ಟರೆ ಅವರು ಶಾಲೆಯಲ್ಲಿ ಇದ್ದಷ್ಟು ದಿವಸಗಳ ಖರ್ಚನ್ನು ಕೆಳಗೆ ಸಹಿ ಮಾಡಿದವರು ನಿರ್ಣಯಿಸಿದಷ್ಟು ಕೊಡಬೇಕಾಗುವದು.

ಪ್ರತಿವರ್ಷ ೧೫-೨೦ ಹುಡುಗರನ್ನು ತೆಗೆದುಕೊಳ್ಳುವದರಲ್ಲಿ ಬರುವದು. ಬೇರೆ ಶಾಲೆಗಳಂತೆ ಈ ಶಾಲೆಗೂ ಯಾವತ್ತೂ ಸೂಟಿಗಳು ದೊರೆಯುವವು. ಇದಲ್ಲದೆ ವರ್ಷಕ್ಕೆ ಎರಡಾವರ್ತಿ ಒಮ್ಮೆ ದೀಪಾವಳಿ ಸುಮಾರಕ್ಕೆ, ಮತ್ತೊಮ್ಮೆ ಬೇಸಿಗೆ ಸಮಯಕ್ಕೆ ಒಂದೊಂದು ತಿಂಗಳದ ಸತತ ಸೂಟಿಗಳು ಸಿಕ್ಕುವವು. ಇವೆರಡು ಸೂಟಿಗಳಲ್ಲಿ ಮಾತ್ರ ಹುಡುಗರನ್ನು ಮನೆಗೆ ಕಳುಹಿಸುವದರಲ್ಲಿ ಬರುವದು. ಈ ಶಾಲೆಯ ಮುಖ್ಯ ಉದ್ದೇಶವೆಂದರೆ ಒಕ್ಕಲಿಗರ ಮಕ್ಕಳಿಗೆ ಸುಧಾರಿಸಿದ ಪ್ರಕಾರದ ಒಕ್ಕಲತನದ ಶಿಕ್ಷಣವನ್ನು ಕೊಟ್ಟು ಅವರನ್ನು ಅವರ ತಾಯಿತಂದೆಗಳಿಗೆ ಹೆಚ್ಚಿಗೆ ಉಪಯುಕ್ತರನ್ನಾಗಿ ಮಾಡಿಕೊಡುವದು ಅದೆ. ಈ ಶಾಲೆಗೆ ಬರಲಿಚ್ಛಿಸುವವರು ಅರ್ಜಿಯನ್ನು ಇದೇ ಮೇ ತಿಂಗಳ ೧೫ನೇ ತಾರೀಖಿನ ಒಳಗಾಗಿ ಕೆಳಗೆ ಸಹಿಮಾಡಿದವರ ಕಡೆಗೆ ಕಳುಹಿಸತಕ್ಕದ್ದು.

ಆ ಅರ್ಜಿ ವಿಚಾರಣೆಮಾಡಿ ನಮ್ಮ ಶಾಲೆಯಲ್ಲಿ ತೆಗೆದುಕೊಳ್ಳತಕ್ಕಂಥ ವಿದ್ಯಾರ್ಥಿಗಳಿಗೆ ಪತ್ರದ್ವಾರದಿಂದ ಬರಲಿಕ್ಕೆ ತಿಳಿಸುವೆವು; ಅರ್ಜಿ ನಿಕಾಲಿ ಮಾಡುವಕಾಲಕ್ಕೆ ವತನದಾರ ಪಾಟೀಲ ಕುಲಕರ್ಣಿಯವರ ಮಕ್ಕಳಿಗೂ, ಸುಸ್ಥಿತಿಯ ಒಕ್ಕಲಿಗರ ಮಕ್ಕಳಿಗೂ, ಹೆಚ್ಚು ಸವಲತ್ತು ಸಿಗುವದು. ಅರ್ಜಿಯಲ್ಲಿ ಹೆಸರು, ತಂದೆಯ ಹೆಸರು, ಅಡ್ಡಹೆಸರು, ಜಾತಿ

ಇರುವ ಊರು, ತಾಲ್ಲೂಕು, ಜಿಲ್ಲಾ ಖಾತೇದ ಹೊಲವು ಎಷ್ಟು, ಮತ್ತು ಅದು ಎಲ್ಲಿರುವದು ಸರಕಾರಕ್ಕೆ ದರವರ್ಷ ಕೊಡಬೇಕಾದ ತೆರಿಗೆ ತೋಟಪಟ್ಟಿಗಳನ್ನು ಮಾಡಲಿಕ್ಕೆ ನೀರಿನ ಅನುಕೂಲತೆ ಇರುವದೇ ಹ್ಯಾಗೆ? ಮತ್ತು ಹೊಲಗಳನ್ನು ಮನೆಯಿಂದ ಮಾಡುವರೋ ಹ್ಯಾಗೆ? ಮೊದಲಾದ ಮಾಹಿತಿಯನ್ನು ತುಂಬಿ ಆಯಾ ಊರ ಗ್ರಾಮಸ್ಥರ ದಾಖಲೆಯನ್ನು ಲಗತಿಟ್ಟು ಅರ್ಜಿ ಕಳಿಸಬೇಕು; ಮತ್ತು ಅರ್ಜಿಯನ್ನು ಶಾಲೆಗೆ ಬರಲಿಚ್ಛಿಸುವ ವಿದ್ಯಾರ್ಥಿಗಳೇ ಸ್ವಹಸ್ತದಿಂದ ತುಂಬಿ ಕಳಿಸಬೇಕು. ಮೇಲೆ ಹೇಳಿದ ನಿಯಮಗಳಂತೆ ನಡೆಯಲಿಕ್ಕೆ ಅನುಮತಿಯುಂಟೆಂದು ತಮ್ಮ ಪಾಲಕರ ಕಡೆಯಿಂದ ಒಂದು ಸಹಿನಿಸಿ ದಾಖಲೆ ತಕ್ಕೊಂಡು ಅರ್ಜಿ ಲಗತ ಇಟ್ಟು ಕಳಿಸಬೇಕು.

ಧಾರವಾಡ
ತಾ|| ೫-೩-೧೯೧೫
ಸಹಿ ಟಿ. ಗಿಲ್ಬರ್ಟ
ಡಿ. ಡಾಯರೆಕ್ಟರ ಶೆತಕೀ ಖಾತೆ,
ದಕ್ಷಿಣಭಾಗ

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತವಾಗಿರುವ ಘೋರಯುದ್ಧದ ದೆಸೆಯಿಂದ ಈ ಸಾಮಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದ ಮತ್ತೂ ಬೆಲಜಿಯಮ್ಮಿನಿಂದ ಸುತರಾಂ ಬರುವುದು ಕಟ್ಟಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಅವಶ್ಯಕವಾದ ಕಾಗದ ಮೊದಲಾದ ಸಾಮಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವಧಿಯು ಪೂರೈಸಿರುವವರಿಗೆಲ್ಲಾ ಪತ್ರಿಕೆಯನ್ನು ವಿ. ಪಿ. ದ್ವಾರ ಕಳುಹಿಸುತ್ತಿರುವೆವು. ಆದರೆ ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿರುಗಿಸಿ ಕಾಗದದ ಬೆಲೆಯೇರಿಕೆಯಿಂದ ನಷ್ಟಪಡುವುದರ ಜತೆಗೆ ಪೋಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದು ತಿಳುಹಲು ಖೇದವಾಗುತ್ತದೆ. ಇತಃಪರಃ ದಯಾರ್ದ್ರಹೃದಯರಾದ ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ. ಪಿ. ಹಣವನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನವಾಗಿ ನಡೆದುಕೊಂಡು ಹೋಗುವಂತೆ ಮಾಡುವರೆಂದು ಸಂಪೂರ್ಣವಾಗಿ ನಂಬಿರುತ್ತೇವೆ.

ಮ್ಯಾನೇಜರ್.

ಸಾಮಾಜಿಕವಿಚಿತ್ರ ದೃಶ್ಯವು.

(ದೇಶಾಯಿ ಶೇಷಗಿರಿರಾವು, ನಂದಿ)

ಯುವತಿ—ಅಮ್ಮಾ! ಈಗ ನೀನು ಹೊರಗೆಹೋಗು ಡಾಕ್ಟರವರೊಡನೆ ನಾನು ನನ್ನ ವ್ಯಾಧಿಯನ್ನು ಕುರಿತ ರಹಸ್ಯವನ್ನು ವಿಜ್ಞಾಪಿಸಿಕೊಳ್ಳುತ್ತಿರುವೆನು (ತಾಯಿ ಮರೆಯಾಗುತ್ತಿರುವಳು.)

ಯುವತಿ (ಕಣ್ಣುಗಳಲ್ಲಿ ಸುರಿಯುತ್ತಿರುವ ನೀರನ್ನು ಒರಸಿಕೊಳ್ಳುತ್ತಾ) ಡಾಕ್ಟರವರೇ! ನಾನು ಬಹಳ ಶ್ರಮೆಯನ್ನು ಕೊಟ್ಟೆನು. ನಾನು ಬದುಕುತ್ತೇನೆಂದು ನಂಬಿಕೊಂಡಿರಲಾಗದು. ತಮಗೆ ಈ ಕಷ್ಟವನ್ನು ಕೇವಲವೈದ್ಯದ ನಿಮಿತ್ತವಾಗಿ ಕೊಡಲಿಲ್ಲವು. ಹಾಗಿದ್ದಲ್ಲಿ ಬೇರೊಬ್ಬ ವೈದ್ಯನನ್ನು ಕರೆಯಕಳುಹಿಸುತ್ತಿದ್ದೆನು. ಹೆಚ್ಚು ಮಾತುಗಳೇಕೆ? ನಾನೀದಿನ ಸಾಯುವುದು ಅತ್ಯುತ್ತಮವು. ಈದಿನ ನನಗಿಂತಲೂ ಭಾಗ್ಯವತಿ ಮತ್ತಾರೂ ಇರಲಾರರು.

ಡಾಕ್ಟರ್‌ಸುಧೀರನು—ಅಮ್ಮಾ! ನೀನು ಹೀಗೆ ನಿರಾಶೆಯನ್ನುಂಟಾಗಿರುವುದೇಕೆ? ಪ್ರಾಣಭಯವಿಲ್ಲವು. ಭಯಪಡಬೇಡ.

ಯುವತಿ—ನನ್ನ ರೋಗದ ಕಾರಣವನ್ನು ತಿಳಿಯದೆ ನೀವು ಹೀಗೆ ವೈದ್ಯಮಾಡುವುದರಿಂದ ಪ್ರಯೋಜನವೇನು? ನನ್ನ ವ್ಯಾಧಿಯು ಕಥೆಯೊಳ್ಳವು; ಜೀವನಕಥೆಯಿಂದ ತುಂಬಿರುವುದು. ನನ್ನ ಜನ್ಮವು ಒಬ್ಬ ದರಿದ್ರನ ಕುಟುಂಬದಲ್ಲಿ ಉಂಟಾಯಿತು. ನನ್ನ ಬಾಲ್ಯಾವಸ್ಥೆಯಲ್ಲಿಯೇ ತಂದೆಯು ಗತಿಸಿದನು. ನಮ್ಮ ತಾಯಿಗೆ ನಾನೊಬ್ಬಳೇ ಪುತ್ರಿಕೆ; ನನ್ನನ್ನು ಹೆತ್ತು ಹೊತ್ತು ಸಾಕಿದ ತಾಯಿಯು ಕೂಡ ಗತಿಸಿ ಕೆಲವು ಕಾಲವಾಯಿತು. ಈಕೆ ನನ್ನ ತಾಯಿಯ ಸೋದರಿ; ಈಕೆಯು ಚಿಕ್ಕಂದಿನಲ್ಲಿಯೇ ವಿಧವೆಯಾದಳು. ನನ್ನಮೇಲೆ ಬಹಳ ಪ್ರೀತಿಯನ್ನುಂಟಾಗಿರುವಳು ನನ್ನ ಸೌಂದರ್ಯವನ್ನು ತಾವು ನೋಡುತ್ತಲೇ ಇರುವಿರಿ. ನನಗೆ ಹದಿನಾಲ್ಕು ವರ್ಷಗಳು ತುಂಬುತ್ತಲೇ ಈ ನನ್ನ ತಾಯಿಯು ಮದುವೆಯ ಪ್ರಯತ್ನವನ್ನು ಮಾಡಿದಳು. ವರನು ಕೂಡ ಸುಂದರನೇ. ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದನು. ವರನ ತಂದೆ ನಾಲ್ಕುಸಾವಿರ ವರದಕ್ಷಿಣೆಯನ್ನು ಕೋರಿದನು. ನಮ್ಮ ತಾಯಿಯು ಒಡವೆಗಳನ್ನೂ ಮನೆಯನ್ನೂ ಅಡವಿಟ್ಟು ನಾಲ್ಕುಸಾವಿರ ತಂದಳು. ಅದರಲ್ಲಿ ನಮ್ಮ ತಾಯಿಯು ಅವಿವೇಕದಿಂದ ಎರಡು ಸಾವಿರ ಕಳ್ಳರಪಾಲಾಯಿತು. ಮಿಕ್ಕೆರಡುಸಾವಿರದಲ್ಲಿ ವಿವಾಹ ವ್ಯಯಗಳು ಹೋಗಲಾಗಿ, ಉಳಿದುದನ್ನು ನಮ್ಮ ಮಾವನವರ ಪಾದಗಳ ಮುಂದಿರಿಸಿ ಪ್ರಾರ್ಥಿಸಿದಳು. ಪ್ರಯೋಜನವಿಲ್ಲದೆಹೋಯಿತು. ನಾನು ಕೂಡ ಆ ರಾತ್ರಿ ನನ್ನ ಪ್ರಾಣನಾಥನ ಪಾದಗಳಲ್ಲಿ ತಲೆಯನ್ನಿರಿಸಿ ಬಹುವಿಧವಾಗಿ ಪ್ರಾರ್ಥಿಸಿದೆನು. ಆತನು ಕೂಡ ಮಹಾ ಕ್ರೋಧದಿಂದ ನಮ್ಮನ್ನು ಮೋಸಪಡಿಸಿದರೆಂದು ಆಗ್ರಹಗ್ರಸ್ತನಾದನು. „ನಾಲ್ಕುಸಾವಿರ ಮುಟ್ಟಿಸುವವರೆಗೂ ನಿನ್ನ ಮುಖವನ್ನು ನೋಡುವುದಿಲ್ಲವು; ನಿನ್ನನ್ನು ಮುಟ್ಟುವುದಿಲ್ಲವು" ಎಂದು ಆತನು ಶಪಥವನ್ನು ಮಾಡಿದನು. ಅಂದಿನಿಂದಲೂ ನನಗೀರೋಗವು ಸಂಪ್ರಾಪ್ತವಾಗಿದೆ. ಉಶ್! ಇನ್ನು ಸ್ವಲ್ಪ ಕೇಳಿ, ಕಥೆಯನ್ನು ಮುಗಿಸುವೆನು. ಡಾಕ್ಟರ್—ಅಮ್ಮಾ! ನಿನ್ನ ಹೆಸರೇನು? ನಿಮ್ಮ ತಂದೆತಾಯಿಗಳ ಹೆಸರೇನು? ನೀವು ಎಲ್ಲಿ ವಾಸವಾಗಿದ್ದಿರಿ?

ಯುವತಿ—ಎಲ್ಲವನ್ನೂ ತಿಳಿಸುವೆನು; ನಾನು ಹೇಳುವುದನ್ನು ಕೇಳಿ. ಇಷ್ಟರಲ್ಲೇ ನನ್ನ ಭವಿಷ್ಯತ್ ಪತಿಯು ಡಾಕ್ಟರ್ ಪರೀಕ್ಷೆಯಲ್ಲಿ ಉತ್ತೀರ್ಣನಾದನೆಂಬ ಸಮಾಚಾರವನ್ನು ಕೇಳಿದೆನು; ನನಗೆ ಪರಮಾನಂದವಾಯಿತು. ಮತ್ತೆ ಸ್ವಲ್ಪಕಾಲಕ್ಕೆ ನನ್ನ ಪತಿಯು ಬೇರೊಬ್ಬ ಸ್ತ್ರೀಯನ್ನು ಮದುವೆಯಾದನೆಂಬ ಸುದ್ದಿಯನ್ನು ಕೇಳಿ ನನ್ನ ಆನಂದವು ಸ್ವರ್ಗವನ್ನು ಸೇರಿತು. ಉಶ್! ಡಾಕ್ಟರ್ ಸುಧೀರನು—(ಯುವತಿಯನ್ನು ಪೂರ್ಣದೃಷ್ಟಿಯಿಂದ ನೋಡಲಾರಂಭಿಸಿದನು)

ಯುವತಿ—ಈ ನಿರ್ಭಾಗ್ಯಳಾದ ನನ್ನ ಕಥೆಯನ್ನು ಶ್ರದ್ಧೆಯಿಂದ ಕೇಳಿ-ನಾವು ತಾಯಿಮಕ್ಕಳು ಆಲೋಚಿಸಿ ಮನೆಯನ್ನು ಮಾರಿದೆವು. ಜೀವನ ನಿರ್ವಾಹಕ್ಕೆ ವ್ಯಯವಾದುದು ಹೋಗಲಾಗಿ ಉಳಿದಿರುವ ಧನವು ಇಗೋ ನೋಡಿ! (ಎಂದು ಕೆಲವು ಕರೆನ್ಸಿ ನೋಟುಗಳನ್ನು ಹಾಸುಗೆ ಕೆಳಗಿನಿಂದ ತೆಗೆದು ಡಾಕ್ಟರವರ ಮುಂದೆ ಹಾಕಿದಳು.)

ಡಾಕ್ಟರ್ ಸುಧೀರನು—ನನ್ನ ಹೃದಯವು ಕಂಪಿಸುತ್ತಿರುವುದು; ನಾನು ನನ್ನ ಸ್ವಾಧೀನದಲ್ಲಿಲ್ಲವು. ಕಥೆಯ ಅಂತ್ಯದ ಪರಿಚಯವನ್ನು ಕೋರುತ್ತಿರುವೆನು.

ಯುವತಿ—(ಎದ್ದು ಕುಳಿತು) ತಾವು ಧನ್ಯಾತ್ಮರು! ನಾನಿಷ್ಟುದಿವಸಗಳು ಬದುಕಿದ್ದುದರ ಕಾರಣವು ನನ್ನ ಪತಿಗೆ ಕೊಡಬೇಕಾಗಿದ್ದ ಋಣವನ್ನು ತೀರಿಸುವುದಕ್ಕಲ್ಲದೆ ಮತ್ತೊಂದಲ್ಲವು. ನನ್ನ ಹೆಸರು ಮನೋರಮೆಯೆಂದು ತಿಳಿಯಿರಿ. ನನ್ನ ಕಥೆಯನ್ನು ನನ್ನ ಪತಿಗೆ ತಿಳಿಸಿದೆನು. ನಾನು ಬದುಕಿದ್ದ ಪಕ್ಷದಲ್ಲಿ ನನ್ನ ಪತಿಗೆ ಮನೋವ್ಯಥೆಯಾಗಿರುವುದು. ನನ್ನ ಮನೋರಥವು ತೀರಿತು. ಪ್ರಾಣನಾಥಾ! ನನಗೀಜನ್ಮದಲ್ಲಿ ದಾಂಪತ್ಯಸುಖವು ಲಭಿಸಲಿಲ್ಲವು; ಚಿಂತೆಯಿಲ್ಲವು. ಇದಿಗೋ ನಿಮ್ಮ ಋಣವನ್ನು ಸ್ವೀಕರಿಸಿ (ಎಂದು ಮಲಗಿ ಮಹಾನಿದ್ರೆಗಾಗಿ ಕಣ್ಣುಗಳನ್ನು ಮುಚ್ಚಿದಳು.)

ಡಾಕ್ಟರ್ ಸುಧೀರನು—ದುಃಖಿಸುತ್ತಾ; ಕಣ್ಣುಗಳಲ್ಲಿ ನೀರನ್ನು ಸುರಿಸುತ್ತಾ; ಏನುಮಾಡುವುದಕ್ಕೂ ತೋರದೆ ಧಾತುವನ್ನು ನೋಡಿದನು. ಪರಮಪತಿವ್ರತೆಯಾದ ಆಕೆಯ ಜೀವನದೀಪವು ಆರಿಹೋಗಿತ್ತು. ತಾಯಿ ಬಂದಳು; ಬೆಳಗಾಯಿತು.

ಪಂಜಾಬಿನಲ್ಲಿ ರಾಜದ್ರೋಹಕೂಟಸಂಬಂಧದ ಅಪರಾಧಿಗಳ ವಿಚಾರಣೆ.

ಬ್ರಿಟಿಷ್ ಕೊಲಂಬಿಯಾ ಅಮೇರಿಕಾ ಮೊದಲಾದ ದೇಶಗಳಿಗೆ ಜೀವನಾರ್ಥವಾಗಿ ಹೋಗಿದ್ದು ಭರತಖಂಡಕ್ಕೆ ಬಂದವರಮೇಲೂ ಇನ್ನು ಕೆಲರಮೇಲೆಯೂ (ಇವರಲ್ಲಿ ಸಿಕ್ ಜನರೇ ವಿಶೇಷವಾಗಿರುವರು) ರಾಜದ್ರೋಹರೂಪವಾದ ಅಪರಾಧಗಳುಹೊರಿಸಲ್ಪಟ್ಟು, ಅವರುಗಳ ವಿಚಾರಣೆಯು ಈಗ ಲಾಹೋರಿನ ಕಾರಾಗೃಹದ ಒಂದು ಮಂದಿರದಲ್ಲಿ ನೂತನವಾದ ಭರತಖಂಡರಕ್ಷಣಶಾಸನದ ಪ್ರಕಾರ ನಡೆಯಿಸಲ್ಪಡುತ್ತಿವೆ. ಇದಕ್ಕಾಗಿ ಮೂರುಮಂದಿ ದೊಡ್ಡಮನುಷ್ಯರುಗಳು ಸ್ಪೆಷಲ್ ಕಮಿಷನರಾಗಿ ಏರ್ಪಡಿಸಲ್ಪಟ್ಟು ಅವರು ದಂಡಾಧಿಕಾರಿಗಳಾಗಿದ್ದಾರೆ. ವಿಚಾರಣೆಯ ಆರಂಭಕಾಲದಲ್ಲಿ ಮೊಟ್ಟ ಮೊದಲು ಗೌರ್ನಮೆಂಟ್ ಅಡ್ವೋಕೇಟರಾದ ಮಿ॥ಬೀರ್ವ ಪೇಟ್ಮ್ಯಾ ಎಂಬುವರು ಅಪರಾಧದ ಸ್ವರೂಪವನ್ನು ನಿರೂಪಿಸುವಾಗ ಮಾಡಿದ ಭಾಷಣದಲ್ಲಿ ಈ ಕೆಳಗಣ ಸಂಗತಿಗಳು ಹೇಳಲ್ಪಟ್ಟಿರುವುವು:—

„ಆಂಗ್ಲಜನರಮೇಲೆ ಯುದ್ಧವನ್ನು ಮಾಡಿ ಭರತಖಂಡದಲ್ಲಿರುವ ಆಂಗ್ಲಪ್ರಭುತ್ವವನ್ನು ನಾಮಾವಶೇಷಮಾಡಬೇಕೆಂಬುದು ಅಪರಾಧಿಗಳ ಉದ್ದೇಶವು. ಈ ದೇಶದಲ್ಲಿರುವ ಯೂರೋಪ್ಯರನ್ನೆಲ್ಲಾ ಓಡಿಸಿಬಿಟ್ಟು ಸ್ವದೇಶೀಯ ಪ್ರಭುತ್ವವನ್ನೋ ಅಥವಾ ಸ್ವರಾಜ್ಯವನ್ನೋ ಸ್ಥಾಪಿಸಿಕೊಳ್ಳಬೇಕೆಂಬುದು ಇವರುಗಳ ಅಭಿಪ್ರಾಯ. ಈ ಉದ್ದೇಶಸಾಧನೆಗಾಗಿ ಭರತಖಂಡದಲ್ಲಿರುವ ಸೈನಿಕರನ್ನು ಪ್ರಭುತ್ವದವರಮೇಲೆ ತಿರುಗಿಬೀಳುವಂತೆ ಮಾಡುವುದು, ತಾವು ಉಂಟುಮಾಡಿದ ವಿಪ್ಲವಕೂಟದಲ್ಲಿ ತಾವೂ ಸೇರಿ, ತಮಗೆ ಬೇಕಾದ ಆಯುಧಗಳನ್ನು ಒದಗಿಸಿಕೊಳ್ಳುವುದು, ಮದ್ದು ಗುಂಡು ಮೊದಲಾದುವುಗಳನ್ನು ಹವಣಿಸಿಕೊಳ್ಳುವುದು, ಸೈನಿಕರನ್ನು ಕೂಡ ಏರ್ಪಡಿಸಿಕೊಳ್ಳುವುದು, ಇದಕ್ಕೆಲ್ಲಾ ಅವಶ್ಯಕವಾದ ಹಣವನ್ನು ಒದಗಿಸಿಕೊಳ್ಳುವುದಕ್ಕಾಗಿ ಸರ್ಕಾರಿ ಬೊಕ್ಕಸವನ್ನು ಸುಲಿಯುವುದು ಇತರ ಶ್ರೀಮಂತರ ಮನೆಯಲ್ಲಿ ಕಳ್ಳತನವನ್ನೊ ಸುಲಿಗೆಯನ್ನೊ ಮಾಡುವುದು, ಇವೇ ಇವರ ಕಾರ್ಯಗಳಾಗಿರುವುವು. ಇವರು ನಡೆಯಿಸಿತಕ್ಕ ದುಷ್ಕೃತ್ಯಗಳಿಗೆ ವಿಘ್ನಕಾರಿಗಳಾಗುವ ಪೊಲೀಸಧಿಕಾರಿಗಳನ್ನಾಗಲಿ ಇತರ ಸರ್ಕಾರಿ ಉದ್ಯೋಗಸ್ಥರನ್ನಾಗಲಿ ಕೊಲ್ಲಬೇಕು; ವಿಪ್ಲವವು ಆರಂಭಿಸಿದ ಕೂಡಲೇ ಹೊಗೆಬಂಡಿಗಳನ್ನು ಸೇತುವೆಗಳನ್ನು ಹಾಳ್ಮಾಡಬೇಕು; ಯೂರೋಪ್ಯಸೈನಿಕರಮೇಲೆ ಅಕಸ್ಮಾತ್ತಾಗಿ ಬಿದ್ದು ಕೊಲ್ಲಬೇಕು; ರಾಜದ್ರೋಹ ಪ್ರಸಾರಕವಾದ ಗ್ರಂಥಗಳನ್ನು ಮುದ್ರಿಸಿ ಪ್ರಕಟಿಸಬೇಕು; ರಾಜದ್ರೋಹವನ್ನು ಪ್ರೋತ್ಸಾಹಿಸುವ ಉಪನ್ಯಾಸಗಳನ್ನು ಮಾಡಬೇಕು; ಎಂಬುದು ಇವರ ಸಿದ್ಧಾಂತವು. ಇವರು ಮಾಡಿದ ಈ ರಹಸ್ಯ ಪ್ರಯತ್ನಗಳೆಲ್ಲಾ ಹೇಗೆ ಬಯಲಾದುವೆಂಬ ಸಂಗತಿಗಳನ್ನು ಅಪ್ರೂವರುಗಳ (ಅಪರಾಧಿಗಳ ಗುಂಪಿನಲ್ಲೇ ಸೇರಿದ್ದು ಸರ್ಕಾರದವರಿಂದ ಕ್ಷಮಾಪಣೆಯನ್ನೂ ಅಭಯದಾನವನ್ನೂ ಪಡೆದು ನಡೆದಿರುವ ವಿದ್ಯಮಾನಗಳನ್ನು ಸಾಕ್ಷ್ಯವಾಗಿ ನುಡಿಯತಕ್ಕವರು) ಹೇಳುವರು ಅವರ ವಾಜ್ಮೂಲದಿಂದ ಅನೇಕಾನೇಕ ಸಂಗತಿಗಳು ಹೊರಬೀಳುವುವು. ಯಾವಯಾವ ಸಂದರ್ಭದಲ್ಲಿ ಇವರುಗಳು ಭರತಖಂಡದಿಂದ ಹೊರಟು ಅಮೇರಿಕಾಕ್ಕೆ ಹೋಗಿ ಈ ವಿಪ್ಲವದ ಏರ್ಪಾಟನ್ನು ಮಾಡಿದರೋ, ಈ ದೇಶದಲ್ಲಿ ರಾಜದ್ರೋಹಾಪರಾಧಗಳು ಹಬ್ಬುವುದಕ್ಕೆ ಯಾವ ಪ್ರಯತ್ನಗಳನ್ನು ಮಾಡಿದರೋ, ಅದೆಲ್ಲಾ ಗೊತ್ತಾಗುವುದು. ಇವರಲ್ಲಿ ಪ್ರಮುಖನಾದ ಹರಿದಯಾಳ್ ಎಂಬುವನು ಅಮೇರಿಕಾದಲ್ಲೂ ಜೇನಾದೇಶದಲ್ಲೂ ರಾಜದ್ರೋಹ ಪ್ರಸಾರಮಾಡುವುದಕ್ಕೆ ಪ್ರಯತ್ನಿಸುತ್ತಿರುವನು. ಈತನು ಗುರುಮುಖಿ-ಹಿಂದಿ-ಉರುದುಭಾಷೆಗಳಲ್ಲಿ ರಾಜದ್ರೋಹವನ್ನು ಬೋಧಿಸುವ ಪತ್ರಿಕೆಯನ್ನು ಪ್ರಕಟಿಸುತ್ತಿರುವನು. ರಾಜದ್ರೋಹೋತ್ಪಾದಕವಾದ ಗೀತೆಗಳನ್ನು ಕೂಡ ಈತನು ರಚಿಸಿರುವನು. ಅಮೇರಿಕಾದಲ್ಲಿರುವ ಭಾರತೀಯರೊಡನೆ ಕೂಡಿ ಈತನು ಸಭೆಮಾಡಿ ಉದ್ರೇಕವನ್ನು ಹುಟ್ಟಿಸುವ ಉಪನ್ಯಾಸಗಳನ್ನು ಕೊಟ್ಟಿರುವನು. ಇಂಥ ಸಭೆಗಳಿಗೆ ಕೆಲ ಅಮೇರಿಕನ್ನರೂ ಬರುತ್ತಿದ್ದರು. ರಾಜದ್ರೋಹಗ್ರಂಥಗಳನ್ನು ಪ್ರಕಟಿಸುವುದಕ್ಕಾಗಿ ಬೇಕಾಗುವ ಹಣವನ್ನು ಈತನು ಕೂಡಿಸುತ್ತಿರುವನು. ಈ ಹರಿದಯಾಳನು ೧೯೧೧ ನೆಯ ವರ್ಷದಲ್ಲಿ ಅಮೇರಿಕಾಕ್ಕೆ ಹೋಗಿ, ಪಂಜಾಬಿನಿಂದ ತಲೆತಪ್ಪಿಸಿಕೊಂಡು ಹೋದ ಥಾಕೂರ್‌ದಾಸ್ ಎಂಬುವನೊಡನೆ ಹೇಗೆ ಸೇರಿಕೊಂಡನೆಂಬುದನ್ನು ಅಪ್ರೂವರುಗಳಲ್ಲಿ ಒಬ್ಬನಾದ ನವಾಬ್ ಖಾನನು ಹೇಳುವನು. ಇವನಿಗೂ ಅಜಿತ್‌ಸಿಂಗ್‌ಎಂಬುವನಿಗೂ ಸುಫಿಅಂಬಾಪ್ರಸಾದ್ ಎಂಬುವನಿಗೂ ಸ್ನೇಹವಿರುವಂತೆ ನವಾಬ್‌ಸಿಂಗನೊಡನೆ ಹೇಳಿರುವನು. ಇವರಿಬ್ಬರೂ ಪರ್ಷ್ಯಾದಲ್ಲಿರುವರು. ಇವನು ಗುಲಾಂಹುಸೇನ್ ಎಂಬ ಹೆಸರನ್ನಿಟ್ಟುಕೊಂಡಿರುವನು. ಈ ರಹಸ್ಯಕೂಟದಲ್ಲಿ ಸೇರಿರುವ ಪ್ರಮುಖರೊಳಗೆ ಭಾಯಿ ಪರಮಾನಂದನೆಂಬುವನೊಬ್ಬನಾಗಿದ್ದಾನೆ. ರಾಜದ್ರೋಹ ಗ್ರಂಥಗಳನ್ನು ಪ್ರಸಾರಮಾಡುವುದಕ್ಕೆ ೧೯೦೭ ನೆಯ ವರ್ಷದಲ್ಲಿ ಅಜಿತಸಿಂಗು ವಿಶೇಷವಾಗಿ ಪ್ರಯತ್ನಪಟ್ಟನು. ಭಾಯಿಪರಮಾನಂದನು ಅಜಿತಸಿಂಗುವಿನ ಮನೆಯಲ್ಲಿ ವಾಸವಾಗಿದ್ದನು. ಆ ವರ್ಷ ಪೊಲೀಸರು ಆ ಮನೆಯನ್ನು ಶೋಧಿಸಿದಾಗ ಸಿಡಿಮದ್ದುಗಳನ್ನು ಮಾಡುವ ವಿಧಾನವನ್ನು ತಿಳಿಸುವ ಒಂದು ಗ್ರಂಥವು ಅಲ್ಲಿ ಸಿಕ್ಕಿತು. ಅದು ಒಂದು ಪೆಟ್ಟಿಗೆಯಲ್ಲಿದ್ದಿತು. ಯೂರೋಪ್ಯರನ್ನು ಭರತಖಂಡದಿಂದ ಓಡಿಸಿಬಿಟ್ಟು ನೇಪಾಳದ ದೊರೆಯ ಆಧಿಪತ್ಯದ ಕೆಳಗೆ ಈ ದೇಶದ ಆಳ್ತನವೆಲ್ಲಾ ಇರುವಂತೆ ಹೇಗೆ ಮಾಡಬೇಕೊ ಅದನ್ನೆಲ್ಲಾ ವಿವರಿಸಿದ ಕೆಲ ಕಾಗದಗಳು ಅಲ್ಲಿ ದೊರೆದುವು. ಆಗ ಇವನ ಮೇಲಣ ಅಪರಾಧಗಳನ್ನು ಬಲವಾಗಿ ನಿರೂಪಿಸಿಕೊಡುವ ಆಧಾರಗಳು ಸರಿಯಾಗಿ ಒದಗದೆ ಹೋದುದರಿಂದ ೯೦೦ ರೂ. ಗಳಿಗೆ ಇವನಿಂದ ಹೊಣೆಯನ್ನು ತೆಗೆದುಕೊಂಡು ಬಿಟ್ಟುಬಿಡಲಾಯಿತು. ಆದರೆ ೧೯೧೦ ನೆ ವರ್ಷದ ಏಪ್ರಲ್ ತಿಂಗಳಲ್ಲಿ ಇವನು ಅಮೇರಿಕಾಕ್ಕೆ ಹೋಗಿ ಹರಿದಯಾಳುವಿನೊಡನೆ ಸೇರಿಕೊಂಡನು. ಈ ಹರಿದಯಾಳುವು ಬಹಳ ಸಮರ್ಥನು; ವಿದ್ಯಾವಂತನು. ಜನರನ್ನೆಲ್ಲಾ ತನ್ನ ಮಾರ್ಗಕ್ಕೆ ತಿರುಗಿಸಿಕೊಳ್ಳುವ ಅಪಾರವಾದ ಶಕ್ತಿಯು ಅವನಲ್ಲಿರುವುದು. ತನ್ನ ಯಾವಚ್ಛಕ್ತಿಯನ್ನೂ ವಿನಿಯೋಗಿಸಿ ಈ ಸಂದರ್ಭದಲ್ಲಿ ಆತನು ಕೆಲಸಮಾಡಿರುವನು. ಅಮೇರಿಕಾದಲ್ಲಿ ಬಹುಜನರು ಈ ರಹಸ್ಯಕೂಟಗಾರರಾಗಿರುವರು. ಇವರು ಆಗಾಗ್ಗೆ ಸಭೆಗೂಡುತ್ತಿರುವರು. ದುಡ್ಡನ್ನು ಕೂಡಿಸುತ್ತಿರುವರು. ಒಂದುರಾಜದ್ರೋಹಬೋಧಕಪತ್ರಿಕೆಯನ್ನು ಪ್ರಾರಂಭಿಸಿರುವರು. ಈಅಪರಾಧಿಗಳಲ್ಲಿ ಕೆಲವರಿಗೆ ಈಪ್ರಯತ್ನದಲ್ಲಿ ವಿಶೇಷಸಂಬಂಧವಿದೆ. ಈಗಿನ ಅಪ್ರೂವರುಗಳಲ್ಲಿ ಒಬ್ಬನೂ ಅಪರಾಧಿಗಳಲ್ಲಿ ನಾಲ್ಕುಮಂದಿಯು ಸಹ ಗದರ್ ಎಂಬ ಆ ರಾಜದ್ರೋಹ ಪತ್ರಿಕೆಯ ಕಾರ್ಯನಿರ್ವಾಹಕತ್ವದಲ್ಲಿ ಸೇರಿದವರು. ಈ ಪತ್ರಿಕೆಯು ಉರುದುಭಾಷೆಯಲ್ಲಿ ಆರಂಭಿಸಲ್ಪಟ್ಟಿತು. ಆದರೆ ೧೯೧೪ ನೆ ವರ್ಷಾರಂಭದಿಂದ ಅದು ಗುರುಮುಖಿ ಗುಜರಾತಿ ಭಾಷೆಗಳಲ್ಲೂ ಪ್ರಕಟಗೊಳ್ಳಲಾರಂಭಿಸಿತು. ಕೆಲ ರಾಜದ್ರೋಹ ಗೀತೆಗಳನ್ನ ಪಂಜಾಬಿ ಭಾಷೆಯಲ್ಲಿ ಮುದ್ರಿಸಿರುವರು. ೧೯೧೪ ನೆ ವರ್ಷದ ಜನವರಿ ತಿಂಗಳಲ್ಲಿ ಬಹುಮಂದಿ ಭಾರತೀಯರು ಸ್ವೀಡನ್‌ದೇಶದ ಮುಖ್ಯಪಟ್ಟಣವಾದ ಸ್ಟಾಕ್‌ಹಾಮ್ ಎಂಬ ಊರಿನಲ್ಲಿರುವ ಗುರುದ್ವಾರದಲ್ಲಿ ಸಭೆ ಮಾಡಿದ್ದರು. ಅಲ್ಲಿಗೆ ಕಾನಡಾ—ಮೆಕ್ಸಿಕೊ ರಾಷ್ಟ್ರಗಳ ಅನೇಕ ಭಾಗಗಳಲ್ಲಿರುವ ಭಾರತೀಯರು ಬಂದು ಕೂಡಿದ್ದರು. ಹಿಂದೂದೇಶಕ್ಕೆ ಹೋಗಿ ವಿಪ್ಲವವನ್ನು ಹುಟ್ಟಿಸಲು ದೀಕ್ಷಾಬದ್ಧರಾದವರನ್ನು ೧೯೧೪ ನೆ ಜುಲೈ ತಿಂಗಳಿಂದ ತಮ್ಮ ಸಂಘಕ್ಕೆ ಸೇರಿಸಿಕೊಳ್ಳಲು ಆರಂಭಿಸಿದರು. ಈ ಕಾಲದಲ್ಲೇ ನಮಗೂ ಜರ್ಮನರಿಗೂ ಇದ್ದ ಸಂಬಂಧವು ಕೆಟ್ಟುಹೋಯಿತು. ೧೯೧೪ ನೆ ವರ್ಷದ ಆಗಸ್ಟ್ ತಿಂಗಳಲ್ಲಿ ಅಮೇರಿಕಾದ ಸ್ಯಾನ್‌ಫ್ರಾನ್ಸಿಸ್ಕೋನಗರದಲ್ಲಿ ಒಂದು ಸಭೆಯು ಜರಗಿತು. ಅಷ್ಟರೊಳಗೆ ಯುದ್ಧಾರಂಭವಾಗಿದ್ದಿತು. ಆ ಸಭೆಯಲ್ಲಿ ಉಪನ್ಯಾಸಗಳು ಕೊಡಲ್ಪಟ್ಟುವು. „ಭರತಖಂಡಕ್ಕೆ ಬಂದು ಭಾರತಮಾತೆಯನ್ನು ಆಂಗ್ಲೇಯರ ಬಂಧನದಿಂದ ಮುಕ್ತಳನ್ನಾಗಿ ಮಾಡಬೇಕೆಂದು ಭರತಖಂಡವು ಕೋರುತ್ತಿರುವುದು" ಎಂದು ಆ ಸಭಿಕರಲ್ಲೊಬ್ಬನು ಭಾಷಣ ಮಾಡಿದನು.

ಅನ್ಯದೇಶಗಳಿಗೆ ಹೋಗಿದ್ದವರು ಹಲವು ಹಡಗುಗಳ ಮೂಲಕ ಭರತಖಂಡಕ್ಕೆ ತಿರುಗಿ ಬಂದರು. ಆಗಸ್ಟ್ ತಾ|| ೨೯ರಲ್ಲಿ „ಕೋರಿಯಾ„ ಎಂಬ ಹಡಗಿನ ಮೇಲೆ ಜರ್ಪಾನ್ ಚೀನಾ ದೇಶಗಳ ಮಾರ್ಗವಾಗಿ ಬಹುಮಂದಿ ಬಂದರು. ಕೆಲರು ಹಂಕಾಂಗಿನಲ್ಲಿರುವ ಸಿಪಾಯರಿಗೆ ದುರ್ಬೋಧೆಯನ್ನು ಮಾಡಿದರು. ಬಜ್‌ಬಜ್‌ನಲ್ಲಿ ಆದ ಗದ್ದಲದ ಸಂದರ್ಭದಲ್ಲಿ ಈ ಸಂಚುಗಳ ವಿಷಯವು ಸರ್ಕಾರಕ್ಕೆ ಗೊತ್ತಾಯಿತು. ಹಂಕಾಂಗಿನಿಂದ ೨೦ ಜನರಿಗಿಂತ ಹೆಚ್ಚಾಗಿ ಹೊರಕ್ಕೆ ಹೋಗಗೊಡಿಸಲಿಲ್ಲ. ಈ ಜನರು ಭರತಖಂಡದ ರೇವೆಯಲ್ಲಿಳಿದು ಕೂಡಲೇ ತಾವು ಪಂಜಾಬಿಗೆ ಹೋಗುತ್ತೇವೆಂಬುದನ್ನು ತಿಳಿಸಿದರು. ಬಳಿಕ ಅನ್ಯ ದೇಶಗಳಿಗೆ ಹೋಗಿ ಬಂದವರುಗಳು ಭರತಖಂಡದಲ್ಲಿ ಮಾಡುತ್ತಿರುವ ಕೆಲಸಗಳನ್ನು ವಿವರಿಸಿದರು. ಆದರೆ ಆ ಕೂಡಲೆ ಸರ್ಕಾರದವರು ಈ ಜನರಲ್ಲಿ ಕೆಲಕೆಲರನ್ನು ಅಲ್ಲಿಯೇ ಬಂಧನಕ್ಕೆ ಹಾಕಿದುದರಿಂದ ಇವರು ಮಾಡಿಕೊಂಡಿದ್ದ ಸಂಧಾನಗಳೆಲ್ಲಾ ಭಿನ್ನ ಭಿನ್ನವಾಗಿಹೋಯಿತು. ತಪ್ಪಿಸಿಕೊಂಡವರುಗಳುಮಾತ್ರ ಕೂಟಗಳನ್ನು ಮಾಡುತ್ತಲೂ ಕೊಲೆ ಸುಲಿಗೆಗಳನ್ನು ನಡೆಸುತ್ತಲೂ ಸಿಡಿಮದ್ದುಗಳನ್ನು ಹಾರಿಸುತ್ತಲೂ ಹಣವನ್ನು ಕೂಡಿಸುತ್ತಲೂ ಚಟುವಟಿಕೆಯಿಂದ ಕೆಲಸಮಾಡುತ್ತಿದ್ದಾರೆ. ಇದುವರೆಗೆ ಈ ಜನರು ಎಷ್ಟೋಕಡೆ ಸುಲಿಗೆ ಕಳ್ಳತನಗಳನ್ನು ಮಾಡಿದ್ದಾರೆ. ಇನ್ನು ಕೆಲವನ್ನು ಮಾಡಬೇಕೆಂದು ಆಲೋಚಿಸುತ್ತಿದ್ದಾರೆ. ಇವರುಗಳಿಗೆ ಅಮೇರಿಕಾ ಕಾನಡಾ ದೇಶಗಳಿಂದ ಕೆಲರು ಮದ್ದು ಗುಂಡುಮೊದಲಾದ ಸಾಮಗ್ರಿಗಳನ್ನು ಕಳ್ಳತನದಿಂದ ಕಳುಹಿಸಿಕೊಡುತ್ತಿದ್ದಾರೆ." ಎಂದು ಹೇಳಿದುದಲ್ಲದೆ ಆ ಅಪರಾಧಿಗಳು ಯಾವಯಾವ ಸ್ಥಳದಲ್ಲಿ ಕೊಲೆ ಸುಲಿಗೆಗಳನ್ನು ಮಾಡಿರುವರೆಂಬುದನ್ನು ವಿವರಿಸಿ, ಆ ಅಪರಾಧಿಗಳಲ್ಲಿ ಆರಾರು ಯಾವಯಾವ ಸಂದರ್ಭಗಳಲ್ಲಿ ಹಿಡಿಯಲ್ಪಟ್ಟಿರುವರು ಎಂಬುದನ್ನೂ ಅವರ ಬಳಿಯಲ್ಲಿ ಅಪರಾಧನಿರೂಪಣಕ್ಕೆ ಸಾಧಕವಾದ ವಸ್ತುಗಳಾವುವು ಇದ್ದವೆಂಬುದನ್ನು ವಿವರಿಸಿ, ಹೇಳಿದರು. ಈ ವ್ಯಾಜ್ಯದ ವಿಚಾರಣೆಯು ಪ್ರತಿದಿನವೂ ನಡೆಯುತ್ತಿರುವುದು. ಅಪರಾಧಿಗಳಲ್ಲಿ ೭ ಗುಂಪುಗಳಿರುತ್ತವೆ. ಇವರುಗಳು ಸ್ವತಃ ತಮ್ಮ ಪರವಾಗಿ ವಕೀಲರುಗಳನ್ನು ಏರ್ಪಡಿಸಿಕೊಂಡಿರುತ್ತಾರೆ. ವಕೀಲರು ಇಲ್ಲದೆಇರುವ ಅಪರಾಧಿಗಳ ಪರವಾಗಿ ಸರ್ಕಾರದವರು ಬೇರೆ ವಕೀಲರನ್ನು ಏರ್ಪಡಿಸಿ ಕೊಟ್ಟಿರುತ್ತಾರೆ. ಇದುವರೆಗೆ ಮುಖ್ಯಮುಖ್ಯ ಪೊಲೀಸುದ್ಯೋಗಿಗಳ ವಾಜ್ಮೂಲಗಳೂ ಅಪ್ರೂವರುಗಳ ವಾಜ್ಮೂಲವೂ ಆಗಿದೆ. ಇದರಲ್ಲಿ ಮೇಲಿಕಂಡ ವಿವರಣಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳು ಹೊರಬಿದ್ದಿರುತ್ತವೆ. ಸಿಂಗಪೂರಿನಲ್ಲಿ ನಡೆದ ಗದ್ದಲಕ್ಕೂ ಈ ರಹಸ್ಯಕೂಟದವರ ಬೋಧೆಯೇ ಕಾರಣವೆಂದು ಒಬ್ಬ ಅಪ್ರೂವರು ಹೇಳಿರುತ್ತಾನೆ.

ವಿಷಧೂಮದ ಗೋಳಗಳು.

ಜರ್ಮನರು ಜಗತ್ತಿನ ಅಪವಾದಕ್ಕೆ ಹೆದರದೆ „ಜಂಗಿ" ಗಳಾಗಿ ತಮ್ಮ ಶತ್ರುಗಳನ್ನು ಬಾಹುಬಲದಿಂದ ಜಯಿಸಲಾರದೆ ಕಪಟಾಚರಣೆಗಳಿಂದ ಸೋಲಿಸಬೇಕೆಂದು ಯೋಚಿಸಿ, ಮಾಡುತ್ತಿರುವ ಸಾಹಸಗಳಲ್ಲಿ ವಿಷದಹೊಗೆಯನ್ನು ಮಿತ್ರಮಂಡಲಿಯ ಸೈನಿಕರಮೇಲೆ ಉಪಯೋಗಿಸಿ ಅವರನ್ನು ಉಸಿರುಕಟ್ಟಿಕೊಂಡು ಸ್ಮೃತಿಗೆಡುವಹಾಗೆ ಮಾಡುತ್ತಲಿರುವರೆಂಬ ಸಂಗತಿಯನ್ನು ಕಳೆದ ವಾರದ ಸಂಚಿಕೆಯಲ್ಲಿ ವಿವರಿಸಿರುವೆವಷ್ಟೆ. ಪಶ್ಚಿಮರಣರಂಗದಲ್ಲಿ ಈ ಪ್ರಯೋಗವನ್ನು ಅವರು ಅವ್ಯಾಹತವಾಗಿ ಮಾಡುತ್ತಲೇ ಇದ್ದಾರೆ. ಈ ಅಸ್ತ್ರದ ವಿಷಯವನ್ನು ಕುರಿತು ಪ್ರಕೃತಿಶಾಸ್ತ್ರಪಂಡಿತರಾದ ಪ್ರಸಿದ್ಧ ಡಾಕ್ಟರ್ ಪಿ. ಸಿ. ರೇಯವರು ಹೀಗೆ ಅಭಿಪ್ರಾಯಪಡುತ್ತಾರೆ:—„ಈ ಅಸ್ತ್ರದಲ್ಲಿ ಜರ್ಮನರು "ಕ್ಲೋರೈನ್ ಎಂಬ ವಾಯುವನ್ನೇ ಮುಖ್ಯವಾಗಿ ಉಪಯೋಗಿಸುತ್ತಿರಬಹುದು. ಈ ವಾಯುವು ಶುದ್ಧವಾಯುವಿಗಿಂತ ಬಹಳ ತೂಕವಾಗಿರುವುದರಿಂದ ಒಂದು ಅಗ್ನಿಗೋಳದಿಂದ ಇದು ಹೊರಕ್ಕೆ ಬಿಡಲ್ಪಟ್ಟಾಗ ವಿಸ್ತಾರವಾದ ಪ್ರದೇಶವನ್ನು ಆಕ್ರಮಿಸಿಕೊಳ್ಳುವುದು. ಅದುಕಾರಣ ಅದರಿಂದ ಆಗುವ ಹಾನಿ ಯೆಷ್ಟೆಂಬುದನ್ನು ನಿರ್ಧರಿಸುವುದು ಸುಲಭವಲ್ಲ. ನಿರ್ಮಲವಾದ ಕ್ಲೋರೈನ್ ದ್ರಾವಕದ ಒಂದೆರಡು ಬೊಟ್ಟುಗಳನ್ನು ಒಂದು ಪಾತ್ರೆಯಲ್ಲಿ ಹಾಕಿ ಅದನ್ನು ಒಂದು ವಿಶಾಲವಾದ ಕೋಣೆಯಲ್ಲಿಟ್ಟರೆ ಒಂದು ಕ್ಷಣದೊಳಗಾಗಿ ಆ ಕೋಣೆಯಲ್ಲೆಲ್ಲಾ ವಿಷಜ್ವಾಲೆಯು ತುಂಬಿಕೊಂಡು, ಅಲ್ಲಿದ್ದವರಿಗೆಲ್ಲಾ ಉಸಿರಾಡುವುದಕ್ಕೆ ಅವಕಾಶವಿಲ್ಲದಂತೆ ಮಾಡಬಲ್ಲುದು. ಅದುಕಾರಣ ಒಂದು ಕಂದಕದಲ್ಲಿ ಜನರು ಕಿಕ್ಕಿರಿದಿರುವಾಗ ಇಂಥ ವಿಷವಾಯುವಿನಿಂದ ತುಂಬಿದ ಗೋಳವನ್ನು ಆ ಜನರ ಮಧ್ಯದಲ್ಲಿ ಬೀಳಿಸಿ ಒಡೆಯಿಸಿಬಿಟ್ಟರೆ ಎಷ್ಟು ಹಾನಿಯನ್ನು ಮಾಡಬಲ್ಲುದೋ ಅದನ್ನು ವಾಚಕರು ಊಹಿಸಿಕೊಳ್ಳಬಹುದು. ಆ ಗೋಳವು ಚಲಿಸುತ್ತಿರುವಾಗ ಅದರಲ್ಲಿರುವ ಒಂದು ಸಣ್ಣ ತೂತಿನಿಂದ ಈ ವಾಯುವು ಹೊರಕ್ಕೆ ಹೊರಟು ವ್ಯಾಪಿಸಿಕೊಳ್ಳುವಂತೆ ಏರ್ಪಾಟನ್ನು ಜರ್ಮನರು ಮಾಡಿದ್ದಾರೆ. ಶತ್ರುಗಳಿರುವ ಸ್ಥಲವು ಸಮೀಪದಲ್ಲಿರುವಾಗ ಮಾತ್ರವೇ ಈ ವಿಧಾನವನ್ನು ನಡೆಯಿಸುವುದು ಸಾಧ್ಯವು. ಸಾಧಾರಣವಾಗಿ ಈ ವಾಯುವು ಊರ್ಧ್ವಮುಖವಾಗಿ ಹೋಗುವ ಸ್ವಭಾವವುಳ್ಳುದು. ಅದುಕಾರಣ, ಮೇಲಕ್ಕೆ ಹಾರಿಸಲ್ಪಟ್ಟ ಈ ಅಗ್ನಿಗೋಳವು ಕೆಳಕ್ಕೆ ಬೀಳುವುದರೊಳಗೆ ಅದರಲ್ಲಿನ ವಾಯುವಿನ ಉದ್ರೇಕವು ಎಷ್ಟೋ ಕಡಿಮೆಯಾಗಿ ಹೋಗುವುದರಿಂದ ಅದು ಬಹಳ ಉಪದ್ರವವನ್ನು ಮಾಡಲಾರದು. ಆದರೂ ನಾನಾ ಸಾಹಸದಿಂದ ಜರ್ಮನರು ಈ ವಿಷವಾಯುವಿನಿಂದ ತಮ್ಮ ಶತ್ರುಗಳನ್ನು ಸ್ಮೃತಿತಪ್ಪಿಸುವಂತೆ ಮಾಡಬೇಕೆಂದು ಅವರಿರುವ ಕಂದಕಗಳಿಗೆ ಇದರ ಅಗ್ನಿಗೋಳವನ್ನು ಪ್ರಯೋಗಿಸುತ್ತಿರುವರಷ್ಟೆ, ಇದಕ್ಕೆ ಪ್ರತೀಕಾರವನ್ನು ಮಿತ್ರಮಂಡಲಿಯವರು ಮಾಡಿಕೊಳ್ಳಬಹುದು. ಗಣಿಗಳಿಗೆ ಪರಿಶುದ್ಧವಾದ ವಾಯುವನ್ನು ಯಂತ್ರಗಳ ಸಹಾಯದಿಂದ ಹೇಗೆ ನುಗ್ಗಿಸುವರೋ ಹಾಗೆ ಪರಿಶುದ್ಧವಾಯುವನ್ನು ಮಿತ್ರಮಂಡಲಿಯವರು ತಮ್ಮ ಕಂದಕಗಳಿಗೆ ಬಿಟ್ಟುಕೊಂಡರೆ ಇಂಥ ವಿಷವಾಯುವಿನಿಂದ ಉಂಟಾಗುವ ಅಪಾಯವು ಅಷ್ಟು ಅಧಿಕವಾಗಿರಲಾರದು. ಈ ಏರ್ಪಾಟಿನಿಂದಲೂ ಪ್ರಯೋಜನವಿಲ್ಲದೆ ಹೋದರೆ ಅಗ್ನಿಯಂತ್ರಗಳ ಹತ್ತಿರ ಕೆಲಸಮಾಡುತ್ತಿರುವ ಜನರ ಉಪಯೋಗಗಳಿಗಾಗಿ ಕೊಡಲ್ಪಡುತ್ತಿರುವ ಹೊಗೆಯ ಟೊಪ್ಪಿಗೆಗಳನ್ನು ಸೈನಿಕರಿಗೂ ಕೂಡ ಕೊಡಬೇಕು. ಈ ಟೊಪ್ಪಿಗೆಯ ರಚನೆಯು ಮುಖವನ್ನೂ ತಲೆಯನ್ನೂ ಕೂಡ ಒಂದು ತೆರದ ಮುಸುಕಿನಿಂದ ಮುಚ್ಚಿಕೊಂಡಿರುವಂತೆ ಮಾಡುವುದು. ಆ ಟೊಪ್ಪಿಗೆಗೆ ಒಂದು ಬಟ್ಟೆಯಿರುವುದು, ಅದರಲ್ಲಿ ಹೊಸದಾಗಿ ಸುಟ್ಟ ಕಲ್ಲಿದ್ದಲಿರುವುದು. ಅದು ವಿಷವಾಯುವನ್ನು ತಾನು ಸೆಳೆದುಕೊಂಡು ಶುದ್ಧವಾಯುವನ್ನು ಹೊರಕ್ಕೆ ಬಿಡುತ್ತಿರುವುದು. ಆ ಟೊಪ್ಪಿಗೆಯನ್ನು ಧರಿಸಿದ್ದವರಿಗೆ ಶುದ್ಧವಾಯುವೇ ದೊರೆಯುತ್ತಿರುವುದು. ಮತ್ತೂ ಸೋಡಿಯಂಪೆರಾಕ್ಸೈಡ್ ಎಂಬುದನ್ನು ನೀರಿನಲ್ಲಿ ಕದಡುವುದರಿಂದ ವಾಯುವನ್ನು ಚೈತನ್ಯಸಮೇತವನ್ನಾಗಿ ಮಾಡುವುದಕ್ಕೆ ತಕ್ಕ ಪ್ರಾಣವಾಯುವು ಆ ಟೊಪ್ಪಿಗೆಯಲ್ಲೇ ಇರುವಂತೆ ಏರ್ಪಡಿಸಬಹುದು. ಪ್ರಕೃತಿಶಾಸ್ತ್ರದಿಂದ ಉಂಟಾಗುವ ಒಂದು ಪರಿಣಾಮನ್ನು ಆ ಶಾಸ್ತ್ರಬಲದಿಂದಲೇ ಪರಿಹರಿಸಬಹುದು. ಈ ರೀತಿಯಾದ ಟೊಪ್ಪಿಗೆಯು ಸ್ವಲ್ಪ ಭಾರವಾಗಿದ್ದರೂ ವಿಷವಾಯುವನ್ನು ಅಡಗಿಸುವುದಕ್ಕೆ ಇದು ಅಪ್ರತಿಹತವಾದ ಸಾಧನವಾಗಿರುವುದು." ಎಂದು ಹೇಳಿರುತ್ತಾರೆ. ಇಂತಹುದೋ ಅಥವಾ ಬೇರೆ ತೆರನಾದುದೋ ಅದರ ಪ್ರತಿಕ್ರಿಯಾಸಾಧನವನ್ನು ಇಷ್ಟರೊಳಗೇ ಮಿತ್ರಮಂಡಲಿಯವರು ಉಪಯೋಗಿಸದೆ ಬಿಡರು.

ಕಲ್ಲಿದ್ದಲ ಗಣಿಗಳು ಹಾರಿದಾಗ ಸಂಭವಿಸುವ ಮರಣದ ಕಾರಣವನ್ನು ಸಿದ್ಧಾಂತಪಡಿಸಿದ ಡಾಕ್ಟರ್ ಹಾಲ್ಡೆನ್ ಎಂಬ ಶಾಸ್ತ್ರಜ್ಞರನ್ನು ಜರ್ಮನರ ಅಗ್ನಿಗೋಳಗಳ ವಿಷವಾಯುವಿನಲ್ಲಿರುವ ಸ್ವಭಾವವನ್ನು ಕಂಡುಹಿಡಿಯುವುದಕ್ಕಾಗಿ ಮಿತ್ರಮಂಡಲಿಯವರು ಗೊತ್ತುಮಾಡಿದ್ದರು. ಅವರು ನಡೆಯಿಸಿದ ಪರಿಶೋಧನೆಯಿಂದ ಈ ವಾಯುವಿನಲ್ಲಿ ಚರ್ಮವನ್ನು ಸುಲಿದು ಬಿಡುವ ಗುಣವಿದೆಯೆಂದು ಗೊತ್ತಾಯಿತಂತೆ. ಈ ಗುಂಡುಗಳನ್ನು ಜರ್ಮನರು ಉಪಯೋಗಿಸಿಬಿಟ್ಟ ಬಳಿಕ ಆ ಹೊಗೆಯು ಮುಂದೆಮುಂದೆ ಹೋಗುತ್ತಿದ್ದಕೆ ಅದರ ಹಿಂದೆಯೇ ಶತ್ರುಗಳ ಸ್ಥಾನವನ್ನು ಆಕ್ರಮಿಸುವುದಕ್ಕಾಗಿ ತಾವುಗಳು ಹೋಗುತ್ತಿರುವರು. ಆಗ ಆ ಹೊಗೆಯ ಅನರ್ಥವು ತಮಗೆ ಆಗದಿರಬೇಕೆಂಬುದಕ್ಕಾಗಿ ಒಂದು ತೆರದ ದ್ರುತಿಯಲ್ಲಿ ಅದ್ದಿದ ಸಣ್ಣ ಬಟ್ಟೆಯನ್ನು ಜರ್ಮನರು ಮುಖದ ಮೇಲೆ ಕಟ್ಟಿಕೊಂಡು ನುಗ್ಗುತ್ತಿದ್ದರಂತೆ. ಇಂಥ ಪ್ರತಿಕ್ರಿಯೆಗಳಲ್ಲಿ ಯಾವುದೋ ಒಂದನ್ನು ಮಿತ್ರಮಂಡಲಿಯವರು ಅಣಿಮಾಡಿಯೇ ಇರಬಹುದು. ಅದುಕಾರಣವೇ ಅವರ ವಿಷವಾಯು ಪ್ರಯೋಗದಿಂದ ಬಾಧೆಯುಂಟಾಗದಂತೆ ನಮ್ಮವರು ತಕ್ಕ ಏರ್ಪಾಟನ್ನು ಮಾಡಿಕೊಂಡಿರುವರೆಂದು ಫ್ರೆಂಚ್ ಅಧಿಕಾರಿಗಳು ಹೇಳಿದ್ದಾರೆ.

„ಈಪ್ರೆಸ್ಸಿನ ಬಳಿಯಲ್ಲಿ ಜರ್ಮನರು ವಿಷವಾಯುಪ್ರಯೋಗದ ಸಾಹಸವನ್ನು ಮಾಡದಿದ್ದರೆ ಇಷ್ಟುಹೊತ್ತಿಗೆ ಅವರು ಆ ಪ್ರಾಂತದಿಂದ ಓಡಿಹೋಗಬೇಕಾಗುತ್ತಿದ್ದಿತು. ಈ ಅವರ ಸಾಹಸವು ಹೇಗ್‌ಪಟ್ಟಣದ ನಿಬಂಧನೆಗಳಿಗೆ ವ್ಯತಿರಿಕ್ತವಾದುದು." ಎಂದು ಲಾರ್ಡ್‌ಕಿಚನರ್‌ರವರು ಒಂದು ಸಂದರ್ಭದಲ್ಲಿ ನುಡಿದಿರುತ್ತಾರೆ. ಜರ್ಮನರು ಇದಕ್ಕೆ ಮುಂಚೆ ಅಗ್ನಿದ್ರಾವಕವನ್ನು ಮಿತ್ರಮಂಡಲಿಯ ಸೈನ್ಯದಮೇಲೆ ಪಿಚಕಾರಿಯಿಂದ ಹೊಡೆಯಿಸುವ ಏರ್ಪಾಟನ್ನು ಮಾಡಿದ್ದರು. ಅದಕ್ಕೆ ತಕ್ಕ ಪ್ರತಿಕ್ರಿಯೋಪಾಯವನ್ನು ಮಿತ್ರಮಂಡಲಿಯವರು ಮಾಡಿಕೊಂಡು ಆ ಪ್ರಯೋಗಕ್ಕೆ ಈಗ ಅವರು ಹೆದರುವಹಾಗಿಲ್ಲ. ಇದನ್ನು ಕಂಡು ಜರ್ಮನರು ಈಗ ವಿಷವಾಯುಪ್ರಯೋಗದ ಹಂಚಿಕೆಯನ್ನು ತೆಗೆದಿದ್ದಾರೆ. ಇದನ್ನು ಇಷ್ಟರಲ್ಲಿಯೇ ಮಿತ್ರಮಂಡಲಿಯವರು ನಿರುಪಯೋಗವೆನಿಸದೆ ಬಿಡಲಾರರು.

ಭರತಖಂಡದ ವೃತ್ತಾಂತಗಳು.

ಭರತಖಂಡದ ಈಶಾನ್ಯಭಾಗದಲ್ಲಿ ಈಗ ಮಳೆಯು ಹೆಚ್ಚಾಗಿ ಆಗುತ್ತಿದೆ. ನಮ್ಮ ದಕ್ಷಿಣದೇಶದಲ್ಲೂ ಆಗಿಂದಾಗ್ಗೆ ಆಗುತ್ತಿರುವ ಮಳೆಯು ಬಡಗಲಿನಿಂದಲೇ ಬರುತ್ತಿದೆ.

ನೂತನ ಪ್ರಜಾರಕ್ಷಣಶಾಸನದ ಪ್ರಕಾರ ಮುಲ್ತಾನಿನಲ್ಲಿ ವಿಚಾರಿಸಲ್ಪಡುತ್ತಿರುವ ವ್ಯಾಜ್ಯದಲ್ಲಿ ಇದುವರೆಗೆ ೬೨ ಮಂದಿ ಅಪರಾಧಿಗಳು ನಿರ್ದೋಷಿಗಳೆಂದು ಬಿಡಲ್ಪಟ್ಟರು. ಇನ್ನೂ ವಿಚಾರಣೆಗೆ ೧೨ ವ್ಯಾಜ್ಯಗಳಿವೆಯಂತೆ. ಅವುಗಳಲ್ಲೆಲ್ಲಾ ೧೩೦ ಮಂದಿ ಅಪರಾಧಿಗಳೂ ೭೦೦ ಮಂದಿ ಸಾಕ್ಷಿಗಳೂ ಇರುವರು.

ವೈದ್ಯಪರಿಚಯವಿಲ್ಲದವರು ಕೂಡ ದೊಡ್ಡದೊಡ್ಡ ಪಾಶ್ಚಾತ್ಯ ವೈದ್ಯಶಾಸ್ತ್ರಗಳಲ್ಲಿ ತಮಗೆ ಜ್ಞಾನವಿರುವಂತೆ ಬಿರುದುಗಳನ್ನಿಟ್ಟುಕೊಳ್ಳುತ್ತಿದ್ದಾರೆ. ಇಂಥವರಿಂದ ಪ್ರಜಾವರ್ಗಕ್ಕೆ ಆಗುವ ಅನರ್ಥವನ್ನು ತಪ್ಪಿಸುವುದಕ್ಕೂ ಅನನುಭವಸ್ಥರು ವೈದ್ಯರನ್ನಾಚರಿಸದಂತೆ ಮಾಡುವುದಕ್ಕೂ ಸಹ ಇಂಡಿಯಾ ಸರ್ಕಾರದವರು ಒಂದು ವಿಧಿಯನ್ನೇರ್ಪಡಿಸುವುದರಲ್ಲಿದ್ದಾರೆ.

ಈ ವರ್ಷ ಜಾರ್ಜ್ ಸಾರ್ವಭೌಮರವರ ವರ್ಷವರ್ಧಂತಿಯ ದಿವಸ ಆಂಗ್ಲಸಾಮ್ರಾಜ್ಯದಲ್ಲೆಲ್ಲಿಯೂ ಉತ್ಸವಗಳನ್ನಾಚರಿಸುವುದಿಲ್ಲ. ಅದುಕಾರಣ ಆ ದಿನ ಭರತಖಂಡದಲ್ಲೂ ಪಾಠಶಾಲೆ ಮೊದಲಾದುವುಗಳಿಗೆ ವಿಶ್ರಾಂತಿಯು ಕೊಡಲ್ಪಡುವುದಿಲ್ಲ. ಉಳಿದ ಆಟನೋಟಗಳೂ ನಡೆಯುವುದಿಲ್ಲ. ಆದರೆ ಪದ್ಧತಿಯಂತೆ ಬಿರುದಾವಳಿಗಳು ಯಾರಾರಿಗೆ ಕೊಡಲ್ಪಡಬೇಕೋ ಅವು ಕೊಡಲ್ಪಡುವುವು.

ವಿರಾರತ್ತಿನಲ್ಲಿ ಆಂಗ್ಲಪ್ರಭುತ್ವವನ್ನು ವಿನಾಶಪಡಿಸಬೇಕೆಂಬ ದುಷ್ಟಕೂಟದವರ ಪ್ರಯತ್ನವನ್ನು ತಿಳಿದೂ ಕೂಡ ಕೂಡಲೇ ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿಯಿಸದೆ ಹೋದರು-ರಾಜದ್ರೋಹ ಕೂಟದಲ್ಲಿ ಸೇರಿದ್ದರು-ರಾಜದ್ರೋಹಬೋಧೆಯನ್ನು ಮಾಡಿದರು-ಎಂಬ ಕಾರಣದಿಂದ ಅಲ್ಲಿನ ಅಶ್ವಸೇನೆಯಲ್ಲಿದ್ದ ದಫೇದಾರ್ ಈಷಾಮ್‌ಸಿಂಗ್ ಮೊದಲಾದ ನಾಲ್ಕುಮಂದಿಗಳಿಗೆ ಮಿಲಿಟರಿ ಕೋರ್ಟಿನವರು ಮರಣದಂಡನೆಯನ್ನು ವಿಧಿಸಿದರು. ಅದರಂತೆ ಕಳೆದ ತಾ|| ೨೬ ರಲ್ಲಿ ನೇಣುಹಾಕಿದರು.

ಬಂಗಾಳದ ನದಿಯಾ ಜಿಲ್ಲೆಗೆ ಸೇರಿದ ಭಾರ್‌ಪ್ರಗೂರ್ ಎಂಬ ಗ್ರಾಮಕ್ಕೆ ೨೫ ಮಂದಿ ಬಂಗಾಳಿ ಯುವಕರು ಯೂರೋಪ್ಯರಂತೆ ಉಡುಪುಗಳನ್ನು ತೊಟ್ಟುಕೊಂಡು ಮೊನ್ನೆ ಶುಕ್ರವಾರ ರಾತ್ರಿ ಆಯುಧಪಾಣಿಗಳಾಗಿ ಹೋಗಿ ಒಬ್ಬ ಬಂಗಾಳಿ ಜಮೀಂದಾರನ ಮನೆಗೆ ನುಗ್ಗಿದರು. ಮನೆಯವರು ಇವರನ್ನು ಹಿಡಿಯಬೇಕೆಂದು ಪ್ರಯತ್ನಿಸಿದಾಗ ಇವರು ತಮ್ಮಲ್ಲಿದ್ದ ತುಪಾಕಿಗಳನ್ನು ತೋರಿಸಿ ಹೆದರಿಸಿಬಿಟ್ಟು, ಕಬ್ಬಿಣದ ಪೆಟ್ಟಿಗೆಯನ್ನೊಡೆದು ೭೦೦೦ ರೂ. ಗಳೆ ನಗನಾಣ್ಯಗಳನ್ನು ದೋಚಿಕೊಂಡು ಹೋಗುವಾಗ ಅಡ್ಡಗಟ್ಟಿದ ಗ್ರಾಮಸ್ಥರಿಗೂ ತುಪಾಕಿಯ ಭಯವನ್ನು ತೋರಿಸಿ ಆ ಪೂರಿನ ಬಳಿಯಲ್ಲಿದ್ದ ವಾರ್ತಾ ತಂತ್ರಿಗಳನ್ನು ಕಿತ್ತುಹಾಕಿಬಿಟ್ಟು ಓಡಿಹೋಗಿರುವರು.

ಯುದ್ಧವಾರ್ತೆಯು.

ಪಶ್ಚಿಮರಣರಂಗ.

ಈಪ್ರೆಸ್ಸಿನ ಸುತ್ತಮುತ್ತಲೂ ಇನ್ನೂ ಜರ್ಮನರು ಘೋರಯುದ್ಧವನ್ನು ಬಹಳ ವೀರಾವೇಶದಿಂದ ಮಾಡುತ್ತಿದ್ದಾರೆ. ಇಂಗ್ಲಿಷ್ ಸೇನೆಯು ಈಪ್ರೆಸ್ಸಿಗೆ ಈಶಾನ್ಯದಲ್ಲೂ ಪೂರ್ವದಲ್ಲೂ ನಿಂತು, ಜರ್ಮನರನ್ನು ಈಪ್ರೆಸ್ಸಿನ ಮೇಲೆ ನುಗ್ಗಿಹೋಗದಂತೆ ತಡೆಯುತ್ತಿರಲು, ಅವರ ಮೇಲೂ ಬಿದ್ದರು. ಲಾಂಗ್‌ಹೇಮಾರ್ಕಿನ ಹತ್ತಿರ ಕನಡಾದ ಸೈನ್ಯವು ಫ್ರೆಂಚ್‌ಸೇನೆಯನ್ನು ಹೊದ್ದಿನಿಂತಿದ್ದಿತು. ಅದು ದಟ್ಟವಾಗಿರಲಿಲ್ಲ. ಆ ಬಲಹೀನತೆಯನ್ನು ಜರ್ಮನರು ಕಂಡು ಈಪ್ರೆಸ್ಸಿಗೆ ಹೋಗುವ ಮಾರ್ಗವನ್ನು ಹಿಡಿದು ಮುಂದಕ್ಕೆ ಬಂದು, ಸೆಂಟ್‌ಜುಲಿಯಸ್ ಎಂಬ ಗ್ರಾಮವನ್ನು ಆಕ್ರಮಿಸಿಕೊಂಡರು. ಈಪ್ರೆಸ್ಸಿಗೆ ಪೂರ್ವದಲ್ಲಿದ್ದ ಆಂಗ್ಲಸೇನೆಯ ಮೇಲೆ ಜರ್ಮನರು ಹಲವು ಸಾರಿ ಬಿದ್ದು ಕಾದಾಡಿ ಫಲವಿಲ್ಲದೆ ಹಿಮ್ಮೆಟ್ಟಿಹೋದರು. ಈಶಾನ್ಯದಿಕ್ಕಿನಲ್ಲೂ ಅದೇ ಗತಿಯಾಯಿತು. ಲಾಯಿಪಾರ್ಜಸ್ಸನ್ನು ಮರಳಿ ಮಿತ್ರಮಂಡಲಿಯವರಿಂದ ಕಿತ್ತುಕೊಳ್ಳಬೇಕೆಂದು ಜರ್ಮನರು ವರ್ಡನ್ನಿಗೆ ಆಗ್ನೇಯದಿಕ್ಕಿನಲ್ಲಿ ಭಯಂಕರವಾಗಿ ಕಾದಾಡಿದರು. ಮತ್ತು ಅವರು ಆಲ್ಸೆಸ್ಸಿಗೆ ಸೇರಿದ ವಾಸ್‌ಜಸ್ ಜಿಲ್ಲೆಯಲ್ಲಿರುವ ವೀಲರ್‌ಕಾಪ್ ಎಂಬ ಗ್ರಾಮದ ಮೇಲೆ ಫಿರಂಗಿಗುಂಡುಗಳ ಮಳೆಯನ್ನು ಸುರಿಸಿ, ಅಲ್ಲಿಗೆ ತಮ್ಮ ಸೈನಿಕರನ್ನು ನುಗ್ಗಿಸಿ ಅಲ್ಲಿನ ಎತ್ತರವಾದ ಪ್ರದೇಶದಲ್ಲಿ ಸ್ವಲ್ಪ ಭಾಗವನ್ನು ಆಕ್ರಮಿಸಿಕೊಂಡರು. ಬಳಿಕ ಫ್ರೆಂಚರು ವಿಪರೀತವಾಗಿ ಕಾದಾಡಿ ಅದನ್ನು ಪೂರ್ಣವಾಗಿ ಮತ್ತೆ ವಶಪಡಿಸಿಕೊಂಡರು; ಅದರ ಮುಂದಕ್ಕೂ ಸಾಗಿದರು. ಲಾಯಿಪಾರ್ಜೆಸ್ಸಿನ ಸುತ್ತಮುತ್ತಣ ಪ್ರದೇಶವು ಫ್ರೆಂಚರ ಅಧೀನದಲ್ಲೇ ಇರುವುದು. ಅತ್ತ ಈಪ್ರೆಸ್ಸಿಗೆ ಉತ್ತರದಲ್ಲಿರುವ ಇಂಗ್ಲಿಷ್ ಫ್ರೆಂಚ್ ಸೇನೆಗಳು ಮುಂದುಮುಂದಕ್ಕೆ ಸಾಗುತ್ತ ಶತ್ರುಗಳ ಹಲವು ದೊಡ್ಡ ಫಿರಂಗಿಗಳನ್ನೂ ನೂರಾರುಗಟ್ಟಲೆ ಸೈನಿಕರನ್ನೂ ಹಿಡಿದುಕೊಂಡಿದ್ದಾರೆ. ಅಲ್ಲಿ ಒಂದು ಕಡೆ ಯುದ್ಧವು ಮುಗಿದ ಬಳಿಕ ರಣಾಂಗಣವನ್ನು ನೋಡಿದಾಗ ೧ ಸಾವಿರ ಮಂದಿ ಜರ್ಮನರ ಹೆಣಗಳು ಬಿದ್ದಿದ್ದುದು ಗೋಚರಿಸಿತು. ಇತ್ತ ಮ್ಯೂಜು ನದಿಯ ಬಳಿಯಣ ಉನ್ನತ ಪ್ರದೇಶಗಳ ಮೇಲೂ ಮಿತ್ರಮಂಡಲಿಯವರು ಸಾಗುತ್ತಿದ್ದಾರೆ. ಅಲ್ಲೂ ಜರ್ಮನರಿಗೆ ಯುದ್ಧದಲ್ಲಿ ಬಹಳ ನಷ್ಟವಾಗಿದೆ. ೬೦ ನೆಯ ನಂ. ಗುಡ್ಡವನ್ನು ಮರಳಿ ಹಿಡಿದುಕೊಳ್ಳಬೇಕೆಂದು ಜರ್ಮನರು ಸಾಹಸಮಾಡಿ ಅದರ ಬಳಿಯಲ್ಲೂ ಕಾದಾಡುತ್ತಿದ್ದಾರೆ. ಮಿತ್ರಮಂಡಲಿಯ ಕಡೆಯ ವೈಮಾನಿಕರು ಬೆಲ್ಜಿಯಂ ದೇಶದ ಫ್ಲಾಂಡರ್ಸ್ ಜಿಲ್ಲೆಯಲ್ಲಿರುವ ರೈಲ್ವೆಜಂಕ್ಷನ್ನುಗಳ ಮೇಲೆ ಸಿಡಿಮದ್ದುಗಳನ್ನು ಹಾಕಿ ಮಾರ್ಗಗಳನ್ನೂ ಸೇತುಗಳನ್ನೂ ಹಾಳ್ಮಾಡಿರುವುದರಿಂದ ಜರ್ಮನರು ಫ್ಲಾಂಡರ್ಸಿನಲ್ಲಿರುವ ತಮ್ಮ ಸೇನೆಯನ್ನು ಈಪ್ರೆಸ್ಸಿನ ಕಡೆಗೆ ಕಳುಹಿಸಿಕೊಡಲವಕಾಶವಿಲ್ಲದವರಾಗಿದ್ದಾರೆ. ಮೇಲೆ ಕಂಡ ಕೆಲ ಯುದ್ಧಗಳಲ್ಲಿ ಜರ್ಮನರು ಪಡೆದ ಜಯವು ಕ್ಷಣಿಕವಾಗಿದ್ದುದು ಮಾತ್ರವಲ್ಲದೆ ಅವರ ಕಡೆ ವಿಪರೀತವಾದ ನಷ್ಟವಾಗಿದೆ. ಅವರು ಪಡೆದ ತಾತ್ಕಾಲಿಕವಾದ ವಿಜಯವು ಕೂಡ ವಿಷವಾಯು ಪ್ರಯೋಗದ ಫಲವಾಗಿದೆ. ಈಪ್ರೆಸ್ಸು ಜರ್ಮನರ ಫಿರಂಗಿಯೇಟಿನಿಂದ ಬಹುಭಾಗ ಸುಟ್ಟುಹೋಗಿದೆ. ಜರ್ಮನರು ಮಿತ್ರಮಂಡಲಿಯವರ ಸೇನಾಮುಖವನ್ನು ಭೇದಿಸಲು ಪ್ರಯತ್ನಪಟ್ಟು ಹತಾಶರಾದರು. ಬೆಲ್ಜಿಯಂ ದೇಶದ ಡಂಕರ್ಕ್ ಪಟ್ಟಣದ ಮೇಲೆ ೧೯ ಜರ್ಮನರ ಫಿರಂಗಿಗುಂಡುಗಳು ಹೊಡೆಯಲ್ಪಟ್ಟು ಅದರಿಂದ ಹಲವರಿಗೆ ಏಟುಬಿದ್ದಿತು. ಈ ಗುಂಡುಗಳು ಜರ್ಮನರ ಯುದ್ಧದ ಹಡಗುಗಳ ಫಿರಂಗಿಗಳಿಂದ ಹೊಡೆಯಲ್ಪಟ್ಟಿರಬೇಕೆಂದೂ ಹಾಗಾದರೆ ಜರ್ಮನರ ಯುದ್ಧನಾವೆಗಳು ಬೆಲ್ಜಿಯಂ ದೇಶದ ವರೆಗೂ ಬಂದಿರಬೇಕೆಂದೂ ಊಹಿಸಲವಕಾಶವಾಯಿತು. ಆದರೆ ಅಷ್ಟರೊಳಗೆ ಮಿತ್ರಮಂಡಲಿಯ ವೈಮಾನಿಕರು ಆಕಾಶದಲ್ಲಿ ಸಂಚರಿಸಿ, ಆ ಫಿರಂಗಿಗುಂಡುಗಳು ಹಡಗಿನವಲ್ಲವೆಂದೂ ಭೂಮಿ ಮೇಲಣ ಫಿರಂಗಿಗಳಿಂದಲೇ ಹೊಡೆಯಲ್ಪಟ್ಟುವೆಂದೂ ತಿಳಿದು ಬಂದರು. ಮತ್ತು ಆ ಫಿರಂಗಿಯ ಮೇಲೆ ವೈಮಾನಿಕರು ೧೨ ಸಣ್ಣ ಸಿಡಿಮದ್ದುಗಳನ್ನೂ ೨ ದೊಡ್ಡ ಸಿಡಿಮದ್ದುಗಳನ್ನೂ ಹಾಕಿ ಧ್ವಂಸಮಾಡಿ ಬಂದರು.

ಡಂಕರ್ಕಿಗೆ ಗುಂಡುಗಳನ್ನು ಹಾಕಿದ ಫಿರಂಗಿಯು ಯುದ್ಧನಾವೆಯಲ್ಲಿಡುವ ಫಿರಂಗಿಯೆಂದೂ ಈ ದೊಡ್ಡ ಫಿರಂಗಿಯನ್ನು ಕ್ರುಪ್‌ಕರ್ಮಾಗಾರದ ಶಿಲ್ಪಿಗಳು ೨ ತಿಂಗಳಿಂದಲೂ ಕಷ್ಟಪಟ್ಟು ಡಿಕ್ಸ್‌ಮೂಡಿನಲ್ಲಿ ನಿರ್ಮಿಸಿದ್ದರೆಂದೂ, ಇದು ೨೧ ಮೈಲಿಗಳ ದೂರಕ್ಕೆ ಗುಂಡನ್ನು ಹೊಡೆಯಬಲ್ಲುದಾಗಿತ್ತೆಂದೂ ಗೊತ್ತಾಗುತ್ತದೆ. ಇದು ಕಡೆಗೆ ತನ್ನಲ್ಲಿದ್ದ ಲೋಪದಿಂದಲೇನೆಯೋ ಅಥವಾ ಫ್ರೆಂಚರ ವೈಮಾನಿಕರ ಸಿಡಿಮದ್ದಿನೇಟಿನಿಂದಲೋ ೩ನೆಯಾವೃತ್ತಿ ಗುಂಡುಗಳನ್ನು ಹಾರಿಸುವುದರೊಳಗಾಗಿ ಹಾಳಾಯಿತು. ಜರ್ಮನರು ಈಚೆಗೆ ಮರಳಿ ರೀಮ್ಸ್ ಪಟ್ಟಣದ ಮೇಲೆ ೫೦೦ ಫಿರಂಗಿ ಗುಂಡುಗಳನ್ನು ಹೊಡೆದರು. ಅದರಿಂದ ಊರಿನಲ್ಲೆಲ್ಲಾ ಬೆಂಕಿಯೆದ್ದಿತು. ಆದರೂ ಕೂಡಲೇ ಆರಿಸಲ್ಪಟ್ಟಿತು.

ಪೂರ್ವರಣರಂಗ.

ಜರ್ಮನರ ಗಮನವೆಲ್ಲಾ ಈಗ ಪಶ್ಚಿಮರಣರಂಗದ ಕಡೆ ಹೆಚ್ಚಾಗಿರುವುದರಿಂದ ಪೂರ್ವರಣರಂಗದಿಂದ ಕೆಲವು ಸೈನ್ಯವನ್ನು ಅತ್ತಕಡೆಗೆ ಸಾಗಿಸಿಕೊಂಡು ಹೋಗಿರುವಂತಿದೆ. ಅದುಕಾರಣ ಈ ರಣರಂಗದ ಯುದ್ಧವಾರ್ತೆಯಲ್ಲಿ ವಿಶೇಷವೇನೂ ಇಲ್ಲ. ರಷ್ಯನರೂ ಶತ್ರುಸೈನಿಕರೂ ಉಜುಕ್ ಕಣಿವೆಯಲ್ಲಿ ಸಮಸಮವಾಗಿ ಹೋರಾಡುತ್ತಿದ್ದಾರೆ. ಅತ್ತ ಗೆಲಿಷಿಯಾದಲ್ಲಿ ಸ್ಟ್ರೀಜ್ ಪ್ರಾಂತ್ಯಕ್ಕೆ ನುಗ್ಗಿರುವ ಶತ್ರುಸೈನ್ಯವು ರಷ್ಯನರ ಮೇಲೆ ಪ್ರಬಲವಾಗಿ ಯುದ್ಧಮಾಡುತ್ತಿವೆ. ತಮಗೆ ವಿಶೇಷ ಜಯಲಾಭವಾಗಿರುವುದೆಂದು ಶತ್ರುಗಳು ಹೇಳಿಕೊಳ್ಳುತ್ತಿದ್ದಾರೆ ಉಜುಕ್ ಕಣಿವೆಯ ಬಳಿಯಲ್ಲಿ ಮೊನ್ನೆವಾರವೊಂದರಲ್ಲಿ ಆದ ಯುದ್ಧಗಳೊಳಗೆ ಆಸ್ಟ್ರಿಯಾದವರ ಕಡೆ ೪೩೦೦೦ ಸಾವಿರ ಸೈನಿಕರು ನಷ್ಟವಾಗಿರುವರೆಂದೂ, ಅವರಲ್ಲಿ ೨೧ ಸಾವಿರ ಮಂದಿಗಳು ಸೆರೆಯಾಳುಗಳಾಗಿ ಸಿಕ್ಕಿಹೋಗಿರುವರೆಂದೂ ಗೊತ್ತಾಗುತ್ತದೆ. ಸ್ಟ್ರೀಜ್ ಪ್ರಾಂತ್ಯದಲ್ಲಿ ರಷ್ಯನ್ ಸೈನ್ಯವು ಶತ್ರುಗಳಿದ್ದ ಗುಡ್ಡಗಳನ್ನು ವಶಪಡಿಸಿಕೊಂಡು ೧ ಸಾವಿರ ಮಂದಿ ಸೈನಿಕರನ್ನೂ ಅವರ ಕೆಲ ಫಿರಂಗಿಗಳನ್ನೂ ಸ್ವಾಧೀನಪಡಿಸಿಕೊಂಡಿದ್ದಾರೆ. ಉತ್ತರದಲ್ಲಿ ಬಾಲ್ಟಿಕ್ ಸಮುದ್ರದ ಮೇಲೆ ಜರ್ಮನ್ ನೌಕಾಸೇನೆಯು ಹೋಗಿ ರಷ್ಯನ್ನರಿಗೆ ಸೇರಿದ ಬಾಲ್ಟಿಕ್ ರಾಷ್ಟ್ರದಲ್ಲಿಳಿದು ಪಾನ್ಲಿ ಪ್ರಾಂತವನ್ನು ಆಕ್ರಮಿಸಿಕೊಳ್ಳುತ್ತಿದ್ದಾರೆ. ಆ ಜರ್ಮನ್ ಸೈನ್ಯವು ಹೆಚ್ಚಾಗಿದ್ದುದರಿಂದ ಅಲ್ಲಿ ಕಾವಲಿದ್ದ ರಷ್ಯನ್ ಸೈನ್ಯವು ಬೆದರಿ ಓಡಿಹೋಯಿತು. ಅವರನ್ನು ಅಟ್ಟಿಕೊಂಡು ಹೋದ ಜರ್ಮನರು ರಿಗಾ ರಾಷ್ಟ್ರಕ್ಕೆ ನುಗ್ಗುತ್ತಿರುವಂತೆ ಕಾಣುತ್ತದೆ. ಜರ್ಮನರ ಯುದ್ಧನಾವೆಗಳು ರಿಗಾ ಸಮುದ್ರಶಾಖೆಯೊಳಕ್ಕೆ ನುಗ್ಗಿ ತೀರಪಟ್ಟಣಗಳನ್ನು ಫಿರಂಗಿ ಗುಂಡಿನೇಟಿನಿಂದ ಸುಡುತ್ತಿವೆ. ಹೀಗೆ ಜರ್ಮನರು ರಷ್ಯನ್ ದೇಶಕ್ಕೆ ಬೇರೊಂದು ಕಡೆಯಲ್ಲಿ ತಾವೇ ನುಗ್ಗಿಬಿಟ್ಟರೆ ದಕ್ಷಿಣದಲ್ಲಿ ಆಸ್ಟ್ರಿಯಾದ ಕಡೆ ಅವರು ಶತ್ರುದೇಶದ ಮೇಲೆ ಮಾಡುತ್ತಿರುವ ಅಭಿಯೋಗವು ಕಡಿಮೆಯಾದೀತೆಂದು ಯೋಚಿಸಿರಬಹುದು. ಆದರೆ ಈ ವಿಷಯದಲ್ಲಿ ರಷ್ಯನ್ ಪ್ರಭುತ್ವದವರ ಅಭಿಪ್ರಾಯವು ಹೇಗಿರುವುದೆಂದರೆ—ಜರ್ಮನರು ರಿಗಾ ಪ್ರಾಂತ್ಯಕ್ಕೆ ನುಗ್ಗಿದುದರಿಂದ ಅವರಿಗೆ ಯುದ್ಧಸಂಬಂಧವಾದ ಪ್ರಯೋಜನವಾವುದೂ ಆಗುವ ಹಾಗಿಲ್ಲ. ಒಂದು ತೆರದ ಪ್ರಯೋಜನವು ಮಾತ್ರ ಅವರಿಗಾಗುವುದು. ಏನೆಂದರೆ—ಇದುವರೆಗೆ ಯುದ್ಧಾಗ್ನಿಯ ಬೇಗೆಗೆ ಸಿಲುಕದ ಆ ದೇಶಭಾಗದಲ್ಲಿ ಅವರಿಗೆ ಆಹಾರ್ಯ ಧಾನ್ಯಗಳೂ ಹುಲ್ಲುಸೊಪ್ಪು ಸಹ ಸಿಕ್ಕಬಹುದು. ಅಷ್ಟರ ಹೊರತು ಅವರಿಗೆ ಇನ್ನಾವ ಲಾಭವೂ ಆಗುವ ಹಾಗಿಲ್ಲ.

ತುರ್ಕಿ.

ರಷ್ಯನರ ಯುದ್ಧನಾವೆಗಳು ಬಾಸ್ಪರಸ್ ಜಲಸಂಧಿಯ ಬಳಿಯಣ ತುರ್ಕಿ ಕೋಟೆಗಳ ಮೇಲೆ ಗುಂಡುಗಳನ್ನು ಹೊಡೆಯುತ್ತಲೇ ಇವೆ. ಈ ಹಡಗುಗಳು ತುರ್ಕಿಯವರ ಒಂದು ಕಲ್ಲಿದ್ದಲ ಹಡಗನ್ನೂ ೨ ಹೊಗೆಯ ಹಡಗುಗಳನ್ನೂ ಮುಳುಗಿಸಿರುತ್ತವೆ. ಎಲ್ಮಾಸ್ ಎಂಬ ಕೋಟೆಯಲ್ಲಿದ್ದ ಮದ್ದಿನ ಕೋಣೆಯ ಮೇಲೆ ಗುಂಡನ್ನು ಹಾರಿಸಿ ಸುಟ್ಟುಬಿಟ್ಟಿದ್ದಾರೆ. ಈ ಸಮಯದಲ್ಲಿ ತುರ್ಕಿಯವರೂ ಪ್ರತಿಯಾಗಿ ಗುಂಡುಗಳನ್ನು ಹಾರಿಸಿದರೂ ಅವರಿಗೆ ಫಲವೇನೂ ಆಗಲಿಲ್ಲ. ರಷ್ಯನ್ ಸೈನ್ಯಗಳು ಮತ್ತೊಂದು ಕಡೆ ಪರ್ಷ್ಯಾಕ್ಕೆ ಉತ್ತರದಲ್ಲಿ ಅಜಾರ್‌ಬೈಜಾನ್ ಜಿಲ್ಲೆಯಲ್ಲಿರುವ ಕೊಟೋರಿನಲ್ಲಿರುವ ತುರ್ಕಿ ಸೇನೆಯ ಮೇಲೆ ಬಿದ್ದು ಕಾದು ಓಡಿಸಿ, ಆ ಸ್ಥಲವನ್ನು ಆಕ್ರಮಿಸಿಕೊಂಡಿವೆ. ಕಾಕಸಸ್ ಪ್ರಾಂತದಲ್ಲಿ ಖಾಲಿಜೆಯ ೧೧ ಸೇನಾಧಿಪತಿಯ ಕೈಕೆಳಗಿದ್ದ ತುರ್ಕಿಸೈನ್ಯದಮೇಲೆ ರಷ್ಯನರು ೩ ದಿವಸದವರೆಗೆ ಯುದ್ಧಮಾಡಿ ಓಡಿಸಿದರು. ಅಲ್ಲಿ ೩|| ಸಾವಿರ ತುರ್ಕಿ ಸೈನಿಕರು ರಣರಂಗದಲ್ಲೇ ಹತರಾದರೆಂದೂ ಉಳಿದವರನು ಬೆನ್ನಟ್ಟಿಕೊಂಡು ಹೋಗುತ್ತಿರುವೆವೆಂದೂ ರಷ್ಯನರು ಪ್ರಕಟಿಸಿದ್ದಾರೆ. ಇತ್ತ ಗಲ್ಲಿಪೋಲಿ ದ್ವೀಪದ ಮೇಲಿಂದ ಇಂಗ್ಲಿಷ್ ಸೇನೆಯು ಆಸ್ಟ್ರೇಲಿಯಾ ನ್ಯೂಜಿಲ್ಯಾಂಡ್ ಸೇನೆಯೊಡನೆ ಕೂಡಿ ತುರ್ಕಿ ಕೋಟೆಗಳ ಸಮೀಪಕ್ಕೆ ಹೋಗುತ್ತಿವೆ. ಫ್ರೆಂಚ್ ಸೇನೆಗಳು ಆಸ್ಯಾದ ತುರ್ಕಿಯಲ್ಲಿನ ದೇಶಭಾಗವನ್ನು ಸ್ವಾಧೀನಪಡಿಸಿಕೊಳ್ಳುತ್ತ ನುಗ್ಗುತ್ತಿವೆ. ಬಹುಮಂದಿ ತುರ್ಕಿಯವರನ್ನು ಸೆರೆಹಿಡಿದುಕೊಂಡೂ ಇದ್ದಾರೆ.

ಸೂಯೆಜ್ ಕಾಲ್ವೆಯನ್ನು ಕಾಯುತ್ತಿದ್ದ ಬಿಕನೀರಿನ ಒಂಟೆಯ ಸೈನ್ಯದವರಿಗೆ ಕಾಲ್ವೆಯಿಂದ ೧೨ ಮೈಲಿ ದೂರದಲ್ಲಿ ತುರ್ಕಿಸೇನೆಯಿರುವುದೆಂದು ಕಾಣಿಸಿತು. ಅದರ ಮೇಲೆ ಅತ್ತಕಡೆಗೆ ಈ ಸೈನ್ಯವು ಹೋಗಲು ತುರ್ಕಿಯವರು ತುಪಾಕಿಗುಂಡುಗಳನ್ನು ಹೊಡೆದರು. ಅದರ ಮೇಲೆ ಯುದ್ಧವಾದುದರಲ್ಲಿ ತುರ್ಕಿ ಸೇನೆಯಲ್ಲಿ ಕೆಲವರು ನಮ್ಮವರಿಗೆ ಸೆರೆಸಿಕ್ಕಿದುದಲ್ಲದೆ ಉಳಿದವರೆಲ್ಲಾ ಕಷ್ಟಪಟ್ಟುಕೊಂಡು ಓಡಿಹೋದರು.

ಡಾರ್ಡನೆಲ್ಸ್.

ಕಳೆದ ತಿಂಗಳು ತಾ|| ೨೫ನೆ ಭಾನುವಾರದಿಂದ ಈ ಜಲಸಂಧಿಯಲ್ಲಿ ವಿಶೇಷವಾಗಿ ಯುದ್ಧಕಾರ್ಯಗಳು ನಡೆದಿರುವುವು. ಆದಿನ ಬೆಳಗಿನಜಾವದ ೪ ಗಂಟೆಯಿಂದ ಮಿತ್ರಮಂಡಲಿಯ ಸೈನಿಕರು ದಡಗಳಲ್ಲಿಳಿಯುವುದಕ್ಕಾರಂಭಿಸಿದರು. ಅವರ ಮೇಲೆ ತುರ್ಕಿ ಸೈನ್ಯವು ವೀರಾವೇಶದಿಂದ ಬಿದ್ದು ಅವರು ಹಿಂತಿರುಗಿ ಹಡಗುಗಳಿಗೆ ಏರಿಹೋಗಬೇಕು, ಅಥವಾ ಸಮುದ್ರದ ಪಾಲಾಗಬೇಕು ಎಂಬುವಹಾಗೆ ಮಾಡಬೇಕೆಂದು ಸೆಣಸಾಡಿದರು. ಆದರೆ ಮಿತ್ರಮಂಡಲಿಯ ಹಡಗುಗಳು ತುರ್ಕಿ ಸೇನೆಯಮೇಲೆ ಗುಂಡಿನ ಸುರಿಮಳೆಯನ್ನು ಮಾಡಿದುದರಿಂದಲೂ ಸೈನಿಕರ ಗುಂಡಿನೇಟುಗಳಿಂದಲೂ ತುರ್ಕಿಯವರ ಆಟವು ಸಾಗದೆಹೋಯಿತು. ಹೀಗಾಗಿ ಆ ಸೈನ್ಯವು ಆ ದಡಗಳಲ್ಲಿ ಬೇರೆಬೇರೆ ಆರುಕಡೆ ಇಳಿದಿತು. ಅಲ್ಲೆಲ್ಲಾ ಶತ್ರುಗಳು ಸಾಲುಸಾಲಾಗಿ ಕಂದಕಗಳನ್ನು ತೋಡಿಕೊಂಡು ಅವುಗಳಿಂದ ಫಿರಂಗಿಗುಂಡುಗಳನ್ನೂ ತುಪಾಕಿಗುಂಡುಗಳನ್ನೂ ಪ್ರಯೋಗಿಸುತ್ತಿದ್ದರೂ ನಮ್ಮ ಕಡೆಯ ಸೈನಿಕರು ೫ ಕಡೆಗಳಲ್ಲಿ ಸಾಮರ್ಥ್ಯದಿಂದ ದಡವನ್ನೇರಿದರು. ೬ ನೆ ಕಡೆಯು ಸೆಡ್ಡೆಲ್‌ಬಾರ್ ಎಂಬುದಕ್ಕೆ ಸಮೀಪದಲ್ಲಿದ್ದಿತು. ಈ ಸ್ಥಲದಲ್ಲಿ ಸಾಯಂಕಾಲದವರೆಗೆ ಸೆಣಸಾಡಿದರೂ ನಮ್ಮ ಸೈನಿಕರು ಮುಂದಕ್ಕೆ ಹೋಗಲಾರದೆ ಹೋದರು. ಶತ್ರುಗಳು ಕಂದಕಗಳಮುಂದೆ ೫೦ ಗೆಜಗಳವರೆಗೂ ಮುಳ್ಳಿನ ತಂತಿಗಳ ಬೇಲಿಗಳಿದ್ದುವು. ಕೆಲಕಡೆ ಹಳ್ಳಗಳಲ್ಲಿ ನಿಶಿತವಾದ ಶೂಲಗಳನ್ನ ನೆಟ್ಟಿದ್ದರು. ನಮ್ಮ ಕಡೆಯ ಪದಾತಿಸೈನ್ಯವು ಸಾಯಂಕಾಲದ ಹೊತ್ತಿಗೆ ಟೆಕ್ಕಿನ ತುದಿಯಭಾಗದಿಂದ ಶತ್ರುಗಳಮೇಲೆ ಬಿದ್ದು ಬಲವಾಗಿ ಯುದ್ಧಮಾಡಿ ಶತ್ರುಗಳನ್ನು ಹಿಮ್ಮುಖಮಾಡಿದರು. ಆಗ ಅಲ್ಲೂ ಸೈನ್ಯವೆಲ್ಲಾ ಇಳಿದಿತು. ಮೊದಲನೇದಿವಸ ಮೂರು ಮುಖ್ಯಸ್ಥಲಗಳಲ್ಲಿ ಮಿತ್ರಮಂಡಲಿಯ ಸೈನ್ಯಗಳು ದಡಗಳನ್ನು ಸೇರಿ ನೆಲಸಿದುವು. ಆಸ್ಟ್ರೇಲಿಯಾ ಸೈನಿಕರೂ ನ್ಯೂಜಿಲ್ಯಾಂಡು ಸೈನಿಕರೂ ಒಂದುಕಡೆಯೂ ಆಂಗ್ಲಸೇನೆಯು ಟೇಕಿನ ತುದಿಯಲ್ಲೂ, ಹೇಲೇಸ್ ತುದಿಯಲ್ಲೂ, ಮಾರ್ಟೋ ಕೊಲ್ಲಿಯ ಬಳಿಯಲ್ಲೂ ಇದ್ದುವು. ಫ್ರೆಂಚ್ ಸೇನೆಯು ಎಲಿಷನ್ನಿನಹತ್ತಿರ ತುರ್ಕಿಯವರಮೇಲೆ ಬಿದ್ದು ಯುದ್ಧಮಾಡಿ ಜಲಸಂಧಿ ಮುಖದಲ್ಲಿರುವ ಕುಂಕಲೆ ಹತ್ತಿರ ನಿಂತಿದ್ದಿತು. ಹೀಗೆ ಒಂದುಕಡೆ ಮಿತ್ರಮಂಡಲಿಯವರು ಶತ್ರುಗಳೊಡನೆ ಯುದ್ಧಮಾಡುತ್ತಲೂ ಒಂದುಕಡೆಯಲ್ಲಿ ತಮ್ಮ ಸೈನ್ಯಗಳನ್ನು ದಡಗಳಲ್ಲಿಳಿಸುತ್ತಲೂ ಇದ್ದರು. ತಾ|| ೨೬ರ ಬೆಳಗ್ಗೆ ಸೆಡ್ಡಲ್‌ಬಾರ್ ಎಂಬ ಗ್ರಾಮವು ತುರ್ಕಿಯವರ ವಶದಲ್ಲೇ ಇದ್ದಿತು. ಅದರ ಹತ್ತಿರ ಸುತ್ತಲೂ ಎತ್ತನೋಡಿದರೂ ನೆಲದೊಳಗಣ ಸುರಂಗಗಳೂ ಕಂದಕಗಳೂ ಮುಳ್ಳಿನ ಬೇಲಿಗಳೂ ನೆಡಲ್ಪಟ್ಟ ಕಬ್ಬಿಣದ ಅಲಗುಗಳುಳ್ಳ ಗೂಟಗಳೂ ಕಾಣುತ್ತಿದ್ದುವು. ಯುದ್ಧನಾವೆಗಳ ಫಿರಂಗಿಗಳ ಸಾಹಾಯ್ಯದಿಂದ ಆಂಗ್ಲಸೈನಿಕರು ಈ ಗ್ರಾಮದ ಬಳಿಯಲ್ಲಿದ್ದ ತುರ್ಕಿ ಸೈನಿಕರಮೇಲೆ ಬಿದ್ದು ಹೋರಾಡಿ ಮಧ್ಯಾಹ್ನ ೨ ಗಂಟೆಯಹೊತ್ತಿಗೆ ಆ ಗ್ರಾಮವನ್ನು ವಶಪಡಿಸಿಕೊಂಡರು. ಆಗ ತುರ್ಕಿಯವರ ೪ ಫಿರಂಗಿಗಳು ಇವರ ವಶವಾದುವು. ತಾ|| ೨೭ರ ಬೆಳಗ್ಗೆ ಮಿತ್ರಮಂಡಲಿಯ ಸೇನೆಗಳು ಹೇಲೇಸಿನ ಅಗ್ರಭಾಗದಲ್ಲಿ ತಮ್ಮ ಮೇಲೆ ಬಿದ್ದ ತುರ್ಕಿ ಸೇನೆಗಳನ್ನು ಹಿಂದಕ್ಕಟ್ಟಿ ತಾವೇ ಮುಂದಕ್ಕೆ ಹೋಗಿ ೮ ಗಂಟೆಯ ಹೊತ್ತಿಗೆ ಟೆಕ್ಕಿನ ಅಗ್ರಕ್ಕೆ ಉತ್ತರಭಾಗದಲ್ಲಿ ೨ ಮೈಲುಗಳ ದೂರದಿಂದ ಬಹುದೂರದವರೆಗೆ ವ್ಯಾಪಿಸಿಕೊಂಡಿದ್ದ ಶತ್ರುಗಳ ಕಂದಕಗಳನ್ನು ವಶಪಡಿಸಿಕೊಳ್ಳುತ್ತ ಹೋದುವು. ಈ ಕಾರ್ಯವನ್ನು ಆಸ್ಟ್ರೇಲಿಯಾ ನ್ಯೂಜಿಲ್ಯಾಂಡ್ ಸೈನ್ಯಗಳು ಬಹಳ ಧೈರ್ಯಪರಾಕ್ರಮದಿಂದ ನಡೆಯಿಸಿ ಜಯಶಾಲಿಗಳಾದುವು. ಈ ಸಮಯದಲ್ಲಿ ಇವರಮೇಲೆ ತುರ್ಕಿ ಸೈನಿಕರು ಬಹಳ ದಿಟ್ಟತನದಿಂದ ಫಿರಂಗಿ ಯುದ್ಧವನ್ನೂ ತುಪಾಕಿ ಯುದ್ಧವನ್ನೂ ಅನೇಕಾವೃತ್ತಿ ನಡೆಯಿಸಿದರು. ಆದರೂ ಇದಿರುಪಕ್ಷದವರ ಪರಾಕ್ರಮದ ಮುಂದೆ ನಿಲ್ಲಲಾರದೆ ಸೋತು ಹಿಮ್ಮೆಟ್ಟಿದರು. ತಾ|| ೨೭ರಲ್ಲಿ ಕುಂಕಲೆಯ ಹತ್ತಿರ ಫ್ರೆಂಚ್‌ಸೇನೆಯಮೇಲೆ ತುರ್ಕಿಯವರು ನಾಲ್ಕಾವೃತ್ತಿ ಬಿದ್ದು ಕಾದಾಡಿದರು. ಏನೂ ಲಾಭಪಡೆಯಲಿಲ್ಲ. ಹಡಗುಗಳು ಫಿರಂಗಿ ಗುಂಡಿನೇಟಿನಿಂದ ತುರ್ಕಿಯ ದೊಡ್ಡ ಸೇನೆಯಿಂದ ಒಡೆದುಕೊಂಡುಹೋದ ೫೦೦ ಮಂದಿ ತುರ್ಕಿ ಸೈನಿಕರು ಫ್ರೆಂಚರು ಸೆರೆಹಿಡಿದರು. ೨೭ನೇ ತಾರೀಖಿನ ಮಧ್ಯಾಹ್ನ ತುರ್ಕಿಯವರ ಸೇನೆಯನ್ನು ಸಾಗಿಸಿಕೊಂಡುಹೋಗುವ ಒಂದು ಹಡಗು ಮೈಡಾಸಿನಹತ್ತಿರ ಇರುವುದೆಂಬ ಸುದ್ದಿಯನ್ನು ಕ್ವೀನ್ ಎಲಿಸಬೆತ್ ಎಂಬ ಹಡಗು ಕೇಳಿ, ಅಲ್ಲಿಗೆ ಹೋಗಿ ಆ ತುರ್ಕಿಹಡಗಿನಮೇಲೆ ಗುಂಡನ್ನು ಹೊಡೆದು ದಡುಮ್ಮನೆ ಮುಳುಗಿಸಿಬಿಟ್ಟಿತು. ನಾಗಾರದ ಹತ್ತಿರ ತುರ್ಕಿಯ ಯುದ್ಧನಾವೆಗಳು ಅಣಿಯಾಗಿ ನಿಂತು ನಮ್ಮ ಸೇನೆಗಳಮೇಲೆ ಕಾರ್ಯಭಾರವನ್ನು ಮಾಡಬೇಕೆನ್ನುತ್ತಿರುವಷ್ಟರಲ್ಲಿ ಕ್ವೀನ್ ಎಲಿಜಬೆತ್ ನಾವೆಯು ಅಲ್ಲಿ ಕಾಣಿಸಿಕೊಂಡಕೂಡಲೆ ಹಿಮ್ಮೆಟ್ಟಿ ತಲೆತಪ್ಪಿಸಿಕೊಂಡುಹೋದುವು. ೨೮-೨೯ ನೇ ತಾರೀಖುಗಳಲ್ಲಿ ಮಿತ್ರಮಂಡಲಿ ಸೈನ್ಯಗಳು ಸ್ವಲ್ಪ ವಿಶ್ರಾಂತಿಯನ್ನು ತೆಗೆದುಕೊಂಡು, ಅದುವರೆಗೆ ತಾವು ಆಕ್ರಮಿಸಿಕೊಂಡಿದ್ದ ಸ್ಥಲವನ್ನು ಬಲಪಡಿಸಿಕೊಂಡರು. ಈಗ ಗಾಲಿಪೋಲಿ ದ್ವೀಪಕಲ್ಪದಲ್ಲಿ ಮಧ್ಯಭಾಗವು ಆಂಗ್ಲಸೈನ್ಯದ ಸ್ವಾಧೀನದಲ್ಲಿದೆ. ಸಾರಿಬಾಯರ್ ಹತ್ತಿರದ ಪ್ರದೇಶವನ್ನು ಆಸ್ಟ್ರೇಲಿಯ ನ್ಯೂಜಿಲ್ಯಾಂಡ್ ಸೈನ್ಯಗಳು ವಶಪಡಿಸಿಕೊಂಡಿವೆ. ಏಷ್ಯಾಖಂಡದ ಪಕ್ಕದ ತೀರಗಳನ್ನು ಫ್ರೆಂಚ್ ಸೈನ್ಯಗಳು ವಶಪಡಿಸಿಕೊಂಡಿವೆ. ಜಲಸಂಧಿಯ ಮುಖದ ತಾವಿನಿಂದಲೂ ತುರ್ಕಿಯವರ ಹಲವು ಕೋಟೆಗಳಿಂದ ಫಿರಂಗಿ ಗುಂಡುಗಳು ಮೊದಮೊದಲು ಹೊಡೆಯಲ್ಪಡುತ್ತಿದ್ದುವು. ಪ್ರತಿಯಾಗಿ ಮಿತ್ರಮಂಡಲಿಯ ಯುದ್ಧನಾವೆಗಳು ಗುಂಡಿನೇಟಿನ ಮಳೆಯನ್ನು ಸುರಿಸಿ ಆ ಫಿರಂಗಿಗಳ ಸದ್ದನ್ನು ಕುಗ್ಗಿಸಿ ಒಳಕ್ಕೆ ನುಗ್ಗಿಹೋಗಿ ಇಷ್ಟು ಕಾರ್ಯಗಳನ್ನು ನಡೆಯಿಸಿರುವುವು. ಈ ಸೈನ್ಯಗಳು ತೋರಿಸಿದ ಸಾಮರ್ಥ್ಯಕ್ಕೂ ಪಡೆದ ಜಯಕ್ಕೂ ನಮ್ಮ ಸಾರ್ವಭೌಮರು ಇಲ್ಲಿನ ಸೇನಾಧಿಪತಿಗಳನ್ನು ಅಭಿನಂದಿಸಿ ತಮ್ಮ ಮೆಚ್ಚುಗೆಯನ್ನು ಎಲ್ಲ ಸೈನಿಕರಿಗೂ ತಿಳಿಸಿರುವರು. ತಾ|| ೨೯ ರಲ್ಲಿ ತುರ್ಕಿಯವರ ಕೋಟೆಗಳಮೇಲೆ ನಮ್ಮ ಯುದ್ಧನಾವೆಗಳು ಗುಂಡುಗಳನ್ನು ಸುರಿಸಿದುವು. ಟ್ರಯಂಫ್ ಎಂಬ ಹಡಗು ಮಯಿಡ್ಸಾ ಎಂಬ ಕೋಟೆಯಮೇಲೆ ಹೊಡೆದ ಗುಂಡಿನೇಟಿನಿಂದ ಆ ಕೋಟೆಯಲ್ಲಿದ್ದ ಮದ್ದಿನ ಮನೆಯು ಸುಟ್ಟು ಕೋಟೆಯು ಉರಿದಿತು. ಈ ಮೇಲೆ ವಿವರಿಸಿದ ಎಲ್ಲ ಯುದ್ಧದಲ್ಲೂ ಮಿತ್ರಮಂಡಲಿಯವರ ಕಡೆಗೆ ವಿಶೇಷ ಸೇನಾ ನಷ್ಟವಾಗಿರುವುದು. ಸಂಖ್ಯೆ ಯೆಷ್ಟೆಂಬುದು ಇನ್ನೂ ಪ್ರಕಟವಾಗಿಲ್ಲ. ತುರ್ಕಿಯವರಕಡೆ ಇನ್ನೂ ವಿಶೇಷ ನಷ್ಟವೂ ಸೋಲೂ ಆಗಿರುವುದು. ಅವರ ಕಡೆಯ ೧೮೦೦ ಮಂದಿ ಸೈನಿಕರನ್ನು ಫ್ರೆಂಚರೂ ೧೨೦೦ ಮಂದಿ ಸೈನಿಕರನ್ನು ಆಂಗ್ಲರೂ ಸೆರೆಯಾಳುಗಳನ್ನಾಗಿ ಹಿಡಿದಿರುವರೆಂದೂ ಪ್ರಕಟವಾಗಿದೆ.

ತಾ|| ೨೭ ನೆ ಮಂಗಳವಾರದ ದಿನ ಮೂರು ಯುದ್ಧನಾವೆಗಳು ಸ್ಮರ್ನಾದ ಹತ್ತಿರದ ಸಮುದ್ರ ಶಾಖೆಯಲ್ಲಿ ನುಗ್ಗಿ ತುರ್ಕಿ ಕೋಟೆಗಳ ಮೇಲೆ ಗುಂಡುಗಳನ್ನು ಹೊಡೆದುವು. ಈನಾಸಿನ ಹತ್ತಿರ ದಡದಲ್ಲಿಳಿದ ಮಿತ್ರಮಂಡಲಿಯ ಸೈನ್ಯಗಳು ೨೦ ಮೈಲಿಗಳ ವರೆಗೆ ನುಗ್ಗಿಹೋಗಿ ಅನೇಕ ಗ್ರಾಮಗಳನ್ನು ಆಕ್ರಮಿಸಿಕೊಂಡಿರುವುವೆಂದು ಪ್ರಕಟವಾಗಿದೆ.

ಜಲಯಾನಗಳು.

ಕಳೆದ ತಾ|| ೨೯ ಕ್ಕೆ ಕಡೆಯಾದ ವಾರದಲ್ಲಿ ಇಂಗ್ಲೀಷ್ ತೀರಗಳಿಗೆ ೧೪೪೧ ವ್ಯಾಪಾರದ ಹಡಗುಗಳು ಬಂದು ಹೋಗಿ ಹೋಗಿರುತ್ತವೆ. ೧ ವ್ಯಾಪಾರದ ಹಡಗನ್ನೂ ೪ ಬೆಸ್ತರ ಹಡಗನ್ನೂ ಜರ್ಮನರು ಮುಳುಗಿಸಿದ್ದಾರೆ. ಈ ವಾರದ ಅವರ ಕೆಲಸವು ಸ್ವಲ್ಪ ಚುರುಕಾಗಿ ನಡೆದಿರುವಂತೆಕಾಣುತ್ತದೆ. ಮೆಸೆಡೋನಿಯಾ ಎಂಬ ಜರ್ಮನರ ಹಡಗನ್ನು ಒಂದು ಇಂಗ್ಲೀಷ್ ಕ್ರೂಜರು ಹಿಡಿದುಕೊಂಡಿತು. ಒಂದು ಜರ್ಮನ್ ಸಬ್‌ಮೆರೀನು ಬ್ಲಾಸ್ಕೆಟ್ ದ್ವೀಪದ ಹತ್ತಿರ ಕಲ್ಲಿದ್ದಲನ್ನು ತುಂಬಿಕೊಂಡು ಹೋಗುತ್ತಿದ್ದ ಒಂದು ರಷ್ಯನ್ ಹಡಗನ್ನು ಟಾರ್ಪೆಡೋವಿನಿಂದ ಹೊಡೆದು ಮುಳುಗಿಸಿತು.

ಉತ್ತರಸಮುದ್ರದಲ್ಲಿ ಒಂದು ಸಣ್ಣ ಹಡಗಿನ ಯುದ್ಧವಾಯಿತು. ಜರ್ಮನರ ೨ ಟಾರ್ಪೆಡೋಗಳನ್ನು ಕೆಲವು ಇಂಗ್ಲೀಷ್ ಡಿಸ್ಟ್ರಾಯರುಗಳು ಅಟ್ಟಿಕೊಂಡು ಹೋಗಿ ಗುಂಡಿನಿಂದ ಹೊಡೆದು ಮುಳುಗಿಸಿದುವು. ಬಳಿಕ ಮತ್ತೊಂದು ಜರ್ಮನರ ಹಡಗು ಟಾರ್ಪೆಡೋವಿನ ಏಟಿನಿಂದ ಕೊಲಂಬಿಯಾ ಎಂಬ ಇಂಗ್ಲೀಷರ ಹಡಗನ್ನು ಮುಳುಗಿಸಿತು. ಬಳಿಕ ಇಂಗ್ಲೀಷರ ನಾಲ್ಕು ಯುದ್ಧನಾವೆಗಳು ಉಳಿದಿದ್ದ ಜರ್ಮನರ ಹಡಗುಗಳನ್ನು ಅಟ್ಟಿಕೊಂಡು ಹೋಗಿ ಒಂದು ಗಂಟೆಯ ಹೊತ್ತಿನಲ್ಲಿ ಮುಳುಗಿಸಿಬಿಟ್ಟುವು ಇಂಗ್ಲೀಷ್ ಡಿಸ್ಟ್ರಾಯರಿನಲ್ಲಿದ್ದವರೊಳಗೆ ಯಾರೂ ನಷ್ಟವಾಗಲಿಲ್ಲ. ಜರ್ಮನರ ಹಡಗಿನಲ್ಲಿದ್ದವರೊಳಗೆ ಇಬ್ಬರು ಅಧಿಕಾರಿಗಳನ್ನೂ ೪೪ ಮಂದಿ ನಾವಿಕರನ್ನೂ ರಕ್ಷಿಸಿ ಸೆರೆಯಾಗಿ ಹಿಡಿದರು. ರಿಕ್ರೂಟ್ ಎಂಬ ಇಂಗ್ಲೀಷ್ ಹಡಗಿನಲ್ಲಿದ್ದವರಲ್ಲಿ ೪ ಮಂದಿ ಅಧಿಕಾರಿಗಳೂ ೨೧ ಮಂದಿ ನಾವಿಕರೂ ಮಾತ್ರ ರಕ್ಷಿಸಲ್ಪಟ್ಟರು.

ಕುಷಿಂಗ್ ಎಂಬ ಅಮೆರಿಕಾದ ವ್ಯಾಪಾರಿ ಹಡಗಿನಮೇಲೆ ಜರ್ಮನ್ ವೈಮಾನಿಕರು ಉತ್ತರಸಮುದ್ರದಲ್ಲಿ ಸಿಡಿಮದ್ದುಗಳೆರಡನ್ನು ಹಾಕಿದರು. ಆ ಹಡಗಿನಮೇಲೆ ೬ ಅಡಿಗಳುದ್ದದ ಅಕ್ಷರಗಳಿಂದ ಅದರ ಹೆಸರು ಬರೆಯಲ್ಪಟ್ಟಿದ್ದಿತು. ಅದು ಅಮೆರಿಕನ್ನರದೆಂದು ಸ್ಪಷ್ಟವಾಗಿದ್ದರೂ ಜರ್ಮನರು ಮಾಡಿದ ಈ ಚೇಷ್ಟೆಯಿಂದ ಅಮೆರಿಕನ್ ಜನರು ಆಗ್ರಹಗೊಂಡಿದ್ದಾರೆ. ದಕ್ಷಿಣಾಮೇರಿಕಾದಿಂದ ಬರುತ್ತಿದ್ದ ಎಡೆಲ್ ಎಂಬ ಹಡಗಿನ ಮೇಲೂ ಜರ್ಮನರು ಟಾರ್ಪೆಡೋವನ್ನು ಹೊಡೆದಿದ್ದಾರೆ. ಯೂರೋಪ್ ಎಂಬ ಫ್ರೆಂಚ್ ಹಡಗಿನಮೇಲೆ ಜರ್ಮನರ ಒಂದು ಸಬ್‌ಮೆರೀನು ಫಿರಂಗಿಗುಂಡುಗಳನ್ನು ಹೊಡೆದು, ಅದರಿಂದ ಫಲವನ್ನು ಕಾಣದೆ ಹೋಗಲಾಗಿ ಕಡೆಗೆ ಟಾರ್ಪೆಡೋವಿನಿಂದ ಹೊಡೆದು ಮುಳುಗಿಸಿತು. ಎಲ್ಲಿಡಾ ಎಂಬ ಸ್ವೀಡನ್‌ದೇಶದ ಹಡಗನ್ನೂ, ಗೆಲ್ಫ್‌ಲೈಟ್ ಎಂಬ ಅಮೇರಿಕನ್ ಹಡಗನ್ನೂ ಜರ್ಮನರು ಟಾರ್ಪೆಡೋ ಏಟಿನಿಂದ ಮುಳುಗಿಸಿಬಿಟ್ಟರು. ಎರಡರಲ್ಲೂ ಇದ್ದವರಲ್ಲಿ ಕೆಲರು ಮಾತ್ರ ಬದುಕಿಸಲ್ಪಟ್ಟು ಉಳಿದವರು ನೀರಿನ ಪಾಲಾದರು. ಅಮೇರಿಕನ್ನರ ಹಡಗಿನ ಕ್ಯಾಪ್ಟನ್ನೂ ಇಬ್ಬರು ಕಳಾಸಿಗಳೂ ಸತ್ತಿರುವರು. ಮೃತರಾದವರ ಹೊರತು ಉಳಿದವರನ್ನು ಒಂದು ನಾರ್ವೆದೇಶದ ಅಂಚೆಯಹಡಗು ತನ್ನ ಮೇಲೇರಿಸಿಕೊಂಡು ಹೋಗುತ್ತಿರಲು, ಅದರಮೇಲೂ ಜರ್ಮನರ ಸಬ್‌ಮೆರೀನು ಎರಡು ಟಾರ್ಪೆಡೋವನ್ನು ಬಿಟ್ಟಿತು. ಆದರೆ ಏಟುತಪ್ಪಿಹೋಯಿತು. ಬಳಿಕ ಆ ಸಬ್‌ಮೆರೀನು ಹಡಗನ್ನು ಸ್ವಲ್ಪದೂರದವರೆಗೂ ಅಟ್ಟಿಕೊಂಡು ಹೋಗಿ ಹಿಂದಿರುಗಿತು. ಈ ಕೃತ್ಯವು ಅಮೇರಿಕನ್ನರಿಗೆ ಅತ್ಯಾಗ್ರಹವನ್ನುಂಟುಮಾಡಿದೆ. ಇವಲ್ಲದೆ ಜರ್ಮನರ ಸಬ್‌ಮೆರೀನುಗಳು ಮುದ್ದುರಿ-ಮಾರ್ಡಿರನ್-ಸನರಿ ಎಂಬ ಹಡಗುಗಳಮೇಲೂ ಫಿರಂಗಿಗುಂಡುಗಳನ್ನು ಹೊಡೆದು ಮುಳುಗಿಸಿರುತ್ತವೆ. ಉತ್ತರಸಮುದ್ರದಲ್ಲಿ ಮರದ ಹಲಗೆಗಳನ್ನು ತುಂಬಿಕೊಂಡು ಹೋಗುತ್ತಿದ್ದ ಒಂದು ನಾರ್ವೆದೇಶದ ಹಡಗನ್ನೂ ಜರ್ಮನರ ಸಬ್‌ಮೆರೀನು ಮುಳುಗಿಸಿರುವುದು. ಅಲ್ಲೇ ಬಾಲ್‌ಡ್ವಿನ್ ಎಂಬ ಮತ್ತೊಂದು ಹಡಗನ್ನು ಮುಳುಗಿಸಿರುವರು.

ಆಕಾಶಯಾನಗಳು.

ಮಿತ್ರಮಂಡಲಿಯವರ ಆಕಾಶಯಾನಗಳು ಬೆಲ್ಜಿಯಂ ದೇಶದ ಫ್ಲಾಂಡರ್ಸ್ ಜಿಲ್ಲೆಯಲ್ಲಿರುವ ಲೋಹಮಾರ್ಗಗಳ ಮೇಲೂ ಸೇತುಗಳ ಮೇಲೂ ಸಿಡಿಮದ್ದುಗಳನ್ನು ಹಾಕಿ ಧ್ವಂಸಮಾಡಿದುವು. ಜರ್ಮನರ ಆಕಾಶನಾವೆಯೊಂದು ಇಂಗ್ಲೆಂಡಿಗೆಸೇರಿದ ಕೆಲವು ಪಟ್ಟಣಗಳಮೇಲೆ ಸಿಡಿಮದ್ದುಗಳನ್ನು ಹಾಕಿತು. ಬೆಂಕಿಯಿಂದ ಸ್ವಲ್ಪ ನಷ್ಟವಾಯಿತು. ಜನರಿಗೆ ಅಪಾಯವಾಗಲ್ಲ. ಎಪಕ್ನೆ ಎಂಬಲ್ಲಿ ಗಾಯಗೊಂಡ ಸೈನಿಕರನ್ನು ಪಚರಿಸುವ ಮತ್ತು ಚಿಕಿತ್ಸೆಗಳನ್ನು ಮಾಡುವ ಜನರುಗಳು ಮಾತ್ರ ಇದ್ದಾರೆ. ಇಂಥ ಊರಿನ ಮೇಲೆ ಜರ್ಮನರ ವಿಮಾನಗಳು ಸಿಡಿಮದ್ದನ್ನು ಹಾಕಿದುವು. ಅಪಾಯವಾದ ವಿವರಣವು ಪ್ರಕಟವಾಗಲ್ಲ. ಡನ್‌ಕರ್ಕ್ ಪಟ್ಟಣದ ಮೇಲೆ ಜರ್ಮನರ ಆಕಾಶನಾವೆಯು ಸಿಡಿಮದ್ದನ್ನು ಹಾಕಿತು. ಅದರ ಮೇಲೆ ಮಿತ್ರಮಂಡಲಿಯವರು ಫಿರಂಗಿಗುಂಡುಗಳನ್ನು ಹಾರಿಸಿದುದರಿಂದ ಅದಕ್ಕೆ ಏಟುಬಿದ್ದು ಕೆಳಕ್ಕೆ ಬಿದ್ದುಬಿಟ್ಟಿತು. ಒಬ್ಬ ಫ್ರೆಂಚ್ ವೈಮಾನಿಕನು ಜರ್ಮನರ ವರ್ಟಂಬರ್ಗ್ ಜಿಲ್ಲೆಗೆ ಸೇರಿದ ಅಬೆಡಾರ್ಫ್ ಊರಿನಲ್ಲಿರುವ ತುಪಾಕಿಗಳ ಕರ್ಮಾಗಾರದ ಮೇಲೆ ಸಿಡಿಮದ್ದನ್ನು ಹಾಕಿ, ಕೆಲ ತುಪಾಕಿಗಳೂ ಮದ್ದುಗುಂಡುಗಳೂ ಸುಟ್ಟುಹೋಗುವಂತೆ ಮಾಡಿದನು. ಒಂದು ಜರ್ಮನ್ ವಿಮಾನದ ಮೇಲೆ ಮಿತ್ರಮಂಡಲಿಯವರು ಫಿರಂಗಿಗುಂಡುಗಳನ್ನು ಹೊಡೆದು ತಮ್ಮ ಶಿಬಿರದಲ್ಲಿ ಬೀಳುವಂತೆ ಮಾಡಿದರು. ಒಂದು ಫ್ರೆಂಚ್ ವಿಮಾನವು ಜರ್ಮನರ ಒಂದು ಪಟ್ಟಣದ ಮೇಲಕ್ಕೆ ಹೋಗಲು, ಜರ್ಮನರು ಎಷ್ಟೋ ಫಿರಂಗಿಗುಂಡಿನೇಟನ್ನು ಹೊಡೆದು ಅದಕ್ಕೆ ಹಲವು ತೂತುಗಳನ್ನು ಬೀಳಿಸಿದರೂ ಆ ವೈಮಾನಿಕನು ಒಂದು ಏಟನ್ನೂ ತಿನ್ನದೆ ತನ್ನ ಶಿಥಿಲವಾದ ವಿಮಾನದ ಸಮೇತ ತಮ್ಮ ಶಿಬಿರಕ್ಕೆ ಬಂದಿಳಿದನು.

ಮೈಸೂರು ಸ್ಟಾರ್.

ಸನ್ ೧೯೧೫ ನೆಯ ಮೇ ತಾ|| ೯ ನೆಯ ಭಾನುವಾರ.

೧೯೧೩-೧೪ ನೆಯ ವರ್ಷದ ಮೈಸೂರು ದೇಶದ ರೆವಿನ್ಯೂಶಾಖೆಯ ವರದಿ.

ಈಗತಾನೇ ಸರ್ಕಾರದಿಂದ ಪ್ರಕಟಿತವಾಗಿರುವ ಈ ವರದಿಯನ್ನು ನೋಡುವಲ್ಲಿ, ಆ ವರ್ಷದೊಳಗೆ ಆದ್ಯಂತವಾಗಿ ಸರ್ಕಾರಕ್ಕೆ ಭೂಗಂದಾಯದ ಮೂಲಕವಾಗಿ ಬಂದಿರುವ ಉತ್ಪತ್ತಿಯು ೧೦೫೨೪೧೧೬ ರೂ.ಗಳೆಂದು ಗೊತ್ತಾಗುತ್ತದೆ. ಇದು ಅದರ ಹಿಂದಿನ ವರ್ಷದ ಉತ್ಪತ್ತಿಗಿಂತಲೂ ೪೨ ಸಾವಿರ ರೂ.ನಷ್ಟು ಹೆಚ್ಚು. ಆ ವರ್ಷದಲ್ಲಿ ಸಂಸ್ಥಾನದೊಳಗೆ ಮಳೆಬೆಳೆಗಳ ಸ್ಥಿತಿಯು ಸಮರ್ಪಕವಾಗಿರಲಿಲ್ಲ. ಮುಖ್ಯವಾದ ಬೆಳಸು ಬಹಳ ಕಡಿಮೆಯಾಯಿತು. ಕೆರೆಕಟ್ಟೆಗಳು ತುಂಬಲಿಲ್ಲ. ದನಗಳ ಮೇವು ನೀರಿಗೂ ಎಷ್ಟೋಕಡೆ ಅಭಾವವಾಯಿತು. ಸರ್ಕಾರದವರು ದನಗಳ ಮೇವನ್ನು ಕಾಡುಗಳಿಂದ ಉಚಿತವಾಗಿ ತೆಗೆದುಕೊಂಡು ಹೋಗುವಂತೆ ಏರ್ಪಡಿಸಿದ್ದರು. ಕಾಲಮಾನದ ಸ್ಥಿತಿಯು ಹೀಗಿದ್ದರೂ ಸರ್ಕಾರಿ ಕಂದಾಯವು ಮಾತ್ರ ಸಮೃದ್ಧವಾಗಿಯೇ ಉತ್ಪನ್ನವಾಗಿರುವುದೆಂಬುದನ್ನು ಕೇಳಿದರೆ ಈ ದೇಶದ ಕಂದಾಯದ ‘‘ವಸೂಲಿಯ’’ ದರ್ಪದ ಕಾಠಿನ್ಯವು ಎಷ್ಟರಮಟ್ಟಿಗಿದೆಯೆಂಬುದು ಗೊತ್ತಾಗುವುದೇ ಹೊರತು ಒಂದೆರಡುವರ್ಷ ಮಳೆಬೆಳೆಯಾಗದಿದ್ದರೂ ಹೂತುಮುಡಗಿರುವ ನಿಧಿಯನ್ನು ಕಿತ್ತು ಸರ್ಕಾರದ ಕಂದಾಯವನ್ನು ನಿರ್ಲಕ್ಷ್ಯವಾಗಿ ಕೊಡುವಷ್ಟರ ಯೋಗ್ಯತೆಯು ಈ ದೇಶದ ಸಾಮಾನ್ಯ ರೈತರಿಗೆಲ್ಲಾ ಇದೆಯೆಂದು ಯಾರೂ ಒಪ್ಪಲಾರರು.

ಆ ವರ್ಷದಲ್ಲಿ ಬಡ ರೈತರಿಗೆ ಜೀವನಾಧಾರವು ಬೆಳಸಿನಿಂದ ಆಗದೆಹೋದರೂ ನೂತನ ಲೋಹಮಾರ್ಗಸ್ಥಾಪನೆ ಮೊದಲಾದ ದೊಡ್ಡದೊಡ್ಡ ಕೆಲಸಗಳು ಸಂಸ್ಥಾನದಲ್ಲಿ ನಡೆಯುತ್ತಿದ್ದುದರಿಂದ ಕೂಲಿಗೆಲಸವು ದೊರೆದು ಜೀವನಕ್ಕೆ ಮಾರ್ಗವಾಗಿದ್ದಿತು.

ಸಂಸ್ಥಾನದೊಳಗಿರುವ ಮುಖ್ಯ ಜಲಾಶಯಗಳೊಳಗೆ ಜೀರ್ಣವಾಗಿರುವ ಕೆರೆಗಳನ್ನು ಉದ್ಧರಿಸುವ ಕೆಲಸವು ಪ್ರಸಕ್ತವರ್ಷದಲ್ಲಿ ಸ್ವಲ್ಪಚುರುಕಾಗಿ ನಡೆದಿದೆ. ೪೯ದೊಡ್ಡ ಕೆರೆಗಳೂ, ೫೬೨ ಸಣ್ಣ ಕೆರೆಗಳೂ ಜೀರ್ಣೋದ್ಧಾರಗೊಳಿಸಲ್ಪಟ್ಟಿವೆ. ಇದಕ್ಕೆಲ್ಲಾ ೩ ಲಕ್ಷ ರೂ.ಗಳ ಮೇಲೆಯೇ ವೆಚ್ಚವಾಗಿದೆ. ಈಚೆಗೆ ಜಲಾಶಯಗಳ ವಿಷಯಗಳಲ್ಲಿ ಪಂಚಾಯತಿಗೆಯನ್ನು ಸರ್ಕಾರದವರು ಏರ್ಪಡಿಸಿರುವುದರಿಂದ ಇತಃಪರಃ ಈ ಕೆರೆಗಳ ಜೀರ್ಣೋದ್ಧಾರದ ಕೆಲಸವು ಇನ್ನೂ ಚೆನ್ನಾಗಿ ನಡೆದು, ದೇಶದ ಹಿತಕ್ಕೆ ಸಾಧಕವಾಗಿ, ಈ ಭಾಗದಲ್ಲಿರುವ ಪ್ರಜೆಗಳ ಕಷ್ಟವು ಕಡಿಮೆಯಾಗುವ ಕಾಲವು ಬೇಗನೆ ಬಂದೀತೆಂದು ಆಶಿಸುತ್ತೇವೆ.

ಮೈಸೂರುದೇಶದ ವ್ಯವಸಾಯರೀತಿಯನ್ನು ಉತ್ತಮಸ್ಥಿತಿಗೆ ತರುವುದಕ್ಕಾಗಿಯೇ ಪ್ರತ್ಯೇಕವಾಗಿ ಸ್ಥಾಪಿಸಲ್ಪಟ್ಟಿರುವ ಶಾಖೆಯ ಕೆಲಸಕ್ಕಾಗಿ ನಮ್ಮ ಸರ್ಕಾರದವರು ಆ ವರ್ಷದಲ್ಲಿ ಒಂದೂಕಾಲು ಲಕ್ಷ ರೂ.ಗಳನ್ನು ವ್ಯಯಮಾಡಿದ್ದಾರೆ. ಆ ಶಾಖೆಯವರು ಇದುವರೆಗೆ ಅನೇಕ ಶಾಸ್ತ್ರೀಯ ಪರಿಶೋಧನಗಳನ್ನೂ ವ್ಯವಸಾಯದ ಪರೀಕ್ಷಾಕ್ಷೇತ್ರಗಳನ್ನೂ ನಡೆಯಿಸುತ್ತಲೂ ವ್ಯವಸಾಯ ವಿಷಯಕಬೋಧೆಗಳನ್ನು ನಡೆಯಿಸುತ್ತಲೂ ಬಂದಿದ್ದಾರೆ. ಸರ್ಕಾರದ ಕೀಳ್ಪಟ್ಟ ಉದ್ಯೋಗಿಗಳು ರೈತರಿಂದ ಬರಬೇಕಾದ ಕಂದಾಯವನ್ನು ಎಷ್ಟು ಮುತುವರ್ಜಿಯಿಂದ ಬರಮಾಡಿಕೊಳ್ಳುವರೋ ಅಷ್ಟು ಮುತುವರ್ಜಿಯಿಂದ ಅವರ ಪ್ರಾರ್ಥನೆಗಳಿಗೆ ಕಿವಿಗೊಟ್ಟು ಬೇಗಬೇಗನೆ ತಮ್ಮ ಕರ್ತವ್ಯವನ್ನು ನೆರವೇರಿಸುತ್ತಲ್ಲಿಲ್ಲವೆಂಬುದನ್ನು ಈ ವರದಿಯಿಂದ ತಿಳಿದು ವ್ಯಥೆಪಡುತ್ತೇವೆ. ರೈತರಿಂದ ಬರುವ ‘‘ದರಖಾಸ್ತು’’ ಗಳನ್ನು ರೆವಿನ್ಯೂಶಾಖಾ ಉದ್ಯೋಗಿಗಳು ಬೇಗಬೇಗನೆ ಇತ್ಯರ್ಥಮಾಡದೆ ಗುಡ್ಡೆಹಾಕಿಕೊಳ್ಳುತ್ತ ಬರುವುದರಿಂದ ರೈತರಿಗೆ ಎಷ್ಟು ತೊಂದರೆಯಾಗುತ್ತದೆಂಬುದನ್ನು ಹೇಳಬೇಕಾಗಿಲ್ಲ. ಹಲವರು ರೆವಿನ್ಯೂಶಾಖಾ ಉದ್ಯೋಗಿಗಳು ಕಾಲಕ್ಕೆಮುಂಚೆ ತಮ್ಮ ‘‘ವಸೂಲಿ’’ ಯ ಕೆಲಸವನ್ನು ಸಮರ್ಪಕವಾಗಿ ಮಾಡಿ ಹಣದ ಗಂಟನ್ನು ಬೊಕ್ಕಸಕ್ಕೆ ಸೇರಿಸಿಬಿಟ್ಟರೆ ತಮ್ಮ ಮುಖ್ಯ ಕರ್ತವ್ಯವೆಲ್ಲಾ ಮುಗಿದುಹೋಯಿತೆಂದೂ ಇನ್ನಾವ ಕರ್ತವ್ಯಲೋಪವು ತಮ್ಮಲ್ಲಿದ್ದರೂ ಅದು ದಂಡನೀಯವಾಗುವುದಿಲ್ಲವೆಂದೂ ತಿಳಿದುಕೊಂಡು ಹಾಗೆಯೇ ಆಚರಿಸುತ್ತ ಬರಬಹುದು. ಇದರಿಂದ ರೈತರು ತಮ್ಮ ನ್ಯಾಯವಾದ ಕೆಲಸಗಳನ್ನು ಸರ್ಕಾರದ ಉದ್ಯೋಗಿಗಳಿಂದ ಮಾಡಿಸಿಕೊಳ್ಳಬೇಕಾದರೂ ಅವರನ್ನು ಹಲವುವಿಧದಿಂದ ಅನುಸರಿಸಿ ಅರ್ಥವ್ಯಯ ದೇಹಶ್ರಮ ಕಾಲವ್ಯಯಗಳನ್ನು ಅನುಭವಿಸಿ ಮಾಡಿಸಿಕೊಳ್ಳಬೇಕಾಗುತ್ತದೆ. ರೈತರ ಕೆಲಸಗಳನ್ನು ಬೇಗಬೇಗನೆ ಮಾಡಿಕೊಡದೆ ನಿಷ್ಕಾರಣವಾಗಿ ಕಾಗದಪತ್ರಗಳ ರಾಶಿಯನ್ನು ಉಳಿಸಿಕೊಂಡಿರುವ ತಾಲ್ಲೂಕು ಅಧಿಕಾರಿಗಳ ವಿಷಯದಲ್ಲಿ ರೆವಿನ್ಯೂಶಾಖಾ ಮುಖ್ಯಾಧಿಕಾರಿಗಳು ನಿರ್ದಾಕ್ಷಿಣ್ಯವಾಗಿ ನಡೆದುಕೊಳ್ಳದಿದ್ದರೆ ಪ್ರಜೆಗಳ ಕಷ್ಟವು ಕೊನೆಗೊಳ್ಳಲಾರದು.

ಕನ್ನಡಿಗರ ಸಮ್ಮೇಳನ.

ಕನ್ನಡಿಗರ ಸಮ್ಮೇಳನವು ಕಳೆದ ತಾ|| ೩ ರಲ್ಲಿ ಬೆಂಗಳೂರ ಸರ್ಕಾರಿಯ ಹೈಸ್ಕೂಲ್ ಕಟ್ಟಡದಲ್ಲಿ ೧ನೆಯ ಕೌನ್ಸಿಲರ್ ಮ|| ಎಚ್. ವಿ. ನಂಜುಂಡಯ್ಯನವರಧ್ಯಕ್ಷತೆಯಲ್ಲಿ ಆರಂಭಿಸಲ್ಪಟ್ಟಿತು. ಧಾರವಾಡ, ಮದ್ರಾಸು, ಉಡುಪಿ ಮೊದಲಾದ ಕಡೆಗಳಿಂದ ಭಾಷಾಭಿಮಾನಿಗಳಾದವರು ಪ್ರತಿನಿಧಿಗಳಾಗಿ ಕರೆಯಲ್ಪಟ್ಟು ಬಂದಿದ್ದರಲ್ಲದೆ ಪ್ರೇಕ್ಷಕರ ಸಂಖ್ಯೆಯೂ ಹೆಚ್ಚಾಗಿ ಸೇರಿದ್ದಿತು. ಶ್ರೀಮದ್ಯುವರಾಜರು, ದಿವಾನರು ಮೊದಲಾದವರು ತಂತಿಯ ಮೂಲಕ ತಮ್ಮಭಿನಂದನೆಗಳನ್ನು ಕಳುಹಿದ್ದರು. ಅಧ್ಯಕ್ಷರು ಕನ್ನಡಭಾಷೆಯುತ್ಪತ್ತಿ, ಪೂರ್ವದಲ್ಲಿ ಅದಕ್ಕಿದ್ದ ಶುದ್ಧತೆ, ಮತ್ತೂ ಉಚ್ಛ್ರಾಯಸ್ಥಿತಿ ಈಗ ಅದಕ್ಕೂ ತೆಲುಗು ತಮಿಳು ಮೊದಲಾದ ದ್ರಾವಿಡಭಾಷೆಗಳಿಗೂ ಇರತಕ್ಕ ವ್ಯತ್ಯಾಸ-ಇವುಗಳನ್ನು ವಿವರಿಸುವ ಮತ್ತೂ ಮುಂದೆ ಅದು ಕರ್ನಾಟಕಪ್ರಾಂತಗಳಲ್ಲೆಲ್ಲಾ ಏಕಸ್ವರೂಪವನ್ನು ಹೊಂದಿ ಸೋದರಭಾಷೆಗಳಂತೆ ಉಚ್ಚಸ್ಥಿತಿಗೆ ಬರುವ ಉಪಾಯ ಮೊದಲಾದಂಶಗಳನ್ನೊಳಗೊಂಡ ಒಂದು ದೊಡ್ಡ ಭಾಷಣವನ್ನು ಮಾಡಿದರು. ಅನಂತರ ವಿಷಯನಿರ್ಧಾರಕಸಭೆಯು ಏರ್ಪಡಿಸಲ್ಪಟ್ಟು ಆ ದಿವಸದ ಸಭೆಯು ವಿಸರ್ಜಿತವಾಯಿತು. ವಿಷಯನಿರ್ಧಾರಕಸಭೆಯವರು ತಾ|| ೪ ರಲ್ಲಿ ದಿ|| ಬ|| ಕೆ. ಪಿ. ಪುಟ್ಟಣ್ಣಸೆಟ್ಟರ ಅಧ್ಯಕ್ಷತೆಯಲ್ಲೂ ತಾ|| ೫ ರಲ್ಲಿ ಚೀಫ್ ಇಂಜನಿಯರ್ ಮ|| ಕರ್ಪೂರಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲೂ ಸಭೆಸೇರಿದ್ದು, ಮೈಸೂರಪ್ರಾಂತಕ್ಕೆ ೧೨, ಬೊಂಬಾಯಾಧಿಪತ್ಯಕ್ಕೆ ೮, ಹೈದರಾಬಾದಿಗೆ ೨, ದಕ್ಷಿಣಮಹಾರಾಷ್ಟ್ರಕ್ಕೆ ೨ ಮತ್ತೂ ಕೊಡಗಿಗೆ ೧ ಈ ಪ್ರಕಾರ ೩೦ ಸಭ್ಯರನ್ನೊಳಗೊಂಡ ೧ ಕಾರ್ಯಕಾರಿಮಂಡಳಿಯು ಸ್ಥಾಪಿತವಾಗಿ, ಒಬ್ಬರು ಅಧ್ಯಕ್ಷರು, ಒಬ್ಬರು ಉಪಾಧ್ಯಕ್ಷರು, ಒಬ್ಬರು ಸೆಕ್ರೆಟರಿ, ಮತ್ತೊಬ್ಬರು ಆಡಿಟರು ಹೀಗೆ ಅಧಿಕಾರಿಗಳು ನಿಯಮಿಸಲ್ಪಡಬೇಕೆಂದೂ; ಪ್ರಾಚೀನ ಕರ್ನಾಟಕಗ್ರಂಥಗಳು ಶೇಖರಿಸಲ್ಪಟ್ಟು ವ್ಯಾಖ್ಯಾನದೊಡನೆ ಪ್ರಚುರಪಡಿಸಲ್ಪಡಬೇಕು, ಗ್ರಂಥಶೋಧನೆಗೆ ಉತ್ತೇಜನವೂ, ಗ್ರಂಥಕರ್ತರಿಗೆ ಪ್ರೋತ್ಸಾಹವೂ ಕೊಡಲ್ಪಡಬೇಕು, ವೃತ್ತಪತ್ರಿಕೆಗಳೂ ಮಾಸಪುಸ್ತಕಗಳೂ ಪ್ರಕಟಿಸಲ್ಪಡಬೇಕು ಎಂದೂ; ೧೦೦೦ ರೂ. ಗಳನ್ನು ಕೊಡತಕ್ಕವರು ಪೋಷಕರಾಗಿಯೂ, ೫೦೦ ರೂ. ಗಳನ್ನು ಕೊಡತಕ್ಕವರು ಆಶ್ರಯದಾತರಾಗಿಯೂ, ೧೦೦ ರೂ. ಗಳನ್ನು ಕೊಡತಕ್ಕವರು ಆಜೀವಸಭಾಸದರಾಗಿಯೂ ಮಾಡಲ್ಪಡತಕ್ಕುದೆಂದೂ; ಪ್ರತಿವರ್ಷದಲ್ಲೂ ೧೨ ರೂ. ಗಳನ್ನು ಕೊಡುವವರು ೧ ನೆಯ ತರಗತಿಯ ಸಭ್ಯರಾಗಿಯೂ, ೪ ರೂ. ಗಳನ್ನು ಕೊಡುವವರು ೨ ನೆಯ ತ|| ಸಭ್ಯರಾಗಿಯೂ ಇರತಕ್ಕುದೆಂದೂ; ಒಂದು ಕಾರ್ಯಕಾರಿ ಮಂಡಳಿಯು ಏರ್ಪಾಟಾಗತಕ್ಕುದೆಂದೂ ನಿರ್ಧಾರಗಳಾಗಿ, ಮ|| ಗಳಾದ ಎಚ್. ವಿ. ನಂಜುಂಡಯ್ಯನವರು ಅಧ್ಯಕ್ಷರಾಗಿಯೂ, ಎಂ. ಶ್ಯಾಮರಾಯರು ಉಪಾಧ್ಯಕ್ಷರಾಗಿಯೂ, ಸರದಾರ್ ಎಂ. ಕಾಂತರಾಜಅರಸಿನವರು, ಎಂ. ವೆಂಕಟಕೃಷ್ಣಯ್ಯನವರು, ಕರ್ಪೂರ ಶ್ರೀನಿವಾಸರಾಯರು, ಆರ್. ಎ. ನರಸಿಂಹಾಚಾರ್ಯರು, ಡಾ|| ಅಚ್ಯುತರಾಯರು, ಆರ್. ರಘುನಾಥರಾಯರು, ಬಾಪು ಸುಬ್ಬರಾಯರು, ಅಯ್ಯಾಶಾಸ್ತ್ರಿಗಳು, ಕರಿಬಸವಶಾಸ್ತ್ರಿಗಳು, ಕೆ. ಪಿ. ಪುಟ್ಟಣ್ಣಸೆಟ್ಟರು, ಸಿ. ಕೃಷ್ಣರಾಯರು, ಸಿ. ವಾಸುದೇವಯ್ಯನವರು, ಎಂ. ಎಸ್. ಪುಟ್ಟಣ್ಣನವರು, ಬಿ. ಎಂ. ಶ್ರೀಕಂಠಯ್ಯನವರು, ಬಿ. ಕೃಷ್ಣಪ್ಪನವರು ಮೈಸೂರಸೀಮೆಯ ಪರವಾಗಿಯೂ; ಧಾರವಾಡದ ಟ್ರೇನಿಂಗ್ ಕಾಲೇಜಿನ ಮುಖ್ಯೋಪಾಧ್ಯಾಯರಾದ ಐ. ಬಿ. ಜೋಷಿಯವರು, ಪಬ್ಲಿಕ್ ಪ್ರಾಸಿಕ್ಯೂಟರಾದ ಎಸ್. ಜಿ. ಕರಿಗುದರಿಯವರು, ಆರ್. ಎ. ಜಹಗೀರ್ದಾರ್‌ರವರು,ನರಗುಂದಕರ್‌ರವರು, ಪಿ. ಆರ್. ಚಿಕ್ಕೋಡಿಯವರು, ಮುದವೇಡಕರ್‌ರವರು, ಎಫ್. ಜಿ. ಹಳಕಟ್ಟಿಯವರು, ವಿ. ಬಿ. ಆಲೂರ್‌ರವರು ಮತ್ತೂ ವಿ. ಎನ್. ಮಗ್ದಾಳ್‌ರವರು ಬೊಂಬಾಯಾಧಿಪತ್ಯದ ಪರವಾಗಿಯೂ, ಬೆನಗಲ್ ರಾಮರಾಯರು, ರಾಜಗೋಪಾಲಕೃಷ್ಣರಾಯರು, ಮತ್ತೂ ಎ. ವೆಂಕಟರಾಯರು ಮದ್ರಾಸಾಧಿಪತ್ಯದ ಪರವಾಗಿಯೂ ಮೆಂಬರುಗಳಾಗಿ ನಿಯಮಿಸಲ್ಪಟ್ಟರು. ಕನ್ನಡಭಾಷೆಯನ್ನಾಡತಕ್ಕ ಪ್ರದೇಶಗಳಲ್ಲೆಲ್ಲಾ ಭಾಷೆಯು ಏಕರೂಪವಾಗಬೇಕಲ್ಲದೆ, ಆ ಪ್ರದೇಶಗಳಲ್ಲಿಯ ಬಾಲ್ಯವಿದ್ಯಾಭ್ಯಾಸವು ಕನ್ನಡದಲ್ಲೇ ಜರುಗುವಂತೆ ಮಾಡಲು ಆಯಾಸರ್ಕಾರದವರನ್ನು ಪ್ರಾರ್ಥಿಸಬೇಕು; ಇದೇ ವಿಚಾರದಲ್ಲಿ ಮದ್ರಾಸು ಮತ್ತೂ ಬೊಂಬಾಯಿ ಸರ್ವಕಲಾಶಾಲೆಯವರನ್ನು ಪ್ರಾರ್ಥಿಸಬೇಕಲ್ಲದೆ, ಮದ್ರಾಸು, ಬೊಂಬಾಯಿ, ಹೈದರಾಬಾದು, ದಕ್ಷಿಣಮಹಾರಾಷ್ಟ್ರ, ದೇಶೀಯ ಸಂಸ್ಥಾನಗಳು ಇವುಗಳ ಕೋರ್ಟುಭಾಷೆಯೂ ಕನ್ನಡವಾಗಿರುವಂತೆ ಆಯಾಸರ್ಕಾರದವರನ್ನೂ, ಕನ್ನಡವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುವಂತೆ ಇಂಡ್ಯಾ ಸರ್ಕಾರದವರನ್ನೂ ಪ್ರಾರ್ಥಿಸಿಕೊಳ್ಳಬೇಕೆಂದು ಅಧ್ಯಕ್ಷರು ಸೂಚಿಸಿದಮೇಲೆ ಕೆಲ ಮಂಗಳಪದ್ಯಗಳು ಹೇಳಲ್ಪಟ್ಟು ಸಮ್ಮೇಳನಕಾರ್ಯವು ಪರಿಸಮಾಪ್ತಿಗೊಳಿಸಲ್ಪಟ್ಟಿತು.

ಶ್ರೀಮನ್ ಮಹಾರಾಜರವರು ಕಳೆದ ಸೋಮವಾರ ಉದಕಮಂಡಲಕ್ಕೆ ಮರಳಿ ಪ್ರಯಾಣಮಾಡಿದರು.

ದಿವಾನರು ಈ ತಾ|| ೭ ರಬೆಳಗ್ಗೆ ಬೆಂಗಳೂರಿಗೆ ಹಿಂದಿರುಗಿ ದಯಮಾಡಿಸಿದರು. ಅವರ ಪರಿವಾರವೆಲ್ಲವೂ ಆ ರಾತ್ರಿ ರೈಲುಬಂಡಿಯಲ್ಲಿ ಹೋಯಿತು.

ವಿಶ್ವಕರ್ಮ ಮಹಾಜನರ ಪರಿಷದವು.

ಈ ಪ್ರಾಂತಗಳಲ್ಲಿ ಸಾಮಾನ್ಯವಾಗಿ ಅಕ್ಕಸಾಲಿಗರು ಅಥವಾ ವಿಶ್ವಕರ್ಮ ಮಹಾಜನರೆಂದು ಕರೆಯಲ್ಪಡುವ ಕೈಕಸಬುದಾರರ ಒಂದು ಮಹಾಸಭೆಯು ಕುಂಭಕೋಣದಲ್ಲಿ ಕಳೆದ ತಿಂಗಳು ತಾ॥ ೬ರಲ್ಲಿ ಕೂಡಿತ್ತು. ದಕ್ಷಿಣ ಹಿಂದೂಸ್ಥಾನದ ಹಲವು ಜಿಲ್ಲೆಗಳಿಂದ ಈ ಜಾತಿಯವರ ಪ್ರತಿನಿಧಿಗಳು ಈ ಸಭೆಗೆ ಬಂದಿದ್ದರು. ರಾ॥ ಟಿ. ಕೆ. ಸುಂದರಾಚಾರಿ ಎಂಬುವರ ಅಧ್ಯಕ್ಷತೆಯಲ್ಲಿ ಒಂದು ಸ್ವಾಗತ ಕಮಿಟಿಯು ಏರ್ಪಡಿಸಲ್ಪಟ್ಟಿತ್ತು. ಪರಿಷದದ ಅಧ್ಯಕ್ಷರು ಮದರಾಸಿನ ರಾ॥ ಟಿ. ಎಂ. ಮುಕ್ಕಣ್ಣಾಚಾರಿ ಎಂಬುವರಾಗಿದ್ದರು ಈ ಜಾತಿಯವರ ಪರಿಷದದ ಉದ್ದೇಶವು ಇತರ ಜಾತಿಗಳಂತೆಯೇ ಜಾತಿಯ ಅಭಿವೃದ್ಧಿಯಾಗಿದೆ. ಶಿಕ್ಷಣ ಮೂಲಕ ಇಂಥಾ ಅಭಿವೃದ್ಧಿಯನ್ನು ಸಾಧಿಸಬೇಕೆಂದು ಇವರ ಅಭಿಮತವಾಗಿದೆ. ಸ್ವಾಗತ ಕಮಿಟಿಯ ಅಧ್ಯಕ್ಷರು ಜಾತಿಯ ಹೀನಸ್ಥಿತಿಯ ಕಾರಣಗಳನ್ನು ಸಂಕ್ಷೇಪವಾಗಿ ಹೇಳಿದರು. ಸಭಾಅಧ್ಯಕ್ಷರು ಈ ಹೀನಸ್ಥಿತಿಯನ್ನು ವಿವರಿಸಿ ಇದರ ನಿವಾರಣೋಪಾಯಗಳನ್ನು ಸೂಚಿಸಿರುತ್ತಾರೆ. ವಿಶ್ವಕರ್ಮ ಮಹಾಜನರ ಸಂಖ್ಯೆಯು ಈ ಸಂಸ್ಥಾನದಲ್ಲಿ ೨ ಲಕ್ಷ ೮ ಸಾವಿರವಾಗಿರುತ್ತದೆ. ಈ ಸಂಸ್ಥಾನದಲ್ಲಿ ಸರ್ವ ವಿದ್ಯಾಲಯವು ಸ್ಥಾಪಿಸಲ್ಪಟ್ಟು ೫೦ ವರ್ಷಗಳು ದಾಟಿಹೋದರೂ ಇಂಥ ವಿದ್ಯಾಸಂಸ್ಥೆಯಿಂದ ವಿಶ್ವಕರ್ಮ ಸಮಾಜದವರು ವಿಶೇಷ ಪ್ರಯೋಜನವನ್ನು ಪಡೆದಿರರು. ಬಿ.ಎ. ಮೊದಲಾದ ಪರೀಕ್ಷೆಯಲ್ಲಿ ತೇರಿದ ಗ್ರಾಜುಯೇಟರು ೧೨, ಬಿ. ಎಲ್ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಒಬ್ಬರು, ಡಾಕ್ಟರರ ಪರೀಕ್ಷೆಯಲ್ಲಿ ಒಬ್ಬರು, ಇಂಜನಿಯರಿಂಗ್ ಪರೀಕ್ಷೆಯಲ್ಲಿ ಒಬ್ಬರು, ಈ ರೀತಿ ಕಾಲೇಜುಗಳಿಂದ ವಿದ್ಯಾಭ್ಯಾಸವನ್ನು ಪಡೆದವರು ಅತಿ ವಿರಳರಾಗಿರುತ್ತಾರೆ ಸೆಕೆಂಡರಿ ವಿದ್ಯಾಭ್ಯಾಸದಲ್ಲಿಯೂ, ಪ್ರೈಮರಿ ವಿದ್ಯಾಭ್ಯಾಸದಲ್ಲಿಯೂ ವಿಶ್ವಕರ್ಮ ಸಮಾಜದವರು ಬಹಳ ಹಿಂದುಳಿದಿರುವರು ವಿಶ್ವಕರ್ಮ ಸಮಾಜದವರ ಸ್ಥಿತಿಯನ್ನು ಸಭಾಧ್ಯಕ್ಷರು ಈ ರೀತಿ ವರ್ಣಿಸಿದ ನಂತರ ಮದರಾಸು ಸರ್ಕಾರದವರ ಕೈಗಾರಿಕೆಗಳ ಮಾಜಿ ಮಾಹಿತಿದಾರರಾದ ಮಿ॥ ಚಾಟರ್ಟನರವರ ಪತ್ರವು ಸಭೆಯಲ್ಲಿ ಓದೋಣಾಯಿತು. ಕುಂಭಕೋಣವು ನಾನಾ ಬಗೆಯ ಲೋಹಸಾಮಗ್ರಿಗಳಿಗೆ ಖ್ಯಾತಿಪಟ್ಟಿದೆ. ಈ ಸಾಮಗ್ರಿಗಳನ್ನು ತಯಾರಿಸುವ ವೃತ್ತಿಯನ್ನನುಸರಿಸುವಂಥವರು ವಿಶ್ವಕರ್ಮ ಸಮಾಜದವರಾಗಿರುತ್ತಾರೆ. ಈಗಿನ ಕಾಲಕ್ಕೆ ತಕ್ಕಂತೆ ಈ ಕೈಗಾರಿಕೆಯನ್ನು ನವೀನ ಯಂತ್ರಸಾಹಿತ್ಯಗಳ ಸಹಾಯದಿಂದ ಬಲಪಡಿಸುವುದು ಅಗತ್ಯ. ಈ ಬಗ್ಗೆ ಪ್ರತ್ಯೇಕ ಒಂದು ಕಲಾಶಾಲೆಯನ್ನು ಏರ್ಪಡಿಸಬೇಕು. ಈ ಕೈಗಾರಿಕೆಯಲ್ಲಿ ನವೀನ ಶೋಧನೆಗಳಿಂದ ವಿಶೇಷ ಅನುಭವವನ್ನು ಪಡೆದಿರುವ ಶಾಸ್ತ್ರಜ್ಞ ಪಂಡಿತರೊಬ್ಬರನ್ನು ಈ ಶಾಲಾ ಬೋಧಕರಾಗಿ ನೇಮಿಸಬೇಕು. ಸರ್ಕಾರದಿಂದ ಈ ವ್ಯವಸ್ಥೆಗೆ ಬೇಕಾದ ದ್ರವ್ಯಸಹಾಯವನ್ನು ಕೇಳಿಕೊಳ್ಳಬಹುದು. ಈ ರೀತಿ ಸೂಚನೆಗಳಿಂದ ಕೂಡಿರುವ ಮಿ॥ ಚಾಟರ್ಟನರವರ ಪತ್ರವನ್ನು ಸಭಿಕರಿಗೆ ಓದಿ ಹೇಳಿದನಂತರ ಇತರ ಸಭಾ ಕಾರ್ಯಗಳನ್ನು ಪ್ರಾರಂಭಿಸಿದರು.

ವಿಶ್ವಕರ್ಮ ಸಮಾಜದವರು ತಮ್ಮ ಪರಿಷದದಲ್ಲಿ ಹಲವು ನಿರ್ಣಯಗಳನ್ನು ಮಾಡಿರುತ್ತಾರೆ ವಿದ್ಯೆಯಲ್ಲಿ ಈ ಸಮಾಜದವರು ಬಹಳ ಹಿಂದುಳಿದಿರುವುದರಿಂದ ಸೆಕೆಂಡರಿ ಶಾಲೆಯಲ್ಲಿಯೂ ಕಾಲೇಜುಗಳಲ್ಲಿಯೂ ಈ ಸಮಾಜದವರ ವಿದ್ಯಾರ್ಥಿಗಳಿಂದ ಶಾಲಾ ಫೀಸು ಅರೆವಾಸಿ ತಕ್ಕೊಂಡು ಇವರಿಗೆ ವಿದ್ಯಾಭ್ಯಾಸವನ್ನು ಕೊಡೋಣಾಗುವಂತೆ ಬೇಕಾದ ವ್ಯವಸ್ಥೆಯನ್ನು ಮಾಡಲು ಸರ್ಕಾರದವರನ್ನು ವಿಜ್ಞಾಪಿಸಿಕೊಳ್ಳಬೇಕೆಂತ ನಿರ್ಣಯಿಸಿರುತ್ತಾರೆ. ಈ ಸಂಸ್ಥಾನದ ಪ್ರತಿ ಹಳ್ಳಿಯಲ್ಲಿರುವ ವಿಶ್ವಕರ್ಮ ಸಮಾಜದವರು ತಮ್ಮ ಮಕ್ಕಳನ್ನು ಪ್ರೈಮರಿ ಶಿಕ್ಷೆಯನ್ನಾದರೂ ಪಡೆಯುವುದಕ್ಕೋಸ್ಕರ ಶಾಲೆಗೆ ತಪ್ಪದೆ ಕಳುಹಿಸಿಕೊಡಬೇಕೆಂಬ ಮತ್ತೊಂದು ನಿರ್ಣಯವು ಪರಿಷದದವರಿಂದ ಮಾಡೋಣಾಗಿರುತ್ತದೆ. ಪ್ರಮುಖ ಪಟ್ಟಣಗಳಲ್ಲಿ ಬಡವಿದ್ಯಾರ್ಥಿಗಳ ಸಹಾಯಾರ್ಥವಾಗಿ ಫಂಡುಗಳನ್ನು ಏರ್ಪಡಿಸುವುದು, ಕೈಗಾರಿಕೆ ಶಾಲೆಗಳು ಸಂಸ್ಥಾನದ ಆಯಾ ಕಡೆಗಳಲ್ಲಿ ಸ್ಥಾಪಿಸಲ್ಪಡೋಣಾಗುವಂತೆ ಸರ್ಕಾರದವರನ್ನು ವಿಜ್ಞಾಪಿಸಿಕೊಳ್ಳುವುದು ಇಂಥಾ ಕಲಾಶಾಲೆಗಳಲ್ಲಿ ಶಿಕ್ಷಣವನ್ನು ವಿಶ್ವಕರ್ಮ ಸಮಾಜದವರಿಗೆ ಕಡ್ಡಾಯವಾಗಿ ಕೊಡಿಸುವುದು, ಮೊದಲಾದ ವಿಷಯಗಳನ್ನು ಒಳಗೊಂಡಿರುವ ಇನ್ನೂ ಕೆಲವು ನಿರ್ಣಯಗಳು ಪರಿಷದದಲ್ಲಿ ಮಂಜೂರು ಮಾಡಲ್ಪಟ್ಟಿರುವವು. ವಿಶ್ವಕರ್ಮ ಸಮಾಜದವರ ಹೆಸರುಗಳಲ್ಲಿರುವ ಆಚಾರಿ ಎಂಬ ಶಬ್ದವನ್ನು ಆಸಾರ್ ಎಂತ ಮಾಡಿದ್ದು ತಪ್ಪೆಂತಲೂ ಇದನ್ನು ಮೊದಲಿದ್ದಂತೆಯೇ ಇರಗೊಡಿಸಬೇಕೆಂತಲೂ ಪರಿಷದದವರು ಮದರಾಸು ಸರ್ಕಾರದವರನ್ನು ತಂತೀಮೂಲಕ ವಿಜ್ಞಾಪಿಸಿಕೊಂಡಿರುವರು. (ಸ್ವ.)

ಪತ್ರವ್ಯವಹಾರ.

ಸೊಲ್ಲಾಪುರ.

ಈ ಗ್ರಾಮದಲ್ಲಿ ಪುಷ್ಯಮಾಸದಿಂದ ಅಧಿಕ ಜ್ಯೇಷ್ಠದವರೆಗೂ ಪ್ಲೇಗದಿಂದ ವೀರಶೈವ ಸಂಸ್ಕೃತಪಾಠಶಾಲೆಯು ಬಂದಾಗಿರುವುದು. ಈಗ ಇದೇ ಅಧಿಕ ಜ್ಯೇಷ್ಠ ವದ್ಯ ಲಾ॥ ಗುರುವಾರದ ದಿವಸ ಪಾಠಶಾಲಾ ಪುನಃ ಆಗುವುದು ಅಭ್ಯಾಸಮಾಡಲಿಚ್ಛೆಯುಳ್ಳವರು ಬರಬೇಕು. ಆದರೆ ಆ ವಿದ್ಯಾರ್ಥಿಗಳು ಕಾವ್ಯದಿಂದ ಅಲಂಕಾರ ಸಾಹಿತ್ಯ ಓದತಕ್ಕವರಿರಬೇಕು ಮಾತ್ರ ಕೋಶ ಮೊದಲಾದ ಸಣ್ಣಸಣ್ಣ ಗ್ರಂಥಗಳನ್ನೋದತಕ್ಕ ವಿದ್ಯಾರ್ಥಿಗಳನ್ನುತೆಗೆದುಕೊಳ್ಳಲಾಗುವುದಿಲ್ಲ.

ವ್ಯವಸ್ಥಾಪಕ ಬ್ರ॥ ಶ್ರೀ॥ ಶಿವಲಿಂಗದೇವರು
ಹುಕ್ಕೇರಿ.

ಹೊಳಲ್ಕೆರೆ ತಾ॥ ಚಿಕ್ಕಜಾಜೂರು.

ಈ ಗ್ರಾಮವು ರೈಲ್ವೇಸ್ಟೇಷನ್ ಸ್ಥಳವಾಗಿಯೂ, ೧,೦೦೦ ಪ್ರಜಾಸಂಖ್ಯೆಯುಳ್ಳದ್ದಾಗಿಯೂ ಇದೆ ಇಲ್ಲಿಗೆ ಒಂದು ಬ್ರಾಂಚ್ ಪೋಸ್ಟಾಫೀಸನ್ನೂ ಮತ್ತು ವಿ. ಇ. ಸ್ಕೂಲನ್ನೂ ಸರ್ಕಾರದವರು ಕೊಟ್ಟಿರುತ್ತಾರೆ. ಇಲ್ಲಿ ಸ್ಕೂಲು ಪ್ರಾರಂಭವಾಗಿ ೧೫ ವರ್ಷವಾಯಿತು. ಮೇಲ್ಕಂಡ ೨ ಛಾರ್ಜನ್ನೂ ಸ್ಕೂಲ್ ಮಾಸ್ಟರವರೇ ನೋಡುತ್ತಲಿದಾರೆ. ಹಾಲಿ ಈ ಸ್ಕೂಲಿನ ಮಾಸ್ಟರಾದ ಮ॥ ಎ ವೆಂಕಟಗಿರಿಯಾರೆಂಬುವರು ಬಿಳಿಚೋಡಿನಿಂದ ಇಲ್ಲಿಗೆ ವರ್ಗವಟ್ಟು ಬಂದು ೧೦ ತಿಂಗಳಾಯಿತು. ಇವರು ಬಂದಕೂಡಲೇ ಪ್ಲೇಗು ಬಂದು ಊರಿನವರೆಲ್ಲರೂ ಕ್ಯಾಂಪಿನಲ್ಲಿದ್ದರು ಗ್ರಾಮಕ್ಕೆ ಪ್ರವೇಶಮಾಡಿ ೩ ತಿಂಗಳಾಯಿತು. ಈ ಮಾಸ್ಟರು ಸ್ಕೂಲು ವಿಷಯದಲ್ಲಿ ತುಂಬಾ ಶ್ರದ್ಧೆ ವಹಿಸಿ ಸುಮಾರು ೫೦ ಬಾಲಕರವರೆಗೂ ಸೇರಿ ಗ್ರಾಮಸ್ಥರ ಅನುರಾಗಕ್ಕೆ ಪಾತ್ರರಾಗಿದ್ದಾರೆ. ಇವರು ಸರ್ವಿಸ್‌ದಾರರು ಮತ್ತು ಟ್ರೇನಿಂಗ್ ಪ್ಯಾಸ್ ಮಾಡಿದಾರೆ. ದಯಾಳುಗಳು, ದೊಡ್ಡ ಕುಟುಂಬಿಗಳು, ಬಡವರು. ಇಂಥಾವರ ಮನೆಗೆ ತಾ॥ ೧೨-೪-೧೫ನೇ ಸೋಮವಾರ ರಾತ್ರಿ ಕನ್ನಾ ಹಾಕಿ ಕಳ್ಳರು ೨೮೦ ರೂಪಾಯಿ ಬೆಲೆ ಬಾಳುವ ಬೆಳ್ಳಿ ಬಂಗಾರ ಒಡವೆ ವಸ್ತುಗಳನ್ನು ದೋಚಿಕೊಂಡು ಹೋಗಿರುತ್ತಾರೆ. ಪೋಲೀಸಿಗೆ ರಿಪೋರ್ಟಾಗಿದೆ. ಮಾಲು ಪತ್ತೆಯಿಲ್ಲ. ಇವರ ಮತ್ತು ಇವರ ಕುಟುಂಬದವರ ವ್ಯಥೆಯನ್ನು ಹೇಳತೀರದು. ಇಂಥಾ ಸದ್ಗೃಹಸ್ಥರಿಗೆ ಈ ರೀತಿಯಾದ ಕೃತ್ರಿಮವನ್ನು ನಡೆಸಿದ ಮಹನೀಯರೆಂಥವರೋ? ಇವರ ಕಷ್ಟಗಳನ್ನು ನೋಡಿ ಉದಾರಿಗಳಾದ ದೊಡ್ಡಮನುಷ್ಯರೂ ಗ್ರಾಮದ ಮುಖಂಡರುಗಳೂ ಸೇರಿ ಚಂದಾ ಎತ್ತಿ ಸಹಾಯ ಮಾಡುವವರಾಗಿ ನಂಬಿದೇನೆ. ದೇವರು ಇವರಿಗೊದಗಿರುವ ಕಷ್ಟವನ್ನು ನಿವಾರಣೆ ಮಾಡಿ ಶ್ರೇಯೋಭಿವೃದ್ಧಿ ಮಾಡಲೆಂದು ಕೋರುವ

ಕ್ಷೇಮಚಿಂತಕ.

ವೀರಶೈವ ಮತಸುಧಾರಣೆ ✓

ದಾವಣಗೆರೆ ವಿರಕ್ತಮಠದ ಶ್ರೀ ಮೃತ್ಯುಂಜಯಸ್ವಾಮಿಗಳವರು ವೀರಶೈವಮತದಲ್ಲಿ ಧರ್ಮೋಪದೇಶಕರು ಅತಿ ವಿರಳವಾಗಿರುವುದರಿಂದ ನಮ್ಮ ಮತವು ಬೇಗ ಸುಧಾರಣೆಯಾಗುವುದಿಲ್ಲವೆಂಬ ಸಂಗತಿಯನ್ನು ದಿವ್ಯಚಿತ್ತಕ್ಕೆ ತಂದುಕೊಂಡು ಕಳೆದ ಸಂವತ್ಸರದಿಂದಲೂ ಪ್ರಾರಂಭಮಾಡಿ ಅಥಣಿ-ಶಹಪುರ-ಹಾವೇರಿ-ರಾಣೀಬನ್ನೂರ-ಮೊದಲಾದ ಮುಖ್ಯಸ್ಥಾನಗಳಲ್ಲಿ ವೀರಶೈವ ಹಿತೋಪದೇಶಸಂಘಗಳನ್ನು ಸ್ಥಾಪನೆಮಾಡಿರುವರಲ್ಲದೆ ಮುಂದೆ ಮಾಡುತ್ತಿರುವುದು ಸರಿಯಷ್ಟೆ ಸದರಿಯವರಿಂದಲೇ ರಾಣೀಬನ್ನೂರಲ್ಲಿ ಸ್ಥಾಪಿಸಲ್ಪಟ್ಟ ಹಿತೋಪದೇಶಕಸಂಘದವರು ಇದೇ ಅಧಿಕ ವೈಶಾಖ ಬ॥ ೪ ಸೋಮವಾರ ಸಾಯಂಕಾಲ ೬ ಘಂಟೆಯಿಂದ ೮ ಘಂಟೆ ವರೆಗೆ ಪುಟ್ಟಯ್ಯನಮಠದಲ್ಲಿ ಶ್ರೀ ರಾಚೋಟಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಚಿಕ್ಕ ಸಭೆ ಸೇರಿಸಿದ್ದರು. ಆ ಕಾಲಕ್ಕೆ ಶ್ರೀ ರಾಮಗಿರಿ ಮಠದ ಶ್ರೀ ಸ್ವಾಮಿಗಳವರೂ ದಾವಣಗೆರೆ ಶ್ರೀ ಮೃತ್ಯುಂಜಯಸ್ವಾಮಿಗಳವರೂ ರಾಣೀಬನ್ನೂರ ಮ॥ ರಾ॥ ರಿತ್ತಿಸೆಟ್ಟರೂ ಮ॥ ರಾ॥ ಆನೆಸೆಟ್ಟರೂ ಸಮಸ್ತ ಭಕ್ತ ಮಾಹೇಶ್ವರರೂ ಸಭಾಸ್ಥಾನವನ್ನಲಂಕರಿಸಿದ್ದರು. ಸದರಿ ಸಭೆಯಲ್ಲಿ ವೇ॥ ಖಾನಾಪುರದ ಹಿರೇಮಠದ ವಿರೂಪಾಕ್ಷಶಾಸ್ತ್ರಿಗಳವರು ವೈದಿಕವಿಷಯವಾಗಿ ಸರ್ವಸಮ್ಮತವಾಗುವಂತೆ ಭಾಷಣಮಾಡಿ ಸಭಿಕರಿಗೆ ಅತ್ಯಾನಂದವನ್ನುಂಟುಮಾಡಿದರು. ನಂತರ ದಾವಣಗೆರೆ ವಿರಕ್ತಮಠದ ಶ್ರೀ ಮೃತ್ಯುಂಜಯಸ್ವಾಮಿಗಳವರು ವೀರಶೈವ ಹಿತೋಪದೇಶಸಂಘದಿಂದ ವೀರಶೈವಸಮಾಜಕ್ಕೆ ಉಂಟಾಗತಕ್ಕ ಪ್ರಯೋಜನವನ್ನು ಕುರಿತು ಭಾಷಣಮಾಡಿದರು. ತರುವಾಯ ಸದರಿ ಶಾಸ್ತ್ರಿಗಳಿಂದ ಕ್ರಮವಾದ ವೇದಾಧ್ಯಯನವು ಮಾಡಲ್ಪಟ್ಟಿತು. ಅನಂತರ ಭಜನಾಸಂಘದವರು ಇಂಪಾದ ಗಾನದೊಡನೆ ಶಿವಭಜನೆಯನ್ನು ಮಾಡಿ ಸಭಿಕರಿಗೆ ಆನಂದವನ್ನುಂಟುಮಾಡಿದರು. ಆಮೇಲೆ ಶ್ರೀ ಸನ್ನಿಧಿಯಿಂದ ಸಮಸ್ತ ಭಕ್ತಮಾಹೇಶ್ವರರಿಗೆ ಆಶೀರ್ವದಿಸಲ್ಪಟ್ಟು ಸಭಾ ಬರಖಾಸ್ತಾಗಲೆಂದು ಅಪ್ಪಣೆ ದಯಪಾಲಿಸಲ್ಪಟ್ಟಿತು. ಪೂಜ್ಯಪಾದರಾದ ದಾವಣಗೆರೆ ಶ್ರೀ ಮೃತ್ಯುಂಜಯಸ್ವಾಮಿಗಳವರು ಕೇವಲ ನಿಸ್ಪೃಹತೆಯಿಂದ ವೀರಶೈವ ಸಮಾಜ ಸುಧಾರಣಾರ್ಥವಾಗಿ ಪ್ರತಿ ಒಂದು ಕಡೆಗೆ ಹಿತೋಪದೇಶ ಸಂಘವನ್ನು ಸ್ಥಾಪನಮಾಡುತ್ತಿರುವಂತೆ ನಮ್ಮ ಸಮಾಜದ ಎಲ್ಲಾ ಗುರುಮನೆತನದವರು ಪ್ರಯತ್ನಮಾಡಿದ್ದೇ ಆದರೆ ನಮ್ಮ ವೀರಶೈವ ಮತವು ಬಹು ಬೇಗ ಸುಧಾರಣೆಯಾಗಿ ಪರಮತದವರ ಶ್ಲಾಘನೆಗೆ ಪಾತ್ರವಾಗುವ ವಿಷಯದಲ್ಲಿ ಯಾವ ಸಂದೇಹವೂ ಇಲ್ಲವು. ಮತಾಭಿಮಾನಿ.

ಕಲ್ಕತ್ತಾದಲ್ಲಿ ಮದ್ರಾಸ್ ಪ್ರಾಂತದ ಮರಿಯಮ್ಮ ಎಂಬ ಹೆಂಗುಸು ತನ್ನ ಗಂಡನಾದ ಜೋಸೆಫ್ ಸಾಮ್ಯುಯಲ್ ಎಂಬುವನಮೇಲೆ ತನ್ನ ತಲೆಕೂದಲನ್ನೆಲ್ಲಾ ಪೂರ್ಣವಾಗಿ ಕತ್ತರಿಸಿಹಾಕಿಬಿಟ್ಟನೆಂಬುದಾಗಿ ದಂಡಾಧಿಕಾರಿಯ ಬಳಿಯಲ್ಲಿ ವ್ಯಾಜ್ಯವನ್ನು ಹೂಡಿರುವಳು. ಆಗ ಅವಳು ಕೊಟ್ಟ ವಾಜಿಮ್ಮಾಲದಲ್ಲಿ— „ನನ್ನ ಮೊದಲ ಗಂಡನು ನನ್ನ ಮೂಗಿನ ತುದಿಯನ್ನು ಕತ್ತರಿಸಿದನು. ೨ ನೆಯ ಗಂಡನು ನನ್ನ ಎಡಗಿವಿಯನ್ನು ಕತ್ತರಿಸಿ ಬಿಟ್ಟನು. ಈ ಮೂರನೆಯವನು ತಲೆಯ ಕೂದಲನ್ನೆಲ್ಲಾ ಕತ್ತರಿಸಿ ಹಾಕಿರುವನು." ಎಂದು ಹೇಳಿರುವಳು.

ಗೋಕಾಕ.

ರವಿವಾರ ತಾ॥೨೫-೪-೧೫ ರಲ್ಲಿ ಮೊದಲಿಗೆ ಗೊತ್ತಾದಂತೆ ಗೋಕಾಕ ಫಸ್ಟ್‌ಗ್ರೇಡ್ ಇಂಗ್ಲೀಷ್‌ಶಾಲೆಯ ವಿದ್ಯಾರ್ಥಿಗಳ ಸಮ್ಮೇಳನವು ಕೂಡಿತ್ತು. ಹುಡುಗರ ಆಟಗಳೂ ಕಸರತ್ತುಗಳೂ ಮುಗಿದನಂತರ ಸಂಜೆಯ ೫ ಘಂಟೆಗೆ ಸರಿಯಾಗಿ ಆಲದಕಟ್ಟಿ ಮಠದಲ್ಲಿ ರಾ. ಸಾ. ಕುರ್ತಕೋಟಿ ಮಾಮಲೇದಾರರ ಅಧ್ಯಕ್ಷತೆಯ ಕೆಳಗೆ ಸಭೆಯು ಕೂಡಿ ಮಿ॥ ಡೋಂಗರೆ ಇವರು ಶಾಲೆಯ ರಿಪೋರ್ಟನ್ನು ಓದಿದರು. ಅದರಲ್ಲಿ ಮಾಜಿ ಹೆಡ್ಮಾಸ್ಟರ್ ಮಿ॥ ಪಂಡಿತ ರಾಯಪ್ಪ ಚಿಕ್ಕೋಡಿ ಬಿ. ಎ ಇವರು ಶಾಲೆಯ ಸ್ಥಿತಿಯನ್ನು ಬಹಳ ರೀತಿ ಸುಧಾರಿಸಿ ವಿದ್ಯಾರ್ಥಿಗಳ ಸಮ್ಮೇಲನ ಮ ಸ್ಫೂರ್ತಿಯನ್ನು ಹುಟ್ಟಿಸಿ ಕಳೆದ ಎರಡುವರ್ಷಗಳಲ್ಲಿ ಸಾಂಗಮಾಡಿದಂತೆ ಅವರ ಅನುಕರಣವನ್ನು ಈಗಿನ ಹೆಡ್ಮಾಸ್ಟರು ಮಿ॥ ತರಣಿ ಇವರು ಮಾಡುತ್ತಿರುವದು ಭೂಷಣವೆಂದೂ ಈ ಶಾಲೆಯ ಮಾಸ್ತರರು ಹುಡುಗರಲ್ಲಿ ವಾಚನಾಭಿರುಚಿಯು ಹೆಚ್ಚುಗುವಂತೆ ಮಾಡಿ ಅವರ ಮನಸ್ಸನ್ನು ಆಕರ್ಷಣ ಮಾಡುತ್ತಿರುವುದು ಬಹಳ ಶ್ಲಾಘನೀಯವೆಂದೂ ತಿಳಿಸಿದರು. ಅನಂತರ ಕನ್ನಡ- ಇಂಗ್ಲೀಷು-ಮರಾಠಿ-ಹಿಂದುಸ್ಥಾನಿ-ಸಂಸ್ಕೃತ ಭಾಷೆಗಳಲ್ಲಿ ವಿದ್ಯಾರ್ಥಿಗಳು ಮಾತನಾಡಿದನಂತರ ರಾವಸಾಹೇಬ ಶಿವಮೂರ್ತಿಸ್ವಾಮಿ ಕಣಬರಗಿಮಠ ಇವರು— „ವಿದ್ಯಾರ್ಥಿಗಳಿಗೆ ಉಪದೇಶ" ವೆಂಬುದರ ಮೇಲೆ ಒಂದು ತಾಸಿನವರೆಗೆ ಉತ್ತಮವಾದ ಭಾಷಣಮಾಡಿದರು. ಅವರು— „ವಿದ್ಯಾರ್ಥಿ" ಇದರ ವ್ಯಾಖ್ಯಾನವನ್ನು ಹೇಳಿ, ಅವರು ಸ್ವಹಿತ ಪರಹಿತಗಳನ್ನು ಹೇಗೆ ಸಾಧಿಸಬೇಕು-ತಾಯಿತಂದೆ ಕುಟುಂಬದವರ ಕೂಡ ನಡೆದುಕೊಳ್ಳುವ ರೀತಿ-ಶಾಲೆಯಲ್ಲಿ ಗುರುಗಳ ಸಂಗಡ ಇರುವಿಕೆ-ಗ್ರಾಮ ತಾಲ್ಲೂಕು ಜಿಲ್ಲೆ ಇಲಾಖೆ ಖಂಡಗಳ ಜನರ ರೀತಿ-ನಡವಳಿಗಳನ್ನು ಕಲಿಯುವುದು-ತಮ್ಮ ಅನುಕೂಲತೆಯ ಪ್ರಕಾರ ದೇಶಸೇವೆ ಸಾರ್ವಜನಿಕ ಹಿತ- ಜಾತಿಮತ್ಸರ ನಿಷೇಧ- ನಾಗರಿಕತೆ- ಪರಹೀಡೆಯಿಂದಾಗುವ ಪರಿಣಾಮ- ಶರೀರ ಸಂಪತ್ತು- ರಾಜನಿಷ್ಠತೆ-ಮುಂತಾದ ಅನೇಕ ಮಹತ್ವದ ವಿಷಯಗಳನ್ನು ಬಹಳ ಸರಸವಾಗಿ ವರ್ಣಿಸಿ ಉಪದೇಶಿಸಿದರು. ಪ್ರತಿಯೊಬ್ಬ ಮನುಷ್ಯನೂ ಗತಿಸಿಹೋದ ನಾಮದಾರ ಗೋಖಲೆ, ರಾನಡೆ, ತೆಲಂಗ ಇವರಂತೆ ದೇಶಸೇವೆ-ಭೂತದಯೆ-ಸ್ವಾರ್ಥತ್ಯಾಗ ಮೊದಲಾದುವುಗಳನ್ನು ಅನಂತವಾಗಿ ತೋರಿಸಿ, ಇಹಲೋಕಕ್ಕೆ ಬಂದುದಕ್ಕೆ „ಮನುಷ್ಯ" ಎಂಬ ಹೆಸರನ್ನು ಸಾರ್ಥಕಪಡಿಸಬೇಕೆಂದೂ, ಇದು ಆಗದ ಪಕ್ಷಕ್ಕೆ ಪರನಿಂದೆ-ಪರಪೀಡ-ಕುಟಿಲತೆ- ಮುಂತಾದುವುಗಳನ್ನು ಕಾಲತ್ರಯದಲ್ಲೂ ಮಾಡಬಾರದೆಂದೂ ತಿಳಿಸಿ, ಆರೋಗ್ಯವನ್ನು ಸದಾ ಕಾಯುವ ಕುರಿತು ಬಹಳ ರಸವತ್ತಾದ ಭಾಷಣಮಾಡಿ, ಹುಡುಗರು ಆಟದ ಸಾಮಾನು ತೆಗೆದುಕೊಳ್ಳುವ ಕುರಿತು ೧೫ ರೂಪಾಯಿಗಳನ್ನು ಇನಾಮಾಗಿ ಕೊಟ್ಟರು. ಅನಂತರ ಪಾಸಾದ ವಿದ್ಯಾರ್ಥಿಗಳಿಗೆ ಬಹುಮಾನ ಪುಸ್ತಕಗಳನ್ನು ಅಧ್ಯಕ್ಷರ ಹಸ್ತದಿಂದ ಹಂಚಿಸಿದಮೇಲೆ, ಅಧ್ಯಕ್ಷರು— ರಾ॥ ಸಾ॥ ಶಿವಮೂರ್ತಿಸ್ವಾಮಿ ಕಣಬರಗಿ ಮಠ ಇವರ ಭಾಷಣವನ್ನು ಸಮರ್ಥನಮಾಡಿ ಹೇಳಿದರು. ಆ ಮೇಲೆ ರಾಷ್ಟ್ರಗೀತವಾಗಿ ಸಭೆಯು ಮುಗಿಯಿತು. ಈ ಸಭೆಗೆ ರಾ॥ ಸಾ॥ ಗಿಲಗಂಜಿ, ಅನ್ನದಾನಿಮಠ, ಪಂಡಿತ ಗುರುಸಿದ್ಧಸ್ವಾಮಿ, ಘೋಡಗೇರಿ ವಂಟಮುರಿ ಮಠ, ಪರಮಶೆಟ್ಟಿ, ವೆಂಕಟರಾವ ದೇಶಪಾಂಡೆ, ವಕೀಲ ಮಹಾಜನ, ಘಾಟಕ ಕವಳಿ, ಅಂಗಡಿ, ಸಬ ಇನ್ಸ್ಪೆಕ್ಟರ ಪೋಲೀಸ ಮುಂತಾದ ಪ್ರಮುಖ ಸದ್ಗೃಹಸ್ಥರು ಕೂಡಿ ಅಜಮಾಸು ೩೦೦ ಜನರು ಸಭೆಗೆ ಬಂದಿದ್ದರು.

ಮರುದಿವಸ ಸೋಮವಾರ ವಿದ್ಯಾರ್ಥಿಗಳ ಆಟಗಳೂ ಭೋಜನವೂ ಮುಗಿದನಂತರ ಸಂಜೆಗೆ ಕಲ್ಪವೃಕ್ಷ ಇವರ ನಾಟಕಗೃಹದಲ್ಲಿ ಮಿ॥ ಕರಣಿ ಇವರು ತಯಾರಿಸಿದ „ಮಾರ್ಕಂಡೇಯ" ವೆಂಬ ಕನ್ನಡ ಸಂಗೀತ ನಾಟಕವನ್ನು ವಿದ್ಯಾರ್ಥಿಗಳು ಉತ್ತಮರೀತಿಯಿಂದ ಅಭಿನಯಿಸಿ ತೋರಿಸಿದರು. ಅವರಿಗೆ ಬಹುಮಾನಾರ್ಥವಾಗಿ ರಾ॥ಸಾ॥ ಕಣಬರಗಿ ಮಠ ಇವರು ಒಂದು ಜರದ ರುಮಾಲನ್ನೂ, ಘೋಡಗೇರಿ ದೆಂಬಳಗಿ ಕಂಪನಿಯವರು ೫ ರೂ. ಯನ್ನೂ, ಮಿ॥ ಪಾರಶೆಟ್ಟಿಯವರು ೫ ರೂ. ಮತ್ತು ಕೆಲ ಪುಸ್ತಕಗಳನ್ನೂ ಉಡುಗೆರೆಗಳನ್ನೂ, ವೆಂಕಟರಾಯರು ಮತ್ತೆ ಕೆಲರು ರೂ. ಗಳನ್ನೂ ಮತ್ತು ಉಡುಗೆರೆಗಳನ್ನೂ ರಾ॥ಸಾ॥ ಮಾಮಲೇದಾರ ಇವರ ಹಸ್ತದಿಂದ ಕೊಡಿಸಿ ವಿದ್ಯಾರ್ಥಿಗಳನ್ನು ಗೌರವಿಸಿದರು. ಗುರುವಾರ ತಾ॥೨೯-೪-೧೯೧೫ ರ ದಿವಸ ಸಾಯಂಕಾಲಕ್ಕೆ ಧಾರವಾಡದ ಲೋಕಪ್ರಿಯ ಕಲೆಕ್ಟರ್ ಮಿ॥ವೇಲ್ಸ್ ಸಾಹೇಬರವರು ಪತ್ನೀಸಮೇತ ಆರು ತಿಂಗಳ ರಜೆಯಮೇಲೆ ಹೋಗುವಾಗ್ಗೆ ಗೋಕಾಕ ರೋಡ ಸ್ಟೇಷನದಲ್ಲಿಳಿಯಲು, ಪ್ಲಾಟಫಾರಮ್ಮಿನಮೇಲೆ ಮೊದಲೇ ಗೊತ್ತುಮಾಡಿದ್ದಂತೆ ತಯಾರಿಸಿದ ಸ್ಥಳದಲ್ಲಿ ದೊರೆ-ದೊರಸಾನಿಯವರನ್ನು ಕೂಡ್ರಿಸಿ, ರಾವಸಾಹೇಬ ಶಿವಮೂರ್ತಿ ಸ್ವಾಮಿ ಕಣಬರಗಿ ಮಠ ಇವರು ತಾಂಬೂಲ ಸಮಾರಂಭವನ್ನು ಜರುಗಿಸಿ, ಪೂಮಾಲೆ ಗಂಧಪರಿಮಳದ್ರವ್ಯವನ್ನು ಸಾ॥ ದಂಪತಿಗಳಿಗೆ ಸಮರ್ಪಿಸಿ, ದೊರೆಗಳ ಪ್ರವಾಸವು ಸುಖಕರವಾಗಿ ಜರುಗಿ ಪ್ರೇಮದಿಂದ ತೀವ್ರವೇ ತಿರುಗಿ ಬರಲೆಂದು ಆಶಿಸಿದರು. ಅಲ್ಲಿ ಶಿ॥ ಪುಟ್ಟರಾಜ ಒಡೆಯರು, ಪಂಡಿತಪ್ಪಾ ಚಿಕ್ಕೋಡಿ, ಮಲಗೌಡಾ ಪಾಟೀಲ, ಬಳವಂತರಾವ, ವೀರಭದ್ರ, ಒಂಟಮುರಿ ಮಠ, ಘೋಡಗೇರಿ ಪರಮಶೆಟ್ಟರು, ದುಂಡಪ್ಪಾ, ಶಿವಲಿಂಗಸ್ವಾಮಿ ಮೊದಲಾದವರು ತಾಂಬೂಲವನ್ನು ಸಮರ್ಪಿಸಿದರು. ಸಾಹೇಬರು ಇವರೆಲ್ಲರ ಆಭಾರ ಮನ್ನಿಸಿ ಮುಂದೆ ಪ್ರಯಾಣಮಾಡಿದರು.

ಪ್ರೇಕ್ಷಕ.

ಶ್ರೀಮದ್ರಂಭಾಪುರೀ ವೀರಸಿಂಹಾಸನದ ಸಮಸ್ತಬಿರುದಾನ್ವಿತ ಶ್ರೀಮಜಗದ್ಗುರು ಪಂಚಾಕ್ಷರೀರಾಜದೇಶಿಕೇಂದ್ರ ಮಹಾಸ್ವಾಮಿಗಳವರಸನ್ನಿಧಾನದಿಂದ ಶಿವಾಯಿಬಾಬು ನಂಬರು ೩೩.

ಶಕ ೧೮೩೩ ನೆಯ ರಾಕ್ಷಸಸಂ॥ ರದ ಚೈತ್ರಬಹುಳ ೮ ಮಿತಿಯಲ್ಲು ಮೈಸೂರುಸೀಮೆಯ ಸಮಸ್ತತಾಲ್ಲೂಕುಗಳಲ್ಲಿರತಕ್ಕ ಪಟ್ಟ, ಚರಂತರು, ಮಠಸ್ತರು, ಪ್ಯಾಟಿಮನೆ ಸೆಟ್ಟಿ, ಯಜಮಾನರು, ಹರದೋಗ್ರಾಮಗಳ ಗೌಡರು, ಬುದ್ಧಿವಂತರು ಇನ್ನೂ ಮುಂತಾದ ವೀರಶೈವ ಭಕ್ತಮಾಹೇಶ್ವರರಿಗೆ ಬರೆಸಿದಾಶೀರ್ವಾದ:-ಈ ಮೊದಲು ತಾ॥ ...... ರಲ್ಲಿ ಸಾದರಾಗಿರುವ ಶಿವಾಯಿಬಾಬು ನಂಬರು ...... ನೆ ನಿರೂಪದ ಪ್ರಕಾರ ಬೆಂಗಳೂರಲ್ಲಿ ಸ್ಥಾಪಿತವಾಗಿರುವ ಮೈಸೂರು ವೀರಶೈವ ವಿದ್ಯಾಭಿವೃದ್ಧಿಫಂಡಿಗೆ ತಮ್ಮತಮ್ಮ ಗೃಹಗಳಲ್ಲಿ ನಡೆಯುವ ಶುಭಶೋಭನಾದಿ ಕಾರ್ಯಗಳಲ್ಲಿ ಸ್ವಶಕ್ತ್ಯಾನುಸಾರ ದ್ರವ್ಯವನ್ನ ತೆಗೆಸಿ ಫಂಡ್ ಸೆಕ್ರಿಟರಿಗಳ ವಶಕ್ಕೆ ಕಳುಹಿಸುವಂತೆ ಸಾದರಾಗಿರುವ ನಿರೂಪದಪ್ರಕಾರ ಈಗಲೂ ಪ್ರತಿಗ್ರಾಮದಲ್ಲಿಯೂ ಲಗ್ನ ಮೊದಲಾದ ಕಾರ್ಯಗಳಲ್ಲಿ ಫಂಡಿಗೆ ದ್ರವ್ಯವನ್ನ ತೆಗೆದು ಮೇಲ್ಕಂಡ ಮೇರೆ ಖಂಡಿತವಾಗಿಯೂ ರವಾನಿಸುತ್ತಾ ಬರುವುದು. ಅಲ್ಲದೆ ಕೈ. ಯಜಮಾನ ವೀರಸಂಗಪ್ಪನವರ ಅಗ್ರತಾಂಬೂಲವನ್ನು ಮೇಲ್ಕಂಡ ಕಾರ್ಯಗಳಲ್ಲಿ ತೆಗೆದು ಅವರ ಸಂತತಿಯವರಾದ ವೈ. ವಿರೂಪಾಕ್ಷಯ್ಯನವರಲ್ಲಿಗೆ ರವಾನಿಸುತ್ತಾ ಬರುವದು. ಮೇಲ್ಕಂಡಮೇರೆ ನಡೆಯದೆ ತಪ್ಪಿದಲ್ಲಿ ಈ ವಿಚಾರದಲ್ಲಿ ತಾಲ್ಲೂಕು ಇಲಾಖಾದಾರರು ಕ್ರಮವರಿತು ರಿಕಾರ್ಡುಮಾಡಿ ರವಾನಿಸುತ್ತಾ ಬರುವುದರಲ್ಲಿ ಗಮನಕೊಡಲಾದೀತಾಗಿ ಬಾಹುಲ್ಯವಾಗಿ ಅಪ್ಪಣೆಕೊಡಿಸುವುದಾವುದಿದ್ದೀತು ೯ ಖತಾರೀಖು ೩ನೇ ಮಾಹೆ ಏಪ್ರಿಲ್ ಸನ್ ೧೯೧೫ನೇ ಇಸವಿ ಮೊಕ್ಕಾಂ ದರ್ಜಾಗ ಸಂಸ್ಥಾನ ಬಾಳೆಹೊನ್ನೂರು.

„ಮಾರಾಟಕ್ಕೆ ಸಿದ್ಧವಾದ ಪುಸ್ತಕವು"

ಇಂಗ್ಲೀಷುಶಿಕ್ಷಕ—ಈ ಪುಸ್ತಕದ ಅಭ್ಯಾಸದಿಂದ ಕನ್ನಡಿಗರಿಗೆ ನಾಲ್ಕಾರು ತಿಂಗಳಲ್ಲಿ, ಶಿಕ್ಷಕನ ಸಹಾಯವಿಲ್ಲದೆ ಸ್ವತಃ ಇಂಗ್ಲೀಷಮಾತು ಕಲಿಯಲಿಕ್ಕೆ ಬರುವದು. ಬೆಲೆ ೧೦ ಆಣೆ ಪ. ಖ ಬೇರೆ ಒಮ್ಮೆಲೆ ೧೦ ಪ್ರತಿಗಳನ್ನು ತರಿಸಿಕೊಂಡರೆ, ಒಂದು ಪ್ರತಿ ಕಮಿಶನ್ ದೊರೆಯುವದು. ಪ್ರತಿಗಳು ತೀರ ಸ್ವಲ್ಪ ಉಳಿದಿವೆ. ಗ್ರಾಹಕರು ತೀವ್ರ ತರಿಸಿಕೊಳ್ಳತಕ್ಕದ್ದು.

ವಿಳಾಸ--ನ. ಸು. ಬಾಗಲ, ಬನ್ನಿಕೊಪ್ಪ, ಪೋ. ಮುಂಡರಗಿ. ಜಿಲ್ಲಾ-ಧಾರವಾಡ. 2

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪರ್ಟಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್‌ಸನ್ಸ್ 1
ಸುಗಂಧಕಾರಿ, ಮೈಸೂರು

ನೋಟೀಸ್.

ರಾವ್‌ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಧರ್ಮ ಸತ್ರದಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನಕ್ಕೆ ಏರ್ಪಾಟಾಗಿದೆ. ವಿದ್ಯಾರ್ಥಿಗಳು ಮೈಸೂರ್ ದೇಶೀಯರಾಗಿಯೂ, ವೀರಶೈವರಾಗಿಯೂ, ಇಂಗ್ಲೀಷ್ ಲೋವರ್‌ಸೆಕೆಂಡರಿಗೆ ಕಡಿಮೆ ಯಿಲ್ಲದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿಯೂ ಇರಬೇಕು. ಮತ್ತು ಪ್ರೌಢವಿದ್ಯಾಭ್ಯಾಸ ಮಾಡಲು ಚೈತನ್ಯವಿಲ್ಲದವರಿಗೆ ಮಾತ್ರ ಅವಕಾಶ ದೊರಿಯುವುದು. ಚೈತನ್ಯವಿಲ್ಲವೆಂಬುದಕ್ಕೆ ಸ್ಥಳೀಯ ಪ್ರಮುಖರಿಂದ ಸರ್ಟಿಫಿಕೇಟ್ ತರಬೇಕಲ್ಲದೆ, ತಾವು ಹಿಂದೆ ಓದಿದ ಸ್ಕೂಲ್ ಯಾ ಕಾಲೇಜ್ ಮುಖ್ಯೋಪಾಧ್ಯಾಯರಿಂದಲೂ ಸಹ ತನ್ನ ಯೋಗ್ಯತಾವಿಚಾರವಾಗಿ ಸರ್ಟಿಫಿಕೇಟ್ ತರತಕ್ಕದ್ದು. ಗತವರ್ಷದಲ್ಲಿ ಸತ್ರದಲ್ಲಿದ್ದ ವಿದ್ಯಾರ್ಥಿಗಳ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರಿಗೆ ಮೊದಲು ಅವಕಾಶಕೊಟ್ಟು ನಂತರ ಇತರರಿಗೆ ಅವರ ಯೋಗ್ಯತಾ ಪ್ರಕಾರ ಸಾಧ್ಯವಾದಷ್ಟು ಕ್ಲುಪ್ತವಾಗಿ ಸ್ಥಳದೊರಿಯುತ್ತೆ. ಇಚ್ಛೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ೧೫ನೇ ಮೇ ತಿಂಗಳ ಆಖೈರ್‌ಒಳಗಾಗಿ ಅಪ್ಲಿಕೇಷನ್ ಹಾಕತಕ್ಕದ್ದು.

(Sd) ಕಂ. ಶಿವಪ್ಪ ಆನರರಿ ಸೆಕ್ರಿಟರಿ
ರಾವ್‌ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ
ತೋಟದಪ್ಪನವರ ಸತ್ರ ಬೆಂಗಳೂರು ಸಿಟಿ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿ ಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೪—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೦—೦ ರೂ. ಕೊಡಬೇಕಾಗುವುದು. ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರದ ಬಣ್ಣದಿಂದ ಬಿಳಿ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೦—೦; ಅನಂತರ ಪ್ರತಿ ೧೦೦ಕ್ಕೂ ೦—೧೨—೦; ಹಳದೀ ಗ್ಲೇಜ್‌ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಹಳದಿ ರಫ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೩-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦-೬-೦ ಆಣೆಯಂತೆ ಕಳುಹಬೇಕು. ಕ್ಲುಪ್ತ ಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,
ಸ್ಟಾರ್‌ಪ್ರೆಸ್, ಮೈಸೂರ್.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು

83

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕದನಗಳ ಪಟಗಳೂ ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ ೨ ಆಣೆ; ವಿ. ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ:—ದಿ ಜನರಲ್ ಏಜನ್ಸಿ. ಮೈಸೂರು.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

19

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗನುಳ್ಳವರು, ರಕ್ತಪುದ್ರೇಕವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ,ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ

ಬಿಸಿಲುಕಾಲಕ್ಕೆ 30

ಬಲ್ಲರಿಗೂಬೇಕು

ಅಮೃತಾಮಲಕತೈಲ:—ವಿಧವಿಧವಾದ ತಲೆನೋವು, ಶರೀರವು ಬೆಂಕಿಯಂತಿರುವುದು, ತಲೆತಿರಗು, ಕಣ್ಣುರಿ, ಕಣ್ಣು ಕೆಂಪು, ಕಣ್ಣು ಮಂಜು, ಕಣ್ಣಿನಲ್ಲಿ ನೀರು ಸುರಿಯುವುದು, ರಾತ್ರಿ ನಿದ್ರೆಬಾರದಿರುವುದು ಇವುಗಳನ್ನು ೧-೨ ಅಭ್ಯಂಗನದಿಂದಲೇ ಗುಣಮಾಡಿ ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ. ಬಿಸಿಲುಕಾಲಕ್ಕೆ ಇದು ಅಮೃತಮೇಸರಿ. ಎಂಟು ಅಭ್ಯಂಗನಕ್ಕೆ ಆಗುವ ತೈಲ ೦-೮-೦. ೧ ಡರ್ಜ ೫-೦-೦.

ಆಮೋದಿನಿ:—ಅಮೋಘವಾದ ಸುವಾಸನೆಯಿಂದ ಕೂಡಿದ ಈ ಮಾತ್ರೆಗಳು ತಾಂಬೂಲವನ್ನು ರಂಜಿಸಿ ಬಾಯಾರಿಕೆಯನ್ನು ತಕ್ಷಣ ನಿಲ್ಲಿಸಿ ಆಯಾಸವನ್ನು ಪರಿಹರಿಸಿ ಕಂಠನಾಳವನ್ನು ಸರಿಪಡಿಸಿ ಕೆಮ್ಮು, ದಮ್ಮು, ಉಬ್ಬಸ, ಮೇಹಬಂಧಗಳನ್ನು ಗುಣಮಾಡಿ ಆರೋಗ್ಯವನ್ನು ಕಾಪಾಡುವದರಲ್ಲಿ ಶ್ರೇಷ್ಠವಾದುದು. ಸಂಗೀತಗಾರರಿಗೂ, ವಿದ್ಯಾರ್ಥಿಗಳಿಗೂ, ಪ್ರಯಾಣೀಕರಿಗೂ ಅಮೂಲ್ಯವಾದುದು. ೧೫೦ ಮಾತ್ರೆ ೦—೪—೦. ೫ ಕ್ಕೆ ಒಂದು ಹೆಚ್ಚು.

ಖಂಡಾಮಲಕರಸಾಯನ:—ತಲೆತಿರಗು, ಕಣ್ಣು ಕಗ್ಗತ್ತಲೆ, ಹಸಿವೇ ಇಲ್ಲದಿರುವುದು, ಆಹಾರದಲ್ಲಿ ಅರುಚಿ, ವಾಕರಿಕೆ, ವಾಂತಿ, ಹುಳಿ, ಖಾರ, ಅಥವಾ ಸಿಹಿಯಾದ ತೇಗು, ಹೊಟ್ಟೆಯುಬ್ಬರ, ಹೊಟ್ಟೆನೋವು, ಕಣ್ಣು ಅಥವಾ ಮೈ ಹಳದೀಬಣ್ಣ, ನಿಶ್ಶಕ್ತಿ, ಹಳೇಜ್ವರ, ಎದೆಬಡಿಯುವಿಕೆ, ಪಾಂಡು, ಕಾಮಾಲೆ, ಮೂರ್ಛೆ ಇವುಗಳಪೈಕಿ ಯಾವುದಿದ್ದರೂ ಖಾತರಿ ಗುಣವಾಗಿ ದಿನಕ್ಕೊಂದುವೇಳೆ ಸಲೀಸಾಗಿ ಕಾಲಪ್ರವರ್ತಿಯಾಗುತ್ತದೆ. ೧೫ ದಿನಕ್ಕೆ ಆಗುವ ಔಷಧ, ಬೆಲೆ ೦-೧೨-೦. ೧ ಡರ್ಜ ಡಬ್ಬಗಳಿಗೆ ೭-೮-೦.

ಪ್ರತಿಔಷಧಕ್ಕೂ ಟಪಾಲ್ ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ.

ವಿಳಾಸ:—ಬಿ. ವಿ. ಪಂಡಿತ್, ಸದ್ವೈದ್ಯಶಾಲಾ,
ನಂಜನಗೂಡು, ಮೈಸೂರು ಸೀ

ಹೊಸ ಪುಸ್ತಕಗಳು.

182

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೦೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ.— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ.— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು ಷಟ್ಸ್ಥಲ-ಶರಣಹಸುಗೆ-ಪಂಚೀಕರಣ ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲ [illegible] ದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮನಾರಾಧ್ಯರ ಚರಿತೆಯನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ— ವೀರಶೈವಮತದ ಪಿಟ್ಟ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ವೇದಾಂತ ಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾರಕಮಂಡಲಿ, ಮೈಸೂರು.

ಪಾಳ್ಯದ ವಂಕಟಾಚಲ ಪಂಡಿತರ ಸಿದ್ಧೌಷಧಗಳು.

49

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋಹತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚು ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ— ೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೊಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯದ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧-೦-೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಳ ಕೂದಲು ಬೆಳೆಯುವ ಪರಿಮಳ ತೈಲವು.

5

ಡಬ್ಬಿ ೧ ಕ್ಕೆ ೩೬ ವಿಧವಾದ ಇನಾಂ ಸಾಮಾನುಗಳ ಸಮೇತ ೧೫ ತೊಲೆ ಎಣ್ಣೆಯ ಕ್ರಯ ರೂ. ೧-೦-೦



ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೇ ಇರುವ ಕೂದಲು ಬೆಳೆಯುವುದು. ಒರಟಾಗಿರುವ ಕೂದಲು ಮೃದುವಾಗುವುದು. ನೇರಳೇಹಣ್ಣಿನಂತೆ ಕಪ್ಪಾಗಿ ಥಳಥಳಿಸುವುದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವುದು. ಕಣ್ಣಿಗೆ ತಂಪುಕೊಡುವದು. ತಲೆಯಲ್ಲಿರುವ ಹೊಟ್ಟನ್ನು ಸರಿಮಾಡುವುದು. ಕಣ್ಣಿನಲ್ಲಿ ಮಂಜನ್ನು ತೆಗೆದು, ಮುಖಕ್ಕೆ ಕಾಂತಿಯನ್ನು, ದೇಹಕ್ಕೆ ಆರೋಗ್ಯವನ್ನು, ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವುದಲ್ಲದೆ ಜವ್ವಾಜಿ ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತೂ ಜಾಜಿ, ಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರೂಪಾಕ್ಷಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವುದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

೧೫ ತೋಲ ತೈಲವುಳ್ಳ ಡಬ್ಬಿ ೧ ಕ್ಕೆ ಕ್ರಯ ೩೬ ಇನಾಂ ಸಾಮಾನುಗಳ ಸಮೇತ ರೂ. ೧-೦-೦

ಇನಾಂ ಸಾಮಾನುಗಳ ತಪ್ಶೀಲು— ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ ೧, ದಂತದ ಬಾಚಣಿಗೆ ೧, ನೋಡಿಕೊಳ್ಳುವ ಕನ್ನಡಿ ೧, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ ೧, ಅತ್ತರುಬಿಲ್ಲೆ ೧, ವಾಸನೆಯುಳ್ಳ ಸೋಪು ೧ ತಾಂಬೂಲಮಾತ್ರೆ ೨೦ ಕೊಂಡೆ ಗಿಣಿಗಳು ೬ ಕಾರೋನೇಷನ್ ಬ್ರೂಚ್ ೧, ಜವಾದುಡಬ್ಬಿ ೧, ಈ ತರಹ ೩೬ ಇನಾಂ ಕೊಡಲ್ಪಡುತ್ತವೆ.

ನಮ್ಮ ವಿಳಾಸ:— ಧನಲಕ್ಷ್ಮಿ ಅಂಡ್ ಕಂಪನಿ ೧-೬
ವೆಂಕಟೇಶಮೇಸ್ತ್ರಿ ಬೀದಿ, ಸಾಹುಕಾರ್ ಪೇಟೆ ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧-೧-೦
ಪರವಾದಿಗಜಾಂಕುಶತಾರಾವಳಿ	೦-೮-೦
ಶಿವಪೂಜಾವಿಧಿಃ	೦-೮-೦
ಚಾರುಶೀಲೆಚರಿತೆ.	೦-೫-೦
ವಿವೇಕಮಂಜರಿ [೨ನೆಯ ಭಾಗ]	೦-೩-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆಯವೆಚ್ಚ ಬೇರೆ.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಣ್ಯವಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್ ವಾಚ್.

ಇದರ ಕ್ರಯ ೭ ಬಹುಮಾನಗಳ ಸಮೇತ ರೂ. ೩-೮-೦
ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ. 5



ಧನವಂತರೇ ಈ:— ನೂತನ ನಮೂನೆ ವಾಚ್ ಈಗತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತೂ ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತೂ ನಾಣ್ಯವಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್ ಬರೀ ಮಾತುಗಳಿಂದಲೇನು? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ ೭ ಬಹುಮಾನಗಳ ತಪಶೀಲ್:—(೧) ಸುಂದರವಾದ ವಾಚ್ ಸರಪಣಿ, (೨) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (೩) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (೪) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆದಾರ, (೫) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (೬) ಪರಿಮಳವುಳ್ಳ ಸುವಾಸನೆ ಶೀಷೆ, (೭) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—
ಎಸ್. ಎಮ್. ಸ್ವಾಮಿ ಅಂಡ್ ಕಂಪೆನಿ,
ನಂ. ೪೪, ನಂಬುಳಯ್ಯರ ಬೀದಿ, ಮದರಾಸು.

೧೯೧೪ ನೆಯ ಇಸವಿ ಮೇ ತಾ॥ ೯ ರಿಂದ ೧೯೧೪ ನೆಯ ಮೇ ತಾ॥ ೧೪ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೬ ನೆಯ ರಾಕ್ಷಸನಾಮಸಂವತ್ಸರದ ಅಧಿಕವೈಶಾಖ ಬ॥ ಏಕಾದಶಿಯಿಂದ ನಿಜವೈಶಾಖ ಶು॥ ಪಾಡ್ಯಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮೇಷ ತೇದಿ
9	[1]ಭಾನು	ಏ	49-55	ಪೂಭಾ	30-30	27
10	ಸೋ	ದ್ವಾ	51-38	ಉಭಾ	33-25	28
11	[2]ಮಂಗ	ತ್ರ	54-24	ರೇವತಿ	37-28	29
12	[3]ಬುಧ	ಚ	58-20	ಅಶ್ವಿನಿ	42-40	30
12	[4]ಗುರು	ಅ	60	ಭರಣಿ	48- 3	31
13	[5]ಶುಕ್ರ	ಅ	3-27	ಕೃತಿಕೆ	55-15	1
14	[6]ಶನಿ	ಪಾ	8-33	ರೋಹಿಣಿ	60	2

(1) ಸರ್ವತ್ರೈಕಾದಶಿ, ಶ್ರೀ ಶ್ವೇತವರಾಹಸ್ವಾಮಿ ರಥಃ. (2) ಶ್ರೀ ಶ್ವೇತವರಾಹ ಜಯಂತಿ, ಶ್ರೀರಂಗದಲ್ಲಿ ರಂಗನಾಥಸ್ವಾಮಿ ರಥಃ, (3) ಮಾಸಶಿವರಾತ್ರಿ, ಮೃತ್ಯುಯೋಗಃ. (4) ಸರ್ವತ್ರಾಮಾವಾಸ್ಯಾ, (5) ವಿಷ್ಣುಪದ ಪುಣ್ಯಕಾಲಃ. (6) ಚಂದ್ರೋದಯಃ, ರಜಬ್ ಚಂ. ೧, ಅಮೃತಸಿದ್ಧಿಯೋಗಃ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರ್ ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಙ್ಕಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿ ಶ್ರೀಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧-೦-೦ ಅಂಚೆವೆಚ್ಚ ಸೇರಿ ೧-೧೪-೦

ಸಂಪುಟ ೨೮) ಮೈಸೂರ್ ಸ್ಟಾರ್ ಸರ್ ೧೯೧೪ ನೆಯ ಇಸವಿ ಮೇ ತಾರೀಖು ೧೭ ನೆಯ ಭಾನುವಾರ. (ಸಂಚಿಕೆ ೧೯

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

15

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

೧. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

೨. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

೩. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ ಯಾವರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

೪. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು, [illegible]ವುದಲ್ಲದೆ, ಕಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

೫. [illegible]ಳಿಕಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ[illegible] ಹಾಗಲ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

[illegible]ಬೇಸಿಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ [illegible]ರಣೆಯನ್ನು ಮಾಡುವುದು.

[illegible]ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

೪೫	ಮಾತ್ರೆಗಳ	ಪೊಟ್ಟಣ	೧ಕ್ಕೆ	೨ ಆಣೆ	೮೦	ಮಾತ್ರೆಗಳ	ಟಿನ್	೧ಕ್ಕೆ	೪ ಆಣೆ.
೯೫	"	"	"	೪ "	೧೦೦	"	ಶೀಶೆ	"	೪॥ "
೨೦೦	"	"	"	೭ "	೫೫೦	"	ಮರದಪೆಟ್ಟಿಗೆ	"	೧ ರೂ.
೨೦೦	"	ಟಿನ್	"	೯ "	೧೨೦೦	"	"	"	೨ "

೧ ರೂ.ಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಎಲ್ಲಾ ಕಡೆಯೂ ಪ್ರಸಿದ್ಧ ವರ್ತಕರಲ್ಲಿ ವಿಕ್ರಯಿಸಲ್ಪಡುತ್ತದೆ.

ಮೈಸೂರುಸೀಮೆಯ ಏಜಂಟರು:— ಎಂ. ರಾಮಸಂಜೀವ ಸೆಟ್ಟಿ,
ಚೆನ್ನಪಟ್ಟಣ.

ಸೋಲ್‌ಏಜಂಟರು:— ಸೆಶಿಂತಾನ್ ಡಿಪೋ,
ಪ್ರಿನ್ಸೆಸ್‌ಸ್ಟ್ರೀಟ್ ಬೊಂಬಾಯಿ ನಂ ೨.

ಮದ್ರಾಸ್ ಏಜಂಟ್:— ಬಿ. ಸಿ. ಷಾ ಅಂಡ್ ಕೊ,
೧೩೩ ಚೀನಾಬಜಾರ್ ರೋಡ್, ಮದ್ರಾಸ್.


S.U. & CO.
BENARES CITY.
KASHI
VISHWESHWAR.

33

[illegible] ಕಂಪೆನಿ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮ ಜಾತಿ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟಲಾಗನ್ನು ಅಪೇಕ್ಷಿಸುವರಿಗೆ ೨೦ ಪುಟಗಳುಳ್ಳ ೧ ಕ್ಯಾಟಲಾಗನ್ನು ಕಳುಹಿಸುವೆವು.

ವಿಳಾಸ— ಎಸ್. ಯು. [illegible] ಮತ್ತು ಕಂಪೆನಿ,
ಬನಾರಸ್ ಸಿಟಿ (ಕಾಶೀ)

ಓರಿಯಂಟಲ್ ಫಾರ್ಮಸಿ ಮೈಸೂರು.

15

ಪ್ರಸಿದ್ಧ ಗುಣಕಂಡ ಔಷಧಗಳು.

ಜ್ವರದಮಾತ್ರೆ— ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ. ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ— ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಯುಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮಂದಇವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ರೂ.

ಗೋರೋಚನದಮಾತ್ರೆ— ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ— ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೂಡ್ಲೆ ತಪ್ಪಿ ಜೀರ್ಣಶಕ್ತಿಕೊಡುತ್ತೆ. ಪ್ರಯಾಣಿಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ— ಎಲ್ಲಾ ವಿಧವಾಯು ನೋವು ಉಳುಕು ಊದು ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ ೫ ಡಬ್ಬಿಗೆ ೧ ರೂ. ಕೂಡ್ಲೆ ನಮ್ಮ ಕ್ಯಾಟಲಾಗಿಗೆ ಬರಿಯಿರಿ ಮುಫತ್ತು ಕಳುಹಿಸುತ್ತೇವೆ.

ಶಿರಸಂಗೀಕರ ಸ್ಮಾರಕ.

ಕನ್ನಡ ಒಕ್ಕಲುತನದ ಶಾಲೆ ದೇವೀಹೊಸೂರ.

9

ಈ ಶಾಲೆಯು ಧಾರವಾಡ ಜಿಲ್ಹೆಯಲ್ಲಿರುವ ಹಾವೇರಿ ಸ್ಟೇಶನ್ನಿಂದ ೫ ಮೈಲು ದೂರವಿರುವ ದೇವೀಹೊಸೂರ ಎಂಬಲ್ಲಿ ಸ್ಥಾಪಿತವಾಗಿದ್ದು ಅದರ ಹೊಸಕ್ಲಾಸುಗಳು ಇದೇ ಮೇ ತಿಂಗಳು ೨೪ ನೇ ತಾರೀಖಿನಿಂದ ಶುರು ಆಗುವವು.

ಇದು ಕೇವಲ ಒಕ್ಕಲಿಗರ ಮಕ್ಕಳ ದೆಶೆಯಿಂದ ಇರುತ್ತದೆ. ಇದರಲ್ಲಿ ಸೇರಲಿಚ್ಛಿಸುವ ವಿದ್ಯಾರ್ಥಿಗಳ ಸಂಬಂಧದ ನಿಯಮಗಳು ಕೆಳಗೆ ಕೊಟ್ಟಂತೆ ಇರುತ್ತವೆ.

(೧) ಹುಡುಗರು ಸ್ವತಃ ಒಕ್ಕಲತನ ಮಾಡುವಂಥ ಒಕ್ಕಲಿಗರ ಮಕ್ಕಳಾಗಿರಬೇಕು. ಮತ್ತು ಆ ಹುಡುಗರು ಸ್ವಲ್ಪ ಮಟ್ಟಿಗಾದರೂ ಒಕ್ಕಲತನದ ಕೆಲಸದಲ್ಲಿ ಮಾಹಿತಿಯುಳ್ಳವರಿರಬೇಕು.

(೨) ಇಲ್ಲಿ ಕಲಿತು ಒಕ್ಕಲತನದ ಉದ್ಯೋಗವನ್ನು ನಡೆಯಿಸಬೇಕೆನ್ನುವವರನ್ನೇ ಈ ಶಾಲೆಯಲ್ಲಿ ತಕ್ಕೊಳ್ಳುವದರಲ್ಲಿ ಬರುವದು. ಸರಕಾರೀ ನೌಕರಿಯನ್ನು ಇಚ್ಛಿಸುವಂಥ ವಿದ್ಯಾರ್ಥಿಗಳು ಇಲ್ಲಿ ಬರಕೂಡದು.

(೩) ಹುಡುಗರು ಕನಿಷ್ಠಪಕ್ಷಕ್ಕೆ ಕನ್ನಡ ೫ನೇ ಇಯತ್ತೆಯಲ್ಲಿಯಾದರೂ ಪಾಸಾಗಿರಲಿಕ್ಕೆ ಬೇಕು. ಮತ್ತು ಅವರು ಯಾವ ಶಾಲೆಯಲ್ಲಿ ಕಲಿತಿರುವರೋ ಆ ಶಾಲೆಯ ಹೆಡ್ಡಮಾಸ್ತರರ ಲೀವ್ಹಿಂಗ ಸರ್ಟಿಫಿಕೇಟನ್ನು ಅರ್ಜಿ ಲಗತ ಕಳುಹಿಸಬೇಕು.

(೪) ಹುಡುಗರ ವಯಸ್ಸು ೧೪ ವರ್ಷದಿಂದ ೧೩ ವರ್ಷದ ಒಳಗಿರಬೇಕು. ಮತ್ತು ವಯಸ್ಸಿನ ದಾಖಲೆ ಅರ್ಜಿ ಲಗತ ಕಳುಹಿಸಬೇಕು.

(೫) ಹುಡುಗರ ಅಭ್ಯಾಸಕ್ರಮವು ಎರಡು ವರ್ಷದ್ದಿರುವದು; ಈ ಶಾಲೆಯಲ್ಲಿ ತೆಗೆದುಕೊಂಡ ಪ್ರತಿಯೊಬ್ಬ ಹುಡುಗನಿಗೆ ಅವನ ಶಾಲೆಯ ಫೀಗೂ ಊಟದ ವೆಚ್ಚಕ್ಕೂ ಸಾಲುವಷ್ಟು ಸ್ಕಾಲರಶಿಪ್ ಕೊಡಲ್ಪಡುವದು.

(೬) ಒಮ್ಮೆ ಶಾಲೆಯಲ್ಲಿ ಸೇರಿದನಂತರ ಶಾಲೆಯ ಅಭ್ಯಾಸ ಕ್ರಮವು ಪೂರ್ಣ ಮುಗಿಯುವವರೆಗೆ ಶಾಲೆಯನ್ನು ಬಿಡಕೂಡದು. ಒಂದು ವೇಳೆ ಮಧ್ಯದಲ್ಲಿ ಬಿಟ್ಟರೆ ಅವರು ಶಾಲೆಯಲ್ಲಿ ಇದ್ದಷ್ಟು ದಿವಸಗಳ ಖರ್ಚನ್ನು ಕೆಳಗೆ ಸಹಿ ಮಾಡಿದವರು ನಿರ್ಣಯಿಸಿದಷ್ಟು ಕೊಡಬೇಕಾಗುವದು.

ಪ್ರತಿವರ್ಷ ೧೫-೨೦ ಹುಡುಗರನ್ನು ತೆಗೆದುಕೊಳ್ಳುವದರಲ್ಲಿ ಬರುವದು. ಬೇರೆ ಶಾಲೆಗಳಂತೆ ಈ ಶಾಲೆಗೂ ಯಾವತ್ತೂ ಸೂಟಿಗಳು ದೊರೆಯುವವು. ಇದಲ್ಲದೆ ವರ್ಷಕ್ಕೆ ಎರಡಾವರ್ತಿ ಒಮ್ಮೆ ದೀಪಾವಳಿ ಸುಮಾರಕ್ಕೆ, ಮತ್ತೊಮ್ಮೆ ಬೇಸಿಗೆ ಸಮಯಕ್ಕೆ ಒಂದೊಂದು ತಿಂಗಳದ ಸತತ ಸೂಟಿಗಳು ಸಿಕ್ಕುವವು. ಇವೆರಡು ಸೂಟಿಗಳಲ್ಲಿ ಮಾತ್ರ ಹುಡುಗರನ್ನು ಮನೆಗೆ ಕಳುಹಿಸುವದರಲ್ಲಿ ಬರುವದು. ಈ ಶಾಲೆಯ ಮುಖ್ಯ ಉದ್ದೇಶವೆಂದರೆ ಒಕ್ಕಲಿಗರ ಮಕ್ಕಳಿಗೆ ಸುಧಾರಿಸಿದ ಪ್ರಕಾರದ ಒಕ್ಕಲತನದ ಶಿಕ್ಷಣವನ್ನು ಕೊಟ್ಟು ಅವರನ್ನು ಅವರ ತಾಯಿತಂದೆಗಳಿಗೆ ಹೆಚ್ಚಿಗೆ ಉಪಯುಕ್ತರನ್ನಾಗಿ ಮಾಡಿಕೊಡುವದು ಅದೆ. ಈ ಶಾಲೆಗೆ ಬರಲಿಚ್ಛಿಸುವವರು ಅರ್ಜಿಯನ್ನು ಇದೇ ಮೇ ತಿಂಗಳ ೧ನೇ ತಾರೀಖಿನ ಒಳಗಾಗಿ ಕೆಳಗೆ ಸಹಿಮಾಡಿದವರ ಕಡೆಗೆ ಕಳುಹಿಸತಕ್ಕದ್ದು.

ಆ ಅರ್ಜಿ ವಿಚಾರಣೆಮಾಡಿ ನಮ್ಮ ಶಾಲೆಯಲ್ಲಿ ತೆಗೆದುಕೊಳ್ಳತಕ್ಕಂಥ ವಿದ್ಯಾರ್ಥಿಗಳಿಗೆ ಪತ್ರದ್ವಾರದಿಂದ ಬರಲಿಕ್ಕೆ ತಿಳಿಸುವೆವು; ಅರ್ಜಿ ನಿಕಾಲಿ ಮಾಡುವಕಾಲಕ್ಕೆ ವತನದಾರ ಪಾಟೀಲ ಕುಲಕರ್ಣಿಯವರ ಮಕ್ಕಳಿಗೂ, ಸುಸ್ಥಿತಿಯ ಒಕ್ಕಲಿಗರ ಮಕ್ಕಳಿಗೂ, ಹೆಚ್ಚು ಸವಲತ ಸಿಗುವದು. ಅರ್ಜಿಯಲ್ಲಿ ಹೆಸರು, ತಂದೆಯ ಹೆಸರು, ಅಡ್ಡಹೆಸರು, ಜಾತಿ

ಇರುವ ಊರು, ತಾಲ್ಲೂಕು, ಜಿಲ್ಹಾ ಖಾತೇದ ಹೊಲವು ಎಷ್ಟು, ಮತ್ತು ಅದು ಎಲ್ಲಿರುವದು ಸರಕಾರಕ್ಕೆ ದರವರ್ಷ ಕೊಡಬೇಕಾದ ತೆರಿಗೆ ತೋಟಪಟ್ಟಿಗಳನ್ನು ಮಾಡಲಿಕ್ಕೆ ನೀರಿನ ಅನುಕೂಲತೆ ಇರುವದೇ ಹ್ಯಾಗೆ? ಮತ್ತು ಹೊಲಗಳನ್ನು ಮನೆಯಿಂದ ಮಾಡುವರೋ ಹ್ಯಾಗೆ? ಮೊದಲಾದ ಮಾಹಿತಿಯನ್ನು ತುಂಬಿ ಆಯಾ ಊರ ಗ್ರಾಮಸ್ಥರ ದಾಖಲೆಯನ್ನು ಲಗತಿಟ್ಟು ಅರ್ಜಿ ಕಳಿಸಬೇಕು; ಮತ್ತು ಅರ್ಜಿಯನ್ನು ಶಾಲೆಗೆ ಬರಲಿಚ್ಛಿಸುವ ವಿದ್ಯಾರ್ಥಿಗಳೇ ಸ್ವಹಸ್ತದಿಂದ ತುಂಬಿ ಕಳಿಸಬೇಕು. ಮೇಲೆ ಹೇಳಿದ ನಿಯಮಗಳಂತೆ ನಡೆಯಲಿಕ್ಕೆ ಅನುಮತಿಯುಂಟೆಂದು ತಮ್ಮ ಪಾಲಕರ ಕಡೆಯಿಂದ ಒಂದು ಸಹಿನಿಸಿ ದಾಖಲೆ ತಕ್ಕೊಂಡು ಅರ್ಜಿ ಲಗತ ಇಟ್ಟು ಕಳಿಸಬೇಕು.

ಧಾರವಾಡ
ತಾ॥ ೫-೩-೧೯೧೫

ಸಹಿ ಟಿ. ಗಿಲ್ಬರ್ಟ
ಡಿ. ಡಾಯರೆಕ್ಟರ ಶೆತಕೀ ಖಾತೆ,
ದಕ್ಷಿಣಭಾಗ

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತವಾಗಿರುವ ಘೋರಯುದ್ಧದ ದೆಸೆಯಿಂದ ಈ ಸಾಮಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದ ಮತ್ತೂ ಬೆಲಜಿಯಮ್ಮಿನಿಂದ ಸುತರಾಂ ಬರುವುದು ಕಟ್ಟಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಆವಶ್ಯಕವಾದ ಕಾಗದ ಮೊದಲಾದ ಸಾಮಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವಧಿಯು ಪೂರೈಸಿರುವವರಿಗೆಲ್ಲಾ ಪತ್ರಿಕೆಯನ್ನು ವಿ. ಪಿ ದ್ವಾರ ಕಳುಹಿಸುತ್ತಿರುವೆವು. ಆದರೆ ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿರುಗಿಸಿ ಕಾಗದದ ಬೆಲೆಯೇರಿಕೆಯಿಂದ ನಷ್ಟಪಡುವುದರ ಜತೆಗೆ ಪೋಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದು ತಿಳುಹಲು ಖೇದವಾಗುತ್ತದೆ. ಇತಃಪರಃ ದಯಾರ್ದ್ರಹೃದಯರಾದ ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ. ಪಿ. ಹಣವನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನವಾಗಿ ನಡೆದುಕೊಂಡು ಹೋಗುವಂತೆ ಮಾಡುವರೆಂದು ಸಂಪೂರ್ಣವಾಗಿ ನಂಬಿರುತ್ತೇವೆ.

ಮ್ಯಾನೇಜರ್.

ಶ್ರೀಮಾನ್ ಗಂಧಿ ದಂಪತಿಗಳು ಕಳೆದವಾರದಲ್ಲಿ ಬೆಂಗಳೂರಿಗೆ ದಯಮಾಡಿಸಿದ್ದಾಗ್ಗೆ ಗ॥ ಹೈಸ್ಕೂಲು ಭವನದಲ್ಲಿ ಅವರಿಗೆ ಈ ಕೆಳಗಣ ವಿಜ್ಞಾಪನಪತ್ರವು ಕನ್ನಡದಲ್ಲೂ ಇಂಗ್ಲೀಷಿನಲ್ಲೂ ಓದಿ ಒಪ್ಪಿಸಲ್ಪಟ್ಟಿತು.

ಶ್ರೀಮತೀ ಕಸ್ತೂರಿಬಾಯಿದೇವಿ ಮತ್ತೂ ಶ್ರೀಮಾನ್
ಮೋಹನದಾಸ್ ಕರಮಚಂದ್ ಗಾಂಧಿಯವರ ಸನ್ನಿಧಿಯಲ್ಲಿ
ಮೈಸೂರುದೇಶ ಸೇವಾಸಂಘದವರ
ವಿನಯಪೂರ್ವಕವಾದ ವಿಜ್ಞಾಪನೆಗಳು:—

ಪೂಜ್ಯರೆ—ಪುಣ್ಯಶ್ಲೋಕರಾದ ತಮ್ಮಗಳ ಪಾದಧೂಳಿಯಿಂದ ಈ ಪ್ರಾಂತವು ಎಂದಿಗೆ ಪವಿತ್ರವಾದೀತೆಂದು ಬಹುದಿನಗಳಿಂದ ನಿರೀಕ್ಷಿಸಿಕೊಂಡಿದ್ದ ನಮಗೆ, ಆ ಸಂತೋಷವನ್ನು ಈ ದಿನ ದೊರಕಿಸಿರುವುದಕ್ಕಾಗಿ ಕೃತಜ್ಞತೆಯನ್ನು ಸೂಚಿಸಲು ಆತುರರಾಗಿದ್ದೇವೆ.

ಅನೇಕ ವಿಷಯಗಳಲ್ಲಿ ಹಿಂದೂಸ್ಥಾನದ ಇತರ ಭಾಗಗಳಿಗಿಂತ ಈ ಭಾಗವು ಹಿಂದುಳಿದಿದ್ದರೂ, ಲೋಕಸೇವಾನಿರತರಾದ ಮಹನೀಯರನ್ನು ಗೌರವಿಸುವುದರಲ್ಲಿ ಇದೂ ಅತ್ಯಂತ ಉತ್ಸಾಹವುಳ್ಳುದಾಗಿದೆ. ಆ ದೂರವಾದ ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ಗೌರವಸ್ವಾತಂತ್ರ್ಯಗಳನ್ನು ಕಾಪಾಡುವುದಕ್ಕೂ, ಸರ್ವಸಮತ್ವವನ್ನು ಬೇರೆಬೇರೆ ಜನಾಂಗಗಳವರಲ್ಲಿ ಸ್ಥಾಪಿಸುವುದಕ್ಕೂ ತಾವಿಬ್ಬರೂ, ತಮ್ಮ ಅನುಯಾಯಿಗಳಾದ ಇತರರೂ, ದ್ವೇಷಾಸೂಯೆಗಳಿಗೆ ಪ್ರತಿಯಾಗಿ ಶಾಂತಿಕಾರುಣ್ಯಗಳನ್ನೂ, ರಾಜಕೀಯ ಮತ್ತೂ ಪಾರ್ಥಿವ ಬಲಗಳಿಗೆ ಪ್ರತಿಯಾಗಿ ಆತ್ಮತೇಜೋಬಲವನ್ನೂ ತೋರಿ, ಶಸ್ತ್ರಸನ್ಯಾಸಪೂರ್ವಕವಾದ ಸಾಧುಯುದ್ಧವನ್ನು ನಡೆಸಿ, ನಾನಾವಿಧದ ಕಾಯಕ್ಲೇಶಗಳನ್ನು ಬಹುಕಾಲ ಸ್ಥಿರಚಿತ್ತದಿಂದನುಭವಿಸಿ, ಕಡೆಯಲ್ಲಿ ಜಯಶೀಲರಾಗಿರುವ ಸಂದರ್ಭಗಳನ್ನೆಲ್ಲಾ ನಾವೂ ಕುತೂಹಲದಿಂದ ತಿಳಿದು, ಪದೇಪದೇ ಸ್ಮರಿಸಿ ಆನಂದಿಸುತ್ತಿರುವೆವು. ಆ ಯುದ್ಧವು ದಾರುಣವಾಗಿ ನಡೆಯುತ್ತಿದ್ದಾಗ ತಮ್ಮಲ್ಲಿ ಸಹಾನುಭೂತಿಯನ್ನು ತೋರಿ, ತಮಗೆ ಮಂಗಳವನ್ನು ಬಯಸಿದವರಲ್ಲಿ ಮೈಸೂರಿನ ಶ್ರೀಮನ್ಮಹಾರಾಜರವರೂ, ಅವರ ಪ್ರಜೆಗಳೂ ಸೇರಿರುವರು. ಈಗಲೂ,

" ಸರ್ವಭೂತಸ್ಥ ಮಾತ್ಮಾನಂ ಸರ್ವಭೂತಾನಿ ಚಾತ್ಮನಿ।
ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ "॥

ಎಂಬ ಗೀತಾವಾಕ್ಯವನ್ನನುಸರಿಸುವ ತಮ್ಮ ಹಿತೋಪದೇಶಗಳೂ, ತಮ್ಮ ಪರಿಶುದ್ಧವೃತ್ತಿಯೂ, ತಮ್ಮ ದೇಶಭಕ್ತಿಯೂ, ತಮ್ಮ ಸ್ವಸುಖಪರಿತ್ಯಾಗವೂ ನಮ್ಮೆಲ್ಲರಿಗೂ ಮೇಲ್ಪಂಕ್ತಿಯಾಗಿವೆ. ಶಮದಮಾದಿಯುಕ್ತರೂ ಸಂಪೂರ್ಣರಾಗಿ, ಭಗವದ್ಧ್ಯಾನನಿರತರಾಗಿರುವ ತಮ್ಮನ್ನು ಅಭಿನವಪ್ರಹ್ಲಾದನೆಂದು ಕರೆದಿರುವುದು ಯಥಾರ್ಥವಾಗಿಯೇ ಇದೆ.

ಕಸ್ತೂರಿಬಾಯಿದೇವಿಯವರೆ! ನಿಮ್ಮ ಪಾತಿವ್ರತ್ಯದ ನಿರ್ಮಲಕೀರ್ತಿಯು, ಕಸ್ತೂರಿಯ ಪರಿಮಳದಂತೆ, ಆರ್ಯವಧೂಪ್ರಪಂಚದಲ್ಲೆತ್ತೆತ್ತಲೂ ವ್ಯಾಪಿಸಿದೆ. ಪೂರ್ವದಲ್ಲಿ ಹರಿಶ್ಚಂದ್ರನ ಛಾಯಾನುವರ್ತಿಯಾಗಿದ್ದು, ಆತನ ದೀಕ್ಷೆಯನ್ನು ತಾನೂ ಕೈಗೊಂಡು, ವಿಪತ್ಪರಂಪರೆಗಳಿಗೆ ಸಿಕ್ಕಿದರೂ ಸತ್ಯವ್ರತವನ್ನು ಬಿಡದಿದ್ದ ಚಂದ್ರಮತೀದೇವಿಯಂತೆ, ನಮ್ಮ ಕಣ್ಣೆದಿರಿಗೆ ನೀವು ಪತಿಸೇವಾಪರಾಯಣರಾಗಿ ಅವರ ಸುಖದುಃಖಗಳೇ ನಿಮ್ಮವೆಂದು ತಿಳಿದು, ಅವರ ದೀಕ್ಷೆಯನ್ನು ಪೂರ್ತಿಗೊಳಿಸುವುದಕ್ಕಾಗಿ ಕಾರಾಗೃಹವಾಸವನ್ನೂ ಅನುಭವಿಸಿ, ಅವರ ಸಾಧುವೃತ್ತಿಯನ್ನೂ ವೈರಾಗ್ಯಭಾವವನ್ನೂ ತಾಳಿ, ಸೋದರೀಮಣಿಯರಿಗೆ ಮಾರ್ಗದರ್ಶಕರಾಗಿರುವಿರಿ. ನಿಮ್ಮಂತಹವರಿಂದಲ್ಲವೆ ಸಹಧರ್ಮಿಣಿಯೆಂಬ ವಚನವು ಸಾರ್ಥಕವಾಗುವುದು?

ಲೋಕಮಾನ್ಯರಾದ ದಂಪತಿಗಳೆ, ತಮಗೆ ಸರ್ವತ್ರ ಸುಖಾಗಮನವಾಗಲಿ. ದೇಶಹಿತಕ್ಕಾಗಿ ತಾವು ಮಾಡುತ್ತಿರುವ ಪ್ರಯತ್ನಗಳು ಬೇಗನೆ ಸಫಲವಾಗಲಿ. ಸರ್ವೇಶ್ವರನು ತಮಗೂ, ತಮ್ಮ ಪುತ್ರಪುತ್ರಿಯರಿಗೂ ದೀರ್ಘಾಯುವನ್ನೂ, ಆರೋಗ್ಯವನ್ನೂ, ಸಕಲ ಶುಭಗಳನ್ನೂ ಅನುಗ್ರಹಿಸಲಿ.

ತಮ್ಮ ಪರಮಮಿತ್ರರಾಗಿದ್ದ ಶ್ರೀ ಗೋಪಾಲಕೃಷ್ಣ ಗೋಖಲೆಯವರನ್ನು ಯಥಾಶಕ್ತಿ ಅನುಸರಿಸಿ ನಡೆಯಬೇಕೆಂದಿರುವ ಕೆಲವರಿಂದ ಈ ಸಣ್ಣ ದೇಶಸೇವಾಸಂಘವು ಈ ಪಟ್ಟಣದಲ್ಲಿ ಸ್ಥಾಪಿಸಲ್ಪಟ್ಟಿದೆ. ದಿವಂಗತರಾದ ಆ ದೇಶಭಕ್ತಾಗ್ರಗಣ್ಯರ [illegible]ನಾರ್ಥಪ[illegible]ಕ್ಷ [illegible]ಗಿ ಸಾಮಾನ್ಯಜನರ ಮನೆಗಳ ನಡುವೆ [illegible]ಪ್ರಭಾಮಂಡಿತವಾದ [illegible]ರವನ್ನು ಸ್ಥಾಪಿಸಿ, ಅದರಲ್ಲೊಂದು ಪುಸ್ತಕಾಲಯ[illegible], ಮಹನೀಯರ ಭಾವಚಿತ್ರಗಳನ್ನೂ ಪ್ರ[illegible]ಗಳನ್ನೂ ಇಟ್ಟು ಅಲ್ಲಿ ವಿದ್ಯಾಪ್ರಸಾರಣೆಯ ಮತ್ತೂ ಇತರ ವಿ[illegible] ಸಮಾಜಸೇವೆಯ ಕಾರ್ಯಗಳನ್ನು ನಡೆಯಿಸಬೇ[illegible]ವು ನಮ್ಮ ಉದ್ದೇಶವಿದೆ. ಈ ಸಂಕಲ್ಪವು ಶೀಘ್ರದಲ್ಲಿಯೇ ನೆರವೇರುವಂತೆ ಆಶೀರ್ವದಿಸಬೇಕೆಂದು ತಮ್ಮನ್ನು ಪ್ರಾರ್ಥಿಸುತ್ತಿರುವೆವು. ಮತ್ತೂ ತಾವು ನಮಗೆ ಸಂದರ್ಶನವನ್ನು ಕೊಟ್ಟು ಕೃತಾರ್ಥರನ್ನಾಗಿ ಮಾಡಿರುವುದರ ಗುರುತಿಗಾಗಿ, ಇಲ್ಲಿಟ್ಟಿರುವ ಗೋಖಲೆಯವರ ಚಿತ್ರಪಟವನ್ನು ತಮ್ಮ ಶುಭಹಸ್ತದಿಂದ ಪ್ರಕಾಶಗೊಳಿಸಿ ಕೊಡಬೇಕೆಂದು ಬೇಡುತ್ತಿರುವೆವು.

ಮಹನೀಯರೆ, ತಮಗೆ ಮಂಗಳವಾಗಲಿ.
ಇಂತು ತಮ್ಮಲ್ಲಿ ಅತ್ಯಂತಕೃತಜ್ಞತೆಯುಳ್ಳ,
ಮೈಸೂರು ದೇಶಸೇವಾ ಸಂಘದವರು.

ಇದಕ್ಕೆ ಶ್ರೀಯುತ ಗಾಂಧಿಯವರು ಉತ್ತರವನ್ನು ಕೊಡುವಾಗ್ಗೆ—" ಶ್ರೀಯುತ ಗಾಂಧಿಯವರು ಶ್ರೀಯುತ ಗೋಖಲೆಯವರ ಭಾವಚಿತ್ರದ ಆವರಣವನ್ನು ತೆರೆಯುವುದು ತಮಗೊಂದು ಗೌರವವೆಂತಲೂ, ಶ್ರೀಯುತ ಗೋಖಲೆಯವರು ತಮಗೆ ಉತ್ತೇಜನಕಾರಿಗಳಾಗಿದ್ದುದಲ್ಲದೆ, ಈಗಲೂ ಹಾಗೆಯೇ ಇರುವುದರಿಂದ ಅವರು ತಮಗೆ ರಾಜಗುರುವೆಂತಲೂ, ಅವರು ಯಾವಕಾರ್ಯವನ್ನೂ ಮಾಡಬೇಕಾದರೂ ಅದನ್ನು ಅವರು ಸಕಾರಣವಾಗಿ ಮಾಡುತ್ತಿದ್ದರೆಂತಲೂ, ರಾಜಕೀಯ ಜೀವನವು ಪಾರಮಾರ್ಥಿಕವಾಗಿ ಪರಿಣಮಿಸುವಂತೆ ಮಾಡುವುದನ್ನು ಶ್ರೀಯುತ ಗೋಖಲೆಯವರು ಬೋಧಿಸುತ್ತಿದ್ದರೆಂತಲೂ, ಆದುದರಿಂದ ರಾಜಕೀಯ ಜೀವನ ಮತ್ತು ವ್ಯಾವಹಾರಿಕ ಜೀವನಗಳು ಒಂದನ್ನು ಬಿಟ್ಟು ಮತ್ತೊಂದಿರಲಾರವೆಂತಲೂ ಮುಂತಾಗಿ ಸಂಕ್ಷೇಪವಾಗಿ ಹೇಳಿ, ಶ್ರೀಯುತ ಗೋಕಲೆಯವರ ಭಾವಚಿತ್ರದ ಆವರಣವನ್ನು ತೆರೆಯುವ ಅಪೂರ್ವವಾದ ಅವಕಾಶವನ್ನು ತಮಗೆ ಒದಗಿಸಿಕೊಟ್ಟ ಮೈಸೂರು ಸೋಷಿಯಲ್ ಸರ್ವಿಸ್‌ಲೀಗ್ ಸಭೆಯವರನ್ನು ವಂದಿಸಿದರು."

ಈ ರೀತಿಯಾಗಿ ಹೇಳಿದನಂತರ ಶ್ರೀ ಗಾಂಧಿಯವರು ಶ್ರೀಯುತ ಗೋಕಲೆಯವರ ಭಾವಚಿತ್ರದ ಆವರಣವನ್ನು ತೆರೆದರು. ಅನಂತರ ಸೋಷಿಯಲ್ ಸರ್ವಿಸ್‌ಲೀಗ್ ಸಂಘದ ದೊಡ್ಡ ಮನುಷ್ಯರು ಯಾವಜ್ಜೀವವೂ ಇದೇ ವಿಧವಾದ ಶ್ರದ್ಧಾವಿಶ್ವಾಸಗಳನ್ನು ಕಾಪಾಡಿಕೊಂಡಿರಬೇಕೆಂದು ಮಿ॥ ಗಾಂಧಿಯವರು ಒತ್ತಿಹೇಳಿದರು. ಆಗ ಸಭಿಕರೆಲ್ಲರೂ ಕರತಾಡನದಿಂದ ತಮ್ಮ ತಮ್ಮ ಸಂತೋಷವನ್ನು ವ್ಯಕ್ತಗೊಳಿಸಿದರು.

ಫಿರಂಗಿಗಳು

ಈಗಿನ ಯುದ್ಧದಲ್ಲಿ ಮಿತ್ರಮಂಡಲಿಯವರೊಳಗೆ ಇಂಗ್ಲೀಷರೊಬ್ಬರಿಗೇ ದಿನ ೧ಕ್ಕೆ ಮೂರು ಕೋಟಿ ರೂ.ಗಳ ವೆಚ್ಚವು ತಗುಲುತ್ತಿದೆ. ಯುದ್ಧಕಾಲದಲ್ಲಿ ಸೈನ್ಯದ ಆಹಾರ್ಯಾದಿಗಳಿಗೆ ೧ ಭಾಗ ವೆಚ್ಚವಾದರೆ ಮದ್ದುಗುಂಡು ಮೊದಲಾದುವುಗಳಿಗೆ ಆಗುವ ವೆಚ್ಚವು ದ್ವಿಗುಣವಾಗುತ್ತದೆ. ಮದ್ದುಗುಂಡಿನ ವೆಚ್ಚದ ಸ್ವರೂಪವನ್ನು ಈ ಕೆಳಗಣ ವಿವರಣದಿಂದ ಸ್ವಲ್ಪಮಟ್ಟಿಗೆ ತಿಳಿದುಕೊಳ್ಳಬಹುದು. ಈಗ ಡಾರ್ಡಿನಲ್ಸ್ ಜಲಸಂಧಿಗೆ ಬಂದು ಯುದ್ಧಮಾಡುತ್ತಿರುವ ಹಡಗುಗಳೊಳಗೆಲ್ಲಾ ಕ್ವೀನ್ ಎಲಿಜ್‌ಬೆತ್ ಎಂಬ ಹಡಗು ಒಂದನೆತರಗತಿಯ " ಸೂಪರ್‌ಡ್ರೆಡ್ನಾಟ್ " ಆಗಿರುತ್ತದೆ. ಈ ಹಡಗಿನಲ್ಲಿರುವ ಎಲ್ಲಾ ಫಿರಂಗಿಗಳನ್ನೂ ಒಂದು ಗೇಟಿಯ ಹೊತ್ತು ಹಾರಿಸಿದರೆ ಅದಕ್ಕಾಗಿ ಆಗುವ ವೆಚ್ಚವು ೩೩೫೦೦೦೦ ರೂ. ಗಳಾಗುತ್ತವೆ. ಬ್ಲುಚರ್ ಎಂಬ ಜರ್ಮನರ ಯುದ್ಧದ ಹಡಗನ್ನು ಉತ್ತರಸಮುದ್ರ ಯುದ್ಧದಲ್ಲಿ ಮುಳುಗಿಸಿದ ಇಂಗ್ಲೀಷರ " ಲಯನ್ " ಎಂಬ ಯುದ್ಧದ ಹಡಗಿನಿಂದ ಪ್ರಯೋಗಿಸಲ್ಪಟ್ಟ ಪ್ರತಿಯೊಂದು ಗುಂಡಿನ ಬೆಲೆಯೂ ೩೫ ರೂ. ಗಳಾಗಿರುವುವು. ಈ ಲಯನ್‌ಹಡಗಿನಲ್ಲಿರುವ ಎಲ್ಲಫಿರಂಗಿಗಳನ್ನೂ ಒಂದಾವೃತ್ತಿ ಹಾರಿಸುವುದಕ್ಕೆ ೭೦೦೦ ರೂ. ಗಳಾಗುವುವು. ಯುದ್ಧಸಮಯದಲ್ಲಿ ಲೆಕ್ಕವಿಲ್ಲದಷ್ಟಾವೃತ್ತಿ ಇವುಗಳಿಂದ ಗುಂಡುಗಳನ್ನು ಹಾರಿಸಬೇಕಾಗುವುದು. ಅದರಿಂದ ಒಂದು ರಪ್ಪೆಬಡಿಯುವಷ್ಟುಹೊತ್ತಿನಲ್ಲಿ ಎಷ್ಟು ಲಕ್ಷಾಂತರ ರೂ. ಗಳು ಹೊಗೆಯರೂಪವಾಗಿ ಕೊಚ್ಚಿಹೋಗುವುವು ಎಂಬುದು ಗೊತ್ತಾಗುವುದು. ಇಂಥಫಿರಂಗಿಗುಂಡಿನೇಟುಗಳು ಬಡಿದರೂ ಹಡಗುಗಳಿಗೆ ತೂತು ಬೀಳದಿರುವಂತೆ ಮಾಡುವುದಕ್ಕಾಗಿ ಅವುಗಳ ಮಗ್ಗುಲಿಗೆ ೧೨ಅಂಗುಲದ ಮಂದದ ಕಬ್ಬಿಣದ ತಗಡುಗಳ ಕವಚವನ್ನು ಸೇರಿಸಿರುವರು. ಇಷ್ಟು ಅಭೇದ್ಯವಾಗಿ ಮಾಡಿದ್ದರೂ, ಈಗಿನ ಯುದ್ಧನಾವೆಗಳಲ್ಲಿರುವ ಬಹಳ ಅಗಲವೂ ನಿಡಿದೂ ಆದ ಫಿರಂಗಿಗಳಿಂದ ೧೦-೧೫ ಮೈಲಿಗಳ ದೂರದಿಂದ ಪ್ರಯೋಗಿಸಲ್ಪಡುವ ಅತಿಭಾರವಾದ ಗುಂಡುಗಳು ಈ ತಗಡುಗಳನ್ನು ಕೂಡ ಭೇದಿಸಿಕೊಂಡು ಸುಲಭವಾಗಿ ತೂತುಕೆಡಹುವುವು. ಕ್ವೀನ್ ಎಲಿಜ್‌ಬೆತ್ ಎಂಬ ಹಡಗಿನಲ್ಲಿ ೧೫ ಅಂಗುಲ ಅಡ್ಡಗಲದ ಬಾಯಿಯ ಫಿರಂಗಿಗಳಿರುವುವು. ಇದರಿಂದ ಹೊಡೆಯಲ್ಪಡುವ ಗುಂಡುಗಳ ಪ್ರತಿಯೊಂದೂ ಒಂದು ಟನ್ನಿನಷ್ಟು (೭೭॥ ಮಣ) ಭಾರವಿರುವುವು. ಈ ಗುಂಡುಗಳು ೨೦ ಮೈಲಿಗಳ ದೂರದವರೆಗೆ ಹೋಗುವುವು. ಅಂಥ ೧ ಗುಂಡಿಗೆ ೧॥ ಸಾವಿರ ರೂ. ಗಳ ವೆಚ್ಚವಾಗುವುದು. ೧ ನೆ ತರಗತಿಯ ದೊಡ್ಡ ಯುದ್ಧದ ಹಡಗುಗಳಲ್ಲಿ ೧೫ ಅಂಗುಲದ ಬಾಯಿಯ ಫಿರಂಗಿಗಳಿರುವುವು. ೨ ನೆ ತರಗತಿಯ ಹಡಗುಗಳಲ್ಲಿ ೧೩.೫ ಅಂಗುಲದ ಬಾಯಿಯ ಫಿರಂಗಿಗಳಿರುವುವು. ಈ ೨ ತರಗತಿಯ ಹಡಗುಗಳೂ ಈಗ ಡಾರ್ಡಿನಲ್ಸಿನಲ್ಲಿ ಕೆಲಸಮಾಡುತ್ತಿವೆ. ಈ ೧೫-೧೩.೫ ಅಂಗುಲದ ಫಿರಂಗಿಗಳಿಗಿರುವ ವ್ಯತ್ಯಾಸವು ಸ್ವಲ್ಪಮಾತ್ರವಾಗಿ ಕಂಡುಬಂದರೂ ೧೨ ಅಂಗುಲದ ಫಿರಂಗಿಗುಂಡಿಗಿಂತಲೂ ದ್ವಿಗುಣವಾಗಿ ೧೫ ಅಂಗುಲದ ಬಾಯಿಯ ಫಿರಂಗಿಗಳು ಕೆಲಸಮಾಡುವುವು. ಅದರ ಬೆಲೆ ಪರಿಮಾಣ ಶಕ್ತಿಗಳೆಲ್ಲಾ ಹಾಗೆಯೇ ದ್ವಿಗುಣವಾಗಿರುವುವು. ಇಂಥ ಬಲವತ್ತರವಾದ ಫಿರಂಗಿಗಳ ಬಲುಬೆಲೆಯ ಗುಂಡುಗಳನ್ನು ಹಾರಿಸುವಾಗ ಗೋಲಂದಾಜರು ಯಾವುದೊಂದು ಗುಂಡನ್ನೂ ನಿರ್ಲಕ್ಷ್ಯವಾಗಿ, ಉದಾಸೀನವಾಗಿ ಹಾರಿಸುವುದಿಲ್ಲ. ಪ್ರತಿಯೊಂದು ಗುಂಡಿನೇಟಿನಿಂದಲೂ ತಕ್ಕ ಫಲವಾಗಬೇಕೆಂಬ ಜಾಗರೂಕತೆಯಿಂದಲೇ ಅವನ್ನುಪಯೋಗಿಸುವುದಕ್ಕೆ ಹಡಗುಗಳಲ್ಲಿ ಏರ್ಪಡಿಸಿರುತ್ತಾರೆ. ಪ್ರತಿಸಲ ಹಾರಿಸಿದ ಗುಂಡಿನಿಂದಲೂ ಫಲವಾಯಿತೇ ಇಲ್ಲವೇ ಎಂಬುದನ್ನು ಅವಧಾನದಿಂದ ನೋಡಿಕೊಳ್ಳುತ್ತಿರುತ್ತಾರೆ. ಈ ವಿಷಯಕ್ಕಾಗಿ ನೌಕಾಯುದ್ಧಕಾರ್ಯದಲ್ಲಿ ಅತ್ಯಂತ ಪ್ರವೀಣರಾದ ಆಂಗ್ಲಸೇನಾನಿಗಳು ಬಹುದೂರದವರೆಗೆ ಪರಿಶೋಧನಗಳನ್ನು ನಡೆಯಿಸಿ, ಒಳ್ಳೆಯ ಫಲದಾಯಕವಾದ ರೀತಿಗಳನ್ನು ಕಂಡುಹಿಡಿದು ಪ್ರತಿಯೊಂದು ಹಡಗಿನಲ್ಲೂ ಅವನ್ನು ಸ್ಥಾಪಿಸಿದ್ದಾರೆ. ಫಿರಂಗಿಗಳ ರಚನೆಯಲ್ಲಿ ಎಷ್ಟು ಅದ್ಭುತಸಾಮರ್ಥ್ಯವು ವ್ಯಕ್ತವಾಗುವುದೋ ಅದಕ್ಕೂ ಮಿಂಚಿದ ಕೌಶಲವು ಇವುಗಳನ್ನು ಹಾರಿಸುವ ಕ್ರಿಯೆಯಲ್ಲಿ ಗೋಚರಿಸುವುದು. ಪ್ರತಿಹಡಗುಗಳ ಧ್ವಜಸ್ತಂಭದ ಹತ್ತಿರವಿರುವ ಒಂದು ಸಣ್ಣ ಕೋಣೆಯೊಳಗೆ ಒಂದು ಅದ್ಭುತಚಾತುರ್ಯಯುಕ್ತವಾದ ಯಂತ್ರವಿಶೇಷವಿರುತ್ತದೆ. ಅದರ ಸಹಾಯದಿಂದ ಕ್ಷಣಮಾತ್ರದೊಳಗೆ ಗುರಿಯು ನೋಡಲ್ಪಡುತ್ತದೆ. ಹಾಗೆ ನೋಡಿದ ಗುರಿಯನ್ನು ಟಿಲಿಫೋನಿನ ದ್ವಾರಾ ಕೆಳಗಿರುವ ಗುಂಡು ಹಾರಿಸುವವರಿಗೆ ಥಟ್ಟನೆ ತಿಳಿಸುಸಲ್ಪಡುವುದು.. ಫಿರಂಗಿಯಹತ್ತಿರ ಗುಂಡನ್ನು ಹಾರಿಸಲು ಸಿದ್ಧರಾಗಿರುವವರ ಕಣ್ಣಿಗೆ ಶತ್ರುಗಳಹಡಗಾಗಲಿ ಕೋಟೆಯಾಗಲಿ ಯಾವುದೂ ಕಾಣಿಸುತ್ತಿರುವುದಿಲ್ಲ. ಅವೆಲ್ಲಿರುವುವೆಂಬುದೂ ಗೊತ್ತಿರುವುದಿಲ್ಲ. ಅವುಗಳ ಗುರಿಯನ್ನು ಹಿಡಿಯುವ ಕೆಲಸವು ಇವರಿಗೆ ಲೇಶಮಾತ್ರವೂ ಇರುವುದಿಲ್ಲ. ಇವರ ದೃಷ್ಟಿಯೆಲ್ಲಾ ಯಾವಾಗಲೂ ತಮ್ಮೆದಿರಿಗಿರುವ ಗಡಿಯಾರದ ಮುಳ್ಳಿನಮೇಲೆಯೇ ಇರುವುದು. ಮೇಲೆ ನಿಂತು ಗುರಿನೋಡುವವರು ಟಿಲಿಫೋನಿನ ದ್ವಾರಾ ಸೂಚಿಸಿದ ದಿಕ್ಕನ್ನು ಈ ಮುಳ್ಳು ತೋರಿಸುತ್ತಿರುವುದು. ಆ ಗಡಿಯಾರದ ಮುಳ್ಳು ಯಾವ ದಿಗ್ವಿದಿಕ್ಕುಗಳನ್ನು ಸೂಚಿಸುವುದೋ ಅತ್ತಕಡೆಗೆ ಥಟ್ಟನೆ ಫಿರಂಗಿಗುಂಡುಗಳನ್ನು ಹಾರಿಸುವುದೇ ಇವರ ಕೆಲಸ. ಶತ್ರುಗಳ ಹಡಗು ೧೦-೧೨ ಮೈಲಿಗಳಷ್ಟು ದೂರದಲ್ಲಿದ್ದರೂ, ಈ ಫಿರಂಗಿಗಳಿಗೆ ಹುದುಗಿಸಿರುವ ಒಂದು ಗುಂಡಿಯನ್ನು ಅದಿಮಿದಕೂಡಲೇ ಆ ಫಿರಂಗಿಗಳ ಬಾಯಿಂದ ಮಹಾಘರ್ಜನ್ಯಗರ್ಜನೆಯಿಂದ ಕೂಡಿದ ಗುಂಡು ಹಾರಿಹೋಗುವುದು. ಆ ಗುಂಡುಗಳನ್ನು ಫಿರಂಗಿಗೆ ತುಂಬಿ ಬೆಂಕಿಯನ್ನು ತೋರಿಸಿ ಹಾರಿಸುವ ಕೆಲಸವಾವುದೂ ಇವರಿಗಿರುವುದಿಲ್ಲ. ಅಂಥ ದೊಡ್ಡಫಿರಂಗಿಗಳಿಗೆ ಮಹಾಭಾರದ ಗುಂಡುಗಳನ್ನು ಎತ್ತಿ ತುಂಬುವುದೂ ಅಸಾಧ್ಯ. ಆ ಕ್ರಿಯೆಗಳೆಲ್ಲಾ ಫಿರಂಗಿಗಳಲ್ಲಿ ಮಾಡಲ್ಪಟ್ಟಿರುವ ಯಂತ್ರರಚನೆಯಿಂದ ತನಗೆ ತಾನೇ ನಡೆಯುತ್ತಿರುವುದು.

ತುರುಕರಿಗೆ ಜರ್ಮನರು ಮಾಡಿದ ಮೋಸ.

(ಪರ್ಷ್ಯಾದೇಶದ ಇಸ್ಪಹಾನಿನಲ್ಲಿ ಇಂಗ್ಲೀಷರ ಕಾನ್ಸಲರಾಗಿರುವ ಮಲ್ಲಿಕ್‌ರೇನವಾಜ್‌ಖಾನರವರು " ಫಾಜಿ ಅಕ್ಬರ್ " ಎಂಬ ಪತ್ರಿಕೆಗೆ ಬರೆದಿರುವ ಲೇಖನದಿಂದ ಈ ಕೆಳಗಣ ಸಂಗತಿಯು ಉದ್ಧೃತವಾಗಿದೆ.)

" ಬಹುಶಃ ಈಗ್ಗೆ ೨೦ ವರ್ಷ ಕಾಲದಿಂದ ರತ್ನಗಂಬಳಿಗಳು ಬಣ್ಣಗಳು ಮೊದಲಾದ ಪದಾರ್ಥಗಳ ವ್ಯಾಪಾರವನ್ನು ಮಾಡುತ್ತಿದ್ದ ಡಾಕ್ಟರ್ ಪ್ಯೂಗಿನ್ ಎಂಬ ಜರ್ಮನಿಯವನು ಇಸ್ಪಹಾನಿನಲ್ಲಿ ವಾಸವಾಗಿದ್ದನು. ಈತನು ಕ್ರಮೇಣ ಜರ್ಮನ್ ಕಾನ್ಸಲ್ ಪದವಿಯನ್ನು ಸಂಪಾದಿಸಿ, ಪರ್ಷ್ಯಾದೇಶದಲ್ಲಿ ಜರ್ಮನ್ಅಧಿಕಾರವನ್ನು ಸ್ಥಾಪಿಸಬೇಕೆಂದು ಯೋಚಿಸಿದನು. ಇದಕ್ಕಾಗಿ ಈತನು ಬಹಳ ಪ್ರಯತ್ನಮಾಡಿದನು. ಅದರಿಂದ ತನ್ನ ವ್ಯಾಪಾರವನ್ನೂ ಸ್ವಲ್ಪಮಟ್ಟಿಗೆ ನಿಲ್ಲಿಸಿದನು. ಅಷ್ಟರಲ್ಲಿ ಯುದ್ಧವು ಆರಂಭಿಸಿತು. ಈ ಯುದ್ಧದಲ್ಲಿ ಕೂಡಿಕೊಳ್ಳಲು ಜರ್ಮನರಿಂದ ತುರ್ಕಿಯವರು ನಿರ್ಬಂಧಪಡಿಸಲ್ಪಟ್ಟರು. ಇಸ್ಪಹಾನಿನಲ್ಲಿದ್ದ ಜರ್ಮನ್‌ಮೋಸಗಾರನು ಜರ್ಮನ್‌ಚಕ್ರವರ್ತಿಯ ಅನುಮತಿಯಮೇರೆಗೆ ತೆಹರಾನಿಗೆ ಹೋಗಿ ಅಲ್ಲಿದ್ದ ಪರ್ಷಿಯನ್ ಮಂತ್ರಿಯನ್ನು ಕಳೆದ ನವಂಬರ್ ತಿಂಗಳಲ್ಲಿ ಕಂಡನು. ತಾನು ಮಹಮ್ಮದೀಯಮತವನ್ನು ಅವಲಂಬಿಸಿರುವಹಾಗೂ, ತನ್ನ ಹೆಸರನ್ನು ಅಹಮ್ಮದ್‌ಬೇಗ್ ಎಂದು ಮಾರ್ಪಡಿಸಿಕೊಂಡಿರುವಹಾಗೂ ಹೇಳಿಕೊಂಡನು. ಈ ವಿಷಯವನ್ನು ಕೇಳಿ ಇಸ್ಪಹಾನಿನ ಮಹಮ್ಮದೀಯಪ್ರಜೆಗಳೆಲ್ಲಾ ಬಹಳ ಸಂತೋಷಪಟ್ಟರು. ದೊಡ್ಡದೊಡ್ಡ ಉದ್ಯೋಗಸ್ಥರು ಕೆಲರು ಈತನ ಮಾತಿಗೆ ಮೋಸಹೋಗಿ, ಇವನನ್ನು ಇಸ್ಪಹಾನಿನಲ್ಲಿ ಮುಸ್ಲಿಂ ಜರ್ಮನ್ ಕಾನ್ಸಲರನ್ನಾಗಿ ನಿಯಮಿಸಿಕೊಳ್ಳಬಹುದೆಂದು ತಮ್ಮ ಷಾಹರಿಗೆ ಬರೆದುಕೊಂಡರು. ಈತನು ತನ್ನ ನೂತನೋದ್ಯೋಗದಮೇಲೆ ೧೯೧೫ ನೆ ವರ್ಷದ ಜನವರಿ ತಾ॥ ೧ ರಲ್ಲಿ ಇಸ್ಪಹಾನಿಗೆ ಬರುವುದಾಗಿ ನಿರ್ಧರಿಸಿದನು. ಅಲ್ಲಿನ ಪ್ರಜೆಗಳು ಈತನ ಆಗಮನವನ್ನು ಸಂಭ್ರಮದಿಂದ ಇದಿರುನೋಡುತ್ತಿದ್ದರು. ಆದರೆ ಈ ಮೋಸಗಾರನು ಆ ಪಟ್ಟಣಕ್ಕೆ ಬರದೆ ಹೊರಗಿಂದಹೊರಗೇ ಅಲ್ಲಲ್ಲಿ ಸಂಚರಿಸುತ್ತ ಉಪನ್ಯಾಸಗಳನ್ನು ಮಾಡಿ ಮಹಮ್ಮದೀಯಪ್ರಜೆಗಳನ್ನು ಮೋಸಪಡಿಸುತ್ತಿದ್ದನು. ಆತನು ಪರ್ಷಿಯನ್ ಉಡುಪುಗಳನ್ನು ಧರಿಸಿಕೊಂಡನು. ಮಹಮ್ಮದೀಯರ ಮತಚಿಹ್ನಗಳನ್ನು ಧರಿಸಿದನು. ತಾನೂ, ಜರ್ಮನ್ ಚಕ್ರವರ್ತಿಯವರೂ, ಅವರ ಪಾಲಿತಪ್ರಜೆಗಳೂ ಸಹ ಮಹಮ್ಮದೀಯಮತವನ್ನು ಅವಲಂಬಿಸಿದೆವೆಂದು ಅವನು ತನ್ನ ಉಪನ್ಯಾಸಗಳಲ್ಲಿ ಹಲವುಬಾರಿ ನುಡಿಯುತ್ತಿದ್ದನು. ತಾವು ಮಹಮ್ಮದ್‌ಮತದ ಷಿಯ್ಯಾಪಂಗಡಕ್ಕೆ ಸೇರಿದವರಾದುದರಿಂದ ಈ ಸಂದಿಗ್ಧಸಮಯದಲ್ಲಿ ಜರ್ಮನರಿಗೆ ಮಹಮ್ಮದೀಯರೆಲ್ಲಾ ಸಹಾಯಮಾಡಬೇಕೆಂದೂ ಇಲ್ಲದೆಹೋದರೆ ತಮ್ಮಮತಕ್ಕೇ ಅಗೌರವವು ಸಂಭವಿಸುವುದೆಂದೂ ಬೋಧಿಸುತ್ತಿದ್ದನು. ಕಡೆಗೆ ಆತನು ಇಸ್ಪಹಾನಿನ ಸಮೀಪಕ್ಕೆ ಬಂದು, ತಾನು ಜರ್ಮನ್ ಚಕ್ರವರ್ತಿಯವರಿಂದಲೂ, ತುರ್ಕಿ ಸುಲ್ತಾನರಿಂದಲೂ ನಿಯಮಿತನಾದ ರಾಯಭಾರಿಯೆಂತಲೂ, ತಾನು ಜನವರಿ ತಾ॥ ೨ ರಲ್ಲಿ ಇಸ್ಪಹಾನಿಗೆ ಬರುತ್ತೇನೆಂತಲೂ, ಅಲ್ಲಿನ ಪ್ರಮುಖರಿಗೆ ತಿಳಿವಳಿಕೆ ಕೊಟ್ಟನು. ಅದಕ್ಕಾಗಿ ಪ್ರಜೆಗಳು ಸಂತೋಷಿಸಿ, ಅವನನ್ನು ಸ್ವಾಗತಿಸುವುದಕ್ಕಾಗಿ ಎರಡು ತಂಗುದಾಣಗಳಷ್ಟು ದೂರಕ್ಕೆ ಹೋಗಿ ಕಾದುಕೊಂಡರು. ಜರ್ಮನ್ ಮೋಸಗಾರನು ಇವರನ್ನು ಕಂಡಕೂಡಲೇ ತಾನು ಗಾಜ್ (ಇದುಬೇರೊಂದೂರು) ನಲ್ಲೇ ಇಳಿದುಕೊಳ್ಳುವಂತೆಯೂ ಇಸ್ಪಹಾನಿಗೆ ತಾನು ಬರಲಾರದೆ ಇರುವುದಕ್ಕಾಗಿ ಕ್ಷಮಿಸಬೇಕೆಂತಲೂ ಆ ಪ್ರಜಾಪ್ರಮುಖರನ್ನು ಪ್ರಾರ್ಥಿಸಿದನು. ಆ ಸುತ್ತುಮುತ್ತಣ ಊರುಗಳಲ್ಲಿ ತನ್ನ ಪದ್ಧತಿಯಂತೆ ಉಪನ್ಯಾಸಗಳನ್ನು ಮಾಡುತ್ತ, ತನ್ನ ಉದ್ದೇಶವು ನೆರವೇರಿತೆಂದು ತೋರಿದಕೂಡಲೇ ಫೆಬ್ರವರಿ ತಾ॥ ೩ ರಲ್ಲಿ ಇಸ್ಪಹಾನಿಗೆ ಬರುವೆನೆಂದು ಮತ್ತೆ ತಿಳಿಯಪಡಿಸಿದನು. ಅಲ್ಲಿನ ಪ್ರಜೆಗಳು ಅವನ ಗೌರವಾರ್ಥವಾಗಿ ಎಷ್ಟೋ ಏರ್ಪಾಟುಗಳನ್ನು ಮಾಡಿದರು. ಅವನು ಇಳಿದುಕೊಳ್ಳುವುದಕ್ಕಾಗಿ ಒಂದು ಭವನವನ್ನು ಅಲಂಕರಿಸಿ ಅಣಿಮಾಡಿದರು. ಆ ಮನೆಯ ಮೇಲೆ ಆ ದಿವಸ ತುರ್ಕಿಯ ಜರ್ಮನಿಯ ಧ್ವಜಪಟಗಳೆರಡೂ ಎತ್ತಿ ಕಟ್ಟಲ್ಪಟ್ಟಿದ್ದುವು. ಪರಿವಾರಸಮೇತವಾಗಿ ಆತನನ್ನು ಊರಿಗೆ ಉತ್ಸವಪೂರ್ವಕವಾಗಿ ಕರೆದುಕೊಂಡು ಬರಲು ದೊಡ್ಡದಾಗಿ ಏರ್ಪಡಿಸಿದರು. ಊರಿಗೆ ಪ್ರವೇಶಿಸಿದಾಗ್ಗೆ ಆತನು ಮೊಟ್ಟಮೊದಲು ಜುಮ್ಮಾಮಸ್ಜಿದ್ದಿಗೆ ಹೋಗಬರಬೇಕೆಂದು ಏರ್ಪಡಿಸಿದ್ದರು. ಈ ಸಂಗತಿಯು ಗಾಜ್‌ನಲ್ಲಿದ್ದ ಜರ್ಮನ್ ಮೋಸಗಾರನಿಗೆ ತಿಳಿದಕೂಡಲೇ ಅವನು ಪರ್ಷಿಯನ್ ಉಡುಪನ್ನು ಅಲ್ಲೇ ತೆಗೆದುಬಿಟ್ಟು, ತನ್ನ ಜರ್ಮನ್ ಉಡುಪನ್ನು ಧರಿಸಿಕೊಂಡು, ಇಸ್ಪಹಾನಿನ ಕಡೆಗೆ ತಾನು ಹೊರಟು, ಗೊತ್ತಾಗಿದ್ದಕಾಲಕ್ಕೆ ಸರಿಯಾಗಿ ಆ ಊರನ್ನು ಪ್ರವೇಶಮಾಡದೆ, ಮಸ್ಜಿದ್ದಿಗೆ ಪ್ರವೇಶಿಸಬೇಕಾದ ನಿರ್ಬಂಧವನ್ನು ಉಪಾಯದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಕಾಲಯಾಪನೆಯನ್ನು ಮಾಡಿಕೊಂಡು ಬಂದನು. ಆದರೂ ಉತ್ಸವದ ಮುಂದಿದ್ದ ಜನಸ್ತೋಮವು ಗೊತ್ತಾಗಿದ್ದ ಏರ್ಪಾಟಿನಪ್ರಕಾರ ಮಸ್ಜಿದ್ದಿಯ ಪಕ್ಕಕ್ಕೆ ತಿರುಗಿಕೊಂಡುದನ್ನು ಈ ಮೋಸಗಾರನು ಕಂಡು, ತನ್ನ ಬಂಡಿಯನ್ನು ಬಿಡಾರದಕಡೆಗೆ ತಿರುಗಿಸಿಬಿಡೆಂದು ತನ್ನ ಸಾರಥಿಗೆ ಆಜ್ಞಾಪಿಸಿಬಿಟ್ಟನು. ಆಗ ಪ್ರಜೆಗಳಿಗೆಲ್ಲಾ ಇವನ ಮೋಸಗಾರಿಕೆಯು ಗೊತ್ತಾಯಿತು. ಅವರು ಇವನನ್ನು ಮುತ್ತಿ, " ನೀನು ಮಹಮ್ಮದೀಯಮತವನ್ನವಲಂಬಿಸಿದೆನೆಂದು ಹೇಳಿದಮಾತೇನಾಯಿತು? ನೀನು ಮಸ್ಜಿದ್ದಿಗೆ ಬರಲು ಯಾತಕ್ಕೆ ತಪ್ಪಿಸಿಕೊಂಡೆ? ನೀನು ಮಾಡಿದ ಪ್ರಕಟನೆಗಳ ಅರ್ಥವೇನು? ಎಂದು ಮೊದಲಾಗಿ ಪ್ರಶ್ನೆಮಾಡುವುದಕ್ಕುಪಕ್ರಮಿಸಿದರು. ಈ ಮೋಸಗಾರನು ೨ ದಿನಗಳವರೆಗೆ ಏನೇನೋ ವ್ಯಾಜದಿಂದ ಕಾಲಹರಣಮಾಡಿ, ಕಡೆಗೆ–ತನಗೆ ಯಾವಸಂಗತಿಯೂ ತಿಳಿಯದೆಂದೂ, ಯಾವುದನ್ನೂ ತಾನು ಪ್ರಕಟಿಸಿದವನಲ್ಲವೆಂದೂ, ಯಾರೋ ಕೈಕೆಳಗಿನವರು ಹಾಗೆಲ್ಲಾ ಮಾಡಿರಬೇಕೆಂದೂ, ಅಸಂಬದ್ಧಪ್ರಲಾಪಕ್ಕೆ ಉಪಕ್ರಮಿಸಿದನು. ಮತ್ತೂ " ಅದೆಲ್ಲಾ ಹಾಗಿರಲಿ, ನಾನು ಮುಖ್ಯವಾಗಿ ಒಂದು ಮಾತನ್ನು ಹೇಳುತ್ತೇನೆ, ಅದನ್ನು ನೀವೆಲ್ಲಾ ಗಮನಿಸಿರಿ–ಜರ್ಮನ್ ಚಕ್ರವರ್ತಿಯವರೂ ಜರ್ಮನ್ ಪ್ರಜೆಗಳೂ ಸಹ ಮಹಮ್ಮದೀಯರೆಲ್ಲರ ಹಿತವನ್ನೂ ಕೋರತಕ್ಕವರು; ಅವರ ವಿಷಯದಲ್ಲಿ ಸಹಾನುಭೂತಿಯುಳ್ಳವರು. ಪರ್ಷಿಯನ್ನರೆಲ್ಲಾ ಅವರಿಗೆ ಸಹಾಯಮಾಡಿದರೆ ಅವರು ಮಹಮ್ಮದೀಯಮತವನ್ನವಲಂಬಿಸುವ ವಿಷಯವನ್ನು ಕುರಿತು ಆಲೋಚಿಸುವರು. ಈಗ ಇನ್ನೂ ಅವರುಗಳೆಲ್ಲಾ ಮಹಮ್ಮದೀಯಮತವನ್ನು ಅವಲಂಬಿಸಿಲ್ಲ " ಎಂದು ಹೇಳಿಬಿಟ್ಟನು. ಆ ಮಾತನ್ನು ಕೇಳಿ ಪ್ರಜೆಗಳಿಗೆ ಕೋಪವು ಮಿತಿಮೀರಿಹೋಯಿತು. ಅಲ್ಲಿಂದೀಚೆಗೆ ಅವರು–" ಜರ್ಮನ್ ಮೋಸಗಾರನ ಮಾತನ್ನು ಕೇಳಿ ಯಾರೂ ಮೋಸಹೋಗಬೇಡಿರಿ " ಎಂಬ ವಿಷಯವನ್ನು ಕಾಣಿಸಿದ ಪ್ರಕಟನಪತ್ರಿಕೆಗಳನ್ನು ಮುದ್ರಿಸಿ ಎಲ್ಲಕಡೆಗೂ ಹಂಚಿಸಿದರು. ಜರ್ಮನರು ಇದೇ ಸೋಗಿನಿಂದ ಮೆಲ್ಲನೆ ತುರ್ಕಿಯವರನ್ನು ಯುದ್ಧಸಾಗರಕ್ಕೆ ಇಳಿಯಿಸಿಬಿಟ್ಟರು. ಪರ್ಷಿಯನ್ನರನ್ನೂ ಹಾಗೆಯೇ ಮಾಡಬೇಕೆಂದು ತಂತ್ರಮಾಡಿದರು ಆದರೆ ಅವರು ಮೋಸಹೋಗಲಿಲ್ಲ. ಅದರಿಂದಲೇ ಅವರು ಆಂಗ್ಲಪರಿಪಾಲನ ಸಾಹಾಯ್ಯದಿಂದ ಸೌಖ್ಯಸೌಕರ್ಯಗಳನ್ನು ಶಾಂತಿಯಿಂದ ಅನುಭವಿಸುತ್ತಿರುವರು.

ಮ॥ ಎ. ಮಹಾದೇವಶಾಸ್ತ್ರಿಗಳ ಉಪನ್ಯಾಸ.

ಮದ್ರಾಸು ಪ್ರಾಂತಿಕರಾಷ್ಟ್ರೀಯಾದಿ ಮಹಾಸಭೆಗಳು ಈ ವರ್ಷ ನೆಲ್ಲೂರಿನಲ್ಲಿ ಕಳೆದವಾರ ಸಾಂಗವಾಗಿ ನೆರವೇರಿದುವು. ಬೇರೆಬೇರೆ ಸಭೆಗಳಿಗೆ ಬೇರೆಬೇರೆ ದೊಡ್ಡಮನುಷ್ಯರು ಅಧ್ಯಕ್ಷರಾಗಿದ್ದರು. ಅವುಗಳೊಳಗೆ ಸಂಘಸಂಸ್ಕರಣವಿಷಯಕವಾದ ಸಭೆಗೆ ನಮ್ಮ ಮೈಸೂರಿನ ಓರಿಯಂಟಲ್ ಲೈಬ್ರೆರಿಯ ಕ್ಯೂರೇಟರಾದ ಮ॥ ಎ. ಮಹಾದೇವಶಾಸ್ತ್ರಿಗಳು ಅಧ್ಯಕ್ಷರಾಗುವುದಕ್ಕೆ ಕೋರಲ್ಪಟ್ಟಿದ್ದರು. ಇವರು ಆಂಗ್ಲಸಂಸ್ಕೃತಭಾಷೆಗಳೆರಡರಲ್ಲೂ ಪಂಡಿತರಾಗಿರುವುದರಿಂದಲೂ, ಮೈಸೂರು ಪ್ರಾಚ್ಯಗ್ರಂಥ ಭಾಂಡಾಗಾರದ ಅಧ್ಯಕ್ಷಪದವಿಯಲ್ಲಿದ್ದುಕೊಂಡು ವೇದಶಾಸ್ತ್ರಾದಿಗಳ ಆಲೋಡನೆಯನ್ನು ಬಹುಕಾಲದಿಂದ ನಡೆಯಿಸುತ್ತ ಅನೇಕ ಮತಸಂಪ್ರದಾಯಗಳನ್ನೂ, ಪ್ರಾಚೀನಾರ್ವಾಚೀನಪದ್ಧತಿಗಳ ಲಕ್ಷಣವನ್ನೂ, ಶಾಸ್ತ್ರೀಯತತ್ವಗಳನ್ನೂ ಬಲ್ಲವರಾಗಿರುವುದರಿಂದಲೂ, ದೇಶಹಿತಕರವಾಗಿಯೂ, ವೇದಸಮ್ಮತವಾಗಿಯೂ ಇರತಕ್ಕ ಸಂಘಸಂಸ್ಕರಣಗಳ ಆಚರಣೆಯವಿಷಯದಲ್ಲಿ ಪ್ರೋತ್ಸಾಹಕರಾಗಿರುವುದರಿಂದಲೂ, ಇದರಮೇಲೆ ಸ್ವತಃ ನೆಲ್ಲೂರುಜಿಲ್ಲೆಯೇ ಇವರ ಜನ್ಮಸ್ಥಲವಾಗಿರುವುದರಿಂದಲೂ, ಇವರನ್ನು ಮದ್ರಾಸಾಧಿಪತ್ಯದ ಸಂಘಸಂಸ್ಕರಣಾಭಿಮಾನಿಗಳು ಆ ಸಭೆಯ ಅಧ್ಯಕ್ಷತೆಗಾಗಿ ಪ್ರಾರ್ಥಿಸಿಕೊಂಡರು. ಶಾಸ್ತ್ರಿಗಳು ಅದಕ್ಕೊಪ್ಪಿಕೊಂಡು ಸಭೆಯಲ್ಲಿ ಮಾಡಿದ ಭಾಷಣವು ಶ್ಲಾಘ್ಯವೂ ಸನ್ಮಾದರಣೀಯವೂ ಆದ ಅನೇಕ ಉಪಯುಕ್ತಾಂಶಗಳಿಂದ ಕೂಡಿರುವುದರಿಂದ ಅದರ ಮುಖ್ಯಭಾಗಗಳನ್ನು ಭಾಷಾಂತರಿಸಿ ನಮ್ಮ ವಾಚಕರಿಗಾಗಿ ಇಲ್ಲಿ ಪ್ರಕಟಿಸಿರುತ್ತೇವೆ.

ಸಂಘಸಂಸ್ಕರಣರೂಪಪ್ರಯತ್ನಗಳು ತಲೆಯಿಕ್ಕಿ ಬಹಳ ವರ್ಷಗಳಾದುವು. ಸಂಘಸಂಸ್ಕರಣಾಭಿಮಾನಿಗಳು ಇದುವರೆಗೆ ಮಾಡಿರುವುದೇನು? ಮುಂದೆ ಮಾಡಬೇಕಾದುದೇನು? ಎಂಬುದನ್ನು ವಿಚಾರಮಾಡುವ. ಈಗ ನಮ್ಮ ಸಂಘಾಭಿವೃದ್ಧಿಗೆ ವಿಘ್ನಕರಗಳಾಗಿರುವ ವಿಷಯಗಳಲ್ಲಿ ವರ್ಣವಿಭೇದವು ಅತ್ಯಂತ ಪ್ರಮುಖವಾದುದೆಂದು ಸಂಸ್ಕರಣಾಭಿಮಾನಿಗಳು ನಿರ್ಧರಿಸಿದ್ದಾರೆ. ಆದರೆ ಅಂಥ ವಿಭೇದವನ್ನು ಅವರು ತೊಡೆಯಲಾರದವರಾಗಿದ್ದಾರೆ. ಮತ್ತೂ ಆ ವರ್ಣವಿಭಾಗದಲ್ಲಿರುವ ಉತ್ತಮಗುಣಗಳನ್ನು ನಿರ್ಮೂಲಗೊಳಿಸದೆ ನೀಚಗುಣಗಳನ್ನು ಮಾತ್ರ ನಿರ್ಮೂಲಗೊಳಿಸಲು ತಕ್ಕ ಸಾಧನಗಳನ್ನು ಸಂಘಸಂಸ್ಕಾರಕ ಪ್ರಮುಖರು ಇನ್ನೂ ನಿರ್ಧರಿಸಿದವರಾಗಿಲ್ಲ. ಮತ್ತೂ ಬಾಲಬಾಲಿಕೆಯರಿಗೆ ಸಣ್ಣವಯಸ್ಸಿನಲ್ಲೇ ಮದುವೆಮಾಡುವುದು ಮತ್ತೊಂದು ಅನರ್ಥಪ್ರದವೆಂದು ನಿಶ್ಚಯಿಸಿದ್ದಾರೆ. ಅತಿಬಾಲ್ಯವಿವಾಹವನ್ನು ಮಾಡುವುದರಿಂದ ಕೆಲವುತೆರದ ಕೇಡುಗಳು ಸಂಭವಿಸುವುದಿಲ್ಲವೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಅಂಥವರು ಹೇಳುವ ಕೇಡುಗಳು ಸಂಭವಿಸಲವಕಾಶವಿಲ್ಲದಂತೆ ಮದುವೆಯನ್ನು ಮಾಡಲು ತಕ್ಕುದಾದ ವಯಃಪರಿಮಿತಿಯನ್ನು ಹೆಚ್ಚಿಸುವುದಕ್ಕೆ ಅವಶ್ಯಕವಾದ ಸಾಧನವನ್ನು ಕೂಡ ಈ ಪ್ರಮುಖರು ಕಂಡುಹಿಡಿದಿಲ್ಲ. ಸ್ತ್ರೀಯರ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೂ ನಿಮ್ನಜಾತಿಯವರನ್ನುದ್ಧರಿಸುವುದಕ್ಕೂ ಸಹ ಸಂಸ್ಕಾರಕರು ಬಹಳ ಶ್ರದ್ಧೆಯನ್ನು ವಹಿಸಿ, ಅದಕ್ಕಾಗಿ ಕೆಲ ಸಾಧನಗಳನ್ನೂ ಏರ್ಪಡಿಸಿಕೊಂಡು ಕೆಲವು ಕಡೆ ಕೆಲಸವನ್ನು ಮಾಡುತ್ತಿದ್ದಾರೆ. ಅದರಿಂದ ಸ್ವಲ್ಪ ಪ್ರಯೋಜನವೂ ಉಂಟಾಗಿದೆ. ಆದರೆ ಸಂಘವಾದ್ಯಂತಕ್ಕೂ ಉಪಯೋಗಮಾಡುವ ಪರಿಪೂರ್ಣವಿಧಾನವಾವುದೆಂಬುದನ್ನು ಮಾತ್ರ ಇವರು ನಿರ್ಧಾರಮಾಡಿರುವುದಿಲ್ಲ. ಇರುವ ಕೇಡುಗಳನ್ನು ಪೂರ್ಣವಾಗಿ ನಿರ್ಮೂಲಗೊಳಿಸುವುದಕ್ಕೆ ತಕ್ಕ ಪ್ರಯತ್ನವನ್ನು ಮಾಡದಿರುವುದರಿಂದ ಸದ್ಯದಲ್ಲಿ ಮಾಡಲ್ಪಡುತ್ತಿರುವ ಅಲ್ಪಸ್ವಲ್ಪ ವಿಧಾನಗಳಿಂದ ಅಂಥ ಗಣ್ಯವಾದ ಪ್ರಯೋಜನವುಂಟಾಗುವುದಿಲ್ಲ.

ಹಿಂದೂಜನಾಂಗದಲ್ಲಿ ಸಾಂಘಿಕವಿಷಯಗಳನ್ನೂ ಮತವಿಷಯಗಳನ್ನೂ ಬೇರೆಬೇರೆ ಮಾಡಿ ಚರ್ಚಿಸಲಾಗುವುದಿಲ್ಲ. ಅವೆರಡರ ವಿಷಯಗಳೂ ನಮ್ಮ ಸಂಘದಲ್ಲಿ ಕಲಸಿ ಗೋಜಾಗೆಹೊಂದಿವೆ. ಅದುಕಾರಣ, ನಾವು ಆ ಮುಖ್ಯವಿಷಯಗಳನ್ನು ಬಹಳ ಜಾಗರೂಕತೆಯಿಂದ ಗಮನಿಸಿ ಕೆಲಸಮಾಡಬೇಕಾಗಿದೆ. ನಮ್ಮ ಹಿಂದೂಮತವನ್ನು ಪರೀಕ್ಷಿಸಿ ನೋಡಿದರೆ ಇದು ಉಳಿದ ಮತಗಳಿಗೆಲ್ಲಾ ಕೇವಲ ಭಿನ್ನವಾಗಿದೆಯೆಂದು ತೋರದೆ ಇರುವುದಿಲ್ಲ. ಈಗಿನಕಾಲದ ವಿದ್ವಾಂಸರ ದರ್ಶನದಲ್ಲಿ ಕೆಲರು ತಮ್ಮ ಪರಿಶೋಧನಸಿದ್ಧವಾದ ದೃಢಾಭಿಪ್ರಾಯದಿಂದ ಈ ಮತದಲ್ಲಿನ ಸುಗುಣಗಳನ್ನು ಶ್ಲಾಘಿಸುತ್ತಿದ್ದಾರೆ. ಮತ್ತೆ ಕೆಲರು ಅಂಥ ದೃಢನಿಶ್ಚಯದಿಂದಲೇ ಇದರಲ್ಲಿನ ಲೋಪಗಳನ್ನು ಪ್ರಬಲವಾಗಿ ಖಂಡಿಸುತ್ತಿದ್ದಾರೆ. ಇಂಥ ವಿಮರ್ಶಕರಲ್ಲಿ ಭಾರತೀಯರೂ ಪಾಶ್ಚಾತ್ಯರೂ ಸಹ ಇರುವರು. ಅವರು ಪಡುವ ಅಭಿಪ್ರಾಯದಂತೆ ಈ ಮತದಲ್ಲಿ ಗುಣಾವಗುಣಗಳೆರಡೂ ವಿಶೇಷವಾಗಿ ಇರುವುವೆಂಬುದು ನಿಜ. ಆದರೆ ಇದರ ಮುಖ್ಯಾಂಗವು ಪ್ರಬಲವಾಗಿಯೂ, ಉದಾರವಾಗಿಯೂ, ನೀರೋಗವಾಗಿಯೂ ಇರುವವರೆಗೂ ನಮ್ಮ ಸಂಘವು ಸಜೀವವಾಗಿಯೇ ಇರುವುದು. ಆದರೆ ಅದರಭಿವೃದ್ಧಿಗೆ ಈ ಸಂಘದೇಹದ ರೋಗಗ್ರಸ್ತಭಾಗವು ವಿಘ್ನಕಾರಿಯಾಗಿರುವುದು.

ನಮ್ಮ ಸಂಘವನ್ನು ಒಂದು ಮುಖ್ಯಶರೀರವನ್ನಾಗಿ ಭಾವಿಸಿಕೊಂಡು, ಆ ಸಂಘದಲ್ಲಿರುವವರೆಲ್ಲರೂ ಆಚರಿಸಬೇಕಾದ ವಿಧಿಗಳನ್ನು ನಮ್ಮ ಶಾಸ್ತ್ರಗಳು ವಿಧಿಸುತ್ತಿವೆ. ಅದುಕಾರಣ ನಮ್ಮ ಸಂಘದ ಸಂಸ್ಕರಣಗಳೆಲ್ಲವೂ ಶಾಸ್ತ್ರೀಯಸಂಸ್ಕರಣಗಳೆನಿಸಿಕೊಳ್ಳುತ್ತವೆ. ನಾವು ಯಾವ ಸಂಸ್ಕರಣವನ್ನು ಮಾಡಲಪೇಕ್ಷಿಸಿದರೂ ನಮ್ಮ ಸಂಘಪ್ರತಿಷ್ಠಾಪನಗಳೆಲ್ಲವೂ ಆ ಮುಖ್ಯಶರೀರದ ನಾನಾ ಉಪಾಂಗಗಳೆಂದು ಭಾವಿಸಿಯೇ ಸಂಸ್ಕರಿಸತೊಡಗಬೇಕು. ವಿಧಿವಿಧಾನಮಾಡುವ ಶಾಸ್ತ್ರಗಳು ಅನೇಕವಾಗಿವೆ. ಸತ್ಯವನ್ನೂ ಆತ್ಮವಿಷಯವನ್ನೂ ಕುರಿತು ನಿರೂಪಿಸುವ ಶಾಸ್ತ್ರಗಳು ಉತ್ತಮವಾದುವುಗಳು. ಅವೇ ಸತ್ಯಾತ್ಮಕಗಳು. ಪಾಧಿಕಾರಗಳು. ಯಾರೂ ಅವುಗಳ ವಚನವಿಷಯದಲ್ಲಿ ಲೇಶವೂ ಸಂಶಯಗೊಳ್ಳಲೆಡೆಯಿಲ್ಲದುವು. ಇವೇ ಶಾಸ್ತ್ರಗಳೆಂಬುದೇ

ಸಿಕೊಳ್ಳಲು ಅರ್ಹವಾದುವುಗಳು. ಆಯಾಸಂಘಗಳವರು ಆಚರಿಸಬೇಕಾದ ನಿಯಮಗಳನ್ನು ಕುರಿತು ಮನು ಮೊದಲಾದವರು ಬರೆದ ನಿಬಂಧನೆಗಳೂ ಕೂಡ ಶಾಸ್ತ್ರಗಳೆಂದೇ ಕರೆಯಲ್ಪಡುತ್ತವೆ. ಈ ಧರ್ಮಶಾಸ್ತ್ರಗಳಲ್ಲಿ ಪ್ರೋಕ್ತವಾದ ಆಚಾರಗಳನ್ನು ಕ್ರಮಕ್ರಮವಾಗಿ ಆಚರಿಸಬೇಕಾಗಿ ಬಂದ ಸಂಘಗಳು ಅವುಗಳಲ್ಲಿ ಎಷ್ಟೋ ಮಾರ್ಪುಗಳನ್ನು ಮಾಡಿಕೊಂಡೇ ಬಂದಿದ್ದಾರೆ. ವೇದಗಳೂ ಸ್ಮೃತಿಗಳೂಕೂಡ ಶಾಸ್ತ್ರಪಙ್ಕ್ತಿಯಲ್ಲೇ ಸೇರಿದುವು. ಮೇಲೆಹೇಳಿದ ಉತ್ತಮಶಾಸ್ತ್ರಗಳಲ್ಲಿ ಸತ್ಯಕ್ಕೆ ವ್ಯತಿರೇಕವಲ್ಲದಂತೆ ಮನುಷ್ಯಪ್ರೋಕ್ತವಾದ ೨ ನೆ ತರಗತಿಯ ಧರ್ಮಶಾಸ್ತ್ರಗಳಲ್ಲಿರುವ ನಿಬಂಧನೆಗಳನ್ನು ಸಂಘಾಭಿವೃದ್ಧಿಗೆ ಅನುಕೂಲವಾಗುವಂತೆ ಸಂಸ್ಕರಿಸುವುದೇ ಸಂಸ್ಕರಣವೆನಿಸಿಕೊಳ್ಳುತ್ತದೆ. ಅದುಕಾರಣ, ನಾವು ಶಾಸ್ತ್ರಗಳನ್ನು ಚೆನ್ನಾಗಿ ಪರಿಶೋಧಿಸಿ ಅವುಗಳಲ್ಲಿ ಅಡಗಿರುವ ಉನ್ನತತತ್ತ್ವಗಳನ್ನು ಕಂಡುಹಿಡಿದು, ಅವುಗಳ ಆಧಾರದಮೇಲೆ ನೂತನಸಂಘಗಳನ್ನು ನಿರ್ಮಿಸಬೇಕಾಗಿದೆ. ಹೀಗೆ ಮಾಡಬೇಕಾದರೆ ವಿದ್ಯಾಪಾಂಡಿತ್ಯ-ಯುಕ್ತಾಯುಕ್ತಪರಿಶೀಲನೆ ಮೊದಲಾದ ಗುಣಗಳು ಅತ್ಯವಶ್ಯಕವು. ಅಂಥ ಯೋಗ್ಯತಾಂಶವುಳ್ಳವರ ಪ್ರಯತ್ನಕ್ಕೆ ಅವಕಾಶವು ಬೇಕಾದಷ್ಟಿರುವುದು.

ಹಿಂದೂ ಸಂಘಕ್ಕೆ ವರ್ಣಾಶ್ರಮಧರ್ಮಗಳೇ ಮೂಲಾಧಾರಗಳೆಂದು ಹೇಳಲ್ಪಡುತ್ತಿರುವುದರಿಂದ, ನಮ್ಮ ಸಾಂಘಿಕ ವಿಧಾನಗಳು ಧರ್ಮಾತ್ಮಕವೆಂಬುದಾಗಿಯೂ, ಧರ್ಮಾವಲಂಬಿಗಳೆಂಬುದಾಗಿಯೂ ಸಿದ್ಧವಾಗುತ್ತದೆ. ಹೀಗೆ ನಮ್ಮ ಸಂಘಕ್ಕೆ ಧರ್ಮವೂ ಆಧ್ಯಾತ್ಮಿಕತ್ವವೂ ಮೂಲಾಧಾರವಾಗಿರುವುದರಿಂದ, ಆಸ್ತಿಕತ್ವವು ಪ್ರಬಲವಾಗಿದ್ದಾಗ ಇದು ಉನ್ನತಿಯನ್ನಡರುತ್ತಲೂ, ಆಸ್ತಿಕತ್ವವು ತಗ್ಗಿದಾಗ ಇದು ನೀಚಸ್ಥಿತಿಗೆ ಇಳಿಯುತ್ತಲೂ ಇದ್ದಿತು. ಪ್ರಾಚೀನ ಸಂಗತಿಗಳ ಪರಿಶೀಲನದಿಂದ ನಮ್ಮ ಸಂಘವು ಕೃತಯುಗದಲ್ಲಿ ಉತ್ತಮಸ್ಥಿತಿಯಲ್ಲಿದ್ದಿತೆಂದೂ ಕಲಿಯುಗದಲ್ಲಿ ನೀಚಸ್ಥಿತಿಗೆ ಬಂದಿತೆಂದೂ ಗೊತ್ತಾಗುತ್ತದೆ. ಪ್ರಭುತ್ವ ಮಾಡತಕ್ಕವರ ಸಾಮರ್ಥ್ಯವನ್ನನುಸರಿಸಿ ಸಂಘದ ಉನ್ನತ್ಯವನತಿಗಳು ಪ್ರಾಪ್ತವಾಗುತ್ತಿದ್ದುವು. ಈಗಲಾದರೂ ನಮ್ಮ ದೇಶದಲ್ಲಿ ಧರ್ಮವು ಪ್ರಬಲದಶೆಯಲ್ಲಿದ್ದರೆ ಸಂಘವು ಉತ್ತಮ ಸ್ಥಿತಿಯನ್ನಡರಬಲ್ಲುದು. ಕೃತಯುಗ ಕಲಿಯುಗವೆಂಬಿವುಗಳು ಪ್ರತ್ಯೇಕವಾದ ಕಾಲನಾಮಗಳಲ್ಲ. ಆಧ್ಯಾತ್ಮಿಕ ಶ್ರೇಷ್ಠತ್ವವೇ ಕೃತಯುಗವು. ಆಧ್ಯಾತ್ಮಿಕ ನೀಚತ್ವವೇ ಕಲಿಯುಗವು. ಇದನ್ನನುಸರಿಸಿ ನೋಡಿದರೆ ಹಿಂದೂಸಂಘಕ್ಕೆ ಆಧ್ಯಾತ್ಮಿಕತ್ವವೇ ಮೂಲಾಧಾರವೆಂಬುದು ಸ್ಪಷ್ಟವಾಗುತ್ತದೆ. ಅದುಕಾರಣ ವರ್ಣಾಶ್ರಮಧರ್ಮಗಳನ್ನೇ ಮೊದಲನೆಯವನ್ನಾಗಿ ಗ್ರಹಿಸಲವಕಾಶವಿಲ್ಲ.

(ಸಶೇಷ).

ಜರ್ಮನರು ಮುಳುಗಿಸಿದ "ಲೂಸಿಟೇನಿಯಾ" ಎಂಬ ಹಡಗಿನ ಮಹಾನರ್ಥ.

(೧೫೦೨ ಮಂದಿಗಳು ಜಲಸಮಾಧಿಗೊಂಡರು).

ಬರುಬರುತ್ತ ಜರ್ಮನರು ನಡೆಯಿಸುತ್ತಿರುವ ರಾಕ್ಷಸ ಕೃತ್ಯಗಳಿಗೆ ಅವಧಿಯೇ ಇಲ್ಲದಂತೆ ಕಾಣುತ್ತದೆ. ಅವರು ಯುದ್ಧವ್ಯಾಜದಿಂದ ಅಗ್ನಿದ್ರಾವಕವನ್ನು ಶತ್ರುಗಳ ಮೇಲೆ ಉಪಯೋಗಿಸಿದುದೂ, ವಿಷದ ಹೊಗೆಯನ್ನು ಸೈನಿಕರ ಮೇಲೆ ಪ್ರಯೋಗಿಸಿದುದೂ, ದಕ್ಷಿಣಾಫ್ರಿಕಾದಲ್ಲಿ ಕುಡಿವ ನೀರಿನ ಬಾವಿಗಳಿಗೆ ವಿಷವನ್ನು ಕದಡಿದುದೂ ಕೂಡ ರಣನೀತಿಗೆ ಅತ್ಯಂತ ವಿರುದ್ಧಗಳೆಂದು ಹೇಳಲ್ಪಡುತ್ತ, ಜರ್ಮನ್ ದೇಶವು ಇದುವರೆಗೆ ಗಳಿಸಿದ ಕೀರ್ತಿಪ್ರತಿಷ್ಠೆಗಳಿಗೆಲ್ಲಾ ಮಸಿಯನ್ನು ಹಚ್ಚಿದಂತೆ ಮಾಡಿರುತ್ತವೆ. ಇದರ ಮೇಲೆ ಅವರ ಸಬ್‌ಮೆರೀನುಗಳು ಲೂಸಿಟೇನಿಯಾ ಎಂಬ ಒಂದು ಪ್ರಯಾಣಸ್ಥರ ಹಡಗನ್ನು ಕಳೆದ ವಾರ ಮನಃಪೂರ್ವಕವಾಗಿ ಮುಳುಗಿಸಿ ಬಹುಮಂದಿ ತಟಸ್ಥದೇಶೀಯ ಪ್ರಜೆಗಳನ್ನು ಕೊಂದ ಕಾರ್ಯವಂತೂ ಅವರ ನಿಷ್ಕರುಣಕಿರಾತಕೃತ್ಯವನ್ನು ಜಗತ್ತಿನಲ್ಲೆಲ್ಲಾ ಶಬ್ದಾಯಮಾನಗೊಳಿಸಿ ಲೋಕವೆಲ್ಲಾ ಅವರ ಮೇಲೆ ಪರಿಕ್ಷುಬ್ಧವಾಗುವಂತೆ ಮಾಡಿರುತ್ತದೆ. ಈ ಲೂಸಿಟೇನಿಯಾ ಎಂಬ ಹಡಗು ಇಂಗ್ಲೆಂಡ್ ದೇಶಕ್ಕೆ ಸೇರಿದ ಲಿವರ್‌ಪೂಲ್ ಪಟ್ಟಣದಲ್ಲಿರುವ ಕ್ಯೂನಾರ್ಡ್ ಕಂಪೆನಿಯವರಿಗೆ ಸೇರಿದುದು. ಪ್ರಯಾಣಿಕರಿಗಾಗಿಯೇ ಇದು ೧೯೦೭ ನೆಯ ವರ್ಷದಲ್ಲಿ ಕಟ್ಟಲ್ಪಟ್ಟ ಹಡಗು. ಇದು ಗಂಟೆ ೧ಕ್ಕೆ ೨೫ ಮೈಲಿಗಳ ಮೇಲೆ ಓಡಬಲ್ಲುದಾಗಿದ್ದಿತು. ಇದು ಅಮೇರಿಕಾ ದೇಶದ ನ್ಯೂಯಾರ್ಕ್ ಪಟ್ಟಣದಿಂದ ಬರುತ್ತಿದ್ದಿತು. ಇದರಲ್ಲಿ ಮೊದಲನೆಯ ತರಗತಿಯ ಪ್ರಯಾಣಿಕರು ೨೯೦ ಮಂದಿಯೂ ೨ ನೆಯ ತರಗತಿಯವರು ೬೬೨ ಮಂದಿಯೂ, ೩ನೆಯ ತರಗತಿಯವರು ೩೬೧ ಮಂದಿಯೂ, ೬೬೫ ಮಂದಿ ಕಳಾಸಿಗಳಾಗಿಯೂ, ಇದರ ಮೇಲೆ ಹಡಗಿನ ಉದ್ಯೋಗಸ್ಥರುಗಳೂ ಸೇರಿ ೨೧೬೦ ಮಂದಿಗಳಿದ್ದರು. ಪ್ರಯಾಣಿಕರಲ್ಲಿ ಬೇರೆ ಬೇರೆ ದೇಶೀಯರನ್ನು ವಿಭಾಗಿಸಿ ಲೆಕ್ಕಮಾಡಿದರೆ, ೯೬೦ ಮಂದಿ ಆಂಗ್ಲೇಯರೂ, ೧೮೮ ಮಂದಿ ಅಮೇರಿಕನ್ನರೂ, ಉಳಿದವರೆಲ್ಲಾ ಬೇರೆ ಬೇರೆ ದೇಶೀಯರೂ ಆಗಿದ್ದರು. ೧ ವರ್ಷ ವಯಸ್ಸಿನೊಳಗಣ ಮಕ್ಕಳೇ ೪೦ರ ವರೆಗಿದ್ದುವು. ೨ ನೆಯ ತರಗತಿಯ ಪ್ರಯಾಣಿಕರಲ್ಲಿ ಹೆಂಗುಸರೇ ಬಹಳವಾಗಿದ್ದರು. ಇದು ಕಳೆದ ತಾ|| ೭ರಲ್ಲಿ ಐರ್ಲ್ಯಾಂಡಿನ ತೀರಕ್ಕೆ ೧೫ ಮೈಲಿಗಳ ದೂರದಲ್ಲಿರುವಾಗ ಹಗಲು ೨| ಗಂಟೆಯ ಹೊತ್ತಿನಲ್ಲಿ ಜರ್ಮನರ ಸಬ್‌ಮೆರೀನ್ ಟಾರ್ಪಿಡೋ ಏಟಿನಿಂದ ಬಡಿಯಲ್ಪಟ್ಟು ೨೦ ನಿಮಿಷದೊಳಗಾಗಿ ಮುಳುಗಿಹೋಯಿತು. ಈ ಏಟು ಬಡಿಯುವಾಗ ಸಮುದ್ರವು ಶಾಂತವಾಗಿದ್ದಿತು. ಪ್ರಯಾಣಿಕರೆಲ್ಲಾ ವಿನೋದವಾಗಿದ್ದರು. ಹಡಗು ಗಂಟೆಗೆ ೧೬ ಮೈಲಿಗಳ ವೇಗದಿಂದ ಪ್ರಯಾಣ ಮಾಡುತ್ತಿದ್ದಿತು. ಅಂಥ ಸಮಯದಲ್ಲಿ ಜರ್ಮನರ ಸಬ್‌ಮೆರೀನು ಮುಂದಾಗಿ ಯಾವ ಸೂಚನೆಯನ್ನೂ ಕೊಡದೆ || ಮೈಲಿ ದೂರದಿಂದ ಇದರ ಮೇಲೆ ೨ ಟಾರ್ಪಿಡೋಗಳನ್ನು ಬಿಟ್ಟು ತೂತು ಕೆಡಹಿ ಮುಳುಗಿಸಿಬಿಟ್ಟಿತು. ಹಡಗಿಗೆ ಏಟು ಬಡಿದು ಮಹಾಶಬ್ದವಾದಾಗ ಪ್ರಯಾಣಿಕರಿಗೆ ಅತ್ಯಂತ ದಿಗ್ಭ್ರಮೆಯೂ ದಿಗಿಲೂ ಉಂಟಾಯಿತು. ಹಡಗಿನ ಒಂದು ಭಾಗವು ನೀರಿನಲ್ಲಿ ಮುಳುಗಿಹೋಗುತ್ತಿದ್ದುದರಿಂದ ಮತ್ತೊಂದು ಭಾಗದಲ್ಲಿದ್ದ ದೋಣಿಗಳನ್ನು ಕಳಚಿ ನೀರಿನ ಮೇಲಕ್ಕೆ ಬಿಟ್ಟು ಹೆಂಗುಸರನ್ನೂ ಮಕ್ಕಳನ್ನೂ ಸಾಧ್ಯವಾದಮಟ್ಟಿಗೆ ಅದಕ್ಕಿಳಿಸಿದರು. ವಾಯುವಾರ್ತೆಯಿಂದ ಸುದ್ದಿ ತಿಳಿದು ಆ ಸ್ಥಳಕ್ಕೆ ಕ್ವೀನ್ಸ್‌ಟನ್ ಪಟ್ಟಣದಿಂದ ಸಹಾಯಕ್ಕಾಗಿ ಬಂದ ೪ ಹಡಗುಗಳೂ ೫ ದೋಣಿಗಳೂ ಸಹ ನೀರಿನ ಮೇಲೆ ತೇಲುತ್ತಿದ್ದವರನ್ನೂ ದೋಣಿಯಲ್ಲಿ ಕುಳಿತಿದ್ದವರನ್ನೂ ರಕ್ಷಿಸಿ ತಂದುವು. ಹೀಗೆಲ್ಲಾ ಕಾಪಾಡಲ್ಪಟ್ಟವರು ೬೦೩ ಮಂದಿಗಳೆಂದು ಗೊತ್ತಾಗಿರುವುದು.

ಹಡಗು ಮುಳುಗಿದೀಚೆಗೆ ಇಂಗ್ಲೆಂಡು ಅಮೇರಿಕಾ ಮೊದಲಾದ ದೇಶಗಳಲ್ಲಿ ವಿಶೇಷ ಕಲಕಲವುಂಟಾಗಿದೆ. ವೃತ್ತಪತ್ರಿಕೆಗಳಲ್ಲೆಲ್ಲಾ ಯುದ್ಧದ ಸುದ್ದಿಗಿಂತ ಇದರ ಸುದ್ದಿಗಳೇ ಚರ್ಚೆಗಳೇ ವಿಶೇಷವಾಗಿವೆ. ಈಚೆಗೆ ಇದರ ಸಂಬಂಧವಾಗಿ ಬಂದಿರುವ ವಾರ್ತೆಗಳಲ್ಲಿ ಮುಖ್ಯ ವಿಷಯಗಳೇನೆಂದರೆ—ಇದರ ಆಪತ್ತಿನಲ್ಲಿ ಸತ್ತವರೊಳಗೆ ಸುಪ್ರಸಿದ್ಧರಾದ ಅನೇಕ ಅಮೇರಿಕಾ ದೇಶೀಯರಾಗಿರುವರು. ಒಬ್ಬ ಕೋಟೀಶ್ವರನೂ ಸತ್ತಿರುವನು. ಈ ಸುದ್ದಿಯು ಅಮೇರಿಕಾಕ್ಕೆ ತಿಳಿದ ಕೂಡಲೇ ಜನರಲ್ಲಿ ತುಂಬಾ ಕಲಕಲವೂ ರೋಷಾವೇಶವೂ ಉಂಟಾಯಿತು. ಹುಂಡಿಗಳ ಬೆಲೆಯು ತಗ್ಗಿಹೋಯಿತು.

ಇಂಗ್ಲೆಂಡಿನ ಪ್ರಜೆಗಳಿಗೆ ರೋಷವು ಮಿತಿಮೀರಿ ಶತ್ರುಗಳ ಮೇಲೆ ಕಾದಾಡಿ ಸೋಲಿಸಿ ನಿರ್ನಾಮಗೊಳಿಸಬೇಕೆಂಬ ಅಭಿನಿವೇಶವು ಹೆಚ್ಚಿ, ಸೇನೆಗೆ ಸೇರುವವರ ಸಂಖ್ಯೆಯು ಬಹಳ ಹೆಚ್ಚಿತು. ಫ್ರಾನ್ಸಿನಲ್ಲೂ ಅದೇ ರೀತಿಯಾಯಿತು. ತಟಸ್ಥ ದೇಶೀಯರೆಲ್ಲರೂ ಆಗ್ರಹಪರವಶರಾಗಿರುವರು. ಈ ವಿಷಯದಲ್ಲಿ ಅಮೇರಿಕನ್ನರು ಜರ್ಮನರನ್ನು ದಾರಿಗೆ ತರುವುದಕ್ಕೆ ಯಾವ ಪ್ರಯತ್ನವನ್ನು ಮಾಡಿದರೆ ಅದಕ್ಕನುಸಾರವಾಗಿ ತಾವೂ ನಡೆಯಲು ಸಿದ್ಧರಾಗಿರುವಂತೆ ತೋರುತ್ತಿರುವುದು. ಎಲ್ಲ ದೇಶದ ವೃತ್ತಪತ್ರಿಕೆಗಳೂ ಈ ಜರ್ಮನರ ದುರಾಗತವನ್ನು ಕುರಿತು ನಿಂದಿಸುತ್ತಲೂ ಅವರ ಅತ್ಯಾಚಾರಕ್ಕೆ ತಕ್ಕ ಪ್ರತಿಕ್ರಿಯೆಯನ್ನು ಮಾಡಬೇಕೆಂತಲೂ ಹೇಳುತ್ತಿರುವುವು. ಯುದ್ಧಾರಂಭ ಕಾಲದಿಂದ ಇದುವರೆಗೆ ಜರ್ಮನರು ನಡೆಯಿಸಿದ ಕ್ರೂರಕೃತ್ಯಗಳೆಲ್ಲಕ್ಕಿಂತಲೂ ಇದು ಅತ್ಯಂತ ದಾರುಣವಾದುದೆಂದು ಇಟಲಿಯ ಪತ್ರಿಕೆಗಳು ಹೇಳಿರುತ್ತವೆ. ಈ ಸುದ್ದಿಯು ಲಿವರ್‌ಪೂಲಿನ ಪ್ರಜೆಗಳಿಗೆ ತಿಳಿದ ಕೂಡಲೇ ಅವರು ತಮ್ಮ ಊರಿನಲ್ಲಿದ್ದ ಜರ್ಮನರ ಅಂಗಡಿಮುಂಗಟ್ಟುಗಳನ್ನೆಲ್ಲಾ ಧ್ವಂಸಮಾಡಿಬಿಟ್ಟರು. ಈ ಹಡಗು ಮುಳುಗಿದ ಸುದ್ದಿಯನ್ನೂ ತಮ್ಮ ದೇಶೀಯರು ಆಗ್ರಹಪರವಶರಾಗಿರುವುದನ್ನೂ ಅಮೇರಿಕಾಧ್ಯಕ್ಷರು ಕೇಳಿ ಯಾರಿಗೂ ದರ್ಶನವನ್ನು ಕೊಡದೆ ಮನೆಯಲ್ಲೇ ಇದ್ದುಬಿಟ್ಟರಂತೆ. ಇಷ್ಟರಲ್ಲೇ ಇದರ ಸಂಬಂಧದ ವಿಚಾರಕ್ಕಾಗಿ ಅಮೇರಿಕನ್ನರು ಒಂದು ಸಭೆಯನ್ನು ಕೂಡಿಸುವಂತೆ ಕಾಣುತ್ತದೆ. ವರ್ತಕಸಂಘದವರು ಇದರ ವಿಚಾರಕ್ಕಾಗಿ ಏರ್ಪಡಿಸಿದ್ದ ಸಂಘದವರು ವಿಚಾರ ನಡೆಸಿದುದರಲ್ಲಿ ಈ ಹಡಗನ್ನು ಮುಳುಗಿಸಿದುದು ಬಹಳ ಕ್ರೂರಕಾರ್ಯವೆಂತಲೂ, ಅಂತರ್ಜಾತೀಯ ಧರ್ಮಕ್ಕೆ ವಿರುದ್ಧವಾದುದೆಂತಲೂ, ಬೇರೆಬೇರೆ ನಾಗರಕ ದೇಶೀಯರು ಮಾಡಿಕೊಂಡಿದ್ದ ಸಂಧಿನಿಬಂಧನೆಗಳಿಗೆ ವ್ಯತಿರಿಕ್ತವಾದುದೆಂತಲೂ, ಈ ಪ್ರಾಣನಷ್ಟ ಮಾಡಿದ ತಪ್ಪನ್ನು ಜರ್ಮನ್ ಪ್ರಭುತ್ವದವರೂ ಅವರ ಸಬ್‌ಮೆರೀನುಗಳ ಅಧಿಕಾರಿಗಳೂ ಮಾಡಿರುವರೆಂತಲೂ, ಅದುಕಾರಣ ಈ ಅತ್ಯಾಚಾರದ ಭಾರವನ್ನು ನಾವು ಅವರುಗಳ ಮೇಲೆ ಹೊರಿಸಿರುತ್ತೇವೆಂತಲೂ ತೀರ್ಪನ್ನು ಹೇಳಿರುತ್ತಾರೆ.

ಜರ್ಮನರು ಇದರ ವಿಷಯಕವಾಗಿ ಹೇಳುವ ಮಾತೇನೆಂದರೆ—ಈ ಹಡಗು ಯುದ್ಧಭೂಮಿಯೆಂದು ಪ್ರಕಟಿಸಲ್ಪಟ್ಟಿರುವ ಸಮುದ್ರಭಾಗಕ್ಕೆ ಪ್ರಯಾಣಮಾಡಿ ಹೋಗುವುದು ಸರಿಯಲ್ಲವೆಂದು ಅಮೇರಿಕಾದಲ್ಲಿರುವ ಜರ್ಮನ್ ರಾಯಭಾರಿಯು ಮೊದಲೇ ತಿಳಿಯಪಡಿಸಿದ್ದಾಗ್ಯೂ ಇಂಗ್ಲಿಷರೂ ಕ್ಯೂನಾರ್ಡ್ ಕಂಪೆನಿಯವರೂ ಆ ಮಾತನ್ನು ಪರಿಹಾಸ ಮಾಡಿಬಿಟ್ಟು ಹೋದುದರಿಂದ ಕಡೆಗೂ ಅನರ್ಥವಾಗಿಯೇ ಆಯಿತು. ಅದುಕಾರಣ ಹೇಳಿದ ಮಾತನ್ನು ಮೀರಿ ಇಂಥ ಅನರ್ಥವನ್ನು ಉಂಟುಮಾಡಿಕೊಂಡ ತಪ್ಪು ಅವರುಗಳ ಮೇಲೆ ಇರುವುದೇ ಹೊರತು ಜರ್ಮನರ ಮೇಲೆ ಇರುವುದಿಲ್ಲ ಎಂಬುದಾಗಿ. ಮತ್ತೂ ತಮ್ಮ ಸಬ್‌ಮೆರೀನುಗಳು ಇಂಥ ಕಾರ್ಯವನ್ನು ನಡೆಯಿಸಿ ಜಯಶೀಲವಾದುದಕ್ಕಾಗಿ ಅವುಗಳ ನಾಯಕನನ್ನು ಜರ್ಮನರು ಶ್ಲಾಘಿಸಿರುವರು.

ಈ ಹಡಗು ನ್ಯೂಯಾರ್ಕಿನಿಂದ ಹೊರಡುವುದಕ್ಕೆ ಮುಂಚೆ ವಾಷಿಂಗ್ಟನ್ನಿನಲ್ಲಿರುವ ಜರ್ಮನ್ ರಾಯಭಾರಿಯು- ಮಿತ್ರಮಂಡಲಿಯವರ ಹಡುಗುಗಳಲ್ಲಿ ಯಾವೊಬ್ಬ ಪ್ರಯಾಣಿಕರೂ ಹೋಗಬಾರದೆಂದೂ, ಒಂದು ವೇಳೆ ಹೋದರೆ ಪ್ರಾಣವನ್ನು ಕಳೆದುಕೊಳ್ಳುವರೆಂದ ಪ್ರಕಟಿಸಿದ್ದನಂತೆ. ಮತ್ತು ಪ್ರಯಾಣಸನ್ನದ್ಧರಾಗಿದ್ದವರಿಗೆಲ್ಲಾ ನೀವು ಹೊರಡಬೇಡಿರೆಂದೂ ತಂತ್ರೀವಾರ್ತೆಯ ಮೂಲಕ ತಿಳಿಯಿಸಿದ್ದರಂತೆ. ಮತ್ತೂ ಅವರುಗಳು ಹಡಗನ್ನು ಹತ್ತುವಾಗಲೂ ಕೂಡ ಜರ್ಮನ್ ಏಜಂಟರು ತಡೆ ಹೇಳಿದರಂತೆ. ಇದನ್ನೆಲ್ಲಾ ನೋಡಿದರೆ ಹೇಗಾದರೂ ಮಾಡಿ ಈ ಹಡಗನ್ನು ಮುಳುಗಿಸಬೇಕೆಂದು ಜರ್ಮನರು ಮುಂದಾಗಿ ಬೇಕಾದ ಪ್ರಯತ್ನಗಳನ್ನೆಲ್ಲಾ ಮಾಡಿಕೊಂಡಿದ್ದಂತೆ ವ್ಯಕ್ತವಾಗುತ್ತದೆ. ಈ ಹಡಗಿನಲ್ಲಿ ಮೂವರು ಜರ್ಮನರು ಹೇಗೋ ಸೇರಿಕೊಂಡು ಪ್ರಯಾಣ ಮಾಡುತ್ತಿದ್ದುದು ಮಧ್ಯಮಾರ್ಗದಲ್ಲಿ ಗೋಚರಿಸಲು, ಅವರನ್ನು ಅದರೊಳಗೇ ಸೆರೆಹಾಕಿದ್ದರು. ಈ ಹಡಗು ಬರುವ ದಾರಿಯಲ್ಲಿ ಜರ್ಮನರು ನವೀನತರದ ೫-೬ ಸಬ್‌ಮೆರೀನುಗಳನ್ನು ಕಾದಿರುವಂತೆ ಏರ್ಪಡಿಸಿದ್ದರೆಂತಲೂ ಊಹಿಸಲ್ಪಟ್ಟಿದೆ. ತಟಸ್ಥದೇಶೀಯ ಪತಾಕೆಯನ್ನು ಧರಿಸಿದ್ದ ಯಾವುದೋ ಒಂದು ಹಡಗು ಈ ಲೂಸಿಡೋನಿಯಾ ಹಡಗು ಹೊರಟುದು ಮೊದಲಾದ ಸಂಗತಿಗಳನ್ನು ವಾಯುವಾರ್ತೆಯ ಮೂಲಕ ತಿಳಿಯಿಸಿರಬೇಕೆಂದು ಎಣಿಸಲ್ಪಟ್ಟಿದೆ. ಜರ್ಮನರ ಮೇಲೆ ಯುದ್ಧಕ್ಕೆ ನಿಲ್ಲಬೇಕೆಂದು ಅಮೇರಿಕಾ ದೇಶದ ನಾನಾ ಭಾಗಗಳಿಂದ ಅಧ್ಯಕ್ಷರಿಗೂ ಮಂತ್ರಿಗಳಿಗೂ ವಿಪರೀತವಾಗಿ ಈಗ ತಂತ್ರೀವಾರ್ತೆಗಳು ಬರುತ್ತಿವೆ.

ಯುದ್ಧವಾರ್ತೆಯು.

ಪಶ್ಚಿಮರಣರಂಗ.

ಕಳೆದ ವಾರದ ವಾರ್ತೆಗಳನ್ನು ನೋಡುವಲ್ಲಿ ಈಚೆಗೆ ಜರ್ಮನರು ಮಹಾರೋಷಾವೇಶದಿಂದ ಮಿತ್ರಮಂಡಲಿಯವರ ಮೇಲೆ ತಾವೇ ನುಗ್ಗಿ ಯುದ್ಧಮಾಡುತ್ತಿರುವಂತೆಯೂ ಕೆಲಕಡೆ ಅವರಿಗೆ ಸ್ವಲ್ಪಮಟ್ಟಿಗೆ ಜಯವಾಗಿರುವಂತೆಯೂ, ಮಿತ್ರಮಂಡಲಿಯವರು ಆತ್ಮರಕ್ಷಣೋಪಾಯವನ್ನೇ ವಿಶೇಷವಾಗಿ ನಡೆಯಿಸುತ್ತಿರುವಂತೆಲೂ ಗೊತ್ತಾಗುತ್ತದೆ. ವಿಷಧೂಮಪ್ರಯೋಗದಿಂದಲೇ ಅವರಿಗೆ ಅಷ್ಟು ಇಷ್ಟು ಲಾಭವಾಗುತ್ತಿರುವಂತೆ ಕಾಣುತ್ತಿದೆ. ಕೇವಲ ಸೇನಾಬಲ ಮದ್ದುಗುಂಡುಗಳ ಬಲದಿಂದಲೇ ಯುದ್ಧಮಾಡುತ್ತಿದ್ದರೆ ಮಿತ್ರಮಂಡಲಿಯವರನ್ನು ಹಿಮ್ಮೆಟ್ಟಿಸುವುದು ಅಸಾಧ್ಯವೆಂದು ಅವರು ತಿಳಿದುಕೊಂಡುದರಿಂದಲೇ ಮಾಯಾಯುದ್ಧದ ಕಡೆಯ ಪ್ರಯತ್ನವನ್ನು ಅವರು ಈಗ ಸಾಗಿಸುತ್ತಿರಬಹುದು.

ಪ್ರಸಿದ್ಧವಾದ ೬೦ನೇ ನಂ. ಗುಡ್ಡವನ್ನು ಹಿಡಿದುಕೊಳ್ಳಬೇಕೆಂದು ಮಹಾ ಪ್ರಯತ್ನವನ್ನು ಮಾಡುತ್ತಿರುವ ಜರ್ಮನರು ವಿಷವಾಯುವನ್ನು ಪ್ರಯೋಗಿಸಿ ಆ ಗುಡ್ಡದ ಕಂದಕಗಳಲ್ಲಿದ್ದ ಆಂಗ್ಲಸೈನಿಕರು ಉಸಿರುಕಟ್ಟಿಕೊಂಡು ಆ ಸ್ಥಳವನ್ನು ಬಿಟ್ಟು ಓಡಿಹೋಗುವಂತೆ ಮಾಡಿ, ಹಲವು ಕಂದಕಗಳನ್ನು ಆಕ್ರಮಿಸಿಕೊಂಡರು. ಈಚೆಗೆ ಆಂಗ್ಲಸೈನಿಕರು ಆ ಜರ್ಮನರ ಮೇಲೆ ಘೋರಯುದ್ಧವನ್ನು ಮಾಡಿ ಅವುಗಳಲ್ಲಿ ಅನೇಕ ಕಂದಕಗಳನ್ನು ವಶಪಡಿಸಿಕೊಂಡಿದ್ದಾರೆ. ಆ ಬಳಿಯಲ್ಲಿ ಇನ್ನೂ ಘೋರ ಯುದ್ಧವು ನಡೆಯುತ್ತಲೇ ಇದೆ.

ಈಪ್ರೆಸ್ಸಿನ ಉತ್ತರ ಭಾಗದಲ್ಲೂ ಹಾಗೆಯೇ ಯುದ್ಧವು ನಡೆಯುತ್ತಿದೆ. ಅಲ್ಲೂ ವಿಷವಾಯು ಪ್ರಯೋಗವನ್ನು ಜರ್ಮನರು ಮಾಡುತ್ತಿದ್ದಾರೆ. ಅವರ ಅಂಥ ಸಮ್ಮೋಹನಾಸ್ತ್ರಕ್ಕೂ ಬೆದರದೆ ಮಿತ್ರಮಂಡಲಿಯವರು ಹಲವು ಕಡೆ ಕಾದಾಡಿ ತಮ್ಮ ತಮ್ಮ ಸ್ಥಾನಗಳನ್ನು ರಕ್ಷಿಸಿಕೊಂಡೂ ಶತ್ರುಗಳನ್ನು ಹಿಮ್ಮೆಟ್ಟಿಸಿಯೂ ಇರುವುದು ಸ್ತೋತ್ರಾರ್ಹವಾಗಿದೆ.

ಪೂರ್ವರಣರಂಗ.

ಜರ್ಮನರು ಕಾರ್ಪೇತಿಯನ್ ಬೆಟ್ಟಗಳಲ್ಲೂ ಗೆಲಿಷಿಯಾದಲ್ಲೂ ರಷ್ಯನರನ್ನು ಹಿಮ್ಮೆಟ್ಟಿಸಿ ಸೋಲಿಸಿ ಮಹಾ ಜಯವನ್ನು ಪಡೆದುಕೊಂಡಿರುವಂತೆ ತಮ್ಮ ದೇಶದಲ್ಲಿ ಪ್ರಕಟಿಸಿಕೊಂಡು, ಆ ವಿಜಯಕ್ಕಾಗಿ ಸಂತೋತ್ಸವಗಳನ್ನು ಮಾಡಿದರೆಂದೂ, ಶಾಲೆಗಳಿಗೆ ಒಂದು ಹೊತ್ತು ವಿಶ್ರಾಂತಿಯನ್ನು ಕೊಟ್ಟಿದ್ದರೆಂದೂ ಗೊತ್ತಾಗುತ್ತದೆ. ಆಸ್ಟ್ರಿಯಾದವರಾದರೊ ರಷ್ಯನರನ್ನು ಹಂಗೇರಿಯಿಂದ ಹಿಂದಕ್ಕೆ ಓಡಿಸಿಬಿಟ್ಟೆವೆಂದೂ ರಷ್ಯನರಿದ್ದ ಕಾರ್ಪೇತಿಯನ್ ಬೆಟ್ಟದ ಒಂದು ಭಾಗವನ್ನು ತಾವು ದಾಟಿಹೋದೆವೆಂದೂ ಹೇಳಿಕೊಳ್ಳುತ್ತಿದ್ದಾರೆ. ರಷ್ಯನರಾದರೊ ಕಾರ್ಪೇತಿಯನ್ ಕಣಿವೆಗಳಲ್ಲಿ ತಾವೇ ಆಸ್ಟ್ರಿಯನ್ನರನ್ನು ಹೊಡೆದೋಡಿಸುತ್ತಿದ್ದೇವೆಂತಲೂ, ಪಶ್ಚಿಮಗೆಲಿಷಿಯಾದಲ್ಲಿ ಶತ್ರುಗಳು ತಮ್ಮನ್ನು ಹಿಂದಕ್ಕಟ್ಟಿಬಿಟ್ಟಿರುವುದು ನಿಜವೆಂತಲೂ ಹೇಳಿರುತ್ತಾರೆ ಆ ಭಾಗದಲ್ಲಿ ರಷ್ಯನರು ಹಿಡಿದುಕೊಂಡಿದ್ದ ೩೫ ಮೈಲಿಗಳ ಪ್ರದೇಶವನ್ನು ಜರ್ಮನ್ ಆಸ್ಟ್ರಿಯನ್ ಸೈನ್ಯಗಳು ಈಗ ವಶಪಡಿಸಿಕೊಂಡಿರುತ್ತವೆ. ಮತ್ತೂ ಈ ಸೈನ್ಯಗಳು ಜೇಮ್ಸಿಲ್ ಪಟ್ಟಣದ ಕಡೆಗೆ ಸಾಗುತ್ತಿವೆ. ಅತ್ತ ಬಾಲ್ಟಿಕ್ ಸಮುದ್ರಮಾರ್ಗವಾಗಿ ಜರ್ಮನರು ನುಗ್ಗಿ ರಷ್ಯಾದೇಶದ ಲಿಬೋ ಎಂಬ ತೀರಪಟ್ಟಣವನ್ನು ಆಕ್ರಮಿಸಿಕೊಂಡಿದ್ದಾರೆ. ಹೀಗೆ ಬಾಲ್ಟಿಕ್ ಜಿಲ್ಲೆಯಲ್ಲಿ ಜರ್ಮನರು ನುಗ್ಗಿದ ಮಾತ್ರದಿಂದಲೇ ರಷ್ಯನರು ತಾವು ಮಾಡಿಕೊಂಡಿದ್ದ ಯುದ್ಧಕ್ರಮದಲ್ಲಿ ಯಾವ ಮಾರ್ಪನ್ನೂ ಮಾಡಿಕೊಳ್ಳುವವರಾಗಿಲ್ಲವಂತೆ. ಏಕೆಂದರೆ- ಅತ್ತಕಡೆಗೆ ಬಂದಿರುವ ಅಲ್ಪಮಾತ್ರವಾದ ಜರ್ಮನ್ ಸೈನ್ಯವನ್ನು ಆ ಸುತ್ತಿನಲ್ಲಿರುವ ರಷ್ಯನ್ ಸೇನೆಗಳೇ ಹೊಡೆದೋಡಿಸಿಬಿಡಲು ಸಮರ್ಥವಾಗಿರುವುವಂತೆ. ಈಚೆಗೆ ಜರ್ಮನರು ಗೆಲಿಷಿಯಾದಲ್ಲಿ ಪಡೆದುಕೊಂಡ ಜಯಲಾಭವನ್ನು ಕಣ್ಣಾರೆ ನೋಡುವುದಕ್ಕಾಗಿ ಜರ್ಮನ್ ಚಕ್ರವರ್ತಿಯವರೇ ಅಲ್ಲಿಗೆ ಬಂದಿದ್ದರಂತೆ.

ಡಾರ್ಡಿನಲ್ಸ್.

ಮಿತ್ರಮಂಡಲಿಯ ಯುದ್ಧನಾವೆಗಳು ಮುಂದಕ್ಕೆ ಸರಿಯುತ್ತಲೂ, ಕೋಟೆಗಳ ಮೇಲೆ ಗುಂಡುಗಳನ್ನು ಹಾರಿಸುತ್ತಲೂ ಇರುವುದಲ್ಲದೆ ಕೆಲಕಡೆ ಮತ್ತಷ್ಟು ನೂತನ ಸೈನ್ಯಗಳನ್ನು ಇಳುಹಿಸಿವೆ. ನಾಗರಾದ ಬಳಿಯಲ್ಲಿ ಇಕ್ಕಟ್ಟಿನ ಸ್ಥಲದಲ್ಲಿರುವ ಪೂರ್ವದಿಕ್ಕಿನ ಕೋಟೆಗಳನ್ನು ಮಿತ್ರಮಂಡಲಿಯ ನೌಕಾದಳವು ಮುತ್ತಿ ಗುಂಡುಗಳನ್ನು ಹೊಡೆದಿವೆ. ಇದರ ಹೊರತು ಉಳಿದ ಕೋಟೆಗಳೆಲ್ಲಾ ನಿಶ್ಶಬ್ದಮಾಡಲ್ಪಟ್ಟಿವೆ. ಡಾರ್ಡಿನಲ್ಸಿನಲ್ಲಿಳಿದು ಮುಂದಕ್ಕೆ

ಹೋಗುತ್ತಿರುವ ಮಿತ್ರಮಂಡಲಿಯ ಸೈನ್ಯಗಳು ಕಿಲಿದ್ಬಹಾರನ್ನೂ ಅದರ ಸುತ್ತಮುತ್ತಣ ಪ್ರದೇಶಗಳನ್ನೂ ವಶಪಡಿಸಿಕೊಂಡಿರುತ್ತವೆ.

ಇಲ್ಲಿನ ಸೈನ್ಯದೊಡನೆ ಬಂದಿದ್ದ ಇಂಗ್ಲಿಷ್ ಮುಖ್ಯಮಂತ್ರಿ ಆಸ್ಕ್ವಿತ್‌ರವರ ಮೂರನೆಯ ಕುಮಾರರವರಿಗೆ ಏಟುಬಿದ್ದು ಚಿಕಿತ್ಸೆಗೊಳುತ್ತಿದ್ದಾರೆ. ಪ್ರಾಣಭಯವೇನೂ ಇಲ್ಲವೆಂದು ತಿಳಿದುಬಂದಿದೆ. ಇದುವರೆಗಿನ ಡಾರ್ಡಿನಲ್ಸ್ ಯುದ್ಧವೆಲ್ಲಾ ಮಿತ್ರಮಂಡಲಿಯವರಿಗೆ ಅನುಕೂಲವಾಗಿದೆ.

ಜಲಯಾನಗಳು.

ಮೇ ತಾ|| ೫ಕ್ಕೆ ಕಡೆಯಾದ ವಾರದಲ್ಲಿ ಜರ್ಮನರ ಸಬ್‌ಮೆರೀನುಗಳು ೫ ವ್ಯಾಪಾರದ ಹಡಗುಗಳನ್ನೂ ೧೬ ಮೀನು ಹಿಡಿಯುವ ಸಣ್ಣ ಹಡಗುಗಳನ್ನೂ ಮುಳುಗಿಸಿರುತ್ತವೆ. ಆ ವಾರದಲ್ಲಿ ಇಂಗ್ಲಿಷ್ ತೀರಗಳಿಗೆ ೧೬೦೪ ಹಡಗುಗಳು ಬಂದು ಹೋಗಿರುತ್ತವೆ. ಉತ್ತರ ಸಮುದ್ರದಲ್ಲಿ ಕ್ವೀನ್ ವಿಲ್ ಹೆಲ್ಮಿನಾ ಎಂಬ ಹಡಗನ್ನು ಜರ್ಮನರು ಟಾರ್ಪಿಡೋ ಏಟಿನಿಂದ ಮುಳುಗಿಸಿದರು. ಮೂರಿ ಎಂಬ ಡಿಸ್ಟ್ರಾಯರ್ ಜಾತಿಯ ಹಡಗು ಬೆಲ್ಜಿಯಂ ತೀರದಲ್ಲಿ ಕೆಲಸಮಾಡುತ್ತಿರಲು ಮದ್ದಿನ ಗೋಳಕ್ಕೆ ಬಡಿದು ಮುಳುಗಿಹೋಯಿತು. ಅದರಲ್ಲಿದ್ದ ಕಳಾಸಿಗಳನ್ನು ದೋಣಿಗಳಿಗೆ ಹತ್ತಿಸುವುದಕ್ಕಾಗಿ ಕ್ರೂಸೆಡರ್ ಎಂಬ ಮತ್ತೊಂದು ಡಿಸ್ಟ್ರಾಯರು ಸಹಾಯ ಮಾಡುತ್ತಿರಲು ಬೆಲ್ಜಿಯಂ ತೀರದಲ್ಲಿದ್ದ ಜರ್ಮನರ ಫಿರಂಗಿಗಳು ಅದರ ಮೇಲೆ ಗುಂಡುಹೊಡೆದುವು. ಕ್ರೂಸೆಡರು ಸ್ವಲ್ಪ ಹೊತ್ತು ಅಲ್ಲಿದ್ದು ಹಿಂದಿರುಗಿ ಬಂದುಬಿಟ್ಟಿತು. ಮುಳುಗಿಹೋದ ಹಡಗಿನಲ್ಲಿದ್ದವರಲ್ಲಿ ೮೮ ಮಂದಿ ಕಳಾಸಿಗಳನ್ನೂ ೭ ಮಂದಿ ಉದ್ಯೋಗಿಗಳನ್ನೂ ಜರ್ಮನರು ಸೆರೆಹಿಡಿದರು.

ಆಕಾಶಯಾನಗಳು.

ಕಳೆದ ತಾ|| ೧೦ ರಲ್ಲಿ ಜರ್ಮನರ ಆಕಾಶನಾವೆಗಳು ಕೆಲವು ಆಂಗ್ಲಪಟ್ಟಣಗಳಮೇಲೆ ಸಿಡಿಮದ್ದುಗಳನ್ನು ಹಾಕಿದುವು. ಆದರಿಂದ ಕೆಲ ಮನೆಗಳು ಸುಟ್ಟುಹೋದುವು. ಒಬ್ಬ ಮುದಿಕನು ವೈದ್ಯಶಾಲೆಯಲ್ಲಿ ಸತ್ತನು.

ದಕ್ಷಿಣಾಫ್ರಿಕಾ.

ಇಲ್ಲಿ ಜನರಲ್ ಬೋಥಾರವರ ಪಕ್ಷದ ಸೈನಿಕರು ಜರ್ಮನರ ಸ್ವಾಸ್ಥ್ಯದಲ್ಲಿರುವ ಕಾರಿಬಿಬು ಮೊದಲಾದ ಕೆಲವು ರೈಲ್ವೆ ಜಂಕ್ಷನ್ನುಗಳನ್ನು ವಶಪಡಿಸಿಕೊಂಡು ಮುಂದುಮುಂದಕ್ಕೆ ಹೋಗುತ್ತಿದ್ದಾರೆ. ಇವರು ಹೋಗುವ ದಾರಿಯಲ್ಲಿರುವ ನೀರಿನ ಕೊಳಗಳಲ್ಲೆಲ್ಲಾ ಜರ್ಮನರು ವಿಷವನ್ನು ಕದಡಿಬಿಟ್ಟು ಹೋಗುತ್ತಿದ್ದಾರೆ.

ಮೈಸೂರು ಸ್ಟಾರ್.

ಸನ್ ೧೯೧೫ ನೆಯ ಮೇ ತಾ|| ೧೬ ನೆಯ ಭಾನುವಾರ.

ಮನೆಗೈಗಾರಿಕೆ.

ಸಂಪದಭ್ಯುದಯ ಸಂಬಂಧವಾಗಿ ರಾಜಧಾನಿಯೊಳಗೆ ಮನೆಗೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ವಿಷಯವನ್ನು ಕುರಿತು ವಿಚಾರಮಾಡುವುದಕ್ಕಾಗಿ ಕಳೆದ ಬುಧವಾರ ಸಾಯಂಕಾಲ ಟವ್ನ್‌ಹಾಲಿನಲ್ಲಿ ಮ್ಯುನ್ಸಿಪಲ್ ಕೌನ್ಸಿಲರು ಮೊದಲಾದ ಪುರಪ್ರಮುಖರ ಒಂದು ಸಭೆಯು ಸೇರಿದ್ದಿತು. ರಾಜಧಾನಿಯಲ್ಲಿ ಪೂರ್ವದಲ್ಲಿದ್ದ ಕೈಗಾರಿಕೆಗಳು ಈಗ ಕ್ಷೀಣಸ್ಥಿತಿಗೆ ಬರುವುದಕ್ಕೆ ಕಾರಣವೇನು ? ಈಗ ಯಾವಯಾವ ತೆರದ ಕೈಗಾರಿಕೆಗಳನ್ನು ಹೇಗೆ ಅಭಿವೃದ್ಧಿಪಡಿಸಬಹುದು, ಎಂಬುದೇ ಮೊದಲಾದ ವಿಷಯಗಳು ಚರ್ಚಿಸಲ್ಪಟ್ಟುವು. ಜನಗಳಿಗೆ ಸ್ವತಂತ್ರ ವೃತ್ತಿಯಿಂದ ಜೀವಿಸುವುದಕ್ಕೆ ಮಾರ್ಗಮಾಡಿಕೊಡುವುದು ಪ್ರಭುತ್ವದವರ ಕರ್ತವ್ಯವಾದುದರಿಂದ, ಅರಮನೆಯಲ್ಲಿ ಬಹುಜನರು ವೈದಿಕರು ನಿರುಪಾಧಿಕವಾಗಿ ಸಂಬಳವನ್ನು ಪಡೆಯುತ್ತ ನಿರುದ್ಯೋಗಿಗಳಾಗಿರುವರೆಂದೂ, ಅಂಥವರುಗಳನ್ನೆಲ್ಲಾ ಯಾವುದಾದರೊಂದುದ್ಯೋಗದಲ್ಲಿ ತತ್ಪರರಾಗಿರುವಂತೆ ಮಾಡುವುದು ಅವಶ್ಯಕವೆಂದೂ, ಹಾಗೆಯೇ ಅರಮನೆಯಲ್ಲಿ ಬಹುಕಾಲದಿಂದ ಸೇರಿಕೊಂಡಿದ್ದ ಅನ್ವಯರುಗಳೆಂಬುವರಲ್ಲಿ ನಿರುಪಯೋಗಿಗಳಾದ ಹೆಚ್ಚು ಜನರನ್ನು ಬಿಡಿಸಿ, ಅವರಿಗೆ ನೂರಾರು ರೂ. ಗಳ ಉಪಕಾರವೇತನವನ್ನು ಕೊಟ್ಟು ಕಳುಹಿಸಿಬಿಟ್ಟುದರಿಂದ, ಅವರು ಆ ಬಂಡವಾಳದಮೇಲೆ ಸ್ವತಂತ್ರವೃತ್ತಿಯಿಂದ ಸುಖವಾಗಿ ಜೀವಿಸಿಕೊಳ್ಳುತ್ತಿರುವರೆಂದೂ ಒಬ್ಬ ಸಭಿಕರೂ, ರಾಜಧಾನಿಯಲ್ಲಿ ಪ್ರಸಿದ್ಧವಾಗಿರುವ ಸಣ್ಣ ಗೆಲಸಗಾರರ ಒಂದು ಬೀದಿಯೇ ಇರುತ್ತ, ಅವರ ಕಸಬಿಗೆ ಪ್ರೋತ್ಸಾಹವಿಲ್ಲದಿರುವುದರಿಂದ ತಕ್ಕ ಪ್ರೋತ್ಸಾಹ ಕೊಟ್ಟು ಮುಂದಕ್ಕೆ ತರಬೇಕೆಂದು ಮತ್ತೊಬ್ಬ ಸಭಿಕರೂ, ಯಂತ್ರಗಾರಿಕೆಯ ಸಾಮಗ್ರಿಗಳ ಪ್ರಾಬಲ್ಯದ ಮುಂದೆ ಮನೆಗೈಗಾರಿಕೆಗಳು ಹಾಯುವ ಹಾಗಿಲ್ಲವೆಂದು ಇನ್ನೊಬ್ಬರೂ ಹೀಗೆ ನಾನಾ ವಿಧವಾಗಿ ವಾದಾನುವಾದಗಳನ್ನು ಮಾಡಿ ಮುಗಿಸಿದರು.

ವಿಚಾರಮಾಡಿ ನೋಡಿದರೆ ರಾಜಧಾನಿಯಲ್ಲಿ ಕೂಲಿನಾಲಿಯಿಂದ ಜೀವಿಸುವವರಿಗೂ ಅನೂಚಾನವಾಗಿ ಬಂದ ಕೈಕಸಬಿನವರಿಗೂ ಜೀವನಕ್ಕೆ ಕೊರತೆಯಿರುವುದಿಲ್ಲ. ಒಂದೊಂದು ತೆರದ ತಮ್ಮ ಕಸಬಿನಿಂದ ಪ್ರಯೋಜನವನ್ನು ಕಾಣದವರು ಬೇರೆ ಕಸಬಿಗೆ ಪ್ರವೇಶಿಸಿ ಜೀವಿಸುತ್ತಿದ್ದಾರೆ. ಉತ್ಸವ ಕಾಲಗಳಲ್ಲಿ ಉಪಯೋಗಿಸುವುದಕ್ಕೆ ವಾಷಿಂಗ್ಟನ್ ದೀಪಗಳು ಬಂದುದರಿಂದ ಇಂಡ್ವಿಗಳನ್ನು ಮಾಡಿಕೊಂಡು ಜೀವಿಸುತ್ತಿದ್ದ ಬುಡಬುಡಕೆಯ ಜನರು ಪಾತ್ರೆಪದಾರ್ಥಗಳ ವ್ಯಾಪಾರಕ್ಕೆ ನುಗ್ಗಿ ತಮ್ಮ ತಿರಿಪೆಯನ್ನು ಬಿಟ್ಟು ಸುಖವಾಗಿ ಜೀವಿಸುತ್ತಿದ್ದಾರೆ. ರವಿವರ್ಮ ಮೊದಲಾದವರ ಚಿತ್ರಪಟಗಳು ಬಂದುದರಿಂದ ತಮ್ಮ ಕೈಗಾರಿಕೆಯ ಪ್ರಯೋಜನವನ್ನು ಹೋಗಲಾಡಿಸಿಕೊಂಡ ಚಿತ್ರಗಾರರು ಚಿನ್ನಗೆಲಸ ಬೆಳ್ಳಿಗೆಲಸಗಳಿಗೆ ನುಗ್ಗಿ ದಾರಿದ್ರ್ಯವನ್ನು ಹೋಗಲಾಡಿಸಿಕೊಳ್ಳುತ್ತಿದ್ದಾರೆ. ಯಂತ್ರಗಳ ಎಣ್ಣೆಯು ಬಂದು ಗಾಣಗಳ ಲಾಭವನ್ನು ಕಡಿಮೆಮಾಡಿಕೊಂಡ ಜನರು ಬೇರೆ ಬೇರೆ ವ್ಯಾಪಾರಗಳನ್ನು ಹಿಡಿದು ಪುಷ್ಟರಾಗುತ್ತಿದ್ದಾರೆ. ಕುಂಬಾರ, ಅಗಸ, ಕಮ್ಮಾರ, ಚಮ್ಮಾರ, ಚಿಪ್ಪಲಿಗ ಮೊದಲಾದ ಕಸಬುಗಾರರ ಉದ್ಯೋಗಕ್ಕೆ ಪ್ರೋತಾಹವು ಸಮರ್ಪಕವಾಗಿದೆ. ಮನೆಗಟ್ಟುವ ಕೆಲಸಗಾರರಾದ ಓಜೆ, ಉಪ್ಪಾರ ಮೊದಲಾದವರ ದಿನಗೂಲಿಗಳು ಹೆಚ್ಚಿಹೋಗಿರುವುದೇ ಅವರ ಉದ್ಯೋಗ ಪ್ರೋತ್ಸಾಹವನ್ನು ವ್ಯಕ್ತಪಡಿಸುತ್ತಿದೆ.

ಕಾಮಾಟಿಯವರ ಕೂಲಿಗಳು ಕೂಡ ಅಧಿಕವಾಗಿರುವುದನ್ನು ನೋಡಿದರೆ ಕೂಲಿಗಾರರ ಜೀವನಕ್ಕೇನೂ ಕೊರತೆಯಿಲ್ಲವೆಂಬುದು ವ್ಯಕ್ತವಾಗುತ್ತದೆ. ಯಾತಗಳನ್ನು ಹಾಕಿಕೊಂಡಿರುವ, ತೊಗರಿ ಮೊದಲಾದ ಧಾನ್ಯಗಳ ಬೇಳೆಯನ್ನು ಮಾಡುವ, ಊಟದೆಲೆ ದೊನ್ನೆಗಳನ್ನು ಚುಚ್ಚುವ, ಹಾಲನ್ನು ಮಾರುವ, ಹೆಂಗುಸರುಗಳು ಕೂಡ ಪುಷ್ಟರಾಗಿಯೂ ಆಗುತ್ತಲೂ ಇದ್ದಾರೆ. ಇದನ್ನೆಲ್ಲಾ ನೋಡಿದರೆ ಉದ್ಯೋಗಮಾಡಿ ಜೀವಿಸಬೇಕೆನ್ನುವವರಿಗೆ ರಾಜಧಾನಿಯಲ್ಲಿ ಮಾರ್ಗವಿಲ್ಲದೆ ಇಲ್ಲ. ಮುಖ್ಯವಾಗಿ ಇಲ್ಲಿ ಬೆಂಗಳೂರಿನಷ್ಟು ವ್ಯಾಪಾರ ಪ್ರಾಬಲ್ಯವಿಲ್ಲದುದು ಒಂದು ದೊಡ್ಡ ಕೊರತೆ. ಅದಕ್ಕೆ ಲೋಹಮಾರ್ಗ ಸಂಬಂಧವು ವಿಶೇಷವಾಗಿಲ್ಲದುದೇ ಕಾರಣ.

ಜನವರ್ಗದಲ್ಲಿ ಕೈಗಾರಿಕೆಯನ್ನು ಹೆಚ್ಚಿಸಿ ಅದರಿಂದ ಸಂಪದಭ್ಯುದಯವನ್ನು ಮಾಡಬೇಕೆನ್ನುವುದು ಪ್ರಭುತ್ವದವರ ಮತ್ತೂ ಅವರ ಅಧಿಕಾರಿವರ್ಗದವರ ಮುಖ್ಯಸಂಕಲ್ಪವಾಗಿದ್ದರೆ ಅವರು ಇಂಥ ಆಲೋಚನೆಗಳನ್ನು ಸಾವಿರಾರುಗಟ್ಟಲೆ ನಡೆಯಿಸುವುದಕ್ಕಿಂತಲೂ ವಿಶೇಷ ಗಮನೀಯವಾದ ಸಾಹಸವೊಂದನ್ನು ಅವರು ಮಾಡಿದರೆ ಖಂಡಿತವಾಗಿಯೂ ದೇಶದಲ್ಲಿ ಸಂಪದಭ್ಯುದಯವಾಗತಕ್ಕ ಮಾರ್ಗವಾಗುವುದೆಂಬುದನ್ನು ನಾವು ಒತ್ತಿ ಹೇಳುತ್ತೇವೆ. ಅದೇನೆಂದರೆ—ಕೈಗಾರಿಕೆಯ ಜನಗಳಿಗೆ ಮದದ್ರವ್ಯವು ಸಿಕ್ಕದಂತೆ ಮಾಡುವುದೇ ಆಗಿರುತ್ತದೆ. ತಲೆತಲಾಂತರದಿಂದಲೂ ಮದದ್ರವ್ಯ ಸೇವನೆಯನ್ನು ಮಾಡಿಕೊಂಡು ಬಂದಿರುವ ಜನರಲ್ಲಿ ಹಲಕೆಲವರು ಸ್ವಬುದ್ಧಿಬಲದಿಂದ ಅಂಥ ದುರಭ್ಯಾಸವನ್ನು ಸ್ವಲ್ಪಕಾಲದಿಂದ ತ್ಯಜಿಸಿಬಿಟ್ಟುದರಿಂದಲೇ ಒಳ್ಳೆಯ ವರ್ತಕತನದಲ್ಲಿ ಮುಂದಾಗುತ್ತಲೂ ಧನಿಕರಾಗುತ್ತಲೂ ಬರುತ್ತಿರುವುದನ್ನು ಯಾರು ಕಾಣರು ? ಆದರೆ ಇಂಥ ಬುದ್ಧಿಯು ಸಣ್ಣ ಜನರೆಲ್ಲರಿಗೂ ಉಂಟಾಗುವುದು ಅಸಂಭವವಾದುದರಿಂದ, ಹೆಂಡ ಸಾರಾಯಿಗಳ ಅಂಗಡಿಗಳನ್ನೇ ಮೈಸೂರು ಸಂಸ್ಥಾನದಲ್ಲಿ ಮುಚ್ಚಿಸಿಬಿಟ್ಟರೆ ಕೂಲಿಗಾರರು ಮೊದಲಾದ ಜನರಲ್ಲೆಲ್ಲಾ ಗಳಿಸಿದ ದುಡ್ಡು ದುರ್ವ್ಯಯವಾಗುವುದಕ್ಕೆ ಮಾರ್ಗವಿಲ್ಲದೆ ಸಂಪದಭ್ಯುದಯವು ತಾನಾಗಿ ಆಗುವುದು. ಈ ಪ್ರಯತ್ನವನ್ನು ಮೈಸೂರು ಸಂಸ್ಥಾನದಲ್ಲೆಲ್ಲಾ ಮಾಡಿದರೆ ದೇಶಕ್ಕೆ ದೇಶವೇ ಉದ್ಧಾರಗೊಳ್ಳುವುದು. ನಮ್ಮ ಶ್ರೀಮನ್ಮಹಾರಾಜರವರ ಆಧಿಪತ್ಯವು ಆಚಂದ್ರಾರ್ಕವಾಗಿ ಭರತಖಂಡದ ಚರಿತ್ರದಲ್ಲಿ ಸ್ವರ್ಣಾಕ್ಷರದಿಂದ ಬರೆಯಲ್ಪಡುವುದಕ್ಕೆ ಅರ್ಹವಾಗಿ ಚಿರಸ್ಮರಣೀಯವಾಗಿರುವುದು. ದೇಶೋದ್ಧಾರ ಚಿಂತೆಯೊಂದರಿಂದಲೇ ರಷ್ಯಾಪ್ರಭುತ್ವದವರು ಮದದ್ರವ್ಯಶಾಖೆಯನ್ನೇ ತಪ್ಪಿಸಿಬಿಡಲಿಲ್ಲವೆ? ದೇಶೋದ್ಧಾರ ಚಿಂತೆಯಿಂದಲೇ ಚೀನಾಪ್ರಭುತ್ವದವರು ಬಲಾತ್ಕಾರ ವಿಧಿಯಿಂದ ಅಫೀಮಿನ ಸೇವನೆಯನ್ನು ಅಡಗಿಸಿಬಿಡಲಿಲ್ಲವೆ ? ದೇಶೋದ್ಧಾರ ಚಿಂತನೆಯಿಂದಲೇ ನಮ್ಮ ಸಾರ್ವಭೌಮರವರು ಮದದ್ರವ್ಯ ಸೇವನೆಯನ್ನು ತಮ್ಮ ಪ್ರಜೆಗಳಿಗೆ ತಪ್ಪಿಸಿಬಿಡಬೇಕೆಂಬ ದೀರ್ಘಾಲೋಚನೆಯಿಂದ ಸ್ವತಃ ಅದರ ಪರಿತ್ಯಾಗವನ್ನು ಮಾಡಿ ಮೇಲ್ಪಂಕ್ತಿಯನ್ನು ಹಾಕಲಿಲ್ಲವೆ ? ಈ ಶಾಖೆಯ ವರಮಾನರೂಪವಾದ || ಕೋಟಿ ರೂ.ಗಳನ್ನು ಬಿಟ್ಟುಬಿಡುವುದುಹೇಗೆಂದು ನಮ್ಮ ಪ್ರಭುತ್ವದವರು ಪರ್ಯಾಲೋಚಿಸಿಕೊಂಡು, ವರ್ಷವರ್ಷಕ್ಕೂ ಪ್ರಜೆಗಳ ಆರ್ಜನೆಯಲ್ಲಿ ಕೋಟ್ಯಾಂತರ ರೂ.ಗಳನ್ನು ಸ್ವದೇಶಮದ್ಯಗಳ ಮೂಲಕ ತಾವೂ, ವಿದೇಶಮದ್ಯಗಳ ಮಾರಾಟದಮೂಲಕ ಪರರೂ ಕಸಿದುಕೊಳ್ಳುವಂತೆ ಮಾರ್ಗ ಮಾಡಿಟ್ಟಿರುವಾಗ, ಮುಖ್ಯವಾದ ಈ ದೋಷವನ್ನು ಪರಿಹರಿಸದೆ, ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬೇಕೆಂದು ಪ್ರಯತ್ನಿಸುವುದು, ಬುಡಮಟ್ಟಕ್ಕೂ ಕೆರೆಗೆ ಕೋಡಿಯನ್ನಿಟ್ಟು ಕೆರೆಯಲ್ಲಿ ನೀರೇತಕ್ಕೆ ನಿಲ್ಲುವುದಿಲ್ಲವೆಂದು ಚರ್ಚೆಮಾಡುವುದಕ್ಕೆ ಸಮನಾಗುವುದು.

ಒಳದೇಶ ವೃತ್ತಾಂತಗಳು.

ಬದೋಡಾಸಂಸ್ಥಾನದ ದಿವಾನರಾದ ಮ|| ವಿ. ಪಿ. ಮಾಧವರಾಯರು ಉದಕಮಂಡಲಕ್ಕೆ ಹೋಗುವುದಕ್ಕಾಗಿ ಈದಿವಸ ಬೆಂಗಳೂರಿಗೆ ಬರುವವರಾಗಿರುವರು.

ಬೆಂಗಳೂರು ಮ್ಯುನಿಸಿಪಾಲಿಟಿಯಿಂದ ಈಸಲದ ಪ್ರಜಾಪ್ರತಿನಿಧಿ ಸಭೆಗೆ ಮ|| ಗಳಾದ ಡಿ. ವೆಂಕಟರಾಮಯ್ಯನವರು, ಸಿ. ವಿ. ನರಸಿಂಹಯ್ಯಂಗಾರರು ಮಿ|| ಅಬ್ದುಲ್‌ರಹಿಮಾನ್‌ರವರು ಮತ್ತೂ ಮಿ|| ಉಸ್ಮಾನ್ ಖಾನ್‌ರವರು ಪ್ರತಿನಿಧಿಗಳಾಗಿ ಹೋಗಲು ಆರಿಸಲ್ಪಟ್ಟಿರುವರು.

ಭೂಮಿಯನ್ನುಳುವುದರ ಮತ್ತೂ ನೇಗಿಲುಗಳ ಸಂಬಂಧವಾಗಿ ಹೆಬ್ಬಾಳಿನಲ್ಲಿರುವ ಸರ್ಕಾರಿಯ ವ್ಯವಸಾಯ ಪರೀಕ್ಷಾಲಯದಲ್ಲಿ ಬೋಧನವು ಈ ತಾ|| ೨೫ ರಿಂದಲೂ ನಡೆಯಲೇರ್ಪಾಡಾಗಿರುವುದರಿಂದ ಕಲಿಯಲಿಷ್ಟವುಳ್ಳವರು ಆಲಯದ ಅಧಿಕಾರಿಗಳಿಗೆ ೧ ವಾರಕ್ಕೆ ಮುಂದಾಗಿ ಬರೆದುಕೊಳ್ಳತಕ್ಕದಾಗಿದೆ.

ದಿವಾನರಾದ ಮ|| ಎಂ. ವಿಶ್ವೇಶ್ವರಯ್ಯನವರು ೧೮ ದಿನಗಳ ಪ್ರಿವಿಲೆಜ್ ರಜವನ್ನು ಪಡೆದುಕೊಂಡು ಕಳೆದ ಮಂಗಳವಾರ ಮದ್ರಾಸಿನ ಮಾರ್ಗವಾಗಿ ಕೊಲಂಬೋವಿಗೆ ಪ್ರಯಾಣಮಾಡಿದರು. ಇವರು ಬರುವವರೆಗೆ ೧ ನೆಯ ಕೌನ್ಸಿಲರಾದ ಮ|| ಎಚ್. ವಿ. ನಂಜುಂಡಯ್ಯನವರು ಆಕ್ಟಿಂಗ್ ದಿವಾನರಾಗಿರುವರು.

ಪ್ರಜಾಪ್ರತಿನಿಧಿ ಸಭೆಯಿಂದ ನಿಯಮನಿರ್ಮಾಣ ಸಭೆಗೂ ಸಂಪದಭ್ಯುದಯ ಸಮಾಜಕ್ಕೂ ಮೆಂಬರುಗಳಾಗಿ ಆರಿಸಲ್ಪಟ್ಟಿರುವವರ ಕಾಲಾವಧಿಯು ಪೂರೈಸುವುದರಿಂದ ಬರುವ ಪ್ರಜಾಪ್ರತಿನಿಧಿ ಸಭೆಯಲ್ಲಿ ಮೇಲೆ ಕಂಡ ಎರಡು ಸಭೆಗಳಿಗೂ ಹೊಸದಾಗಿ ಮೆಂಬರುಗಳಾರಿಸಲ್ಪಡುವುದರಿಂದ ಅನೇಕರು ಸ್ಪರ್ಧಿಸತಕ್ಕವರಾಗಿರುವರೆಂದು ಕೇಳುತ್ತೇವೆ.

ಈ ಜೂನ್ ತಿಂಗಳಲ್ಲಿ ಶ್ರೀಮನ್ ಮಹಾರಾಜರವರ ವರ್ಧಂತ್ಯುತ್ಸವ ಸಮಯದಲ್ಲಿ ಮೈಸೂರುಸೀಮೆಯ ಮ್ಯುನಿಸಿಪಲ್ ಮಹಾಸಭೆಯು ನಡೆಯುವುದು ಸರಿಯಷ್ಟೆ. ಈ ಸಭೆಯ ಆರಂಭೋತ್ಸವವು ಶ್ರೀಮದ್ಯುವರಾಜರವರಿಂದ ನಡೆಸಲ್ಪಡುವುದಾಗಿಯೂ, ಅಧ್ಯಕ್ಷಸ್ಥಾನವನ್ನು ದಿ|| ಬ|| ಕೆ. ಪಿ. ಪುಟ್ಟಣ್ಣಸೆಟ್ಟರು ವಹಿಸುವುದಾಗಿಯೂ ತಿಳಿಯುತ್ತೇವೆ.

ಸರದಾರ್ ಗೋಪಾಲಕೃಷ್ಣಅರಸಿನವರ ಕುಮಾರಿಯನ್ನು ಅರಮನೆ ಮಿಲ್ಟರಿ ಭಕ್ಷಿಯರಾಗಿದ್ದ ಕೈ|| ವೀರಪ್ಪಾಜಿಅರಸಿನವರ ಮೊಮ್ಮಕ್ಕಳಿಗೆ ಕೊಟ್ಟು ಈ ವೈಶಾಖ ಶುದ್ಧದಲ್ಲಿ ಅರಮನೆಯಲ್ಲಿ ವಿವಾಹಮಹೋತ್ಸವವು ನಡೆಯುವುದಾಗಿ ಗೊತ್ತಾಗಿರುವುದರಿಂದ ಶ್ರೀಮನ್ ಮಹಾರಾಜರವರು ರಾಣಿವಾಸದವರೊಡನೆ ಇಷ್ಟರಲ್ಲೇ ರಾಜಧಾನಿಗೆ ಚಿತ್ತೈಸುವುದಾಗಿ ತಿಳಿಯುತ್ತೇವೆ.

ಜ|| ಮತ್ತೂ ರೆ|| ಸೆಕ್ರೆಟರಿ ಮ|| ಡಿ. ಎಂ. ನರಸಿಂಗರಾಯರು ೧೫ ದಿನಗಳ ಪ್ರಿವಿಲೆಜ್ ರಜವನ್ನು ಪಡೆದುಕೊಂಡು ಎಳಂದೂರಿನಲ್ಲಿ ಈ ದಿವಸ ನಡೆಯುವ ಜಹಗೀರ್ದಾರ್ ಮ|| ಪೂರ್ಣನರಸಿಂಗರಾಯರ ಕುಮಾರನ ಚೌಲಕರ್ಮಕ್ಕಾಗಿ ಹೋಗಿರುವುದರಿಂದ ಅವರ ಬದಲು ಡೆಪ್ಯುಟಿ ಸೆಕ್ರೆಟರಿ ಮಿ|| ಡಿಸೌಜಾಯವರು ಜ|| ಮತ್ತೂ ರೆ|| ಸೆಕ್ರೆಟರಿಯಾಗಿ ಆಕ್ಟ್‌ಮಾಡುವರು.

ಮೈಸೂರ ಡಿ|| ಕ|| ಮ|| ಎ. ಸುಬ್ರಹ್ಮಣ್ಯಯ್ಯರ್‌ರವರ ಕುಮಾರನಿಗೆ ಚಿತ್ರಕಲ್‌ದುರ್ಗದ ಡಿ|| ಕ|| ಮ|| ಕೆ. ಎಸ್. ಕೃಷ್ಣಯ್ಯರ್‌ರವರ ಪುತ್ರಿಯನ್ನು ಕೊಟ್ಟು ವಿವಾಹವು ನಡೆಯುವುದರಿಂದ ಸುಬ್ರಹ್ಮಣ್ಯಯರು ತಾ|| ೧೪ ರಿಂದ ೧೦ ದಿನಗಳ ಪ್ರಿವಿಲೆಜ್ ರಜವನ್ನು ತೆಗೆದುಕೊಂಡು ಸೀನಿಯರ್ ಅ|| ಕಮಿಷನರ್ ಮ|| ಎಲ್. ಕೃಷ್ಣರಾಯರಿಗೆ ಡೆ|| ಕ|| ರ ಛಾರ್ಜನ್ನು ತಾ|| ೧೩ ರಲ್ಲಿ ವಹಿಸಿಕೊಟ್ಟು ಪ್ರಯಾಣಮಾಡಿದರು.

ಕ್ಲೋಸ್‌ಪೇಟೆ ಸಬ್ ತಾ|| ಶ್ರೀ ರೇವಣಾಸಿದ್ಧೇಶ್ವರ ಬೆಟ್ಟದಲ್ಲಿ ಇದೇ ನಿಜವೈಶಾಖ ಶು|| ೧೫ ರಲ್ಲಿ ರಥೋತ್ಸವವೂ ತದಂಗಭೂತವಾದ ನಾನಾ ಉತ್ಸವಗಳು ಶು|| ೯ರ ಆರಭ್ಯ ಬ|| ೩ ರ ವರೆಗೆ ನಡೆಯುವುದಾಗಿಯೂ, ಆ ಪ್ರಾಂತ ರೋಗಾದಿಗಳ ಬಾಧೆಯೇನೂ ಇಲ್ಲದೆ ಕುಡಿಯುವ ನೀರು ಮೊದಲಾದುದಕ್ಕೆ ಕೊರತೆಯಿಲ್ಲದಿರುವುದರಿಂದಲೂ ಯಾತ್ರಾರ್ಥಿಗಳು ವಿಶೇಷವಾಗಿ ಸೇರಿ ಉತ್ಸವವು ವಿಜೃಂಭಣೆಯಿಂದ ನಡೆಯುವುದಾಗಿಯೂ ದೇವಸ್ಥಾನದ ಪಾರುಪತ್ತೆಗಾರರು ತಿಳಿಸುತ್ತಾರೆ.

ಈ ಮೇ ತಾ|| ೫ರ ಒಕ್ಕಲಿಗರ ಪತ್ರಿಕೆಯಲ್ಲಿ "ಮ|| ಗಳಾದ ಕರ್ಣಿಕ ಕೃಷ್ಣಮೂರ್ತಿರಾಯರು, ಹುಚ್ಚೀರೇಗೌಡರು ಮತ್ತು ಗಿರ್ಮಾಜಿರಾಯರು ಲೋಕಲ್‌ಬೋರ್ಡು, ಡಿಸ್ಟ್ರಿಕ್ಟ್‌ಬೋರ್ಡು ಮತ್ತೂ ಮ್ಯುನಸಿಪಾಲಿಟಿ ಇವುಗಳಿಗೆ ಮೆಂಬರುಗಳಾಗಾರಿಸಲ್ಪಡಲರ್ಹರಲ್ಲವೆಂದೂ, ಸರ್ಕಾರಿಯುದ್ಯೋಗದಿಂದ ನಿವೃತ್ತರಾದ ಅಧಿಕಾರಿಗಳು ಆರಿಸಲ್ಪಡತಕ್ಕದಲ್ಲವೆಂದು ಸರ್ಕಾರದವರು ನಿರ್ಧರಿಸಿರುತ್ತಾರೆ." ಎಂಬ ಸುಳ್ಳು ವರ್ತಮಾನವು ಪ್ರಕಟಿತವಾಗಿರುವುದರಿಂದ ತಮ್ಮ ಗೌರವಕ್ಕೂ ಮುಂದೆ ಮೆಂಬರಾಗಾರಿಸಲ್ಪಡಲೂ ಬಹಳ ಕುಂದಕವಾಗಿರುತ್ತದೆಂದು ಲೆಜಿಸ್ಲೆಟಿವ್ ಕೌನ್ಸಿಲ್ ಮೆಂಬರಾದ ಮ|| ಕರ್ಣಿಕ ಕೃಷ್ಣಮೂರ್ತಿರಾಯರು ಒಕ್ಕಲಿಗರ ಪತ್ರಿಕೆಯ ಸಂಪಾದಕರು, ಡೈರೆಕ್ಟರು, ಮ್ಯಾನೇಜರು ಮತ್ತೂ ಸೆಕ್ರೆಟರಿಗಳು ಇವರುಗಳ ಮೇಲೆ ಇಂಡಿಯನ್ ಪಿನಲ್‌ಕೋಡ್ ೫೦೦ನೆಯ ಸೆಕ್ಷನ್ ಪ್ರಕಾರಮಾನನಷ್ಟಕ್ಕೆ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ವಿವಾದವನ್ನು ಹೂಡಿರುತ್ತಾರೆ. ಅಲ್ಲದೆ ಇದರಂತೆಯೇ ಪ್ರಕಟಿಸಿದ್ದ ಮೈಸೂರು ಸಂಪದಭ್ಯುದಯ ಪತ್ರಿಕೆಯ ಸಂಪಾದಕರಮೇಲೂ ಇಲ್ಲಿಯ ಸಿಟಿಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿವಾದವನ್ನು ನಡೆಸಿರುತ್ತಾರೆ.

ಪತ್ರವ್ಯವಹಾರ.

ದಾವಣಗೆರೆ.

ಮೇ ತಾ|| ೯ ನೆ ದಿವಸ ಪ್ರಾತಃಕಾಲದ ವೇಳಿನಲ್ಲಿ ಶ್ರೀಯುತ ಗಾಂಧಿಯವರು ಪತ್ನೀಸಹಿತ ಬೊಂಬಾಯಿಗೆ ದಯಮಾಡಿಸುತ್ತಾರೆಂದು ಪ್ರೈಸಾಫಂಡ್ ಕಮಿಟಿಯ ಜನರಲ್ ಸೆಕ್ರಟರಿಯವರಾದ ದತ್ತಾತ್ರೆಯಜಾಧವ ಇವರು ಬೆಂಗಳೂರಿನಿಂದ ಕಮಿಟಿ ಅಧ್ಯಕ್ಷರಿಗೆ ಟೆಲಿಗ್ರಾಮ ಮಾಡಿದ್ದರಿಂದ ಪ್ಲಾಟ್‌ಫಾರಮಿನಮೇಲೆ ಕಮಿಟಿಯ ವೈಸ್‌ಪ್ರಸಿಡೆಂಟರಾದ ಎಂ.ಆರ್. ರಾಘವೇಂದ್ರರಾವ ಇವರೂ, ಜಾಯಿಂಟ್ ಸೆಕ್ರಟರಿಗಳಾದ ನಾರಾಯಣಶರ್ಮರೇ ಮೊದಲಾದ ಸದ್ಗೃಹಸ್ಥರೂ ಕಾದಿದ್ದರು. ಅದರಂತೆ ಶ್ರೀಯುತ ಗಾಂಧಿಯವರು ಟ್ರೇನಿನಲ್ಲಿ ಬಂದು, ಸತ್ಕಾರಗಳನ್ನು ಪ್ರೈಸಾಫಂಡ್ ಕಮಿಟಿಯವರಿಂದ ತೆಗೆದುಕೊಂಡು ಸಂತೋಷಪಟ್ಟರು. ಮತ್ತೂ ದೇಶಹಿತಕ್ಕೆ ಬೇಕಾದ ಉತ್ತಮ ಸಲಹೆಗಳನ್ನು ಹೇಳಿ ಕಮಿಟಿಯ ಅಧ್ಯಕ್ಷರಾದ ಜಯರಾಮಾಚಾರ್ಯರು ಕಾರಣಾಂತರದಿಂದ ಇಲ್ಲದಿದ್ದುದಕ್ಕೆ ಖೇದವನ್ನು ಪ್ರದರ್ಶಿಸಿ ಮುಂದಕ್ಕೆ ಬೊಂಬಾಯಿಗೆ ತೆರಳಿದರು. ಪ್ರೇಕ್ಷಕ.

ಗದಗ ತಾಲ್ಲೂಕ ಹಳ್ಳೀಕೇರಿ.

ಇಲ್ಲಿ ಪರಸ್ಪರ ಸಹಕಾರೀ ಸಂಘವು ಸ್ಥಾಪಿಸಲ್ಪಟ್ಟಿರುತ್ತದಷ್ಟೆ ಈ ಸಂಘದ ವಾರ್ಷಿಕ ಜನರಲ್ ಕಮಿಟಿಯು ತಾ|| ೨೮-೪-೧೯೧೫ ನೇ ದಿವಸ ಸೊಸೈಟಿ ಆಫೀಸಿನಲ್ಲಿ ಮೆಹರ್ಬಾನ ಬಿ. ಎನ್ ಕಾನಡೆ ಮಹಾಲಕರಿ ಸಾಹೇಬ ಮೇಠಾ ಮುಂಡರಗಿ ಇವರ ಅಧ್ಯಕ್ಷತೆಯ ಕೆಳಗೆ ಒಳ್ಳೇ ವಿಜೃಂಭಣೆಯಿಂದ ನೆರೆದಿತು. ಈ ಸಭೆಗೆ ಊರೊಳಗಿನ ಎಲ್ಲ ಪ್ರಮುಖ ಸದ್ಗೃಹಸ್ಥರು ಬಂದಿದ್ದರಲ್ಲದೆ ಹಳ್ಳೀಗುಡಿ ಮೊದಲಾದ ಸಮೀಪದ ಹಳ್ಳಿಗಳ ಕೆಲ ಪ್ರಮುಖ ಗೃಹಸ್ಥರೂ ಆಗಮಿಸಿದ್ದರು. ಸಭಾಗೃಹದ ಸೊಬಗಿನಿಂದಲೂ, ವಿಶೇಷ ಜನಸಮುದಾಯದಿಂದಲೂ ಈ ಸಭೆಗೆ ಅಪ್ರತಿಮವಾದ ಸೌಂದರ್ಯವು ಪ್ರಾಪ್ತವಾಗಿತ್ತು. ಪ್ರಥಮದಲ್ಲಿ ದೇವತಾಸ್ತುತಿಯೂ ಅಧ್ಯಕ್ಷರ ಸ್ವಾಗತ ಪರಭಾಷಣವೂ ಆದನಂತರ ಸಂಘದ ಸೆಕ್ರೆಟರಿಯವರು ವಾರ್ಷಿಕ ರಿಪೋರ್ಟನ್ನು ಓದಿ ಹೇಳಿದರು. ಬಳಿಕ ಸಂಘವು ಸ್ಥಾಪಿಸಲ್ಪಟ್ಟ ನಾಲ್ಕು ವರ್ಷಗಳೊಳಗೆ ೪೦,೦೦೦ ರೂಪಾಯಿಗಳ ವರೆಗೆ ಬಂಡವಾಲ ಬೆಳಸಿ ಉತ್ತಮವಾದ ವ್ಯವಸ್ಥೆಯಿಂದ ಅಭಿವೃದ್ಧಿಯನ್ನು ಹೊಂದಿಸಿದ್ದಕ್ಕೆ ವಿಶೇಷವಾಗಿ ನಾಲ್ಕು ವರ್ಷ ಸತತ ಕೆಲಸಮಾಡಿದ ವ್ಯವಸ್ಥಾಪಕರನ್ನು ಸಂಘದಪತಿಯಿಂದ ಸತ್ಕರಿಸಿದರು. ಇಷ್ಟಾದ ಮೇಲೆ ಸಂಘದ ಉಪಯುಕ್ತ ಕಾಯದೆಗಳ ಚರ್ಚೆಯು ನಡೆದು ಕೆಲವು ಸರ್ವಾನುಮತದಿಂದ ಪಾಸಾದವು. ಇಷ್ಟೇ ಅಲ್ಲ; ಸಂಘದಿಂದ ಪ್ರತಿವರ್ಷ ೧೦ ರೂ. ರಕಮ್ಮನ್ನು ವಿದ್ಯಾಭಿವೃದ್ಧಿಗೆ ವೆಚ್ಚಮಾಡತಕ್ಕದ್ದೆಂದೂ, ಅವಶ್ಯಕಂಡರೆ ಈ ಹಣವನ್ನು ಇನ್ನೂ ಹೆಚ್ಚಿಸಬಹುದೆಂದೂ ಸರ್ವಾನುಮತದಿಂದ ಠರಾವು ಪಾಸಮಾಡಿತು. ಇದಲ್ಲದೆ ಇಕ್ಕಟ್ಟಿನ ರಸ್ತೆಗಳನ್ನು ಸಾಧ್ಯವಿದ್ದಷ್ಟುಮಟ್ಟಿಗೆ ವಿಸ್ತಾರಮಾಡಿಸಿ ಸ್ವಚ್ಛ ಹವೆಯಾಡುವಂತೆಯೂ ಜನರಆರೋಗ್ಯವನ್ನು ಕಾಯುವಂತೆಯೂ ವ್ಯವಸ್ಥೆಯನ್ನಿಡುವ ಸ್ಯಾನಿಟರಿ ಕಮಿಟಿ ಸ್ಥಾಪನಮಾಡಲಿಕ್ಕೆ ಸಂಘದ ರಿಝರ್ವಫಂಡಿನಿಂದ ೧೦೦ ರೂಪಾಯಿ ಕೊಡತಕ್ಕದ್ದೆಂಬ ಠರಾವು ಬಹು ಮತದಿಂದ ಮಂಜೂರಾಯಿತು. ಸಹಕಾರೀ ಸಂಘಗಳಿರುವ ಎಲ್ಲ ಹಳ್ಳಿಯವರು ಇವರ ಅನುಕರಣಮಾಡಿದರೆ ವಿದ್ಯಾಖಾತೆಗೂ ಸ್ಯಾನಿಟರಿ ಖಾತೆಗೂ ಬಹಳ ಸಹಾಯವಾಗಬಹುದು. ಬಳಿಕ ಅಧ್ಯಕ್ಷಸಾಹೇಬರು “ಈ ಊರಲ್ಲಿ ಸಹಕಾರೀಸಂಘ ಸ್ಥಾಪನವಾದಂದಿನಿಂದ ಬಣಗಳು ಮುರಿಯಲ್ಪಟ್ಟು ಮ್ಯಾನೇಜಿಂಗ ಕಮಿಟಿಯವರ ಪ್ರೋತ್ಸಾಹದಿಂದ ಸಾರ್ವಜನಿಕ ಕೆಲಸಗಳು ನಡೆಯುತ್ತಿರುವುದನ್ನು ನೋಡಿ ನಮಗೆ ಪರಮಾನಂದವಾಗುತ್ತದೆ” ಎಂಬದಾಗಿ ಉದ್ಗಾರಮಾಡಿದರು. ನಂತರ ಹಾರಾ ತುರಾಯಿ, ಅತ್ತರ, ಗುಲಾಬ, ತಾಂಬೂಲ ಮೊದಲಾದುವುಗಳ ವಿನಿಯೋಗ ಕಾರ್ಯವಾಗಲು, ಶ್ರೀಯುತ ಪಂಚಮ ಜಾರ್ಜ ಬಾದಶಹರವರ ಜಯಜಯಘೋಷದೊಡನೆ ಸಭಾ ವಿಸರ್ಜನೆಯಾಯಿತು. ಓರ್ವ ಪ್ರತ್ಯಕ್ಷದರ್ಶಿ.

ಬೆಳಗಾವ ಶಹಾಪುರ ವೀರಶೈವ ಬೋರ್ಡಿಂಗ್ ವಿದ್ಯಾರ್ಥಿಗಳ ಸಮ್ಮೇಲನವು.

ಈ ಬೋರ್ಡಿಂಗದ ವಿದ್ಯಾರ್ಥಿಗಳು ಸಮ್ಮೇಲನದ ವಾರ್ಷಿಕ ಪದ್ಧತಿಗನುಸಾರವಾಗಿ ಇದೇ ತಿಂಗಳು ೨ ನೆ ತಾ|| ದಿವಸ ಬೆಳಗಾವ ಶಿವಾನಂದ ಥಿಯೇಟರದಲ್ಲಿ ಮಿ|| ಬಿ. ಸಿ. ಹಿರೇಮಠ ಇವರಿಂದ ರಚಿಸಲ್ಪಟ್ಟ “ನೀತಿವಿಜಯ” ವೆಂಬ ಹೊಸ ಸಂಗೀತ ನಾಟಕವನ್ನು ಪ್ರಯೋಗಮಾಡಿ ತೋರಿಸಿದರು. ಕಾವ್ಯವು ಸರಸವಾಗಿದ್ದುದರಿಂದಲೋ ಹುಡುಗರ ಜ್ಞಾನಶಕ್ತಿಯಿಂದಲೋ ಅಥವಾ ನಮ್ಮ ವೀರಶೈವ ಬಾಂಧವರ ಸುದೈವದಿಂದಲೋ ನೋಡಲಿಕ್ಕೆ ಬಂದಿದ್ದ ಪ್ರೇಕ್ಷಕರು ಇದೊಂದು ಕರ್ನಾಟಕ ಕಂಪನಿಗಳಲ್ಲಿ ಮುಖ್ಯವಾದ ಕೊಣ್ಣೂರಕರ ಮತ್ತೂ ಶಿರಹಟ್ಟಿಕರರಿಗೆ ಸಮಾನವಾದ ಹೊಸಕಂಪನಿಯೆಂದು ತರ್ಕಮಾಡಹತ್ತಿದರು. ಹೈಸ್ಕೂಲದ “ನಳದಮಯಂತಿ” ನಾಟಕಕ್ಕಿಂತಲೂ ಬಹು ಮೇಲ್ತರದ್ದೆಂದು ಮಾತಾಡತೊಡಗಿದರು. ಇವರಿಗೆ ಸಹಾಯಮಾಡಿದ ಮ|| ರಾ|| ಕೇಶವರಾವ ಭೋಸಲೆ ಲಲಿತಕಲಾದರ್ಶ ನಾಟಕಮಂಡಳಿಯ ಮಾಲಕರು ಅತ್ಯುತ್ತಮ ನಾಟಕವೆಂದು ಅಭಿಪ್ರಾಯವನ್ನಿತ್ತರು. ಈ ನಾಟಕವನ್ನು ನಾಲ್ಕಾರು ದೊಡ್ಡ ಊರುಗಳಿಗೆ ಒಯ್ದು ಬಂದ ಹಣದಿಂದ ಬೆಳಗಾವಿಯಲ್ಲಿ ಒಂದುಇಮಾರತನ್ನು ಬೋರ್ಡಿಂಗದ ವಿದ್ಯಾರ್ಥಿಗಳಿಗಾಗಿ ಕಟ್ಟಿಸಬೇಕೆಂಬ ಆಲೋಚನೆಯಿಂದ ನಾಟಕಕರ್ತರು ಬೋರ್ಡಿಂಗದ ಸೆಕ್ರೆಟರಿಯವರ ಅನುಮೋದನದಿಂದ ಮೆಸರ್ಸ್ ಮೂಗಿ ಮತ್ತೂ ನಿರಡಿ ಇವರ ಸಹಾಯದಿಂದ ತಯಾರ ಮಾಡಿದ್ದರು. ಆದರೆ ರಂಗಭೂಮಿಗೆ ಬಂದಮೇಲೆ ಹುಡುಗರ ಕೆಲಸವನ್ನು ನೋಡಿ ಬೆಂಡಿಗೇರಿ, ನೀಲಸೆಟ್ಟಿ, ಗುತ್ತಿಗೊಳಿತಬಾಡೆ, ಈ ನಾಲ್ವರು ಹುಡುಗರನ್ನು ಇವರ ನಾಟಕಗಳ ಮಾಲಕರು ತಮ್ಮ ಮಂಡಳಿಯಲ್ಲಿ ಸೇರಿಸಿಕೊಳ್ಳಲು ಬೇಡಹತ್ತಿದ್ದರಿಂದ ಹುಡುಗರಿಗೆ ನಾಟಕದ ವ್ಯಸನವು ಹತ್ತಬಾರದೆಂದು ಮೇಲ್ಬಾಣಿಸಿದ ವ್ಯವಸ್ಥಾಪಕರು ನಾಟಕವನ್ನು ಬಂದು ಮಾಡಿ, ಹುಡುಗರನ್ನು ಬೇಸಗೆಯ ಸೂಟಿಯ ನಿಮಿತ್ತ ಊರುಗಳಿಗೆ ಕಳಿಸಿಕೊಟ್ಟರು. ಈ ನಾಟಕವನ್ನು ಎಷ್ಟುಸಾರೆ ನೋಡಿದರೂ ಮನದಣಿಯುವಂತೆ ಇಲ್ಲ ಆದ್ದರಿಂದ ನಮ್ಮ ಕನ್ನಡ ನಾಟಕ ಕಂಪನಿಗಳು ಈ ನಾಟಕವನ್ನು ಅವಶ್ಯವಾಗಿ ಸಂಗ್ರಹಿಸಿ ಇಡುವುದು ಯೋಗ್ಯವಾಗಿರುತ್ತದೆ. ಯಾವುದಾದರು ಕಂಪನಿಯವರು “ಇದರ ಹಕ್ಕನ್ನು ತಮ್ಮ ಕಡೆಗೆ ತೆಗೆದುಕೊಂಡರೆ ಕಿರ್ಲೋಸ್ಕರ ಕಂಪನಿಯವರ “ಮಾನಾಪಮಾನವು” ಇದನ್ನು ತೆಗೆದುಕೊಂಡ ಕಂಪನಿಯ “ನೀತಿವಿಜಯವೂ” ಸರಿಯಾಗಬಹುದು. ಈ ನಾಟಕವು ಇನ್ನೂ ಮುದ್ರಿತವಾದಂತೆ ತೋರುವುದಿಲ್ಲ ಬೇಗನೆ ಮುದ್ರಿಸಿದರೆ ನಾಟಕಮಂಡಳಿಗಳಿಗೆ ಬಹಳ ಉಪಯೋಗವಾಗುವುದು. ಈ ನಾಟಕದಿಂದ ಬಂದ ಉತ್ಪನ್ನವನ್ನಿಳಿದು ಮ|| ರಾ|| ಬೋಳಮಲ್ಲ ಇವರು ಕೊಡಲೊಪ್ಪಿದ ೫೦೦ ರೂಪಾಯಿಗಳಲ್ಲಿ ಇದೇ ಬೋರ್ಡಿಂಗದಲ್ಲಿ ಒಂದು ಲಾಯಬ್ರರಿಯನ್ನು ಸ್ಥಾಪಿಸುವ ಏರ್ಪಾಡು ಮಾಡಲ್ಪಟ್ಟಿದೆ. ನಾಟಕಾಭಿಮಾನಿ.

ದಕ್ಷಿಣಮಹಾರಾಷ್ಟ್ರ ವೀರಶೈವಸಮಾಜ.

ಪೂರ್ವದಲ್ಲಿ ವಿಧಿಸಿದ ಪ್ರಕಾರ ಈ ಸಮಾಜದ ಜನರಲ್ ಸಭೆಯು ಮೇ ೨ ತಾ|| ೫ ಗಂಟೆಯ ಸಮಯಕ್ಕೆ ರಾ|| ರಾ|| ಅಪ್ಪಯ್ಯ ಬುವಾಗವಾಯಿ ಕಾಮಗಾರ ಇವರ ಅಧ್ಯಕ್ಷತೆಯ ಕೆಳಗೆ ಶ್ರೀ ಚಿತ್ರದುರ್ಗ ಮಹಾಸ್ವಾಮಿಯವರ ನವೀನ ಸ್ಥಾಪಿತವಾದ ಮಠದಲ್ಲಿ ಕೂಡಿತ್ತು. ಈ ಸಭೆಗೆ ದಕ್ಷಿಣ ಮಹಾರಾಷ್ಟ್ರದ ಬೇರೆಬೇರೆ ಭಾಗಗಳಿಂದ ಸುಮಾರು ಎರಡುನೂರುಮಂದಿಗಿಂತ ಹೆಚ್ಚಾಗಿ ಸದ್ಗೃಹಸ್ಥರು ಕೂಡಿದ್ದರು. ಸಭೆಯಲ್ಲಿ ಕೆಳಗೆ ಬರೆದಂತೆ ನೇಮಗಳು ಪಾಸಾದವು

(೧) ಈಗ ನಡೆದಿರುವ ಯುದ್ಧದಲ್ಲಿ ಸಾರ್ವಭೌಮ ಬ್ರಿಟಿಷ್ ಸರಕಾರದವರಿಗೆ ಜಯವಾಗಲೆಂದು ಸರ್ವಶಕ್ತನಾದ ಪರಮೇಶ್ವರನನ್ನು ಕುರಿತು ಇವರು ಪ್ರಾರ್ಥಿಸಿರುತ್ತಾರೆ.

(೨) ಶ್ರೀಮನ್ಮಹಾರಾಜ ಶಾಹೂ ಛತ್ರಪತಿ ಅವರ ದ್ವಿಕುಮಾರರಿಗೆ ಈಶ್ವರನು ದೀರ್ಘಾಯುಷ್ಯವುಳ್ಳವರನ್ನಾಗಿ ಮಾಡಲೆಂಬುದು ಈ ಸಭಿಕರ ಪ್ರಾರ್ಥನೆಯಾಗಿರುತ್ತದೆ.

(೩) ಈ ಸಮಾಜದ ಸನ್ ೧೯೧೩ ಮತ್ತೂ ೧೯೧೪ ನೆ ಇಸವಿಯ ಜಮಾಖರ್ಚಿನ ಲೆಕ್ಕವನ್ನು ನೋಡಿ ಮಂಜೂರಮಾಡುವುದರಲ್ಲಿ ಬಂತು.

(೪) ಈ ಸಮಾಜದ ಕಾರ್ಯಮಾಡುವ ಜನರ ನೇಮಣೂಕ ಮಾಡುವುದರಲ್ಲಿ ಬಂತು.

(೫) ಈ ಸಮಾಜಫಂಡಿಗೆ ವರ್ಗಣಿ ಕೊಡಲೊಪ್ಪಿದ ಜನರ ಪೈಕಿ ಎಷ್ಟೋ ಜನರ ಕಡೆಯಿಂದ ವಸೂಲಆಗತಕ್ಕ ರಕಮು ಇನ್ನೂ ಉಳಿದಿರುತ್ತದೆ. ಇದನ್ನು ವಸೂಲಮಾಡುವುದರ ದೆಸೆಯಿಂದ ವ್ಯವಸ್ಥಾಪಕ ಕಮಿಟಿಯವರು ಯೋಗ್ಯಉಪಾಯ ನೋಡಿ ಫಂಡು ವಸೂಲಮಾಡತಕ್ಕದ್ದು.

(೬) ಇಲ್ಲಿ ಶಾಹೂಪುರಿಯಲ್ಲಿಯ ವೀರಶೈವ ವ್ಯಾಪಾರಿಮಂಡಲಿಯವರು ನಡೆಯಿಸಿರುವ ಧರ್ಮಾದಾಯದ ರಕಮನ್ನು ಸಮಾಜಫಂಡಿಗೆ ಕೊಡುವ ಇಚ್ಛೆಯನ್ನು ತೋರಿಸಿದ ಮೂಲಕ ಈ ರಕಮನ್ನು ವಸೂಲಮಾಡುವದರ ದೆಸೆಯಿಂದ ೧೧ಜನ ಗೃಹಸ್ಥರ ಸ್ಪೆಶಲ್ ಕಮಿಟಿ ನೇಮಿಸುವುದರಲ್ಲಿ ಬಂತು.

(೭) ಶ್ರೀ ಮಹಾಸ್ವಾಮಿ ಚಿತ್ರದುರ್ಗ ಇವರು ಪಾಗಾ ಹತ್ತರ ಇರುವ ತಮ್ಮ ಮಠದಲ್ಲಿ ಸಮಾಜದ ಬೋರ್ಡಿಂಗಿಗೆ ಸ್ಥಳವನ್ನು ಕೊಡುವ ಆಶೀರ್ವಾದಯುಕ್ತ ಅಭಿವಚನವನ್ನು ಕೊಟ್ಟಿರುತ್ತಾರೆ. ಮತ್ತೂ ಇದೇ ಪ್ರಕಾರ ಬೋರ್ಡಿಂಗ ಸೋಯಿ ಅನುಸರಿಸಿ ಕಟ್ಟುವಕೆಲಸವು ಆರಂಭವಾಗುತ್ತದೆ. ಬೋರ್ಡಿಂಗನ್ನು ಸದರಿ ಮಠಕ್ಕೆ ಸ್ಥಾನಾಂತರ ಮಾಡುವ ವೇಳೆಯಲ್ಲಿ ಶ್ರೀಗಳವರ ಅಭಿವಚನದಂತೆ ಲೇಖನಪುರವಾಗಿ ತೆಗೆದುಕೊಂಡು ಮ.ಠಕ್ಕೆ ಆರಂಭಿಸುವೆವು. ಮತ್ತೂ ರಂನಾಳಕೆರೆಯ ದಂಡೆಯಮೇಲೆ ಇರುವ ಕಟ್ಟಡವನ್ನು ವಿಕ್ರಯಮಾಡಿ ಬಂದ ರಕಮನ್ನು ಹುಜೂರ್ ಖಜಾನೆಯಲ್ಲಿ ಜಮಾಮಾಡುವುದರಲ್ಲಿ ಬರುವುದು.

(೮) ಸಮಾಜದ ಹನ್ನೆರಡನೆ ನೇಮದಲ್ಲಿ “ಜನರಲ್ ಸಭೆಯು ದರವರ್ಷ ನಿದಾನ ಒಂದುವೇಳೆಯಾದರೂ ಕೂಡಬೇಕು” ಹೀಗೆ ಇದ್ದುದರಬದಲು “ಪ್ರತಿ ಮೂರುವರ್ಷಕ್ಕೊಮ್ಮೆಯಾದರೂ ಕೂಡಬೇಕು” ಎಂಬ ಶಬ್ದಗಳನ್ನು ದುರಸ್ತುಮಾಡುವುದರಲ್ಲಿ ಬಂತು. ಮೇಲಿನ ಪ್ರಕಾರ ಠರಾವುಗಳು ಪಾಸಾದಮೇಲೆ ಪಾನಸುಪಾರಿ ಅತ್ತರ್ ಗುಲಾಬ ಈ ಮೊದಲಾದ ಮಾನೋಪಚಾರಗಳಾಗಿ ಶ್ರೀಮನ್ಮಹಾರಾಜ ಶಾಹೂ ಛತ್ರಪತಿ ಸರಕಾರ ಕರವೀರ ಇವರ ಜಯಘೋಷಣೆಯಾಗಿ ಸಭೆಯು ವಿಸರ್ಜಿತವಾಯಿತು.

ತಮ್ಮ ಪ್ರಿಯ, ಸಿದ್ಧರಾಮಯ್ಯ ಗದಿಗೆಯ್ಯ ಸ್ವಾಮಿ
ಹಿರೇಮಠ ಬಿ. ಎ. ಸೆಕ್ರೆಟರಿ, ದ. ಮ. ವೀ. ಸ.

ವೀರಶೈವ ಬೋರ್ಡಿಂಗ ಹೌಸ್ ಕೊಲ್ಲಾಪುರ.

ಈ ಹೌಸಿನಲ್ಲಿ ಸದ್ಯಕ್ಕೆ ಇರುವ ಮತ್ತೂ ಮುಂದೆ ಬರಲಿಚ್ಛಿಸುವ ಯಾವ ವಿದ್ಯಾರ್ಥಿಗೆ ಫ್ರೀ ಅಥವಾ ಆಫ್‌ಫ್ರೀಶಿಪ್ ದೊರಕಿಸುವ ಆಸೆ ಇರುವುದೋ ಅವನು ಯೋಗ್ಯ ದಾಖಲ ಸಹಿತ ಜೂನ ತಾ||೧೫ರೊಳಗಾಗಿ ಸೆಕ್ರೆಟರಿ ಯವರ ಹೆಸರಿಗೆ ಅರ್ಜಿಮಾಡತಕ್ಕದ್ದು. ೧೬ ವರ್ಷದ ಒಳಗಿರುವ ವಿದ್ಯಾರ್ಥಿಯಾದ ಅರ್ಜಿದಾರರ ಇವರ ಪಾಲಕರ ಸಹಿ ಅವಶ್ಯವಾಗಿರಬೇಕು. ನೇಮಿಸಿದ ವೇಳೆಯನ್ನು ಮೀರಿಬಂದ ಅರ್ಜಿಯ ವಿಚಾರವು ಆಗಲಿಕ್ಕಿಲ್ಲ ತಿಳಿಯತಕ್ಕದ್ದು.

ಎಸ್. ಜಿ. ಸ್ವಾಮಿ ಹಿರೇಮಠ ಬಿ ಎ. ಸೆಕ್ರೆಟರಿ.

ಶ್ರೀಮದ್ರಂಭಾಪುರೀ ವೀರಸಿಂಹಾಸನದ ಸಮಸ್ತಬಿರುದಾನ್ವಿತ ಶ್ರೀಮಜಗದ್ಗುರು ಪಂಚಾಕ್ಷರೀರಾಜದೇಶಿಕೇಂದ್ರ ಮಹಾಸ್ವಾಮಿಗಳವರ ಸನ್ನಿಧಾನದಿಂದ ಶಿವಾಯಿಬಾಬು ನಂಬರು ೩೩.

ಶಕ ೧೮೩೭ ನೆಯ ರಾಕ್ಷಸಸಂ|| ರದ ಚೈತ್ರ ಬಹುಳ ೮ ಮಿತಿಯಲ್ಲು ಮೈಸೂರುಸೀಮೆಯ ಸಮಸ್ತತಾಲ್ಲೂಕುಗಳಲ್ಲಿ ರತಕ್ಕ ಪಟ್ಟ, ಚರಂತರು, ಮಠಸ್ತರು, ಪ್ಯಾಟಿಮನೆ ಸೆಟ್ಟಿ, ಯಜಮಾನರು, ಹರದೋಗ್ರಾಮಗಳ ಗೌಡರು, ಬುದ್ಧಿವಂತರು ಇನ್ನೂ ಮುಂತಾದ ವೀರಶೈವ ಭಕ್ತಮಾಹೇಶ್ವರರಿಗೆ ಬರೆಸಿದಾಶೀರ್ವಾದ:—ಈ ಮೊದಲು ತಾ|| ......ರಲ್ಲಿ ಸಾದರಾಗಿರುವ ಶಿವಾಯಿಬಾಯಿ ನಂಬರು......ನೆ ನಿರೂಪದ ಪ್ರಕಾರ ಬೆಂಗಳೂರಲ್ಲಿ ಸ್ಥಾಪಿತವಾಗಿರುವ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ತಮ್ಮತಮ್ಮ ಗೃಹಗಳಲ್ಲಿ ನಡೆಯುವ ಶುಭಶೋಭನಾದಿ ಕಾರ್ಯಗಳಲ್ಲಿ ಸ್ವಶಕ್ತ್ಯಾನುಸಾರ ದ್ರವ್ಯವನ್ನ ತೆಗಸಿ ಫಂಡ್ ಸೆಕ್ರಿಟರಿಗಳ ವಶಕ್ಕೆ ಕಳುಹಿಸುವಂತೆ ಸಾದರಾಗಿರುವ ನಿರೂಪದಪ್ರಕಾರ ಈಗಲೂ ಪ್ರತಿಗ್ರಾಮದಲ್ಲಿಯೂ ಲಗ್ನ ಮೊದಲಾದ ಕಾರ್ಯಗಳಲ್ಲಿ ಫಂಡಿಗೆ ದ್ರವ್ಯವನ್ನ ತೆಗೆದು ಮೇಲ್ಕಂಡ ಮೇರೆ ಖಂಡಿತವಾಗಿಯೂ ರವಾನಿಸುತ್ತಾ ಬರುವುದು. ಅಲ್ಲದೆ ಕೈ. ಯಜಮಾನ ವೀರಸಂಗಪ್ಪನವರ ಅಗ್ರತಾಂಬೂಲವನ್ನು ಮೇಲ್ಕಂಡ ಕಾರ್ಯಗಳಲ್ಲಿ ತೆಗೆದು ಅವರ ಸಂತತಿಯವರಾದ ವೈ. ವಿರೂಪಾಕ್ಷಯ್ಯನವರಲ್ಲಿಗೆ ರವಾನಿಸುತ್ತಾ ಬರುವದು. ಮೇಲ್ಕಂಡಮೇರೆ ನಡೆಯದೆ ತಪ್ಪಿದಲ್ಲಿ ಈ ವಿಚಾರದಲ್ಲಿ ತಾಲ್ಲೂಕು ಇಲಾಖಾದಾರರು ಕ್ರಮವರಿತು ರಿಕಾರ್ಡುಮಾಡಿ ರವಾನಿಸುತ್ತಾ ಬರುವುದರಲ್ಲಿ ಗಮನಕೊಡಲಾದೀತಾಗಿ ಬಾಹುಲ್ಯವಾಗಿ ಅಪ್ಪಣೆಕೊಡಿಸುವುದಾವುದಿದ್ದೀತು ? ಬತಾರೀಖು ೨ನೇ ಮಾಹೆ ಏಪ್ರೆಲ್ ಸನ್ ೧೯೧೫ನೇ ಇಸವಿ ಮೊಕ್ಕಾಂ ದರ್ಜಾಗ ಸಂಸ್ಥಾನ ಬಾಳೆಹೊನ್ನೂರು.

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ಕ್ಕೆ ೧-೦-೦; ಹಸಿಗಂಧ ತೋಲಾ ೧ಕ್ಕೆ ೧೨ ಆಣೆ ದಶಾಂಗಪೊಟ್ಣ ೧ಕ್ಕೆ ೪ ಆಣೆ ಧೂಪದಗಟ್ಟಿ ೧ಕ್ಕೆ ೨ ಆಣೆ ಬಾಲಗ್ರಹದೂಪರ್ಟಿ ೧ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್‌ಸನ್ಸ್ 2
ಸುಗಂಧಕಾರಿ, ಮೈಸೂರು

ನೋಟೀಸ್.

ರಾವ್‌ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಧರ್ಮ ಸತ್ರದಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನಕ್ಕೆ ಏರ್ಪಾಡಾಗಿದೆ. ವಿದ್ಯಾರ್ಥಿಗಳು ಮೈಸೂರ್ ದೇಶೀಯರಾಗಿಯೂ, ವೀರಶೈವರಾಗಿಯೂ, ಇಂಗ್ಲೀಷ್ ಲೋವರ್‌ಸೆಕಂಡರಿಗೆ ಕಡಿಮೆ ಯಿಲ್ಲದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿಯೂ ಇರಬೇಕು. ಮತ್ತು ಪ್ರೌಢವಿದ್ಯಾಭ್ಯಾಸ ಮಾಡಲು ಚೈತನ್ಯವಿಲ್ಲದವರಿಗೆ ಮಾತ್ರ ಅವಕಾಶ ದೊರಿಯುವುದು. ಚೈತನ್ಯವಿಲ್ಲವೆಂಬುದಕ್ಕೆ ಸ್ಥಳೀಯ ಪ್ರಮುಖರಿಂದ ಸರ್ಟಿಫಿಕೇಟ್ ತರಬೇಕಲ್ಲದೆ, ತಾವು ಹಿಂದೆ ಓದಿದ ಸ್ಕೂಲ್ ಯಾ ಕಾಲೇಜ್ ಮುಖ್ಯೋಪಾಧ್ಯಾಯರಿಂದಲೂ ಸಹ ತನ್ನ ಯೋಗ್ಯತಾವಿಚಾರವಾಗಿ ಸರ್ಟಿಫಿಕೇಟ್ ತರತಕ್ಕದ್ದು. ಗತವರ್ಷದಲ್ಲಿ ಸತ್ರದಲ್ಲಿದ್ದ ವಿದ್ಯಾರ್ಥಿಗಳ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರಿಗೆ ಮೊದಲು ಅವಕಾಶಕೊಟ್ಟು ನಂತರ ಇತರರಿಗೆ ಅವರ ಯೋಗ್ಯತಾ ಪ್ರಕಾರ ಸಾಧ್ಯವಾದಷ್ಟು ಕ್ಲುಪ್ತವಾಗಿ ಸ್ಥಳದೊರಿಯುತ್ತೆ. ಇಚ್ಛೆಯುಳ್ಳವರು ಈ ಕೆಳನ್ನ ವಿಳಾಸಕ್ಕೆ ೧೯೧೫ನೇ ಮೇ ತಿಂಗಳ ಅಖೈರ್‌ಒಳಗಾಗಿ ಅಪ್ಲಿಕೇಷನ್ ಹಾಕತಕ್ಕದ್ದು.

(Sd) ಕೆಂ. ಶಿವಪ್ಪ ಆನರರಿ ಸೆಕ್ರಿಟರಿ
ರಾವ್‌ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ
ತೋಟದಪ್ಪನವರ ಸತ್ರ ಬೆಂಗಳೂರು ಸಿಟಿ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕಾರ್ಲ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿ ಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೪—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೦—೦ ರೂ. ಕೊಡಬೇಕಾಗುವುದು ಕೆಂಪು, ಹಸುರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಬಂದೇತರದ ಬಣ್ಣದಿಂದ ಬಿಳಿ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೦—೦; ಅನಂತರ ಪ್ರತಿ ೧೦೦ಕ್ಕೊ ೦—೧೨—೦; ಹಳದೀ ಗ್ಲೇಜ್ ಕಾಗದದಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೊ ೦—೧೪—೦; ಹಳದಿ ರಫ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೊ ೦-೬-೦ ಆಣೆಯಂತೆ ಕಳುಹಬೇಕು. ಕ್ಲುಪ್ತ ಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು,

ಮ್ಯಾನೇಜರ್,
ಕಾರ್ಲಪ್ರೆಸ್, ಮೈಸೂರ್.

ಬಿಸಿಲುಕಾಲಕ್ಕೆ 31

ಎಲ್ಲರಿಗೂಬೇಕು

ಅಮೃತಾಮಲಕತೈಲ:—ವಿಧವಿಧವಾದ ತಲೆನೋವು, ಶರೀರವು ಬೆಂಕಿಯಂತಿರುವುದು, ತಲೆತಿರಗು, ಕಣ್ಣುರಿ. ಕಣ್ಣು ಕೆಂಪು, ಕಣ್ಣು ಮಂಜು, ಕಣ್ಣಿನಲ್ಲಿ ನೀರು ಸುರಿಯುವುದು, ರಾತ್ರಿ ನಿದ್ರೆಬಾರದಿರುವುದು ಇವುಗಳನ್ನು ೧-೨ ಅಭ್ಯಂಗನದಿಂದಲೇ ಗುಣಮಾಡಿ ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ. ಬಿಸಿಲುಕಾಲಕ್ಕೆ ಇದು ಅಮೃತವೇಸರಿ. ಎಂಟು ಅಭ್ಯಂಗನಕ್ಕೆ ಆಗುವ ತೈಲ ೦-೮-೦. ೧ ಡಜನ ೫-೦-೦.

ಆಮೋದಿನಿ:—ಅಮೋಘವಾದ ಸುವಾಸನೆಯಿಂದ ಕೂಡಿದ ಈ ಮಾತ್ರೆಗಳು ತಾಂಬೂಲವನ್ನು ರಂಜಿಸಿ ಬಾಯಾರಿಕೆಯನ್ನು ತಕ್ಷಣ ನಿಲ್ಲಿಸಿ ಆಯಾಸವನ್ನು ಪರಿಹರಿಸಿ ಕಂಠನಾಳವನ್ನು ಸರಿಪಡಿಸಿ ಕೆಮ್ಮು, ದಮ್ಮು, ಉಬ್ಬಸ, [illegible] ಗಳನ್ನು ಗುಣಮಾಡಿ ಆರೋಗ್ಯವನ್ನು ಕಾಪಾಡುವುದರಲ್ಲಿ ಶ್ರೇಷ್ಠವಾದುದು. ಸಂಗೀತಗಾರರಿಗೂ, ವಿದ್ಯಾರ್ಥಿಗಳಿಗೂ, ಪ್ರಯಾಣೀಕರಿಗೂ ಅಮೂಲ್ಯವಾದುದು. ೧೫೦ ಮಾತ್ರೆ ೦—೪—೦. ೫ಕ್ಕೆ ಒಂದು ಹೆಚ್ಚು.

ಖಂತಾಮಲಕರಸಾಯನ:—ತಲೆತಿರಗು, ಕಣ್ಣುಕಗ್ಗತ್ತಲೆ, ಹಸಿನೇ ಇಲ್ಲದಿರುವುದು, ಆಹಾರದಲ್ಲಿ ಅರುಚಿ, ವಾಕರಿಕೆ, ವಾಂತಿ, ಹುಳಿ, ಖಾರ, ಅಥವಾ ಸಿಹಿಯಾದ ತೇಗು, ಹೊಟ್ಟೆಯುಬ್ಬರ, ಹೊಟ್ಟೆನೋವು, ಕಣ್ಣು ಅಥವಾ ಮೈ ಹಳದೀಬಣ್ಣ, ನಿಶ್ಶಕ್ತಿ, ಹಳೇಜ್ವರ, ಎದೆಬಡಿಯುವಿಕೆ, ಪಾಂಡು, ಕಾಮಾಲೆ, ಮೂರ್ಛೆ ಇವುಗಳಪೈಕಿ ಯಾವುದಿದ್ದರೂ ಖಾತರಿ ಗುಣವಾಗಿ ದಿನಕ್ಕೊಂದುವೇಳೆ ಸಲೀಸಾಗಿ ಕಾಲಪ್ರವರ್ತಿಯಾಗುತ್ತದೆ. ೧೫ ದಿನಕ್ಕೆ ಆಗುವ ಔಷಧ, ಬೆಲೆ ೦-೧೨-೦. ೧ ಡಜನ ಡಬ್ಬಿಗಳಿಗೆ ೩-೮-೦.

ಪ್ರತಿಔಷಧಕ್ಕೂ ಟಪಾಲ್ ಮತ್ತು ಪ್ಯಾಕಿಂಗ್ ಛಾರ್ಜು ಪ್ರತ್ಯೇಕ.

ವಿಳಾಸ:—ಬಿ. ವಿ. ಪಂಡಿತ್, ಸದ್ವೈದ್ಯಶಾಲಾ,
ನಂಜನಗೂಡು, ಮೈಸೂರು ೩||

ಕೇವಲ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

20

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯು ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಮುದ್ರೇಕವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ

“ಮಾರಾಟಕ್ಕೆ ಸಿದ್ಧವಾದ ಪುಸ್ತಕವು”

3

ಇಂಗ್ಲೀಷುಶಿಕ್ಷಕ—ಈ ಪುಸ್ತಕದ ಅಭ್ಯಾಸದಿಂದ ಕನ್ನಡಿಗರಿಗೆ ನಾಲ್ಕಾರು ತಿಂಗಳಲ್ಲಿ, ಶಿಕ್ಷಕನ ಸಹಾಯವಿಲ್ಲದೆ ಸ್ವತಃ ಇಂಗ್ಲೀಷುಮಾತು ಕಲಿಯಲಿಕ್ಕೆ ಬರುವದು. ಬೆಲೆ ೧೦ ಆಣೆ ಪ. ಖ ಬೇರೆ ಒಮ್ಮೆಲೆ ೧೦ ಪ್ರತಿಗಳನ್ನು ತರಿಸಿಕೊಂಡರೆ, ಒಂದು ಪ್ರತಿ ಕಮಿಶನ್ ದೊರೆಯುವದು. ಪ್ರತಿಗಳು ತೀರ ಸ್ವಲ್ಪ ಉಳಿದಿವೆ. ಗ್ರಾಹಕರು ತೀವ್ರ ತರಿಸಿಕೊಳ್ಳತಕ್ಕದ್ದು.

ವಿಳಾಸ..ನ. ಸು. ಬಾಗಲ, ಬನ್ನಿಕೊಪ್ಪ, ಪೋ. ಮುಂಡರಗಿ ಜಿಲ್ಲಾ ಧಾರವಾಡ.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು

84

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕದನಗಳ ಪಟಗಳೂ ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ ೨ ಆಣೆ; ವಿ ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ:—ವಿ ಜನರಲ್ ಏಜನ್ಸಿ. ಮೈಸೂರು.

---

೫೦೦ ರೂಪಾಯಿಳ ಬಹುಮಾನ

ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್‌ಬ್ಯಾಂಕಿನಲ್ಲಿ ಮೇಲ್ಕಂಡ ೫೦೦ ರೂಪಾಯಿಗಳನ್ನು ೧೯೧೫ ನೆ ಇಸವಿ ಮಾರ್ಚಿ ತಾ|| ೧೫ ರಲ್ಲಿ ಡಿಪಾಜಿಟ್ಟು ಇಟ್ಟಿರುತ್ತೇವೆ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ “ಸಾಲಾಮಿಸ್ರೀ ಮುರಬ್ಬಾವನ್ನು” ಸೇವಿಸಿರಿ! ಸೇವಿಸಿರಿ !! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್‌ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಸಾಲಾಮಿಸ್ರಿಯ ಧಾರಣೆಯು ಜಾಸ್ತಿಯಾಗಿರುವದರಿಂದ ಅನೇಕರು ಉರುಳುಗಡ್ಡೆ, ಕಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹಾದ್ದೋ ಎಂಬುವದು ತಿಳಿದುಬರುತ್ತದೆ.

ಸಾಲಾಮಿಸ್ರಿ ಮುರಬ್ಬಾವು—ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವುದು.
ಸಾಲಾಮಿಸ್ರಿ ಮುರಬಾವು—ನಿದ್ರೆಯಲ್ಲಿ ಧಾತುವು ಹೋಗುವುದನ್ನು ನಿಲ್ಲಿಸುವುದ.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲ ಧಾತುಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕ್ಷಣ ಕ್ಷಣಕ್ಕೆ ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ವೃದ್ಧಿಪಡಿಸುವದು.
ಸಾಲಾಮಿಸಿ ಮುರಬ್ಬಾವು—ಶ್ವಾಸಕಾಸ ರೋಗಗಳನ್ನು ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹೊಟ್ಟೆಯಲ್ಲಿರುವ ಜ್ವರದಗಡ್ಡೆ ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೆಟ್ಟುಹೋಗಿರುವ ರಕ್ತವನ್ನು ಶುದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬಾವು—ಹಳೆತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು.
ಸಾಲಾಮಿಸ್ರಿ ಮುರಬ್ಬಾವು—ಉತ್ಸಾಹ, ಧೈರ್ಯ, ಬುದ್ಧಿಕುಶಲತೆ, ಶರೀರಕಾಂತಿಯನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು—ತಾಂಬ್ರ, ಬೆಳ್ಳಿ, ಮತ್ತು ಭಂಗಾರ ಭಸ್ಮಕ್ಕಿಂತಲೂ ಉತ್ತಮವಾದುದು.
ಸಾಲಾಮಿಸ್ರಿ ಮುರಬ್ಬಾವು—ಸ್ತ್ರೀ ಸಂಗಕ್ಕೆ ಮೊದಲೆ ಧಾತು ಸ್ಖಲನವಾಗುವದನ್ನು ನಿಲ್ಲಿಸುವದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪುರಾ ಗುಣಕೊಡುತ್ತದೆ. ೨೩ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು “ಸಾಲಾಮಿಸ್ರಿ” ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ಕ್ಕೆ ಕ್ರಯ ೨—೦—೦ ರೂಪಾಯಿ. ಟಪ್ಪಾಲು ಖರ್ಚು ೧ ಡಬ್ಬಿಯಿಂದ ಡಬ್ಬಿಗಳ ವರೆಗೆ ೬ ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ವಿಳಾಸ:—ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು,
೫, ಅವೆನ್ಯೂ ರೋಡ್ ಬೆಂಗಳೂರು ಸಿಟಿ,

ಹೊಸ ಪುಸ್ತಕಗಳು.

183

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೦ ಆಣೆ.

ಬಸವರಾಜವಿಜಯಂ.— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಮಂಚೇಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟಿಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ- ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಚ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

50

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೊತೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ— ೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಒಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯು ಬೆಲೆ ೧-೦-೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಳೆ ಕೂದಲು ಬೆಳೆಯುವ ಪರಿಮಳ ತೈಲವು.

6

ಡಬ್ಬಿ ೧ ಕ್ಕೆ ೩೬ ವಿಧವಾದ ಇನಾಂ ಸಾಮಾನುಗಳ ಸಮೇತ ೧೫ ತೊಲೆ ಎಣ್ಣೆಯ ಕ್ರಯ ರೂ. ೧-೦-೦

SAKUNTHALA HAIR OIL
REGISTERED TRADE MARK

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೇಇರುವ ಕೂದಲು ಬೆಳೆಯುವುದು. ಒರಟಾಗಿರುವ ಕೂದಲು ಮೃದುವಾಗುವುದು. ನೇರಳೇಹಣ್ಣಿನಂತೆ ಕಪ್ಪಾಗಿ ಥಳಥಳಿಸುವುದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವುದು. ಕಣ್ಣಿಗೆ ತಂಪುಕೊಡುವದು. ತಲೆಯಲ್ಲಿರುವ ಹೊಡವನ್ನು ಸರಿಮಾಡುವುದು. ಕಣ್ಣಿನಲ್ಲಿ ಮಂಜನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವುದಲ್ಲದೆ ಜವ್ವಾಜಿ ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತೂ ಜಾಜಿ, ಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರೂಪಾಕ್ಷಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವುದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

೧೫ ತೋಲ ತೈಲವುಳ್ಳ ಡಬ್ಬಿ ೧ ಕ್ಕೆ ಕ್ರಯ ೩೬ ಇನಾಂ ಸಾಮಾನುಗಳ ಸಮೇತ ರೂ. ೧-೦-೦

ಇನಾಂ ಸಾಮಾನುಗಳ ತಪ್ಸೀಲು— ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ ೧, ದಂತದ ಬಾಚಣಿಗೆ ೧, ನೋಡಿಕೊಳ್ಳುವ ಕನ್ನಡಿ ೧, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ ೧, ಅತ್ತರುಬಿಲ್ಲೆ ೧, ವಾಸನೆಯುಳ್ಳ ಸೋಪು ೧ ತಾಂಬೂಲಮಾತ್ರೆ ೨೨ ಕೊಂಡೆ ಗಿಣಿಗಳು ೬ ಕಾರೊನೇಷನ್ ಬ್ರೂಚ್ ೧, ಜವಾದುಡಬ್ಬಿ ೧, ಈ ತರಹ ೩೬ ಇನಾಂ ಕೊಡಲ್ಪಡುತ್ತವೆ.

ನಮ್ಮ ವಿಳಾಸ:— ಧನಲಕ್ಷ್ಮಿ ಅಂಡ್ ಕಂಪನಿ ೧-೬
ವೆಂಕಟೇಶಮೇಸ್ತ್ರಿ ಬೀದಿ, ಸಾಹುಕಾರ್ ಪೇಟೆ ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧-೦-೦
ಪರವಾದಿಗಜಾಂಕುಶತಾರಾವಳಿ	೦-೮-೦
ಶಿವಪೂಜಾವಿಧಿ	೦-೮-೦
ಚಾರುಶೀಲೆಚರಿತೆ	೦-೫-೦
ವಿವೇಕಮಂಜರಿ [೨ನೆಯ ಭಾಗ]	೦-೩-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆಯವೆಚ್ಚ ಬೇರೆ.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಣ್ಯವಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್‌ವಾಚ್.

ಇದರ ಕ್ರಯ ೭ ಬಹುಮಾನಗಳ ಸಮೇತ ರೂ.೩-೮-೦
ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ. 6



ಧನವಂತರೇ ಈ:— ನೂತನ ನಮೂನೆ ವಾಚ್ ಈಗ ತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತೂ ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತೂ ನಾಣ್ಯವಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್ ಬರೀ ಮಾತುಗಳಿಂದಲೇನುಕೆ ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ ೭ ಬಹುಮಾನಗಳ ತಪಶೀಲ್ :—(೧) ಸುಂದರವಾದ ವಾಚ್ ಸರಪಣಿ, (೨) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (೩) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (೪) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆದಾರ, (೫) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (೬) ಪರಿಮಳವುಳ್ಳ ಸುವಾಸನೆ ಶೀಷೆ, (೭) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—
ಎಚ್. ಎಮ್. ಸ್ವಾಮಿ ಅಂಡ್ ಕಂಪೆನಿ,
ನಂ. ೪೪, ನಂಬುಳಯ್ಯರ ಬೀದಿ, ಮದರಾಸು.

೧೯೧೫ ನೆಯ ಇಸವಿ ಮೇ ತಾ॥ ೧೬ರಿಂದ ೧೯೧೫ ನೆಯ ಮೇ ತಾ॥ ೨೨ರ ವರೆಗೆ ಸಲ್ಲುವ ಶಾಲಿವಾಹನಶಕ ೧೮೩೭ ನೆಯ ರಾಕ್ಷಸನಾಮಸಂವತ್ಸರದ ನಿಜವೈಶಾಖ ಶು॥ ಬಿದಿಗೆಯಿಂದ ನಿಜವೈಶಾಖ ಶು॥ ಅಷ್ಟಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ಭೇದಿ
16	ಭಾನು	ಬಿ	13-37	ರೋಹಿಣಿ	1-52	3
17	[1]ಸೋಮ	ತದಿ	18-14	ಮೃಗ	8-5	4
18	[2]ಮಂಗ	ಚೌ	21-6	ಆರ್ದ್ರಾ	13-53	5
19	[3]ಬುಧ	ಪಂ	24-54	ಪುನರ್ವ	18-3	6
20	[4]ಗುರು	ಷ	60	ಪುಷ್ಯ	21-23	7
21	[5]ಶುಕ್ರ	ಸ	26-42	ಆಶ್ಲೇ	23-27	8
22	[6]ಶನಿ	ಅ	25-55	ಮಖ	24-19	9

(1) ತ್ರೇತಾಯುಗಾದಿಃ, ವಾರ್ತಾಗೌರೀವ್ರತಂ, ಅಕ್ಷತೃತೀಯಾ. (2) ಶೂನ್ಯ ತಿಥಿಃ. (3) ಲಾವಣ್ಯಗೌರೀವ್ರತಂ, ಶಂಕರಜಯಂತೀ. (4) ಶ್ರೀರಂಗದಲ್ಲಿ ವಸಂತೋತ್ಸವಾರಂಭಃ. (5) ಗಂಗಾಸಪ್ತಮಿ, ಮೃತ್ಯುಯೋಗಃ. (6) ಸರ್ವತ್ರ ಅಷ್ಟಮೀ ತಿಥಿಃ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರ್ ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೈತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸಿಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧-೦-೦ ಅಂಚೆವೆಚ್ಚ ಸೇರಿ ೧-೧೪-೦

ಸಂಪುಟ ೨೮) ಮೈಸೂರ್ ಸ್ಟಾರ್ ಸನ್ ೧೯೧೫ ನೆಯ ಇಸವಿ ಮೇ ತಾರೀಖು ೨೩ ನೆಯ ಭಾನುವಾರ. (ಸಂಚಿಕೆ ೨೦

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

16

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆಶಿಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

೧. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.

೨. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.

೩. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ ಯಾವರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.

೪. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

೫. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.

೬. ಬೇಸಿಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.

೭. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

೪೫ ಮಾತ್ರೆಗಳ ಪೊಟ್ಟಣ ೧ಕ್ಕೆ ೨ ಆಣೆ	೮೦ ಮಾತ್ರೆಗಳ ಟಿನ್ ೧ಕ್ಕೆ ೪ ಆಣೆ.
೯೫ ,, ,, ,, ೪ ,,	೧೦೦ ,, ಶೀಶೆ ,, ೪½ ,,
೨೦೦ ,, ,, ,, ೭ ,,	೫೫೦ ,, ಮರದಪೆಟ್ಟಿಗೆ ,, ೧ ರೂ.
೨೦೦ ,, ಟಿನ್ ,, ೯ ,,	೧,೦೦೦ ,, ,, ,, ೨ ,,

೧ ರೂ.ಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಎಲ್ಲಾ ಕಡೆಯೂ ಪ್ರಸಿದ್ಧವರ್ತಕರಲ್ಲಿ ವಿಕ್ರಯಿಸಲ್ಪಡುತ್ತದೆ.

ಮೈಸೂರುಸೀಮೆಯ ಏಜಂಟರು:- ಎಂ. ರಾಮಸಂಜೀವ ಸೆಟ್ಟಿ,
ಚನ್ನಪಟ್ಟಣ.

ಸೋಲ್ ಏಜಂಟರು:- ಸೆಶಿಂತಾನ್ ಡಿಪೋ,
ಪ್ರಿನ್ಸೆಸ್‌ಸ್ಟ್ರೀಟ್ ಬೊಂಬಾಯಿ ನಂ ೨.

ಮದ್ರಾಸ್ ಏಜಂಟ್:— ಬಿ. ಸಿ. ಷಾ ಅಂಡ್ ಕೊ,
೧೨೩ ಜೇನಾಬಜಾರ್ ರೋಡ್, ಮದ್ರಾಸ್.

S.U.N. & Co
BENARES CITY.
KASHI
VISHWESHWAR.

34

ದೊಡ್ಡಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರಿಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ-ಎಸ್. ಯೂ ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ಓರಿಯಂಟಲ್ ಫಾರ್ಮಸಿ ಮೈಸೂರು.

16

ಪ್ರಸಿದ್ಧ ಗುಣಕಂಡ ಔಷಧಗಳು.

ಜ್ವರದಮಾತ್ರೆ - ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ— ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಯುಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮುಂತಾದ ಇವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ ರೂ.

ಗೋರೋಚನದಮಾತ್ರೆ — ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ— ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೂಡ್ಲೆ ತಪ್ಪಿ ಜೀರ್ಣಶಕ್ತಿ ಕೊಡುತ್ತೆ. ಪ್ರಯಾಣಿಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ— ಎಲ್ಲಾ ವಿಧವಾಯು ನೋವು ಉಳುಕು ಊದು ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ. ೫ ಡಬ್ಬಿಗೆ ೧ ರೂ. ಕೂಡ್ಲೆ ನಮ್ಮ ಕ್ಯಾಟಲಾಗಿಗೆ ಬರಿಯಿರಿ ಮುಫತ್ತು ಕಳುಹಿಸುತ್ತೇವೆ.

ತಿರಸಂಗೀಕರ ಸ್ಮಾರಕ.

ಕನ್ನಡ ಒಕ್ಕಲತನದ ಶಾಲೆ ದೇವೀಹೊಸೂರ.

10

ಈ ಶಾಲೆಯು ಧಾರವಾಡ ಜಿಲ್ಹೆಯಲ್ಲಿರುವ ಹಾವೇರಿ ಸ್ಟೇಶನ್ನದಿಂದ ೫ ಮೈಲು ದೂರವಿರುವ ದೇವೀಹೊಸೂರ ಎಂಬಲ್ಲಿ ಸ್ಥಾಪಿತವಾಗಿದ್ದು ಅದರ ಹೊಸಕ್ಲಾಸುಗಳು ಇದೇ ಮೇ ತಿಂಗಳು ೨೪ ನೇ ತಾರೀಖಿನಿಂದ ಶುರು ಆಗುವವು. ಇದು ಕೇವಲ ಒಕ್ಕಲಿಗರ ಮಕ್ಕಳ ದೆಸೆಯಿಂದ ಇರುತ್ತದೆ. ಇದರಲ್ಲಿ ಸೇರಬಿಚ್ಛಿಸುವ ವಿದ್ಯಾರ್ಥಿಗಳ ಸಂಬಂಧದ ನಿಯಮಗಳು ಕೆಳಗೆ ಕೊಟ್ಟಂತೆ ಇರುತ್ತವೆ.

(೧) ಹುಡುಗರು ಸ್ವತಃ ಒಕ್ಕಲತನ ಮಾಡುವಂಥ ಒಕ್ಕಲಿಗರ ಮಕ್ಕಳಾಗಿರಬೇಕು ಮತ್ತು ಆ ಹುಡುಗರು ಸ್ವಲ್ಪ ಮಟ್ಟಿಗಾದರೂ ಒಕ್ಕಲತನದ ಕೆಲಸದಲ್ಲಿ ಮಾಹಿತಿಯುಳ್ಳವರಿರಬೇಕು.

(೨) ಇಲ್ಲಿ ಕಲಿತು ಒಕ್ಕಲತನದ ಉದ್ಯೋಗವನ್ನು ನಡೆಯಿಸಬೇಕೆನ್ನುವವರನ್ನೇ ಈ ಶಾಲೆಯಲ್ಲಿ ತಕ್ಕೊಳ್ಳುವದರಲ್ಲಿ ಬರುವದು. ಸರಕಾರೀ ನೌಕರಿಯನ್ನು ಇಚ್ಛಿಸುವಂಥ ವಿದ್ಯಾರ್ಥಿಗಳು ಇಲ್ಲಿ ಬರಕೂಡದು.

(೩) ಹುಡುಗರು ಕನಿಷ್ಠಪಕ್ಷಕ್ಕೆ ಕನ್ನಡ ೫ನೇ ಇಯತ್ತೆಯಲ್ಲಿಯಾದರೂ ಪಾಸಾಗಿರಲಿಕ್ಕೆ ಬೇಕು ಮತ್ತು ಅವರು ಯಾವ ಶಾಲೆಯಲ್ಲಿ ಕಲಿತಿರುವರೋ ಆ ಶಾಲೆಯ ಹೆಡ್ಡಮಾಸ್ತರರ ಲೀವ್ಹಿಂಗ ಸರ್ಟಿಫಿಕೇಟನ್ನು ಅರ್ಜಿ ಲಗತ ಕಳುಹಿಸಬೇಕು.

(೪) ಹುಡುಗರ ವಯಸ್ಸು ೧೪ ವರ್ಷದಿಂದ ೧೬ ವರ್ಷದ ಒಳಗಿರಬೇಕು. ಮತ್ತು ವಯಸ್ಸಿನ ದಾಖಲೆ ಅರ್ಜಿ ಲಗತ ಕಳುಹಿಸಬೇಕು.

(೫) ಹುಡುಗರ ಅಭ್ಯಾಸಕ್ರಮವು ಎರಡು ವರ್ಷದ್ದಿರುವದು; ಈ ಶಾಲೆಯಲ್ಲಿ ತೆಗೆದುಕೊಂಡ ಪ್ರತಿಯೊಬ್ಬ ಹುಡುಗನಿಗೆ ಅವನ ಶಾಲೆಯ ಫೀಗೂ ಊಟದ ವೆಚ್ಚಕ್ಕೂ ಸಾಲುವಷ್ಟು ಸ್ಕಾಲರಶಿಪ್ ಕೊಡಲ್ಪಡುವದು.

(೬) ಒಮ್ಮೆ ಶಾಲೆಯಲ್ಲಿ ಸೇರಿದನಂತರ ಶಾಲೆಯ ಅಭ್ಯಾಸ ಕ್ರಮವು ಪೂರ್ಣ ಮುಗಿಯುವವರೆಗೆ ಶಾಲೆಯನ್ನು ಬಿಡಕೂಡದು. ಒಂದು ವೇಳೆ ಮಧ್ಯದಲ್ಲಿ ಬಿಟ್ಟರೆ ಅವರು ಶಾಲೆಯಲ್ಲಿ ಇದ್ದಷ್ಟು ದಿವಸಗಳ ಖರ್ಚನ್ನು ಕೆಳಗೆ ಸಹಿಮಾಡಿದವರು ನಿರ್ಣೈಯಿಸಿದಷ್ಟು ಕೊಡಬೇಕಾಗುವದು.

ಪ್ರತಿವರ್ಷ ೧೫-೨೦ ಹುಡುಗರನ್ನು ತೆಗೆದುಕೊಳ್ಳುವದರಲ್ಲಿ ಬರುವದು. ಬೇರೆ ಶಾಲೆಗಳಂತೆ ಈ ಶಾಲೆಗೂ ಯಾವತ್ತೂ ಸೂಟಿಗಳು ದೊರೆಯುವವು. ಇದಲ್ಲದೆ ವರ್ಷಕ್ಕೆ ಎರಡಾವರ್ತಿ ಒಮ್ಮೆ ದೀಪಾವಳಿ ಸುಮಾರಕ್ಕೆ, ಮತ್ತೊಮ್ಮೆ ಬೇಸಿಗೆ ಸಮಯಕ್ಕೆ ಒಂದೊಂದು ತಿಂಗಳದ ಸತತ ಸೂಟಿಗಳು ಸಿಕ್ಕುವವು. ಇವೆರಡು ಸೂಟಿಗಳಲ್ಲಿ ಮಾತ್ರ ಹುಡುಗರನ್ನು ಮನೆಗೆ ಕಳುಹಿಸುವದರಲ್ಲಿ ಬರುವದು. ಈ ಶಾಲೆಯ ಮುಖ್ಯ ಉದ್ದೇಶವೆಂದರೆ ಒಕ್ಕಲಿಗರ ಮಕ್ಕಳಿಗೆ ಸುಧಾರಿಸಿದ ಪ್ರಕಾರದ ಒಕ್ಕಲತನದ ಶಿಕ್ಷಣವನ್ನು ಕೊಟ್ಟು ಅವರನ್ನು ಅವರ ತಾಯಿತಂದೆಗಳಿಗೆ ಹೆಚ್ಚಿಗೆ ಉಪಯುಕ್ತರನ್ನಾಗಿ ಮಾಡಿಕೊಡುವದು ಅದೆ. ಈ ಶಾಲೆಗೆ ಬರಬಿಚ್ಛಿಸುವವರು ಅರ್ಜಿಯನ್ನು ಇದೇ ಮೇ ತಿಂಗಳ ೧ನೇ ತಾರೀಖಿನ ಒಳಗಾಗಿ ಕೆಳಗೆ ಸಹಿಮಾಡಿದವರ ಕಡೆಗೆ ಕಳುಹಿಸತಕ್ಕದ್ದು.

ಆ ಅರ್ಜಿ ವಿಚಾರಣೆಮಾಡಿ ನಮ್ಮ ಶಾಲೆಯಲ್ಲಿ ತೆಗೆದುಕೊಳ್ಳತಕ್ಕಂಥ ವಿದ್ಯಾರ್ಥಿಗಳಿಗೆ ಪತ್ರದ್ವಾರದಿಂದ ಬರಲಿಕ್ಕೆ ತಿಳಿಸುವೆವು; ಅರ್ಜಿ ನಿಕಾಲಿ ಮಾಡುವಕಾಲಕ್ಕೆ ವತನದಾರ ಪಾಟೀಲ ಕುಲಕರ್ಣಿಯವರ ಮಕ್ಕಳಿಗೂ, ಸುಸ್ಥಿತಿಯ ಒಕ್ಕಲಿಗರ ಮಕ್ಕಳಿಗೂ, ಹೆಚ್ಚು ಸವಲತ ಸಿಗುವದು. ಅರ್ಜಿಯಲ್ಲಿ ಹೆಸರು, ತಂದೆಯ ಹೆಸರು, ಅಡ್ಡಹೆಸರು, ಜಾತಿ

ಇರುವ ಊರು, ತಾಲ್ಲೂಕು, ಜಿಲ್ಲಾ ಖಾತೇದ ಹೊಲವು ಎಷ್ಟು, ಮತ್ತು ಅದು ಎಲ್ಲಿರುವದು ಸರಕಾರಕ್ಕೆ ದರವರ್ಷ ಕೊಡಬೇಕಾದ ತೆರಿಗೆ ತೋಟಪಟ್ಟಿಗಳನ್ನು ಮಾಡಲಿಕ್ಕೆ ನೀರಿನ ಅನುಕೂಲತೆ ಇರುವದೇ ಹ್ಯಾಗೆ? ಮತ್ತು ಹೊಲಗಳನ್ನು ಮನೆಯಿಂದ ಮಾಡುವರೋ ಹ್ಯಾಗೆ? ಮೊದಲಾದ ಮಾಹಿತಿಯನ್ನು ತುಂಬಿ ಆಯಾ ಊರ ಗ್ರಾಮಸ್ಥರ ದಾಖಲೆಯನ್ನು ಲಗತಿಟ್ಟು ಅರ್ಜಿ ಕಳಿಸಬೇಕು; ಮತ್ತು ಅರ್ಜಿಯನ್ನು ಶಾಲೆಗೆ ಬರಲಿಚ್ಛಿಸುವ ವಿದ್ಯಾರ್ಥಿಗಳೇ ಸ್ವಹಸ್ತದಿಂದ ತುಂಬಿ ಕಳಿಸಬೇಕು. ಮೇಲೆ ಹೇಳಿದ ನಿಯಮಗಳಂತೆ ನಡೆಯಲಿಕ್ಕೆ ಅನುಮತಿಯುಂಟೆಂದು ತಮ್ಮ ಪಾಲಕರ ಕಡೆಯಿಂದ ಒಂದು ಸಹಿನಿಸಿ ದಾಖಲೆ ತಕ್ಕೊಂಡು ಅರ್ಜಿ ಲಗತ ಇಟ್ಟು ಕಳಿಸಬೇಕು.

ಧಾರವಾಡ
ತಾ॥ ೪-೩-೧೯೧೫

ಸಹಿ ಟಿ. ಗಿಲ್ಬರ್ಟ
ಡಿ. ಡಾಯರೆಕ್ಟರ ಶೆತಕೀ ಖಾತೆ,
ದಕ್ಷಿಣಭಾಗ

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತವಾಗಿರುವ ಘೋರಯುದ್ಧದ ದಶೆಯಿಂದ ಈ ಸಾಮಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದ ಮತ್ತೂ ಬೆಲಜಿಯಮ್ಮಿನಿಂದ ಸುತರಾಂ ಬರುವುದು ಕಟ್ಟಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಅವಶ್ಯಕವಾದ ಕಾಗದ ಮೊದಲಾದ ಸಾಮಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವಧಿಯು ಪೂರೈಸಿರುವವರಿಗೆಲ್ಲಾ ಪತ್ರಿಕೆಯನ್ನು ವಿ. ಪಿ ದ್ವಾರ ಕಳುಹಿಸುತ್ತಿರುವೆವು. ಆದರೆ ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿರುಗಿಸಿ ಕಾಗದದ ಬೆಲೆಯೇರಿಕೆಯಿಂದ ನಷ್ಟಪಡುವುದರ ಜತೆಗೆ ಪೋಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದು ತಿಳುಹಲು ಖೇದವಾಗುತ್ತದೆ. ಇತಃಪರಃ ದಯಾರ್ದ್ರಹೃದಯರಾದ ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ. ಪಿ. ಹಣವನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನವಾಗಿ ನಡೆದುಕೊಂಡು ಹೋಗುವಂತೆ ಮಾಡುವರೆಂದು ಸಂಪೂರ್ಣವಾಗಿ ನಂಬಿರುತ್ತೇವೆ.

ಮ್ಯಾನೇಜರ್.

ಅರಸೀಕೆರೆ ತಾ॥ ದೊಡ್ಡಮೇಟಿಕುರ್ಕೆಯಲ್ಲಿ ನಡೆಸಿದ ಮಹೋತ್ಸವ.

ನಮ್ಮ ಶ್ರೀಮತ್ ಸಾರ್ವಭೌಮರಿಗೆ ಅನಿರೀಕ್ಷ್ಯವಾಗಿ ದುಷ್ಟನಿಗ್ರಹಾರ್ಥವಾಗಿ ಒದಗಿರುವ ಈ ಯುದ್ಧದಲ್ಲಿ ಚಕ್ರವರ್ತಿಯವರಿಗೆ ಜಯಲಕ್ಷ್ಮಿಯು ಕೈಸೇರಲೆಂದು ವಿಧಿಪೂರ್ವಕವಾಗಿ ದೇವರ ಸೇವೆಯನ್ನೂ ಬಹುಜನ ಸಂತರ್ಪಣೆಯನ್ನೂ ನಡೆಸಬೇಕೆಂದು ಮ॥ ಯಂ. ಹೆಚ್. ಹರಿಯಣ್ಣನವರು ಗ್ರಾಮಸ್ಥರಿಗೆ ತಿಳಿಸಿದ್ದರಮೇಲೆ ಈ ಗ್ರಾಮದ ಮ॥ಶ್ಯಾ॥ ಹರಿಯಪ್ಪನವರು, ಮ॥ ಪಟೇಲ್ ಹರಳೇಗೌಡರು, ಮ॥ ಪ॥ ರಾಮಜ್ಜೀಗೌಡರು, ಮ॥ ಸಾಹುಕಾರ್ ಶಿವಪ್ಪನವರು ಮೊದಲಾದ ಗ್ರಾಮದ ಮುಖಂಡರುಗಳು ಈ ಕಾರ್ಯವನ್ನು ಆಗಮಾಡಬೇಕೆಂದು ಸರ್ವಸನ್ನಾಹವನ್ನು ಮಾಡಿಕೊಂಡರು. ಅದರಂತೆ ಈ ಮಾಹೆ ೯ ನೆ ಭಾನುವಾರ ಸುತ್ತಮುತ್ತಣ ಗ್ರಾಮಗಳ ದೇವರುಗಳನ್ನು ಬರಮಾಡಿಕೊಂಡರು. ಮತ್ತು ಹೊಳಲಕೆರೆ ಪ್ರಸನ್ನ ರಾಮೇಶ್ವರಸ್ವಾಮಿಯವರ ರಜತಾಂದೋಳೋತ್ಸವವು ತಕ್ಕ ಮರ್ಯಾದೆಗಳಿಂದ ನಡೆಯಿತು. ೧೦ ನೇ ಸೋಮವಾರ ಹಾಲ್ಕುರಿಕೆ ವಿರಕ್ತಮಠದ ನಿರಂಜನ ಮಹಾಸ್ವಾಮಿಗಳು, ಹಲ್ಕೂರು ಶ್ರೀ ಮಠದ ಪಟ್ಟದಸ್ವಾಮಿಗಳು, ಚರಮೂರ್ತಿಸ್ವಾಮಿಗಳು ಮೊದಲಾದ ಮಹಾಸ್ವಾಮಿಗಳು ಈ ಗ್ರಾಮದ ರೇವಣಸಿದ್ಧೇಶ್ವರ ಮೊದಲಾದ ಸಮಸ್ತ ದೇವರುಗಳಿಗೂ, ಮಹಾಭಿಷೇಕವನ್ನೂ ವಿಧಿಪೂರ್ವಕ ನೆರವೇರಿಸಿದರು. ನಂತರ ಶ್ರೀ ಪ್ರಸನ್ನರಾಮೇಶ್ವರಸ್ವಾಮಿಯವರ ಮಂಗಳಾರ್ತಿ ಕಾಲದಲ್ಲಿ ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೆ ಜಯವಾಗಲೆಂದು ಸರ್ವರೂ ಪ್ರಾರ್ಥಿಸಿದರು. ಈ ಮಹಾಕಾರ್ಯಕ್ಕೆ ಸಾವಿರಾರುಜನಗಳು ಬಂದಿದ್ದರು. ಇವರಿಗೆಲ್ಲಾ ದೊಡ್ಡ ಸಂತರ್ಪಣೆಯು ನಡೆಯಿತು. ಮ॥ ಶ್ಯಾ॥ ಹರಿಯಪ್ಪನವರು ತಮ್ಮ ಗೃಹದಲ್ಲಿ ನೂರಾರುಜನ ಬ್ರಾಹ್ಮಣರಿಗೆ ಸಮಾರಾಧನೆ ಮಾಡಿದರು. ಸಮಸ್ತ ವರ್ಣದವರಿಗೂ ಸಮದೃಷ್ಟಿಯಿಂದ ಅನ್ನದಾನ ಮಾಡಬೇಕಾಗಿಯೂ, ಏನಾದರೂ ವ್ಯತ್ಯಾಸ ನಡೆದೀತಾಗಿಯೂ ಹೊಳಲಕೆರೆ ಮ॥ ಶ್ಯಾ॥ ಪುಟ್ಟಯ್ಯನವರು, ಮ॥ ಶ್ಯಾ॥ ಹರಿಯಪ್ಪನವರು ಖುದ್ದು ನಿಂತು ಜಾತಿ ಮತವೆಂಬ ಬಾಹ್ಯವರ್ತನೆಗಳನ್ನು ಬಿಟ್ಟು ಭೂತತೃಪ್ತಿಯೇ ಮುಖ್ಯವೆಂದು ಭಾವಿಸಿ ಪ್ರತಿಪಂಕ್ತಿಯಲ್ಲಿಯೂ ಸಂಚರಿಸಿ ಬೇಕಾದವರಿಗೆ ಬೇಕಾದ ಪದಾರ್ಥಗಳನ್ನು ಒದಗಿಸುತ್ತಾ ಇದ್ದುದು ತುಂಬಾ ಸ್ತೋತ್ರಾರ್ಹವಾಗಿತ್ತು. ೧೧ ನೇ ತಾರೀಖು ಯಥಾಪ್ರಕಾರ ಅಭಿಷೇಕ ಮಂಗಳಾರತಿ ಮಹಾಸಂತರ್ಪಣೆ ಕಾರ್ಯ ಜರುಗಿಸಲ್ಪಟ್ಟಿತು. ಮಧ್ಯಾಹ್ನ ೩ ಗಂಟೆಗೆ ಈ ಗ್ರಾಮದ ವಿ. ಇ. ಸ್ಕೂಲ್ ಬಾಲಕರಿಂದ ಹಾಸನದಲ್ಲಿ ಈ ಮಾಹೆ ೨೮-೨೯ ರಲ್ಲಿ ನಡೆಯುವ ಟೀಚರ್ಸ್ ಕಾನ್ಫರೆನ್ಸಿನ ಪ್ರದರ್ಶನಕ್ಕೆ ತಯಾರಿಸಿದ್ದ ಕೈಗಾರಿಕೆ ಸಾಮಾನುಗಳನ್ನು ದಸರಾಮೆಂಬರ್ ಮ॥ ಎಂ. ಎಚ್. ಹರಿಯಣ್ಣನವರ ಅಭಿಪ್ರಾಯದಂತೆ ಸ್ಕೂಲ್ ಹಾಲಿನಲ್ಲಿ ಹೆ॥ಮಾ॥ ಕೃಷ್ಣಮೂರ್ತಿಗಳಿಂದ ಅಂದವಾಗಿ ಇಡಿಸಲ್ಪಟ್ಟಿದ್ದವು. ಪ್ರದರ್ಶನಪ್ರಾರಂಭೋತ್ಸವವು ಶೇಕದಾರ್ ಬಿ. ಹಿರಿಯಣ್ಣಯ್ಯನವರಿಂದ ಆರಂಭಗೊಂಡಿತು. ನೆರೆದಿದ್ದ ದೊಡ್ಡಮನುಷ್ಯರುಗಳು ಪ್ರದರ್ಶನ ವಸ್ತುಗಳಿಗಾಗಿ ತಮ್ಮ ಮೆಚ್ಚಿಗೆಯನ್ನು ಕೊಟ್ಟು, ಉತ್ತಮವಾದ ಪದಾರ್ಥಗಳನ್ನು ತಯಾರಿಸಿದ್ದ ವಿದ್ಯಾರ್ಥಿನಿಯರುಗಳಿಗೆ ಬಹುಮಾನವನ್ನು ದಯಪಾಲಿಸಿದರು. ಈ ಸಮಯದಲ್ಲಿ ಮ॥ ಎಂ. ಎಚ್. ಹರಿಯಣ್ಣನವರು ವ್ಯಾಪಾರ, ಕೈಗಾರಿಕೆ, ವ್ಯವಸಾಯ, ವಿದ್ಯಾಭಿವೃದ್ಧಿ ಇವುಗಳ ವಿಚಾರವಾಗಿ ಸರ್ಕಾರದವರು ಮಾಡಿರತಕ್ಕ ಅನುಕೂಲಗಳನ್ನು ಕುರಿತು ಉಪನ್ಯಾಸಮಾಡಿದರು. ತರುವಾಯ ವಿದ್ಯಾಭಿವೃದ್ಧಿಯಲ್ಲಿ ಕೇವಲ ಆಸಕ್ತಿಯನ್ನು ತೋರಿಸುತ್ತಿರುವ ಹೆ॥ಮಾ॥ ಕೃಷ್ಣಮೂರ್ತಿಗಳಿಗೆ ಕೃತಜ್ಞತೆಯನ್ನು ಅರ್ಪಿಸಿದರು. ಸಾಯಂಕಾಲ ಶ್ರೀ ಪ್ರಸನ್ನರಾಮೇಶ್ವರಸ್ವಾಮಿಯವರ ಉತ್ಸವವು ಅತಿ ವಿಜೃಂಭಣೆಯಿಂದ ನಡೆಸಲ್ಪಟ್ಟಿತು. ಈ ಮಹಾಕಾರ್ಯವು ಯಾವ ನ್ಯೂನತೆಯೂ ಇಲ್ಲದಂತೆ ಗ್ರಾಮಸ್ಥರು ಏಕೀಭವಿಸಿ ನಡಸಿದ್ದು ಶ್ಲಾಘನೀಯವಾಗಿದೆ. ಈ ರೀತಿ ಎಲ್ಲಾ ಕಡೆಗಳಲ್ಲೂ ನಮ್ಮ ಚಕ್ರವರ್ತಿ ಸಾರ್ವಭೌಮರವರಿಗೆ ಜಯವುಂಟಾಗಬೇಕೆಂದು ದೇವರ ಸೇವೆಗಳು ನಡೆಯಬೇಕೆಂಬುದೇ ನಮ್ಮ ಪ್ರಾರ್ಥನೆ.

ಪ್ರತ್ಯಕ್ಷದರ್ಶಿ.

---

೨ ನೆಯ ಕೌನ್ಸಿಲರ ಮಲೆನಾಡಿನ ಸಂಚಾರ.

ಸಂಸ್ಥಾನದ ಎರಡನೆಯ ಕೌನ್ಸಿಲರಾದ ಮೆಹರ್ಬಾನ್ ಸರದಾರ್ ಎಂ. ಕಾಂತರಾಜಅರಸ್, ಬಿ.ಎ., ಸಿ.ಎಸ್.ಐ; ಯವರು ಮಲೆನಾಡಿನ ಪ್ರಾಂತ್ಯ ಸಂಚಾರ ಬಂದಿದ್ದಾಗ್ಯೆ ಹಾಸನ ಡಿ॥ ಡೆ॥ ಕ॥ ಮೆ॥ ಬಿ. ರಾಮಸ್ವಾಮಯ್ಯ, ಬಿ.ಎ, ಬಿ.ಎಲ್, ರವರು ಮೊದಲಾದ ಡಿಸ್ಟ್ರಿಕ್ಟ್ ಅಧಿಕಾರಿಗಳೊಡನೆ ಸಾಳ್ಯೆ ಮೊಕ್ಕಾಮಿನಿಂದ ಮಹಾರಾಜನ ದುರ್ಗವನ್ನು ಪರಾಮರಿಸಿಕೊಂಡು ತಾ॥ ೧೪-೪-೧೫ ನೇ ಬೆಳಿಗ್ಗೆ ೧೦ ಗಂಟೆಗೆ ಸಕಲೇಶಪುರದ ಟ್ರಾವಲರ್ಸ್ ಬಂಗಲೆಯಬಳಿ ಮನೋಹರವಾಗಿ ರಚಿಸಲ್ಪಟ್ಟಿದ್ದ ಮಂಟಪದೊಳಕ್ಕೆ ದಯಮಾಡಿಸಿದೊಡನೆ ತಾ॥ ಬೋರ್ಡ್ ಮ್ಯುನಿಸಿಪಲ್ ಕೌನ್ಸಿಲ್ ಮೆಂಬರುಗಳು, ಸಾಹುಕಾರರುಗಳು ಮೊದಲಾದವರೆಲ್ಲರೂ ಶ್ರೀಯವರಿಗೆ ಮರ್ಯಾದೆಯನ್ನು ಮಾಡಿ, ಫಲಪುಷ್ಪಗಳನ್ನೊಪ್ಪಿಸಿದಮೇಲೆ ಪರಸ್ಪರ ಕುಶಲಪ್ರಶ್ನೆಗಳು ನಡೆದು ಶ್ರೀಯವರು ಬಂಗಲೆಯೊಳಕ್ಕೆ ಚಿತ್ತೈಸಿದರು. ಮಧ್ಯಾಹ್ನ ಭೋಜನಾನಂತರ ಅಲಂಕೃತವಾಗಿದ್ದ ಊರಿನೊಳಗೆ ಚಿತ್ತೈಸಿ, ಸ್ಕೂಲು ಮೊದಲಾದ ಸ್ಥಳಗಳನ್ನು ಪರಾಮರಿಸಿಕೊಂಡು ಬಂದು, ತಾ॥ ೧೫ ರ ಬೆಳಿಗ್ಗೆ ೬ ಗಂಟೆಗೆ ಸಕಲೇಶಪುರದಿಂದ ದೋಣಿಗಾಲಿಗೆ ಹೊರಟು ಆ ಗ್ರಾಮದ ಬಳಿ ಬಹಳ ಮನೋಹರವಾಗಿ ರಚಿಸಿದ್ದ ಮಂಟಪದ ಬಳಿಗೆ ಚಿತ್ತೈಸುತಲೆ ದೋಣಿಗಾಲ್ ಕಾಫಿ ಪ್ಲಾಂಟರಾದ ಮ॥ ಡಿ. ಶಾಂತಮಲ್ಲೇಗೌಡರು, ಮತ್ತು ಇವರ ಸಹೋದರರಾದ ಮ॥ ಡಿ. ನಂಜೇಗೌಡರು ಪುರಜನರೊಡನೆ ವಾದ್ಯಗಳು ನೊಳಗುತ್ತಿರುವಾಗ್ಗೆ ಇದಿರ್ಗೊಂಡು ಮರ್ಯಾದಿಸಿ, ಫಲಪುಷ್ಪಗಳನ್ನೊಪ್ಪಿಸಿದರು. ಸರದಾರರು ಎಲ್ಲರ ಕ್ಷೇಮವನ್ನೂ ವಿಚಾರಿಸಿ ಮುಂದೆ ನಡೆದು ಮಲೆನಾಡಿನ ಗುಡ್ಡಬೆಟ್ಟಗಳನ್ನು ಪರಾಮರಿಸಿಕೊಂಡು, ಮಧ್ಯಾಹ್ನ ೧ ಗಂಟೆಯ ಸಮಯಕ್ಕೆ ದೋಣಿಗಾಲಿಗೆ ಹಿಂದಿರುಗಿ ಬರುತಲೆ ಕಾಫಿ ಪ್ಲಾಂಟರುಗಳಾದ ಶಾಂತಮಲ್ಲೇಗೌಡರು ಮತ್ತೂ ಇವರ ತಮ್ಮ ನಂಜೇಗೌಡರು ಕೌನ್ಸಿಲರನ್ನು ಇದಿರ್ಗೊಂಡು ತಮ್ಮ ಮನೆಗೆ ಚಿತ್ತೈಸಬೇಕೆಂದು ಪ್ರಾರ್ಥಿಸಿಕೊಂಡ ಮೇರೆಗೆ, ಡೆ॥ ಕ॥ ಸಾಹೇಬರವರಾದ ಮೆ॥ ಬಿ. ರಾಮಸ್ವಾಮಯ್ಯ, ಬಿ.ಎ, ಬಿ.ಎಲ್; ರವರು ಸಕಲೇಶಪುರ ಸ॥ಡಿ॥ ಆ॥ಕ॥ ಮೆ॥ ಎಂ. ಸದಾಶಿವರಾವ್, ಬಿ.ಎ., ಬಿ.ಎಲ್, ರವರು ಡಿ॥ ಫಾ॥ ಕನ್ಸರ್‌ವೇಟರ್ ಸಾ॥ ರಾದ ಮೆ॥ ಜಿ. ಹೀರಾಸಿಂಗ್‌ಯವರು, ಡಿ॥ ಎಕ್ಸೈಜು ಆ॥ಕ॥ ಮೆ॥ ಬಿ. ಶಾಮಣ್ಣನವರು, ಕಡೂರು ಹಾಸನ ಡಿ॥ ಗಳ ಮಲ್ನಾಡು ಇ॥ ಸ್ಕೀಂ ಸ್ಪೆಷಲ್ ರೆವಿನ್ಯೂ ಆಫೀಸರಾದ ಮೆ॥ ಆರ್. ನಾನಾಸಾಮಿರಾಯರವರು, ಡಿ॥ ಪೋ॥ ಸೂಪರಿಂಟೆಂಡೆಂಟ್, ಮೆ॥ ಕೆ. ವಿ. ಅನಂತರಾಮ್ಸ ಬಿ.ಎ., ಬಿ.ಎಲ್, ರವರು, ಮಂಜರಾಬಾದ್ ತಾ॥ ಅಮಲ್ದಾರ್ ಮ॥ ಆರ್. ತಿರುನಾರಣಯ್ಯಂಗಾರ್ ಬಿ.ಎ., ಯವರು ಸ್ಪೆಷಲ್ ಸ್ಯಾನಿಟರಿ ಆಫೀಸರಾದ ಡಾ॥ ಎ ಫರ್ನಾಂಡಿಸ್‌ರವರು, ಪ್ರೋ॥ ಇ॥ ಮ॥ ನಾರಿಸ್‌ಯವ ಮುಂತಾದ ಆಫೀಸರುಗಳ ಸಮೇತ ಸವಾರಿಯು ವಾ ಘೋಷ ಬಿರುದಾವಳಿಗಳೊಡನೆ ಮನೆಗೆ ಚಿತ್ತೈಸಿ ಚಿತಾಸನಗಳಲ್ಲಿ ಮುಹೂರ್ತಮಾಡಿಸಿದರು. ಸಂಗೀತ, ಫೋನೋಗ್ರಾಪು ಮುಂತಾದ ವಿನೋದದಿಂದ ತೃಪ್ತಿಪಡಿಸಿ ರಾ, ತುರಾಯಿ, ಪನ್ನೀರು, ಗಂಧಗಳನ್ನು ಅರ್ಪಿಸಿ ಶ್ರೀ ವರ ಶ್ರೇಯಸ್ಸನ್ನು ಬಯಸಿ, ಬಹು ಸ್ವಾರಸ್ಯವಾದ ವಿಜ್ಞಾಪನಾಪತ್ರಿಕೆಯನ್ನು ಮೆ॥ ಡಿ. ನಂಜೇಗೌಡರು, ಓದಿ ಒಪ್ಪಿ ದ್ದನ್ನು ಸರದಾರರು ವಿಶ್ವಾಸದಿಂದಸ್ವೀಕರಿಸಿ,ತಕ್ಕ ಉತ್ತ ವನ್ನಿತ್ತು ಸರ್ವರೊಡನೆ ಬಹಳ ಸಂತೋಷಚಿತ್ತರಾಗಿ ಸ ಲೇಶಪುರಕ್ಕೆ ಸ್ವಾರಿಯು ಚಿತ್ತೈಸಿತು. ಮೇಲೆಕಂಡ ಕಾಫಿ ಪ್ಲಾಂಟರುಗಳೇರ್ವರೂ ಯಾವಾಗ್ಯೂ ರಾಜಕಾರ್ಯ ಹಿತಚಿಂತಕರಾಗಿಯೂ,ಜನಾನುರಾಗಿಗಳಾಗಿಯೂ ಇರುವುದು ಬಹು ಸಂತೋಷಕರವಾಗಿರುತ್ತದೆ. ಇದಕ್ಕನುಸಾರವಾಗಿ ಹಾಸನ ಡಿ॥ ಡಿಪ್ಯುಟಿ ಕ॥ ಸಾ॥ ರವರು ಸ॥ಡಿ॥ ಆ॥ಕ॥ ಸಾ॥ರು ಸಹ ಮಲ್ನಾಡುಸಂಚಾರದಿಂದ ಪ್ರಜೆಗಳ ಆರೋಗ್ಯಾಭಿವೃದ್ಧಿ ಮುಂತಾದ ವಿಚಾರದಲ್ಲಿ ಪ್ರಜಾನುರಾಗಿಗಳಾಗಿರುವುದು ಮಲ್ನಾಡು ಪ್ರಜೆಗಳ ಭಾಗ್ಯೋದಯವೆಂದು ಎಣಿಸಬೇಕಾಗಿದೆ. ಅಲ್ಲದೆ ಮಂಜರಾಬಾದು ತಾಲ್ಲೋಕ್ ಅಮಲ್ದಾರ್ ಮೆ॥ ಆರ್. ತಿರುನಾರಣಯ್ಯಂಗಾರ್, ಬಿ. ಎ, ಯವರು ಈ ತಾಲ್ಲೋಕಿಗೆ ಬಂದ ಲಾಗಾಯ್ತು ತಾಲ್ಲೋಕಾಮಳೆ ಪ್ರತಿಗ್ರಾಮ ಸಂಚಾರಮಾಡಿ, ಮಲ್ನಾಡು ಇಂಪ್ರೂವ್‌ಮೆಂಟ್ ಸ್ಕೀಮು ಪಿ. ವಿ. ಇ॥ ಸ್ಕೀಮುಗಳ ಜಾರಿ ವಿಚಾರದಲ್ಲಿಯೂ ವ್ಯವಸಾಯ ಗ್ರಾಮಾಭಿವೃದ್ಧಿ ಸಂಘ ಸ್ಕೂಲು ಮುಂತಾದ ಏರ್ಪಾಡುಗಳಲ್ಲಿಯೂ ನಿರತರಾಗಿ ಮೃಗಪ್ರಾಯರಾಗಿರುವ ಮಲ್ನಾಡು ಜನರನ್ನು ಉತ್ತಮ ಮಾರ್ಗಕ್ಕೆ ತರಬೇಕೆಂಬುದರಲ್ಲಿಯೇ ತುಂಬಾ ಆಸಕ್ತಚಿತ್ತರಾಗಿರುತ್ತಾರೆ. ಇಂಥ ಶಕ್ತರನ್ನು ದಯಾಳುಗಳಾದ ಘನಸರ್ಕಾರದವರು ದೀರ್ಘಕಾಲ ಈ ತಾಲ್ಲೋಕಿನಲ್ಲಿ ನಿಲ್ಲಿಸಿಕೊಟ್ಟದಾದರೆ ಮಲೆನಾಡು ಪ್ರಜೆಗಳು ಅಭಿವೃದ್ಧಿಗೆ ಬರಲು ಏನೊಂದೂ ಅಡ್ಡಿ ಇರುವುದಿಲ್ಲ. ಇವರ ಶ್ರಮಸಾರ್ಥಕ್ಕನುಸಾರವಾಗಿ ಸರ್ಕಾರದವರು ಬಲಾತ್ಕಾರ ವಿದ್ಯಾಭ್ಯಾಸದ ರೂಲ್ಸನ್ನು ಈ ಮಂಜರಾಬಾದು ತಾ॥ ಪ್ರತಿಹೋಬಳಿಗೂ ಜಾರಿಗೆತಂದದ್ದಾದರೆ ಮಲೆನಾಡುಪ್ರಜೆಗಳ ಭಾಗ್ಯೋದಯವಾಗುವುದೆಂದೆಣಿಸಬೇಕಾಗುತ್ತದೆ. ಶ್ರೀಮತ್ ಕೌನ್ಸಿಲರ್ ಸಾ॥ ರವರ ಮೇಲೆಕಂಡ ಮತ್ತು ಸಂಚಾರಮಾರ್ಗದಲ್ಲಿ ಇವರು ಮಾಡಿದ ಏರ್ಪಾಡು ಬಹು ಶ್ಲಾಘ್ಯತರವಾಗಿದ್ದಿತು.

ಪ್ರೇಕ್ಷಕ.

ಮ॥ ಎ. ಮಹಾದೇವಶಾಸ್ತ್ರಿಗಳ ಭಾಷಣ.

(ಕಳೆದವಾರದ ಶೇಷ.)

ವರ್ಣ-ಆಶ್ರಮ-ಧರ್ಮ-ಎಂಬ ಶಬ್ದಗಳ ನಿಜವಾದ ಅರ್ಥವನ್ನು ನಾವು ಉತ್ತಮಶಾಸ್ತ್ರವಚನಾಧಾರದಿಂದ ನಿಶ್ಚಯಿಸಬೇಕು. ಈ ಪ್ರಪಂಚವು ಹೇಗೆ ನಡೆಯಿಸಲ್ಪಡುತ್ತದೋ ಆ ವಿಷಯವೇ ಪ್ರಥಮಧರ್ಮವೆನಿಸಿಕೊಳ್ಳುತ್ತಿದ್ದಿತು. ಈ ಜಗತ್ತೆಲ್ಲವೂ ಪರಬ್ರಹ್ಮನ ಅಪರ ಪ್ರಕೃತಿಯೆಂತಲೂ, (ಆ ಪರಬ್ರಹ್ಮನಲ್ಲಿ ಶ್ರೇಷ್ಠ ಕನಿಷ್ಠವೆನಿಸಿಕೊಂಡಿರುವ ೨ ಭಾಗಗಳಲ್ಲಿ ಶ್ರೇಷ್ಠವಾದ ಭಾಗವೇ ಪರಪ್ರಕೃತಿಯೆನಿಸಿಕೊಳ್ಳುವುದು; ಕನಿಷ್ಠಭಾಗವೇ ಅಪರಪ್ರಕೃತಿಯೆನಿಸಿಕೊಂಡಿರುವುದು. ಪರಪ್ರಕೃತಿಯು ಅಪರಪ್ರಕೃತಿಯನ್ನು ಪರಿಪಾಲಿಸುತ್ತಲೂ ನಡೆಯಿಸುತ್ತಲೂ ಇರುವುದೆಂದು ಭಗವದ್ಗೀತೆಯಲ್ಲಿ ಹೇಳಲ್ಪಟ್ಟಿದೆ.) ಅದುಕಾರಣ, ಧರ್ಮವೆಂದರೆ-ಜಗದ್ವಿಸ್ತರಣಕಾರ್ಯದಲ್ಲಿ ದ್ಯೋತಕವಾಗುವ ದೈವನಿರ್ದೇಶವೆಂದೇ ಸ್ಪಷ್ಟವಾಗುತ್ತದೆ. ಪರಬ್ರಹ್ಮನ ಭಾವಕ್ಕೆ ಅನುಗುಣವಾಗಿ ತನ್ನ ಭಾವವನ್ನು ಮಾರ್ಪುಗೊಳಿಸುಕೊಳ್ಳುವುದೇ ಮನುಷ್ಯಧರ್ಮವೆನಿಸಿಕೊಳ್ಳುತ್ತದೆ. ಎಂದರೆ - ವೇದದಲ್ಲಿನ ಪ್ರಥಮಾಜ್ಞೆಯನ್ನು ಅನುಸರಿಸುವುದೇ, ಪರಬ್ರಹ್ಮನ ಭಾವವನ್ನನುಸರಿಸಿದ ಚರ್ಯೆಯನ್ನು ತನ್ನಲ್ಲುಂಟುಮಾಡಿಕೊಳ್ಳುವ ಪ್ರಯತ್ನವೆನಿಸಿಕೊಳ್ಳುವುದು. ಭಗವದಾಜ್ಞಾನುಸಾರವಾಗಿ ನಡೆಯುತ್ತ ಜಗತ್ತಿನಲ್ಲಿ ಭಗವನ್ಮಹಿಮೆಯನ್ನು ವಿಸ್ತರಿಸುವುದಕ್ಕಾಗಿ ತನ್ನ ಸರ್ವಶಕ್ತಿಯನ್ನೂ ಉಪಯೋಗಿಸುವುದೇ ಮನುಷ್ಯನ ಮುಖ್ಯಧರ್ಮವೆಂದು ವೇದದಲ್ಲಿನ ಮುಖ್ಯಾಜ್ಞಾವಚನಗಳು ವಿಧಿಸುತ್ತಲಿವೆ. ಇದಕ್ಕೇ ವರ್ಣವೆಂದು ಹೆಸರು. ಭಗವದ್ಭಾವಾನುಸಾರವಾಗಿ ತನ್ನ ಚರ್ಯೆಯನ್ನು ಮಾರ್ಪುಗೊಳಿಸಿಕೊಳ್ಳಲು ಪ್ರಯತ್ನಿಸುವವನೂ ಆತ್ಮಲಾಭವನ್ನು ನೋಡಿಕೊಳ್ಳದೆ ಧರ್ಮವನ್ನನುಸರಿಸಿ ಭಗವದ್ಭಾವಾನುಸಾರವಾಗಿ ಪ್ರವರ್ತಿಸುವವನೂ, ವರ್ಣಗಳಿಗೆ ಸೇರಿದವನೆನಿಸಿಕೊಳ್ಳುವನು. ವೇದಗಳಲ್ಲಿರುವ ಈ ಮುಖ್ಯಾದೇಶವೇ ವೇದಹೃದಯವಾಗಿರುವುದು. ಇದೇ ಪರಿತ್ಯಾಗವೆನ್ನಿಸಿಕೊಳ್ಳುವ ಉತ್ತಮಧರ್ಮವು. ಇದೇ ಮುಖ್ಯವಾದ ಸೋಮಯಾಗವು.

ಬ್ರಾಹ್ಮಣನೆಂದರೆ ಯಾರು?-ಈ ಪೂರ್ವೋಕ್ತವಾದ ಧರ್ಮಾಚರಣವುಳ್ಳವನು ಯಾವಜಾತಿಯಲ್ಲಿ ಹುಟ್ಟಿದವನಾಗಿದ್ದರೂ ಬ್ರಾಹ್ಮಣನಾಗುವನೆಂಬುದೇ ನಿಜವಾದ ವೇದಮತವು. ಭಗವತ್ಸ್ವರೂಪವನ್ನರಿಯಬೇಕೆಂದಪೇಕ್ಷಿಸುವವನೂ, ಪರಮಭಕ್ತನೂ ಆದಾತನೇ ಬ್ರಾಹ್ಮಣನೆನಿಸಿಕೊಳ್ಳುವನೆಂದು ವೇದಮತವು ಬೋಧಿಸುತ್ತದೆ. ಯಾವನಾದರೊಬ್ಬನು ಯಾವುದೋ ಒಂದು ಮನುಷ್ಯವರ್ಗದ ಆಚಾರಗಳಿಗೆ ಬದ್ಧನಾಗಿರದೆ ಸರ್ವವ್ಯಾಪಿಯಾದ ಪರಮಾತ್ಮನ ವಿಸ್ತಾರವಾದ ಧರ್ಮವನ್ನು ಅನುಸರಿಸಿ, ಉತ್ತಮರೀತಿಯಿಂದಲೂ, ಉದಾರಭಾವದಿಂದಲೂ, ಜೀವಯಾತ್ರೆಯನ್ನು ನಡೆಯಿಸುವನೋ ಆತನೇ ಬ್ರಾಹ್ಮಣನು. ಬ್ರಾಹ್ಮಣನೆಂಬ ಹೆಸರು ಆತನಿಗೇ ವರ್ತಿಸುವುದು. ಸ್ತ್ರೀಯೇ ಆಗಲಿ ಪುರುಷನೇ ಆಗಲಿ ಯಾವವಿಧವಾಗಿ ಭಗವಂತನನ್ನು ಧ್ಯಾನಿಸುತ್ತಿದ್ದರೂ ಇಂಥ ಉತ್ತಮಾಧ್ಯಾತ್ಮಿಕ ಧರ್ಮವನ್ನು ಅವಲಂಬಿಸಿ ಪ್ರವರ್ತಿಸಿದರೆ ಬ್ರಾಹ್ಮಣತ್ವವನ್ನು ಪಡೆದುಕೊಳ್ಳಬಹುದೆಂಬುದೇ ವೇದಮತವು.

ಮತವೆನಿಸಿಕೊಳ್ಳತಕ್ಕ ಪ್ರತಿಯೊಂದು ಸಂಪ್ರದಾಯವೂ ಭಿನ್ನಭಿನ್ನವಾಗಿದ್ದರೂ, ಆ ಸಂಪ್ರದಾಯಗಳನ್ನವಲಂಬಿಸಿದವರೆಲ್ಲರ ಆತ್ಮವೂ ಶರೀರಕ್ಕೆ ವಿಲಕ್ಷಣವಾಗಿಯೂ, ಜರಾಮರಣರಹಿತವಾಗಿಯೂ, ಸ್ವೇಚ್ಛಾಚಾರಸಂಪನ್ನವಾಗಿಯೂ ಇರುವ ಕಾರಣ, ಅಂತಹ ಆತ್ಮವು ನಿರುಪಾಧಿಕವಾಗಿ ಎಂಥ ಉತ್ತಮಮಾರ್ಗದಲ್ಲಿ ಪ್ರವರ್ತಿಸುವುದೋ ಅಂಥ ಉತ್ತಮಮಾರ್ಗದಲ್ಲೇ ಶರೀರಬದ್ಧರಾದವರೆಲ್ಲರೂ ಇಹಲೋಕದಲ್ಲಿ ಪ್ರವರ್ತಿಸುವವರಾಗಬೇಕೆಂದು ವೇದವು ಬೋಧಿಸುತ್ತಿದೆಯಾದಕಾರಣ, ಭಿನ್ನಭಿನ್ನಮತಕರ್ತರುಗಳೆಲ್ಲರೂ ಇಂಥ ಉದಾರಭಾವನೆಯಿಂದ ಭಗವಂತನನ್ನು ಅರಿತುಕೊಳ್ಳುವುದಕ್ಕೆ ಪ್ರಯತ್ನಿಸಿರುವರಾದುದರಿಂದ, ಅವರುಗಳು ಅವಲಂಬಿಸಿದ ವಿಧಾನಗಳು ಬೇರೆಬೇರೆಯಾಗಿದ್ದರೂ ಅವರೆಲ್ಲರೂ ವೇದಮತಾನುಸಾರವಾಗಿ ಬ್ರಾಹ್ಮಣರೇ ಸವರ್ಣರೇ ಆಗುವರು. ಎಂದರೆ-ಅವರೆಲ್ಲರೂ ಭಗವಂತನನ್ನು ಅನುಸರಿಸಬೇಕೆಂದಪೇಕ್ಷಿಸುವವರೇ ಆಗಿರುವರು. ವರ್ಣ-ಬ್ರಾಹ್ಮಣಶಬ್ದಗಳ ಅರ್ಥವು ಹೇಗಿರುವುದೆಂಬುದನ್ನು ನಾವು ಸಂಪೂರ್ಣವಾಗಿ ಗ್ರಹಿಸಿಕೊಂಡರೆ ಮಹಾಭಾರತದಲ್ಲಿ ಭೃಗುಮಹರ್ಷಿಯೂ, ಬೌದ್ಧಮತಗ್ರಂಥಗಳಲ್ಲಿ ಬುದ್ಧಭಗವಂತನೂ ಹೇಳಿರುವ ವಿಷಯಗಳು ನಮಗೆ ಸುಲಭಗ್ರಾಹ್ಯಗಳಾಗುವುವು. "ಬೇರೆಬೇರೆ ವರ್ಣಗಳಿದ್ದರೂ ಅವುಗಳಲ್ಲಿ ಪ್ರತ್ಯೇಕಿಸಲ್ಪಡಬಹುದಾದ ಭೇದವೇನೂ ಇಲ್ಲ; ಪ್ರಪಂಚವೆಲ್ಲವೂ ಬ್ರಾಹ್ಮಣಮಯವೇ. ಮೊದಲು ಎಲ್ಲರೂ ಬ್ರಾಹ್ಮಣರೇ. ಈಗ ಅವರವರು ಅವಲಂಬಿಸುವ ವೃತ್ತಿಗಳನ್ನನುಸರಿಸಿ ಕ್ಷತ್ರಿಯ ವೈಶ್ಯ ಶೂದ್ರಾದಿನಾಮಗಳು ಆ ಬ್ರಾಹ್ಮಣರಲ್ಲಿ ಕೆಲವರಿಗೆ ಪ್ರಾಪ್ತವಾಗಿವೆ" ಈ ರೀತಿಯಾದ ವೇದಗಳ ಮತ್ತೂ ಮಹರ್ಷಿಗಳ ಅಭಿಪ್ರಾಯವನ್ನು ಅನುಸರಿಸಿ, ಜಗತ್ತಿನಲ್ಲಿ ಬೇರೆಬೇರೆಯಾಗಿರುವ ಮತಧರ್ಮಗಳನ್ನನುಸರಿಸುವವರೆಲ್ಲರೂ ಬಹಿರಾಚಾರದಲ್ಲಿ ಭಿನ್ನರಾಗಿ ಕಂಡುಬರುತ್ತಿದ್ದರೂ ಅವರೆಲ್ಲರೂ ಅಧ್ಯಾತ್ಮವಿಷಯದಲ್ಲಿ ಅಭಿನ್ನರೇ ಆಗಿರುವರು. ಎಲ್ಲರೂ ಭಗವದ್ಭಕ್ತರೇ. ಅದುಕಾರಣ, ಭಿನ್ನಭಿನ್ನಮತಗಳವರಿಗೆ ಮತವಿಷಯದಲ್ಲಿ ವೈರುಧ್ಯವೆಂಬುದೇನೂ ಇಲ್ಲವೇ ಇಲ್ಲ. ಮನುಷ್ಯರ ವರ್ಣಧರ್ಮವೆಂದರೆ ಭಗವದ್ಭಕ್ತಿಯೇ ಆಗಿರುವುದು. ಮನುಷ್ಯನು ತನ್ನಲ್ಲಿರುವ ಆತ್ಮನು ದೈವಸ್ವರೂಪಿಯೆಂದು ಗ್ರಹಿಸಿಕೊಳ್ಳುವುದಕ್ಕೆ ಪ್ರಯತ್ನಿಸಿ, ಭಗವಂತನ ಉದ್ದೇಶವನ್ನು ಅನುಸರಿಸಿ, ಭಗವಂತನ ಮಹಿಮೆಯನ್ನು ಜಗತ್ತಿನಲ್ಲಿ ವಿಸ್ತರಿಸುವುದಕ್ಕಾಗಿ ತನ್ನ ಕೈಲಾದಮಟ್ಟಿಗೂ ಪ್ರಯತ್ನಪಡುವುದೇ ಧರ್ಮವೆನ್ನಿಸಿಕೊಳ್ಳುವುದೆಂದು ಮೇಲೆಯೇ ಹೇಳಲ್ಪಟ್ಟಿದೆ.

ಈ ವರ್ಣಧರ್ಮಗಳಿಂದ ವಿಭಾಗಗಳು ಹೇಗೆ ಉಂಟಾಯಿತೋ, ಈಗ ತಿಳಿಯಲ್ಪಡುತ್ತಿರುವಂತೆ ವರ್ಣಧರ್ಮವೆಂದರೆ ಜಾತಿಧರ್ಮವೆಂಬ ಅರ್ಥವು ಹೇಗೆ ಉಂಟಾಯಿತೋ ಅದನ್ನು ನಾವು ಈಗ ಗ್ರಹಿಸಬೇಕಾಗಿದೆ. ಆಶ್ರಮಧರ್ಮಗಳ ಸ್ವರೂಪವನ್ನು ನಾವು ಅರಿಯುವುದಕ್ಕೆ ಪ್ರಯತ್ನಿಸಿದರೆ ನಮಗೆ ಈ ವರ್ಣಧರ್ಮಗಳ ವಿಷಯವು ಸ್ಪಷ್ಟವಾಗುವುದು. ದೈವಭಕ್ತನು ಸತ್ಯ (ತ್ರಿಕರಣಗಳಿಗೆ ವಿರುದ್ಧವಾದ ಮಾತನ್ನಾಡದಿರುವುದು) ವೇದ (ಆಧ್ಯಾತ್ಮಿಕಧರ್ಮವನ್ನೂ, ಆಧ್ಯಾತ್ಮಿಕಪ್ರಚಾರವನ್ನೂ ಗ್ರಹಿಸುವುದು) ಕರ್ಮ (ಪ್ರಪಂಚಸೇವೆಯನ್ನು ಮಾಡುವುದು) ದಮ (ತನ್ನನ್ನು ತನ್ನ ಅಧೀನದಲ್ಲಿರಿಸಿಕೊಳ್ಳುವಂತೆ ಮಾಡುವುದು) ತಪಸ್ಸು (ಆಧ್ಯಾತ್ಮಿಕವಿಧಾನವನ್ನು ನಿಶ್ಚಲವಾಗಿರುವಂತೆ ಅವಲಂಬಿಸುವುದು) ಈ ಸುಗುಣಗಳನ್ನು ವೃದ್ಧಿಪಡಿಸಿಕೊಳ್ಳುತ್ತ, ಭಗವಂತನಲ್ಲಿ ಐಕ್ಯವನ್ನು ಪಡೆದುಕೊಳ್ಳುವುದಕ್ಕಾಗಿ ಪ್ರಯತ್ನಿಸಬೇಕೆಂದು ಕೇನೋಪನಿಷತ್ತಿನಲ್ಲಿ ಹೇಳಲ್ಪಟ್ಟಿದೆ. ಬ್ರಹ್ಮಚರ್ಯ ಮೊದಲಾದ ನಾಲ್ಕು ಆಶ್ರಮಗಳಲ್ಲಿಯೂ ಮನುಷ್ಯನು ಈ ಸುಗುಣಗಳನ್ನು ಪಡೆಯುವುದಕ್ಕಾಗಿ ಸಾಧನಮಾಡಬೇಕಾಗಿದೆ. ಸತ್ಯವೆಂಬುದು ಅಧ್ಯಾತ್ಮಿಕ ಸಂಪದಾರ್ಜನೆಗಾಗಿ ಸಕಲಾಶ್ರಮಗಳವರಿಗೂ ವಿಧಾಯಕವಾಗಿದ್ದೇತೀರಬೇಕು. ಉಳಿದ ವೇದ-ಕರ್ಮ-ದಮ-ತಪಸ್ಸೆಂಬಿವುಗಳನ್ನು ಸತ್ಯದ ಜತೆಗೇ ಎಲ್ಲವನ್ನೂ ಅಥವಾ ಒಂದನ್ನು ಅಭ್ಯಸಿಸಿದಬಳಿಕ ಮತ್ತೊಂದರಂತೆಯೂ ನಾಲ್ಕಾಶ್ರಮಗಳಲ್ಲೂ ಅಭ್ಯಸಿಸಬೇಕಾಗಿದೆ. ಮನುಸ್ಮೃತಿ ಮೊದಲಾದ ಸ್ಮೃತಿಗಳಲ್ಲಿ ವೇದ ಕರ್ಮ ದಮ ತಪಸ್ಸುಗಳೆಂಬ ಈ ನಾಲ್ಕೂ ಬ್ರಹ್ಮಚಾರಿ-ಗೃಹಸ್ಥ-ವಾನಪ್ರಸ್ಥ-ಸನ್ಯಾಸಿಗಳೆಂಬ ನಾಲ್ಕು ಆಶ್ರಮದವರಿಂದಲೂ ಕ್ರಮವಾಗಿ ಒಂದೊಂದಾಶ್ರಮದಲ್ಲೊಂದೊಂದರಂತೆ ಅಭ್ಯಾಸಿಸಬೇಕೆಂದೇ ಹೇಳಲ್ಪಟ್ಟಿದೆ. ಮಾನವಸೇವೆಯಲ್ಲಿ ಭಗವಂತನನ್ನು ಅರಿತುಕೊಳ್ಳುವುದಕ್ಕಾಗಿ ಮಾಡಬೇಕಾದ ಸಾಧನಗಳು ಗೃಹಸ್ಥಾಶ್ರಮದಲ್ಲೇ ಆಚರಿಸಲ್ಪಡಬೇಕು. ಎಂದರೆ-ಈ ಆಶ್ರಮದಲ್ಲಿ ಗೃಹಸ್ಥನು ತನಗೆ ದೊರೆದಿರುವ ಮತ್ತೂ ತಾನು ಅಭ್ಯಸಿಸಿದ ಸರ್ವಶಕ್ತಿಗಳನ್ನೂ ಭೂತಸೇವೆಗಾಗಿಯೇ ವಿನಿಯೋಗಿಸಬೇಕು. (ಭೂತಸೇವೆಯೆಂದರೆ-ಮನುಷ್ಯಜಾತಿಯ ಮಾತ್ರವಲ್ಲದೆ ಪ್ರಾಣವಿರುವ ಸಮಸ್ತಜೀವಿಗಳ ಸೇವೆಯನ್ನು ಮಾಡಬೇಕೆಂದರ್ಥವು) ಈ ಸೇವೆಯನ್ನು ಮಾಡುವುದರಲ್ಲಿ ಗೃಹಸ್ಥನು ತಾನು ಭಗವಂತನ ಸೇವೆಯನ್ನು ಮಾಡುತ್ತಿರುವೆನೆಂಬ ನಿಶ್ಚಯಭಾವದಿಂದಲೇ ಮಾಡುತ್ತಿರಬೇಕು. ಇದೇ ವರ್ಣಧರ್ಮವೆನಿಸಿಕೊಳ್ಳುವುದು.

ಪ್ರಜೆಗಳಿಗೆ ಅವಶ್ಯಕವಾದ ಸಾಧನಗಳು ಸರ್ವಸಾಮಾನ್ಯವಾಗಿರುವಾಗ ಎಲ್ಲರೂ ಒಂದೇ ರೀತಿಯಿಂದಲೇ ಸಂಘಸೇವೆಯನ್ನು ಮಾಡಬಹುದು. ಆಗ ಸಂಘದವರೆಲ್ಲರೂ ಒಂದೇ ವರ್ಗದವರೇ ಆಗುವರು. ಹಾಗೆ ಸಂಘದಲ್ಲಿರುವವರೆಲ್ಲರೂ ಸೌಮ್ಯಜೀವರೇ ಆಗಿದ್ದುದರಿಂದ ಒಬ್ಬರಿಗೊಬ್ಬರು ಮಾಡಬೇಕಾದ ಸೇವೆಯು ಇಲ್ಲದೆಯೇ ಹೋಗಿ ಎಲ್ಲರೂ ಆಧ್ಯಾತ್ಮಿಕ ವಿಷಯದಲ್ಲೇ ಹೆಚ್ಚಾಗಿ ದೀಕ್ಷಿತರಾಗಿದ್ದರು. ಎಲ್ಲರೂ ಬ್ರಾಹ್ಮಣರೇ ಆಗಿದ್ದರು. ಆದುಕಾರಣವೇ ವೇದಗಳೂ, ಪುರಾಣಗಳೂಕೂಡ ಮೊಟ್ಟಮೊದಲು ಎಲ್ಲರೂಬ್ರಾಹ್ಮಣರೇ ಆಗಿದ್ದರೆಂತಲೂ, ಸವರ್ಣರೇ ಆಗಿದ್ದರೆಂತಲೂ ಈಚೆಗೆ ಆ ಒಂದೇ ವರ್ಣದಿಂದ ಬೇರೆ ಬೇರೆ ವರ್ಣವಿಭಾಗಗಳು ಉಂಟಾದುವೆಂತಲೂ ಹೇಳುತ್ತಿವೆ. ಸಂಘದಲ್ಲಿ ಬೇರೆ ಬೇರೆ ವೃತ್ತಿಗಳಿರಬೇಕಾದುದು ಅವಶ್ಯಕವಾದುದರಿಂದಲೂ ಆ ವೃತ್ತಿಗಳನ್ನು ಅವಲಂಬಿಸಿದವರು ಆಯಾ ವೃತ್ತಿಗಳನ್ನು ಅನುಸರಿಸಿದ ಬೇರೆ ಬೇರೆ ವರ್ಣಗಳವರಾಗಿ ವಿಭಾಗಿಸಲ್ಪಟ್ಟರು. ಇಂಥ ವಿಭಾಗಗಳೇರ್ಪಟ್ಟು, ಆಯಾ ವೃತ್ತಿಗಳನ್ನು ಅವಲಂಬಿಸಿದವರಿಗೆ ಕ್ಷತ್ರಿಯ, ವೈಶ್ಯ, ಶೂದ್ರ ಮೊದಲಾದ ಹೆಸರುಗಳು ಕರೆಯಲ್ಪಟ್ಟರೂ ಕೂಡ ಅವರೆಲ್ಲರಿಗೂ ಆಧ್ಯಾತ್ಮಿಕಚಿಂತೆಯೇ ಮುಖ್ಯ ಕರ್ಮವಾಗಿದ್ದ ಕಾಲದವರೆಗೆ ಈ ಸಂಘದವರೆಲ್ಲರೂ ಒಂದೇ ಬ್ರಾಹ್ಮಣಸಂಘದವರಾಗಿಯೇ ಭೇದವಿಲ್ಲದೆ ಇದ್ದರು. ಬರಬರುತ್ತ ಐಹಿಕತತ್ಪರತೆಯು ಹೆಚ್ಚಿಕೊಂಡು, ಆಧ್ಯಾತ್ಮಿಕ ಪರತೆಯು ಕ್ಷೀಣಿಸುತ್ತಬಂದುದರಿಂದ ಸರ್ವರಿಗೂ ಸಾಮಾನ್ಯನಾಮವಾಗಿದ್ದ ಬ್ರಾಹ್ಮಣನೆಂಬ ಹೆಸರು ತೊಲಗಿಹೋಗಿ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ವ್ಯಕ್ತಿಸೂಚಕ ನಾಮಗಳೇ ಪ್ರಬಲಿಸುವಂತಾದುವು. ಅಂದಿನಿಂದ ಮತದ ಉತ್ತಮೋದಾರಭಾವಗಳು ಮಸುಳಿಸಿ, ನಿತ್ಯನೈಮಿತ್ತಕಾದಿ ಕರ್ಮಗಳರೂಪದಲ್ಲಿ ಅವು ಪರಿಣಮಿಸಿದುವು. ತತ್ಸಂಬಂಧವಾದ ಮಂತ್ರತಂತ್ರಾದಿಗಳನ್ನಭ್ಯಸಿಸಿ, ಅವುಗಳನ್ನಾಚರಿಸುವವರು ಬ್ರಾಹ್ಮಣರಾದರು. ಕ್ಷತ್ರಿಯರೂ ವೈಶ್ಯರೂ ಈ ಮಂತ್ರತಂತ್ರಗಳನ್ನು ಅಷ್ಟು ಶ್ರದ್ಧೆಯಿಂದ ಆಚರಿಸುವುದನ್ನು ಬಿಟ್ಟುಬಿಟ್ಟರು. ಶೂದ್ರರು ಸಂಪೂರ್ಣವಾಗಿ ತ್ಯಜಿಸಿಬಿಟ್ಟರು ದೇಶಾಂತರಗಳಿಗೆ ಹೋಗಿ ಹೆಚ್ಚು ವರ್ಷಗಳ ಕಾಲ ಅಲ್ಲಿ ವಾಸಮಾಡಿ ಬ್ರಾಹ್ಮಣರೊಡನೆ ಸಂಬಂಧವೇ ಇಲ್ಲದವರಾಗಿದ್ದು ಮರಳಿ ಅಲ್ಲಿಂದ ಬಂದವರೆಲ್ಲರೂ ಚಂಡಾಲರೂ ದಸ್ಯುಗಳೂ, ಮ್ಲೇಂಛರೂ ಆದರು. ವೇದಗಳನ್ನೂ ಇತಿಹಾಸ ಪುರಾಣಗಳನ್ನೂ ಅನುಸರಿಸಿ ವಿಚಾರಮಾಡಿ ನೋಡಿದರೆ ವರ್ಣವಿಭಾಗವು ಹೇಗೆ ಏರ್ಪಟ್ಟಿರುವುದೆಂಬುದನ್ನು ನಾವು ಅರಿತುಕೊಳ್ಳಬಹುದು.

ಸ್ವಯಂವ್ಯಕ್ತಲಿಂಗಮೂರ್ತಿ.

(ಅಮೃತಬಜಾರ್ ಪತ್ರಿಕೆಯಲ್ಲಿ ಈ ಕೆಳಗಿನ ವಿಷಯವು ಪ್ರಕಟವಾಗಿದೆ).

ಬಂಗಾಳಾಕ್ಕೆ ಸೇರಿದ ಚಾಪ್ರಾದ ಶವಿಪಾಪದಲ್ಲಿರುವ ಜಮಕೊಲಾ ಎಂಬ ಗ್ರಾಮದಲ್ಲಿ ರಾಮಚಂದ್ರೋಪಾಧ್ಯಾಯನೆಂಬ ಒಬ್ಬ ಪಂಡಿತನಿರುವನು. ಅವನ ಮನೆಯಿದಿರಿಗೆ ಒಂದು ಹಳೆಯ ಅರಳೀಮರವಿರುವುದು. ಒಂದು ದಿನ ರಾತ್ರಿ ಪರಮೇಶ್ವರನು ಆ ಪಂಡಿತನ ಸ್ವಪ್ನದಲ್ಲಿ ಗೋಚರಿಸಿ "ಎಲೈ ಭಕ್ತನೆ, ನಾನು ಈ ನಿನ್ನ ಮನೆಯ ಮುಂದಿರುವ ಮರದಲ್ಲಿ ಭೂಮಟ್ಟಕ್ಕೆ ಒಂದು ಮೊಳದ ಮೇಲೆ ವಾಸವಾಗಿರುವೆನು. ಆ ನನ್ನ ಮೂರ್ತಿಯನ್ನು ಹೊರಕ್ಕೆ ತೆಗೆದು ಜಗದ್ಧಿತಾರ್ಥವಾಗಿ ಪೂಜಿಸು" ಎಂದು ಆಜ್ಞಾಪಿಸಿದನು. ಹೀಗೆ ಆ ಪಂಡಿತನಿಗೆ ೨-೩ ವೇಳೆ ಸ್ವಪ್ನದಲ್ಲಿ ಆಜ್ಞೆಯಾಯಿತು. ಆಗ ಆ ಪಂಡಿತನು ಪಾಂಡೆ ರಾಮಾವತಾರಶರ್ಮ ಎಂ. ಎ., ರವರೊಡನೆಯೂ ಇನ್ನು ಕೆಲ ಪ್ರಮುಖರೊಡನೆಯೂ ಈ ವಿಷಯವನ್ನು ಪ್ರಸ್ತಾಪಿಸಿ, ಅವರ ಸಹಾಲೋಚನೆಯಿಂದ ಆ ಅರಳೀಮರವನ್ನು ಛೇದಿಸುವುದಕ್ಕೆ ನಿಶ್ಚಯಿಸಿದನು. ಕಳೆದ ಮೇ ತಾ॥ ೧೦ರಲ್ಲಿ ಆ ಮರವನ್ನು ಛೇದಿಸಿ, ಲಿಂಗಮೂರ್ತಿಯನ್ನು ಹೊರತೆಗೆಯುವ ಸಂಗತಿಯು ಸರ್ವತ್ರ ಪ್ರಕಟಿಸಲ್ಪಟ್ಟಿತು. ಆ ದಿನ ಸಾವಿರಾರು ಜನರು ಅಲ್ಲಿಗೆ ಬಂದು ನೆರೆದರು. ಡಿಸ್ಟ್ರಿಕ್ಟ್ ಮುನಸೀಫರು, ವಕೀಲರು, ಮೊಕ್ತ್ಯಾರುಗಳು, ಮ್ಯು॥ ಕಮಿಷನರುಗಳು ಮೊದಲಾದ ದೊಡ್ಡ ಮನುಷ್ಯರನೇಕರು ಬಂದು ಕೂಡಿದರು. ಹತ್ವಾ ಮಹಾರಾಜರವರು, ತಮ್ಮ ತಾಯಿಯವರೊಡನೆಯೂ ಭಾವಮೈದುಂದಿರೊಡನೆಯೂ ಮಂಜಾಲಾದ ಬಾಬುರವರೊಡನೆಯೂ ಅಲ್ಲಿಗೆ ಬಂದರು ಕೆಲವು ಪೊಲೀಸ್ ಉದ್ಯೋಗಿಗಳೂ ಕೂಡ ಅಲ್ಲಿಗೆ ಕಳುಹಿಸಲ್ಪಟ್ಟಿದ್ದರು. ಇಷ್ಟು ಜನರಿದಿರಿಗೂ ಆ ಮರವನ್ನು ಕತ್ತರಿಸಿದರು ಆಗ ಒಳಗಿದ್ದ ಸ್ವಯಂ ವ್ಯಕ್ತಲಿಂಗಮೂರ್ತಿಯು ಗೋಚರಿಸಿತು. ನೋಡಿದವರೆಲ್ಲರ ಆನಂದಕ್ಕೆ ಮಿತಿಯಿಲ್ಲದೆ ಹೋಯಿತು. ಈಗ ಹತ್ವಾ ಮಹಾರಾಜರವರು ಆ ಸ್ಥಲದಲ್ಲಿ ಒಂದು ದೇವಾಲಯವನ್ನು ಕಟ್ಟಿಸುವುದಕ್ಕೆ ಏರ್ಪಡಿಸಿರುವರು. ಆ ಅರಳೀಮರವು ಅಲ್ಲಿ ೩೦ ವರ್ಷಗಳಿಂದಲೂ ಇರುವುದೆಂತಲೂ, ಮೇಲೆ ಹೇಳಿರುವ ಸಂಗತಿಯೆಲ್ಲವೂ ಸತ್ಯವಾಗಿ ನಡೆದಿರುವುದೆಂತಲೂ, ಹತ್ವಾ ಮಹಾರಾಜರೊಡನೆ ಆ ಸ್ಥಲಕ್ಕೆ ಹೋಗಿದ್ದ ಅವರ ಮ್ಯಾನೇಜರು ಬಿಹಾರಿ ಎಂಬ ಪತ್ರಿಕೆಗೆ ಬರೆದಿರುವರು.

ಭರತಖಂಡದ ವೃತ್ತಾಂತಗಳು.

ಬೊಂಬಾಯಿಯ ಕಾಲ್ಬಾದೇವಿ ಬೀದಿಯಲ್ಲಿರುವ ಒಬ್ಬ ಟೊಪ್ಪಿಗೆಯ ವ್ಯಾಪಾರಿ ಅಂಗಡಿಗೆ ಬೆಂಕಿಬಿದ್ದು ೩೦ ಸಾವಿರ ರೂ. ಗಳ ಸೊತ್ತು ನಷ್ಟವಾಯಿತು.

ಈ ವರ್ಷದ ಮಳೆಗಾಲದ ಆರಂಭದಿಂದಲೂ ಪಶ್ಚಿಮ ಸಮುದ್ರತೀರದ ಕೊಚ್ಚಿ ಕಲ್ಲಿಕೋಟೆ ಮೊದಲಾದ ಪ್ರದೇಶಗಳಲ್ಲಿ ವಿಶೇಷವಾಗಿ ಮಳೆಯಾಗಿದೆ. ಬೆಂಗಳೂರು ಪ್ರಾಂತದಲ್ಲಿ ೪ ಅಂಗುಲದಷ್ಟು ಮಳೆಯಾಗಿದೆ.

ಇದೇತಿಂಗಳು ತಾ॥ ೨೭-೨೮-೨೯ ಈ ಮೂರುದಿನಗಳಲ್ಲಿ ಆರ್ಯವೈಶ್ಯಸಭೆಯ ೮ ನೆಯ ಅಧಿವೇಶನವು ಬಳ್ಳಾರಿಪಟ್ಟಣದಲ್ಲಿ ನಡೆಯುವುದು. ಏಲೂರಿನಲ್ಲಿರುವ ವಿಸ್ಸನ್ನಪೇಟೆ ಜಮೀನ್ದಾರರಾದ ಮೋತೆ ಗಂಗರಾಜುರವರು ಸಭಾಧ್ಯಕ್ಷತೆಯನ್ನು ವಹಿಸುವರು.

ಬರ್ಮಾಕ್ಕೆ ಸೇರಿದ ಬಾರ್ಸಿ ಎಂಬ ಊರಿನಲ್ಲಿ ೧೧ ಮಂದಿ ಕಳ್ಳರು ಆಯುಧಪಾಣಿಗಳಾಗಿ ಒಬ್ಬ ಬರ್ಮೀಯನಮನೆಗೆ ಮುತ್ತಿದರು. ಇದನ್ನು ತಿಳಿದು ಗ್ರಾಮಸ್ಥರ[illegible]ವುಕೂಡಿ ಕಳ್ಳರನ್ನು ಹಿಡಿಯಲು ಪ್ರಯತ್ನಿಸಿದಾಗ, ಇಬ್ಬರಿಗೂ ಬಡಿದಾಟವಾಗಿ ಆ ಗ್ರಾಮಾಧಿಕಾರಿಯೂ ಇನ್ನು ಮೂವರೂ ಸತ್ತರು ಇನ್ನಾರುಮಂದಿಗೆ ಗಾಯವಾಯಿತು. ಕಳ್ಳರ ಮುಖಂಡನಿಗೂ ಗಾಯವಾಯಿತು. ಕಳ್ಳರೆಲ್ಲಾ ತಪ್ಪಿಸಿಕೊಂಡು ಓಡಿದರು.

ಭರತಖಂಡದಲ್ಲಿ ಆಗುವ ನೂಲಿನ ಬಟ್ಟೆಯಮೇಲಣ ಸುಂಕವನ್ನು ನಿರ್ಧರಿಸುವ ಕೆಲಸವನ್ನು ಸರ್ಕಾರದವರು ಪ್ರತಿವರ್ಷದ ಡಿಸೆಂಬರ್ ತಿಂಗಳಲ್ಲಿ ನಡೆಯಿಸುತ್ತಿದ್ದರು. ಇನ್ನು ಮುಂದೆ ಫೆಬ್ರುವರಿ ತಿಂಗಳಲ್ಲಿ ನಿರ್ಧರಿಸಲು ಗೊತ್ತುಮಾಡಿದ್ದಾರೆ. ಮತ್ತೂ ನೂಲಿನ ಬಟ್ಟೆಗಳ ಬೆಲೆಯಲ್ಲಿ ವಿಶೇಷ ವ್ಯತ್ಯಾಸವೇನಾದರೂ ಆದರೆ ಅವಶ್ಯಕವಾದಾಗ ಆ ಬೆಲೆಯನ್ನು ಇಷ್ಟೇ ಇರಬೇಕೆಂದು ನಿರ್ಧರಿಸುವ ಅಧಿಕಾರವನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ.

ಭರತಖಂಡದ ನೂತನದೇಶರಕ್ಷಕಶಾಸನವನ್ನನುಸರಿಸಿ, ಉತ್ತರಹಿಂದೂಸ್ಥಾನದಲ್ಲಿರುವ ಹಮ್ದಾದ್-ಕಾಮ್ರೇಡ್- ಎಂಬ ಪತ್ರಿಕೆಗಳ ಸಂಪಾದಕರುಗಳಿಗೆ "ನೀವುಗಳು ಡಿಲ್ಲಿ ಜಿಲ್ಲೆಗೆ ಸೇರಿದ ಮಹರಾಲೀಪ್ರಾಂತದಲ್ಲಿ ಸರ್ಕಾರದವರು ಗೊತ್ತುಮಾಡಿದ ಸ್ಥಲದಲ್ಲೇ ಇರಬೇಕು. ಜಿಲ್ಲಾ ಮ್ಯಾಜಿಸ್ಟ್ರೇಟರ ಅಪ್ಪಣೆಯಿಲ್ಲದೆ ಎಲ್ಲಿಗೂ ಹೋಗಕೂಡದು. ಯಾವುದೊಂದು ಸಭೆಗಳಿಗೂ ಹೋಗಕೂಡದು." ಎಂದು ಸರ್ಕಾರದಿಂದ ಅವರುಗಳಿಗೆ ನೋಟೀಸುಗಳು ಕೊಡಲ್ಪಟ್ಟಿವೆ.

ಕಲ್ಕತ್ತಾದಲ್ಲಿ ಪ್ರಕೃತಿಶಾಸ್ತ್ರ ಪರಿಶ್ರಾಮಿಕವಿದ್ಯಾಪ್ರಸಾರಕ್ಕಾಗಿ ಏರ್ಪಟ್ಟಿರುವ ಸಂಘದವರ ೧೧ ನೆಯ ವಾರ್ಷಿಕೋತ್ಸವವು ಕಳೆದವಾರ ಜರುಗಿತು. ಸಂಘದ ವರದಿಯನ್ನೋದಿದುದರಲ್ಲಿ, ಇದುವರೆಗೆ ಆ ಸಂಘದವರ ಸಾಹಾಯ್ಯದಿಂದ ೧೮೦ ಮಂದಿ ವಿದ್ಯಾರ್ಥಿಗಳು ವಿದೇಶಗಳಿಗೆ ಹೋಗಿ, ವಿದ್ಯಾಭ್ಯಾಸವನ್ನು ಮಾಡಿಕೊಂಡು ಬಂದಿರುವರೆಂತಲೂ, ಇದರಲ್ಲಿ ೧೦೦ ಮಂದಿಗಳು ಉದ್ಯೋಗಗಳಲ್ಲಿ ಸೇರಿರುವರೆಂತಲೂ, ಈಗ ವಿದೇಶಗಳಲ್ಲಿ ೧೦೮ ಮಂದಿಗಳು ವಿದ್ಯಾಭ್ಯಾಸಮಾಡುತ್ತಿರುವರೆಂತಲೂ, ಈ ವರ್ಷದಲ್ಲಿ ಈ ಸಂಘದವರು ಮತ್ತೆ ೨೦ ಮಂದಿಗಳನ್ನು ವಿದೇಶಗಳಿಗೆ ಕಳುಹಿಸಿಕೊಡುವವರಾಗಿದ್ದಾರೆಂತಲೂ, ಅವರಲ್ಲಿ ೧೨ ಮಂದಿಯು ಇಂಗ್ಲಾಂಡಿಗೂ, ೬ ಮಂದಿ ಅಮೇರಿಕಾಕ್ಕೂ, ಒಬ್ಬನು ಜಪಾನಿಗೂ ಹೋಗುವವರಾಗಿದ್ದಾರೆಂತಲೂ, ಗೊತ್ತಾಯಿತು.

ಯುದ್ಧವಾರ್ತೆಯು.

ಪಶ್ಚಿಮರಣರಂಗ.

ಈ ರಣರಂಗದ ಕಾರ್ಯಗಳು ಕಳೆದ ವಾರದಲ್ಲಿ ಮಿತ್ರಮಂಡಲಿಯವರಿಗೆ ಜಯಪ್ರದವಾಗಿರುತ್ತವೆ. ಫ್ರೆಂಚರು ಕರನ್ಸಿ ಎಂಬ ಗ್ರಾಮದ ಮೇಲೆ ೩ ಗಂಟೆಯ ಹೊತ್ತಿನೊಳಗೆ ೨೦ ಸಾವಿರ ಫಿರಂಗಿಗುಂಡುಗಳನ್ನು ಹೊಡೆದು ಅದರ ದುರ್ಗಗಳನ್ನು ಧ್ವಂಸಮಾಡಿ, ಪತಾಕಿಸೇನೆಯನ್ನು ನುಗ್ಗಿಸಿ, ಅಲ್ಲಿದ್ದ ೩ ಸಾಲು ಜರ್ಮನರ ಕಂದಕಗಳನ್ನು ಹಿಡಿದುಕೊಂಡರು. ಆಗ ಜರ್ಮನರು ಬಹಳ ವೀರಾವೇಶದಿಂದ ಕಾದಿದರು. ಅಲ್ಲಿ ೨ ದಿನಗಳ ವರೆಗೆ ಉಭಯಪಕ್ಷಕ್ಕೂ ಕಡುಕಾಳಗವಾಯಿತು. ಫ್ರೆಂಚ್ ಸೇನೆಯು ೨ ಪಕ್ಕಗಳಿಂದಲೂ ಮುತ್ತಿ ಯುದ್ಧಮಾಡ ತೊಡಗಿತು. ಜರ್ಮನರು ಅಲ್ಲಿದ್ದ ಒಂದು ಕಾಡನ್ನು ತಮ್ಮ ರಕ್ಷಣೆಯ ದುರ್ಗವನ್ನಾಗಿ ಮಾಡಿಕೊಂಡರು. ಫಿರಂಗಿಗಳೇಟಿನಿಂದ ಗುಡ್ಡದ ಮೇಲಿದ್ದ ಜರ್ಮನರನ್ನು ಹಣ್ಣಿಗೆ ತಂದು ಶರಣಾಗತರಾಗುವಂತೆ ಮಾಡಿದರು. ಅಲ್ಲಿ ಫ್ರೆಂಚರು ಗುರಿಯಿಟ್ಟು ಗುಂಡನ್ನು ಹಾರಿಸಿದ ಕೆಲಸಕ್ಕೂ ಪದಾತಿ ಸೇನೆಯ ಶೌರ್ಯಕ್ಕೂ ಜರ್ಮನರು ಫ್ರೆಂಚರನ್ನು ಶ್ಲಾಘಿಸಿದರು. ಕಡೆಗೆ ಆ ಗ್ರಾಮವನ್ನೂ ಸಮೀಪದ ಪ್ರದೇಶಗಳನ್ನೂ ಫ್ರೆಂಚರು ವಶಪಡಿಸಿಕೊಂಡರು. ಫ್ರೆಂಚರ ಈ ವಿಜಯವು ಘನತರವಾದುದೆಂದು ಶ್ಲಾಘಿಸಲ್ಪಡುತ್ತಿದೆ. ಈ ಗ್ರಾಮವನ್ನು ಫ್ರೆಂಚರು ಹಿಡಿದುಕೊಂಡ ನಂತರ ಅದರ ಉತ್ತರಕ್ಕೂ ನುಗ್ಗಿ ಆಬ್ಲಿ ಎಂಬ ಮತ್ತೂ ಸೇಯಿಂಟ್-ನಾಜರ್ ಎಂಬ ಪ್ರದೇಶಗಳನ್ನು ಸಹ ಫ್ರೆಂಚರು ವಶಪಡಿಸಿಕೊಂಡರು. ಮತ್ತು ಫ್ರೆಂಚರು ನ್ಯೂವಿಲ್ಲಿಗೆ ಉತ್ತರದಲ್ಲಿ ಶತ್ರುಗಳ ವಶದಲ್ಲಿದ್ದ ಕೆಲವು ನೂರಾರುಗಜಗಳ ಭೂಮಿಯನ್ನು ಸಹ ವಶಪಡಿಸಿಕೊಂಡರು. ಆ ಬಳಿಯಣ ಗ್ರಾಮಗಳ ಮನೆಮನೆಯೊಳಗೂ ತುಂಬಿಕೊಂಡಿದ್ದ ಜರ್ಮನರನ್ನೆಲ್ಲಾ ಹೊಡೆದೋಡಿಸಿಬಿಟ್ಟರು. ನಾಟರ್‌ಡಾಂ-ಡಿಲೋರೆಟ್‌ಗಳಲ್ಲಿ ಜರ್ಮನರು ಫ್ರೆಂಚರ ಮೇಲೆ ವೀರಾವೇಶದಿಂದ ಬಿದ್ದು ಕಾದಾಡಲು, ಅಲ್ಲಿ ಅವರನ್ನು ಹೊಡೆದು ಹಿಮ್ಮೆಟ್ಟಿಸಿದರು. ಸ್ಟ್ರೀನ್ಸ್ಟ್ರಾಕ್ಟ್ ಎಂಬುದನ್ನು ಜರ್ಮನರು ಮುತ್ತಿ ಅಲ್ಲಿದ್ದ ಆಂಗ್ಲಸೈನ್ಯದ ಮೇಲೆ ಪರಾಕ್ರಮದಿಂದ ಕಾದಾಡಿದರು. ಅಲ್ಲಿ ನಡೆದ ಯುದ್ಧದಲ್ಲಿ ಜರ್ಮನರ ಕಡೆ ಅಪಾರವಾದ ನಷ್ಟವಾಗಿ ಅವರು ಸೋತು, ಹಿಮ್ಮೆಟ್ಟಿಹೋದರು. ಅಲ್ಲಿ ಆಂಗ್ಲಸೈನಿಕರಿಗೆ ವಿಶೇಷ ಜಯವುಂಟಾಯಿತು. ಅರ್ರಾಸಿಗೆ ಉತ್ತರದಲ್ಲಿ ಫ್ರೆಂಚ್ ಸೈನ್ಯವು ಜರ್ಮನರ ಮೇಲೆ ಬೀಳಲಾಗಿ ೭ ಆವೃತ್ತಿ ಅವರುಗಳಿಗೆ ದ್ವಂದ್ವಯುದ್ಧವು ನಡೆದು ಕಡೆಗೆ ಜರ್ಮನರು ಹಿಮ್ಮೆಟ್ಟಿದರು. ಪಾಂಪೆಯ್ನಿನಲ್ಲಿ ಜರ್ಮನರು ಫ್ರೆಂಚ್ ಸೇನಾ ಪಂಕ್ತಿಯ ಮೇಲೆ ಬಿದ್ದು ಭೇದಿಸಿ, ಅವರಿದ್ದ ಸ್ಥಲವನ್ನು ಆಕ್ರಮಿಸಿಕೊಳ್ಳಲು, ಫ್ರೆಂಚರು ಮರಳಿ ಜರ್ಮನರ ಮೇಲೆ ಬಿದ್ದು ಕಾದಾಡಿ ಆ ಸ್ಥಲವನ್ನು ವಶಪಡಿಸಿಕೊಂಡಿರುವರು. ಯುದ್ಧವಾದ ಬಳಿಕ ನೋಡುವಲ್ಲಿ ಆ ಕಂದಕಗಳಲ್ಲಿ ೧ ಸಾವಿರ ಜರ್ಮನರ ಹೆಣಗಳು ಬಿದ್ದಿದ್ದುವು. ೩೩೭ ಮಂದಿ ಜರ್ಮನರನ್ನು ಸೆರೆಹಿಡಿದರು. ಅವರಲ್ಲಿ ೧೨ ಮಂದಿ ಅಧಿಕಾರಿಗಳು. ಮತ್ತೊಂದು ಕಡೆ ಎಂದರೆ ಲಾಬಸ್ಸಿಗೆ ವಾಯವ್ಯದಲ್ಲಿ ಮಿತ್ರಮಂಡಲಿಯ ಸೈನ್ಯಗಳು ಅರ್ಧರಾತ್ರಿ ಹೊತ್ತಿನಲ್ಲಿ ಯುದ್ಧವನ್ನಾರಂಭಿಸಿ, ೨ ಮೈಲಿಗಳ ದೂರದವರೆಗೆ ಶತ್ರುಸೇನಾ ಪಂಕ್ತಿಯನ್ನು ಭೇದಿಸಿ ೮೦೦ ಗಜಗಳುದ್ದದ ೨ ಕಂದಕಗಳನ್ನು ಆಕ್ರಮಿಸಿಕೊಂಡುವು. ಅದರ ಕೆಳಭಾಗದ ಮತ್ತೊಂದುಕಡೆ ೧೨೦೦ ಗಜಗಳಗಲದ ಕಂದಕಗಳನ್ನು ಹಿಡಿದುಕೊಂಡರು. ಜರ್ಮನರು ಈಪ್ರೆಸಿನಕಡೆಗೂ, ಕಲೆಯಕಡೆಗೂ ನುಗ್ಗಿ ಹೋಗಬೇಕೆಂದೂ ಅದಕ್ಕೆ ಅಡ್ಡಲಾಗಿರುವ ಮಿತ್ರಮಂಡಲಿಯ ಸೇನಾಪಂಕ್ತಿಯನ್ನು ಭೇದಿಸಬೇಕೆಂದೂ ಅಗಣಿತ ಸಾಹಸದಿಂದ ವಿಶೇಷಸನ್ನಾಹದಿಂದ ಯುದ್ಧಗಳನ್ನು ಮಾಡಿ ಕಳೆದ ವಾರ ಬಹಳ ನಷ್ಟಪಟ್ಟು ಹತಾಶರಾಗಿರುತ್ತಾರೆ. ಪ್ರತಿಯೊಂದು ಕಡೆಯೂ ಜರ್ಮನರು ವಿಷಧೂಮ ಪ್ರಯೋಗವನ್ನು ಮಾಡುತ್ತಲೇ ತಮ್ಮ ಯುದ್ಧವನ್ನು ಸಾಗಿಸುತ್ತಿದ್ದಾರೆ. ಆದರೆ ಇದರ ಪ್ರಯೋಗದಿಂದ ಮಿತ್ರಮಂಡಲಿಯ ಸೈನಿಕರೊಳಗೆ ಮೊದಮೊದಲು ಆಗುತ್ತಿದ್ದಂಥ ನಷ್ಟಗಳೂ ಜರ್ಮನರಿಗೆ ಆಗುತ್ತಿದ್ದ ಲಾಭವೂ ಈಗ ಆಗುತ್ತಲಿಲ್ಲ. ಮಿತ್ರಮಂಡಲಿಯ ಸೈನ್ಯಕ್ಕೆ ಈಗ ಹೊಸದೊಂದು ತೆರದ ಟೊಪ್ಪಿಗೆಗಳೂ ಮುಖದ ಮುಸುಕುಗಳೂ ಕೊಡಲ್ಪಟ್ಟಿರುವುದರಿಂದ ಆ ಹೊಗೆಯ ವಿಷವು ಇವರಿಗೆ ಯಾವ ಕೇಡನ್ನೂ ಮಾಡಲಸಮರ್ಥವಾಗಿದೆ. ಈ ಹೊಗೆಯಿಂದ ಜರ್ಮನ್ ಸೈನಿಕರೇ ಕೆಲಕಡೆ ಅಪಾಯವನ್ನು ಹೊಂದಿರುತ್ತಾರೆ. ಜರ್ಮನರನ್ನು ಫ್ರಾನ್ಸಿನಿಂದ ಓಡಿಸುವುದಕ್ಕೆ ತಮಗೆ ಬಹಳ ಮದ್ದುಗುಂಡುಗಳು ಒದಗಬೇಕೆಂದು ಅವರ ಮುಖ್ಯ ಸೇನಾಪತಿಗಳು ಸೂಚಿಸಿದುದರಿಂದ ದಿನ ೧ಕ್ಕೆ ೨ ಲಕ್ಷ ಫಿರಂಗಿ ಗುಂಡುಗಳೂ ೨ ಲಕ್ಷ ತುಪಾಕಿಗುಂಡುಗಳೂ ಒದಗಿಸಲ್ಪಡುವುದಕ್ಕೆ ಫ್ರಾನ್ಸ್ ಪ್ರಭುತ್ವದವರು ಏರ್ಪಡಿಸುತ್ತಿದ್ದಾರೆ. ಈಪ್ರೆಸ್ಸಿನ ಮೇಲೆ ಜರ್ಮನರು ಹೊಡೆಯುತ್ತಿರುವ ಫಿರಂಗಿಗುಂಡಿನೇಟಿನಿಂದ ಆ ಊರು ಹಲವುಕಡೆ ಉರಿದು ಹೋಗಿದೆ. ಈಪ್ರೆಸ್ಸಿನ ಮೇಲಣ ಆಸೆಯನ್ನು ಜರ್ಮನರು ಇನ್ನೂ ಬಿಟ್ಟಿಲ್ಲ. ಈ ಬಡಿದಾಟದಲ್ಲಿ ಈಪ್ರೆಸ್ಸು ನಿರ್ಜೀವಸ್ಥಿತಿಗೆ ಬಂದುಬಿಟ್ಟಿದೆ. ಕಲೆಯ ಕಡೆಗೆ ಹೋಗಬೇಕೆಂಬ ಅಭಿಲಾಷೆಯಿಂದ ಜರ್ಮನರು ಈಪ್ರೆಸ್ಸಿನ ಬಳಿಯಲ್ಲೇ ತಮ್ಮ ಸೇನಾಮುಖ್ಯಸ್ಥಾನವನ್ನೇರ್ಪಡಿಸಿಕೊಂಡಿದ್ದಾರೆ. ಈಪ್ರೆಸ್ಸಿನ ಬಳಿಯಲ್ಲಿ ಅವರು ನಡೆಯಿಸಿದ ಘೋರಸಂಗ್ರಾಮಗಳಲ್ಲಿ ಅವರಕಡೆ ೧|| ಲಕ್ಷ ಮಂದಿಗಳು ಹತರಾಗಿರುವರಂತೆ. ಮಿತ್ರಮಂಡಲಿಯ ಪಕ್ಷಕ್ಕೂ ಬಹಳ ನಷ್ಟವಾಯಿತು. ಆದರೆ ಅವರಸೇನಾಪಂಕ್ತಿಯು ಜರ್ಮನರಿಂದ ಭೇದಿಸಲ್ಪಡಲಿಲ್ಲ.

ಪೂರ್ವರಣರಂಗ.

ಈ ರಣರಂಗದಲ್ಲಿ ಶತ್ರುಪಕ್ಷದವರ ಕೈಸ್ವಲ್ಪ ಬಲವಾಗಿರುತ್ತಿದೆ. ಗೆಲೀಷಿಯಾದಲ್ಲಿ ರಷ್ಯನರು ಆಕ್ರಮಿಸಿಕೊಂಡಿದ್ದ ಸ್ಥಲಗಳನ್ನು ಜರ್ಮನ್ ಆಸ್ಟ್ರಿಯನ್ ಸೈನ್ಯಗಳು ಹಿಡಿದುಕೊಂಡು ರಷ್ಯನರನ್ನು ಹಿಂದಕ್ಕೋಡಿಸುತ್ತಲಿವೆ. ಶತ್ರುಸೈನ್ಯಗಳು ಪ್ರಿಜೆಮ್ಸಿಲ್ ಕೋಟೆಯ ಕಡೆಗೆ ನುಗ್ಗುತ್ತಲಿವೆ. ಅದನ್ನು ರಷ್ಯನರು ತಡೆಯದೆ ಹೋಗಿದ್ದಾರೆ. ಅವರು ತಮಗೆ ಸುರಕ್ಷಿತವಾದ ಸ್ಥಾನವು ದೊರೆಯುವವರೆಗೂ ಹಿಂದಾಗಿಹೋಗಿ ಬಿಕ್ಕಟ್ಟಿನೆಡೆಯಲ್ಲಿ ಶತ್ರುಗಳನ್ನು ಬಲಿಹಾಕಬೇಕೆಂದು ಯುಕ್ತಿಮಾಡಿರುವಂತೆ ಕಾಣುತ್ತದೆ. ಇಂಥ ಉಪಾಯವನ್ನು ಅವರು ಇದುವರೆಗೆ ಎಷ್ಟೋಕಡೆ ಮಾಡಿದ್ದಾರೆ. ಈಗ ಶತ್ರುಸೈನ್ಯಗಳು ಪ್ರಿಜೆಮ್ಸಿಲ್ ಪಟ್ಟಣಕ್ಕೆ ಸಮೀಪಿಸಿವೆ. ಗೆಲೀಷಿಯಾದ ಪೂರ್ವಭಾಗದಲ್ಲಿ ರಷ್ಯನ್ ಸೈನ್ಯಗಳು ಆಸ್ಟ್ರಿಯನ್ ಸೈನ್ಯವನ್ನು ಹೊಡೆದು ಬಕೋವಿನಾದ ಕಡೆಗೆ ಓಡಿಸುತ್ತಿವೆ. ಉತ್ತರದಲ್ಲಿ ಬಾಲ್ಟಿಕ್ ಜಿಲ್ಲೆಯೊಳಗೆ ಜರ್ಮನರು ರಷ್ಯನ್ ಸೈನ್ಯಗಳನ್ನು ಅಟ್ಟಿಕೊಂಡು ನುಗ್ಗಿಬರುತ್ತಿರಲು, ಅದನ್ನು ತಡೆದು ಹಿಮ್ಮೆಟ್ಟಿಸಿದ್ದಾರೆ. ಈಗ ಶಾವಲಿ ಪ್ರಾಂತದಲ್ಲಿ ಉಭಯಪಕ್ಷಕ್ಕೂ ಯುದ್ಧವಾಗುತ್ತಿದೆ. ರಷ್ಯನ್ ಪ್ರಭುತ್ವದವರ ಪ್ರಕಟನೆಯು ಹೀಗೆ ಹೇಳುತ್ತದೆ:-ಬಕೋವಿನಾ ಪ್ರಾಂತದಲ್ಲಿ ಆಸ್ಟ್ರಿಯನ್ನರು ಸಂಪೂರ್ಣವಾಗಿ ಹಿಂದಕ್ಕೋಡಿಸಲ್ಪಟ್ಟಿದ್ದಾರೆ. ಪಶ್ಚಿಮಗೆಲೀಷಿಯಾದಲ್ಲಿ ಶತ್ರುಗಳಿಗೆ ತಾತ್ಕಾಲಿಕ ವಿಜಯವು ಸ್ವಲ್ಪಮಟ್ಟಿಗಾಗಿದ್ದರೂ, ಆವಿಜಯವು ಬಕೋವಿನಾ ಪ್ರಾಂತದ ಅವರ ಜಯವನ್ನು ಮುಚ್ಚಿಸಲಾರದು. ನೀಸ್ಟರಿನಿಂದ ಡಿದು ಪ್ರತ್ತಿನವರೆಗೆ ಇರುವ ಪ್ರದೇಶವೆಲ್ಲಾ ನಮ್ಮ ಸ್ವಾಧೀನದಲ್ಲಿದೆ. ೧೦೦ಮೈಲಿಗಳಗಲದ ಸ್ಥಲದಲ್ಲಿ ಶತ್ರುಗಳು ನೆಲಸಿಕೊಂಡಿದ್ದಾರೆ. ಈ ಸ್ಥಾನವನ್ನು ಸಂಪಾದಿಸಿಕೊಳ್ಳುವುದಕ್ಕೆ ಶತ್ರುಗಳು ಅಪರಿಮಿತವಾದ ಪ್ರಾಣಧನಹಾನಿಗಳನ್ನು ಹೊಂದಿದ್ದಾರೆ. ಜರ್ನೋವಿಟ್ಜು ನಮಗೆ ವಶವಾಗಿದೆ. ಶಾವಲಿಪ್ರಾಂತದಲ್ಲಿನ ಯುದ್ಧವು ನಮಗೆ ಅನುಕೂಲವಾಗಿಯೇ ಇದೆ. ನಾವು ಲೂಬಸ್ಸಾವನ್ನು ದಾಟಿ ಬಹುಮಂದಿ ಸೈನಿಕರನ್ನು ಸೆರೆಹಿಡಿದಿದ್ದೇವೆ. ಒಪೇಟೋಪ್ರಾಂತದಲ್ಲಿ ನಾವು ಅಕಸ್ಮಾತ್ತಾಗಿ ಶತ್ರುಸೇನಾಪಙ್ಕ್ತಿಮೇಲೆ ಬೀಳಲು, ಅವರಲ್ಲಿ ಹಲವರು ಸತ್ತರು. ಉಳಿದವರು ೭ಮೈಲಿಗಳ ಹಿಂದಕ್ಕೆ ಓಡಿಹೋದರು. ಪ್ರಿಜೆಮ್ಸಿಲ್ಲಿನವರೆಗೂ ಫಿರಂಗಿಯುದ್ಧವು ನಡೆಯುತ್ತಿದೆ'' ಎಂಬದಾಗಿ. ಈಚೆಗೆ ಬಂದಿರುವ ತಂತ್ರೀವಾರ್ತೆಯಿಂದ ಶತ್ರುಗಳು ಪ್ರಿಜಮ್ಸಿಲ್ ಕೋಟೆಯಬಳಿಗೆ ಉತ್ತರದಕ್ಷಿಣಭಾಗಗಳಿಂದ ಗುಂಪುಗುಂಪಾಗಿ ಬಂದು ತಾ||೧೬ರಲ್ಲಿ ಮುತ್ತಿ ರಷ್ಯನರಮೇಲೆ ಯುದ್ಧ ಮಾಡಲಾರಂಭಿಸಿದರೆಂದೂ, ಆ ಯುದ್ಧದಲ್ಲಿ ರಷ್ಯನರಿಗೆ ೩೦೦೦ ಮಂದಿ ಶತ್ರುಗಳೂ ಹಲವು ಫಿರಂಗಿಗಳೂ ವಶವಾದುವೆಂದೂ, ಜರೋಸ್ಲೇವಿನ ಹತ್ತಿರ ಉಭಯಪಕ್ಷಕ್ಕೂ ಯುದ್ಧವು ನಡೆದುದರಲ್ಲಿ ಶತ್ರುಗಳ ಕಡೆ ಬಹಳಮಂದಿ ಹತರಾಗಿ ಉಳಿದವರು ಸಾನುನದಿಯ ಪಕ್ಕಕ್ಕೆ ಓಡಿದರೆಂದೂ, ಪ್ರಿಜೆಮ್ಸಿಲ್ಲಿನ ಪಶ್ಚಿಮದ ಕೋಟೆಗಳ ಮೇಲೆ ಶತ್ರುಗಳು ಫಿರಂಗಿಗುಂಡುಗಳನ್ನು ಹೊಡೆಯುತ್ತಿರುವರೆಂದೂ, ಅಲ್ಲಿದ್ದ ರಷ್ಯನ್ ಸೈನ್ಯಗಳ ೨ ಪಟಾಲಮ್ಮಿನ ಕಂದಕಗಳನ್ನು ಶತ್ರುಗಳು ವಶಪಡಿಸಿಕೊಂಡರೆಂದೂ, ಈ ಯುದ್ಧದಲ್ಲಿ ಶತ್ರುಪಕ್ಷದೊಳಗೆ ಲಕ್ಷಾಂತರಜನರು ಹತರಾಗಿರುವರೆಂದೂ ಗೊತ್ತಾಗುತ್ತದೆ. ಪ್ರಿಜೆಮ್ಸಿಲ್ ಕೋಟೆಯ ಹತ್ತಿರ ಈಗ ಘೋರಯುದ್ಧವಾಗುತ್ತಿದೆ.

ತುರ್ಕಿ.

ಡಾರ್ಡಿನೆಲ್ಸ್ ಜಲಸಂಧಿಯಲ್ಲಿ ಯುದ್ಧ ಮಾಡುತ್ತಿದ್ದ ಗೋಲಿಯರ್ ಎಂಬ ಹಡಗನ್ನು ತುರ್ಕಿಯವರು ಟಾರ್ಪೆಡೋವಿನಿಂದ ಮುಳುಗಿಸಿಬಿಟ್ಟರು. ೫೦೦ ಮಂದಿಯವರೆಗೆ ಆ ಹಡಗಿನಲ್ಲಿದ್ದವರು ಸತ್ತಿರಬಹುದೆಂದು ಗೊತ್ತು ಮಾಡಲ್ಪಟ್ಟಿದೆ. ಒಂದುಕಡೆಯಲ್ಲಿ ಯುದ್ಧಮಾಡುತ್ತಿದ್ದ ಫ್ರೆಂಚ್ ಸೈನಿಕರಿಗೆ ಯುದ್ಧನಾವೆಗಳು ಸಹಾಯಮಾಡುತ್ತಿರುವಲ್ಲಿ ಅಲ್ಲಿಗೆ ತುರ್ಕಿಯವರ ಡಿಸ್ಟ್ರಾಯರುಗಳು ಬಂದು ಮೇಲೆಬಿದ್ದುವು. ಆ ಸಂದರ್ಭದಲ್ಲಿ ಮೇಲೆಕಂಡ ಹಡಗು ಮುಳುಗಿಹೋಯಿತು. ಮಾರ್ಮೊರಾ ಸಮುದ್ರಕ್ಕೆ ಆಂಗ್ಲರ ಒಂದು ಸಬ್‌ಮೆರೀನು ನುಗ್ಗಿಹೋಗಿ ಅಲ್ಲಿದ್ದ ತುರ್ಕಿಯವರ ಫಿರಂಗಿ ಸಮೇತವಾದ ೨ ಹಡಗುಗಳನ್ನೂ ೧ ಸಾಮಾನಿನ ಹಡಗನ್ನೂ ಮುಳುಗಿಸಿತು. ಗೂಬೆನ್ ಎಂಬ ಯುದ್ಧನಾವೆಯು ಡಾರ್ಡಿನಲ್ಸಿಗೆ ಬಂದಿತು. ಆದರೆ ಲಾರ್ಡ್ ನೆಲ್ಸನ್ ಎಂಬ ಹೆಸರಿನ ಹಡಗಿನಿಂದ ಒಂದು ಫಿರಂಗಿಗುಂಡು ಹೊಡೆಯಲ್ಪಟ್ಟಕೂಡಲೇ ಆ ಏಟನ್ನು ತಿಂದು ಓಡಿಹೋಯಿತು. ಕಾಕಸಸ್ ಪ್ರಾಂತ್ಯದಲ್ಲಿ ರಷ್ಯನ್ ಸೇನೆಗಳು ತುರ್ಕಿ ಸರಹದ್ದಿಗೆ ಹೋಗಿ ತಭಾಲಿಯಸ್ಸಿನ ದಕ್ಷಿಣದಲ್ಲಿ ಕಾದಾಡುತ್ತಿವೆ.

ಮೈಸೂರು ಸ್ಟಾರ್.

ಸನ್ ೧೯೧೫ನೆಯ ಇಸವಿ ಮೇ ತಾ|| ೨೩ನೆಯ ಭಾನುವಾರ.

ಚೀನಾಜಪಾನುಗಳು.

ಪಶ್ಚಿಮದೇಶದಲ್ಲಿ ತಲೆದೋರಿ ದೇಶದೇಶವನ್ನೇ ಸುಟ್ಟುಬಿಡುತ್ತಲಿರುವ ಯುದ್ಧಾಗ್ನಿಯು ಪೂರ್ವದೇಶದಲ್ಲೂ ಕಾಣಿಸಿಕೊಂಡು ಪ್ರಳಯವನ್ನು ಉಂಟುಮಾಡುವುದೆಂಬ ಸೂಚನೆಗಳು ಚೀನಾ-ಜಪಾನ್ ದೇಶಗಳ ಮಧ್ಯದಲ್ಲಿ ಕೆಲಕಾಲದಿಂದ ನಡೆಯುತ್ತಿದ್ದ ಪತ್ರವ್ಯವಹಾರಗಳಿಂದ ಜಗತ್ತಿಗೆ ಕಾಣಿಸುತ್ತಿದ್ದುವು. ಆದರೆ ಏಷ್ಯಾಖಂಡದಿಂದ ಸುದೈವದಿಂದ ಅಂಥ ವಿನಾಶಹೇತುವು ಮೂಲೋತ್ಪಾಟಿತವಾಯಿತೆಂಬ ಸಂಗತಿಯು ಈಚೆಗೆ ಪ್ರಕಟವಾದುದರಿಂದ ಏಷ್ಯಾಖಂಡ ನಿವಾಸಿಗಳಿಗೆಲ್ಲಾ ಸಂತೋಷವಾಗಿರುವುದು.

ಈಗಿನ ಯುದ್ಧಚಕ್ರದಲ್ಲಿ ಸಿಲ್ಕದೆ ತಟಸ್ಥವಾಗಿರುವ ರಾಷ್ಟ್ರಗಳಲ್ಲಿ ಕೆಲಕೆಲವು ಈ ಸಂಧಿಯನ್ನು ಸಾಧಿಸಿ, ಅರ್ಥಲಾಭ ದೇಶಲಾಭಗಳನ್ನು ಮಾಡಿಕೊಳ್ಳುವ ಚಿಂತೆಯಲ್ಲಿ ಮಗ್ನವಾಗಿರುತ್ತವೆ. ವ್ಯಾಪಾರ ಮೂಲಕವಾಗಿ ಅರ್ಥಲಾಭವನ್ನು ಅಮೇರಿಕಾ ಜಪಾನ್ ದೇಶಗಳು ಅತಿಶಯವಾಗಿ ಮಾಡಿಕೊಳ್ಳುತ್ತಲಿವೆ. ಜಪಾನ್ ದೇಶವು ಇತ್ತೀಚೆಗೆ ತನ್ನಲ್ಲುಂಟಾಗಿರುವ ಸಾಮರ್ಥ್ಯದಿಂದಲೂ, ಪ್ರಕೃತದಲ್ಲಿ ಪಶ್ಚಿಮಖಂಡ ಪ್ರಮುಖರಾಷ್ಟ್ರಗಳೆಲ್ಲಾ ಯುದ್ಧದ ಬೇಗೆಯಲ್ಲಿ ಬಿದ್ದು ಬೇರೆಕಡೆಗೆ ದೃಷ್ಟಿಯನ್ನು ಪ್ರಸರಿಸಲಾಗದ ಸ್ಥಿತಿಯಲ್ಲಿರುವುದರಿಂದಲೂ, ಇಂಗ್ಲೆಂಡು-ರಷ್ಯಾ-ಫ್ರಾನ್ಸು-ದೇಶಗಳು ತನಗೆ ಆಪ್ತರಾಷ್ಟ್ರಗಳಾಗಿರುವುದರಿಂದಲೂ, ತನ್ನ ವ್ಯಾಪನಪ್ರಯತ್ನಕ್ಕೆ ಅವರುಗಳು ಯಾವುದೊಂದು ಆತಂಕವನ್ನೂ ಮಾಡಲಾರದ ಸ್ಥಿತಿಯಲ್ಲಿರುವುದರಿಂದಲೂ, ಅಮೇರಿಕಾವು ತಟಸ್ಥವಾಗಿದ್ದರೂ ಜಪಾನಿನ ಉದ್ದೇಶವನ್ನು ಮುರಿಯಲು ಸಾಹಸಗೊಳ್ಳುವ ಕೆಲಸಕ್ಕೆ ಅದು ಕೈಹಾಕುವಷ್ಟರ ಸ್ಥಿತಿಯಲ್ಲಿಲ್ಲದಿರುವುದರಿಂದಲೂ, ಈ ಸುಸಂಧಿಯನ್ನು ಸಾಧಿಸಿ, ಜಪಾನು ಚೀನಾದೇಶದಲ್ಲಿ ಕಾಲುಚಾಚಿ ತನ್ನ ವರ್ಚಸ್ಸತ್ವವನ್ನು ಹೆಚ್ಚಾಗಿ ಸ್ಥಾಪಿಸಿಕೊಳ್ಳುವ ಪ್ರಯತ್ನವನ್ನು ಈಗ ನಡೆಯಿಸಿತು.

ಚೀನಾ ದೇಶದಲ್ಲಿ ಪ್ರಜಾ ಪರಿಪಾಲನ ಕ್ರಮವು ಆರಂಭವಾಗಿ ಸ್ವಲ್ಪಕಾಲ ಮಾತ್ರವೇ ಆಗಿ, ಅಲ್ಲಿನ ಪ್ರಜಾಪಕ್ಷ ಪ್ರಭುಪಕ್ಷದವರ ಮಧ್ಯದಲ್ಲಿ ಹುಟ್ಟಿರುವ ವೈರಸ್ಯವು ಇನ್ನೂ ಶಾಂತವಾಗದೆಯೂ, ಜಪಾನಿನಂಥ ಪ್ರಬಲರಾಷ್ಟ್ರದೊಡನೆ ವಿರೋಧವನ್ನು ಕಟ್ಟಿಕೊಳ್ಳುವಷ್ಟು ಶಕ್ತಿ ಸಾಮರ್ಥ್ಯಗಳು ಚೀನಾಕ್ಕೆ ಇಲ್ಲದೆಯೂ ಅದರ ಸದ್ಯಸ್ಥಿತಿಯು ಜಪಾನಿನ ದೇಶವ್ಯಾಪನ ಪ್ರಯತ್ನಕ್ಕೆ ಉತ್ತೇಜನವನ್ನು ಹುಟ್ಟಿಸಿತು. ಬಹುಕಾಲಗಿಂದಲೂ ಜಪಾನಿಗೆ ಚೀನಾದ ಮೇಲೆ ಒಂದು ಕಣ್ಣು ಇದ್ದೇ ಇದೆ. ಅಲ್ಲಿಗೆ ಜರ್ಮನರು ಅಮೇರಿಕನ್ನರು ಮೊದಲಾದ ಪಾಶ್ಚಾತ್ಯರೆಲ್ಲ ಬಂದು ವ್ಯಾಪಾರಸ್ವಾತಂತ್ರ್ಯ ಲೋಹಮಾರ್ಗಸೌಕರ್ಯ ಮೊದಲಾದುವುಗಳನ್ನು ಪಡೆದುಕೊಳ್ಳುತ್ತಿರುವುದನ್ನು ನೋಡಿ ಜಪಾನು ಒಳಗೊಳಗೇ ಹೊಟ್ಟೆಯನ್ನು ಹಿಸುಕಿಕೊಳ್ಳುತ್ತಿದ್ದಿತು. ಚೀನಾದ ಮೇಲೆ ತನ್ನ ತೇಜಸ್ಸತ್ವವನ್ನು ಊರಿ ಅದನ್ನು ಅಂಕಿತಮಾಡಿಕೊಳ್ಳಬೇಕೆಂಬ ತನ್ನ ಕಾಂಕ್ಷೆಯನ್ನು ಅದು ಪಶ್ಚಿಮಖಂಡದ ಪ್ರಬಲ ರಾಷ್ಟ್ರಗಳ ಭಯದಿಂದ ಹೊರಗೆಡಹದೆ ಇದ್ದಿತು. ಚೀನಾದೇಶವಾದರೋ ತನ್ನ ಸ್ಥಿತಿಯನ್ನು ನೆನೆದು ಹೇಗಾದರೂ ಮಾಡಿ ತನ್ನ ಹಜ್ಜೆಯ ಮೇಲೆ ತಾನು ಸ್ವತಂತ್ರವಾಗಿ ನಿಂತುಕೊಂಡು ಕಾಲಯಾಪನೆ ಮಾಡಬೇಕೆಂಬ ತಪಸ್ಸಿನಲ್ಲಿರುವುದು. ಅದರ ಆ ಸ್ವಾತಂತ್ರ್ಯಪ್ರೀತಿಗೂ ಜಪಾನಿನ ಪರದೇಶವ್ಯಾಪನ ಕಾಂಕ್ಷೆಗೂ ಪರಸ್ಪರ ವೈರುದ್ಧ್ಯವಿರುವುದು ಸಹಜವಾಗಿರುತ್ತದೆ. ಒಳಗೊಳಗೇ ಬಹು ಕಾಲದಿಂದ ಕವರುತ್ತಿದ್ದ ಈ ವೈರುದ್ಧಾಗ್ನಿಯು ಅನುಕೂಲವಾಯುವು ಜಪಾನಿಗೆ ಬೀಸಿದ ಈ ಸಮಯದಲ್ಲಿ ಥಟ್ಟನೆ ಹತ್ತಿಕೊಳ್ಳುವ ಸ್ಥಿತಿಗೆ ಬಂದಿತು.

ಚೀನಾದಲ್ಲಿದ್ದ ಸಿಂಗ್‌ಚೋವು ಎಂಬ ಜರ್ಮನ್ ಸ್ವಾಸ್ಥ್ಯವನ್ನು ಜಪಾನರು ಈಗಿನ ಯುದ್ಧಪ್ರಸಕ್ತಿಯಲ್ಲಿ ಹಿಡಿದುಕೊಂಡ ವಿಷಯವು ನಮ್ಮ ವಾಚಕವರ್ಗಕ್ಕೆ ಗೊತ್ತೇಇದೆಯಷ್ಟೆ. ಜಪಾನಿನ ಗೂಢೋದ್ದೇಶವನ್ನು ತಿಳಿದುಕೊಂಡಿರುವ ಚೀನಾದವರು ಈ ಜಪಾನರ ವಿಜಯಲಾಭದಿಂದ ಚಕಿತರಾಗಿ, ಕಿಂಗ್‌ಚೋವಿನ ಸ್ವಾಮ್ಯವಿಷಯವನ್ನು ಹೇಗೆ ಕಡೆಗಾಣಿಸುವಿರೆಂದು ಆಗಲೇ ಜಪಾನರನ್ನು ಕೇಳಿದರು. ಕೊನೆಗೆ ನಿಮಗೇ ಇದನ್ನು ವಹಿಸಿಕೊಡುವೆವೆಂದು ಆಗ ಜಪಾನರು ಉತ್ತರವಿತ್ತು, ಬೆಳೆಯುವುದಕ್ಕಿದ್ದ ಗದ್ದಲವನ್ನು ಅಲ್ಲಿಗೇ ಶಾಂತಿಗೊಳಿಸಿದರು. ಸಿಂಗ್‌ಚಾವನ್ನು ಹಿಡಿದುಕೊಂಡ ಜಪಾನರು ಬಳಿಕ ಆ ಪ್ರದೇಶವನ್ನೆಲ್ಲಾ ಯುದ್ಧಕಾಲಿಕಶಾಸನಬದ್ಧಸ್ಥಲವನ್ನಾಗಿ ಮಾಡಿಟ್ಟರು. ಅದನ್ನು ತಪ್ಪಿಸಿಬಿಡಬೇಕೆಂದು ಚೀನಾದವರು ಜಪಾನಿಗೆ ನಿಕ್ಷುಣ್ಣವಾಗಿ ಹೇಳಲುಪಕ್ರಮಿಸಿದರು. ಆಗ ಜಪಾನಿನವರು ಇನ್ನು ಕಾಲಹರಣ ಮಾಡುವುದು ಸರಿಯಲ್ಲವೆಂದು ಯೋಚಿಸಿ, ತಾವು ಸಿಂಗ್‌ಚೌವನ್ನು ಚೀನಾಕ್ಕೆ ಒಪ್ಪಿಸಬೇಕಾದರೆ ತಮ್ಮ ಇಷ್ಟದಂತೆ ಕೆಲವು ನಿಬಂಧನೆಗಳಿಗೆ ಬದ್ಧವಾಗಿ ಚೀನಾವು ನಡೆದುಕೊಳ್ಳಬೇಕೆಂದು ಹೇಳಿ ಆ ನಿಯಮಗಳ ಪಟ್ಟಿಯನ್ನು ಚೀನಾಕ್ಕೆ ಕಳುಹಿಸಿಕೊಟ್ಟರಂತೆ. ಆ ನಿಯಮಗಳು ಯಾವಸ್ವರೂಪವಾದುವುಗಳೆಂಬುದು ಇದುವರೆಗೂ ಬಹಿಃ ಪ್ರಕಟವಾಗಿಲ್ಲ. ಆದರೂ ಆ ನಿಯಮಗಳ ವಿಷಯದಲ್ಲಿ ಚೀನಾ ಜಪಾನ್ ಪತ್ರಿಕೆಗಳು ಪರಸ್ಪರ ದೂಷಣಖಂಡನ ಭೂಯಿಷ್ಠವಾದ ವಾದಾನುವಾದಗಳನ್ನು ಪ್ರಕಟಿಸಿರುವುದನ್ನು ಹಿಡಿದು ಆಲೋಚಿಸಿ ನೋಡಿದರೆ "ಚೀನಾದಲ್ಲಿ ಯಾಂಗ್ಟ್ಸಿ ನದಿಯವರೆಗೆ ತಮ್ಮ ಲೋಹಮಾರ್ಗ ಪ್ರಸಾರಕ್ಕೆ ಅವಕಾಶವನ್ನು ಕೊಡಬೇಕು. ಗಣಿಗಳನ್ನು ತೋಡಿ ರೂಢಿಸಿಕೊಳ್ಳುವ ಸ್ವಾತಂತ್ರ್ಯವನ್ನು ತಮಗೆ ಕೊಡಬೇಕು. ಚೀನಾಕ್ಕೆ ಸೇರಿದ ಯಾವುದೊಂದು ಭೂಪ್ರದೇಶವನ್ನೂ ಜಪಾನಿನ ಅನುಮತಿಯಿಲ್ಲದೆ ವಿದೇಶೀಯರಿಗೆ ಚೀನಾವು ಒಪ್ಪಿಸಿಕೊಡಕೂಡದು, ಚೀನಾದಲ್ಲಿರುವ ಸೇನೆಯ ತಿದ್ದುಪಡಿ ಅಧಿಕಾರ ಮೊದಲಾದುವುಗಳನ್ನೆಲ್ಲಾ ಜಪಾನಿನ ಅನುಮತಿಯ ಮೇಲೆ ಏರ್ಪಡಿಸಿಕೊಳ್ಳಬೇಕು, ಚೀನಾಕ್ಕೆ ಬೇಕಾದ ಮದ್ದುಗುಂಡು ಮೊದಲಾದ ಸಾಮಾನುಗಳನ್ನೆಲ್ಲಾ ಜಪಾನಿನ ಮೂಲಕವಾಗಿಯೇ ತರಿಸಿಕೊಳ್ಳಬೇಕು" ಎಂಬುದೇ ಮೊದಲಾದ ನಿಬಂಧನೆಗಳು ಆ ಪಟ್ಟಿಯಲ್ಲಿ ಕಾಣಿಸಲ್ಪಟ್ಟಿರಬೇಕೆಂದು ಕಾಣುತ್ತದೆ. ಆದರೆ ಇದೇ ಸಂದರ್ಭದಲ್ಲಿ ಇಂಗ್ಲಿಷ್ ಪಾರ್ಲಿಮೆಂಟಿನೊಳಗೆ ಇಂಗ್ಲೆಂಡ್ ಚೀನಾಗಳ ಸಂಬಂಧ ವಿಷಯಕ್ಕೆ ಈಗಿನ ಜಪಾನ್ ಪ್ರಯತ್ನವು ವಿಘಾತಕವಾಗುವುದೆ ? ಎಂದು ಮೊದಲಾಗಿ ಚರ್ಚೆಹುಟ್ಟಿ, ಲೋಕದವರ ಕಣ್ಣೆಲ್ಲಾ ಚೀನಾ ಜಪಾನುಗಳ ಪತ್ರವ್ಯವಹಾರಗಳ ಕಡೆಗೆ ತಿರುಗಿದುದರಿಂದ, ಜಪಾನು ತನ್ನ ಅಪೇಕ್ಷಾಪರಿಮಿತಿಯನ್ನು ಸ್ವಲ್ಪಮಟ್ಟಿಗೆ ಕುಗ್ಗಿಸಿರಬಹುದು. ಆದರೆ ಚೀನಾವು ಅಮೇರಿಕಾದ ಬೆಂಬಲವನ್ನು ನೆನೆದೋ ಏನೋ ಜಪಾನಿನ ಪ್ರಾರ್ಥನೆಗೆ ಪ್ರತ್ಯುತ್ತರವನ್ನು ಕೊಡುವುದಕ್ಕೆ ಕಾಲಯಾಪನೆ ಮಾಡುತ್ತ ಬಂದಿತು. ಅದರ ಮೇಲೆ ಜಪಾನು ಮರಳಿ ಚೀನಾವನ್ನು ಕುರಿತು-"ನಾವು ಕೇಳಿರುವ ನಿಯಮಗಳಿಗೆ ಅಂಗೀಕರಿಸಿದರೇನೆಯೇ ನಾವು ಮರಳಿ ಸಿಂಗ್‌ಚೌವನ್ನು ನಿಮಗೆ ಒಪ್ಪಿಸಿಕೊಡುವ ವಿಷಯವನ್ನು ಆಲೋಚಿಸುವೆವು" ಎಂದು ಖಂಡಿತವಾಗಿ ತಿಳಿಯಿಸಿದರು. ಆಗ ಚೀನಾವು ೧-೨ ಮುಖ್ಯ ವಿಷಯಗಳ ಹೊರತು ಉಳಿದ ನಿಮ್ಮ ಕೋರಿಕೆಗಳಿಗೆಲ್ಲಾ ಒಪ್ಪುವೆವೆಂದು ತಿಳಿಯಪಡಿಸಲು, ಹಾಗಾದರೆ ಸಿಂಗ್‌ಚೌವಿನ ಆಸೆಯನ್ನು ನೀವು ಬಿಟ್ಟುಬಿಡಿರೆಂದು ಹೇಳಿ, ತಮ್ಮ ಯುದ್ಧಸನ್ನಾಹವನ್ನು ಪ್ರದರ್ಶಿಸಿ, "ಆದ್ಯಂತನಿಯಮಗಳಿಗೂ ನೀವು ಒಪ್ಪಿಗೆಯನ್ನು ೪೮ ಗಂಟೆಗಳ ಕಾಲದೊಳಗೆ ಕೊಡದಿದ್ದರೆ ಯುದ್ಧಕ್ಕೆ ಸನ್ನದ್ಧರಾಗಬೇಕು" ಎಂದು ಕಡೆಯ ಸಂದೇಶವನ್ನು ತಿಳಿಯಿಸಿಬಿಟ್ಟರು. ಅದರ ಮೇಲೆ ಚೀನಾವು (ತನ್ನ ದೌರ್ಬಲ್ಯವನ್ನು ಲಕ್ಷ್ಯಕ್ಕೆ ತಂದುಕೊಂಡು) ಸಾಮವಚನದಿಂದ ಯಾವುದೋ ಒಂದು ವಿಷಯವನ್ನು ಮಾತ್ರ ನಿಯಮಗಳ ಪಟ್ಟಿಯಿಂದ ತಪ್ಪಿಸಿಬಿಡಬೇಕೆಂದು ಪ್ರಾರ್ಥಿಸಿಕೊಂಡು, ಉಳಿದ ನಿಯಮಗಳಿಗೆಲ್ಲಾ ತಾನು ಒಪ್ಪಿಕೊಂಡಿತಂತೆ. ಅದರಮೇಲೆ ಜಪಾನೂ ಕೂಡ ಹಾಗೆಯೇ ಮಾಡಲು ಒಪ್ಪಿದುದರಿಂದ ಚೀನಾ ಜಪಾನುಗಳ ವೈಮನಸ್ಯಾಗ್ನಿಯು ಸದ್ಯಃ ಅಲ್ಲಿಗೇ ಶಾಂತವಾಯಿತೆಂಮ ಪ್ರಕಟವಾಗಿದೆ.

ಜಪಾನು ಜರ್ಮನಿಯಂತೆಯೇ ದೇಶತೃಷ್ಣೆಯಿಂದ ಬಾಯ್ದೆರೆದುಕೊಂಡಿದ್ದರೂ ಜಪಾನಿನ ರಾಜನೀತಿಯು ಜರ್ಮನಿಯ ರಾಜನೀತಿಯಷ್ಟು ಕಲುಷಿತವಾಗಿರುವುದಿಲ್ಲ. ಜಪಾನ್ ಚೀನಾಗಳ ವ್ಯವಹಾರವು ಆಸ್ಟ್ರಿಯಾ ಸರ್ವಿಯಾಗಳ ವ್ಯವಹಾರ ರೀತಿಯಂತೆ ಬೆಂಬಲಗಳ ನೇಕದಿಂದ ಕಠಿನತರವಾಗಲೂ ಇಲ್ಲ. ಅದುಕಾರಣವೇ ಪ್ರಾಪ್ತವಾಗಲಿಕ್ಕಿದ್ದ ಪೂರ್ವದೇಶೀಯ ಯುದ್ಧಾನಲವು ಗರ್ಭಾವಸ್ಥೆಯಲ್ಲಿಯೇ ನಂದಿಹೋಯಿತು. ಆದರೆ ರಾಜ್ಯರಾಜ್ಯಗಳ ಸಂಧಿನಿಬಂಧನೆಗಳು ಆಚಂದ್ರಾರ್ಕಸ್ಥಾಯಿಗಳಲ್ಲ. ಸಮಬಲತೆಯು ಉಭಯಪಕ್ಷದಲ್ಲೂ ಸಮನಿಸಿದಾಗ ಸಕಲವಿಧ ಪ್ರತಿಜ್ಞಾಪತ್ರಗಳೂ ಇದ್ದಬಳಿಯಲ್ಲಿಯೇ ಗೆದ್ದಲು ಹಿಡಿದಂತಾಗುವುವು. ಆದರೂ ಪೌರಸ್ತ್ಯರಾದ ಚೀನಾ ಜಪಾನರ ಮಧ್ಯದಲ್ಲಿ ಈಗ ನಡೆದಿರುವ ನಿಬಂಧನವು ಚಿರಕಾಲಿಕ ಸಾತ್ವಿಕನಿಬಂಧನವಾಗಿ ಪರಿಣಮಿಸುವಂತೆ ಜಗದೀಶನು ಮಾಡಲೆಂದು ಕೋರುವುದು ಪೌರಸ್ತ್ಯರಾದ ನಮಗೆ ಕರ್ತವ್ಯವಾಗಿರುವುದು.

ಪೋರ್ಚುಗಲ್ಲಿನ ವಿಪ್ಲವ.

ಪೋರ್ಚುಗಲ್‌ದೇಶದಲ್ಲಿನ ಪ್ರಜೆಗಳು ಪ್ರಜಾಸತ್ತಾಕರಾಜ್ಯವನ್ನು ಸ್ಥಾಪಿಸಿಕೊಳ್ಳಬೇಕೆಂಬ ಉದ್ದೇಶದಿಂದ ಪ್ರೇರಿತರಾಗಿ ಅಲ್ಲಿನ ಪ್ರಭುತ್ವದವರಮೇಲೆ ತಿರುಗಿಬಿದ್ದರೆಂಬ ವಾರ್ತೆಯು ಕಳೆದ ವಾರದಲ್ಲಿ ಪ್ರಕಟವಾಗಿದೆ. ವಿಪ್ಲವಕಾರಕ ಪಕ್ಷದ ಪ್ರಜೆಗಳು ತಂತ್ರೀವಾರ್ತೆಯ ಕಂಬ ಮೊದಲಾದುವುಗಳನ್ನು ಕಿತ್ತುರುಳಿಸಿ, ಸೈನಿಕರಲ್ಲನೇಕರನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಂಡು, ಟಾಗಸ್‌ನದಿಯಲ್ಲಿ ನಿಂತಿದ್ದ ಕೆಲವು ಹಡಗುಗಳನ್ನು ವಶಪಡಿಸಿಕೊಂಡು, ವಾಸ್‌ಕೋಡಿಗಾಮಾ ಎಂಬ ಕ್ರ್ಯುಯಿಝರಿನ ಕೇಪ್ಟನ್ನನ್ನು ಕೊಂದು, ಆ ಯುದ್ಧದ ಹಡಗುಗಳಿಂದ ಫಿರಂಗಿಗುಂಡುಗಳನ್ನು ಪಟ್ಟಣಗಳಮೇಲೆ ಹೊಡೆದರು. ಇದರಿಂದ ಲಿಸ್ಬನ್ ಪಟ್ಟಣದಲ್ಲಿ ಬಹಳ ನಷ್ಟವಾಯಿತು. ತೀರದಿಂದ ಆ ಹಡಗುಗಳ ಮೇಲೆ ಪ್ರತಿಗುಂಡುಗಳು ಹಾರಿಸಲ್ಪಟ್ಟುವು. ಈ ವಿಪ್ಲವವು ಲಿಸ್ಬನ್ ನಗರದಲ್ಲಿ ಮಾತ್ರವೇ ಅಲ್ಲದೆ ಕಯಿಂಬ್ರಾ, ಟಿಸೋಟೋಸಾಂಟಿಮು ಪಟ್ಟಣಗಳಲ್ಲೂಸಹ ಉಂಟಾಯಿತು. ಇವರು ತಮ್ಮ ಪ್ರಾಬಲ್ಯದಿಂದ ದೇಶಾಧಿಕಾರವನ್ನೆಲ್ಲಾ ತಮ್ಮ ಕೈಗೆ ತೆಗೆದುಕೊಳ್ಳುತ್ತ ಬಂದರು. ದೇಶದಲ್ಲಿ ಮುಖ್ಯಮಂತ್ರಿಯಾಗಿದ್ದ ಆಲ್ಫಾನ್ಸೋ ಕೋಸ್ಟಾ ಎಂಬಾತನನ್ನು ಕೊಂದುಬಿಟ್ಟರು. ತಾವು ಹಿಡಿದುಕೊಂಡ ವಾಸ್ಕೋಡಿಗಾಮಾ ಎಂಬ ಹಡಗಿನಮೇಲೆ ಈ ವಿಪ್ಲವಪಕ್ಷಪ್ರಮುಖರು ಸಭೆಗೂಡಿ, ತಮ್ಮ ಪಕ್ಷದ ಮಂತ್ರಿವರ್ಗವನ್ನು ಹೊಸದಾಗಿ ನಿಯಮಿಸಬೇಕೆಂದೂ, ಪ್ರಜಾಸತ್ತಾಕಪ್ರಭುತ್ವವನ್ನು ಸ್ಥಾಪಿಸಿ ವೃದ್ಧಿಪಡಿಸಬೇಕೆಂದೂ ಚರ್ಚಿಸಿ ನಿರ್ಧರಿಸಿದರು. ಪ್ರಜಾಪಕ್ಷದ ಸೈನಿಕರಿಗೂ ಪ್ರಭುತ್ವದ ಕಡೆಯವರಿಗೂ ಅಲ್ಲಲ್ಲಿ ಕಾಳಗಗಳಾದುವು. ಪ್ರಭುತ್ವಪಕ್ಷದ ಉದ್ಯೋಗಿಗಳಲ್ಲಿ ನಾಲ್ಕುಮಂದಿಗೆ ಪ್ರಾಣಾಪಾಯಕರವಾದ ಗಾಯಗಳಾದುವು. ವಿಪ್ಲವಕಾರರು ಅರಮನೆಯಕಡೆಗೆ ನುಗ್ಗಿಹೋಗುತ್ತಿರುವಾಗ ಆ ಗುಂಪಿನಮೇಲೆ ಯಾರೋ ಸಿಡಿಮದ್ದುಗಳನ್ನು ಹಾಕಿದರು. ತುಪಾಕಿಗುಂಡುಗಳನ್ನು ಹೊಡೆದರು. ಅದರಿಂದ ಬಹುಜನಕ್ಕೆ ಗಾಯವಾಯಿತು. ಒಟ್ಟಿಗೆ ಈ ಬಡಿದಾಟದಲ್ಲಿ ೨೦೦ ಮಂದಿಗಳು ಹತರಾದರು. ೫೦೦ ಮಂದಿಗಳಿಗೆ ಗಾಯವಾಯಿತು. ಅಷ್ಟರಲ್ಲಿ ಪ್ರಭುತ್ವಪಕ್ಷ ಪ್ರಜಾಪಕ್ಷದವರೀರ್ವರಿಗೂ ಸಮಾಧಾನವಾಗುವ ಸ್ಥಿತಿಯುಂಟಾಯಿತು. ವಿಪ್ಲವಕಾರರ ಅಭಿಮತವೇನೆಂದು ಕೇಳುವಲ್ಲಿ ಪ್ರಜಾವರ್ಗದವರಿಂದ ಆರಿಸಲ್ಪಟ್ಟ ಜನರೇ ಮಂತ್ರಿಮಂಡಲದವರಾಗಿರಬೇಕೆಂಬ ತಮ್ಮ ಅಭಿಮತವನ್ನು ಅವರು ತಿಳಿಯಪಡಿಸಿದರು. ಹಾಗೆ ಮಾಡುವುದಕ್ಕೆ ಪ್ರಭುತ್ವಪಕ್ಷದವರು ಒಪ್ಪಿಕೊಂಡರು. ಈಚೆಗೆ ಬಂದಿರುವ ವರ್ತಮಾನಗಳಿಂದ ನೂತನಮಂತ್ರಿವರ್ಗವು ಪ್ರಜಾಮತಕ್ಕನುಸಾರವಾಗಿ ಸ್ಥಾಪಿಸಲ್ಪಟ್ಟಿರುವುದೆಂದೂ, ಎಲ್ಲಕಡೆಯಲ್ಲೂ ಶಾಂತಿಯುಂಟಾಗಿರುವುದೆಂದೂ ಗೊತ್ತಾಗುತ್ತದೆ.

ಇಟಲಿ-ಜರ್ಮನಿ.

ಇಟಲಿಗೂ-ಆಸ್ಟ್ರಿಯಾ ಜರ್ಮನಿಗಳಿಗೂ ವೈಮನಸ್ಯವು ಹೆಚ್ಚುತ್ತಿದೆ. ಆದ್ರಿಯಾಟಿಕ್ ಸಮುದ್ರದ ತೀರದಲ್ಲಿರುವ ಟ್ರೀಸ್ಟಿ ಎಂಬ ಪಟ್ಟಣವು ಆಸ್ಟ್ರಿಯಾ ಚಕ್ರವರ್ತಿಯ ಪರಿಪಾಲನೆಗೊಳಪಟ್ಟಿರುತ್ತದೆ. ಇಲ್ಲಿ ಆ ಪ್ರಭುತ್ವದವರ ಹಡಗು ಮದ್ದುಗುಂಡು ಮೊದಲಾದುವುಗಳನ್ನು ನಿರ್ಮಿಸುವ ಕರ್ಮಾಗಾರವಿರುತ್ತದೆ. ಈಗಿನ ಯುದ್ಧಾರಂಭವಾದಬಳಿಕ ಈ ಕರ್ಮಾಗಾರದಲ್ಲಿ ಕೆಲಸ ಮಾಡುತ್ತಿದ್ದ ಎಷ್ಟೋ ಸಾವಿರಾರು ಮಂದಿ ಇಟಲಿ ಜನರನ್ನು ಕೆಲಸದಿಂದ ತೆಗೆದುಬಿಟ್ಟು ಆ ಸ್ಥಲಕ್ಕೆ ತಮ್ಮ ಜನರನ್ನು ಆಸ್ಟ್ರಿಯನ್ನರು ನಿಯಮಿಸಿಕೊಂಡರು. ಅಂದಿನಿಂದ ಆ ಉಭಯ ಜನವರ್ಗದಲ್ಲಿ ವೈಷಮ್ಯವು ವೃದ್ಧಿಯಾಗುತ್ತಿದೆ. ಆಸ್ಟ್ರಿಯನ್ ಸೈನ್ಯದಲ್ಲಿ ಅಧಿಕಾರಿಗಳಾಗಿದ್ದ ಕೆಲ ಆಸ್ಟ್ರಿಯನ್ನರು ಇಟಲಿಯ ಪಕ್ಷಪಾತಿಗಳಾಗಿರುವರೆಂಬ ಕಾರಣದ ಮೇಲೆ ಅವರನ್ನು ಉದ್ಯೋಗದಿಂದ ತೆಗೆದುಹಾಕಿಬಿಟ್ಟರು. ಅವರ ಸ್ಥಾನಕ್ಕೆಲ್ಲಾ ಜರ್ಮನ್ ಉದ್ಯೋಗಿಗಳನ್ನು ಆಸ್ಟ್ರಿಯನ್ನರು ನಿಯಮಿಸಿಕೊಂಡರು. ಇಟಲಿ ಆಸ್ಟ್ರಿಯಾದ ಎಲ್ಲೆಕಟ್ಟಿನಲ್ಲಿರುವ ಪೋಲಾ ಎಂಬ ಊರಿನಲ್ಲಿ ವಾಸವಾಗಿದ್ದ ಜನರನ್ನೆಲ್ಲಾ ಸುತ್ತುಮುತ್ತಿನ ಗ್ರಾಮಗಳಿಗೆ ಕಳುಹಿಸಿಬಿಟ್ಟು ಅಲ್ಲಿ ಪ್ರಬಲವಾದ ದುರ್ಗಗಳನ್ನು ಜರ್ಮನ್ ಆಸ್ಟ್ರಿಯನ್ನರುಗಳು ನಿರ್ಮಿಸುತ್ತಿದ್ದಾರೆ. ಹಳೆಯ ಕೋಟೆಯ ಫಿರಂಗಿ ಜಗತಿಗಳ ಮೇಲೆ ದೊಡ್ಡ ದೊಡ್ಡ ಫಿರಂಗಿಗಳನ್ನು ನಿರ್ಮಿಸುತ್ತಿದ್ದಾರೆ. ಅಲ್ಲಿಂದ ಗುರಿಕಟ್ಟಿ ಹೊಡೆಯುವ ಗುಂಡುಗಳಿಗೆ ಅಡ್ಡಲಾಗಬಹುದಾಗಿದ್ದ ಮನೆಗಳನ್ನೆಲ್ಲಾ ನೆಲಸಮ ಮಾಡುತ್ತಿದ್ದಾರೆ. ಟ್ರೀಸ್ಟಿ ತೀರದಲ್ಲಿ ಅನೇಕ ಜರ್ಮನ್ ಸಬ್‌ಮೆರೀನುಗಳು ಬಂದು ನಿಂತಿರುತ್ತವೆ. ಪ್ರತಿದಿವಸವೂ ಕಾರ್ನಿಯೊಲಾ, ಕಾರಿಂತಿಯಾ, ಬೋಸ್ನಿಯಾ, ಹರ್ಜಿಗೋವಿನಾ-ಎಂಬ ಪ್ರದೇಶಗಳಿಂದ ಜರ್ಮನ್ ಸೇನಾಸ್ತೋಮವು ಪ್ರವಾಹದಂತೆ ಬಂದು ಆಸ್ಟ್ರಿಯಾ ಇಟಲಿ ಎಲ್ಲೆಕಟ್ಟುಗಳಲ್ಲಿ ನಿಲ್ಲುತ್ತಲಿವೆ. ಈ ಸಮರಸನ್ನಾಹವೆಲ್ಲಾ ಇಟಲಿಯವರನ್ನು ಬೆದರಿಸಿ ತಮ್ಮ ಪಕ್ಷಕ್ಕೆ ಸೆಳೆದುಕೊಳ್ಳಬೇಕೆಂದು ಜರ್ಮನರು ಮಾಡುತ್ತಿರುವ ಕಪಟೋಪಾಯವಾಗಿರಬಹುದು. ಇದಲ್ಲದೆ ನೀವು ನಮ್ಮ ಪಕ್ಷಕ್ಕೆ ಸೇರದಿದ್ದರೆ ನಮ್ಮ ದೇಶದಲ್ಲಿರುವ ಇಟಲಿಯನ್ನರ ಮಾನಧನ ಪ್ರಾಣಹಾನಿಗಳನ್ನು ವಾಚಾಮಗೋಚರವಾಗಿ ಮಾಡುತ್ತೇವೆಂದು ಜರ್ಮನರು ಇಟಲಿಯವರನ್ನು ಹೆದರಿಸುತ್ತಿರುವರಂತೆ. ಮತ್ತು ಜರ್ಮನ್ ಚಕ್ರವರ್ತಿಯವರು ಇಟಲಿ ಚಕ್ರವರ್ತಿಯ ತಾಯಿಯನ್ನು ಕುರಿತು "ಇಟಲಿಯು ಜರ್ಮನಿಯ ಪಕ್ಷಕ್ಕೆ ಸೇರಿ ಯುದ್ಧಮಾಡುವಂತೆ ಮಾಡಿಸಬೇಕು, ಎಂದು ಪತ್ರವನ್ನು ಈ ಮಧ್ಯೆ ಬರೆದಿರಲಾಗಿ, ಹಾಗೆ ಮಾಡಲಾಗುವುದಿಲ್ಲವೆಂದು ಆಕೆಯವರು ಉತ್ತರವನ್ನು ಕಳುಹಿಸಿಬಿಟ್ಟರಂತೆ. ಇವೆಲ್ಲ ಪ್ರಯತ್ನಗಳೂ ಇಟಲಿ ಪ್ರಜೆಗಳನ್ನು ಜರ್ಮನರ ಮೇಲೆ ರೇಗಿಸುತ್ತಲಿವೆ. ಅದುಕಾರಣ ಅವರು ಮಿತ್ರಮಂಡಲಿಯವರ ಕಡೆಗೆ ಸೇರಿ ಜರ್ಮನಿ ಆಸ್ಟ್ರಿಯನ್ನರ ಮೇಲೆ ರಣಭೇರಿಯನ್ನು ಹೊಡೆಯಿಸಬೇಕೆಂದು ತಮ್ಮ ಪ್ರಭುತ್ವದವರನ್ನು ಬಲಾತ್ಕರಿಸುತ್ತಲಿದ್ದಾರೆ. ಪ್ರಭುತ್ವದವರು ಮಾತ್ರ ರಣೋತ್ಸಾಹವನ್ನು ಹೊಂದಿದಂತೆ ಕಾಣುವುದಿಲ್ಲ.

ಒಳದೇಶ ವೃತ್ತಾಂತಗಳು.

ಬರುವ ನವಂಬರ್ ತಿಂಗಳಲ್ಲಿ ನಡೆಯುವ ಸಿವಿಲ್‌ಸರ್ವಿಸ್ ಪರೀಕ್ಷೆ ಕೊಡಲು ಅಪೇಕ್ಷಿಸಿದ್ದ ವಿದ್ಯಾರ್ಥಿಗಳಲ್ಲಿ ೨೩ಜನರು ಮಾತ್ರ ಅಂಗೀಕರಿಸಲ್ಪಟ್ಟು ಬರುವ ಜೂನ್ ತಾ|| ೧೪ರಲ್ಲಿ ವೈದ್ಯಸಂಘದವರ ಪರೀಕ್ಷೆಗೆ ಸೇರಬೇಕೆಂದು ಅಪ್ಪಣೆಯಾಗಿದೆ.

ಈ ಜೂನ್ ತಿಂಗಳಲ್ಲಿ ಜರುಗುವ ಶ್ರೀಮನ್ ಮಹಾರಾಜರವರ ವರ್ಧಂತ್ಯುತ್ಸವ ಸಮಯದಲ್ಲಿ ಕುದುರೆಗಳ ಪಂದ್ಯವು ನಿಲ್ಲಿಸಲ್ಪಟ್ಟಿರುವುದಷ್ಟೆ. ಮುಂದೆ ಬರುವ ದಸರಾಮಹೋತ್ಸವ ವೇಳೆಯಲ್ಲಿ ಕೈಗಾರಿಕ ಮತ್ತೂ ಬೇಸಾಯದ ವಸ್ತುಗಳ ಪ್ರದರ್ಶನವೂ ನಡೆಸಲ್ಪಡುವುದಿಲ್ಲವಾಗಿ ಗೊತ್ತಾಗಿದೆ.

ರಜವನ್ನು ಪಡೆದುಕೊಂಡು ಕೊಲೊಂಬೋವಿಗೆ ದಯಮಾಡಿರುವ ಮ|| ವಿಶ್ವೇಶ್ವರಯ್ಯನವರು ಈ ತಾ|| ೨೬ರಲ್ಲಿ ಕೊಲೊಂಬೊದಿಂದ ಮೇಟುಪಾಳ್ಯಕ್ಕೆ ಬಂದು ಅಲ್ಲಿಂದ ಮೋಟಾರು ಬಂಡಿಯಲ್ಲಿ ಉದಕಮಂಡಲಕ್ಕೆ ಚಿತ್ತೈಸಿ ಅಲ್ಲಿ ಜೂನ್ ತಾ||೮-೧೦ ವರೆಗಿದ್ದು ಅನಂತರ ಬೆಂಗಳೂರಿಗೆ ಹಿಂದಿರುಗುವವರಾಗಿರುವರು.

ಬರುವ ವರ್ಧಂತಿಯ ಮಹೋತ್ಸವ ಸಮಯದಲ್ಲಿ ರಾಜಧಾನಿಯಲ್ಲಿ ಜರುಗುವ ಮುನಿಸಿಪಲ್ ಕಾನ್‌ಫರೆನ್ಸಿಗೆ ಮೈಸೂರು ಡಿಸ್ಟ್ರಿಕ್ಟ್‌ಬೋರ್ಡಿನಿಂದ ಮ|| ಗಳಾದ ರಾಜಧಾನಿಯ ಅಡ್ವೋಕೇಟ್ ಸಿ. ನರಸಿಂಹಯ್ಯನವರು, ಶ್ರೀರಂಗಪಟ್ಟಣದ ಪ್ಲೀಡರ್ ಬಿ. ನರಸಿಂಗರಾಯರು ಮತ್ತೂ ನಂಜಪ್ಪಸೆಟ್ಟರು ಪ್ರತಿನಿಧಿಗಳಾಗಿ ಆರಿಸಲ್ಪಟ್ಟಿರುವರು.

ಬೆಂಗಳೂರು ಶ್ರೀ ಶಾರದಾ ಸ್ತ್ರೀಸಮಾಜದಲ್ಲಿ ಸೌ|| ಸರಸ್ವತೀದೇವಿಯವರು ಕಳೆದ ಭಾನುವಾರ ನಿಜದ ವಿಷಯವಾಗಿ ಒಂದು ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು. ಈ ಸಮಾಜಕ್ಕೆ ಬೆಂಗಳೂರು ಮ್ಯುನಿಸಿಪಾಲಿಟಿಯ ವೈಸ್‌ಪ್ರೆಸಿಡೆಂಟರಾದ ಮ|| ಬಿ. ಬಸವಾರಾಧ್ಯರ ಪತ್ನಿಯವರು ಉಪಯುಕ್ತವಾದ ೭ ಪುಸ್ತಕಗಳನ್ನು ಬಹುಮಾನವಾಗಿ ಕೊಟ್ಟಿರುವರು.

ಅಕ್ಟಿಂಗ್ ದಿವಾನರಾದ ಮ|| ಎಚ್. ವಿ. ನಂಜುಂಡಯ್ಯನವರು ಕಳೆದ ಗುರುವಾರ ರಾಜಧಾನಿಗೆ ಬಂದಿದ್ದು ಶ್ರೀಮನ್ ಮಹಾರಾಜರವರ ದರ್ಶನವನ್ನು ತೆಗೆದುಕೊಂಡು ಶನಿವಾರ ಹಿಂದಿರುಗಿ ಬೆಂಗಳೂರಿಗೆ ಪ್ರಯಾಣಮಾಡಿದರು. ಇವರು ನಾಳೆಯದಿನ ಬೆಂಗಳೂರಲ್ಲಿ ನಡೆಯಿಸುವ ತಮ್ಮ ಮಗಳ ವಿವಾಹ ಸಂಬಂಧವಾಗಿ ಪ್ರಭುಗಳಿಗೆ ಲಗ್ನಪತ್ರಿಕೆಯನ್ನೊಪ್ಪಿಸಲು ಬಂದಿದ್ದರೆಂದು ಅರಿಯುತ್ತೇವೆ.

ಕಳೆದ ಶನಿವಾರ ಅರಮನೆಯಲ್ಲಿ ಸರದಾರ್ ಗೋಪಾಲಕೃಷ್ಣ ಅರಸಿನವರ ಪುತ್ರಿಯನ್ನು ಮ|| ಲೇಟ್‌ಭಕ್ಷಿ ವೀರಪ್ಪಾಜಿ ಅರಸಿನವರ ಮೊಮ್ಮಕ್ಕಳಿಗೂ, ಈಗ ಯುದ್ಧಕ್ಕೆ ಹೋಗಿರುವ ಇಂಪೀರಿಯಲ್ ಸರ್ವಿಸ್ ಲ್ಯಾನ್ಸರ್ಸ್ ಕಮಾಂಡೆಂಟರಾದ ಮ|| ಚಾಮರಾಜ ಅರಸ್ ಬಹದ್ದೂರ್‌ರವರ ಪುತ್ರಿಯನ್ನು ಮ|| ಚಿಕ್ಕಕಿಲೇದಾರ್ ಬಾಳರಾಜ ಅರಸಿನವರಿಗೂ ಕೊಟ್ಟು ವಿವಾಹಮಹೋತ್ಸವಗಳು ಬಹಳ ವಿಜೃಂಭಣೆಯಿಂದ ನಡೆಸಲ್ಪಟ್ಟುವು. ಇವಲ್ಲದೆ ಇನ್ನೂ ೫ ಮದುವೆಗಳು ಅರಮನೆಯಲ್ಲಿ ನಡೆದುದಾಗಿ ತಿಳಿಯುತ್ತೇವೆ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಯ ಜನರಲ್‌ಕಮಿಟಿಯು ಈ ತಾ|| ೩೦ರಲ್ಲಿ ರಾ| ಬ| ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಸತ್ರದಲ್ಲಿ ದಿ| ಬ| ಕೆ. ಪಿ. ಪುಟ್ಟಣ್ಣಸೆಟ್ಟರ ಅಧ್ಯಕ್ಷತೆಯಲ್ಲಿ ಸಭೆಗೂಡಿ ಆಡಿಟರುಗಳ ಮತ್ತು ಸೆಕ್ರೆಟರಿಯ ರಿಪೋರ್ಟುಗಳು ಓದಲ್ಪಟ್ಟು ಕಳೆದ ವರ್ಷದಲೆಕ್ಕವು ಪರೀಕ್ಷಿಸಲ್ಪಡುವುದು, ಈಸಲದ ಪ್ರಜಾಪ್ರತಿನಿಧಿ ಸಭೆಗೆ ಒಬ್ಬ ಮೆಂಬರನ್ನು ಆರಿಸುವುದು, ಸಭೆಯ ಕಾರ್ಯನಿರ್ವಾಹಕ ಸಂಘಕ್ಕೆ ಅಧ್ಯಕ್ಷರು ಸೆಕ್ರೆಟರಿ ಮೆಂಬರುಗಳು ಮೊದಲಾದವರು ಹೊಸದಾಗಿ ನಿಯಮಿಸಲ್ಪಡುವುದು ಇತ್ಯಾದಿ ಕಾರ್ಯಗಳು ಜರುಗುವುವು.

ಹೊಳಲಕೆರೆ ತಾ|| ಅನುಗೊಂಡಹಳ್ಳಿ ಹೋಬಳಿ ಜೋಡಿ ಕಲ್ಲುಂಟಿ ಅಗ್ರಹಾರದ ಶ್ರೀರಂಗನಾಥಸ್ವಾಮಿಯ ರಥೋತ್ಸವವು ಕಳೆದ ಮಾರ್ಚಿ ತಾ|| ೨ರಲ್ಲಿ ನಡೆಯಬೇಕಾಗಿದ್ದುದು ಅನಿವಾರ್ಯದಿಂದ ನಡೆಯದೆ ಈ ತಾ|| ೨೮ರಲ್ಲಿ ನಡೆಯುವುದಾಗಿಯೂ, ಈ ಗ್ರಾಮವಾಸಸ್ಥರಾದ ಮ|| ಎಸ್. ಕೃಷ್ಣಯ್ಯಂಗಾರರು ಮೂಲವಿಗ್ರಹಕ್ಕೊಪ್ಪಿಸಲು ಮದ್ರಾಸಿನಿಂದ ತಂದಿರುವ ವಜ್ರಾಂಗ ಮುಂತಾದ ಆಭರಣಗಳಿಂದ ಮೂರ್ತಿಯು ಅಲಂಕರಿಸಲ್ಪಡುವ ಪ್ರಯುಕ್ತ ಜಾತ್ರೆಯು ಬಹುವಿಜೃಂಭಣೆಯಿಂದಲೂ, ಪ್ರೇಕ್ಷಣೀಯವಾಗಿಯೂ ನಡೆಸಲ್ಪಡುವುದೆಂದು ಒಬ್ಬ ಸ್ವಾಮಿಭಕ್ತರು ತಿಳಿಸಿರುತ್ತಾರೆ.

ದೇವನಹಳ್ಳಿ ತಾ|| ಹುಣಸುಮಾರನಹಳ್ಳಿಯ ಮಠದ ಶ್ರೀಗಳವರು ತಮ್ಮ ಮಠದ ಏಜಂಟರಾಗಿದ್ದ ಕೈ| ಚೆನ್ನಬಸವ ಒಡೆಯರ ಹೆಸರಿನ ಮೇಲೆ ಅಲ್ಲಿ ಕಟ್ಟಿರುವ ಸ್ಕೂಲಿನಲ್ಲಿ ಈಗ ನಡೆಯುತ್ತಿರುವ ಕನ್ನಡ ವಿದ್ಯಾಭ್ಯಾಸದ ಜತೆಗೆ ಇಂಗ್ಲೀಷ್ ಪಾಠವನ್ನು ಆರಂಭಿಸಲಪ್ಪಣೆಯಾಗಬೇಕೆಂದೂ ಮತ್ತೊಬ್ಬ ಉಪಾಧ್ಯಾಯರನ್ನು ಹೆಚ್ಚಾಗಿ ಕೊಡಿಸಬೇಕೆಂದೂ ಸರ್ಕಲ್ ಇನ್‌ಸ್ಪೆಕ್ಟರಿಗೆ ಬರೆದುಕೊಂಡಿದ್ದುದರಮೇಲೆ ಇಂಗ್ಲೀಷ್ ಪಾಠವನ್ನು ಕೂಡಲೇ ಆರಂಭಿಸಬಹುದಲ್ಲದೆ ಇನ್ನೊಬ್ಬ ಉಪಾಧ್ಯಾಯರನ್ನು ನಿಯಮಿಸುವ ವಿಚಾರವು ಇ|| ಜನರಲ್‌ರವರ ಪರ್ಯಾಲೋಚನೆಯಲ್ಲಿದೆ ಎಂದು ಉತ್ತರ ಬಂದಿರುವುದರ ಮೇಲೆ ಅಲ್ಲಿ ಇಂಗ್ಲೀಷ್ ಪಾಠವಾರಂಭವಾಗಿರುವುದಾಗಿಯೂ, ಈಗ ಪರಸ್ಥಳದಿಂದ ಬಂದಿರುವ ೧೫ ಜನ ವಿದ್ಯಾರ್ಥಿಗಳು ಮಠದಲ್ಲಿಯೇ ಊಟಮಾಡಿಕೊಂಡಿರುವುದಲ್ಲದೆ ಶ್ರೀಗಳವರು ತಮ್ಮ ವಾಗ್ದಾನದಂತೆ ೨೦ ಜನ ವಿದ್ಯಾರ್ಥಿಗಳ ಊಟಕ್ಕೆ ತಕ್ಕೇರ್ಪಾಟನ್ನು ಮಾಡಿರುವುದರಿಂದ ಇನ್ನೂ ಬರಲಿಷ್ಟವುಳ್ಳ ೫ ವಿದ್ಯಾರ್ಥಿಗಳು ಕೂಡಲೇ ಬರೆದುಕೊಳ್ಳುವದಲ್ಲದೆ ಈ ಸ್ಥಳನಿವಾಸಿಗಳಾದ ಅಸ್ಟ್ರಲಜರ್ ಮ|| ರಾ|| ಬಿ. ಸೂರ್ಯನಾರಾಯಣ ರಾವ್ ಬಿ. ಎ. ಯವರು ೫-೭ ಬಡಬ್ರಾಹ್ಮಣ ವಿದ್ಯಾರ್ಥಿಗಳಿಗೆ ಅನ್ನವನ್ನು ಹಾಕಲೊಪ್ಪಿರುವುದರಿಂದ ಬ್ರಾಹ್ಮಣ ವಿದ್ಯಾರ್ಥಿಗಳು ವ್ಯಾಸಂಗಮಾಡಲು ಬರಬಹುದೆಂದೂ ಮಠದ ಏಜಂಟರು ತಿಳಿಸಿರುತ್ತಾರೆ.

ಇತರವಿಷಯಗಳು.

ಜರ್ಮನರ ವಿಷಧೂಮಪ್ರಯೋಗದ ಪ್ರತಿಕ್ರಿಯೆಗಾಗಿ ನಾವೂ ಅಂತಹ ಪ್ರಯೋಗವನ್ನೇ ಮಾಡದಿದ್ದರೆ ಅವರ ಅನ್ಯಾಯಾಚರಣೆಯನ್ನು ನಿಲ್ಲಿಸಲಾಗುವುದಿಲ್ಲವೆಂದು ಆಂಗ್ಲ-ಫ್ರಾನ್ಸ್ ಪ್ರಭುತ್ವದವರು ಯೋಚಿಸಿರುವರೆಂದು ಲಾರ್ಡ್ ಕಿಚನರ್‌ರವರು ಪಾರ್ಲಿಮೆಂಟಿನಲ್ಲಿ ಹೇಳಿರುವರು.

ಆಂಗ್ಲನೌಕಾದಳಾಧ್ಯಕ್ಷರಾದ ಲಾರ್ಡ್ ಫಿಷರ್‌ರವರು ತಮ್ಮ ಉದ್ಯೋಗಕ್ಕೆ ರಾಜೀನಾಮೆಯನ್ನು ಕೊಟ್ಟರು. ಮುಖ್ಯಾಧಿಕಾರಿಗಳಲ್ಲಿಬ್ಬರಿಗೆ ಅಭಿಪ್ರಾಯಭೇದವುಂಟಾದುದೇ ಇದಕ್ಕೆ ಹೇತುವೆಂದು ಗೊತ್ತಾಗುತ್ತದೆ. ರಾಜೀನಾಮೆಯು ಅಂಗೀಕರಿಸಲ್ಪಟ್ಟಿಲ್ಲ.

ದಕ್ಷಿಣಾಫ್ರಿಕಾದಲ್ಲಿ ಬೋಥಾಪಕ್ಷದ ಸೈನಿಕರು ಅಲ್ಲಿನ ಜರ್ಮನ್‌ಸ್ವಾಸ್ಥ್ಯವಾದ ನೈಋತಿ ಆಫ್ರಿಕಾದ ರಾಜಧಾನಿಯಾದ ವಿಂಡ್‌ಹಾಕ್ ಎಂಬ ಪಟ್ಟಣವನ್ನು ವಶಪಡಿಸಿಕೊಂಡು, ಅಲ್ಲಿ ಆಂಗ್ಲಪತಾಕೆಯನ್ನು ಸ್ಥಾಪಿಸಿದರು. ಮತ್ತೂ ಆಫ್ರಿಕಾದಲ್ಲಿರುವ ಫ್ರೆಂಚ್‌ಸೈನ್ಯವು ಜರ್ಮನರಿಗೆ ಸೇರಿದ ಕಾಮರೂನ್ಸಿನಲ್ಲಿರುವ ಎಸ್ಸಾನ್ ಪಟ್ಟಣವನ್ನು ವಶಪಡಿಸಿಕೊಂಡಿತು.

ಆಂಗ್ಲಮಂತ್ರಿಮಂಡಲದಲ್ಲಿ ಎಲ್ಲಪಕ್ಷದ ನಾಯಕರ ಸಮಾವೇಶವಾಗುವ ಸ್ಥಿತಿಯು ಕಾಣುತ್ತದೆ. ಈ ಸಂದರ್ಭದಲ್ಲಿ ಮಂತ್ರಿಮಂಡಲದಲ್ಲಿ ಕೆಲ ಬದಲಾವಣೆಗಳಾಗುವುದರಲ್ಲಿವೆ.

ಲೂಸಿಟೇನಿಯಾ ಹಡಗನ್ನು ಜರ್ಮನರು ಮುಳುಗಿಸಿದ ಅನ್ಯಾಯಾಚರಣೆಯ ವಿಷಯದಲ್ಲಿ ಅಮೇರಿಕಾಪ್ರಭುತ್ವದವರು ದರ್ಪಯುಕ್ತವಾದ ಸಂದೇಶವನ್ನು ಕಳುಹಿಸಿ, ಪರಿಹಾರವನ್ನು ಕೇಳುತ್ತಾರೆ.

ಪತ್ರವ್ಯವಹಾರ.

ತಾ॥ ೨೫-೪-೧೫ ರಲ್ಲಿ ಈ ತಳಕು ಗ್ರಾಮದಲ್ಲಿ ನೂತನವಾಗಿ ಸರ್ಕಾರದವರು ಕಟ್ಟಿಸಿಕೊಟ್ಟಿರುವ ಸ್ಕೂಲನ್ನು ಈ ಡಿ. ಡಿ. ಇ॥ ರು ಮ॥ ರಾ॥ ಶ್ರೀ ತಿರುಮಲಾಚಾರ್ಯರವರು ಚಳ್ಳಕೆರೆ ಅ॥ ಇ–ಸಾರವರಾದ ಮ॥ ರಾ॥ ಚಂದ್ರಶೇಖರಯ್ಯನವರಿಂದ ಛಾರ್ಜನ್ನು ವಹಿಸಿ, ನಮ್ಮ ಹೆಡ್ ಮಾಸ್ಟರ್ ನಾರಾಯಣರಾಯರವರಿಗೆ ಕೊಟ್ಟರು. ಈ ಉತ್ಸವಕ್ಕೋಸ್ಕರವಾಗಿ ಈ ಕಟ್ಟಡವು ತಳಿರ್ತೋರಣಗಳಿಂದಲೂ ಕದಳೀಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟಿತ್ತು. ಎಲ್ಲಾ ಗ್ರಾಮದ ಮುಖಂಡರೂ ನೆರೆದಿದ್ದರು. ವಿದ್ಯಾವಿಷಯಕವಾದ ಉಪನ್ಯಾಸವನ್ನು ನಮ್ಮ ಹೆಡ್ಮಾಸ್ಟರವರು ಹೇಳಿದರು. ನಮ್ಮ ಗ್ರಾಮದ ಪಟೇಲ್ ಉಜ್ಜನಪ್ಪನವರು ವಿಜ್ಞಾಪನಾಪತ್ರಿಕೆಯನ್ನು ಓದಿ ಸಾಹೇಬರವರಿಗೆ ಹಾರತುರಾಯಿಗಳನ್ನು ಕೊಟ್ಟರು. ಅನಂತರ ಸಭಿಕರಿಗೆಲ್ಲಾ ಫಲ ತಾಂಬೂಲಗಳನ್ನೂ ಬಾಲಬಾಲಕಿಯರಿಗೆ ಕಡಲೆಪುರಿ ಬತ್ತಾಸುಗಳನ್ನೂ ಹಂಚಿ ಮಂಗಳವನ್ನು ಹಾಡಿ ಸಭೆಯನ್ನು ಬರಖಾಸ್ತು ಮಾಡಿದರು. ಸ್ಥಳನಿವಾಸಿ.

ಶ್ರೀ ಬಸವೇಶ್ವರ ಜಯಂತ್ಯುತ್ಸವಗಳು.

ಶಿಕಾರಿಪುರ.

ರಾಕ್ಷಸನಾಮಸಂವತ್ಸರದ ನಿಜವೈಶಾಖ ಶುದ್ಧ ಪ್ರತಿಪದ ಶನಿವಾರದದಿವಸ ಶ್ರೀ ಬಸವೇಶ್ವರಜಯಂತೀ ಮಹೋತ್ಸವವನ್ನು ಆಚರಿಸತಕ್ಕದೆಂದು ನಿರ್ಧರಿಸಲ್ಪಟ್ಟ ಮೇರೆಗೆ ಪಟ್ಟಣವು ತಳಿರ್ದೋರಣಾದಿಗಳಿಂದ ಅಲಂಕರಿಸಲ್ಪಟ್ಟು ಪ್ರಾತಃಕಾಲ ೮ ಘಂಟೆಗೆ ಸರಿಯಾಗಿ ಶ್ರೀ ಬಸವೇಶ್ವರ ದೇವಸ್ಥಾನದಿಂದ ಸಮಸ್ತ ಮಹನೀಯರೊಡನೆ ಉತ್ಸವ ಹೊರಟು ದೇವರ ಸಮ್ಮುಖದಲ್ಲಿ ವೇದಘೋಷವೂ, ಇದರ ಮುಂಭಾಗದಲ್ಲಿ ಶಿವಭಜನೆಯೂ, ಇದರ ಮುಂಭಾಗದಲ್ಲಿ ಇಂಗ್ಲಿಷ್ ಬ್ಯಾಂಡ್ವಾದ್ಯವೂ, ಇದರ ಮುಂಭಾಗದಲ್ಲಿ ಚಾಮರವನ್ನು ಬೀಸುವ ಆನೆಯೂ, ಇದರ ಮುಂಭಾಗದಲ್ಲಿ ಕರ್ನಾಟಕ ವಾದ್ಯಘೋಷದೊಡನೆ ಪ್ರೇಕ್ಷಕರ ಚಿತ್ತವನ್ನು ಆಕರ್ಷಿಸುತ್ತ ೧೨ ಘಂಟೆಗೆ ಸರಿಯಾಗಿ ಶ್ರೀ ಬಸವೇಶ್ವರ ದೇವಸ್ಥಾನಕ್ಕೆ ಬಿಜಯಂಗೈಸಿ ಮಂಗಳಾರತಿಯೊಡನೆ ಉತ್ಸವವು ಸಮಾಪ್ತಿಗೊಳಿಸಲ್ಪಟ್ಟಿತು. ಅನಂತರ ಪ್ರತಿವರ್ಷವೂ ಇದೇರೀತಿ ಜಯಂತ್ಯುತ್ಸವವನ್ನು ಆಚರಿಸತಕ್ಕದೆಂದು ಸರ್ವಾನುಮತದಿಂದ ನಿರ್ಧರಿಸಲ್ಪಟ್ಟು ಸಭಾ ವಿಸರ್ಜನೆಯಾಯ್ತು. ಮತಾಭಿಮಾನಿ.

ಹಲಸೂರು.

ಬೆಂಗಳೂರು ದಂಡು ಹಲಸ್ಸೂರಿನಲ್ಲಿ ಇದೇ ತಿಂಗಳು ೧೫ ನೇ ತಾ॥ ಶನಿವಾರ ಶ್ರೀ ಬಸವೇಶ್ವರ ಜಯಂತ್ಯುತ್ಸವ ದಿನವಾದುದರಿಂದ ಹಲಸೂರು ವೀರಶೈವ ಸನ್ಮಾರ್ಗಸಭೆಯವರಿಂದ ಮಧ್ಯಾಹ್ನ ಅನ್ನದಾನವೂ, ಪ್ರಮಥ ಗಣಾರಾಧನೆಯೂ ಸಾಯಂಕಾಲ ನಗರಸಂಕೀರ್ತನ ಭಜನೆಯೂ, ಬಸವೇಶ್ವರನ ಪೂಜೆಯೂ ಬಹಳ ಆಡಂಬರವಾಗಿ ನಡೆಯಿತು. ಮತ್ತೂ ಆದಿನರಾತ್ರಿ ಮ॥ ರಾ॥ ಕುರುಗೋಡಪ್ಪನವರು ಬಸವೇಶ್ವರನ ಚರಿತ್ರೆಯನ್ನು ವಚನರೂಪವಾಗಿ ಸರ್ವರಿಗೂ ತಿಳಿಯುವಂತೆ ಹಿತಕರವಾಗಿ ಬೋಧಿಸಿದರು. ಈ ಕಾರ್ಯವನ್ನು ನೆರವೇರಿಸಿದ್ದಕ್ಕಾಗಿ ಸಾಹುಕಾರ್ ಯಜಮಾನ್ ಮತ್ತು ಆನರರಿ ಮ್ಯಾಜಿಸ್ಟ್ರೇಟರವರಾದ ಯು. ಎಸ್. ಕಾಳಪ್ಪಶೆಟ್ಟಿಯವರಿಗೂ, ಮತ್ತು ಡಾ॥ ಕುರುಗೋಡಪ್ಪನವರಿಗೂ, ಈ ಸಂಘದ ಏಜಂಟರಾದ ಹೊಸಕೋಟೆ ಮಲ್ಲಪ್ಪನವರಿಗೂ, ಮತ್ತು ಇವರ ಸಕಲಪರಿವಾರಕ್ಕೂ ಕೃತಜ್ಞರಾಗಿರುವುದಲ್ಲದೆ ಆಯುರಾರೋಗ್ಯ ಐಶ್ವರ್ಯ ಸಂಪತ್ತುಗಳನ್ನು ದಯಪಾಲಿಸಲೆಂದು ಶ್ರೀ ಬಸವೇಶ್ವರನನ್ನು ವೀರಶೈವ ಸನ್ಮಾರ್ಗಸಭೆಯ ಮೆಂಬರುಗಳಾದ ನಾವುಗಳು ಬೇಡಿಕೊಳ್ಳುವೆವು. ವೀರಶೈವಾಭಿಮಾನಿ.

ಕೂಗಲೂರು

ನಂಜನಗೂಡು ತಾ॥ ಕೂಗಲೂರು ಗ್ರಾಮದಲ್ಲಿ ಸ್ಟಾರ್ ಪತ್ರದ್ವಾರಾ ಪ್ರಕಟಿಸಲ್ಪಟ್ಟಿದ್ದ ಪ್ರಕಾರ ಇದೇ ನಿಜವೈಶಾಖ ಶು॥ ೧ ಶನಿವಾರ (ತಾ॥ ೧೫-೫-೧೫)ರಲ್ಲಿ ಶ್ರೀಬಸವೇಶ್ವರ ಜನ್ಮೋತ್ಸವದ ಹಬ್ಬವನ್ನು ಸರ್ವರೂ ಮಾಡಬೇಕೆಂದು ಮ॥ ರಾ॥ ಕಳಲೆ ಚನ್ನಬಸಪ್ಪನವರು ಪ್ರೋತ್ಸಾಹಿಸಿದ ಮೇರೆಗೆ ಇಲ್ಲಿಯ ವೀರಶೈವ ಸದ್ಗೃಹಸ್ಥರು ಅನುಮೋದಿಸಿ ತಮ್ಮ ತಮ್ಮ ಮನೆಗಳಲ್ಲಿ ಅತಿ ಉತ್ಸಾಹದಿಂದ ಹಬ್ಬವನ್ನಾಚರಿಸಿ ಬಸವೇಶ್ವರದೇವರಿಗೆ ಅಭಿಷೇಕಾದಿ ಪೂಜೆಗಳೂ, ಜಂಗಮಾರ್ಚನೆಗಳೂ ನಡೆದು, ಮಧ್ಯಾಹ್ನ ಮ॥ ರಾ॥ ಹುಚ್ಚಪ್ಪನವರ ಗೃಹದಲ್ಲಿ ತಳಿರುತೋರಣಗಳಿಂದಲಂಕೃತವಾದ ಮಂಟಪದಲ್ಲಿ "ಸೋಲಾಪುರದಿಂದ ತರಿಸಲ್ಪಟ್ಟ" ಶ್ರೀ ಬಸವೇಶ್ವರ ಸ್ವಾಮಿಯವರ ಮತ್ತು ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿಗಳ ಫೋಟೋಗಳನ್ನು ಗಂಧಪುಷ್ಪಾದಿಗಳಿಂದಲಂಕರಿಸಿ ಲಕ್ಷ್ಮಣಾಪುರದ ವೀ ಭುಜಂಗಾರಾಧ್ಯರ ಸಮಕ್ಷದಲ್ಲಿ ಜೀ ಪುಟ್ಟಬಸಪ್ಪನೆಂಬುವರಿಂದ ಬಸವೇಶ್ವರ ಜನ್ಮೋತ್ಸವ ಪುರಾಣವನ್ನೂ ಸಿದ್ಧಲಿಂಗೇಶ್ವರ ಪುರಾಣದ ಕೆಲವು ಭಾಗಗಳನ್ನೂ ಓದಿಸಿ ಸಾಯಂಕಾಲ ಶಿವಭಜನ-ಶಿವಕೀರ್ತನಾದಿಗಳು ನಡೆದು ನೆರೆದಿದ್ದ ಸಮಸ್ತರಿಗೂ ಗಂಧ, ಪುಷ್ಪ, ಫಲಾಹಾರ, ತಾಂಬೂಲಾದಿಗಳಿಂದ ತೃಪ್ತಿಗೊಳಿಸಲ್ಪಟ್ಟಿತು. ಈ ಕಾರ್ಯದಲ್ಲಿ ನೆರೆದಿದ್ದ ಪರಸ್ಥಳದವರೂ, ಮತ್ತು ಸ್ವಸ್ಥಳದವರೂ ಸಹ ಅವರವರ ಸ್ವಗೃಹಗಳಿಗೆ ಸಂತೋಷದಿಂದ ತೆರಳಿದರು. ಪ್ರತ್ಯಕ್ಷದರ್ಶಿ.

ನಂಜನಗೂಡು ತಾಲ್ಲೂಕು ಹಗಿನವಾಳು ಗ್ರಾಮ— ಈ ಗ್ರಾಮದಲ್ಲಿ ಕಳೆದ ಮೇ ತಾ॥ ೧೫ನೇ ಶನಿವಾರ ದಿವಸ ಶ್ರೀ ಬಸವೇಶ್ವರ ಸ್ವಾಮಿಯವರ ಜಯಂತಿ ಉತ್ಸವವು ಈ ಗ್ರಾಮದ ಸದ್ಭಕ್ತಜನರಿಂದ ಸಾಂಗವಾಗಿ ನೆರವೇರಿಸಲ್ಪಟ್ಟಿತು. ಈ ಗ್ರಾಮದ ಶ್ರೀಮಂತರಾದ ವೀರರಾಜೇ ಅರಸಿನವರು, ಅಂ. ಶಿವಪ್ಪನವರು ಮರಿ ಲಿಂಗಪ್ಪನವರು, ಮುಂತಾದವರು ಸಭೆಸೇರಿ ಪುರಮಧ್ಯದಲ್ಲಿರುವ ಶ್ರೀ ಬಸವೇಶ್ವರ ಸ್ವಾಮಿಯವರ ದೇವಾಲಯವನ್ನು ತಳಿರ್ದೋರಣಗಳಿಂದ ಅಲಂಕರಿಸಿ ಶ್ರೀ ಸ್ವಾಮಿಯವರಿಗೆ ಮಹಾ ರುದ್ರಾಭಿಷೇಕವೂ ಸಹಸ್ರ ಬಿಲ್ವಾರ್ಚನೆಯೂ ಶಾಸ್ತ್ರೋಕ್ತವಾಗಿ ನಡೆಸಲ್ಪಟ್ಟು ಬಹಳ ವಿಜೃಂಭಣೆಯಿಂದ ಮಹಾ ಉತ್ಸವವು ನಡೆಸಲ್ಪಟ್ಟಿತು. ಮತ್ತು ವಿ. ಮಲ್ಲಪ್ಪನವರ ಗೃಹದಲ್ಲಿ ಸೂರಹಳ್ಳಿ ವಿರಕ್ತಮಠದ ಶ್ರೀಗಳು ಗಂಗಾಧರ ಸ್ವಾಮಿಗಳವರ ಪಾದಾರ್ಚನೋತ್ಸವವು ವೇದಘೋಷದೊಡನೆ ನಡೆಸಲ್ಪಟ್ಟಿತು. ಮತ್ತು ಈ ರಾತ್ರಿ ಮ॥ ರಾ॥ ಹಳೇಪುರದ ಲಿಂಗಪ್ಪನವರಿಂದ ಶ್ರೀ ಬಸವೇಶ್ವರ ಪುರಾಣದಲ್ಲಿ ಶ್ರೀ ನಂದೀಶ್ವರೋದಯವೂ ಅವರ ಮಹತ್ವಗಳೆಲ್ಲವೂ ಸರ್ವರಿಗೂ ತಿಳಿಯುವಂತೆ ಓದಲ್ಪಟ್ಟು ನಂತರ ಜಯನಮಃ ಪಾರ್ವತೀಪತೇ ಎಂಬ ಜಯಘೋಷದೊಡನೆ ಶ್ರೈ. ವೈ. ವೀರಸಂಗಪ್ಪನವರ ಜ್ಞಾಪಕಾರ್ಥವಾಗಿ ಅಗ್ರತಾಂಬೂಲದೊಡನೇ ೧-೦-೦ ತೆಗೆಯಲ್ಪಟ್ಟು ಸಭೆಯವರೆಲ್ಲರಿಗೂ ತಾಂಬೂಲಾದಿಗಳು ಹಂಚಲ್ಪಟ್ಟು ಸಭೆ ಮುಕ್ತಾಯವಾಯಿತು. ಇದರಂತೆ ಪ್ರತಿವರ್ಷದಲ್ಲಿಯೂ ಶ್ರೀ ಬಸವೇಶ್ವರ ಕಟಾಕ್ಷದಿಂದ ಈ ಜಯಂತಿ ಉತ್ಸವವು ಜರುಗಲೆಂದು ಕೋರುವ

ವೀರಶೈವಮತಹಿತೈಷಿ.

ಅಯ್ಯಾ ಪ್ರಿಯಬಾಂಧವರೇ! ವೀರಶೈವ ಮಹನೀಯರೇ! ಈಗ ಸುಮಾರು ಎರಡು ವರುಷಗಳ ಹಿಂದೆ ವೀರಶೈವ ಪ್ರಮುಖರೆಲ್ಲಾ ಸೇರಿ ಬಸವಜಯಂತಿ ಎಂಬ ಹೊಸ ಹಬ್ಬವನ್ನು ಪ್ರತಿಸಂವತ್ಸರದಲ್ಲಿಯೂ ವೈಶಾಖ ಶುದ್ಧದಲ್ಲಿ ರೋಹಿಣಿನಕ್ಷತ್ರ ಬಂದದಿವಸ ಮಾಡಬೇಕೆಂದು ಮೈಸೂರು ಸ್ಟಾರ್ ಪತ್ರದ್ವಾರಾ ಕೃತಪಡಿಸಿದ್ದ ಪ್ರಕಾರ ಮ॥ ರಾ॥ ಮಹಂತಪ್ಪ, ದುಂಡಪ್ಪ, ಸಂಗೋಜಿ ಇವರು ಕಿತ್ತೂರು, ಬಸವಪುರ ಮುಂತಾದ ಗ್ರಾಮಗಳಲ್ಲಿ ಅನೇಕರನ್ನು ಪ್ರೋತ್ಸಾಹಿಸಿ ಹೋದ ವರ್ಷ ಮೇಲೆಕಂಡ ಹೊಸಹಬ್ಬವನ್ನು ನಡೆಸಿದ ಬಗ್ಗೆ ತಾ॥ ೧೮-೪-೧೯೧೫ ನೇ ಮೈಸೂರು ಸ್ಟಾರ್ ಪತ್ರದ ಮೂಲಕ ಪ್ರಚಾರ ಪಡಿಸಿರುವುದು ಸರಿಯಷ್ಟೆ. ಆ ರೀತಿ ಶಿವಮೊಗ್ಗ ತಾಲ್ಲೂಕು ಹೊಳೆಹೊನ್ನೂರು ವೀರಶೈವ ಪ್ರಮುಖರಿಗೆ ಮ॥ ರಾ॥ ಪ್ರೈವೆಟ್ ಸ್ಕೂಲ್ಮಾಸ್ಟರ್ ಜಿ. ವೀರಜಯಪ್ಪನವರು ಪ್ರೋತ್ಸಾಹಿಸಿದ್ದರ ಮೇಲೆ ಅದಕ್ಕೆ ನ್ಯೂನತೆ ಬಾರದಂತೆ ಮ॥ ರಾ॥ ಕೊಪ್ಪದ ವೀರಜಯಪ್ಪನವರು, ಚೆನ್ನಗಿರಿ ಶ್ರೀ ವೀರಬಸವಯ್ಯನವರು, ಶ್ರೀ ಮಲ್ಲಪ್ಪನವರು, ಶ್ರೀ ಯಗಟಪ್ಪನವರು, ಹುಲೀಕೆರೆ ರುದ್ರಪ್ಪನವರು, ಶೆಟ್ಟಿ ಕೊಪ್ಪದ ಮಲ್ಲಪ್ಪನವರು, ಇವರೇ ಮುಂತಾದವರು ಮೇಲ್ಪಂಕ್ತಿಯಾಗಿ ಇದೇ ರಾಕ್ಷಸನಾಮಸಂವತ್ಸರದ ನಿಜವೈಶಾಖಶುದ್ಧ ಬಿದಿಗೆ ಭಾನುವಾರ ಬಸವಜಯಂತಿ ಹಬ್ಬವನ್ನು ಉತ್ಸವಾದಿ ಮಂಗಳ ಕಾರ್ಯಗಳಿಂದ ನಡೆಸಿ ರೂಢಿಗೆ ತಂದದ್ದು ಈ ತಾಲ್ಲೂಕಿನ ಗ್ರಾಮಾದಿಗಳ ವೀರಶೈವರಿಗೂ ಇನ್ನು ಮುಂತಾದ ಮತಾಭಿಮಾನಿಗಳಿಗೂ ಸಹ ಪೂರ್ಣ ಜ್ಞಾಪಕಕ್ಕೆ ಬಂದ ವಿಷಯವಾಗಿದೆ. ಮತಾಭಿಮಾನಿ.

ಮಾಗಡಿ ತಾ॥ ಹಾರೋಹಳ್ಳಿ.—ಇಲ್ಲಿ ವ್ಯವಸಾಯದ ಕೆಲಸಕ್ಕೆ ತಕ್ಕ ಹದ ಮಳೆಯಾಗಿರುತ್ತೆ. ಇದಕ್ಕೆ ಮುಂಚೆ ಗೋಕಾಯಿಗಳಿಗೂ ಜನಗಳಿಗೂ ನೀರಿಗೆ ತುಂಬಾ ಕಷ್ಟವಾಗಿತ್ತು. ಈ ಗ್ರಾಮದಲ್ಲಿ ಯಾವಾಗಲೂ ನೀರಿಗೆ ತುಂಬಾ ಕಷ್ಟವಾಗಿದೆ. ಇರತಕ್ಕ ಎರಡು ಸೇದುವ ಭಾವಿಗಳಲ್ಲಿ ಮಾತ್ರ ವಿಶೇಷ ಮಳೆಗಾಲದಲ್ಲಿಯೂ ನೀರು ದೊರೆಯುವುದೇ ಕಷ್ಟವಾಗಿರುತ್ತೆ. ಬಾಕಿ ಎಲ್ಲಾ ಕಾಲದಲ್ಲಿಯೂ ಕೂಡ ಗ್ರಾಮಕ್ಕೆ ೨-೩ ಫರ್ಲಾಂಗು ದೂರದಲ್ಲಿರುವ ಸೇದುವ ಮತ್ತು ಕಲ್ಯಾಣಿಯಿಂದ ನೀರು ಒದಗಿಸಿಕೊಳ್ಳಬೇಕಾಗಿರುತ್ತೆ. ಈ ಕಷ್ಟವು ಯಾವಾಗ ತಪ್ಪುವುದೋ ತಿಳಿಯದು. ಇದೇ ತಿಂಗಳಿನಲ್ಲಿ ನಡೆದ ಬಸವಜಯಂತಿಯನ್ನು ಈ ಊರಿನಲ್ಲಿರತಕ್ಕ ಪುರನಿವಾಸಿಗಳೆಲ್ಲರೂ ಬಹಳ ವಿಜೃಂಭಣೆಯಿಂದ ನೆರವೇರಿಸಿದರು. ಈ ದಿನ ಗ್ರಾಮದಲ್ಲಿರತಕ್ಕ ವೃಷಭೇಶ್ವರ ದೇವಸ್ಥಾನವೂ ಸ್ಕೂಲುಕಟ್ಟಡವೂ ತಳಿರುತೋರಣಗಳಿಂದ ಅಲಂಕೃತವಾಗಿದ್ದುವು, ಈ ದಿನ ಪ್ರತಿಯೊಬ್ಬರೂ ವ್ಯವಸಾಯ ವಗೈರೆ ಕೆಲಸಗಳಿಗೆ ಎತ್ತು (ಬಸವ) ಗಳನ್ನು ಕಟ್ಟದೆ ಅವುಗಳಿಗೆ ಮೈತೊಳೆದು ಬಣ್ಣ ಮುಂತಾದುವುಗಳಿಂದ ಅಲಂಕರಿಸಿದ್ದೂ ಈ ಜಯಂತ್ಯುತ್ಸವವನ್ನು ನೆರವೇರಿಸಿದ್ದೂ ತುಂಬಾ ಸಂತೋಷವಾಗಿದೆ. ಈ ದಿನವೇ ಸ್ಕೂಲುಮಾಷ್ಟರು ಬಾಲಕರನ್ನು ಅಲಂಕರಿಸಿಕೊಂಡು ಸಾರ್ವಭೌಮ ಚಕ್ರವರ್ತಿಯವರ ನಮ್ಮನ್ನಾಳುತ್ತಿರುವ ಧರ್ಮಪ್ರಭುಗಳ ಮತ್ತು ಇನ್ನೂ ಇತರರ ಚಿತ್ರಪಟಗಳೊಡನೆ ವಾದ್ಯಘೋಷದಿಂದ ಉತ್ಸವಾದಿಗಳನ್ನು ಮಾಡಿದರು. ಅನಂತರ ಸ್ಕೂಲುಮಾಸ್ಟರುಗಳೇ ಮುಂತಾದ ಪುರಪ್ರಮುಖರನ್ನೆಲ್ಲಾ ಸ್ಕೂಲಿಗೆ ಬರಮಾಡಿಕೊಂಡು ಸಭೆಯನ್ನು ಮಾಡಿ ಪ್ರಮುಖರಿಂದ ಸಭೆಯ ಅಗ್ರಾಸನವನ್ನು ತಾವೇ ಹೊಂದಿ ಈ ದಿನ ನಡೆಯಿಸಿರತಕ್ಕ ಉತ್ಸವದ ಸಂತೋಷವನ್ನು ಎಲ್ಲರಿಗೂ ವಿನಯವಾಗಿ ತಿಳಿಸಿದರು. ಅನಂತರ ಗಂಧಪುಷ್ಪಾದಿಗಳನ್ನೂ ಹಾರವನ್ನೂ ಸಭೆಯವರಿಗೆಲ್ಲಾ ಹಂಚಿದರು. ಸ್ಕೂಲು ಬಾಲಕಿಯರಿಗೆಲ್ಲಾ ಸಕ್ಕರೆ ಹಂಚಲ್ಪಟ್ಟಿತು. ಆ ಮೇಲೆ ಸಭೆಯು ಬರಖಾಸ್ತಾಯಿತು. ಈ ರೀತಿಯಾಗಿ ಈ ಜಯಂತ್ಯುತ್ಸವವನ್ನು ಪುರನಿವಾಸಿಗಳೆಲ್ಲರೂ ಅನುಮೋದಿಸಿ ಆಚರಣೆಗೆ ತಂದುದಕ್ಕಾಗಿ ತುಂಬಾ ಸಂತೋಷವಾಗಿದೆ. ಪುರಪ್ರಮುಖ.

ಶ್ರೀಮದ್ರಂಭಾಪುರೀ ವೀರಸಿಂಹಾಸನದ ಸಮಸ್ತಬಿರುದಾ
ನ್ವಿತ ಶ್ರೀಮಜಗದ್ಗುರು ಪಂಚಾಕ್ಷರೀರಾಜದೇಶಿ
ಕೇಂದ್ರ ಮಹಾಸ್ವಾಮಿಗಳವರ ಸನ್ನಿಧಾನದಿಂದ
ಶಿವಾಯಿಬಾಬು ನಂಬರು ೨೩.

ಶಕೆ ೧೮೩೭ ನೆಯ ರಾಕ್ಷಸಸಂ॥ ರದ ಚೈತ್ರ ಬಹುಳ ೮ ಮಿತಿಯಲ್ಲು ಮೈಸೂರುಸೀಮೆಯ ಸಮಸ್ತತಾಲ್ಲೂಕುಗಳಲ್ಲಿರತಕ್ಕ ಪಟ್ಟ, ಚರಂತರು, ಮಠಸ್ತರು, ಪ್ಯಾಟಿಮನೆ ಸೆಟ್ಟಿ, ಯಜಮಾನರು, ಹರದೋಗ್ರಾಮಗಳ ಗೌಡರು, ಬುದ್ಧಿವಂತರು ಇನ್ನೂ ಮುಂತಾದ ವೀರಶೈವ ಭಕ್ತಮಾಹೇಶ್ವರರಿಗೆ ಬರೆಸಿದಾಶೀರ್ವಾದ:—ಈ ಮೊದಲು ತಾ॥ ......ರಲ್ಲಿ ಸಾದರಾಗಿರುವ ಶಿವಾಯಿಬಾಯಿ ನಂಬರು......ನೆ ನಿರೂಪದ ಪ್ರಕಾರ ಬೆಂಗಳೂರಲ್ಲಿ ಸ್ಥಾಪಿತವಾಗಿರುವ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ತಮ್ಮತಮ್ಮ ಗೃಹಗಳಲ್ಲಿ ನಡೆಯುವ ಶುಭಶೋಭನಾದಿ ಕಾರ್ಯಗಳಲ್ಲಿ ಸ್ವಶಕ್ತ್ಯನುಸಾರ ದ್ರವ್ಯವನ್ನ ತೆಗಿಸಿ ಫಂಡ್ ಸೆಕ್ರಿಟರಿಗಳ ವಶಕ್ಕೆ ಕಳುಹಿಸುವಂತೆ ಸಾದರಾಗಿರುವ ನಿರೂಪದಪ್ರಕಾರ ಈಗಲೂ ಪ್ರತಿಗ್ರಾಮದಲ್ಲಿಯೂ ಲಗ್ನ ಮೊದಲಾದ ಕಾರ್ಯಗಳಲ್ಲಿ ಫಂಡಿಗೆ ದ್ರವ್ಯವನ್ನ ತೆಗೆದು ಮೇಲ್ಕಂಡ ಮೇರೆ ಖಂಡಿತವಾಗಿಯೂ ರವಾನಿಸುತ್ತಾ ಬರುವುದು. ಅಲ್ಲದೆ ಕೈ. ಯಜಮಾನ ವೀರಸಂಗಪ್ಪನವರ ಅಗ್ರತಾಂಬೂಲವನ್ನು ಮೇಲ್ಕಂಡ ಕಾರ್ಯಗಳಲ್ಲಿ ತೆಗೆದು ಅವರ ಸಂತತಿಯವರಾದ ವೈ. ವಿರೂಪಾಕ್ಷಯ್ಯನವರಲ್ಲಿಗೆ ರವಾನಿಸುತ್ತಾ ಬರುವದು. ಮೇಲ್ಕಂಡಮೇರೆ ನಡೆಯದೆ ತಪ್ಪಿದಲ್ಲಿ ಈ ವಿಚಾರದಲ್ಲಿ ತಾಲ್ಲೂಕು ಇಲಾಖಾದಾರರು ಕ್ರಮವರಿತು ರಿಕಾರ್ಡುಮಾಡಿ ರವಾನಿಸುತ್ತಾ ಬರುವುದರಲ್ಲಿ ಗಮನಕೊಡಲಾರದೀತಾಗಿ ಬಾಹುಲ್ಯವಾಗಿ ಅಪ್ಪಣೆಕೊಡಿಸುವುದಾವುದಿದ್ದೀತು? ಬತಾರೀಖು ೩ನೇ ಮಾಹೆ ಏಪ್ರಿಲ್ ಸನ್ ೧೯೧೫ನೇ ಇಸವಿ ಮೊಕ್ಕಾಂ ದರ್ಜಾಗ ಸಂಸ್ಥಾನ ಬಾಳೆಹೊನ್ನೂರು.

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪರ್ತಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್ ಸನ್ಸ್ 3
ಸುಗಂಧಕಾರಿ, ಮೈಸೂರು

ನೋಟೀಸ್.

ರಾವ್ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಧರ್ಮ ಸತ್ರದಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನಕ್ಕೆ ಏರ್ಪಾಡಾಗಿದೆ. ವಿದ್ಯಾರ್ಥಿಗಳು ಮೈಸೂರ್ ದೇಶೀಯರಾಗಿಯೂ, ವೀರಶೈವರಾಗಿಯೂ, ಇಂಗ್ಲೀಷ್ ಲೋವರ್ಸೆಕೆಂಡರಿಗೆ ಕಡಿಮೆ ಯಿಲ್ಲದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿಯೂ ಇರಬೇಕು. ಮತ್ತು ಪ್ರೌಢವಿದ್ಯಾಭ್ಯಾಸ ಮಾಡಲು ಚೈತನ್ಯವಿಲ್ಲದವರಿಗೆ ಮಾತ್ರ ಅವಕಾಶ ದೊರಿಯುವುದು. ಚೈತನ್ಯವಿಲ್ಲವೆಂಬುದಕ್ಕೆ ಸ್ಥಳೀಯ ಪ್ರಮುಖರಿಂದ ಸರ್ಟಿಫಿಕೇಟ್ ತರಬೇಕಲ್ಲದೆ, ತಾವು ಹಿಂದೆ ಓದಿದ ಸ್ಕೂಲ್ ಯಾ ಕಾಲೇಜ್ ಮುಖ್ಯೋಪಾಧ್ಯಾಯರಿಂದಲೂ ಸಹ ತನ್ನ ಯೋಗ್ಯತಾವಿಚಾರವಾಗಿ ಸರ್ಟಿಫಿಕೇಟ್ ತರತಕ್ಕದ್ದು. ಗತವರ್ಷದಲ್ಲಿ ಸತ್ರದಲ್ಲಿದ್ದ ವಿದ್ಯಾರ್ಥಿಗಳ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರಿಗೆ ಮೊದಲು ಅವಕಾಶಕೊಟ್ಟು ನಂತರ ಇತರರಿಗೆ ಅವರ ಯೋಗ್ಯತಾ ಪ್ರಕಾರ ಸಾಧ್ಯವಾದಷ್ಟು ಕ್ಲುಪ್ತವಾಗಿ ಸ್ಥಳದೊರಿಯುತ್ತೆ. ಇಚ್ಛೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ೧೯೧೫ನೇ ಮೇ ತಿಂಗಳ ಆಖೈರ್ಒಳಗಾಗಿ ಅಪ್ಲಿಕೇಷನ್ ಹಾಕತಕ್ಕದ್ದು.

(Sd) ಕೆಂ. ಶಿವಪ್ಪ ಆನರರಿ ಸೆಕ್ರಿಟರಿ
ರಾವ್ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ
ತೋಟದಪ್ಪನವರ ಸತ್ರ ಬೆಂಗಳೂರು ಸಿಟಿ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರೌನ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿ ಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧-೦-೦ ರೂ. ಕೊಡಬೇಕಾಗುವುದು ಕೆಂಪು, ಹಸರು, ನೀಲಿ, ಬ್ರಾಂಜ್ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಬಂದೇತರದ ಬಣ್ಣದಿಂದ ಬಿಳಿ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨-೦-೦; ಅನಂತರ ಪ್ರತಿ ೧೦೦ಕ್ಕೂ ೦-೧೨-೦; ಹಳದೀ ಗ್ಲೇಜ್ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨-೨-೦; ಅನಂತರ ಪ್ರತಿ ೧೦೦ ಕ್ಕೂ ೦-೧೪-೦; ಹಳದಿ ರಫ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦-೬-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು,

ಮ್ಯಾನೇಜರ್,
ಕ್ರೌನ್ಪ್ರೆಸ್, ಮೈಸೂರ್.

ಬಿಸಿಲುಕಾಲಕ್ಕೆ 32

ಎಲ್ಲರಿಗೂ ಬೇಕು

ಅಮೃತಾಮಲಕತೈಲ:—ವಿಧವಿಧವಾದ ತಲೆನೋವು, ಶರೀರವು ಬೆಂಕಿಯಂತಿರುವುದು, ತಲೆತಿರಗು, ಕಣ್ಣುರಿ. ಕಣ್ಣು ಕೆಂಪು, ಕಣ್ಣು ಮಂಜು, ಕಣ್ಣಿನಲ್ಲಿ ನೀರು ಸುರಿಯುವುದು, ರಾತ್ರಿ ನಿದ್ರೆಬಾರದಿರುವುದು ಇವುಗಳನ್ನು ೧-೨ ಅಭ್ಯಂಗನದಿಂದಲೇ ಗುಣಮಾಡಿ ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ. ಬಿಸಿಲುಕಾಲಕ್ಕೆ ಇದು ಅಮೃತಮೇಸರಿ. ಎಂಟು ಅಭ್ಯಂಗನಕ್ಕೆ ಆಗುವ ತೈಲ ೦-೮-೦. ೧ ಡಜನ್ ೫-೦-೦.

ಆಮೋದಿನಿ:—ಅಮೋಘವಾದ ಸುವಾಸನೆಯಿಂದ ಕೂಡಿದ ಈ ಮಾತ್ರೆಗಳು ತಾಂಬೂಲವನ್ನು ರಂಜಿಸಿ ಬಾಯಾರಿಕೆಯನ್ನು ತಕ್ಷಣ ನಿಲ್ಲಿಸಿ ಆಯಾಸವನ್ನು ಪರಿಹರಿಸಿ ಕಂಠನಾಳವನ್ನು ಸರಿಪಡಿಸಿ ಕೆಮ್ಮು, ದಮ್ಮು, ಉಬ್ಬಸ, ಮಲಬಂಧಗಳನ್ನು ಗುಣಮಾಡಿ ಆರೋಗ್ಯವನ್ನು ಕಾಪಾಡುವದರಲ್ಲಿ ಶ್ರೇಷ್ಠವಾದುದು. ಸಂಗೀತಗಾರರಿಗೂ, ವಿದ್ಯಾರ್ಥಿಗಳಿಗೂ, ಪ್ರಯಾಣಿಕರಿಗೂ ಅಮೂಲ್ಯವಾದುದು. ೧೫೦ ಮಾತ್ರೆ ೦-೪-೦. ೫ ಕ್ಕೆ ಒಂದು ಹೆಚ್ಚು.

ಖುತಾಮಲಕರಸಾಯನ:—ತಲೆತಿರಗು, ಕಣ್ಣು ಕತ್ತಲೆ, ಹಸಿವೇ ಇಲ್ಲದಿರುವುದು, ಆಹಾರದಲ್ಲಿ ಅರುಚಿ, ವಾಕರಿಕೆ, ವಾಂತಿ, ಹುಳಿ, ಖಾರ, ಅಥವಾ ಶೀತಯಾದ ತೇಗು, ಹೊಟ್ಟೆಯುಬ್ಬರ, ಹೊಟ್ಟೆನೋವು, ಕಣ್ಣು ಅಥವಾ ಮೈ ಹಳದೀಬಣ್ಣ, ನಿಶ್ಶಕ್ತಿ, ಹಳೇಜ್ವರ, ಎದೆಬಡಿಯುವಿಕೆ, ಬಾಂಡು, ಕಾಮಾಲೆ, ಮೂರ್ಛೆ ಇವುಗಳಲ್ಪೈಕಿ ಯಾವುದಿದ್ದರೂ ಖಾತರಿ ಗುಣವಾಗಿ ದಿನಕ್ಕೊಂದುವೇಳೆ ಸಲೀಸಾಗಿ ಕಾಲಪ್ರವರ್ತಿಯಾಗುತ್ತದೆ. ೧೫ ದಿನಕ್ಕೆ ಆಗುವ ಔಷಧ, ಬೆಲೆ ೦-೧೨-೦. ೧ ಡಜನ್ ಡಬ್ಬಿಗಳಿಗೆ ೭-೮-೦.

ಪ್ರತಿಔಷಧಕ್ಕೂ ಟಪಾಲ್ ಮತ್ತು ಪ್ಯಾಕಿಂಗ್ ಛಾರ್ಜ ಪ್ರತ್ಯೇಕ.

ವಿಳಾಸ:—ಬಿ. ವಿ. ಪಂಡಿತ್, ಸದ್ವೈದ್ಯಶಾಲಾ,
ನಂಜನಗೂಡು, ಮೈಸೂರು ಡಿ॥

ಫಕ್ತು ವನಸ್ಪತಿಯಿಂದಲೇ ತಯಾರಿಸಿದ
ಧಾತುಪೌಷ್ಟಿಕ ಲೇಹವು.

21

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ಜೋಕೆ! (ಗುಣವಾಗದಿದ್ದರೆ ಹಣ ಪರತ !!) ಜೋಕೆ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪಿತ್ತರೋಗವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣರೋಗವುಳ್ಳವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರದ ಬೊಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲಿ, ವಾತರೋಗ, ಮುಂತಾದವು ಅತಿ ತ್ವರಿತಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರಿಗೆ ಬೇಕಾಗುವದು. ಕಿಮ್ಮತು ೪೦ ತೋಲಿಗೆ ರೂ ೩-೮-೦. ೮೦ ತೊಲೆಗೆ ೬ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನ್ನಡ.

"ಮಾರಾಟಕ್ಕೆ ಸಿದ್ಧವಾದ ಪುಸ್ತಕವು" 4

ಇಂಗ್ಲೀಷಶಿಕ್ಷಕ—ಈ ಪುಸ್ತಕದ ಅಭ್ಯಾಸದಿಂದ ಕನ್ನಡಿಗರಿಗೆ ನಾಲ್ಕಾರು ತಿಂಗಳಲ್ಲಿ, ಶಿಕ್ಷಕನ ಸಹಾಯವಿಲ್ಲದೆ ಸ್ವತಃ ಇಂಗ್ಲೀಷಮಾತು ಕಲಿಯಲಿಕ್ಕೆ ಬರುವದು. ಬೆಲೆ ೧೦ ಆಣೆ ಟ. ಖ ಬೇರೆ ಒಮ್ಮೆಲೆ ೧೦ ಪ್ರತಿಗಳನ್ನು ತರಿಸಿಕೊಂಡರೆ, ಒಂದು ಪ್ರತಿ ಕಮಿಶನ್ ದೊರೆಯುವದು. ಪ್ರತಿಗಳು ತೀರ ಸ್ವಲ್ಪ ಉಳಿದಿವೆ. ಗ್ರಾಹಕರು ತೀವ್ರ ತರಿಸಿಕೊಳ್ಳತಕ್ಕದ್ದು.

ವಿಳಾಸ.-ನ. ಸು ಬಾಗಲ, ಬನ್ನಿಕೊಪ್ಪ, ಪೋ. ಮುಂಡರಿಗಿ ಜಿಲ್ಲಾ ಧಾರವಾಡ.

ಯುರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು

85

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕದನಗಳ ಪಟಗಳೂ ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ ೨ ಆಣೆ; ವಿ ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ:—ದಿ ಜನರಲ್ ಏಜನ್ಸಿ. ಮೈಸೂರು.

೫೦೦ ರೂಪಾಯಿಗಳ ಬಹುಮಾನ

ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್ಬ್ಯಾಂಕಿನಲ್ಲಿ ಮೇಲ್ಕಂಡ ೫೦೦ ರೂಪಾಯಿಗಳನ್ನು
೧೯೧೫ ನೆ ಇಸವಿ ಮಾರ್ಚ್ ತಾ॥ ೧೫ ರಲ್ಲಿ ಡಿಪಾಜಿಟ್ಟು ಇಟ್ಟಿರುತ್ತೇವೆ. 2

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ
ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಸಾಲಾಮಿಸ್ರಿಯ ಧಾರಣೆಯು ಜಾಸ್ತಿಯಾಗಿರುವದರಿಂದ ಅನೇಕರು ಊರುಳಿಗಡ್ಡೆ, ಕಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹಾದ್ದೋ ಎಂಬುವದು ತಿಳಿದುಬರುತ್ತದೆ.

ಸಾಲಾಮಿಸ್ರಿ ಮುರಬ್ಬಾವು—ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವುದು.
ಸಾಲಾಮಿಸ್ರಿ ಮುರಬ್ಬಾವು—ನಿದ್ರೆಯಲ್ಲಿ ಧಾತುವು ಹೋಗುವುದನ್ನು ನಿಲ್ಲಿಸುವುದ.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಧಾತುಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕ್ಷಣ ಕ್ಷಣಕ್ಕೆ ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ವೃದ್ಧಿಪಡಿಸುವದು.
ಸಾಲಾಮಿಸಿ ಮುರಬ್ಬಾವು—ಶ್ವಾಸಖಾಸ ರೋಗಗಳನ್ನು ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹೊಟ್ಟೆಯಲ್ಲಿರುವ ಜ್ವರದಗಡ್ಡೆ ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೆಟ್ಟುಹೋಗಿರುವ ರಕ್ತವನ್ನು ಶುದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಳೆತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು.
ಸಾಲಾಮಿಸ್ರಿ ಮುರಬ್ಬಾವು—ಉತ್ಸಾಹ, ಧೈರ್ಯ, ಬುದ್ಧಿಕುಶಲತೆ, ಶರೀರಕಾಂತಿಯನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು—ತಾಂಬ್ರ, ಬೆಳ್ಳಿ, ಮತ್ತು ಬಂಗಾರ ಭಸ್ಮಕ್ಕಿಂತಲೂ ಉತ್ತಮವಾದುದು.
ಸಾಲಾಮಿಸ್ರಿ ಮುರಬ್ಬಾವು—ಸ್ತ್ರೀ ಸಂಗಕ್ಕೆ ಮೊದಲೆ ಧಾತು ಸ್ಖಲನವಾಗುವದನ್ನು ನಿಲ್ಲಿಸುವದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯ್ಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪುರಾ ಗುಣಕೊಡುತ್ತದೆ. ೨-೩ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಸಾಲಾಮಿಸ್ರಿ" ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ
500 ರೂಪಾಯಿಗಳು ಬಹುಮಾನ ಕೊಡುವವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ ಕ್ಕೆ ಕ್ರಯ ೨-೦-೦ ರೂಪಾಯಿ. ಟಪಾಲು ಖರ್ಚು ೧ ಡಬ್ಬಿಯಿಂದ ಡಬ್ಬಿಗಳ ವರೆಗೆ ೬ ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ವಿಳಾಸ:—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
೫, ಅವೆನ್ಯೂ ರೋಡ್ ಬೆಂಗಳೂರು ಸಿಟಿ.

ಪತ್ರವ್ಯವಹಾರ.

ತಾ॥ ೨೫-೪-೧೫ ರಲ್ಲಿ ಈ ತಳುಕು ಗ್ರಾಮದಲ್ಲಿ ನೂತನವಾಗಿ ಸರ್ಕಾರದವರು ಕಟ್ಟಿಸಿಕೊಟ್ಟಿರುವ ಸ್ಕೂಲನ್ನು ಈ ಡಿ. ಡಿ. ಇ॥ ರು ಮ॥ ರಾ॥ ಶ್ರೀ ತಿರುಮಲಾಚಾರ್ಯರವರು ಚಳ್ಳಕೆರೆ ಅ॥ ಇ-ಸಾರರವರಾದ ಮ॥ ರಾ॥ ಚಂದ್ರಶೇಖರಯ್ಯನವರಿಂದ ಛಾರ್ಜನ್ನು ವಹಿಸಿ, ನಮ್ಮ ಹೆಡ್ ಮಾಸ್ಟರ್ ನಾರಾಯಣರಾಯರವರಿಗೆ ಕೊಟ್ಟರು. ಈ ಉತ್ಸವಕ್ಕೋಸ್ಕರವಾಗಿ ಈ ಕಟ್ಟಡವು ತಳಿರ್ತೋರಣಗಳಿಂದಲೂ ಕದಳೀಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟಿತ್ತು. ಎಲ್ಲಾ ಗ್ರಾಮದ ಮುಖಂಡರೂ ನೆರೆದಿದ್ದರು. ವಿದ್ಯಾವಿಷಯಕವಾದ ಉಪನ್ಯಾಸವನ್ನು ನಮ್ಮ ಹೆಡ್ಮಾಷ್ಟರವರು ಹೇಳಿದರು. ನಮ್ಮ ಗ್ರಾಮದ ಪಟೇಲ್ ಉಜ್ಜನಪ್ಪನವರು ವಿಜ್ಞಾಪನಾಪತ್ರಿಕೆಯನ್ನು ಓದಿ ಸಾಹೇಬರವರಿಗೆ ಹಾರತುರಾಯಿಗಳನ್ನು ಕೊಟ್ಟರು. ಅನಂತರ ಸಭಿಕರಿಗೆಲ್ಲಾ ಫಲತಾಂಬೂಲಗಳನ್ನೂ ಬಾಲಬಾಲಕಿಯರಿಗೆ ಕಡಲೆಪುರಿ ಬತ್ತಾಸುಗಳನ್ನೂ ಹಂಚಿ ಮಂಗಳವನ್ನು ಹಾಡಿ ಸಭೆಯನ್ನು ಬರಖಾಸ್ತು ಮಾಡಿದರು.

ಸ್ಥಳನಿವಾಸಿ.

ಶ್ರೀ ಬಸವೇಶ್ವರ ಜಯಂತ್ಯುತ್ಸವಗಳು.

ಶಿಕಾರಿಪುರ.

ರಾಕ್ಷಸನಾಮಸಂವತ್ಸರದ ನಿಜವೈಶಾಖ ಶುದ್ಧ ಪ್ರತಿಪದ ಶನಿವಾರದದಿವಸ ಶ್ರೀ ಬಸವೇಶ್ವರಜಯಂತೀ ಮಹೋತ್ಸವವನ್ನು ಆಚರಿಸತಕ್ಕದೆಂದು ನಿರ್ಧರಿಸಲ್ಪಟ್ಟ ಮೇರೆಗೆ ಪಟ್ಟಣವು ತಳಿರ್ತೋರಣಾದಿಗಳಿಂದ ಅಲಂಕರಿಸಲ್ಪಟ್ಟು ಪ್ರಾತಃಕಾಲ ೮ ಘಂಟೆಗೆ ಸರಿಯಾಗಿ ಶ್ರೀ ಬಸವೇಶ್ವರ ದೇವಸ್ಥಾನದಿಂದ ಸಮಸ್ತ ಮಹನೀಯರೊಡನೆ ಉತ್ಸವ ಹೊರಟು ದೇವರ ಸಮ್ಮುಖದಲ್ಲಿ ವೇದಘೋಷವೂ, ಇದರ ಮುಂಭಾಗದಲ್ಲಿ ಶಿವಭಜನೆಯೂ, ಇದರ ಮುಂಭಾಗದಲ್ಲಿ ಇಂಗ್ಲಿಷ್ ಬ್ಯಾಂಡ್‌ವಾದ್ಯವೂ, ಇದರ ಮುಂಭಾಗದಲ್ಲಿ ಚಾಮರವನ್ನು ಬೀಸುವ ಆನೆಯೂ, ಇದರ ಮುಂಭಾಗದಲ್ಲಿ ಕರ್ನಾಟಕ ವಾದ್ಯಘೋಷದೊಡನೆ ಪ್ರೇಕ್ಷಕರ ಚಿತ್ತವನ್ನು ಆಕರ್ಷಿಸುತ್ತ ೧೨ ಘಂಟೆಗೆ ಸರಿಯಾಗಿ ಶ್ರೀ ಬಸವೇಶ್ವರ ದೇವಸ್ಥಾನಕ್ಕೆ ಬಿಜಯಂಗೈಸಿ ಮಂಗಳಾರತಿಯೊಡನೆ ಉತ್ಸವವು ಸಮಾಪ್ತಿಗೊಳಿಸಲ್ಪಟ್ಟಿತು. ಅನಂತರ ಪ್ರತಿವರ್ಷವೂ ಇದೇರೀತಿ ಜಯಂತ್ಯುತ್ಸವವನ್ನು ಆಚರಿಸತಕ್ಕದೆಂದು ಸರ್ವಾನುಮತದಿಂದ ನಿರ್ಧರಿಸಲ್ಪಟ್ಟು ಸಭಾ ವಿಸರ್ಜನೆಯಾಯ್ತು.

ಮತಾಭಿಮಾನಿ.

ಹಲಸೂರು.

ಬೆಂಗಳೂರು ದಂಡು ಹಲಸೂರಿನಲ್ಲಿ ಇದೇ ತಿಂಗಳು ೧೫ ನೇ ತಾ॥ ಶನಿವಾರ ಶ್ರೀ ಬಸವೇಶ್ವರ ಜಯಂತ್ಯುತ್ಸವ ದಿನವಾದುದರಿಂದ ಹಲಸೂರು ವೀರಶೈವ ಸನ್ಮಾರ್ಗಸಭೆಯವರಿಂದ ಮಧ್ಯಾಹ್ನ ಅನ್ನದಾನವೂ, ಪ್ರಮಥ ಗಣಾರಾಧನೆಯೂ ಸಾಯಂಕಾಲ ನಗರಸಂಕೀರ್ತನ ಭಜನೆಯೂ, ಬಸವೇಶ್ವರನ ಪೂಜೆಯೂ ಬಹಳ ಆಡಂಬರವಾಗಿ ನಡೆಯಿತು. ಮತ್ತೂ ಆದಿನರಾತ್ರಿ ಮ॥ ರಾ॥ ಕುರುಗೋಡಪ್ಪನವರು ಬಸವೇಶ್ವರನ ಚರಿತ್ರೆಯನ್ನು ವಚನರೂಪವಾಗಿ ಸರ್ವರಿಗೂ ತಿಳಿಯುವಂತೆ ಹಿತಕರವಾಗಿ ಬೋಧಿಸಿದರು. ಈ ಕಾರ್ಯವನ್ನು ನೆರವೇರಿಸಿದ್ದಕ್ಕಾಗಿ ಸಾಹುಕಾರ್ ಯಜಮಾನ್ ಮತ್ತು ಆನರರಿ ಮ್ಯಾಜಿಸ್ಟ್ರೇಟರವರಾದ ಯು. ಎಸ್. ಕಾಳಪ್ಪಶೆಟ್ಟಿಯವರಿಗೂ, ಮತ್ತು ರಾ॥ ಕುರುಗೋಡಪ್ಪನವರಿಗೂ, ಈ ಸಂಘದ ಏಜಂಟರಾದ ಹೊಸಕೋಟೆ ಮಲ್ಲಪ್ಪನವರಿಗೂ, ಮತ್ತು ಇವರ ಸಕಲಪರಿವಾರಕ್ಕೂ ಕೃತಜ್ಞರಾಗಿರುವುದಲ್ಲದೆ ಆಯುರಾರೋಗ್ಯ ಐಶ್ವರ್ಯ ಸಂಪತ್ತುಗಳನ್ನು ದಯಪಾಲಿಸಲೆಂದು ಶ್ರೀ ಬಸವೇಶ್ವರನನ್ನು ವೀರಶೈವ ಸನ್ಮಾರ್ಗಸಭೆಯ ಮೆಂಬರುಗಳಾದ ನಾವುಗಳು ಬೇಡಿಕೊಳ್ಳುವೆವು.

ವೀರಶೈವಾಭಿಮಾನಿ.

ಕೂಗಲೂರು

ನಂಜನಗೂಡು ತಾ॥ ಕೂಗಲೂರು ಗ್ರಾಮದಲ್ಲಿ ಸ್ಟಾರ್ ಪತ್ರದ್ವಾರಾ ಪ್ರಕಟಿಸಲ್ಪಟ್ಟಿದ್ದ ಪ್ರಕಾರ ಇದೇ ನಿಜವೈಶಾಖ ಶು॥ ೧ ಶನಿವಾರ (ತಾ॥ ೧೫-೫-೧೫)ರಲ್ಲಿ ಶ್ರೀಬಸವೇಶ್ವರ ಜನ್ಮೋತ್ಸವದ ಹಬ್ಬವನ್ನು ಸರ್ವರೂ ಮಾಡಬೇಕೆಂದು ಮ॥ ರಾ॥ ಕಳಲೆ ಚನ್ನಬಸಪ್ಪನವರು ಪ್ರೋತ್ಸಾಹಿಸಿದ ಮೇರೆಗೆ ಇಲ್ಲಿಯ ವೀರಶೈವ ಸದ್ಗೃಹಸ್ಥರು ಅನುಮೋದಿಸಿ ತಮ್ಮ ತಮ್ಮ ಮನೆಗಳಲ್ಲಿ ಅತಿ ಉತ್ಸಾಹದಿಂದ ಹಬ್ಬವನ್ನಾಚರಿಸಿ ಬಸವೇಶ್ವರದೇವರಿಗೆ ಅಭಿಷೇಕಾದಿ ಪೂಜೆಗಳೂ, ಜಂಗಮಾರ್ಚನೆಗಳೂ ನಡೆದು, ಮಧ್ಯಾಹ್ನ ಮ॥ ರಾ॥ ಹುಚ್ಚಪ್ಪನವರ ಗೃಹದಲ್ಲಿ ತಳಿರುತೋರಣಗಳಿಂದಲಂಕೃತವಾದ ಮಂಟಪವಲ್ಲಿ “ಸೋಲಾಪುರದಿಂದ ತರಿಸಲ್ಪಟ್ಟ” ಶ್ರೀ ಬಸವೇಶ್ವರ ಸ್ವಾಮಿಯವರ ಮತ್ತು ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿಗಳ ಫೋಟೋಗಳನ್ನು ಗಂಧಪುಷ್ಪಾದಿಗಳಿಂದಲಂಕರಿಸಿ ಲಕ್ಷ್ಮಣಾಪುರದ ವೀ॥ ಭುಜಂಗರಾಯ್ಯರ ಸಮಕ್ಷದಲ್ಲಿ ಚಿ॥ ಪುಟ್ಟಬಸಪ್ಪನೆಂಬುವರಿಂದ ಬಸವೇಶ್ವರ ಜನ್ಮೋತ್ಸವ ಪುರಾಣವನ್ನೂ ಸಿದ್ಧಲಿಂಗೇಶ್ವರ ಪುರಾಣದ ಕೆಲವು ಭಾಗಗಳನ್ನೂ ಓದಿಸಿ ಸಾಯಂಕಾಲ ಶಿವಭಜನ-ಶಿವಕೀರ್ತನಾದಿಗಳು ನಡೆದು ನೆರೆದಿದ್ದ ಸಮಸ್ತರಿಗೂ ಗಂಧ, ಪುಷ್ಪ, ಫಲಾಹಾರ, ತಾಂಬೂಲಾದಿಗಳಿಂದ ತೃಪ್ತಿಗೊಳಿಸಲ್ಪಟ್ಟಿತು. ಈ ಕಾರ್ಯದಲ್ಲಿ ನೆರೆದಿದ್ದ ಪರಸ್ಥಳದವರೂ, ಮತ್ತು ಸ್ವಸ್ಥಳದವರೂ ಸಹ ಅವರವರ ಸ್ವಗೃಹಗಳಿಗೆ ಸಂತೋಷದಿಂದ ತೆರಳಿದರು.

ಪ್ರತ್ಯಕ್ಷದರ್ಶಿ.

ನಂಜನಗೂಡು ತಾಲ್ಲೂಕು ಹಗಿನವಾಳು ಗ್ರಾಮ—ಈ ಗ್ರಾಮದಲ್ಲಿ ಕಳೆದ ಮೇ ತಾ॥ ೧೫ನೇ ಶನಿವಾರ ದಿವಸ ಶ್ರೀ ಬಸವೇಶ್ವರ ಸ್ವಾಮಿಯವರ ಜಯಂತಿ ಉತ್ಸವವು ಈ ಗ್ರಾಮದ ಸದ್ಭಕ್ತಜನರಿಂದ ಸಾಂಗವಾಗಿ ನೆರವೇರಿಸಲ್ಪಟ್ಟಿತು. ಈ ಗ್ರಾಮದ ಶ್ರೀಮಂತರಾದ ವೀರರಾಜೇ ಅರಸಿನವರು, ಅಂ. ಶಿವಪ್ಪನವರು ಮರಿ ಲಿಂಗಪ್ಪನವರು, ಮುಂತಾದವರು ಸಭೆಸೇರಿ ಪುರಮಧ್ಯದಲ್ಲಿರುವ ಶ್ರೀ ಬಸವೇಶ್ವರ ಸ್ವಾಮಿಯವರ ದೇವಾಲಯವನ್ನು ತಳಿರ್ತೋರಣಗಳಿಂದ ಅಲಂಕರಿಸಿ ಶ್ರೀ ಸ್ವಾಮಿಯವರಿಗೆ ಮಹಾ ರುದ್ರಾಭಿಷೇಕವೂ ಸಹಸ್ರ ಬಿಲ್ವಾರ್ಚನೆಯೂ ಶಾಸ್ತ್ರೋಕ್ತವಾಗಿ ನಡೆಸಲ್ಪಟ್ಟು ಬಹಳ ವಿಜೃಂಭಣೆಯಿಂದ ಮಹಾ ಉತ್ಸವವು ನಡೆಸಲ್ಪಟ್ಟಿತು. ಮತ್ತು ಎ. ಮಲ್ಲಪ್ಪನವರ ಗೃಹದಲ್ಲಿ ಸೂರಹಳ್ಳಿ ವಿರಕ್ತಮಠದ ಶ್ರೀಗಳು ಗಂಗಾಧರ ಸ್ವಾಮಿಗಳವರ ಪಾದಾರ್ಚನೋತ್ಸವವು ವೇದಘೋಷದೊಡನೆ ನಡೆಸಲ್ಪಟ್ಟಿತು. ಮತ್ತು ಈ ರಾತ್ರಿ ಮ॥ ರಾ॥ ಹಳೇಪುರದ ಲಿಂಗಪ್ಪನವರಿಂದ ಶ್ರೀ ಬಸವೇಶ್ವರ ಪುರಾಣದಲ್ಲಿ ಶ್ರೀ ನಂದೀಶ್ವರೋದಯವೂ ಅವರ ಮಹತ್ವಗಳೆಲ್ಲವೂ ಸರ್ವರಿಗೂ ತಿಳಿಯುವಂತೆ ಓದಲ್ಪಟ್ಟು ನಂತರ ಜಯನಮಃ ಪಾರ್ವತೀಪತೇ ಎಂಬ ಜಯಘೋಷದೊಡನೆ ಕೈ. ವೈ. ವೀರಸಂಗಪ್ಪನವರ ಜ್ಞಾಪಕಾರ್ಥವಾಗಿ ಅಗ್ರತಾಂಬೂಲದೊಡನೇ ೧-೦-೦ ತೆಗೆಯಲ್ಪಟ್ಟು ಸಭೆಯವರೆಲ್ಲರಿಗೂ ತಾಂಬೂಲಾದಿಗಳು ಹಂಚಲ್ಪಟ್ಟು ಸಭೆ ಮುಕ್ತಾಯವಾಯಿತು. ಇದರಂತೆ ಪ್ರತಿವರ್ಷದಲ್ಲಿಯೂ ಶ್ರೀ ಬಸವೇಶ್ವರ ಕಟಾಕ್ಷದಿಂದ ಈ ಜಯಂತಿ ಉತ್ಸವವವು ಜರುಗಲೆಂದು ಕೋರುವ

ವೀರಶೈವಮತಹಿತೈಷಿ.

ಅಯ್ಯಾ ಪ್ರಿಯಬಾಂಧವರೇ! ವೀರಶೈವ ಮಹನೀಯರೇ! ಈಗ ಸುಮಾರು ಎರಡು ವರುಷಗಳ ಹಿಂದೆ ವೀರಶೈವ ಪ್ರಮುಖರೆಲ್ಲಾ ಸೇರಿ ಬಸವಜಯಂತಿ ಎಂಬ ಹೊಸ ಹಬ್ಬವನ್ನು ಪ್ರತಿಸಂವತ್ಸರದಲ್ಲಿಯೂ ವೈಶಾಖ ಶುದ್ಧದಲ್ಲಿ ರೋಹಿಣಿನಕ್ಷತ್ರ ಬಂದದಿವಸ ಮಾಡಬೇಕೆಂದು ಮೈಸೂರು ಸ್ಟಾರ್ ಪತ್ರದ್ವಾರಾ ಕೃತಪಡಿಸಿದ್ದ ಪ್ರಕಾರ ಮ॥ ರಾ॥ ಮಹಂತಪ್ಪ, ದುಂಡಪ್ಪ, ಸುಂಗೋಜಿ ಇವರು ಕಿತ್ತೂರು, ಬಸವಪುರ ಮುಂತಾದ ಗ್ರಾಮಗಳಲ್ಲಿ ಅನೇಕರನ್ನು ಪ್ರೋತ್ಸಾಹಿಸಿ ಹೋದ ವರ್ಷ ಮೇಲ್ಕಂಡ ಹೊಸಹಬ್ಬವನ್ನು ನಡೆಸಿದ ಬಗ್ಗೆ ತಾ॥ ೧೮-೪-೧೯೧೫ ನೇ ಮೈಸೂರು ಸ್ಟಾರ್ ಪತ್ರದ ಮೂಲಕ ಪ್ರಚಾರ ಪಡಿಸಿರುವುದು ಸರಿಯಷ್ಟೆ. ಆ ರೀತಿ ಶಿವಮೊಗ್ಗ ತಾಲ್ಲೂಕು ಹೊಳೆಹೊನ್ನೂರು ವೀರಶೈವ ಪ್ರಮುಖರಿಗೆ ಮ॥ ರಾ॥ ಪ್ರೈವೆಟ್ ಸ್ಕೂಲ್ಮಾಸ್ಟರ್ ಜಿ. ವೀರಜಯ್ಯಪ್ಪನವರು ಪ್ರೋತ್ಸಾಹಿಸಿದ್ದರ ಮೇಲೆ ಅದಕ್ಕೆ ನ್ಯೂನತೆ ಬಾರದಂತೆ ಮ॥ ರಾ॥ ಕೊಪ್ಪದ ವೀರಜಯಪ್ಪನವರು, ಚೆನ್ನಗಿರಿ ಶ್ರೀ ವೀರಬಸವಯ್ಯನವರು, ಶ್ರೀ ಮಲ್ಲಪ್ಪನವರು, ಶ್ರೀ ಯಗಟಪ್ಪನವರು, ಹುಲೀಕೆರೆ ರುದ್ರಪ್ಪನವರು, ಶೆಟ್ಟಿ ಕೊಪ್ಪದ ಮಲ್ಲಪ್ಪನವರು, ಇವರೇ ಮುಂತಾದವರು ಮೇಲ್ಪಂಕ್ತಿಯಾಗಿ ಇದೇ ರಾಕ್ಷಸನಾಮಸಂವತ್ಸರದ ನಿಜವೈಶಾಖಶುದ್ಧ ಬಿದಿಗೆ ಭಾನುವಾರ ಬಸವಜಯಂತಿ ಹಬ್ಬವನ್ನು ಉತ್ಸವಾದಿ ಮಂಗಳ ಕಾರ್ಯಗಳಿಂದ ನಡೆಸಿ ರೂಢಿಗೆ ತಂದದ್ದು ಈ ತಾಲ್ಲೂಕಿನ ಗ್ರಾಮಾದಿಗಳ ವೀರಶೈವರಿಗೂ ಇನ್ನು ಮುಂತಾದ ಮತಾಭಿಮಾನಿಗಳಿಗೂ ಸಹ ಪೂರ್ಣ ಜ್ಞಾಪಕಕ್ಕೆ ಬಂದ ವಿಷಯವಾಗಿದೆ.

ಮತಾಭಿಮಾನಿ.

ಮಾಗಡಿ ತಾ॥ ಹಾರೋಹಳ್ಳಿ.—ಇಲ್ಲಿ ಬೇಸಾಯದ ಕೆಲಸಕ್ಕೆ ತಕ್ಕ ಹದ ಮಳೆಯಾಗಿರುತ್ತೆ. ಇದಕ್ಕೆ ಮುಂಚೆ ಗೋಕಾಯಿಗಳಿಗೂ ಜನಗಳಿಗೂ ನೀರಿಗೆ ತುಂಬಾ ಕಷ್ಟವಾಗಿತ್ತು. ಈ ಗ್ರಾಮದಲ್ಲಿ ಯಾವಾಗಲೂ ನೀರಿಗೆ ತುಂಬಾ ಕಷ್ಟವಾಗಿದೆ. ಇರತಕ್ಕ ಎರಡು ಸೇದುವ ಭಾವಿಗಳಲ್ಲಿ ಮಾತ್ರ ವಿಶೇಷ ಮಳೆಗಾಲದಲ್ಲಿಯೂ ನೀರು ದೊರೆಯುವುದೇ ಕಷ್ಟವಾಗಿರುತ್ತೆ. ಬಾಕಿ ಎಲ್ಲಾ ಕಾಲದಲ್ಲಿಯೂ ಗೂಡಗ್ರಾಮಕ್ಕೆ ೨-೩ ಫರ್ಲಾಂಗು ದೂರದಲ್ಲಿರುವ ಸೇದುವ ಮತ್ತು ಕಲ್ಯಾಣಿಯಿಂದ ನೀರು ಒದಗಿಸಿಕೊಳ್ಳಬೇಕಾಗಿರುತ್ತೆ. ಈ ಕಷ್ಟವು ಯಾವಾಗ ತಪ್ಪುವುದೋ ತಿಳಿಯದು. ಇದೇ ತಿಂಗಳಿನಲ್ಲಿ ನಡೆದ ಬಸವಜಯಂತಿಯನ್ನು ಈ ಊರಿನಲ್ಲಿರತಕ್ಕ ಪುರನಿವಾಸಿಗಳೆಲ್ಲರೂ ಬಹಳ ವಿಜೃಂಭಣೆಯಿಂದ ನೆರವೇರಿಸಿದರು. ಈ ದಿನ ಗ್ರಾಮದಲ್ಲಿರತಕ್ಕ ವೃಷಭೇಶ್ವರ ದೇವಸ್ಥಾನವೂ ಸ್ಕೂಲುಕಟ್ಟಡವೂ ತಳಿರುತೋರಣಗಳಿಂದಲಂಕೃತವಾಗಿದ್ದುವು, ಈ ದಿನ ಪ್ರತಿಯೊಬ್ಬರೂ ಬೇಸಾಯ ವಗೈರೆ ಕೆಲಸಗಳಿಗೆ ಎತ್ತು (ಬಸವ) ಗಳನ್ನು ಕಟ್ಟದೆ ಅವುಗಳಿಗೆ ಮೈತೊಳೆದು ಬಣ್ಣ ಮುಂತಾದುವುಗಳಿಂದ ಅಲಂಕರಿಸಿದ್ದೂ ಈ ಜಯಂತ್ಯುತ್ಸವವನ್ನು ನೆರವೇರಿಸಿದ್ದೂ ತುಂಬಾ ಸಂತೋಷವಾಗಿದೆ. ಈ ದಿನವೇ ಸ್ಕೂಲುಮಾಷ್ಟರು ಬಾಲಕರನ್ನು ಅಲಂಕರಿಸಿಕೊಂಡು ಸಾರ್ವಭೌಮ ಚಕ್ರವರ್ತಿಯವರ ನಮ್ಮನ್ನಾಳುತ್ತಿರುವ ಧರ್ಮಪ್ರಭುಗಳ ಮತ್ತು ಇನ್ನೂ ಇತರರ ಚಿತ್ರಪಟಗಳೊಡನೆ ವಾದ್ಯಘೋಷದಿಂದ ಉತ್ಸವಾದಿಗಳನ್ನು ಮಾಡಿದರು. ಅನಂತರ ಸ್ಕೂಲುಮಾಸ್ಟರುಗಳೇ ಮುಂತಾದ ಪುರಪ್ರಮುಖರನ್ನೆಲ್ಲಾ ಸ್ಕೂಲಿಗೆ ಬರಮಾಡಿಕೊಂಡು ಸಭೆಯನ್ನು ಮಾಡಿ ಪ್ರಮುಖರಿಂದ ಸಭೆಯ ಅಗ್ರಾಸನವನ್ನು ತಾವೇ ಹೊಂದಿ ಈ ದಿನ ನಡೆಯಿಸಿರತಕ್ಕ ಉತ್ಸವದ ಸಂತೋಷವನ್ನು ಎಲ್ಲರಿಗೂ ವಿನಯವಾಗಿ ತಿಳಿಸಿದರು. ಅನಂತರ ಗಂಧಪುಷ್ಪಾದಿಗಳನ್ನೂ ಹಾರವನ್ನೂ ಸಭೆಯವರಿಗೆಲ್ಲಾ ಹಂಚಿದರು. ಸ್ಕೂಲು ಬಾಲಕಿಯರಿಗೆಲ್ಲಾ ಸಕ್ಕರೆ ಹಂಚಲ್ಪಟ್ಟಿತು. ಆ ಮೇಲೆ ಸಭೆಯು ಬರಖಾಸ್ತಾಯಿತು. ಈ ರೀತಿಯಾಗಿ ಈ ಜಯಂತ್ಯುತ್ಸವವನ್ನು ಪುರನಿವಾಸಿಗಳೆಲ್ಲರೂ ಅನುಮೋದಿಸಿ ಆಚರಣೆಗೆ ತಂದುದಕ್ಕಾಗಿ ತುಂಭಾ ಸಂತೋಷವಾಗಿದೆ.

ಪುರಪ್ರಮುಖ.

ಶ್ರೀಮದ್ರಂಭಾಪುರೀ ವೀರಸಿಂಹಾಸನದ ಸಮಸ್ತಬಿರುದಾನ್ವಿತ ಶ್ರೀಮಜಗದ್ಗುರು ಪಂಚಾಕ್ಷರೀರಾಜದೇಶಿಕೇಂದ್ರ ಮಹಾಸ್ವಾಮಿಗಳವರ ಸನ್ನಿಧಾನದಿಂದ
ಶಿವಾಯಿಬಾಬು ನಂಬರು ೩೩.

ಶಕ ೧೮೩೭ ನೆಯ ರಾಕ್ಷಸಸಂ॥ ರದ ಚೈತ್ರ ಬಹುಳ ೮ ಮಿತಿಯಲ್ಲು ಮೈಸೂರುಸೀಮೆಯ ಸಮಸ್ತತಾಲ್ಲೂಕುಗಳಲ್ಲಿರತಕ್ಕ ಪಟ್ಟ, ಚರಂತರು, ಮಠಸ್ತರು, ಪ್ಯಾಟಿಮನೆ ಸೆಟ್ಟಿ, ಯಜಮಾನರು, ಹರದೋಗ್ರಾಮಗಳ ಗೌಡರು, ಬುದ್ಧಿವಂತರು ಇನ್ನೂ ಮುಂತಾದ ವೀರಶೈವ ಭಕ್ತಮಾಹೇಶ್ವರರಿಗೆ ಬರೆಸಿದಾಶೀರ್ವಾದ:—ಈ ಮೊದಲು ತಾ॥ ......ರಲ್ಲಿ ಸಾದರಾಗಿರುವ ಶಿವಾಯಿಬಾಯಿ ನಂಬರು......ನೆ ನಿರೂಪದ ಪ್ರಕಾರ ಬೆಂಗಳೂರಲ್ಲಿ ಸ್ಥಾಪಿತವಾಗಿರುವ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ತಮ್ಮತಮ್ಮ ಗೃಹಗಳಲ್ಲಿ ನಡೆಯುವ ಶುಭಶೋಭನಾದಿ ಕಾರ್ಯಗಳಲ್ಲಿ ಸ್ವಶಕ್ತ್ಯನುಸಾರ ದ್ರವ್ಯವನ್ನ ತೆಗಿಸಿ ಫಂಡ್ ಸೆಕ್ರಿಟರಿಗಳ ವಶಕ್ಕೆ ಕಳುಹಿಸುವಂತೆ ಸಾದರಾಗಿರುವ ನಿರೂಪದಪ್ರಕಾರ ಈಗಲೂ ಪ್ರತಿಗ್ರಾಮದಲ್ಲಿಯೂ ಲಗ್ನ ಮೊದಲಾದ ಕಾರ್ಯಗಳಲ್ಲಿ ಫಂಡಿಗೆ ದ್ರವ್ಯವನ್ನ ತೆಗೆದು ಮೇಲ್ಕಂಡ ಮೇರೆ ಖಂಡಿತವಾಗಿಯೂ ರವಾನಿಸುತ್ತಾ ಬರುವುದು. ಅಲ್ಲದೆ ಕೈ. ಯಜಮಾನ ವೀರಸಂಗಪ್ಪನವರ ಅಗ್ರತಾಂಬೂಲವನ್ನು ಮೇಲ್ಕಂಡ ಕಾರ್ಯಗಳಲ್ಲಿ ತೆಗೆದು ಅವರ ಸಂತತಿಯವರಾದ ವೈ. ವಿರೂಪಾಕ್ಷಯ್ಯನವರಲ್ಲಿಗೆ ರವಾನಿಸುತ್ತಾ ಬರುವದು. ಮೇಲ್ಕಂಡಮೇರೆ ನಡೆಯದೆ ತಪ್ಪಿದಲ್ಲಿ ಈ ವಿಚಾರದಲ್ಲಿ ತಾಲ್ಲೂಕು ಇಲಾಖಾದಾರರು ಕ್ರಮವರಿತು ರಿಕಾರ್ಡುಮಾಡಿ ರವಾನಿಸುತ್ತಾ ಬರುವುದರಲ್ಲಿ ಗಮನಕೊಡಲಾದೀತಾಗಿ ಬಾಹುಲ್ಯವಾಗಿ ಅಪ್ಪಣೆಕೊಡಿಸುವುದಾವುದಿದ್ದೀತು? ಬತಾರೀಖು ೨೯ನೇ ಮಾಹೆ ಏಪ್ರಿಲ್ ಸ॥ ೧೯೧೫ನೇ ಇಸವಿ ಮೊಕ್ಕಾಂ ದರ್ಜಾಗ ಸಂಸ್ಥಾನ ಬಾಳೆಹೊನ್ನೂರು.

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪರ್ಟಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್ ಸನ್ಸ್ 3
ಸುಗಂಧಕಾರಿ, ಮೈಸೂರು

ನೋಟೀಸ್.

ರಾವ್‌ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಧರ್ಮ ಸತ್ರದಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನಕ್ಕೆ ಏರ್ಪಾಡಾಗಿದೆ. ವಿದ್ಯಾರ್ಥಿಗಳು ಮೈಸೂರ್ ದೇಶೀಯರಾಗಿಯೂ, ವೀರಶೈವರಾಗಿಯೂ, ಇಂಗ್ಲೀಷ್ ಲೋವರ್‌ಸೆಕೆಂಡರಿಗೆ ಕಡಿಮೆ ಯಿಲ್ಲದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿಯೂ ಇರಬೇಕು. ಮತ್ತು ಪ್ರೌಢವಿದ್ಯಾಭ್ಯಾಸ ಮಾಡಲು ಚೈತನ್ಯವಿಲ್ಲದವರಿಗೆ ಮಾತ್ರ ಅವಕಾಶ ದೊರೆಯುವುದು. ಚೈತನ್ಯವಿಲ್ಲವೆಂಬುದಕ್ಕೆ ಸ್ಥಳೀಯ ಪ್ರಮುಖರಿಂದ ಸರ್ಟಿಫಿಕೇಟ್ ತರಬೇಕಲ್ಲದೆ, ತಾವು ಹಿಂದೆ ಓದಿದ ಸ್ಕೂಲ್ ಯಾ ಕಾಲೇಜ್ ಮುಖ್ಯೋಪಾಧ್ಯಾಯರಿಂದಲೂ ಸಹ ತನ್ನ ಯೋಗ್ಯತಾವಿಚಾರವಾಗಿ ಸರ್ಟಿಫಿಕೇಟ್ ತರತಕ್ಕದ್ದು. ಗತವರ್ಷದಲ್ಲಿ ಸತ್ರದಲ್ಲಿದ್ದ ವಿದ್ಯಾರ್ಥಿಗಳ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರಿಗೆ ಮೊದಲು ಅವಕಾಶಕೊಟ್ಟು ನಂತರ ಇತರರಿಗೆ ಅವರ ಯೋಗ್ಯತಾ ಪ್ರಕಾರ ಸಾಧ್ಯವಾದಷ್ಟು ಕ್ಲಪ್ತವಾಗಿ ಸ್ಥಳದೊರಿಯುತ್ತೆ. ಇಚ್ಛೆಯುಳ್ಳವರು ಈ ಕೆಳಗಿನ ವಿಳಾಸಕ್ಕೆ ೧೯೧೫ನೇ ಮೇ ತಿಂಗಳ ಆಖೈರ್‌ಬಳಗಾಗಿ ಅಪ್ಲಿಕೇಷನ್ ಹಾಕತಕ್ಕದ್ದು.

(Sd) ಕೆಂ. ಶಿವಪ್ಪ ಆನರರಿ ಸೆಕ್ರಟರಿ
ರಾವ್‌ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ
ತೋಟದಪ್ಪನವರ ಸತ್ರ ಬೆಂಗಳೂರು ಸಿಟಿ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿ ಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೪—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೦—೦ ರೂ. ಕೊಡಬೇಕಾಗುವುದು ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರದ ಬಣ್ಣದಿಂದ ಬಿಳಿ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೦—೦; ಅನಂತರ ಪ್ರತಿ ೧೦೦ಕ್ಕೂ ೦—೧೨—೦; ಹಳದೀ ಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨—೦—೦; ಅನಂತರ ಪ್ರತಿ ೧೦೦ ಕ್ಕೂ ೦—೧೦—೦; ಹಳದಿ ರಫ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦-೬-೦ ಆಣೆಯಂತೆ ಕಳುಹಬೇಕು. ಕ್ಲಪ್ತ ಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು,

ಮ್ಯಾನೇಜರ್,
ಸ್ಟಾರ್‌ಪ್ರೆಸ್, ಮೈಸೂರ್.

ಬಿಸಿಲುಕಾಲಕ್ಕೆ 32

ಎಲ್ಲರಿಗೂಬೇಕು

ಅಮೃತಾಮಲಕತೈಲ:—ವಿಧವಿಧವಾದ ತಲೆನೋವು, ಶರೀರವು ಬೆಂಕಿಯಂತಿರುವುದು, ತಲೆತಿರಗು, ಕಣ್ಣುರಿ, ಕಣ್ಣು ಕೆಂಪು, ಕಣ್ಣು ಮಂಜು, ಕಣ್ಣಿನಲ್ಲಿ ನೀರು ಸುರಿಯುವುದು, ರಾತ್ರಿ ನಿದ್ರೆಬಾರದಿರುವುದು ಇವುಗಳನ್ನು ೧-೨ ಅಭ್ಯಂಗನದಿಂದಲೇ ಗುಣಮಾಡಿ ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ. ಬಿಸಿಲುಕಾಲಕ್ಕೆ ಇದು ಅಮೃತಮೇಸರಿ. ಎಂಟು ಅಭ್ಯಂಗನಕ್ಕೆ ಆಗುವ ತೈಲ ೦-೮-೦. ೧ ಡಜನ್ ೫-೦-೦.

ಆಮೋದಿನಿ:—ಅಮೋಘವಾದ ಸುವಾಸನೆಯಿಂದ ಕೂಡಿದ ಈ ಮಾತ್ರೆಗಳು ತಾಂಬೂಲವನ್ನು ರಂಜಿಸಿ ಬಾಯಾರಿಕೆಯನ್ನು ತತ್ಷಣ ನಿಲ್ಲಿಸಿ ಆಯಾಸವನ್ನು ಪರಿಹರಿಸಿ ಕಂಠನಾಳವನ್ನು ಸರಿಪಡಿಸಿ ಕೆಮ್ಮು, ದಮ್ಮು, ಉಬ್ಬಸ, ಮೋಹಂಧಗಳನ್ನು ಗುಣಮಾಡಿ ಆರೋಗ್ಯವನ್ನು ಕಾಪಾಡುವವರಲ್ಲಿ ಶ್ರೇಷ್ಠವಾದುದು. ಸಂಗೀತಗಾರರಿಗೂ, ವಿದ್ಯಾರ್ಥಿಗಳಿಗೂ, ಪ್ರಯಾಣಿಕರಿಗೂ ಅನುಕೂಲ್ಯವಾದುದು. ೧೫೦ ಮಾತ್ರೆ ೦—೪—೦. ೫ ಕ್ಕೆ ಒಂದು ಹೆಚ್ಚು.

ಖುತಾಮಲಕರಸಾಯನ:—ತಲೆತಿರಗು, ಕಣ್ಣು ಕಗ್ಗತ್ತಲೆ, ಹಸಿವೇ ಇಲ್ಲದಿರುವುದು, ಆಹಾರದಲ್ಲಿ ಅರುಚಿ, ವಾಕರಿಕೆ, ವಾಂತಿ, ಹುಳಿ, ಖಾರ, ಅಥವಾ ಕಹಿಯಾದ ತೇಗು, ಹೊಟ್ಟೆಯುಬ್ಬರ, ಹೊಟ್ಟೆನೋವು, ಕಣ್ಣು ಅಥವಾ ಮೈ ಹಳದೀಬಣ್ಣ, ನಿಶ್ಶಕ್ತಿ, ಹಳೇಜ್ವರ, ಎದೆಬಡಿಯುವಿಕೆ, ಪಾಂಡು, ಕಾಮಾಲೆ, ಮೂರ್ಛೆ ಇವುಗಳಪೈಕಿ ಯಾವುದಿದ್ದರೂ ಖಾತರಿ ಗುಣವಾಗಿ ದಿನಕ್ಕೊಂದುವೇಳೆ ಸಲೀಸಾಗಿ ಕಾಲಪ್ರವರ್ತಿಯಾಗುತ್ತದೆ. ೧೫ ದಿನಕ್ಕೆ ಆಗುವ ಔಷಧ, ಬೆಲೆ ೦-೧೨-೦. ೧ ಡಜನ್ ಡಬ್ಬಿಗಳಿಗೆ ೭-೮-೦.

ಪ್ರತಿಔಷಧಕ್ಕೂ ಟಪಾಲ್ ಮತ್ತು ಪ್ಯಾಕಿಂಗ್ ಛಾರ್ಜ್ ಪ್ರತ್ಯೇಕ.

ವಿಳಾಸ:—ಬಿ. ವಿ. ಪಂಡಿತ್, ಸದ್ವೈದ್ಯಶಾಲಾ,
ನಂಜನಗೂಡು, ಮೈಸೂರು ಡಿ॥

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

21

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಗೂ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ರಿಟರ್ನ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪಿತ್ತಕೆವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫಉಂಟಾದವರು, ಮೂಲವ್ಯಾಧಿಯುಳ್ಳವರು, ವಾಂತಿಯಾಗುವವರು, ಮೋಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣರೋಗವುಳ್ಳವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರವೇಶದ ಮೇಲೆ ಹುಟ್ಟುವ ಎಲ್ಲಾ ತರದ ಬಕ್ಕಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಚಳಿಶೂಲೆ, ವಾತರೋಗ, ಮುಂತಾದವು ಅತಿ ತ್ವರಿತವಾಗಿ ಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೊಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತ್ತು ೪೦ ತೊಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚ್ ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

“ಮಾರಾಟಕ್ಕೆ ಸಿದ್ಧವಾದ ಪುಸ್ತಕವು”

4

ಇಂಗ್ಲೀಷುಶಿಕ್ಷಕ—ಈ ಪುಸ್ತಕದ ಅಭ್ಯಾಸದಿಂದ ಕನ್ನಡಿಗರಿಗೆ ನಾಲ್ಕಾರು ತಿಂಗಳಲ್ಲಿ, ಶಿಕ್ಷಕನ ಸಹಾಯವಿಲ್ಲದೆ ಸ್ವತಃ ಇಂಗ್ಲೀಷುಮಾತು ಕಲಿಯಲಿಕ್ಕೆ ಬರುವದು. ಬೆಲೆ ೧೦ ಆಣೆ ಟ. ಖ ಬೇರೆ ಒಮ್ಮೆಲೆ ೧೦ ಪ್ರತಿಗಳನ್ನು ತರಿಸಿಕೊಂಡರೆ, ಒಂದು ಪ್ರತಿ ಕಮಿಶನ್ ದೊರೆಯುವದು. ಪ್ರತಿಗಳು ತೀರ ಸ್ವಲ್ಪ ಉಳಿದಿವೆ. ಗ್ರಾಹಕರು ತೀವ್ರ ತರಿಸಿಕೊಳ್ಳತಕ್ಕದ್ದು.

ವಿಳಾಸ—ನ. ಸು ಬಾಗಲ, ಬನ್ನಿಕೊಪ್ಪ, ಪೋ. ಮುಂಡರಿಗಿ ಜಿಲ್ಲಾ ಧಾರವಾಡ.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಠಗಳು

85

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಠಗಳೂ, ವಿವಿಧ ಕದನಗಳ ಪಠಗಳೂ ಯುದ್ಧದ ಹಡಗುಗಳ ಪಠಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಠಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತವೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಠಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಠಗಳು. ಕ್ರಯ ೨ ಆಣೆ; ವಿ ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ:—ದಿ ಜನರಲ್ ಏಜನ್ಸಿ. ಮೈಸೂರು.

---

೫೦೦ ರೂಪಾಯಿಗಳ ಬಹುಮಾನ

ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್‌ಬ್ಯಾಂಕಿನಲ್ಲಿ ಮೇಲ್ಕಂಡ ೫೦೦ ರೂಪಾಯಿಗಳನ್ನು
೧೯೧೫ ನೆ ಇಸವಿ ಮಾರ್ಚಿ ತಾ॥ ೧೫ ರಲ್ಲಿ ಡಿಪಾಜಿಟು ಇಟ್ಟಿರುತ್ತೇವೆ. 2

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ “ಸಾಲಾಮಿಸ್ರೀ ಮುರಬ್ಬಾವನ್ನು” ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್‌ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಸಾಲಾಮಿಸ್ರಿಯ ಧಾರಣೆಯು ಜಾಸ್ತಿಯಾಗಿರುವದರಿಂದ ಅನೇಕರು ಊರುಳುಗಡ್ಡೆ, ಕಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹಾದ್ದೋ ಎಂಬುವದು ತಿಳಿದುಬರುತ್ತದೆ.

ಸಾಲಾಮಿಸ್ರಿ ಮುರಬ್ಬಾವು—ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವುದು.
ಸಾಲಾಮಿಸ್ರಿ ಮುರಬ್ಬಾವು—ನಿದ್ರೆಯಲ್ಲಿ ಧಾತುವು ಹೋಗುವುದನ್ನು ನಿಲ್ಲಿಸುವುದ.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಧಾತುಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕ್ಷಣ ಕ್ಷಣಕ್ಕೆ ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ವೃದ್ಧಿಪಡಿಸುವದು.
ಸಾಲಾಮಿಸಿ ಮುರಬ್ಬಾವು—ಶ್ವಾಸಖಾಸ ರೋಗಗಳನ್ನು ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹೊಟ್ಟೆಯಲ್ಲಿರುವ ಜ್ವರದಗಡ್ಡೆ ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೆಟ್ಟುಹೋಗಿರುವ ರಕ್ತವನ್ನು ಶುದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಳೆತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು.
ಸಾಲಾಮಿಸ್ರಿ ಮುರಬ್ಬಾವು—ಉತ್ಸಾಹ, ಧೈರ್ಯ, ಬುದ್ಧಿಕುಶಲತೆ, ಶರೀರಕಾಂತಿಯನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು—ತಾಂಬ್ರ, ಬೆಳ್ಳಿ, ಮತ್ತು ಬಂಗಾರ ಭಸ್ಮಕ್ಕಿಂತಲೂ ಉತ್ತಮವಾದುದು.
ಸಾಲಾಮಿಸ್ರಿ ಮುರಬ್ಬಾವು—ಸ್ತ್ರೀ ಸಂಗಕ್ಕೆ ಮೊದಲೆ ಧಾತು ಸ್ಖಲನವಾಗುವದನ್ನು ನಿಲ್ಲಿಸುವದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯ್ಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣಕೊಡುತ್ತದೆ. ೨-೩ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು “ಸಾಲಾಮಿಸ್ರಿ” ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ ಕ್ಕೆ ಕ್ರಯ ೨—೦—೦ ರೂಪಾಯಿ. ಟಪ್ಪಾಲು ಖರ್ಚು ೧ ಡಬ್ಬಿಯಿಂದ ಡಬ್ಬಿಗಳ ವರೆಗೆ ೬ ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ವಿಳಾಸ:—ಡಿ. ಮನ್ನಾಲಾಲ್, ಡಲ್ಲಿ ವೈದ್ಯರು,
೫, ಅವೆನ್ಯೂ ರೋಡ್ ಬೆಂಗಳೂರು ಸಿಟಿ.

ಹೊಸ ಪುಸ್ತಕಗಳು.

184

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೩೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೦ ಆಣೆ.

ಬಸವರಾಜವಿಜಯಂ.— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಸಂಬೇಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ.—ಬೆಲೆ ೧-೨-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೨-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೨-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೨-೦

ಸೌಂದರಪುರಾಣಂ- ೧-೨-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಸ್ತೋತ್ರ ಕಾಲಿರಾಗವುದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೦ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಪಾಳ್ಯದವೆಂಕಟಾಚಲಪಂಡಿತರ ಸಿದ್ಧೌಷಧಗಳು.

51

ಲೋಕಾನುಯುಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಕೈ ಕಾಲು ಜೊಹಿತ (ಬಾತ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಮುಟ್ಟಿನಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೦ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮೀರಿಹೋದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಬೇಕಾದರೆ ಬೇಡಿರಿ. ಒಂದೇವೊಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧—೦—೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡು) ಶಕುಂತಳ ಕೂದಲು ಬೆಳೆಯುವ ಪರಿಮಳ ತೈಲವು.

7

ಡಬ್ಬಿ ೧ ಕ್ಕೆ ೩೬ ವಿಧವಾದ ಇನಾಂ ಸಾಮಾನುಗಳ ಸಮೇತ ೧೫ ತೊಲೆ ಎಣ್ಣೆಯ ಕ್ರಯ ರೂ. ೧-೦-೦

SAKUNTHALA
HAIR OIL
REGISTERED TRADE MARK

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವುದು. ಒರಟಾಗಿರುವ ಕೂದಲು ಮೃದುವಾಗುವುದು. ನೇರಳೇಹಣ್ಣಿನಂತೆ ಕಪ್ಪಾಗಿ ಥಳಥಳಿಸುವುದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವುದು. ಕಣ್ಣಿಗೆ ತಂಪುಕೊಡುವದು. ತಲೆಯಲ್ಲಿರುವ ಹೊಟ್ಟನ್ನು ಸರಿಮಾಡುವುದು. ಕಣ್ಣಿನಲ್ಲಿ ಮಂಜನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವುದಲ್ಲದೆ ಜವ್ವಾಜಿ ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತೂ ಜಾಜಿ, ಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರೂಪಾಕ್ಷಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವುದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

೧೫ ತೊಲ ತೈಲವುಳ್ಳ ಡಬ್ಬಿ ೧ ಕ್ಕೆ ಕ್ರಯ ೩೬ ಇನಾಂ ಸಾಮಾನುಗಳ ಸಮೇತ ರೂ. ೧-೦-೦

ಇನಾಂ ಸಾಮಾನುಗಳ ತಪ್ಸೀಲು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ ೧, ದಂತದ ಬಾಚಣಿಗೆ ೧, ನೋಡಿಕೊಳ್ಳುವ ಕನ್ನಡಿ ೧, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ ೧, ಅತ್ತರುಬುಡ್ಡಿ ೧, ವಾಸನೆಯುಳ್ಳ ಸೋಪು ೧ ತಾಂಬೂಲಮಾತ್ರೆ ೨೦ ಕೊಂಡೆ ಗಿಣಿಗಳು ೬ ಕಾರೊನೇಷನ್ ಬ್ರೂಚ್ ೧, ಜವಾದುಡಬ್ಬಿ ೧, ಈ ತರಹ ೩೬ ಇನಾಂ ಕೊಡಲ್ಪಡುತ್ತವೆ.

ನಮ್ಮ ವಿಳಾಸ:—ಧನಲಕ್ಷ್ಮಿ ಅಂಡ್ ಕಂಪನಿ ೧-೬
ವೆಂಕಟೇಶಮೇಸ್ತ್ರಿ ಬೀದಿ, ಸಾಹುಕಾರ್ ಪೇಟೆ ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೧—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲಚರಿತೆ	೦—೫—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಣ್ಯವಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್‌ವಾಚ್.

ಇದರ ಕ್ರಯ ೭ ಬಹುಮಾನಗಳ ಸಮೇತ ರೂ.೩-೮-೦
ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ. 7



ಘನವಂತರೇ ಈ:—ನೂತನ ನಮೂನೆ ವಾಚ್ ಈಗತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತೂ ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತೂ ನಾಣ್ಯವಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್ ಬರೀ ಮಾತುಗಳಿಂದಲೇನು? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ ೭ ಬಹುಮಾನಗಳ ತಪಶೀಲ್:-(೧) ಸುಂದರವಾದ ವಾಚ್ ಸರಪಣಿ, (೨) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (೩) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (೪) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆದಾರ, (೫) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (೬) ಪರಿಮಳವುಳ್ಳ ಸುವಾಸನೆ ಶೀಷೆ, (೭) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—
ಎಸ್. ಎಮ್. ಸ್ವಾಮಿ ಅಂಡ್ ಕಂಪೆನಿ,
ನಂ. ೪೪, ನಂಬುಳಯ್ಯರ ಬೀದಿ, ಮದರಾಸು.

೧೯೧೫ ನೆಯ ಇಸವಿ ಮೇ ತಾ॥ ೨೩ರಿಂದ ೧೯೧೫ ನೆಯ ಮೇ ತಾ॥ ೨೯ರ ವರೆಗೆ ಸಲ್ಲುವ ಶಾಲೀವಾಹನಶಕೆ ೧೮೩೭ ನೆಯ ರಾಕ್ಷಸನಾಮಸಂವತ್ಸರದ ನಿಜವೈಶಾಖ ಶು॥ ನವಮಿಯಿಂದ ನಿಜವೈಶಾಖ ಬ॥ ಪಾಡ್ಯಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ತೇದಿ
23	[1] ಭಾನು	ನವ	23-10	ಪುಬ್ಬ	24-0	10
24	[2] ಸೋ	ದಶ	20-11	ಉತ್ತ	22-33	11
25	[3] ಮಂಗ	ಏಕಾ	16-0	ಹಸ್ತ	20-14	12
26	ಬುಧ	ದ್ವಾ	11-1	ಚಿತ್ತ	17-7	13
27	[4] ಗುರು	ತ್ರ	5-36	ಉಪರಿ	54-15	14
28	[5] ಶುಕ್ರ	ಚ	53-25	ವಿಶಾಖ	9-27	15
29	ಶನಿ	ಪೌ	47-10	ಅನೂ	5-16	16

(1) ತಿಥಿದ್ವಯಂ, (ವಾಕ್ಯರೀತ್ಯಾ ನವಮೀತಿಥಿಃ). (2) ಏಕಾದಶೀತಿಥಿಃ, (ವಾಕ್ಯರೀತ್ಯಾ ತಿಥಿದ್ವಯಂ). (3) ಸರ್ವತ್ರೈಕಾದಶೀ, ಶ್ರೀರಂಗಪಟ್ಟಣದಲ್ಲಿ ನೃಸಿಂಹಸ್ವಾಮಿರಥಃ, ವರದರಾಜಜಯಂತೀ. (4) ಕಾಂಚ್ಯಾಂಗರುಡೋತ್ಸವಃ, ಕೂರ್ಮಜಯಂತೀ, ನಮ್ಮಾಳ್ವಾರ್ ತಿರುನ॥, ಸ್ಮಾರ್ತ ಸರ್ವತ್ರ ಶ್ರೀನೃಸಿಂಹಜಯಂತೀ, ಶ್ರೀರಂಗನಾಥಬ್ರಹ್ಮತಂತ್ರಪರಕಾಲಸ್ವಾಮಿಗಳ ತಿರುನ॥ (5) ವೈಷ್ಣವ ಸರ್ವತ್ರ ಶ್ರೀನೃಸಿಂಹಜಯಂತೀ, ವ್ಯಾಸ ೧೫, ಅರ್ಧನಾರೀಶ್ವರವ್ರತಂ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರ್ ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಕ್ಷ್ಯಜನಹೃತ್ತಮೋಹರಾಜೇಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಪಲಂ ।
ಸಿಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿತ್ತಿ ಕೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೪—೦

ಸಂಪುಟ ೨೮) ಮೈಸೂರ್ ಸ್ಟಾರ್ ಸನ್ ೧೯೧೫ ನೆಯ ಇಸವಿ ಮೇ ತಾರೀಖು ೩೦ ನೆಯ ಭಾನುವಾರ. (ಸಂಚಿಕೆ ೨೧

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಶಿಂತಾನ್.

17

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು. ಈ ಸೆರ್ಷಿತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

೧. ಇದು ಶಕ್ತಿಯನ್ನು ವೃದ್ಧಿಪಡಿಸುವುದಲ್ಲದೆ, ತಲೆಯನೋವು, ತಲೆತಿರುಗುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು.
೨. ದುಃಖಾದಿಗಳಿಂದ ಕೂಡಿದ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತೂ ಮೆದುಳಿಗೆ ಕೆಲಸವನ್ನು ಕೊಡತಕ್ಕವರಿಗೆ ಮಹಾಪ್ರಸಾದವಾಗಿರುವುದು.
೩. ಊಟವಾದನಂತರ ಅಥವಾ ತಾಂಬೂಲವನ್ನುಪಯೋಗಿಸುವಾಗಲೆಲ್ಲಾ ಈ ಮಾತ್ರೆಗಳನ್ನುಪಯೋಗಿಸುತ ಬಂದಲ್ಲಿ ತಿಂದನ್ನವು ಜೀರ್ಣವಾಗುವುದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಆಗುತ ಯಾವರೋಗಕ್ಕೂ ಆಸ್ಪದವುಂಟಾಗುವುದಿಲ್ಲವು.
೪. ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.
೫. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ, ಎಲ್ಲ ಉದ್ಯೋಗದ ದೊಡ್ಡಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವುವು.
೬. ಬೇಸಿಗೆ ಮತ್ತೂ ಚಳಿಗಾಲಗಳಲ್ಲಿ ಎಲ್ಲತರದ ರೋಗವನ್ನೂ ಬಹು ಚಮತ್ಕೃತಿಯಿಂದ ನಿವಾರಣೆಯನ್ನು ಮಾಡುವುದು.
೭. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಸೆರ್ಷಿತಾನದ ಒಂದು ಪೊಟ್ಟಣವನ್ನು ಯಾವಾಗಳೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ.

೪೫	ಮಾತ್ರೆಗಳ	ಪೊಟ್ಟಣ	೧ಕ್ಕೆ	೨ ಆಣೆ		೮೦	ಮಾತ್ರೆಗಳ	ಟಿನ್	೧ಕ್ಕೆ	೪ ಆಣೆ.
೯೫	"	"	"	೪ "		೧೦೦	"	ಶೀಶೆ	"	೪॥ "
೨೦೦	"	"	"	೭ "		೫೫೦	"	ಮರದಪೆಟ್ಟಿಗೆ	"	೧ ರೂ.
೨೦೦	"	ಟಿನ್	"	೯ "		೧೨೦೦	"	"	"	೨ "

೧ ರೂ.ಗೆ ಕಡಿಮೆಯಾಗಿ ವಿ. ಪಿ. ಮೂಲಕ ಕಳುಹಲ್ಪಡುವುದಿಲ್ಲವು. ಮತ್ತೂ ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಎಲ್ಲಾ ಕಡೆಯೂ ಪ್ರಸಿದ್ಧವರ್ತಕರಲ್ಲಿ ವಿಕ್ರಯಿಸಲ್ಪಡುತ್ತದೆ.

ಮೈಸೂರುಸೀಮೆಯ ಏಜಂಟರು:—ಎಂ. ರಾಮಸಂಜೀವ ಸೆಟ್ಟಿ,
ಚನ್ನಪಟ್ಟಣ.

ಸೋಲ್ ಏಜಂಟರು:—ಸೆರ್ಷಿತಾರ್ಟಡಿಪೋ,
ಪ್ರಿನ್ಸೆಸ್‌ಸ್ಟ್ರೀಟ್ ಬೊಂಬಾಯಿ ನಂ ೨.

ಮದ್ರಾಸ್ ಏಜಂಟ್:—ಬಿ. ಸಿ. ಷಾ ಅಂಡ್‌ಕೊ,
೧೩೭ ಬೇನಾಬಜಾರ್ ರೋಡ್, ಮದ್ರಾಸ್.

S.U.N.&Co
BENARES CITY.
KASHI
VISHWESHWAR.

35

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ-ಎಸ್. ಯೂ. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ಓರಿಯಂಟಲ್ ಫಾರ್ಮಸಿ ಮೈಸೂರು.

17

ಪ್ರಸಿದ್ಧ ಗುಣಕಂಡ ಔಷಧಗಳು.

ಜ್ವರದಮಾತ್ರೆ— ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಯುಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕಸೆಳೆತ ಮಂದ ಇವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ರೂ.

ಗೋರೋಜನದಮಾತ್ರೆ— ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೂಡ್ಲೆ ತಪ್ಪಿ ಜೀರ್ಣಶಕ್ತಿಕೊಡುತ್ತೆ. ಪ್ರಯಾಣೀಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾದ ನೋವು ಉಳುಕು ಊದು ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ. ೫ ಡಬ್ಬಿಗೆ ೧ ರೂ. ಕೂಡ್ಲೆ ನಮ್ಮ ಕ್ಯಾಟಲಾಗಿಗೆ ಬರಿಯಿರಿ ಪುಕಟತ್ತ ಕಳುಹಿಸುತ್ತೇವೆ.

ತಿರಸಂಗೀಕರ ಸ್ಮಾರಕ.

ಕನ್ನಡ ಒಕ್ಕಲತನದ ಶಾಲೆ ದೇವೀಹೊಸೂರ.

11

ಈ ಶಾಲೆಯು ಧಾರವಾಡ ಜಿಲ್ಹೆಯಲ್ಲಿರುವ ಹಾವೇರಿ ಸ್ಟೇಶನ್ನದಿಂದ ೫ ಮೈಲು ದೂರವಿರುವ ದೇವೀಹೊಸೂರ ಎಂಬಲ್ಲಿ ಸ್ಥಾಪಿತವಾಗಿದ್ದು ಅದರ ಹೊಸಕ್ಲಾಸುಗಳು ಇದೇ ಮೇ ತಿಂಗಳು ೨೪ ನೇ ತಾರೀಖನಿಂದ ಶುರು ಆಗುವವು. ಇದು ಕೇವಲ ಒಕ್ಕಲಿಗರ ಮಕ್ಕಳ ದೆಶೆಯಿಂದ ಇರುತ್ತದೆ. ಇದರಲ್ಲಿ ಸೇರಲಿಚ್ಛಿಸುವ ವಿದ್ಯಾರ್ಥಿಗಳ ಸಂಬಂಧದ ನಿಯಮಗಳು ಕೆಳಗೆ ಕೊಟ್ಟಂತೆ ಇರುತ್ತವೆ.

(೧) ಹುಡುಗರು ಸ್ವತಃ ಒಕ್ಕಲತನ ಮಾಡುವಂಥ ಒಕ್ಕಲಿಗರ ಮಕ್ಕಳಾಗಿರಬೇಕು. ಮತ್ತು ಆ ಹುಡುಗರು ಸ್ವಲ್ಪ ಮಟ್ಟಿಗಾದರೂ ಒಕ್ಕಲತನದ ಕೆಲಸದಲ್ಲಿ ಮಾಹಿತಿಯುಳ್ಳವರಿರಬೇಕು.

(೨) ಇಲ್ಲಿ ಕಲಿತು ಒಕ್ಕಲತನದ ಉದ್ಯೋಗವನ್ನು ನಡೆಯಿಸಬೇಕೆನ್ನುವವರನ್ನೇ ಈ ಶಾಲೆಯಲ್ಲಿ ತಕ್ಕೊಳ್ಳುವದರಲ್ಲಿ ಬರುವದು. ಸರಕಾರೀ ನೌಕರಿಯನ್ನು ಇಚ್ಛಿಸುವಂಥ ವಿದ್ಯಾರ್ಥಿಗಳು ಇಲ್ಲಿ ಬರಕೂಡದು.

(೩) ಹುಡುಗರು ಕನಿಷ್ಠಪಕ್ಷಕ್ಕೆ ಕನ್ನಡ ೫ನೇ ಇಯತ್ತೆಯಲ್ಲಿಯಾದರೂ ಪಾಸಾಗಿರಲಿಕ್ಕೆ ಬೇಕು. ಮತ್ತು ಅವರು ಯಾವ ಶಾಲೆಯಲ್ಲಿ ಕಲಿತಿರುವರೋ ಆ ಶಾಲೆಯ ಹೆಡ್ಡಮಾಸ್ತರರ ಲೀವ್ಹಿಂಗ ಸರ್ಟಿಫಿಕೇಟನ್ನು ಅರ್ಜಿ ಲಗತ ಕಳುಹಿಸಬೇಕು.

(೪) ಹುಡುಗರ ವಯಸ್ಸು ೧೪ ವರ್ಷದಿಂದ ೧೭ ವರ್ಷದ ಒಳಗಿರಬೇಕು. ಮತ್ತು ವಯಸ್ಸಿನ ದಾಖಲೆ ಅರ್ಜಿ ಲಗತ ಕಳುಹಿಸಬೇಕು.

(೫) ಹುಡುಗರ ಅಭ್ಯಾಸಕ್ರಮವು ಎರಡು ವರ್ಷದ್ದಿರುವದು; ಈ ಶಾಲೆಯಲ್ಲಿ ತೆಗೆದುಕೊಂಡ ಪ್ರತಿಯೊಬ್ಬ ಹುಡುಗನಿಗೆ ಅವನ ಶಾಲೆಯ ಫೀಗೂ ಊಟದ ವೆಚ್ಚಕ್ಕೂ ಸಾಲುವಷ್ಟು ಸ್ಕಾಲರಶಿಪ್ ಕೊಡಲ್ಪಡುವದು.

(೬) ಒಮ್ಮೆ ಶಾಲೆಯಲ್ಲಿ ಸೇರಿದನಂತರ ಶಾಲೆಯ ಅಭ್ಯಾಸ ಕ್ರಮವು ಪೂರ್ಣ ಮುಗಿಯುವವರೆಗೆ ಶಾಲೆಯನ್ನು ಬಿಡಕೂಡದು. ಒಂದು ವೇಳೆ ಮಧ್ಯದಲ್ಲಿ ಬಿಟ್ಟರೆ ಅವರು ಶಾಲೆಯಲ್ಲಿ ಇದ್ದಷ್ಟು ದಿವಸಗಳ ಖರ್ಚನ್ನು ಕೆಳಗೆ ಸಹಿ ಮಾಡಿದವರು ನಿರ್ಣಯಿಸಿದಷ್ಟು ಕೊಡಬೇಕಾಗುವದು.

ಪ್ರತಿವರ್ಷ ೧೫-೨೦ ಹುಡುಗರನ್ನು ತೆಗೆದುಕೊಳ್ಳುವದರಲ್ಲಿ ಬರುವದು. ಬೇರೆ ಶಾಲೆಗಳಂತೆ ಈ ಶಾಲೆಗೂ ಯಾವತ್ತೂ ಸೂಟಿಗಳು ದೊರೆಯುವವು. ಇದಲ್ಲದೆ ವರ್ಷಕ್ಕೆ ಎರಡಾವರ್ತಿ ಒಮ್ಮೆ ದೀಪಾವಳಿ ಸುಮಾರಕ್ಕೆ, ಮತ್ತೊಮ್ಮೆ ಬೇಸಿಗೆ ಸಮಯಕ್ಕೆ ಒಂದೊಂದು ತಿಂಗಳದ ಸತತ ಸೂಟಿಗಳು ಸಿಕ್ಕುವವು. ಇವೆರಡು ಸೂಟಿಗಳಲ್ಲಿ ಮಾತ್ರ ಹುಡುಗರನ್ನು ಮನೆಗೆ ಕಳುಹಿಸುವದರಲ್ಲಿ ಬರುವದು. ಈ ಶಾಲೆಯ ಮುಖ್ಯ ಉದ್ದೇಶವೆಂದರೆ ಒಕ್ಕಲಿಗರ ಮಕ್ಕಳಿಗೆ ಸುಧಾರಿಸಿದ ಪ್ರಕಾರದ ಒಕ್ಕಲತನದ ಶಿಕ್ಷಣವನ್ನು ಕೊಟ್ಟು ಅವರನ್ನು ಅವರ ತಾಯಿತಂದೆಗಳಿಗೆ ಹೆಚ್ಚಿಗೆ ಉಪಯುಕ್ತರನ್ನಾಗಿ ಮಾಡಿಕೊಡುವದು ಅದೆ. **ಈ ಶಾಲೆಗೆ ಬರಲಿಚ್ಛಿಸುವವರು ಅರ್ಜಿಯನ್ನು ಇದೇ ಮೇ ತಿಂಗಳ ೧ನೇ ತಾರೀಖನ ಒಳಗಾಗಿ ಕೆಳಗೆ ಸಹಿಮಾಡಿದವರ ಕಡೆಗೆ ಕಳುಹಿಸತಕ್ಕದ್ದು.**

ಆ ಅರ್ಜಿ ವಿಚಾರಣೆಮಾಡಿ ನಮ್ಮ ಶಾಲೆಯಲ್ಲಿ ತೆಗೆದುಕೊಳ್ಳತಕ್ಕಂಥ ವಿದ್ಯಾರ್ಥಿಗಳಿಗೆ ಪತ್ರದ್ವಾರದಿಂದ ಬರಲಿಕ್ಕೆ ತಿಳಿಸುವೆವು; ಅರ್ಜಿ ನಿಕಾಲಿ ಮಾಡುವಕಾಲಕ್ಕೆ ವತನದಾರ ಪಾಟೀಲ ಕುಲಕರ್ಣಿಯವರ ಮಕ್ಕಳಿಗೂ, ಸುಸ್ಥಿತಿಯ ಒಕ್ಕಲಿಗರ ಮಕ್ಕಳಿಗೂ, ಹೆಚ್ಚು ಸವಲತ ಸಿಗುವದು. ಅರ್ಜಿಯಲ್ಲಿ ಹೆಸರು, ತಂದೆಯ ಹೆಸರು, ಅಡ್ಡಹೆಸರು, ಜಾತಿ

ಇರುವ ಊರು, ತಾಲ್ಲೂಕು, ಜಿಲ್ಲಾ ಖಾತೇದ ಹೊಲವು ಎಷ್ಟು, ಮತ್ತು ಅದು ಎಲ್ಲಿರುವದು ಸರಕಾರಕ್ಕೆ ದರವರ್ಷ ಕೊಡಬೇಕಾದ ತೆರಿಗೆ ತೋಟಪಟ್ಟಿಗಳನ್ನು ಮಾಡಲಿಕ್ಕೆ ನೀರಿನ ಅನುಕೂಲತೆ ಇರುವದೇ ಹ್ಯಾಗೆ? ಮತ್ತು ಹೊಲಗಳನ್ನು ಮನೆಯಿಂದ ಮಾಡುವರೋ ಹ್ಯಾಗೆ? ಮೊದಲಾದ ಮಾಹಿತಿಯನ್ನು ತುಂಬಿ ಆಯಾ ಊರ ಗ್ರಾಮಸ್ಥರ ದಾಖಲೆಯನ್ನು ಲಗತಿಟ್ಟು ಅರ್ಜಿ ಕಳಿಸಬೇಕು; ಮತ್ತು ಅರ್ಜಿಯನ್ನು ಶಾಲೆಗೆ ಬರಲಿಚ್ಛಿಸುವ ವಿದ್ಯಾರ್ಥಿಗಳೇ ಸ್ವಹಸ್ತದಿಂದ ತುಂಬಿ ಕಳಿಸಬೇಕು. ಮೇಲೆ ಹೇಳಿದ ನಿಯಮಗಳಂತೆ ನಡೆಯಲಿಕ್ಕೆ ಅನುಮತಿಯುಂಟೆಂದು ತಮ್ಮ ಪಾಲಕರ ಕಡೆಯಿಂದ ಒಂದು ಸಹಿನಿಸಿ ದಾಖಲೆ ತಕ್ಕೊಂಡು ಅರ್ಜಿ ಲಗತ ಇಟ್ಟು ಕಳಿಸಬೇಕು.

ಧಾರವಾಡ | ಸಹಿ ಟಿ. ಗಿಲ್ಬರ್ಟ
ತಾ॥ ೫-೩-೧೯೧೫ | ಡಿ. ಡಾಯರೆಕ್ಟರ ಶೆತಕೀ ಖಾತೆ,
ದಕ್ಷಿಣಭಾಗ

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತವಾಗಿರುವ ಘೋರಯುದ್ಧದ ದೆಸೆಯಿಂದ ಈ ಸಾಮಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದ ಮತ್ತು ಬೆಲ್ಜಿಯಮ್ಮಿನಿಂದ ಸುತರಾಂ ಬರುವುದು ಕಟ್ಟಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಆವಶ್ಯಕವಾದ ಕಾಗದ ಮೊದಲಾದ ಸಾಮಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವದಿಯು ಪೂರೈಸಿರುವವರಿಗೆಲ್ಲಾ ಪತ್ರಿಕೆಯನ್ನು ವಿ. ಪಿ ದ್ವಾರ ಕಳುಹಿಸುತ್ತಿರುವೆವು. ಆದರೆ ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿರುಗಿಸಿ ಕಾಗದದ ಬೆಲೆಯೇರಿಕೆಯಿಂದ ನಷ್ಟಪಡುವುದರ ಜತೆಗೆ ಪೋಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದು ತಿಳುಹಲು ಖೇದವಾಗುತ್ತದೆ. ಇತಃಪರಃ ದಯಾರ್ದ್ರಹೃದಯರಾದ ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ. ಪಿ. ಹಣವನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನವಾಗಿ ನಡೆದುಕೊಂಡು ಹೋಗುವಂತೆ ಮಾಡುವರೆಂದು ಸಂಪೂರ್ಣವಾಗಿ ನಂಬಿರುತ್ತೇವೆ.

ಮ್ಯಾನೇಜರ್.

ವಿವಾಹಚರ್ಚೆ.

1915 ನೇ ಇಸವಿ ಮಾರ್ಚಿ ತಾ॥ 26-27-28, ಈ ಮೂರುದಿನಗಳಲ್ಲಿ ಶ್ರೀ ಶ್ರೀ ಉತ್ತರಾದಿ ಮಠಾಧೀಶರನ್ನು ಮೈಸೂರಿನಲ್ಲಿರುವ ಮ॥ ಅಡ್ವೋಕೇಟ್, ಎಚ್. ನರಸಿಂಗರಾಯರು ತಮ್ಮ ಮನೆಗೆ ಕರೆದುಕೊಂಡು ಬಂದು, ಪಾದಪೂಜೆ ದೇವತಾರ್ಚನೆ ಮುಂತಾದ ಮಹೋತ್ಸವಗಳನ್ನು ನಡೆಸಿದರು. ಪ್ರತಿದಿನವೂ ಮೈಸೂರು ಪುರವಾಸಿಗಳಾದ ಅನೇಕ ವೈದಿಕ ಲೌಕಿಕ ಮಹಾಜನಂಗಳು ದೇವತಾರ್ಚನ ಮುಂತಾದುದನ್ನು ನೋಡಿ ಪರಮಾನಂದ ಭರಿತರಾದರು. ಅಲ್ಲದೆ 28 ನೇ ತಾರೀಖು ಮಧ್ಯಾಹ್ನ 2 ಘಂಟೆಯ ಮೇಲೆ ಶ್ರೀ ಶ್ರೀಗಳವರ ಮಹಾಸನ್ನಿಧಾನದಲ್ಲಿ ಕೆಳಗೆ ಉದಹರಿಸುವ ವೈದಿಕ ಲೌಕಿಕ ಮಹಾಜನಗಳು ಸೇರಿದ್ದರು.—

ಶ್ರೀ॥ ಮ॥ಗಳಾದ ಮುಳಬಾಗಲ್ ಅಪ್ಪಣ್ಣಾಚಾರ್ಯರು, ಧರ್ಮಾಧಿಕಾರಿ ಶ್ರೀಕಂಠ ಶಾಸ್ತ್ರಿಗಳು, ಮಹಾವಿದ್ವಾನ್ ರಾಮಚಂದ್ರಾಚಾರ್ಯರು, ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು, ಕವಿತಿಲಕ ಅಯ್ಯಾಶಾಸ್ತ್ರಿಗಳು, ಮೇಲುಕೋಟೆ ಶ್ರೀನಿವಾಸಯ್ಯಂಗಾರ್, ಆನೇಕಲ್ಲು ಶ್ರೀನಿವಾಸಾಚಾರ್ಯರು, ಬ್ರಹ್ಮಕರ್ತ ಕೃಷ್ಣಾಚಾರ್ಯರು, ಲೈಬ್ರರಿಪಂಡಿತ ಶ್ಯಾಮಾಚಾರ್ಯರು, ನಂಜಪ್ಪನವರು, ತಿರುನಾರಣಯ್ಯಂಗಾರ್, ವ್ಯಾಕರಣ ಶ್ಯಾಮಾಚಾರ್ಯರು, ಮಠದ ದಿವಾನ್ ಜಯರಾಯಾಚಾರ್ಯರು, ಕಲ್ಲಾಪುರ ಗೋಪಾಲ ಕೃಷ್ಣಾಚಾರ್ಯರು, ಅಯ್ಯಾ ಘನಪಾಟಿಗಳು, ಸಂಗೀತವಿದ್ವಾನ್ ವಾಸುದೇವಾಚಾರ್ಯರು, ರಾಘವೇಂದ್ರಾಚಾರ್ಯರು, ಪಾಂಡುರಂಗ ಅಣ್ಣಾಸ್ವಾಮಿ ಆಚಾರ್ಯರು, ನವರತ್ನ ಶ್ರೀನಿವಾಸಾಚಾರ್ಯರು, ಪಾಂಡುರಂಗ ಕೃಷ್ಣಾಚಾರ್ಯರು ಅನಂತಶಯನಾಚಾರ್ಯರು, ವೆಂಕಣ್ಣಾಚಾರ್ಯರು, ಶ್ಯಾಮಾಚಾರ್ಯರು, ಕೊಪ್ಪಳಂ ಹನುಮಂತಾಚಾರ್ಯರು, ಮಹಾ ವಿದ್ವಾನ್ ಪಾಂಡುರಂಗ ವೆಂಕಟರಮಣಾಚಾರ್ಯರು, ಮಳಗಿ ಹನುಮಂತಾಚಾರ್ಯರು, ಪಂಡರಾಪುರಂ ಕೃಷ್ಣಾಚಾರ್ಯರು, ವೆಂಕೋಬಾಚಾರ್ಯರು, ಬೆಳಗುಂದಿ ಪದ್ಮನಾಭಾಚಾರ್ಯರು, ಶ್ರೀರಂಗ ಗೋಪಾಲಾಚಾರ್ಯರು, ಸುರಪುರತಿರುಪತ್ಯಾಚಾರ್ಯರು, ಪಾಂಡುರಂಗ ರಂಗಾಚಾರ್ಯರು, ಭೀಮಾಚಾರ್ಯರು, ಭಟ್ರ ರಂಗನಾಥಾಚಾರ್ಯರು, ಈರೋಡುಕೃಷ್ಣಾಚಾರ್ಯರು, ಕಂಬದಣಾಪುರ ಸುಬ್ರಹ್ಮಣ್ಯಾಚಾರ್ಯರು, ವರದೇಶ ಪ್ರದ್ಯುಮ್ನಾಚಾರ್ಯರು, ನೇವಣಿಗ ರಾಮಾಚಾರ್ಯರು, ಕಾಲಿ ವಾಸುದೇವಾಚಾರ್ಯರು, ಬೇವಿನಹಳ್ಳಿ ಕೃಷ್ಣಾಚಾರ್ಯರು, ಹೊಳವನಹಳ್ಳಿ ಕೃಷ್ಣಾಚಾರ್ಯರು, ರಾಮಾಚಾರ್ಯರು, ಭೀಮಸೇನಾಚಾರ್ಯರು, ಕೊಟ್ಟೂರು ಶ್ರೀನಿವಾಸಾಚಾರ್ಯರು, ಉಡುಪಿ ಶ್ರೀನಿವಾಸಾಚಾರ್ಯರು, ನೇವಮ್ಯಾಳಾಚಾರ್ಯರು, ವ್ಯಾಸಾಚಾರ್ಯರು, ಅಂಬಳೆ ಅಣ್ಣಯ್ಯಪಂಡಿತರು, ಎಂ. ವೆಂಕಟಕೃಷ್ಣಯ್ಯನವರು, ಎ. ಮಹಾದೇವಶಾಸ್ತ್ರಿಗಳು, ಸಿ. ನಾರಾಯಣರಾಯರು, ನೇವಸ್ಯಂ ಗೋವಿಂದಾಚಾರ್ಯರು, ರಿಪೆಂಟ್‌ದಾರ್ ಮುಸಾಹೇಬ್ ಕೃಷ್ಣರಾಯರು, ವೀಣೆಶೇಷಣ್ಣನವರು, ಅಡ್ವೋಕೇಟ್ ಚಂದ್ರಶೇಖರಯ್ಯನವರು, ಡಿ. ವೆಂಕಟರಾಮಯ್ಯನವರು, ಎಚ್. ನರಸಿಂಗರಾಯರು, ಮಿಲ್ಲರ್ ವೆಂಕಟರಾಮಯ್ಯನವರು, ರಂಗಸಾಮಯ್ಯಂಗಾರ್, ಸಿ. ನಂಜಪ್ಪನವರು, ಟಿ. ಗುಂಡಪ್ಪನವರು, ಎಚ್. ರಂಗಸ್ವಾಮಯ್ಯಂಗಾರ್, ಕೆ. ರಾಮರಾಯರು, ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀನಿವಾಸರಾಯರು, ಲಾಯರು ಕೆ. ವ್ಯಾಸಾಚಾರ್ಯರು, ಇವಲ್ಲದೆ ಧರ್ಮಬುಭುತ್ಸುಗಳಾದ ಮತತ್ರಯದವರ ಸಮುದಾಯವು ಬಹಳವಾಗಿ ಸೇರಿತ್ತು.

ಆ ಸಮಯದಲ್ಲಿ, ಮ॥ ವೆಂಕಟಕೃಷ್ಣಯ್ಯನವರು ಶ್ರೀ ಶ್ರೀಯವರ ಸನ್ನಿಧಾನದಲ್ಲಿ:—“ನಮ್ಮ ಶಾಸ್ತ್ರಗಳಲ್ಲಿ ಉಕ್ತವಾದ ಧರ್ಮಗಳೆಲ್ಲವೂ ಜನಗಳ ಕ್ಷೇಮಕ್ಕೋಸ್ಕರವಾಗಿಯೇ ಪೂರ್ವಿಕರಿಂದ ಮಾಡಲ್ಪಟ್ಟುವು; ಆದರೆ ಈಗಿನ ಕಾಲಸ್ಥಿತಿಯಲ್ಲಿ ಆ ಧರ್ಮಗಳ ದೆಸೆಯಿಂದ ಜನಗಳಿಗೆ ತೊಂದರೆಯುಂಟಾಗುವಪಕ್ಷ ಈಗಿನ ಮಹನೀಯರು ಜನಗಳ ಕ್ಷೇಮಕ್ಕಾಗಿ ಆ ಧರ್ಮಗಳನ್ನು ಏತಕ್ಕೆ ಬದಲಾಯಿಸಕೂಡದು? ಇದಕ್ಕೆ ಸಾಕ್ಷಿ ಏನೆಂದರೆ:—ನಮ್ಮ ಹಿಂದಿನ ಆಚಾರಗಳನ್ನು ನಾವು ಎಷ್ಟೋ ಬದಲಾಯಿಸಿಕೊಂಡಿರುತ್ತೇವೆ. ಪೂರ್ವದಲ್ಲಿ ನಿಂದ್ಯವೆಂದು ಎಣಿಸಲ್ಪಟ್ಟಿದ್ದ ಎಷ್ಟೋ ಆಚಾರಗಳನ್ನು ನಾವು ಈಗ ನಿರಾಕ್ಷೇಪವಾಗಿ ಮಾಡುತ್ತಿರುವೆವು. ಆದುದರಿಂದ ಈಗ ಕಾಲಸ್ಥಿತಿಯನ್ನು ಅನುಸರಿಸಿ ನಮ್ಮ ಧರ್ಮಗಳನ್ನು ಬದಲಾಯಿಸಬೇಕು” ಎಂದು ಪೂರ್ವಪಕ್ಷಮಾಡಿದರು. ಇದಕ್ಕೆ ಶ್ರೀಗಳವರು ಕೆಲವು ಶಾಸ್ತ್ರವಚನಗಳನ್ನು ನಿರೂಪಿಸಿ, ಸಹೇತುಕವಾಗಿಯೂ, ದೃಷ್ಟಾಂತಯುಕ್ತವಾಗಿಯೂ ಈರೀತಿ ಅಪ್ಪಣೆ ಕೊಡಿಸಿದರು:—

ದೃಷ್ಟಪ್ರಯೋಜನಗಳೆಂದೂ ಅದೃಷ್ಟಪ್ರಯೋಜನಗಳೆಂದೂ ಎರಡುವಿಧ ಪ್ರಯೋಜನಗಳುಂಟು. ನಮ್ಮ ಶಾಸ್ತ್ರಗಳ ರೀತ್ಯಾ ತಾತ್ಕಾಲಿಕವಾಗಿ ತೋರಿಬರುವ ಸುಖಲೇಶವು ಪ್ರಯೋಜನವಾಗಿ ಎಂದಿಗೂ ಮುಖ್ಯವಾಗಿ ಎಣಿಸಲ್ಪಡುವುದಿಲ್ಲ. ತಾತ್ಕಾಲಿಕದಲ್ಲಿ ಕಿಂಚಿತ್ ಕಷ್ಟ ಕಂಡುಬಂದರೂ ಪರಿಣಾಮದಲ್ಲಿ ಸುಖಾಧಿಕ್ಯವುಂಟಾಗುವುದಾವುದೋ ಅದೇ ಮುಖ್ಯ ಪ್ರಯೋಜನವಾಗಿ ಎಣಿಸಲ್ಪಡುವುದು. ಅಲ್ಲದೆ, ನಮ್ಮ ಶಾಸ್ತ್ರರೀತ್ಯಾ ಶಾಸ್ತ್ರವಿಧಿಗಳಿಗೆ ಅದೃಷ್ಟಪ್ರಯೋಜನವು ಮುಖ್ಯವೇ ವಿನಾ, ದೃಷ್ಟವಾದ ಪ್ರಯೋಜನವು ಮುಖ್ಯವಲ್ಲ. ಹೇಗೆಂದರೆ ಭೋಜನ ವಿಷಯದಲ್ಲಿ, ಪಾಕಕರಣ ಚರ್ವಣ ಮುಂತಾದ ಕಾರ್ಯಗಳು ತತ್ಕಾಲದಲ್ಲಿ ಕಿಂಚಿತ್ ಕಷ್ಟವಾದರೂ, ಮುಂದೆ ಉಂಟಾಗುವ ದೇಹಪುಷ್ಟಿ ಮೊದಲಾದವುಗಳಿಂದ ಹೇಗೆ ಆ ಕಷ್ಟವು ಸರ್ವತ್ರ ಪರಿಗೃಹೀತವಾಗಿದೆಯೋ, ಮತ್ತು ಬಾಲಕರನ್ನು ಹೊಡೆಯುವುದು ಬೈಯುವುದು ಮುಂತಾದ ಶಿಕ್ಷಣಮಾಡುವುದರಿಂದಲೂ, ಅವರಿಗೆ ಅನ್ನನಿದ್ರಾದಿಗಳ ವಿಷಯದಲ್ಲಿ ನಿಯಮಗಳನ್ನೂ ನಿರ್ಬಂಧಗಳನ್ನೂ ಮಾಡುವುದರಿಂದಲೂ, ಅವರಿಗೆ ತತ್ಕಾಲದಲ್ಲಿ ತೊಂದರೆಯಾದರೂ ಕಾಲಾನುಕಾಲದಲ್ಲಿ ಬಿ.ಎ. ಬಿ.ಎಲ್., ಮುಂತಾದ ಉಪಪದಗಳನ್ನು ಧರಿಸಿ ಧನಾರ್ಜನೆಗೆ ಅತ್ಯಂತ ಸಹಾಯಕಾರಿಯಾಗುವುದರಿಂದ ಅಂತಹ ಶಿಕ್ಷಣನಿಯಮಗಳು ಹೇಗೆ ಪರಿಗೃಹೀತವಾಗಿವೆಯೋ, ಹಾಗೆ ಧರ್ಮವಿಷಯದಲ್ಲಿಯೂ ದೃಷ್ಟಪ್ರಯೋಜನಗಳು ತತ್ಕಾಲದಲ್ಲಿ ಕಠಿಣಗಳಾಗಿ ಕಂಡುಬಂದರೂ, ಮುಂದೆಬರುವ ಮಹತ್ತಾದ ಅದೃಷ್ಟಪ್ರಯೋಜನಗಳ ದೆಸೆಯಿಂದ ಧರ್ಮಗಳು ಪರಿಗ್ರಾಹ್ಯವೇ ವಿನಾ, ಎಂದಿಗೂ ಬದಲಾಯಿಸಲ್ಪಡತಕ್ಕವುಗಳಲ್ಲ. ಹಾಗೆ ದೃಷ್ಟಪ್ರಯೋಜನಗಳೇ ಮುಖ್ಯವಾಗಿದ್ದಲ್ಲಿ ವಿವಾಹಾದಿಸಂಸ್ಕಾರಗಳಿಗೂ ಮತ್ತು ಶಾಸ್ತ್ರನಿಯಮಗಳಿಗೂ ಕಟ್ಟುಬಿದ್ದು ಅವುಗಳನ್ನು ಆಚರಿಸಿಯೇ ದೃಷ್ಟಪ್ರಯೋಜನಗಳನ್ನು ಪಡೆಯಬೇಕೆಂಬ ನಿರ್ಬಂಧವೇಕೆ? ವಿವಾಹಾದಿಸಂಸ್ಕಾರಗಳ ನಿಯಮಗಳಿಲ್ಲದೇನೇ ಸ್ತ್ರೀಸಂಗ ಪುತ್ರೋತ್ಪಾದನ ಮುಂತಾದ ದೃಷ್ಟಪ್ರಯೋಜನಗಳು ಲಭಿಸುವುದಿಲ್ಲವೆ? ಜನಗಳಿಗೆ ತತ್ಕಾಲದಲ್ಲಿ ಕಿಂಚಿತ್ ಕಷ್ಟದಂತೆ ತೋರಿದರೂ ಮುಂದೆ ಉಂಟಾಗುವ ಮಹತ್ತಾದ ಫಲಲಾಭವನ್ನು ನಮ್ಮ ಮಹರ್ಷಿಗಳು ತಮ್ಮ ದಿವ್ಯದೃಷ್ಟಿಯಿಂದ ಕಂಡು, ನಮ್ಮಲ್ಲಿನ ಮಹತ್ತಾದ ವಾತ್ಸಲ್ಯದಿಂದ ಈರೀತಿಯಾದ ಧರ್ಮಗಳನ್ನು ನಮಗೆ ಉಪದೇಶಿಸಿರುತ್ತಾರೆ.” ಎಂಬದಾಗಿ ಅಪ್ಪಣೆಗೊಡಿಸಿದರು. ಇದನ್ನು ಸರ್ವರೂ ಅನುಮೋದಿಸಿದರು.

ಶ್ಲೋ॥ಬ್ರಾಹ್ಮಣಸ್ಯ ಚ ದೇಹೋಯಂಕ್ಷುದ್ರ ಕಾಮಾಯನೇಷ್ಯತೇ । ಕೃಛ್ರಾಯತಪಸೇಚೇಹಪ್ರೇತ್ಯಾನಂತಸುಖಾಯಚ ॥

ಆಗ್ಗೆ ಶ್ರೀಗಳವರು ಕುಳಿತಿದ್ದ ಕೊಠಡಿಯಲ್ಲಿ ಜನರಿಗೆ ಸ್ಥಳಸಾಲದೆಹೋದುದರಿಂದ ಶ್ರೀಗಳವರು ಎದ್ದು ಮನೆಯ ಮುಂದಿನಕಲ್ಲಿನಮೇಲೆ ಕುಳಿತರು; ಜನರು ಅಂಗಳದಲ್ಲೆಲ್ಲಾ ತುಂಬಿಕೊಂಡರು. ಆ ಮುಂದೆ ನಡೆದ ಚರ್ಚೆಯಲ್ಲಿ ಮುಖ್ಯವಾಗಿ ಮಾತನಾಡಿದವರು ವೇ॥ ಮಹಾದೇವಶಾಸ್ತ್ರಿಗಳು, ಮತ್ತು ಶ್ರೀ ಶ್ರೀಗಳವರು. ಆದರೆ ಉಭಯಪಕ್ಷಕ್ಕೆ ಸೇರಿದ ಕೆಲವು ಲೌಕಿಕವೈದಿಕರೂಕೂಡ ಮಧ್ಯೆಮಧ್ಯೆ ಒಂದೊಂದು ಮಾತನಾಡುತ್ತಿದ್ದರು, (ಈ ಎಲ್ಲರೂಆಡಿದ ಮಾತುಗಳನ್ನು ಬೇರೆಬೇರೆಯಾಗಿ ಹೇಳುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲವಾದುದರಿಂದ, ಪೂರ್ವಪಕ್ಷವನ್ನು ಘೋಷಿಸಿ ಆಡಿದವರ ಮಾತುಗಳಾವವು? ಇವುಗಳಿಗೆ ಬಂದ ಉತ್ತರಗಳಾವವು? ಎಂಬುವುಗಳನ್ನು ಮಾತ್ರ ಇಲ್ಲಿ ತಿಳಿಸುತ್ತೇವೆ.)

ಪೂರ್ವಪಕ್ಷದವರು:—ಆಪಸ್ತಂಬ ಧರ್ಮಸೂತ್ರದಲ್ಲಿ “ಸಾಮಯಾಚಾರಿಕಾನ್ ಧರ್ಮಾನ್ ವ್ಯಾಖ್ಯಾಸ್ಯಾಮಃ” ಎಂದೇ ಪ್ರಾರಂಭವಾಗಿರುವುದರಿಂದ ಸಮಯ ಅಂದರೆ ಕಾಲಕ್ಕೆತಕ್ಕಂತೆ ಪುರುಷರು ಏಕದೇಶವಾಗಿ ಮಾಡಿಕೊಳ್ಳುವ ವ್ಯವಸ್ಥೆಯನ್ನನುಸರಿಸಿ ಮಾಡುವ ಆಚಾರಗಳೇ ಸಮಯಾಚಾರಗಳೆನ್ನಿಸಿಕೊಳ್ಳುವುವು. ಆದುದರಿಂದ ಪುರುಷವ್ಯವಸ್ಥೆಗಳು ಭಿನ್ನಭಿನ್ನವಾಗುತ್ತ ಬಂದಹಾಗೆಲ್ಲಾ ಆಚಾರಗಳು ಭೇದಿಸಿದಹಾಗೆಲ್ಲಾ, ಧರ್ಮಬೋಧಕಶಾಸ್ತ್ರಗಳನ್ನು ಬದಲಾಯಿಸಬೇಕು.

ಉತ್ತರವಾದಿಗಳು:—“ಸಮಯಾಚಾರ ಧರ್ಮಗಳು” ಎಂಬುವ ವಚನದಲ್ಲಿ “ಸಮಯ” ಶಬ್ದಕ್ಕೆ ತಾವು ಮಾಡುವ ಅರ್ಥವು ಸಾಧುವಲ್ಲ. ಸಮಯಾಚಾರಗಳೆಂದರೆ ಕೇವಲ ಪುರುಷವ್ಯವಸ್ಥೆಯಿಂದ ಸಿದ್ಧಿಸುವ ಆಚಾರಗಳೆಂದು ಅರ್ಥವಲ್ಲ. ಅದೇ ಧರ್ಮಸೂತ್ರದಲ್ಲಿ ಮುಂದೆಹೇಳಿರುವ ವಚನಗಳ ಗಮನವೇ ಇಲ್ಲದೆ ಮಾತನಾಡುವುದು ಯುಕ್ತವಲ್ಲ. ಅದೇ ಧರ್ಮಸೂತ್ರದಲ್ಲಿ ಇನ್ನು ಸ್ವಲ್ಪ ಮುಂದೆ ನೋಡಿದರೆ “ಧರ್ಮಜ್ಞ ಸಮಯಃ ಪ್ರಮಾಣಂ” ಎಂದಿರುತ್ತದೆ. ಆದುದರಿಂದ ಇಲ್ಲಿ “ಸಮಯ” ವೆಂದರೆ “ಧರ್ಮಜ್ಞ ಸಮಯ’ ವೆಂದರ್ಥಮಾಡಬೇಕು. ಮತ್ತು ಧರ್ಮಜ್ಞರು ಯಾರು? ಎಂಬುವುದಕ್ಕೆ ಆ ಧರ್ಮಸೂತ್ರದಲ್ಲಿಯೇ “ಮನ್ವಾದಯಃ” ಎಂದು ಅರ್ಥಮಾಡಿರುತ್ತಾರೆ. ಅಲ್ಲದೆ “ಸಮಯಶ್ಶಪಥಾಚಾರಕಾಲಸಿದ್ಧಾಂತಸಂವಿದಃ” ಎಂದು ಕೋಶದಲ್ಲಿ ಸಮಯ ಶಬ್ದಕ್ಕೆ ಸಿದ್ಧಾಂತವೆಂದು ಅರ್ಥ ಹೇಳಿರುವುದರಿಂದ ಧರ್ಮಜ್ಞರಾದ ಮನ್ವಾದಿಗಳ ಸಿದ್ಧಾಂತಗಳೇ ನಮಗೆಲ್ಲಾ ಪ್ರಮಾಣವಾದ ಸಮಯಾಚಾರ ಧರ್ಮಗಳೆಂಬ ಅರ್ಥವು ನ್ಯಾಯವಾಗುತ್ತದೆ. ಮನ್ವಾದಿಗಳು ಧರ್ಮಜ್ಞರು ಎಂದರೆ ಧರ್ಮವನ್ನು ಸಾಕ್ಷಾತ್ಕರಿಸಿದವರು ಅಥವಾ ಶಾಸ್ತ್ರಾನುಸಾರವಾಗಿ ಧರ್ಮವನ್ನು ತಿಳಿದವರು ಎಂದರ್ಥವಾಗುವುದು. ಆದುದರಿಂದ ಈಗ ನವೀನವಾಗಿ ಧರ್ಮವ್ಯವಸ್ಥಾಪಕರೆಂದು ಬದ್ಧಕಂಕಣರಾಗಿ ನಿಲ್ಲಲು ಆತುರರಾಗಿರುವವರು ಶಾಸ್ತ್ರಾನುಸಾರವಾಗಿಯಾಗಲಿ ಜ್ಞಾನದೃಷ್ಟಿಯಿಂದಲಾಗಲಿ ಮನು ಮೊದಲಾದ ಮಹರ್ಷಿಗಳಿಗೆ ಸಮಾನರಾಗಿರುವಪಕ್ಷದಲ್ಲಿ ಅವರು ಮಾಡುವ ವ್ಯವಸ್ಥೆಯೂ ಕೂಡ ಜನಗಳ ಆದರಣೆಗೆ ಪಾತ್ರವಾಗಬಹುದು. ಹಾಗಿಲ್ಲದೆ ಧರ್ಮಸ್ವರೂಪವನ್ನು ಸ್ವಪ್ರತ್ಯಕ್ಷದಿಂದಲಾಗಲೀ ಶ್ರುತಿಸ್ಮೃತ್ಯಾಧಾರಗಳಿಂದಾಗಲೀ ತಿಳಿದುಕೊಳ್ಳಲಾರದೆ ಇರುವವರು ಮಾಡಲು ಯತ್ನಿಸುವ ವ್ಯವಸ್ಥೆಯು ಕಾರ್ಯಕಾರಿಯಾಗಲಾರದು; ಜನಗಳಿಗೆ ಆದರಣೀಯವೂ ಆಗಲಾರದು. ಅವರು ಮಾಡಲಿಳಿಸುವ ವ್ಯವಸ್ಥೆಯು ಬರೀ ಅವ್ಯವಸ್ಥೆಯಾಗುವುದಲ್ಲದೆ ಮುಂದೆ ವಿಪರೀತ ಫಲವನ್ನುಂಟುಮಾಡಿಯಾವು. ಅಲ್ಪಜ್ಞರಾದ ಕೆಲವರು ತಮ್ಮ ಬಡಮತಿಗೆ ಸದ್ಯಃ ಕಾಣಬರುವ ಸುಖಲೇಶದಿಂದ ಮೋಹಿತರಾಗಿ ಮಾಡುವ ಏರ್ಪಾಡುಗಳಿಂದ ಮುಂದೆ ನಮ್ಮ ಸನಾತನ ಲೋಕಾಚಾರಗಳಿಗೆ ಎಂಥೆಂಥಾ ಅಪಾಯಗಳೂ ಉಪಹತಿಗಳೂ ಸಂಭವಿಸುವುವೆಂಬಂಶವನ್ನು ಆಧುನಿಕ ಸಂಘಪರಿಷ್ಕಾರಕರೆಂಬುವರು ಆಲೋಚನೆಗೆ ತಂದದ್ದೇ ಇಲ್ಲ. “ಬೆನಕನಂ ಮಾಡುಪೋಚಿ ಭೇತಾಳಂ ಮಾಡಿದುದು” ಎಂಬ ದುರವಸ್ಥೆಗೆ ನಮ್ಮನ್ನೆಲ್ಲಾ ಈಡುಮಾಡಿಬಿಡುವರು. ಆದುದರಿಂದ ಶಾಸ್ತ್ರಬಲದಿಂದ ಧರ್ಮವನ್ನು ತಿಳಿದಿರತಕ್ಕವರು ಮಾಡಿರತಕ್ಕ ಆಚಾರಗಳೇ ಧರ್ಮಸಾಧನವೇ ಹೊರತು ಮತ್ತಾವುದೂ ಅಲ್ಲ.

ತೀರ್ಮಾನ.—ಆಚಾರಗಳ ವಿಷಯದಲ್ಲಿ ಶಾಸ್ತ್ರವಿರುದ್ಧವಾದ ಬದಲಾವಣೆಗಳು ಸರ್ವಥಾ ಯುಕ್ತವಲ್ಲ.

ತರುವಾಯ ಪ್ರೌಢಾವಿವಾಹವಿಷಯದಲ್ಲಿ ವಿಚಾರ ನಡೆಯಿತು. ಆರಂಭದಲ್ಲಿ ಧರ್ಮವಿಷಯದಲ್ಲಿ ಪ್ರಮಾಣಗಳು ಯಾವವು ಎಂಬ ವಿಚಾರವು ನಡೆದು ಶ್ರುತಿ ಸ್ಮೃತಿ ಇತಿಹಾಸ ಪುರಾಣಗಳು ಇವೆಲ್ಲವೂ ಪ್ರಮಾಣಗಳೆಂದು ವ್ಯವಸ್ಥಿತವಾಯಿತು. ಆಗ ಮಹಾದೇವಶಾಸ್ತ್ರಿಗಳು ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರ ಸಹಾಯದಿಂದ ಲೋಕಸಿದ್ಧವಾದ ಅರ್ಥಗಳನ್ನು ತಿಳಿಸುವ ಶ್ರುತ್ಯಾದಿ ವಚನಗಳು ಅಪ್ರಮಾಣಗಳೆಂ

ಪತ್ರವ್ಯವಹಾರ.

ನಿಜವೈಶಾಖ ಶುದ್ಧ ೫ ಬುಧವಾರ ಕಡೂರು ತಾಲ್ಲೋಕು ಹೊಸಹಳ್ಳಿಯಲ್ಲಿರುವ ಕಡವರಳ್ಳಿ ಮಠದ ವೇ. ಮುದ್ದಬಸವಯ್ಯನವರುಸ್ವಧರ್ಮಾರ್ಥವಾಗಿ ನಡೆಸಿದ ಶ್ರೀ ಶಿವದೀಕ್ಷಾಸಮಾರಂಭದಲ್ಲಿ ತರೀಕೆರೆ ಎಣ್ಣೆಹೊಳೆ ಮಠದ ಶ್ರೀ ಮನ್ನಿರಂಜನ ಸ್ವಾಮಿಗಳವರು ಸಕ್ಕರಾಯಪಟ್ಟದ ಮಠದ ಶ್ರೀ ಹಾಲದ ಸ್ವಾಮಿಗಳು ಮೊದಲಾದ ಪಟ್ಟ ಚರಮೂರ್ತಿಗಳೂ ಸ್ಥಲಪರಸ್ಥಲದಭಕ್ತಮಾಹೇಶ್ವರರೂ ದಯಮಾಡಿಸಿದ್ದರು. ಬೀರೂರು ಸಂಸ್ಕೃತ ಪಾಠಶಾಲಾಧ್ಯಾಪಕರಾದ ಸಂಪಗೆ ಹಿರೇಮಠದ ವೇ. ಸಿದ್ಧಲಿಂಗಶಾಸ್ತ್ರಿಗಳು ದೊಡ್ಡಗುಣಿಮಠದ ಶ್ರೀಪಟ್ಟದಸ್ವಾಮಿಗಳು ಇವರುಗಳಿಂದ ದೀಕ್ಷಾಸಂಸ್ಕಾರವು ವಿಧ್ಯುಕ್ತಪ್ರಕಾರವಾಗಿ ನಡೆಸಲ್ಪಟ್ಟಿತು. ಷಷ್ಠಿ ಗುರುವಾರ ಶ್ರೀಮನ್ನಿರಂಜನ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮತಸಂಬಂಧವಾದ ಧರ್ಮಬೋಧೆಯು ವೇ. ಶಾಸ್ತ್ರಿಗಳಿಂದ ಹೇಳಲ್ಪಟ್ಟ ತರುವಾಯ ವಸೂಲಾದ ಮಹಂತ್ಕಾಣಿಕೆಯಲ್ಲಿ ೫ ರೂಪಾಯಿಗಳನ್ನು ವೀರಶೈವ ವಿದ್ಯಾವರ್ಧಕ ಫಂಡಿಗೋಸ್ಕರವೂ ೫ರೂಪಾಯಿ ಸ್ಟಾರ್ ಪತ್ರಿಕೆಯ ಪುರೋವೃದ್ಧಿಗೋಸ್ಕರವೂ ಮತ್ತು ಆ ಗ್ರಾಮದಲ್ಲಿ ಶಿವಾಲಯವನ್ನು ಕಟ್ಟಿಸುವುದಕ್ಕೋಸ್ಕರ ೩೦ ರೂಪಾಯಿಗಳನ್ನೂ ಸದ್ವಿನಿಯೋಗ ಮಾಡಬೇಕೆಂಬುದಾಗಿ ಸರ್ವ ಸಮ್ಮತಿಯಿಂದ ಸಕ್ಕರಾಯಪಟ್ಟಣದ ಶ್ರೀ ಪಟ್ಟದ ಹಾಲದಸ್ವಾಮಿಗಳವರು ಅಪ್ಪಣೆಮಾಡಿ, ಫಂಡಿಗೂ, ಸ್ಟಾರ್ ಆಫೀಸಿಗೂ ಕಳುಹಿಸುವುದಕ್ಕೋಸ್ಕರ ಶಾಸ್ತ್ರಿಗಳವರ ವಶಕ್ಕೆ ಕೊಡಿಸಿದರು. ತರುವಾಯ ಸರ್ವರಿಗೂ ಪದ್ಧತಿ ಪ್ರಕಾರ ದಕ್ಷಿಣೆ ಫಲತಾಂಬೂಲಾದಿಸನ್ಮಾನಗಳು ನಡೆದು ಸಭೆಯು ವಿಸರ್ಜಿಸಲ್ಪಟ್ಟಿತು.

ಈಶ್ವರಾರ್ಪಿತವಾಗಿ ಕಾಯಕ್ಲೇಶಾದಿಗಳನ್ನು ಲಕ್ಷಿಸದೆ ಈ ಪುಣ್ಯಕಾರ್ಯವನ್ನೆಸಗಿದ ಮುದ್ದುಬಸವಯ್ಯನವರಿಗೂ ಈ ವಿಧವಾಗಿ ವಿದ್ಯಾಭಿವೃದ್ಧಿಗೆ ಪ್ರೋತ್ಸಾಹಗಳನ್ನುಂಟುಮಾಡತಕ್ಕ ಅಶೇಷ ವೀರಶೈವ ಮಹನೀಯರಿಗೂ ಶ್ರೀಪರಮೇಶ್ವರನು ಸಕಲ ಮನೋರಥಗಳನ್ನು ಕರುಣಿಸಲೆಂದು ಕೋರುವ,

ಪ್ರತ್ಯಕ್ಷದರ್ಶಿ.

[ಮೇಲೆ ಕಂಡ ೫ ರೂಗಳನ್ನು ನಾವು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ.—ಪ. ಪ್ರ.]

ಪ್ರಕಟಣೆ.

ಈ ಮೂಲಕ ಸಕಲರಿಗೂ ತಿಳಿಯಪಡಿಸುವುದೇನೆಂದರೆ—ಮೈಸೂರು ಸ್ಟಾರ್ ಮತ್ತು ವೃತ್ತಾಂತಪತ್ರಿಕೆಗಳಲ್ಲಿ ಯಾರೋ ಒಬ್ಬರು ಪೈಸಾಫಂಡ್ ಕಮಿಟಿ ವಿಷಯದಲ್ಲಿ ಆಗಾಗ್ಯೆ ಕೆಲವು ವಿಷಯಗಳನ್ನು ಪ್ರಕಟನಮಾಡುತ್ತಿರುವುದು ನಮ್ಮ ದೃಷ್ಟಿಗೆ ಬಿದ್ದಿದೆ. ಇದರಲ್ಲಿ ಯಾವುದೊಂದಕ್ಕೂ ಸೇರದ ನಮ್ಮಗಳ ಹೆಸರನ್ನೆಲ್ಲಾ ಸುಮ್ಮನೆ ಸೇರಿದ್ದಂತೆ ಬರೆದು ಮನಸ್ಸಿಗೆ ಬಂದವರಿಗೆ ಒಂದೊಂದು ಸಾರಿ ಒಂದೊಂದು ವಿಧವಾಗಿ ವೈಸ್ ಪ್ರೆಸಿಡೆಂಟ್, ಸೆಕ್ರೆಟರಿ, ಲೆಕ್ಚರರ್ ಮುಂತಾಗಿ ಹೆಸರುಗಳನ್ನು ಕೊಡುತ್ತಾ ಇದ್ದಾರೆ. ಪೈಸಾಫಂಡ್ ಕಮಿಟಿಯು ನಿಯಮಿತವಾಗಿರುವ ವಿಷಯವೇ ನಮಗೆ ತಿಳಿಯದು. ಇಂತಹ ಒಂದು ಕಮಿಟಿಯನ್ನು ಮೈಸೂರಲ್ಲಿ ನೇಮಕಮಾಡಿರುವುದಾಗಿಯೂ ಅದಕ್ಕೆ ನಾವುಗಳು ಸಹಾಯಮಾಡಬೇಕೆಂಬುದಾಗಿಯೂ ನಮ್ಮನ್ನು ಮ॥ ರಾ॥ ಜಯರಾಮಾಚಾರ್ಯರು ಬಂದು ಕೇಳಿದ್ದರು. ಆ ರೀತಿ ಮೈಸೂರಲ್ಲಿ ಕಮಿಟಿ ಏರ್ಪಾಡಾಗಿದೆಯೋ ಇಲ್ಲವೋ ನಮಗೆ ಗೊತ್ತಿಲ್ಲ. ಒಂದುವೇಳೆ ಆಗಿದ್ದರೂ ನಾವಂತು ಇದರಲ್ಲಿ ಇದುವರೆಗೂ ಸಂಬಂಧಪಟ್ಟಿಲ್ಲ. ಸರಿಯಾದ ಸ್ಥಿತಿಯಲ್ಲಿ ಸಂಘವನ್ನೇರ್ಪಡಿಸಿ, ಸಂಘವನ್ನು ರಿಜಿಸ್ಟರುಮಾಡಿಸಿ, ಸಂಘದ ಉದ್ದೇಶಗಳನ್ನೂ, ಕಾರ್ಯಗಳನ್ನೂ ನಿರ್ದೇಶಿಸಿ ಅವು ನಮಗೆ ಸಮ್ಮತವಾಗಿದ್ದಲ್ಲಿ ನಾವು ಸಹಾಯಕರಾಗಿ ನಿಲ್ಲುತ್ತೇವೆಂದು ಅವರಿಗೆ ತಿಳಿಸಿದ್ದೆವು. ಇಷ್ಟಾದದ್ದೇ ಹೊರತು ಈ ವಿಷಯದಲ್ಲಿ ಇನ್ನಾವುದೂ ಜರುಗಲಿಲ್ಲ. ಆದುದರಿಂದ ಪೈಸಾಫಂಡ್ ಎಂಬ ಕಮಿಟಿಗೆ ನಾವು ಯಾವರೀತಿಯಿಂದಲೂ ಸಂಬಂಧಪಟ್ಟಿಲ್ಲವಾಗಿಯೂ, ಇನ್ನು ಮುಂದೆ ನಮ್ಮಗಳ ಹೆಸರಿನಿಂದ ಈ ರೀತಿಯಲ್ಲಿ ಪ್ರಕಟಿಸಲಿಕ್ಕೆ ಅವಕಾಶಕೊಡಬಾರದಾಗಿಯೂ ಕೋರಿದೆ.

೧. ನಾದಿಗದತ್ತಾತ್ರಿರಾವ್ ಹರಿಹರ ೨. ಎಂ. ಮಂಜಪ್ಪ ಹರ್ಡಿಕರ್ ಎಡಿಟರ್ “ಧನುರ್ಧಾರಿ” ೩. ಎಚ್. ನಾರಾಯಣ ಶರ್ಮ. ೪. ಎಂ. ಕೆ. ರಾಘವೇಂದ್ರರಾವ್.

ಶ್ರೀ ಬಸವೇಶ್ವರ ಜಯಂತ್ಯುತ್ಸವಗಳು.

ತುರುವೆಕೆರೆ.

ಇಲ್ಲಿಯ ಶ್ರೀ ವಿರಕ್ತಮಠದ ಮಲ್ಲಿಕಾರ್ಜುನ ಸ್ವಾಮಿಗಳು ಈ ತಿಂಗಳಾದಿಭಾಗದಲ್ಲಿ ಇಲ್ಲಿನ ಶೆಟ್ಟಿ ಯಜಮಾನರು ಮೊದಲಾದ ವೀರಶೈವ ಮಂಡಲಿಯನ್ನು ಖರಮಾಡಿಕೊಂಡು ಎಲ್ಲಕಡೆಯೂ ವೀರಶೈವ ಮತೋದ್ಧಾರಕನಾದ ಬಸವೇಶ್ವರನ ಜಯಂತ್ಯುತ್ಸವವನ್ನು ಜರುಗಿಸುವಂತೆ ಈ ಊರಿನಲ್ಲೂ ನಡೆಸಬೇಕೆಂದಪ್ಪಣೆ ಕೊಡಿಸಿದ ಪ್ರಕಾರ ನಿಜವೈಶಾಖ ಶು॥ ೧ ಶನಿವಾರ ರೋಹಿಣೀ ನಕ್ಷತ್ರದಲ್ಲಿ ಶ್ರೀ ಬಸವೇಶ್ವರರ ಮತ್ತೂ ರುದ್ರಸ್ವಾಮಿಗಳ ದೇವಾಲಯವನ್ನು ನಾನಾ ವಿಧವಾಗಿ ಶೃಂಗರಿಸಿ ಶ್ರೀ ರುದ್ರಾಭಿಷೇಕ ಪುರಾಣ ಶ್ರವಣಾದಿಗಳನ್ನು ನಡೆಯಿಸಿ, ಸಾಯಂಕಾಲ ೫ ಘಂಟೆಯವರೆಗೂಭಕ್ತಮಾಹೇಶ್ವರರಿಗೆ ಸಂತರ್ಪಣೆಯಾಯಿತು. ರಾತ್ರಿಮೂರ್ತಿಗಳ ಉತ್ಸವವನ್ನುಮಾಡಯತ್ನಿಸುತ್ತಿರುವಲ್ಲಿ ಮಳೆಯು ವಿಶೇಷವಾಗಿ ಬಂದುದರಿಂದ ಅವಕಾಶವಾಗಲಿಲ್ಲ. ಬಹಳ ದಿನಗಳಿಂದಲೂ ಮಳೆಯಿಲ್ಲದೆ ಜನರಿಗೂ ದನಕರುಗಳಿಗೂ ನೀರಿಗೆ ಬಹಳ ತೊಂದರೆಯುಂಟಾಗಿದ್ದು ಈಗ ನಿವಾರಣೆಯಾದುದಕ್ಕಾಗಿ ಸಮಸ್ತಜನರಿಗೂ ಅತ್ಯಾನಂದವಾಯಿತು. ಕಳೆದ ತಾ॥೧೩ರರಾತ್ರಿ ಶ್ರೀಬಸವೇಶ್ವರ ರುದ್ರಮುನೀಶ್ವರ ಮೂರ್ತಿಗಳ ಉತ್ಸವವು ನಂದೀಧ್ವಜ ಸಮೇತ ವಾದ್ಯವಿಶೇಷದಿಂದಲೂ ದೀಪಾವಳಿಗಳಿಂದಲೂ ಕೋಟೆಪೇಟೆಗಳಲ್ಲಿ ನಡೆಸಲ್ಪಟ್ಟಿತು. ವೀರಶೈವರ ಪ್ರತಿಮನೆಯ ಬಳಿಯೂ ದೇವರುಗಳಿಗೆ ಮಂಗಳಾರತಿಯು ಮಾಡಿಸಲ್ಪಟ್ಟಿತು ದೇವರುಗಳು ಸ್ವಸ್ಥಾನಗಳನ್ನು ಸೇರಿದಮೇಲೆ ಮಂಗಳಾರತಿಯು ನಡೆದು ಸಮಸ್ತರಿಗೂ ತೀರ್ಥಪ್ರಸಾದಗಳ ವಿನಿಯೋಗವಾಯಿತು. ಈ ಉತ್ಸವಕಾರ್ಯದಲ್ಲಿ ಮುಂದಾಳುಗಳಾಗಿದ್ದ ನಿ. ನಂಜುಂಡಶೆಟ್ಟರು. ಕೆ, ವೀರಶೆಟ್ಟರು, ಭದ್ರಶೆಟ್ಟರು, ರುದ್ರಶೆಟ್ಟರು, ಅಡವಿ ರುದ್ರಯ್ಯನವರು ಮೊದಲಾದವರುಗಳಿಗೆ ನಾವು ಕೃತಜ್ಞರಾಗಿರುವೆವಲ್ಲದೆ ಇವರುಗಳು ಪ್ರತಿವರ್ಷದಲ್ಲೂ ಇದೇ ರೀತಿ ನಡೆಸಿಕೊಂಡು ಬರುವರೆಂದೂ, ತುರುವೆಕೆರೆಪೇಟೆಗೆ ಸೇರಿದ ಸೂಳೆಕೆರೆ ಶ್ರೀರುದ್ರದೇವರ ದೇವಸ್ಥಾನದ ಜೀರ್ಣೋದ್ಧಾರವನ್ನು ಅಭಿಮಾನದಿಂದ ಮಾಡಿಸುವರೆಂದೂ ನಿರೀಕ್ಷಿಸುತ್ತೇವೆ.

ಓರ್ವ ಅಭಿಮಾನಿ.

ಸಂಪಗಾಂವ. ✓

ಇಲ್ಲಿಯ ವೀರಶೈವ ಮತೋತ್ಕರ್ಷಕ ಸಂಘದವರು ತಾರೀಖು ೧೦-೫-೧೫ ಇಸವಿ ಸೋಮವಾರ ದಿವಸ ಸಭೆ ಮಾಡಿ ವೀರಶೈವ ಮತೋದ್ಧಾರಕನಾದ ಶ್ರೀಬಸವೇಶ್ವರನ ಜಯಂತ್ಯುತ್ಸವವನ್ನು ತಾ॥ ೧೫-೫-೧೫ ರಲ್ಲಿ ನಡೆಯಿಸಬೇಕೆಂದು ನಿರ್ಣಯಿಸಿದ ಪ್ರಕಾರ ಊರಲ್ಲಿ ಬೀದಿಗಳು ಸಾರಣೆ ಕಾರಣೆ ತಳಿರು ತೋರಣಗಳಿಂದ ನಾನಾವಿಧವಾಗಲಂಕರಿಸಲ್ಪಟ್ಟು ಪ್ರತಿಯೊಬ್ಬರೂ ತಂತಮ್ಮ ಮನೆಯಲ್ಲಿ ಜಂಗಮಪಾದಪೂಜೆ ದಾಸೋಹಗಳನ್ನು ಶಕ್ತ್ಯನುಸಾರ ನೆರವೇರಿಸಿ ಉಡುಗೆ ತೊಡುಗೆಗಳಿಂದಲಂಕೃತರಾಗಿ ಮಧ್ಯಾಹ್ನ ಮೂರು ಘಂಟೆಗೆ ಸರಿಯಾಗಿ ಪೇಟೆಯೊಳಗಿನ ಶ್ರೀ ಬಸವೇಶ್ವರ ದೇವಾಲಯಕ್ಕೆ ಆಗಮಿಸಿ ವೀರಶೈವ ಮತೋತ್ಕರ್ಷಕ ಸಂಘದ ಮೆಂಬರರು ಹಾಗು ಸೆಕ್ರೆಟರಿ ಬೇರಮನ್ನರುಗಳೊಡನೆ ಶ್ರೀ ಬಸವೇಶ್ವರ ಮಹಾರಾಜರ ಮತ್ತು ಶ್ರೀಮನ್ಮಹಾರಾಜ ನಿರಂಜನಜಗದ್ಗುರು ಜಯದೇವಮುರುಘರಾಜೇಂದ್ರಮಹಾ“ ”ಸ್ವಾಮಿಗಳವರ ಭಾವಚಿತ್ರಗಳನ್ನು ಪಾಲಕಿಯಲ್ಲಿ ಅಂದವಾಗಿ ಮಂಡಿಸಿ, ಕೊರಳಲ್ಲಿ ಪೂಮಾಲೆಯನ್ನು ಹಾಕಿ ಮಂಗಲಮಾಡಿ ಜಯಘೋಷದೊಡನೆ ಪಾಲಕ್ಕಿಯ ಉತ್ಸವನನ್ನು ಸಮಸ್ತ ಬಿಗಡುಗಳಿಂದಲೂ ವಾದ್ಯ ರಭಸದಿಂದಲೂ ಹೊರಡಿಸಿದರು. ಉತ್ಸವವು ಹಳೆಕಚೇರಿಯಮುಂದೆ ದಾರಿಯಲ್ಲಿ ಹನುಮಂತದೇವರಓಣಿ, ಗ್ರಾಮದೇವತೆಯಓಣಿ, ಬನಗಾರ ಓಣಿ, ಪ್ಯಾಟಿ, ವಾಲಿಯವರಓಣಿ, ದೊಡ್ಡೋಣಿ ಮೊದಲಾದ ಸ್ಥಳಗಳಿಂದ ನಿರಾಭಾರಿ ಪಾಲ್ಲಿಮಠಕ್ಕೆ ಮುಟ್ಟಿತು. ಉತ್ಸವವು ಹೋಗುವ ಕಾಲಕ್ಕೆ ಪ್ರತಿಯೊಂದು ಮನೆಯವರು ಕಾಯಿ, ಕರ್ಪೂರ, ಮೊದಲಾದ ಕಾಣಿಕೆಯನ್ನಿಟ್ಟು ಮಂಗಲವನ್ನು ಮಾಡಿ ತಮ್ಮ ಭಕ್ತಿಯನ್ನು ದರ್ಶನಗೊಳಿಸಿದರು. ಸಭಾಸ್ಥಾನವಾದ ಪಾರ್ಶಿಮಠಕ್ಕೆ ಉತ್ಸವವು ಬಂದೊಡನೆ ನೆರೆದ ಯಾವತ್ತು ಭಕ್ತಮಂಡಳಿಯು ಜಯಘೋಷದೊಡನೆ ಉಭಯ ಮಹಾತ್ಮರ ಭಾವಚಿತ್ರಗಳನ್ನು ಅಂದವಾಗಿ ಶೃಂಗರಿಸಲ್ಪಟ್ಟ ಸಭಾಮಧ್ಯದ ಉಚ್ಚಾಸನದಲ್ಲಿ ಇರಿಸಿ ಮಂಗಳವನ್ನು ಮಾಡಿದರು. ಅನಂತರ ಈ ಊರ ಮಧ್ವಮತಾನುಯಾಯಿಗಳಾದ ರಾಜಶ್ರೀ ನರಸಿಂಹ ಗುರುರಾವ ಕಿತ್ತೂರ ಇವರು ಶಿವಭಕ್ತಿಶ್ರೇಷ್ಠರಾದ ಶ್ರೀ ಶಿರಿಯಾಳಸೆಟ್ಟಿಯ ಆಖ್ಯಾನವನ್ನು ಕೀರ್ತನೆಮಾಡಿದರು. ಅನಂತರ ಸಭೆಯು ನಿಯಮದ ಪ್ರಕಾರ ಮಸ್ತಿಕ ರಾಜಶೇಖರ ಶಿವಲಿಂಗಪ್ಪ ನಂದಿಪಾಟೀಲ ತಾಲೂಕ ಲೋಕಲ್ ಬೋರ್ಡ ಮೆಂಬರ ಇವರ ಅಧ್ಯಕ್ಷತೆಯ ಕೆಳಗೆ ಸಭೆಯು ಕೆಲಸವು ನಡೆದು, ಬಸವೇಶ್ವರಚರಿತ್ರ, ಬಸವನಕಾಲದ ಪೂರ್ವಸ್ಥಿತಿ ಅನಂತರಸ್ಥಿತಿ ಬಸವನುಮಾಡಿದ ಸುಧಾರಣೆ ಮುಂತಾದ ವಿಷಯಗಳಮೇಲೆ ಮೆಸೆರ್ಸ್ ಗಂಗಾಧರ ಸಿದ್ಧರಾಮಯ್ಯ ಹುಡುದಾಪೂರ ಕಲ್ಲೇಶ್ವರ ಕೆನ್ನಪುಳ್ಳಯ್ಯ ಶೆಟ್ಟಿ ಹಾಗು ಅಧ್ಯಕ್ಷರ ರಸಭರಿತಭಾಷಣಗಳಾಗಿ ಪ್ರಸಾದ ಹಂಚಲ್ಪಟ್ಟು “ಹರಹರ ಮಹಾದೇವ” ಎಂಬ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಈ ಬಸವಜಯಂತ್ಯುತ್ಸವದಿಂದ ಈ ಊರ ವೀರಶೈವರಲ್ಲಿ ಒಳ್ಳೇ ಸ್ಫೂರ್ತಿಯು ಹುಟ್ಟಿ ಸಮಾರಂಭವು ವಿಜೃಂಭಣೆಯಿಂದ ಜರುಗಿತೆಂದು ತಿಳುಹಲು ತುಂಬಾ ಆನಂದವಾಗುತ್ತದೆ.

ಪ್ರತ್ಯಕ್ಷದರ್ಶಿ

ಗೋಕಾಕ. ✓

ಶ್ರೀ ನಿರಂಜನ ಮೂರ್ತಿಗಳಾದ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳವರ ಪ್ರಭಾವದ ಮಹಿಮೆಯು.

ಬಾದಾಮಿ ತಾಲ್ಲೂಕಿನಲ್ಲಿ ಪೂರ್ವಕ್ಕೆ ೮ಮೈಲಿಯ ಮೇಲೆ ಇರುವ ಶಿವಯೋಗಮಂದಿರವನ್ನು ತಿಳಿಯದಂಥ ಜನರು ವೀರಶೈವರಲ್ಲಿ ಬಹಳ ವಿರಲವು. ಅಲ್ಲಿ ಧರ್ಮಜಾಗ್ರತೆ ಪಡಿಸುವ ಮೂಲಕ ಧರ್ಮ ಗುರುಗಳನ್ನು ತಯಾರಿಸುವ ಕೆಲಸವು ಇಂದಿಗೆ ೫-೬ ವರ್ಷಗಳಿಂದ ಸತತ ಶ್ರೀಮಹಾಸ್ವಾಮಿಗಳವರಿಂದ ನಡೆದಿರುವುದು ಸರ್ವವಿದಿತವಿದೆ. ಈ ಮಹಾಶಿವಯೋಗಿಗಳು ಲೋಕಕ್ಕೆ ಮುಖ್ಯವಾಗಿ ವೀರಶೈವಮತವನ್ನು ಸುಧಾರಿಸುವ ಕುರಿತು ಶಿವಲೋಕವನ್ನು ಬಿಟ್ಟು ಈ ಲೋಕಕ್ಕೆ ಬಂದಿರುವರೆಂದು ತಿಳಿಸಲಿಕ್ಕೆ ಅವರ ಆಚಾರ, ವಿಚಾರ, ಕಾಯಕಷ್ಟ, ಸ್ವಮತದ ಬಗ್ಗೆ ಕಳಕಳಿ ಪರೋಪಕಾರ, ಭಕ್ತಿ, ಪ್ರೀತಿ ಮುಂತಾದ ಅವರಲ್ಲಿ ಸದಾ ವಾಸಮಾಡುತ್ತಿರುವ ಅನೇಕ ಗುಣಗಳನ್ನು ನಿರಭಿಮಾನದಿಂದ ಪರೀಕ್ಷಿಸುವವನಿಗೆ ಅವನು ಯಾವ ಜಾತಿಯವನೇ, ಯಾವ ಧರ್ಮದವನೇ, ಬಡವನೇ, ಶ್ರೀಮಂತನೇ, ವಿದ್ಯಾವಂತನೇ, ಪಾಮರನೇ ಆದರೂ ಸಂಶಯ ಬಾರದು. ಅನೇಕ ಭಾಗದ ವೀರಶೈವರನ್ನು ಒತ್ತಟ್ಟಿಗೆ ಕೂಡಿಸುವ ಕುರಿತು ಮಹಾಸಭೆಯೆಂಬ ಸಂಜೀವಿನಿಯನ್ನು ಬೋಧಿಸಿ ಅನೇಕ ದೇಶದ ಜನರ ಗುರ್ತನ್ನು ಪರಸ್ಪರ ಮಾಡಿಕೊಟ್ಟರು. ಧರ್ಮ, ನೀತಿ, ಆಚಾರ, ವಿಚಾರ, ಅಷ್ಟಾವರಣದ ಮಹಿಮೆ, ಶಿವಭಕ್ತರ ಲಕ್ಷಣಗಳು, ವಿದ್ಯೆಯಫಲಗಳು, ಐಕಮತ್ಯ, ಸಂಗಡಗಳ ನಿಷೇಧ ದುರುಳವೇದಾಂತಿಗಳ ಭ್ರಮೆನಿವಾರಣೆ, ಮುಂತಾದ ವಿಷಯಗಳ ಜ್ಞಾನವಾಗುವಂತೆ ಬಲ್ಲಬಲ್ಲ ಜನರಿಂದ ವ್ಯಾಖ್ಯಾನಗಳನ್ನು ಕೊಡಿಸಿ ಆಯಾಯ ವಿಷಯಗಳ ಬಗ್ಗೆ ಚರ್ಚೆ ನಡೆಸಿದ್ದು ಸರ್ವವಿದಿತವಿದೆ.

ಈ ಭವಸಾಗರದಲ್ಲಿ ಗೃಹಸ್ಥನನ್ನು ನೋಡಿ ಬ್ರಹ್ಮಚಾರಿಯೂ, ಕೃಪಣನನ್ನು ಕಂಡು ಉದಾರನೂ, ವಿದ್ಯಾರಹಿತನನ್ನು ಕಂಡು ಪಂಡಿತನೂ, ಬಡವನನ್ನುನೋಡಿ ಶ್ರೀಮಂತನೂ, ಹೇಡಿಯನ್ನು ನೋಡಿ ಶೂರನೂ, ತಿರಸ್ಕರಿಸುವಂತೆ ಇದ್ದರೂ, ಪಶುಗಳೂ, ಪಕ್ಷಿಗಳೂ ವಿವೇಕಿಗಳೂ ಅವಿವೇಕಿಗಳೂ, ರೋಗಿಗಳೂ ಪುರುಷರೂ, ಸ್ತ್ರೀಯರೂ, ಗೃಹಸ್ಥರೂ, ಸನ್ಯಾಸಿಗಳೂ, ಸಾರಾಂಶ ಭೂಲೋಕದೊಳಗಿನ ಸಕಲ ಪ್ರಾಣಿಗಳೂ ಒಂದೇ ವಿಷಯದ ಬಗ್ಗೆ ಹವಣಿಸುವದು ಒಡೆದು ಕಾಣುವುದು. ಅದು ಸರ್ವರಿಗೂ ಮಾನ್ಯವಿರುವುದು. ಕೆಲವರು ಹಣವನ್ನು ಅಪೇಕ್ಷಿಸಬಹುದು. ಉಳಿದವರಿಗೆ ಅಂದರೆ ಸನ್ಯಾಸಿಗೆ ಅದು ತಿರಸ್ಕರಣೀಯವು. ಕೆಲವರು ಮಡದಿ ಮಕ್ಕಳನ್ನು ಬಯಸಿದರೆ ಬ್ರಹ್ಮಚಾರಿಗೆ ಅದು ನಿರುಪಯೋಗವು. ಕೆಲವರು ಪಂಚ ಪಕ್ವಾನ್ನವನ್ನು ಅಪೇಕ್ಷಿಸಿದರೆ ರೋಗಿಗಳಿಗೆ ಅಸಮ್ಮತವು. ಸಾರಾಂಶ—ಈ ಜಗತ್ತಿನಲ್ಲಿ ಒಬ್ಬರಿಗೊಂದು ಬೇರೆಯವರಿಗೆ ಇನ್ನೊಂದು ಈ ರೀತಿ ವಿಷಯವಿದ್ದಾಗ್ಯೂ ಸರ್ವರಿಗೂ ಬೇಕಾಗಿರುವುದು ಒಂದೇ ಒಂದು ವಿಷಯವು ಅದರ ಹೆಸರು “ಸೌಖ್ಯವು.” ಇದರ ಅಪೇಕ್ಷೆ ಮಾಡದವರು ಪೃಥ್ವಿಯ ಮೇಲೆ ಇರಲಾರರೆಂದರೆ ಅವರ ಯೋರ್ತಿ ಆಗದು. ಸಣ್ಣವರು, ದೊಡ್ಡವರು, ರೋಗಿಗಳು, ಬಡವರು, ಶ್ರೀಮಂತರು, ರಾಜರು, ಪ್ರಜರು, ಪಶುಗಳು, ಪಕ್ಷಿಗಳು, ಕ್ರಿಮಿಕೀಟಾದಿಗಳು ಸಹಿತ ಸುಖಾಪೇಕ್ಷೆಯನ್ನು ಮಾಡುವುದು ಮುಖ್ಯಸಂಗತಿಯು.

ಆ ಸೌಖ್ಯವನ್ನು ಪಡೆಯುವುದಕ್ಕಾಗಿ ನಾನಾ ರೀತಿ ಪ್ರಪಂಚಗಳು ಸಾಗಿರುವುವು. ಆ ಎಲ್ಲ ಪ್ರಪಂಚಗಳು ಆಚಾರಕ್ಕೂ ವಿಚಾರಕ್ಕೂ ಧರ್ಮಕ್ಕೂ ನೀತಿಗೂ ಸರಿಯಾಗಿ ನಡೆದರೇನೇ ಸುಖದ ಆಶೆಯು. ಅದನ್ನು ತಪ್ಪಿ ನಡದವರಿಗೆ ದುಃಖವೇ ಮುಕ್ತಾಫಲವು. ಇದನ್ನು ಜನರಿಗೆ ತಿಳಿಸುವುದೇ ಭವರೋಗಹರನಾದ ಸದ್ಗುರುವಿನ ಕೆಲಸವೆಂದೂ, ಅದನ್ನು ಲಾಲಿಸಿ ಅದರ ಫಲವನ್ನು ಪಡೆಯುವುದು ಸದ್ಭಕ್ತನ ಕೆಲಸವೂ ಆಗಿರುವುದರಿಂದ ಅಂಥ ಸದ್ಗುರುಗಳನ್ನು ತಯಾರಿಸುವ ಉದ್ದಿಶ್ಯ ಈ ಶಿವಯೋಗಮಂದಿರವು ಸ್ಥಾಪಿಸಲ್ಪಟ್ಟಿರುವುದು. ಅಲ್ಲಿ ಶಿವಯೋಗಿಗಳೂ ಶಿವಕೀರ್ತನಕಾರರೂ ಶಾಸ್ತ್ರಿಗಳೂ ಇದ್ದು ಅನೇಕ ಗ್ರಂಥಗಳ ಪರಿಶೋಧನೆ, ನಾನಾ ವಿಷಯಗಳ ಚರ್ಚೆ, ವಿದ್ಯಾರ್ಥಿಗಳಿಗೆ ಶಿಕ್ಷಣ, ಆರೋಗ್ಯದ ಫಲ, ಧರ್ಮನೀತಿ, ಪರಮತಗಳಬಗ್ಗೆ ಸಹಾನುಭೂತಿ, ಪರೋಪಕಾರ, ಭೂತದಯೆ; ಶಿವಶರಣರ ಪುಣ್ಯಕಥೆಗಳು ಸದಾ ನಡೆಯುವುವು.

ಸಶೇಷ.

ಯುದ್ಧವಾರ್ತೆಯು.

ಪಶ್ಚಿಮರಣರಂಗ.

ಆಲ್ಸೆಸ್ ಜಿಲ್ಲೆಯಲ್ಲಿ ಫ್ರೆಂಚರು ಮುಂದುಮುಂದಕ್ಕೆ ಸಾಗುತ್ತಲೇ ಇರುವುದರಿಂದ ಅವರು ಜರ್ಮನಿಯೊಳಕ್ಕೆ ನುಗ್ಗಿ ಬರದಂತೆ ತಡೆಯುವುದಕ್ಕಾಗಿ ಜರ್ಮನರು ಯುದ್ಧಾಂಗಣದಿಂದ ೩೦ ಮೈಲಿಗಳ ದೂರದಲ್ಲಿ ವಿಷವಾಯುನಿರ್ಮಾಣಮಾಡುವ ಯಂತ್ರಾಗಾರವನ್ನೇ ಸ್ಥಾಪಿಸಿ ಅದರಿಂದ ನೆಲದಮೇಲೆ ಬಹುದೂರದವರೆಗೆ ವಿಷವಾಯು ಪ್ರವಾಹವು ಹೋಗುವ ನಳ್ಳಿಗಳನ್ನು ಹೂಳುತ್ತಿದ್ದಾರೆ. ಇದೇತೆರದ ಪ್ರಯತ್ನವನ್ನು ಇಟಲಿಯ ಎಲ್ಲೆಕಟ್ಟಿನ ಬಳಿಯಲ್ಲೂ ಮಾಡಿಸುತ್ತಿದ್ದಾರೆ. ಜರ್ಮನರ ಈತೆರದ ಕಪಟೋದ್ಯೋಗವು ಇಷ್ಟಕ್ಕೇ ಮುಗಿಯುವಂತೆ ಕಾಣುವುದಿಲ್ಲ. ಅವರು ಪಶ್ಚಿಮರಣರಂಗದಲ್ಲಿ ಮತ್ತೊಂದುತೆರದ ಭೀಕರಪ್ರಯೋಗಮಾಡಿದರೆಂಬ ವಾರ್ತೆಯು ಕಳೆದವಾರದ ಸುದ್ದಿಗಳಿಂದ ಗೊತ್ತಾಗುತ್ತದೆ. ಅದೇನೆಂದರೆ-ತುಪಾಕಿಯಿಂದ ಹೊಡೆದ ಗುಂಡುಗಳು ಶತ್ರುಗಳ ಮೈಮೇಲೆ ಬೆಂಕಿಯ ಜ್ವಾಲೆಯನ್ನು ಹರಡಿ, ಅವರ ಬಟ್ಟೆಬರೆಗಳನ್ನು ಸುಟ್ಟುಬಿಡುವಂತೆ ಮಾಡುವುದೇ ಆಗಿರುತ್ತದೆ. ಮತ್ತು ಈಪ್ರೆಸ್ಸಿನ ಸಮೀಪದಲ್ಲಿರುವ ಹೊಳೆಯತೀರದಲ್ಲಿ ಜರ್ಮನರು ಪಾಷಾಣವನ್ನು ಕದಡಿಬಿಟ್ಟಿದ್ದರಂತೆ. ಅಷ್ಟರಲ್ಲಿ ಇಂಗ್ಲೀಷ್‌ಸೈನ್ಯಕ್ಕೆ ನೀರನ್ನು ಉಪಯೋಗಿಸದಂತೆ ಎಚ್ಚರಿಕೆಯು ಹೇಳಲ್ಪಟ್ಟಿದ್ದರಿಂದ ಅನರ್ಥಗಳೇನೂ ಆಗಲಿಲ್ಲವೆಂದು ಪ್ರಕಟವಾಗಿದೆ.

ಈ ರಣರಂಗದಲ್ಲಿ ಶತ್ರುಗಳನ್ನು ಹಿಂದಕ್ಕೆ ದಬ್ಬುವ ಕೆಲಸವನ್ನು ಮಿತ್ರಮಂಡಲಿಯವರು ಸಮರ್ಪಕವಾಗಿ ಮಾಡುತ್ತಿದ್ದಾರೆ. ಈಪ್ರೆಸ್ಸಿನಬಳಿಯಲ್ಲಿ ಜರ್ಮನರ ನುಗ್ಗಾಟವು ಪೂರ್ಣವಾಗಿ ನಿಲ್ಲಿಸಲ್ಪಟ್ಟಿದೆ. ಅರ್ರಾಸಿಗೂ ನ್ಯೂಚಾಪಲ್ಲೀಯ ಹತ್ತಿರದಲ್ಲೂ ಯುದ್ಧವುನಡೆದು ನಮ್ಮವರೇ ಜಯಪಡೆದಿದ್ದಾರೆ. ಇಲ್ಲಿಗೆ ಜರ್ಮನರು ಹೊಸ ಹೊಸ ಸೈನ್ಯಗಳನ್ನು ತಂದು ಕೂಡಿಸುತ್ತಿದ್ದಾರೆ. ಹಲವುಕಡೆ ಯುದ್ಧಗಳು ಸಾಗುತ್ತಲೇ ಇವೆ.

ಪೂರ್ವರಣರಂಗ.

ರಷ್ಯನರು ಕಾರ್ಪೇತಿಯನ್ ಪರ್ವತಶ್ರೇಣಿಯನ್ನು ಬಿಟ್ಟಿಳಿದು ಪ್ರೆಜೆಮ್ಸಿಲ್ ಕೋಟೆಯಕಡೆಗೆ ಹಿಂದಕ್ಕೆ ಸಾಗಿಹೋಗಿ ಪ್ರಬಲಸ್ಥಾನದಲ್ಲಿ ನೆಲಸಿ, ಅಲ್ಲಿ ತಮ್ಮಕಡೆಯ ವಿಶೇಷ ಸೈನ್ಯವನ್ನು ಗುಂಪುಕೂಡಿಸುತ್ತಿದ್ದಾರೆ. ಪ್ರೆಜೆಮ್ಸಿಲ್ ಕೋಟೆಗೂ ನೀಸ್ಟರ್ ನದಿಗೂ ಮಧ್ಯದ ಪ್ರದೇಶದಲ್ಲಿ ಶತ್ರುಸೈನ್ಯವು ರಷ್ಯನ್ ಸೇನಾಪಂಕ್ತಿಯನ್ನು ಭೇದಿಸಬೇಕೆಂದು ಮಾಡಿದ ಪ್ರಯತ್ನವು ವ್ಯರ್ಥಗೊಳಿಸಲ್ಪಟ್ಟಿತು. ಜರ್ಮನರು ಪ್ರೆಜೆಮ್ಸಿಲ್ ಕೋಟೆಯ ಬಳಿಯಲ್ಲಿರುವ ಸ್ಯಾನ್ ನದಿಯನ್ನು ದಾಟಿ ಕೋಟೆಯಮೇಲೆ ಆಗ್ನೇಯ ಭಾಗದಿಂದ ಫಿರಂಗಿಗುಂಡುಗಳನ್ನು ಹೊಡೆಯುತ್ತಿದ್ದಾರೆ. ಮತ್ತೂ ಕೋಟೆಯ ಹೊರಗಿದ್ದ ರಷ್ಯನರ ಕೆಲವು ಕಂದಕಗಳನ್ನೂ ಆಕ್ರಮಿಸಿಕೊಂಡಿದ್ದಾರೆ. ಪೂರ್ವಕ್ಕೆ ೧೦ ಮೈಲಿಯ ದೂರದಲ್ಲಿ ಭೀಕರಯುದ್ಧವು ನಡೆಯುತ್ತಿದೆ. ಈ ಪ್ರಾಂತಕ್ಕೆ ಬಂದು ಇಷ್ಟು ಕೆಲಸವನ್ನು ಮಾಡುವುದರೊಳಗೆ ಜರ್ಮನರ ಕಡೆ ೧|| ಲಕ್ಷ ಮಂದಿ ಸೈನಿಕರು ಹತರಾಗಿರುವರಂತೆ.

ಸ್ಯಾನ್‌ನದಿಯ ಪ್ರಾಂತಕ್ಕೆ ಜರ್ಮನ್ ಚಕ್ರವರ್ತಿಯವರೇ ಪ್ರತ್ಯಕ್ಷವಾಗಿ ಬಂದು ಯುದ್ಧವನ್ನು ಸಾಗಿಸಿದರಂತೆ. ಸಾನು ವಿಶ್ಚುಲಾನದಿಗಳ ಸಂಗಮಪ್ರದೇಶದಲ್ಲಿ ರಷ್ಯನರು ಬಹಳ ಸೈನ್ಯವನ್ನು ಸೇರಿಸಿ, ಶತ್ರುಗಳ ಮೇಲೆ ತೀಕ್ಷ್ಣವಾದ ಯುದ್ಧವನ್ನು ಮಾಡಿ, ಬಹಳ ನಷ್ಟವನ್ನುಂಟುಮಾಡಿ, ಅವರನ್ನು ಹಿಮ್ಮೆಟ್ಟಿಸಿದ್ದಾರೆ. ಈಗ ಗೆಲೀಷಿಯದಲ್ಲಿ ಶತ್ರುಗಳ ನುಗ್ಗಾಟವು ತಗ್ಗಿಹೋಗಿ, ಅವರು ಆತ್ಮರಕ್ಷಣೆಯನ್ನು ಮಾಡಿಕೊಳ್ಳುವ ಸ್ಥಿತಿಗೆ ಬಂದಿರುವರಂತೆ.

ತುರ್ಕಿ.

ರಷ್ಯನರ ಯುದ್ಧನಾವೆಗಳು ಕಪ್ಪುಸಮುದ್ರದಲ್ಲಿ ಹೋಗಿ ತುರ್ಕಿಯ ತೀರಗಳಲ್ಲಿ ತಮ್ಮ ಸೇನೆಗಳನ್ನಿಳಿಯಿಸಿ ಇರ್ಜಲ್ಲಿಗೆ ಪೂರ್ವಭಾಗದಲ್ಲಿರುವ ಸೇನಾಸ್ಥಳಗಳನ್ನು ಧ್ವಂಸಮಾಡಿರುತ್ತವೆ. ಅಲ್ಲಿದ್ದ ಸೇನೆಗಳು ದಿಕ್ಕುಗೆಟ್ಟು ಓಡಿಹೋಗಿರುತ್ತವೆ. ಡಾರ್ಡನಲ್ಸಿನಲ್ಲಿ ಮಿತ್ರಮಂಡಲಿಯಕಡೆಯಸೇನೆಗಳು ಸಾವಕಾಶವಾಗಿ ಮುಂದಕ್ಕೆ ಸಾಗುತ್ತಲಿವೆ. ಅಲ್ಲಲ್ಲಿಗೆ ಶತ್ರುಗಳು ಪ್ರತಿಭಟಿಸಿ ಪರಾಜಯಹೊಂದುತ್ತಿದ್ದಾರೆ. ಮಿತ್ರಮಂಡಲಿಯವರ ಕಾರ್ಯಭಾಗಗಳು ತೃಪ್ತಿಕರವಾಗಿಯೇ ಇವೆ.

ಇಟಲಿಯ ಸ್ಥಿತಿ.

ಈಕ್ಷಣದಲ್ಲಿ ಬೇಕೆಂದರೂ ಯುದ್ಧಕ್ಕೆ ಹೋಗಲು ಸಿದ್ಧವಾಗಿರುವ ಸೈನ್ಯವು ಇಟಲಿಯಲ್ಲಿ ೨೦ ಲಕ್ಷವಿರುವುದು. ಇದು ಚೆನ್ನಾಗಿ ಶಿಕ್ಷಿತವಾದ ಸುಸಜ್ಜಿತವಾದ ಮೊದಲನೇ ತರಗತಿಯ ಸೇನೆ. ಈ ಸೇನೆಯಲ್ಲಿರುವವರೆಲ್ಲರೂ ೩೦ ವರ್ಷ ವಯಸ್ಸಿನೊಳಗಿನ ಮಹಾವೀರರು. ಇದಲ್ಲದೆ ತತ್ಕಾಲದಲ್ಲಿ ಕೂಡಿಸಿಕೊಳ್ಳಬಹುದಾದ ದೇಶೀಯ ಸೈನ್ಯವು ಬೇರೆ ಇರುವುದು. ಅದನ್ನೆಲ್ಲಾ ಕೂಡಿಸಿದರೆ ಒಟ್ಟು ೩೦ ಲಕ್ಷವಾಗುವುದು. ಇಟಲಿಯ ಕಾಲ್ಬಲವೆಲ್ಲಾ ೯೨ ಪಟಾಲಮ್ಮಾಗುವುದು. ಪಟಾಲಂ ೧ ಕ್ಕೆ ೪೦೦೦ ಸೈನಿಕರಿರುವರು. ಇಟಲಿ ಎಲ್ಲೆಕಟ್ಟುಗಳಲ್ಲಿ ಮಹಾಪರ್ವತಪಂಕ್ತಿಯಿರುವುದರಿಂದ ಅಲ್ಲಿ ನಿಂತು ಕಾದಾಡುವುದಕ್ಕಾಗಿ ೪೮೦೦೦ ಸೇನೆಯನ್ನು ಕಳೆದಾರುತಿಂಗಳಿಂದಲೂ ಪರ್ವತಭೂಮಿ ಯುದ್ಧಶಿಕ್ಷಣದಿಂದ ಅಣಿಮಾಡಿರುವರು. ಮತ್ತೂ ಇಟಲಿಯಲ್ಲಿರುವ ಅಶ್ವಸೇನೆಯು ಜಗತ್ಪ್ರಸಿದ್ಧವಾದುದು. ಮತ್ತೂ ಕಳೆದ ೬-೮ ತಿಂಗಳಿಂದ ಅವರು ಹಗಲೂ ರಾತ್ರಿ ಕೆಲಸ ಮಾಡಿಸಿ ಕ್ರುಪ್ ಕರ್ಮಾಗಾರದ ಫಿರಂಗಿಗಳಂಥ ದೊಡ್ಡ ಫಿರಂಗಿಗಳನ್ನು ತಮ್ಮ ದೇಶದಲ್ಲೇ ಮಾಡಿಸಿರುವರು. ಅವನ್ನು ಫ್ರೆಂಚರು ಕೊಟ್ಟ ಮಾದರಿ ಫಿರಂಗಿಗಳ ರೀತಿಯಿಂದ ನಿರ್ಮಿಸಿರುವರು. ಇವರಲ್ಲಿ ಆಕಾಶವಿಮಾನಗಳೂ ಕೂಡ ೩೦೦ ಇರುವುವು. ಜಲಸೇನೆಯು ಬಲವಾಗಿರುವುದು. ಆಸ್ಟ್ರಿಯಾಕ್ಕೆ ೪ ಡ್ರೆಡ್‌ನಾಟ್ ಎಂಬ ಮಹಾಯುದ್ಧನೌಕೆಗಳಿರುತ್ತಿರುವಲ್ಲಿ ಇಟಲಿಗೆ ೬ ಇರುವುವು. ಅವುಗಳಲ್ಲಿ ೨ನ್ನು ಈ ವರ್ಷದಲ್ಲಿಯೇ ಹೊಸದಾಗಿ ಕಟ್ಟಿಸಿರುವರು, ಇವು ಪ್ರತಿಯೊಂದೂ ೨೨,೩೪೦ ಟನ್ನುಗಳ ಭಾರವುಳ್ಳವುಗಳಾಗಿ ೧೨ ಅಂಗುಲದ ಬಾಯಿಯ ೧೩ ಫಿರಂಗಿಗಳನ್ನು ಹೊಂದಿರುವುವು. ಇವಲ್ಲದೆ ಲೈಟ್ ಕ್ರುಯಿಝರುಗಳು ೪ ಇರುವುವು. ಬೇರೆ ತೆರದ ಕ್ರುಯಿಝರುಗಳು ೧೧, ಡಿಸ್ಟ್ರಾಯರುಗಳು ೩೩, ಟಾರ್ಪೆಡೋ ದೋಣಿಗಳು ೮೫, ಸಬ್‌ಮೆರೀನುಗಳು ೧೮ ಇರುವುವು. ಈ ನೌಕಾಸೈನ್ಯದಲ್ಲೆಲ್ಲಾ ೪೦,೧೬೩ ಮಂದಿ ಜನರಿರುವರು.

ಇಟಲಿ ಸಂಬಂಧದ ಯುದ್ಧವಾರ್ತೆ.

ಇಟಲಿಯ ರಾಜ್ಯಾಂಗಸಭೆಯವರು ಸ್ವದೇಶರಕ್ಷಣಾರ್ಥವಾಗಿ ಯುದ್ಧವನ್ನಾರಂಭಿಸಬೇಕೆಂದು ನಿರ್ಧರಿಸಿದರು. ಈ ಸಭೆಯ ಸಭಿಕರೊಳಗೆ ಯುದ್ಧಾರಂಭವನ್ನು ೨೬೨ ಮಂದಿ ಅನುಮೋದಿಸಿದರು. ಇಬ್ಬರು ಮಾತ್ರ ಅಸಮ್ಮತಿಸಿದರು. ಸಭೆಯಲ್ಲಿ ಬಹಳ ಉತ್ಸಾಹವು ತೋರ್ಪಟ್ಟಿತು. ಯುದ್ಧನಿರ್ಧಾರವಾದುದನ್ನು ಪ್ರಜೆಗಳು ಕೇಳಿ ಬಹಳ ಸಂತೋಷವನ್ನು ಪ್ರದರ್ಶಿಸಿದರು. ಮಹಾ ಜನಸ್ತೋಮವು ಚೌಕದಲ್ಲಿ ಸೇರಿ ಮೂರು ಬಣ್ಣದ ಪತಾಕೆಯನ್ನು ಚರಿತ್ರವಿಖ್ಯಾತವಾದ ದೇಶೀಯ ರಾಜಧ್ವಜಸ್ತಂಭದಮೇಲಕ್ಕೆತ್ತಿ ಕಟ್ಟಿದರು.

ಇಟಲಿಯ ಅಧಿನಿವೇಶದ ಪ್ರಜೆಗಳು ತಾವು ಸಹಾಯಕ ಸೈನ್ಯವಾಗಿ ಬರಲು ಸಿದ್ಧರಾಗಿರುವೆವೆಂದು ತಂತ್ರೀವಾರ್ತೆಗಳಿಂದ ಶ್ರುತಪಡಿಸಿದರು.

ಮೆ ತಾ|| ೨೩ರಿಂದ ಇಟಲಿ ದೇಶದಲ್ಲಿ ಯುದ್ಧವು ಪ್ರಕಟಿಸಲ್ಪಟ್ಟಿತು. ಪ್ರಭುತ್ವದವರಿಗೆ ಯುದ್ಧಕಾಲಿಕವಾದ ವಿಶೇಷಾಧಿಕಾರಗಳು ಕೊಡಲ್ಪಟ್ಟುವು. ಯುದ್ಧದ ಸಹಾಯಕ ಧನರಾಶಿಗೆ ಕ್ರೈಸ್ತ ಜಗದ್ಗುರುಗಳು ೧೦ ಲಕ್ಷ ಫ್ರಾಂಕುಗಳನ್ನು ಸಹಾಯ ಮಾಡಿದರು.

ಇಟಲಿ ದೇಶದಲ್ಲಿದ್ದ ಜರ್ಮನ್-ಆಸ್ಟ್ರಿಯನ್-ತುರ್ಕಿ ರಾಯಭಾರಿಗಳು ತಮ್ಮ ತಮ್ಮ ದೇಶಗಳಿಗೆ ಹೊರಟುಹೋದರು.

ರೋಮು ಇಟಲಿ ದೇಶಗಳ ಅಂಚೆಗಳನ್ನು ಆಸ್ಟ್ರಿಯಾದವರು ಹಿಂದಕ್ಕೆ ಕಳುಹಿಸಿಬಿಟ್ಟುದಲ್ಲದೆ ಅಲ್ಲಿಗಿದ್ದ ತಂತ್ರೀಸಂಬಂಧವನ್ನು ಕತ್ತರಿಸಿಹಾಕಿಬಿಟ್ಟರು; ಮಧ್ಯದ ಲೋಹಮಾರ್ಗಗಳನ್ನು ಧ್ವಂಸಮಾಡಿಬಿಟ್ಟರು.

ಜರ್ಮನಿ ರಾಜಧಾನಿಯಲ್ಲಿದ್ದ ಇಟಲಿಯ ರಾಯಭಾರಿಯು ತನ್ನ ಕಾರ್ಯಾಲಯದಿಂದ ಹೊರಕ್ಕೆ ಹೊರಟುಬರುತ್ತಿರಲು, ಜರ್ಮನರು ಗುಂಪುಗುಂಪಾಗಿ ಅವರಮೇಲೆ ಬಿದ್ದು ಹೊಡೆದರು. ಒಬ್ಬ ಜರ್ಮನನು ಆ ರಾಯಭಾರಿಯ ಟೊಪ್ಪಿಗೆಯನ್ನು ಹಾರಿಸಿಬಿಟ್ಟನು. ಜರ್ಮನಿ ವಿದೇಶವ್ಯವಹಾರ ಮಂತ್ರಿಯು ಈ ಕೃತ್ಯಕ್ಕಾಗಿ ಇಟಲಿ ರಾಯಭಾರಿಯ ಕ್ಷಮಾಪಣೆಯನ್ನು ಕೇಳಿಕೊಂಡನು.

ಇಟಲಿ ದೇಶದ ಸರ್ವಭಾಗಗಳಲ್ಲೂ ಪ್ರಜೆಗಳು ಯುದ್ಧವಿಷಯಕವಾದ ತಮ್ಮ ಅನುಮೋದನವನ್ನು ಅನಂತವಿಧವಾಗಿ ತೋರಿಸಿದರು.

ಯುದ್ಧಾರಂಭ.

ಆಸ್ಟ್ರಿಯಾದವರ ವಿಮಾನಗಳು ಇಟಲಿಗೆ ಸೇರಿದ ವೆನಿಸ್ ಪಟ್ಟಣದ ಮೇಲೇರಿಬಂದು ಅಲ್ಲಿದ್ದ ಮದ್ದಿನ ಕರ್ಮಾಗಾರದಮೇಲೆ ಸಿಡಿಮದ್ದುಗಳನ್ನು ಹಾಕಿದುವು. ಕೂಡಲೇ ಇಟಲಿಯವರು ಆ ವಿಮಾನಗಳಿಗೆ ಗುಂಡನ್ನು ಹೊಡೆದು ಓಡಿಸಿಬಿಟ್ಟುವು. ಇದರಂತೆ ಆಸ್ಟ್ರಿಯನ್ನರು ಇನ್ನೂ ಒಂದೆರಡು ಪಟ್ಟಣಗಳ ಮೇಲೆ ಸಿಡಿಮದ್ದುಗಳನ್ನು ಹಾಕಿದರು. ಆಸ್ಟ್ರಿಯನ್ನರ ಕಾವಲಿನ ಹಡಗುಗಳು ಇಟಲಿಯ ತೀರಪಟ್ಟಣಗಳ ಮೇಲೆ ಫಿರಂಗಿ ಗುಂಡುಗಳನ್ನು ಹೊಡೆಯಲಾಗಿ ಇಟಾಲಿಯನ್ ನೌಕಾಸೇನೆಯು ಟಾರ್ಪೆಡೋ ದೋಣಿಗಳನ್ನು ಬಿಟ್ಟು ಆ ಶತ್ರುನೌಕೆಗಳನ್ನು ಓಡಿಸಿದುವು. ಆಸ್ಟ್ರಿಯಾ ಜರ್ಮನೀ ದೇಶಗಳಿಗೆ ಸೇರಿದ ೮೦ ಹಡಗುಗಳು ಇಟಲೀದೇಶದ ತೀರಗಳಲ್ಲಿದ್ದುವು. ಅವನ್ನೆಲ್ಲಾ ಇಟಾಲಿಯನ್ನರು ಹಿಡಿದು ವಶಪಡಿಸಿಕೊಂಡರು. ಇವುಗಳ ಬೆಲೆ ೬ ಕೋಟಿ ರೂ. ಇಟಲೀದೇಶದ ಯುದ್ಧನೌಕೆಗಳು ತಮ್ಮ ಎಲ್ಲೆಕಟ್ಟಿನ ಮಗ್ಗುಲಲ್ಲಿದ್ದ ಪೋರ್ಟ್‌ಬಸೋಯಿನ್ ಎಂಬ ಆಸ್ಟ್ರಿಯನ್ ದ್ವೀಪಗಳ ಬಳಿಗೆ ನುಗ್ಗಿ ಅಲ್ಲಿನ ಸೇನೆಯನ್ನು ಧ್ವಂಸಮಾಡಿ, ಬಹಳ ಮೋಟಾರ್‌ದೋಣಿಗಳನ್ನು ಮುಳುಗಿಸಿ, ೪೭ ಮಂದಿಗಳನ್ನು ಸೆರೆ ಹಿಡಿದು ತಂದುವು. ಇಟಲೀದೇಶದ ಸರ್ವಸೇನಾಧಿಪತಿಯಾದ ಕೌಂಟ್‌ಕಡೋರ್ನಾರವರು ೨೪ ನೆ ತಾ|| ಸೋಮವಾರದ ದಿನ ಸುರಾತ್ರಿಯಲ್ಲಿ ರಣರಂಗಕ್ಕೆ ತೆರಳಿದರು.

ಮಗ್ಗುಲಲ್ಲಿರುವ ಸ್ವಿಟ್‌ಜರ್ಲೆಂಡ್ ದೇಶದ ತಾಟಸ್ಥ್ಯಕ್ಕೆ ನಾವು ಯಾವ ಭಂಗವನ್ನೂ ತರುವುದಿಲ್ಲವೆಂದು ಆಸ್ಟ್ರಿಯಾ-ಜರ್ಮನಿ-ಇಟಲಿ ದೇಶಗಳವರು ಪ್ರಕಟಿಸಿದ್ದಾರೆ. ಇಟಲಿಯವರು ಅಡ್ರಿಯಾಟಿಕ್ ಸಮುದ್ರವನ್ನು ಯುದ್ಧಪ್ರದೇಶವನ್ನಾಗಿ ಸಾರಿ, ಅದರೊಳಕ್ಕೆ ಯಾವ ಹಡಗೂ ಬಂದುಹೋಗದಂತೆ ಮಾಡುವುದಕ್ಕಾಗಿ ಮುಚ್ಚಿಬಿಟ್ಟು, ಈ ಸಂಗತಿಯನ್ನು ಎಲ್ಲ ಹಡಗಿನ ಕಂಪೆನಿಯವರಿಗೂ ತಿಳಿಯಿಸಿಬಿಟ್ಟರು.

ಆಸ್ಟ್ರಿಯನ್ನರು ಇಟಲಿಯ ಎಲ್ಲೆಕಟ್ಟಿನಲ್ಲಿರುವ ಕಾರ್ನಿ ಎಂಬ ಊರಿನ ಹತ್ತಿರ ನುಗ್ಗಿ ಫಿರಂಗಿ ಗುಂಡುಗಳನ್ನು ಊರಿನಮೇಲೆ ಹಾರಿಸಿದರು. ಅವರ ಫಿರಂಗಿಗಳ ಶಿಬಿರದಮೇಲೆ ಇಟಾಲಿಯನ್ನರೂ ಗುಂಡುಗಳನ್ನು ಹೊಡೆದರು. ಆಸ್ಟ್ರಿಯನ್ನರು ಇಟಲಿಯವರಿಗೆ ಸ್ವಲ್ಪ ನಷ್ಟವನ್ನು ಮಾಡಿದರು. ಇಟಲಿಯವರು ಕಾಪೊರೆಟ್ಟಾ-ಕಾರ್ಮೋನ್ಸ್ ಮೊದಲಾದ ಊರುಗಳ ಮೇಲೆ ನುಗ್ಗಿ ಅವುಗಳ ಮಧ್ಯದಲ್ಲಿರುವ ಉನ್ನತಪ್ರದೇಶಗಳನ್ನು ಹಿಡಿದುಕೊಂಡರು. ಅಲ್ಲಿದ್ದ ಆಸ್ಟ್ರಿಯನ್ ಸೈನ್ಯಗಳು ಹಿಂದೆಗೆದು ಓಡಿಹೋಗುವ ತಮ್ಮ ದೇಶದ ಮಾರ್ಗದಲ್ಲಿನ ಸೇತುಗಳನ್ನು ಧ್ವಂಸಮಾಡಿ, ಊರುಗಳನ್ನು ಸುಟ್ಟುಬಿಟ್ಟು ಹೋದರು. ಪೂರ್ವರಣರಂಗದ ಗೆಲೀಷಿಯಾ ಜಿಲ್ಲೆಯಲ್ಲಿದ್ದ ಜರ್ಮನ್ ಚಕ್ರವರ್ತಿಯವರು ಈಗ ಇಟಲಿಯ ಯುದ್ಧರಂಗಕ್ಕೆ ಹೋಗಿರುವರೆಂದು ಪ್ರಕಟವಾಗಿದೆ.

ಇಟಲಿಯವರು ತಮ್ಮ ಉತ್ತರದ ಎಲ್ಲೆಯ ಕಡೆಯಿಂದ ಆಸ್ಟ್ರಿಯಾದೊಳಕ್ಕೆ ೪ ಮೈಲಿಗಳದೂರ ನುಗ್ಗಿಹೋಗಿದ್ದಾರೆ. ಅಲ್ಲಿ ಶತ್ರುಗಳು ಪ್ರತಿಭಟಿಸಲು, ಅವರೊಡನೆ ಸಂಗೀನುಯುದ್ಧವನ್ನು ಮಾಡಿ ಹಿಂದಕ್ಕೆ ದೂಡಿ, ಕಡೊರುಲೊನಿ ಎಲ್ಲೆಯ ಬಳಿಯಣ ಶತ್ರುಗಳ ಕಣಿವೆಗಳನ್ನೆಲ್ಲಾ ವಶಪಡಿಸಿಕೊಂಡರು. ಅಲ್ಲಿದ್ದ ಆಸ್ಟ್ರಿಯಾದವರು ಫಿರಂಗಿಗುಂಡುಗಳನ್ನು ಹಾರಿಸಿದರು. ಆದರೂ ಫಲವೇನೂ ಆಗಲಿಲ್ಲ. ಇಟಲಿಯವರು ಕಾಲಿಂಟರಿ ಎಂಬ ಕಣಿವೆಗಳನ್ನು ಹಿಡಿದುಕೊಂಡಿದ್ದಾರೆ; ಕೆಲ ಸೈನಿಕರನ್ನು ಸೆರೆಹಿಡಿದಿರುವರು. ಪೂರ್ವದ ಆಸ್ಟ್ರಿಯಾ ಯುದ್ಧರಂಗದಲ್ಲಿ ಇಟಲಿ ಸೈನ್ಯಗಳು ಮುಂದಕ್ಕೆ ಸಾಗಿಹೋಗಿ ಕೆಲವು ದಿಣ್ಣೆಗಳ ಮೇಲೆ ನೆಲೆಗೊಂಡಿವೆ. ಶತ್ರುಗಳ ಫಿರಂಗಿಯೇಟಿನ ಪ್ರತಿಭಟನವು ಅವರಿಗೆ ಫಲದಾಯಕವಾಗಲಿಲ್ಲ. ದಕ್ಷಿಣದ ಸಾಂಜಸೋವನ್ನು ಹಿಡಿದುಕೊಳ್ಳಬೇಕೆಂದು ಇಟಲಿಯವರು ನುಗ್ಗುತ್ತಿದ್ದಾರೆ. ಆಸ್ಟ್ರಿಯಾದವರು ಪ್ರತಿಭಟಿಸಲಾರದೆ ಓಡಿಹೋಗುತ್ತ ದಾರಿಯಲ್ಲಿರುವ ಸೇತುಗಳನ್ನು ಹಾಳ್ಮಾಡುತ್ತಿದ್ದಾರೆ.

ತಾ|| ೨೪ರಲ್ಲಿ ಟಿರಾನೋವಿಗೆ ೨೦ ಮೈಲಿಗಳ ದೂರದಲ್ಲಿರುವ ಕೊರ್ಡಿಲುಚೋನಾಸ್ಸಿನಹತ್ತಿರ ದೊಡ್ಡ ಯುದ್ಧವಾಯಿತು. ಇಟಲಿಯವರು ಒಂದುಕಡೆಯಲ್ಲಿ ಆಸ್ಟ್ರಿಯಾದೊಳಕ್ಕೆ ನುಗ್ಗಿಹೋಗಿರಲು, ಮತ್ತೊಂದುಕಡೆಯಿಂದ ಆಸ್ಟ್ರಿಯನ್ನರು ಇಟಲಿಯೊಳಕ್ಕೆ ನುಗ್ಗಿಬಂದರು. ಆದರೆ ಅವರನ್ನೆಲ್ಲಾ ಇಟಲಿಯವರು ಹಿಂದಕ್ಕೋಡಿಸಿದರು. ಆಲ್ಪೈನ್ ಪರ್ವತಪ್ರಾಂತದಲ್ಲಿ ಅನೇಕ ಆಸ್ಟ್ರಿಯನ್ ಸೈನಿಕರನ್ನು ಇಟಲಿಯವರು ಸೆರೆಹಿಡಿದರು. ಎಲ್ಲೆಕಟ್ಟಿನ ರಿವೋಲಿಟ್ರೆಂಟ್ ಪ್ರಾಂತಗಳೆರಡರಲ್ಲೂ ಇಟಲಿಯವರು ಸೇನೆಗಳನ್ನು ಸಜ್ಜುಗೊಳಿಸಿದ್ದಾರೆ. ಅಲ್ಲಿ ಇದಿರಿಗೆ ಜರ್ಮನರು ದೊಡ್ಡಫಿರಂಗಿಗಳನೇಕವನ್ನು ಒಡ್ಡಿ ನಿಲ್ಲಿಸಿದ್ದಾರೆ. ಎಲ್ಲೆಕಟ್ಟಿನಲ್ಲಿರುವ ಶತ್ರುಸೈನಿಕರಿಗೆ ಯುದ್ಧದಲ್ಲಿ ಇಷ್ಟವಿಲ್ಲವಂತೆ; ಅವರಿಗೆ ಉಪಯುಕ್ತವಾದ ಆಯುಧಸಾಮಗ್ರಿಗಳು ಕೊಡಲ್ಪಟ್ಟಿಲ್ಲವಂತೆ.

ಇಟಲಿದೇಶದ ಸೈನ್ಯಗಳು ಟ್ರೆಸ್ಟಿ ಪ್ರಾಂತಕ್ಕೆ ನುಗ್ಗಿಹೋಗುತ್ತಿರುವಲ್ಲಿ ಅಲ್ಲಿರುವ ಪ್ರಜೆಗಳು ಇವರನ್ನು ಕಂಡು ಆನಂದಪಟ್ಟಿರುತ್ತಾರೆ. ಸೇನಾಧ್ಯಕ್ಷನನ್ನು ನೋಡಿ ಆಲಿಂಗಿಸಿ ಆದರಿಸಿರುತ್ತಾರೆ. ಪ್ರತಿಯೊಂದು ಮನೆಗಳಮೇಲೂ ಇಟಲಿಯ ಪತಾಕೆಯನ್ನು ಕಟ್ಟಿದ್ದಾರೆ. (ಈ ಪ್ರಾಂತದಲ್ಲಿನ ಪ್ರಜೆಗಳಲ್ಲಿ ಇಟಲಿಯವರೇ ಹೆಚ್ಚಾಗಿದ್ದಾರೆ.)

ಆಸ್ಟ್ರಿಯಾದವರ ಒಂದು ಯುದ್ಧನಾವೆಯು ಇಂಗ್ಲೀಷ್ ಪತಾಕೆಯನ್ನು ತನ್ನಮೇಲೆ ಮೋಸದಿಂದ ಏರಿಸಿಕೊಂಡುಬಂದು ಬಾರ್ಲೆಡಾ ಎಂಬ ತೀರಪಟ್ಟಣದಮೇಲೆ ಫಿರಂಗಿಗುಂಡುಗಳನ್ನು ಹಾರಿಸಿರುತ್ತದೆ. ಈ ಸುದ್ದಿಯನ್ನು ಕೇಳಿ ಲಂಡನ್ ಪಟ್ಟಣದ ಪ್ರಜೆಗಳಿಗೆ ಬಹಳ ರೋಷವುಂಟಾಗಿದೆ.

ಕೆಲವು ಆಸ್ಟ್ರಿಯನ್ ವಿಮಾನಗಳು ವೆನಿಸ್ ಪಟ್ಟಣದ ಮೇಲೆ ಮೊದಲುಸಲ ಕೆಲವು ಸಿಡಿಮದ್ದುಗಳನ್ನು ಹಾಕಿದುವು. ೩-೪ ಮಂದಿಗೆ ಏಟುತಗಲಿತು. ಮನೆಗಳಿಗೆ ಬಿದ್ದ ಏಟಿನಿಂದ ಕಿಟಕಿಗಳು ಹಾಳಾದುವು. ಹಾರಿಹೋಗುತ್ತಿರುವ ವಿಮಾನಗಳನ್ನು ನೋಡುವುದಕ್ಕೆ ಇಟಲಿ ಪ್ರಜೆಗಳು ಬೀದಿಗೆಬಂದರು. ಸೈನಿಕರು ಅವುಗಳಮೇಲೆ ಫಿರಂಗಿಗುಂಡುಗಳನ್ನು ಹಾರಿಸುತ್ತಿರುವುದನ್ನು ಕಂಡು ಕೇಕೆಹಾಕಿದರು.

ಇಂಗ್ಲೆಂಡಿನ ನೂತನ ಮಂತ್ರಿವರ್ಗ.

ಈಗಿನ ಯುದ್ಧವನ್ನು ಕಟ್ಟುನಿಟ್ಟಾಗಿ ಕೊನೆಸಾಗಿಸುವುದಕ್ಕಾಗಿ ಇಂಗ್ಲೆಂಡಿನ ಮಂತ್ರಿವರ್ಗದಲ್ಲಿ ಎಲ್ಲಪಕ್ಷದ ಪ್ರತಿನಿಧಿಪ್ರಮುಖರೂ ಇರುವಂತೆ ಮಾಡುವುದರಲ್ಲಿ ಗುಣವುಂಟೆಂದು ತೋರಿದುದರಿಂದ ವೈಮನಸ್ಯಗಳೊಂದೂ ಇಲ್ಲದೆ ಆ ನೂತನ ಮಂತ್ರಿವರ್ಗವು ಏರ್ಪಟ್ಟಿದೆ. ಇದನ್ನು ಜಾರ್ಜ್ ಪ್ರಭುಗಳೂ ಕೂಡ ಸಮ್ಮತಿಸಿದರೆಂದು ಪ್ರಕಟವಾಗಿದೆ. ಈಗಿನ ಮಂತ್ರಿವರ್ಗದವರ ಪಟ್ಟಿಯು ಹೇಗೆಂದರೆ:—

ಇದುವರೆಗೆ ಮುಖ್ಯಮಂತ್ರಿಯಾಗಿದ್ದ ಆಸ್ಕ್ವಿತ್‌ರವರೇ ಮುಖ್ಯಮಂತ್ರಿಯೂ ಕೋಶಾಧ್ಯಕ್ಷರೂ ಆಗಿರುವರು. ಇದುವರೆಗೆ ಕೋಶಾಧ್ಯಕ್ಷರಾಗಿದ್ದ ಲಾಯಿಡ್ ಜಾರ್ಜ್‌ರವರು ಕೆಲಕಾಲದವರೆಗೆ ಯುದ್ಧಸಾಮಗ್ರಿಗಳನ್ನು ಪರಿಶೀಲಿಸುವ ಮಂತ್ರಿಯಾಗಿರುವರು. ಯುದ್ಧಸಂಬಂಧವಾದ ಪ್ರಶ್ನೆಗಳನ್ನು ವಿಚಾರಿಸಿಕೊಳ್ಳುವುದಕ್ಕೆ ಮಂತ್ರಿವರ್ಗದವರಲ್ಲಿ ನೂತನವಾಗೇರ್ಪಟ್ಟ ಒಂದು ಸ್ಥಾನದಲ್ಲಿ ಹೆಂಡರ್ಸನ್‌ರವರು ಏರ್ಪಟ್ಟರು. ಸರ್ ಎಡ್ವರ್ಡ್ ಗ್ರೇರವರೇ ವಿದೇಶಕಾರ್ಯದರ್ಶಿಗಳು, ಬೋನರ್‌ಲಾರವರು ಅಧಿನಿವೇಶಗಳ ಕಾರ್ಯದರ್ಶಿಗಳು, ಚೇಂಬರ್ಲೇನರು ಹಿಂದೂಸ್ಥಾದ ಕಾರ್ಯದರ್ಶಿಗಳು, ಬಾಲ್ಫರ್‌ರವರು ನೌಕಾದಳಕ್ಕೆ ಪ್ರಧಾನಾಧ್ಯಕ್ಷರು, ಲಾರ್ಡ್ ಕಿಚನರ್‌ರವರು ಯುದ್ಧಕಾರ್ಯದರ್ಶಿಗಳು, ಸರ್ ಎಡ್ವರ್ಡ್ ಕಾರ್ಸನ್‌ರವರು ಅಟರ್ನಿ ಜನರಲ್ಲು. ಇವರಲ್ಲದೆ ಲಾರ್ಡ್ ಲ್ಯಾನ್ಸ್‌ಡೌನ್, ಲಾರ್ಡ್ ಕರ್ಜನ್, ಮೆಕನ್ನಾ, ಸಿಂಸನ್, ಕ್ರೂ, ಮೆಲ್ಬೊರ್ನ್, ಹಾರ್ಕೋಟ್ ಮೊದಲಾದ ಇನ್ನೂ ಕೆಲರು ಈ ಮಂತ್ರಿವರ್ಗದಲ್ಲಿ ಸೇರಿಸಲ್ಪಟ್ಟಿರುವರು. ಈ ಏರ್ಪಾಟನ್ನು ಪ್ರಜೆಗಳು ಕೇಳಿ ಆನಂದಪಟ್ಟಿದ್ದಾರೆ.

ಮೈಸೂರು ಸ್ಟಾರ್.

ಸನ್ ೧೯೧೫ನೆಯ ಇಸವಿ ಮೇ ತಾ|| ೩೦ನೆಯ ಭಾನುವಾರ.

ಇಟಲಿಯೂ ಯುದ್ಧದಲ್ಲಿ ಸೇರಿತು.

ಬರುಬರುತ್ತ ಯುದ್ಧಾಗ್ನಿಜ್ವಾಲೆಯು ವಿಸ್ತರಿಸುತ್ತಲೇ ಇದೆ. ಯೂರೋಪಿನ ಪ್ರಬಲರಾಷ್ಟ್ರಗಳಲ್ಲಿ ಒಂದಾಗಿದ್ದ ಇಟಲಿಯೂ ಕೂಡ ಈಗಿನ ಮಹಾಯುದ್ಧದಲ್ಲಿ ಒಂದು ಅಂಗವಾಗಿ ಸೇರಿತೆಂಬ ವಾರ್ತೆಗಳು ಕಳೆದವಾರದ ತಂತಿಗಳಿಂದ ಗೊತ್ತಾಗಿರುತ್ತದೆ. ಇದರಿಂದ ಯುದ್ಧದ ಪ್ರಮಾಣವು ಇನ್ನಷ್ಟು ಹೆಚ್ಚಿದಂತಾಯಿತೆಂಬುದಕ್ಕೆ ಸಂಶಯವಿಲ್ಲ. ಯೂರೋಪಿನ ಮುಖ್ಯ ರಾಷ್ಟ್ರಗಳೊಳಗೆ ಜರ್ಮನಿ-ಆಸ್ಟ್ರಿಯಾ-ಇಟಲಿಗಳು ಒಂದು ಪಕ್ಷದುವೆಂದು ತಿಳಿಯಲ್ಪಟ್ಟಿದ್ದುವು. ಅವರವರಲ್ಲಿನ ಏಕಮತ್ಯವು ೧೯೨೦ ನೆಯ ವರ್ಷದವರೆಗೆ ನಡೆಯಲುಳ್ಳ ಒಂದು ಒಡಂಬಡಿಕೆಯ ಪತ್ರದಿಂದ ನಿಶ್ಚಿತವಾಗಿದ್ದಿತು. ಆದರೆ ಈಚೆಗೆ ಪ್ರಕಟಗೊಂಡಿರುವ ಸಂಗತಿಗಳನ್ನು ನೋಡಿದರೆ ಅವರವರ ವಿಶ್ವಾಸವು ಬಹಿರಂಗದಲ್ಲಿ ಮಾತ್ರ ಕಾಣಿಸುತ್ತಿದ್ದಿತೆಂತಲೂ, ಆಸ್ಟ್ರಿಯಾ ಇಟಲಿಗಳ ಅಂತರಂಗಶುದ್ಧಿಯು ಚೆನ್ನಾಗಿರಲಿಲ್ಲವೆಂತಲೂ ಗೊತ್ತಾಗುತ್ತದೆ. ಈಗಿನಮಹಾಯುದ್ಧದ ಆರಂಭಕಾಲದಲ್ಲಿ ಆಸ್ಟ್ರಿಯಾವು ಸರ್ವಿಯಾದಮೇಲೆ ಯುದ್ಧವನ್ನು ಪ್ರಕಟಿಸಿದಾಗ, ಅದು ತನ್ನ ಆಪ್ತಕೂಟಕ್ಕೆ ಸೇರಿದುದೆನಿಸಿಕೊಂಡಿದ್ದ ಇಟಲಿಯೊಡನೆ ಯಾವುದೊಂದು ಯೋಚನೆಯನ್ನೂ ಮಾಡಲಿಲ್ಲವಂತೆ; ಯಾವ ಸಂಗತಿಯನ್ನೂ ಕೂಡ ತಿಳಿಯಿಸಲಿಲ್ಲವಂತೆ. ಹೀಗೆ ಆಸ್ಟ್ರಿಯಾವು ನಡೆಯಿಸಿದಾಗಲೇ ಇಟಲಿಯು ಆಸ್ಟ್ರಿಯಾದ ವಿಶ್ವಾಸ ವಿಷಯದಲ್ಲಿ ಅಪನಂಬುಗೆಯನ್ನು ಹೊಂದಿಬಿಟ್ಟಿತು. ಇದಲ್ಲದೆ ಆಸ್ಟ್ರಿಯಾದ ದುರಾಶಾಲಕ್ಷಣವು ಇಟಲಿಗೆ ಮೊದಲಿಂದಲೂ ಗೊತ್ತೇ ಇದ್ದಿತು. ಆಸ್ಟ್ರಿಯಾ ಜರ್ಮನಿಗಳೂ ಕೂಡ ಇಟಲಿಯ ವಿಷಯದಲ್ಲಿ ಒಳಗೆ ಅನುಮಾನವನ್ನೇ ಹೊಂದಿದ್ದುವು. ಆದರೂ ಬಾಲ್ಕನ್ ರಾಷ್ಟ್ರಗಳು ರಷ್ಯನರ ಬೆಂಬಲದಿಂದ ಪ್ರಬಲಿಸಿದರೆ ಅವಕ್ಕೆ ತನ್ನ ಭಯವು ಇರಬೇಕೆಂಬುದಾಗಿ ಇಟಲಿಯು ಜರ್ಮನ್ ಆಸ್ಟ್ರಿಯಾದ ಮೈತ್ರಿಯನ್ನು ತೋರಿಕೆಯಲ್ಲಿ ಪ್ರಕಟಮಾಡಿಕೊಂಡಿದ್ದಿತು. ಅಷ್ಟೇ ಹೊರತು ಜರ್ಮನಿ ಆಸ್ಟ್ರಿಯಾಗಳಿಂದ ತನಗೆ ನಿಜವಾದ ಲಾಭವಾಗುವುದೆಂದು ನಂಬಿರಲಿಲ್ಲ. ಮತ್ತೂ ಜಾತೀಯತೆಯ ಸಂಬಂಧದಿಂದ ಇಟಲಿಗೆ ಸೇರಬೇಕಾಗಿದ್ದ ಟ್ರೆಸ್ಟಿ ದೇಶಭಾಗವನ್ನೂ ಟಿರೋಲ್ ದೇಶಭಾಗವನ್ನೂ ಸಹ ಆಸ್ಟ್ರಿಯಾವು ವಶಪಡಿಸಿಕೊಂಡಿರುವುದರಿಂದಲಂತೂ ಇಟಲಿಯು ಮತ್ಸರಾಗ್ನಿಯನ್ನು ಹೃದಯದಲ್ಲಿ ಧಾರಣೆಮಾಡಿಕೊಂಡೇ ಇದ್ದಿತು. ಅದುಕಾರಣ ಈ ಮಿತ್ರತ್ರಯದ ವಿಶ್ವಾಸವು ಪಯೋಮುಖವಾದ ವಿಷಕುಂಭದಂತೆ ಇದ್ದಿತೆಂದು ಹೇಳುವಲ್ಲಿ ಅಡ್ಡಿಯಿಲ್ಲ. ಇಂಥ ಕಪಟಮೈತ್ರಿಯ ಪರಿಣಾಮವು ಎಂದಾದರೊಂದುದಿನ ಮಹಾವಿನಾಶರೂಪವಾಗಿಯೇ ತೀರುವುದು ಸಿದ್ಧವಲ್ಲವೆ? ಆ ಪರಿಣಾಮವೇ ಈಗ ಗೋಚರಿಸಿತೆಂದು ಹೇಳಬಹುದು.

ಈಗಿನ ಮಹಾಯುದ್ಧದಲ್ಲಿ ಜರ್ಮನಿ ಆಸ್ಟ್ರಿಯಾಗಳಿಗೆ ಜಯಲಾಭವಾಗಿಬಿಟ್ಟರೆ ಇಟಲಿಯ ಅವಸ್ಥೆಯು ಪರಿತಾಪಕರವಾಗಿ ಹೋಗುವುದು. ಅದು ಆಸ್ಟ್ರಿಯಾದ ಅಧೀನರಾಜ್ಯವಾಗಿಯೇ ಬಾಳಬೇಕಾಗುವುದು. ಇದನ್ನೆಲ್ಲಾ ಯೋಚಿಸಿಯೇ ಇಟಲಿಯ ದೇಶಾಭಿಮಾನಿ ಪ್ರಜೆಗಳು ಕೆಲವು ತಿಂಗಳುಗಳಿಂದಲೂ ಮಿತ್ರಮಂಡಲಿಯ ಪಕ್ಷಕ್ಕೆ ತಾವು ಸೇರಿ, ಯುದ್ಧಾಭಿನಿವೇಶವುಳ್ಳ ಜರ್ಮನ್ ಆಸ್ಟ್ರಿಯಾಗಳ ಹಮ್ಮನ್ನು ಮುರಿಯಬೇಕೆಂಬ ಕುತೂಹಲವನ್ನು ಅವಿಚ್ಛಿನ್ನವಾಗಿ ತೋರಿಸುತ್ತ ಬಂದರು. ಆದರೂ ಇಟಲಿ ಪ್ರಭುತ್ವದವರು ಇದುವರೆಗೂ ಸಹನೆಯನ್ನೇ ತೋರಿಸುತ್ತಲಿದ್ದರು. ಆದರಿಂದ ಲೋಕದವರೆಲ್ಲಾ ಇಟಲಿಯ ವಿಷಯವನ್ನು ಹೀಗೆಯೇ ಸರಿಯೆಂದು ನಿರ್ಧರಿಸಲಾರದೆ ಇದ್ದರು. ಯುದ್ಧಾರಂಭವಾದಬಳಿಕ ಈ ಮಧ್ಯದಲ್ಲಿ ಇಟಲಿಯು ಅತ್ತ ಮಿತ್ರಮಂಡಲಿಯವರೊಡನೆಯೂ ಇತ್ತ ಜರ್ಮನ್ ಆಸ್ಟ್ರಿಯಾಗಳೊಡನೆಯೂ ಪತ್ರವ್ಯವಹಾರವನ್ನು ನಡೆಯಿಸುತ್ತಿದ್ದಿರಬೇಕೆಂದು ಈಚಿನ ಸಂಗತಿಗಳಿಂದ ಗೊತ್ತಾಗುತ್ತದೆ. ಜರ್ಮನಿ ಆಸ್ಟ್ರಿಯಾಗಳ ಕಪಟಬುದ್ಧಿ ದುರಾಲೋಚನೆಗಳು ಇಟಲಿಗೆ ಸರಿಬೀಳದೆ ಹೋದುದರಿಂದಲೇ ಕಡೆಗೆ ಅದು ನಿರುಪಾಯವಾಗಿ ಯುದ್ಧಕ್ಕೆ ನಿಲ್ಲಬೇಕಾಯಿತೆಂಬ ಸಂಗತಿಯು ಈ ಮಧ್ಯದಲ್ಲಿ ನಡೆದಿರುವ ಸಂಗತಿಗಳನ್ನೆಲ್ಲಾ ವಿವರಿಸಿ ಇಟಲಿಯವರು ಮುದ್ರಿಸಿ ಪ್ರಕಟಿಸಿರುವ ಗ್ರಂಥದಿಂದ ಗೊತ್ತಾಗುತ್ತದೆ. ಇಟಲಿಯವರು ಹೇಗೆ ಕೋರುವರೋ ಆದರಂತೆ ನಡೆದುಕೊಳ್ಳುವುದೊಳ್ಳೆಯದೆಂದು ಜರ್ಮನಿಯು ಆಸ್ಟ್ರಿಯಾಕ್ಕೆ ಶ್ರುತಪಡಿಸಿದರೂ, ಆಸ್ಟ್ರಿಯಾವು ಆದರಂತೆ ಮಾಡದೆಹೋಯಿತಂತೆ. ಆದರಮೇಲೆ ಇಟಲಿಯು ಮಿತ್ರಮಂಡಲಿಯವರೊಡನೆ ಒಪ್ಪಂದ ಮಾಡಿಕೊಳ್ಳಬೇಕಾಯಿತು. ಸರ್ವಿಯಾದೊಡನೆ ಆಸ್ಟ್ರಿಯಾವು ಯುದ್ಧವನ್ನಾರಂಭಿಸಿದಾಗ ಆ ಸಂಗತಿಯನ್ನು ಇಟಲಿಗೆ ತಿಳಿಯಿಸದೆ ಹೋದಾಗಲೇ ಅವರವರ ಮಧ್ಯದ ಹಿಂದಿನ ಒಡಂಬಡಿಕೆಯು ಶಿಥಿಲಗೊಳಿಸಲ್ಪಟ್ಟಂತಾಯಿತು. ಆ ಒಡಂಬಡಿಕೆಯು ಹಾಳಾಗಿಹೋಗುವುದನ್ನು ಇಟಲಿಯು ಅಪೇಕ್ಷಿಸಿರಲಿಲ್ಲ. ಅದನ್ನೇ ಕಾಪಾಡಿಕೊಂಡುಹೋಗುವಂತೆ ಮಾಡಲು ಮತ್ತೊಂದಾವೃತ್ತಿ ಪ್ರಯತ್ನಿಸಿ ನೋಡಬೇಕೆಂದು ಇಟಲಿಯು ಆಲೋಚಿಸಿ, ಆಸ್ಟ್ರಿಯಾದವರು ಸರ್ವಿಯಾದ ಮೇಲೆ ಯುದ್ಧಕ್ಕೆ ಹೋದಾಗ ಆ ವಿಷಯವಾಗಿ ತಮ್ಮನ್ನು ಕೇಳದೇನೆಯೇ ಹೋದುದು ತಮ್ಮ ಮೈತ್ರೀ ನಿಬಂಧನೆಗಳಿಗೆ ವ್ಯತಿರಿಕ್ತವಾದುದಾದಕಾರಣ, ಆದಕ್ಕಾಗಿ ತಮಗೆ ನಷ್ಟಪರಿಹಾರವನ್ನು ಕೊಡಬೇಕೆಂದು ಇಟಲಿಯು ಆಸ್ಟ್ರಿಯಾವನ್ನು ಕೇಳಿತು. ಆದರೆ ವಿನಾಶಕಾಲವು ಸಮೀಪಿಸಿರುವುದರಿಂದ ಗರ್ವಪ್ರಮತ್ತವಾಗಿರುವ ಆಸ್ಟ್ರಿಯಾಕ್ಕೆ ಅದು ನ್ಯಾಯವೆಂದು ತೋರಲಿಲ್ಲ. ಆಗಲೇ ಇಟಲಿಯು ಮಿತ್ರಮಂಡಲಿಯ ಪಕ್ಷವನ್ನು ವಹಿಸಬೇಕೆಂದು ಅಂತರಂಗದಲ್ಲಿ ಆಲೋಚಿಸಿರಬೇಕು. ಆದರೆ ತನ್ನ ಉತ್ತರೋತ್ತರಪರಿಣಾಮವನ್ನು ಪತ್ರವ್ಯವಹಾರಗಳ ಮೂಲಕ ದೃಢಪಡಿಸಿಕೊಳ್ಳುವುದಕ್ಕಾಗಿಯೂ ತತ್ಕಾಲದಲ್ಲಿ ತನಗಿದ್ದ ಸೇನಾಸನ್ನಾಹದ ಕೊರತೆಯಿಂದಲೂ ಇಟಲಿಯು ೧೦ ತಿಂಗಳಕಾಲ ತಟಸ್ಥವಾಗಿರಬೇಕಾಯಿತೆಂದು ಊಹಿಸಬಹುದಾಗಿದೆ. ಆದರೂ ಕಟ್ಟಕಡೆಗೆ ತನ್ನ ಸಾಹಸವೂ ಕಾಲಯಾಪನೆಯೂ ವ್ಯರ್ಥವೆಂದು ಸಿದ್ಧವಾದ ಬಳಿಕ ಇಟಲಿಯು ತನ್ನ ಹಳೆಯ ಮಿತ್ರರ ಸಂಬಂಧವನ್ನು ಕಡಿದುಕೊಂಡು ಮಿತ್ರಮಂಡಲಿಯವರೊಡನೆ ನೂತನವಾಗಿ ಮೈತ್ರೀನಿಬಂಧನೆಗಳನ್ನು ಮಾಡಿಕೊಂಡು, ಆ ಸಂಗತಿಯನ್ನು ಕಳೆದ ತಾ|| ೪ರಲ್ಲಿ ಪ್ರಕಟಿಸಿಬಿಟ್ಟಿತು.

ಹೀಗೆ ಇಟಲಿಯು ಮಿತ್ರಮಂಡಲಿಪಕ್ಷಕ್ಕೆ ಸೇರಿದುದರಿಂದ ಮಿತ್ರಮಂಡಲಿಯವರಿಗೆ ಪ್ರತ್ಯಕ್ಷಪರೋಕ್ಷವಾದ ಪ್ರಯೋಜನಗಳು ಎಷ್ಟೋ ಹೆಚ್ಚಿತೆಂದು ಹೇಳಬಹುದಾಗಿದೆ. ಇಟಲಿಯು ಮಿತ್ರಮಂಡಲಿಯವರ ಸಾಹಾಯ್ಯಕ್ಕೆ ತನ್ನ ಸೇನಾಸ್ತೋಮವನ್ನು ವಿಶೇಷವಾಗಿ ಕಳುಹಿಸಿಕೊಡದಿದ್ದರೂ, ಮಿತ್ರಮಂಡಲಿಯವರ ಭಾರವನ್ನು ಎಷ್ಟೋಮಟ್ಟಿಗೆ ತಗ್ಗಿಸಲು ಸಾಧಕವಾಗದೆಹೋಗುವುದಿಲ್ಲ. ಹೇಗೆಂದರೆ-ಇದು ಒಂದು ಪಕ್ಕದಲ್ಲಿ ಆಸ್ಟ್ರಿಯಾದ ಮೇಲೆ ಹೋಗಿ ಬೀಳುವುದರಿಂದ, ಆಸ್ಟ್ರಿಯಾವು ತನ್ನ ಸೇನೆಯನ್ನು ಇತ್ತಕಡೆಗಷ್ಟು ಮರಳಿಸಬೇಕಾಗುವುದು. ಆದರಿಂದ ರಷ್ಯಾದ ಭಾರವು ಸ್ವಲ್ಪಕಡಿಮೆಯಾಗುವುದು. ಒಂದು ರಟ್ಟೆಯನ್ನು-ರಷ್ಯಾವೂ ಒಂದು ರಟ್ಟೆಯನ್ನು ಇಟಲಿಯೂ ಹಿಡಿದು ಜಗ್ಗಿಸುವುದಕ್ಕೆ ತೊಡಗಿದಬಳಿಕ ಆಸ್ಟ್ರಿಯಾವು ಬೇಗನೆ ನೆಲಕಚ್ಚಿ ಕುಳಿತುಕೊಳ್ಳಬೇಕಾಗುವುದೇ ನಿಜ. ಆಸ್ಟ್ರಿಯಾಕ್ಕೆ ಈ ಗತಿಯು ಪ್ರಾಪ್ತವಾಗುವುದಾದರೆ ಜರ್ಮನಿಯ ಹಮ್ಮು ಅರ್ಧಕ್ಕಿಂತಲೂ ಹೆಚ್ಚಾಗಿಯೇ ಮುರಿದುಹೋಗುವುದು. ಇದರ ಮೇಲೆ ಇಟಲಿಯ ನೌಕಾಸೈನ್ಯವು ಪ್ರಬಲವಾಗಿರುವುದರಿಂದ ಇದು ಸಮುದ್ರ ಮಾರ್ಗವಾಗಿ ತುರ್ಕಿ ರಾಜಧಾನಿಯ ಮೇಲೆ ನುಗ್ಗಿಹೋಗಿ ಅದನ್ನು ವಶಪಡಿಸಿಕೊಳ್ಳುವಲ್ಲಿ ಮಿತ್ರಮಂಡಲಿಗೆ ತುಂಬಾ ಸಹಾಯ ಮಾಡಬಹುದು. ಮತ್ತೂ ಫ್ರೆಂಚ್ ದೇಶವೂ ಇಟಲಿಯೂ ಒಂದರಮಗ್ಗುಲಲ್ಲೊಂದು ಇರುವುದರಿಂದ ಫ್ರೆಂಚರು ಸಂಶಯಗ್ರಸ್ತವಾದ ಇಟಲಿಯಮೇಲಣ ಕಾವಲಿಗಾಗಿ ತಮ್ಮ ಎಲ್ಲೆಕಟ್ಟಿನಲ್ಲಿ ೧೦ ಲಕ್ಷ ಸೈನ್ಯವನ್ನು ಸುಮ್ಮನೆ ಇಟ್ಟುಕೊಂಡಿದ್ದರು. ಇಟಲಿಯಮೇಲಣ ಸಂಶಯವು ಅದಕ್ಕೆ ದೂರವಾಗಿ, ತಮ್ಮಿಬ್ಬರ ಮಧ್ಯದಲ್ಲಿ ಮೈತ್ರಿಯು ದೃಢಪಟ್ಟುದರಿಂದ ಆ ಎಲ್ಲೆಕಟ್ಟಿನ ಸೈನ್ಯವನ್ನೆಲ್ಲಾ ಯುದ್ಧಾಂಗಣಕ್ಕೆ ಉಪಯೋಗಿಸಿಕೊಳ್ಳಲು ಫ್ರೆಂಚರಿಗೆ ಅನುಕೂಲವಾದಂತಾಯಿತು. ಈಗ ಇಂಗ್ಲೆಂಡು-ಫ್ರಾನ್ಸು-ರಷ್ಯಾ-ಇಟಲಿ-ಎಂಬ ರಾಷ್ಟ್ರಚತುಷ್ಟಯವೂ ಭೂಸೇನೆ ಜಲಸೇನೆಗಳನ್ನೂ-ಧನಕನಕಾದಿಗಳನ್ನೂ-ಮದ್ದು ಗುಂಡು ಆಹಾರ್ಯವಸ್ತು ಮೊದಲಾದುವುಗಳನ್ನೂ ಒಬ್ಬರಿಗೊಬ್ಬರು ಸಹಾಯ ಮಾಡಿಕೊಳ್ಳಲು ಅನುಕೂಲವಾಯಿತು. ಹೀಗೆ ಮಾಡಲು ಅವರು ಪರಸ್ಪರವಾಗಿ ನಿಬಂಧನಪತ್ರವನ್ನೂ ಮಾಡಿಕೊಂಡರೆಂದು ಗೊತ್ತಾಗಿರುವುದು. ಇದನ್ನೆಲ್ಲಾ ಮೊದಲೇ ಜರ್ಮನಿಯು ಯೋಚಿಸಿಕೊಂಡು ಇಟಲಿಯನ್ನು ಮಿತ್ರಮಂಡಲಿಯ ಕಡೆಗೆ ಸೇರಗೊಡದಂತೆ ಮಾಡಬೇಕೆಂದು ತನ್ನ ಯುಕ್ತಿಸಾಹಸಗಳನ್ನೆಲ್ಲಾ ಪ್ರಯೋಗಿಸಿತು. ಆದರೆ ಆಸ್ಟ್ರಿಯಾದ ದುರ್ದೈವ ದುರ್ಬುದ್ಧಿಗಳ ಬಲದ ಮುಂದೆ ಅವೊಂದೂ ಫಲಿಸದೆಹೋದುವು

ಇಟಲಿಯು ಮಿತ್ರಮಂಡಲಿಯ ಕಡೆಗೆ ಸೇರಿಬಿಟ್ಟುದರಿಂದ ಅತ್ತಣ ಬಲವು ಹೆಚ್ಚಿದುದೇನೋ ಖಂಡಿತ. ಆದರಿಂದ ಶತ್ರುಪಕ್ಷದವರ ಹಮ್ಮು ಉಡುಗುವುದಕ್ಕೆ ಅವಕಾಶವಾದುದೂ ನಿಜ. ಇದರಿಂದ ಯುದ್ಧವು ಇನ್ನು ಬಹುಕಾಲ ನಡೆಯಲಾರದೆಂದು ಯುದ್ಧಕಲಾಭಿಜ್ಞರು ಹೇಳುತ್ತಿದ್ದಾರೆ. ಈ ಮೊದಲೇ ಆಸ್ಟ್ರಿಯನ್ನರು ರಷ್ಯನರ ಹೊಡೆತದಿಂದ ಜರ್ಝರಿತರಾಗಿ ರಷ್ಯನರೊಡನೆ ಒಪ್ಪಂದ ಮಾಡಿಕೊಳ್ಳಬೇಕೆಂದು ಪ್ರಯತ್ನಿಸಿದ್ದರೆಂಬ ಸಂಗತಿಯು ಹೊರಬಿದ್ದಿದ್ದಿತು. ಇಟಲಿಯು ಮಿತ್ರಮಂಡಲಿಯೊಡನೆ ಸೇರಿದಬಳಿಕ ಜರ್ಮನಿಯವರೂ ಸಹ ರಷ್ಯಾದವರೊಡನೆ ಪ್ರತ್ಯೇಕವಾಗಿ ಒಪ್ಪಂದ ಮಾಡಿಕೊಳ್ಳಬೇಕೆಂದು ಪ್ರಯತ್ನಿಸಿದರೆಂದೂ, ಮಿತ್ರಮಂಡಲಿಯವರೆಲ್ಲರೂ ಒಪ್ಪದಿದ್ದರೆ ಸಂಧಿಯು ಎಂದಿಗೂ ನಡೆಯಲಾರದಾದುದರಿಂದ, ಜರ್ಮನರ ಆ ಪ್ರಯತ್ನವು ಸಾಗದೆಹೋಯಿತೆಂದೂ, ರಷ್ಯಾದ ವಿದೇಶಾಂಗಮಂತ್ರಿಯವರು ರೂಟರ್‌ವಾರ್ತಾ ಪ್ರತಿನಿಧಿಯೊಡನೆ ಹೇಳಿರುವರೆಂಬುದನ್ನು ನೋಡಲಾಗಿಯೂ, ಈ ಮಧ್ಯೆ ಜರ್ಮನರ ಸಬ್‌ಮೆರೀನು ಮಾಡಿದ ಅತ್ಯಾಚಾರದಿಂದ ಪರಿಕ್ಷುಬ್ಧರಾಗಿ ಅಮೇರಿಕನ್ನರು ಕೇಳಿದ್ದ ಪರಿಹಾರಕ್ಕೆ ವಿಧೇಯತೆಯಿಂದ ಉತ್ತರವನ್ನು ಕೊಡಬೇಕೆಂದೂ ಅಮೇರಿಕನ್ನರ ಮನಸ್ಸು ಕೆಟ್ಟುಹೋಗದಂತೆ ಮಾಡುವುದಕ್ಕಾಗಿ ಅವರು ಕೇಳಿದ ಪರಿಹಾರವನ್ನು ತೆರಲು ಜರ್ಮನಿಯು ಸಿದ್ಧವಾಗಿರುವುದೆಂದೂ ಪ್ರಕಟವಾಗಿರುವುದನ್ನು ನೋಡಲಾಗಿಯೂ, ಜರ್ಮನಿಯು ಈಚೆಗೆ [illegible] ಎದೆಗೆಟ್ಟುಹೋಗಿರುವುದೆಂಬುದು ಗೊತ್ತಾಗುವುದು. ಮತ್ತೂ ಇಟಲಿಯ ಸ್ಥಿತಿಯನ್ನು ನೋಡಿ, ಗ್ರೀಸ್ ರುಮೇನಿಯಾ ದೇಶಗಳೂ ಕೂಡ ಮಿತ್ರಮಂಡಲಿಯ ಕಡೆಗೆ ಬೇಗನೆ ಒಲಿದುಹೋಗಬಹುದು. ಇವೆಲ್ಲ ಸ್ಥಿತಿಗಳು ಯುದ್ಧದ ಸ್ವರೂಪವನ್ನು ಪ್ರಚಂಡಸ್ಥಿತಿಗೆ ತರುವಂತೆ ಸದ್ಯಃ ಕಂಡುಬರುತ್ತಿದ್ದರೂ ಬೇಗನೆ ಯುದ್ಧದ ಪರಿಶಾಂತಿಗೂ ಸಾಧಕವಾಗಿ ಪರಿಣಮಿಸಬಹುದು. ಜಗದೀಶನು ಅಂಥ ಕಾಲವನ್ನು ಬೇಗನೆ ಉಂಟುಮಾಡಲೆಂದು ಕೋರುವೆವು.

ಒಳದೇಶ ವೃತ್ತಾಂತಗಳು.

ಈ ಪತ್ರಿಕೆಯ ೩ನೆಯ ಪುಟದಲ್ಲಿ ೬ನೆಯ ಪುಟವೂ ೬ನೆಯ ಪುಟದಲ್ಲಿ ೩ನೆಯ ಪುಟವೂ ಕೈತಪ್ಪಿ ಬಿದ್ದಿರುವುದರಿಂದ ವಾಚಕರು ದಯವಿಟ್ಟು ಸರಿಮಾಡಿಕೊಂಡೋದಬೇಕಾಗಿ ಪ್ರಾರ್ಥನೆ.

ತರೀಕೆರೆಯಿಂದ ೧೧ ಮೈಲಿ ದೂರದಲ್ಲಿರುವ ಲಕ್ಕುವಳ್ಳಿಯವರೆಗೆ ಲೋಹಮಾರ್ಗವು ಸಿದ್ಧವಾಗಿರುವುದರಿಂದ ಕಳೆದ ತಾ|| ೨೨ರ ಆರಭ್ಯ ಪ್ರಯಾಣಿಕರ ಬಂಡಿಗಳು ಬಿಡಲ್ಪಡುತ್ತಿರುವುವು.

ಮದ್ರಾಸ್ ಸರ್ಕಾರದಲ್ಲಿ ಪೋಲೀಸ್ ಸಬ್ ಇನ್ಸ್ಪೆಕ್ಟರಾಗಿದ್ದ ಮ|| ಎನ್. ಎಸ್. ರಾಮರಾಯರು ಗತಿಸಿದ ಕೆ. ವಿ. ಭೀಮಸೇನರಾಯರ ಬದಲು ೨ನೆಯ ತರಗತಿಯ ಇನ್ಸ್ಪೆಕ್ಟರಾಗಿ ನಿಯಮಿಸಲ್ಪಟ್ಟಿರುವರು.

ಬರುವ ಜುಲೈ ತಾ|| ೧ರಿಂದ ನರಸಿಂಹರಾಜಪುರದ (ಯಡೆಹಳ್ಳಿಯ)ಲ್ಲಿ ಒಂದು ಮುನಸೀಫ್ ಕೋರ್ಟು ಸ್ಥಾಪಿತವಾಗಿ ತರೀಕೆರೆ ಮತ್ತು ಕೊಪ್ಪ ತಾಲ್ಲೂಕುಗಳ ಹಾಗೂ ನರಸಿಂಹರಾಜಪುರ ಸಬ್‌ತಾಲ್ಲೂಕಿನ ವಿವಾದಗಳೆಲ್ಲವೂ ಈ ಕೋರ್ಟಿನ ವಿಚಾರಣೆಗೊಳಪಡಿಸಲ್ಪಡುವುವು.

ರಾಜಧಾನಿಯಲ್ಲಿ ಕಳೆದ ಶುಕ್ರವಾರ ರಾತ್ರಿ ದೊಡ್ಡ ಮಳೆಯಾಯಿತು. ಇದರಿಂದ ಕೆರೆಗಳಿಗೆ ತಕ್ಕಮಟ್ಟಿಗೆ ನೀರು ಬಂದಿರುತ್ತದೆ. ಈ ಮಳೆಯು ನಿಂತಿರುವ ಜೋಳದ ಪೈರಿಗೆ ಬಹಳ ಅನುಕೂಲವಾಗಿದೆ. ಡಂಗ್ಯೂಜ್ವರವು ಮರಳಿ ಆರಂಭವಾಗಿ ಜನರನ್ನು ಬಹಳಮಟ್ಟಿಗೆ ಪೀಡಿಸುತ್ತಿದೆ. ಇದರ ವಿನಾ ಇತರ ರೋಗಗಳಾವುವೂ ಇಲ್ಲವು.

ಅರಮನೆಯ ಜನಾನಾ ತೊಟ್ಟಿಯ ಶಿರಸ್ತೆದಾರರಾದ ಮ|| ವೆಂಗಟರಮಣಯ್ಯನವರು ನಿವೃತ್ತಿಗೊಳಿಸಲ್ಪಟ್ಟು ಅವರ ಸ್ಥಾನಕ್ಕೆ ಅರಮನೆ ಖಜಾಂಚಿಯರಾದ ಮ|| ಸಿ. ರಾಮಚಂದ್ರರಾಯರೂ, ಅವರ ಸ್ಥಾನದಲ್ಲಿ ಮ|| ಶೇಷಗಿರಿರಾಯರೂ ನಿಯಮಿಸಲ್ಪಟ್ಟಿರುವುದಾಗಿ ಕೇಳುತ್ತೇವೆ. ಮ|| ವೆಂಗಟರಮಣೈಯ್ಯನವರು ವಯೋವೃದ್ಧರೂ, ದೈವಭಕ್ತರೂ, ಜನಾನುರಾಗಿಗಳೂ, ನಿಸ್ಪೃಹರೂ ಆಗಿದ್ದು ಶ್ರೀಮನ್ ಮಹಾರಾಜರವರ ಪೂರ್ಣಕೃಪೆಗೆ ಪಾತ್ರರಾಗಿದ್ದರು.

ಬೆಂಗಳೂರು ವೈದಿಕಧರ್ಮಸಭೆಯವರು ಪ್ರತಿವರ್ಷದಲ್ಲೂ ಶಂಕರಜಯಂತ್ಯುತ್ಸವ ಸಮಯದಲ್ಲಿ ಕಾವ್ಯ, ಜೋತಿಷ ಪ್ರಯೋಗ ಮೊದಲಾದ ಸಂಸ್ಕೃತ ವಿದ್ಯೆಯಲ್ಲಿ ಪರೀಕ್ಷೆಯನ್ನು ನಡೆಯಿಸಿ ಉತ್ತೀರ್ಣರಾದವರಿಗೆ ಬಹುಮಾನವನ್ನು ಕೊಡುವ ಪದ್ಧತಿಯ ಮೇರೆಗೆ ಈ ವರ್ಷವೂ ಶಂಕರಮಠದಲ್ಲಿ ಪರೀಕ್ಷೆಯನ್ನು ನಡೆಸಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಆಕ್ಟಿಂಗ್ ದಿವಾನರಾದ ಮ|| ರಾ|| ಎಚ್. ವಿ. ನಂಜುಂಡಯ್ಯನವರ ಅಧ್ಯಕ್ಷತೆಯಲ್ಲಿ ಬೆಳ್ಳಿಯ ಬಟ್ಟಲುಗಳು, ತಟ್ಟೆಗಳು ಪದಕಗಳು ಮೊದಲಾದುವುಗಳನ್ನು ಪಾರಿತೋಷಿಕವಾಗಿ ಕೊಡಿಸಿದರು.

ಹಣಸ್ಥನೂ ಗಣ್ಯನೂ ಆದ ಬಂಡಿಗಡಿಯ ಇಮಾಂಸಾಬಿ ಎಂಬಾತನೂ ಹುಂಚಪುರದ ಪೋಲೀಸು ತಾಣಕ್ಕೆ ಸೇರಿದ ಷೇಕ್‌ಮುಸೇನ್ ಮತ್ತೂ ಹಯಾತ್‌ಸಾಬಿ ಎಂಬಿಬ್ಬರು ಕಾನ್ಸ್ಟೇಬಲರುಗಳೂ ಮತ್ತೆ ೧೩ಜನರೂ ಒಬ್ಬಒಕ್ಕಲಿಗರ ಹೆಂಗುಸನ್ನು ಬಲಾತ್ಕಾರದಿಂದ ಅಪಹರಿಸಿಕೊಂಡು ಹೋಗಿ, ಅವಳ ಸಮ್ಮತಿಯಿಲ್ಲದೆ ಒಬ್ಬ ಒಕ್ಕಲಿಗನಿಗೆ ಮದುವೆ ಮಾಡಯತ್ನಿಸಲು ಆಕೆಯು ಒಡಂಬಡದೆ ಅವರಿಂದ ತಪ್ಪಿಸಿಕೊಂಡುಹೋಗಿ ಕೂಡಲೆ ಪೋಲೀಸಿಗೆ ದೂರುಮಾಡಿದಳು. ಈಗ ಆ ಅಪರಾಧಿಗಳ ವಿಚಾರಣೆಯು ಕಡೂರು ಸಬ್‌ಡಿ|| ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ನಡೆಯುತ್ತಿದೆ.

ಪರಹಿತಾರ್ಥಕ್ಕಾಗಿ ಸ್ವಾರ್ಥತ್ಯಾಗ ಮಾಡಿ ನಿರಪೇಕ್ಷಬುದ್ಧಿಯಿಂದ ಮಾತೃದೇಶ ಸೇವೆಯನ್ನು ಮಾಡಿ ಕೀರ್ತಿಶೇಷರಾಗಿರುವ ಶ್ರೀ ಗೋಪಾಲಕೃಷ್ಣ ಗೋಖಲೆಯವರ ಸಂಕ್ಷಿಪ್ತ ಜೀವನಚರಿತ್ರೆಯನ್ನು ಬೆಂಗಳೂರಲ್ಲಿರುವ ಮೈಸೂರು ದೇಶಸೇವಾ ಸಂಘದವರು ಪ್ರಕಟಿಸಿ ಪ್ರತಿಯೊಂದಕ್ಕೆ ೬ ಕಾಸಿನಂತೆ ವಿಕ್ರಯಿಸುತ್ತಿರುವರು. ಈ ಪುಸ್ತಕಗಳ ಮಾರಾಟದಿಂದ ಉತ್ಪನ್ನವಾಗುವ ಹಣವು ಬೆಂಗಳೂರಿನಲ್ಲಿ ಶ್ರೀಯವರ ಹೆಸರಿನ ಮೇಲೆ ಕಟ್ಟಬೇಕೆಂದುದ್ದೇಶಿಸಿರುವ ಮಂದಿರದ ವೆಚ್ಚಕ್ಕೆ ವಿನಿಯೋಗಿಸಲ್ಪಡುವುದರಿಂದ ಈ ಅಲ್ಪಕ್ರಯದ ಪುಸ್ತಕವನ್ನು ಪ್ರತಿಯೊಬ್ಬ ದೇಶಭಕ್ತನೂ ಕೊಂಡು ಆ ಮಹಾ ಪುರುಷರ ಸ್ಮಾರಕಕಾರ್ಯಕ್ಕೆ ಸಹಾಯಕರಾಗಲೆಂದು ಕೋರುತ್ತೇವೆ.

ಚಿಕ್ಕಮಗಳೂರಿನಲ್ಲಿ ಮ|| ಗಳಾದ ಎಸ್. ಎನ್. ಚಿಕ್ಕಣ್ಣನವರು, ಸಿ. ಶ್ರೀನಿವಾಸರಾಯರು, ಕೇಶವಾಚಾರ್ಯರು, ಮಿ|| ರಸುಲ್‌ಖಾನ್‌ರವರು ಮತ್ತೂ ಚೆನ್ನಬಸವಸೆಟ್ಟರು; ಶಿವಮೊಗ್ಗೆಯಲ್ಲಿ ಮ||ಗಳಾದ ಸುಬ್ಬರಾಯರು, ಬಿ.ಸಿ. ಕೇಶವಯ್ಯನವರು, ಮಿ|| ಎಚ್. ಎಫ್. ಸ್ಟ್ರಿಕ್‌ಲಾಂಡ್‌ರವರು, ಎನ್. ಜೆ. ಕಾಡಪ್ಪನವರು, ಸಿ. ರಾಮಣ್ಣನವರು ಮತ್ತು ಮಿ|| ಸಯ್ಯದ್ ಮಹಮದ್‌ಸಾಬರು; ತುಮಕೂರಿನಲ್ಲಿ ಮ|| ಗಳಾದ ಟಿ.ಎಚ್. ಹನುಮಂತಯ್ಯನವರು, ಬಿ. ಕೇಶವಸಿಂಗ್‌ರವರು, ಟಿ. ರಾಮಚಂದ್ರರಾಯರು, ಜೆ. ಚಿನ್ನಪ್ಪನವರು, ಟಿ. ಸಿ. ರೇವಣ್ಣನವರು, ಮತ್ತೂ ಮಿ|| ಟಿ. ಮಹಮ್ಮದ್ ಇಸೂಫ್‌ರವರು; ಹಾಸನದಲ್ಲಿ ಮಿ|| ಮಹಮದ್ ರಜಾರವರು, ಮ|| ಗಳಾದ ಎಚ್. ಮುದ್ದಪ್ಪನವರು, ಎಚ್. ಮಹಾಲಿಂಗಣ್ಣನವರು, ದೊಡ್ಡ ಪಾಪಣ್ಣನವರು, ಬಿ. ಅಳಸಿಂಗ್ರಾಚಾರರು, ಮತ್ತೂ ಕೃಷ್ಣಸೆಟ್ಟರು, ಬೆಂಚ್ ಮ್ಯಾಜಿಸ್ಟ್ರೇಟರುಗಳಾಗಿ ಸರ್ಕಾರದವರಿಂದ ನಿಯಮಿಸಲ್ಪಟ್ಟಿರುತ್ತಾರೆ.

ತಲೂ, ಪೂರ್ವಾರ್ಥಗಳನ್ನು ಬೋಧಿಸುವ ವಚನಗಳು ಮಾತ್ರ ಪ್ರಮಾಣವೆಂತಲೂ ಹೇಳಿದರು. ಅದಕ್ಕೆ ಶ್ರೀಶ್ರೀಗಳವರಿಂದ ಅಪ್ಪಣೆಯಾದುದು ಏನೆಂದರೆ:—ಲೋಕಸಿದ್ಧವಾದ ಅರ್ಥಗಳನ್ನು ತಿಳಿಸುವ ವಚನಗಳೂ ಕೂಡ ಪ್ರಮಾಣಗಳೇ. ಪ್ರಮಾಣವೆಂದರೆ ವಸ್ತು ಹೇಗಿದೆಯೋ ಹಾಗೆಯೇ ಅದನ್ನು ತಿಳಿಸುವುದು ಎಂದರ್ಥ. ಅರ್ಥಗಳು ಲೋಕಸಿದ್ಧವಾಗಿದ್ದರೂ ಅವು ಹೇಗೆ ಇರುತ್ತವೆಯೋ ಹಾಗೆಯೇ ಅವುಗಳನ್ನು ತಿಳಿಸುವುದು ಪ್ರಮಾಣವಲ್ಲವೆಂದು ಹೇಳಲಾದೀತೆ? ಲೋಕಸಿದ್ಧವಾದ ಅರ್ಥಗಳನ್ನು ತಿಳಿಸುವ ವಚನಗಳಿಂದ ಪ್ರಯೋಜನವೇನು ಎಂಬ ವಿಚಾರವು ಒಂದುವೇಳೆ ಬರಬಹುದು ವಿನಾ ಅವುಗಳು ಪ್ರಮಾಣಗಳಲ್ಲವೆಂತ ಎಂದಿಗೂ ಹೇಳಲವಕಾಶವಿಲ್ಲವಲ್ಲಾ, ಎಂದು ನಿರೂಪಿಸಿ ಶ್ರುತಿಸ್ಮೃತ್ಯಾದಿಗಳ ವಚನಗಳು ಅಪೂರ್ವಾರ್ಥವನ್ನು ತಿಳಿಸುವುವಾಗಿದ್ದರೂ ಸರಿಯೆ ಸ್ವಪ್ರಯೋಜನವಾಗಿ ಲೋಕಸಿದ್ಧವಾದ ವಿಷಯಗಳನ್ನು ತಿಳಿಸುವವಾಗಿದ್ದರೂ ಸರಿಯೇ, ಅವು ಪ್ರಮಾಣಗಳೇ ಎಂದು ಸರ್ವರೂ ಒಪ್ಪಿದರು.

ಪೂರ್ವಪಕ್ಷದವರು ಪ್ರೌಢಾವಿವಾಹವು ಶಾಸ್ತ್ರೀಯವಾದದ್ದು; ಶಾಸ್ತ್ರಕ್ಕೆ ಎರಡರ್ಥವುಂಟು (೧) ಅದೃಷ್ಟಫಲ (೨) ದೃಷ್ಟಫಲ. ವಿವಾಹಕ್ಕೆ ಎರಡು ಫಲವುಂಟು, ದೃಷ್ಟಫಲ ಅದೃಷ್ಟಫಲ. ವಯಸ್ಸು ಮೊದಲಾದುವು ದೃಷ್ಟಫಲಸಾಧಕವು. ಮದುವೆಯಾದಮೇಲೆ ಮಕ್ಕಳುಮರಿ ಆಗುವುದು ದೃಷ್ಟಫಲವು. ಅದೃಷ್ಟಫಲವನ್ನು ಹೇಳುವ ಭಾಗದಲ್ಲಿ ಶಾಸ್ತ್ರಗಳನ್ನು ಬದಲಾಯಿಸಲಾಗದು. ಆದರೆ ಅದೃಷ್ಟಫಲವನ್ನು ಹೇಳುವ ಶಾಸ್ತ್ರಭಾಗಗಳನ್ನು ನಾವು ಧಾರಾಳವಾಗಿ ಬದಲಾಯಿಸಬಹುದು.

ಉತ್ತರವಾದಿಗಳು:—ಮದುವೆಯಾದಮೇಲೆ ಮಕ್ಕಳಾಗುವುದು ಮೊದಲಾದುದನ್ನು ದೃಷ್ಟಫಲವೆನ್ನುವಿರಲ್ಲವೆ? ಈ ವಿಧವಾದ ನಿಮ್ಮ ದೃಷ್ಟಫಲವನ್ನು ಪಡೆಯಲು ಮದುವೆಯೇ ಆಗಬೇಕೆ? ಮದುವೆಯಾಗದೇನೇ ಪರಸ್ತ್ರೀಯರಲ್ಲಿ ಮಕ್ಕಳಾಗುವುದಿಲ್ಲವೆ? ಇದಲ್ಲದೆ ದೃಷ್ಟಫಲವಾದ ಮಕ್ಕಳನ್ನು ಪಡೆಯಲು ಸಜಾತೀಯಸ್ತ್ರೀಯಲ್ಲೇ ಪಡೆಯಬೇಕೆ? ಅನ್ಯಜಾತಿ ಸ್ತ್ರೀಯರಲ್ಲಿ ಮಕ್ಕಳಾಗುವುದಿಲ್ಲವೆ? ಮತ್ತು ಅಸಗೋತ್ರದವಳಲ್ಲಿ ಮಕ್ಕಳಾಗಬೇಕೋ? ಸಗೋತ್ರದವಳಲ್ಲಿ ಮಕ್ಕಳಾಗುವುದಿಲ್ಲವೊ? ನಿಮ್ಮ ಮಾತು ನ್ಯಾಯವಾದುದಾಗಿಲ್ಲ. ಏಕೆಂದರೆ:—(೧) ವಿವಾಹವಾಗಿ ಮಕ್ಕಳನ್ನು ಪಡೆಯಬೇಕು ವಿವಾಹವಿಲ್ಲದೆ ಮಕ್ಕಳನ್ನು ಪಡೆಯಕೂಡದು (೨) ಸಜಾತೀಯಳನ್ನೇ ವಿವಾಹಮಾಡಿಕೊಳ್ಳಬೇಕು, ಅನ್ಯಜಾತಿಯವಳು ನಿಷಿದ್ಧ. (೩) ಅಸಗೋತ್ರದವಳನ್ನೇ ವಿವಾಹಮಾಡಿಕೊಳ್ಳಬೇಕು, ಸಗೋತ್ರದವಳನ್ನು ಮದುವೆಮಾಡಿಕೊಳ್ಳಕೂಡದು. (೪) ಹೀಗೆ ವಿವಾಹಿತರಾಗುವ ದಂಪತಿಗಳಿಂದ ಹುಟ್ಟುವ ಪುತ್ರರೇ ಪುತ್ರರು, ಅವರಿಂದಲೇ ಪಿತೃಗಳು ಉತ್ತೀರ್ಣರಾಗುತ್ತಾರೆ, ಇತರವಾದ ಮಕ್ಕಳಿಂದ ಈ ಫಲವು ಉಂಟಾಗುವುದಿಲ್ಲ. ಎಂಬ ಈ ನಾಲ್ಕು ವಿಷಯಗಳನ್ನೂ ಪರ್ಯಾಲೋಚಿಸಿನೋಡಿದರೆ, ಶಾಸ್ತ್ರರೀತ್ಯಾ ಅದೃಷ್ಟಫಲಕ್ಕೆ ಬೇರೆಯಾದ ಫಲವು ದೃಷ್ಟಫಲಕ್ಕೆಲ್ಲಿಂದ ಬಂತು? ನೀವು ಹೇಳುವ ದೃಷ್ಟಫಲವೆಂಬುವುದು ಮಾತ್ರ ಅದೃಷ್ಟಫಲವನ್ನೇ ಅನುಸರಿಸುವುದಾಗಿದೆ.

ತೀರ್ಮಾನ:—ಅದೃಷ್ಟಫಲವು ಮುಖ್ಯ ದೃಷ್ಟಫಲವು ನಮ್ಮಲ್ಲಿ ತಾನಾಗಿಯೇ ಬರತಕ್ಕದ್ದಾಗಿರುತ್ತದೆಯಲ್ಲವೆ? ಧಾನ್ಯಕ್ಕಾಗಿ ಮಾಡಿದ ಕೃಷಿಯಿಂದ ನಮಗೆ ಹುಲ್ಲು ತನಾಗಿಯೇ ಹೇಗೆ ಲಭಿಸುತ್ತದೆಯೋ ಹಾಗೆಯೇ ದೃಷ್ಟಫಲವು ನಮಗೆ ತಾನಾಗಿಯೇ ಬರತಕ್ಕದ್ದಾಗಿರುತ್ತದೆ.

ಪೂ. ಪ.—ಚಿಂತೆಯಿಲ್ಲ, ದೃಷ್ಟಾದೃಷ್ಟಫಲವಿಚಾರವನ್ನು ಬಿಟ್ಟುಬಿಡೋಣ. ವಿವಾಹದಲ್ಲಿ ಮೊದಲನೆಯದಿನ ವರನು ವಧುವನ್ನು ಕುರಿತು ವಧುವಿನ ತಿಳುವಳಿಕೆಗೆ ಕೆಲವು ಮಂತ್ರಗಳನ್ನು ಹೇಳುತ್ತಾನೆ ಆ ಮಂತ್ರಗಳನ್ನು ಕೇಳಲೂ ಕೇಳಿತಿಳಿದುಕೊಳ್ಳಲೂ ಸಮರ್ಥಳಾಗಿರಬೇಕಾದರೆ ವಧುವು ಪ್ರೌಢೆಯಾಗಿಯೇ ಇರಬೇಕೆಂದರ್ಥವಾಗುತ್ತದೆಯೇ ಹೊರತು, ಕನ್ನೆಯೆನಿಸಿಕೊಳ್ಳುವ ಚಿಕ್ಕ ೮ ವರ್ಷದ ಹುಡುಗಿಗೆ ಅಂತಹ ಸಾಮರ್ಥ್ಯವಿರುವದೇ ಇಲ್ಲ. ಆದಕಾರಣ ಪ್ರೌಢಾವಿವಾಹವು ಸಿದ್ಧಿಸುವುದು.

ಉತ್ತರ:—ತಾವು ಹೇಳುವ ಈ ಮಾತುಗಳಿಗೂ ಉದ್ದಿಷ್ಟವಿಷಯಕ್ಕೂ ಸಾಮರಸ್ಯವೇ ಇಲ್ಲವಲ್ಲಾ! ಬಾಲ್ಯವಿವಾಹವೇ ತಪ್ಪು ಪ್ರೌಢಾವಿವಾಹವೇ ಶಾಸ್ತ್ರವಿಹಿತವಾದದ್ದು ಎಂಬುದು ತಮ್ಮ ಉದ್ದೇಶವಾಗಿರುವಲ್ಲಿ, ತಾವು ವಿವಾಹವಾಗುವ ಹೆಣ್ಣಿಗೆ ಮಂತ್ರಾರ್ಥಜ್ಞಾನವಿಲ್ಲ; ಆದುದರಿಂದ ಪ್ರೌಢಾವಿವಾಹವು ಸಿದ್ಧವಾಯಿತು ಎಂಬ ತೀರ್ಮಾನಕ್ಕೆ ಬಂದಿರಿ. ನಿಮ್ಮ ವಾದದಿಂದ ಪ್ರೌಢಾವಿವಾಹವೆ ಬಾಲ್ಯವಿವಾಹವೆ? ಏತೇನ ವಿವಾಹಕಾಲವು ಎಂದಿಗೂ ನಿರ್ಣಯವಾಗಲಾರದು. ಏಕೆಂದರೆ—ನೀವು ಈಗ ಮದುವೆಮಾಡುವ ೮ ವರ್ಷದ ಹುಡುಗಿಗೆ ಮದುವೆಯಲ್ಲಿ ವರನು ಹೇಳುವ ಸಂಸ್ಕೃತಭಾಷೆಯ ಮಂತ್ರದ ಅರ್ಥವು ತಿಳಿಯುವುದಿಲ್ಲವೆಂದು ಹೇಳಿದಿರಿ. ೮ ವರುಷದ ಹುಡುಗಿ ಹಾಗಿರಲಿ ೧೬-೨೦ ವರ್ಷದ ಕನ್ನೆಗೆ ಈಗ ಮದುವೆಮಾಡಿದಾಗ್ಯೂ ಅವಳಿಗೂ ಮಂತ್ರಾರ್ಥಜ್ಞಾನವಿಲ್ಲದಿರುವುದು ಅನೇಕವಾಗಿ ಕಂಡುಬಂದಿದೆ. ಕಡೆಗೆ ವಧುವಿನ ಮಾತು ಹಾಗೆ ಬಿಡಿ. ಮಂತ್ರವನ್ನು ಹೇಳುವ ವರನಿಗಾದರೂ ಈ ಕಾಲದಲ್ಲಿ ಮಂತ್ರಾರ್ಥಜ್ಞಾನವುಂಟೊ? ಅವನಿಗೂ ಇಲ್ಲವಲ್ಲಾ! ಆದುದರಿಂದ ಬಾಲೆಯರಿಗೆ ಮಂತ್ರಾರ್ಥಜ್ಞಾನವಿಲ್ಲ ಆದುದರಿಂದ ಬಾಲ್ಯವಿವಾಹವು ಸಿದ್ಧಿಸುವುದಿಲ್ಲ. ಪ್ರೌಢೆಯಾದರೆ ಮಂತ್ರಾರ್ಥಜ್ಞಾನವಿರುತ್ತದೆ ಆದುದರಿಂದ ಪ್ರೌಢಾವಿವಾಹವು ಸಿದ್ಧಿಸುವುದು ಎಂಬ ನಿಮ್ಮ ಎರಡು ವಾದಗಳೂ ವ್ಯರ್ಥವಾದವುಗಳು. ಪರಂತು ಕ್ರಮವಾಗಿ 3 ನೇ ಅಥವಾ 5 ನೇ ವರ್ಷದಲ್ಲಿಯೇ ವಿದ್ಯಾಭ್ಯಾಸಕ್ಕೆ ಆರಂಭಿಸಿದರೆ ಬಾಲೆಯರಿಗೆ ಕೂಡ ೮ ವರ್ಷಕ್ಕೆ ಮಂತ್ರಾರ್ಥಜ್ಞಾನವುಂಟಾಗಲಾರದು. ಇದೂ ಅಲ್ಲದೆ ವಿದ್ಯಾಭ್ಯಾಸದ ಮಾತು ಹಾಗಿರಲಿ. ನಮ್ಮ ಮನೆಗಳಲ್ಲಿ ನಮ್ಮ ಬಾಲಕ ಬಾಲಕಿಯರಿಗೆ ಮಾತೃಭಾಷೆಯು ಚೆನ್ನಾಗಿಯೇ ಬರುತ್ತದೆಯಲ್ಲವೆ? ಎಲ್ಲರೂ ಆಡತಕ್ಕ ಮಾತುಗಳನ್ನು ತಿಳಿಯುವರು. ಅದಕ್ಕೆ ಸದುತ್ತರವನ್ನು ಕೊಡುವರು. ಹೀಗಿರುವಲ್ಲಿ ನಮ್ಮ ಶಾಸ್ತ್ರಗಳು ಹುಟ್ಟಿದಾಗ್ಯೆ ನಮ್ಮ ಪೂರ್ವಿಕರ ಮನೆಗಳಲ್ಲಿ ಸಂಸ್ಕೃತಭಾಷೆಯೇ ಮಾತೃಭಾಷೆಯಾಗಿದ್ದದ್ದರಿಂದ ವರನು ಸಂಸ್ಕೃತದ ಮಂತ್ರವನ್ನು ಹೇಳುವುದಕ್ಕೂ ವಧುವು ಆ ಮಂತ್ರದ ಅರ್ಥವನ್ನ ತಿಳಿಯುವುದಕ್ಕೂ ಸಮರ್ಥರೇ ಆಗಿದ್ದರು. ನಾವಾದರೋ ನಮ್ಮ ಮಾತೃವನ್ನು(ಭಾಷೆ) ಬಿಟ್ಟುಬಿಟ್ಟು ಸಪತ್ನಿ ಮಾತೃ (ಭಾಷೆ) ಗಳನ್ನುಮಾತ್ರ ಸೇವಿಸಿ ಸಂಸ್ಕೃತಭಾಷೆಯ ಮಂತ್ರಾರ್ಥವು ನಮಗೂ ನಮ್ಮ ಬಾಲಕಬಾಲಕಿಯರಿಗೂ ಆಗುವುದಿಲ್ಲವೆಂದು ಪೇಚಾಡುವುದು ಯಾವನ್ಯಾಯ?

ನಿರ್ಣಯ:—ಮಂತ್ರಾರ್ಥಜ್ಞಾನವಿಲ್ಲವೆಂಬಮಾತಿನಿಂದ ಪ್ರೌಢಾವಿವಾಹಕ್ಕೆ ಸಾಧಕವಾಗುವುದಿಲ್ಲ.

ಪೂ.ಪ:—ಪ್ರೌಢಾವಿವಾಹವೇ ಶಾಸ್ತ್ರದಲ್ಲಿ ಉಕ್ತವಾಗಿರುತ್ತದೆ ಎಂಬುವುದಕ್ಕೆ ವಿವಾಹದ ನಾಲ್ಕನೇ ದಿನ ವಧೂವರರು ಪರಸ್ಪರ ನಿರೀಕ್ಷಣೆಮಾಡುವಕಾಲದಲ್ಲಿ ಹೇಳುವ ಮಂತ್ರವು ಬಲವಾದ ಸಾಧಕವಾಗಿರುತ್ತದೆ. "ಪ್ರಜಾಯಸ್ವಪ್ರಜಯಾಪುತ್ರಕಾಮಾ" "ಪ್ರಜಾಯಸ್ವಪ್ರಜಯಾಪುತ್ರಕಾಮೆ" ಎಂದು ಮೊದಲಾಗಿ ಹೇಳುವ ಸಂಭೋಗಕಾರ್ಯಗಳು ಬಾಲೆಯರಿಗೆ ಸಂಭವಿಸಲಾರವಾದಕಾರಣ ಪ್ರೌಢಾವಿವಾಹವು ಊಹ್ಯವು.

ಉತ್ತರ:—ನೀವು ಹೇಳಿದ ಮಂತ್ರದಲ್ಲಿರುವ ಕ್ರಿಯಾಪದವು ದಶ "ಲ" ಕಾರಗಳಲ್ಲಿ ಯಾವ "ಲ" ಕಾರವಾಗುವುದು?

ಪೂ.ಪ:—(ಒಬ್ಬರಮುಖವನ್ನು ಒಬ್ಬರು ನೋಡುತ್ತಾ ತಲೆ ಕೆಳಕ್ಕೆ ಬೊಗ್ಗಿಸಿಕೊಂಡು ತೂಷ್ಣೀಂಭಾವವನ್ನವಲಂಬಿಸಿಬಿಟ್ಟರು,)

ಉ. ವಾದಿ:—ಅಲ್ಲಿನ ಕ್ರಿಯಾಪದವು 'ಲೋಟು' ಪ್ರಯೋಗವಾಗಿರುತ್ತದೆ. ಲೋಟು ಪ್ರಯೋಗವು ಯಾವಾಗಲೂ ಪ್ರಾರ್ಥನಾರ್ಥವನ್ನು ಅಂದರೆ ಮುಂದೆ ಆಗುವ ಅರ್ಥವನ್ನು ಸೂಚಿಸುತ್ತಾದುದರಿಂದ:—"ಮುಂದೆ ಹೀಗೆ ಸಂಭೋಗಮಾಡೋಣ" ಎಂದು ಕೋರಿಕೆಗಳನ್ನು ಸೂಚಿಸುತ್ತದೆಯೇ ಹೊರತು ವಿವಾಹದ ನಾಲ್ಕನೇ ದಿವಸವೇ ಸಂಭೋಗಮಾಡಬೇಕೆಂಬ ಅರ್ಥವು ಎಂದಿಗೂ ಆಗುವುದಿಲ್ಲ; ಬಹುಮಾತಿನಿಂದೇಕೆ "ಪ್ರಜಾಯಸ್ವ" ಅಂದರೆ ಮಕ್ಕಳನ್ನು ಪಡಿ ಎಂಬುವ ವಾಕ್ಯವು ಪ್ರಾರ್ಥನಾರೂಪವಾದ ಮುಂದೆ ಆಗುವ ಕಾರ್ಯಕ್ಕೆ ಅನ್ವಯವಾಗದೆ ಸದ್ಯಃಕಾರ್ಯವನ್ನೂ ಸದ್ಯಃ ಫಲವನ್ನೂ ಸೂಚಿಸುವುದಾದರೆ ವಿವಾಹಕಾಲದಲ್ಲಿಯೇ ಕನ್ಯೆಯು ೯ ತಿಂಗಳು ಗರ್ಭಿಣಿಳಾಗಿ ಪ್ರಸವಕಾಲಪ್ರಾಪ್ತವಾಗಿರಬೇಕಾಗುತ್ತದೆ, ಹಾಗೂ ನೋಡಿರಿ ವಿವಾಹದ ಪ್ರಥಮದಿನವೇ ಪ್ರಧಾನಹೋಮಕಾಲದಲ್ಲಿ ಹೇಳುವ ಮಂತ್ರದಲ್ಲಿ "ದ್ಯೌಸ್ತೇಪೃಷ್ಟಂ ರಕ್ಷತ್‌ವಾಯೂರೂರೂ ಅಶ್ವಿನೌ ಚ ಸ್ತನಂಧಯಂತಂ ಸ ವಿತಾಭಿರಕ್ಷತು" ಎಂದು ವರನು ವಧುವನ್ನು ಉದ್ದೇಶಿಸಿ ಹೇಳುವಾಗ್ಯೆ "ನಿನ್ನ ಹಾಲು ಕುಡಿಯುವ ಮಗುವನ್ನು ಸೂರ್ಯನು ರಕ್ಷಿಸಲಿ" ಎಂದು ಹೇಳುವನು. ನಿಮ್ಮ ಪೂರ್ವಪಕ್ಷದವರ ವಾದವು ಸಾಧುವಾಗುವಲ್ಲಿ ವಿವಾಹ ಪ್ರಥಮದಿನವೇ ವಧುವಿಗೆ ಹಾಲುಕುಡಿಯುವ ಮಗುವೂ ಒಂದು ಇದ್ದೇ ಇರಬೇಕಾಯಿತು. (ಈ ವಿಷಯದಲ್ಲಿ ಇನ್ನೊಂದು ಪ್ರಮಾಣವನ್ನು ಕೊಡುತ್ತೇನೆ) ಏನೆಂದರೆ:—"ರಯಿಂಚ ಪುತ್ರಾಂಶ್ಚಾದಾದಗ್ನಿಃ ಮಹ್ಯಮಥೋ ಇಮಾಂ"

ಪೂ. ಪ:—ಎಲ್ಲರೂ ಮೌನವಾಗಿ ನಿರುತ್ತರರಾದರು. (ಅವರಲ್ಲೊಬ್ಬರು ಬುದ್ಧಿವಂತರು) ತಾವು ಹೇಳುವುದೆಲ್ಲಾ ನಿಜ. ಆದರೆ ಆಶೀರ್‌ರೂಪವಾಗಿ ಮುಂದೆ ಆಗುವ ಫಲವನ್ನು ಸೂಚಿಸುವುದೇ ಮಂತ್ರಾರ್ಥವಾಗಿದ್ದಾಗ್ಯೂ ಅಂತಹ ಮುಂದಿನಫಲವನ್ನೇ ಅಪೇಕ್ಷಿಸುವ ಯೋಚನೆಯಾದರೂ ಇರಬೇಕಾದಲ್ಲಿ ವಧುವು ಪ್ರೌಢೆಯಾಗೇ ಇರಬೇಕು. ಬಾಲೆಯರಿಗೆ ಅಂಥ ಯೋಚನೆಯೂ ಇರುವುದಿಲ್ಲ.

ಉತ್ತರ:—ಮಕ್ಕಳನ್ನು ಪಡೆದವರೂ ಅಥವಾ ಮಕ್ಕಳ ಆಟವನ್ನು ಗಮನಿಸಿ ನೋಡಿದವರೂ ಇಂತಹ ಮಾತನ್ನು ಎಂದಿಗೂ ಆಡುವುದಿಲ್ಲ. ಬಾಲಕರು ಆಟವಾಡುವಾಗ್ಗೆ ಒಬ್ಬನು ತಾನು "ರಾಜ" ನೆಂತಲೂ, ಇಬ್ಬರು "ಲಾಯರೆಂತಲೂ" ಒಬ್ಬನು "ಜಡ್ಜಿ" ಎಂತಲೂ, ಒಬ್ಬನು "ಕಳ್ಳ" ನೆಂತಲೂ ಆಟವಾಡುವುದಿಲ್ಲವೇ? ಹಾಗೆಯೇ ಬಾಲಕಿಯರು ಬೊಂಬೆಗಳಿಗೆ 'ಮದುವೆ' ಯೆಂತಲೂ ಅವುಗಳಿಗೆ 'ಸೀಮಂತ' ವೆಂತಲೂ 'ಪ್ರಸ್ತ' ವೆಂತಲೂ 'ಗರ್ಭ' ವೆಂತಲೂ ಮಕ್ಕಳು ಹುಟ್ಟಿದುವೆಂತಲೂ ಆ ಮಕ್ಕಳಿಗೆ 'ಲಾಲಿ' ಜೋಗುಳವೆಂತಲೂ ಆಡುವುದಿಲ್ಲವೆ? ಅವರಿಗೆ ಈ ಮೇಲೆಕಂಡ ವಿಷಯಗಳ ಜ್ಞಾನವೇ ಇಲ್ಲದೆ ಆಡುತ್ತವೆಯೆ?

ತೀರ್ಮಾನ:—(ಪೂರ್ವಪಕ್ಷದವರು ಸುಮ್ಮನಾದರು.)

ಉ.ವಾ:—ಈವಿಧವಾಗಿ ಸಿಕ್ಕಾಬಟ್ಟೆಯಾಗಿ ಚರ್ಚಿಸುವುದು ಶಾಸ್ತ್ರಸಮ್ಮತವಲ್ಲ. ಇದರಿಂದ ಕಾರ್ಯಕಾರಿಯೂ ಆಗುವುದಿಲ್ಲ. ಈಗ ಒಂದಂಶವನ್ನು ನಿಷ್ಕರ್ಷೆಮಾಡೋಣ. ನಾವು ಮಾಡುವ ಚರ್ಚೆಯು ಶಾಸ್ತ್ರಪಂಕ್ತಿಯನ್ನು ಹಿಡಿದ ಚರ್ಚೆಯೋ? ಅಥವಾ ಶಾಸ್ತ್ರವನ್ನು ಬಿಟ್ಟ ಚರ್ಚೆಯೋ? ಶಾಸ್ತ್ರವನ್ನು ಬಿಟ್ಟು ಮಾಡುವ ಯುಕ್ತಿವಾದಕ್ಕೂ ನಾವು ಸಿದ್ಧರಾಗಿರುತ್ತೇವೆ. ಆದರೂ ಶಾಸ್ತ್ರವನ್ನು ಹಿಡಿದ ಮಾತೇ? ಬಿಟ್ಟ ಮಾತೇ? ಎಂಬುವುದನ್ನು ಮೊದಲು ನಿಷ್ಕರ್ಷೆಮಾಡಿಕೊಳ್ಳೋಣ.

ಪೂ, ಪ:—"ಶಾಸ್ತ್ರದಲ್ಲಿ ದೃಷ್ಟಫಲವನ್ನು ಹೇಳುವ ಭಾಗವನ್ನು ಬಿಟ್ಟೇ ನಾವು ಮಾತನಾಡಬೇಕು. ಅದೃಷ್ಟಫಲವನ್ನು ಹೇಳುವ ಭಾಗವನ್ನು ಅಂಗೀಕಾರಮಾಡಿಕೊಳ್ಳಬೇಕು." (ಎಂದು ಮೊದಲೆಯೇ ಚರ್ಚೆಯಾಗಿ ನಿಷ್ಕರ್ಷೆಯಾಗಿದ್ದರೂ ಪುನಃ ಹೇಳಿದ್ದನ್ನೇ ಹೇಳಲಾರಂಭಿಸಿದರು.)

ಉ.ವಾ:—ಇದಕ್ಕೆ ಉತ್ತರ ಹಿಂದಕ್ಕೆಯೇ ಆಗಿದೆ. ಪುನಃ ಅದೇ ಚರ್ಚೆಯಿಂದ ಪ್ರಯೋಜನವೇನು?

ಪೂ. ಪ:—ಹೌದು; ಶಾಸ್ತ್ರವನ್ನು ಹಿಡಿದೇ ನಮ್ಮ ಚರ್ಚೆಯೆಲ್ಲವೂ ನಡೆಯಬೇಕೆಂದೇ ಇಟ್ಟುಕೊಳ್ಳೋಣ. (ಹಾಗಾದರೆ ರಾಘವೇಂದ್ರಾಚಾರ್ಯರೇ ಈ ಮಾತನ್ನು ಬರೆದುಕೊಳ್ಳಿರಿ. ಏಕೆಂದರೆ ಮುಂದೆ ಚರ್ಚೆ ನಡೆಯುತ್ತಾ ನಡೆಯುತ್ತಾ ಹಿಂದೆ ನಿಷ್ಕರ್ಷೆಯಾದದ್ದನ್ನು ಇಲ್ಲವೆಂದು ಯಾರಾದರೂ ಎತ್ತಬಹುದು) ಎಂದಮೇಲೆ ಆಚಾರ್ಯರು ಬರೆದುಕೊಂಡರು.

ಪೂ.ಪ:—ಇಲ್ಲ, ಇಲ್ಲ, ಶಾಸ್ತ್ರವನ್ನು ಬಿಟ್ಟೂ ಮಾತನಾಡಬೇಕಾಗುತ್ತದೆ. ಏಕೆಂದರೆ ಒಂದೊಂದು ಶಾಸ್ತ್ರದಲ್ಲಿ ಒಂದೊಂದುವಿಧವಾಗಿ ಹೇಳುತ್ತಧ. ಹೀಗೆ ಶಾಸ್ತ್ರಗಳು ಭಿನ್ನಾರ್ಥವಾದಲ್ಲಿ ಒಂದು ಶಾಸ್ತ್ರವನ್ನು ಬಿಟ್ಟು ಮತ್ತೊಂದುಶಾಸ್ತ್ರವನ್ನೇ ಅವಲಂಬಿಸಬೇಕಾಗುತ್ತದೆ. ಆದುದರಿಂದ ಅಂತಹ ಸಂದರ್ಭಗಳಲ್ಲಿ ಶಾಸ್ತ್ರವನ್ನೇ ಬಿಟ್ಟು ಮಾತನಾಡಬೇಕಾಗುತ್ತದೆ. "ರಾಘವೇಂದ್ರಾಚಾರ್ಯರೇ ಈಗ ಬರೆದದ್ದನ್ನು ಅಳಿಸಿಬಿಡಿ" ಎಂದು ಹೇಳಿ ಪೂರ್ವಪಕ್ಷದವರನ್ನೇ ಕುರಿತು "ನಿಮ್ಮ ವಾದವು ಅತ್ಯಸಂಗತವಾದುದು, ವಿಷಯವಿಭಾಗಜ್ಞಾನವು ನಿಮಗೆ ಇರುವಂತೆ ಕಾಣುವುದಿಲ್ಲ. ಭಿನ್ನಾರ್ಥಶಾಸ್ತ್ರಗಳಲ್ಲಿ ಒಂದನ್ನು ಹಿಡಿಯುವುದೂ ಒಂದನ್ನು ಬಿಡುವುದೂ ಕೂಡ ಶಾಸ್ತ್ರಾರ್ಥವಿಚಾರವೇ ಹೊರತು ಬೇರೆ ಆಗುವುದಿಲ್ಲ. ಶಾಸ್ತ್ರಗಳಲ್ಲಿ ಭಿನ್ನಾರ್ಥ ಬಂದಾಗ್ಯೆ ಅವುಗಳನ್ನು ಪರಸ್ಪರ ಸಮಯೋಗಿಸುವಂತೆ ಅರ್ಥಮಾಡುವುದೂ ಶಾಸ್ತ್ರಾರ್ಥವಿಚಾರವಲ್ಲದೆ ಬೇರೆಯಲ್ಲ. (೧) ಶಾಸ್ತ್ರವನ್ನು ಹಿಡಿದ ಮಾತೇ, ಬಿಟ್ಟುಮಾತೇ? (೨) ಶಾಸ್ತ್ರವೆಂದರೆ ಯಾವುದು? 'ವೇದ' ಒಂದೇ ಶಾಸ್ತ್ರವೇ ಶ್ರುತಿ ಸ್ಮೃತಿ ಪುರಾಣಗಳೆಲ್ಲವೂ ಶಾಸ್ತ್ರವೇ? (೩) ಶಾಸ್ತ್ರದಲ್ಲಿ ಭಿನ್ನಾರ್ಥ ತೋರಿಬಂದರೆ ಅವುಗಳಿಗೆ ಸಮಂಜಸಮಾಡುವುದು ಹೇಗೆ? ಹೀಗೆ ಕ್ರಮಕ್ರಮವಾಗಿ ವಾದಿಸಬೇಕೇ ಹೊರತು ಹಿಂದುಮುಂದುಮಾಡಿಕೊಂಡು ಮುಂದೆ ಹಿಂದುಮಾಡಿಕೊಂಡು ಮಾತನಾಡುವುದು ಯುಕ್ತವಲ್ಲ. (ಎಂದುಹೇಳಿ ನಿಶ್ಶಬ್ದರಾಗಿ ತಲೆಬೊಗ್ಗಿಸಿಕೊಂಡು ಕುಳಿತುಬಿಟ್ಟರು.)

ಉ.ವಾ:—ಹೀಗೆ ಸುಮ್ಮನೆಕುಳಿತರೆ ಹೇಗಾಗಬೇಕು? ಎಲ್ಲಿಗಾದರೂ ನೆಲೆಗೆ ಬಂದು ನಿಲ್ಲಬೇಕು. ನಿಂತಮೇಲೆ ಮುಂದಿನ ವಿಷಯ ಚರ್ಚೆಯಾಗಬಹುದು.

ಪೂ. ಪ:—ಹಾ ಸರಿಯೆ, ಹೂಸರಿಯೆ, ಶಾಸ್ತ್ರವನ್ನು ಹಿಡಿದೇ ಮಾತನಾಡುವುದು ಅನ್ಯಥಾ ಇಲ್ಲ.

ಉ. ವಾದಿಗಳು:—ಇದು ಖರೇವೋ ಖರೇವೋ?

ಪೂ. ಪ:—ಹೌದು, ಇದೇ ಠರಾವು. 'ರಾಘವೇಂದ್ರಾಚಾರ್ಯರೇ ಈಗ ಆಖೈರ್ ಠರಾವಂತೆ; ಈಗಲಾದರೂ ಬರೆದುಕೊಳ್ಳಿರಿ' ಎಂದುಹೇಳಿ, ಪೂರ್ವಪಕ್ಷದವರನ್ನೇ ಕುರಿತು 'ಶಾಸ್ತ್ರವನ್ನೇ ಹಿಡಿದು ಮಾತನಾಡುವುದೆಂದು ನಿಷ್ಕರ್ಷೆಯಾಯಿತಲ್ಲವೆ? ನಿಮ್ಮ ಪ್ರೌಢಾವಿವಾಹಕ್ಕೆ ಸಾಧಕವಾದ ಪ್ರಮಾಣಗಳ್ಯಾವುವು? ಅವುಗಳನ್ನು ಈಗ ಉದಾಹರಿಸಿದರೆ ಇನ್ನು ಚರ್ಚೆ ನಡೆಯಬಹುದು.' ಎಂದು ಹೇಳಿದರು.

(ಸಶೇಷ)

ಶಕ್ತ ವನಸ್ಪತಿಯಿಂದಲೇ ತಯಾರಿಸಿದ
ಧಾತುಪೌಷ್ಟಿಕ ಲೇಹವು.

22

ಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮವು. ಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಂಗಸರು, ವಾತರೋಗವುಳ್ಳವರು, ರಕ್ತಪುದ್ರೇಕವಾದವ, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವ, ಮೇಹಸಂಬಂಧದ ರೋಗವಿದ್ದವರು, ಧಾತುಹೋಗು ವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನ ಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾ ಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇ ಕ, ಮನೋತ್ಸಾಹಕ, ಗರ್ಮಿ, ಚಾಕಿ, ಗುಪ್ತಪ್ರದೇಶದ ಲೆ ಹುಟ್ಟಿಗುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ತ್ರದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದ ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗು ದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆ ವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೯-೦. ೮೦ ತೊಲೆಗೆ ರೂಪಾಯಿ ೩ ಬೀಳುವದು. ಟ ಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡ ರವಾನಿಸುವೆವು.

ಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

,ಮಾರದಸಿ ಪ್ರಸವಾಪ್ರಕ್ತೆಟಕ್ಕದ್ಧ", ೨

5

ಇಂಗ್ಲೀಷಶಿಕ್ಷಕ—ಈ ಪುಸ್ತಕದ ಅಭ್ಯಾಸದಿಂದ ಕನ್ನಡಿಗರಿಗೆ ನಾಲ್ಕಾರು ತಿಂಗಳಲ್ಲಿ, ಶಿಕ್ಷಕನ ಸಹಾಯವಿಲ್ಲದೆ ಸ್ವತಃ ಇಂಗ್ಲೀಷಮಾತು ಕಲಿಯಲಿಕ್ಕೆ ಬರುವದು. ಬೆಲೆ ೧೦ ಆಣೆ ಪ. ಖ. ಬೇರೆ ಒಮ್ಮೆಲೆ ೧೦ ಪ್ರತಿಗಳನ್ನು ತರಿಸಿಕೊಂಡರೆ, ಒಂದು ಪ್ರತಿ ಕಮಿಶನ್ ದೊರೆಯುವದು. ಪ್ರತಿಗಳು ತೀರ ಸ್ವಲ್ಪ ಉಳಿದಿವೆ. ಗ್ರಾಹಕರು ತೀವ್ರ ತರಿಸಿಕೊಳ್ಳತಕ್ಕದ್ದು.

ವಿಳಾಸ..ನ. ಸು ಬಾಗಲ, ಬನ್ನಿಕೊಪ್ಪ, ಪೋ. ಮುಂಡರಗಿ ಜಿಲ್ಲಾ ಧಾರವಾಡ.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದಪಠಗಳು

85

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಠಗಳೂ, ವಿವಿಧ ಕದನಗಳ ಪಠಗಳೂ ಯುದ್ಧದ ಹಡಗುಗಳ ಪಠಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಠಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯಇಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಠಗಳು! ಇದರಲ್ಲಿ ಜಾರ್ಜ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಠಗಳು. ಕ್ರಯ ೨ ಆಣೆ; ವಿ. ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ:—ದಿ ಜನರಲ್ ಏಜನ್ಸಿ. ಮೈಸೂರು

೫೦೦ ರೂಪಾಯಿಗಳ ಬಹುಮಾನ

ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್‌ಬ್ಯಾಂಕಿನಲ್ಲಿ ಮೇಲ್ಕಂಡ ೫೦೦ ರೂಪಾಯಿಗಳನ್ನು ೧೯೧೫ ನೆ ಇಸವಿ ಮಾರ್ಚಿ ತಾ॥ ೧೫ ರಲ್ಲಿ ಡಿಪಾಜಿಟ್ಟು ಇಟ್ಟಿರುತ್ತೇವೆ. 3

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ
ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥ ಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂ ವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್‌ದೇಶದ ಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಸಾಲಾಮಿಸ್ರಿಯ ಧಾರಣೆ ು ಜಾಸ್ತಿಯಾಗಿರುವದರಿಂದ ಅನೇಕರು ಉರುಳುಗಡ್ಡೆ, ಕಾಸುಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾ ಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೇ ಅಥವಾ ರೆ ತರಹಾದ್ದೇ ಎಂಬುವದು ತಿಳಿದುಬರುತ್ತದೆ.

ಸಾಲಾಮಿಸ್ರಿ ಮುರಬ್ಬಾವು—ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವುದು.
ಸಾಲಾಮಿಸ್ರಿ ಮುರಬಾವು—ನಿದ್ರೆಯಲ್ಲಿ ಧಾತುವು ಹೋಗುವುದನ್ನು ನಿಲ್ಲಿಸುವುದ.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಧಾತುಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕ್ಷಣ ಕ್ಷಣಕ್ಕು ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ವೃದ್ಧಿಪಡಿಸುವದು.
ಸಾಲಾಮಿಸಿ ಮುರಬ್ಬಾವು—ಶ್ವಾಸಖಾಸರೋಗಗಳನ್ನು ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹೊಟ್ಟೆಯಲ್ಲಿರುವ ಜ್ವರದಗಡ್ಡೆ ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೆಟ್ಟುಹೋಗಿರುವ ರಕ್ತವನ್ನು ಶುದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬಾವು—ಹಳೆತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು.
ಸಾಲಾಮಿಸ್ರಿ ಮುರಬ್ಬಾವು—ಉತ್ಸಾಹ, ಧೈರ್ಯ, ಬುದ್ಧಿಕುಶಲತೆ, ಶರೀರಕಾಂತಿಯನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು—ತಾಂಬ್ರ, ಬೆಳ್ಳಿ, ಮತ್ತು ಭಂಗಾರ ಭಸ್ಮಕ್ಕಿಂತಲೂ ಉತ್ತಮವಾದುದು.
ಸಾಲಾಮಿಸ್ರಿ ಮುರಬ್ಬಾವು—ಸ್ತ್ರೀ ಸಂಗಕ್ಕೆ ಮೊದಲೆ ಧಾತು ಸ್ಖಲನವಾಗುವದನ್ನು ನಿಲ್ಲಿಸುವದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪುರಾ ಗುಣಕೊಡುತ್ತದೆ. ೨-೩ ಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಸಾಲಾಮಿಸ್ರಿ" ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂ ೆ ನನ್ನಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ ಕ್ಕೆ ಕ್ರಯ ೨-೦-೦ ರೂಪಾಯಿ. ಟಪ್ಪಾಲು ರ್ಚು ೧ ಡಬ್ಬಿಯಿಂದ ಡಬ್ಬಿಗಳ ವರೆಗೆ ೬ ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ವಿಳಾಸ:—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
೫, ಅವೆನ್ಯೂ ರೋಡ್ ಬೆಂಗಳೂರುಸಿಟಿ,

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕಾರ್ಯ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿ ಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧-೦-೦ ರೂ. ಕೊಡಬೇಕಾಗುವುದು ಕೆಂಪು, ಹಸುರು, ನೀಲಿ, ಬ್ರಾಂಜ್‌ಬಲ್ಲ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರದ ಬಣ್ಣದಿಂದ ಬಿಳಿ ಗ್ಲೇಜು ಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨-೦-೦; ಅನಂತರ ಪ್ರತಿ ೧೦೦ಕ್ಕೂ ೦-೧೨-೦; ಹಳದೀ ಗ್ಲೇಜ್ ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨-೨-೦; ಅನಂತರ ಪ್ರತಿ ೧೦೦ ಕ್ಕೂ ೦-೧೪-೦; ಹಳದಿ ರಫ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦-೬-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು,

ಮ್ಯಾನೇಜರ್,
ಕಾರ್ಯಪ್ರೆಸ್, ಮೈಸೂರ್.

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹಧೂಪರ್ತಿ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್ ಸನ್ಸ್ 4
ಸುಗಂಧಕಾರಿ, ಮೈಸೂರು

ಬಿಸಿಲುಕಾಲಕ್ಕೆ 33

ಬಲ್ಲರಿಗೂಬೇಕು

ಅಮೃತಾಮಲಕತೈಲ:—ವಿಧವಿಧವಾದ ತಲೆನೋವು, ಶರೀರವು ಬೆಂಕಿಯಂತಿರುವುದು, ತಲೆತಿರಗು, ಕಣ್ಣುರಿ. ಕಣ್ಣು ಕೆಂಪು, ಕಣ್ಣು ಮಂಜು, ಕಣ್ಣಿನಲ್ಲಿ ನೀರು ಸುರಿಯುವುದು, ರಾತ್ರಿ ನಿದ್ರೆಬಾರದಿರುವುದು ಇವುಗಳನ್ನು ೧-೨ ಅಭ್ಯಂಗನದಿಂದಲೇ ಗುಣಮಾಡಿ ಬುದ್ಧಿಶಕ್ತಿಯನ್ನು ಹೆಚ್ಚಿಸುತ್ತದೆ. ಬಿಸಿಲುಕಾಲಕ್ಕೆ ಇದು ಅಮೃತವೇಸರಿ. ಎಂಟು ಅಭ್ಯಂಗನಕ್ಕೆ ಆಗುವ ತೈಲ ೦-೮-೦. ೧ ಡಜ್ಜ ೫-೦-೦.

ಆಮೋದಿನಿ:—ಅಮೋಘವಾದ ಸುವಾಸನೆಯಿಂದ ಕೂಡಿದ ಈ ಮಾತ್ರೆಗಳು ತಾಂಬೂಲವನ್ನು ರಂಜಿಸಿ ಬಾಯಾರಿಕೆಯನ್ನು ತಕ್ಷಣ ನಿಲ್ಲಿಸಿ ಆಯಾಸವನ್ನು ಪರಿಹರಿಸಿ ಕಂಠನಾಳವನ್ನು ಸರಿಪಡಿಸಿ ಕೆಮ್ಮು, ದಮ್ಮು, ಉಬ್ಬಸ, ಮೇ[illegible]ಂಧಗಳನ್ನು ಗುಣಮಾಡಿ ಆರೋಗ್ಯವನ್ನು ಕಾಪಾಡುವದರಲ್ಲಿ ಶ್ರೇಷ್ಠವಾದುದು. ಸಂಗೀತಗಾರರಿಗೂ, ವಿದ್ಯಾರ್ಥಿಗಳಿಗೂ, ಪ್ರಯಾಣಿಕರಿಗೂ ಅಮೂಲ್ಯವಾದುದು. ೧೫೦ ಮಾತ್ರೆ ೦-೪-೦. ೫ ಕ್ಕೆ ಒಂದು ಹೆಚ್ಚು.

ಕುಂತಾಮಲಕರಸಾಯನ:—ತಲೆತಿರಗು, ಕಣ್ಣು ಕಗ್ಗತ್ತಲೆ, ಹಸಿವೇ ಇಲ್ಲದಿರುವುದು, ಆಹಾರದಲ್ಲಿ ಅರುಚಿ, ವಾಕರಿಕೆ, ವಾಂತಿ, ಹುಳಿ, ಖಾರ, ಅಥವಾ ಶಿಹಿಯಾದ ತೇಗು, ಹೊಟ್ಟೆಯುಬ್ಬರ, ಹೊಟ್ಟೆನೋವು, ಕಣ್ಣು ಅಥವಾ ಮೈ ಹಳದೀಬಣ್ಣ, ನಿಶ್ಶಕ್ತಿ, ಹಳೇಜ್ವರ, ಎದೆಬಡಿಯುವಿಕೆ, ಪಾಂಡು, ಕಾಮಾಲೆ, ಮೂರ್ಛೆ ಇವುಗಳಲ್ಲೈಕಿ ಯಾವುದಿದ್ದರೂ ಖಾತರಿ ಗುಣವಾಗಿ ದಿನಕ್ಕೊಂದುವೇಳೆ ಸಲೀಸಾಗಿ ಕಾಲಪ್ರವರ್ತಿಯಾಗುತ್ತದೆ. ೧೫ ದಿನಕ್ಕೆ ಆಗುವ ಔಷಧ, ಬೆಲೆ ೦-೧೨-೦. ೧ ಡಜ್ಜ ಡಬ್ಬಿಗಳಿಗೆ ೭-೮-೦.

ಪ್ರತಿಔಷಧಕ್ಕೂ ಟಪಾಲ್ ಮತ್ತು ಪ್ಯಾಕಿಂಗ್ ಛಾರ್ಜ ಪ್ರತ್ಯೇಕ.

ವಿಳಾಸ:—ಬಿ. ವಿ. ಪಂಡಿತ್, ಸದ್ವೈದ್ಯಶಾಲಾ,
ನಂಜನಗೂಡು, ಮೈಸೂರು ಪ್ರಾಂ.

ಹೊಸ ಪುಸ್ತಕಗಳು.

185

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೩೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ.— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟಿಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕೋತ್ತರಕಾಲೀರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಸಾರಕಮಂಡಲಿ, ಮೈಸೂರು.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಣ್ಯವಾದ ವಾಚ್!

ಸ್ಪ್ರಿಂಗ್ ಪಾಕೆಟ್ ಲೀವರ್‌ವಾಚ್.

ಇದರ ಕ್ರಯ ೭ ಬಹುಮಾನಗಳ ಸಮೇತ ರೂ. ೩-೮-೦
ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ. 8



ಧನವಂತರೇ ಈ:—ನೂತನ ನಮೂನೆ ವಾಚ್ ಈಗತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತೂ ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತೂ ನಾಣ್ಯವಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು ನಂಬಿಕೆಯಾಗಿ ದೀರ್ಘಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್ ಬರೀ ಮಾತುಗಳಿಂದಲೇನು? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ ೭ ಬಹುಮಾನಗಳ ತಪಶೀಲ್ :—(೧) ಸುಂದರವಾದ ವಾಚ್ ಸರಪಣಿ, (೨) ದಿಕ್ಕುಗಳನ್ನು ತೋರಿಸುವ ಉತ್ತರಮುಖಿ, (೩) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (೪) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆದಾರ, (೫) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (೬) ಪರಿಮಳವುಳ್ಳ ಸುವಾಸನೆ ಶೀಷೆ, (೭) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—
ಎಸ್. ಎಮ್. ಸ್ವಾಮಿ ಅಂಡ್ ಕಂಪೆನಿ,
ನಂ. ೪೪, ನಂಬುಳಯ್ಯರ ಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತೆ	೦—೫—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

52

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊತೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ



ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಪೊಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವು ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧—೦—೦
ಟಪಾಲ್‌ಖರ್ಚು ಬೇರೆ.
ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡ್) ಶಕುಂತಳ ಕೂದಲು ಬೆಳೆಯುವ ಪರಿಮಳ ತೈಲವು.

8

ಡಬ್ಬಿ ೧ ಕ್ಕೆ ೩೬ ವಿಧವಾದ ಇನಾಂ ಸಾಮಾನುಗಳ ಸಮೇತ ೧೫ ತೊಲೆ ಎಣ್ಣೆಯ ಕ್ರಯ ರೂ. ೧-೦-೦

SAKUNTHALA
HAIR OIL
REGISTERED TRADE MARK

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೇ ಇರುವ ಕೂದಲು ಬೆಳೆಯುವುದು. ಒರಟಾಗಿರುವ ಕೂದಲು ಮೃದುವಾಗುವುದು. ನೇರಳೇಹಣ್ಣಿನಂತೆ ಕಪ್ಪಾಗಿ ಥಳಥಳಿಸುವುದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವುದು. ಕಣ್ಣಿಗೆ ತಂಪುಕೊಡುವದು. ತಲೆಯಲ್ಲಿರುವ ಮಿದಡನ್ನು ಸರಿಮಾಡುವುದು. ಕಣ್ಣಿನಲ್ಲಿ ಮಂಜನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವುದಲ್ಲದೆ ಜವ್ವಾಜಿ ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತೂ ಜಾಜಿ, ಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರೂಪಾಕ್ಷಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವುದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

೧೫ ತೋಲ ತೈಲವುಳ್ಳ ಡಬ್ಬಿ ೧ ಕ್ಕೆ ಕ್ರಯ ೩೬ ಇನಾಂ ಸಾಮಾನುಗಳ ಸಮೇತ ರೂ. ೧-೦-೦

ಇನಾಂ ಸಾಮಾನುಗಳ ತಪ್ಸೀಲು—ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ ೧, ದಂತದ ಬಾಚಣಿಗೆ ೧, ನೋಡಿಕೊಳ್ಳುವ ಕನ್ನಡಿ ೧, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ ೧, ಅತ್ತರುಬುಡ್ಡಿ ೧, ವಾಸನೆಯುಳ್ಳ ಸೋಪು ೧ ತಾಂಬೂಲಮಾತ್ರೆ ೨೦ ಕೊಂಡೆ ಗಿಣಿಗಳು ೬ ಕಾರೊನೇಷನ್ ಬ್ರೂಚ್ ೧, ಜವಾದುಡಬ್ಬಿ ೧, ಈ ತರಹ ೩೬ ಇನಾಂ ಕೊಡಲ್ಪಡುತ್ತವೆ.

ನಮ್ಮ ವಿಳಾಸ:—ಧನಲಕ್ಷ್ಮಿ ಅಂಡ್ ಕಂಪನಿ ೧-೬
ವೆಂಕಟೇಶಮೇಸ್ತ್ರಿ ಬೀದಿ, ಸಾಹುಕಾರ್ ಪೇಟೆ ಮದರಾಸು.

೧೯೧೫ ನೆಯ ಇಸವಿ ಮೇ ತಾ॥ ೩೦ರಿಂದ ೧೯೧೫ ನೆಯ ಜೂನ್ ತಾ॥ ೬ರ ವರೆಗೆ ಸಲ್ಲುವ ಶಾಲೀವಾಹನಶಕ ೧೮೩೭ ನೆಯ ರಾಕ್ಷಸನಾಮಸಂವತ್ಸರದ ನಿಜವೈಶಾಖ ಬ॥ ಬಿದಿಗೆಯಿಂದ ನಿಜವೈಶಾಖ ಬ॥ ನವಮಿಯವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ತೇದಿ
30	[1]ಭಾನು	ಬಿದಿ	1-12	ಜ್ಯೇಷ್ಠ	1-10	17
31	[2]ಸೋ	ತದಿ	35-41	ಪೂಷಾ	53-37	18
1	ಮಂಗ	ಚೌತಿ	30-43	ಉ॥ಷಾ	50-55	19
2	[3]ಬುಧ	ಪಂಚ	26-33	ಶ್ರವಣ	48-56	20
3	[4]ಗುರು	ಷಷ್ಠಿ	23-18	ಧನಿ	48-6	21
4	ಶುಕ್ರ	ಸಪ್ತ	21-8	ಶತ	48-10	22
5	[5]ಶನಿ	ಅಷ್ಟ	20-9	ಪೂಭಾ	49-0	23

(1) ಲಕ್ಷ್ಮೀರಮಣಸ್ವಾಮಿ ರಥಃ. (2) ಸಂಕಟಹರ ಚತುರ್ಥಿ, ಮದ್ದೂರು ನರಸಿಂಹಸ್ವಾಮಿರಥಃ, ಕಂಬೀ ವರದರಾಜಸ್ವಾಮಿ ರಥಃ. (3) ಮೇಲುಕೋಟೆಯಲ್ಲಿ ಪಲ್ಲವೋತ್ಸವಾರಂಭಃ. (4) ದಗ್ಧಯೋಗಃ. (5) ಗುರುಚಂದ್ರಯೋಸ್ಸ್ವಷ್ಕಂ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124

ಮೈಸೂರ್ ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರನುಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಕ್ಷ್ಯಜ್ಜನಹೃತ್ತಮೋಹರಾ ಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂ ಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂ ವಲಂ ॥
ಸಿಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಶ್ರೀಮಂಟೆತ್ತಿರೆಯಂ ಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೪—೦

ಸಂಪುಟ ೨೮) ಮೈಸೂರ್ ಸ್ಟಾರ್ ಸರ್ ೧೯೧೫ ನೆಯ ಇಸವಿ ಜೂನ್ ತಾರೀಖು ೬ ನೆಯ ಭಾನುವಾರ. (ಸಂಚಿಕೆ ೨೨

೫೦೦ ರೂಪಾಯಿಗಳ ಬಹುಮಾನ

ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್‌ಬ್ಯಾಂಕಿನಲ್ಲಿ ಮೇಲ್ಕಂಡ ೫೦೦ ರೂಪಾಯಿಗಳನ್ನು ೧೯೧೫ ನೆ ಇಸವಿ ಮಾರ್ಚ್ ತಾ॥ ೧೫ ರಲ್ಲಿ ಡಿಪಾಜಿಟ್ಟು ಇಟ್ಟಿರುತ್ತೇವೆ.

4

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್‌ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಸಾಲಾಮಿಸ್ರಿಯ ಧಾರಣೆಯು ಜಾಸ್ತಿಯಾಗಿರುವದರಿಂದ ಅನೇಕರು ಉರುಳಿಗಡ್ಡೆ, ಕಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹಾದ್ದೋ ಎಂಬುವದು ತಿಳಿದುಬರುತ್ತದೆ.

ಸಾಲಾಮಿಸ್ರಿ ಮುರಬ್ಬಾವು—ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವುದು.
ಸಾಲಾಮಿಸ್ರಿ ಮುರಬ್ಬಾವು—ನಿದ್ರೆಯಲ್ಲಿ ಧಾತುವು ಹೋಗುವುದನ್ನು ನಿಲ್ಲಿಸುವುದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಧಾತುಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕ್ಷಣ ಕ್ಷಣಕ್ಕು ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ವೃದ್ಧಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಶ್ವಾಸಕಾಸ ರೋಗಗಳನ್ನು ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹೊಟ್ಟೆಯಲ್ಲಿರುವ ಜ್ವರದಗಡ್ಡೆ ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೆಟ್ಟುಹೋಗಿರುವ ರಕ್ತವನ್ನು ಶುದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಳೆತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು.
ಸಾಲಾಮಿಸ್ರಿ ಮುರಬ್ಬಾವು—ಉತ್ಸಾಹ, ಧೈರ್ಯ, ಬುದ್ಧಿಕುಶಲತೆ, ಶರೀರಕಾಂತಿಯನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು—ತಾಂಬ್ರ, ಬೆಳ್ಳಿ, ಮುತ್ತು ಭಂಗಾರ ಭಸ್ಮಕ್ಕಿಂತಲೂ ಉತ್ತಮವಾದುದು.
ಸಾಲಾಮಿಸ್ರಿ ಮುರಬ್ಬಾವು—ಸ್ತ್ರೀ ಸಂಗಕ್ಕೆ ಮೊದಲೆ ಧಾತು ಸ್ಖಲನವಾಗುವದನ್ನು ನಿಲ್ಲಿಸುವದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣಕೊಡುತ್ತದೆ. ೨-೩ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಸಾಲಾಮಿಸ್ರಿ" ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ ಕ್ಕೆ ಕ್ರಯ ೨—೦—೦ ರೂಪಾಯಿ. ಟಪ್ಪಾಲು ಖರ್ಚು ೧ ಡಬ್ಬಿಯಿಂದ ೬ ಡಬ್ಬಿಗಳ ವರೆಗೆ ೬ ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ವಿಳಾಸ:—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
೫, ಅವೆನ್ಯೂ ರೋಡ್ ಬೆಂಗಳೂರುಸಿಟಿ,

ಶುದ್ಧ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

23

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯು ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪಿತ್ತ್ರೇಕವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೋಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೋಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ತಿರಸಂಗೀಕರ ಸ್ಮಾರಕ.

ಕನ್ನಡ ಒಕ್ಕಲತನದ ಶಾಲೆ ದೇವೀಹೊಸೂರ

12

ಈ ಶಾಲೆಯು ಧಾರವಾಡ ಜಿಲ್ಲೆಯಲ್ಲಿರುವ ಹಾವೇರಿ ಸ್ಟೇಶನ್ನದಿಂದ ೫ ಮೈಲು ದೂರವಿರುವ ದೇವೀಹೊಸೂರ ಎಂಬಲ್ಲಿ ಸ್ಥಾಪಿತವಾಗಿದ್ದು ಅದರ ಹೊಸಕ್ಲಾಸುಗಳು ಇದೇ ಮೇ ತಿಂಗಳು ೨೪ ನೇ ತಾರೀಖಿನಿಂದ ಶುರು ಆಗುವವು. ಇದು ಕೇವಲ ಒಕ್ಕಲಿಗರ ಮಕ್ಕಳ ದೆಸೆಯಿಂದ ಇರುತ್ತದೆ. ಇದರಲ್ಲಿ ಸೇರಲಿಚ್ಛಿಸುವ ವಿದ್ಯಾರ್ಥಿಗಳ ಸಂಬಂಧದ ನಿಯಮಗಳು ಕೆಳಗೆ ಕೊಟ್ಟಂತೆ ಇರುತ್ತವೆ.

(೧) ಹುಡುಗರು ಸ್ವತಃ ಒಕ್ಕಲತನ ಮಾಡುವಂಥ ಒಕ್ಕಲಿಗರ ಮಕ್ಕಳಾಗಿರಬೇಕು ಮತ್ತು ಆ ಹುಡುಗರು ಸ್ವಲ್ಪ ಮಟ್ಟಿಗಾದರೂ ಒಕ್ಕಲತನದ ಕೆಲಸದಲ್ಲಿ ಮಾಹಿತಿಯುಳ್ಳವರಿರಬೇಕು.

(೨) ಇಲ್ಲಿ ಕಲಿತು ಒಕ್ಕಲತನದ ಉದ್ಯೋಗವನ್ನು ನಡೆಯಿಸಬೇಕೆನ್ನುವವರನ್ನೇ ಈ ಶಾಲೆಯಲ್ಲಿ ತಕ್ಕೊಳ್ಳುವದರಲ್ಲಿ ಬರುವದು. ಸರಕಾರೀ ನೌಕರಿಯನ್ನು ಇಚ್ಛಿಸುವಂಥ ವಿದ್ಯಾರ್ಥಿಗಳು ಇಲ್ಲಿ ಬರಕೂಡದು.

(೩) ಹುಡುಗರು ಕನಿಷ್ಠಪಕ್ಷಕ್ಕೆ ಕನ್ನಡ ೫ನೇ ಇಯತ್ತೆಯಲ್ಲಿಯಾದರೂ ಪಾಸಾಗಿರಲಿಕ್ಕೆ ಬೇಕು. ಮತ್ತು ಅವರು ಯಾವ ಶಾಲೆಯಲ್ಲಿ ಕಲಿತಿರುವರೋ ಆ ಶಾಲೆಯ ಹೆಡ್ಡಮಾಸ್ತರರ ಲೀವ್ಹಿಂಗ ಸರ್ಟಿಫಿಕೇಟನ್ನು ಅರ್ಜಿ ಲಗತ ಕಳುಹಿಸಬೇಕು.

(೪) ಹುಡುಗರ ವಯಸ್ಸು ೧೪ ವರ್ಷದಿಂದ ೧೩ ವರ್ಷದ ಒಳಗಿರಬೇಕು. ಮತ್ತು ವಯಸ್ಸಿನ ದಾಖಲೆ ಅರ್ಜಿ ಲಗತ ಕಳುಹಿಸಬೇಕು.

(೫) ಹುಡುಗರ ಅಭ್ಯಾಸಕ್ರಮವು ಎರಡು ವರ್ಷದ್ದಿರುವದು; ಈ ಶಾಲೆಯಲ್ಲಿ ತೆಗೆದುಕೊಂಡ ಪ್ರತಿಯೊಬ್ಬ ಹುಡುಗನಿಗೆ ಅವನ ಶಾಲೆಯ ಫೀಗೂ ಊಟದ ವೆಚ್ಚಕ್ಕೂ ಸಾಲುವಷ್ಟು ಸ್ಕಾಲರಶಿಪ್ ಕೊಡಲ್ಪಡುವದು.

(೬) ಒಮ್ಮೆ ಶಾಲೆಯಲ್ಲಿ ಸೇರಿದನಂತರ ಶಾಲೆಯ ಅಭ್ಯಾಸ ಕ್ರಮವು ಪೂರ್ಣ ಮುಗಿಯುವವರೆಗೆ ಶಾಲೆಯನ್ನು ಬಿಡಕೂಡದು. ಒಂದು ವೇಳೆ ಮಧ್ಯದಲ್ಲಿ ಬಿಟ್ಟರೆ ಅವರು ಶಾಲೆಯಲ್ಲಿ ಇದ್ದಷ್ಟು ದಿವಸಗಳ ಖರ್ಚನ್ನು ಕೆಳಗೆ ಸಹಿಮಾಡಿದವರು ನಿರ್ಣೈಯಿಸಿದಷ್ಟು ಕೊಡಬೇಕಾಗುವದು.

ಪ್ರತಿವರ್ಷ ೧೫-೨೦ ಹುಡುಗರನ್ನು ತೆಗೆದುಕೊಳ್ಳುವದರಲ್ಲಿ ಬರುವದು. ಬೇರೆ ಶಾಲೆಗಳಂತೆ ಈ ಶಾಲೆಗೂ ಯಾವತ್ತೂ ಸೂಟಿಗಳು ದೊರೆಯುವವು. ಇದಲ್ಲದೆ ವರ್ಷಕ್ಕೆ ಎರಡಾವರ್ತಿ ಒಮ್ಮೆ ದೀಪಾವಳಿ ಸುಮಾರಕ್ಕೆ, ಮತ್ತೊಮ್ಮೆ ಬೇಸಿಗೆ ಸಮಯಕ್ಕೆ ಒಂದೊಂದು ತಿಂಗಳದ ಸತತ ಸೂಟಿಗಳು ಸಿಕ್ಕುವವು. ಇವೆರಡು ಸೂಟಿಗಳಲ್ಲಿ ಮಾತ್ರ ಹುಡುಗರನ್ನು ಮನೆಗೆ ಕಳುಹಿಸುವದರಲ್ಲಿ ಬರುವದು. ಈ ಶಾಲೆಯ ಮುಖ್ಯ ಉದ್ದೇಶವೆಂದರೆ ಒಕ್ಕಲಿಗರ ಮಕ್ಕಳಿಗೆ ಸುಧಾರಿಸಿದ ಪ್ರಕಾರದ ಒಕ್ಕಲತನದ ಶಿಕ್ಷಣವನ್ನು ಕೊಟ್ಟು ಅವರನ್ನು ಅವರ ತಾಯಿತಂದೆಗಳಿಗೆ ಹೆಚ್ಚಿಗೆ ಉಪಯುಕ್ತರನ್ನಾಗಿ ಮಾಡಿಕೊಡುವದು ಅದೆ. ಈ ಶಾಲೆಗೆ ಬರಲಿಚ್ಛಿಸುವವರು ಅರ್ಜಿಯನ್ನು ಇದೇ ಮೇ ತಿಂಗಳ ೧ನೇ ತಾರೀಖಿನ ಒಳಗಾಗಿ ಕೆಳಗೆ ಸಹಿಮಾಡಿದವರ ಕಡೆಗೆ ಕಳುಹಿಸತಕ್ಕದ್ದು.

ಆ ಅರ್ಜಿ ವಿಚಾರಣೆಮಾಡಿ ನಮ್ಮ ಶಾಲೆಯಲ್ಲಿ ತೆಗೆದುಕೊಳ್ಳತಕ್ಕಂಥ ವಿದ್ಯಾರ್ಥಿಗಳಿಗೆ ಪತ್ರದ್ವಾರದಿಂದ ಬರಲಿಕ್ಕೆ ತಿಳಿಸುವೆವು; ಅರ್ಜಿ ನಿಕಾಲಿ ಮಾಡುವ ಕಾಲಕ್ಕೆ ವತನದಾರ ಪಾಟೀಲ ಕುಲಕರ್ಣಿಯವರ ಮಕ್ಕಳಿಗೂ, ಸುಸ್ಥಿತಿಯ ಒಕ್ಕಲಿಗರ ಮಕ್ಕಳಿಗೂ, ಹೆಚ್ಚು ಸವಲತ ಸಿಗುವದು. ಅರ್ಜಿಯಲ್ಲಿ ಹೆಸರು, ತಂದೆಯ ಹೆಸರು, ಅಡ್ಡಹೆಸರು, ಜಾತಿ

ಇರುವ ಊರು, ತಾಲ್ಲೂಕು, ಜಿಲ್ಲಾ ಖಾತೆಯ ಹೊಲವು ಎಷ್ಟು, ಮತ್ತು ಅದು ಎಲ್ಲಿರುವದು ಸರಕಾರಕ್ಕೆ ದರವರ್ಷ ಕೊಡಬೇಕಾದ ತೆರಿಗೆ ತೋಟಪಟ್ಟಿಗಳನ್ನು ಮಾಡಲಿಕ್ಕೆ ನೀರಿನ ಅನುಕೂಲತೆ ಇರುವದೇ ಹ್ಯಾಗೆ? ಮತ್ತು ಹೊಲಗಳನ್ನು ಮನೆಯಿಂದ ಮಾಡುವರೋ ಹ್ಯಾಗೆ? ಮೊದಲಾದ ಮಾಹಿತಿಯನ್ನು ತುಂಬಿ ಆಯಾ ಊರ ಗ್ರಾಮಸ್ಥರ ದಾಖಲೆಯನ್ನು ಲಗತಿಟ್ಟು ಅರ್ಜಿ ಕಳಿಸಬೇಕು; ಮತ್ತು ಅರ್ಜಿಯನ್ನು ಕಾಲೇಜಿಗೆ ಬರಲಿಚ್ಛಿಸುವ ವಿದ್ಯಾರ್ಥಿಗಳೇ ಸ್ವಹಸ್ತದಿಂದ ತುಂಬಿ ಕಳಿಸಬೇಕು. ಮೇಲೆ ಹೇಳಿದ ನಿಯಮಗಳಂತೆ ನಡೆಯಲಿಕ್ಕೆ ಅನುಮತಿಯುಂಟೆಂದು ತಮ್ಮ ಪಾಲಕರ ಕಡೆಯಿಂದ ಒಂದು ಸಹಿನಿಸಿ ದಾಖಲೆ ತರಿಸ್ಕೊಂಡು ಅರ್ಜಿ ಲಗತ ಇಟ್ಟು ಕಳಿಸಬೇಕು

ಧಾರವಾಡ | ಸಹಿ ಟಿ. ಗಿಲ್ಬರ್ಟ
ತಾ|| ೪-೩-೧೯೧೫ | ಡಿ. ಡಾಯರೆಕ್ಟರ ಶೆತಕೀ ಖಾತೆ,
ದಕ್ಷಿಣಭಾಗ

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕೆ ಅವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತವಾಗಿರುವ ಘೋರಯುದ್ಧದ ದೆಸೆಯಿಂದ ಈ ಸಾಮಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದ ಮತ್ತು ಬೆಲಜಿಯಮ್ಮಿನಿಂದ ಸುತರಾಂ ಬರುವುದು ಕಟ್ಟಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಅವಶ್ಯಕವಾದ ಕಾಗದ ಮೊದಲಾದ ಸಾಮಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವಧಿಯು ಪೂರೈಸಿರುವವರಿಗೆಲ್ಲಾ ಪತ್ರಿಕೆಯನ್ನು ವಿ. ಪಿ ದ್ವಾರ ಕಳುಹಿಸುತ್ತಿರುವೆವು. ಆದರೆ ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿರುಗಿಸಿ ಕಾಗದದ ಬೆಲೆಯೇರಿಕೆಯಿಂದ ನಷ್ಟಪಡುವುದರ ಜತೆಗೆ ಪೋಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದು ತಿಳುಹಲು ಖೇದವಾಗುತ್ತದೆ. ಇತಃಪರಃ ದಯಾರ್ದ್ರಹೃದಯರಾದ ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ. ಪಿ. ಹಣವನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನವಾಗಿ ನಡೆದುಕೊಂಡು ಹೋಗುವಂತೆ ಮಾಡುವರೆಂದು ಸಂಪೂರ್ಣವಾಗಿ ನಂಬಿರುತ್ತೇವೆ.

ಮ್ಯಾನೇಜರ್.

ವಿವಾಹಚರ್ಚೆ.

(ಕಳೆದವಾರದ ಶೇಷ)

ಪೂ. ಪ:—ಸ್ಮೃತಿಯಲ್ಲಿ "ತ್ರೀಣಿವರ್ಷಾಣ್ಯುದೀಕ್ಷೇತ ಕನ್ಯಾ" ಎಂಬ ವಚನವಿರುತ್ತದೆ. ಅಂದರೆ ಕನ್ಯೆಯು ಋತುಮತಿಯಾದರೂ ೩ ವರ್ಷಗಳವರೆಗೆ ನಿರೀಕ್ಷಿಸಿ ಸರಿಯಾದ ವರನನ್ನು ವರಿಸಬಹುದು ಎಂದಿರುತ್ತದೆ. ಇದರಿಂದಲೇ ಋತುಮತೀವಿವಾಹವು ಸಿದ್ಧವಾಗುವುದು.

ಉ. ವಾ:—ನೀವು ಹೇಳುವ ವಚನವು ಕೇವಲ ಆಪದ್ಧರ್ಮವಿಷಯವಾಗಿರುತ್ತದೆ. ಅದೇ ಸ್ಮೃತಿಗಳಲ್ಲಿ ತಂದೆತಾಯಿಗಳು ಹೆಣ್ಣುಮಕ್ಕಳಿಗೆ ೮ ವರ್ಷಕ್ಕೆ ಅಥವಾ ೧೦ ವರ್ಷದೊಳಗಾಗಿ ಮದುವೆಮಾಡಲೇಬೇಕು. ಹಾಗೆ ಮಾಡದೆ ಇದ್ದಲ್ಲಿ ಅವರಿಗೆ ಪಾಪವು ಘಟಿಸುವುದು ಎಂದು ಕಂಠೋಕ್ತವಾಗಿ ವಿವಾಹಕಾಲವಿಧಿಯನ್ನೇ ನಿಷ್ಕರ್ಷೆಮಾಡಿ, ಆ ತರುವಾಯ ಸಕಾಲದಲ್ಲಿ ವಿವಾಹಮಾಡಲು ಆಪತ್ತುಗಳುಂಟಾಗಿ ಆಗ್ಯೆ ವಿವಾಹವಾಗದೆ ಇರುವ ಅಸಂದರ್ಭ ಕಾಲಕ್ಕೆ ಕನ್ಯೆಯು ಋತುಮತಿಯಾಗಿದ್ದರೂ ಪ್ರಾಯಶ್ಚಿತ್ತಮಾಡಿ ವಿವಾಹನಡೆಯಬೇಕಾಗಿರುತ್ತದೆ ಎಂದು ಹೇಳಿರುವುದು. ಇದು ಕೇವಲ ಆಪದ್ಧರ್ಮವಚನವೇಹೊರತು ವಿಧಿವಾಕ್ಯವಲ್ಲ. ಆಪದ್ಧರ್ಮವನ್ನೇ ವಿಧಿಯಾಗಿಟ್ಟುಕೊಳ್ಳುವುದು ಯುಕ್ತವಲ್ಲ. ಪರಂತು ಪ್ರಾಯಶ್ಚಿತ್ತವು ಉಕ್ತವಾದಮೇಲೆ ಆ ಕಾರ್ಯವು ಪಾಪಕಾರ್ಯವೆಂದೇ ಸಿದ್ಧವಾಯಿತು. ಪ್ರಾಯಶ್ಚಿತ್ತಮಾಡಿಕೊಂಡುದರಿಂದ ಪಾಪಕಾರ್ಯವು ಪುಣ್ಯಕಾರ್ಯವಾಗುವುದೆಂದು ಭಾವಿಸುವುದು ಸರ್ವಾತ್ಮನಾ ತಪ್ಪು. ಹೇಗೆಂದರೆ—ಸುರಾಪಾನ ಮಾಡುವುದು ಪಾಪಕಾರ್ಯ ಆ ಪಾಪಕಾರ್ಯವನ್ನು ಮಾಡಿದರೆ ಪ್ರಾಯಶ್ಚಿತ್ತಮಾಡಿಕೊಳ್ಳಬೇಕೆಂದು ಶಾಸ್ತ್ರವಿಧಿ (ಅದುದರಿಂದ ನೀವು ಹೇಳಿರುವಂತೆ ಆದರೆ ಪ್ರಾಯಶ್ಚಿತ್ತಮಾಡಿಕೊಂಡರೆ ಸುರಾಪಾನಮಾಡುವುದು ಧರ್ಮವೆಂದು ಹೇಳಿದಹಾಗಾಯಿತು. ಇದೆಂಥಾಬುದ್ಧಿ!)

ತೀರ್ಮಾನ:—ಪ್ರಾಯಶ್ಚಿತ್ತಾರ್ಹವಾದ ಕಾರ್ಯವು ಎಂದಿಗೂ ಧರ್ಮವಾಗುವುದಿಲ್ಲ. ಎಂಬ ಮಾತು ಸರ್ವತಸ್ಸಮ್ಮತವೆಂದು ತೀರ್ಮಾನವಾಯಿತು.

ಪೂ. ಪ:—ಮುಂದೆ ಯಾವಮಾತನ್ನೂ ಆಡದೆ ಮೂಕರಾಗಿ ಕುಳಿತರು. ೧೦ ನಿಮಿಷಕಾಲದವರೆಗೂ ಸಭೆಯು ಅನಿರ್ವಚನೀಯವಾದ ಮೌನವ್ರತವನ್ನು ತಾಳಿತ್ತು

ಉ. ವಾ:—ಇದುವರೆಗೆ ನೀವು ಹೇಳಿದುದೊಂದು ಪ್ರಮಾಣವೂ ಸಾಧಕವಾಗಲಿಲ್ಲ. ಮುಂದೆ ಇನ್ನಾವ ಪ್ರಮಾಣಗಳಾದರೂ ಉಂಟೊ?

ಪೂ. ಪ:—ನಾವು ಹೇಳುವುದಿಷ್ಟೇ. ನಾವು ಹೇಳತಕ್ಕುದನ್ನೆಲ್ಲಾ ಸೂಚಿಸಿಬಿಟ್ಟಿರುತ್ತೇವೆ. ಒಪ್ಪಿದರೆ ಒಪ್ಪಿ, ಬಿಟ್ಟರೆ ಬಿಡಿ.

ಉ ವಾ:—ಸ್ವಾಮಿ ಹಾಗೆ ಮಾತಕೂಡದು. ತಮ್ಮ ಪ್ರೌಢಾವಿವಾಹಪ್ರಮಾಣಗಳೆಷ್ಟಿವೆಯೋ ಅಷ್ಟನ್ನೂ ನಿರೂಪಿಸಿ ಚರ್ಚಿಸಬೇಕು. ಇನ್ನೇನಾದರೂ ಉಂಟೋ?

ಪೂ. ಪ:—ನಮಗೆ ಕೆಲಸವಿದೆ. ಹೋಗಬೇಕು.

ಉ. ವಾ:—ನಿಮ್ಮ ಕೆಲಸ ಹಾಗಿರಲಿ. ತಾವು "ಶಾಸ್ತ್ರಿ"ಗಳು, ಇದು ಮಹಾಸನ್ನಿಧಾನ, ತಮ್ಮಿಬ್ಬರಲ್ಲಿ ನಡೆಯುವ ಚರ್ಚೆಯನ್ನು ಕೇಳಿ ನಮ್ಮನಮ್ಮ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದು ಶಾಸ್ತ್ರಾನಭಿಜ್ಞರಾದ ನಾವು ಬಹು ಕುತೂಹಲದಿಂದ ಇಲ್ಲಿಗೆ ಬಂದಿರುವೆವು ಇಂತಹ ಸಂದರ್ಭದಲ್ಲಿ ತಾವು ಶಾಸ್ತ್ರವಿಚಾರವೆ? ಶಾಸ್ತ್ರ ಬಿಟ್ಟು ವಿಚಾರವೆ? ಎಂಬ ಮಾತಿನಲ್ಲಿಯೇ ಮುಂದಕ್ಕೆ ಹೋಗುವುದು, ಹಿಂದಕ್ಕೆ ಹೋಗುವುದು, ಮುಂದಕ್ಕೆ ಬರುವುದು, ಪುನಃ ಹಿಂದಕ್ಕೆ ಹೋಗುವುದು ಹೀಗೆ ತಿರುಗಂಬೆಮರುಗಂಬೆ ಮಾಡಿಬಿಟ್ಟಿರಿ. ಈಗ ವಿಷಯವ್ಯವಸ್ಥೆ ಬಂದಾಗ್ಯೂ "ಎಣ್ಣೆ ಬರುವಾಗ ಕಣ್ಣುಮುಚ್ಚಿಕೊಂಡ" ನೆಂಬ ಗಾದೆಯಂತೆ ಪಲಾಯನಸೂಕ್ತವನ್ನು ಜಪಿಸಲಾರಂಭಿಸಿದ್ದೀರಿ. ಈ ದಿನ ನಿಮಗೆ ವ್ಯವಧಾನವಿಲ್ಲದಿದ್ದರೆ ನಾಳೆಯಾದರೂ ಬಂದು ವಾಕ್ಯಾರ್ಥಮಾಡಿರಿ.

ಪೂ. ಪ:—ನಮಗೆ ನಾಳೆಯೂ ಪುರಸತ್ತಿಲ್ಲ.

ಉ. ವಾ:—ಶ್ರೀ ಮಠವು ಇನ್ನು ೮-೧೦ ದಿನ ಇಲ್ಲಿಯೇ ಇದ್ದೀತು. ಆ ೮-೧೦ ದಿನವೂ ಅರ್ಧರಾತ್ರಿಯಲ್ಲಿ ಬಂದರೂ ನಾವು ವಾದಕ್ಕೆ ಸಿದ್ಧವಾಗಿಯೇ ಇರುತ್ತೇವೆ.

ಪೂ. ಪ:—ನಮಗೆ ಇನ್ನು ೮-೧೦ ದಿನವೂ ಪುರಸತ್ತಿಲ್ಲ

ಉ. ವಾ:—ಶ್ರೀ ಮಠವು ಈ ಸಂಸ್ಥಾನವನ್ನು ಬಿಟ್ಟು ಬೇರೆ ಎಲ್ಲಿ ಹೋಗಿದ್ದಾಗ್ಯೂ ನೀವು ವಿಷಯವನ್ನು ಚರ್ಚೆಮಾಡುವುದಾಗಿದ್ದರೆ ಶ್ರೀ ಮಠದಿಂದ ನಾಲ್ವರು ವಿದ್ವಾಂಸರನ್ನು ಮಠದ ವೆಚ್ಚದಿಂದಲೇ ಕಳುಹಿಸಲಾದೀತು.

ಪೂ. ಪ:—ಬೇಡವೆಂದು ಹೇಳುತ್ತಿದ್ದರೂ ಎದ್ದು ಹೊರಟುಹೋದರು.

ವಾಚಕಮಹಾಶಯರೇ! ನಾನು ಈ ವಿಷಯವನ್ನು ಪತ್ರಿಕೆಗೆ ಬರೆಯಬೇಕೆಂಬ ಅಭಿಪ್ರಾಯವಿಟ್ಟುಕೊಂಡಿರಲಿಲ್ಲ. ಈ ವಿಷಯವು ಜನಪನಿತವಾಗಿದ್ದ ಕಾರಣ ಸುಮ್ಮನಿದ್ದಾಯಿತು. ಆದರೆ ಕೆಲವು ವರ್ತಮಾನಪತ್ರಿಕೆಗಳಲ್ಲಿ ಇದ್ದ ಸಂಗತಿಯನ್ನು ಬಿಟ್ಟು ಬೇರೆ ವಿಧವಾದ ಸಂಗತಿಗಳನ್ನೆಲ್ಲಾ ವಿರೂಪಮಾಡಿ ಬರೆದಿದ್ದುದರಿಂದ ಈ ಲೇಖನವನ್ನು ನಾನು ಬರೆಯಬೇಕಾಯಿತು. ಆ ಸಭೆಯಲ್ಲಿ ಮುಖ್ಯವಾಗಿ ಕುಳಿತಿದ್ದ ವೇ|| ಮಹಾದೇವಶಾಸ್ತ್ರಿಗಳು ತಮ್ಮ ಹೆಸರನ್ನಿಟ್ಟುಕೊಂಡು ಈ ನನ್ನ ಲೇಖನಕ್ಕೆ ಉತ್ತರಕೊಡುವುದಾದರೆ ಆಗ್ಯೆ ನಾನು ನನ್ನ ಹೆಸರನ್ನು ಹಾಕಿಕೊಂಡು ಅವರಿಗೂ ಉತ್ತರವನ್ನು ಬರೆಯುವೆನು. ವೃಥಾ ಹೆಸರಿಲ್ಲದೆ ನಾನಾವಿಧವಾಗಿ ಬರೆಯುವ ಬರವಣಿಗೆಗೆ ಉತ್ತರಕೊಡುವುದಿಲ್ಲ

ಋತುವಾದಮೇಲೆ ಕನ್ಯಾದಾನವನ್ನು ಮಾಡಕೂಡದೆಂಬುವುದು ಮತ್ತು ಪಾತಕಾವಹವೆಂದು ನಮ್ಮ ಸ್ಮೃತಿಗಳಲ್ಲಿ ಅನೇಕವಾಗಿ ಕಂಡುಬರುತ್ತದೆ. ಮತ್ತು ಕನ್ಯಾದಾನವನ್ನು ೮ ವರ್ಷದಮೇಲೆ ೧೦ ವಯಸ್ಸಿನೊಳಗಾಗಿ ಅಂದರೆ ಋತುವಾಗುವದಕ್ಕೆ ಪೂರ್ವವೇ ಮಾಡಬೇಕೆಂದೂ ಧರ್ಮಶಾಸ್ತ್ರವಿಧೆ. "ಪಿತೃಗೃಹೇಚಯಾಕನ್ಯಾ ರಜಃಪಶ್ಯತ್ಯಸಂಸ್ಕೃತಾ | ಭ್ರೂಣಹತ್ಯಾಪಿತುಸ್ತಸ್ಯಾಃ ಸಾಕನ್ಯಾವೃಷಲೀಸ್ಮೃತಾ || ಯಸ್ತುತಾಂವರಯೇತ್‌ಕನ್ಯಾಂ ಬ್ರಾಹ್ಮಣೋಜ್ಞಾನದುರ್ಬಲಃ | ಅಶ್ರಾದ್ಧೇಯಮಪಾಂಕ್ತೇಯಃ ತಂ ವಿದ್ಯಾತ್‌ವೃಷಲೀಪತಿಂ ||" ಕನ್ಯೆಗೆ ೮ ವರ್ಷ ತುಂಬಿದ ಮೇಲೆ ಮತ್ತು ೧೦ ವರ್ಷ ತುಂಬುವುದರ ಒಳಗಾಗಿ ಅಂದರೆ ಋತುಚಿಹ್ನೆಗಳು ಕಂಡುಬರುವುದಕ್ಕೆ ಮೊದಲೇ ಚಿಕ್ಕವಯಸ್ಸಿನಲ್ಲಿರುವಾಗಲೇ ಮಾತಾಪಿತೃಗಳು ಕನ್ಯೆಗೆ ಮದುವೆ ಮಾಡಬೇಕೆಂಬುವುದು ಮಾತಾಪಿತೃಗಳ ಮುಖ್ಯಕರ್ತವ್ಯವಾಗಿರುತ್ತದೆ. ಈ ರೀತಿಯಾಗಿ ಕನ್ಯೆಯು ಋತುವಾಗುವುದಕ್ಕೆ ಮೊದಲು, ಸಣ್ಣವಯಸ್ಸಿನಲ್ಲಿಯೇ ಇರುವಾಗ್ಯೆ ಮದುವೆಮಾಡಬೇಕು ಎಂಬ ವಿಧಿಯಕ್ಕೆ ಕಾರಣಗಳುಂಟು.

೧. ಕಾಮಭೋಗವನ್ನು ಪಡೆಯಬೇಕೆಂಬ ಅಪೇಕ್ಷೆಯಿಂದ ಮದುವೆಯನ್ನು ಮಾಡಕೂಡದು. ವಿವಾಹವು ಒಂದು ಸಂಸ್ಕಾರ. ಯಜ್ಞಕ್ಕೂ ಮೋಕ್ಷಕ್ಕೂ ಸಾಧನ ಎಂಬ ಭಾವನೆಯಿಂದಲೇ ಮದುವೆಮಾಡಬೇಕು. ಮತ್ತೂ ಇಂತಹ ಭಾವನೆಯನ್ನು ಇಟ್ಟುಕೊಂಡಲ್ಲಿ ತತ್‌ಕ್ಷಣ ಕಾಮಭೋಗ ಪಡೆಯುವುದನ್ನು ಅಸಾಧ್ಯಮಾಡಲ್ಪಡಬೇಕು. ಬೇರೆಬೇರೆ ವಂಶಕ್ಕೆ, ಬೇರೆಬೇರೆ ದೇಶಕ್ಕೆ, ಬೇರೆಬೇರೆ ಸ್ವಭಾವವುಳ್ಳ ಹೆಣ್ಣುಗಂಡುಗಳು ಏಕಮನಸ್ಸಿನವರೂ, ಏಕದೇಹನ್ಯಾಯವುಳ್ಳವರೂ ಆಗಬೇಕಾದರೆ ಪೂರ್ವಭಾವಿಯಾದ ಮನಸ್ಸಿನ ತರಪೇತಾಗಬೇಕು. ಅದಿಲ್ಲದೆ ಏಕಾಏಕಿ ದುಡುಂ ಅಂಗಸಂಗಮಾಡಿದರೆ ಅದರಿಂದ ಅನೇಕ ಅನರ್ಥಗಳುಂಟಾಗುವುದು ಸಕಲರಿಗೂ ಕಂಡುಬಂದೇ ಇದೆ. ಆದುದರಿಂದ ಸಣ್ಣವಯಸ್ಸಿನಲ್ಲಿ ವಿವಾಹ ನಡೆದರೆ ವಧೂವರರ ಮನಸ್ಸುಗಳೆರಡೂ ಕ್ರಮಕ್ರಮವಾಗಿ ದಿನೇದಿನೇ ಹೊಂದಿಕೊಂಡು ಬರುತ್ತಾ ಉಭಯರೂ ಪರಸ್ಪರ ಧ್ಯಾನಾನುರಾಗವುಳ್ಳವರಾಗಿ ಕಡೆಗೆ ಏಕಮನಸ್ಸು, ಏಕದೇಹ ನ್ಯಾಯವುಳ್ಳವರಾಗುವರು. ಆಗ್ಯೆ ಅವರು ಸಂಭೋಗಮಾಡಿದಲ್ಲಿ ಅನರ್ಥವೇನೂ ಉಂಟಾಗುವುದಿಲ್ಲ.

೨. ವಿವಾಹದಿಂದ ಹೆಣ್ಣು ತನ್ನ ಗಂಡನ ಅರ್ಧಾಂಗಿ ಆಗುವುದೊಂದೇ ಅಲ್ಲದೆ ಆ ಹೆಣ್ಣು ತನ್ನ ಗಂಡನಮನೆ ಜನಗಳಲ್ಲಿ ತಾನೂ ಒಬ್ಬಳಾಗಬೇಕಾಗುತ್ತದೆ. ಇದು ಹಿಂದೂಜನರ ಧರ್ಮವಾಗಿರುತ್ತದೆ. ಹೀಗೆ ಸಣ್ಣವಯಸ್ಸಿನವಳಾಗಿ ಮನಸ್ಸೂ, ಚರ್ಯವೂ ಒಂದೂ ಚಿತ್ತಕ್ಕೆ ನಿಲ್ಲದೆ, ಹಿರಿಯರು ತೋರಿಸಿಕೊಡುವ ಸನ್ಮಾರ್ಗದಲ್ಲಿ ಪ್ರತ್ಯುತ್ತರಕೊಡದೆ ವಿಧೇಯಳಾಗಿ ಆ ಹೆಣ್ಣು ವರ್ತಿಸುವ ಸ್ಥಿತಿಯಲ್ಲಿಯೇ ಗಂಡನ ಮನೆಯನ್ನು ಸೇರಿ, ಆ ಮನೆಯಲ್ಲಿ ನಾನಾಸ್ವಭಾವವುಳ್ಳ ಗಂಡನ ನಾನಾಸಂಬಂಧಿಗಳೊಡನೆ ಕಲೆತು ಬೆರೆತುಕೊಂಡರೆ, ಆಗ್ಯೆ ಆ ಹೆಣ್ಣು ಆ ಗಂಡನಮನೆಯಲ್ಲಿಯೇ ಹುಟ್ಟಿ ಬೆಳೆದವಳೋಪಾದಿಯಲ್ಲಿ ಆ ಮನೆಯವರೊಂದಿಗೆ ವರ್ತಿಸಿಕೊಂಡು ಹೋಗುವಳು.

೩. ಹಿಂದೂಶಾಸ್ತ್ರಕಾರರ ರೀತ್ಯಾ ಸಂಸಾರಸೌಖ್ಯಕ್ಕೂ, ಸಂಸಾರದಲ್ಲಿನ ಜನಗಳ ಪರಸ್ಪರ ಸಂಬಂಧಗಳಿಗೂ ಮತ್ತು ಅವರವರ ಪರಸ್ಪರ ಪ್ರೀತಿಗೂ ಮತ್ತು ಮೋಕ್ಷಕ್ಕೂ ಸ್ತ್ರೀ ಪಾತಿವ್ರತ್ಯವೇ ಅಸ್ತಿಭಾರವಾದದ್ದು. ಅಂಥಾ ಸ್ತ್ರೀ ಪಾತಿವ್ರತ್ಯವು ಬಾಲ್ಯವಿವಾಹದಿಂದ ಸಾಧ್ಯವೇಹೊರತು ಅನ್ಯಥಾ ಇಲ್ಲ ಈ ಕಾರಣದಿಂದಲೇ ಗಂಡಹೆಂಡರ ಮಧ್ಯಹುಟ್ಟುವ ಅನುರಾಗವೂ ಮತ್ತು ಗಂಡನಲ್ಲಿ ಹೆಂಡತಿಗೆ ಇರುವ ಭಕ್ತಿಯೂ ಹಿಂದೂಜನರಲ್ಲಿರುವಷ್ಟು ಬೇರೆ ಯಾವಜನಾಂಗದಲ್ಲಿಯೂ ಇಲ್ಲವೆಂಬುದು ಸುಪ್ರಸಿದ್ಧವಾದ ವಿಷಯವಾಗಿರುತ್ತದೆ. (a) ಋತುಮತಿಯರಾಗಿ ಪ್ರೈನೆರೆವ ಅವಸ್ಥೆ ಕಳೆದಮೇಲೆ ಪ್ರಾಪಂಚಿಕವಿಷಯಜ್ಞಾನದಲ್ಲಿ ತೇರ್ಗಡೆಯಾದಮೇಲೆಯೇ ವಿವಾಹಮಾಡುವುದು ಪಾಶ್ಚಾತ್ಯಪದ್ಧತಿಯಾಗಿರುತ್ತದೆ. ಆದರೆ ಆ ಪಾಶ್ಚಾತ್ಯರ ಪದ್ಧತಿಗಳಿಗೂ ನಮ್ಮ ಪದ್ಧತಿಗಳಿಗೂ ಬಹಳ ವ್ಯತ್ಯಾಸವಿರುತ್ತದೆ. ನಮ್ಮ ಹಿಂದೂಗಳಲ್ಲಿ ಶಾಶ್ವತವಾದ ನಿಜಸೌಖ್ಯವನ್ನು ಪರಲೋಕದಲ್ಲಿಯೇ ಪಡೆಯತಕ್ಕದ್ದಾಗಿರುತ್ತದೆ ಎಂಬ ಗುರಿಯನ್ನಿಟ್ಟುಕೊಂಡು ನಮ್ಮ ಪದ್ಧತಿಗಳನ್ನೂ ಶಾಸ್ತ್ರಗಳನ್ನೂ ಅವರಿಗನುಸಾರವಾಗಿ ಏರ್ಪಾಡು ಮಾಡಿರುತ್ತಾರೆ. ಪಾಶ್ಚಾತ್ಯರಲ್ಲಾದರೋ ಈ ಲೋಕದ ನಶ್ವರಸುಖವನ್ನು ನಿಜಸುಖವೆಂದು ಭಾವವಿಟ್ಟಿರುವುದರಿಂದ ಅವರ ಪದ್ಧತಿಗಳಿಗನುಸಾರವಾಗಿ ಮಾಡಿಕೊಂಡಿರುತ್ತಾರೆ. ಪಾಶ್ಚಾತ್ಯರ ಮತರೀತ್ಯಾ 'ಡೂಮ್ಸ್‌ಡೇ' (Dooms Day) ಅಂದರೆ "ಜಡ್ಜ್‌ಮೆಂಟ್‌ಡೇ" ಬರುವವರೆಗೂ ಅಂದರೆ ಮನುಷ್ಯರು ಸತ್ತಮೇಲೆ ಅವರ ಜೀವಾತ್ಮಗಳು ಯಾವುದೋ ಒಂದು ತ್ರಿಶಂಕುಸ್ಥಾನದಲ್ಲಿ ಕಾದುಕೊಂಡಿದ್ದರೆ, ಒಂದಾನೊಂದುದಿನ ದೇವರು ಅಲ್ಲಿಗೆ ಬಂದು ಆಯಾಜೀವಾತ್ಮನ ಗತಿವ್ಯವಸ್ಥೆಯನ್ನು ಮಾಡುವನಂತೆ, 'ಆ ದಿನವೇ ಜಡ್ಜ್‌ಮೆಂಟ್‌ದಿನ' ಅಲ್ಲಿನವರೆಗೂ ಅವರಿಗೆ ಪರಲೋಕಾನುಭವವು ಪ್ರಾರಂಭವಾಗುವುದಿಲ್ಲ. ಹಿಂದುಗಳಲ್ಲೋ ಅಂದರೆ ಮನುಷ್ಯರು ಸಾಯುತ್ತಲೇ ಪರಲೋಕಾನುಭವವು ಪ್ರಾರಂಭವಾಗಿ ಇಹಲೋಕದಲ್ಲಿ ಮಾಡಿದ ಪುಣ್ಯಪಾಪಗಳಿಗನುಸಾರವಾಗಿ ಜೀವನು ಮೋಕ್ಷವನ್ನೋ ಸ್ವರ್ಗವನ್ನೋ ಅಥವಾ ಇನ್ನಾವ ಜೀವರಾಶಿಗಳಲ್ಲಿ ಜನನವನ್ನೋ ಹೊಂದುವನು. ಈ ರೀತಿಯಾಗಿ ಹಿಂದುಗಳಿಗೆ ಇಹಲೋಕಸೌಖ್ಯಕ್ಕಿಂತಲೂ ಪಾರಮಾರ್ಥಿಕಸೌಖ್ಯವೇ ಮುಖ್ಯವಾದುದೂ ಶಾಶ್ವತವಾದುದೂ ಮತ್ತೂ ನಿಜವಾದುದೂ ಆಗಿರುತ್ತದೆ. ಹಿಂದುಗಳು ಈ ಪ್ರಪಂಚಕ್ಕಾಗಿ ಅಷ್ಟು ವಾಂಛಲ್ಯವುಳ್ಳವರಲ್ಲ. ಮುಖ್ಯವಾಗಿ ತಮ್ಮ ಮತಕ್ಕೂ ಮೋಕ್ಷಕ್ಕೂ ಹುಟ್ಟಿದವರಾಗಿರುತ್ತಾರೆ. ಅಂತಹ ಉದ್ದೇಶವನ್ನು ಗಳಿಸಿಕೊಳ್ಳುವುದಕ್ಕೆ ಇಂದ್ರಿಯನಿಗ್ರಹವೂ, ಆತ್ಮಯಜ್ಞವೂ, ಆತ್ಮನಿಯಮನವೂ, ಅತ್ಯಗತ್ಯವಾಗಿರುತ್ತವೆ. ಆದುದರಿಂದ ಇಂತಹ ಉದ್ದೇಶಕ್ಕನುಸಾರವಾಗಿ ಹಿಂದುಗಳ ಪದ್ಧತಿಗಳು ಏರ್ಪಡಿಸಲ್ಪಟ್ಟು, ಅವುಗಳ ಫಲವೇ ಹಿಂದುಗಳಲ್ಲಿ ಕಂಡುಬರುವ ಸಹನಾಗುಣ, ಶಾಂತಿ ಮುಂತಾದ ಸುಗುಣಗಳಿಗೆ ಕಾರಣವಾಗಿರುತ್ತದೆ. ಬಹುಮಾತಿನಿಂದೇನು? ಮನುಷ್ಯಜೀವಿತಕ್ಕೆ ಮೋಕ್ಷವನ್ನು ಪಡೆಯುವುದೇ ಮುಖ್ಯೋದ್ದೇಶವನ್ನಾಗಿ ಹಿಂದುಗಳು ಇಟ್ಟುಕೊಂಡಿರುವುದರಿಂದ ಅದನ್ನು ಪಡೆಯುವ ರೀತಿ ಹೇಗೋ ಅದಕ್ಕನುಸಾರವಾಗಿ ನಮ್ಮ ಹಿಂದುಗಳ ವಿವಾಹ ಮುಂತಾದ ಪದ್ಧತಿಗಳು ಏರ್ಪಟ್ಟಿರುವವು. ಇಂತಹ ನಮ್ಮಗಳ ಪದ್ಧತಿಗಳ ವಿಷಯದಲ್ಲಿ ಸಂಘಪರಿಷ್ಕಾರಕರೆಂದು ನವೀನವಾಗಿ ಪ್ರವರ್ತಿಸುವ ಮಹನೀಯರು ನಮ್ಮ ಶಾಸ್ತ್ರಗಳನ್ನು ಆಮೂಲಾಗ್ರವಾಗಿ ಓದಿದವರೂ, ಓದಿ ಅರ್ಥತಿಳಿದವರೂ ಆಗಿದ್ದರೂ, ಅವರು ಈ ದೇಶದಲ್ಲಿ ಹೇಳುವ ಮಾತುಗಳು ನಮ್ಮ ಜನ ಸಮಸ್ತಕ್ಕೂ ಅಂಗೀಕೃತವಾಗಲಾರದು. ಅಂತಹುದರಲ್ಲಿ ಓದದೆ, ಅರ್ಥತಿಳಿಯದೆ ಅವರಿವರಿಂದ ಅಲ್ಲಿ ಒಂದುಮಾತು, ಇಲ್ಲಿಂದುಮಾತನ್ನು ಕಲಿತು, ಅದನ್ನು ಹಿಡಿದು ಪೂರ್ವಾಪರಸಂಬಂಧವಿಲ್ಲದೆ ಮುಂದೆ ಉಂಟಾಗಬಹುದಾದ ವಿಪರೀತಪರಿಣಾಮಗಳನ್ನು ಆಲೋಚಿಸದೆ, ಜನರಿಗೆ ಉಪದೇಶಮಾಡುತ್ತೇವೆಂದು ತೊಡಗುವವರ ಮಾತುಗಳು ಎಂದಿಗಾದರೂ ಜನರ ಅಂಗೀಕಾರಕ್ಕೆ ಅರ್ಹವಾಗುತ್ತವೆಯೇ? ಆದುದರಿಂದ ನಮ್ಮ ಶಾಸ್ತ್ರಗಳಿಗೂ ಅನೂಚಾನವಾಗಿ ಬಂದಿರುವ ನಮ್ಮ ಆಚಾರಗಳಿಗೂ ವಿರುದ್ಧವಾಗಿ ಬೋಧಿಸುವುದಕ್ಕೆ ಯಾರು ಬಂದಾಗ್ಯೂ ಆ ಮಾತುಗಳನ್ನು ನೀವು ಏಕಾಏಕಿ ನಂಬಿ ಮೋಸಹೋಗಬೇಡಿರಿ. ಅಂಥವರ ಉಪನ್ಯಾಸಗಳನ್ನು ಕೇಳಬಾರದೆಂದೂ, ವಿಷಯವಿಚಾರ ಮಾಡಕೂಡದೆಂದೂ ನಮ್ಮ ಅಭಿಪ್ರಾಯವಲ್ಲ. ಅಂಥವರು ಮಾಡುವ ಆಕ್ಷೇಪಣೆಗಳನ್ನು ನೀವು ಚೆನ್ನಾಗಿ ಪರ್ಯಾಲೋಚಿಸಿ ಪರೀಕ್ಷಿಸಿ ನೋಡಿರಿ. ಮತ್ತೂ ನಿಮಗೆ ತಿಳಿಯದಿದ್ದರೆ ತಿಳಿದವರನ್ನು ಕೇಳಿ ವಿಷಯವ್ಯವಸ್ಥೆಯನ್ನು ಮಾಡಿಕೊಳ್ಳಿರಿ, ದುಡುಕಬೇಡಿ, ಮೋಸಹೋಗಬೇಡಿ ಎಂಬುವದೇ ನನ್ನ ಪ್ರಾರ್ಥನೆ

ತಮ್ಮ ವಿಧೇಯ
"ಹಿತೇಚ್ಛು"

ಕೊಲೆಸುಲಿಗೆಗಾರರಿಗೆ ಶಿಕ್ಷೆ.

ಪಂಜಾಬಿನ ನೈರುತ್ಯಭಾಗದಲ್ಲಿ ಉಂಟಾಗಿದ್ದ ಅಶಾಂತಿಯ ಸಂದರ್ಭದಲ್ಲಿ ಕೆಲವು ಕಳ್ಳತನಗಳೂ, ಕೊಲೆಸುಲಿಗೆಗಳೂ ನಡೆದಿದ್ದುವು. ತತ್ಸಂಬಂಧದಲ್ಲಿ ಸಂಶಯದಮೇಲೆ ಹಿಡಿಯಲ್ಪಟ್ಟಿದ್ದ ಅಪರಾಧಿಗಳು ೨೧೨೧ ಮಂದಿಗಳು ದಂಡಾಧಿಕಾರಿಗಳ ವಿಚಾರಣೆಗೆ ಒಳಪಡಿಸಲ್ಪಟ್ಟಿದ್ದರು. ಅವರಲ್ಲಿ ೨೬೦ ಮಂದಿಗೆ ಶಿಕ್ಷೆಯಾಯಿತು ; ೬೭೫ ಮಂದಿಗಳು ನಿರ್ದೋಷಿಗಳೆಂದು ಬಿಡಲ್ಪಟ್ಟರು ; ಉಳಿದವರ ವಿಚಾರಣೆಯು ಇನ್ನೂ ನಡೆಯುತ್ತಿದೆ. ಅಪರಾಧಿಗಳಲ್ಲಿ ಕೆಲಕೆಲರಿಗೆ ೨೧-೧೦-೧೨-೫-೪-೩-೨ ವರ್ಷಗಳಮೇರೆಗೆ ಕಾರಾಗೃಹವಾಸಶಿಕ್ಷೆಯೂ, ಕೆಲರಿಗೆ ದ್ವೀಪಾಂತರವಾಸಶಿಕ್ಷೆಯೂ, ಕೆಲರಿಗೆ ಕೆಲವು ತಿಂಗಳು ದಿವಸಗಳಮೇರೆಗೆ ಕಾರಾಗೃಹವಾಸಶಿಕ್ಷೆಯೂ, ಕೆಲರಿಗೆ ಅರ್ಥದಂಡವೂ ಅಪರಾಧರೂಪಾನುಸಾರವಾಗಿ ವಿಧಿಸಲ್ಪಟ್ಟಿರುವುವು. ಲಾಹೋರಿನಲ್ಲಿ ಸ್ಪೆಷಲ್ ಮ್ಯಾಜಿಸ್ಟ್ರೇಟರುಗಳಿಂದ ವಿಚಾರಿಸಲ್ಪಡುತ್ತಿರುವ ರಾಜದ್ರೋಹಕೂಟಸಂಬಂಧದ ದೊಡ್ಡವ್ಯಾಜ್ಯವು ಇನ್ನೂ ನಡೆಯುತ್ತಲೇ ಇರುವುದು.

ಮೀಸೆಗಡ್ಡಗಳು ಬೆಳೆದ ಸ್ತ್ರೀ.

ಪ್ಯಾರಿಸ್ ಪಟ್ಟಣದಲ್ಲಿ ಪ್ರಖ್ಯಾತಿಪಡೆದ ವೈದ್ಯಶ್ರೇಷ್ಠರಲ್ಲೊಬ್ಬರಾದ ಪ್ರೊ|| ಟ್ರೊಫಿಯರ್ ಎಂಬುವರು ೬೨ ವರುಷಪ್ರಾಯದ ಒಬ್ಬ ಹೆಂಗುಸನ್ನು ಫ್ರಾನ್ಸ್ ದೇಶದ ಪ್ರಕೃತಿಶಾಸ್ತ್ರಕೋವಿದರ ಪರಿಷತ್ತಿಗೆ ಕರೆದುಕೊಂಡುಹೋಗಿದ್ದರು. ಆಕೆಯ ಮುಖವೂ ಕೈಯೂ ಪುರುಷರ ಪ್ರಕೃತಿಗೆ ಅನುಸಾರವಾಗಿ ಮಾರ್ಪಟ್ಟಿದ್ದುವು. ಆಕೆಗೆ ೪೦ನೇ ವಯಸ್ಸಿನಲ್ಲಿ ಒಂದು ತೆರದ ವ್ಯಾಧಿಯು ಪ್ರಾಪ್ತವಾಯಿತು. ಅಲ್ಲಿಂದೀಚೆಗೆ ಅವಳ ಅಂಗದಲ್ಲಿ ವೈಚಿತ್ರ್ಯವುಂಟಾಯಿತು. ಆಕೆಯ ಮುಂಗೈಯೂ ಭುಜವೂ ವಿಶಾಲವಾದುವು; ಪಿಂಡಗಳು ವಿಸ್ತರಿಸಿದುವು; ತಲೆಯು ಬಟ್ಟಗಾಯಿತು. ಕಪ್ಪಾದ ಗಡ್ಡವು ಬೆಳೆದು ನಡುವಿನ ಮಟ್ಟಕ್ಕೆ ಇಳಿಯಬಿದ್ದಿತು. ಈ ಅದ್ಭುತರೂಪಿನ ಸ್ತ್ರೀಯನ್ನು ಆ ವೈದ್ಯಶಿಖಾಮಣಿಯು ಪರಿಷತ್ತಿನವರ ಅವಲೋಕನಕ್ಕೆ ಒಳಪಡಿಸಬೇಕೆಂದು ಕರೆದುಕೊಂಡುಹೋಗಲು ಪ್ರಯತ್ನಿಸಿದಾಗ ಆಕೆಯು ಬಹಳ ನಾಚಿಕೆಗೊಂಡಳು; ತನ್ನ ಗಡ್ಡಮೀಸೆಗಳನ್ನು ಬೋಳಿಸಿಕೊಳ್ಳಬೇಕೆಂದು ಉಜ್ಜುಗಿಸಿದಳು. ಆದರೆ ಆ ಡಾಕ್ಟರು ಹಾಗೆ ಮಾಡಗೊಡಲಿಲ್ಲ. ಈ ದೇಹದಲ್ಲಿ ಮಧ್ಯಕಾಲದೊಳಗೆ ಹೀಗೆ ಉಂಟಾದ ವೈಚಿತ್ರ್ಯಕ್ಕೆ ಕಾರಣವೇನೆಂಬುದನ್ನು ಆ ಪರಿಷತ್ತಿನವರು ಬಹಳವಾಗಿ ಆಲೋಚಿಸಿದರೂ ನಿರ್ಧಾರಮಾಡಲಾರದೆಹೋದರು. ಈಶ್ವರನ ಅದ್ಭುತಸೃಷ್ಟಿವೈಚಿತ್ರ್ಯಮರ್ಮವನ್ನೆಲ್ಲಾ ಅಲ್ಪಜ್ಞರು ತಿಳಿಯಲು ಸಾಧ್ಯವೆ?

ಮಾದಕದ್ರವ್ಯಗಳಿಗೆ ಪ್ರತಿಯಾಗಿ ಸೇವನೀಯವಾದ ಉತ್ತಮ ವಸ್ತುಗಳು.

ಮದದ್ರವ್ಯಸೇವನೆಯಲ್ಲೇ ತಗುಲಿದ ಮನಸ್ಸುಳ್ಳವರ ಭ್ರಮೆಯು ಮತ್ತಾವ ವಸ್ತುವಿನ ಸೇವನೆಯಿಂದಲೂ ಶಾಂತವಾಗುವುದಿಲ್ಲ. ಸಾರಾಯಿ ಮೊದಲಾದ ಅಪೇಯವಸ್ತುಗಳಲ್ಲಿ ಗುಣಾಂಶಕ್ಕಿಂತಲೂ ದುರ್ಗುಣವೇ ಹೆಚ್ಚಾಗಿರುವುದು. ಅವುಗಳಲ್ಲಿರುವ ಗುಣಾಂಶವನ್ನು ಮಾತ್ರವೇ ಗಮನಿಸಿದರೆ ಅಂಥ ಗುಣಾಂಶವುಳ್ಳ ಇತರ ಪಾನೀಯವಸ್ತುಗಳು ಅನೇಕವಾಗಿರುವುವು. ಹೆಚ್ಚು ಕಾಫಿಪುಡಿಯನ್ನು ಸೇರಿಸಿದ ಪಾನೀಯವಾಗಲಿ, ಹೆಚ್ಚಾದ ಟೀ ಸೊಪ್ಪು ಸೇರಿದ ಪಾನಕವೇ ಆಗಲಿ, ಕೋಕೋ ಎಂಬುದೇ ಆಗಲಿ ಇವು ಮೂರೂ ಸೇವಿಸಿದವರಿಗೆ ವಿಶೇಷೋತ್ಸಾಹವನ್ನು ತತ್ಕಾಲದಲ್ಲಿ ಹುಟ್ಟಿಸುವುದು ನಿಜ. ಆದರೆ ಇವುಗಳ ಸೇವನೆಯಿಂದ ಕ್ರಮೇಣ ಪೈತ್ಯವು ಅಧಿಕವಾಗುತ್ತ ಬರುವುದು; ನಿದ್ರೆಯು ಕಡಿಮೆಯಾಗುವುದು. ನಿದ್ರೆ ಕಡಿಮೆಯಾಗುತ್ತ ಬಂದಂತೆ ದೇಹದಲ್ಲಿ ನಿತ್ರಾಣವು ಹೆಚ್ಚುವುದು. ಅದುಕಾರಣ ಈ ಮೇಲೆಕಂಡ ಪಾನೀಯಗಳೂ ಕೂಡ ದೇಹಕ್ಕೆ ಹಿತವಾದುವಲ್ಲ. ಬಿಸಿಬಿಸಿಯಾದ ಹಾಲಿನೊಡನೆ ಕಬ್ಬಿನ ಸಕ್ಕರೆಯನ್ನು ಸೇರಿಸಿ ಸೇವಿಸುತ್ತ ಬಂದರೆ ಉತ್ತಮವಾದ ಗುಣವನ್ನು ದೇಹಕ್ಕೆ ಉಂಟುಮಾಡುವುದು. ಸಕ್ಕರೆಯಲ್ಲಿ ಉತ್ಸಾಹವರ್ಧಕವಾದ ಗುಣವಿರುವುದು. ಮದದ್ರವ್ಯವನ್ನು ಕುಡಿಯುವುದರಿಂದ ಉಂಟಾಗತಕ್ಕ ಉತ್ಸಾಹವು ಎಷ್ಟುಬೇಗನೆ ಇಳಿದುಹೋಗುವುದೋ ಅಷ್ಟುಬೇಗನೆ ಈ ಸಕ್ಕರೆಬೆರೆದ ಹಾಲನ್ನು ಕುಡಿಯುವುದರಿಂದ ಉಂಟಾದ ಉತ್ಸಾಹವು ತಗ್ಗಿಹೋಗುವುದಿಲ್ಲ. ಮತ್ತೂ ಇಂಥ ಸವಿಹಾಲಿನ ಸೇವನೆಯಿಂದ ಯಾವಕೇಡೂ ದೇಹಕ್ಕೆ ಉಂಟಾಗುವುದಿಲ್ಲ. ನಿಂಬೆಹಣ್ಣಿನ ರಸವು ಮದ್ಯಪಾನದಿಂದ ಉಂಟಾಗತಕ್ಕ ಕಂಠಶೋಷಣವನ್ನು ನಿರ್ಮೂಲಮಾಡುವುದು. ಸುಂಟಿಯಲ್ಲೂ ಕೂಡ ಇಂತಹ ಸುಗುಣವಿರುವುದು. ಸುಂಟಿಯ ಪಾನಕವು ಬಹಳ ಪ್ರಶಸ್ತವಾದುದು. ಬೇಸಗೆಕಾಲದಲ್ಲಿ ಮುಖ್ಯವಾಗಿ ಸೇವಿಸತಕ್ಕ ಪಾನೀಯಗಳಲ್ಲಿ ಬೀಟುಧಾನ್ಯದ ಗಂಜಿಯೂ, ಬಾರ್ಲಿಅಕ್ಕಿಯ ಗಂಜಿಯೂ ಕೂಡ ಪ್ರಶಸ್ತವಾದುವುಗಳು. ಬಿಸಿಲಿನಲ್ಲಿ ಬಯಲಿನೊಳಗೆ ಕೆಲಸಮಾಡತಕ್ಕ ಜನರಿಗೆ ಈ ಗಂಜಿಯ ಸೇವನೆಯು ಅಮೃತಪಾನಕ್ಕೆ ಸಮಾನವು. ಅದಕ್ಕಿಂತಲೂ ಮಜ್ಜಿಗೆಗೆ ಸಮಾನವಾದ ಪಾನೀಯವು ಮತ್ತೊಂದಿಲ್ಲ. ಈ ಮಜ್ಜಿಗೆಯು ಕೇವಲ ಪಾನೀಯವಸ್ತುವು ಮಾತ್ರವೇ ಅಲ್ಲ. ಉತ್ತಮವಾದ ಆಹಾರ್ಯವಸ್ತುವೂ ಆಗಿರುತ್ತದೆ. ದಾಹವನ್ನು ಅಣಗಿಸುವುದರಲ್ಲೂ ಈ ಮಜ್ಜಿಗೆಯು ಪ್ರಶಸ್ತವಾದ ಸಾಮರ್ಥ್ಯವುಳ್ಳದು. ಮಜ್ಜಿಗೆಯ ಪಾನದಲ್ಲಿ ಅಭಿರುಚಿಯುಳ್ಳವರಿಗೆ ಮದ್ಯಪಾನಾಭಿರುಚಿಯೇ ಹುಟ್ಟುವುದಿಲ್ಲ. ಮದ್ಯಪಾನಾಸಕ್ತರಿಗೆ ಮೊಸರು ಮಜ್ಜಿಗೆಗಳು ಪ್ರಿಯವಾಗಿಲ್ಲದಿರುವುದು ಅವರ ದುರದೃಷ್ಟವು.

ಪ್ರೇಮಪಾಶದ ಬಲ್ಮೆ.

ಪ್ರೇಮಪಾಶವು ಎಷ್ಟು ಬಲವತ್ತರವಾದುದೆಂಬುದನ್ನು ಲೋಕಕ್ಕೆ ನಿದರ್ಶನಪಡಿಸತಕ್ಕ ಒಂದಾನೊಂದು ವಿವಾಹವು ಮೊನ್ನೆತಾನೇ ಪ್ಯಾರಿಸ್‌ಪಟ್ಟಣದ ಬಳಿಯಲ್ಲಿ ನಡೆದಿರುವುದು. ಅದರ ವಿವರವು ಹೇಗೆಂದರೆ—ವಧುವು ಒಬ್ಬ ದೊಡ್ಡಭೂಸ್ವಾಮಿಯ ಏಕಮಾತ್ರಪುತ್ರಿಯು. ವರನು ಆ ಭೂಸ್ವಾಮಿಯ ರೈತರಲ್ಲಿ ಒಬ್ಬನ ಮಗನು. ಇವರಿಬ್ಬರಿಗೂ ಪರಸ್ಪರಪ್ರೇಮವು ಹುಟ್ಟಿ ವೃದ್ಧಿಹೊಂದಿತು. ಈ ವಿಷಯವನ್ನು ಕುರಿತು ರೈತನು ಆ ಭೂಸ್ವಾಮಿಯೊಡನೆ ಪ್ರಸ್ತಾಪಿಸಲಾಗಿ, ಇಂಥ ಅಸಮಾನಸಂಬಂಧವು ಎಂದಿಗೂ ನಡೆಯತಕ್ಕುದಲ್ಲವೆಂದು ಹೇಳಿ ತಿರಸ್ಕರಿಸಿಬಿಟ್ಟನು. ವಧೂವರರ ತಂದೆಗಳ ಪ್ರಸ್ತಾಪದ ಪರಿಣಾಮವು ಹೀಗಾದರೂ, ವಧೂವರರ ಮನೋಭಾವಗಳು ಮಾತ್ರ ಕದಲಿಹೋಗದೆ ದೃಢವಾಗಿದ್ದುವು. ಯಾರು ಏನುಹೇಳಿದರೂ, ಯಾರು ಎಷ್ಟು ಅಡ್ಡಿಮಾಡಿದರೂ, ಅವರವರ ಪ್ರೇಮಪಾಶಬಂಧವುಮಾತ್ರ ಲೇಶವೂ ಶಿಥಿಲವಾಗಲಿಲ್ಲ. ದಿನದಿನಕ್ಕೆ ಆ ಪ್ರೇಮಲತೆಯು ಕುಡಿಗೊಂಡು ಬಳೆಯುತ್ತಲೇ ಇದ್ದಿತು. ಇದೆಲ್ಲಾ ಈಗಿನ ಮಹಾಯುದ್ಧವು ಆರಂಭವಾಗುವುದಕ್ಕೆ ಮುಂಚೆ ನಡೆದಿದ್ದ ಸಂಗತಿ. ಯುದ್ಧಾರಂಭವಾದಮೇಲೆ ಆ ದೇಶದಲ್ಲಿ ಸೇನೆಗೆ ಜನರನ್ನು ಆರಿಸಿ ಸೇರಿಸಿಕೊಳ್ಳುವ ಕೆಲಸಕ್ಕುಪಕ್ರಮವಾಯಿತು. ವರನೂ ಸೇನೆಗೆ ಸೇರಬೇಕಾಯಿತು. ಆಗ ಅವನು ತನ್ನ ಪ್ರೀತಿಪಾತ್ರಳಾದ ವಧುವಿಗೆ ಹೀಗೆಂದು ಕಾಗದವನ್ನು ಬರೆದನು.—"ನಾನು ನಾಳೆಯದಿನ ಯುದ್ಧಾಂಗಣಕ್ಕೆ ಹೊರಡುವವನಾಗಿದ್ದೇನೆ. ನಾನು ಮರಳಿ ನಿನ್ನನ್ನು ನೋಡಲಾರದವನಾಗಿಯೇ ಹೋಗಬಹುದು. ನಾನು ಯುದ್ಧದಲ್ಲಿ ಮಡಿದುಹೋದರೆ ನಿನಗೆ ಸ್ವೇಚ್ಛಾಪ್ರವರ್ತನವು ಸಂಭವಿಸುವುದು. ಆಗ ನೀನು ನನ್ನನ್ನು ಮರೆತು ನಿನ್ನ ಸಂಗಡಿಗರಲ್ಲಾವನಾದರೊಬ್ಬನನ್ನು ವರಿಸಿ ಮದುವೆಯಾಗಿ ಸುಖಪಡುವೆ" ಎಂದು ಬರೆದನು. ಇದಕ್ಕೆ ಉತ್ತರವಾಗಿ ಆ ವಧುವು—"ನೀನು ನಿನ್ನ ಕರ್ತವ್ಯವನ್ನು ನೆರವೇರಿಸಬೇಕು. ಆದರೆ ಆ ಸಂದರ್ಭದಲ್ಲಿ ನೀನು ಪ್ರಯತ್ನಪೂರ್ವಕವಾಗಿ ನಿನ್ನ ದೇಹಕ್ಕೆ ಅಪಾಯವನ್ನು ತಂದುಕೊಳ್ಳಬೇಡ. ನಿನಗಾಗಿ ನಾನು ಕಾದುಕೊಂಡಿರುವೆನು. ನೀನು ಸಾಯುವುದೆಂದರೆ ನಾನು ಸತ್ತುಹೋಗುವುದೇ ಎಂದು ತಿಳಿದಿರುವೆನು" ಎಂದು ಬರೆದಳು.

ಹೀಗೆ ಅವರೀರ್ವರಿಗೂ ಉತ್ತರಪ್ರತ್ಯುತ್ತರಗಳು ನಡೆದುವು. ವರನು ಯುದ್ಧಕ್ಕೆ ಹೊರಟುಹೋದನು. ಮಾರ್ನೆ ಹತ್ತಿರ ನಡೆದ ಯುದ್ಧದಲ್ಲಿ ಅವನು ಶ್ಲಾಘನೀಯವಾಗಿ ಹೋರಾಡಿ ಕೀರ್ತಿಯನ್ನು ಸಂಪಾದಿಸಿದನು. ಅವನಿಗೊಂದು ಬಹುಮಾನಪದಕವೂ ಲಭಿಸಿತು. ಆದರೇನು? ಒಂದು ಸಿಡಿಮದ್ದಿನ ಗೋಳದ ಏಟು ಅವನಿಗೆ ಬಡಿದುದರಿಂದ ಕೆಲದಿನಗಳವರೆಗೆ ವೈದ್ಯಶಾಲೆಯ ಚಿಕಿತ್ಸೆಯನ್ನು ಹೊಂದಿ ಸ್ವಸ್ಥನಾದನು. ಆದರೆ ಆ ಏಟಿನಿಂದ ಕಳೆದುಹೋದ ನೇತ್ರೇಂದ್ರಿಯವು ಮಾತ್ರ ಮರಳಿ ಲಭಿಸಲಿಲ್ಲ. ಅವನು ಕುರುಡನೇ ಆಗಿಬಿಟ್ಟನು. ಅದರಿಂದ ಅವನು ಮರಳಿ ಯುದ್ಧಕ್ರಿಯೆಗೆ ಅನುಪಯುಕ್ತನಾಗಿ ಮನೆಗೆ ಕಳುಹಿಸಲ್ಪಟ್ಟನು. ತನ್ನ ಅವಸ್ಥೆಯನ್ನು ಯೋಚಿಸಿಕೊಂಡು, ತನ್ನ ಮದುವೆಯ ಆಸೆಯನ್ನೇ ತೊರೆದುಬಿಟ್ಟನು. ಆದರೆ ಆಡಿದಮಾತಿನಂತೆ ತನ್ನ ಪ್ರೀತಿಪಾತ್ರನಾದ ವರನ ಆಗಮನವನ್ನೇ ನಿರೀಕ್ಷಿಸಿಕೊಂಡು, ಮತ್ತಾರನ್ನೂ ಮದುವೆಯಾಗದೆ ಇದ್ದ ಆ ವಧುವು, ಆತನ ಪುನರಾಗಮನದಿಂದ ಮೆಯ್ಯುಬ್ಬಿ ಹರ್ಷಾತಿರೇಕವನ್ನು ಹೊಂದಿ, ತನ್ನ ತಂದೆಯಬಳಿಗೆ ಹೋಗಿ ನಾನಾವಿಧ ಪ್ರಾರ್ಥನೆಗಳಿಂದ ಆತನ ಅನುಮತಿಯನ್ನು ಪಡೆದು, ಆ ಕುರುಡಗಂಡನನ್ನೇ ಮದುವೆಯಾಗಿ ಸುಖಿಸಿದಳು. ಇದಲ್ಲವೆ ನಿಜವಾದ ಪ್ರೇಮವು? ಇವರದಲ್ಲವೆ ಅನುಕೂಲದಾಂಪತ್ಯವು?

ಸರ್ ಸಿ. ಶಂಕರನ್ ನಾಯರ್‌ರವರು.

ಈ ಮಹಾಶಯರು ವೈಸ್ರಾಯರ ಕಾರ್ಯನಿರ್ವಾಹಕಸಂಘದ ಒಬ್ಬ ಸಭಿಕರಾಗಿ ಈಗತಾನೇ ನಿಯಮಿಸಲ್ಪಟ್ಟಿರುತ್ತಾರೆ. ವಿದ್ಯಾಶಾಖೆಯ ಮುಖ್ಯಮಂತ್ರಿತ್ವವೂ ಮ್ಯುನಿಸಿಪಾಲಿಟಿಗಳ ಮೇಲಣ ವಿಚಾರಾಧಿಕಾರವೂ ಇವರಿಗೆ ವಹಿಸಲ್ಪಡುವುದೆಂದು ಪ್ರಕಟವಾಗಿದೆ. ಇದುವರೆಗೆ ಈ ಪದವಿಯು ಹಿಂದುಗಳಲ್ಲಾರಿಗೂ ವಹಿಸಲ್ಪಟ್ಟುದಿಲ್ಲ. ಐ.ಸಿ.ಎಸ್. ಪ್ಯಾಸ್‌ಮಾಡಿ ಬಂದ ಐರೋಪ್ಯರಿಗೇ ವಹಿಸಲ್ಪಡುತ್ತಿದ್ದಿತು. ಲಾರ್ಡ್ ಹಾರ್ಡಿಂಜ್‌ರವರ ಭಾರತೀಯಪ್ರೇಮಸೌಹಾರ್ದಗುಣವೇ ಈಗಿನ ಏರ್ಪಾಟಿಗೆ ಮುಖ್ಯಕಾರಣವೆಂದು ತಿಳಿದು ಭಾರತೀಯರೆಲ್ಲರೂ ಸಂತೋಷಿಸುತ್ತಿದ್ದಾರೆ. ಭಾರತೀಯರಲ್ಲೂ ಆ ಪದವಿಗೆ ಸರ್ವವಿಧದಿಂದಲೂ ಒಪ್ಪುವ ಶ್ರೀಯುತ ನಾಯರ್‌ರವರನ್ನೇ ಆರಿಸಿದುದನ್ನು ಕಂಡು ಭಾರತೀಯರೂ ಐರೋಪ್ಯರೂ ಸಹ ಒಂದೇ ಮನಸ್ಸಿನಿಂದ ಅಭಿನಂದಿಸುತ್ತಿದ್ದಾರೆ.

ಸರ್ ಶಂಕರನ್ ನಾಯರ್‌ರವರು ಕೇರಳ ದೇಶದವರು. ಇವರು ೧೮೫೭ ನೆ ಇಸವಿಯ ಜುಲೈ ತಿಂಗಳಲ್ಲಿ ಜನಿಸಿ, ಮದ್ರಾಸ್ ಪ್ರಸಿಡೆನ್ಸಿ ಕಲಾಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ, ಪಟ್ಟಪರೀಕ್ಷೆಯನ್ನಿತ್ತು, ಬಳಿಕ ನ್ಯಾಯಶಾಸ್ತ್ರ ಪರೀಕ್ಷೆಯಲ್ಲೂ ಉತ್ತೀರ್ಣರಾಗಿ, ಡಿಸ್ಟ್ರಿಕ್ಟ್ ಮುನ್ಸೀಫ್ ಉದ್ಯೋಗದಲ್ಲಿ ಕೆಲಕಾಲವಿದ್ದು, ಅದನ್ನು ಬಿಟ್ಟು, ೧೮೮೦ ನೆಯ ವರ್ಷದಲ್ಲಿ ಮದ್ರಾಸಿನಲ್ಲಿ ವಕೀಲತನಕ್ಕೆ ಆರಂಭಿಸಿ, ಪ್ರಸಿದ್ಧಿಪಡೆದು, ೧೮೮೮ ನೆಯ ವರ್ಷದಲ್ಲಿ (ಎಂದರೆ ತನ್ನ ೩೧ ನೆಯ ವಯಸ್ಸಿನಲ್ಲಿ) ಮಲಯಾಳದೇಶದ ಸ್ಥಿತಿಗತಿಗಳನ್ನು ವಿಚಾರಿಸುವುದಕ್ಕೆ ಏರ್ಪಡಿಸಲ್ಪಟ್ಟ ಸಂಘದಲ್ಲಿ ಒಬ್ಬ ಸಭ್ಯರಾಗಿ ನಿಯಮಿಸಲ್ಪಟ್ಟರು. ತನ್ನ ೪೧ನೆಯ ವಯಸ್ಸಿನಲ್ಲಿ ಮದ್ರಾಸು ನಿಯಮನಿರ್ಮಾಣಸಭೆಯ ಸಭಿಕರಾಗಿ ಸರ್ಕಾರದವರಿಂದ ಆರಿಸಲ್ಪಟ್ಟರು. ೧೮೯೯ ನೆಯ ವರ್ಷದಲ್ಲಿ ಗೌರ್ನಮೆಂಟ್ ವಕೀಲರಾದರು. ೧೯೦೪ ರಲ್ಲಿ ಹೈಕೋರ್ಟ್ ಜಡ್ಜ್ ಪದವಿಯಲ್ಲಿ ಆಕ್ಟಿಂಗಾಗಿ ನಿಯಮಿಸಲ್ಪಟ್ಟು ೧೯೦೮ ರಲ್ಲಿ ಸ್ಥಿರಪಡಿಸಲ್ಪಟ್ಟರು. ಇವರ ಯೋಗ್ಯತಾ ವಿಶೇಷದಿಂದ ಇವರಿಗೆ ಸಾರ್ವಭೌಮರಿಂದ ಸರ್ ಪದವಿಯು ಈ ವರ್ಷದಲ್ಲೇ ಕೊಡಲ್ಪಟ್ಟಿತು. ಇವರು ರಾಜಕೀಯ ಕಾರ್ಯದಕ್ಷತೆಯಲ್ಲಿ ಮಾತ್ರವೇ ಹೆಸರಾದವರಲ್ಲ; ದೇಶಾಭಿಮಾನದಲ್ಲೂ ಹೆಸರಾದವರು. ಸರ್ಕಾರಿಯ ಅಧಿಕಾರವನ್ನು ವಹಿಸುವುದಕ್ಕೆ ಮುಂಚೆ ಇವರು ವೃತ್ತಪತ್ರಿಕೆಗಳಿಗೆ ಉಪಯುಕ್ತವಾದ ಲೇಖನಗಳನ್ನು ಬರೆಯುತ್ತಿದ್ದರು. ದೇಶೀಯ ಮಹಾಸಭೆಯ ಮುಂದಾಳುಗಳಲ್ಲಿ ಒಬ್ಬರಾಗಿದ್ದರು. ಅಮರಾವತಿಯಲ್ಲಿ ನೆರೆದಿದ್ದ ದೇಶೀಯ ಮಹಾಸಭೆಯಲ್ಲಿ ಇವರು ಅಧ್ಯಕ್ಷರಾಗಿದ್ದರು. ಇವರು ಸ್ವಸಾಮರ್ಥ್ಯದಿಂದ ಉನ್ನತದಶೆಗೆ ಬಂದವರು. ಉನ್ನತಾಧಿಕಾರಿಗಳ ಕೃಪಾವಲಂಬನೆಯ ಹಂಬಲಿಗೆ ಎಂದೂ ಬಿದ್ದವರಲ್ಲ. ಕೇವಲ ಸ್ವಾತಂತ್ರ್ಯಪ್ರಿಯರು. ಜನರ ಮೆಚ್ಚುಗೆಗಾಗಿ ಒಳಗೊಂದು ಹೊರಗೊಂದು ಮಾತನಾಡತಕ್ಕವರಲ್ಲ. ಯಾವಾಗಲೂ ಸತ್ಯಪ್ರಿಯರು, ನಿಷ್ಕಪಟಿಗಳು, ಉದಾರಭಾವರು, ಮಿತಭಾಷಿಗಳು, ಗ್ರಂಥಾಲೋಡನೆಯಲ್ಲಿ ಘನತರವಾದ ಪ್ರೀತಿಯುಳ್ಳವರು, ವಿದೇಶಗಳಿಗೂ ಕೂಡ ಹಲವುಬಾರಿ ಹೋಗಿ ಬಂದವರಾದುದರಿಂದ ವಿಶೇಷ ಲೋಕಾನುಭವವುಳ್ಳವರು. ಮತ್ತೂ ಸಂಘಸಂಸ್ಕರಣದಲ್ಲಿ ವಿಹಿತ ಕುತೂಹಲವುಳ್ಳವರು. ಇಂಥ ಉದಾತ್ತಪುರುಷರನ್ನು ಭರತಖಂಡದ ಸರ್ಕಾರದ ವಿದ್ಯಾಶಾಖಾಂಗಮಂತ್ರಿಯನ್ನಾಗಿ ನಮ್ಮ ವೈಸ್ರಾಯರು ಆರಿಸಿಕೊಂಡಿರುವುದರಿಂದ, ಈ ದೇಶದಲ್ಲಿ ಎಲ್ಲಕ್ಕಿಂತಲೂ ಮುಖ್ಯವಾಗಿ ಅಭಿವೃದ್ಧಿಗೊಳಿಸಲ್ಪಡಬೇಕಾಗಿರುವ ವಿದ್ಯಾಭ್ಯಾಸ ಕಾರ್ಯವು ಸ್ವದೇಶೀಯ ಸ್ಥಿತಿಗತಿಯನ್ನು ಸಂಪೂರ್ಣವಾಗಿ ಬಲ್ಲ ಈ ಮಹನೀಯರ ೫ ವರ್ಷದ ಅಧಿಕಾರದವಧಿಯಲ್ಲಿ ಪ್ರಶಸ್ತವಾದ ರೀತಿಯಿಂದ ನೆರವೇರಿಸಲ್ಪಡದೆ ಇರಲಾರದೆಂದು ದೇಶೀಯರೆಲ್ಲರೂ ನಂಬಿ ನಿರೀಕ್ಷಿಸುವರು.

ಉಪಯುಕ್ತವಾದ ವಿಷಯಗಳು.

ಬೆಳ್ಳಿಯ ಪಾತ್ರೆಯ ಮೇಲಿರುವ ಗೀಚಾದ ಸಣ್ಣಸಣ್ಣ ಗೆರೆಗಳನ್ನು ಹೋಗಲಾಡಿಸಬೇಕಾದರೆ, ಶಾಮೊಯ್ ತೊಗಲನ್ನು ನಾಲ್ಕಾರು ಪದರಗಳಾಗಿ ಮಡಚಿ, ಸೀಮೆ ಹಿಪ್ಪೆ ಎಣ್ಣೆಯೊಂದಿಗೆ, ಪಾತ್ರೆಯ ಮೇಲೆ ಚೆನ್ನಾಗಿ ಉಜ್ಜಬೇಕು.

ಸಿಂಹಳ (ಲಂಕಾ) ದ್ವೀಪದ ಕೆಲವು ಭಾಗದ ಜನರು ಸ್ನಾನ ಮಾಡುವಾಗ ನೀರಿನಲ್ಲಿ ಕೊಬ್ಬರಿಯೆಣ್ಣೆಯನ್ನು ಬೆರಸಿ ಉಪಯೋಗಿಸುವುದರಿಂದ, ಅವರಿಗೆ ಮಲೇರಿಯಾ ಜ್ವರವು ಬರುವುದಿಲ್ಲವೆಂದು ಡಾಕ್ಟರ್ ಕುಂಜನಪಿಳ್ಳೆ ಎಂಬವರು ತಿಳಿಸುತ್ತಾರೆ.

ಕೇವಲ ಕಪ್ಪಾಗಿಯೂ, ಕೊಳೆಯಾಗಿಯೂ ಇರುವ ಬಿಳಿಯ ಜೋಡುಗಳನ್ನು, ೨೦ ಟೇಬಲ್ ಚಂಚಗಳಷ್ಟು ನೀರು ಮಿಶ್ರವಾದ ಇಪ್ಪತ್ತು ತೊಟ್ಟು ಕೇಸರಿ ನೀರಿನಿಂದ ಉಜ್ಜಿದುದಾದರೆ, ಅವು ಮನೋಹರವಾದ ಪಿಂಗಲ ವರ್ಣವನ್ನು ಹೊಂದುವುವು. ಹೆಚ್ಚಾಗಿ ಪುಟಕೊಟ್ಟಂತಾಗಬೇಕಾದರೆ ಮೇಲೆ ಹೇಳಿದುದನ್ನು ಎರಡಾವೃತ್ತಿ ಉಪಯೋಗಿಸಬೇಕು.

ಯುದ್ಧವಾರ್ತೆಯು.

ಪಶ್ಚಿಮರಣರಂಗ.

ಫ್ರಾನ್ಸು ಸೈನಿಕರೂ ಇಂಗ್ಲೀಷು ಸೈನಿಕರೂ ಎಲ್ಲ ಕಡೆಯೂ ಶತ್ರುಗಳಮೇಲೆ ಕಾದಾಡುತ್ತ ಮುಂದಕ್ಕೆ ಸಾಗುತ್ತಲೇ ಇದ್ದಾರೆ. ಫ್ರೆಂಚರು ಆಂಗರ್ಸ್ ಪ್ರಾಂತದಲ್ಲಿ ಜರ್ಮನರಮೇಲೆ ಬಿದ್ದು ಕಾದಾಡಿ ಅವರಿದ್ದ ೨ ಕಂದಕಗಳನ್ನೂ ಅಬ್ರಾ ಎಂಬ ಗ್ರಾಮವನ್ನೂ ಅವರ ಕಡೆಯ ೪೦೦ ಮಂದಿ ಸೈನಿಕರನ್ನೂ ವಶಪಡಿಸಿಕೊಂಡರು. ಕೆಲೆ ಕಡೆಗೆ ಸಾಗುವ ಪ್ರಯತ್ನವನ್ನು ಜರ್ಮನರು ಬಿಟ್ಟೇ ಇಲ್ಲ. ೬೦ ನೆಯ ನಂಬರು ಗುಡ್ಡದ ಆಸೆಯನ್ನೂ ಅವರು ಬಿಟ್ಟಿಲ್ಲ. ಉಭಯರ ಕಡೆಯ ಫಿರಂಗಿ ಏಟಿನಿಂದ ಆ ಗುಡ್ಡವು ನೆಲಸಮವಾಗಿ ಹೋಗಿರುವುದು. ಅದನ್ನು ಹಿಡಿದುಕೊಳ್ಳುವುದರಲ್ಲಿ ಲಾಭವೇನೂ ಇಲ್ಲದಿದ್ದರೂ ಹಿಡಿದೇ ತೀರಬೇಕೆಂದು ಜರ್ಮನರು ಸಾಹಸಮಾಡುತ್ತಿರುವರು. ಫ್ರೆಂಚರು ಮತ್ತೊಂದು ಕಡೆ ಜರ್ಮನರು ನೆಲಸಿದ್ದ ಒಂದು ಎತ್ತರವಾದ ಸ್ಥಾನವನ್ನು ಬಹಳ ಪರಾಕ್ರಮದಿಂದ ಆಕ್ರಮಿಸಿದರು. ಅಲ್ಲಿ ಬಹುಮಂದಿ ಜರ್ಮನ್ ಸೈನಿಕರು ಹತರಾದರು. ಅಬ್ಲೇಯಿಕ್ ಎಂಬ ಮತ್ತೊಂದು ಗ್ರಾಮವನ್ನು ಸಂಪೂರ್ಣವಾಗಿ ಫ್ರೆಂಚರು ವಶಪಡಿಸಿಕೊಂಡರು.

ಪೂರ್ವರಣರಂಗ.

ಗೆಲೀಷಿಯಾದಲ್ಲಿ ಶತ್ರುಸೈನ್ಯಗಳು ಮುಂದಕ್ಕೆ ನುಗ್ಗಿಬಾರದಂತೆ ರಷ್ಯನ್ ಸೈನ್ಯಗಳು ಮಾಡಿರುತ್ತವೆ. ಪ್ರೆಜಿಮ್ಸಿಲ್ ಪಟ್ಟಣದ ಸುತ್ತಲೂ ಬಹಳ ತೀಕ್ಷ್ಣವಾದ ಯುದ್ಧಗಳು ನಡೆದುದರಲ್ಲಿ ರಷ್ಯನ್ ಸೈನ್ಯಗಳು ಜರ್ಮನ್ ಆಸ್ಟ್ರಿಯನ್ ಸೈನ್ಯಗಳನ್ನು ಹಿಂದಕ್ಕೆ ಓಡಿಹೋಗುವಂತೆ ಮಾಡಿರುತ್ತವೆ. ಜರ್ಮನರು ಹಿಡಿದುಕೊಂಡಿದ್ದ ಸೇನ್ಯಾ ಎಂಬ ಪಟ್ಟಣವನ್ನು ಮರಳಿ ರಷ್ಯನರು ಹಿಡಿದುಕೊಂಡರು. ದಕ್ಷಿಣದಲ್ಲಿ ಲಬೆಜೆಸ್ಕಾನದಿಯ ಬಳಿಯಣ ಲೋಹಮಾರ್ಗದ ಜಂಕ್ಷನ್ನಿನವರೆಗೂ, ನೀಸರ್ ನದಿಯ ಕೆಳಗಿನವರೆಗೂ, ಪ್ರಿಜೆಮ್ಸಿಲ್ಲಿಗೆ ಆಗ್ನೇಯಭಾಗದವರೆಗೂ ರಷ್ಯನ್ ಸೇನೆಗಳು ಶತ್ರುಗಳನ್ನು ಅಟ್ಟಿಕೊಂಡು ಹೋಗಿ ಸೇವಿಕಾನದಿಯ ಬಲದಡದ ಆಶ್ರಯವನ್ನು ಶತ್ರುಗಳು ಬಿಟ್ಟುಹೋಗುವಂತೆ ಮಾಡಿರುತ್ತವೆ. ಈ ಪ್ರಾಂತ್ಯದಲ್ಲಿ ರಷ್ಯನ್ ಸೈನ್ಯಗಳೂ ಶತ್ರುಗಳೂ ಸಹ ಪರಸ್ಪರ ಒಂದನ್ನೊಂದು ಸುತ್ತುಗಟ್ಟಿಹಾಕುವುದಕ್ಕೆ ಬಹಳ ಸಾಹಸಮಾಡುತ್ತಿರುವುವು. ಈ ಸಂದರ್ಭದಲ್ಲಿ ಜರ್ಮನರು ೧೫೦೦ ದೊಡ್ಡ ಫಿರಂಗಿಗಳನ್ನು ಸಾಗಿಸಿತಂದು ರಷ್ಯನರ ೨ ಅಕ್ಷೋಹಿಣಿ ಸೈನ್ಯದಮೇಲೆ ಅಗ್ನಿವರ್ಷವನ್ನು ಭೀಕರವಾಗಿ ಸುರಿಸಿರುವರು. ಒಂದಾವೃತ್ತಿ ೬ ಗಂಟೆಯ ಕಾಲದೊಳಗೆ ೬ ಲಕ್ಷ ಫಿರಂಗಿಗುಂಡುಗಳನ್ನು ಸುರಿಸಿದರಂತೆ! ಇಂಥ ಮಹಾ ಪ್ರಳಯಕಾರಿ ಯುದ್ಧವನ್ನು ಅವರು ಕ್ರಾಕೋವಿನ ಬಳಿಯಿಂದಲೂ ಮಾಡುತ್ತ ಬಂದುದರಿಂದ ಅವರಲ್ಲಿದ್ದ ಮದ್ದುಗುಂಡುಗಳ ರಾಶಿಯು ಕರಗಿಹೋಗಿರುವುದಂತೆ, ಮತ್ತೂ ಅವರು ಹಲವು ಕಡೆ ವಿಷವಾಯುಪ್ರಯೋಗವನ್ನು ಮಾಡಿರುವರು. ಈಗ ರಷ್ಯನರಲ್ಲಿದ್ದ ಮದ್ದುಗುಂಡುಗಳ ಕೊರತೆಯು ತಪ್ಪಿ ಸರ್ವಸಾಧನಸಂಪೂರ್ಣರಾಗಿರುವಕಾರಣ ಅವರು ಜರ್ಮನರ ದಾಳಿಗೆ ಜಗ್ಗದವರಾಗಿ ನಿಂತಿದ್ದಾರೆ. ಇದುವರೆಗೆ ಅಟ್ಟಿಕೊಂಡು ಹೋದಂಥ ಸೌಲಭ್ಯವು ಇನ್ನು ಶತ್ರುಗಳಿಗೆ ಗೆಲಿಷಿಯಾದಲ್ಲಿ ಇರಲಾರದು. ನೀಸ್ಟರ್ ನದಿಯ ಬಳಿಯಲ್ಲೂ ಜುಬುಕು ಜೋಕಾ ನದಿಯ ಬಳಿಯಲ್ಲೂ ರಷ್ಯನರು ಶತ್ರುಗಳಮೇಲೆ ಯುದ್ಧಮಾಡಿದ ಸಂದರ್ಭದಲ್ಲಿ ೬ ಸಾವಿರಮಂದಿ ಜರ್ಮನ್ ಸೈನಿಕರನ್ನೂ ೩೦ ಫಿರಂಗಿಗಳನ್ನೂ ಹಿಡಿದುಕೊಂಡಿರುತ್ತಾರೆ. ಶಾವಲಿ ಜಿಲ್ಲೆಯಲ್ಲಿ ಮೇ ತಾ|| ೧೨ ರಿಂದ ೨೪ ರ ವರೆಗೆ ನಡೆಯಿಸಿದ ಯುದ್ಧದಲ್ಲಿ ಶತ್ರುಗಳ ಕಡೆಯ ೨೦ ಮಂದಿ ಉದ್ಯೋಗಿಗಳನ್ನೂ ೮೫೧೭ ಮಂದಿ ಸೈನಿಕರನ್ನೂ ರಷ್ಯನರು ಸೆರೆ ಹಿಡಿದಿದ್ದಾರೆ. ಮತ್ತೊಂದುಕಡೆ ರಷ್ಯನರು ಜರ್ಮನರ ಮುಖ್ಯಸೇನೆಯಮೇಲೆ ಯುದ್ಧಮಾಡಿ ಟಾಬಾಕ್ಷ್ವೀವಾದ ಕಡೆಗೆ ಓಡಿಹೋಗುವಂತೆ ಮಾಡಿದಾಗ ಅವರ ಕಡೆಯ ೩೦೬೦ ಮಂದಿಗಳನ್ನೂ ಹಲವು ಯುದ್ಧಸಾಮಗ್ರಿಗಳನ್ನೂ ವಶಪಡಿಸಿಕೊಂಡಿದ್ದಾರೆ. ಮತ್ತೊಂದು ಕಡೆ ಶತ್ರುಗಳನ್ನು ರಷ್ಯನರ ಜನರಲ್ ಇರ್ಮನಾಫ್‌ರವರು ಓಡಿಸಿಕೊಂಡು ಹೋಗುವಾಗ ೧೦೦೦ ಮಂದಿ ಸೈನಿಕರನ್ನೂ, ಪಾಕಶಾಲೆಗಳಾಗಿದ್ದ ಹಲವು ಬಂಡಿಗಳನ್ನೂ ವಶಪಡಿಸಿಕೊಂಡಿರುವರು. ಶಾವಲಿ ಪ್ರಾಂತದಲ್ಲಿ ಅತ್ಯಂತ ಬಲವತ್ತರವಾಗಿದ್ದ ಶತ್ರುಗಳ ಬೂಚಿ ಎಂಬ ಸ್ಥಾನವನ್ನು ರಷ್ಯನರು ವಶಪಡಿಸಿಕೊಂಡಾಗ ಅಲ್ಲಿದ್ದ ೧೦೦೦ ಮಂದಿ ಶತ್ರುಸೈನಿಕರನ್ನು ಹಿಡಿದುಕೊಂಡರು. ಗೆಲಿಷಿಯಾದಲ್ಲಿ ಈಗ ತಮಗಾಗಿರುವ ಪರಾಭವವನ್ನು ಜರ್ಮನರೇ ಒಪ್ಪಿಕೊಂಡಿದ್ದಾರೆ. ಅಂತೂ ಗೆಲಿಷಿಯಾದಲ್ಲಿ ಶತ್ರುಗಳು ಮಾಡಿದ ಸಾಹಸವನ್ನೆಲ್ಲಾ ರಷ್ಯನರು ವಿಶೇಷ ಪರಾಕ್ರಮದಿಂದಿದಿರಿಸಿ ಧ್ವಂಸಮಾಡಿರುವರು. ಈ ಯುದ್ಧದಲ್ಲಿ ಕಳೆದ ಮೇ ತಾ|| ೨೫ ರಿಂದೀಚೆಗೆ ಶತ್ರುಪಕ್ಷದಲ್ಲಿ ೧ ಲಕ್ಷ ಮಂದಿಗಳು ಹತರಾಗಿರುವರೆಂದು ಪ್ರಕಟವಾಗಿದೆ. ಗೆಲೀಷಿಯಾದಲ್ಲಿ ಶತ್ರುಗಳ ಕಡೆ ೧೨ ಲಕ್ಷ ಸೈನ್ಯವು ಕಾಯುತ್ತಿರುವುದಂತೆ. ಈಚೆಗೆ ಜರ್ಮನರು ಸಾನ್ ನದಿಯಮೇಲೆ ಜರೋಸ್ಲೇವ್ ಪಟ್ಟಣಕ್ಕೆ ಉತ್ತರದಲ್ಲೂ ದಕ್ಷಿಣದಲ್ಲೂ ೨ ಮುಖ್ಯಸ್ಥಾನಗಳನ್ನಾಕ್ರಮಿಸಿಕೊಂಡು ಮುಂದಕ್ಕೆ ಸಾಗಿರುವ ಹಾಗೂ, ಅವರನ್ನು ರಷ್ಯನರು ಬಹಳ ಪರಾಕ್ರಮದಿಂದ ಇದಿರಿಸಿ ಯುದ್ಧಮಾಡುತ್ತಿರುವರೆಂದೂ ಗೊತ್ತಾಗುತ್ತದೆ. ಜರ್ಮನರು ದಕ್ಷಿಣದಲ್ಲಿರುವ ತಮ್ಮ ಸೇನಾಪಂಕ್ತಿಯನ್ನು ಬಹಳ ವಿಸ್ತರಿಸಿದ್ದಾರೆ. ಬಹಳ ವಿಶೇಷವಾಗಿ ಸೇರಿಸಿದ ತಮ್ಮ ಸೇನಾಸ್ತೋಮವನ್ನು ಜರ್ಮನರು ಕಳೆದ ತಾ|| ೩೦ ರಲ್ಲಿ ಪ್ರೆಜೆಮ್ಸಿಲ್ ಪಟ್ಟಣದ ಪಶ್ಚಿಮದಿಕ್ಕಿನ ಮತ್ತು ವಾಯವ್ಯದಿಕ್ಕಿನ ಕೋಟೆಗಳ ಕಡೆಗೆ ಸಾಗಿಸಿ ಸುತ್ತಿ ಸ್ವಲ್ಪ ಸೇನೆಯನ್ನು ಅತಿ ಸಾಹಸದಿಂದ ಕೋಟೆಯೊಳಕ್ಕೆ ನುಗ್ಗಿಸಿದರು. ೩೧ ನೇ ತಾ|| ಮಧ್ಯಾಹ್ನದ ವರೆಗೂ ಬಹಳ ಭಯಂಕರವಾದ ಯುದ್ಧವಾಯಿತು. ಅಲ್ಲಿ ಮುತ್ತಿದ್ದ ಜರ್ಮನ್ ಸೈನ್ಯವು ಬಹಳ ನಷ್ಟಪಟ್ಟು ಹಿಮ್ಮೆಟ್ಟಿಹೋಯಿತು. ಒಳಕ್ಕೆ ನುಗ್ಗಿದ್ದ ೬೨೪ ಮಂದಿ ಸೈನಿಕರನ್ನೂ ರಷ್ಯನರು ಹಿಡಿದು ಸೆರೆಹಾಕಿದರು. ತಾ|| ೨೮ ರಿಂದ ೩೦ ರೊಳಗೆ ನೀಸ್ಟರ್ ನದಿಯ ಬಳಿಯಲ್ಲಿ ನಡೆದ ಘೋರಯುದ್ಧದಲ್ಲಿ ೧೦೬೬೦ ಮಂದಿ ಜರ್ಮನ್ ಸೈನಿಕರನ್ನು ರಷ್ಯನರು ಸೆರೆಹಿಡಿದಿದ್ದಾರೆ.

ಇಟಲಿ.

ಇಟಲಿಯ ಸೈನ್ಯಗಳು ಆಸ್ಟ್ರಿಯಾದೇಶಕ್ಕೆ ನುಗ್ಗಿಹೋಗಿ ಟ್ರೇಸ್ಟಿಕಡೆಗೆ ನುಗ್ಗಿಹೋಗುತ್ತಾ ದಾರಿಯಲ್ಲಿ ಸಿಕ್ಕಿದ ಗ್ರಾಮಗಳನ್ನು ವಶಪಡಿಸಿಕೊಂಡಿವೆ. ಅಲ್ಲಿರುವ ಇಟಾಲಿಯನ್ ಜನರು ಈ ಸೈನಿಕರಿಗೆ ಸ್ವಾಗತಮಾಡುತ್ತಿದ್ದಾರೆ. ಇಟಲಿಯ ಒಂದು ಸೈನ್ಯಭಾಗವು ಉತ್ತರದಕಡೆಗೆ ಆಸ್ಟ್ರಿಯಾದೇಶದ ಮುಖ್ಯವಾದ ಮಾರ್ಗಗಳನ್ನು ಆಕ್ರಮಿಸಿಕೊಂಡು ಅಲ್ಲಿಗೆ ತಮ್ಮ ಸೈನ್ಯಗಳನ್ನು ವಿಶೇಷವಾಗಿ ಬರಮಾಡಿಕೊಂಡು ಸೇರಿಸುತ್ತಲಿವೆ. ಪೂರ್ವದಕಡೆಗೆ ನುಗ್ಗಿರುವ ಸೇನಾಭಾಗವು ಟ್ರೇಸ್ಟ್ರಿಯಕಡೆಯ ಲೋಹಮಾರ್ಗಗಳನ್ನೂ ನದಿಯ ಸೇತುಗಳನ್ನೂ ವಶಪಡಿಸಿಕೊಂಡಿರುತ್ತವೆ. ಆದ್ರಿಯಾಟಿಕ್‌ಸಮುದ್ರದಲ್ಲಿ ಕಳೆದ ತಾ|| ೨೪ರಲ್ಲಿ ಆಸ್ಟ್ರಿಯನ್ ನೌಕಾದಳಕ್ಕೂ ಇಟಲಿಯ ನೌಕಾದಳಕ್ಕೂ ಒಂದು ಸಣ್ಣ ಕಾಳಗವಾಗಿ ಶತ್ರುಪಕ್ಷದಳದಲ್ಲಿ ಒಂದು ಟಾರ್ಪೆಡೋ ಹಡಗೂ ಮೂರು ಯುದ್ಧದಹಡಗುಗಳೂ ಇನ್ನೊಂದು ಸಣ್ಣ ಹಡಗೂ ಬಹಳನಷ್ಟಗೊಂಡವು; ಬಹುಮಂದಿಸತ್ತರು. ಟರ್ಲೈನ್ ಎಂಬ ಇಟಲಿ ಯುದ್ಧನೌಕೆಯನ್ನು ಶತ್ರುಗಳು ಮುಳುಗಿಸಿಬಿಟ್ಟರು.

ಪೂರ್ವಕ್ಕೆ ನುಗ್ಗುತ್ತಿರುವ ಇಟಲಿ ಸೈನ್ಯಗಳು ಹಲವು ಮುಖ್ಯಪಟ್ಟಣಗಳನ್ನೂ ೩-೪ ಸುರಕ್ಷಿತವಾದ ಕೋಟೆಗಳನ್ನೂ ಕೆಲವು ಪರ್ವತಪ್ರಾಂತದ ಕಣಿವೆಗಳನ್ನೂ, ಕೆಲವು ಗ್ರಾಮಗಳನ್ನೂ ವಶಪಡಿಸಿಕೊಂಡುವು. ಇಲ್ಲೆಲ್ಲಾ ಶತ್ರುಗಳು ಯುದ್ಧಮಾಡಿ ಸೋತುಹೋಗಿದ್ದಾರೆ. ಈ ರಣರಂಗದಲ್ಲಿ ಮಳೆಯು ಸುರಿಯುತ್ತಲೂ ನದಿಗಳು ತುಂಬಿ ಹರಿಯುತ್ತಲೂ ಇವೆ. ಇಟಾಲಿಯನ್ನರು ಇಟ್ಟಹೆಜ್ಜೆಯನ್ನು ಹಿಂದೆಗೆಯದೆ ಬಹಳ ಪರಾಕ್ರಮದಿಂದ ಶತ್ರುದೇಶದೊಳಗೆ ನುಗ್ಗಿಹೋಗುತ್ತಲೇ ಇದ್ದಾರೆ. ಇಟಲಿ ಸೈನ್ಯಗಳು ಟ್ರೇಸ್ಟಿಯಕಡೆ ಬರುತ್ತಲಿರುವ ವಾರ್ತೆಯನ್ನು ಕೇಳಿ ಆ ಪಟ್ಟಣದಲ್ಲಿರುವ ಆಸ್ಟ್ರಿಯನ್ ಪ್ರಜೆಗಳು ಇಟಾಲಿಯನ್ ಜನರ ಮನೆಗಳನ್ನೂ ಅಂಗಡಿಗಳನ್ನೂ ನುಗ್ಗಿ ಸಿಕ್ಕಿದ ಪದಾರ್ಥಗಳನ್ನು ದೋಚಿಕೊಂಡು ಓಡಿಹೋಗುತ್ತಿದ್ದಾರೆ. ಪೋಲೀಸರು ಆ ಗುಂಪಿನವರಿಗೇ ಸಹಾಯಕರಾಗಿದ್ದಾರಂತೆ.

ತುರ್ಕಿ.

ಡಾರ್ಡನೆಲ್ಸಿಗೂ ಸಾಮಸ್ ಜಲಸಂಧಿಗೂ ಮಧ್ಯದಲ್ಲಿರುವ ತುರ್ಕಿಯ ರೇವೆಗಳಿಗೆ ಯಾವವಿಧದ ಸಾಮಗ್ರಿಗಳನ್ನೂ ಹಡಗುಗಳು ಸಾಗಿಸಿಕೊಂಡುಹೋಗಲು ಅವಕಾಶವಿಲ್ಲದಂತೆ ಆಂಗ್ಲೇಯರು ತಮ್ಮ ನೌಕಾಬಲದಿಂದ ಪ್ರತಿಬಂಧಿಸುತ್ತೇವೆಂದು ಪ್ರಕಟಿಸಿರುತ್ತಾರೆ. "ಇಂಗ್ಲೀಷ್ ಫ್ರೆಂಚ್‌ಸೈನ್ಯಗಳು ಈಜಿಪ್ಟಿನಲ್ಲಿ ವಿರುದ್ಧಪ್ರಯತ್ನಗಳನ್ನು ಮಾಡುತ್ತಿರುವುದರಿಂದ ಸೂಯೇಜ್ ಕಾಲ್ವೆಯವರೆಗೂ ನಾವು ಯುದ್ಧರಂಗವನ್ನು ವಿಸ್ತರಿಸುತ್ತೇವೆ. ತಟಸ್ಥದೇಶೀಯರ ಹಡಗಿಗೂ ಸಾಮಗ್ರಿಗಳಿಗೂ ನಷ್ಟವುಂಟಾದರೆ ಅದಕ್ಕೆ ಇಂಗ್ಲೀಷ್ ಫ್ರಾನ್ಸ್ ದೇಶೀಯರೇ ಬಾಧ್ಯರು" ಎಂದು ತುರ್ಕಿಯವರು ಪ್ರಕಟಿಸಿದ್ದಾರೆ. ಇದರಿಂದ ತುರ್ಕಿಯವರು ಇನ್ನುಮುಂದೆ ಸೂಯೆಜ್‌ಕಾಲ್ವೆಯ ಪ್ರಾಂತಕ್ಕೂ ತಮ್ಮ ಸಬ್‌ಮೆರೀನುಗಳನ್ನು ಕಳುಹಿಸಿ ಹಾವಳಿಮಾಡಬಹುದೆಂದು ಕಾಣುತ್ತದೆ. ಇಂಗ್ಲೀಷರ ಒಂದು ಸಬ್‌ಮೆರೀನು ಕಾನ್‌ಸ್ಟಾಂಟಿನೋಪಲಿನವರೆಗೂ ನುಗ್ಗಿಹೋಗಿ ತುರುಕರ ಸೈನ್ಯವಿದ್ದ ಒಂದು ಹಡಗನ್ನು ಟಾರ್ಪೆಡೋವಿನಿಂದ ಹೊಡೆದು ಮುಳುಗಿಸಿತು. ಮತ್ತು ಮಾರ್ಮೊರಾ ಸಮುದ್ರದಲ್ಲಿ ಯುದ್ಧಸಾಮಗ್ರಿಗಳು ತುಂಬಿದ್ದ ಮತ್ತೊಂದು ತುರ್ಕಿ ಹಡಗನ್ನು ಮುಳುಗಿಸಿತು. ಅದರಲ್ಲಿ ಅನೇಕ ಫಿರಂಗಿಗಳೂ ವಿಶೇಷ ಮದ್ದುಗುಂಡುಗಳೂ ತುಂಬಿದ್ದುವು. ಮತ್ತು ಇದೇ ಸಬ್‌ಮೆರೀನು ಆಹಾರ್ಯಪದಾರ್ಥಗಳನ್ನು ತುಂಬಿದ್ದ ಮತ್ತೊಂದು ತುರ್ಕಿ ಹಡಗನ್ನು ಅಟ್ಟಿಕೊಂಡುಹೋಗಿ ದಡಕ್ಕೆ ನಾಟಿಸಿ ಹೊಡೆದಿರುವುದು. ಡಾರ್ಡನೆಲ್ಸ್ ಜಲಸಂಧಿಯಲ್ಲಿಳಿದಿರುವ ಮಿತ್ರಮಂಡಲಿಯ ಸೈನ್ಯವು ಮುಂದಕ್ಕೆ ಮಂದವಾಗಿ ಸಾಗುತ್ತಿರುವುದು. ಅಲ್ಲಲ್ಲಿಗೆ ತುರ್ಕಿ ಸೈನಿಕರು ಪ್ರತಿಭಟಿಸಿ ಸೋತು ಓಡಿಹೋಗುತ್ತಿರುವರು. ಒಂದು ಕಡೆ ಹಿಂದೂದೇಶಸೈನಿಕರು ತುರ್ಕಿಯವರಮೇಲೆ ತೀಕ್ಷ್ಣವಾಗಿ ಕಾದು ಪರಾಜಿತರನ್ನು ಮಾಡಿರುವರು. ಗಲ್ಲಿಪೋಲಿ ದ್ವೀಪಕಲ್ಪದಲ್ಲಿ ಯುದ್ಧಮಾಡುತ್ತಿರುವ ಮಿತ್ರಮಂಡಲಿಯ ಸೈನಿಕರಿಗೆ ಸಹಾಯಮಾಡುತ್ತಿದ್ದ ಮೆಜೆಸ್ಟಿಕ್ ಎಂಬ ಯುದ್ಧದಹಡಗು ತುರ್ಕಿಯವರ ಸಬ್‌ಮೆರೀನಿನ ಟಾರ್ಪೆಡೋ ಬಡಿತದಿಂದ ಮುಳುಗಿಹೋಯಿತು. ಆಂಗ್ಲರ ಸಬ್‌ಮೆರೀನು ಮತ್ತೊಂದು ಜರ್ಮನರ ಸೇನೆತುಂಬಿದ್ದ ಹಡಗನ್ನು ಟಾರ್ಪೆಡೋವಿನಿಂದ ಬಡಿದಿತು. ಈ ಹಾವಳಿಗೆ ಹೆದರಿ ಶತ್ರುಗಳ ಹಲವು ಹಡಗುಗಳು ಒಳಗಡೆಯ ರೇವೆಯಲ್ಲಿ ಅವಿತುಕೊಂಡುಬಿಟ್ಟವು. ಈ ಸುದ್ದಿಯನ್ನು ಕಾನ್‌ಸ್ಟಾಂಟಿನೋಪಲಿನಲ್ಲಿರುವ ಪ್ರಜೆಗಳು ಕೇಳಿ ಬಹಳ ಭಯಪಟ್ಟರು. ಅನೇಕ ಅಂಗಡಿಮುಂಗಟ್ಟುಗಳು ಮುಚ್ಚಲ್ಪಟ್ಟುವು.

ಪರ್ಷಿಯನ್ ಸಮುದ್ರಶಾಖೆಯ ಪ್ರಾಂತದಲ್ಲಿರುವ ಆಂಗ್ಲಸೇನೆಗಳು ನೌಕಾದಳದವರ ಸಾಹಾಯ್ಯದಿಂದ ಟೈಗ್ರೀಸ್ ನದಿಯವರೆಗೂ ಮುಂದಕ್ಕೆ ನುಗ್ಗಿಹೋಗಿರುತ್ತವೆ. ಆ ಪ್ರಾಂತದಲ್ಲಿ ಉಷ್ಣವು ಹೆಚ್ಚಾಗಿದ್ದರೂ ಸೈನ್ಯಗಳು ಉತ್ಸಾಹದಿಂದ ಶತ್ರುಗಳಮೇಲೆ ಬಿದ್ದು ಕಾದಾಡುತ್ತ ಅವರ ೪ ಸ್ಥಲಗಳನ್ನು ವಶಪಡಿಸಿಕೊಂಡಿವೆ. ಈ ಯುದ್ಧದಲ್ಲಿ ಆಂಗ್ಲಸೈನ್ಯದಲ್ಲಿ ಆಗಿರುವ ನಷ್ಟವು ಬಹಳಸ್ವಲ್ಪ.

ಆಕಾಶಯಾನಗಳು.

ಇದುವರೆಗೂ ಯಾವ ವೈಮಾನಿಕರೂ ಮಾಡದಿದ್ದಂತಹ ಅಸಾಧಾರಣ ಸಾಹಸವನ್ನು ಫ್ರಾನ್ಸ್ ವೈಮಾನಿಕರು ಕಳೆದ ವಾರದಲ್ಲಿ ಮಾಡಿರುತ್ತಾರೆ. ಅದೇನೆಂದರೆ-೧೮ ಮಂದಿ ವೈಮಾನಿಕರು ಜರ್ಮನಿಗೆ ಸೇರಿದ ಡ್ವಿಗ್ಸಾಫೇನ್ ಎಂಬ ಪಟ್ಟಣದಲ್ಲಿರುವ ಕಮ್ಮಾಗಾರದ ಮೇಲೆ ದೊಡ್ಡ ದೊಡ್ಡ ಸಿಡಿಮದ್ದುಗಳನೇಕವನ್ನು ಹಾಕಿ ಬಹಳ ಅನರ್ಥವನ್ನು ಮಾಡಿರುತ್ತಾರೆ. ಈ ಪಟ್ಟಣದಲ್ಲಿ ಪೂರ್ವದೊಳಗೆ ರಾಸಾಯನಿಕ ಯಂತ್ರಶಾಲೆಯಾಗಿದ್ದ ಭವನವನ್ನೇ ಈಗ ಜರ್ಮನರು ಮದ್ದುಗುಂಡುಗಳನ್ನು ಮಾಡುವ ಯಂತ್ರಾಗಾರವನ್ನಾಗಿ ಏರ್ಪಡಿಸಿಕೊಂಡಿದ್ದಾರೆ. ಇಲ್ಲಿ ೨೦ ಸಾವಿರ ಮಂದಿಗಳು ಕೆಲಸಮಾಡುತ್ತಿದ್ದಾರೆ. ಇದಕ್ಕೆ ಸೇರಿದ ಮತ್ತೊಂದು ಯಂತ್ರಾಲಯದ ಮೇಲೂ ೯೬ ಸಿಡಿಮದ್ದುಗಳನ್ನು ಹಾಕಿರುವರು. ಈ ಗುಂಡುಗಳೆಲ್ಲಾ ಗುರಿತಪ್ಪದೆ ಬಿದ್ದಿರುವುವು. ಈ ಮದ್ದಿನ ಗೋಳಗಳ ಏಟಿನಿಂದ ಆ ಯಂತ್ರಾಲಯಗಳಲ್ಲಿ ಬೆಂಕಿಹುಟ್ಟಿ ಬಹುದೂರದವರೆಗೆ ಜ್ವಾಲೆಗಳೂ ಹೊಗೆಯೂ ವ್ಯಾಪಿಸಿದುವು. ವಿಷವಾಯುವೂ ಕೂಡ ದಟ್ಟವಾಗಿ ಎದ್ದುದರಿಂದ ಅಲ್ಲಿ ವಿಷವಾಯುಗೋಳಗಳನ್ನು ಕೂಡ ಜರ್ಮನರು ನಿರ್ಮಿಸುತ್ತಿರಬಹುದೆಂದು ಗೊತ್ತಾಯಿತು. ಈ ಸಾಹಸಕಾರ್ಯವನ್ನು ಮಾಡಿದ ವೈಮಾನಿಕರಲ್ಲಿ ಒಬ್ಬನ ಹೊರತು ಉಳಿದವರೆಲ್ಲಾ ಸುರಕ್ಷಿತವಾಗಿ ಹಿಂದಿರಿಗಿ ಬಂದರು. ಒಂದು ವಿಮಾನವು ಮಾತ್ರ ಡ್ವಿಗ್ಸಾಫೇನಿನ ಹತ್ತಿರ ಶತ್ರುಗಳ ಗುಂಡಿನೇಟಿನಿಂದ ಸುಟ್ಟು ನೆಲದಮೇಲಕ್ಕೆ ಬಿದ್ದುಹೋಯಿತು. ಅದರಲ್ಲಿದ್ದ ವೈಮಾನಿಕನೂ ಸುಟ್ಟುಹೋದನು.

ಒಂದು ಜರ್ಮನ್ ವಿಮಾನವು ಪ್ಯಾರಿಸ್ ಪಟ್ಟಣದ ಮೇಲೆ ಮದ್ದಿನ ಗೋಳವನ್ನು ಹಾಕಬೇಕೆಂದು ೮ ಸಾವಿರ ಅಡಿ ಎತ್ತರದಲ್ಲಿ ಬರುತ್ತಿರಲು ಫ್ರಾನ್ಸ್‌ವೈಮಾನಿಕನು ತನ್ನ ವಿಮಾನವನ್ನು ೯ ಸಾವಿರ ಅಡಿಯೆತ್ತರಕ್ಕೆ ಹಾರಿಸಿ, ಆ ಶತ್ರುವೈಮಾನಿಕನ ಮೇಲೆ ಯುದ್ಧವನ್ನು ಮಾಡಿದನು. ಶತ್ರುವಿನ ಗುಂಡಿನೇಟು ಈತನ ಭುಜದ ಮೇಲೆ ಬಡಿದರೂ ಲಕ್ಷಿಸದೆ ಶತ್ರು ವಿಮಾನದ ಮೇಲೆ ೩೦ ಅಡಿಗಳ ದೂರದಿಂದ ಗುಂಡನ್ನು ಹೊಡೆಯುವಂತೆ ತನ್ನ ಜತೆಗಾರನಿಂದ ಮಾಡಿಸಿ ೬ ಸಾವಿರ ಅಡಿಯೆತ್ತರದಿಂದ ಶತ್ರುವಿಮಾನವು ತುಣುತುಣುಕಾಗಿ ಕೆಳಕ್ಕೆ ಬೀಳುವಂತೆಯೂ ಅದರಲ್ಲಿದ್ದ ವೈಮಾನಿಕರಿಬ್ಬರೂ ಸಾಯುವಂತೆಯೂ ಮಾಡಿರುವನು.

ಜರ್ಮನರ ಆಕಾಶನಾವೆಗಳು ಲಂಡನ್ ಪಟ್ಟಣದ ಮೇಲೆ ಹಲವು ಕಡೆ ಕೆಲವು ಸಿಡಿಮದ್ದುಗಳನ್ನು ಹಾಕಿ ಸ್ವಲ್ಪ ನಷ್ಟ ಮಾಡಿರುತ್ತವೆ. ಇಬ್ಬರು ಸತ್ತರು ಸರ್ಕಾರಿ ಕಟ್ಟಡಗಳಿಗಾವುದಕ್ಕೂ ನಷ್ಟವಾಗಲಿಲ್ಲ. ಮದ್ದಿನೇಟಿನಿಂದ ಸುಟ್ಟ ಮನೆಗಳಮೇಲೆ ಕೂಡಲೇ ನೀರನ್ನು ಸುರಿಸುತ್ತ ಬಂದುದರಿಂದ ನಷ್ಟವು ವಿಶೇಷವಾಗಿ ಆಗಲಿಲ್ಲ.

ಜರ್ಮನರ ಸಬ್‌ಮೆರೀನುಗಳು.

ಇವು ಕಳೆದ ವಾರದಲ್ಲಿ ಸ್ವಲ್ಪ ಹೆಚ್ಚು ಹಾವಳಿಯನ್ನು ಮಾಡಿ ೬-೭ ಹಡಗುಗಳನ್ನು ಮುಳುಗಿಸಿರುತ್ತವೆ. ಲೂಸಿಟಾನಿಯಾ ಹಡಗನ್ನು ಮುಳುಗಿಸಿದ ವಿಷಯದಲ್ಲಿ ಅಮೇರಿಕಾದವರು ಮಾಡಿದ್ದ ಪ್ರಶ್ನೆಗೆ ಜರ್ಮನರು ಕೊಟ್ಟಿರುವ ಉತ್ತರವು ಅವರಿಗೆ ಸಮಾಧಾನಪಡಿಸಿಲ್ಲ.

ಮೈಸೂರು ಸ್ಟಾರ್.

ಸ: ೧೯೧೫ನೆಯ ಇಸವಿ ಜೂನ್ ತಾ|| ೬ನೆಯ ಭಾನುವಾರ.

ನಮ್ಮ ದಿವಾನರು ನೂತನ ಬಿರುದಾಂಕನದಿಂದ ಸನ್ಮಾನಿಸಲ್ಪಟ್ಟರು.

ನಮ್ಮ ಸಾರ್ವಭೌಮರವರ ಜನ್ಮದಿನಮಹೋತ್ಸವವು ಕಳೆದ ತಾ|| ೩ರ ದಿವಸ ಆಚರಿಸಲ್ಪಟ್ಟಿತು. ಆ ದಿನ ಆ ಮಹಾಪ್ರಭುಗಳ ಪರಿಪಾಲನೆಗೊಳಪಟ್ಟ ರಾಜ್ಯದಲ್ಲಿ ಯೋಗ್ಯತಾಂಶವುಳ್ಳ ಪ್ರಜೆಗಳಿಗೆ ಅನುಗುಣವಾದ ಬಿರುದಾಂಕನಗಳು ಅನುಗ್ರಹಿಸಲ್ಪಡುವ ಪದ್ಧತಿಯಂತೆ ಈ ಸಲವೂ ಎಷ್ಟೋ ಪ್ರಶಸ್ತಿಗಳು ಕೊಡಲ್ಪಟ್ಟಿರುವುವು. ಅವುಗಳಲ್ಲಿ ೨೯೧ ಬಿರುದುಗಳು ನಮ್ಮ ಭರತಖಂಡ ನಿವಾಸಿಗಳಿಗೆ ಅನುಗ್ರಹಿಸಲ್ಪಟ್ಟಿರುವುವು. ನಮ್ಮ ಮೈಸೂರು ಸಂಸ್ಥಾನದೊಳಗೆ ಮಂತ್ರಿಶ್ರೇಷ್ಠರಾದ ಶ್ರೀಯುತ ಮೋಕ್ಷಗುಂಡಂ ವಿಶ್ವೇಶ್ವರಯ್ಯ, ಸಿ.ಐ.ಇ. ಯವರಿಗೆ ಕೆ.ಸಿ.ಐ.ಇ., ಎಂಬ ಬಿರುದು ದೊರೆತಿರುವುದು ನಮ್ಮ ದೇಶೀಯರಿಗೆಲ್ಲಾ ಅತ್ಯಂತ ಸಂತೋಷಪ್ರದವಾಗಿರುವುದು. ಈ ಮಹಾಶಯರು ನಮ್ಮ ಸಂಸ್ಥಾನದ ಮಂತ್ರಿಪದವಿಗೆ ಬಂದನಂತರ ಅಹೋರಾತ್ರಿ ದೇಹಶ್ರಮಾದಿಗಳನ್ನು ಗಣಿಸದೆ ಸಂಪೂರ್ಣ ದೇಶಾಭಿಮಾನದಿಂದ ರಾಜ್ಯಕಾರ್ಯವನ್ನು ಹಿಂದಿನ ಯಾವೊಬ್ಬ ಮಂತ್ರೀಶ್ವರರೂ ನಡೆಯಿಸದೆ ಇದ್ದ ರೀತಿಯಲ್ಲಿ ನಿರ್ವಹಿಸುತ್ತಲಿರುವುದನ್ನು ಕಂಡು ಆ ಗೋಪಾಲ ಭೂಪಾಲ ಪರ್ಯಂತವಾಗಿ ಅವರನ್ನು ಹರಸುತ್ತಿರುವರು. ಇಂಥ ಮಹಾಶಯರಿಗೆ ಈ ಬಿರುದು ಲಭ್ಯವಾದುದೇನೂ ದೊಡ್ಡದಲ್ಲ. ಇವರು ಇದೇ ಪದವಿಯಲ್ಲಿ ಇನ್ನೂ ಚಿರಕಾಲವಿದ್ದು ಇತೋಪ್ಯತಿಶಯವಾದ ಬಿರುದಾವಳಿಯನ್ನೂ ಮೈಸೂರು ಪ್ರಜೆಗಳ ಸಂಪೂರ್ಣ ಕೃತಜ್ಞತೆಯನ್ನೂ ಶಾಶ್ವತವಾದ ಯಶೋವೈಭವವನ್ನೂ ಪಡೆದುಕೊಳ್ಳುವವರಾಗಲೆಂದು ಕೋರಿ, ಸದ್ಯದಲ್ಲಿ ಅವರಿಗೆ ಲಭಿಸಿದ ಸನ್ಮಾನಕ್ಕಾಗಿ ಮನಃಪೂರ್ವಕವಾದ ನಮ್ಮ ಅಭಿನಂದನವನ್ನು ಈ ಮೂಲಕವಾಗಿ ಸಮರ್ಪಿಸುತ್ತೇವೆ.

ಆರ್ಯವೈಶ್ಯಮಹಾಸಭೆ.

ಈ ಸಭೆಯ ೮ ನೆಯ ಅಧಿವೇಶನವು ಕಳೆದ ತಿಂಗಳು ತಾ|| ೨೭-೨೮-೨೯ರಲ್ಲಿ ಬಳ್ಳಾರಿಪಟ್ಟಣದಲ್ಲಿ ಮ|| ಮೋತೆಗಂಗರಾಜು ಎಂಬ ವೈಶ್ಯಶ್ರೇಷ್ಠರ ಅಧ್ಯಕ್ಷತೆಯಿಂದ ಸಾಂಗವಾಗಿ ನೆರವೇರಿತು. ಸಭೆಗೆ ಮೈಸೂರುದೇಶ, ಹೈದರಾಬಾದು ರಾಜ್ಯಗಳಿಂದಲೂ ಗುಂಟೂರು ಏಲೂರು ಕೋಕನಾಡ ಮೊದಲಾದ ಉಳಿದ ಆಂಧ್ರದೇಶದ ಹಲವುಭಾಗಗಳಿಂದಲೂ ಬಹುಶಃ ೪೦೦ ಮಂದಿಗಳ ವರೆಗೆ ಪ್ರತಿನಿಧಿಗಳೂ ಸಾವಿರಾರು ಮಂದಿ ಪ್ರೇಕ್ಷಕರೂ ನೆರೆದಿದ್ದರು. ಸತ್ಕಾರಕ ಸಂಘಾಧ್ಯಕ್ಷರ ಭಾಷಣವನ್ನು ನೋಡಲಾಗಿ, ಈ ಸಭಾಕಾರ್ಯನಿರ್ವರ್ತನದ ವಿಷಯದಲ್ಲಿ ಸ್ಥಲೀಯ ಸ್ವಜನವರ್ಗದ ದ್ವೈವಿಧ್ಯದಿಂದ ಎಷ್ಟೋ ತೊಂದರೆಗಳು ತಟ್ಟಿರಬೇಕೆಂಬುದು ಗೊತ್ತಾಗಿ, ಹಿಂದೆ ಇದೇ ಪಟ್ಟಣದಲ್ಲಿ ವೀರಶೈವಮಹಾಸಭೆಯು ನೆರೆದಾಗ್ಗೆ ಉಂಟಾಗಿದ್ದ ವಿಘ್ನಪರಂಪರೆಗಳು ಸ್ಮರಣೆಗೆ ಬರುತ್ತಲಿವೆ. ಬಳ್ಳಾರಿಯು ಒಳ್ಳೆಯ ವರ್ತಕಸ್ಥಳವಾಗಿದ್ದರೂ, ಅಲ್ಲಿನ ಜನರು ವಿದ್ಯಾಪ್ರಸಾರ ಸಂಘಪರಿಷ್ಕರಣ ಮೊದಲಾದ ಜನಪುರೋವೃದ್ಧಿಸಾಧನಕಾರ್ಯಗಳನ್ನು ನೆರವೇರಿಸಿ, ಆತ್ಮಶ್ರೇಯಸ್ಸನ್ನು ಸಾಧಿಸಿಕೊಳ್ಳುವ ವಿಷಯದಲ್ಲಿ ಪರಸ್ಪರ ಸೌಹಾರ್ದ, ಸತ್ಪ್ರಯತ್ನ, ಕುತೂಹಲ ಮೊದಲಾದುವುಗಳನ್ನು ಸಮಗ್ರವಾಗಿ ಹೊಂದಿಲ್ಲದಿರುವುದೇಕೋ ಕಾಣಲಿಲ್ಲ. ಆದರೂ ವೈಶ್ಯಮಹಾಸಭಾಚಾಲನಪ್ರಮುಖರು ಬಂದ ವಿಘ್ನಗಳನ್ನೆಲ್ಲಾ ಮೆಟ್ಟಿಕೊಂಡು ಕಾರ್ಯವನ್ನು ಪರಿಪೂರ್ಣಗೊಳಿಸಿದುದು ಶ್ಲಾಘನೀಯವಾಗಿದೆ.

ಸಭಾಧ್ಯಕ್ಷರು ಮಾಡಿದ ಭಾಷಣದಲ್ಲಿ ತಮ್ಮ ಜನವರ್ಗದ ಲೌಕಿಕ ಪಾರಮಾರ್ಥಿಕ ಶ್ರೇಯಸ್ಸುಗಳೆರಡಕ್ಕೂ ಸಾಧಕವಾದ ವಿಷಯಗಳನ್ನು ಸ್ಪಷ್ಟವಾಗಿ ವಿಚಾರಮಾಡಿರುತ್ತಾರೆ. ಸಮಯಾಚಾರಕ್ಕೆ ಸಂಬಂಧಪಟ್ಟ ವಿಷಯಗಳನ್ನು ಪ್ರಸ್ತಾಪಿಸುವಾಗ್ಗೆ ತಮ್ಮವರೆಲ್ಲಾ ಶುಭಾಶುಭ ಕರ್ಮಗಳನ್ನು ವೇದೋಕ್ತಮಂತ್ರಪುರಸ್ಸರವಾಗಿಯೇ ನಡೆಯಿಸಿಕೊಳ್ಳಬೇಕೆಂದೂ,ವಿವಾಹಕಾಲಬರುವವರೆಗೂ ಉಪನಯನವನ್ನು ಮಾಡದೆ ಇದ್ದು ವಿವಾಹದ ಜತೆಗೇ ಅದನ್ನೂ ನಡೆಯಿಸುವುದು ತಪ್ಪೆಂದೂ, ರಾತ್ರಿಹೊತ್ತು ಉಪನಯನವನ್ನು ಮಾಡಬಾರದೆಂದೂ, ರಜಸ್ವಲಾನಂತರ ವಿವಾಹವು ಶಾಸ್ತ್ರನಿಷಿದ್ಧವಾದ ಕಾರಣ ಅದು ಕೂಡದೆಂದೂ, ಬಾಲ್ಯವಿವಾಹವು ಕೂಡ ಯೋಗ್ಯವಲ್ಲವೆಂದೂ, ೧೦-೧೨ ವರ್ಷ ವಯಸ್ಸಿನ ಕನ್ಯೆಯರಿಗೂ ೧೬ ವರ್ಷ ತುಂಬಿದ ಹುಡುಗರಿಗೂ ವಿವಾಹವನ್ನು ಮಾಡಬಹುದೆಂದೂ ಹೇಳಿದರು. ಐಹಿಕವ್ಯಾಪಾರ ವಿಷಯಕವಾಗಿ ಮಾತನಾಡುವಾಗ ತಮಗೆ ಅನೂಚಾನವಾಗಿ ಬಂದಿರುವ ವ್ಯಾಪಾರ ವೃತ್ತಿಯನ್ನು ಕಾಲೋಚಿತವಾಗಿ ವೃದ್ಧಿಪಡಿಸಿಕೊಳ್ಳಬೇಕೆಂದೂ, ತಮ್ಮ ಬಾಲಕರನ್ನು ವಿದ್ಯಾಭ್ಯಾಸ ವ್ಯಾಪಾರಸಾಧನೆ ಮೊದಲಾದುವುಗಳಿಗಾಗಿ ವಿದೇಶಗಳಿಗೆ ಕಳುಹಿಸಿಕೊಡಬೇಕೆಂದೂ, ತಮ್ಮವರ ವಿದ್ಯಾಭ್ಯಾಸಕ್ಕೆ ಸಾಧ್ಯವಾದ ಪ್ರಯತ್ನಗಳನ್ನೆಲ್ಲಾ ಮಾಡಬೇಕೆಂದೂ, ಕೈಗಾರಿಕೆಗಳಲ್ಲಿ ವಿಶೇಷವಾಗಿ ಪ್ರವೇಶಿಸಬೇಕೆಂದೂ ದೀರ್ಘವಾದ ಭಾಷಣವನ್ನು ಮಾಡಿದರು. ವಿದ್ಯಾಪ್ರಸಾರ ಮೊದಲಾದ ವಿಷಯಗಳನ್ನು ಕುರಿತು ಇನ್ನೂ ಹಲವು ಪ್ರತಿನಿಧಿಗಳ ಭಾಷಣಗಳಾದುವು. ವಿದ್ಯಾಭಿವೃದ್ಧಿ ಫಂಡಿಗಾಗಿ ಸಭಾಧ್ಯಕ್ಷರೇ ೫ ಸಾವಿರ ರೂ.ಗಳನ್ನು ವಾಗ್ದಾನಮಾಡಿದರು. ಉಳಿದವರೂ ನೂರಾರುಗಟ್ಟಲೆಯಾಗಿ ಹಾಕಿದ ವರ್ಗಣಿಯೆಲ್ಲಾ ೧೦ ಸಾವಿರ ರೂ.ಗಳ ವರೆಗಾಯಿತು. ಸಿರಿವಂತಿಗೆಗೆ ಹೆಸರಾದ ವೈಶ್ಯರ ಸಭೆಯಲ್ಲಿ ಸ್ವಜನರ ವಿದ್ಯಾಭಿವೃದ್ಧಿ ಪ್ರಯತ್ನಕ್ಕಾಗಿ ಕೂಡಿಸಲು ಏರ್ಪಟ್ಟ ಫಂಡಿಗೆ ಸಾಮಾನ್ಯವಾದ ಒಂದು ಹತ್ತುಸಾವಿರ ರೂ.ಗಳ ವರ್ಗಣಿಯಾಯಿತೆಂಬುದು ಲಾಂಛನಾಸ್ಪದವಾದ ಮಾತಾಗಿರುತ್ತದೆ. ವಿದ್ಯಾವಂತರೂ ಮಾತುಬಾರಿಗಳೂ ಸ್ವಜನಾಭಿಮಾನಿಗಳೂ ಆದ ವೈಶ್ಯಪ್ರಮುಖರು ನಡುಕಟ್ಟಿ ಧನಶೇಖರಕ್ಕಾಗಿ ಪ್ರಯತ್ನಿಸಿದರೆ ಲಕ್ಷಾಂತರ ರೂ.ಗಳು ಅವಶ್ಯಕವಾಗಿ ಕೂಡಿಯೇ ತೀರಬೇಕು. ಸಭಾಕಾಲದ ೩-೪ ದಿನಗಳಲ್ಲಿ ಮಾತ್ರ ಸ್ವಜನಾಭಿವೃದ್ಧಿಯುಪಾಯವನ್ನು ಚಿಂತಿಸುವ ವಾಗಾಡಂಬರಕೃತ್ಯಗಳಲ್ಲಿ ತಮ್ಮ ಉತ್ಸಾಹವನ್ನೆಲ್ಲಾ ಮುಗಿಸಿಬಿಡದೆ ಸತತಪ್ರಯತ್ನವನ್ನಿಟ್ಟರೆ ಇತರ ಜನವರ್ಗಕ್ಕೆಲ್ಲಾ ಮೇಲ್ಪಙ್ತಿಯಾಗುವಂತೆ ಈ ಜನರು ವಿದ್ಯಾಭಿವೃದ್ಧಿ ಧನರಾಶಿಯನ್ನು ಕೂಡಿಸಿ ಸ್ವದೇಶ ವಿದೇಶ ವಿದ್ಯಾರ್ಜನೆಗಳಿಗಾಗಿ ತೊಡಗುವ ತಮ್ಮ ಕುಲದ ಅನಾಥಬಾಲಕರಿಗೆ ಯಥೇಚ್ಛವಾದ ಸಹಾಯವನ್ನು ಕಲ್ಪಿಸಬಹುದು.

ಸಭೆಯವರು ಮಾಡಿದ ತೀರ್ಮಾನಗಳೊಳಗೆ ಈಗಿನ ಯುದ್ಧದಲ್ಲಿ ಜಾರ್ಜ್ ಸಾರ್ವಭೌಮರಿಗೆ ಜಯವನ್ನು ಕೋರುವುದು, ದೇಶಭಕ್ತ ಗೋಖಲೆಯವರ ಮೃತಿಗಾಗಿ ದುಃಖಪ್ರದರ್ಶನ, ವೈಶ್ಯಬಾಲಕರಿಗೆ ೧೨ ವರ್ಷದೊಳಗೆ ಉಪನಯನ ಮಾಡಬೇಕು, ವಿವಾಹದ ಜತೆಗೆ ಉಪನಯನ ಮಾಡಬಾರದು, ೧೮ ವರ್ಷ ವಯಸ್ಸಿನೊಳಗಿನ ಬಾಲಕರಿಗೂ ೧೦ ವರ್ಷ ತುಂಬದ ಹೆಣ್ಣುಮಕ್ಕಳಿಗೂ ವಿವಾಹವನ್ನು ಮಾಡಬಾರದು, ವ್ಯಾಪಾರಾಭಿವೃದ್ಧಿಗಾಗಿಯೂ ಪರದೇಶಗಳಿಗೆ ತಮ್ಮ ಬಾಲಕರನ್ನು ಕಳುಹಿಸುವುದಕ್ಕಾಗಿಯೂ ಅನುಕೂಲಿಸುವಂತೆ ಒಂದು ಧನರಾಶಿಯನ್ನು ಸ್ಥಾಪಿಸಬೇಕು. ಅದಕ್ಕೆ ವೈಶ್ಯರೆಲ್ಲಾ ತಮ್ಮ ಲಾಭದಲ್ಲಿ ಒಂದಿಷ್ಟನ್ನು ತೆಗೆದು ಸೇರಿಸಬೇಕು. ಶುಭಾಶುಭ ಕರ್ಮಗಳ ಕಾಲದಲ್ಲಿ ಧರ್ಮಾರ್ಥವಾಗಿ ತೆಗೆದ ಹಣವನ್ನೂ ಇದಕ್ಕೆ ಸೇರಿಸಬೇಕು. ಕನ್ಯಾಶುಲ್ಕವರಶುಲ್ಕಗಳನ್ನೂ ಮದುವೆಯ ಕಾಲದಲ್ಲಿ ದುಂದುವೆಚ್ಚಗಳನ್ನು ತಪ್ಪಿಸಬೇಕು. ವಿವಾಹಾದಿ ಕಾರ್ಯಗಳಿಗೂ ದೇವಾಲಯಗಳಿಗೂ ಸೂಳೆಯರನ್ನು ಕರೆಯಬಾರದು. ಶ್ರೀ ಶೃಂಗಗಿರಿ ಸ್ವಾಮಿಗಳು ಪ್ರಕಟಿಸಿರುವ ವೈಶ್ಯವೇದೋಕ್ತಕ್ರಿಯಾಚಾರವ್ಯವಸ್ಥೆಯೆಂಬ ಪುಸ್ತಕದ ಖಂಡನೆಯ ವಿಷಯವಾಗಿ ಗದಗಿನಲ್ಲಿ ನಡೆದ ವೈಶ್ಯಮಹಾ ಸಭೆಯವರು ನಡೆಯಿಸಿದ ಚರ್ಚೆಯನ್ನೂ ತೀರ್ಮಾನವನ್ನೂ ಪುಸ್ತಕರೂಪವಾಗಿ ಮುದ್ರಿಸಿ ಎಲ್ಲಕಡೆಯೂಹಂಚಬೇಕು. ಆರ್ಯವೈಶ್ಯಮಹಾಸಭೆಯಮುಖ್ಯೋದ್ದೇಶಗಳನ್ನು ಎಲ್ಲ ನಗರ ಗ್ರಾಮಾದಿಗಳ ವೈಶ್ಯರಲ್ಲೆಲ್ಲಾ ಪ್ರಕಟಿಸುವುದಕ್ಕಾಗಿ ಬೋಧಕರನ್ನು ನಿಯಮಿಸಬೇಕು. ಎಂಬ ವಿಷಯಗಳು ಪ್ರಮುಖವಾಗಿರುವುವು

ಸಂಯುಕ್ತಾಧಿಪತ್ಯಕ್ಕೆ ಕಾರ್ಯನಿರ್ವಾಹಕಸಭೆ.

ಒಬ್ಬ ಲೆಫ್ಟಿನೆಂಟ್ ಗೌರ್ನರಿನ ಆಧಿಪತ್ಯಕ್ಕೆ ಒಳಪಟ್ಟಿರುವ ಸಂಯುಕ್ತಾಧಿಪತ್ಯಕ್ಕೆ ಒಂದು ಕಾರ್ಯನಿರ್ವಾಹ ಸಭೆಯನ್ನು ಮದ್ರಾಸು ಮೊದಲಾದ ಗೌರ್ನರುಗಳ ಸಹಾಯಕ್ಕೆ ಇರುವ ಸಂಘದಂತೆ ಇಲ್ಲೂ ಏರ್ಪಡಿಸಿಕೊಡಬೇಕೆಂದು ಆ ಭಾಗದ ಪ್ರಜಾಪ್ರಮುಖರು ಸರ್ಕಾರದವರನ್ನು ಬಹುಕಾಲದಿಂದ ಪ್ರಾರ್ಥಿಸುತ್ತಿರಲು, ಅದಕ್ಕೆ ಇಂಡಿಯಾ ಗೌರ್ನಮೆಂಟಿನವರು ಅನುಮತಿಯನ್ನಿತ್ತು, ಸ್ಟೇಟ್‌ಸೆಕ್ರೆಟರಿಯವರಮೂಲಕ ಪಾರ್ಲಿಮೆಂಟಿನವರ ಅನುಮತಿಯನ್ನು ಕೇಳಿದಾಗ ಲಾರ್ಡ್ ಸಭೆಯವರು ತಿರಸ್ಕರಿಸಿಬಿಟ್ಟರು. ಅದರಿಂದ ಈ ವಿಷಯದಲ್ಲಿ ಭರತಖಂಡದ ಸರ್ವಭಾಗದ ಮುಂದಾಳುಗಳೂ ಈಗ ಅಸಮಾಧಾನವನ್ನು ಹೊಂದಿದ್ದಾರೆ. ಕಳೆದ ತಾ|| ೨೫ ರಲ್ಲಿ ಅಲಹಾಬಾದಿನೊಳಗೆ ಒಂದು ಮಹಾಸಭೆಯು ಇದೇ ಕಾರ್ಯಕ್ಕಾಗಿ ನೆರೆದಿದ್ದಿತು. ಅ|| ಮದನಮೋಹನಮಾಳವ್ಯರವರು ಸತ್ಕಾರಕಸಂಘಾಧ್ಯಕ್ಷರಾಗಿದ್ದರು. ಆ ಆಧಿಪತ್ಯದಲ್ಲಿರುವ ಅನೇಕಮಂದಿ ಸಂಸ್ಥಾನಾಧೀಶರುಗಳೂ, ನವಾಬರುಗಳೂ, ಎಲ್ಲಾ ಜಿಲ್ಲೆಗಳ ಪ್ರತಿನಿಧಿಗಳೂ, ತಾಲ್ಲೂಕುದಾರರೂ ಜಮೀನ್‌ದಾರರೂ ನಾನಾವಿಧವೃತ್ತಿಯ ಜನರ ಪ್ರತಿನಿಧಿಗಳೂ ಸಹ ಬಹುಶಃ ೬೦೦ ಮಂದಿಗಳವರೆಗೆ ನೆರೆದಿದ್ದರು. ಪ್ರೇಕ್ಷಕರೂ ಅನಂತವಾಗಿ ಸೇರಿದ್ದುದರಿಂದ ಸಂಯುಕ್ತಾಧಿಪತ್ಯದಲ್ಲಿ ಇದುವರೆಗೆ ಯಾವಾಗಲೂ ಅಂತಹ ಸಭೆಯು ನೆರೆದಿರಲಿಲ್ಲವೆಂದು ಹೇಳಿಸಿಕೊಂಡಿತು. ಮಹಮ್ಮದಾಬಾದ್ ಸಂಸ್ಥಾನಾಧೀಶರಾದ ಅ|| ರಾಜಾ ಸರ್ ಮಹಮ್ಮದಲ್ಲಿಖಾನ್‌ರವರು ಸಭಾಧ್ಯಕ್ಷರಾಗಿ ಆರಿಸಲ್ಪಟ್ಟರು. ಅವರು ತಮ್ಮ ಉಪನ್ಯಾಸವನ್ನು ಆವೇಶಯುಕ್ತವಾಗಿ ಮಾಡುವಾಗ "ಈ ಸಭೆಯಲ್ಲಿ ಹಿಂದೂಮಹಮ್ಮದೀಯಾದಿ ಎಲ್ಲತೆರದ ಜನವರ್ಗದ ಪ್ರತಿನಿಧಿಗಳೂ ಸೇರಿ ಒಂದೇವಿಧವಾದ ಉನ್ನತಾಶಯದಿಂದ ಪ್ರೇರಿತರಾಗಿದ್ದಾರೆ. ಈ ದೇಶಭಾಗಕ್ಕೆ ಲೆಫ್ಟಿನೆಂಟ್ ಗೌರ್ನರೆಂಬ ಒಬ್ಬಾನೊಬ್ಬ ಅಧಿಕಾರಿಯ ಪರಿಪಾಲನವು ತೃಪ್ತಿಕರವಾದುದಲ್ಲ, ಕಾರ್ಯನಿರ್ವಾಹಕಸಂಘ ಸಾಹಾಯ್ಯದಿಂದ ಒಬ್ಬಾನೊಬ್ಬ ಗೌರ್ನರು ಇದನ್ನು ಪರಿಪಾಲಿಸುವ ಕ್ರಮವು ಸ್ಥಾಪಿಸಲ್ಪಡಬೇಕು. ಇತರ ರಾಷ್ಟ್ರಭಾಗಗಳಲ್ಲಿ ಕೆಲವು ರಾಜಕೀಯ ದೌರ್ಜನ್ಯಕಳಂಕನಿಂದ ಪರಿದೂಷಿತವಾಗಿವೆ. ಈ ನಮ್ಮ ರಾಷ್ಟ್ರಭಾಗವಾದರೊ ಅಂಥ ಕಳಂಕನಿಂದ ಲೇಶವೂ ದೂಷಿತವಾಗಿಲ್ಲ. ಈ ಆಧಿಪತ್ಯದಪ್ರಜೆಗಳು ಹಾಗೆ ನಿಷ್ಕಪಟವಾದ ರಾಜಭಕ್ತಿಯಿಂದ ಪರಿಪೂರಿತರಾಗಿರುವುದಕ್ಕೆ ಪ್ರಭುತ್ವದವರು ಮಾಡುವ ಪ್ರತ್ಯುಪಕಾರವೆಂದರೆ ಅವರ ಬಹುಕಾಲಿಕ ಪ್ರಾರ್ಥನೆಯನ್ನು ಒಂದೇ ಮಾತಿನಿಂದ ತಿರಸ್ಕರಿಸಿಬಿಡುವುದೇ ಆಗಬಹುದೆ? ವೈಸ್ರಾಯಿ ಹಾರ್ಡಿಂಜ್ ಪ್ರಭುಗಳು ನಮ್ಮ ಪ್ರಾರ್ಥನೆಯನ್ನು ನ್ಯಾಯ್ಯವೆಂದು ಒಪ್ಪಿ ನಮ್ಮ ಪಕ್ಷವನ್ನು ವಹಿಸಿರುವುದರಿಂದ ನಮ್ಮ ಪ್ರಾರ್ಥನೆಯು ಎಂದಿಗೂ ಹುಸಿದುಹೋಗತಕ್ಕುದಾಗಿಲ್ಲ. ಆದರೆ ನಾವೆಲ್ಲರೂ ಸಂಪೂರ್ಣಕೃಷಿಯನ್ನು ಮಾಡಿ ಈ ವಿಷಯದಲ್ಲಿ ಆ ಪ್ರಭುಗಳ ಪ್ರಯತ್ನಕ್ಕೆ ಸಹಾಯಕಾರಿಗಳಾಗಬೇಕಾಗಿದೆ. ಅದಕ್ಕಾಗಿ ನಾವು ರಾಜಭಕ್ತಿಗೆ ವ್ಯತಿರೇಕವಲ್ಲದ ಆಂದೋಳನವನ್ನು ಈವಿಷಯದಲ್ಲಿ ಚೆನ್ನಾಗಿ ನಡೆಯಿಸಬೇಕು. ನಮಗೆ ಕಾರ್ಯನಿರ್ವಾಹಕಸಭೆಯೊಂದನ್ನು ಅನುಗ್ರಹಿಸಿದರೂ ಸಾಲದು. ಒಬ್ಬ ಗೌರ್ನರ ಆಧಿಪತ್ಯವನ್ನು ನಮಗೆ ಕೊಡದಿದ್ದರೆ ನಮ್ಮ ದೇಶದ ಲೋಪವು ಪರಿಷ್ಕೃತವಾಗುವುದಿಲ್ಲ." ಎಂದು ಮೊದಲಾಗಿ ಭಾಷಣಮಾಡಿದರು. ಬಳಿಕ ಇದೇ ವಿಷಯವನ್ನು ಪರಿಪೋಷಿಸುವ ಒಂದು ನಿರ್ಧಾರವು ಸಭಿಕರಿಂದ ಮಾಡಲ್ಪಟ್ಟುದಲ್ಲದೆ ಕಾರ್ಯನಿರ್ವಾಹಕಸಭೆಯಲ್ಲಿ ಒಬ್ಬ ಭಾರತೀಯ ಸಭಿಕರನ್ನು ಸೇರಿಸುವಂತೆ ಮಾಡಬೇಕೆಂಬ ಪ್ರಾರ್ಥನೆಯೂ ಸೇರಿಸಲ್ಪಟ್ಟು ಇದನ್ನು ವೈಸ್ರಾಯರ ಮುಖಾಂತರ ಸ್ಟೇಟ್‌ಸೆಕ್ರೆಟರಿಯವರ ಬಳಿಗೆ ಕಳುಹಿಸುವಂತೆ ಗೊತ್ತುಮಾಡಿದರು. ಮತ್ತು "ಸಂಯುಕ್ತಾಧಿಪತ್ಯಕ್ಕೆ ಒಬ್ಬ ಗೌರ್ನರನ್ನೂ ಕಾರ್ಯನಿರ್ವಾಹಕಸಭೆಯನ್ನೂ ಕೋರುವ ಸಂಘ" ಎಂಬ ಹೆಸರಿನಿಂದ ಒಂದು ಸಂಘವನ್ನು ಎಡೆಬಿಡದೆ ಕಾರ್ಯಗಳನ್ನು ಮಾಡುತ್ತಿರುವುದಕ್ಕಾಗಿ ಏರ್ಪಡಿಸಿದರು. ಲಾರ್ಡ್ ಹಾರ್ಡಿಂಜ್‌ರವರ ಅಧಿಕಾರಪರಿಮಿತಿಯನ್ನು ಹೆಚ್ಚಿಸಿಕೊಡಬೇಕೆಂಬ ವಿಷಯದಲ್ಲೂ ಹಲವರ ಭಾಷಣಗಳಾಗಿ ಈ ವಿಷಯದಲ್ಲೂ ಒಂದು ನಿರ್ಧಾರವು ಮಾಡಲ್ಪಟ್ಟು ಸಭೆಯು ಮುಗಿಸಲ್ಪಟ್ಟಿತು.

ಭರತಖಂಡದ ರಾಜ್ಯಪರಿಪಾಲನೆಯೊಳಗೆ ಇರುವ ಕಷ್ಟಸುಖಗಳನ್ನೂ ನ್ಯೂನಾತಿರೇಕಗಳನ್ನೂ ಇಲ್ಲಿನ ರಾಜಪ್ರತಿನಿಧಿಗಳು ತಿಳಿದಿರುವಮಟ್ಟಿಗೆ ಸೀಮೆಯಲ್ಲಿರುವ ಮಂತ್ರಿಮಂಡಲಿಯವರೇ ಆಗಲಿ ಪಾರ್ಲಿಮೆಂಟ್ ಸ್ಟೇಟ್‌ಸೆಕ್ರೆಟರಿಗಳೇ ಆಗಲಿ ಅರಿಯರು. ಭರತಖಂಡದ ರಾಜ್ಯಾಡಳಿತಕ್ಕೆ ಸಂಬಂಧಪಟ್ಟ ಯಾವುದಾದರೊಂದು ವಿಷಯವನ್ನು ಹೀಗೇ ಆಗಬೇಕೆಂದು ಪಾರ್ಲಿಮೆಂಟಿನವರ ಅನುಮತಿಗೆ ತಂದಾಗ ಅವರು ಬರಿಯ ನವಾಬುಗಾರಿಕೆಯನ್ನು ತೋರಿಸಿ ಒಂದೇ ಮಾತಿನಲ್ಲಿ ತಳ್ಳಿಬಿಡುವುದೆಂದರೆ ಭಾರತೀಯರ ಮನಸ್ಸನ್ನೂ ಭರತಖಂಡದ ಅಧಿಕಾರಿವರ್ಗದವರ ಮನಸ್ಸನ್ನೂ ಕೆಡಿಸಿ ಬರುವುದೇ ಆಗಿರುತ್ತದೆ.

ಕಳೆದವರ್ಷ ದೇಶೀಯಮಹಾಸಭೆಯ ಪ್ರತಿನಿಧಿಗಳೇ ಅಲ್ಲಿಗೆ ಹೋಗಿದ್ದು ಸ್ಟೇಟ್ ಸೆಕ್ರೆಟರಿಗಳ ಕಾರ್ಯನಿರ್ವಾಹಕಸಭೆಯೊಳಗೆ ಕೆಲವು ಹೊಸ ಮಾರ್ಪುಗಳನ್ನು ಮಾಡಬೇಕೆಂದು ಒಂದು ಮಸೂದೆಯನ್ನು ಸ್ಟೇಟ್ ಸೆಕ್ರೆಟರಿಗಳು ಲಾರ್ಡ್‌ಗಳ ಸಭೆಗೆ ತಂದಾಗಲೂ ಅವರು ಇದೇ ಗತಿಯನ್ನು ಅದಕ್ಕೂ ಉಂಟುಮಾಡಿದರು. ಲಾರ್ಡ್ ಹಾರ್ಡಿಂಜ್‌ರವರ ಪ್ರಯತ್ನವಿಶೇಷದಿಂದಲೂ ಪ್ರಸಕ್ತಸಮಯದಲ್ಲಿನ ಸಂಯುಕ್ತ ರಾಷ್ಟ್ರೀಯರ ದೃಢಪ್ರತಿಜ್ಞೆಯಿಂದಲೂ ಅವರ ಪ್ರಾರ್ಥನೆಯು ಈಡೇರುವುದಕ್ಕೂ ಲಾರ್ಡುಗಳ ಸಭೆಯವರು ಭರತಖಂಡದ ಆಡಳಿತದ ವಿಷಯದಲ್ಲಿ ತೋರಿಸುತ್ತಿರುವ ದೋರಣೆಗೆ ಸ್ವಲ್ಪಮಟ್ಟಿಗಾದರೂ ಚಿಕಿತ್ಸೆಯಾಗುವುದಕ್ಕೂ ಮಾರ್ಗವಾಗಲೆಂದು ಕೋರುತ್ತೇವೆ.

ಒಳದೇಶ ವೃತ್ತಾಂತಗಳು.

ಪ್ರೊ|| ಅಸಿಸ್ಟೆಂಟ್‌ಕಮಿಷನರಾದ ಮ|| ಪಿ. ಗೋಪಾಲರಾಜಅರಸಿನವರಿಗೆ ೨ ನೆಯ ತಾ|| ಮ್ಯಾಜಿಸ್ಟ್ರೇಟ್ ಅಧಿಕಾರವು ಕೊಡಲ್ಪಟ್ಟಿರುತ್ತದೆ.

ಮೈಸೂರ ಡಿ|| ಮೆಡಿಕಲಾಫೀಸರಾದ ಅ|| ಸರ್ಜನ್ ಡಾ|| ಉಸ್ಮಾನ್‌ರವರು ತಮ್ಮ ಕೆಲಸದೊಡನೆ ಜನರಲ್ ಆಸ್ಪತ್ರೆಯ ಇನ್‌ಛಾರ್ಜಾಫೀಸರಾಗಿ ನಿಯಮಿಸಲ್ಪಟ್ಟಿರುವರು.

ರಾಜಧಾನಿಯಲ್ಲಿ ಕಳೆದ ಶುಕ್ರವಾರ ರಾತ್ರಿ ತಕ್ಕಮಟ್ಟಿಗೆ ಮಳೆಯಾಯಿತು. ಹಗಲಿನಲ್ಲಿ ಬಿಸಿಲಿನತಾಪವು ಸಹಿಸಲಶಕ್ಯವಾಗಿದೆ. ಡೆಂಗ್ಯುಜ್ವರದ ವಿನಾ ಬೇರೆ ರೋಗಗಳೇನೂ ಇಲ್ಲವು. ವಿವಾಹಗಳು ವಿಶೇಷವಾಗಿ ನಡೆಯುತ್ತಿವೆ.

ಬೆಂಗಳೂರ ಡಿ|| ಡೆ|| ಕಮಿಷನರ್ ಮಿ|| ಚಾಂಡಿಯವರ ೨ ವರ್ಷ ವಯಸ್ಸಿನ ಮಗುವು ಬಂಗಲೆಯ ಆವರಣದಲ್ಲಿ ಆಡಿಕೊಂಡಿರುವಾಗ್ಗೆ ಒಂದು ನಾಯಿಯು ಬಂದು ಆ ಮಗುವನ್ನು ಕಚ್ಚಿಬಿಟ್ಟುದರಿಂದ ಚಿಕಿತ್ಸೆಗಾಗಿ ಮಿ||ಚಾಂಡಿಯವರು ಮಗುವನ್ನು ಕರೆದುಕೊಂಡು ಕೂನೂರಿಗೆ ಹೋಗಿರುತ್ತಾರೆ.

ಬೆಂಗಳೂರ ಪೇಟೆ ದೊಡ್ಡಬೀದಿಗಳಲ್ಲೂ, ಸಂದುಗಳಲ್ಲೂ ಜಲಮಲವಿಸರ್ಜನೆಯನ್ನು ಮಾಡಿ ಹೇಸಿಗೆಯನ್ನು ಮಾಡುವಂತಹ ಜನರನ್ನು ಹಿಡಿದು ಪೋಲೀಸರ ವಶಮಾಡಲು ಅಲ್ಲಿಯ ಮ್ಯುನಿಸಿಪಾಲಿಟಿಯವರು ನಾಲ್ವರು ಮೇಸ್ತ್ರಿಗಳನ್ನು ಅನಿತ್ಯವಾಗಿ ನೇಮಕಮಾಡಿರುತ್ತಾರೆ. ಪೋಲೀಸರು ಅಪರಾಧಿಗಳನ್ನು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡುವರು.

ಕಳೆದ ಇಂಗ್ಲೀಷ್ ಲೋವರ್‌ಸೆಕೆಂಡರಿ ಪರೀಕ್ಷೆಗೆ ಮೈಸೂರು ಮಹಾರಾಣಿಕಾಲೇಜಿನಿಂದ ಹೋಗಿದ್ದ ೪ ವಿದ್ಯಾರ್ಥಿನಿಯರೂ ಉತ್ತೀರ್ಣರಾಗಿರುವರೆಂದೂ, ಮದ್ದಗಿರಿ ಸ|| ಡಿ|| ಆಫೀಸರಾದ ಮ|| ಕೃಷ್ಣಸ್ವಾಮಯ್ಯಂಗಾರ್, ಬಿ.ಎ., ಯವರ ೧೧-೧೨ ವರ್ಷ ವಯಸ್ಸಿನ ಮಗನು ಒಂದನೆಯ ತರಗತಿಯಲ್ಲಿ ಸಂಸ್ಥಾನಕ್ಕೆಲ್ಲಾ ೪ ನೆಯವನಾಗಿ ಉತ್ತೀರ್ಣನಾಗಿರುತ್ತಾನೆಂದೂ ತಿಳುಹಲು ಸಂತೋಷವಾಗುತ್ತದೆ.

ದಾವಣಗೆರೆಯಿಂದ ೨೦ ಜನ ವೀರಶೈವವಿದ್ಯಾರ್ಥಿಗಳು ಕಳೆದ ಬುಧವಾರ ಬೆಂಗಳೂರಿಗೆ ಪ್ರಯಾಣಮಾಡಿ ಬರುವಾಗ್ಗೆ ತಿಪಟೂರು ರೈಲ್ವೆಸ್ಟೇಷನ್ ಬಳಿ ದಾವಣಗೆರೆಯ ಮ|| ರಾ|| ಉರುವುಕೊಂಡೆ ಚೆನ್ನಬಸಪ್ಪನವರು ನಿರೀಕ್ಷಿಸಿಕೊಂಡಿದ್ದು ವಿದ್ಯಾರ್ಥಿಗಳನ್ನು ಹಣ್ಣುಹಂಪಲುಗಳಿಂದಲೂ, ಎಳನೀರಿನಿಂದಲೂ ಸತ್ಕರಿಸಿ ತಮಗಿರುವ ವಿದ್ಯಾಭಿಮಾನವನ್ನು ವ್ಯಕ್ತಗೊಳಿಸಿದುದಕ್ಕಾಗಿ ಆ ವಿದ್ಯಾರ್ಥಿಗಳೆಲ್ಲರೂ ಅವರುಪಕಾರವನ್ನು ಬಹಳವಾಗಿ ಸ್ಮರಿಸುತ್ತಾರೆ. ಎಂದು ಒಬ್ಬ ಪತ್ರಿಕಾವಾಚಕರು ಬರೆದಿರುತ್ತಾರೆ.

ಕಳೆದ ಗುರುವಾರ ಬೆಂಗಳೂರ ದಂಡಿನಲ್ಲಿ ಒಬ್ಬ ಕುದುರೆಯ ಸ್ವಾರನು ವೇಗವಾಗಿ ಹೋಗುತ್ತಿರುವಾಗ್ಗೆ ಕುದುರೆಯು ಏನನ್ನೋ ನೋಡಿ ಬೆದರಿ ಮುಂಗಾಲುಗಳನ್ನೆತ್ತಿ ನಿಂತುಕೊಳ್ಳಲು ಸ್ವಾರನು ಅದರಮೇಲಿಂದ ಕೆಳಗೆ ಬಿದ್ದುಬಿಟ್ಟನು, ಆದರೆ ಕುದುರೆಯುಮಾತ್ರ ಅವನ ಪಕ್ಕದಲ್ಲೇ ನಿಂತಿದ್ದಿತು. ಇಷ್ಟರಲ್ಲಿ ಮೋಟಾರುಬಂಡಿಯಲ್ಲಿ ಹೋಗುತ್ತಿದ್ದ ಒಬ್ಬ ಯೂರೋಪ್ಯರು ಬಂಡಿಯನ್ನು ನಿಲ್ಲಿಸಿ ಸ್ವಾರನನ್ನು ಎತ್ತಿ ಬಂಡಿಯಲ್ಲಿ ಕುಳ್ಳಿರಿಸಿ ಆಸ್ಪತ್ರೆಗೆ ಕರೆದುಕೊಂಡುಹೋಗಲು ಪ್ರಯತ್ನಿಸಿದಾಗ್ಗೆ ಆ ಸ್ವಾರನು ಚೇತರಿಸಿಕೊಂಡು ತನ್ನ ಕುದುರೆಯನ್ನು ಹತ್ತಿ ಕುಳಿತುಕೊಂಡು ಮೆಲ್ಲಗೆ ಹೊರಟುಹೋದನು.

ಈ ವೇಳೆ ಮಹಾರಾಜಾಕಾಲೇಜಿನಿಂದ ಬಿ.ಎ. ಪರೀಕ್ಷೆಗೆ ಹೋಗಿದ್ದ ವಿದ್ಯಾರ್ಥಿಗಳಲ್ಲಿ ಚರಿತ್ರಭಾಗದಲ್ಲಿ ೩೪ ಜನರೂ, ಇಂಗ್ಲೀಷ್‌ಭಾಷೆಯಲ್ಲಿ ೧೯ ಜನರೂ ಸಂಪೂರ್ಣವಾಗಿ ೨೬ ಜನರೂ ಉತ್ತೀರ್ಣರಾಗಿರುವರೆಂದೂ ಇಂಥ ಪರಿಣಾಮವು ಯಾವಾಗಲೂ ಆಗಿರಲಿಲ್ಲವೆಂದೂ ತಿಳುಹಲು ಸಂತೋಷವಾಗುತ್ತದೆ. ಅಲ್ಲದೆ ಇಂಟರ್‌ಮೀಡಿಯೆಟ್ ಪರೀಕ್ಷೆಗೆ ಹೋಗಿದ್ದ ೧೩೫ ಜನರಲ್ಲಿ ೩೬ ಜನರು ಉತ್ತೀರ್ಣರಾಗಿ ಅವರಲ್ಲಿ ನಾಲ್ವರು ೧ ನೆಯ ತರಗತಿಯಲ್ಲುತ್ತೀರ್ಣರಾಗಿದ್ದಾರೆ. ಮತ್ತೂ ಮಹಾರಾಣಿ ಕಾಲೇಜಿನ ಆಕ್ಟಿಂಗ್ ಸೂಪರಿಂಟೆಂಡೆಂಟರಾದ ಸ್ಸಾ|| ಕೆ. ಡಿ. ರುಕ್ಮಿಣಿಯಮ್ಮನವರ ೨೦ ವರ್ಷ ವಯಸ್ಸಿನ ಮಗಳೊಬ್ಬರೂ ಉತ್ತೀರ್ಣರಾಗಿರುವರು.

ಸ್ವೀಕಾರ.

ಮೈಸೂರು ಮ॥ ರಾ॥ ನಂಜುಂಡಪ್ಪನವರ ಮಕ್ಕಳು ವಿರೂಪಾಕ್ಷಪ್ಪನವರು ತಮ್ಮ ಪುತ್ರಿಯನ್ನು ಗಂಜಾಂಮಠದ ಸಿದ್ಧಲಿಂಗಪ್ಪನವರಿಗೆ ಕೊಟ್ಟು ವಿವಾಹವನ್ನು ಮಾಡಿದ ವೇಳೆಯಲ್ಲಿ ಕೈ ವೈ. ವೀರಸಂಗಪ್ಪನವರ ಸ್ಮರಣಾರ್ಥವಾಗಿ ತೆಗೆದ ಅಗ್ರತಾಂಬೂಲದ ಬಗೆಗೆ ೧ ರೂ. ಯನ್ನು ವಂದನಾಪೂರ್ವಕವಾಗಿ ಅಂಗೀಕರಿಸಿರುತ್ತೇವೆ. ಪ. ಪ್ರ.

ಪತ್ರವ್ಯವಹಾರ.

ಹರಿಹರ ಸಬ್‌ತಾಲ್ಲೋಕಿಗೆ ಸೇರಿದ ಸಿರಿಗೆರೆ ಗ್ರಾಮವು.

ಈ ಗ್ರಾಮವು ನಾರುಹುಣ್ಣಿನ ತವರುಮನೆಯಾಗಿದೆ. ದಯಾಳು ಸರ್ಕಾರದವರಾಗಲೀ, ಅಥವಾ ಮತ್ತಾವ ಮಹಾನುಭಾವರಾಗಲೀ ಇದರಿಂದ ಪಡುವ ಕಷ್ಟವನ್ನು ತಪ್ಪಿಸಲಿಲ್ಲ. ಈ ಗ್ರಾಮವು ೪೦೦ ಮನೆ, ಮತ್ತು ಎರಡು ಸಾವಿರ ಪ್ರಜೆಗಳುಳ್ಳ ಯೂನಿಯನ್ನಾಗೇರ್ಪಟ್ಟಿರುತ್ತದೆ. ಇಂಥಾ ಗ್ರಾಮಕ್ಕೆ ಅನುಕೂಲವಾದ ಸರ್ಕಾರಿ ಪೋಲೀಸ್ ಕಟ್ಟಡ ಇಲ್ಲವು. ಮತ್ತು ರೈತರಿಗೆ ತರೀಫಸಲು ಬೆಳೆಯಲು ಕೆರೆ ಒಡೆದುಹೋಗಿ ನೂರಾರು ವರ್ಷಗಳಾಗಿವೆ. ಅದು ಇನ್ನೂ ರಿಪೇರಿಗೆ ಬಂದಿಲ್ಲ. ಮತ್ತು ಸರ್ಕಾರಿ ಸ್ಕೂಲ್ ಹಳೇಕಟ್ಟಡದಲ್ಲಿಯೇ ಇದ್ದದ್ದು ತಾ॥ ೧೩-೪-೧೯೧೪ ರಲ್ಲಿ ಅ॥ ಡೆ॥ ಇ॥ ಸಾ॥ ರವರು ದಯಮಾಡಿಸಿ ಸ್ಕೂಲ್ ಪರೀಕ್ಷೆ ಆದಮೇಲೆ ವಿದ್ಯಾವಿಷಯದಲ್ಲಿ ಜನಗಳಿಗೆ ಬೋಧೆಮಾಡಿ ಈಗ ಸ್ಕೂಲ್ ಅಭಿವೃದ್ಧಿಗೆ ಬಂದಿರುವ ವಿಷಯವನ್ನು ತಿಳಿಯಪಡಿಸಿದನಂತರ ಸರ್ಕಾರಿಕೆಲಸದಲ್ಲಿ ಮುತವರ್ಜಿ ವಹಿಸಿ ಹಳೇಕಟ್ಟಡವನ್ನು ೨೦೦ ರೂ. ಗಳಿಗೆ ಹರಾಜುಮಾಡಿಸಿ ಹೊಸಕಟ್ಟಡಕ್ಕೆ ಶಿಫಾರ್ಸು ಮಾಡುವಂತೆ ಅಪ್ಪಣೆಕೊಡಿಸಿದರು. ಹಾಲಿ ಬಂದಿರುವ ಮಾಸ್ಟರು ನರಸಿಂಗರಾಯರು ತಮ್ಮ ಕೆಲಸದಲ್ಲಿ ನಿರತರಾಗಿ ಎಲ್ಲರಲ್ಲಿಯೂ ವಿಶ್ವಾಸಪಾತ್ರರಾಗಿ ತುಂಬಾ ಮೆಹನತ್ತಿನಿಂದ ಕೆಲಸಮಾಡಿ ಸ್ಕೂಲನ್ನು ಅಭಿವೃದ್ಧಿಗೆ ತಂದಿರುತ್ತಾರೆ. ಇವರು ಇನ್ನು ಕೆಲವು ವರ್ಷಗಳಿದ್ದರೆ ೨-೩ ಜನ ಮೇಸ್ಟರುಗಳು ಆಗಿ ಲೊ॥ ಸೆ॥ ಪರೀಕ್ಷೆಗಳು ಆಗಲು ಅಡ್ಡಿಯಿಲ್ಲ, ಆದರೆ ಈಗಾಗಲೇ ನಾರುಹುಣ್ಣಿನಿಂದ ಭಯಪಡುತ್ತಿರುತ್ತಾರೆ. ಈಗಿರುವ ದಫೇದಾರರು ಹಳಬರಾಗಿರುವದರಿಂದ ತಮ್ಮ ಸರಹದ್ದಿನಲ್ಲಿ ಕೆಟ್ಟ ಕೃತ್ಯಗಳು ನಡೆಯದಂತೆ ಮುತವರ್ಜಿಯಿಂದ ನೋಡಿಕೊಳ್ಳುತ್ತಿರುತ್ತಾರೆ. ಯೂನಿಯನ್ ಇದ್ದಾಗ್ಯೂ ಲಾಂದ್ರಗಳಿಲ್ಲದಿರುವದರಿಂದ ಜನಗಳು ರಾತ್ರಿಯಲ್ಲಿ ತಡವರಿಸಿಕೊಂಡು ನಡೆದಾಡುತ್ತಾರೆ. ಆದ್ದರಿಂದ ದಯಾಳುಸರ್ಕಾರದವರು ಈ ಗ್ರಾಮಕ್ಕೆ ಕೆರೆ, ಪೋಲೀಸ್‌ಕಟ್ಟಡ, ಸ್ಕೂಲು, ಲಾಂದ್ರಗಳು ಇವುಗಳನ್ನು ಕೊಡಿಸಿ ಕಾಪಾಡಬೇಕಾಗಿ ಬೇಡುತ್ತೇನೆ.

ಪ್ರಜಾಹಿತಚಿಂತಕ.

ತುಮಕೂರು ತಾ॥ ಬೆಳ್ಳಾವೆಯ ವೃತ್ತಾಂತ

ತುಮಕೂರು ತಾ॥ ಬೆಳ್ಳಾವೆಯು ಭಾರಿಸಂತೆಯಿಂದ ಪ್ರಸಿದ್ಧಿಗೆ ಬಂದಿದೆ. ಈಚೆಗೆ ಈ ಸಂತೆಯು ಅನೇಕಕಾರಣಗಳಿಂದ ಹೀನಸ್ಥಿತಿಗೆ ಬಂದಿರುವಕಾರಣ ತುಮಕೂರಿಂದ ಬೆಳ್ಳಾವೆಯ ಮಾರ್ಗವಾಗಿ ರೈಲ್‌ಹಾಕಿಸಿ ವ್ಯಾಪಾರವನ್ನು ಅಭಿವೃದ್ಧಿಗೆ ತರುವ ಯೋಚನೆಯು ೩-೪ ವರ್ಷಗಳಿಂದ ನಡೆಯುತ್ತಾ ಇತ್ತು. ಈಗ ಈ ಯೋಚನೆಯು ಸಫಲವಾಯಿತೆಂದು ಕೇಳುವುದಕ್ಕೆ ತುಂಬಾ ಸಂತೋಷಪ್ರದವಾಗಿದೆ. ಬೆಳ್ಳಾವೆ ಎ. ಇ. ಕನ್ನಡ ಬಾಯ್ಸ್‌ಸ್ಕೂಲಿನಿಂದ ಈ ವರ್ಷ ಲೋವರ್‌ಸೆಕೆಂಡರಿ ಪರೀಕ್ಷೆಗೆ ಹೋಗಿದ್ದ ೧೪ ಜನ ವಿದ್ಯಾರ್ಥಿಗಳಲ್ಲಿ ೧೨ ಮಂದಿ ಪ್ಯಾಸಾಗಿರುವುದು ತುಂಬಾ ಶ್ಲಾಘನೀಯವಾಗಿಯೂ ಇವರಲ್ಲಿ ಒಬ್ಬ ಪಂಚಮವಿದ್ಯಾರ್ಥಿಯು ಪ್ಯಾಸಾಗಿರುವುದು ಮತ್ತೂ ಸ್ತೋತ್ರಾರ್ಹವಾಗಿಯೂ ಇದೆ. ಮುಖ್ಯವಾಗಿ ಈ ಸ್ಕೂಲಿನ ಅಭಿವೃದ್ಧಿಯ ಫಲಿತಾಂಶವು ಇಲ್ಲಿನ ಹೆಡ್ಮಾಸ್ಟರನವರಾದ ಹೆಚ್. ಮೂಡ್ಲಗಿರಯ್ಯನವರ ಅಪಾರವಾದ ಮೆಹನತ್ತನ್ನು ವ್ಯಕ್ತಗೊಳಿಸುತ್ತದೆ. ಅಲ್ಲದೆ ಈ ಸ್ಕೂಲು ಇಷ್ಟರಲ್ಲಿಯೇ ಎ. ವಿ. ಸ್ಕೂಲು ಆಗುವ ಸಂಭವವು ಇದೆ. ಈ ಗ್ರಾಮದಲ್ಲಿ ಸ್ಥಾಪಿತವಾಗಿರುವ ಗ್ರಾಮಮ್ಯಾಸೀಫ್‌ಕೋರ್ಟು ಮ॥ ರಾ॥ ಅನಂತರಾಜಪ್ಪನವರ ಅಧ್ಯಕ್ಷತೆಯಲ್ಲಿಯೂ ಕೋಆಪರೇಟಿವ್ ಸೊಸೈಟಿಯು ಮ॥ ಗ. ಎ. ಚನ್ನಪ್ಪನವರ ಅಧ್ಯಕ್ಷತೆಯಲ್ಲಿಯೂ ತೃಪ್ತಿಕರವಾಗಿ ಕೆಲಸ ನಡೆಸುತ್ತಾ ಇವೆ. ಮ॥ ಅಮಲ್ದಾರ್ ರಾಮಚಂದ್ರರಾಯರವರ ಕಾಲದಲ್ಲಿ ಈ ಗ್ರಾಮ ಪಾಕೀಜಾಸ್ಥಿತಿಯೂ ಗ್ರಾಮಾಭಿವೃದ್ಧಿ ಏರ್ಪಾಡುಗಳೂ, ವಾಚಕಶಾಲಾಕಾರ್ಯಗಳೂ ಸಮರ್ಪಕವಾಗಿ ನಡೆಯುತ್ತಾ ಇದ್ದವು. ಇವರು ಎಕ್ಸಾಮಿನ್‌ಇಲಾಖೆಗೆ ವರ್ಗಪಟ್ಟು ಹೋದಮೇಲೆ ಪ್ರೋತ್ಸಾಹ ಕಡಮೆಯಾಗಿ, ಯೂನಿಯನ್ ಮೆಂಬರುಗಳು, ಶೇಕದಾರರು ಔದಾಸೀನ್ಯವನ್ನವಲಂಬಿಸಿರುವುದು ತುಂಬಾ ಶೋಚನೀಯವಾಗಿದೆ. ಆದಕಾರಣ ಮೇಲ್ಪಟ್ಟ ಅಧಿಕಾರಿಗಳು ಪ್ರತಿತಿಂಗಳಲ್ಲಿಯೂ ತಪ್ಪದೆ ಮೀಟಿಂಗ್ ನಡೆಸಿ ಎಲ್ಲರಿಗೂ ಪ್ರೋತ್ಸಾಹಗೊಳಿಸಿ ಕ್ರಮಪಡಿಸಬೇಕಾಗಿದೆ. ಕೊರಟಗೆರೆ ಬಳಿ ತಡೆಯಲ್ಪಟ್ಟಿರುವ ಗ್ಯಾಂಗುಪಡ್ಡರು ಹೇಗೋ ತಪ್ಪಿಸಿಕೊಂಡು ಬಂದು ೧-೨ ತಿಂಗಳುಗಳಿಂದ ಈ ಗ್ರಾಮದಲ್ಲಿಯೂ ಮತ್ತು ಆಜುಬಾಜು ಗ್ರಾಮಗಳಲ್ಲಿಯೂ ಕನ್ನಕಳವು ನಡಸುತ್ತಾ ರಾತ್ರಿವೇಳೆಯಲ್ಲಿ ಕಲ್ಲುಗಳನ್ನು ಬೀಸುತ್ತಾ ತುಂಬಾ ಹಾವಳಿಮಾಡುತ್ತಾ ಇದ್ದಾರೆ. ಆದರೂ ಪೋಲೀಸು ಅಧಿಕಾರಿಗಳು ಇದಕ್ಕೆ ತುಂಬಾ ಗಮನಕೊಟ್ಟು ಸಿಬ್ಬಂದಿಯನ್ನು ಹೆಚ್ಚಿಸಿ ಈ ಕಳ್ಳರನ್ನು ಅಡಗಿಸದೆ ಇರುವುದು ತುಂಬಾ ವಿಷಾದಾಸ್ಪದವಾಗಿದೆ. ಇನ್ನಮುಂದೆ ಎಲ್ಲಾ ವಿಷಯಗಳಿಗೂ ಗಮನಕೊಟ್ಟು ಪ್ರೋತ್ಸಾಹಿಸುತ್ತಾರೆಂದು ನಂಬಿರುತ್ತೇನೆ.

ಪ್ರತ್ಯಕ್ಷದರ್ಶಿ.

ಮಹಾಸಭೆಯ ತೀರ್ಮಾನದಂತೆ ನಡೆದ ವಿವಾಹಗಳು.

ಕಳೆದ ಮೇ ತಾ॥ ೧೯ ನೇ ಬುಧವಾರ ಮಂಜರಾಬಾದು ತಾಲೋಕ್ ಬೆಳಗೋಡುಪೇಟೆಯಲ್ಲಿ ಮ॥ರಾ॥ ಹೊಣೇನೂರು ಸಿದ್ಧಲಿಂಗಶೆಟ್ಟರಿಗೆ ಕುರಕುಂದಿ ಮ॥ ಗುರುಬಸವಯ್ಯನವರ ಪುತ್ರಿ ಚಿ॥ ಸೌ॥ ಗಂಗಮ್ಮನನ್ನು ಕೊಟ್ಟು ಪಾಣಿಗ್ರಹಣಮಹೋತ್ಸವವು ನಡೆಯಿತು ಈ ವಿವಾಹಮಹೋತ್ಸವಕಾಲದಲ್ಲಿ ಮ॥ ಶಿ॥ ಊರಿಬಸಪ್ಪನವರು, ಮತ್ತು ಮ॥ ಬಲುಮಲಿ ಪುಟ್ಟಪ್ಪಶೆಟ್ಟರು ವಧೂವರರ ಪರವಾಗಿ ಮೈಸೂರು ವಿದ್ಯಾಭಿವೃದ್ಧಿ ಫಂಡಿಗಾಗಿ ೩ ರೂಪಾಯಿಗಳನ್ನು ಕೊಟ್ಟದ್ದಲ್ಲದೆ ಕೈ॥ ವೈ॥ ವೀರಸಂಗಪ್ಪನವರ ಜ್ಞಾಪಕಾರ್ಥವಾಗಿ ಅಗ್ರತಾಂಬೂಲವನ್ನು ತೆಗೆಯುವ ಪದ್ಧತಿಯನ್ನು ಜಾರಿಗೆ ತರಬೇಕೆಂದು ಮ॥ ಎಚ್. ಕೆ. ಮಲ್ಲಪ್ಪನವರು ಹೇಳಿದ್ದರಮೇಲೆ ಕೈ॥ ವೈ॥ ವೀರಸಂಗಪ್ಪನವರ ಜ್ಞಾಪಕಾರ್ಥವಾಗಿ ವಧೂವರರ ಪರವಾಗಿ ಒಂದು ರೂಪಾಯನ್ನು ಮ॥ ವೈ. ವಿರೂಪಾಕ್ಷಯ್ಯನವರಿಗೆ ತಲುಪಿಸುವಂತೆ ಮ॥ ಎಚ್. ಕೆ. ಮಲ್ಲಪ್ಪನವರ ಹಸ್ತ ಫಂಡಿನ ಮೊಬಲಗೂ, ಮೇಲೆ ಹೇಳಿದ ಮೊಬಲಗೂ ಕೊಡಲ್ಪಟ್ಟಿತು. ಇದೇ ತಿಂಗಳು ತಾ॥ ೨೨ ನೇ ಶನಿವಾರ ಹಾಸನದಲ್ಲಿ ಮ॥ ಹೊಳೇನರಸೀಪುರದ ರಾಯಚೂರು ರುದ್ರಪ್ಪನವರ ಅಣ್ಣನವರ ಪುತ್ರ ಚಿ॥ ರಾಚಪ್ಪನಿಗೆ ಮ॥ ಪಿರಿಯಾಪಟ್ಟಣದ ರುದ್ರಪ್ಪನವರ ಸಹೋದರಿ ಚಿ॥ ಸೌ॥ ಭದ್ರಮ್ಮನನ್ನು ಕೊಟ್ಟು ಹಾಸನದಲ್ಲಿ ಬೆಳಸಿದ ಲಗ್ನದಲ್ಲಿ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗಾಗಿ ಕೊಟ್ಟ ೩ ರೂ. ಗಳೂ ಕೈ॥ ವೈ॥ ವೀರಸಂಗಪ್ಪನವರ ಜ್ಞಾಪಕಾರ್ಥವಾಗಿ ಒಂದು ರೂ. ಮ॥ ಎಚ್. ಕೆ. ಮಲ್ಲಪ್ಪನವರ ವಶಕ್ಕೂ ತಿಪಟೂರು ಗ್ರಾಮದಲ್ಲಿ ಸ್ಥಾಪಿತವಾಗಿರುವ ವೀರಶೈವಾಶ್ರಮಕ್ಕೆ ೨ ರೂ ಮ॥ ಮ್ಯಾನೇಜರ್ ಬಸಪ್ಪನವರ ವಶಕ್ಕೂ ಕೊಡಲ್ಪಟ್ಟಿತು. ಇದೇತಿಂಗಳು ತಾ॥ ೨೪ ನೇ ಸೋಮವಾರ ಆಲೂರುಗ್ರಾಮದಲ್ಲಿ ಮ॥ ತಿಪಟೂರು ದೇಶಮುದ್ರೆ ಶಂಕರಪ್ಪನವರ ಪುತ್ರ ಚಿ॥ ದೇಶಮುದ್ರೆ ಮಲ್ಲಪ್ಪನವರಿಗೆ ಮ॥ ಆಲೂರು ಶೀಳಿನ ರುದ್ರಪ್ಪನವರ ಪುತ್ರಿ ಚಿ॥ ಸೌ॥ ಗಂಗಮ್ಮನನ್ನು ಕೊಟ್ಟು ಪಾಣಿಗ್ರಹಣಮಹೋತ್ಸವವನ್ನು ನಡೆಸಿದ ಕಾಲದಲ್ಲಿ ಮ॥ ಮ್ಯಾನೇಜರ್ ಬಸಪ್ಪನವರು ಮತ್ತು ಮ॥ ಆ. ಶಿ. ನಂಜುಂಡಪ್ಪನವರು ವಧೂವರರ ಪರವಾಗಿ ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೆ ತೆಗೆದ ೪೦ ರೂ. ಕೈ॥ ವೈ॥ ವೀರಸಂಗಪ್ಪನವರ ಜ್ಞಾಪಕಾರ್ಥವಾಗಿ ತೆಗೆದ ೩ ರೂ. ಗಳು ಮ॥ ಹಾಸನದ ಕೇಜಿ ಮಹಾದೇವಪ್ಪನವರ ತಮ್ಮಂದಿರಾದ ಮ॥ ಎಚ್. ಕೆ ಮಲ್ಲಪ್ಪನವರ ಹಸ್ತ ಕೊಡಲ್ಪಟ್ಟಿತು. ಇದೇ ವಿವಾಹಮಹೋತ್ಸವಕಾಲದಲ್ಲಿ ತಿಪಟೂರಲ್ಲಿ ಸ್ಥಾಪಿತವಾಗಿರುವ ವೀರಶೈವಾಶ್ರಮಕ್ಕೆ ೪೦ ರೂಪಾಯಿಗಳು ತೆಗೆಯಲ್ಪಟ್ಟಿತು. ಮೇಲೆಹೇಳಿದ ಈ ಮೂರುಲಗ್ನಗಳಲ್ಲಿಯೂ ವೇಶ್ಯಾಸ್ತ್ರೀಯರ ನಾಟ್ಯವನ್ನು ಮಾಡಿಸದೆ ಬಿಟ್ಟಿರುವುದು ವಿಶೇಷ ಶ್ಲಾಘನೀಯವಾಗಿದೆ. ಈ ಪದ್ಧತಿಯು ಈ ಪ್ರಾಂತ್ಯದಲ್ಲಿ ಮೊದಲು ಮ॥ ಎಚ್. ಕೆ. ವೀರಬಸವಯ್ಯ, ಬಿ. ಎ. ಬಿ. ಎಲ್., ಇವರ ಲಗ್ನದಲ್ಲಿ ಜಾರಿಗೆ ಬಂದು, ಇವರು ಹಾಕಿದ ಮೇಲ್ಪಂಕ್ತಿಯನ್ನು ತಪ್ಪದೇ ಅನುಸರಿಸಿ ದುಂದುವೆಚ್ಚಗಳನ್ನು ನಿಲ್ಲಿಸಿ ಸದ್ಧರ್ಮಾಚರಣೆಯಲ್ಲಿ ಉಪಯೋಗಿಸುತ್ತಾ ಬರುವುದು ಸರ್ವರ ಭಾಗ್ಯೋದಯಕ್ಕೆ ಕಾರಣಭೂತವಾಗಿದೆ.

ಪ್ರತ್ಯಕ್ಷದರ್ಶಿ.

[ಮೇಲೆಕಂಡ ೫ ರೂಪಾಯಿಗಳನ್ನು ವಂದನಾಪುರಸ್ಸರವಾಗಿ ಸ್ವೀಕರಿಸಿರುತ್ತೇವೆ. ಪ. ಪ್ರ.]

ಇರುವೆಗಳನ್ನು ಓಡಿಸಲು ನಾನಾವಿಧವಾದ ಉಪಾಯಗಳಿರುವವು. ಅವುಗಳಲ್ಲಿ ಕೆಲವನ್ನು ಕ್ವೀನ್ಸ್‌ಲೇಂಡಿನ ವ್ಯವಸಾಯ ಪತ್ರಿಕೆಯು ತಿಳಿಸುವುದು:—(೧) ಇರುವೆಗಳು ವಿಶೇಷವಾಗಿರುವ ಕೊಠಡಿಯಲ್ಲಿ, ನೆಲದ ಮೇಲೆ ಅಲ್ಲಲ್ಲಿ ನಶ್ಯದ ಪುಡಿಯನ್ನುದರಿಸಿದುದಾದರೆ, ಅವು ಅದರ ವಾಸನೆಗೆ ಹೊರಟುಹೋಗುವುವು. (೨) ನುಣುಪಾದ ತೊಗಟೆಯುಳ್ಳ ಯಾವುದಾದರೊಂದು ಗಿಡಕ್ಕಾಗಲಿ, ಹಲಗೆಗಾಗಲಿ, ಕಂಭಕ್ಕಾಗಲಿ ಇರುವೆ ಮುತ್ತಿದ್ದರೆ, ಆ ವಸ್ತುಗಳ ಸುತ್ತಲೂ ಸೀಮೆಸುಣ್ಣದಿಂದ ಗೆರೆಯನ್ನೆಳೆದುದಾದರೆ, ಇರುವೆಗಳು ಆ ಗೆರೆಯನ್ನು ದಾಟುವುದಿಲ್ಲ. (೩) ಇರುವೆಗಳು ಜಾಸ್ತಿಯಾಗಿರುವೆಡೆಗಳಲ್ಲಿ, ಪುಡಿಮಾಡಿದ ಬಿಳಿಗಾರವನ್ನು ಉದುರಿಸಿದರೆ, ಕೆಂಪು ಇರುವೆಗಳೂ, ಕರಿ ಇರುವೆಗಳೂ ಅಲ್ಲಿಗೆ ಪುನಃ ಬರಲಾರವು.

ವೀರಶೈವ ಹಿತೋಪದೇಶ ಸಂಘಸ್ಥಾಪನೆ.

ಶ್ರೀಮನ್‌ಮಹಾರಾಜ ನಿರಂಜನ ಜಗದ್ಗುರು ಚಿನ್ಮೂಲಾದ್ರಿ ಬೃಹನ್ಮಠದ ಶಾಖಾನುವರ್ತಿಗಳಾದ ದಾವಣಗೆರೆ ವಿರಕ್ತಮಠದ ಶ್ರೀ ಮೃತ್ಯುಂಜಯಸ್ವಾಮಿಗಳವರೂ, ರಾಮಗಿರಿ ವಿರಕ್ತಮಠದ ಶ್ರೀ ಸ್ವಾಮಿಗಳವರೂ, ತರೀಕೆರೆ ತಾ॥ ಬುಕ್ಕಾಂಬುಧಿಗ್ರಾಮದ ಭಕ್ತಮಾಹೇಶ್ವರರ ಕೋರಿಕೆಯಂತೆ ಇದೇ ಅಧಿಕ ವೈ॥ ಬ॥ ಬುಧವಾರ ಸದರಿಗ್ರಾಮಕ್ಕೆ ಬಿಜಯಂಗೈಸಿ ಈ ಗ್ರಾಮದಲ್ಲಿ ವೀರಶೈವ ಹಿತೋಪದೇಶಸಂಘವನ್ನು ಸ್ಥಾಪಿಸುವುದು ಅತ್ಯಾವಶ್ಯಕವೆಂದು ಶ್ರೀಗಳವರು ಅಪ್ಪಣೆಕೊಡಿಸಿದಮೇರೆಗೆ ಸಮಸ್ತ ಭಕ್ತರೂ ಒಪ್ಪಿ, ಗುರುವಾರ ಸಾಯಂಕಾಲ ೬ ಗಂಟೆಯಿಂದ ೯ ಗಂಟೆಯವರೆಗೆ ವಿರೂಪಾಕ್ಷಲಿಂಗದೇವಸ್ಥಾನದಲ್ಲಿ ಶ್ರೀ ರಾಮಗಿರಿ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆಸೇರಿದ್ದರು. ಈ ಸಭೆಗೆ ಶ್ರೀ ಹೋದಿಗ್ಗೆರೆ ಪಟ್ಟದದೇವರೂ, ನಂದಿಪುರದ ಪಟ್ಟದದೇವರೂ, ಇಲ್ಲಿಯ ಪ್ರಮುಖರಾದ ಮ॥ ಶಾಂತವೀರಪ್ಪನವರೂ, ಇನ್ನು ಮುಂತಾದ ಭಕ್ತಮಹೇಶ್ವರರೂ ದಯಮಾಡಿಸಿದ್ದರು. ಈ ಸಭೆಯಲ್ಲಿ ಶ್ರೀ ಮೃತ್ಯುಂಜಯಸ್ವಾಮಿಗಳವರ ಪಾದಾನುವರ್ತಿಗಳಾದ ಖಾನಾಪುರದ ಹಿರೇಮಠದ ವಿರೂಪಾಕ್ಷಶಾಸ್ತ್ರಿಗಳವರು ಈ ಗ್ರಾಮದಲ್ಲಿ ಸದರಿ ಸಂಘವು ನಿರ್ವಿಘ್ನವಾಗಿ ನಡೆಯಲೆಂದು ವಿಘ್ನೇಶ್ವರಪೂಜೆಯನ್ನು ಮಾಡಿ ಅನಂತರ ವೀರಶೈವಮತವಿಚಾರದಲ್ಲಿ ಭಾಷಣಮಾಡಿದರು. ತರುವಾಯ ಶ್ರೀಗಳವರು ಆಯಾಯ ಆಶ್ರಮಗಳ ಧರ್ಮಗಳನ್ನು ತಪ್ಪದೆ ಆಚರಿಸಬೇಕೆಂದು ಉಪನ್ಯಾಸವನ್ನು ಮಾಡಿ ಸರ್ವರಿಗೂ ಆನಂದವನ್ನುಂಟುಮಾಡಿದಮೇಲೆ ವೇ॥ ವೀರಪ್ಪಯ್ಯನವರು, ಶ್ರೀಗಳವರು ದಯಮಾಡಿ ಸಂಘಸ್ಥಾಪನೆಯನ್ನು ಮಾಡಿದ್ದಕ್ಕಾಗಿ ಉಂಟಾದ ಸಂತೋಷವನ್ನು ಮಹಾಪಾದದಲ್ಲಿ ಅರಿಕೆಮಾಡಿಕೊಂಡರು. ತರುವಾಯ ಮರುಳಸಿದ್ಧಪ್ಪನೆಂಬ ವಿದ್ಯಾರ್ಥಿಯು ಪೂಜ್ಯಪಾದರವರ ದರ್ಶನದಿಂದುಂಟಾದ ಲಾಭವನ್ನು ಕುರಿತು ಭಾಷಣಮಾಡಿದನು. ತರುವಾಯ ವೇ॥ ಶಾಂತವೀರಪ್ಪನವರು ಎದ್ದು ನಿಂತು ಸದರಿ ಪೂಜ್ಯಪಾದರನ್ನು ಕುರಿತು ಮಹಾಸ್ವಾಮಿ! ನಮ್ಮ ಗುರುಹಿರಿಯರು ಅನೂಚಾನವಾಗಿ ನಡೆಯಿಸಿಕೊಂಡು ಬಂದಿದ್ದ ಈ ಗ್ರಾಮದ ಉದ್ಭವಮೂರ್ತಿಯಾದ ವಿರೂಪಾಕ್ಷಲಿಂಗದೇವರ ವಾರ್ಷಿಕೋತ್ಸವಗಣಾರಾಧನೆಯನ್ನು ನಾಳೆ ಭಾನುವಾರ ಜರುಗಿಸಬೇಕೆಂದು ನಾವುಗಳೆಲ್ಲರೂ ಪ್ರಯತ್ನಮಾಡಿಕೊಂಡಿರುವೆವು. ಆದಕಾರಣ ಸದರೀ ಮಹತ್‌ಕಾರ್ಯವನ್ನು ನೆರವೇರಿಸಿ ನಮ್ಮಗಳನ್ನೆಲ್ಲಾ ಕೃತಾರ್ಥರನ್ನಾಗಿ ಮಾಡಬೇಕೆಂದು ಪ್ರಾರ್ಥನೆಮಾಡಿಕೊಂಡರು. ಮಹಾಸ್ವಾಮಿಯವರು ಬಹು ಸಂತೋಷದಿಂದ ಆಗಬಹುದೆಂದು ಅಪ್ಪಣೆಕೊಡಿಸಿದರು. ಸಭಾಬರಖಾಸ್ತು ಆಯಿತು. ಇದೇ ಅಧಿಕ ವೈ॥ ಬ॥ ೧೧ ಭಾನುವಾರ ಪ್ರಾತಃಕಾಲ ಸಮಸ್ತ ಭಕ್ತಮಾಹೇಶ್ವರರು ಸೇರಿ ಶ್ರೀ ಮೃತ್ಯುಂಜಯಸ್ವಾಮಿಗಳವರನ್ನು ಆಂದೋಳಿಕೋತ್ಸವದೊಡನೆ ಈ ಗ್ರಾಮಕ್ಕೆ ನಾಲ್ಕು ಫರ್ಲಾಂಗುದೂರದಲ್ಲಿರುವ ಉದ್ಭವಮೂರ್ತಿಯಾದ ವಿರೂಪಾಕ್ಷಲಿಂಗದೇವಾಲಯಕ್ಕೆ ವೇದಘೋಷದಿಂದಲೂ, ಸಮಸ್ತವಾದ್ಯಗಳಿಂದಲೂ, ಶಿವಭಜನೆಯಿಂದಲೂ ಬಿಜಯಂಗೈಸಿಕೊಂಡು ಮಧ್ಯಾಹ್ನ ೨ ಗಂಟೆಗೆ ತಳಿರುತೋರಣಗಳಿಂದಲೂ, ಕದಳೀಸ್ತಂಭಗಳಿಂದಲೂ ಅಲಂಕರಿಸಲ್ಪಟ್ಟಿದ್ದ ಶ್ರೀ ವಿರೂಪಾಕ್ಷಲಿಂಗದೇವಾಲಯಕ್ಕೆ ಶ್ರೀಗಳವರ ಉತ್ಸವವು ತಲುಪಿತು. ನಂತರ ಸದರೀಶಾಸ್ತ್ರಿಗಳಿಂದ ವಿರೂಪಾಕ್ಷಲಿಂಗದೇವರಿಗೆ ಈ ಗ್ರಾಮದ ಶ್ರೇಯೋಭಿವೃದ್ಧಿಗಾಗಿ ಮಹಾನ್ಯಾಸೋಕ್ತ ರುದ್ರಾಭಿಷೇಕವು ಮಾಡಲ್ಪಟ್ಟಿತು ತರುವಾಯ ಮೃತ್ಯುಂಜಯಸ್ವಾಮಿಗಳವರ ಪಾದಪೂಜೆಯು ನಡೆಯಿಸಲ್ಪಟ್ಟು ಸಮಸ್ತ ಭಕ್ತಮಾಹೇಶ್ವರರು ತೀರ್ಥಪ್ರಸಾದಸೇವನೆಯಿಂದ ಕೃತಾರ್ಥರಾದರಲ್ಲದೆ ಆ ದಿವಸ ಸದರೀ ದೇವಸ್ಥಾನದಲ್ಲಿ ನಾಲ್ಕುಸಾವಿರಜನ ಭಕ್ತಮಾಹೇಶ್ವರರಿಗೆ ಅನ್ನದಾನವು ಮಾಡಲ್ಪಟ್ಟಿತು. ಮಾರನೆ ಸೋಮವಾರ ಪ್ರಾತಃಕಾಲ ೧೦ ಗಂಟೆಯಿಂದ ೧೨ ಗಂಟೆಯವರೆಗೆ ಸಭಾಸೇರಿದ್ದಿತು. ಆ ಸಮಯದಲ್ಲಿ ಮೇಲೆಕಂಡ ಗ್ರಾಮದ ಸಮಸ್ತ ಭಕ್ತಮಾಹೇಶ್ವರರೂ ಸೇರಿದ್ದರಲ್ಲದೆ ವೇ॥ ಕೆಂಗೊಳ್ಳಿಮಠದ ಮಹಾದೇವಯ್ಯನವರು ಮ॥ ಶಿವನಿ ಪುರದಪ್ಪಗೌಡರು ಸೇರಿದ್ದರು. ಆವಾಗ ಶ್ರೀ ಮೃತ್ಯುಂಜಯಸ್ವಾಮಿಗಳವರು ಸಮಸ್ತ ಭಕ್ತಮಾಹೇಶ್ವರರ ಅಜ್ಞಾನಾಂಧಕಾರವು ತೊಲಗುವಂತೆ ಪಾರಮಾರ್ಥಿಕ ವಿಷಯವಾಗಿ ಭಾಷಣಮಾಡಿದರು. ಅನಂತರ ಸದರೀಶಾಸ್ತ್ರಿಗಳಿಂದ ವೈದಿಕವಿದ್ಯಾಭಿವೃದ್ಧಿ ವಿಷಯಕವಾಗಿ ಭಾಷಣಮಾಡಲ್ಪಟ್ಟು ಸಭಿಕರ ಮನಸ್ಸಿಗೆ ಆನಂದವುಂಟಾಗುವಂತೆ ಸ್ವಸ್ತಿವಚನಗಳು ಹೇಳಲ್ಪಟ್ಟುವು. ಅನಂತರ ಭಜನಾಸಂಘದವರಿಂದ ಇಂಪಾದ ಗಾನದೊಡನೆ ಶಿವಭಜನೆಯು ಮಾಡಲ್ಪಟ್ಟಿತು. ತರುವಾಯ ಅಧ್ಯಕ್ಷರಿಂದ ಸಮಸ್ತ ಭಕ್ತಮಾಹೇಶ್ವರರಿಗೆ ಆಶೀರ್ವಾದವು ದಯಪಾಲಿಸಲ್ಪಟ್ಟಿತು. ಸಭಾ ಬರಖಾಸ್ತು ಆಯಿತು.

ಓರ್ವ ಪ್ರತ್ಯಕ್ಷದರ್ಶಿ.

ಗೋಕಾಕ.

(ಕಳೆದವಾರದ ಶೇಷ)

ಶ್ರೀ ಪರಮಗುರುವಿನ ಪುಣ್ಯಪ್ರಭಾವದಿಂದ ತಯಾರಾಗಿರುವ ಅನೇಕ ಶಿವಕೀರ್ತನಕಾರರು ಅನೇಕಕಡೆಗೆ ಹೋಗಿರುವಂತೆ ವೇ॥ ಶಿ॥ ಬಸವಲಿಂಗಶಾಸ್ತ್ರಿಗಳೂ, ಪಂಚಾಕ್ಷರಿ ಗವಯಿಗಳೂ, ಭಜನಾಮೇಳವೂ ಶ್ರೀಗಳವರ ಅಪ್ಪಣೆಯ ಮೇರೆಗೆ ರಾ॥ ಸಾ॥ ಶಿವಮೂರ್ತಿಸ್ವಾಮಿ ಕಣಬರಗಿಮಠ ಗೋಕಾಕ ಫಾಲ್ಸಕ್ಕೆ ಶನಿವಾರ ತಾ॥ ೧-೫-೧೫ ದಿವಸ ಬರಲು, ರಾ॥ಸಾ॥ ಬರು ಸದ್ಧರ್ಮದಲ್ಲಿ ಸದಾ ನಿರತರಾಗಿರುವವರಾದಕಾರಣ, ಬಹು ಪ್ರೇಮದಿಂದ ಸ್ವಾಗತವನ್ನು ಮಾಡಿ, ಸತತ ೬ ದಿವಸಗಳವರೆಗೆ ಅನೇಕ ಧಾರ್ಮಿಕ, ನೈತಿಕ, ಸಾಮಾಜಿಕ, ಅಷ್ಟಾವರಣದ ಮಹಿಮೆ, ಶಿವಲಾಂಛನದ ಮಹಿಮೆ, ವೀರಶೈವಧರ್ಮದ ಮೂಲತತ್ವ, ಮುಂತಾದ ಮಹತ್ವದ ವಿಷಯಗಳಮೇಲೆ ರಾತ್ರಿಯಕಾಲದಲ್ಲಿ ಶಿವಕೀರ್ತನೆಯನ್ನು ಮಾಡಿಸೋಣದರಿಂದ ಜಾತಿಭೇದವಿಲ್ಲದೆ ಸರ್ವಮತಸ್ಥರೂ ದಿನವಹಿತಂಡತಂಡವಾಗಿ ಕೀರ್ತನಕೆಲಸಕ್ಕೆ ಬಂದು ಅವರ ಉಪದೇಶದಿಂದ ಪುನೀತರಾಗಿ ಶ್ರೀ ಹಾನಗಲ್ಲ ಮಹಾಸ್ವಾಮಿಗಳ ಪುಣ್ಯಪ್ರಭಾವದ ಮಹಿಮೆಯು ಎಂಥಾದ್ದು! ಅವರ ಭೂತದಯೆ ಎಂಥಾದ್ದು, ಎಂಬುದನ್ನೇ ಸರ್ವಜನರೂ ಕೊಂಡಾಡುತ್ತ ತಮ್ಮತಮ್ಮ ಮನೆಗಳಿಗೆ ಹೋಗುತ್ತಿದ್ದರು. ಈಗ ಬಸವಲಿಂಗಶಾಸ್ತ್ರಿಗಳು ಕೀರ್ತನಮಾಡುವ ಶೈಲಿ, ಪಂಚಾಕ್ಷರಿ ಗವಯಿಗಳ ಮಂಜುಳಗಾನ, ಶೇಖರಯ್ಯನವರ ಪಿಯಾನ ಬಾರಿಸುವಿಕೆ, ಶಿವಯ್ಯನವರ ತಬಲ ಬಾರಿಸುವಿಕೆ, ಲಿಂಗಯ್ಯನವರ ಫಿಡಿಲ ಬಾರಿಸುವಿಕೆ, ಮತ್ತು ಭಜನೆಯ ಬಾಲಕರ ಸಮೂಹ, ಶಾಸ್ತ್ರಿಗಳು ಕ್ಷಣಕ್ಷಣಕ್ಕೆ ಸದ್ಗುರುಗಳ ನಾಮಸ್ಮರಣ ಮಾಡಿ ರಸವತ್ತಾಗಿ, ಆಧಾರಭೂತವಾಗಿ ಹೇಳುವ ಶಿವಶರಣರ ಚರಿತ್ರಗಳು,ಲಿಂಗಧಾರಣ, ಧರ್ಮ,ನೀತಿ, ಆಚಾರವಿಚಾರಗಳ ಸಂಗತಿ-ಇವುಗಳನ್ನು ಶ್ರವಣಮಾಡಿದ ಪ್ರತಿಯೊಬ್ಬರು ಆನಂದಸಾಗರದಲ್ಲಿ ಮುಳುಗಿ ಶಿವರಾತ್ರಿಗೆ ಶ್ರೀಮನ್ ನಿರಂಜನಮೂರ್ತಿ ಶ್ರೀ ಹಾನಗಲ್ಲ ಗುರುವಿನ ದರ್ಶನವಾಗಬೇಕೆಂತಲೇ ಸರ್ವರೂ ಅಪೇಕ್ಷಿಸಿದರು. ಹೋದ ಗುರುವಾರದದಿವಸ ದೇವರ ಮೇಲಿನ ಪ್ರೀತಿಯ ಬಗ್ಗೆ ಕಡೆಯ ಕೀರ್ತನವು ಆಗಿ ಶಾಸ್ತ್ರಿಗಳಿಗೂ ಗವಾಯಿ ಭಜನಮಂಡಳಿಗೆಲ್ಲಾ ರಾವಸಾಹೇಬರು, ಶಿವಮೂರ್ತಿಸ್ವಾಮಿಗಳು ಉಡುಗರೆಗಳನ್ನ ಕೊಟ್ಟದ್ದಲ್ಲದೆ ಚನಬಸಪ್ಪಾ ಭಿಮೋಡಿ, ದುಂಡಪ್ಪಾ ಇನ್ನೋಳಿ, ಪಾರಶೆಟ್ಟಿ, ಡಾಕ್ಟರರು, ಪೋಸ್ಟಮಾಸ್ತರ ಜೋಶಿ, ಮಹಾಂತಯ್ಯನವರು, ಈರಪ್ಪನವರು ಅವರ ವ್ಯವಸ್ಥೆಯನ್ನು ಚೆನ್ನಾಗಿ ಕಾಪಾಡಿ ಉಡುಗರೆಗಳನ್ನು ಉಚಿತವಾಗಿ ಕೊಟ್ಟರು. ಶಾಸ್ತ್ರಿಗಳು ಗೋಕಾಕದ ಶ್ರೀ ಲಾಗಲೋಟಿಸ್ವಾಮಿ ಮಂಟಪಮುರಿಮಠ, ಲಕ್ಷಶೆಟ್ಟಿ ಯಾದವಾಡ, ಪರಮಶೆಟ್ಟರು, ವೀರಭದ್ರಪ್ಪನವರು, ಘೋಡಗೇರಿ ಈ ವೀರಶೈವ ಮುಂದಾಳುಗಳ ಆಮಂತ್ರಣವನ್ನು ಸ್ವೀಕರಿಸಿ ಇಲ್ಲಿಗೆ ಬಂದು ಇಂದಿಗೆ ದಿನಾಲೂ ಕೀರ್ತನೆಗಳು ಸಂಪದವು ತೆದಲ್ಲಿ ಬಿದಿಗೆಯ ಚಂದ್ರನಂತೆ ದಿನದಿನಕ್ಕೆ ವೀರಶೈವರ ಚಿತ್ತಾಕರ್ಷಣ ಮಾಡುತ್ತಿರುವುದರಿಂದ ಮಹಿಮರ ಪುಣ್ಯಪ್ರತಾಪ ಲೋಕಕ್ಕೆ ಸುಖವೇಹೊರ್ತು ಕಂಟಕವಾಗಲಾರದು. ಇವರ ಕೀರ್ತನೆಗಳನ್ನು ಕೇಳಲಿಕ್ಕೆ ಜಾತಿಭೇದವಿಲ್ಲದೆ ಸರ್ವರೂ ಬರುತ್ತಿರುವರು. ಕೇಳುವವರೂ, ಹೇಳುವವರೂ ಯೋಗ್ಯರಾಗುವದಕ್ಕೆ ಶ್ರೀ ಗುರುಗಳ ಪುಣ್ಯಪ್ರಭಾವವೇ ಕಾರಣವು. ಕೆಲವರು ಅಧಿಕಾರ ಮದದಲ್ಲಿ, ಕೆಲವರು ಲಕ್ಷ್ಮಿಯ ಮದದಲ್ಲಿ, ಕೆಲವರು ವಿದ್ಯೆಯ ಗರ್ವದಲ್ಲಿ, ಕೆಲವರು ಮಾಯೆಯಲ್ಲಿ ಮೋಹಿತರಾಗಿ, ಕೆಲವರು ಸ್ವಾರ್ಥಸಾಧಿಸುವ ಕುರಿತು, ಅನೇಕರನ್ನು ಹಳಿಯುತ್ತ, ದುರುಳವೇದಾಂತವನ್ನು ಬೋಧಿಸುತ್ತ ತಮ್ಮನ್ನೂ, ತಮ್ಮ ಧರ್ಮವನ್ನೂ, ನೀತಿಯನ್ನೂ,ದೇವರಲ್ಲಿಯ ಪ್ರೇಮವನ್ನೂ,ಗುರುವಿನಲ್ಲಿಯ ಭಕ್ತಿಯನ್ನೂ, ರಾಜನಲ್ಲಿ ನಿಷ್ಠೆಯನ್ನೂ, ತಾಯಿತಂದೆಗಳಲ್ಲಿ ವಿಧೇಯತ್ವವನ್ನೂ, ಮಿತ್ರರಲ್ಲಿ ವಿಶ್ವಾಸವನ್ನೂ, ಪರಮತಸ್ಥರಲ್ಲಿ ಸಹಾನುಭೂತಿಯನ್ನೂ, ಅಂಗಹೀನರಲ್ಲಿ ಕೃಪೆಯನ್ನೂ, ಭೂತದಯೆಯನ್ನೂ ತೋರಿಸುವದನ್ನು ಮರೆತಿರುವರು. ಆದರೆ „ ಬಾಪನೇಬೇಟಾಸವಾಯ ” ಎಂಬ ಗಾದಿಯ ಮಾತಿನಂತೆ ಗುರುವಿನ ಪ್ರಭಾವದಿಂದ ವಿದ್ಯಕಲಿತು „ ಮನುಷ್ಯ ” ವೆಂಬ ನಾಮವನ್ನು ಸಾರ್ಥಕಮಾಡುವದೇ ಪ್ರತಿಒಬ್ಬನ ಆದ್ಯಕರ್ತವ್ಯವಾಗಿರುವದರಿಂದ ಶ್ರೀ ಹಾನಗಲ್ಲ ಸದ್ಗುರುಗಳು ಪ್ರಾರಂಭಿಸಿದ ಶಿವಯೋಗಮಂದಿರದೊಳಗಿಂದ ಬೇಗ ಗುರುಕುಲವೃಂದವು ಹೊರಬಿದ್ದು, ಭಕ್ತರನ್ನು ಪುನೀತರನ್ನು ಮಾಡಲೆಂತಲೂ, ಆ ಗುರುಗಳಿಗೆ ಅಖಂಡಆಯುಷ್ಯವು ದೊರೆತು ಅವರ ಮಾರ್ಗವನ್ನೇ ಇನ್ನುಳಿದ ನಾಮಾಭಿಮಾನವನ್ನು ಪಡೆದ ಗುರುಗಳು ಅವಲಂಬಿಸಿ ಲೋಕಹಿತಮಾಡಲೆಂದೂ ಈಶ್ವರನನ್ನು ಪ್ರಾರ್ಥಿಸುವೆನು.

„ ಶಿವಭಕ್ತ ”

ವೀರಶೈವಾಶ್ರಮ-ಬೆಂಗಳೂರು.

ಮೇಲೆಕಂಡ ವೀರಶೈವಾಶ್ರಮವು ವೀರಶೈವ ವಿದ್ಯಾರ್ಥಿಗಳ ಬೋರ್ಡಿಂಗ್ ಆಗಿ, ಸ್ಕೂಲು ಕಾಲೇಜ್‌ಗಳಿಗೂ, ಪೇಟೆಗೂ ಮಧ್ಯಸ್ಥವಾದ ಆನಂದಮಹಲ್ ಬಂಗ್ಲೆಯಲ್ಲಿ ಸ್ಥಾಪಿಸಲ್ಪಟ್ಟಿರುತ್ತದೆ. ಇದಕ್ಕೆ ಸೇರಿಸಲಪೇಕ್ಷಿಸುವ ವಿದ್ಯಾರ್ಥಿಗಳ ಪೋಷಕರು ಈ ಕೆಳಗಿನ ವಿಳಾಸಕ್ಕೆ ಕೂಡಲೆ ಅಪ್ಲಿಕೇಷನ್ ಕಳುಹಿಸುವುದು. ಮತ್ತು ಮೇಲೆಕಂಡ ಆಶ್ರಮಕ್ಕೆ ಒಬ್ಬ ಗುಮಾಸ್ತರು ಬೇಕಾಗಿರುವುದರಿಂದ ಅವರಿಗೆ ಭೋಜನಸೇರಿ ಮಾಹೆಯಾನಾ ೮ ರೂ. ಲಾಗಾಯಿತು ೧೦ ರೂ. ನೊಳಗೆ ವೇತನಕೊಡಲ್ಪಡುವುದು. ಇದನ್ನು ಅಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಅಪ್ಲಿಕೇಷನನ್ನು ಜಾಗ್ರತೆ ಹಾಕಿಕೊಳ್ಳತಕ್ಕದ್ದು.

ಜಿ. ಕೆ. ರುದ್ರಾರ್ಯ, ಆನರರಿ ಸೆಕ್ರಟರಿ,
ವೀರಶೈವಾಶ್ರಮ ಬೆಂಗಳೂರು.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು

86

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕದನಗಳ ಪಟಗಳೂ ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ ೨ ಆಣೆ; ವಿ. ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ:—ದಿ ಜನರಲ್ ಏಜನ್ಸಿ. ಮೈಸೂರು

ಓರಿಯಂಟಲ್ ಫಾರ್ಮಸಿ ಮೈಸೂರು.

18

ಪ್ರಸಿದ್ಧಿ ಗುಣಕಂಡ ಔಷಧಗಳು.

ಜ್ವರದಮಾತ್ರೆ —ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಉಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮಂದಷವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ ರೂ.

ಗೋರೋಜನದಮಾತ್ರೆ — ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೂಡ್ಲೆ ತಪ್ಪಿ ಜೀರ್ಣಶಕ್ತಿಕೊಡುತ್ತೆ. ಪ್ರಯಾಣೀಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾದ ನೋವು ಉಳುಕು ಊದು ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ ೫ ಡಬ್ಬಿಗೆ ೧ ರೂ. ಕೂಡ್ಲೆ ನಮ್ಮ ಕ್ಯಾಟಲಾಗಿಗೆ ಬರಿಯಿರಿ ಮುಫತ್ತು ಕಳುಹಿಸುತ್ತೇವೆ.

S.U.N.&Co.
BENARES CITY.
KASHI
VISHWESHWAR.

36

ದೊಡ್ಡ ಕಂಪೆನಿ ! ಸೊಗಸಾದ ಸರಕುಗಳು !

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ. ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಪಾಗಟಿ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ ಎಸ್. ಯು. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಸ್ಟಾರ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿ ಕೊಡುತ್ತೇವೆ.

ಚೆನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨—೪—೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೦—೦ ರೂ. ಕೊಡಬೇಕಾಗುವುದು ಕೆಂಪು, ಹಸುರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರದ ಬಣ್ಣದಿಂದ ಬಿಳಿ ಗ್ಲೇಜು ಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೦—೦; ಅನಂತರ ಪ್ರತಿ ೧೦೦ಕ್ಕೂ ೦—೧೨—೦; ಹಳದೀ ಗ್ಲೇಜ್‌ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಹಳದಿ ರಫ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿನೂರಕ್ಕೂ ೦-೬-೦ ಆಣೆಯಂತೆ ಕಳುಹಬೇಕು. ಕ್ಲುಪ್ತ ಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು,

ಮ್ಯಾನೇಜರ್,
ಸ್ಟಾರ್‌ಪ್ರೆಸ್, ಮೈಸೂರ್.

ಆಯುರ್ವೇದ ವಿದ್ವಾನ್-ಬಿ. ವಿ. ಪಂಡಿತರ 34

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್‌ಕಸ್ತೂರಿ, ಚಿನ್ನದರೇಖು, ಲೋಹಭಸ್ಮ ಮುಂತಾದವುಗಳಿಂದ ವಂಶಪಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀಕರಕಸ್ತೂರಿಮಾತ್ರೆಗಳನ್ನು ತಾಂಬೂಲದೊಡನೆ ಅಥವಾ ಹಾಗೆ ಉಪಯೋಗಿಸಿದರೆ ಆಹಾರವು ಬೇಗನೆ ಜೀರ್ಣವಾಗಿ ಬಹಳಹೊತ್ತು ಬಾಯಿ ಘುಮಘುಮಿಸುತ್ತಿರುವುದು.

ಛಳಿಮಳೆಗಾಲಗಳಲ್ಲೂ, ಸೊಂಕುರೋಗಸ್ಥಳಗಳಲ್ಲೂ, ಪ್ರಯಾಣಕಾಲದಲ್ಲೂ, ಮಕ್ಕಳಿರುವ ಮನೆಗಳಲ್ಲೂ, ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಶೀತವಾಯು, ಕೆಮ್ಮು, ನೆಗಡಿ, ಅಜೀರ್ಣಭೇದಿ, ಮಲಬಂಧ, ಸರಸೀಜ್ವರ, ಪ್ಲೇಗುಜ್ವರ, ಮಲೇರಿಯಾಜ್ವರ, ನಡುನೋವು, ಅರೋಚಕ, ಹಲ್ಲುನೋವು, ಮೈಕೈನೋವುಗಳು ಬಹಳಬೇಗನೆ ನಾಶಿಯಾಗುತ್ತವೆ. ಮಕ್ಕಳಿಗೆ ಸಂಜೀವನ-ಯಾವಾಗಲೂ ವಿಳಾಸವನ್ನು ಪರೀಕ್ಷಿಸಿ ಔಷಧವನ್ನು ಕೊಂಡುಕೊಳ್ಳಿರಿ-ಮೋಸಹೋಗಬೇಡಿರಿ. ೨೫ ಮಾತ್ರೆಯುಳ್ಳ ಸೀಸೆಯ ಬೆಲೆ ೦—೪—೦ ಆಣೆ. ಐದಕ್ಕೆ ಒಂದು ಮುಫತ್ತು. ಟಪಾಲ್‌ಖರ್ಚು ಬೇರೆ.

ಆಮೋದಿನಿ.

ಸಂಗೀತಗಾರರಿಗೆ ಅತ್ಯಂತ ಸುಖವನ್ನೂ, ವಿದ್ಯಾರ್ಥಿಗಳಿಗೆ ಆನಂದವನ್ನೂ, ಪ್ರಯಾಣಿಕರಿಗೆ ಆಯಾಸಪರಿಹಾರವನ್ನೂ, ಉಂಟುಮಾಡಿ ಬಿಸಿಲುಕಾಲದ ಅಥವಾ ಆಯಾಸದ ಬಾಯಾರಿಕೆಯನ್ನು ತತ್ಕ್ಷಣ ಅಣಗಿಸಿ, ಎಂತಹ ಕೆಮ್ಮು, ಉಬ್ಬಸಗಳನ್ನಾದರೂ ನಾಶಮಾಡಿ ಆಬಾಲವೃದ್ಧರಿಂದಲೂ ಹೊಗಳ್ಪಡುತ್ತಲಿರುವ ಕೈಗಂಡಸಿದ್ಧಾಮೃತ, ಮತ್ತಾವ ಮಾತ್ರೆಗಳೂ ಇಷ್ಟು ಮನೋಹರವಾಗಿಲ್ಲವೆಂಬುದನ್ನು ನಂಬಿರಿ! ೧೫೦ ಮಾತ್ರೆಯ ಸೀಸೆ ೦—೪—೦ ಆಣೆ. ಐದಕ್ಕೆ ಒಂದು ಹೆಚ್ಚು. ಟಪಾಲ್‌ಖರ್ಚು ಪ್ರತ್ಯೇಕ.

ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರು ಪಿ॥

ಹೊಸ ಪುಸ್ತಕಗಳು.

186

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ ೩೬೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ — ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಗಳ ಕಾವ್ಯ. ಬೆಲೆ ೧೦ ಆಣೆ.

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು ಷಟ್ಸ್ಥಲ-ಶರಣಹಸುಗೆ-ಸಂಬೋಕರಣ ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ, ಲಯ ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಾನುಸಾರದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟಿಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎ. ಆರ್. ಕರಿಬಸವಶಾಸ್ತ್ರಿ,
ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

3

ಶೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಯೊಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯಕ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧—೦—೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಅನೇಕ ಯೋಗ್ಯತಾಪತ್ರಿಕೆಗಳನ್ನು ಪಡೆದಿರುವ (ರಿಜಿಸ್ಟರ್ಡ್) ಶಕುಂತಳ ಕೂದಲು ಬೆಳೆಯುವ ಪರಿಮಳ ತೈಲವು.

9

ಡಬ್ಬಿ ೧ ಕ್ಕೆ ೩೬ ವಿಧವಾದ ಇನಾಂ ಸಾಮಾನುಗಳ ಸಮೇತ ೧೫ ತೊಲೆ ಎಣ್ಣೆಯ ಕ್ರಯ ರೂ. ೧-೦-೦

SAKUNTHALA
HAIR OIL
REGISTERED TRADE MARK

ಈ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲುಗಳಿಗೆ ಹಚ್ಚಿಕೊಂಡು ಬಾಚಿಕೊಳ್ಳುತ್ತಾ ಬಂದರೆ ಬೆಳೆಯದೆ ಇರುವ ಕೂದಲು ಬೆಳೆಯುವುದು. ಒರಟಾಗಿರುವ ಕೂದಲು ಮೃದುವಾಗುವುದು. ನೇರಳೇಹಣ್ಣಿನಂತೆ ಕಪ್ಪಾಗಿ ಥಳಥಳಿಸುವುದು. ದೇಹದಲ್ಲಿ ಇರತಕ್ಕ ಉಷ್ಣವನ್ನು ತೆಗೆಯುವುದು. ಕಣ್ಣಿಗೆ ತಂಪುಕೊಡುವದು. ತಲೆಯಲ್ಲಿರುವ ಮೊದಡನ್ನು ಸರಿಮಾಡುವುದು. ಕಣ್ಣಿನಲ್ಲಿ ಮಂಜನ್ನು ತೆಗೆದು, ಮುಖಕ್ಕೆ ಕಾಂತಿಯನ್ನು ದೇಹಕ್ಕೆ ಆರೋಗ್ಯವನ್ನು ಮನಸ್ಸಿಗೆ ಸಂತೋಷವನ್ನು ಕೆಲಸಕ್ಕೆ ಉಲ್ಲಾಸವನ್ನು ಓದುವವರಿಗೆ ಆಹ್ಲಾದವನ್ನು ಉಂಟುಮಾಡುವುದಲ್ಲದೆ ಜವ್ವಾಜಿ ಪುನುಗು, ಅಂಬರ್, ಕೇಸರ್, ಪಚ್ಚಕರ್ಪೂರ ಮತ್ತೂ ಜಾಜಿ, ಮಲ್ಲಿಗೆ, ಸಂಪಿಗೆ, ಇರುವಂತಿಗೆ, ಶ್ಯಾವಂತಿಗೆ, ಕ್ಯಾದಿಗೆ, ಗುಲಾಬಿ, ವಿರೂಪಾಕ್ಷಿ, ದವನ, ಮರುಗ, ಇತ್ಯಾದಿ ಪುಷ್ಪಗಳ ವಾಸನೆಯಾಗಿರುವ ಈ ಒಂದು ತೈಲವನ್ನು ತಲೆಯ ಕೂದಲಿಗೆ ಹಚ್ಚಿಕೊಂಡರೆ ಯಾವತ್ತು ದಿವಸಗಳ ವರಿಗೂ ಇದರ ವಾಸನೆ ಹೋಗುವುದಿಲ್ಲ. ಈ ತೈಲವು ಹೆಂಗಸರು, ಗಂಡಸರು, ಹುಡುಗರು, ಮಕ್ಕಳು ಪ್ರತಿಒಬ್ಬರಿಗೂ ಬಹಳ ಅನುಕೂಲವಾದದ್ದು. ಪ್ರತಿ ಕುಟುಂಬದಲ್ಲು ಈ ತೈಲವು ಅವಶ್ಯಕವಾಗಿ ಇರಬೇಕಾದದ್ದು.

೧೫ ತೋಲ ತೈಲವುಳ್ಳ ಡಬ್ಬಿ ೧ ಕ್ಕೆ ಕ್ರಯ ೩೬ ಇನಾಂ ಸಾಮಾನುಗಳ ಸಮೇತ ರೂ. ೧-೦-೦

ಇನಾಂ ಸಾಮಾನುಗಳ ತಪ್ಸೀಲು— ಸ್ತ್ರೀಯರು ತಲೆಯಲ್ಲಿ ಧರಿಸುವ ಕೊಂಡೆಪುಷ್ಪ ೧, ದಂತದ ಬಾಚಣಿಗೆ ೧, ನೋಡಿಕೊಳ್ಳುವ ಕನ್ನಡಿ ೧, ಜರ್ಮನ್ ಸಿಲ್ವರ್ ಕಾಡಿಗೆ ಭರಣಿ ೧, ಅತ್ತರುಬಿಲ್ಲೆ ೧, ವಾಸನೆಯುಳ್ಳ ಸೋಪು ೧ ತಾಂಬೂಲಮಾತ್ರೆ ೨೦ ಕೊಂಡೆ ಗಿಣಿಗಳು ೬ ಕಾರೊನೇಷನ್ ಬ್ರೂಚ್ ೧, ಜವಾದುಡಬ್ಬಿ ೧, ಈ ತರಹ ೩೬ ಇನಾಂ ಕೊಡಲ್ಪಡುತ್ತವೆ.

ನಮ್ಮ ವಿಳಾಸ:— ಧನಲಕ್ಷ್ಮಿ ಅಂಡ್ ಕಂಪನಿ ೧-೬
ವೆಂಕಟೇಶಮೇಸ್ತ್ರಿ ಬೀದಿ, ಸಾಹುಕಾರ್ ಪೇಟೆ ಮದರಾಸು.

ಶ್ರೇಷ್ಠವಾದ ವಾಚ್! ನೂತನವಾದ ವಾಚ್! ನಾಣ್ಯವಾದ ವಾಚ್!

ಸ್ಟ್ರಾಂಗ್ ಪಾಕೆಟ್ ಲೀವರ್‌ವಾಚ್.

ಇದರ ಕ್ರಯ ೭ ಬಹುಮಾನಗಳ ಸಮೇತ ರೂ.೩-೮-೦
ಏಳು ವರ್ಷಗಳ ಖಾತ್ರಿಯಾದ ಗ್ಯಾರಂಟಿ. 9



ಧನವಂತರೇ ಈ:—ನೂತನ ನಮೂನೆ ವಾಚ್ ಈಗತಾನೇ ಬಂದಿರುತ್ತೆ. ಪ್ರಪಂಚದಲ್ಲೆಲ್ಲಾ ಹೆಸರುವಾಸಿಯಾದ ಮತ್ತೂ ಶ್ರೇಷ್ಠವಾದ ಲೀವರ್ ಕೆಲಸದಿಂದಲೂ, ಬಲಿಷ್ಠವಾದ ಮತ್ತೂ ನಾಣ್ಯವಾದ ಯಂತ್ರ ಸಾಮಾನುಗಳಿಂದಲೂ ತಯಾರಾಗಿ ಬಂದಿರುತ್ತೆ. ಈಗತಾನೇ ಹೊಸದಾಗಿ ನಾವು ಪ್ರತ್ಯೇಕವಾಗಿ ತರಿಸಿರುತ್ತೇವೆ. ಗೌರ್ನಮೆಂಟು ಟೈಂಗೆ ಸರಿಯಾದ ಕಾಲವನ್ನು ತೋರಿಸತಕ್ಕದ್ದು. ಖಾತ್ರಿಯಾದದ್ದು ನಂಬಿಕೆಯಾಗಿ ದೀರ್ಘ ಕಾಲ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ಬಹು ರಮಣೀಯವಾದ ವಾಚ್ ಬರೀ ಮಾತುಗಳಿಂದಲೇನು? ಪರಂಪರೆ ಬಾಳಿಕೆ ಬರುವ ವಾಚ್ ಇದೇ. ಇದರ ೭ ಬಹುಮಾನಗಳ ತಪಶೀಲ್ :—(೧) ಸುಂದರವಾದ ವಾಚ್ ಸರಪಣಿ, (೨) ದಿಕ್ಕುಗಳನ್ನು ತೋರಿಸುವ ಉತ್ತರಮುಖ, (೩) ವಾಚ್‌ಗೆ ಧೂಳು ಸೇರದಂತೆ ಭದ್ರಪಡಿಸುವ ತೊಗಲಿನ ಚೀಲ, (೪) ಕುತ್ತಿಗೆಗೆ ವಾಚ್ ಸಂಗಡ ಧರಿಸಿಕೊಳ್ಳುವ ರೇಷ್ಮೆದಾರ, (೫) ವಾಚ್ ಪೆಟ್ಟಿಗೆ (ಬಹು ಸುಂದರವಾದದ್ದು), (೬) ಪರಿಮಳವುಳ್ಳ ಸುವಾಸನೆ ಶೀಷೆ, (೭) ಕರವಸ್ತ್ರ.

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.—
ಎ. ಎಮ್. ಸ್ವಾಮಿ ಅಂಡ್ ಕಂಪೆನಿ,
ನಂ. ೪೪, ನಂಬುಳಯ್ಯರ ಬೀದಿ, ಮದರಾಸು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲಚರಿತೆ.	೦—೫—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

೧೯೧೫ ನೆಯ ಇಸವಿ ಜೂನ್ ತಾ॥ ೬ ರಿಂದ ೧೯೧೫ ನೆಯ ಜೂನ್ ತಾ॥ ೧೨ರವರೆಗೆ ಸಲ್ಲುವ ಶಾಲೀವಾಹನಶಕ ೧೮೩೮ ನೆಯ ರಾಕ್ಷಸನಾಮಸಂವತ್ಸರದ ನಿಜವೈಶಾಖ ಬ॥ ನವಮಿಯಿಂದ ನಿಜವೈಶಾಖ ಬ॥ ಅಮಾವಾಸ್ಯೆವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಷ ತೇದಿ
6	[1]ಭಾನು	ನವ	20- 4	ಉತ್ತಭಾ	52-8	24
7	[2]ಸೋಮ	ದಶ	21-59	ರೇವತಿ	56-0	25
8	[3]ಮಂಗ	ಏಕಾ	24-43	ಅಶ್ವಿನಿ	60-0	26
9	[4]ಬುಧ	ದ್ವಾದ	28-34	ಅಶ್ವಿನಿ	1-26	27
10	[5]ಗುರು	ತ್ರ	33-7	ಭರಣಿ	7-16	28
11	ಶುಕ್ರ	ಚತು	38-11	ಕೃತ್ತಿಕ	13-38	29
12	[6]ಶನಿ	ಅಮಾ	43-18	ರೋಹಿ	20-16	30

(1) ದಶಮೀತಿಥಿಃ, (ವಾಕ್ಯರೀತ್ಯಾ ನವಮೀತಿಥಿಃ). (2) ಶೂನ್ಯತಿಥಿಃ, (ವಾಕ್ಯರೀತ್ಯಾ ದಶಮೀತಿಥಿಃ) (3) ಸರ್ವತ್ರ ಏಕಾದಶೀತಿಥಿಃ, ಸರ್ವತ್ರೈಕಾದಶೀ, ಶ್ರೀಮನ್ಮಹಾರಾಜರವರ ವರ್ಧಂತೀ. (4) ಮೃತ್ಯುಯೋಗಃ, ಕುಜಚಂದ್ರಯೋಸ್ಸಾಮ್ಯಂ. (5) ಮಾಸಶಿವರಾತ್ರಿಃ, ಪ್ರದೋಷಃ, ಶುಕ್ರಚಂದ್ರಯೋಸ್ಸಾಮ್ಯಂ. (6) ಸರ್ವತ್ರಾಮಾವಾಸ್ಯಾ, ಅಮೃತಸಿದ್ಧಿಯೋಗಃ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಕ್ರಾಸ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರ್ ಸ್ಟಾರ್

REGISTERED NO. M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಮಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯುಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೪—೦

ಸಂಪುಟ ೨೮) ಮೈಸೂರ್ ಸ್ಟಾರ್ ಸನ್ ೧೯೧೫ ನೆಯ ಇಸವಿ ಜೂನ್ ತಾರೀಖು ೧೩ ನೆಯ ಭಾನುವಾರ. (ಸಂಚಿಕೆ ೨೩

೫೦೦ ರೂಪಾಯಿಗಳ ಬಹುಮಾನ

ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್‌ಬ್ಯಾಂಕಿನಲ್ಲಿ ಮೇಲ್ಕಂಡ ೫೦೦ ರೂಪಾಯಿಗಳನ್ನು ೧೯೧೫ ನೆ ಇಸವಿ ಮಾರ್ಚಿ ತಾ॥ ೧೫ ರಲ್ಲಿ ಡಿಪಾಜಿಟ್ಟು ಇಟ್ಟಿರುತ್ತೇವೆ. 5

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್‌ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಸಾಲಾಮಿಸ್ರಿಯ ಧಾರಣೆಯು ಜಾಸ್ತಿಯಾಗಿರುವದರಿಂದ ಅನೇಕರು ಉರುಳುಗಡ್ಡೆ, ಕಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹಾದ್ದೋ ಎಂಬುವದು ತಿಳಿದುಬರುತ್ತದೆ.

ಸಾಲಾಮಿಸ್ರಿ ಮುರಬ್ಬಾವು—ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವುದು.
ಸಾಲಾಮಿಸ್ರಿ ಮುರಬ್ಬಾವು—ನಿದ್ರೆಯಲ್ಲಿ ಧಾತುವು ಹೋಗುವುದನ್ನು ನಿಲ್ಲಿಸುವುದ.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಧಾತುಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕ್ಷಣ ಕ್ಷಣಕ್ಕೆ ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ವೃದ್ಧಿಪಡಿಸುವದು.
ಸಾಲಾಮಿಸಿ ಮುರಬ್ಬಾವು—ಶ್ವಾಸಖಾಸ ರೋಗಗಳನ್ನು ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹೊಟ್ಟೆಯಲ್ಲಿರುವ ಜ್ವರದಗಡ್ಡೆ ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೆಟ್ಟುಹೋಗಿರುವ ರಕ್ತವನ್ನು ಶುದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಳೆತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು.
ಸಾಲಾಮಿಸ್ರಿ ಮುರಬ್ಬಾವು—ಉತ್ಸಾಹ, ಧೈರ್ಯ, ಬುದ್ಧಿಕುಶಲತೆ, ಶರೀರಕಾಂತಿಯನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು—ತಾಂಬ್ರ, ಬೆಳ್ಳಿ, ಮತ್ತು ಬಂಗಾರ ಭಸ್ಮಕ್ಕಿಂತಲೂ ಉತ್ತಮವಾದುದು.
ಸಾಲಾಮಿಸ್ರಿ ಮುರಬ್ಬಾವು—ಸ್ತ್ರೀ ಸಂಗಕ್ಕೆ ಮೊದಲೆ ಧಾತು ಸ್ಖಲನವಾಗುವದನ್ನು ನಿಲ್ಲಿಸುವದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪುರಾ ಗುಣಕೊಡುತ್ತದೆ. ೨-೩ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಸಾಲಾಮಿಸ್ರಿ" ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸಿರುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ ಕ್ಕೆ ಕ್ರಯ ೨—೦—೦ ರೂಪಾಯಿ. ಟಪ್ಪಾಲು ಖರ್ಚು ೧ ಡಬ್ಬಿಯಿಂದ ಡಬ್ಬಿಗಳ ವರೆಗೆ ೬ ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ವಿಳಾಸ:—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
೫, ಅವೆನ್ಯೂ ರೋಡ್ ಬೆಂಗಳೂರುಸಿಟಿ,

ಶುದ್ಧ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

24

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತವುದ್ರೇಕವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫವುಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೊಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲಾ ಉತ್ತರಕನಡಾ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರಾಸ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿ ಕೊಡುತ್ತೇವೆ.

ಚೆನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧—೦—೦ ರೂ. ಕೊಡಬೇಕಾಗುವುದು ಕೆಂಪು, ಹಸರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಬಂಪೇತರದ ಬಣ್ಣದಿಂದ ಬಿಳಿ ಗ್ಲೇಜು ಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨—೦—೦; ಅನಂತರ ಪ್ರತಿ ೧೦೦ಕ್ಕೂ ೦—೧೨—೦; ಹಳದೀ ಗ್ಲೇಜ್‌ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨—೨—೦; ಅನಂತರ ಪ್ರತಿ ೧೦೦ ಕ್ಕೂ ೦—೧೪—೦; ಹಳದಿ ರಫ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿನೂರಕ್ಕೂ ೦-೬-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು,

ಮ್ಯಾನೇಜರ್,
ಕ್ರಾಸ್ ಪ್ರೆಸ್, ಮೈಸೂರ್.

S.U.N.&Co
BENARES CITY.
KASHI
VISHWESHWAR

37

ದೊಡ್ಡ ಕಂಪೆನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ. ಎಸ್. ಯು. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶಿ)

ಲೋಕಸೇವೆಯೇ ದೇವರಸೇವೆಯು.

ದೇವರು ಯಾವಾಗಲೂ ಲೋಕಹಿತಕ್ಕಾಗಿ ಕೆಲಸಮಾಡುತ್ತಿರುವನು.

ನಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷುಲೋಕೇಷು ಕಿಂಚನ।
ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ॥
(ಗೀತಾ III. ೨೨)

ಎಂಬಂತೆ ದೇವರು ಪೂರ್ಣನು; ಆತನು ಮಾಡಬೇಕಾದ ಕರ್ತವ್ಯವಾಗಲೀ ಹೊಂದಬೇಕಾದ ಇಷ್ಟಾರ್ಥವಾಗಲೀ ಯಾವುದೂ ಇಲ್ಲವು. ಆತನು ಸರ್ವಜ್ಞನು; ತಿಳಿಯಬೇಕಾದುದು ಏನೂ ಇಲ್ಲವು. ಆತನು ಸರ್ವಶಕ್ತಿವಂತನು; ಆತನ ಕೈಲಾಗದುದು ಏನೂ ಇಲ್ಲವು. ಆದರೂ ಆತನು ಯಾವಾಗಲೂ ಲೋಕಹಿತಕ್ಕಾಗಿ ಕೆಲಸಮಾಡುತ್ತಿರುವನು. ಆತನು ಕೆಲಸಮಾಡದಿದ್ದರೆ ಸೂರ್ಯನು ಉದಯಿಸನು, ಗಾಳಿಯು ಬೀಸದು, ಮಳೆಯು ಹುಯ್ಯದು, ಸಸ್ಯಗಳು ಬೆಳೆಯವು, ನಾವು ಬದುಕಲಾರೆವು, ಮತ್ತೂ ಪ್ರಪಂಚದಲ್ಲಿ ಯಾವುದೊಂದು ಕೆಲಸವೂ ನಡೆಯದು. ಪ್ರಪಂಚವೇ ನಿಲ್ಲದು. ಪ್ರಪಂಚವು ನಿಂತಿರುವುದೂ ಅದರಲ್ಲಿನ ಸಕಲ ಕಾರ್ಯಗಳೂ ನಡೆಯುತ್ತಿರುವುದೂ ಸಹ ಆತನ ಕೆಲಸದಿಂದಲೇ.

೨. ನಾವು ಲೋಕಸೇವೆಯನ್ನು ಮಾಡಬೇಕು.

ಆತನೇ ಹಾಗೆ ಯಾವಾಗಲೂ ಲೋಕಹಿತಕ್ಕಾಗಿ ಕೆಲಸಮಾಡುತ್ತಿರುವಲ್ಲಿ ಆತನ ಮಕ್ಕಳಾದ ನಾವೂ ಸಹ ಆತನನ್ನು ತಿಳಿದು ಪ್ರೀತಿಸಿ, ಆತನಂತೆ ದೊಡ್ಡವರಾಗಿ ಬೆಳೆದು ಪೂರ್ಣರಾಗಿ, ಲೋಕಸೇವೆಯನ್ನು ಮಾಡಬೇಕಾದುದು ಅವಶ್ಯಕವಲ್ಲವೆ? ಅಂತಹ ಪರಮಭಾಗ್ಯವು ಲಭಿಸಬೇಕಾದರೆ ಈಗಿನಿಂದಲೇ ನಮ್ಮ ನಮ್ಮ ಕೈಲಾಗುವಮಟ್ಟಿಗೂ "ಅಳಿಲಭಕ್ತಿ ಮಳಲುಸೇವೆ" ಎಂಬತೆ ಭೂತಸೇವೆಯನ್ನು ಅಭ್ಯಸಿಸುತ್ತಾ ಬರಬೇಕು. ಈ ಅಂಶವು ನಮ್ಮ ಹಿಂದೂಗಳಲ್ಲಿ ಬಹಳಮಟ್ಟಿಗೆ ಮರೆತುಹೋಗಿ ಪ್ರತಿಯೊಂದರಲ್ಲೂ ಸ್ವಪ್ರಯೋಜನಪರತ್ವವು ಹೆಚ್ಚುತ್ತಾ ಬಂದಿದೆ. ಕೊನೆಗೆ ಮೋಕ್ಷ ವಿಚಾರದಲ್ಲಿಯೂ ಕೂಡ ಸ್ವಾರ್ಥಪರಾಯಣರಾಗಿದ್ದೇವೆ. ನಮ್ಮಮಟ್ಟಿಗೆ ನಮಗೆ ಮೋಕ್ಷವಾದರೆ ಸರಿ; ಮತ್ತೊಬ್ಬರ ಪಾಡು ನಮಗೇಕೆ ಎಂಬ ಭಾವವು ಬಹಳವಾಗಿದೆ. ಇದರಿಂದಲೇ ಮಹೋನ್ನತಪದವಿಯಲ್ಲಿದ್ದ ಹಿಂದೂದೇಶವು ಈಗ ಹೀಗೆ ಹೀನಸ್ಥಿತಿಗೆ ಬರಲು ಅವಕಾಶವಾಯಿತು. ಈಗಲಾದರೂ ತಿಳಿದು ಎಚ್ಚತ್ತುಕೊಳ್ಳುವುದು ಉತ್ತಮವಲ್ಲವೆ? ನಮ್ಮ ಪೂರ್ವಿಕರಾದ ಮಹರ್ಷಿಗಳೂ ಸಹ ನಮ್ಮಂತೆಯೇ ಸ್ವಾರ್ಥಪರರಾಗಿ ತಮ್ಮ ಸುಖಮೋಕ್ಷಗಳಲ್ಲಿಯೇ ಗಮನವುಳ್ಳವರಾಗಿದ್ದ ಪಕ್ಷದಲ್ಲಿ ಇಂತಹ ಅಮೋಘವಾದ ವೇದಶಾಸ್ತ್ರ ಪುರಾಣ ಇತಿಹಾಸಗಳೊಂದೂ ನಮಗೆ ಬರುತ್ತಿರಲಿಲ್ಲ; ಹಿಂದೂಮತವು ಇಷ್ಟು ಘನತರವಾದುದೆಂದು ಹೇಳುವುದಕ್ಕೂ ಅವಕಾಶವಿರುತ್ತಿರಲಿಲ್ಲ. ಅವರು ಭಕ್ತಿ ಜ್ಞಾನ ವೈರಾಗ್ಯಪೂರ್ಣರಾಗಿ ಮುಕ್ತರಾದಾಗ್ಯೂ ತಮ್ಮ ಮುಕ್ತಿಸುಖವನ್ನು ಕೂಡ ಬಿಟ್ಟು ಅಜ್ಞಾನವೆಂಬ ಕಗ್ಗತ್ತಲೆಯಲ್ಲಿ ದಾರಿಗಾಣದೆ ದುಃಖದಿಂದ ಪೇಚಾಡುತ್ತಿರುವ ಮನುಷ್ಯವರ್ಗದ ಮೇಲೆ ಕೃಪೆಯಿಟ್ಟು ಈ ಲೋಕಕ್ಕೆ ಬಂದು ಅಮೋಘವಾದ ವೇದಶಾಸ್ತ್ರಾದಿಗಳ ದ್ವಾರಾ ಜ್ಞಾನ ದಾನವನ್ನು ಮಾಡಿರುವರು; ಈಗಲೂ ಮಾಡುತ್ತಿರುವರು. ಲೋಕಹಿತಕ್ಕೆ ಅಂದರೆ ಪರೋಪಕಾರಕ್ಕೆ ಸಹಾಯಕಾರಿಗಳಲ್ಲದ ಜ್ಞಾನ ಭಕ್ತಿ ವೈರಾಗ್ಯಗಳು ಅಹಂಕಾರ ಸ್ವಾರ್ಥತಾನಿರ್ದಯತ್ವಗಳನ್ನು ಹೆಚ್ಚುಮಾಡುವುವು. ಆದುದರಿಂದ ಭೂತಸೇವೆಗೆ ಉಪಯುಕ್ತವಾದ ಭಕ್ತಿ ಜ್ಞಾನ ವೈರಾಗ್ಯಗಳೇ ಸಾರ್ಥಕವಾದುವುಗಳು. ಮನುಷ್ಯನಲ್ಲಿ ಈ ಗುಣಗಳು ಹೆಚ್ಚಿದ ಹಾಗೆಲ್ಲಾ ಪರಾರ್ಥವು ಹೆಚ್ಚಬೇಕು.

೩. ಭೂತಸೇವೆಯೇ ದೇವರಪೂಜೆಯು.

ಭಗವತ್ಪೂಜೆಯು ಯಾವುದೆಂದು ಕೇಳಿದುದಕ್ಕೆ ಶ್ರೀಕೃಷ್ಣನು ಹೇಳಿದ ಉತ್ತರವನ್ನು ಯಾವಾಗಲೂ ನೆನಪಿನಲ್ಲಿಡುವುದು ಒಳ್ಳೆಯದು ಅದಾವುದೆಂದರೆ—

ಸೇವನಂ ಸರ್ವಭೂತಾನಾಂ ಪೂಜನಂ ಚ ಮಹಾತ್ಮನಾಂ॥
ಕಾರ್ಯಂ ಸ್ವಾಭಾವಿಕಂ ಮತ್ವಾ ಕರ್ಮಸಂಧಾರಣಂ ಕುರು॥
ಇದಮೇವಾಸ್ತಿ ಮತ್ಪೂಜಾ ಇದಮೇವ ಪರಂ ತಪಃ॥

ಅಂದರೆ ಸಮಸ್ತ ಭೂತಸೇವೆಯೂ, ಮಹಾತ್ಮರ ಪೂಜೆಯೂ ನಿನ್ನ ಸ್ವಭಾವಕರ್ಮವೆಂದರಿತು ಕೆಲಸಮಾಡು; ಇದೇ ನನ್ನ ಪೂಜೆಯು, ಇದೇ ಶ್ರೇಷ್ಠವಾದ ತಪಸ್ಸು ಎಂದು ಹೇಳಿರುವನು.

ಭಗವಂತನ ಪಾದಸೇವೆಯನ್ನು ಮಾಡಬೇಕೆಂದು ಹೇಳುವುದು ಕೇವಲ ರೂಢಿಯಾಗಿದೆ. ಭಗವಂತನ ಪಾದವಾವುದು? "ಪಾದೋಸ್ಯ ವಿಶ್ವಾಭೂತಾನಿ" ಅಂದರೆ ಈ ಸಮಸ್ತ ಭೂತಕೋಟಿಯೇ ಆತನ ಪಾದವೆಂದು "ಪುರುಷಸೂಕ್ತ"ದಲ್ಲಿ ಹೇಳಿರುವುದು. ಅಸ್ಯಪದ್ಭ್ಯಾಂ ಪೃಥಿವೀ" ಈ ಭೂಮಿಯೇ ಆತನ ಪಾದವೆಂದು ಉಪನಿಷತ್ತಿನಲ್ಲಿ ಹೇಳಿರುವುದು. ಆದುದರಿಂದ ಸರ್ವಭೂತಸೇವೆಯೇ ದೇವರಪೂಜೆಯು.

೪. ಲೋಕಸೇವೆಯೇ ದೇವರಸೇವೆಯು.

ಭಗವಂತನಿಗೆ ವಿಶ್ವಕುಟುಂಬಿ ಎಂದು ಹೆಸರು. ಈ ಪ್ರಪಂಚವೇ ಆತನ ಕುಟುಂಬವು "ತ್ರಿಲೋಕೀಗೃಹಸ್ಥಃ" ಎಂದು ಶ್ರೀಮದ್ರಾಮಾನುಜಾಚಾರ್ಯರು ಹೇಳಿರುವಂತೆ ಆತನು ಗೃಹಸ್ಥನು. ಈ ಮೂರು ಲೋಕಗಳೂ ಆತನ ಮನೆಯು; ಅವುಗಳಲ್ಲಿರುವ ಸಮಸ್ತ ಪ್ರಾಣಿಗಳೂ ಆತನ ಕುಟುಂಬವು. ಈ ಕುಟುಂಬರಕ್ಷಣೆಗಾಗಿ ಆತನು ಸದಾ ಕೆಲಸಮಾಡುತ್ತಿರುವನು. ಆತನ ಮಕ್ಕಳಾದ ನಮಗೆ ಆತನು ತನ್ನ ಈ ದೊಡ್ಡ ಕುಟುಂಬದಲ್ಲಿ ಒಂದೊಂದು ಸಣ್ಣ ಭಾಗವನ್ನು ಕೊಟ್ಟು, ಆತನ ಪ್ರತಿನಿಧಿಗಳಾಗಿ ನಾವು ಅದನ್ನು ನೋಡಿಕೊಳ್ಳುವಂತೆ ಏರ್ಪಡಿಸಿರುವನು. ನಾವು ಕ್ರಮಕ್ರಮವಾಗಿ ಬೆಳೆದು ಆತನಂತೆ ಪೂರ್ಣರಾಗಿ ಲೋಕಸೇವೆ ಮಾಡಲು ಕಲಿಯುವುದಕ್ಕಾಗಿ ತಾನು ಮೇಲ್ಪಂಕ್ತಿಯಾಗಿ ಪ್ರತಿಯೊಂದು ಕೆಲಸಮಾಡಿ ತೋರಿಸುತ್ತಿರುವನು. ಆದುದರಿಂದ ನಾವು ಮಾಡುವ ಒಂದೊಂದು ಕಾರ್ಯವನ್ನೂ ಆತನೇ ಬಂದು ಮಾಡಿದರೆ ಎಷ್ಟು ಚೆನ್ನಾಗಿ ಮಾಡುವನೋ ಹಾಗೆ ಅಷ್ಟು ಚೆನ್ನಾಗಿ ಮಾಡಲು ಯತ್ನಿಸಬೇಕು. ನಮ್ಮ ಶಕ್ತಿ ಇರುವಷ್ಟು ಪೂರ್ತಿಯಾಗಿ ಪ್ರಯತ್ನಪಟ್ಟು ಮಾಡಿದಲ್ಲಿ ಭಗವಂತನು ಸಂತುಷ್ಟನಾಗಿ ಮುಂದೆ ಮಾಡಬೇಕಾದುದನ್ನು ಒಳಗಿನಿಂದ ತೋರಿಸುವನು. "ಪಿತನ ನಿಜಗುಣದೆ ತೋಷಿಪ ಸುತನೆಸುತಂ" ಅಂದರೆ ತಂದೆಯ ನಿಜವಾದ ಗುಣವನ್ನನುಸರಿಸಿ ಆತನಂತೆ ನಡೆಯುವ ಮಗನೇ ನಿಜವಾದ ಮಗನು ಎಂದು ಹೇಳುವರು. ಅದು ಸತ್ಯವು, ಏಕೆಂದರೆ ನಾವು ದೇಹಗಳಲ್ಲವು, ಒಳಗಿರುವ ಶಾಶ್ವತರಾದ ಭಗವದಂಶರಾದ ಜೀವರು. ಆತನು ಸಕಲ ಕಲ್ಯಾಣಗುಣಪರಿಪೂರ್ಣನು. ಆದುದರಿಂದ ಆ ಗುಣಗಳೆಲ್ಲವೂ ನಮ್ಮಲ್ಲಿಯೂ ಒಳಗಡೆ ಅಡಗಿರುವುವು. ಆದುದರಿಂದ ನಾವು ಪ್ರಯತ್ನಪಟ್ಟು ಕೈಲಾದಮಟ್ಟಿಗೂ ಲೋಕಸೇವೆಯನ್ನು ಮಾಡುತ್ತ ಬರಬೇಕು. ಇದೇ ನಿಜವಾದ ದೇವರ ಸೇವೆಯು; ದೇವರ ಪೂಜೆಯು.

ಕೆ. ನರಹರಿಶಾಸ್ತ್ರಿ.

ಮೆದೆಗೆ ಬೆಂಕಿಹೊತ್ತಿರುವಾಗ ಅವಲನ್ನು ಆರಿಸಿ ತಿನ್ನುವವರೂ ಇರುವರಲ್ಲವೆ?

ಫ್ರಾನ್ಸ್‌ದೇಶವು ಯುದ್ಧಾಗ್ನಿಯಲ್ಲಿ ಬೆಯ್ಯುತ್ತಿರುವಾಗ, ಯುದ್ಧದಿಂದ ಆರ್ತಿಗೊಂಡಿರುವ ಪ್ರಜೆಗಳಿಗೆ ಸಹಾಯವನ್ನು ಮಾಡುವ ಸಂಘಗಳೆಂಬ ಹೆಸರಿನಿಂದ ಹಲವುಮಂದಿ ಮೋಸಗಾರರು ಪ್ಯಾರಿಸ್‌ಪಟ್ಟಣದಲ್ಲಿ ಕೆಲವು ಮೋಸದ ಸಂಘಗಳನ್ನೇರ್ಪಡಿಸಿ, ಪ್ರಜೆಗಳ ಗೌರವಕ್ಕೆ ಪಾತ್ರರಾದವರಲ್ಲಿ ಯಾರಾದರೊಬ್ಬರನ್ನು ಆಶ್ರಯಿಸಿ, ಆ ನಾಯಕರ ಹೆಸರಿನಿಂದ ಪ್ರಕಟನೆಗೊಳಿಸಿ, ಅರಿಯದ ಪ್ರಜೆಗಳಿಂದ ಹಣವನ್ನು ಎತ್ತಿ ತಮ್ಮ ಪ್ರಯೋಜನಕ್ಕಾಗಿ ಉಪಯೋಗಿಸಿಕೊಳ್ಳುತ್ತಿರುವರೆಂಬ ಸಂಗತಿಯು ಆ ಪಟ್ಟಣದ ಪೊಲೀಸರ ಕಿವಿಗೆ ಬೀಳಲಾಗಿ, ಅವರು ಪರಿಶೋಧಿಸಿದುದರಲ್ಲಿ ಇಂಥ ಕಾರ್ಯಕ್ಕೆ ಪ್ರಯತ್ನಪಟ್ಟಿರುವ ಸಂಘಗಳು ೧೪೩ ಇರುವುವೆಂದೂ, ಅವುಗಳಲ್ಲಿ ೭೩ ಸಂಘಗಳು ಮೋಸದುವುಗಳೆಂದೂ ಗೊತ್ತಾಯಿತು. ಇವುಗಳಲ್ಲಿ ೩೫ ಸಂಘಗಳನ್ನೇರ್ಪಡಿಸಿರತಕ್ಕವರು ಹಲವುಸಾರಿ ಅನೇಕವರ್ಷ ಕಾರಾಗೃಹವಾಸವನ್ನನುಭವಿಸಿ ಬಂದಿರುವ ಪುರುಷರೂ, ವ್ಯಭಿಚಾರವೃತ್ತಿಯಲ್ಲಿರುವ ಸ್ತ್ರೀಯರೂ ಆಗಿದ್ದಾರೆಂದು ಗೊತ್ತಾಯಿತು. ಭುಕ್ತಿಗೆ ಮಾರ್ಗವಿಲ್ಲದವರನೇಕರು ಯುದ್ಧಾರಂಭವಾದ ಬಳಿಕ ಇಂಥ ಸಂಘಗಳನ್ನೇರ್ಪಡಿಸಿಬಿಟ್ಟು, ಅವುಗಳ ಮರೆಯಲ್ಲಿ ತಾವು ರಾಜೋಪಭೋಗವನ್ನು ಅನುಭವಿಸುತ್ತಿರುವರಂತೆ. ನಿರ್ಗತಿಕರಾಗಿದ್ದ ಇಬ್ಬರು ಹೆಂಗುಸರು ಈಗ ದೊಡ್ಡ ಮೋಟಾರುಬಂಡಿಗಳನ್ನೂ ದೊಡ್ಡ ಉಪ್ಪರಿಗೆಯ ಮನೆಗಳನ್ನೂ ದೊಡ್ಡ ಉಪವನವನ್ನೂ ಇಟ್ಟುಕೊಂಡು, ದೊಡ್ಡದೊಡ್ಡ ಔತಣಗಳನ್ನು ಮಾಡಿಸುತ್ತ ರಾಜವೈಭವವನ್ನು ಅನುಭವಿಸುತ್ತಿದ್ದಾರೆ. ಈ ಹೆಂಗುಸರು ಯುದ್ಧಾರ್ತರ ಸಹಾಯಕ್ಕೆಂಬ ಧಾರ್ಮಿಕಸಂಘವನ್ನು ಕಳೆದವರ್ಷದ ಸೆಪ್ಟಂಬರ್ ತಿಂಗಳಲ್ಲಿ ಏರ್ಪಡಿಸಿದರು. ಆಗಿನಿಂದಲೂ ಇವರ ಸಂಘಕ್ಕೆ ಧರ್ಮಾರ್ಥವಾಗೆಂದು ೪೦ ಪೌನು (೬೦೦ ರೂಪಾಯಿ) ಗಳಿಗೆ ಕಡಿಮೆಯಾಗಿ ಬಂದ ದಿವಸವು ಒಂದಾದರೂ ಇಲ್ಲ. ಇದೇತೆರದ ಸಂಘವನ್ನೇರ್ಪಡಿಸಿಕೊಂಡಿರುವ ಮತ್ತೊಬ್ಬನು ವರ್ಷಕ್ಕೆ ೨೫ ಪೌನುಗಳ ಬಾಡಿಗೆಯ ಒಂದು ಸಣ್ಣಮನೆಯಲ್ಲಿ ವಾಸಮಾಡುತ್ತಿದ್ದವನು ಈಗ ವರ್ಷಕ್ಕೆ ೩೦೦ ಪೌನು ಬಾಡಿಗೆಯುಳ್ಳ ದೊಡ್ಡ ಭವನದಲ್ಲಿ ವಾಸಮಾಡುತ್ತಿದ್ದಾನೆ. ಇಂಥ ಮೋಸಗಾರರನೇಕರು ಈಗ ಸರ್ವಸಾಮಾನ್ಯವಾಗಿ ತಿಂಗಳಿಗೆ ೨೪೦ ಪೌನು (೩೬೦೦ ರೂ.) ಗಳಷ್ಟನ್ನು ಸಂಪಾದಿಸುತ್ತಿರುವರಂತೆ. ಹೀಗೆ ಮೋಸದಿಂದ ಧನಾರ್ಜನೆಮಾಡುತ್ತಿರುವವರಲ್ಲಿ ಬಹುಜನರು ಆಸ್ಟ್ರಿಯಾ ಜರ್ಮನಿದೇಶದವರೇ ಆಗಿರುವರಂತೆ. ಈ ಕಪಟಿಗಳು ಧರ್ಮಾತ್ಮರೂ, ನಿರ್ಮಲಚಿತ್ತರೂ ಆದ ಫ್ರಾನ್ಸ್‌ದೇಶೀಯರನ್ನು ಮೋಸಪಡಿಸಿ, ದುಡ್ಡನ್ನು ಸೆಳೆದು, ತಾವು ನಾನಾ ಭೋಗಗಳನ್ನನುಭವಿಸುತ್ತಿದ್ದಾರೆ. ಈಗ ದ್ರೋಹಿಗಳೆಲ್ಲರೂ ಸಿಕ್ಕಿಬಿದ್ದಿರುವುದರಿಂದ ಎಲ್ಲರನ್ನೂ ಕಾರಾಗೃಹದಲ್ಲಿಟ್ಟಿದ್ದಾರೆ. ಇವರಲ್ಲಿನ ಒಬ್ಬಳು ಆಸ್ಟ್ರಿಯಾದೇಶೀಯಳು, ತಾನು ಲಾರ್ಡ್‌ಮನೆತನದವಳೆಂದೂ, ಸೇನೆಯಲ್ಲಿ ಏಟುತಿಂದವರ ಮತ್ತೂ ಆರ್ತರಾದವರ ಸೇವೆ ಮಾಡುವುದಕ್ಕಾಗಿ ತಾನು ಬಂದಿರುವೆನೆಂದೂ ಹೇಳಿಕೊಂಡು, ಅದಕ್ಕೆ ತಕ್ಕ ವೇಷದ ತನ್ನ ಭಾವಚಿತ್ರವನ್ನು ತೆಗೆಯಿಸಿಕೊಂಡು ದೊಡ್ಡದೊಡ್ಡ ಶ್ರೀಮಂತರಿಗೆ ತೋರಿಸುತ್ತ, ಪ್ರಬಲವಾದ ಒಂದೆರಡು ವೃತ್ತಪತ್ರಿಕೆಗಳ ಕಂಪಾಜಟರನ್ನು ವಶಪಡಿಸಿಕೊಂಡು, ಪತ್ರಿಕೆಗಳಲ್ಲಿ ತೆರವಾಗಿ ನಿಂತ ಯಾವುದಾದರೊಂದು ಮೂಲೆಯಲ್ಲಿ ತನ್ನ ಸಂಘದ ಹೆಸರಿನ ಮತ್ತೂ ತಾನು ಯುದ್ಧಾರ್ತರಿಗೆ ಸಹಾಯಮಾಡುವ ವಿಷಯದ ವಾರ್ತೆಯನ್ನು ಪ್ರಕಟಗೊಳಿಸುವಂತೆ ಮಾಡಿ ಅದನ್ನೆಲ್ಲಾ ತೋರಿಸಿ, ಹಣವನ್ನು ಎತ್ತುತ್ತಲಿದ್ದಳು. ಈ ಸಂಘಗಳವರು ತಮಗೆ ಅನೇಕ ಪ್ರತಿನಿಧಿಗಳನ್ನು ಏರ್ಪಡಿಸಿಕೊಂಡು ಅವರಿಗೆ ಉದಾರವಾದ ಕಮಿಷನ್ನುಗಳನ್ನು ಕೊಡುತ್ತಿದ್ದರು. ಆ ಪ್ರತಿನಿಧಿಗಳು ಮನೆಮನೆಗೂ ಸುತ್ತಿ ಹಣವನ್ನು ಎತ್ತುತ್ತಿದ್ದರು. ಅವರುಗಳಲ್ಲಿ ಹಲವರಿಗೆ ದಿನ ೧ಕ್ಕೆ ೬೦ ರೂ, ಗಳವರೆಗೆ ಕಮಿಷನ್ ಕೊಡುತ್ತಿದ್ದರಂತೆ. ಈ ವಿಷಯವೆಲ್ಲಾ ಅವರುಗಳ ವಾಙ್ಮೂಲದಿಂದಲೇ ಹೊರಪಟ್ಟಿತು. ದೇಶರಕ್ಷಣೆಗಾಗಿ ಫ್ರಾನ್ಸ್ ದೇಶೀಯರು ಸರ್ವಸ್ವವನ್ನೂ ಪರಿತ್ಯಾಗ ಮಾಡುತ್ತಿರುವಾಗ ಈ ಮೋಸಗಾರರು ಸ್ವಾರ್ಥಕ್ಕಾಗಿ ಮಾಡುತ್ತಿರುವ ಕಪಟವು ಮೆದೆಹತ್ತಿದಾಗ ಅವಲನ್ನು ಆರಿಸುವುದೆಂಬ ಮಾತಿಗೆ ನಿದರ್ಶನವಾಗಿಲ್ಲವೆ?

ಸಿಲೋನಿನಲ್ಲಿ ದೊಡ್ಡ ಗೊಂದಲ.

ಸಿಲೋನ್ ಎಂದು ಕರೆಯಲ್ಪಡುತ್ತಿರುವ ಸಿಹ್ಮಳದ್ವೀಪದಲ್ಲಿರುವ ಪ್ರಜೆಗಳೊಳಗೆ ಸಿಂಗಾಳಿಗಳೆಂಬ ಬೌದ್ಧಜನರಿಗೂ ಮಹಮ್ಮದೀಯರಿಗೂ ಬಹುಕಾಲದಿಂದ ಇರುವ ವೈಮನಸ್ಯವು ವಿಜೃಂಭಿಸಿ ಮಹಾನರ್ಥವನ್ನುಂಟುಮಾಡಿತೆಂಬ ಸುದ್ದಿಗಳು ಕಳೆದವಾರದಲ್ಲಿ ಬಂದಿರುವುವು. ಸಿಂಗಾಳಿಗಳಿಗೂ ಮಹಮ್ಮದೀಯರಿಗೂ ಮತವಿಷಯಕವಾದ ಮತ್ತೂ ವ್ಯಾಪಾರವಿಷಯಕವಾದ ಮನಸ್ತಾಪಗಳಿದ್ದುದಲ್ಲದೆ ಹಲವು ತುಂಟರು ಯಾವುದಾದರೊಂದು ವ್ಯಾಜದಿಂದ ಮಹಮ್ಮದೀಯರ ಅಂಗಡಿಗಳನ್ನು ಸೂರೆಮಾಡಬೇಕೆಂದು ಕಾದಿದ್ದರಂತೆ. ಕಳೆದ ಮೇ ತಾ॥ ೩೧ ರ ದಿವಸ ಬುದ್ಧನ ವರ್ಧಂತಿಯ ಸಂಬಂಧವಾದ ಉತ್ಸವವನ್ನು ಒಂದು ಮಸೀದಿಯ ಮುಂಗಡೆಯಲ್ಲಿ ಸಿಂಗಾಳಿಗಳು ಸಾಗಿಸಿಕೊಂಡು ಹೋಗುವಾಗ ಅವರಿವರಿಗೆ ಕಲಹಕ್ಕಾರಂಭವಾಯಿತು. ಕ್ಯಾಂಡಿಯೆಂಬ ಊರಿನಲ್ಲಿ ಅರಂಭಗೊಂಡ ಈ ಕಲಹವು ಕೂಡಲೇ ಗ್ರಾಮಗ್ರಾಮಗಳಿಗೆಲ್ಲಾ ಹಬ್ಬಿತು. ಆ ರಾತ್ರಿ ೭ ಗಂಟೆಯಲ್ಲಿ ಕೊಲಂಬೋವಿನಲ್ಲೂ ಕೂಡ ಪ್ರಜೆಗಳು ದಿಗಿಲುಬಿದ್ದು ಅಂಗಡಿ ಮನೆಬಾಗಿಲುಗಳನ್ನು ಮುಚ್ಚಿಬಿಟ್ಟರು. ಗೊಂದಲಗಾರರಾದ ಸಿಂಗಾಳಿಗಳು ಅಂಗಡಿಗಳಿಗೂ ಮುಂಗಟ್ಟುಗಳಿಗೂ ನುಗ್ಗುವುದಕ್ಕೆ ಆರಂಭಿಸಿದರು, ಮಂಗಳವಾರ ಬೆಳಗ್ಗೆ ಊರಿನಬೀದಿಬೀದಿಗಳಲ್ಲೇ ಬಡಿದಾಟಕ್ಕಾರಂಭವಾಯಿತು. ಇಂಥ ಗದ್ದಲವಾಗುವುದೆಂಬ ಸಂಗತಿಯು ಪೋಲೀಸರಿಗೆ ಗೊತ್ತಿರಲಿಲ್ಲವಾದುದರಿಂದ ಅವರು ಸಜ್ಜುಗೊಂಡು ಬರಲು ಸಾವಕಾಶವಾದುದರಿಂದ ಗೊಂದಲಗಾರರು ಅಂಗಡಿಗಳನ್ನು ದೋಚಿಹಾಕಿದರು. ಕೂಲಿಗಾರರು ಯಾವಕೆಲಸಕ್ಕೂ ಹೋಗದೆ ನಿಂತುಬಿಟ್ಟರು. ಗುಂಪಿನ ಜನರ ಸಂಖ್ಯೆಯು ಮಿತಿಮೀರಿದ್ದುದರಿಂದ ಪೋಲೀಸರು ಏನನ್ನೂ ಮಾಡಲಾರದವರಾದರು. ಆ ದಿನ ಮಧ್ಯಾಹ್ನ ೧೨ ಗಂಟೆ ಹೊತ್ತಿಗೆ ಕೋಟೆಯಲ್ಲಿನ ಅಂಗಡಿಗಳೆಲ್ಲಾ ಮುಚ್ಚಿಹೋದುವು. ಆಗ ಪಂಜಾಬಿ ಪಟಾಲಮ್ಮಿನ ೪೦ ಮಂದಿ ಸೈನಿಕರನ್ನು ಗದ್ದಲವನ್ನಡಗಿಸುವುದಕ್ಕಾಗಿ ಅಧಿಕಾರಿಗಳು ಕಳುಹಿಸಿಕೊಟ್ಟರು. ಗುಂಪಿನವರು ಇವರಮೇಲೆಲ್ಲಾ ಕಲ್ಲುಗಳನ್ನು ಬೀರಿದರು. ಕೊಲಂಬೋ ಪೊಲೀಸ್‌ಸೈನ್ಯದವರು ಸಾಯುಧರಾಗಿ ಮೋಟಾರುಬಂಡಿಗಳಮೇಲೆ ಬಂದರು. ಸೊತ್ತುಗಳನ್ನು ದೋಚಿಕೊಂಡು ಓಡಿಹೋಗುತ್ತಿದ್ದ ಕೆಲವರನ್ನು ಹಿಡಿದುಹಾಕಿದರು. ಸರ್ಕಾರದ ಯಂತ್ರಾಲಯವೊಂದಕ್ಕೆ ಗೊಂದಲಕಾರರು ಬೆಂಕಿಯನ್ನಿಕ್ಕಿದರು. ಅದನ್ನು ಜಲಯಂತ್ರದಿಂದ ಬೇಗನೆ ಆರಿಸುವುದಕ್ಕೆ ಅಧಿಕಾರಿಗಳು ಏರ್ಪಡಿಸಿದುದರಿಂದ ವಿಶೇಷ ನಷ್ಟಕ್ಕೆ ಅವಕಾಶವಾಗಲಿಲ್ಲ. ಕೊಲಂಬೋವಿನಲ್ಲಿ ಕ್ರಿಸ್ಟಲ್‌ಪಾಲೆಸ್ ಎಂಬ ಒಂದು ವ್ಯಾಪಾರಶಾಲೆಯು ೧೨ ಲಕ್ಷ ರೂ. ಗಳ ಸರಕುಳ್ಳುದಾಗಿದ್ದಿತು. ಇದು ಮಹಮ್ಮದೀಯರದು. ಇಲ್ಲಿನ ಸಾಮಾನನ್ನೆಲ್ಲಾ ದೊಂಬಿಗಾರರು ಸೂರೆಮಾಡಿಬಿಟ್ಟರು. ಗೊಂದಲಗಾರರ ಜತೆಗೆ ಲೋಹಮಾರ್ಗ ಮೊದಲಾದಕಡೆ ಕೆಲಸಮಾಡುತ್ತಿದ್ದ ಕೂಲಿಗಾರರೂ ಸೇರಿಬಿಟ್ಟರು. ಇವರು ನಡೆಯಿಸಿದ ಸೂರೆಗೆ ಪಾರವಿಲ್ಲದಂತಾಯಿತು. ಜನರು ಊರುಬಿಟ್ಟು ಹೋದರು. ಮಂಗಳವಾರ ಮಧ್ಯಾಹ್ನದ ಹೊತ್ತಿಗೆ ೪೦ ಬೀದಿಗಳಲ್ಲಿ ಸೂರೆಮಾಡಿಬಿಟ್ಟರಂತೆ. ಅಷ್ಟರಲ್ಲಿ ದಂಡಾಧಿಕಾರಿಯೂ ಬಂದರು. ಪೊಲೀಸರೂ ಅವರೂ ಸೇರಿ ಎಷ್ಟು ಸಾಹಸಮಾಡಿದರೂ ಗದ್ದಲವನ್ನಡಗಿಸಲಾಗಲಿಲ್ಲ. ಕೆಲಕೆಲರನ್ನು ಹಿಡಿದು ಬಂಧನದಲ್ಲಿಟ್ಟರು. ಸಿಂಗಾಳಿಗಳಿಗೂ ತುರುಕರಿಗೂ ಹಲವುಕಡೆ ಬಡಿದಾಟವಾಯಿತು. ಏಟು ತಿಂದು ಗಾಯಗೊಂಡವರು ಲೆಕ್ಕವಿಲ್ಲದಷ್ಟಾದರು. ಹಲವರು ವೈದ್ಯಶಾಲೆಗೆ ಸಾಗಿಸಲ್ಪಟ್ಟರು. ಸೆರೆಯಲ್ಲಿದ್ದವರಲ್ಲಿ ಕೆಲರು ತಪ್ಪಿಸಿಕೊಂಡೋಡಿದರು; ಕೆಲರು ಏಟು ತಿಂದು ಅಲ್ಲಲ್ಲೇ ಸತ್ತರು. ಕೊಲಂಬೊ ಒಂದರಲ್ಲೇ ಏಟು ತಿಂದು ಸತ್ತವರು ೪೩ ಮಂದಿಗಳೆಂದೂ, ಗಾಯಗೊಂಡು ನರಳುತ್ತಿರುವವರು ೨೦೦ ಮಂದಿಗಳೆಂದೂ ಪ್ರಕಟವಾಗಿದೆ. ಇನ್ನೂ ಬೇರೆಬೇರೆ ಊರುಗಳಲ್ಲಿ ನಡೆದಿರುವ ಬಡಿದಾಟದಲ್ಲಿ ಹತರಾದವರೆಷ್ಟುಮಂದಿಗಳೋ ಇನ್ನೂ ಗೊತ್ತಾಗಿಲ್ಲ. ಈ ಗದ್ದಲದ ಕಾರಣದಿಂದ ಕೊಲಂಬೋ ರೇವಿಯಲ್ಲಿ ಹಡಗಿನ ಸಾಮಾನುಗಳನ್ನು ಇಳುಹಿಸುವ ಏರಿಸುವ ಕೆಲಸಗಳೊಂದೂ ಸಾಗಲಿಲ್ಲ. ಯಾವ ಊರಿನಲ್ಲೂ ಅಂಗಡಿ ಬಾಗಿಲುಗಳು ತೆರೆದಿಲ್ಲ. ಆಹಾರ್ಯಪದಾರ್ಥಗಳೇ ದೊರೆಯದೆ ಪ್ರಜೆಗಳು ಬಹಳ ಕಷ್ಟಪಡುತ್ತಿದ್ದಾರೆ. ಅಲ್ಲಲ್ಲಾ ಯುದ್ಧಕಾಲಿಕ ಶಾಸನವನ್ನು ಸರ್ಕಾರದವರು ಸಾರಿದ್ದಾರೆ. ಜೂನ್ ತಾ॥ ೪-೫ ರ ವರೆಗೂ ಗದ್ದಲವು ಶಾಂತವಾಗಲಿಲ್ಲ. ಸಿಂಗಾಳಿಗಳು ವಾಸಮಾಡುವ ಮನೆಗಳಿಗೆ ಸೈನಿಕರು ನುಗ್ಗಿ ಒಳಗಿದ್ದ ದೊಣ್ಣೆ ಆಯುಧ ಮೊದಲಾದುವುಗಳನ್ನು ವಶಪಡಿಸಿಕೊಂಡು ಬಂದರು. ತಾ॥ ೫ರಲ್ಲಿ ಕೊಲಂಬೋವಿನಲ್ಲಿ ಗದ್ದಲವು ಶಾಂತಸ್ಥಿತಿಗೆ ಬಂದಿತು. ದೊಂಬಿಗಾರರನ್ನು ಶಾಂತಿಪಡಿಸುವ ಕೆಲಸದಲ್ಲಿ ತೊಡಗಿದ್ದ ಸರ್ಕಾರದ ಕಡೆಯ ಜನರಲ್ಲಿ ಒಬ್ಬ ದೇಶೀಯ ಪೊಲೀಸಾಳು ಕತ್ತಿಯೇಟಿನಿಂದಲೂ ದೊಣ್ಣೆಯ ಬಡಿತದಿಂದಲೂ ಹೊಡೆಯಲ್ಪಟ್ಟು ಸತ್ತಿರುವನು. ಒಬ್ಬ ಆಂಗ್ಲ ಸೋಲ್ಜರು ಗಾಯಗೊಂಡು ವೈದ್ಯಶಾಲೆಯ ಚಿಕಿತ್ಸೆಯಲ್ಲಿದ್ದು ಸತ್ತನು. ಈಚೆಗೆ ಗದ್ದಲವು ಎಲ್ಲಕಡೆಯೂ ಶಾಂತಿಗೊಂಡಿದೆ. ರೇವೆಯಲ್ಲಿನ ಕೆಲಸಗಳು ಸಾಗುವುದಕ್ಕುಪಕ್ರಮವಾಗಿವೆಯೆಂದು ವರ್ತಮಾನ ಬಂದಿದೆ. ಅಪರಾಧಿಗಳಾಗಿ ಹಿಡಿಯಲ್ಪಟ್ಟವರ ವಿಚಾರಣೆ ನಡೆಯುತ್ತಲೂ ಅನೇಕರಿಗೆ ಶಿಕ್ಷೆಯಾಗಿಯೂ ಇದೆ.

ತುರ್ಕಿಯವರ ಕ್ರೂರತನ.

ಪಾರ್ಶಿದೇಶದ ಎಲ್ಲೆಯ ನೈಋತಿಭಾಗದಲ್ಲಿ ಉರ್ಮಿ ಎಂಬ ಪಟ್ಟಣವಿರುವುದು. ಅಲ್ಲಿರುವ ಒಬ್ಬ ಅಮೆರಿಕ ಪಾದ್ರಿಯು ಕಳೆದ ಏಪ್ರಿಲ್ ತಾ॥ ೮ ರಲ್ಲಿ ಒಂದು ಲೇಖನವನ್ನು ಬರೆದು ಅದರಲ್ಲಿ ಆ ಪ್ರಾಂತದ ತುರುಕರ ಕ್ರೂರಕಾರ್ಯಗಳನ್ನು ಈ ಕೆಳಗೆ ಕಾಣಿಸುವ ರೀತಿಯಲ್ಲಿ ವರ್ಣಿಸಿದ್ದಾನೆ— "ತುರುಕರೂ ಕುರ್ದ್ ಜನರೂ ಸೇರಿ ಈ ಪ್ರಾಂತದಲ್ಲಿರುವ ಕ್ರೈಸ್ತರ ಗ್ರಾಮಗಳನ್ನೆಲ್ಲಾ ಸೂರೆಮಾಡಿರುವರು. ೧ ಸಾವಿರ ಮಂದಿ ಕ್ರೈಸ್ತ ಪ್ರಜೆಗಳನ್ನು ಕೊಂದು ಹಾಕಿರುವರು. ೨ ಸಾವಿರಮಂದಿ ಕ್ರೈಸ್ತರು ಆಹಾರ್ಯಾದಿಗಳ ಅಭಾವದಿಂದ ರೋಗಪೀಡಿತರಾಗಿ ಸತ್ತರು. ೨೦೦ ಮಂದಿ ತುರುಕರು ಗುಂಪುಕೂಡಿ ಬಂದು ಪ್ರಜೆಗಳಿಗೆ ನಾನಾ ಹಿಂಸೆಗೊಳಿಸುತ್ತಿದ್ದಾರೆ. ಸಲ್ಮಾಸ್ ಎಂಬ ನಗರದಲ್ಲಿರುವ ರಷ್ಯ ರಾಯಭಾರಿಯವರು-ಆ ಪಟ್ಟಣದಲ್ಲೂ ಗುಲ್‌ಪೈಗ್ ನಗರದಲ್ಲೂ ಪ್ರಜಾಹತ್ಯವೂ, ಬಲಾತ್ಕಾರಗಳೂ, ಕೆಲವು ಸುಲಿಗೆಗಳೂ ಅವಿಚ್ಛಿನ್ನವಾಗಿ ನಡೆಯುತ್ತಿರುವುವೆಂದು ಬರೆದಿರುವರು. ಹೆಂಗುಸರನ್ನು ಸೆರೆಯಿಡುತ್ತಿರುವರು. ಮಕ್ಕಳನ್ನು ಅಪಹರಿಸಿಕೊಂಡು ಹೋಗುತ್ತಿರುವರು. ಗುಲ್‌ಪೈಗ್ ನಗರದಲ್ಲಿರುವ ತುರ್ಕಿಯ ರಾಯಭಾರಿಯ ಅಪ್ಪಣೆಮೇರೆ ಅಲ್ಲಿರುವ ೫೫ ಮಂದಿ ಕ್ರೈಸ್ತ ಪ್ರಜಾಪ್ರಮುಖರನ್ನು ಸ್ಮಶಾನಕ್ಕೆ ಕರೆದುಕೊಂಡು ಹೋಗಿ, ಅವರ ಬಂಧುಗಳಿದಿರಿಗೆ ಕುರಿಗಳ ತಲೆಯನ್ನು ಹೊಯ್ಯುವಂತೆ ಅಲ್ಲಿ ಕತ್ತರಿಸಿಹಾಕಿಬಿಟ್ಟರು; ಒಬ್ಬ ಪಾದರಿಯನ್ನು ನೇಣುಹಾಕಿದರು. ಕೆಥೋಲಿಯರ್ಸ್ ಮಿರ್ಷ ಭವನದಲ್ಲಿ ಅವಿತುಕೊಂಡಿದ್ದ ೬೪ ಮಂದಿ ಪುರವಾಸಿಗಳನ್ನು ತುರ್ಕಿಯ ರಾಯಭಾರಿಯು ಹಿಡಿತರಿಸಿ, ತನ್ನಿದಿರಿಗೆ ಶಿರಚ್ಛೇದನ ಮಾಡಿಸಿದನು. ಸಲ್ಮಾಸಿನಲ್ಲಿರುವ ಹಲವುಮಂದಿ ಕ್ರೈಸ್ತರನ್ನು ಹಿಡಿದು ಅವರ ಕೈಗಳನ್ನು ಬೆನ್ನಿಗೆ ಸೇರಿಸಿ ಕಟ್ಟಿ, ಶಿರಚ್ಛೇದಮಾಡಿರುವರು. ಕೆಲ ಕ್ರೈಸ್ತಜನರನ್ನು ಏಣಿಗಳಿಗೆ ಬಿಗಿದು ಕಟ್ಟಿ ಅವರ ತಲೆಗಳನ್ನು ಮೆಟ್ಟಲು ಸಂದಿಗೆ ತುರಿಕಿ ಚಿತ್ರವಿಚಿತ್ರವಾಗಿ ಕತ್ತರಿಸಿ ಹಾಕಿದರು. ನಿರಪರಾಧಿಗಳಾದ ಸ್ತ್ರೀಪುರುಷರನ್ನೂ, ಶಿಶುಗಳನ್ನೂ, ಪಾದರಿಗಳನ್ನೂ ಸಹ ಈ ಕ್ರೂರಾತ್ಮರು ಹೀಗೆ ಚಿತ್ರವಧೆಮಾಡುವುದು ಯಾವ ಪೌರುಷವೋ ಕಾಣೆ." ಎಂದು ಬರೆದಿರುತ್ತಾರೆ.

ಈಗಿನ ಮಹಾ ಯುದ್ಧದ ಸೇಕವು ಎಷ್ಟೋಕಡೆ ಹೀಗೆ ಈ ಭೂಲೋಕವನ್ನೇ ನರಕವನ್ನಾಗಿ ಮಾಡಿಬಿಟ್ಟಿರುವದು!

"ಡಿಸ್ಟ್ರಾಯರ್" ಎಂಬ ಯುದ್ಧದ ಹಡಗುಗಳು.

ನೀರಿನೊಳಗೆ ಮುಳುಗಿಹೋಗಿ ದೊಡ್ಡ ದೊಡ್ಡ ಹಡಗುಗಳಿಗೆ ಟಾರ್ಪಿಡೋ ಎಂಬ ಮದ್ದಿನ ಕಿಡಿಗಳನ್ನು ಪ್ರಯೋಗಿಸಿ ತೂತುಗೆಡಹಿ ಮುಳುಗಿಸತಕ್ಕ ಸಬ್‌ಮೆರೀನುಗಳೆಂಬುವುಗಳಿಗೆ ಶತ್ರುಗಳೆಂದುವುಗಳು ಡಿಸ್ಟ್ರಾಯರುಗಳಾಗಿರುತ್ತವೆ. ಸಬ್‌ಮೆರೀನುಗಳಿಗೆ ಜಲಸಮಾಧಿ ಕಾಣಿಸುವುದರಲ್ಲಿ ಇವು ಬಹಳ ಉಪಯೋಗ್ಯಗಳು. ಈ ಡಿಸ್ಟ್ರಾಯರ್ ಎಂಬ ಹಡಗುಗಳು ಆಕೃತಿಯಲ್ಲಿ ಚಿಕ್ಕವಾಗಿರುತ್ತವೆ. ಜರ್ಮನರ ಪಕ್ಷದಲ್ಲಿ ಹಾವಳಿಮಾಡುತ್ತಲಿರುವ ಸಬ್‌ಮೆರೀನುಗಳಿಗೆ ಮರಣಹೋಮ ಮಾಡುವುದರಲ್ಲಿ ಇಂಗ್ಲೀಷರ ಡಿಸ್ಟ್ರಾಯರುಗಳು ಕೇವಲ ಶಕ್ತವಾದುವು. ಅವರ ಆ ಹಡಗುಗಳು ಪ್ರತಿಯೊಂದೂ ೩೦೦ ಟನ್ನುಗಳ ಮೊದಲು ೧೨೦೦ ಟನ್ನುಗಳವರೆಗೆ ಭಾರವಾಗಿರುವುವು. ಇವು ಬಹಳ ನಾಟಾಗಿಲ್ಲದೆಯೂ ಹಗುರವಾಗಿಯೂ ಕಟ್ಟಲ್ಪಟ್ಟಿರುವುದರಿಂದ ೮-೯ ಅಡಿಗಳುದ್ದದ ನೀರಿನಲ್ಲಿ ಸುಲಭವಾಗಿ ಓಡಬಲ್ಲುವು. ಸಬ್‌ಮೆರೀನುಗಳಿಂದ ಬಿಡಲ್ಪಡುವ ಟಾರ್ಪೆಡೋಗಳು ೧೫ ಅಡಿಗಳ ಆಳದ ನೀರಿನಲ್ಲಲ್ಲದೆ ಹೋಗಲಾರವು. ಅದುಕಾರಣ, ಅದಕ್ಕಿಂತ ಮೇಲ್ಮಟ್ಟದಲ್ಲಿ ಹೋಗುವ ಡಿಸ್ಟ್ರಾಯರುಗಳಿಗೆ ಟಾರ್ಪೆಡೋವಿನ ಭಯವು ವಿಶೇಷವಾಗಿರುವುದಿಲ್ಲ. ಈ ಡಿಸ್ಟ್ರಾಯರುಗಳಿಗೆ ೨ ರಿಂದ ಹಿಡಿದು ೬ ರ ವರೆಗೆ ಹೊಗೆ ಹೋಗುವ ಕೊಳವೆಗಳಿರುವುವು. ೩೦೦ ಪೌನುಗಳ ಭಾರವುಳ್ಳ ಗುಂಡುಗಳನ್ನು ಪ್ರಯೋಗಿಸತಕ್ಕ ೪ ಅಂಗುಲದ ಬಾಯಿಯ ಫಿರಂಗಿಗಳು ಇವುಗಳಲ್ಲಿರುವುವು. ಜರ್ಮನರಲ್ಲಿರುವ ಡಿಸ್ಟ್ರಾಯರುಗಳಲ್ಲಾದರೆ ೨೪೦ ಪೌನುಗಳ ಭಾರದ ಗುಂಡುಗಳನ್ನು ಮಾತ್ರ ಪ್ರಯೋಗಿಸುವ ಫಿರಂಗಿಗಳಿರುವುದರಿಂದ ಅವರ ಡಿಸ್ಟ್ರಾಯರುಗಳಿಗಿಂತ ಇಂಗ್ಲೀಷರ ಡಿಸ್ಟ್ರಾಯರುಗಳೇ ಸಾಮರ್ಥ್ಯದಲ್ಲಿ ಹೆಚ್ಚಿನವು. ಇಂಗ್ಲೀಷ್ ಡಿಸ್ಟ್ರಾಯರುಗಳಲ್ಲಿ ದೊಡ್ಡ ಬಾಯಿಯ ಫಿರಂಗಿಗಳಿರುವುದು ಮಾತ್ರವೇ ಅಲ್ಲದೆ ಅವುಗಳಲ್ಲಿ ೧೧ ಅಂಗುಲದ ಬಾಯಿಯ ಟಾರ್ಪೆಡೋಕೊಳವೆಗಳು ೨ ಜತೆಗಳು ಪ್ರತಿಯೊಂದರಲ್ಲೂ ಇರುವುವು. ಆದರೆ ಅಷ್ಟು ದೂರದಿಂದ ಪ್ರಯೋಗಿಸದೆ ಸಮೀಪದಿಂದಲೇ ಇವುಗಳನ್ನು ಪ್ರಯೋಗಿಸುವರು. ಗನ್‌ಕಾಟನ್ (ಫಿರಂಗಿಹತ್ತಿ) ಯಿಂದ ಇದನ್ನು ಹೊತ್ತಿಸಿ ಟಾರ್ಪೆಡೋ ಕೊಳವೆಯಿಂದೀಚೆಗೆ ಇದನ್ನು ಹೊರಡಿಸಿದ ಕೂಡಲೇ ಇದು ನೀರಿನಲ್ಲಿ ನುಗ್ಗಿ ಗುರಿಯಿಟ್ಟಕಡೆಗೆ ರಭಸದಿಂದ ಹೋಗಿ ನಾವೆಗಳ ಬುಡಕ್ಕೆ ಬಡಿದು ಒಡೆದುಹಾಕುವುದು. ಈಗ ಇಂಗ್ಲೀಷರ ಡಿಸ್ಟ್ರಾಯರುಗಳೆಲ್ಲವೂ ಸೀಮೆಯೆಣ್ಣೆಯಿಂದ ಹುಟ್ಟಿಸಲ್ಪಟ್ಟ ಆವಿಯಬಲದಿಂದ ನಡೆಯುತ್ತಿರುವುವು. ಕಲ್ಲಿದ್ದಲನ್ನು ಇವುಗಳಲ್ಲಿ ಉಪಯೋಗಿಸುವುದಿಲ್ಲ. ಇದರಿಂದ ಕಲ್ಲಿದ್ದಲನ್ನು ಸದಾ ಇಂಜನ್ನಿನೊಳಕ್ಕೆ ಸಾಗಿಸುತ್ತಿರಬೇಕಾದ ಶ್ರಮವು ತಪ್ಪಿಹೋಗಿರುವುದು. ಜರ್ಮನ್‌ಡಿಸ್ಟ್ರಾಯರುಗಳಲ್ಲಾದರೊ ಬೆಂಕಿಹಾಕುವ ಬಾಯ್ಲರುಗಳು (ತೊಂಬೆಯಾಕಾರದೊಲೆಗಳು) ಮೂರು ಇರುವುವು. ಇವುಗಳಲ್ಲಿ ರಡಕ್ಕೆ ಕಲ್ಲಿದ್ದಲೂ, ಒಂದಕ್ಕೆ ಸೀಮೆಯೆಣ್ಣೆಯೂ ಹಾಕಲ್ಪಡುತ್ತಿರುವುದು. ಅದುಕಾರಣ ಅವುಗಳಿಗೆ ಸೀಮೆಯೆಣ್ಣೆಯ ಪ್ರಯೋಜನವು ಕಡಿಮೆ. ಇಂಗ್ಲೀಷ್ ಡಿಸ್ಟ್ರಾಯರುಗಳಿಗೆ ಸೀಮೆಯೆಣ್ಣೆಯು ಸಮೃದ್ಧವಾಗಿರುವ ಕಾರಣ ಅವು ಸಂಪೂರ್ಣ ಶಕ್ತಿಯಿಂದ ಗಂಟೆಗೆ ೩೦ ಅಥವಾ ೩೫ ಮೈಲಿಗಳ ವೇಗದಲ್ಲಿ ಓಡಬಲ್ಲುವು. ಜರ್ಮನ್‌ಡಿಸ್ಟ್ರಾಯರುಗಳು ಅಷ್ಟುವೇಗದಿಂದ ಓಡಲಾರವು ಏಕೆಂದರೆ ಅವುಗಳಿಗೆ ಪೂರ್ಣಶಕ್ತಿಯಿಂದ ಓಡುವುದಕ್ಕೆ ಅವಶ್ಯಕವಾದಷ್ಟು ಕಲ್ಲಿದ್ದಲನ್ನು ಅವಿಚ್ಛಿನ್ನವಾಗಿ ಒದಗಿಸುವುದಸಾಧ್ಯ. ಈಗಿನ ಡಿಸ್ಟ್ರಾಯರುಗಳಲ್ಲಿ ಹೆಚ್ಚು ಜನರೂ ಇರುವುದಿಲ್ಲ ೫೫ ಮಂದಿ ಉದ್ಯೋಗಿಗಳುಮಾತ್ರ ಇರುವರು. ಅವರಲ್ಲಿ ಒಬ್ಬನು ಇಂಜನಿಯರು. ಯುದ್ಧಕಾಲದಲ್ಲಿ ಈ ಡಿಸ್ಟ್ರಾಯರುಗಳಲ್ಲಿ ಕುಳಿತು ಪ್ರಯಾಣಮಾಡುವುದು ಸುಲಭವಲ್ಲ. ಇವುಗಳ ನಾಟು ಹೆಚ್ಚಾಗಿಲ್ಲದಿರುವುದರಿಂದ ಯಾವಾಗಲೂ ಸಮುದ್ರದ ನೀರು ಒಳಕ್ಕೂ ಹೊರಕ್ಕೂ ಹೊಯ್ದಾಡುತ್ತಿರುವುದು. ಅದರೊಳಗೆ ಚಳಿಯು ಬಹಳ; ಶ್ರಮವು ಹೆಚ್ಚು. ಸಮುದ್ರವು ಅಶಾಂತವಾಗಿರುವಾಗ ಈ ಹಡಗಿನೊಳಗೆ ಮಲಗಿಕೊಳ್ಳುವುದಕ್ಕೂ ಅನುಕೂಲವಾಗಿರುವುದಿಲ್ಲ. ಈ ಹಡಗುಗಳ ಹೊರಮೈಯ್ಯಿಗೆ ಹದ್ದಲ್ಪಟ್ಟಿರುವ ತಗಡು ಪುಸ್ತಕಗಳ ಮಗ್ಗುಲಿಗೆ ಹಾಕಿ ಕಟ್ಟುವ ರಟ್ಟುಗಳ ಮಂದಕ್ಕಿಂತ ಹೆಚ್ಚು ಮಂದವಾಗಿರುವುದಿಲ್ಲ. ಈ ಹಡಗುಗಳು ಮಾಡುವ ಕೆಲಸವು ಬಹಳ ಅವಧಾನಪೂರ್ವಕವಾದುದು. ನೀರಿನಲ್ಲಿಮುಳುಗಿಕೊಂಡು ಹೋಗತಕ್ಕ ಸಬ್‌ಮೆರೀನುಗಳಮೇಲೆ ಇರುವ ದುರ್ಬೀನಿನ ಕಂಬವು ನೀರಿನಮೇಲೆ ಎಲ್ಲಿ ಕಾಣಬರುವುದೋ ಅದನ್ನೇ ಇವು ಸದಾ ನಿರೀಕ್ಷಿಸುತ್ತಿರಬೇಕು. ಅಂಥ ಸಬ್‌ಮೆರೀನಿನ ಕಂಬವು ಎಲ್ಲಾದರೂ ಕಣ್ಣಿಗೆ ಬಿದ್ದ ಕೂಡಲೇ ಈ ಡಿಸ್ಟ್ರಾಯರು ಅದನ್ನು ಮುಳುಗಿಸುವ ಸಾಹಸಕ್ಕೆ ಉಜ್ಜುಗಿಸುವುದು. ಸಮುದ್ರದಮೇಲೆ ಈ ಡಿಸ್ಟ್ರಾಯರುಗಳು ಎಷ್ಟು ಹೆಚ್ಚಾಗಿದ್ದರೆ ಸಬ್‌ಮೆರೀನುಗಳಿಗೆ ಅಷ್ಟೂ ಅಪಾಯವೆಂದು ತಿಳಿಯಬೇಕು. ಡಿಸ್ಟ್ರಾಯರುಗಳ ಕಣ್ಣಿಗೆ ಬಿದ್ದ ಸಬ್‌ಮೆರೀನುಗಳು ತಪ್ಪಿಸಿಕೊಂಡು ಹೋಗುವುದು ಅಸಾಧ್ಯ. ಈಗಿನ ಯುದ್ಧಾರಂಭಕ್ಕೆ ಮುಂಚೆ ಇಂಗ್ಲೀಷರಲ್ಲಿ ಡಿಸ್ಟ್ರಾಯರುಗಳು ಹೆಚ್ಚಾಗಿಲ್ಲದಿದ್ದುದರಿಂದ ಜರ್ಮನರ ಸಬ್‌ಮೆರೀನುಗಳ ಹಾವಳಿಯು ಸ್ವಲ್ಪ ಹೆಚ್ಚಾಗಲು ಅವಕಾಶವಾಯಿತು. ಸೈನ್ಯಗಳನ್ನೂ ಸಾಮಾನುಗಳನ್ನೂ ತುಂಬಿಕೊಂಡು ಪ್ರಯಾಣಮಾಡುವ ಹಡಗುಗಳನ್ನು ಈ ಡಿಸ್ಟ್ರಾಯರುಗಳು ಕಾವಲುಗಾಯುತ್ತಿರುತ್ತವೆ. ಪ್ರತಿಯೊಂದು ದೊಡ್ಡ ಯುದ್ಧನಾವೆಗಳ ಮುಂಗಡೆಯೂ ಈ ಡಿಸ್ಟ್ರಾಯರುಗಳು ಕಾವಲಾಗಿ ಹೋಗುತ್ತಿರುವುದುಂಟು. ಹಿಂದೆ ಹೆಲಿಗೋಲ್ಯಾಂಡಿನಲ್ಲೂ ಉತ್ತರಸಮುದ್ರದಲ್ಲೂ ನೌಕಾಯುದ್ಧವು ಜರ್ಮನರ ನೌಕೆಗಳೊಡನೆ ನಡೆದಾಗ ಈ ಡಿಸ್ಟ್ರಾಯರುಗಳು ಸ್ವಲ್ಪವೇ ಇದ್ದರೂ ಬಹಳ ಚೆನ್ನಾಗಿ ಹೋರಾಡಿದುವು.

ಯುದ್ಧದಿಂದ ಭರತಖಂಡದ ವ್ಯಾಪಾರಕ್ಕೆ ಉಂಟಾಗಿರುವ ನಷ್ಟ.

ಈಗಿನ ಯುದ್ಧದಿಂದ ಅಮೇರಿಕಾ-ಜಪಾನ್ ಮೊದಲಾದ ಕೆಲವು ದೇಶಗಳು ವಿಪರೀತವಾದ ಧನಾರ್ಜನೆಯನ್ನು ಮಾಡಿಕೊಳ್ಳುತ್ತಿವೆ. ನಮ್ಮ ಭರತಖಂಡದ ವ್ಯಾಪಾರಕ್ಕಾದರೋ ಬಹಳ ಬಾಧೆಯು ತಟ್ಟಿರುತ್ತದೆ. ವಿದೇಶಗಳೊಡನೆ ಈ ದೇಶದ ವ್ಯಾಪಾರವು ನಡೆಯುವುದು ಯಾವಾಗಲೂ ಏಪ್ರಿಲ್-ಮೇ ತಿಂಗಳುಗಳಲ್ಲೇ ಬಹಳ ಹೆಚ್ಚು. ಈ ವರ್ಷದ ಏಪ್ರಿಲ್ ತಿಂಗಳ ವ್ಯಾಪಾರವನ್ನು ಹಿಂದಿನವರ್ಷದ ಅದೇ ತಿಂಗಳ ವ್ಯಾಪಾರದೊಡನೆ ಹೋಲಿಸಿ ಹಾಕಿರುವ ಸಂಖ್ಯೆಯು ಈ ಕೆಳಗೆ ಕೊಡಲ್ಪಟ್ಟಿರುವುದು. ಅದನ್ನು ನೋಡಿದರೆ ನಮ್ಮ ವ್ಯಾಪಾರದ ನಷ್ಟಸ್ಥಿತಿಯು ಚೆನ್ನಾಗಿ ಗೋಚರಿಸುವುದು. ಏಪ್ರಿಲ್ ತಿಂಗಳೊಂದರಲ್ಲಿ

	೧೯೧೪-೧೫ ರಲ್ಲಿ (ಕೋಟಿ ರೂ.)	೧೯೧೫-೧೬ ರಲ್ಲಿ (ಕೋಟಿ ರೂ.)	ತಗ್ಗಿದುದು
ಹೊರಗಿನಿಂದ ಬಂದುದು	೧೪.೪೯.	೯.೨೩.	೫.೨೬.
ಇಲ್ಲಿಂದಸಾಗಿದುದು	೨೦.೪೧.	೧೨.೨೧.	೮.೨೦.

ಎಂದರೆ ೧ ತಿಂಗಳ ಕಾಲದಲ್ಲಿ ೧೩ ಕೋಟಿಯೂ ೪೬ ಲಕ್ಷ ರೂಪಾಯಿಗಳ ವ್ಯಾಪಾರವು ತಗ್ಗಿಹೋದಂತಾಯಿತು. ಚಿನ್ನಬೆಳ್ಳಿಯ ವ್ಯಾಪಾರವೂ ಕೂಡ ಅದೇ ತಿಂಗಳಲ್ಲಿ ಎಷ್ಟು ತಗ್ಗಿಹೋಗಿರುವುದೆಂಬುದು ಈ ಕೆಳಗಣ ಪಟ್ಟಿಯಿಂದ ಗೊತ್ತಾಗುವುದು:—

	೧೯೧೪-೧೫	೧೯೧೫-೧೬	ತಗ್ಗಿದುದು
ಚಿನ್ನ	೯೦ ಲಕ್ಷ	೪೪ ಲಕ್ಷ	೪೬ ಲಕ್ಷ
ಬೆಳ್ಳಿ	೧ ಕೋಟಿ ೯ ಲಕ್ಷ	೭೦ ಲಕ್ಷ	೩೯ ಲಕ್ಷ

ಎಂದರೆ ಅದೊಂದು ತಿಂಗಳಲ್ಲಿ ೮೫ ಲಕ್ಷದಷ್ಟು ಈ ಲೋಹಗಳ ವ್ಯಾಪಾರವು ತಗ್ಗಿಹೋಯಿತು.

ಜರ್ಮನಿ-ಇಟಲಿಗಳ ವಾಕ್ಪ್ರಹಾರ.

ಜರ್ಮನಿಯ ರಾಜ್ಯಾಂಗಸಭೆಯಲ್ಲಿ ಅಲ್ಲಿನ ಚಾನ್ಸಲರು (ಪ್ರಧಾನ ಧರ್ಮಾಧಿಕಾರಿಯು) ಇಟಲಿಯನ್ನು ಕುರಿತು ಹೀಗೆ ವಾಗ್ಬಾಣಪ್ರಯೋಗವನ್ನು ಮಾಡಿರುವರು—"ಇಟಲಿಯವರು ಯುದ್ಧಕ್ಕೆ ನಿಂತುದರಿಂದ ತಮ್ಮ ಸಂಧಿನಿಬಂಧನೆಗಳನ್ನು ಭಂಗಪಡಿಸಿ, ಆಡಿದ ಮಾತಿಗೆ ತಪ್ಪಿಹೋಗಿರುತ್ತಾರೆ. ಇಟಲಿಯವರು ಕೋರಿದ ಕೋರಿಕೆಗಳನ್ನು ನೆರವೇರಿಸಿಕೊಡುವುದಕ್ಕೆ ಆಸ್ಟ್ರಿಯಾದವರು ಒಪ್ಪಿಕೊಂಡರು. ಹಾಗೆ ಆಸ್ಟ್ರಿಯಾದವರಿಂದ ಮಾಡಿಸುವುದಕ್ಕೆ ನಾವು ಹೊಣೆಗಾರರಾಗುವೆವೆಂದು ಇಟಲಿಯವರಿಗೆ ನಾವು ತಿಳಿಸಿದೆವು. ಇಟಲಿಯವರು ಜರ್ಮನ್ ಮಿತ್ರಮಂಡಲಿಯಿಂದ ಅಗಲಿಹೋಗದಿರುವಂತೆ ಮಾಡುವುದಕ್ಕೆ ನಾವು ಮಾಡಬೇಕಾದ ಪ್ರಯತ್ನಗಳನ್ನೆಲ್ಲಾ ಮಾಡಿದೆವು. ಆದರೆ ಇಟಲಿಯವರು ಈ ಯುದ್ಧದಲ್ಲಿ ಪ್ರವೇಶಿಸುವಂತೆ ಅವರಿಗೆ ಬೇರೆಯವರಿಂದ ಪ್ರೋತ್ಸಾಹವು ಮಾಡಲ್ಪಟ್ಟಿತು" ಎಂದು ಆಡಿದರು. ಆಂಗ್ಲರು ಮೊದಲಾದ ರಾಜ್ಯಾಧಿಪತಿಗಳೊಡನೆ ತಾವು ಮಾಡಿಕೊಂಡಿದ್ದ ಸಂಧಿನಿಬಂಧನಾಪತ್ರವನ್ನು "ಕಾಗದದ ಚೂರುಗಳು" ಎಂದು ಧಿಕ್ಕರಿಸಿ ಪೂರ್ವನಿಬಂಧನೆಯನ್ನು ಮೀರಿ ತಾವೇ ನಡೆದು, ಈಗಿನ ಮಹಾಪ್ರಳಯಕ್ಕೆ ಮುಖ್ಯ ಹೇತುಭೂತರಾಗಿರುವ ಜರ್ಮನರು ಇಟಲಿಯವರನ್ನು ದೂರುವುದು, ಜಾರೆಯು ಪತಿವ್ರತೆಯನ್ನು ಜರೆಯುವುದಕ್ಕೆ ಸಮನಾಗಿರುವುದಲ್ಲವೆ?

ಇದಕ್ಕೆ ಪ್ರತಿಯಾಗಿ ಇಟಲಿಯ ಪ್ರಧಾನಮಂತ್ರಿಯವರಾದ ಸರ್ ಸಾಲಾಂದ್ರಾರವರು ತಮ್ಮ ರಾಜಧಾನಿಸಭೆಯಲ್ಲಿ ಹೀಗೆ ನುಡಿದಿರುತ್ತಾರೆ— ಈಗ ನಾವು ಕೈಕೊಂಡಿರುವುದು ಇಟಲಿದೇಶಕ್ಕೆ ಪವಿತ್ರವಾದ ಯುದ್ಧಕಾರ್ಯವು. ಆಸ್ಟ್ರಿಯಾ ಜರ್ಮನಿ ದೇಶಗಳು ಪ್ರಜೆಗಳ ಹಕ್ಕುಗಳನ್ನೂ ಸಂಧಿ ನಿಬಂಧನೆಗಳನ್ನೂ ತುಳಿದುಬಿಟ್ಟಿರುತ್ತವೆ. ನಮ್ಮನ್ನು ಸಂಧಿನಿಬಂಧನೆಗಳನ್ನು ಮರ್ಯಾದಿಸಲಿಲ್ಲವೆಂದಾಗಲೀ ನಮ್ಮ ಮೈತ್ರೀಭಾವವನ್ನು ಕುರಿತೇ ಆಗಲೀ ಈಗ ಮಾತನಾಡುವುದಕ್ಕೆ ಅವರಿಗೆ ಲೇಶವೂ ಬಾಧ್ಯತೆಯಿರುವುದಿಲ್ಲ. ಆಸ್ಟ್ರಿಯಾದವರೊಬ್ಬರೇ ಈ ಯುದ್ಧವನ್ನು ಕೋರಿ ತಂದಿಕ್ಕಿರುತ್ತಾರೆ. ಆಂಗ್ಲೀಯರು ಯಾವುದೋ ಒಂದು ವಿಧದಿಂದ ವ್ಯವಹಾರವನ್ನು ಪರಿಷ್ಕರಿಸುತ್ತೇವೆಂದು ಹೇಳಿದರೂ ಆಸ್ಟ್ರಿಯಾದವರು ಒಪ್ಪಿಕೊಳ್ಳಲಿಲ್ಲ. ಮತ್ತು ಈ ಆಸ್ಟ್ರಿಯನ್ನರು ಇಟಲಿಗೆ ಸಾಮರ್ಥ್ಯವಿಲ್ಲವೆಂತಲೂ, ಕತ್ತಿಹಿಡಿದು ತನ್ನ ಹಕ್ಕುಗಳನ್ನು ಸಂಪಾದಿಸಿಕೊಳ್ಳಲಿಲ್ಲವೆಂತಲೂ ತಿಳಿದಿರುವರು.

ಲಿಬಿಯಾದಲ್ಲಿ ಇಟಲಿಯು ಯುದ್ಧವನ್ನು ಮಾಡಿದಾಗ ಜರ್ಮನಿ ಆಸ್ಟ್ರಿಯಾದೇಶಗಳು ಯಾವ ಸಹಾಯವನ್ನೂ ನಮಗೆ ಮಾಡಲಿಲ್ಲ. ಯೂರೋಪ್ ತುರ್ಕಿಯಮೇಲೆ ಇಟಲಿಯು ಬಿದ್ದರೆ ನಾನು ಇಟಲಿಯಮೇಲೆ ಬೀಳುವೆನೆಂದು ಆಸ್ಟ್ರಿಯಾವು ಬೆದರಿಸಿ ನಾವು ಥಿಯಸ್ಸನ್ನು ಹಿಡಿದುಕೊಳ್ಳದಂತೆ ಮಾಡಿತು. ಆಸ್ಟ್ರಿಯಾವೂ ನಾವೂ ಸಖ್ಯದಲ್ಲಿರುವವರು ಎನ್ನಿಸಿಕೊಂಡಿದ್ದಾಗಣ ವ್ಯವಹಾರವೇ ಈರೀತಿಯಲ್ಲಿ ಜರುಗಿರುವುದು. ಆಸ್ಟ್ರಿಯಾವು ನಮಗೆ ಕೊಡುತ್ತೇನೆಂದು ಹೇಳಿದ ಪ್ರದೇಶವನ್ನು ಮಾತ್ರ ತೆಗೆದುಕೊಂಡು ನಾವು ಸುಮ್ಮನೆ ಕುಳಿತುಕೊಳ್ಳುವುದು ಬಹಳ ಹಾಸ್ಯಾಸ್ಪದವು. ಒಂದುವೇಳೆ ನಾವು ಹಾಗೆಯೇ ಮಾಡಿದ್ದರೆ ಜರ್ಮನಿ ಆಸ್ಟ್ರಿಯಾದೇಶಗಳು ಹೇಳಿದಂತೆ ಕೇಳಿಕೊಂಡು ಬಿದ್ದಿರಬೇಕಾಗುತ್ತಿದ್ದಿತು. ಜರ್ಮನಿಯು ಪ್ರಪಂಚಸಾಮ್ರಾಜ್ಯವನ್ನು ಪಡೆಯಬೇಕೆಂದು ಆಸೆಪಟ್ಟಿದ್ದಿತು. ಈಗ ಆ ಆಸೆಯು ತೀರಿಹೋಯಿತು. ಇದರಿಂದ ಮುಂದೆ ಹೊಸ ಸಂದರ್ಭಗಳು ಏರ್ಪಡುವುವು. ಮನುಷ್ಯಜಾತಿಯ ಅಭಿವೃದ್ಧಿಗೂ ನಾಗರಕತೆಗೂ ಇನ್ನು ಭಂಗವುಂಟಾಗದು. ನಾವಾದರೊ ದಯಾಧರ್ಮ ಭಿಕ್ಷರೂಪವಾಗಿ ಒಂದಿಷ್ಟನ್ನು ಆಸ್ಟ್ರಿಯಾದಿಂದ ಈಸಿಕೊಳ್ಳುವುದಕ್ಕೆ ಅಪೇಕ್ಷಿಸುವವರಲ್ಲ; ಕತ್ತಿಹಿರಿದು ಆಸ್ಟ್ರಿಯಾದಮೇಲೆ ಬಿದ್ದು ಅದನ್ನು ಜಯಿಸಿ ನಮ್ಮ ಇಷ್ಟಾರ್ಥವನ್ನು ನೆರವೇರಿಸಿಕೊಳ್ಳುತ್ತೇವೆ'' ಎಂದು ನುಡಿದಿರುವರು.

ಮೈಸೂರು ಸ್ಟಾರ್.

೧೯೧೫ನೆಯ ಇಸವಿ ಜೂನ್ ತಾ|| ೧೩ನೆಯ ಭಾನುವಾರ

ದೇಶಭಾಷಾಭಿಮಾನಿಗಳಿಗೆ ಕೊಟ್ಟ ಎಚ್ಚರಿಕೆ.

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದವರು ಪದ್ಧತಿಯಂತೆ ಇದೇ ತಿಂಗಳು ತಾ|| ೧ ರಲ್ಲಿ ಈ ವರ್ಷದ ಬಹುಮಾನಸಭೆಯನ್ನು ನೆರವೇರಿಸಿದಾಗ್ಗೆ ಬೊಂಬಾಯಿ ಆಧಿಪತ್ಯದ ದಕ್ಷಿಣಭಾಗದ ಕಮಿಷನರಾದ ಮೆ|| ಲಾರೆನ್ಸ್ ಸಾಹೇಬರಿಗೆ ಸಭಾಧ್ಯಕ್ಷತೆಯು ವಹಿಸಲ್ಪಟ್ಟಿದ್ದಿತು. ಪದ್ಧತಿಯಂತೆ ಸಭಾಕಾರ್ಯಚರಿತ್ರದ ವಾಚನ- ಬಹುಮಾನಪ್ರದಾನ ಮೊದಲಾದುವುಗಳು ಆದಬಳಿಕ ಕಮಿಷನರ್ ಮಿ|| ಲಾರೆನ್ಸ್ ಸಾಹೇಬರು ಸಂಘದ ಸ್ತುತ್ಯಪ್ರಯತ್ನವನ್ನು ಕುರಿತು ಶ್ಲಾಘಿಸಿ, ಇಂಥ ಪ್ರಯತ್ನಕ್ಕೆ ಸ್ವದೇಶೀಯರ ನೆರವು ಸಾಕಾದಷ್ಟು ಇಲ್ಲದಿರುವುದನ್ನು ಕಂಡು ಆಶ್ಚರ್ಯಪಟ್ಟುದಲ್ಲದೆ, ಆ ಸಭೆಯಲ್ಲಿ ಒಬ್ಬ ಗಾಯಕನಿಂದ ಆರಂಭಕಾಲಕ್ಕೆ ಸಾರ್ವಭೌಮರ ಶ್ರೇಯಸ್ಸನ್ನು ಕೋರುವ ಒಂದು ಗೀತವನ್ನು ಉರ್ದುಭಾಷೆಯಿಂದ ಹಾಡಿಸಿದುದಕ್ಕೆ ಪ್ರತಿಯಾಗಿ ಕನ್ನಡ ಭಾಷೆಯ ಪದವನ್ನು ಸಂಘದವರು ಹಾಡಿಸಿದ್ದರೆ ಅವರಿಗೆ ಶೋಭಿಸುತ್ತಿದ್ದಿತು ಎಂದು ಎಚ್ಚರನ್ನು ಹೇಳಿದರು. ಭಾಷೋದ್ಧಾರ ಕಾರ್ಯದಲ್ಲಿ ನಿರತರಾಗಿದ್ದೇವೆಂದು ಕೆಲ ಸಮಾಜಕಕ್ಕ ಹಲವರಲ್ಲಿ ಇದೇ ತೆರದ ನ್ಯೂನತೆಗಳೆಷ್ಟೋ ಇರುತ್ತವೆ. ಅಂಥವರಿಗೆಲ್ಲಾ ಇದು ಅವಶ್ಯಕವಾದ ಎಚ್ಚರಿಕೆಯೆಂದು ನಾವು ಎಣಿಸುತ್ತೇವೆ. ದೇಶಭಾಷಾ ಪ್ರೇಮವುಳ್ಳವರು ನಿರ್ವಾಹವಾಗದ ಸಂದರ್ಭದಲ್ಲಿ ಮಾತ್ರ ಅನ್ಯಭಾಷೆಯ ವ್ಯವಹಾರಕ್ಕೆ ಕೈ ಹಾಕುವುದರಲ್ಲಿ ಆಕ್ಷೇಪವಿಲ್ಲ. ಸ್ವದೇಶಭಾಷೆಯಿಂದ ನಿರ್ವಾಹವಾಗತಕ್ಕ ಕೆಲಸಗಳಲ್ಲೂ ಪರಭಾಷೆಯನ್ನು ಬಿಡಲಾರದಿರುವುದು ಅನ್ಯಾಯವೇ ಸರಿ. ಇತ್ತಿತ್ತಲಾಗಿ ಮದ್ರಾಸಾಧಿಪತ್ಯದೊಳಗೆ ನೆರೆಯತಕ್ಕ ಪ್ರಾಂತಿಕ ಸಭೆಗಳಲ್ಲೂ ಕೂಡ ಉಪನ್ಯಾಸಗಳು ದೇಶೀಯಭಾಷೆಯಲ್ಲಿ ಆಗುವುದಕ್ಕುಪಕ್ರಮವಾಗಿದೆ. ಬಂಗಾಳಾ ಮಹಾರಾಷ್ಟ್ರದೇಶಗಳಲ್ಲಂತೂ ಸ್ವದೇಶೀಯರ ಸಭೆಗಳಲ್ಲೆಲ್ಲಾ ಸ್ವಭಾಷೆಯೇ ಅಖಂಡವಾಗಿ ಉಪಯೋಗಿಸಲ್ಪಡುತ್ತಲಿದೆ. ದೇಶಹಿತಾರ್ಥ ಕಾರ್ಯಗಳ ಸಂದರ್ಭದಲ್ಲೆಲ್ಲಾ ಬರೋಡಾದ ಶ್ರೀಮನ್ಮಹಾರಾಜರವರು ದೇಶಭಾಷೆಯಲ್ಲೇ ಭಾಷಣಗಳನ್ನು ಮಾಡುತ್ತಿರುತ್ತಾರೆ. ಬಂಗಾಳದ ಗೌರ್ನರಾದ ಲಾರ್ಡ್ ಕಾರ್ಮಿಕೇಲ್‌ರವರು ಒಂದು ಸಂಸ್ಕೃತಶಾಲೆಯಲ್ಲಿ ಬಹುಮಾನಪ್ರದಾನವನ್ನು ತಾವು ಮಾಡಬೇಕಾಗಿ ಬಂದಾಗ್ಗೆ ವಂಗಭಾಷಾ ಸಂಸ್ಕೃತಭಾಷೆಗಳಲ್ಲೇ ಭಾಷಣಮಾಡಿ ಸಭಿಕರನ್ನು ಆನಂದಪಡಿಸಿರುವರು. ಸುಪ್ರಸಿದ್ಧ ಗಂಧಿಮಹಾಶಯರು ದಕ್ಷಿಣದೇಶದಲ್ಲಿ ಮಾಯವರಮ್ಮಿಗೆ ಹೋಗಿದ್ದಾಗ್ಗೆ ಅಲ್ಲಿನ ಪ್ರಜೆಗಳು ಆಂಗ್ಲಭಾಷೆಯಲ್ಲಿ ವಿಜ್ಞಾಪನಪತ್ರವನ್ನು ಒಪ್ಪಿಸಲು, ಅದಕ್ಕಿಂತಲೂ ಸ್ವದೇಶಭಾಷೆಯಲ್ಲಿ ಬರೆದ ಪತ್ರಿಕೆಯನ್ನು ತನಗೆ ಒಪ್ಪಿಸಿದ್ದರೆ ಬಹಳ ಸಂತೋಷಪ್ರದವಾಗುತ್ತಿದ್ದಿತೆಂದು ಉತ್ತರವಿತ್ತರು. ಫ್ರಾನ್ಸ್ ದೇಶದ ಪ್ರೊಫೆಸರ್ ಗೆಡ್ಡಿಸ್‌ರವರು ಮದ್ರಾಸಿನಲ್ಲಿ ಅನೇಕ ಉಪನ್ಯಾಸಗಳನ್ನು ಮಾಡಿದಾಗ್ಗೆ— "ದೇಶಭಾಷೆಯನ್ನು ಉಪೇಕ್ಷಿಸುವುದು ನಾಗರಕತೆಗೆ ನಷ್ಟಕರವು; ಅದನ್ನು ಯಾವ ದೇಶಾಭಿಮಾನಿಯೂ ಉಪೇಕ್ಷಿಸಲಾಗದು." ಎಂದು ಹೇಳಿರುವರು. ಈ ವಿಷಯಗಳನ್ನೆಲ್ಲಾ ಕೇಳಿಯೂ ತಿಳಿದೂ ಇದ್ದರೂ ನಮ್ಮ ಮೈಸೂರು ದೇಶದಲ್ಲಿ ಕರ್ನಾಟಕಭಾಷಾಭಿವೃದ್ಧಿಗಾಗಿ ಕೂಡಿದ್ದ ಸಭೆಯಲ್ಲಿ "ಅಗಮಾರ್ಥಂತುದೇವಾನಾಂ" ಮೊದಲುಗೊಂಡು "ಗಚ್ಛಗಚ್ಛಸುರಶ್ರೇಷ್ಠ" ಎನ್ನುವವರೆಗೂ ಆಂಗ್ಲಭಾಷಾಪಾಂಡಿತ್ಯವೇ ಹೆಚ್ಚಾಗಿ ಮೆರೆದುಹೋಯಿತು. ಅಲ್ಲಿ ಕರ್ನಾಟಕಭಾಷಾ ಪರಿಚಯವಿಲ್ಲದವರಾರೂ ಸೇರಿರಲಿಲ್ಲ. ಆದರೂ ಅಪ್ರಕೃತವಾದ ಆಂಗ್ಲಭಾಷಾ ನಿಬಂಧನಗಳನ್ನು ಯಾರ ಉಪಕಾರಾರ್ಥವಾಗಿ ಕಷ್ಟಪಟ್ಟು ಬರೆದು ತಂದೋದಿದರೋ ತಿಳಿಯಲಿಲ್ಲ. ನಮ್ಮವರು ಭಾಷಾಭಿವೃದ್ಧಿಯೋಚನೆಗಾಗಿಯೇ ಕೂಡುವ ಇಂಥ ಸಭೆಗಳಲ್ಲೂ ಪರಭಾಷಾ ಪ್ರೇಮವನ್ನು ತೊರೆಯದಿರುವುದು ಕನ್ನಡಭಾಷೆಯ ದುರ್ದೈವವೆಂದೇ ತಿಳಿಯಬೇಕಾಗಿದೆ. "ಜನಾದೌಜನಮನುಷ್ಯೇಣ ಜನಾಂತೇಜನ್ಮನೀಪುನಃ | ಏನಾನಾಸಿಕಚೂರ್ಣೇನ ತಜ್ಜನ್ಮ ನಿಷ್ಫಲಂಭವೇತ್ ||'' ಎಂದು ನಸ್ಯಾಭಿಮಾನಿಗಳು ಕಲ್ಪಿಸಿಕೊಂಡಿರುವ ವಚನದಂತೆ, ನಮ್ಮ ದಾಕ್ಷಿಣಾತ್ಯ ಆಂಗ್ಲಭಾಷಾಪ್ರೇಮಿಗಳು, ಆಂಗ್ಲಭಾಷಾ ಸಂಬಂಧವಿಲ್ಲದಿದ್ದಲ್ಲಿ ಯಾವ ಮಹಾಸಭೆಯೂ ಸಫಲಗೊಳ್ಳಲಾರದೆಂದು ಭಾವಿಸಿರುವಂತೆ ಕಾಣುತ್ತದೆ. ಇಂಥ ಭಾವನೆಯು ನಾಗರಕರಲ್ಲಿ ಅಳಿದುಹೋದಲ್ಲದೆ ಭಾಷಾಪ್ರೇಮದ ನಿಜವಾದ ಕಾರ್ಯಗಳು ಎಳ್ಳಿಗೆ ಬರಲಾರವೆಂದು ನಾವು ತಿಳಿಯುತ್ತೇವೆ. ನಮ್ಮ ದೇಶದ ಭಾಷಾಭಿವೃದ್ಧಿ ಸಭೆಯಲ್ಲಾದ ಈ ತೆರದ ಲೋಪಗಳ ಕಡೆಗೆ ಆತಿಥ್ಯಸುಖದಲ್ಲಿ ಮುಗ್ಧರಾಗಿ ಹೋದ ದೇಶಭಾಷಾ ವೃತ್ತಪತ್ರಿಕಾಕರ್ತರುಗಳ ವಿಚಾರವೇ ನುಗ್ಗಿರುವುದಿಲ್ಲ. ಮಿ|| ಲಾರೆನ್ಸ್ ಸಾಹೇಬರಂಥ ಪರದೇಶೀಯರ ಹಿತವಚನದಿಂದಲಾದರೂ ನಮ್ಮವರು ಎಚ್ಚತ್ತು ಇಂಥ ಲೋಪವನ್ನು ಸರಿಪಡಿಸಿಕೊಂಡಾರೆಂದು ನಿರೀಕ್ಷಿಸುತ್ತೇವೆ.

ಒಳದೇಶ ವೃತ್ತಾಂತಗಳು.

ಮೈಸೂರ ಚೀಫ್‌ಕೋರ್ಟು ನಾಳೆಯದಿನ ತೆರೆಯಲ್ಪಡುವುದು.

ಶ್ರೀಮನ್ಮಹಾರಾಜರವರ ಸ್ವಾರಿಯು ರಾಜಧಾನಿಗೆ ಚಿತ್ತೈಸಿರುತ್ತದೆ.

ನಮ್ಮ ಶ್ರೀಮದ್ಯುವರಾಜರವರು ಮುಂದಿನತಿಂಗಳಲ್ಲಿ ವೈಸ್ರಾಯರ ಸಂದರ್ಶನವನ್ನು ಮಾಡಿಕೊಂಡುಬರುವುದಕ್ಕಾಗಿ ಸಿಮ್ಲಾಕ್ಕೆ ಬ್ರಿಟಿಷ್ ರೆಸಿಡೆಂಟರಕೂಡ ಪ್ರಯಾಣಮಾಡುವರೆಂದು ವಾರ್ತೆಯಿದೆ.

ಬಹಳ ದಿನಗಳಿಂದ ಅಸ್ವಸ್ಥರಾಗಿದ್ದ ಸೋಸಲೆಯ ಶ್ರೀ ವ್ಯಾಸರಾಯ ಸ್ವಾಮಿಗಳು ಕಳೆದ ಭಾನುವಾರ ಪರಂಧಾಮವನೈದಿದರು. ಅವರ ಕಳೇಬರವು ಯಥಾ ಮರ್ಯಾದೆಯಿಂದ ನಿಕ್ಷೇಪಮಾಡಲ್ಪಟ್ಟಿತು.

ಕಳೆದ ತಾ|| ೨ರಲ್ಲಿ ಬೆಂಗಳೂರಿನಲ್ಲಿ ವಿಪರೀತ ಗಾಳಿಯಿಂದ ಕೂಡಿದ ದೊಡ್ಡ ಮಳೆಯಾಗಿ ಹಲವು ಮರಗಳು ಬುಡಕಿತ್ತುರುಳಿದುವು. ವಿದ್ಯುಚ್ಛಕ್ತಿ ತಂತಿಯ ಕಂಬಗಳು ಕೆಲವು ಉರುಳಿದುವು. ಆ ತಂತಿಯು ಬಡಿದು ಒಂದು ಕುದುರೆಯು ಸತ್ತಿತು. ಒಂದುದಿನ ರಾತ್ರಿ ದೀಪವನ್ನು ಹತ್ತಿಸುವುದಕ್ಕೇ ಅವಕಾಶತಪ್ಪಿತು. ಒಬ್ಬ ಹೆಂಗುಸು ನೀರಿನಕಾಲ್ವೆಯಲ್ಲಿ ಕೊಚ್ಚಿಹೋಗಿ ಸ್ಮೃತಿತಪ್ಪಿದ್ದು ಸಿಕ್ಕಿದಳು. ಆದಿನ ೨ ಅಂಗುಲ ಮಳೆಯಾಗಿರುವುದಂತೆ.

ಚೆನ್ನಪಟ್ಟಣದಲ್ಲಿ ಕಳೆದ ಬುಧವಾರ ದೊಡ್ಡ ಮಳೆಯು ಬಂದು ಬತ್ತಿಹೋಗಿದ್ದ ಕುಡಿಯುವನೀರುಕಟ್ಟೆಗೆ ೪ ತಿಂಗಳುವರೆಗಾಗುವಷ್ಟು ನೀರು ಬಂದು ನೀರಿಗಾಗಿ ಕಷ್ಟಪಡುತ್ತಿದ್ದ ಜನರಿಗೆ ಮಹದಾನಂದವಾಗಿದೆ. ಈ ತಾಲ್ಲೂಕಿನ ಒಂದು ಗ್ರಾಮದಲ್ಲಿ ಕೆಲ ದಿನಗಳ ಕೆಳಗೆ ದೊಡ್ಡ ಮಳೆಯು ಬರುತ್ತಿರುವಾಗ್ಗೆ ಕುರಿಯನ್ನು ಕಾಯುತ್ತಿದ್ದವರು ತಮ್ಮ ಕುರಿಗಳ ಸಮೇತ ಒಂದು ದೊಡ್ಡ ಮರದ ಕೆಳಗೆ ಬಂದು ನಿಂತಿಕೊಂಡಿರುವಲ್ಲಿ ದೊಡ್ಡ ಸಿಡಿಲು ಬಡಿದು ೭ ಜನರೂ ೩೦ ಕುರಿಗಳೂ ದಗ್ಧವಾದರೆಂದು ತಿಳಿಯಬರುತ್ತದೆ.

ರಾಜಧಾನಿಯಲ್ಲಿ ಕಳೆದ ಶುಕ್ರವಾರ ರಾತ್ರಿ ೨-೩ ಅಂಗುಲದ ವರೆಗೆ ಮಳೆಯು ಆಗಿ ಕೆರೆಗಳಿಗೆ ಬಹಳ ನೀರು ಬಂದಿರುತ್ತದೆ. ಕಳೆದ ಬುಧವಾರ ಆದ ಮಳೆಯಲ್ಲಿ ಕೋಟೆಯ ವರಹಾಸ್ವಾಮಿಯ ದೇವಸ್ಥಾನದ ಗರ್ಭಗುಡಿಗೆ ಸಿಡಿಲು ಬಡಿದು ಕಟ್ಟಡಕ್ಕಪಾಯವನ್ನುಂಟುಮಾಡಿದುದಲ್ಲದೆ ಅದೇ ದಿವಸ ಮ|| ಅಣ್ಣಾಯ್ಯಪಂಡಿತರ ಮನೆಯಿಂದೀಚೆಗೆ ಸ್ವಲ್ಪ ದೂರದಲ್ಲಿ ಹಿಂದೆ ಪ್ರೋಸ್ಕ್ರಾಪೀಸಿಡಲ್ಪಟ್ಟಿದ್ದ ಮನೆಗೂ ಸಿಡಿಲು ಬಡಿದು ಕೆಲಭಾಗವನ್ನು ಹಾಳುಮಾಡಿತು. ಈ ಸಂವತ್ಸರ ಸಿಡಿಲಿನಪಾಯವು ವಿಶೇಷವಾಗಿ ಜನರಿಗೆ ಬಹಳ ಭೀತಿಯನ್ನುಂಟುಮಾಡಿರುತ್ತದೆ.

ಕೋಲಾರ ಬಂಗಾರದ ಗಣಿಗಳಹತ್ತಿರ ಒಂದು ದೊಡ್ಡ ಹುಲಿಯು ಕಾಣಿಸಿಕೊಳ್ಳಲು ಜನರು ಭಯವಿಹ್ವಲರಾದರು. ಅದು ಒಬ್ಬನನ್ನು ತನ್ನ ಪಂಜಾದಿಂದ ಹೊಡೆದು ಗಾಯಮಾಡಿತು. ಒಂದು ಪೊದೆಯ ಮಗ್ಗುಲಹಳ್ಳದಲ್ಲಿ ಅಡಗಿಕೊಂಡಿತು. ಚೀಫ್ ಸೂಪರ್‌ವೈಜರಾದ ಆರ್. ಜೋನ್ಸ್ ಎಂಬ ಶಿಕಾರಿದಾರರಿಗೆ ಈ ಸುದ್ದಿಯು ಗೊತ್ತಾಗಲು, ಅವರು ಬಂದು ತುಪಾಕಿಯ ಸದ್ದನ್ನುಮಾಡಿ ಪೊದೆಯಿಂದ ಈಚೆಗೆ ಹುಲಿಯನ್ನು ಹೊರಡಿಸಿದರು. ಹುಲಿಯು ರೋಷದಿಂದೆದ್ದು ಈ ಸಾಹೇಬರ ಕಡೆಗೆ ಬರುತ್ತಿರುವಲ್ಲಿ ೧೦ ಗಜಗಳದೂರದಿಂದ ಅವರು ಗುಂಡು ಹಾರಿಸಲು ಗುರಿತಪ್ಪಿ ಹುಲಿಯು ಅವರಮೇಲೆ ಬಿದ್ದು ಪರಚಿತು. ಕೈತುಪಾಕಿಯು ಬಿದ್ದುಹೋಯಿತು. ಅಷ್ಟರಲ್ಲಿ ಹುಲಿಯು ಬೇರೇಕಡೆಗೆ ಓಡುತ್ತಿರುವಲ್ಲಿ ಜೋನ್ಸ್‌ರವರು ಸುಧಾರಿಸಿಕೊಂಡೆದ್ದು ಮರಳಿ ತುಪಾಕಿಯಿಂದ ೨ ಸಾರಿ ಗುಂಡುಗಳನ್ನು ಹೊಡೆದು ಹುಲಿಯನ್ನು ಕೊಂದರು. ಅದು ೬|| ಅಡಿಯುದ್ದವಿದ್ದಿತು.

ಯುದ್ಧವಾರ್ತೆಯು.

ಪಶ್ಚಿಮರಣರಂಗ.

ಕಳೆದೆರಡುಮೂರುವಾರಗಳಲ್ಲಿ ಫ್ರೆಂಚರು ಜರ್ಮನರಮೇಲೆ ತೀಕ್ಷ್ಣಯುದ್ಧಗಳನ್ನು ಮಾಡಿ, ಕಾರೆನ್ಸಿ ಅಬ್ಲಾಯಿನ್ ಸೌಚೇಜು ಎಂಬ ಸ್ಥಲಗಳನ್ನು ವಶಪಡಿಸಿಕೊಂಡರು. ಆಸಮಯಗಳಲ್ಲಿ ನಡೆಯಿಸಿದ ಯುದ್ಧಗಳಲ್ಲಿ ಎಂದರೆ ಮೇ ತಾ|| ೮ರಿಂದ ಜೂನ್ ತಾ|| ೧ರ ವರೆಗೆ ೩೧೦೦ ಮಂದಿ ಜರ್ಮನ್ ಸೈನಿಕರನ್ನು ಫ್ರೆಂಚರು ಸೆರೆಹಿಡಿದಿರುವರು. ರಣಾಂಗಣದಲ್ಲಿ ಬಿದ್ದಿದ್ದ ಜರ್ಮನರ ೨೬೦೦ ಹೆಣಗಳನ್ನು ಹೂಳಿದರು. ಫ್ರೆಂಚರ ಕಡೆಯೂ ೮೨೦೦ ಮಂದಿಗಳು ನಷ್ಟವಾಗಿರುವರು.

ಸ್ವಲ್ಪ ಬಿಡುವಾದಾಗ ಪಶ್ಚಿಮರಣರಂಗದಲ್ಲಿ ಮಿತ್ರಮಂಡಲಿ ಸೈನಿಕರು ವಿನೋದದಾಟಗಳನ್ನು ಆಡುತ್ತಿರುವುದುಂಟು. ಉತ್ತರಫ್ಲಾಂಡರ್ಸಿನಲ್ಲಿ ಯುದ್ಧರಂಗಕ್ಕೆ ಒಂದೆರಡುಮೈಲಿಗಳ ದೂರದಲ್ಲಿ ನಮ್ಮ ಭಾರತೀಯಸೈನಿಕರು ಕೆಲವು ಆಟಗಳನ್ನಾಡಿದರು. ಇಂಗ್ಲೀಷ್ ಫ್ರೆಂಚ್ ಅಲ್‌ಜೀರ್ಸಿನ ಸೈನಿಕರುಗಳನೇಕರು ಅದನ್ನು ನೋಡುವುದಕ್ಕೆ ಹೋಗಿದ್ದರು. ಭಾರತೀಯಸ್ವಾರರು ಕುದುರೆಗಳಮೇಲೆ ಕುಳಿತು ಚಿತ್ರವಿಚಿತ್ರವಾಗಿ ತಿರುಗಾಡಿಸಿ ಮಾಡಿದ ಸ್ವಾರಿಯು ಬಹಳ ಆಶ್ಚರ್ಯಕರವಾಗಿದ್ದುದರಿಂದ ನೋಡಿದ ಸೈನಿಕರು ಬಹಳ ಸಂತೋಷಪಟ್ಟರು.

ಆಂಗ್ಲೇಯಸೈನಿಕರು ಬೆಲ್ಜಿಯಂದೇಶದಲ್ಲಿ ಜೋರ್ಕಬೇಕಿನ ಹತ್ತಿರವಿರುವ ಛಾಟೋಹೋಕ್ ಎಂಬ ಊರನ್ನು ಜರ್ಮನರಿಂದ ಬಿಡಿಸಿ ಹಿಡಿದುಕೊಂಡಿರುತ್ತಾರೆ. ಅರ್‍ರಾಸಿಗೆ ಉತ್ತರದಲ್ಲಿ ೧೨ ಮೈಲಿಗಳ ದೂರದೊಳಗೆ ಫ್ರಾನ್ಸಿನವರು ಜರ್ಮನರಮೇಲೆ ತೀವ್ರವಾಗಿ ಕಾದಾಡುತ್ತಿದ್ದಾರೆ. ಇಲ್ಲಿ ಲೇಂಬ್ರಿತ್ ಎಂದು ಕರೆಯಲ್ಪಡುತ್ತಿರುವ ೨ ಮೈಲಿಯಗಲದ ಒಂದು ಪ್ರದೇಶವಿದೆ. ಇದರೊಳಗೆಲ್ಲಾ ಶತ್ರುಗಳ ಕಂದಕಗಳೇ ತುಂಬಿವೆ. ಭೂಮಿಯೊಳಗೆ ಮೈಲಿಗಟ್ಟಲೆಯ ಕಂದಕಗಳು ತೋಡಲ್ಪಟ್ಟಿವೆ. ಇದನ್ನು ಹಿಡಿಯಲು ಫ್ರೆಂಚರು ಸಾಹಸಪಡುತ್ತಿದ್ದಾರೆ. ಇದರಲ್ಲಿ ೨ ಭಾಗವನ್ನು ಆಕ್ರಮಿಸಿಕೊಂಡಿದ್ದಾರೆ. ಇದುವರೆಗೆ ಫ್ರೆಂಚ್ ಸೈನಿಕರು ಆ ಪ್ರಾಂತದಲ್ಲಿ ಜರ್ಮನರು ಏರ್ಪಡಿಸಿಕೊಂಡಿದ್ದ ಬಲೀಯವಾದ ಸ್ಥಾನಗಳನ್ನೆಲ್ಲಾ ವಶಪಡಿಸಿಕೊಂಡುಬಿಟ್ಟರು. ಈಲೇಬ್ರಿಂಕ್ ಎಂಬ ಸ್ಥಾನವೊಂದುಮಾತ್ರ ಉಳಿದಿದೆ. ಲೇನ್ಸಿಗೆ ಹೋಗುವ ದಾರಿಯಲ್ಲಿ ಅಡ್ಡಿಯಾಗಿರುವುದು ಇದೊಂದೇ ಆಗಿರುತ್ತದೆ. ಇದನ್ನು ಫ್ರೆಂಚ್‌ಅಶ್ವಸೈನಿಕರು ಹಿಡಿಯಲು ಬಹಳ ಶೌರ್ಯತೋರಿಸುತ್ತ ೧೦-೧೨ ದಿನಗಳಿಂದ ಅಲ್ಲೇ ಕಾದಾಡುತ್ತಿದ್ದಾರೆ. ಸೌಚೇಜು ಗ್ರಾಮದಹತ್ತಿರ ಉತ್ತರದಕ್ಷಿಣದಲ್ಲಿರುವ ಶತ್ರುಗಳ ಕಂದಕಗಳನ್ನೂ ಅಲ್ಲಿದ್ದ ಒಂದು ಸಕ್ಕರೆಯ ಯಂತ್ರಶಾಲೆಯನ್ನೂ ಸಹ ಫ್ರೆಂಚರು ಹಿಡಿದುಕೊಂಡರು. ಅದಕ್ಕೆ ವಾಯವ್ಯದಲ್ಲಿರುವ ಇನ್ನೂ ಕೆಲವು ಜರ್ಮನರ ಸ್ಥಾನಗಳನ್ನೂ ಆಕ್ರಮಿಸಿಕೊಂಡರು. ಇವನ್ನೆಲ್ಲಾ ಬಿಡಿಸಿಕೊಳ್ಳಬೇಕೆಂದು ಜರ್ಮನರು ಹಗಲೂರಾತ್ರಿ ಅನೇಕಸಾರಿ ಮೇಲೆಬಿದ್ದು ಕಾದಾಡಿದರೂ ನಷ್ಟಪಟ್ಟು ಹಿಂದೆಗೆದೋಡಿರುವರು. ಈಪ್ರೆಸ್ ಜಿಲ್ಲೆಯಲ್ಲಿ ಮರಳಿ ಯುದ್ಧವಾಯಿತು. ಜರ್ಮನ್ ಸೈನಿಕರಿಗೆ ಬಹಳ ನಷ್ಟವಾಯಿತು. ಏಟುತಿಂದವರು ಬೆಲ್ಜಿಯಂ ವೈದ್ಯಶಾಲೆಯ ತುಂಬಾ ತುಂಬಿದರು. ಅರ್‍ರಾಸಿಗೆ ಉತ್ತರದಲ್ಲಿ ನಡೆಯುತ್ತಿರುವ ಘೋರಯುದ್ಧದಲ್ಲಿ ಫ್ರೆಂಚರು ಮುಂದಾಗುತ್ತಿರುವುದನ್ನು ಬಿಟ್ಟಿಲ್ಲ. ಶತ್ರುಗಳ ಕಂದಕಗಳನ್ನು ಹಿಡಿಯುತ್ತಲೇ ಇದ್ದಾರೆ. ಒಂದುಸಲ ಜರ್ಮನರು ಹಲವು ಮೋಟಾರುಗಳಮೇಲೆ ಬಹಳ ಮಂದಿ ಸೈನಿಕರನ್ನು ಸಹಾಯಕ್ಕೆ ಕರೆದುಕೊಂಡುಬಂದು ಯುದ್ಧಮಾಡಿದರು. ಅವರನ್ನೆಲ್ಲಾ ಫ್ರೆಂಚರು ಪೂರ್ಣವಾಗಿ ಸೋಲಿಸಿ ಓಡಿಸಿದರು. ೨ ಸಾವಿರಮಂದಿ ಜರ್ಮನ್‌ಸೈನಿಕರು ರಣಾರಂಗದಲ್ಲೇ ಸತ್ತುಬಿದ್ದಿದ್ದರು. ೨೫೦ ಮಂದಿಗಳನ್ನೂ ೬ ಫಿರಂಗಿಗಳನ್ನೂ ಸೆರೆಹಿಡಿದರು. ಈಗಣ ಯುದ್ಧಗಳಲ್ಲಿ ಫ್ರೆಂಚರು ಜರ್ಮನರ ವಿಷಧೂಮಪ್ರಯೋಗಕ್ಕೆ ಪ್ರತಿಯಾಗಿ ಒಂದುತೆರದ ದ್ರಾವಕವನ್ನು ಶತ್ರುಸೈನಿಕರಮೇಲೆ ಪ್ರಯೋಗಿಸುತ್ತಿದ್ದಾರೆ. ಅದು ಸೋಂಕಿದವರು ಕೈಕಾಲುಹಿಡಿದುಕೊಂಡು ಯುದ್ಧಕ್ರಿಯೆಗೆ ನಿರುಪಯೋಗರಾಗುತ್ತಾರೆ.

ಮುಖ್ಯಮಂತ್ರಿ ಆಸ್ಕ್ವಿತ್‌ರವರು ರಣರಂಗಕ್ಕೆ ದಯೆಮಾಡಿಸಿದ್ದುದು.

ಮುಖ್ಯಮಂತ್ರಿಯವರು ಇಂಗ್ಲೆಂಡಿನಿಂದ ಫ್ರಾನ್ಸಿಗೆ ಬಂದು ಫೀಲ್ಡ್‌ಮಾರ್ಷಲ್ ಸರ್ ಜಾನ್ ಫ್ರೆಂಚರವರೊಡನೆ ಅತಿ ವೇಗಗಾಮಿಯಾದ ಮೋಟಾರುಬಂಡಿಗಳಲ್ಲಿ ಕುಳಿತು ಏರಡಾವೃತ್ತಿ ಆಂಗ್ಲಸೈನ್ಯ ಸ್ಥಿತಿಗತಿಯನ್ನೂ ಕಾರ್ಯಕ್ರಮ ಮೊದಲಾದುವುಗಳನ್ನೂ ಚೆನ್ನಾಗಿ ಪರಿಶೀಲಿಸಿ ಆನಂದಿಸಿದರು. ಇವರು ರಣರಂಗಕ್ಕೆ ಹೋದಾಗ ಪ್ರತಿಯೊಂದುಸ್ಥಲದಲ್ಲಿಯೂ ಸೈನಿಕರು ಸುಸ್ವಾಗತಮಾಡಿದರು. ಒಂದು ಉನ್ನತವಾದ ಗುಡ್ಡದಮೇಲೆ ನಿಂತು ದೂರದರ್ಶಕಯಂತ್ರಸಹಾಯದಿಂದ ರಣರಂಗದಲ್ಲಿರುವ ಕಂದಕಗಳು, ಫಿರಂಗಿಗಳನ್ನು ಹಾರಿಸುತ್ತಿರುವುದು, ಹೊಗೆಯೇಳುತ್ತಿರುವುದು ಮೊದಲಾದುವುಗಳನ್ನೆಲ್ಲಾ ನೋಡಿದರು. ಈಪ್ರೆಸ್‌ಪಟ್ಟಣವು ಹಾಳುಬಿದ್ದಿರುವುದನ್ನು ನೋಡಿದರು. ಒಂದು ಸೈನ್ಯದ ಮಧ್ಯದಲ್ಲಿ ಹೋಗಿ ನಿಂತು ಅವರ ಧೈರ್ಯಸ್ಥೈರ್ಯ ಪರಾಕ್ರಮಾದಿಗಳನ್ನು ಕುರಿತು ಶ್ಲಾಘಿಸಿ ಉಪನ್ಯಾಸಮಾಡಿದರು. ಅದನ್ನು ಕೇಳುತ್ತಿದ್ದಾಗ ಸೈನಿಕರು ಅಧಿಕೋಲ್ಲಾಸವನ್ನು ತೋರಿಸಿದರು. ಬಳಿಕ ಮಂತ್ರಿಯವರು ಸೈನಿಕವೈದ್ಯಾಲಯಕ್ಕೆ ಹೋಗಿ ಅಲ್ಲಿನ ಚಿಕಿತ್ಸೆ ಉಪಚಾರಕ್ರಮಗಳನ್ನು ನೋಡಿ ಅಲ್ಲಿ ಮಲಗಿದ್ದವರನ್ನು ಮೃದುವಚನಗಳಿಂದ ಆನಂದಪಡಿಸಿದರು. ಅಲ್ಲಿನ ಜನರು ಇವರನ್ನು ಮಂತ್ರೀಶರೆಂದು ತಿಳಿಯದೆ ತಮ್ಮ ನಿತ್ಯದ ವಿನೋದದಂತೆ ಆಗಲೂ ಬಿಸಿನೀರಿನತೊಟ್ಟಿಗಳಲ್ಲಿ ಮಕ್ಕಳಂತೆ ಧುಮುಕಿ ಕೇಕೆಹಾಕಿಕೊಂಡು ಸ್ನಾನಮಾಡುತ್ತಿದ್ದರು. ಅದನ್ನು ಮಂತ್ರೀಶರು ನೋಡಿ ಬಹಳ ಆನಂದಪಟ್ಟರು. ಸ್ವಲ್ಪಹೊತ್ತಿನಮೇಲೆ ಅವರಿಗೆಲ್ಲಾ ಇವರು ಮಂತ್ರೀಶರೆಂದು ತಿಳಿದಬಳಿಕ ಓಡಿಬಂದು ಸುತ್ತಲೂ ಗುಂಪುಕೂಡಿ ಉತ್ಸಾಹದಿಂದ ಕೇಕೆಹಾಕಿದುದನ್ನು ಕಂಡು ಮಂತ್ರೀಶರು ಮಿತಿಮೀರಿದಾನಂದದಿಂದ ವಿಶೇಷವಾಗಿ ನಕ್ಕರು. ಆ ಚಿಕಿತ್ಸಾಲಯದ

ಸರ್ವವಿಧದ ಏರ್ಪಾಟನ್ನೂ ಕಂಡು ಅಭಿನಂದಿಸಿದರು. ಮತ್ತೊಂದುದಿನ ಹಾಗೆಯೇ ರಣರಂಗಕ್ಕೆಹೋಗಿ ಎರಡುಪಕ್ಕಗಳಲ್ಲೂ ವರಸೆಯಾಗಿ ನಿಂತಿದ್ದ ಆಯುಧಪಾಣಿಗಳಾಗಿದ್ದ ಘೂರ್ಕಾ, ಸಿಕ್, ಪಂಜಾಬ್, ಪಠಾಣಿ, ಕನಡಾ ಮೊದಲಾದ ಸೈನಿಕರ ಪಂಕ್ತಿಗಳನ್ನೂ ಅವರ ಹಸ್ತಗಳಲ್ಲಿ ಮಿರುಮಿರನೆ ಮಿರುಗುತ್ತಿದ್ದ ನಾನಾವಿಧದ ಆಯುಧಪಂಕ್ತಿಗಳನ್ನೂ, ಸೈನಿಕರ ಶೌರ್ಯಗಾಂಭೀರ್ಯೋಪೇತ ಮುಖಮುದ್ರೆಗಳನ್ನೂ ನೋಡಿ ಆಂಗ್ಲಸಾಮ್ರಾಜ್ಯದ ವೀರಶ್ರೀಸೌಭಾಗ್ಯಕ್ಕಾಗಿ ತಲೆದೂಗಿದರು. ಬಳಿಕ ಸರ್ ಜಾನ್ ಫ್ರೆಂಚರ ಮನೆಯಲ್ಲಿ ಜನರಲ್ ಜಾಫ್ರೆ, ಫೋಕ್ ಮಿಲ್ರೆಂಡ್‌ರವರೊಡನೆ ಸ್ವಲ್ಪಹೊತ್ತು ಮಾತನಾಡುತ್ತಿದ್ದು ತೆರಳಿದರು. ಮಂತ್ರೀಶರು ಹೀಗೆ ರಣಾಂಗಣಕ್ಕೆ ದರ್ಶನವನ್ನಿತ್ತು ಹೋದುದರಿಂದ ಅಲ್ಲಿನ ಆಂಗ್ಲಸೈನ್ಯವೆಲ್ಲಾ ವಿಶೇಷೋತ್ಸಾಹಗೊಂಡಿತು.

ಈಗ ಪ್ರಕೃತದ ಯುದ್ಧಕ್ಕೆ ಸೇನಾಸಾಹಾಯ್ಯಕ್ಕಿಂತ ಮದ್ದುಗುಂಡುಗಳ ಸಹಾಯವು ವಿಶೇಷವಾಗಿ ಬೇಕಾಗಿರುವುದರಿಂದಲೂ, ಸಂಯುಕ್ತರಕಡೆ ಆಂಗ್ಲೇಯರ ಸೇನೆಯು ಯಥೇಚ್ಛವಾಗಿ ಸೇರಿ, ಅವರಿಗೆ ಒದಗಿಸಬೇಕಾದಷ್ಟು ಮದ್ದುಗುಂಡುಗಳು ಇನ್ನೂ ಒದಗದಿರುವುದರಿಂದಲೂ, ಇದರ ಪೂರೈಕೆಯ ಮೇಲ್ವಿಚಾರಣೆಗಾಗಿ ಸಮರ್ಥರಾದ ಲಾಯಿಡ್‌ಜಾರ್ಜ್‌ರವರು ಆಂಗ್ಲಮಂತ್ರಿಮಂಡಲದಲ್ಲಿ ನಿಯುಕ್ತರಾಗಿರುವರು. ಅವರೂ ಮುಖ್ಯಮಂತ್ರಿ ಆಸ್ಕ್ವಿತ್‌ರವರೂ ಸಹ ಇಂಗ್ಲೆಂಡ್‌ದೇಶದ ಹಲವುಭಾಗಗಳಲ್ಲಿ ಸಂಚರಿಸುತ್ತಲೂ ಮದ್ದುಗುಂಡಿನ ಆವಶ್ಯಕತೆಯನ್ನು ಕುರಿತು ಉಪನ್ಯಾಸಮಾಡುತ್ತಲೂ ಸಮಯಬಿದ್ದರೆ ಇದರ ತಯಾರಿಯನ್ನು ಸರ್ಕಾರದವರು ಬಲಾತ್ಕಾರದಿಂದ ಜನಗಳಮೂಲಕ ಮಾಡಿಸಬೇಕಾಗುವುದೆಂದು ಹೇಳುತ್ತಲೂ ಇರುವರು. ಅವರುಗಳ ಉಪದೇಶದಮೇಲೆ ಹಲವು ಕರ್ಮಾಗಾರಗಳಲ್ಲಿ ಪ್ರಜೆಗಳು ವಿಶೇಷವಾಗಿ ಸೇರಿ ಹಗಲೂ ರಾತ್ರಿ ಕೆಲಸಮಾಡುತ್ತಲೂ ವಿಶೇಷವಾಗಿ ಮದ್ದುಗುಂಡುಗಳನ್ನು ಮಾಡುತ್ತಲೂ ಇರುವರು.

ಪೂರ್ವರಣರಂಗ.

ಈ ಮಧ್ಯೆ ಜರ್ಮನರು ಆಸ್ಟ್ರಿಯನ್ನರಿಗೆ ಅಭಯದಾನಮಾಡಿ, ಜರ್ಮನ್ ಚಕ್ರವರ್ತಿಯೇ ಪೂರ್ವರಣರಂಗಕ್ಕೆ ಹೋಗಿದ್ದುದಕ್ಕೆ ತಕ್ಕ ಫಲಪ್ರಾಪ್ತಿಯು ಅವರುಗಳಿಗೆ ಆದಂತಹ ವರ್ತಮಾನಗಳು ಕಳೆದವಾರದಲ್ಲಿ ಬಂದಿರುತ್ತವೆ. ಜರ್ಮನ್ ಆಸ್ಟ್ರಿಯನ್ ಸೈನ್ಯಗಳು ೧೨|| ಲಕ್ಷದವರೆಗೆ ಕೂಡಿ ಸಾವಿರಾರು ಫಿರಂಗಿಗಳನ್ನೂ ಪರ್ವತೋಪಮಾನವಾದ ಮದ್ದುಗುಂಡುಗಳನ್ನೂ ಸಾಗಿಸಿ, ಗೆಲೀಷಿಯಾದಲ್ಲಿ ರಷ್ಯನರ ಮೇಲೆ ಬಿದ್ದು ಗಂಟೆಗೆ ಲಕ್ಷಾಂತರ ಗುಂಡುಗಳಂತೆ ಹೊಡೆಯುತ್ತಾ ಕಾರ್ಪೇತಿಯನ್ ಪರ್ವತಪ್ರಾಂತದಿಂದಲೂ ಹಿಂದಕ್ಕೆ ದಬ್ಬುತ್ತಾಬಂದರು. ಅಲ್ಲಿ ಕಳೆದ ೨-೩ ವಾರಗಳಲ್ಲಿ ನಡೆದ ಯುದ್ಧವು ಅಭೂತಪೂರ್ವವೆನಿಸಿಕೊಂಡಿತು. ಶತ್ರುಗಳಿಗೆ ಇದ್ದಷ್ಟು ಫಿರಂಗಿಗಳೂ ಮದ್ದುಗುಂಡುಗಳ ಸಮೃದ್ಧಿಯೂ ರಷ್ಯನರಿಗೆ ಇರಲಿಲ್ಲ. ಆದಕಾರಣ ಇದ್ದ ಸ್ಥಲದಲ್ಲೇ ನಿಂತು ಶತ್ರುಗಳಿಗೆ ಯುದ್ಧಕೊಡುವುದಾಗಿದ್ದರೆ ರಷ್ಯನರ ಸೇನಾನಷ್ಟವು ಅಪರಿಮಿತವಾಗಿಹೋಗುವಂತಿದ್ದಿತು. ಆದುಕಾರಣ ರಷ್ಯನ್ ಸೇನಾಪತಿಗಳಾದ ನಿಕೋಲಸ್‌ರವರು ದೂರದೃಷ್ಟಿಯಿಟ್ಟು ತಮ್ಮ ಸೈನ್ಯಕ್ಕೆ ಹೆಚ್ಚು ಹಾನಿ ತಟ್ಟದಂತೆ ಜಾಗ್ರತೆಯನ್ನು ಮಾಡಿ ತಾವೇ ಹಿಂದಕ್ಕೆ ಸರಿದು, ಪ್ರಿಜೆಮ್ಸಿಲ್ ಪಟ್ಟಣವನ್ನು ಬಿಟ್ಟುಕೊಟ್ಟುಹೋದರು. ಈ ಪಟ್ಟಣವನ್ನು ಉಳಿಸಿಕೊಳ್ಳಬೇಕೆಂದು ಹಟಮಾಡುವುದರಲ್ಲಿ ರಷ್ಯನರಿಗೆ ನಷ್ಟವೇ ಹೊರತು ಲಾಭವಿರಲಿಲ್ಲ. ಪ್ರಿಜೆಮ್ಸಿಲ್ ಪಟ್ಟಣವನ್ನು ಬಿಟ್ಟುಹೋಗುವಾಗ ಆಸ್ಟ್ರಿಯನ್ನರೇ ಅದರ ಕೋಟೆಗಳನ್ನೂ ಫಿರಂಗಿ ಮೊದಲಾದವುಗಳನ್ನೂ ನಾಶಪಡಿಸಿ ಹೋಗಿದ್ದರು. ಬಹುಭಾಗ ಕೋಟೆಯೆಲ್ಲಾ ಹಾಳ್ಮಾಡಲ್ಪಟ್ಟಿದ್ದಿತು. ಈಚೆಗೆ ರಷ್ಯನರು ಅಲ್ಲಿದ್ದ ಆಸ್ಟ್ರಿಯನ್ನರ ಸಾಮಗ್ರಿಗಳನ್ನೂ ಸೈನಿಕರನ್ನೂ ಸಹ ತಮ್ಮ ದೇಶಕ್ಕೆ ಸಾಗಿಸಿಬಿಟ್ಟಿದ್ದರು. ಪುನಃ ಕೋಟೆಕೊತ್ತಲಗಳನ್ನು ಜೀರ್ಣೋದ್ಧಾರಪಡಿಸಿರಲಿಲ್ಲ. ಸಾಗಿಸಲು ಸಾಧ್ಯವಲ್ಲದ ವಸ್ತುಗಳನ್ನೆಲ್ಲಾ ರಷ್ಯನರು ಈಗ ಹಾಳ್ಮಾಡಿಬಿಟ್ಟು ಬರಿಯ ಬಯಲಾಗಿದ್ದ ಪ್ರಿಜಮ್ಸಿಲನ್ನು ಶತ್ರುಗಳಿಗೆ ವಶಪಡಿಸಿಬಿಟ್ಟರು. ಇದರಿಂದ ಜರ್ಮನರು ಆಸ್ಟ್ರಿಯನ್ನರಮುಂದೆ ತಮ್ಮ ಬಹದೂರ್‌ಗಿರಿಯನ್ನು ಸ್ವಲ್ಪಕಾಲ ಕೊಚ್ಚಿಕೊಳ್ಳುವುದಕ್ಕೆ ಅವಕಾಶವಾಯಿತು. ಇಷ್ಟಾಗುವುದರೊಳಗೂ ರಷ್ಯನರು ಶತ್ರುಗಳನ್ನು ಸುಮ್ಮನೆ ಬಿಟ್ಟಿಲ್ಲ. ರಷ್ಯನರಿಗೆ ಸಂಯುಕ್ತರ ಕಡೆಯಿಂದ ಯಾವಸಹಾಯವಾಗುವುದಕ್ಕೂ ಮಾರ್ಗವಿಲ್ಲ. ಡಾರ್ಡನಲ್ಸ್ ಮೂಲಕವೂ ಮಾರ್ಮೊರಾಸಮುದ್ರದಮೂಲಕವೂ ಏನಿದ್ದರೂ ಅವರಿಗೆ ಸಾಹಾಯ್ಯಸಾಮಗ್ರಿಗಳು ಒದಗಬೇಕು. ಪ್ರಸ್ತುತಸ್ಥಿತಿಯಲ್ಲಿ ಆ ಮಾರ್ಗವು ಬಿಡುವಾಗಿಲ್ಲ. ಆದುಕಾರಣ ರಷ್ಯನರು ತಕ್ಕಷ್ಟು ಮದ್ದುಗುಂಡಿನ ಪರಸೈನ್ಯದ ಸಹಾಯವಿಲ್ಲದೆ ತಾವೊಬ್ಬರೇ ಸೆಣಸಾಡುತ್ತಿದ್ದರೂ, ಗೆಲೀಷಿಯಾ ಯುದ್ಧದೊಳಗೆ ಜರ್ಮನರಕಡೆಗೆ ೩ ಲಕ್ಷಸೇನೆಯ ನಷ್ಟವನ್ನು ಮಾಡಿದ್ದಾರೆ. ಆಸ್ಟ್ರಿಯಾದವರಂತೂ ತಮಗೆ ಮಿತಿಯಿಲ್ಲದಷ್ಟು ನಷ್ಟವಾಗಿರುವುದೆಂದು ತಾವೇ ಪ್ರಕಟಿಸಿಕೊಂಡಿದ್ದಾರೆ. ಇವರಕಡೆಯ ೬೦ ಸಾವಿರಮಂದಿ ಸೈನಿಕರನ್ನು ರಷ್ಯನರು ಹಿಡಿದುಕೊಂಡಿದ್ದಾರೆ. ಸ್ಥಿತಿಗತಿಗಳ ಪರ್ಯಾಲೋಚಿಸಿದರೆ ರಷ್ಯನ್‌ಸೇನೆಯು ಗೆಲೀಷಿಯಾದಲ್ಲಿ ಬಹುಭಾಗವನ್ನುಬಿಟ್ಟು ಹಿಮ್ಮೆಟ್ಟಿದ್ದರೂ ಗೆಲೀಷಿಯಾವನ್ನೆಲ್ಲಾ ಸಂಪೂರ್ಣವಾಗಿ ಬಿಟ್ಟುಕೊಟ್ಟಿಲ್ಲ. ಸಮಯಸಾಧಿಸಿ ತಮ್ಮ ಕೊರತೆಯನ್ನು ಪರಿಹರಿಸಿಕೊಂಡು ಮತ್ತೊಂದು ಅಭಿಯೋಗವನ್ನು ಮಾಡಿ ಶತ್ರುಗಳಿಗೆ ಮುಯ್ಯಾಡದೆ ಅವರು ಬಿಡುವಹಾಗೆ ತೋರಲಿಲ್ಲ. ಪರಮಮೇಧಾವಿಗಳಾದ ರಷ್ಯನ್‌ಸೇನಾಪತಿ ನಿಕೋಲಸ್‌ರವರು ಎಷ್ಟೋಕಡೆ ಹಿಮ್ಮೆಟ್ಟಿದವರಂತೆ ಶತ್ರುಗಳಿಗೆ ತೋರಿಸಿ ಸಂಧಿಸಾಧಿಸಿ ಸಮುದ್ರತರಂಗದಂತೆ ನುಗ್ಗಿ ಶತ್ರುಗಳನ್ನು ಪತನಮಾಡಿದ ಉದಾಹರಣೆಗಳೆಷ್ಟೋ ಹಿಂದೆ ನಡೆದಿದೆ. ರಷ್ಯನರ ಈ ಹಿಂದೆಗೆಯುವಿಕೆಯು ಆಕ್ರಮಣದ ವೇಗವನ್ನು ಹೆಚ್ಚಿಸಿಕೊಳ್ಳಲು ಹಿಂದಾಗಿಹೋಗುವ ಟಗರಿನ ಗತಿಯಂತೆ ಇರುವುದೆಂದು ಹೇಳಬೇಕಾಗಿರುವುದು. ಇತ್ತ ನೀಸರ್‌ನದಿಯ ಕೆಳಭಾಗಕ್ಕೆ ಶತ್ರುಗಳು ಬಹಳಸೈನ್ಯವನ್ನು ಸಾಗಿಸಿಕೊಂಡುಹೋಗಿ ಯುದ್ಧಮಾಡಿ ಸ್ಟ್ರೀಜ್‌ಪಟ್ಟಣವನ್ನು ವಶಪಡಿಸಿಕೊಂಡರೆಂದು ಪ್ರಕಟಮಾಡಲ್ಪಟ್ಟಿದೆ. ಅದು ನಿಜವಾದ ವರ್ತಮಾನವಾಗಿಲ್ಲ. ವಾಯವ್ಯಭಾಗದಲ್ಲಿದ್ದ ರಷ್ಯನ್ ಸೇನಾಪಂಕ್ತಿಯನ್ನು ಶತ್ರುಸೈನ್ಯವು ಭೇದಿಸಿತೆಂದು ವರ್ತಮಾನಬಂದಿದೆ. ಉತ್ತರದಲ್ಲಿ ಪೋಲಂಡಿನೊಳಗೆ ವಾರ್ಸಾಪ್ರಾಂತದಲ್ಲಿಯೂ ಜರ್ಮನರು ಹಾವಳಿಯನ್ನು ಹೆಚ್ಚುಮಾಡಿದರು. ಅಲ್ಲಿ ಜರ್ಮನರು ರಷ್ಯನ್ ಸೇನಾಪಂಕ್ತಿಯ ಮೇಲೆ ವಿಷಧೂಮಪ್ರಯೋಗವನ್ನು ಮಾಡಿದರು. ಗಾಳಿಯು ಅವರಕಡೆಗೇ ಬೀಸುತ್ತಿದ್ದುದರಿಂದ ಜರ್ಮನರಿಗೇ ಅದು ವ್ಯಾಪಿಸಲು, ಅವರು ತಮ್ಮ ಕಂದಕಗಳನ್ನು ಬಿಟ್ಟು ಓಡಬೇಕಾಯಿತು. ಆಗ ರಷ್ಯನರು ಅವರಮೇಲೆ ಫಿರಂಗಿಗುಂಡುಗಳ ಮಳೆಯನ್ನು ಕರೆದು ನಾಶಪಡಿಸಿದರು. ಈ ಕಡೆ ಜರ್ಮನರು ವಿಷಧೂಮಪ್ರಯೋಗಮಾಡುವಾಗ ಕಸಕಡ್ಡಿಗಳನ್ನು ಗುಡ್ಡೆಹಾಕಿ ಅದರಮೇಲೆ ಒಂದುತೆರದ ದ್ರಾವಕವನ್ನು ಸುರಿದು ಬೆಂಕಿಹೊತ್ತಿಸಿ ಅದರಿಂದೆದ್ದ ಹೊಗೆಯು ಗಾಳಿಯಿಂದ ಶತ್ರುಗಳಮೇಲೆ ಬಡಿದುಹೋಗುವಂತೆ ಮಾಡಿದ್ದರು. ಅವರು ಪಶ್ಚಿಮರಣರಂಗದಲ್ಲಿ ವಿಷಧೂಮದ ಗುಂಡುಗಳನ್ನು ೨-೩ ಫರ್ಲಾಂಗುಗಳ ದೂರದಿಂದ ಹೊಡೆಯುತ್ತಿದ್ದರು. ಈ ಪೂರ್ವರಣರಂಗದಲ್ಲಿ ಮೇಲೆಕಂಡ ತೆರದ ಪ್ರಯೋಗವನ್ನು ೧೦-೨೦ ಮೈಲಿಗಳ ದೂರದಿಂದಲೂ ಮಾಡುತ್ತಿರುವರು. ಬಳಿಕ ಜರ್ಮನರು ಬಾಜ್ರಾ ನದಿಯಮೇಲಿದ್ದ ರಷ್ಯನ್ ಸೇನಾಸ್ಥಾನದಮೇಲೆ ಬಿದ್ದರು. ಆದರೆ ಅವರು ಜಗ್ಗದೆ ಕಾದಾಡಿ ಜರ್ಮನರನ್ನು ಹಿಮ್ಮೆಟ್ಟಿಸಿದರು.

ಉತ್ತರದಲ್ಲಿ ಬಾಲ್ಟಿಕ್‌ಜಿಲ್ಲೆಯೊಳಗೆ ಘೋರಯುದ್ಧವು ನಡೆದಿತು. ಅಲ್ಲಿಗೆ ಬಂದಿರುವ ಜರ್ಮನ್ ಮುಖ್ಯ ಸೇನಾಪತಿಯಾಗಿರುವ ಜನರಲ್ ಫ್ರಿಟ್ವಿಟ್ಜರವರನ್ನೂ ಕೆಲ ಸೈನಿಕೋದ್ಯೋಗಿಗಳನ್ನೂ ಅಲ್ಲಿರುವ ಕಾವಲಿನ ರಷ್ಯನ್ ಸೈನ್ಯವು ಹಿಡಿದುಕೊಂಡಿರುವುವು. ಜರ್ಮನ್ ಜನರಲ್ಲಿಗೆ ಕೆಲವು ಗಾಯಗಳೂ ಆಗಿರುವುವು. ಬಾಲ್ಟಿಕ್‌ಸಮುದ್ರದ ರೇವುಪಟ್ಟಣವಾದ ಲಿಬೋವಿನ ಹತ್ತಿರ ರಷ್ಯನರಿಗೆ ಒಂದು ಒಳ್ಳೆಯ ಜಯಲಾಭವಾಯಿತು. ರಷ್ಯನರ ಒಂದು ಸೇನೆಯು ಗುಟ್ಟುಕೊಡದಂತೆ ದಕ್ಷಿಣದಿಂದ ನುಗ್ಗಿ, ಜರ್ಮನ್ ಸೇನಾಪಂಕ್ತಿಯನ್ನು ಭೇದಿಸಿ, ಅವರದೇಶದ ಮೇಮಿಲ್ಲಿನಿಂದ ರಷ್ಯಾದ ಲಿಬೋವಿನಲ್ಲಿರುವ ಜರ್ಮನ್ ಸೇನೆಗೆ ಸಂಬಂಧವು ತಪ್ಪಿಹೋಗುವಂತೆ ಮಾಡಿತು. ಇದರಿಂದ ಜರ್ಮನರು ಭೂಮಿಯಕಡೆಯಿಂದಲೂ ರಷ್ಯನರಮೇಲೆ ಕಾಳಗಮಾಡುವುದಕ್ಕೆ ಅವಕಾಶವು ತಪ್ಪಿಹೋದಂತಾಯಿತು. ಲಿಬೋವಿಗೆ ದಕ್ಷಿಣದಲ್ಲಿರುವ ೨ ಪಟ್ಟಣಗಳನ್ನು ರಷ್ಯನರು ಜರ್ಮನರಿಂದ ಕಿತ್ತುಕೊಂಡರು. ಈ ಕೆಲಸವನ್ನು ಇತ್ತ ದಕ್ಷಿಣದಿಂದ ಬಂದಸೇನೆಯು ಮಾಡುತ್ತಿರುವಾಗ ಲಿಬೋವಿನಕಡೆಯಿಂದ ದಕ್ಷಿಣಕ್ಕೆ ಮತ್ತೊಂದು ಸೇನಾನಿವಹವು ಬಂದು ಸಮುದ್ರದಕಡೆಗೆ ಹೋಗುವುದಕ್ಕಿದ್ದ ಒಂದೇ ಒಂದು ಮಾರ್ಗವನ್ನೂ ಆಕ್ರಮಿಸಿಕೊಂಡುಬಿಟ್ಟಿತು. ಇದರಿಂದ ಜರ್ಮನ್ ಸೈನ್ಯವು ಬೋನಿಗೆ ಬಿದ್ದ ಇಲಿಯ ಅವಸ್ಥೆಯನ್ನು ಹೊಂದಿದಂತಾಯಿತು.

ಬಾಲ್ಟಿಕ್ ಸಮುದ್ರದಲ್ಲಿ ನುಗ್ಗಿಬಂದ ಜರ್ಮನ್ ನೌಕಾಸೇನೆಯ ಆಗಮನವನ್ನು ರಿಗಾಸಿಂಧು ಶಾಖೆಯಲ್ಲಿದ್ದ ರಷ್ಯನ್ ಸಬ್‌ಮೆರೀನುಗಳು ತಿಳಿದು, ಮುಂದಾಗಿ ಹೋಗಿ, ಆ ಸಂಗತಿಯನ್ನು ತಮ್ಮ ನೌಕಾದಳಕ್ಕೆ ತಿಳಿಯಿಸಲಾಗಿ, ರಷ್ಯನ್ ನೌಕಾದಳವು ಇದಿರಾಗಿ ಹೊರಟು ಕಾಣಿಸಿಕೊಂಡಕೂಡಲೇ ಜರ್ಮನ್‌ನೌಕಾದಳವು ಹಿಮ್ಮೆಟ್ಟಿಹೋಯಿತು. ಜರ್ಮನರ ನೌಕಾವಿಮಾನಗಳು ಸ್ವಲ್ಪಕಾಲ ಹೋರಾಡಿದುವು. ರಷ್ಯನರ ನೌಕೆಯ ಫಿರಂಗಿಗಳು ಅವನ್ನೆಲ್ಲಾ ಹೊಡೆದೋಡಿಸಿದುವು. ಈಚೆಗೆ ಮತ್ತೊಂದುದಿನ ಜರ್ಮನರ ಯುದ್ಧದ ಹಡಗುಗಳು ರಷ್ಯನ್ ಸಮುದ್ರತೀರಕ್ಕೆ ಬರಲು, ರಷ್ಯನರ ಸಬ್‌ಮೆರೀನುಗಳು ಅಟ್ಟಿಸಿಕೊಂಡು ಹೋದುವು. ಮತ್ತು ಅವುಗಳ ಆಗಮನಕ್ಕೆ ತಡೆಯಾಗಿ ರಷ್ಯನರು ನೀರಿನಲ್ಲಿ ಮದ್ದಿನ ಗೋಳಗಳನ್ನು ಹಾಕಿದ್ದರು. ಇದರಿಂದ ಜರ್ಮನರ ನೌಕೆಗಳಲ್ಲಿ ಮೂರು ನಷ್ಟವಾಗಿರುವುವು. ಯೂನ್ಸಿ ಎಂಬ ಒಂದು ರಷ್ಯನ್ ನೌಕೆಯನ್ನು ಜರ್ಮನ್ ಸಬ್‌ಮೆರೀನು ಮುಳುಗಿಸಿತು. ಅದರಲ್ಲಿದ್ದವರಲ್ಲಿ ೩೨ ಮಂದಿಗಳು ಬದುಕಿದರು. ಈ ಬಾಲ್ಟಿಕ್‌ಸಮುದ್ರದ ಯುದ್ಧವು ಒಟ್ಟಿಗೆ ೬ ಘಂಟೆಗಳಕಾಲ ನಡೆದಿತು.

ಇಟಲಿ.

ಇಟಲಿಯನರ ಯುದ್ಧನಾವೆಗಳು ಡಾಲ್ಮಟಿಕ್ ದ್ವೀಪಗಳಲ್ಲಿ ಶತ್ರುಗಳ ಸ್ಥಿತಿಗತಿಯನ್ನು ತಿಳಿಯುವುದಕ್ಕೆ ಹೋಗಿ ಅಲ್ಲಿದ್ದ ಅವರ ವಾಯುವಾರ್ತಾನಿಲಯ ಮೊದಲಾದುವುಗಳನ್ನು ನಾಶಮಾಡಿದುವು. ಆದರೂ ಆಸ್ಟ್ರಿಯನ್ನರ ಯುದ್ಧದ ಹಡಗುಗಳು ಹೊರಕ್ಕೆ ಬರಲಿಲ್ಲ. ಈಚೆಗೆ ಇಟಲಿಯ ಭೂಸೈನ್ಯಗಳು ಟ್ರೆಂಟಿನೋ ಪ್ರಾಂತದಲ್ಲೂ ಕಾರ್ಡೋಸಿರಸ್ಸಿಗೆ ಪೂರ್ವಭಾಗದಲ್ಲೂ ಮುಂದಕ್ಕೆ ನಿದಾನವಾಗಿ ಸಾಗುತ್ತಲೇ ಇವೆ. ಆಸ್ಟ್ರಿಯಾದವರು ದುರ್ಗಗಳನ್ನು ನಿರ್ಮಿಸಿಕೊಳ್ಳುತ್ತಿದ್ದಾರೆ. ಇಟಲಿಯವರು ಶತ್ರುಗಳ ಕೆಲವು ಉನ್ನತಸ್ಥಾನಗಳನ್ನು ಹಿಡಿದರು. ಅವರು ಹಿಡಿದ ಒಂದು ದೊಡ್ಡ ಗುಡ್ಡದಮೇಲಿನಿಂದ ಫಿರಂಗಿಗುಂಡುಗಳನ್ನು ಹೊಡೆದರೆ ಗುಂಡುಗಳು ಶತ್ರುಗಳ ದುರ್ಗಗಳಮೇಲೆ ಹೋಗಿ ಬಡಿಯುವಂತಿರುತ್ತವೆ. ಟ್ರೆಂಟೋವಿಗೆ ಪೂರ್ವದಲ್ಲಿ ಒಂದು ಉನ್ನತವಾದ ಗುಡ್ಡವನ್ನು ಇಟಲಿಯವರು ಹಿಡಿದು ಅಲ್ಲಿಗೆ ತಮ್ಮ ಸೈನ್ಯವನ್ನು ಸೇರಿಸುತ್ತಿದ್ದಾರೆ. ಇದು ಇಸಾಂಜೋ ನದಿಯಪಕ್ಕದಲ್ಲಿದೆ. ಇದೇ ಪ್ರಾಂತದಲ್ಲಿ ಆಸ್ಟ್ರಿಯನ್ನರೂ ಕೂಡ ಬಹಳ ಸೈನ್ಯವನ್ನೂ ಫಿರಂಗಿಗಳನ್ನೂ ಬಹಳ ಮದ್ದುಗುಂಡುಗಳನ್ನೂ ಸೇರಿಸಿದ್ದಾರೆ. ಅಲ್ಲಿ ಉಭಯಪಕ್ಷಕ್ಕೂ ಭೀಕರಯುದ್ಧವಾಗುತ್ತಿದೆ. ಶತ್ರುಗಳ ಪ್ರಾಬಲ್ಯವನ್ನು ನೋಡಿ ಇಟಲಿಯವರು ಅಲ್ಲಿಗೆ ಹೊಸಸೈನ್ಯವನ್ನು ಬರಮಾಡಿಕೊಂಡು, ಸೆಣಸುತ್ತಿದ್ದಾರೆ. ಇದುವರೆಗೆ ಇಟಲಿಯವರ ೫ ಲಕ್ಷ ಸೈನ್ಯಗಳು ಆಸ್ಟ್ರಿಯಾದೊಳಕ್ಕೆ ಕಳುಹಿಸಲ್ಪಟ್ಟಿವೆಯಂತೆ. ಜಯಾಪಜಯಗಳು ಎರಡು ಕಡೆಗೂ ಆಗುತ್ತಿವೆ. ಪೂರ್ವದಿಕ್ಕಿನಲ್ಲಿ ಸ್ಟೆಲ್ವಿಯೋದಿಂದ ಹಿಡಿದು ಸಮುದ್ರದವರೆಗೂ ಅಲ್ಲಲ್ಲಿಗೆ ಯುದ್ಧವು ನಡೆಯುತ್ತಲೇ ಇದೆ. ಇಲ್ಲಿ ಹಲವುಕಡೆಯ ಆಸ್ಟ್ರಿಯನ್ ಕೋಟೆಗಳು ಇಟಲಿಯವರಿಂದ ಧ್ವಂಸಮಾಡಲ್ಪಟ್ಟುವು. ಈಕಡೆ ನಡೆದ ಯುದ್ಧದಲ್ಲಿ ಇಟಲಿಯವರ ಫಿರಂಗಿಗಳು ಶತ್ರುಗಳ ಫಿರಂಗಿಗಳಿಗಿಂತ ಚೆನ್ನಾಗಿ ಕೆಲಸ ಮಾಡಿರುತ್ತವೆ. ಆಸ್ಟ್ರಿಯನ್ನರು ಕಾರ್ಪೇತಿಯನ್ ಬೆಟ್ಟದಕಡೆಯಲ್ಲಿದ್ದ ತಮ್ಮ ಸೈನ್ಯದಲ್ಲಿ ವಿಶೇಷಭಾಗವನ್ನು ಈಕಡೆಗೆ ಕರೆಯಿಸಿಕೊಳ್ಳುತ್ತಿದ್ದಾರೆ. ಈ ಪ್ರಾಂತವು ಪರ್ವತಪ್ರದೇಶವಾಗಿಯೂ ಶತ್ರುಗಳು ಹಲವು ಕಂದಕಗಳನ್ನು ತೋಡಿಕೊಂಡು ದುರ್ಗಮವಾದ ಸ್ಥಲದಲ್ಲಿರುವುದರಿಂದ ಇಲ್ಲಿ ಅವರಮೇಲೆ ಕಾದಾಡುವುದು ಇಟಲಿಯವರಿಗೆ ಸುಲಭವಾಗಿಲ್ಲ. ಅವರಿಗೆ ಬಹಳ ನಷ್ಟಕಷ್ಟಗಳುಂಟಾಗಿರುವುವು. ಆದರೂ ಒಂದೆರಡು ಬೆಟ್ಟಗಳನ್ನು ಸ್ವಾಧೀನಪಡಿಸಿಕೊಂಡರು. ಬಹಳ ಶೌರ್ಯದಿಂದ ಇವರ ಫಿರಂಗಿದಳವು ಶತ್ರುಗಳಮೇಲೆ ಮೂರುದಿನಗಳವರೆಗೆ ಹೋರಾಡಿ ಸೋಲಿಸಿತು. ಇವರ ಅಶ್ವಸೈನ್ಯಗಳು ಇಸೋಂಜೊ ನದಿಯನ್ನು ದಾಟಿದುವು. ಹೊಳೆಯ ಬಲಪಕ್ಕದಲ್ಲಿ ಇಟಲಿಸೈನಿಕರು ಕಂದಕಗಳನ್ನು ಏರ್ಪಡಿಸಿಕೊಂಡು ಸ್ಥಾನಬಲವನ್ನು ಮಾಡಿರುವರು. ಉತ್ತರದಲ್ಲೂ ಆಸ್ಟ್ರಿಯನ್ ಎಲ್ಲೆಯ ಪ್ರಾಂತದ ಬೆಟ್ಟಸೀಮೆಗಳಲ್ಲಿ ಯುದ್ಧವು ನಡೆಯುತ್ತಿದೆ. ಅಲ್ಲಿ ಇದಿರಾದ ಆಸ್ಟ್ರಿಯನ್ ಸೈನ್ಯವು ವಿಶೇಷ ಶೌರ್ಯವನ್ನು ತೋರಿಸಿಲ್ಲ. ಅಲ್ಲೂ ಕೆಲವು ಮುಖ್ಯಸ್ಥಾನಗಳನ್ನು ಇಟಲಿಯವರು ಹಿಡಿದುಕೊಂಡು ಮುಂದಕ್ಕೆ ಸಾಗುತ್ತಿದ್ದಾರೆ. ಇಂಗ್ಲೆಂಡಿನಲ್ಲಿ ಇಟಲಿದೇಶದ ಅರ್ಥಿಕಮಂತ್ರಿಯವರೂ, ಇಂಗ್ಲೀಷ್ ದೇಶದ ಅರ್ಥಿಕಮಂತ್ರಿಗಳೂ ಸೇರಿ ಯುದ್ಧಕಾಲದ ಹಣದ ವೆಚ್ಚ ಮೊದಲಾದುವುಗಳ ವಿಷಯವನ್ನು ಕುರಿತು ಮಾತನಾಡಿ, ಯುದ್ಧಕಾರ್ಯಕ್ಕೆ ಉಭಯದೇಶದವರೂ ಸೇನೆಯನ್ನೂ ಹಡಗುಗಳನ್ನೂ ಒಬ್ಬರಿಗೊಬ್ಬರು ಸಹಾಯಮಾಡಿಕೊಳ್ಳುವಂತೆಯೇ ಹಣದ ವಿಷಯದಲ್ಲೂ ಒಬ್ಬರಿಗೊಬ್ಬರು ಸಹಾಯಮಾಡುವುದಾಗಿ ಏರ್ಪಡಿಸಿಕೊಂಡರು.

ತುರ್ಕಿ.

ಯುದ್ಧಸಾಮಗ್ರಿಗಳನ್ನು ತುಂಬಿಕೊಂಡು ಡಾರ್ಡನಲ್ಸಿಗೆ ಹೋಗುತ್ತಿದ್ದ ೨ ತುರ್ಕಿಯ ಹಡಗುಗಳನ್ನು ಮಾರ್ಮೊರಾ ಸಮುದ್ರದಲ್ಲಿ ಒಂದು ಇಂಗ್ಲೀಷ್ ಸಬ್‌ಮೆರೀನು ಟಾರ್ಪೆಡೋ ಬಡಿತದಿಂದ ಮುಳುಗಿಸಿಬಿಟ್ಟಿತು. ಇದೇ ಇಂಗ್ಲೀಷ್ ಸ್ಟೀಮರು ಮಾರ್ಮೊರಾಸಮುದ್ರದಲ್ಲಿದ್ದ ಯುದ್ಧಸಾಮಗ್ರಿಗಳಿಂದ ತುಂಬಿದ್ದ ಒಂದು ಜರ್ಮನ್ ದೊಡ್ಡ ಹಡಗನ್ನೂ ಮುಳುಗಿಸಿತು.

ಕಾಕಸಸ್ ಪ್ರಾಂತ್ಯದಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ರಷ್ಯನ್ ಸೈನ್ಯಗಳು ತುರ್ಕಿ ಸೈನ್ಯವನ್ನು ವಾನ್ ಪ್ರಾಂತದ ಕೋರಕಿನಹತ್ತಿರ ಅಟ್ಟಿಕೊಂಡುಹೋಗುತ್ತಿರುವಹಾಗೂ ಮಂಘಲಾಂಡಿನಹತ್ತಿರವೂ ರಷ್ಯನ್ ಸೈನ್ಯಗಳು ಜಯಲಾಭಗೊಂಡು ಶತ್ರುಗಳನ್ನು ಅಟ್ಟಿಕೊಂಡುಹೋಗುತ್ತಿರುವಂತೆಯೂ ವರ್ತಮಾನ ಬಂದಿದೆ. ತುರ್ಕಿಯವರು ತಮ್ಮ ರಾಜಧಾನಿಯ ರಕ್ಷಣೆಗಾಗಿ ಕಾಕಸಸ್‌ಪ್ರಾಂತದ ತಮ್ಮ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಂಡಿರುವರಂತೆ.

ಮಿಸಪೊಟೋಮಿಯಾದಲ್ಲಿ ನಡೆದ ಯುದ್ಧದ ವಿಷಯವಾಗಿ ನಮ್ಮ ವೈಸ್ರಾಯರಿಗೆ ಜನರಲ್ ನಿಕ್ಸನ್‌ರವರುಕಳುಹಿಸಿರುವ ವಾರ್ತೆಯಲ್ಲಿ ಹೀಗೆ ತಿಳಿಯಿಸಿರುತ್ತಾರೆ.—ಒಂದು ಚಿಕ್ಕ ನೌಕಾದಳದೊಡನೆ ನಮ್ಮ ಕೆಲವು ಪದಾತಿಸೈನ್ಯವು ಹೋಗಲು ತುರ್ಕಿಯವರಕಡೆಯ ಅಮರಾದ ಗೌರ್ನರು ಜೂನ್ ತಾ|| ೩ರಲ್ಲಿ ಹಗಲು ೧|| ಘಂಟೆಯ ಹೊತ್ತಿನಲ್ಲಿ ೨೦ ಮಂದಿ ಉದ್ಯೋಗಿಗಳೊಡನೆಯೂ ೨೦೦ ಮಂದಿ ಸೈನಿಕರೊಡನೆಯೂ ಶರಣಾಗತರಾಗಿ ಬಂದರು. ಅಮರಾವು ಈಗ ನಮ್ಮ ಸ್ವಾಧೀನದಲ್ಲಿದೆ. ಜನರಲ್ ಗರಿಂಜ್‌ರವರು ಓಡಿಸಿಕೊಂಡುಹೋದ ಬೇರೊಂದು ತುರ್ಕಿ ಸೈನ್ಯದಲ್ಲೂ ಹಲವರು ನಮಗೆ ವಶರಾದರು. ಒಟ್ಟು ೮೦ ಮಂದಿ ಉದ್ಯೋಗಿಗಳೂ ೨೦೦೦ ಮಂದಿ ಸೈನಿಕರೂ ೭ ಯುದ್ಧದ ಫಿರಂಗಿಗಳೂ ೭ ಹಡಗಿನ ಫಿರಂಗಿಗಳೂ ಮರ್ಮೆರಿಸ್ ಎಂಬ ಒಂದು ಯುದ್ಧದಹಡಗೂ ೧೨ ಸಾಧಾರಣದ ಹಡಗುಗಳೂ ೧ ದೊಡ್ಡ ನದೀನೌಕೆಯೂ ೩ ಸಣ್ಣ ಹಡಗುಗಳೂ ಬಹಳ ತುಪಾಕಿಗಳೂ ನಮಗೆ ಸಿಕ್ಕಿದುವು. ಅವರಲ್ಲಿ ೬ ಮಂದಿ ಜರ್ಮನರೂ ಸಿಕ್ಕಿಬಿದ್ದರು. ಇಬ್ಬರು ಸತ್ತರು ಎಂಬುದಾಗಿ.

ಇತ್ತ ಸಿಸಿಲಿದ್ವೀಪಕಲ್ಪದಲ್ಲೂ ಸಿರಿಯಾದಲ್ಲೂ ಇದ್ದ ತುರ್ಕಿಸೇನೆಯಲ್ಲಿ ಬಹಳಭಾಗವು ಡಾರ್ಡನಲ್ಸಿಗೆ ಹೊರಟುಹೋದುದರಿಂದ ಈಜಿಪ್ಟ್‌ಪ್ರಜೆಗಳಿಗೆ ಸಂತೋಷವುಂಟಾಗಿದೆ.

ಡಾರ್ಡನಲ್ಸಿನ ಗಾಲಿಪೋಲಿ ದ್ವೀಪಕಲ್ಪದಲ್ಲಿ ಭೂಸೈನ್ಯಕ್ಕೆ ಯುದ್ಧಗಳಾಗುತ್ತಲೇ ಇವೆ. ದಕ್ಷಿಣಭಾಗದಲ್ಲಿದ್ದ ತುರ್ಕಿಸೈನ್ಯಗಳನ್ನು ಸೋಲಿಸಿ ಅವರ ಕಂದಕಗಳನ್ನು ನಮ್ಮವರು ಹಿಡಿದುಕೊಂಡು ಮುಂದಕ್ಕೆ ಸಾಗುತ್ತಿದ್ದಾರೆ. ಹೊಸದಾಗಿ ಹಿಡಿದ ಸ್ಥಾನಗಳನ್ನು ಬಲಪಡಿಸಿಕೊಳ್ಳುತ್ತಿದ್ದಾರೆ. ಹತರಾದ ಸೆರೆಸಿಕ್ಕಿದ ಶತ್ರುಸೈನ್ಯದಲ್ಲಿ ಜರ್ಮನರು ಅನೇಕರಿರುವರು.

ಆಕಾಶಯಾನಗಳು

ಕಳೆದ ತಾ|| ೪ರಲ್ಲಿ ೧೯ ಫ್ರೆಂಚ್ ವಿಮಾನಗಳು ಜರ್ಮನ್ ಯುವರಾಜರಿದ್ದ ಶಿಬಿರದ ಮೇಲಕ್ಕೇರಿಹೋಗಿ ೧೨೮ ಸಿಡಿಮದ್ದಿನ ಗೋಳಗಳನ್ನು ಹಾಕಿ ಕೆಲವು ಬಾಣಪ್ರಯೋಗವನ್ನು ಮಾಡಿ ಬಂದಿರುತ್ತವೆ. ಶಿಬಿರದಲ್ಲಿ ಹಲವುಮಂದಿ ಸತ್ತರೆಂದು ಜರ್ಮನರು ಪ್ರಕಟಿಸಿದ್ದಾರೆ.

ತಾ|| ೬ ರ ರಾತ್ರಿ ಜರ್ಮನರ ಒಂದು ಆಕಾಶನೌಕೆಯು ಇಂಗ್ಲೆಂಡ್ ಪೂರ್ವಸಮುದ್ರತೀರಕ್ಕೆ ಬಂದು ಕೆಲವು ಸಿಡಿಮದ್ದಿನ ಗೋಳಗಳನ್ನು ಹಾಕಿತು. ೨ ಕಡೆ ಬೆಂಕಿಹೊತ್ತಿತು; ೪ ಮಂದಿ ಸತ್ತರು; ೪೦ ಮಂದಿಗೆ ಗಾಯವಾಯಿತು. ಇದಕ್ಕೆ ಮುಯ್ಯಾಗಿ ಇಂಗ್ಲಿಷ್ ವೈಮಾನಿಕರು ಕಳೆದ ತಾ|| ೭ ರಲ್ಲಿ ಬ್ರುಸಲ್ಲಿಗೆ ಉತ್ತರದಲ್ಲಿ ಈವ್ರೆ ಎಂಬಲ್ಲಿರುವ ಜರ್ಮನರ ವಿಮಾನಶಾಲೆಯ ಮೇಲೆ ಹಲವು ಸಿಡಿಮದ್ದುಗಳನ್ನು ಹಾಕಿ ಸುಟ್ಟುಬಿಟ್ಟರು. ಆ ಆಲಯವೆಲ್ಲಾ ಸುಟ್ಟು ಬಹುಮೇಲಕ್ಕೆ ಉರಿಯೆದ್ದುದು ಕಂಡುಬಂದಿತು. ಇನ್ನೊಬ್ಬ ಆಂಗ್ಲವೈಮಾನಿಕನು ಘೆಂಟಿಗೂ ಬ್ರುಜಲ್ಸಿಗೂ ಮಧ್ಯದಲ್ಲಿ ೬ ಸಾವಿರ ಅಡಿ ಎತ್ತರದಲ್ಲಿ ಒಂದು ಜರ್ಮನ್ ಆಕಾಶನಾವೆಯ ಮೇಲೆ ಸಿಡಿಮದ್ದನ್ನು ಹಾಕಿದನು. ಅದು ಸುಟ್ಟು ನೆಲಕ್ಕೆ ಬಿದ್ದಿತು. ಆ ಶತ್ರುವಿಮಾನವು ಸುಟ್ಟು ಒಡೆದ ರಭಸದೇಟಿಗೆ ಆಂಗ್ಲವೈಮಾನವು ತಲೆಕೆಳಗಾಯಿತು. ಅದರಲ್ಲಿದ್ದ ಇಂಗ್ಲಿಷ್ ವೈಮಾನಿಕನು ಬೇಗನೆ ಸರಿಪಡಿಸಿಕೊಂಡು ಸುರಕ್ಷಿತವಾಗಿ ಸ್ವಸ್ಥಾನಕ್ಕೆ ಬಂದು ಸೇರಿದನು.

ಒಂದು ಕಡೆ ಜರ್ಮನ್ ಸೇನಾಪಂಕ್ತಿಯ ಹತ್ತಿರ ಒಂದು ಆಂಗ್ಲವಿಮಾನವು ಒಂದು ಜರ್ಮನ್ ವಿಮಾನದ ಮೇಲೆ ಸಿಡಿಮದ್ದುಗಳನ್ನು ಇಡುತ್ತಿದ್ದಿತು ಅಷ್ಟರಲ್ಲಿ ಜರ್ಮನರ ೧೦ ವಿಮಾನಗಳು ಎತ್ತಲಿಂದಲೋ ಬಂದು ಆಂಗ್ಲವಿಮಾನವನ್ನು ಸುತ್ತುಗಟ್ಟಿದುವು. ಅವರೇಟಿನಿಂದ ಆಂಗ್ಲವಿಮಾನದ ಎರಡುಪಕ್ಕದ ರೆಕ್ಕೆಗಳೂ ಮುರಿದುಹೋಗಿ ವಿಮಾನವು ಬಿದ್ದುಹೋಗುವಂತಾಗಲು, ಒಳಗಿದ್ದ ವೈಮಾನಿಕನು ಥಟ್ಟನೆ ಹತ್ತಿರವಿದ್ದ ಜರ್ಮನ್ ವಿಮಾನವೊಂದಕ್ಕೆ ಹಾರಿ, ಅದರಲ್ಲಿದ್ದ ವೈಮಾನಿಕನನ್ನು ಕೆಳಕ್ಕೆ ಕೆಡಹಿ ಒಳಗಿದ್ದ ಯಂತ್ರದ ಫಿರಂಗಿಯಿಂದ ೩ ಜರ್ಮನ್ ವಿಮಾನಗಳನ್ನು ಹೊಡೆದು ಕೆಳಕ್ಕೆ ಕೆಡಹಿ, ತಾನು ಡರ್ಕಕರ್ಕಿಯ ಕಡೆಗೆ ತಿರಿಗಿ ಬಂದನಂತೆ! ಈ ಅದ್ಭುತಸಾಹಸವು ಶ್ಲಾಘನೀಯವೇ ಸರಿ.

ಭರತಖಂಡದ ವೃತ್ತಾಂತಗಳು.

ಈಗಿನ ಯುದ್ಧ ಕಾರಣದಿಂದ ಬರ್ಮಾದೇಶದ ವ್ಯಾಪಾರವು ಕಳೆದ ವರ್ಷಕ್ಕಿಂತ ಈ ವರ್ಷದಲ್ಲಿ ೧೯ ಕೋಟಿಯೂ ೧೪ ಲಕ್ಷದಷ್ಟು ಕಡಿಮೆಯಾಗಿ ಹೋಗಿದೆ.

ಬಂಗಾಳದಲ್ಲಿ ಕಳೆದ ಏಪ್ರಿಲ್ ತಿಂಗಳೊಂದರಲ್ಲಿ ೧೧೪ ಸುಲಿಗೆಗಳ್ಳತನಗಳಾಗಿರುವುವು. ಇವುಗಳೊಳಗೆ ಬೇಕರ್ ಗಂಜ್ ಜಿಲ್ಲೆಯೊಂದರಲ್ಲೇ ೮೪ ನಡೆದಿರುವುವು.

ಲಾಹೋರಿನಲ್ಲಿ ನಡೆಯುತ್ತಿರುವ ರಾಜದ್ರೋಹಾಪರಾಧದ ದೊಡ್ಡವ್ಯಾಜ್ಯವಿಚಾರದಲ್ಲಿ ಕಮಿಷನರುಗಳು ಇದುವರೆಗೆ ೩೬೦ ಮಂದಿಗಳ ಸಾಕ್ಷ್ಯವನ್ನು ಬರೆದುಕೊಂಡಿದ್ದಾರೆ.

ಬೊಂಬಾಯಿಯಲ್ಲಿ ಕೂಡಿದ್ದ ಮಹಾರಾಷ್ಟ್ರ ಸಾಹಿತ್ಯ ಪರಿಷತ್ತಿನವರು ಸೆಕೆಂಡರಿ ಪಾಠಶಾಲೆಗಳಲ್ಲಿ ವಿದ್ಯಾಭ್ಯಾಸವನ್ನು ಮರಾಟಿಭಾಷೆಯಿಂದಲೇ ಮಾಡಿಸುವುದವಶ್ಯಕವೆಂದು ತೀರ್ಮಾನಿಸಿರುವರು.

ಸಿಂಧುದೇಶದಲ್ಲಿರುವ ನಾರ್ತ್‌ವೆಸ್ಟರ್ನ್ ರೆಲ್ವೆಕಂಪನಿಯವರಿಗೆ ರಂಗಿನ ಪದಾರ್ಥಗಳು ಬೇಕಾಗಿರುವುದರಿಂದ ಭರತಖಂಡದಲ್ಲಿ ನಿರ್ಮಿತವಾದ ರಂಗುಗಳನ್ನೇ ಅಪೇಕ್ಷಿಸಿ ಅಂಥವುಗಳನ್ನೇ ಕೊಡಲು ಒಪ್ಪುವ ಕಂಟ್ರಾಕ್ಟರುಗಳು ಟೆಂಡರನ್ನು ಕೊಡಬಹುದೆಂದು ಪ್ರಕಟಿರುತ್ತಾರೆ. ಸ್ವದೇಶೀಯೋದ್ಯಮಕ್ಕೆ ಇಂಥ ಪ್ರಯತ್ನಗಳೇ ವಿಶೇಷ ಪ್ರೋತ್ಸಾಹಕಗಳಲ್ಲವೆ?

ಮಧುರೆಯಲ್ಲಿ ಒಬ್ಬ ಮುನ್ಸಿಪಲ್ ಕೌನ್ಸಿಲರು ಹೊಸದಾಗಿ ಮಾಡಲ್ಪಡುವ ಚುನಾವಣೆಯಲ್ಲಿ ತನಗೆ ಪ್ರಜೆಗಳ ಮತಗಳು ಸಿಕ್ಕಬೇಕೆಂಬ ಉದ್ದೇಶದಿಂದ, ಕಳೆದೆರಡು ತಿಂಗಳಿಂದಲೂ ಮತವನ್ನು ಕೊಡಲರ್ಹರಾದ ಜನರಿಗೆ ಔತಣವನ್ನು ಮಾಡಿಸಿದ ಕಾರಣ, ಸರ್ಕಾರದವರು ಆ ಕೌನ್ಸಿಲರ ಮೇಲೆ ಅಭಿಯೋಗವನ್ನು ತಂದು ವಿಚಾರಣೆ ನಡೆಯಿಸಬೇಕೆಂದು ಕಲೆಕ್ಟರಿಗೆ ಅಪ್ಪಣೆಮಾಡಿದ್ದಾರೆ.

ಕಳೆದವಾರ ಬಿರುಗಾಳಿ ಮಳೆಗಳಿಂದ ಭರತಖಂಡದಲ್ಲಿ ಹಲವುಕಡೆ ನಷ್ಟವುಂಟಾದ ವಾರ್ತೆಗಳು ಬಂದಿವೆ. ದಿಲ್ಲಿ ಆಗ್ರಾಗಳ ಮಧ್ಯದಲ್ಲಿ ಒಂದು ಕಡೆ ಅರ್ಧಮೈಲಿಗಳ ವರೆಗೆ ತಂತಿಕಂಬಗಳು ಉರುಳಿಹೋಗಿ ವಾರ್ತೆಗಳು ಹೋಗಬರುವುದೇ ಕಷ್ಟವಾಗಿದ್ದಿತು. ಇ. ಬಿ. ಎಸ್. ರೈಲ್ವೆಯಲ್ಲಿ ಚೋರಕೈ ಎಂಬ ನಿಲ್ದಾಣಕ್ಕೆ ದಕ್ಷಿಣದಲ್ಲಿ ೧ ಮೈಲಿಯೊಳಗೆ ಓಡಿಹೋಗುತ್ತಿದ್ದ ಬಂಡಿಗಳೊಳಗೆ ೧೩ ತಲೆಕೆಳಕಾಗಿ ಮಗುಚಿಕೊಂಡುವು.

ಪಂಜಾಬಿಗೆ ಸೇರಿದ ಜವರ್ಲಾಲ್ ಗುಲೇಷಿಯಾ ಎಂಬ ಭಾರತೀಯರು ಬ್ಯಾರಿಸ್ಟರ್ ಪರೀಕ್ಷೆಗೆ ಓದುವುದಕ್ಕಾಗಿ ಸೀಮೆಗೆ ಹೋಗಿದ್ದಾಗ ಅಲ್ಲಿನ ಒಬ್ಬ ಪಾಶ್ಚಾತ್ಯ ಸ್ತ್ರೀಯನ್ನು ಸಂಬಂಧಮಾಡಿಕೊಂಡು ಬಂದರು. ಆಕೆಯು ಕೂಡ ಅವರು ಈಗ ಲಾಹೋರಿನಲ್ಲಿ ವಾಸವಾಗಿದ್ದಾರೆ. ಅವಳಿಗೆ ಪಂಜಾಬಿನ ಆರ್ಯಮತದವರಿಂದ ಪ್ರಾಯಶ್ಚಿತ್ತವನ್ನು ಮಾಡಿಸಿ ಆರ್ಯಮತದೀಕ್ಷೆಯನ್ನು ಆರ್ಯಮತದವರಿಂದ ಕೊಡಿಸಿ ಸಮಾಜಕ್ಕೆ ಸೇರಿಸಿಕೊಂಡರು.

ಕಲ್ಕತ್ತಾ ವಿಶ್ವವಿದ್ಯಾಲಯಕ್ಕೆ ಸರ್ ತಾರಕನಾಥ ಪಾಲಿತ್‌ರವರು ೧೪ ಲಕ್ಷ ರೂ. ಗಳನ್ನು ಧರ್ಮಮಾಡಿದರು ಅವರು ಮೃತರಾದನಂತರ ಅವರ ಮಗನಾದ ಬ್ಯಾರಿಸ್ಟರ್ ಜೆ. ಪಾಲಿತ್‌ರವರು ಆ ಧರ್ಮವು ನಡೆಯಕೂಡದೆಂದೂ, ತನ್ನ ಸಹೋದರರಾದ ಎಲ್. ಪಾಲಿತ್ ಐ. ಸಿ. ಎಸ್. ರವರ ಮೇಲೂ ವಿಶ್ವವಿದ್ಯಾಲಯದವರಮೇಲೂ ವ್ಯಾಜ್ಯವನ್ನು ಹೂಡಿದರು. ಇದನ್ನು ಹೈಕೋರ್ಟಿನ ಇಬ್ಬರು ನ್ಯಾಯಮೂರ್ತಿಗಳು ವಿಚಾರಿಸುತ್ತಿರುವರು.

ಸೀಮೆಯಲ್ಲೂ ಭರತಖಂಡದಲ್ಲೂ ಮುದ್ರಣಸಾಧನಗಳು ಕಂಡುಹಿಡಿಯುವುದಕ್ಕೆ ಮುಂಚೆಯೇ ಮಹಾರಾಷ್ಟ್ರದೇಶದ ಸರ್ ಗಂಗಾಧರರಾವ್‌ರವರ ತಾತಂದಿರು ತಾಮ್ರದ ತಗಡಿನ ಮೇಲೆ ಅಕ್ಷರಗಳನ್ನು ಕೆತ್ತಿಸಿ, ಶಾಯಿಯನ್ನು ಸವರಿ, ನುಣುಪಾದ ಕಾಗದದ ಮೇಲೆ ಒತ್ತಿಸುವ ಏರ್ಪಾಡಿನಿಂದ ಭಗವದ್ಗೀತೆಯ ೧೦೮ ಪ್ರತಿಗಳನ್ನು ಮುದ್ರಿಸಿ ಹಂಚಿದ್ದರೆಂಬ ಸಂಗತಿಯು ಪುಣೆ ನಗರದಲ್ಲಿ ಮೊನ್ನೆತಾನೇ ಕೂಡಿದ್ದ ಮಹಾರಾಷ್ಟ್ರಸಾಹಿತ್ಯಪರಿಷತ್ತಿನಲ್ಲಿ ಗೋಚರಿಸಿತು.

ನೂತನವಾಗಿ ಕಾಶಿಯಲ್ಲಿ ಸ್ಥಾಪಿಸಲ್ಪಡುವ ಹಿಂದೂ ವಿಶ್ವವಿದ್ಯಾಲಯದಲ್ಲಿ ಮಹಮ್ಮದೀಯ ವಿದ್ಯಾರ್ಥಿಗಳು ಸೇರಿ ವೇದಶಾಸ್ತ್ರಾದಿಗಳನ್ನು ಅಭ್ಯಾಸಮಾಡುವುದಕ್ಕೆ ಅವಕಾಶಕೊಡಲ್ಪಡುವುದೆ? ಎಂದು ಕಲ್ಕತ್ತಾದ ಒಂದು ಮುಸಲ್ಮಾನ್ ಪತ್ರಿಕೆಯು ಪ್ರಶ್ನೆಮಾಡಿರುತ್ತದೆ. ಬ್ರಾಹ್ಮಣೇತರರು ವೇದಾಧ್ಯಯನ ಶ್ರವಣಾದಿಗಳನ್ನು ಮಾಡಕೂಡದೆಂಬ ಪೂರ್ವಕಾಲದ ನಿಯಮಗಳೆಲ್ಲಾ ಮಣ್ಣುಗೂಡಿ ಹೋಗಿರುವ ಈಗಿನ ಕಾಲದಲ್ಲಿ ಮಹಮ್ಮದೀಯರಿಗೆ ಅಲ್ಲಿ ವೇದಾಧ್ಯಯನ ಮಾಡಲು ಅಭ್ಯಂತರವುಂಟೆ? ಎಂದು ಮತ್ತೊಂದು ಭಾರತೀಯ ಪತ್ರಿಕೆಯು ಉತ್ತರ ಕೊಟ್ಟಿರುತ್ತದೆ.

ಮೀನುಗಳನ್ನು ಹಿಡಿಯುವ ಬೆಸ್ತರು ತಾವು ಹಿಡಿದ ಮೀನುಗಳಲ್ಲಿ ಸಣ್ಣವನ್ನು ಬಾಯಿಯಲ್ಲಿ ಕಚ್ಚಿ ಕೊಲ್ಲುವುದುಂಟು. ಒಂದು ಕೊಳದಲ್ಲಿ ಒಬ್ಬ ಬೆಸ್ತನು ಮೀನುಗಳನ್ನು ಹಿಡಿಯುವಾಗ ಸಿಕ್ಕಿದ ಒಂದು ಮೀನನ್ನು ಪದ್ಧತಿಯಂತೆ ಬಾಯಿಯಲ್ಲಿ ಕಚ್ಚಿದಾಗ ಅದು ನುಣಿಚಿಕೊಂಡು ಗಂಟಲಿಗೆ ಹೋಗಿ ಅಡ್ಡಲಾಗಿ ತುರುಕಿಕೊಂಡಿತು. ಅದನ್ನು ಹೊರಕ್ಕೆ ಸೆಳೆದುಹಾಕಬೇಕೆಂದು ಅವನು ಎಷ್ಟು ಪ್ರಯತ್ನಮಾಡಿದರೂ ಸಾಧ್ಯವಾಗಲಿಲ್ಲ. ಅವನು ಪ್ರಾಣಭೀತಿಯಿಂದ ಊರಿಗೆ ಓಡಿಹೋಗಲು, ಮಾತ್ರಾದ ವೈದ್ಯಶಾಲೆಗೆ ಅವನನ್ನು ಸಾಗಿಸಿದರು. ಅವನ ಅಪಾಯ ಸ್ಥಿತಿಯನ್ನು ವೈದ್ಯರು ಕಂಡು, ಕೂಡಲೇ ಶಸ್ತ್ರಚಿಕಿತ್ಸೆಯಿಂದ ಅದನ್ನು ಹೊರಕ್ಕೆ ತೆಗೆದರು, ಆದರೆ ಅವನು ಕೆಲಗಂಟೆಗಳೊಳಗಾಗಿ ಸತ್ತುಹೋದನು.

ಪೂರಿ ಜಿಲ್ಲಾದಲ್ಲಿ ಬಿ. ಎ. ಮೊದಲಾದ ಪರೀಕ್ಷೆಯಲ್ಲುತ್ತೀರ್ಣರಾಗಿರುವ ಕೆಲವು ಪಂಡಿತರೇ ಸೇರಿ ಪರಹಿತೇಚ್ಛೆಯಿಂದ ಒಂದು ಹೈಸ್ಕೂಲನ್ನು ಸ್ಥಾಪಿಸಿರುವರು. ಇದಕ್ಕೆ ನೀಲಕಂಠದಾಸ್ ಎಂ. ಎ. ರವರು ಮುಖ್ಯೋಪಾಧ್ಯಾಯರು. ಅವರಿಗೆ ತಿಂಗಳೊಂದಕ್ಕೆ ೮೦ ರೂ.ಗಳ ಮಾಸವೇತನವು, ಇನ್ನಿಬ್ಬರು ಎಂ. ಎ. ಪದವೀಧರರೂ ಮತ್ತು ೧೯ ಮಂದಿ ಪಂಡಿತರೂ ಉಪಾಧ್ಯಾಯರುಗಳಾಗಿರುವರು. ೪ ವರ್ಷಗಳ ಕೆಳಗೆ ೧೯ ಮಂದಿ ಬಾಲಕರಿಂದ ಆರಂಭಿಸಲ್ಪಟ್ಟ ಈ ಶಾಲೆಯು ಈಗ ೮೦೦ ಮಂದಿ ಬಾಲಕರನ್ನು ಹೊಂದಿರುತ್ತದೆ. ಅವರಲ್ಲಿ ೭೦೦ ಮಂದಿ ವಿದ್ಯಾರ್ಥಿಗಳು ವಿದ್ಯಾರ್ಥಿಭೋಜನಶಾಲೆಯಲ್ಲಿದ್ದುಕೊಂಡು ಓದುತ್ತಿದ್ದಾರೆ. ಸರ್ಕಾರದ ಯಾವುದೊಂದು ಸಹಾಯ್ಯವನ್ನೂ ಕೋರದೆ ಇಂಥಾ ಪಾಠಶಾಲೆಯನ್ನು ಸ್ಥಾಪಿಸಿ ಜರುಗಿಸಿಕೊಂಡು ಬರುತ್ತಿರುವ ಮಹನೀಯರು ವಂದನೀಯರಲ್ಲವೆ? ನಮ್ಮ ದಕ್ಷಿಣದೇಶದ ಪಂಡಿತರಲ್ಲಿ ಇಂಥ ಗುಣವನ್ನು ಕಾಣುವುದಾವಾಗ?

ವಿದೇಶ ವೃತ್ತಾಂತಗಳು

ಅಮೇರಿಕಾ ಪ್ರೆಸಿಡೆಂಟರು ಲೂಸಿಟಾನಿಯಾ ಜರ್ಮನಿಗೆ ಬರೆದಿರುವ ಲೇಖನವು ಮಂತ್ರಿಗಳಾಗಿರುವ ಬ್ರೈಯನರವರಿಗೆ ಸಂಮತವಾಗಲಿಲ್ಲ ಅಮೇರಿಕಾವು ಯುದ್ಧಕ್ಕೆ ನಿಲ್ಲುವುದು ದೇಶಕ್ಷೇಮಕ್ಕೆ ಸಾಧಕವಾದುದಲ್ಲವೆಂಬುದು ಅವರ ಮತವಾದುದರಿಂದ ಅವರು ಕೆಲಸಕ್ಕೆ ರಾಜೀನಾಮೆಕೊಟ್ಟರು ಈಗ ರಾಬರ್ಟ್‌ಲಾನ್ಸಿಂಗ್‌ರವರು ಹೊಸಮಂತ್ರಿಗಳಾದರು.

ಸೀಮೆಯಲ್ಲಿ ಷಾಪುಗಳೊಳಗೆ ಕೆಲಸಮಾಡಿಕೊಂಡಿರುವ ಜನರೇ ೪ ಲಕ್ಷದ ೭೦ ಸಾವಿರವಿರುವರು. ಇವರೊಳಗೆ ಸೈನಿಕರಾಗಿ ಸೇರುವುದಕ್ಕೆ ಅರ್ಹವಾದ ವಯಸ್ಸಿನವರು ೩ ಲಕ್ಷದ ೬೦ ಸಾವಿರ ಮಂದಿ ಇರುವರು. ಷಾಪುಗಳ ಮುತ್ಸದ್ದಿಗಳೂ, ಯಾತ್ರಿಕರೂ ಸೇರಿ ೭ ಲಕ್ಷದ ೭೦ ಸಾವಿರ ಮಂದಿಗಳಾಗಿರುವರು. ಇವರಲ್ಲಿ ಸೇನೆಗೆ ಸೇರಲರ್ಹರಾದವರು ೨ ಲಕ್ಷದ ೧೦ ಸಾವಿರ ಮಂದಿಗಳು. ಹೀಗೆ ಅರ್ಹತೆಯುಳ್ಳ ಮೇಲೆಕಂಡ ೬ ಲಕ್ಷದ ೭೦ ಸಾವಿರ ಮಂದಿಗಳೂ ಈಗ ಸೇನೆಯಲ್ಲಿ ಸೇರಿರುವರು.

ಒಬ್ಬ ಜರ್ಮನ್ ಶಾಸ್ತ್ರಜ್ಞನು ಕೆಲವು ರಾಸಾಯನಿಕ ಪದಾರ್ಥಗಳ ಸಮ್ಮೇಳನದಿಂದ ಕಾಫಿ ಪಾನಕದಂತಹ ಒಂದು ಪಾನೀಯವಸ್ತುವನ್ನು ನಿರ್ಮಿಸಿದ್ದಾನಂತೆ. ಇದರಲ್ಲಿ ಕಾಫಿಬೀಜದಲ್ಲಿರುವ ಗುಣವೆಲ್ಲವೂ ಇರುವುವೆಂದು ಆತನು ಬರೆದಿದ್ದಾನೆ. ಬ್ರೆಜಲ್‌ದೇಶದ ಕಾಫಿಯಿಂದ ಭರತಖಂಡದ ಕಾಫಿಗೆ ಬೆಲೆ ತಗ್ಗಿ ಇಲ್ಲಿ ತೋಟಗಾರರು ಈಗಲೇ ಎದೆಗೆಟ್ಟುಹೋಗಿರುವರು. ಇನ್ನು ಕೃತಕಕಾಫಿಯೂ ಅಗ್ಗವಾಗಿ ಮಾರಕಟ್ಟುಗಳಿಗೆ ದುಮುಕಿದರೆ ಕಾಫಿತೋಟಗಳ ಗತಿ ಹೇಗಾಗುವುದೋ ತಿಳಿಯದು.

ಜರ್ಮನರು ನಿರುಪದ್ರವರಾದ ಪ್ರಜೆಗಳಮೇಲೆಲ್ಲಾ ನಾನಾವಿಧದ ದೌಷ್ಟ್ಯವನ್ನು ತೋರಿಸುತ್ತಿರುವುದನ್ನು ಕಂಡು ರೇಗಿಹೋಗಿರುವ ಇಂಗ್ಲೆಂಡ್ ನಿವಾಸಿಗಳು ತಮ್ಮ ದೇಶದಲ್ಲಿರುವ ಜರ್ಮನರಿಗೆ ಸೇರಿದ ೧೬೦ ಕೋಟಿ ರೂ. ಗಳ ಸ್ವತ್ತನ್ನೆಲ್ಲಾ ಸರ್ಕಾರಕ್ಕೆ ಸೇರಿಸಿಕೊಳ್ಳುವುದಲ್ಲದೆ ತಮ್ಮ ದೇಶದಲ್ಲಿ ವಾಸವಾಗಿರುವ ಜರ್ಮನ್ ಶ್ರೀಮಂತರನ್ನೆಲ್ಲಾ ಸೆರೆಯಲ್ಲಿಡಬೇಕೆಂದೂ ಆಂಗ್ಲರಾಜ್ಯದ ಎಲ್ಲೆಯೊಳಗಿರುವ ಜರ್ಮನರ ವ್ಯಾಪಾರದ ಹಡಗುಗಳನ್ನೆಲ್ಲಾ ಸರ್ಕಾರಕ್ಕೆ ಸೇರಿಸಿಕೊಳ್ಳಬೇಕೆಂದೂ ಒಂದಾನೊಂದುಸಭೆಯಲ್ಲಿ ತಿರ್ಮಾನಿಸಿದರು.

ಯುದ್ಧಾರಂಭದಲ್ಲಿ ಜರ್ಮನರು ಭಾರತೀಯರನ್ನು ಇಂಗ್ಲೀಷರಿಗೆ ವಿರುದ್ಧರಾಗಿರುವರೆಂದು ಯೋಚಿಸಿದ್ದರು. ಆ ಕಾರಣದಿಂದಲೇ ಆ ದೇಶದಲ್ಲಿ ವಿದ್ಯಾಭ್ಯಾಸಮಾಡುತ್ತಿದ್ದ ಭಾರತೀಯ ವಿದ್ಯಾರ್ಥಿಗಳಿಗೆ ಯಾವಬಾಧೆಯನ್ನೂ ಕೊಡದೆ ಆದರದಿಂದ ನೋಡಿಕೊಳ್ಳುತ್ತಿದ್ದರಂತೆ. ಈಗಲಾದರೊ ಆಂಗ್ಲಸಾಮ್ರಾಜ್ಯದ ವಿಷಯದಲ್ಲಿ ಸಂಪೂರ್ಣಭಕ್ತಿಯಿಂದ ಸರ್ವಪರಿತ್ಯಾಗವನ್ನು ಮಾಡುವುದಕ್ಕೂ ಭಾರತೀಯರು ಸಿದ್ಧರಾಗಿರುವರೆಂಬುದನ್ನು ಜರ್ಮನರು ಪ್ರತ್ಯಕ್ಷತಃ ತಿಳಿದುಕೊಂಡುದರಿಂದ ತಮ್ಮಲ್ಲಿರುವ ಭಾರತೀಯ ವಿದ್ಯಾರ್ಥಿಗಳನ್ನು ಕ್ರೂರದೃಷ್ಟಿಯಿಂದ ಕಾಣುವುದಕ್ಕುಪಕ್ರಮಿಸಿರುವರಂತೆ.

ಜರ್ಮನರು ತಮ್ಮ ಇಷ್ಟಾರ್ಥಲಾಭಕ್ಕಾಗಿ ಎಂಥ ಹೇಸಿಗೆಯ ಕೆಲಸವನ್ನಾದರೂ ಮಾಡುವುದಕ್ಕೆ ಸಿದ್ಧರಾಗಿರುವರೆಂಬ ಸಂಗತಿಯು ಇದುವರೆಗೇ ಎಷ್ಟೋ ಸಂಗತಿಗಳಿಂದ ಹೊರಪಟ್ಟಿರುವುದು. ಈಗ ಮತ್ತೊಂದು ಸಂಗತಿಯು ಪ್ರಕಟಿತವಾಗಿದೆ. ಅದೇನೆಂದರೆ—ಇಟಲಿಯಲ್ಲಿ "ಇಟಾಲಿಕ್" ಎಂಬ ಹೆಸರಿನ ಒಂದು ರೋಮನ್ ಪತ್ರಿಕೆಯಿರುವುದು. ಆ ಪತ್ರಿಕಾಕರ್ತರು ತಮ್ಮ ಇದುವರೆಗಿನ ಪದ್ಧತಿಯನ್ನು ಬಿಟ್ಟು ಬೇರೊಂದು ರೀತಿಯ ಲೇಖನಗಳನ್ನು ಪ್ರಚುರಿಸುವುದಕ್ಕೆ ಒಡಂಬಡುವುದಾದರೆ ೨ ಲಕ್ಷದ ೫೦ ಸಾವಿರ ಪೌನುಗಳನ್ನು ಕೊಡುವೆವೆಂದು ಜರ್ಮನರು ಸೂಚಿಸಿದರಂತೆ. ಆದರೆ ಆ ಪತ್ರಿಕಾಕರ್ತರು ಇಂಥ ನೀಚತನಕ್ಕೆ ಒಪ್ಪದೆ ತಿರಸ್ಕರಿಸಿಬಿಟ್ಟರು. ಮತ್ತು ಮಿಲಾನ್ ನಗರದಲ್ಲಿರುವ ಮತ್ತೊಂದು ಪತ್ರಿಕೆಯನ್ನೂ ಹೀಗೆಯೇ ವಶಪಡಿಸಿಕೊಳ್ಳುವುದಕ್ಕೆ ಜರ್ಮನರು ಬ್ಯಾಂಕರುಗಳ ಮೂಲಕ ಪ್ರಯತ್ನಿಸಿ ಅಲ್ಲೂ ಸ್ವರೂಪನಾಶವನ್ನು ಮಾಡಿಸಿಕೊಂಡರಂತೆ.

ಬರ್ಲಿನ್‌ಪಟ್ಟಣದಲ್ಲಿ ಉನ್ಥಾನ್ ಎಂಬುವನೊಬ್ಬನಿರುವನು. ಇವನಿಗೆ ಹುಟ್ಟಿದಾಗಲೇ ೨ ಕೈಗಳೂ ಇರಲಿಲ್ಲ. ಇವನು ಈಗ ದೊಡ್ಡ ಸಂಗೀತವಿದ್ವಾಂಸನಾಗಿರುವನು. ಮತ್ತೂ ತಂತ್ರೀವಾದ್ಯವಾದನದಲ್ಲೂ ನಿಪುಣನಾಗಿರುವನು. ಇವನ ಸಂಗೀತಕಚೇರಿಯೆಂದರೆ ಜನರು ಅತ್ಯಾದರದಿಂದ ಬಂದು ಕಿಕ್ಕಿರಿಸಿ ಕೂಡುವರು. ಇವನು ಅಂಥ ಮಹಾಸಭೆಗಳೊಳಗೆ ಸರ್ವರ ಇದಿರಿಗೂ ತನ್ನ ಕಾಲುಗಳ ಬೆರಳಿನ ಸಹಾಯದಿಂದಲೇ ಕ್ಷೌರವನ್ನು ಮಾಡಿಕೊಂಡು, ಬೇಕಾದ ವಿಷಯವನ್ನು ಆ ಕಾಲುಬೆರಲುಗಳಿಂದಲೇ ಕಾಗದದಮೇಲೆ ಬರೆದು, ಆ ಬೆರಲುಗಳಿಂದಲೇ ತಂತ್ರೀವಾದ್ಯಗಳನ್ನು ಬಾಜಿಸಿ, ಪ್ರೇಕ್ಷಕರನ್ನು ಆಶ್ಚರ್ಯಾನಂದಸಮುದ್ರದಲ್ಲಿ ಮುಳುಗಿಸುತ್ತಿರುವನು. ಇದನ್ನು ಅಲ್ಲಿನ ಪ್ರಭುತ್ವದವರು ತಿಳಿದು, ಈಗಿನ ಯುದ್ಧಸಂದರ್ಭದಲ್ಲಿ ಕೈಗಳನ್ನು ಕಳೆದುಕೊಂಡಿರುವ ಸೈನಿಕರಿಗೆಲ್ಲಾ ಕಾಲುಗಳಿಂದಲೇ ಕೆಲಸಮಾಡುವ ಪದ್ಧತಿಯನ್ನು ಕಲಿಸುವ ಶಾಲೆಯೊಂದನ್ನೇರ್ಪಡಿಸಿ ಅದರಿಂದ ಅವರುಗಳು ಜೀವನಾಧಾರವನ್ನು ಕಲ್ಪಿಸಿಕೊಳ್ಳುವಂತೆ ಮಾಡಬೇಕೆಂದು ಪ್ರಯತ್ನಿಸಿರುವರು. ಆ ಶಾಲೆಗೆ ಈ ಉನ್ಥಾನನೇ ಉಪಾಧ್ಯಾಯನಾಗಿ ನಿಯಮಿಸಲ್ಪಟ್ಟಿರುವನು.

ಸ್ವೀಕಾರ.

ಕಳೆದ ಮೇ ತಾ|| ೬ ರಲ್ಲಿ ಮ|| ರಾ|| ಎಚ್. ಮಲ್ಲಪ್ಪಸೆಟ್ಟರು ತಮ್ಮ ಮಗಳನ್ನು ಚಿಕ್ಕಮಗಳೂರಿನ ಮ|| ರಾ|| ಬಿ. ಪುಟ್ಟಣ್ಣಸೆಟ್ಟರ ಮಗನಿಗೆ ಕೊಟ್ಟು ವಿವಾಹಮಹೋತ್ಸವವನ್ನು ಬೆಳಸಿದ ಕಾಲದಲ್ಲಿ ಕೈ|| ವೀರಸಂಗಪ್ಪನವರ ಜ್ಞಾಪನಾರ್ಥವಾಗಿ ಅಗ್ರತಾಂಬೂಲವನ್ನು ತೆಗೆದು ಅದರ ಬಗೆಗೆ ಆಲೂರ್ ಕಾಫಿಪ್ಲಾಂಟರ್ ಮ|| ಎ. ವಿ. ದೇವಪ್ಪಗೌಡರ ವಶಕ್ಕೆ ಕೊಟ್ಟಿದ್ದ ೩ ರೂ. ಗಳನ್ನೂ; ಶಿವಮೊಗ್ಗ ಡಿ|| ಕುಂಸಿ ಸಬ್‌ತಾ|| ಆಯನೂರು ಕೋಹಳ್ಳಿವಾಸಿ ಪಟೇಲ್ ಮಂಜಪ್ಪನವರ ಮಗಳನ್ನು ಹಾರನಹಳ್ಳಿ ಪಟೇಲ್ ನಂಜಪ್ಪನವರ ಮಗನಿಗೆ ಕೊಟ್ಟು ವೈಶಾಖ ಬ|| ೧೦ ರಲ್ಲಿ ನಡೆಸಿದ ವಿವಾಹಮಹೋತ್ಸವಕಾಲದಲ್ಲಿ ಕೈ|| ವೀರಸಂಗಪ್ಪನವರ ಜ್ಞಾಪನಾರ್ಥವಾಗಿ ತೆಗೆದ ೮ ಆಣೆಯನ್ನೂ (ಮ|| ಬಿಲ್ಲು ಒಡೇರ್ ಕೊಪ್ಪದ ರುದ್ರಪ್ಪನವರ ಮೂಲಕ) ವಿಶ್ವಾಸದಿಂದ ಸ್ವೀಕರಿಸಿರುತ್ತೇವೆ. ಪ. ಪ್ರ.

ಪತ್ರವ್ಯವಹಾರ.

ವೀರಶೈವ ಮಹಾಜನರಿಗೆ ವಿನಂತಿ.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್‌ಸಭೆಗೆ ಮಹಾಸಭಾಕಾಲದಲ್ಲಿ ವಾಗ್ದಾನಮಾಡಿದ ಮೊಬಲಗನ್ನೂ ಲಗ್ನ ಮೊದಲಾದ ಸಮಯಗಳಲ್ಲಿ ತೆಗೆದ ಮೊಬಲಗನ್ನೂ ಪ್ರೆಸಿಡೆಂಟರವರಾದ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರವರ ಹೆಸರಿಗಾಗಲಿ ಸೆಕ್ರೆಟರಿಗಳಾದ ಮೆ|| ಬಿ. ಬಸವಾರಾಧ್ಯರವರು ಬಿ. ಎ. ಬಿ. ಯಲ್ ಯವರ ಹೆಸರಿಗಾಗಲಿ ಅಥವಾ ಈ ಕೆಳಗಿನ ವಿಳಾಸಕ್ಕಾಗಲಿ ದಯವಿಟ್ಟು ಕಳುಹಿಸಿಕೊಡಬೇಕಾಗಿ ಕೋರಲ್ಪಟ್ಟಿದೆ.

ಜಿ. ಕೆ. ರುದ್ರಾರ್ಯ, ಅಸಿಸ್ಟೆಂಟ್ ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ
ಫಂಡ್‌ಸಭೆ, ಬೆಂಗಳೂರು.

ಬೆಂಕಿಪುರ.

ಹುಣಸೂರ ತಾಲ್ಲೂಕು ಬೆಂಕಿಪುರದ ಗ್ರಾಮದಲ್ಲಿ ಇದೇ ನಿಜವೈಶಾಖ ಶು|| ೧ ಶನಿವಾರ ತಾ|| ೧೫-೫-೧೫ ರಲ್ಲಿ ಶ್ರೀ ಬಸವೇಶ್ವರ ಜನ್ಮೋತ್ಸವದ ಹಬ್ಬವನ್ನು ಸರ್ವರೂ ಮಾಡಬೇಕೆಂದು ಪ್ರೈವೇಟ್ ಸ್ಕೂಲ್ ಮಾಸ್ಟರ್ ಮ|| ಕೆ. ಎಮ್. ಶ್ರೀಕಂಠಾರಾಧ್ಯರು ಪ್ರೋತ್ಸಾಹಿಸಲು, ಅದೇಮೇರೆಗೆ ಇಲ್ಲಿಯ ವೀರಶೈವ ಜನಗಳು ಅನುಮೋದಿಸಿ ತಮ್ಮತಮ್ಮ ಗೃಹಗಳಲ್ಲಿ ಅತಿ ಸಂತೋಷದಿಂದ ಹಬ್ಬವನ್ನಾಚರಿಸಿ ಶ್ರೀ ಬಸವೇಶ್ವರದೇವರಿಗೆ ಅಭಿಷೇಕಾದಿ ಪೂಜೆಗಳನ್ನು ನಡೆಸಿದರು. ಈ ಜಯಂತ್ಯುತ್ಸವವನ್ನು ನೆರವೇರಿಸಿದುದು ತುಂಬ ಸಂತೋಷವಾಗಿದೆ. ಈ ದಿವಸ ಸಾಯಂಕಾಲಕ್ಕೆ ಪ್ರೈವೇಟ್ ಸ್ಕೂಲ್ ಮಾಸ್ಟರು ಸ್ಕೂಲ್ ಬಾಲಕರನ್ನು ಅಲಂಕರಿಸಿಕೊಂಡು ಗ್ರಾಮದ ಮುಖಂಡರನ್ನೆಲ್ಲಾ ಬರಮಾಡಿಕೊಂಡು ಸಾರ್ವಭೌಮಚಕ್ರವರ್ತಿಯವರಿಗೂ ನಮ್ಮನ್ನಾಳುವ ಶ್ರೀಮನ್ಮಹಾರಾಜರವರಿಗೂ ಶ್ರೇಯಸ್ಸುಂಟಾಗಲೆಂದೂ ಈಗ ನಡೆಯುತ್ತಿರುವ ಯುದ್ಧದಲ್ಲಿ ಜಯವಾಗಲೆಂದೂ ಶ್ರೀ ಬಸವೇಶ್ವರನನ್ನು ಪ್ರಾರ್ಥಿಸಿ ತಮ್ಮತಮ್ಮ ಗೃಹಗಳಿಗೆ ತೆರಳಿದರು.

ಪುರಪ್ರಮುಖ.

ಶ್ರೀಮನ್ನಿರಂಜನ ದೇಶಿಕೇಂದ್ರ ಲಿಂಗಪೂಜಾ ಧುರಂಧರರಾದ ಜಂಗಮದಾಸೋಹತತ್ಪರ ಅವಿರಳ ಪರಂಜ್ಯೋತಿ ಸ್ವರೂಪಿಗಳಾದ ಅಡವಿಸ್ವಾಮಿ ಗುರು ಸಿದ್ಧರಾಮಸ್ವಾಮಿ ಅಡವೀಸ್ವಾಮಿ ಮಠ ಅಂಕಲಗಿ ಜಿಲ್ಲಾ ಬೆಳಗಾಂವ ತಾ|| ಗೋಕಾಕ ಇವರ ಸನ್ನಿಧಿಯಿಂದ ನಿರೂಪವು:—

ಸಮಸ್ತ ವೀರಶೈವ ಮಹನೀಯರಿಗೆ ತಿಳಿಯಪಡಿಸುವುದೇನೆಂದರೆ—ಈ ಮಠವು ಪುಣ್ಯಸ್ಥಲವಿದ್ದು ನಿತ್ಯದಲ್ಲಿ ನಡೆಯತಕ್ಕ ದಾಸೋಹವುಳ್ಳದ್ದಾಗಿಯೂ ಇರುವದಷ್ಟೇ. ಆದರೆ ಸದರಿ ಪೂರ್ವದ ಮಹಾಸ್ವಾಮಿಗಳವರು ಅತ್ಯದ್ಭುತಲೋಕೋತ್ತರವಾದ ಅಮಾನುಷಕೃತ್ಯಗಳನ್ನು ಜಗತ್ತಿಗೆ ತೋರ್ಪಡಿಸಿರುವರಷ್ಟೆ. ಆದರೆ ಅಂದಿನಿಂದ ಇಲ್ಲಿಯವರೆಗೆ ಈ ಮಠವು ಊರ್ಜಿತ ಸ್ಥಿತಿಯಲ್ಲಿರುವುದಲ್ಲದೆ ದಾಸೋಹಮಾತ್ರ ಒಂದೇ ಮಠದಲ್ಲಿ ಜರುಗುತ್ತಿತ್ತು. ಆದರೆ ಈಗ್ಗೆ ಮಠದಲ್ಲಿ ಸಂಸ್ಕೃತ ಪಾಠಶಾಲೆಯನ್ನು ನಿರ್ಮಿಸಿರುತ್ತದೆ. ಸಮಸ್ತ ವೀರಶೈವ ಜಂಗಮಮೂರ್ತಿಗಳು ತಮ್ಮ ಮಕ್ಕಳನ್ನು ಸದರೀ ಪಾಠಶಾಲೆಗೆ ಕಳುಹಿಸಿಕೊಡಬೇಕೆಂದು ಇಚ್ಛಿಸುತ್ತೇವೆ. ಸಧ್ಯಕ್ಕೆ ಸದರೀ ಪಾಠಶಾಲೆಯಲ್ಲಿ ಹತ್ತುಜನರು ವಿದ್ಯಾರ್ಥಿಗಳು ಇರುತ್ತಾರೆ. ಸದರೀ ಪಾಠಶಾಲೆಯಲ್ಲಿ ವೈದಿಕ ಮತ್ತು ಸಂಸ್ಕೃತ ಸಂಗೀತ ಇತ್ಯಾದಿ ವಿಷಯಗಳು ಸಾಂಗವಾಗಿ ಹೇಳಲ್ಪಡುತ್ತವೆ. ಆದರೆ ಈ ಮಠಕ್ಕೆ ಆಸ್ತಿ ಕಮ್ಮಿ ಇರುವುದು. ಆದರೂ ಇಂಥ ದೊಡ್ಡ ಕಾರ್ಯವು ಪ್ರತಿದಿವಸ ನಡೆಯುತ್ತದೆ. ಈ ಕಾರ್ಯವು ಧರ್ಮಾರ್ಥವಿರುವ ಕಾರಣ ಭಕ್ತಜನರು ತಮ್ಮ ಶಕ್ತ್ಯನುಸಾರ ಸಹಾಯ ಮಾಡುವಿರೆಂದು ನಂಬಿದೇವೆ.

ಗದಗ ತಾ|| ಹಂಮಿಗಿ.

ನಮ್ಮ ವೀರಶೈವ ಮತೋದ್ಧಾರಕನಾದ ಶ್ರೀ ಬಸವೇಶ್ವರನ ಜಯಂತ್ಯುತ್ಸವವನ್ನು ಇತರ ಊರಿನಂತೆ ನಮ್ಮೂರಲ್ಲಿ ಮಾಡಬೇಕೆಂದು ಇಲ್ಲಿಯ ಕೆಲ ಮಹನೀಯರಿಗೆ ನಾನು ಪ್ರಾರ್ಥನೆಮಾಡಿಕೊಂಡಮೇರೆಗೆ—ಇದೇ ನಿಜವೈಶಾಖ ಶು|| ೧ ಶನಿವಾರ (೧೫—೫—೧೯೧೫) ಶ್ರೀ ಬಸವೇಶ್ವರ ದೇವಸ್ಥಾನವನ್ನು ತಳಿರುತೋರಣಾದಿಗಳಿಂದ ಅಲಂಕರಿಸಿ ಯಾವತ್ತು ನಮ್ಮ ವೀರಶೈವಸಮಾಜದವರು ಕೂಡಿದ್ದರು. ಆ ಕಾಲಕ್ಕೆ ಮ|| ಚನ್ನಬಸಪ್ಪನವರು, ಗದ್ದಿಕೇರಿ ಇವರು ಶ್ರೀ ಬಸವೇಶ್ವರ ಜಯಂತ್ಯುತ್ಸವವನ್ನು ಒಂದು ಹಬ್ಬದಂತೆ ಭಾವಿಸಿ ತಮ್ಮತಮ್ಮ ಮನೆಗಳಲ್ಲಿ ಜಂಗಮಾರಾಧನೆ ಗೈದು ಹೆಚ್ಚಿಗೆ ಮಂಗಳೋತ್ಸವಗಳಿಂದ ಪ್ರತಿವರುಷ ಮಾಡಬೇಕೆಂತಲೂ, ಹಾಗು ದೇವಸ್ಥಾನಕ್ಕೆ ಐದುಜನ ಪಂಚರಿರಬೇಕೆಂತಲೂ ಭಾಷಣಮಾಡಿದರು. ಅನಂತರ ಮ|| ವಿರೂಪಾಕ್ಷಪ್ಪನವರು ಕುಬಸದ ಇವರು ವಿದ್ಯಾವಿಷಯವಾಗಿಯೂ, ನಮ್ಮ ಆಚಾರಸಂಬಂಧವಾಗಿಯೂ ಭಾಷಣಮಾಡಿದರು. ನಂತರ ಈ ಮೊದಲೇ ನಮ್ಮ ವೀರಶೈವಸಮಾಜದವರು ವರ್ಗಣಿಕೊಡಿಸಿ ಖರೀದಿಗೆ ತೆಗದುಕೊಂಡಿದ್ದ ಜಮೀನನ್ನು ಇಲ್ಲಿಯ ಶ್ರೀ ಬಸವೇಶ್ವರದೇವರಿಗೆ ಅರ್ಪಿಸಿದರು. ಮತ್ತು ಸದರಿ ದೇವಸ್ಥಾನಕ್ಕೆ ಶಿರಾಚಯ್ಯನವರು ಕಲ್ಲುಮಠದ ವೀರಭೀಮನಗೌಡರು, ಪಾಟೀಲ ರುದ್ರಪ್ಪನವರು, ಶಿರಿವಾರದ ವೀರಪ್ಪಣ್ಣ, ವಿರೂಪಾಕ್ಷಪ್ಪ, ಕುಬಸದ ಶಂಕರಪ್ಪ ಯಲಿಗಾರ ಈ ೬ ಜನರನ್ನು ಚುನಾಯಿಸಿ ಪಂಚರನ್ನಾಗಿ ನೇಮಣೂಕ ಮಾಡಿದರು. ಈ ಸತ್ಕಾರ್ಯದಲ್ಲಿ ಮುಂದಾಳುಗಳಾದ ಮಹನೀಯರಿಗೆ ಜಗದೀಶನು ಸರ್ವದಾ ಕಲ್ಯಾಣ ಮಾಡಲಿ ಎಂದು ಜಯಘೋಷದೊಡನೆ ಶ್ರೀ ದೇವರಿಗೆ ಮಂಗಳಾರತಿಯನ್ನು ಮಾಡಿಸಿ ನೆರೆದಿರ್ದ ಸಭಿಕರೆಲ್ಲರಿಗೂ ಗಂಧ ಪುಷ್ಪ ತಾಂಬೂಲಾದಿಗಳನ್ನು ಕೊಟ್ಟು ಸಭಾವಿಸರ್ಜನೆಯಾಯಿತು.

ಗುರುಬಸಪ್ಪ.

ಬಿಜಾಪುರ ಡಿ|| ಹುನಗುಂದ ತಾ|| ಹಿರೇಪೋತಗೇರಿ ಎಂಬಲ್ಲಿ ಕಳೆದ ಮೆ|| ತಾ|| ೧೪ ರ ದಿವಸವನ್ನು ಯಾವತ್ತು ವೀರಶೈವರು ಹಬ್ಬವೆಂದೆಣಿಸಿ ಶ್ರೀ ಬಸವೇಶ್ವರದೇವರ ಗುಡಿಯನ್ನು ತಳಿರುತೋರಣದಿಂದ ಶೃಂಗರಿಸಿ, ಶುಭೋಜ್ಯ ನೈವೇದ್ಯವನ್ನು ಮಾಡಿ ಮಧ್ಯಾಹ್ನದ ೩-೪ ಘಂಟೆಗೆ ಸರಿಯಾಗಿ ಸರಕಾರಿ ಶಾಲೆಯ ಇದಿರಿಗಿರುವ ಬೈಲಜಾಗದಲ್ಲಿ ಯಾವತ್ತು ಊರಜನರ ಸಭೆಯನ್ನು ಕೂಡಿಸಿ, ಶ್ರೀಬಸವೇಶ್ವರ ದೇವರ ಚಿತ್ರಪಟವು ಶೃಂಗರಿಸಿ ಇಡಲ್ಪಟ್ಟಿತು. ಸಭೆಯಲ್ಲಿ ನಡೆಯತಕ್ಕ ಕಾರ್ಯಕ್ರಮವನ್ನು ಇಲ್ಲಿಯ ಲೋಕಪ್ರಿಯ ಶಾಲಾ ಮಾಸ್ತರರಾದ ಮಿ|| ರಾಮಚಂದ್ರ ಭೀಮಾಜಿ ತೆಲೂರ ಇವರು ಓದಿ ಹೇಳಿದರು. ಆಮೇಲೆ ಮಿ|| ವೀರನಗೌಡ ಪಾಟೀಲ ಇವರು ಸ್ತೋತ್ರಪದಗಳನ್ನು ಹಾಡಿದರು. ಬಳಿಕ ಇಲ್ಲಿಯ ಶಿವಮೂರ್ತಿಗಳಾದ ಸಂಗನಬಸಯ್ಯಾ ಸೊಪ್ಪಯ್ಯಾ ಮಠದ ಇವರು ಶ್ರೀ ಬಸವೇಶ್ವರದೇವರ ಅವತಾರದ ಆದ್ಯಂತ ಕಥೆಯನ್ನೂ ಅವರು, ಲಿಂಗಾಯತ ಧರ್ಮವನ್ನು ಉದ್ಧಾರಮಾಡಲಿಕ್ಕೆ ಸೋಸಿದ ಅಡಚಣೆಯನ್ನೂ ಅವರು ಕೇವಲ ದೇವರ ಅವತಾರವೇ ಇದ್ದರೆಂಬ ಸಂಗತಿಯನ್ನೂ ಮತ್ತು ಲಿಂಗಾಯತ ಧರ್ಮವನ್ನು ಉದ್ಧಾರಮಾಡುವ ಮಹತ್ತರವಾದ ಕಾರ್ಯವನ್ನು ಪೂರ್ಣಸಿದ್ಧತೆಗೆ ಒಯ್ದು ಕಟ್ಟಕಡೆಗೆ ಕಪ್ಪಡಿ ಸಂಗಮದಲ್ಲಿ ಹೇಗೆ ಐಕ್ಯಹೊಂದಿದರೆಂಬುದನ್ನೂ ನೆರೆದ ಜನರ ಮನಸ್ಸಿನಮೇಲೆ ಪೂರ್ಣ ಪರಿಣಾಮವಾಗುವಂತೆ ಸುವಾಚ್ಯ ಮತ್ತು ಭಕ್ತಿಪುರಸ್ಸರ ಉಪನ್ಯಾಸವನ್ನು ಮಾಡಿದರು. ಇಲ್ಲಿಯ ರಾಮರಾವ ಕುಲಕರ್ಣಿ ಇವರು ಯಾವತ್ತು ವೀರಶೈವರು ಇಷ್ಟುದಿವಸ ಮರೆತುಬಿಟ್ಟ ಜಯಂತಿಯನ್ನು ಪರಮ ಸಂಭ್ರಮದಿಂದ ಮಾಡಿದ್ದನ್ನು ನೋಡಿ ಆನಂದವಾದ ಸಂಗತಿಯನ್ನೂ ಧರ್ಮೋದ್ಧಾರಮಾಡುವ ಕಾರ್ಯವೆಂದರೆ ಸಾಧಾರಣವಾದ ಮಾತಲ್ಲವೆಂಬುದನ್ನೂ ಮತ್ತು ಧರ್ಮೋದ್ಧಾರಕರ ಜಯಂತಿಯನ್ನು ಪ್ರತಿ ವರ್ಷ ನೆರವೇರಿಸದಿದ್ದರೆ ಎಷ್ಟು ಕೃತಘ್ನತೆ ತೋರಿಸಿದಂತೆ ಆಗುತ್ತದೆಂಬದನ್ನೂ ಒಳ್ಳೇ ರೀತಿಯಿಂದ ಜನರಿಗೆ ತಿಳಿಯುವಂತೆ ಹೇಳಿ, ಪ್ರಸ್ತುತ ಶ್ರೀ ಬಸವಜಯಂತಿ ಮಾಡಿದ ಆನಂದದ ಸಂಗಡವೇ ನಮ್ಮ ದಯಾಳು ಇಂಗ್ಲೀಷ ಸರಕಾರದವರಿಗೆ ಜಯಸಿಕ್ಕ ಸುದ್ದಿಯು ಬಂದು ಅದರ ಉತ್ಸವವನ್ನು ಮಾಡಿ ಆನಂದಪಡುವ ಭಾಗ್ಯವು ಬರಲೆಂದೂ ದೇವರಿಗೆ ಪ್ರಾರ್ಥನೆಮಾಡಬೇಕಾಗಿ ಜನರಿಗೆ ವಿನಂತಿ ಮಾಡಿಕೊಂಡು ಜಯಘೋಷ, ಮಂಗಳಾರತಿ ಸ್ತೋತ್ರಪದಗಳಿಂದಲೂ ಕಥಾ ಕೀರ್ತನಗಳಿಂದಲೂ ವಾದ್ಯವೈಭವದಿಂದಲೂ ಈ ಕಾರ್ಯವನ್ನು ಜರಿಗಿಸಿದರು. ಇದರಂತೆ ಈ ಹಳ್ಳಿಯ ಸಮೀಪದಲ್ಲಿರುವ ಚಿಕ್ಕ ಪೋಲಿಗೇರಿ ಸೊನಾಳ ಊರುಗಳಲ್ಲಿಯೂ ಈ ಉತ್ಸವವು ಆಯಿತು.

ರಾಮರಾವ ಕುಲಕರ್ಣಿ ಸೆಕ್ರೆಟರಿ
ಮುಷ್ಟಿಫಂಡ ಸಂಘ, ಹಿರೇಪೋತಗೇರಿ.

ರಾಮಗಿರಿ.

ಈ ರಾಮಗಿರಿಗೆ ಇದೇ ತಿಂಗಳು ತಾ|| ೧೧ ನೇ ಮಂಗಳವಾರ ಶ್ರೀಮನ್ ನಿರಂಜನ ಜಗದ್ಗುರು ಮುರಘರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಥಾನದ ಶಾಖಾನುವರ್ತಿಗಳಾದ ದಾವಣಗೆರೆ ವಿರಕ್ತಮಠಾಧಿಕಾರಿಗಳಾದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳವರನ್ನು ಈ ಗ್ರಾಮದ ಶ್ರೀ ವಿರಕ್ತಮಹಾಸ್ವಾಮಿಗಳವರು, ಶೆಟ್ಟರು, ಪಾಳ್ಯಗಾರರು, ವರ್ತಕರು ಇನ್ನು ಮುಂತಾದ ವೀರಶೈವ ಭಕ್ತಾದಿಗಳೆಲ್ಲರೂ ಫಲಪುಷ್ಪತಾಂಬೂಲಗಳಿಂದಲೂ, ವಾದ್ಯಘೋಷಗಳಿಂದಲೂ ಶ್ರೀಗಳವರನ್ನು ರೈಲ್ವೆಸ್ಟೇಷನ್ ಬಳಿ ಇದಿರುಗೊಂಡು ವಾದ್ಯಮೇಳದೊಡನೆ ಗ್ರಾಮಪ್ರವೇಶಮಾಡಿಸಿ, ಸಾಯಂಕಾಲ ೪ ಗಂಟೆಗೆ ಚಪ್ಪರ ತಳಿರುತೋರಣಗಳಿಂದ ಅಲಂಕರಿಸಲ್ಪಟ್ಟ ಶ್ರೀ ವಿರಕ್ತಮಠಕ್ಕೆ ಬಿಜಯಮಾಡಿಸಿದರು. ಆಗ ಸದರಿ ಶ್ರೀಗಳವರು ಸೇರಿದ ಭಕ್ತಮಹಾಜನಗಳಿಗೆಲ್ಲಾ ಆಶೀರ್ವದಿಸಿ, ಸಾಯಂಕಾಲ ೭ ಗಂಟೆಯಿಂದ ವೀರಶೈವಮತಸುಧಾರಣಸಂಬಂಧವಾದ ಮತ್ತು ನೀತಿಯುಕ್ತವಾದ ಉಪನ್ಯಾಸವನ್ನು ಮಾಡುವುದಕ್ಕಾಗಿ ಸಭೆ ಸೇರುವಂತೆ ಭಕ್ತಾದಿಗಳಿಗೆಲ್ಲಾ ಅಪ್ಪಣೆಕೊಡಿಸಿದಮೇಲೆ ಮಂಗಳಹೇಳಿದ ತರುವಾಯ ಸಭೆಯು ಭರಖಾಸ್ತಾಯಿತು. ಆ ಮೇರೆ ಶ್ರೀಗಳವರು ಸಾಯಂಕಾಲ ೬ ಗಂಟೆಯಿಂದ ಈ ಗ್ರಾಮದ ಬೆಟ್ಟದಮೇಲಿರುವ ಶ್ರೀ ಕರಿಸಿದ್ಧಸ್ವಾಮಿಯ ದೇವಸ್ಥಾನಕ್ಕೆ ಭಕ್ತಮಂಡಲಿಯೊಡನೆ ದಯಮಾಡಿಸಿ ಭಗವತ್ಪ್ರಾರ್ಥನೆಯನ್ನು ಮಾಡಿಕೊಂಡು, ಸಾಯಂಕಾಲ ೭ ಗಂಟೆಗೆ ಸರಿಯಾಗಿ ಪುನಃ ಶ್ರೀ ವಿರಕ್ತಮಠದಲ್ಲಿ ಸೇರಿದ ಸಭೆಗೆ ದಯಮಾಡಿಸಿದರು. ಈ ಸಭೆಯು ಅದೇದಿವಸ, ಸಾಯಂಕಾಲ ೭ ಗಂಟೆಯಿಂದ ೧೦ ಗಂಟೆಯವರೆಗೂ ಮಾರನೇ ಬುಧವಾರ, ಸಾಯಂಕಾಲ ೩ ಗಂಟೆಯಿಂದ ೭ ಗಂಟೆಯವರೆಗೂ ಸೇರಿತು. ಈ ಸಭೆಗೆ ಮ|| ರಾ|| ಸ್ಟೇಷನ್ ಮಾಸ್ಟರವರೂ, ಸ್ಕೂಲ್ ಹೆಡ್‌ಮಾಸ್ಟರವರೂ, ಸಹಾಯೋಪಾಧ್ಯಾಯರೂ, ಗರ್ಲ್‌ಸ್ಕೂಲ್ ಮಾಸ್ಟರೂ, ಶಿಲ್ಪಿ ಹನುಮಂತಾಚಾರ್ಯರವರೂ, ಅಣ್ಣಪ್ಪಾಚಾರ್ಯರವರೂ ಮತ್ತು ಸಮಸ್ತ ವೀರಶೈವ ಭಕ್ತಮಂಡಲಿಯೆಲ್ಲಾ ಸೇರಿತ್ತು. ಈ ಸಭೆಯಲ್ಲಿ ಶ್ರೀಗಳವರ ಪಾದಾನುವರ್ತಿಗಳಾಗಿ ಬಂದಿದ್ದ ಕಾನಾಪುರದ ಹಿರೇಮಠದ ವಿರೂಪಾಕ್ಷಶಾಸ್ತ್ರಿಗಳವರು ವೀರಶೈವ ಧರ್ಮಸುಧಾರಣ ವಿಷಯದಲ್ಲಿಯೂ, ವೈದಿಕವಿದ್ಯಾಭಿವೃದ್ಧಿ ವಿಷಯದಲ್ಲಿಯೂ ಭಾಷಣಮಾಡಿದ ಮೇಲೆ ಶ್ರೀಗಳವರು, ಮತಾಚಾರ, ಆಯಾಯ ಆಶ್ರಮಧರ್ಮ, ನೀತಿ, ವಿದ್ಯೆ, ಐಕಮತ್ಯ, ರಾಜಭಕ್ತಿಯುಕ್ತವಾದ ಉಪನ್ಯಾಸವನ್ನು ಬಹು ಸ್ವಾರಸ್ಯವಾಗಿ ಮಾಡಿ ಹಿಂದೆ ಪ್ರಾರಂಭವಾಗಿ ಕಾರಣಾಂತರದಿಂದ ನಿಂತುಹೋಗಿದ್ದ ಶ್ರೀ ಮಜ್ಜಯದೇವ ಭಜನಾಮಂದಿರವನ್ನೂ, ವೀರಶೈವ ಧರ್ಮಾಭಿವೃದ್ಧಿ ಫಂಡನ್ನೂ ಪುನಃ ಸ್ಥಾಪನೆಮಾಡಿದುದಲ್ಲದೆ ಸದರಿ ಸಭೆಯಲ್ಲಿ ಈ ಗ್ರಾಮದ ಸ್ಕೂಲ್‌ಮಾಸ್ಟರುಗಳಿಗೆ ತಮ್ಮ ಹಿತೋಕ್ತಿಗಳಿಂದ ಸದರೀಸ್ಕೂಲಿನಲ್ಲಿ ಪ್ರತಿಶನಿವಾರ ಸಾಯಂಕಾಲ ಸ್ಟೂಡೆಂಟ್ಸ್‌ಸೊಸೈಟಿಯನ್ನು ಏರ್ಪಡಿಸುವಂತೆ ಅಪ್ಪಣೆಕೊಡಿಸಿ,ಸದರೀಸೊಸೈಟಿಗೆಬೇಕಾಗುವ ದ್ರವ್ಯಸಹಾಯಕ್ಕೆ ಸ್ವಹಸ್ತದಿಂದ ಅಸ್ತಿಭಾರರೂಪಕವಾದ ದ್ರವ್ಯಸಹಾಯವನ್ನು ಸಹ ಮಾಡಿ, ಸದರಿ ಕಾರ್ಯವು ಸಾಂಗವಾಗಿ ನಡೆಯುವಂತೆ ಆಶೀರ್ವದಿಸಿ, ಶ್ರೀಮನ್ ನಿರಂಜನ ಜಗದ್ಗುರು ಮುರಘರಾಜೇಂದ್ರಸ್ವಾಮಿಗಳವರ ಶ್ರೇಯಃಪ್ರಾರ್ಥನೆಯನ್ನೂ ನಮ್ಮನ್ನಾಳುವ ಶ್ರೀ ಚಕ್ರವರ್ತಿ ದಂಪತಿಗಳವರ ಮತ್ತು ಶ್ರೀಮನ್ ಮಹಾರಾಜ ಶ್ರೀ ಕೃಷ್ಣರಾಜೇಂದ್ರಒಡೆಯರವರ ಶ್ರೇಯಃಪ್ರಾರ್ಥನೆಯನ್ನೂ ಮಾಡಿದ ತರುವಾಯ ಮಂಗಳಹೇಳಿಸಿ ಸಭಿಕರಿಗೆ ಫಲಪೂರ್ವಕವಾಗಿ ಆಶೀರ್ವದಿಸಿದ ತರುವಾಯ ಮೇಲೆಕಂಡ ಶಾಸ್ತ್ರಿಗಳಿಂದ ಕ್ರಮವಾದ ವೇದಾಧ್ಯಯನ ಮಾಡಲ್ಪಟ್ಟು ಸಭೆಯು ಭರಖಾಸ್ತಾಯಿತು. ತಾ|| ೧೩ ನೇ ಗುರುವಾರ ಬೆಳಗ್ಗೆ ಈ ಗ್ರಾಮದ ಶಿಲ್ಪಿ ಹನುಮಂತಾಚಾರ್ಯರ ಇರಾದೆಯಂತೆ ಸದರಿಯವರಿಂದ ನಿರ್ಮಿತವಾದ ಕಾಳಿಕಾದೇವಸ್ಥಾನಕ್ಕೆ ದಯಮಾಡಿಸಿ ಸದರೀದೇವಸ್ಥಾನವನ್ನು ನೋಡಿ ಸಂತೋಷಪಟ್ಟು ಮೇಲೆಕಂಡ ಹನುಮಂತಾಚಾರ್ಯರಿಗೆ ಚಿರಾಯುರಾರೋಗ್ಯವನ್ನು ಈಯುವಂತೆ ಭಗವತ್ಪ್ರಾರ್ಥನೆಯನ್ನು ಮಾಡಿ ಪುನಃ ವಿರಕ್ತಮಠಕ್ಕೆ ದಯಮಾಡಿಸಿ ಶಿವಪೂಜೆಯನ್ನು ತೀರಿಸಿಕೊಂಡು ಭಕ್ತಮಂಡಲಿಗೆಲ್ಲಾ ಆಶೀರ್ವದಿಸಿ ವಾದ್ಯಮೇಳದೊಡನೆ ಸದರಿ ದಾವಣಗೆರೆಗೆ ದಯಮಾಡಿಸಲು ಪುರಜನಗಳಿಂದ ಸಂತೋಷವಾಗಿ ಕಳುಹಿಸಲ್ಪಟ್ಟರು.

ಓರ್ವ ಪ್ರತ್ಯಕ್ಷದರ್ಶಿ.

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತವಾಗಿರುವ ಘೋರಯುದ್ಧದ ದೆಸೆಯಿಂದ ಈ ಸಾಮಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದ ಮತ್ತೂ ಬೆಲಜಿಯಮ್ಮಿನಿಂದ ಸುತರಾಂ ಬರುವುದು ಕಟ್ಟಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಆವಶ್ಯಕವಾದ ಕಾಗದ ಮೊದಲಾದ ಸಾಮಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವಧಿಯು ಪೂರೈಸಿರುವವರಿಗೆಲ್ಲಾ ಪತ್ರಿಕೆಯನ್ನು ವಿ. ಪಿ ದ್ವಾರ ಕಳುಹಿಸುತ್ತಿರುವೆವು. ಆದರೆ ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿರುಗಿಸಿ ಕಾಗದದ ಬೆಲೆಯೇರಿಕೆಯಿಂದ ನಷ್ಟಪಡುವುದರ ಜತೆಗೆ ಪೋಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದು ತಿಳುಹಲು ಖೇದವಾಗುತ್ತದೆ. ಇತಃಪರಃ ದಯಾರ್ದ್ರಹೃದಯರಾದ ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ. ಪಿ. ಹಣವನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನವಾಗಿ ನಡೆದುಕೊಂಡು ಹೋಗುವಂತೆ ಮಾಡುವರೆಂದು ಸಂಪೂರ್ಣವಾಗಿ ನಂಬಿರುತ್ತೇವೆ.

ಮ್ಯಾನೇಜರ್.

ಹೊಸ ಪುಸ್ತಕಗಳು.

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೬೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ— ಬೆಲೆ ೧-೮-೦ ದ್ವಿತೀಯಃ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟಿಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ- ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
187 ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಓರಿಯಂಟಲ್ ಫಾರ್ಮಸಿ ಮೈಸೂರು.

ಪ್ರಸಿದ್ಧ ಗುಣಕಂಡ ಔಷಧಗಳು. 19

ಜ್ವರದಮಾತ್ರೆ—ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಉಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮಂದಇವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ರೂ.

ಗೋರೋಜನದಮಾತ್ರೆ— ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲುಮೈನೋವುಗಳು ಕೂಡ್ಲೆ ತಪ್ಪಿ ಜೀರ್ಣಶಕ್ತಿಕೊಡುತ್ತೆ. ಪ್ರಯಾಣೀಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾದ ನೋವು ಉಳುಕು ಊದು ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ. ೫ ಡಬ್ಬಿಗೆ ೧ ರೂ. ಕೂಡ್ಲೆ ನಮ್ಮ ಕ್ಯಾಟಲಾಗಿಗೆ ಬರೆಯಿರಿ ಮುಫತ್ತು ಕಳುಹಿಸುತ್ತೇವೆ.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು

87

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕದನಗಳ ಪಟಗಳೂ ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯಯಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ ೨ ಆಣೆ; ವಿ. ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ:—ದಿ ಜನರಲ್ ಏಜನ್ಸಿ. ಮೈಸೂರು

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧-೯-೦
ಪರವಾದಿಗಜಾಂಕುಶತಾರಾವಳಿ	೦-೮-೦
ಶಿವಪೂಜಾವಿಧಿಃ	೦-೮-೦
ಚಾರುಶೀಲೆಚರಿತೆ.	೦-೫-೦
ವಿವೇಕಮಂಜರಿ [೨ನೆಯ ಭಾಗ]	೦-೩-೦
ವ್ರತಪಂಚಕ	೦-೨-೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦-೨-೦
ಗುರುಶಂಕರೇಶ್ವರಶತಕಂ	೦-೧-೦

ಅಂಚೆಯವೆಚ್ಚ ಬೇರೆ.

ಆಯುರ್ವೇದ ವಿದ್ವಾನ್-ಬಿ. ವಿ. ಪಂಡಿತರ 35

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ಕಸ್ತೂರಿ, ಚಿನ್ನದರೇಕು, ಲೋಹಭಸ್ಮ ಮುಂತಾದವುಗಳಿಂದ ವಂಶಪಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀಕರಕಸ್ತೂರಿಮಾತ್ರೆಗಳನ್ನು ತಾಂಬೂಲದೊಡನೆ ಅಥವಾ ಹಾಗೆ ಉಪಯೋಗಿಸಿದರೆ ಆಹಾರವು ಬೇಗನೆ ಜೀರ್ಣವಾಗಿ ಬಹಳಹೊತ್ತು ಬಾಯಿ ಘಮಘಮಿಸುತ್ತಿರುವುದು.

ಛಳಿಮಳೆಗಾಲಗಳಲ್ಲೂ, ಸೋಂಕುರೋಗಸ್ಥಳಗಳಲ್ಲೂ, ಪ್ರಯಾಣಕಾಲದಲ್ಲೂ, ಮಕ್ಕಳಿರುವ ಮನೆಗಳಲ್ಲೂ, ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಶೀತವಾಯು, ಕೆಮ್ಮು, ನೆಗಡಿ, ಅಜೀರ್ಣಭೇದಿ, ಮಲಬಂಧ, ಮರಸೀಜ್ವರ, ಪ್ಲೇಗುಜ್ವರ, ಮಲೇರಿಯಾಜ್ವರ, ನಡುನೋವು, ಅರೋಚಕ, ಹಲ್ಲುನೋವು, ಮೈಕೈನೋವುಗಳು ಬಹಳಬೇಗನೆ ವಾಸಿಯಾಗುತ್ತವೆ. ಮಕ್ಕಳಿಗೆ ಸಂಜೀವನ-ಯಾವಾಗಲೂ ವಿಳಾಸವನ್ನು ಪರೀಕ್ಷಿಸಿ ಔಷಧವನ್ನು ಕೊಂಡುಕೊಳ್ಳಿರಿ-ಮೋಸಹೋಗಬೇಡಿರಿ. ೨೫೦ ಮಾತ್ರೆಯುಳ್ಳ ಸೀಸೆಯ ಬೆಲೆ ೦-೪-೦ ಆಣೆ. ಐದಕ್ಕೆ ಒಂದು ಮುಫತ್ತು. ಟಪಾಲ್‌ಖರ್ಚು ಬೇರೆ.

ಆಮೋದಿನಿ.

ಸಂಗೀತಗಾರರಿಗೆ ಅತ್ಯಂತ ಸುಖವನ್ನೂ, ವಿದ್ಯಾರ್ಥಿಗಳಿಗೆ ಆನಂದವನ್ನೂ, ಪ್ರಯಾಣಿಕರಿಗೆ ಆಯಾಸಪರಿಹಾರವನ್ನೂ, ಉಂಟುಮಾಡಿ ಬಿಸಿಲುಕಾಲದ ಅಥವಾ ಆಯಾಸದ ಬಾಯಾರಿಕೆಯನ್ನು ತಕ್ಷಣ ಅಣಗಿಸಿ, ಎಂತಹ ಕೆಮ್ಮು, ಉಬ್ಬಸಗಳನ್ನಾದರೂ ವಾಸಿಮಾಡಿ ಆಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವ ಕೈಗಂಡಸಿದ್ಧಾಮೃತ, ಮತ್ತಾವಮಾತ್ರೆಗಳೂ ಇಷ್ಟು ಮನೋಹರವಾಗಿಲ್ಲವೆಂಬುದನ್ನು ನಂಬಿರಿ! ೧೫೦ ಮಾತ್ರೆಯ ಸೀಸೆ ೦-೪-೦ ಆಣೆ. ಐದಕ್ಕೆ ಒಂದು ಹೆಚ್ಚು. ಟಪಾಲ್‌ಖರ್ಚು ಪ್ರತ್ಯೇಕ.

ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರು ಡಿ॥

೧೯೧೫ನೆಯ ಇಸವಿ ಜೂನ್ ತಾ॥ ೧೩ರಿಂದ ೧೯೧೫ ನೆಯ ಜೂನ್ ತಾ॥ ೧೯ರವರೆಗೆ ಸಲ್ಲುವ ಶಾಲೀವಾಹನಶಕ ೧೮೩೮ ನೆಯ ರಾಕ್ಷಸನಾಮಸಂವತ್ಸರದ ಜ್ಯೇಷ್ಠ ಶು॥ ಪಾಡ್ಯಮಿಯಿಂದ ಜ್ಯೇಷ್ಠ ಶು॥ ಸಪ್ತಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವ್ಯಾಖಿ ತೇದಿ
13	[1]ಭಾನು	ಪಾ	48-1	ಮೃಗ	26-34	31
14	[2]ಸೋ	ಬಿದಿ	51-52	ಆರಿದ್ರಾ	32- 0	32
15	[3]ಮಂಗ	ತದಿ	54-46	ಪುನರ್ವ	37-6	1
16	[4]ಬುಧ	ಚೌ	56-25	ಪುಷ್ಯ	40-45	2
17	[5]ಗುರು	ಪಂ	56-49	ಆಶ್ಲೇಷ	43-8	3
18	ಶುಕ್ರ	ಷಷ್ಠಿ	55-54	ಮಖಾ	4-16	4
19	ಶನಿ	ಸಪ್ತ	53-33	ಪುಬ್ಬಾ	44-10	5

(1) ಪುನ್ನಾಗಗೌರೀವ್ರತಂ, ಶನಿಚಂದ್ರಯೋಸ್ಸಾಮ್ಯಂ. (2) ಚಂದ್ರೋದಯಃ, ಷಾಬಾನ್ ಚಂ ೧, ವಾಕ್ಯರೀತ್ಯಾ ಷಡಶೀತಿಪುಣ್ಯಕಾಲಃ. (3) ಕದಳೀಗೌರೀವ್ರತಂ, ರಂಭಾತ್ರಿತೀಯಾ, ಷಡಶೀತಿಪುಣ್ಯಕಾಲಃ. (4) ಸಿಂಹವಿವಾಹಃ. (5) ಸ್ಕಂದಪಂಚಮಿ

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಕ್ರೌನ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

4

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇವೊಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧-೦-೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

REGISTERED NO. M. 124.

ಮೈಸೂರ್ ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸಿಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿ ಕೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧-೦-೦
ಅಂಚೆವೆಚ್ಚ ಸೇರಿ ೧-೧೪-೦

ಸಂಪುಟ ೨೮) ಮೈಸೂರ್ ಸ್ಟಾರ್ ಸನ್ ೧೯೧೫ ನೆಯ ಇಸವಿ ಜೂನ್ ತಾರೀಖು ೨೦ ನೆಯ ಭಾನುವಾರ. (ಸಂಚಿಕೆ ೨೪

ರಖಂವಾರ್ ಹೊಸ ಹಾರ್ಮೋನಿಯಂಗಳು.

ಮಿತ್ರರೇ! ನಿಮ್ಮ ಹಣವನ್ನು ಸದ್ವ್ಯಯಮಾಡುವುದು ಹೇಗೆ? ಕ್ರಯಕ್ಕೆ ತಕ್ಕ ಉತ್ತಮವಾದ ಪದಾರ್ಥವನ್ನು ಕೊಂಡುಕೊಳ್ಳುವುದೇ ಅಲ್ಲವೆ? ಹಾಗಾದರೆ ನಮ್ಮಿಂದ ಒಂದುಸಾರಿ ತರಿಸಿ ಪರೀಕ್ಷಿಸಿರಿ. ನೀವೂ ಅನೇಕಕಡೆಗಳಿಂದ ನಾನಾತರಹ ಹಾರ್ಮೋನಿಯಂಗಳನ್ನು ತರಿಸಿಕೊಂಡಿರುವಿರಿ, ಆದರೆ ಈ ಕೆಳಗೆ ವಿವರಿಸಿರುವ ಪ್ರಖ್ಯಾತರಾದ ಕಾರೀಗಾರರಿಂದ ಬಹಳ ಬಂದೋಬಸ್ತಾಗಿ ತಯಾರಿಸಲ್ಪಟ್ಟು ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಹಾರ್ಮೋನಿಯಂಗಳನ್ನು ಒಂದುಸಾರಿ ತರಿಸಿಕೊಂಡು ಪರೀಕ್ಷಿಸಿದರೆ ಪದಾರ್ಥದ ಸೊಗಸೂ, ಬಾಳ್ವಿಕೆ, ಬಂದೋಬಸ್ತು, ಸ್ಪಷ್ಟವಾದ ಸ್ವರ ಇವೇ ಮೊದಲಾದ ಅತ್ಯುತ್ಕೃಷ್ಟವಾದ ಗುಣಗಳೂ, ಅಗ್ಗವಾದ ದರಗಳೂ ತಾವಾಗಿ ಗೋಚರವಾಗುತ್ತವೆಯಾದ್ದರಿಂದ ನಮ್ಮಿಂದಹಾರ್ಮೋನಿಯಂಗಳನ್ನು ತರಿಸಿಕೊಂಡವರಿಂದ ಸಂತೋಷಪೂರ್ವಕವಾದ ಸನ್ಮಾನಪತ್ರಿಕೆಗಳು ಪ್ರತಿನಿತ್ಯವೂ ಬರುತ್ತಲಿವೆ ಇವುಗಳ ಪೈಕಿ ಸ್ಥಳಸಂಕೋಚದಿಂದ ಒಂದನ್ನು ಮಾತ್ರ ಇಲ್ಲಿ ವಿವರಿಸಿದೇವೆ.

ಸಯ್ಯದ್ ಜಮಾಲ್‌ಸಾಬ್ ಸ್ಕೂಲ್‌ಮಾಸ್ಟರ್ ಬೇಲೂರು ತಾಲ್ಲೋಕು ಚನ್ನಹಳ್ಳಿಗ್ರಾಮ ಇವರು ಬರೆಯುವದು. ಸ್ವಾಮಿ! ತಾವು ಕಳಿಸಿಕೊಟ್ಟ ಹಾರ್ಮೋನಿಯಂ ಪಾರ್ಸಲನ್ನು ಡಿಲಿವರೀ ತೆಗೆದುಕೊಂಡೆನು. ನೋಡುವಲ್ಲಿ ಪದಾರ್ಥಬಹಳ ಸೊಗಸಾಗಿಯೂ ಬಂದೋಬಸ್ತಾಗಿಯೂ ಇರುವುದರಿಂದ ನನ್ನ ಮನಸ್ಸಿಗೆ ಬಹು ಸಮರ್ಪಕವಾಯಿತು. ಇದನ್ನು ನೋಡಿ ನನ್ನ ಸ್ನೇಹಿತರು ಇನ್ನು ಕೆಲವಕ್ಕೆ ಆರ್ಡರ್ ಕೊಡುವುದರಲ್ಲಿಧಾರೆ.

ಆರ್ಡರಿನ ಸಂಗಡ ಅಡ್ವಾನ್ಸು ಕಳುಹಿಸಿಕೊಡುತ್ತೇವೆ.

ಕ್ರಯದ ತಪ್ಸೀಲ್.

೧. "ಬಿಜಲೀಫ್ಲ್ಯೂಟ್" ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ	೨೫-೦-೦
೨. ಡಿಟೋ ಉತ್ತಮತರಹ ಹಾರ್ಮೋನಿಯಂ	೧ ಕ್ಕೆ	೨೩-೮-೦
೩. "ಕೋಹಿನೂರು ಫ್ಲ್ಯೂಟ್" ಸಿಂಗಲ್‌ರೀಡ್ಸ್‌ಹಾರ್ಮೋನಿಯಂ	೧ ಕ್ಕೆ	೨೯-೮-೦
೪. ಡಿಟೋ ನಮೂನೆ ಅತ್ಯುತ್ತಮವಾದ ಹಾರ್ಮೋನಿಯಂ	೧ ಕ್ಕೆ	೩೨-೮-೦
೫. "ಮೋಸ್ಲೆಂಫ್ಲ್ಯೂಟ್" ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ	೩೫-೦-೦
೬. ಪ್ರಖ್ಯಾತಿಹೊಂದಿದ ಎಂ. "ಮೋರ್ಹೆಫ್ಲ್ಯೂಟ್" ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ	೩೭-೮-೦
೭. ಪ್ರಖ್ಯಾತಿಹೊಂದಿದ ಎಂ. "ಮೋರ್ಹೆಫ್ಲ್ಯೂಟ್" ಹಾರ್ಮೋನಿಯಂನಲ್ಲಿ ಅತ್ಯುತ್ತಮವಾದ ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ	೪೨-೮-೦
೮. "ಕೊಹಿನೂರ್‌ಫ್ಲ್ಯೂಟ್" ಡಬ್ಬಲ್‌ರೀಡ್ಸ್‌ಹಾರ್ಮೋನಿಯಂ	೧ ಕ್ಕೆ	೪೨-೮-೦
೯. "ಬಿಜಲೀಫ್ಲ್ಯೂಟ್" ಡಬ್ಬಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ	೪೨-೦-೦
೧೦. "ಮೋಸ್ಲೆಂಫ್ಲ್ಯೂಟ್" ಡಬ್ಬಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ	೪೭-೮-೦
೧೧. ಪ್ರಖ್ಯಾತಿಹೊಂದಿದ ಎಂ. "ಮೋರ್ಹೆಫ್ಲ್ಯೂಟ್" ಡಬ್ಬಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ	೫೦-೮-೦
೧೨. ಡಿಟೋ ಎಂ. "ಮೋರ್ಹೆಫ್ಲ್ಯೂಟ್" ಡಬ್ಬಲ್‌ರೀಡ್ಸ್ ಅತ್ಯುತ್ತಮವಾದ ಹಾರ್ಮೋನಿಯಂ	೧ ಕ್ಕೆ	೫೨-೮-೦

ಹಾರ್ಮೋನಿಯಂಗಳಿಗೆ ಆರ್ಡರ್ ಮಾಡತಕ್ಕವರು ನಿಮ್ಮ ಊರಿಗೆಸಮೀಪವಿರುವ ರೈಲ್ವೇಸ್ಟೇಷನ್ ಬರೆಯುವದಲ್ಲದೆ ೫ರೂಪಾಯಿ ಅಡ್ವಾನ್ಸು ಕಳುಹಿಸಿಕೊಡಬೇಕು. ಅಡ್ವಾನ್ಸಿಲ್ಲದೇ ಬರತಕ್ಕ ಆರ್ಡರ್‌ಗಳಿಗೆ ಖಂಡಿತವಾಗಿಯೂ ರವಾನಿಸಲಾಗುವುದಿಲ್ಲ.

ಕಸ್ತೂರಿಮಾತ್ರೆ ಪ್ರಖ್ಯಾತರಾದ ಘನ ವೈದ್ಯರಿಂದ ತಯಾರಿಸಲ್ಪಟ್ಟ ಕಸ್ತೂರಿಮಾತ್ರೆ ಶೀಶೆ 1 ಕ್ಕೆ 0-4-0. 5 ಶೀಶೆಗೆ ಒಂದು ಶೀಶೆ ಇನಾಂ ಪೋಸ್ಟೇಜು ಅಲಾಯಿದಾ 12 ಶೀಶೆ ಒಟ್ಟಿಗೆ ತರಿಸಿಕೊಳ್ಳುವರಿಗೆ ಪೋಸ್ಟೇಜು ಸೇರಿ 2-8-0

ಪರಿಮಳಕಾರ್ಡುಗಳು ಒಂದು ಕಾರ್ಡನ್ನು ಜೇಬಿನಲ್ಲಿಟ್ಟುಕೊಂಡಿದ್ದರೆ ಸುವಾಸನೆಯಾದ ಪುಷ್ಪವಟಿಗಳ ಮಧ್ಯದಲ್ಲಿರುವಂತೆ ಬಹು ಮನೋಹರವಾಗಿರುತ್ತೆ ಕಾರ್ಡು 1 ಕ್ಕೆ ಕ್ರಯ 0-1 0 12 ಕ್ಕೆ 0-10-0 ಪೋಸ್ಟೇಜು ಅಲಾಯಿದಾ ಒಂದು ಡಜನ್‌ಗಿಂತಲೂ ಕಡಿಮೆಯಾಗಿ ರವಾನಿಸಲಾಗುವುದಿಲ್ಲಾ.

ಸರ್‌ನರ್‌ತಾಂಬೂಲಮಿತ್ರ 250 ಮಾತ್ರೆಗಳಿರುವ ಪೊಟ್ನ 1 ಕ್ಕೆ 0-2-6 ಒಂದು ಡಜನ್ ಒಟ್ಟಿಗೆ ತರಿಸಿಕೊಳ್ಳುವರಿಗೆ 1-10-0 ಕೊಡುವುದಲ್ಲದೆ ಪೋಸ್ಟೇಜು ಸಹಾ ಮಾಫಿ ಮಾಡಿದೇವೆ. ಇದರ ಸೇವನೆಯಿಂದಾಗತಕ್ಕ ಗುಣಗಳ ಪ್ರಿಂಟಾದ ಚೀಟಿ ಪಾರ್ಸಲಿನ ಸಂಗಡ ರವಾನಿಸಲಾಗುತ್ತೆ.

ಕೆಷಿಂತಾನ್ 45 ಮಾತ್ರೆಗಳ ಪೊಟ್ನ 1 ಕ್ಕೆ 0-2-0, 95 ಮಾತ್ರೆಗಳ ಪೊಟ್ನ 1 ಕ್ಕೆ 0-4-0, 200 ಮಾತ್ರೆಗಳ ಪೊಟ್ನ 1 ಕ್ಕೆ 0-7-0, 200 ಮಾತ್ರೆಗಳ ಟಿನ್ 1 ಕ್ಕೆ 0-9-0, 80 ಮಾತ್ರೆಗಳ ಟಿನ್ 1 ಕ್ಕೆ 0-4-0, 100 ಮಾತ್ರೆಗಳ ಶೀಸೆ 1 ಕ್ಕೆ 0-4-6.

ನಮ್ಮ ವಿಳಾಸ:—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್ ಕೃಷ್ಣರಾಜಮೊಹಲ್ಲಾ ಮೈಸೂರು.

ಓರಿಯಂಟಲ್ ಫಾರ್ಮಸಿ ಮೈಸೂರು.

20

ಪ್ರಸಿದ್ಧ ಗುಣಕಂಡ ಔಷಧಗಳು.

ಜ್ವರದಮಾತ್ರೆ—ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಉಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮಂದಇವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ರೂ.

ಗೋರೋಜನದಮಾತ್ರೆ— ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲುಮೈನೋವುಗಳು ಕೂಡ್ಲೆ ತಪ್ಪಿ ಜೀರ್ಣಶಕ್ತಿಕೊಡುತ್ತೆ. ಪ್ರಯಾಣೀಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾದ ನೋವು ಉಳುಕು ಊದು ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ. ೫ ಡಬ್ಬಿಗೆ ೧ ರೂ. ಕೂಡ್ಲೆ ನಮ್ಮ ಕ್ಯಾಟಲಾಗಿಗೆ ಬರೆಯಿರಿ ಮುಫತ್ತು ಕಳುಹಿಸುತ್ತೇವೆ.

ಹೊಸ ಪುಸ್ತಕಗಳು.

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೬೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ— ಬೆಲೆ ೧-೮-೦ ದ್ವಿತೀಯಃ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ— ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ— ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟಿಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ- ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
188 ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕೆ ಅವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತನಾಗಿರುವ ಘೋರಯುದ್ಧದ ದೆಸೆಯಿಂದ ಈ ಸಾಮಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದ ಮತ್ತೂ ಬೆಲಜಿಯಮ್ಮಿನಿಂದ ಸುತರಾಂ ಬರುವುದು ನಿಟ್ಟಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಅವಶ್ಯಕವಾದ ಕಾಗದ ಮೊದಲಾದ ಸಾಮಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವಧಿಯು ಪೂರೈಸಿರುವವರಿಗೆಲ್ಲಾ ಪತ್ರಿಕೆಯನ್ನು ವಿ. ಪಿ. ದ್ವಾರ ಕಳುಹಿಸುತ್ತಿರುವೆವು. ಆದರೆ ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿರುಗಿಸಿ ಕಾಗದದ ಬೆಲೆಯೇರಿಕೆಯಿಂದ ನಷ್ಟಪಡುವುದರ ಜತೆಗೆ ಪೋಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದು ತಿಳುಹಲು ಖೇದವಾಗುತ್ತದೆ. ಇತಃಪರ ದಯಾರ್ದ್ರಹೃದಯರಾದ ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ. ಪಿ. ಹಣವನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನವಾಗಿ ನಡೆದುಕೊಂಡು ಹೋಗುವಂತೆ ಮಾಡುವರೆಂದು ಸಂಪೂರ್ಣವಾಗಿ ನಂಬಿರುತ್ತೇವೆ.

ಮ್ಯಾನೇಜರ್.

ನೋಟುಗಳ ವ್ಯವಹಾರದಲ್ಲಿ ಮಾರ್ಪು.

ಸೀಮೆಯಲ್ಲಿ ನೋಟುಗಳ ವ್ಯವಹಾರದ ಮೇಲಣ ಅಧಿಕಾರವು “ ಬ್ಯಾಂಕ್‌ಆಫ್ ಇಂಗ್ಲಾಂಡ್ ” ಗೆ ಇರುವುದು. ವ್ಯವಹಾರದಲ್ಲಿರುವ ಯಾವುದೊಂದುನೋಟಾಗಲಿ ಈ ಬ್ಯಾಂಕಿನವರ ಕೈಗೆ ಬಂದಾಗ ಅದನ್ನು ಅವರು ಮರಳಿ ವ್ಯವಹಾರಕ್ಕಾಗಿ ಹೊರಕ್ಕೆ ಕೊಡುವುದೇ ಇಲ್ಲ. ಬೇರೆ ಹೊಸನೋಟುಗಳನ್ನೇ ಹೊರಕ್ಕೆ ಕೊಟ್ಟು, ಆ ಹಳೆಯನೋಟನ್ನು “ ರದ್ದು ” ಮಾಡಿಬಿಡುತ್ತಾರೆ. ಇದರಿಂದ ವಿಶೇಷಪ್ರಯೋಜನವುಂಟು. ಹಳೆಯದಾಗಿ ನಲುಗಿಹೋದ ನೋಟುಗಳು ವ್ಯವಹಾರಕ್ಕೆ ಮನೋಹರವಾಗಿರುವುದಿಲ್ಲ. ಮತ್ತೂ ನೋಟುಗಳು ವಿಶೇಷಕಾಲ ವ್ಯವಹರಣೆಯಲ್ಲಿದ್ದರೆ ಸೃಷ್ಟನೆಗವಕಾಶವಾಗಿ, ಹಳೆಯನೋಟುಗಳನ್ನು ಜನರು ತೆಗೆದುಕೊಳ್ಳಬೇಕಾದಾಗ ಬಹಳ ಪರಿಶೋಧನೆಯನ್ನು ನಡೆಯಿಸಬೇಕಾಗುವುದು. ಅದೇಕಾರಣವೇ ಹಲವರು ಹಳೆಯನೋಟುಗಳನ್ನು ಪರಿಗ್ರಹಿಸುವುದೇ ಇಲ್ಲ. ಹಳೆಯನೋಟುಗಳು ನಿಂತು ಹೊಸಹೊಸನೋಟುಗಳು ಹೊರಕ್ಕೆ ಬರುತ್ತಿದ್ದರೆ, ಮೇಲ್ಕಂಡ ಲೋಪಗಳಿಗೆ ಅವಕಾಶವೇ ಇರುವುದಿಲ್ಲ. ನೋಟುಗಳ ವ್ಯವಹಾರವೂ ಹೆಚ್ಚುವುದು. ಆದುದರಿಂದ ಸೀಮೆಯ ಮರ್ಯಾದೆಯನ್ನನುಸರಿಸಿ ನಮ್ಮ ಭರತಖಂಡದ ಸರ್ಕಾರದವರೂ ಕೂಡ ಹಳೆಯನೋಟುಗಳು ಸರ್ಕಾರಿ ಧನವ್ಯವಹಾರಕಾರ್ಯಾಲಯಕ್ಕೆ ಬಂದ ಕೂಡಲೇ ಅವನ್ನು ನಾಶಪಡಿಸಿ ಅವಕ್ಕೆ ಪ್ರತಿಯಾಗಿ ಹೊಸನೋಟುಗಳನ್ನು ಕೊಡುವ ಪದ್ಧತಿಯನ್ನು ಈ ದೇಶದಲ್ಲೂ ವ್ಯವಹಾರಕ್ಕೆ ತರುವಂತೆ ಮಾಡಬೇಕೆಂದು ಸ್ಟೇಟ್‌ಸೆಕ್ರೆಟರಿಯವರಿಗೆ ಬರೆದುಕೊಂಡಿರಲು, ಅದಕ್ಕೆ ಅನುಮತಿಯು ದೊರೆತಿರುತ್ತದೆ. ಸದ್ಯಃ ಕೆಲಕಾಲದವರೆಗೆ ಬೊಂಬಾಯಿಯಲ್ಲಿ ಮಾತ್ರ ಕೆಲವು ಅನಿವಾರ್ಯಗಳಿಂದ ಈ ಹೊಸಏರ್ಪಾಟು ನಡೆಯುವುದಿಲ್ಲ. ಉಳಿದ ಎಲ್ಲಅಧಿಪತ್ಯಗಳಲ್ಲೂ ಈ ಹೊಸಏರ್ಪಾಟು ವ್ಯವಹಾರಕ್ಕೆ ಬರುವುದು. ಈಗ ನಮ್ಮ ದೇಶದಲ್ಲಿ ನಾಗರಿಕರು ಮಾತ್ರವೇ ಅಲ್ಲ; ಗ್ರಾಮಾಂತರದ ಜನರೂ ಕೂಡ ನೋಟುಗಳ ವ್ಯವಹಾರವನ್ನು ಸಾಧಾರಣವಾಗಿ ಮಾಡುತ್ತಿದ್ದಾರೆ ೫-೧೦ ರೂ ಗಳ ನೋಟಂತೂ ಎಲ್ಲರಕೈಯಲ್ಲೂ ರೂ. ಗಳ ಹಾಗೆಯೇ ಓಡಾಡುತ್ತಿವೆ. ಆದರೆ ಕೆಲವು ನೋಟುಗಳು ಎಷ್ಟೋ ಹಳೆಯಕಾಲದುವಾಗಿ ಮುಟ್ಟುವುದಕ್ಕೂ ಕೂಡ ಅಸಹ್ಯವಾಗಿರುತ್ತಿರುವುವು. ಇನ್ನು ಮುಂದೆ ಅಂಥ ಹಳೆಯನೋಟುಗಳ ವ್ಯವಹಾರವು ಕಡಿಮೆಯಾಗಿಹೋಗಿ ಹೊಸಹೊಸನೋಟುಗಳೇ ಓಡಾಡುತ್ತಲಿರುವಂತೆ ಇಂಡ್ಯಾಸರ್ಕಾರದವರು ಮಾಡಿಕೊಟ್ಟದು ಪ್ರಜೆಗಳಿಗೂ, ಪ್ರಭುತ್ವದವರಿಗೂ ಸಹ ಬಹಳ ಹಿತವಾದಂತಾಯಿತು.

ಲಂಡನ್ ಟೈಮ್ಸ್‌ಪತ್ರಿಕೆ.

ಯುದ್ಧಾರಂಭವಾದ ಕೂಡಲೇ ರಾಜ್ಯರಕ್ಷಣಶಾಸನವೆಂಬುದು ಅಲ್ಲೂ ಪ್ರಕಟಿಸಲ್ಪಟ್ಟಿತು. ಆ ವಿಧಿಯಲ್ಲಿ ಕಂಡಿರುವ ಒಂದಾನೊಂದು ಅಪರಾಧವನ್ನು (ಎಂದರೆ ವಾರ್ತಾಪರಿಶೋಧನ ಶಾಖೆಯವರ ಅಪ್ಪಣೆಯಿಲ್ಲದೆ ಒಂದಾನೊಂದು ವಿರುದ್ಧವಾದ ಸಂಗತಿಯನ್ನು ಪತ್ರಿಕೆಯಲ್ಲಿ ಪ್ರಕಟಿಸಿದುದು) ಟೈಮ್ಸ್ ಪತ್ರಿಕೆಯು ಮಾಡಿತೆಂದು ಅದರ ಸಂಪಾದಕರಮೇಲೆ ಅಭಿಯೋಗವು ತರಲ್ಪಟ್ಟಿತು. “ ಆಂಗ್ಲದೇಶದ ಜನರಲ್ಲಿ ಎಷ್ಟೋ ಮಂದಿಯು ಗಟ್ಟಿಮುಟ್ಟಾಗಿದ್ದುಕೊಂಡು ಚೆಂಡಾಟ ಮೊದಲಾದ ವಿನೋದಗಳಲ್ಲಿ ಮಗ್ನರಾಗಿರುವಾಗ ಫ್ರೆಂಚ್‌ದೇಶೀಯರು ತಂಡೋಪತಂಡವಾಗಿ ದೇಶಾಭಿಮಾನದಿಂದ ಯುದ್ಧಾಂಗಣದಲ್ಲಿ ತಲೆಯನ್ನೊಪ್ಪಿಸುತ್ತಿರುವರು ” ಎಂಬರ್ಥವುಳ್ಳ ಒಂದಾನೊಂದು ಪತ್ರವ್ಯವಹಾರವನ್ನು ಪ್ರಕಟಿಸಿದುದೇ ಅಪರಾಧವೆಂದು ನಿರೂಪಿಸಲ್ಪಟ್ಟಿದ್ದಿತು. ಈ ಲೇಖನದಿಂದ-ಆಂಗ್ಲದೇಶೀಯರು ಯುದ್ಧದ ವಿಷಯದಲ್ಲಿ ತಕ್ಕಷ್ಟು ಶ್ರದ್ಧಾಭಿಮಾನವುಳ್ಳವರಾಗಿಲ್ಲವೆಂದು ಅವರ ವಿಷಯದಲ್ಲಿ ಫ್ರೆಂಚ್‌ಜನರು ಅಸಮಾಧಾನಚಿತ್ತರಾಗಲು ಅವಕಾಶವುಂಟಾಗುವುದೆಂಬುದೇ ಫಿರ್ಯಾದಿಗಳ ಪಕ್ಷದ ವಾದವು. ಅಪರಾಧಿಪಕ್ಷದವರಾದರೋ ಇದು ಕೆಟ್ಟ ಉದ್ದೇಶದಿಂದ ಬರೆಯಲ್ಪಟ್ಟ ಲೇಖನವಲ್ಲ. ಆಂಗ್ಲಪ್ರಜೆಗಳನ್ನು ಮತ್ತಷ್ಟು ಯುದ್ಧಾಭಿನಿವೇಶನವುಳ್ಳವರಾಗುವಂತೆ ಪ್ರೋತ್ಸಾಹಿಸಬೇಕೆಂಬುದೇ ಈ ಲೇಖನದ ಉದ್ದೇಶವು; ತಮ್ಮ ಜತೆಯಲ್ಲೇ ನಿಂತು ರಣಾಂಗಣದಲ್ಲಿ ರಕ್ತಧಾರೆಯನ್ನು ಹರಿಸಿಕೊಳ್ಳುತ್ತಿರುವ ಆಂಗ್ಲರ ವಿಷಯದಲ್ಲಿ ಫ್ರೆಂಚರಿಗೆ ಈ ಲೇಖನದಿಂದ ಎಂದಿಗೂ ಅಸಮಾಧಾನವುಂಟಾಗಲು ಕಾರಣವಿರುವುದಿಲ್ಲ ” ಎಂದು ವಾದಿಸಲ್ಪಟ್ಟಿತು. ಇದರಮೇಲೆ ನ್ಯಾಯಾಧಿಪತಿಗಳು ಪತ್ರಿಕಾಕರ್ತರನ್ನು ನಿರ್ದೋಷಿಗಳೆಂದು ಹೇಳಿ ತೀರ್ಮಾನಿಸಿದರು. ಈ ಲಂಡನ್ ಟೈಮ್ಸ್ ಪತ್ರಿಕಾಕರ್ತರು ಕೇವಲ ನಿಸ್ಪೃಹರು; ಪ್ರಭುತ್ವಪಕ್ಷದಮೇಲೆ ಅನ್ಯಾಯವಾದ ಅಪನಿಂದೆಗಳನ್ನು ಯಾವಾಗಲೂ ಹೊರಿಸುವವರಲ್ಲ; ಪೂರ್ಣದೇಶಾಭಿಮಾನಿಗಳು. ಇಂಥವರ ವಿಷಯದಲ್ಲೂ ಯುದ್ಧಕಾಲಿಕಶಾಸನವು ಅಷ್ಟು ವೇಗವಾಗಿ ವರ್ತಿಸಿದುದನ್ನು ನೋಡಿದರೆ ಈಗಿನ ಮಹಾಯುದ್ಧವು ಪತ್ರಿಕಾಕರ್ತರಿಗೂ ಎಷ್ಟು ವಿಷಮಾವಸ್ಥೆಯನ್ನು ತಂದಿಕ್ಕುವುದೆಂಬುದು ಗೊತ್ತಾಗುವುದು.

ಆಂಗ್ಲಪ್ರಭುತ್ವದ ಮುಖ್ಯಮಂತ್ರಿಯವರಾದ ಆಸ್ಕ್ವಿತ್ ಮಹಾಶಯರು.

ಪ್ರಪಂಚದ ¼ ಭಾಗದ ಆಂಗ್ಲಸಾಮ್ರಾಜ್ಯದ ಮುಖ್ಯಪರಿಪಾಲನಸೂತ್ರವನ್ನು ಹಿಡಿದು ನಿರ್ವಹಿಸುವ ಭಾರವು ಸಾಮಾನ್ಯವಾದುದಲ್ಲ. ಅಂಥ ಭಾರವನ್ನು ಸಾಧಾರಣಕಾಲದಲ್ಲಿ ನಿರ್ವಹಿಸುವುದಕ್ಕಿಂತಲೂ ದೇಶಕ್ಕೆ ಅಭೂತಪೂರ್ವವಾದ ವಿಪನ್ನಾವಸ್ಥೆಯು ತಟ್ಟಿರುವಾಗ ನಿರ್ವಹಿಸುವುದು ಎಷ್ಟು ಅಸಾಧಾರಣಸಾಮರ್ಥ್ಯಸಂಪನ್ನರಿಗೆ ಮಾತ್ರ ಶಕ್ಯವೆಂಬುದನ್ನು ಹೇಳಬೇಕಾಗಿಲ್ಲ. ಇಂಥ ಅಘಟನಘಟನಸಾಮರ್ಥ್ಯವುಳ್ಳ ಮಹಾಶಯರುಗಳು ಆಂಗ್ಲರಾಜ್ಯದಲ್ಲಿ ವಿರಾಜಮಾನರಾಗಿರುತ್ತಿರುವುದರಿಂದಲೇ ಪ್ರಪಂಚದಲ್ಲಿ ಆಂಗ್ಲರಾಜ್ಯಪತಾಕೆಯು ಎಷ್ಟೋ ತೇಜೋವತ್ತಾಗಿ ಮೆರೆಯಲು ಅವಕಾಶವಿರುತ್ತದೆ. ಈಗಿನ ಮುಖ್ಯಮಂತ್ರಿಯವರಾದ ಎಚ್. ಎಚ್. ಆಸ್ಕ್ವಿತ್, ಕೆ. ಸಿ. ಎಮ್. ಪಿ. ಯವರು ಆಂಗ್ಲರಾಜ್ಯದ ಪ್ರಖ್ಯಾತಮಂತ್ರಿಗಳ ಪಙ್ತಿಯಲ್ಲಿ ವಿಶೇಷ ಪರಿಗಣ್ಯರಾಗಲರ್ಹರಾದವರು. ಇವರು ಈಗ ದೇಶಾಭಿಮಾನದಿಂದ ಪಡುತ್ತಿರುವ ಶ್ರಮಸಾಹಸಗಳು ಮಾನವವರ್ಗಕ್ಕೆಲ್ಲಾ ವಿಸ್ಮಯವನ್ನುಂಟುಮಾಡುತ್ತಿರುವುವು. ಇವರಿಗೆ ವಿರಾಮವೆಂಬುದು ಯಾವಾಗಿರುವುದೋ ತಿಳಿಯುವುದೇ ಕಷ್ಟ. ಇವರಿಗೆ ಈಗ ೬೦ ವರ್ಷ ವಯಸ್ಸಾಗಿದ್ದರೂ ೩೫ ವರ್ಷದ ಹರೆಯದವರೂ ಇವರಷ್ಟು ಚಟುವಟಿಕೆಯಿಂದಲೂ ಜುಗುಪ್ಸೆಯಿಲ್ಲದೆಯೂ ಕೆಲಸಮಾಡುವುದು ದುರ್ಲಭ. ಪ್ರಸಕ್ತಸಮಯದಲ್ಲಿ ಇವರು ಕಳೆದೊಂದು ಶನಿವಾರದದಿನ ಲಂಡನ್ನನ್ನು ಬಿಟ್ಟು ಮಗ್ಗುಲ ಒಂದು ಗ್ರಾಮಕ್ಕೆ ರಾಜ್ಯಕಾರ್ಯಕ್ಕಾಗಿ ತೆರಳಿದರು. ಭಾನುವಾರರಾತ್ರಿ ೧ ಗಂಟೆಗೆ ಮರಳಿ ಲಂಡನ್ನಿಗೆ ಬಂದರು. ಸೋಮವಾರ ಬೆಳಗಿನ ೮ ಗಂಟೆಗೆ ಅರ್ಲ್‌ಕಿಚನರ್‌ರವರೊಡನೆ ಯುದ್ಧಕಾರ್ಯವಿಷಯವಾಗಿ ದೀರ್ಘಾಲೋಚನೆಯಲ್ಲಿ ಮಗ್ನರಾಗಿದ್ದರು. ಬಳಿಕ ೧೧ ಗಂಟೆಯಹೊತ್ತಿಗೆ ಮಂತ್ರಿಮಂಡಲದವರ ಅಂತರಂಗಸಭೆಯಲ್ಲಿ ಅಗ್ರಾಸನವನ್ನು ವಹಿಸಿದರು. ಈ ಮಧ್ಯೆ ಎಷ್ಟೋ ಕಾಗದಗಳಿಗೆ ಉತ್ತರವನ್ನು ಬಾಯಿಂದಲೇ ಹೇಳಿ ಬರೆಯಿಸುತ್ತಿದ್ದರು. ಮಧ್ಯಾಹ್ನದ ಊಟವಾದನಂತರ ಕಾಮನ್ಸ್‌ಸಭೆಗೆ ತೆರಳಿದರು. ಅಲ್ಲಿ ನಡೆದ ಅನೇಕ ಚರ್ಚೆಗಳಲ್ಲಿ ಅಂಗರಾಗಿದ್ದುಕೊಂಡು, ಸಭಿಕರಿಂದ ಮಾಡಲ್ಪಟ್ಟ ನಾನಾವಿಧದ ಪ್ರಶ್ನೆಗಳಿಗೆ ಕೂಡಕೂಡಲೇ ಉತ್ತರವನ್ನು ಹೇಳಿದರು ಮತ್ತೂ ಒಂದೆರಡು ಉಪನ್ಯಾಸಗಳನ್ನೂ ಮಾಡಿದರು. ರಾತ್ರಿಯ ಊಟವಾದಬಳಿಕ ಮಂತ್ರಿಗಳ ಮತ್ತೊಂದುಸಭೆಗೆ ದಯಮಾಡಿಸಿದರು. ಇಂಥ ಕೆಲಸಗಳು ಸಾಧಾರಣವಾಗಿ ಪ್ರತಿದಿನವೂ ಈಗ ಇದ್ದೇ ಇರುತ್ತಿರುವುವು. ಪರಮೇಶ್ವರನು ಇವರಿಗೆ ಸಾಮಾನ್ಯಮನುಷ್ಯರಿಗಿಂತಲೂ ವಿಲಕ್ಷಣವಾದ ದೇಹದಾರ್ಢ್ಯವನ್ನೂ, ಸದಾರೋಗ್ಯವನ್ನೂ, ಮೇಧಾವಿತೆಯನ್ನೂ ಅನುಗ್ರಹಿಸಿರುವುದರಿಂದಲೇ ಆ ಮಹಾಕಾರ್ಯಭಾರವನ್ನೆಲ್ಲಾ ಲೀಲಾಜಾಲವಾಗಿ ನಿರ್ವಹಿಸುತ್ತಿರುವರು. ಇವರು ಕಳೆದ ೩೫ ವರ್ಷಗಳ ಕಾಲದಲ್ಲಿ ೨ ದಿನ ಮಾತ್ರ ಅಸ್ವಸ್ಥತೆಯಿಂದ ಮಂಚದಮೇಲೆ ಮಲಗಿದ್ದರಂತೆ. ಈ ವಯಸ್ಸಿನೊಳಗೆ ಅವರು ೫ ೬ ಸೀಸೆಗಳಷ್ಟು ಔಷಧವನ್ನು ಕೂಡ ಕುಡಿದವರಲ್ಲವಂತೆ. ಈ ವಿಷಯವು ಅವರು ಸ್ವತಃ ಒಬ್ಬ ವೈದ್ಯನೊಡನೆ ಈ ಮಧ್ಯೆ ನುಡಿದಿರುವ ಸಂಗತಿಯಿಂದ ಹೊರಪಟ್ಟಿರುವುದು. ಈ ಮಹಾನುಭಾವರಿಗೆ ಕೆಲಸಗಳು ಹೆಚ್ಚಿದಷ್ಟೂ ಆರೋಗ್ಯವೂ ಉಲ್ಲಾಸವೂ ಹೆಚ್ಚುತ್ತಿರುವಂತೆ ಕಾಣುತ್ತದೆ. ಲಿಬರಲ್‌ಪಕ್ಷದವರು ರಾಜ್ಯಸೂತ್ರವನ್ನು ಗ್ರಹಿಸಿ ಇಲ್ಲಿಗೆ ೭ವರ್ಷಗಳಾದುವು. ಅಂದಿನಿಂದಲೂ ಇವರು ಇದಿರುಪಕ್ಷದವರ ಮತ್ತೂ ರಾಜ್ಯಕಾರ್ಯಸಂಬಂಧದ ಇತರ ನಾನಾವಿಷಯಗಳ ಬಡಿದಾಟದಲ್ಲಿ ಎಷ್ಟೋ ಕಷ್ಟಪರಂಪರೆಗಳನ್ನು ಸೈರಿಸಿಕೊಂಡು ಬಂದಿರುತ್ತಾರೆ. ಮೊನ್ನೆ ತಾನೇ ಇವರು ತಮ್ಮ ಒಬ್ಬ ಮಿತ್ರನೊಡನೆ ಮಾತನಾಡುವಾಗ “ ನಮ್ಮ ಜಾತಿಯೆಲ್ಲವೂ ಈ ಯುದ್ಧಸಮಯದಲ್ಲಿ ಒಂದೇಆಗಿ ನಿಂತಿರುವುದೆಂಬುದನ್ನು ನಾನು ಕಂಡಾಗ ಇದುವರೆಗೆ ನಾನು ಪಟ್ಟ ಪಾಡುಗಳೂ ಕಷ್ಟಗಳೂ ಎಲ್ಲವೂ ಮಟ್ಟಮಾಯವಾಗಿ ಹೋದುವು ” ಎಂದು ನುಡಿದರಂತೆ. ಇಂಥ ಭಾವಗಳು ದೇವತಾಂಶಪುರುಷರಲ್ಲಲ್ಲದೆ ಸಾಮಾನ್ಯರಲ್ಲಿರುವುವೆ ? ಈ ಮಹಾಶಯರು ಕೀರ್ತಿಶೇಷರಾದ ಸುಪ್ರಸಿದ್ಧ ಮಂತ್ರಿಗ್ಲಾಡ್‌ಸ್ಟನ್ ಮಹಾಶಯರ ಶಿಷ್ಯಕೋಟಿಗೆ ಸೇರಿದವರು. ಆ ಮಹಾಶಯರು ಚಿಕ್ಕಂದಿನಲ್ಲೇ ಇವರ ಬುದ್ಧಿ ಮತ್ತಾದಿ ಲಕ್ಷಣವನ್ನು ನೋಡಿ—“ ನೀನು ಘನತರವೂ ಉತ್ತಮವೂ ಆದ ದೇಶಸೇವೆಯನ್ನು ಮಾಡತಕ್ಕವನಾಗುತ್ತೀಯೆ,ಆ ಸೇವೆಯು ಮನುಷ್ಯಶಕ್ತಿಗೆ ಮಿಂಚಿದುದಾಗಿರುತ್ತದೆ; ಅಂಥ ಶಕ್ತಿಯನ್ನು ಜಗದೀಶನು ನಿನಗೆ ಅನುಗ್ರಹಿಸಲಿ ” ಎಂದು ಹೇಳಿದ್ದರಂತೆ. ಆ ವಾಕ್ಯವು ಈಗ ಜಗತ್ತಿಗೆ ಪ್ರತ್ಯಕ್ಷವಾಗಿರುವುದು.

ಈ ಆಸ್ಕ್ವಿತ್‌ಮಹಾಶಯರು ಸಣ್ಣಂದಿನಲ್ಲಿ ವಿದ್ಯಾಭ್ಯಾಸಮಾಡುತ್ತಿರುವಾಗಲೇ ತನ್ನ ಅದ್ಭುತವಾದ ಗ್ರಹಣಶಕ್ತಿ ಜ್ಞಾಪಕಶಕ್ತಿಗಳಿಂದ ಉಪಾಧ್ಯಾಯಕೋಟಿಯನ್ನೆಲ್ಲಾ ವಿಸ್ಮಯಗೊಳಿಸಿ ಅವರ ಅಭಿಮಾನಕ್ಕೆ ಪಾತ್ರರಾಗಿದ್ದರು. ಇವರು ಅಭ್ಯಸಿಸುತ್ತಲಿದ್ದ ಲಂಡನ್‌ಪಾಠಶಾಲೆಯಲ್ಲಿ ಈಗಲೂ ಇವರ ಹೆಸರಿನಮೇಲೆ ಒಂದು ವಿದ್ಯಾರ್ಥಿವೇತನವು ಇವರ ಪಟುತ್ವದ ಜ್ಞಾಪಕಾರ್ಥವಾಗಿ ವಿನಿಯೋಗಿಸಲ್ಪಡುತ್ತಿದೆ. ಇವರು ತಮ್ಮ ಸಹೋದರರೊಡನೆ ಆಕ್ಸ್‌ಫರ್ಡ್‌ವಿಶ್ವವಿದ್ಯಾಲಯದಲ್ಲಿ ಓದಿ ಪಟ್ಟಪರೀಕ್ಷೆಯನ್ನಿತ್ತುದಲ್ಲದೆ ಬ್ಯಾರಿಸ್ಟರ್ ಪರೀಕ್ಷೆಯನ್ನೂ ಕೊಟ್ಟರು. ಈ ವಿದ್ಯಾರ್ಥಿದಶೆಯಲ್ಲಿ ತಮ್ಮ ೧೭ ನೆಯ ವಯಸ್ಸಿನಲ್ಲಿಯೇ ಉತ್ತಮವಾದ ಉಪನ್ಯಾಸಗಳನ್ನು ಕೊಡಲು ಶಕ್ತರಾದರು. ಇವರು ಧನಿಕಕುಟುಂಬದಲ್ಲಿ ಜನಿಸಿದವರಲ್ಲ. ತಾವು ಬ್ಯಾರಿಸ್ಟರಾದಬಳಿಕ ೧ ವರ್ಷ ಕಾಲದೊಳಗಾಗಿ ವಿವಾಹವಾದರು. ಆಗ ಸಂಸಾರನಿರ್ವಾಹಭಾರವು ಇವರಮೇಲೆ ಬಿದ್ದುದರಿಂದ ಅದಕ್ಕಾಗಿ ವಕೀಲತನದಲ್ಲಿ ಪ್ರವೇಶಿಸಿದರು. ಮೊದಮೊದಲು ಇವರಿಗೆ ಆದಾಯವು ಬಹಳ ಕಡಿಮೆಯಾಗಿದ್ದಿತು. ಉನ್ನತ್ಯಾಕಾಂಕ್ಷೆಯು ಇವರ ಹುಟ್ಟುಗುಣವಾಗಿದ್ದುದರಿಂದಲೂ ಅದಕ್ಕೆ ತಕ್ಕ ಮೇಧಾಶಕ್ತಿ ಕಾರ್ಯೋತ್ಸಾಹಗಳು ಸಹಾಯಕವಾಗಿದ್ದುದರಿಂದಲೂ ಪ್ರಸಿದ್ಧವಾದ ಕೆಲವು ವ್ಯಾಜ್ಯಗಳನ್ನು ಹಿಡಿದು ವಾದಿಸಿ, ಜಯಶೀಲರಾಗುತ್ತ ಬಂದುದರಿಂದ ಇವರಿಗೆ ಕನಕವೃಷ್ಟಿಯಾಗುವುದಕ್ಕೆ ಆರಂಭವಾದುದಲ್ಲದೆ ಇಲ್ಲೆಲ್ಲೂ ಈ ಬ್ಯಾರಿಸ್ಟರ ಕೀರ್ತಿಯೇ ಹರಡಿಕೊಳ್ಳುತ್ತ ಬಂದಿತು. ಇವರಿಗೆ ಬಿಡುವೇ ಇಲ್ಲದಂತಾಯಿತು. ದಿನ ೧ ಕ್ಕೆ ೪-೫ ಕೋರ್ಟುಗಳಿಗೆ ಹೋಗಬೇಕಾಗುತ್ತಿದ್ದಿತು. ಬರುಬರುತ್ತ ಇವರಮೇಲೆ ಭಾಗ್ಯಲಕ್ಷ್ಮೀಕಟಾಕ್ಷತರಂಗಗಳು ಅವಿರಳವಾಗಿ ಸೂಸುತ್ತ ಬಂದುವು. ೧೮೮೬ ನೆಯ ವರ್ಷದಲ್ಲಿ ಸ್ಕಾಟ್ಲಾಂಡಿನ ಒಂದುಭಾಗದ ಪ್ರಜೆಗಳ ಪ್ರತಿನಿಧಿಗಳಾಗಿ ಪಾರ್ಲಿಮೆಂಟಿನ ಸಭಿಕತ್ವಕ್ಕೆ ಆರಿಸಲ್ಪಟ್ಟರು. ಅಂದಿನಿಂದ ಇಲ್ಲಿಯವರೆಗೆ ೨೯ ವರ್ಷಗಳ ಕಾಲದಿಂದಲೂ ಅದೇಭಾಗದ ಪ್ರತಿನಿಧಿಗಳಾಗಿಯೇ ಇರುವರು. ತಮ್ಮ ಪ್ರತಿನಿಧಿಗೆ ಆಂಗ್ಲಪ್ರಭುತ್ವದ ಮುಖ್ಯಮಂತ್ರಿತ್ವವು ದೊರೆತಿರುವುದಕ್ಕಾಗಿ ಆದೇಶಭಾಗದ ಜನರೆಲ್ಲರೂ ಎಷ್ಟೋ ಅಭಿಮಾನಪಡುತ್ತಿರುವರು.

ಈ ಆಸ್ಕ್ವಿತ್‌ಮಹಾಶಯರಿಗೆ ಇಂಥ ಅಸಾಧಾರಣಪದವಿಯು ದೊರೆತುದಕ್ಕೆ ಅವರ ಸ್ವಕೀಯ ವಿದ್ಯಾವಿವೇಕಾದಿಸಾಮರ್ಥ್ಯಗಳು ಮಾತ್ರವೇ ಕಾರಣವಾಗಿಲ್ಲ. ಅವರಲ್ಲಿ ಅಗಾಧವಾದ ಶಾಂತಿ ಅನುಪಮವಾದ ತ್ರಿಕರಣಶುದ್ಧಿ ಅಸಾಧಾರಣವಾದ ದೇಶಾಭಿಮಾನ ಮೊದಲಾದ ಉತ್ಕೃಷ್ಟಗುಣಗಳು ಮೂರ್ತಿಮತ್ತಾಗಿರುವುದರಿಂದಲೇ ಲೋಕಾದ್ಭುತಗೊಳ್ಳುವಂತೆ ಅವರು ತಮ್ಮ ಕಾರ್ಯವನ್ನು ನಿರ್ವಹಿಸುತ್ತಿರುವರು. ಅಶನಿಪಾತದಂತೆ ಪ್ರತಿಪಕ್ಷದವರು ಉರಿದೆದ್ದು ವಾಗ್ಬಾಣಗಳನ್ನು ಪ್ರಯೋಗಿಸುವಾಗಲೂ ಕೂಡ ಇವರು ಮೇರುಪರ್ವತದಂತೆ ಅಚಲವಾಗಿದ್ದುಕೊಂಡು, ಆ ಪ್ರತಿಪಕ್ಷದವರಿಗೆ—“ ಸ್ವಲ್ಪ ಶಾಂತಿಯನ್ನು ವಹಿಸಿ, ಮತ್ತೊಂದಾವೃತ್ತಿ ಪೂರ್ವಾಪರಾಲೋಚನೆಯನ್ನು ಮಾಡಿ ನೋಡಿ ಮಾತನಾಡಿ ” ಎಂದು ವಿನಯದಿಂದಲೇ ಉತ್ತರವನ್ನು ಹೇಳಿ, ಅವರಾಗಿ ತಮ್ಮ ತಪ್ಪನ್ನು ತಾವೇ ತಿಳಿದುಕೊಂಡು ಶಾಂತರಾಗುವಂತೆ ಮಾಡುವರು. ಇವರು ಮಾತಿನ ಜಾಳಿಗದಲ್ಲಿ

ಜಯಶೀಲರಾಗಬೇಕೆಂಬ ತತ್ತ್ವದವರಲ್ಲ. ಕಾರ್ಯಜಯದಲ್ಲಿ ಗಮನವುಳ್ಳವರು. ಎಂಥ ತೊಡಕಾದ ವಿಷಯಗಳನ್ನೂ ಬೆಣ್ಣೆಯಿಂದ ಕೂದಲನ್ನು ಹಿರಿಯುವಷ್ಟು ಸುಲಭವಾಗಿ ವಿಷಯವಿಮರ್ಶನದಿಂದ ತೀರ್ಪುಗೊಳಿಸಬಲ್ಲವರು. ತಮ್ಮ ಕೈಕೆಳಗಣ ಮಂತ್ರಿಮಂಡಲದವರನ್ನೆಲ್ಲಾ ನಡೆಯಿಸಿಕೊಳ್ಳುವುದರಲ್ಲಿ ಇವರು ತೋರಿಸತಕ್ಕ ಪ್ರಜ್ಞಾವೈಭವವೂ ಆದರಣವೂ ಸಹ ಸಮಾನಮಂತ್ರಿಮಂಡಲದವರಿಂದೆಲ್ಲಾ ಕೊಂಡಾಡಲ್ಪಡುತ್ತಲಿವೆ.

ನಾನಾವಿಧಾಭಿಪ್ರಾಯಗ್ರಥಿತರಾದ ಮಂತ್ರಿಮಂಡಲಿಯವರನ್ನೂ, ನಾನಾವಿಷಯ ವಿಮರ್ಶನಚರ್ಚಾಕುತುಕಿಗಳಾದ ಸಭಾಸದರನ್ನೂ, ತಕ್ಕತಕ್ಕ ಉತ್ತರಗಳಿಂದ ಸಮಾಧಾನಪಡಿಸುವಲ್ಲಿ ಈ ಮುಖ್ಯಮಂತ್ರಿಯವರಿಗಿರತಕ್ಕ ಅದ್ಭುತವಾದ ಶಕ್ತಿಯು ಮತ್ತಾರಿಗೂ ಇಲ್ಲ. ಪಾರ್ಲಿಮೆಂಟಿನಲ್ಲಿ ಐರ್ಲಾಂಡ್ ಸ್ವರಾಜ್ಯದ ವಿಷಯವಾಗಿ ಆಲ್ಸ್ಟರ್ ಪ್ರಜೆಗಳು ಗೊಂದಲವನ್ನೆಬ್ಬಿಸಿದಸಮಯದಲ್ಲಿ ಇವರು ಪರ್ವತೋಪಮಾನವಾದ ಸ್ಥೈರ್ಯದಿಂದ ಅದನ್ನೆಲ್ಲಾ ತಾಳಿಕೊಂಡು ಹೇಗೆ ಶಾಂತಿಗೆ ತಂದರೆಂಬುದನ್ನು ತತ್ಸಂಬಂಧವಾಗಿ ಹಿಂದೆ ನಾವು ಆಗಾಗ್ಗೆ ಬರೆಯುತ್ತಬಂದಿರುವ ಲೇಖನಗಳಿಂದ ವಾಚಕರೆಲ್ಲರೂ ತಿಳಿದೇ ಇರುವರು. ಅದೇಸಮಯದಲ್ಲಿ ಇವರು ಒಂದಾವೃತ್ತಿ ಯುದ್ಧಾಂಗಮಂತ್ರಿಯ ಕೆಲಸವನ್ನು ತಾವೇ ವಹಿಸಿಕೊಂಡು ನಿರ್ವಾಹಮಾಡಿದ ಅಭೂತಪೂರ್ವರೀತಿಯು ಲೋಕಾಶ್ಚರ್ಯಕರವಾಗಿದ್ದಿತು. ಈ ಮಹಾಶಯರು ಮೇಲ್ಕಂಡಂತಹ ಸುಗುಣಗಳಿಂದ ಭೂಯಿಷ್ಠರಾಗಿರುವುದುಮಾತ್ರವೇ ಅಲ್ಲದೆ ಲೋಕೋತ್ತರವಾದ ವಾಗ್ಮಿತ್ವವೂ ಇವರಲ್ಲಿರುವುದು. ಆಗಾಗ್ಗೆ ಇವರು ಮಾಡುತ್ತಿರುವ ಭಾಷಣಗಳು ವೃತ್ತಪತ್ರಿಕೆಗಳಲ್ಲೂ ತಂತ್ರೀವಾರ್ತೆಗಳ ಮೂಲಕವಾಗಿಯೂ ಪ್ರಕಟವಾಗುತ್ತಿರುವುವು. ಪ್ರತಿಯೊಬ್ಬ ವಾಗ್ಮಿಯೂ ಲೇಖಕನೂ ಕಣ್ಣಿಗೊತ್ತಿಕೊಳ್ಳುವುದಕ್ಕೆ ಅವು ಯೋಗ್ಯವಾಗಿರುತ್ತಿರುವುವು. ಇವರ ಭಾಷಣದಲ್ಲಿ ಸಮಯೋಚಿತ ರಸಪೂರ್ಣಪದಪ್ರಯೋಗಗಳು ಅಚ್ಚುಗಟ್ಟಾಗಿರುವುವು. ಪ್ರತಿ ಸಂದರ್ಭದಲ್ಲೂ ಮಿತಿಮೀರದೆಯೂ ಕಡಿಮೆಯಾಗದೆಯೂ ಇರುವ ವಿಚಾರಗಳು ಆ ಭಾಷಣದಲ್ಲಿ ಸಮಗ್ರವಾಗಿರುವುವು. ಅಪಾರ್ಥಗಳಿಗೂ ಅಶ್ಲೀಲವಿಧಗಳಿಗೂ ಲೇಶಮಾತ್ರವೂ ಇವರ ವಾಕ್ಯಗಳಲ್ಲಿ ಎಡೆಯಿರುವುದಿಲ್ಲ. ಪಾರ್ಲಿಮೆಂಟಿನ ನಿಯಮಗಳಿಗೆ ಬದ್ಧವಾಗಿ ಇವರು ಮಾತನಾಡುವಾಗ ಇವರ ಬಾಯಿಂದ ಬರುವ ವಾಕ್ಯಗಳು ಒಂದರಹಿಂದೊಂದು ಪೋಣಿಸಿದ ಆಣಿಮುತ್ತುಗಳಂತೆ ಅಸ್ಖಲಿತವಾಗಿಯೂ ರಮ್ಯವಾಗಿಯೂ ಕಾಲೋಚಿತವಾಗಿಯೂ ದುಮುಕುತ್ತಿರುವುವು. ಅವನ್ನು ಕೇಳುತ್ತ ಸಭೆಯೆಲ್ಲಾ ಸ್ತಂಭೀಭೂತವಾಗಿರುವುದು. ಈ ಯುದ್ಧಾರಂಭವಾದಮೇಲೆ ಅವರು ಪಾರ್ಲಿಮೆಂಟಿನಲ್ಲೇ ಅಲ್ಲದೆ ಕೆಲವು ಊರುಗಳಲ್ಲೂ ಕೇರಿಗಳಲ್ಲೂ ಎಷ್ಟೋಕಡೆ ಅಹರ್ನಿಶಿಯೂ ಉಪನ್ಯಾಸಗಳನ್ನು ಮಾಡುತ್ತಿರುವರು. ಅವುಗಳೆಲ್ಲಾ ದೇಶಭಕ್ತಿ ಸಂಪೂರ್ಣವಾಗಿಯೂ, ವಕ್ತೃತ್ವಕಲಾಪರಿಪೂರ್ಣವಾಗಿಯೂ ಇರುತ್ತಿರುವುವು. ಇವರ ಭಾಷಣದಲ್ಲಿ ಹಿಂದೆ ಒಂದುಸಲ ಆಡಿದ ಮಾತು ಮತ್ತೊಂದುಸಲ ಬರುವ ದೋಷಕ್ಕೆ ಲೇಶವೂ ಎಡೆಯಿಲ್ಲ. ಇವರು ಈಗಲೂ ಮಹಾ ಉದ್ಗ್ರಂಥಗಳ ಆಲೋಡನೆಯನ್ನು ಬಿಟ್ಟವರಲ್ಲ. ಇವರಿಗೆ ಲ್ಯಾಟಿನ್ ಭಾಷೆಯಲ್ಲಿ ಸಂಪೂರ್ಣ ಪಾಂಡಿತ್ಯವಿರುವುದು. ಇವರ ಗೃಹಸೌಖ್ಯವು ಭೂಲೋಕ ಸ್ವರ್ಗಸೌಖ್ಯವಾಗಿರುವುದು. ಇವರ ಪತ್ನಿಯು ಸ್ತ್ರೀಜಾತಿಲಲಾಮವಾದ ಸಾಧ್ವೀಮಣಿಯು. ಇವರಿಗಿರುವ ಇಬ್ಬರು ಗಂಡುಮಕ್ಕಳೂ ಈಗ ಯುದ್ಧಾಂಗಣದಲ್ಲಿದ್ದಾರೆ. ರಾಜಕಾರ್ಯದಲ್ಲಿಯೂ ಮನೋನಿಶ್ಚಯದಲ್ಲಿಯೂ ಆ ಮಕ್ಕಳುಗಳು ತಂದೆಯ ಅಭಿಪ್ರಾಯವನ್ನೇ ಅನುಸರಿಸಿದವರಾಗಿದ್ದಾರೆ. ಈಗ ಆಂಗ್ಲಸಾಮ್ರಾಜ್ಯವೆಲ್ಲವೂ ಈ ಆಸ್ಕ್ವಿತ್ ಮಹನೀಯರನ್ನು ಪರಮಪೂಜ್ಯರನ್ನಾಗಿ ತಿಳಿಯುತ್ತಿದೆ. ರಾಜ್ಯಕಾರ್ಯದಲ್ಲಿ ಇವರ ಪ್ರತಿಪಕ್ಷದವರೂಸಹ ಇವರ ಅದ್ಭುತ ಸಾಮರ್ಥ್ಯವಿಶೇಷಗಳನ್ನು ಕಂಡು ಮುಗ್ಧರಾಗಿ ಹೋಗಿದ್ದಾರೆ. ಇವರ ಕಾಲದಲ್ಲಿ ಮೊನ್ನೆತಾನೇ ಏರ್ಪಟ್ಟಿರುವ ಸಂಯುಕ್ತಮಂತ್ರಿಮಂಡಲವು ಅಭೂತಪೂರ್ವವೆನಿಸಿಕೊಂಡಿರುವುದಲ್ಲದೆ ಅಂಥ ಏರ್ಪಾಟಿಗೆ ಈ ಮಹಾಶಯರ ದೀರ್ಘದರ್ಶಿತ್ವದೇಶಾಭಿಮಾನಲಕ್ಷ್ಯಗಳೇ ಮುಖ್ಯ ಹೇತುಭೂತಗಳಾಗಿರುತ್ತವೆ. ಆಂಗ್ಲಸಾಮ್ರಾಜ್ಯದ ನಿರುಪಮಘನತೆಗೆ ಸರ್ವವಿಧದಿಂದಲೂ ಈ ಮಂತ್ರಿವರ್ಯರು ತಕ್ಕವರಾಗಿರುತ್ತಾರೆ. ಇವರ ಕಾಲದಲ್ಲಿ ಹುಟ್ಟಿ ನಡೆಯುತ್ತಿರುವ ಈಗಿನ ಘೋರಯುದ್ಧದಲ್ಲಿ ಧರ್ಮಸ್ಥಾಪನೆಗಾಗಿ ಆಂಗ್ಲಸಾಮ್ರಾಜ್ಯವು ಬೆರೆಯಬೇಕಾಗಿಬಂದಿತು. ಧರ್ಮರಕ್ಷಣೆಗಾಗಿಯೇ ಲಕ್ಷಾಂತರಪ್ರಾಣಗಳನ್ನು ಧರ್ಮಸಾಮ್ರಾಜ್ಯವು ಆಹುತಿಗೊಡುತ್ತಿರುವುದು. ಪರಿಣಾಮದಲ್ಲಿ ಉಂಟಾಗುವ ಸದ್ಧರ್ಮವಿಜಯದಿಂದ ಆಂಗ್ಲರಾಜ್ಯದ ಪವಿತ್ರ ಚರಿತ್ರದಲ್ಲಿ ನಮ್ಮ ಆಸ್ಕ್ವಿತ್‌ಮಹಾಶಯರ ವಿವೇಕವೈಭವವು ರತ್ನಖಚಿತಾಕ್ಷರಾವಳಿಗಳಿಂದ ಆಚಂದ್ರಾರ್ಕವಾಗಿ ವಿರಾಜಿಸುವುವೆಂಬುದಕ್ಕೆ ಅಭ್ಯಂತರವಿಲ್ಲ.

ಪ್ರಿನ್ಸ್ ಬಿಸ್ಮಾರ್ಕರವರ ಅಂತ್ಯೋಕ್ತಿ.

ಈ ಮಹನೀಯರು ಜರ್ಮನ್‌ದೇಶದ ಈಗಿನ ಚಕ್ರವರ್ತಿಗಳ ತಂದೆಯಕಾಲದಲ್ಲೂ ತಾತನಕಾಲದಲ್ಲೂ ಆ ದೇಶಕ್ಕೆ ಮುಖ್ಯಮಂತ್ರಿಯಾಗಿದ್ದವರು. ಈತನ ಕಾರ್ಯಭಾರವು ಜಗತ್ಪ್ರಖ್ಯಾತವಾದುದು. ಯೂರೋಪಿನಲ್ಲೆಲ್ಲಾ ಈತನ ಹೆಸರು ಭಯೋತ್ಪಾದಕವಾಗಿದ್ದಿತು. ಜರ್ಮನ್‌ದೇಶದ ವಿಸ್ತರಣಕ್ಕೆ ಈತನೇ ಬಲುಮಟ್ಟಿಗೆ ಕಾರಣನು. ಈತನು ಸಾಯುವುದಕ್ಕೆ ಮುಂಚೆ ಈ ಕೆಳಗೆ ಹೇಳುವ ರೀತಿಯಲ್ಲಿ ಮಾತನಾಡಿಬಿಟ್ಟು ಮೃತನಾದನಂತೆ. “ನಾನು ಭೂಮಿಯಮೇಲೆ ಮಾಡಿದ ಕಾರ್ಯಗಳಿಗಾಗಿ ನನ್ನನ್ನು ಯಾರೂ ಪ್ರೀತಿಸುವುದಿಲ್ಲ. ನಾನು ಮಾಡಿದ ಕಾರ್ಯಗಳಿಂದ ನನಗೆ ಮಾತ್ರವೇ ಅಲ್ಲದೆ ನನ್ನ ಕುಟುಂಬದವರಿಗೂ ಸಹ ನಾನು ಸಂತೋಷಪ್ರದನಾದವನಲ್ಲ. ನನ್ನನ್ನು ಜಾತೀಯವ್ಯಕ್ತಿಯನ್ನು ಉಂಟುಮಾಡಿದವನೆಂದು ಕೆಲವರೆನ್ನುವರು. ಆದರೆ ನಾನು ಇಲ್ಲದಿದ್ದರೆ ಮೂರು ದೊಡ್ಡ ಯುದ್ಧಗಳು ಭೂಮಿಯಮೇಲೆ ನಡೆಯುತ್ತಿರಲಿಲ್ಲ; ೮೦ ಸಾವಿರಮಂದಿಗಳು ಹತರಾಗುತ್ತಿರಲಿಲ್ಲ; ಎಷ್ಟೋ ತಾಯ್ತಂದೆಗಳೂ, ಅಣ್ಣತಂಗಿಯರೂ, ವಿತಂತುಗಳೂ ದುಃಖಸಾಗರದಲ್ಲಿ ಮುಳುಗುತ್ತಿರಲಿಲ್ಲ. ಇದಕ್ಕೆಲ್ಲಾ ನಾನು ಸೃಷ್ಟಿಕರ್ತನಾದ ಭಗವಂತನೊಡನೆ ಉತ್ತರವನ್ನು ಹೇಳಿ ಪರಿಷ್ಕರಿಸಿಕೊಂಡಿದ್ದೇನೆ. ಆದರೆ ನಾನು ಮಾಡಿದ ಕಾರ್ಯಗಳಿಗಾಗಿ ನನಗೆ ಲೇಶಮಾತ್ರವೂ ಸಂತೋಷವುಂಟಾಗಲಿಲ್ಲ” ಎಂಬುದಾಗಿ. ದುರಾಶಾಪೀಡಾಗ್ರಸ್ತರಾಗಿ ಈ ಮುಖ್ಯಮಂತ್ರಿಯು ಮಾಡಿದ ಕಾರ್ಯವು ಅಂತ್ಯಕಾಲದಲ್ಲಿ ಆತನಿಗೆ ಎಷ್ಟುಮಟ್ಟಿಗೆ ಅಸಮಾಧಾನವನ್ನು ಉಂಟುಮಾಡಿತೆಂಬುದನ್ನು ಮೇಲಿನ ವಿಷಯವು ವ್ಯಕ್ತಪಡಿಸುತ್ತದೆ. ಅದೇ ರಾಜ್ಯದ ಈಗಿನ ಚಕ್ರವರ್ತಿಯು ಜಗತ್ತಿಗೇ ಅಭೂತಪೂರ್ವವಾದಂಥ ಈಗಿನ ಯುದ್ಧವನ್ನು ಹೂಡಿ ಲಕ್ಷೋಪಲಕ್ಷ ಸೈನಿಕಜನರ ಪ್ರಾಣಹತಿಗೂ, ನಿರಪರಾಧಿಜನರ ಅಪರಿಮಿತ ಮಾನಪ್ರಾಣಗಳ ವಿನಾಶಕ್ಕೂ ಹೇತುಭೂತರಾಗಿ, ಜಗತ್ತಿನವರಿಂದೆಲ್ಲಾ ಶಪಿಸಲ್ಪಡುತ್ತಿರುವಾಗ, ಅಂತ್ಯಕಾಲದಲ್ಲಿ ಈವಿಷಯಗಳೆಲ್ಲಾ ಅವರ ಸ್ಮರಣೆಗೆ ಬಂದರೆ ಎಷ್ಟು ಪಶ್ಚಾತ್ತಾಪವುಂಟಾಗಬಹುದು ! ಸೃಷ್ಟಿಕರ್ತನಾದ ಜಗದೀಶನಮುಂದೆ ಇದಕ್ಕೆಲ್ಲಾ ಹೇಗೆ ಪರಿಹಾರವನ್ನು ಹೇಳಲಾದೀತು ? ಮಾಡಿದ ತಪ್ಪನ್ನು ಅರಿತು ಪರಿತಾಪಪಡುವ ಸ್ಥಿತಿಯು ಅಂತ್ಯಕಾಲದಲ್ಲಾದರೂ ಆ ಪ್ರಿನ್ಸ್ ಬಿಸ್ಮಾರ್ಕರಿಗೆ ದೊರೆದಿತು. ಈಗಿನ ಕ್ರೂರಾತ್ಮರಾದ ಕೇಜರ್‌ರವರಿಗೆ ಅಂತ್ಯಕಾಲದಲ್ಲೂ ತನ್ನ ದೋಷವು ತನಗೆ ಸ್ಮರಣೆಗೆ ಬರುವುದೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ. ಈಗಿನ ಇವರ ಕ್ರೂರಸ್ವಭಾವವು ಅತ್ಯಂತ ಪರಿಪಾಕಕ್ಕೆ ಬಂದಿರುವುದರಿಂದ ಅಂತ್ಯಕಾಲದಲ್ಲೂ ಅವರ ಕ್ರೂರಚಿತ್ತವು ಪರಿತಾಪಪಡುವ ಸ್ಥಿತಿಯನ್ನು ಹೊಂದುವಂತೆ ತೋರುವುದಿಲ್ಲ.

ಜರ್ಮನರ ವಿಷವಾಯುಗೋಳಗಳು.

ಜರ್ಮನರ ಪ್ರಕೃತಿಶಾಸ್ತ್ರಪಾಂಡಿತ್ಯಪರಿಪಾಕವು ಜಗದ್ವಿನಾಶಹೇತುವಾಯಿತೆಂಬ ವಿಷಯವು ಈಗಿನ ಯುದ್ಧವೈಚಿತ್ರ್ಯದಿಂದಜಗತ್ತಿಗೇ ಗೊತ್ತಾಗಿದೆಯಷ್ಟೆ. ಜರ್ಮನೀದೇಶಕ್ಕೆ ಹೋಗಿದ್ದು ಅಲ್ಲಿನ ಜರ್ಮನರ ಯುದ್ಧಪ್ರಯತ್ನಗಳನ್ನೆಲ್ಲಾ ಅರಿತುಬಂದ ಒಬ್ಬಾನೊಬ್ಬ ಸ್ವೀಡನ್‌ದೇಶೀಯನು ಅಲ್ಲಿನ ಕೆಲವು ವಿಶೇಷಗಳನ್ನು ಪತ್ರಿಕೆಗಳಿಗೆ ಬರೆದಿರುತ್ತಾನೆ. ಆದರಿಂದ ಗೊತ್ತಾಗುವುದೇನೆಂದರೆ-ಜರ್ಮನರು ಇದುವರೆಗೆ ವಿಷವಾಯುವನ್ನು ನಿರ್ಮಿಸಿಅದನ್ನು ಫಿರಂಗಿಗುಂಡುಗಳಮೂಲಕವಾಗಿಯೂ ನಳ್ಳಿಗಳಿಂದಲೂ ಶತ್ರುಗಳಮೇಲೆ ಪ್ರಯೋಗಿಸುತ್ತಿದ್ದರಷ್ಟೆ. ಈಗ ಅವರು ವಿಷವಾಯುವನ್ನು ಆಕಾಶನಾವೆಗಳಲ್ಲಿರುವ ಸಿಡಿಮದ್ದಿನ ಗುಂಡುಗಳಲ್ಲೂಕೂಡ ಸೇರಿಸುತ್ತಿರುವರು. ಇಂಥ ವಿಷದ ಗೋಲಗಳನ್ನು ಆಕಾಶನಾವೆಗಳ ಮೂಲಕದಿಂದ ಇಂಗ್ಲೀಷ್ ಫ್ರೆಂಚ್ ಸೈನಿಕರ ಮೇಲೂ ಅವರ ಪಟ್ಟಣಗಳಮೇಲೂ ಇಟ್ಟು ಜಯಶೀಲರಾಗಬೇಕೆಂದು ಅವರು ಪ್ರಯತ್ನಿಸುತ್ತಿದ್ದಾರೆ. ಇದುವರೆಗೆ ಈ ಗೋಲಗಳನ್ನು ಯುದ್ಧರಂಗಕ್ಕಾಗಿ ಅಣಿಮಾಡಿಕೊಟ್ಟ ಜರ್ಮನ್‌ದೇಶದ ರಾಸಾಯನಿಕ ಶಾಸ್ತ್ರಜ್ಞಸಂಘದವರೇ ಈ ನೂತನಗೋಳಗಳನ್ನೂ ನಿರ್ಮಿಸಿಕೊಡುತ್ತಿದ್ದಾರೆ. ಇವುಗಳನ್ನು ನಿರ್ಮಿಸುವುದಕ್ಕೆ ಅಪರಿಮಿತವಾಗಿ ಧನವ್ಯಯವಾಗುತ್ತದೆ. ಇವು ಅಪಾಯಕರವಾದವುಗಳು ಒಂದುಕಡೆಯಿಂದ ಮತ್ತೊಂದುಕಡೆಗೆ ಸಾಗಿಸಿಕೊಂಡು ಹೋಗುವುದೂ ಕೂಡ ಬಹಳ ಅಪಾಯಕರವು. ಒಂದಾವೃತ್ತಿ ಥಟ್ಟನೆ ಇಂಗ್ಲೆಂಡಿನಮೇಲೂ ಫ್ರಾನ್ಸಿನಮೇಲೂ ಏರಿಹೋಗಿ ಈ ನೂತನ ವಿಷಗೋಳಗಳನ್ನು ಅಪರಿಮಿತವಾಗಿ ಪ್ರಯೋಗಿಸಿ ದಹನಮಾಡಿಬಿಟ್ಟರೆ ಯುದ್ಧವು ಬೇಗನೆ ಮುಗಿದುಹೋಗುವುದೆಂದು ಜರ್ಮನರು ಯೋಚಿಸಿಕೊಂಡಿದ್ದಾರಂತೆ. ಈಗ ಮಾಡಲ್ಪಡುತ್ತಿರುವ ಆಕಾಶನಾವೆಯ ವಿಷಧೂಮಗೋಳಗಳು ಇದುವರೆಗೆ ಯುದ್ಧರಂಗದಲ್ಲಿ ಪ್ರಯೋಗಿಸುತ್ತಿದ್ದ ವಿಷವಾಯುಗೋಳಗಳಿಗಿಂತಲೂ ಬಹಳ ಅಪಾಯಕರಗಳಂತೆ. ಒಂದು ಗೋಳವನ್ನು ಒಂದೂರಿನಮೇಲಿಟ್ಟುಬಿಟ್ಟರೆ ಅದರೊಳಗಿರುವ ಹೊಗೆಯು ಊರಿನತುಂಬಾ ಮೋಡವು ಮುಸುಕಿದಂತೆ ವಾತಾವರಣದಲ್ಲೆಲ್ಲಾ ಹರಡಿಕೊಂಡು ಒಳಗಿರುವ ಜನರನ್ನೆಲ್ಲಾ ಉಸುರಾಡುವುದಕ್ಕವಕಾಶವಿಲ್ಲದಹಾಗೆ ಮಾಡುವುದಂತೆ. ಇದಕ್ಕಾಗಿ ಇಂಗ್ಲೆಂಡ್ ಫ್ರಾನ್ಸ್‌ದೇಶೀಯರು ತಕ್ಕ ಮುಂದಾಲೋಚನೆಗಳನ್ನು ಈಗಿನಿಂದಲೇ ಮಾಡಿಕೊಂಡಿರುವುದು ಆವಶ್ಯಕವೆಂದು ಆ ಸ್ವೀಡನ್ ದೇಶೀಯನು ತಿಳಿಯಪಡಿಸಿದ್ದಾನೆ.

ಜರ್ಮನರು ಯುದ್ಧಾರಂಭಮಾಡುವಾಗಲೇ ಒಂದು ತಿಂಗಳೊಳಗಾಗಿ ಪ್ರಪಂಚಸಾಮ್ರಾಜ್ಯವನ್ನು ಸಾಧಿಸುವೆವೆಂದು ಯೋಚಿಸಿಕೊಂಡಿದ್ದರು. ಆ ಸಂಕಲ್ಪಗಳೆಲ್ಲಾ ಪೂರೈಸಿಹೋದುವೆ ? ನಿರಪರಾಧಿಗಳಾದ ಪ್ರಜೆಗಳು ತುಂಬಿರುವ ಪಟ್ಟಣಗಳನ್ನೆಲ್ಲಾ ಧ್ವಂಸಮಾಡಬೇಕೆಂಬ ದುಷ್ಟಸಂಕಲ್ಪವು ಜರ್ಮನರಿಗೆ ಹುಟ್ಟಿದಮಾತ್ರಕ್ಕೇ ಅದನ್ನು ಜಗದೀಶ್ವರನು ನೆರವೇರಿಸಿಕೊಡುವನೆ ? ಈ ದುರ್ಬುದ್ಧಿಯು ಅವರ ಅಂತ್ಯಕಾಲಸಾಮೀಪ್ಯವನ್ನು ಸೂಚಿಸುವುದು. ಇಂಥ ದುಷ್ಟಸಂಕಲ್ಪಗಳಿಂದ ಈಗಲೇ ಜರ್ಮನಿಯವರು ಜಗದ್ವಿರೋಧವನ್ನು ಬಹಳವಾಗಿ ಸಂಪಾದಿಸಿಕೊಂಡಿರುವರು. ತಮ್ಮ ಪಾಪಾಚರಣೆಯು ಪರಿಪಕ್ವವಾಗಿ ಅವರ ಫಲವನ್ನು ಈ ಜನ್ಮದಲ್ಲೇ ಅನುಭವಿಸುವಂಥ ಸ್ಥಿತಿಯನ್ನು ಜರ್ಮನ್ ಚಕ್ರವರ್ತಿಯವರು ತಂದುಕೊಳ್ಳುತ್ತಿರುವರು. ಅವರೊಬ್ಬರ ಪಾಪಾಚರಣದಿಂದ ಜಗತ್ತೇ ದುಃಖಾನುಭವಮಾಡುತ್ತಿರುವುದಕ್ಕಾಗಿ ವಿಷಾದಿಸಬೇಕಾಗಿರುವುದು.

ಸಕ್ಕರೆ ಅಚ್ಚುಗಳು.

ಈಗಿನ ಮಹಾಯುದ್ಧದಿಂದ ಸಮುದ್ರದಮೇಲೆ ವ್ಯಾಪಾರದ ಹಡಗುಗಳ ತಿರುಗಾಟವು ನಿರುಪಾಧಿಕವಾಗಿ ಸಾಗುತ್ತಲಿಲ್ಲ. ಅದುಕಾರಣವೇ ವ್ಯಾಪಾರದಲ್ಲಿ ಎಷ್ಟೋ ವ್ಯತ್ಯಾಸಗಳುಂಟಾಗಿರುತ್ತವೆ. ಹವಾಯಿ ಎಂಬ ದ್ವೀಪದಲ್ಲಿ ಸಕ್ಕರೆಯನ್ನು ಮಾಡುವ ಯಂತ್ರಾಲಯಗಳು ಸುಪ್ರಸಿದ್ಧವಾಗಿರುತ್ತವೆ. ಅದರಲ್ಲಿ ನಿರ್ಮಿತವಾಗುವ ಸಕ್ಕರೆಯನ್ನು ಹೊರಕ್ಕೆ ಕಳುಹಿಸುವುದಕ್ಕೆ ಅವರಿಗೆ ಗೋಣಿಚೀಲಗಳು ಸಿಕ್ಕದೆಹೋಗಿವೆ. ಅದುಕಾರಣ ಅಣಿಯಾದ ಸಕ್ಕರೆಯನ್ನು ತುಂಬಿಟ್ಟುಕೊಂಡು ಪರಿತಪಿಸುವ ಸ್ಥಿತಿಯು ಅಲ್ಲಿನವರಿಗೆ ಬಂದಿದೆ. ಪ್ರತಿವರ್ಷವೂ ಅಲ್ಲಿನವರು ಸಕ್ಕರೆಯನ್ನು ತುಂಬಿ ಕಳುಹಿಸಿಕೊಡುವುದಕ್ಕಾಗಿಯೇ ೧ ಕೋಟಿಯೂ ೧೦ ಲಕ್ಷದ ಗೋಣೀಚೀಲಗಳನ್ನು ಹೊರಗಿನಿಂದ ತರಿಸಿಕೊಳ್ಳುತ್ತಿದ್ದರು. ಕಾಫಿ, ಅಕ್ಕಿ ಮೊದಲಾದ ಇತರ ಸಾಮಗ್ರಿಗಳಿಗಾಗಿ ಬೇರೆ ೧೦ ಲಕ್ಷ ಚೀಲಗಳನ್ನು ತರಿಸಿಕೊಳ್ಳುತ್ತಿದ್ದರು. ಈಗ ಯಾವುದಕ್ಕೂ ಗೋಣೀಚೀಲಗಳೇ ದೊರಕದೆ ಹೋಗಿರುವುದರಿಂದ ಅಲ್ಲಿನ ಸಕ್ಕರೆಯ ವರ್ತಕರು ಇನ್ನು ಮುಂದೆ ತಮ್ಮ ಸಕ್ಕರೆಯನ್ನೆಲ್ಲಾ ಕರಗಿಸಿ ಬೆಲ್ಲದಂತೆ ಅಚ್ಚುಹೊಯ್ದು ಪೆಟ್ಟಿಗೆಗಳಲ್ಲಿ ತುಂಬಿ ಹೊರಕ್ಕೆ ಕಳುಹಿಸಿಕೊಡಬೇಕೆಂದು ಯೋಚಿಸಿರುವರು. ಇನ್ನುಮುಂದೆ ನಾವು ಬೆಲ್ಲದ ಅಚ್ಚುಗಳಿಗೆ ಪ್ರತಿಯಾಗಿ ಸಕ್ಕರೆಯ ಅಚ್ಚುಗಳನ್ನು ಉಪಯೋಗಿಸುವ ಕಾಲವೂ ಬರಬಹುದು.

ಯುದ್ಧವಾರ್ತೆಯು.

ಪಶ್ಚಿಮರಣರಂಗ.

ಮಿತ್ರಮಂಡಲಿಯವರ ಕೈಯು ಮುಂದಾಗಿಯೇ ಇದೆ. ಹಲವುಕಡೆ ಜರ್ಮನರು ತಮ್ಮ ಸ್ಥಾನಗಳನ್ನು ಹಲವು ಸಾಮಗ್ರಿಗಳ ಸಮೇತ ಸಂಯುಕ್ತಸೈನ್ಯದವರಿಗೆ ಬಿಟ್ಟುಬಿಟ್ಟು ಓಡಿಹೋಗಿರುತ್ತಾರೆ. ಈಗಿನ ಸ್ಥಿತಿಯಂತೆಯೇ ನಡೆದರೆ ಜರ್ಮನರು ಇನ್ನು ಸ್ವಲ್ಪಕಾಲದೊಳಗಾಗಿ ಫ್ರಾನ್ಸ್ ಎಲ್ಲೆಯಿಂದಾಚೆಗೆ ದಬ್ಬಲ್ಪಡುವುದರಲ್ಲಿ ಸಂಶಯವಿಲ್ಲವೆಂದು ಕಾಣುತ್ತದೆ. ಇದುವರೆಗೆ ಜರ್ಮನರು ಕಳೆದುಕೊಂಡ ಕೆಲವು ಸ್ಥಾನಗಳನ್ನು ಮರಳಿ ಆಕ್ರಮಿಸಿಕೊಳ್ಳಬೇಕೆಂದು ಅವರು ಮಾಡಿದ ಸಾಹಸಯುದ್ಧಗಳಲ್ಲೊಂದರಲ್ಲೂ ಫಲವಾಗಲಿಲ್ಲ. ಫ್ರಾನ್ಸ್ ಸೈನ್ಯಗಳು ತಾವು ಹಿಡಿದ ಸ್ಥಲಗಳನ್ನು ಭದ್ರಪಡಿಸಿಕೊಂಡು ಮುಂದುಮುಂದಕ್ಕೆ ನುಗ್ಗಿ ಶತ್ರುಗಳ ಮೇಲೆ ಕಾದಾಡುತ್ತಲೇ ಇದ್ದಾರೆ. ನ್ಯೂವೆಲ್ಲಿ ಎಂಬ ಗ್ರಾಮವನ್ನೆಲ್ಲಾ ಈಗ ಪೂರ್ಣವಾಗಿ ಫ್ರೆಂಚ್ ಸೈನಿಕರು ಸ್ವಾಧೀನಪಡಿಸಿಕೊಂಡಿದ್ದಾರೆ. ಇದರ ಹತ್ತಿರದ ಯುದ್ಧವು ಮುಗಿದಂತಾಯಿತು. ಈ ಬಳಿಯಲ್ಲಿ ನಡೆದ ಯುದ್ಧದಲ್ಲಿ ಜರ್ಮನರ ೧ ಸಾವಿರ ಹೆಣಗಳು ರಣರಂಗದಲ್ಲೇ ಬಿದ್ದಿದ್ದುವು. ಈ ಬಳಿಯಲ್ಲಿ ನೆಲದೊಳಗೆ ಹೂತಿದ್ದ ಶತ್ರುಗಳ ೩ ಕಂದಕಗಳ ಫಿರಂಗಿಗಳೂ, ೧೫ ಚಿಕ್ಕ ಫಿರಂಗಿಗಳೂ, ಕೆಲವು ಹಾಳ್ಮಾಡಿದ್ದ ಫಿರಂಗಿಗಳೂ, ೧ ಸಾವಿರ ತುಪಾಕಿಗಳೂ, ಲಕ್ಷಾಂತರ ತೋಟಾಗಳೂ, ಇನ್ನೂ ಹಲವು ಯುದ್ಧಸಾಮಗ್ರಿಗಳೂ ಕೂಡ ಫ್ರೆಂಚರಿಗೆ ಸಿಕ್ಕಿದುವು. ಲೇಬ್ರಿಂತಿನ ಹತ್ತಿರ ಇನ್ನು ಕೆಲವು ಸ್ಥಲಗಳನ್ನು ಫ್ರೆಂಚರು ವಶಪಡಿಸಿಕೊಂಡಿದ್ದಾರೆ.

ಹೇಬುಡ್ರಾದ ಬಳಿಯಲ್ಲಿ ದಕ್ಷಿಣದಿಕ್ಕಿನೊಳಗೆ ನಡೆದ ಘೋರಯುದ್ಧದಲ್ಲಿ ೧೫೦ ಮಂದಿ ಜರ್ಮನರನ್ನು ಸೆರೆಹಿಡಿದರು. ಒಬ್ಬ ಮೇಜರನ್ನೂ ಕೂಡ ಹಿಡಿದರು. ಅಲ್ಲಿ ಜರ್ಮನರ ಸೇನಾಪಂಕ್ತಿಯನ್ನು ಕೂಡ ಫ್ರೆಂಚರು ಅರ್ಧಮೈಲಿಯ ಅಗಲ ಛೇದಿಸಿದರು. ಅರ್ರಾಸಿಗೆ ಉತ್ತರಭಾಗದಲ್ಲೂ ಲೇಬ್ರಿಂತಿನ ದಕ್ಷಿಣಪ್ರಾಂತದಲ್ಲೂ ಫ್ರೆಂಚರು ಭೀಕರವಾದ ಫಿರಂಗಿ ಯುದ್ಧವನ್ನು ಮಾಡಿ ಶತ್ರುಗಳನ್ನು ಹಿಂದಕ್ಕಟ್ಟಿದ್ದಾರೆ. ಈ ಸುತ್ತಿನಲ್ಲಿ ಈಗ ಮಂಜು ವಿಶೇಷವಾಗಿ ಸುರಿಯುತ್ತಿದೆ. ಸೌಷೇಜಿನ ಹತ್ತಿರವಿರುವ ೧ ರೈಲ್ವೆಸ್ಟೇಷನ್ನನ್ನು ಫ್ರೆಂಚರು ಹಿಡಿದುಕೊಂಡರು. ಸೌಷೇಜಿನ ಸಕ್ಕರೆ ಯಂತ್ರಾಲಯದ ಉತ್ತರದಲ್ಲಿರುವ ೧ ಗುಡ್ಡದ ಮೇಲೆ ಶತ್ರುಗಳು ಫಿರಂಗಿ ಮೊದಲಾದುವುಗಳನ್ನಿಟ್ಟುಕೊಂಡು ತೀಕ್ಷ್ಣವಾಗಿ ಇದಿರಿಸುತ್ತಿದ್ದರು. ಅದನ್ನೂ ಫ್ರೆಂಚರು ವಶಪಡಿಸಿಕೊಂಡರು. ಈ ರಣರಂಗದಲ್ಲಿರುವ ಜರ್ಮನರು ಈಗ ತಮ್ಮ ಸೇನಾಪಂಕ್ತಿಯನ್ನು ಆಕುಂಚನಗೊಳಿಸಿಕೊಳ್ಳುವಂತೆ ಕಾಣುತ್ತಿದೆ. ಅರ್ರಾಸಿನ ಉತ್ತರದಲ್ಲಿ ಕೋಟ್ರಾಯಿಯಿಂದ ಟಾರ್ನಲೇ ಲಿಲ್ಲಿಯವರೆಗೆ ಸಂಧಿಸಿ ತ್ರಿಭುಜರೇಖಾಕೃತಿಯ ವ್ಯೂಹವನ್ನಾಗಿ ಕಲ್ಪಿಸಿಕೊಳ್ಳಬಹುದೆಂದು ಎಣಿಸಲ್ಪಟ್ಟಿದೆ. ಇದು ಅವರ ಬಲಕುಂಠತೆಯನ್ನು ವ್ಯಕ್ತಪಡಿಸುತ್ತದೆ.

ಉತ್ತರದಲ್ಲಿ ಬೆಲ್ಜಿಯಂ ಸೈನಿಕರು ಡಿಕ್ಸ್‌ಮೂಡು ಲೋಹಮಾರ್ಗ ಸೇತುವಿನ ಬಳಿಯಲ್ಲಿ ಈಜರ್‌ನದಿಯನ್ನು ದಾಟಿ ಕೆಲವು ಪ್ರದೇಶಗಳನ್ನು ಹಿಡಿದುಕೊಂಡು ತಮ್ಮ ಸೈನ್ಯಗಳನ್ನು ಅಲ್ಲಿಗೆ ಸೇರಿಸಿದ್ದಾರೆ. ನ್ಯೂಪೋರ್ಟಿಗೆ ಈಶಾನ್ಯದಲ್ಲಿ ಇವರು ತೀಕ್ಷ್ಣಯುದ್ಧವನ್ನುಮಾಡಿ ಜರ್ಮನ್‌ಸೈನ್ಯದಲ್ಲಿ ಬಹುಜನರನ್ನು ಕೊಂದು ಜಯಶಾಲಿಗಳಾಗಿದ್ದಾರೆ. ಡಿಕ್ಸ್‌ಮೂಡಿನ ಹತ್ತಿರ ಜರ್ಮನರು ವಿಷವಾಯುವನ್ನು ಬೆಲ್ಜಿಯಂ ಸೈನಿಕರ ಮೇಲೆ ಪ್ರಯೋಗಿಸಿ ತಾವು ಈಸರ್‌ನದಿಯನ್ನು ದಾಟಿದರು. ಬೆಲ್ಜಿಯನ್ನರ ಸಹಾಯಕ್ಕೆ ಇಂಗ್ಲೀಷರ ಕೆಲವು ಸೈನ್ಯವು ಹೋಗಲಾಗಿ, ಮರುದಿವಸ ಈ ಎರಡು ಸೈನ್ಯಗಳೂ ಕೂಡಿ ಜರ್ಮನರ ಮೇಲೆ ಬಿದ್ದು ಕಾದು ಅವರನ್ನು ನದಿಯಾಚೆಗೋಡಿಸಿದರು. ಈಗ ಡಿಕ್ಸ್‌ಮೋ

ಡಿನ ಹತ್ತಿರವಿರುವ ಜರ್ಮನ್ ಸೈನ್ಯದ ಸ್ಥಿತಿಯು ಬಹಳ ಹೀನವಾಗಿದೆಯಂತೆ. ಡಿಕ್ಸ್‌ಮೂಡ್ ಪಟ್ಟಣದಲ್ಲಿ ಸ್ವಲ್ಪಭಾಗವು ಮಿತ್ರಮಂಡಲಿಯವರ ವಶದಲ್ಲೂ ಸ್ವಲ್ಪಭಾಗವು ಜರ್ಮನರ ವಶದಲ್ಲೂ ಇವೆ.

ಪಶ್ಚಿಮ ರಣರಂಗದಲ್ಲಿ ಈಚೆಗೆ ಫ್ರೆಂಚರಿಗೆ ಆದ ವಿಜಯದ ಕಾರಣವನ್ನು ಪ್ರತ್ಯಕ್ಷವಾಗಿ ನೋಡಿಕೊಂಡು ಹೋಗುವುದಕ್ಕಾಗಿ ಇಷ್ಟರಲ್ಲೇ ಕೇಜರರು ಇತ್ತಕಡೆಗೆ ಬರುವುದರಲ್ಲಿದ್ದಾರಂತೆ. ಅವರು ಬಂದಬಳಿಕ ತಮ್ಮ ಮುಖವನ್ನು ಹೇಗೆ ತೋರಿಸುವುದೆಂಬ ಭಯಲಜ್ಜೆಗಳಿಂದ ಜರ್ಮನರ ಕಡೆಯ ಹಲವು ಕರ್ನಲ್ಲುಗಳೂ ಮೇಜರುಗಳೂ ಆತ್ಮಹತ್ಯವನ್ನು ಮಾಡಿಕೊಂಡಿರುವರಂತೆ.

ಪೂರ್ವರಣರಂಗ.

ಪ್ರಿಜೆಮ್ಸಿಲ್ಲನ್ನ ಬಿಟ್ಟುಹೋದ ರಷ್ಯನ್‌ಸೈನ್ಯಗಳು ಪೂರ್ವಕ್ಕೆಹೋಗಿ ನೀಸ್ಟರ್ ನದಿಯ ದಡದಮೇಲೆ ಬಲವಾಗಿ ನಿಂತು ಶತ್ರುಗಳನ್ನು ತಡೆದಿರುತ್ತವೆ. ಜುರೋವ್ನೋವಿನ ಹತ್ತಿರ ಬಲವಾದ ಶತ್ರುಸೈನ್ಯವು ಬಂದು ಸಾಹಸದಿಂದ ನದಿಯನ್ನು ದಾಟಿದುವು. ಆದರೆ ರಷ್ಯನರು ಶೌರ್ಯದಿಂದ ಕಾದು ಹಿಂದಕ್ಕಟ್ಟಿದರು. ಆಗ ಶತ್ರುಗಳ ಕಡೆ ಬಹಳ ನಷ್ಟವಾಯಿತು. ಅವರಕಡೆಯ ೧೭ ದೊಡ್ಡ ಫಿರಂಗಿಗಳನ್ನೂ ೪೯ ಚಿಕ್ಕ ಫಿರಂಗಿಗಳನ್ನೂ ೧೮೮ ಮಂದಿ ಸೈನಿಕೋದ್ಯೋಗಿಗಳನ್ನೂ, ೬೫೦೦ ಮಂದಿ ಸೈನಿಕರನ್ನೂ ರಷ್ಯನರು ಹಿಡಿದುಕೊಂಡರು. ಹೀಗೆ ಸಿಕ್ಕಿದ ಜನರಲ್ಲಿ ಜರ್ಮನ್ನರೂ ಆಸ್ಟ್ರಿಯನ್ನರೂ ಕೂಡ ಇರುವರು. ಶತ್ರುಗಳು ನೀಸ್ಟರ್‌ನದಿಯ ಮೇಲಿರುವ ಜರ್‌ಹೋ ಪಟ್ಟಣದ ಬಳಿಗೆ ಬಹಳ ಸೈನ್ಯವನ್ನು ಸೇರಿಸಿ ಭೀಕರ ಯುದ್ಧವನ್ನು ಮಾಡಿ ಹಿಮ್ಮೆಟ್ಟಿದರು. ಲೆಂಬರ್ಗಿನ ಕಡೆಗೆ ನುಗ್ಗಬೇಕೆಂದು ಶತ್ರುಗಳು ಮಾಡಿದ ಪ್ರಯತ್ನವನ್ನು ರಷ್ಯನರು ಸಾಗಗೊಡಲಿಲ್ಲ. ಲೋಹಮಾರ್ಗಗಳಿಗೆ ಮುಖ್ಯಸ್ಥಾನವಾದ ಕಾರ್ಸ್ಟ್ರೆಯಿರ್ಕ್‌ಪಾ ಎಂಬ ಸ್ಥಲವು ಮಾತ್ರ ಶತ್ರುಗಳ ಅಧೀನದಲ್ಲೇ ಇದೆ. ಜೂನ್ ತಾ|| ೧೦ ರಿಂದೀಚೆಗೆ ರಷ್ಯನರಿಗೆ ಉತ್ತರದ ಬಾಲ್ಟಿಕ್‌ಜಿಲ್ಲೆ ಮೊದಲುಗೊಂಡು ದಕ್ಷಿಣದಲ್ಲಿ ಬಕೋವಿನಾದವರೆಗೂ ದೊಡ್ಡ ಜಯಗಳೇ ಆಗಿರುತ್ತವೆ. ಹಲವುಕಡೆ ನಡೆದ ಯುದ್ಧದಲ್ಲಿ ಜರ್ಮನರ ಸೇನಾನಷ್ಟವು ಬಹಳವಾಗಿ ಆಗಿದೆ. ಬಹುಶಃ ೧|| ಲಕ್ಷ ಸೈನ್ಯವು ಅವರ ಕಡೆ ನಷ್ಟವಾಗಿದೆಯೆಂದು ಎಣಿಸಲ್ಪಟ್ಟಿದೆ. ಹಲವು ಫಿರಂಗಿಗಳೂ ಯುದ್ಧಸಾಮಗ್ರಿಗಳೂ ಸೈನಿಕರೂ ರಷ್ಯನರಿಗೆ ವಶವಾಗಿರುತ್ತಾರೆ. ಸ್ಟ್ರೀಜ್ ಪ್ರಾಂತ್ಯದಲ್ಲಿ ಆಗುತ್ತಿರುವ ಯುದ್ಧದಲ್ಲಿ ಆಸ್ಟ್ರಿಯನ್ನರ ಪಟಾಲಮ್ಮುಗಳಲ್ಲಿ ಒಂದು ಪಟಾಲಮ್ಮು ಪೂರ್ಣವಾಗಿ ರಷ್ಯನರ ವಶವಾಯಿತು. ರಷ್ಯನರು ಯುದ್ಧವನ್ನು ಮಾಡದೇನೆಯೇ ಸ್ಟ್ಯಾನಿಸ್ಲಾವ್ ಪಟ್ಟಣವನ್ನು ಶತ್ರುಗಳಿಗೆ ಬಿಟ್ಟುಕೊಟ್ಟು ಬಟ್ವೀನ್ ಪ್ರಾಂತಕ್ಕೆ ಅವರನ್ನು ನುಗ್ಗಿಬರುವಂತೆ ಮಾಡಿ ಅಲ್ಲಿನ ಇಕ್ಕಟ್ಟಿನ ಸ್ಥಲದಲ್ಲಿ ಅವರ ಮೇಲೆ ತಿರುಗಿಬಿದ್ದು ಭೀಕರವಾಗಿ ಕಾದಾಡಿದಾಗ ಅವರು ನೀಸ್ಟರ್ ನದಿಯಕಡೆಗೆ ಓಡಬೇಕಾಯಿತು. ಅಲ್ಲಿ ಶತ್ರುಗಳ ೧೦ ದೊಡ್ಡ ಫಿರಂಗಿಗಳೂ ೧೮ ಯಂತ್ರದ ಫಿರಂಗಿಗಳೂ ೧೧೦೦೦ ಮಂದಿ ಸೈನಿಕರೂ ಸೆರೆಸಿಕ್ಕಿದರು. ಎಷ್ಟೋಜನರು ಹತರಾಗಿ ಹೋದರು. ಪ್ರಿಜೆಮ್ಸಿಲಿಗೆ ಪೂರ್ವದಲ್ಲಿ ೧೭ ಮೈಲಿ ದೂರದಲ್ಲಿ ಮೊಸೋಸಿಸ್ಕಾ ಎಂಬ ಸ್ಥಲದಲ್ಲಿ ಜರ್ಮನ್ ಸೈನ್ಯಗಳು ಬಹು ತೀಕ್ಷ್ಣವಾಗಿ ರಷ್ಯನ್ ಸೇನಾ ಮಧ್ಯಭಾಗದ ಮೇಲೆ ಬಿದ್ದು ಕಾದಾಡಿದರು. ಅಲ್ಲೂ ಜರ್ಮನರಿಗೆ ಅಪಜಯವುಂಟಾಯಿತು. ೨೦೦೦ ಅಡಿಯಷ್ಟು ದೂರ ಹಿಂದಕ್ಕೋಡಿದರು. ಜುರೋವಿನಾದ ಹತ್ತಿರ ೫ ದಿನಗಳವರೆಗೆ ಅಖಂಡವಾಗಿ ಯುದ್ಧ ನಡೆದುದರಲ್ಲಿ ರಷ್ಯನರು ಶತ್ರುಗಳನ್ನು ಸೋಲಿಸಿ ಅವರ ಕಡೆಯ ೫೮೮ ಮಂದಿ ಉದ್ಯೋಗಿಗಳನ್ನೂ, ೧೫೪೫೧ ಮಂದಿ ಸೈನಿಕರನ್ನೂ ೯೫ ಫಿರಂಗಿಗಳನ್ನೂ ಹಲವು ಮದ್ದುಗುಂಡು ಮೊದಲಾದ ಸಾಮಗ್ರಿಗಳನ್ನೂ ವಶಪಡಿಸಿಕೊಂಡಿರುವರು. ಈಗ ನೀಸ್ಟರ್ ನದಿಯ ಹತ್ತಿರ ಉತ್ತರಭಾಗದಲ್ಲಿ ರಷ್ಯನರು ನಿಂತಿರುವ ಸ್ಥಾನವು ಬಹಳ ಬಲವತ್ತರವಾದುದು. ಉತ್ತರಭಾಗದಲ್ಲಿ ನೀಸ್ಟರ್ ನದಿಗೆ ಹಲವು ಉಪನದಿಗಳಿರುವುದರಿಂದ ಅಲ್ಲಿ ರಷ್ಯನ್ ಸೈನ್ಯಕ್ಕೆ ರಕ್ಷಣೋಪಾಯವು ವಿಶೇಷವಾಗಿದೆ. ಅಲ್ಲಿ ರಷ್ಯನರನ್ನು ಸೋಲಿಸಿ ಲೆಂಬರ್ಗಿನ ಕಡೆಗೆ ಹೋಗಬೇಕೆಂದು ಯೋಚಿಸಿದ್ದ ಶತ್ರುಗಳು ಬಹಳ ನಷ್ಟಪಟ್ಟು ವಿಫಲಮನೋರಥರಾಗಿ, ಈಗ ಆ ಪ್ರಯತ್ನದಲ್ಲಿ ರುಚಿಬಿಟ್ಟು, ಪೋಲಂಡಿನ ಜುರಾ ಪ್ರಾಂತದಲ್ಲೂ, ಪ್ರಾಸ್ನಿಜ್ಜಿಗೆ ಉತ್ತರದಲ್ಲೂ ಮ್ಲಾವಾ ಲೋಹಮಾರ್ಗ ಪ್ರಾಂತದಲ್ಲೂ ಘೋರಯುದ್ಧವನ್ನು ಮಾಡಲುಪಕ್ರಮಿಸಿದ್ದಾರೆ. ಇದರಿಂದ ಗೆಲಿಷೀಯಾದಲ್ಲಿನ ಜರ್ಮನರ ಯುದ್ಧದಭರವು ತಗ್ಗಿತೆಂದೇ ಹೇಳಬಹುದು.

ದಕ್ಷಿಣ ರಣರಂಗ.

ಇಟಲಿ.

ಇಸಾಂಜೋವಿನ ಹತ್ತಿರ ತೀವ್ರವಾದ ಯುದ್ಧಗಳು ನಡೆದುವು. ೫೦೦ ಮಂದಿಗಳನ್ನು ಇಟಲಿಯವರು ಹಿಡಿದರು. ಮೊಂಟ್‌ಫಾಲ್ಕನೋ ಎಂಬ ಪಟ್ಟಣವನ್ನು ಇಟಲಿಯವರು ಸ್ವಾಧೀನಪಡಿಸಿಕೊಂಡರು. ಇದರಲ್ಲಿ ಆಸ್ಟ್ರಿಯನ್ನರು ವಿಷವಾಯುನಿರ್ಮಾಣದ ಶಾಲೆಯೊಂದನ್ನು ಸ್ಥಾಪಿಸಿದ್ದರು. ಇಂಥ ಯಂತ್ರಶಾಲೆಯು ಅವರ ದೇಶದಲ್ಲಿ ಇದೊಂದೇ ಇದ್ದಿತು. ಇಟಲಿಯವರು ಇದರ ಸಂಗತಿಯನ್ನು ತಿಳಿದುಕೊಂಡು ನೌಕಾವಿಮಾನಗಳಮುಖೇನ ಇದರ ಮೇಲೆ ಮದ್ದಿನ ಗೋಳಗಳನ್ನು ಹಾಕಿಸಿ ನಾಶಪಡಿಸಿಬಿಟ್ಟರು. ಈ ಪಟ್ಟಣವು ಐಸೋವಿಜೋಗೆ ಪೂರ್ವದಲ್ಲಿ ೫ ಮೈಲಿಯೊಳಗೂ ಟ್ರೀಸ್ಟಿಗೆ ೨೦ ಮೈಲಿ ದೂರದಲ್ಲೂ ಇದೆ. ಇದು ಪರ್ವತಪ್ರಾಂತ್ಯದಲ್ಲಿರುವುದರಿಂದ ಆಸ್ಟ್ರಿಯನ್ನರು ಇದರ ಶಿಖರಸ್ಥಾನಗಳ ಮೇಲೆ ದಿಬ್ಬಗಳನ್ನು ಕಟ್ಟಿ ಅಲ್ಲಿ ಫಿರಂಗಿಗಳನ್ನಿಟ್ಟು ಸುರಕ್ಷಿತಸ್ಥಾನವನ್ನಾಗೇರ್ಪಡಿಸಿಟ್ಟುಕೊಂಡು, ಇಲ್ಲಿ ಬಹಳಮಟ್ಟಿಗೆ ಶತ್ರುಗಳನ್ನು ಇದಿರಿಸಿ ಹೋರಾಡಿದರು. ಪಟ್ಟಣವು ಇಟಲಿಯವರ ಪರಾಕ್ರಮದಿಂದ ಆಸ್ಟ್ರಿಯನ್ನರ ಕೈಬಿಟ್ಟುಹೋಯಿತು. ಆದರೂ ಸುತ್ತುಮುತ್ತಣ ಸ್ಥಳಗಳಲ್ಲಿ ಶತ್ರುಗಳು ಯುದ್ಧಮಾಡುತ್ತಲೇ ಇದ್ದಾರೆ. ಈ ಮಾಂಟ್‌ಫಾಲ್ಕನೋದಲ್ಲಿ ಮದ್ದುಗುಂಡಿನ ಯಂತ್ರಾಲಯಗಳೂ, ನೌಕಾನಿರ್ಮಾಣಸ್ಥಲವೂ, ಧಾನ್ಯದ ಕೊಟ್ಟಾರಗಳೂ, ಮದ್ದುಗುಂಡಿನ ದೊಡ್ಡ ದೊಡ್ಡ ಉಗ್ರಾಣಗಳೂ ಇದ್ದುವು. ಇಲ್ಲಿಂದಲೇ ವಿದ್ಯುಚ್ಛಕ್ತಿಯನ್ನು ಟ್ರೀಸ್ಟಿ ನಗರಕ್ಕೆ ಕಳುಹಿಸುತ್ತಿದ್ದರು. ಇದು ಲೋಹಮಾರ್ಗಗಳಿಗೂ ಮುಖ್ಯಸ್ಥಲವಾಗಿದ್ದಿತು. ಇಂತಹ ಮುಖ್ಯಸ್ಥಲವನ್ನು ಇಟಲಿಯವರು ವಶಪಡಿಸಿಕೊಂಡುಬಿಟ್ಟುದರಿಂದ ಆಸ್ಟ್ರಿಯಾದವರಿಗೆ ಬಹಳ ತೊಂದರೆಯಾಯಿತು. ಆಸ್ಟ್ರಿಯನ್ನರು ಟ್ರೀಸ್ಟಿಯಿಂದ ಇಸೊಂಜೋವಿಗೆ ತಮ್ಮ ಸೈನ್ಯಗಳನ್ನು ಕಳುಹಿಸಿಕೊಡುವುದಕ್ಕೂ ಅಭ್ಯಂತರವಾಯಿತು. ಈಗ ಇಟಲಿಯವರು ತಮ್ಮ ಯುದ್ಧನಾವೆಗಳ ಮೇಲಣ ಫಿರಂಗಿಗಳಿಂದ ಟ್ರೀಸ್ಟಿ ಪಟ್ಟಣದ ಮೇಲೆಫಿರಂಗಿಗಳನ್ನು ಹಾರಿಸಿಕೊಂಡು ಮುತ್ತುವುದಕ್ಕೆ ಬಹಳ ಅನುಕೂಲವಾಯಿತು. ಹಿಂದೆ ಈ ಮಾಂಟ್‌ಫಾಲ್ಕನೋ ಪಟ್ಟಣವು ತುರುಕರಿಗೆ ಸೇರಿದ್ದಿತು. ಇದನ್ನು ವೆನಿಸ್ಸಿನವರು ವಶಪಡಿಸಿಕೊಂಡಾಗ ಒಂದು ಧ್ವಜಸ್ತಂಭವನ್ನು ಇಲ್ಲಿ ನಿಲ್ಲಿಸಿದ್ದರು. ಅದೆಲ್ಲಾ ಜೀರ್ಣರೂಪದಲ್ಲಿದ್ದಿತು. ಈಗ ಇಟಲಿಯವರು ಅದನ್ನೇ ಜೀರ್ಣೋದ್ಧಾರಮಾಡಿ ಅದರ ಮೇಲೆ ತಮ್ಮ ದೇಶದ ತ್ರಿವರ್ಣಪತಾಕೆಯನ್ನು ಕಟ್ಟಿರುತ್ತಾರೆ. ಮಾಂಟನೀರೋವಿನಲ್ಲಿದ್ದ ಆಸ್ಟ್ರಿಯಾದವರ ಒಂದು ಮುಖ್ಯಸ್ಥಲವನ್ನೂ ಇಟಲಿಯವರು ಹಿಡಿದುಕೊಂಡರು. ಎಡಿಜೂ ಕಣಿವೆಗಳಲ್ಲಿದ್ದ ರೋವರ್ತೋ-ಆರ್ನೋಲ್ ಎಂಬ ಸ್ಥಲಗಳನ್ನು ಆಸ್ಟ್ರಿಯನ್ನರು ಬಿಟ್ಟುಬಿಟ್ಟು ಓಡಿದರು. ಉತ್ತರದಲ್ಲಿ ಆಲಪ್ ಪರ್ವತಗಳಲ್ಲಿರುವ ಇಟಲಿಸೈನಿಕರು ಪ್ರಿಕೋಪಲ್ ಎಂಬ ಸುರಕ್ಷಿತಸ್ಥಾನವನ್ನು ಮಹಾಸಾಹಸದಿಂದ ವಶಪಡಿಸಿಕೊಂಡರು. ಇದು ೩ ಸಾವಿರ ಅಡಿಗಳ ಎತ್ತರಕ್ಕಿಂತಲೂ ಹೆಚ್ಚಾಗಿರುವುದು. ಇಂಥ ಉನ್ನತವಾದ ದುರ್ಗಮಸ್ಥಲವನ್ನು ಕೂಡ ಇಟಲಿ ಸೈನಿಕರು ವಶಪಡಿಸಿಕೊಂಡಿರುವುದನ್ನು ನೋಡಿದರೆ ಅವರು ಆಸ್ಟ್ರಿಯಾದೇಶದ ಮುಖ್ಯಭಾಗದ ಮೇಲೆಯೇ ಆಕ್ರಮಣ ಮಾಡುವ ಸಂಕಲ್ಪವುಳ್ಳವರಾಗಿರುವರೆಂದು ಭಾವಿಸಲ್ಪಡುತ್ತಿದೆ. ಪೊಜೇಪಿಯಾ ಎಂಬ ಬಲವಾದ ತಮ್ಮ ಕೋಟೆಯನ್ನು ಆಸ್ಟ್ರಿಯನ್ನರೇ ನಾಶಪಡಿಸಿಬಿಟ್ಟು ಅದರಲ್ಲಿದ್ದ ದೊಡ್ಡ ಫಿರಂಗಿಗಳನ್ನು ಗೆಲೀಷಿಯಾಕ್ಕೆ ಸಾಗಿಸಿಕೊಂಡು ಹೋಗಿದ್ದಾರಂತೆ. ಇಟಲಿಯವರು ಇದುವರೆಗೆ ಎಲ್ಲ ರಣರಂಗದಲ್ಲೂ ಮುಂದಕ್ಕೆ ಸಾಗುತ್ತಲೇ ಇದ್ದಾರೆ. ಆಲಪ್ ಪರ್ವತಗಳ ಮೇಲೆ ಆಸ್ಟ್ರಿಯನ್ನರ ಸುಶಿಕ್ಷಿತವಾದ ಬಹಳ ಸೈನ್ಯವೂ ವಿಶೇಷವಾದ ಆಯುಧಸಾಮಗ್ರಿಗಳೂ ತುಂಬಿದ್ದುವು. ಅಂಥ ಪರ್ವತಗಳ ಮೇಲೆ ಶತ್ರುದೇಶದೊಳಕ್ಕೆ ಇಟಲಿ ಸೈನ್ಯಗಳು ನುಗ್ಗಿ ತಮ್ಮ ದೊಡ್ಡ ದೊಡ್ಡ ಫಿರಂಗಿಗಳನ್ನು ಎತ್ತರವಾದ ಬೆಟ್ಟಗಳಮೇಲೇರಿಸಿಕೊಂಡು ಹೋಗಿರುವುದಲ್ಲದೆ, ತಮ್ಮ ಅಶ್ವಸೇನೆಗಳನ್ನೂ, ಬೈಸಿಕಲಾ ಬಂಡಿಗಳನ್ನೂ ಕೂಡ ಸಾಗಿಸಿಕೊಂಡು ಹೋಗಿ ಯುದ್ಧಮಾಡಿ ಶತ್ರುಗಳನ್ನೇ ಸೋಲಿಸುತ್ತಿರುವುದು ಬಹಳ ಪರಾಕ್ರಮ ಕಾರ್ಯವಾಗಿರುವುದು. ಒಂದುಕಡೆ ಇದೇ ಪರ್ವತಗಳ ಮೇಲೆ ಆಸ್ಟ್ರಿಯನ್ನರು ೬೦೦೦ ಸೈನ್ಯವನ್ನೂ ದೊಡ್ಡದೊಡ್ಡ ಫಿರಂಗಿಗಳನೇಕವನ್ನೂ ಸಾವಿರಾರು ಹೇಸರಕತ್ತೆಗಳಮೂಲಕ ಸಾಗಿಸಿಕೊಂಡು ಹೋಗಿ ೫ ಭಾಗವಾಗಿ ಒಡೆದುಕೊಂಡು ಇಟಲಿಯವರ ಮೇಲೆ ಹಠಾತ್ತಾಗಿ ಸುತ್ತುಹಾಕಬೇಕೆಂದು ಪ್ರಯತ್ನಿಸಿದರು. ಆದರೆ ಅಲ್ಲಿದ್ದ ಇಟಲಿ ಸೈನ್ಯಗಳು ಶತ್ರುಗಳ ಸಂಚನ್ನು ತಿಳಿದುಕೊಂಡು ಅವರು ಸಮಿಪಕ್ಕೆ ಬರುವವರೆಗೂ ಸುಮ್ಮನಿದ್ದು, ಬಳಿಕ ಮೆಳೆಗಳ-ಮರಗಳ ಹಳ್ಳಗಳ ಸ್ಥಲಗಳಿಂದೆಲ್ಲಾ ಒಂದೇ ಆವೃತ್ತಿ ಸಿಷ್ಮನಾದವನ್ನು ಮಾಡಿಕೊಂಡು ಹೊರಕ್ಕೆ ಹೊರಟು ಶತ್ರುಗಳ ಮೇಲೆ ಬಿದ್ದು ಸಣೀನುಯುದ್ಧವನ್ನು ಮಾಡಿದರು. ಮತ್ತೊಂದು ಕಡೆಯಿಂದ ಇಟಲಿಯ ಫಿರಂಗಿದಳವು ಬಂದು ಶತ್ರುಗಳ ಬೆನ್ನು ಕಡೆಯಿಂದ ಗುಂಡುಗಳ ಮಳೆಯನ್ನು ಸುರಿಸಿದರು. ಆಸ್ಟ್ರಿಯನ್ನರು ವೀರಾವೇಶದಿಂದ ಹೋರಾಡಿ ಕೊನೆಗೆ ಬಹುಜನರು ಸತ್ತು ಉಳಿದವರು ಪಲಾಯನಗೊಂಡರು.

ಟ್ರೀಸ್ಟಿ ಸಿಂಧುಶಾಖೆಯಿಂದ ತಪ್ಪಿಸಿಕೊಂಡು ಹೋಗಬೇಕೆಂದು ಪ್ರಯತ್ನಿಸಿದ ಒಂದು ಆಸ್ಟ್ರಿಯನ್ನರ ಟಾರ್ಪೆಡೋ ಹಡಗನ್ನು ಇಟಲಿಯವರ ಸಬ್‌ಮೆರೀನು ಮುಳುಗಿಸಿತು. ಹಡಗಿನಲ್ಲಿದ್ದವರೆಲ್ಲಾ ಮುಳುಗಿದರು.

ಈಚೆಗೆ ಆಸ್ಟ್ರಿಯನ್ನರು ಹೊಟ್ಟೆಕಚ್ಚಿನಿಂದ ಇಟಲಿಯವರು ಆಕ್ರಮಿಸಿಕೊಂಡ ಮೋನಾಫಾಲ್ಕನ್ನಿನ ಸುತ್ತಣ ಅಡವಿಗೆ ಬೆಂಕಿಯಿಟ್ಟು ಶತ್ರುಗಳನ್ನು ಧ್ವಂಸಮಾಬೇಕೆಂದು ಯತ್ನಿಸಿದರು ಆದರೆ ಇಟಲಿಯವರು ಸಾಗಗೊಡಲಿಲ್ಲ. ಇಟಲಿಯವರ ಏಟುಗಳು ಆಸ್ಟ್ರಿಯನ್ನರಿಗೆ ಬಲವಾದುದರಿಂದ ಅವರು ಸರ್ವಿಯಾ ಪ್ರಾಂತದಲ್ಲಿದ್ದ ತಮ್ಮ ಸೈನ್ಯವನ್ನೆಲ್ಲಾ ಹಿಂದಕ್ಕೆ ಕರೆಯಿಸಿಕೊಳ್ಳುತ್ತಿದ್ದಾರೆ.

ತುರ್ಕಿ.

ಮಿತ್ರಮಂಡಲಿಯವರು ಡಾರ್ಡಿನಲ್ಸನ್ನು ವಶಪಡಿಸಿಕೊಳ್ಳುವರೆಂಬ ಭಯದಿಂದ ಪುಣ್ಯಕ್ಷೇತ್ರಯಾತ್ರೆಗೆ ಹೊರಡಬೇಕೆಂಬ ನೆವದಿಂದ ತುರ್ಕಿ ಸುಲ್ತಾನರನ್ನು ಕಾನ್ಸ್ಟಾಂಟಿನೋಪಲ್ಲಿನಿಂದ ಕೊನಯೂವಿಗೆ ಹೊರಡಿಸಲು ಜರ್ಮನಿಯವರು ಸುಲ್ತಾನರಿಗೆ ಬೋಧಿಸಿದರು. ಆದರೆ ಯುವಸುಲ್ತಾನರನ್ನು ಬೇಕಾದರೆ ಹೊರಡಿಸಿರಿ. ನಾನು ಮಾತ್ರ ರಾಜಧಾನಿಯನ್ನು ಬಿಟ್ಟು ಹೊರಡುವುದಿಲ್ಲವೆಂದು ಹೇಳಿಬಿಟ್ಟರಂತೆ. ಸುಲ್ತಾನರು ಈಗ ಶ್ಲೇ ಜಾಡ್ಯದಿಂದ ಅಸ್ವಸ್ಥರಾಗಿದ್ದಾರೆ. ಈಗ ಜರ್ಮನರು ತಮ್ಮ ಹೆಂ ಸರು ಮಕ್ಕಳನ್ನೆಲ್ಲಾ ಕಾನ್ಸ್ಟಾಂಟಿನೋಪಲ್ ಪಟ್ಟಣವ ಬಿಡಿಸಿ ಕರೆದುಕೊಂಡು ಗುಂಪುಗುಂಪಾಗಿ ಹೊರಟುಹೋಗು ರುವರು. ಹಿಂದೆ ಲಂಡನ್ ಪಟ್ಟಣದಲ್ಲಿ ತುರ್ಕಿ ರಾಯಭಾರಿ ಗಿದ್ದ ಟ್ಯೂಫಿಕ್ ಪಾಷಾರವರಿಗೆ ಮತ್ತೆ ಅಧಿಕಾರವನ್ನು ಕೊ ವುದಕ್ಕಾಗಿ ಸಂಧಿಪಕ್ಷದವರಾದ ತುರುಕರು ಬಹಳ ಪ್ರಯ ವನ್ನು ಮಾಡುತ್ತಿದ್ದಾರೆ. ಏಷ್ಯಾಮೈನರಿನಲ್ಲಿರುವ ತುರ್ಕಿ ಪ್ರ ಗಳೂ ಸೈನಿಕರೂ ಸಹ ವಿಷಮಶೀತಜ್ವರದಿಂದ ಬಹಳ ನಷ್ಟ ಗುತ್ತಿರುವರಂತೆ. ಈ ಜ್ವರದಿಂದ ೬೫ ಮಂದಿ ವೈದ್ಯರೂ ಮೃತರಾಗಿರುವರಂತೆ. ತುರ್ಕಿಸೈನಿಕರಿಗೆ ರೊಟ್ಟಿಯೂ ದ್ದಲೂ ತಕ್ಕಷ್ಟು ದೊರೆಯುವುದಿಲ್ಲವಂತೆ.

ರಷ್ಯನರ ಕಡೆಯ ೨ ಡಿಸ್ಟ್ರಾಯರುಗಳಿಗೂ, ತುರ್ಕಿ ಕ್ರೂಯಿಝುರಾದ ಬ್ರೆಸ್ಲಾ ಕ್ಯೂ ಬಾಸ್ಪರಸ್ ಜಲಸಂಧಿ ಹತ್ತಿರ ಯುದ್ಧವು ನಡೆದು ತುರ್ಕಿ ಕ್ರೂಯಿಝುರಿಗೆ ಬ ನಷ್ಟವಾಗಿರುವುದು.

ಇತ್ತ ಅರ್ಮೇನಿಯಾದಲ್ಲಿ ನುಗ್ಗಿರುವ ರಷ್ಯನ್ ಸೈನ್ಯಗ ಜೂನ್ ತಾ|| ೬ ರಲ್ಲಿ ಸಮ್ಮಾ ಕುಮುಷ್‌ನಲ್ಲಿ ಸ್ವಲ್ಪಭಾಗವ ಹಿಡಿದುಕೊಂಡು ಅಲ್ಲಿರುವ ಕುಯಿಲ್‌ಬೇ ಕೈಕೆಳಗಿನ ಮೊದ ಸೇನೆಯನ್ನೆಲ್ಲಾ ನಾಶಪಡಿಸಿರುವುವು. ವಾನ್-ಉರಮಿಯ ಸರೋವರಗಳ ಪ್ರದೇಶದಲ್ಲಿದ್ದ ತುರ್ಕಿ ಸೈನ್ಯವನ್ನೆಲ್ಲಾ ಹಿಂದ ಪೂರ್ಣವಾಗಿ ಓಡಿಸಿಬಿಟ್ಟಿರುವುವು. ಏಷ್ಯಾಮೈನರಿನಲ್ಲಿ ಸಿಮಿಾ ರೇವೆಯಲ್ಲಿ ಜರ್ಮನರ ಸಬ್‌ಮೆರೀನುಗಳಿರುವುವೆಂ ದನ್ನು ಕೇಳಿ, ಫ್ರಾನ್ಸ್ ಯುದ್ಧನಾವೆಗಳು ಆ ರೇವೆ ಮೇಲೆ ಮದ್ದಿನ ಗೋಳಗಳನ್ನು ಹೊಡೆದು ಅಲ್ಲಿದ್ದ ವ ನೌಕೆಗಳನ್ನೆಲ್ಲಾ ಮುಳುಗಿಸಿದುವು. ಅಲ್ಲಿನ ಸುಂಕದ ಕಚೇ ಯನ್ನೂ, ತಂತ್ರೀವಾರ್ತೆಯ ಕಾರ್ಯಾಲಯವನ್ನೂ, ಸೀ ಯೆಣ್ಣೆ ತೊಟ್ಟಿಯನ್ನೂ ನಾಶಪಡಿಸಿದುವು. ಅಲ್ಲಿದ್ದ ತುರ್ಕಿಯ ಕಾವಲಿನ ಸೈನ್ಯವು ಓಡಿಹೋಯಿತು.

ಡಾರ್ಡಿನಲ್ಸ್.

ಫ್ರಾನ್ಸ್ ಸೈನ್ಯಗಳು ಈ ಜಲಸಂಧಿಯ ಬಲಗಡೆ ತೀರಗಳಲ್ಲಿ ಇನ್ನೂ ಕೆಲಸ್ಥಲಗಳನ್ನು ವಶಪಡಿಸಿಕೊಂಡು ಶತ್ರುಗಳು ಅಲ್ಲಲ್ಲಿಗೆ ಪ್ರತಿಭಟಿಸಿ ಕಾಯುತ್ತಿರುವರು. ಅ ಕಡೆ ಬಹಳ ನಷ್ಟವಾಗಿರುವುದು.

ಜರ್ಮನರ ಸಬ್‌ಮೇರಿನುಗಳು.

ಇವು ಸಮುದ್ರದಲ್ಲಿ ಹಾವಳಿಯನ್ನು ಮಾಡುತ್ತಲೇ ಇ ಉತ್ತರಸಮುದ್ರದಲ್ಲಿ ಒಟಾಗೋ ಎಂಬ ಸ್ವೀಡನ್ ದೇಶದ ಹ ಗನ್ನೂ ಡಾಸಿಯಾ ಎಂಬ ರಷ್ಯನ್‌ದೇಶದ ಹಡಗನ್ನೂ ಅಟ್ಲಾಂ ಕಸಮುದ್ರದಲ್ಲಿ ಮತ್ತೊಂದು ರಷ್ಯನ್ ಹಡಗನ್ನೂ ಮುಳುಗಿಸಿ ವುವು. ಸೆಂಟ್ ಜಾರ್ಜ್ ಸಿಂಧುಶಾಖೆಯಲ್ಲಿ ಇಂಗ್ಲೀಷರ ಒಂದ ಕಲ್ಲಿದ್ದಲ ಹಡಗನ್ನೂ ನಾರ್ವೆದೇಶದ ವ್ಯಾಪಾರದ ಹಡಗನ್ನೂ ಸಹ ಟಾರ್ಪೆಡೋವಿನಿಂದ ಹೊಡೆದು ಮುಳುಗಿಸಿರುವುವು ಇಂಗ್ಲೆಂಡ್ ದೇಶದ ಪೂರ್ವತೀರದಲ್ಲಿ ಇಂಗ್ಲೀಷರ ಕೆಲ ಟಾರ್ಪೆಡೋ ಹಡಗುಗಳನ್ನು ಮುಳುಗಿಸಿರುವುವು. ೫ ಮೀನ ಹಿಡಿಯುವ ಹಡಗುಗಳನ್ನೂ ಹೋಪ್‌ಮೌಂಟ್ ಎಂಬ ನ್ನೊಂದು ಇಂಗ್ಲೀಷ್ ಹಡಗನ್ನೂ ಮತ್ತೊಂದು ಫ್ರಾನ್ಸ ಹಡಗನ್ನೂ ಕೂಡ ಮುಳುಗಿಸಿದುವು.

ಆಕಾಶಯಾನಗಳು.

ಉತ್ತರಸಮುದ್ರದಲ್ಲಿ ಒಂದು ಜರ್ಮನ್ ಆಕಾಶನಾವೆಯ ಸಿಡಿಮದ್ದುಗಳನ್ನಿಟ್ಟು ೨ ಹಡಗುಗಳನ್ನು ಮುಳುಗಿಸಿತು. ಒ ಗಿದ್ದವರಲ್ಲಿ ೮ ಮಂದಿ ಬದುಕಿಸಲ್ಪಟ್ಟರು. ೬ನೇ ತಾ|| ಭಾನ ವಾರದ ದಿನ ಮಿತ್ರಮಂಡಲಿಯ ವೈಮಾನಿಕರು ಬ್ರಸಲ್ ಪಟ್ ಣದ ಮೇಲಿಂದ ಹೋದರು. ಪ್ರಜೆಗಳು ನಿದ್ರೆಯಿಂದೆಚ್ಚೆತ್ತರು ಜರ್ಮನ್ ಸೈನಿಕರು ಈ ವಿಮಾನಗಳ ಮೇಲೆ ಹಲವು ವಿಧ ಫಿರಂಗಿಗುಂಡುಗಳನ್ನು ಹಾರಿಸಿದರು. ಆದರೂ ಈ ವೈಮಾ ಕರು ಎಟ್ಟರ್‌ಬೀಕ್ ಎಂಬ ಊರಿನಮೇಲೂ ಹೆಲ್ಮೆಟ್ಟಿನ ಹತ್ತಿ ವಿರುವ ಜಪ್ಲಿನ್ ಶಾಲೆಯ ಮೇಲೂ ಸಿಡಿಮದ್ದುಗಳನ್ನು ಹಾ ದೊಡ್ಡ ಬೆಂಕಿಜ್ವಾಲೆಯನ್ನು ಹುಟ್ಟಿಸಿಬಿಟ್ಟು, ಹಿಂದಿರುಗಿ ಬರ ವಾಗ ಜರ್ಮನರ ಅಶ್ವಶಾಲೆಯ ಮೇಲೆ ಸಿಡಿಮದ್ದುಗಳನ್ನು ಹಾಕಿ ಬಂದಿರುತ್ತಾರೆ.

ನಸೋಯಿಸರೋಲ್ಸಿನ ಹತ್ತಿರ ಒಂದು ಜರ್ಮನ್ ವಿಮಾ ವನ್ನು ಮಿತ್ರಮಂಡಲಿ ವೈಮಾನಿಕರು ಕೆಳಕ್ಕೆ ಕೆಡಹಿ, ಒಳಗಿದ್ದ ವರನ್ನು ಸೆರೆಹಿಡಿದರು. ತಾ|| ೧೫ ರ ರಾತ್ರಿ ಜರ್ಮನ್ ವಿಮಾ ಗಳು ಇಂಗ್ಲಾಂಡಿನ ಈಶಾನ್ಯಭಾಗದಲ್ಲಿ ಕೆಲವುಕಡೆ ಸಿಡಿಮದ್ದು ಗಳನ್ನು ಹಾಕಿ ಬೆಂಕಿ ಹುಟ್ಟಿಸಿದುವು. ಅದರಿಂದ ೧೬ ಮಂ ಗಳು ಸತ್ತರು; ೧೬ ಮಂದಿಗೆ ಗಾಯವಾಯಿತು. ಇದಕ್ಕೆ ಮುಯ್ಯಾಗಿ ಇಂಗ್ಲೀಷ್ ಫ್ರಾನ್ಸ್ ವಿಮಾನಗಳು ೨೦ ಜರ್ಮ ನಿಗೆ ಸೇರಿದ ಕಾರ್ಲ್ಸ್‌ರೂಹ್ ಪಟ್ಟಣದಮೇಲೆ ಹೋಗಿ ಅಲ್ಲಿನ ಕೋ ಟೆಗಳು, ಆಯುಧಶಾಲೆಗಳು, ಮದ್ದಿನಮನೆಗಳು, ರೈಲ್ವೆಸ್ಟೇ ಷನ್ನುಗಳು ಇವುಗಳಮೇಲೆ ಸಿಡಿಮದ್ದುಗಳನ್ನು ಬಹಳವಾಗಿ ಹಾಕಿ ಶತ್ರುಗಳ ಫಿರಂಗಿಯೇಟುಗಳನ್ನು ತಪ್ಪಿಸಿಕೊಂಡು ಸುರ ಕ್ಷಿತವಾಗಿ ಹಿಂದಿರುಗಿಬಂದುವು. ಎರಡು ವಿಮಾನಗಳುಮಾತ್ರ ಬರಲಿಲ್ಲ.

ರಾಯಿಸಾಹೇಬ್ ಪಂಡಿತ ರಾಮಪ್ರಸಾದತಿವಾರಿ ಎಂಬ ವರಿಗೆ ಇಂಡ್ಯಾ ಸರ್ಕಾರದವರು ಇದುವರೆಗೆ ಯಾವ ಭಾರತೀ ಯರಿಗೂ ಸೈನಿಕಶಾಖೆಯಲ್ಲಿ ಕೊಡದಿದ್ದಂಥ ಉನ್ನತೋದ್ಯೋ ಗವನ್ನು ಎಂದರೆ ಗ್ಯಾರಿಜನ್ ಇಂಜನಿಯರ್ ಪದವಿಯನ್ನು ಮಾರತ್ತಿನಲ್ಲಿ ಕೊಟ್ಟಿರುತ್ತಾರೆ.

ಮೈಸೂರು ಸ್ಟಾರ್.

೧೯೧೫ನೆಯ ಇಸವಿ ಜೂನ್ ತಾ|| ೨೦ನೆಯ ಭಾನುವಾರ.

ಲಾರ್ಡ್‌ಹಾರ್ಡಿಂಜ್‌ರವರ ಅಧಿಕಾರದ ಅವಧಿಯು ಹೆಚ್ಚಿತು.

ಸರ್ವತನ್ಸಮಾನ್ಯರಾದ ಲಾರ್ಡ್‌ಹಾರ್ಡಿಂಜ್‌ರವರು ಭರತಖಂಡದ ವೈಸ್‌ರಾಯ್‌ಪದವಿಗೆ ಬಂದು ಬರುವ ನವಂಬರ್ ತಿಂಗಳಿಗೆ ೫ ವರ್ಷಗಳು ತುಂಬುವುವು. ಪದ್ಧತಿಯಂತೆ ಅವರು ಆಗ್ಗೆ ತಮ್ಮ ಅಧಿಕಾರದಿಂದ ವಿಮುಕ್ತರಾಗಬೇಕಾಗಿದ್ದಿತು. ಆದರೆ ಇದುವರೆಗೆ ಅವರು ಸ್ವಾರ್ಥವನ್ನು ಲೇಶಮಾತ್ರವೂ ಲೆಕ್ಕಿಸದೆ ಭರತಖಂಡದ ಪ್ರಜಾಹಿತಾರ್ಥವಾಗಿ ತ್ರಿಕರಣಶುದ್ಧಿಯಿಂದ ಕೆಲಸಮಾಡಿರುವುದರಿಂದಲೂ, ಆ ಮಹನೀಯರಿಂದ ಭರತಖಂಡಕ್ಕೆ ಇನ್ನೂ ಕೆಲವು ಪ್ರಯೋಜನಗಳಾಗಬೇಕಾಗಿರುವುದರಿಂದಲೂ, ಪ್ರಕೃತದ ಮಹಾಯುದ್ಧಮಧ್ಯದಲ್ಲೇ ಆಗಲೀ, ಇದುಮುಗಿದ ತರುಣದಲ್ಲೇ ಆಗಲೀ ಇವರು ವೈಸ್‌ರಾಯಿಗಿರಿಯನ್ನು ಬಿಟ್ಟು ಹೋಗುವುದು ಭಾರತೀಯರಿಗೆ ಇಷ್ಟವಾಗಿರುವುದಿಲ್ಲ. ಆದುಕಾರಣ ಇವರನ್ನೇ ಇನ್ನು ಕೆಲಕಾಲ ವೈಸ್‌ರಾಯಿಗಿರಿಯಲ್ಲಿರುವಂತೆ ಮಾಡುವುದಕ್ಕಾಗಿ ಅವರ ಅಧಿಕಾರದವಧಿಯನ್ನು ಹೆಚ್ಚಿಸಿಕೊಡಬೇಕೆಂದು ಇಲ್ಲಿನ ದೇಶವತ್ಸಲರು ಅನೇಕ ಸಭಾಮುಖಗಳಿಂದಲೂ, ಪತ್ರಿಕಾಲೇಖನಗಳಿಂದಲೂ ಶ್ರೀಮನ್ ಜಾರ್ಜ್ ಸಾರ್ವಭೌಮರವರಿಗೆ ಬಿನ್ನಯಿಸಿಕೊಳ್ಳುತ್ತ ಬಂದರು. ಭಾರತೀಯರಲ್ಲಿ ವಿಶೇಷ ವಾತ್ಸಲ್ಯವನ್ನಿಟ್ಟಿರುವ ನಮ್ಮ ಚಕ್ರವರ್ತಿಯವರು ಇಲ್ಲಿನ ಪ್ರಜೆಗಳ ಕೋರಿಕೆಯನ್ನು ಭಂಗಪಡಿಸದೆ ಮುಂದಣವರ್ಷದ ಮಾರ್ಚಿ ತಿಂಗಳ ಕೊನೆಯವರೆಗೂ ವೈಸ್‌ರಾಯಿಗಿರಿಯಲ್ಲಿ ಇವರೇ ಇರುವಂತೆ ಅನುಗ್ರಹಿಸಿರುತ್ತಾರೆ. ಅವರಪ್ಪಣೆಯನ್ನು ನಮ್ಮ ವೈಸ್‌ರಾಯರು ಭಾರತೀಯರಮೇಲಣ ಪ್ರೇಮಾತಿಶಯದಿಂದ ಅಂಗೀಕರಿಸಿಕೊಂಡಿರುತ್ತಾರೆ. ಈ ಏರ್ಪಾಟನ್ನು ಕೇಳಿ ಭಾರತೀಯರೆಲ್ಲರೂ ಆನಂದಿಸಿ, ನಮ್ಮ ಸಾರ್ವಭೌಮ ಪ್ರಭುತ್ವದವರ ಮತ್ತೂ ಲಾರ್ಡ್‌ಹಾರ್ಡಿಂಜ್‌ರವರ ವಿಷಯದಲ್ಲಿ ಕೃತಜ್ಞತಾಪೂರ್ವಕವಾದ ವಂದನೆಯನ್ನರ್ಪಿಸುತ್ತಾರೆನ್ನುವುದಕ್ಕೆ ಸಂಶಯವಿಲ್ಲ. ಈ ವಿಷಯದಲ್ಲಿ ಆಂಗ್ಲಮುಖ್ಯಮಂತ್ರೀಶರಾದ ಆಸ್ಕಿತ್‌ರವರು ಪಾರ್ಲಿಮೆಂಟಿನಲ್ಲಿ ಹೀಗೆ ಭಾಷಣಮಾಡಿದರು:—

> “ಲಾರ್ಡ್‌ಪೆನ್ಸರ್ಸ್ಟ್‌ಹಾರ್ಡಿಂಜ್‌ರವರ ಅಧಿಕಾರಕಾಲಪರಿಮಿತಿಯು ಈ ವರ್ಷದ ನವಂಬರ್ ತಿಂಗಳೊಡನೆ ಮುಗಿಯುವುದು. ಆದರೆ ಹಾರ್ಡಿಂಜ್‌ಪ್ರಭುಗಳು ಭರತಖಂಡಕ್ಕೆ ಮಾಡಿರುವ ಮಹೋಪಕಾರವನ್ನು ಶ್ರೀಮಚ್ಚಕ್ರವರ್ತಿಯವರ ಪ್ರಭುತ್ವದವರು ಗಮನಿಸಿರುವುದರಿಂದ, ಬರುವ ಶೀತಕಾಲದಲ್ಲಿಯೂ ಕೂಡ ಅನುಭವಸ್ಥರಾದ ಲಾರ್ಡ್‌ಹಾರ್ಡಿಂಜ್‌ರವರನ್ನೇ ಭರತಖಂಡದ ವೈಸ್‌ರಾಯಿಗಿರಿಯಲ್ಲಿರಿಸುವುದಕ್ಕೆ ನಿಶ್ಚೈಸಿ, ೧೯೧೬ ನೆ ವರ್ಷದ ಮಾರ್ಚಿ ಕೊನೆಯವರೆಗೂ ಅಧಿಕಾರದಲ್ಲಿರುವ ವಿಷಯವಾಗಿ ಲಾರ್ಡ್‌ಹಾರ್ಡಿಂಜ್‌ರವರ ಅಭಿಪ್ರಾಯವನ್ನು ಕೇಳಿದರು. ಅವರು ಅದಕ್ಕೆ ಅಭ್ಯಂತರವಿಲ್ಲದೆ ಕೂಡಲೇ ಒಪ್ಪಿಕೊಂಡರು. ಈ ಏರ್ಪಾಟನ್ನು ಶ್ರೀಮತ್ಸಾರ್ವಭೌಮರೂ ಅನುಮೋದಿಸಿದರು. ಲಾರ್ಡ್‌ಹಾರ್ಡಿಂಜ್‌ರವರು ವಹಿಸಿರುವ ಕಾರ್ಯಭಾರವು ಅಗಾಧವಾಗಿದ್ದರೂ ತಮಗೆ ಕುಟುಂಬಸಂಬಂಧವಾದ ದೊಡ್ಡ ವಿಪತ್ತುಗಳು ಸಂಘಟಿಸಿದ್ದರೂ ಅವರು ನಮ್ಮ ಕೋರಿಕೆಯ ಪ್ರಕಾರ ನಡೆಸುಕೊಳ್ಳಲು ಅಂಗೀಕರಿಸಿದುದರಿಂದ, ವ್ಯಕ್ತಪಟ್ಟಿರುವ ಅವರ ದೇಶಸೇವಾಭಿರತಿಯನ್ನು ಕುರಿತು ನನಗಿರುವ ಗೌರವಭಾವವನ್ನು ವ್ಯಕ್ತಪಡಿಸುವುದಕ್ಕೆ ತಕ್ಕ ಸಮಯವು ಈಗ ನನಗೆ ದೊರೆದಿರುವುದು” ಎಂದು ಹೇಳಿದರು.

ಈ ಸಂದರ್ಭದಲ್ಲಿ ಲಾರ್ಡ್‌ಹಾರ್ಡಿಂಜ್‌ರವರು ಬರೆದ ಉತ್ತರವೇನೆಂದರೆ:—

> “ಆಂಗ್ಲಸಾಮ್ರಾಜ್ಯಕ್ಕೆ ಪ್ರಾಪ್ತವಾಗಿರುವ ಇಂಥ ವಿಷಮಸಮಯದಲ್ಲಿ ಶ್ರೀ ಜಾರ್ಜ್ ಸಾರ್ವಭೌಮರ ಪ್ರಭುತ್ವದವರು ಕೋರಿದ ರೀತಿಯಂತೆ ನಡೆದುಕೊಳ್ಳುವುದು ನನ್ನ ಮುಖ್ಯವಿಧಿಯಾಗಿದೆ. ವೈಸ್‌ರಾಯಿಯ ಕರ್ತವ್ಯವಾದ ಬಹುಳ ಉತ್ತರವಾದಿತ್ವದಿಂದ ಕೂಡಿದ ಮಹಾಕಾರ್ಯಭಾರವನ್ನು ನಿರ್ವಹಿಸುವುದಕ್ಕಾಗಿ ನನಗೆ ಅಧಿಕಾರ ಕಾಲಪರಿಮಿತಿಯನ್ನು ಹೆಚ್ಚಿಸಿಕೊಟ್ಟುದನ್ನು ನಾನು ಉತ್ಸಾಹದಿಂದ ಅಂಗೀಕರಿಸುವುದಿಲ್ಲ; ಆದರೆ ನನ್ನ ಅಧಿಕಾರ ಕಾಲಪರಿಮಿತಿಯನ್ನು ಹೆಚ್ಚಿಸಿಕೊಡಬೇಕೆಂದು ಭರತಖಂಡದಲ್ಲಿರುವ ಅನೇಕ ಸಂಸ್ಥಾನಾಧಿಪತಿಗಳೂ, ನಾನಾಪ್ರಜಾಸಂಘದವರೂ ಕೋರಿಕೊಂಡಿರುವ ವಿಷಯವನ್ನು ನಾನು ಮರೆಯಲಾರೆ. ಇಷ್ಟೊಂದುಮಂದಿಗಳು ನನ್ನಮೇಲೆ ಸ್ನೇಹವಿಶ್ವಾಸಗಳನ್ನಿಟ್ಟುಕೊಂಡಿರುವ ಕಾರಣದಿಂದ ನನ್ನ ಶಕ್ತಿ ವಂಚನೆಯಿಲ್ಲದಂತೆ ಭರತಖಂಡದ ಮತ್ತೂ ಅದರ ಪ್ರಜೆಗಳ ಕಾರ್ಯವನ್ನು ನಿರ್ವಹಿಸುವ ವಿಷಯದಲ್ಲಿ ನನಗೆ ಧೈರ್ಯವುಂಟಾಗಿರುತ್ತದೆ” ಎಂದು ಬರೆದು ತಿಳಿಯಿಸಿರುತ್ತಾರೆ.

ಲಾರ್ಡ್ ಹಾರ್ಡಿಂಜ್‌ರವರು ಈ ಸಂದರ್ಭದಲ್ಲಿ ಕೊಟ್ಟಿರುವ ಉತ್ತರವು ಅವರ ನಿಸರ್ಗವಾದ ಉದಾರ ಮನೋಭಾವಕ್ಕೆ ತಕ್ಕುದಾಗಿರುತ್ತದೆ. ಇದುವರೆಗೇ ಕೃತಜ್ಞತಾಬದ್ಧರಾಗಿರುವ ಈ ದೇಶದ ಪ್ರಜೆಗಳನ್ನೂ ಮತ್ತಷ್ಟು ಆನಂದಾಬ್ಧಿಯಲ್ಲಿ ಮುಳುಗಿಸತಕ್ಕುದಾಗಿದೆ. ಈ ಮಹಾಶಯರ ವೈಸ್‌ರಾಯಗಿರಿಯು ಇಲ್ಲಿನ ಪ್ರಜೆಗಳನ್ನು ಚೆನ್ನಾಗಿ ತೃಪ್ತಿಪಡಿಸಿರುವುದೆಂಬುದನ್ನು ಸಾಮ್ರಾಜ್ಯಪ್ರಭುತ್ವದವರು ಅರಿತು ಎಷ್ಟು ಮೆಚ್ಚಿಕೊಂಡಿರುವರೆಂಬುದು ಆಸ್ಕ್ವಿತ್ ಮಂತ್ರಿವರ್ಯರ ಭಾಷಣದಿಂದ ವ್ಯಕ್ತವಾಗಿರುತ್ತದೆ. ಶ್ರೀಮತ್ಸಾರ್ವಭೌಮರೂ ಅವರ ಪ್ರಭುತ್ವದವರೂ ಸಹ ತಮ್ಮ ಪ್ರಾರ್ಥನೆಯನ್ನು ಇಷ್ಟುಮಟ್ಟಿಗೆ ನೆರವೇರಿಸಿಕೊಟ್ಟುದಕ್ಕಾಗಿ ಭಾರತೀಯರು ಕೃತಜ್ಞರಾಗಿರುತ್ತಾರೆ. ಆದರೆ ತಮ್ಮ ಪ್ರಾರ್ಥನೆಯು ೪ ತಿಂಗಳಮಟ್ಟಿಗೇ ಅಧಿಕಾರದವಧಿಯನ್ನು ಹೆಚ್ಚಿಸಲು ಸಾಧಕವಾದುದಕ್ಕಾಗಿ ಇವರ ತೃಪ್ತಿಯು ಅರ್ಧಾಂತಕವೆಂತಲೇ ಹೇಳಬೇಕಾಗುವುದು. ಈಗಿನ ಮಹಾಯುದ್ಧವು ಬೇಗನೆ ಮುಕ್ತಾಯಗೊಂಡು, ವೈಸ್‌ರಾಯರ ಸಂಕಲ್ಪದಲ್ಲೂ ಭಾರತೀಯರ ನಿರೀಕ್ಷಣೆಯಲ್ಲೂ ಇರುವ ಕಾರ್ಯಗಳು ಫಲಮುಖಕ್ಕೆ ಬರುವಂತೆ ಮುಂದಣ ಮಾರ್ಚಿ ತಿಂಗಳೊಳಗೇ ಪರಿಣಮಿಸಿದರೆ ಭಾರತೀಯರು ಸಂಪೂರ್ಣಪರಿತೃಪ್ತರಾಗುವರು. ಅಂಥ ಕಾಲವೇ ಸನ್ನಿಹಿತವಾಗಲೆಂದು ನಾವು ಕೋರುತ್ತೇವೆ.

ಒಳದೇಶ ವೃತ್ತಾಂತಗಳು.

ರಾಜಧಾನಿಯಲ್ಲಿ ಸಂಪದಭ್ಯುದಯಸಮಾಜ ಸಭೆಯು ನಾಳೆಯಿಂದ ತಾ|| ೨೬ ರ ವರೆಗೂ, ಮ್ಯುನಿಸಿಪಲ್ ಲೋಕಲ್ ಬೋರ್ಡುಗಳ ಸಭೆಯು ತಾ|| ೨೮ ರಿಂದ ೩೦ ರ ವರೆಗೂ ನಡೆಯಲು ಏರ್ಪಾಡಾಗಿದೆ.

ಮೈಸೂರ ನಿಯಮನಿರ್ಮಾಣಸಭೆಯು ಈ ತಾ|| ೨೮ ರ ಮಧ್ಯಾಹ್ನ ೩ ಗಂಟೆಯಲ್ಲಿ ರಾಜಧಾನಿಯ ಪಬ್ಲಿಕ್ ಆಫೀಸ್‌ಕಟ್ಟಡದಲ್ಲಿ ಸೇರುವುದು. ಆಗ ಅರ್ಥಶಾಖಾ ಸೆಕ್ರೆಟರಿಯವರು ಸಂಸ್ಥಾನದ ಆಯವ್ಯಯದ ಪಟ್ಟಿಯನ್ನೋದಿದಮೇಲೆ ಕೆಲ ಚರ್ಚೆಗಳು ನಡೆಯುವುವು.

ದಿವಾನರಾದ ಸರ್ ವಿಶ್ವೇಶ್ವರಯ್ಯನವರು ತಮ್ಮ ಸೆಕ್ರೆಟರಿಗಳೊಡನೆ ನೆನ್ನೆಯದಿನ ಬೆಳಗ್ಗೆ ರಾಜಧಾನಿಗೆ ಬಂದರು. ಇವರ ಅಧಿಕಾರದವಧಿಯು ಇನ್ನು ೨ ವರ್ಷದವರೆಗೆ ಹೆಚ್ಚಿಸಲ್ಪಟ್ಟಿರುವುದೆಂದು ಮದ್ರಾಸಿನ ಒಂದು ಪತ್ರಿಕೆಯು ತಿಳಿಸುತ್ತದೆ. ಅದು ನಿಜವಾಗಲೆಂದು ನಾವೂ ಕೋರುತ್ತೇವೆ.

ಮೈಸೂರ್ ಬ್ಯಾಂಕಿನ ಚೀಫ್ ಅಕೌಂಟ್ಯಾಂಟರವರಾದ ಮ|| ಪಿ. ಸುಬ್ಬರಾವ್ ಬಿ.ಎ., ರವರು ದಾಮೋದರದಾಸ್ ಫಂಡಿನಿಂದ ತಿಂಗಳೊಂದಕ್ಕೆ ೨೫೦ ರೂ. ಗಳ ವೇತನವನ್ನು ಸರ್ಕಾರದಿಂದ ಪಡೆದು ಬ್ಯಾಂಕನ್ನು ನಡೆಸುವ ಕ್ರಮವನ್ನು ವ್ಯಾಸಂಗಮಾಡಲು ಈ ತಾ|| ೨೬-೨೮ ರಲ್ಲಿ ಬೊಂಬಾಯಿಗೆ ಪ್ರಯಾಣಮಾಡಿ ಅಲ್ಲಿಂದ ತಾ|| ೨೬ ರಲ್ಲಿ ಹಡಗನ್ನು ಹತ್ತಿ ಸೀಮೆಗೆ ಹೊರಡುವರು.

ಮೈಸೂರು-ಬೆಂಗಳೂರು ಪಟ್ಟಣಗಳಲ್ಲಿ ಕುಡಿಯುವ ನೀರಿನ ಕೊಳಾಯಿಗಳನ್ನಿಟ್ಟಿರುವ ಮನೆಗಳಲ್ಲಿ ಅಳತೆಗಾಗಿಟ್ಟಿರುವ ಮಿಾಟರುಗಳಿಗೆ ತಿಂಗಳೊಂದಕ್ಕೆ ನೀರಿನ ತೆರುಗೆಯ ಜತೆಗೆ ಬೇರೆ ೪ ಆಣೆಯು ಬರುವ ಜುಲೈ ತಾ|| ೧ ರಿಂದ ತೆಗೆದುಕೊಳ್ಳಲ್ಪಡತಕ್ಕುದೆಂದೂ, ಮಿಾಟರು ಕೆಟ್ಟುಹೋಗಿದ್ದಲ್ಲಿ ಮತ್ತೂ ೧ ತಿಂಗಳಿಗೆ ೮೦೦೦ ಗ್ಯಾಲನ್ನುಗಿಂತ ಹೆಚ್ಚಾಗಿ ನೀರು ಉಪಯೋಗಿಸಲ್ಪಡದಿದ್ದಲ್ಲಿ ಮಿಾಟರಿನ ಛಾರ್ಜು ತೆಗೆದುಕೊಳ್ಳಲ್ಪಡಕೂಡದೆಂದೂ ಸರ್ಕಾರದಪ್ಪಣೆಯಾಗಿದೆ.

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವವು ಈ ತಾ|| ೨೩ ನೆಯ ಬುಧವಾರದ ದಿವಸ ನಡೆಯುವುದು. ಬೆಳಗ್ಗೆ ಅರತ್ಯಕ್ಷತೆ ಅಭ್ಯಂಜನ ಸ್ನಾನವಾದಮೇಲೆ ಅಂಬಾವಿಲಾಸಕ್ಕೆ ಶ್ರೀಯವರು ಚಿತ್ತೈಸಿ ಗುರುಗಳ ಪಾದಪೂಜೆಯನ್ನು ಮಾಡಿ ಭದ್ರಾಸನಾರೋಹಣವನ್ನು ಮಾಡಿ ಒಡ್ಡೋಲಗವನ್ನು ನಡೆಸುವರು. ಅನಂತರ ಪದ್ಧತಿಯಂತೆ ಉತ್ಸವಾದಿಗಳೆಲ್ಲಾ ನಡೆಯುವುವು. ಮರುದಿನದಿಂದ ಕುದುರೆಯ ಪಂದ್ಯವು ನಡೆಯುವ ಬೈಲಿನಲ್ಲಿ ಅಧಿಕಾರಿಗಳ ಮತ್ತು ದೊಡ್ಡಮನುಷ್ಯರುಗಳ ಕುದುರೆಯ ಸ್ವಾರಿ ಮೊದಲಾದ ಪಂದ್ಯಗಳ ವಿನೋದವು ನಡೆಯುವುದು.

ರಾಜಧಾನಿಯಲ್ಲಿಯೂ ಸುತ್ತುಮುತ್ತಲೂ ಮೃಗಶಿರೆಯ ಮಳೆಯು ಬಹಳ ಚೆನ್ನಾಗಿ ನಡೆಯಿಸಿದುದರಿಂದ ಕೆರೆಕಟ್ಟೆಗಳು ಜಲಸಮೃದ್ಧವಾಗಿರುವುವು. ಕಾರಂಜಿಕೆರೆಯು ಕೋಡಿಬಿದ್ದು ದೊಡ್ಡಕೆರೆಯು ಇಷ್ಟರಲ್ಲೇ ಕೋಡಿಬೀಳುವ ಸ್ಥಿತಿಯಲ್ಲಿ ತುಂಬಿತುಳುಕುತ್ತಿರುವುದು. ಹತ್ತಾರುವರ್ಷದಿಂದ ಕೆರೆಗಳಲ್ಲಿ ಇಂಥ ಜಲಸಮೃದ್ಧಿಯನ್ನು ಕಾಣದಿದ್ದ ಪುರನಿವಾಸಿಗಳು ಕ್ಷಾಮದಿಂದ ಸುಭಿಕ್ಷಸ್ಥಿತಿಗೆ ಬಂದವರಂತೆ ಆ ಕೆರೆಗಳ ಸೊಂಪನ್ನು ನೋಡಿ ಆನಂದಿಸುತ್ತಿರುವರು. ಮಳೆಯ ಜತೆಗೆ ಗಾಳಿಯೂ ಸಿಡಿಲೂ ಈ ವರ್ಷ ವಿಶೇಷವಾಗಿರುವುದರಿಂದ ಬಹಳ ಮನೆಗಳ ಹಳೆಗೋಡೆಗಳೂ ಮರಗಳೂ ವಿಶೇಷವಾಗಿ ಎಲ್ಲೆಲ್ಲೂ ಬಿದ್ದಿರುವುವು.

ಅಮಲ್ದಾರುಗಳಾದ ಮಿ|| ಬಿ. ಮೊಹಿದೀನ್ ಷರೀಫರವರು, ಶಿಕಾರಿಪುರದಿಂದ ಅರಕಲಗೂಡಿಗೆ; ಮ|| ಜಿ. ಎಸ್. ರಾಮಸ್ವಾಮಯ್ಯಂಗಾರು, ಅರಕಲಗೂಡಿನಿಂದ ನಾಗಮಂಗಲಕ್ಕೆ; ಮ|| ಎ. ಎಸ್. ರಾಜಗೋಪಾಲಾಚಾರರು, ಹಾಸನದಿಂದ ಶಿಕಾರಿಪುರಕ್ಕೆ; ಮ|| ಕೆ. ಕೆ. ವೆಂಕಟಸಾಮಿ ಅಯ್ಯರ್‌ರವರು ರಜಾ ಪೂರೈಸುತಲೆ ಸೊರಬದಿಂದ ಹಾಸನಕ್ಕೆ; ಮಿ|| ಸಯ್ಯದ್ ಯಾಕೂಬ್‌ರವರು, ಬೆಂಗಳೂರಿಂದ ಮೂಡಗೆರೆಗೆ; ಮ|| ಟಿ. ಹನುಮಂತರಾಯರು ಸ್ಪೆಷಲ್ ಡ್ಯೂಟಿಯಿಂದ ಬೆಂಗಳೂರಿಗೆ (ಜುಲೈ ತಾ|| ೧ ರಾರಭ್ಯ) ಮತ್ತೂ ಮ|| ಸಿ. ಕೃಷ್ಣನಾಯುಡುಯವರು ರಜವು ಪೂರೈಸಿದಮೇಲೆ ಚೌರಿಂಗ್‌ಪೇಟೆಗೆ ವರ್ಗಾಯಿಸಲ್ಪಟ್ಟಿರುವರು.

ಭರತಖಂಡದ ವೃತ್ತಾಂತಗಳು.

ಬೂತಾನ್ ಪ್ರಭುತ್ವದವರು ಯುದ್ಧನಿಧಿಯ ಸಹಾಯಕ್ಕಾಗಿ ೧ ಲಕ್ಷ ರೂ.ಗಳನ್ನು ಕೊಟ್ಟಿರುವರು.

ಈಗ ಭರತಖಂಡದ ಪಶ್ಚಿಮ ಸಮುದ್ರತೀರದಲ್ಲಿ ಮಳೆಯು ಅಧಿಕವಾಗಿ ಸುರಿಯುತ್ತಿದೆ. ಅದರಿಂದಲೇ ನಮ್ಮಲ್ಲಿ ಚಳಿಗಾಳಿಗೂ ತುಂತುರುಮಳೆಗೂ ನದೀ ಪ್ರವಾಹಗಳ ವೃದ್ಧಿಗೂ ಆರಂಭವಾಗಿದೆ.

ಬಂಗಾಳಕ್ಕೆ ಸೇರಿದ ಮೈಮನ್‌ಸಿಂಗ್‌ಜಿಲ್ಲೆಯಲ್ಲಿ ವಿಪರೀತ ವೃಷ್ಟಿಯಿಂದಲೂ ಬಿರುಗಾಳಿಯಿಂದಲೂ ಕೆಲವು ಗ್ರಾಮಗಳಲ್ಲಿ ಬಹಳ ಮನೆಗಳು ಬಿದ್ದುಹೋಗಿ ಬಹುಜನರು ಸತ್ತರೆಂದೂ, ಹೊಳೆಗಳಲ್ಲಿ ಪ್ರವಾಹವು ಮಿತಿಮಿಾರಿ ಬಂದು ಪೈರುಪಚ್ಚೆಗಳು ಹಾಳಾದುವೆಂದೂ ವರ್ತಮಾನ ಬಂದಿದೆ.

ಬೊಂಬಾಯಿ ಗವರ್ನರಾದ ಲಾರ್ಡ್ ವೆಲ್ಲಿಂಗ್‌ಡನ್‌ರವರ ಕುಮಾರರಾದ ಗೆರಾರ್ಡ್ ಫ್ರೀಮೆನ್ ಥಾಮಸ್‌ರವರು ಕಳೆದ ಆಗಸ್ಟ್ ತಿಂಗಳಲ್ಲಿ ಯುದ್ಧಾಂಗಣದಲ್ಲಿ ಗುಂಡಿನೇಟನ್ನು ತಿಂದರು. ಅಂದಿನಿಂದ ಅವರೆಲ್ಲಿರುವರೆಂಬುದು ಗೊತ್ತಾಗಿರಲಿಲ್ಲ. ಅವರು ಮೃತರಾಗಿಹೋದರೆಂದು ಈಗ ಪ್ರಕಟವಾಗಿರುವ ಸುದ್ದಿಯನ್ನು ತಿಳಿಯಿಸುವುದಕ್ಕೆ ವಿಷಾದಿಸುತ್ತೇವೆ.

ನೀಲಗಿರಿಯಲ್ಲಿರುವ ಬರೋಡಾಮಹಾರಾಜರು ಇದೇ ತಿಂಗಳು ತಾ|| ೨೫ ಕ್ಕೆ ಅಲ್ಲಿಂದ ಹೊರಟು ಕೊಲ್ಲಂಗೋಡು ಕೊಚ್ಚಿ ತಿರುವಾಂಕೂರು ಸಂಸ್ಥಾನಗಳಲ್ಲಿ ಸಂಚರಿಸಿಕೊಂಡು ಬರುವವರಾಗಿದ್ದಾರೆ. ಈ ಸಂಚಾರಕಾಲದಲ್ಲಿ ತಮ್ಮ ಜತೆಯಲ್ಲಿರುವುದಕ್ಕಾಗಿ ಆ ದೇಶದ ಅನುಭವವುಳ್ಳ ತಮ್ಮ ದಿವಾನರಾದ ಮ|| ವಿ. ಪಿ. ಮಾಧವರಾಯರನ್ನು ನೀಲಗಿರಿಗೆ ಬರಮಾಡಿಕೊಂಡಿರುವರು.

ಅಮೃತಸರ ಜಿಲ್ಲೆಯಲ್ಲಿ ಕಳೆದ ತಾ|| ೧೧ರ ದಿವಸ ಬೆಳಗಿನ ಜಾವದಲ್ಲಿ ಕೆಲವುಮಂದಿ ಸಾಯುಧರಾದ ಕಳ್ಳರು ಜಾಂಡಿಯ ಲೋಹಮಾರ್ಗದ ಹತ್ತಿರದ ಸೇತುವನ್ನು ಕಾವಲು ಕಾಯುತ್ತಿದ್ದ ಸೈನಿಕರ ಮೇಲೆ ಬಿದ್ದು, ಒಬ್ಬನನ್ನು ಕೊಂದುಹಾಕಿದರು; ಇನ್ನಿಬ್ಬರಿಗೆ ಗಾಯಮಾಡಿದರು. ಒಬ್ಬ ಹವಾಲ್ದಾರನು ಏನಾದನೋ ಗೊತ್ತಿಲ್ಲ. ಸೈನಿಕರಲ್ಲಿದ್ದ ೭ ಸಣೀನುಗಳನ್ನೂ ೨೮೦ ತೋಟಾಗಳನ್ನೂ ಕಳ್ಳರು ಸುಲಿದುಕೊಂಡು ಹೋಗಿದ್ದರು. ಅವರಲ್ಲಿ ಕೆಲವರು ಸಿಕ್ಕಿಬಿದ್ದಿದ್ದಾರೆ.

ಬಂಗಾಳ ದೇಶದಲ್ಲಿ ಪ್ರತಿವರ್ಷವೂ ಯಾವುದಾದರೊಂದು ಕಡೆ ಕ್ಷಾಮವಿದ್ದೇ ಇದೆ. ಈ ವರ್ಷ ಆ ದೇಶದ ಎಲ್ಲ ಭಾಗದಲ್ಲೂ ಕ್ಷಾಮವು ವ್ಯಾಪಿಸಿದೆಯಂತೆ. ಅದರಲ್ಲೂ ಚಂದಪುರದಲ್ಲಿ ಕ್ಷಾಮಬಾಧೆಯು ವಿಪರೀತವಾಗಿರುವುದಂತೆ. ಪ್ರಜೆಗಳು ಆಹಾರಾಭಾವದಿಂದ ಕಾಡುಗೆಡ್ಡೆಗೆಣಸುಗಳನ್ನು ತಿಂದು ನಾನಾ ರೋಗಗಳಿಗೆ ತುತ್ತಾಗಿರುವರಂತೆ. ತಾಯಂದಿರು ಮಕ್ಕಳಿಗೆ ಆಹಾರವನ್ನು ಒದಗಿಸಲಾರದೆ ಅಲ್ಲಲ್ಲೇ ಬಿಟ್ಟುಬಿಟ್ಟು ಹೋಗುತ್ತಿದ್ದಾರಂತೆ. ಕೆಲರು ಹಸಿವಿನ ಬಾಧೆಯನ್ನು ತಾಳಲಾರದೆ ಆತ್ಮಹತ್ಯವನ್ನು ಮಾಡಿಕೊಂಡಿರುವರಂತೆ !

ಮುಂದಣ ಡಿಸೆಂಬರ್ ತಿಂಗಳಲ್ಲಿ ಬೊಂಬಾಯಿ ಪಟ್ಟಣದೊಳಗೆ ರಾಷ್ಟ್ರೀಯ ಮಹಾಸಭೆಯು ಜರುಗುವುದಷ್ಟೆ. ಇದಕ್ಕಾಗಿ ಒಂದು ಆಹ್ವಾನಸಭೆಯನ್ನು ಏರ್ಪಡಿಸಬೇಕೆಂದು ಪ್ರಯತ್ನಗಳು ನಡೆಯುತ್ತಿವೆ. ಈ ಮಹಾ ಸಭೆಯು ೧೮೮೫ನೆಯ ವರ್ಷದಲ್ಲಿ ಬೊಂಬಾಯಿ ಪಟ್ಟಣದಲ್ಲಿ ಎಷ್ಟು ವಿಜೃಂಭಣೆಯಿಂದ ನಡೆದಿತೋ ಹಾಗೆಯೇ ಈ ಸಲವೂ ನಡೆಯಿಸಬೇಕೆಂದು ಯತ್ನವು ನಡೆದಿದೆ. ಅಲಹಾಬಾದಿನಲ್ಲಿ ಯಾವ ಸಂಪ್ರದಾಯದ ಮೇರೆಗೆ ಸಭೆಯು ನಡೆದಿತೋ ಅದರಂತೆಯೇ ಇದು ನಡೆಯುವುದು. ಬಹುಮಂದಿ ಮಹಮ್ಮದೀಯ ಪ್ರಮುಖರಿಗೆ ಆಹ್ವಾನವು ಕಳುಹಿಸಲ್ಪಟ್ಟಿದೆ.

ಕಲ್ಲಿಕೋಟೆ ತಾಲ್ಲೂಕಿಗೆ ಸೇರಿದ ಒಂದು ಗ್ರಾಮದಲ್ಲಿ ಕೆಲರು ಪಂಚಮರು ಮಾರ್ಗದಲ್ಲಿ ಹೋಗುತ್ತಿದ್ದರು. ಅವರಿದಿರಾಗಿ ಕೆಲರು ನಾಯರುಗಳು ಬಂದರು. “ನೀವು ಸಮಿಾಪಕ್ಕೆ ಬರಬೇಡಿರಿ ದೂರಹೋಗಿರಿ. ನಮಗೆ ಮೈಲಿಗೆಯಾಗುವುದು” ಎಂದು ಆ ನಾಯರುಗಳಲ್ಲೊಬ್ಬನು ಪಂಚಮರನ್ನು ಕುರಿತು ಹೇಳಿದನು. ಅವರು ಅದರಂತೆ ದೂರವಾಗಿ ಹೋಗಲಿಲ್ಲ. ಆಗ ಆ ನಾಯರು ಆಗ್ರಹಗೊಂಡು ತನ್ನಲ್ಲಿದ್ದ ಕತ್ತಿಯಿಂದ ಆ ಪಂಚಮರಲ್ಲೊಬ್ಬನನ್ನು ಬಲವಾಗಿ ತಿವಿದು ಗಾಯಪಡಿಸಿದನಂತೆ. ಅವನು ಈಗ ವೈದ್ಯಶಾಲೆಯಲ್ಲಿರುವನು. ಈ ನಾಯರ ಮೊಗಲಯ್ಯಿಗೆ ತಕ್ಕ ಶಿಕ್ಷೆಯಾಗದೆ ತಪ್ಪದು.

ಎಮ್ಡನ್ ಹಡಗು ಮದ್ರಾಸು ಪಟ್ಟಣದ ಮೇಲೆ ಗುಂಡನ್ನು ಹೊಡೆದಾಗ್ಗೆ ಅಲ್ಲಿನ ಹೈಕೋರ್ಟಿನ ಒಂದುಭಾಗಕ್ಕೆ ಏಟು ತಗುಲಿ ಶಿಥಿಲವಾಗಿ ಹೋಗಿದ್ದಿತು. ಅದನ್ನು ಸರ್ಕಾರದವರು ಈಚೆಗೆ ಜೀರ್ಣೋದ್ಧಾರಮಾಡಿ, ಆ ಬಳಿಯಲ್ಲಿ ಶಿಲೆಯೊಂದನ್ನು ಹುದ್ದಿಸಿ ಅದರಮೇಲೆ “ಎಮ್ಡನ್ ಹಡಗು ೧೯೧೪ ನೇ ಸೆಪ್ಟೆಂಬರ್ ತಾ|| ೨೨ ರಲ್ಲಿ ಹೊಡೆದ ಗುಂಡಿನೇಟು ಈ ಸ್ಥಲಕ್ಕೆ ಬಡಿದು ಸ್ವಲ್ಪಭಾಗವು ಬಿದ್ದುಹೋಯಿತು. , ನಮ್ಮ ಮುಂದಿನ ಪೀಳಿಗೆಯವರು “ಶೌರ್ಯಸಂಪನ್ನರಾದ ನಮ್ಮ ಪ್ರಭುತ್ವದವರು ತಮ್ಮ ಶತ್ರುಗಳ ನೌಕಾದಳದವರು ತೋರಿಸಿದ ಸಾಹಸಕ್ಕೆ ಮೆಚ್ಚಿ ಈ ಸ್ಮಾರಕವನ್ನು ಸ್ಥಾಪಿಸಿರುವರೆಂಬುದನ್ನು ಸ್ಮರಿಸಿಕೊಳ್ಳಬಲ್ಲರು” ಎಂಬ ಮಾತುಗಳನ್ನು ಕೆತ್ತಿಸಿರುವರಂತೆ. ಆಂಗ್ಲರ ಗುಣಗ್ರಹಣಲಕ್ಷಣಕ್ಕೆ ಇದು ತಕ್ಕ ನಿದರ್ಶನವಲ್ಲವೆ ?

ಸರ್ ವೆಲಂಟೈನ್ ಚಿರೋಲ್ ಎಂಬ ಯೂರೋಪ್ಯರು ೧೯೧೦ನೆಯ ವರ್ಷದಲ್ಲಿ “ಅನ್‌ರೆಸ್ಟ್ ಇನ್ ಇಂಡ್ಯಾ” (ಭರತಖಂಡದಲ್ಲಿ ಅಸಂತುಪ್ತಿ) ಎಂಬ ಹೆಸರಿನಿಂದ ಒಂದು ಗ್ರಂಥವನ್ನು ಮುದ್ರಿಸಿರುವರು. ಅದರಲ್ಲಿ ಬರೆದಿರುವ ವಿಷಯಗಳೊಳಗೆ ಶ್ರೀಯುತ ಬಾಲಗಂಗಾಧರ ತಿಲಕರವರಿಗೆ ಮಾನಹಾನಿಕರವಾದ ಕೆಲವು ಸಂಗತಿಗಳಿರುವುವೆಂದು ಹೇಳಿ ತಿಲಕರವರು ಆ ಯೂರೋಪ್ಯರ ಮೇಲೆ ಮಾನನಷ್ಟದ ದಾವಾವನ್ನು ಸೀಮೆಯ ನ್ಯಾಯಸ್ಥಾನದಲ್ಲಿ ಹೂಡಬೇಕೆಂದು ನಿರ್ಧರಿಸಿ, ಪ್ರತಿವಾದಿಯು ಸಂಪೂರ್ಣವಾದ ಕ್ಷಮಾಪಣೆಯನ್ನು ಕೋರಿಕೊಳ್ಳದಿದ್ದರೆ ವಾದಿಯು ವಿಶೇಷ ಪರಿಹಾರದ್ರವ್ಯವನ್ನು ಪಡೆದುಕೊಳ್ಳುವುದಕ್ಕಾಗಿ ವ್ಯಾಜ್ಯವನ್ನು ಹೂಡುವರೆಂಬ ವಿಷಯಕವಾಗಿ ಮಿ||ಚಿರೋಲ್‌ರವರಿಗೆ ನೋಟೀಸನ್ನು ಇಂಗ್ಲೆಂಡಿನಲ್ಲಿರುವ ಬ್ಯಾರಿಸ್ಟರುಗಳ ಮೂಲಕ ಕಳುಹಿಸುವವರಾಗಿದ್ದಾರೆ. ಆ ಪುಸ್ತಕವು ಪ್ರಕಟವಾದಾಗ ತಿಲಕರವರು ಕಾರಾಗೃಹದಲ್ಲಿದ್ದರು. ಅವರು ಮುಕ್ತರಾಗಿ ಬಂದು ಇನ್ನೂ ೧ ವರ್ಷಕಾಲವು ತುಂಬಿಲ್ಲವಾದುದರಿಂದ ಇಷ್ಟರೊಳಗೇ ವ್ಯಾಜ್ಯತೆ ಹೂಡಲ್ಪಡುವುದಲ್ಲವೆ.

ವಿದೇಶ ವೃತ್ತಾಂತಗಳು

ಬ್ರೈಟನಿನ ಚಿಕಿತ್ಸಾಲಯದಲ್ಲಿರುವ ಭಾರತೀಯ ಸೈನಿಕರಿಗೆಲ್ಲಾ ನಮ್ಮ ಸಾರ್ವಭೌಮದಂಪತಿಗಳು ಕೃಪಾಪೂರ್ವಕವಾಗಿ ಮಾವಿನಹಣ್ಣುಗಳನ್ನು ಕೊಡಿಸಿಕೊಟ್ಟು ಆನಂದಪಡಿಸಿರುವರು.

ಪಾರ್ಲಿಮೆಂಟ್ ಸಭಾಸದರೂ ಭಾರತೀಯರಿಗೆ ಪ್ರತ್ಯಕ್ಷಪರಿಚಿತರೂ ಆದ ಕಿಯರ್ ಹಾರ್ಡಿಯವರು ಪ್ರಬಲವಾದ ವ್ಯಾಧಿಯಿಂದ ಪೀಡಿತರಾಗಿ ಔಪಚಾರಿಕ ಗೃಹದಲ್ಲಿರುವರೆಂದು ತಂತ್ರೀವಾರ್ತೆಯು ಬಂದಿದೆ.

ಇಂಗ್ಲೆಂಡಿನಲ್ಲಿರುವ ೩೯೯೮೩ ಮಂದಿ ಹೆಂಗುಸರು ಯುದ್ಧಸಂಬಂಧವಾದ ಯಾವಕಾರ್ಯವನ್ನಾದರೂ ಮಾಡಲು ಸಿದ್ಧರಾಗಿರುವೆವೆಂದು ತಿಳಿಯಿಸಿ ಅಧಿಕಾರಿಗಳಿಗೆ ತಮ್ಮ ಹೆಸರುಗಳನ್ನು ಕೊಟ್ಟಿರುವರು.

ಬೆಲ್ಜಿಯಂದೇಶದ ರಾಜದಂಪತಿಗಳು ಯುದ್ಧರಂಗದಲ್ಲಿ ಭರತಖಂಡದ ಅಶ್ವಸೇನೆಯಿರುವ ಸ್ಥಲಕ್ಕೆ ಬಂದು, ಅವರ ಸೇನಾವ್ಯೂಹವನ್ನೆಲ್ಲಾ ಚೆನ್ನಾಗಿ ಪರಾಮರಿಸಿ ಬಹಳ ಸಂತೋಷಪಟ್ಟು, ಶ್ಲಾಘಿಸಿ ತೆರಳಿದರು.

ಲಂಡನ್ನಿಗೆ ಸೇರಿದ ವೆಸ್ಟ್‌ಎಂಡ್ ಭಾಗದಲ್ಲಿ ಒಂದು ಭವನಕ್ಕೆ ಬೆಂಕಿಬಿದ್ದು ಯುದ್ಧಸಂಬಂಧವಾದ ೩೦೦ ಮೋಟಾರು ಬಂಡಿಗಳು ಸುಟ್ಟುಹೋದುವು. ಇವುಗಳಲ್ಲಿ ಔಪಚಾರಿಕ ಸಂಘಕ್ಕೆ ಸೇರಿದ ಬಂಡಿಗಳೇ ೧೦೦ ಇದ್ದುವು.

ಯುದ್ಧಸಾಮಗ್ರಿಗಳನ್ನು ವಿಶೇಷವಾಗಿ ನಿರ್ಮಾಣಮಾಡಿಸುವುದಕ್ಕೆ ಲಂಡನ್ನಿನ ಅಧಿಕಾರಿಗಳು ಯಂತ್ರಶಾಲೆಗಳಲ್ಲೆಲ್ಲಾ ಒಂದು ಹೊಸ ಏರ್ಪಾಟನ್ನು ಮಾಡಿರುವರು. ಇದರಂತೆಯೇ ಒಂದುನೂರು ಯಂತ್ರಾಗಾರಗಳಲ್ಲಿ ಕೆಲಸವು ನಡೆಯುತ್ತಿದೆ.

ಲಂಡನ್‌ನಗರದಲ್ಲಿ ಡನ್ಯಾರ್ಬ ಎಂಬ ಭವನಕ್ಕೆ ಬೆಂಕಿಬಿದ್ದು ಸ್ವಲ್ಪಭಾಗವು ಸುಟ್ಟುಹೋಯಿತು. ಅಲ್ಲಿ ಯುದ್ಧದಲ್ಲಿ ಗಾಯಗೊಂಡ ಕೆಲರು ಚಿಕಿತ್ಸೆಗೊಳ್ಳುತ್ತಿದ್ದರು. ಅವರನ್ನೂ ಹೆಚ್ಚುಬೆಲೆಬಾಳತಕ್ಕವಾಗಿದ್ದ ಚಿತ್ರಪಟಗಳನ್ನೂ ಬೇರೆ ಕೆಲ ಪದಾರ್ಥಗಳನ್ನೂ ಹೊರಕ್ಕೆ ಸಾಗಿಸಿದರು.

ಈಗಿನ ಯುದ್ಧದಿಂದ ಆಸ್ಟ್ರಿಯಾದೇಶದಲ್ಲಿ ಆಹಾರದುರ್ಭಿಕ್ಷವು ಜಾಸ್ತಿಯಾಗಿ ವಾಂತಿಭೇದಿರೋಗವು ಪ್ರಬಲಿಸುತ್ತಿದೆ. ೧೯೧೩ ನೆ ವರ್ಷದಲ್ಲಿ ಉಂಟಾಗಿದ್ದ ಈ ರೋಗದ ಸ್ಥಿತಿಗಿಂತಲೂ ಈಗಿನ ರೋಗದಸ್ಥಿತಿಯು ಬಹಳ ಭೀಕರವಾಗಿದೆ ಪ್ರಜೆಗಳು ಬಹಳ ಭಯಗ್ರಸ್ತರಾಗಿದ್ದಾರೆ. ಈ ರೋಗವು ಆ ದೇಶದ ಪೂರ್ವ ಹಂಗೇರಿ-ಗೆಲೀಷಿಯಾ-ಟ್ರಾನ್ಸಿಲ್ವೇನಿಯಾ ಭಾಗಗಳಲ್ಲಿ ವಿಶೇಷವಾಗಿದೆ.

ದಕ್ಷಿಣಾಫ್ರಿಕಾದಲ್ಲಿ ಈ ಮಧ್ಯೆ ಅಲ್ಲಿನ ಸಂಯುಕ್ತ ಪ್ರಭುತ್ವದವರಮೇಲೆ ಕತ್ತಿಕಟ್ಟಿ ಯುದ್ಧಕ್ಕೆ ನಿಂತ ಗುಂಪಿನ ಜನರ ಪ್ರಮುಖನಾದ ಡಿವೇಟ್ ಎಂಬಾತನನ್ನು ಸಂಯುಕ್ತ ಪ್ರಭುತ್ವಪಕ್ಷದ ಸೈನಿಕರು ಸೆರೆ ಹಿಡಿದರಷ್ಟೆ. ಈಗ ಅವರ ವಿಚಾರಣೆಯನ್ನು ಬ್ಲೂಫಾಂಟಿಯನ್ನಿನಲ್ಲಿ ನಡೆಯಿಸುತ್ತಿರುವರು. ತಾನು ಯಾವ ಅಪರಾಧವನ್ನೂ ಮಾಡಿದವನಲ್ಲವೆಂದು ಡಿವೆಟ್ಟು ವಾಙ್ಮೂಲವನ್ನು ಕೊಟ್ಟಿರುವನು

ಇದುವರೆಗೆ ಇಂಗ್ಲೀಷರ ಸೈನ್ಯದೊಳಗೆ ೩೩೦೭ ಮಂದಿ ಉದ್ಯೋಗಸ್ಥರೂ, ೪೭೦೧೬ ಮಂದಿ ಸೈನಿಕರೂ ಮೃತರಾಗಿರುವರೆಂದೂ ೬೪೯೮ ಮಂದಿ ಉದ್ಯೋಗಸ್ಥರೂ ೧೪೭೪೮೦ ಮಂದಿ ಸೈನಿಕರೂ ಗಾಯಗೊಂಡಿರುವರೆಂದೂ ೧೧೩೦ ಮಂದಿ ಉದ್ಯೋಗಸ್ಥರೂ ೫೬೬೧೭ ಮಂದಿ ಸೈನಿಕರೂ ಸೆರೆ ಸಿಕ್ಕಿ ಅಥವಾ ಕಾಣಿಸದೆ ಹೋಗಿರುವರೆಂದೂ ಮುಖ್ಯಮಂತ್ರಿಯವರು ಪಾರ್ಲಿಮೆಂಟಿನಲ್ಲಿ ನುಡಿದಿರುವರು

ಲಂಡನ್‌ಪಟ್ಟಣದಿಂದ ಯೊಕೊಹಾಮಿಗೆ ಹೋಗುತ್ತಿದ್ದ ರಾಡ್ನರ್‌ಷೈರ್ ಎಂಬ ಇಂಗ್ಲೀಷ್ ಹಡಗೂ ಕರಾಚಿಯಿಂದ ಜಿಬ್ರಾಲ್ಟರಿಗೆ ಹೋಗುತ್ತಿದ್ದ ಡಾವಿಷ್ ಎಂಬ ಮತ್ತೊಂದು ಇಂಗ್ಲೀಷರ ಹಡಗೂ ಸಹ ನ್ಯೂಪೋರ್ಟಿನ ಗುಡ್ಡದ ಹತ್ತಿರ ಒಂದಕ್ಕೊಂದು ಡಿಕ್ಕಿಹೊಡೆದುವು. ಒಂದಕ್ಕೆ ತೂತುಬಿದ್ದಿತು, ಮತ್ತೊಂದಕ್ಕೆ ಬೆಂಕಿ ಹೊತ್ತಿತು. ಎರಡೂ ದಡಕ್ಕೆ ಸೇರಿಸಲ್ಪಟ್ಟುವು ಒಳಗಿದ್ದವರಲ್ಲಿ ಮೂವರಿಗೆ ಮಾತ್ರ ಗಾಯವಾಯಿತು.

ಈ ಮಧ್ಯದಲ್ಲಿ ಜರ್ಮನ್ ರಾಜಧಾನಿಯಾದ ಬರ್ಲಿನ್‌ನಗರದಲ್ಲಿ ವಿಶೇಷವಾದ ಅಲಂಕಾರವನ್ನು ಪ್ರಭುತ್ವದವರು ಮಾಡಿಸಿದರಂತೆ. ಇದಕ್ಕೇನು ಕಾರಣವೆಂಬುದು ಯಾವೊಬ್ಬ ವೃತ್ತಪತ್ರಿಕಾಕಾರರಿಗೂ ಇತರ ಪ್ರಜೆಗಳಿಗೂ ಸಹ ತಿಳಿಯಲಿಲ್ಲ. ಅದರಿಂದ ಸರ್ವರೂ ಆಶ್ಚರ್ಯಪಡುತ್ತಿದ್ದರು. ಇಂಥ ರಹಸ್ಯಪ್ರಯತ್ನಗಳೇತಕ್ಕೆ? ಲೋಕವು ಏನೆಂದುಕೊಳ್ಳುವುದು! ಎಂದು ಅಲ್ಲಿನ ಪತ್ರಿಕೆಗಳೇ ಬರೆಯುವುದಕ್ಕೆ ಹಿಡಿದುವು. ಬೆಲ್ಜಿಯಂರಾಜ್ಯದಲ್ಲಿ ಜರ್ಮನ್ ಯುವರಾಜರಿಗೆ ಪಟ್ಟಾಭಿಷೇಕವಾಗುವುದೆಂದು ಸ್ವದೇಶದ ಜನರನ್ನು ವಂಚಿಸಿ ಹುರಿದುಂಬಿಸುವುದಕ್ಕಾಗಿ ಇಂಥ ಪ್ರಯತ್ನವು ಮಾಡಲ್ಪಟ್ಟಿತೆಂದು ಈಚೆಗೆ ಗೊತ್ತಾಯಿತಂತೆ!

ಗ್ರೀಸ್‌ದೇಶದ ಪ್ರಭುಗಳಿಗೆ ಶಸ್ತ್ರಚಿಕಿತ್ಸೆಯನ್ನು ಮಾಡಿದರು. ಅವರ ದೇಹಸ್ಥಿತಿಯು ಅಪಾಯಕರವಾಗಿಯೇ ಇದೆ. ಈ ಗ್ರೀಸ್‌ದೇಶದ ಪ್ರಜೆಗಳು ಪ್ರಕೃತ ಯುದ್ಧದಲ್ಲಿ ಮಿತ್ರಮಂಡಲಿಯವರ ಕಡೆಗೆ ಸೇರಬೇಕೆಂಬ ಇಚ್ಛೆಯುಳ್ಳವರಾಗಿದ್ದಾರೆ. ಹಾಗಾದರೆ ಗ್ರೀಸಿನ ಕಾನ್‌ಸ್ಟಾಂಟೈನ್ ಪ್ರಭುಗಳು ಸಿಂಹಾಸನ ಪರಿತ್ಯಾಗಮಾಡುವುದರಲ್ಲಿದ್ದಾರೆ. ಆಗ ಯುವರಾಜರಾದ ಜಾರ್ಜ್‌ರವರು ಪಟ್ಟಕ್ಕೆ ಬರುವರು. ಈ ಜಾರ್ಜ್‌ರವರಿಗೆ ಜರ್ಮನರನ್ನು ಕಂಡರಾಗದು. ಮೊನ್ನೆ ತಾನೇ ಇವರು ಇಂಗ್ಲಾಂಡ್‌ದೇಶಕ್ಕೆ ಹೋಗಿದ್ದು ಬಂದರು. ಫ್ರಾನ್ಸ್‌ದೇಶದ ಮಂತ್ರಿಮಂಡಲದವರೊಡನೆ ಆಲೋಚನೆಮಾಡಿ ಬರುವುದಕ್ಕಾಗಿ ಈಗ ಆ ದೇಶಕ್ಕೆ ಹೋಗಿರುವರು.

ಯುದ್ಧಾರಂಭಕಾಲದಲ್ಲಿ ಜರ್ಮನ್ ಯುವರಾಜರ ಶೌರ್ಯಧೈರ್ಯ ಪರಾಕ್ರಮಗಳ ಸುದ್ದಿಯು ಪದೇಪದೇ ಕೇಳಬರುತ್ತಿದ್ದಿತು. ಈಚೆಗೆ ಅವರ ಸುದ್ದಿಯೇ ಇಲ್ಲ. ಯುದ್ಧಕಾರ್ಯಕ್ರಮಸಂಬಂಧವಾಗಿ ಅವರ ತಂದೆಗೂ ಅವರಿಗೂ ಅಭಿಪ್ರಾಯಭೇದವುಂಟಾದುದರಿಂದ ಯುವರಾಜರು ಮುಳಿಸುಗೊಂಡುಹೋಗಿ ಅಂತಃಪುರವನ್ನು ಸೇರಿಬಿಟ್ಟಿರುವರೆಂದು ಈ ಮಧ್ಯೆ ಪ್ರಕಟವಾಗಿದ್ದಿತು. ಈಚೆಗೆ ಬಂದಿರುವ ಇನ್ನೊಂದು ಸುದ್ದಿಯೇನೆಂದರೆ—ಯುವರಾಜರು ಒಂದಾನೊಂದು ದಿನ ಒಬ್ಬ ಯುವತಿಯೊಡನೆ ಒಂದು ಮನೆಯ ಕಿಟಕಿಯಲ್ಲಿ ಕುಳಿತು ಸರಸಸಂಭಾಷಣವನ್ನಾಡುತ್ತಿದ್ದರು. ಆ ಸಮಯದಲ್ಲಿ ಅವರಿಬ್ಬರೂ ಇದ್ದ ಸ್ಥಿತಿಯಲ್ಲಿಯೇ ಯಾರೋಒಬ್ಬರು ಭಾವಚಿತ್ರವನ್ನು ತೆಗೆದು ಯುವರಾಜರ ಪತ್ನಿಯವರ ಬಳಿಗೆ ಕಳುಹಿಸಿಕೊಟ್ಟರಂತೆ. ಆಕೆಯು ಅದರ ಸಮೇತ ತನ್ನ ಮಾವಂದಿರ ಬಳಿಗೆ ಹೋಗಿ ಸಂಗತಿಗಳನ್ನು ಹೇಳಿಕೊಳ್ಳಲು "ಯುದ್ಧಮುಗಿಯುವವರೆಗೂ ಸುಮ್ಮನಿರು; ಅನಂತರ ವಿಚಾರಿಸುತ್ತೇನೆ" ಎಂದು ಸಮಾಧಾನ ಹೇಳಿದರು. ಆಕೆಯು ಕೇಳದೆ ಬರ್ಲಿನ್‌ನಗರವನ್ನೇ ಬಿಟ್ಟು ಹೊರಟುಹೋದರಂತೆ. ಬಳಿಕ ಚಕ್ರವರ್ತಿಯವರು ಯುವರಾಜರನ್ನು ಕುರಿತು ಅವರ ವರ್ತನೆಯನ್ನು ಖಂಡಿಸಿದ ಲೇಖನವನ್ನು ಬರೆಯಲಾಗಿ ಅವರೂ ಕೂಡ ತಂದೆಗೆ ಪ್ರತ್ಯುತ್ತರವನ್ನು ಅಗೌರವಕರವಾಗಿ ಬರೆದರಂತೆ. ಸ್ಥಿತಿಗತಿಯು ಹೀಗಿರುವುದರಿಂದಲೇ ಯುದ್ಧರಂಗದ ಕಾರ್ಯದಲ್ಲಿ ಯುವರಾಜರು ತೊಡಗಿಲ್ಲವೆಂದು ಪ್ರಕಟವಾಗಿದೆ.

ಸ್ವೀಕಾರ.

ಕೈ॥ ವೈ. ವೀರಸಂಗಪ್ಪನವರ ಸ್ಮರಣಾರ್ಥವಾಗಿ ಕೊಡಗು ಕೊಡ್ಲಿಪೇಟೆಯ ಮ॥ ರಾ॥ ಕಡಲೆ ಶಾಂತಮಲ್ಲಪ್ಪನವರ ಮಗನ ಶಿವದೀಕ್ಷಾಮಹೋತ್ಸವದಲ್ಲಿ ತೆಗೆದ ಅಗ್ರತಾಂಬೂಲದ ಬಗೆಗೆ ಮ॥ ಬಿ. ಸೋಮಯ್ಯನವರ ಮೂಲಕ ೧ ರೂ; ಹೊಳೇನರಸೀಪುರದಲ್ಲಿ ಮ॥ ಪಿರಿಯಾಪಟ್ಟಣದ ಗುರುಶಾಂತಪ್ಪನವರ ಮಗ ಚಿ॥ ಮಲ್ಲಪ್ಪನಿಗೆ ಹೊಳೆನರಸೀಪುರದ ಮ॥ ಗೆಜ್ಜವಳ್ಳಿ ಸೂಗೂರಪ್ಪನವರ ಪುತ್ರಿ ಚಿ॥ ಸೌ॥ ಚೆನ್ನಮ್ಮನನ್ನು ಕೊಟ್ಟು ಜೂನ್ ತಾ॥ ೬ ರಲ್ಲಿ ನಡೆದ ವಿವಾಹಮಹೋತ್ಸವದಲ್ಲಿ ತೆಗೆದ ಅಗ್ರತಾಂಬೂಲದ ಬಗೆಗೆ ಹಾಸನದ ಮ॥ ಎಚ್. ಕೆ. ಮಲ್ಲಪ್ಪನವರ ಮೂಲಕ ೧॥ ರೂ.; ಗುಂಡ್ಲುಪೇಟೆ ತಾ॥ ದುಂದಾಸನಪುರದ ಮ॥ ದೊಡ್ಡವೀರಶೆಟ್ಟರ ಮಗ ಚಿ॥ ಬಸವಯ್ಯನಿಗೂ ತೆರಕಣಾಂಬಿ ಮ॥ ರುದ್ರಪ್ಪನವರ ಕುಮಾರ್ತಿ ಚಿ॥ ಸೌ॥ ಗೌರಮ್ಮನಿಗೂ ನಡೆದ ವಿವಾಹಮಹೋತ್ಸವದಲ್ಲಿ ತೆಗೆದ ಅ॥ ತಾಂ॥ ಬಗೆಗೆ ಕಸಬಾ ಶೇಕದಾರ್ ಮ॥ ಎಂ. ಭದ್ರಯ್ಯನವರ ಮೂಲಕ ೧ ರೂ.; ಹೊನ್ನುಡಿಕೆಯಲ್ಲಿ ಮ॥ ಯಜಮಾನ್ ಹೊನ್ನಶೆಟ್ಟಪ್ಪನವರ ಕುಮಾರ್ತಿ ಚಿ॥ ಸೌ॥ ರೇವಮ್ಮನನ್ನು ಅದಲಗೆರೆ ಮ॥ ಗಂಗಪ್ಪನವರ ಮಗ ಚಿ॥ ಹೊನ್ನಪ್ಪನಿಗೆ ಕೊಟ್ಟು ತಾ॥ ೨-೬-೧೫ ರಲ್ಲಿ ನಡೆದ ವಿವಾಹಮಹೋತ್ಸವದಲ್ಲಿ ತೆಗೆದ ಅ॥ ತಾ॥ ಬಗೆಗೆ ಮ॥ ಯ॥ ಹೊನ್ನಶೆಟ್ಟಪ್ಪನವರ ಮೂಲಕ ೧ ರೂ. ಗಳನ್ನೂ ವಂದನಪೂರ್ವಕವಾಗಿ ಸ್ವೀಕರಿಸಿರುತ್ತೇವೆ.

ಪ. ಪ್ರ.

ಪತ್ರವ್ಯವಹಾರ.

ಬೆಳ್ಳಾವೆ.

ಸ್ವಾಮಿ! ತಮ್ಮ ತಾ॥ ೬-೬-೧೫ ನೆ ಸ್ಟಾರ್‌ಸಂಚಿಕೆಯಲ್ಲಿ ಬೆಳ್ಳಾವೆ ವೃತ್ತಾಂತವನ್ನು ಬರೆದಿರುವ ಪ್ರತ್ಯಕ್ಷದರ್ಶಿಗಳು ಕೆಲವು ವಿಷಯಗಳನ್ನು ದೀರ್ಘವಾಗಿ ಪರಿಶೀಲಿಸಿರುವಂತೆ ಕಾಣುವುದಿಲ್ಲ. ಗ್ರಾಮಪಂಚಾಯಿತಿ ಗ್ರಾಮಾಭಿವೃದ್ಧಿ ವಾಚಕಶಾಲೆಗಳ ವಿಷಯದಲ್ಲಿ ಹಿಂದೆ ಅಮಲ್ದಾರರಾಗಿದ್ದ ಮ॥ ರಾ॥ ರಾಮಚಂದ್ರರಾಯರವರ ಕಾಲದಲ್ಲಿ ಇವುಗಳು ಸಮರ್ಪಕವಾಗಿ ನಡೆಯುತ್ತಿದ್ದು ಈಗ ಪ್ರೋತ್ಸಾಹ ಕಡಿಮೆಯಾಗಿದೆ ಎಂದು ವಸ್ಕೈರೆ ಬರೆದಿರುತ್ತಾರೆ. ಮ॥ ರಾ॥ ರಾಮಚಂದ್ರರಾಯರವರು ವಾಚಕಶಾಲೆ ಗ್ರಾಮಾಭಿವೃದ್ಧಿ ಏರ್ಪಾಟುಗಳನ್ನು ಮಾಡಿಕೊಟ್ಟು ಅವುಗಳನ್ನು ಮುಂದೆ ಚೆನ್ನಾಗಿ ಅಭಿವೃದ್ಧಿಪಡಿಸಿಕೊಳ್ಳುವ ವಿಷಯವಾಗಿ ದಯವಿಟ್ಟು ಅನೇಕ ಸದುಪದೇಶಗಳನ್ನು ದಯಪಾಲಿಸಿರುತ್ತಾರೆ. ಅವುಗಳನ್ನು ಆದರ್ಶಪ್ರಾಯವಾಗಿ ಇಟ್ಟುಕೊಂಡು ಮೇಲ್ಕಂಡ ಕಾರ್ಯಗಳನ್ನು ನಾವು ಅಭಿವೃದ್ಧಿಪಡಿಸಿಕೊಂಡು ಆತ್ಮಾವಲಂಬಿಗಳಾಗದೆ ಸುಮ್ಮನೆ ಮತ್ತೊಬ್ಬರು ಪ್ರೋತ್ಸಾಹಿಸುವುದಿಲ್ಲವೆಂದು ಗೊಣಗುಟ್ಟುವದು ತಕ್ಕುದಲ್ಲ. ಹಾಲಿ ಇರುವ ಯೂನಿಯನ್ ಮೆಂಬರುಗಳು ಮ॥ ರಾಮಚಂದ್ರರಾಯರವರ ಕಾಲದಲ್ಲೇ ಮೊಕರರಾದವರಾದ್ದರಿಂದ ಯೂನಿಯನ್ ವಿಚಾರಗಳಲ್ಲೂ ಇವರು ತಕ್ಕ ತಿಳುವಳಿಕೆಗಳನ್ನು ಪಡೆದವರೇ ಆಗಿರುತ್ತಾರೆ ಕೆಲವು ವೇಳೆ ಇರುವ ನ್ಯೂನಾತಿರಿಕ್ತಗಳನ್ನು ಉಪಾಧ್ಯಕ್ಷರಾದ ಶೇಕದಾರರವರ ಗಮನಕ್ಕೆ ತಂದು ಮೀಟಿಂಗುಗಳು ನಡೆಯುವಂತೆ ಸಲಹೆಕೊಟ್ಟು ಎಲ್ಲರೂ ಏಕೀಭವಿಸಿ ಮೀಟಿಂಗ್‌ಗಳನ್ನು ನಡೆಸುವ ವಿಚಾರದಲ್ಲಿ ಮೆಂಬರುಗಳೆಲ್ಲರ ಅಭಿಪ್ರಾಯವನ್ನು ಲಕ್ಷ್ಯವಿಡದೆ ಒಟ್ಟಿಗೆ ತಿರಸ್ಕರಿಸುತ್ತಾ ಉಚ್ಛೃಂಖಲರಾಗಿ ಶೇಕದಾರರು ವರ್ತಿಸಿದ್ದು ಕಾಣಲಿಲ್ಲ. ಈ ವಿಷಯದಲ್ಲಿ ನಾವು ಪ್ರತಿ ತಿಂಗಳೂ ಮೇಲ್ಪಟ್ಟ ಅಧಿಕಾರಿಗಳೇ ಮೀಟಿಂಗ್‌ಗಳು ನಡೆಸಲಿಲ್ಲವೆಂದು ಅವರನ್ನು ಆಕ್ಷೇಪಣೆಮಾಡುವುದಕ್ಕೆ ತೊಡಗಬಾರದು.

ಬೆಳ್ಳಾವೆ ಸ್ಕೂಲಿನ ಲೋವರ್‌ಸೆಕೆಂಡರಿ ಫಲಿತಾಂಶದ ವಿಷಯದಲ್ಲಿ ೧೫ ಮಂದಿಗೆ ೧೨ ಮಂದಿ ಪ್ಯಾಸಾಗಿರುವುದೇನೋ ನಿಜ ಆದರೆ ಹೆಡ್ಮಾಸ್ಟರವರೊಬ್ಬರೇ ಮೆಹನತ್ತಿಗೆ ಕಾರಣಭೂತರೆಂದು ಹೇಳಲಾಗದು. ಅಸಿಸ್ಟೆಂಟ್‌ಮಾಸ್ಟರುಗಳೂ ಪ್ರತಿವರ್ಷವೂ ತಮ್ಮ ತರಗತಿಗಳಲ್ಲಿ ಬಹಳ ತೃಪ್ತಿಕರವಾಗಿ ಪ್ರಮೋಷನ್‌ಗಳನ್ನು ಮಾಡಿಸುತ್ತಿದ್ದರೂ ಅವರ ಮೆಹನತ್ತನ್ನು ಕೇಳುವವರೇ ಇಲ್ಲ. ಈವರುಷ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ಯಾಸಾದ ೧೨ ಮಂದಿಯಲ್ಲಿ ಅರ್ಧಭಾಗ ಜನಗಳು ಹಿಂದಿನವರ್ಷದಲ್ಲಿ ತೇರ್ಗಡೆಯಾಗದೆಇದ್ದವರು. ಇವರಲ್ಲಿ ಕೆಲವರು ಈವರುಷ ತೇರ್ಗಡೆಹೊಂದಲೋಸ್ಕರ ಹಿಂದೆ ಅ॥ಮಾ॥ ರಾಗಿದ್ದು ಈಗ ಹೊಳವನಹಳ್ಳಿಗೆ ವರ್ಗಪಟ್ಟಿರುವ ಪ॥ ವೆಂಕಟರಾಯರಿಂದ ರಾತ್ರಿಕಾಲದಲ್ಲಿ ಬಿಡದೆ ಪ್ರೈವೇಟ್ ಶಿಕ್ಷಣವನ್ನು ಹೊಂದಿದವರಾಗಿದ್ದರು. ಆದುದರಿಂದ ಮ॥ ವೆಂಕಟರಾಯರೂ ಈ ಮೆಹನತ್ತಿಗೆ ಬಾಧ್ಯರೇ ಆಗಿರುತ್ತಾರೆ. ಇವರು ಪ್ರೈವೇಟ್‌ಶಿಕ್ಷಣವನ್ನು ಕೊಟ್ಟುದೂ ಹುಡುಗರ ತಂದೆತಾಯಿಗಳು ತಮ್ಮ ಮಕ್ಕಳು ಫೆಯಿಲಾದುದರಿಂದ ಪ್ರೈವೇಟ್ ಶಿಕ್ಷಣವನ್ನಾದರೂ ಕೊಡಿಸಿ ಪ್ಯಾಸುಗಮಾಡಿಸಬೇಕೆಂದು ಶಿಕ್ಷಣದ ಏರ್ಪಾಟುಮಾಡಿದುದೂ ಇವು ಯಾವವೂ ಅಲ್ಲದೇನೇ ಬರಿ ಹೆಡ್ಮಾಸ್ಟರವರೊಬ್ಬರ ಮೆಹನತ್ತೇ ಉತ್ತಮಫಲಿತಾಂಶಕ್ಕೆ ಸಾಲದೆಂಬುದೂ ತಿಳಿಯದೇ ಇರುವ ವಿಷಯವಲ್ಲ. ಹೆಡ್ಮಾಸ್ಟರವರ ಮೆಹನತ್ತೇ ಮುಖ್ಯಕಾರಣವಾದ ಭಾಗದಲ್ಲಿ ಇವರು ಈ ಸ್ಕೂಲಿಗೆ ದಯಮಾಡಿಸಿದ ಇಪ್ಪತ್ತು ವರುಷಗಳ ದೀರ್ಘಕಾಲದಲ್ಲಿ ಇಂಥಾ ಫಲಿತಾಂಶದ ವಿಷಯವು ಯಾಕೆ ಪತ್ರಿಕಾಪ್ರಚಾರಾರ್ಹವಾಗಲಿಲ್ಲವೋ ತಿಳಿಯದು. ಅಲ್ಲದೆ ಒಂದಾದರೂ ಫಸ್ಟ್‌ಕ್ಲಾಸ್ ತೇರ್ಗಡೆಯು ಇದುವರೆಗೂ ಇಲ್ಲದಿರುವುದು ತುಂಬಾ ಆಶ್ಚರ್ಯವಾಗಿದೆ. ಹೆಡ್ಮಾಸ್ಟರೊಬ್ಬರಿಗೇ ಈ ಮೆಹನತ್ತು ಅಪಾರವೆಂತಲೂ ಸ್ತೋತ್ರಾರ್ಹವೆಂತಲೂ ಅನ್ವಯಿಸುವ ಪಕ್ಷಕ್ಕೆ ಪ್ರೈವೇಟ್ ಶಿಕ್ಷಣವನ್ನು ಕೊಟ್ಟು ಶ್ರಮಿಸಿದವರಿಗೆ ಮನಃಕ್ಲೇಶವಲ್ಲವೆ? ಮತ್ತು ಪ್ರೈವೇಟ್‌ಶಿಕ್ಷಣವು ಒದಗಿದ ಈ ವರ್ಷವೇ ಇಂಥ ಫಲಿತಾಂಶವು ಬರಬೇಕೇಕೆ? ಉಪಾಧ್ಯಾಯರುಗಳು ದಕ್ಷರಾದ ಭಾಗದಲ್ಲಿ ಅವರುಗಳು ಸ್ಕೂಲಿಗೆ ಬಂದ ಅಲ್ಪಕಾಲದಲ್ಲೇ ಇನ್ನೂ ಅತ್ಯುತ್ತಮವಾದ ಎಂದರೆ ಕಳುಹಿಸಿದಷ್ಟು ಮಂದಿಯೂ ತೇರ್ಗಡೆಹೊಂದಿ ಅದರಲ್ಲಿಯೂ ಫಸ್ಟ್‌ಕ್ಲಾಸ್‌ಗಳು ಬರುವುದು ದೊಡ್ಡದಲ್ಲ. ಅನೇಕವೇಳೆ ಇಂಥ ನಿದರ್ಶನಗಳನ್ನು ಪತ್ರಿಕೆಗಳಲ್ಲಿ ಓದುತ್ತಲೇ ಇದ್ದೇವೆ. ಆದುದರಿಂದ ನಮ್ಮ ಸ್ಕೂಲಿನ ಫಲಿತಾಂಶವು ಕೂಪಕೂರ್ಮನ್ಯಾಯದಂತೆ ಪ್ರಚುರಪಡಿಸಲ್ಪಟ್ಟಿತೆಂಬುದನ್ನು ಧಾರಾಳವಾಗಿ ಹೇಳಬಹುದಾಗಿದೆ, ಪ್ರತ್ಯಕ್ಷದರ್ಶಿಗಳು ಬರೆದಂತೆ ಈ ಸ್ಕೂಲು ಎ. ವಿ. ಸ್ಕೂಲಾಗುವುದು ಸಂತೋಷವೇಸರಿ. ನವೀನರೀತಿ ಶಿಕ್ಷಣವು ಈ ಹೆಡ್ಮಾಸ್ಟರಿಂದಾಗದೆಂದು ಬಹುಶಃ ಈ ಸ್ಕೂಲಿಗೆ ಒಬ್ಬ ಅಪ್ಪರ್‌ಸೆಕೆಂಡರಿ ಟ್ರೈನಿಂಗ್ ಆದವರನ್ನು ಸರ್ಕಾರದವರು ನೇಮಿಸಿರಬಹುದು. ಮತ್ತು ಅದೇ ಟ್ರೈನಿಂಗ್‌ಆಗಿದ್ದ ಇದುವರೆಗೂ ಇದ್ದ ಅ॥ ಮಾ॥ ಮೇಲ್ಕಂಡ ವೆಂಕಟರಾಯರು ವರ್ಗವಾದಮೇಲೂ ಇವರ ಐವಜಿಗೆ ಅದೇ ಟ್ರೈನಿಂಗ್ ಆದವರನ್ನೇ ಚುನಾಯಿಸಿ ಕಳುಹಿಸಿರುವುದರಿಂದ ಮೇಲ್ಕಂಡ ಊಹೆಯು ಮತ್ತಷ್ಟು ಉಪೋದ್ಬಲಪಡುತ್ತದಲ್ಲವೆ? ಪರೀಕ್ಷಾಕ್ಲಾಸಿನಲ್ಲಿರುವ ಹುಡುಗರೆಲ್ಲರೂ ಪರೀಕ್ಷೆಗೆ ಹೋಗಿದ್ದೂ ಪ್ರೈವೇಟ್ ಶಿಕ್ಷಣವೂ ಇಲ್ಲದೇಲೂ ಇಂಥ ೧೫ ಕ್ಕೆ ೧೨ ರಂತಾಗುವ ಶೇಕಡಾ ಕ್ರಮದ ಫಲಿತಾಂಶವು ಈಗ ಸ್ತೋತ್ರಕ್ಕೋಸ್ಕರಾಗಿರುವ ಮ॥ ರಾ॥ ಹೆಡ್ಮಾಸ್ಟರವರ ಮೆಹನತ್ತಿನಿಂದಲೇ ಕಂಡುಬಂದಲ್ಲಿ ಸದರಿ ಹೆಡ್ಮಾಸ್ಟರವರು ನಿಜವಾಗಿಯೂ ಸ್ತೋತ್ರಾರ್ಹರೇಸರಿ.

ಇನ್ನು ಕಳ್ಳರ ವಿಚಾರದಲ್ಲಿಯಾದರೋ ಕೆಲವರನ್ನು ಹಿಡಿದು ತುಮಕೂರಲ್ಲಿ ವಿಚಾರಣೆಗೆ ಗುರಿಪಡಿಸಿರುವುದೂ ಇನ್ನೂ ಹುಡುಕುವ ಪ್ರಯತ್ನವು ನಡೆಯುತ್ತಲಿರುವುದೂ ನಮ್ಮ ಪ್ರತ್ಯಕ್ಷದರ್ಶಿಗಳಿಗೆ ಅಪ್ರತ್ಯಕ್ಷವಾದಂತೆ ತೋರುತ್ತದೆ.

ಸತ್ಯಾಭಿಲಾಷಿ,

ಇಂಡಿ.

ಸರ್ ೧೯೧೫ ನೆ ಜೂನ್ ತಾರೀಖು ೩ ನೇ ದಿವಸ ನಮ್ಮ ಸಾರ್ವಭೌಮರಾದ ಪಂಚಮ ಜಾರ್ಜ್‌ಬಾದಶಹರವರ ಜನ್ಮದಿವಸ ಇದ್ದಾಗ್ಯೂ ದರವರ್ಷದ ಸಮಾರಂಭವು ಬ್ರಿಟಿಷ್ ರಾಜ್ಯದಲ್ಲಿ ಹೆಚ್ಚುಕಡಿಮೆ ಪ್ರಮಾಣದೊಂದಿಗೆ ಒಳ್ಳೇ ವಿಜೃಂಭಣೆಯಿಂದ ನೆರವೇರಿ ಆಯಾಸ್ಥಳಗಳ ನಿವಾಸಿಗಳು ಬಡವರಿಗೆ ಅನ್ನದಾನ, ವಸ್ತ್ರದಾನ, ಶಾಲೆಯಹುಡುಗರಿಗೆ ಪುಸ್ತಕ, ಸ್ಲೇಟು, ಮಿಠಾಯಿ ಹಂಚುವುದೂ; ಆಟ, ನೋಟ, ಹಾರೋಣ, ಜಿಗಿಯೋಣದರಲ್ಲಿ ಮೇಲಾದ ವಿದ್ಯಾರ್ಥಿಗಳಿಗೆ ಪಾರಿತೋಷವನ್ನು ಕೊಡೋಣ, ಮುಂತಾದ ಉತ್ಸವದ ಕೆಲಸಗಳಲ್ಲಿ ಈ ದಿವಸವನ್ನು ಕಳೆದು ರಾಜರಿಗೆ ಕಲ್ಯಾಣ ಚಿಂತಿಸುತ್ತಿದ್ದರು. ಆದರೆ ಈ ವರ್ಷವಾದರೂ ನಮ್ಮ ವಿಜಾಪೂರಜಿಲ್ಲೆಯ ಪೈಕಿ ತಾಲೂಕಿನ ಮುಖ್ಯಸ್ಥಳವಾದ ಇಂಡಿಗ್ರಾಮದ ನಿವಾಸಿಗಳು ದರವರ್ಷದಂತೆ ಈ ವರ್ಷದಲ್ಲಾದರೂ ಈ ಸಮಾರಂಭವನ್ನು ಒಳ್ಳೇ ಸಡಗರದಿಂದ ನೆರವೇರಿಸಬೇಕೆಂಬುವಷ್ಟರಲ್ಲಿ ನಮ್ಮ ಸಾರ್ವಭೌಮರಾದ ಬಾದಶಹರವರು ಯುರೋಪದ ಮಹಾಯುದ್ಧದಲ್ಲಿ ತೊಡಕಿದ್ದರಿಂದಲೂ ಆ ಯುದ್ಧಕ್ಕೋಸ್ಕರ ವಾರ್‌ಫಂಡಿಗೆ ಮತ್ತು ಇತರ ಕೆಲಸಕ್ಕೆ ಪ್ರಜೆಗಳು ಕೈಲಾದಷ್ಟು ಸಹಾಯ ಮಾಡಿದ್ದರಿಂದಲೂ ಇನ್ನುಮೇಲೆ ಪ್ರಜೆಗಳಿಗೆ ಹೆಚ್ಚಿನವೆಚ್ಚವು ಬೀಳಬಾರದೆಂದು ಸದಯಾಂತಃಕರಣವುಳ್ಳ ಸರಕಾರದವರು ದರವರ್ಷದ ತೆ ವೆಚ್ಚಕ್ಕೊಳಗಾಗದೆ ಫಕ್ತ ಕಚೇರಿ, ಶಾಲೆಗಳಿಗೆ ಸೂಟಿಕೊಟ್ಟದ್ದಲ್ಲದೆ ರಾಜರ ಹೆಸರಿನಿಂದ ನಿಶಾನೆಗಳನ್ನು ನಡಿಸಬೇಕಲ್ಲದೆ ಯಾವತರದ ಉತ್ಸವದ ಕಾರ್ಯವನ್ನೂ ಮಾಡಬಾರದೆಂದು ವ್ಯಕ್ತಪಡಿಸಿದ್ದರೂ ಕೂಡ, ನಮ್ಮ ಇಂಡಿ ತಾಲೂಕಿನ ಲೋಕಪ್ರಿಯರಾದ ಮತ್ತು ಒಳ್ಳೇ ಉತ್ಸುಕತೆವುಳ್ಳ ಮೆ॥ ಶಾಂತವಡೆಯಾರ ಕರೆವಡೆಯಾರ ಮಾಮಲೇದಾರ ಸಾ॥ ರವರ ಅಧ್ಯಕ್ಷತೆಯ ಕೆಳಗೆ ಇಂಡಿ ಜನರಲ್ ಲಾಯಬ್ರರಿಯ ಇಮಾರತಿಯಲ್ಲಿ ಸರಕಾರಿ ನೌಕರರೂ, ವಕೀಲರೂ, ಊರಪ್ರಮುಖರೂ, ಶಾಲಾಮಾಸ್ತರರೂ ಮೊದಲಾದ ಜನರೊಂದಿಗೆ ಕೂಡಿ ಅದರಲ್ಲಿ ನಡೆದ ಸಂಗತಿಗಳ ಸಾರಾಂಶವೇನಂದರೆ—(೧) ಶಾಲಾವಿದ್ಯಾರ್ಥಿಗಳಿಂದ ದೇವರ ಸ್ತುತಿಪರವಾದ ಪದ್ಯಗಳನ್ನೂ ಮತ್ತು ರಾಜರ ಕಲ್ಯಾಣದಬಗ್ಗೆ ಪದ್ಯಗಳನ್ನು ಅನ್ನಿಸುವದು. (೨) ಇಂದಿನ ದಿವಸದ ಸಮಾರಂಭದ ಬಗ್ಗೆ— ಯಾವತರದ ಉತ್ಸವವನ್ನೂ ಮಾಡದೇ ಇದ್ದಾಗ್ಯೂ ನಿರುತ್ಸಾಹವುಳ್ಳವರಾಗಿರದೆ ನಮ್ಮ ಬ್ರಿಟಿಷ್‌ಸರಕಾರದವರಿಂದ ನಮಗಾದ ಲಾಭ, ವಿದ್ಯಾವೃದ್ಧಿಯ ಬಗ್ಗೆ ನಮ್ಮ ಸರಕಾರದವರಿಂದ ದೊರೆತ ಸಹಾಯ, ಯುರೋಪದ ಮಹಾಯುದ್ಧದಲ್ಲಿ ನಮ್ಮ ಸಾರ್ವಭೌಮರವರು ನ್ಯಾಯದಿಂದ ತೊಡಗಿದ್ದರಿಂದ ಅವರಿಗೆ ಜಯವಾಗಲೆಂದು ಚಿಂತಿಸುವುದು, ಮತ್ತು ಇಂಡಿ ಊರಪ್ರಮುಖರು ಶಾಲೆಯ ವಿದ್ಯಾರ್ಥಿಗಳ ವಿಷಯವಾಗಿ ವಿದ್ಯಾವೃದ್ಧಿಗೋಸ್ಕರ ಏನೇನು ಕೊರತೆಗಳುಂಟೋ ಅವುಗಳನ್ನು ಪೂರೈಸುವ ಬಗ್ಗೆ ಸ್ಕಾವುಟ ಸಿಸ್ಟಿಮ ಎಂಬ ಪದ್ಧತಿಯನ್ನು ಉಂಟುಮಾಡಿದ ಬಗ್ಗೆ ಇಂಡಿ ಶಾಲೆಯ ಹೆಡ್‌ಮಾಸ್ತರರು ಭಾಷಣಮಾಡಿದರು. (೩) ವಿಜಾಪೂರ ಡಿಸ್ಟ್ರಿಕ್ಟ್ ಕೋರ್ಟಿನ ವಕೀಲರಾದ ಮಿ॥ ಶ್ರೀನಿವಾಸಕೊಪ್ಪ ಎಂಬುವವರ ಆಗಮನವು ಇಲ್ಲಿಗೆ ಆದ್ದರಿಂದ ಅವರು ನಮ್ಮ ಬ್ರಿಟಿಷರ ಆಳಿಕೆಯಿಂದ ಹಿಂದೂದೇಶದ ಪ್ರಜೆಗಳಿಗಾದ ಲಾಭದ ವಿಷಯಕ್ಕೆ ಅರ್ಧ ತಾಸು ತಮ್ಮ ಅಸ್ಖಲಿತವಾದ ಭಾಷಣಮಾಡಿದ್ದರಿಂದ ಜನರ ಮನಸ್ಸಿನ ಮೇಲೆ ಒಳ್ಳೇ ಪರಿಣಾಮ ಆಯಿತು (೪) ಮೀಟಿಂಗಿನ ಅಧ್ಯಕ್ಷರಾದ ಮೆ॥ ವಡೆಯಾರ ಮಾಮಲೇದಾರ ಸಾ॥ ರು ನಮ್ಮ ಆಂಗ್ಲಸಾರ್ವಭೌಮರು ಹಿಂದೂಜನರ ಏಳ್ಗೆಯ ಬಗ್ಗೆ ಮತ್ತು ಸರಕಾರದವರು ಪ್ರಜೆಗಳ ಸಂಬಂಧದಿಂದ ಯಾವ್ಯಾವಬಗೆಯ ಹಿತದ ಕಾರ್ಯಗಳನ್ನು ಮಾಡಿದರೆಂಬ ಬಗ್ಗೆ ಮತ್ತು ಮೆ॥ ವಿಮಲರ ಸಾ॥ ರು ಸ್ಕಾವುಟ ಸಿಸ್ಟಮ ಪದ್ಧತಿಯನ್ನು ಅಮಲಿನಲ್ಲಿ ತಂದದ್ದರಿಂದಾದ ಪರಿಣಾಮದ ಬಗ್ಗೆ ಮತ್ತು ನಮ್ಮ ಹಿಂದೂಜನರು ಸರಕಾರಕ್ಕೆ ಯಾವನಾವಪ್ರಕಾರ ಕೃತಜ್ಞತೆಯನ್ನು ತೋರಿಸಬೇಕೆಂಬ ಬಗ್ಗೆ ಮತ್ತು ಊರ ಪ್ರಮುಖಜನರೂ ಇತರ ಸಭ್ಯಗೃಹಸ್ಥರೂ ವಿದ್ಯಾವೃದ್ಧಿಯ ಉಪಯೋಗಕ್ಕಾಗಿ ಮಾಡತಕ್ಕ ಸಹಾಯದ ಬಗ್ಗೆ ಒಳ್ಳೇ ಆವೇಶಯುಕ್ತವಾದ ಜನರ ಮನಸ್ಸಿನ ಮೇಲೆ ಬಿಂಬಿಸುವಂತೆ ಸರಸವಾದ ಭಾಷಣವನ್ನು ಸುಮಾರು ಮುಕ್ಕಾಲು ತಾಸು ಮಾಡಿದನಂತರ ಉರ್ದುಶಾಲೆಯ ಹೆಡ್‌ಮಾಸ್ತರರಾದರೂ ಉರ್ದುಭಾಷೆಯಲ್ಲಿ ಸರಕಾರಕ್ಕೆ ಹಿತಚಿಂತನಪರವಾದ ಸರಸವಾದ ಭಾಷಣವನ್ನು ಮಾಡಿದರು. ಬಳಿಕ ಇಲ್ಲಿಯ ಸಭ್ಯಗೃಹಸ್ಥರು ತಮ್ಮ ಸಂತೋಷದಿಂದ ಕನ್ನಡ ಉರ್ದುಶಾಲೆಗಳಿಗೆ ಸಹಾಯ್ಯಮಾಡಿದವರ ಹೆಸರು—ಮಿ॥ ಗಣಪತ ಲಕ್ಷ್ಮಣಕೊಳೇಕರ ಚೇರಮನ್ ಇವರು ಕನ್ನಡಶಾಲೆಗೆ ೧೫ ರೂ. ದ ಗಡಿಯಾರ ಕೊಡಲೊಪ್ಪಿದರು. ಮತ್ತು ಬಡಹುಡುಗರಿಗೆ ಸ್ಲೇಟು ಮತ್ತು ಪುಸ್ತಕ ಮುಂದಿನ ಈ ದಿವಸಗಳವರೆಗೆ ಕೊಡಲೊಪ್ಪಿದರು. (೨) ಮೆ॥ ವಡೆಯಾರ ಮಾಮಲೇದಾರ ಸಾ॥ ರವರು ಉರ್ದುಶಾಲೆಯ ವಿದ್ಯಾರ್ಥಿಗಳಿಗೆ ಪುಟಬಾಲ ಕೊಡಲೊಡಂಬಟ್ಟರು. (೩) ಕೃಷ್ಣರಾವ ಮೋಹರೀರ ನಿ॥ ದೇಶಮುಖ ಇವರಾದರೂ ಕನ್ನಡಶಾಲೆಗೆ ಪುಟಬಾಲ ಕೊಡಲೊಪ್ಪಿದರು. (೪) ಮಿ॥ ನಾರಾಯಣರಾವ ಸೂಡೂರ ಸಬ್‌ರಿಜಿಸ್ಟ್ರಾರ ಇವರು ಉರ್ದುಶಾಲೆಯ ಗಡಿಯಾರಕ್ಕಾಗಿ ಒಂದು ರೂ. ವರ್ಗಣಿಕೊಟ್ಟರು. (೫) ಕನ್ನಡಶಾಲೆಯ ಹಾರಿ ರುಂಟಲ ಬಾರಕ್ಕೆ ರಾ॥ ಹರಿಪಂತಗೋಡಕೆ ಅವ್ವಲಕಾರಕೂನ ಮಾಮಲೇದಾರ ಕಚೇರಿ ಇವರು ಎರಡು ರೂ. ಮಿ॥ ಶ್ರೀನಿವಾಸರಾವ ಕೊಪ್ಪ ವಕೀಲಯವರು ಒಂದು ರೂ. ಮಿ॥ ವೆಂಕಟರಾವ ಅಗರಖೇಡ ಇವರು ಒಂದು ರೂ. ಮಿ॥ ರಾಮರಾವ ಕಟಗೇರಿ ಕಾರಕೂನ ಮಾಮಲೇದಾರ ಕಚೇರಿ ಇವರು ಒಂದು ರೂ. ಹೋರ್ತಿಭಾಗದ ಸಬ್ ಇನ್ಸ್‌ಪೆಕ್ಟರರು ಒಂದು ರೂ. ಪ್ರಾಸಿಕ್ಯೂಟಿಂಗ್ ಸಬ್ ಇನ್ಸ್‌ಪೆಕ್ಟರ ವಿ॥ ಗಲಗಲಿ ಇವರು ಒಂದು ರೂ. ಮಿ॥ ಕಾಸೀಮ್ ಸಾ॥ ಲಾಲಸ ಕಾರಕೂನ ಮಾಮಲೇದಾರ ಕಚೇರಿ ಇವರು ಒಂದು ರೂ. ಈ ಪ್ರಕಾರ ಸಭ್ಯಗೃಹಸ್ಥರು ವಿದ್ಯಾವೃದ್ಧಿಯ ಸ್ತುತ್ಯಕೆಲಸಕ್ಕೆ ಸಹಾಯಮಾಡಿದರು. ನಂತರ ವಿದ್ಯಾರ್ಥಿಗಳಿಗೆ ಮಿಠಾಯಿ ಹಂಚಿದಬಳಿಕ ಪಾನಸುಪಾರಿ ಅತ್ತರ ಗುಲಾಬ ಇವೆಲ್ಲಾ ಆದಬಳಿಕ ಎಲ್ಲರೂ ಎದ್ದುನಿಂತು ರಾಷ್ಟ್ರಗೀತವಾದ ನಂತರ ತ್ರಿವಾರ ಸಾರ್ವಭೌಮರವರ ಜಯಘೋಷವಾಗಿ ಬಾದಶಹರವರಿಗೆ ದೀರ್ಘಾಯುಷ್ಯವಾಗಲೆಂದು ದೇವರನ್ನು ಸ್ತುತಿಸಿ ಮೀಟಿಂಗು ಬರಖಾಸ್ತಾಯಿತು.

ತಮ್ಮ ಪ್ರೇಕ್ಷಕ.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು

89

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕದನಗಳ ಪಟಗಳೂ ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ ೨ ಆಣೆ; ವಿ. ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ:—ದಿ ಜನರಲ್ ಏಜನ್ಸಿ. ಮೈಸೂರು

S.U.N.&Co.
BENARES CITY.
KASHI
VISHWESHWAR.

39

ದೊಡ್ಡಕಂಪನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರಿಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟಲಾಗನ್ನು ಕಳುಹಿಸುವೆವು.

ವಿಳಾಸ—ಎಸ್. ಯು. ಎನ್ ಮತ್ತು ಕಂಪನಿ,
ಬನಾರಿಸ್ ಸಿಟಿ (ಕಾಶೀ)

ಊದುಬತ್ತಿಗಳು.

ವಿಧವಿಧವಾದ ಊದುಬತ್ತಿಗಳು ಸೇರು ೧ಕ್ಕೆ ೧೨-೦-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹಧೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂತ್‌ಸನ್ಸ್
ಸುಗಂಧಕಾರಿ, ಮೈಸೂರು.

ಶಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

26

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ!!) ದೇಶಿ!!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪ್ರಮೇಹವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಸ್ನೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೋಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲಿಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರ್ಯಾನ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿ ಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧-೦-೦ ರೂ. ಕೊಡಬೇಕಾಗುವುದು ಕೆಂಪು, ಹಸುರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರದ ಬಣ್ಣದಿಂದ ಬಿಳಿ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨-೦-೦; ಅನಂತರ ಪ್ರತಿ ೧೦೦ಕ್ಕೂ ೦-೧೨-೦; ಹಳದೀ ಗ್ಲೇಜ್‌ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨-೨-೦; ಅನಂತರ ಪ್ರತಿ ೧೦೦ ಕ್ಕೂ ೦-೧೪-೦; ಹಳದಿ ರಫ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦-೬-೦ ಆಣೆಯಂತೆ ಕಳುಹಬೇಕು. ಕ್ಲುಪ್ತಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು,

ಮ್ಯಾನೇಜರ್,
ಕ್ರ್ಯಾನ್, ಮೈಸೂರ್.

೫೦೦ ರೂಪಾಯಿಗಳ ಬಹುಮಾನ

ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್‌ಬ್ಯಾಂಕಿನಲ್ಲಿ ಮೇಲ್ಕಂಡ ೫೦೦ ರೂಪಾಯಿಗಳನ್ನು
೧೯೧೫ ನೆ ಇಸವಿ ಮಾರ್ಚಿ ತಾ॥ ೧೫ ರಲ್ಲಿ ಡಿಪಾಜಿಟ್ಟು ಇಟ್ಟಿರುತ್ತೇವೆ. 6

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಪಡುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ « ಸಾಲಾಮಿಸ್ರೀ ಮುರಬ್ಬಾವನ್ನು ” ಸೇವಿಸಿರಿ ! ಸೇವಿಸಿರಿ !! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್‌ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಸಾಲಾಮಿಸ್ರಿಯ ಧಾರಣೆಯು ಜಾಸ್ತಿಯಾಗಿರುವದರಿಂದ ಅನೇಕರು ಉರುಳಿಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹಾದ್ದೋ ಎಂಬುವದು ತಿಳಿದುಬರುತ್ತದೆ.

ಸಾಲಾಮಿಸ್ರಿ ಮುರಬ್ಬಾವು—ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವುದು.
ಸಾಲಾಮಿಸ್ರಿ ಮುರಬಾವು—ನಿದ್ರೆಯಲ್ಲಿ ಧಾತುವು ಹೋಗುವುದನ್ನು ನಿಲ್ಲಿಸುವುದ.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಧಾತುಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕ್ಷಣ ಕ್ಷಣಕ್ಕೆ ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ವೃದ್ಧಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಶ್ವಾಸಕಾಸ ರೋಗಗಳನ್ನು ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹೊಟ್ಟೆಯಲ್ಲಿರುವ ಜ್ವರದಗಡ್ಡೆ ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೆಟ್ಟುಹೋಗಿರುವ ರಕ್ತವನ್ನು ಶುದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬಾವು—ಹಳೆತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು.
ಸಾಲಾಮಿಸ್ರಿ ಮುರಬ್ಬಾವು—ಉತ್ಸಾಹ, ಧೈರ್ಯ, ಬುದ್ಧಿಕುಶಲತೆ, ಶರೀರಕಾಂತಿಯನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು—ತಾಂಬ್ರ, ಬೆಳ್ಳಿ, ಮತ್ತು ಭಂಗಾರ ಭಸ್ಮಕ್ಕಿಂತಲೂ ಉತ್ತಮವಾದುದು.
ಸಾಲಾಮಿಸ್ರಿ ಮುರಬ್ಬಾವು—ಸ್ತ್ರೀ ಸಂಗಕ್ಕೆ ಮೊದಲೆ ಧಾತು ಸ್ಖಲನವಾಗುವದನ್ನು ನಿಲ್ಲಿಸುವದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯ್ಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣಕೊಡುತ್ತದೆ. ೨-೩ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು « ಸಾಲಾಮಿಸ್ರಿ ” ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ ಕ್ಕೆ ಕ್ರಯ ೨—೦—೦ ರೂಪಾಯಿ. ಟಪ್ಪಾಲು ಖರ್ಚು ೧ ಡಬ್ಬಿಯಿಂದ ಡಬ್ಬಿಗಳ ವರೆಗೆ ೬ ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ವಿಳಾಸ:—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
೫೫, ಅವೆನ್ಯೂರೋಡ್ ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು. 5



ರೋಗಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋಹಿತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೩೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಪೊಂದು ಬುಡ್ಡಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯದ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧—೦—೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲಚರಿತೆ	೦—೫—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಜಿಕೆ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನೆ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಆಯುರ್ವೇದ ವಿದ್ವಾನ್-ಬಿ. ವಿ. ಪಂಡಿತರ 36

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್‌ಕಸ್ತೂರಿ, ಚಿನ್ನದರೇಖು, ಲೋಹಭಸ್ಮ ಮುಂತಾದವುಗಳಿಂದ ವಂಶಪಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀಕರಕಸ್ತೂರಿಮಾತ್ರೆಗಳನ್ನು ತಾಂಬೂಲದೊಡನೆ ಅಥವಾ ಹಾಗೆ ಉಪಯೋಗಿಸಿದರೆ ಆಹಾರವು ಬೇಗನೆ ಜೀರ್ಣವಾಗಿ ಬಹಳಹೊತ್ತು ಬಾಯಿ ಘುಮಘುಮಿಸುತ್ತಿರುವುದು.

ಛಳಿಮಳೆಗಾಲಗಳಲ್ಲೂ, ಸೋಂಕುರೋಗಸ್ಥಳಗಳಲ್ಲೂ, ಪ್ರಯಾಣಕಾಲದಲ್ಲೂ, ಮಕ್ಕಳಿರುವ ಮನೆಗಳಲ್ಲೂ, ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಶೀತವಾಯು, ಕೆಮ್ಮು, ನೆಗಡಿ, ಅಜೀರ್ಣಭೇದಿ, ಮಲಬಂಧ, ಮರಸೇಜ್ವರ, ಪ್ಲೇಗುಜ್ವರ, ಮಲೇರಿಯಾಜ್ವರ, ನಡುನೋವು, ಅರೋಚಕ, ಹಲ್ಲುನೋವು, ಮೈಕೈನೋವುಗಳು ಬಹಳಬೇಗನೆ ವಾಸಿಯಾಗುತ್ತವೆ. ಮಕ್ಕಳಿಗೆ ಸಂಜೀವನ–ಯಾವಾಗಲೂ ವಿಳಾಸವನ್ನು ಪರೀಕ್ಷಿಸಿ ಔಷಧವನ್ನು ಕೊಂಡುಕೊಳ್ಳಿರಿ–ಮೋಸಹೋಗಬೇಡಿರಿ. ೫೦ ಮಾತ್ರೆಯುಳ್ಳ ಸೀಸೆಯ ಬೆಲೆ ೦—೪—೦ ಆಣೆ. ಇದಕ್ಕೆ ಒಂದು ಮುಫತ್ತು. ಟಪಾಲ್‌ಖರ್ಚು ಬೇರೆ.

ಆಮೋದಿನಿ.

ಸಂಗೀತಗಾರರಿಗೆ ಅತ್ಯಂತ ಸುಖವನ್ನೂ, ವಿದ್ಯಾರ್ಥಿಗಳಿಗೆ ಆನಂದವನ್ನೂ, ಪ್ರಯಾಣಿಕರಿಗೆ ಆಯಾಸಪರಿಹಾರವನ್ನೂ, ಉಂಟುಮಾಡಿ ಬಿಸಿಲುಕಾಲದ ಅಥವಾ ಆಯಾಸದ ಬಾಯಾರಿಕೆಯನ್ನು ತಕ್ಷಣ ಅಣಗಿಸಿ, ಎಂತಹ ಕೆಮ್ಮು, ಉಬ್ಬಸಗಳನ್ನಾದರೂ ವಾಸಿಮಾಡಿ ಆಬಾಲವೃದ್ಧರಿಂದಲೂ ಹೊಗಳ್ಪಡುತ್ತಲಿರುವ ಕೈಗಂಡಸಿದ್ಧಾಮೃತ, ಮತ್ತಾವಮಾತ್ರೆಗಳೂ ಇಷ್ಟು ಮನೋಹರವಾಗಿಲ್ಲವೆಂಬುದನ್ನು ನಂಬಿರಿ! ೧೫೦ ಮಾತ್ರೆಯ ಸೀಸೆ ೦—೪—೦ ಆಣೆ. ಇದಕ್ಕೆ ಒಂದು ಹೆಚ್ಚು. ಟಪಾಲ್‌ಖರ್ಚು ಪ್ರತ್ಯೇಕ.

ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರು ಡಿ॥

೧೯೧೫ನೆಯ ಇಸವಿ ಜೂನ್ ತಾ॥ ೨೦ರಿಂದ ೧೯೧೫ ನೆಯ ಜೂನ್ ತಾ॥ ೨೬ರವರೆಗೆ ಸಲ್ಲುವ ಶಾಲೀವಾಹನಶಕ ೧೮೩೭ ನೆಯ ರಾಕ್ಷಸನಾಮಸಂವತ್ಸರದ ಜ್ಯೇಷ್ಠ ಶು॥ ಅಷ್ಟಮಿಯಿಂದ ಜ್ಯೇಷ್ಠ ಶು॥ ಚತುರ್ದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥು ತೇದಿ
20	ಭಾನು	ಅಷ್ಟ	50-18	ಉತ್ತರ	43-0	6
21	[1]ಸೋ	ನವ	45-57	ಹಸ್ತ	40-48	7
22	[2]ಮಂಗ	ದಶ	40-55	ಚಿತ್ತ	37-43	8
23	[3]ಬುಧ	ಏಕಾ	35-15	ಸ್ವಾತಿ	34-10	9
24	[4]ಗುರು	ದ್ವಾ	29-12	ವಿಶಾಖ	30-11	10
25	[5]ಶುಕ್ರ	ತ್ರ	23-1	ಅನೂ	26-0	11
26	[6]ಶನಿ	ಚತು	16-50	ಜ್ಯೇಷ್ಠ	21-50	12

(1) ಸಿಂಹೇವಿವಾಹಃ, (ಪಂಚಕಶಾಂತಿಃ). (2) ದಶಹರದಶಮಿ, ಸುದರ್ಶನಾಳ್ವಾರ್ ತಿರುನಕ್ಷತ್ರಂ. (3) ಸರ್ವತ್ರನಿರ್ಜಲೈಕಾದಶೀ, ಖಾಸ್‌ವರ್ಧಂತಿ, ಪೆರಿಯಾಳ್ವಾರ್ ವೈನತೇಯರ್ ತಿರುನಕ್ಷತ್ರಂ. (4) ರಾಮಲಕ್ಷ್ಮಣ ದ್ವಾದಶೀ, ಪ್ರದೋಷಃ. (5) ಸರ್ವತ್ರತಿಥಿದ್ವಯಂ, ನಾಥ ಮುನಿ ತಿರುನಕ್ಷತ್ರಂ. (6) ಸರ್ವತ್ರಪೂರ್ಣಿಮಾತಿಥಿ; ಶ್ರೀರಂಗದಲ್ಲಿ ಜ್ಯೇಷ್ಠಾಭಿಷೇಕಃ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಕಾ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರ್ ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂಪಲಂ ॥
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಚಿತ್ತಿಳೆಯುಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧—೦—೦ ಅಂಚೆವೆಚ್ಚ ಸೇರಿ ೧—೪—೦

ಸಂಪುಟ ೨೮) ಮೈಸೂರ್ ಸ್ಟಾರ್ ಸರ್ ೧೯೧೫ ನೆಯ ಇಸವಿ ಜೂನ್ ತಾರೀಖು ೨೦ ನೆಯ ಭಾನುವಾರ. (ಸಂಚಿಕೆ ೨೫

ರಖಂವಾರ್ ಹೊಸ ಹಾರ್ಮೋನಿಯಂಗಳು.

ಮಿತ್ರರೇ ! ನಿಮ್ಮ ಹಣವನ್ನು ಸದ್ವ್ಯಯಮಾಡುವುದು ಹೇಗೆ? ಕ್ರಯಕ್ಕೆ ತಕ್ಕ ಉತ್ತಮವಾದ ಪದಾರ್ಥವನ್ನು ಕೊಂಡುಕೊಳ್ಳುವುದೇ ಅಲ್ಲವೆ? ಹಾಗಾದರೆ ನಮ್ಮಿಂದ ಒಂದುಸಾರಿ ತರಿಸಿ ಪರೀಕ್ಷಿಸಿರಿ. ನೀವೂ ಅನೇಕಕಡೆಗಳಿಂದ ನಾನಾತರಹ ಹಾರ್ಮೋನಿಯಂಗಳನ್ನು ತರಿಸಿಕೊಂಡಿರುವಿರಿ, ಆದರೆ ಈ ಕೆಳಗೆ ವಿವರಿಸಿರುವ ಪ್ರಖ್ಯಾತರಾದ ಕಾರೀಗಾರರಿಂದ ಬಹಳ ಬಂದೋಬಸ್ತಾಗಿ ತಯಾರಿಸಲ್ಪಟ್ಟು ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಹಾರ್ಮೋನಿಯಂಗಳನ್ನು ಒಂದುಸಾರಿ ತರಿಸಿಕೊಂಡು ಪರಿಕ್ಷಿಸಿದರೆ ಪದಾರ್ಥದ ಸೊಗಸೂ, ಚಾಕ್ಚಕ್ಯೆ, ಬಂದೋಬಸ್ತು, ಸ್ಪಷ್ಟವಾದ ಸ್ವರ ಇವೇ ಮೊದಲಾದ ಅತ್ಯುತ್ಕೃಷ್ಟವಾದ ಗುಣಗಳೂ, ಅಗ್ಗವಾದ ದರಗಳೂ ತಾವಾಗಿ ಗೋಚರವಾಗುತ್ತವೆಯಾದ್ದರಿಂದ ನಮ್ಮಿಂದಹಾರ್ಮೋನಿಯಂಗಳನ್ನು ತರಿಸಿಕೊಂಡವರಿಂದ ಸಂತೋಷಪೂರ್ವಕವಾದ ಸನ್ಮಾನಪತ್ರಿಕೆಗಳು ಪ್ರತಿನಿತ್ಯವೂ ಬರುತ್ತಲಿವೆ ಇವುಗಳ ಪೈಕಿ ಸ್ಥಳಸಂಕೋಚದಿಂದ ಒಂದನ್ನು ಮಾತ್ರ ಇಲ್ಲಿ ವಿವರಿಸಿದೇವೆ.

ಸಯ್ಯದ್ ಜಮಾಲ್‌ಸಾಬ್ ಸ್ಕೂಲ್‌ಮಾಸ್ಟರ್ ಬೇಲೂರು ತಾಲ್ಲೋಕು ಚನ್ನಹಳ್ಳಿಗ್ರಾಮ ಇವರು ಬರೆಯುವದು. ಸ್ವಾಮಿ ! ತಾವು ಕಳಿಸಿಕೊಟ್ಟ ಹಾರ್ಮೋನಿಯಂ ಪಾರ್ಸಲನ್ನು ಡಿಲಿವರೀ ತೆಗೆದುಕೊಂಡೆನು. ನೋಡುವಲ್ಲಿ ಪದಾರ್ಥ ಬಹಳಸೊಗಸಾಗಿಯೂ ಬಂದೋಬಸ್ತಾಗಿಯೂ ಇರುವುದರಿಂದ ನನ್ನ ಮನಸ್ಸಿಗೆ ಬಹು ಸಮರ್ಪಕವಾಯಿತು. ಇದನ್ನು ನೋಡಿ ನನ್ನ ಸ್ನೇಹಿತರು ಇನ್ನು ಕೆಲವಕ್ಕೆ ಆರ್ಡರ್ ಕೊಡುವುದರಲ್ಲಿದ್ಧಾರೆ.

ಆರ್‌ಡರಿನ ಸಂಗಡ ಅಡ್ವಾನ್ಸು ಕಳುಹಿಸಿಕೊಡುತ್ತೇವೆ. 2

ಕ್ರಯದ ತಪ್ಸೀಲ್.

೧. "ಬಿಜಲೀಫ್ಲೂಟ್" ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ	೨೫-೦-೦
೨. ಡಿಟೋ ಉತ್ತಮತರಹ ಹಾರ್ಮೋನಿಯಂ	೧ ಕ್ಕೆ	೨೩-೮-೦
೩. "ಕೋಹಿನೂರು ಫ್ಲೂಟ್" ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ	೨೯-೮-೦
೪. ಡಿಟೋ ನಮೂನೆ ಅತ್ಯುತ್ತಮವಾದ ಹಾರ್ಮೋನಿಯಂ	೧ ಕ್ಕೆ	೩೨-೮-೦
೫. "ಮೋಸ್ಲೀನ್‌ಫ್ಲೂಟ್" ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ	೩೫-೦-೦
೬. ಪ್ರಖ್ಯಾತಿಹೊಂದಿದ ಎಂ. "ಮೋರ್ಹೆಡ್‌ಫ್ಲೂಟ್" ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ	೩೩-೮-೦
೭. ಪ್ರಖ್ಯಾತಿಹೊಂದಿದ ಎಂ. "ಮೋರ್ಹೆಡ್‌ಫ್ಲೂಟ್" ಹಾರ್ಮೋನಿಯಂನಲ್ಲಿ ಅತ್ಯುತ್ತಮವಾದ ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ	೪೨-೮-೦
೮. "ಕೊಹಿನೂರ್‌ಫ್ಲೂಟ್" ಡಬ್ಬಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ	೪೨-೮-೦
೯. "ಬಿಜಲೀಫ್ಲೂಟ್" ಡಬ್ಬಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ	೪೨-೦-೦
೧೦. "ಮೋಸ್ಲೀಂಫ್ಲೂಟ್" ಡಬ್ಬಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ	೪೩-೮-೦
೧೧. ಪ್ರಖ್ಯಾತಿಹೊಂದಿದ ಎಂ. "ಮೋರ್ಹೆಡ್‌ಫ್ಲೂಟ್" ಡಬ್ಬಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ	೫೦-೮-೦
೧೨. ಡಿಟೋ ಎಂ. "ಮೋರ್ಹೆಡ್‌ಫ್ಲೂಟ್" ಡಬ್ಬಲ್‌ರೀಡ್ಸ್ ಅತ್ಯುತ್ತಮವಾದ ಹಾರ್ಮೋನಿಯಂ	೧ ಕ್ಕೆ	೫೨-೮-೦

ಹಾರ್ಮೋನಿಯಂಗಳಿಗೆ ಆರ್‌ಡರ್ ಮಾಡತಕ್ಕವರು ನಿಮ್ಮ ವೂರಿಗೆಗೆಸಮೀಪವಿರುವ ರೈಲ್ವೇಸ್ಟೇಷನ್ ಬರೆಯುವದಲ್ಲದೆ ೫ರೂಪಾಯಿ ಅಡ್ವಾನ್ಸು ಕಳುಹಿಸಿಕೊಡಬೇಕು. ಅಡ್ವಾನ್ಸಿಲ್ಲದೇ ಬರತಕ್ಕ ಆರ್‌ಡರ್‌ಗಳಿಗೆ ಖಂಡಿತವಾಗಿಯೂ ರವಾನಿಸಲಾಗುವುದಿಲ್ಲ.

ಕಸ್ತೂರಿಮಾತ್ರೆ ಪ್ರಖ್ಯಾತರಾದ ಘನ ವೈದ್ಯರಿಂದ ತಯಾರಿಸಲ್ಪಟ್ಟ ಕಸ್ತೂರಿಮಾತ್ರೆ ಶೀಶೆ 1 ಕ್ಕೆ 0-4-0. 5 ಶೀಶೆಗೆ ಒಂದು ಶೀಶೆ ಇನಾಂ ಪೋಸ್ಟೇಜು ಅಲಾಯಿದಾ 12 ಶೀಶೆ ಒಟ್ಟಿಗೆ ತರಿಸಿಕೊಳ್ಳುವರಿಗೆ ಪೋಸ್ಟೇಜು ಸೇರಿ 2-8-0

ಪರಿಮಳಕಾರ್ಡುಗಳು ಒಂದುಕಾರ್ಡನ್ನು ಜೇಬಿನಲ್ಲಿಟ್ಟುಕೊಂಡಿದ್ದರೆ ಸುವಾಸನೆಯಾದ ಪುಷ್ಪವಾಟಿಗಳ ಮಧ್ಯದಲ್ಲಿರುವಂತೆ ಬಹು ಮನೋಹರವಾಗಿರುತ್ತೆ ಕಾರ್ಡು 1 ಕ್ಕೆ ಕ್ರಯ 0-1 0 12 ಕ್ಕೆ 0-10-0 ಪೋಸ್ಟೇಜು ಅಲಾಯಿದಾ ಒಂದು ಡಜನ್‌ಗಿಂತಲೂ ಕಡಿಮೆಯಾಗಿ ರವಾನಿಸಲಾಗುವುದಿಲ್ಲಾ.

ಸೇನ್‌ಸೇ ತಾಂಬೂಲಮಿತ್ರ 250 ಮಾತ್ರೆಗಳಿರುವ ಪೊಟ್ಟ 1 ಕ್ಕೆ 0-2-6 ಒಂದು ಡಜನ್ ಒಟ್ಟಿಗೆ ತರಿಸಿಕೊಳ್ಳುವರಿಗೆ 1-10-0 ಕೊಡುವುದಲ್ಲದೆ ಪೋಸ್ಟೇಜು ಸಹಾ ಮಾಫಿ ಮಾಡಿದ್ದೇನೆ. ಇದರ ಸೇವನೆಯಿಂದಾಗತಕ್ಕ ಗುಣಗಳ ಪ್ರಿಂಟಾದ ಚೀಟಿ ಪಾರ್ಸಲಿನ ಸಂಗಡ ರವಾನಿಸಲಾಗುತ್ತೆ.

ಶೆಖಿಂತಾನ್ 45 ಮಾತ್ರೆಗಳ ಪೊಟ್ಟ 1 ಕ್ಕೆ 0-2-0, 95 ಮಾತ್ರೆಗಳ ಪೊಟ್ಟ 1 ಕ್ಕೆ 0-[illegible]-0, 200 ಮಾತ್ರೆಗಳ ಪೊಟ್ಟ 1 ಕ್ಕೆ 0-7-0, 200 ಮಾತ್ರೆಗಳ ಟಿನ್ 1 ಕ್ಕೆ 0-9-0, 80 ಮಾತ್ರೆಗಳ ಟಿನ್ 1 ಕ್ಕೆ 0-4-0, 100 ಮಾತ್ರೆಗಳ ಶೀಸೆ 1 ಕ್ಕೆ 0-4-6.

ನಮ್ಮ ವಿಳಾಸ:—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್ ಕೃಷ್ಣರಾಜಮೊಹಲ್ಲಾ ಮೈಸೂರು.

ಓರಿಯಂಟಲ್ ಫಾರ್ಮಸಿ ಮೈಸೂರು.

21

ಪ್ರಸಿದ್ಧ ಗುಣಕಂಡ ಔಷಧಗಳು.

ಜ್ವರದಮಾತ್ರೆ—ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಯುಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮಂದಷವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ರೂ.

ಗೋರೋಚನದಮಾತ್ರೆ— ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೂಡ್ಲೆ ತಪ್ಪಿ ಜೀರ್ಣಶಕ್ತಿಕೊಡುತ್ತೆ. ಪ್ರಯಾಣೀಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾಯು ನೋವು ಉಳುಕು ಊದು ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ. ೫ ಡಬ್ಬಿಗೆ ೧ ರೂ. ಕೂಡ್ಲೆ ನಮ್ಮ ಕ್ಯಾಟಲಾಗಿಗೆ ಬರಿಯಿರಿ ಮುಫತ್ತು ಕಳುಹಿಸುತ್ತೇವೆ.

ಹೊಸ ಪುಸ್ತಕಗಳು.

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೩೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ದಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ— ಬೆಲೆ ೧-೮-೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ — ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ಪಾದಪ್ರಕರಣ ೧-೩-೦

ಸೌಂದರಪುರಾಣಂ- ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
189 ಗ್ರಂಥಪ್ರಕಾರಕಮಂಡಲಿ, ಮೈಸೂರು.

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತವಾಗಿರುವ ಘೋರಯುದ್ಧದ ದೆಸೆಯಿಂದ ಈ ಸಾಮಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದ ಮತ್ತೂ ಬೆಲಜಿಯಮ್ಮಿನಿಂದ ಸುತರಾಂ ಬರುವುದು ಕಟ್ಟಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಆವಶ್ಯಕವಾದ ಕಾಗದ ಮೊದಲಾದ ಸಾಮಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವಧಿಯು ಪೂರೈಸಿರುವವರಿಗೆಲ್ಲಾ ಪತ್ರಿಕೆಯನ್ನು ವಿ. ಪಿ ದ್ವಾರ ಕಳುಹಿಸುತ್ತಿರುವೆವು. ಆದರೆ ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿರುಗಿಸಿ ಕಾಗದದ ಬೆಲೆಯೇರಿಕೆಯಿಂದ ನಷ್ಟಪಡುವುದರ ಜತೆಗೆ ಪೋಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದು ತಿಳುಹಲು ಖೇದವಾಗುತ್ತದೆ. ಇತಃಪರಃ ದಯಾರ್ದ್ರಹೃದಯರಾದ ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ. ಪಿ. ಹಣವನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನವಾಗಿ ನಡೆದುಕೊಂಡು ಹೋಗುವಂತೆ ಮಾಡುವರೆಂದು ಸಂಪೂರ್ಣವಾಗಿ ನಂಬಿರುತ್ತೇವೆ. ಮ್ಯಾನೇಜರ್.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್‌ಸಭೆಯ ವಾರ್ಷಿಕ ಜನರಲ್ ಕಮಿಟಿ ಮೀಟಿಂಗು ೧೯೧೫ ನೆ ಮೇ॥ ತಾ॥ ೩೦ ನೆ ಭಾನುವಾರ ಸಾಯಂಕಾಲ ೫ ಘಂಟೆಯಲ್ಲಿ ಬೆಂಗಳೂರು ರಾವ್ ಬಹದ್ದೂರ್ ಧರ್ಮಪ್ರವೃತ್ತ ಗುಬ್ಬಿ ತೋಟದಪ್ಪನವರ ಧರ್ಮಸತ್ರದ ಮಹಡಿಯಲ್ಲಿ ಮೆ॥ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರವರ ಅಧ್ಯಕ್ಷತೆಯಲ್ಲಿ ನಡೆದುದರ ಪ್ರೊಸಿಡಿಂಗ್ಸ್:—

ಹಾಜರಿದ್ದ ಮೆಂಬರುಗಳು—ಮ॥ ರಾ॥ ಗಳಾದ ೧ ದಿವಾನ್‌ಬಹದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಶೆಟ್ಟರು (ಪ್ರೆಸಿಡೆಂಟ್) ೨ ಡಾಕ್ಟರ್ ಟಿ. ಎಸ್. ನಂಜಪ್ಪನವರು ಎಂ. ಬಿ. ಸಿ. ಎಂ. (ವೈಸ್‌ಪ್ರೆಸಿಡೆಂಟ್) ೩ ಶೆಟ್ಟರ ಸಿದ್ಧಬಸವಶೆಟ್ಟರು. ೪ ಶೆಟ್ಟರ ವೀರಭದ್ರಶೆಟ್ಟರು. ೫ ಯಜಮಾನ್ ಬಸಪ್ಪನವರು (೬) ಎಂ. ಬಸವಯ್ಯನವರು ಬಿ.ಎ.ಬಿ.ಎಲ್ (೭) ಡಾಕ್ಟರ್ ಬಿ. ನಂಜಪ್ಪನವರು ಎಂ. ಬಿ. ಸಿ. ಎಂ. (೮) ಎ. ಪಿ ಭೋಗಯ್ಯನವರು ಬಿ. ಎ. (೯) ಕೆ. ರೇವಣ್ಣನವರು (೧೦) ಎಲೆ ಸಿದ್ಧಲಿಂಗಪ್ಪಶೆಟ್ಟರು (೧೧) ಗಂಡಿಗೆಅಂಗಡಿ ಗಾ॥ ವೀರಭದ್ರಪ್ಪನವರು (೧೨) ಎಸ್. ಕಡ್ಲಪ್ಪನವರು (೧೩) ಗಂಡಿಗೆಅಂಗಡಿ ಚನ್ನಬಸಪ್ಪನವರು (೧೪) ಗಂಡಿಗೆ ಅಂಗಡಿ ಶ್ರೀ ವೀರಭದ್ರಪ್ಪನವರು (೧೫) ಗುಬ್ಬಿ ಯಜಮಾನ್ ರೇವಣ್ಣನವರು (೧೬) ಜಿ. ಕೆ. ರುದ್ರಾರ್ಯರು.

೧. ಕಳೆದ ತಾ॥ ೨೦-೫-೧೯೧೪ ರಲ್ಲಿ ನಡೆದ ಜನರಲ್ ಕಮಿಟಿ ಮೀಟಿಂಗಿನ ಮಿನಿಟ್‌ಗಳು ಓದಲ್ಪಟ್ಟು ಒಪ್ಪಲ್ಪಟ್ಟವು.

೨. ಲೆಖ್ಖ ತಾ॥ ೨೦-೫-೧೯೧೪ ರಿಂದ ತಾ॥ ೩೦-೫ ೧೯೧೫ ರ ವರೆಗೆ ಓದಲ್ಪಟ್ಟು ಮಂಜೂರುಮಾಡಲ್ಪಟ್ಟಿತು.

ಜಮಾ.

ತಾ॥ ೨೦-೫-೧೪ರಲ್ಲಿ ಗು॥ಸಿಲ್ಕು ಮು॥ಜಮು	೬೯೧-೨-೩
(೨) ಲಗ್ನ ಮೊದಲಾದವುಗಳಿಂದ ಬಂದದ್ದು	೩೭೪-೧೨-೦
(೩) ಮಹಾಸಭಾ ಕಾಲದಲ್ಲಿ ವಾಗ್ದಾನಮಾಡಿದವರಿಂದ ಬಂದದ್ದು	೧೬೦-೦-೦
(೪) ಮ॥ ಗುಬ್ಬಿ ಶಿವರಾತ್ರಿ ಶಿವರಾತ್ರಪ್ಪನವರಿಂದ ಒಬ್ಬ ವಿದ್ಯಾರ್ಥಿಯ ಸ್ಕಾಲರ್‌ಷಿಪ್ ಬಗ್ಗೆ ಬಂದದ್ದು	೧೬-೦-೦
(೫) ದಾವಣಗೆರೆ ವೀರಶೈವ ಫಂಡಿನಿಂದ ಸ್ಕಾಲರ್‌ಷಿಪ್ ಬಗ್ಗೆ ಬಂದದ್ದು	೪೨-೦-೦
(೬) ೧೯೦೦೦ ರೂ. ಮೂಲಧನದ ಬಾಬ್ತು ೧೯೧೩-೧೪ನೆ ಸಾಲಿನ ಬಡ್ಡಿ ಬೆಂಗಳೂರು ಡಿ॥ ಟ್ರಿಜರಿಯಿಂದ ಬಂದದ್ದು	೭೩೩-೧-೯
(೭) ಮೈಸೂರು ಬ್ಯಾಂಕ್ ಕರೆಂಟ್ ಡಿಪಾಜಟ್ ಬಡ್ಡಿ ಬಂದದ್ದು	೨-೩-೦
(೮) ಮೈಸೂರು ಬ್ಯಾಂಕಿನಿಂದ ಸ್ಕಾಲರ್‌ಷಿಪ್ ವಗೈರೆಗೆ ಡ್ರಾಮಾಡಿದ್ದು	೧೦೯೩-೧೦-೦
ಜುಮ್ಲಾ ರೂ.	೩೧೧೩-೧-೦

ಖರ್ಚು.

(೧) ವಿದ್ಯಾರ್ಥಿಗಳಿಗೆ (ಸ್ಕಾಲರ್‌ಷಿಪ್) ವಿದ್ಯಾರ್ಥಿವೇತನ ಕೊಟ್ಟದ್ದು	೮೯೩-೧೨-೦
(೨) ದಾವಣಗೆರೆ ವೀರಶೈವ ಫಂಡಿನಿಂದ ಬಂದ ಮೊಬಲಿಗಿನಲ್ಲಿ ಟಿ. ಎಂ. ಈಶ್ವರಯ್ಯ VI ಫಾರಂ ವಿದ್ಯಾರ್ಥಿಗೆ ಸ್ಕಾಲರ್‌ಷಿಪ್ ಕೊಟ್ಟದ್ದು	೪೨-೦-೦
(೩) ಗುಬ್ಬಿ ಮ॥ ಶಿವರಾತ್ರಪ್ಪನವರಿಂದ ಬಂದ ಮೊಬಲಗಿನಲ್ಲಿ ಎಚ್. ಕನ್ನೇರಯ್ಯ V ಫಾರಂ ವಿದ್ಯಾರ್ಥಿಗೆ ಸ್ಕಾಲರ್‌ಷಿಪ್ ಕೊಟ್ಟದ್ದು	೧೪-೦-೦
(೪) ಬೆಂಗಳೂರು ವೀರಶೈವಾಶ್ರಮ ಕಟ್ಟಡದ ಬಾಡಿಗೆ ವಗೈರೆಗೆ ಕೊಟ್ಟಿದ್ದು	೧೦೮-೫-೨
(೫) ಫರ್ನಿಚರ್ ಖರೀದಿಗೆ ಕೊಂಡುಕೊಂಡ ಬಗ್ಗೆ ಕೊಟ್ಟಿದ್ದು	೫೦-೦-೦
(೬) ೧೯೧೪ ನೆ ಮೈಸೂರು ದಸರಾ ಪ್ರಜಾಪ್ರತಿನಿಧಿಸಭೆಗೆ ಮೆಂಬರಾಗಿ ಹೋಗಿದ್ದ ಮೆ॥ ಎಂ. ಬಸವಯ್ಯನವರು ಬಿ. ಎ. ಬಿ. ಎಲ್. ಖರ್ಚುಮಾಡಿದ ಬಿಲ್ ಬಗ್ಗೆ ಕೊಟ್ಟದ್ದು	೫೩-೬-೦
(೭) ಪ್ರಿಂಟಿಂಗ್ ಪೋಸ್ಟೇಜು ಸಾದಿಲ್ವಾರ್ ಖರ್ಚು	೧೮-೧೩-೬
(೮) ಮೈಸೂರು ಬ್ಯಾಂಕಿನಲ್ಲಿ ಕರೆಂಟ್ ಡಿಪಾಜಿಟ್ ಮಾಡಿದ್ದು	೧೯೨೫-೬-೦
ಜುಮ್ಲಾ ರೂ	೩೧೦೯-೧೦-೮
ಹಾಜರು ಸಿಲ್ಕು ತಾ॥ ೩೦-೫-೧೯೧೫ರಲ್ಲಿ ಮೆ॥ ಜಿ. ಕೆ. ರುದ್ರಾರ್ಯರಲ್ಲಿ	೩-೬-೪
ಜುಮ್ಲಾ ರೂ.	೩೧೧೩-೧-೦

ತಾ॥ ೩೦-೫-೧೯೧೫ ರಲ್ಲಿ

ಶಿಲ್ಕು—ಮೈಸೂರು ಬ್ಯಾಂಕಿನಲ್ಲಿ	೮೩೧-೧೨-೦
ಮೆ॥ ಜಿ. ಕೆ. ರುದ್ರಾರ್ಯರಲ್ಲಿ	೩-೬-೪
ಫಂಡಿನ ಮೂಲಧನ—ಬೆಂಗಳೂರು ಡಿ॥ ಟ್ರಿಜರಿಯಲ್ಲಿ	೧೯೦೦೦-೦-೦
ಡಿಬೆಂಚರ್‌ಬಾಂಡ್	೨೦೦-೦-೦
ಜುಮ್ಲಾ ರೂ.	೨೦೦೩೫-೨-೪

೩. ಆಡಿಟರುಗಳಾದ ಮೆ॥ ಶೆಟ್ಟರ ಸಿದ್ಧಬಸವಶೆಟ್ಟರು ಮೆ॥ ಬಿ. ಜಿ. ಬಸವಲಿಂಗಪ್ಪನವರು ಇವರ ರಿಪೋರ್ಟು ಓದಲ್ಪಟ್ಟು ಒಪ್ಪಲ್ಪಟ್ಟಿತು.

೪. ಆಕ್ಟಿಂಗ್ ಸೆಕ್ರಟರಿ ಮೆ॥ ಜಿ. ಕೆ. ರುದ್ರಾರ್ಯರಿಂದ ತಯಾರಿಸಲ್ಪಟ್ಟ ವಾರ್ಷಿಕ ರಿಪೋರ್ಟು ಓದಲ್ಪಟ್ಟು ಒಪ್ಪಲ್ಪಟ್ಟಿತು. ವಾರ್ಷಿಕರಿಪೋರ್ಟನ್ನೂ ೧೯೧೪-೧೫ನೆ ಸಾಲಿನಲ್ಲಿ ಲಗ್ನ ವಗೈರೆಗಳಿಂದ ಜಮಾಬಂದ ಸ್ಕಾಲರ್‌ಷಿಪ್ ವಗೈರೆಗೆ ಖರ್ಚಾದ ಗೋಷ್ವಾರೆ ಪಟ್ಟಿಯನ್ನೂ ಸಹ ಪಾಂಪ್ಲೆಟ್ಟಾಗಿ ಪ್ರಿಂಟ್‌ಮಾಡಿಸಿ ಜನರಲ್ ಕಮಿಟಿ ಮೆಂಬರುಗಳಿಗೂ ಫಂಡಿಗೆ ವಾಗ್ದಾನ ಮಾಡಿದವರಿಗೂ ಹಂಚುವಂತೆ ನಿರ್ಧರಿಸಲ್ಪಟ್ಟಿತು.

೫. ೧೯೧೪ನೆ ದಸರಾ ಪ್ರತಿನಿಧಿಸಭೆಗೆ ಮೆಂಬರಾಗಿ ಹೋಗಿದ್ದ ಮೆ॥ ಎಂ. ಬಸವಯ್ಯನವರು ಬಿ. ಎ. ಬಿ. ಎಲ್ ಇವರ ರಿಪೋರ್ಟು ಓದಲ್ಪಟ್ಟು ರಿಕಾರ್ಡುಮಾಡಲ್ಪಟ್ಟಿತು.

೬. ಮೆ॥ ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ ಪುಟ್ಟಣ್ಣಶೆಟ್ಟರವರು ಪ್ರೆಸಿಡೆಂಟರಾಗಿಯೂ ಡಾಕ್ಟರ್ ಟಿ. ಎಸ್. ನಂಜಪ್ಪನವರು ಎಂ. ಬಿ. ಸಿ. ಎಂ. ವೈಸ್‌ಪ್ರೆಸಿಡೆಂಟರಾಗಿಯೂ ಮೆ॥ ಬಿ. ಬಸವಾರಾಧ್ಯರವರು ಬಿ. ಎ. ಬಿ. ಎಲ್. ಸೆಕ್ರಟರಿಗಳಾಗಿಯೂ ಚುನಾಯಿಸಲ್ಪಟ್ಟರು.

.ಮೆ॥ ಪಿ. ಎಮ್. ಬಸಪ್ಪನವರು ಟ್ರಿಜರರಾಗಿಯೂ ಮೆ॥ ಜಿ. ಕೆ. ರುದ್ರಾರ್ಯರು ಅಸಿಸ್ಟೆಂಟ್ ಸೆಕ್ರಟರಿಗಳಾಗಿಯೂ ನೇಮಕ ಮಾಡಲ್ಪಟ್ಟರು. ಮೆ॥ ಶೆಟ್ಟರ ಸಿದ್ಧಬಸವಶೆಟ್ಟರು ಮೆ॥ ಬಿ. ಜಿ. ಬಸವಲಿಂಗಪ್ಪನವರು ಆಡಿಟರುಗಳಾಗಿ ನೇಮಕಮಾಡಲ್ಪಟ್ಟರು.

ಮ॥ ರಾ॥ ಆರ್. ಪುಟ್ಟಣ್ಣನವರು ಬಿ. ಎ. ಬಿ. ಎಲ್. (೨) ಶೆಟ್ಟರ ವೀರಭದ್ರಶೆಟ್ಟರು (೩) ಯಜಮಾನ್ ಬಸಪ್ಪನವರು (೪) ಎಂ. ಬಸವಯ್ಯನವರು ಬಿ. ಎ. ಬಿ. ಎಲ್ (೫) ಪಿ. ಮಹಾದೇವಯ್ಯನವರು ಬಿ. ಎ. ಬಿ. ಎಲ್. (೬) ಕೆ. ರೇವಣ್ಣನವರು (೭) ಕಂ॥ ಶಿವಪ್ಪನವರು (೮) ಎಸ್. ಕಡ್ಲಪ್ಪನವರು (೯) ಯು. ಎಸ್. ಕಾಳಪ್ಪನವರು (೧೦) ಎಲೆ ಸಿದ್ಧಲಿಂಗಪ್ಪಶೆಟ್ಟರು ಮ್ಯಾನೇಜಿಂಗ್‌ಕಮಿಟಿ ಮೆಂಬರುಗಳಾಗಿ ಆರಿಸಲ್ಪಟ್ಟರು.

೭. ೧೯೧೫ ನೆ ಮೈಸೂರು ದಸರಾ ಪ್ರಜಾಪ್ರತಿನಿಧಿಸಭೆಗೆ ಮೈ॥ ವೀ. ವಿ. ಫಂಡ್‌ಸಭೆಪರವಾಗಿ ಮೆ॥ ಎಂ. ಬಸವಯ್ಯನವರು ಬಿ. ಎ. ಬಿ. ಎಲ್. ರವರು ಮೆಂಬರಾಗಿ ಹೋಗುವಂತೆ ನಿರ್ಧರಿಸಲ್ಪಟ್ಟರು.

೮. ಮ॥ ರಾ॥ (೧) ಡಿ. ಮಲ್ಲಪ್ಪನವರು ಬೆಂಗಳೂರು (೨) ಬಿ. ಪುಟ್ಟಣ್ಣನವರು ಬೆಂಗಳೂರು (೩) ಎಜ್. ಸಿದ್ಧಲಿಂಗದೇವರು ಶ್ರೀರಂಗಪಟ್ಟಣ (೪) ಮೋಟಗಾನಹಳ್ಳಿ ಚನ್ನವೀರಪ್ಪನವರ ಬದಲಿಗೆ ಮೋಟಗಾನಹಳ್ಳಿ ರುದ್ರಪ್ಪನವರ ಮಲ್ಲಪ್ಪನವರು (೫) ಪಿ. ಎಮ್. ಬಸಪ್ಪನವರು ಬೆಂಗಳೂರು (೬) ಅಪ್ಪಯ್ಯಶೆಟ್ಟರ ಹೊನ್ನಗಂಗಪ್ಪನವರು ಬೆಂಗಳೂರು (೭) ಎಜ್ ಸಿ. ಬಸವಲಿಂಗಪ್ಪನವರು ಸ್ಯಾನಿಟರಿ ಇನ್ಸ್‌ಪೆಕ್ಟರ್ ಮೈಸೂರು (೮) ಟಿ. ರುದ್ರಾರಾಧ್ಯರು ಸ್ಯಾನಿಟರಿ ಇನ್ಸ್‌ಪೆಕ್ಟರ್ ಬೆಂಗಳೂರು (೯) ಟಿ. ಜಿ. ಲಿಂಗಪ್ಪನವರು ಹೆಡ್‌ಮಾಸ್ಟರು ಎ. ವಿ. ಸ್ಕೂಲ್ ಕಡೂರು (೧೦) ಲಿಂಗಪ್ಪಯ್ಯನವರು ಸ್ಕೂಲ್‌ಮಾಸ್ಟರು ಮೈಸೂರು ಇವರುಗಳು ಜನರಲ್ ಕಮಿಟಿ ಮೆಂಬರುಗಳ ಲಿಸ್ಟಿಗೆ ಸೇರಿಸಲ್ಪಟ್ಟರು

೯. ಲಗ್ನ ಮೊದಲಾದುವುಗಳಲ್ಲಿ ಫಂಡ್‌ಸಭೆಗಾಗಿ ಮೊಬಲಗನ್ನು ತೆಗಿಸಿ ಕಳುಹಿಸಿಕೊಡದೆ ತಮ್ಮಲ್ಲಿಯೇ ಇಟ್ಟುಕೊಂಡಿರುವುದರ ವಿಷಯದಲ್ಲಿ ತಕ್ಕ ವಸೂಲಾತಿ ಬಗ್ಗೆ ಏರ್ಪಾಡು ಮಾಡಬೇಕಾಗಿ ನಿರ್ಧರಿಸಲ್ಪಟ್ಟಿತು.

೧೦. ಫಂಡ್‌ಸಭೆಯ ಮುಖ್ಯವಾದ ಕರೆಸ್ಪಾಂಡೆನ್ಸು ಮೇಲ್ವಿಚಾರಣೆ ಫಂಡ್ ಸಭೆಯ ಅಭಿವೃದ್ಧಿ ಏರ್ಪಾಡುವಗೈರೆಯನ್ನು ಸೆಕ್ರಟರಿಯವರು ನೋಡಿಕೊಳ್ಳುವಂತೆ ನಿರ್ಧರಿಸಲ್ಪಟ್ಟಿತು. ಸಾಧಾರಣವಾದ ಕರೆಸ್ಪಾಂಡೆನ್ಸು ಲೆಖ್ಖ ಲಗ್ನ ಮೊದಲಾದವುಗಳಲ್ಲಿ ಬಂದ ಮೊಬಲಗನ್ನು ತೆಗೆದುಕೊಳ್ಳುವುದು ರಸೀತಿಯನ್ನು ಕೊಡುವುದು ಮ್ಯಾನೇಜಿಂಗ್ ಕಮಿಟಿಯಲ್ಲಿ ಸ್ಯಾಂಕ್ಷನ್ ಆದಮೇರೆಗೆ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಕೊಡುವುದು ವಗೈರೆಯನ್ನು ಅಸಿಸ್ಟೆಂಟ್ ಸೆಕ್ರಟರಿಯವರು ನೋಡಿಕೊಳ್ಳುವಂತೆ ನಿಯಮಿಸಲ್ಪಟ್ಟಿತು.

೧೧. ಯಾವ ಮೆಂಬರು ಕ್ರಮವಾಗಿ ೩ ಮೀಟಿಂಗ್‌ಗಳಿಗೆ ಕಾರಣವಿಲ್ಲದೆ ಬಾರದೆ ನಿಲ್ಲುತ್ತಾರೋ ಮತ್ತು ಬರದಿರುವಬಗ್ಗೆ ಪ್ರೆಸಿಡೆಂಟರವರ ಅನುಮತಿಯನ್ನು ಸಹ ಪಡೆಯುವುದಿಲ್ಲವೋ ಅಂಥವರು ಮುಂದೆ ಮೆಂಬರಾಗಿ ಗಣಿಸಲ್ಪಡುವುದಿಲ್ಲವೆಂದು ನಿರ್ಧರಿಸಲ್ಪಟ್ಟಿತು

೧೨. ಬೆಂಗಳೂರು ವೀರಶೈವಾಶ್ರಮವಿರುವ ಆನಂದಮಹಲ್ ಬಂಗ್ಲೆ ಬಾಡಿಗೆ ಮಾಹೆಯಾನ ೩೫ ರೂ. ಪೈಕಿ ಅರ್ಧ ಅಂದರೆ ರೂ. ೧೭-೮-೦ ನ್ನು ೧೯೧೪ ನೆ ಡಿಸೆಂಬರ್ ೧೫ ರಿಂದ ಮೆ॥ ಸಾಹುಕಾರ್ ಅತ್ತಿಬೆಲೆ ಸಿದ್ಲಬಸಪ್ಪನವರು ಪ್ರತಿ ಮಾಹೆಯಲ್ಲಿಯೂ ಕೊಡುವುದಾಗಿ ಒಪ್ಪಿದ್ದಕ್ಕಾಗಿ ಕಮಿಟಿಯವರು ವಂದನೆಯನ್ನು ಅವರಿಗೆ ಅರ್ಪಿಸಬೇಕೆಂದು ನಿರ್ಧರಿಸಲ್ಪಟ್ಟಿತು.

ಪ್ರೆಸಿಡೆಂಟರವರಿಗೆ ವಂದನೆಯನ್ನು ಅರ್ಪಿಸಿ ಮೀಟಿಂಗ್ ವಿಸರ್ಜಿಸಲ್ಪಟ್ಟಿತು.

ಜಿ. ಕೆ. ರುದ್ರಾರ್ಯ, ಅಸಿಸ್ಟೆಂಟ್‌ಸೆಕ್ರಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ
ಫಂಡ್‌ಸಭೆ, ಬೆಂಗಳೂರು.

ಭಕ್ತಜನಸಹವಾಸವು.

(ದೇಶಾಯಿ ಶೇಷಗಿರಿರಾವು, ನಂದಿ.)

ಸೂರ್ಯನು ತನ್ನ ಬೆಳಕನ್ನು ನಾಲ್ಕು ಕಡೆಗಳಲ್ಲಿಯೂ ಪ್ರಸರಿಸುವಂತೆ ಮಾಡುವ ಹಗಲುಹೊತ್ತಿನಲ್ಲಿ ಸೊಗಸಾದ ರಾಜಮಾರ್ಗದಲ್ಲಿ ಪ್ರಯಾಣಮಾಡುವುದು ಸುಲಭವೇ ಆಗಿದ್ದರೂ ಗಾಢಾಂಧಕಾರವಾಗಿರುವ ಅರ್ಧರಾತ್ರಿಯಲ್ಲಿ ಸಹವಾಸವಿಲ್ಲದೆ ಯಾರೇ ಆಗಲಿ ಆ ದಾರಿಯಲ್ಲಿ ಪ್ರಯಾಣಮಾಡುವುದು ಅತ್ಯಂತ ಕಷ್ಟವಲ್ಲವೇ? ಹಾಗೆಯೆ ಧರ್ಮಜೀವನಮಾರ್ಗದಲ್ಲಿಯೂ ಪ್ರಯಾಣಮಾಡುವುದು ಬಹು ಕಷ್ಟಮಯವಾಗಿರುವುದು. ಭಕ್ತಜನರ ಸಹವಾಸವಿಲ್ಲದೆ ಯಾರೊಬ್ಬರೂ ಈ ಮಾರ್ಗದಲ್ಲಿ ಒಂಟಿಯಾಗಿ ನಡೆಯಲಾರರು. ಆದುದರಿಂದಲೇ ಪ್ರತಿಮತಸ್ಥರೂ ಭಕ್ತರ ಸಾಂಗತ್ಯವು ಆತ್ಮಾಭಿವೃದ್ಧಿಗೆ ಮುಖ್ಯಾವಶ್ಯಕವೆಂದು ಹೇಳಿರುವರು.

ಧರ್ಮಜೀವನಮಾರ್ಗದಲ್ಲಿ ಮೊದಲು ಸ್ವಲ್ಪ ಪ್ರಯಾಣವನ್ನು ಮಾಡಿ ಅನುಭವವನ್ನು ಗಳಿಸಿದಂಥ ಮಹನೀಯರ ಸಹವಾಸವು ಲಭಿಸುವಂತೆ ಮಾಡುವುದರಲ್ಲಿಯೇ ಸಾಮಾಜಿಕೋಪಾಸನೆಯ ಶ್ರೇಷ್ಠತ್ವವು ಸೇರಿರುವುದು. ಮಾನವಸಂಘವನ್ನು ಬಿಟ್ಟು ಏಕಾಂತವಾಗಿ ಯಾವ ಅರಣ್ಯಮಧ್ಯದಲ್ಲಿಯೋ ಯಾವ ಪರ್ವತಗುಹಾಂತದಲ್ಲಿಯೋ ಈಶ್ವರಧ್ಯಾನವನ್ನು ಮಾಡುವಾತನು ಈ ಸಹವಾಸಲಾಭವನ್ನು ಕಳೆದುಕೊಳ್ಳುತ್ತಿರುವನು. ಸಹವಾಸದಿಂದ ಮನುಷ್ಯರು ಅನೇಕ ಅಭ್ಯಾಸಗಳನ್ನೂ, ಅನೇಕ ಗುಣಗಣಗಳನ್ನೂ, ಬಹುವಿಧಗಳಾದ ವೇಷಭಾಷೆಗಳನ್ನೂ ಕಲಿತುಕೊಳ್ಳುತ್ತಿರುವರು. ಹೀಗೆಯೇ ಭಕ್ತಿಯು ಸುಲಭವಾಗಿ ಸಹವಾಸದಿಂದಲೇ ಲಭಿಸುತ್ತಿರುವುದು. ತನ್ನ ಭಕ್ತಿಯನ್ನು ಅಭಿವೃದ್ಧಿಪಡಿಸಿಕೊಳ್ಳಬೇಕೆಂದಿರುವ ಯಾವ ಮಾನವನಾದರೂ ತನ್ನ ಅಭಿಪ್ರಾಯಾನುಗುಣವಾದ ಭಕ್ತಕೂಟವೊಂದನ್ನು ನೋಡಿಕೊಳ್ಳಬೇಕಾಗಿರುವುದು.

ಚರಿತ್ರೆಯು ಪುನರಾವೃತ್ತಿಯನ್ನು ಹೊಂದುತ್ತಿರುವುದೆಂದು ಸುಪ್ರಸಿದ್ಧ ಸೂಕ್ತಿಯೊಂದಿರುವುದು. ಒಂದುದೇಶವು ಒಂದುವಿಧವಾದ ಉಚ್ಚಸ್ಥಿತಿಯನ್ನು ಹೊಂದಿತೆಂದು ತಿಳಿಯಿರಿ. ಈ ಸ್ಥಿತಿಯು ಆ ದೇಶಕ್ಕೆ ಒಂದೇಸಾರಿ ಹಠಾತ್ತಾಗಿ ಲಭಿಸಿರುವುದಿಲ್ಲವು. ಉನ್ನತವಾದ ಈ ಸ್ಥಿತಿಗೆ ಬರುವುದಕ್ಕೆ ಪೂರ್ವ ಆ ದೇಶವು ಒಂದೊಂದು ಮೆಟ್ಟಿನಂತೆ ಎಷ್ಟೋ ಅವಸ್ಥೆಗಳನ್ನು ಹೊಂದಿರಬೇಕು. ಈ ಉಚ್ಚಸ್ಥಿತಿಗೆ ಮತ್ತೊಂದುದೇಶವು ಬರಬೇಕಾಗಿದ್ದಲ್ಲಿ ಈ ದೇಶವು ಹಿಂದೆ ಪಡೆದಿದ್ದ ಅವಸ್ಥೆಗಳನ್ನೆಲ್ಲಾ ಅದೂ ಕೂಡ ಅನುಭವಿಸಿರುವುದು. ಇದು ಒಂದು ಚರಿತ್ರೆಯ ವಿಷಯದಲ್ಲಿಯೇ ಅಲ್ಲದೆ ಸಮಸ್ತೇತರ ವಿಷಯಗಳಲ್ಲಿ ಕೂಡ ಸತ್ಯವಾಗಿ ವರ್ತಿಸುವುದು. ಒಬ್ಬ ಮನುಷ್ಯನು ಭಕ್ತಿಯಲ್ಲಿ ಒಂದುವಿಧವಾದ ಉನ್ನತಸ್ಥಾನವನ್ನು ಹೊಂದಿರುವನೆಂದು ತಿಳಿಯಿರಿ. ಇಂತಹ ಉಚ್ಚಸ್ಥಿತಿಯನ್ನು ಸಾಧಿಸಬೇಕೆಂದಿರುವ ಮತ್ತಾವನಾದರೂ ಈತನು ಹೊಂದಿದ ಅವಸ್ಥೆಗಳನ್ನೆಲ್ಲಾ ಹೊಂದಬೇಕು; ಈತನವಲಂಬಿಸಿದ ಸಾಧನಗಳನ್ನವಲಂಬಿಸಬೇಕು; ಈತನು ಪಟ್ಟ ಕಷ್ಟಗಳನ್ನು ಪಡಬೇಕು; ಈತನನುಭವಿಸಿದ ದುಃಖವನ್ನನುಭವಿಸಬೇಕು. ಆಗಲೇ ಈ ಭಕ್ತನ ಉತ್ತಮಸಂತೋಷವು ಆತನಿಗೆ ಲಭಿಸುವುದು. ಆದುದರಿಂದಲೇ ಭಕ್ತರ ಜೀವನಚರಿತ್ರೆಗಳೆಲ್ಲವೂ ರಾಜಮಾರ್ಗವನ್ನು ಪ್ರಕಾಶವಂತವಾದುದನ್ನಾಗಿ ಮಾಡುವ ದೀಪಸ್ತಂಭಗಳಂತೆ ಧರ್ಮಜೀವನಮಾರ್ಗವನ್ನು ಪ್ರಕಾಶಿಸುವಂತೆ ಮಾಡುತ್ತಿರುವುವು. ಸಜೀವಿಗಳಾದ ಭಕ್ತರ ಸಹವಾಸದಂತೆಯೇ ಮೃತಿಹೊಂದಿದ ಭಕ್ತವರೇಣ್ಯರ ಚರಿತ್ರೆಗಳು ಕೂಡ ಧರ್ಮಮಾರ್ಗಾಭಿಮಾನಿಗಳಿಗೆ ಅತ್ಯಂತ ಉಪಯೋಗಕರಗಳು. ಪೂರ್ವದ ಋಷೀಶ್ವರಿಂದ ರಚಿಸಲ್ಪಟ್ಟ ಉತ್ತಮಶ್ಲೋಕಗಳನ್ನೂ, ಪೂರ್ವದ ಭಕ್ತಪುಂಗವರಿಂದ ಗಾನಮಾಡಲ್ಪಟ್ಟ ಕೀರ್ತನೆಗಳನ್ನೂ ನಾವುಗಳು ಓದಿಯೂ, ಹಾಡಿಯೂ ಅವರೊಡನೆ ನಾವುಗಳು ಸಹವಾಸವನ್ನು ಸಂಪಾದಿಸಿಕೊಳ್ಳುತ್ತಿರುವೆವು. ಆ ಶ್ಲೋಕಗಳನ್ನು ಪಠಿಸಿದಾಗಲೂ, ಆ ಕೀರ್ತನೆಗಳನ್ನು ಗಾನಮಾಡಿದಾಗಲೂ ಅವರನುಭವಿಸಿದ ಮಹಾಸಂತೋಷವೇ ನಮಗೂ ಉಂಟಾಗುತ್ತಿರುವುದು ಆ ಮಹನೀಯರು ಈ ಲೋಕವನ್ನು ಬಿಟ್ಟು ಎಷ್ಟೋ ಶತಾಬ್ದಗಳಾಗಿರಬಹುದು. ಆದರೆ ಅವರ ಅಭಿಪ್ರಾಯಗಳು ಮಾತ್ರ ಚಿರನೂತನಗಳಾಗಿ ಈಗಲೂ ನಮ್ಮ ಆತ್ಮಗಳಿಗೆ ಶಾಂತಿಯನ್ನುಂಟುಮಾಡುತ್ತಿರುವುವು. ಈ ವಿಷಯಗಳನ್ನು ನೆನಪಿಗೆ ತಂದುಕೊಂಡಾಗ, ನಮ್ಮಸ್ವಭಾವಗಳಿಗೂ ಅವರಸ್ವಭಾವಗಳಿಗೂ ಇರುವ ಐಕ್ಯವು ಬೋಧೆಯಾಗುತ್ತಿರುವುದು ಅವರಿಗೆ ವಿಷಾದಜನಕವಾದ ಆತ್ಮಶುಷ್ಕತ್ವವು ನಮಗೂ ವಿಷಾದವನ್ನುಂಟುಮಾಡುತ್ತಿರುವುದು. ಅವರನ್ನು ಬಾಧೆಪಡಿಸಿದ ವಿಷಯಾನುರಾಗಗಳು ನಮ್ಮಗಳನ್ನೂ ಬಾಧಿಸುತ್ತಿರುವುವು. ಈಶ್ವರಸಾಮೀಪ್ಯವನ್ನು ಹೊಂದುವುದಕ್ಕೆ ಅವರವಲಂಬಿಸಿದ ಮಾರ್ಗಗಳು ನಮಗೂ ಅನುಸರಣೀಯಗಳಾಗುತ್ತಿರುವುವು. ಆಗ ಅವರು ಹೊಂದಿದ ಆತ್ಮಾನಂದವು ನಮಗೆ ಸಹಿತ ಸಾಧ್ಯವಾಗುತ್ತಿರುವುದು.

ಹೀಗೆ ಸಜೀವಿಗಳೂ, ಮೃತರೂ ಆದ ಭಕ್ತಜನರ ಸಹವಾಸವು ಧರ್ಮಜೀವನಮಾರ್ಗದಲ್ಲಿ ನಡೆಯುತಕ್ಕವರೆಲ್ಲರಿಗೂ ವಿಶೇಷಲಾಭಪ್ರದವಾಗಿ ಕಂಗೊಳಿಸುತ್ತಿರುವುದು. ಆತ್ಮಾಭಿವೃದ್ಧಿಯನ್ನು ಹೊಂದಲು ಅನೇಕೋಪಾಯಗಳು ಹೇಳಲ್ಪಡುತ್ತಿವೆ. ಆದರೆ, ಈ ಭಕ್ತಜನಸಹವಾಸದಂತೆ ಉಪಯೋಗವಾಗುವ ಉಪಾಯವು ಮತ್ತೊಂದಿಲ್ಲವು ಆದುದರಿಂದ ತನ್ನ ಧರ್ಮಜೀವನವನ್ನು ವೃದ್ಧಿಪಡಿಸಿಕೊಳ್ಳಲು ಅಭಿಲಾಷಿಸುವ ಪ್ರತಿಮನುಷ್ಯನೂ ಭಕ್ತಜನರ ಸಹವಾಸವನ್ನು ಪಡೆಯುವುದಕ್ಕೆ ಬಹು ತ್ವರಿತವಾಗಿ ಪ್ರಯತ್ನಿಸಬೇಕಾಗಿರುವುದು. ಅನುಭವಪೂರ್ವಕವಾಗಿ ಅವರುಪದೇಶಿಸುವ ಸದ್ವಾಕ್ಯಗಳನ್ನು ಲಾಲಿಸಿ ಅವುಗಳನ್ನು ಸ್ವಕೀಯಜೀವನದಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನಿಸಬೇಕು. ಅವರ ಹಿತೋಪದೇಶಗಳು ಅಭ್ಯಾಸವಾದಂತೆಲ್ಲಾ ಅವರ ಸಹವಾಸವು ಅತ್ಯಂತ ಪ್ರೀತಿಕರವಾಗುತ್ತಿರುವುದು. ಕಷ್ಟಗಳೆಷ್ಟು ಸುತ್ತಿಕೊಂಡರೂ ಆ ಭಕ್ತಪುಂಗವರು ತಮ್ಮ ಮಧುರವಾಕ್ಯಾಮೃತದಿಂದ ನಮ್ಮ ಜೀವಿತಗಳನ್ನು ಅತ್ಯಂತ ಸುಖಪ್ರದಗಳನ್ನಾಗಿ ಮಾಡಲಾಗುವರು. ವಿಷಯಾನುರಾಗಗಳು ಎಷ್ಟು ಆಕರ್ಷಿಸುತ್ತಿದ್ದರೂ ಆ ಭಕ್ತವರೇಣ್ಯರು ತಮ್ಮ ಸಮಯೋಚಿತ ಸಹಾಯದಿಂದ ನಮ್ಮಗಳನ್ನು ಅವುಗಳಿಂದ ಬಿಡಿಸಲಾಗುವರು. ಶೋಧನೆಗಳು ಎಷ್ಟು ಇದಿರ್ಗೊಂಡರೂ ಆ ಭಕ್ತಶ್ರೇಷ್ಠರು ತಮ್ಮ ಉತ್ಸಾಹಜನಕ ಸಾಂಗತ್ಯದಿಂದ ನಮ್ಮಗಳನ್ನು ಅವುಗಳಿಂದ ಉತ್ತೀರ್ಣರಾಗುವಂತೆ ಮಾಡಲಾಗುವರು. ಪಾಪಗಳೆಷ್ಟು ಸಮೀಪಿಸಿದರೂ ಆ ಭಕ್ತಾಗ್ರೇಸರರು ತಮ್ಮ ಪವಿತ್ರ ಜೀವನದಿಂದ ನಮ್ಮ ಪ್ರತಿದಿನದ ಕಾರ್ಯಗಳನ್ನು ಕಳಂಕರಹಿತಗಳನ್ನಾಗಿ ಮಾಡಲಾಗುವರು ದುಃಖಗಳೆಷ್ಟು ಸಂಭವಿಸಿದರೂ ಆ ಭಕ್ತಶಿಖಾಮಣಿಗಳು ತಮ್ಮ ಶಾಂತಸ್ವಭಾವದಿಂದ ನಮ್ಮ ಹೃದಯತಾಪಗಳನ್ನು ಶಾಂತಿಹೊಂದುವಂತೆ ಮಾಡಲಾಗುವರು. ಸಾಧುಸಾಂಗತ್ಯವು ಸಮಸ್ತ ಶ್ರೇಯಸ್ಸನ್ನುಂಟುಮಾಡುವುದು; ಧರ್ಮಜೀವನವನ್ನು ಅಭಿವೃದ್ಧಿಪಡಿಸುವುದು; ಈಶ್ವರಸಾನ್ನಿಧ್ಯವನ್ನು ಕೊಡುವುದು; ಪರಮಾನಂದವನ್ನು ಪ್ರಸಾದಿಸುವುದು. ಭಕ್ತಜನರನ್ನು ಹುಡುಕೋಣವೂ, ಅವರ ಸಹವಾಸವನ್ನು ಅಪೇಕ್ಷಿಸೋಣವೂ, ಅವರೊಡನೆ ಕಲಿತು ಜೀವಿಸೋಣವೂ ಜನ್ಮಸಾರ್ಥಕವನ್ನು ಮಾಡುವುವು. ಈಶ್ವರನು ಸರ್ವಮಾನವರಿಗೂ ಸಜ್ಜನಗೋಷ್ಠಿಯನ್ನು ಅನುಗ್ರಹಿಸಿ ಧನ್ಯರನ್ನಾಗಿ ಮಾಡಲಿ.

ವರ್ತಮಾನಸಂಗ್ರಹಗಳು.

ವೈಸ್‌ರಾಯ್ ನಿಯಮನಿರ್ಮಾಣಸಭೆಯು ಬರುವ ಸೆಪ್ಟಂಬರ್ ತಾ॥ ೭ ರಲ್ಲಿ ಕೂಡುವುದು.

ಬೊಂಬಾಯಿನಲ್ಲೇರ್ಪಟ್ಟಿರುವ ಗೋಖಲೆಯವರ ಸ್ಮಾರಕಫಂಡಿಗೆ ೫೪೦೦೦ ರೂ. ವರೆಗೂ ಕೂಡಿರುತ್ತದೆ.

ಆಸ್ಟ್ರೇಲಿಯಾ ಸರ್ಕಾರದವರು ಯುದ್ಧಕ್ಕೆ ಕಳುಹಲು ೯೦೦೦೦ ಮಂದಿ ಸೈನಿಕರನ್ನು ಸರ್ವಪ್ರಯತ್ನದಿಂದ ಸಿದ್ಧಪಡಿಸಿರುವುದಾಗಿ ತಿಳಿಯಬರುತ್ತದೆ.

ಕಾನಡಾರಾಜ್ಯದಲ್ಲಿ ಜನರು ವಿಶೇಷವಾಗಿ ಸೈನ್ಯಕ್ಕೆ ಸೇರುತ್ತಿರುವರು. ಇನ್ನು ಕೊಂಚಕಾಲದಲ್ಲಿ ಅಲ್ಲಿಯ ಸೈನಿಕರ ಸಂಖ್ಯೆಯು ೧೬೦೦೦೦ ವರೆಗೇರುವ ಸಂಭವವಿದೆ.

ತಿರುಚಿನಾಪಲ್ಲಿಯಲ್ಲಿ ಪ್ರಮುಖ ವಕೀಲರಾದ ಜಂಬುನಾಥಯ್ಯರ್‌ರವರು ತಮ್ಮ ವಿಧವಾಪುತ್ರಿಯನ್ನು ಮನ್ನಾರ್‌ಗುಡಿ ವಾಸಸ್ಥರಾದ ರಾಜಗೋಪಾಲಯ್ಯರ್‌ರವರಿಗೆ ಕೊಟ್ಟು ಆದಿವಾರದಲ್ಲಿ ಪುನರ್ವಿವಾಹವನ್ನು ಮಾಡಿದರು.

ರವೀಂದ್ರನಾಥ ಟಾಗೋರ್‌ರವರಿಗೆ ಸರ್ (ನೈಟು) ಪ್ರಶಸ್ತಿಯು ಲಭ್ಯವಾಗಿರುವುದಷ್ಟೆ. ಇದರ ಚಿಹ್ನವನ್ನು ಸ್ವೀಕರಿಸುವುದಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣಮಾಡಬೇಕೆಂದು ಪ್ರಭುತ್ವದವರಿಂದ ಅವರು ಕೋರಲ್ಪಟ್ಟಿರುವುದಾಗಿ ಒಂದು ಪತ್ರಿಕೆಯು ತಿಳಿಸುತ್ತದೆ.

ಬೊಂಬಾಯಿ ಗೌರ್ನರಾದ ಲಾರ್ಡ್‌ವಿಲ್ಲಿಂಗ್‌ಡನ್‌ರವರು ಬರುವ ಸಂವತ್ಸರದ ಮಾರ್ಚಿ ತಿಂಗಳಲ್ಲಿ ಬಂಗಾಳದ ಗೌರ್ನರಾಗುತ್ತಾರೆಂದು ಕಲಕತ್ತಾದ ಪತ್ರಿಕೆಯಲ್ಲಿ ಪ್ರಕಟಿತವಾಗಿದ್ದ ಸುದ್ದಿಯು ನಿರಾಧಾರವಾದುದೆಂದು ಬೊಂಬಾಯಿಯ ಕ್ರಾನಿಕಲ್ ಪತ್ರಿಕೆಯು ತಿಳಿಸುತ್ತದೆ.

ಬೆಲ್ಜಿಯಂರಾಜ್ಯಕ್ಕೆ ಸೇರಿದ ಬ್ರಬಾಂಟ್ ಪ್ರಾಂತದಲ್ಲಿ ಜರ್ಮನರು ೫೮೪ ಮನೆಗಳನ್ನು ಸುಟ್ಟು ಭಸ್ಮಮಾಡಿ, ೧೬೦೦೦ ಮನೆಗಳನ್ನು ಸೂರೆಮಾಡಿ ಅವುಗಳಿಗಪಾಯವನ್ನುಂಟುಮಾಡಿರುತ್ತಾರೆ; ೮೩೨ ಗಂಡಸರು, ಹೆಂಗಸರು ಮತ್ತೂ ಮಕ್ಕಳುಗಳನ್ನು ಗುಂಡಿನಿಂದ ಸುಟ್ಟು ೨೧೧೨ ಜನರನ್ನು ಜರ್ಮನಿಗೆ ಸಾಗಿಸಿರುತ್ತಾರೆ.

ಯುದ್ಧವಾರಂಭವಾಗುವುದಕ್ಕೆ ಮೊದಲು ಜರ್ಮನಿಯಲ್ಲಿ ಮದ್ದುಗುಂಡು ಫಿರಂಗಿ ಮೊದಲಾದ ಸಾಮಗ್ರಿಗಳನ್ನು ಮಾಡುವ ಕ್ರುಪ್ಪು ಕಾರ್ಖಾನೆಯಲ್ಲಿ ೩೦೦೦೦ ಕೆಲಸಗಾರರಿದ್ದರು ಈಗಲಾದರೊ ೧ ಲಕ್ಷದ ೨೮ ಲಕ್ಷ ಜನ ಕೆಲಸಮಾಡುತ್ತಿರುವುದಾಗಿ ಅರ್ಥಶಾಸ್ತ್ರಾಭ್ಯಾಸವನ್ನು ಮಾಡುತ್ತಿದ್ದ ಡಚ್ಚು ದೇಶದ ವಿದ್ಯಾರ್ಥಿಯು ಜರ್ಮನಿಯಿಂದ ಎಸ್ಸೆನ್ ಪಟ್ಟಣಕ್ಕೆ ಹೋಗಿಬಂದು ತಿಳಿಸಿರುತ್ತಾನೆ.

ಬೊಂಬಾಯಿಯಲ್ಲಿ ಬಣ್ಣದ ವ್ಯಾಪಾರವನ್ನು ಮಾಡತಕ್ಕವರಲ್ಲನೇಕರು ಬಣ್ಣದ ಬೆಲೆಯು ನಿತ್ಯದಲ್ಲೂ ಏರುತ್ತಿರುವುದರಿಂದ ದಿವಾಳಿಗಳಾಗುತ್ತಿರುವರು. ಯುದ್ಧವು ಪ್ರಾರಂಭವಾಗುವುದಕ್ಕೆ ಮೊದಲು ನೀಲಿಯು ಪೌನು ೧ ಕ್ಕೆ ೧೦ ಆಣೆಯಂತೆ ಮಾರಲ್ಪಡುತ್ತಿದ್ದುದು ಈಗ ೧೧-೧೨ ರೂ. ನಂತೆ ಮಾರಲ್ಪಡುತ್ತಿರುವುದು. ಬಣ್ಣದ ಬೆಲೆ ಎಷ್ಟರಮಟ್ಟಿಗೇರಿರುವುದೆಂಬುದು ಇದರಿಂದಲೇ ವ್ಯಕ್ತವಾಗುತ್ತಿದೆ.

ಮದ್ರಾಸ್ ಹೈಕೋರ್ಟು ಜಡ್ಜಿಯರುಗಳಲ್ಲೊಬ್ಬರಾಗಿದ್ದ ಸರ್ ಶಂಕರನ್‌ನಾಯರ್‌ರವರು ವೈಸ್‌ರಾಯರ ಕಾರ್ಯನಿರ್ವಾಹಕ ಸಭೆಯ ಒಬ್ಬ ಮೆಂಬರಾಗಿ ತೆಗೆದುಕೊಳ್ಳಲ್ಪಟ್ಟಿರುವುದರಿಂದ ಅವರ ಸ್ಥಾನದಲ್ಲಿ ಮದ್ರಾಸಿನ ಪ್ರಮುಖ ವಕೀಲರುಗಳಲ್ಲೊಬ್ಬರಾದ ಮ॥ ಕೆ. ಶ್ರೀನಿವಾಸಯ್ಯಂಗಾರ್ ಬಿ.ಎ. ಬಿ ಎಲ್. ರವರು, ಅಫಿಷಿಯೇಟಿಂಗ್ ಜಡ್ಜರಾಗಿ ನಿಯಮಿಸಲ್ಪಟ್ಟಿರುವರು. ಇವರಿಗೆ ಈಗ ೪೩ ವರ್ಷ ವಯಸ್ಸಾಗಿದೆಯಲ್ಲದೆ ವಕೀಲತನದಲ್ಲೇ ಹೆಚ್ಚು ಪ್ರಸನ್ನವಿದ್ದಿತು.

ಟಿಪ್ಪರಾಡಿಸ್ಟ್ರಿಕ್ಟಿನಲ್ಲಿ ೨೪ ಜನ ಯುವಕರು ಮುಖಗಳಿಗೆ ಮಸಿಯನ್ನು ಬಳಿದುಕೊಂಡು ವೇಷವನ್ನು ಬದಲಾಯಿಸಿ ಆಯುಧಪಾಣಿಗಳಾಗಿ ಒಂದು ರಾತ್ರಿ ಒಬ್ಬ ಬಂಗಾಳಿ ವ್ಯಾಪಾರಸ್ಥನ ಮನೆಗೆ ನುಗ್ಗಿದರು. ಗ್ರಾಮಸ್ಥರಲ್ಲಿ ಕೆಲವರು ಕಳ್ಳರನ್ನು ಪ್ರತಿಭಟಿಸಯತ್ನಿಸಿ ಅವರನ್ನಿದಿರಿಸಲು ಕೈಲಾಗದೆ ಹೊರಟುಹೋಗಲು, ಕಳ್ಳರು ಮನೆಯೊಳಗಿದ್ದ ಕಬ್ಬಿಣದ ಪೆಟ್ಟಿಗೆಯನ್ನೊಡೆದುಹಾಕಿ ಅದರೊಳಗಿದ್ದ ಬೆಳ್ಳಿ ಬಂಗಾರ ಮೊದಲಾಗಿ ೫೦೦೦ ರೂ ಬೆಲೆಯ ಪದಾರ್ಥಗಳನ್ನು ದೋಚಿಕೊಂಡು ಹೋದರು. ಪೊಲೀಸರು ಕಳ್ಳರನ್ನು ಹುಡುಕಯತ್ನಿಸಿದ್ದಾರೆ.

ವೈಸ್‌ರಾಯ್ ಹಾರ್ಡಿಂಜ್‌ಪ್ರಭುಗಳ ಜನ್ಮದಿನೋತ್ಸವ ಸಂಬಂಧವಾಗಿ ಕಲಕತ್ತಾದಲ್ಲಿ ನಡೆಸಿದ ವಿದ್ಯಾರ್ಥಿಗಳ ವಿನೋದೋತ್ಸವಕ್ಕೆ ಬಹಳಜನರು ಬಂದಿದ್ದರು ಆಗ ಗುರುದಾಸಬಾನರ್ಜಿಯವರು ಪ್ರಭುಗಳ ರಾಜನೀತಿಜ್ಞತೆಯನ್ನೂ ಸುಶೀಲಸ್ವಭಾವವನ್ನೂ ಕುರಿತು ಉಪನ್ಯಾಸಮಾಡಿ ಶ್ರೀಯವರು ಕಲಕತ್ತಾದಲ್ಲಿಯ ವಿಶ್ವವಿದ್ಯಾಲಯದ ಧನರಾಶಿಗೆ ೨೦೦೦ ರೂ. ಗಳನ್ನು ಕಳುಹಿಸಿಕೊಟ್ಟು ಅದರ ವಿನಿಯೋಗದ ವಿಚಾರವಾಗಿ ಬರೆದಿದ್ದ ಕಾಗದವನ್ನೋದಿ ಸಭಿಕರಿಗೆ ತಿಳಿಸಿದರು. ಅದೇನೆಂದರೆ:—"ಈ ಹಣವನ್ನು ನನ್ನ ಪತ್ನಿಯವರ ಸ್ಮರಣಾರ್ಥವಾಗಿ ನನ್ನಿಂದ ಜಮಾ ಕಟ್ಟಿಕೊಳ್ಳುವುದು. ಈ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಕ್ಷೇಮಚಿಂತನೆಯು ನನಗೆ ನಿರಂತರವಾಗಿರುವುದು."

ಇಂಗ್ಲೀಯರಲ್ಲಿ ಆರನ್ನಾದರೂ 'ಜರ್ಮನಿ' ಯವನೆಂದು ಸಂಬೋಧಿಸುವುದು ಬಹಳ ಅಪಮಾನಕರವೂ, ಅಪರಾಧವೂ ಆಗಿ ಪರಿಣಮಿಸಿರುವುದು ಈಗ್ಗೆ ಕೊಂಚ ದಿನಗಳ ಪೂರ್ವ ಒಬ್ಬ ಪ್ರಯಾಣಿಕನು ತನ್ನ ಜತೆಯ ಪ್ರಯಾಣಿಕನನ್ನು 'ಜರ್ಮನಿ' ಯವನೆಂದು ಸಂಬೋಧಿಸಿ ಅವನಮೇಲೆ ಅತ್ಯಾಚಾರವನ್ನು ನಡೆಸಿದ್ದುದಕ್ಕಾಗಿ ಅವನಿಂದ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದು ತರಲ್ಪಟ್ಟು, ಫಿರ್ಯಾದಿಕಡೆಯ ವಕೀಲನು "ಈಗ ಒಬ್ಬನನ್ನು ಜರ್ಮನಿಯವನೆಂದು ಕರೆಯುವುದಕ್ಕಿಂತ ಹೆಚ್ಚಾದ ಅಪಮಾನಕರವಾದುದು ಮತ್ತಾವುದಿದೆ? ಈ ಶಬ್ದಕ್ಕಿಂತ ಹೇಯವಾದುದುಂಟೆ?" ಎಂದು ವಾದಿಸಿದುದರಮೇಲೆ ನ್ಯಾಯಾಧೀಶನು ಅಪರಾಧಿಗೆ ೩೦ ರೂ. ದಂಡವನ್ನು ವಿಧಿಸಿದನು.

ವೈಸ್‌ರಾಯ್ ಹಾರ್ಡಿಂಜ್‌ಪ್ರಭುಗಳ ಅಧಿಕಾರದವಧಿಯು ಬರುವ ನವಂಬರಿನಿಂದ ಮುಂದಣ ಸಂವತ್ಸರದ ಮಾರ್ಚಿ ತಿಂಗಳವರೆಗೆ ಹೆಚ್ಚಿಸಲ್ಪಟ್ಟಿರುವುದರಿಂದ ಬೊಂಬಾಯಿಯ ನಗರವಾಸಿಗಳು ತಮಗುಂಟಾದಾನಂದವನ್ನು ಶ್ರೀಗಳವರಿಗೆ ತಿಳಿಸುವಾಗ್ಗೆ:—ಹಾರ್ಡಿಂಜ್‌ಪ್ರಭುಗಳು ತಮ್ಮ ಪತ್ನಿಯವರೂ, ಕುಮಾರನೂ ವಿಧಿವಶರಾದುದರಿಂದ ತಮಗೆಷ್ಟೋ ಮನೋವ್ಯಥೆಯುಂಟಾಗಿದ್ದರೂ ಇಂತಹ ವಿಷಮಸಮಯದಲ್ಲಿ ಸಾನುಭೂತಿಯಿಂದ ಸ್ವಾರ್ಥತ್ಯಾಗಮಾಡಿ ಭಕ್ತಿಯಿಂದಲೂ ರಾಜನೀತಿಜ್ಞತೆಯಿಂದಲೂ ಬ್ರಿಟಿಷ್ ಸಾಮ್ರಾಜ್ಯಕ್ಕೂ, ಭರತಖಂಡಕ್ಕೂ ಮಹೋಪಕಾರವನ್ನು ಮಾಡುತ್ತಿರುವರು. ಎಂದು ಇಂಗ್ಲೆಂಡಿನ ಅಮಾತ್ಯಶ್ರೇಷ್ಠರಾದ ಆಸ್ಕ್ವಿತ್‌ರವರು ಗುಣಕಥನವನ್ನು ಮಾಡಿರುವರು. ಈ ಅಭಿಪ್ರಾಯದಲ್ಲಿ ಮಂತ್ರಿಗಳ ಕೂಡ ನಾವೂ ಭಾಗಿಗಳಾಗಿರುತ್ತೇವೆ. ಹಾರ್ಡಿಂಜ್‌ಪ್ರಭುಗಳು ಈವರೆಗೆ ಭಾರತೀಯರೆಲ್ಲರನ್ನೂ ಬಹುಗೌರವದಿಂದ ನೋಡುಕೊಂಡು ಬಂದಿರುವರು. ಇವರು ಈವರೆಗೆ ಎಷ್ಟರಮಟ್ಟಿಗೆ ಸ್ವಾರ್ಥತ್ಯಾಗಮಾಡಿ ಕಾರ್ಯದೀಕ್ಷೆಯಿಂದಲೂ ದೃಢಸಂಕಲ್ಪದಿಂದಲೂ ಭರತಖಂಡದ ನೈತಿಕ, ಆರ್ಥಿಕಸಂಪತ್ತನ್ನು ದೃಢತರವಾಗಿಯೂ, ಶಾಶ್ವತವಾಗಿಯೂ ಅಭಿವೃದ್ಧಿಹೊಂದಿಸಲು ಪ್ರಯತ್ನಿಸುತ್ತಿರುವರೋ, ಇನ್ನು ಮುಂದೆಯೂ ಅದೇರೀತಿಯಾಗಿ ಕೆಲಸಮಾಡಿ ಪ್ರಜೆಗಳೆಲ್ಲರನ್ನೂ ಹೆಚ್ಚು ಉಪಕೃತರನ್ನಾಗಿ ಮಾಡುವರೆಂದು ನಂಬಿರುತ್ತೇವೆ.

ಇಂಗ್ಲೆಂಡಿನ ಮಂತ್ರಿಗಳಾದ ಆಸ್ಕ್ವಿತ್‌ರವರು ಗಿಲ್ಡ್‌ಹಾಲಿನಲ್ಲಿ ನೆರೆದಿದ್ದ ಸಭೆಯಲ್ಲಿ ಉಪನ್ಯಾಸ ಮಾಡುವಾಗ್ಗೆ—ಭರತಖಂಡದ ರಾಜರುಗಳೂ, ಪ್ರಜೆಗಳೂ ನಮಗೆ ಮಾಡಿರುವ ಧನಸಹಾಯ್ಯ ವಿಚಾರವು ಕಳೆದ ಸೆಪ್ಟಂಬರಿನಲ್ಲೇ ಪ್ರಕಟಿತವಾಗಿದೆ. ಅದನ್ನೋದಿರುವವರಿಗೆಲ್ಲಾ ನಮಗೆಲ್ಲ ಕಡೆಯಿಂದಲೂ ಸಹಾಯವುಂಟಾಗಿರುವುದೆಂಬುದು ಗೊತ್ತಾಗುವುದು. ಅಲ್ಲಿಂದೀಚೆಗೆ ಅವರುಗಳಿಂದಿನ್ನೆಷ್ಟು ಸಾಹಾಯ್ಯವಾಗಿರುವುದೆಂಬುದನ್ನು ಇಲ್ಲಿ ಮರಳಿವಿವರಿಸಬೇಕಾದುದಿಲ್ಲ. ಆದರೂ ಒಂದೆರಡನ್ನು ಮಾತ್ರ ಉದಾಹರಣಾರ್ಥವಾಗಿ ತಿಳಿಸುತ್ತೇನೆ. ಸಾಮ್ರಾಜ್ಯದಿಂದೆಲ್ಲಾ ಬಂದಿರುವ ಸಾಹಾಯ್ಯದಲ್ಲೆಲ್ಲಾ ಮೈಸೂರ ಮಹಾರಾಜರವರು ಮಾಡಿರುವ ಸಹಾಯದ ಸಂಗತಿಯು ನಮ್ಮೆಲ್ಲರಿಗೂ ವಿಶದವಾಗಿಯೇ ಇದೆ ಅನಂತರ ಸೇನೆಯ ಸಹಾಯಕ್ಕಾಗಿ ಹೈದರಾಬಾದಿನ ನೈಜಾಂರವರು ೪೦ ಲಕ್ಷ ರೂ. ಗಳನ್ನು ಕೊಟ್ಟಿರುವ ಸಂಗತಿಯೂ ನಿಮಗೆ ತಿಳಿದೇ ಇದೆ ಇಲ್ಲಿ ಗ್ವಾಲಿಯರ್ ಮಹಾರಾಜರ ದಾತೃತ್ವವನ್ನು ಹೊಂದದೆಯಿರುವ ಯಾವ ಶಾಖೆಯೂ ಇಲ್ಲವು. ಈಗಷ್ಟೇ ನೇಪಾಳದ ಮಹಾರಾಜರವರು ಬಹಳ ಉದಾರಬುದ್ಧಿಯಿಂದ ಸಹಾಯಮಾಡಿದ ಯಂತ್ರಫಿರಂಗಿಗಳ ವಿಷಯದಲ್ಲಿ ಚಕ್ರವರ್ತಿಯವರು ತಮ್ಮ ಸಂತೋಷವನ್ನು ತಿಳಿಸಿರುವರು. ಪ್ರಭುಗಳ ಸಾಹಾಯ್ಯವು ಈ ಪ್ರಕಾರವಾಗಿರುವುದಲ್ಲದೆ ಪ್ರಜೆಗಳ ಸಾಹ್ಯವು ಹೇಗಿರುವುದೆಂದರೆ:—ಬೊಂಬಾಯಿ ಬಂಗಾಳಾ ಮತ್ತೂ ಮದ್ರಾಸಾಧಿಪತ್ಯಗಳಲ್ಲಿ ಇಂಪೀರಿಯಲ್ ಫಂಡನ್ನೇರ್ಪಡಿಸಿರುವುದಲ್ಲದೆ ಹಿಂದೂಸೈನಿಕರುಗಳಿಗೆ ನಾನಾವಿಧವಾದ ಸಾಹಾಯ್ಯವನ್ನು ಮಾಡಿರುವರು. ಇಲ್ಲಿ ಹಿಂದೂ ಸೈನಿಕರ ಸಂಗತಿಯನ್ನು ಪ್ರತ್ಯೇಕವಾಗಿ ಹೇಳಬೇಕಾದುದಿಲ್ಲವು. ಯುದ್ಧರಂಗಕ್ಕೆ ಭರತಖಂಡದಿಂದ ಫಿರಂಗಿಗಳ ಸಮೇತ ೯ ಕಾಲ್ಬಲಗಳಿಗೆ ಸರಿಹೋಗುವ ಸೈನಿಕಬಲವು ಬಂದಿರುತ್ತದೆ. ಇದಲ್ಲದೆ ೮ ಅಶ್ವಬಲವೂ, ಇನ್ನೂ ಎಷ್ಟೋ ಎಲ್ಲೆಲ್ಲಿಯೋ ಉದ್ಯೋಗನಿರತರಾಗಿರುವ ಹಿಂದೂಸೈನಿಕರ ಬಲವೂ ಅಸಂಖ್ಯಾತವಾಗಿವೆ. ದೇಶಾಂತರದಲ್ಲಿ ಹೀಗೆ ಕೆಲಸಮಾಡುತ್ತಿರುವ ಭರತಖಂಡದ ಸೇನೆಯಲ್ಲಿ ಬ್ರಿಟಿಷರಾಗಲಿ ಇಂಡಿಯನರಾಗಲಿ ಒಟ್ಟು ೨೮ ಅಶ್ವಬಲವೂ, ೧೨೪ ಕಾಲ್ಬಲವೂ ಸಾಮ್ರಾಜ್ಯರಕ್ಷಣಾರ್ಥವಾಗಿ ಕಾದಾಡುತ್ತಿರುವರು. ಇವರುಗಳು ಫ್ರಾನ್ಸಿನಲ್ಲೂ, ಫ್ಲಾಂಡರ್ಸಿನಲ್ಲೂ ಪಡೆದ ಜಯವೇ ಇವರ ಯುದ್ಧಕೌಶಲ್ಯ ಕಾರ್ಯಗಳಿಗೆ ನಿದರ್ಶನವಾಗುತ್ತದೆ."

ಮೈಸೂರು ಸ್ಟಾರ್.

ಸ. ೧೯೧೫ನೆಯ ಇಸವಿ ಜೂನ್ ತಾ|| ೨೭ನೆಯ ಭಾನುವಾರ.

ಅರ್ಥಸಾಧಕ ಸಭೆ.

ಗೊತ್ತಾಗಿದ್ದ ಮೇರೆಗೆ ಈ ಸಭೆಯು ಕಳೆದ ತಾ||೨೦ ನೆಯ ಸೋಮವಾರ ಮಧ್ಯಾಹ್ನ ಇಲ್ಲಿನ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ನೆರವೇರಿತು. ಸಂಸ್ಥಾನದ ದಿವಾನರು ಸಭಾಧ್ಯಕ್ಷರಾಗಿದ್ದರು. ಶ್ರೀಮದ್ಯುವರಾಜರವರೂ ೧-೨ ನೆಯ ಕೌನ್ಸಿಲರೂ ಶಾಖಾ ಮುಖ್ಯಾಧಿಕಾರಿಗಳೂ ಡಿಪ್ಟಿಕಮಿಷನರು ಮೊದಲಾದ ಉದ್ಯೋಗಿಗಳೂ ಅನೇಕ ಪುರಪ್ರಮುಖರೂ ಸಭೆಯನ್ನಲಂಕರಿಸಿದ್ದರು.

ದಿವಾನ್ ಸರ್ ವಿಶ್ವೇಶ್ವರಯ್ಯನವರು ಸಭಾ ಪ್ರಾರಂಭ ಮಾಡುವಾಗ್ಗೆ ಅರ್ಥಸಾಧಕಸಭೆಯವರು ಇದುವರೆಗೆ ನಡೆಯಿಸಿದ ಕಾರ್ಯಭಾಗಗಳನ್ನೂ, ಅವುಗಳಿಂದ ಉತ್ತರೋತ್ತರ ಲಭ್ಯವಾಗುವುದಕ್ಕಿರುವ ಪ್ರಯೋಜನವನ್ನೂ, ಮೈಸೂರು ದೇಶದಲ್ಲಿ ಅರ್ಥಸಾಧನೆಗಾಗಿ ಮಾಡಬೇಕಾಗಿರುವ ಪ್ರಯತ್ನದ ಆವಶ್ಯಕತೆಯನ್ನೂ ಕುರಿತು ತಮ್ಮ ಭಾಷಣದಲ್ಲಿ ಯುಕ್ತಿಯುಕ್ತವಾಗಿ ನಿರೂಪಣಮಾಡಿದರು. ಈ ಸಭೆಯ ಪ್ರಯತ್ನವಿಶೇಷದಿಂದ ಮೈಸೂರು ದೇಶದಲ್ಲಿ ಕೃಷಿ ಶಿಲ್ಪವ್ಯಾಪಾರಾದಿಗಳು ಅಭಿವೃದ್ಧಿಗೊಳ್ಳುವುದಾದರೆ ಸಂಸ್ಥಾನಾದ್ಯಂತಕ್ಕೂ ವ್ಯವಸಾಯಭಾಗದಿಂದ ೧ ಕೋಟಿ ರೂ.ಗಳೂ, ಶಿಲ್ಪಾಭಿವೃದ್ಧಿಯಿಂದ ೩ ಕೋಟಿ ರೂ.ಗಳೂ, ಕಸಬುದಾರರಿಗೆ ಅವರವರ ವೃತ್ತಿಯಲ್ಲಿ ಹೆಚ್ಚು ಜ್ಞಾನವೂ ಪ್ರೋತ್ಸಾಹವೂ ಹೆಚ್ಚುವುದರಿಂದ ೨ ಕೋಟಿ ರೂ.ಗಳೂ, ಇತರಭಾಗಗಳಿಂದೆಲ್ಲಾ ಮತ್ತೊಂದುಕೋಟಿ ರೂಪಾಯಿಯೂ ಹೀಗೆ ಪ್ರಜಾವರ್ಗದಲ್ಲಿ ಸಂಪದುತ್ಪತ್ತಿ ವೃದ್ಧಿಯಾಗುವಂತೆ ಮಾಡಬಹುದೆಂದು ನಿರೂಪಿಸಿ ಮೈಸೂರುದೇಶದ ಏಳಿಗೆಯಲ್ಲಿ ಅವರ ಮನಸ್ಸು ಎಷ್ಟು ತವಕಪಡುತ್ತಿರುವುದೆಂಬುದನ್ನು ತಮ್ಮ ಭಾಷಣದಲ್ಲಿ ಚೆನ್ನಾಗಿ ವ್ಯಕ್ತಪಡಿಸಿದರು. ಬಳಿಕ ಈ ಸಭೆಯ ಕೃಷಿ ವಿದ್ಯಾ ಶಿಲ್ಪಶಾಖಾಸಂಘಗಳವರು ಕಳೆದ ವರ್ಷದಲ್ಲಿ ನಡೆಯಿಸಿರುವ ಕಾರ್ಯಭಾಗಗಳ ವರದಿಗಳು ಪ್ರತ್ಯೇಕವಾಗಿ ಓದಲ್ಪಟ್ಟುವು. ವಿದ್ಯಾಪ್ರಸಾರಣದ ವಿಷಯದಲ್ಲಿ ಹೊಸದಾಗಿ ಏರ್ಪಟ್ಟಿರುವ ನಿರ್ಬಂಧಪದ್ಧತಿ ನೂತನಶಾಲಾಸ್ಥಾಪನೆ ಮೊದಲಾದ ಕಾರ್ಯಭಾಗಗಳೂ, ಕೃಷಿ ಶಾಖೆಯ ಸಂಬಂಧದಲ್ಲಿ ಪರೀಕ್ಷಾರೂಪವಾಗಿ ನಡೆಯಿಸಿದ ಪ್ರಯತ್ನಗಳೂ ಅಲ್ಲಲ್ಲಿಗೆ ಯಂತ್ರಗಳಿಂದ ನೀರನ್ನೆತ್ತಿ ವ್ಯವಸಾಯಕ್ಕೆ ಉಪಯೋಗಿಸುತ್ತಿರುವ ಪ್ರಯತ್ನಗಳ ಹೆಚ್ಚಿಗೆಯೂ, ಸಕ್ಕರೆಯ ಯಂತ್ರಾಲಯದ ಕಾರ್ಯಸಿದ್ಧಿ ಮೊದಲಾದುವುಗಳೂ ವಿವರಿಸಲ್ಪಟ್ಟಿರುವುವು. ಶಿಲ್ಪಶಾಖೆಯವರ ವರದಿಯಲ್ಲಿ ಕಾಗದದ ನಿರ್ಮಾಣದ ಯಂತ್ರಾಲಯಸ್ಥಾಪನೆಯ ವಿಷಯದಲ್ಲಿ ಮರ ಮೊದಲಾದ ಸಾಧನಗಳ ಅನುಕೂಲತೆಗೆ ಸಂಬಂಧಪಟ್ಟ ಪರಿಶೋಧನೆಯನ್ನು ನಡೆಯಿಸಿರುವುದು, ಬೆಂಗಳೂರಲ್ಲಿ ಒಂದು ಹತ್ತಿಯ ಯಂತ್ರಾಲಯವನ್ನು ಸ್ಥಾಪಿಸುವುದು, ಶಿವಮೊಗ್ಗದಲ್ಲಿ ಒಂದು ದೀಪದಕಡ್ಡಿಯ ಯಂತ್ರಾಲಯವನ್ನು ಸ್ಥಾಪಿಸುವುದು ಇವುಗಳ ವಿಷಯದಲ್ಲಿ ಕಮಿಟಿಯವರು ಮಾಡಿದ ಶೋಧನೆ ಮತ್ತು ಅಭಿಪ್ರಾಯಗಳು, ಗಾಜಿನಬಳೆ, ಸಾಬೂನು, ಎಣ್ಣೆಗಳನ್ನೆಳೆಸುವುದು ಇತ್ಯಾದಿ ಕಾರ್ಯಾಲಯಗಳ ಸ್ಥಾಪನೆಯಿಂದಾಗಬಹುದಾದ ಲಾಭಗಳು, ಈ ವಿಷಯಗಳೆಲ್ಲಾ ಅದರಲ್ಲಿ ನಿರೂಪಿಸಲ್ಪಟ್ಟಿದ್ದುವು. ಈ ವರದಿಗಳೆಲ್ಲಾ ಓದಲ್ಪಟ್ಟಬಳಿಕ ಜಿಲ್ಲಾ ಸಂಘದವರು ಗತವರ್ಷದಲ್ಲಿ ನಡೆಯಿಸಿದ ಕಾರ್ಯಭಾಗಗಳ ವರದಿಯು ಸಭೆಯಮುಂದಿಡಲ್ಪಟ್ಟಿತು. ಮರುದಿನದಿಂದ ಗೊತ್ತಾಗಿದ್ದ ವಿಷಯಗಳ ಮೇಲೆ ಸಭಿಕರು ದೀರ್ಘವಾದ ಚರ್ಚೆಗಳನ್ನು ಮಾಡಿದರು. ಪ್ರತಿಯೊಂದುಶಾಖೆಯವರ ಕಾರ್ಯಭಾಗಕ್ಕೂ ಸಂಬಂಧಪಟ್ಟ ಅನೇಕ ನಿರ್ಧಾರಗಳು ಸಭೆಯಲ್ಲಿ ಮಾಡಲ್ಪಟ್ಟುವು. ಕಳೆದ ೬ ವರ್ಷಗಳಿಂದಲೂ ಈ ಸಭಾಸಂಬಂಧವಾಗಿ ನಡೆದಿರುವ ಅರ್ಥವ್ಯಯವೂ, ಆಗಿರುವ ಪರಿಶೋಧನಕಾರ್ಯಗಳೂ ಅನಲ್ಪವಾಗಿರುವುವು. ಆ ಪೂರ್ವಾಂಗಕರ್ಮಗಳೆಲ್ಲವೂ ಮುಗಿದು ಸಾಕ್ಷಾತ್ತಾಗಿ ಧನಾರ್ಜನೆಯನ್ನು ಮಾಡುವ ಕಾರ್ಯಭಾಗಗಳನ್ನು ಪ್ರಜಾವರ್ಗಕ್ಕೆ ಒದಗಿಸಿಕೊಟ್ಟು ತನ್ಮೂಲಕವಾದ ಕೃತಾರ್ಥತೆಯನ್ನು ಈ ಸಮಾಜವು ಪಡೆದುಕೊಳ್ಳುವಂತಾಗಲೆಂದು ನಾವು ಆಶಿಸುವೆವು.

ಅರ್ಥಸಾಧಕಸಭೆಯಲ್ಲಿ ರೇಷ್ಮೆಯನ್ನು ಮಾಡುವುದರ ವಿಚಾರಕವಾದ ಪ್ರಸ್ತಾವವು ನಡೆಯುವಾಗ್ಗೆ ಕೈಗಾರಿಕೆಯ ಶಾಖೆಯ ಡೈರೆಕ್ಟರಾದ ಮಿ|| ಚಾಟರ್ಟನ್‌ರವರು-ಚನ್ನಪಟ್ಟಣದಲ್ಲೇರ್ಪಟ್ಟಿರುವ ರೇಷ್ಮೆ ವ್ಯವಸಾಯದ ಸಂಘದವರು ಪ್ರಯೋಜನಕರವಾದ ಕೆಲಸವನ್ನು ಮಾಡಿಲ್ಲವೆಂದಪ್ಪಣೆಕೊಡಿಸಲು, ಆ ಸಂಘದ ಸೆಕ್ರೆಟರಿಯವರಾದ ಮಿ|| ಅಬ್ದುಲ್ ಖುದುಸ್ ಸಾಹೇಬರು-ರೇಷ್ಮೆ ವ್ಯವಸಾಯದ ಸ್ಥಿತಿಯು ತಮ್ಮ ಸಂಘಕ್ಕೆ ವಹಿಸಲ್ಪಡುವುದಕ್ಕೆ ಮೊದಲು ಬಹಳ ಕ್ಷೀಣದಶೆಯಲ್ಲಿದ್ದಿತೆಂದೂ, ಮೆ|| ಚಾಟರ್ಟನ್‌ರವರು ೨ ವರ್ಷಕಾಲ ಮೇಲ್ವಿಚಾರಣೆಯಲ್ಲಿಟ್ಟುಕೊಂಡಿದ್ದಾಗ್ಯೂ ಯಾವ ಪ್ರಯೋಜನಕರವಾದ ಕಾರ್ಯವನ್ನೂ ಮಾಡಿರಲಿಲ್ಲವೆಂಬುದಾಗಿಯೂ, ಈ ಕಾರ್ಯವು ತಮ್ಮ ಮೇಲ್ವಿಚಾರಣೆಗೆ ವಹಿಸಲ್ಪಟ್ಟಾರಭ್ಯ ಹೆಚ್ಚು ಫಲಕಾರಿಯಾದ ಕೆಲಸಗಳನ್ನು ಮಾಡಿರುವುದಾಗಿಯೂ ಹೇಳಿದರು.

ವರ್ಧಂತ್ಯುತ್ಸವವು.

ನಮ್ಮ ಶ್ರೀಮನ್ಮಹಾರಾಜರವರ ೩೧ ನೆಯ ವರ್ಷದವರ್ಧಂತ್ಯುತ್ಸವವೈಭವದಿಂದ ರಾಜಧಾನಿಯು ಕಂಗೊಳಿಸುತ್ತಿರುವುದು. ಮುಂಗಾರು ಮಳೆಯು ಅನುಕೂಲವಾಗಿ ನಡೆದು ಕೆರೆಕಟ್ಟೆಗಳೂ ಹೊಲ ತೋಟಗಳೂ ನಲಿದಾಡುತ್ತಿರುವುದರಿಂದ ಪ್ರಾಣಿಸಮುದಾಯಕ್ಕೆ ಉಂಟಾಗಿರುವ ಹರ್ಷಾತಿರೇಕವು ಈ ಉತ್ಸವವೈಭವವನ್ನು ಇಮ್ಮಡಿಗೊಳಿಸಿರುವುದು. ತಾ|| ೨೩ರಲ್ಲಿ ಪದ್ಧತಿಯಂತೆ ನಡೆದ ರಾಜವೀಥಿಯುತ್ಸವಕಾಲದಲ್ಲಿ ಅಶ್ವಾರೂಢರಾದ ಶ್ರೀವಸ್ಮಹಾರಾಜರು ಶ್ರೀಮದ್ಯುವರಾಜರುಗಳ ಮಧ್ಯದಲ್ಲಿ ಬರೋಡಾರಾಜಪುತ್ರರೂ ಅಶ್ವಾರೂಢರಾಗಿ ಸಮಾನವಯೋ ರಾಜತೇಜೋವೈಭವದಿಂದೊಪ್ಪಿ ಬರುತ್ತಿದ್ದುದು ಈ ವರ್ಷದ ಉತ್ಸವ ವೈಖರಿಯನ್ನು ಮತ್ತಷ್ಟು ಹೆಚ್ಚಿಸಿದ್ದಿತು. ಬೀದಿಯುದ್ದಕ್ಕೂ ನಿಂತಿದ್ದ ಪ್ರೇಕ್ಷಕಸ್ತೋಮವು ಅಭೂತಪೂರ್ವವಾದ ಈ ಉತ್ಸವವನ್ನು ನೋಡಿ ವಿಶೇಷ ಸಂತೋಷಪಟ್ಟರು. ಆದಿನದಿಂದ ಮೂರುದಿನಗಳವರೆಗೆ ರಾತ್ರಿಯಹೊತ್ತು ಪದ್ಧತಿಯಂತೆ ಅರಮನೆಯಲ್ಲಿ ಆರತ್ಯಕ್ಷತೆಯ ಸಭೆಗಳೂ ಹಗಲುಹೊತ್ತು ಜೂಜಿನ ಬಯಲಿನಲ್ಲಿ ವಿನೋದೋತ್ಸವಗಳೂ ನಡೆಯುತ್ತಬಂದಿರುವುವು. ಕುದುರೆಯಜೂಜು ಒಂದು ಹೊರತು ಉಳಿದ ಏರ್ಪಾಡುಗಳೆಲ್ಲಾ ಯಥಾಸಾಂಗವಾಗಿ ನೆರವೇರಿರುವುವು. ಶ್ರೀ ಜಗದಾಂಬಾ ಕಟಾಕ್ಷದಿಂದ ನಮ್ಮ ಶ್ರೀಮನ್ಮಹಾರಾಜರವರ ಇಂಥ ವರ್ಧಂತ್ಯುತ್ಸವಗಳು ಅನೇಕವಾಗಿ ಜರುಗುತಿರಲೆಂದೂ, ದೇಶದ ಪ್ರಜಾವರ್ಗವನ್ನು ಇತೋಪ್ಯತಿಶಯವಾಗಿ ಪುತ್ರನಿರ್ವಿಶೇಷದಿಂದ ಕಾಪಾಡುವುದಕ್ಕೆ ತಕ್ಕ ಆಯುರಾರೋಗ್ಯಾದಿ ಭಾಗ್ಯಗಳನ್ನು ಅವರಿಗೆ ಜಗದೀಶ್ವರನು ಅನುಗ್ರಹಿಸಲೆಂದೂ ಸಕಲ ಪ್ರಜಾಸಮುದಾಯದೊಡನೆ ನಾವು ಭಗವಂತನನ್ನು ಪ್ರಾರ್ಥಿಸುವೆವು.

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವವು

ಒಳದೇಶ ವೃತ್ತಾಂತಗಳು.

ಬರೋಡಾ ರಾಜಬಂಧುವರ್ಗದವರು ರಾಜಧಾನಿಗೆ ವರ್ಧಂತ್ಯುತ್ಸವಕ್ಕಾಗಿಬಂದು ಶ್ರೀಮನ್ಮಹಾರಾಜರ ಆತಿಥ್ಯದಲ್ಲಿರುವರು.

ವರ್ಧಂತ್ಯುತ್ಸವಕ್ಕೆ ಅತಿಥಿಗಳಾಗಿ ಉದಕಮಂಡಲದಿಂದ ದಯಮಾಡಿದ್ದ ನಮ್ಮ ಬ್ರಿಟಿಷ್ ರೆಸಿಡೆಂಟರು ಈದಿವಸ ಉದಕಮಂಡಲಕ್ಕೆ ಹಿಂದಿರುಗುವವರಾಗಿರುವರು.

ದಿವಾನರು ಪದ್ಧತಿಯಂತೆ ವರ್ಧಂತ್ಯುತ್ಸವ ಸಂಬಂಧವಾದ ಔತಣವನ್ನು ಈ ತಾ|| ೨೯ನೆಯ ಮಂಗಳವಾರದ ದಿವಸ ಶೇಷಾದ್ರಯ್ಯರ ಬಂಗಲೆಯಲ್ಲಿ ಮಾಡಿಸಲೇರ್ಪಡಿಸಿರುವರು.

ಅರ್ಥಸಾಧಕ ಮಹಾಸಭೆಯಲ್ಲಿ ಅಗ್ರಾಸನಾಧಿಪತಿಗಳಾಗಿದ್ದ ದಿವಾನರು ಮೈಸೂರುಸೀಮೆಯ ಸರ್ವ ಕಲಾಶಾಲೆ (ಯೂನಿವರ್ಸಿಟಿ) ಯು ರಾಜಧಾನಿಯಲ್ಲಿ ಸ್ಥಾಪಿಸಲ್ಪಡುವುದೆಂದು ಅಪ್ಪಣೆಯನ್ನು ಕೊಡಿಸಿದರು.

ಉದಕಮಂಡಲಕ್ಕೆ ದಯಮಾಡಿದ್ದ ಹೈದರಾಬಾದಿನ ರೆಸಿಡೆಂಟರಾದ ಕರ್ನಲ್‌ಫ್ಲಿನ್ನೆಯವರು ರಾಜಧಾನಿಗೆ ಬಂದು ಶ್ರೀಮನ್ಮಹಾರಾಜರವರ ಅತಿಥಿಗಳಾಗಿ ಗೌರ್ನಮೆಂಟ್‌ಹೌಸಿನಲ್ಲಿ ೨ ದಿನಗಳಿದ್ದು ದಯಮಾಡಿದರು.

ಲೋಕಲ್ ಮತ್ತು ಮ್ಯುನಿಸಿಪಲ್ ಬೋರ್ಡುಗಳ ಕಾನ್‌ಫರೆನ್ಸು ನಾಳೆಯದಿನ ಬೆಳಗ್ಗೆ ಶ್ರೀಮದ್ಯುರಾಜರವರಿಂದಾರಂಭಿಸಲ್ಪಟ್ಟು ದಿ||ಬ|| ಕೆ.ಪಿ. ಪುಟ್ಟಣ್ಣಸೆಟ್ಟರ ಅಧ್ಯಕ್ಷತೆಯಲ್ಲಿ ಮಂಗಳವಾರ ಮತ್ತೂ ಬುಧವಾರದವರೆಗೂ ನಡೆಯುವುದು. ಈ ಸಭೆಗೆ ಸರ್ಕಾರಿಯುದ್ಯೋಗಸ್ಥರಲ್ಲದ ಬೋರ್ಡುಗಳ ಮೆಂಬರುಗಳಲ್ಲಿ ೬೦ ಜನ ದೊಡ್ಡಮನುಷ್ಯರುಗಳು ಪ್ರತಿನಿಧಿಗಳಾಗಿ ಬಂದಿರುವರು.

ಬೆಂಗಳೂರಿನ ಎಲ್. ಎ. ಬೌರ್ನಾಲ್ ಕಂಪೆನಿಯವರು ಕಳೆದ ಬುಧವಾರ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವದ ಸಂತೋಷಸೂಚನಾರ್ಥವಾಗಿ ಬೆಂಗಳೂರ ಸರ್ಕಾರಿಯ ಬಾಲಿಕಾಪಾಠಶಾಲೆಯ ವಿದ್ಯಾರ್ಥಿನಿಯರುಗಳಿಗೆಲ್ಲಾ ಲಾಡುಗಳನ್ನು ಹಂಚಿಸಿದುದಲ್ಲದೆ ಶ್ರೀನಿವಾಸಮಂದಿರದ ಅನಾಥಬಾಲೆಯರಿಗೆ ಬನಿಯನ್ನುಗಳನ್ನೂ ಲಾಡುಗಳನ್ನೂ ಹಂಚಿದರು.

ಈ ತಾ|| ೨೪ ರಲ್ಲಿ ಅರ್ಥಸಾಧಕಸಭೆಯಲ್ಲಿ ಚಿಕ್ಕಮಗಳೂರಿನ ಕಾಫೀತೋಟಗಾರರಾದ ಮ|| ಶ್ರೀನಿವಾಸರಾಯರು ತಕಾವಿ ಸಂಬಂಧವಾದ ನಿಬಂಧನೆಗಳನ್ನು ಕುರಿತು ಪ್ರಸ್ತಾಪಿಸುವಾಗ್ಗೆ ಮೆ|| ಚಾಟರ್ಟನ್‌ರವರು ಮ|| ರಾಯರ ಹೇಳಿಕೆಯು ಅಸಂಗತವೆಂದು ಹೇಳತೊಡಗಿ ರಬ್ಬಿಷ್ ಎಂಬ ಪದಪ್ರಯೋಗಮಾಡಿದುದರ ಮೇಲೆ ಮ||ರಾಯರು ಕುಪಿತರಾಗಿ ಇಂತಹ ಸಣ್ಣಮಾತುಗಳನ್ನು ಈಸಭೆಯಲ್ಲಾಡುವುದನ್ನು ತಪ್ಪಿಸದಿದ್ದಲ್ಲಿಸಭೆಯ ಗೌರವಕ್ಕೆ ಕುಂದುಂಟಾಗುವುದೆಂದು ದಿವಾನರಿಗೆ ಅರಿಕೆಮಾಡಿದರು.

ವೈಸ್‌ರಾಯರ ಕಾರ್ಯನಿರ್ವಾಹಕಮಂಡಳಿಯ ಸಭಾಸಾರ್ತರಾಗೇರ್ಪಟ್ಟ ಆನರಬಲ್ ಸರ್ ಶಂಕರನ್‌ನಾಯರವರು ಶ್ರೀಮನ್ ಮಹಾರಾಜರವರ ಅತಿಥಿಗಳಾಗಿ ದಯಮಾಡಿಸಿರುವರು. ಇವರು ಕಳೆದ ತಾ|| ೨೪ ರಲ್ಲಿ ಅರ್ಥಸಾಧಕ ಸಭೆಗೆ ಚಿತ್ತೈಸಿದ್ದು ಅಲ್ಲಿಯ ಕಾರ್ಯಕ್ರಮಗಳನ್ನು ಪರಾಮರಿಸಿ ಈ ಸಭೆಯು ದೇಶದ ಸಂಪದಭ್ಯುದಯಕ್ಕೆ ಸಾಧಕವಾದುದೆಂದು ಅಭಿಪ್ರಾಯಪಟ್ಟರೆಂದು ತಿಳಿಯುತ್ತೇವೆ.

ಶ್ರೀಮನ್ಮಹಾರಾಜರವರು ಬರುವ ತಾ|| ೧ರಲ್ಲಿ ಶ್ರೀರಂಗಪಟ್ಟಣಕ್ಕೆ ಚಿತ್ತೈಸಿ ತಮ್ಮ ತಾತಂದಿರಾದ ಶ್ರೀಮನ್ ಮುಮ್ಮಡಿ ಕೃಷ್ಣರಾಜ ಒಡೆಯರವರ ಜನ್ಮಸ್ಥಲದಲ್ಲಿ ಜ್ಞಾಪಕಾರ್ಥವಾಗಿ ಹೊಸದಾಗಿ ಕಟ್ಟಿಸಿರುವ ಮಂಟಪದ ಪ್ರತಿಷ್ಠೋತ್ಸವವನ್ನು ಜರುಗಿಸುವುದಾಗಿ ಗೊತ್ತಾಗಿದೆ. ಆ ಸಂದರ್ಭದಲ್ಲಿ ಅರಮನೆಯ ಕಂಟ್ರೋಲರು ತತ್ಸಂಬಂಧವಾದ ಒಂದು ವರದಿಯನ್ನೋದುವರಲ್ಲದೆ ಶ್ರೀರಂಗಪಟ್ಟಣದ ನಿವಾಸಿಗಳು ಒಂದು ವಿಜ್ಞಾಪನ ಪತ್ರಿಕೆಯನ್ನೋದಿ ಶ್ರೀಯವರಿಗೊಪ್ಪಿಸುವರು. ಈ ಮಹೋತ್ಸವಕ್ಕೆ ಅನೇಕ ಸ್ಥಳ ಪರಸ್ಥಳದ ದೊಡ್ಡ ಮನುಷ್ಯರುಗಳಿಗೆ ಆಹ್ವಾನವು ಕೊಡಲ್ಪಟ್ಟಿರುವುದಲ್ಲದೆ ಈ ಮಹೋತ್ಸವಕ್ಕೆ ಬೇಕಾದ ಏರ್ಪಾಡುಗಳು ಬಹಳ ಸಡಗರದಿಂದ ನಡೆಯುತ್ತಿರುವುವು.

ಕಳೆದ ತಾ|| ೨೪ ರಲ್ಲಿ ಕುದುರೆಯ ಸ್ವಾರಿಯ ಪಂದ್ಯವು ನಡೆದಿತು. ಇದು ನೇಟಾದ ರಾಜಮಾರ್ಗದಮೇಲಲ್ಲದೆ ಹಳ್ಳಕೊಳ್ಳ ಹೊಲಗಳಮೇಲೆ ಹಾದುಬರುವ ಪಂದ್ಯವಾಗಿದ್ದಿತು. ಇದಕ್ಕೆ ಸರ್ಕಾರಿಯಧಿಕಾರಿಗಳೂ, ಇತರರೂ ಸೇರಿದ್ದರು. ಈ ಸ್ವಾರಿಯು ಇಲವಾಲದ ರೆಸಿಡೆನ್ಸಿ ಬಂಗಲೆಯದ್ವಾರದಿಂದ ಬಿಡಲ್ಪಟ್ಟಿತು ಬೆಳವಾಡಿ, ಬಸವನಹಳ್ಳಿ, ಹುಂಡಿ, ಭೋಗಾದಿ, ದಟ್ಟಗಹಳ್ಳಿ ಮತ್ತು ಕನ್ನೇಗೌಡನಕೊಪ್ಪಲು ಈ ಹಳ್ಳಿಗಳನ್ನು ಹಾದು ಬರುವಲ್ಲಿ ೧ ನೆಯವರಾದ ಅಮಲ್ದಾರ್ ಮಿ|| ಹೈದರಲ್ಲಿಖಾನ್‌ರವರಿಗೆ ೨೫೦ ರೂ.ಗಳೂ, ಮತ್ತು ೧೦೦ ರೂ. ಬೆಲೆಯ ಒಂದು ಬಟ್ಟಲೂ; ೨ನೆಯವರಾದ ಪೊಲೀಸ್ ಸೂಪರಿಂಟೆಂಡೆಂಟ್ ಮಿ|| ವೇದಾಂತಯ್ಯಂಗಾರರಿಗೆ ೧೫೦ ರೂ. ಮತ್ತು ೫೦ ರೂ. ಬೆಲೆಯ ಒಂದು ಬಟ್ಟಲೂ; ೩ ನೆಯವರಾದ ಸರ್ವೆಶಾಖೆಯ ಮ|| ಶ್ರೀನಿವಾಸರಾಯರಿಗೆ ೧೦೦ ರೂ. ಮತ್ತು ೩೦ ರೂ. ಬೆಲೆಯ ಒಂದು ಬಟ್ಟಲೂ ಬಹುಮಾನಗಳಾಗಿ ದೊರೆದುವು.

ಒಕ್ಕಲಿಗರ ಪತ್ರಿಕೆಯಲ್ಲಿ ಕುರುಬಜಾತಿಯನ್ನು ನಿಂದಿಸಿ ಬರೆಯಲ್ಪಟ್ಟಿದ್ದಿತೆಂಬ ಅಪರಾಧದ ಮೇಲೆ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರು ಮ|| ಗಳಾದ ಮಾರಪ್ಪ ಮತ್ತು ವೆಂಕಟರಾಮಯ್ಯನವರುಗಳಿಗೆ ಅರ್ಥದಂಡವನ್ನು ವಿಧಿಸಿದ್ದುದರ ಮೇಲೆ ಚೀಫ್ ಕೋರ್ಟಿನಲ್ಲಿ ಮಾಡಿದ್ದ ಅಪೀಲಿನ ವಿಚಾರಣೆಯು ಕಳೆದ ಸೋಮವಾರ ನಡೆದಿತು. ಆ ಕಾಲದಲ್ಲಿ ಅಪರಾಧಿಗಳ ವಕೀಲರಾದ ಮ|| ಕೆ. ಆರ್ ಶ್ರೀನಿವಾಸಯ್ಯಂಗಾರರು ಅಪರಾಧಿಗಳನ್ನು ದೋಷವಿಮುಕ್ತರನ್ನಾಗಿ ಮಾಡಬೇಕೆಂದು ವಾದಿಸಿದುದರ ಮೇಲೆ ಫಿರ್ಯಾದಿ ಪರ ವಕೀಲರಾದ ದಿವಾನ್ ಬಹದ್ದೂರ್ ಗೋವಿಂದರಾಘವಯ್ಯರ್‌ರವರು ಕೆಳಕೋರ್ಟಿನ ತೀರ್ಪು ನ್ಯಾಯಬದ್ಧವಾಗಿರುವುದರಿಂದ ಶಿಕ್ಷೆಯನ್ನು ಮನ್ನಿಸಕೂಡದೆಂದು ವಾದಿಸಿದರು. ಚೀಫ್‌ಜಡ್ಜರು ಉಭಯಪಕ್ಷದ ವಾದಾನುವಾದಗಳನ್ನು ಚೆನ್ನಾಗಿ ಲಾಲಿಸಿ ವರ್ಧಂತ್ಯುತ್ಸವದ ರಜವಾದನಂತರ ತೀರ್ಪನ್ನು ಹೇಳುವುದಾಗಿ ಅಪ್ಪಣೆ ಕೊಡಿಸಿದರು. ಮತ್ತೂ ಸಿಟಿ ಮ್ಯಾಜಿಸ್ಟ್ರೇಟರು ಮ|| ಗಳಾದ ಕೆ. ಎಚ್. ರಾಮಯ್ಯ, ಸುಬ್ರಹ್ಮಣ್ಯಯ್ಯರ್ ಮತ್ತೂ ಷಣ್ಮುಗಂ ಇವರುಗಳನ್ನು ನಿರ್ದೋಷಿಗಳನ್ನಾಗಿ ಬಿಟ್ಟಿರುವುದು ತಪ್ಪಾದುದರಿಂದ ಅವರುಗಳಿಗೆ ಮರಳಿ ವಿಚಾರಿಸಿ ಶಿಕ್ಷೆಯನ್ನು ಕೊಡಿಸಬೇಕೆಂದು ಕುರುಬರ ಪರವಾಗಿ ಅಡ್ವೋಕೇಟ್ ಮ|| ಸಿ. ವಿ. ನರಸಿಂಹಯ್ಯಂಗಾರರು ಕೊಟ್ಟಿದ್ದ ಅರ್ಜಿಯನ್ನು ಚೀಫ್‌ಜಡ್ಜರು ವಿಚಾರಣೆಗಿಟ್ಟುಕೊಂಡು ಈ ವಿಚಾರದಲ್ಲಿ ಉಭಯಪಕ್ಷದ ವಕೀಲರುಗಳೂ ಮಾಡಿದ ಚರ್ಚೆಗಳನ್ನು ಲಾಲಿಸಿ ಸುಬ್ರಹ್ಮಣ್ಯಯರ್ ಮತ್ತೂ ಮ|| ಷಣ್ಮುಗಂ ಇವರುಗಳ ವಿಚಾರಕವಾದ ಅರ್ಜಿಯನ್ನು ತಿರಸ್ಕರಿಸಿ ಮ|| ಕೆ. ಎಚ್. ರಾಮಯ್ಯನವರು ಸೀಮೆಯಿಂದ ಹಿಂದಿರುಗಿ ಬರುವವರೆಗೂ ಅವರ ವಿಚಾರಕವಾದ ಅರ್ಜಿಯು ಹಾಗೆಯೇ ಇಡಲ್ಪಟ್ಟಿರತಕ್ಕದೆಂದಪ್ಪಣೆ ಮಾಡಿದರು.

ಯುದ್ಧವಾರ್ತೆಯು.

ಪಶ್ಚಿಮರಣರಂಗ.

ಜರ್ಮನರು ಡಂಕರ್ಕಿನ ಮೇಲೆ ಮರಳಿ ದೊಡ್ಡ ದೊಡ್ಡ ಫಿರಂಗಿಗಳನ್ನು ಹೊಡೆಯಲುಪಕ್ರಮಿಸಿ ೧೪ ಗುಂಡುಗಳನ್ನು ಹಾರಿಸಿ ಕೆಲಜನರನ್ನು ಕೊಂದುಹಾಕಿರುವರು. ಬೆಲ್ಜಿಯನರು ಸೆಂಟ್ ಜಾರ್ಜಸ್ ಪ್ರದೇಶದಲ್ಲಿ ಜಯಪ್ರದವನ್ನು ಹೊಂದಿ ಜರ್ಮನರ ಒಂದು ಕಂದಕವನ್ನು ಆದರಲ್ಲಿರುವವರನ್ನೆಲ್ಲಾ ಕೊಂದುಹಾಕಿಯೋ ಅಥವಾ ಸೆರೆಹಿಡಿದೋ ವಶಪಡಿಸಿಕೊಂಡರು. ಅರ್ರಾಸಿನಲ್ಲಿ ನಡೆದ ಯುದ್ಧದಲ್ಲಿ ಶತ್ರುಗಳು ಬಹು ಭೀಕರವಾಗಿ ಫಿರಂಗಿಗಳನ್ನು ಹಾರಿಸಿ ಅನೇಕ ಕಡೆಗಳಲ್ಲಿ ಮುತ್ತಿಗೆಗಳನ್ನು ಹಾಕಿ ಸೌಚೆಜ್ಜಿಗೆ ಆಗ್ನೇಯ ದಿಕ್ಕಿನಲ್ಲಿ ಒಂದು ಕಂದಕದ ಭಾಗದಲ್ಲಿ ಸ್ವಲ್ಪ ಪ್ರದೇಶವನ್ನು ಪುನಃ ಸಂಪಾದಿಸಿದುದರ ವಿನಾ ಮತ್ತೆಲ್ಲಾ ಕಡೆಯಲ್ಲೂ ವಿಮುಖರಾದರು. ಜರ್ಮನರು ಲಾಬ್ರಿಂತ್ ಪ್ರದೇಶದಲ್ಲಿ ಬಹಳ ನಷ್ಟವನ್ನು ಹೊಂದಿದರು; ಮತ್ತೊಂದು ಕಡೆ ಮುತ್ತಿಗೆಹಾಕಿ ಪದಾತಿಗಳ ಮತ್ತು ಫಿರಂಗಿಗಳ ಗುಂಡಿನೇಟಿನಿಂದ ಪರಾಜಿತರಾದರು. ಇಲ್ಲಿ ಶತ್ರುಗಳು ವಿಷವಾಯುವಿನ ಸಿಡಿಮದ್ದುಗಳನ್ನು ಪಯೋಗಿಸುತ್ತಿದ್ದರು. ಫ್ರೆಂಚರು ಅಲ್ಸೆಸ್ ಮತ್ತು ಲೋರೈನಿನಲ್ಲಿ ತಮ್ಮ ಮೇಲೆ ಪ್ರತಿಭಟಿಸಿರುವ ಶತ್ರುಗಳನ್ನು ನಿರಾಯಾಸದಿಂದ ಹಿಮ್ಮೆಟ್ಟಿಸಿ ಕೆಲವರನ್ನು ಸೆರೆಯಾಳುಗಳನ್ನಾಗಿ ಹಿಡಿದುಕೊಂಡು ಮತ್ತೂ ಕೆಲ ಯಂತ್ರಫಿರಂಗಿಗಳನ್ನು ಸ್ವಾಧೀನಪಡಿಸಿಕೊಂಡು ಮುಂದುಮುಂದಕ್ಕೆ ಸಾಗಿಹೋಗುತ್ತಿರುವರು. ತಾ|| ೨೩ರ ಬೆಳಗ್ಗೆ ಶತ್ರುಗಳು ಡಂಕರ್ಕಿನ ಮೇಲೆ ಪುನಃ ೧೫ ದೊಡ್ಡ ಫಿರಂಗಿಗುಂಡುಗಳನ್ನು ಹೊಡೆದುದರ ಮೇಲೆ ನಮ್ಮ ಕಡೆಯ ಭಾರೀಫಿರಂಗಿಗಳು ಶತ್ರುಗಳ ಫಿರಂಗಿಗಳ ಮೇಲೆ ಪ್ರತಿಯಾಗಿ ಹೊಡೆಯಲುಪಕ್ರಮಿಸಿರುವುವು. ಅರ್ರಾಸಿನ ಉತ್ತರದಲ್ಲಿ ಜರ್ಮನರು ಪ್ರತಿಭಟಿಸುವುದನ್ನು ಬೆಳಗಿನಿಂದ ನಿಲ್ಲಿಸಿ ಬಹು ಭೀಕರವಾಗಿ ಫಿರಂಗಿಗುಂಡುಗಳನ್ನು ಆ ದಿನವೆಲ್ಲಾ ಹೊಡೆಯುತ್ತಿದ್ದರು. ಜರ್ಮನರು ಮ್ಯೂಜ್, ವೊವ್ರೆ ಮತ್ತೂ ಲೊರೇನ್‌ಗಳಿಗೆ ಮುತ್ತಿಗೆಯನ್ನು ಹಾಕಿದ್ದು ಹಿಮ್ಮೆಟ್ಟಿಸಲ್ಪಟ್ಟರು. ಫ್ರೆಂಚರು ವಾಸ್ಜೆಸ್ ಕಡೆಗೆ ಸಾಗಿಹೋಗುತ್ತಿರುವರು. ಜರ್ಮನಿ ಸೇನೆಯ ಚಲನದ ವಿಚಾರವಾಗಿ ಪಯೋನಿಯರ್ ಪತ್ರಿಕೆಗೆ ಒಬ್ಬ ವಿಲೇಖಕನು ಬರೆದಿರುವುದೇನಂದರೆ:—ಜರ್ಮನಿಯ ಸೈನಿಕರು ಪಶ್ಚಿಮದ ಕಡೆಗೆ ಮುಖ್ಯವಾಗಿ ಫ್ರಾನ್ಸಿನ ಉತ್ತರಕ್ಕೆ ಸಾಗಿಹೋಗುವುದು ಬಹಳವಾಗಿ ನಡೆದಿರುವುದು. ಆದರೂ ಶತ್ರುಗಳು ವಿಶೇಷ ಜನರನ್ನೂ ದೊಡ್ಡ ಫಿರಂಗಿಗಳನ್ನೂ ಕಳೆದ ೨ ದಿವಸಗಳಿಂದಲೂ ಸಂಗ್ರಹಿಸಿಕೊಂಡು ನುಗ್ಗಿಹೋಗುವ ಪ್ರಯತ್ನವನ್ನು ಮಿತ್ರಮಂಡಲಿಯವರು ನಿರೋಧಿಸಿರುವರು. ಹೊಸದಾಗಿ ಬಂದ ಸೇನೆಯು ಕಾದಾಡುವವರ ಪಂಕ್ತಿಗೆ ಕಳುಹಲ್ಪಟ್ಟಿರುವುದು. ಕೋಟ್ರ್ಯಾಯು ಹತ್ತಿರ ಶೇಖರಿಸಿದ್ದ ೨೦೦ ದೊಡ್ಡ ಫಿರಂಗಿಗಳು ಅರ್ರಾಸಿನ ಉತ್ತರದ ಪ್ರದೇಶಕ್ಕೆ ಬಹು ಆತುರದಿಂದ ಸಾಗಿಸಲ್ಪಟ್ಟಿರುವುವು.

ಪೂರ್ವರಣರಂಗ.

ರಷ್ಯನರು ಲೆಂಬರ್ಗ್ ಶತ್ರುಗಳ ಕೈವಶವಾಗದಂತೆ ಅದರ ಸಮೀಪದಲ್ಲಿ ಗ್ರಾಡೆಕ್ ಹಿಂಭಾಗದಲ್ಲಿ ನಿಂತು ಬಹು ಧೈರ್ಯಸಾಹಸಗಳಿಂದ ಹೋರಾಡುತ್ತಿರುವರಾದರೂ, ರಷ್ಯಾದ ಯುದ್ಧನಿಪುಣರು ಲೆಂಬರ್ಗ್ ಶತ್ರುವಶವಾಗುವುದೆಂದು ಯೋಚಿಸುವರು. ಯಾಕೆಂದರೆ ಈ ಪಟ್ಟಣದ ಕೋಟೆಯು ಅಷ್ಟು ಭದ್ರವಾದುದಲ್ಲವು. ಸೆಪ್ಟಂಬರಿನಲ್ಲಿ ರಷ್ಯನರು ಈ ಕೋಟೆಗೆ ಮುತ್ತಿಗೆಯನ್ನು ಹಾಕಿದಾಗ್ಗೆ ಆಸ್ಟ್ರಿಯನ್ನರು ಅದನ್ನು ಸಂರಕ್ಷಿಸಿಕೊಳ್ಳಲು ಪ್ರಯತ್ನಿಸಲಿಲ್ಲವು. ಜರ್ಮನರ ಸೇನೆಯು ಉತ್ತರದಿಕ್ಕಿನಿಂದ ರಾರ್ರುಸ್ಕಾ ಮಾರ್ಗವಾಗಿ ದೊಡ್ಡ ಚಕ್ರಾಕೃತಿಯಲ್ಲಿ ಈ ಪಟ್ಟಣದ ಸಮೀಪಕ್ಕೆ ಬರುತ್ತಿರುವುದು. ಇತ್ತಲಾಗಿ ಆಸ್ಟ್ರಿಯನರು ನೈರುತಿದಿಕ್ಕಿನಿಂದ ಮುಂದುವರಿದು ಬರುತ್ತಿರುವರು. ಅಂತೂ ರಷ್ಯನರು ದಿಕ್ಕಾಪಾಲಾಗೋಡದೆ ಕ್ರಮವರಿತು ಹಿಂದಾಗುತ್ತಿರುವುದರಿಂದ ಜರ್ಮನರಿಗೆ ಅಲ್ಲಿ ಪೂರ್ಣ ಜಯವಾಗಿಲ್ಲವೆಂದು ಗೊತ್ತಾಗುತ್ತದೆ. ಮುಂಭಾಗದಲ್ಲಿ ಚದರಿಹೋಗದಿರುವ ರಷ್ಯನರ ಸೇನೆಯು ಜರ್ಮನಿಯವರ ಮೇಲೆ ಪ್ರತಿಭಟಿಸಿರುವುದು. ಪ್ರಕೃತದ ಇಲ್ಲಿನ ಸ್ಥಿತಿಯು ಪಶ್ಚಿಮರಣರಂಗದಲ್ಲಿ ಜನರಲ್ ಜಾಫ್ರೆಯವರು ಮಾರ್ನೆನದಿಯಮೇಲೆ ಹಿಂದಿರುಗವಾಗ ಹೇಗಿದ್ದಿತೋ ಹಾಗಿದೆ. ಟಾನ್ಯುಮುಂಭಾಗದಲ್ಲಿ ರಷ್ಯನರ ಸ್ಥಾನಗಳು ಬಹಳ ಪ್ರಬಲವಾಗಿರುವುದರಿಂದ ಶತ್ರುಗಳು ಉತ್ತರದಿಗ್ಭಾಗದಿಂದ ಬಂದು ಬೀಳುವುದು ಅಸಂಭವವಾಗಿರುವುದು. ಲೆಂಬರ್ಗಿನಸುತ್ತಲೂ ಯುದ್ಧವು ನಡೆಯುವುದರ ಭರವಸೆಯು ಬಹಳಮಟ್ಟಿಗಿಲ್ಲವು. ಜನರಲ್ ವಾನ್‌ಮ್ಯಾಕೆನ್‌ಸೆನ್‌ರವರು ತಮ್ಮ ಬಹಳ ಬಳಲಿರುವ ಸೈನಿಕರಿಗೆ ವಿರಾಮವನ್ನು ಕೊಡುವುದಕ್ಕಾಗಿಯೋ ಅಥವಾ ಮತ್ತೊಂದು ಸೇನಾಭಾಗವನ್ನು ಸಿದ್ಧಪಡಿಸಿಕೊಳ್ಳುವುದಕ್ಕಾಗಿಯೋ ತಟಸ್ಥರಾಗಿರುವರು. ರಷ್ಯನರು ಶತ್ರುಗಳಮೇಲೆ ಬೀಳಲು ತಾವೇ ಮೊದಲುಮಾಡಿ ರಾತ್ರಿಕಾಲದಲ್ಲಿ ಟ್ಯಾನ್ಯುನದಿಯನ್ನು ದಾಟಿ ಆಸ್ಟ್ರಿಯನರ ಮೇಲೆ ಸಙೀನುಗಳಿಂದ ಕಾದಾಡಿದರು. ಶತ್ರುಗಳು ರಾವರ್ಸ್ಕಾ ಪ್ರದೇಶದಲ್ಲಿ ಬಹಳ ಧೈರ್ಯದಿಂದ ಮೇಲೆ ಬಿದ್ದರಾದರೂ ಸಂಪೂರ್ಣವಾಗಿ ಹಿಮ್ಮೆಟ್ಟಿಸಲ್ಪಟ್ಟರು. ರಷ್ಯನರು ೮೮೦ ಬಂದಿಗಳನ್ನೂ ೨೦ ಅಧಿಕಾರಿಗಳನ್ನೂ ಯಂತ್ರದ ಫಿರಂಗಿಗಳನ್ನೂ ಹಿಡಿದುಕೊಂಡರು. ಲೆಂಬರ್ಗಿನಕಡೆ ಗುಂಡು ಹೊಡೆಯಲ್ಪಡುತ್ತಿದ್ದಿತು. ರಷ್ಯನರು ನಿಜಿನಾಫಿನ ಕೆಳಗಡೆ ನೀಸ್ಟರ್‌ನದಿಯಮೇಲೆ ಮುಖ್ಯವಾದ ಜಯಪ್ರದವನ್ನು ಹೊಂದಿರುತ್ತಾರೆ. ಆಸ್ಟ್ರಿಯನ್ನರು ನೀಸ್ಟರಿಗೆ ಅಡ್ಡವಾಗಿ ಕಳುಹಿಸಿಕೊಟ್ಟಿದ್ದ ಸೇನೆಯ ಕೂಡ ರಷ್ಯನರು ಒಂದು ವಾರದವರೆಗೆ ಭೀಕರವಾದ ಯುದ್ಧವನ್ನು ಮಾಡುವುದರಲ್ಲಿ ನಿರತರಾಗಿದ್ದರು. "ಸೋಮವಾರ ಸೂರ್ಯೋದಯಸಮಯದಲ್ಲಿ ನಮಗೆ ಸಂಪೂರ್ಣ ಜಯವುಂಟಾಗಿ ಯುದ್ಧವು ಮುಕ್ತಾಯವಾಯಿತು. ನಾವು ಕೋಟೆಕೊತ್ತಲುಗಳಿಂದ ಭದ್ರಪಡಿಸಲ್ಪಟ್ಟಿದ್ದ ಸ್ಥಳಗಳನ್ನೂ, ಕ್ಷೇತ್ರಗಳನ್ನೂ, ಗ್ರಾಮಗಳನ್ನೂ ಸೂರೆಮಾಡಿ ೩೫೦೦ ಜನರನ್ನೂ, ಅನೇಕ ಯಂತ್ರಫಿರಂಗಿಗಳನ್ನೂ ಸ್ವಾಧೀನಪಡಿಸಿಕೊಂಡೆವು. ಶತ್ರುಗಳು ನೀಸ್ಟರನ್ನು ದಾಟಿ ಪಲಾಯನರಾದರು. ಕೊಸಾಕ್‌ಸೈನಿಕರು ಅವರನ್ನು ಹಿಂಬಾಲಿಸಿ ಶತ್ರುಗಳ ೪ ಸೇತುಗಳನ್ನು ದಾಟಿ ನದಿಯ ಬಲಗಡೆಯ ದಡದಮೇಲೆ ಶತ್ರುಗಳನ್ನು ಓಡಿಸಿಕೊಂಡುಹೋದರು. ಜಲಸ್ಜೆರ್ ಪಟ್ಟಣವು ನಮ್ಮ ವಶವಾಗದಂತೆ ಭದ್ರವಾಗಿ ರಕ್ಷಿಸಲ್ಪಟ್ಟಿದ್ದಾಗ್ಯೂ ನೆರೆಯಗ್ರಾಮಗಳಿಂದ ಶತ್ರುಗಳು ಓಡಿಹೋಗುತ್ತಿರುವರು. ಸೋಮವಾರ ರಾತ್ರಿ ಮತ್ತೆ ೩ ಗ್ರಾಮಗಳಿಗೆನುಗ್ಗಿ ಸೂರೆಮಾಡಿ ೧೦೦೦೦ ಜನರನ್ನೂ ಅನೇಕ ಯಂತ್ರದ ಫಿರಂಗಿಗಳನ್ನೂ ಸೆರೆಹಿಡಿದುಕೊಂಡೆವು" ಎಂದು ರಷ್ಯನ್ ಪ್ರಭುತ್ವದವರು ಪ್ರಕಟಿಸಿರುವರು.

ಸ್ಟೇಟ್‌ಸೆಕ್ರೆಟರಿಯವರಿಂದ ವೈಸ್‌ರಾಯರಿಗೆ ತಾ|| ೨೨ ರಲ್ಲಿ ಬಂದ ತಂತ್ರೀವಾರ್ತೆಯೇನೆಂದರೆ:—ಗೆಲಿಷಿಯಾದಲ್ಲಿ ನಡೆದ ಯುದ್ಧದಲ್ಲಿ ರಷ್ಯನರು ತಾ|| ೧೯ ಮತ್ತೂ ೨೦ ರ ರಾತ್ರಿ ಗ್ರಾಡೆಕ್‌ನಲ್ಲಿದ್ದ ಸ್ಥಳವನ್ನು ಬಿಟ್ಟು ಲೆಂಬರ್ಗಿನಲ್ಲಿರುವ ಸ್ಥಳಗಳಿಗೆ ಹಿಂದಿರುಗಿ ಬಂದರು. ಆಗ ಶತ್ರುಗಳು ರಾವಸ್ಕಾಪ್ರದೇಶದಲ್ಲಿ ಮುಂದುವರಿದು ಕಾದಾಡುತ್ತಿದ್ದರು. ಜನರಲ್ ವಾನ್‌ಮೆಕ್ಲನ್‌ಸೆನ್‌ರವರು ಲೆಂಬರ್ಗಿಗೋಸುಗ ಕಾದಾಡುತ್ತಿರುವುದಾಗಿಯೂ, ಲೆಂಬರ್ಗಿನ ಉತ್ತರದಲ್ಲಿ ೨೦ ಮೈಲಿ ದೂರದಲ್ಲಿರುವ ಜಾಫ್‌ಕಿನ್ನು ಮತ್ತೂ ರೀವಾರಸ್ಕಾ ಇವೆರಡೂ ಅವರ ಕೈವಶದಲ್ಲಿರುವುದಾಗಿಯೂ ಒಂದು ಜರ್ಮನ್‌ವರದಿಯು ತಿಳಿಸುವುದಾಗಿ ರಷ್ಯಾದ ಸರ್ಕಾರಿಯ ವರ್ತಮಾನದಿಂದ ತಿಳಿಯಬರುತ್ತದೆ. ನೀಸ್ಟರ್‌ನದಿಯ ಮೇಲಾದ ಯುದ್ಧದಲ್ಲಿ ಶತ್ರುಗಳು ಮೆಕ್ಲಜಾಟ್ ಮತ್ತೂ ಜೆಡಾಚೋಗಳ ಮಧ್ಯೆ ಶತ್ರುಗಳಮೇಲೆ ಬಿದ್ದು ವಿಶೇಷ ನಷ್ಟವನ್ನು ಹೊಂದಿ ವಿಮುಖರಾದರು. ಗೆಲಿಷಿಯಾದ ಮುಂಭಾಗದಲ್ಲೂ, ಬೊಕಾವಿನಾದಲ್ಲೂ ಯುದ್ಧವು ಬಹಳ ಜೋರಾಗಿ ನಡೆಯುತ್ತಿದ್ದರೂ ಶತ್ರುಗಳು ಎಲ್ಲೂ ಜಯವನ್ನು ಹೊಂದಲಿಲ್ಲವು. ರಷ್ಯನರು ನೀಸ್ಟರ್‌ನದಿಯಮೇಲಣ ಸ್ಥಾನವನ್ನು ಇನ್ನೂ ಬಿಟ್ಟಿಲ್ಲವೆಂದೂ, ಟಾನ್ಯುನದಿಯಮೇಲೂ, ರಷ್ಯಾರಾಜ್ಯದಲ್ಲಿ ಗೆಲೀಷಿಯಾದ ಉತ್ತರದ ಎಲ್ಲೆಕಟ್ಟಿಗೆ ಅಡ್ಡಲಾಗಿಯೂ ತಮ್ಮ ಸ್ಥಾನವನ್ನು ಇನ್ನೂ ಬಿಡದೆ ಪೋಲಾಂಡಿನಲ್ಲಿ ಜರ್ಮನರನ್ನು ಅನೇಕವೇಳೆ ಸೋಲಿಸಿರುತ್ತಾರೆ. ಬಾಲ್ಟಿಕ್‌ಪ್ರಾಂತಗಳಲ್ಲಿ ಯುದ್ಧವು ಇನ್ನೂ ನಡೆಯುತ್ತಲೇಇದೆ.

ಈಗ ರಷ್ಯನರು ಟಾನ್ಯುನದಿಯಮೇಲೆ ತಮ್ಮ ಸ್ಥಾನವನ್ನು ಬಲಪಡಿಸಿಕೊಂಡು ನಿಂತಿರುವರು: ಮತ್ತೂ ಗ್ರಾಡೆಕ್ ಸರೋವರಗಳ ಬಳಿಯಿರುವ ಸೇನೆಯ ಹಿಂಭಾಗದವರು ಶತ್ರುಗಳು ಲೆಂಬರ್ಗಿನಮೇಲೆ ನುಗ್ಗಿ ಬರುವುದನ್ನು ಎರಡು ದಿನಗಳವರೆಗೆ ತಡೆದಿದ್ದರು. ನೀಸ್ಟರ್ ನದಿಯಮೇಲೆ ರಷ್ಯನರಕೈ ಕೊಂಚ ಮುಂದಾಗಿದ್ದುದರಿಂದ ಹೊಸಸೇನೆಯ ಅಪೇಕ್ಷೆಯು ಇರಲಿಲ್ಲ. ರಷ್ಯನರು ಶನಿವಾರದೊಳಗೆ ಸರಾಗವಾಗಿ ಹಿಂದಿರುಗಿದುದರಿಂದ ಹಠಾಹಠಿ ಯುದ್ಧವನ್ನು ಮಾಡಬೇಕೆಂಬ ಶತ್ರುಗಳ ಉದ್ದೇಶಕ್ಕೆ ಭಂಗವಾಯಿತು. ಟಾನ್ಯು ನದಿಯ ಕೆಳಭಾಗದಿಂದ ವಿಕಾಲಿಜ್ಯುವರೆಗೆ ೧೦೦ ಮೈಲಿಯ ಪ್ರದೇಶದಲ್ಲಿ ೨೦ ಲಕ್ಷ, ನೀಸ್ಟರ್ ನದಿಯ ಮುಂಭಾಗದಲ್ಲಿ ೪೦,೦೦೦, ಆಸ್ಟ್ರಿಯಾದ ಮತ್ತು ಜರ್ಮನಿಯ ಸೇನೆಯಿರುವುದು. ಒಟ್ಟು ೪೦ ಲಕ್ಷ ಶತ್ರುಸೇನೆಯು ಬಾಲ್ಟಿಕ್ ಮತ್ತೂ ಬುಕೋವಿನಾ ಮಧ್ಯದಲ್ಲಿರುವುದು. ಲೆಂಬರ್ಗಿನ ಸಂರಕ್ಷಣಾರ್ಥವಾಗಿ ಆ ಪಟ್ಟಣದ ಪಶ್ಚಿಮದಲ್ಲಿ ೫-೬ ಮೈಲಿ ದೂರದಲ್ಲಿ ಕೋಟೆಗಳಿರುತ್ತವೆ. ಅವು ಈಚಿಗೆ ಕಟ್ಟಲ್ಪಟ್ಟಿರುವುದರಿಂದ ಅವುಗಳಿಗೆ ಪ್ರವೇಶಿಸುವುದು ಸಾಧ್ಯವಲ್ಲವು. ಜರ್ಮನರು ಲಿಬುವಿನ ಕೋಟೆಗಳನ್ನು ಭದ್ರಪಡಿಸುತ್ತಿರುವುದಲ್ಲದೆ ಬೀದಿಗಳಲ್ಲಿ ನೌಕಾ ಫಿರಂಗಿಗಳನ್ನಿರಿಸಿರುವುದಾಗಿ ಸಿವಿಲ್ ಮತ್ತೂ ಮಿಲ್ಟರಿ ಗೆಜೆಟ್ಟು ತಿಳಿಸುತ್ತದೆ.

ದಕ್ಷಿಣರಣರಂಗ.

ಅದ್ರಿಯಾಟಿಕ್ಕಿಗೆ ಸಮೀಪದಲ್ಲಿ ನೌಕಾದಳವನ್ನು ಕಾವಲಿಡಲು ಇಟಲಿಯವರು ಅಂಗೀಕರಿಸಿರುವರು. ಫ್ರಾನ್ಸಿನ ನೌಕಾದಳಾಧಿಕಾರಿಯು ಈ ವಿಷಯವನ್ನು ಪ್ರಕಟಿಸಿ ಕಳೆದ ಒಂದು ತಿಂಗಳಿಂದಲೂ ಅಲ್ಲಿ ಕಾವಲಿರುವ ನೌಕಾದಳ ಸೈನಿಕರ ಸಹನೆಯನ್ನು ಪ್ರಶಂಸಿಸಿರುವನು. ಇಟಲಿಯವರು ಗಾರ್ಜೆಗೆ ಗುಂಡುಹೊಡೆಯುತ್ತಿರುವುದರಿಂದ ಆಸ್ಟ್ರಿಯನ್ನರು ಅಲ್ಲಿರುವುದಕ್ಕೆ ಯತ್ನವಿಲ್ಲದೆ ಅಲ್ಲಿರುವ ಕೊಟ್ಟಾರ ಮೊದಲಾದುವುಗಳನ್ನು ನಾಶಪಡಿಸಿ ಗಾರ್ಜೆಯನ್ನು ಬಿಟ್ಟು ಹೋಗಲು ನಿಶ್ಚಯಿಸಿರುವರು. ಕೆಲ ದಿನಗಳ ಕೆಳಗೆ ಒಂದುದಿನ ರಾತ್ರಿ ಇಟಲಿಯವರ ೨ ಅಶ್ವಸೇನಾ ಪಂಗಡದವರು ಗಾರ್ಜೆಗೆ ನುಗ್ಗಿ ಕಾವಲುಗಾರರನ್ನು ಸದೆದು ಗಲಭೆಯನ್ನುಂಟುಮಾಡಿದುದರ ಮೇಲೆ, ಇಟಲಿಯವರ ಸೇನೆಯೆಲ್ಲವೂ ಬಂದು ತಮ್ಮ ಮೇಲೆ ಬೀಳುತ್ತದೆಂದು ಅಲ್ಲಿರುವ ರಕ್ಷಕಸೈನಿಕರು ಭಯಗ್ರಸ್ತರಾಗಿರುವಾಗ್ಗೆ ಇಟಲಿಯವರು ನಿರಾಯಾಸದಿಂದ ತಲೆತಪ್ಪಿಸಿಕೊಂಡು ಹೋದರು, ಎಂದು ರೋಮಿನಿಂದ ಡೇಲಿ ಕ್ರಾನಿಕಲ್ ಪತ್ರಿಕೆಗೆ ಒಬ್ಬ ವಿಲೇಖಕನು ಬರೆದಿರುವುದನ್ನು ಲಂಡನ್ನಿನ ಒಬ್ಬ ವಿಲೇಖಕನು ಪಯೋನಿಯರ್ ಪತ್ರಿಕೆಗೆ ಬರೆದಿರುವನು. ಆಸ್ಟ್ರಿಯಾದವರು ಆಲ್ಪೈನು ಸೇನೆಯನ್ನು ಗೆಲಿಷಿಯಾದಿಂದ ಹೊಸದಾಗಿ ಕರೆಯಿಸಿಕೊಂಡಿರುವರು. ನಮ್ಮ ಕಡೆಯ ಆಲ್ಪೈನು ಸೈನಿಕರಿಗೂ ಶತ್ರುಪಕ್ಷದ ಆಲ್ಪೈನು ಸೈನಿಕರಿಗೂ ಸೋಮವಾರದ ದಿವಸ ಕದನವೆಸಗಿ ನಮ್ಮ ಸೈನಿಕರು ಆಸ್ಟ್ರಿಯಾ ಸೈನಿಕರನ್ನೋಡಿಸಿ, ಅವರಲ್ಲಿ ಬಹು ಜನರನ್ನು ಹಿಡಿದು ಚೆನ್ನಾಗಿ ಸದೆದರು. ಆಸ್ಟ್ರಿಯನ್ನರು ರಾತ್ರಿವೇಳೆ ವಾಲ್ಪಾಲೋಯಿಂದ ನಮ್ಮ ಸ್ಥಾನದಮೇಲೆ ದೊಡ್ಡದೊಡ್ಡ ಸಿಡಿಮದ್ದುಗಳನ್ನು ಹಾಕಿದರು ಎಂದು ರೋಮಿನ ಅಧಿಕಾರಿಗಳು ಪ್ರಕಟಿಸಿರುವರು.

ತುರ್ಕಿ.

ಶೈಬಾ ಯುದ್ಧವರ್ಣನೆಯು :—ಬಸಾರಕ್ಕೆ ಸಮೀಪದಲ್ಲಿರುವ ಶೈಬಾದಲ್ಲಿ ಘೋರಯುದ್ಧವು ಏಪ್ರಿಲ್ ತಿಂಗಳಲ್ಲಿ ನಡೆದಿತಷ್ಟೆ. ಇದರ ವಿವರವನ್ನು ಅಧಿಕಾರಿಗಳು ಇನ್ನೂ ಪ್ರಕಟಿಸಿಲ್ಲವು. ಆದರೆ ಇಂಡ್ಯಾ ಟೈಮ್ಸ್ ಪತ್ರಿಕೆಯಲ್ಲಿ ಕೆಲ ವಿವರವು ಪ್ರಕಟಿತವಾಗಿರುವುದೇನೆಂದರೆ—ಏಪ್ರಿಲ್ ತಾ|| ೧೧ರಲ್ಲಿ ೮೦೦೦ಮಂದಿ ತುರ್ಕಿಯ ಮುಖ್ಯಸೈನಿಕರು, ಫಿರಂಗಿಗಳೊಡನೆಯೂ, ೩೦೦೦ ಮಂದಿ ಕುರ್ದು ಸೈನಿಕರೊಡನೆಯೂ, ೧೦೦೦೦ ಮಂದಿ ಅರಬ್ಬಿ ಸೇನೆಯೊಡನೆಯೂ ವಾಯುವ್ಯದಿಕ್ಕಿನಿಂದ ಶೈಬಾದಮೇಲೆ ಬಂದರು. ಶೈಬಾದಲ್ಲಿ ನಮ್ಮ ಕಂದಕಗಳ ಮೇಲೆ ಇವರು ತಾ|| ೧೨ ರ ದಿನವೆಲ್ಲಾ ಫಿರಂಗಿ ಗುಂಡುಗಳನ್ನು ಹೊಡೆದಾಗ್ಯೂ ನಮಗೇನೂ ನಷ್ಟವಾಗಲಿಲ್ಲವು. ಶೈಬಾಕ್ಕೆ ಗುಂಡುಹೊಡೆಯಬೇಕೆಂಬ ಕೋರಿಕೆಯಿಂದ ಅವರು ನಮ್ಮ ಸೇನೆಯನ್ನು ಬಾಸ್ರಾಕ್ಕೆ ಬರಗೊಡದಂತೆ ಮಾಡಲು ಬಾಸ್ರಾಕ್ಕೆ ಹೋಗುವ ಮಾರ್ಗದಲ್ಲೆಲ್ಲಾ ಅಡ್ಡಕಟ್ಟಲು ವಿಶ್ವಪ್ರಯತ್ನಮಾಡಿದರು.

ತಾ|| ೧೩ ರ ಬೆಳಗ್ಗೆ ನಾವು ಶತ್ರುಗಳನ್ನು ತಬ್ಬಿ ಮೊದಲು ಉತ್ತರದಕಡೆಗೂ ಅನಂತರ ಪಶ್ಚಿಮದಕಡೆಗೂ ಹೊರಟೆವು. ಈ ಯುದ್ಧದಲ್ಲಿ ನಮ್ಮ ಫಿರಂಗಿಗಳು ಶತ್ರುಗಳ ಫಿರಂಗಿಗಳಿಗೆ ಬಹಳ ನಷ್ಟವನ್ನುಂಟುಮಾಡಿದುದಲ್ಲದೆ, ಮಾರನೆಯದಿನ ಜರುಗಿದ ಯುದ್ಧದಲ್ಲಿ ಅವರ ಫಿರಂಗಿಗಳಲ್ಲಿ ಮುಕ್ಕಾಲುಭಾಗದವುಗಳು ಕೆಲಸಮಾಡದೆಹೋದುವು. ನಮ್ಮ ಅಶ್ವಸೇನೆಯವರು ಕೂಡ ಅನೇಕ ಶತ್ರುಗಳನ್ನು ಕೊಂದರು. ಅವರು ಶತ್ರುಸೇನೆಯ ಮಧ್ಯಕ್ಕೆ ಹೋಗಿ ನೋಡುವಲ್ಲಿ ೧೦೦ ಶವಗಳು ಬಿದ್ದಿರುವುದು ಕಂಡುಬಂದಿತು. ೩೦೦-೪೦೦ ಜನರನ್ನು ಬಂದಿಗಳನ್ನಾಗಿ ಹಿಡಿದುಕೊಂಡೆವು. ೨ ಫಿರಂಗಿಗಳು ನಮ್ಮ ವಶವಾದುವು. ತಾ|| ೧೪ ರಲ್ಲಿ ನಾವು ಪುನಃ ಶೈಬಾದಿಂದ ನೈರುತಿದಿಕ್ಕಿಗೆ ಹೊರಟೆವು. ಶತ್ರುಸೇನೆಯು ಶೈಬಾಕ್ಕೆ ೫ ಮೈಲಿ ದೂರದಲ್ಲಿ ಜರಾಪಾದ ಹತ್ತಿರವಿದ್ದಿತು. ಅಲ್ಲಿ ಅವರ ಸೇನೆಯು ಬಲವಾಗಿಯೇ ಇದ್ದಿತು. ಅವರಲ್ಲಿ ಕೆಲರು ಚದರಿ ನಮ್ಮ ಕಡೆಗೆ ಬಾರದೆ ತಾವು ಬಂದಕಡೆಗೆ ಹಿಂದಿರುಗಿಹೋದರು. ಶತ್ರುಗಳ ಕಂದಕವು ಒಳ್ಳೆಯ ಸ್ಥಳಗಳಲ್ಲಿ ಚೆನ್ನಾಗಿ ಕಟ್ಟಲ್ಪಟ್ಟಿರುವುವು. ಅಲ್ಲಿ ಕಾಡಿದ್ದುದರಿಂದ ನಮ್ಮ ಫಿರಂಗಿಗಳಿದ್ದ ಕಂದಕಗಳನ್ನು ನೋಡುವುದಕ್ಕಿಲ್ಲವಾಗಿದ್ದಿತು. ಅಲ್ಲಿ ಬಿಸಿಲಿನ ಝಳವು ತೀಕ್ಷ್ಣವಾಗಿದ್ದಿತು. ನಮ್ಮ ಸೈನಿಕರು ಬೆಳಗಿನಿಂದ ಕಾದಾಡುತ್ತಿದ್ದು ಮಳಲುಕಾಡಿನಲ್ಲಿ ೫ ಮೈಲಿ ದೂರ ಶತ್ರುಗಳ ಫಿರಂಗಿಯೇಟು ಬೀಳದಂತೆ ನಡೆದುಕೊಂಡು ಹೋದರು. ಸಾಯಂಕಾಲ ೪|| ಗಂಟೆಯ ಸಮಯದಲ್ಲಿ ನಾವೆಲ್ಲರೂ ಶತ್ರುಗಳ ಕಂದಕಗಳಮೇಲೆ ನುಗ್ಗಿ ಅಲ್ಲಿದ್ದವರನ್ನೆಲ್ಲಾ ಸಙೀನುಗಳಿಂದ ತಿವಿದೋಡಿಸಿದೆವು. ಈ ಸ್ಥಳವನ್ನು ೨ ಶತ್ರುಸೇನೆಗಳು ಭದ್ರಪಡಿಸಿಕೊಂಡಿದ್ದುವು. ಮತ್ತೊಂದುಕಡೆ ಆಂಗ್ಲ ಭಾರತ ಸೇನೆಗಳೆರಡೂ ಒಟ್ಟುಗೂಡಿ ತಮಗಿಂತ ಮೂರರಷ್ಟು ಅಧಿಕವಾಗಿದ್ದ ಶತ್ರುಸೇನೆಯ ಮೇಲೆಬಿದ್ದು ಅವರನ್ನೋಡಿಸಿದರು. ಶತ್ರುಗಳು ಆ ರಾತ್ರಿಯಲ್ಲಿ ತಮ್ಮ ಬಿಡಾರವನ್ನು ಬಿಟ್ಟು ಈಶಾನ್ಯದಿಕ್ಕಿನ ಕಡೆಗೆ ಓಡಿಹೋದರು. ಅವರಲ್ಲಿ ಕೆಲರು ತಾವು ಬಿಟ್ಟುಹೋಗಿದ್ದ ಅಮರಾಕ್ಕೆ ಹೋಗಿ ಅಲ್ಲಿಂದಲೂ ಓಡಿಸಲ್ಪಟ್ಟರು. ಬಹಳಮಂದಿ ಸೈನಿಕರನ್ನು ಬಂದಿಗಳನ್ನಾಗಿ ಹಿಡಿದುದಲ್ಲದೆ ಫಿರಂಗಿಗಳನ್ನು ತೆಗೆದುಕೊಂಡೆವು. ಇದರಿಂದಾದ ಮುಖ್ಯ ಪ್ರಯೋಜನವೇನೆಂದರೆ—ಅರಬ್ಬಿಯವರು ಧೈರ್ಯಗುಂದಿ ತಂತಮ್ಮ ಮನೆಗೆ ಹೋಗಿ ಸೇರಿಕೊಂಡರು. ಶೈಬಾ ಆಮರಾ ಯುದ್ಧದಲ್ಲಿ ಬಿದ್ದ ಏಟಿನಿಂದ ಅರಬ್ಬಿಯವರು ಆಂಗ್ಲಸೇನೆಗೆ ಸಹಾಯಮಾಡಿದಲ್ಲಿ ತಮಗೆ ಕ್ಷೇಮವಾಗುವುದಲ್ಲದೆ, ಪ್ರತಿಭಟಿಸುವುದರಿಂದ ಕ್ಷೇಮವಿಲ್ಲವೆಂದು ತಿಳಿದುಕೊಂಡರು.

ಪತ್ರವ್ಯವಹಾರ.

ಶ್ರೀಮಜ್ಜಗದ್ಗುರು ವಿಶ್ವಾರಾಧ್ಯೋ ವಿಜಯತೇತರಾಮ್.

"ಶ್ರೀ ಕ್ಷೇತ್ರ ಕಾಶಿಯಿಂದ"

ಪ್ರತಿವರ್ಷದಂತೆ ಈ ವರ್ಷ ಕಲಕತ್ತಾ ಗೌರ್ನ್ಮೆಂಟಿನ ಕಾಲೇಜಿನಲ್ಲಿ ನಮ್ಮ ಶ್ರೀ ಸಂಸ್ಥಾನ ಮಠದಿಂದ ಹೋಗಿ ಪರೀಕ್ಷೆಗೆ ಕುಳಿತವರಲ್ಲಿ ಪರೀಕ್ಷೋತ್ತೀರ್ಣರಾದವರ ಹೆಸರುಗಳು ೧ ನೇ॥ ಗೌರೀಶಂಕರಶಾಸ್ತ್ರಿ ಮೈಸೂರ-ಕಾವ್ಯತೀರ್ಥಸಾಂಖ್ಯ ಮಧ್ಯಮ; ೨ ನೇ॥ ಶಂಕರಶಾಸ್ತ್ರಿ ನರೇಗಲ್ಲ ಪಾಣಿನೀಯವ್ಯಾಕರಣ ಮಧ್ಯಮ; ೩ ನೇ॥ ಜಗದೀಶಶಾಸ್ತ್ರಿ ಹೊಳಲ-ವೇದಾಂತ ಮಧ್ಯಮ; ೪ ನೇ॥ ಮಹಾದೇವಶಾಸ್ತ್ರಿ ಮಮದಾಪುರ; ೫ ನೇ॥ ಕಾಶೀನಾಥಶಾಸ್ತ್ರಿ ನಾಗನೂರ ೬ ನೇ॥ ಸಂಗಮೇಶ್ವರಶಾಸ್ತ್ರಿ ಅಣದುರ್ಗ-ಸಾಹಿತ್ಯ ಮಧ್ಯಮ; ೭ ನೇ॥ ಸೀತಾರಾಮಶಾಸ್ತ್ರಿ ದ್ರಾವಿಡ ಪ್ರಾಚೀನನ್ಯಾಯ ಮಧ್ಯಮ-ಇಂತಿಷ್ಟು ಜನರು ಉತ್ತೀರ್ಣರಾದವರು.

ವ್ಯವಸ್ಥಾಪಕ. ಶ್ರೀ ಸಂಸ್ಥಾನ
ಜಂಗಮವಾಡೀಮಠ, ಬನಾರಸ್ ಸಿಟಿ.

ನೋಟೀಸ್.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಯಿಂದ ಸ್ಕಾಲರ್‌ಷಿಪ್ ಯಾ ವಿದ್ಯಾರ್ಥಿವೇತನವನ್ನು ಪಡೆಯಲಪೇಕ್ಷಿಸುವ ಇಂಗ್ಲೀಷ್ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಮುಂದೆ ಪ್ರೌಢ ವಿದ್ಯಾಭ್ಯಾಸ ಮಾಡಲು ಚೈತನ್ಯವಿಲ್ಲದಿರುವ ವೀರಶೈವ ವಿದ್ಯಾರ್ಥಿಗಳು ಫಂಡ್‌ಸಭೆಗೆ ಧನಸಹಾಯ ಮಾಡಿರುವ ತಮ್ಮ ಸ್ಥಳೀಯ ದೊಡ್ಡಮನುಷ್ಯರ ಮತ್ತು ಸ್ಕೂಲ್ ಯಾ ಕಾಲೇಜಿನ ಹೆಡ್‌ಮಾಸ್ಟರ ಸರ್ಟಿಫಿಕೇಟ್‌ಗಳಿಸಿ ಅಪ್ಲಿಕೇಷನನ್ನು ೧೯೧೫ ನೇ ಜುಲೈ ತಾ॥ ೧೫ ರೊಳಗೆ ಈ ಕೆಳಗಿನ ವಿಳಾಸಕ್ಕೆ ತಲ್ಪುವಂತೆ ಹಾಕಿಕೊಳ್ಳತಕ್ಕದ್ದು. ಅಪ್ಲಿಕೇಷನನಲ್ಲಿ ವಿದ್ಯಾರ್ಥಿಯ ಹೆಸರು, ವಯಸ್ಸು, ವಾಸಸ್ಥಳ, ತಂದೆ ಯಾ ಪೋಷಕರ ಹೆಸರು, ಇವರ ವಾರ್ಷಿಕ ಉತ್ಪತ್ತಿ, ಕಸುಬು ಅಭ್ಯಾಸ ಮಾಡುವ ಸ್ಕೂಲ್, ತರಗತಿ ವಗ್ಯೈರೆ ನಮೂದಿಸತಕ್ಕದ್ದು.

ಜಿ. ಕೆ. ರುದ್ರಾರ್ಯ, ಅಸಿಸ್ಟೆಂಟ್ ಸೆಕ್ರೆಟರಿ,
ಮೈಸೂರು ವೀರಶೈವ ವಿದ್ಯಾಭಿವೃದ್ಧಿ
ಫಂಡ್‌ಸಭೆ, ಬೆಂಗಳೂರು.

ಬಣಕಾರ್ ಕಾಟೀಹಳ್ಳಿ.

ಅಯ್ಯಾ—ಇದೇ ರಾಕ್ಷಸನಾಮಸಂವತ್ಸರದ ನಿಜವೈಶಾಖ ಶುದ್ಧ ೫ ಬುಧವಾರ ದಾವಣಗೆರೆ ತಾಲ್ಲೋಕು ಹುಣಸಿಕಟ್ಟಿ ಬಣಕಾರೆ ಕಾಟೀಹಳ್ಳಿ ಬಸಪ್ಪನವರ ಪುತ್ರ ಲಿಂಗಪ್ಪನಿಗೆ ಕಂದನಕೋವಿ ಹೊಸಹಳ್ಳಿ ಹನುಮಪ್ಪನವರ ಪುತ್ರಿ ದೊಡ್ಡಬಸಮ್ಮನನ್ನು ಕೊಟ್ಟು ಸದರಿ ಕಂದನಕೋವಿ ಗ್ರಾಮದಲ್ಲಿ ನಡೆದ ವಿವಾಹಮಹೋತ್ಸವಕಾಲದಲ್ಲಿ ಮ॥ ಸಾಹುಕಾರ್ ಮಲ್ಲಪ್ಪನವರ ಮಕ್ಕಳು ಗುರುಸಿದ್ಧಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಸಕಾಲದಲ್ಲಿ ಬಂದ ಮ॥ ಬಿಳಿಚೋಡು ಕೆಪ್ಪರ ಸಣ್ಣರುದ್ರಪ್ಪನವರು, ವೀರಶೈವ ಮತಾಧಿಕ್ಯ ವಿಷಯದಲ್ಲಿ ಸರ್ವರಿಗೂ ಮನನವಾಗುವಂತೆ ಉಪನ್ಯಾಸವನ್ನಾಡಿದರು. ಹಾಗು ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೂ ಕೈಲಾಸವಾಸಿ ಮೈಸೂರು ವೈ॥ ವೀರಸಂಗಪ್ಪನವರ ಅಗ್ರತಾಂಬೂಲದ ಬಗೆಗೂ ಸಹ ವಿವಾಹದರೂ ಮೊಬಲಗು ಕೊಡಬೇಕೆಂದು ಮ॥ ಗಂಗನಕಟ್ಟಿಗೌಡರು ಸಿದ್ಧಲಿಂಗಪ್ಪನವರು ಸೂಚಿಸಿದ ಮೇರೆಗೆ ವಿದ್ಯಾಫಂಡಿಗೆ ಎರಡುರೂಪಾಯಿ ಅಗ್ರತಾಂಬೂಲದ ಬಗ್ಗೆ ೧ ರೂ. ಜುಮ್ಲಾ ಮೂರು ರೂಪಾಯಿಗಳನ್ನು ವರನಪಕ್ಷದವರು ಕೊಡಲೊಪ್ಪಿದರು. ಹೀಗೆ ವಸೂಲು ಬಂದ ಮೊಬಲಗನ್ನು ಒಟ್ಟಾಗಿ ತಮ್ಮಲ್ಲಿಗೆ ರವಾನಿಸಿದೆ.

ಓರ್ವ ಮತಾಭಿಮಾನಿ.

[ಈ ಮೊಬಲಗು ನಮಗೆ ಸಂದಿರುತ್ತದೆ. ಪ. ಪ್ರ]

ಯಾದವಾಡ ತಾಲ್ಲೋಕು ಗೋಕಾಕ.

ಶ್ರೀ ಹಾನಗಲ್ಲ ಮಹಾಸ್ವಾಮಿಗಳವರ ಅಪ್ಪಣೆಯ ಮೇರೆಗೆ ರಾವಸಾಹೇಬ ಶಿವಮೂರ್ತಿಸ್ವಾಮಿ ಕಣಬರಗಿಮಠ ಇವರ ಅತ್ಯಾಗ್ರಹದ ಮೂಲಕ ನಮ್ಮೆಲ್ಲರ ಸುದೈವದಿಂದ ನಮ್ಮ ಗ್ರಾಮಕ್ಕೆ ವೇದಮೂರ್ತಿ ಬಸವಲಿಂಗಶಾಸ್ತ್ರಿಗಳವರು ದಯಮಾಡಿಸಿ ತಾ॥ ೨೯-೩೦-೩೧, ೧೯೧೫ ಮಾಹೆ ಮೇ ಈ ೩ ದಿವಸ ಮ॥ ರಾ॥ ಚನ್ನಬಸಪ್ಪ ಅಣ್ಣಾಲಕ್ಷೆಟ್ಟಿ ಲೋಕಲ್‌ಬೋರ್ಡ ಮೆಂಬರ ಇವರ ಮನೆಯಲ್ಲಿ ಕೀರ್ತನವನ್ನು ಮಾಡಿದರು. ಶಾಸ್ತ್ರಿಗಳವರಅರ್ಥ ಗಾಂಭೀರ್ಯ, ಭಾಷಾಶೈಲಿ, ವಾಕ್ಚಾತುರ್ಯ, ಗೀರ್ವಾಣಭಾಷೆಯ ನೈಪುಣ್ಯ ಇವುಗಳನ್ನು ನೋಡಿದರೆ ಯಾರಿಗೂ ಆನಂದವಾಗದೆಇರದು. ಒಟ್ಟಿಗೆ ಈ ಊರಲ್ಲಿ ೬ ಕೀರ್ತನಗಳಾದವು ತಾ॥ ೩೦-೫-೧೯೧೫ನೇ ದಿವಸ ನಡೆದ ಕೀರ್ತನವು ಮುಗಿದ ತರವಾಯ ಇಲ್ಲಿಯ ಅ॥ ಮಾಸ್ತರ ಮಿ॥ ಬಿ. ಜಿ. ಮಠಪತಿಯವರು ಶಾಸ್ತ್ರಿಗಳವರನ್ನು ಬಹಳವಾಗಿ ಕೊಂಡಾಡಿ ಇವರನ್ನು ಇತ್ತಕಡೆಗೆ ಬರಮಾಡಿದ ರಾವ್‌ಸಾಹೇಬ ಕಣಬರ್ಗಿಮಠ ಮ॥ ರಾ॥ ರಾ॥ ಲಕ್ಷೆಟ್ಟಿ ಇವರೀರ್ವರನ್ನು ಬಹಳವಾಗಿ ಶ್ಲಾಘನೆ ಮಾಡಿದರು.

ರಾ॥ ಬ॥ ಆರ್. ಸಿ. ಅರಟಾಳ, ಐ. ಎಸ್. ಬ॥ ಇವರಕಡೆಯ ಆಶ್ರಯದಿಂದ, ಮೃದಂಗ ಬಾರಿಸಲಿಕ್ಕೆ ಕಲಿತು, ಪ್ರತಿನಿತ್ಯದಲ್ಲಿಯೂ ಇವರನ್ನೇ ಕೊಂಡಾಡುತ್ತಿರುವ ಶಿ॥ ರಾ॥ ರಾ॥ ಶಿವಯ್ಯ ಚನ್ನ ವೀರಯ್ಯ ಹಿರೇಮಠದ ಜೇಕಿನಕಟ್ಟಿಯವರು, ಶಿವಯೋಗಿಮಂದಿರದ ಪಂಚಾಕ್ಷರಿ ಪ್ರಸಿದ್ಧ ಗವಯಿಗಳು ಈ ಶಾಸ್ತ್ರಿಗಳವರ ಬೆಂಬಲವಾಗಿರುವುದರಿಂದ ರತ್ನಕ್ಕೆ ಕುಂದಣ ಹಾಕಿದಂತೆ ಆಗಿರುವದು.

ಈ ಶಾಸ್ತ್ರಿಗಳವರಿಗೆ ಮ॥ ರಾ॥ ರಾ॥ ಚನ್ನಬಸಪ್ಪ ಅಣ್ಣಾಲಕ್ಕಸೆಟ್ಟಿ ಇವರು ಒಟ್ಟಿಗೆ ಅರವತ್ತು ರೂಪಾಯಿಗಳನ್ನು ಕೊಟ್ಟರು.

ಓರ್ವಪ್ರೇಕ್ಷಕ.

ಕ್ಯಾತ್ಸಂದ್ರ.

ಇದೇ ಜ್ಯೇಷ್ಠ ಶು॥ ೪ ತಾ॥ ೧೬-೬-೧೯೧೫ ರಲ್ಲಿ ತುಮಕೂರಲ್ಲಿರುವ ಹುಲ್ಕುಂಟಿ ಮ॥ ರಾ॥ ಸಿದ್ಧನಂಜಯ್ಯನವರ ಪುತ್ರ ಮ॥ ನಂಜುಂಡಯ್ಯನವರಿಗೂ ಕ್ಯಾತ್ಸಂದ್ರದ ಮ॥ ರಾ॥ ಕಾರಕಾರಿ ಹುಚ್ಚವೀರಪ್ಪನವರ ಪುತ್ರಿ ಚಿ॥ ಸೌ॥ ರುದ್ರಮ್ಮನಿಗೂ ಕ್ಯಾತ್ಸಂದ್ರದಲ್ಲಿ ಚಿಕ್ಕಹಳ್ಳಿ ವಿ॥ ಆರ್. ಕಪ್ಪಣ್ಣಶಾಸ್ತ್ರಿಗಳು ಹಿರೇಹಳ್ಳಿಮಠದ ಶ್ರೀ ಸಿದ್ಧಪ್ಪದೇವರು ಇವರುಗಳ ಪೌರೋಹಿತ್ಯದಿಂದ ನಡೆದ ವಿವಾಹ ಮಹೋತ್ಸವಕಾಲದಲ್ಲಿ ನೆರೆದಿದ್ದ ಸಭಾದಲ್ಲಿ ತುಮಕೂರ ಮ॥ ರಾ॥ ಷಾಪು ರೇವಣ್ಣನವರು ಶ್ರೀಮದ್ರಂಭಾಪುರೀ ವೀರಸಿಂಹಾಸನದ ಸಮಸ್ತ ಬಿರುದಾನ್ವಿತ ಶ್ರೀಮಜ್ಜಗದ್ಗುರು ಪಂಚಾಕ್ಷರೀ ರಾಜದೇಶಿಕೇಂದ್ರ ಮಹಾಸ್ವಾಮಿಗಳವರ ಸನ್ನಿಧಾನದಿಂದ ದಯಪಾಲಿಸಲ್ಪಟ್ಟಿರುವ ನಿರೂಪದ ಪ್ರಕಾರ ಇಂಥಾ ಶುಭಶೋಭನಾದಿ ಕಾರ್ಯಗಳಲ್ಲಿ ಪ್ರತಿಯೊಬ್ಬ ವೀರಶೈವರೂ ಬೆಂಗಳೂರು ಮಹಾಸಭಾ ವಿದ್ಯಾವರ್ಧಕಫಂಡಿಗೂ ಮತ್ತು ಈ ಮತಕ್ಕೆ ಉಂಟಾಗಿದ್ದ ನ್ಯೂನತೆಗಳನ್ನು ಪರಿಹರಿಸುವ ವಿಷಯದಲ್ಲಿ ತಮ್ಮ ತನುಮನೋಧನಗಳನ್ನರ್ಪಿಸಿ ಮತಸೇವೆಯನ್ನು ಮಾಡಿ ಪ್ರತಿಯೊಬ್ಬ ವೀರಶೈವರಿಗೂ ಮಾರ್ಗದರ್ಶಕರಾಗಿ ಕೀರ್ತಿಪಡೆದಿರತಕ್ಕ ಮ॥ ರಾ॥ ವೈ॥ ವೀರಸಂಗಪ್ಪನವರ ಜ್ಞಾಪನಾರ್ಥ ಅಗ್ರತಾಂಬೂಲವೂ, ಸ್ಟಾರ್‌ಪತ್ರಿಕೆಯ ಚಿರಜೀವಿತೆಯ ಫಂಡಿಗೆ ತಮ್ಮತಮ್ಮ ಶಕ್ತ್ಯನುಸಾರ ಕಾಣಿಕೆಯನ್ನು ತೆಗೆಯುವಂತೆ ಸೂಚಿಸಿದರು. ಇದಕ್ಕೆ ಇಲ್ಲಿನ ಸೆಟ್ಟರು ಮ॥ ರಾ॥ ಚನ್ನಬಸಪ್ಪನವರು ಪಟೇಲ್ ಸಿದ್ಧಬಸಪ್ಪನವರು ಸ॥ ವೀರಸೆಟ್ಟಪ್ಪನವರು ಸೋ॥ ರೇವಣ್ಣಪ್ಪನವರು ಸೋ॥ ಶಿವರುದ್ರಯ್ಯನವರು ತುಮಕೂರು ಹು॥ ಸೋಮಶೇಖರಯ್ಯ ಉರುಡ್ ಚಿಕ್ಕಶಾಪದ್ಯನವರು ಕೆಂಪನಂಜಯ್ಯನವರು ಯಲಿರಾಮಪುರದ ಹೊಸಳ್ಳಪ್ಪನವರು ಮುಂತಾದ ಸ್ಥಳಪರಸ್ಥಳದ ಸಭಾಸದರು ಅನುಮೋದಿಸಿದರು. ಕೂಡಲೆ ವಧೂವರರಕಡೆಯಿಂದ ಮಹಾಸಭಾಫಂಡಿಗೆ ೨ ರೂ. ಮ॥ ರಾ॥ ವೀರಸಂಗಪ್ಪನವರ ಅಗ್ರತಾಂಬೂಲದ ಬಾಬ್ತು ಸ್ಟಾರುಪತ್ರಿಕೆಯ ಚಿರಜೀವಿತೆಯಫಂಡಿಗೆ ೧ ರೂ. ತೆಗೆದು ಜ॥ ಅಂ॥ ಕೆ. ಯಸ್. ವೀರಭದ್ರಪ್ಪನವರ ಮೂಲಕ ಉಭಯಸ್ಥಳಗಳಿಗೂ ಮನಿಯಾರ್ಡರು ಮಾಡಲ್ಪಟ್ಟಿತು. ಇದೇರೀತಿಯಾಗಿ ಪ್ರತಿಯೊಬ್ಬ ವೀರಶೈವರೂ ತಪ್ಪದೆ ಆಚರಿಸಿ ಮತಸೇವೆಯನ್ನು ಮಾಡಬೇಕೆಂಬದಾಗಿ ಪ್ರಾರ್ಥಿಸುವ,

ಮತಾಭಿಮಾನಿ.

[ಈ ಹಣವು ನಮಗೆ ತಲುಪಿರುವುದು. ಪ. ಪ್ರ]

ದಾವಣಗೆರೆ.

ವಿವಾಹಸಮಾರಂಭ:—ವಿವಾಹಕಾರ್ಯಗಳಲ್ಲಿ ದುಂದುವೆಚ್ಚ ಮಾಡಬಾರದೆಂದು ವೀರಶೈವ ಮಹಾಸಭೆಗಳಲ್ಲಿ ಅನೇಕಾವೃತ್ತಿ ತೀರ್ಮಾನವಾಗಿದೆಯಷ್ಟೆ ಆ ರೀತಿ ಇಲ್ಲಿನ ವೀರಶೈವ ಮಹಾಶಯರು ಈವರಿಗೂ ಆಚರಿಸುತ್ತಲೇ ಬಂದಿದ್ದರು. ಆದರೆ ಈವರ್ಷ ಮಾತ್ರ ಕೆಲವು ಧನಿಕರೇ ಈ ನಿಯಮಕ್ಕೆ ವಿರೋಧವಾಗಿ ವರ್ತಿಸಲು ಉಪಕ್ರಮಿಸಿರುವುದು ತುಂಬಾ ವಿಷಾದಕರವಾದುದೇಸರಿ ವಿವಾಹಕ್ಕೆ ೨೦೦-೩೦೦ ರೂಪಾಯಿಗಳನ್ನು ಕೊಟ್ಟು ತಾಫೆದವರನ್ನು ಕರೆಯಿಸಿ ಆ ಮೂಲಕ ದುಂದುವೆಚ್ಚವನ್ನು ತಾವು ಮಾಡಿದುದಲ್ಲದೆ ಅನೇಕರು ದುರಾಚಾರದಲ್ಲಿ ಬೀಳುವುದಕ್ಕೂ ಕಾರಣರಾಗುವುದಕ್ಕಿಂತ ಶಿವಕೀರ್ತನದವರನ್ನು ಕರೆಯಿಸಿ ಸದ್ಬೋಧೆಯನ್ನು ಮಾಡಿಸಿಯಾಗಲಿ ಅಥವಾ ವೀರಶೈವ ವಿದ್ಯಾರ್ಥಿಗಳ ವಿದ್ಯಾಭಿವೃದ್ಧಿಗೆ ಸಹಾಯಮಾಡಿಯಾಗಲಿ ತಾವು ಕೀರ್ತಿಭಾಜನರಾಗುವುದಲ್ಲದೆ ಆ ಮೂಲಕ ಸಮಾಜಕ್ಕೆ ಮಹದುಪಕಾರವನ್ನು ಮಾಡಿದ ಶ್ರೇಯಸ್ಸನ್ನು ಹೊಂದಬಾರದೆ? ಆದ ಪ್ರಯುಕ್ತ ಇನ್ನು ಮೇಲಾದರೂ ಮಹಾಸಭೆಯ ತೀರ್ಮಾನಗಳನ್ನು ತುಂಬಾ ಜ್ಞಾಪಕದಲ್ಲಿಟ್ಟುಕೊಂಡು ನಡೆಯಲೆಂದು ಹಾರೈಸುತ್ತೇವೆ.

ದುಃಖಪ್ರದರ್ಶನಸಭೆ

ಕಳೆದ ತಾ॥ ೧೨ ನೆ ದಿವಸ ಇಲ್ಲಿನ ಶ್ರೀ ವಿರಕ್ತಮಠದಲ್ಲಿ ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಶ್ರೀ ಮೃತ್ಯುಂಜಯ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ವೀರಶೈವ ಹಿತೋಪದೇಶಕಸಂಘ ಸಭೆ ಸೇರಿತ್ತು. ಮೈಸೂರು ನಗರದ ಚನ್ನವೀರಪ್ಪಯ್ಯನವರು ಚಿತ್ರದುರ್ಗದ ಮ॥ ರಾ॥ ಸಾಹುಕಾರ್ ಎಂ. ಬಿ. ಕಾಡಪ್ಪಣ್ಣನವರು ಕಳೆದ ತಾ॥ ೧೧ ರಲ್ಲಿ ಶಿವೈಕ್ಯರಾದುದರಿಂದ ವೀರಶೈವಸಮಾಜಕ್ಕೆ ಉಂಟಾದ ದುಃಖವನ್ನು ಪ್ರದರ್ಶಿಸಲು ಈ ಸಭೆಯು ಸೇರಿದೆ ಎಂದು ಸೂಚಿಸಿದರು. ಅನಂತರ ಮ॥ ರಾ॥ ಹರ್ಡೇಕರ್ ಮಂಜಪ್ಪನವರು—ಮ॥ ರಾ॥ ಸಾಹುಕಾರ್ ಕಾಡಪ್ಪನವರು ಚಿತ್ರದುರ್ಗದಲ್ಲಿ ಕಲಿಯುವ ಬಡ ವೀರಶೈವವಿದ್ಯಾರ್ಥಿಗಳಿಗೆ ಅನ್ನೋದಕಗನ್ನು ಕೊಟ್ಟು ವಿದ್ಯಾಭಿವೃದ್ಧಿಗೆ ತುಂಬಾ ಪ್ರೋತ್ಸಾಹವನ್ನುಂಟುಮಾಡುತ್ತಿದ್ದರೆಂತಲೂ ಸಮಾಜದ ಪುರೋವೃದ್ಧಿಯ ಪ್ರತಿಯೊಂದು ಕಾರ್ಯದಲ್ಲಿಯೂ ಮುಂದಾಳುಗಳಾಗಿದ್ದರೆಂತಲೂ ಅವರ ಅಸಾಧಾರಣವಾದ ಕಾರ್ಯ ಧುರೀಣತ್ವವನ್ನು ವಿವರಿಸಿ ದುಃಖಪ್ರದರ್ಶನದ ವಿಷಯವನ್ನು ಸಭೆಯಮುಂದಿಡಲು ಮ॥ ರಾ॥ ಹೆಡ್‌ಮಾಸ್ಟರ್ ಗುರುಶಾಂತಪ್ಪನವರು ಈ ವಿಷಯವನ್ನು ಅನುಮೋದಿಸಿದುದಲ್ಲದೆ ಭೀಮಸಮುದ್ರದ ಪ॥ ಕೆಂಚವೀರಪ್ಪನವರು ಎಂಬ ಮತಾಭಿಮಾನಿಗಳು ಶಿವೈಕ್ಯರಾದುದರಿಂದಲೂ ಸಮಾಜದವರಿಗೆ ತುಂಬಾ ವಿಷಾದವಾಗಿದೆಯೆಂತಲೂ ತಿಳಿಸಿದರು. ಅನಂತರ ಈ ದುಃಖಪ್ರದರ್ಶನವಿಷಯವನ್ನು ಮ॥ ರಾ॥ ಪ್ಲೀಡರ್ ಸಿದ್ಧನಂಜಪ್ಪನವರ ಹೆಸರಿಗೆ ಕಳುಹಿಸಬೇಕೆಂದು ತೀರ್ಮಾನವಾಗಿ ಸಭೆಯು ಮುಕ್ತಾಯವಾಯಿತು.

ಗುಂಡ್ಲುಪೇಟೆ.

ಇದೇ ರಾಕ್ಷಸನಾಮಸಂವತ್ಸರದ ನಿಜವೈಶಾಖ ಬಹುಳ ಸಪ್ತಮಿವಾದಿವಸ ನಡೆದ ಗುಂಡ್ಲುಪೇಟೆ ತಾ॥ ಕಸಬಾಹೋಬಳಿ ದುಂಬದಾಸನಪುರದ ಮ॥ ರಾ॥ ದೊಡ್ಡವೀರಪ್ಪನವರ ಕುಮಾರರು ಚಿ॥ ರಾ॥ ಕರಿಬಸವಣ್ಣನಿಗೂ ತೆರಕಣಾಂಬಿ ಕಸಬಾ ಗ್ರಾಮದಲ್ಲಿರುವ ಮ॥ ದೇಶದ ಶೆಟ್ಟಿ ರುದ್ರಪ್ಪನವರ ಕುಮಾರ್ತಿ ಚಿ॥ ಸೌ॥ ಗೌರಮ್ಮನಿಗೂ ಆದ ವಿವಾಹಲಗ್ನದ ಸಂದರ್ಭದಲ್ಲಿ ತಾ॥ ೮-೬-೧೯೧೫ ರಲ್ಲಿ ದುಬಂದಾಸನಪುರದ ಮ॥ ದೊಡ್ಡವೀರಪ್ಪನವರ ಸ್ವಗೃಹದಲ್ಲಿ ವಧೂವರರಿಗೆ ಆರತಿ ಅಕ್ಷತೆ ನಡೆಯಿತು ಆಗ್ಯೆ ಮ॥ ಕಸಬಾಹೋಬಳಿ ಶೇಕದಾರರು, ಯಂ. ಭದ್ರಯ್ಯನವರು, ಬೇಗೂರು ಸ್ಕೂಲ್ ಹೆಡ್ಮಾಸ್ಟರ್ ಮ॥ ಯಂ. ಮಲ್ಲಣ್ಣನವರು, ಪಟೇಲ್ ಒಡೇರಪ್ಪನವರು, ಕಾಳಪ್ಪನವರು, ಭಕ್ತಮಾಹೇಶ್ವರರು ಮೊದಲಾದ ವೀರಶೈವಮಂಡಲಿಯು ನೆರೆದಿತ್ತು. ಆಗ ಶೇಕದಾರರು, ಮ॥ ಯಂ. ಭದ್ರಯ್ಯನವರು, ನಮ್ಮ ವೀರಶೈವಮತಸ್ಥರು, ವಿದ್ಯಾ, ಆಚಾರ, ವ್ಯವಹಾರ ಮೊದಲಾದಭಾಗದಲ್ಲಿ ಹಿಂದುಳಿದಿರುವ ವಿಷಯದಲ್ಲೂ, ಉತ್ತರದೇಶದ ನಮ್ಮ ಬಾಂಧವರು ಮುಂದುವರಿಯುತ್ತಿರುವ ಭಾಗದಲ್ಲಿಯೂ ಉಪನ್ಯಾಸಮೂಲಕ ಸರ್ವರಿಗೂ ತಿಳುವಳಿಕೆಯಾಗುವಂತೆ ವೀರಶೈವ ಮತಾಚಾರ, ಧರ್ಮ ಮೊದಲಾದವುಗಳನ್ನೆಲ್ಲಾ ತಕ್ಕಷ್ಟು ಕಾಲ ಅಪ್ಪಣೆಕೊಡಿಸಿದರು. ಮತ್ತು ಈ ವೀರಶೈವ ಮತಾಭಿವೃದ್ಧಿಗಾಗಿ ತಮ್ಮ ತನುಮನೋಧನಗಳನ್ನು ಸಮರ್ಪಿಸಿ, ಈ ಮತಸ್ಥರು ಎಲ್ಲಾ ಭಾಗದಲ್ಲೂ ಮುಂದುವರಿಯುವಂತೆ ಮಾಡಿದ ಶ್ರೀ ಕೈ. ವೈ ವೀರಸಂಗಪ್ಪನವರ ಗುಣಸಂಘಟನಮೂಲಕ ಆ ಮಹನೀಯರು ಈಗಿನಕಾಲದ ಬಸವಾವತಾರ ಮೂರ್ತಿಯಂತೆ ಉದ್ಭವಿಸಿ, ಮತದ ಏಳಿಗೆಗೆ ಕಾರಣಭೂತರೆಂಬುದನ್ನು ಯುಕ್ತಿಯುಕ್ತವಾಗಿ ತಿಳಿಯಪಡಿಸಿ, ಸದರಿ ಕೈ ವೈ ವೀರಸಂಗಪ್ಪನವರ ಹೆಸರಿನಲ್ಲಿ ಇಂಥಾ ಶುಭಕಾರ್ಯಗಳಲ್ಲಿ ಅಗ್ರತಾಂಬೂಲವನ್ನು ತೆಗೆಯಬೇಕಲ್ಲದೆ ಶಕ್ತ್ಯನುಸಾರ ಶ್ರೀಯವರ ಸ್ಮಾರಕಫಂಡಿಗೆ ಧನಸಹಾಯ ಮಾಡಬೇಕೆಂದು ಹೇಳಿದರು. ಈ ಮತದ ಅಭಿವೃದ್ಧಿಗೆ ವಿದ್ಯೆಯೇ ಮೊದಲನೇಕಾರಣವೆಂದು ಮಹನೀಯರು ಸ್ಥಾಪಿಸಿರುವ ವೀರಶೈವಮಹಾಸಭೆಯ ಉದ್ದೇಶಗಳನ್ನೂ ಸಭೆಯಿಂದ ಆಗುತ್ತಿರುವ ಪ್ರಯೋಜನಗಳನ್ನೂ ಸಾಂಗವಾಗಿ ತಿಳಿಸಿದ್ದಲ್ಲದೆ ಇಂಥಾ ಶುಭಕಾರ್ಯಗಳಲ್ಲಿ ಸಾಧ್ಯವಾದಮಟ್ಟಿಗೂ ವೀರಶೈವ ವಿದ್ಯಾಭಿವೃದ್ಧಿಫಂಡಿಗೆ ಧನಸಹಾಯಮಾಡುವ ಪದ್ಧತಿಯನ್ನು ಅನುಸರಿಸಬೇಕೆಂದು ಹೇಳಿದುದರಮೇಲೆ ಮ॥ ಬೇಗೂರು ಸ್ಕೂಲ್ ಹೆಡ್ಮಾಸ್ಟರ್ ಯಂ. ಮಲ್ಲಣ್ಣನವರು, ಮ॥ ಶೇಕದಾರ್ ಭದ್ರಯ್ಯನವರು ಬೋಧಿಸಿದ ವಿಷಯಗಳನ್ನು ಮತ್ತಷ್ಟು ಪುಷ್ಟೀಕರಿಸಿ, ಈ ಪ್ರಾಂತ ವಿದ್ಯೆಯಲ್ಲಿ ಹಿಂದುಳಿದಿರುವ ನಮ್ಮ ವೀರಶೈವ ಮತಸ್ಥರು ಇನ್ನುಮುಂದೆಯಾದಗೂ ಉತ್ತಮಸ್ಥಿತಿಗೆ ಬರುವಂತೆ ಮಾಡಿಕೊಳ್ಳಬೇಕೆಂದು ಹೇಳಿದರು. ಸಭಿಕರೆಲ್ಲರೂ ತುಂಬಾ ಸಂತೋಷದಿಂದ ಒಪ್ಪಂಬಟ್ಟು ಶ್ರೀ ಕೈ ವೈ ವೀರಸಂಗಪ್ಪನವರ ಹೆಸರಿನಲ್ಲಿ ಅಗ್ರತಾಂಬೂಲವನ್ನೂ ಶ್ರೀಯವರ ಸ್ಮಾರಕಫಂಡಿಗಾಗಿ ಒಂದು ರೂಪಾಯನ್ನೂ, ವಿದ್ಯಾಭಿವೃದ್ಧಿಫಂಡಿಗಾಗಿ ವರನಕಡೆಯಿಂದ ಎರಡು ರೂ. ವಧುವಿನಕಡೆಯಿಂದ ಒಂದು ರೂ. ಯನ್ನೂ ತೆಗೆದು, ಸದರಿ ಮೊಬಲಗು ಮಣಿಯಾರ್ಡರ್ ಮೂಲಕ ರವಾನೆ ಮಾಡಲ್ಪಟ್ಟಿತು. ಈ ತಾ॥ ಮತ್ತು ಚಾಮರಾಜನಗರ ತಾ॥ ಮೊದಲಾದ ಕೆಲವೆಡೆಗಳಲ್ಲಿ ವೀರಶೈವರು ಬಾಹುಳ್ಯವಾಗಿಯೂ ಸಂಪದ್ಯುಕ್ತರಾಗಿಯೂ ಇರುತ್ತಾರೆ. ಇವರು ಲಗ್ನ ಮೊದಲಾದ ಶುಭಕಾರ್ಯಗಳಲ್ಲಿ ನಡೆಯಿಸುತ್ತಿರುವ ದುಂದುವೆಚ್ಚಗಳನ್ನು ವಜಾಮಾಡಿ ಮಹನೀಯ ಸಭೆಯವರು ಏರ್ಪಡಿಸಿರುವಂತೆ ಆಚರಣೆಗೆ ತಂದಾರೆಂದು ನಂಬುತ್ತೇನೆ ಈ ಗುಂಡ್ಲುಪೇಟೆ ಟವನ್‌ನಲ್ಲಿರುವ ಮ॥ ರಾ॥ ಗುರುಕಾರ್ ನಂಜಪ್ಪನವರು ವಿದ್ಯಾವಂತರಾಗಿಯೂ, ಪ್ರಾಜ್ಞರಾಗಿಯೂ, ಪ್ರಮುಖರಾಗಿಯೂ ಇರುವುದರಿಂದ ಇವರು ಶುಭಕಾರ್ಯಗಳಲ್ಲಿ ಮೇಲ್ಕಂಡಂತೆ ವೀರಶೈವಮತಸ್ಥರೆಲ್ಲರೂ ಆಚರಣೆಗೆ ತರುವಂತೆ ಪ್ರೋತ್ಸಾಹಿಸುವರೆಂದು ನಂಬುತ್ತೇನೆ.

ಮತಾಭಿಮಾನಿ.

ಕಪ್ಪಕೋಳಿಸಂಸ್ಥಾನ—ಕೊಲ್ಲಾಪುರ.

ಶ್ರೀಮನ್ನೃಪಶಾಲಿವಾಹನ ಶಕ ೧೮೩೭ನೆ ರಾಕ್ಷಸನಾಮ ಸಂವತ್ಸರದ ನಿಜವೈಶಾಖ ಶು॥ ೧೦ ಬುಧವಾರ ಕಪ್ಪಕೋಳಿ ಶ್ರೀಮಠದಲ್ಲಿ ಮಂತ್ರೋಪದೇಶ ವಾಯಿತು. ಇದಕ್ಕೆ ದಯಮಾಡಿಸಿದ್ದ ಸ್ವಾಮಿಗಳ ವಿವರ-ಶ್ರೀಮನ್ನಿರಂಜನ ಬುಕ್ಕುಂದಿಮಠದ ಸ್ವಾಮಿಗಳು ಕಲಾದಗಿ ಪಟ್ಟದದೇವರು ಮುರಗೋಡ ಪಟ್ಟದದೇವರು ಬನ್ನೂರ ಪಟ್ಟದದೇವರು ಸತ್ತಿಗೇರಿ ಪಟ್ಟದದೇವರು ಹನಮರಟ್ಟಿ ಪಟ್ಟದದೇವರು ವಗೈರೆ ಸ್ವಾಮಿಗಳ ಮುಖಾಂತರ ಶಾಸ್ತ್ರೋಕ್ತರೀತಿಯಿಂದಾಗಿ ೪-೫ಸಾವಿರ ಜಂಗಮ ಪಡಕ್ತಜನರ ಅನ್ನಸಂತರ್ಪಣೆಯಿಂದಲೂ ದ್ರವ್ಯದಾನ ವಸ್ತ್ರದಾನದಿಂದಲೂಸಂತೋಷಪಡಿಸಿದರು. ಶು॥ ೧೩ನೆ ಗುರುವಾರದ ದಿವಸವೂ ಅನ್ನಸಂತರ್ಪಣೆಯಾಗಿ ಸ್ವಾಮಿಗಳ ಮೆರವಣಿಗೆ ಮಹೋತ್ಸವವು ಸಂಜೆ ೮ ಗಂಟೆಗೆ ಸಾಗಿ ಅಡ್ಡಪಲ್ಲಕ್ಕಿ ನಂದಿಧ್ವಜ ವ್ಯಾಘ್ರನತೋಳಗಳಿಂದ ೨ ಆನೆ ಕುದುರೆಗಳಿಂದಲೂ ನಗಾರಿ ನೌಬತ್ತಿನಿಂದಲೂ ಭಜನೆತಾಳ ತಮಟೆಗಳಿಂದಲೂ (ಪುರಜನ) ದೇಸಾಯಿ ದೇಶಪಾಂಡೆ ಶೆಟ್ಟಿ ಸಾವುಕಾರ ಪುರಜನ ಪರಸ್ಥಳಜನ ಎಂಟು ಹತ್ತು ಸಾವಿರ ಜನರಿಂದೊಡಗೂಡಿ ಸದರಿ ಮಠದಿಂದ ಸ್ವಾಮಿಗಳನ್ನು ವಾಹನಾರೂಢರನ್ನಾಗಿಹೊರಡಿಸಿದರು. ಈ ಮೊದಲೆ ಗ್ರಾಮಶೃಂಗಾರವು ಸಾರಣೆಯಿಂದಲೂ ತಳಿರುತೋರಣಗಳಿಂದಲೂ ಧ್ವಜಪತಾಕೆಗಳಿಂದಲೂ ಶೃಂಗರಿಸಲ್ಪಟ್ಟಿತ್ತು. ಎಲ್ಲಿನೋಡಿದರಲ್ಲಿ ಶಿವಮಹಿಮೆ ಸಾಗಿತ್ತು. ಅಲ್ಲಲ್ಲಿ ಮುತ್ತೈದೆಯರು ಪನ್ನೀರಿನಿಂದಚರಣಗಳನ್ನುತೊಳೆದು ಮಂಗಳಾರತಿ ಬೆಳಗಿ ಜಯನಮಃ ಪಾರ್ವತೀಪತೆ ಹರಹರ ಮಹಾದೇವ ಎಂಬ ಜಯಘೋಷದಿಂದ ಸಾಗಿ ಕುಮಾರಸ್ವಾಮಿ ಮಠಕ್ಕೆ ಬಂದು ಸ್ವಾಮಿಗಳ ಆಶೀರ್ವಾದ ಪಡಕೊಂಡು ಯಾವದೂ ತೊಂದರೆಯಿಲ್ಲದೆ ರಾತ್ರಿ ೫ ಘಂಟೆಗೆ ಸ್ಥಳಕ್ಕೆ ಮುಟ್ಟಿದರು. ಶಿವಸ್ವರೂಪಿಯಾದ ಜಂಗಮರಿಗೆ ಯಾವದು ತಾನೇ ಕೊರತೆಯಾದೀತು?

ಪ್ರತ್ಯಕ್ಷದರ್ಶಿ.

ದೇಶಪರ್ಯಟನೆ,

ಮಿರ್ಜಿಸಂಸ್ಥಾನದ ಪೈಕಿ ಶಿರಹಟ್ಟಿಯು ಶ್ರೀ॥ ಫಕೀರಸ್ವಾಮಿಗಳ ಮಠವಿದ್ದು, ಸದರಿ ಮಠದಲ್ಲಿ ಪ್ರತಿ ಸಂವತ್ಸರದ ವೈಶಾಖಶುದ್ಧ ೧೫ ರಲ್ಲಿ ರಥೋತ್ಸವವು ಬಹು ವಿಜೃಂಭಣೆಯಿಂದ ಅನೂಚಾನವಾಗಿ ನಡೆಯುತ್ತಿರುವ ಸಂಗತಿಯು ಸರ್ವರಿಗೂ ವೇದ್ಯವಾಗಿದೆಯಷ್ಟೆ. ಆ ಕಾಲಕ್ಕೆ ಸರಕಾರಿ ಅಧಿಕಾರಿಗಳು ಸ್ವಸ್ಥಳ ಪರಸ್ಥಳದ ಎಲ್ಲ ಮತೀಯರೂ ಸಾಧಾರಣ ಹತ್ತುಸಾವಿರ ಜನಗಳಿಗೆ ಕಮ್ಮಿಯಿಲ್ಲದಂಥ ಜನಸಂಖೆಯು ಸೇರುವ ಸಂಗತಿಯನ್ನು ವೀರಶೈವ ಹಿತೋಪದೇಶಸಂಘವನ್ನು ಅನೇಕಕಡೆಗೆ ಸ್ಥಾಪನೆಮಾಡಿ ಆ ಮೂಲಕ ನಮ್ಮ ವೀರಶೈವ ಮತಧರ್ಮಸುಧಾರಣೆಯ ವಿಷಯದಲ್ಲಿ ಬದ್ಧಾದರರಾದ ನಮ್ಮ ಶ್ರೀ॥ ಜಗದ್ಗುರುಪೀಠದ ಶಾಖಾನುವರ್ತಿಗಳಾದ ದಾವಣಗೆರೆ ವಿರಕ್ತಮಠದ ಶ್ರೀ॥ ಮೃತ್ಯುಂಜಯಸ್ವಾಮಿಗಳವರುಕೇಳಿ ಧರ್ಮಬೋಧೆಮಾಡಲು ನಾನಾಗಿಯೇ ಪ್ರಯತ್ನಪೂರ್ವಕ ಜನಗಳನ್ನು ಸೇರಿಸಿ ಸುಧಾರಣೆ ಮಾಡುವದಕ್ಕಿಂತಲೂ ಅನಾಯಾಸವಾಗಿ ಶ್ರೀ॥ ಫಕೀರಸ್ವಾಮಿಗಳವರ ತಪಃಪ್ರಭಾವದಿಂದ ಸೇರುವ ಜನಗಳಿಗೆ ಧರ್ಮಬೋಧೆಮಾಡಲು ಇದು ಸುಸಮಯವೆಂದು ತಮ್ಮ ದಿವ್ಯಚಿತ್ತಕ್ಕೆ ತಂದುಕೊಂಡು, ಶ್ರೀ॥ ಪೂಜ್ಯಪಾದರವರು ತಮ್ಮ ಭಜನಾಸಂಘದವರೊಡನೆಯೂ ವಿದ್ಯಾರ್ಥಿಗಳೊಡನೆಯೂ ಸಕಾಲಕ್ಕೆ ಸಿರಹಟ್ಟಿಗೆ ದಯಮಾಡಿಸಿದರು. ರಥೋತ್ಸವ ತೀರಿದ ಮರುದಿವಸ ಸಾಯಂಕಾಲ ೫ ಘಂಟೆಯಿಂದ ರಾತ್ರಿ ೯ ಘಂಟೆವರೆಗೆ ಸಭಾ ಸೇರಿರಲು ಸದರಿ ಸಭೆಯಲ್ಲಿ ಅಮಲ್ದಾರರೂ ಇನ್ನು ಕೆಲವು ಸರಕಾರಿ ಉದ್ಯೋಗಿಗಳೂ ಲೌಕಿಕರೂ ವೈದಿಕರೂ ಬಂದಿದ್ದರು. ಆ ಕಾಲದಲ್ಲಿ ಶ್ರೀ॥ ಮೃತ್ಯುಂಜಯಸ್ವಾಮಿಗಳವರ ಆಜ್ಞಾಪ್ರಕಾರ ವೇ॥ ಖಾನಾಪುರದ ಹಿರೇಮಠದ ವಿರೂಪಾಕ್ಷಶಾಸ್ತ್ರಿಗಳು ಆಸ್ತಿಕ್ಯ ಬುದ್ಧಿಯ ವಿಷಯದಲ್ಲಿ ಸರ್ವರಿಗೂ ಆನಂದವುಂಟಾಗುವಂತೆ ಭಾಷಣ ಮಾಡಿದರು. ಅನಂತರ ದಾವಣಗೆರೆ ವಿದ್ಯಾರ್ಥಿಯಾದ ಶಿವಸಂಗಯ್ಯನು ಸರ್ವರೂ ವಿದ್ಯಾಭ್ಯಾಸ ಮಾಡಬೇಕೆಂಬ ವಿಷಯವನ್ನು ಕುರಿತು ಭಾಷಣಮಾಡಿದನು. ತರುವಾಯ ಸದರಿ ವಿದ್ಯಾರ್ಥಿಯು ಮಾಡಿದ ಉಪನ್ಯಾಸ ವಿಷಯವಾಗಿ ಸಿರಹಟ್ಟಿ ವಕೀಲ ಅಡವಪ್ಪನವರು ಎದ್ದು ನಿಂತು ಚೆನ್ನಾಗಿ ಪ್ರೋತ್ಸಾಹ ಮಾಡಿ ಸರ್ವರಿಗೂ ತಿಳಿಯುವಂತೆ ಭಾಷಣ ಮಾಡಿದರು. ಅನಂತರ ಭಜನಾಸಂಘದವರಿಂದ ಇಂಪಾದ ಗಾನದೊಡನೆ ಶಿವಭಜನೆಯು ಮಾಡಲ್ಪಟ್ಟಿತು. ಅನಂತರ ಶ್ರೀ॥ ಫಕೀರಸ್ವಾಮಿಗಳವರಿಂದ ಬಂದಿದ್ದ ಸಮಸ್ತ ಭಕ್ತಮಾಹೇಶ್ವರರಿಗೆ ಆಶೀರ್ವಾದವು ದಯಪಾಲಿಸಲ್ಪಟ್ಟಿತು. ಸಭಾ ಬರ್ಖಾಸ್ತಾಯಿತು. ಮರುದಿವಸ ಶ್ರೀ॥ ಫಕೀರಸ್ವಾಮಿಗಳವರು ಶ್ರೀ॥ ಮೃತ್ಯುಂಜಯಸ್ವಾಮಿಗಳವರ ಭಜನಾಸಂಘದವರಿಗೆ ಅವರವರ ಯೋಗ್ಯತಾನುಸಾರವಾಗಿ ಆಶೀರ್ವಾದವನ್ನು ದಯಪಾಲಿಸಿದರು ಆಮೇಲೆ ಅದೇ ತಾಲ್ಲೂಕ ಬಟ್ಟೂರ ಎಂಬ ಗ್ರಾಮದ ಹಿರೇಮಠದ ಚನ್ನವೀರಯ್ಯನವರ ಪ್ರಾರ್ಥನೆಯ ಮೇರೆ ಶ್ರೀ॥ ಮೃತ್ಯುಂಜಯ ಸ್ವಾಮಿಗಳವರು ತಮ್ಮ ಪರಿವಾರಸಮೇತ ಬಟ್ಟೂರಿಗೆ ದಯಮಾಡಿಸಿ ಅಲ್ಲಿಯೂ ವೀರಶೈವ ಹಿತೋಪದೇಶಸಂಘವನ್ನು ಸ್ಥಾಪನೆಮಾಡಿ ಮತಸಂಬಂಧದುಪನ್ಯಾಸಗಳಿಂದಲೂ ಶಿವಭಜನೆಯಿಂದಲೂ ಅಲ್ಲಿಯ ಸಮಸ್ತ ಭಕ್ತಮಾಹೇಶ್ವರರನ್ನು ಸಂತೋಷಪಡಿಸಿ ಅಲ್ಲಿಂದ ಲಕ್ಷ್ಮೇಶ್ವರಕ್ಕೆ ದಯಮಾಡಿಸಿ, ಅಲ್ಲಿ ಶಿವಭಕ್ತಿಧುರೀಣರಾದ ತಟ್ಟಿ ದೊಡ್ಡಬಸಪ್ಪನವರ ಮನೆಯಲ್ಲೂ ಅಲ್ಲಿಯ ಭಕ್ತಮಹೇಶ್ವರರನ್ನು ಸೇರಿಸಿ ಧರ್ಮಬೋಧೆಯಿಂದಲೂ ಶಿವಭಜನೆಯಿಂದಲೂ ಸರ್ವರಿಗೂ ಆನಂದವನ್ನುಂಟುಮಾಡಿ, ಅಲ್ಲಿಂದ ಮರುದಿವಸ ಗುಡಿಗೇರಿಗೆ ಸಮಸ್ತ ಪರಿವಾರದೊಡನೆ ದಯಮಾಡಿಸಿ ಅಲ್ಲಿಯೂ ವೀರಶೈವ ಹಿತೋಪದೇಶಸಂಘವು ನಿರ್ವಿಘ್ನವಾಗಿ ನಡೆಯುವಂತೆ ಏರ್ಪಾಡುಮಾಡಿ, ಅಲ್ಲಿಯೂ ಭಕ್ತಾದಿಗಳಿಗೆಲ್ಲಾ ಧರ್ಮಬೋಧೆಯನ್ನು ಮಾಡಿ ಅಲ್ಲಿಂದ ದಾವಣಗೆರೆಗೆ ಸಮಸ್ತ ಪರಿವಾರದೊಡನೆ ದಯಮಾಡಿಸಿದರು. ಈ ಮಹಾತ್ಮರು ವೀರಶೈವಧರ್ಮಸುಧಾರಣೆಯ ವಿಷಯದಲ್ಲಿ ಪ್ರಯತ್ನಪಡುತ್ತಿರುವಂತೆ ನಮ್ಮ ಮತದ ಪಂಚಾಚಾರ್ಯರ ವಂಶಜರೆಲ್ಲರೂ ಪ್ರಯತ್ನಮಾಡಿದರೆ ನಮ್ಮ ಮತವು ಬೇಗ ಅಭಿವೃದ್ಧಿಯ ಸ್ಥಿತಿಗೆ ಬರಲು ಯಾವ ಸಂದೇಹವೂ ಇಲ್ಲ.

ಓರ್ವ ಭಕ್ತ.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದಪಟಗಳು

89

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕದನಗಳ ಪಟಗಳೂ ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ ೨ ಆಣೆ; ವಿ. ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ:—ದಿ ಜನರಲ್ ಏಜನ್ಸಿ. ಮೈಸೂರು

S.U.N.&Co
BENARES CITY.
KASHI
VISHWESHWAR.

39

ದೊಡ್ಡಕಂಪನಿ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅನುಕೂಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ—ಎಸ್. ಯು. ಎನ್ ಮತ್ತು ಕಂಪನಿ,
ಬನಾರಿಸ್ ಸಿಟಿ (ಕಾಶೀ)

ಊದಬತ್ತಿಗಳು.

6

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹರೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್‌ಸನ್ಸ್
ಸುಗಂಧಕಾರಿ, ಮೈಸೂರು.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

26

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪ್ರದ್ರೇಕವಾದವರು, ತೃಷೆಯುಳ್ಳವರು, ದಮ್ಮಿಸವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲಿ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲಿಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರ ಕನಡಾ.

ಲಗ್ನಪತ್ರಿಕೆಗಳ ಮುದ್ರಣಕ್ರಮ.

ನಮ್ಮ ಕ್ರಾನ್ ಮುದ್ರಾಶಾಲೆಯಲ್ಲಿ ಲಿಂಗ, ಬಸವ, ನಟೇಶ್ವರ, ಉಮಾಮಹೇಶ್ವರ, ಗಜಲಕ್ಷ್ಮಿ, ಶಂಖ, ಚಕ್ರ, ಹನುಮಂತ, ಗರುಡ, ನಾಮ, ಗಿರಿಜಾಕಲ್ಯಾಣ, ಸೀತಾಕಲ್ಯಾಣ ಈ ವಿಗ್ರಹಗಳಲ್ಲಿ ಅಪೇಕ್ಷಿತವಾದುವುಗಳನ್ನುಪಯೋಗಿಸಿ ಕ್ಲುಪ್ತ ಕಾಲದಲ್ಲಿ ಬಹಳ ಸುಲಭವಾದ ಛಾರ್ಜಿನಿಂದ ಲಗ್ನಪತ್ರಿಕೆಯನ್ನು ಅಚ್ಚುಮಾಡಿಸಿ ಕೊಡುತ್ತೇವೆ.

ಚಿನ್ನದ ಗಿಲೀಟ್ ಅಕ್ಷರಗಳಿಂದ ಸ್ವಚ್ಛವಾದ ಕಾಗದದ ಮೇಲೆ ನೇತ್ರಾನಂದಕರವಾಗಿ ನೂರು ಲಗ್ನಪತ್ರಿಕೆಗಳನ್ನು ಮುದ್ರಿಸಲು ೨-೪-೦ ರೂ. ಆಗುತ್ತದೆ. ನೂರಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದರೆ ಅನಂತರ ಪ್ರತಿನೂರಕ್ಕೂ ೧-೦-೦ ರೂ. ಕೊಡಬೇಕಾಗುವುದು ಕೆಂಪು, ಹಸುರು, ನೀಲಿ, ಬ್ರಾಂಜ್‌ಬ್ಲೂ ಮೊದಲಾದ ಬಣ್ಣದ ಶಾಯಿಯಲ್ಲಿ ಒಂದೇತರದ ಬಣ್ಣದಿಂದ ಬಿಳಿ ಗ್ಲೇಜುಕಾಗದದಮೇಲೆ ಮುದ್ರಣಮಾಡಿದರೆ ಮೊದಲನೇ ೧೦೦ ಕ್ಕೆ ೨-೦-೦; ಅನಂತರ ಪ್ರತಿ ೧೦೦ಕ್ಕೂ ೦-೧೨-೦; ಹಳದೀ ಗ್ಲೇಜ್‌ಕಾಗದದ ಮೇಲೆ ಕಪ್ಪುಶಾಯಿಯಲ್ಲಿ ಮೊದಲನೇ ೧೦೦ಕ್ಕೆ ೨-೨-೦; ಅನಂತರ ಪ್ರತಿ ೧೦೦ ಕ್ಕೂ ೦-೧೪-೦; ಹಳದಿ ರಫ್ ಕಾಗದದಮೇಲೆ ಕಪ್ಪು ಶಾಯಿಯಲ್ಲಿ ನೂರು ಪತ್ರಿಕೆಗಳನ್ನು ಅಚ್ಚುಮಾಡಲು ೧-೬-೦ ಯನ್ನೂ, ೧೦೦ ಕ್ಕಿಂತ ಹೆಚ್ಚು ಪತ್ರಿಕೆಗಳು ಬೇಕಾದ ಸಂದರ್ಭದಲ್ಲಿ ಅನಂತರ ಪ್ರತಿ ನೂರಕ್ಕೂ ೦-೬-೦ ಆಣೆಯಂತೆ ಕಳುಹಬೇಕು. ಕ್ಲುಪ್ತ ಕಾಲದಲ್ಲಿ ಮುದ್ರಿಸಿ ಕಳುಹಿಸುವುದಲ್ಲದೆ, ಕಾಗದದ ಬೆಲೆಯನ್ನೂ ಪರಸ್ಥಳದವರಿಗೆ ಅಂಚೆಯ ವೆಚ್ಚವನ್ನೂ ನಾವೇ ವಹಿಸಿಕೊಳ್ಳುವೆವು. ಒಂದಾವೃತ್ತಿ ಮುದ್ರಿಸಿದ ಅನಂತರ ಅದನ್ನೇ ಬೇರೊಂದು ವಿಧವಾಗಿ ವ್ಯತ್ಯಾಸಮಾಡಿ ಅಚ್ಚುಮಾಡಬೇಕಾದರೆ ೧-೦-೦ ರೂ. ನ್ನು ಹೆಚ್ಚಾಗಿ ಕೊಡಬೇಕು, ಮಿಕ್ಕ ವಿಷಯವನ್ನು ಬರೆದು ತಿಳಿದುಕೊಳ್ಳಬಹುದು,

ಮ್ಯಾನೇಜರ್,
ಕ್ರಾನ್‌ಪ್ರೆಸ್, ಮೈಸೂರ್.

೫೦೦ ರೂಪಾಯಿಗಳ ಬಹುಮಾನ

ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್‌ಬ್ಯಾಂಕಿನಲ್ಲಿ ಮೇಲ್ಕಂಡ ೫೦೦ ರೂಪಾಯಿಗಳನ್ನು ೧೯೧೫ ನೆ ಇಸವಿ ಮಾರ್ಚಿ ತಾ॥ ೧೫ ರಲ್ಲಿ ಡಿಪಾಜಿಟ್ಟು ಇಟ್ಟಿರುತ್ತೇವೆ. 7

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುತ್ತಿರುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ « ಸಾಲಾಮಿಸ್ರೀ ಮುರಬ್ಬಾವನ್ನು " ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್‌ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಸಾಲಾಮಿಸ್ರಿಯ ಧಾರಣೆಯು ಜಾಸ್ತಿಯಾಗಿರುವದರಿಂದ ಅನೇಕರು ಉರುಳುಗಡ್ಡೆ, ಶಾಮುಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹಾದ್ದೋ ಎಂಬುವದು ತಿಳಿದುಬರುತ್ತದೆ.

ಸಾಲಾಮಿಸ್ರಿ ಮುರಬ್ಬಾವು—ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವುದು.
ಸಾಲಾಮಿಸ್ರಿ ಮುರಬ್ಬಾವು—ನಿದ್ರೆಯಲ್ಲಿ ಧಾತುವು ಹೋಗುವುದನ್ನು ನಿಲ್ಲಿಸುವುದ.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಧಾತುಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕ್ಷಣ ಕ್ಷಣಕ್ಕೆ ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ವೃದ್ಧಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಶ್ವಾಸಬಾರ ರೋಗಗಳನ್ನು ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹೊಟ್ಟೆಯಲ್ಲಿರುವ ಜ್ವರದಗಡ್ಡೆ ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೆಟ್ಟುಹೋಗಿರುವ ರಕ್ತವನ್ನು ಶುದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಳೆತಲೆನೋವನ್ನು ಹೋಗಲಾಡಿಸಿ ಮಿದುಳಿಗೆ ಬಲವನ್ನುಂಟುಮಾಡುವದು.
ಸಾಲಾಮಿಸ್ರಿ ಮುರಬ್ಬಾವು—ಉತ್ಸಾಹ, ಧೈರ್ಯ, ಬುದ್ಧಿಕುಶಲತೆ, ಶರೀರಕಾಂತಿಯನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು—ತಾಂಬ್ರ, ಬೆಳ್ಳಿ, ಮತ್ತು ಭಂಗಾರ ಭಸ್ಮಕ್ಕಿಂತಲೂ ಉತ್ತಮವಾದುದು.
ಸಾಲಾಮಿಸ್ರಿ ಮುರಬ್ಬಾವು—ಸ್ತ್ರೀ ಸಂಗಕ್ಕೆ ಮೊದಲೆ ಧಾತು ಸ್ಖಲನವಾಗುವದನ್ನು ನಿಲ್ಲಿಸುವದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯ್ಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪುರಾ ಗುಣಕೊಡುತ್ತದೆ. ೨-೩ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು « ಸಾಲಾಮಿಸ್ರಿ " ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನಮ್ಮಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ ಕ್ಕೆ ಕ್ರಯ ೨—೦—೦ ರೂಪಾಯಿ. ಟಪ್ಪಾಲು ಖರ್ಚು ೧ ಡಬ್ಬಿಯಿಂದ ಡಬ್ಬಿಗಳ ವರೆಗೆ ೬ ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ವಿಳಾಸ:—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
೫, ಅವೆನ್ಯೂರೋಡ್ ಬೆಂಗಳೂರು ಸಿಟಿ.

ಬಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು. 6

ಶೀಘ್ರಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊತೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನ ಚ್ಚು ಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈ ಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇವೊಂದು ಬುದ್ದಿಯು ನಿಮ್ಮಲ್ಲಿರಲಿ. ಮತ್ತೊಂದು ಸಹಾಯವ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುದ್ದಿಯ ಬೆಲೆ ೧—೦—೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೯—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತೆ.	೦—೫—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ 37

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್‌ಕಸ್ತೂರಿ, ಚಿನ್ನದರೇಖು, ಲೋಹಭಸ್ಮ ಮುಂತಾದವುಗಳಿಂದ ವಂಶಪಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀಕರಕಸ್ತೂರಿಮಾತ್ರೆಗಳನ್ನು ತಾಂಬೂಲದೊಡನೆ ಅಥವಾ ಹಾಗೆ ಉಪಯೋಗಿಸಿದರೆ ಆಹಾರವು ಬೇಗನೆ ಜೀರ್ಣವಾಗಿ ಬಹಳಹೊತ್ತು ಬಾಯಿ ಘಮಘಮಿಸುತ್ತಿರುವುದು.

ಛಳಿಮಳೆಗಾಲಗಳಲ್ಲೂ, ಸೋಂಕುರೋಗಸ್ಥಳಗಳಲ್ಲೂ, ಪ್ರಯಾಣಕಾಲದಲ್ಲೂ, ಮಕ್ಕಳಿರುವ ಮನೆಗಳಲ್ಲೂ, ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಶೀತವಾಯು, ಕೆಮ್ಮು, ನೆಗಡಿ, ಅಜೀರ್ಣಭೇದಿ, ಮಲಬಂಧ, ವರಸೇಜ್ವರ, ಪ್ಲೇಗುಜ್ವರ, ಮಲೇರಿಯಾಜ್ವರ, ನಡುನೋವು, ಅರೋಚಕ, ಹಲ್ಲುನೋವು, ಮೈಕೈನೋವುಗಳು ಬಹಳಬೇಗನೆ ವಾಸಿಯಾಗುತ್ತವೆ. ಮಕ್ಕಳಿಗೆ ಸಂಜೀವನ—ಯಾವಾಗಲೂ ವಿಳಾಸವನ್ನು ಪರೀಕ್ಷಿಸಿ ಔಷಧವನ್ನು ಕೊಂಡುಕೊಳ್ಳಿರಿ—ಮೋಸಹೋಗಬೇಡಿರಿ. ೩೫೦ ಮಾತ್ರೆಯುಳ್ಳ ಸೀಸೆಯ ಬೆಲೆ ೦—೪—೦ ಆಣೆ. ಐದಕ್ಕೆ ಒಂದು ಮುಫತ್ತು. ಟಪಾಲ್‌ಖರ್ಚು ಬೇರೆ.

ಆಮೋದಿನಿ.

ಸಂಗೀತಗಾರರಿಗೆ ಅತ್ಯಂತ ಸುಖವನ್ನೂ, ವಿದ್ಯಾರ್ಥಿಗಳಿಗೆ ಆನಂದವನ್ನೂ, ಪ್ರಯಾಣಿಕರಿಗೆ ಆಯಾಸಪರಿಹಾರವನ್ನೂ, ಉಂಟುಮಾಡಿ ಬಿಸಿಲುಕಾಲದ ಅಥವಾ ಆಯಾಸದ ಬಾಯಾರಿಕೆಯನ್ನು ತಕ್ಷಣ ಅಣಗಿಸಿ, ಎಂತಹ ಕೆಮ್ಮು, ಉಬ್ಬಸಗಳನ್ನಾದರೂ ವಾಸಿಮಾಡಿ ಆಬಾಲವೃದ್ಧರಿಂದಲೂ ಹೊಗಳ್ಪಡುತ್ತಲಿರುವ ಕೈಗಂಡಸಿದ್ಧಾಮೃತ, ಮತ್ತಾವ ಮಾತ್ರೆಗಳೂ ಇಷ್ಟು ಮನೋಹರವಾಗಿಲ್ಲವೆಂಬುದನ್ನು ನಂಬಿರಿ! ೧೫೦ ಮಾತ್ರೆಯ ಸೀಸೆ ೦—೪—೦ ಆಣೆ. ಐದಕ್ಕೆ ಒಂದು ಹೆಚ್ಚು. ಟಪಾಲ್‌ಖರ್ಚು ಪ್ರತ್ಯೇಕ.

ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರು ಡಿ॥

೧೯೧೫ನೆಯ ಇಸವಿ ಜೂನ್ ತಾ॥ ೨೭ರಿಂದ ೧೯೧೫ ನೆಯ ಜುಲೈ ತಾ॥ ೩ ರವರೆಗೆ ಸಲ್ಲುವ ಶಾಲೀವಾಹನಶಕ ೧೮೩೭ ನೆಯ ರಾಕ್ಷಸನಾಮಸಂವತ್ಸರದ ಜ್ಯೇಷ್ಠ ಶು॥ ಪೌರ್ಣಮಿಯಿಂದ ಜ್ಯೇಷ್ಠ ಬ॥ ಸಪ್ತಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನ ಶೇದಿ
27	¹ಭಾನು	ಪೌ	10-49	ಮೂಲ	17-53	13
28	²ಸೋ	ಪಾ	5-15	ಪೂಷಾ	14-22	14
29	³ಮಂಗ	ಬಿದಿ	0-16	ಉಷಾ	55-18	15
30	ಬುಧ	ಚೌ	52-11	ಶ್ರವಣ	9-19	16
1	ಗುರು	ಪಂ	49-57	ಧನಿಷ್ಠ	8-10	17
2	ಶುಕ್ರ	ಷಷ್ಠಿ	48-51	ಶತಭಿಷ	8-4	18
3	⁴ಶನಿ	ಸಪ್ತ	48-57	ಪೂಭಾ	9-7	19

(1) ರೌಚ್ಯಮನ್ವಾದಿಃ, ಸಾವಿತ್ರೀಪೂಜಾಭೂಮಿ ೧೫, ಶ್ರೀರಂಗದಲ್ಲಿ ತಿರುಪ್ಪಾವಾಡೆ, ಗಾಢಾಸ್ತಂಬುಧಃ ೧೦. (2) ಪಾತಾಭಾವಃ, ಕವೆ, ಗಾಢಾಸ್ತಂಶನಿಃ. (3) ಅವಮಃ ಶ್ರೀಕೃಷ್ಣಬ್ರಹ್ಮತಂತ್ರ ಪರಕಾಲಸ್ವಾಮಿಗಳ ತಿರುನಕ್ಷತ್ರ (4) ವಾಣೀವಿಲಾಸದವರ ವರ್ಧಂತೀ, ಗುರುಚಂದ್ರಯೋಸ್ಸಾಮ್ಯಂ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಕ್ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರ್ ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಶ್ಯಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾಧು ಸ್ತ್ಯಾಲವಾಲಂವಲಂ ॥
ಸಿಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಶ್ರೀಮಂಬೆತ್ತಿಕೆಯಂಸದಾಪೊರೆಗೆ ಗೌರೀಕಾಂತನುಜ್ವಲಂ ॥
ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಹೊರತು—೧೪—೦

ಸಂಪುಟ ೨೮) ಮೈಸೂರ್ ಸ್ಟಾರ್ ಸನ್ ೧೯೧೫ ನೆಯ ಇಸವಿ ಜುಲೈ ತಾರೀಖು ೪ ನೆಯ ಭಾನುವಾರ. (ಸಂಚಿಕೆ ೨೬

ರಬಂವಾರ್ ಹೊಸ ಹಾರ್ಮೋನಿಯಂಗಳು.

ಮಿತ್ರರೇ! ನಿಮ್ಮ ಹಣವನ್ನು ಸದ್ವ್ಯಯಮಾಡುವುದು ಹೇಗೆ? ಕ್ರಯಕ್ಕೆ ತಕ್ಕ ಉತ್ತಮವಾದ ಪದಾರ್ಥವನ್ನು ಕೊಂಡುಕೊಳ್ಳುವುದೇ ಅಲ್ಲವೆ? ಹಾಗಾದರೆ ನಮ್ಮಿಂದ ಒಂದುಸಾರಿ ತರಿಸಿ ಪರೀಕ್ಷಿಸಿರಿ. ನೀವೂ ಅನೇಕಕಡೆಗಳಿಂದ ನಾನಾತರಹ ಹಾರ್ಮೋನಿಯಂಗಳನ್ನು ತರಿಸಿಕೊಂಡಿರುವಿರಿ, ಆದರೆ ಈ ಕೆಳಗೆ ವಿವರಿಸಿರುವ ಪ್ರಖ್ಯಾತರಾದ ಕಾರ್ಖಾನೆದಾರರಿಂದ ಬಹಳ ಬಂದೋಬಸ್ತಾಗಿ ತಯಾರಿಸಲ್ಪಟ್ಟು ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಹಾರ್ಮೋನಿಯಂಗಳನ್ನು ಒಂದುಸಾರಿ ತರಿಸಿಕೊಂಡು ಪರೀಕ್ಷಿಸಿದರೆ ಪದಾರ್ಥದ ಸೊಗಸೂ, ಬಾಳ್ವಿಕೆ, ಬಂದೋಬಸ್ತು, ಸ್ವಾದಿಷ್ಟವಾದ ಸ್ವರ ಇವೇ ಮೊದಲಾದ ಅತ್ಯುತ್ಕೃಷ್ಟವಾದ ಗುಣಗಳೂ, ಅಗ್ಗವಾದ ದರಗಳೂ ತಾವಾಗಿ ಗೋಚರವಾಗುತ್ತವೆಯಾದ್ದರಿಂದ ನಮ್ಮಿಂದಹಾರ್ಮೋನಿಯಂಗಳನ್ನು ತರಿಸಿಕೊಂಡವರಿಂದ ಸಂತೋಷಪೂರ್ವಕವಾದ ಸನ್ಮಾನಪತ್ರಿಕೆಗಳು ಪ್ರತಿನಿತ್ಯವೂ ಬರುತ್ತಲಿವೆ ಇವುಗಳ ಪೈಕಿ ಸ್ಥಳಸಂಕೋಚದಿಂದ ಒಂದನ್ನು ಮಾತ್ರ ಇಲ್ಲಿ ವಿವರಿಸಿದೇವೆ.

ಸಯ್ಯದ್ ಜಮಾಲ್‌ಸಾಬ್ ಸ್ಕೂಲ್‌ಮಾಸ್ಟರ್ ಬೇಲೂರು ತಾಲ್ಲೋಕು ಚನ್ನಹಳ್ಳಿ ಗ್ರಾಮ ಇವರು ಬರೆಯುವದು. ಸ್ವಾಮಿ! ತಾವು ಕಳಿಸಿಕೊಟ್ಟ ಹಾರ್ಮೋನಿಯಂ ಪಾರ್ಸಲನ್ನು ಡಿಲಿವರೀ ತೆಗೆದುಕೊಂಡೆನು. ನೋಡುವಲ್ಲಿ ಪದಾರ್ಥ ಬಹಳಸೊಗಸಾಗಿಯೂ ಬಂದೋಬಸ್ತಾಗಿಯೂ ಇರುವುದರಿಂದ ನನ್ನ ಮನಸ್ಸಿಗೆ ಬಹು ಸಮರ್ಪಕವಾಯಿತು. ಇದನ್ನು ನೋಡಿ ನನ್ನ ಸ್ನೇಹಿತರು ಇನ್ನು ಕೆಲವಕ್ಕೆ ಆರ್ಡರ್ ಕೊಡುವುದರಲ್ಲಿದ್ದಾರೆ.

ಆರ್‌ಡರಿನ ಸಂಗಡ ಅಡ್ವಾನ್ಸು ಕಳುಹಿಸಿಕೊಡುತ್ತೀವೆ. 3

ಕ್ರಯದ ತಪ್ಸೀಲ್.

೧. « ಬಿಜಲೀಫ್ಲೂಟ್ " ಸಿಂಗಲ್‌ರೀಡ್ಸ್ ಹಾರ್ಮೋನಿಯಂ . ೧ ಕ್ಕೆ ೨೫-೦-೦
೨. ಡಿಟೋ ಉತ್ತಮತರಹ ಹಾರ್ಮೋನಿಯಂ ೧ ಕ್ಕೆ ೨೩-೮-೦
೩. « ಕೋಹಿನೂರು ಫ್ಲೂಟ್ " ಸಿಂಗಲ್‌ರೀಡ್ಸ್‌ಹಾರ್ಮೋನಿಯಂ ೧ ಕ್ಕೆ ೨೯-೮-೦
೪. ಡಿಟೋ ನಮೂನೆ ಅತ್ಯುತ್ತಮವಾದ ಹಾರ್ಮೋನಿಯಂ ೧ ಕ್ಕೆ ೩೨-೮-೦
೫. « ವೋಸ್ಲೆ‌ಫ್ಲೂಟ್ " ಸಿಂಗಲ್‌ರೀಡ್ಸ್ ಹಾರ್ಮೋನಿಯಂ ೧ ಕ್ಕೆ ೩೫-೦-೦
೬. ಪ್ರಖ್ಯಾತಿಹೊಂದಿದ ಎಂ. « ವೋರ್ಲ್‌ಫ್ಲೂಟ್ " ಸಿಂಗಲ್‌ರೀಡ್ಸ್ ಹಾರ್ಮೋನಿಯಂ ೧ ಕ್ಕೆ ೩೨-೮-೦
೭. ಪ್ರಖ್ಯಾತಿಹೊಂದಿದ ಎಂ. « ವೋರ್ಲ್‌ಫ್ಲೂಟ್ " ಹಾರ್ಮೋನಿಯಂನಲ್ಲಿ ಅತ್ಯುತ್ತಮವಾದ ಸಿಂಗಲ್‌ರೀಡ್ಸ್ ಹಾರ್ಮೋನಿಯಂ ೧ ಕ್ಕೆ ೪೨-೮-೦
೮. « ಕೊಹಿನೂರ್‌ಫ್ಲೂಟ್ " ಡಬ್ಬಲ್‌ರೀಡ್ಸ್‌ಹಾರ್ಮೋನಿಯಂ ೧ ಕ್ಕೆ ೪೨-೮-೦
೯. « ಬಿಜಲೀಫ್ಲೂಟ್ " ಡಬ್ಬಲ್‌ರೀಡ್ಸ್ ಹಾರ್ಮೋನಿಯಂ ೧ ಕ್ಕೆ ೪೨-೦-೦
೧೦. « ವೋಸ್ಲೆಂಫ್ಲೂಟ್ " ಡಬ್ಬಲ್‌ರೀಡ್ಸ್ ಹಾರ್ಮೋನಿಯಂ ೧ ಕ್ಕೆ ೪೩-೮-೦
೧೧. ಪ್ರಖ್ಯಾತಿಹೊಂದಿದ ಎಂ. « ವೋರ್ಲ್‌ಫ್ಲೂಟ್ " ಡಬ್ಬಲ್‌ರೀಡ್ಸ್ ಹಾರ್ಮೋನಿಯಂ ೧ ಕ್ಕೆ ೫೦-೮-೦
೧೨. ಡಿಟೋ ಎಂ. « ವೋರ್ಲ್‌ಫ್ಲೂಟ್ " ಡಬ್ಬಲ್‌ರೀಡ್ಸ್ ಅತ್ಯುತ್ತಮವಾದ ಹಾರ್ಮೋನಿಯಂ ೧ ಕ್ಕೆ ೫೨-೮-೦

ಹಾರ್ಮೋನಿಯಂಗಳಿಗೆ ಆರ್‌ಡರ್ ಮಾಡತಕ್ಕವರು ನಿಮ್ಮ ಪೂರಿಗೆಸಮೀಪವಿರುವ ರೈಲ್ವೇಸ್ಟೇಷನ್ ಬರೆಯುವದಲ್ಲದೆ ೫ರೂಪಾಯಿ ಅಡ್ವಾನ್ಸು ಕಳುಹಿಸಿಕೊಡಬೇಕು. ಅಡ್ವಾನ್ಸಿಲ್ಲದೇ ಬರತಕ್ಕ ಆರ್‌ಡರ್‌ಗಳಿಗೆ ಖಂಡಿತವಾಗಿಯೂ ರವಾನಿಸಲಾಗುವುದಿಲ್ಲ.

ಕಸ್ತೂರಿಮಾತ್ರೆ ಪ್ರಖ್ಯಾತರಾದ ಘನ ವೈದ್ಯರಿಂದ ತಯಾರಿಸಲ್ಪಟ್ಟ ಕಸ್ತೂರಿಮಾತ್ರೆ ಸೀಸೆ 1 ಕೆ 0-4-0. 5 ಸೀಸೆಗೆ ಒಂದು ಸೀಸೆ ಇನಾಂ ಪೋಸ್ಟೇಜು ಅಲಾಯಿದಾ 12 ಸೀಸೆ ಒಟ್ಟಿಗೆ ತರಿಸಿಕೊಳ್ಳುವರಿಗೆ ಪೋಸ್ಟೇಜು ಸೇರಿ 2-8-0

ಪರಿಮಳಕಾರ್ಡುಗಳು ಒಂದುಕಾರ್ಡನ್ನು ಜೇಬಿನಲ್ಲಿಟ್ಟುಕೊಂಡಿದ್ದರೆ ಸುವಾಸನೆಯಾದ ಪುಷ್ಪವಟಿಗಳ ಮಧ್ಯದಲ್ಲಿರುವಂತೆ ಬಹು ಮನೋಹರವಾಗಿರುತ್ತೆ ಕಾರ್ಡು 1 ಕ್ಕೆ ಕ್ರಯ 0-1 0 12 ಕ್ಕೆ 0-10-0 ಪೋಸ್ಟೇಜು ಅಲಾಯಿದಾ ಒಂದು ಡಜನ್‌ಗಿಂತಲೂ ಕಡಿಮೆಯಾಗಿ ರವಾನಿಸಲಾಗುವುದಿಲ್ಲ.

ಸೇರ್ಸೇತಾಂಬೂಲಮಿತ್ರ 50 ಮಾತ್ರೆಗಳಿರುವ ಪೊಟ್ನ 1 ಕ್ಕೆ 0-2-6 ಒಂದು ಡಜನ್ ಒಟ್ಟಿಗೆ ತರಿಸಿಕೊಳ್ಳುವರಿಗೆ 1-10-0 ಕೊಡುವುದಲ್ಲದೆ ಪೋಸ್ಟೇಜು ಸಹಾ ಮಾಫಿ ಮಾಡಿದೇವೆ. ಇದರ ಸೇವನೆಯಿಂದಾಗತಕ್ಕ ಗುಣಗಳ ಪ್ರಿಂಟಾದ ಚೀಟಿ ಪಾರ್ಸಲಿನ ಸಂಗಡ ರವಾನಿಸಲಾಗುತ್ತೆ.

ಕೆಷಿಂತಾನ್ 45 ಮಾತ್ರೆಗಳ ಪೊಟ್ನ 1 ಕ್ಕೆ 0-2-0, 95 ಮಾತ್ರೆಗಳ ಪೊಟ್ನ 1 ಕ್ಕೆ 0- -0, 200 ಮಾತ್ರೆಗಳ ಪೊಟ್ನ 1 ಕ್ಕೆ 0-7-0, 200 ಮಾತ್ರೆಗಳ ಟಿನ್ 1 ಕ್ಕೆ 0-9-0, 80 ಮಾತ್ರೆಗಳ ಟಿನ್ 1 ಕ್ಕೆ 0-4-0, 100 ಮಾತ್ರೆಗಳ ಸೀಸೆ 1 ಕ್ಕೆ 0-4-6

ನಮ್ಮ ವಿಳಾಸ:—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್ ಕೃಷ್ಣರಾಜಮೊಹಲ್ಲಾ ಮೈಸೂರು.

ಓರಿಯಂಟಲ್ ಫಾರ್ಮಸಿ ಮೈಸೂರು.

22

ಪ್ರಸಿದ್ಧಿ ಗುಣಕಂಡ ಔಷಧಗಳು.

ಜ್ವರದಮಾತ್ರೆ —ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಯುಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮುಂತಾದವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ರೂ.

ಗೋರೋಚನದಮಾತ್ರೆ —ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೂಡ್ಲೆ ತಪ್ಪಿ ಜೀರ್ಣಶಕ್ತಿಕೊಡುತ್ತೆ. ಪ್ರಯಾಣೀಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾಯುನೋವು ಉಳುಕು ಊದು ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ. ೫ ಡಬ್ಬಿಗೆ ೧ ರೂ. ಕೂಡ್ಲೆ ನಮ್ಮ ಕ್ಯಾಟಲಾಗಿಗೆ ಬರಿಯಿರಿ ಮುಫತ್ತು ಕಳುಹಿಸುತ್ತೇವೆ.

ಹೊಸ ಪುಸ್ತಕಗಳು.

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೬೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ ಬೆಲೆ ೧೨ ಆಣೆ

ಬಸವರಾಜವಿಜಯಂ.— ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.— ಬೆಲೆ ೧-೮-೦ ದ್ವಿತೀಯಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೇಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ-ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಕ್ರಮದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ — ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಗ್. ಆರ್. ಕರಿಬಸವಶಾಸ್ತ್ರಿ,
190 ಗ್ರಂಥಪ್ರಕಾಶಕಮಂಡಲಿ, ಮೈಸೂರು.

ರಾಜಸಭಾಭೂಷಣ, ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರವರು ಸ್ಥಳೀಯ ಸ್ವಾರಾಜ್ಯ ಪ್ರಥಮ ಪರಿಷತ್ತಿನ ಪ್ರೆಸಿಡೆಂಟರಾಗಿ ಮಾಡಿದ ಉಪನ್ಯಾಸ.

1915 ನೇ ಇಸವಿ ಜೂನ್ 28 ನೇ ಸೋಮವಾರ.

ಮಹಾಶಯರೇ !

ಒಂಭತ್ತು ಡಿಸ್ಟ್ರಿಕ್ಟುಬೋರ್ಡುಗಳು ಮತ್ತು ಇಪ್ಪತ್ತೆರಡು ಮ್ಯುನಿಸಿಪಲ್ ಕೌನ್ಸಿಲ್‌ಗಳಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳಲ್ಲಿಯೂ ನಾಗರೀಕಗುಣಗಳಿಗೆ ಪ್ರಸಿದ್ಧರಾದ ನಮ್ಮ ಪುರಜನಗಳಲ್ಲಿಯೂ ಶ್ರೇಷ್ಟರಾದವರುಗಳಿಂದ ಸಮಾವೇಶವಾದ ಈ ಮಹಾ ಸಭಾಮುಖದಲ್ಲಿ ನಾನು ಅತ್ಯಂತ ನಮ್ರಭಾವದಿಂದ ಈ ಸ್ಥಾನವನ್ನು ವಹಿಸಿರುತ್ತೇನೆ. ಇದು ವಾಸ್ತವವಾಗಿಯೂ ಪ್ರತಿನಿಧಿಸ್ವರೂಪವಾದ ಸಮಾಗಮವಾಗಿದೆ. ನಮ್ಮ ಕರುಣಾಳುಗಳಾದ ಮೈಸೂರು ಶ್ರೀಮನ್ ಮಹಾರಾಜರವರ ವಿವೇಕಪೂರ್ವಕವಾದ ನಿರ್ದೇಶಾನುಸಾರ ಪ್ರಾಚೀನವೂ ಚರಿತ್ರಾರ್ಹವೂ ಆದ ಈ ಪಟ್ಟಣದಲ್ಲಿ ಏರ್ಪಡಿಸಲ್ಪಟ್ಟು ಶ್ರೀಮದ್ಯುವರಾಜರಿಂದ ಪ್ರೋತ್ಸಾಹೋಪಯುಕ್ತವಚನಗಳಿಂದ ಪ್ರಾರಂಭಿಸಲ್ಪಟ್ಟ ಈ ಪ್ರಥಮ ಪರಿಷತ್ತಿನ ಅಗ್ರಾಸನಾಧಿಪತ್ಯವನ್ನು ವಹಿಸಲು ನಿಮ್ಮಂತಹ ಗೌರವಪದವಿಗಳುಳ್ಳ ದೊಡ್ಡಮನುಷ್ಯರುಗಳಿಂದ ಆರಿಸಲ್ಪಡುವುದು ವಿಶೇಷ ಗೌರವವೇ ಸರಿ. ಆದರೆ ಇಂಥಹ ಗೌರವವಾದ ಕಾರ್ಯಭಾಗವನ್ನು ನಿರ್ವಹಿಸಲು ಸಮರ್ಥರಾದ ಯಾರಾದರು ಮತ್ತೊಬ್ಬರಿಗೆ ವಹಿಸಿದ್ದರೆ ನಾನೂ ಇನ್ನೂ ಸಂತೋಷಪಡುತ್ತಿದ್ದೆನು. ಬೆಂಗಳೂರುಪಟ್ಟಣದಲ್ಲಿ ನಾನು ಸರ್ಕಾರಿ ಉದ್ಯೋಗವನ್ನು ಬಿಟ್ಟಮೇಲೆ ಪೌರಕಾರ್ಯನಿರ್ವಹಣೆ ಮುಂತಾದ ಸಾರ್ವಜನಿಕ ಕೆಲಸಗಳಿಗೆ ನನ್ನ ಕಾಲವನ್ನು ವಿನಿಯೋಗಿಸಲುದ್ಯುಕ್ತನಾದುದೆ ನೀವುಗಳು ನನ್ನನ್ನು ಚುನಾಯಿಸಿದುದಕ್ಕೆ ಕಾರಣವೆಂದು ಭಾವಿಸುತ್ತೇನೆ. ಅದಾಗ್ಯೂ ಈ ಕೆಲಸಕ್ಕೆ ಸರ್ಕಾರಿ ಉದ್ಯೋಗದ ಸ್ಪರ್ಶ ಇಲ್ಲದಂಥಾವನನ್ನು ಚುನಾಯಿಸಿದ್ದರೆ ಉತ್ತಮವಾಗಿತ್ತು. ಸರ್ಕಾರಿ ಉದ್ಯೋಗದಿಂದ ನಿವೃತ್ತರಾದ ಅಧಿಕಾರಿಗಳಲ್ಲಿ ಚಿರಕಾಲದ ಅಭ್ಯಾಸಜನಿತವಾದ ಅಧಿಕಾರಪಕ್ಷಪಾತ ತುಂಬಿರುವುದೆಂತಲೂ ಅಂತಹ ಅಭಿಮಾನವನ್ನು ಬಿಡಬೇಕೆಂದು ಅವರುಗಳು ಎಷ್ಟೇ ಮನಸ್ಸುಳ್ಳವರಾಗಿದ್ದಾಗ್ಯೂ ಬಿಡಲು ಅಶಕ್ತರಾಗಿರುತ್ತಾರೆಂತಲೂ ಸಾಧಾರಣವಾಗಿ ಜನಸಮುದಾಯದಲ್ಲಿ ಒಂದು ವಿಧವಾದ ಶಂಕೆ ಇದ್ದೇ ಇರುವುದು. ಇದು ಸಹಜವೇ ಸರಿ. ಆದರೆ ಮಹಾಶಯರೇ, ನಾನು ಸರ್ಕಾರಿ ಉದ್ಯೋಗದಲ್ಲಿದ್ದಾಗಲೂ ಕೂಡಾ ಯಾವಾಗಲೂ ನಾನು ಜನಗಳಲ್ಲಿ ಮಮತೆಯುಳ್ಳವನಾಗಿದ್ದುದೇ ಈ ಸಂದರ್ಭದಲ್ಲಿ ನಿಮ್ಮಗಳ ದಯಾವಿಶ್ವಾಸಗಳಿಗೆ ಕಾರಣಭೂತವಾಯಿತೆಂದು ದೃಢವಾಗಿ ನಂಬುತ್ತೇನೆ.

ಈ ಪರಿಷತ್ತಿನ ಮೂಲ.

ನಮ್ಮ ಶ್ರೀಮನ್ ಮಹಾರಾಜರವರ ಆಜ್ಞಾನುಸಾರವಾಗಿ ನಮ್ಮ ಸಮರ್ಥರಾದ ಮತ್ತು ಸ್ವದೇಶಾನುರಾಗಿಗಳಾದ ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಆಗಮನಕಾಲದಿಂದ ಮೈಸೂರಿನಲ್ಲಿ ಅರ್ಥಸಾಧಕ ಏರ್ಪಾಡುಗಳ ಮತ್ತು ಅಭಿವೃದ್ಧಿಯ ಶಕವು ಪ್ರಾರಂಭವಾಗಿದೆ. ದಿವಾನ್ ಸಾಹೇಬರವರು ನಮ್ಮ ದೇಶದ ಏಳಿಗೆಗಾಗಿ ಮಾಡಿದ ಕೆಲಸಗಳ ಅಂಗೀಕಾರಾರ್ಥವಾಗಿ ಅವರಿಗೆ “ನೈಟ್ ಹುಡ್” ಎಂಬ ಬಿರುದು ಅನುಗ್ರಹಿಸಲ್ಪಟ್ಟುದಕ್ಕಾಗಿ ಈದಿವಸ ಅವರಿಗೆ ನಮ್ಮ ಆನಂದವನ್ನು ತಿಳಿಸಲು ಆನಂದವುಳ್ಳವರಾಗಿದ್ದೇವೆ. ಜನಗಳ ಐಹಿಕ ನೈತಿಕ ಸಾಂಪತ್ತಿಕಾದಿ ಸ್ಥಿತಿಗಳನ್ನು ಅಭಿವೃದ್ಧಿಪಡಿಸುವುದಕ್ಕೂ, ಅವರ ಸ್ಥಳೀಯ ಕಾರ್ಯಭಾಗಗಳ ನಿರ್ವಹಣೆಯಲ್ಲಿ ಅವರಿಗೆ ವಿಶೇಷ ಶ್ರದ್ಧೆಯುಂಟಾಗುವಂತೆ ಬೋಧಿಸುವುದಕ್ಕೂ ಮತ್ತು ಸ್ಥಳೀಯ ಸ್ವರಾಜ್ಯಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳಲ್ಲಿಯೂ ಸ್ವಾವಲಂಬನೆಯ ಸಾಮರ್ಥ್ಯವು ಬೆಳೆಯುವಂತೆ ಮಾಡುವುದಕ್ಕೂ ಸಾಧಕವಾದ ಸರ್ವ ವಿಷಯಗಳನ್ನೊಳಗೊಂಡ ಅರ್ಥಸಾಧಕಸಂಘದ ರೀತ್ಯಾರೂಪವಾಗಿ ಇಂಡಿಯಾ ದೇಶದಲ್ಲೆಲ್ಲಾ ಮೊದಲನೇಯದಾದ ಈ ಪರಿಷತ್ತು ಸ್ಥಾಪನೆಯಾಗಿರುವುದು ತಕ್ಕ ಸನ್ನಿವೇಶವೇ ಆಗಿದೆ. ಈ ಪರಿಷತ್ತನ್ನು ನಡೆಸಬೇಕೆಂಬ ಸೂಚನೆಯು ಪ್ರಥಮತಃ ನಂಜನಗೂಡು ಮ್ಯುನಿಸಿಪಾಲಿಟಿಯ ಪ್ರತಿನಿಧಿಗಳೊಬ್ಬರಿಂದ ಕೊಡಲ್ಪಟ್ಟಿತು. ಅದನ್ನು ಮೈಸೂರು ಪಟ್ಟಣದ ಮ್ಯುನಿಸಿಪಾಲಿಟಿಯವರು ಸಂತೋಷದಿಂದ ಅಂಗೀಕರಿಸಿದರು. ಈ ಸ್ಥಳೀಯ ಸ್ವರಾಜ್ಯದ ಪ್ರಥಮ ಪರಿಷತ್ತನ್ನು ಏರ್ಪಡಿಸಿದ ಗೌರವವೂ ಘನತೆಯೂ ಮೈಸೂರು ಮ್ಯುನಿಸಿಪಾಲಿಟಿಯವರಿಗೇ ಸಲ್ಲತಕ್ಕದಾಗಿದೆ; ಮತ್ತು ಈ ವಿಷಯದಲ್ಲಿ ಅವರಿಂದ ತೋರಿಸಲ್ಪಟ್ಟ ಆರಂಭೋತ್ಸಾಹ ಮತ್ತು ಪ್ರಜಾಹಿತಚಿಂತನೆಗಳಿಗಾಗಿಯೂ ಈ ಪರಿಷತ್ತಿಗೆ ದಯಮಾಡಿಸಿದ ಪ್ರತಿನಿಧಿಗಳಿಗೆ ಅವರು ತೋರಿಸಿದ ಆದರಾತಿಥ್ಯಗಳಿಗಾಗಿಯೂ ನಾವು ಅವರನ್ನು ವಂದಿಸುತ್ತೇವೆ

ಈ ಪರಿಷತ್ತಿನ ಪರ್ಯಾಲೋಚನೆಗೆ ಈ ಕೆಳಗೆ ಕಂಡ ವಿಷಯಗಳು ಸರ್ಕಾರದವರಿಂದ ಗೊತ್ತುಮಾಡಲ್ಪಟ್ಟಿರುವುವು:—

(a) ಸ್ಥಳೀಯ ಪೌರಕಾರ್ಯನಿರ್ವಾಹಕಮಂಡಲಿಯ (Local Bodies) ಕಾರ್ಯನಿರ್ವಾಹಕಶಕ್ತಿಯನ್ನೂ, ಅದರ ಆಡಳಿತವನ್ನೂ ಅಭಿವೃದ್ಧಿಪಡಿಸುವ ಮತ್ತು ಅದರ ಸಂಪತ್ತನ್ನು ಹೆಚ್ಚಿಸುವ ಉತ್ತಮವಿಧಾನಗಳು.
(b) ಪಟ್ಟಣರಚನೆ ಮತ್ತು ಪಟ್ಟಣ ಬಡಾವಣೆಗಳು.
(c) ಆರೋಗ್ಯವಿಧಾನಗಳು
(d) ಜಲವಸತಿ, ನಿರ್ಮಾಣ ಮತ್ತು ನಿರ್ವಹಣೆ.
(e) ಗ್ರಾಮಪಾಕೀಜ ವಿಧಾನಗಳು.
(f) ಒಂದೇಕಡೆ ಬಹುಜನಗಳು ವಾಸಮಾಡುವುದನ್ನು ತಪ್ಪಿಸುವುದು, ಜನವಸತಿಯು ನಿಬಿಡವಾಗಿರುವುದಕ್ಕೆ ಪರಿಹಾರ ಮತ್ತು ಈ ತೊಂದರೆಗಳಿಗೆ ಗುರಿಯಾದ ಜನಗಳಿಗೆ ವಾಸಾರ್ಹವಾದ ಸ್ಥಳಗಳನ್ನೊದಗಿಸುವುದು.
(g) ಸಂಚಾರ ಸಾಧನಗಳನ್ನಭಿವೃದ್ಧಿಪಡಿಸುವುದು ಮತ್ತು ಡಿಸ್ಟ್ರಿಕ್ಟು ಬೋರ್ಡುಗಳ ಮೂಲಕ ಫೀಡರ್ ರೈಲ್ವೆಗಳನ್ನೂ, ಟ್ರಾಂವೆಗಳನ್ನೂ ಬಡಾವಣೆ ಮಾಡುವುದು; ಮತ್ತು
(h) ಜನಗಳ ರಕ್ಷಣೆಗೂ, ಅನುಕೂಲಕ್ಕೂ ಮತ್ತು ಸೌಖ್ಯಕ್ಕೂ ಸಾಧಕವಾದ ಇತರ ವಿಷಯಗಳು.

ಮುಖ್ಯ ಪಂಗಡಗಳು.

ಸ್ಥಳೀಯ ಸ್ವರಾಜ್ಯಭಾರವನ್ನು ಮೂರು ಮುಖ್ಯ ಭಾಗಗಳಾಗಿ ಭಾಗಿಸಬಹುದು. ಹೇಗೆಂದರೆ,

(i) ಮ್ಯುನಿಸಿಪಲ್ ಬೋರ್ಡುಗಳು. (ii) ರೂರಲ್ (ಡಿಸ್ಟ್ರಿಕ್ಟು ಮತ್ತು ಸಬ್ ಡಿಸ್ಟ್ರಿಕ್ಟು) ಬೋರ್ಡುಗಳು. (iii) ಗ್ರಾಮಾಂತರದ ಸಂಘಗಳು.

ಮ್ಯುನಿಸಿಪಲ್ ಬೋರ್ಡುಗಳು.

ಮ್ಯುನಿಸಿಪಲ್ ಬೋರ್ಡುಗಳ ವಿಚಾರವಾಗಿ ಅವುಗಳ ಪ್ರಕೃತ ಸ್ಥಿತಿಯನ್ನೂ, ಅವುಗಳಿಗೆ ಯಾವಯಾವ ಭಾಗಗಳಲ್ಲಿ ತಿದ್ದುಪಾಟು ಅವಶ್ಯಕವೆಂಬುವನ್ನೂ ಸಂಕ್ಷೇಪವಾಗಿ ಸೂಚಿಸುತ್ತೇನೆ.

ಪೂರ್ವಾರಂಭ.

ಮೈಸೂರು ದೇಶದಲ್ಲಿ ಮ್ಯುನಿಸಿಪಲ್ ಆಡಳಿತವು 1862 ನೆಯ ಇಸವಿಯಿಂದ ಪ್ರಾರಂಭವಾಗಿದೆ. ನಿರಂತರ ಪ್ರಖ್ಯಾತವಾದ ಬ್ರಿಟಿಷ್‌ಅಧಿಪತ್ಯಕಾಲದಲ್ಲಿ ಮ್ಯುನಿಸಿಪಲ್ ಸರ್ಕಾರದ ಅಂಕುರಗಳು ಪ್ರಥಮತಃ ಬೆಂಗಳೂರುಪಟ್ಟಣದಲ್ಲಿ ಹಾಕಲ್ಪಟ್ಟವು. ಅದೇವರ್ಷದ ಮಾರ್ಚಿ 27 ನೆಯ ತಾರೀಖಿನಲ್ಲಿ, ಚೀಫ್‌ಕಮಿಷನರ್ ಆಫೀಸಿನ ಹೆಡ್ ಶಿರಸ್ತೆದಾರರಾದ ಮೆ॥ ವಿಜಯರಗಂನಾಯ್ಡುಯವರು ಪ್ರಜೆಗಳಿಂದ ಚುನಾಯಿಸಲ್ಪಟ್ಟ ಪ್ರೆಸಿಡೆಂಟರಾಗಿಯೂ, ಜ್ಯುಡಿಸಿಯಲ್ ಕಮಿಷನರ್ ಆಫೀಸಿನ ಹೆಡ್ ಶಿರಸ್ತೆದಾರರಾದ ಮೆ॥ ಬಿ. ಕೃಷ್ಣಯ್ಯಂಗಾರ್ಯರು ವೈಸ್‌ಪ್ರೆಸಿಡೆಂಟರಾಗಿಯೂ, ಏಳುಜನ ದೊಡ್ಡಮನುಷ್ಯರು ಮೆಂಬರುಗಳಾಗಿಯೂವುಳ್ಳ ಬೋರ್ಡು ಎಂಬ ಸಭೆಯು ಸ್ಥಾಪಿಸಲ್ಪಟ್ಟಿತು. ಬೆಂಗಳೂರು ತಾಲ್ಲೂಕಿನ ಅಮಲ್ದಾರರವರು ಮ್ಯುನಿಸಿಪಾಲಿಟಿಯ ಕಾರ್ಯನಿರ್ವಾಹಕ ಆಫೀಸರರಾಗಿದ್ದರು.

ಉತ್ತರಾಭಿವೃದ್ಧಿ.

ಒಂಭತ್ತು ವರ್ಷಗಳ ಅನುಭವದ ಮೇಲೆ, 1871 ನೆಯ ವರ್ಷದಲ್ಲಿ ಬೆಂಗಳೂರು ಟವನ್ ಮ್ಯುನಿಸಿಪಲ್ ರೆಗ್ಯುಲೇಷನ್ಸ್ ಎಂಬ ಕಾನೂನಿನ ಮೂಲಕ ಬೆಂಗಳೂರು ಮ್ಯುನಿಸಿಪಾಲಿಟಿಯು ಶಾಸನಾಧಾರವುಳ್ಳದ್ದಾಗಿ ಮಾಡಲ್ಪಟ್ಟಿತು. ಆಗ ಡಾಕ್ಟರ್, ಆರ್. ಸಿ ಬಿ. ಯವರು ಸಂಪೂರ್ಣಕಾಲದ ಪ್ರಥಮ ಪ್ರೆಸಿಡೆಂಟರಾಗಿದ್ದರು. ಮೈಸೂರು ಸರ್ಕಾರವು ಶ್ರೀಮನ್ ಮಹಾರಾಜರವರಿಗೆ 1881 ನೆಯ ಇಸವಿಯಲ್ಲಿ ಒಪ್ಪಿಸಲ್ಪಟ್ಟಾಗ, ಡೆಪ್ಯುಟಿ ಕಮಿಷನರ್‌ರವರು ಉದ್ಯೋಗ ಪ್ರಯುಕ್ತ ಪ್ರೆಸಿಡೆಂಟರಾಗಿ ಮಾಡಲ್ಪಟ್ಟರು. ಈ ಏರ್ಪಾಟು, ಒಂದೆರಡು ಅಲ್ಪಾವಧಿಗಳಲ್ಲಿ ವಿನಹಾ, 1913 ನೆಯ ಇಸವಿಯವರೆಗೂ ನಡೆದು ಬಂತು. ಅನಂತರ ಸಂಪೂರ್ಣ ಅವಧಿಯ ಸನ್ಮಾನಿತಾಧ್ಯಕ್ಷರು (Honorary President) ಸರ್ಕಾರದವರಿಂದ ನೇಮಿಸಲ್ಪಟ್ಟರು.

ಮೈಸೂರು ಪಟ್ಟಣದಲ್ಲಿಯೂ ಸಹ ಅಧ್ಯಕ್ಷಪದವಿಯು 1913 ನೆಯ ಇಸವಿಯವರೆಗೆ ಡೆಪ್ಯುಟಿ ಕಮಿಷನರವರಿಂದಲೇ ಉದ್ಯೋಗಪ್ರಯುಕ್ತವಾಗಿ ವಹಿಸಲ್ಪಟ್ಟಿದ್ದಿತು. ಅದೇವರ್ಷ ಸಂಪೂರ್ಣಕಾಲದ ಪ್ರೆಸಿಡೆಂಟರೊಬ್ಬರು ಪ್ರತ್ಯೇಕವಾಗಿ ಸರ್ಕಾರದವರಿಂದ ನೇಮಿಸಲ್ಪಟ್ಟರು.

ಮ್ಯುನಿಸಿಪಲ್ ಕೌನ್ಸಿಲ್ಲುಗಳಿಗೆ ಸಂಬಂಧಪಟ್ಟ ಕಾನೂನು ಆಗಾಗ್ಗೆ ತಿದ್ದುಪಾಟು ಮಾಡಲ್ಪಟ್ಟು 1906 ನೆಯ ಇಸವಿಯ VII ನಂಬರಿನ ಮೈಸೂರು ಮ್ಯುನಿಸಿಪಲ್ ರೆಗ್ಯುಲೇಷನ್ನಿನಲ್ಲಿ ನಮೂದಾಗಿದೆ. ಆದರೆ ರೆಗ್ಯುಲೇಷನ್ನಿಗೊಳಪಡದೆ, ಸರ್ಕಾರದವರ (Executive orders) ಅಪ್ಪಣೆ ಅನುಸರಿಸಿ ಏರ್ಪಟ್ಟ ತಾಲ್ಲೂಕು ಕಸಬಾಗಳು ಮುಂತಾದ ಸಾಮಾನ್ಯಪ್ರದೇಶಗಳಲ್ಲಿ ಇನ್ನೂ 54 ಮ್ಯುನಿಸಿಪಲ್ ಬೋರ್ಡುಗಳಿರುತ್ತಿರುವುದು ಆಶ್ಚರ್ಯವಾಗಿದೆ

ಸಿಟಿ ಮ್ಯುನಿಸಿಪಾಲಿಟಿಗಳು.

ಕಳೆದ ಮುವತ್ತು ತಿಂಗಳಲಾಗಾಯಿತು ಬೆಂಗಳೂರು ಪಟ್ಟಣದ ಮ್ಯುನಿಸಿಪಾಲಿಟಿಯ ಆಡಳಿತಗಳನ್ನು ನೋಡಿದುದರಲ್ಲಿ ನನಗುಂಟಾದ ಅನುಭವದ ಫಲಿತಾಂಶವನ್ನು ನಿಮ್ಮಗಳಿಗೆ ಸಾಧ್ಯವಾದಮಟ್ಟಿಗೂ ತಿಳಿಸುತ್ತೇನೆ. ಸಿಟಿ ಮ್ಯುನಿಸಿಪಾಲಿಟಿಗಳು ಎಂದರೆ, ಈಚೆಗೆ ಮಾಡಿದ ವಿಲೆವಾರಿ ಪ್ರಕಾರ 25,000 ಪ್ರಜಾಸಂಖ್ಯೆಗೆ ಮೇಲ್ಪಟ್ಟ ಮುನಿಸಿಪಾಲಿಟಿಗಳು ಬೇರೆ ಪಂಗಡವಾಗಿ ಎಣಿಸಬೇಕು ; ಮತ್ತು ಅವು ಸ್ಥಳೀಯ ಸ್ವರಾಜ್ಯಭಾರದ ಮುಂದರಿದ ಭಾಗಗಳಾಗಿರುವುದರಿಂದ ಅವುಗಳಿಗೆ ಪ್ರತ್ಯೇಕ ನಿಗಾ ಕೊಡುವುದಾವಶ್ಯಕ.

ಅವಶ್ಯಕವಾದ ತಿದ್ದುಪಾಟುಗಳು.

ಮ್ಯುನಿಸಿಪಲ್ ಕೌನ್ಸಿಲ್ಲುಗಳಲ್ಲಿ ಪ್ರಜೆಗಳಿಂದ ಚುನಾಯಿಸಲ್ಪಟ್ಟ ಮೆಂಬರುಗಳ ಸಂಖ್ಯೆ ಹೆಚ್ಚಾಗಿರಬೇಕೆಂಬುವುದು ಮತ್ತು ಸರ್ಕಾರದಿಂದ ನೇಮಕ ಮಾಡಲ್ಪಟ್ಟ ಮೆಂಬರುಗಳ ಸಂಖ್ಯೆ ಕಡಿಮೆಯಾಗಿರಬೇಕೆಂಬುವುದು ನನ್ನ ಅಭಿಮತ. ಸರ್ಕಾರದವರು ನೇಮಕಮಾಡುವ ಪದ್ಧತಿಯನ್ನು ಜನಸಂಖ್ಯೆ ಕಡಮೆಯಾಗಿರುವ ಪ್ರಜೆಗಳ ಪ್ರತಿನಿಧಿಗಳನ್ನು ಮೆಂಬರಾಗಿ ಸೇರಿಸುವುದಕ್ಕು ಮತ್ತು ಸರ್ಕಾರಿ ಅನುಭವವುಳ್ಳವರನ್ನು ಸೇರಿಸುವುದಕ್ಕೆ ಮಾತ್ರ ಅನುಸರಿಸಬೇಕು. ಈ ವಿಷಯದಲ್ಲಿ ರೆಗ್ಯುಲೇಷನ್ನಿನಲ್ಲಿ ಗೊತ್ತುಮಾಡಿರುವಂತೆ ಚುನಾಯಿಸಲ್ಪಟ್ಟ ಮೆಂಬರುಗಳ ಸಂಖ್ಯೆಯು ಕನಿಷ್ಠಪಕ್ಷ $\frac{1}{3}$ ಭಾಗವಾಗಿರಬೇಕೆಂಬುವುದಕ್ಕೆ ಬದಲಾಗಿ $\frac{2}{3}$ ಭಾಗದಂತೆ ಇರಬೇಕು ಬೆಂಗಳೂರು ಪಟ್ಟಣದಲ್ಲಿ ಇವರುಗಳ ಸಂಖ್ಯೆಯು ಸರಿಯಾಗಿ ಅರ್ಧವಿದೆಯಂತಲೂ ಅದನ್ನು ಹೆಚ್ಚಿಸಬಹುದೆಂತಲೂ ಈ ಸಂದರ್ಭದಲ್ಲಿ ಸೂಚಿಸಬಹುದಾಗಿದೆ.

ಸಿಟಿ ಕೌನ್ಸಿಲ್ಲಿನ ಪ್ರೆಸಿಡೆಂಟರು ಕೌನ್ಸಿಲ್ಲಿನವರ ಅನುಮೋದನದಿಂದ ಆರಿಸಲ್ಪಡಬೇಕೇ ಹೊರತು ಸರ್ಕಾರದವರಿಂದ ನೇಮಿಸಲ್ಪಡಬಾರದು. ಅಧ್ಯಕ್ಷಪದವಿಯು ಸನ್ಮಾನಿತವಾಗಿರಬೇಕೇ ಹೊರತು ವೇತನವನ್ನು ಪಡೆಯತಕ್ಕದ್ದಾಗಿರಬಾರದು. ಹೀಗೆ ಮಾಡುವುದರಿಂದ, ತಮ್ಮ ತಮ್ಮ ಪಟ್ಟಣಗಳ ಮ್ಯುನಿಸಿಪಲ್ ಆಡಳಿತಗಳಿಗೆ ಸಂಪೂರ್ಣವಾದ ಕಾಲವನ್ನೂ ಗಮನವನ್ನೂ ವಿನಿಯೋಗಿಸಲಿಷ್ಟವುಳ್ಳಂಥಾವರುಗಳಿಗೆ ಜನೋಪಯೋಗವಾದ ಕಾರ್ಯಗಳಲ್ಲಿ ಉತ್ಸಾಹವನ್ನು ಹುಟ್ಟಿಸಿದಂತಾಗುವುದು. ಇಂತಹ ಪುರನಿವಾಸಿಗಳ ಸಂಖ್ಯೆಯು ದಿನೇದಿನೇ ಹೆಚ್ಚುತಲಿದೆಯೆಂದು ತಿಳಿಸಲು ಹರ್ಷವಾಗುತ್ತದೆ ; ಮತ್ತು ಅವರ ನಗರಾಭಿಮಾನವನ್ನು ಕಾರ್ಯತಹ ತೋರ್ಪಡಿಸಲು ಮಾರ್ಗವು ಸಹ ಕಲ್ಪಿಸಿದಂತಾಗುವುದು. ಈ ಸಂಬಂಧದಲ್ಲಿ, ಸರ್ಕಾರೀ ಉದ್ಯೋಗದಿಂದ ನಿವೃತ್ತರಾದ ಅಧಿಕಾರಿಗಳಲ್ಲಿ ಅತ್ಯುತ್ತಮರಾದವರನ್ನೇ ಸರ್ಕಾರದವರು ನೇಮಿಸಿದಾಗ್ಯೂ ಅದು ಜನಾನುರಾಗಕ್ಕೆ ಪಾತ್ರವಾಗುವುದಿಲ್ಲ. ಸರ್ಕಾರಿ ಉದ್ಯೋಗದಿಂದ ನಿವೃತ್ತನಾದ ಅಧಿಕಾರಿಯು ಪಡೆದಿರುವಷ್ಟು ಅನುಭವವೂ ವಿಷಯಗ್ರಹಣೆಯೂ ಪಟ್ಟಣವಾಸಿಗಳ ಅಭಿಮಾನಪಾತ್ರನಾದ ಮನುಷ್ಯನಿಗಿಲ್ಲದಿದ್ದರೂ, ಅವರು ಆತನನ್ನೇ ಚುನಾಯಿಸಲು ಮತ್ತು ತಮ್ಮ ಮನಃಪೂರ್ವಕವಾದ ಒಪ್ಪಿಗೆ (ಓಟ್ಸ್) ಗಳನ್ನು ಕೊಡಲು ಅಪೇಕ್ಷಿಸುವರು. ಈ ಅಭಿಪ್ರಾಯವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಆದ್ದರಿಂದ ಸಿಟಿ ಮ್ಯುನಿಸಿಪಾಲಿಟಿಗಳಲ್ಲಿ ಪ್ರೆಸಿಡೆಂಟರುಗಳನ್ನು ನೇಮಕಮಾಡುವ ಪದ್ಧತಿಯನ್ನು ತೆಗೆದುಹಾಕಬೇಕೆಂತಲೂ, ಪ್ರೆಸಿಡೆಂಟರನ್ನು ಚುನಾಯಿಸಲು ಕೌನ್ಸಿಲ್ಲಿನವರಿಗೆ ಅಧಿಕಾರ ಕೊಡಬೇಕೆಂತಲೂ ಸೂಚಿಸುತ್ತೇನೆ. ಹೀಗೆ ಮಾಡಿದರೆ ತಕ್ಕ ಜನಗಳೂ ಬಂದೇಬರುವರು. ವೈಸ್‌ಪ್ರೆಸಿಡೆಂಟರು ಕೂಡ ಚುನಾಯಿಸಲ್ಪಡಬೇಕು ; ನೇಮಕ ಮಾಡಲ್ಪಡಬಾರದು. ಮತ್ತು ಸನ್ಮಾನಿತ (ವೇತನವಿಲ್ಲದ) ರಾಗಿಯೇ ಇರಬೇಕು. ಪ್ರೆಸಿಡೆಂಟರಿಗೂ, ವೈಸ್‌ಪ್ರೆಸಿಡೆಂಟರಿಗೂ ಪ್ರವರ್ತಕಾಧಿಕಾರ ವಹಿಸಿಕೊಡುವ ಈಗಿನ ಪದ್ಧತಿ ಅಸಮರ್ಪಕವಾದುದೆಂಬುದು ಪ್ರಾಮುಖ್ಯವಾದ ವಿಷಯವಾಗಿದೆ. ಇದೊಂದು ನಮ್ಮ ಕಟ್ಟುಪಾಟುಗಳಲ್ಲಿ ಆಚರಣೆ ಬಂದಿರುವ ದುರಾಚಾರವಾಗಿದೆ. ಬೊಂಬಾಯಿ ಅಧಿಪತ್ಯದಲ್ಲಿರುವಂತೆ, ಪ್ರತಿಯೊಂದು ಪಟ್ಟಣದ ಮ್ಯುನಿಸಿಪಾಲಿಟಿಗೆ ಒಬ್ಬ ಮುಖ್ಯಾಧಿಕಾರಿಯು ನೇಮಿಸಲ್ಪಡಬೇಕು. ಆತನು ಹೆಲ್ತ್ ಆಫೀಸರಿಂದಲೂ, ಮ್ಯುನಿಸಿಪಲ್ ಇಂಜನಿಯರಿಂದಲೂ ಸಹಾಯವನ್ನು ಪಡೆಯುತ್ತ ಕೌನ್ಸಿಲ್ಲಿನ ಮುಖ್ಯ ಪ್ರವರ್ತಕಾಧಿಕಾರಿಯಾಗಿರಬೇಕು. ಈ ಅಧಿಕಾರಿಗಳು ಮ್ಯುನಿಸಿಪಲ್ ಮಿಟಿಂಗುಗಳಲ್ಲಿ ಹಾಜರಿದ್ದು ಚರ್ಚೆಗಳಲ್ಲಿ ಭಾಗಿಗಳಾಗಬಹುದಾದರೂ ಸಮ್ಮತ (ಓಟ್ಸು) ಗಳನ್ನು ಸೂಚಿಸಕೂಡದು ವೈಸ್‌ಪ್ರೆಸಿಡೆಂಟರುಗಳನ್ನೂ, ಹೆಲ್ತ್ ಆಫೀಸರುಗಳನ್ನೂ ಕೌನ್ಸಿಲರುಗಳನ್ನಾಗಿಯೂ ಮತ್ತು ಇವರುಗಳನ್ನೇ ಸೀನಿಯರ್ ಜೂನಿಯರ್ ವೈಸ್‌ಪ್ರೆಸಿಡೆಂಟರುಗಳಾಗಿಯೂ ನೇಮಿಸುವ ಈಗಣ ಪದ್ಧತಿಯು ಕೆಟ್ಟದಾಗಿಯೂ, ಬಹುಕಾಲದ ಹಿಂದೆಯೇ ಹಾರಿಹೋದ ಹಳೆಯಪದ್ಧತಿಯ ಶೇಷವಾಗಿಯೂ, ಮ್ಯುನಿಸಿಪಲ್ ರೆಗ್ಯುಲೇಷನ್ನಿನ ಅಭಿಪ್ರಾಯಕ್ಕೆ ಕೇವಲ ವಿರುದ್ಧವಾಗಿಯೂ ಇದೆ. ಮ್ಯುನಿಸಿಪಲ್ ಕೌನ್ಸಿಲ್ಲಿನಿಂದ ವೇತನವನ್ನು ಪಡೆಯುವ ಯಾವ ಮನುಷ್ಯನೂ ಮ್ಯುನಿಸಿಪಲ್ ಕೌನ್ಸಿಲರಾಗಿರುವುದಕ್ಕೂ ಸಮ್ಮತ (ಓಟ್ಸ್) ಗಳನ್ನು ಕೊಡುವುದಕ್ಕೂ ಅನರ್ಹನೆಂತಲೂ, ಅಂತವನು ಸರ್ಕಾರದವರಿಂದ ಎರವಾಗಿ ಕೊಡಲ್ಪಟ್ಟವನಾಗಿದ್ದರೂ ಕೂಡ ವೈಸ್‌ಪ್ರೆಸಿಡೆಂಟರಾಗಕೂಡದೆಂತಲೂ ಒಂದು ಕಟ್ಟುಪಾಟು ಮಾಡಲ್ಪಡಬೇಕು. ಕೌನ್ಸಿಲ್ಲಿನಿಂದ ಪ್ರವರ್ತಕಾಧಿಕಾರಿಗಳು ಪ್ರತ್ಯೇಕಿಸಲ್ಪಟ್ಟರೆ, ಕೌನ್ಸಿಲ್ಲಿನ ಸ್ಥಿತಿಯು ಸ್ಪಷ್ಟವಾಗಿ ಅಭಿವೃದ್ಧಿಗೆ ಬರುವುದು. ಹೇಗೆಂದರೆ:—ಕೌನ್ಸಿಲರುಗಳಿಗೆ ಪ್ರವರ್ತಕಾಧಿಕಾರಿಗಳು ಮಾಡಿದ ಕೆಲಸಗಳನ್ನು ಪರೀಕ್ಷಿಸಿ ಪರ್ಯಾಲೋಚಿಸಲು ವಿಶೇಷ ಸ್ವಾತಂತ್ರ್ಯವುಂಟಾಗುವುದರಿಂದ ಕೌನ್ಸಿಲ್ಲಿನ ನಡವಳಿಕೆಯನ್ನು ಕ್ರಮಗೊಳಿಸಲು ಶಕ್ತರಾಗುವರೆಂದು ಹೇಳಬೇಕಾದುದೇ ಇಲ್ಲ. ಈಗಣ ಕ್ರಮಾನುಸಾರವಾಗಿ, ಪ್ರೆಸಿಡೆಂಟರೇ ಕೌನ್ಸಿಲ್ಲಿನ ಮುಖ್ಯ ಪ್ರವರ್ತಕಾಧಿಕಾರಿ (ಚೀಫ್ ಎಕ್ಸಿಕ್ಯೂಟಿವ್ ಆಫೀಸರ್) ಯಾಗಿರುವರು. ದಿನಚರಿಯ ರೂಢಿಯಾದ ಕಾರ್ಯಕಲಾಪಗಳಿಗೆ ಗಮನಕೊಡುವುದು, ಹೆಡ್‌ಆಫೀಸನ್ನೂ ಲೆಕ್ಕಪತ್ರಗಳನ್ನೂ ಪರೀಕ್ಷಿಸುವುದು, ಎಲ್ಲರೊಡನೆ ಪತ್ರವ್ಯವಹಾರವನ್ನು ನಡೆಸುವುದು, ಹೊರಗಡೆಯಲ್ಲಿ ಪರೀಕ್ಷಾರ್ಥವಾಗಿ ಸಂಚರಿಸುವುದು, ಕೌನ್ಸಿಲ್ ಮತ್ತು ಕಮಿಟಿ ಮಿಟಿಂಗುಗಳಲ್ಲಿ ಅಗ್ರಾಸನವನ್ನು ವಹಿಸುವುದು ಇವೆಲ್ಲವನ್ನೂ ಅವರೇ ಮಾಡಬೇಕಾಗಿದೆ. ಕೌನ್ಸಿಲ್ ಮಿಟಿಂಗುಗಳಲ್ಲಿ ತಾವು ಮಾಡಿದ ಕಾರ್ಯಕಲಾಪಗಳನ್ನು ತಾವೇ ವಿಮರ್ಶಿಸಬೇಕಾಗಿದೆ. ಇದರಿಂದ ಕೌನ್ಸಿಲರುಗಳ ಶ್ರದ್ಧಾಭಕ್ತಿಸ್ವಾತಂತ್ರ್ಯಗಳಿಗೆ ಕುಂದನ್ನುಂಟುಮಾಡಿದಂತಾಗುವುದು. ಆದಕಾರಣ ರೆಗ್ಯುಲೇಷನ್ ಪ್ರಕಾರ ಯೋಚಿಸಲ್ಪಟ್ಟಿರುವ ಮುಖ್ಯಾಧಿಕಾರಿಯು ಮೇಲ್ಕಂಡ ಕಾರ್ಯಕಲಾಪಗಳಿಂದ ಪ್ರೆಸಿಡೆಂಟರನ್ನು ಬಿಡುಗಡೆ ಮಾಡಿ, ಪಟ್ಟಣಾಭಿವೃದ್ಧಿಗೆ ಸಂಬಂಧಪಟ್ಟ ಮುಖ್ಯವಿಷಯಗಳಿಗೆ ಅವರು ಗಮನಕೊಡಲವಕಾಶವಾಗುವಂತೆ ಅವರಿಗೆ ವಿರಾಮವನ್ನು ಕಲ್ಪಿಸಬೇಕು.

ಸಿಟಿ ಕೌನ್ಸಿಲ್ಲುಗಳ ಉತ್ತಮಸ್ಥಿತಿಗನುಗುಣವಾಗಿ ಅವುಗಳ ಆಡಳಿತಗಳ ಮೇಲೂ, ಅವುಗಳ ಆಯವ್ಯಯಗಳ ಮೇಲೂ ಡೆಪ್ಯುಟಿ ಕಮಿಷನರವರಿಗೆ ಇರುವ ಅಧಿಕಾರವು ಸಂಪೂರ್ಣವಾಗಿ ನಿವಾರಣೆ ಮಾಡಲ್ಪಡಬೇಕು. ಸಿಟಿ ಮ್ಯುನಿಸಿಪಲ್ ಪ್ರೆಸಿಡೆಂಟರಿಗೆ ಗೌರ್ನಮೆಂಟಿನಿಂದ ಹೊರತು ಮತ್ತಾರಿಂದಲೂ ಹುಕುಂಗಳು ಸಾದರಾಗಬಾರದು. ಈ ವಿಷಯದಲ್ಲಿ ಮ್ಯುನಿಸಿಪಲ್ ರೆಗ್ಯುಲೇಷನ್ನು ತಿದ್ದುಪಾಟು ಮಾಡಲ್ಪಡಬೇಕು.

ಮ್ಯುನಿಸಿಪಲ್ ಕಮಿಟಿಗಳು.

ಕಮಿಟಿಗಳ ಮೂಲಕ ನಡೆಸಲ್ಪಡುವ ಕಾರ್ಯನಿರ್ವಾಹಕ್ರಮವು ವಿಸ್ತರಿಸಲ್ಪಡುವುದು ಅವಶ್ಯಕವಾಗಿದೆ. ಹಾಗೆ ಮಾಡುವದರಿಂದುಂಟಾಗುವ ಪ್ರಯೋಜನಗಳಲ್ಲಿ ಪಟ್ಟಣಾಭಿವೃದ್ಧಿಯ ಕರ್ತವ್ಯಗಳಲ್ಲಿ ಜನಗಳಿಗೆ ತಿಳುವಳಿಕೆ ಕೊಡುವುದು ಮುಖ್ಯವಾದುದು. ಆದಕಾರಣ ಇಂತಹ ಕಮಿಟಿಗಳಲ್ಲಿ ಕೌನ್ಸಿಲರುಗಳಾಗಿಲ್ಲದ ಜನಗಳ ಪ್ರತಿನಿಧಿಗಳನ್ನು ಸೇರಿಸಲವಕಾಶವಾಗುವಂತೆ ರೆಗ್ಯುಲೇಷನ್ನಿನಲ್ಲಿ ಕಮಿಟಿಗಳ ರಚನೆಯ ಭಾಗವನ್ನು ಬದಲಾಯಿಸಲಪೇಕ್ಷಿಸುತ್ತೇನೆ. ಮ್ಯುನಿಸಿಪಾಲಿಟಿಯ ಕಾರ್ಯಭಾಗಗಳಲ್ಲಿ ಲೋಪವಿಲ್ಲದಂತೆ ಕಾಪಾಡುವುದಕ್ಕೂ, ಕೌನ್ಸಿಲ್ಲಿನ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೂ ತಕ್ಕಷ್ಟು ನಿಬಂಧನೆಗಳನ್ನಿಟ್ಟುಕೊಂಡು, ಕೌನ್ಸಿಲರುಗಳು ನಿರ್ಣಿತವಾದ ಸಂಖ್ಯೆಗೊಳಪಟ್ಟಿರುವಂತೆ ಗೊತ್ತುಮಾಡಬಹುದು. ಕಮಿಟಿಗಳ ಆಡಳಿತದಿಂದುಂಟಾದ ಅನುಭವವನ್ನು ಪರ್ಯಾಲೋಚಿಸಿದರೆ, ಅರ್ಧಕ್ಕಿಂತ ಹೆಚ್ಚಾದ ನಿರ್ದಿಷ್ಟಸಂಖ್ಯೆ (ಕೋರಂ) ಇರಬೇಕೆಂಬುದು ಬಹಳ ಹೆಚ್ಚೆಂದು ತೋರುತ್ತದೆ. ಆ ನಿರ್ದಿಷ್ಟ ಸಂಖ್ಯೆಯು $\frac{1}{3}$ ಕ್ಕೆ ಕಡಿಮೆ ಮಾಡಲ್ಪಡಬಹುದು.

ತೆರಿಗೆ ಹಾಕುವುದು.

ಕಂದಾಯದ ವಿಚಾರದಲ್ಲಿ, ಪ್ರಾಚೀನ ಆಚರಣೆಯಲ್ಲಿರುವ ಮೊಹತರ್ಫವನ್ನು ತೆಗೆದುಹಾಕಿ, ಅದಕ್ಕೆ ಬದಲಾಗಿ ಕುಶಲವಿದ್ಯೆಯ ಕೆಲಸಗಳ ಮೇಲೂ, ಕಸಬುಗಳಮೇಲೂ, ವ್ಯಾಪಾರಗಳಮೇಲೂ, ಉದ್ಯೋಗಗಳಮೇಲೂ, ಆಫೀಸುಗಳಮೇಲೂ, ನೌಕರಿಗಳಮೇಲೂ ತೆರಿಗೆಯು ಹಾಕಲ್ಪಡಬೇಕು. ಯಾತಕ್ಕೆಂದರೆ, ಪುರಪ್ರಮುಖರಾದ ಸರ್ಕಾರಿ ಉದ್ಯೋಗಸ್ಥರೂ, ಡಾಕ್ಟರುಗಳೂ, ಲಾಯರುಗಳೂ ಇನ್ನೂ ಮುಂತಾದವರೂ ಸಂಪಾದನೆಯಮೇಲೆ ಯಾವ ವಿಧವಾದ ಮ್ಯುನಿಸಿಪಲ್ ತೆರಿಗೆಯನ್ನು ಕೊಡುವುದಿಲ್ಲ. ಹೀಗೆ ಮ್ಯುನಿಸಿಪಲ್ ಧನಕೋಶಕ್ಕೆ ಏನನ್ನೂ ಕೊಡದೇ ಇದ್ದರೂ, ಪಟ್ಟಣವಾಸದ ಹಕ್ಕು ಬಾಧ್ಯತೆಗಳನ್ನು ಸಾಧಿಸುವುದರಲ್ಲಿಯೂ, ಮ್ಯುನಿಸಿಪಲ್ ಸರ್ಕಾರದ ಲೋಪಗಳನ್ನು ಒತ್ತಿ ಹೇಳುವುದರಲ್ಲಿಯೂ ಅವರೇ ಮುಖಂಡರಾಗಿರುತ್ತಾರೆ.

ಆಕ್ಟ್ರಾಯಿ.

ಮ್ಯುನಿಸಿಪಲ್ ಸರಹದ್ದುಗಳಲ್ಲಿ ಖರ್ಚಾಗುವ ಕೆಲವು ಪದಾರ್ಥಗಳ ಮೇಲೆ ಹಾಕಿರುವ ಆಕ್ಟ್ರಾಯಿ ಸುಂಕವು ಮ್ಯುನಿಸಿಪಲ್ ಆದಾಯದಲ್ಲಿ ಮುಖ್ಯವಾದ ಒಂದು ಭಾಗವಾಗಿದೆ. ಅದರಲ್ಲಿ ಜನಗಳಿಂದ ಭಾರವಾಗಿ ಭಾವಿಸಲ್ಪಡದ ಪರೋಕ್ಷಸುಂಕವಾಗಿರುವ ಪ್ರಯೋಜನವೂ ಇದೆ. ಆದರೆ ಅದರಲ್ಲಿ ನ್ಯೂನತೆಗಳೂ ಇವೆ. ಅದು ನಿರುಪಾಧಿಕವಾದ ಮತ್ತು ಸಲೀಸಾದ ವ್ಯಾಪಾರಕ್ಕೆ ವಿಶೇಷ ಕುಂದಕವಾಗಿದೆಯೆಂತಲೂ, ಮೋಸಕ್ಕೂ, ಜನಗಳಿಗೆ ಹಿಂಸೆಗೂ ಅವಕಾಶಗಳನ್ನು ಕಲ್ಪಿಸುವುದೆಂತಲೂ ಭಾವಿಸಲ್ಪಟ್ಟಿದೆ. ಅದಕ್ಕೆ ಬದಲಾಗಿ ರೈಲು ಮಾರ್ಗದಿಂದ ಮ್ಯುನಿಸಿಪಲ್ ಸರಹದ್ದಿನೊಳಕ್ಕೆ ತರಲ್ಪಟ್ಟ ಎಲ್ಲಾ ಪದಾರ್ಥಗಳ ಮೇಲೆ “ರೀಫಂಡು” ಅಂದರೆ ವಾಪಿ ಇಲ್ಲದ ಒಂದು ಅಲ್ಪವಾದ ಕೊನೆಯ ಸುಂಕವನ್ನು (Terminal Tax) ಹಾಕಬಹುದೆಂದು ಸೂಚಿಸಲ್ಪಟ್ಟಿದೆ ಆ ಸುಂಕವನ್ನು ರೈಲ್ವೆ ಕಂಪೆನಿಯವರು ಪದಾರ್ಥಗಳನ್ನು ಸಾಗಿಸುವುದಕ್ಕೆ ಹಾಕುವ ಚಾರ್ಜಿನ ಜೊತೆಯಲ್ಲಿ ಅವರೇ ವಸೂಲ್ಮಾಡಬಹುದು. ರಸ್ತೆಗಳ ಮೂಲಕ ಬರುವ ಎಲ್ಲಾ ಪದಾರ್ಥಗಳಿಗೂ ಈ ತೆರಿಗೆ (ಸುಂಕ) ಯನ್ನು ವಜಾಮಾಡಬಹುದು ಈ ಪದ್ಧತಿಯ ಪ್ರಕಾರ ರೈಲು ಮಾರ್ಗವಾಗಿ ತರಲ್ಪಡುವ ಎಲ್ಲಾ ವಿಧವಾದ ಪ್ರತಿಯೊಂದು ಪದಾರ್ಥದಮೇಲೂ ತಾನಾಗಿಯೇ ಸುಂಕವು ಹೇರಿಸಲ್ಪಡುವುದು ; ಬೇಕಾದರೆ ಆಹಾರದ ಮುಖ್ಯಧಾನ್ಯಗಳ ಮೇಲೆ ಸುಂಕವು ವಜಾಮಾಡಲ್ಪಡುವದರಲ್ಲಿ ಆಕ್ಷೇಪಣೆ ಏನೂ ಇಲ್ಲ. ಈ ವಿಷಯವು ವಿಶೇಷ ಚರ್ಚೆಗೆ ಆಕರವಾಗಿಯೂ ನಿಮ್ಮಗಳ ದೀರ್ಘಾಲೋಚನೆಗೆ ತಕ್ಕದ್ದಾಗಿಯೂ ಇದೆ

ಮನೆ ಮುಂತಾದ ತೆರಿಗೆಗಳನ್ನು ಕ್ರಮವಾಗಿ ವಸೂಲ್ಮಾಡುವುದು ಈಗ ಕಷ್ಟತರವಾಗಿದೆ. ಇದು ವಿಶೇಷ ಸುಲಲಿತವೂ ಸುಲಭವೂ ಆಗುವಂತೆ ಮಾಡಲ್ಪಡಬೇಕು. ಪ್ರಕೃತ ಪದ್ಧತಿಯು ತೊಡಕಾಗಿರುವದರಿಂದ ಮತ್ತು ಬಾಕಿ ನಿಲ್ಲುವುದಕ್ಕೆ ಆಕರವಾಗಿದೆ. ಕೊನೆಗೆ ಆ ಬಾಕಿಯು ವಸೂಲಿಗೆ ಮಾರ್ಗವಿಲ್ಲದಂತಾಗಿ ಲೆಕ್ಕದಿಂದ ತೆಗೆದು ಹಾಕಲ್ಪಡಬೇಕಾಗುತ್ತದೆ.

ಟವನ್ ಕೌನ್ಸಿಲ್‌ಗಳು.

ಇನ್ನು ಟವನ್ ಮ್ಯುನಿಸಿಪಲ್ ಕೌನ್ಸಿಲ್ಲುಗಳು ಎಂದರೆ, ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲಿಯೂ 7,000 ಮತ್ತು ಅದಕ್ಕೆ ಹೆಚ್ಚಾದ ಪ್ರಜಾಸಂಖ್ಯೆಯುಳ್ಳ ಊರುಗಳಲ್ಲಿಯೂ ಇರುವ ಕೌನ್ಸಿಲ್ಲುಗಳ ವಿಚಾರದಲ್ಲಿ, ಅವುಗಳ ಅಧ್ಯಕ್ಷತೆಗೆ ತಕ್ಕ ಖಾಸಗಿ ದೊಡ್ಡಮನುಷ್ಯರು ದೊರೆಯುವವರೆಗೂ ಹಿಂದಿನಂತೆಯೇ ಡೆಪ್ಯುಟಿ ಕಮಿಷನರವರ ಅಧ್ಯಕ್ಷತೆಯಲ್ಲಿರಬಹುದು ಸರ್ಕಾರಿ ಉದ್ಯೋಗಸ್ಥರಲ್ಲದ ಸನ್ಮಾನಿತ ವೈಸ್‌ಪ್ರೆಸಿಡೆಂಟರೊಬ್ಬರು ಚುನಾಯಿಸಲ್ಪಡಬಹುದು. ಪ್ರಜೆಗಳಿಂದ ಚುನಾಯಿಸಲ್ಪಟ್ಟ ಕೌನ್ಸಿಲರುಗಳ ಸಂಖ್ಯೆಯು ಅರ್ಧಕ್ಕೆ ಕಡಮೆಯಾಗಿರಬಾರದು. ವಿಶೇಷ ಆದಾಯವಿರುವ ಮುಖ್ಯವಾದ ಮ್ಯುನಿಸಿಪಾಲಿಟಿಗಳ ವಿಷಯದಲ್ಲಿ ಅಮಲ್ದಾರರ ದರ್ಜೆಯ ಒಬ್ಬ (ಚೀಫ್ ಆಫೀಸರ್) ಮುಖ್ಯಾಧಿಕಾರಿಯು ಪ್ರವರ್ತಕಾಧಿಕಾರಗಳನ್ನು ನಡೆಸುವುದಕ್ಕೆ ಅವಶ್ಯಕವಾಗಬಹುದು.

(ಮೈನರ್) ಚಿಕ್ಕ ಮ್ಯುನಿಸಿಪಾಲಿಟಿಗಳು.

ಚಿಕ್ಕ ಮ್ಯುನಿಸಿಪಾಲಿಟಿಗಳು ಎಂದರೆ 2,000 ಮತ್ತು ಅದಕ್ಕೆ ಹೆಚ್ಚಾದ ಪ್ರಜಾಸಂಖ್ಯೆಯುಳ್ಳ ತಾಲ್ಲೂಕು ಕಸಬಾಗಳ ಮತ್ತು ಟವನ್ ಮ್ಯುನಿಸಿಪಾಲಿಟಿಗಳ ವಿಚಾರದಲ್ಲಿ, ಸಬ್‌ಡಿವಿಜನ್ ಅಸಿಸ್ಟೆಂಟ್ ಕಮಿಷನರವರು ಸರ್ಕಾರಿ ಉದ್ಯೋಗಸ್ಥರಲ್ಲದ ತಕ್ಕ ದೊಡ್ಡಮನುಷ್ಯರು ದೊರೆಯುವವರೆಗೆ ಉದ್ಯೋಗಪ್ರಯುಕ್ತ ಪ್ರೆಸಿಡೆಂಟರಾಗಿರಬಹುದು ಕೌನ್ಸಿಲ್‌ನವರು ಸರ್ಕಾರಿ ಉದ್ಯೋಗಸ್ಥರಲ್ಲದ ವೈಸ್ ಪ್ರೆಸಿಡೆಂಟರನ್ನು ಚುನಾಯಿಸಿಕೊಳ್ಳಬಹುದು.

ಟವನ್ ಮತ್ತು ಮೈನರ್ ಮ್ಯುನಿಸಿಪಾಲಿಟಿಗಳಲ್ಲಿ ಮೆಂಬರುಗಳನ್ನು ಚುನಾವಣೆ ಮಾಡುವ ಪದ್ಧತಿಯನ್ನು ನಿವಾಸಿಗಳಲ್ಲಿ ನಾಗರೀಕತೆಯೂ, ತಿಳಿವಳಿಕೆಯೂ ಹೆಚ್ಚಾದಹಾಗೆಲ್ಲಾ ಕ್ರಮೇಣ ವಿಸ್ತರಿಸಿಕೊಳ್ಳಬಹುದು

ರೆಗ್ಯುಲೇಷನ್ನಲ್ಲಿರುವ ನ್ಯೂನತೆಗಳು.

ಮ್ಯುನಿಸಿಪಲ್ ತಕ್ಸಿರುಗಳನ್ನು ಪರಭಾರೀ ರಾಜೀಮಾಡುವುದಕ್ಕೆ ಯಾವ ನಿಯಮವೂ ಇಲ್ಲದಿರುವುದು ಈಗಿರುವ ಮ್ಯುನಿಸಿಪಲ್ ರೆಗ್ಯುಲೇಷನ್ನಿನ ಮುಖ್ಯವಾದ ಒಂದು ನ್ಯೂನತೆಯಾಗಿದೆ ಅಂತಹ ತಕ್ಸೀರುಮಾಡಿದವರನ್ನು ಕ್ಷಮಿಸಿದರೇ ಕ್ಷಮಿಸಬೇಕು, ಇಲ್ಲವಾದರೆ ಕ್ರೂರವಾದ ಶಿಕ್ಷೆಗೆ ಗುರಿಪಡಿಸಬೇಕೇ ಹೊರ್ತು ಮಧ್ಯ ಮಾರ್ಗವಿಲ್ಲವೇ ಇಲ್ಲ. ಇದು ಆಸಾಮಿಗಳಿಗೆ ಕಷ್ಟವೂ, ಮ್ಯುನಿಸಿಪಲ್ ನೌಕರರಿಗೆ ತೊಂದರೆಯೂ ಆಗಿದೆ ಕೌನ್ಸಿಲ್ಲಿನವರು ತಮ್ಮ ನ್ಯಾಯದೃಷ್ಟಿಗನುಸಾರವಾಗಿ ಅಂತಹ ತಕ್ಸೀರುಗಳನ್ನು ಬಗೆಹರಿಸುವುದಕ್ಕೆ ವಿಧಿಯು ಬ್ರಿಟಿಷ್ ಇಂಡಿಯಾದೇಶದ ಕೆಲವು ಮ್ಯುನಿಸಿಪಲ್ ಕಾನೂನುಗಳಲ್ಲಿ ನಮೂದಿಸಲ್ಪಟ್ಟಿದೆ ಅದೇಪ್ರಕಾರ ನಮ್ಮ ರೆಗ್ಯುಲೇಷನ್ನಿನಲ್ಲಿಯೂ ತಿದ್ದುಪಾಟುಮಾಡಬೇಕೆಂದು ಸೂಚಿಸುತ್ತೇನೆ.

ನಮ್ಮ ಚಿಕ್ಕ ಮ್ಯುನಿಸಿಪಾಲಿಟಿಗಳಿಗೆ ಆ ರೆಗ್ಯುಲೇಷನ್ನಿನ ನಿಯಮಗಳನ್ನೆಲ್ಲಾ ಒಟ್ಟಾಗಿ ಪ್ರಯೋಗಿಸಬಾರದೆಂದು ಹೇಳುವದೇ ಅನಾವಶ್ಯಕ. ಬೊಂಬಾಯಿ ಡಿಸ್ಟ್ರಿಕ್ಟು ಮ್ಯುನಿಸಿಪಾಲಿಟಿಗಳ ಕಾನೂನಿನಲ್ಲಿ ನಮೂದಿಸಲ್ಪಟ್ಟಿರುವ ಒಂದು ರೂಲನ್ನು ಅನುಸರಿಸಿ ಅಭಿವೃದ್ಧಿಯಲ್ಲಿ ಹಿಂದುಳಿದಿರುವ ಚಿಕ್ಕ ಮ್ಯುನಿಸಿಪಾಲಿಟಿಗಳಿಗೆ ಆ ರೆಗ್ಯುಲೇಷನ್ನಿನ ಕೆಲವು ಸೆಕ್ಷನ್‌ಗಳು ಮಾತ್ರ ಅನ್ವಯಿಸತಕ್ಕುದೆಂದು ಪ್ರಸಿದ್ಧಿಪಡಿಸಬಹುದು.

ಪ್ರಾಥಮಿಕ ವಿದ್ಯಾಭ್ಯಾಸ

ಮ್ಯುನಿಸಿಪಲ್ ಪ್ರದೇಶಗಳಲ್ಲಿ ನಡೆಯುವ ಪ್ರಾಥಮಿಕ ವಿದ್ಯಾಭ್ಯಾಸವೆಲ್ಲವು ಮ್ಯುನಿಸಿಪಾಲಿಟಿಯ ಅಧೀನದಲ್ಲಿರಬೇಕೆಂಬುದು ಈಗ ಸಂಪೂರ್ಣವಾಗಿ ಸಮ್ಮತಿಸಲ್ಪಟ್ಟಿದೆ ಇದನ್ನು ತೃಪ್ತಿಕರವಾದ ರೀತಿಯಲ್ಲಿ ನೆರವೇರಿಸುವುದಕ್ಕೆ ಸರ್ಕಾರದವರಿಂದ ಧಾರಾಳವಾದ ದ್ರವ್ಯಸಹಾಯವು ಮತ್ತು ಸರ್ಕಾರಿ ವಿದ್ಯಾಭ್ಯಾಸದ ಇಲಾಖೆಯ ಸಹಕಾರವು ಅವಶ್ಯಕವಾಗಿರುತ್ತದೆ.

ಅಲ್ಪವಿಷಯಗಳಲ್ಲಿ ಪ್ರವರ್ತಿಸುವುದು.

ಸರ್ಕಾರದವರು ತಮ್ಮ ಸ್ವಂತ ಇಲಾಖೆಗಳ ಮೇಲೆ ನಡೆಸುವಷ್ಟು ಅಧಿಕಾರ ಮತ್ತು ತನಿಖೆಗಳನ್ನು ಮ್ಯುನಿಸಿಪಾಲಿಟಿಗಳ ಮೇಲೂ ಸಹ ನಡೆಸುತ್ತಿರುವುದು ತಿಳಿದ ಸಂಗತಿಯಾಗಿದೆ. ಆದರೆ ಆದರಿಂದ ಮ್ಯುನಿಸಿಪಲ್ ಕೌನ್ಸಿಲ್‌ಗಳ ಜವಾಬ್ದಾರಿ ಮತ್ತು ಸ್ವಾತಂತ್ರ್ಯಗಳಿಗೆ ಭಂಗವು ಉಂಟಾಗುವದು ಇಂತಹ ಗೌರ್ನಮೆಂಟಿನವರ ಪ್ರವರ್ತನೆಯು ಕೆಲವು ವೇಳೆ ಮಿತಿಮೀರಿ ಹೋಗುವದೆಂದು ಹೇಳಬಹುದಾಗಿದೆ. ಸಿಟಿ ಮತ್ತು ಟವನ್ ಮ್ಯುನಿಸಿಪಾಲಿಟಿಗಳಿಗೆ ಆದರೂ ಅವರು ಹೆಚ್ಚಾದ ಸ್ವಾತಂತ್ರ್ಯವನ್ನು ಕೊಡುವುದಲ್ಲದೆ ಬಡ್ಜೆಟ್ಟಿಗೆ ವಿರಾರದಂತೆ ಖರ್ಚುಮಾಡುವುದಕ್ಕು ಸಹ ಹೆಚ್ಚಾದ ಅಧಿಕಾರವು ಕೊಡಬೇಕಾಗಿದೆ. ಲೆಕ್ಕಗಳು ಆಗಾಗ್ಗೆ ಕ್ರಮವಾಗಿ ತನಿಖೆ ಆಗಬೇಕಾದ್ದು ಅತ್ಯಾವಶ್ಯಕ.

ಮಹನೀಯರೆ ಈ ಸಂಸ್ಥಾನದಲ್ಲಿ ಸ್ಥಳೀಯ ಸ್ವರಾಜ್ಯಭಾರವನ್ನು ಸ್ಥಾಪಿಸಿ ಅದನ್ನು ಅಭಿವೃದ್ಧಿಪಡಿಸುವ ವಿಚಾರವನ್ನು ಪರ್ಯಾಲೋಚಿಸುವುದಕ್ಕಾಗಿ ಸರ್ಕಾರದವರಿಂದ ನೇಮಿಸಲ್ಪಟ್ಟ ಒಂದು ಮುಖ್ಯಕಮಿಟಿಯು ನಮ್ಮ ಘನತೆಹೊಂದಿದ ಎರಡನೆಯ ಕೌನ್ಸಿಲರಾದ ಮೆ॥ ಎಂ. ಕಾಂತರಾಜಅರಸ್, ಸಿ ಯಸ್. ಐ. ಯವರ ಅಧ್ಯಕ್ಷತೆಯಲ್ಲಿ ನಡೆಯಿತೆಂಬುದು ನಿಮಗೆ ತಿಳಿದೇಯಿದೆ. ಆ ಕಮಿಟಿಯಿಂದ ಸ್ಥಳೀಯ ಸ್ವರಾಜ್ಯಭಾರಕ್ಕೆ ಸಂಬಂಧಪಟ್ಟ ವಿಷಯಗಳನ್ನೆಲ್ಲಾ ಸಂಪೂರ್ಣವಾಗಿ ವಿಚಾರಮಾಡಿ ಕೆಲವು ಪರಿಷ್ಕಾರವಾದ ಸಲಹೆಗಳೊಡನೆ ಸರ್ಕಾರದವರಿಗೆ ಒಪ್ಪಿಸಿರುವ ರಿಪೋರ್ಟಿನ ಕಾಪಿಯು ನಿಮ್ಮಗಳ ತಿಳುವಳಿಕೆಗಾಗಿಯೂ ಮತ್ತು ಅಭಿಪ್ರಾಯಗಳನ್ನು ಸೂಚಿಸುವುದಕ್ಕಾಗಿಯೂ ನಿಮ್ಮಗಳ ಮುಂದಿಡಲ್ಪಡುತ್ತದೆ. ಸದರಿ ರಿಪೋರ್ಟಿನಲ್ಲಿ ಮೇಲೆ ನಮೂದಿಸಿದ ಕೆಲವು ಅಭಿಪ್ರಾಯಗಳು ವಿಶದವಾಗಿ ಸೂಚಿಸಲ್ಪಟ್ಟಿರುವುವು. (ಸಶೇಷ)

ಕಬ್ಬುನದ ಮಹಿಮೆ.

ರೂಢಿಯಲ್ಲಿ “ ಕಬ್ಬಿಣ ” ಎಂದು ಕರೆಯಲ್ಪಡುತ್ತಿರುವ ಕಬ್ಬುನಕ್ಕೆ ಹಳಗನ್ನಡದಲ್ಲಿ “ ಕಾಬೋರ್ನ್ನು ” ಎಂದು ಪರ್ಯಾಯನಾಮವುಂಟು. ಕಾಬೋರ್ನ್ನು ಎಂದರೆ—ಕರಿದಾದ ಪೊನ್ನು (ಕಪ್ಪಾದ ಚಿನ್ನ) ವೆಂದರ್ಥ. ವಿಚಾರಮಾಡಿ ನೋಡಿದರೆ ಈ ಹೆಸರು ಈ ಲೋಹಕ್ಕೆ ಒಪ್ಪತಕ್ಕದಾಗಿದೆ. ಏಕೆಂದರೆ—ರೂಢಿಯಲ್ಲಿರುವ ಹೊನ್ನಿಗಿಂತಲೂ ಈ ಕರಿಯ ಹೊನ್ನಿನಿಂದ ಲೋಕಕ್ಕೆ ಆಗುವ ಪ್ರಯೋಜನವನ್ನು ನೋಡಿದರೆ ಇದನ್ನು ಲೋಹರಾಜನೆಂದು ಕರೆಯುವುದು ಕೂಡ ತಪ್ಪಾಗಿ ತೋರುವುದಿಲ್ಲ. ಭೂಗರ್ಭದಿಂದ ಆಯಾ ಲೋಹಗಳನ್ನು ತೆಗೆವುದಕ್ಕೆ ತಗುಲುವ ವೆಚ್ಚ ಮತ್ತು ಅವುಗಳು ದೊರೆಯುವ ಪ್ರಮಾಣ ಇವುಗಳನ್ನನುಸರಿಸಿ ಅವುಗಳ ಬೆಲೆಯು ನಿಗದಿಮಾಡಲ್ಪಟ್ಟಿರುವುದರಿಂದ ಸುವರ್ಣಕ್ಕೆ ವಿಪರೀತ ಕ್ರಯವೂ ಕಬ್ಬುನಕ್ಕೆ ಹೀನಕ್ರಯವೂ ಉಂಟಾಗಿದೆ. ಲೋಹಗಳ ಪ್ರಯೋಜನವನ್ನನುಸರಿಸಿ ಬೆಲೆ ಯಿಡಲ್ಪಡುವುದಾದರೆ ಕಬ್ಬುನಕ್ಕೆ ದೊರೆಯುವ ಅಗ್ರಸ್ಥಾನವು ಮತ್ತಾವ ಲೋಹಕ್ಕೂ ದೊರೆಯಲಾರದು. ಈಗಿನ ಪ್ರಪಂಚದ ಚರಿತ್ರವನ್ನು ವಿಮರ್ಶಿಸಿ ನೋಡಿದರೆ ಕಬ್ಬುನದ ಸಮೃದ್ಧಿಯಿಲ್ಲದೆ ಯಾವುದೊಂದು ದೇಶವು ಕೂಡ ಮುಂದುವರಿಯಲಾರದೆಂದು ಕಾಣುತ್ತದೆ. ಯಾವುದೊಂದು ಸಾಮ್ರಾಜ್ಯದ ವ್ಯಾಪಕತೆಗೇ ಆಗಲೀ ಸ್ಥಿರತೆಗೇ ಆಗಲೀ ಮುಖ್ಯವಾಗಿ ಇರತಕ್ಕ ಸಾಧನಸಂಪತ್ತಿಗಳಲ್ಲಿ ಕಬ್ಬುನವೂ ಒಂದಾಗಿ ಗಣಿಸಲ್ಪಡುವಂತಾಗಿರುತ್ತದೆ. ಈಗಿನ ಯುದ್ಧಸ್ಥಿತಿಯನ್ನು ಗಮನದಲ್ಲಿಟ್ಟು ಪರ್ಯಾಲೋಚಿಸಿದರೆ, ಇನ್ನು ಮುಂದೆ ಯಾವ ದೇಶಕ್ಕೆ ಕಬ್ಬುನವು ಸಮೃದ್ಧವಾಗಿರುವುದೋ ಅದೇ ಎಲ್ಲ ರಾಜ್ಯಕ್ಕೂ ಮಿಂಡನಾಗಿರುವುದೆಂದು ಹೇಳಬೇಕಾಗುತ್ತದೆ. ಅದುಕಾರಣ ಈಗಿನಕಾಲವನ್ನು ಕಬ್ಬುನದ ಯುಗಾರಂಭವೆಂದು ಹೇಳಿದರೂ ಹೇಳಬಹುದು.

ಇಂಗ್ಲೆಂಡು—ಜರ್ಮನಿದೇಶಗಳು ಆಧಿಕ್ಯವನ್ನು ಪಡೆದಿರುವುದಕ್ಕೆ ಅವುಗಳಿಗಿರುವ ಕಬ್ಬುನದ ಗಣಿಗಳೇ ಮುಖ್ಯಕಾರಣವೆಂದು ಹೇಳಲಾಗದಿದ್ದರೂ, ಮುಖ್ಯಕಾರಣಗಳೊಳಗೆ ಅದೂ ಒಂದಾಗಿರುವುದೆಂದು ಹೇಳಲು ಅಭ್ಯಂತರವಿರುವುದಿಲ್ಲ. ಜರ್ಮನಿದೇಶದಲ್ಲಿ ಕಬ್ಬುನ—ಉಕ್ಕು—ಇವುಗಳ ಗಣಿಗಳು ವಿಶಾಲವಾಗಿರುವುದರಿಂದಲೇ ಜರ್ಮನಿಚಕ್ರವರ್ತಿಯವರು ಸರ್ವಪ್ರಪಂಚಸಾಮ್ರಾಜ್ಯವನ್ನನುಭವಿಸಬೇಕೆಂಬ ಆಸೆಯನ್ನು ಪಡೆಯಲೂ ಅದಕ್ಕಾಗಿ ಪ್ರಯತ್ನಿಸಲೂ ಅವಕಾಶವಾಯಿತು. ಜರ್ಮನಿಯಲ್ಲಿ ಕಬ್ಬುನದ ಆಧಿಕ್ಯವು ತುಂಬಿತುಳುಕುತ್ತಿರುವುದರಿಂದಲೇ ಅವರು ಇಂಗ್ಲೆಂಡು-ಫ್ರಾನ್ಸ್‌ದೇಶಗಳಿಗಿಂತಲೂ ತಾವು ಎಲ್ಲವಿಷಯದಲ್ಲೂ ಅಧಿಕರೆಂದು ಉಬ್ಬಿ ಕೋಲಾಹಲಮಾಡಿಕೊಳ್ಳುವುದಕ್ಕೆ ಎಡೆಯುಂಟಾಗಿರುವುದು. ಎಸ್ಸನ್ ನಗರದಲ್ಲಿರುವ ಕ್ರುಪ್ ಕರ್ಮಾಗಾರದಲ್ಲಿ ಅಪರಿಮಿತವಾದ ಕುಲುಮೆಗಳೊಳಗೆ ಪರ್ವತೋಪಮಾನವಾದ ಕಬ್ಬುನವನ್ನು ಕರಗಿಸಿ ಎರಕಹೊಯ್ದು ಅದ್ಭುತಶಕ್ತಿಯುಕ್ತ ನಾನಾಯುದ್ಧಸಾಧನಗಳನ್ನು ಒದಗಿಸಿಕೊಡುತ್ತಿರುವುದರಿಂದಲೇ ಈಗ ಅಹರ್ನಿಶಿಯೂ ಜರ್ಮನರು ಯೂರೋಪುಖಂಡದೊಳಗೆ ಅಪರಿಮಿತವಾದ ಪ್ರಾಣಧನಗಳನ್ನು ಸೂರೆಮಾಡಿ ದೇಶದೇಶವನ್ನೇ ಹಾಳ್ಮಾಡುತ್ತಿರುವರು. ಜರ್ಮನಿಯೊಳಗೆ ೬ ಕೋಟಿ ಪ್ರಜೆಗಳಿದ್ದಾರೆ. ಅವರಲ್ಲಿ ೧ ಕೋಟಿ ಮಂದಿಗಳು ಕಬ್ಬುನದ ಕೆಲಸಗಳನ್ನು ಮಾಡಿಯೇ ಜೀವಿಸುವವರಾಗಿದ್ದಾರೆ. ಕಬ್ಬುನದ ರುಚಿಯನ್ನು ಜರ್ಮನರು ಚೆನ್ನಾಗಿ ಬಲ್ಲವರಾದುದರಿಂದಲೇ ಅವರು ಈಗ ಫ್ರಾನ್ಸು-ಬೆಲ್ಜಿಯಂದೇಶಗಳಲ್ಲಿರುವ ಕಬ್ಬುನದ ಗಣಿಗಳನ್ನು ಕೂಡ ವಶಪಡಿಸಿಕೊಳ್ಳಬೇಕೆಂದು ಅಪೇಕ್ಷಿಸಿರುವರೆಂದೂ ಈಗಿನ ಯುದ್ಧಕ್ಕೆ ಅದೊಂದು ಪ್ರಧಾನೋದ್ದೇಶವೆಂದೂ ಕುಶಲಮತಿಯಾದ ಒಬ್ಬಾನೊಬ್ಬ ಜರ್ಮ ಪ್ರಮುಖ ಮನುಷ್ಯನು ಅಭಿಪ್ರಾಯಪಟ್ಟಿರುವುದು ಒಪ್ಪತಕ್ಕ ಮಾತಾಗಿರುತ್ತದೆ. ಈಗ ಜರ್ಮನರು ಕಬ್ಬುನವನ್ನು ವೆಚ್ಚಮಾಡುತ್ತಿರುವ ರೀತಿಯಲ್ಲಿಯೇ ಮುಂಬೆಯೂ ವೆಚ್ಚಮಾಡಿದರೆ ಜರ್ಮನಿಯೊಳಗಿರುವ ಕಬ್ಬುನ ಉಕ್ಕುಗಳೆಲ್ಲಾ ೩೦ ವರ್ಷಗಳೊಳಗೆ ಮುಗಿದುಹೋಗುವುವು. ಮುಖ್ಯಾಧಾರವಾದ ಆ ಕಬ್ಬುನವೇ ತೀರಿಹೋದರೆ ಜರ್ಮನಿಯು ಈಗ ತಾನು ಪಡೆದುಕೊಂಡಿರುವ ಅಗ್ರಸ್ಥಾನದಿಂದ ಜಾರಿ ೩ ನೆ ತರಗತಿಯ ರಾಜ್ಯವಾಗಿ ನಿಲ್ಲಬೇಕಾಗುವುದು. ಈ ಸಂಗತಿಯನ್ನು ದೂರವಾಗಿ ಪರ್ಯಾಲೋಚಿಸಿಯೇ ಜರ್ಮನಿಯವರು ಈಗಿನ ಯುದ್ಧವನ್ನು ಸಾಗಿಸುತ್ತಲಿರುವರೆಂದು ದೀರ್ಘದರ್ಶಿಗಳು ಸಿದ್ಧಾಂತಿಸಿರುವರು. ಪ್ರಪಂಚದಲ್ಲಿರುವ ಕಬ್ಬುನದ ಗಣಿಗಳೆಲ್ಲ ತಮಗೇ ಸೇರಬೇಕೆಂದೂ ಅವು ಹಾಗೆ ತಮಗೆ ದೊರೆಯದೆ ಎಲ್ಲಿ ತಪ್ಪಿಹೋಗುವುವೋ ಎಂದೂ ಜರ್ಮನರು ಅಹರ್ನಿಶಿಯೂ ಚಿಂತಿಸುತ್ತಲಿದ್ದಾರೆ. ಜರ್ಮನರಿಗೆ ಈ ತೆರದ ಅಂತಸ್ಸಂಕಲ್ಪವಿರುವುದೆಂಬುದನ್ನು ಊಹಿಸಿಕೊಂಡಿರುವುದರಿಂದಲೇ ಸ್ಪೈನ್ ದೇಶದವರೂ ಸ್ವೀಡನ್ ದೇಶದವರೂ ಕೂಡ ತಮ್ಮ ಕಬ್ಬುನದ ಗಣಿಗಳಲ್ಲಿ ಜರ್ಮನರಿಗೆ ಲೇಶಮಾತ್ರದ ಸಂಬಂಧಕ್ಕೂ ಅವಕಾಶ ಕೊಡದೆ ಇರುವರು. ಮೊರಾಕ್ಕೋವಿನಲ್ಲಿ ಕಬ್ಬುನದ ಗಣಿಗಳಿರುವುದರಿಂದ ಅದನ್ನ ಸ್ವಾಧೀನಪಡಿಸಿಕೊಳ್ಳಬೇಕೆಂದು ಜರ್ಮನರು ಪ್ರಯತ್ನಿಸಿದರು. ಆದರೆ ಅದನ್ನು ತಿಳಿದು ಇಂಗ್ಲೆಂಡ್ ಫ್ರಾನ್ಸ್ ದೇಶಗಳು ಥಟ್ಟನೆ ಅದಕ್ಕೆ ಅಭ್ಯಂತರವನ್ನು ತಂದಿಕ್ಕಿದುವು. ಅದರಿಂದಲೇ ಜರ್ಮನಿಗೆ ಇಂಗ್ಲೆಂಡ್ ಫ್ರಾನ್ಸ್ ದೇಶಗಳ ಮೇಲೆ ಮುಗಿಯಲಾರದಷ್ಟು ದ್ವೇಷವು ಮೂಡಿಹೋಯಿತು. ಚೀನಾದೇಶದಲ್ಲಿರುವಷ್ಟು ಕಬ್ಬುನದ ಗಣಿಗಳು ಪ್ರಪಂಚದ ಮೇಲಣ ಮತ್ತಾವ ದೇಶದಲ್ಲಿಯೂ ಇರುವುದಿಲ್ಲ. ಅದುಕಾರಣವೇ ಜರ್ಮನರು ಚೀನಾದೊಡನೆ ಮೈತ್ರಿಯನ್ನು ಬೆಳಸಿ ಸ್ವಲ್ಪ ಸ್ಥಲವನ್ನು ಸಂಪಾದಿಸಿ ಕಾಲೂರಿ ನಿಂತಿದ್ದರು. ಇದರ ರಹಸ್ಯವನ್ನು ಮಗ್ಗುಲಲ್ಲಿರುವ ಜಪಾನರು ಅರಿತುಕೊಳ್ಳದೆ ಹೋಗಲಿಲ್ಲ. ಇದಕ್ಕಾಗಿ ಅವರು ಬಹು ಅಗಾಧವಾಗಿ ಪರ್ಯಾಲೋಚನೆಯನ್ನು ಮಾಡಿದರು. ಪ್ರಬಲವಾದ ಜರ್ಮನಿಯು ಬೇರನ್ನು ಚೀನಾದಿಂದ ಕಿತ್ತು ಬಿಸುಡುವುದು ಹೇಗೆಂದು ಯೋಚಿಸುತ್ತಿದ್ದರು. ಈಗಿನ ಯುದ್ಧದಲ್ಲಿ ತಕ್ಕ ಸಂಧಿಯು ದೊರೆದಿತು. ಕಿಯಾಚೋವನ್ನು ಹಿಡಿದುಕೊಂಡು ತಮ್ಮ ಸಂಕಲ್ಪವನ್ನು ಈಡೇರಿಸಿದರು. ಜಪಾನಿನವರಿಗೆ ಸ್ವದೇಶದಲ್ಲಿ ಕಬ್ಬುನದ ಗಣಿಗಳಿಲ್ಲವೇ ಇಲ್ಲ. ಅವರಿಗೆ ಬೇಕಾದ ಕಬ್ಬುನವು ಸಿಕ್ಕುವುದಕ್ಕೆ ಚೀನಾದೇಶವೇ ಆಧಾರವಾಗಿದೆ. ದೇಶದ ವ್ಯಾಪಕತೆ ಸ್ಥಿರತೆಗಳಿಗೆ ಪ್ರಧಾನವಸ್ತುವಾದ ಕಬ್ಬುನದ ವಿಷಯದಲ್ಲಿ ತಾವು ಪರೋಪಾಶ್ರಯದಲ್ಲಿರುವಂತಾಗಿರುವುದು ಕೇವಲ ಸ್ವಾತಂತ್ರ್ಯಪ್ರಿಯರಾದ ಜಪಾನರಿಗೆ ವಾಚಾಮಗೋಚರವಾದಷ್ಟು ಕೊರತೆಯಾಗಿರುವುದು. ಅಂಥ ಕೊರತೆಯನ್ನು ಹೇಗಾದರೂ ಪರಿಹರಿಸಿಕೊಂಡೇ ತೀರಬೇಕೆಂಬುದು ಜಪಾನ್‌ರಾಜನೀತಿಜ್ಞರ ದೃಢಸಂಕಲ್ಪವಾಗಿದೆ. ಈಗಿನ ಯುದ್ಧದ ಅನುಭವದಿಂದಲಂತೂ ಅವರ ಸಂಕಲ್ಪವು ಅತ್ಯವಶ್ಯಕವಾದುದೆಂದು ದೃಢಪಟ್ಟುಕೊಂಡಿದೆ. ಈಗಲಾದರೂ ಜಪಾನ್‌ದೇಶದ ಪ್ರತಿಯೊಂದು ನೌಕಾನಿರ್ಮಾಣಕರ್ಮಾಗಾರಗಳಲ್ಲೂ ಕೆಲಸವು ಜರುಗುತ್ತಿದೆ. ಏನಾದರೂ ಅವಶ್ಯಕತೆಯು ಬಿದ್ದು ಮತ್ತೊಂದು ಹೊಸಹಡಗನ್ನು ಕಟ್ಟಬೇಕೆಂದರೆ ಅದನ್ನು ಥಟ್ಟನೆ ಕಟ್ಟಲಾರದಂಥ ಸ್ಥಿತಿಯಲ್ಲಿ ಜಪಾನು ಇರುತ್ತಿದೆ. ಏಕೆಂದರೆ ಅದರ ಕೈಯಲ್ಲಿ ಕಬ್ಬುನವಿಲ್ಲ. ಆಂಗ್ಲಮಿತ್ರಮಂಡಲಿಯವರಲ್ಲಿ ಕಬ್ಬುನದ ಗಣಿಗಳಿದ್ದರೂ ಜಪಾನರಿಗೆ ಫಲವಿಲ್ಲ. ಏಕೆಂದರೆ ಎಷ್ಟಾದರೂ ಅವರಿಗೇ ಸಾಲದೆಯಿದೆ. ಇನ್ನು ಶತ್ರುರಾಜ್ಯಗಳಲ್ಲಿ ಕಬ್ಬುನವಿದ್ದರೆ ಇವರಿಗೆ ಆಗುವ ಧನಲಾಭವೇನು ? ತಟಸ್ಥರಾಜ್ಯಗಳಲ್ಲಿದ್ದರೂ ಕಾಲಕ್ಕೆ ತಕ್ಕಷ್ಟು ಒದಗುವಹಾಗಿಲ್ಲ. ಅದುಕಾರಣ, ಜಪಾನರು ಕಬ್ಬುನದ ವಿಷಯದಲ್ಲಿ ತಮಗಿರುವ ಪರಾಧೀನತೆಯನ್ನು ತಪ್ಪಿಸಿಕೊಳ್ಳಬೇಕೆಂದು ಈಗ ದೀಕ್ಷಾಬದ್ಧರಾಗಿದ್ದಾರೆ. ಹೇಗಾದರೂ ಸಹಿಸಿಕೊಳ್ಳಲಾರದೆ ಚೀನಾದಲ್ಲಿರುವ ಕಬ್ಬುನದ ಗಣಿಗಳಮೇಲೆ ಜರ್ಮನರು ಸಂಪಾದಿಸಿಕೊಂಡಿದ್ದ ಸ್ವಾಮ್ಯವನ್ನೆಲ್ಲಾ ತಾವು ಪಡೆದುಕೊಳ್ಳಬೇಕೆಂಬುದೇ ಈಗಿನ ಅವರ ಪ್ರಯತ್ನವಾಗಿದೆ. ಜರ್ಮನರಿಗಿದ್ದ ಕಿಯಾಚೋಭಾಗವನ್ನು ಜಪಾನರು ವಶಪಡಿಸಿಕೊಂಡುಬಿಟ್ಟಬಳಿಕ, ಚೀನಾದವರೊಡನೆ ಈಚೆಗೆ ಅವರು ಪತ್ರವ್ಯವಹಾರವನ್ನು ನಡೆಯಿಸಿ, ಕಡೆಗೆ ಯುದ್ಧಕ್ಕೆ ಸನ್ನದ್ಧರಾಗಬೇಕೆಂದು ತಿಳಿಯಿಸುವತನಕ ಚತುರುಪಾಯಗಳನ್ನು ನಡೆಯಿಸಿ, ಒಂದು ಸಂಧಿನಿಬಂಧನೆಯನ್ನು ಮೊನ್ನೆತಾನೇ ಮಾಡಿಕೊಂಡುದರಲ್ಲಿ ಈ ಜಪಾನರ ಮನೋರಥಪೂರಣಸಂಕಲ್ಪವೇ ವಿಶೇಷವಾಗಿದ್ದಿತೆಂದು ಎಣಿಸಬೇಕಾಗಿದೆ ಚೀನಾದೇಶದ ದೊಡ್ಡದೊಡ್ಡ ಕಬ್ಬುನದ ಗಣಿಗಳನ್ನು ವಶಪಡಿಸಿಕೊಳ್ಳಬೇಕೆಂಬ ಬಹುಕಾಲಾಲೋಚಿತ ಮಹಾಮನೋರಥವು ಅವರಿಗಿದ್ದುದಕ್ಕೆ ಸರಿಯಾಗಿ ಅದು ಈಡೇರುವುದಕ್ಕೆ ಸಹಾಯಕವಾಗಿ ಯೂರೋಪಿನ ಪ್ರಬಲರಾಷ್ಟ್ರಗಳ ಮಧ್ಯದಲ್ಲಿ ವಿರೋಧವು ಹುಟ್ಟಿದುದೂ ಯುದ್ಧಾಗ್ನಿಯಲ್ಲಿ ಅವರು ತೊಡಗಿ ಪೂರ್ವದೇಶದ ವಿಷಯಕ್ಕೆ ಅವರುಗಳು ವಿಶೇಷ ಲಕ್ಷ್ಯವನ್ನು ಕೊಡಲು ಅವಕಾಶವಿಲ್ಲದೆ ಹೋದುದೂ ಸಹ ಜಪಾನರ ಮನೋರಥಸಿದ್ಧಿಗೆ ಅನುಕೂಲಸಂಧಿಯಾಗಿ ಪರಿಣಮಿಸಿತು. ಜಪಾನರಿಗೆ ಕಬ್ಬುನದಮೇಲಣ ಸ್ವಾತಂತ್ರ್ಯವನ್ನೆಲ್ಲಾ ಒಪ್ಪಿಸಿಬಿಟ್ಟರೆ ತಮ್ಮ ದೇಶಕ್ಕೆ ದೌರ್ಬಲ್ಯವನ್ನು ತಾವಾಗಿ ಉಂಟುಮಾಡಿಕೊಂಡಂತಾಗುವುದಲ್ಲಾ ಎಂದು ಚೀನಾದೇಶದವರು ಬಹಳವಾಗಿ ಚಿಂತಿಸಿದರು. ಆದರೆ ಮಾಡುವುದೇನು ? ಪ್ರಕೃತ ಸಂದರ್ಭದಲ್ಲಿ ಅವರಿಗೆ ಪಾಶ್ಚಾತ್ಯರಲ್ಲಾರ ಬೆಂಬಲವೂ ದೊರೆಯುವಂತಿರಲಿಲ್ಲ. ಪ್ರಬಲನಾದ ಜಪಾನು ಶಸ್ತ್ರವನ್ನು ಹಿರಿದು ನಿಂತುಕೊಂಡೇ ಬಾಗಲಲ್ಲಿ ನಿಂತು ಪ್ರಶ್ನೆಮಾಡುತ್ತಿರುವಾಗ ಅದಕ್ಕೆ ಪ್ರತಿಯಾಗಿ ಹೇಳುವ ಮಟ್ಟಿ ಕೆಚ್ಚು ತನ್ನ ಬಾಹುವಿನಲ್ಲಿಲ್ಲ. ಹೀಗಾಗಿ ಚೀನಾದೇಶವು ಜಪಾನಿನ ಇಷ್ಟಾರ್ಥವನ್ನು ಪೂರ್ಣಮಾಡಿಯೇ ತೀರಬೇಕಾದ ಸ್ಥಿತಿಗೆ ನಿಂತಿತು. ಚೀನಾದವರು ನಮಗೆ ಕಬ್ಬುನದ ಮೇಲಣ ಅಧಿಕಾರವನ್ನು ಒಪ್ಪಿಸಿಕೊಟ್ಟರೆ ಚೀನಾ—ಜಪಾನ್ ದೇಶಗಳೆರಡನ್ನೂ ನಾವು ಕಾಪಾಡಿಕೊಂಡುಹೋಗಬಲ್ಲೆವೆಂಬ ನಂಬುಗೆಯು ಜಪಾನಿಗೆ ಇರುವುದು. ಆದರೆ ಚೀನಾಕ್ಕೆ ಮಾತ್ರ ಜಪಾನಿನ ಮೇಲೆ ನಂಬುಗೆಯಿರುವ ಹಾಗೆ ಕಾಣಲಿಲ್ಲ ಈಗಿನ ಸಂಧಿಯನ್ನು ಜಪಾನು ಹೋಗಲಾಡಿಸಿಕೊಂಡುಬಿಟ್ಟಿದ್ದರೆ, ಅವರಿಗೆ ಚೀನಾದೇಶದ ಕಬ್ಬುನದ ಮೇಲಣ ಅಧಿಕಾರವು ಇನ್ನೆಂದಿಗೂ ಇಷ್ಟು ಸುಲಭವಾಗಿ ಲಭಿಸುತ್ತಿರಲಿಲ್ಲ. ಕಷ್ಟದಿಂದಲೂ ಕೂಡ ಸಾಧ್ಯವಾಗುತ್ತಲಿದ್ದಿತೋ ಇಲ್ಲವೋ ಹೇಳುವುದು ಕಷ್ಟ. ಪಾಶ್ಚಾತ್ಯರ ಯೂರೋಪು ಖಂಡದಲ್ಲಿ ಯುದ್ಧಾಗ್ನಿಯು ಹುಟ್ಟಿ ಅದು ದಹಿಸಿಹೋಗುತ್ತಿರುವ ದುರ್ಯೋಗದಲ್ಲಿ ಪೂರ್ವದೇಶದ ಜಪಾನರಿಗೆ ಈ ಮೇಲೆ ಹೇಳಿದ ಅನುಪಮವಾದ ಸುಯೋಗವು ಲಭಿಸಿದುದು ಭಗವದ್ವಿಲಾಸವೈಚಿತ್ರ್ಯವಾಗಿರುವುದು. ಇಂಥ ಲಾಭವು ತಮ್ಮ ದೇಶಕ್ಕೆ ಅನಾಯಾಸವಾಗಿ ದೊರೆದುದು ತಮ್ಮ ಭಾಗ್ಯದೇವತೆಯ ಪ್ರಸಾದ ಲಕ್ಷಣವೆಂದು ಜಪಾನಿನ ರಾಜನೀತಿಕುಶಲರು ಪರಿಭಾವಿಸುತ್ತಿರುವರು. ಜಪಾನು ಏಷ್ಯಾಖಂಡದ ಸರ್ವಾಧಿಕಾರವನ್ನೂ ವಹಿಸಿ ಮಹಾಸಾಮ್ರಾಜ್ಯವಾಗಿರುವಂತೆ ಮಾಡಬೇಕೆಂದೂ, ಈ ಸಾಮ್ರಾಜ್ಯರಕ್ಷಣದ ಕೆಳಗೆ ಪೂರ್ವದೇಶೀಯರೆಲ್ಲರೂ ಇರುವಂತೆ ಮಾಡಬೇಕೆಂದೂ ಜಪಾನಿನವರು ಬಹುಕಾಲದಿಂದ ಒಂದು ಆಶೆಯನ್ನು ಇಟ್ಟುಕೊಂಡಿರುವರು. ಈಗಿನ ಯುದ್ಧಸಂಬಂಧದಲ್ಲಿ ಅವರ ದೇಶದ ವ್ಯಾಪಾರಸಾಮ್ರಾಜ್ಯವು ಪೂರ್ವ ದೇಶವನ್ನೆಲ್ಲಾ ವ್ಯಾಪಿಸುವುದಕ್ಕೆ ಅವಕಾಶವು

ಚೆನ್ನಾಗಿ ಆಗಿರುವುದು. ಚೀನಾದೇಶದಲ್ಲಾದ ಲಾಭವು ಅವರ ಸೈನಿಕಬಲಕ್ಕೆ ವಿಶೇಷ ಪ್ರೋತ್ಸಾಹಕವಾಗಿ ಪರಿಣಮಿಸಿರುವುದು. ಇದರಿಂದ ಅವರ ಚಿರಕಾಲಕಾಂಕ್ಷೆಗೆ ಚೆನ್ನಾಗಿ ಉತ್ತೇಜನವು ಸಿಕ್ಕಿರುವುದೆಂದು ಹೇಳಲು ಅಭ್ಯಂತರವಿರುವುದಿಲ್ಲ. ಕಬ್ಬುನದ ಮಹಿಮೆಯು ಜರ್ಮನ್ ಕೈಸರರ ಲೋಕಸಾಮ್ರಾಜ್ಯಾಧಿಕಾರಾಪೇಕ್ಷೆಗೆ ಉತ್ತೇಜನವನ್ನಿತ್ತು ಈಗಿನ ಮಹಾಪ್ರಳಯ ಪರಿಣಾಮವನ್ನುಂಟುಮಾಡಿರುವುದು. ಜಪಾನರಿಗೆ ಈ ಕಬ್ಬುನದ ಮಹಿಮೆಯು ಯಾವ ತೆರದ ಉತ್ತೇಜನವನ್ನಿತ್ತು ಲೋಕದಲ್ಲಿ ಯಾವ ಪರಿಣಾಮವನ್ನುಂಟುಮಾಡಲಿಕ್ಕಿರುವುದೋ ಅದನ್ನು ಊಹಿಸಿ ಹೇಳುವುದು ಕಷ್ಟ. ನಮ್ಮ ಭರತಖಂಡದಲ್ಲಾದರೋ ಕಬ್ಬುನವು ಯಥೇಷ್ಟವಾಗಿರುವುದು. ಆದರೇನು? ನಾವು ಅದನ್ನು ಕಾಸಿಗೆ ಪಂಜೇರಂತೆ ಮಾರಿ ದುಡ್ಡಿಗೆ ಪಾವಿನಂತೆ ಅದನ್ನೇ ಕೊಳ್ಳುತ್ತಿರುವೆವು.

ಮೈಸೂರ್ ಸ್ಟಾರ್.

೧೯೧೫ ನೆಯ ಇಸವಿ ಜುಲೈ ತಾ|| ೪ ನೇ ಭಾನುವಾರ.

ಸ್ಥಾನಿಕ ಸ್ವರಾಜ್ಯಮಹಾಸಭೆ.

ಈ ಪ್ರಥಮ ಪರಿಷತ್ತು ಕಳೆದ ಜೂನ್ ತಾ|| ೨೮-೨೯ ೩೦ನೆಯ ಮೂರುದಿನಗಳಲ್ಲಿ ರಾಜಧಾನಿಯ ಟೌನ್‌ಹಾಲ್ ಭವನದಲ್ಲಿ ಯಥಾಸಾಂಗವಾಗಿ ನೆರವೇರಿತು. ಪ್ರಥಮ ದಿವಸದ ಸಭೆಗೆ ವರ್ಧಂತ್ಯುತ್ಸವದ ನಿಮಿತ್ತವಾಗಿ ಹೊರಗಿನಿಂದ ಬಂದಿದ್ದ ಅತಿಥಿಗಳೊಳಗೆ ಲಿಂಬ್ಡಿ ಸಂಸ್ಥಾನದ ಪ್ರಭುಗಳಾದ ಶ್ರೀಮನ್ ಠಾಕೂರ್ ಸಾಹೇಬರು, ಬರೋಡಾ ಸಂಸ್ಥಾನದ ದ್ವಿತೀಯ ರಾಜಪುತ್ರರು, ಪುದುಕೋಟೆ ರಾಜರ ಸಹೋದರರು, ಸರ್ ಶಂಕರನ್‌ನಾಯರ್‌ರವರು ದಯಮಾಡಿಸಿದ್ದರು. ನಮ್ಮ ಸಂಸ್ಥಾನದ ಶ್ರೀಮದ್ಯುವರಾಜರು, ದಿವಾನರು, ಕೌನ್ಸಿಲರುಗಳು, ಶಾಖಾಮುಖ್ಯಾಧಿಕಾರಿಗಳು, ಡಿ|| ಕಮಿಷನರುಗಳು ಮೊದಲಾದವರೆಲ್ಲ ಸಭೆಯನ್ನಲಂಕರಿಸಿದ್ದರು. ಸಂಸ್ಥಾನದ ಎಲ್ಲಾ ಲೋಕಲ್‌ಬೋರ್ಡು ಮ್ಯುನಿಸಿಪಲ್‌ಬೋರ್ಡುಗಳ ಪ್ರತಿನಿಧಿಗಳೂ ಬಂದಿದ್ದರು.

ಪ್ರಥಮದಲ್ಲಿ ಮ|| ಟಿ. ಜಿ. ಲಕ್ಷ್ಮಣರಾಯರು ಸತ್ಕಾರಕ ಸಂಘಾಧ್ಯಕ್ಷತೆಯ ಭಾಷಣವನ್ನು ಮಾಡಿದರು. ಅದರಲ್ಲಿ-ಶ್ರೀಮದ್ಯುವರಾಜರು ತಮ್ಮ ಪ್ರಾರ್ಥನೆಯನ್ನಂಗೀಕರಿಸಿ ಸಭಾಪ್ರಾರಂಭಮಹೋತ್ಸವವನ್ನು ನೆರವೇರಿಸಲು ದಯಮಾಡಿದುದಕ್ಕಾಗಿ ವಂದನೆಯೂ, ಇಂಥ ಆವಶ್ಯಕವಾದ ಸಭೆಯೊಂದನ್ನು ನೆರವೇರಿಸಲು ಅನುಜ್ಞೆಕೊಟ್ಟ ಸರ್ಕಾರಕ್ಕೆ ಕೃತಜ್ಞತೆಯೂ, ಸಂಸ್ಥಾನದ ಎಲ್ಲಾ ಭಾಗಗಳ ಬೋರ್ಡುಗಳಿಂದ ದಯಮಾಡಿಸಿದ್ದ ಪ್ರತಿನಿಧಿಗಳಿಗೆ ರಾಜಧಾನಿಯ ಮ್ಯುನಿಸಿಪಾಲಿಟಿ ಪಕ್ಷದಿಂದ ಸ್ವಾಗತಾಭಿನಂದನವೂ ತಿಳಿಯಿಸಲ್ಪಟ್ಟಿತಲ್ಲದೆ, ಈ ಸಭೆಯ ಆವಶ್ಯಕತೆ-ಇದರಿಂದ ಉಂಟಾಗಬಹುದಾದ ಪ್ರಯೋಜನಗಳೂ ನಿರೂಪಿಸಲ್ಪಟ್ಟಿದ್ದುವು.

ಬಳಿಕ ಶ್ರೀಮದ್ಯುವರಾಜರವರು ಸಭಾಪ್ರಾರಂಭಮಾಡುವಾಗ್ಗೆ ಮಾಡಿದ ಕಾಲೋಚಿತವಾದ ಭಾಷಣದಲ್ಲಿ-ನಮ್ಮ ಭರತಖಂಡದೊಳಗೆಲ್ಲಾ ಸ್ಥಾನಿಕ ಸ್ವರಾಜ್ಯಕಾರ್ಯನಿರ್ವಾಹ ವಿಚಾರಕ್ಕಾಗಿ ಕೂಡಿರುವ ಇಂಥ ಸಭೆಗಳಲ್ಲಿ ಇದೇ ಮೊದಲನೆಯದಾಗಿರುವುದರಿಂದ ಇದರ ಪ್ರವರ್ತಕರ ಯತ್ನವು ಶ್ಲಾಘ್ಯವಾದುದೆಂದು ಹೇಳಿ ಇಂಥ ಪ್ರಥಮಪರಿಷತ್ತಿನ ಅಧ್ಯಕ್ಷತೆಗೆ ಮೈಸೂರು ದೇಶದಲ್ಲೆಲ್ಲಾ ಅಗ್ರೇಸರವಾಗಿರುವ ಒಂದಾನೊಂದು ಮ್ಯುನಿಸಿಪಾಲಿಟಿಯ ಅಧ್ಯಕ್ಷರನ್ನೇ ಆರಿಸಿಕೊಂಡುದು ಉತ್ತಮವಾದ ಏರ್ಪಾಟೆಂದು ಹೇಳಿದುದಲ್ಲದೆ, ಆ ಅಧ್ಯಕ್ಷರಾದ ಮ|| ಕೆ. ಪಿ. ಪುಟ್ಟಣ್ಣಶೆಟ್ಟರವರು ಮೈಸೂರು ಸಂಸ್ಥಾನಕ್ಕೆ ಅನರ್ಘವಾದ ಸೇವೆಯನ್ನು ಮಾಡಿದವರೂ, ಹಿಡಿದ ಕೆಲಸವನ್ನೆಲ್ಲಾ ಮುತುವರ್ಜಿಯಿಂದಲೂ ಸಾಹಸದಿಂದಲೂ ಕೊನೆಮುಟ್ಟಿಸತಕ್ಕವರೂ ಆಗಿರುವರೆಂದು ಹೇಳಿ ಶ್ಲಾಘಿಸಿ, ಬಳಿಕ ಸ್ಥಾನಿಕ ಸ್ವರಾಜ್ಯವಿಷಯಸಂಬಂಧವಾಗಿ ಸರ್ಕಾರದವರಿಂದ ಈ ಹಿಂದೆಯೇ ಏರ್ಪಡಿಸಲ್ಪಟ್ಟಿದ್ದ ಎರಡು ಸಂಘಗಳವರು ಕೊಟ್ಟಿರುವ ವರದಿಯು ಪ್ರಸಕ್ತಸಭೆಯ ಪ್ರತಿನಿಧಿಗಳ ವಿಚಾರಕ್ಕೆ ಸಂಪೂರ್ಣಾರ್ಹವಾಗಿರುವುದೆಂದೂ, ಸ್ಥಾನಿಕ ಸ್ವರಾಜ್ಯಸಂಬಂಧವಾದ ಕಾರ್ಯಗಳ ನ್ಯೂನಾತಿರೇಕಗಳನ್ನೂ, ಆಚರಿಸಬೇಕಾದ ಏರ್ಪಾಟುಗಳ ಸೂಚನೆಗಳನ್ನೂ ನಿರ್ಧರಿಸಿ ಗೌರ್ನ್ಮೆಂಟಿನ ಗಮನಕ್ಕೆ ನೀವುಗಳು ತರಬೇಕೆಂದೂ, ನಿಮ್ಮ ಕಾರ್ಯಭಾಗದಿಂದ ಸಂಸ್ಥಾನದ ಮ್ಯುನಿಸಿಪಾಲಿಟಿಗಳ ಕಾರ್ಯಕ್ರಮಗಳು ಸಮೀಚೀನವಾಗಿಯೂ, ಪ್ರಜಾಹಿತಕರಗಳಾಗಿಯೂ ಪರಿಣಮಿಸುವುದಕ್ಕೆ ಮಾರ್ಗವಾದೀತೆಂದು ನಾನು ನಿರೀಕ್ಷಿಸುವೆನೆಂದೂ ಹೇಳಿ ಪ್ರತಿನಿಧಿಗಳನ್ನೆಲ್ಲಾ ಪ್ರೋತ್ಸಾಹಿಸಿದರು.

ಅನಂತರ ರಾಜಧಾನಿಯ ಮ್ಯುನಿಸಿಪಲ್ ಕೌನ್ಸಿಲರಾದ ರಾ|| ಬ|| ಎಂ. ಸಿ. ರಂಗಯ್ಯಂಗಾರರು-ಪ್ರಸಕ್ತಸಭೆಗೆ ದಿವಾನ್ ಬಹದೂರ್ ಕೆ. ಪಿ. ಪುಟ್ಟಣ್ಣಶೆಟ್ಟರನ್ನು ಅಧ್ಯಕ್ಷರನ್ನಾಗಿ ಆರಿಸಬೇಕೆಂಬ ಸೂಚನೆಯನ್ನು ತಂದು, ಮ|| ಶೆಟ್ಟರು ಸರ್ಕಾರದ ಉದ್ಯೋಗದಿಂದ ನಿವೃತ್ತರಾದ ಮೇಲೂ ಕೂಡ ಪ್ರಜಾಹಿತೈಕದೃಷ್ಟಿಯಿಂದ ಅನೇಕ ಕಾರ್ಯಗಳನ್ನು ಮಾಡುತ್ತಿರುವರೆಂದೂ, ಅಂಥವರನ್ನು ತಮ್ಮೀಸಭೆಗೆ ಅಧ್ಯಕ್ಷರನ್ನು ಮಾಡಿಕೊಳ್ಳುವುದರಿಂದ ಅವರ ಸ್ವಾನುಭವಾದಿಗಳೂ, ಪ್ರೋತ್ಸಾಹಗಳೂ ಸಹ ಈ ಸಭಾಕಾರ್ಯವನ್ನು ಫಲವತ್ತಾಗಿ ಮಾಡುವುದಕ್ಕೆ ಸಾಧಕವಾಗುವುವೆಂದೂ ಹೇಳಿದರು. ಈ ಸೂಚನೆಯನ್ನು ಬೆಂಗಳೂರಿನ ಮ್ಯುನಿಸಿಪಲ್ ಕೌನ್ಸಿಲರ್ ಮ|| ವಿ. ವೆಂಕಟರಾಮಯ್ಯನವರು ಪ್ರೋದ್ಬಲಗೊಳಿಸಿದರು. ಸಭಿಕರೆಲ್ಲರೂ ಅಂಗೀಕಾರಸೂಚಕವಾದ ಕರತಾಡನವನ್ನು ಮಾಡುತ್ತಿರುವಾಗ ಮ|| ಶೆಟ್ಟರವರು ಅಧ್ಯಕ್ಷಪೀಠವನ್ನಲಂಕರಿಸಿ, ಅತ್ಯುಪಯುಕ್ತವಾದ ಭಾಷಣವನ್ನು ಮಾಡಿದರು. ಅದನ್ನು ಈ ಪತ್ರದ ಮತ್ತೊಂದು ಭಾಗದಲ್ಲಿ ಮುದ್ರಿಸಿರುತ್ತೇವೆ.

ಅನಂತರ ಸಭೆಯಲ್ಲಿ ಚರ್ಚಿಸಲ್ಪಡತಕ್ಕ ವಿಷಯಗಳನ್ನು ನಿರ್ಧರಿಸುವುದಕ್ಕಾಗಿ ಒಂದು ಸಂಘವು ಏರ್ಪಡಿಸಲ್ಪಟ್ಟಿತು. ಕಡೆಗೆ ಇಂಗ್ಲೀಷ್ ಅರ್ಥಸಾಧಕಪತ್ರಿಕೆಯ ಸಂಪಾದಕರಾದ ಮ|| ಹಯವದನರಾಯರು ಒಂದು ಉಪನ್ಯಾಸವನ್ನು ಓದಿದರು. ಅದರಲ್ಲಿ ಗ್ರಾಮಾಂತರಗಳ ಆರೋಗ್ಯರಕ್ಷಣೆ, ಸಾಂಪತ್ತಿಕಾಭಿವೃದ್ಧಿ ಮೊದಲಾದ ವಿಷಯಗಳನ್ನು ಕುರಿತ ವಿವರಣೆಗಳು ಸ್ಪಷ್ಟವಾಗಿದ್ದುವು. ಅನಂತರ ಶ್ರೀಮದ್ಯುವರಾಜರು ದಿವಾನರು ಮೊದಲಾದವರಿಗೆಲ್ಲಾ ಗಂಧಪುಷ್ಪಹಾರಾದಿಗಳು ಅರ್ಪಿಸಲ್ಪಡಲು ಸಭೆಯು ಮುಗಿದಿತು.

ತಾ|| ೨೯-೩೦ ರಲ್ಲು ಕೂಡ ಸಭಾಸದರಲ್ಲಿ ಹಲವರು ಸ್ಥಾನಿಕಸ್ವರಾಜ್ಯದ ಈಗಿನ ಏರ್ಪಾಟುಗಳಲ್ಲಿರುವ ಕೆಲವು ಕೊರತೆಗಳನ್ನೂ, ನೂತನವಾಗಿ ಮಾಡಬೇಕಾಗಿರುವ ಏರ್ಪಾಟುಗಳ ಸೂಚನೆಗಳನ್ನೂ ತಮ್ಮ ತಮ್ಮ ಅನುಭವಕ್ಕೆ ಬಂದಿದ್ದಮಟ್ಟಿಗೆ ಸಭಾಮುಖದಲ್ಲಿ ಭಾಷಣಮಾಡಿ ಚರ್ಚಿಸಿದರು. ಸಭಾಧ್ಯಕ್ಷರು ಮಾಡಿದ್ದ ಅನುಭವಪೂರ್ವಕವಾದ ಹಲವು ಸೂಚನೆಗಳೂ ಕೂಡ ಚೆನ್ನಾಗಿ ಚರ್ಚಿಸಲ್ಪಟ್ಟು ಮುಖ್ಯಮುಖ್ಯಾಂಶದಲ್ಲಿ ನಿರ್ಧಾರಗಳು ಮಾಡಲ್ಪಟ್ಟುವು.

ಸ್ಮಾರಕಾರಂಭೋತ್ಸವವು.

ನಮ್ಮ ಪ್ರಭುಗಳಾದ ಶ್ರೀಮನ್ ಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ರವರು ತಮ್ಮ ಪಿತಾಮಹರಾದ ಶ್ರೀಮನ್ ಮುಮ್ಮಡಿ ಕೃಷ್ಣರಾಜಒಡೆಯರ್ ಬಹದ್ದೂರ್‌ರವರು ಶ್ರೀರಂಗಪಟ್ಟಣದಲ್ಲಿ ಜನಿಸಿದರಾದುದರಿಂದ ಆ ಸ್ಥಳವನ್ನು ಗೊತ್ತುಪಡಿಸಿ ಅದರ ಜ್ಞಾಪಕಾರ್ಥವಾಗಿ ಅಲ್ಲಿ ಒಂದು ಶೃಂಗಾರವಾದ ಮಂಟಪವನ್ನು ರಚಿಸಲು ಅಪ್ಪಣೆಮಾಡಿ, ಅದರ ಆರಂಭೋತ್ಸವವನ್ನು ಕಳೆದ ತಾ|| ೧ರಲ್ಲಿ ನಡೆಯಿಸಲು ಗೊತ್ತುಮಾಡಿದ್ದಪ್ರಕಾರ ಅದಿನ ಮಧ್ಯಾಹ್ನ ೪|| ಗಂಟೆಯಲ್ಲಿ ಶ್ರೀಯವರು ತಮ್ಮ ಪ್ರೈವೇಟ್ ಸೆಕ್ರೆಟರಿ, ಹುಜೂರು ಸೆಕ್ರೆಟರಿ, ಅಸಿಸ್ಟೆಂಟ್ ಸೆಕ್ರೆಟರಿಗಳು ಮತ್ತು ಎಡಿಕಾಂಗರುಗಳೊಡನೆ ಮೋಟಾರು ಬಂಡಿಯಲ್ಲಿ ಚಿತ್ತೈಸಿದರು. ದಿವಾನರು, ಕೌನ್ಸಿಲರುಗಳು, ಚೀಫ್ ಕೋರ್ಟು ಜಡ್ಜಿಗಳು ಮೊದಲಾಗಿ ಅಧಿಕಾರಿಗಳೂ, ರಾಜವರ್ಗದವರೂ, ಲಾಯರುಗಳೂ, ವರ್ತಕರುಗಳೂ ಶ್ರೀಮನ್ಮಹಾರಾಜರವರಿಂದಾಹೂತರಾಗಿ ದಯಮಾಡಿದ್ದರು. ಇವರುಗಳು ರಾಜಧಾನಿಯಿಂದ ಹೋಗಿಬರಲು ಒಂದು ಹೆಚ್ಚುಕಟ್ಟಲೆಯ ರೈಲು ಬಂಡಿಯು ಏರ್ಪಡಿಸಲ್ಪಟ್ಟಿದ್ದಿತು. ಆ ಶ್ರೀರಂಗಪಟ್ಟಣವು ತಳಿರ್ತೋರಣಗಳಿಂದಲೂ ಧ್ವಜಪತಾಕೆಗಳಿಂದಲೂ ನೇತ್ರಾನಂದಕರವಾಗಿ ಶೃಂಗರಿಸಲ್ಪಟ್ಟಿದ್ದು, ಅಲ್ಲಲ್ಲಿಗೆ ಚಪ್ಪರಗಳು ಪುರನಿವಾಸಿಗಳಿಂದ ಹಾಕಲ್ಪಟ್ಟಿದ್ದುವು. ಶ್ರೀಮನ್ಮಹಾರಾಜರವರೂ, ಬರೋಡಾ ಸಂಸ್ಥಾನದ ಯುವರಾಜರ ಸಮೇತರಾದ ನಮ್ಮ ಶ್ರೀಮದ್ಯುವರಾಜರವರೂ ಪುರಪ್ರವೇಶಮಾಡುತಲೆ ಪುರಪ್ರಮುಖರು ಇದಿರ್ಗೊಂಡು ಫಲಪುಷ್ಪಗಳನ್ನೊಪ್ಪಿಸಿ, ಉತ್ಸವದೊಡನೆ ಮಂಟಪದ ಬಳಿಗೆ ಬರುತಲೆ ವಾದ್ಯಘೋಷವಾಯಿತು. ಅರಮನೆಯ ಪುರೋಹಿತರು ಮಂಗಳಾಚರಣೆಯನ್ನು ಮಾಡಿದ ಮೇಲೆ ವಿದ್ವಾನ್ ನರಹರಿಜೋಯಿಸರು ಸ್ಮಾರಕವನ್ನು ಕುರಿತು ರಚಿಸಿದ್ದ ಸಂಸ್ಕೃತ ಪದ್ಯಗಳನ್ನು ಹೇಳಿದರು. ಹಾಗೆಯೇ ಗುಂಬಜಿನ ನಾಜೆಂರವರು ಪರ್ಷಿಯನ್ ಭಾಷೆಯಲ್ಲಿ ರಚಿಸಿದ್ದ ಪದ್ಯಗಳನ್ನೋದಿದರು. ತರುವಾಯ ಅರಮನೆಯ ಕಂಟ್ರೋಲರು ಮಂಟಪರಚನೆಗೆ ಆದ ವೆಚ್ಚವನ್ನು ಕುರಿತು ವರದಿಯನ್ನೋದಿಹೇಳಿದರು. ಇವೆಲ್ಲವೂ ಮುಗಿದಮೇಲೆ ಅಲ್ಲಿಯ ಫಸ್ಟ್ ಗ್ರೇಡ್ ಪ್ಲೀಡರೂ, ಲೆ|| ಕೌನ್ಸಿಲ್ ಮೆಂಬರರೂ ಆದ ಮ|| ಬಿ. ನರಸಿಂಗರಾಯರು ಪುರನಿವಾಸಿಗಳ ಪರವಾಗಿ ಒಂದು ವಿಜ್ಞಾಪನಪತ್ರಿಕೆಯನ್ನೋದಿ ಬೆಳ್ಳಿಯ ಪೆಟ್ಟಿಗೆಯಲ್ಲಿಟ್ಟು ಮಹಾರಾಜರಿಗೊಪ್ಪಿಸಿದರು. ಇದರ ಮುಖ್ಯಾಭಿಪ್ರಾಯವೇನೆಂದರೆ:—ಈ ಶ್ರೀರಂಗಪಟ್ಟಣ ದ್ವೀಪವು ಪವಿತ್ರವಾದ ಕಾವೇರೀ ನದಿಯು ಪ್ರವಹಿಸುತ್ತಿರುವುದರಿಂದಲೂ, ಶ್ರೀ ರಂಗನಾಥಸ್ವಾಮಿಯ ದೇವಸ್ಥಾನವೂ, ಶ್ರೀ ಗಂಗಾಧರೇಶ್ವರಸ್ವಾಮಿಯ ದೇವಸ್ಥಾನವೂ ಇರುವುದರಿಂದಲೂ, ಇದು ಯಾತ್ರಾಸ್ಥಲವಾಗಿ ಬಹುಕಾಲದಿಂದಲೂ ಪ್ರಖ್ಯಾತವಾಗಿರುವುದಲ್ಲದೆ, ಮೈಸೂರು ಸಂಸ್ಥಾನವು ಪುರಾತನ ರಾಜಧಾನಿಯಾಗಿಯೂ ಮಹಾಸ್ವಾಮಿಯವರ ತಾತಂದಿರಾದ ಶ್ರೀ ಮುಮ್ಮಡಿ ಕೃಷ್ಣರಾಜವೊಡೆಯರ್ ಬಹದ್ದೂರ್ ಕೆ.ಜಿ.ಸಿ.ಎಸ್.ಐ., ಯವರ ಜನ್ಮಸ್ಥಲವಾಗಿಯೂ ಪ್ರಸಿದ್ಧವಾಗಿರುವುದು. ಕೈ|| ಮುಮ್ಮಡೀ ಕೃಷ್ಣರಾಜವೊಡೆಯರ್ ಬಹದ್ದೂರ್‌ರವರು ಇಲ್ಲಿಯ ಪ್ರಜೆಗಳ ಪ್ರಾರ್ಥನೆಯ ಪ್ರಕಾರ ತಮ್ಮ ಜನ್ಮಸ್ಥಲದ ಜ್ಞಾಪಕಾರ್ಥವಾಗಿ ಒಂದು ಕಟ್ಟಡವನ್ನು ಕಟ್ಟಿಸಿದ್ದುದಾಗರಿಯುತ್ತೇವೆ. ಈಚೆಗೆ ೧೮೮೮ ರಲ್ಲಿ ತಮ್ಮ ತಂದೆಯವರಾದ ಸದಾ ನಮ್ಮ ಸ್ಮೃತಿಪಥದಲ್ಲಿರುವ ಕೈ|| ಶ್ರೀ ಚಾಮರಾಜೇಂದ್ರ ವೊಡೆಯರ್ ಬಹದ್ದೂರ್ ಜಿ. ಸಿ. ಎಸ್.ಐ., ರವರು ಈ ಊರಿಗೆ ಚಿತ್ತೈಸಿದ್ದಾಗ್ಗೆ ಇಲ್ಲಿಯ ನಿವಾಸಿಗಳ ಪ್ರಾರ್ಥನೆಯಂತೆ ಈ ಸ್ಮಾರಕಕಾರ್ಯವನ್ನು ನೆರವೇರಿಸಿ ಕೊಡುವುದಾಗಪ್ಪಣೆ ಯಾಗಿದ್ದಿತು. ನಮ್ಮಗಳ ಪ್ರಾರ್ಥನೆಯು ಈಗ ಮಹಾಸ್ವಾಮಿಯವರಿಂದ ನಡೆಯಿಸಲ್ಪಡುವಂತಾದುದು ನಮ್ಮಗಳ ಪುಣ್ಯೋದಯವಲ್ಲದೆ, ಈ ಸ್ಮಾರಕಾಲಯದಾರಂಭೋತ್ಸವವನ್ನು ಸ್ವತಃ ನೆರವೇರಿಸಲು ಈ ದಿವಸ ಇಲ್ಲಿಗೆ ಚಿತ್ತೈಸಿ ನಮ್ಮಗಳಿಗೆ ಮಹಾ ಗೌರವವನ್ನುಂಟುಮಾಡಿದುದಕ್ಕಾಗಿ ನಾವು ತಮಗೆ ಕೃತಜ್ಞರಾಗಿರುತ್ತೇವೆ. ಕೆಲ ವರ್ಷಗಳ ಹಿಂದೆ ಈ ಪಟ್ಟಣವು ಬಹಳ ಜನಭರಿತವಾಗಿಯೂ, ಉಚ್ಛ್ರಾಯಸ್ಥಿತಿಯಲ್ಲೂ ಇದ್ದು, ಈಚೆಗೆ ಪ್ರಜಾಸಂಖ್ಯೆಯಲ್ಲೂ ಸಂಪತ್ತಿನಲ್ಲೂ ಕಡಿಮೆಯಾಗುತ್ತಿರುವುದರಿಂದ ಇದರ ಕಾರಣವನ್ನೂ ನಿವಾರಣೋಪಾಯವನ್ನೂ ಕಂಡುಹಿಡಿಯಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇವೆ. ಈ ಚರಿತ್ರಾರ್ಹವಾದ ದ್ವೀಪದಭಿವೃದ್ಧಿಗೆ ಈ ದಿವಸದ ಶುಭಸಮಾರಂಭವು ಹೊಸ ಶಕವಾಗಿ ಪರಿಣಮಿಸುವುದೆಂದು ನಿರೀಕ್ಷಿಸುತ್ತೇವೆ.''

ಇದಕ್ಕೆ ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿದುತ್ತರದ ಅಭಿಪ್ರಾಯವೇನೆಂದರೆ:—‘‘ಈ ದಿವಸ ನಾನು ಆರಂಭಮಾಡಲಿಕ್ಕಿರುವ ಸ್ಮಾರಕಾಲಯದ ಚರಿತ್ರವನ್ನು ಮ|| ರಾಮಕೃಷ್ಣರಾಯರು ಸಂಕ್ಷಿಪ್ತವಾಗಿ ಹೇಳಿದುದನ್ನು ನಾನು ವಿಶ್ವಾಸದಿಂದ ಲಾಲಿಸಿದೆನು. ನಮ್ಮ ತಂದೆಯವರ ಕಾಲದಲ್ಲೂ ಈಗಲೂ ಬಹಳ ನಿಸ್ಪೃಹತೆಯಿಂದ ಕೆಲಸಮಾಡಿ ನನ್ನ ಪೂರ್ಣ ವಿಶ್ವಾಸಕ್ಕೆ ಪಾತ್ರರಾಗಿರುವ ಮ|| ರಾಮಕೃಷ್ಣರಾಯರು ಈ ದಿವಸದ ಸಮಾರಂಭಕಾಲದಲ್ಲಿ ಮುಂದಾಳುಗಳಾಗಿರುವುದು ಬಹಳ ಸಂತೋಷಕರವಾಗಿದೆ. ಈ ದ್ವೀಪಕ್ಕಿಂತಲೂ ಹೆಚ್ಚು ಚರಿತ್ರಾರ್ಹವಾದ ಸ್ಥಳಗಳು ಕೆಲವಿವೆ. ಶ್ರೀರಂಗಪಟ್ಟಣವು ಬ್ರಿಟಿಷರ ಕೈವಶವಾದಮೇಲೆ ನಮ್ಮ ಪುರಾತನ ರಾಜಮನೆತನದ ಪುನರುಜ್ಜೀವನಕ್ಕೂ, ಬ್ರಿಟಿಷರು ಈ ರಾಜ್ಯವನ್ನು ಐವತ್ತು ವರುಷಗಳವರೆಗೆ ಆಳಿದನಂತರ ಎರಡನೆಯವೇಳೆ ನಮ್ಮ ಮನೆತನಕ್ಕೆ ರಾಜ್ಯಾಡಳಿತವು ಲಭ್ಯವಾಗುವುದಕ್ಕೂ ಕಾರಣಭೂತರಾದ ಆ ನಮ್ಮ ಪ್ರಖ್ಯಾತ ತಾತಂದಿರ ಸ್ಮಾರಕಕಾರ್ಯಕ್ಕೀಸ್ಥಳವನ್ನು ಗೊತ್ತುಪಡಿಸಲು ನನ್ನ ಮನಸ್ಸಿಗುಂಟಾದ ಸಂತುಷ್ಟಿಯೇ ಕಾರಣವಾಗಿದೆ. ಬ್ರಿಟಿಷ್ ಸರ್ಕಾರದವರು ಔದಾರ್ಯದಿಂದಲೂ, ನ್ಯಾಯವನ್ನನುಸರಿಸಿಯೂ ಈ ಮೈಸೂರು ರಾಜ್ಯವನ್ನು 1881 ರಲ್ಲಿ ಮರಳಿ ನಮ್ಮ ಮನೆತನಕ್ಕೆ ವಹಿಸಿಕೊಡಲು ನಮ್ಮ ತಾತಂದಿರ ತಾಳ್ಮೆ, ಧೈರ್ಯಾದಿ ಸದ್ಗುಣಗಳೂ, ಪ್ರತಿಕೂಲವಾಗಿದ್ದ ಅನೇಕವರ್ಷಗಳಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಅವರು ಚ್ಯುತಿಯಿಲ್ಲದ ರಾಜಭಕ್ತಿಯಿಂದ ನಡೆದುಕೊಳ್ಳುತ್ತಿದ್ದುದೂ ಕಾರಣಭೂತವಾಗಿದೆ. ಹಿಂದೆ ಪೂರ್ಣ ಉಚ್ಛ್ರಾಯಸ್ಥಿತಿಯಲ್ಲಿದ್ದ ಈ ಪಟ್ಟಣವು ಈಗ ಹಾಳಾಗಿರುವುದನ್ನು ನೋಡಿ ನನ್ನ ಮನಸ್ಸಿಗೆ ಬಹಳ ವ್ಯಾಕುಲವಾಗಿದೆ. ಈ ಪಟ್ಟಣವನ್ನು ಅಭಿವೃದ್ಧಿಗೊಳಿಸಬೇಕೆಂಬ ಇಲ್ಲಿನ ನಿವಾಸಿಗಳ ಪ್ರಾರ್ಥನೆಯ ವಿಚಾರದಲ್ಲಿ ನಮ್ಮ ಸಾನುಭೂತಿಯು ಬಹಳವಾಗಿರುವುದು. ಇದರ ಅಭಿವೃದ್ಧಿಯ ವಿಚಾರದಲ್ಲಿ ಸರ್ಕಾರದವರು ಕೆಲ ಉಪಾಯವನ್ನು ಕಂಡುಹಿಡಿದಿರುತ್ತಾರೆ. ಅದಕ್ಕಾಗಿ ತಗಲುವ ವೆಚ್ಚವು ಬಹಳವಾಗಿರುವುದರಿಂದ, ಸದ್ಯದಲ್ಲಿ ಬಹಳ ಅಗತ್ಯವಾಗಿರುವ ಕಾರ್ಯಗಳಿಗಾಗಿ ಕಳೆದೆರಡುವರ್ಷಗಳಿಂದ ಕೆಲ ಹಣವನ್ನು ವ್ಯಯಮಾಡಲು ಗೊತ್ತುಮಾಡಿದೆ. ಇನ್ನುಮುಂದೆ ಹೆಚ್ಚು ಹಣವು ವಿನಿಯೋಗಿಸಲ್ಪಡುವುದು. ಸರ್ಕಾರದವರ ಸಾನುಭೂತಿ ಮತ್ತೂ ಸಹಾಯಗಳಿಂದಲೂ ನಿಮ್ಮಗಳ ಸಹಕಾರದಿಂದಲೂ ಶ್ರೀರಂಗಪಟ್ಟಣವು ಉತ್ತಮಸ್ಥಿತಿಗೆ ತರಲ್ಪಡಲು ಸಾಧ್ಯವಾಗುವುದೆಂದು ನಂಬುತ್ತೇನೆ. ಈ ಚರಿತ್ರಪ್ರಸಿದ್ಧವಾದ ಯುದ್ಧಭೂಮಿಯಲ್ಲಿ ನಿಂತಿರುವುದರಿಂದ ಈಗ ಯೂರೋಪಿನಲ್ಲಿ ನಡೆಯುತ್ತಿರುವ ಭೀಕರವಾದ ಯುದ್ಧವು ಸ್ಮರಣೆಗೆ ಬರುತ್ತದೆ. ಈ ಯುದ್ಧದಲ್ಲಿ ನಮ್ಮ ಭರತಖಂಡದ ಸೈನಿಕರೂ ಬ್ರಿಟಿಷ್ ಸೈನಿಕರೂ ಒಟ್ಟುಗೂಡಿ ನ್ಯಾಯಪಕ್ಷವನ್ನು ಹಿಡಿದು ಕಾದಾಡುತ್ತಿರುವರು. ಬ್ರಿಟಿಷರಿಗೆ ಜಯವಾಗಲೆಂದೂ ಶಾಶ್ವತವಾದ ಶಾಂತಿಯುಂಟಾಗಲೆಂದೂ ನಾವೆಲ್ಲರೂ ಏಕೀಭವಿಸಿ ಸಾರ್ವದಾ ದೇವರನ್ನು ಪ್ರಾರ್ಥಿಸುವ, ಎಂದಪ್ಪಣೆಕೊಡಿಸಿ ಮಂಟಪದೊಳಕ್ಕೆ ಪ್ರವೇಶಿಸಿದರು.

ಒಳದೇಶ ವೃತ್ತಾಂತಗಳು.

ವರ್ಧಂತ್ಯುತ್ಸವಕ್ಕೆ ಬಂದಿದ್ದ ಅಧಿಕಾರಿಗಳೂ, ಅತಿಥಿಗಳೂ ಕಳೆದ ಗುರುವಾರ ಶುಕ್ರವಾರಗಳಲ್ಲಿ ಹಿಂದಿರುಗಿ ಪ್ರಯಾಣ ಮಾಡಿದರು. ದಿವಾನರು ಈ ದಿವಸ ಪ್ರಯಾಣ ಮಾಡುವವರಾಗಿರುವರು.

ರಾಜಧಾನಿಯಲ್ಲಿ ನಡೆದ ಸ್ಥಾನಿಕ ಸ್ವರಾಜ್ಯಪರಿಷತ್ತಿನ ಕೊನೆಯ ದಿವಸ ಸಭಿಕರಿಗೆಲ್ಲಾ ಗಾನಶ್ರವಣ, ಅಲ್ಪಾಹಾರಭೋಜನ, ಕಂದುಕಖೇಲನಾದಿ ಏರ್ಪಾಟುಗಳೂ, ಮಾಯಾದೀಪದ ಮೂಲಕ ಆರೋಗ್ಯವಿಷಯಕ್ಕೆ ಸಂಬಂಧಿಸಿದ ಪ್ರದರ್ಶನಗಳೂ ಸಹ ಟವನ್‌ಹಾಲಿನಲ್ಲಿ ನಡೆಯಿಸಲ್ಪಟ್ಟುವು.

ಅರಮನೆಯ ಕಂಟ್ರೋಲರು ಅರಮನೆಯ ನಾನಾಶಾಖೆಗಳಲ್ಲಿ ಬಹು ಕಾಲದಿಂದಲೂ ನಡೆದುಬಂದಿದ್ದ ದುಂದುವೆಚ್ಚಗಳಲ್ಲಿ ಬಹುಭಾಗವನ್ನು ಕಡಿಮೆಮಾಡಿ ಹಣವನ್ನುಳಿಸುತ್ತ ಬಂದುದರ ಮೇಲೆ ಶ್ರೀಮನ್ ಮಹಾರಾಜರವರಿಗೆ ಇವರ ವಿಚಾರದಲ್ಲಿ ಪೂರ್ಣಾಭಿಮಾನವು ಹುಟ್ಟಿ, ಇವರ ಅಧಿಕಾರವಧಿಯನ್ನು ಇನ್ನೂ ೨ ವರ್ಷಗಳವರೆಗೂ ಸಂಬಳವನ್ನು ೭೦೦ ಕ್ಕೂ ಹೆಚ್ಚಿಸುವುದಾಗಿ ತಿಳಿಯುತ್ತೇವೆ.

ದಿವಾನರು ವರ್ಧಂತ್ಯುತ್ಸವಕ್ಕೆ ಬಂದಿದ್ದ ಐರೋಪ್ಯಾತಿಥಿಗಳಿಗೆಲ್ಲಾ ತಮ್ಮ ‘ಲೇಕ್‌ವ್ಯೂ’ ಎಂಬ ಬಂಗಲೆಯಲ್ಲಿ ಕಳೆದ ಸೋಮವಾರ ಔತಣವನ್ನು ಮಾಡಿಸಿ, ಮಂಗಳವಾರ ರಾತ್ರಿ ಬ್ರಾಹ್ಮಣರಿಗೂ ಅರಸುಗಳಿಗೂ ಶೇಷಾದ್ರಿಅಯ್ಯರ ಮನೆಯಲ್ಲೂ, ಇತರರಿಗೆ ಮರಿಮಲ್ಲಪ್ಪನವರ ಮನೆಯಲ್ಲೂ ದಿವ್ಯವಾದೌತಣಗಳನ್ನು ಮಾಡಿಸಿದರು. ಪ್ರಾಯಶಃ ೫೦೦ ಜನರವರೆಗೆ ಸೇರಿದ್ದರೆಂದು ತೋರುತ್ತದೆ.

ದಿವಾನರೂ, ಇತರ ಅಧಿಕಾರಿಗಳೂ ಕಳೆದ ಭಾನುವಾರ ಕನ್ನಂಬಾಡಿಯ ಜಲಾಶಯಕ್ಕೆ ಹೋಗಿ ನೋಡಿಕೊಂಡು ಬಂದರು. ಕಾವೇರೀನದಿಯಲ್ಲಿ ಅರ್ಧಕ್ಕಿಂತ ಹೆಚ್ಚಾಗಿ ಪ್ರವಾಹವು ಬಂದಿದ್ದುದರ ಮೇಲೆ ಜಲಾಶಯದಲ್ಲಿ ೫೩ ಅಡಿ ನೀರು ನಿಂತಿರುವುದು. ಇದರಿಂದ ಕನ್ನಂಬಾಡಿ ಗ್ರಾಮದಲ್ಲಿ ನೀರಿನ ಜೋಗುಂಟಾಗಿ ಗ್ರಾಮವು ಎಲ್ಲಿ ಜಲಮಯವಾಗುವುದೋ ಎಂದು ಜನರು ಭೀತರಾಗಿರುವರಂತೆ.

ಸಂಪದಭ್ಯುದಯಸಮಾಜದ ಕಾರ್ಯಗಳೆಲ್ಲಾ ಮುಗಿದಬಳಿಕ ದಿವಾನರು ಉಪಸಂಹಾರದ ಭಾಷಣವನ್ನು ಮಾಡುವಾಗ್ಗೆ ಸರ್ಕಾರದುದ್ಯೋಗಿಗಳಿಗೂ ಪ್ರಜೆಗಳಿಗೂ ಬೋಧಪರವಾದ ಅತ್ಯುತ್ತಮ ಹಿತವಚನಗಳನ್ನು ತಿಳಿಯಪಡಿಸಿದುದಲ್ಲದೆ, ಇತಃಪರಃ ಶ್ರೀಮನ್ಮಹಾರಾಜರವರು ಸಂಸ್ಥಾನದ ಸಂಪದಭ್ಯುದಯ ಕಾರ್ಯಗಳಿಗಾಗಿ ವೆಚ್ಚಮಾಡಲು ವರ್ಷ ೧ ಕ್ಕೆ ೫ ಲಕ್ಷ ರೂ.ಗಳ ಮೇರೆ ೫ ವರ್ಷಗಳ ವರೆಗೆ ಅನುಗ್ರಹಿಸಲು ಅಪ್ಪಣೆಮಾಡಿರುವರೆಂದು ತಿಳಿಯಪಡಿಸಿದರು.

ಕಳೆದ ಗುರುವಾರ ಶ್ರೀರಂಗಪಟ್ಟಣದಲ್ಲಿ ಶ್ರೀ ಮುಮ್ಮಡಿ ಕೃಷ್ಣರಾಜೊಡೆಯರ ಸ್ಮಾರಕಮಂಟಪ ಪ್ರತಿಷ್ಠೋತ್ಸವವು ನಡೆಯುವ ಗೊಂದಲದಲ್ಲಿ ರಂಗನಾಥದೇವಸ್ಥಾನದ ಮುಂಗಡೆ ನಿಲ್ಲಿಸಿದ್ದ ರಥದ ಒಂದು ಗಾಲಿಯನ್ನು ಕೆಲ ಹುಡುಗರು ಹಿಡಿದು ತಿರುಗಿಸುತ್ತಿರುವಾಗ್ಗೆ ಕಡಾಣಿಮೊಳೆಯು ಇಲ್ಲದಿದ್ದುದರಿಂದ ಗಾಲಿಯು ಕಳಚಿ ನೆಲದಮೇಲೆ ಮಗುಚಿಕೊಂಡಿತು. ಅದು ಬಹಳ ಭಾರವಾಗಿದ್ದುದರಿಂದ ಅದರ ಕೆಳಗೆ ಸಿಕ್ಕಿಬಿದ್ದ ೮-೧೦ ವರ್ಷ ವಯಸ್ಸಿನ ಒಬ್ಬ ಹುಡುಗನು ಹತನಾದನೆಂದು ಕೇಳುತ್ತೇವೆ.

ಕಳೆದ ತಾ|| ೨೮ ರಲ್ಲಿ ರಾಜಧಾನಿಯ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ದಿವಾನರ ಅಧ್ಯಕ್ಷತೆಯಿಂದ ಶಾಸನನಿರ್ಮಾಣ ಸಭೆಯು ಕೂಡಿದ್ದಿತು. ಸಂಸ್ಥಾನದ ಆಯವ್ಯಯ ಸಂಬಂಧವಾದ ಬಡ್ಜೆಟ್ಟು ಸಭೆಯ ಮುಂದಿಡಲ್ಪಟ್ಟಿತು. ಅದರಲ್ಲಿ ಕಂಡ ಪ್ರಕಾರ ಸಂಸ್ಥಾನದ ಪ್ರಸಕ್ತ ವರ್ಷದ ಒಟ್ಟು ಆದಾಯವು ೨೮೫೦೯೦೦೦, ವ್ಯಯವು ೨೫೪೮೧೫೦೦೦ ರೂ. ಗಳೆಂದೂ ಗೊತ್ತಾಗುವುದು. ಇದೇ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ಈ ಸಭೆಯು ಕೂಡಿದಾಗ್ಗೆ ಬಡ್ಜೆಟ್ಟಿಗೆ ಸಂಬಂಧಪಟ್ಟ ಚರ್ಚೆಯು ನಡೆಯುವುದು.

ಯುದ್ಧವಾರ್ತೆಯು.

ಪಶ್ಚಿಮ ರಣರಂಗ.

ಫ್ರಾನ್ಸಿನ ಉತ್ತರದಲ್ಲಿ ಅರ್ರಾಸಿನಿಂದ ಸೌಷೆವರೆಗೂ ಜರ್ಮನಿಯವರ ವಶದಲ್ಲಿದ್ದ ಕಂದಕಗಳನ್ನು ಹಿಡಿದುಕೊಂಡೆವು. ಆ ರಾತ್ರಿಯೆಲ್ಲವೂ ಫಿರಂಗಿಗುಂಡುಗಳು ಹೊಡೆಯಲ್ಪಟ್ಟುವು. ಛಾಜೇಲ್ಲೇಸು, ಗೋಂಡೇರ್‌ಕ್ವರ್, ಲೇರಾಂಚಾ ಹತ್ತಿರ ಜರ್ಮನರು ತಮ್ಮ ಸ್ಥಾನವನ್ನು ಬಿಟ್ಟೋಡಿದರು. ಅವರ ಕಂದಕಗಳಲ್ಲಿ ಶವಗಳ ರಾಶಿಯು ಬಿದ್ದಿರುವುದು ಎಂದು ಫ್ರೆಂಚ್ ಅಧಿಕಾರಿಗಳು ಪ್ರಕಟಿಸಿರುವರು. ತಾ|| ೨೨ ರಲ್ಲಿ ಫ್ರೆಂಚ್‌ವೈಮಾನಿಕರು ಅರ್ರಾಸಿಗೆ ಉತ್ತರದಲ್ಲಿದ್ದ ಜರ್ಮನ್ ವೈಮಾನಿಕರ ಮೇಲೆ ಸಿಡಿಮದ್ದುಗಳನ್ನೆಸೆದರು. ಇದರಿಂದ ೨ ವಿಮಾನಗಳು ಕೆಟ್ಟುಹೋದುವು. ಜರ್ಮನರ ವಿಷವಾಯು ಪ್ರಯೋಗದಿಂದ ನಾವು ಹಿಂದಕ್ಕೆ ಹೋಗಬೇಕಾಗಿ ಬಂದಿತು. ಲೊರೇನಿನಲ್ಲಿ ನೋಡೇರೆಕ್ಸನ್ ಹತ್ತಿರ ಭದ್ರವಾಗಿ ಕಟ್ಟಲ್ಪಟ್ಟಿದ್ದ ಸ್ಥಳದಲ್ಲಿ ಜನರಿಲ್ಲವು. ಇಲ್ಲಿಂದ ನಿಮೆಟರು ವರೆಗೆ ಓಡಿಹೋಗಿದ್ದರು. ನಾವು ಮೆಟ್ಜೆವಲ್ ಆಲ್ಸೆಸ್ಸು ಹತ್ತಿರ ರೈಲ್ವೆಸ್ಟೇಷನ್ನನ್ನು ಆಕ್ರಮಿಸಿಕೊಂಡೆವು, ಮತ್ತು ೨೦೦ ಜನರನ್ನು ಸೆರೆಯಾಳುಗಳನ್ನಾಗಿ ಹಿಡಿದುಕೊಂಡೆವು ಎಂದು ಫ್ರೆಂಚಧಿಕಾರಿಗಳು ಪ್ರಕಟಿಸಿರುವರು. ಫ್ರಾನ್ಸಿಗುತ್ತರದಲ್ಲಿ ಕಲೆಯ ಹತ್ತಿರ ಇರುವ ಡಂಕರ್ಕ್ ಪಟ್ಟಣಕ್ಕೆ ೧೦ ಮೈಲಿ ದೂರದಲ್ಲಿ ೩೮ ದೊಡ್ಡ ಫಿರಂಗಿಗುಂಡುಗಳನ್ನು ಹೊಡೆದು, ಜರ್ಮನರು ಬಹಳ ನಷ್ಟವನ್ನುಂಟುಮಾಡಿದರು. ಇವುಗಳಿಗೆ ಫ್ರೆಂಚರು ತಮ್ಮ ಫಿರಂಗಿಗುಂಡುಗಳನ್ನು ಹೊಡೆದು ಅವುಗಳನ್ನು ನಾಶಪಡಿಸಿದುದಾಗಿ ಹೇಳಿಕೊಳ್ಳುತ್ತಿರುವರು. ಆಲ್ಸೆಸ್ಸು ಲೊರೈನುಗಳಲ್ಲಿ ಫ್ರೆಂಚಿನವರು ಕಷ್ಟವಿಲ್ಲದೆಯೇ ಮುಂದುಮುಂದಕ್ಕೆ ಸಾಗಿಹೋಗುತ್ತಿರುವರು. ತಾ|| ೨೪ ರಲ್ಲಿ ಮ್ಯೂಜೆ ಶಿಖರವನ್ನು ಜರ್ಮನರು ಗುಂಡಿನಿಂದ ಹೊಡೆಯಲು ಪ್ರಯತ್ನಿಸಿದರು. ಕಾಂಪೇನಿನಲ್ಲಿ ೨ ಕಂದಕಗಳನ್ನು ತುಪಾಕಿಯಿಂದ ಹೊಡೆದು ನಾಶಪಡಿಸಿದರು. ಅರ್ರಾಸಿಗುತ್ತರದಲ್ಲಿ ಪದಾತಿಗಳಿಗೆ ಬಡಿದಾಟವಾಯಿತು. ಜರ್ಮನರು ಫ್ರಾನ್ಸಿನಲ್ಲಿ ತಾವು ಆಕ್ರಮಿಸಿಕೊಳ್ಳಲಿಕ್ಕಿದ್ದ ಜಿಲ್ಲಾಲದಲ್ಲಿರುವ ಕೊಟ್ಟಾರಗಳನ್ನು ಧ್ವಂಸಮಾಡುತ್ತಿರುವರು. ಜರ್ಮನಿಯವರ ಸೇನೆಯು ಮೊದಲಿನಂತೆ ಧೈರ್ಯೋತ್ಸಾಹದಿಂದಿರುವಂತೆ ತೋರಿಬರುವುದಿಲ್ಲವು. ೯೦೦ ಮಂದಿ ಪ್ರಷ್ಯಾ ಸೈನಿಕರು ಮೋಟಾರು ಬಂಡಿಗಳನ್ನುಹತ್ತಿ ಲಿಲ್ಲಿಯಿಂದ ಬಂದು ತಾ|| ೨೪ರಲ್ಲಿ ಫ್ರೆಂಚರ ಸೆರೆಯಾಳುಗಳಾಗಿ ಸಿಕ್ಕಿಬಿದ್ದರು. ಫೆಂಟ್‌ಹತ್ತಿರ ನಡೆದ ಯುದ್ಧದಲ್ಲಿ ೨೫ ಜನ ಅಧಿಕಾರಿಗಳೂ, ೭೩೮ ಜನ ಸೈನಿಕರೂ ಫ್ರೆಂಚರ ವಶರಾದರು.

ಲಕ್ಸಂಬರ್ಗು ಒಂದು ಸ್ವತಂತ್ರರಾಜ್ಯವಾಗಿ ಫ್ರಾನ್ಸಿಗೂ, ಜರ್ಮನಿಗೂ ಮಧ್ಯದಲ್ಲಿದೆ. ಅದನ್ನು ಜರ್ಮನರು ವಶಪಡಿಸಿಕೊಂಡು, ಅದರ ಪಾಲಕಳಾದ ರಾಣಿಯನ್ನು ಸೆರೆಯಾಳನ್ನಾಗಿ ಹಿಡಿದು ಜರ್ಮನಿಗೆ ಕರೆದುಕೊಂಡು ಹೋದರು. ಈಗ ಅಲ್ಲಿನ ಪ್ರಜೆಗಳು ಆಹಾರವಿಲ್ಲದೆ ಬಹಳ ಸಂಕಟಪಡುತ್ತಿರುವರು. ಸ್ವಿಟ್ಜರ್ಲೆಂಡಿನವರು ಅಪ್ರಾರ್ಥಿತವಾಗಿ ಅವರುಗಳಿಗೆ ೧೫ ದಿನಗಳವರೆಗಾಗುವಷ್ಟು ಆಹಾರವನ್ನು ಕಳುಹಿಸಿಕೊಟ್ಟಿರುವರು. ಫ್ರಾನ್ಸಿಗೆ ಸೇರಿದ ವರ್ಡನ್ ಡಿಸ್ಟ್ರಿಕ್ಟಿನಲ್ಲಿ ಉತ್ತರದಿಕ್ಕಿನಲ್ಲಿರುವ ಆರ್‌ಗೋನಿನ ಮೇಲೆ ಜರ್ಮನರು ಫಿರಂಗಿಗುಂಡುಗಳನ್ನು ಹಾರಿಸಿದರು. ವರ್ಡನ್ನಿನ ಕೆಳಗಡೆಯಿರುವ ವೋಜ್ಜೆಸ್ಸಿನ ಮೇಲೆ ಕೆಲ ಗಂಟೆಗಳಲ್ಲಿ ೪೦೦೦ ಗುಂಡುಗಳನ್ನು ಹೊಡೆದು ಫ್ರೆಂಚಿನವರನ್ನು ಹಿಂಸೆಪಡಿಸಿ ಓಡಿಸಿಬಿಟ್ಟು ಕೊಂಚ ಭೂಮಿಯನ್ನಾಕ್ರಮಿಸಿಕೊಂಡರು.

ಸೌಸೇಜುಪ್ರಾಂತದಲ್ಲಿ ಫ್ರಾನ್ಸಿನವರು ಶತ್ರುಗಳನ್ನೋಡಿಸಲು ಮುಂದಕ್ಕೆ ಹೊರಟರು. ಮ್ಯೂಜ್‌ನದಿಯಮೇಲೆ ದೊಡ್ಡ ಯುದ್ಧವಾರಂಭವಾಗಿದೆ. ಜರ್ಮನರು ಯುದ್ಧರಂಗದಲ್ಲೆಲ್ಲಾ ವಿಷವಾಯುವನ್ನೂ, ವಿಷದ್ರಾವಕವನ್ನೂ ಪ್ರಯೋಗಿಸಿ ಫ್ರಾನ್ಸಿನವರಮೇಲೆ ತೀವ್ರವಾಗಿ ಬಂದುಬಿದ್ದರು. ಫ್ರಾನ್ಸಿನವರು ಅವರನ್ನು ಹಿಂದಕ್ಕಟ್ಟಿದರು. ಶತ್ರುಗಳು ಅರ್ಧರಾತ್ರಿಯಲ್ಲಿ ಪುನಃ ಫ್ರಾನ್ಸಿನವರಮೇಲೆ ಬೀಳಲು ಪ್ರಯತ್ನಿಸಿದರು. ಅಷ್ಟರಲ್ಲಿ ಫ್ರಾನ್ಸಿನವರು ಅವರ ಸುತ್ತಲೂ ಮುತ್ತಿ ಅವರಲ್ಲಿ ಬಹಳಜನರನ್ನು ಹೊಡೆದೋಡಿಸಿದರು. ಲೊರೇನು ಆಲ್ಸೆಸ್ಸುಗಳಲ್ಲಿ ಫ್ರಾನ್ಸಿನವರು ವಿಶೇಷ ಶ್ರಮಪಡದೆಯೇ ಕಾದಾಡುತ್ತಿರುವರು.

ಪೂರ್ವರಣರಂಗ.

ಗೆಲೀಷಿಯಾವು ಆಸ್ಟ್ರಿಯಾ ದೇಶದಲ್ಲೊಂದುಭಾಗವಾಗಿದೆ. ಹಂಗೇರಿಗೂ ಈ ಪ್ರಾಂತ್ಯಕ್ಕೂ ಕಾರ್ಪೇಥಿಯನ್ ಪರ್ವತಗಳು ಕೊಂಚ ಅಡ್ಡಲಾಗಿವೆ. ರಷ್ಯನರು ಈ ಯುದ್ಧಾರಂಭದಲ್ಲಿ ಗಲೀಷಿಯಾದಲ್ಲಿ ಬಹುಭಾಗವನ್ನು ವಶಮಾಡಿಕೊಂಡು, ಕಾರ್ಪೇಥಿಯನ್ ವರೆಗೂ ಬಂದು, ಜೇಂಸಿಲ್‌ಕೋಟೆ ಸಮೇತ ಹಿಡಿದುಕೊಂಡರು. ಅದುಕಾರಣ ಜರ್ಮನರೂ, ಆಸ್ಟ್ರಿಯನ್ನರೂ ೪೦ ಲಕ್ಷ ಸೇನೆಯನ್ನು ಸಿದ್ಧಪಡಿಸಿಕೊಂಡು ಗೆಲೀಷಿಯಾದಿಂದ ರಷ್ಯನರನ್ನು ಹಿಂದಕ್ಕೋಡಿಸುವ ಪ್ರಯತ್ನಮಾಡಿದರು. ಜೇಂಸಿಲ್‌ಕೋಟೆಯು ಮರಳಿ ಹಿಡಿದುಕೊಳ್ಳಲ್ಪಟ್ಟಿತು. ಅದರ ಹಿಂಭಾಗದಲ್ಲಿರುವ ಲೆಂಬರ್ಗುಪಟ್ಟಣದಲ್ಲಿ ಸಹ ಘೋರಯುದ್ಧವು ನಡೆದು ಅದು ಆಸ್ಟ್ರಿಯಾ ಮತ್ತೂ ಜರ್ಮನಿಯ ಸೇನೆಯ ವಶವಾಯಿತು. ರಷ್ಯನರು ಗೆಲೀಷಿಯಾವನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕಾದ ಕಾಲ ಪ್ರಾಪ್ತವಾಗಿರುವುದು. ಅಗ್ಗೆ ಯುದ್ಧವು ರಷ್ಯಾದಭೂಮಿಯಲ್ಲೇ ನಡೆಯುವುದೋ, ಅಥವಾ ಗೆಲೀಷಿಯಾವನ್ನು ರಷ್ಯಾವು ಮರಳಿ ಜಯಿಸುವುದೋ ನಿರೀಕ್ಷಣೀಯವಾಗಿದೆ.

ಉತ್ತರದಲ್ಲಿ ಟಾರ್ನ್ ನದಿಯಿಂದ ಹಿಡಿದು ದಕ್ಷಿಣದಲ್ಲಿ ಮಿಕೋಲಿಜುವರೆಗೆ ೧೦೦ ಮೈಲಿ ಭೂಪ್ರದೇಶದಲ್ಲಿ ೨೦೦೦೦೦೦ ಸೇನೆಯನ್ನು ಲೆಂಬರ್ಗಿಗೆ ಜರ್ಮನರೂ, ಆಸ್ಟ್ರಿಯನ್ನರೂ ಕಳಿಸಿಕೊಟ್ಟರು. ರಷ್ಯನರಿಗೆ ಶತ್ರುಗಳಿಗಿರುವಷ್ಟು ಸೇನೆಯಾಗಲಿ ಮದ್ದುಗುಂಡು ಸಾಮಗ್ರಿಗಳಾಗಲಿ ಇಲ್ಲದಿದ್ದುದರಿಂದ ಲೆಂಬರ್ಗಿನಲ್ಲಿ ಒಂದು ತುಪಾಕಿಯು ಸಹ ಸಿಕ್ಕದಂತೆ ರಷ್ಯನರು ಬಿಡುವುಮಾಡಿ ಬಿಟ್ಟುಹೋದರು.

ಬಿಟ್ಟೋಡಿದ ಸೈನಿಕರು ತಮ್ಮಿಷ್ಟಪ್ರಕಾರ ಸಿದ್ಧಪಡಿಸಲ್ಪಟ್ಟಿದ್ದ ಹೊಸಸ್ಥಾನಕ್ಕೆ ಬಂದು ಸೇರಿಕೊಂಡರು. ನೀಸ್ಟರು ನದೀಪ್ರಾಂತ್ಯದಲ್ಲಿ ಜರುಗಿದ ಬಡಿದಾಟದಲ್ಲಿ ರಷ್ಯನರಿಗೆ ಜಯವಾಯಿತು. ಆಸ್ಟ್ರಿಯನ್ನರು ನಿಶ್ಶೇಷವಾಗಿ ಹತಮಾಡಲ್ಪಟ್ಟರಂತೆ. ಲೆಂಬರ್ಗನ್ನು ಬಿಟ್ಟುಕೊಡುವುದಕ್ಕೆ ತಕ್ಕ ಯುದ್ಧಸಾಮಗ್ರಿಗಳು ಇಲ್ಲದಿದ್ದುದು ಕಾರಣವು. ಬೇಕಾದ ಸಾಮಗ್ರಿಗಳು ಏರ್ಪಡಿಸಲ್ಪಡುತ್ತಿರುವುವೆಂದೂ, ಈ ಯುದ್ಧದಲ್ಲಿ ನಷ್ಟವನ್ನು ರಷ್ಯನರು ಯೋಚಿಸಬೇಕಾದ ನಿಮಿತ್ತವಿಲ್ಲವೆಂದೂ ಪ್ರಜೆಗಳು ಉತ್ಸಾಹಭರಿತರಾಗಿರುವರೆಂದೂ, ಶತ್ರುಗಳ ಅನಂತವಾದ ಸೇನಾಸಮೂಹವನ್ನು ರಷ್ಯನರು ತಡೆದು ನಿಲ್ಲಿಸಿದುದು ಪಶ್ಚಿಮದಲ್ಲೆಲ್ಲಾ ಮಿತ್ರಮಂಡಲಿಗೆ ಲಾಭವೆಂದೂ ಪ್ರಕಟಿತವಾಗಿರುವುದು.

ರಷ್ಯಾದೇಶದ ಸ್ಥಿತಿಗತಿಯನ್ನು ಕುರಿತು ವಾರ್ಸ್‌ವಲ್ಡ್ ಪತ್ರಿಕೆಯು ಬರೆದಿರುವುದೇನೆಂದರೆ:—ಪ್ರಜೆಗಳಿಗೆ ಯುದ್ಧದಲ್ಲಿ ಉತ್ಸಾಹವು ಕಡಿಮೆಯಾಗಿಲ್ಲವು. ಪ್ರಜೆಗಳು ದೇಶಾಭಿಮಾನಬುದ್ಧಿಯಿಂದ ಸರ್ಕಾರದವರಿಗೆ ಸಾಹಾಯ್ಯಮಾಡುತ್ತಿರುವರು. ಸರ್ಕಾರದವರಾದರೊ ಯಾವಾಗಲೂ ತಮ್ಮ ಪ್ರಜೆಗಳಿಗುಪಕಾರವನ್ನುಂಟುಮಾಡಲು ಕುತೂಹಲರಾಗಿರುತ್ತಾರೆ.

ಜೂನ್ ತಾ|| ೨೨ರಲ್ಲಿ ಮಾಂಟೆನೀಗ್ರೋ ಸೇನೆಯು ಸ್ಕುಟಾರಿ ಸಮೀಪಕ್ಕೆ ಬಂದಿತು. ಮಾರ್ಗದಲ್ಲಿ ಅಲ್ಬೇನಿಯನರು ನೆಪಮಾತ್ರಕ್ಕೆ ಅವರನ್ನಿದಿರಿಸಲು ಮಾಂಟನೀಗ್ರೋ ಸೇನೆಯು ಅಲ್ಬೇನಿಯನ್ನರನ್ನು ಬಡಿದೋಡಿಸಿದರು. ಒಂದು ಮಾಂಟನೀಗ್ರೊ ನಾವೆಯು ಇದ್ದಲನ್ನು ತುಂಬಿಕೊಂಡು ಹೋಗುತ್ತಿದ್ದ ೩ ಆಸ್ಟ್ರಿಯಾ ನೌಕೆಗಳನ್ನು ಹಿಡಿದುಕೊಂಡು ಆಂಟವರಿ ವರೆಗೆ ಹೋಯಿತು.

ನಾರೂರಂಗದಲ್ಲಿ ಯುದ್ಧವು ನಡೆಯುತ್ತಿದೆ. ರಷ್ಯನರು ಬಹಳಮಟ್ಟಿಗೆ ಜಯಶೀಲರಾಗುತ್ತಿರುವರು. ಅದುಕಾರಣ ಜರ್ಮನರು ದೊಡ್ಡ ಫಿರಂಗಿಗಳನ್ನು ಹಾರಿಸಿ ಒಂದು ಸ್ಥಳವನ್ನು ಸಂಪೂರ್ಣವಾಗಿ ನಾಶಗೊಳಿಸಿದರು. ಆ ಫಿರಂಗಿಯ ಬಾಯಿಯಿಂದ ದಾರುಣವಾದ ಅಗ್ನಿಜ್ವಾಲೆಯು ಹೊರಡುತ್ತಿದ್ದಿತೆಂದು ರಷ್ಯನರು ಹೇಳುತ್ತಿರುವರು.

ವಿಶ್ಚುಲಾನದಿಯ ಮೇಲಿಂದ ವಿಲಿಟ್ಜಾಕ್ಕೆ ದಕ್ಷಿಣದಲ್ಲಿ ಜರ್ಮನರು ನಮ್ಮ ಮೇಲೆ ಬಂದುಬಿದ್ದು ಬಹಳ ನಷ್ಟವನ್ನು ಹೊಂದಿ ವಿಮುಖರಾದರು. ಶತ್ರುಗಳು ಲೆಂಬರ್ಗು ಪ್ರದೇಶದಿಂದ ಮುಂದಕ್ಕೆ ಹೋಗಲಾರದೆ ಹೋದುದರಿಂದ ನೀಸ್ಟರ್‌ನದಿಯ ಹತ್ತಿರ ನಡೆದ ಯುದ್ಧದಲ್ಲಿ ರಷ್ಯನರು ಜಯವನ್ನು ಹೊಂದಿ ಮುಂದಕ್ಕೆ ಹೊರಟರು. ಕೊಜಾರಿ ಡಿಸ್ಟ್ರಿಕ್ಟಿನಲ್ಲಿ ಬಹಳವಾಗಿದ್ದ ಶತ್ರುಸೇನೆಯು ಎತ್ತಕಡೆಯೋ ಓಡಿಹೋಗಿರುವುದು.

ಹಿಡಿದುಕೊಳ್ಳಲು ಕೊಂಚಮುಂದಕ್ಕೆ ಹೋಗಿ ನೀಸ್ಟರ್ ನದಿಯನ್ನು ದಾಟಿದ ಆಸ್ಟ್ರಿಯನ್ನರನ್ನೂ ಜರ್ಮನರನ್ನೂ ಬಂದಿಗಳನ್ನಾಗಿ ಹಿಡಿದುಕೊಂಡೆವು. ತಾವು ನದಿಯನ್ನು ದಾಟುವಲ್ಲುಂಟಾಗುವ ನಷ್ಟವನ್ನು ಕಂಡಿದ್ದಾಗ್ಯೂ ಜರ್ಮನರು ರಾತ್ರಿಯಲ್ಲಿ ನದಿಯನ್ನು ದಾಟಲು ಪ್ರಯತ್ನಿಸಿದರು. ಯುದ್ಧವು ಇನ್ನೂ ಜರುಗುತ್ತಿದೆ.

ರಷ್ಯನರ ಜೂನ್ ತಾ|| ೨೯ರ ವರ್ತಮಾನವು ತಿಳಿಸುವುದೇನಂದರೆ:—ಶತ್ರುಗಳು ಹೊಸ ಜರ್ಮನ್ ಸೇನಾ ಸಹಾಯದಿಂದ ನೀಸ್ಟರು ಮತ್ತೂ ಗ್ಯಾಲಿಲಿಪಾ ನದಿಗಳ ಮಧ್ಯೆ ರಷ್ಯನರಮೇಲೆ ಬಹಳ ಉಗ್ರಾವತಾರದಿಂದ ಬಂದುಬಿದ್ದು ರಷ್ಯನರು ಭ್ರಾಂತರಾಗಿ ಗ್ಯಾಲಿಲಿಪಾ ನದಿಯ ಕಡೆ ಓಡಿಹೋಗುವಂತೆ ಮಾಡಲೆತ್ನಿಸಿ ಕಡೆಗೆ ತಾವೇ ಸೋತು ಬಹಳನಷ್ಟವನ್ನು ಹೊಂದಿದರು. ರಷ್ಯನರ ಗ್ಯಾಲಿಲಿಪಾ ನದಿಯಿಂದಾಚೆಗೆ ಹಿಮ್ಮೆಟ್ಟಿಸಲ್ಪಟ್ಟು ಮರಳಿ ಮುತ್ತಿಗೆಹಾಕಲು ಯೋಚಿಸದೆ ಬಗ್ನಿನ ಹಿಂದಕ್ಕೋಡಿದರು ಎಂದು ಜರ್ಮನರು ವರದಿಮಾಡಿರುತ್ತಾರೆ. ವಾವಿಜ್ ಎಲ್ಲೆಕಟ್ಟಿನಲ್ಲಿ ಗೆಲಿಷಿಯಾದ ಉತ್ತರದಲ್ಲಿ ನಡೆದ ಯುದ್ಧಕ್ಕೆ ಶತ್ರುಸೇನೆಯು ಬಹಳವಾಗಿ ಬಂದಿತ್ತು. ಮತ್ತು ಜೂನ್ ತಾ|| ೨೭-೨೮ ರಲ್ಲಿ ಜರ್ಮನರು ಬಹಳ ಉಗ್ರಸ್ವರೂಪದಿಂದ ಬಂದು ಮೇಲೆ ಬಿದ್ದರಾದರೂ ಹಿಮ್ಮೆಟ್ಟಿಸಲ್ಪಟ್ಟರು ಎಂದು ರಷ್ಯನರು ವರದಿಮಾಡಿರುವರು. ಟಾಂಸ್ಜೋವ್ ಪ್ರಾಂತ್ಯದಲ್ಲಿ ಆಸ್ಟ್ರಿಯನರೂ ಜರ್ಮನರೂ ಒತ್ತಿಬರುತ್ತಿರುವುದರಿಂದ ರಷ್ಯನರು ಟಾರ್ನೋ ಡಿಸ್ಟ್ರಿಕ್ಟಿನಲ್ಲೂ ಲೋವರ್ ಪ್ರಾನ್ಸಿನಲ್ಲೂ ತಮ್ಮ ಸ್ಥಳಗಳನ್ನು ಬಿಟ್ಟುಕೊಡಲು ಉಪಕ್ರಮಿಸಿರುವರೆಂದು ಜರ್ಮನಿಯವರ ವರದಿಯೂ, ಆಸ್ಟ್ರಿಯನರೂ, ಜರ್ಮನರೂ ಟಾಂಸ್ಜೋವನ್ನೂ ಆಸ್ಟ್ರಿಯಾದ ಎಲ್ಲೆಯನ್ನೂ ಸ್ವಾಧೀನಪಡಿಸಿಕೊಂಡಿರುವುದಾಗಿ ಆಸ್ಟ್ರಿಯನ್ನರ ವರದಿಯೂ ತಿಳಿಸುತ್ತದೆ.

ನೀಮನ್ ನಾರ್ಯೂದಲ್ಲೂ ವಿಶ್ಚುಲಾ ನದಿಯ ಎಡಗಡೆಯ ದಡದಮೇಲೂ ಎಲ್ಲವೂ ಶಾಂತವಾಗಿರುವುದಲ್ಲದೆ ಷವಲಿ ಪ್ರಾಂತ್ಯದಲ್ಲಿ ರಷ್ಯನರು ಜರ್ಮನರನ್ನು ಹಿಂದಟ್ಟಿರುವರು.

ದಕ್ಷಿಣರಣರಂಗ.

ರೋಮಿನ ಕೆಥೋಲಿಕ್ ಮತಾಧಿಪತಿಯಾದ ಪೋಪರ ಕೂಡ ಒಂದು ವೃತ್ತಪತ್ರಿಕೆಯ ಪ್ರತಿನಿಧಿಯು ಈ ಯುದ್ಧವಿಚಾರವಾಗಿ ಪ್ರಸ್ತಾಪಿಸುವಾಗ್ಗೆ, ಮತಾಧಿಪತಿಯು ‘‘ದುರ್ಮಾರ್ಗತನಕ್ಕೆಳಸಿದವರಿವರು, ಅಮಾನುಷಕೃತ್ಯವನ್ನೆಸಗಿದವರು ಎಂದು ಒಬ್ಬರನ್ನೊಬ್ಬರು ನಿಂದಿಸುತ್ತಿರುವ ಸಮಯದಲ್ಲಿ ಯಾರ ಮಾತು ನಿಜವೆಂದು ತಿಳಿಯುವುದು ಕಷ್ಟವಾಗಿದೆ. ಬೆಲ್ಜಿಯಮ್ಮಿನಲ್ಲಿ ವಿಶ್ವವಿದ್ಯಾಲಯವನ್ನು ಹಾಳುಮಾಡಿದುದೂ, ಲೂಸಿಟಾನಿಯಾ ಹಡಗನ್ನು ಮುಳುಗಿಸಿದುದು ಜರ್ಮನರ ಕೇವಲ ಅಮಾನುಷ ಕೆಲಸವೇ ಸರಿ. ೭ ಕೋಟಿ ಜರ್ಮನಿ ಪ್ರಜೆಗಳಿಗೆ ಆಹಾರಪದಾರ್ಥಗಳು ಸಮುದ್ರದಮೇಲಿಂದ ಬರಗೊಡಬಾರದೆಂಬಿಷ್ಟಾರ್ಥವು ನೆರವೇರದಿರಲು ದಯೆಯಿಂದ ಮಾಡಲ್ಪಡುತ್ತಿರುವ ಕೆಲಸವಿದೆಯೇ? ನ್ಯಾಯಾನ್ಯಾಯವನ್ನು ವಿಮರ್ಶಿಸುವ ಪ್ರಭುವು ಈರೀತಿ ಹೂಡುವುದಾಗಿದೆ. ಇಟಲಿಯು ಯುದ್ಧದಲ್ಲಿ ಪ್ರವೇಶಿಸಕೂಡದೆಂದು ನಾನು ಸರ್ವಪ್ರಯತ್ನವನ್ನು ಮಾಡಿದುದು ನಿಜವು ಎಂದು ಸಂಧಿಯನ್ನು ಮಾಡಲು ಇವರುಜ್ಜುಗಿಸುವರೊ ಆ ಕ್ಷಣವೇ ಎಲ್ಲರೂ ಸಂಧಿಮಾಡಿಕೊಳ್ಳಬೇಕೆಂದು ಪ್ರಾರ್ಥಿಸುವೆನು'' ಎಂದು ಹೇಳಿದರು. ಈರೀತಿ ಪೋಪರು ಹೇಳಲಿಲ್ಲವೆಂದೂ ಇದನ್ನು ವರ್ತಮಾನಪತ್ರಿಕಾಲೇಖಕನು ಈರೀತಿ ಕಲ್ಪಿಸಿ ಬರೆದಿರುತ್ತಾನೆಂದೂ ಹೇಳಿಕೊಳ್ಳುತ್ತಿದಾರೆ.

ಟ್ರೆಸ್ಟಿಗುತ್ತರದಲ್ಲಿರುವ ಸೊರ್ಜುವನ್ನು ಮರಳಿ ಹಿಡಿದುಕೊಳ್ಳುವುದಕ್ಕೆ ಆಸ್ಟ್ರಿಯನ್ನರೆತ್ನಿಸುತ್ತಿರುವರು. ಇಟಾಲಿಯನರ ಫಿರಂಗಿಗಳು ಪಟ್ಟಣಗಳನ್ನು ವಾಸಯೋಗ್ಯವನ್ನಾಗಿ ಮಾಡುವಂತಿಲ್ಲವು. ಕೆಲ ಇಟಾಲಿಯನರು ಪಟ್ಟಣದೊಳಕ್ಕೆ ಮುಂದಾಗಿ ನುಗ್ಗಿ ಪ್ರಜೆಗಳಿಗೆ ಭೀತಿಯನ್ನುಂಟುಮಾಡಿದರು. ಆಸ್ಟ್ರಿಯನರ ಅಲ್ಪವಾಗಿದ್ದ ಸೇನೆಗೂ, ಇಟಲಿಯವರಿಗೂ ಸೋಮವಾರದದಿವಸ ಯುದ್ಧವು ಮೊಟ್ಟಮೊದಲು ಪ್ರಾರಂಭವಾಯಿತು. ಯೂಡಿನೇ ಹತ್ತಿರ ಆಸ್ಟ್ರಿಯನ್ನರು ತಮ್ಮ ಸ್ಥಾನವನ್ನು ಬಲಪಡಿಸಿಕೊಳ್ಳುತ್ತಿರುವರು. ಇಲ್ಲಿ ಅನೇಕ ವರ್ಷಗಳ ಹಿಂದೆಯೇ ಕಂದಕಗಳು ಸಿಮೆಂಟ್ ಗಾರೆಯಿಂದ ಕಟ್ಟಲ್ಪಟ್ಟಿರುವುವು. ಇಂತಹ ಕಂದಕಗಳು ಅನೇಕವಾಗಿವೆ. ಫಿರಂಗಿಗಳು ಗಟ್ಟಿಯಾಗಿ ನೆಲದಲ್ಲಿ ನಾಟಲ್ಪಟ್ಟಿವೆ. ಮುಟ್ಟಿದರೆ ಸತ್ತುಹೋಗುವಷ್ಟು ಬಲವಾಗಿ ವಿದ್ಯುಚ್ಛಕ್ತಿಯು ಓಡಾಡುತ್ತಿರುವಂತೆ ಕಟ್ಟಲ್ಪಟ್ಟಿವೆ. ಗುಡ್ಡಗಳನ್ನು ಕೊರೆದು ಅಲ್ಲಿ ಫಿರಂಗಿಗಳಿಡಲ್ಪಟ್ಟಿರುವುವು. ಅನೇಕ ನೀರಿನ ಕಣಿವೆಗಳು ನಿರ್ಮಿಸಲ್ಪಟ್ಟಿರುವುವು. ಈರೀತಿಯಾಗಿ ಸಿದ್ಧಮಾಡಲ್ಪಟ್ಟಿರುವ ಸ್ಥಳವು ಲೆಬಿರಿಂತು ಎಂದು ಕರೆಯಲ್ಪಡುವುದು. ಫ್ರಿಯಕೋಫಿಲ್ ಹತ್ತಿರ ಆಸ್ಟ್ರಿಯನ್ನರು ಬಡಿದೋಡಿಸಲ್ಪಟ್ಟರು. ಇಲ್ಲಿ ಕಂದಕಯುದ್ಧವು ಪ್ರಾರಂಭವಾಗಿರುವಂತೆ ತಿಳಿಯಬರುತ್ತದೆ.

ಟ್ರೆಸಿನೋದಲ್ಲಿ ಫಿರಂಗಿಗುಂಡುಗಳು ಬಹು ತೀಕ್ಷ್ಣವಾಗಿ ಹೊಡಿಯಲ್ಪಡುತ್ತಿರುವುದಾಗಿಯೂ, ಆಸ್ಟ್ರಿಯನ್ನರು ಇಸಾಂಜೋ ಪ್ರಾಂತ್ಯದಲ್ಲಿ ಪದೇಪದೆ ಮುತ್ತಿಗೆಹಾಕುತ್ತಿರುವುದಾಗಿಯೂ ಇಟಾಲಿಯನರು ವರದಿಮಾಡಿರುತ್ತಾರೆ. ವಾಯುಗುಣವು ಒಂದೇಸಮವಾಗಿ ಅನನುಕೂಲವಾಗಿರುವುದರಿಂದ ಯುದ್ಧಕಾರ್ಯಕ್ಕೆ ತೊಂದರೆಯಾಗಿದೆ. ಆಸ್ಟ್ರಿಯನ್ನರು ಬೇರೆಬೇರೆ ಮುತ್ತಿಗೆಯನ್ನು ಹಾಕಿ ಹಿಮ್ಮೆಟ್ಟಿಸಲ್ಪಟ್ಟರು.

ಭರತಖಂಡದ ವೃತ್ತಾಂತಗಳು.

ಕಳೆದ ಜೂನ್ ತಿಂಗಳ ಕಡೆಯ ವಾರದಲ್ಲಿ ಭರತಖಂಡದ ಅನೇಕ ಭಾಗಗಳಲ್ಲಿ ಸುವೃಷ್ಟಿಯೂ ವಿಪರೀತ ವೃಷ್ಟಿಯೂ ಆದ ವರ್ತಮಾನಗಳು ಬಂದಿವೆ.

ಯುದ್ಧಾರಂಭವಾದ ಬಳಿಕ ಸೀಮೆಯಿಂದ ಭರತಖಂಡಕ್ಕೆ ಅಂಚೆಯನ್ನು ಸಾಗಿಸಿಕೊಂಡು ಬರುವ ಹಡಗು ಫ್ರಾನ್ಸ್ ದೇಶದ ಮಾರ್ಸೇಲ್ಸ್ ತೀರ ಪಟ್ಟಣದ ಮೇಲೆ ಬರದೆ ಜಿಬ್ರಾಲ್ಟರನ್ನು ಸುತ್ತಿ ಕೊಂಡು ಬರುತ್ತಿದ್ದಿತು. ಕಳೆದ ವಾರದಲ್ಲಿ ಖೈಬರ್ ಎಂಬ ಇಂಗ್ಲೀಷ್ ಅಂಚೆಯ ಹಡಗು ಮಾರ್ಸೇಲ್ಸ್ ಪಟ್ಟಣದ ಮಾರ್ಗವಾಗಿಯೇ ಭರತಖಂಡಕ್ಕೆ ಬಂದು ಸೇರಿರುವುದು. ಇದರಿಂದ ಫ್ರಾನ್ಸ್ ದೇಶದ ದಕ್ಷಿಣ ಪೂರ್ವ ಪಶ್ಚಿಮ ಭಾಗಗಳಲ್ಲಿ ಯುದ್ಧದ ಅಶಾಂತಿಯೇನೂ ಇಲ್ಲವೆಂದು ವ್ಯಕ್ತವಾಗುವುದು.

ಬೊಂಬಾಯಿಯಲ್ಲಿ ನಿನ್ನೆಯವರೆಗೂ ಮಳೆ ಇರಲಿಲ್ಲ. ಕಳೆದ ತಾರೀಖು ೮ ರ ರಾತ್ರಿಯಿಂದ ಮಳೆ ಪ್ರಾರಂಭವಾಗಿ [illegible]

[illegible]

ವಿದೇಶ ವೃತ್ತಾಂತಗಳು.

[illegible]

ಸ್ವೀಕಾರ.

ಕೈ॥ ವೈ. ವೀರಸಂಗಪ್ಪನವರ ಸ್ಮರಣಾರ್ಥವಾಗಿ [illegible] ಸನದ ತಾ॥ ಗ್ರಾಮದ ರಾ॥ ಮಾದಶೆಟ್ಟರ ಕುಮಾರ್ತಿ [illegible] ಗೌರಮ್ಮನ ಲಗ್ನದಲ್ಲಿ ತೆಗೆದ ೧ ರೂ. ಯನ್ನು ಗ್ರಾಮದ ಷಾಪ್ ಕೀಪರ್ ರಾ॥ ಸಿದ್ಧಲಿಂಗಯ್ಯನವರ ಮೂಲಕ [illegible] ಮಳವಳ್ಳಿ ತಾ॥ ಹಲಗೂರಿನ ರಾ॥ ಪುಟ್ಟಮ್ಮನ ಮಾದಪ್ಪನವರ ಮನೆ ಲಗ್ನದಲ್ಲಿ ತೆಗೆದ ೧ ರೂ. ಯನ್ನು ಅದೇ ಊರಿನ ರಾ॥ ಗು॥ ಮಲ್ಲಯ್ಯನವರ ಮಾದಪ್ಪನವರ ಮೂಲಕವೂ ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ. ಪ. ವ.

ಪತ್ರವ್ಯವಹಾರ.

[illegible]

ಸಂಕೀರ್ಣ

[illegible]

ಸಂಕ್ಷೇಪ

[illegible]

ಇದೇ ಮಾಹೆ ಜೂನ್ ತಾರೀಖು ೧೫ ಕ್ಕೆ ದಯಮಾಡಿಸಿ, ವಿ.ಇ. ಬಾಯ್ಸ್ ಸ್ಕೂಲ್ ಮತ್ತು ಗರ್ಲ್ಸ್ ಸ್ಕೂಲ್ ಪರೀಕ್ಷೆಯು ಪೂರೈಸಿದಮೇಲೆ ಜೇವಾ॥ರವರು ಪ್ಯಾಸಾದ ಬಾಲಕ ಬಾಲಕಿಯರಿಗೆ ಪಾರಿತೋಷಕ ದಾನೋತ್ಸವವನ್ನು ನಡೆಸಬೇಕೆಂಬ ಆತುರವುಳ್ಳವರಾಗಿ ಅ॥ಶಿ॥ ಸಾಹೇಬರವರಲ್ಲಿ ಹೋಗಿ ಇದು ತಮ್ಮ ಮುಖೇನ ನಡಿಸಬೇಕೆಂದು ಬಿನ್ನಯಿಸಿಕೊಂಡಿದ್ದರವೇಲೆ ಆಗಬಹುದೆಂದು ಅಪ್ಪಣೆಕೊಡಿಸಿದರು. ಕೂಡಲೇ ಮಾಸ್ಟರುಗಳು ಮಾತುವರ್ಜಿಯಿಂದ ಸ್ಕೂಲ್ ಮುಂಗಡೆಯನ್ನು ತಳಿರುತೋರಣಗಳಿಂದಲೂ, ಕದಳೀಸ್ತಂಭಗಳಿಂದಲೂ ಅಲಂಕರಿಸಿ ಒಳಗೆ ರಾ॥ ಗಳವರು ಕೂಡುವದಕ್ಕೆ ಆಸನವೂ ಅಲಂಕರಿಸಲ್ಪಟ್ಟಿದ್ದಿತು. ಅಲ್ಲಿ ರಾ॥ ಶೇಕದಾರರವರು, ಶಾನುಭೋಗರು, ಪಟೇಲರು, ಮಠಾಧಿಕಾರಿಗಳು, ಶೆಟ್ಟರು, ವರ್ತಕರು, ಸ್ಕೂಲ್ ಕಮಿಟಿ ಮೆಂಬರುಗಳು ಇನ್ನು ಮುಂತಾದ ಸಮಸ್ತ ಜನಗಳ ಸಂದೋಹವು ಸೇರಿತ್ತು. ಅ॥ಶಿ॥ ಸಾಹೇಬರವರ ಸ್ವಾರಿಯು ಸ್ಕೂಲಿಗೆ ದಯಮಾಡಿಸಿದ ಕೂಡಲೇ ಸಕಲರೂ ಎದ್ದು ವಂದನೆಯನ್ನು ಮಾಡಿದರು. ಸಾಹೇಬರವರು ಆಸನದಲ್ಲಿ ಮಂಡಿಸಿದ ಕೂಡಲೇ ಬಾಲಕಬಾಲಕಿಯರು ದೇವಪ್ರಾರ್ಥನೆಯನ್ನು ಮಾಡಿದರ ಕೂಡಲೇ ನಮ್ಮ ಜಾರ್ಜ್ ಪ್ರಭುಗಳವರ ಮತ್ತು ಮಹಾರಾಜರವರ ಶ್ರೇಯಸ್ಸಾರ್ಥನೆಯ ಹಾಡುಗಳನ್ನು ಹಾಡಿ ಆನಂದವನ್ನುಂಟುಮಾಡಿದರು. [illegible]

ಬಯಸಿ ಬೆಳ್ಳಿಯ ಅಂದೋಲನವನ್ನು ಮಾಡಿಸಿ ಅರ್ಪಿಸುವ ಸತ್ಸಂಕಲ್ಪವನ್ನು ಅರಿಕೆಮಾಡಿಕೊಂಡು, ತತ್ಕಾಲದ ಕಾಣಿಕೆಯನ್ನು ಸಹ ಸಲ್ಲಿಸಿ ಬೆ॥ರಾದ ಶ್ರೀಮಂತ ಬಸವಂತರಾವ ಮಲ್ಲೇಶ್ವರರಾವ ಅಪ್ಪಾಸಾಹೇಬರು ಸಹಾ ಕೃಪಾಪೂರ್ಣವಾದ ಫಲಾಶೀರ್ವಾದ ಪಡೆದು ಧನ್ಯರಾದರು. ಈ ಹಂದಿಗನೂರು ಸಂಸ್ಥಾನಾಧಿಪತಿಗಳು ಪೂರ್ವಾರಭ್ಯವಾಗಿ ಶ್ರೀ ಜಗದ್ಗುರು ಮಹಾಪೀಠಕ್ಕೆ ಪ್ರೀತಿಯ ಭಕ್ತರೆನಿಸಿದ್ದ ರೀತಿಯೇ ಈಗಲೂ ಈ ಶ್ರೀಮಂತರ ಮತ್ತು ಇವರ ಬಂಧುವರ್ಗದವರ ಶೀಲಸ್ವಭಾವವಾಗಿರುತ್ತದೆ. ಸದಾಚಾರಸಂಪನ್ನ ಸದ್ಭಕ್ತರ ಸದ್ಗುಣವನ್ನನುಸರಿಸಿ ವರ್ತಿಸುವ ಸುಪುತ್ರರಿಗೆ ಶ್ರೀ ಕರ್ತನು ದೀರ್ಘಾಯುರಾರೋಗ್ಯ ಭಾಗ್ಯ ಸಕಲ ಸಂಪತ್ಸಮೃದ್ಧಿಯನ್ನಿತ್ತು ಕಾಪಾಡಲೆಂದು ಭಜಿಸುವ.

ಓರ್ವ ಸದ್ಭಕ್ತ, ಬಂಕಾಪುರವಾಸಿ.

ಬಂಕಾಪುರ.

ಶ್ರೀ ಮಂಗಳ ಮಹಾರಾಜಾಧಿರಾಜ ಜಗದ್ಗುರು
ಮುರುಘಾರಾಜೇಂದ್ರ ಮಹಾಸ್ವಾಮಿ
ಅಡ್ಡ ಪಾಲಕಿ ಮಹೋತ್ಸವ.

ಶ್ರೀ ಮಹಾಸ್ವಾಮಿಯು [illegible]

[illegible]

ಚನ್ನಬಸವಯ್ಯ ಹೇಮಗಿರಿಮಠ ಇವರಿಂದ ಸಂಸ್ಥಾನ ಸಂಚಾರ ಭಕ್ತಮಂಡಳಿಯವರ ಸೇವಾವಿಷಯಗಳು ವಿವರಿಸಲ್ಪಟ್ಟು ಸದ್ಯಃ ಸಾರ್ವಭೌಮ ಸರಕಾರದವರು ಕೈಕೊಂಡಿರುವ ಮಹಾ ಯುದ್ಧದಲ್ಲಿ ನಮ್ಮ ಸಾರ್ವಭೌಮ ಪಂಚಮ ಜಾರ್ಜ್ ಪ್ರಭುಗಳಿಗೆ ಜಯವುಂಟಾಗಲೆಂದು ಶ್ರೀ ದೇವರನ್ನು ಸದಾ ಪ್ರಾರ್ಥಿಸತಕ್ಕದ್ದೆಂಬ ಅಪ್ಪಣೆಯು ಸೂಚಿಸಲ್ಪಟ್ಟಿತು. ಅನಂತರ ಮಂಗಳಾರತಿ [illegible] ಆಶೀರ್ವಾದ ದಯಮಾಡಿಸೋಣವಾಗಿ ಸಭಾ ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣ ಕಾರ್ಯಕ್ಕೆ ಅವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ [illegible]

[illegible]

[illegible]

ಊದಬತ್ತಿಗಳು.

7

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧-೦-೦; [illegible] ಕಸ್ತೂರಿ ಬಿಲ್ಲೆ ತೋಲ ೧ಕ್ಕೆ ೧-೦-೦; ಹಸಿಗಂಧ ತೋಲ ೧ಕ್ಕೆ ೧೦ ಆಣೆ ದಶಾಂಗಧೂಪ ೧ಕ್ಕೆ ೪ ಆಣೆ ಧೂಪದ ಕಡ್ಡಿ ೧ಕ್ಕೆ ೨ ಆಣೆ ಬಾಳಗ್ರಹಧೂಪ ಟಿನ್ ೧ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ಶುದ್ಧ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

27

ರಕ್ತಶುದ್ಧಿ ಮತ್ತು ರಕ್ತವೃದ್ಧಿಯ [illegible] ನೋಡಿ! (ಗುಣವಾಗದಿದ್ದರೆ ಹಣ ವಾಪಸ್!) ನೋಡಿ !!!

[illegible]

೫೦೦ ರೂಪಾಯಿಗಳ ಬಹುಮಾನ

ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್‌ಬ್ಯಾಂಕಿನಲ್ಲಿ ಮೇಲ್ಕಂಡ ೫೦೦ ರೂಪಾಯಿಗಳನ್ನು ೧೯೧೫ ನೆ ಇಸವಿ ಮಾರ್ಚಿ ತಾ॥ ೧೫ ರಲ್ಲಿ ಡಿಪಾಜಿಟ್ಟು ಇಟ್ಟಿರುತ್ತೇವೆ. 8

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ “ ಸಾಲಾಮಿಸ್ರೀ ಮುರಬ್ಬಾವನ್ನು ” ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್‌ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಸಾಲಾಮಿಸ್ರಿಯ ಧಾರಣೆಯು ಜಾಸ್ತಿಯಾಗಿರುವದರಿಂದ ಅನೇಕರು ಉರುಳುಗಡ್ಡೆ, ಕಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೇ ಅಥವಾ ಬೇರೆ ತರಹದ್ದೇ ಎಂಬುವದು ತಿಳಿದುಬರುತ್ತದೆ.

ಸಾಲಾಮಿಸ್ರಿ ಮುರಬ್ಬಾವು—ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವುದು.
ಸಾಲಾಮಿಸ್ರಿ ಮುರಬ್ಬಾವು—ನಿದ್ರೆಯಲ್ಲಿ ಧಾತುವು ಹೋಗುವುದನ್ನು ನಿಲ್ಲಿಸುವುದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಧಾತುಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕ್ಷಣ ಕ್ಷಣಕ್ಕೆ ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ವೃದ್ಧಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಶ್ವಾಸಕಾಸ ರೋಗಗಳನ್ನು ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹೊಟ್ಟೆಯಲ್ಲಿರುವ ಜ್ವರದಗಡ್ಡೆ ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೆಟ್ಟುಹೋಗಿರುವ ರಕ್ತವನ್ನು ಶುದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಳೆತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು.
ಸಾಲಾಮಿಸ್ರಿ ಮುರಬ್ಬಾವು—ಉತ್ಸಾಹ, ಧೈರ್ಯ, ಬುದ್ಧಿಕುಶಲತೆ, ಶರೀರಕಾಂತಿಯನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು—ತಾಂಬ್ರ, ಬೆಳ್ಳಿ, ಮತ್ತು ಭಂಗಾರ ಭಸ್ಮಕ್ಕಿಂತಲೂ ಉತ್ತಮವಾದುದು.
ಸಾಲಾಮಿಸ್ರಿ ಮುರಬ್ಬಾವು—ಸ್ತ್ರೀ ಸಂಗಕ್ಕೆ ಮೊದಲೆ ಧಾತು ಸ್ಖಲನವಾಗುವದನ್ನು ನಿಲ್ಲಿಸುವದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯ್ಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣಕೊಡುತ್ತದೆ. ೨ ೩ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು “ ಸಾಲಾಮಿಸ್ರಿ ” ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ ಕ್ಕೆ ಕ್ರಯ ೨—೦—೦ ರೂಪಾಯಿ. ಟಪ್ಪಾಲು ಖರ್ಚು ೧ ಡಬ್ಬಿಯಿಂದ ಡಬ್ಬಿಗಳ ವರೆಗೆ ೬ ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ವಿಳಾಸ:—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
೫೫, ಅವೆನ್ಯೂರೋಡ್ ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು. 7

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಕೊಲೆ ಸಂದುಗಳ ನೋವು ಮೈ ಕಾಲು ಹೊಡೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಮೋಸಹೋಗಬೇಡಿರಿ. ಒಂದೇಪ್ಪೊಂಡು ಬುಡ್ಡಿಯು ನಿಮ್ಮಲ್ಲಿರಲಿ ಮುದ್ರಿತವಾದ ಸಹಾಯಕ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧—೦—೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೮—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತೆ।	೦—೫—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಆಯುರ್ವೇದ ವಿದ್ವಾನ್–ಬಿ. ವಿ. ಪಂಡಿತರ 38

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ಕಸ್ತೂರಿ, ಚಿನ್ನದರೇಖು, ಲೋಹಭಸ್ಮ ಮುಂತಾದವುಗಳಿಂದ ವಂಶಪಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀಕರಕಸ್ತೂರಿಮಾತ್ರೆಗಳನ್ನು ತಾಂಬೂಲದೊಡನೆ ಅಥವಾ ಹಾಗೆ ಉಪಯೋಗಿಸಿದರೆ ಆಹಾರವು ಬೇಗನೆ ಜೀರ್ಣವಾಗಿ ಬಹಳಹೊತ್ತು ಬಾಯಿ ಘಮಘಮಿಸುತ್ತಿರುವುದು.

ಛಳಿಮಳೆಗಾಲಗಳಲ್ಲೂ, ಸೊಂಕುರೋಗಸ್ಥಳಗಳಲ್ಲೂ, ಪ್ರಯಾಣಕಾಲದಲ್ಲೂ, ಮಕ್ಕಳಿರುವ ಮನೆಗಳಲ್ಲೂ, ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಶೀತವಾಯು, ಕೆಮ್ಮು, ನೆಗಡಿ, ಅಜೀರ್ಣಭೇದಿ, ಮಲಬಂಧ, ವರಸೇಜ್ವರ, ಪ್ಲೇಗುಜ್ವರ, ಮಲೇರಿಯಾಜ್ವರ, ನಡುನೋವು, ಅರೋಚಕ, ಹಲ್ಲುನೋವು, ಮೈಕೈನೋವುಗಳು ಬಹಳಬೇಗನೆ ವಾಸಿಯಾಗುತ್ತವೆ. ಮಕ್ಕಳಿಗೆ ಸಂಜೀವನ–ಯಾವಾಗಲೂ ವಿಳಾಸವನ್ನು ಪರೀಕ್ಷಿಸಿ ಔಷಧವನ್ನು ಕೊಂಡುಕೊಳ್ಳಿರಿ–ಮೋಸಹೋಗಬೇಡಿರಿ. ೨೫೦ ಮಾತ್ರೆಯುಳ್ಳ ಸೀಸೆಯ ಬೆಲೆ ೦—೪—೦ ಆಣೆ. ಐದಕ್ಕೆ ಒಂದು ಮುಫತ್ತು. ಟಪಾಲ್‌ಖರ್ಚು ಬೇರೆ.

ಆಮೋದಿನಿ.

ಸಂಗೀತಗಾರರಿಗೆ ಅತ್ಯಂತ ಸುಖವನ್ನೂ, ವಿದ್ಯಾರ್ಥಿಗಳಿಗೆ ಆನಂದವನ್ನೂ, ಪ್ರಯಾಣಿಕರಿಗೆ ಆಯಾಸಪರಿಹಾರವನ್ನೂ, ಉಂಟುಮಾಡಿ ಬಿಸಿಲುಕಾಲದ ಅಥವಾ ಆಯಾಸದ ಬಾಯಾರಿಕೆಯನ್ನು ತಕ್ಷಣ ಅಣಗಿಸಿ, ಎಂತಹ ಕೆಮ್ಮು, ಉಬ್ಬಸಗಳನ್ನಾದರೂ ವಾಸಿಮಾಡಿ ಆಬಾಲವೃದ್ಧರಿಂದಲೂ ಹೊಗಳ್ಪಡುತ್ತಲಿರುವ ಕೈಗಂಡಸಿದ್ಧಾಮೃತ, ಮತ್ತಾವಮಾತ್ರೆಗಳೂ ಇಷ್ಟು ಮನೋಹರವಾಗಿಲ್ಲವೆಂಬುದನ್ನು ನಂಬಿರಿ! ೧೫೦ ಮಾತ್ರೆಯ ಸೀಸೆ ೦—೪—೦ ಆಣೆ. ಐದಕ್ಕೆ ಒಂದು ಹೆಚ್ಚು. ಟಪಾಲ್‌ಖರ್ಚು ಪ್ರತ್ಯೇಕ.

ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರು ಡಿ॥

೧೯೧೫ನೆಯ ಇಸವಿ ಜುಲೈ ತಾ॥ ೪ ರಿಂದ ೧೯೧೫ ನೆಯ ಜುಲೈ ತಾ॥ ೧೦ರವರೆಗೆ ಸಲ್ಲುವ ಶಾಲೀವಾಹನಶಕ ೧೮೩೭ ನೆಯ ರಾಕ್ಷಸನಾಮಸಂವತ್ಸರದ ಜ್ಯೇಷ್ಠ ಬ॥ ಅಷ್ಟಮಿಯಿಂದ ಜ್ಯೇಷ್ಠ ಬ॥ ತ್ರಯೋದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥು ತೇದಿ
4	ಭಾನು	ಅಷ್ಟ	50-23	ಉಭಾ	11-29	20
5	[1]ಸೋ	ನವ	53-1	ರೇವತಿ	15-4	21
6	[2]ಮಂಗ	ದಶ	56-51	ಅಶ್ವಿನಿ	19-48	22
7	ಬುಧ	ಏಕಾ	60-0	ಭರಣಿ	25-28	23
8	[3]ಗುರು	ಏಕಾ	1-41	ಕೃತ್ತಿಕೆ	31-46	24
9	ಶುಕ್ರ	ದ್ವಾ	6-38	ರೋಹಿ	38-21	25
10	[4]ಶನಿ	ತ್ರ	11-40	ಮೃಗಶಿ	44-49	26

(1) ಮಿಥುನೇಶುಕ್ರಃ ೨. (2) ಅಮೃತಸಿದ್ಧಿಯೋಗಃ. (3) ಸರ್ವತ್ರ ಸಾರ್ವೈಕಾದಶೀ, ಕುಜಚಂದ್ರಯೋಸ್ಸಾಮ್ಯಂ. (4) ನಂಜನಗೂಡು ವಿಜಯೀಂದ್ರಸ್ವಾಮಿಗಳ ಪುಣ್ಯದಿನ, ಮಾಸಶಿವರಾತ್ರಿಃ, ಶುಕ್ರಚಂದ್ರಯೋಸ್ಸಾಮ್ಯಂ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಕ್ಲಾ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರ್ ✶ ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಕ್ಷ್ಮಜ್ಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸಿಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧—೦—೦ ಅಂಚೆವೆಚ್ಚ ಸೇರಿ ೧—೧೪—೦

ಸಂಪುಟ ೨೮) ಮೈಸೂರ್ ಸ್ಟಾರ್ ಸನ್ ೧೯೧೫ ನೆಯ ಇಸವಿ ಜುಲೈ ತಾರೀಖು ೧೧ ನೆಯ ಭಾನುವಾರ. (ಸಂಚಿಕೆ ೨೩

ರಖಂವಾರ್ ಹೊಸ ಹಾರ್ಮೋನಿಯಂಗಳು.

ಮಿತ್ರರೇ! ನಿಮ್ಮ ಹಣವನ್ನು ಸದ್ವ್ಯಯಮಾಡುವುದು ಹೇಗೆ? ಕ್ರಯಕ್ಕೆ ತಕ್ಕ ಉತ್ತಮವಾದ ಪದಾರ್ಥವನ್ನು ಕೊಂಡುಕೊಳ್ಳುವುದೇ ಅಲ್ಲವೆ? ಹಾಗಾದರೆ ನಮ್ಮಿಂದ ಒಂದುಸಾರಿ ತರಿಸಿ ಪರೀಕ್ಷಿಸಿರಿ. ನೀವೂ ಅನೇಕಕಡೆಗಳಿಂದ ನಾನಾತರಹ ಹಾರ್ಮೋನಿಯಂಗಳನ್ನು ತರಿಸಿಕೊಂಡಿರುವಿರಿ, ಆದರೆ ಈ ಕೆಳಗೆ ವಿವರಿಸಿರುವ ಪ್ರಖ್ಯಾತರಾದ ಕಾರೀಗಾರರಿಂದ ಬಹಳ ಬಂದೋಬಸ್ತಾಗಿ ತಯಾರಿಸಲ್ಪಟ್ಟು ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಹಾರ್ಮೋನಿಯಂಗಳನ್ನು ಒಂದುಸಾರಿ ತರಿಸಿಕೊಂಡು ಪರೀಕ್ಷಿಸಿದರೆ ಪದಾರ್ಥದ ಸೊಗಸೂ, ಬಾಳ್ವಿಕೆ, ಬಂದೋಬಸ್ತು, ಸ್ಪಷ್ಟವಾದ ಸ್ವರ ಇವೇ ಮೊದಲಾದ ಅತ್ಯುತ್ಕೃಷ್ಟವಾದ ಗುಣಗಳೂ, ಅಗ್ಗವಾದ ದರಗಳೂ ತಾವಾಗಿ ಗೋಚರವಾಗುತ್ತವೆಯಾದ್ದರಿಂದ ನಮ್ಮಿಂದಹಾರ್ಮೋನಿಯಂಗಳನ್ನು ತರಿಸಿಕೊಂಡವರಿಂದ ಸಂತೋಷಪೂರ್ವಕವಾದ ಸನ್ಮಾನಪತ್ರಿಕೆಗಳು ಪ್ರತಿನಿತ್ಯವೂ ಬರುತ್ತಲಿವೆ ಇವುಗಳ ಪೈಕಿ ಸ್ಥಳಸಂಕೋಚದಿಂದ ಒಂದನ್ನು ಮಾತ್ರ ಇಲ್ಲಿ ವಿವರಿಸಿದೇವೆ.

ಸಯ್ಯದ್ ಜನಾಲ್‌ಸಾಬ್ ಸ್ಕೂಲ್‌ಮಾಸ್ಟರ್ ಬೇಲೂರು ತಾಲ್ಲೋಕು ಚನ್ನಹಳ್ಳಿಗ್ರಾಮ ಇವರು ಬರೆಯುವದು. ಸ್ವಾಮಿ! ತಾವು ಕಳುಹಿಸಿಕೊಟ್ಟ ಹಾರ್ಮೋನಿಯಂ ಪಾರ್ಸಲನ್ನು ಡಿಲಿವರೀ ತೆಗೆದುಕೊಂಡೆನು. ನೋಡುವಲ್ಲಿ ಪದಾರ್ಥ ಬಹಳಸೊಗಸಾಗಿಯೂ ಬಂದೋಬಸ್ತಾಗಿಯೂ ಇರುವುದರಿಂದ ನನ್ನ ಮನಸ್ಸಿಗೆ ಬಹು ಸಮರ್ಪಕವಾಯಿತು. ಇದನ್ನು ನೋಡಿ ನನ್ನ ಸ್ನೇಹಿತರು ಇನ್ನು ಕೆಲವಕ್ಕೆ ಆರ್ಡರ್ ಕೊಡುವುದರಲ್ಲಿದ್ದಾರೆ.

ಆರ್‌ಡರಿನ ಸಂಗಡ ಅಡ್ವಾನ್ಸು ಕಳುಹಿಸಿಕೊಡುತ್ತೀವೆ. 4

ಕ್ರಯದ ತಪ್ಸೀಲ್.

೧.	“ ಬಿಜಲೀಪ್ಲೂಟ್ ” ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೨೫—೦—೦
೨.	ಡಿಟೋ ಉತ್ತಮತರಹ ಹಾರ್ಮೋನಿಯಂ	೧ ಕ್ಕೆ ೨೩—೮—೦
೩.	“ ಕೋಹಿನೂರು ಪ್ಲೂಟ್ ” ಸಿಂಗಲ್‌ರೀಡ್ಸ್‌ಹಾರ್ಮೋನಿಯಂ	೧ ಕ್ಕೆ ೨೯—೮—೦
೪.	ಡಿಟೋ ನಮೂನೆ ಅತ್ಯುತ್ತಮವಾದ ಹಾರ್ಮೋನಿಯಂ	೧ ಕ್ಕೆ ೩೨—೮—೦
೫.	“ ಮೋರ್ಸ್ಲೆಪ್ಲೂಟ್ ” ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೩೫—೦—೦
೬.	ಪ್ರಖ್ಯಾತಿಹೊಂದಿದ ಎಂ. “ ಮೋರ್ಹೆಪ್ಲೂಟ್ ” ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೩೨—೮—೦
೭.	ಪ್ರಖ್ಯಾತಿಹೊಂದಿದ ಎಂ. “ ಮೋರ್ಹೆಪ್ಲೂಟ್ ” ಹಾರ್ಮೋನಿಯಂನಲ್ಲಿ ಅತ್ಯುತ್ತಮವಾದ ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೪೨—೮—೦
೮.	“ ಕೊಹಿನೂರ್‌ಪ್ಲೂಟ್ ” ಡಬ್ಬಲ್‌ರೀಡ್ಸ್‌ಹಾರ್ಮೋನಿಯಂ	೧ ಕ್ಕೆ ೪೨—೮—೦
೯.	“ ಬಿಜಲೀಪ್ಲೂಟ್ ” ಡಬ್ಬಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೪೨—೦—೦
೧೦.	“ ಮೋಸ್ಲೆಂಪ್ಲೂಟ್ ” ಡಬ್ಬಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೪೩—೮—೦
೧೧.	ಪ್ರಖ್ಯಾತಿಹೊಂದಿದ ಎಂ. “ ಮೋರ್ಹೆಪ್ಲೂಟ್ ” ಡಬ್ಬಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೫೦—೮—೦
೧೨.	ಡಿಟೋ ಎಂ. “ ಮೋರ್ಹೆಪ್ಲೂಟ್ ” ಡಬ್ಬಲ್‌ರೀಡ್ಸ್ ಅತ್ಯುತ್ತಮವಾದ ಹಾರ್ಮೋನಿಯಂ	೧ ಕ್ಕೆ ೫೨—೮—೦

ಹಾರ್ಮೋನಿಯಂಗಳಿಗೆ ಆರ್‌ಡರ್ ಮಾಡತಕ್ಕವರು ನಿಮ್ಮ ಊರಿಗೆಸಮೀಪವಿರುವ ರೈಲ್ವೇಸ್ಟೇಷನ್ ಬರೆಯುವದಲ್ಲದೆ ೫ರೂಪಾಯಿ ಅಡ್ವಾನ್ಸು ಕಳುಹಿಸಿಕೊಡಬೇಕು. ಅಡ್ವಾನ್ಸಿಲ್ಲದೇ ಬರತಕ್ಕ ಆರ್‌ಡರ್‌ಗಳಿಗೆ ಖಂಡಿತವಾಗಿಯೂ ರವಾನಿಸಲಾಗುವುದಿಲ್ಲ.

ಕಸ್ತೂರಿಮಾತ್ರೆ ಪ್ರಖ್ಯಾತರಾದ ಘನ ವೈದ್ಯರಿಂದ ತಯಾರಿಸಲ್ಪಟ್ಟ ಕಸ್ತೂರಿಮಾತ್ರೆ ಶೀಶೆ 1 ಕ್ಕೆ 0-4-0. 5 ಶೀಶೆಗೆ ಒಂದು ಶೀಶೆ ಇನಾಂ ಪೋಸ್ಟೇಜು ಅಲಾಯಿದಾ 12 ಶೀಶೆ ಒಟ್ಟಿಗೆ ತರಿಸಿಕೊಳ್ಳುವವರಿಗೆ ಪೋಸ್ಟೇಜು ಸೇರಿ 2-8-0

ಪರಿಮಳಕಾರ್ಡುಗಳು ಒಂದುಕಾರ್ಡನ್ನು ಜೇಬಿನಲ್ಲಿಟ್ಟುಕೊಂಡಿದ್ದರೆ ಸುವಾಸನೆಯಾದ ಪುಷ್ಪವಾಟಿಗಳ ಮಧ್ಯದಲ್ಲಿರುವಂತೆ ಬಹು ಮನೋಹರವಾಗಿರುತ್ತೆ ಕಾರ್ಡು 1 ಕ್ಕೆ ಕ್ರಯ 0-1-0 12 ಕ್ಕೆ 0-10-0 ಪೋಸ್ಟೇಜು ಅಲಾಯಿದಾ ಒಂದು ಡಜನ್‌ಗಿಂತಲೂ ಕಡಿಮೆಯಾಗಿ ರವಾನಿಸಲಾಗುವುದಿಲ್ಲಾ.

ಸೇಸೇತಾಂಬೂಲಮಿತ್ರ 250 ಮಾತ್ರೆಗಳಿರುವ ಪೊಟ್ನ 1 ಕ್ಕೆ 0-2-6 ಒಂದು ಡಜನ್ ಒಟ್ಟಿಗೆ ತರಿಸಿಕೊಳ್ಳುವವರಿಗೆ 1-10-0 ಕೊಡುವುದಲ್ಲದೆ ಪೋಸ್ಟೇಜು ಸಹಾ ಮಾಫಿ ಮಾಡಿದ್ದೇವೆ. ಇದರ ಸೇವನೆಯಿಂದಾಗತಕ್ಕ ಗುಣಗಳ ಪ್ರಿಂಟಾದ ಚೀಟಿ ಪಾರ್ಸಲಿನ ಸಂಗಡ ರವಾನಿಸಲಾಗುತ್ತೆ.

ಕೆಷಿಂತಾನ್ 45 ಮಾತ್ರೆಗಳ ಪೊಟ್ನ 1 ಕ್ಕೆ 0-2-0, 95 ಮಾತ್ರೆಗಳ ಪೊಟ್ನ 1 ಕ್ಕೆ 0- -0, 200 ಮಾತ್ರೆಗಳ ಪೊಟ್ನ 1 ಕ್ಕೆ 0-7-0, 200 ಮಾತ್ರೆಗಳ ಟಿನ್ 1 ಕ್ಕೆ 0-9-0, 80 ಮಾತ್ರೆಗಳ ಟಿನ್ 1 ಕ್ಕೆ 0-4-0, 100 ಮಾತ್ರೆಗಳ ಶೀಸೆ 1 ಕ್ಕೆ 0-4-6.

ನಮ್ಮ ವಿಳಾಸ:—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್ ಕೃಷ್ಣರಾಜಮೊಹಲ್ಲಾ ಮೈಸೂರು.

ಓರಿಯಂಟಲ್ ಫಾರ್ಮಸಿ ಮೈಸೂರು.

23

ಪ್ರಸಿದ್ಧ ಗುಣಕಂಡ ಔಷಧಗಳು.

ಜ್ವರದಮಾತ್ರೆ—ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಯುಬ್ಬರ ಹೊಟ್ಟೆನೋವು ಅಜೀರ್ಣ, ಸಕ್ಕೆಸಳೆತ ಮಂದಇವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ರೂ.

ಗೋರೋಜನದಮಾತ್ರೆ— ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೂಡ್ಲೆ ತಪ್ಪಿ ಜೀರ್ಣಶಕ್ತಿಕೊಡುತ್ತೆ. ಪ್ರಯಾಣಿಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾಯು ನೋವು ಉಳುಕು ಊದು ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ. ೫ ಡಬ್ಬಿಗೆ ೧ ರೂ. ಕೂಡ್ಲೆ ನಮ್ಮ ಕ್ಯಾಟಲಾಗಿಗೆ ಬರೆಯಿರಿ ಮುಫತ್ತು ಕಳುಹಿಸುತ್ತೇವೆ.

ಹೊಸ ಪುಸ್ತಕಗಳು.

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೫೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧—೮—೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ— ಬೆಲೆ ೧—೪—೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ— ಬೆಲೆ ೧—೮—೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕಿರಣಹಸುಗೆ-ಪಂಚೀಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಸಾಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ. ಎಸ್. ಆರ್. ಕರಿಬಸವಶಾಸ್ತ್ರಿ,

191 ಗ್ರಂಥಪ್ರಕಾಶಕಮಂಡಳಿ, ಮೈಸೂರು.

೫೦೦ ರೂಪಾಯಿಗಳ ಬಹುಮಾನ

ಬೆಂಗಳೂರು ಸಿಟಿ ಟಪಾಲು ಆಫೀಸಿನ ಸೇವಿಂಗ್‌ಬ್ಯಾಂಕಿನಲ್ಲಿ ಮೇಲ್ಕಂಡ ೫೦೦ ರೂಪಾಯಿಗಳನ್ನು ೧೯೧೫ ನೆ ಇಸವಿ ಮಾರ್ಚಿ ತಾ॥ ೧೫ ರಲ್ಲಿ ಡಿಪಾಜಿಟ್ಟು ಇಟ್ಟಿರುತ್ತೇವೆ. ೪

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯು ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಸಾಲಾಮಿಸ್ರಿಯು ಧಾರಣೆಯು ಜಾಸ್ತಿಯಾಗಿರುವದರಿಂದ ಅನೇಕರು ಉರುಳುಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುವದು ತಿಳಿದುಬರುತ್ತದೆ.

ಸಾಲಾಮಿಸ್ರಿ ಮುರಬ್ಬಾವು—ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವುದು.
ಸಾಲಾಮಿಸ್ರಿ ಮುರಬ್ಬಾವು—ನಿದ್ರೆಯಲ್ಲಿ ಧಾತುವು ಹೋಗುವುದನ್ನು ನಿಲ್ಲಿಸುವುದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಧಾತುಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕ್ಷಣ ಕ್ಷಣಕ್ಕೆ ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ವೃದ್ಧಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಶ್ವಾಸಕಾಸ ರೋಗಗಳನ್ನು ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹೊಟ್ಟೆಯಲ್ಲಿರುವ ಜ್ವರದಗಡ್ಡೆ ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೆಟ್ಟುಹೋಗಿರುವ ರಕ್ತವನ್ನು ಶುದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಳೆತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು.
ಸಾಲಾಮಿಸ್ರಿ ಮುರಬ್ಬಾವು—ಉತ್ಸಾಹ, ಧೈರ್ಯ, ಬುದ್ಧಿಕುಶಲತೆ, ಶರೀರಕಾಂತಿಯನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು—ತಾಂಬ್ರ, ಬೆಳ್ಳಿ, ಮತ್ತು ಭಂಗಾರ ಭಸ್ಮಕ್ಕಿಂತಲೂ ಉತ್ತಮವಾದುದು.
ಸಾಲಾಮಿಸ್ರಿ ಮುರಬ್ಬಾವು—ಸ್ತ್ರೀ ಸಂಗಕ್ಕೆ ಮೊದಲೆ ಧಾತು ಸ್ಖಲನವಾಗುವದನ್ನು ನಿಲ್ಲಿಸುವದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯ್ಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪುರಾ ಗುಣಕೊಡುತ್ತದೆ. ೨ ೩ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಸಾಲಾಮಿಸ್ರಿ" ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ
500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನಮ್ಮಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾನಿನ ಡಬ್ಬಿ ೧ ಕ್ಕೆ ಕ್ರಯ ೨—೦—೦ ರೂಪಾಯಿ. ಟಪ್ಪಾಲು ಖರ್ಚು ೧ ಡಬ್ಬಿಯಿಂದ ಡಬ್ಬಿಗಳ ವರೆಗೆ ೬ ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ವಿಳಾಸ:—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
೫೫, ಅವೆನ್ಯೂರೋಡ್ ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು. 7

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊತೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈ ವಿಾರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಹೇಳಾಡಬೇಡಿರಿ. ಒಂದೇಪ್ರೊಂದು ಬುಡ್ಡಿಯು ನಿಮ್ಮಲ್ಲಿರಲಿ ಮತ್ತೊಂದು ಸಹಾಯಕ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧—೦—೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೦—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತೆ।	೦—೫—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ 38

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ಕಸ್ತೂರಿ, ಚಿನ್ನದರೇಖು, ಲೋಹಭಸ್ಮ ಮುಂತಾದವುಗಳಿಂದ ವಂಶಪಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀಕರಕಸ್ತೂರಿಮಾತ್ರೆಗಳನ್ನು ತಾಂಬೂಲದೊಡನೆ ಅಥವಾ ಹಾಗೆ ಉಪಯೋಗಿಸಿದರೆ ಆಹಾರವು ಬೇಗನೆ ಜೀರ್ಣವಾಗಿ ಬಹಳಹೊತ್ತು ಬಾಯಿ ಘಮಘಮಿಸುತ್ತಿರುವುದು.

ಛಳಿಮಳೆಗಾಲಗಳಲ್ಲೂ, ಸೋಂಕುರೋಗಸ್ಥಳಗಳಲ್ಲೂ, ಪ್ರಯಾಣಕಾಲದಲ್ಲೂ, ಮಕ್ಕಳಿರುವ ಮನೆಗಳಲ್ಲೂ, ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಶೀತವಾಯು, ಕೆಮ್ಮು, ನೆಗಡಿ, ಅಜೀರ್ಣಭೇದಿ, ಮಲಬಂಧ, ಪರಸೇಜ್ವರ, ಪ್ಲೇಗುಜ್ವರ, ಮಲೇರಿಯಾಜ್ವರ, ನಡುನೋವು, ಅರೋಚಕ, ಹಲ್ಲುನೋವು, ಮೈಕೈನೋವುಗಳು ಬಹಳಬೇಗನೆ ವಾಸಿಯಾಗುತ್ತವೆ. ಮಕ್ಕಳಿಗೆ ಸಂಜೀವನ—ಯಾವಾಗಲೂ ವಿಳಾಸವನ್ನು ಪರೀಕ್ಷಿಸಿ ಔಷಧವನ್ನು ಕೊಂಡುಕೊಳ್ಳಿರಿ—ಮೋಸಹೋಗಬೇಡಿರಿ. ೨೫೦ ಮಾತ್ರೆಯುಳ್ಳ ಸೀಸೆಯ ಬೆಲೆ ೦—೪—೦ ಆಣೆ. ಐದಕ್ಕೆ ಒಂದು ಮುಫತ್ತು. ಟಪಾಲ್‌ಖರ್ಚು ಬೇರೆ.

ಆಮೋದಿನಿ.

ಸಂಗೀತಗಾರರಿಗೆ ಅತ್ಯಂತ ಸುಖವನ್ನೂ, ವಿದ್ಯಾರ್ಥಿಗಳಿಗೆ ಆನಂದವನ್ನೂ, ಪ್ರಯಾಣಿಕರಿಗೆ ಆಯಾಸಪರಿಹಾರವನ್ನೂ, ಉಂಟುಮಾಡಿ ಬಿಸಿಲುಕಾಲದ ಅಥವಾ ಆಯಾಸದ ಬಾಯಾರಿಕೆಯನ್ನು ತಕ್ಷಣ ಅಣಗಿಸಿ, ಎಂತಹ ಕೆಮ್ಮು, ಉಬ್ಬಸಗಳನ್ನಾದರೂ ವಾಸಿಮಾಡಿ ಆಬಾಲವೃದ್ಧರಿಂದಲೂ ಹೊಗಳ್ಪಡುತ್ತಲಿರುವ ಕೈಗಂಡಸಿದ್ಧಾ ವೃತ, ಮತ್ತಾವ ಮಾತ್ರೆಗಳೂ ಇಷ್ಟು ಮನೋಹರವಾಗಿಲ್ಲವೆಂಬುದನ್ನು ನಂಬಿರಿ! ೧೫೦ ಮಾತ್ರೆಯ ಸೀಸೆ ೦—೪—೦ ಆಣೆ. ಐದಕ್ಕೆ ಒಂದು ಹೆಚ್ಚು. ಟಪಾಲ್‌ಖರ್ಚು ಪ್ರತ್ಯೇಕ.

ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರು ಡಿ॥

೧೯೧೫ನೆಯ ಇಸವಿ ಜುಲೈ ತಾ॥ ೪ ರಿಂದ ೧೯೧೫ ನೆಯ ಜುಲೈ ತಾ॥ ೧೦ರವರೆಗೆ ಸಲ್ಲುವ ಶಾಲೀವಾಹನಶಕ ೧೮೩೭ ನೆಯ ರಾಕ್ಷಸನಾಮಸಂವತ್ಸರದ ಜ್ಯೇಷ್ಠ ಬ॥ ಅಷ್ಟಮಿಯಿಂದ ಜ್ಯೇಷ್ಠ ಬ॥ ತ್ರಯೋದಶಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥು ತೇದಿ
4	ಭಾನು	ಅಷ್ಟ	50-23	ಪೂಭಾ	11-29	20
5	¹ಸೋ	ನವ	53-1	ರೇವತಿ	15-4	21
6	²ಮಂಗ	ದಶ	56-51	ಅಶ್ವಿನಿ	19-48	22
7	ಬುಧ	ಏಕಾ	60-0	ಭರಣಿ	25-28	23
8	³ಗುರು	ಏಕಾ	1-41	ಕೃತ್ತಿಕ	31-46	24
9	ಶುಕ್ರ	ದ್ವಾ	6-38	ರೋಹಿ	38-21	25
10	⁴ಶನಿ	ತ್ರ	11-40	ಮೃಗಶಿ	44-49	26

(1) ಮಿಥುನೆಶುಕ್ರಃ ೨. (2) ಅಮೃತಸಿದ್ಧಿಯೋಗಃ. (3) ಸರ್ವತ್ರ ಸಾರ್ವೈಕಾದಶೀ, ಕುಜಚಂದ್ರಯೋಸ್ಸಾಮ್ಯಂ. (4) ನಂಜನಗೂಡು ವಿಜಯೇಂದ್ರಸ್ವಾಮಿಗಳ ಪುಣ್ಯದಿನ, ಮಾಸಶಿವರಾತ್ರಿಃ, ಶುಕ್ರಚಂದ್ರಯೋಸ್ಸಾಮ್ಯಂ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124.

ಮೈಸೂರ್ ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.
ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸಿಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿ ಸೆಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥
ವಾರ್ಷಿಕ ಚಂದಾ ೧—೦—೦ ಅಂಚೆವೆಚ್ಚ ಸೇರಿ ೧—೪—೦

ಸಂಪುಟ ೨೮) ಮೈಸೂರ್ ಸ್ಟಾರ್ ಸರ್ ೧೯೧೫ ನೆಯ ಇಸವಿ ಜುಲೈ ತಾರೀಖು ೧೧ ನೆಯ ಭಾನುವಾರ. (ಸಂಚಿಕೆ ೨೩

ರಖಂವಾರ್ ಹೊಸ ಹಾರ್ಮೋನಿಯಂಗಳು.



ಮಿತ್ರರೇ! ನಿಮ್ಮ ಹಣವನ್ನು ಸದ್ವ್ಯಯಮಾಡುವುದು ಹೇಗೆ? ಕ್ರಯಕ್ಕೆ ತಕ್ಕ ಉತ್ತಮವಾದ ಪದಾರ್ಥವನ್ನು ಕೊಂಡುಕೊಳ್ಳುವುದೇ ಅಲ್ಲವೆ? ಹಾಗಾದರೆ ನಮ್ಮಿಂದ ಒಂದುಸಾರಿ ತರಿಸಿ ಪರೀಕ್ಷಿಸಿರಿ. ನೀವೂ ಅನೇಕಕಡೆಗಳಿಂದ ನಾನಾತರಹ ಹಾರ್ಮೋನಿಯಂಗಳನ್ನು ತರಿಸಿಕೊಂಡಿರುವಿರಿ, ಆದರೆ ಈ ಕೆಳಗೆ ವಿವರಿಸಿರುವ ಪ್ರಖ್ಯಾತರಾದ ಕಾರೇಗಾರರಿಂದ ಬಹಳ ಬಂದೋಬಸ್ತಾಗಿ ತಯಾರಿಸಲ್ಪಟ್ಟ ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಹಾರ್ಮೋನಿಯಂಗಳನ್ನು ಒಂದುಸಾರಿ ತರಿಸಿಕೊಂಡು ಪರೀಕ್ಷಿಸಿದರೆ ಪದಾರ್ಥದ ಸೊಗಸೂ, ಬಾಳ್ವಿಕೆ, ಬಂದೋಬಸ್ತು, ಸ್ಪಷ್ಟವಾದ ಸ್ವರ ಇವೇ ಮೊದಲಾದ ಅತ್ಯುತ್ಕೃಷ್ಟವಾದ ಗುಣಗಳೂ, ಅಗ್ಗವಾದ ದರಗಳೂ ತಾವಾಗಿ ಗೋಚರವಾಗುತ್ತವೆಯಾದ್ದರಿಂದ ನಮ್ಮಿಂದಹಾರ್ಮೋನಿಯಂಗಳನ್ನು ತರಿಸಿಕೊಂಡವರಿಂದ ಸಂತೋಷಪೂರ್ವಕವಾದ ಸನ್ಮಾನಪತ್ರಿಕೆಗಳು ಪ್ರತಿನಿತ್ಯವೂ ಬರುತ್ತಲಿವೆ ಇವುಗಳ ಪೈಕಿ ಸ್ಥಳಸಂಕೋಚದಿಂದ ಒಂದನ್ನು ಮಾತ್ರ ಇಲ್ಲಿ ವಿವರಿಸಿಧೇವೆ.

ಸಯ್ಯದ್ ಜನಾಲ್‌ಸಾಬ್ ಸ್ಕೂಲ್‌ಮಾಸ್ಟರ್ ಬೇಲೂರು ತಾಲ್ಲೋಕು ಚನ್ನಹಳ್ಳಿಗ್ರಾಮ ಇವರು ಬರೆಯುವದು. ಸ್ವಾಮಿ! ತಾವು ಕಳಿಸಿಕೊಟ್ಟ ಹಾರ್ಮೋನಿಯಂ ಪಾರ್ಸಲನ್ನು ಡಿಲಿವರೀ ತೆಗೆದುಕೊಂಡೆನು. ನೋಡುವಲ್ಲಿ ಪದಾರ್ಥ ಬಹಳಸೊಗಸಾಗಿಯೂ ಬಂದೋಬಸ್ತಾಗಿಯೂ ಇರುವುದರಿಂದ ನನ್ನ ಮನಸ್ಸಿಗೆ ಬಹು ಸಮರ್ಪಕವಾಯಿತು. ಇದನ್ನು ನೋಡಿ ನನ್ನ ಸ್ನೇಹಿತರು ಇನ್ನು ಕೆಲವಕ್ಕೆ ಆರ್ಡರ್ ಕೊಡುವುದರಲ್ಲಿಧಾರೆ.
ಆರ್ಡರಿನ ಸಂಗಡ ಅಡ್ವಾನ್ಸು ಕಳುಹಿಸಿಕೊಡುತ್ತೇವೆ. 4

ಕ್ರಯದ ತಪ್ಸೀಲ್.

೧. "ಬಿಜಲೀಫ್ಲೂಟ್" ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೨೫—೦—೦
೨. ಡಿಟೋ ಉತ್ತಮತರಹ ಹಾರ್ಮೋನಿಯಂ	೧ ಕ್ಕೆ ೨೩—೮—೦
೩. "ಕೋಹಿನೂರು ಫ್ಲೂಟ್" ಸಿಂಗಲ್‌ರೀಡ್ಸ್‌ಹಾರ್ಮೋನಿಯಂ	೧ ಕ್ಕೆ ೨೯—೮—೦
೪. ಡಿಟೋ ನಮೂನೆ ಅತ್ಯುತ್ತಮವಾದ ಹಾರ್ಮೋನಿಯಂ	೧ ಕ್ಕೆ ೩೨—೮—೦
೫. "ಮೋಸ್ಲೆಮ್‌ಫ್ಲೂಟ್" ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೩೫—೦—೦
೬. ಪ್ರಖ್ಯಾತಿಹೊಂದಿದ ಎಂ. "ಮೋರ್ಹೆಫ್ಲೂಟ್" ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೩೩—೮—೦
೭. ಪ್ರಖ್ಯಾತಿಹೊಂದಿದ ಎಂ. "ಮೋರ್ಹೆಫ್ಲೂಟ್" ಹಾರ್ಮೋನಿಯಂನಲ್ಲಿ ಅತ್ಯುತ್ತಮವಾದ ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೪೨—೮—೦
೮. "ಕೊಹಿನೂರ್‌ಫ್ಲೂಟ್" ಡಬ್ಬಲ್‌ರೀಡ್ಸ್‌ಹಾರ್ಮೋನಿಯಂ	೧ ಕ್ಕೆ ೪೨—೮—೦
೯. "ಬಿಜಲೀಫ್ಲೂಟ್" ಡಬ್ಬಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೪೨—೦—೦
೧೦. "ಮೋಸ್ಲೆಂಫ್ಲೂಟ್" ಡಬ್ಬಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೪೩—೮—೦
೧೧. ಪ್ರಖ್ಯಾತಿಹೊಂದಿದ ಎಂ. "ಮೋರ್ಹೆಫ್ಲೂಟ್" ಡಬ್ಬಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೫೦—೮—೦
೧೨. ಡಿಟೋ ಎಂ. "ಮೋರ್ಹೆಫ್ಲೂಟ್" ಡಬ್ಬಲ್‌ರೀಡ್ಸ್ ಅತ್ಯುತ್ತಮವಾದ ಹಾರ್ಮೋನಿಯಂ	೧ ಕ್ಕೆ ೫೨—೮—೦

ಹಾರ್ಮೋನಿಯಂಗಳಿಗೆ ಆರ್ಡರ್ ಮಾಡತಕ್ಕವರು ನಿಮ್ಮ ಊರಿಗೆಗೆಸಮಿಾಪವಿರುವ ರೈಲ್ವೇಸ್ಟೇಷನ್ ಬರೆಯುವದಲ್ಲದೆ ೫ರೂಪಾಯಿ ಅಡ್ವಾನ್ಸು ಕಳುಹಿಸಿಕೊಡಬೇಕು. ಅಡ್ವಾನ್ಸಿಲ್ಲದೇ ಬರತಕ್ಕ ಆರ್ಡರ್‌ಗಳಿಗೆ ಖಂಡಿತವಾಗಿಯೂ ರವಾನಿಸಲಾಗುವುದಿಲ್ಲ.

ಕಸ್ತೂರಿಮಾತ್ರೆ ಪ್ರಖ್ಯಾತರಾದ ಘನ ವೈದ್ಯರಿಂದ ತಯಾರಿಸಲ್ಪಟ್ಟ ಕಸ್ತೂರಿಮಾತ್ರೆ ಶೀಶೆ 1 ಕ್ಕೆ 0-4-0. 5 ಶೀಶೆಗೆ ಒಂದು ಶೀಶೆ ಇನಾಂ ಪೋಸ್ಟೇಜು ಅಲಾಯಿದಾ 12 ಶೀಶೆ ಒಟ್ಟಿಗೆ ತರಿಸಿಕೊಳ್ಳುವರಿಗೆ ಪೋಸ್ಟೇಜು ಸೇರಿ 2-8-0

ಪರಿಮಳಕಾರ್ಡುಗಳು ಒಂದುಕಾರ್ಡನ್ನು ಜೇಬಿನಲ್ಲಿಟ್ಟುಕೊಂಡಿದ್ದರೆ ಸುವಾಸನೆಯಾದ ಪುಷ್ಪವಾಟಿಗಳ ಮಧ್ಯದಲ್ಲಿರುವಂತೆ ಬಹು ಮನೋಹರವಾಗಿರುತ್ತೆ ಕಾರ್ಡು 1 ಕ್ಕೆ ಕ್ರಯ 0-1-0 12 ಕ್ಕೆ 0-10-0 ಪೋಸ್ಟೇಜು ಅಲಾಯಿದಾ ಒಂದು ಡಜನ್‌ಗಿಂತಲೂ ಕಡಿಮೆಯಾಗಿ ರವಾನಿಸಲಾಗುವುದಿಲ್ಲಾ.

ಸೇರ್‌ಸೇರ್‌ತಾಂಬೂಲಮಿತ್ರ 250 ಮಾತ್ರೆಗಳಿರುವ ಪೊಟ್ನ 1 ಕ್ಕೆ 0-2-6 ಒಂದು ಡಜನ್ ಒಟ್ಟಿಗೆ ತರಿಸಿಕೊಳ್ಳುವರಿಗೆ 1-10-0 ಕೊಡುವುದಲ್ಲದೆ ಪೋಸ್ಟೇಜು ಸಹಾ ಮಾಫಿ ಮಾಡಿಧೇವೆ. ಇದರ ಸೇವನೆಯುಂದಾಗತಕ್ಕ ಗುಣಗಳ ಪ್ರಿಂಟಾದ ಚೀಟಿ ಪಾರ್ಸಲಿನ ಸಂಗಡ ರವಾನಿಸಲಾಗುತ್ತೆ.

ಶೆಟಿಂತಾನ್ 45 ಮಾತ್ರೆಗಳ ಪೊಟ್ನ 1 ಕ್ಕೆ 0-2-0, 95 ಮಾತ್ರೆಗಳ ಪೊಟ್ನ 1 ಕ್ಕೆ 0- -0, 200 ಮಾತ್ರೆಗಳ ಪೊಟ್ನ 1 ಕ್ಕೆ 0-7-0, 200 ಮಾತ್ರೆಗಳ ಟಿನ್ 1 ಕ್ಕೆ 0-9-0, 80 ಮಾತ್ರೆಗಳ ಟಿನ್ 1 ಕ್ಕೆ 0-4-0, 100 ಮಾತ್ರೆಗಳ ಶೀಸೆ 1 ಕ್ಕೆ 0-4-6.

ನಮ್ಮ ವಿಳಾಸ:—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್ ಕೃಷ್ಣರಾಜಮೊಹಲ್ಲಾ ಮೈಸೂರು.

ಓರಿಯಂಟಲ್ ಫಾರ್ಮಸಿ ಮೈಸೂರು.

23

ಪ್ರಸಿದ್ಧ ಗುಣಕಂಡ ಔಷಧಗಳು.

ಜ್ವರದಮಾತ್ರೆ—ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಯುಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮುಂದಇವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ರೂ.

ಗೋರೋಚನದಮಾತ್ರೆ— ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೂಡ್ಲೆ ತಪ್ಪಿ ಜೀರ್ಣಶಕ್ತಿಕೊಡುತ್ತೆ. ಪ್ರಯಾಣೀಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾಯು ನೋವು ಉಳುಕು ಊದು ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ. ೫ ಡಬ್ಬಿಗೆ ೧ ರೂ. ಕೂಡ್ಲೆ ನಮ್ಮ ಕ್ಯಾಟಲಾಗಿಗೆ ಬರೆಯಿರಿ ಮುಫತ್ತಾ ಕಳುಹಿಸುತ್ತೇವೆ.

ಹೊಸ ಪುಸ್ತಕಗಳು.

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೫೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧—೮—೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ—ಬೆಲೆ ೧—೪—೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ— ಬೆಲೆ ೧—೮—೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ—ಕರಣಹಸುಗೆ—ಪಂಚೀಕರಣ—ಕಾಲಜ್ಞಾನ— ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ-ಲಯ-ಹಠ-ರಾಜಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಕ್ರಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವಿಕಾಲೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
191 ಗ್ರಂಥಪ್ರಕಾಶಕಮಂಡಲಿ, ಮೈಸೂರು.

ರಾಜಸಭಾಭೂಷಣ, ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರವರು ಸ್ಥಳೀಯ ಸ್ವಾರಾಜ್ಯ ಪ್ರಥಮ ಪರಿಷತ್ತಿನ ಪ್ರೆಸಿಡೆಂಟರಾಗಿ ಮಾಡಿದ ಉಪನ್ಯಾಸ.

(ಕಳೆದವಾರದ ಶೇಷ)

ಲೋಕಲ್ ಬೋರ್ಡುಗಳು.

1902 ನೆಯ ಇಸವಿಯ ಮೈಸೂರು ಲೋಕಲ್‌ಬೋರ್ಡ್ಸ್ ರೆಗ್ಯುಲೇಷನ್ನ ಅನುಸರಿಸಿ ಈಗ ಜಾರಿಯಲ್ಲಿರುವ ಲೋಕಲ್ ಬೋರ್ಡುಗಳ ವಿಷಯವಾಗಿ ಮುಂದೆ ಚರ್ಚಿಸುತ್ತೇನೆ. ಈ ರೆಗ್ಯುಲೇಷನು ಕೆಲವು ಅಲ್ಪವಿಷಯಗಳಲ್ಲಿ ಮಾತ್ರ ಈಚೆಗೆ ತಿದ್ದುಪಾಟು ಮಾಡಲ್ಪಟ್ಟಿದೆಯೆ ಹೊರತು ಬಾಕಿ ವಿಷಯಗಳಲ್ಲಿ ಪ್ರಾಸಾದ ಲಾಗಾಯಿತು ಒಂದೇ ರೀತಿಯಾಗಿದೆ.

ನಮ್ಮ ಲೋಕಲ್ ಬೋರ್ಡುಗಳ ರಚನೆ ಮತ್ತು ಕಾರ್ಯನಿರ್ವಾಹಕ ವಿಚಾರವಾಗಿ ಹಿಂದೆ ಹೇಳಿದ ಕಮಿಟಿಯಿಂದ ಸೂಚಿಸಲ್ಪಟ್ಟ ಕೆಲವು ಸಲಹೆಗಳನ್ನು ನಿಮ್ಮ ತಿಳುವಳಿಕೆಗೆ ತರಲಪೇಕ್ಷಿಸುತ್ತೇನೆ. ಅವುಗಳಲ್ಲಿ ಮುಖ್ಯವಾದ ಭಾಗಗಳಾವುವೆಂದರೆ:—

ಮುಂದೆ ಹೇಳುವಂತೆ ಸ್ಥಳೀಯ ಸಭೆಗಳ ಕಾರ್ಯನಿರ್ವಾಹಕ ವಿಚಾರಗಳಲ್ಲಿ ಕೆಲವು ಬದಲಾವಣೆಗಳು ಆಗಬೇಕಾಗಿದೆ.

ಈಗಿನ ಸ್ವತಂತ್ರಾಧಿಕಾರವಿಲ್ಲದೆ ನಿರರ್ಥಕವಾಗಿಯು ಅನುಪಯೋಗವಾಗಿಯು ಇರುವ ತಾಲ್ಲೂಕು ಬೋರ್ಡುಗಳಿಗೆ ಬದಲಾಗಿ ರೆವಿನ್ಯೂ ಸಬ್ ಡಿವಿಜನ್‌ಗಳಿಗೆ ಅನುಗುಣವಾಗಿಯು ಪ್ರತ್ಯೇಕವಾದ ಕಾನೂನಿಗೆ ಒಳಪಟ್ಟು ನಿರ್ಧರಿಸಲ್ಪಟ್ಟ ಅಧಿಕಾರವೂ ಮತ್ತು ಜವಾಬ್ದಾರಿಯು ಸ್ವತಂತ್ರವುಳ್ಳ ಸಬ್ ಡಿಸ್ಟ್ರಿಕ್ಟ್ ಬೋರ್ಡುಗಳು ಸ್ಥಾಪಿಸಲ್ಪಟ್ಟು ಅವುಗಳಿಗೆ ಒಳಪಟ್ಟ ವಿಸ್ತೀರ್ಣದಲ್ಲಿ ಹುಟ್ಟುವಳಿಯಾದ ಲೋಕಲ್ ಸೆಸ್‌ಗಳಲ್ಲಿ ಅರ್ಧಕ್ಕಿಂತಲೂ ಕಡಿಮೆಯಿಲ್ಲದೆ ವಹಿಸಿಕೊಡಬೇಕಾಗಿದೆ. ಮನೆಗಳ ಮತ್ತು ಗಾಡಿಗಳ ಮೇಲೆ ಹಾಕಿರುವ ಮೊಹತರ್ಫವೆಲ್ಲವೂ ಮತ್ತು ಯೂನಿಯನ್ ಅಲ್ಲದ ಪ್ರದೇಶಗಳ ಹಿತ್ತಲ ತೆರಿಗೆಯೂ ಗ್ರಾಮಾಭಿವೃದ್ಧಿಯ ಕಾರ್ಯಗಳಿಗೆ ಮಾತ್ರ ಉಪಯೋಗಿಸಲ್ಪಡುವುದಕ್ಕಾಗಿ ಈ ಬೋರ್ಡುಗಳಿಗೆ ಒಪ್ಪಿಸಲ್ಪಡಬೇಕು. ಯೂನಿಯನ್ ಪ್ರದೇಶಗಳಲ್ಲಿ ವಸೂಲಾಗುವ ಇದೇ ಬಾಬಿನ ಉತ್ಪತ್ತಿ ಯೂನಿಯನ್ ಪಂಚಾಯಿತಿಗೆ ಒಪ್ಪಿಸಬಹುದು. ಡಿಸ್ಟ್ರಿಕ್ಟು ಬೋರ್ಡುಗಳಿಗೆ ಇಂತಹ ಸಬ್ ಡಿಸ್ಟ್ರಿಕ್ಟು ಬೋರ್ಡುಗಳ ಬಡ್ಜೆಟ್ಟುಗಳು ಮಂಜೂರ್ಮಾಡುವುದಕ್ಕೂ ಮತ್ತು ಅಂದಾಜು ಪಟ್ಟಿಗಳು ಸ್ಯಾಂಕ್ಷನ್ ಮಾಡುವುದಕ್ಕೂ ಅಧಿಕಾರವನ್ನು ವಹಿಸಿಕೊಡಬೇಕು. ಪ್ರೈಮರಿ ವಿದ್ಯಾಭ್ಯಾಸ ಮತ್ತು ವೈದ್ಯಶಾಲೆಗಳ ಮತ್ತು ಕೆಲವು ಮುಜರಾಯಿ ಬಾಬುಗಳ ವಿಚಾರಣೆಯನ್ನು ಡಿಸ್ಟ್ರಿಕ್ಟುಬೋರ್ಡುಗಳಿಗೆ ವಹಿಸಿಕೊಡುವುದರಿಂದ ಅವುಗಳ ಉಪಯೋಗವನ್ನು ಹೆಚ್ಚಿಸಬಹುದು. ಸರ್ಕಾರಿ ಮತ್ತು ಮರಾಮತ್ತು ಇಲಾಖೆಯವರ ಸಹಾಯವಿಲ್ಲದೇನೆ ಲೋಕಲ್ ಬೋರ್ಡಿನವರು ತಮ್ಮ ಪ್ರದೇಶದಲ್ಲಿ ಬೇಕಾಗುವ ಮರಾಮತ್ತು ಕೆಲಸಗಳನ್ನು ಬಡ್ಜೆಟ್ ಪರಿಮಿತಿ ಮೀರದಂತೆ ತಾವೇ ನಡಿಸಿಕೊಳ್ಳುವುದಕ್ಕಾಗಿ ಪ್ರತ್ಯೇಕವಾಗಿ ಇಂಜಿನೀರಿಂಗು ನೌಕರರುಗಳನ್ನು ಸ್ಯಾಂಕ್ಷನ್ ಮಾಡಬೇಕು. ಯೂನಿಯನ್‌ಗಳು ತಮ್ಮತಮ್ಮ ಬಡ್ಜೆಟ್‌ಗಳು ತಯಾರ್ಮಾಡಿಕೊಂಡು ಅದರಂತೆ ಖರ್ಚುಮಾಡುವುದಕ್ಕೂ ತಮ್ಮ ಸಿಬ್ಬಂದಿಯನ್ನು ಹತೋಟಿಯಲ್ಲಿಟ್ಟುಕೊಂಡಿರುವುದಕ್ಕೂ ಅಧಿಕಾರ ಕೊಡಬೇಕು. ಯೂನಿಯನ್‌ಗಳ ಬಡ್ಜೆಟ್ಟುಗಳು ಸಬ್ ಡಿಸ್ಟ್ರಿಕ್ಟು ಬೋರ್ಡುಗಳ ಸ್ಯಾಂಕ್ಷನ್‌ಗೆ ಒಳಪಟ್ಟಿರಬೇಕು.

ಮೇಲೆ ಸೂಚಿಸಿದಂತೆ ಅಧಿಕಾರಗಳು ಮತ್ತು ಜವಾಬ್ದಾರಿಗಳು ವರ್ಗಾಯಿಸುವುದರಿಂದ ಯೂನಿಯನ್‌ಗಳ ಸಂಖ್ಯೆಯು ಹೆಚ್ಚಾಗುವುದಲ್ಲದೆ ಅವುಗಳ ಉಪಯೋಗವೂ ಮತ್ತು ಜನಗಳ ಪ್ರೀತಿಪಾತ್ರತೆಯು ಅಭಿವೃದ್ಧಿಯಾಗುವುದೆಂದು ನಂಬುತ್ತೇನೆ. ಈ ರೀತಿ ಆಗುವುದರಿಂದ ಸಬ್‌ಡಿಸ್ಟ್ರಿಕ್ಟು ಬೋರ್ಡುಗಳು ತಮ್ಮತಮ್ಮ ಪ್ರದೇಶಗಳ ಆಡಳಿತಗಳಲ್ಲಿ ಹೆಚ್ಚಾಗಿ ಪ್ರವರ್ತಿಸಿ ಡಿಸ್ಟ್ರಿಕ್ಟು ಬೋರ್ಡುಗಳ ಭಾರವನ್ನು ಕಡಮೆಮಾಡಬಹುದಾಗಿದೆ.

ಮುಖ್ಯವಾಗಿ ನಾವು ದೃಷ್ಟಿಯಲ್ಲಿಡತಕ್ಕದ್ದೇನೆಂದರೆ—ಕ್ರಮೇಣ ನಮ್ಮ ಸಂಸ್ಥಾನದಲ್ಲಿರುವ ಪ್ರತಿಯೊಂದು ಗ್ರಾಮವೂ ಒಂದು ಯೂನಿಯನ್‌ಗೆ ಒಳಪಟ್ಟಿರಬೇಕೆಂಬುವುದೇ. ಇದು ಬಹುಶಃ ಕೆಲವು ಚಿಕ್ಕ ಗ್ರಾಮಗಳಲ್ಲಿ ಅಸಾಧ್ಯವಾಗಬಹುದು ಅಂತಹ ಸಂದರ್ಭಗಳಲ್ಲಿ ಕೆಲವು ಚಿಕ್ಕ ಗ್ರಾಮಗಳನ್ನು ಸೇರಿಸಿ ಸಮುದಾಯ[illegible]ಗಳನ್ನು ಸಹ ಯೂನಿಯನ್‌ಗೆ ಸೇರಿಸಬಹುದು. ಈ ಸಂಕಲ್ಪವು ಶೀಘ್ರದಲ್ಲಿ ನೆರವೇರಿಸಲು ಅಸಾಧ್ಯವಾಗಿದ್ದಾಗ್ಯೂ ಕಾಲಕ್ರಮೇಣ ನಮ್ಮ ಹಳ್ಳಿಗಾಡಿನ ಸ್ವರಾಜ್ಯದ—ಪರಿಮಿತಿಯೆಂದು ಜ್ಞಾಪಕದಲ್ಲಿಡಬೇಕಾದ ಮುಖ್ಯಾಂಶವಾಗಿರುತ್ತೆ.

ಲೋಕಲ್ ಫೈನಾನ್ಸು ಕಮಿಟಿ.

ಮೈಸೂರು ಎಕನಾಮಿಕ್ ಕಾನ್‌ಫರೆನ್ಸಿಗೆ ಒಳಪಟ್ಟದ್ದಾಗಿ ಮತ್ತು ಈ ಲೋಕಲ್ ಸೆಲ್ಫ್ ಗೌರ್ನಮೆಂಟಿಗೆ ಕೇವಲ ಅನುಬಂಧವಾಗಿಯು ಇರುವ ಲೋಕಲ್ ಫೈನಾನ್ಸು ಕಮಿಟಿಯೆಂಬ ಮತ್ತೊಂದು ಕಮಿಟಿಯು ಆಯಾ ಲೋಕಲ್ ಫಂಡಿನ ಆದಾಯವ್ಯಯದ ಸವರಣೆಯನ್ನು ಕುರಿತು ಪರ್ಯಾಲೋಚಿಸಿ ಒಂದು ರಿಪೋರ್ಟನ್ನು ತಯಾರ್ಮಾಡುವ ಬಗ್ಗೆ ದಿವಾನ್ ಬಹದ್ದೂರ್ ಸಿ. ಶ್ರೀನಿವಾಸಯ್ಯಂಗಾರ್ರವರ ಅಧ್ಯಕ್ಷತೆಯಲ್ಲಿ ನೇರಿದಿರುತ್ತೆ. ಸದರಿ ಕಮಿಟಿಯವರ ರಿಪೋರ್ಟನ್ನು ತಮ್ಮಗಳ ತಿಳುವಳಿಕೆಗಾಗಿಯು ಮತ್ತು ಅಭಿಪ್ರಾಯಕ್ಕಾಗಿಯು ತಮ್ಮ ಮುಂದೆ ಇಡಲ್ಪಡುವುದು ಅವರ ಸಲಹೆಗಳಲ್ಲಿ ಮುಖ್ಯವಾದ್ದೇನಂದರೆ:—

I. (a) ಲೋಕಲ್ ಫಂಡು ಜನರಲ್ ಎಂಬುವದನ್ನು ವಜಾಮಾಡಿ ಅದರಿಂದ ಆಗತಕ್ಕ ಕೆಲಸಗಳನ್ನು ಡಿಸ್ಟ್ರಿಕ್ಟು ಫಂಡಿಗೂ ಮತ್ತು ಗೌರ್ನಮೆಂಟಿಗೂ ಅವುಗಳ ಸ್ವಭಾವಾನುಸಾರವಾಗಿ ವಹಿಸತಕ್ಕದ್ದು.

(b) ಅದೇಮೇರೆಗೆ ವಿಲೇಜ್ ಸ್ಕೂಲು ಫಂಡು ಸಹ ವಜಾಮಾಡಿ ಗ್ರಾಮಾಂತರಗಳಲ್ಲಿನ ಪ್ರೈಮರಿ ಮತ್ತು ವರ್ನಾಕ್ಯುಲರ್ ವಿದ್ಯಾಭ್ಯಾಸವನ್ನು ಡಿಸ್ಟ್ರಿಕ್ಟುಫಂಡಿಗೆ ವಹಿಸತಕ್ಕದ್ದು.

(c) ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ಇರತಕ್ಕ ಡಿಸ್ಟ್ರಿಕ್ಟು ಫಂಡಿಗೆ ಪ್ರೈಮರಿ ವಿದ್ಯಾಭ್ಯಾಸವೇ ಮುಂತಾದ ಕಾರ್ಯಗಳನ್ನು ವಹಿಸಿಕೊಟ್ಟು ಅದಕ್ಕಾಗಿ ಸೆಸ್ಸು ಪೂರ್ತಿಯಾಗಿಯೂ ಲೋಕಲ್‌ಫಂಡು ಜನರಲ್‌ಗೆ ಸಂಬಂಧಪಟ್ಟ ಇತರ ಆದಾಯವು ಮತ್ತು ವಿಲೇಜ್ ಸ್ಕೂಲುಫಂಡು ಸಹ ಅದಕ್ಕೆ ಸೇರಿಸಿಕೊಡತಕ್ಕದ್ದು.

II. (a) ಈ ಮೇಲೆ ಹೇಳಿದ ಪ್ರಕಾರ ಈ ಕೆಲಸಗಳನ್ನೆಲ್ಲಾ ಡಿಸ್ಟ್ರಿಕ್ಟು ಬೋರ್ಡುಗಳು ಸಾಂಗವಾಗಿ ನೆರವೇರಿಸಲು ಪ್ರಸ್ತುತ 23 ಲಕ್ಷ ರೂಪಾಯಿಗಳು ಬೇಕಾಗುವುವು ಈ ಬಗ್ಗೆ ಗೌರ್ನಮೆಂಟಿನವರು 7 ಲಕ್ಷ ರೂಪಾಯಿಗಳು ನಗದಾಗಿ ಗ್ರಾಂಟುಕೊಡುವುದಲ್ಲದೆ ಜನರಲ್‌ರೆವಿನ್ಯೂಗೆ ಪಾಲಿಜಮಾ ಮಾಡಿಸುತ್ತಾ ಇರುವ ಒಟ್ಟು ಮೊಹತರ್ಫಾ ಬಾಬ್ತು ಆಗುವ 3 ಲಕ್ಷ ರೂಪಾಯಿಗಳು ಸಹಾ ಕೊಡಬೇಕಾಗುತ್ತೆ.

(b) ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಬೋರ್ಡುಗಳು ಮತ್ತು ಯೂನಿಯನ್‌ಗಳಿಗೂ ಹೆಚ್ಚಾದ ಅಧಿಕಾರಗಳನ್ನು ಕೊಡುವುದಲ್ಲದೆ ತಾಲ್ಲೂಕು ಬೋರ್ಡುಗಳಿಗೂ ಮತ್ತು ಯೂನಿಯನ್‌ಗಳಿಗೆ ಸ್ವತಂತ್ರವಾದ ಆದಾಯವೆಚ್ಚಗಳ ಆಡಳಿತವು ಮತ್ತು ಅವುಗಳಿಗೆಂದೆ ಆಗತಕ್ಕ ಕರ್ತವ್ಯಗಳನ್ನು ವಿಧಿಸಬೇಕು

III. (a) ರೆಗ್ಯುಲೇಷನ್‌ಗೆ ಒಳಪಡದ ಮ್ಯುನಿಸಿಪಾಲಿಟಿಗಳನ್ನೆಲ್ಲವನ್ನು ರೆಗ್ಯುಲೇಷನ್‌ಗೆ ಒಳಪಡಿಸಿ ಅವುಗಳಲ್ಲಿ ರೆಗ್ಯುಲೇಷನ್‌ಗೆ ಅನುಸಾರವಾದ ತೆರಿಗೆಗಳನ್ನು ಮಾತ್ರ ವಿಧಿಸತಕ್ಕದ್ದು.

(b) ಎಲ್ಲಾ ಮ್ಯುನಿಸಿಪಾಲಿಟಿಗಳಲ್ಲಿಯು ಆಕ್ಟ್ರಾಯಿ ವಜಾಮಾಡಲ್ಪಡಬೇಕು. ಅದರಿಂದ ಆಗುವ ನಷ್ಟವನ್ನು ರೈಲ್ವೆಸಂಬಂಧವಿರುವ ಸ್ಥಳಗಳಲ್ಲಿ ಟರ್ಮಿನಲ್ ಟ್ಯಾಕ್ಸು ಎಂಬ ತೆರಿಗೆಯನ್ನು ವಿಧಿಸುವುದರಿಂದಲೂ ಮತ್ತು ಇತರಸ್ಥಳಗಳಲ್ಲಿ ಕಸಬುವಾರಿ ತೆರಿಗೆಯನ್ನು ವಿಧಿಸುವುದರಿಂದಲು ಮತ್ತು ಮನೆಕಂದಾಯವು, ಸುಂಕವು ಹೆಚ್ಚಿಸುವುದರಿಂದಲು ಭರ್ತಿಮಾಡಿಕೊಳ್ಳಬೇಕು.

(c) ಉತ್ಪತ್ತಿಸಾಧಕವುಳ್ಳ ಪಬ್ಲಿಕ್ ಕೆಲಸಗಳನ್ನು ನಡಿಸುವುದಕ್ಕೆ ಸಾಲ ತೆಗೆಯಲು ಮ್ಯುನಿಸಿಪಾಲಿಟಿಗಳಿಗೆ ಪ್ರೋತ್ಸಾಹವನ್ನು ಕೊಟ್ಟು ಅಂತಹ ಸಾಲಗಳಿಗೆ ಬೇಕಾದರೆ ಗೌರ್ನಮೆಂಟಿನವರು ಗ್ಯಾರಂಟಿಯು (ಖಾತರಿ) ಸಹಾ ಕೊಡಬೇಕು.

(d) ಉತ್ಪತ್ತಿಸಾಧಕವಿಲ್ಲದಿದ್ದಾಗ್ಯೂ ಅವಶ್ಯಕವೂ ಮತ್ತು ಪ್ರಯೋಜನಕಾರಿಯು ಆದ ಕೆಲಸಗಳನ್ನು ನಡೆಸುವುದಕ್ಕೆ ಬೇಕಾಗುವ ಖರ್ಚಿನಲ್ಲಿ ಅರ್ಧಮಟ್ಟಿಗೆ ಗೌರ್ನಮೆಂಟಿನವರು ಗ್ರಾಂಟ್-ಇನ್-ಏಯ್ಡ್ ಆಗಿ ಕೊಡುವುದಕ್ಕಾಗಿ ಸ್ಪಷ್ಟವಾದ ರೂಲ್ಸುಗಳು ವಿಧಿಸಬೇಕು.

IV. (a) ಮೊಹತರ್ಫಾ ಸ್ಥಳೀಯ ಸಭೆಗಳಿಗೆ ವಹಿಸಲ್ಪಡಬೇಕು.

(b) ಮ್ಯುನಿಸಿಪಲ್ ಸರಹದ್ದಲ್ಲದ ಪ್ರದೇಶದಲ್ಲಿ ಸುಮಾರು 60 ವರ್ಷಗಳ ಹಿಂದೆ ವಿಧಿಸಲ್ಪಟ್ಟ ಮನೆಮೊಹತರ್ಫಾ ತೆರಿಗೆಯು ಈಗ ಉತ್ತಮಸ್ಥಿತಿಯಲ್ಲಿರುವ ಮನೆಗಳ ವಿಷಯದಲ್ಲಿ ಹೆಚ್ಚಿಸಬಹುದಾಗಿದೆ.

(c) ಮ್ಯುನಿಸಿಪಲ್ ಸರಹದ್ದಲ್ಲದ ಪ್ರದೇಶಗಳಲ್ಲಿ ಅಂಗಡಿ ತೆರಿಗೆಯು ಈಗಿನಂತೆಯೇ ಇರಬಹುದು ಆದರೆ ಮ್ಯುನಿಸಿಪಲ್ ಸರಹದ್ದುಗಳಲ್ಲಿ ಅಂಗಡಿ ತೆರಿಗೆಯನ್ನು ವಜಾಮಾಡಿ ಅದಕ್ಕೆ ಬದಲಾಗಿ ರೆಗ್ಯುಲೇಷನ್ ಮೇರೆಗೆ ಕಸಬುವಾರಿ ತೆರಿಗೆಯನ್ನು ವಿಧಿಸಬಹುದಾಗಿದೆ

(d) ಗಾಡಿ ತೆರಿಗೆಯು ಎಲ್ಲಾ ಗಾಡಿಗಳು ಅಂದರೆ ರೈತಾಪಿ ಗಾಡಿಗಳಿಗು ಸಹಾ ಗಾಡಿ ಒಂದಕ್ಕೆ ವರ್ಷಕ್ಕೆ ಒಂದು ರೂಪಾಯಿನಂತೆ ವಿಧಿಸಬಹುದು. ಒಡ್ಡರಗಾಡಿಗಳಿಗೆ ಮಾತ್ರ ಅರ್ಧರೂಪಾಯಿ ಮಾಡಬಹುದು.

ಟವನ್ ಪ್ಲಾನಿಂಗ್.

ಪಟ್ಟಣರಚನೆ ಮತ್ತು ಬಡಾವಣೆಗಳ ವಿಷಯದಲ್ಲಿ ನಿಪುಣನೆಂದೆನ್ನಿಸಿಕೊಂಡಿರುವ ಪ್ರೊಫೆಸರ್ ಗೆಡ್ಡೀಸ್‌ರವರು ಈಚೆಗೆ ನಮ್ಮದೇಶಕ್ಕೆ ಬಂದು ಮಾಡಿದ ಉಪನ್ಯಾಸಗಳಿಂದ ಪಟ್ಟಣಾಭಿವೃದ್ಧಿಯ ವಿಷಯವು ವಿಶೇಷವಾಗಿ ಪ್ರೋತ್ಸಾಹವನ್ನು ಹೊಂದಿರುತ್ತೆ. ಈ ವಿಷಯದಲ್ಲಿ ಇಂಡಿಯಾದೇಶದ ಪಟ್ಟಣಗಳನ್ನು ಕುರಿತು ಗೆಡ್ಡೀಸ್‌ರವರು ಬರೆದಿರುವ ಟಿಪ್ಪಣಿಗಳು ಅನೇಕ ನೂತನ ಅಭಿಪ್ರಾಯಗಳನ್ನು ಸೂಚಿಸುತ್ತವೆ. ಅವುಗಳಲ್ಲಿ ಮುಖ್ಯಾಂಶಗಳೇನೆಂದರೆ:—

ಪಟ್ಟಣದ ರಚನೆಯು ಪ್ರತಿಯೊಬ್ಬ ಮನುಷ್ಯನ ಆಯುರಾರೋಗ್ಯಾಭಿವೃದ್ಧಿಗು ಮತ್ತು ಪಟ್ಟಣವಾಸಿಗಳ ಸಮುದಾಯಾಭಿವೃದ್ಧಿಗೂ ಮೂಲಕಾರಣವಾಗಿರುವುದು ಪಟ್ಟಣ ರಚನಮಾಡುವಂಥಾ ಶಿಲ್ಪಿಯು ಪೂರ್ವಾಚಾರಗಳು ಕೆಡದಂತೆ ಈಗಿನ ಕಾಲಕ್ಕೆ ಆರೋಗ್ಯಶಾಸ್ತ್ರಾನುಸಾರವಾಗಿ ಬೇಕಾಗುವ ಸಲಕರಣೆಗಳನ್ನು ಒದಗಿಸಿಕೊಟ್ಟು ಜನಗಳ ಸುಖಸಂತೋಷಾಭಿವೃದ್ಧಿಗಳಲ್ಲಿ ಕೇವಲ ಶ್ರದ್ಧೆಯುಳ್ಳವನಾಗಿರಬೇಕೇಹೊರ್ತು ಜನಸಮುದಾಯ ಹೆಚ್ಚಾದ ಪ್ರದೇಶಗಳಲ್ಲಿ ಮನಸ್ಸಿ ಮನೆಗಳನ್ನು ಹೊಡೆದುಹಾಕಿ ಅದಕ್ಕೆ ಬದಲಾಗಿ ಅಂದವಿಲ್ಲದ ಒಂದೇ ಮಾದಿರಿ ಮನೆಗಳನ್ನು ನಿರ್ಮಿಸುವವನಾಗಿರಬಾರದು. ಮತ್ತು ಜನಗಳಿಗೆ ಪುರಾತನ ವಸ್ತುಗಳಲ್ಲಿ ಇರತಕ್ಕ ಮಮತೆಯನ್ನು ಕೆಡಿಸದೆ ಈಗಿನ ಕಾಲಕ್ಕೆ ಬೇಕಾದದ್ದನ್ನು ಒದಗಿಸಿಕೊಡುವಷ್ಟು ತಿಳುವಳಿಕೆಯು ಮತ್ತು ಇನ್ನುಮುಂದೆ ಬೇಕಾಗಬಹುದಾದವುಗಳನ್ನ ಊಹಿಸತಕ್ಕವನಾಗಿಯೂ ಇರಬೇಕು ಕೇವಲ ಮುಂದಿನ ದೃಷ್ಟಿಯಿಲ್ಲದೆ ತತ್ಕಾಲೋಚಿತವಾಗಿ ಪಟ್ಟಣನಿರ್ಮಾಣಮಾಡುವಂಥಾವನು ಎಷ್ಟು ತಿಳುವಳಿಕೆವುಳ್ಳವನಾದಾಗ್ಯೂ ಶಿಲ್ಪಿಯೆಂದು ಎಣಿಸಿಕೊಳ್ಳಲಾರನು. ಪ್ರಾಯಶಃ ಪಟ್ಟಣಗಳು ವ್ಯವಸಾಯ ಸಂಬಂಧವಾದ ಅನುಕೂಲಗಳಿಗೂ ವ್ಯಾಪಾರ ಮತ್ತು ಲೇವಾದೇವಿ ಮತ್ತು ವಿದ್ಯಾಭ್ಯಾಸ ಮತ್ತು ಸಮುದ್ರಯಾನ, ರಾಜಕೀಯ, ದೇವತಾಕಾರ್ಯ ಸಮ್ಮಂಧವಾದ ಅನುಕೂಲಗಳಿಗೂ ತಕ್ಕಾಗಿ ಪೂರ್ವಕಾಲದಲ್ಲಿ ನಿರ್ಮಿಸಲ್ಪಟ್ಟು, ಆಗಿಂದಾಗ್ಯೆ ಅವಶ್ಯಕವಿದ್ದಾಗೆಲ್ಲಾ ಅಭಿವೃದ್ಧಿಗೆ ಬರುವುದು ಸಹಜವಾದ್ದರಿಂದ ಶಿಲ್ಪಿಯಾದವನು ಪಟ್ಟಣನಿರ್ಮಾಣ ಮಾಡುವುದಕ್ಕೆ ಮುಂಚೆಯೇ ಅದರ ಭೌತಿಕ ಮತ್ತು ಭೂಗೋಳ ಸಮ್ಮಂಧವಾದ ಲಕ್ಷಣಗಳನ್ನು ಮತ್ತು ಅದರ ಐತಿಹಾಸಿಕಕ್ರಮವನ್ನು ಅದರ ಮುಂದಿನ ಬಡಾವಣೆ ಅವಶ್ಯಕತೆಗಳನ್ನು, ಅದರ ಬೆಳವಳಿಗೆ, ಮೂಲ, ಮುಂತಾದ ಅಂಶಗಳನ್ನು ಚೆನ್ನಾಗಿ ಪರಿಶೋಧಿಸಿ ತಿಳಿದುಕೊಳ್ಳಬೇಕು ದಕ್ಷಿಣ ಇಂಡಿಯಾದೇಶದಲ್ಲಿ ದೇವತಾರಾಧನಾ ಮತ್ತು ಉತ್ಸವಾದಿಗಳ ದೆಶೆಯಿಂದ ಅನೇಕ ಪಟ್ಟಣಗಳು ಅತ್ಯಂತಾಭಿವೃದ್ಧಿಯನ್ನು ಹೊಂದಿರುತ್ತವೆ.

ಆದ್ದರಿಂದ ಪ್ರತಿಯೊಂದು ಪಟ್ಟಣವೂ ಯಾವ ಕಾರಣದಿಂದ ಸ್ಥಾಪಿಸಲ್ಪಟ್ಟು ಇರುತ್ತದೆಯೋ ಆ ಕಾರಣವನ್ನು ಅನುಸರಿಸಿಯೇ ಅಭಿವೃದ್ಧಿಪಡೆಯತಕ್ಕದ್ದಾಗಿರುತ್ತದೆ.

ಈಗ ಮಾಡುತ್ತಿರುವ ಪಟ್ಟಣರಚನೆ ವಿಧಾನವನ್ನು ನೋಡಿದರೆ ಪಟ್ಟಣಾಭಿವೃದ್ಧಿಗಿಂತಲೂ ಮತ್ತು ಜನಗಳಿಗೆ ಸುಖಾಭಿವೃದ್ಧಿಗಿಂತಲೂ ಹೆಚ್ಚಾಗಿ ತೆರಿಗೆ ವಸೂಲ್ಮಾಡುವುದರ ಮೇಲೆಯೆ ದೃಷ್ಟಿಯಿಟ್ಟು ಮಾಡುವಂತೆ ತೋರುವುದು ಈಗ ನಮ್ಮ ಪಟ್ಟಣಗಳಲ್ಲಿ ಜನಬಾಹುಳ್ಯದಿಂದ ವಿಶೇಷವಾಗಿ ಗಲೀಜಾಗಿಯೂ ಅನಾರೋಗ್ಯಕರವಾಗಿಯೂ ಇರುವವೆಂದು ಹೇಳಲ್ಪಡುವ ಪ್ರದೇಶಗಳು ಸಹ ಅಲ್ಲಿರತಕ್ಕ ಮನೆಗಳನ್ನು ದಯಾರಹಿತರಾಗಿ ಹೊಡೆದುಹಾಕಿ ಆ ಜನಗಳನ್ನು ಚಿರಕಾಲದಿಂದ ಮಮತೆಯೊಡನೆ ವಾಸಮಾಡುತ್ತಿದ್ದ ಮನೆಗಳಿಂದ ಹೊರಪಡಿಸಿ ಅನೇಕ ತೊಂದರೆಗಳಿಗೆ ಗುರಿಮಾಡದ ಹಾಗೆಯೇ ಶುದ್ಧಪಡಿಸಿ ವಾಸಯೋಗ್ಯವಾಗಿ ಮಾಡಬಹುದಾಗಿದೆ ಮನಸ್ಸಿ ಮನೆಗಳನ್ನು ಹೊಡೆದುಹಾಕುವುದರಿಂದ ಕೆಲವು ಹಣವಂತರಿಗೆ ಮಾತ್ರ ಆದಾಯ ಹೆಚ್ಚುಮಾಡಿ ಅನೇಕ ಬಡಜನಗಳಿಗೆ ಅವರ ಬಡತನವನ್ನು ಅದರಿಂದುಂಟಾಗುವ ಕಷ್ಟಗಳನ್ನು ವಿಶೇಷವಾಗಿ ಹೆಚ್ಚಿಸಿದಂತಾಗುವುದು. ಜನವಸತಿಗೆ ನಿಬಿಡವಾಗುವದಕ್ಕೆ ಮುಖ್ಯಕಾರಣಗಳಾದ ರೈಲ್ವೆಬಡಾವಣೆ ಕೈಗಾರಿಕೆ ಕಾರ್ಖಾನೆ ಮತ್ತು ವ್ಯಾಪಾರದ ಬೆಳವಣಿಗೆಗಳು ಒಂದು ಪಟ್ಟಣದಲ್ಲಿರುವ ವಾಸಯೋಗ್ಯವಾದ ಸ್ಥಳವನ್ನೆಲ್ಲಾ ಆಕ್ರಮಿಸಿಕೊಳ್ಳುವದರಿಂದ ತಮಗಾಗಿ ಬಂದು ಸೇರಿದ ಜನಗಳಿಗೆ ಉಂಟುಮಾಡುವ ಕಷ್ಟಗಳು ವರ್ಣಿಸಲಸಾಧ್ಯವು.

ಆರೋಗ್ಯಶಾಸ್ತ್ರಜ್ಞರು ಊರುಮಧ್ಯದಲ್ಲಿರುವ ಕೊಳಚಕುಂಟಾದಿಗಳನ್ನು ಮುಚ್ಚುವದರಿಂದ ಆರೋಗ್ಯಾಭಿವೃದ್ಧಿ ಉಂಟಾಗುವದೆಂದು ಸಾಟುಪಡುತ್ತಿರುವರು ಇದರಿಂದ ಜನಗಳಿಗೆ ಹಾನಿಯೇಹೊರ್ತು ಕ್ಷೇಮವಿಲ್ಲ ಏತಕ್ಕಂದರೆ, ಭೂಮಿಯಲ್ಲಿರುವ ತಂಪನ್ನು ಹೊರಡಿಸುವ ಸಲಕರಣೆಯಿಲ್ಲದೆ ಇರುವಾಗ, ಈ ಭಾವಿ ಮುಂತಾದ್ದನ್ನು ಮುಚ್ಚುವದರಿಂದ ಅವುಗಳಲ್ಲಿರುವ ನೀರು ಸಹ ಸೇರಿ ವಾಸಯೋಗ್ಯವಾದ ಸ್ಥಳಗಳನ್ನೆಲ್ಲಾ ಶೀತಭೂಮಿಗಳನ್ನಾಗಿ ಮಾಡಿ ಅನಾರೋಗ್ಯಕ್ಕೆ ದಾರಿ ಕಲ್ಪಿಸಿದಂತಾಗುವುದು ಇದೂ ಅಲ್ಲದೆ, ಶುದ್ಧಿಗೆ ಮುಖ್ಯಾಧಾರವಾದ ಜಲವಸತಿಯು ತಪ್ಪಿಸಿದಂತಾಗುವುದು. ಆದ್ದರಿಂದ ಕೊಳಚಕುಂಟಾದಿಗಳಿಂದ ಉತ್ಪತ್ತಿಯಾಗುವವೆಂದು ಹೇಳುವ ಕ್ರಿಮಿಕೀಟಾದಿಗಳ ನಾಶಾರ್ಥವಾಗಿ ಅವುಗಳನ್ನು ಭುಜಿಸುವ ಮೀನುಗಳು ಮುಂತಾದ ಜಲಚರಗಳ ಮುಖದಿಂದ ಆಗಾಗ್ಗೆ ಶುದ್ಧಿಪಡಿಸಬಹುದಾಗಿದೆ

ಮನೆಗಳನ್ನು ಎತ್ತರವಾದ ಪಾಯಗಳ ಮೇಲೆ ಕಟ್ಟಿದರೆ ಸಾಕಾಗಿದೆ. ಒಂದರಮೇಲೆ ಒಂದು ಮಹಡಿಗಳುಳ್ಳ ಮನೆಗಳು ನಮ್ಮ ದೇಶಕ್ಕೆ ತಕ್ಕದ್ದಲ್ಲ. ಮತ್ತು ವಾಸಕ್ಕೆ ಅನುಕೂಲವುಳ್ಳವೂ ಅಲ್ಲ ಅವುಗಳು ಬೆಳಕು ಮತ್ತು ಗಾಳಿ ಮುಂತಾದ್ದಕ್ಕೆ ಅಡಚಣೆಗಳಾಗಿರುತ್ತವೆ.

ಅನಾರೋಗ್ಯಕರವಾದ ಪದ್ಧತಿಗಳು.

ನಮ್ಮ ಪಟ್ಟಣಗಳಲ್ಲಿ ಇರತಕ್ಕ ಕೆಲವು ನೋಡಲಶಕ್ಯವಾದ ಅನಾರೋಗ್ಯ ಆಚರಣೆಗಳನ್ನು ಸೂಚಿಸಬೇಕಾಗಿದೆ. ನಮ್ಮ ದೇಶೀಯರೆಲ್ಲರು ತಮ್ಮ ತಮ್ಮ ದೇಹಗಳು ಮತ್ತು ಉಡಿಗೆತೊಡಿಗೆಗಳು ಅತಿ ಶುಭ್ರವಾಗಿ ಇಟ್ಟುಕೊಳ್ಳುವಂಥಾವರೆಂದು ಪ್ರಖ್ಯಾತಿಹೊಂದಿದವರಾಗಿರುತ್ತಾರೆ. ಆದಾಗ್ಯೂ ಇವರುಗಳು ಪಟ್ಟಣದ ಬೀದಿಗಳಲ್ಲಿಯೂ ಸಂದಿಗಳಲ್ಲಿ ಸಿಕ್ಕಿದಕಡೆಯಲ್ಲೆಲ್ಲ ಮಲಮೂತ್ರ ವಿಸರ್ಜನೆ ಮಾಡುವದು ಅತಿ ಘೋರವಾದ ಪಾಪವೆಂದು ತಿಳಿದಿರುವುದಿಲ್ಲ. ಬೆಂಗಳೂರು ಪಟ್ಟಣವೊಂದರಲ್ಲಿಯೇ ಸುಮಾರು 500 ಮನೆಗಳಲ್ಲಿ ಪಾಯಿಖಾನೆಗಳು ಇರುವುದಿಲ್ಲ. ಸಾವಿರಾರು ಮನೆಗಳ ಕಶ್ಮಲವನ್ನು ದಿನವಹಿ ದೂರಪಡಿಸುವುದಕ್ಕೆ ವಸತಿ ಇರುವುದಿಲ್ಲ. ಬೀದಿಗಳು ಮತ್ತು ಸಂದಿಗೊಂದಿಗಳಲ್ಲಿ ಇರುವ ಜೇಡಾರಿಗಳಲ್ಲಿ ಮಾಡಿರುವ ಅಸಹ್ಯಗಳನ್ನು ಶುದ್ಧಿಪಡಿಸುವುದಕ್ಕೆ ಎಷ್ಟು ಸಿಬ್ಬಂದಿ ಇದ್ದರೂ ಸಾಕಾಗುವುದಿಲ್ಲ. ಮನೆಗಳಲ್ಲಿ ಪಾಯಿಖಾನೆ ಗುಂಡಿಗಳು ಇರುವುದು ಜನಗಳ ಕಾಯಿಲೆಗಳಿಗೂ ಆಧಾರಭೂತವಾಗಿರುತ್ತದೆ

ಬೆಂಗಳೂರು ಹಳೆಪಟ್ಟಣದಲ್ಲಿ ಇರುವ ಪುರಾತನ ಚರಂಡಿಗಳನ್ನು ತೆಗೆದು ಹಾಕಿ ಮಳೆನೀರು ಮತ್ತು ಕೊಚ್ಚೆನೀರು ಹೊರಡಿಸುವುದಕ್ಕೆ ಈಗಿನ ಪದ್ಧತಿಗಳಿಗೆ ಸರಿಯಾದ ಚರಂಡಿಗಳನ್ನು ಕಟ್ಟಿಸುವುದು ಅತ್ಯಂತಾವಶ್ಯಕವಾಗಿರುತ್ತದೆ.

ಮುಕ್ತಾಯ.

ಈಚೆಗೆ ಕೆಲವು ವರ್ಷಗಳಿಂದ ಆಡಳಿತದ ವಿಧಾನವು ಕ್ರಮೇಣ ಬದಲಾಗುತ್ತಾ ಬರುತ್ತಿರುವದು ನಿಮ್ಮಗಳ ಗೋಚರಕ್ಕೆ ಬಂದಿರದೆ ಇರಲಾರದು. ಸರ್ಕಾರಿ ಉದ್ಯೋಗಸ್ಥರಲ್ಲದೆ ಇರುವ ದೊಡ್ಡ ಮನುಷ್ಯರು ತಮ್ಮತಮ್ಮ ಸ್ಥಳಗಳ ಕಾರ್ಯ ನಿರ್ವಾಹಣೆ ವಿಷಯಗಳಲ್ಲಿಯೂ ಮತ್ತು ಇತರ ಜನಸಮುದಾಯಾಭಿವೃದ್ಧಿಗೆ ಸಂಬಂಧವಾದ ವಿಷಯಗಳಲ್ಲಿಯೂ ಪ್ರವರ್ತಿಸುವಂತೆ ಆಗಿರೋಣದರಿಂದ ಅವರುಗಳ ಗೌರವಾರ್ಹತೆಯು ದಿನೇದಿನೇ ಹೆಚ್ಚುತ್ತಾ ಇದೆ. ಪ್ರತಿಯೊಬ್ಬ ಮನುಷ್ಯನಲ್ಲಿಯೂ ತನ್ನ ದೇಶದ ಏಳಿಗೆಯೇ ತನ್ನ ಸ್ವಂತ ಏಳಿಗೆಯೆಂಬುವ ಭಾವ ಉದಯಿಸಿರುವದು ಎಲ್ಲಾ ಕಡೆಯಲ್ಲಿಯು ಕಂಡುಬರುತ್ತಾ ಇದೆ. ಸರ್ಕಾರಿ ಉದ್ಯೋಗಸ್ಥರು ಮತ್ತು ಇತರರು ಸಹಾ ಕಮಿಟಿ ಮೀಟಿಂಗುಗಳು ಮುಂತಾದವುಗಳಲ್ಲಿ ಪದೇಪದೇ ಸೇರುವದರಿಂದಲು ಜನಗಳ ಶ್ರೇಯಾಭಿವೃದ್ಧಿಗೆ ಕಾರಣವಾಗಿದೆ. ಎಲ್ಲೆಲ್ಲಿ ನೋಡಿದರು ಹಳ್ಳಿಗಾಡುಗಳಲ್ಲಿ ಸಹಾ ನೂತನವಾಗಿ ಚಟುವಟಿಕೆಯು ದೇಶಾಭಿವೃದ್ಧಿ ಮಾಡಬೇಕೆಂಬ ಕುತೂಹಲವು ಹುಟ್ಟಿ ಹರಡುತ್ತಿರುವುದು. ಇಂಥಾ ಅಪೂರ್ವವು ಮತ್ತು ಉತ್ತಮವಾದ ಸಮಯೋಚಿತ ಸ್ಥಿತಿಯಿಂದ ಸಂಪೂರ್ಣ ಫಲವನ್ನು ಸಾಧಿಸುವದಕ್ಕಾಗಿ ಪ್ರಜಾಪ್ರತಿನಿಧಿಗಳಾದ ನಾವುಗಳೆಲ್ಲರೂ ಸಾಹಸ ಮಾಡಬೇಕಾದ್ದು ನಮ್ಮ ಕರ್ತವ್ಯವಾಗಿದೆ. ಈ ಪರಿಷತ್ತು ಶ್ರೀಮನ್ ಮಹಾರಾಜರವರ ಸರ್ಕಾರದ ಆಶ್ರಯದಲ್ಲಿಯೆ ನೆರದಿರುವದರಿಂದ ನಮ್ಮ ಸ್ಥಳೀಯ ಸ್ವರಾಜ್ಯಾಭಿವೃದ್ಧಿ ಮುಂತಾದವುಗಳ ವಿಷಯದಲ್ಲಿ ಸದರಿ ಸರ್ಕಾರದವರ ಅನುಗ್ರಹವು ಸಹಾಯವು ನಮಗೆ ದೊರೆಯುವದರಲ್ಲಿ ಕೊರತೆ ಇರಲಾರದೆಂದು ದೃಢವಾಗಿ ನಂಬಬಹುದಾಗಿದೆ.

ಕೇವಲ ಸಾಮಾನ್ಯನೇ ಆಗಲಿ ದೊಡ್ಡ ಪದವಿಯಲ್ಲಿರುವನೇ ಆಗಲಿ ಪ್ರತಿಯೊಬ್ಬ ಮನುಷ್ಯನಲ್ಲಿಯೂ ತಾನು ವಾಸವಾಗಿರುವ ಗ್ರಾಮ ಅಥವಾ ನಗರಕ್ಕೆ ಸಂಬಂಧಪಟ್ಟ ಕೆಲಸಕಾರ್ಯಗಳಲ್ಲಿ ಆಸಕ್ತನಾಗಿದ್ದು ಅಂತಹ ಪ್ರದೇಶಗಳ ಕಾರ್ಯನಿರ್ವಹಣೆಯಲ್ಲಿ ತಾನು ಪಾಲುಗಾರನಾಗಿದ್ದು ಅದರ ಭಾರವನ್ನು ತಾನೂ ವಹಿಸಬೇಕೆಂಬ ಆಶೆಯು ನೆಲಗೊಂಡು ಇರಬೇಕಾದ್ದು ಮುಖ್ಯವಾದದ್ದು. ಇದೇ ಸ್ಥಳೀಯ ಸ್ವಾರಾಜ್ಯದ ಮುಖ್ಯ ಸಾರಾಂಶವು. ಮತ ಆಚಾರ ಮುಂತಾದವುಗಳ ವಿಷಯಗಳಲ್ಲಿ ಜನಗಳಿಗೆ ಎಷ್ಟುವಿಧವಾದ ಭಿನ್ನಾಭಿಪ್ರಾಯಗಳು ಇದ್ದಾಗ್ಯೂ, ಸ್ಥಳೀಯ ಕಾರ್ಯನಿರ್ವಹಣೆಯಲ್ಲಿ ಎಲ್ಲರೂ ಏಕೀಭವಿಸಿ ಪ್ರವರ್ತಿಸಬೇಕು. ಕೌನ್ಸಿಲುಗಳು ಮತ್ತು ಕಮಿಟಿಗಳು ಅಭಿವೃದ್ಧಿಯಾಗುವದಕ್ಕೂ ಅಥವಾ ಕ್ಷೀಣಿಸುವುದಕ್ಕೂ ಅವುಗಳ ಮೆಂಬರುಗಳಾಗಿರುವರೇ ಕಾರಣಭೂತರಾಗಿರುತ್ತಾರೆಂಬುವದು ಹೇಳುವದೇ ಅನಾವಶ್ಯಕ. ಒಂದು ಮ್ಯುನಿಸಿಪಾಲಿಟಿಯಲ್ಲಿ ಕೆಲಸಕಾರ್ಯಗಳು ಸರಿಯಾಗಿ ನಡೆಯದೆ ಕೆಟ್ಟುಹೋಗುತ್ತಾ ಇದ್ದರೆ ಅದು ಆ ಪ್ರದೇಶದ ಜನಗಳಿಗೆ ಸ್ಥಳೀಯ ಕಾರ್ಯಗಳಲ್ಲಿ ಶ್ರದ್ಧೆಯಿಲ್ಲದೆ ಇರುವಿಕೆಯನ್ನು ಸ್ಪಷ್ಟವಾಗಿ ಸೂಚಿಸುತ್ತೆ. ಅವರಿಗೆ ಶ್ರದ್ಧೆ ಯಾವಾಗ ಹುಟ್ಟುತ್ತೆಯೋ ಆ ಕ್ಷಣವೇ ಲೋಪಗಳೆಲ್ಲಾ ತೊಲಗುವುದಕ್ಕೆ ಆರಂಭವಾಗುವುದು. ಮ್ಯುನಿಸಿಪಲ್ ಕೌನ್ಸಿಲ್‌ಗಳು ಮತ್ತು ಕಮಿಟಿಗಳಲ್ಲಿ ಕೆಲಸಮಾಡಲು ಒಪ್ಪಿದಂಥವರು ಪ್ರತಿಯೊಂದು ಮೀಟಿಂಗಿಗು ಬಂದು ಅಲ್ಲಿನ ಆಲೋಚನೆಗಳಲ್ಲಿಯೂ ಕೆಲಸಕಾರ್ಯಗಳಲ್ಲಿಯೂ ಶ್ರದ್ಧೆಯನ್ನು ತೋರಿಸಿ ತಮ್ಮ ಕೈಲಾದಮಟ್ಟಿಗೂ ಜನಸಮುದಾಯದ ಕಾರ್ಯವನ್ನು ಒಂದು ದೇವತಾಕಾರ್ಯದಂತೆ ಭಾವಿಸಿ ಮಾಡುತ್ತೇನೆಂದು ದೃಢಸಂಕಲ್ಪ ಮಾಡಿಕೊಳ್ಳಬೇಕು. ಪ್ರತಿಯೊಬ್ಬ ಮನುಷ್ಯನು ಪ್ರಜೆಗಳ ಕ್ಷೇಮಸಿದ್ಧಿಗಾಗಿ ಯಾವದಾದರೂ ಒಂದು ಪ್ರಯತ್ನವನ್ನು ಅದು ಎಷ್ಟೇ ಅಲ್ಪವಾಗಿದ್ದಾಗ್ಯೂ, ಮಾಡಲಾರಂಭಿಸಿದರೆ ಅದು ಸಮುದಾಯಾಭಿವೃದ್ಧಿಯನ್ನುಂಟುಮಾಡುವುದು. ಸಾಧಾರಣವಾಗಿ ಒಬ್ಬ ಮನುಷ್ಯನಿಗೆ ತನ್ನ ದೇಹದ ಮೇಲೆ ಇರುವಷ್ಟು ಪ್ರೀತಿಯು ತನ್ನ ಮನೆಯಮೇಲೆಯೂ ಸಹ ಇರುವದು ಸಹಜವಾಗಿದೆ. ಆತನಿಗೆ ತನ್ನ ಮನೆ, ತನ್ನ ಗ್ರಾಮ, ಎಂಬುವ ಮಮತೆಯಿಂದ ಆತನ ಮನಸ್ಸೆಲ್ಲವು ಅವುಗಳ ಮೇಲೆಯೇ ಇರುವುದು. ಆದ್ದರಿಂದ ಮನೆ ಮತ್ತು ಗ್ರಾಮನ ಶುದ್ಧಿ ಮತ್ತು ಅಲಂಕಾರಕ್ಕೋಸ್ಕರ ತನ್ನ ವಿರಾಮಕಾಲದಲ್ಲಿ ಸ್ವಲ್ಪವಾದರು ಉಪಯೋಗಿಸುವಂತೆ ಪ್ರೋತ್ಸಾಹ ಕೊಟ್ಟಲ್ಲಿ ಆತನಿಗೆ ಸ್ಥಳಾಭಿವೃದ್ಧಿಯಲ್ಲಿ ಶ್ರದ್ಧೆಯು ಅಂಕುರಿಸಿ ಕ್ರಮೇಣ ಹೆಚ್ಚುವಂತೆ ಮಾಡಿದಂತಾಗುವುದು ಎಲ್ಲಾ ಭಾಗಗಳಿಗೂ ಸರ್ಕಾರದವರ ಸಹಾಯವನ್ನು ಅಪೇಕ್ಷಿಸದೇ, ಸಾಧ್ಯವಾದಮಟ್ಟಿಗು ನಮ್ಮ ಕೆಲಸಗಳನ್ನು ನಾವೇ ನಿರ್ವಹಿಸಿಕೊಳ್ಳುವ ಶಕ್ತಿಯನ್ನು ಸಂಪಾದಿಸಿಕೊಳ್ಳದೆ ಇದ್ದರೆ ನಾವು ನಿಜವಾದ ಸ್ಥಳೀಯ ಸ್ವಾರಾಜ್ಯಕ್ಕೆ ಅರ್ಹರಾಗಲಾರೆವು ಆರೋಗ್ಯಾಭಿವೃದ್ಧಿಯೇ ಮುಂತಾದ ದೊಡ್ಡ ಕೆಲಸಗಳಿಗಾಗಿ ಬೇಕಾದರೆ ಸರ್ಕಾರದವರಿಂದ ಉಚಿತ ಸಹಾಯವನ್ನು ಅಪೇಕ್ಷಿಸಬಹುದೇ ಹೊರ್ತು ಆಯಾ ಊರಿನ ದಿನಚರ್ಯಗಳಿಗೆ ಸಾಕಾಗುವಷ್ಟು ದ್ರವ್ಯ ಆಯಾಸ್ಥಳಗಳಲ್ಲಿಯೇ ಉತ್ಪತ್ತಿಯಾಗುವಂತೆ ಮಾಡಬೇಕು ಸ್ಥಳೀಯ ಸ್ವರಾಜ್ಯಕ್ಕೆ ಸ್ವಸಹಾಯವೆಂಬುವದೇ ಮುಖ್ಯವಾದ ಅಸ್ತಿಭಾರವೆಂದು ತಿಳಿಯಬೇಕು. ಪರೋಪಕಾರಾರ್ಥವಾಗಿ ಮಾಡುವ ಕೆಲಸಗಳೆಲ್ಲಾ ಐಹಿಕಸಾಧನೆಗಳೇ ಅಲ್ಲದೆ ಆಮುಷ್ಮಿಕಸಾಧನೆಗಳಾಗಿಯು ಪರಿಣಮಿಸುವವೆಂದು ಋಷಿಪ್ರೋಕ್ತವಾಗಿ ಹೇಳಲ್ಪಟ್ಟಿದೆ ಹ್ಯಾಗಂದರೆ:—

ಸಂತೋಷಂಜನಯೇತ್ಪ್ರಾಜ್ಞಃ । ತದೇವೇಶ್ವರ ಪೂಜನಂ ॥
ಜನಾನುಮೋದಕಂಕಾರ್ಯಂ । ಈಶ್ವರಾರಾಧನೇಶಿಸ್ತಮಂ ॥

ನಾವು ಜನೋಪಕಾರಕ್ಕಾಗಿ ಮಾಡಿದ ಕೆಲಸವೆಲ್ಲವು ಭಗವದಾರಾಧನೆಗೆ ಸಾದೃಶ್ಯವಾಗಿರುವುದು.

ಕ್ಷಯರೋಗ ನಿವಾರಣೆಯ ಸುಲಭ ಉಪಾಯಗಳು.

ನಿಂಬೇಹಣ್ಣಿನ ರಸವು ಕ್ಷಯರೋಗನಿವಾರಣೆಗೆ ಸುಲಭ ಉಪಾಯವೆಂದು ಈಚೆಗೆ ಅನುಭವಸಿದ್ಧಾಂತದಿಂದ ಕಂಡುಬಂದಿದೆ. ಈ ವಿಷಯದಲ್ಲಿ ಮಿಸೆಸ್ ಎಲಿಸ್ ವಿಲ್ಸನ್ ಎಂಬಅಮೇರಿಕದ ಸ್ತ್ರೀಯು ಒಂದು ಪತ್ರಿಕೆಗೆ ಬರೆದ ಲೇಖನದಿಂದ ನಿಂಬೆಹಣ್ಣಿನ ಮಹತ್ವವು ಹೊರಬಿದ್ದದೆ.

ಒಂದು ಡಜನ್ ನಿಂಬೇಹಣ್ಣುಗಳನ್ನು ತಣ್ಣೀರಿನಲ್ಲಿ ಹಾಕಿ ಅದನ್ನು ಕುದಿಸಿ, ನಂತರ ಹಣ್ಣನ್ನು ಹಿಂಡಿ ರಸ ತೆಗೆದು, ರಸಕ್ಕೆ ಸ್ವಲ್ಪ ಸಕ್ಕರೆ ಹಾಕಿ ಕುಡಿಯಬೇಕು. ಒಂದು ದಿವಸಕ್ಕೆ ಡಜನ್ ಹಣ್ಣಿನಂತೆ ಪ್ರಯೋಗಿಸಬೇಕು. ಇದರಿಂದ ಹೊಟ್ಟೆನೋವು ಮತ್ತು ನೀರು ಹೊರಕಡೆಯಾದ ಪಕ್ಷಕ್ಕೆ ದಿವಸಕ್ಕೆ ೪-೬ ಹಣ್ಣಿನ ರಸ ಕುಡಿಯಬೇಕು. ಹೀಗೆ ಕುಡಿಯುವಾಗ ಹೊಟ್ಟೆನೋವು ನಿಂತರೆ ದಿನೇದಿನೇ ಒಂದರಂತೆ ಹೆಚ್ಚಿಸುತ್ತಾ ಬಂದು ದಿನಕ್ಕೆ ೧೫ ಹಣ್ಣಿನ ರಸ ಕುಡಿಯಬೇಕು. ಸನಯ ಹೋಗುತ್ತಾ ದಿವಸಕ್ಕೆ ೪-೬ ಡಜನ್ ನಿಂಬೇಹಣ್ಣುಗಳ ರಸವನ್ನೂ ಕುಡಿಯಬಹುದು. ಇದರಿಂದ ಜೀರ್ಣಶಕ್ತಿಯು ಸರಿಯಾಗಿ ದೇಹದಾರ್ಢ್ಯವುಂಟಾಗುವುದು ಎಂಬದಾಗಿ ಮಿಸೆಸ್ ಎಲಿಸ್‌ರವರು ಸೂಚಿಸಿ, ನಿಂಬೇಹಣ್ಣಿನ ಈ ಪ್ರಯೋಗದಿಂದ ಗುಣಹೊಂದಿದ ಎರಡು ರೋಗಿಗಳ ದೃಷ್ಟಾಂತಗಳನ್ನು ವಾಚಕರ ಅವಗಾಹನೆ ಬಗ್ಗೆ ತಂದಿರುತ್ತಾರೆ. ವೈದ್ಯರು ಎರಡು ಕ್ಷಯರೋಗಿಗಳಿಗೂ ಗುಣವಾಗುವುದು ಕಷ್ಟವೆಂದು ಹೇಳಿ ಔಷಧೋಪಚಾರ ಮಾಡುವುದನ್ನೇ ನಿಲ್ಲಿಸಿದ್ದರು. ಆದರೆ ಮೇಲೆ ಹೇಳಿದ ರೀತಿಯಲ್ಲಿ ನಿಂಬೇಹಣ್ಣನ್ನು ಪ್ರಯೋಗಿಸಿದ್ದರಿಂದ ಇಬ್ಬರೂ ಗುಣಹೊಂದಿರುತ್ತಾರೆ. ಒಬ್ಬ ಹೆಂಗಸು ಹಾಸಿಗೆ ಹಿಡಿದು ಮಲಗಿದ್ದಳು. ಕ್ಷಯರೋಗ ನಿವಾರಣೆಗಾಗಿ ಇದ್ದ ಹಣವನ್ನೆಲ್ಲಾ ಔಷಧಿಗೆ ವೆಚ್ಚಮಾಡಿದಳು. ಆದರೆ ಗುಣಹೊಂದಲಿಲ್ಲ. ಕಡೆಗೆ ತನ್ನ ಸ್ನೇಹಿತರ ಮಾತಿನಂತೆ ನಿಂಬೇಹಣ್ಣನ್ನು ಪ್ರಯೋಗಿಸಲು ಪ್ರಾರಂಭಿಸಿ ಮೂರು ತಿಂಗಳೊಳಗೆ ಪೂರ್ಣ ಸೌಖ್ಯಹೊಂದಿ ೧೪೦ ರಾತಲು ಭಾರವಾದಳು. ಈಗ ಅವಳು ಗಟ್ಟಿಮುಟ್ಟಾದ ಹೆಂಗಸಾಗಿದ್ದಾಳೆಂದು ಮಿಸೆಸ್ ಎಲಿಸ್‌ರವರು ಬರೆದಿರುತ್ತಾರೆ.

ನಿಂಬೇಹಣ್ಣಿಗಿರುವಂತೆಯೇ ಬೆಳ್ಳುಳ್ಳಿಗೂ ಕ್ಷಯರೋಗಾಣುಗಳನ್ನು ನಾಶಮಾಡುವ ಶಕ್ತಿ ಇದೆ ಎಂಬ ಅನುಭವಸಿದ್ಧವಾದ ದೃಷ್ಟಾಂತಗಳು ಇವೆ. ಬೆಳ್ಳುಳ್ಳಿಯಲ್ಲಿ ಎಲೈಲ್ ಸಲ್ಫೈತ್ ಎಂದು ಕರೆಯಲ್ಪಡುವ ವಲಂಟೈನ್ ಎಣ್ಣೆಯ ಸಾರವು ಇದೆ. ಈ ಎಣ್ಣೆಗೆ ನಾಶಮಾಡುವ ಗುಣವಿರುವುದರಿಂದ ಇದು ಕ್ಷಯರೋಗಾಣುಗಳ ಬೆಳೆವಣಿಗೆಗೆ ತಡೆಕಟ್ಟುತ್ತದೆ. ಬೆಳ್ಳುಳ್ಳಿಯನ್ನು ಉಪಯೋಗಿಸಿದರೆ ಅದರಲ್ಲಿರುವ ಈ ಎಣ್ಣೆಯು ಶ್ವಾಸಕೋಶ, ಚರ್ಮ, ಮೂತ್ರಾಶಯ ಮತ್ತು ಕಲಿಜಿ ಮೊದಲಾದ ಇಂದ್ರಿಯಗಳೊಳಗೆ ಸೇರಿಕೊಂಡು ಅದರೊಳಗಿರುವ ರೋಗಾಣುಗಳನ್ನು ನಾಶಮಾಡುತ್ತದೆ. ಬಾಹ್ಯಲೇಪನವಾಗಿ ಬೆಳ್ಳುಳ್ಳಿಯನ್ನು ಉಪಯೋಗಿಸಲೂಬಹುದು. ಹೀಗೆ ಉಪಯೋಗಿಸುವುದರಿಂದ ಚರ್ಮವು ಅದರ ಎಣ್ಣೆಯನ್ನು ಸುಲಭವಾಗಿ ಹೀರಿಕೊಂಡು ಶರೀರದ ನಾಡಿಕೊಳವೆಗಳಿಗೆ ಸೇರಿಕೊಳ್ಳುತ್ತದೆ. ದೇಹದ ಯಾವ ಇಂದ್ರಿಯಗಳಿಗೆ ಕ್ಷಯರೋಗವು ಸೋಂಕಿದರೂ ಬೆಳ್ಳುಳ್ಳಿಯನ್ನು ಪ್ರಯೋಗಿಸುವುದರಿಂದ ಮಹತ್ತಾದ ಪ್ರಯೋಜನವು ಉಂಟಾಗುವುದು. ಚರ್ಮ, ಎಲುಬು, ಶ್ವಾಸಕೋಶ, ಮೊದಲಾದ ಅವಯವಗಳಿಗೆ ಇದರಿಂದ ಹೆಚ್ಚಿನ ಪ್ರಯೋಜನವಿದೆ ಎಂಬುದು ಅನುಭವಸಿದ್ಧಾಂತವಾಗಿದೆ. ಈಚೆಗೆ ೧೦ ವರ್ಷ ವಯಸ್ಸಿನ ಹುಡುಗನೊಬ್ಬನ ಕೈ ಎಲುಬುಗಳಿಗೆ ಕ್ಷಯರೋಗವು ಸೋಂಕಿ ಅಂಗೈಯಲ್ಲಿ ಹುಣ್ಣಾಗಿ ತುಂಬಾ ಕೀವು ಹರಿಯುತ್ತಿತ್ತು. ಬೆಳ್ಳುಳ್ಳಿಯನ್ನು ಕೊಬ್ಬಿನೊಡನೆ ಬೆರಸಿ ಪೌಲ್ಟಿಸ್ ಮಾಡಿ ೨೪ ತಾಸಿಗೊಂದಾವರ್ತಿ ಆ ಹುಣ್ಣಿಗೆ ಕಟ್ಟುತ್ತಾ ಬಂದಿರಲಾಗಿ ಗುಣವಾಗುವುದಿಲ್ಲವೆಂದು ಡಾಕ್ಟರರು ಅಭಿಪ್ರಾಯಪಟ್ಟ ಹುಡುಗನ ಕೈ ಹುಣ್ಣು ೩ ವಾರದೊಳಗೆ ಪೂರಾ ವಾಸಿಯಾಯಿತೆಂದು ಮತ್ತೊಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಸ್ವ.

ಭರತಖಂಡದ ವೃತ್ತಾಂತಗಳು.

ಈಗ ಭರತಖಂಡನಲ್ಲಿ ಪ್ಲೇಗಿನ ಮರಣಗಳು ಬಹಳ ಕಡಿಮೆಯಾಗಿವೆ. ವಾರವೊಂದಕ್ಕೆ ಮರಣಸಂಖ್ಯೆಯು ೪೦೦ಕ್ಕಿಂತಲೂ ಕಡಿಮೆಯಾಗಿದೆ.

ಪ್ರಯಾಗಪಟ್ಟಣದಲ್ಲಿ ಒಂದುದಿನ ದೊಡ್ಡ ಬಿರುಗಾಳಿಮಳೆಯು ಸುರಿದಿತು. ೨೪ ಗಂಟೆಯ ಕಾಲದೊಳಗಾಗಿ ೩॥ ಅಂಗುಲ ಮಳೆಯಾಗಿರುವುದೆಂದು ಗೊತ್ತಾಯಿತು.

ರಂಗೂನಿನಿಂದ ಬಂಗಾಳಾ ಎಂಬ ಹಡಗಿನಮೇಲೆ ಕಳೆದ ತಾ॥ ೩ ರಲ್ಲಿ ಯುದ್ಧರಂಗಕ್ಕಾಗಿ ಸಿಕ್-ಪಂಜಾಬಿ-ಮಿಲಿಟರಿ ಪೋಲೀಸುಸೈನ್ಯದವರು ಪ್ರಯಾಣಮಾಡಿದರು. ಒಟ್ಟು ಅವರ ಸಂಖ್ಯೆ ೩೦೦.

ಮೈಮನ್‌ಸಿಂಗ್‌ಜಿಲ್ಲೆಗೆ ಸೇರಿದ ಬಜಿತ್ಪುರದ ಟಾಣಾದಲ್ಲಿದ್ದ ಒಬ್ಬ ಪೋಲೀಸಾಳಿನಮೇಲೆ ಯಾವನೋ ಒಬ್ಬನು ಸಿಡಿಮದ್ದಿನಂಥ ಗುಂಡೊಂದನ್ನು ಎಸೆದು ಓಡಿಹೋದನು. ಆದರೆ ಗುಂಡು ಒಡೆಯಲಿಲ್ಲ.

ಪೂರ್ವಬಂಗಾಳದಲ್ಲಿ ಕ್ಷಾಮಬಾಧೆಯು ಬಲವತ್ತರವಾಗಿದೆ. ಪ್ರಜಾಪ್ರಮುಖರೂ ಸರ್ಕಾರದವರೂ ಸಹ ವಿಪನ್ನರಿಗೆ ಸಾಲವಾಗಿಯೂ ಉಚಿತವಾಗಿಯೂ ಧನಸಹಾಯಮಾಡುವುದಕ್ಕಾಗಿ ಹಲವು ಫಂಡುಗಳನ್ನು ಅಲ್ಲಲ್ಲಿಗೆ ಏರ್ಪಡಿಸಿದ್ದಾರೆ.

ವಂಗದೇಶೀಯರು ಈ ಮೊದಲೇ ಏರ್ಪಡಿಸಿಕೊಟ್ಟಿದ್ದ ವೈದ್ಯಶಾಲೆಯು ನೌಕೆಯು ಹಾಳಾಗಿಹೋಯಿತು. ಈಗ ಅವರು ಮತ್ತೆ ೧೦ ಲಕ್ಷ ರೂ. ಗಳನ್ನು ಕೂಡಿಸಿ, ಅದರಿಂದ ಮತ್ತೊಂದು ನೌಕೆಯನ್ನು ಅಣಿಮಾಡಿಕಳುಹಿಸಲು ಪ್ರಯತ್ನಿಸಿದ್ದಾರೆ.

ಯುದ್ಧಕ್ಕೆ ಬೇಕಾದ ಮದ್ದುಗುಂಡು ಮೊದಲಾದುವುಗಳನ್ನು ಭರತಖಂಡದಲ್ಲಿಯೂ ನಿರ್ಮಿಸಿ ಕಳುಹಿಸುವ ಏರ್ಪಾಟನ್ನು ಇಂಡ್ಯಾಸರ್ಕಾರದವರು ನಡೆಯಿಸಿದ್ದಾರೆ. ಕಲ್ಕತ್ತಾದಲ್ಲಿರುವ ಅನೇಕ ಯಂತ್ರಾಲಯಗಳವರು ಈ ಕೆಲಸಕ್ಕೆ ಒಪ್ಪಿ ಕಾರ್ಯಾರಂಭಮಾಡುತ್ತಿವೆ.

ಲಾಹೋರು ರಹಸ್ಯಕೂಟಕ್ಕೆ ಸೇರಿದ್ದ ಅಪರಾಧಿಗಳಲ್ಲಿ ತಲೆತಪ್ಪಿಸಿಕೊಂಡು ಹೋಗಿದ್ದವರಲ್ಲಿ ಒಬ್ಬನು ಹೊಶಿಯಾರ್ಪುರದ ಜಿಲ್ಲೆಯ ಒಂದು ಗ್ರಾಮದಲ್ಲಿ ಸಿಕ್ಕಿಬಿದ್ದನು. ಇವನನ್ನು ಹಿಡಿದುಕೊಟ್ಟವರಿಗೆ ೨ ಸಾವಿರ ರೂ. ಗಳನ್ನು ಕೊಡುವೆವೆಂದು ಸರ್ಕಾರದವರು ಪ್ರಕಟಿಸಿದ್ದರು. ಅದರಂತೆಯೇ ಈಗ ಕೊಡುವರು.

ಮದ್ರಾಸು ಯುದ್ಧವೈದ್ಯಾಲಯ ನೌಕೆಯು ಕಳೆದವಾರ ಬೊಂಬಾಯಿರೇವಿಗೆ ಹೋಗಿ ನಿಂತಿದ್ದಾಗ ಬೊಂಬಾಯಿ ಗೌರ್ನರು ಪತ್ನೀಸಮೇತರಾಗಿ ಅದರೊಳಕ್ಕೆ ಹೋಗಿ ೧ ಗಂಟೆಯಹೊತ್ತಿದ್ದು ಒಳಗಿದ್ದ ಪ್ರತಿಯೊಬ್ಬ ಹಿಂದೂಸೈನಿಕನನ್ನೂ ಕ್ಷೇಮಲಾಭವನ್ನು ವಿಚಾರಿಸಿದರು. ಅವರ ಆದರಕ್ಕಾಗಿ ಸೈನಿಕರೆಲ್ಲಾ ಬಹಳ ಸಂತೋಷಿಸಿದರು

ಕಲ್ಕತ್ತಾದಲ್ಲಿರುವ ಸ್ಟೇಟ್ಸ್‌ಮನ್ ಎಂಬ ಪತ್ರಿಕೆಯ ಕರ್ತರು ಯುದ್ಧಾಂಗಣದ ಸಹಾಯಕ್ಕಾಗಿ ವಿಮಾನಗಳನ್ನೂ ವೈದ್ಯಸಹಾಯದ ಮೋಟಾರುಬಂಡಿಗಳನ್ನೂ ಕಟ್ಟಿಸಿಕೊಡುವುದಕ್ಕಾಗಿ ಒಂದು ಫಂಡನ್ನು ಚಂದಾಹಣದಮೂಲಕ ಕೂಡಿಸಬೇಕೆಂದು ಕಳೆದತಿಂಗಳಲ್ಲಿ ಪ್ರಾರಂಭಿಸಿದರು. ಈಗಾಗಲೇ ಅದಕ್ಕೆ [illegible] ರೂ. ಗಳು ಕೂಡಿದುವು.

ಅರ್ರಾ ಜಿಲ್ಲೆಗೆ ಸೇರಿದ ಒಂದು ಗ್ರಾಮದಲ್ಲಿ ಚಿಕ್ಕವಯಸ್ಸಿನ ಯುವತಿಯೊಬ್ಬಳು ತನ್ನ ಗಂಡನು ಮೃತನಾದುದರಿಂದ ಶವದಜತೆಗೆ ಸ್ಮಶಾನಕ್ಕೆ ಹೋಗಿ ಇತರರ ನಿರ್ಬಂಧಪ್ರೊಂದಕ್ಕೂ ದಕ್ಕದೆ ತನ್ನ ಗಂಡನ ಚಿತೆಯಲ್ಲಿಯೇ ಬಿದ್ದು ದಗ್ಧಳಾಗಿ ಸಹಗಮನಗೊಂಡಿರುವಳು. ಆಕೆಯ ಬಂಧುಗಳಲ್ಲಿ ೯ ಮಂದಿಯನ್ನು ಪೋಲೀಸರು ಹಿಡಿದಿರುವರು.

ಯುದ್ಧಾಂಗಣಕ್ಕೆ ಹೋಗಿದ್ದು ಸ್ವದೇಶಕ್ಕೆ ಮೊನ್ನೆತಾನೇ ಮರಳಿಬಂದ ಜ್ಯೋತಿಪುರದ ಮಹಾರಾಜರು ತಮ್ಮ ದೇಶದಲ್ಲಿ ಹೊಸದಾಗಿ ಕಟ್ಟಿಸಿದ್ದ ಸುಮೇರುಪುರವೆಂಬ ಊರನ್ನು ಈಗ ಬಿಡುವುಮಾಡಿಸಿದ್ದಾರೆ. ಇವರಲ್ಲಿ ಆಂಗ್ಲಪ್ರಭುತ್ವದವರ ಸೆರೆಯಾಳುಗಳನ್ನಾಗಿ ಹಿಡಿದಿರುವವರನ್ನು ತಂದಿರುವರಂತೆ. ಈ ಊರಿನಲ್ಲಿದ್ದ ಜನರಿಗೆಲ್ಲಾ ಮಹಾರಾಜರು ೨॥ ಲಕ್ಷ ರೂ. ಗಳನ್ನು ಕೊಟ್ಟು ಹೊರಕ್ಕೆ ಹೊರಡಿಸಿದರು.

ಸಾಮ್ರಾಜ್ಯಯುದ್ಧನಿಧಿಯ ಬೊಂಬಾಯಿಶಾಖೆಯವರು ಕಳೆದ ೧೯೧೪ ನೆ ಆಗಸ್ಟ್‌ತಿಂಗಳಿಂದ ಇದೇವರ್ಷದ ಮಾರ್ಚಿ ತಾ॥ ೩೧ ರ ವರೆಗೆ ನಡೆಯಿಸಿರುವ ಕಾರ್ಯಗಳ ವರದಿಯನ್ನು ಈಗತಾನೇ ಪ್ರಕಟಿಸಿದ್ದಾರೆ. ಅದು ೨೫ ಪುಟಗಳ ಒಂದು ಗ್ರಂಥವಾಗಿದೆ. ಅದರಲ್ಲಿನ ವಿವರಣೆಗಳನ್ನು ನೋಡುವಲ್ಲಿ ಅದುವರೆಗೆ [illegible] ರೂ. ಗಳು ಚಂದಾಮೂಲಕ ಕೂಡಿದ್ದುವೆಂದು ಗೊತ್ತಾಗುವುದು. ಆ ಅಧಿಪತ್ಯದ ವಿದ್ಯಾಶಾಲೆಗಳ ಮೂಲಕವೇ [illegible] ರೂಪಾಯಿಗಳು ಬಂದಿರುವುವು.

ಮೊನ್ನೆಯವಾರದಲ್ಲಿ ಬೊಂಬಾಯಿಯಕಡೆ ವಿಪರೀತ ವೃಷ್ಟಿ ಆಯಿತಷ್ಟೆ. ಹಾಗೆ ಬಿದ್ದ ಮಳೆಯಲೆಕ್ಕವು ೮೦ ಅಂಗುಲವೆಂದು ಗೊತ್ತಾಗಿದೆ. ಆ ಅಧಿಪತ್ಯಕ್ಕೆ ಸೇರಿದ ಎಲ್ಲಾ ಜಿಲ್ಲೆಗಳಲ್ಲೂ ಸುವೃಷ್ಟಿಯಾಗಿದೆ. ಎಲ್ಲೆಲ್ಲೂ ಜಲಸಮೃದ್ಧಿಯಾಗಿದೆ. ವ್ಯವಸಾಯವು ಅನುಕೂಲವಾಗಿ ಸಾಗುತ್ತಿದೆ. ದನಗಳ ಮೇವಿಗೆ ಕೊರತೆಯಿಲ್ಲ ಹೆಚ್ಚಿಗೆ ಸುರಿದ ಮಳೆಯಿಂದ ಬೊಂಬಾಯಿಪಟ್ಟಣದಲ್ಲಿ ಒಂದು ಮಳಿಗೆಯ ಗೋಡೆಯು ಕುಸಿದುಬಿದ್ದು ಪಕ್ಕದಲ್ಲಿದ್ದ ಸಣ್ಣಮನೆಗಳಲ್ಲಿ ಮಲಗಿದ್ದವರಲ್ಲಿ ೩ ಮಂದಿ ಸತ್ತರು.

ಬೊಂಬಾಯಿಯಲ್ಲಿರುವ ಲೇಡಿಹಾರ್ಡಿಂಜ್ ಯುದ್ಧವೈದ್ಯಶಾಲೆಯಲ್ಲಿ ಕಳೆದ ತಾ॥ ೪ ರ ರಾತ್ರಿಯಲ್ಲಿ ಉಪಚಾರಿಣಿಯಾಗಿರುವ ಒಬ್ಬ ಕನ್ಯೆಯು ವಿದ್ಯುಚ್ಛಕ್ತಿಯ ಬೀಸಣಿಗೆಯನ್ನು ಒಂದುಕಡೆಯಿಂದ ಮತ್ತೊಂದುಕಡೆಗೆ ಎತ್ತಿ ಇಡುತ್ತಿರುವಾಗ ಬೀಸುತ್ತಿರುವ ಬೀಸಣಿಗೆಯ ಗರಿಗಳಿಗೆ ಆಕೆಯ ತಲೆಗೂದಲು ಸಿಕ್ಕಿ, ಸುತ್ತಿಕೊಂಡು ನೆಳೆತದಿಂದ ತಲೆಚರ್ಮವು ಸುಲಿದುಹೋಗುವ ಸ್ಥಿತಿಗೆಬಂದಿತು. ಅಷ್ಟರಲ್ಲಿ ಕೂಗಾಟವೇಳಲು, ಉಪಚಾರಿಣಿಯರು ಕೆಲರುಬಂದು ವಿದ್ಯುಚ್ಛಕ್ತಿಯನ್ನು ನಿಲ್ಲಿಸಿ, ಆಕೆಯ ತಲೆಕೂದಲನ್ನು ಕತ್ತರಿಸಿ ಸಂಬಂಧವನ್ನು ತಪ್ಪಿಸಿದರು. ಅದರಿಂದ ಆಕೆಯ ಮೃತ್ಯುವು ತಪ್ಪಿತು.

ಬಂಗಾಳಾದ ಕಾಮಿಲ್ಲಾಜಿಲ್ಲೆಯಲ್ಲಿನ ಪಾಠಶಾಲೆಯಲ್ಲಿ ಉಪಾಧ್ಯಾಯರಾಗಿದ್ದ ಶರತ್ಕುಮಾರ ಭೋಸ್‌ರವರನ್ನು ಯಾರೋ ಅತ್ಯಾಚಾರಿಗಳು ಕಳೆದ ಮಾರ್ಚಿತಿಂಗಳಲ್ಲಿ ಕೊಲೆಮಾಡಿಬಿಟ್ಟರು. ಆ ಬೋಸ್‌ರವರು ಮಾಡಿದ್ದ ಋಣವನ್ನು ತೀರಿಸುವ ವಿಷಯದಲ್ಲಿ ಬಂಗಾಳಾ ಸರ್ಕಾರದವರು ಮಾಡಿದ ವಚನಸಹಾಯ್ಯದಮೇಲೆ ಇಂಡ್ಯಾಪ್ರಭುತ್ವದವರು ಭೋಸ್‌ರವರ ಮಕ್ಕಳಿಗೆ ೨ ಸಾವಿರ ರೂ. ಗಳನ್ನು ಕೊಟ್ಟರು. ಮತ್ತೂ ಭೋಸ್‌ರವರ ಹಿರಿಯಮಗನಿಗೆ ೧೫೦ ರೂ. ಸಂಬಳದ ಒಂದು ಉದ್ಯೋಗವನ್ನು ಅನುಗ್ರಹಿಸಿದರು. ಇನ್ನಿಬ್ಬರುಮಕ್ಕಳಿಗೆ ಉಚಿತವಾಗಿ ವಿದ್ಯಾಭ್ಯಾಸಮಾಡಿಸುವುದಕ್ಕೆ ಒಪ್ಪಿರುವರು.

ವಿದೇಶ ವೃತ್ತಾಂತಗಳು

ಫ್ರಾನ್ಸಿನ ರಾಜಧಾನಿಯಾದ ಪ್ಯಾರಿಸ್‌ಪಟ್ಟಣದ ಮ್ಯುನಿಸಿಪಾಲಿಟಿಯವರು ಆ ಪಟ್ಟಣದ ಮೇಲೆ ಅಥವಾ ಅದರ ನೆರೆಯಲ್ಲಿ ಸಂಚರಿಸುವ ಶತ್ರುಗಳ ಆಕಾಶವಿಮಾನವನ್ನು ಕೆಳಕ್ಕೆ ಕೆಡಹಿದ ವೈಮಾನಿಕನಿಗೆ ೩೦೦೦ ರೂ. ಗಳೂ, ೧ ಭಂಗಾರದ ಪದಕವೂ ಬಹುಮಾನಿಸಲ್ಪಡುವುದೆಂದು ಪ್ರಕಟಿಸಿರುತ್ತಾರೆ.

ಇಟಲಿಯವರು ಯುದ್ಧಕ್ಕೆ ನಿಂತ ದಿವಸವೇ ಜರ್ಮನ್ ಕೈಸರರು ಇಟಲಿಯ ಪ್ರಭುವಿಗೆ ಒಂದು ತಂತ್ರೀವಾರ್ತೆಯನ್ನು ಕೊಟ್ಟು ಅದರಲ್ಲಿ—"ನಾನು ಗೆದ್ದರೂ ಸೋತರೂ ನೀವು ಈ ಯುದ್ಧದಲ್ಲಿ ಬಹಳ ನಷ್ಟವನ್ನು ಹೊಂದುವುದು ಮಾತ್ರ ಖಂಡಿತ" ಎಂದು ತಿಳಿಯಿಸಿ ಗೊಡ್ಡುಬೆದರಿಕೆ ಗೊಟ್ಟಿರುವರಂತೆ.

ಜೂನ್ ತಾ॥ ೩೦ ನೆ ಶುಕ್ರವಾರ ರಾತ್ರಿ ನ್ಯೂಯಾರ್ಕ್ ಪಟ್ಟಣದಲ್ಲಿರುವ ಅಮೇರಿಕಾದ ಸೆನೇಟ್‌ಸಭೆಯಲ್ಲಿ ಯಾವುದೋ ಒಂದು ಮಹಾಧ್ವನಿಯಾಗಿ ಕಟ್ಟಡ ಮೊದಲಾದುವುಗಳಿಗೆ ಬಹಳ ನಷ್ಟವಾಯಿತು. ಯಾವನೋ ಒಬ್ಬನು ನಾನೇ ಸಿಡಿಮದ್ದನ್ನು ಹಾಕಿದೆನೆಂದು ಹೇಳುತ್ತಿದ್ದನು. ನಿಜಸ್ಥಿತಿಯು ಇನ್ನೂ ಸಿದ್ಧಾಂತವಾಗಿಲ್ಲ.

ಫ್ರೆಂಚರಿಗೆ ಸೇರಿದ ಮಾರ್ಸೇಲ್ಸ್ ಪಟ್ಟಣದಲ್ಲಿದ್ದ ಒಂದು ಯಂತ್ರಶಾಲೆಯಲ್ಲಿ ೮ ಮಂದಿ ಹೆಂಗುಸರೂ ೨೦ ಮಂದಿ ಗಂಡುಸರೂ ಕೆಲಸಮಾಡುತ್ತಿದ್ದರು. ಆ ಆಲಯಕ್ಕೆ ಹೇಗೋ ಬೆಂಕಿಬಿದ್ದು ಭಯಂಕರವಾಗಿ ಸುಟ್ಟುಹೋಯಿತು. ಒಳಗಿದ್ದವರಲ್ಲಿ ೧೦ ಮಂದಿಯನ್ನು ಮಾತ್ರ ಕಾಪಾಡಲು ಸಾಧ್ಯವಾಯಿತು. ಅವರಿಗೂ ಭಯಂಕರವಾದ ಗಾಯಗಳಾಗಿರುವುವು.

ಇಂಗ್ಲೆಂಡ್ ಐರ್ಲ್ಯಾಂಡ್ ಮೊದಲಾದೆಡೆಯಲ್ಲೂ ಅಧೀನದೇಶಗಳಲ್ಲೂ ಬೇಕಾದಷ್ಟು ಮದ್ದುಗುಂಡು ಮೊದಲಾದ ಸಾಮಗ್ರಿಗಳು ಈಗ ಅಣಿಯಾಗುತ್ತಿವೆ. "ನಮಗೂ ನಮ್ಮ ಮಿತ್ರಮಂಡಲಿಯವರಿಗೂ ಸಹ ಸಮೃದ್ಧವಾಗಿ ಸಾಕಾಗುವಷ್ಟು ಮದ್ದುಗುಂಡುಗಳು ಈ ೧೯೧೫ ನೆಯ ವರ್ಷ ಮುಗಿಯುವುದರೊಳಗಾಗಿಯೇ ಸಿದ್ಧವಾಗುವುವೆಂದು ಊಹಿಸಲು ಅವಕಾಶವಿದೆ" ಎಂದು ಲಾರ್ಡ್‌ಕರ್ಜನರವರು ಪಾರ್ಲಿಮೆಂಟಿನಲ್ಲಿ ಹೇಳಿರುವರು.

ಅಮೇರಿಕಾ ಸಂಯುಕ್ತ ರಾಷ್ಟ್ರಕ್ಕೆ ಹಿಂದೆ ಅಧ್ಯಕ್ಷರಾಗಿದ್ದ ರೂಜ್‌ವೆಲ್ಟ್‌ರವರು ಈಗಿನ ಜರ್ಮನಿಯವರ ಔದ್ಧತ್ಯವನ್ನೂ ಅಮೇರಿಕ ಪ್ರಭುತ್ವದವರ ತಾಟಸ್ಥ್ಯವನ್ನೂ ನೋಡಿ ಸೈರಿಸಲ್ಲ ಅಮೇರಿಕಾವು ಈಗ ಯುದ್ಧಕ್ಕೆ ನಿಲ್ಲಬೇಕೆಂದೇ ಅವರು ಹೇಳುತ್ತಿರುವರು. ಅಮೇರಿಕಾವು ತಟಸ್ಥವಾಗಿರಬೇಕೆಂದು ವಾದಿಸುತ್ತಿರುವ ಬ್ರಯಾನರವರ ಪಕ್ಷದವರನ್ನು ಕುರಿತು ಅವರು ಭಾಷಣಮಾಡುವಾಗ "ಇವರ ಉದ್ದೇಶವು ಅಮೇರಿಕಾವನ್ನು ೨ ನೆಯ ಚೀನಾದೇಶವನ್ನಾಗಿ ಮಾಡಿ ಕುಳ್ಳಿರಿಸಬೇಕೆಂದಿರುವುದಾಗಿ ತೋರುತ್ತದೆ" ಎಂದು ಹೀಯಾಳಿಸಿರುವರು.

ಪೂರ್ವರಣರಂಗದ ಗೆಲೀಸಿಯಾದಲ್ಲಿ ಕಾದಾಡುತ್ತಿರುವ ರಷ್ಯನ್ ವೈಮಾನಿಕ ಸೈನ್ಯದಲ್ಲಿ ಒಬ್ಬ ರಷ್ಯನ್ ತರುಣಿಯು ಸಾಹಸದ ಕೆಲಸವನ್ನು ಮಾಡುತ್ತಿರುವಳು. ಈಕೆಯು ಮೊನ್ನೆಮೊನ್ನೆಯ ವರೆಗೂ ರಷ್ಯಾರಾಜಧಾನಿಯ ವೈದ್ಯಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಳು. ಈಚೆಗೆ ಇವಳು ಹೇಗೋ ವಿಮಾನಸೈನ್ಯದಲ್ಲಿ ಸೇರಿಕೊಂಡು, ಆಸ್ಟ್ರಿಯಾ ಸೇನಾ ಶಿಬಿರದ ಬಳಿಗೆ ಹೋಗಿ, ಅದರ ಸ್ಥಿತಿಗತಿಯನ್ನು ತಿಳಿದುಕೊಳ್ಳುತ್ತಿರುವಾಗ ಶತ್ರುಗಳು ಈಕೆಯ ವಿಮಾನದ ಮೇಲೆ ಗುಂಡುಗಳನ್ನು ಹೊಡೆದರು. ಅದರಿಂದ ಈ ಹುಡುಗಿಯ ಕೈಕಾಲುಗಳಮೇಲೆ ಗಾಯಗಳಾದುವು. ಆದರೂ ಈಕೆಯು ಲಕ್ಷ್ಯಮಾಡದೆ ಮೆಲ್ಲನೆ ವಿಮಾನವನ್ನು ಸಾಗಿಸಿಕೊಂಡು ತನ್ನ ಸೈನಿಕರ ಶಿಬಿರವನ್ನು ಸೇರಿದಳಂತೆ.

ಮೈಸೂರ್ ಸ್ಟಾರ್.

೧೯೧೫ನೆಯ ಇಸವಿ ಜುಲೈ ತಾ||೧೧ನೆಯ ಭಾನುವಾರ.

ದಿ|| ಬ|| ಕೆ. ಪಿ. ಪುಟ್ಟಣ್ಣಸೆಟ್ಟರವರು.

ಮೈಸೂರು ಸಂಸ್ಥಾನದ ಸರ್ಕಾರಿಯುದ್ಯೋಗಗಳಲ್ಲಿ ಸಣ್ಣ ಸ್ಥಲದಿಂದ ಹಿಡಿದು ಉನ್ನತವಾದ ಉಪಮಂತ್ರಿಪದವಿಯವರೆಗಿನ ನಾನಾಶಾಖೆಗಳ ಕೆಲಸವನ್ನು ವಹಿಸಿ, ಅತ್ಯಂತ ಸಮರ್ಪಕವಾದ ರೀತಿಯಿಂದ ನಿರ್ವಹಿಸಿ, ಪ್ರಜಾಪ್ರಭುಗಳೀರ್ವರ ಪ್ರೀತಿಗೂ ಪಾತ್ರರಾದವರೆನಿಸಿಕೊಂಡಿರುವ ಅಧಿಕಾರಿಗಳು ಬಹಳ ವಿರಳತಮರು. ಅಂಥ ಅಧಿಕಾರಿಗಳಲ್ಲಿ ನಮ್ಮ ಶೆಟ್ಟರನ್ನು ಕೇವಲ ಗಣ್ಯರಾದವರೆಂದು ಹೇಳಬಹುದು. ಇವರು ತಮಗೆ ವಹಿಸಲ್ಪಟ್ಟ ಸರ್ಕಾರದ ಯಾವುದೊಂದು ಕಷ್ಟತಮವಾದ ಕಾರ್ಯವನ್ನೂ ದಕ್ಷತೆಯಿಂದಲೂ, ನಿಸ್ಪೃಹತೆಯಿಂದಲೂ, ಪ್ರಜಾಹಿತಚಿಂತನೆಯಿಂದಲೂ, ನಿಷ್ಪಕ್ಷಪಾತತೆಯಿಂದಲೂ ನೆರವೇರಿಸಿ ಒಳ್ಳೆಯ ಹೆಸರನ್ನು ಪಡೆದುಕೊಂಡು ಬಂದಿರುವರು. ಸರ್ಕಾರದಧಿಕಾರದಿಂದ ನಿವೃತ್ತರಾದ ಬಳಿಕವೂ ಇವರು ಪ್ರತಿಫಲಾಪೇಕ್ಷೆಯಿಲ್ಲದೆ ಅನೇಕ ಉದ್ಯೋಗಗಳನ್ನು ವಹಿಸಿ ನಿರ್ವಹಿಸುತ್ತಿರುವುದನ್ನು ನೋಡಿದರೆ ಇವರ ಸ್ವದೇಶವಾತ್ಸಲ್ಯದ ಪರಿಮಾಣವು ಎಂಥವರಿಗೂ ಗೊತ್ತಾಗುವಂತಿರುವುದು. ಇವರು ಈಗ ನಿರ್ವಹಿಸುತ್ತಿರುವ ಕಾರ್ಯಗಳಲ್ಲಿ ಮೈಸೂರು ಬ್ಯಾಂಕಿನ ಅಧಿಕಾರ, ಬೆಂಗಳೂರು ಪುರಪಾಲಕ ಸಂಘದ ಅಧ್ಯಕ್ಷತೆ- ಇವೆರಡೂ ಅತ್ಯಂತ ಮುಖ್ಯವಾದುವುಗಳು. ಅವೆರಡರ ಈಗಿನ ಉತ್ತಮ ದಶೆಗೆ ಈ ನಮ್ಮ ಶೆಟ್ಟರವರ ಮುತವರ್ಜಿಯೇ ಮುಖ್ಯಕಾರಣವೆಂಬುದನ್ನು ಹೇಳಬೇಕಾಗಿಲ್ಲ. ಇವರು ಮೊನ್ನೆತಾನೇ ರಾಜಧಾನಿಯಲ್ಲಿ ನೆರವೇರಿದ ಸ್ಥಾನಿಕ ಸ್ವರಾಜ್ಯಪರಿಷತ್ತಿನಲ್ಲಿ ಅಧ್ಯಕ್ಷಪೀಠದ ಪರವಾಗಿ ಮಾಡಿರುವ ಭಾಷಣವು ಅವರ ಕಾರ್ಯಾನುಭವ ಪರಿಪಾಕಸ್ಥಿತಿಯನ್ನೂ, ದೀರ್ಘದರ್ಶಿತೆಯನ್ನೂ, ನಿಸ್ಪೃಹತ್ವವನ್ನೂ ಬಹಳ ಚೆನ್ನಾಗಿ ನಿದರ್ಶನಪಡಿಸಿರುವುದು. ಆ ಭಾಷಣದಲ್ಲಿ ಕಂಡಿರುವ ಉಪಯುಕ್ತಾಂಶಗಳು ಪ್ರಭುತ್ವದವರಿಗೂ ಪ್ರತಿಯೊಂದು ಸ್ಥಳಿಕಸರ್ಕಾರದವರಿಗೂ, ದೇಶಾಭಿಮಾನಿಗಳಾದ ಪ್ರತಿಯೊಬ್ಬರಿಗೂ ಗಮನೀಯವಾಗಿರುವುವು. ಇವರ ಯೋಗ್ಯತಾಂಶವನ್ನು ಕುರಿತು ಆ ಪರಿಷತ್ತಿನಲ್ಲಿ ಶ್ರೀಮದ್ಯುವರಾಜರು ಅಪ್ಪಣೆ ಕೊಡಿಸಿರುವ ಮಾತುಗಳು ಸರ್ವವಿಧದಿಂದಲೂ ಒಪ್ಪತಕ್ಕುವಾಗಿರುವುವಲ್ಲದೆ, ಅವು ನಮ್ಮ ಪ್ರಿಯತಮರಾದ ಶೆಟ್ಟರಿಗೂ ಅವರಂಥ ಸ್ವದೇಶಹಿತೇಚ್ಛುಗಳಾದ ಸಹೋದ್ಯೋಗಿಗಳಿಗೂ ಸಹ ಪ್ರೋತ್ಸಾಹವಚನಗಳಾಗಿರುವುವು. ಸರ್ಕಾರದಧಿಕಾರವು ಸಿಕ್ಕಿದರೆ ಅದನ್ನು ನಾನಾವಿಧದಿಂದ ದುರ್ವಿನಿಯೋಗಪಡಿಸಿ, ಸ್ವಜನಪಕ್ಷಪಾತತೆ-ಸ್ವಾರ್ಥಸಾಧನೆ-ಸ್ವಾಮಿದ್ರೋಹಾಚರಣೆಗಳಿಂದ ಪರಿಸಮಾಪ್ತಿಗೊಳಿಸಿಕೊಂಡು ಕೆಟ್ಟಹೆಸರಿನಿಂದ ವಿಶ್ರಾಂತಿಯನ್ನು ಪಡೆದುಕೊಳ್ಳುವ ಅಧಿಕಾರಿಗಳು ಅನಂತವಾಗಿರುವರು. ಸ್ವದೇಶೀಯರಾಗಿ, ನಿಸ್ಪೃಹಶಿಖಾಮಣಿಗಳಾಗಿ ತ್ರಿಕರಣಶುದ್ಧರಾಗಿ, ನೀರೋಗಿಗಳಾಗಿ, ಸ್ವಾಮಿಭಕ್ತರಾಗಿ, ರಾಜ್ಯಕಾರ್ಯನಿರ್ವಾಹಮಾಡಿ, ತಮಗೂ ತಮ್ಮ ಪದವಿಗೂ ತಮ್ಮ ದೇಶಕ್ಕೂ ಕೀರ್ತಿಯನ್ನು ತಂದು ಉದ್ಯೋಗವಿಶ್ರಾಂತಿಯನ್ನು ಪಡೆಯುವವರು ಮಾತ್ರ ಅತ್ಯಂತ ವಿರಳರು. ಈ ನಮ್ಮ ಶೆಟ್ಟರಲ್ಲಿ ಮಹತ್ಪದವಿಗೆ ಅರ್ಹವಾದ ಸಕಲಗುಣಗಳೂ ಸಮಗ್ರವಾಗಿರುವುವು. ಇನ್ನೂ ಹತ್ತಾರುವರ್ಷಗಳ ವರೆಗೆ ಯಾವ ಕಾರ್ಯವನ್ನಾದರೂ ನಿರ್ವಹಿಸುವಷ್ಟು ದೇಹಾರೋಗ್ಯವೂ ಬುದ್ಧಿಶಕ್ತಿಯೂ ಇರುತ್ತಿರುವುವು. ಅದಕ್ಕೆ ಈಗಿನ ಅವರ ಕಾರ್ಯತತ್ಪರತೆಯೇ ನಿದರ್ಶನವಾಗಿರುವಾಗ ಬೇರೆ ಉದಾಹರಣೆಯನ್ನು ಹೇಳಬೇಕಾಗಿಲ್ಲ. ಈಗ ಅವರು ಕಟ್ಟಿಕೊಂಡಿರುವ ಕಾರ್ಯಗಳ ಜತೆಗೆ ೧ ಆಂಗ್ಲಭಾಷಾ ದೈನಿಕಪತ್ರಪ್ರಚಾರ ಕರ್ತೃತ್ವಭಾಗಿಗಳೂ ಆಗುವುದರಲ್ಲಿರುವರೆಂದು ಕೇಳುತ್ತಿರುವೆವು. ಸರ್ಕಾರದವರು ಬೇರೆಬೇರೆ ಹೊಸಕೆಲಸಗಳ ಮೇಲ್ವಿಚಾರಣೆಗೆ ಇವರನ್ನು ನಿಯೋಜಿಸುವುದರಲ್ಲಿರುವರು. ಇಂಥ ಯೋಗ್ಯತಾಂಶವು ಇವರಲ್ಲಿದ್ದರೂ, ಇಂದ್ರಿಯಪಾಟವವು ಗಳಿತರಾಗಿದ್ದವರಿಂದೆಲ್ಲಾ ನಿರ್ವಹಿಸಲ್ಪಟ್ಟ ಮೈಸೂರು ಸಂಸ್ಥಾನದ ದಿವಾನ್‌ಗಿರಿಯ ಪದವಿಯು ಅಲ್ಪಕಾಲಕವಾಗಿ ಅನಿತ್ಯವಾಗಿಯಾದರೂ ಇವರಿಗೆ ಕೊಡಲ್ಪಡುವುದಕ್ಕೆ ಇಲ್ಲದಂತಾದುದು ಶೋಚನೀಯವಲ್ಲವೆ? ಇಂಥ ಸಮರ್ಥರಾದ ಸ್ವದೇಶೀಯ ನಿಸ್ಪೃಹಶಿಖಾಮಣಿಗಳ ಮಂತ್ರಿತ್ವಪದವಿಯ ಫಲವು ಮೈಸೂರುದೇಶೀಯರಿಗೆ ಲಭಿಸದೆ ಹೋದ ಕೊರತೆಯು, ಸದ್ಯ ಸ್ವದೇಶಿಯರೇ ಆದ ನಮ್ಮ ಸರ್ ವಿಶ್ವೇಶ್ವರಯ್ಯನವರ ಮಂತ್ರಿತ್ವಫಲೋದಯ ಪ್ರಭೆಯಿಂದ ನಿವಾರಿತವಾಗಲು ಅವಕಾಶವಾದುದು ಸಮಾಧಾನಸ್ಥಾನವು. ಲಭ್ಯವಾಗಬೇಕಾಗಿದ್ದ ಪದವಿಯ ಅಲಾಭವು ತಮಗೆ ಉಂಟಾದರೂ ಮ|| ಶೆಟ್ಟರವರು ಲಕ್ಷಿಸದೆ ಈಗಲೂ ತಮ್ಮ ಜನ್ಮಭೂಮಿಯ ಹಿತಕಾಂಕ್ಷೆಯಿಂದ ಕೆಲಸಮಾಡುತ್ತಿರುವುದು ಅವರ ಸಾದ್ಗುಣ್ಯಘನತೆಗೂ, ಪವಿತ್ರವಾದ ಚರಿತ್ರಕ್ಕೂ ಮತ್ತಷ್ಟು ಭೂಷಣವನ್ನೇ ಉಂಟುಮಾಡಿರುವುದು. ಸ್ವದೇಶಸೇವಾಕಾರ್ಯವನ್ನು ಎಷ್ಟು ಪವಿತ್ರವಾದುದೆಂದು ಇವರು ಪ್ರೀತಿಸುತ್ತಿರುವರೆಂಬುದಕ್ಕೆ, ಅವರು ತಮ್ಮ ಭಾಷಣದ ಅಂತ್ಯದಲ್ಲಿ "ಸಂತೋಷಂಜನಯೇತ್ಪ್ರಾಜ್ಞ ಸ್ತದೇವೇಶ್ವರಪೂಜನಂ| ಜನಾನುಮೋದಕಂಕಾರ್ಯಂ ಈಶ್ವರಾರಾಧನೈಸ್ಸಮಂ" ಎಂದು ಹೇಳಿರುವ ಶ್ಲೋಕವು ನಿದರ್ಶಕವಾಗಿರುವುದು. ಇಂಥ ಮಹನೀಯರುಗಳ ಸಂಖ್ಯೆಯು ಯಾವದೇಶದಲ್ಲಿ ಯಾವಜನವರ್ಗದಲ್ಲಿ ಹೆಚ್ಚುವುದೋ ಅವುಗಳ ಕ್ಷೇಮವು ಹೆಚ್ಚುವುದು ಸಿದ್ಧಾಂತವು. ಆದರೆ ಇವರು ಜನಿಸಿದ ಸಮಾಜವು ಇವರಂಥ ಮುಂಪಾಳುಗಳಾದ ಬೇರೊಬ್ಬರನ್ನು ಕಾಣದ ಸ್ಥಿತಿಯಲ್ಲಿರುವಾಗ ಅದರ ಉದ್ಧಾರಕ್ಕೆ ಸಾಧಕವಾದ ಕಾರ್ಯಗಳು ಇವರಿಂದ ಇನ್ನೂ ಸಮಗ್ರವಾಗಿ ನಡೆಯಿಸಲ್ಪಡದೆ ಹೋಗದಿರುವುದೊಂದುಮಾತ್ರ ಇವರ ಪವಿತ್ರಚಾರಿತ್ರದಲ್ಲಿನ ಕೊರತೆಯಾಗಿರುವುದು. ಸ್ವತೋಭ್ರಾತಮಾತಿಗಳಾಗಿರುವ ಇವರು ಅದನ್ನೂ ನಿವಾರಿಸಿ, ಆಚಂದ್ರಾರ್ಕಸ್ಥಾಯಿಯಾದ ಕೀರ್ತಿಯನ್ನು ಆರ್ಜಿಸಿಕೊಳ್ಳುವಂತಾಗಬೇಕೆಂಬುದೇ ನಮ್ಮ ಪ್ರಾರ್ಥನೆಯು.

ಒಳದೇಶ ವೃತ್ತಾಂತಗಳು.

ಮೈಸೂರ ನಿಯಮನಿರ್ಮಾಣಸಭೆಯು ಈ ತಾ|| ೨೬ ನೆಯ ಸೋಮವಾರ ಮಧ್ಯಾಹ್ನ ೧೨ ಗಂಟೆಗೆ ಬೆಂಗಳೂರ ಪಬ್ಲಿಕ್ ಆಫೀಸ್‌ಕಟ್ಟಡದಲ್ಲಿ ಸೇರುವುದು.

ಮಹಾರಾಣೀಕಾಲೇಜಿನ ಸ್|| ಶ್ರೀರಂಗಮ್ಮ, ಬಿ. ಎ., ಯವರು ಬೆಂಗಳೂರಲ್ಲಿರುವ ಬಾಲಿಕಾಪಾಠಶಾಲೆಗಳ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುವರು.

ಶಿವಮೊಗ್ಗಾ ವೃತ್ತಾಂತ ಎಂಬ ಹೆಸರಿನಿಂದ ಒಂದು ವಾರಪತ್ರಿಕೆಯು ಶಿವಮೊಗ್ಗೆಯಲ್ಲಿ ಕಳೆದ ೩ ವಾರಗಳಿಂದಲೂ ಪ್ರಕಟವಾಗುತ್ತಿರುವುದು. ಇದು ಕರ್ನಾಟಕದೇಶಕ್ಕುಪಯುಕ್ತವಾಗಿ ಚಿರಜೀವಿಯಾಗಿರಲೆಂದು ಪ್ರಾರ್ಥಿಸುತ್ತೇವೆ.

ಶ್ರೀಮನ್ ಮಹಾರಾಜರವರ ಸ್ವಾರಿಯು ಕಳೆದ ಗುರುವಾರ ಮಧ್ಯಾಹ್ನ ೨ ಗಂಟೆಯಲ್ಲಿ ಬೆಂಗಳೂರಿಗೆ ಮೋಟಾರುಬಂಡಿಯಲ್ಲಿ ಚಿತ್ತೈಸಿದ್ದು ಮಾರನೆಯದಿನ ಹಿಂದಿರುಗಿತು. ಮತ್ತೂ ರಾಣಿವಾಸದವರೊಡನೆ ಈ ತಾ|| ೧೭ ರಲ್ಲಿ ಮೇಲುಗೋಟೆಗೆ ದಯಮಾಡಿಸಿ ಬರುವುದಾಗಿ ತಿಳಿಯುತ್ತೇವೆ.

ಯುದ್ಧಭೂಮಿಗೆ ಹೋಗಿರುವ ನಮ್ಮ ಸಂಸ್ಥಾನದ ಇಂಪೀರಿಯಲ್ ಸರ್ವಿಸ್ ಲ್ಯಾನ್ಸರ್ಸ್‌ಸೇನೆಯವರು ಇಸ್ಮೇಲಿಯಾದಲ್ಲಿ ತುರ್ಕಿಯವರ ಮೇಲೆಬಿದ್ದು ಅವರ ಆಯುಧಗಳನ್ನೂ ಕಂಬಳಿಗಳನ್ನೂ ಕಿತ್ತುಕೊಂಡು ಅವುಗಳನ್ನು ಜ್ಞಾಪನಾರ್ಥವಾಗಿ ಇಲ್ಲಿಗೆ ಕಳುಹಿಸಿಕೊಟ್ಟಿರುವರು. ಅವು ಈಗ ಜಗನ್ಮೋಹನಪ್ರಾಸಾದದಲ್ಲಿ ಪ್ರದರ್ಶಿಸಲ್ಪಟ್ಟಿರುವುವು.

ಚಕ್ರವರ್ತಿಯವರಿಂದ ಲಭ್ಯವಾಗಿರುವ ಪ್ರಶಸ್ತಿಗಳ ಸೂಚಕವಾದ ಪದಕಗಳನ್ನು ವೈಸ್‌ರಾಯರಿಂದ ಸ್ವೀಕರಿಸಲು ಶ್ರೀಮದ್ಯುವರಾಜರು ತಾ|| ೮ ರಲ್ಲೂ ದಿವಾನ್ ಮ|| ವಿಶ್ವೇಶ್ವರಯ್ಯನವರು ತಾ|| ೮ ರಲ್ಲೂ ಸಿಮ್ಲಾಪಟ್ಟಣಕ್ಕೆ ದಯಮಾಡಿಸಿದರು. ಮತ್ತು ಈ ತಾ||೨೪ ರಲ್ಲಿ ಅವರುಗಳು ಹಿಂದಿರುಗಿ ಬರುವರಾಗಿರುವರು. ಅದುವರೆಗೆ ೧ ನೆಯ ಕೌನ್ಸಿಲರಾದ ಮ|| ನಂಜುಂಡಯ್ಯನವರು ದಿವಾನರುದ್ಯೋಗವನ್ನು ನಡೆಸುವರು.

ಮ|| ಡಿ. ಎಂ. ನರಸಿಂಗರಾಯರು ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯಾಗಿ ಇದ್ದರಷ್ಟೆ. ಈಗ ಆ ಎರಡು ಉದ್ಯೋಗಗಳೂ ಬೇರ್ಪಡಿಸಲ್ಪಟ್ಟು ಚಿತ್ರಕಲ್‌ದುರ್ಗದ ಡೆ|| ಕ|| ರವರಾದ ಮಿ|| ತ್ಯಾಗರಾಜಯ್ಯರ್‌ರವರು ರೆವಿನ್ಯೂ ಸೆಕ್ರೆಟರಿಯಾಗಿ ನಿಯಮಿಸಲ್ಪಟ್ಟು, ಅರ್ಥಸಾಧಕಸಭೆಯ ವಿದ್ಯಾವ್ಯವಸಾಯಶಾಖಾ ಸೆಕ್ರೆಟರಿಯವರಾಗಿದ್ದ ಮ|| ಬಾಲಸುಂದರಂ ಅಯ್ಯರ್‌ರವರು ಚಿತ್ರಕಲ್‌ದುರ್ಗದ ಡೆ|| ಕಮಿಷನರಾಗಿಯೂ, ಅಂಡರ್ ಸೆಕ್ರೆಟರಿ ಮಿ|| ಡಿಸೌಜಾಯವರು ವಿದ್ಯಾವ್ಯವಸಾಯ ಶಾಖೆಯ ಸೆಕ್ರೆಟರಿಗಳಾಗಿಯೂ ನಿಯಮಿಸಲ್ಪಟ್ಟಿರುವರು.

ಮೈಸೂರ ರೈಲ್ವೆಶಾಖೆಯ ಕಾರ್ಯನಿರ್ವಹಣಾರ್ಥವಾಗಿ ಈ ಮುಂದಣೇರ್ಪಾಟು ಮಾಡಲ್ಪಟ್ಟಿರುತ್ತದೆ:—ಇಂಡ್ಯಾಸರ್ಕಾರದವರನುಮತಿಯಿಂದ ಕರೆಸಿಕೊಂಡಿರುವ ಮಿ|| ಸಿ. ಡಿ. ಡೌವಿಲ್ಲರ್‌ರವರು ಸಂಸ್ಥಾನದ ರೈಲ್ವೆಶಾಖೆಯ ಇಂಜನಿಯರ್‌ಇನ್‌ಚೀಫ್‌ರಾಗಿಯೂ, ಸಂಸ್ಥಾನದಿಂದ ನಡೆಸಲ್ಪಡುತ್ತಿರುವ ರೈಲ್ವೆಗಳ ಏಜಂಟರಾಗಿಯೂ, (೨) ರಾವ್ ಬಹದ್ದೂರ್ ಕೆ. ಕೃಷ್ಣಯ್ಯಂಗಾರ್‌ರವರು ತಮ್ಮ ಪ್ರಸಕ್ತ ಕೆಲಸದೊಡನೆ ಅಫಿಷಿಯೇಟಿಂಗ್ ಸೆಕ್ರೆಟರಿಯಾಗಿಯೂ, (೩) ಮ|| ಟಿ. ಲಕ್ಷ್ಮೀನರಸಿಂಹರಾಯರು ಅಫಿಷಿಯೇಟಿಂಗ್ ಅಂಡರ್‌ಸೆಕ್ರೆಟರಿಯಾಗಿಯೂ, (೪) ಮ|| ಪಿ. ರಾಮಮೂರ್ತಿಯವರು ತಿಂಗಳಿಗೆ ೫೦ ರೂ. ಅಲೋಯನ್ಸಿನಮೇಲೆ ಅಸಿಸ್ಟೆಂಟ್ ಸೆಕ್ರೆಟರಿಯಾಗಿಯೂ ನಿಯಮಿಸಲ್ಪಟ್ಟಿರುವರು. ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಸೆಟ್ಟರು, ರಾ|| ಬ|| ಕೆ. ಕೃಷ್ಣಯ್ಯಂಗಾರರು ಮತ್ತು ಮ|| ಎಂ. ಎನ್. ಕೃಷ್ಣರಾಯರು ಇವರುಗಳಿಂದ ಕೂಡಿದ ಒಂದು ಸ್ಪೆಷಲ್‌ಕಮಿಟಿಯು ಸಂಸ್ಥಾನದ ಲೋಹಮಾರ್ಗದ ರಚನೆ ಮತ್ತು ಅಭಿವೃದ್ಧಿಗಳ ವಿಚಾರದಲ್ಲೂ, ಈ ಶಾಖೆಯ ಆಯವ್ಯಯದ ಮೇಲ್ವಿಚಾರಣೆ ಮೊದಲಾದುದರ ಸಂಬಂಧವಾಗಿಯೂ ಕಾಲೋಚಿತವಾದ ಸೂಚನೆಗಳನ್ನು ಈ ಶಾಖೆಯ ಸೆಕ್ರೆಟರಿಯವರಿಗೆ ಕೊಟ್ಟು ಸಾಹಾಯ್ಯ ಮಾಡುವ ಬಗೆಗೆ ಏರ್ಪಡಿಸಲ್ಪಡುವುದು. ಸೆಕ್ರೆಟರಿಯವರು ಈ ಕಮಿಟಿಯವರ ಕೂಡ ಮೇಲೆಕಂಡ ವಿಚಾರಗಳಲ್ಲಿ ಆಲೋಚಿಸಿ ಅವರ ಸೂಚನೆಗಳನ್ನು ಸರ್ಕಾರದವರ ಪರ್ಯಾಲೋಚನೆಗೆ ತರತಕ್ಕುದಾಗಿದೆ. ಈ ಕಮಿಟಿಯವರ ಕಾರ್ಯಭಾಗದ ವಿಚಾರದಲ್ಲಿ ಪ್ರತ್ಯೇಕವಾದ ಸೂಚನೆಯು ಕೊಡಲ್ಪಡುವುದು.

ಕುರುಬರು ಒಕ್ಕಲಿಗರ ಪತ್ರಿಕೆಯಮೇಲೆ ಮಾನನಷ್ಟಕ್ಕಾಗಿ ಬೆಂಗಳೂರ ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮಾಡಿದ್ದ ವಿವಾದದಲ್ಲಿ ಮ|| ಗಳಾದ ಮಾರಪ್ಪನವರು, ಬೋರಯ್ಯನವರು, ವೆಂಕಟರಾಮಯ್ಯನವರು ಇವರುಗಳಿಗೆ ಪ್ರತಿಯೊಬ್ಬರಿಗೂ ೧೦೦ ರೂ. ನಂತೆ ಅರ್ಥದಂಡವು ವಿಧಿಸಲ್ಪಟ್ಟಿದ್ದುದರಮೇಲೆ ಚೀಫ್‌ಕೋರ್ಟಿನಲ್ಲಪೀಲುಮಾಡಲ್ಪಟ್ಟಿದ್ದುದರಲ್ಲಿ ಕಳೆದ ಸೋಮವಾರ ಚೀಫ್‌ಜಡ್ಜರು ತೀರ್ಪನು [illegible]ವಾಗ್ಗೆ—"ಒಂದನೆಯ ಅಪರಾಧಿಯು ಅಪಮಾನಕರವಾದ ಲೇಖನವನ್ನು ಪತ್ರಿಕೆಗೆ ಕಳುಹಿಕೊಟ್ಟುದಕ್ಕೆ ಹೊಣೆಯಾಗಿರುತ್ತಾನೆಂಬುದರಲ್ಲಿ ಸಂದೇಹವೇಇಲ್ಲವು. ಆದರೆ ಎರಡನೆಯಪರಾಧಿ ಮಾರಪ್ಪನವರಿಗೆ ಶಿಕ್ಷೆಯನ್ನು ವಿಧಿಸುವುದನ್ನು ನಾನೊಪ್ಪುವುದಿಲ್ಲ. ೧೮೬೪ ನೆಯ ರೆಗ್ಯುಲೇಷನ್ನಿನ ಪ್ರಕಾರ ೧೯೦೯ ನೆಯ ನವೆಂಬರ್ ತಾ|| ೧೮ ರಲ್ಲಿ ಮಾರಪ್ಪನವರು ಡಿಕ್ಲರೇಷನ್ ಮಾಡಿರುವುದರಿಂದ ಅವರೂ ಹೊಣೆಗಾರರೆಂಬ ಭಾವನೆಯುಂಟಾಗುವುದಾದರೂ, ಅವರು ಒಕ್ಕಲಿಗರಸಂಘದ ಪ್ರೆಸಿಡೆಂಟರಾಗಿ ಡಿಕ್ಲರೇಷನನ್ನ ಮಾಡಿರುವುದು ಸ್ಪಷ್ಟವಾಗಿರುವುದರಿಂದ ಪತ್ರಿಕಾ ಪ್ರಕಟನೆಯ ವಿಚಾರದಲ್ಲಿ ಅವರ ಸಂಬಂಧವು ನೆಪಮಾತ್ರವಾದುದು. ಪತ್ರಿಕಾಲೇಖನದ ವಿಚಾರದಲ್ಲಾಗಲಿ ಅಥವಾ ಪ್ರಕಟನ ವಿಚಾರದಲ್ಲಾಗಲೀ ಇವರಿಗೇನೂ ಸಂಬಂಧವಿಲ್ಲವೆಂಬುದಕ್ಕೆ ತಕ್ಕ ನಿದರ್ಶನಗಳಿರುತ್ತವೆ. ಇವರು ಪ್ರೆಸಿಡೆಂಟರಾಗಿ ಸಂಘದ ಮೀಟಿಂಗುಗಳಿಗೆ ಬರುತ್ತಿದ್ದರು. ಆ ಮೀಟಿಂಗುಗಳಲ್ಲಿ ಪತ್ರಿಕೆಯಲ್ಲಿ ಪ್ರಕಟವಾಗಬೇಕಾದ ಲೇಖನಗಳನ್ನು ಗೊತ್ತುಮಾಡುವುದಾಗಲಿ ಅಥವಾ ಚರ್ಚಿಸುವುದಾಗಲಿ ನಡೆಯುತ್ತಿರಲಿಲ್ಲವು. ಅದುಕಾರಣ ಈ ಲೇಖನಪ್ರಸಾರದ ವಿಚಾರದಲ್ಲಿ ಮಾರಪ್ಪನವರಿಗೆ ಯಾವಸಂಬಂಧವೂ ಇಲ್ಲವೆಂದು ಅವರು ಕೊಟ್ಟಿರುವ ನಿದರ್ಶನವನ್ನು ನಾವು ನಂಬಬೇಕಾಗಿರುವುದರಿಂದ ಅವರು ನಿರ್ದೋಷಿಗಳಾಗಿರುವರು. ೧ ನೆಯಪರಾಧಿ ಬೋರಯ್ಯ ೩ ನೆಯಪರಾಧಿ ವೆಂಗಟರಾಮಯ್ಯ ಇವರುಗಳು ತಪ್ಪಿತಸ್ಥರೆಂಬುದರಲ್ಲಿ ಸಂದೇಹವಿಲ್ಲವಾದುದರಿಂದ ಅವರಿಗಾಗಿರುವ ದಂಡನೆಯದನ್ನು ಸ್ಥಿರಗೊಳಿಸಿ ೨ ನೆಯಪರಾಧಿಯನ್ನು ದೋಷಮುಕ್ತರನ್ನಾಗಿ ಮಾಡಿದೆ. ಇವರು ದಂಡರೂಪವಾದ ಹಣವನ್ನು ಕೊಟ್ಟಿದ್ದರೆ ಅದನ್ನು ಅವರಿಗೆ ಹಿಂದಿರುಗಿ ಕೊಟ್ಟುಬಿಡತಕ್ಕುದು" ಎಂದು ಬರೆದಿರುತ್ತಾರೆ.

ಯುದ್ಧವಾರ್ತೆಯು.

ಪಶ್ಚಿಮರಣರಂಗ.

ಈ ಕಡೆಯಲ್ಲಿ ಫ್ರೆಂಚ್ ಸೈನಿಕರು ಸರ್ವಸನ್ನಾಹಸಂಪೂರ್ಣರಾಗಿ ಬಹಳ ಪರಾಕ್ರಮದಿಂದ ಶತ್ರುಗಳನ್ನು ಹಿಮ್ಮೆಟ್ಟಿಸುತ್ತಲೇ ಇದ್ದಾರೆ. ಇದನ್ನು ಕಂಡು ಜರ್ಮನರು ಬಹಳ ಸಾಹಸದಿಂದ ಯುದ್ಧಕಾರ್ಯವನ್ನು ಬಲಗೊಳಿಸುತ್ತಿದ್ದಾರೆ. ಪೂರ್ವರಣರಂಗದಲ್ಲಿ ಮೊನ್ನೆತಾನೇ ಮಾಡಿದಂಥ ದಾಳಿಯನ್ನು ಈ ಕಡೆಯಲ್ಲೂ ಒಂದು ಸಲ ವಿಪರೀತವಾಗಿ ನಡೆಯಿಸಿ, ಮಿತ್ರಮಂಡಲಿಯವರನ್ನು ಓಡಿಸಬೇಕೆಂಬುದು ಕೈಜರ್ರವರ ಉದ್ದೇಶವಾಗಿದೆಯಂತೆ. ಅದುಕಾರಣ, ಅವರು ಈಗ ಫ್ರಾನ್ಸಿನಕಡೆ ವಿಶೇಷವಾದ ಸೈನ್ಯವನ್ನೂ ದೊಡ್ಡದೊಡ್ಡ ಫಿರಂಗಿಗಳನ್ನೂ ಬಹಳವಾಗಿ ಸಾಗಿಸುತ್ತಿರುವರೆಂಬ ವಾರ್ತೆಯು ಬಂದಿದೆ. ರಷ್ಯಾಪ್ರಾಂತದಿಂದ ಈ ಕಡೆಗೆ ಬಹಳ ಸೈನ್ಯವು ಆಗಲೇ ಬಂದಿದೆಯಂತೆ. ಆಯಕಟ್ಟಿನ ಸ್ಥಲಗಳಲ್ಲಿ ಫಿರಂಗಿಗಳನ್ನು ಏರಿಸುತ್ತಿದ್ದಾರೆ. ಯುದ್ಧರಂಗದ ಹಿಂಗಡೆಯಾದ ಲಿಲ್ಲಿ ಮೊದಲಾದ ಪ್ರದೇಶಗಳಲ್ಲಿ ಮದ್ದುಗುಂಡುಗಳನ್ನು ವಿಶೇಷವಾಗಿ ಕೂಡಿಸುತ್ತಿದ್ದಾರಂತೆ. ಈ ಸನ್ನಾಹವನ್ನೆಲ್ಲಾ ಕೇಳಿದರೆ ಜರ್ಮನ್ ಕೈಜರರು ಈ ಕಡೆಗೂ ಇಷ್ಟರಲ್ಲೇ ಭೀಕರವಾದ ಪ್ರಳಯವನ್ನು ಮಾಡಲು ಯತ್ನಿಸದೆ ಬಿಡುವುದಿಲ್ಲವೆಂದು ಕಾಣುತ್ತದೆ. ಇದರ ಪ್ರತಿಕ್ರಿಯೆಗೆ ಮಿತ್ರಮಂಡಲಿಯವರು ಅಣಿಯಾಗುತ್ತಿದ್ದಾರೆ. ಫ್ರೆಂಚರಲ್ಲಿ ಸೈನ್ಯಬಲವೂ ಅದಕ್ಕೆ ಸಾಕಾಗುವಷ್ಟು ಮದ್ದುಗುಂಡು ಮೊದಲಾದ ಸಾಧನಗಳ ಸಮೃದ್ಧಿಯೂ ಚೆನ್ನಾಗಿವೆ. ಆಂಗ್ಲಸೈನ್ಯದಲ್ಲಿ ಜನಬಲವು ಸರಿಯಾಗಿದ್ದರೂ ಮದ್ದುಗುಂಡಿನ ಸಹಾಯವು ಸಾಲದೆ ಇದೆ. ಆ ಕೊರತೆಯ ಪರಿಹಾರಕ್ಕಾಗಿ ಆಂಗ್ಲೇಯರು ಅಸಾಧಾರಣವಾದ ಪ್ರಯತ್ನಗಳನ್ನು ಮಾಡಿದ್ದಾರೆ. ಅವರ ದೇಶದ ಪೂರ್ವದಿಂದ ಪಶ್ಚಿಮಕ್ಕೂ, ಉತ್ತರದಿಂದ ದಕ್ಷಿಣಕ್ಕೂ ಇರುವ ಭಾಗಗಳಲ್ಲಿನ ಎಲ್ಲ ಕರ್ಮಾಗಾರಗಳಲ್ಲೂ ಹಗಲೂ ರಾತ್ರಿ ಲಕ್ಷಾಂತರ ಜನಗಳು ಈ ಮದ್ದುಗುಂಡಿನ ನಿರ್ಮಾಣದಲ್ಲೇ ತತ್ಪರರಾಗಿದ್ದಾರೆ. ಆಂಗ್ಲೇಯರ ಅಧಿನಿವೇಶಗಳಲ್ಲೂ ಈ ಕೆಲಸವು ಆತುರದಿಂದ ಸಾಗಿಸಲ್ಪಡುತ್ತಿದೆ. ಅದುಕಾರಣ ಇಷ್ಟರಲ್ಲೇ ಇವರೂ ಕೂಡ ಅಗಣಿತವಾದ ಯುದ್ಧಸಾಮಗ್ರಿಗಳನ್ನು ಒದಗಿಸಿಕೊಂಡು ಶತ್ರುಗಳ ನುಗ್ಗಾಟವನ್ನು ತಪ್ಪಿಸುವುದಕ್ಕೂ, ಫ್ರಾನ್ಸ್ ಬೆಲ್ಜಿಯಂ ರಣರಂಗದಿಂದ ಅವರನ್ನು ಹೊರಗೆಡಹುವುದಕ್ಕೂ ಸಜ್ಜಾಗುವುದರಲ್ಲಿ ಅಭ್ಯಂತರವಿರುವುದಿಲ್ಲ. ಬರುವ ಅಕ್ಟೋಬರ್ ತಿಂಗಳೊಳಗಾಗಿ ಯುದ್ಧಕಾರ್ಯವೆಲ್ಲಾ ಪರಿಸಮಾಪ್ತವಾಗುವುದೆಂದು ಜರ್ಮನ್ ಕೈಜರರು ಹೇಳಿರುವರಂತೆ. ದಕ್ಷಿಣದಿಂದಲೂ ಉತ್ತರದಿಂದಲೂ ರಷ್ಯನರನ್ನು ಸುತ್ತೊತ್ತಿ ಹಣ್ಣಿಗೆ ತರುವ ಪ್ರಯತ್ನವನ್ನೊಂದುಕಡೆಯೂ, ಇಟಲಿಯವರ ನುಗ್ಗಾಟವನ್ನು ತಡೆಯುವ ಕೆಲಸವನ್ನೊಂದುಕಡೆಯೂ ಆಸ್ಟ್ರೋ ಜರ್ಮನರು ಅಸಾಧಾರಣ ಸಾಹಸಬಲಗಳಿಂದ ಮಾಡಬೇಕಾಗಿದ್ದರೂ, ಪಶ್ಚಿಮರಣರಂಗದ ಯುದ್ಧವನ್ನು ಕೂಡ ಇನ್ನು ಕೆಲ ತಿಂಗಳೊಳಗಾಗಿ ಮುಗಿಸಿಬಿಡುತ್ತೇವೆಂದು ಕೈಜರರು ನೆನೆಸಿಕೊಂಡಿದ್ದರೆ. ಅದು ಬರಿಯ ಭ್ರಮೆಯೆಂದೇ ಹೇಳಬೇಕಾಗುವುದು, ಅಥವಾ ಅವರು ಈ ಮಾತನ್ನು ತಮ್ಮ ದೇಶೀಯರಿಗೆ ಧೈರ್ಯವನ್ನೂ, ಸಮರೋತ್ಸಾಹವನ್ನೂ ಹುಟ್ಟಿಸುವುದಕ್ಕೇನಾದರೂ ಹೇಳಿರಬೇಕು.

ಪೂರ್ವ ರಣರಂಗದಲ್ಲಿ ಮಾಡಿದಂಥ ಹಾವಳಿಯನ್ನು ಪಶ್ಚಿಮರಣರಂಗದಲ್ಲೂ ಮಾಡಬೇಕೆಂದು ಕೈಜರರು ಅಲ್ಲಿದ್ದ ತಮ್ಮ ಹೆಚ್ಚು ಸೈನ್ಯವನ್ನು ಫ್ರಾನ್ಸಿನ ಕಡೆಗೆ ಸಾಗಿಸಿಬಿಟ್ಟರೆ, ಆಸ್ಟ್ರಿಯನ್ನರು ಇಟಲಿಯವರ ನುಗ್ಗುವಿಕೆಯನ್ನು ತಡೆಯುವುದಕ್ಕೆ ಗೆಲೀಷಿಯಾದಲ್ಲಿರುವ ತಮ್ಮ ಸೈನ್ಯದ ಹೆಚ್ಚುಭಾಗವನ್ನು

ಇತ್ತ ಕಡೆಗೆ ಸಾಗಿಸಿಬಿಟ್ಟರೆ, ಗೆಲೀಷಿಯಾದ ಸ್ಥಿತಿಯನ್ನು ರಷ್ಯನರು ಯಥಾಪೂರ್ವವಾಗಿ ಮತ್ತೆ ಮಾಡದೆ ಬಿಡರು. ಆಗ ಕೈಜರರು ಮರಳಿ ಅತ್ತಕಡೆಗೆ ಓಡಬೇಕಾಗುವುದು. ಇಂಥ ಓಡಾಟವು ಎಷ್ಟೋ ಸಾರಿ ಆಗಬೇಕಾಗಿರುವಲ್ಲಿ ಕೈಜರರು ಈಗಾಗಲೇ ಜಯಲಾಭದಿಂದ ಯುದ್ಧಸಮಾಪ್ತಿಗೊಳಿಸುವುದು ಸ್ವಪ್ನದ ಕನವರಿಕೆಗೆ ಸಮನೆಂದೇ ಹೇಳಬಹುದು.

ಫ್ರಾನ್ಸಿನ ಈಗಿನ ಸ್ಥಿತಿಯನ್ನು ನೋಡಿದರೆ ಫ್ರೆಂಚ್ ದೇಶದಲ್ಲಿ ಜರ್ಮನರು ಎಷ್ಟು ಸಾಹಸಮಾಡಿದರೂ ಮೊದಲಿನಂತೆ ಲೀಲಾಜಾಲವಾಗಿ ಮೈಲಿಗಟ್ಟಲೆ ನುಗ್ಗಿ ಹೋಗುವುದು ಎಂದಿಗೂ ಸಾಧ್ಯವಾಗಿಲ್ಲ. ಎರ್ರಾಸ್-ಲೇಬ್ರಂತ್-ಪಾಂಟ್‌ಯೂಜಿರ್ನ್-ಫೆಯರ್ನ್ ಹಿ-ವಿಜೆಲ್ಲಿ-ನ್ಯೂಪೋರ್ಟ್ ಮೊದಲಾದ ಕಡೆಗಳಲ್ಲಿ ಉಭಯಪಕ್ಷಕ್ಕೂ ಭೀಕರವಾದ ಯುದ್ಧಗಳು ಅಹೋರಾತ್ರಿ ನಡೆಯುತ್ತಲೇ ಇವೆ. ಅವುಗಳಲ್ಲೆಲ್ಲಾ ಆಗಿರುವ ಜಯಾಪಜಯಾಂಶಗಳನ್ನು ಪರಿಶೀಲಿಸಿದರೆ ಜರ್ಮನರ ನಷ್ಟವೇ ಹೆಚ್ಚಾಗಿ ತೋರುತ್ತದೆ; ಫ್ರೆಂಚರಿಗೆ ಅನುಕೂಲಸ್ಥಿತಿಯು ಕಾಣುತ್ತದೆ. ಬೆಲ್ಜಿಯಮ್ಮಿನಲ್ಲೂ, ಅರ್ರಾಸಿಗೆ ಉತ್ತರದಲ್ಲೂ, ಎಯನ್ನಿಗೆ ಉತ್ತರದಲ್ಲೂ ಮದ್ದಿನ ಗೋಳಗಳನ್ನು ಭೂಮಿಯಲ್ಲಿ ನಟ್ಟು ಹಾರಿಸಿ ಶತ್ರುಗಳನ್ನು ಕೊಲ್ಲುವುದು, ಸಿಡಿಮದ್ದಿನ ಗೋಳಗಳನ್ನು ಕೈಯಲ್ಲಿ ಹಿಡಿದು ಪರಸ್ಪರ ಎಸೆದಾಡುವುದು, ಬಯಲಿನಲ್ಲಿ ಒಬ್ಬರಮೇಲೊಬ್ಬರು ಟಾರ್ಪಿಡೋಗಳನ್ನು ಬಿಟ್ಟಾಡುವುದು, ಸನೀನಿನ ತಿವಿದಾಟ, ಮುಷ್ಟಾಮುಷ್ಟಿ, ಫಿರಂಗಿಯೇಟು, ತುಪಾಕಿ ಗುಂಡುಗಳ ಸುರಿಮಳೆ, ವಿಷಧೂಮಪ್ರಯೋಗ- ಈ ತೆರನಾದ ಯುದ್ಧಕ್ರಿಯೆಗಳೆಲ್ಲಾ ಅವಿಚ್ಛಿನ್ನವಾಗಿ ಕಳೆದ ವಾರದಲ್ಲಿ ನಡೆದಿರುವುವೆಂಬ ಯುದ್ಧವಾರ್ತೆಯು ಬಂದಿದೆ. ಮ್ಯೂಜ್ ಗುಡ್ಡಗಳ ಮೇಲೂ, ಲಾಬ್ರಂತಿನ ಹತ್ತಿರವೂ ವಾಸ್ಜೆಸ್ಸಿನಲ್ಲೂ ಜರ್ಮನರು ತಾವು ಕಳೆದುಕೊಂಡ ಸ್ಥಾನಗಳನ್ನು ಮರಳಿ ಹಿಡಿದುಕೊಳ್ಳಬೇಕೆಂದು ಎಷ್ಟೋ ಸಾಹಸದ ಯುದ್ಧಗಳನ್ನು ಮಾಡಿದರೂ ಸಫಲರಾಗಿಲ್ಲವು. ಅಲ್ಸೆಸ್-ಲೊರೈನ್-ಜಿಲ್ಲೆಗಳಲ್ಲೂ ಜರ್ಮನರು ಫ್ರೆಂಚರನ್ನು ಹಿಮ್ಮೆಟ್ಟಿಸಿರುವುದಿಲ್ಲ. ಫ್ರೆಂಚರು ಅಲ್ಲಿ ಹಿಡಿದುಕೊಂಡಿರುವ ಪ್ರದೇಶಗಳೆಲ್ಲಾ ಅವರಧೀನದಲ್ಲೇ ಇವೆ. ಇಷ್ಟರಲ್ಲೇ ಜರ್ಮನರು ಹೊಸಸೈನ್ಯಗಳನ್ನು ವಿಶೇಷವಾಗಿ ತಂದು ಮಹಾಯುದ್ಧಗಳನ್ನು ಆರಂಭಿಸುವರೆಂಬ ಸುದ್ದಿಯಿರುವುದರಿಂದ ಅದರ ಸ್ಥಿತಿಪರ್ಯವಸಾನಗಳು ನಿರೀಕ್ಷಣೀಯವಾಗಿವೆ.

ಪೂರ್ವರಣರಂಗ.

ಜರ್ಮನಿ ಆಸ್ಟ್ರಿಯಾದ ಸೇನೆಗಳು ಗೆಲೀಷಿಯಾದಿಂದ ಪೋಲಂಡಿನೊಳಕ್ಕೆ ಅದರ ಆಗ್ನೇಯಭಾಗದಿಂದ ನುಗ್ಗುವುದಕ್ಕೂ ಅದರ ಮುಖ್ಯಪಟ್ಟಣವಾದ ವಾರ್ಸಾವನ್ನು ಹಿಡಿದುಕೊಳ್ಳುವುದಕ್ಕೂ ಪ್ರಯತ್ನಿಸುತ್ತಿವೆ. ಅವರು ವೈರಾಜ್‌ಬಗ್‌ನದಿಗಳಿಗೆ ಮಧ್ಯದಲ್ಲಿ ನಮ್ಮಮೇಲೆ ಬಿದ್ದು ಹಿಂಮೆಟ್ಟಿಸಲ್ಪಟ್ಟು ನಾಸುಜ್‌ಪ್ರಾಂತ್ಯಕ್ಕೆ ಮರಳುತ್ತಿದ್ದಾರೆಂದು ಜೂನ್ ತಿಂಗಳ ಕೊನೆಯದಿನ ರಷ್ಯನರು ಪ್ರಕಟಿಸಿದರು. ಬಗ್‌ನದಿ ವಿಶ್ಚುಲಾ ನದಿಗಳ ಮಧ್ಯದಲ್ಲಿ ರಷ್ಯನ್ ಸೈನ್ಯಗಳು ಹಿಂಜರಿಯುತ್ತಿವೆಯೆಂದು ಆಸ್ಟ್ರಿಯನ್ನರು ಪ್ರಕಟಿಸಿದ್ದಾರೆ. ಆಸ್ಟ್ರಿಯಾ ಜರ್ಮನಿ ಸೇನೆಗಳು ಪ್ರಾಂಪಲ್ಲಿನ ಹತ್ತಿರವಿರುವ ಒಂದು ಗುಡ್ಡವನ್ನು ಆಕ್ರಮಿಸಿಕೊಂಡಿವೆ. ವಿಶ್ಚುಲಾಕ್ಕೆ ಪೂರ್ವದಲ್ಲಿ ನಡೆದ ಯುದ್ಧದಲ್ಲಿ ಶತ್ರುಗಳಿಗೆ ಜಯಲಾಭವಾದುದರಿಂದ ರಷ್ಯಾದವರು ವಿಶ್ಚುಲಾನದಿಯ ಪಶ್ಚಿಮಭಾಗದಲ್ಲಿರುವ ಪ್ರದೇಶಗಳಲ್ಲಿ ಒಂದೊಂದನ್ನಾಗಿ ಬಿಟ್ಟುಹೋಗುತ್ತಿದ್ದಾರೆ. ಮತ್ತೂ ಅವರು ಪ್ರಬಲಸ್ಥಾನಗಳಾದ ಜಯಿಕೋಸ್ಟ್—ಬಜ್ರಾಸ್‌ನೋ ಎಂಬ ಸ್ಥಲಗಳನ್ನೂ ಕೂಡ ಬಿಟ್ಟುಹೋಗಿರುವರೆಂದು ಆಸ್ಟ್ರಿಯನ್ನರು ಪ್ರಕಟಿಸಿದ್ದಾರೆ. ಲೆಂಬರ್ಗಿನ ಪೂರ್ವದಲ್ಲಿ ಯಾವ ಬದಲಾವಣೆಯೂ ಇಲ್ಲವೆಂದು ಜರ್ಮನರು ಪ್ರಕಟಿಸಿದ್ದಾರೆ. ಜುಗ್ನೇಯಿಲಾಕ್ಕೆ ಪಶ್ಚಿಮದಲ್ಲೂ ನೀಸ್ಟರ್ ನದಿಯಮೇಲಿರುವ ಹೀಲಿಯನ್ನಿನ ಹತ್ತಿರವೂ ನಾವು ಶತ್ರುಗಳನ್ನು ಹೊಡೆದೋಡಿಸಿದೆವೆಂದು ರಷ್ಯನರು ಪ್ರಕಟಿಸಿದ್ದಾರೆ.

ಇದುವರೆಗೆ ರಷ್ಯನರು ಗೆಲೀಷಿಯಾದ ದಕ್ಷಿಣಭಾಗದಲ್ಲಿ ಬಹು ಪ್ರದೇಶವನ್ನು ಬಿಟ್ಟುಹೋಗಿರುವುದು ನಿಜವಾದರೂ ಸಂಪೂರ್ಣವಾಗಿ ಆ ದೇಶಭಾಗವನ್ನೆಲ್ಲಾ ಬಿಟ್ಟುಹೋಗಿರುವುದಿಲ್ಲ. ಉತ್ತರಗೆಲೀಷಿಯಾದಲ್ಲಿ ವಿಶೇಷ ನದೀಮಯವಾಗಿ ಸುರಕ್ಷಿತವಾಗಿರುವ ಸ್ಥಲಗಳಲ್ಲಿ ಅವರು ನಿಂತುಕೊಂಡಿದ್ದಾರೆ. ಅಲ್ಲಿ ಶತ್ರುಗಳನ್ನು ಅವರು ಸಂಪೂರ್ಣವಾಗಿ ಇದಿರಿಸುವವರಾಗಿದ್ದಾರೆ. ಆ ಕೆಲಸವನ್ನು ಅವರು ಈಗ ಅಲ್ಲಿ ಮಾಡುತ್ತಿದ್ದಾರೆ. ತಮ್ಮ ಬಲವು ಸಮಗ್ರವಾಗಿ, ಶತ್ರುಗಳ ಸ್ಥಿತಿ ಸ್ವಲ್ಪ ದುರ್ಬಲವಾದ ಸಂಧಿಯನ್ನು ಸಾಧಿಸಿ ಅವರು ಮರಳಿ ದಿಗ್ವಿಜಯಕ್ಕಾಗಿ ಮುಂದಕ್ಕೆ ಸಾಗುವ ಕಾರ್ಯವನ್ನು ಬಿಡುವವರಾಗಿಲ್ಲ. ಉತ್ತರಗೆಲೀಷಿಯಾದಲ್ಲಿ ನೀಸ್ಟರ್‌ನದಿಯ ಹತ್ತಿರ ಶತ್ರುಗಳು ಈಗ ಎಷ್ಟು ಶ್ರಮಪಟ್ಟರೂ ದಕ್ಷಿಣಭಾಗದಲ್ಲಿ ಸುಲಭವಾಗಿ ಶತ್ರುಗಳನ್ನು ಹಿಂಮೆಟ್ಟಿಸಿದಂತೆ ಇಲ್ಲಿ ಮಾಡಲಾರದೆ ಪೇಚಾಡುತ್ತಿದ್ದಾರೆ. ಉತ್ತರಗೆಲೀಷಿಯಾದಲ್ಲಿ ಪಶ್ಚಿಮಭಾಗದಿಂದ ಶತ್ರುಗಳು ಸ್ವಲ್ಪ ಒಳಕ್ಕೆ ನುಗ್ಗಿಹೋಗಿದ್ದಾರೆ. ಬಗ್‌ನದಿಯ ಪೂರ್ವಭಾಗದಲ್ಲಿ ರಷ್ಯನರು ಈ ಶತ್ರುಗಳ ದಾಳಿಯನ್ನು ತಡೆದಿದ್ದಾರೆ. ಅಲ್ಲಿಂದ ಹಿಡಿದು. ಪಶ್ಚಿಮಕ್ಕೆ ಕ್ರಾಸ್‌ನಿಕ್ಕನವರೆಗೂ ಶತ್ರುಸೈನ್ಯಗಳು ದಟ್ಟವಾಗಿ ನಿಂತಿರುವಂತೆ ಕಾಣುತ್ತದೆ. ಕ್ರಾಸ್ನಿಕ್ಕಿನ ಹತ್ತಿರವೂ ರಷ್ಯನರು ಶತ್ರುಗಳ ಆಟವನ್ನು ಸಾಗಗೊಡದೆ ತಡೆದುಬಿಟ್ಟಿದ್ದಾರೆ. ಅಲ್ಲಿಂದ ಹಿಡಿದು ಉತ್ತರಕ್ಕೂ ಪಶ್ಚಿಮಕ್ಕೂ ಯುದ್ಧಗಳು ಆಗುತ್ತಲೇ ಇವೆ. ಉತ್ತರಪೋಲಂಡಿನಲ್ಲೂ ಅತ್ತ ಬಾಲ್ಟಿಕ್‌ಜಿಲ್ಲೆಯಲ್ಲೂ ಯುದ್ಧಕಾರ್ಯಗಳು ವೀರಾವೇಶದಿಂದ ಆಗುತ್ತಲೇ ಇವೆ.

ಗೆಲೀಷಿಯಾದಿಂದ ಪೋಲೆಂಡಿನಕಡೆಗೆ ನುಗ್ಗುತ್ತಿರುವ ಜರ್ಮನ್ ಆಸ್ಟ್ರಿಯನ್ ಸೇನೆಯು ಜನರಲ್ ಮೆಕಿನ್ಸನ್ ಎಂಬ ದಳಪತಿಯ ಅಧ್ಯಕ್ಷತೆಯಲ್ಲಿ ಸಾಗುತ್ತಲಿವೆ. ಈ ಸೇನೆಯು ಜಿಮೆಸೊ-ಸೋಕಲ್ ಪಟ್ಟಣಗಳ ಮಧ್ಯದಲ್ಲಿ ಈಶಾನಮುಖವಾಗಿ ೫೦ ಮೈಲಿಗಳಗಲ ವಿಸ್ತರಿಸಿಕೊಂಡು ಹೋಗುತ್ತಿದ್ದಿತೆಂದು ಸುದ್ದಿಬಂದಿದೆ. ಈ ಸೋಕಲ್ ಎಂಬುದು ಗೆಲೀಷಿಯಾದಲ್ಲಿನ ಒಂದು ಪಟ್ಟಣವು. (ಇದು ಲೆಂಬರ್ಗಿಗೆ ಈಶಾನ್ಯದಲ್ಲಿ ೪೫ ಮೈಲಿಗಳ ದೂರದಲ್ಲಿ ಪೋಲಂಡಿನ ಎಲ್ಲೆಕಟ್ಟಿನ ಹತ್ತಿರ ಇರುವುದು.) ಈ ಮಹಾಸೇನೆಯು ತಮಗೆ ಯುದ್ಧಕ್ಕೆ ಅನುಕೂಲವಾದ ಸ್ಥಲವು ಸಿಕ್ಕುವವರೆಗೂ ನುಗ್ಗಿಹೋಗುತ್ತಿದೆ. ಈ ಮಹಾಸೈನ್ಯವು ಛೋಲಮ್ಮಿನಹತ್ತಿರ (ಇದು ಪೋಲಂಡಿನಲ್ಲಿರುವ ಲೋಹಮಾರ್ಗಗಳ ಸೇರುವಿಕೆಯುಳ್ಳ ಒಂದು ಪಟ್ಟಣ. ಎಲ್ಲೆಕಟ್ಟಿಗೆ ೫೦ ಮೈಲಿಗಳ ದೂರದಲ್ಲಿ ಬಗ್‌ನದಿಗೂ ವಿಟ್ಟಿಸ್ ನದಿಗೂ ಮಧ್ಯದಲ್ಲಿದೆ.) ಇದನ್ನು ಹಿಡಿದುಕೊಳ್ಳಬೇಕೆಂದು ಪ್ರಯತ್ನಿಸಿತು, ಆದರೆ ಅವರ ಯತ್ನವನ್ನು ರಷ್ಯನರು ಸಾಗಗೊಡಲಿಲ್ಲ. ಕಳೆದೆರಡುವಾರಗಳಲ್ಲಿ ರಷ್ಯನರು ಈ ಶತ್ರುದಳವನ್ನು ಇದಿರಿಸಿ ಮಹಾಯುದ್ಧವನ್ನು ಮಾಡಿದುದರಲ್ಲಿ ಶತ್ರುಗಳಕಡೆಯ ೧೫ ಸಾವಿರಮಂದಿ ಸೈನಿಕರನ್ನೂ, ೨೩ ಯಂತ್ರದ ಫಿರಂಗಿಗಳನ್ನೂ ಹಿಡಿದುಕೊಂಡಿದ್ದಾರೆ. ಶತ್ರುಗಳಪಕ್ಷದಲ್ಲಿ ದಿನ ೧ ಕ್ಕೆ ೧೦ ಸಾವಿರ ಮಂದಿಗಳಂತೆ ಈ ರಣರಂಗದಲ್ಲಿಯೇ ಹತರಾಗುತ್ತಿರುವರಂತೆ. ರಷ್ಯಾ ಚಕ್ರವರ್ತಿಯವರು ತಮ್ಮ ದೇಶದಲ್ಲೆಲ್ಲಾ ಒಂದು ಪ್ರಕಟನೆಯನ್ನು ಮಾಡಿ ಎಲ್ಲಾ ಪ್ರಜೆಗಳೂ ಅತ್ಯಂತೋತ್ಸಾಹದಿಂದ ಪ್ರಯತ್ನಿಸಿ, ಜಯವನ್ನು ಸಂಪಾದಿಸಬೇಕೆಂದೂ ಎಲ್ಲಾ ಕಾರ್ಮಾಗಾರದವರೂ ಮದ್ದು ಗುಂಡು ಮೊದಲಾದ ಯುದ್ಧಸಾಮಗ್ರಿಗಳನ್ನು ವಿಪುಲವಾಗಿ ನಿರ್ಮಿಸಿ ಒದಗಿಸಿಕೊಡಬೇಕೆಂದೂ ಪ್ರೋತ್ಸಾಹಪಡಿಸಿದ್ದಾರೆ. ಅಲ್ಲಿ ಯುದ್ಧಸಾಮಗ್ರಿಗಳ ನಿರ್ಮಾಣದ ಮೇಲ್ವಿಚಾರಣೆಗಾಗಿಯೇ ೧ ಸಂಘವು ಏರ್ಪಡಿಸಲ್ಪಟ್ಟಿದೆ. ಮತ್ತು ರಷ್ಯಾದೇಶದಲ್ಲೂ ಕೂಡ ಇಂಗ್ಲೆಂಡ್ ರಾಜ್ಯದಲ್ಲಿನಂತೆ ಎಲ್ಲಪಕ್ಷದ ಪ್ರತಿನಿಧಿಗಳನ್ನೂ ಒಳಗೊಂಡ ನೂತನಮಂತ್ರಿಮಂಡಲವು ಈಚೆಗೆ ಸ್ಥಾಪಿಸಲ್ಪಟ್ಟು ಅಧಿಕೋತ್ಸಾಹದಿಂದ ಯುದ್ಧಕಾರ್ಯವನ್ನು ತುದಿಮುಟ್ಟಿಸಬೇಕೆಂಬ ಸಂಕಲ್ಪವು ಮಾಡಲ್ಪಟ್ಟಿದೆ.

ತುರ್ಕಿ.

ಡಾರ್ಡಿನಲ್ಸಿಗೆ ಹೋಗಿರುವ ಸೈನ್ಯಕ್ಕೆ ಮುಖ್ಯದಳಪತಿಯಾಗಿದ್ದ ಫ್ರೆಂಚರ ಜನರಲ್ ಗೌರೋಡ್‌ರವರು ಯುದ್ಧರಂಗದಿಂದ ಒಂದು ವೈದ್ಯಶಾಲೆಗೆ ಹೋಗುತ್ತಿರುವಾಗ ಒಂದು ಒಡೆದ ಗುಂಡಿನಚೂರು ಅವರಿಗೆ ಬಡಿದುದರಿಂದ ಬಲವಾದ ಗಾಯವಾಯಿತು. ಪ್ರಾಣಭಯವೇನೂಇಲ್ಲ. ಇವರಿಗೆ ಬದಲಾಗಿ ಬೈಕಾಪ್ ಎಂಬ ಜನರಲ್ಲನ್ನು ಡಾರ್ಡಿನಲ್ಸಿಗೆ ಕಳುಹಿಸಿದ್ದಾರೆ. ಡಾರ್ಡಿನಲ್ಸಿನಲ್ಲಿರುವ ಅರ್ಚಿಬಾಬಾವಿನ ಉತ್ತರಕ್ಕೂ ಕಿಲಿದ್‌ಬಹಾರಿನ ದಕ್ಷಿಣಕ್ಕೂ ಮಿತ್ರಮಂಡಲಿಯವರು ವಶಪಡಿಸಿಕೊಂಡಿರುವ ಸ್ಥಲಗಳನ್ನು ಪಿಡಿಸಿಕೊಳ್ಳಬೇಕೆಂದು ತುರ್ಕಿಸೈನಿಕರು ರಾತ್ರಿಯ ಹೊತ್ತು ಫಿರಂಗಿಗುಂಡುಗಳ ಮದ್ದಿನಗೋಳಗಳ ಸಹಾಯದಿಂದ ಕದನಕಾಳಗವನ್ನು ಮಾಡಿದರು. ಕಡೆಗೆ ಬಹಳ ನಷ್ಟಪಟ್ಟು ಹಿಂದಿರುಗಿಬಂದರು. ಆಗ ಇಂಗ್ಲೀಷರ ಹಡಗು ಮಹಾಜ್ಯೋತಿ ಪ್ರಕಾಶವನ್ನು ತುರ್ಕಿಸೈನ್ಯದಮೇಲೆ ಕೆಡಹಿ, ಫಿರಂಗಿಗುಂಡುಗಳ ಮಳೆಗರೆದು ಅವರಿಗೆ ಬಹುನಷ್ಟವನ್ನುಂಟುಮಾಡಿತು. ಬೆಳಗಾದಮೇಲೆ ಫ್ರೆಂಚ್‌ಸೈನಿಕರು ಮುಂದಕ್ಕೆ ಸಾಗಿಹೋಗಿ ಅಲ್ಲಿದ್ದ ಶತ್ರುಗಳ ಒಂದು ಕಂದಕವನ್ನೂ ಆ ಸುತ್ತಿನ ಶತ್ರುಸ್ಥಾನಗಳೆಲ್ಲವನ್ನೂ ಸಹ ವಶಪಡಿಸಿಕೊಂಡರು. ಅಲ್ಲೆಲ್ಲಾ ತುರ್ಕಿಸೈನ್ಯಕ್ಕೆ ಬಹಳ ನಷ್ಟವುಂಟಾಯಿತು. ಇದುವರೆಗೆ ಹಿಡಿದ ಸ್ಥಾನಗಳನ್ನೆಲ್ಲಾ ಮಿತ್ರಮಂಡಲಿಯ ಸೈನ್ಯಗಳು ಬಲಪಡಿಸಿ ರಕ್ಷಿಸಿಕೊಂಡಿವೆ. ಡಾರ್ಡಿನಲ್ಸಿನಲ್ಲಿರುವ ಹೆಲ್ಲೀಸ್ ತುದಿಯಹತ್ತಿರ ಫ್ರೆಂಚರ ಕಾರ್ತೇಜಿ ಎಂಬ ಯುದ್ಧದಹಡಗು ತುರ್ಕಿಯವರ ಟಾರ್ಪೆಡೋ ಬಡಿತದಿಂದ ಮುಳುಗಿಹೋಯಿತು. ಇದರಲ್ಲಿದ್ದ ನಾವಿಕರಲ್ಲಿ ೬೬ ಮಂದಿ ಬದುಕಿಸಲ್ಪಟ್ಟರು.

ಇಟಲಿ.

ಇಸಾಂಜೋಪ್ರಾಂತದಲ್ಲಿ ಮಳೆಯು ಹೆಚ್ಚಾಗಿರುವುದರಿಂದ ಯುದ್ಧಕಾರ್ಯಕ್ಕೆ ಪ್ರತಿಬಂಧಕವಾಗಿದೆ. ಟ್ರೆಂಟಿಯ ಸುತ್ತಿನಲ್ಲಿ ಫಿರಂಗಿಯುದ್ಧವು ಭಯಂಕರವಾಗಿ ನಡೆಯುತ್ತಿದೆ. ಇಟಲಿಯವರು ಪರ್ವತಪ್ರದೇಶಗಳಲ್ಲಿ ಆಸ್ಟ್ರಿಯನ್ನರ ದೇಶಕ್ಕೆ ನುಗ್ಗಬೇಕಾಗಿರುವುದರಿಂದ ಅವರ ಗಮನವು ಬಹಳ ಮಂದವಾಗಿಯೂ ಕಷ್ಟಸಾಧ್ಯವಾಗಿಯೂ ಇದೆ. ಆಸ್ಟ್ರಿಯನ್ನರು ಹಜ್ಜೆಹಜ್ಜೆಗೆ ಪ್ರತಿಭಟಿಸುತ್ತಿದ್ದಾರೆ. ಟ್ರೆಸ್ಟಿಪಟ್ಟಣದಮೇಲೆ ಇಟಲಿ ವೈಮಾನಿಕರು ಸಿಡಿಮದ್ದುಗಳನ್ನು ಹಾಕಿ ಮದ್ದಿನ ಕೊಟ್ಟಾರ ಮೊದಲಾದುವುಗಳನ್ನು ಸುಟ್ಟು ಅನರ್ಥಮಾಡಿದ್ದಾರೆ. ಈಗ ಆ ಪಟ್ಟಣದಿಂದ ಉಳಿದ ಪಟ್ಟಣಗಳಿಗೆ ಇದ್ದ ವಾರ್ತಾತಂತ್ರಿ ಲೋಹಮಾರ್ಗ ಮೊದಲಾದ ಸಂಬಂಧಗಳೆಲ್ಲಾ ತಪ್ಪಿಸಲ್ಪಟ್ಟಿವೆ. ಕಾಸಿಕೋಪಾದ ಬೆಟ್ಟದಹತ್ತಿರ ತೀಕ್ಷ್ಣವಾದ ಯುದ್ಧವಾಗುತ್ತಿದೆ. ಇಲ್ಲಿ ಇಟಲಿಯವರು ೪೦೦ ಮಂದಿ ಆಸ್ಟ್ರಿಯನ್‌ಸೈನಿಕರನ್ನು ಸೆರೆಹಿಡಿದರು. ಈಚೆಗೆ ಇಟಲಿಯವರು ಟಾಲ್ಮಿನೋಪಟ್ಟಣವನ್ನು ವಶಪಡಿಸಿಕೊಂಡರೆಂದು ವರ್ತಮಾನಬಂದಿದೆ. ಇದನ್ನು ಆಸ್ಟ್ರಿಯನ್ನರು ಬಿಟ್ಟುಹೋಗಿ, ತಾವೇ ಅದರಮೇಲೆ ಫಿರಂಗಿಗುಂಡುಗಳನ್ನು ಹೊಡೆದು ಹಾಳ್ಮಾಡುತ್ತಿರುವರಂತೆ.

ಮಾಂಟಿನೀಗ್ರೋ.

ಮಾಂಟಿನೀಗ್ರೋದೇಶದ ಸೈನಿಕರು ಆಸ್ಟ್ರಿಯಾಕ್ಕೆ ಸೇರಿದ್ದ ಸ್ಕುಟಾರಿ-ಅಲೆಸ್ಸಿಯೋ ಎಂಬ ಪಟ್ಟಣಗಳನ್ನು ವಶಪಡಿಸಿಕೊಂಡುವು. ಸರ್ವಿಯನ್ನರಿಗೆ ನಾವು ಸೇನಾಸಹಾಯಮಾಡದಂತೆ ಅಭ್ಯಂತರಪಡಿಸುವುದಕ್ಕಾಗಿ ಆಸ್ಟ್ರಿಯಾದವರು ಅಲ್ಸೇನಿಯಾದಲ್ಲಿ ಕಪಟಾಚರಣೆಮಾಡುತ್ತಿದ್ದುದರಿಂದ ನಾವು ಹೀಗೆ ಮಾಡಬೇಕಾಯಿತು. ಈಗ ನಾವು ಸರ್ವಿಯಾಕ್ಕೆ ಸಹಾಯಮಾಡಲು ಅನುಕೂಲವಾಯಿತು ಎಂದು ಮಾಂಟಿನೀಗ್ರೋದವರು ಪ್ರಕಟಿಸಿರುತ್ತಾರೆ.

ದಕ್ಷಿಣಾಫ್ರಿಕಾ.

ಜನರಲ್ ಬೋಥಾರವರ ಸೈನಿಕರು ದಕ್ಷಿಣ ಪಶ್ಚಿಮಾಫ್ರಿಕಾದಲ್ಲಿರುವ ಜರ್ಮನರ ಸ್ವಾಸ್ಥ್ಯದಲ್ಲಿರುವ ಆಕ್ಟೇವಿ ಎಂಬ ಪ್ರದೇಶವನ್ನು ವಶಪಡಿಸಿಕೊಂಡರು. ಇದು ಬೇಕಾದಷ್ಟು ಜಲವಸತಿಯುಳ್ಳ ಮುಖ್ಯಸ್ಥಲವು. ದಕ್ಷಿಣಾಫ್ರಿಕಾಪ್ರಭುತ್ವದವರು ಸಾಮ್ರಾಜ್ಯಸರ್ಕಾರಕ್ಕೆ ಕೆಲವು ಸ್ವಚ್ಛಂದಸೈನಿಕರನ್ನೂ ಕೆಲಫಿರಂಗಿಗಳನ್ನೂ ಗೋಲಂದಾಜುಸೈನಿಕರನ್ನೂ ಕಳುಹಿಸಿಕೊಡಲು ಯೋಚಿಸಿ. ಆ ಸಂಗತಿಯನ್ನು ಸರ್ಕಾರಕ್ಕೆ ಶ್ರುತಪಡಿಸಿಕೊಂಡಿರಲು ಅವರು ಒಪ್ಪಿ ಉತ್ತರವನ್ನು ಕೊಟ್ಟಿದ್ದಾರೆ.

ಜಲಯುದ್ಧ.

ಜರ್ಮನರ ಕೆಲವು ಯುದ್ಧದ ಹಡಗುಗಳೂ ತೀರವನ್ನು ಕಾಯುವ ಕಾವಲಿನ ಕೆಲ ಹಡಗುಗಳೂ, ೪ ಕ್ರೂಯಿಝರುಗಳೂ, ಕೆಲವು ಡಿಸ್ಟ್ರಾಯರ್‌ಗಳೂ ಸಹ ಕಳೆದ ತಿಂಗಳ ಕಡೆಯಲ್ಲಿ ರಷ್ಯನ್ನರಿಗೆ ಸೇರಿದ ಬಾಲ್ಟಿಕ್‌ಸಮುದ್ರದ ತೀರದಲ್ಲಿರುವ ವಿಂಡೋಪಟ್ಟಣದ ಬಳಿಗೆ ಹೋಗಿ ಫಿರಂಗಿಗುಂಡುಗಳನ್ನು ಅದರ ಮೇಲೆ ಹೊಡೆದು, ಹಡಗುಗಳಲ್ಲಿದ್ದ ತಮ್ಮ ಸೈನ್ಯವನ್ನು ಅಲ್ಲಿಳಿಸುವುದಕ್ಕೆ ಪ್ರಯತ್ನಿಸಿದುವು. ಅಷ್ಟರಲ್ಲಿ ರಷ್ಯನರ ಯುದ್ಧನೌಕೆಗಳು ಬಂದು ಶತ್ರುಗಳ ಹಡಗುಗಳಮೇಲೆ ಗುಂಡುಗಳನ್ನು ಹೊಡೆದು ಯುದ್ಧಮಾಡಿ ಹಿಂದಕ್ಕೋಡಿಸಿಬಿಟ್ಟುವು. ಆ ಸಮಯದಲ್ಲಿ ಜರ್ಮನರ ಒಂದು ಯುದ್ಧದಹಡಗು ನೀರಿನಲ್ಲಿದ್ದ ಮದ್ದಿನ ಗೋಳಕ್ಕೆ ಬಡಿದು ಮುಳುಗಿಹೋಯಿತು. ಈ ಯುದ್ಧವು ೧೫ ನಿಮಿಷಗಳಕಾಲ ಮಾತ್ರ ನಡೆಯಿತು. ರಷ್ಯನರಕಡೆ ಯಾವುದೊಂದು ಪ್ರಾಣಹಾನಿಯೇಆಗಲಿ ಇನ್ನಾವತೆರದ ನಷ್ಟವೇಆಗಲಿ ಸ್ವಲ್ಪವೂ ಆಗಲಿಲ್ಲ.

ಜುಲೈ ತಾ|| ೧ ರ ದಿವಸ ಆದೇ ಬಾಲ್ಟಿಕ್‌ಸಮುದ್ರದಲ್ಲಿ ಜರ್ಮನ್-ರಷ್ಯಾ ಯುದ್ಧನೌಕೆಗಳಿಗೆ ಒಂದು ಸಣ್ಣಯುದ್ಧವಾಯಿತು. ಹೇಗೆಂದರೆ—ಆ ದಿನ ಬೆಳಗಿನ ೮ ಗಂಟೆಯಲ್ಲಿ ಮಂಜು ಹೊಗೆಯಂತೆ ಸಮುದ್ರದಮೇಲೆ ದಟ್ಟವಾಗಿ ಆವರಿಸಿಕೊಂಡಿರುವ ಸಮಯದಲ್ಲಿ ರಷ್ಯನರ ಕೆಲವು ಯುದ್ಧದ ಹಡಗುಗಳು ಬಾಲ್ಟಿಕ್‌ಸಮುದ್ರದ ದಕ್ಷಿಣಭಾಗದಲ್ಲಿ ಬರುತ್ತಿರುವಾಗ ಜರ್ಮನರ ಕೆಲವು ಹಗುರವಾದ ಕ್ರೂಯಿಝರುಗಳೂ ಕೆಲವು ಡಿಸ್ಟ್ರಾಯರುಗಳೂ ಕಣ್ಣಿಗೆ ಬಿದ್ದುವು. ಕೂಡಲೇ ರಷ್ಯನ್ ಹಡಗುಗಳು ಅವುಗಳಕಡೆಗೆ ತಿರಿಗಿ ಗುಂಡುಗಳನ್ನು ಹಾರಿಸುತ್ತ ಯುದ್ಧಕ್ಕುಪಕ್ರಮಿಸಿದುವು. ಒಂದು ಜರ್ಮನ್ ಕ್ರೂಯಿಝರಿಗೆ ಬಲವಾದ ಏಟುಬಿದ್ದುದರಿಂದ ಅದು ತನ್ನ ಧ್ವಜಪಟವನ್ನು ಇಳಿಯಿಸಿಬಿಟ್ಟು ದಡದಕಡೆಗೆ ಓಡಿಹೋಯಿತು. ಉಳಿದ ಜರ್ಮನ್ ಹಡಗುಗಳೂ ಕಾಲಿಗೆ ಬುದ್ಧಿಹೇಳಿ ತಲೆತಪ್ಪಿಸಿಕೊಂಡುವು. ಆ ಮಧ್ಯದಲ್ಲಿ ಜರ್ಮನರು ರಷ್ಯನ್ ಹಡಗುಗಳಮೇಲೆ ಟಾರ್ಪೆಡೋಗಳನ್ನು ಪ್ರಯೋಗಿಸಬೇಕೆಂದು ಪ್ರಯತ್ನಿಸಿದರು. ಆದರೆ ಸಫಲವಾಗಲಿಲ್ಲ. ದಡದ ಕಡೆಗೆ ಓಡಿಹೋದ ಜರ್ಮನರ ಹಡಗು ನೀರಿನಲ್ಲಿ ಮದ್ದಿನಗೋಳಗಳನ್ನು ಹೂಳುವ ಕ್ರೂಯಿಝರಾಗಿದ್ದಿತು. ಅದು ಸ್ವೀಡನ್ ದೇಶಕ್ಕೆ ಸೇರಿದ ಗೋತ್ಲಾಂಡುದ್ವೀಪದ ದಡಕ್ಕೆಹೋಗಿ ನಾಟಿಕೊಳ್ಳುವವರೆಗೆ ಅದನ್ನು ರಷ್ಯನರು ಅಟ್ಟಿಬಿಟ್ಟು ಹಿಂದಿರುಗಿ ಬಂದರು. ಅದಕ್ಕೆ ರಷ್ಯನರು ಹೊಡೆದೇಟಿನಿಂದ ಅದರೊಳಗಿದ್ದ ೨೧ ಜನರು ಸತ್ತರು; ೨೭ ಮಂದಿಗೆ ಗಾಯಗಳಾದುವು. ಬಳಿಕ ರಷ್ಯನರ ಹಡಗುಗಳು ತಮ್ಮ ದಾರಿಯನ್ನು ಹಿಡಿದುಹೋಗುತ್ತಿರಲು ೧೦ ಗಂಟೆಯಹೊತ್ತಿನಲ್ಲಿ ಜರ್ಮನರ ಇನ್ನು ನಾಲ್ಕು ಡಿಸ್ಟ್ರಾಯರುಗಳು ಬರುತ್ತಿದ್ದುದು ಕಂಡುಬಂದಿತು. ಅವುಗಳ ಮೇಲೂ ರಷ್ಯನರ ಹಡಗುಗಳು ಬೀಳಲು ಸ್ವಲ್ಪಹೊತ್ತು ಫಿರಂಗಿಗುಂಡಿನ ಬಡಿದಾಟವಾಯಿತು. ಜರ್ಮನರ ಹಡಗುಗಳು ಸೋತು ದಕ್ಷಿಣದಿಕ್ಕಿಗೆ ಓಡಿದುವು. ಅವುಗಳ ಜತೆಯಲ್ಲಿದ್ದ ಸಬ್‌ಮೆರೀನುಗಳು ರಷ್ಯನರ ಹಡಗುಗಳಮೇಲೆ ಬಿದ್ದು ಕಾದಾಡಬೇಕೆಂದು ಪ್ರಯತ್ನಿಸಿದುವು. ಆದರೆ ಅವುಗಳಾಟವೂ ಸಾಗಲಿಲ್ಲ. ಈ ಯುದ್ಧದಲ್ಲಿ ಜರ್ಮನರ ಹಡಗುಗಳಿಗೆ ಬಲವಾದ ಪೆಟ್ಟುಗಳು ಬಿದ್ದುದರಲ್ಲಿ ರೂರ್ ಎಂಬ ಹಡಗಿನಲ್ಲಿ ಬೆಂಕಿಹುಟ್ಟಿ ನಷ್ಟವಾಯಿತು. ರಷ್ಯನರಕಡೆ ೧೪ ಮಂದಿ ನಾವಿಕರಿಗೆ ಏಟುಬಿದ್ದಿರುವುದು. ಆದೇ ಬಾಲ್‌ಟಿಕ್‌ಸಮುದ್ರದಲ್ಲಿ ರಷ್ಯನರ ಸಬ್‌ಮೆರೀನು ಆಹಾರ್ಯಪದಾರ್ಥಗಳನ್ನೂ ಕಲ್ಲಿದ್ದಲನ್ನೂ ತುಂಬಿಕೊಂಡು ಹೋಗುತ್ತಿದ್ದ ೩ ಜರ್ಮನ್‌ಹಡಗುಗಳನ್ನೂ ಲಂಗರ್‌ಹಾಕಿ ನಿಂತಿದ್ದ ಮತ್ತೊಂದುಹಡಗನ್ನೂ ಮುಳುಗಿಸಿಬಿಟ್ಟಿರುವುದು. ರಷ್ಯಾದ ಯುದ್ಧದ ಹಡಗುಗಳಬಳಿಗೆ ಹೋಗಬೇಕೆಂದು ಪ್ರಯತ್ನಿಸುತ್ತಿದ್ದ ಒಂದು ಜರ್ಮನ್‌ಸಬ್‌ಮೆರೀನನ್ನು ರಷ್ಯನರ ಒಂದು ಯುದ್ಧದಹಡಗು ಮೆಟ್ಟಿ ನೀರಿನಲ್ಲಿ ಮುಳುಗಿಸಿ ಪಾತಾಳಗಾಣಿಸಿಬಿಟ್ಟಿತು. ಅದು ಮರಳಿ ತಲೆಯೆತ್ತಲೇಇಲ್ಲ. ಆದರೆ ಆ ರಷ್ಯಾಹಡಗಿಗೆ ಸ್ವಲ್ಪ ಏಟುಬಡಿದಿತು. ಮತ್ತೊಂದು ರಷ್ಯನ್ ಸಬ್‌ಮೆರೀನು ಬಾಸ್ಫರಸ್ ಜಲಸಂಧಿಯ ಮುಖದ್ವಾರದಲ್ಲಿ ಆಯುಧಸಮೇತವಾದ ಒಂದು ಶತ್ರುನೌಕೆಯೊಡನೆ ಕಾದಾಡಿ ಅದನ್ನು ದಡಮೆಟ್ಟಿಸಿಬಿಟ್ಟಿತು.

ಇಂಗ್ಲಾಂಡ್ ಪೂರ್ವಸಮುದ್ರತೀರದಲ್ಲಿದ್ದ "ಲೈಟ್ನಿಂಗ್" ಎಂಬ ಹಳೆಯ ಯುದ್ಧದ ಹಡಗೊಂದು ಮದ್ದಿನಗೋಳಕ್ಕೋ ಟಾರ್ಪಿಡೋವಿಗೋ ಬಡಿದಿತು. ಶಿಥಿಲವಾದ ಆ ಹಡಗು ಈಗ ನೌಕಾಶ್ರಯಸ್ಥಾನದಲ್ಲಿ ಸೇರಿಸಲ್ಪಟ್ಟಿದೆ. ಅದರಲ್ಲಿದ್ದ ನಾವಿಕರಲ್ಲಿ ೧೫ ಮಂದಿ ಏನಾದರೋ ಗೊತ್ತಾಗಲಿಲ್ಲ.

ಪತ್ರವ್ಯವಹಾರ.

ರೇವಣಸಿದ್ಧೇಶ್ವರನ ಬೆಟ್ಟ.

ಶ್ರೀಮನ್ಮಹಾರಾಜರವರ ವರ್ಧಂತಿ ಮಹೋತ್ಸವ ೨೩-೬-೧೫ ರಲ್ಲಿ ನಡೆದ ದಿನ ಶ್ರೀ ರೇವಣಸಿದ್ಧೇಶ್ವರಸ್ವಾಮಿಗೆ ಮಹಾರುದ್ರಾಭಿಷೇಕ ಸಹಸ್ರನಾಮಾರ್ಚನೆಗಳನ್ನು ನಡೆಸಿದನಂತರ ರಾಜಾಶೀರ್ವಾದಪೂರ್ವಕ ಶ್ರೀಮನ್ಮಹಾರಾಜರವರಿಗೂ ಶ್ರೀಮದ್ ಯುವರಾಜರವರಿಗೂ ಶ್ರೇಯಃಪ್ರಾರ್ಥನೆಯು ನೆರವೇರಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಚಿತ್ರದುರ್ಗದ ಮ॥ ರಾ॥ ಕಾಡಪ್ಪನವರ ಶೋಚನೀಯವಾದ ಮರಣವಾರ್ತೆ.

ಮ॥ ರಾ॥ ಸಾಹುಕಾರ್ ಕಾಡಪ್ಪನವರು ಇದೇ ಜೂನ್ ಮಾಹೆ ೧೦ ನೆ ತಾರೀಖಿನ ರಾತ್ರಿ ಕೈಲಾಸವಾಸಿಗಳಾದರೆಂದು ತಿಳಿಸಲು ತುಂಬಾ ವಿಷಾದವಾಗುತ್ತದೆ. ಇವರು ಸ್ವಮತವಿಷಯದಲ್ಲಿ ಅಸಾಧಾರಣವಾದ ಅಭಿಮಾನವುಳ್ಳವರಾಗಿದ್ದರು. ಅಲ್ಲದೆ ನಿಸ್ಪೃಹತೆ ದಯೆ ಧೈರ್ಯ ಸ್ಥೈರ್ಯ ಗಾಂಭೀರ್ಯಾದಿ ಸದ್ಗುಣಗಳು ಇವರಲ್ಲಿದ್ದುದರಿಂದ ಬಹುಜನಪ್ರೀತಿಗೆ ಪಾತ್ರರಾಗಿದ್ದರು. ಮತ್ತು ಸಾಹುಕಾರಿಕೆಯ ಲಕ್ಷಣಗಳು ಶೋಭಾಯಮಾನವಾಗಿ ತೋರುತ್ತಿದ್ದವು. ವೀರಶೈವರ ವಿದ್ಯಾಭಿವೃದ್ಧಿಗೆ ತುಂಬಾ ಸಹಾಯಮಾಡುತ್ತಿದ್ದ ಇವರು ಹೋದದ್ದು ಈ ಪ್ರಾಂತದ ವೀರಶೈವ ಮಂಡಳಿಗೆ ಗಾಢಾಂಧಕಾರವು ಮುಸುಕಿದಂತಾಯಿತು. ಅಲ್ಲದೆ ವೀರಶೈವ ಮತಾಭಿಮಾನದೇವತೆಯು ಇಂಥಾ ಆಶ್ರಯವನ್ನು ಕಳಕೊಂಡು ಮುಂದೆ ಯಾರನ್ನಾದರೂ ಕೂಡುವಳೋ ಕಾಡಿನಲ್ಲೇ ಅಡಗುವಳೋ ಕಾಣೆನು. ಶಿವಶಿವಾ! ಜಗದೀಶನು ಅವರ ಕುಟುಂಬಕ್ಕೆ ಉಂಟಾಗಿರುವ ಪತಿವಿಯೋಗದುಃಖವನ್ನು ಪರಿಹರಿಸಲೆಂದು ಪ್ರಾರ್ಥಿಸುತ್ತೇವೆ.

ಅಣಜಿ ಸಿದ್ಧಲಿಂಗಪ್ಪ
ಸಾಕೀನ ಭರಮಸಾಗರ.

ದಾವಣಗೆರೆ.

ಕಳೆದ ಜೂನ್ ತಾ॥ ೨೭ ನೆಯ ಮೈಸೂರ್ ಸ್ಟಾರ್ ಪತ್ರಿಕೆಯಲ್ಲಿ ದುಃಖಪ್ರದರ್ಶನಸಭೆ ಎಂಬ ಶಿರೋಲೇಖನದ ಕೆಳಗೆ, „ಮೈಸೂರು ಮಠದ ಚೆನ್ನವೀರಪ್ಪಯ್ಯನವರು ಚಿತ್ರದುರ್ಗದ ಮ॥ ರಾ॥ ಸಾಹುಕಾರ್ ಎಂ. ಬಿ. ಕಾಡಪ್ಪಣ್ಣನವರು ಕಳೆದ ತಾ॥ ೧೧ ರಲ್ಲಿ ಶಿವೈಕ್ಯರಾದುದರಿಂದ ವೀರಶೈವಸಮಾಜಕ್ಕುಂಟಾದ ದುಃಖವನ್ನು ಪ್ರದರ್ಶಿಸಲು ಈ ಸಭೆಯು ಸೇರಿದೆ ಎಂದು ಸೂಚಿಸಿದರು" ಎಂದಿದ್ದುದರಮೇಲೆ ಮೈಸೂರ ಮಠದ ಚೆನ್ನವೀರಪ್ಪಯ್ಯನವರ ವಿಚಾರದಲ್ಲಿ ಅವರ ಬಂಧುಮಿತ್ರರುಗಳು ಪರ್ಯಾಯವಾಗಿ ತಿಳಿದು ದುಃಖಪ್ರದರ್ಶನವನ್ನು ಸಹ ಮಾಡಿದರೆಂದು ಕೇಳುತ್ತೇನೆ. ಸಾ॥ ಕಾಡಪ್ಪನವರು ಶಿವೈಕ್ಯರಾದುದರಿಂದ ವೀರಶೈವಸಮಾಜಕ್ಕುಂಟಾಗಿರುವ ದುಃಖವನ್ನು ಪ್ರದರ್ಶಿಸಲು ಈ ಸಭೆಯು ಸೇರಿದೆ ಎಂದು ಮೈಸೂರ ಮಠದ ಚೆನ್ನವೀರಪ್ಪಯ್ಯನವರು ಸೂಚಿಸಿದರು. ಎಂದು ಬರೆಯುವುದಕ್ಕೆ ಬದಲು ಹಸ್ತದೋಷದಿಂದ ಶಬ್ದಗಳು ಹಿಂದುಮುಂದಾಗಿ ಬಿದ್ದುದರಿಂದ ಇಷ್ಟು ಅಸಂಗತಕ್ಕೆ ಕಾರಣವಾದುದಕ್ಕಾಗಿ ವಿಷಾದಿಸುತ್ತೇನೆ. ಶ್ರೀ ಮೈಸೂರ ಮಠದ ಚೆನ್ನವೀರಪ್ಪಯ್ಯನವರು ಸುರಕ್ಷಿತವಾಗಿರುತ್ತಾರೆಂದು ತಿಳುಹಲು ಆನಂದವಾಗುತ್ತದೆ.

ಓರ್ವ ಸ್ಥಳನಿವಾಸಿ.

ಒಬ್ಬ ಹೆಂಗುಸೂ, ಒಬ್ಬ ಬ್ರಿಟಿಷ್‌ದೇಶಸ್ಥನೂ ಹಾಗೂ ೬ ಜನ ಬೆಲ್ಜಿಯಂದೇಶಸ್ಥರೂ ಬೆಲ್ಜಿಯಂದೇಶದ ರೈಲುಬಂಡಿಗಳಲ್ಲಿ ಜರ್ಮನರ ಸೇನೆಯ ಚಲನವಲನಗಳನ್ನು ಮಿತ್ರಮಂಡಲಿಯವರಿಗೆ ಗೂಢವಾಗಿ ತಿಳಿಸುತ್ತಿದ್ದರೆಂಬ ಅಪರಾಧದ ಮೇಲೆ ಲೀಗ್‌ಪಟ್ಟಣದಲ್ಲಿ ಗುಂಡಿನಿಂದ ಸುಡಲ್ಪಟ್ಟಿರುವುದಾಗಿ ಜರ್ಮನರು ಲೀಗ್‌ಪಟ್ಟಣದಲ್ಲಿ ಪ್ರಕಟಿಸಿರುತ್ತಾರೆ.

ಯುದ್ಧಾರಂಭವಾದಕೂಡಲೇ ಇಟಲಿಯವರು „ಬೈರನಿ" ಎಂಬ ಜರ್ಮನರ ಒಂದು ವ್ಯಾಪಾರದ ಹಡಗನ್ನು ಹಿಡಿದುಕೊಂಡು ನೇಪಲ್ಸ್ ತೀರದಲ್ಲಿ ನಿಲ್ಲಿಸಿದ್ದರು. ಈಗ ಅವರು ಅದನ್ನು ಪರಿಶೋಧಿಸುವಲ್ಲಿ ಒಳಗೆ ೫ ಲಕ್ಷ ಪಿಸ್ತೋಲುಗಳು, ೧ ಲಕ್ಷ ತುಪಾಕಿಗಳು, ೨ ಲಕ್ಷ ಮದ್ದುಗುಂಡು ತುಂಬುವ ಚೀಲಗಳು, ೪ ವಿಮಾನಗಳು, ೧ ಸಾವಿರ ವಿಮಾನದ ಸಿಡಿಮದ್ದಿನ ಗೋಳಗಳು, ೧೪ ದೊಡ್ಡ ಫಿರಂಗಿಗಳು, ಕೆಲವು ಯಂತ್ರದ ಫಿರಂಗಿಗಳು, ಸಕಲಸಾಧನಸಮಗ್ರವಾದ ವಾಯುವಾರ್ತಾಯಂತ್ರಗಳು ೨, ಹಲವು ಯುದ್ಧಸಂಬಂಧವಾದ ಕಾಗದಪತ್ರಗಳು ಸಿಕ್ಕಿರುವುವು.

ಬೆಂಗಳೂರು ತಾ॥ ಕಾಕೋಳ್‌ಸ್ಕೂಲ್.

ಘನತೆಯನ್ನು ಹೊಂದಿರುವ ಶ್ರೀಮನ್ಮಹಾರಾಜ ಕೃಷ್ಣರಾಜಒಡೆಯರ್ ಬಹದ್ದೂರ್‌ರವರ ವರ್ಧಂತಿ ಮಹೋತ್ಸವದ ವಿಷಯವಾಗಿಯೂ ತಮಗೆ ೧೫ ರೂಪಾಯಿಗೆ ಬಡ್ತಿ ಆದ ಸಂತೋಷಕ್ಕಾಗಿಯೂ ಸ್ಕೂಲ್ ಮಾಸ್ಟರ್ ಮ॥ ರಾ॥ ಬಿ. ನರಸಪ್ಪನವರು ಸ್ಕೂಲನ್ನು ಮನೋಹರವಾಗಿ ಅಲಂಕರಿಸಿ ಬಾಲಕರಿಂದ ಕಿಂಡರ್‌ಗಾರ್ಟನ್ ಆಟಗಳು ಡ್ರಿಲ್ ವಗೈರೆ ಮಾಡಿಸಿ ಈ ಗ್ರಾಮದ ಮತ್ತು ಅಜುಬಾಜು ಗ್ರಾಮಗಳ ಮುಖ್ಯಜನಗಳನ್ನೆಲ್ಲಾ ಸ್ಕೂಲಿನಲ್ಲಿ ಸಭೆ ಸೇರಿಸಿದರು. ಇವರ ಕೋರಿಕೆಯಂತೆ ಬೆಂಗಳೂರು ಡಿ॥ ಸ್ಕೂಲ್‌ಗಳ ೧ ನೆ ಅ॥ ಡೆ॥ ಇನ್ಸ್‌ಪೆಕ್ಟರ್ ಮ॥ ರಾ॥ ಬಿ. ಅನಂತಸುಬ್ಬರಾಯರವರು ಅಗ್ರಾಸನವನ್ನು ವಹಿಸಿದ್ದರು. ಭಜನೆಕೂಟದವರು ಸಂಗೀತದಿಂದ ಸರ್ವರನ್ನೂ ಆನಂದಪಡಿಸಿದರು. ನಂತರ ಸ್ಕೂಲ್ ಮಾ॥ ಬಿ. ನರಸಪ್ಪನವರು ವಿದ್ಯಾಭ್ಯಾಸದ ವಿಷಯವಾಗಿಯೂ ನೀತಿಮಾರ್ಗದ ವಿಷಯವಾಗಿಯೂ ಇಂಗ್ಲೀಷ್ ರಾಜ್ಯಭಾರದವರಿಂದ ನಮಗುಂಟಾಗಿರುವ ಸೌಕರ್ಯಗಳ ವಿಷಯವಾಗಿಯೂ ಉಪನ್ಯಾಸಮಾಡಿದರು. ಅನಂತರ ಮೆ॥ ಅನಂತಸುಬ್ಬರಾಯರವರು ಇಷ್ಟು ಅಭಿವೃದ್ಧಿಗೆ ಬಂದಿರುವ ಸ್ಕೂಲ್ ಇರುವ ಸ್ಥಳದಲ್ಲಿ ಒಂದು ನೈಟ್‌ಸ್ಕೂಲ್ ಮತ್ತು ಸೊಸೈಟಿ ಸಹ ಆಗಬೇಕು; ಇದರಿಂದ ಜನಗಳೆಲ್ಲರೂ ಐಕಮತ್ಯದಿಂದ ಗುಣಗ್ರಾಹಿಗಳಾಗಿ ವಿದ್ಯಾವಂತರಾಗಿ ರಾಜಭಕ್ತಿ ವಿಶ್ವಾಸಗಳಲ್ಲಿ ನಿರತರಾಗಿರಬೇಕೆಂಬ ವಿಷಯಗಳನ್ನು ಕುರಿತು ಬಹು ಸ್ವಾರಸ್ಯವಾಗಿ ಉಪನ್ಯಾಸ ಮಾಡಲು, ಸಭಾ ಜನಗಳೆಲ್ಲಾ ಬಹಳ ಸಂತೋಷಪಟ್ಟು ತಾವು ಕಳುಹಿಸಿಕೊಟ್ಟ ಟ್ರೈನಿಂಗಿನಲ್ಲಿ ಪ್ಯಾಸಾದ ಮಾ॥ ಬಿ. ನರಸಪ್ಪನವರು ಇಲ್ಲಿಗೆ ಬಂದ ಲಾಗಾಯಿತು ೫೦ ಜನಗಳವರೆಗೂ ಬಾಲಕರನ್ನು ಸೇರಿಸಿಕೊಂಡು ಸ್ಕೂಲನ್ನು ಬಹಳ ಅಭಿವೃದ್ಧಿಗೆ ತಂದರೆಂಬ ತಮ್ಮತಮ್ಮ ಸಂತೋಷಗಳನ್ನು ತೋರ್ಪಡಿಸಿದರು. ಬಾಲಕಬಾಲಕಿಯರು ಶ್ರೀಮನ್ಮಹಾರಾಜರವರ ಮತ್ತು ಶ್ರೀಮದಿಂಡಿಯಾ ಚಕ್ರವರ್ತಿಯವರ ಶ್ರೇಯೋಭಿವೃದ್ಧಿಪರವಾದ ಹಾಡುಗಳನ್ನು ಗಾನಮಾಡಿದರು. ಅನಂತರ ಸಭಾಧ್ಯಕ್ಷರಾದ ಮೆ॥ ಬಿ. ಅನಂತಸುಬ್ಬರಾಯರವರ ಸನ್ನಿಧಿಯಲ್ಲಿ ಮಾ॥ ಬಿ. ನರಸಪ್ಪನವರು ತಮ್ಮ ವಂದನೆಗಳನ್ನು ಸಮರ್ಪಿಸಿದರು. ಕೂಡಲೆ ಗಂಧಪುಷ್ಪ ತಾಂಬೂಲಾದಿಗಳು ಹಂಚಲ್ಪಟ್ಟುವು. ಸಭೆಯು ಬರಖಾಸ್ತಾಯಿತು.

ಪ್ರೇಕ್ಷಕ.

ಶ್ರೀಮಚ್ಛಿವಗಂಗಾ ಮೇಲಣಗವಿ ವೀರಸಿಂಹಾಸನಕ್ಕೆ ಸೇರಿದ ಪಾಳ್ಯದಲ್ಲಿ ಸದರಿ ಸಂಸ್ಥಾನದ ಏಜಂಟರು ವೇ॥ ಬಸವಲಿಂಗದೇವರು ಇದೇ ಜ್ಯೇಷ್ಠ ಶುದ್ಧ ೧೧ ಬುಧವಾರ ತಮ್ಮ ಅಣ್ಣಂದಿರಾದ ವೇ॥ ಹುಚ್ಚಪ್ಪದೇವರ ಕುಮಾರ ಚಿಕ್ಕರುದ್ರಾರಾಧ್ಯನಿಗೂ ದೇವರಹೊಸಹಳ್ಳಿ ಪೇಟೆಯಲ್ಲಿರುವ ನಿಜಗಲ್ಲುಮಠದ ವೇ॥ ದೊಡ್ಡಕಣ್ಣದೇವರ ಕುಮಾರಿ ಚಿ॥ ಸೌ॥ ಗಂಗಮ್ಮನಿಗೂ ಮಾಗಡಿ ತಾ॥ ಕಲ್ಪದಮಠದ ವೇ॥ ಪರ್ವತಪ್ಪದೇವರ ಕುಮಾರ ಮಲ್ಲಾರಾಧ್ಯನಿಗೂ ತುಮಕೂರು ಗುಬ್ಬಿದೇವರ ಮಠದ ವೇ॥ ಗುರುಸಿದ್ಧದೇವರ ಕುಮಾರಿ ಚಿ॥ ಸೌ॥ ಗೌರಮ್ಮನಿಗೂ ಸಹ ನಡೆಸಿದ ವಿವಾಹ ಮಹೋತ್ಸವಕ್ಕೆ ತಿಪಟೂರು ವೀರಶೈವಾಶ್ರಮದಲ್ಲಿರುವ ತುರುವೇಕೆರೆ ಶ್ರೀಗಳವರು ಗುಬ್ಬಿ ತುಮಕೂರು ಕೊರಟಗೆರೆ ಹೊನ್ನುಡಿಕೆ ತುರುವೇಕೆರೆ ಶಿವಗಂಗೆ ಶೀತಕಲ್ಲು ಕ್ಯಾಮಗೊಂಡ್ಲು ದೇವರಹೊಸಹಳ್ಳಿ ಮೊದಲಾದ ಪೇಟೆಗಳಿಂದ ಶೆಟ್ಟರು ಯಜಮಾನರು ಮತ್ತು ಮುಖ್ಯ ಬಂಧುಗಳು ಸಹ ಸೇರಿದ್ದರು. ಈ ಲಗ್ನಗಳಿಗೆ ವೇ॥ ಮಾಗಡಿ ಎಸ್. ವೀರಪ್ಪಶಾಸ್ತ್ರಿಗಳು ಕೊರಟಗೆರೆ ತೀರ ಮಲ್ಲಪ್ಪಶಾಸ್ತ್ರಿಗಳು ಮೊದಲಾದ ೫-೬ ಜನಗಳು ಪುರೋಹಿತರಾಗಿ ಬಂದಿದ್ದರು. ಇದಕ್ಕೆ ಕಾರ್ಯದರ್ಶಿಗಳಾಗಿದ್ದ ಶ್ರೀ ಶಿವಗಂಗೆಪೇಟೆ ಮ॥ ರಾ॥ ಗಂಗಾಧರಶೆಟ್ಟರು ಮ॥ ರಾ॥ ಯಜಮಾನ್ ತೋಟದಪ್ಪನವರು ಮ॥ ರಾ॥ ಸಾಹುಕಾರ್ ರೇವಪ್ಪನವರು ಮ॥ ರಾ॥ ಎಡೆಯೂರಪ್ಪನವರು ಕಂಬಾಳಲ್ಲಿರುವ ದೇವರಹೊಸಹಳ್ಳಿ ಪೇಟೆ ರುದ್ರಣ್ಣನವರು ಮಾಡಿದ್ದ ತಕ್ಕ ಏರ್ಪಾಡಿನಿಂದ ವಿವಾಹ ಸಮಾರಂಭವು ಅತಿ ವಿಜೃಂಭಣೆಯಿಂದ ವಿತರಣೆಯೊಡಗೂಡಿ ನಡೆಯಿಸಲ್ಪಟ್ಟಿತು. ಸದರಿ ವೀರಸಿಂಹಾಸನದ ಪಟ್ಟದ ಮಹಾಸ್ವಾಮಿಗಳವರು ವಿದ್ಯಾ ಮತ್ತು ವೀರಶೈವ ಧರ್ಮಾಚಾರ ವಿಷಯದಲ್ಲಿ ಸರ್ವರಿಗೂ ಸಂತೋಷವುಂಟಾಗುವಂತೆಯೂ ಲೋಕೋದಾಹರಣೆಗಳಿಂದ ಪ್ರತಿಯೊಬ್ಬರ ಹೃದಯದಲ್ಲಿ ಪ್ರತಿಬಿಂಬಿಸುವಂತೆ ಸಪ್ರಮಾಣವಾಗಿ ಉಪನ್ಯಾಸರೂಪದಿಂದ ಬೋಧಿಸಿದ ನಂತರ ಸಭಿಕರು ಕರತಾಡನಪೂರ್ವಕ ತಮ್ಮ ಅಭಿನಂದನಗಳನ್ನು ಸಮರ್ಪಿಸಿದರು. ಅನಂತರ ಏಜಂಟರಿಂದ ಮೈಸೂರ್ ವೀರಶೈವ ವಿದ್ಯಾಭಿವೃದ್ಧಿಫಂಡಿಗೆ ೫ ರೂಪಾಯಿಗಳನ್ನೂ ಕಲ್ಪದ ಮಠದ ವೇ॥ ಪುಟ್ಟಪ್ಪಶಾಸ್ತ್ರಿಗಳಿಂದ ೨ ರೂಪಾಯಿಗಳನ್ನೂ ತೆಗಿಸಿ ರವಾನಿಸಲ್ಪಟ್ಟಿತಲ್ಲದೆ ಕೈ॥ ವೀರಸಂಗಪ್ಪನವರು ಈ ಮತಕ್ಕಾಗಿ ಮಾಡಿರುವ ಉಪಕಾರಸ್ಮರಣೆಗಾಗಿ ಅಗ್ರತಾಂಬೂಲ ರೂಪದಿಂದ ಸದರಿ ಏಜಂಟರಿಂದ ೨ ರೂಪಾಯಿಗಳನ್ನು ತೆಗಿಸಿ ಕಳುಹಿಸಲ್ಪಟ್ಟಿತು. ಬಳಿಕ ಸಭಿಕರಿಗೆ ಗಂಧಪುಷ್ಪ ಹಾರ ತಾಂಬೂಲಗಳನ್ನು ಸಮರ್ಪಿಸಿ ಸಭೆಯು ಬರಖಾಸ್ತು ಮಾಡಲ್ಪಟ್ಟಿತು.

ಪ್ರೇಕ್ಷಕ.

[ಮೇಲೆ ಕಂಡ ೨ ರೂ. ನಮಗೆ ಸಂದಿರುತ್ತದೆ.—ಪ. ಪ್ರ.]

ವಿಜಾಪುರ ಜಿಲ್ಲಾ ಹುನಗುಂದ ತಾ॥ ಪೈಕಿ ಹಿರೇ ಜಾತಗೇರಿಯೆಂಬ ಸಣ್ಣಹಳ್ಳಿಯಿದೆ. ಈ ಊರಲ್ಲಿ ಮನೆಗಳು ನೂರು ಇರುತ್ತವೆ. ಜನವಸತಿಯು ೪೫೫ ಇರುತ್ತದೆ. ಈ ಹಳ್ಳಿಯು ಕಾಶಿ, ದ್ವಾರಕಾ ಮತ್ತು ಪಂಢರಪುರ ಮುಂತಾದ ಉತ್ತರದಿಕ್ಕಿನಲ್ಲಿರುವ ಕ್ಷೇತ್ರಗಳಿಂದ ದಕ್ಷಿಣದಲ್ಲಿರುವ ರಾಮೇಶ್ವರ ಹಂಪೆ ಮುಂತಾದ ಕ್ಷೇತ್ರಗಳಿಗೆ ಹೋಗತಕ್ಕ ರಸ್ತೆಯಮೇಲಿದೆ. ಈ ಯಾತ್ರೆಗಳಿಗೆ ಹೋಗತಕ್ಕ ಬಾವಾ (ಬೈರಾಗಿ) ಜನರು ಯಾವಾಗಲೂ ಈ ಹಳ್ಳಿಯಮೇಲಿಂದ ಹಾಯ್ದು ಈ ಹಳ್ಳಿಯಲ್ಲಿ ವಸತಿಮಾಡಿ ಹೋಗಿಬರುತ್ತಿರುತ್ತಾರೆ. ಈ ಜನರ ಸಂಖ್ಯೆಯು ವರ್ಷಾವಧಿಯಲ್ಲಿ ಸಾವಿರಮೇಲೆಯೇ ಆಗುತ್ತದೆ. ಇಷ್ಟುದಿವಸಗಳವರೆಗೆ ಈ ಬೈರಾಗಿ ಜನರು ಹತ್ತೆಂಟುಮಂದಿ ಟೋಳಿಟೋಳಿ ಬಂದು ಹಿಟ್ಟಿನ ದೆಸೆಯಿಂದ ಊರಲ್ಲಿ ಬಂದು ಮನೆಮನೆ ತಿರುಗಾಡಿದರೂ ಅವರಿಗೆ ಸಾಕಾಗುವಷ್ಟು ಹಿಟ್ಟು ಸಿಗುವುದು ಕಷ್ಟವಾಗಿತ್ತು. ಆದರೆ ಇತ್ತಿತ್ತಲಾಗಿ ಈ ಊರಲ್ಲಿಯೇ ನಾಲ್ಕುಮಂದಿ ಪ್ರಮುಖಜನರು ಕೂಡಿ ಈ ಅಡಚಣೆಯನ್ನು ದೂರಮಾಡುವುದರ ದೆಸೆಯಿಂದ ಮುಷ್ಟಿಫಂಡು ತೆಗೆಯಬೇಕೆಂದು ಆಲೋಚನೆ ಮಾಡಿ ಊರಮಂದಿಯ ಸಮ್ಮತಿಯಿಂದ ಪ್ರತಿಯೊಂದು ಮನೆಯವರೂ ಪ್ರತಿದಿವಸ ಒಂದೊಂದು ಮುಷ್ಟಿ ಹಿಟ್ಟನ್ನು ಬೈರಾಗಿಜನರಿಗಾಗಿ ತೆಗೆದು ಇಡಬೇಕೆಂದು ನಿಶ್ಚಯಮಾಡಿರುತ್ತಾರೆ. ಇದರ ವ್ಯವಸ್ಥೆಗಾಗಿ ತಾ॥ ೧೯-೪-೧೫ರ ದಿವಸ ಒಂದು ಮುಷ್ಟಿಫಂಡ್ ಸಂಘವು ಸ್ಥಾಪಿಸಲ್ಪಟ್ಟಿರುತ್ತದೆ. ಈ ಸಂಬಂಧವಾದ ಕಾಗದಪತ್ರಗಳು ಎಂದರೆ (೧) ಹಿಟ್ಟು ಕೊಡತಕ್ಕ ಜನರ ಖಾತೆ, (೨) ಹಿಟ್ಟುಕೊಟ್ಟ ಬೈರಾಗಿ ಜನರ ಬಾಬತು ರಿಜಿಸ್ಟರು (೩) ಪ್ರೊಸೀಡಿಂಗ್ಸ್ ಬುಕ್ಕು (೪) ವಿಜಿಟರ್ಸ್ ಬುಕ್ಕು (೫)ಬಾರನಿಸಿ ಮುಂತಾದ ಲೆಕ್ಕಪತ್ರ ಇಟ್ಟು, ಪ್ರೆಸಿಡೆಂಟ, ಚೇರ್ಮನ, ಸೆಕ್ರೆಟರಿ ಇವರ ಕಡೆಯಿಂದ ಬೈರಾಗಿ ಜನರಿಗೆ ಏನೂ ಅನಾನುಕೂಲತೆ ಆಗದಂತೆ ಅವರು ಬಂದ ವೇಳೆಗೆ ಹಿಟ್ಟು, ಉಪ್ಪು, ಖಾರಗಳನ್ನು ಕೊಡುವುದು ನಡೆದಿರುತ್ತದೆ. ಬೈರಾಗಿ ಜನರಿಗೆ ಆಗುವ ಅಡಚಣೆ ಯಾವುದೆಂದರೆ— ಅವರು ಇಳಿದುಕೊಳ್ಳಲಿಕ್ಕೆ ಸೋಯಿಗೋಸ್ಕರ ಜಾಗಾ ಇಲ್ಲ. ಆದುದರಿಂದ ಒಂದು ಧರ್ಮಶಾಲೆಯನ್ನು ಈ ಊರಲ್ಲಿ ಕಟ್ಟಿಸುವುದು ಜರೂರ ಅದೆ ಎಂಬ ಸಂಗತಿಯನ್ನು ನಮ್ಮ ದಯಾಳು ಸರ್ಕಾರದವರ ಗಮನಕ್ಕೆ ತರತಕ್ಕುದು ಸಂಘದವರ ಮತ್ತು ಊರಜನರ ವಿಚಾರವದೆ ಇದೊಂದು ಕೆಲಸವಾದಲ್ಲಿ ಬೈರಾಗಿ ಜನರಿಗೆ ಯಾವ ತರದ ಅಡಚಣೆಯೂ ಆಗಲಿಕ್ಕಿಲ್ಲ. ಈ ಸಣ್ಣಹಳ್ಳಿಯಲ್ಲಿ ಈ ಪರೋಪಕಾರದ ಕೆಲಸವು ಆದುದು ಊರಜನರಿಗೂ ಮತ್ತು ಅವರ ವ್ಯವಸ್ಥಾಪಕರಿಗೂ ಶ್ಲಾಘನೀಯವಾದ ಸಂಗತಿಯಾಗಿರುತ್ತದೆ. ಇದಕ್ಕೂ ಹೆಚ್ಚಿಗೆ ಬೈರಾಗಿ ಜನರಿಗೆ ಬೇಕಾಗುವ ಅಕ್ಕಿ, ಬ್ಯಾಳಿ, ಬೆಲ್ಲ, ತುಪ್ಪ ಇವುಗಳಿಗಾಗಿ ಯಾರಾದರೂ ಉದಾರಾಶ್ರಯಕೊಟ್ಟು ಧನರೂಪದಿಂದ ಸಹಾಯಮಾಡುತ್ತೇವೆಂದು ತಿಳಿಸಿ ಆ ಪ್ರಕಾರ ಹಣ ಕಳಿಸಿದಲ್ಲಿ ಅವರ ಹೆಸರು ನಮ್ಮಲ್ಲಿ ಈ ಬಾಬತು ಇಟ್ಟಿರತಕ್ಕ ರಿಜಿಸ್ಟರಕ್ಕೆ ದಾಖಲ್ಮಾಡಿಕೊಂಡು ಅವರಿಂದ ಬಂದ ದೇಣಿಗೆಯನ್ನು ವಿಶ್ವಾಸಪೂರ್ವಕ ಸ್ವೀಕಾರಮಾಡಲಿಕ್ಕೆ ಸಂಘವು ತಯಾರ ಇರುತ್ತದೆ. ಇದಕ್ಕೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಸಂಘದ ಸೆಕ್ರೆಟರಿಯವರಿಗೆ ಪತ್ರವ್ಯವಹಾರ ಮಾಡಿದಲ್ಲಿ ಯಾವತ್ತೂ ಸಂಗತಿ ತಿಳಿಸುವುದರಲ್ಲಿ ಬರುವುದು.

ರಾಮರಾವ್ ಕುಲಕರ್ಣಿ, ಸೆಕ್ರೆಟರಿ,
ಮುಷ್ಟಿಫಂಡ್ ಸಂಘ, ಹಿರೇಜಾತಗೇರಿ.

ವೀರಶೈವ ವಿದ್ಯಾಭಿವೃದ್ಧಿ ಫಂಡು.

ಮೈಸೂರು ವೀರಶೈವ ವಿದ್ಯಾಭಿವೃದ್ಧಿ ಫಂಡ್ ಸಭೆಗೆ ಲಗ್ನ ಮೊದಲಾದುವುಗಳಿಂದ ತಾ॥ ೧೦-೫-೧೯೧೫ ರಿಂದ ತಾ॥ ೨೩-೬-೧೯೧೫ ರ ವರೆಗೆ ಜಮಾ ಬಂದ ಮೊಬಲಗಿನ ವಿವರ:—

ಮ॥ ರಾ॥ ಗಳಾದ

ಬೌರಿಂಗ್‌ಪೇಟೆ ತಾ॥ ಅಮಲ್ದಾರ್ ಕೆ. ಸಿದ್ಧರಾಮಪ್ಪ, ಬಿ.ಎ, ಯವರ ಮೂಲಕ ಬೌರಿಂಗ್‌ಪೇಟೆ ತಿಗಪತ್ತೂರು ಬಸಪ್ಪಶೆಟ್ಟರ ಮಗನ ಲಗ್ನದಲ್ಲಿ	೫-೦-೦
ಬೆಂಗಳೂರು ದೊಡ್ಡಪೇಟೆ ದೇಶದಶೆಟ್ಟರು ಸಿದ್ಧಬಸವಶೆಟ್ಟರ ಮೂಲಕ ಬಿಡದಿ ವೀರಭದ್ರಪ್ಪನವರ ಕುಮಾರ್ತಿಯನ್ನು ಬೆಂಗಳೂರು ಬಾಣಾವಾರದ ಪರ್ವತಪ್ಪನವರ ಕುಮಾರ ಚೆಳಿವಪ್ಪನವರಿಗೆ ಕೊಟ್ಟು ನಡಿಸಿದ ಲಗ್ನದಲ್ಲಿ ವರನಕಡೆಯಿಂದ ೫ ರೂ. ವಧುವಿನ ಕಡೆಯಿಂದ ೨ ರೂ., ಮತ್ತು ಬೆಂಗಳೂರು ಚಿಕ್ಕಪೇಟೆ ಪಿ. ಭದ್ರಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ತೆಗೆದ ಬಾಬತು ೩ ರೂ. ಒಟ್ಟು ೧೦ ರೂ.	೧೦-೦-೦
ಬೀರೂರು ಸಂಸ್ಕೃತ ಪಾಠಶಾಲಾಧ್ಯಾಪಕರಾದ ಸಂಪಿಗೆ ಹಿರೇಮಠದ ಸಿದ್ಧಲಿಂಗಶಾಸ್ತ್ರಿಗಳ ಮೂಲಕ ಕಡೂರು ತಾ॥ ಹೊಸಹಳ್ಳಿಯಲ್ಲಿರುವ ಕೆಡವರಹಳ್ಳಿಮಠದ ಮುದ್ದುಬಸವಯ್ಯನವರು ಧರ್ಮಾರ್ಥವಾಗಿ ನಡೆಸಿದ ಶಿವದೀಕ್ಷಾ ಸಮಾರಂಭದಲ್ಲಿ ತೆಗೆದುದು	೫-೦-೦
ಬೆಂಗಳೂರು ಅರಳೇಪೇಟೆ ದೇಶದಸೆಟ್ಟರು ವೀರಭದ್ರಸೆಟ್ಟರು ದೇಶದ ಯಜಮಾನ್ ಬಸಪ್ಪನವರು ಇವರುಗಳ ಮೂಲಕ ಅತ್ತಿಬೆಲೆ ಸಾಹುಕಾರ್ ಸಿದ್ಲಬಸಪ್ಪನವರ ಪುತ್ರನ ನಿಷೇಕಪ್ರಸ್ತದಲ್ಲಿ ತೆಗೆದುದು ೩ ರೂ., ಬೆಂಗಳೂರು ಚೌಡ್ರಿ ಮಲ್ಲಪ್ಪನವರ ಮನೆಯಲ್ಲಿ ನಡೆದ ಲಗ್ನದಲ್ಲಿ ತೆಗೆದುದು ೨ ರೂ.	೫-೦-೦
ಶಿಕಾರಿಪುರ ತಾ॥ ಚಿಕ್ಕಪುರ ಪೋಸ್ಟ್ ಪುರದ ಹೊಳೆಯಪ್ಪನವರಿಂದ ಬಂದುದು	೪-೦-೦
ಮೊಣಕಾಲ್ಮರು ತಾ॥ ರಾಮಪುರದ ವರ್ನಾಕ್ಯುಲರ್ ಸ್ಕೂಲ್ ಮಾಸ್ಟರ್ ರುದ್ರಯ್ಯನವರಿಂದ ತಮ್ಮ ಪುತ್ರನ ವಿವಾಹಕಾಲದಲ್ಲಿ ತೆಗೆದುದುದು	೧-೦-೦
ಕಡೂರು ತಾ॥ ಆಲ್ದೂರು ಎ. ವಿ. ದೇವಪ್ಪಗೌಡರ ಮೂಲಕ ಆಲ್ದೂರು ಕಾಫಿಪ್ಲಾಂಟರ್ ಎಚ್. ಮಲ್ಲಪ್ಪಸೆಟ್ಟರ ಪುತ್ರಿ ಚಿ॥ ಸೌ॥ ಮಲ್ಲಮ್ಮನನ್ನು ಆಲ್ದೂರು ಕಾಫಿಪ್ಲಾಂಟರ್ ಬಿ. ಪುಟ್ಟಣ್ಣಶೆಟ್ಟರ ಪುತ್ರ ಚಿ॥ ಮಲ್ಲಪ್ಪನವರಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ತೆಗೆದುದು ೧೦ ರೂ., ಬಾಣೂರು ದೇವೇಗೌಡರ ಪುತ್ರಿ ಚಿ॥ ಸೌ॥ ವೀರಮ್ಮನನ್ನು ನಲ್ಲೂರು ಚನ್ನೇಗೌಡರಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ತೆಗೆದುದು ೩ ರೂ. ಒಟ್ಟು	೧೩-೦-೦
ಒಟ್ಟು ರೂ.	೪೩-೦-೦

(ಸಶೇಷ.)

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿನಾಂ ಶ್ರೀಮಚ್ಛಿನ್ಮೂಲಾದ್ರಿ ಬೃಹನ್ಮಠ ಮಹಾಸಂಸ್ಥಾನ ಕಚೇರಿಯಿಂದ—

ಉಳವಿ ಶ್ರೀ ವೀರಶೈವ ಧಾರ್ಮಿಕ ಮಹಾಸಭಾ ಹಾಗೂ ಶ್ರೀ ದೇವಸ್ಥಾನ, ಸಭಾಮಂಟಪ ಕಟ್ಟಡಗಳ ಸಹಾಯಕಾರಿಗಳಾದ ಸಮಸ್ತ ಭಕ್ತಮಂಡಳಿಯವರಿಗೆ ಈ ಮೂಲಕ ಅಪ್ಪಣೆ ದಯಪಾಲಿಸುವುದೇನೆಂದರೆ:— ಉಳವಿಯ ಕ್ಷೇತ್ರದಲ್ಲಿ ಜರುಗತಕ್ಕ ವೀರಶೈವ ಧಾರ್ಮಿಕ ಮಹಾಸಭೆಯ ಖರ್ಚಿಗಾಗಿ ವಾಗ್ದಾನಮಾಡಿರುವ, ವರ್ಷಾಶನ ಹಾಗೂ ದೇವಸ್ಥಾನದ ದಕ್ಷಿಣಭಾಗದ ಪೌಳಿ ಸಭಾಮಂಟಪದ ಜೀರ್ಣೋದ್ಧಾರ—ಇವುಗಳಿಗಾಗಿ ವಾಗ್ದಾನಮಾಡಿರುವ ವರ್ಗಣಿ ರಕಮನ್ನು ರಾವಬಹದ್ದೂರ ರುದ್ರಗೌಡ ಚೆನ್ನವೀರಗೌಡ ಅರಟಾಳ, ಐ.ಎಸ್.ಒ., ಮುಕ್ಕಾಂ ಬೆಳಗಾಂವ ಇವರ ವಿಳಾಸಕ್ಕೆ ಮನಿಯಾರ್ಡರುಮಾಡಿ ಕಳಿಸತಕ್ಕದ್ದು. ಮಳೆಗಾಲವು ಕಳೆದನಂತರ ಉಳುವೆಯ ಕಟ್ಟಡವು ಪ್ರಾರಂಭಿಸಲ್ಪಡುವುದು. ಆ ಬಗ್ಗೆ ತಕ್ಕ ಏರ್ಪಾಟುಗಳು ನಡೆದಿರುತ್ತವೆ. ಸಭೆಯ ಸಂಬಂಧವಾದ ಸೂಚನೆಗಳನ್ನು ಕಳಿಸತಕ್ಕವರು ಕಾರ್ತೀಕ ಮಾಸದ ಆಖೈರಿನೊಳಗಾಗಿ ಮಹಾಸಂಸ್ಥಾನ ಕಚೇರಿಗೆ ಬಿನ್ನಯಿಸಿಕೊಳ್ಳತಕ್ಕದು.

ಚೆನ್ನಬಸವಯ್ಯಾ ಹೇಮಗಿರಿಮಠ,
ತಾ॥ ೨೩-೬-೧೫ } ಕಾರಭಾರಿ,
ಮುಕ್ಕಾಂ ಬಂಕಾಪೂರ್ } ಸಂಸ್ಥಾನ ಚಿತ್ರದುರ್ಗ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿನಾಂ ಶ್ರೀಮಚ್ಛಿನ್ಮೂಲಾದ್ರಿ ಬೃಹನ್ಮಠ ಮಹಾಸಂಸ್ಥಾನದಿಂದ—

ಈ ಮೂಲಕ ತಿಳಿಯಪಡಿಸುವುದೇನೆಂದರೆ:— ಮಹಾಸಂಸ್ಥಾನದಲ್ಲಿ ಇಂಗ್ಲೀಷು ಪತ್ರವ್ಯವಹಾರಮಾಡತಕ್ಕ ಯೋಗ್ಯತೆಯುಳ್ಳವರು (ಅರ್ಪಾಸು ಯಾ ಫೇಲ್ ಇದ್ದರೂ ಅಡ್ಡಿಯಿಲ್ಲ) ಎರಡನೆ ಮರಾಟಿ ಹಾಗೂ ಕನ್ನಡ ಬರವಣಿಗೆಯನ್ನು ಬಲ್ಲ ಒಬ್ಬ ಕಾರಕೂನ; ಮರಾಟಿ ಪತ್ರವ್ಯವಹಾರವನ್ನು ಮಾಡತಕ್ಕ ಕನ್ನಡ ಪರಿಜ್ಞಾನವುಳ್ಳ ಒಬ್ಬ ಕಾರಕೂನ; ಕನ್ನಡದಲ್ಲಿ ಖರ್ಚುಖಾತೆಗಳ ಮಾಹಿತಿಯುಳ್ಳವರಾಗಿ ಸುಲಕ್ಷಣ ಅಕ್ಷರಗಳನ್ನು ಬರೆಯತಕ್ಕವರು ಇಬ್ಬರು ಅಂತು ನಾಲ್ಕು ಜನ ವೀರಶೈವ ಕಾರಕೂನರು ಬೇಕಾಗಿರುತ್ತದೆ. ಅವಶ್ಯವಿದ್ದವರು ೧೯೧೫ ನೆಯ ಇಸವಿ ಜುಲೈ ಆಖೈರಿನೊಳಗಾಗಿ ಸ್ವಾರೀ ಮುಕ್ಕಾಮಿಗೆ ತಾವು ನೌಕರಿ ಮಾಡಿದ ಸ್ಥಳದ ಸರ್ಟಿಫಿಕೇಟು ಇದ್ದಲ್ಲಿ ಅದನ್ನು ಸಹ ಲಗತಯಿಟ್ಟು ಪೂರ್ಣಪತ್ತೆ ವಯಸ್ಸು ವಗೈರೆ ತಪ್ಸೀಲುಗಳನ್ನು ಸ್ಪಷ್ಟವಾಗಿ ಬಿನ್ನಯಿಸಿಕೊಳ್ಳಬೇಕು. ಅಥವಾ ರೂಬರೂಬು ಹಾಜರಾದರೂ ಅಡ್ಡಿಯಿಲ್ಲ. ಪಗಾರ ಮಾಹೆಯಾನಾ ಇಂಗ್ಲೀಷು ಬಲ್ಲ ಕಾರಕೂನನಿಗೆ ೧೨ ರಿಂದ ೨೦ ರೂ. ವರೆಗೆ; ಮರಾಟಿ ಬಲ್ಲವರಿಗೆ ೧೦ ರಿಂದ ೧೫ ರೂ. ವರೆಗೆ; ಕನ್ನಡದವರಿಗೆ ೮ ರಿಂದ ೧೫ ರೂ ವರೆಗೆ. ಈ ಪ್ರಕಾರವಿದ್ದು ಮುಂದೆ ಅವರ ಕೆಲಸದ ಯೋಗ್ಯತೆ ಅನುಸರಿಸಿ ಸಂಸ್ಥಾನದ ರೂಲ್ಸ್ ಪ್ರಕಾರ ಹೆಚ್ಚಿಸಲ್ಪಡುತ್ತದೆ. ಅರ್ಜಿಗಳನ್ನು ಪೋಸ್ಟ್ ಬಂಕಾಪುರ ಅಥವಾ ಸ್ವಾರೀ ಮುಕ್ಕಾಮಿಗೆ ಬಿನ್ನಯಿಸಿಕೊಳ್ಳತಕ್ಕದ್ದು.

ಚೆನ್ನಬಸವಯ್ಯಾ ಹೇಮಗಿರಿಮಠ,
ಕಾರಭಾರಿ, ಸಂಸ್ಥಾನ ಚಿತ್ರದುರ್ಗ.

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕೆ ಆವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತವಾಗಿರುವ ಘೋರಯುದ್ಧದ ದೆಸೆಯಿಂದ ಈ ಸಾಮಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದ ಮತ್ತೂ ಬೆಲಜಿಯಮ್ಮಿನಿಂದ ಸುತರಾಂ ಬರುವುದು ಕಟ್ಟಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಆವಶ್ಯಕವಾದ ಕಾಗದ ಮೊದಲಾದ ಸಾಮಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವಧಿಯು ಪೂರೈಸಿರುವವರಿಗೆಲ್ಲಾ ಪತ್ರಿಕೆಯನ್ನು ವಿ. ಪಿ. ದ್ವಾರ ಕಳುಹಿಸುತ್ತಿರುವೆವು. ಆದರೆ ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿರುಗಿಸಿ ಕಾಗದದ ಬೆಲೆಯೇರಿಕೆಯಿಂದ ನಷ್ಟಪಡುವುದರ ಜತೆಗೆ ಪೋಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದು ತಿಳುಹಲು ಖೇದವಾಗುತ್ತದೆ. ಇತಃಪರಃ ದಯಾರ್ದ್ರಹೃದಯರಾದ ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ. ಪಿ. ಹಣವನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನವಾಗಿ ನಡೆದುಕೊಂಡು ಹೋಗುವಂತೆ ಮಾಡುವರೆಂದು ಸಂಪೂರ್ಣವಾಗಿ ನಂಬಿರುತ್ತೇವೆ.

ಮ್ಯಾನೇಜರ್.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು

90

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕದನಗಳ ಪಟಗಳೂ ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ. ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ ೨ ಆಣೆ; ವಿ. ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ:—ದಿ ಜನರಲ್ ಏಜನ್ಸಿ. ಮೈಸೂರು.

BENARES CITY.
KASHI
VISHWESHWAR.

41

ದೊಡ್ಡ ಕಂಪೆನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ—ಎಸ್. ಯೂ ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶಿ)

ಊದುಬತ್ತಿಗಳು.

8

ವಿಧವಿಧವಾದ ಊದುಬತ್ತಿಗಳು ಸೇರು ೧ಕ್ಕೆ ೧೨-೦-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್‌ಸನ್ಸ್
ಸುಗಂಧಕಾರಿ, ಮೈಸೂರು.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

28

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪುದ್ರೇಕವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ,ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಅಪೂರ್ವಗ್ರಂಥ ! ಅಪೂರ್ವಗ್ರಂಥ !!

ಬಳ್ಳಾರಿ ಶ್ರೀ ಮರಿಸ್ವಾಮಿಗಳು 2
ಸಕ್ಕರಿ ಕರಡೆಪ್ಪ

ಇವರ ಜೀವಿತಚರಿತ್ರೆ.

ಈ ಮಹಿಮರ ಚರಿತ್ರೆಯನ್ನು ಇಲ್ಲಿಯವರಿಗೂ ಯಾರೊಬ್ಬರು ಪ್ರಕಟನ ಮಾಡಿದ್ದಿಲ್ಲವೆಂಬುದು ತಿಳಿದದ್ದಾಗಿರುವುದಷ್ಟೆ. ಇಂತಹ ಅದ್ಭುತ ಮಹಿಮಶಾಲಿಗಳ ಚರಿತ್ರೆಗಳು ಅವಶ್ಯಕವಾಗಿಯೂ ಆದರಣೀಯಗಳಾಗಿರುವವು. ಈರ್ವರ ಮಹಿಮೆಯು ಅಸಾಧಾರಣವಾದುದು ಒಂದೆ ದಿನ ಒಂದೆ ಕಾಲದಲ್ಲಿ ಬಳ್ಳಾರಿ, ಬೆಂಗಳೂರು, ಭೈರವಪುರ, ಎಂಬ ಮೂರು ಸ್ಥಳಗಳಲ್ಲಿ ಸಮಾಧಿಯನ್ನು ಹೊಂದಿದರೆಂಬುದೊಂದೆ ಅಪ್ರತಿಮ ಪ್ರಭಾವವನ್ನು ಸೂಚಿಸುತ್ತಿರುವುದು. ಇವರು ಅಲ್ಲಲ್ಲಿ ತೋರಿದ ಮಹಿಮೆಗಳು ಅನಂತವಾಗಿರವವು; ಇದಲ್ಲದೆ ಇವರ ಶಿಷ್ಯನಾದ ಸಕ್ಕರಿ ಕರಡೆಪ್ಪನ ಅಪಾರ ಮಹಿಮೆಯು ವಿಶದವಾಗಿ ವರ್ಣಿಸಲ್ಪಟ್ಟಿರುವುದು. ಈ ಸಕ್ಕರಿ ಶರಣನಂತಹ ಶರಣನು ಇಹೀ ಪ್ರಪಂಚದಲ್ಲಿ ವೀರಶೈವ ಮತದೊಳಗೆ ಹುಟ್ಟುವುದು ಅಪರೂಪ. ಆ ಗುರುಶಿಷ್ಯರೀರ್ವರ ಚರಿತ್ರೆಗಳು ಒಂದು ಗ್ರಂಥದಲ್ಲಿ ತಯಾರುಮಾಡಿರುವೆವು. ಈ ಗ್ರಂಥವನ್ನೋದುವವರು ಖಂಡಿತವಾಗಿಯೂ ನೀತಿ, ಭಕ್ತಿ, ಜ್ಞಾನಗಳ ಕಡೆ ಮನಸ್ಸನ್ನು ಕೊಡದಿರಲಾರರು ಇದಲ್ಲದೆ ಶಿಷ್ಯರಾದ ಕಂಬಳಿಸ್ವಾಮಿಗಳು ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಶ್ರೀ ಕೃಷ್ಣರಾಜಒಡೆಯರ್ ಬಹದ್ದೂರರವರ ಮತ್ತು ಸಮೇತ ಇರುವ ಮಹಾಸ್ವಾಮಿಗಳ ಭಾವಚಿತ್ರಪಟವು ಪ್ರಥಮ ಪುಟದಲ್ಲಿ ಅಂದವಾಗಿರಿಸಲ್ಪಟ್ಟಿರುವುದು. ಈ ಗ್ರಂಥವನ್ನು ತರಿಸಿಕೊಳ್ಳುವವರಿಗೆ ಪ್ರಾಚೀನಪಂಡಿತ ಗ್ರಂಥಗಳಿಂದ ಶೋಧೀಕರಿಸಲ್ಪಟ್ಟ ದಶಾಷ್ಟಕರತ್ನಾವಳಿ ಎಂಬುವ ಪುಸ್ತಕವನ್ನು ಉಚಿತವಾಗಿ ಕಳಿಸುವೆವು. ನಿಮ್ಮ ವಿಳಾಸ ಚೆನ್ನಾಗಿರಲಿ. ಇದರ ಬೆಲೆ ವಿ. ಪಿ. ಸಹಿತ ರೂ. ೧-೨-೦.

ನಮ್ಮ ವಿಳಾಸ:—
ಬಸವರಾಜಕಂಪೆನಿ, ಬಳ್ಳಾರಿ.

೫೦೦ ರೂಪಾಯಿಗಳ ಬಹುಮಾನ

9

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್‌ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಸಾಲಾಮಿಸ್ರಿಯ ಧಾರಣೆಯು ಜಾಸ್ತಿಯಾಗಿರುವದರಿಂದ ಅನೇಕರು ಉರುಳಿಗಡ್ಡೆ, ಶಾಮುಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುವದು ತಿಳಿದುಬರುತ್ತದೆ.

ಸಾಲಾಮಿಸ್ರಿ ಮುರಬ್ಬಾವು—ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವುದು.
ಸಾಲಾಮಿಸ್ರಿ ಮುರಬಾವು—ನಿದ್ರೆಯಲ್ಲಿ ಧಾತುವು ಹೋಗುವುದನ್ನು ನಿಲ್ಲಿಸುವುದ.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಧಾತುಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕ್ಷಣ ಕ್ಷಣಕ್ಕು ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ವೃದ್ಧಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಶ್ವಾಸಖಾಸ ರೋಗಗಳನ್ನು ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹೊಟ್ಟೆಯಲ್ಲಿರುವ ಜ್ವರದಗಡ್ಡೆ ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೆಟ್ಟುಹೋಗಿರುವ ರಕ್ತವನ್ನು ಶುದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬಾವು—ಹಳೆತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು.
ಸಾಲಾಮಿಸ್ರಿ ಮುರಬ್ಬಾವು—ಉತ್ಸಾಹ, ಧೈರ್ಯ, ಬುದ್ಧಿಕುಶಲತೆ, ಶರೀರಕಾಂತಿಯನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು—ತಾಂಬ್ರ, ಬೆಳ್ಳಿ, ಮತ್ತು ಭಂಗಾರ ಭಸ್ಮಕ್ಕಿಂತಲೂ ಉತ್ತಮವಾದುದು.
ಸಾಲಾಮಿಸ್ರಿ ಮುರಬ್ಬಾವು—ಸ್ತ್ರೀ ಸಂಗಕ್ಕೆ ಮೊದಲೆ ಧಾತು ಸ್ಖಲನವಾಗುವದನ್ನು ನಿಲ್ಲಿಸುವದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯ್ಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪುರಾ ಗುಣಕೊಡುತ್ತದೆ. ೨-೩ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಸಾಲಾಮಿಸ್ರಿ" ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನಮ್ಮಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ ಕ್ಕೆ ಕ್ರಯ ೨—೦—೦ ರೂಪಾಯಿ. ಟಪ್ಪಾಲು ಖರ್ಚು ೧ ಡಬ್ಬಿಯಿಂದ ಡಬ್ಬಿಗಳ ವರೆಗೆ ೬ ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ವಿಳಾಸ:—ಡಿ. ಮುನ್ನಾಲಾಲ್, ಡೆಲ್ಲಿ ವೈದ್ಯರು,
೫, ಅವೆನ್ಯೂರೋಡ್ ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

8

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋತೆ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ

ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಮೊಂದು ಬುದ್ಧಿಯು ನಿಮ್ಮಲ್ಲಿರಲಿ. ಸುಲಭ್ಯಾಂದು ಸಹಾಯುವ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುದ್ಧಿಯು ಬೆಲೆ ೧—೦—೦

ಟಪಾಲ್‌ಖರ್ಚು ಬೇರೆ.

ವಿಳಾಸು— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೯—೦
ಪರವಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲಿಚರಿತೆ	೦—೫—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಆಯುರ್ವೇದ ವಿದ್ವಾನ್-ಬಿ. ವಿ. ಪಂಡಿತರ 39

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ಕಸ್ತೂರಿ, ಚಿನ್ನದರೇಖು, ಲೋಹಭಸ್ಮ ಮುಂತಾದವುಗಳಿಂದ ಮಂಶಬಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀಕರಕಸ್ತೂರಿಮಾತ್ರೆಗಳನ್ನು ತಾಂಬೂಲದೊಡನೆ ಅಥವಾ ಹಾಗೆ ಉಪಯೋಗಿಸಿದರೆ ಆಹಾರವು ಬೇಗನೆ ಜೀರ್ಣವಾಗಿ ಬಹಳಹೊತ್ತು ಬಾಯಿ ಘಮಘಮಿಸುತ್ತಿರುವುದು.

ಛಳಿಮಳೆಗಾಲಗಳಲ್ಲೂ, ಸೊಂಕುರೋಗಸ್ಥಳಗಳಲ್ಲೂ, ಪ್ರಯಾಣಕಾಲದಲ್ಲೂ, ಮಕ್ಕಳಿರುವ ಮನೆಗಳಲ್ಲೂ, ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಶೀತವಾಯು, ಕೆಮ್ಮು, ನೆಗಡಿ, ಅಜೀರ್ಣಭೇದಿ, ಮಲಬಂಧ, ಮರಸೇಜ್ವರ, ಪ್ಲೇಗುಜ್ವರ, ಮಲೇರಿಯಾಜ್ವರ, ನಡುನೋವು, ಅರೋಚಕ, ಹಲ್ಲುನೋವು, ಮೈಕೈನೋವುಗಳು ಬಹಳಬೇಗನೆ ವಾಸಿಯಾಗುತ್ತವೆ. ಮಕ್ಕಳಿಗೆ ಸಂಜೀವನ-ಯಾವಾಗಲೂ ವಿಳಾಸವನ್ನು ಪರೀಕ್ಷಿಸಿ ಔಷಧವನ್ನು ಕೊಂಡುಕೊಳ್ಳಿರಿ-ಮೋಸಹೋಗಬೇಡಿರಿ. ೨೫೦ ಮಾತ್ರೆಯುಳ್ಳ ಸೀಸೆಯ ಬೆಲೆ ೦—೪—೦ ಆಣೆ. ಐದಕ್ಕೆ ಒಂದು ಮುಫತ್ತು. ಟಪಾಲ್‌ಖರ್ಚು ಬೇರೆ.

ಆಮೋದಿನಿ.

ಸಂಗೀತಗಾರರಿಗೆ ಅತ್ಯಂತ ಸುಖವನ್ನೂ, ವಿದ್ಯಾರ್ಥಿಗಳಿಗೆ ಆನಂದವನ್ನೂ, ಪ್ರಯಾಣಿಕರಿಗೆ ಆಯಾಸಪರಿಹಾರವನ್ನೂ, ಉಂಟುಮಾಡಿ ಬಿಸಿಲುಕಾಲದ ಅಥವಾ ಆಯಾಸದ ಬಾಯಾರಿಕೆಯನ್ನು ತಕ್ಷಣ ಅಣಗಿಸಿ, ಎಂತಹ ಕೆಮ್ಮು, ಉಬ್ಬಸಗಳನ್ನಾದರೂ ವಾಸಿಮಾಡಿ ಆಬಾಲವೃದ್ಧರಿಂದಲೂ ಹೊಗಳ್ಪಡುತ್ತಲಿರುವ ಕೈಗಂಡಸಿದ್ಧಾಮೃತ, ಮತ್ತಾವಮಾತ್ರೆಗಳೂ ಇಷ್ಟು ಮನೋಹರವಾಗಿಲ್ಲವೆಂಬುದನ್ನು ನಂಬಿರಿ! ೧೫೦ ಮಾತ್ರೆಯ ಸೀಸೆ ೦—೪—೦ ಆಣೆ. ಐದಕ್ಕೆ ಒಂದು ಹೆಚ್ಚು. ಟಪಾಲ್‌ಖರ್ಚು ಪ್ರತ್ಯೇಕ.

ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರು ಡಿ॥

೧೯೧೫ನೆಯ ಇಸವಿ ಜುಲೈ ತಾ॥ ೧೧ ರಿಂದ ೧೯೧೫ನೆಯ ಜುಲೈ ತಾ॥ ೧೭ರವರೆಗೆ ಸಲ್ಲುವ ಶಾಲೀವಾಹನಶಕ ೧೮೩೭ನೆಯ ರಾಕ್ಷಸನಾಮಸಂವತ್ಸರದ ಜ್ಯೇಷ್ಠ ಬ॥ ಚತುರ್ದಶಿಯಿಂದ ಆಷಾಢ ಶು॥ ಪಂಚಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥು ತೇದಿ
11	¹ಭಾನು	ಚತು	16-15	ಆರ್ದ್ರಾ	50-45	27
12	ಸೋ	ಅಮಾ	20-12	ಪುನರ್ವ	55-52	28
13	²ಮಂಗ	ಪಾಡ್ಯ	22-59	ಪುಷ್ಯ	59-47	29
14	ಬುಧ	ಬಿದಿಗೆ	24-41	ಆಶ್ಲೇಷ	60	30
15	ಗುರು	ತದಿಗೆ	25-2	ಆಶ್ಲೇಷ	1-53	31
16	³ಶುಕ್ರ	ಚೌತಿ	24-12	ಮಖಾ	3-18	1
17	ಶನಿ	ಪಂಚ	22-5	ಪುಬ್ಬಾ	3-31	2

(1) ಸರ್ವತ್ರಾಮಾವಾಸ್ಯಾ. (2) ಶೂನ್ಯತಿಥಿಃ, (ವಾಕ್ಯರೀತ್ಯಾ ಪ್ರಥಮಾತಿಥಿಃ) ನಂಜನಗೂಡಿನಲ್ಲಿ ಮಾರ್ಕಂಡೇಯೋತ್ಸವಃ, ಚಂದ್ರೋದಯಃ, ರಂಜಾನ್ ಚಂ ೧. (3) ಸೋಸಲೆ ಶೇಷಚಂದ್ರಿಕಾಚಾರ್ಯ ಪುಣ್ಯದಿನ, ಆಡಿಶುಕ್ರವಾರ, ದೇಶರಾಜೇ ಅರಸಿನವರ ಕುಮಾರರ ವರ್ಧಂತಿ, ದಕ್ಷಿಣಾಯನ ಪುಣ್ಯಕಾಲ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124

ಮೈಸೂರ್ ✶ ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಕ್ಷದ್ವಯಹೃತ್ತಮೋಹರಾಜೇಯಾತ್ ॥
ಶ್ರೀಮತ್ಕೃಷ್ಣನೃಪಾಲಸುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸದ್ಗುಣ್ಯಾಲವಾಲಂಪಲಂ ॥
ನಿಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿಭ್ರತಿಯಂಸದಾಫೂರಿಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೧೪—೦

ಸಂಪುಟ ೨೮) ಮೈಸೂರ್ ಸ್ಟಾರ್ ಸನ್ ೧೯೧೫ ನೆಯ ಇಸವಿ ಜುಲೈ ತಾರೀಖು ೧೮ ನೆಯ ಭಾನುವಾರ. (ಸಂಚಿಕೆ ೨೮

ರಖಂವಾರ್ ಹೊಸ ಹಾರ್ಮೋನಿಯಂಗಳು.

ಮಿತ್ರರೇ! ನಿಮ್ಮ ಹಣವನ್ನು ಸದ್ವ್ಯಯಮಾಡುವುದು ಹೇಗೆ? ಕ್ರಯಕ್ಕೆ ತಕ್ಕ ಉತ್ತಮವಾದ ಪದಾರ್ಥವನ್ನು ಕೊಂಡುಕೊಳ್ಳುವುದೇ ಅಲ್ಲವೆ? ಹಾಗಾದರೆ ನಮ್ಮಿಂದ ಒಂದುಸಾರಿ ತರಿಸಿ ಪರೀಕ್ಷಿಸಿರಿ. ನೀವೂ ಅನೇಕಕಡೆಗಳಿಂದ ನಾನಾತರಹ ಹಾರ್ಮೋನಿಯಂಗಳನ್ನು ತರಿಸಿಕೊಂಡಿರುವಿರಿ, ಆದರೆ ಈ ಕೆಳಗೆ ವಿವರಿಸಿರುವ ಪ್ರಖ್ಯಾತರಾದ ಕಾರೀಗಾರರಿಂದ ಬಹಳ ಬಂದೋಬಸ್ತಾಗಿ ತಯಾರಿಸಲ್ಪಟ್ಟು ನಮ್ಮಲ್ಲಿ ವಿಕರಿಗೆ ಸಿದ್ಧವಾಗಿರುವ ಹಾರ್ಮೋನಿಯಂಗಳನ್ನು ಒಂದುಸಾರಿ ತರಿಸಿಕೊಂಡು ಪರಿಕ್ಷಿಸಿದರೆ ಪದಾರ್ಥದ ಸೊಗಸೂ, ಬಾಳ್ವಿಕೆ, ಬಂದೋಬಸ್ತು, ಸ್ವಚ್ಛವಾದ ಸ್ವರ ಇವೇ ಮೊದಲಾದ ಅತ್ಯುತ್ಕೃಷ್ಟವಾದ ಗುಣಗಳೂ, ಅಗ್ಗವಾದ ದರಗಳೂ ತಾವಾಗಿ ಗೋಚರವಾಗುತ್ತವೆಯಾದ್ದರಿಂದ ನಮ್ಮಿಂದಹಾರ್ಮೋನಿಯಂಗಳನ್ನು ತರಿಸಿಕೊಂಡವರಿಂದ ಸಂತೋಷಪೂರ್ವಕವಾದ ಸನ್ಮಾನಪತ್ರಿಕೆಗಳು ಪ್ರತಿನಿತ್ಯವೂ ಬರುತ್ತಲಿವೆ ಇವುಗಳ ಪೈಕಿ ಸ್ಥಳಸಂಕೋಚದಿಂದ ಒಂದನ್ನು ಮಾತ್ರ ಇಲ್ಲಿ ವಿವರಿಸಿದೇವೆ.

ಸಯ್ಯದ್ ಜಮಾಲ್‌ಸಾಬ್ ಸ್ಕೂಲ್‌ಮಾಸ್ಟರ್ ಬೇಲೂರು ತಾಲ್ಲೋಕು ಚನ್ನಹಳ್ಳಿಗ್ರಾಮ ಇವರು ಬರೆಯುವದು. ಸ್ವಾಮಿ! ತಾವು ಕಳಿಸಿಕೊಟ್ಟ ಹಾರ್ಮೋನಿಯಂ ಪಾರ್ಸಲನ್ನು ಡಿಲಿವರೀ ತೆಗೆದುಕೊಂಡೆನು. ನೋಡುವಲ್ಲಿ ಪದಾರ್ಥ ಬಹಳಸೊಗಸಾಗಿಯೂ ಬಂದೊಬಸ್ತಾಗಿಯೂ ಇರುವುದರಿಂದ ನನ್ನ ಮನಸ್ಸಿಗೆ ಬಹು ಸಮರ್ಪಕವಾಯಿತು. ಇದನ್ನು ನೋಡಿ ನನ್ನ ಸ್ನೇಹಿತರು ಇನ್ನು ಕೆಲವಕ್ಕೆ ಆರ್ಡರ್ ಕೊಡುವುದರಲ್ಲಿಧಾರೆ.

ಆರ್‌ಡರಿನ ಸಂಗಡ ಅಡ್ವಾನ್ಸು ಕಳುಹಿಸಿಕೊಡುತ್ತೇವೆ.

5

ಕ್ರಯದ ತಪ್ಸೀಲ್.

೧. "ಬಿಜಲೀಫ್ಲುಟ್" ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೨೫—೦—೦
೨. ಡಿಟೋ ಉತ್ತಮತರಹ ಹಾರ್ಮೋನಿಯಂ	೧ ಕ್ಕೆ ೨೩—೮—೦
೩. "ಕೋಹಿನೂರು ಫ್ಲುಟ್" ಸಿಂಗಲ್‌ರೀಡ್ಸ್‌ಹಾರ್ಮೋನಿಯಂ	೧ ಕ್ಕೆ ೨೯—೮—೦
೪. ಡಿಟೋ ನಮೂನೆ ಅತ್ಯುತ್ತಮವಾದ ಹಾರ್ಮೋನಿಯಂ	೧ ಕ್ಕೆ ೩೨—೮—೦
೫. "ಮೋಸ್ಲೀಂಫ್ಲುಟ್" ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೩೫—೦—೦
೬. ಪ್ರಖ್ಯಾತಿಹೊಂದಿದ ಎಂ. "ಮೋರ್ಹೆಫ್ಲುಟ್" ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೩೩—೮—೦
೭. ಪ್ರಖ್ಯಾತಿಹೊಂದಿದ ಎಂ. "ಮೋರ್ಹೆಫ್ಲುಟ್" ಹಾರ್ಮೋನಿಯಂನಲ್ಲಿ ಅತ್ಯುತ್ತಮವಾದ ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೪೨—೮—೦
೮. "ಕೊಹಿನೂರ್‌ಫ್ಲುಟ್" ಡಬ್ಬಲ್‌ರೀಡ್ಸ್‌ಹಾರ್ಮೋನಿಯಂ	೧ ಕ್ಕೆ ೪೨—೮—೦
೯. "ಬಿಜಲೀಫ್ಲುಟ್" ಡಬ್ಬಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೪೦—೧—೦
೧೦. "ಮೋಸ್ಲೀಂಫ್ಲುಟ್" ಡಬ್ಬಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೪೩—೮—೦
೧೧. ಪ್ರಖ್ಯಾತಿಹೊಂದಿದ ಎಂ. "ಮೋರ್ಹೆಫ್ಲುಟ್" ಡಬ್ಬಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೫೦—೮—೦
೧೨. ಡಿಟೋ ಎಂ. "ಮೋರ್ಹೆಫ್ಲುಟ್" ಡಬ್ಬಲ್‌ರೀಡ್ಸ್ ಅತ್ಯುತ್ತಮವಾದ ಹಾರ್ಮೋನಿಯಂ	೧ ಕ್ಕೆ ೫೦—೮—೦

ಹಾರ್ಮೋನಿಯಂಗಳಿಗೆ ಆರ್‌ಡರ್ ಮಾಡತಕ್ಕವರು ನಿಮ್ಮ ಊರಿಗೆಗೆಸಮೀಪವಿರುವ ರೈಲ್ವೇಸ್ಟೇಷನ್ ಬರೆಯುವದಲ್ಲದೆ ೫ರೂಪಾಯಿ ಅಡ್ವಾನ್ಸು ಕಳುಹಿಸಿಕೊಡಬೇಕು. ಅಡ್ವಾನ್ಸಿಲ್ಲದೇ ಬರತಕ್ಕ ಆರ್‌ಡರ್‌ಗಳಿಗೆ ಖಂಡಿತವಾಗಿಯೂ ರವಾನಿಸಲಾಗುವುದಿಲ್ಲ.

ಕಸ್ತೂರಿಮಾತ್ರೆ ಪ್ರಖ್ಯಾತರಾದ ಘನ ವೈದ್ಯರಿಂದ ತಯಾರಿಸಲ್ಪಟ್ಟ ಕಸ್ತೂರಿಮಾತ್ರೆ ಶೀಶೆ 1 ಕ್ಕೆ 0-4-0. 5 ಶೀಶೆಗೆ ಒಂದು ಶೀಶೆ ಇನಾಂ ಪೋಸ್ಟೇಜು ಅಲಾಯಿದಾ 12 ಶೀಶೆ ಒಟ್ಟಿಗೆ ತರಿಸಿಕೊಳ್ಳುವರಿಗೆ ಪೋಸ್ಟೇಜು ಸೇರಿ 2-8-0

ಪರಿಮಳಕಾರ್ಡುಗಳು ಒಂದುಕಾರ್ಡನ್ನು ಜೇಬಿನಲ್ಲಿಟ್ಟುಕೊಂಡಿದ್ದರೆ ಸುವಾಸನೆಯಾದ ಪುಷ್ಪವಟಿಗಳ ಮಧ್ಯದಲ್ಲಿರುವಂತೆ ಬಹು ಮನೋಹರವಾಗಿರುತ್ತೆ ಕಾರ್ಡು 1 ಕ್ಕೆ ಕ್ರಯ 0-1 0 12 ಕ್ಕೆ 0-10-0 ಪೋಸ್ಟೇಜು ಅಲಾಯಿದಾ ಒಂದು ಡಜನ್‌ಗಿಂತಲೂ ಕಡಿಮೆಯಾಗಿ ರವಾನಿಸಲಾಗುವುದಿಲ್ಲಾ.

ಸೆಸೆಕ್ತಾಂಬೂಲಮಿತ್ರ 250 ಮಾತ್ರೆಗಳಿರುವ ಪೊಟ್ನ 1 ಕ್ಕೆ 0-2-6 ಒಂದು ಡಜನ್ ಒಟ್ಟಿಗೆ ತರಿಸಿಕೊಳ್ಳುವರಿಗೆ 1-10-0 ಕೊಡುವುದಲ್ಲದೆ ಪೋಸ್ಟೇಜು ಸಹಾ ಮಾಫಿ ಮಾಡಿದ್ದೇವೆ. ಇದರ ಸೇವನೆಯಿಂದಾಗತಕ್ಕ ಗುಣಗಳ ಪ್ರಿಂಟಾದ ಚೀಟಿ ಪಾರ್ಸಲಿನ ಸಂಗಡ ರವಾನಿಸಲಾಗುತ್ತೆ.

ಶೆಷಿಂತಾನ್ 45 ಮಾತ್ರೆಗಳ ಪೊಟ್ನ 1 ಕ್ಕೆ 0-2-0, 95 ಮಾತ್ರೆಗಳ ಪೊಟ್ನ 1 ಕ್ಕೆ 0- -0, 200 ಮಾತ್ರೆಗಳ ಪೊಟ್ನ 1 ಕ್ಕೆ 0-7-0, 200 ಮಾತ್ರೆಗಳ ಟಿನ್ 1 ಕ್ಕೆ 0-9-0, 80 ಮಾತ್ರೆಗಳ ಟಿನ್ 1 ಕ್ಕೆ 0-4-0, 100 ಮಾತ್ರೆಗಳ ಶೀಸೆ 1 ಕ್ಕೆ 0-4-6

ನಮ್ಮ ವಿಳಾಸ:—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್ ಕೃಷ್ಣರಾಜಮೊಹಲ್ಲಾ ಮೈಸೂರು.

ಓರಿಯಂಟಲ್ ಫಾರ್ಮಸಿ ಮೈಸೂರು.

24

ಪ್ರಸಿದ್ಧ ಗುಣಕಂಡ ಔಷಧಗಳು.

ಜ್ವರದಮಾತ್ರೆ—ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆಯುಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮಂದಷವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ರೂ.

ಗೋರೋಜನದಮಾತ್ರೆ—ಮಕ್ಕಳಿಗೆ ಸುಖಭೇದಿಮಾಡಿಸುತ್ತೆ. ೪೦ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೂಡ್ಲೆ ತಪ್ಪಿ ಜೀರ್ಣಶಕ್ತಿಕೊಡುತ್ತೆ. ಪ್ರಯಾಣೀಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾಯು ನೋವು ಊಳುಕು ಊದು ಮುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ ೫ ಡಬ್ಬಿಗೆ ೧ ರೂ. ಕೂಡ್ಲೆ ನಮ್ಮ ಕ್ಯಾಟಲಾಗಿಗೆ ಬರಿಯಿರಿ ಮುಫತ್ತು ಕಳುಹಿಸುತ್ತೇವೆ.

ಹೊಸ ಪುಸ್ತಕಗಳು.

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ ೩೬೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧-೮-೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ ಷಟ್ಪದಿಯ ಕಾವ್ಯ. ಬೆಲೆ ೧೦ ಆಣೆ.

ಬಸವರಾಜವಿಜಯಂ—ಬೆಲೆ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ— ಬೆಲೆ ೧-೮-೦ ದ್ವಿತೀಯಃ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು ಷಟ್ಸ್ಥಲ-ಶರಣಸಸುಗೆ-ಸಂಜೀಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ-ರಾಜ ಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಕ್ರಮದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡ ಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ—ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ- ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸ್ತೋತ್ರರತ್ನ ೬ ಆಣೆ; ದೇವೀಕೋತ್ತರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಕುಸುಮಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,

192 ಗ್ರಂಥಪ್ರಕಾರಕಮಂಡಲಿ, ಮೈಸೂರು.

ಶ್ರೀಮದ್ ಮೈಸೂರು ಯುವರಾಜರವರಿಂದ ದಯಪಾಲಿಸಲ್ಪಟ್ಟ ಬಹುಮಾನ.

ಮಲೆನಾಡು ಪ್ರಾಂತ್ಯಕ್ಕೆ ಶ್ರೀಮದ್ ಯುವರಾಜರವರು ಸರ್ಕೀಟು ದಯಮಾಡಿಸಿದ ವೇಳೆ ವಿಶೇಷ ಶ್ರಮವಹಿಸಿದ್ದಕ್ಕಾಗಿ ನಗರದ ಸಿ. ನರಸಿಂಹಯ್ಯನವರಿಗೆ ಕೊಡುವ ಉದ್ದಿಶ್ಯ ತಮ್ಮ ಸ್ವಂತ ಭಾವಚಿತ್ರವನ್ನ ನಗರ ತಾಲ್ಲೂಕಿಗೆ ಕಳುಹಿಸಿಕೊಟ್ಟಿದ್ದನ್ನ ತಾ॥ ೫-೭-೧೫ ನೇ ದಿವಸ ಮಧ್ಯಾಹ್ನ ೪ ಗಂಟೆಯ ಸಮಯ ತಾಲ್ಲೂಕ್ ಕಚೇರಿಯಲ್ಲಿ ಈ ತಾಲ್ಲೂಕಿನ ಪ್ರಮುಖರನ್ನೆಲ್ಲಾ ಬರಮಾಡಿಕೊಂಡು ಸಭೆ ಸೇರಿಸಿ ಡಿಸ್ಟ್ರಿಕ್ಟಿನಿಂದ ಬಂದ ಆರ್ಡರ್ ಓದಿಹೇಳಿ ಮೆ॥ ಅಮಲ್ದಾರ್ ಮೊಹಿಯುದ್ದೀನ್ ಷರೀಫರವರಿಂದ ಯುವರಾಜರವರ ಭಾವಚಿತ್ರವು ಮಿ॥ ಸಿ. ನರಸಿಂಹಯ್ಯನವರಿಗೆ ಕೊಡಲ್ಪಟ್ಟಿತು. ಸಭಿಕರೆಲ್ಲರೂ ಸದರಿ ಚಿತ್ರವನ್ನ ನೋಡಿ ಸಂತೋಷಪಟ್ಟರು. ಮಿ॥ ಸಿ. ನರಸಿಂಹಯ್ಯನವರು ಎದ್ದುನಿಂತು ಶ್ರೀಮದ್ಯುವರಾಜರವರ ಸರ್ವೋತ್ತಮವಾದ ಪ್ರಜಾವಾತ್ಸಲ್ಯಾದಿಗುಣಗಳನ್ನ ವರ್ಣಿಸಿ ಶ್ರೀಮದ್ಯುವರಾಜರವರಿಗೂ ಶ್ರೀಮನ್ಮಹಾರಾಜರವರಿಗೂ ವಂದಿಸಿ, ಭಾವಚಿತ್ರವನ್ನ ಅಂಗೀಕರಿಸಿದರು. ಪ್ರತ್ಯಕ್ಷದರ್ಶಿ.

ಶ್ರೀಯುತ ಗೋಖಲೆಯವರು ಮತ್ತು ವೀರಶೈವ ಸಮಾಜವು.

ಯಾವ ಮಹಾಶಯನ ಅಕಾಲಮರಣವು ಭರತಖಂಡವನ್ನೇ ದುಃಖಸಾಗರದಲ್ಲಿ ಮುಳುಗಿಸಿರುವುದೋ, ಆ ಪುಣ್ಯಚರಿತನಿಗೂ, ಕೇವಲ ಹಿಂದುಳಿದಿರುವ ಮತ್ತು ಇದುವರೆಗೂ ದೇಶಸೇವಾನಿರತರಾದ ಯಾರೊಬ್ಬರ ಗಮನಕ್ಕೂ ಬಾರದಿದ್ದ ವೀರಶೈವಸಮಾಜಕ್ಕೂ ಇದ್ದ ಪರಸ್ಪರಸಂಬಂಧವು ನಿಜವಾಗಿ ದೇಶಸೇವೆಯಲ್ಲಿ ತೊಡಗಿರುವ ಪ್ರತಿಯೊಬ್ಬ ಮನುಷ್ಯನಿಂದಲೂ ವಿಚಾರಮಾಡಲ್ಪಡತಕ್ಕ ವಿಷಯವಾಗಿರುವುದು. ಬೊಂಬಾಯಿಪಟ್ಟಣದಲ್ಲಿ ತಾ॥ ೫-೩-೧೫ ರಲ್ಲಿ ಕೂಡಿದ್ದ ದುಃಖಪ್ರದರ್ಶನಸಭೆಯಲ್ಲಿ ಎಚ್. ಎಚ್. ದಿ ಆಗಾಖಾನರವರು ಈ ಪ್ರಕಾರ ಹೇಳಿರುವರು:—

"......As time went on Gokhale realised so fully that the path of political progress in India had to be wide enough and broad enough for all minorities, not only Moslems but even the smallest to be able to travel on it without losing individuality, that in the very last state paper which he ever wrote (he only finished it three days before he died and sent two copies to two trusted friends.) In this state paper which for the two friends is a sacred legacy which they will use only as he desired, he distinctly laid down that not only the Musalmans but that even the smallest minorities such as the Lingayats in any part of India wherever they may be should receive special representation......"

ಇದರ ಮುಖ್ಯ ಸಾರಾಂಶವೇನೆಂದರೆ:—ಗೋಖಲೆಯವರು ತಾವು ದಿವಂಗತರಾಗುವುದಕ್ಕೆ ಮೂರುದಿವಸ ಮುಂಚೆ ತಮ್ಮ ಮಿತ್ರಮಂಡಲಿಯಲ್ಲಿ ಮುಖ್ಯರಾದ ಇಬ್ಬರು ದೊಡ್ಡಮನುಷ್ಯರಿಗೆ ಈಪ್ರಕಾರ ಬರೆದಿರುವರಂತೆ—« ಇಂಡಿಯಾದೇಶದ ಏಳ್ಗೆಗೆ ಕಾರಣಭೂತವಾದ ದಾರಿಯು ಈ ದೇಶದಲ್ಲಿರತಕ್ಕ ಪ್ರತಿಯೊಂದು ಸಮಾಜವೂ (ಸಂಖ್ಯೆಯಲ್ಲಿ ಅದು ಎಷ್ಟೇ ದೊಡ್ಡದಾಗಿರಲಿ ಅಥವಾ ಸಣ್ಣದಾಗಿರಲಿ) ಚಲಿಸಲು ಸಾಕಾಗುವಷ್ಟು ವಿಶಾಲವಾಗಿರಬೇಕು. ಆದುದರಿಂದ ಪ್ರಜಾಬಾಹುಳ್ಯದಲ್ಲಿ ಅಧಿಕರೆನಿಸಿರುವ ಮಹಮ್ಮದೀಯಸಮಾಜ ಮಾತ್ರವಲ್ಲದೆ, ಸಂಖ್ಯೆಯಲ್ಲಿ ಕೇವಲ ಕಡಮೆಯಿರುವ ಲಿಂಗಾಯತರೇ ಮೊದಲಾದ ಇತರ ಜನಾಂಗದವರೂ ಕೂಡ (ಇಂಡಿಯಾದೇಶದಲ್ಲಿ ಅವರು ಎಲ್ಲಿದ್ದಾಗ್ಯೂ) ರಾಜಕಾರ್ಯನಿರ್ವಾಹಕಸಂಘಗಳಲ್ಲಿ ತಮ್ಮ ಪ್ರತಿನಿಧಿಗಳನ್ನುಳ್ಳವರಾಗಿರಬೇಕು (should receive special representation,) ಈ ಮಹಾವಾಕ್ಯವು ಕಾರ್ಯತಃ ನೆರವೇರುವುದರೊಳಗಾಗಿ, ಹಿಂದುಳಿದ ಜನಾಂಗಗಳ ದೌರ್ಭಾಗ್ಯವು ಆ ದೇವಾಂಶಸಂಭೂತರಾದ ಮಹಾಪುರುಷರನ್ನು ಇನ್ನೆರಡುವರ್ಷಗಳಕಾಲ ಜೀವಂತರನ್ನಾಗಿರಗೊಡದೆಹೋಯಿತು.

ಶ್ರೀಯುತ ಗೋಖಲೆಯವರ ಮಹಾವಾಕ್ಯವು ಮೈಸೂರುದೇಶಕ್ಕೂ ಅನ್ವಯಿಸತಕ್ಕದಾಗಿದೆ. ಈ ಸಂದರ್ಭದಲ್ಲಿ ಯೋಚಿಸಬೇಕಾದ ವಿಷಯವೊಂದುಂಟು. ಇಂಡಿಯಾದೇಶದ ಜನಸಂಖ್ಯೆಗೆ ಹೋಲಿಸಿದಲ್ಲಿ, ವೀರಶೈವಸಮಾಜವು ಕೇವಲ ಸ್ವಲ್ಪ ಜನಗಳನ್ನೊಳಕೊಂಡಿರುವುದೇನೋ ನಿಶ್ಚಯವು. ಮೈಸೂರುದೇಶದಲ್ಲಾದರೋ ಒಟ್ಟು ಜನಸಂಖ್ಯೆಯಲ್ಲಿ ೧/೭ ನೇ ಭಾಗ ವೀರಶೈವರೇ ಆಗಿರುವರು. ಇದೂ ಅಲ್ಲದೆ ಈ ಸಮಾಜದ ಬಹುಜನರು ವ್ಯವಸಾಯ, ವ್ಯಾಪಾರ, ಶೃಂಗಾರಿಕೆ ಮೊದಲಾದ ದೇಶದ ಸಂಪದಭಿವೃದ್ಧಿಗೆ ಕಾರಣಗಳಾದ ವೃತ್ತಿಗಳಲ್ಲಿ ತೊಡಗಿರುವರು. ಆದುದರಿಂದ ಮೈಸೂರುದೇಶದ ರಾಜಕಾರ್ಯನಿರ್ವಾಹದಲ್ಲಿ ಈ ವೀರಶೈವಸಮಾಜಕ್ಕೆ ಎಷ್ಟರಮಟ್ಟಿನ ಹಕ್ಕು ಬಾಧ್ಯತೆ ಇರುವುದೆಂಬ ವಿಷಯವನ್ನು ತಿಳಿದುಕೊಳ್ಳಬೇಕಾದುದು ನಿಜವಾದ ದೇಶಸೇವೆಯಲ್ಲಿ ನಿರತನಾಗಿರುವ ಪ್ರತಿಯೊಬ್ಬ ಮನುಷ್ಯನ ಮುಖ್ಯಕರ್ತವ್ಯವಾಗಿರುವುದು. ಹೀಗಿದ್ದಾಗ್ಯೂ, ತಮ್ಮ ಸಮಾಜಕ್ಕೆ ಸಂಬಂಧಪಟ್ಟ ಕುಂದುಕೊರತೆಗಳೇನಿದ್ದಾಗ್ಯೂ, ಆ ಸಮಾಜದವರೇ ಕೇಳಿಕೊಳ್ಳಬೇಕಾಗಿರುವುದೇಹೊರತು, ಈ ದೇಶದಲ್ಲಿ ಬಹಳ ಜವಾಬ್ದಾರಿಯಿಂದ ಕೂಡಿದುದಾಗಿಯೂ, ನಿಸ್ಪೃಹತೆಯಿಂದ ನಡೆಸಿಕೊಂಡು ಬರಬೇಕಾದುದಾಗಿಯೂ ಇರುವ ಅಧಿಕಾರಪದವಿಯನ್ನು ಅನುಭವಿಸುತ್ತಿರುವ ಮಹಾಶಯರ ಕನಸಿನಲ್ಲಿ ಕೂಡ ಈ ಸಮಾಜವು ನೆನಪಿಗೆ ಬರುವಂತೆ ಕಾಣುವುದಿಲ್ಲ. ಇವರುಗಳಿಗೆ ಈ ಸಮಾಜದವರು ಎಲ್ಲಿನೋಡಿದರೂ ಸೇವಾವೃತ್ತಿಯನ್ನೂ ವ್ಯವಸಾಯವೇ ಮೊದಲಾದ ಕೀಳುವೃತ್ತಿಯನ್ನೂ ಮಾಡಿಕೊಂಡಿರುವರಂತೆ ತೋರುವರೇವಿನಾ ಮತ್ತೆಬೇರೆಯಿಲ್ಲ! ಏತಕ್ಕೆಂದರೆ, ಅನೇಕವೇಳೆ ನಾನು ರೈಲಿನಲ್ಲಿ ಪ್ರಯಾಣಮಾಡುವಾಗ್ಗೆ ಈ ಮಹಾತ್ಮರಲ್ಲಿ ಕೆಲವರು ನನ್ನನ್ನು ನೀನು ಯಾವಜಾತಿಗೆ ಸೇರಿದವನೆಂದು ಕೇಳಲು, ಲಿಂಗಾಯಿತನೆಂದು ಹೇಳಿದೆನು. ಅದಕ್ಕೆ ಅವರುಗಳು "Oh! You belong to those who serve as manials (i.e. cooks) in the Palace." ಇದರ ಅಭಿಪ್ರಾಯವೇನೆಂದರೆ « ಓಹೋ ! ನೀನು ಅರಮನೆಯಲ್ಲಿ ಅಡಿಗೆಮಾಡಿಕೊಂಡಿರುವವರಿಗೆ ಸಂಬಂಧಪಟ್ಟವನೋ?" ವಾಚಕಮಹಾಶಯರೆ,ನೋಡಿದಿರಾ! ವೀರಶೈವರು ಎಷ್ಟರಮಟ್ಟಿಗೆ ಮರ್ಯಾದೆಯಿಂದ ಕಾಣಲ್ಪಡುತ್ತಿರುವರು? ಇದು ಆ ಅಧಿಕಾರಿಗಳ ತಪ್ಪಲ್ಲ. ಅವರ ವಿಚಾರಶೂನ್ಯಕರ್ತವ್ಯಕುಂಠಿತೆಯೇ ಇದಕ್ಕೆಲ್ಲಾ ಮುಖ್ಯಕಾರಣವು. ತಮ್ಮ ಅಧಿಕಾರವು ಎಷ್ಟನದು? ತಮ್ಮ ಮುಖ್ಯಕರ್ತವ್ಯವೇನು? ತಮ್ಮ ಅಧಿಕಾರಕ್ಕೊಳಪಟ್ಟ ಪ್ರಜೆಗಳ ರಾಜ್ಯದ ಮುಖ್ಯಾಂಗವೆನಿಸುವ ಒಂದು ಸಮಾಜಕ್ಕೆ ಸೇರಿದವರುಗಳಾರು? ಅವರ ಕುಂದುಕೊರತೆಗಳೇನು? ಇವೇ ಮೊದಲಾದ ವಿಚಾರವನ್ನು ಮಾಡಿದಲ್ಲಿ, ಅವರ ಬಾಯಿಯಲ್ಲಿ ಇಂಥಾ ಮಾತು ಬರುತ್ತಲಿದ್ದಿತೆ? ಆದರೇನು ಸಮಾಜಕ್ಕೆ ಯಾವವಿಧವಾದ ಅಪಮಾನವೂ ಆಗಲಿಲ್ಲ. ಹೇಳಿದವರ ವಿಚಾರಶೂನ್ಯತೆಯನ್ನು ಹೊರಪಡಿಸಿತು. ಸಮಾಜಹಿತವನ್ನು ಕೋರತಕ್ಕ ಪ್ರತಿಯೊಬ್ಬನ ಮನಸ್ಸಿನಲ್ಲೂ ಜನಗಳಲ್ಲಿರತಕ್ಕ ಈ ವಿಧವಾದ ಅನೇಕ ದುರಭಿಪ್ರಾಯಗಳನ್ನು ಹೋಗಲಾಡಿಸಬೇಕೆಂಬ ಕುತೂಹಲವನ್ನುಂಟುಮಾಡಲು ಕಾರಣವಾಯಿತು.

ಇದುವರೆಗೂ ವೀರಶೈವಸಮಾಜವು ಇತರರಿಂದ ಮುಖ್ಯವಾಗಿ ಮೈಸೂರುದೇಶದಲ್ಲಿ ಎಷ್ಟರಮಟ್ಟಿಗೆ ಕಾಣಲ್ಪಡುತ್ತಿರುವುದೆಂಬ ವಿಚಾರವನ್ನು ಮಾಡಿದುದಾಯಿತು. ಇನ್ನು ಈ ಸಮಾಜಕ್ಕೆ ಸೇರಿದ ಕೆಲವು ಮಹಾಶಯರ ವಿಚಾರವನ್ನು ಇಲ್ಲಿ ಮಾಡದಿದ್ದಲ್ಲಿ ಈ ನನ್ನ ಲೇಖನದ ಮುಖ್ಯಕರ್ತವ್ಯವನ್ನೇ ಮರೆತಂತಾಗುವುದು. ಈ ಸಮಾಜಕ್ಕೆ ಸೇರಿದ ಕೆಲವು ವಿದ್ಯಾವಂತರುಗಳು ಪ್ರಾರಂಭದಲ್ಲಿ ಸ್ವಕಾರ್ಯಸಾಧನೆಗಾಗಿ ಸಮಾಜೋದ್ಧಾರಕರಂತೆ ನಟಿಸಿ, ಕೊನೆಗೆ ಸರ್ಕಾರಿ ಉದ್ಯೋಗವನ್ನು ಪಡೆದು (ಅಂದರೆ ಸ್ವಕಾರ್ಯವು ಕೈಗೂಡಿದನಂತರ) ತಾವು ಹುಟ್ಟಿ ಬೆಳೆದ ಸಮಾಜವನ್ನೇ ಮರೆತು, ಆ ಸಮಾಜಕ್ಕೆ ತಾವುಗಳು ಇದ್ದೂ ಇಲ್ಲದಂತಾಗಿರುವರು. ಬಹುಶಃ ಸಮಾಜಕ್ಕೆ ಸಂಬಂಧಪಟ್ಟ ಕೊರತೆಯನ್ನು ಹೋಗಲಾಡಿಸಿಕೊಡಬೇಕೆಂದು ಎಷ್ಟು ದೈನ್ಯದಿಂದ ಹೇಳಿಕೊಂಡರೂ ಕಿವಿಗೊಟ್ಟು ಕೇಳುವವರೇ ಇಲ್ಲವೆಂದು ಬೇಸರಗೊಂಡಿರಬಹುದು. ಅಥವಾ ಸಮಾಜದಮೇಲೆ ತಮಗಿರುವ ಪ್ರೀತಿಯನ್ನು ಹೊರಪಡಿಸಿದರೆ, ಉತ್ತರೋತ್ತರ ತಮಗೆ ಇನ್ನೂ ಉನ್ನತಪದವಿಯು ದೊರೆಯದೇಹೋದೀತೆಂಬ ಭಯವಿದ್ದರೂ ಇರಬಹುದು. ಇಂಥ ಮಹಾನುಭಾವರೆಲ್ಲ ರಾವಬಹದ್ದೂರ್ ರುದ್ರಗೌಡ ಚನ್ನವೀರಗೌಡ ಅರಟಾಳ ಐ. ಎಸ್. ಒ. (I. S. O.) ಇವರ ಮೇಲ್ಪಂಕ್ತಿಯನ್ನು ಅನುಸರಿಸಬಾರದೆ? ಇವರು ಸರ್ಕಾರಿ ಉದ್ಯೋಗದಲ್ಲಿ ಯಶಸ್ಸನ್ನು ಪಡೆದುದಲ್ಲದೆ, ಅದೇಸಮಯದಲ್ಲಿ ಸ್ವಸಮಾಜಸೇವೆಯನ್ನು ಮಾಡಿ ಶ್ರೀ ಬಸವೇಶ್ವರನಿಗೆ ಸಮಾನರಾಗಿ ವೀರಶೈವರೆಲ್ಲರಿಂದಲೂ ಕಾಣಲ್ಪಡುತ್ತಿಲ್ಲವೆ?

ಆದುದಾಯಿತು. ಇನ್ನುಮೇಲಾದರೂ ಪ್ರತಿಯೊಬ್ಬ ವೀರಶೈವನೂ ತನಗೆ ಸಾಧ್ಯವಾದಮಟ್ಟಿಗಾದರೂ ಸಮಾಜಸೇವೆಯನ್ನು ಮಾಡಿ ಶ್ರೀಯುತ ಗೋಖಲೆಯವರ ಆಶಯವನ್ನು ಕಾರ್ಯತಃ ನೆರವೇರುವಂತೆ ಮಾಡಬೇಕೆಂಬುವುದೇ ನನ್ನ ಪ್ರಾರ್ಥನೆಯು. ಪ್ರಾರಂಭದಲ್ಲಿ ಅನೇಕ ತೊಂದರೆಗಳುಂಟಾಗುವುವು. ಆದರೆ ಹಿಡಿದ ಕಾರ್ಯವನ್ನು ಬಿಡದೆ ಕೊನೆಗಾಣಿಸಬೇಕೆಂಬ ದೃಢಸಂಕಲ್ಪವುಳ್ಳ ಮುಂದಾಳುಗಳು ಒಬ್ಬಿಬ್ಬರಾದರೂ ಇಲ್ಲದಿದ್ದಲ್ಲಿ ಯಾವಸಮಾಜವೂ ಮುಂದಕ್ಕೆ ಬರಲಾರದು. ಓರ್ವ ಸಮಾಜಬಾಂಧವ.

ಬರೋಡಾ ಮಹಾರಾಜರು.

ಇವರು ಪತ್ನೀಸಮೇತರಾಗಿ ತಮ್ಮ ಮಂತ್ರಿಯವರೊಡನೆ ಜುಲೈ ತಾ॥ ೭ ರಲ್ಲಿ ತಿರುವಾಂಕೂರು ಸಂಸ್ಥಾನಕ್ಕೆ ದಯಮಾಡಿಸಿದರು. ಮಹಾರಾಜರು ಇವರ ಸತ್ಕಾರಕ್ಕಾಗಿ ವಿತರಣೆಯಾದ ಏರ್ಪಾಟುಗಳನ್ನು ಮಾಡಿಸಿದ್ದರು. ಆ ಸಂಸ್ಥಾನದ ಎಲ್ಲೆಯಹತ್ತಿರ ದಿವಾನರು ಇವರನ್ನು ಇದಿರುಗೊಳ್ಳುವಂತೆ ಏರ್ಪಾಟಾಗಿದ್ದಿತು. ಅಲ್ಲಿ ಅವರು ವೈಭವದಿಂದ ಸ್ವಾಗತಮಾಡಿದಬಳಿಕ ಕ್ವಿಲಾನಿನಿಂದ ಅಲಂಕೃತವಾದ ಹೊಗೆಹಡಗಿನಮೇಲೆ ಗಾಯಕ್ವಾರ್ ಮಹಾರಾಜರವರು ಸಪರಿವಾರರಾಗಿ ಪ್ರಯಾಣಮಾಡಿದರು. ಅದರ ಮೇಲೆ ಪ್ರಯಾಣಕಾಲದಲ್ಲಿ ನಾವಿಕರು ನಾನಾವಿಧವಾದ ಆಟಗಳನ್ನೂ ಹಾಡುಗಳನ್ನೂ ಆಡುವ ಏರ್ಪಾಟು ಆಗಿದ್ದಿತು. ಮಹಾರಾಜರ ಹಡಗಿನ ಹಿಂದೆ ಹಲವು ದೋಣಿಗಳು ಪರಿವಾರದ ಜನರನ್ನು ಕುಳ್ಳಿರಿಸಿಕೊಂಡು ಹೊರಟುವು. ಈ ಪ್ರಯಾಣವು ಕಾಲ್ವೆಯಮಾರ್ಗವಾಗಿ ಬಹುಮನೋಹರವಾಗಿ ಸಾಗಿತು. ಆ ಮಾರ್ಗವೆಲ್ಲಾ ಧ್ವಜಪತಾಕೆ ತೋರಣ ಮೊದಲಾದುವುಗಳಿಂದ ಸುಂದರವಾಗಿ ಅಲಂಕರಿಸಲ್ಪಟ್ಟಿದ್ದಿತು. ರೆಸಿಡೆಂಟರಭವನದಹತ್ತಿರ ಸರ್ವರೂ ಹಡಗುಗಳಿಂದಿಳಿದರು. ಅಲ್ಲಿ ಸುಂದರವಾದ ಮಂಟಪ ಮೊದಲಾದುವುಗಳು ನಿರ್ಮಿಸಲ್ಪಟ್ಟಿದ್ದುವು. ಅಲ್ಲಿಂದ ರಾಜಮಾರ್ಗದಲ್ಲಿ ರಥಾರೂಢರಾದ ಮಹಾರಾಜರು ಹೊರಡಲು ದೇಶೀಯಪ್ರಜೆಗಳು ಬಹಳ ಸಂತೋಷದಿಂದ ಕೋಲಾಹಲಧ್ವನಿಮಾಡುತ್ತ ಸ್ವಾಗತಿಸಿದರು. ತಾ॥ ೮ ನೆ ಮಧ್ಯಾಹ್ನ ರಾಜಧಾನಿಯಲ್ಲಿ ಗಾಯಕ್ವಾರ್ ಮಹಾರಾಜರಿಗೂ ತಿರುವಾಂಕೂರು ಮಹಾರಾಜರಿಗೂ ದರ್ಶನಪ್ರತಿದರ್ಶನಗಳು ನಡೆದುವು. ಆಗ ಪದ್ಧತಿಯಂತೆ ೨೧-೨೧ ಗುಂಡುಗಳು ಹಾರಿಸಲ್ಪಟ್ಟುವು. ಆ ದಿನ ರಾತ್ರಿ ಬಿಡಾರದಲ್ಲಿ ಸಂಸ್ಥಾನಪರವಾದ ಔತಣವೂ ಸಂಗೀತಶ್ರವಣಾದಿಗಳೂ ನಡೆದುವು. ತಾ॥ ೯ ನೆಯ ದಿವಸ ಗಾಯಕ್ವಾರ್ ಮಹಾರಾಜ ದಂಪತಿಗಳು ತಿರುವಾಂಕೂರು ಸಂಸ್ಥಾನದ ಮಂತ್ರೀಶರಾದ ಮ॥ ಕೃಷ್ಣನಾಯರ್‌ರವರೊಡನೆ ಹೊರಟು ಅಲ್ಲಿನ ವಸ್ತುಪ್ರದರ್ಶನಶಾಲೆ-ಪುರೋದ್ಯಾನ-ಚಿತ್ರಪಾಠಶಾಲೆ-ಕಳಾಶಾಲೆ-ಗ್ರಂಥಭಾಂಡಾಗಾರ-ಹುಚ್ಚರವೈದ್ಯಶಾಲೆ-ಇವುಗಳನ್ನೆಲ್ಲಾ ಪರಾಮರಿಸಿಕೊಂಡು ಬಂದರು. ಮಧ್ಯಾಹ್ನಾತ್ಪರ ತಿರುವಾಂಕೂರು ಮಹಾರಾಜರ ದರ್ಬಾರಿಗೆ ದಯಮಾಡಿಸಿ, ರಾಜಮರ್ಯಾದೆಯಿಂದ ಸ್ವಾಗತಿಸಲ್ಪಟ್ಟರು. ಅದೇದಿನ ಸಾಯಂಕಾಲದಹೊತ್ತಿಗೆ ಯೂನಿಯನ್‌ಕ್ಲಬ್ಬಿನವರು ಏರ್ಪಡಿಸಿದ್ದ ವನಭೋಜನ ವಿಹಾರೋತ್ಸವಕ್ಕೆ ದಯಮಾಡಿಸಿದ್ದರು. ಇಲ್ಲಿಂದ ತಾ॥ ೧೦ ಬೆಳಗ್ಗೆ ಹೊರಟ ಬರೋಡಾಮಹಾರಾಜದಂಪತಿಗಳು ಮೋಟಾರಿನಮೇಲೆ ಕನ್ಯಾಕುಮಾರಿಗೆ ಮಧ್ಯಾಹ್ನದ ಹೊತ್ತಿಗೆ ದಯಮಾಡಿಸಿ ಅಲ್ಲಿನ ಭೂಶಿರದ ಪ್ರಕೃತಿಸೌಂದರ್ಯಾದಿಗಳನ್ನೆಲ್ಲಾ ನೋಡಿ ಆನಂದಿಸಿದರು. ನಾಗರ್ ಕೋಯಿಲ್ ಗ್ರಾಮದಲ್ಲಿ ಇವರ ಸತ್ಕಾರಕ್ಕಾಗಿ ಪುರಾಲಂಕಾರಾದಿಗಳು ಮಾಡಲ್ಪಟಿದ್ದುವು. ಅಲ್ಲಿನ ಪುರಜನಗಳು ಮ॥ ವಿ. ಪಿ. ಮಾಧವರಾಯರಿಗೆ ಒಂದು ಸ್ವಾಗತಪತ್ರವನ್ನು ಸಮರ್ಪಿಸಿದರು.

ಅಮೇರಿಕಾ-ಜರ್ಮನಿ.

ಲೂಸಿಟಾನಿಯಾ ಎಂಬ ಹಡಗನ್ನು ಜರ್ಮನರು ಸಬ್‌ಮೆರೀನಿನಿಂದ ಮುಳುಗಿಸಿದ ವಿಷಯವಾಗಿ ಅಮೇರಿಕಾಕ್ಕೂ ಜರ್ಮನಿಗೂ ಪತ್ರವ್ಯವಹಾರಗಳು ನಡೆಯುತ್ತಿರುವುವಷ್ಟೆ. ಇದಕ್ಕೆ ಹಿಂದೆ ಅಮೇರಿಕನ್ನರು ಬರೆದಿದ್ದ ಪತ್ರಿಕೆಗೆ ಜರ್ಮನರು ಈಗತಾನೇ ಕೊಟ್ಟಿರುವ ಉತ್ತರದಲ್ಲಿ ಹೀಗೆ ತಿಳಿಯಿಸಿದ್ದಾರೆಂದು ಪ್ರಕಟವಾಗಿದೆ—« ಅಂತರ್ಜಾತೀಯ ನಿಬಂಧನೆಗಳನ್ನು ನಮ್ಮ ಶತ್ರುಗಳು ಅಲಕ್ಷೀಕರಿಸಿ, ನಮಗೂ ತಟಸ್ಥದೇಶೀಯರಿಗೂ ವ್ಯಾಪಾರವು ಸಾಗದಂತೆ ಮಾಡಿದುದರಿಂದ ನಾವು ಸಬ್‌ಮೆರೀನುಗಳ ಯುದ್ಧವನ್ನು ಆರಂಭಿಸಬೇಕಾಯಿತು. ಲೂಸಿಟಾನಿಯಾವನ್ನು ನಾವು ಮುಳುಗಿಸದೆ ಇದ್ದರೆ ಹಲವು ಪೆಟ್ಟಿಗೆಗಳ ಮದ್ದುಗುಂಡು ಮೊದಲಾದ ಸಾಮಗ್ರಿಗಳು ಶತ್ರುಗಳ ಕೈಸೇರುತ್ತಿದ್ದುವು. ಅದರಿಂದ ಜರ್ಮನಿಯಲ್ಲಿರುವ ಅನೇಕ ಸಹಸ್ರಮಂದಿ ಹೆಂಗುಸರೂ, ಮಕ್ಕಳೂ ಅನಾಥರಾಗಿ ಹೋಗುತ್ತಿದ್ದರು. ಅಷ್ಟು ದೊಡ್ಡಹಡಗು ಅಷ್ಟುಬೇಗನೆ ಒಡೆದುಹೋಗುವುದು ಬಹಳ ಆಶ್ಚರ್ಯಕರವು. ಅದರಲ್ಲಿ ಹಾರುವ ಮದ್ದಿಗೆ ಸಂಬಂಧಪಟ್ಟ ಸಾಮಗ್ರಿಗಳಿದ್ದುದರಿಂದಲೇ ಅದು ಅಷ್ಟುಬೇಗನೆ ಒಡೆದು ಮುಳುಗುವುದಕ್ಕೆ ಕಾರಣವಾಗಿರಬೇಕು. ಅಮೇರಿಕಾದವರ ಹಡಗುಗಳು ಹೊರಡುವ ಕಾಲವನ್ನು ನಮಗೆ ತಿಳಿಯಿಸುವುದಕ್ಕೂ ಅವುಗಳಮೇಲೆ ಒಂದು ಗೊತ್ತಾದ ಬಣ್ಣ ಮೊದಲಾದುವುಗಳನ್ನು ಹಾಕುವುದಕ್ಕೂ ಏರ್ಪಡಿಸಿದರೆ, ನಾವು ಆ ನಿಮ್ಮ ಹಡಗುಗಳನ್ನು ಮುಳುಗಿಸದಿರುವಂತೆ ಏರ್ಪಡಿಸುತ್ತೇವೆ. ಅಮೇರಿಕಾಧ್ವಜಪಟವನ್ನು ಏರಿಸಿಕೊಂಡಿರುವ ತಟಸ್ಥದೇಶೀಯನೌಕೆಗಳು ಅಮೇರಿಕಾದೇಶೀಯರನ್ನು ಕುಳ್ಳಿರಿಸಿಕೊಂಡು ಹೋಗುವುದಕ್ಕೂ ಕೂಡ ನಾವು ಸ್ವಲ್ಪಮಟ್ಟಿಗೆ ಅಭ್ಯಂತರವನ್ನು ಮಾಡಲಾರೆವು. ಅಮೇರಿಕಾದವರಿಗೆ ಬೇಕಾಗುವಷ್ಟು ತಟಸ್ಥದೇಶೀಯನೌಕೆಗಳು ದೊರಕದಿದ್ದರೆ ಅವರು ಶತ್ರುದೇಶದವರ ೪ ಹಡಗುಗಳನ್ನು ಪ್ರಯಾಣಕರಿಗೋಸ್ಕರವಾಗಿ ಉಪಯೋಗಿಸಕೊಳ್ಳಬಹುದು. ನಾವು ಅವನ್ನೂ ಕೂಡ ಮುಳುಗಿಸುವುದಿಲ್ಲ. ಮುಂದೆ ಸಮುದ್ರಯುದ್ಧದಲ್ಲಿ ಮಾರ್ಪು ಜರುಗಬೇಕಾದುದು ಅವಶ್ಯಕವೆಂದು ಅಮೇರಿಕಾದ ಅಧ್ಯಕ್ಷರು ಆಂಗ್ಲಪ್ರಭುತ್ವದವರಿಗೆ ಬರೆದು ತಿಳಿಯಿಸಿರುವುದಕ್ಕಾಗಿ ನಾವು ಅವರನ್ನು ವಂದಿಸುತ್ತೇವೆ. ನಾವು ಯಾವಾಗಲೂ ಅಮೇರಿಕಾಧ್ಯಕ್ಷರ ಸಹಾಯವನ್ನು ಅಪೇಕ್ಷಿಸುವುದಕ್ಕೆ ಬಹಳ ಸಂತೋಷಿಸುತ್ತೇವೆ. ಈಗಿನ ಪ್ರಸಕ್ತಿಯು ಮುಗಿದನಂತರ ಸಮುದ್ರಸ್ವಾತಂತ್ರ್ಯವನ್ನು ದೊರಕಿಸುವ ವಿಷಯದಲ್ಲೂ ಅವರ ಸಹಾಯ್ಯವು ಅನುಕೂಲಿಸುವಂತಾಗಲಿ ಎಂದು ನಾವು ಕೋರುತ್ತೇವೆ" ಎಂದು ತಿಳಿಯಿಸಿರುವರಂತೆ. ಲೂಸಿಟಾನಿಯಾವನ್ನು ಮುಳು [illegible]

ಪಬೋರಾ ಎಂಬ ಗ್ರಾಮದಲ್ಲಿರುವ ಒಂದು ಮಹಮ್ಮದೀಯರ ಕುಟುಂಬದಲ್ಲಿ ತಂದೆ ಮಗಳು-ಅಳಿಯ-ಈ ಮೂವರೂ ಅನ್ನವಿಲ್ಲದೆ ಅನ್ನ! ಅನ್ನ!! ಎಂದು ಬಾಯ್ಬಿಡುತ್ತಲೇ ಮೃತರಾಗಿರುವರಂತೆ. ಹಲವುಕಡೆ ಜನರಿಗೆ ದಿನಕ್ಕೆ ಒಂದು ಹೊತ್ತಿನ ಊಟವೂ ಇಲ್ಲದೆ ಬಳಲುತ್ತಿದ್ದಾರೆ. ಗೌರ್ನಮೆಂಟಿನವರು ವಿಪನ್ನಪ್ರಜೆಗಳಿಗೆ ಸಾಲವಾಗಿ ಕೊಡಲು ಇತ್ತ ೧ ಲಕ್ಷ ರೂ.ಗಳೂ ಆಹಾರ್ಯವಸ್ತುಗಳಿಗಾಗಿ ಕೊಟ್ಟ ೧೦ ಸಾವಿರ ರೂ.ಗಳೂ ಸಾಲದೆಹೋದುವು. ಪ್ರಜೆಗಳು ಚಂದಾ ಎತ್ತುತ್ತಿದ್ದಾರೆ.

ಯುದ್ಧವು ಬೇಗನೆ ಮುಗಿದು ಆಂಗ್ಲಪ್ರಭುತ್ವದವರಿಗೆ ಸಂಪೂರ್ಣ ವಿಜಯವಾಗುವಂತೆ ಮಾಡುವುದಕ್ಕಾಗಿ ಬೊಂಬಾಯಿಯಲ್ಲಿ ಘೂರ್ಜರರು ಒಂದು ಮಹಾ ಶಾಂತಿಯಜ್ಞವನ್ನು ಇಷ್ಟರಲ್ಲೇ ಮಾಡುವವರಾಗಿದ್ದಾರಂತೆ. ಇದಕ್ಕೆ ಲಕ್ಷಾಂತರ ರೂ. ಗಳ ವೆಚ್ಚವು ಹಿಡಿಯುವುದಂತೆ. ಹೃಷೀಕೇಶಕ್ಷೇತ್ರದಲ್ಲಿ ಮಹಾ ಮಹಿಮರೆನಿಸಿಕೊಂಡಿರುವ ಪರಮಹಂಸಜಿ ಮೋನರಾಜ ಶ್ರೀಮಚ್ಚಿದಾನಂದ ಸರಸ್ವತಿಯೆಂಬ ಯೋಗೀಶ್ವರರು ಇದಕ್ಕಾಗಿ ಬೊಂಬಾಯಿಗೆ ಬಂದಿದ್ದಾರೆ. ಈ ಯಜ್ಞಕ್ಕಾಗಿ ಚಂದಾಮೂಲಕ ಹಣವು ಕೂಡಿಸಲ್ಪಡುತ್ತಿರುವುದು.

ಗಳೂರಿಗೆ ಹೋದಕೂಡಲೆ ನಿಮ್ಮ ಬಾಕಿಯ ಹಣವನ್ನೆಲ್ಲಾ ಕಳುಹಿಸಿಕೊಡುತ್ತೇನೆಂದು ಹೇಳಲು, ಆ ಶ್ರೀಮಂತನಿಗೆ ಇವನ ಮಾತಿನಲ್ಲಿ ಕೊಂಚ ಅನುಮಾನವು ಹುಟ್ಟಿ, ತಮ್ಮಲ್ಲಿದ್ದ ಆ ವಂಚಕನ ಚೀಲವನ್ನು ರಹಸ್ಯದಲ್ಲಿ ಬಿಚ್ಚಿನೋಡುವಲ್ಲಿ ಕಲ್ಲು ಮಣ್ಣು ಇದ್ದುದನ್ನು ಕಂಡು ಭಯಗ್ರಸ್ತನಾಗಿ ಆ ಮೋಸಗಾರನನ್ನು ಹುಡುಕಿಸುತ್ತಿರುವಲ್ಲಿ ಅವನು ಪಲಾಯನವಾಗಿದ್ದನು.

ವಿದೇಶ ವೃತ್ತಾಂತಗಳು

ತುಪಾಕಿಗಳಿಗೆ ಮದ್ದನ್ನು ಸೈನಿಕರು ತುಂಬಬೇಕಷ್ಟೆ. ಜರ್ಮನ್‌ಸೈನ್ಯದಲ್ಲಿ ತುಪಾಕಿಗಳಿಗೆ ಮದ್ದನ್ನು ತನ್ನಷ್ಟಕ್ಕೆತಾನೇ ತುಂಬಿಕೊಳ್ಳುವಂತೆ ಯಂತ್ರರಚನೆಯನ್ನು ಜರ್ಮನರು ಈಚೆಗೆ ಮಾಡಿರುವರಂತೆ.

ಆಸ್ಟ್ರಿಯಾದೇಶವಾದ್ಯಂತದಲ್ಲೂ ಈಗ ವಾಂತಿಭೇದಿ ರೋಗವು ವ್ಯಾಪಿಸುತ್ತಲಿದೆ. ಈ ವ್ಯಾಧಿಯು ಪ್ರಜೆಗಳಲ್ಲೂ ಸೈನಿಕರಲ್ಲೂ ಕೂಡ ಕಾಣಿಸಿಕೊಂಡಿದೆ. ಸೆರೆಯಾಳುಗಳಿಟ್ಟಿರುವ ಸ್ಥಲದಲ್ಲೂ ವ್ಯಾಪಿಸಿ, ೧೪೧೪ ಮಂದಿಗೆ ಸೋಕಿ ೩೧೦ ಮಂದಿಯು ಸತ್ತಿರುವರೆಂದು ಅಲ್ಲಿನ ಅಧಿಕಾರಿಗಳು ಪ್ರಕಟಿಸಿದ್ದಾರೆ.

ಹಾರುವ ಮದ್ದನ್ನು
ಕಿಬಿದ್ದು ಬಹಳ ಅನ
ಈ ಸತ್ತವರಲ್ಲಿ ಇಂ
ಕೂಡ ಒಬ್ಬನಾಗಿರುವ
ಉದ್ಯೋಗಿಯಾಗಿದ್ದ
ಹುತಕ್ಕೆ ಕಾರಣಭೂ

ಮನುಷ್ಯರಮೂಲಕ
ಸಿ. ಯಂತ್ರಸಹಾಯ
ಸಾಧನವನ್ನು ಕಂಡು
ಮಂಡಲಿಯವರಿಗೆ ಆ
ಮುಂದಣಯುದ್ಧದಲ್ಲಿ
ಳೆಹನಿಯಂತೆ ಸುರಿಸುವ
ಡಿದಿರುವರಂತೆ.

ಡಿಯಾನು-ಮೇಹಿಯೋ
ರುತ್ತಲೊಡನೆ ಸಿಡಿಲಂಗ
ಮಾಡಿದೆ. ಬಹುಜನರು
ಕಂಬಿಮೇಲೆ ಹೋಗು
ರಾಲೇ ಮಗುಚಿಕೊಂಡಿ
ಗುಚಿಕೊಂಡುವು. ಅದ
ಳುಗ ಸತ್ತರು. ಇದೇತೆ
ಗಿರುವುವು.

ಕೊಲ್ಲುವುದಕ್ಕಾಗಿ ೨ ನೆ
ನಡೆದಿರುವುದು. ಕಳೆದ
ಧರಾಗಿ ಪ್ರಾರ್ಥನೆಗಾಗಿ
ಯಾರೋ ಸಿಡಿಮದ್ದನ್ನು
ಕಿಯೊಳಕ್ಕೆ ಬೀಳದೆ ಕು
. ಆದರೆ ಒಡೆಯಲಿಲ್ಲ.
ಆಗಲಿಲ್ಲ ಸುಲ್ತಾನರು
ತೀರಿಸಿಕೊಂಡು ಬಂದು
ಹೋದರು.

ರ್ಕ ಪಟ್ಟಣದಲ್ಲಿ ಎರಿಕ್
ಶೀಯನು ಜೆ. ಪಿ. ಮೋ
ರ ಮೇಲೆ ೨ ಆವೃತ್ತಿ ತು
ಬಲವಾದ ಗಾಯವನ್ನುಂ
ರಾಯಭಾರಿಯೊಡನೆಯೂ
ಳಿತು ಮೋರ್ಗನರವರು
ರುವಾಗ ಈ ಅನಾಹುತ
ಪೋಲೀಸರು ಹಿಡಿದು ವಿ
ತನು ನುಡಿದಿರುವುದೇನೆಂದ
ವಿದ್ಯಾಲಯದಲ್ಲಿ ಜರ್ಮಭಾ
ಧ್ಯಾಯನು. ಈ ಮೋರ್ಗನ
ಗಿ ಯುದ್ಧಸಾಮಗ್ರಿಗಳನ್ನು
ಕುತ್ತಿರುವುದರಿಂದ ಅಲ್ಲಿ ವಿಶೇ
ಕಾರಣವಾಗಿದೆ ಅದುಕಾರ
ಕ್ಕೆ ಇವನನ್ನು ಕೊಲ್ಲುವುದೇ
ನು ಹೀಗೆ ಮಾಡಿದೆನು. ನಾ
ಯನ್ನು ಏರಿಬಂದೆನು. ಇದ
ಒಂದು ಚೀಲವ ತುಂಬಾ
ವ ಮದ್ದನ್ನೂ ಮತ್ತೊಂದು
ಎಂಬ ಮಾರಕವಸ್ತುವನ್ನೂ
ಟಾಗಳನ್ನೂ ತೆಗೆದುಕೊಂಡು
ಲ ಕೊಟ್ಟನು. ಈಗ ಮೋ
ಲ್ಲಿ ಚಿಕಿತ್ಸೆಯಲ್ಲಿದ್ದಾರೆ. ಪ್ರಾ
ಣಭಯವೇನೂ ಇಲ್ಲ. ಅಪರಾಧಿಯು ತಾನು ಸೆರೆಯಲ್ಲಿದ್ದ ಸ್ಥಳದಲ್ಲೇ ಆತ್ಮಹತ್ಯೆ ಮಾಡಿಕೊಂಡನು. ವೈದ್ಯರು ಶವವನ್ನು ಪರೀಕ್ಷಿಸಿದಾಗ ಅದು ತುಪಾಕಿಗುಂಡಿನೇಟಿನಿಂದ ಆದ ಮರಣವಲ್ಲವೆಂದು ಹೇಳಿದರು. ಈತನು ಸೆರೆಮನೆಯಲ್ಲಿ ೫೦ ಅಡಿಗಳಮೇಲಿನ ಕಿಟಕಿಯಿಂದ ದುಮಿಕಿ ಸತ್ತಿರುವನೆಂದು ಊಹಿಸಲ್ಪಟ್ಟಿತು.

ಶ್ರೀಮನ್ಮೈಸೂರು ಯುವರಾಜರವರಿಂದ ದಯಪಾಲಿಸಲ್ಪಟ್ಟ ಬಹುಮಾನ.

ಮಲೆನಾಡು ಪ್ರಾಂತ್ಯ ಶ್ರೀಮನ್ ಯುವರಾಜರವರು ಸರ್ಕೀಟು ದಯಮಾಡಿಸಿದ ವೇಳೆ ವಿಶೇಷ ಶ್ರಮವಹಿಸಿದ್ದಕ್ಕಾಗಿ ನಗರದ ಸಿ. ನರಸಿಂಹಯ್ಯನವರಿಗೆ ಕೊಡುವ ಉದ್ದಿಶ್ಯ ತಮ್ಮ ಸ್ವಂತ ಭಾವಚಿತ್ರವನ್ನ ನಗರ ತಾಲ್ಲೂಕಿಗೆ ಕಳುಹಿಸಿಕೊಟ್ಟದ್ದನ್ನ ತಾ॥ ೫-೭-೧೫ ನೇ ದಿವಸ ಮಧ್ಯಾನ್ಹ ೪ ಗಂಟೆಯ ಸಮಯ ತಾಲ್ಲೂಕ್ ಕಚೇರಿಯಲ್ಲಿ ಈ ತಾಲ್ಲೂಕಿನ ಪ್ರಮುಖರನ್ನೆಲ್ಲಾ ಬರಮಾಡಿಕೊಂಡು ಸಭೆ ಸೇರಿಸಿ ಡಿಸ್ಟ್ರಿಕ್ಟಿನಿಂದ ಬಂದ ಆರ್ಡರ್ ಓದಿಹೇಳಿ ಮೆ॥ ಅಮಲ್ದಾರ್ ಮೊಹಿಯುದ್ದೀನ್ ಷರೀಫರವರಿಂದ ಯುವರಾಜರವರ ಭಾವಚಿತ್ರವು ಮಿ॥ ಸಿ ನರಸಿಂಹಯ್ಯನವರಿಗೆ ಕೊ
ಡಲ್ಪಟ್ಟಿತು. ಸಭೆ
ಸಂತೋಷಪಟ್ಟರು
ನಿಂತು ಶ್ರೀಮದ್ಯುವ
ವಾತ್ಸಲ್ಯಾದಿಗುಣ
ರವರಿಗೂ ಶ್ರೀಮನ್
ಚಿತ್ರವನ್ನು ಅಂಗೀ

ಶ್ರೀಯುತಗೋ

ಯಾವಮಹಾಕ
ವನ್ನೇ ದುಃಖಸಾಗರ
ಚರಿತನಿಗೂ, ಕೇವಲ
ಗೂ ದೇಶಸೇವಾನಿ
ಬಾರದಿದ್ದ ವೀರಶೈವ
ಧವು ನಿಜವಾಗಿ ದೇ
ಬ್ಬ ಮನುಷ್ಯನಿಂದಲ
ವಾಗಿರುವುದು. ಬೊ
ರಲ್ಲಿ ಕೊಡಿದ್ದ ದುಃಖ
ಆಗಾಖಾನರವರು ಈ
"......As time
fully that the path
had to be wide enou
minorities, not only
to be able to travel
duality, that in the
ever wrote (he only
he died and sent two
In this state paper
sacred legacy whic
desired, he distinctly
Musalmans but that
such as the Lingayat
ever they may be sho
ation......"
ಇದರ ಮುಖ್ಯ ಸಾ
ವಗು ತಾವು ದಿವಂಗತರ
ಬೆ ತಮ್ಮ ಮಿತ್ರಮಂಡಲಿ
ಡ್ಡ ಮನುಷ್ಯರಿಗೆ ಈ(ಪ್ರ
ಯಾದೇಶದ ಏಳ್ಗೆಗೆ ಕ
ದೇಶದಲ್ಲಿರತಕ್ಕ ಪ್ರತಿಯೊ
ಅದು ಎಷ್ಟೇ ದೊಡ್ಡದಾ
ರಿಸಲು ಸಾಕಾಗುವಷ್ಟು
ರಿಂದ ಪ್ರಜಾಬಾಹುಳ್ಯದ
ಯಸಮಾಜ ಮಾತ್ರವಲ್ಲದ
ಯಿರುವ ಲಿಂಗಾಯತರೇ
ರೂ ಕೂಡ (ಇಂಡಿಯಾದೇ
ಜಕಾರ್ಯನಿರ್ವಾಹಕಸಂಘ
ವರಾಗಿರಬೇಕು (shoul
ation,) ಈ ಮಹಾವಾಕ್ಯ
ಗಾಗಿ, ಹಿಂದುಳಿದ ಜನಾ
ವಾಂಶಸಂಭೂತರಾದ ಮ
ರ್ಷಗಳಕಾಲ ಜೀವಂತರಾ
ಶ್ರೀಯುತ ಗೋಖಲೆ
ಸೂರುದೇಶಕ್ಕೂ ಅನ್ವಯಿ
ದಲ್ಲಿ ಯೋಚಿಸಬೇಕಾದ ವಿ
ದೇಶದ ಜನಸಂಖ್ಯೆಗೆ ಹೋ
ಕೇವಲ ಸ್ವಲ್ಪ ಜನಗಳನ್ನೊ

ಯವು. ಮೈಸೂರುದೇಶದಲ್ಲಾದರೊ ಒಟ್ಟು ಜನಸಂಖ್ಯೆಯಲ್ಲಿ ⅓ ನೇ ಭಾಗ ವೀರಶೈವರೇ ಆಗಿರುವರು. ಇದೂ ಅಲ್ಲದೆ ಈ ಸಮಾಜದ ಬಹುಜನರು ವ್ಯವಸಾಯ, ವ್ಯಾಪಾರ, ಕೈಗಾರಿಕೆ ಮೊದಲಾದ ದೇಶದ ಸಂಪದಭಿವೃದ್ಧಿಗೆ ಕಾರಣಗಳಾದ ವೃತ್ತಿಗಳಲ್ಲಿ ತೊಡಗಿರುವರು. ಆದುದರಿಂದ ಮೈಸೂರುದೇಶದ ರಾಜಕಾರ್ಯನಿರ್ವಾಹದಲ್ಲಿ ಈ ವೀರಶೈವಸಮಾಜಕ್ಕೆ ಎಷ್ಟರಮಟ್ಟಿನ ಹಕ್ಕು ಬಾಧ್ಯತೆ ಇರುವುದೆಂಬ ವಿಷಯವನ್ನು ತಿಳಿದುಕೊಳ್ಳಬೇಕಾದುದು ನಿಜವಾದ ದೇಶಸೇವೆಯಲ್ಲಿ ನಿರತನಾಗಿರುವ ಪ್ರತಿಯೊಬ್ಬ ಮನುಷ್ಯನ ಮುಖ್ಯಕರ್ತವ್ಯವಾಗಿರುವುದು. ಹೀಗಿದ್ದಾಗ್ಯೂ, ತಮ್ಮ ಸಮಾಜಕ್ಕೆ ಸಂಬಂಧಪಟ್ಟ ಕುಂದುಕೊರತೆಗಳೇನಿದ್ದಾಗ್ಯೂ, ಆ ಸಮಾಜದವರೇ ಕೇಳಿಕೊಳ್ಳಬೇಕಾಗಿರುವುದೇ ಹೊರತು, ಈ ದೇಶದಲ್ಲಿ ಬಹಳ ಜವಾಬ್ದಾರಿಯಿಂದ ಕೂಡಿದುದಾಗಿಯೂ, ನಿಸ್ಪೃಹತೆಯಿಂದ ನಡೆಸಿಕೊಂಡು ಬರಬೇಕಾದುದಾಗಿಯೂ ಇರುವ ಅಧಿಕಾರಪದವಿಯನ್ನು ಅನುಭವಿಸುತ್ತಿರುವ ಮಹಾಶಯರ ಕನಸಿನಲ್ಲಿ ಕೂಡ ಈ ಸಮಾಜವು ನೆನಪಿಗೆ ಬರುವಂತೆ ಕಾಣುವುದಿಲ್ಲ. ಇವರುಗಳಿಗೆ ಈ ಸಮಾಜದವರು ಎಲ್ಲಿ ನೋಡಿದರೂ ಸೇವಾವೃತ್ತಿಯನ್ನೂ ವ್ಯವಸಾಯವೇ

ಬರಲಾರದು. ಓರ್ವ ಸಮಾಜಬಾಂಧವ.

ಬರೋಡಾ ಮಹಾರಾಜರು.

ಇವರು ಪತ್ನೀಸಮೇತರಾಗಿ ತಮ್ಮ ಮಂತ್ರಿಯವರೊಡನೆ ಜುಲೈ ತಾ॥ ೬ ರಲ್ಲಿ ತಿರುವಾಂಕೂರು ಸಂಸ್ಥಾನಕ್ಕೆ ದಯಮಾಡಿಸಿದರು. ಮಹಾರಾಜರು ಇವರ ಸತ್ಕಾರಕ್ಕಾಗಿ ವಿಶೇಷವಾದ ಏರ್ಪಾಟುಗಳನ್ನು ಮಾಡಿಸಿದ್ದರು. ಆ ಸಂಸ್ಥಾನದ ಎಲ್ಲೆಯಹತ್ತಿರ ದಿವಾನರು ಇವರನ್ನು ಇದಿರುಗೊಳ್ಳುವಂತೆ ಏರ್ಪಾಟಾಗಿದ್ದಿತು. ಅಲ್ಲಿ ಅವರು ವೈಭವದಿಂದ ಸ್ವಾಗತಮಾಡಿದಬಳಿಕ ಕ್ವಿಲಾನಿನಿಂದ ಅಲಂಕೃತವಾದ ಹೊಗೆಹಡಗಿನಮೇಲೆ ಗಾಯಕ್ವಾರ್ ಮಹಾರಾಜರವರು ಸಪರಿವಾರರಾಗಿ ಪ್ರಯಾಣಮಾಡಿದರು. ಅದರ ಮೇಲೆ ಪ್ರಯಾಣಕಾಲದಲ್ಲಿ ನಾವಿಕರು ನಾನಾವಿಧವಾದ ಆಟಗಳನ್ನೂ ಹಾಡುಗಳನ್ನೂ ಆಡುವ ಏರ್ಪಾಟು ಆಗಿದ್ದಿತು. ಮಹಾರಾಜರ ಹಡಗಿನ ಹಿಂದೆ ಹಲವು ದೋಣಿಗಳು ಪರಿವಾರದ ಜನರನ್ನು ಕುಳ್ಳಿರಿಸಿಕೊಂಡು ಹೊರಟುವು. ಈ ಪ್ರಯಾಣವು ಕಾಲೇಯಮಾರ ವಾಗಿ

ಡಗುಗಳನ್ನು ಮುಳುಗಿಸದಿರುವಂತೆ ಏರ್ಪಡಿಸುತ್ತೇವೆ. ಅಮೇರಿಕಾಧ್ವಜಪಟವನ್ನು ಏರಿಸಿಕೊಂಡಿರುವ ತಟಸ್ಥದೇಶೀಯನಾವೆಗಳು ಅಮೇರಿಕಾದೇಶೀಯರನ್ನು ಕುಳ್ಳಿರಿಸಿಕೊಂಡು ಹೋಗುವುದಕ್ಕೂ ಕೂಡ ನಾವು ಸ್ವಲ್ಪಮಟ್ಟಿಗೆ ಅಭ್ಯಂತರವನ್ನು ಮಾಡಲಾರೆವು. ಅಮೇರಿಕಾದವರಿಗೆ ಬೇಕಾಗುವಷ್ಟು ತಟಸ್ಥದೇಶೀಯನಾವೆಗಳು ದೊರಕದಿದ್ದರೆ ಅವರು ಶತ್ರುದೇಶದವರ ೪ ಹಡಗುಗಳನ್ನು ಪ್ರಯಾಣಿಕರಿಗೋಸ್ಕರವಾಗಿ ಉಪಯೋಗಿಸಿಕೊಳ್ಳಬಹುದು. ನಾವು ಅವನ್ನೂ ಕೂಡ ಮುಳುಗಿಸುವುದಿಲ್ಲ. ಮುಂದೆ ಸಮುದ್ರಯುದ್ಧದಲ್ಲಿ ಮಾರ್ಪು ಜರುಗಬೇಕಾದುದು ಅವಶ್ಯಕವೆಂದು ಅಮೇರಿಕಾದ ಅಧ್ಯಕ್ಷರು ಆಂಗ್ಲಪ್ರಭುತ್ವದವರಿಗೆ ಬರೆದು ತಿಳಿಯಿಸಿರುವುದಕ್ಕಾಗಿ ನಾವು ಅವರನ್ನು ವಂದಿಸುತ್ತೇವೆ. ನಾವು ಯಾವಾಗಲೂ ಅಮೇರಿಕಾಧ್ಯಕ್ಷರ ಸಹಾಯವನ್ನು ಅಪೇಕ್ಷಿಸುವುದಕ್ಕೆ ಬಹಳ ಸಂತೋಷಿಸುತ್ತೇವೆ. ಈಗಿನ ಪ್ರಸಕ್ತಿಯು ಮುಗಿದನಂತರ ಸಮುದ್ರಸ್ವಾತಂತ್ರ್ಯವನ್ನು ದೊರಕಿಸುವ ವಿಷಯದಲ್ಲೂ ಅವರ ಸಹಾಯವು ಅನುಕೂಲಿಸುವಂತಾಗಲಿ ಎಂದು ನಾವು ಕೋರುತ್ತೇವೆ" ಎಂದು ತಿಳಿಯಿಸಿರುವರಂತೆ. ಲೂಸಿಟಾನಿಯಾವನ್ನು ಮುಳುಗಿಸಿದ ವಿಷಯದಲ್ಲಿ ಜರ್ಮನರು ತಮ್ಮ ಕಾರ್ಯವನ್ನೇ ಸಾಧುವನ್ನಾಗಿ ಸಾಧಿಸುತ್ತಿರುವುದರಿಂದ ಈ ಉತ್ತರವನ್ನು ಅಮೇರಿಕನ್ನರು ಒಪ್ಪದೆ ಅತೃಪ್ತರಾಗಿರುವರಂತೆ.

ಯಂತ್ರ, ರಕ್ತವಾಂತಿಮಾಡುವ ಮಕ್ಕಳಿಗೆ ಯಂತ್ರ, ಹಲ್ಲುಕಡಿಯುವ ಮಕ್ಕಳಿಗೆ ಯಂತ್ರ, ದ್ರಿಷ್ಟಿಮಂತ್ರ, ಹೊಟ್ಟೆನೋವಿಗೆ ಮಂತ್ರ, ಹಟಮಾಡತಕ್ಕ ಮಕ್ಕಳಿಗೆ ಯಂತ್ರ, ಕಲವರಿಸುವ ಮಕ್ಕಳಿಗೆ ಯಂತ್ರ, ಸಮಸ್ತ ಗ್ರಹಗಳಿಗೆ ಯಂತ್ರ ಕಟ್ಟುವವಿಧ ಮತ್ತು ಮಂತ್ರ, ಸರ್ವಭಯ ಸರ್ವಜ್ವರಗಳಿಗೆ ಯಂತ್ರ ಮತ್ತು ಮಂತ್ರ, ವೀರಹನುಮಂತನ ಮಂತ್ರ ಮತ್ತು ಯಂತ್ರ, ಸಕಲ ಗ್ರಹಗಳಿಗೆ ವೀರಭದ್ರ ಯಂತ್ರ ಇದಕ್ಕೆ ಮಂತ್ರ, ನಾರಸಿಂಹನ ಯಂತ್ರ ಮತ್ತು ಮಂತ್ರ, ಭೇತಾಳನಯಂತ್ರ ಇದಕ್ಕೆ ಮಂತ್ರ, ಗ್ರಹವುಚ್ಚಾಟನೆಗೆ ಹಿಂದುಸ್ಥಾನಿ ಯಂತ್ರ ಇದಕ್ಕೆ ಮಂತ್ರ, ನೀರು ಮಂತ್ರಿಸಿಕೊಡುವ ಮಂತ್ರ, ಗ್ರಹಗಳಿಗೆ ಕಾಟೇರಿಯಂತ್ರ ಇದಕ್ಕೆ ಮಂತ್ರ, ರಾಮಬಾಣಯಂತ್ರ ಇದಕ್ಕೆ ಮಂತ್ರ, ನಾಗೇಂದ್ರನಯಂತ್ರ ಇದಕ್ಕೆ ಮಂತ್ರ, ಮೋಹಿನಿಗ್ರಹಕ್ಕೆ ಯಂತ್ರ ಇದಕ್ಕೆ ಮಂತ್ರ, ಮಾರ್ಕಂಡೇಯಮುನಿ ಯಂತ್ರ, ಅಘೋರಜ್ವಾಲ ಭೈರವಯಂತ್ರ ಇದಕ್ಕೆ ಮಂತ್ರ, ಕೂರ್ಮಾಸನಚಕ್ರ, ಲಬಪರಂಜ್ಯೋತಿ ಸಿದ್ಧಿಯಂತ್ರ ಇದಕ್ಕೆ ಮಂತ್ರ, ದುರ್ಗೇಶ್ವರಿಯಂತ್ರ ಇದಕ್ಕೆ ಮಂತ್ರ, ಶಿವಚಕ್ರ, ಹೆರಿಗೆ ಆಗುವವರಿಗೆ ಯಂತ್ರಗಳು, ಪ್ರಾಣಪ್ರತಿಷ್ಟೆ ಯಂತ್ರ ಇದಕ್ಕೆ ಮಂತ್ರ, ಸೂರ್ಯನಾರಾಯಣ ಯಂತ್ರ ಇದಕ್ಕೆ ಮಂತ್ರ, ಚಂಡಿಗ್ರಹಕ್ಕೆ ಯಂತ್ರ, ಗರ್ಭನಿಲ್ಲುವದಕ್ಕೆ ಯಂತ್ರ, ಶ್ರೀರಾಮಯಂತ್ರ ಇದಕ್ಕೆ ಮಂತ್ರ, ಯಲ್ಲಮ್ಮನ ಯಂತ್ರ ಇದಕ್ಕೆ ಮಂತ್ರ, ಭುವನೇಶ್ವರಿಯಂತ್ರ, ರೇಣುಕಾದೇವಿ ಯಂತ್ರ ಇದಕ್ಕೆ ಮಂತ್ರ, ಮಹೇಶ್ವರಿಯಂತ್ರ ಇದಕ್ಕೆ ಮಂತ್ರ, ಗಜವಾಹನಯಂತ್ರ, ತಲೆನೋವಿಗೆ ಹಿಂದುಸ್ಥಾನಿ ಮಂತ್ರ, ಅಷ್ಟದಿಗ್ಬಂಧನೆ ಯಂತ್ರ ಮತ್ತು ಮಂತ್ರ, ಹೊಟ್ಟೆನೋವಿಗೆ ಹಿಂದುಸ್ಥಾನಿ ಮಂತ್ರ, ಸರ್ಪಕಚ್ಚಿದರೆ ಯಂತ್ರ ಇದಕ್ಕೆ ಮಂತ್ರ, ಗರ್ಭಿಣಿ ಜನನವಾಗುವದಕ್ಕೆ ನೀರುಮಂತ್ರಿಸಿಕೊಡುವ ಮಂತ್ರ, ಚೇಳುಕಚ್ಚಿದ್ದಕ್ಕೆ ಹಿಂದುಸ್ಥಾನಿ ಮಳೆಹೊಯ್ಯುವ ಪ್ರಯೋಗ, ಮೃತ್ಯುಂಜಯ ಯಂತ್ರ, ಭೂತಆವೇಶ ಯಂತ್ರ, ನೀಲಕಂಠಯಂತ್ರ ಇದಕ್ಕೆ ಮಂತ್ರ, ಅಪಸ್ಮಾರಗ್ರಹಕ್ಕೆ ಯಂತ್ರ, ಭೂತಗ್ರಹಗಳಿಗೆ ಯಂತ್ರ, ಹೆರಿಗೆಗೆ ಯಣ್ಣೆ ಮಂತ್ರಿಸುವದು, ಶಾಕಿನಿಗ್ರಹಕ್ಕೆ ಮಂತ್ರ, ಆದಿಶಕ್ತಿಮಂತ್ರ, ಗ್ರಹವುಚ್ಚಾಟನೆಮಂತ್ರ, ಚವುಡೇಶ್ವರಿ ದಂಡಕ ಮೊದಲಾದ ಇನ್ನೂ ಅನೇಕ ವಿಷಯಗಳಿಂದ ಅಡಕವಾಗಿದೆ.

೨ನೇ ಭಾಗದ ಹಿಂದುವೈದ್ಯದಲ್ಲಿ—

ಕಸ್ತೂರಿಮಾತ್ರೆಗಳು, ಪಚ್ಚಕರ್ಪೂರ ಮಾತ್ರೆಗಳು, ವಿಶ್ವಾಮಿತ್ರಘುಟಿಕಾ, ಬೇದಿಚೂರ್ಣ, ಬೇದಿಮಾತ್ರೆಗಳು, ಜೋಗರಸಾಯನಮಾತ್ರೆ, ಮುಪ್ಪುಬೇದಿಮಾತ್ರೆ, ಹೊಕ್ಕಳಿಗೆ ಹಾಕುವ ಬೇದಿ ಪಟ್ಟು, ರಾತ್ರಿಕಾಲದಲ್ಲಿ ತೆಗದುಕೊಳ್ಳುವ ಬೇದಿಚೂರ್ಣ, ಬೇದಿಲೇಹ, ಗೌರಿಬೀಜದ ಬೇದಿಚೂರ್ಣ, ಮೂತ್ರಜುಲಾಬಿ, ಬೇದಿನಿಲ್ಲುವದಕ್ಕೆ ವಜ್ರಕವಾಟಮಾತ್ರೆ, ಬೇದೀಗೆ ಲಾಲ್‌ತಿಗಡುಚೂರ್ಣ, ಬಾಲಸಂಜೀವಿನೀಮಾತ್ರೆ, ವಾಯುಪುತ್ರಮಾತ್ರೆ, ಬೇದೀಗೆ ಮೇಘನಾದಮಾತ್ರೆ, ಆನಂದಭೈರವೀಮಾತ್ರೆಗಳು, ಅಮೃತಸಂಜೀವನೀಮಾತ್ರೆ, ಮಹಾಸಂಜೀವನೀಮಾತ್ರೆ, ರಾಜಚಂಡಭಾನುಮಾತ್ರೆ, ನೀಲಕಂಠಮಾತ್ರೆ, ಸಮೀರಮಾತ್ರೆ, ರಾಮಬಾಣಮಾತ್ರೆ, ವಿಷಕಂಠಮಾತ್ರೆ, ಸಂಜೀವಿಮಾತ್ರೆ, ಚಿಂತಾಮಣಿಮಾತ್ರೆ, ಮಹಾಭೋಟಾಚೂಳಿಮಾತ್ರೆ,

ಕತರಹ ಯಣ್ಣೆಗಳು, ಬಾಣಂತಿಕಾರ, ಮಕ್ಕಳ ಸರ್ವರೋಗಕ್ಕೆ ಯಣ್ಣೆ, ಮೇಹಕ್ಕೆ ಮಾತ್ರೆಗಳು, ಮಕ್ಕಳ ಮಾದಕಟ್ಟಿನ ಬೇದಿಯಣ್ಣೆ, ಯರಿಪುಚ್ಚಿಕಾಯಿ ಯಣ್ಣೆ, ಬಲಕ್ಕಿತಕಿಯಣ್ಣೆ, ಮಕ್ಕಳ ಸುತ್ತುಕಾರ, ಭಟ್ಟೆನೋವಿನ ಚಿಕಿತ್ಸೆ, ತಾಳಿಸಾದಿವಟಕ, ಭಸ್ಮಾಜೀರ್ಣಮಾತ್ರೆ, ಧಾತುಪುಷ್ಟಿಮಾತ್ರೆ, ಬಹುಮೂತ್ರಕ್ಕೆಮಾತ್ರೆ, ವೀರ್ಯಸ್ತಂಭನಮಾತ್ರೆಗಳು, ಮಧುಮೇಹಕ್ಕೆ, ನಾಗರಹಾವು ಕಚ್ಚಿದ್ದಕ್ಕೆ, ಮೂಲಜಾಡ್ಯಕ್ಕೆ, ಕಣ್ಣಿನ ಅಂಜನ, ಪಂಚಲೋಹಭಸ್ಮ, ಶೀಸಭಸ್ಮ, ವಂಗಭಸ್ಮ, ಬೆಳ್ಳಿಭಸ್ಮ, ಅವಳಸಾರಸಿಂಧೂರ, ಕರ್ಪೂರಶಿಲಾಜಿತುಭಸ್ಮ, ಸುವರ್ಣಭಸ್ಮ, ಶೃಂಗಭಸ್ಮ, ಶೀಸಭಸ್ಮ, ಶಂಖಭಸ್ಮ, ತಾಳಕಭಸ್ಮ, ಕಾಂತಭಸ್ಮ, ಹವಳದಭಸ್ಮ, ಗೋಮೂತ್ರಶಿಲಾಜಿತುಭಸ್ಮ, ನಂಜಿನಮಾತ್ರೆ, ಮದ್ದಿಡು ಬೀಳುವದಕ್ಕೆ, ಅನೇಕತರಹ ಮುಲಾಮು, ದಂತಚೂರ್ಣ, ಭೃಂಗಾಮಲಕತೈಲ, ಕಬ್ಬಿಣಸಿಂಧೂರ, ವತ್ಸನಾಭಿಸಿಂಧೂರ, ಕಾಂತಸಿಂಧೂರ, ಕೆಮ್ಮುಲು ಪುಬ್ಬುಸಕ್ಕೆಮಾತ್ರೆ, ವಿಷದ್ರವ್ಯಗಳನ್ನು ಶುದ್ಧಿಮಾಡುವ ವಿಧಾನ ಮುಂತಾದ ಇನ್ನೂ ಅನೇಕ ಔಷಧಿಗಳು ಶಾಸ್ತ್ರೋಕ್ತವಾಗಿ ತಯಾರುಮಾಡತಕ್ಕ ವಿವರಣೆ ಅವುಗಳ ಅನುಪಾನ ಮತ್ತು ಸೇವನಾಕ್ರಮ ಮುಂತಾದವು ಮರ್ಮವಿಲ್ಲದೆ ವಿವರಿಸಲ್ಪಟ್ಟಿದೆ.

೩ನೇ ಭಾಗದ ಯುನಾನಿವೈದ್ಯದಲ್ಲಿ—

ಆಬಾಲವೃದ್ಧ ಸ್ತ್ರೀಪುರುಷರಿಗೆ ಹಿತಕರವಾಗಿ ರುಚಿಯಾಗಿಯೂ ಗುಣವುಳ್ಳ ನಾನಾತರಹ ಷರಬತ್, ನಾನಾತರಹ ಗುಲ್ಕನ್, ನಾನಾತರಹ ಮುರಬ್ಬ, ಸಾಲಾಮಿಸ್ರಿಲೇಹ, ಅನೇಕತರಹ ಧಾತುಪುಷ್ಟಿ ಲೇಹಗಳು, ಸಿಕಂಜಿ, ಅನೇಕತರಹ ಮೇಹಸಂಬಂಧವಾದ ರೋಗಗಳಿಗೆ ಯಣ್ಣೆಗಳು ಮುಂತಾದ ಯುನಾನಿವೈದ್ಯ ವಿಧಾನದಂತೆ ಸಕಲವಿಧ ಚಿಕಿತ್ಸೆಯು ಅವುಗಳ ಅನುಪಾನ ಮತ್ತು ಸೇವನಾಕ್ರಮ ಸಮರ್ಪಕವಾಗಿ ವಿವರಿಸಲ್ಪಟ್ಟಿರುತ್ತೆ.

೪ನೇ ಭಾಗದ ಸುಗಂಧದಲ್ಲಿ—

ಅಗರುಕಡ್ಡಿ, ಹಸನು ಕಸ್ತೂರಿಕಡ್ಡಿ, ಧೂಪದಕಡ್ಡಿ, ಮೈಣದ ಹಸೇಕಡ್ಡಿ, ಹಸನು ಗುಲಾಬಿಕಡ್ಡಿ, ಕಿರದು ಪುನಗುಕಡ್ಡಿ, ಪಚ್ಚಕರ್ಪೂರದಕಡ್ಡಿ, ಹಸನು ಪನ್ನೀರುಕಡ್ಡಿ, ಹಸನು ಪುನಗಿನಕಡ್ಡಿ, ಹಸನುಕಡ್ಡಿ ಮಸಾಲು, ಕೇಸರಿಕಡ್ಡಿ, ಜವ್ವಾಜಿಕಡ್ಡಿ, ಹಸನುಕಡ್ಡಿ ಬಿಲ್ಲೆ ಮಸಾಲುಕ್ರಮ, ದಶಾಂಗದ ಬಿನಸು, ಹಸನು ಗಂಧೂಣಿ ಬಿನಸು, ಹಸನು ಕಸ್ತೂರಿಕಡ್ಡಿ, ಹಸೀಹಸೀಬಿಲ್ಲೆ ಮಾಡುವವಿಧ, ಕಿರದು ಬಿಳೇಕಡ್ಡಿ ಮಸಾಲು, ಹಸನು ಬಿಳೇಕಡ್ಡಿ ಮಸಾಲು, ಹಸೀಬಿಲ್ಲೆ, ಸ್ನಾನೋಲ್ಲಾಸಿನಿ ಚೂರ್ಣ, ಸುವಾಸನೆಯಾಗಿ ಹೊಗೆಬರುವ ಬಿರ್ಮುಕ್ಕೆ ಮಾತ್ರೆಗಳು, ಮತಾಬಿ ಊದಬತ್ತಿ, ಅನೇಕತರಹ ಜವ್ವಾಜಿಗಂಧ, ಅನೇಕತರಹ ಅರಗಜ, ಕೇಸರಿಬಿಲ್ಲೆಗಳು, ಕಿರದು ಮೆತುಪುಬಿಲ್ಲೆ, ಕಿರದು ಗಂಧದಬಿಲ್ಲೆ ಮಾಡುವಕ್ರಮ ಮುಂತಾದ ಸುವಾಸನಾ ಪದಾರ್ಥಗಳನ್ನು ಶಾಸ್ತ್ರೋಕ್ತವಾಗಿ ಮಾಡತಕ್ಕ ವಿಧಾನಗಳು ವಿವರಿಸಲ್ಪಟ್ಟಿವೆ.

೪ ಭಾಗಗಳುಳ್ಳ ಪುಸ್ತಕ ೧ಕ್ಕೆ ಕ್ರಯ ೧—೮—೦.

ನಮ್ಮ ವಿಳಾಸ:— ವೆಂಕಟೇಶವಿಲಾಸ ಬುಕ್‌ಡಿಪೊ,
೧೧೩೪, ಹಲಸೂರುಪೇಟೆ, ಬೆಂಗಳೂರು ಸಿಟಿ.

Sarada Vilasa Press, Bangalore City.

ಬೊಂಬಾಯಿಪ್ರಾಂತಿಕ ರಾಷ್ಟ್ರೀಯಸಭೆ.

ಸೂರತ್ತಿನಲ್ಲಿ ರಾಷ್ಟ್ರೀಯಸಭೆಯು ನಡೆಯುವುದಕ್ಕೆ ಮುಂಚೆ ಬೊಂಬಾಯಿಪ್ರಾಂತಿಕಸಭೆಗಳು ೧೪ ನೆರವೇರಿದ್ದುವು. ಅದರಿಂದೀಚೆಗೆ ದ್ವೈವಿಧ್ಯವುಂಟಾದನಂತರ ಅಲ್ಲಿನ ಪ್ರಾಂತಿಕಸಭೆಯು ನೆರವೇರುವುದಕ್ಕೆ ಈ ಸಲವೇ ಮೊದಲು. ಕಳೆದ ತಾ॥ ೧೦-೧೧-೧೨ ಈ ಮೂರುದಿನಗಳಲ್ಲಿ ಈ ಸಭೆಯು ಪುನಾನಗರದಲ್ಲಿ ಮಹಾವಿಜೃಂಭಣೆಯಿಂದ ನೆರವೇರಿತು. ಶ್ರೀಯುತ ಹರಿನಾರಾಯಣ ಆಪ್ಟೆಯವರು ಸತ್ಕಾರಕ ಸಂಘಾಧ್ಯಕ್ಷರಾಗಿಯೂ ಶ್ರೀಯುತ ಹಾರ್ಮಸ್ಜಿ ಎ. ವಾಡಿಯಾ ಎಂಬ ಪಾರ್ಸಿ ಸದ್ಗೃಹಸ್ಥರು ಸಭಾಧ್ಯಕ್ಷರಾಗಿಯೂ ಇದ್ದರು. ಬೊಂಬಾಯಿ ಗೌರ್ನರ್ ದಂಪತಿಗಳು ಈ ಸಭೆಗೆ ದಯಮಾಡಿಸಿ, ಸ್ವಾಗತಿಸಲ್ಪಟ್ಟು ಈ ಸಭಾಕಾರ್ಯದಲ್ಲಿ ತಮ್ಮ ಸಾನುಭೂತಿಯನ್ನು ಪ್ರದರ್ಶಿಸಿದರು. ಮೇಲೆಕಂಡ ಉಭಯ ಅಧ್ಯಕ್ಷರೂ ಮಾಡಿದ ಭಾಷಣಗಳಲ್ಲಿ ರಾಜಕೀಯಸಂಬಂಧವಾದ ಅನೇಕ ವಿಷಯಗಳು ಪದ್ಧತಿಯಂತೆ ವಿಮರ್ಶಿಸಲ್ಪಟ್ಟಿದ್ದುದಲ್ಲದೆ ಭರತಖಂಡದ ರಾಜಕೀಯವಿಷಯದಲ್ಲಿ ಉಂಟಾಗಿರುವ ಉಭಯಪಕ್ಷದವರೊಳಗೆ ಐಕ್ಯವು ಸಮನಿಸುವುದೆಂಬ ವಿಷಯದಲ್ಲಿ ನಿರಾಶೆಯೇ ಅವರಭಾಷಣಗಳಲ್ಲಿ ತೋರುತ್ತಿದ್ದುವು. ದೇಶಹಿತಕ್ಕಾಗಿಯೇ ರಾಷ್ಟ್ರೀಯಸಭಾಕಾರ್ಯಸಂಬಂಧದಲ್ಲಿ ಕೆಲವು ನಿಬಂಧನೆಗಳನ್ನು ಮಾಡುವ ಆವಶ್ಯಕತೆಯುಂಟಾಯಿತೆಂದೂ, ಆ ನಿಬಂಧನೆಗಳು ಇದ್ದೇತೀರಬೇಕಾದುವೆಂದೂ, ಅವನ್ನನುಸರಿಸಲಾರದವರು ತಾವಾಗಿ ದ್ವೈವಿಧ್ಯವನ್ನುಂಟುಮಾಡಿಕೊಂಡರೆಂದೂ ಮೊದಲಾಗಿ ಸಭಾಧ್ಯಕ್ಷರು ಅಭಿಪ್ರಾಯಪಟ್ಟಿರುವರು. ಮೊನ್ನೆತಿಂಗಳಲ್ಲಿ ಇದೇ ಪ್ರಾಂತಿಕಸಭೆಯನ್ನು ಅತಿವಾದಿಪಕ್ಷದವರು ನಡೆಯಿಸಿದರು. ಅದರ ಮುಖಂಡರ ಅಭಿಪ್ರಾಯಗಳನ್ನೂ, ಈ ಸಭಾಪ್ರಮುಖರ ಅಭಿಪ್ರಾಯಗಳನ್ನೂ ನೋಡಲಾಗಿ, ಈ ದ್ವೈವಿಧ್ಯವು ಇಷ್ಟರಲ್ಲೇ ಉಪಶಾಂತವಾಗುವುದೆಂದು ಹೇಳಲು ಅವಕಾಶವು ತೋರುವುದಿಲ್ಲ. ಅಲ್ಪವಿಷಯಗಳಲ್ಲುಂಟಾಗಿರುವ—ದೇಶಹಿತ ವಿಘ್ನಕರವಾದ—ಈ ವಿಭೇದಗಳು ಅಡಗಿಹೋಗಿ ಐಕ್ಯವು ಪ್ರಬಲಿಸಿರಬೇಕಾದ ಈಗಿನ ಸ್ಥಿತಿಯಲ್ಲಿ ಅದು ಕಾಣದೆಹೋಗಿರುವುದು ಭರತಖಂಡದ ದುರದೃಷ್ಟವೆಂತಲೇ ಹೇಳಬೇಕಾಗುವುದು.

ಭರತಖಂಡದ ವೃತ್ತಾಂತಗಳು.

ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಮಿಸುಬಾ ಬೀಬಿ ಎಂಬ ಸ್ತ್ರೀಯು ಕಳೆದವರ್ಷದ ಬಿ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಮಹಮ್ಮದೀಯ ಸ್ತ್ರೀಯರಲ್ಲಿ ದೊಡ್ಡ ಪರೀಕ್ಷೆಯನ್ನು ಕೊಟ್ಟವರಲ್ಲಿ ಈಕೆಯೇ ಮೊದಲನೆಯವರು.

ಯುದ್ಧವು ಮುಗಿಯುವವರೆಗೂ ಬೊಂಬಾಯಿಯಲ್ಲೂ ಪೂನಾದಲ್ಲೂ ಪ್ರಭುತ್ವದವರ ಮನೆಯಲ್ಲಿ ವಾಸಮಾಡುವರಾರೂ ಮದ್ಯಪಾನ ಮಾಡದಿರುವಂತೆ ಏರ್ಪಡಿಸಿಕೊಂಡಿದ್ದಾರೆ. ದೊಡ್ಡದೊಡ್ಡ ಔತಣಗಳು ನಡೆಯುವಾಗ ಮಾತ್ರ ವಿಸ್ಕಿ-ಬ್ರಾಂದಿ-ಸಾರಾಯಿಗಳು ಸ್ವಲ್ಪವಾಗಿ ಹಂಚಲ್ಪಡುವುವು.

ಕಲ್ಕತ್ತಾದಲ್ಲಿ ಎಂ ರಾಯಚೌಧುರಿಯೆಂಬ ೫೦ ವರ್ಷದ ವಯಸ್ಸಿನಿಗೆ ದುರ್ಗಾರಾಮದೇವಿಯೆಂಬ ೧೬ ವರ್ಷದ ಯುವತಿಯನ್ನು ಕೊಟ್ಟು ತಾಯ್ತಂದೆಗಳು ಮದುವೆ ಮಾಡಿದರು. ಅನನುರೂಪವಯಸ್ಕ ವರನನ್ನು ಸೇರಿದೆನೆಂಬ ಚಿಂತೆಯಿಂದ ವಧುವು ಅಫೀಮನ್ನು ನುಂಗಿ ಆತ್ಮಹತ್ಯ ಮಾಡಿಕೊಂಡಳು.

ಬಂಗಾಳಾದಲ್ಲಿ ಕ್ಷಾಮಬಾಧೆಯು ಹೆಚ್ಚುತ್ತಲೇ ಇದೆ. ಪಬೋರಾ ಎಂಬ ಗ್ರಾಮದಲ್ಲಿರುವ ಒಂದು ಮಹಮ್ಮದೀಯರ ಕುಟುಂಬದಲ್ಲಿ ತಂದೆ ಮಗಳು—ಅಳಿಯ—ಈ ಮೂವರೂ ಅನ್ನವಿಲ್ಲದೆ ಅನ್ನ! ಅನ್ನ!! ಎಂದು ಬಾಯ್ಬಿಡುತ್ತಲೇ ಮೃತರಾಗಿರುವರಂತೆ. ಹಲವುಕಡೆ ಜನರಿಗೆ ದಿನಕ್ಕೆ ಒಂದು ಹೊತ್ತಿನ ಊಟವೂ ಇಲ್ಲದೆ ಬಳಲುತ್ತಿದ್ದಾರೆ. ಗೌರ್ನಮೆಂಟಿನವರು ವಿಪನ್ನಪ್ರಜೆಗಳಿಗೆ ಸಾಲವಾಗಿ ಕೊಡಲು ಇತ್ತ ೧ ಲಕ್ಷ ರೂ.ಗಳೂ ಆಹಾರ್ಯವಸ್ತುಗಳಿಗಾಗಿ ಕೊಟ್ಟ ೧೦ ಸಾವಿರ ರೂ.ಗಳೂ ಸಾಲದೆಹೋದುವು. ಪ್ರಜೆಗಳು ಚಂದಾ ಎತ್ತುತ್ತಿದ್ದಾರೆ.

ಯುದ್ಧವು ಬೇಗನೆ ಮುಗಿದು ಆಂಗ್ಲಪ್ರಭುತ್ವದವರಿಗೆ ಸಂಪೂರ್ಣ ವಿಜಯವಾಗುವಂತೆ ಮಾಡುವುದಕ್ಕಾಗಿ ಬೊಂಬಾಯಿಯಲ್ಲಿ ಘೂರ್ಜರರು ಒಂದು ಮಹಾ ಶಾಂತಿಯಜ್ಞವನ್ನು ಇಷ್ಟರಲ್ಲೇ ಮಾಡುವವರಾಗಿದ್ದಾರಂತೆ. ಇದಕ್ಕೆ ಲಕ್ಷಾಂತರ ರೂ. ಗಳ ವೆಚ್ಚವು ಹಿಡಿಯುವುದಂತೆ. ಹೃಷೀಕೇಶಕ್ಷೇತ್ರದಲ್ಲಿ ಮಹಾ ಮಹಿಮರೆನಿಸಿಕೊಂಡಿರುವ ಪರಮಹಂಸಜಿ ಮೋನರಾಜ ಶ್ರೀಮಚ್ಚಿದಾನಂದ ಸರಸ್ವತಿಯೆಂಬ ಯೋಗೀಶ್ವರರು ಇದಕ್ಕಾಗಿ ಬೊಂಬಾಯಿಗೆ ಬಂದಿದ್ದಾರೆ. ಈ ಯಜ್ಞಕ್ಕಾಗಿ ಚಂದಾಮೂಲಕ ಹಣವು ಕೂಡಿಸಲ್ಪಡುತ್ತಿರುವುದು.

ಭಾವನಗರದ ಮಹಾರಾಜರೂ ಮಹಾರಾಣಿಯವರೂ ಅವರ ಮಾತೃಶ್ರೀಯವರೂ ಅವರ ಕುಮಾರಿಯಾದ ಪನ್ನಾಮಹಾರಾಣಿಯವರು ಸಹ ಕಳೆದ ವಾರ ಬೊಂಬಾಯಿಗೆ ದಯಮಾಡಿದ್ದು ಅಲ್ಲಿರುವ ಲೇಡಿಹಾರ್ಡಿಂಜ್ ವೈದ್ಯಶಾಲೆಯನ್ನವಲೋಕಿಸುವುದಕ್ಕೆ ಹೋಗಿದ್ದರು. ಅಲ್ಲಿ ಚಿಕಿತ್ಸೆಗೊಳ್ಳುತ್ತಿರುವ ಸೈನಿಕರನ್ನು ಮಾತನಾಡಿಸಿ ನಿಮಗೇನು ಬೇಕೆಂದು ಕೇಳುತ್ತಿರುವಾಗ ಕಾಲನ್ನು ಕಳೆದುಕೊಂಡಿದ್ದವರಿಬ್ಬರು ನಮಗೆ ಹೊಸ ಕಾಲುಗಳಾಗಬೇಕು ಎಂದು ಪ್ರಾರ್ಥಿಸಿದರು. ಅವರಿಷ್ಟದಂತೆ ಒಬ್ಬನಿಗೆ ತಾಯಿಯವರೂ ಮತ್ತೊಬ್ಬನಿಗೆ ರಾಜಕುಮಾರಿಯವರೂ ಇಂಗ್ಲೆಂಡಿನಿಂದ ಇಂಥವರಿಗಾಗಿರಚಿಸಿ ಮಾರಲ್ಪಡುತ್ತಿರುವ ಕಾಲುಗಳನ್ನು ತರಿಸಿಕೊಡುವುದಕ್ಕಾಗಿ ಹಣವನ್ನು ದಯಪಾಲಿಸಿದರು.

ಮಿಡ್ನಾಪುರ ಡಿಸ್ಟ್ರಿಕ್ಟಿಗೆ ಸೇರಿದ ಬಲಿಹರಪುರದಲ್ಲಿ ಒಬ್ಬ ಹುಡುಗಿಯು ಕೆಲದಿನಗಳ ಕೆಳಗೆ ಒಂದು ಕೊಳಕ್ಕೆ ಹೋಗಿ ಸ್ನಾನವನ್ನು ಮಾಡಿಕೊಂಡು ಬರುವಾಗ್ಗೆ ತನ್ನ ಕೈ ಬಳೆಯು ಬಿದ್ದುಹೋಗಿರುವುದನ್ನು ಕಂಡು ತನ್ನತ್ತೆಗೆ ಈ ಸಂಗತಿಯು ತಿಳಿದಲ್ಲಿ ಹಿಂಸಿಸುತ್ತಾಳೆಂದು ಹೆದರಿ ಮನೆಗೆಬಂದು ಯಾರಿಗೂ ತಿಳಿಯದಹಾಗೆ ಒಂದು ಕಿರುಮನೆಯಲ್ಲಿ ಸೇರಿಕೊಂಡು ಅದರ ಬಾಗಿಲನ್ನು ಭದ್ರಪಡಿಸಿ ತನ್ನ ಸೀರೆಗೆಲ್ಲಾ ಸೀಮೆಯೆಣ್ಣೆ ಹೊಯಿದು ಬೆಂಕಿಯನ್ನು ಹೊತ್ತಿಸಿಕೊಂಡಳು. ಕಿರುಮನೆಯಿಂದ ಹೊಗೆಬರುವುದನ್ನು ಒಂದು ಮಗುವು ಕಂಡು ಕೂಗಿಕೊಳ್ಳಲು ಆ ಹುಡುಗಿಯ ಮಾವನು ಬಂದು ಮನೆಯಬಾಗಿಲನ್ನು ತೆಗೆಯೆಂದು ಕೂಗಲು ಉರಿದುಹೋಗುತ್ತಿರುವಾಕೆಯು ಬಾಗಿಲನ್ನು ತೆಗೆಯಲು ತನಗೆ ಚೈತನ್ಯವಿಲ್ಲವೆಂದುತ್ತರವನ್ನು ಕೊಟ್ಟಳು. ಆಗ ಆತನು ಬಾಗಿಲನ್ನೊಡೆದು ನೋಡುವಲ್ಲಿ ಆಕೆಯು ಸುಟ್ಟು ಇದ್ದಲಾಗಿದ್ದಳು.

ಸೇನೆಯಲ್ಲಿ ಕೆಲಸಮಾಡುವುದಕ್ಕೆ ಸಮರ್ಥರಾದ ಕೆಲಸಗಾರರು ಬೇಕಾಗಿರುವರೆಂದು ಇಂಡ್ಯಾಸರ್ಕಾರದವರು ಪ್ರಕಟಿಸಿದ್ದಾರೆ. ಕಮ್ಮಾರರು ತಾಮ್ರದ ಕೆಲಸಗಾರರು ಮರಗೆಲಸದವರು ಯಂತ್ರಾಲಯದ ಕೆಲಸವನ್ನು ಬಲ್ಲವರು ಆಗಬೇಕು. ಇವರು ಎಂಜನ್ನುಗಳು ಮೋಟಾರುಗಳು ಮೊದಲಾದುವುಗಳ ಸಂಬಂಧದ ಕೆಲಸವನ್ನು ಮಾಡಬಲ್ಲವರಾಗಿರಬೇಕು. ಬಂದಿಗಳನ್ನು ನಡೆಯಿಸಲು ಕೆಲಸಗಾರರು ಬೇಕು. ಮತ್ತು ವಿಮಾನಸೇನೆಯಲ್ಲಿ ಸೇರಿ ಕೆಲಸಮಾಡತಕ್ಕ ಸಾರ್ಜೆಂಟ್ ಕಾರ್ಪೋರಲ್ ಮೊದಲಾದವರುಗಳಿಗೆ—೬೦ ೭೮—೧೧೫—೯೦ ರೂ.ಗಳ ಮೇರೆ ಸಂಬಳವು ಕೊಡಲ್ಪಡುವುದಲ್ಲದೆ ಯುದ್ಧರಂಗದಲ್ಲಿರುವಾಗ ಸಂಬಳದಮೇಲೆ ತಿಂಗಳಿಗೆ ೩೦ ರೂ. ನಂತೆ ಬತ್ಯವೂ ಕೊಡಲ್ಪಡುವುದು. ಆದರೆ ಇವರು ಸ್ವಚ್ಛಂದ ಸೈನಿಕರಾಗಿದ್ದು ಆಯಾ ಉದ್ಯೋಗದ ಮರ್ಮವನೆಲ್ಲಾ ತಿಳಿದು ಸೇನಾಪತಿಗಳಿಂದ ಯೋಗ್ಯತಾಪತ್ರವನ್ನು ಪಡೆದವರಾಗಿರಬೇಕು.

ಯಾವನೋ ಒಬ್ಬ ವಂಚಕನು ಮಂಗಳೂರಿಗೆ ಕೆಲದಿನಗಳಕೆಳಗೆ ಹೋಗಿ ಅಲ್ಲಿಯ ಧನಾಢ್ಯನಾದ ಒಬ್ಬ ವರ್ತಕನನ್ನು ಕಂಡು ಆತನ ಕೂಡ ತಾನು ಬೆಂಗಳೂರಲ್ಲಿ ದೊಡ್ಡ ವರ್ತಕನಾಗಿರುವೆನೆಂದೂ ನಿಮ್ಮಲ್ಲಿಗೆ ವ್ಯಾಪಾರಕ್ಕಾಗಿ ಬಂದಿರುವೆನೆಂದೂ ಹೇಳಿ ತಾನು ತಂದಿದ್ದ ರೈಲುಚೀಲವನ್ನು ಆ ಶ್ರೀಮಂತನ ಕೈಗೆ ಕೊಟ್ಟು, ಇದರಲ್ಲಿ ೧೫೦೦೦ ರೂ.ಗಳಿವೆಯಾದುದರಿಂದ ನಿಮ್ಮ ಕಬ್ಬಿಣದ ಪೆಟ್ಟಿಗೆಯಲ್ಲಿ ಜೋಪಾನವಾಗಿಟ್ಟಿರಿ ಎಂದು ಹೇಳಿ, ಕೆಲ ದಿಗಳವರೆಗೆ ಆತಿಥ್ಯದಲ್ಲಿ ಬಹು ಸತ್ಯವಂತನಂತೆಯೂ ದೊಡ್ಡ ಶ್ರೀಮಂತನಂತೆಯೂ ನಟಿಸಿ ಕೊಂಡಿದ್ದನು. ಕೆಲದಿನಗಳ ನಂತರ ಈ ಮೋಸಗಾರನು ಆ ಶ್ರೀಮಂತನಲ್ಲಿ ೮೦೦೦ ರೂ. ವರೆಗೆ ಪದಾರ್ಥಗಳನ್ನು ಕೊಂಡು, ಅವನ್ನು ರೈಲ್ವೆಬಂಡಿಯಲ್ಲಿ ತನ್ನೂರಿಗೆ ಕಳುಹುವಂತೆ ಹೇಳಿ, ಆ ಪ್ರಕಾರ ಪದಾರ್ಥಗಳು ಕಳುಹಲ್ಪಟ್ಟಮೇಲೆ ಈಗ ನಗದಾಗಿ ೩೦೦೦ ರೂ.ಗಳನ್ನು ಕೊಡಿ, ಬೆಂಗಳೂರಿಗೆ ಹೋದಕೂಡಲೆ ನಿಮ್ಮ ಬಾಕಿಯ ಹಣವನ್ನೆಲ್ಲಾ ಕಳುಹಿಸಿಕೊಡುತ್ತೇನೆಂದು ಹೇಳಲು, ಆ ಶ್ರೀಮಂತನಿಗೆ ಇವನ ಮಾತಿನಲ್ಲಿ ಕೊಂಚ ಅನುಮಾನವು ಹುಟ್ಟಿ, ತನ್ನಲ್ಲಿದ್ದ ಆ ವಂಚಕನ ಚೀಲವನ್ನು ರಹಸ್ಯದಲ್ಲಿ ಬಿಚ್ಚಿನೋಡುವಲ್ಲಿ ಕಲ್ಲು ಮಣ್ಣು ಇದ್ದುದನ್ನು ಕಂಡು ಭಯಗ್ರಸ್ತನಾಗಿ ಆ ಮೋಸಗಾರನನ್ನು ಹುಡುಕಿಯತ್ತಿಸುವಲ್ಲಿ ಅವನು ಪಲಾಯನವಾಗಿದ್ದನು.

ವಿದೇಶ ವೃತ್ತಾಂತಗಳು

ತುಪಾಕಿಗಳಿಗೆ ಮದ್ದನ್ನು ಸೈನಿಕರು ತುಂಬಬೇಕಷ್ಟೆ. ಜರ್ಮನ್‌ಸೈನ್ಯದಲ್ಲಿ ತುಪಾಕಿಗಳಿಗೆ ಮದ್ದನ್ನು ತನ್ನಷ್ಟಕ್ಕೆ ತಾನೇ ತುಂಬಿಕೊಳ್ಳುವಂತೆ ಯಂತ್ರರಚನೆಯನ್ನು ಜರ್ಮನರು ಈಚೆಗೆ ಮಾಡಿರುವರಂತೆ.

ಆಸ್ಟ್ರಿಯಾದೇಶವಾದ್ಯಂತದಲ್ಲೂ ಈಗ ವಾಂತಿಭೇದಿರೋಗವು ವ್ಯಾಪಿಸುತ್ತಲಿದೆ. ಈ ವ್ಯಾಧಿಯು ಪ್ರಜೆಗಳಲ್ಲೂ ಸೈನಿಕರಲ್ಲೂ ಕೂಡ ಕಾಣಿಸಿಕೊಂಡಿದೆ. ಸೆರೆಯಾಳುಗಳನ್ನಿಟ್ಟಿರುವ ಸ್ಥಲದಲ್ಲೂ ವ್ಯಾಪಿಸಿ, ೧೪೧೪ ಮಂದಿಗೆ ಸೋಕಿ ೩೧೦ ಮಂದಿಯು ಸತ್ತಿರುವರೆಂದು ಅಲ್ಲಿನ ಅಧಿಕಾರಿಗಳು ಪ್ರಕಟಿಸಿದ್ದಾರೆ.

ಅಮೇರಿಕಾದ ಕೆನಡಾದೇಶದಲ್ಲಿ ಹಾರುವ ಮದ್ದನ್ನು ನಿರ್ಮಿಸುವ ಒಂದು ಯಂತ್ರಶಾಲೆಗೆ ಬೆಂಕಿಬಿದ್ದು ಬಹಳ ಅನರ್ಥವಾಯಿತು. ೭ ಮಂದಿ ಸತ್ತರು. ಈ ಸತ್ತವರಲ್ಲಿ ಇಂಗ್ಲೆಂಡಿನಿಂದ ಬಂದಿದ್ದ ಇನ್ಸ್‌ಪೆಕ್ಟರೂ ಕೂಡ ಒಬ್ಬನಾಗಿರುವನು. ಹಿಂದೆ ಇದೇ ಯಂತ್ರಾಲಯದಲ್ಲಿ ಉದ್ಯೋಗಿಯಾಗಿದ್ದ ಒಬ್ಬ ಜರ್ಮನ್‌ದೇಶೀಯನೇ ಈ ಅನಾಹುತಕ್ಕೆ ಕಾರಣಭೂತನಂತೆ.

ಜರ್ಮನರು ತಮ್ಮ ಫಿರಂಗಿಗಳಿಗೆ ಮನುಷ್ಯರಮೂಲಕ ಬೆಂಕಿಹೊತ್ತಿಸುವ ರೀತಿಯನ್ನು ತಪ್ಪಿಸಿ, ಯಂತ್ರಸಹಾಯದಿಂದಲೇ ಆ ಕೆಲಸವು ನಡೆಯುವಂಥ ಸಾಧನವನ್ನು ಕಂಡು ಹಿಡಿದು ಪಶ್ಚಿಮರಣರಂಗದಲ್ಲಿ ಮಿತ್ರಮಂಡಲಿಯವರಿಗೆ ಆಶ್ಚರ್ಯವನ್ನುಂಟುಮಾಡಿದರು. ಇನ್ನು ಮುಂದಣಯುದ್ಧದಲ್ಲಿ ಅವರು ಫಿರಂಗಿಗುಂಡುಗಳನ್ನು ಮಳೆಹನಿಯಂತೆ ಸುರಿಸುವ ಬೇರೊಂದುವಿಧಾನವನ್ನು ಕಂಡುಹಿಡಿದಿರುವರಂತೆ.

ಅಮೇರಿಕಾದಲ್ಲಿನ ಮಿಸೂರಿ—ಇಡಿಯಾನ—ಓಹಿಯೋ ಪ್ರದೇಶಗಳಲ್ಲಿ ಮಹಾಝಂಝಾಮಾರುತದೊಡನೆ ಸಿಡಿಲುಗಳು ಬಡಿದು ಬಹಳ ಅನರ್ಥವನ್ನು ಮಾಡಿದೆ. ಬಹುಜನರು ಸತ್ತಿರುವರು. ಗಾಳಿಯಬಡಿತದಿಂದ ಕೆಂಬಿಮೇಲೆ ಹೋಗುತ್ತಿದ್ದ ಹೊಗೆಬಂಡಿಗಳ ಸಾಲಿಗೆಸಾಲೇ ಮಗುಚಿಕೊಂಡಿತು. ೨ ಹಡಗುಗಳು ನದಿಯಲ್ಲಿ ಮಗುಚಿಕೊಂಡುವು. ಅದರಲ್ಲಿದ್ದ ಬಹುಜನರು ನೀರಿನಲ್ಲಿ ಮುಳುಗಿ ಸತ್ತರು. ಇದೇತೆರದ ಅನರ್ಥಗಳು ಬಹಳವಾಗಿ ಆಗಿರುವುವು.

ಈಜಿಪ್ಟಿನ ಸುಲ್ತಾನರನ್ನು ಕೊಲ್ಲುವುದಕ್ಕಾಗಿ ೨ ನೆ ಸಲ ಮತ್ತೊಂದು ಪ್ರಯತ್ನವು ನಡೆದಿರುವುದು. ಕಳೆದ ತಾ॥ ೧೦ ರಲ್ಲಿ ಅವರು ರಥಾರೂಢರಾಗಿ ಪ್ರಾರ್ಥನೆಗಾಗಿ ಮಸ್ಜಿದ್ದಿಗೆ ಹೋಗುತ್ತಿರಲು, ಯಾರೋ ಸಿಡಿಮದ್ದನ್ನು ಹಾಕಿದರು. ಅದು ಬಂಡಿಯ ಕಿಟಕಿಯೊಳಕ್ಕೆ ಬೀಳದೆ ಕುದುರೆಗಳ ಕಾಲಿನಮುಂದೆ ಬಿದ್ದಿತು. ಆದರೆ ಒಡೆಯಲಿಲ್ಲ. ಆದುದರಿಂದ ಯಾವಅಪಾಯವೂ ಆಗಲಿಲ್ಲ ಸುಲ್ತಾನರು ಪದ್ಧತಿಯಂತೆ ಪ್ರಾರ್ಥನೆಯನ್ನು ತೀರಿಸಿಕೊಂಡು ಬಂದು ಮಧ್ಯಾಹ್ನದಮೇಲೆ ಬೇಟೆಗಾಗಿ ಹೋದರು.

ಅಮೇರಿಕಾದ ವಾಷಿಂಗ್ಟನ್ ಪಟ್ಟಣದಲ್ಲಿ ಎರಿಕ್ ಮ್ಯೂಂಟರ್ ಎಂಬ ಜರ್ಮನ್ ದೇಶೀಯನು ಜೆ. ಪಿ. ಮೋರ್ಗನ್ ಎಂಬ ದೊಡ್ಡ ಮನುಷ್ಯರ ಮೇಲೆ ೨ ಆವೃತ್ತಿ ತುಪಾಕಿ ಗುಂಡಿನಿಂದ ಹೊಡೆದು ಬಲವಾದ ಗಾಯವನ್ನುಂಟುಮಾಡಿದನು. ಇಂಗ್ಲೀಷ್ ರಾಯಭಾರಿಯೊಡನೆಯೂ ಇನ್ನು ಕೆಲರೊಡನೆಯೂ ಕುಳಿತು ಮೋರ್ಗನ್‌ರವರು ಔತಣದೂಟವನ್ನು ಮಾಡುತ್ತಿರುವಾಗ ಈ ಅನಾಹುತವು ನಡೆದಿತು. ಅಪರಾಧಿಯನ್ನು ಪೊಲೀಸರು ಹಿಡಿದು ವಿಚಾರಣೆಗೊಳಪಡಿಸಿದಾಗ ಆತನು ನುಡಿದಿರುವುದೇನೆಂದರೆ—"ನಾನು ಕಾರ್ನಲ್ ವಿಶ್ವವಿದ್ಯಾಲಯದಲ್ಲಿ ಜರ್ಮನ್‌ಭಾಷೆಯನ್ನು ಬೋಧಿಸತಕ್ಕ ಉಪಾಧ್ಯಾಯನು. ಈ ಮೋರ್ಗನ್‌ರವರು ಈ ದೇಶದಿಂದ ಬಹಳವಾಗಿ ಯುದ್ಧಸಾಮಗ್ರಿಗಳನ್ನು ಯೂರೋಪಿಗೆ ಕಳುಹಿಸಿಕೊಡುತ್ತಿರುವುದರಿಂದ ಅಲ್ಲಿ ವಿಶೇಷ ಜನನಷ್ಟವಾಗುವುದಕ್ಕೆ ಕಾರಣವಾಗಿದೆ ಅದುಕಾರಣ ಅದನ್ನು ತಪ್ಪಿಸಿಬಿಡುವುದಕ್ಕೆ ಇವನನ್ನು ಕೊಲ್ಲುವುದೇ ಉಪಾಯವೆಂದು ತಿಳಿದು ನಾನು ಹೀಗೆ ಮಾಡಿದೆನು. ನಾನು ಒಂದು ಮೋಟಾರುಬಂಡಿಯನ್ನು ಏರಿಬಂದೆನು. ಇದಕ್ಕಾಗಿ ೨ ಪಿಸ್ತೋಲುಗಳನ್ನೂ ಒಂದು ಚೀಲದ ತುಂಬಾ ಡೈನಾಮೈಟ್ ಎಂಬ ಹಾರುವ ಮದ್ದನ್ನೂ ಮತ್ತೊಂದು ಚೀಲದಲ್ಲಿ ನೈಟ್ರೋಗ್ಲಿಸರೀನ್ ಎಂಬ ಮಾರಕವಸ್ತುವನ್ನೂ ೨ ಪೆಟ್ಟಿಗೆಗಳ ತುಂಬಾ ತೋಟಾಗಳನ್ನೂ ತೆಗೆದುಕೊಂಡು ಬಂದಿದ್ದೆ" ಎಂದು ವಾಜ್ಮೂಲ ಕೊಟ್ಟನು. ಈಗ ಮೋರ್ಗನ್‌ರವರು ವೈದ್ಯಶಾಲೆಯಲ್ಲಿ ಚಿಕಿತ್ಸೆಯಲ್ಲಿದ್ದಾರೆ. ಪ್ರಾಣಭಯವೇನೂ ಇಲ್ಲ. ಅಪರಾಧಿಯು ತಾನು ಸೆರೆಯಲ್ಲಿದ್ದ "ಇಟ್ಟಿದ್ದ ಸ್ಥಳದಲ್ಲೇ ಆತ್ಮಹತ್ಯೆ ಮಾಡಿಕೊಂಡನು. ವೈದ್ಯರು ಶವವನ್ನು ಪರೀಕ್ಷಿಸಿದಾಗ ಅದು ತುಪಾಕಿಗುಂಡಿನೇಟಿನಿಂದ ಆದ ಮರಣವಲ್ಲವೆಂದು ಹೇಳಿದರು. ಈತನು ಸೆರೆಮನೆಯಲ್ಲಿ ೫೦ ಅಡಿಗಳಮೇಲಿನ ಕಿಟಕಿಯಿಂದ ದುಮಿಕಿ ಸತ್ತಿರಬಹುದೆಂದು ಊಹಿಸಲ್ಪಟ್ಟಿತು.

ಮೈಸೂರ್ ಸ್ಟಾರ್.

೧೯೧೫ನೆಯ ಇಸವಿ ಜುಲೈ ತಾ|| ೧೮ನೆಯ ಭಾನುವಾರ.

ಜನರಲ್ ಬೋಥಾರವರ ವಿಜಯ.

ಯುದ್ಧಾರಂಭವಾದ ಮೇಲೆ ಜರ್ಮನರು ದುರುಪದೇಶದಿಂದ ಆಫ್ರಿಕಾಖಂಡದಲ್ಲಿರುವ ಆಂಗ್ಲರ ಅಧಿನಿವೇಶದ ಪ್ರಜೆಗಳ ಮನಸ್ಸನ್ನು ಕೆಡಿಸಿ, ಅಲ್ಲಿನ ಕೆಲ ಬೂವರ್ ಜನರು ಪ್ರಭುತ್ವದವರ ಮೇಲೆ ತಿರುಗಿಬಿದ್ದು ಯುದ್ಧಕಾರ್ಯಗಳನ್ನು ನಡೆಯಿಸುವಂತೆ ಮಾಡಿದ್ದುದೂ, ಅವರೆಲ್ಲಾ ಅಲ್ಲಿನ ಸಂಯುಕ್ತಪ್ರಭುತ್ವದವರ ಸಾಮ್ರಾಜ್ಯನಿಷ್ಠೆ, ಶೌರ್ಯ-ಧೈರ್ಯ ಮೊದಲಾದ ಸಾದ್ಗುಣ್ಯದಿಂದ ಅಣಗಿಸಲ್ಪಟ್ಟುದೂ, ಆಗಿಂದಾಗ್ಗೆ ನಾವು ಪ್ರಕಟಿಸುತ್ತಬಂದಿರುವ ವಾರ್ತೆಗಳಿಂದ ವಾಚಕರಿಗೆ ವಿದಿತವಾಗಿಯೇ ಇದೆಯಷ್ಟೆ. ಜರ್ಮನರು ಅಲ್ಲಿ ಹೀಗೆ ಮಾಡಿದುದಕ್ಕೆ ಮುಯ್ಯಾಗಿ ಅಲ್ಲಿನ ದಕ್ಷಿಣಾಫ್ರಿಕಾ ಪ್ರಭುತ್ವದವರು ಆಫ್ರಿಕಾದಲ್ಲಿರುವ ಜರ್ಮನ್ ಸ್ವಾಸ್ಥ್ಯಭೂಮಿಗಳ ಮೇಲೆ ದಾಳಿಗೆ ಉಪಕ್ರಮಿಸಿ ಅಲ್ಲಲ್ಲಿಗೆ ಯುದ್ಧಮಾಡಿ ಕೆಲಭಾಗಗಳನ್ನು ವಶಪಡಿಸಿಕೊಳ್ಳುತ್ತಬಂದರು. ಆದೇಶದ ಮಂತ್ರಿಯವರಾದ ಜ|| ಬೋಥಾರವರ ಸೈನಿಕರು ತೋರಿಸುತ್ತಬಂದ ಪರಾಕ್ರಮದಿಂದ ಜರ್ಮನರಿಗೆ ಉಳಿಗೆಯು ಇಲ್ಲವಾಗಿ ಬಂದಿತು. ಕೊನೆಗೆ ಅವರೆಲ್ಲರೂ ಆದುವರಿಗೆ ಪಟ್ಟ ನಷ್ಟಕಷ್ಟಗಳಿಂದಲೇ ಬೇಜಾರಾಗಿ, ಕಡೆಗೆ ಕಳೆದ ತಾ|| ೮ ರ ರಾತ್ರಿ ೨ ಗಂಟೆಯ ಹೊತ್ತಿನಲ್ಲಿ ನಾವು ನಿಮಗೆ ಶರಣಾಗತರಾಗುವೆವು ಎಂದು ಜನರಲ್ ಬೋಥಾರವರಿಗೆ ಜರ್ಮನರ ನೈಋತ್ಯಾಫ್ರಿಕಾದ ಗೌನರ್‌ರಾದ ಡಾಕ್ಟರ್ ಸಿಯಿಟ್ಜರವರು ಶ್ರುತಪಡಿಸಿಕೊಂಡರು. ಅದೇಮೇರೆಗೆ ಅವರಕಡೆ ಉಳಿದಿದ್ದ ೨೦೪ ಮಂದಿ ಸೈನಿಕೋದ್ಯೋಗಿಗಳೂ, ೩೧೬೬ ಮಂದಿ ಸೈನಿಕರೂ, ೩೭ ದೊಡ್ಡ ಫಿರಂಗಿಗಳೂ, ೨೧ ಮಿಷಿನ್ ಫಿರಂಗಿಗಳೂ, ಬಹಳ ಮದ್ದುಗುಂಡು ಮೊದಲಾದ ಸಾಮಗ್ರಿಗಳೂ ಬೋಥಾರವರ ವಶವಾದರು. ಹೀಗೆ ಅಧೀನರಾದ ಶತ್ರುಸೈನಿಕರನ್ನು ಜನರಲ್ ಬೋಥಾರವರು ಉಚಿತವಾದ ಮರ್ಯಾದೆಯಿಂದಲೇ ಕಂಡರು. ಸೈನಿಕೋದ್ಯೋಗಿಗಳು ತಮ್ಮತಮ್ಮ ಆಯುಧಗಳೊಡನೆ ತಮ್ಮ ಇಷ್ಟಬಂದಕಡೆ ಹೋಗಿ ವಾಸಮಾಡಬಹುದೆಂದು ಅಪ್ಪಣೆಮಾಡಿದರು. ಇತರ ಸೈನಿಕರಿಂದ ಪ್ರಮಾಣಮಾಡಿಸಿಕೊಂಡು ಅವರ ತುಪಾಕಿಗಳನ್ನೆಲ್ಲಾ ಕಸುಕೊಂಡು ಅವರವರ ಮನೆಗೆ ಕಳುಹಿಸಿಬಿಟ್ಟರು. ಯುದ್ಧಸಾಮಗ್ರಿಗಳನ್ನೆಲ್ಲಾ ತಮ್ಮ ವಶಪಡಿಸಿಕೊಂಡರು. ಈ ಕೃತ್ಯದೊಡನೆ ಜರ್ಮನರ ನೈಋತಿಆಫ್ರಿಕಾ ಭಾಗವಾದ್ಯಂತವೂ ಜರ್ಮನರ ಕೈಬಿಟ್ಟು ಹೋದಂತಾಯಿತು.

ಜರ್ಮನರಿಗೆ ಆಫ್ರಿಕಾದಲ್ಲಿ ಪೂರ್ವಭಾಗದಲ್ಲಷ್ಟು ನೈಋತಿಭಾಗದಲ್ಲಷ್ಟು ಭೂಭಾಗವು ಸೇರಿದ್ದುದರೊಳಗೆ ನೈಋತ್ಯದ ಈ ಭಾಗವೆಲ್ಲಾ ಈಗ ಕಳೆದುಹೋದಂತಾಯಿತು. ಈ ದೇಶಭಾಗವು ೩೨೨೨೪೫೦ ಮೈಲಿಗಳ ವಿಸ್ತಾರವುಳ್ಳದ್ದೂ, ೧೨೦೦೦೦ ಮಂದಿ ಜನಸಂಖ್ಯೆಯುಳ್ಳದ್ದೂ, ೧ ಕೋಟಿಯೂ ೩೦ ಲಕ್ಷ ರೂ.ಗಳಷ್ಟು ಆದಾಯವುಳ್ಳದ್ದೂ, ೫|| ಕೋಟಿಯಷ್ಟು ವ್ಯಾಪಾರ ನಡೆಯುವುದೂ ಆಗಿರುವುದು. ಜರ್ಮನರು ತಮ್ಮ ಪಾದರಿಗಳನ್ನು ನೊಟ್ಟನೊದಲು ಇಲ್ಲಿ ಕಾಲಿಡಿಸಿ, ಬಳಿಕ ವ್ಯಾಪಾರಿಗಳ ಗುಡಿಸಲನ್ನು ಕಟ್ಟಿಸಿ, ಅದರ ಹಿಂದೆ ತಾವು ಬೇರುಬಿಡುತ್ತಬಂದು ಕಳೆದ ೩೫ ವರ್ಷಗಳಿಂದ ಇಲ್ಲಿ ಪ್ರಬಲಿಸುತ್ತ ೩ ಲಕ್ಷ ಮೈಲಿಗಿಂತಲೂ ವಿಸ್ತಾರವಾದ ಈ ಭೂಭಾಗವನ್ನು ಸ್ವಾಸ್ಥ್ಯವನ್ನಾಗಿ ಮಾಡಿಕೊಂಡು, ಅಲ್ಲಿನ ಆದಾಯಕ್ಕಿಂತಲೂ ಮಿಗಿಲಾಗಿ ತಮ್ಮ ಕೈವೆಚ್ಚವನ್ನೇ ಹಾಕಿಕೊಂಡು ವೃದ್ಧಿಪಡಿಸುತ್ತ ಬಂದಿದ್ದರು. ಈ ವೃದ್ಧಿಯನ್ನು ಆಂಗ್ಲಪ್ರಭುತ್ವದವರು ನೋಡಿ ಒಳಗೆ ಸೈರಿಸಲಾರದವರಾಗಿದ್ದರೂ ಮೇಲೆ ಏನನ್ನೂ ಮಾಡದವರಾಗಿದ್ದರು. ಇಂಥ ವಿಶಾಲರಾಷ್ಟ್ರಪ್ರದೇಶವು ಈಗ ಅತ್ಯಂತ ಸುಲಭವಾದ ಮಾರ್ಗದಿಂದ ಆಂಗ್ಲರ ಸಾಮ್ರಾಜ್ಯಕ್ಕೆ ಅಧೀನವಾಗಿ ಅವರಿಗೆ ಅಪರಿಮಿತಾನಂದವನ್ನು ಉಂಟುಮಾಡಿದುದಕ್ಕೆ ಅದರ ಸದ್ಧರ್ಮಪ್ರಭಾವವೇ ಕಾರಣವಲ್ಲದೆ ಬೇರೊಂದಲ್ಲನೆಂದು ನಾವು ತಿಳಿಯುತ್ತೇವೆ. ಜನರಲ್ ಬೋಥಾರವರು ತಮ್ಮಕಡೆಗೆ ಸ್ವಲ್ಪಸೈನ್ಯವಿದ್ದರೂ, ಅದಕ್ಕೂ ಕೂಡ ವಿಶೇಷ ನಷ್ಟತಟ್ಟದಂತೆ ಬಹಳ ಯುಕ್ತಿಸಾಹಸದಿಂದ ಯುದ್ಧಕಾರ್ಯಗಳನ್ನು ಅಲ್ಲಿನ ಶತ್ರುಗಳ ಮೇಲೆ ನಡೆಯಿಸಿ, ಅಸಾಧಾರಣವಾದ ಇಂಥ ವಿಜಯವನ್ನು ಪಡೆದುಕೊಂಡುದು ಆಂಗ್ಲಸಾಮ್ರಾಜ್ಯವೆಲ್ಲಕ್ಕೂ ಅತಿಶಯವಾದ ಆನಂದವನ್ನುಂಟುಮಾಡಿರುತ್ತದೆ. ಈ ಆನಂದದಲ್ಲಿ ಮಿತ್ರಮಂಡಲಿಯ ರಾಷ್ಟ್ರಗಳೆಲ್ಲವೂ ಭಾಗಿಗಳಾಗಿರುವುವು. ಈಗಿನ ಯುದ್ಧರಂಗದಲ್ಲಿ ನಾಲ್ಕಾರು ಮಾರುಗಳ ಭೂಮಿಯನ್ನು ಸಂಪಾದಿಸುವುದಕ್ಕೂ ಸಾವಿರಾರು ಪ್ರಾಣಗಳ ಬಲಿಯೂ ಲಕ್ಷಾಂತರ ಗುಂಡುಗಳ ವ್ಯಯವೂ ಆಗುತ್ತಿರುವಾಗ, ಲಕ್ಷಾಂತರ ಮೈಲಿಗಳ ಶತ್ರುದೇಶವನ್ನು ಅತ್ಯಂತ ಸುಲಭವಾಗಿ ವಶಪಡಿಸಿಕೊಂಡು ಜನರಲ್ ಬೋಥಾರವರು ಪಡೆದ ವಿಜಯವು ಈಗಿನ ಯುದ್ಧಚರಿತ್ರದಲ್ಲಿ ಗಮನೀಯವಾದ ಅಗ್ರಸ್ಥಾನವನ್ನು ಪಡೆಯುವುದಕ್ಕೆ ಅರ್ಹವಾದುದಲ್ಲವೆ? ಮಿತ್ರಮಂಡಲಿಯವರ ಈ ಅಸಾಧಾರಣವಾದ ವಿಜಯವು ಕಾಲಮೂರ್ತಿಯಾಗಿರುವ ಆ ಜರ್ಮನ್ ಕೈಜರರಿಗೆ ಎಷ್ಟುಮಟ್ಟಿನ ಕ್ರೋಧಾತಿರೇಕವನ್ನುಂಟುಮಾಡಿರಬಹುದೋ ಅವರ ಅಂತರಾತ್ಮನೇ ಬಲ್ಲ. ಜನರಲ್ ಬೋಥಾರವರ ಶೌರ್ಯ ಸಾಹಸ ಕೌಶಲಗಳು ಹಿಂದೆ ಇಂಗ್ಲೀಷರ ಮೇಲೆ ಯುದ್ಧವನ್ನು ಹೂಡಿದ್ದ ಸಮಯದಲ್ಲೇ ಜಗದ್ವಿದಿತವಾಗಿದ್ದುವು: ಈಗ ಅವರ ಸದ್ಗುಣರಾಜಿಯೊಡನೆ ಅಕುಟಿಲವಾದ ಸಾಮ್ರಾಜ್ಯನಿಷ್ಠೆಯೂ ಕೂಡ ಸೇರಿಕೊಂಡಿರುವುದರಿಂದ ಅವರ ಕಾರ್ಯವಿಶೇಷವು ಆಚಂದ್ರಾರ್ಕಸ್ಥಾಯಿಯಾದ ಅದ್ವಿತೀಯಕೀರ್ತಿಯನ್ನು ಅವರಿಗೆ ತಂದುಕೊಟ್ಟಿರುವುದು. ಈ ಮೊದಲೇ ಅವರ ರಾಜನಿಷ್ಠೆಯನ್ನು ಆಂಗ್ಲಪ್ರಭುತ್ವದವರು ಅಭಿನಂದಿಸಿ ಅದರ ಗುರ್ತಿಗಾಗಿ ಹೊಸದಾಗಿ ನಿರ್ಮಿಸಿದ ಒಂದುಹಡಗಿಗೆ ಅವರ ಹೆಸರನ್ನು ಕರೆದು ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸಿದ್ದರು. ಈಗಲೂ ಜಾರ್ಜ್ ಸಾರ್ವಭೌಮರೂ ಯುದ್ಧಾಂಗಕಾರ್ಯದರ್ಶಿಗಳು ಮೊದಲಾದ ಮಂತ್ರಿಮಂಡಲದವರೂ ಮಿತ್ರಮಂಡಲಿಯ ರಾಷ್ಟ್ರಾಧಿಪತಿಗಳೂ ಸಹ ವಿಶೇಷಾನಂದದಿಂದ ಜನರಲ್ ಬೋಥಾರವರ ಸಾಹಸವನ್ನು ಅಭಿನಂದಿಸಿ ಕೊಂಡಾಡಿರುವರು. ಬ್ರಿಟಿಷ್ ಪಾರ್ಲಿಮೆಂಟಿನವರು ಏಕಕಂಠ್ಯದಿಂದ ತಮ್ಮ ಕೃತಜ್ಞತೆಯನ್ನು ಅವರಿಗೆ ಅರ್ಪಿಸಿರುವರು. ಸೀಮೆಯಲ್ಲೂ ಭರತಖಂಡದಲ್ಲೂ ಈ ವಿಜಯದಿಂದಾದ ಆನಂದವನ್ನು ಪ್ರದರ್ಶಿಸುವುದಕ್ಕಾಗಿ ಸರ್ಕಾರದ ಮುಖ್ಯ ಕಾರ್ಯಾಲಯಗಳ ಮೇಲೆಲ್ಲಾ ಧ್ವಜಪಟವು ಎತ್ತಿ ಕಟ್ಟಲ್ಪಡುವಂತೆ ಆಜ್ಞೆಮಾಡಲ್ಪಟ್ಟಿದ್ದಿತು. ಅದರಂತೆ ಕಳೆದ ತಾ|| ೧೨ ರಲ್ಲಿ ಭರತಖಂಡದ ಸಿಮ್ಲಾನಗರದಲ್ಲೂ ಅಧಿಪತ್ಯಗಳ ಮುಖ್ಯಪ್ರಭುತ್ವಕಾರ್ಯಾಲಯಗಳ ಮೇಲೂ ಧ್ವಜಪಟಗಳು ಎತ್ತಿಕಟ್ಟಲ್ಪಟ್ಟಿದ್ದುವು.

ಜರ್ಮನರು ಪೂರ್ವಪಶ್ಚಿಮ ರಣರಂಗಗಳಲ್ಲಿ ರಕ್ತದ ಕೋಡಿಯನ್ನು ಹರಿಸಿ ಲೋಕನಾಶವನ್ನು ಮಾಡುತ್ತ ಕುಳಿತಿದ್ದರೂ ಮಿತ್ರಮಂಡಲಿಯವರು ಸಾಹಸವಿಶೇಷದಿಂದ ಜರ್ಮನರ ಎರಡು ಪ್ರಬಲವಾದ ಸ್ವಾಸ್ಥ್ಯಗಳನ್ನು ಎಂದರೆ ಪೂರ್ವದೇಶದಲ್ಲಿ ಚೀನಾದೊಳಗಿದ್ದ ಕಯಾಚುವನ್ನೂ, ಪಶ್ಚಿಮದೊಳಗೆ ಆಫ್ರಿಕಾದ ಈ ಸ್ವಾಸ್ಥ್ಯವನ್ನೂ ಉಪಾಯವಾಗಿ ಕಸುಕೊಂಡುಬಿಟ್ಟುದು ಜರ್ಮನಿಯ ಎರಡುಕಿವಿಗಳನ್ನೇ ಕತ್ತರಿಸಿಬಿಟ್ಟಂತಾಯಿತು. ಈ ಮಿತ್ರಮಂಡಲಿಯ ವಿಜಯವು ಮುಂದಣ ಅವರ ಭವಿಷ್ಯತ್ಸಂಪೂರ್ಣ ವಿಜಯಕ್ಕೆ ಶುಭಸೂಚಕವಾಗಿ ಪರಿಣಮಿಸಲೆಂದು ನಾವು ಕೋರುವೆವು.

ಇನ್ನು ಆಫ್ರಿಕಾದಲ್ಲಿ ಜರ್ಮನರಿಗೆ ಸೇರಿದ ಪೂರ್ವಾಫ್ರಿಕಾದ ಭಾಗವು ಸ್ವಲ್ಪ ಇರುವುದು. ಅದನ್ನೂ ಆಪೋಶನಮಾಡುವುದಕ್ಕೆ ಜನರಲ್ ಬೋಥಾರವರ ಸೈನ್ಯವು ಪ್ರವೃತ್ತವಾಗಿದ್ದರೆ ಚೆನ್ನಾಗಿದ್ದಿತು. ಆದರೆ ಅರ್ಲ್‌ಕಿಚನರ್‌ರವರಿಗೂ ಜನರಲ್ ಬೋಥಾರವರಿಗೂ ನಡೆದಿರುವ ಉತ್ತರಪ್ರತ್ಯುತ್ತರಗಳನ್ನು ಪರಿಶೀಲಿಸಿದರೆ, ಪಶ್ಚಿಮರಣರಂಗಕ್ಕೇ ಈ ಸೈನ್ಯವು ಕಳುಹಿಸಲ್ಪಡುವಂತೆ ಕಾಣುತ್ತದೆ. ಈ ಸೈನ್ಯವು ಹೋದಹೋದಕಡೆಗೆ ಜಯಲಕ್ಷ್ಮಿಯ ಕಟಾಕ್ಷವು ಬೆಂಬಿಡದೆ ಇರಲೆಂದು ಕೋರುವೆವು.

ಒಳದೇಶ ವೃತ್ತಾಂತಗಳು.

ಶಿವಮೊಗ್ಗೆಯಲ್ಲಿ ಆಕ್ಟಿಂಗ್ ಮುನಸೀಫರಾಗಿರುವ ಮ|| ಎಂ. ಕೃಷ್ಣಸ್ವಾಮಿಯವರಿಗೆ ೨ನೆಯ ತರಗತಿ ಮ್ಯಾಜಿಸ್ಟ್ರೇಟ್ ಅಧಿಕಾರವು ಕೊಡಲ್ಪಟ್ಟಿದೆ.

ರಾಜಧಾನಿಯಲ್ಲಿ ಆರ್ದ್ರೆ-ಪುನರ್ವಸು ಮಳೆಗಳು ನಡೆಯಿಸಲಿಲ್ಲ; ಬಿಸಿಲೂ ಸೆಕೆಯೂ ಹೆಚ್ಚಿವೆ. ಸುತ್ತುಮುತ್ತಣ ಗ್ರಾಮಗಳ ಕಡೆಗೆ ಈಚೆಗೆ ಮಳೆಯಾಗುತ್ತಿದೆ. ಪಟ್ಟಣದಲ್ಲೂ ಸ್ವಲ್ಪ ಮೋಡವಾಡುತ್ತಿದೆ.

ಜೂನ್ ತಾ|| ೩೦ ಕ್ಕೆ ಕಡೆಯಾದ ೬ ತಿಂಗಳ ಕಾಲದಲ್ಲಿ ಮೈಸೂರು ಬ್ಯಾಂಕಿಗೆ ೬೫೨೫೫-೪-೪ ರೂ.ಗಳ ಲಾಭವು ಬಂದಿದೆ. ಎಂದರೆ ಒಟ್ಟಿಗೆ ಅಸಲಿನಮೇಲೆ ೧೦೦ಕ್ಕೆ ೧೩ ರೂ. ನಂತೆ ಲಾಭವು ಗಿಟ್ಟಿರುತ್ತದೆ.

ಬೆಂಗಳೂರು ವೆಂಕಟೇಶವಿಲಾಸ ಬುಕ್‌ಡಿಪೋವಿನ ಹಿಂದುಯುನಾನಿ ವೈದ್ಯ, ಮಂತ್ರ-ಯಂತ್ರ ಸುಗಂಧಬೋಧಕ ಪುಸ್ತಕದ ಪ್ರಕಟನಪತ್ರಿಕೆಯು ಈ ಪತ್ರಿಕೆಯಲ್ಲಿ ಗರ್ಭಿತವಾಗಿರುತ್ತದೆ. ವಾಚಕರು ಅತ್ತಕಡೆಗೆ ಗಮನಿಸುವವರಾಗಲಿ.

೧ನೆಯ ಕೌನ್ಸಿಲರಾದ ರಾಜಮಂತ್ರಪ್ರವೀಣ ಎಚ್.ವಿ. ನಂಜುಂಡಯ್ಯ, ಎಂ.ಎ.,ಎಂ.ಎಲ್.,ರವರು ಇಷ್ಟರಲ್ಲೇ ತಮ್ಮ ಕೆಲಸದಿಂದ ನಿವೃತ್ತರಾಗುವರೆಂದೂ, ರೆವಿನ್ಯೂ ಕಮಿಷನರ್ ಮ|| ಕೆ. ದೊರೆಸ್ವಾಮಯ್ಯರ್‌ರವರು ಕೌನ್ಸಿಲರಾಗುವರೆಂದೂ ಸುದ್ದಿಹುಟ್ಟಿದೆ.

ರಾಜಧಾನಿಯಲ್ಲಿ ಮಕ್ಕಳ ಸನ್ನಿಪಾತಜ್ವರವು ಹೆಚ್ಚುತಲಿದೆ. ಈ ರೋಗದ ಮರಣಗಳೂ ಹೆಚ್ಚುತ್ತಿವೆ. ಡಾ|| ಕೃಷ್ಣಯ್ಯಂಗಾರರ ಹೋಮ್ಯೋಪಥಿ ಚಿಕಿತ್ಸೆಯು ಈ ರೋಗದ ಮೇಲೆ ಉತ್ತಮಪರಿಣಾಮವನ್ನು ಮಾಡುತ್ತಿರುವುದರಿಂದ ಬಹುಜನರು ಅವರಿಗೆ ಕೃತಜ್ಞರಾಗಿದ್ದಾರೆ.

ಬೆಂಗಳೂರಲ್ಲಿ ಒಂದಾಣೆಯ ನಿಕಲ್ ನಾಣ್ಯದಂತೆ ಕೃತ್ರಿಮನಾಣ್ಯವನ್ನು ಮಾಡುತ್ತಿದ್ದ ಷೇಕ್‌ನೊಹದೀನ್ ಎಂಬುವನನ್ನು ಪೋಲೀಸಿನವರು ಅಚ್ಚು ಮೊದಲಾದ ಸಾಮಗ್ರಿಗಳ ಸಮೇತ ಹಿಡಿದು ಸಿಟಿಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರುಮಾಡಿರುವಲ್ಲಿ ಅವರು ಸೆಷನ್ಸ್‌ವಿಚಾರಣೆಗೆ ಕಳುಹಿಸಿಕೊಟ್ಟರು.

ಶ್ರೀಮನ್ಮಹಾರಾಜರವರು ರಾಣೀವಾಸದವರೊಡನೆ ನಿನ್ನೆಯದಿನ ಮೋಟಾರುಬಂಡಿಗಳಲ್ಲಿ ಮೇಲುಕೋಟೆಗೆ ದೇವರಸೇವೆಗೆ ದಯಮಾಡಿಸಿ ಈ ದಿವಸ ಹಿಂದಿರುಗುವವರಾಗಿರುವರು. ಶ್ರೀಯವರ ಸ್ವಾಗತಕ್ಕಾಗಿ ಮೇಲುಕೋಟೆಯ ನಿವಾಸಿಗಳು ಊರನ್ನು ಚಪ್ಪರ ಮೊದಲಾದವುಗಳಿಂದ ಶೃಂಗರಿಸಿ ಒಂದು ವಿಜ್ಞಾಪನ ಪತ್ರಿಕೆಯನ್ನೊಪ್ಪಿಸಲೇರ್ಪಡಿಸಿಕೊಂಡಿದ್ದರು.

ಬೆಂಗಳೂರಲ್ಲಿ ಪ್ರಕಟವಾಗುವ ಕರ್ನಾಟಕ ಪತ್ರಿಕೆಯ ಸಂಪಾದಕರಾದ ಮ|| ಡಿ. ವಿ. ಗುಂಡಪ್ಪನವರು "ಮೈಸೂರಿನ ಕೈಗನ್ನಡಿ" ಎಂಬ ಕರ್ನಾಟಕ ವಾರ್ಷಿಕಪುಸ್ತಕವನ್ನು ಪ್ರಕಟಿಸಿ ಅದರ ಪ್ರತಿಯೊಂದನ್ನು ನಮ್ಮಲ್ಲಿಗೆ ಕಳುಹಿಸಿಕೊಟ್ಟಿರುವರು. ಇದರಲ್ಲಿ ಮೈಸೂರು ಸೀಮೆಯ ವಿಸ್ತೀರ್ಣ, ಭೂಗುಣ, ವಾಯುಗುಣ, ದೇಶವಿಭಾಗ, ಪರ್ವತಗಳು, ಕಾಡುಗಳು, ನದಿಗಳು, ಜನಸಂಖ್ಯೆ, ಲೋಹಮಾರ್ಗ, ಮತಜಾತಿಗಳು, ಭಾಷೆ, ಕೃಷಿ, ವಾಣಿಜ್ಯಗಳು, ವಿದ್ಯಾಸಂಸ್ಥೆಗಳು, ಈಚೆಗಾಗಿರುವ ಕವಲುನಾಮೆ, ಶ್ರೀಮನ್ ಮಹಾರಾಜರವರ ಮತ್ತು ಶ್ರೀಮದ್ಯುವರಾಜರವರ ಸಂಕ್ಷಿಪ್ತಚರಿತ್ರೆಗಳು, ಪ್ರಜಾಪ್ರಮುಖರು ಇತ್ಯಾದಿ ವಿಷಯಗಳು ಸಂಕ್ಷಿಪ್ತವಾಗಿಯೂ ಸ್ವಾರಸ್ಯವಾಗಿಯೂ ಬರೆಯಲ್ಪಟ್ಟಿವೆ. ಈ ವಿಧವಾದ ಪುಸ್ತಕ ರಚನೆಯು ಈ ವರೆಗೆ ಆಂಗ್ಲಭಾಷೆಯಲ್ಲಿ 'ಡೈರೆಕ್ಟರಿ' ಎಂಬ ಹೆಸರಿನಿಂದ ಪ್ರಕಟವಾಗುತ್ತಿದ್ದಿತು. ಇದು ಸ್ಥಳೀಯರಿಗೆ ತತ್ರಾಪಿ ಪರಸ್ಥಳೀಯರಿಗೆ ಅತ್ಯಂತೋಪಯುಕ್ತವಾದುದರಿಂದ ಇದನ್ನು ಮ|| ಗುಂಡಪ್ಪನವರು ಪ್ರಯಾಸಪಟ್ಟು ವಿಷಯಸಂಗ್ರಹಮಾಡಿ ಪ್ರಕಟಿಸಿರುವುದರಿಂದ ಕನ್ನಡಿಗರಿಗುಪಕಾರವನ್ನು ಮಾಡಿದಂತಾಗಿರುವುದರಲ್ಲಿ ಸಂದೇಹವಿಲ್ಲವು. ಸ್ವದೇಶಾಭಿಮಾನಿಗಳು ಈ ಪುಸ್ತಕವನ್ನು ಸಂಗ್ರಹಿಸಿ ಪ್ರಸಾರಕರ ಶ್ರಮಸಾರ್ಥಕವನ್ನು ಮಾಡದಿರಲಾರರೆಂದು ನಿರೀಕ್ಷಿಸುತ್ತೇವೆ. ಇದರಲ್ಲಿ ಮೈಸೂರು ಸೀಮೆಯ ಭೂಪಟವೂ ಶ್ರೀಮನ್ ಮಹಾರಾಜರ ಮತ್ತೂ ಶ್ರೀಮದ್ಯುವರಾಜರವರ ಸುಂದರವಾದ ಭಾವಚಿತ್ರಗಳೂ ಕೊಡಲ್ಪಟ್ಟಿವೆ. ಗ್ರಂಥಕರ್ತರು ಮುಜರಾಯಿ ಸಂಬಂಧದಲ್ಲಿ ಮತಸ್ಥಾಪಕರ ವಿಚಾರಮಾಡುವಾಗ್ಗೆ "ಶ್ರೀ ಬಸವೇಶ್ವರನಮತವೂ ಇಲ್ಲಿ ಬೆಳೆದು ಪ್ರಬಲಿಸಿರುವುದು ......" ಎಂದು ಹೇಳಿರುವರು. ಇಲ್ಲಿ ಬಸವೇಶ್ವರನ ಮತವಾವುದೆಂಬುದನ್ನು ತಿಳಿಸಿಲ್ಲ. ಒಂದುವೇಳೆ ಗ್ರಂಥಕರ್ತರು ವೀರಶೈವಮತವೇ ಬಸವೇಶ್ವರನಿಂದ ಹುಟ್ಟಿದುದೆಂದು ಭಾವಿಸಿರುವುದಾದರೆ,ಅದು ಅಸಂಗತವು. ಇಂತಹ ವಿಷಯಗಳನ್ನು ಬರೆಯುವಾಗ ಆಯಾಮತ ವಿಷಯವನ್ನು ಬಲ್ಲವರಿಂದ ತಿಳಿದು ಬರೆಯುವುದು ಕ್ಷೇಮಕರವು. ಇದಲ್ಲದೆ ಹಿಂದೂಗಳ ಮುಖ್ಯಗುರುಪೀಠಗಳನ್ನು ಹೇಳುವಾಗ್ಗೆ "ವೀರಶೈವರಿಗೆ ಚಿತ್ರದುರ್ಗ ಡಿ|| ಶ್ರೀ ಮುರಘರಾಜೇಂದ್ರಸ್ವಾಮಿಗಳ ಮಠ" ಎಂದು ತಿಳಿಸಿರುತ್ತಾರೆ. ಇದರಿಂದ ಇದೊಂದೇ ಮಠವೆಂದರ್ಥವಾಗುವುದು. ವೀರಶೈವಮತಸ್ಥಾಪಕರಾದ ಪಂಚಾಚಾರ್ಯರುಗಳಲ್ಲಿ ಒಬ್ಬರಾದ ರೇಣುಕಾಚಾರ್ಯರಪೀಠವು ಕಡೂರು ಡಿ|| ಬಾಳೆಹೊನ್ನೂರಲ್ಲಿರುವುದು.

ಯುದ್ಧವಾರ್ತೆಯು.

ಪಶ್ಚಿಮ ರಣರಂಗ.

ಈಪ್ರೆಸ್ಸಿಗೆ ಉತ್ತರದಲ್ಲೂ ನ್ಯೂವೆಪಾಪಲ್ಲಿಗೆ ಉತ್ತರದಲ್ಲೂ ಕದುಕಾಳಗಗಳು ಕಳೆದ ವಾರದಲ್ಲಿ ನಡೆದುವು. ಜರ್ಮನರು ತೋರಿಸಿದ ವೀರಾವೇಶದಿಂದ ಅಲ್ಪಕಾಲಿಕ ಜಯವು ಅವರಿಗೆ ಉಂಟಾದರೂ ಉತ್ತರಕ್ಷಣದಲ್ಲಿ ಅವರು ಹಿಡಿದಿದ್ದ ಸ್ಥಾನಗಳನ್ನು ಫ್ರೆಂಚ್ ಸೈನ್ಯಗಳು ವಶಪಡಿಸಿಕೊಂಡು ಶತ್ರುಗಳಿಗೆ ವಿಶೇಷ ಸೈನ್ಯನಷ್ಟವನ್ನೇ ಫಲವನ್ನಾಗಿಮಾಡಿಸಿರುವುವು. ಮತ್ತು ಶತ್ರುಗಳ ಕಂದಕಗಳಲ್ಲಿ ಕೆಲ ಭಾಗವನ್ನು ಫ್ರೆಂಚರೇ ಆಕ್ರಮಿಸಿಕೊಂಡಿರುವರು. ಇಂಗ್ಲೀಷ್ ಸೈನ್ಯಗಳು ಏರ್ಕೀನಿನ ನೈಋತಿಭಾಗದಲ್ಲಿ ಜರ್ಮನರಮೇಲೆ ಯುದ್ಧಮಾಡಿ ಸ್ವಲ್ಪಸ್ಥಲವನ್ನಾಕ್ರಮಿಸಿ ೮೦ ಮಂದಿಗಳನ್ನು ಸೆರೆಹಿಡಿದಿರುವರು. ಶತ್ರುಗಳು ಅರ್‍ರಾಸ್ ಪಟ್ಟಣದಮೇಲೂ, ರೀಮ್ಸ್‌ಪಟ್ಟಣದಮೇಲೂ ಭಗ್ಗನೆ ಹೊತ್ತಿಕೊಳ್ಳುವ ಮದ್ದಿನ ಗೋಳಗಳನ್ನು ಹಾಕುತ್ತಿರುವರು. ಸೌಜೇಜಿನ ಹತ್ತಿರ ಫ್ರೆಂಚರು ಜರ್ಮನ್ ಕಂದಕಗಳಮೇಲೆ ಬಿದ್ದು ಕೈಮದ್ದಿನಗೋಳಗಳ ಯುದ್ಧವನ್ನು ಮಾಡಿ ಮುಂದಣ ಶತ್ರುಸೇನಾಪಂಗ್ತಿಯನ್ನು ಹತಮಾಡಿ ಆ ಭಾಗವನ್ನು ಹಿಡಿದುಕೊಂಡು ಅಲ್ಲಿದ್ದ ಕೆಲ ಜರ್ಮನ್ ಸೈನಿಕರನ್ನು ಸೆರೆಹಿಡಿದು ಪಟ್ಟಣದ ಸಮೀಪಕ್ಕೆ ನುಗ್ಗಿರುವರು. ಬೋಯಿಸ್‌ಲಿಪ್ರೇಟ್ರಿಯ ಹತ್ತಿರ ಮಾಡಿದ ಯುದ್ಧದಲ್ಲಿ ಜರ್ಮನರು ಫ್ರೆಂಚ್‌ಸೈನಿಕರಮೇಲೆ ವಿಮಾನಗಳಿಂದ ಟಾರ್ಪೆಡೋವನ್ನು ಬಿಟ್ಟರು; ಉರಿಯುವ ದ್ರಾವಕವನ್ನು ಮೇಲಿನಿಂದ ಸುರಿದರು. ಹೀಗೆಮಾಡಿ ಫ್ರೆಂಚರ ಮುಂದಣಸೇನಾಪಂಗ್ತಿಯಲ್ಲಿ ನುಗ್ಗಿದರು. ಆದರೆ ಫ್ರೆಂಚರು ಹಿಂದೆಗೆಯದೆ ಯುದ್ಧಮಾಡಿ ಶತ್ರುಗಳನ್ನು ಹಿಂದಕ್ಕೋಡಿಸಿದರು. ವಾಸ್‌ಜೆಸ್ಸಿನಕಡೆಯಲ್ಲಿ ಫ್ರೆಂಚರು ಬಹಳ ಮುಂದಕ್ಕೆ ನುಗ್ಗಿಹೋಗಿರುವರು. ಅಲ್ಲಿ ಹಲವು ಯುದ್ಧಸಾಮಗ್ರಿಗಳನ್ನೂ ೭೦೪ ಮಂದಿ ಸೈನಿಕರನ್ನೂ ಅನೇಕಮಂದಿ ಗಾಯಗೊಂಡವರನ್ನೂ ಒಬ್ಬ ಸೇನಾಧಿಪತಿಯನ್ನೂ, ೧೪ ಮಂದಿ ಸೈನಿಕೋದ್ಯೋಗಿಗಳನ್ನೂ ಸೆರೆಹಿಡಿದುಕೊಂಡರು. ಸರ್ ಜಾನ್ ಫ್ರೆಂಚರವರ ಅಪೇಕ್ಷೆಯಮೇರೆ ಮುಖ್ಯಮಂತ್ರಿ ಅಸ್ಕ್ವಿತ್‌ರವರೂ ಅರ್ಲ್‌ಕಿಚನರ್‌ರವರೂ ಸಹ ಯುದ್ಧರಂಗಕ್ಕೆ ಹೋಗಿ ಕಳೆದ ತಾ|| ೬ ರಿಂದ ೧೦ ರ ವರೆಗೂ ಅಲ್ಲೇ ಇದ್ದು ಎಲ್ಲಕಡೆಗೂ ಹೋಗಿ ನಾನಾಸೈನ್ಯಗಳ ಸ್ಥಿತಿಗತಿಯನ್ನೂ ವ್ಯೂಹರಚನೆಯನ್ನೂ ಪರೀಕ್ಷಿಸಿಕೊಂಡುಬಂದರು; ಬೆಲ್ಜಿಯಂ ರಾಜರೊಡನೆಯೂ ಸಂಭಾಷಿಸಿದರು; ಭಾರತೀಯ ಅಶ್ವಸೈನ್ಯವನ್ನು ಪರಾಮರಿಸಿದರು. ಕಲೆ ಪಟ್ಟಣದಲ್ಲಿ ಅಸ್ಕ್ವಿತ್ ಮಂತ್ರಿಯವರು ಲಾರ್ಡ್ ಕ್ರ್ಯೂರವರು, ಅರ್ಲ್‌ಕಿಚನರ್‌ರವರು, ಬಾಲ್ಫರ್‌ರವರು, ಸರ್ ಜಾನ್ ಫ್ರೆಂಚ್‌ರವರು ಫ್ರೆಂಚ್‌ದೇಶದ ಮಂತ್ರಿವರ್ಗದವರೂಸಹ ಸೇರಿ ಆಲೋಚನೆಗಳನ್ನು ನಡೆಯಿಸಿಕೊಂಡುಬಂದರು. ಇನ್ನುಮುಂದೆ ಜರ್ಮನರು ಪಶ್ಚಿಮರಣರಂಗದಲ್ಲಿ ಭೀಕರಯುದ್ಧಗಳನ್ನು ಪ್ರಬಲವಾಗಿ ನಡೆಯಿಸಬೇಕೆಂದು ಲಕ್ಷಾಂತರ ಸೈನ್ಯಗಳನ್ನು ಕಳುಹಿಸುತ್ತಿರುವರು.

ಬೆಲ್ಜಿಯಮ್ಮಿನಲ್ಲಿರುವ ಅರ್‍ರಾಸಿಗೆ ಉತ್ತರದಲ್ಲಿ ಇಂಗ್ಲೀಷ್ ಫ್ರೆಂಚ್ ಸೈನ್ಯಗಳಮೇಲೆ ಜರ್ಮನ್ ಯುವರಾಜರೇ ಸ್ವತಃ ನಿಂತು ಯುದ್ಧಕಾರ್ಯಗಳನ್ನು ವೀರಾವೇಶದಿಂದ ನಡೆಯಿಸಿ ವಿಷವಾಯು ಗೋಳಗಳನ್ನೂ ದೊಡ್ಡ ಫಿರಂಗಿಗುಂಡುಗಳನ್ನೂ ಬಹಳವಾಗಿ ಹೊಡೆದರು. ಆದರೆ ಮಿತ್ರಮಂಡಲಿ ಸೈನ್ಯಗಳು ಅದಕ್ಕೆ ಸರಿಯಾಗಿ ಪ್ರತಿಕ್ರಿಯೆಯನ್ನು ಮಾಡಿ ಶತ್ರುಗಳನ್ನು ಸೋಲಿಸಿ ಹಿಂದಕ್ಕೋಡಿಸಿಬಿಟ್ಟರು.

ಪೂರ್ವರಣರಂಗ.

ಪೋಲಂಡಿನ ಆಗ್ನೇಯಭಾಗದಲ್ಲಿ ಬಹಳ ಕ್ರೂರವಾದ ಯುದ್ಧಗಳು ನಡೆದಿರುವುವು. ಕ್ರಾಸ್ನಿಕ್ಕಿನ ಉಭಯಪಾರ್ಶ್ವಗಳಲ್ಲೂ ಬಹಳ ತೀಕ್ಷ್ಣವಾದ ಯುದ್ಧಗಳು ನಡೆದಿರುವುವು. ರಷ್ಯನರಿಗೆ ನೂತನಸೈನ್ಯಗಳು ಸಹಾಯಕ್ಕೆ ಬಂದುದರಿಂದ ಕಳೆದ ತಾ|| ೫ ರಾರಭ್ಯ ಅವರಿಗೆ ಜಯಲಾಭವೂ ಶತ್ರುಗಳ ಹಿಮ್ಮೆಟ್ಟುವಿಕೆಯೂ ನಷ್ಟವೂ ಕಾಣಬರುತ್ತಿದೆ. ವಿಲ್ಕೋಜಿನಬಳಿಯಲ್ಲಿ ನಡೆದ ಯುದ್ಧದಲ್ಲಿ ಜರ್ಮನರಿಗೆ ಬಹಳ ನಷ್ಟವಾಯಿತು; ೨೦೦೦ ಜರ್ಮನರು ರಷ್ಯನರಿಗೆ ಸೆರೆಸಿಕ್ಕಿದರು. ಲೂಬ್ಲಿನ್ ಪಟ್ಟಣವನ್ನು ಹಿಡಿಯಬೇಕೆಂದು ಶತ್ರುಸೈನ್ಯಗಳು ಅದರಕಡೆಗೆ ವೀರಾವೇಶದಿಂದ ನುಗ್ಗಿಹೋಗುತ್ತಿದ್ದರು. ಈಶಾನ್ಯದಕಡೆಯಿಂದ ಲೂಬ್ಲಿನ್ನನ್ನು ಮುತ್ತಬೇಕೆಂದು ಜರ್ಮನ್ ಆಸ್ಟ್ರಿಯನ್ ಸೈನ್ಯಗಳು ಬಹಳ ಸಾಹಸದಿಂದ ಯುದ್ಧಮಾಡುತ್ತ ನುಗ್ಗಿ ರಷ್ಯನರ ಜೂಣಿಯ ಸೇನಾಪಂಗ್ತಿಯಮೇಲೆ ಬಿದ್ದರು. ಅಷ್ಟರಲ್ಲಿ ರಷ್ಯನರು ಬಹಳ ಕ್ರೋಧಾವೇಶದಿಂದ ಕಾದು ಶತ್ರುಗಳನ್ನು ಹಿಮ್ಮೆಟ್ಟಿಸಿಬಿಟ್ಟರು. ತಾ|| ೫ ರಿಂದ ೧೨ ರ ವರೆಗೆ ರಷ್ಯನರು ನಡೆಯಿಸಿದ ಯುದ್ಧದಲ್ಲಿ ಆಸ್ಟ್ರಿಯನ್ನರಕಡೆ ೧೩ ಸಾವಿರಮಂದಿಗಳು ಹತರಾಗಿರುವರಂತೆ. ಮೂರೇಮೂರು ದಿನದಲ್ಲಿ ಜರ್ಮನ್ ಆಸ್ಟ್ರಿಯನ್ ಸೇನೆಗಳಲ್ಲಿ ೧ ಅಕ್ಷೋಹಿಣಿ ಸೇನೆಯು ಹತವಾಗಿರುವುದೆಂದು ಟೇಲಿಗ್ರಾಫ್ ಎಂಬ ಪತ್ರಿಕೆಯ ಪೆಟ್ರೋಗ್ರೇಡ್ ವಿಲೇಖಕನು ಬರೆದಿರುವನು. ಇದರಿಂದ ರಷ್ಯನರ ಪ್ರಾಬಲ್ಯವು ಈಗ ಹೇಗಿರುವುದೆಂಬುದು ಸ್ವಲ್ಪಮಟ್ಟಿಗೆ ಗೊತ್ತಾಗುವುದು.

ಇಟಲಿ.

ಇಟಲಿಯವರು ತೀವ್ರವಾದ ಯುದ್ಧಗಳನ್ನು ಅಖಂಡವಾಗಿ ನಡೆಯಿಸುತ್ತಲೇ ಇದ್ದಾರೆ. ಫಲಿತಾಂಶಗಳು ಸಮೃದ್ಧವಾಗಿ ಆಗುವುದು ಕಷ್ಟವಾಗಿದೆ. ಅವರು ಪರ್ವತಪ್ರಾಂತಗಳಲ್ಲಿ ಯುದ್ಧಮಾಡಬೇಕಾಗಿರುವುದೇ ಇದಕ್ಕೆ ಕಾರಣ. ಕೆಲವುಕಡೆ ಆಸ್ಟ್ರಿಯನ್ ಸೈನಿಕರು ತಾವು ಶರಣಾಗತರಾಗುವೆವೆಂಬುದನ್ನು ಸೂಚಿಸುವುದಕ್ಕಾಗಿ ತಮ್ಮ ಎರಡು ಕೈಗಳನ್ನೂ ಮೇಲಕ್ಕೆತ್ತುವುದನ್ನೂ ನೆಲದಮೇಲೆ ಅಡ್ಡಬಿದ್ದುಕೊಳ್ಳುವುದನ್ನೂ ಮಾಡಿ, ಅದನ್ನು ಕಂಡು ಇಟಲಿಯವರು ಮುಂದಕ್ಕೆ ಸಾಗಿಬಂದಾಗ ಹಿಂಗಡೆಯಿದ್ದ ಆಸ್ಟ್ರಿಯನ್ ಸೈನಿಕರು ಫಿರಂಗಿಗುಂಡುಗಳ ಮಳೆಯನ್ನು ಸುರಿಸಿ ಮೋಸದ ಯುದ್ಧವನ್ನು ಮಾಡಿರುತ್ತಾರೆ. ಒಂದೆರಡುಕಡೆ ಆದ ಈ ತೆರನನ್ನು ತಿಳಿದುಕೊಂಡು ಇಟಲಿಯವರು ಎಚ್ಚತ್ತು ತಕ್ಕ ಪ್ರತಿಕ್ರಿಯೆಗಳನ್ನು ಮಾಡುತ್ತಲಿದ್ದಾರೆ. ಪಿಜೊವೋಸ್ಸನೋ ಪ್ರಾಂತಗಳಿಗೆ ಶತ್ರುಗಳು ದೊಡ್ಡ ಸೇನೆಯನ್ನು ತಂದು ಇದಿರಿಸಿದರು. ಇಟಲಿಯವರು ಜಗ್ಗಲಿಲ್ಲ. ಇದುವರೆಗೆ ಆಸ್ಟ್ರಿಯನ್ನರು ಕಳೆದುಕೊಂಡಿರುವ ಯಾವುದೊಂದು ಸ್ಥಲದಲ್ಲಿ ಲೇಶಭಾಗವನ್ನೂ ಅವರು ಮರಳಿ ವಶಪಡಿಸಿಕೊಳ್ಳಲಾಗಲಿಲ್ಲ. ಈಚೆಗೆ ಇಟಲಿಯವರು ೬೫೫೦ ಅಡಿಗಳ ಉನ್ನತವಾದ ಬಲ್ರಿಂಕೋಫೇಲ್ ಎಂಬ ಶಿಖರವನ್ನು ಹಿಡಿದುಕೊಂಡರು. ಈ ಪರ್ವತಶಿಖರವು ಬಹು ಕಡಿದಾದುದು. ಹತ್ತುವುದಕ್ಕೆ ಅನುವು ಇಲ್ಲ. ಇಂತಹ ಜಾಗವನ್ನು ೧೧ ಮಂದಿ ಇಟಾಲಿಯನ್ನರು ಒಬ್ಬರನಡುವಿಗೊಬ್ಬರಂತೆ ಹಗ್ಗವನ್ನು ಕಟ್ಟಿಕೊಂಡು ೧ ಫಿರಂಗಿಯಸಮೇತ ಸಾಹಸದಿಂದ ಹತ್ತಿ ಸಾಯಂಕಾಲದಹೊತ್ತಿಗೆ ಶಿಖರವನ್ನು ಸೇರಿದರು. ಅಲ್ಲಿದ್ದ ಶತ್ರುಗಳಮೇಲೆ ಸನೀನುಯುದ್ಧವನ್ನು ಮಾಡಿ ಒಬ್ಬ ಸೇನಾನಿಯ ಹೊರತು ಅಲ್ಲಿದ್ದವರನ್ನೆಲ್ಲ ಕೊಂದರು. ಇಟಲಿಯವರಿಗೆ ಉತ್ತರದಲ್ಲಿ ಆಸ್ಟ್ರಿಯಾದ ಮುಖದ್ವಾರದಂತಿರುವ ಟ್ರಾಲಿಸ್‌ಪಟ್ಟಣವನ್ನೂ, ದಕ್ಷಿಣದಲ್ಲಿ ಆಸ್ಟ್ರಿಯಾದ ಮುಖ್ಯಾಯುಧಶಾಲೆಯಂತಿರುವ ಟ್ರೆಸ್ಟಿಯನ್ನೂ ಹಿಡಿದುಕೊಳ್ಳಬೇಕೆಂಬ ಆಶಯವು ಮುಖ್ಯವಾಗಿರುತ್ತದೆ. ಇಸಾಂಜೋ ಪ್ರಾಂತ್ಯದಲ್ಲಿ ತೀಕ್ಷ್ಣ ಯುದ್ಧಗಳಾಗುತ್ತಿವೆ. ಕಾರ್ನೋಪಾದಪರ್ವತಪ್ರಾಂತ್ಯದಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ಇಟಲಿಯವರು ೧೪೦೦ ಮಂದಿ ಶತ್ರುಸೈನಿಕರನ್ನು ಸೆರೆಹಿಡಿದರು. ಆಸ್ಟ್ರಿಯನ್ನರ ವಿಮಾನನಿರ್ಮಾಣಾಲಯದಮೇಲೂ ಲೋಹಮಾರ್ಗದ ನಿಲ್ದಾಣದಮೇಲೂ ಇಟಲಿ ವೈಮಾನಿಕರು ಸಿಡಿಮದ್ದುಗಳನ್ನು ಹಾಕಿ ಸುರಕ್ಷಿತವಾಗಿ ಬಂದಿರುವರು. ಟ್ರೆಸ್ಟಿಪಟ್ಟಣವನ್ನು ಆಕ್ರಮಿಸಿಕೊಳ್ಳುವುದಕ್ಕೆ ಮೊದಲು ಅದರ ಪಕ್ಕದಲ್ಲಿರುವ ಕಾರ್ಜೊ ಬೆಟ್ಟಗಳನ್ನಾಕ್ರಮಿಸಿಕೊಳ್ಳಬೇಕೆಂಬುದು ಇಟಲಿಯನ್ನರ ಯೋಚನೆ. ಇದರಮೇಲೆ ಫಿರಂಗಿಗಳನ್ನಿಟ್ಟು ಹೊಡೆದರೆ ಟ್ರೆಸ್ಟಿಯು ಹಸ್ತಗತವಾದಂತೆಯೇ. ಅದು ಕಾರಣ ಇಟಲಿಯವರು ಆ ಬೆಟ್ಟವನ್ನು ಹಿಡಿಯಲು ಸಾಹಸಪಡುತ್ತಿದ್ದಾರೆ. ಅತ್ತ ಆಸ್ಟ್ರಿಯನ್ನರು ಇಟಲಿಯನ್ನರ ಏಟಿನಿಂದ ಟ್ಮಿನೊ ಪಟ್ಟಣವನ್ನು ಬಿಟ್ಟುಹೋಗುತ್ತಿರುವರೆಂದೂ ಇಷ್ಟರಲ್ಲೇ ಅದು ಇಟಲಿಯವರ ವಶವಾಗುವುದರಲ್ಲಿದೆಯೆಂದೂ ಸುದ್ದಿ ಬಂದಿದೆ.

ತುರ್ಕಿ.

ಇಂಗ್ಲೀಷರ ಒಂದು ಹಡಗು ತುರ್ಕಿಗೆಸೇರಿದ ಸ್ಮಿರ್ನಾಕೋಟೆಗಳಮೇಲೂ, ಅಯಿವಾಲೀಕೋಟೆಗಳಮೇಲೂ ಸಿಡಿಮದ್ದುಗಳನ್ನು ಹಾಕಿತು. ಗಲ್ಲಿಪೋಲಿದ್ವೀಪಕಲ್ಪದಲ್ಲಿನ ರಣರಂಗಕ್ಕೆ ಎನ್ವರ್‌ಪಾಷಾರವರೇ ಸೈನ್ಯಾಧಿಪತಿಗಳಾಗಿ ಬಂದಿದ್ದಾರೆ. ಇದುವರೆಗೆ ಅಲ್ಲಿದ್ದ ಸೇನಾಪತಿಗೆ ಏಟುಬಿದ್ದು ಹಿಂದಿರುಗಿರುವನಂತೆ. ಆ ಪ್ರಾಂತದಲ್ಲಿ ಕಳೆದ ತಾ|| ೨೮ ರಿಂದ ೪-೫ ದಿನಗಳವರೆಗೆ ಆದ ಯುದ್ಧದಲ್ಲಿ ತುರ್ಕಿಯವರಕಡೆ ೫೧೦೫ ಮಂದಿ ಮೃತರಾದರೆಂದೂ, ೧೫೦೦೦ ಜನರು ಗಾಯಗೊಂಡರೆಂದೂ, ಅವರ ಕಡೆಯ ೫೧೯ ತುಪಾಕಿಗಳೂ, ೧೨೬೪೦೦ ತೋಟಾಗಳೂ, ೧೦೦ ಸಿಡಿಮದ್ದುಗಳೂ ಇಂಗ್ಲೀಷರಿಗೆ ಸಿಕ್ಕಿರುವುವೆಂದೂ ಪ್ರಕಟವಾಗಿದೆ.

ತಾ|| ೫ ರಲ್ಲಿ ಇದುವರೆಗೆ ಯಾವಾಗಲೂ ಹೊಡೆಯದಿದ್ದಷ್ಟು ತೀವ್ರವಾಗಿ ತುರ್ಕಿಯವರು ಫಿರಂಗಿಗುಂಡುಗಳನ್ನು ಹಾರಿಸಿದರೆಂದೂ, ನಮ್ಮಕಡೆಯ ಸೈನಿಕರೆಲ್ಲಾ ಒಟ್ಟಿಗೆ ಸೇರಿ ಅವರಮೇಲೆ ಯುದ್ಧಕ್ಕೆ ನಿಲ್ಲುವುದರೊಳಗಾಗಿ ಬಹುಶಃ ನಮ್ಮಗಳಮೇಲೆ ೫೦೦೦ ದೊಡ್ಡ ಫಿರಂಗಿಗುಂಡುಗಳನ್ನು ಹಾರಿಸಿರಬಹುದೆಂದೂ, ಕಡೆಗೆ ಶತ್ರುಗಳು ವಿಪರೀತ ನಷ್ಟಪಟ್ಟು ಹಿಮ್ಮೆಟ್ಟಿಹೋದರೆಂದೂ ಇಂಗ್ಲೀಷ್ ಸೇನಾಪತಿಯಾದ ಇಯಾನ್ ಹ್ಯಾಮಿಲ್ಟನ್‌ರವರು ವರದಿಮಾಡಿದ್ದಾರೆ.

ಬಾಸ್ಪರಸ್ಸಿನ ಹತ್ತಿರ ರಷ್ಯಾದವರ ಯುದ್ಧದ ಹಡಗುಗಳು ಒಂದು ತುರ್ಕಿ ಸಬ್‌ಮೆರೀನನ್ನು ಮುತ್ತಲು, ಅದು ಟಾರ್ಪೆಡೋ ದೋಣಿಯೊಂದನ್ನು ಅಟ್ಟಿತು. ಅಷ್ಟರಲ್ಲಿ ರಷ್ಯನ್ ಹಡಗುಗಳ ಗುಂಡಿನೇಟು ಬಲವಾಗಲು, ಅದು ತಪ್ಪಿಸಿಕೊಂಡೋಡಿತು.

ಒಂದು ದೊಡ್ಡ ತುರ್ಕಿಸೇನೆಯು ಕಳೆದ ತಾ|| ೨ ರಲ್ಲಿ ಕೆಲವು ಫಿರಂಗಿಗಳ ಸಮೇತ ಬಂದು ಏಡನ್ನಿನಪ್ರಾಂತದ ಹಿಂಟರ್‌ಲಾಂಡಿನಲ್ಲಿರುವ ಲಾಹೋಜ್‌ಸಂಸ್ಥಾನದಮೇಲೆ ಬೀಳುವುದಕ್ಕುಪಕ್ರಮಿಸಿತು. ಅಲ್ಲಿನ ಸುಲ್ತಾನರು ಕೋರಿಕೊಂಡಪ್ರಕಾರ ಇಂಗ್ಲೀಷರು ಏಡನ್ನಿನಿಂದ ತಮ್ಮ ಕೆಲವು ಸೈನ್ಯವನ್ನು ಕಳುಹಿಸಿಕೊಟ್ಟರು. ಇವರು ಹೋಗಿ ತುರ್ಕಿಸೈನಿಕರ ಮೇಲೆಬಿದ್ದು ಯುದ್ಧಮಾಡಿದರು. ಮತ್ತೊಂದುಸೈನ್ಯವೂ ಕಳುಹಿಸಲ್ಪಟ್ಟಿತು. ತುರ್ಕಿಸೇನೆಯು ತಾ|| ೫ ರಲ್ಲಿ ಹಿಂದೆಗೆದು ಹೊರಟುಹೋಯಿತು. ಇಂಗ್ಲೀಷ್‌ಸೈನ್ಯಗಳು ಬಿಸಿಲಿನ ಉಪಟಲದಿಂದಲೂ ನೀರಿನ ಕೊರತೆಯಿಂದಲೂ ಏಡನ್ನಿಗೆ ಹೋಗಿಬಿಟ್ಟುವು. ಈ ಯುದ್ಧದಲ್ಲಿ ಇಂಗ್ಲೀಷರಕಡೆ ಮೂವರು ಸೈನಿಕೋದ್ಯೋಗಿಗಳಿಗೆ ಗಾಯಗಳು ತಗುಲಿದುವು. ಒಬ್ಬ ತುರ್ಕಿ ಸೈನಿಕೋದ್ಯೋಗಿಯನ್ನೂ ೧೩ ಮಂದಿ ಸೈನಿಕರನ್ನೂ ನಮ್ಮವರು ಸೆರೆಹಿಡಿದು ತಂದರು. ಇದರಿಂದ ಯುದ್ಧಾಗ್ನಿಸ್ಫುರಣವು ಭರತಖಂಡದ ಎಲ್ಲೆಕಟ್ಟಿಗೂ ಬಂದಿತೆಂದು ಹೇಳಬಹುದಾಯಿತು.

ಜಲಯಾನಗಳು.

ಕೆಲ ಆಂಗ್ಲನಾವಿಕರು ಒಂದು ಹಡಗಿನಲ್ಲಿ ಹತ್ತಿ ಡಾನ್ಯೂಬ್‌ನದಿಯಲ್ಲಿ ಹೋಗಿ ಅಲ್ಲಿದ್ದ ಆಸ್ಟ್ರಿಯನ್ ಹಡಗುಗಳಿಗೆ ಗುಂಡಿನೇಟಿನಿಂದ ಸ್ವಲ್ಪ ನಷ್ಟವನ್ನುಂಟುಮಾಡಿ ಒಂದು ಹಡಗನ್ನು ಟಾರ್ಪೆಡೋವಿನಿಂದ ಹೊಡೆಯಿಸಿದರು. ಅಷ್ಟರಲ್ಲಿ ಆಸ್ಟ್ರಿಯನ್ನರ ಉಳಿದ ಹಡಗುಗಳೆಲ್ಲಾ ಅವರ ದಡಕ್ಕೆ ಹೋಗಿ ಸೇರಿಕೊಂಡುವು. ಈ ಸಂದರ್ಭದಲ್ಲಿ ಆಂಗ್ಲನಾವಿಕರಿಗೆ ಶತ್ರುಗಳ ಬಹಳ ಸಾಮಗ್ರಿಗಳು ದೊರೆದುವು. ಬೊಲೋಗ್ನಿಗೆ ೬ ಮೈಲಿ ದೂರದಲ್ಲಿ ಒಂದು ಫ್ರಾನ್ಸ್ ಯುದ್ಧನೌಕೆಯು ಪರಿಶೋಧಿಸುತ್ತಿರುವಾಗ ಅಲ್ಲಿ ಒಂದು ಜರ್ಮನ್ ಸಬ್‌ಮೆರೀನಿನ ಮೇಲಣ ಕೊಂಬು ಕಾಣಿಸಿತು. ಕೂಡಲೇ ಫ್ರೆಂಚ್ ಹಡಗು ಅದರಮೇಲೆ ೨೫ ಫಿರಂಗಿಗುಂಡುಗಳನ್ನು ಹೊಡೆಯಲು ಜರ್ಮನ್ ಸಬ್‌ಮೆರೀನು ಒಡೆದು ನೀರಿನಲ್ಲಿ ಮುಳುಗಿತು. ಜರ್ಮನರಕಡೆಯ ಎಮ್ಡನ್‌ಜಾತಿಯ ಕೋನಿಂಗ್ಸ್‌ಬರ್ಗ್ ಎಂಬ ಕ್ರೂಯಿಜರು ಫಿಜಿ ನದಿಯಲ್ಲಿ ಸಿಕ್ಕಿ ಬಂದೀಕೃತವಾಗಿಹೋಗಿರುವುದೆಂಬ ಸಂಗತಿಯು ನಮ್ಮ ವಾಚಕರ ನೆನಪಿನಲ್ಲಿರಬಹುದು. ಈಚೆಗೆ ಮಿತ್ರಮಂಡಲಿಯವರ ೨ ಯುದ್ಧದಹಡಗುಗಳು ಆ ನದಿಗೆಹೋಗಿ ಕೋನಿಂಗ್ಸ್‌ಬರ್ಗಿನೊಡನೆ ಯುದ್ಧಮಾಡಿದುವು. ಮಗ್ಗುಲ ಅಡವಿಯಮೇಲಿಂದ ಹೋಗಿ ವಿಮಾನಗಳು ಆ ಕ್ರೂಯಿಜರಿನ ಮೇಲೆ ಸಿಡಿಮದ್ದುಗಳನ್ನು ಹಾಕಿದುವು. ಇದರಿಂದ ಅದು ಸುಟ್ಟು ಧ್ವಂಸವಾಗಿ ಕಳೆದ ತಾ|| ೧೧ ರಲ್ಲಿ ಮುಳುಗಿಹೋಯಿತು. ಮಿತ್ರಮಂಡಲಿಯವರ ಹಡಗುಗಳಲ್ಲಿ ೪ ಮಂದಿ ಸತ್ತು ೬ ಮಂದಿ ಗಾಯಗೊಂಡರು. ಜರ್ಮನ್ ಪೂರ್ವಆಫ್ರಿಕಾದ ಕಡೆ ಉಳಿದಿದ್ದ ಜರ್ಮನರ ಇದೊಂದು ಹಡಗೂ ನಾಶವಾದಂತಾಯಿತು.

ಜರ್ಮನ್ ಸಬ್‌ಮೆರೀನುಗಳ ಹಾವಳಿ.

ಜರ್ಮನ್ ಸಬ್‌ಮೆರೀನುಗಳು ನಾರ್ವೇದೇಶದ ಮೂರು ಹಡಗುಗಗನ್ನು ಮುಳುಗಿಸಿದುವು. ಅವುಗಳಲ್ಲೊಂದರಲ್ಲಿ ನಾವಿಕರಾಗಿದ್ದ ೮ ಮಂದಿ ಜರ್ಮನರನ್ನು ದಡಕ್ಕೆ ತಂದಿಳಿಸಿದರು. ಮತ್ತೊಂದು ಸಬ್‌ಮೆರೀನು ಮತ್ತೊಂದು ಹಡಗನ್ನು ಟಾರ್ಪೆಡೋ ಬಡಿತದಿಂದ ಮುಳುಗಿಸಿತು. ಅದರಲ್ಲಿದ್ದ ೨೦ ಮಂದಿ ಅಮೇರಿಕನ್ನರು ಸಮುದ್ರದಪಾಲಾದರು. ಮತ್ತೊಂದು ಹಡಗು ಸಕ್ಕರೆಯನ್ನು ತುಂಬಿಕೊಂಡು ಮಾಂಚಸ್ಟರಿಗೆ ಹೋಗುತ್ತಿರಲು ಅದನ್ನು ಟಾರ್ಪೆಡೋ ಬಡಿತದಿಂದ ಮುಳುಗಿಸಿದರು. ನಾವಿಕರು ೨೦ ಮಂದಿ ಬದುಕಿದರು. ಪಶ್ಚಿಮಆಫ್ರಿಕಾದಿಂದ ಅಂಚೆಯನ್ನು ತರುತ್ತಿದ್ದ ಒಂದು ಹಡಗು ಎಷ್ಟು ಸಾಹಸಮಾಡಿ ಓಡಲು ಪ್ರಯತ್ನಿಸಿದರೂ ಜರ್ಮನ್ ಸಬ್‌ಮೆರೀನ್ ಹೊಡೆತದಿಂದ ಮುಳುಗಿಹೋಯಿತು. ಅರ್ಜಂಟೀನಾದಿಂದ ಮುಸುಕಿನ ಜೋಳವನ್ನು ತುಂಬಿಕೊಂಡು ಹೋಗುತ್ತಿದ್ದ ಒಂದು ಹೊಗೆ ಹಡಗನ್ನೂ ಇನ್ನೆರಡು ಇಂಗ್ಲೀಷ್‌ಹಡಗುಗಳನ್ನೂ ಇನ್ನೊಂದು ಸ್ಕಾಟ್ಲೆಂಡ್ ಹಡಗನ್ನೂ ಸಹ ಜರ್ಮನರ ಸಬ್‌ಮೆರೀನುಗಳು ಮುಳುಗಿಸಿವೆ. ಸ್ಕಾಟ್‌ಲಾಂಡ್ ಹಡಗನ್ನು ಮುಳುಗಿಸಿದ ಸಬ್‌ಮೆರೀನುಗಳು ಒಂದೊಂದು ಅರ್ಧ ಫರ್ಲಾಂಗಿನ ಉದ್ದವಾಗಿಯೂ ಬಹಳ ವೇಗದಿಂದ ಓಡತಕ್ಕವಾಗಿಯೂ ಇದ್ದುವಂತೆ. ಸಕ್ಕರೆಯನ್ನು ತುಂಬಿಕೊಂಡುಹೋಗುತ್ತಿದ್ದ ವೆಲ್ಬರಿ ಎಂಬ ಮತ್ತೊಂದು ಹಡಗನ್ನು ಜರ್ಮನರ ಸಬ್‌ಮೆರೀನು ಫಿರಂಗಿಗುಂಡಿನೇಟಿನಿಂದ ಮುಳುಗಿಸಿಬಿಟ್ಟಿತು. ಮೇಜರ್‌ಹೆಡ್ಡಿನ ಬಳಿಯಲ್ಲಿ ಇಟಲಿಯವರ ಒಂದು ಹಡಗು ಟಾರ್ಪೆಡೋ ಬಡಿತದಿಂದ ಮುಳುಗಿಸಲ್ಪಟ್ಟಿತು. ಒಳಗಿದ್ದವರಲ್ಲಿ ೯ ಜನರು ಮುಳುಗಿದರು. ಅರ್ಮೆನಿಯನ್ ಎಂಬ ಇಂಗ್ಲೀಷ್ ಹಡಗನ್ನು ಜರ್ಮನ್ ಸಬ್‌ಮೆರೀನು ಕಾರ್ನ್‌ವೆಲ್ ತೀರದಲ್ಲಿ ಟಾರ್ಪೆಡೋ ಬಡಿತದಿಂದ ಮುಳುಗಿಸಿತು. ಒಳಗಿದ್ದವರಲ್ಲಿ ೨೯ ಜನರು ಸತ್ತರು. ಅವರಲ್ಲಿ ಕೆಲವರು ಗುಂಡಿನೇಟಿನಿಂದಲೂ ಕೆಲವರು ಸಮುದ್ರದೊಳಕ್ಕೆ ಬಿದ್ದೂ ಸತ್ತವರಾಗಿದ್ದರು. ಜರ್ಮನರ ಒಂದು ಸಬ್‌ಮೆರೀನು ಸಮುದ್ರದಲ್ಲಿ ಮುಳುಗಿಸಲ್ಪಟ್ಟು ೩೬ ಗಂಟೆಗಳಾದಬಳಿಕ ಮೇಲಕ್ಕೆ ಅದನ್ನು ತೆಗೆಯಲಾಗಿ ಒಳಗಿದ್ದವರಲ್ಲಿ ಒಬ್ಬನು ಮಾತ್ರ ಸತ್ತು ಉಳಿದವರೆಲ್ಲಾ ಬದುಕಿದ್ದರು. ಬಾಲ್ಟಿಕ್ ಸಮುದ್ರದಲ್ಲಿ ೨ ಟಾರ್ಪೆಡೋ ಏಟುಗಳಿಂದ ಜರ್ಮನರ ಒಂದು ಯುದ್ಧದಹಡಗು ಮುಳುಗಿಸಲ್ಪಟ್ಟಿರುವುದು. ಇದನ್ನೆಲ್ಲಾ ನೋಡಲು ಮೊನ್ನೆವಾರದಲ್ಲಿ ಸಬ್‌ಮೆರೀನುಗಳ ಹಾವಳಿಯು ವಿಶೇಷವೆಂದು ಗೊತ್ತಾಗುವುದು. ಕಳೆದವಾರದಲ್ಲಿ ಇವುಗಳ ಹಾವಳಿಯು ಬಹಳ ಕಡಿಮೆ.

ಕೈಜರರ ಪ್ರತಿಜ್ಞಾ ಭಾಷಣ.

ತಟಸ್ಥದೇಶೀಯನೊಬ್ಬನು ಜರ್ಮನಿ ರಾಜಧಾನಿಗೆ ಹೋಗಿದ್ದು ಅಲ್ಲಿನ ವಿಶೇಷವನ್ನು ತಿಳಿದುಬಂದು ಪ್ರಕಟಿಸಿರುವುದರಲ್ಲಿ ಕಳೆದ ವಾರದೊಳಗೆ ಬರ್ಲಿನ್‌ನಗರದಲ್ಲಿ ಒಂದು ಸೈನಿಕೋತ್ಸವವು ನಡೆಯಿತೆಂದೂ, ಆಗ ಅಧಿಕಾರಿಗಳೂ ಪ್ರಜೆಗಳೂ ಸಂತೋಷದಿಂದ ಕೇಕೆಹಾಕುತ್ತಿದ್ದರೆಂದೂ, ಆ ಮಧ್ಯೆ ಜರ್ಮನ್ ಚಕ್ರವರ್ತಿಯವರು ಉಪನ್ಯಾಸಮಾಡಿ, ಶೀತಕಾಲದಲ್ಲಿ ನಮಗೆ ಯುದ್ಧಮಾಡುವ ಪ್ರಮೇಯವೇ ಬೀಳುವುದಿಲ್ಲವೆಂದೂ ಅಕ್ಟೋಬರ್ ತಿಂಗಳಲ್ಲಿ ಯುದ್ಧವು ಮುಗಿದುಹೋಗುವುದೆಂದೂ ಉಪನ್ಯಸಿಸಿದರೆಂದೂ, ಕಳೆದ ವರ್ಷದ ಶೀತಕಾಲದಲ್ಲಿ ಯುದ್ಧಮಾಡಿದಂತೆಯೇ ಮುಂದಿನವರ್ಷವೂ ಯುದ್ಧಮಾಡಬೇಕಾಗುವುದೆಂದು ಭಯಪಡುತ್ತಿದ್ದ ಜರ್ಮನ್‌ಪ್ರಜೆಗಳಿಗೆ ಕೈಜರರ ಈ ಮಾತಿನಿಂದ ಸ್ವಲ್ಪ ಸಮಾಧಾನವುಂಟಾಗಲು ಕಾರಣವಾಯ್ತೆಂದೂ ಬರೆದಿರುತ್ತಾನೆ. ಕೈಜರರ ಈ ಭಾಷಣವು ನಿರರ್ಥಕವಾದುದಲ್ಲ. ಇದರಲ್ಲಿ ನಾನಾರ್ಥಗಳಿವೆ. ಇಷ್ಟರಲ್ಲೇ ತಾವು ಮಹಾಪ್ರಯತ್ನವನ್ನು ಮಾಡಿ ಸರ್ವಸನ್ನಾಹದಿಂದ ಪೂರ್ವರಣರಂಗದಲ್ಲಿನಂತೆ ಪಶ್ಚಿಮರಣರಂಗದಲ್ಲಿಯೂ ಜಯಭೇರಿಯನ್ನು ಹೊಡೆಯಿಸಿ ತಮ್ಮಶತ್ರುಗಳೇ ಸಂಧಿಗೆ ಬರುವಂತೆ ಮಾಡಿ ಯುದ್ಧವನ್ನು ಪರಿಸಮಾಪ್ತಿಗೊಳಿಸುವರಾಗಿದ್ದೇವೆಂದು ಆತ್ಮಪೌರುಷವನ್ನು ಕೊಚ್ಚಿಕೊಂಡು, ಶತ್ರುಗಳ ಎದೆಯನ್ನು ತಲ್ಲಣಗೊಳಿಸಬೇಕೆಂಬುದೊಂದು ಇದರ ಉದ್ದೇಶವು. ಮತ್ತೂ ಜರ್ಮನಿದೇಶದಲ್ಲಿ ಪ್ರತಿಕುಟುಂಬದಲ್ಲೂ ಗಂಡುಸರೆಲ್ಲಾ ಯುದ್ಧಕ್ಕೆ ಹೊರಡಿಸಲ್ಪಟ್ಟು ಹೆಂಗುಸರು ಮಕ್ಕಳುಗಳು ಮಾತ್ರ ಮನೆಗಳಲ್ಲಿ ಉಳಿದಿರುತ್ತಾರೆ. ಎಲ್ಲ ವಿಧದ ಉದ್ಯೋಗಗಳೂ ಪಾಳಾಗಿರುತ್ತವೆ. ಇಂಥ ಸ್ಥಿತಿಯಲ್ಲಿ ಅಲ್ಲಿನ ಅಷ್ಟುಇಷ್ಟು ಉಳಿದಿರುವ ಜನರನ್ನು ಯುದ್ಧರಂಗಕ್ಕೆ ಹೊರಡಿಸುವುದು ಸುಲಭವಾದ ಕಾರ್ಯವಾಗಿಲ್ಲ. ಆ ದೇಶದ ಹೆಂಗುಸರ ಗೋಳನ್ನು ನಿಲ್ಲಿಸುವುದೇ ಪ್ರಭುತ್ವದವರಿಗೆ ಅಸಾಧ್ಯವಾಗಿಹೋಗಿದೆ. ಮತ್ತು ಅಲ್ಲಿನ ವ್ಯಾಪಾರಸಂಘದವರು ಯುದ್ಧವನ್ನು ಮುಂದಣ ಶೀತಕಾಲದೊಳಗಾಗಿ ನಿಲ್ಲಿಸದಿದ್ದರೆ ಜರ್ಮನ್ ಸಾಮ್ರಾಜ್ಯವು ದಿವಾಳಿಯಾಗುವುದು ಎಂದು ಚಕ್ರವರ್ತಿಯವರಿಗೆ ಮೊರೆಯಿಟ್ಟುಕೊಂಡಿದ್ದಾರೆ. ಅದುಕಾರಣ ನಾನಾರೂಪದಲ್ಲಿ ಸ್ವದೇಶದವರಿಗೆ ಧೈರ್ಯೋತ್ಸಾಹಗಳನ್ನು ಕೈಜರರು ಹುಟ್ಟಿಸಬೇಕಾಗಿದೆ. ಅದನ್ನು ಹುಟ್ಟಿಸಿ ಸಮಾಧಾನಪಡಿಸುವುದೂ ಕೂಡ ಈಗಿನ ಭಾಷಣದ ಒಂದು ಮುಖ್ಯೋದ್ದೇಶವಾಗಿದೆ. ಅಂತೂ ಜರ್ಮನರು ಪಶ್ಚಿಮ ರಣರಂಗದಕಡೆಗೆ ಈಸಲ ಮಹಾಭಗೀರಥಪ್ರಯತ್ನವನ್ನು ಮಾಡದೆ ಬಿಡುವಹಾಗಿಲ್ಲ. ಇದಕ್ಕೆ ತಕ್ಕ ಪ್ರತಿಕ್ರಿಯೆಯನ್ನು ಈಸಲವೂ ಮಿತ್ರಮಂಡಲಿಯವರು ನಡೆಯಿಸಿಬಿಟ್ಟರೆ ಶತ್ರುಗಳ ಹುರಿಯು ಅಲ್ಲಿಗೆ ಬಲುಮಟ್ಟಿಗೆ ಹಾಳಾಗಿಹೋಗುವುದು ಖಂಡಿತ.

ಸೇನಾನಷ್ಟ.

ಯುದ್ಧಾರಂಭದಿಂದ ಕಳೆದ ಏಪ್ರಿಲ್ ತಾ|| ೨೫ ರ ವರೆಗೆ ಆಗಿರುವ ಸೇನಾನಷ್ಟವು ಇಷ್ಟೆಂದು ಎಣಿಸಲ್ಪಟ್ಟಿದೆ.—

	ಹತರು	ಗಾಯಗೊಂಡವರು	ಸೆರೆಸಿಕ್ಕಿಹೋದವರು
ಜರ್ಮನಿಗೆ	16,36,000	18,80,000	4,90,000
ಆಸ್ಟ್ರಿಯಾಕ್ಕೆ	8,70,000	8,85,000	8,10,000
ತುರ್ಕಿಗೆ	1,10,000	1,40,000	95,000
ಫ್ರಾನ್ಸಿಗೆ	9,00,000	7,00,000	3,00,000

ಪತ್ರವ್ಯವಹಾರ.

ಅಣ್ಣಿಗೇರಿಯಲ್ಲಿ ಕೂಡಿದ ನವಲಗುಂದ ತಾಲ್ಲೂಕಿನ ಸಹಾಯಕಾರಿ ಸಂಘಗಳ ಪರಿಷತ್ತು.

ಸನ್ ೧೯೧೫ ನೆ ಇಸ್ವಿ ಜೂನ್ ತಿಂಗಳ ೨೫ ತಾ|| ಶುಕ್ರವಾರದ ದಿವಸವು, ಧಾರವಾಡ ಜಿಲ್ಲೆಯ ಸಹಾಯಕಾರಿಸಂಘಗಳ ಇತಿಹಾಸದಲ್ಲಿ, ಅಶ್ರುತಪೂರ್ವಕವಾದದ್ದೆಂದು ಹೇಳಬಹುದು. ಯಾಕೆಂದರೆ:—ಇದೇ ಪೆಟ್ಟುಂಬರು ಇಲಾಖೆಯ ಈ ಹೊತ್ತಿನ ವರೆಗೆ ಎಲ್ಲಿಯೂ ಕೂಡದಿದ್ದಂಥ ಅಂಗಿಗರನ್ನು ಇಲ್ಲಿಯ ಸರ್ಕಾರಿ ಕನ್ನಡ ಶಾಲೆಯಲ್ಲಿ ಕೂಡಿತ್ತು. ಇದರಲ್ಲಿ ಸುಮಾರು ೩೦೦-೪೦೦ ಜನರು ಕೂಡಿದ್ದರೂ

ಈ ಬಗ್ಗೆ ನಮ್ಮ ಧಾರವಾಡ ಜಿಲ್ಹೆಯ ಹೆಜ್ಜೆಯು ಸಹಾಯಕಾರಿ ಸಂಘಗಳ ಸಂಬಂಧವಾಗಿ ಮುಂಬಯಿ ಇಲಾಖೆಯ ಉಳಿದ ಭಾಗಗಳಿಗಿಂತ ಮುಂದೆ ಇರುವುದೆಂಬುದು ಶಾನೆ ಅಭಿಮಾನಪಡತಕ್ಕ ಸಂಗತಿಯಾಗಿದೆ. ಅದರಲ್ಲಿ ತಾಲ್ಲೂಕು ಸಂಘಗಳ ಪರಿಷತ್ತನ್ನು ಕೂಡಿಸಿದ್ದರಿಂದಂತೂ ಬಂಗಾರಕ್ಕೆ ಕುಂದಣ ಕೂಡಿಸಿದಂತೆ ಬಹು ಶೋಭೆಯನ್ನೂ ಆನಂದವನ್ನೂ ಹೊಂದಿತು. ಇದು ನಮ್ಮೆಲ್ಲರಿಗೂ ಅತ್ಯಂತ ಸಂತೋಷದಾಯಕವಾದ ಮಾತೇ ಸರಿ. ಮೊದಲು ನಾಮದಾರ ರಾ॥ ಬ॥ ರೊದ್ದ ಶ್ರೀನಿವಾಸರಾಯರು ಅಂದು ತೋರಿಸಿದಂತೆ ದೊಡ್ಡದೊಡ್ಡ ಪಟ್ಟಣಗಳಲ್ಲಿ ಸಹಾಯಕಾರಿ ಸಂಘಗಳ ವಾರ್ಷಿಕ ಸಭೆಗಳು ಆಗುವವು ಅಂಥಲ್ಲಿ ಹಳ್ಳಿಗಾಡು ಜನರು ಹೋಗಿ ಸಭೆಯಲ್ಲಿ ಚರ್ಚಿಸಲ್ಪಡುವ ವಿಷಯಗಳನ್ನು ಕೇಳಿ ತಿಳಿದುಕೊಂಡು ತಾವೂ ತಮ್ಮ ಸಂಘಗಳನ್ನು ಊರ್ಜಿತಾವಸ್ಥೆಗೆ ತರಲಿಕ್ಕೆ ತಕ್ಕ ಅನುಕೂಲ್ಯವಿರುವದಿಲ್ಲ. ಈ ಅನನುಕೂಲತೆಯ ನಿವಾರಣಕ್ಕಾಗಿ ಮೊಟ್ಟಮೊದಲು ರಾ॥ಸಾ॥ ರಾಘವೇಂದ್ರರಾವ ಕೃಷ್ಣ ಇನಾಮತಿ ಸಾ॥ ಅಣ್ಣಿಗೇರಿ ಇವರು ತಾ॥ ಸಂಘಗಳ ಪರಿಷತ್ತನ್ನು ಕೂಡಿಸಬೇಕೆಂದು ಯೋಚಿಸಿದರು. ಇವರು ಪ್ರಮುಖ ನಾಗರಿಕರೂ, ಯಾವತ್ತು ಸಾರ್ವಜನಿಕ ಕೆಲಸಗಳಲ್ಲಿ ಮನಮುಟ್ಟಿ ಪ್ರಯತ್ನಮಾಡತಕ್ಕವರೂ ಇರುವರೆಂಬುದು ಇಲ್ಲಿ ನೆರೆದ ಪರಿಷತ್ತಿನಿಂದಲೇ ಒಡೆದು ಕಾಣುತ್ತದೆ. ರಾವಸಾಹೇಬ ಇನಾಮತಿ ಇವರು ಹಾಕಿದ ಮೇಲ್ಪಂಕ್ತಿಗೆ ಅಣ್ಣಿಗೇರಿಯ ಶ್ರೀಮಂತ ಶಂಕರಪ್ಪ ದೇಸಾಯಿ ಶ್ರೀ ಭೀಮಪ್ಪಯ್ಯ ದೇಶಪಾಂಡೆ ಶೇಷಗಿರಿರಾವ ಮುತಾಲೀಕ ದೇಸಾಯಿ, ಫಕೀರಪ್ಪ ಬಳ್ಳೊಳ್ಳಿ, ಮಲ್ಲಪ್ಪ ಬೂದಿಹಾಳ, ಬಿ. ಆರ್. ಕುಲಕರ್ಣಿ, ನಾಯಕ, ಈರತಪ್ಪ ನವಲಗುಂದ, ಈ ಮುಂತಾದ ಸದ್ಗೃಹಸ್ಥರು ಅನುಮೋದಿಸಿದರು. ಆಗ ಈ ವಿಷಯವಾಗಿ ಒಂದು ಸ್ವಾಗತಕಮಿಟಿಯು ಸ್ಥಾಪಿಸಲ್ಪಟ್ಟಿತು. ಸದರಿ ಕಮಿಟಿಗೆ ರಾವಸಾಹೇಬ ಇನಾಮತಿ ಇವರು ಚೇರಮನ್ನರಾಗಿದ್ದರು. ಈ ಕಮಿಟಿಯಲ್ಲಿ ಗೊತ್ತುಪಡಿಸಿದಂತೆ ಜರಗುವ ಕೆಲಸದಲ್ಲಿ ಅಣ್ಣಿಗೇರಿ ಕನ್ನಡಶಾಲೆಯ ಆಕ್ಟಿಂಗ್ ಹೆ॥ ಮಾಸ್ತರ ಶಂಕರ ನರಸಿಂಹ ಕುಲಕರ್ಣಿ ಇವರು ಮತ್ತು ಎಲ್ಲ ಅಸಿಸ್ಟೆಂಟರೂ ಬಹಳ ಸಹಾಯಮಾಡಿದರು. ಈ ಪರಿಷತ್ತಿನಲ್ಲಿ ನವಲಗುಂದ ತಾಲ್ಲೂಕಿನೊಳಗಿನ ಎಲ್ಲ ಸೊಸೈಟಿಗಳ ಮೆಂಬರ ಜನರು ಒತ್ತಟ್ಟಿಗೆ ಕಲೆತು ತಮ್ಮತಮ್ಮ ಅನುಭವಗಳನ್ನು ತಿಳಿಸಿ ಹೆಚ್ಚಿನಸುಧಾರಣೆಯನ್ನು ಮಾಡಯತ್ನಿಸುವವರ ಅಭಿಪ್ರಾಯವನ್ನು ತಿಳಿದುಕೊಂಡು ಅದರಂತೆ ಮಾಡಲಿಕ್ಕೆ ತಕ್ಕ ಅನುವುದೊರೆದಂತಾಯಿತು.

ಈ ಸಭೆಗೆ ಸಹಾಯಕಾರಿ ಸಂಘಗಳ ರಿಜಿಸ್ಟ್ರಾರರಾದ ಮೆ॥ ಹೇಗಸಾಹೇಬ ಬಹಾದ್ದೂರರವರು ಮೆ॥ ಡಿಸ್ಟ್ರಿಕ್ಟ ಡೆಪ್ಯುಟಿ ಕಲೆಕ್ಟರ ಬಾಳೇಕುಂದ್ರಿ ಸಾಹೇಬ ಬಹಾದ್ದೂರರವರೂ, ಪರಸ್ಪರ ಸಹಾಯಕಾರಿ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರ ಮಿ॥ ಗೊನೆಹಳ್ಳಿ ಇವರೂ, ರಾ॥ ಸಾ॥ ಕಬಾಡ ಮಾಮಲೇದಾರ ನವಲಗುಂದ ತಾ॥ ಇವರೂ, ಸ್ಪೆಶಲ್ ಮಾಮಲೇದಾರ ಮಿ॥ ದಿವೆಕರ, ಆಡಿಟರ ಮಿ॥ ಭದ್ರಾಪೂರ, ಅಸಿಸ್ಟೆಂಟ್ ಮಿ॥ ಹುಬ್ಬಳಿ, ಮಿ॥ ರಾಮರಾವ ಇಟಗಿ ಅಗ್ರಿಕಲ್ಚರ ಓವ್ಹರಸಿಯರ್ ಮಿ॥ ರಾಮನಗೌಡ ಶೇತಕೀಶಾಲಾ ಹೆಡ್‌ಮಾಸ್ತರ ಮೊದಲಾದ ಅಧಿಕಾರಿಗಳೂ ನಾಮದಾರ ರಾವಬಹಾದ್ದೂರ ರೊದ್ದ, ಶ್ರೀನಿವಾಸರಾವ ಕಾಮಲಾಪೂರ, ಮಿ॥ ಹೆರ್ಲೆಕರ, ವಾಳ್ವೇಕರ, ನಾರಾಯಣರಾವ ಚಿಟಗುಬ್ಬಿ, ಮಿ॥ ಶಾಂತಾರಾಮರಾವ ನಿಕೇತರ ವಕೀಲ, ರಾವಸಾಹೇಬ ಶಿವಾಜಿ ರಾಮಚಂದ್ರ ಕುಲಕರ್ಣಿ, ಅಂತಲಗಿ, ವಕೀಲ ನಿಂಗನಗೌಡಾ ಹುಲಕೋಟಿ, ಭವಾನಸಾಕವಾಡಿ, ಕಟ್ಟಾಚಾರ್ಯಕಟ್ಟಿ ಬಹಾದ್ದೂರ ದೇಸಾಯಿ ಅಗಡಿ, ಮಹಾದೇವರಾವ ಕುಲಕರ್ಣಿ ಮೊದಲಾದ ಈ ವಿಷಯದ ಕಳಕಳಿಯುಳ್ಳವರೂ ಈ ಸಭೆಗೆ ಬಂದಿದ್ದರು. ಇದರಿಂದ ಈಗ ಇಡೀನವಲಗುಂದ ತಾ॥ ಎಲ್ಲ ಮೆಂಬರ ಜನರಿಗೆ ಮೇಲೆ ಬರೆದ ಯಾವತ್ತು ಸದ್ಗೃಹಸ್ಥರ ಅನುಭವದ ಲಾಭ ದೊರೆಯಿತೆಂಬುದಿಷ್ಟೇ ಅಲ್ಲ, ಸಭೆಯನ್ನು ನೋಡಲಿಕ್ಕೆಂದು ಬಂದ ಎಲ್ಲ ಜನರಿಗೆ ಕೂಡಾ ಸಹಾಯಕಾರಿಸಂಘಗಳ ತತ್ವಗಳ ಅಂಕುರವು ಮನಸಿನಲ್ಲಿ ಮೊಳೆಯಿತೆನ್ನಲಿಕ್ಕೆ ಏನೂ ಅಡ್ಡಿ ಇಲ್ಲ.

ಮೊದಲು ಅಣ್ಣಿಗೇರಿ ಶಾಲಾ ಆ॥ ಹೆಡ್‌ಮಾಸ್ತರರು ರಚಿಸಿದ ಕೆಳಗೆ ಬರೆದ ಸ್ವಾಗತಪರಪದ್ಯವು ಅನ್ನಲ್ಪಟ್ಟಿತು.

“ ಲಗ್ನಾಲಾಜಾತೋಯಿಾ ದ್ವಾರಕಾವು ” ಈ ಮರಾಠಿ ಪದ್ಯದಂತೆ

ಸ್ವಾಗತವೆನುಮಾಳ್ಪೆನು ಅನುರಾಗದಿಂದಲಿ ॥ಪ॥ ಬಾಗಿಕರವಮುಗಿದು ಸುಗುಣಿ ॥ ಹೇಗದೊರೆಗೆನಾಂ ॥ಅ॥ ಸಂಘಗಳ ಸುಸಂಗತಿಯ ಇಂಗಿತವರಿತ ॥ ಆಂಗ್ಲವರ್ಯಹೇಗದೊರೆಗೆ ಸಂಘಪತಿಯಲಿ ॥೧॥ ಧೀರಗೆ ಸುವಿಚಾರಗೆ ಪರಮೋದರವಲಿನಾಂ ॥ ಸಾರಸುಗುಣಪೂರ್ಣದಯಾ । ಪಾರಜಲಧಿಗೆ ॥೨॥ ಅರ್ಥಯುಳೀಪ್ರಾರ್ಥಿಪೆನಾಂ । ಸ್ವಾರ್ಥರಹಿತಗೆ ॥ ಕರ್ತೃಕಾರಿಯೂಗಿಪರ । ಮಾರ್ಥಮಾಳ್ಪಗೆ ॥೩॥ ಮನ್ನಣೆಯೊಳ್ ಮಾನ್ಯರೆನಿಪ । ಸರ್ವಜನರಿಗೆ ॥ ಸನ್ಮತಾಸನಕೆ ಬರ್ಪವಿನ್ನಹದಲಿ ॥೪॥

ಬಳಿಕ ನಾಮದಾರ ರಾ॥ ಬ॥ ರೊದ್ದ ಸಾಹೇಬರು ಅಂದದ್ದೇನಂದರೆ:— ಮೆ॥ ಹೇಗಸಾಹೇಬರವರು ಮಳೆಗಾಲದಲ್ಲಿ ಪುಣೆಯಲ್ಲಿಯೇ ನಿಂತು ವಿಶ್ರಾಂತಿ ತಕ್ಕೊಳ್ಳತಕ್ಕ ಸಮಯವಾಗಿದ್ದರೂ ಇಲ್ಲಿಗೆ ಬಹು ದೂರದಿಂದ ಬಂದದ್ದಕ್ಕಾಗಿ ನಮ್ಮೆಲ್ಲರಿಗೂ ಅತ್ಯಾನಂದವಾಗಿರುವುದು. ಇದಕ್ಕಾಗಿ ನಾವೆಲ್ಲರೂ ಅವರಿಗೆ ತುಂಬಾ ಕೃತಜ್ಞರಾಗಿದ್ದೇವೆ. ಅನಂತರ ಮೆ॥ ಹೇಗಸಾಹೇಬರವರಿಗೆ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಬೇಕೆಂದು ಸೂಚಿಸಿದರು. ತರುವಾಯ ರಾವಸಾಹೇಬ ಇನಾಮತಿ ಇವರು ಈ ತಾಲ್ಲೂಕಿನಲ್ಲಿರುವ ಸಂಘಗಳ ರಿಪೋರ್ಟನ್ನು ಓದಿ ತೋರಿಸಿದರು.

ರಿಪೋರ್ಟಿನ ವಾಚನವಾದ ಬಳಿಕ ಅಸಿಸ್ಟೆಂಟ್ ರಿಜಿಸ್ಟ್ರಾರ ಮಿ॥ ಗೊನೆಹಳ್ಳಿ ಇವರು ಕೊಂಡುಕೊಳ್ಳುವ ಸಹಾಯಕಾರೀಸಂಘಗಳ ಅವಶ್ಯಕತೆಯ ಬಗ್ಗೆ ಸರಸಾಗಿ ಭಾಷಣಮಾಡಿದರು. ಸಂಯುಕ್ತಸಂಘಗಳ ವಿಷಯದ ವಿವೇಚನವು ಎರಡನೆಯ ವಿಷಯವಾದ್ದರಿಂದ ಈ ಬಗ್ಗೆ ಮಿ॥ ಭದ್ರಾಪೂರ ಆಡಿಟರ ಇವರು ಬಹು ಸರಸಾಗಿ ಮನದಟ್ಟಾಗುವಂತೆ ಹೇಳಿದರು. ಸಂಯುಕ್ತಸಂಘವೆಂದರೆ ಸಣ್ಣಸಣ್ಣ ಸಂಘಗಳು ಕೂಡಿಕೊಂಡು ಮೇಲ್ವಿಚಾರಣೆಮಾಡುವುದು. ಅಣ್ಣಿಗೇರಿ ಮತ್ತು ಅದರ ನೆರೆಯಲ್ಲಿ ೮ ಮೈಲಿಯೊಳಗಣ (೧೧) ಗ್ರಾಮಗಳು ಕೂಡಿಸಿದ್ದಕ್ಕೆ ಈ ಸಂಯುಕ್ತಸಂಘ (ಫೆಡರೇಷನ) ವು ರಚಿಸಲ್ಪಟ್ಟದೆ. ಇದರ ಕಾರಣ ಕಾರ್ಯವಿವೇಚನ ಮೊದಲಾದವುಗಳನ್ನು ತೋರ್ಪಡಿಸುವುದಕ್ಕಾಗಿ ಬರೆದ ನಿಯಮದ ಪುಸ್ತಕಗಳು ಸಭೆಯಲ್ಲಿ ಹಂಚಲ್ಪಟ್ಟವು. ಈ ಹಂಚಿದ ಪುಸ್ತಕಗಳಲ್ಲಿರುವ ನಿಯಮಗಳ ಅವಲೋಕನದಿಂದಲೂ ಸಭೆಯಲ್ಲಿ ಚರ್ಚಿಸಲ್ಪಟ್ಟ ವಿಷಯವನ್ನು ಕೇಳುವುದರಿಂದಲೂ, ಈ ತರದ ಫೆಡರೇಶನುಗಳ ಇರುವಿಕೆಯು ಅತ್ಯವಶ್ಯವಾದದ್ದೆಂದು ತಿಳಿಯಬಂತು. ಈ (ಸಂಯುಕ್ತ) ಸಂಘಗಳಿಗೆ ಸ್ಪೆಶಲ್ ಮಾಮಲೇದಾರರ ಕೆಲವು ಅಧಿಕಾರಗಳು ದೊರೆತಿರುವವೆಂಬ ಬಗ್ಗೆ ಆನಂದವಾಗುತ್ತದೆ. ಈ ರೀತಿಯಾಗಿ ದಯಾಳುಗಳಾದ ಸರಕಾರದವರು ರೈತರ ಕಲ್ಯಾಣಕ್ಕಾಗಿ ಪ್ರಯತ್ನಿಸುತ್ತಿರುವುದು ತುಂಬಾ ಆನಂದದ ಸಂಗತಿಯಾಗಿದೆ. ಈ ಮಾದರಿಯ ೬-೮ ಸಂಘಗಳು ಕೂಡಿ ಒಂದು ಸಂಯುಕ್ತ ಸಂಘವೂ, ಇಂಥ ೧೦-೮ ಸಂಯುಕ್ತಸಂಘಗಳು ಕೂಡಿ ಒಂದು ತಾಲ್ಲೂಕ ಸಂಘವೂ, ಎಲ್ಲ ತಾಲ್ಲೂಕ ಸಂಘಗಳ ಪ್ರತಿನಿಧಿಗಳುಳ್ಳ ಜಿಲ್ಲಾಸಂಘವೂ ಹೀಗೆ ಆಗುತ್ತಾಗುತ್ತಾ ಸೆಂಟ್ರಲ್‌ಸೊಸೈಟಿಯವರಿಗೆ ಯಾವತ್ತು ಸಂಘಗಳ ಕೆಲಸವು ಸುರಕ್ಷಿತವಾಗಿ ನಡೆಯುತ್ತಿದ್ದರೆ ಈ ತರದ ಸಂಸ್ಥೆಗಳನ್ನು ಚೆನ್ನಾಗಿ ನಡೆಯಿಸುವ ಪಾಠವನ್ನೇ ನಾವು ಕಲಿತಂತಾಗುತ್ತದೆ. ಈ ಪರಿಷತ್ತಿನ ಸಂಬಂಧವಾಗಿ ರಾವಸಾಹೇಬ ಇನಾಮತಿಯವರು ಮಾಡಿದ ಮೊದಲನೆಯ ಪ್ರಯತ್ನವು ಎಲ್ಲರಿಂದಲೂ ಸ್ತುತ್ಯರ್ಹವಾಗಿದೆ.

ಬಳಿಕ ಮಿ॥ ದಿವೇಕರ ಸ್ಪೆಶಲ್ ಮಾಮಲೇದಾರ ಇವರು ತಮ್ಮ ಅನುಭವದ ಮೇಲಿಂದ ಆಸ್ತೀಪತ್ರಿಕೆಯನ್ನು ತಯಾರಿಸುವ ಕ್ರಮವನ್ನೂ ಅದರ ಅವಶ್ಯಕತೆಯನ್ನೂ ಕುರಿತು ವಿಶದವಾಗಿ ಭಾಷಣಮಾಡಿದರು. ಆಮೇಲೆ ಮಿ॥ ಅಂಕಲಗಿ ವಕೀಲ ಇವರು ಕೆಟ್ಟಸಂಘಗಳ ಸುಧಾರಣಾಕ್ರಮವನ್ನು ಕುರಿತು ವಿವೇಚಿಸಿದರು. ಅನಂತರ ಮೆ॥ ಹೇಗಸಾ॥ ಬಹಾದ್ದೂರ ಆಯ್ ಸಿ. ಎಸ್. ಇವರು ಕನ್ನಡದಲ್ಲಿ ಮಾಡಿದ ಅಚ್ಚುಕಟ್ಟಾದ ಭಾಷಣದ ಸಾರಾಂಶವೇನಂದರೆ:—

ಸದ್ಗೃಹಸ್ಥರೇ ಈಗ ಹೊತ್ತು ಬಹಳ ಆಗಿದೆ; ಅದರಲ್ಲಿ ೪॥ ಘಂಟೆಯ ಗಾಡಿಗೆ ಬಹುಜನರು ಹೋಗಬೇಕಾಗಿದೆ. ಕಾರಣ ನಾನು ಬಹಳಹೊತ್ತು ಮಾತಾಡಿ ನಿಮ್ಮೆಲ್ಲರ ವೇಳೆಯನ್ನು ತೆಗೆದುಕೊಳ್ಳದೆ ಸ್ವಲ್ಪದರಲ್ಲಿಯೇ ಹೇಳುವೆನು. ನನಗೆ ಈ ಪರಿಷತ್ತಿನ ನೆವದಿಂದ ತಮ್ಮೆಲ್ಲರನ್ನು ನೋಡುವ ಸುಸಂಧಿಯು ದೊರೆತದ್ದಕ್ಕಾಗಿ ತುಂಬಾ ಸಂತೋಷವುಳ್ಳವನಾಗಿರುವೆನು. ಈ ಮೊದಲು ನಾಮದಾರ ರಾವಬಹಾದ್ದೂರ ರೊದ್ದರವರು ಅಂದಮೇರೆಗೆ ನನಗೇನೂ ಅಷ್ಟು ಶ್ರಮವಾಗಿಲ್ಲ. ಯಾವತ್ತು ಸೊಸೈಟಿಗಳ ಹಿತಮಾಡುವುದು ನನ್ನ ಕರ್ತವ್ಯವಾದ್ದರಿಂದ ಈ ಪರಿಷತ್ತಿಗೆ ಬಂದಿರುವೆನು. ನನಗೆ ನೀವೆಲ್ಲರೂ ಕೂಡಿ ಅಧ್ಯಕ್ಷಸ್ಥಾನದ ಬಹುಮಾನವನ್ನು ಕೊಟ್ಟದ್ದರಿಂದ ನಾನು ನಿಮ್ಮೆಲ್ಲರ ಕೃತಜ್ಞನಾಗಿರುತ್ತೇನೆ. ಇದು ನವಲಗುಂದ ತಾಲ್ಲೂಕ ಸಂಘಗಳ ಕಾನ್ಫರೆನ್ಸು ಆದ ಮೂಲಕ ಇದಕ್ಕೆ ಸಂಬಂಧಪಟ್ಟವರೂ ಮತ್ತು ಸಂಬಂಧವಿಲ್ಲದ ಅನೇಕ ಸದ್ಗೃಹಸ್ಥರೂ ಇಲ್ಲಿ ನೆರೆದಿರುವರು. ತಾವೆಲ್ಲರೂ ಶ್ರಮಪಟ್ಟು ತಮ್ಮ ಅಮೂಲ್ಯವಾದ ವೇಳೆಯನ್ನು ವೆಚ್ಚಮಾಡಿಕೊಂಡು ಇಲ್ಲಿಗೆ ಬಂದದ್ದಕ್ಕಾಗಿ ನಾನು ನಿಮ್ಮ ಉಪಕಾರವನ್ನು ನೆನೆಸುವೆನು.

ಇನ್ನು ಸಂಘಗಳ ಸಂಬಂಧವಾಗಿ ನನಗೆ ತೋರಿದ ಎರಡು ಮಾತುಗಳನ್ನು ಹೇಳುವೆನು. ಈ ಜಿಲ್ಲೆಯೊಳಗೆ ಈಗ ಅನೇಕ ಸಂಘಗಳಾಗಿವೆ. ಹತ್ತುವರ್ಷಗಳ ಕೆಳಗೆ ಒಂದೂ ಇದ್ದಿಲ್ಲ. ಒಂದು ಸಂಘ [illegible]ಪಿಸಬೇಕೆಂದರೆ ಎಷ್ಟೋ ಶ್ರಮವಾಗುತ್ತಿತ್ತು. ಈಗ ಜನರು ತಾವಾಗಿಯೇ ಸಂಘಗಳನ್ನು ಸ್ಥಾಪಿಸುವುದಕ್ಕೆ ಉತ್ಸುಕತೆಯುಳ್ಳವರಾಗಿ ಅನೇಕ ಅರ್ಜಿಗಳನ್ನು ಕೊಡುತ್ತಿದ್ದಾರೆ. ಈ ಅರ್ಜಿಗಳ ಮೇಲಿಂದ ಸಂಘಗಳ ಸದ್ಯಸ್ಥಿತಿಯು ಚೆನ್ನಾಗಿರುತ್ತದೆಂದು ಹೇಳಬಹುದು. ಸರಕಾರದವರು ಸಂಘಗಳ ವ್ಯವಸ್ಥೆಯಲ್ಲಿ ಕೈಹಾಕುವುದಿಲ್ಲ. ಸಂಘಗಳ ನೋಂದಣಿಗಾಗಿ ಬಹಳ ಅರ್ಜಿಗಳು ಬರುವುದರಿಂದ ಜನರು ಅದರಲ್ಲಿ ಎಷ್ಟು ಉತ್ಸುಕತೆಯುಳ್ಳವರಾಗಿರುವರೆಂಬುದು ಸ್ಪಷ್ಟವಾಗುತ್ತದೆ ಒಂದು ಸಂಘದ ಮೆಂಬರನ್ನು ಮತ್ತೊಂದುಸಂಘದ ಮೆಂಬರನಿಗೆ ಸಹಾಯಮಾಡುವಂತೆ ಒಂದು ಸಂಘವು ಮತ್ತೊಂದುಸಂಘಕ್ಕೆ ಸಹಾಯಮಾಡಬೇಕಾದರೆ ಈ ಸಂಯುಕ್ತ ಸಂಘಗಳ ರಚನೆಯು ಅತ್ಯವಶ್ಯವಾಗಿ ಬೇಕು. ಈಮೇರೆಗೆ ಒಬ್ಬರಿಗೊಬ್ಬರು ನೆರವಾಗದಿದ್ದರೆ ಈ ಚಳವಳಿಯು ಉಪಯೋಗವಾಗಲಿಕ್ಕಿಲ್ಲ.

ಎರಡು ವ್ಯಕ್ತಿಗಳು ಅನ್ಯೋನ್ಯವಾಗಿ ಸಹಾಯ ಹೊಂದಬೇಕಾದರೆ ಒಂದು ವ್ಯಕ್ತಿಯು ಮತ್ತೊಂದು ವ್ಯಕ್ತಿಗೆ ಪರಿಚಯವುಳ್ಳದ್ದೂ ನಂಬಿಗೆಯುಳ್ಳದ್ದೂ ಇರುವುದು ಅಗತ್ಯವಿದ್ದಂತೆ ಒಂದು ಸೊಸೈಟಿಯು ಮತ್ತೊಂದು ಸೊಸೈಟಿಗೆ ಗುರ್ತಿನದೂ ವಿಶ್ವಾಸವುಳ್ಳದ್ದೂ ಇರಬೇಕು. ಈ ಪರಿಚಯವೂ ನಂಬಿಗೆಯೂ ಇಲ್ಲಿ ನೆರೆದಿರುವ ಕಾನ್ಫರೆನ್ಸುಗಳ ದ್ವಾರದಿಂದಲೇ ಹುಟ್ಟುತ್ತದೆ. ಪರಿಷತ್ತಿನಲ್ಲಿ ಒಬ್ಬರನ್ನೊಬ್ಬರು ಘುಟ್ಟಿಯಾಗಿ ಪರಸ್ಪರ ಅನುಭವಗಳನ್ನೂ ಅಡಚಣೆಗಳನ್ನೂ ಹೇಳಿ ಕೇಳಿಕೊಂಡು ತಮ್ಮಲ್ಲಿರುವ ನ್ಯೂನತೆಗಳನ್ನು ತೆಗೆದುಹಾಕಿ ಸುಧಾರಣೆಯ ಕ್ರಮವನ್ನು ಬೈಲಿಗೆ ತರುವರು. ಅಂದಮೇಲೆ ಈ ಮಾದರಿಯ ಕಾನ್ಫರೆನ್ಸುಗಳು ಸುಧಾರಣಾಕ್ರಮದ ಮಾಲಿಕೆಯಲ್ಲಿ ಸೇರಿದ ಜನರೆಲ್ಲರಿಗೂ ಯಾವಾಗಲೂ ಕಲ್ಯಾಣಮಾಡತಕ್ಕವುಗಳಾಗಿವೆ. ಇದುವರೆಗೆ ರಾವಸಾಹೇಬ ಇನಾಮತಿಯವರು ತಾಲ್ಲೂಕ ಸಂಘಗಳ ಇತಿಹಾಸವನ್ನು ಹೇಳಿದರು. ಮಿ॥ ಗೊನೆಹಳ್ಳಿ ಇವರು ಕೊಂಡುಕೊಳ್ಳುವ ಸಹಕಾರಿಸಂಘಗಳ ರಚನಾಕ್ರಮ ಅವಶ್ಯಕತೆಗಳನ್ನು ಕುರಿತು ಹೇಳಿದರು. ಹುಬ್ಬಳ್ಳಿ ಗದಗ ಮೊದಲಾದ ದೊಡ್ಡ ಪಟ್ಟಣಗಳಲ್ಲಿ ಅರಳೆ ಮಾರಲಿಕ್ಕೆ ಹೋದರೆ ದಲಾಲರ ಮುಖಾಂತರವಾಗಿ ರೈತರಿಗೆ ಬಹಳ ಹಾನಿಯಾಗುತ್ತದೆ. ಈ ಹಾನಿಯಾಗದಂತೆ ಮಿ॥ ಗೊನೆಹಳ್ಳಿಯವರು ಹೇಳಿದ ಮೇರೆಗೆ ಅಣ್ಣಿಗೇರಿಯಂಥ ಮುಖ್ಯಮುಖ್ಯ ಹಳ್ಳಿಗಳಲ್ಲಿ ಕೊಂಡುಕೊಳ್ಳುವ ಸಹಕಾರಿಸಂಘಗಳ ಸ್ಥಾಪನೆಯಾಗಲಿಕ್ಕೆ ಬೇಕು. ಯಾರಾದರೂ ಈ ಬಗ್ಗೆ ಅರ್ಜಿಗಳನ್ನು ನನ್ನ ಕಡೆಗೆ ಕಳಿಸಿದರೆ ಅವುಗಳ ವಿಚಾರವನ್ನು ಹೆಚ್ಚು ಅನುಕೂಲವಾದಪಕ್ಷದಿಂದ ಮಾಡುವೆನು. ಇಂಥ ಸಂಘವು ಅಣ್ಣಿಗೇರಿಯಲ್ಲಿ ಬೇಗನೆ ಸ್ಥಾಪನೆಯಾಗತಕ್ಕದ್ದಿದೆ. ಸಂಯುಕ್ತಸಂಘವಾದರೂ ಇಲ್ಲಿಯೇ ಆಯಿತು. ಇಂಥ ಅನೇಕ ಸಂಯುಕ್ತಸಂಘಗಳು ಸ್ಥಾಪನೆಯಾಗುವುದು ಅತ್ಯವಶ್ಯವಾಗಿದೆ. ಅಣ್ಣಿಗೇರಿಯಲ್ಲಿರುವ ಈ ಸಂಘವು ರಾ॥ ಸಾ॥ ಇನಾಮತಿಯವರ ಮೇಲ್ವಿಚಾರಣೆಯಿಂದ ಉತ್ತಮರೀತಿಯಿಂದ ನಡೆಯುವುದೆಂದು ನನಗೆ ಪೂರ್ಣ ವಿಶ್ವಾಸವುಂಟು. ಆದ್ದರಿಂದ ಸಂಯುಕ್ತ ಸಂಘಗಳನ್ನು ಸ್ಥಾಪಿಸುವವರು ರಾ॥ ಸಾ॥ ಇನಾಮತಿಯವರನ್ನು ಕೇಳಿ ತಿಳಿದುಕೊಂಡು ಅರ್ಜಿಮಾಡಿದರೆ ನನ್ನಿಂದ ದೊರೆಯತಕ್ಕ ಯೋಗ್ಯಸಹಾಯವನ್ನು ನಿಶ್ಚಯವಾಗಿ ಹೊಂದುವರು. ನಾನು ಈಹೊತ್ತಿನದಿವಸ ಇಲ್ಲಿಗೆ ಬಂದದ್ದಕ್ಕಾಗಿ ಅತ್ಯಾನಂದವಾಗಿದೆ. ಮುಂಬಯಿ ಕರ್ನಾಟಕ ವಾಸಸ್ಥರಾದ ಕನ್ನಡನುಡಿಯನ್ನಾಡುವ ಜನರಲ್ಲಿಗೆ ಬರುವುದೆಂದರೆ ನನಗೆ ಬಹಳ ಸಂತೋಷವಾಗುತ್ತದೆ. ಇಂದಿನ ಪರಿಷತ್ತಿನ ಕಾರ್ಯವು ಕಾರ್ಯಕ್ರಮಪತ್ರಿಕೆಯಲ್ಲಿದ್ದಂತೆ ಅನಿರ್ಬಾಧವಾಗಿ ನಡೆದದ್ದರಿಂದಂತೂ ನನಗೆ ಬಹಳ ಆನಂದವಾಗಿದೆ. ಇಂಥ ಸಭೆಗಳು ಬೇರೆಬೇರೆಕಡೆಯಲ್ಲಿ ಆಗಬೇಕೆಂದು ನಾನು ಅಪೇಕ್ಷಿಸುತ್ತೇನೆ ಇತ್ಯಾದಿ ಅರ್ಥವುಳ್ಳ ಭಾಷಣವನ್ನು ಮಾಡಿದರು. ಬಳಿಕ ಮೆ॥ ಬಾಳೇಕುಂದ್ರಿ ಸಾಹೇಬ ಬಹಾದ್ದೂರರವರು ಅಧ್ಯಕ್ಷರ ಮತ್ತು ಪ್ರತಿನಿಧಿಗಳ ಆಭಾರವನ್ನು ಬಹು ಸರಸಾಗಿ ಮನ್ನಿಸಿದರು. ಈ ಪರಿಷತ್ತಿನ ಕಾರ್ಯದಲ್ಲಿ ಮೆ॥ ಜೆ. ಆರ್. ಬಾಳೇಕುಂದ್ರಿ ಸಾಹೇಬ ಬಹದ್ದೂರ ಡಿ. ಡಿ. ಕಲೇಕ್ಟರ ಮತ್ತು ರಾ॥ ಸಾ॥ ಕಬಾಡ ಮಾಮಲೇದಾರ ತಾಲ್ಲೂಕ ನವಲಗುಂದ ಇವರೂ ಒಳ್ಳೇ ಸಹಾಯಮಾಡಿದ್ದು ಅವರಿಗೆ ಅತ್ಯಂತ ಭೂಷಣಾಸ್ಪದವಾಗಿರುತ್ತದೆ. ಕಡೆಯಲ್ಲಿ ಪಾನಸುಪಾರಿ ಅತ್ತರ ಗುಲಾಬಿ ಹಾರ ತುರಾಯಿ ಪಕ್ಸರೆ ಆದಮೇಲೆ ರಾಷ್ಟ್ರಗೀತವಾಯಿತು. ಅನಂತರ ಪಂಚಮಜಾರ್ಜ ಬಾದಶಹರವರಿಗೆ ತ್ರಿವಾರ ಜಯಘೋಷವು ಅರ್ಪಿಸಲ್ಪಟ್ಟ ಬಳಿಕ ಸಭಾಕಾರ್ಯವು ಮುಗಿಯಿತು. ಕಾನ್ಫರನ್ಸು ನಡೆದ ಕಾಲದ ಮಧ್ಯವೇಳೆಯಲ್ಲಿ ದೊರೆತ ಸೂಟಿಯಲ್ಲಿ ಎಲ್ಲ ಸದ್ಗೃಹಸ್ಥರಿಗೆ ಉಪಹಾರದ ವ್ಯವಸ್ಥೆಯಾದ ಬಳಿಕ ಪರಿಷತ್ತಿನಲ್ಲಿ ನೆರೆದ ಸದ್ಗೃಹಸ್ಥರ ಫೋಟೋ ತೆಗೆದುಕೊಳ್ಳಲ್ಪಟ್ಟಿತು. ಈ ಮೇರೆಗೆ ಪರಿಷತ್ತಿನ ಕೆಲಸವು ಅತ್ಯುತ್ತಮವಾದ ಪ್ರೇಕ್ಷಣೀಯ ಶೋಭೆಯಿಂದ ನಡೆದಂತೆ ಈ ಮೊದಲು ಎಲ್ಲಿಯೂ ಕೇಳಿ ಕಂಡದ್ದಾಗಲಿಲ್ಲ.

ಪ್ರೇಕ್ಷಕರಲ್ಲೊಬ್ಬ.

ವೀರಶೈವ ವಿದ್ಯಾಭಿವೃದ್ಧಿ ಫಂಡು.

(ಕಳೆದವಾರದ ಶೇಷ.)

ಗುಬ್ಬಿ ಶೆಟ್ಟರ ಕಪ್ಪಣ್ಣಶೆಟ್ಟರ ಮೂಲಕ ಗುಬ್ಬಿ ಕಟ್ಟಿ ಬಸವಣ್ಣನ ಗುಡಿ ಶಾಂತಯ್ಯನವರಮಗನ ಲಗ್ನದಲ್ಲಿ ತೆಗೆದುದು. ೨-೦-೦

ಬೆಂಗಳೂರು ಯಸ್. ಕಡ್ಲೆಪ್ಪನವರ ಮೂಲಕ ಚೆನ್ನಪಟ್ಟಣದ ಗುರುಕಾರ್‌ಮಲ್ಲಿಕಾರ್ಜುನಯ್ಯ ಬಿ. ಎ. ಯವರ ಮನೆಯಲ್ಲಿ ನಡೆದ ವಿರೂಪಾಕ್ಷಪುರದ ವೀರಣ್ಣನವರ ಮಕ್ಕಳ ಲಗ್ನದಲ್ಲಿ ತೆಗೆದುದು ೩-೦-೦

ಪ್ಯಾಟಿಧಾರಣೆ.

ಅರಶಿಣ	ಕುಂಕುಮ	ಭಂಗಾರ	ಬೆಳ್ಳಿ
೬	೫	೨೪-೧೨ F	೬೮-೮-೦

ಪತ್ತಾ

ವಿಠ್ಠಲದಾಸ ಬಿಲ್ಡಿಂಗ ೨ ನೇ
ಮಜಲು ಬ್ಲಾಕನಂಬರ ೩ ಪ್ರಿ
ನ್ಸೆಸ್ ಸ್ಟ್ರೀಟ ಫೋಷ್ಟ
ಕಾಳಬಾದೇವಿ ತಾ॥ ೫-೬-೧೫

ತಮ್ಮ
ಗಂಗಾಧರಪ್ಪಾ ಸಂಗಪ್ಪಾ
ಸಾಬೋಜಿ.

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಊದುಬತ್ತಿಗಳು.

9

ವಿಧವಿಧವಾದ ಊದುಬತ್ತಿಗಳು ಸೇರು ೧ಕ್ಕೆ ೧೨-೦-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್‌ಸನ್ಸ್
ಸುಗಂಧಕಾರಿ, ಮೈಸೂರು.

ತಿಯಿಂದಲೇ ತಯಾರಿಸಿದ
ಟಿಕ್ ಲೇಹವು.

29

ಕ್ತವೃದ್ಧಿಯ ಮೇಲೆ ಅತಿಉತ್ತಮ.
ದ್ದರೆ ಹಣ ಪರತ !!) ದೇಶಿ !!!
ವೃದ್ಧರು, ಬಾಲಕರು, ಮುಟ್ಟಾಗದ
ಗವುಳ್ಳವರು, ರಕ್ತಪ್ರದೇಶವಾದವ
ದಮ್ಮಿನವರು, ಕೆಮ್ಮಿನವರು, ಕಫ
ವ್ಯಾಧಿಯವರು, ವಾಂತಿಯಾಗುವ
ರೋಗವಿದ್ದವರು, ಧಾತುಹೋಗು
ವವರು, ಸೇವಿಸಬೇಕು. ಇದರಿಂದ
ಲ್ಲ ರೋಗಗಳೂ ಪೂರ್ಣತೆಯಿಂ
ದ್ರಿಯದ ಶಿಥಿಲತೆ, ದುರ್ಬಲತೆ, ನ
ಷ್ಟಪ್ರಾವಸ್ಥೆ ಇವು ಗುಣವಾಗಿ ಧಾ
ಕ,ರಕ್ತಶೋಧಕ, ಕಾಮೋತ್ತೇ
ಗರ್ಮಿ, ಟಾಕಿ, ಗುಪ್ತಪ್ರದೇಶದ
ತರದ ಬಕ್ಕೆಗಳು, ಹುಣ್ಣುಗಳು,
ಕೂಲಿ, ವಾತರೋಗ, ಮುಂತಾದ
ಗ ಶರೀರಕ್ಕೆ ನೀರೋಗತ್ವವೂ,
ಪೂರ್ಣಶಕ್ತಿಯೂ ಉಂಟಾಗು
೪೦ ತೋಲೆಯಿಂದ ೮೦ ತೊಲೆ
ಕಿಮ್ಮತು ೪೦ ತೋಲೆಗೆ ರೂ.
ಪಾಯಿ ೬ ಬೀಳುವದು. ಪ
ಪಾನ ಪತ್ರಿಕೆ ಔಷಧಿ ಸಂಗಡ

. ಜೋಶಿ ಮತ್ತು ಕಂಪನಿ,
ಬನವಾಸಿ, ಜಿಲ್ಲ ಉತ್ತರಕನಡಾ.

ಅಪೂರ್ವಗ್ರಂಥ !!
ಮರಿಸ್ವಾಮಿಗಳು 3
ಕರಡೆಪ್ಪ

ವಿತಚರಿತ್ರೆ.

ಮನ್ನು ಇಲ್ಲಿಯವರಿಗೂ ಯಾ
ದ್ದಿಲ್ಲವೆಂಬುದು ತಿಳಿದದ್ದಾಗಿರು
ಮಹಿಮಶಾಲಿಗಳ ಚರಿತ್ರೆಗಳು
ಯಗಳಾಗಿರುವವು. ಈರ್ವರ
ವಾದುದು. ಒಂದೆ ದಿನ ಒಂದೆ
ರು, ಭೈರವಪುರ, ಎಂಬ ಮೂ
ನ್ನು ಹೊಂದಿದರೆಂಬುದೊಂದೆ
ಸೂಚಿಸುತ್ತಿರುವುದು. ಇವರು
ಅನಂತವಾಗಿರವವು; ಇದ
ರಿ ಕರಡೆಪ್ಪನ ಅಪಾರ ಮಹಿ
ಲ್ಪಟ್ಟಿರುವುದು. ಈ ಸಕ್ಕರಿ
ಪ್ರಪಂಚದಲ್ಲಿ ವೀರಶೈವ
ಅಪರೂಪ. ಆ ಗುರುಶಿಷ್ಯ
ಗ್ರಂಥದಲ್ಲಿ ತಯಾರುಮಾಡಿ
ವವರು ಖಂಡಿತವಾಗಿಯೂ
ಮನಸ್ಸನ್ನು ಕೊಡದಿರಲಾರ
ಳಿಸ್ವಾಮಿಗಳು ಮೈಸೂರು
ಶ್ರೀ ಕೃಷ್ಣರಾಜಒಡೆಯರ್

ಬಹದ್ದೂರರವರ ಮತ್ತು ಸಮೇತ ಇರುವ ಮಹಾಸ್ವಾಮಿಗಳ ಭಾವಚಿತ್ರಪಟವು ಪ್ರಥಮ ಪುಟದಲ್ಲಿ ಅಂದವಾಗಿರಿಸಲ್ಪಟ್ಟಿರುವುದು. ಈ ಗ್ರಂಥವನ್ನು ತರಿಸಿಕೊಳ್ಳುವವರಿಗೆ ಪ್ರಾಚೀನಪಂಡಿತ ಗ್ರಂಥಗಳಿಂದ ಕ್ರೋಢೀಕರಿಸಲ್ಪಟ್ಟ ದಶಾಷ್ಟಕರತ್ನಾವಳಿ ಎಂಬುವ ಪುಸ್ತಕವನ್ನು ಪುಕಟವಾಗಿ ಕಳಿಸುವೆವು. ನಿಮ್ಮ ವಿಳಾಸ ಚೆನ್ನಾಗಿರಲಿ. ಇದರ ಬೆಲೆ ವಿ. ಪಿ. ಸಹಿತ ರೂ. ೧-೨-೦.

ನಮ್ಮ ವಿಳಾಸ:—
ಬಸವರಾಜಕಂಪನಿ, ಬಳ್ಳಾರಿ.

ಸ್ಥಾನ ಶ್ರೀ ಮಹಾಲಕ್ಷ್ಮಿ ಮತ್ತು ಶ್ರೀ ಸರಸ್ವತಿಪೂಜನವನ್ನು ಸಮಾರಂಭದಿಂದ ಮಾಡಿರುತ್ತೇವೆ. ತಮಗೆ ಬೇಕಾದ ಮಾಲನ್ನು ತರಿಸಿಕೊಳ್ಳಬೇಕು ಮತ್ತು ಮಾರಾಟದ ಬದಕನ್ನೂ ಕಳುಹಿಸಬೇಕು. ಕೆಲಸವನ್ನು ಸತ್ಯದಿಂದಲೂ ಕಾಳಜಿಯಿಂದಲೂ ಮಾಡುತ್ತೇವೆ. ಈ ನಮ್ಮ ಹೊಸ ಅಂಗಡಿಯಿಂದ ಉಭಯತರಿಗೂ ಪ್ರೀತಿ ಮತ್ತು ದ್ರವ್ಯದ ಲಾಭವು ವಿಶೇಷವಾಗಿ ಆಗಬೇಕೆಂದು ನಮಗಿದ್ದ ಅಪೇಕ್ಷೆಯನ್ನು ಪೂರ್ಣಮಾಡಲು ಶ್ರೀಗುರು ಸಮರ್ಥನಿದ್ದಾನೆ.

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಫೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟಿ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ-ಎಸ್. ಯೂ ಎನ್ ಮತ್ತು ಕಂಪನಿ,
ಬನಾರಿಸ್ ಸಿಟಿ (ಕಾಶಿ)

Supplyment to this issue.

☞ ತಾವು ಲಕ್ಷ್ಯವಿಟ್ಟು ಓದಿ ಆದಮೇಲೆ ದಯಮಾಡಿ ಇದನ್ನು ತಮ್ಮ ಮಿತ್ರರಿಗೂ ತೋರಿಸಿ.

ಹೊಸ ಪುಸ್ತಕ! ೪ ಭಾಗಗಳುಳ್ಳ ಪುಸ್ತಕ ಕ್ರಯ ೧—೮—೦. ಬಿಕರಿಗೆ ಸಿದ್ಧವಾಗಿದೆ !!

ಹಿಂದು-ಯುನಾನಿ ವೈದ್ಯ, ಮಂತ್ರ-ಯಂತ್ರ ಸುಗಂಧಬೋಧಕ.

ಈ ಭೇತಾಳನ ಯಂತ್ರದಂತೆ ೧೦೦ ತರಹೆಯ ಯಂತ್ರಗಳೂ, ಅದಕ್ಕೆ ಸಂಬಂಧಿಸಿದ ನ್ಯಾಯವಾದ ಮಂತ್ರಗಳು ಪ್ರಕಟಿಸಲ್ಪಟ್ಟಿರುತ್ತೆ.

ಪ್ರತಿ ಕುಟುಂಬೀಕನಿಗೂ ರೋಗ, ಪೀಡೆ, ಭೀತಿ ಮುಂತಾದ ಅನೇಕ ವಿಧ್ವರಗಳು ಪದೇಪದೇ ಘಟಿಸುತ್ತಲೇ ಇರುವವು. ಸ್ವಲ್ಪ ಕುರುಹುಗಳು ಪ್ರಾರಂಭಿಸಿದಕೂಡಲೇ ಅದಕ್ಕೆ ಮಾಡತಕ್ಕ ಪ್ರತೀಕಾರವನ್ನು ಮಾಡಿ ಅಂಕುರದಲ್ಲಿಯೇ ಮೊಳೆಯದಂತೆ ಮುರಿಯುವುದರಿಂದ, ಅದರಿಂದಾಗತಕ್ಕ ಅನಾಹುತಕ್ಕೆ ಶಿಕ್ಕಿ, ಅರ್ಥನಷ್ಟ, ಪ್ರಾಣನಷ್ಟ ಪಡಬೇಕಾದ ಅವಶ್ಯವುಂಟಾಗುವುದಿಲ್ಲವೆಂಬುದನ್ನು ಎಂತಹ ಮೂಢನೂ ತಿಳಿಯುತ್ತಾನೆ.



ಈ ಕಾಲದಲ್ಲಿ ವಿಧವಿಧವಾದ ಯಂತ್ರಚಿಕಿತ್ಸೆ, ಮಂತ್ರವೈದ್ಯ, ವೈದ್ಯ ಮುಂತಾದ ಹೆಸರಿನಿಂದ ತಂಡೋಪತಂಡ ಪುಸ್ತಕಗಳು ಹೊರಟು, ಅವುಗಳಲ್ಲಿ ಹೇಳುವಂತೆ ಯಾವ ಉಪಯೋಗವೂ ತೋರದಿದ್ದರೂ ಜನರನ್ನು ಮೋಸಗೊಳಿಸುತ್ತಲಿರುವದರಿಂದ ನ್ಯಾಯವಾದ ಪುಸ್ತಕಗಳು ಪ್ರಚಾರಕ್ಕೆ ಬರಲು ಭಯಪಡುತ್ತಾ ಸಮಯನಿರೀಕ್ಷಣೆಯಲ್ಲಿದ್ದವು. ನಾವು ಯಂತ್ರ, ಮಂತ್ರ, ವೈದ್ಯ ಮುಂತಾದ ಜನೋಪಕಾರ ವಿಷಯಗಳಲ್ಲಿ ಎಷ್ಟೋ ವರ್ಷಗಳಿಂದ ಪ್ರಜಾನುರಾಗವನ್ನು ಸಂಪಾದಿಸಿರುವದರಿಂದ ಈ ವಿಷಯಗಳನ್ನು “ ಹಿಂದು - ಯುನಾನಿವೈದ್ಯ, ಮಂತ್ರ - ಯಂತ್ರ, ಸುಗಂಧಬೋಧಕ ” ಎಂಬ ಹೆಸರಿನಿಂದ ಜನಗಳ ಉಪಯೋಗಾರ್ಥವಾಗಿ ಪ್ರಕಟಿಸಿರುತ್ತೆ.

೧ನೇ ಭಾಗದ ಮಂತ್ರ - ಯಂತ್ರದಲ್ಲಿ—

ಜನಗಳಿಗೆ ಆಕಸ್ಮಿಕವಾಗಿ ಘಟಿಸುವ ಪೀಡೆ, ಭೀತಿ ಮುಂತಾದ್ದರ ನಿವಾರಣಾರ್ಥವಾಗಿ ಯಂತ್ರಗಳನ್ನು ಬರೆಯುವ ಲಕ್ಷಣ, ಕ್ರಮ, ಅದಕ್ಕೆ ಮಾಡತಕ್ಕ ಪೂಜೆ ಮುಂತಾದ ವಿವರಣೆ, ಅದರಿಂದಾಗುವ ಫಲಗಳು, ಹೀಗೆಯೇ ಮಂತ್ರಸಾಧನಾಕ್ರಮ ಮುಂತಾದವು ಎಂತಹ ಮೂಢರಿಗೂ ತಿಳಿಯುವಂತೆ ವಿವರಿಸಲ್ಪಟ್ಟಿದೆ. ಇದರಲ್ಲಿ ಶಾಸ್ತ್ರೋಕ್ತಗಳಾದ ಯಂತ್ರಗಳನ್ನು ಬರಿಯುವುದರಲ್ಲಿ ೧೦೦ ವಿಧಗಳಾದ ಯಂತ್ರಗಳ ನ್ಯಾಯವಾದ ಚಿತ್ರಗಳೂ ಪ್ರಕಟಿಸಲ್ಪಟ್ಟಿವೆ. ಈ ಅಧ್ಯಾಯದಲ್ಲಿ—೧೨ ತಿಂಗಳುವರಿವಿಗೆ ಬಾಲಗ್ರಹಚಿಕಿತ್ಸೆ ಮತ್ತು ಯಂತ್ರಗಳು, ಹನ್ನೆ

ಮೂಗುಪೆಟ್ಟುನೋವು, ವಾಯುನೋವುಗಳಿಗೆ, ಮೂಲಿಕೆಗಳ ಕ್ಷಾರ ತೆಗಿಯುವ ವಿಧಾನ, ಪೀನಾಶಿ ಚಿಕಿತ್ಸೆ, ಅಷ್ಟಗುಲ್ಮಕ್ಕೆ, ಖಜ್ಜಿ ತುರಿ ಕುರುಗಳಿಗೆ, ಕರಪಾಣಿ ಮತ್ತು ವಿಷಪುರಿಗೆ, ಜಲಮಲಕಟ್ಟಿದ್ದಕ್ಕೆ, ಹೊಟ್ಟೆಉಬ್ಬರಕ್ಕೆ, ವಾಂತಿ ಮತ್ತು ವಾಕರಿಕೆಗೆ, ಕುಸುಮರೋಗಕ್ಕೆ, ೧ನೇ ತರಹ ಜ್ವರಾಂಕುಶಮಾತ್ರೆ, ಕಠಿಣವಾದ ಛಳಿಜ್ವರಕ್ಕೆ, ೨ನೇ ತರಹ ಜ್ವರಾಂಕುಶಮಾತ್ರೆ ಬೇದೀಗೆ, ಸಕಲಜ್ವರ ಮತ್ತು ಛಳಿಜ್ವರಕ್ಕೆ, ಗಂಡೌಷಧಿ, ಹಯಪತಿಚೂರ್ಣ, ತಾಳಗಾದಿಚೂರ್ಣ, ಮಹಾತಾಳೀಸಾದಿಚೂರ್ಣ, ಅಶ್ವಗಂಧಿಚೂರ್ಣ, ಖಂಡಾದ್ರಿಚೂರ್ಣ, ಗಾಜುಚೂರ್ಣ, ದ್ರಾಕ್ಷಾದಿಚೂರ್ಣ, ಭೃಂಗಾದಿಚೂರ್ಣ, ಏಲಾದಿಚೂರ್ಣ, ಬಡಬಾಗ್ನಿ ಚೂರ್ಣ, ಇಂಗುವಾದಿಚೂರ್ಣ, ರಾಸ್ನಾದಿಚೂರ್ಣ, ಗಂಧಕಾದಿಚೂರ್ಣ, ಚಂದ್ರೋದಯಚೂರ್ಣ,

ಈ ಬಗ್ಗೆ ನಮ್ಮ ಧಾರವಾಡ ಜಿಲ್ಲೆಯು ಹೆಜ್ಜೆಯು ಸಹಾಯಕಾರಿ ಸಂಘಗಳ ಸಂಬಂಧವಾಗಿ ಮುಂಬಯಿ ಇಲಾಖೆಯ ಉಳಿದ ಭಾಗಗಳಿಗಿಂತ ಮುಂದೆ ಇರುವುದೆಂಬುದು ಶಾನೆ ಅಭಿಮಾನಪಡತಕ್ಕ ಸಂಗತಿಯಾಗಿದೆ. ಅದರಲ್ಲಿ ತಾಲ್ಲೂಕು ಸಂಘಗಳ ಪರಿಷತ್ತನ್ನು ಕೂಡಿಸಿದ್ದರಿಂದಂತೂ ಬಂಗಾರಕ್ಕೆ ಕುಂದಣ ಕೂಡಿಸಿದಂತೆ ಬಹು ಶೋಭೆಯನ್ನೂ ಅನಂದವನ್ನೂ ಹೊಂದಿತು. ಇದು ನಮ್ಮೆಲ್ಲರಿಗೂ ಅತ್ಯಂತ ಸಂತೋಷದಾಯಕವಾದ ಮಾತೇ ಸರಿ. ಮೊದಲು ನಾಮದಾರ ರಾ॥ ಬ॥ ರೊದ್ದ ಶ್ರೀನಿವಾಸರಾಯರು ಅಂದು ತೋರಿಸಿದಂತೆ ದೊಡ್ಡದೊಡ್ಡ ಪಟ್ಟಣಗಳಲ್ಲಿ

ಘಗಳ ವಾರ್ಷಿಕ ಸಭೆಗಳು ಆಗು
ಡು ಜನರು ಹೋಗಿ ಸಭೆಯಲ್ಲಿ ಚ
ಗಳನ್ನು ಕೇಳಿ ತಿಳಿದುಕೊಂಡು ತಾ
ನ್ನು ಊರ್ಜಿತಾವಸ್ಥೆಗೆ ತರಲಿಕ್ಕೆ ತ
ವುದಿಲ್ಲ. ಈ ಅನನುಕೂಲತೆಯು ನಿ
ಮೊದಲು ರಾ॥ಸಾ॥ ರಾಘವೇಂದ್ರರ
ಸಾ॥ ಅಣ್ಣೀಗೇರಿ ಇವರು ತಾ॥ ಸ
ಕೂಡಿಸಬೇಕೆಂದು ಯೋಚಿಸಿದರ
ನಾಗರಿಕರೂ, ಯಾವತ್ತು ಸಾ
ಮನಮುಟ್ಟಿ ಪ್ರಯತ್ನಮಾಡತಕ್ಕ
ಇಲ್ಲಿ ನೆರೆದ ಪರಿಷತ್ತಿನಿಂದಲೇ ಬ
ಮಸಾಹೇಬ ಇನಾಮತಿ ಇವರು
ಅಣ್ಣೀಗೇರಿಯ ಶ್ರೀಮಂತ ಶಂಕರ
ವ. ಪ್ರಯ್ಯ ದೇಶಪಾಂಡೆ ಶೇಷಗಿರಿ
ಸಾಯಿ, ಫಕೀರಪ್ಪ ಬಳ್ಳೊಳ್ಳಿ, ವ
ಅರ್. ಕುಲಕರ್ಣಿ, ನಾಯಕ,
ಈ ಮುಂತಾದ ಸದ್ಗೃಹಸ್ಥರು
ಈ ವಿಷಯವಾಗಿ ಒಂದು ಸ್ವಾ
ಲ್ಪಟ್ಟಿತು. ಸದರಿ ಕಮಿಟಿಗೆ ರಾವ
ವರು ಚೇರಮನ್ನರಾಗಿದ್ದರು.
ಪಡಿಸಿದಂತೆ ಜರಗುವ ಕೆಲಸದಲ್ಲಿ
ಯು ಆಕ್ಟಿಂಗ್ ಹೆ॥ ಮಾಸ್ತರ ಶಂ
ಇವರು ಮತ್ತು ಎಲ್ಲ ಅಸಿಸ್ಟೆಂಟ
ಡಿದರು. ಈ ಪರಿಷತ್ತಿನಲ್ಲಿ ನವ
ಣ ಎಲ್ಲ ಸೊಸೈಟಿಗಳ ಮೆಂಬರ
ತಮ್ಮತಮ್ಮ ಅನುಭವಗಳನ್ನು ತಿ
ನ್ನು ಮಾಡಯತ್ನಿಸುವವರ ಅಭಿ
ಡು ಅದರಂತೆ ಮಾಡಲಿಕ್ಕೆ ತಕ್ಕ

ಈ ಸಭೆಗೆ ಸಹಾಯಕಾರಿ
ದ ಮೆ॥ ಹೇಗಸಾಹೇಬ ಬಹಾದ
ಕ್ಟ ಡೆಪ್ಯುಟಿ ಕಲೆಕ್ಟರ ಬಾಳೇ
ದ್ದೂರರವರೂ, ಪರಸ್ಪರ ಸಹಾ
ಸ್ಟೆಂಟ್ ರಜಿಸ್ಟ್ರಾರ ಮಿ॥ ಗೊ
ಕಬಾಡ ಮಾಮಲೇದಾರ ನವಲ
ಲ್ ಮಾಮಲೇದಾರ ಮಿ॥ ದಿವೆ
ಪೂರ, ಅಸಿಸ್ಟೆಂಟ್ ಮಿ॥ ಹೂ
ಅಗ್ರಿಕಲ್ಚರ ಓವ್ಹರಸಿಯರ್
ಕೀಶಾಲಾ ಹೆಡ್‌ಮಾಸ್ತರ ಮೇ
ಮದಾರ ರಾವಬಹಾದ್ದೂರ ರೆ
ಮಲಾಪೂರ, ಮಿ॥ ಹೆರ್ಲೆಕರ
ರಾವ ಚಿಟಗುಬ್ಬಿ, ಮಿ॥ ಶಾಂ
ಕೀಲ, ರಾವಸಾಹೇಬ ಶಿವಾ
ಅಂತಲಗಿ, ವಕೀಲ ನಿಂಗನಗ
ಸಾಕವಾಡಿ, ಕೆಟ್ಟಾಚಾರ್ಯ
ಅಗಡಿ, ಮಹಾದೇವರಾವ ಕು
ಯದ ಕಳಕಳಿಯುಳ್ಳವರೂ
ರಿಂದ ಈಗ ಇದೀನವಲಗುಂ
ಗೆ ಮೇಲೆ ಬರೆದ ಯಾವತ್ತು
ಲಾಭ ದೊರೆಯಿತೆಂಬುದಿಷ್ಟೆ
ಕ್ಕೆದು ಬಂದ ಎಲ್ಲ ಜನರಿಗೆ
ಗಳ ತತ್ವಗಳ ಅಂಕುರವು
ಏನೂ ಅಡ್ಡಿ ಇಲ್ಲ.

ಮೊದಲು ಅಣ್ಣೀಗೇರಿ
ರಚಿಸಿದ ಕೆಳಗೆ ಬರೆದ ಸ್ವಾ

“ ಲಗ್ನಾಲಾಜಾತೋವಿಪಾದ್ವಾರಕಾಪು ” ಈ ಮರಾಠಿ ಪದ್ಯದಂತೆ

ಸ್ವಾಗತವನುಮಾಳ್ಪೆನು ಅನುರಾಗದಿಂದಲಿ ॥ಪ॥ ಬಾಗಿಕರವಮುಗಿದು ಸುಗುಣಿ ॥ ಹೇಗದೊರೆಗೆನಾಂ ॥ಅ॥ ಸಂಘಗಳ ಸುಸಂಗತಿಯು ಇಂಗಿತವರಿತ ॥ ಆಂಗ್ಲವರ್ಯಹೇಗ ದೊರೆಗೆ ಸಂಘಪತಿಯಲಿ ॥೧॥ ಧೀರಗೆ ಸುವಿಚಾರಗೆ ಪರಮಾದರವಲಿನಾಂ ॥ ಸಾರಸುಗುಣಪೂರದಯಾ । ವಾರಜಲಧಿಗೆ ॥೨॥ ಅರ್ಥಯುಳಿಪಾರ್ಥಿಪೆನಾಂ । ಸ್ವಾರ್ಥರಹಿತಗೆ ॥ ಕರ್ತೃಕಾರಿಯಾಗಿಪರ । ಮಾರ್ಥಮಾಳ್ಪಗೆ ॥೩॥ ಮನ್ನಣೆಯೊಳ್ ಮಾನ್ಯರೆನಿಪ । ಸರ್ವಜನರಿಗೆ ॥ ಸನ್ನುತಾಸನಕೆ ಬರ್ಪಬಿನ್ನಹದಲಿ ॥೪॥

ಬಳಿಕ ನಾಮದಾರ ರಾ॥ ಬ॥ ರೊದ್ದ ಸಾಹೇಬರು ಅಂದದ್ದೇನಂದರೆ:—ಮೆ॥ ಹೇಗಸಾಹೇಬರವರು ಮಳೆಗಾಲದಲ್ಲಿ ಪುಣೆಯಲ್ಲಿಯೇ ನಿಂತು ವಿಶ್ರಾಂತಿ ತಕ್ಕೊಳ್ಳತಕ್ಕ ಸಮಯವಾಗಿದ್ದರೂ ಇಲ್ಲಿಗೆ ಬಹು ದೂರದಿಂದ ಬಂದದ್ದಕ್ಕಾಗಿ ನಮ್ಮೆಲ್ಲರಿಗೂ ಅತ್ಯಾನಂದವಾಗಿರುವುದು. ಇದಕ್ಕಾಗಿ ನಾವೆಲ್ಲರೂ ಅವರಿಗೆ ತುಂಬಾ ಕೃತಜ್ಞರಾಗಿದ್ದೇವೆ. ಅನಂತರ ಮೆ॥ ಹೇಗಸಾಹೇಬರವರಿಗೆ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಬೇಕೆಂದು ಸೂಚಿಸಿದರು. ತರುವಾಯ ರಾವಸಾಹೇಬ

ಳ ಕಾರ್ಯಭರವನ್ನು ಆದ ಮೂಲಕ ಇವಕ್ಕೆ ಸಂಬಂಧ[illegible] ರೂ ಮತ್ತು ಸಂಬಂಧವಿಲ್ಲದ ಅನೇಕ ಸದ್ಗೃಹಸ್ಥರೂ ಇಲ್ಲ ನೆರೆದಿರುವರು. ತಾವೆಲ್ಲರೂ ಶ್ರಮಪಟ್ಟು ತಮ್ಮ ಅಮೌಲ್ಯವಾದ ವೇಳೆಯನ್ನು ವೆಚ್ಚಮಾಡಿಕೊಂಡು ಇಲ್ಲಿಗೆ ಬಂದದ್ದಕ್ಕಾಗಿ ನಾನು ನಿಮ್ಮ ಉಪಕಾರವನ್ನು ನೆನೆಸುವೆನು.

ಇನ್ನು ಸಂಘಗಳ ಸಂಬಂಧವಾಗಿ ನನಗೆ ತೋರಿದ ಎರಡು ಮಾತುಗಳನ್ನು ಹೇಳುವೆನು. ಈ ಜಿಲ್ಲೆಯೊಳಗೆ ಈಗ ಅನೇಕ ಸಂಘಗಳಾಗಿವೆ. ಹತ್ತುವರ್ಷಗಳ ಕೆಳಗೆ ಒಂದೂ ಇದ್ದಿಲ್ಲ. ಒಂದು ಸಂಘ [illegible]ಪಿಸಬೇಕೆಂದರೆ ಎಷ್ಟೋ ಶ್ರಮವಾಗುತ್ತಿತ್ತು. ಈಗ ಜನರು ತಾವಾಗಿಯೇ ಸಂಘಗಳನ್ನು ಸ್ಥಾಪಿಸುವುದಕ್ಕೆ ಉತ್ಸುಕತೆಯುಳ್ಳವರಾಗಿ ಅನೇಕ ಅರ್ಜಿಗಳನ್ನು ಕೊಡುತ್ತಿದ್ದಾರೆ. ಈ ಅರ್ಜಿಗಳ ಮೇಲಿಂದ ಸಂಘಗಳ ಸದ್ಯಸ್ಥಿತಿಯು ಚೆನ್ನಾಗಿರುತ್ತದೆಂದು ಹೇಳಬಹುದು. ಸರಕಾರದವರು ಸಂಘಗಳ ವ್ಯವಸ್ಥೆಯಲ್ಲಿ ಕೈಹಾಕುವುದಿಲ್ಲ. ಸಂಘಗಳ ನೋಂದಣಿಗಾಗಿ ಬಹಳ ಅರ್ಜಿಗಳು ಬರುವುದರಿಂದ ಜನರು ಅದರಲ್ಲಿ ಎಷ್ಟು ಉತ್ಸುಕತೆಯುಳ್ಳವರಾಗಿರುವರೆಂಬುದು ಸ್ಪಷ್ಟವಾಗುತ್ತದೆ ಒಂದು ಸಂಘದ ಮೆಂಬರನ್ನು ಮತ್ತೊಂದುಸಂಘದ ಮೆಂಬರನಿಗೆ ಸಹಾಯಮಾಡುವಂತೆ ಒಂದು ಸಂಘವು ಮತ್ತೊಂದುಸಂಘಕ್ಕೆ ಸಹಾಯ [illegible] ಸಂಘಗಳ ರಚನೆಯು

ರಿಗೆ ತ್ರಿವಾರ ಜಯಘೋಷವು ಅರ್ಪಿಸಲ್ಪಟ್ಟ ಬಳಿಕ ಸಭಾಕಾರ್ಯವು ಮುಗಿಯಿತು. ಕಾರ್ಯಭರವನ್ನು ನಡೆದ ಕಾಲದ ಮಧ್ಯವೇಳೆಯಲ್ಲಿ ದೊರೆತ ಸೂಟಿಯಲ್ಲಿ ಎಲ್ಲ ಸದ್ಗೃಹಸ್ಥರಿಗೆ ಉಪಹಾರದ ವ್ಯವಸ್ಥೆಯಾದ ಬಳಿಕ ಪರಿಷತ್ತಿನಲ್ಲಿ ನೆರೆದ ಸದ್ಗೃಹಸ್ಥರ ಫೋಟೋ ತೆಗೆದುಕೊಳ್ಳಲ್ಪಟ್ಟಿತು. ಈ ವೇಳೆಗೆ ಪರಿಷತ್ತಿನ ಕೆಲಸವು ಅತ್ಯುತ್ತಮವಾದ ಪ್ರೇಕ್ಷಣೀಯ ಶೋಭೆಯಿಂದ ನಡೆದಂತೆ ಈ ಮೊದಲು ಎಲ್ಲಿಯೂ ಕೇಳಿ ಕಂಡದ್ದಾಗಲಿಲ್ಲ.

ಪ್ರೇಕ್ಷಕರಲ್ಲೊಬ್ಬ.

ವೀರಶೈವ ವಿದ್ಯಾಭಿವೃದ್ಧಿ ಫಂಡು.

(ಕಳೆದವಾರದ ಶೇಷ.)

ಗುಬ್ಬಿ ಶೆಟ್ಟರ ಕಪ್ಪಣ್ಣಶೆಟ್ಟರ ಮೂಲಕ ಗುಬ್ಬಿ ಕಟ್ಟಿ ಬಸವಣ್ಣನ ಗುಡಿ ಶಾಂತಯ್ಯನವರ ಮಗನ ಲಗ್ನದಲ್ಲಿ ತೆಗೆದುದು. ೨-೦-೦

ಬೆಂಗಳೂರು ಯಸ್. ಕಲ್ಲಪ್ಪನವರ ಮೂಲಕ ಚೆನ್ನಪಟ್ಟಣದ ಗುರುಕಾರ್ ಮಲ್ಲಿಕಾರ್ಜುನಯ್ಯ ಬಿ. ಎ. ಯವರ ಮನೆಯಲ್ಲಿ ನಡೆದ ವಿರೂಪಾಕ್ಷಪುರದ ವೀರಣ್ಣನವರ ಮಕ್ಕಳ ಲಗ್ನದಲ್ಲಿ ತೆಗೆದುದು ೩-೦-೦

ಮೈಸೂರ್ ಸ್ಟಾರ್ ಆಫೀಸ್ ಮೂಲಕ ಆಯನೂರು ಬಿಲ್ ಒಡೇರ್ ಕೊಪ್ಪದ ರುದ್ರಪ್ಪನವರಿಂದ ಆಯನೂರು ಕೋಡಳ್ಳಿವಾಸಿ ಪಟೇಲ್ ಮಂಜಪ್ಪನವರ ಮಗಳ ಲಗ್ನದಲ್ಲಿ ತೆಗೆದುದು. ೧-೩-೦

ಕೊಡ್ಲಿಪೇಟೆ ಎ. ಎಂ. ಕರಿಬಸಪ್ಪನವರ ಮೂಲಕ ಕೊಡ್ಲಿಪೇಟೆ ಕಲ್ಲೆ ಶಾಂತಮಲ್ಲಪ್ಪನವರ ಮಗನ ದೀಕ್ಷಾಕಾಲದಲ್ಲಿ ತೆಗೆದುದು. ೨-೦-೦

ಬೆಂಗಳೂರು ಕೆ॥ ಶಿವಪ್ಪನವರ ಮೂಲಕ ತುಮಕೂರು ತಾ॥ ಹೊನ್ನುಡಿಕೆ ಯಜಮಾನ್ ಹೊನ್ನಶೆಟ್ಟಪ್ಪನವರು ತುಮಕೂರು ಷಾವು ರೇವಣ್ಣನವರು ಇವರಿಂದ ಹೊನ್ನುಡಿಕೆಯಜಮಾನರ ಹೊನ್ನಣ್ಣನವರ ಹೊನ್ನಶೆಟ್ಟಪ್ಪನವರ ಪುತ್ರಿಯ ಲಗ್ನದಲ್ಲಿ ತೆಗೆದುದು. ೨-೦-೦

ಗುಬ್ಬಿ ಯಜಮಾನ್ ರೇವಣ್ಣನವರ ಮೂಲಕ ಗುಬ್ಬಿ ತಾ॥ ಚನ್ನವೀರದೇವರ ರುದ್ರಯ್ಯನವರ ಮನೆಯಲ್ಲಿ ನಡೆದ ಲಗ್ನದಲ್ಲಿ ತೆಗೆದುದು. ೩-೦-೦

ಬೆಂಗಳೂರು ಅರಳೇಪೇಟೆ ದೇಶದ ಯಜಮಾನ್ ಬಸಪ್ಪನವರ ಮೂಲಕ ಅತ್ತಿಬೆಲೆ ದೊಡ್ಡನಂಜಣ್ಣನವರ ಮಾದಪ್ಪನವರ ಕುಮಾರ್ತಿ ಚಿ॥ಸೌ॥ ಮಹಾದೇವಮ್ಮನನ್ನ ಅತ್ತಿಬೆಲೆ ಗುರುಮಲ್ಲಪ್ಪನವರ ೨ ನೇ ಕುಮಾರ ಚಿ॥ ಪುಟ್ಟಯ್ಯನವರಿಗೆ ಕೊಟ್ಟು ಲಗ್ನ ನಡೆಸಿದ ಕಾಲದಲ್ಲಿ ವಧೂ ತಂದೆ ಮಾದಪ್ಪನವರಿಂದ ೨-೮-೦ ವರನ ಅಣ್ಣ ಬಸವಣ್ಣನವರಿಂದ ರೂ. ೨-೮-೦ ಜುಮ್ಲಿ ಬಂದದ್ದು ರೂಪಾಯಿ. ೫-೦-೦

ಒಟ್ಟು ರೂಪಾಯಿ ೬೧-೩-೦

(ಸಶೇಷ.)

ನೋಟೀಸು.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವುದೇನಂದರೆ:—ಶಿವಮೊಗ್ಗಾ ಡಿಸ್ಟ್ರಿಕ್ಟ ಶಿರಾಳಕೊಪ್ಪದಲ್ಲಿರುವ ಕುಬಸದ ಸಂಗಪ್ಪನವರ ಮಗ ಚನ್ನಮಲ್ಲಪ್ಪನವರು ಸಂಸಾರದ ಆಡಳಿತ ನೋಡತಕ್ಕ ಶಕ್ತಿ ಇಲ್ಲದವರೆಂದು ಸದರಿ ಸಂಗಪ್ಪನವರೂ ಚನ್ನಮಲ್ಲಪ್ಪನವರೂ ಸಹ ೧೮೯೯ ನೆ ಡಿಶಂಬರ್ ತಾ॥ ೧೨ ರಲ್ಲಿ ಬರೆದು ಕೊಟ್ಟ ಅಧಿಕಾರಪತ್ರದ ಮೇರಿಗೆ ಕರ್ನೆಲ್ಲಿ ಹಾಲಪ್ಪನವರು ಗುಡೇಕೋಟೆ ವಿರುಪಣ್ಣನವರು ನಡೆಸುತ್ತಿದ್ದ ಸದರಿ ಸಂಗಪ್ಪನವರ ಆಸ್ತಿಯು ಆಡಳಿತವು ಈಗ ನನ್ನ ಆಧೀನದಲ್ಲಿ ಇದೆ. ಸದರಿ ಚನ್ನಮಲ್ಲಪ್ಪನವರು ಈಗ ಕೆಲವು ಜನರ ದುರ್ಬೋಧನೆಗೆ ಒಳಗಾಗಿ ಆಸ್ತಿಪರಾಧೀನಮಾಡುತ್ತಾರೆಂದು ತಿಳಿಯುತ್ತೇನೆ. ಅವರಿಂದ ಬರೆಸಿಕೊಂಡವರಿಗೆ ಸದರಿ ಸಂಗಪ್ಪನವರ ಆಸ್ತಿಯಲ್ಲಿ ಯಾವ ಬಾಧ್ಯತೆಯೂ ದೊರೆಯಲಾರದು.

ಕುಬಸದ ಚನ್ನಬಸಪ್ಪ, ಬಿನ್. ಚನ್ನಮಲ್ಲಪ್ಪನ ರುಜು.

ಶ್ರೀಗುರುಪ್ರಸನ್ನಃ.

ಶ್ರೀಮನ್ನಿರಂಜನಮೂರ್ತಿ ಶ್ರೀಗುರು ಬಸವಸ್ವಾಮಿ
ಬಿಳ್ಳೂರಮಠ ಇವರ ಕೃಪಾಛತ್ರದೊಳಗಿನ
ಅಂಗಡಿಯು.

ಮುಂಬಯಿಯಲ್ಲಿಂದ ಗಂಗಾಧರಪ್ಪಾ ಸಂಗಪ್ಪಾ ಸಾಬೋಜಿ ಮತ್ತು ಕಾಡಪ್ಪಾ ಶಿವಪ್ಪಾ ಮರೀಗುದ್ದಿ ಇವರು ತಿಳಿಯಪಡಿಸುವುದೇನಂದರೆ:—ನಾವು ಮಿತಿ ಶಕೆ ೧೮೩೭ ರಾಕ್ಷಸ ಸಂವತ್ಸರದ ಜ್ಯೇಷ್ಠ ಬಹುಳ ೯ ಸೋಮವಾರ ಪ್ರಾತಃಕಾಲದ (ಸ್ಟಾ. ಟಾ.) ೭ ಘಂಟೆಗೆ ಸುಮುಹೂರ್ತದಿಂದ ದಲಾಲಿ ಮತ್ತು ವ್ಯವಹಾರದ ಅಂಗಡಿಯನ್ನು ಸ್ಥಾಪಿಸಿ ಶ್ರೀ ಮಹಾಲಕ್ಷ್ಮಿ ಮತ್ತು ಶ್ರೀ ಸರಸ್ವತಿಪೂಜನವನ್ನು ಸಮಾರಂಭದಿಂದ ಮಾಡಿರುತ್ತೇವೆ. ತಮಗೆ ಬೇಕಾದ ಮಾಲನ್ನು ತರಿಸಿಕೊಳ್ಳಬೇಕು ಮತ್ತು ಮಾರಾಟದ ಬದಕನ್ನೂ ಕಳುಹಿಸಬೇಕು. ಕೆಲಸವನ್ನು ಸತ್ಯದಿಂದಲೂ ಕಾಳಜಿಯಿಂದಲೂ ಮಾಡುತ್ತೇವೆ. ಈ ನಮ್ಮ ಹೊಸ ಅಂಗಡಿಯಿಂದ ಉಭಯತರಿಗೂ ಪ್ರೀತಿ ಮತ್ತು ದ್ರವ್ಯದ ಲಾಭವು ವಿಶೇಷವಾಗಿ ಆಗಬೇಕೆಂದು ನಮಗಿದ್ದ ಅಪೇಕ್ಷೆಯನ್ನು ಪೂರ್ಣಮಾಡಲು ಶ್ರೀಗುರು ಸಮರ್ಥನಿದ್ದಾನೆ.

ಖ್ಯಾತಿಧಾರಣೆ.

ಅರಶಿಣ	ಕುಂಕುಮ	ಭಂಗಾರ	ಬೆಳ್ಳಿ
೬	೫	೨೪-೧೨-೯	೬೮-೮-೦

ಪತ್ತಾ

ವಿಠ್ಠಲದಾಸ ಬಿಲ್ಡಿಂಗ ೨ ನೇ ಮಜಲು ಬ್ಲಾಕನಂಬರ ೩ ಪ್ರಿನ್‌ಸೆಸ್ ಸ್ಟ್ರೀಟ ಪೋಷ್ಟ ಕಾಳಬಾದೇವಿ ತಾ॥ ೫-೩-೧೫ } ತಮ್ಮ ಗಂಗಾಧರಪ್ಪಾ ಸಂಗಪ್ಪಾ ಸಾಬೋಜಿ.

ಮೈಸೂರು ಸ್ಟಾರ್ ಚಂದಾದಾರರಲ್ಲಿ ವಿನಂತಿ.

ಮುದ್ರಣಕಾರ್ಯಕ್ಕೆ ಅವಶ್ಯಕವಾದ ಕಾಗದ, ಶಾಯಿ ಮೊದಲಾದ ಸಾಮಗ್ರಿಗಳೆಲ್ಲವೂ ಯೂರೋಪುದೇಶದಿಂದಲೇ ಭರತಖಂಡಕ್ಕೆ ಯಾವಾಗಲೂ ಬರಬೇಕಾಗಿರುವುದು. ಆದರೆ ದುರ್ದೈವವಶಾತ್ ಈಗ ಆ ದೇಶದಲ್ಲಿ ಪ್ರಾಪ್ತವಾಗಿರುವ ಘೋರಯುದ್ಧದ ದೆಸೆಯಿಂದ ಈ ಸಾಮಗ್ರಿಗಳು ಸರಾಗವಾಗಿ ಬರಲಿಕ್ಕಿಲ್ಲವಾದುದರಿಂದಲೂ ಶತ್ರುರಾಜ್ಯಗಳಿಂದ ಮತ್ತೂ ಬೆಲಜಿಯಮ್ಮಿನಿಂದ ಸುತರಾಂ ಬರುವುದು ಕಟ್ಟಾಗಿರುವುದರಿಂದಲೂ ಇಲ್ಲಿ ಪದಾರ್ಥಗಳ ಬೆಲೆಯು ನಿತ್ಯದಲ್ಲೂ ಏರುತ್ತಿದೆ. ಈ ಕಾರಣದಿಂದ ಆವಶ್ಯಕವಾದ ಕಾಗದ ಮೊದಲಾದ ಸಾಮಗ್ರಿಗಳನ್ನು ನಾವು ಶೇಖರಿಸಿಟ್ಟುಕೊಳ್ಳಬೇಕಾಗಿರುವ ಪ್ರಯುಕ್ತ ಚಂದಾವಧಿಯು ಪೂರೈಸಿರುವವರಿಗೆಲ್ಲಾ ಪತ್ರಿಕೆಯನ್ನು ವಿ. ಪಿ ದ್ವಾರ ಕಳುಹಿಸುತ್ತಿರುವೆವು. ಆದರೆ ಕೆಲ ಮಹನೀಯರು ವಿ. ಪಿ. ಯನ್ನು ಹಿಂದಿರುಗಿಸಿ ಕಾಗದದ ಬೆಲೆಯೇರಿಕೆಯಿಂದ ನಷ್ಟಪಡುವುದರ ಜತೆಗೆ ಪೋಸ್ಟೇಜಿನ ನಷ್ಟವನ್ನುಂಟುಮಾಡುತ್ತಿರುವರೆಂದು ತಿಳುಹಲು ಖೇದವಾಗುತ್ತದೆ. ಇತಃಪರಃ ದಯಾರ್ದ್ರಹೃದಯರಾದ ನಮ್ಮ ಚಂದಾದಾರರು ಆ ರೀತಿ ಮಾಡದೆ ವಿ. ಪಿ. ಹಣವನ್ನು ಸಲ್ಲಿಸಿ ಸ್ಟಾರ್‌ಪತ್ರಿಕೆಯು ನಿರ್ವಿಘ್ನವಾಗಿ ನಡೆದುಕೊಂಡು ಹೋಗುವಂತೆ ಮಾಡುವರೆಂದು ಸಂಪೂರ್ಣವಾಗಿ ನಂಬಿರುತ್ತೇವೆ.

ಮ್ಯಾನೇಜರ್.

ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದ ಪಟಗಳು

91

ಯುದ್ಧಕ್ಕೆ ಸೇರಿರತಕ್ಕ ಪ್ರಮುಖ ದಳಪತಿಗಳ ಪಟಗಳೂ, ವಿವಿಧ ಕದನಗಳ ಪಟಗಳೂ ಯುದ್ಧದ ಹಡಗುಗಳ ಪಟಗಳೂ, ಯುದ್ಧಕ್ಕೆ ಸಂಬಂಧಪಟ್ಟ ಪಟ್ಟಣಗಳ ಪಟಗಳೂ, ಇನ್ನೂ ಅನೇಕ ಚಿತ್ರಗಳೂ ಸೇರಿರತಕ್ಕ ಪುಸ್ತಕ ನಮ್ಮಲ್ಲಿ ಮಾರಾಟಕ್ಕೆ ಬಂದಿರುತ್ತದೆ. ಇದು ಬಹು ಅಪೂರ್ವವಾದ ಪುಸ್ತಕವೆನ್ನುವದರಲ್ಲಿ ಸಂಶಯವಿಲ್ಲ. ಜಾಗ್ರತೆ ಬರೆದು ತರಿಸಿಕೊಳ್ಳಿ ಕ್ರಯ ೪ ಆಣೆ; ವಿ. ಪಿ. ಮೂಲಕ ೬ ಆಣೆ.

ಒಂದೇ ದಪ್ಪನಾದ ಆರ್ಟ್ ಕಾಗದದ ಮೇಲೆ ಇಪ್ಪತ್ತೆರಡು ಯುದ್ಧಕ್ಕೆ ಸಂಬಂಧಪಟ್ಟ ಪಟಗಳು! ಇದರಲ್ಲಿ ಜಾರ್ಜ್ ಚಕ್ರವರ್ತಿ, ರಷ್ಯಾ ಚಕ್ರವರ್ತಿ, ಜರ್ಮನಿ ಚಕ್ರವರ್ತಿಯವರೇ ಮೊದಲಾದ ಸುಂದರವಾದ ಪಟಗಳು. ಕ್ರಯ ೨ ಆಣೆ; ವಿ. ಪಿ. ಯಲ್ಲಿ ೪ ಆಣೆ.

ನಮ್ಮ ವಿಳಾಸ:—ದಿ ಜನರಲ್ ಏಜಸಿ. ಮೈಸೂರು.



42

ಹೊರ್ಡ್ ಕಂಪೆನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ-ಎಸ್. ಯು. ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ಊದುಬತ್ತಿಗಳು.

9

ವಿಧವಿಧವಾದ ಊದುಬತ್ತಿಗಳು ಸೇರು ೧ಕ್ಕೆ ೧೨-೦-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೋಲಾ ೧ಕ್ಕೆ ೧-೦-೦; ಹಸಿಗಂಧ ತೋಲಾ ೧ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ಕ್ಕೆ ೪ ಆಣೆ ಧೂಪದಗಟ್ಟಿ ೧ಕ್ಕೆ ೨ ಆಣೆ ಬಾಲಗ್ರಹಧೂಪ ಟಿನ್ ೧ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್‌ಸನ್ಸ್
ಸುಗಂಧಕಾರಿ, ಮೈಸೂರು.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

29

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಪರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತಪಿದ್ರೇಕವಾದವರು, ತೃಷೆಯುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫವುಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತ್ತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಅಪೂರ್ವಗ್ರಂಥ! ಅಪೂರ್ವಗ್ರಂಥ!!

ಬಳ್ಳಾರಿ ಶ್ರೀ ಮರಿಸ್ವಾಮಿಗಳು 3

ಸಕ್ಕರಿ ಕರಡೆಪ್ಪ

ಇವರ ಜೀವಿತಚರಿತ್ರೆ.

ಈ ಮಹಿಮರ ಚರಿತ್ರೆಯನ್ನು ಇಲ್ಲಿಯವರಿಗೂ ಯಾರೊಬ್ಬರು ಪ್ರಕಟನ ಮಾಡಿದ್ದಿಲ್ಲವೆಂಬುದು ತಿಳಿದದ್ದಾಗಿರುವುದಷ್ಟೆ. ಇಂತಹ ಅದ್ಭುತ ಮಹಿಮಶಾಲಿಗಳ ಚರಿತ್ರಗಳು ಅವಶ್ಯಕವಾಗಿಯೂ ಆದರಣೀಯಗಳಾಗಿರುವವು. ಈರ್ವರ ಮಹಿಮೆಯು ಅಸಾಧಾರಣವಾದುದು. ಒಂದೆ ದಿನ ಒಂದೆ ಕಾಲದಲ್ಲಿ ಬಳ್ಳಾರಿ, ಬೆಂಗಳೂರು, ಭೈರವಪುರ, ಎಂಬ ಮೂರು ಸ್ಥಳಗಳಲ್ಲಿ ಸಮಾಧಿಯನ್ನು ಹೊಂದಿದರೆಂಬುದೊಂದೆ ಅಪ್ರತಿಮ ಪ್ರಭಾವವನ್ನು ಸೂಚಿಸುತ್ತಿರುವುದು. ಇವರು ಅಲ್ಲಲ್ಲಿ ತೋರಿದ ಮಹಿಮೆಗಳು ಅನಂತವಾಗಿರುವವು; ಇದಲ್ಲದೆ ಇವರ ಶಿಷ್ಯನಾದ ಸಕ್ಕರಿ ಕರಡೆಪ್ಪನ ಅಪಾರ ಮಹಿಮೆಯು ವಿಶದವಾಗಿ ವರ್ಣಿಸಲ್ಪಟ್ಟಿರುವುದು. ಈ ಸಕ್ಕರಿ ಶರಣನಂತಹ ಶರಣನು ಇಡೀ ಪ್ರಪಂಚದಲ್ಲಿ ವೀರಶೈವ ಮತದೊಳಗೆ ಹುಟ್ಟುವುದು ಅಪರೂಪ. ಆ ಗುರುಶಿಷ್ಯರೀರ್ವರ ಚರಿತ್ರೆಗಳು ಒಂದು ಗ್ರಂಥದಲ್ಲಿ ತಯಾರುಮಾಡಿರುವೆವು. ಈ ಗ್ರಂಥವನ್ನೋದುವವರು ಖಂಡಿತವಾಗಿಯೂ ನೀತಿ, ಭಕ್ತಿ, ಜ್ಞಾನಗಳ ಕಡೆ ಮನಸ್ಸನ್ನು ಕೊಡದಿರಲಾರರು ಇದಲ್ಲದೆ ಶಿಷ್ಯರಾದ ಕಂಬಳಿಸ್ವಾಮಿಗಳು ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಶ್ರೀ ಕೃಷ್ಣರಾಜಒಡೆಯರ್ ಬಹದ್ದೂರರವರ ಮತ್ತು ಸಪೋತ ಇರುವ ಮಹಾಸ್ವಾಮಿಗಳ ಭಾವಚಿತ್ರಪಟವು ಪ್ರಥಮ ಪುಟದಲ್ಲಿ ಅಂದವಾಗಿಸಲ್ಪಟ್ಟಿರುವುದು. ಈ ಗ್ರಂಥವನ್ನು ತರಿಸಿಕೊಳ್ಳುವವರಿಗೆ ಪ್ರಾಚೀನಪಂಡಿತ ಗ್ರಂಥಗಳಿಂದ ಕ್ರೋಢೀಕರಿಸಲ್ಪಟ್ಟ ದಕಾಷ್ಯಕರತ್ನಾವಳಿ ಎಂಬುವ ಪುಸ್ತಕವನ್ನು ಪುಚಿತವಾಗಿ ಕಳಿಸುವೆವು. ನಿಮ್ಮ ವಿಳಾಸ ಚೆನ್ನಾಗಿರಲಿ. ಇದರ ಬೆಲೆ ವಿ. ಪಿ. ಸಹಿತ ರೂ. ೧-೨-೦.

ನಮ್ಮ ವಿಳಾಸ:—
ಬಸವರಾಜಕಂಪೆನಿ, ಬಳ್ಳಾರಿ.

೫೦೦ ರೂಪಾಯಿಗಳ ಬಹುಮಾನ

10

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ « ಸಾಲಾಮಿಸ್ರೀ ಮುರಬ್ಬಾವನ್ನು " ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಸಾಲಾಮಿಸ್ರಿಯ ಧಾರಣೆಯು ಜಾಸ್ತಿಯಾಗಿರುವದರಿಂದ ಅನೇಕರು ಉರುಳುಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುವದು ತಿಳಿದುಬರುತ್ತದೆ.

ಸಾಲಾಮಿಸ್ರಿ ಮುರಬ್ಬಾವು—ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವುದು.
ಸಾಲಾಮಿಸ್ರಿ ಮುರಬ್ಬಾವು—ನಿದ್ರೆಯಲ್ಲಿ ಧಾತುವು ಹೋಗುವುದನ್ನು ನಿಲ್ಲಿಸುವುದ.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಧಾತುಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕ್ಷಣ ಕ್ಷಣಕ್ಕು ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ವೃದ್ಧಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಶ್ವಾಸಬಾಸ ರೋಗಗಳನ್ನು ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹೊಟ್ಟೆಯಲ್ಲಿರುವ ಜ್ವರದಗಡ್ಡೆ ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೆಟ್ಟುಹೋಗಿರುವ ರಕ್ತವನ್ನು ಶುದ್ಧಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಳೆತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು.
ಸಾಲಾಮಿಸ್ರಿ ಮುರಬ್ಬಾವು—ಉತ್ಸಾಹ, ಧೈರ್ಯ, ಬುದ್ಧಿಕುಶಲತೆ, ಶರೀರಕಾಂತಿಯನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು—ತಾಂಬ್ರ, ಬೆಳ್ಳಿ, ಮತ್ತು ಬಂಗಾರ ಭಸ್ಮಕ್ಕಿಂತಲೂ ಉತ್ತಮವಾದುದು.
ಸಾಲಾಮಿಸ್ರಿ ಮುರಬ್ಬಾವು—ಸ್ತ್ರೀ ಸಂಗಕ್ಕೆ ಮೊದಲೆ ಧಾತು ಸ್ಖಲನವಾಗುವದನ್ನು ನಿಲ್ಲಿಸುವದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪುರಾ ಗುಣಕೊಡುತ್ತದೆ. ೨-೩ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು « ಸಾಲಾಮಿಸ್ರಿ " ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾವು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನಮ್ಮಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ ಕ್ಕೆ ಕ್ರಯ ೨—೦—೦ ರೂಪಾಯಿ. ಟಪ್ಪಾಲು ಖರ್ಚು ೧ ಡಬ್ಬಿಯಿಂದ ಡಬ್ಬಿಗಳ ವರೆಗೆ ೬ ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ.

ವಿಳಾಸ:—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
೫೫, ಅ ನ್ಯೂರೋಡ್ ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

9

ಗೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಹೊಡೆತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತುಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಪ್ಯರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು, ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ



ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈ ವಿಷಾರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇವೊಂದು ಬುಡ್ಡಿಯು ನಿಮ್ಮಲ್ಲಿರಲಿ ಮತ್ತೊಂದು ಸಹಾಯವ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುಡ್ಡಿಯ ಬೆಲೆ ೧—೦—೦

ಟಪಾಲ್‌ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈ ಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೯—೦
ಪರಮಾದಿಗಜಾಂಕುಶತಾರಾವಳಿ	೦—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲಚರಿತೆ	೦—೫—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯುವೆಚ್ಚ ಬೇರೆ.

ಆಯುರ್ವೇದ ವಿದ್ವಾನ್-ಬಿ. ವಿ. ಪಂಡಿತರ 40

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್‌ಕಸ್ತೂರಿ, ಚಿನ್ನದರೇಖು, ಲೋಹಭಸ್ಮ ಮುಂತಾದವುಗಳಿಂದ ವಂಶಪಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀಕರಕಸ್ತೂರಿಮಾತ್ರೆಗಳನ್ನು ತಾಂಬೂಲದೊಡನೆ ಅಥವಾ ಹಾಗೆ ಉಪಯೋಗಿಸಿದರೆ ಆಹಾರವು ಬೇಗನೆ ಜೀರ್ಣವಾಗಿ ಬಹಳಹೊತ್ತು ಬಾಯಿ ಘಮಘಮಿಸುತ್ತಿರುವುದು.

ಛಳಿಮಳೆಗಾಲಗಳಲ್ಲೂ, ಸೋಂಕುರೋಗಸ್ಥಳಗಳಲ್ಲೂ, ಪ್ರಯಾಣಕಾಲದಲ್ಲೂ, ಮಕ್ಕಳಿರುವ ಮನೆಗಳಲ್ಲೂ, ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಶೀತವಾಯು, ಕೆಮ್ಮು, ನೆಗಡಿ, ಅಜೀರ್ಣಭೇದಿ, ಮಲಬಂಧ, ವರಸೇಜ್ವರ, ಪ್ಲೇಗುಜ್ವರ, ಮಲೇರಿಯಾಜ್ವರ, ನಡುನೋವು, ಅರೋಚಕ, ಹಲ್ಲುನೋವು, ಮೈಕೈನೋವುಗಳು ಬಹಳಬೇಗನೆ ವಾಸಿಯಾಗುತ್ತವೆ. ಮಕ್ಕಳಿಗೆ ಸಂಜೀವನ-ಯಾವಾಗಲೂ ವಿಳಾಸವನ್ನು ಪರೀಕ್ಷಿಸಿ ಔಷಧವನ್ನು ಕೊಂಡುಕೊಳ್ಳಿರಿ-ಮೋಸಹೋಗಬೇಡಿರಿ. ೩೦ ಮಾತ್ರೆಯುಳ್ಳ ಸೀಸೆಯ ಬೆಲೆ ೦—೪—೦ ಆಣೆ. ಐದಕ್ಕೆ ಒಂದು ಮುಫತ್ತು. ಟಪಾಲ್‌ಖರ್ಚು ಬೇರೆ.

ಆಮೋದಿನಿ.

ಸಂಗೀತಗಾರರಿಗೆ ಅತ್ಯಂತ ಸುಖವನ್ನೂ, ವಿದ್ಯಾರ್ಥಿಗಳಿಗೆ ಆನಂದವನ್ನೂ, ಪ್ರಯಾಣಿಕರಿಗೆ ಆಯಾಸಪರಿಹಾರವನ್ನೂ, ಉಂಟುಮಾಡಿ ಬಿಸಿಲುಕಾಲದ ಅಥವಾ ಆಯಾಸದ ಬಾಯಾರಿಕೆಯನ್ನು ತಕ್ಷಣ ಅಣಗಿಸಿ, ಎಂತಹ ಕೆಮ್ಮು, ಉಬ್ಬಸಗಳನ್ನಾದರೂ ವಾಸಿಮಾಡಿ ಆಬಾಲವೃದ್ಧರಿಂದಲೂ ಹೊಗಳಲ್ಪಡುತ್ತಲಿರುವ ಕೈಗಂಡಸಿದ್ಧಾಮೃತ,ಮತ್ತಾವಮಾತ್ರೆಗಳೂ ಇಷ್ಟು ಮನೋಹರವಾಗಿಲ್ಲವೆಂಬುದನ್ನು ನಂಬಿರಿ! ೧೫೦ ಮಾತ್ರೆಯ ಸೀಸೆ ೦—೪—೦ ಆಣೆ. ಐದಕ್ಕೆ ಒಂದು ಹೆಚ್ಚು. ಟಪಾಲ್‌ಖರ್ಚು ಪ್ರತ್ಯೇಕ.

ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರು ಡಿ||

೧೯೧೫ನೆಯ ಇಸವಿ ಜುಲೈ ತಾ|| ೧೮ ರಿಂದ ೧೯೧೫ನೆಯ ಜುಲೈ ತಾ|| ೨೪ರವರೆಗೆ ಸಲ್ಲುವ ಶಾಲೀವಾಹನಶಕ ೧೮೩೭ ನೆಯ ರಾಕ್ಷಸನಾಮಸಂವತ್ಸರದ ಆಷಾಢ ಶು|| ಷಷ್ಠಿಯಿಂದ ಆಷಾಢ ಶು|| ತ್ರಯೋದಶಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ನಾ ತೇದಿ
18	[1]ಭಾನು	ಷಷ್ಠಿ	18-52	ಪ್ತಾಬಾ	2-32	3
19	[2]ಸೋ	ಸಪ್ತ	14-44	ಹಸ್ತ	0-38	4
20	ಮಂಗ	ಅಷ್ಟ	9-49	ಸ್ವಾತಿ	54-45	5
21	[3]ಬುಧ	ನವ	4-17	ಉವರಿ	54-17	6
22	[4]ಗುರು	ಏಕಾ	52-15	ಅನೂ	46-30	7
23	[5]ಶುಕ್ರ	ದ್ವಾ	46-18	ಜ್ಯೇಷ್ಠ	42-15	8
24	[6]ಶನಿ	ತ್ರ	39-56	ಮೂಲ	38-9	9

(1) ಸರ್ವತ್ರ ಸಪ್ತಮೀತಿಥಿಃ (2) ಘಂಟಾವತಾರಶರಕಾಲಸ್ವಾಮಿಗಳಾರಾಧನೆ. (3) ವೈವಸ್ವತಮನ್ವಾದಿಃ, ಕೆಂಪಚೆಲುವಾಜಮ್ಮಣಿಯವರ ವರ್ಧಂತೀ. (4) ಸ್ಮಾರ್ತ ಪ್ರಥಮೈಕಾದಶಿ, ಗೋಪದ್ಮವ್ರತಂ. (5) ವೈಷ್ಣವಪ್ರಥಮೈಕಾದಶಿ, ಶಯನದ್ವಾದಶಿ, ಆಡಿಶುಕ್ರವಾರ. (6) ಶನಿಪ್ರದೋಷಃ.

ಮೈಸೂರ್ ವೈ. ವಿರೂಪಾಕ್ಷಯ್ಯನವರಿಂದ ಸ್ಟಾರ್ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124

ಮೈಸೂರ್ ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಸಲ್ಪಡುವುದು.

ಮಹಿಶೂರಪುರೀತಾರಾ ಪರಮಧಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಕ್ಷೈಜ್ಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಸಾದ್ಗುಣ್ಯಾಲವಾಲಂವಲಂ ॥
ಸೀಮಾತೀತಗುಣಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿಳಿಯಂಸದಾಪೊರೆಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೧೪—೦

ಸಂಪುಟ ೨೮) ಮೈಸೂರ್ ಸ್ಟಾರ್ ಸರ್ ೧೯೧೫ ನೆಯ ಇಸವಿ ಜುಲೈ ತಾರೀಖು ೨೫ ನೆಯ ಭಾನುವಾರ. (ಸಂಚಿಕೆ ೨೯

ರಖಂವಾರ್ ಹೊಸ ಹಾರ್ಮೋನಿಯಂಗಳು.

ಮಿತ್ರರೇ! ನಿಮ್ಮ ಹಣವನ್ನು ಸದ್ವ್ಯಯಮಾಡುವುದು ಹೇಗೆ? ಕ್ರಯಕ್ಕೆ ತಕ್ಕ ಉತ್ತಮವಾದ ಪದಾರ್ಥವನ್ನು ಕೊಂಡುಕೊಳ್ಳುವುದೇ ಅಲ್ಲವೆ? ಹಾಗಾದರೆ ನಮ್ಮಿಂದ ಒಂದುಸಾರಿ ತರಿಸಿ ಪರೀಕ್ಷಿಸಿರಿ. ನೀವೂ ಅನೇಕಕಡೆಗಳಿಂದ ನಾನಾತರಹ ಹಾರ್ಮೋನಿಯಂಗಳನ್ನು ತರಿಸಿಕೊಂಡಿರುವಿರಿ, ಆದರೆ ಈ ಕೆಳಗೆ ವಿವರಿಸಿರುವ ಪ್ರಖ್ಯಾತರಾದ ಕಾರೀಗಾರರಿಂದ ಬಹಳ ಬಂದೋಬಸ್ತಾಗಿ ತಯಾರಿಸಲ್ಪಟ್ಟು ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುವ ಹಾರ್ಮೋನಿಯಂಗಳನ್ನು ಒಂದುಸಾರಿ ತರಿಸಿಕೊಂಡು ಪರೀಕ್ಷಿಸಿದರೆ ಪದಾರ್ಥದ ಸೊಗಸೂ, ಚಾಕ್ಷಿಕೆ, ಬಂದೋಬಸ್ತು, ಸ್ಪಷ್ಟವಾದ ಸ್ವರ ಇವೇ ಮೊದಲಾದ ಅತ್ಯುತ್ಕೃಷ್ಟವಾದ ಗುಣಗಳೂ, ಅಗ್ಗವಾದ ದರಗಳೂ ತಾವಾಗಿ ಗೋಚರವಾಗುತ್ತವೆಯಾದ್ದರಿಂದ ನಮ್ಮಿಂದಹಾರ್ಮೋನಿಯಂಗಳನ್ನು ತರಿಸಿಕೊಂಡವರಿಂದ ಸಂತೋಷಪೂರ್ವಕವಾದ ಸನ್ಮಾನಪತ್ರಿಕೆಗಳು ಪ್ರತಿನಿತ್ಯವೂ ಬರುತ್ತಲಿವೆ ಇವುಗಳ ಪೈಕಿ ಸ್ಥಳಸಂಕೋಚದಿಂದ ಒಂದನ್ನು ಮಾತ್ರ ಇಲ್ಲಿ ವಿವರಿಸಿದ್ದೇವೆ.

ಸಯ್ಯದ್ ಜಮಾಲ್‌ಸಾಬ್ ಸ್ಕೂಲ್‌ಮಾಸ್ಟರ್ ಬೇಲೂರು ತಾಲ್ಲೋಕು ಚನ್ನಹಳ್ಳಿಗ್ರಾಮ ಇವರು ಬರೆಯುವದು. ಸ್ವಾಮಿ! ತಾವು ಕಳಿಸಿಕೊಟ್ಟ ಹಾರ್ಮೋನಿಯಂ ಪಾರ್ಸಲನ್ನು ಡಿಲಿವರೀ ತೆಗೆದುಕೊಂಡೆನು. ನೋಡುವಲ್ಲಿ ಪದಾರ್ಥ ಬಹಳಸೊಗಸಾಗಿಯೂ ಬಂದೋಬಸ್ತಾಗಿಯೂ ಇರುವುದರಿಂದ ನನ್ನ ಮನಸ್ಸಿಗೆ ಬಹು ಸಮರ್ಪಕವಾಯಿತು. ಇದನ್ನು ನೋಡಿ ನನ್ನ ಸ್ನೇಹಿತರು ಇನ್ನು ಕೆಲವಕ್ಕೆ ಆರ್ಡರ್ ಕೊಡುವುದರಲ್ಲಿಧಾರೆ.

ಆರ್‌ಡರಿನ ಸಂಗಡ ಅಡ್ವಾನ್ಸು ಕಳುಹಿಸಿಕೊಡುತ್ತೇವೆ. 6

ಕ್ರಯದ ತಪ್ಸೀಲ್.

೧. « ಬಿಜಲೀಫ್ಲೂಟ್ " ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೨೫—೦—೦
೨. ಡಿಟೋ ಉತ್ತಮತರಹ ಹಾರ್ಮೋನಿಯಂ	೧ ಕ್ಕೆ ೨೩—೮—೦
೩. « ಕೋಹಿನೂರು ಫ್ಲೂಟ್ " ಸಿಂಗಲ್‌ರೀಡ್ಸ್‌ಹಾರ್ಮೋನಿಯಂ	೧ ಕ್ಕೆ ೨೯—೮—೦
೪. ಡಿಟೋ ನಮೂನೆ ಅತ್ಯುತ್ತಮವಾದ ಹಾರ್ಮೋನಿಯಂ	೧ ಕ್ಕೆ ೩೦—೮—೦
೫. « ಮೋಸ್ಲೀಫ್ಲೂಟ್ " ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೩೫—೦—೦
೬. ಪ್ರಖ್ಯಾತಿಹೊಂದಿದ ಎಂ. « ಮೋರ್ಹೆಫ್ಲೂಟ್ " ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೩೩—೮—೦
೭. ಪ್ರಖ್ಯಾತಿಹೊಂದಿದ ಎಂ. « ಮೋರ್ಹೆಫ್ಲೂಟ್ " ಹಾರ್ಮೋನಿಯಂನಲ್ಲಿ ಅತ್ಯುತ್ತಮವಾದ ಸಿಂಗಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೪೦—೮—೦
೮. « ಕೊಹಿನೂರ್‌ಫ್ಲೂಟ್ " ಡಬ್ಬಲ್‌ರೀಡ್ಸ್‌ಹಾರ್ಮೋನಿಯಂ	೧ ಕ್ಕೆ ೪೦—೮—೦
೯. « ಬಿಜಲೀಫ್ಲೂಟ್ " ಡಬ್ಬಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೪೦—೦—೦
೧೦. « ಮೋಸ್ಲೀಫ್ಲೂಟ್ " ಡಬ್ಬಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೪೩—೮—೦
೧೧. ಪ್ರಖ್ಯಾತಿಹೊಂದಿದ ಎಂ. « ಮೋರ್ಹೆಫ್ಲೂಟ್ " ಡಬ್ಬಲ್‌ರೀಡ್ಸ್ ಹಾರ್ಮೋನಿಯಂ	೧ ಕ್ಕೆ ೫೦—೮—೦
೧೨. ಡಿಟೋ ಎಂ. « ಮೋರ್ಹೆಫ್ಲೂಟ್ " ಡಬ್ಬಲ್‌ರೀಡ್ಸ್ ಅತ್ಯುತ್ತಮವಾದ ಹಾರ್ಮೋನಿಯಂ	೧ ಕ್ಕೆ ೫೨—೮—೦

ಹಾರ್ಮೋನಿಯಂಗಳಿಗೆ ಆರ್‌ಡರ್ ಮಾಡತಕ್ಕವರು ನಿಮ್ಮ ವೂರಿಗೆಗೆಸಮೀಪವಿರುವ ರೈಲ್ವೇಸ್ಟೇಷನ್ ಬರೆಯುವದಲ್ಲದೆ ೫ರೂಪಾಯಿ ಅಡ್ವಾನ್ಸು ಕಳುಹಿಸಿಕೊಡಬೇಕು. ಅಡ್ವಾನ್ಸಿಲ್ಲದೇ ಬರತಕ್ಕ ಆರ್‌ಡರ್‌ಗಳಿಗೆ ಖಂಡಿತವಾಗಿಯೂ ರವಾನಿಸಲಾಗುವುದಿಲ್ಲ.

ಕಸ್ತೂರಿಮಾತ್ರೆ ಪ್ರಖ್ಯಾತರಾದ ಘನ ವೈದ್ಯರಿಂದ ತಯಾರಿಸಲ್ಪಟ್ಟ ಕಸ್ತೂರಿಮಾತ್ರೆ ಶೀಶೆ 1 ಕ್ಕೆ 0-4-0. 5 ಶೀಶೆಗೆ ಒಂದು ಶೀಶೆ ಇನಾಂ ಪೋಸ್ಟೇಜು ಅಲಾಯಿದಾ 12 ಶೀಶೆ ಒಟ್ಟಿಗೆ ತರಿಸಿಕೊಳ್ಳುವರಿಗೆ ಪೋಸ್ಟೇಜು ಸೇರಿ 2-8-0

ಪರಿಮಳಕಾರ್ಡುಗಳು ಒಂದುಕಾರ್ಡನ್ನು ಜೇಬಿನಲ್ಲಿಟ್ಟುಕೊಂಡಿದ್ದರೆ ಸುವಾಸನೆಯಾದ ಪುಷ್ಪವಾಟಿಗಳ ಮಧ್ಯದಲ್ಲಿರುವಂತೆ ಬಹು ಮನೋಹರವಾಗಿರುತ್ತೆ ಕಾರ್ಡು 1 ಕ್ಕೆ ಕ್ರಯ 0-1 0 12 ಕ್ಕೆ 0-10-0 ಪೋಸ್ಟೇಜು ಅಲಾಯಿದಾ ಒಂದು ಡಜನ್‌ಗಿಂತಲೂ ಕಡಿಮೆಯಾಗಿ ರವಾನಿಸಲಾಗುವುದಿಲ್ಲಾ.

ಸರ್‌ಸರ್‌ತಾಂಬೂಲಮಿತ್ರ 250 ಮಾತ್ರೆಗಳಿರುವ ಪೊಟ್ನ 1 ಕ್ಕೆ 0-2-6 ಒಂದು ಡಜನ್ ಒಟ್ಟಿಗೆ ತರಿಸಿಕೊಳ್ಳುವರಿಗೆ 1-10-0 ಕೊಡುವುದಲ್ಲದೆ ಪೋಸ್ಟೇಜು ಸಹಾ ಮಾಫಿ ಮಾಡಿದ್ದೇವೆ. ಇದರ ಸೇವನೆಯಿಂದಾಗತಕ್ಕ ಗುಣಗಳ ಪ್ರಿಂಟಾದ ಚೀಟಿ ಪಾರ್ಸಲಿನ ಸಂಗಡ ರವಾನಿಸಲಾಗುತ್ತೆ.

ಕೆಷಿಂತಾನ್ 45 ಮಾತ್ರೆಗಳ ಪೊಟ್ನ 1 ಕ್ಕೆ 0-2-0, 95 ಮಾತ್ರೆಗಳ ಪೊಟ್ನ 1 ಕ್ಕೆ 0-'-0, 200 ಮಾತ್ರೆಗಳ ಪೊಟ್ನ 1 ಕ್ಕೆ 0-7-0, 200 ಮಾತ್ರೆಗಳ ಟಿನ್ 1 ಕ್ಕೆ 0-9-0, 80 ಮಾತ್ರೆಗಳ ಟಿನ್ 1 ಕ್ಕೆ 0-4-0, 100 ಮಾತ್ರೆಗಳ ಶೀಸೆ 1 ಕ್ಕೆ 0-4-6.

ನಮ್ಮ ವಿಳಾಸ:—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್ ಕೃಷ್ಣರಾಜಮೊಹಲ್ಲಾ ಮೈಸೂರು.

ಓರಿಯಂಟಲ್ ಫಾರ್ಮಸಿ ಮೈಸೂರು.

25

ಪ್ರಸಿದ್ಧಿ ಗುಣಕಂಡ ಔಷಧಗಳು.

ಜ್ವರದಮಾತ್ರೆ - ಎಲ್ಲಾ ವಿಧದ ಜ್ವರವನ್ನೂ ಖಂಡಿತ ಗುಣಮಾಡುತ್ತೆ ೨೪ ಮಾತ್ರೆ ಶೀಷೆಗೆ ೮ ಆಣೆ.

ಬಾಲಸಂಜೀವಿನಿ—ಮಕ್ಕಳ ಜ್ವರ, ಕೆಮ್ಮು, ಎಳವು, ಹೊಟ್ಟೆವುಬ್ಬರ ಹೊಟ್ಟೆನೋವು ಅಜೀರ್ಣ, ಪಕ್ಕೆಸೆಳೆತ ಮಂದಇವೆಲ್ಲಾ ಖಂಡಿತ ಗುಣವಾಗುತ್ತೆ. ೧೦೦ ವರ್ಷದ ಅನುಭವಸಿದ್ಧವಾದುದು. ೧ ಡಬ್ಬಿಗೆ ೪ ಆಣೆ, ೫ ಡಬ್ಬಿಗೆ ೧ರೂ.

ಗೋರೋಚನದಮಾತ್ರೆ— ಮಕ್ಕಳಿಗೆ ಸುಖಭೇದಿನಾಡಿಸುತ್ತೆ. ೪೦ಮಾತ್ರೆ ಶೀಷೆಗೆ ೪ ಆಣೆ, ೫ ಶೀಷೆಗೆ ೧ ರೂ.

ರೋಗನಾಶಿನಿ—ಹವಾದೋಷ, ಜಲದೋಷ, ಬಿಸಿಲಿನಿಂದುಂಟಾಗುವ ತಲೆನೋವು ಜ್ವರ ಕೆಮ್ಮು ಕೈಕಾಲು ಮೈನೋವುಗಳು ಕೂಡ್ಲೆ ತಪ್ಪಿ ಜೀರ್ಣಶಕ್ತಿಕೊಡುತ್ತೆ. ಪ್ರಯಾಣೀಕರಿಗೆ ಮುಖ್ಯವಾದುದು. ೪೦ ಮಾತ್ರೆಗೆ ೪ ಆಣೆ, ೫ ಶೀಷೆಗೆ ೧ ರೂ.

ಬಾಧಾನಿವಾರಿಣಿ—ಎಲ್ಲಾ ವಿಧವಾಯು ನೋವು ಊಳುಕು ಊದು ಜುಂತಾದುದಕ್ಕೆ ರಾಮಬಾಣ, ೧ ಡಬ್ಬಿಗೆ ೪ ಆಣೆ. ೫ ಡಬ್ಬಿಗೆ ೧ ರೂ. ಕೂಡ್ಲೆ ನಮ್ಮ ಕ್ಯಾಟಲಾಗಿಗೆ ಬರೆಯಿರಿ ಮುಫತ್ತು ಕಳುಹಿಸುತ್ತೇವೆ.

ಹೊಸ ಪುಸ್ತಕಗಳು.

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ. ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೩೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧—೮—೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಯ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ—ಬೆಲೆ ೧—೪—೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ— ಬೆಲೆ ೧—೮—೦ ದ್ವಿತೀಯ ಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ-ಹಠ-ರಾಜಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಕ್ರಮರಸ್ಯದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತಿವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ—ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತೆ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟೀಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ- ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ದೇವೀಕೋತ್ತರಕಾರಾಗಮದ ಜ್ಞಾನಾಚಾರಬೋಧಕಪಟಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎಸ್. ಆರ್. ಕರಿಬಸವಶಾಸ್ತ್ರಿ,
198 ಗ್ರಂಥಪ್ರಕಾಶಕಮಂಡಲಿ, ಮೈಸೂರು.

ಮೋಕ್ಷಮಾರ್ಗವು.

(ದೇಶಾಯಿ-ಶೇಷಗಿರಿರಾವು, ನಂದಿ.)

ಮೋಕ್ಷಾಸಕ್ತಿಯು ಸಮಸ್ತಮಾನವರಿಗೂ ಸಹಜವಾಗಿದೆ. ಅಜ್ಞಾನಾಂಧಕಾರವನ್ನು ತೊಲಗಿಸಿಕೊಳ್ಳಲು ಅವನು ಅಭಿಲಾಷಿಸದೆ ಇರುವನು? ದ್ವೇಷಾಸೂಯೆಗಳಿಂದ ವಿಮುಕ್ತನಾಗಲು ಅವನು ಇಚ್ಛಿಸದೆ ಇರುವನು? ಪಾಪಕೂಪದಿಂದ ಉದ್ಧರಿಸಲ್ಪಡಲು ಅವನು ಕೋರದೆ ಇರುವನು? ದುಃಖಸಾಗರವನ್ನು ದಾಟಲು ಅವನು ಅಪೇಕ್ಷಿಸದೆ ಇರುವನು? ಮೋಕ್ಷವಾಂಛೆಯು ಸಕಲ ಮಾನವರಿಗೂ ಸ್ವಾಭಾವಿಕವೇ ಆದರೂ, ಸುಲಭಮಾರ್ಗಗಳಿಂದ ತನ್ಮುಕ್ತಿಯನ್ನು ಸಾಧಿಸಲು ಎಲ್ಲರೂ ನೋಡುತ್ತಿರುವರು. ಭೂರಿಕ್ಷೇತ್ರಗಳನ್ನು ದಾನಮಾಡಿಯೋ, ಪುಣ್ಯಸ್ಥಲಗಳನ್ನು ದರ್ಶನಮಾಡಿಯೋ, ಅವತಾರಮೂರ್ತಿಗಳನ್ನಾರಾಧಿಸಿಯೋ, ಪವಿತ್ರಗ್ರಂಥಗಳನ್ನು ನಂಬಿ ಪಠಿಸಿಯೋ, ಪಾಪನಿವಾರಕಗಳೆಂದು ಎಣಿಸಲ್ಪಡುವ ಸತ್ಕರ್ಮಗಳನ್ನಾಚರಿಸಿಯೋ, ಆವುದಾದರೊಂದು ಸುಲಭೋಪಾಯದಿಂದ ಮೋಕ್ಷಸಾಮ್ರಾಜ್ಯವನ್ನು ಸಂಪಾದಿಸಲು ಮಾನವರು ಸಾಮಾನ್ಯವಾಗಿ ಇಚ್ಛಿಸುತ್ತಿರುವರು. ಆದರೆ ಇಂತಹ ಮಾರ್ಗಗಳಿಂದ ಮೋಕ್ಷವು ಸಾಧ್ಯವಾಗತಕ್ಕದಲ್ಲವು.

ಮೋಕ್ಷಮಾರ್ಗವು ಕಷ್ಟಮಯವಾದುದು. ಮಾರ್ಗವು ಸ್ವಲ್ಪ ಸರಳವಾಗಿರುವುದು; ಸ್ವಲ್ಪ ವಕ್ರವಾಗಿರುವುದು; ಎತ್ತರದ ಪ್ರದೇಶಗಳನ್ನು ಹತ್ತಬೇಕಾಗಿರುವುದು; ಇಳಿಜಾರು (ತಗ್ಗು) ಭೂಮಿಗಳಿಗೆ ಇಳಿಯಬೇಕಾಗಿರುವುದು; ಒಂದು ಕಡೆ ಅಂಧಕಾರಾವೃತವಾಗಿರುವುದು; ಮತ್ತೊಂದು ಕಡೆ ತೇಜೋಮಯವಾಗಿರುವುದು; ಅತಿ ಜಾಗರೂಕರಾಗಿ ಭಯಂಕರವಾದ ಆ ಮಾರ್ಗದಲ್ಲಿ ಪ್ರಯಾಣಿಕರು ನಡೆಯಬೇಕಾಗಿರುವುದು; ಎಷ್ಟುದೂರ ನಡೆದರೂ ನಿರ್ಭಯರಾಗಿರುವುದಕ್ಕೆ ಅವಕಾಶವಿಲ್ಲವು; ಈ ವಿಧವಾಗಿ ನಾನಾವಿಧಬಾಧೆಗಳಿಂದ ತುಂಬಿರುವುದರಿಂದಲೇ ಈ ಮಾರ್ಗವನ್ನು ತುಳಿಯುವುದಕ್ಕೆ ಸಾಧಾರಣವಾಗಿ ಮಾನವರು ಭಯಭ್ರಾಂತರಾಗುತ್ತಿರುವರು.

ಇಂತಹ ಮಾರ್ಗದಲ್ಲಿ ಮೊದಲು ಪ್ರಯಾಣಮಾಡಿದಂತಹ ಯಾವ ಪ್ರಯಾಣಿಕನ ಜೀವನ ಚಾರಿತ್ರವನ್ನು ಪರಿಶೀಲಿಸಿದರೂ, ಆ ಮಾರ್ಗದಲ್ಲಿರುವ ಕಷ್ಟಪರಂಪರೆಗಳು ನಮಗೆ ವಿದಿತವಾಗದೆ ಇರಲಾರವು. ಮೋಕ್ಷರಾಜ್ಯವನ್ನು ಜಯಿಸಲು ಯತ್ನಿಸಿದ ಶಾಕ್ಯಸಿಂಹನ ಚರಿತ್ರೆಯನ್ನು ಪರಿಶೀಲಿಸಿರಿ. ಆತನು ರಾಜ್ಯವೈಭವವನ್ನು ತ್ಯಜಿಸಿದನು; ಪತ್ನೀಪುತ್ರಮಿತ್ರವಿಯೋಗವನ್ನು ಸಹಿಸಿದನು; ಅರಣ್ಯಸಂಚಾರಕ್ಕೆ ಸಮ್ಮತಿಸಿದನು; ಮಾರನೊಂದಿಗೆ ಕಲಹಿಸಿ ಜಯಿಸಿದನು; ಎಂತಹ ಕಠೋರಬಾಧೆಗಳನ್ನು ಆ ಗೌತಮಬುದ್ಧನು ಓರ್ಚೆ (ಸಹಿಸಿ) ಕೊಂಡನೋ ಗಮನಿಸಿದಿರಾ? ಮತ್ತೊಬ್ಬ ಮಹಾಭಕ್ತನ ಚಾರಿತ್ರವನ್ನು ನೋಡಿರಿ:—ವಿಶ್ವನಾಥನು ಎಷ್ಟು ಕಷ್ಟಗಳ ಪಾಲಾದನು; ಸುವಿಚಾರದೂರರಾದ ಎಷ್ಟುಜನರ ಕ್ರೋಧಾಗ್ನಿಗೆ ಗುರಿಯಾದನು; ಎಷ್ಟು ಮನೋವ್ಯಥೆಯನ್ನನುಭವಿಸಿದನು; ಇಚ್ಛಾ ಕರ್ಮಕ ವಿಷಯಗಳೊಡನೆ ಎಷ್ಟುಕಾಲ ಹೋರಾಡಿದನು; ಮೋಕ್ಷಾನಂದದ ರುಚಿಯನ್ನು ಕಷ್ಟಗಳ ಪಾಲಾಗದೆ ಯಾವಮಾನವನೂ ಅನುಭವಿಸಲಿಲ್ಲವು. ಭೋಗಗಳನ್ನು ತ್ಯಜಿಸಲು ಇಷ್ಟವಿಲ್ಲದವನೂ, ಶರೀರಕ್ಲೇಶಗಳನ್ನನುಭವಿಸಲು ಇಷ್ಟವಿಲ್ಲದವನೂ ಮೋಕ್ಷಮಾರ್ಗದಲ್ಲಿ ಒಂದು ಹಜ್ಜೆಯನ್ನಾದರೂ ಮುಂದಕ್ಕಿಡಲಾರನು.

ಮುಕ್ತಿಮಾರ್ಗದಲ್ಲಿ ಪ್ರವೇಶಿಸುವಾತನು ನಿಷ್ಕಪಟಹೃದಯದಿಂದ ತನ್ನ ಪಾಪಲೋಪಗಳನ್ನು ಈಶ್ವರನ ಸಮ್ಮುಖದಲ್ಲಿ ಒಪ್ಪಿಕೊಳ್ಳಬೇಕು. ಸರ್ವಸಾಕ್ಷಿಯಾದ ಭಗವಂತನ ಸಮೀಪದಲ್ಲಿ ಕೂಡ ನಾವು ಯಾವ ದುಷ್ಕರ್ಮಗಳನ್ನು ತಾನೇ ಮರೆಮಾಚಬಲ್ಲೆವು? ಆದರೂ ನಾವು ಸಾಧಾರಣವಾಗಿ ಈಶ್ವರನ ಕಣ್ಣುಮುಚ್ಚಿ ಮೋಕ್ಷಾನಂದವನ್ನಪಹರಿಸಲು ಪ್ರಯತ್ನಿಸುತ್ತಿರುವೆವು. ಆವಸಮಯದಲ್ಲಿ ಪಶ್ಚಾತ್ತಾಪತಪ್ತಹೃದಯದಿಂದ ನಮ್ಮ ಲೋಪಗಳನ್ನು ಭಗವಂತನಿಗೆ ನಿವೇದಿಸುವೆವೋ, ಆವಸಮಯದಲ್ಲಿ ನಾವು ಈಶ್ವರೇಚ್ಛೆಗೆ ಪ್ರತಿಕೂಲವಾದ ದಾರಿಯಲ್ಲಿ ನಡೆದೆವೆಂದು ಗ್ರಹಿಸುವೆವೋ ಆ ಸಮಯದಲ್ಲಿಯೇ ನಾವುಗಳು ಮೋಕ್ಷಮಂದಿರಕ್ಕೆ ನಮ್ಮಗಳನ್ನು ತೆಗೆದುಕೊಂಡುಹೋಗುವ ಸೋಪಾನಗಳಲ್ಲಿ ಮೊತ್ತಮೊದಲನೆಯದನ್ನು ಹತ್ತಿದವರಾಗುವೆವು.

ತನ್ನ ದೋಷಗಳನ್ನರಿತು ಈಶ್ವರನ ಸಮಕ್ಷದಲ್ಲಿ ಒಪ್ಪಿಕೊಳ್ಳುವುದೇ ಅಲ್ಲದೆ, ಪ್ರತಿಪಾಪಿಯೂ ತನ್ನ ಪಾತಕದ ಘೋರಸ್ವಭಾವವನ್ನು ಗ್ರಹಿಸಿ ಪಾಪಕಾರ್ಯಗಳ ವಿಷಯದಲ್ಲಿ ಅಸಹ್ಯವನ್ನುಂಟಾಗಿರಬೇಕು. ಪರಮದಯಾಪರನಾದ ಪರಮೇಶ್ವರನು ನಮ್ಮಗಳನ್ನು ಈ ಲೋಕದಲ್ಲಿ ಸೃಷ್ಟಿಸಿರುವುದು ದುಷ್ಕರ್ಮಗಳನ್ನಾಚರಿಸುವದಕ್ಕೇನೆಯೆ? ಸೃಷ್ಟಿಯೊಳಗಿನ ಆವ ಪದಾರ್ಥವನ್ನು ನೋಡಿದರೂ ಭಗವಂತನ ಸತ್ಸಂಕಲ್ಪವೇ ಕಾಣುತ್ತಿರುವುದು. ಬಹುವಿಧೋತ್ತಮಶಕ್ತಿಗಳಿಂದ ಕಂಗೊಳಿಸುತ್ತಿರುವ ಮಾನವನನ್ನು ಪಾಪಕಾರ್ಯಗಳಿಂದ ಭ್ರಷ್ಟನಾಗುವದಕ್ಕೆ ಭಗವಂತನು ಸೃಷ್ಟಿಸಿರುವನೇ? ಸೃಷ್ಟಿವಿಧಾನಕ್ಕೆ ಈ ಊಹೆಯು ಎಷ್ಟು ವಿರುದ್ಧವಾಗಿರುವುದು! ಈಶ್ವರನು ಪ್ರತಿಮಾನವನ ಮೂಲಕವಾಗಿ ತನ್ನ ಮಾಹಾತ್ಮ್ಯವನ್ನು ಎಷ್ಟೋವಿಧಗಳಲ್ಲಿ ಪ್ರಪಂಚಕ್ಕೆ ಬಹಿರಂಗಗೊಳಿಸಲು ಭಾವಿಸಿರಬಹುದು. ಆತನು ಕೊಟ್ಟಿರುವ ಜ್ಞಾನಶಕ್ತಿ ಎಷ್ಟು ಅದ್ಭುತವಾದುದು! ವಿವೇಕವೆಷ್ಟು ಮಹತ್ತರವಾದುದು! ಈ ಶಕ್ತಿಗಳನ್ನು ಸದ್ವಿನಿಯೋಗಮಾಡದೆ ಜೀವನನ್ನು ಪಾಪಭೂಯಿಷ್ಠಮಾಡಿಕೊಂಡಲ್ಲಿ ಎಷ್ಟು ಘೋರಾಪರಾಧವನ್ನು ಮಾಡಿದವರಾಗುವೆವು? ಇನ್ನು ಪವಿತ್ರತ್ವವು ಎಷ್ಟು ಮನೋಹರವಾದುದು! ಧರ್ಮವೆಷ್ಟು ಸುರುಚಿರವಾದುದು! ಪವಿತ್ರತೆಯನ್ನೂ, ಧರ್ಮವನ್ನೂ ಬಿಟ್ಟು ಪಾಪವನ್ನೂ, ಅಧರ್ಮವನ್ನೂ ಅನುಸರಿಸುವವನ ಜೀವನವು ಎಷ್ಟು ಹೀನವು! ಎಷ್ಟುವ್ಯರ್ಥವು!! ಎಷ್ಟು ಭಯಂಕರವು!!!

ಅಷ್ಟೇಅಲ್ಲವು! ಪಾಪಚಾರಿಯಾದ ಪ್ರತಿಮನುಷ್ಯನೂ ತಾನು ಮಾಡಿದ ಪಾಪಗಳನ್ನು ಈಶ್ವರನ ಸಮಕ್ಷ ಒಪ್ಪಿಕೊಳ್ಳುವುದೇ ಅಲ್ಲದೆ, ಪಾಪವೆಷ್ಟು ಘೋರಾಪರಾಧವೋ ಗ್ರಹಿಸುವುದೇ ಅಲ್ಲದೆ, ಇನ್ನುಮುಂದೆ ಅಂತಹ ಪಾಪಕಾರ್ಯಗಳನ್ನು ಆಚರಿಸುವುದಿಲ್ಲವೆಂದು ದೃಢಪ್ರತಿಜ್ಞೆಯನ್ನು ಮಾಡಿಕೊಳ್ಳಬೇಕು. ದುರ್ಮಾರ್ಗವಿಮುಖನಾಗಿ ಪುಣ್ಯಮಾರ್ಗಾಭಿಮುಖನಾದ ಪ್ರತಿಮನುಷ್ಯನಿಗೂ ಸಹಾಯಮಾಡಲು ಪರಮೇಶ್ವರನು ಸದಾ ಸಂಸಿದ್ಧನಾಗಿರುವನು. ಪಾಪವ್ಯಸನಗಳನ್ನು ಜಯಿಸಬಲ್ಲೆನೆಂಬ ದೃಢನಿಶ್ಚಯದಿಂದ ಪ್ರತಿಮನುಷ್ಯನೂ ಈ ಶಪಥವನ್ನು ಮಾಡಬೇಕು. ಸತ್ಯಮಾರ್ಗದಲ್ಲಿ ನಡೆಯತಕ್ಕವನೆಂಬ ಶಪಥಕ್ಕೆ ಸರಿಯಾಗಿ ಸ್ವಾರ್ಥಪರಾಯಣತ್ವವನ್ನು ಬಿಟ್ಟು ಪರಾರ್ಥಪರಾಯಣನಾಗಬೇಕು. ತನಗೆ ತೋರಿದ ವಿಧದಲ್ಲಿ ಪರರ ಸುಖಾತಿಶಯಕ್ಕಾಗಿ ಕೃಷಿಮಾಡಲು ಆತನು ಕೃತಸಂಕಲ್ಪನಾಗಬೇಕು. ಮಾನವಸೇವೆಯೇ ಮೋಕ್ಷಪ್ರಾಪ್ತಿಗೆ ಪರಮಸಾಧನವು. ಬಾನಿಸರ ದುಸ್ಥಿತಿಯನ್ನು ತೊಲಗಿಸುವುದಕ್ಕಾಗಿ ಧೀರನಾಗಿ ಹೋರಾಡಿದ ವಿಲ್ಬರ್‌ಫೋರ್ಸ್ ಎಂಬಾತನನ್ನು "ನಿನ್ನ ಮೋಕ್ಷವನ್ನು ಕುರಿತು ಆಲೋಚಿಸಿಕೊಳ್ಳುತ್ತಿರುವಿಯಾ?" ಎಂದು ಒಬ್ಬರು ಕೇಳಲಾಗಿ "ಪರರ ಮುಕ್ತಿಗಾಗಿ ಪ್ರಯತ್ನಿಸುವುದರಲ್ಲಿ ನಾನು ನಿಮಗ್ನನಾಗಿರುವೆನು. ನನ್ನ ಮೋಕ್ಷವನ್ನು ಆಲೋಚಿಸುವದಕ್ಕೆ ನನಗೆ ಕಾಲವು ಕಾಣಿಸುವುದಿಲ್ಲವು" ಎಂಬುದಾಗಿ ಪ್ರತ್ಯುತ್ತರ ಕೊಟ್ಟನು. ಪರರ ಸೌಖ್ಯಕ್ಕಾಗಿ ಕೃಷಿಮಾಡಿದಂತೆಲ್ಲಾ ನಮಗೆ ಸ್ವಹಿತಸೌಖ್ಯವು ಲಭಿಸುವುದು. ಇತರರಮಾತನ್ನೇ ಎಣಿಸದೆ ಸ್ವಸುಖಕ್ಕಾಗಿ ಎಷ್ಟುಕೃಷಿಮಾಡಿದರೂ ಯಾವನೊಬ್ಬನೂ ನಿಜವಾದ ಸೌಖ್ಯವನ್ನು ಹೊಂದಲಾರನು. ನಾವುಗಳು ಮಾಡುವ ಸಾಧನೆಗಳಿಗೆ ಸಹಾಯವಾಗಿ ಈಶ್ವರನ ಅನುಗ್ರಹವು ಕೂಡ ಲಭಿಸಿದಲ್ಲಿ ಮೋಕ್ಷಮಂದಿರವನ್ನು ಸೇರುವೆವೆಂಬುದರಲ್ಲಿ ಲೇಶವಾದರೂ ಸಂದೇಹವಿಲ್ಲವು. ಮಾನವನ ಶಕ್ತಿ ಅತ್ಯಲ್ಪವು. ಸ್ವಶಕ್ತಿಯನ್ನೇ ಆಧಾರಮಾಡಿಕೊಂಡ ಮನುಷ್ಯನು ಯಾವಕಾರ್ಯವನ್ನೂ ಸಾಧಿಸಲು ಸಮರ್ಥನಾಗಲಾರನು. ಪ್ರತಿಮನು[illegible] ಭಗವಂತನಲ್ಲಿ ಪರಿಪೂರ್ಣವಿಶ್ವಾಸವನ್ನಿರಿಸಬೇಕು. ಈಶ್ವರಾದೇಶವನ್ನು ಕ್ಷಣಕ್ಷಣದಲ್ಲಿಯೂ ಹೊಂದುತ್ತಿರಬೇಕು. ಸರ್ವಶಕ್ತಿಮಂತನಾದ ಆ ಮಹಾಮಹಿಮನ ಸಹಾಯದಿಂದ ಮೋಕ್ಷಮಾರ್ಗದಲ್ಲಿ ಧೈರ್ಯದಿಂದಲೂ, ವಿಶ್ವಾಸದಿಂದಲೂ ಎಲ್ಲರೂ ಪ್ರಯಾಣಮಾಡಿ ತಮ್ಮ ಗಮ್ಯಸ್ಥಾನವಾದ ಮೋಕ್ಷಾನಂದಸಾಮ್ರಾಜ್ಯ ವೈಭವವನ್ನನುಭವಿಸತಕ್ಕವರಾಗಲಿ.

ಜರ್ಮನ್‌ದೈತ್ಯರು ಬೆಲ್ಜಿಯಮ್ಮಿನಲ್ಲಿ ಮಾಡಿರುವ ಅನರ್ಥರಾಶಿ.

ಜರ್ಮನರು ಬೆಲ್ಜಿಯಮ್ಮಿಗೆ ನುಗ್ಗಿದಾರಭ್ಯ ಅಲ್ಲಿ ಉಂಟುಮಾಡಿರುವ ಅಪರಾಧ ಕೃತ್ಯಗಳಿಗೂ, ಅನರ್ಥಗಳಿಗೂ ಪಾರವೇ ಇಲ್ಲ. ಹಸುಮಕ್ಕಳು- ಹೆಂಗುಸರು ಗಂಡುಸರು ಮುದಿಕರುಗಳನೇಕರನ್ನು ನಿಷ್ಕಾರಣವಾಗಿ ಕೊಂದುಹಾಕಿರುವರು. ಅಮೌಲ್ಯವಾದ ಸುಂದರ ಭವನಗಳನ್ನೂ ಪುಸ್ತಕಭಾಂಡಾಗಾರಗಳನ್ನೂ ಅಗ್ನಿದೇವನಿಗೆ ಆಹುತಿಮಾಡಿಬಿಟ್ಟರು. ಲೋಹಮಾರ್ಗಗಳನ್ನೂ ಸಾಮಾನ್ಯಮಾರ್ಗಗಳನ್ನೂ ತೋಟಗಳನ್ನೂ ಹೊಲಗದ್ದೆಗಳನ್ನೂ ಊರುಗಳನ್ನೂ ಕೇರಿಗಳನ್ನೂ ಪುರಗಳನ್ನೂ ಅನೇಕಾನೇಕವಾಗಿ ಧ್ವಂಸಮಾಡಿಬಿಟ್ಟರು. ಆ ದೇಶದ ಪ್ರಜೆಗಳನ್ನು ನಾನಾವಿಧವಾಗಿ ಭಯಪಡಿಸಿ, ಬಹು ಅಸಹ್ಯಕರವಾದ ಜರ್ಮನ್ ದೇಶದ ಚಿಹ್ನೆಯಾದ ಮರದ ತುಂಡನ್ನು ಅವರ ಎದೆಯಮೇಲೆ ಕಟ್ಟುವುದಕ್ಕೆ ನಾನಾ ತೆರದ ದುಷ್ಕೃತ್ಯಗಳನ್ನು ಮಾಡಿರುವರು. ಅನೇಕ ವರ್ಷಗಳಿಂದ ಸಾವಿರಾರು ಮಂದಿ ಜರ್ಮನರು ಮಿತ್ರರಂತೆ ಬೆಲ್ಜಿಯಂದೇಶದಲ್ಲಿ ನುಗ್ಗಿ ಅಲ್ಲಿನ ಪ್ರಜೆಗಳ ಆತಿಥ್ಯವನ್ನು ಸ್ವೀಕರಿಸಿ, [illegible]ದಲ್ಲಿನ ಸ್ಥಿತಿಗತಿಗಳನ್ನೆಲ್ಲಾ ಚೆನ್ನಾಗಿ ಅರಿತುಕೊಂಡು, ಅಲ್ಲಿನ ಅದ್ಭುತ ಭೂಮಿಯನ್ನೂ ಅಳತೆ ಮಾಡಿಕೊಂಡು, ಆ ದೇಶೀಯರು ಇವರ ವಿಷಯದಲ್ಲಿ ತೋರಿಸಿದ ದಯೆಗೂ ವಿಶ್ವಾಸಕ್ಕೂ ಪ್ರತ್ಯುಪಕಾರವನ್ನು ಈಗ ಇವರು ಈ ರೀತಿಯಲ್ಲಿ ಮಾಡಿದರು. ಬೆಳೆದ ಧಾನ್ಯಗಳನ್ನು ಹಾಳ್ಮಾಡುವುದರಿಂದಲೋ ಅಥವಾ ಅದನ್ನೆಲ್ಲಾ ತಮ್ಮ ದೇಶಕ್ಕೆ ಸಾಗಿಸಿಕೊಂಡು ಹೋಗುವುದರಿಂದಲೋ ಬೆಲ್ಜಿಯಂ ಪ್ರಜೆಗಳ ಹೊಟ್ಟೆಗೆ ಅನ್ನವಿಲ್ಲದಂತೆ ಮಾಡಿ, ಅವರನ್ನು ತಮ್ಮಧೀನಪಡಿಸಿಕೊಳ್ಳುವುದಕ್ಕೆ ಪ್ರಯತ್ನಿಸಿದರು. ಅಮೇರಿಕಾ ಮೊದಲಾದ ದೇಶಗಳಲ್ಲಿರುವ ವಿತರಣಶಾಲೆಗಳು ಕೊಳ್ಳದೆ ತೊಳಲುತ್ತಿರುವ ಈ ಬೆಲ್ಜಿಯಂದೇಶದ ನಿರ್ಗತಿಕರಿಗಾಗಿ ಧಾನ್ಯ ತುಂಬಿದ ಹಡಗುಗಳನ್ನು ಕಳುಹಿಸಿಕೊಡಲಾಗಿ, ಅವುಗಳಲ್ಲಿ ಬಂದ ಧಾನ್ಯವನ್ನೂ ಈ ಜರ್ಮನ್ ಘಾತುಕರೇ ಅಪಹರಿಸಿಕೊಂಡರು. ಕಳೆದ ಡಿಶಂಬರ್ ತಾ|| ೩೧ ರಲ್ಲಿ ಅನ್ಯದೇಶಗಳಿಂದ ಬೆಲ್ಜಿಯನ್ನರನ್ನು ಪೋಷಿಸುವುದಕ್ಕಾಗಿ ಬರುತ್ತಲಿದ್ದ ಆಹಾರ್ಯಪದಾರ್ಥಗಳನ್ನು ಅವರಿಗೆ ಕೊಡುತ್ತೇವೆಂದು ಈ ಜರ್ಮನರು ಹೇಳಿ, ಅದಕ್ಕಾಗಿ ಬೆಲ್ಜಿಯಂ ಪ್ರಜೆಗಳ ಮೇಲೆ ೨ ಕೋಟಿಯೂ ೪೦ ಲಕ್ಷ ರೂ. ಗಳ ದಂಡವನ್ನು ಹೊರಿಸಿದರು. ೧೯೧೫ ನೆ ವರ್ಷದ ಜೂನ್ ತಿಂಗಳ ಕೊನೆಯೊಳಗೆ ಅಲ್ಲಿದ್ದ ೨೦ ಲಕ್ಷ ಪ್ರಜೆಗಳಿಗೆ ಹೊಟ್ಟೆತುಂಬಾ ಅನ್ನವೂ ಸಿಕ್ಕದಂತಿದ್ದಿತು. ಉಳಿದ ೫೫ ಲಕ್ಷ ಪ್ರಜೆಗಳ ಸ್ಥಿತಿಯೂ ಯದ್ವಾತದ್ವವಾಗಿಯೇ ಇದ್ದಿತು. ಈ ಜರ್ಮನರು ಆಕ್ರಮಿಸಿಕೊಂಡಿರುವ ಫ್ರಾನ್ಸ್ ದೇಶಭಾಗದೊಳಗಿರುವ ೨೫ ಲಕ್ಷ ಜನರ ಅವಸ್ಥೆಯೂ ಹೀಗೆಯೇ ಶೋಚನೀಯವಾಗಿರುವುದು. ಈ ಯುದ್ಧದಿಂದ ಬೆಲ್ಜಿಯಂದೇಶವು ಬಹಳ ಅನಾರೋಗ್ಯಸ್ಥಿತಿಗೆ ಬಂದಿದೆ. ಅಲ್ಲಿ ಅಂಟುರೋಗಗಳು ಪ್ರಬಲಿಸಿಕೊಂಡು ಅನ್ನವಿಲ್ಲದೆ ಬಳಲುತ್ತಿರುವ ಪ್ರಜೆಗಳನ್ನು ಸೋಂಕಿ, ಬೇಗಬೇಗನೆ ಅವರನ್ನು ಯಮಸದನಕ್ಕೆ ಕಳುಹಿಸುತ್ತ ಎಲ್ಲಿ ದೇಶವಿನಾಶವನ್ನು ಮಾಡುವುವೋ ಎಂಬ ಭೀತಿಯು ಈಗ ಪ್ರಬಲವಾಗಿದೆ. ಕಳೆದ ಡಿಶಂಬರ್ ತಿಂಗಳ ಕಡೆಯವರೆಗೆ ಬೆಲ್ಜಿಯಂ ದೇಶಕ್ಕೆ ಈ ಕೆಳಗೆ ಕಾಣಿಸಿರುವಷ್ಟು ನಷ್ಟವುಂಟಾಗಿದೆ ಯೆಂದು ಎಣಿಸಲ್ಪಟ್ಟಿದೆ:—

	ರೂಪಾಯಿ.
ಅಸ್ತಿಯ ನಷ್ಟ	೪೭೮೦೦೦೦೦೦೦
ಹತರಾದ ಮನುಷ್ಯರ ಪ್ರಾಣಗಳ ಬೆಲೆ	೨೨೫೦೦೦೦೦೦
ಆ ದೇಶದಮೇಲೆ ಅನ್ಯಾಯವಾಗಿ ಹೊರಿಸಿದ ತೆರಗೆಗಳು	೧೨೦೦೦೦೦೦೦
ಜರ್ಮನರು ಅಪಹರಿಸಿಕೊಂಡುಹೋದ ಪೈರುಗಳ ಧಾನ್ಯದ ಬೆಲೆ	೪೫೦೦೦೦೦೦
ಒಟ್ಟು	೫೧೭೦೦೦೦೦೦೦

ಯುದ್ಧದಲ್ಲಿ ಸತ್ತ ಪ್ರಜೆಗಳ ಹೊರತು ಜರ್ಮನರ ಕ್ರೂರಕೃತ್ಯದಿಂದ ಹತರಾದವರೇ ೩೦೦೦೦ ಮಂದಿಗಳು. ಇವರುಗಳ ಪ್ರಾಣದ ಬೆಲೆಯು ೨೨|| ಕೋಟಿ ರೂ. ಎಂದು ಕಾರ್ಡಿನಲ್‌ಮೆರ್ಸಿಯರ್‌ರವರು ಲೆಕ್ಕಮಾಡಿರುವರು. ಬೆಲ್ಜಿಯಂದೇಶದ ಯಾವಯಾವ ಪಟ್ಟಣಗಳಿಗೆ ಈ ಜರ್ಮನರು ಮಾಡಿದ ಅನರ್ಥದಿಂದಲೂ ಹೊರಿಸಿದ ದಂಡದ್ರವ್ಯದಿಂದಲೂ ಎಷ್ಟೆಷ್ಟು ನಷ್ಟವಾಗಿರುವುದೆಂಬುದು ಈ ಕೆಳಗಣ ವಿವರಣದಿಂದ ಗೊತ್ತಾಗುವುದು:—

ಟರ್ಮಾಂಡಿಪಟ್ಟಣಕ್ಕೆ ಪೌನುಗಳು ೩೮೪೦೦೦, ಆಂಟ್ವರ್ಪಿಗೆ ೨೩೦೦೦೦೦, ಮೋಲಿಗೆ ೩೮೦೦೦, ಮಾಲಿನ್ಸಿಗೆ ೧೫೦೦೦೦೦, ಏರ್ಷಾಟಿಗೆ ೨೪೮೦೦೦, ಲೌವಿನ್ನಿಗೆ ೩೪೦೦೦೦೦, ಬ್ರುಸೆಲ್ಸಿಗೆ ೩೪೦೦೦೦೦, ಟೈರ್ಲಿಮಾಂಟಿಗೆ ೧೧೦೦೦೦೦, ಲ್ಯೂಜ್ಜಿಗೆ ೧೦೦೦೦೦, ಮಾನ್ಸಿಗೆ ೧೩೭೦೦೦, ಟಾರ್ಲಿರಾಯಿಗೆ ೨೭೦೦೦೦೦, ನಾಮೂರಿಗೆ ೪೩೦೦೦೦೦, ಡಿನಾಂಟಿಗೆ ೩೧೦೦೦೦೦, ಲೀಜಿಗೆ ೬೯೦೦೦೦೦. ಈ ಹಣವೆಲ್ಲಾ ಮೇಲೆ ಕಾಣಿಸಿರುವ ಒಟ್ಟು ನಷ್ಟದಲ್ಲೇ ಸೇರಿದೆ. ಇದಲ್ಲದೆ ವ್ಯಾಪಾರಸಂಬಂಧದಲ್ಲಿ ವರ್ತಕರಿಗೆ ೩೦ ಕೋಟಿ ರೂ. ಗಳೂ, ಸರ್ಕಾರದ ಕಟ್ಟಡಗಳು ಲೋಹಮಾರ್ಗಗಳು, ಮಾರ್ಗಗಳು, ಇವುಗಳಿಗೆಲ್ಲಾ ಉಂಟುಮಾಡಿರುವ ಅನರ್ಥದಿಂದಾಗಿರುವ ನಷ್ಟವು ೩೦ ಕೋಟಿ ರೂಗಳೂ ಆಗಿರುವುವು. ಈಗಿನ ಯುದ್ಧವೆಲ್ಲಾ ಮುಗಿದು ಜರ್ಮನರು ಪರಾಜಿತರಾಗಿ ಓಡಿಹೋದರೆ ಈ ನಷ್ಟವನ್ನೆಲ್ಲಾ ಬೆಲ್ಜಿಯಮ್ಮಿಗೆ ಮಿತ್ರಮಂಡಲಿಯವರು ಜರ್ಮನರಿಂದ ಕೊಡಿಸಿಕೊಡಬೇಕಾಗಿದೆ.

ಅಮೇರಿಕಾದಲ್ಲಿ ಜರ್ಮನರ ಪ್ರಾಬಲ್ಯ.

ಜರ್ಮನರು ಲೂಸಿಟಾನಿಯಾ ಹಡಗನ್ನು ಮುಳುಗಿಸಿದಾಗಿನಿಂದ ಅಮೇರಿಕೆಯು ಯುದ್ಧದಲ್ಲಿ ಸೇರುವುದೇ ಎಂಬ ಚರ್ಚೆಯು ಪ್ರಬಲವಾಗಿದೆ. ಅಮೇರಿಕಾದಲ್ಲಿ ಜರ್ಮನರ ಪ್ರಾಬಲ್ಯವು ವಿಶೇಷವಾಗಿಲ್ಲದಿದ್ದರೆ ಇಷ್ಟುಹೊತ್ತಿಗೆ ಅದು ಸಂಯುಕ್ತರ ಕಡೆ ಸೇರದೆ ಇರುತ್ತಿರಲಿಲ್ಲ. ಅಮೇರಿಕೆಯಲ್ಲಿ ಜರ್ಮನರು ಎಷ್ಟು ಪ್ರಬಲವಾಗಿರುವರೆಂಬುದನ್ನು ಈ ಕೆಳಗಣ ಲೇಖನದಿಂದ ತಿಳಿದುಕೊಳ್ಳಬಹುದು:—

ಅಮೇರಿಕಾಸಂಯುಕ್ತರಾಷ್ಟ್ರದ ಒಟ್ಟು ಜನಸಂಖ್ಯೆಯು ೯೧೯೭೨೨೬೬. ಇದರಲ್ಲಿ ಅಲ್ಲಿನ ಮೂಲನಿವಾಸಿಗಳಾದ ಕರಿದೊವಲಿನ ನಿಗ್ರೋಜನರು ೯೭೨೪೦೯೮ ಮಂದಿ ಇರುವರು. ಬಿಳಿದೊವಲಿನ ಜನರು ೮೨೫೯೮೧೬೨ ಮಂದಿ ಇರುವವರು. ಇವರಲ್ಲಿ ಜರ್ಮನರು ೮೨೮೨೬೧೮ ಮಂದಿ ಇರುವರು. ಇವರೊಳಗೆ ಜರ್ಮನಿಯಲ್ಲಿ ಹುಟ್ಟಿ ಅಮೇರಿಕಾಕ್ಕೆ ಹೋಗಿ ಸೇರಿ ವಾಸವಾಗಿರುವವರರು ೨೫೦೧೧೮೧ ಮಂದಿ ಇರುವವರು. ಸಂಯುಕ್ತರಾಷ್ಟ್ರದಲ್ಲೇ ಹುಟ್ಟಿದ ಜರ್ಮನ್ ತಾಯ್ತಂದೆಗಳ ಮಕ್ಕಳು ೩೯೧೧೮೪೨ ಮಂದಿ ಇರುವವರು ತಾಯಿಯೋ ಅಥವಾ ತಂದೆಯೋ ಜರ್ಮನಿಯವರಾಗಿದ್ದು ಸಂಯುಕ್ತರಾಷ್ಟ್ರದಲ್ಲಿ ಹುಟ್ಟಿರುವವರ ಸಂಖ್ಯೆಯು ೧೮೬೯೫೯೦ ಆಗಿರುವುದು. ಮೇಲ್ಕಂಡ ೮೨೮೨೬೧೮ ಮಂದಿ ಜರ್ಮನರೊಳಗೆ ೫೫ ಲಕ್ಷ ಮಂದಿಗೆ "ಚುನಾವಣೆಯ" ಕಾಲದಲ್ಲಿ ಮತ (ಓಟನ್ನು) ವನ್ನು ಕೊಡುವ ಅಧಿಕಾರವಿರುವುದು. ಅಮೇರಿಕಾದ ಅಧ್ಯಕ್ಷರನ್ನು ಆರಿಸುವ ವೇಳೆಯಲ್ಲಿ ಜರ್ಮನರಿಗೆ ಅನುಕೂಲವಾಗಿ ಯಾರಿರುವರೋ ಅಂಥವರನ್ನು ಆರಿಸುವುದಕ್ಕೆ ಈ ಅಧಿಕಾರವು ಸಹಾಯಕವಾಗಿ ಉಪಯೋಗಿಸಲ್ಪಡುವುದು. ಮಿಸ್ಸೋರಿ, ಓಹಿಯೋ, ವಿಸ್ಕೋನ್ಸಿನ್, ರಾಷ್ಟ್ರಭಾಗಗಳಲ್ಲಿ ಜರ್ಮನರ ಸಂಖ್ಯೆಯು ಅಧಿಕವಾಗಿಯೂ, ಅವರ ಪ್ರಾಬಲ್ಯವು ಬಹಳವಾಗಿಯೂ ಇರುವುದು. ಅಲ್ಲಿನ ರಾಷ್ಟ್ರೀಯಪರಿಪಾಲನಭಾರವೆಲ್ಲವೂ ಅವರ ಕೈಯಲ್ಲೇ ಇರುವುದೆಂದರೂ ಸಲ್ಲುವುದು. ವಿಸ್ಕೋನ್ಸಿನ್ ಪ್ರಾಂತದಲ್ಲಿ ಒಂದು ಉದಾಹರಣೆಯನ್ನು ತೆಗೆದುಕೊಂಡರೆ ಈ ಸಂಗತಿಯು ವ್ಯಕ್ತವಾಗುವುದು ಆ ಭಾಗದ ಮುಖ್ಯನಗರವಾದ ಮಿಲ್ವಾಕಿ ಪಟ್ಟಣವನ್ನು ಜರ್ಮನರ ಪಟ್ಟಣವೆಂದೇ ಹೇಳಬಹುದು. ಅಲ್ಲಿರುವ ೪ ಲಕ್ಷ ಜನರಲ್ಲಿ ಮೂರೂಮುಕ್ಕಾಲುಪಾಲು ಜನರೆಲ್ಲಾ ಜರ್ಮನರೇ. ಅಲ್ಲಿನ ಪೇಟೆಗಳಲ್ಲೂ ಅಂಗಡಿಗಳಲ್ಲೂ ಇಂಗ್ಲೀಷಿಗಿಂತಲೂ ಜರ್ಮನ್ ಭಾಷೆಯೇ ಹೆಚ್ಚು ಬಳಕೆಯಲ್ಲಿದೆ. ಈ ಅಮೇರಿಕೆಯಲ್ಲಿರುವ ಜರ್ಮನರಿಗೆ ಮಿತ್ರಮಂಡಲಿಯವರಮೇಲೆ ಇರುವ ಹೊಟ್ಟೆಯುರಿಯನ್ನು ಅಷ್ಟಿಷ್ಟೆಂದು ಹೇಳಿತೀರುರುವಹಾಗಿಲ್ಲ. ಈಗಿನ ಯುದ್ಧದಲ್ಲಿ ಇಂಗ್ಲೆಂಡು ಸೇರಿಕೊಂಡುದರಿಂದ ಜರ್ಮನಿಗೆ ಎಲ್ಲತೆರದ ಬಿಕ್ಕಟ್ಟುಗಳೂ ಬರಲವಕಾಶವಾಯಿತೆಂದು ಅವರು ಊಹಿಸಿದ್ದಾರೆ. ಅದರಿಂದಲೇ ಅವರು ಇಂಗ್ಲೆಂಡಿನಮೇಲೆ ಇತರರೆಲ್ಲರಮೇಲಿಗಿಂತಲೂ ಹೆಚ್ಚಾದ ಅಸೂಯೆಯನ್ನು ಹೊಂದಿರುತ್ತಾರೆ.

ಈ ಯುದ್ಧಾರಂಭವಾದಮೇಲೆ ಜರ್ಮನ್‌ದೇಶದಿಂದ ಅನೇಕಮಂದಿ ದೊಡ್ಡದೊಡ್ಡವರು ಅಮೇರಿಕನ್ನರನ್ನು ಜರ್ಮನಿಯಪಕ್ಷಕ್ಕೆ ತಿರಿಗಿಸುವುದಕ್ಕಾಗಿ ಕಳುಹಿಸಲ್ಪಟ್ಟರು. ಅವರಲ್ಲಿ ಹರ್‌ಡೇರ್ನಬರ್ಗ್ ಎಂಬಾತನು ಪ್ರಮುಖನು. ಅಮೇರಿಕಾದ ಪ್ರಜೆಗಳು ಇಂಗ್ಲೆಂಡಿನ ಮೇಲೆ ಪ್ರೀತಿಯನ್ನು ತೋರಿಸಿದರೆ, ಅಥವಾ ಅವರ ಪಕ್ಷದಲ್ಲಿ ನಿಂತು ಯುದ್ಧಮಾಡಿದರೆ, ಇಲ್ಲವೆ ಜರ್ಮನಿಯು ಮಾಡುತ್ತಲಿರುವ ಘೋರಕೃತ್ಯಗಳು ಅಮಾನುಷವಾಗಿರುವುವೆಂದು ಅಮೇರಿಕನರು ಸಹಾನುಭೂತಿಯನ್ನು ವ್ಯಕ್ತಪಡಿಸಿದರೆ, ಅಮೇರಿಕಾದಲ್ಲಿ ಅಂತಃಕಲಹವನ್ನು ಹುಟ್ಟಿಸುವುದಕ್ಕೋಸುಗವೆಂದು ಡೇರ್ನಬರ್ಗ್ ಮೊದಲಾದವರು ಅಮೇರಿಕಾದಲ್ಲಿರುವ ಜರ್ಮನರನ್ನು ಸಿದ್ಧಗೊಳಿಸಿದರು. ಈ ಜರ್ಮನರು ಪ್ರಭುತ್ವದವರಮೇಲೆ ತಿರಿಗಿಬೀಳುವುದಕ್ಕಾಗಿಯೇ ಕಳ್ಳತನದಿಂದ ಮದ್ದುಗುಂಡು ಮೊದಲಾದುವುಗಳನ್ನು ಕೂಡಿಸುತ್ತಿರುವರೆಂದು ಅಲ್ಲಿ ಪ್ರಬಲವಾದ ವಾರ್ತೆ ಇರುವುದು. ಅಮೇರಿಕಾದ ಪಾರ್ಲಿಮೆಂಟ್ ಭವನವನ್ನು ಸಿಡಿಮದ್ದಿನಿಂದ ಒಡೆದುಹಾಕಬೇಕೆಂದು ಅವರುಗಳು ಮಾಡಿದ್ದ ರಹಸ್ಯಪ್ರಯತ್ನವು ಬಯಲಾಯಿತು. ಅಮೇರಿಕಾದಿಂದ ಫ್ರಾನ್ಸು-ಇಂಗ್ಲೆಂಡುಗಳಿಗೆ ಹೋಗುವ ಸರಕುಗಳಲ್ಲಿ ಸಿಡಿಮದ್ದುಗಳನ್ನಿಡುತ್ತಿರುವರು. ಮಿತ್ರಮಂಡಲಿಯವರಲ್ಲಿ ಪಕ್ಷಪಾತಿಗಳಾಗಿರುವ ಅಮೇರಿಕಾ ಪ್ರಮುಖರನ್ನು ಕೊಲ್ಲುವ ರಹಸ್ಯಪ್ರಯತ್ನವು ಕೂಡ ಅವರಿಂದ ಮಾಡಲ್ಪಟ್ಟಿರುವುದೆಂಬ ಸುದ್ದಿಯಿದೆ. ಅಮೇರಿಕಾದ ಕೋಟೀಶ್ವರರಾದ ಮಾರ್ಗನ್‌ರವರು ಇಂಗ್ಲೀಷರಿಗೆ ಮದ್ದುಗುಂಡು ಮೊದಲಾದ ಸಾಮಾನುಗಳನ್ನು ಕಳುಹಿಸಿಕೊಟ್ಟು ಸಹಾಯಮಾಡುತ್ತಿರುವರೆಂಬ ಕಾರಣದಿಂದ ಅವರನ್ನು ಒಬ್ಬ ಸ್ಕೂಲ್ ಮಾಸ್ತರಾದ ಹೋಲ್ಟ್ (ಎಂಬ ಜರ್ಮನನು) ನ್ಯೂಯಾರ್ಕ್‌ಪಟ್ಟಣದಲ್ಲಿ ತುಪಾಕಿಯಿಂದ ಹೊಡೆದು ಸೆರೆಮನೆಯಲ್ಲಿ ತಾನು ಆತ್ಮಹತ್ಯೆಯನ್ನು ಮಾಡಿಕೊಂಡನೆಂಬ ಸುದ್ದಿಯನ್ನು ನಾವು ಮೊನ್ನೆತಾನೇ ಕೇಳಿರುವೆವು ಅಮೇರಿಕಾದಲ್ಲಿ ಇಂಗ್ಲೀಷ್ ರಾಯಭಾರಿಯಾಗಿರುವ ಸರ್ ಸೆಸಿಲ್ ಸ್ಪ್ರಿಂಗ್‌ರೈಸ್‌ರವರನ್ನು ಕೊಲ್ಲುವುದಕ್ಕಾಗಿ ಮಾಡಿದ್ದ ರಹಸ್ಯ ಪ್ರಯತ್ನಗಳೂ ಹೊರಬಿದ್ದುವು. ಈ ಜರ್ಮನ್ ಅಮೇರಿಕನರು ತಾವು ಕೆಲ ವೃತ್ತಪತ್ರಿಕೆಗಳನ್ನು ಪ್ರಕಟಿಸುತ್ತಿರುವರು; ಅವುಗಳಲ್ಲಿ ಯಾವಾಗಲೂ ಮಿತ್ರಮಂಡಲಿಯವರ ಮೇಲೆ ವಿಷವನ್ನು ಕಾರುವ ಲೇಖನಗಳನ್ನೇ ಬರೆಯುತ್ತಿರುವುದಲ್ಲದೆ, ಅಮೇರಿಕಾ ಪ್ರಭುತ್ವದವರನ್ನು ಸದಾ ಹುಲ್ಲಿಗಿಂತ ಕಡೆಯಾಗಿ ಗಣಿಸಿ ಲೇಖನಗಳನ್ನು ಬರೆಯುತ್ತಿದ್ದಾರೆ. ಈ ಜರ್ಮನರು ಅಮೇರಿಕಾದಿಂದ ಜರ್ಮನಿಗೆ ಬೇಕಾದ ಸಾಮಾನುಗಳನ್ನು ಹಾಲಂಡಿಗೋ ನಾರ್ವೆಗೋ ಅಥವಾ ದಕ್ಷಿಣಾಮೇರಿಕಾಕ್ಕೋ ಕಳುಹಿಸಿಕೊಟ್ಟು, ಅಲ್ಲಿಂದ ಜರ್ಮನಿಗೆ ಸಾಗಿಹೋಗುವಂತೆ ಮಾಡುತ್ತಿದ್ದಾರೆ. ಇವರು ಯಾವ ದೇಶದಲ್ಲಿ ಬೆಳೆದು ಯಾವ ದೇಶದ ಸೊತ್ತನ್ನು ತಿನ್ನುತ್ತಿರುವರೋ ಆ ಅಮೇರಿಕಾದೇಶದ ಮೇಲೆಯೇ ತಿರಿಗಬೀಳುವುದಕ್ಕೆ ಪ್ರಯತ್ನವನ್ನು ಮಾಡುತ್ತ ದೇಶದ್ರೋಹಿಗಳಾಗಿಯೂ ಜರ್ಮನಿಯಮೇಲೆ ವಿಶೇಷ ಭಕ್ತಿಯುಳ್ಳವರಾಗಿಯೂ ಇರುವುದು ಈ ಯುದ್ಧದಿಂದ ಹೊರಪಟ್ಟಿರುವ ವಿಚಿತ್ರಸಂಗತಿಗಳಲ್ಲಿ ಒಂದಾಗಿರುವುದೆಂದು ಅಮೇರಿಕಾ ಪತ್ರಿಕೆಗಳು ಸಾರುತ್ತಿವೆ ಕೆಲಮಂದಿ ಅಮೇರಿಕನ್ನರು ಅಂತಃಕಲಹವು ಹುಟ್ಟಿದರೂ ಸರಿ; ಈ ಜರ್ಮನ್ ಅಮೇರಿಕನ್ನರ ಸತ್ವವನ್ನು ಅಣಗಿಸಿಬಿಟ್ಟು ಮೊಟ್ಟಮೊದಲು ತಾವು ಅಮೇರಿಕನ್ನರೆಂದೂ ಬಳಿಕ ಜರ್ಮನರೆಂದೂ ಅವರಿಗೆ ಬುದ್ಧಿ ಹುಟ್ಟುವಂತೆ ಮಾಡುವುದು ಅತ್ಯವಶ್ಯಕವೆಂದು ಹೇಳುತ್ತಿದ್ದಾರೆ. ಅಂತು ಈ ಯುದ್ಧವು ಜರುಗುವಷ್ಟು ಕಾಲವೂ ಅಮೇರಿಕಾದ ರಾಜನೀತಿಜ್ಞರು ತಾವು ಏನನ್ನು ಮಾಡಬೇಕಾಗಿದ್ದರೂ ಈ ಜರ್ಮನ್ ಅಮೇರಿಕನ್ನರಮೇಲೆ ಒಂದು ಕಣ್ಣನ್ನಿಟ್ಟುಕೊಂಡೇ ಕೆಲಸಮಾಡಬೇಕಾಗಿ ಬಂದಿದೆ.

ಜರ್ಮನ್‌ದೇಶದ ಪ್ರತಿಯೊಂದು ಪಿಳ್ಳೆಗೂ ಜನ್ಮಾರಭ್ಯ ಸ್ವದೇಶಾಭಿಮಾನಮಂತ್ರಾನುಷ್ಠಾನವು ಚೆನ್ನಾಗಿ ಅಭ್ಯಸಿಸಲ್ಪಟ್ಟು, ಅದು ಸಿದ್ಧಿಗೆ ಬರುವಂತೆ ಪ್ರತಿಯೊಂದು ಗಳಿಗೆಯಲ್ಲಿಯೂ ಮಾಡಲ್ಪಡುತ್ತದೆ. ಅದರಂತೆ ಆ ದೇಶೀಯರು ಪ್ರಪಂಚದಮೇಲೆ ಯಾವ ಕಡೆಯಲ್ಲಿದ್ದರೂ ಅವರ ಒಲವು ಸ್ವದೇಶದ ಕಡೆಗೇ ಇರುತ್ತ, ಪ್ರತಿಯೊಬ್ಬರೂ ಒಂದುತೆರದ ಗೂಢಚಾರರಾಗಿಯೇ ಇರುವರೆಂದು ತಿಳಿಯಲ್ಪಡಬೇಕಾದವರಾಗಿದ್ದಾರೆ. ಅವರ ಸ್ವದೇಶಾಭಿಮಾನವು ಪರವಿನಾಶ-ಆತ್ಮ ಪ್ರಾಬಲ್ಯಗಳ ಲಕ್ಷ್ಯವುಳ್ಳುದಾಗಿರುವುದರಿಂದ ಅದು ಪರ ವಿಘಾತಕವಾಗಿರುತ್ತದೆ. ಜರ್ಮನ್ ದುರಾಶಾಪಿಶಾಚಗಳು ಪ್ರಪಂಚದ ಎಲ್ಲ ಭಾಗಗಳಲ್ಲೂ ಒಳಹೊಕ್ಕು ಯಾವ ಉದ್ದೇಶದಿಂದ ಇದುವರೆಗೆ ಮೈತ್ರಿಯನ್ನು ತೋರಿಸಿಕೊಂಡಿದ್ದುವೆಂಬುದು ಈಗಿನ ಯುದ್ಧದಿಂದ ಜಗತ್ತಿಗೆಲ್ಲಾ ಗೊತ್ತಾದಂತಾಗಿರುವುದು. ಇನ್ನು ಅವರು ಜಯಿಸಲಿ, ಅಥವಾ ಸೋತುಹೋಗಲಿ, ಈಗ ವಿಶ್ವಾಸಘಾತುಕತನದಿಂದ ಅವರು ಹೊರಪಡಿಸಿಕೊಂಡಿರುವ ಕಳಂಕವನ್ನು ಮಾಜಿಸಿಕೊಳ್ಳುವುದು ಪರಮಾಸಾಧ್ಯವು.

ವಿದೇಶ ವೃತ್ತಾಂತಗಳು

ಈಗ ಇಂಗ್ಲಿಷ್ ಪ್ರಭುತ್ವದವರಿಗೆ ದಿನ ೧ ಕ್ಕೆ ಯುದ್ಧದ ವೆಚ್ಚವು ೪|| ಕೋಟಿ ರೂ.ಗಳಾಗುತ್ತಿರುವುದು.

ಅಮೇರಿಕಾದಲ್ಲಿರುವ ಜರ್ಮನರು ಯುದ್ಧಶಾಂತಿಗಾಗಿ ಅಂಚೆಯ ದ್ವಾರಾ ನಡೆಯಿಸುತ್ತಿರುವ ಪ್ರಯತ್ನಗಳು ಕಳೆದ ಪಕ್ಷದಲ್ಲಿ ಹೆಚ್ಚಿರುವುವು.

ಈಗ ಇಂಗ್ಲೆಂಡಿನಲ್ಲಿರುವ ಕಾರ್ಯಾಲಯಗಳೊಳಗೆ ಹಗಲೂ ರಾತ್ರಿ ೧ ಲಕ್ಷ ಜನ ಹೊಸ ಕೆಲಸಗಾರರು ಮದ್ದುಗುಂಡುಗಳನ್ನು ಮಾಡುವ ಕೆಲಸದಲ್ಲಿ ತೊಡಗಿದ್ದಾರೆ.

ಇಂಗ್ಲೆಂಡಿನ ಏರ್ಪಾಟನ್ನು ಅನುಸರಿಸಿ, ಇಟಲಿಯವರೂ ರಷ್ಯನರೂ ಸಹ ಅಗಾಧವಾಗಿ ಮದ್ದುಗುಂಡುಗಳ ನಿರ್ಮಾಣವನ್ನು ತಮ್ಮ ದೇಶದ ಎಲ್ಲಯಂತ್ರಾಲಯಗಳಲ್ಲೂ ಮಾಡಿಸುತ್ತಲಿದ್ದಾರೆ.

ಜರ್ಮನರು ಒಂದು ಹೊಸತೆರದ ತ್ರಿಭುಜಾಕಾರದ ವಿಮಾನವನ್ನು ನಿರ್ಮಿಸಿದ್ದಾರಂತೆ. ಜಪ್ಪಲಿನ್ನಿನಲ್ಲಿರುವಂಥ ಮೋಟಾರುಗಳು ೮ ಇದರಲ್ಲಿರುವುವು. ನಡೆಯಿಸುವ ಸಾಧನಗಳು ೩ ಇರುವುವು ಇದರೊಳಗೆ ೨೦ ಮಂದಿ ಯೋಧರೂ ೪ ಫಿರಂಗಿಗಳೂ, ಒಂದು ಚಿಕ್ಕ ಫಿರಂಗಿಯನ್ನು ಎಲ್ಲ ದಿಕ್ಕಿಗೂ ತಿರುಗಿಸಿಡುವಂಥ ಸಾಧನವೂ ಇರುವುದಂತೆ. ಈ ವಿಮಾನವನ್ನು ಕಂದಕಗಳಮೇಲೆ ಹೋಗಿ ಅಸ್ತ್ರಪ್ರಯೋಗ ಮಾಡಲು ಉಪಯೋಗಿಸುವರಂತೆ.

ಜರ್ಮನರಿಗೆ ಮದ್ದುಗುಂಡುಗಳನ್ನು ನಿರ್ಮಿಸಿಕೊಡಲು ಕ್ರುಪ್ ಕರ್ಮಾಗಾರವು ಹೇಗೆ ಪ್ರಧಾನವಾದುದೋ ಹಾಗೆ ಫ್ರೆಂಚರಿಗೆ ಲೀಕ್ರೋಸೋ ಯಂತ್ರಾಲಯವು ಅಷ್ಟು ಪ್ರಧಾನವಾಗಿರುವುದು. ಇಲ್ಲಿ ಯುದ್ಧಕ್ಕೆ ಮೊದಲು ನಡೆಯುತ್ತಿದ್ದ ಕೆಲಸಕ್ಕೂ ಈಗ ನಡೆಯುತ್ತಿರುವ ಕೆಲಸಕ್ಕೂ ಅಜಗಜಾಂತರವಿರುವುದು. ಇಲ್ಲಿ ಹೆಂಗುಸರು ಮಕ್ಕಳು ಮುದುಕರು ಮೊದಲಾಗಿ ಸರ್ವತ್ರ ಅಹರ್ನಿಶಿಯೂ ದೇಶಾಭಿಮಾನದಿಂದ ಕೆಲಸಮಾಡುತ್ತಿರುವರು. ವಾರಕ್ಕೆ ೬|| ದಿನಗಳೂ ದಿನಕ್ಕೆ ೧೫|| ಗಂಟೆಗೆ ಕಡಿಮೆಯಿಲ್ಲದೆಯೂ ಕೆಲಸ ನಡೆಯುತ್ತಿರುವುದು. ಈಗಿನ ಯುದ್ಧವು ಫ್ರಾನ್ಸ್ ದೇಶೀಯರನ್ನು ಆಲಸ್ಯಕೂಪದಿಂದುದ್ಧರಿಸಿ ಲೋಕಾಶ್ಚರ್ಯಗೊಳಿಸಿರುವುದು.

ಚೀನಾದೇಶದ ಪಾರ್ಲಿಮೆಂಟಿನಲ್ಲಿ ಸ್ತ್ರೀಯರಿಂದ ಓಟನ್ನು ಪಡೆದ ಇಬ್ಬರು ವನಿತೆಯರು ಮೆಂಬರಾಗಿರಬಹುದೆಂದು ಅಲ್ಲಿನ ಸರ್ಕಾರದವರು ಅಪ್ಪಣೆ ಕೊಡಿದ್ದಾರೆ. ಅದೇ ಪದ್ಧತಿಯನ್ನು ಡೆನ್ಮಾರ್ಕ್ ಸರ್ಕಾರದವರೂ ಅನುಸರಿಸುವವರಾಗಿದ್ದಾರೆ. ಯುದ್ಧ ಮುಗಿದಮೇಲೆ ಇಂಗ್ಲೆಂಡಿನಲ್ಲಿನ ಸ್ತ್ರೀಸ್ವಾತಂತ್ರ್ಯವಾದಿನಿಯರಿಗೂ ಇಂಥ ಬಾಧ್ಯತೆಯನ್ನು ಇಂಗ್ಲೆಂಡ್ ಸರ್ಕಾರದವರೂ ಅನುಗ್ರಹಿಸಬೇಕಾಗುವುದೋ ಏನೋ.

ಜೂನ್ ತಾ|| ೮ ರಲ್ಲಿ ತುರ್ಕಿ ರಾಜಧಾನಿಯಾದ ಕಾನ್‌ಸ್ಟಾಂಟಿನೋಪಲ್ ನಗರದಲ್ಲಿ ಗಾಯಗೊಂಡ ಸೈನಿಕರು ೪೦ ಸಾವಿರ ಮಂದಿ ಇದ್ದರು. ಇವರಲ್ಲಿ ಜರ್ಮನ್ ಉದ್ಯೋಗಿಗಳು ೨೫೦ ಮಂದಿ ಇವರಿಗೆಲ್ಲಾ ಚಿಕಿತ್ಸೆಮಾಡುವುದಕ್ಕೆ ತಕ್ಕ ವೈದ್ಯರಿಲ್ಲದೆ ಪೆರ್ಮ ಪಡೆದಿದ್ದವರನ್ನೆಲ್ಲಾ ಬರಮಾಡಿಕೊಂಡರಂತೆ. ಅವರಮೇಲೆ ಹೆಚ್ಚು ಸಂಬಳವನ್ನು ಕೊಟ್ಟು ಬಲ್ಗೇರಿಯಾದಿಂದ ಅನೇಕ ವೈದ್ಯರನ್ನು ಬರಮಾಡಿರುವರು. ಆದರೂ ಹಲವು ಸೈನಿಕರು ಚಿಕಿತ್ಸೆಗೆ ಅವಕಾಶವಿಲ್ಲದೆ ಸಾಯುತ್ತಿರುವರಂತೆ.

ಬೆಲ್ಜಿಯಂದೇಶದ ರಾಜರ ಮಕ್ಕಳು ಸೀಮೆಯಲ್ಲಿ ಲಾರ್ಡ್ ಕರ್ಜನ್‌ರವರ ಮನೆಯಲ್ಲಿ ಪಾಲಿಸಲ್ಪಡುತ್ತಿವೆ. ಬೆಲ್ಜಿಯಂ ರಾಜದಂಪತಿಗಳು ಯುದ್ಧಾಂಗಣದಲ್ಲಿ ತಮ್ಮ ಸೇನಾಮುಖ್ಯಕಾರ್ಯಾಲಯದಲ್ಲಿದ್ದಾರೆ. ಆ ಮಕ್ಕಳುಗಳು ತಮ್ಮ ತಾಯ್ತಂದೆಗಳನ್ನು ನೋಡಬೇಕೆಂದು ಅಪೇಕ್ಷಿಸಿದುವು. ರಣರಂಗಕ್ಕೆ ಅವನ್ನು ಕರೆದುಕೊಂಡು ಹೋಗುವುದು ಅಪಾಯಕರವೆಂದು ತಿಳಿದಿದ್ದರೂ ಮಕ್ಕಳ ಆಸೆಯನ್ನು ನೆರವೇರಿಸಿಯೇ ತೀರಬೇಕಾಗಿ ಬಂದುದರಿಂದ ತಾಯ್ತಂದೆಗಳಿದ್ದಲ್ಲಿಗೆ ಅವನ್ನು ಕರೆದುಕೊಂಡು ಹೋದರು. ಆ ಮಕ್ಕಳನ್ನು ನೋಡಿದಾಗ ಬೆಲ್ಜಿಯಂ ಪ್ರಭು ದಂಪತಿಗಳಿಗೆ ಉಂಟಾದ ಶೋಕವು ವಾಚಾಮಗೋಚರವಾಗಿದ್ದಿತಂತೆ! ನಿರಪರಾಧಿಗಳಾದ ಬೆಲ್ಜಿಯಂ ಸಜ್ಜನರಿಗೆ ಜರ್ಮನ್‌ದೈತ್ಯರು ಮಾಡಿರುವ ಪಾಪಾಚರಣೆಗಳಲ್ಲಿ ಇದೂ ಒಂದಾಗಿರುವುದು.

ಜರ್ಮನಿ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ದೊಡ್ಡದೊಡ್ಡಮನೆತನದ ಸ್ತ್ರೀಯರೇ ಸೇರಿ ೧೩೦ ಭೋಜನಾಲಯಗಳನ್ನೇರ್ಪಡಿಸಿ ಬಡಬಗ್ಗರಿಗೆಲ್ಲಾ ಸುಲಭದ ಬೆಲೆಗೆ (ಎಂದರೆ ಹೊತ್ತಿಗೆ ಮೂರಾಣೆಯಂತೆ) ಅನ್ನಾಹಾರಗಳನ್ನು ಮಾರಿಸುತ್ತಿರುವರು. ಇಂಥ ಆಲಯಗಳಲ್ಲಿ ದಿನ ೧ಕ್ಕೆ ೫೦ ಸಾವಿರ ಜನರು ಊಟಮಾಡಿ ಹೋಗುತ್ತಿರುವರಂತೆ. ಇದನ್ನು ಕೇಳಿದರೆ ಆ ದೇಶದಲ್ಲಿ ಕುಟುಂಬಪೋಷಣೆಯನ್ನು ಮಾಡುವ ಗಂಡುಸರೆಲ್ಲಾ ಯುದ್ಧಕಾರ್ಯದಲ್ಲಿ ಪ್ರವೃತ್ತರಾಗಿರುವುದರಿಂದಲೂ ಆಹಾರ್ಯವಸ್ತುಗಳೆಲ್ಲಾ ಸೈನಿಕರ ಉಪಯೋಗಕ್ಕೇ ತೆಗೆದುಕೊಳ್ಳಲ್ಪಡುತ್ತಿರುವುದರಿಂದ ಬಡಬಗ್ಗರ ಉದರನಿರ್ವಾಹಕ್ಕಾಗಿ ಕಷ್ಟವಾಗಿದೆಯೆಂದೂ, ಅವರ ಸಂಕಟಗಳನ್ನು ನೋಡಿ ಧನಿಕರ ಮನೆಯ ಹೆಂಗುಸರು ಕನಿಕರದಿಂದ ಭೋಜನಾಲಯಗಳನ್ನೇರ್ಪಡಿಸಿರುವರೆಂದೂ ಯೋಚಿಸಬೇಕಾಗಿದೆ.

ಇಟಲಿಯವರು ಮಿತ್ರಮಂಡಲಿಯವರ ಪಕ್ಷಕ್ಕೆ ಸೇರಿದುದರಿಂದ ಜರ್ಮನ್‌ಚಕ್ರವರ್ತಿಯವರು ಕೋಪಿಸಿಕೊಂಡು, ಇಟಾಲಿಯನ್ ಕವೀಶ್ವರರು ರಚಿಸಿರುವ ನಾಟಕಗಳನ್ನು ತಮ್ಮ ದೇಶದಲ್ಲಿ ಪ್ರದರ್ಶಿಸಕೂಡದೆಂದು ಅಪ್ಪಣೆಮಾಡಿರುವುದಲ್ಲದೆ ಆ ಗ್ರಂಥಗಳನ್ನೆಲ್ಲಾ ರಾಶಿಹಾಕಿಸಿ, ತಮ್ಮ ಪ್ರಜೆಗಳ ಗುಂಪಿನಿದಿರಿಗೆ ಸುಡಿಸಿಬಿಟ್ಟರಂತೆ. ಅದನ್ನು ನೋಡಿ ಜರ್ಮನ್‌ಪ್ರಜೆಗಳು ಸಂತೋಷದಿಂದ ಚಪ್ಪಾಳೆ ತಟ್ಟಿದರಂತೆ. ಜರ್ಮನ್‌ಪ್ರಭುವಿನ ಕೋಪವೂ ಯಥಾರಾಜಾತಥಾಪ್ರಜಾಃ ಎಂಬಂತಿರುವ ಅವರ ಪ್ರಜೆಗಳ ಕ್ರೋಧಾತಿರೇಕವೂ ಎಷ್ಟುಮಟ್ಟಿಗಿದೆಯೆಂಬುದು ಇದರಿಂದ ಗೊತ್ತಾಗುವುದು. ಆದರೆ ಅತ್ತೆಮೇಲಣ ಕೋಪವನ್ನು ತೊತ್ತಿನಮೇಲೆ ತೋರಿಸಿದಂತೆ ಲೋಕಹಿತಂಕರಗಳಾದ ಗ್ರಂಥಗಳನ್ನು ಸುಡಿಸುವುದಕ್ಕೆ ಉಪಯುಕ್ತವಾದ ಆ ಕೋಪವುಮಾತ್ರ ಲೋಕಾಪಹಾಸ್ಯಕ್ಕೆ ಗುರಿಯಾದುದೇಸರಿ.

ಯುದ್ಧರಂಗದಲ್ಲಿ ಜರ್ಮನರು ತೋಡಿಕೊಂಡಿರುವ ಕಂದಕಗಳು ಬಹಳ ಆಳವಾಗಿರುವುವು ಅವುಗಳ ಮುಂದೆ ಮುಳ್ಳಿನ ತಂತಿಯ ಬಲವಾದ ಬೇಲಿಗಳಿರುವುವು. ಇವು ಕೇವಲ ಸಮೀಪಕ್ಕೆ ಹೋದಲ್ಲದೆ ದೂರದಲ್ಲಿರುವವರಿಗೆ ಕಾಣಿಸುವುದೇ ಇಲ್ಲವು. (ಅದಕ್ಕೆ ಹಾಕಿರುವ ಬಣ್ಣವು ಹಾಗಿರುವುದು.) ಈ ಬೇಲಿಯೊಳಗಡೆಯಲ್ಲಿ ಜಲ್ಲಿಕಲ್ಲುಗಳಿಂದಲೂ ಕಬ್ಬಿಣದ ದಪ್ಪತಗಡಿನಿಂದಲೂ ಕಟ್ಟಿದ ಗೋಡೆಗಳಿರುವುವು. ಜಗತಿಯಂತಿರುವ ಆ ಗೋಡೆಗಳಮೇಲೆ ಒಂದೊಂದು ಪಟಾಲಮ್ಮಿಗೆ ೧೨ ರಂತೆ ಮಿಷಿನ್‌ಫಿರಂಗಿಗಳು ಇಡಲ್ಪಟ್ಟಿರುವುವು. ಕಂದಕಗಳಲ್ಲಿ ಎಷ್ಟು ಪಟಾಲಮ್ಮುಗಳಿರುವುವೋ ಅಷ್ಟು ೧೨ ಫಿರಂಗಿಗಳೂ ಅವಕ್ಕೆ ತಕ್ಕಷ್ಟು ಗುಂಡುಗಳೂ ಸಿದ್ಧಮಾಡಲ್ಪಟ್ಟಿರುವುವು. ಈ ಬೇಲಿಗಳನ್ನೂ ಗೋಡೆಗಳನ್ನೂ ಫಿರಂಗಿಗಳನ್ನೂ ಮೊದಲು ಧ್ವಂಸಮಾಡಿದಲ್ಲದೆ ಆ ಕಂದಕಗಳಿಗೆ ನುಗ್ಗಲು ಅವಕಾಶವಿರುವುದಿಲ್ಲ. ಅವುಗಳನ್ನು ಧ್ವಂಸಮಾಡಬೇಕಾದರೆ ದೊಡ್ಡದೊಡ್ಡ ಫಿರಂಗಿಗಳ ಹೊಡೆತವು ಬೀಳಬೇಕು. ಈಗ ಮಿತ್ರಮಂಡಲಿಯವರು ಅಂಥ ದೊಡ್ಡ ಫಿರಂಗಿಗಳ ಮದ್ದಿನ ಗೋಳಗಳನ್ನು ಅನಂತವಾಗಿ ನಿರ್ಮಾಣಮಾಡಿಸುತ್ತಿದ್ದಾರೆ.

ಯುದ್ಧಕ್ಕಾಗಿ ಆಂಗ್ಲಪ್ರಭುತ್ವದವರು ಸಾಲಮಾಡಬೇಕೆಂದು ಪ್ರಕಟಿಸಲು ೧ ಪಕ್ಷದೊಳಗಾಗಿ ೮೫೫ ಕೋಟಿ ರೂ. ಗಳು ಕೂಡಿದುವು. ಸೇವಿಂಗ್ಸ್‌ಬ್ಯಾಂಕುಗಳಲ್ಲಿಟ್ಟಿದ್ದ ಬಡಬಗ್ಗರ ಹಣವೇ ೩೭|| ಕೋಟಿ ರೂ.ಗಳು ಸರ್ಕಾರಕ್ಕೆ ಸಾಲವಾಗಿ ವಹಿಸಿಕೊಡಲ್ಪಟ್ಟಿತು. ಒಂದೊಂದು ಬ್ಯಾಂಕುಗಳೇ ಕೋಟಿಗಟ್ಟಲೆಯಾಗಿ ಸಾಲವನ್ನು ಕೊಟ್ಟುವು. ಇದನ್ನು ನೋಡಲಾಗಿ ಇಂಗ್ಲೆಂಡಿನ ಸಂಪತ್ತಿಯು ಹೇಗಿದೆಯೆಂಬುದು ಪ್ರಪಂಚಕ್ಕೇ ಗೊತ್ತಾಗುವುದು.

ಜರ್ಮನರ ನೈರುತಿ ಆಫ್ರಿಕಾವನ್ನು ಜನರಲ್ ಬೋಥಾರವರ ಸೈನಿಕರು ಗೆದ್ದುಕೊಂಡರಷ್ಟೆ. ಇದನ್ನು ವಶಪಡಿಸಿಕೊಳ್ಳುವಲ್ಲಿ ಸೇನಾನಷ್ಟ ಮದ್ದುಗುಂಡುಗಳ ನಷ್ಟವು ವಿಶೇಷವಾಗಿ ಆಗದಿದ್ದರೂ ಬೋಥಾರವರ ಸೈನಿಕರು ಪಟ್ಟ ಶ್ರಮವು ಮಾತ್ರ ವರ್ಣನಾತೀತವಾಗಿದ್ದಿತು. ಇವರು ಯುದ್ಧಮಾಡಿದ ದಕ್ಷಿಣಭಾಗವೆಲ್ಲಾ ನಿರ್ಜಲಪ್ರದೇಶವು. ಆದುಕಾರಣ ಜನರಲ್ ಬೋಥಾರವರು ಕಿಂಬರ್ಲೆ ನಗರದಿಂದ ಹೊರಟ ತಮ್ಮ ಕಡೆಯ ೨ಸಾವಿರಮಂದಿ ಸೈನಿಕರಿಗೆ ಬೇಕಾಗುವಷ್ಟು ಆಹಾರ್ಯಸಾಮಗ್ರಿಗಳನ್ನೂ, ಮದ್ದುಗುಂಡು ಮೊದಲಾದ ಸಾಮಗ್ರಿಗಳನ್ನೂ, ಪಶುಗಳ ಮೇವನ್ನೂ, ಕಡೆಗೆ ಕುಡಿಯುವ ನೀರನ್ನೂ ಸಹ ಮೋಟಾರು ಬಂಡಿಗಳ ಮೇಲೆಯೂ ಸಾಮಾನು ಬಂಡಿಗಳ ಮೇಲೆಯೂ ಸಾಗಿಸಿಕೊಂಡು ೭೦೦ ಮೈಲಿಗಳ ದೂರ ನಡೆದುಹೋಗಿ, ಜರ್ಮನರಮೇಲೆ ಕಾದಾಡಿ ಅವರ ದೇಶವನ್ನೆಲ್ಲಾ ವಶಪಡಿಸಿಕೊಳ್ಳಬೇಕಾಯಿತು. ಸಾಲದುದಕ್ಕೆ ಆ ಜರ್ಮನರು ಅಲ್ಲಲ್ಲಿ ವಿರಳವಾಗಿದ್ದ ಜಲಾಶಯಗಳೊಳಗೆ ವಿಷವನ್ನು ಕದಡಿಬಿಟ್ಟಿದ್ದರು. ಜನರಲ್ ಬೋಥಾರವರು ಬಹು ದೂರ ನೀರನ್ನು ಸಾಗಿಸಿಕೊಂಡು ಹೋದುದರಿಂದ ಅದಕ್ಕೆ ಹಿಡಿದ ವೆಚ್ಚವನ್ನು ಲೆಕ್ಕಹಾಕಿದರೆ ಗ್ಯಾಲನ್ ೧ಕ್ಕೆ ೧೨ ಆಣೆಯಂತೆ ಬೆಲೆ ಬಿದ್ದಂತಾಯಿತು. ಒಂದು ಎತ್ತಿಗೆ ಒಂದುಸಲ ಕುಡಿಯುವುದಕ್ಕೆ ಬೇಕಾಗುವಷ್ಟು ನೀರಿಗೆ ೭|| ರೂ. ಗಳು ವೆಚ್ಚವಾದಂತಾಗುತ್ತಿದ್ದಿತು. ಇದೊಂದು ಉದಾಹರಣೆಯಿಂದಲೇ ಅವರ ಕಷ್ಟಗಳು ಎಷ್ಟುಮಟ್ಟಿಗಿದ್ದುವೆಂಬುದನ್ನು ಊಹಿಸಿಕೊಳ್ಳಬಹುದು.

ಮೈಸೂರ್ ಸ್ಟಾರ್.

೧೯೧೫ನೆಯ ಇಸವಿ ಜುಲೈ ತಾ|| ೨೫ನೆಯ ಭಾನುವಾರ.

ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಸೆಟ್ಟರವರು

ದಿವಾನ್ ಬಹದ್ದೂರ್ ರಾಜಸಭಾಭೂಷಣ ಕೆ. ಪಿ. ಪುಟ್ಟಣ್ಣಸೆಟ್ಟರವರ ದೇಶಸೇವಾತತ್ಪರತೆಯನ್ನೂ, ಸ್ವಸಮಾಜಸೇವೆಯ ವಿಷಯದಲ್ಲಿ ಅವರು ಮಾಡಬೇಕಾಗಿರುವ ಕರ್ತವ್ಯವನ್ನೂ ಕುರಿತು ಮೊನ್ನೆ ವಾರದ ಸಂಚಿಕೆಯಲ್ಲಿ ನಾವು ಒಂದು ಅಗ್ರಲೇಖನವನ್ನು ಬರೆದಿದ್ದೆವಷ್ಟೆ. ಅದರಮೇಲೆ ಮ|| ಸೆಟ್ಟರವರು ಒಂದು ಪತ್ರವನ್ನು ನಮಗೆ ಬರೆದು ಹೀಗೆಂದು ತಿಳಿಯಿಸಿರುತ್ತಾರೆ— "ನಾನು ಈಗ ಮಾಡುತ್ತಿರುವ ಸ್ವದೇಶಸೇವೆಗೆ ಶ್ರೀಮನ್ಮಹಾರಾಜರವರ ಮತ್ತೂ ಮಂತ್ರಿವರ್ಯರಾದ ಸರ್ ಎಂ. ವಿಶ್ವೇಶ್ವರಯ್ಯನವರ ಉತ್ತೇಜನವೇ ಕಾರಣವಾಗಿರುವುದರಿಂದ ಈ ನನ್ನ ಉದ್ಯಮದಲ್ಲಿ ಲಭ್ಯವಾಗುವ ಕೀರ್ತಿಗೆ ಅವರುಗಳೇ ಭಾಜನರು. ನಮ್ಮ ವೀರಶೈವಮತಸೇವೆಯನ್ನು ಮಾಡಲು ನಾನು ಯಾವಾಗಲೂ ಸಿದ್ಧನಾಗಿರುತ್ತೇನೆ. ಆದರೆ ನನ್ನಿಂದಾಗಬೇಕಾದ ಪ್ರಯೋಜನವನ್ನು ಹೊಂದುವ ಭಾರವು ಮತೀಯರಮೇಲೆ ಬಿದ್ದಿರುತ್ತದೆ." ಎಂದು ತಿಳಿಸಿರುತ್ತಾರೆ.

ಈ ಲೇಖನದಲ್ಲಿ ಕಂಡ ಮೊದಲನೆಯ ಭಾಗವು ಮ|| ಸೆಟ್ಟರ ನಿರ್ಮಲ ಮನೋಭಾವವನ್ನೂ, ಸ್ವಾಮಿಭಕ್ತಿ ತತ್ಪರತೆಯನ್ನೂ ವ್ಯಕ್ತಪಡಿಸುತ್ತಲಿದೆ. ಆ ವಿಷಯವಾಗಿ ನಾವು ಮೊನ್ನೆಯ ಸಂಚಿಕೆಯಲ್ಲೇ ಪ್ರಸ್ತಾಪಿಸಿರುವುದರಿಂದ ಮರಳಿ ಹೇಳಬೇಕಾದುದೇನೂ ಇಲ್ಲ. ೨ ನೆಯ ಭಾಗವನ್ನು ಕುರಿತು ಮಾತ್ರ ಕೆಲವು ಮಾತುಗಳನ್ನಾಡಬೇಕಾಗಿದೆ.

ಸ್ವಮತಸೇವೆಯನ್ನು ಮಾಡಲು ಯಾವಾಗಲೂ ನಾನು ಸಿದ್ಧನಾಗಿದ್ದೇನೆಂಬ ಅವರ ವಾಗ್ದಾನವು ನಮಗೆ ಮಾತ್ರವೇ ಅಲ್ಲದೆ ಸಮಾಜದವರಿಗೆಲ್ಲಾ ಸಂತೋಷವನ್ನುಂಟುಮಾಡುವುದರಲ್ಲಿ ಸಂಶಯವಿಲ್ಲ. ಆದರೆ ಅದರ ಉತ್ತರವಾಕ್ಯವು ಪೂರ್ವವಾಕ್ಯಕ್ಕೆ ವಿರುದ್ಧವಾಗಿರುವುದನ್ನು ಮಾತ್ರ ಕಂಡು ವಿಷಾದಿಸಬೇಕಾಗುತ್ತದೆ. ಕರ್ತೃತ್ವವುಳ್ಳ ಮುಂದಾಳುಗಳು ತಾವು ಮಾಡಬೇಕಾದ ಕರ್ತವ್ಯಕ್ಕಾಗಿ ಪರಪ್ರೇರಣೆಯನ್ನು ಕಾಯುತ್ತ ಕುಳಿತುಕೊಳ್ಳುವುದು ಕಾರ್ಯಸಾಧನೆಯ ಮಾರ್ಗವಲ್ಲವೆಂದು ನಾವು ತಿಳಿಯುತ್ತೇವೆ. ಸದ್ಯಃ ವೀರಶೈವಸಮಾಜದ ಸ್ಥಿತಿಯನ್ನು ನೋಡಿದರಂತೂ ಈ ನಮ್ಮ ಅಭಿಪ್ರಾಯವು ಸಮಂಜಸವಾದುದೆಂದು ಯಾರಿಗೂ ತೋರದೆ ಇರಲಾರದು. ಸದ್ಯಃ ವಿದ್ಯಾದಿಸಂಪತ್ತಿಗಳಲ್ಲಿ ಹಿಂದುಳಿದಿರುವ ವೀರಶೈವ ಸಮಾಜಕ್ಕೆ ಕಾಲೋಚಿತವಾಗಿ ದಿಗ್ದರ್ಶನವನ್ನು ಮಾಡಿ ತಿಟ್ಟೇರಿಸತಕ್ಕ ಮುಂದಾಳುಗಳು ಬಹಳ ವಿರಳರಾಗಿದ್ದಾರೆಂಬುದನ್ನು ಯಾರುತಾನೇ ಕಾಣರು? ಮ|| ಸೆಟ್ಟರಂಥ ಮತ್ತೊಬ್ಬ ಮುಂದಾಳುಗಳನ್ನು ಮೈಸೂರಿನ ವೀರಶೈವರು ಕಾಣರು. ಹೀಗಿರುವಲ್ಲಿ ಮೈಸೂರು ದೇಶಕ್ಕೇ ಸ್ವಕರ್ತೃತ್ವವಿಶೇಷದಿಂದ ಹಿತವನ್ನು ಮಾಡಬಲ್ಲ ಸೆಟ್ಟರು ಸ್ವಸಮಾಜಕ್ಕಾಗಿ ಆಗಬೇಕಾಗಿರುವ ಸೇವೆಯನ್ನು ಮಾಡಲು ಪರರ ಪ್ರೇರಣೆಯನ್ನು ಕೋರುವುದು ಹೇಗೆತಾನೇ ಯುಕ್ತವೆನಿಸಿಕೊಂಡೀತು? ತಮ್ಮ ಸಮಾಜದವರ ಸ್ಥಿತಿಯನ್ನು ತಾವೇ ಅರಿತಿರುವಾಗ ಇತರರಮೇಲೆ ಕರ್ತವ್ಯಲೋಪವನ್ನು ಹೊರಿಸಿ, ಸುಕೃತವಿಶೇಷದಿಂದ ಲಭ್ಯವಾಗಿರುವ ತಮ್ಮ ಕರ್ತೃತ್ವಶಕ್ತಿಯನ್ನು ಸ್ವಮತೋದ್ಧಾರದ ವಿಷಯದಲ್ಲಿ ನಿರುಪಯೋಗಗೊಳಿಸುವುದು ಸಾಧುವಲ್ಲವು. ಆದರೆ ಇದರಿಂದ ಮ|| ಸೆಟ್ಟರು ಸಮಾಜದ ಸೇವೆಯಲ್ಲಿ ನಿಷ್ಣಾತರಾಗಿಲ್ಲವೆಂದು ಹೇಳಬೇಕೆಂಬುದು ನಮ್ಮ ತಾತ್ಪರ್ಯವಲ್ಲ. ರಾ|| ಬ|| ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಸತ್ರವು ವೀರಶೈವ ವಿದ್ಯಾರ್ಥಿಗಳಿಗೆ ಕಾಮಧೇನುವಾಗಿ ಪರಿಣಮಿಸಿರುವುದನ್ನೂ, ವೀರಶೈವ ವಿದ್ಯಾಭಿವೃದ್ಧಿಯ ಧನರಾಶಿಯು, ಇವರು ಮುಂದಾಗಿ ಅನುಗ್ರಹಿಸಿದ ೫ ಸಹಸ್ರ ರೂಪಾಯಿಗಳಿಂದ, ಸಾಕಾರವಾಗಿ ನಿಂತಿರುವುದನ್ನೂ ಪ್ರತ್ಯಕ್ಷವಾಗಿ ಬಲ್ಲವರಾರೂ ಹಾಗೆ ಅಭಿಪ್ರಾಯಪಡಲಾರರು. ಆದರೆ ಇಷ್ಟರಿಂದಲೇ ಮ|| ಶೆಟ್ಟರು ಸಮಾಜಕ್ಕೆ ಮಾಡಬಹುದಾದ ಕರ್ತವ್ಯಗಳೆಲ್ಲಾ ಮುಗಿದುಹೋಗಿಲ್ಲ. ರಾ|| ಬ|| ರುದ್ರಗೌಡರಂಥ ಒಂದು ವ್ಯಕ್ತಿಯು ಪರಪ್ರೇರಣೆಯನ್ನೇ ಕಾಯದೆ ತನ್ನ ಕರ್ತೃತ್ವಶಕ್ತಿಯಿಂದ ಸ್ವಸಮಾಜಕ್ಕೆ ಎಷ್ಟು ಹಿತವನ್ನು ಮಾಡಿಯೂ, ಮಾಡುತ್ತಲೂ ಇರುವುದೆಂಬುದನ್ನು ಗಮನಿಸಿದರೆ ಮ|| ಶೆಟ್ಟರವರ ಕರ್ತವ್ಯಮಾರ್ಗದ ಇಯತ್ತೆಯೂ ಊಹಿತವಾಗುವುದು. ಧಾರವಾಡದಲ್ಲಿ ಸ್ಥಾಪಿಸಲ್ಪಡಬೇಕಾಗಿರುವ ಪ್ರೌಢವಿದ್ಯಾಲಯಕ್ಕಾಗಿ ಇತರಸಮಾಜದವರು ವರ್ಷಗಟ್ಟಲೆ ದುಡಿದು ೮೫ ಸಾವಿರ ರೂ. ಗಳನ್ನು ಕೂಡಿಸುವುದೇ ಕಷ್ಟವಾಗಿರುವಲ್ಲಿ ರಾ|| ಬ|| ರುದ್ರಗೌಡರು ೬ ತಿಂಗಳಕಾಲ ದುಡಿದು ಸಂಚರಿಸಿ, ಸ್ವಸಮಾಜದವರಿಂದ ೧ ಲಕ್ಷ ರೂ. ಗಳನ್ನು ಕೂಡಿಸಿರುವರು. ಅಲ್ಲಿನ ವೀರಶೈವ ವಿದ್ಯಾಭಿವೃದ್ಧಿಫಂಡಿನ ಕೂಡಿಸುವಿಕೆಗಾಗಿ ಸಮಾಜದವರೇ ಪ್ರೇರಿಸಲೆಂದು ಅವರು ಕುಳಿತಿದ್ದರೆ ಈಗ ಉಂಟಾಗಿರುವ ಆ ಫಂಡಿನ ಸ್ಥಿತಿಯು ಅದಕ್ಕೆಂದಿಗೂ ಬರುತ್ತಿರಲಿಲ್ಲ. "ಸಮಾಜದವರು ತಮ್ಮಿಂದಾಗಬೇಕಾದ ಕಾರ್ಯವನ್ನು ಮಾಡಿಸಿಕೊಳ್ಳಲಿ" ಎಂದು ಕಳೆದ ೧೦ ವರ್ಷಗಳಿಂದಲೂ ಕುಳಿತುದರಿಂದ, ಈ ದೇಶದ ವೀರಶೈವ ವಿದ್ಯಾಭಿವೃದ್ಧಿಫಂಡು ಸ್ವಾಭಿವೃದ್ಧಿಗೇ ಲೋಪವನ್ನು ತಂದುಕೊಂಡಿತು. ಕಳೆದ ೧೦ ವರ್ಷಗಳ ಅನುಭವದಿಂದ ಆ ರೀತಿಯಮಾರ್ಗಪ್ರತೀಕ್ಷೆಯು ಯುಕ್ತವಾದುದಲ್ಲವೆಂಬುದನ್ನು ಸುಲಭವಾಗಿ ತಿಳಿದುಕೊಳ್ಳಬಹುದು. ಸಚೇತನವಾದ ಇಂಜನ್ನು ಅಚೇತನವಾದ ಸಾಲುಬಂಡಿಗಳನ್ನು ತಾನೇ ತಗುಲಿಸಿಕೊಂಡು ಗಮ್ಯಸ್ಥಲಕ್ಕೆ ಸೆಳೆದುಕೊಂಡು ಹೋಗಬೇಕಾದುದು ಸ್ವಭಾವವು. ವೀರಶೈವಸಮಾಜವು ಸರ್ವಾಂಗಪೂರ್ಣವಾದರೂ ಅಚೇತನವಾದ ಸಾಲುಬಂಡಿಗಳಂತಿರುವುದು. ಕರ್ತವ್ಯದಕ್ಷರಾದ ಮ|| ಸೆಟ್ಟರು ಸಚೇತನವಾದ ಎಂಜನ್ನಿನಂತಿರುವರು. ಇವರ ಮಾತಿನಲ್ಲೂ, ಇವರ ಕೃತ್ಯದಲ್ಲೂ ಮೈಸೂರಿನ ಅಶೇಷವೀರಶೈವರಿಗೂ ಗೌರವವಿರುವುದು. ಇವರು ಮಾಡಬೇಕಾದ ಮತಸೇವೆಯನ್ನು ನೆರವೇರಿಸುವುದಕ್ಕೆ ಇದಕ್ಕಿಂತಲೂ ಉತ್ತಮಸಮಯವು ಮುಂದೆ ದೊರೆಯಲಾರದು. ಅದು ಕಾರಣ, ಮತಸೇವೆಗಾಗಿ ತಮಗಿರುವ ಕಾಂಕ್ಷೆಯನ್ನು ಸಫಲಮಾಡಬೇಕಾದರೆ, ಇವರು ಮತಸ್ಥರ ಪ್ರೇರಣೆಯನ್ನು ಕಾಯುವ ಹಂಬಲನ್ನು ಬಿಟ್ಟು, ಕನಿಷ್ಠಪಕ್ಷ ೩ ತಿಂಗಳಕಾಲವಾದರೂ ವೀರಶೈವ ವಿದ್ಯಾಭಿವೃದ್ಧಿ ಧನರಾಶಿಯ ಶೇಖರಕ್ಕಾಗಿ ಸಂಚಾರವನ್ನಿಟ್ಟುಕೊಂಡರೆ, ಒಂದು ವರ್ಷಕಾಲದೊಳಗಾಗಿ ಅದನ್ನು ಲಕ್ಷಾವಧಿಯನ್ನಾಗಿ ಮಾಡಿಡುವುದು ಎಂದಿಗೂ ಅಸಾಧ್ಯವಾಗುವುದಿಲ್ಲ. ಇದನ್ನು ಸಾವಧಾನದಿಂದ ಗಮನಿಸಿ, ಆದ್ಯಕರ್ತವ್ಯವಾದ ಸ್ವಸಮಾಜೋದ್ಧಾರವನ್ನು ಮಾಡಿ ಪುಣ್ಯಕೀರ್ತಿಗೆ ಭಾಜನರಾಗಬೇಕೆಂದು ನಾವು ಸವಿನಯದಿಂದ ಸೂಚಿಸುತ್ತೇವೆ.

ಸ್ವದೇಶ ವೃತ್ತಾಂತಗಳು.

ಮ|| ವಿ. ಆರ್. ತ್ಯಾಗರಾಜಯ್ಯರ್, ಎಂ.ಎ., ಯವರು ರೆವಿನ್ಯೂ ಸೆಕ್ರೆಟರಿಯುದ್ಯೋಗವನ್ನು ಈ ತಾ|| ೧೯ರಲ್ಲಿ ವಹಿಸಿಕೊಂಡರು.

ಚಳ್ಳಕೆರೆ ಮ್ಯುನಿಸಿಪಾಲಿಟಿ ಎಲ್ಲೆಕಟ್ಟಿನೊಳಗೆ ಬರುವ ಆಗಸ್ಟ್ ತಾ|| ೧ರ ಆರಭ್ಯ ೨ ವರ್ಷ ಕಾಲದವರೆಗೆ ಮಕ್ಕಳಿಗೆ ಸಿಡುಬು ಬಲವಂತದಿಂದ ಹಾಕಲ್ಪಡುವುದು.

ನಮ್ಮ ಶ್ರೀಮದ್ಯುವರಾಜರವರು ಸಿಮ್ಲಾಕ್ಕೆ ದಯಮಾಡಿದ್ದ ವೇಳೆಯಲ್ಲಿ ಅಲ್ಲಿರುವ ಹಿಂದೂವಿವಾಹಪರಿಷ್ಕರಣ ಸಂಘವನ್ನು ಪರಾಮರ್ಶಿಸಿ ೨೫೦ ರೂ.ಗಳನ್ನು ಬಹುಮಾನಿಸಿದುದಾಗಿ ತಿಳಿಯುತ್ತೇವೆ.

ಶ್ರೀಮನ್ ಮಹಾರಾಜರವರು ಶ್ರೀ ಶ್ರೀಕಂಠೇಶ್ವರಸ್ವಾಮಿಯ ಪೂರ್ಣಿಮಾ ಸೇವೆಗಾಗಿ ನಾಳೆಯದಿನ ಮೋಟಾರುಬಂಡಿಯಲ್ಲಿ ನಂಜನಗೂಡಿಗೆ ದಯಮಾಡಿ ಸಾಯಾಂತರ ಹಿಂದಿರುಗಿ ಬರುವವರಾಗಿರುವರು.

ಹರಿಹರದಿಂದ ಹರ್ಪನಹಳ್ಳಿ ಮಾರ್ಗವಾಗಿ ಹೊಸಪೇಟೆಗೆ ಲೋಹಮಾರ್ಗವನ್ನು ಹಾಕುವುದಕ್ಕಾಗಿ ಸರ್ವೆಮಾಡಲು ಮದರಾಸ್ ಸದರನ್ ಮರಾಟಾರೈಲ್ವೆ ಕಂಪೆನಿಯವರಿಗೆ ನಮ್ಮ ಸರ್ಕಾರದವರಪ್ಪಣೆ ಕೊಟ್ಟಿರುತ್ತಾರೆ.

ಪರಸ್ಪರ ಸಹಾಯಸಂಘದ ರೆಜಿಸ್ಟ್ರಾರರಾದ ಮ|| ಎಂ. ಎ. ನಾರಾಯಣಯ್ಯಂಗಾರರು ಆಗಸ್ಟು ತಾ|| ೨೧ರ ವರೆಗೆ ಪ್ರಿವಿಲೆಜ್ ರಜವನ್ನು ತೆಗೆದುಕೊಂಡಿರುವ ಪ್ರಯುಕ್ತ ಅವರ ಅಸಿಸ್ಟೆಂಟರಾದ ಮ|| ಆರ್. ರಂಗರಾಯರು ರೆಜಿಸ್ಟ್ರಾರರಾಗಿ ಆಕ್ಟ್‌ಮಾಡುವರು.

ಸಂಸ್ಥಾನದ ಬಾಲಿಕಾ ಪಾಠಶಾಲೆಗಳ ಇನ್ಸ್‌ಪೆಕ್ಟ್ರರವರಾದ ಶ್ರೀಮತಿ ರಂಗಮ್ಮನವರು ಕೃಷ್ಣರಾಜಪೇಟೆಗೆ ಪಾಠಶಾಲೆಗಳನ್ನು ಪರೀಕ್ಷಿಸಲು ಹೋಗಿದ್ದಾಗ, ಅಲ್ಲಿಯ ಅಮಲ್ದಾರರವರ ಪತ್ನಿಯವರ ಅಧ್ಯಕ್ಷತೆ[illegible]ದ್ದ ಒಂದು ಸ್ತ್ರೀಯರ ಸಭೆಯಲ್ಲಿ ವಿದ್ಯೆಯ ಪ್ರಯೋಜನವನ್ನು ಕುರಿತು ಬಹಳ ಯುಕ್ತಿಯುಕ್ತವಾಗಿಯೂ, ರಸವತ್ತಾಗಿಯೂ ಸಭಿಕರ ಮನಸ್ಸಿಗೆ ನಾಟುವಂತೆ ಭಾಷಣವನ್ನು ಮಾಡಿದರು.

ಬೆಂಗಳೂರಿಗೆ ಬಂದಿದ್ದ ಇಂದೂರು ಸಂಸ್ಥಾನದ ಮಹಾರಾಣಿಯವರು ಅಲ್ಲಿನ ವಿಕ್ಟೋರಿಯಾ ವೈದ್ಯಶಾಲೆಯನ್ನು ಆದ್ಯಂತವಾಗಿ ಪರಾಮರಿಸಿ, ಅಲ್ಲಿನ ಸರ್ವೋತ್ತಮವಾದ ಏರ್ಪಾಟುಗಳನ್ನು ಕಂಡು ಸಂತೋಷಿಸಿ, ೧ ಸಾವಿರ ರೂ.ಗಳನ್ನು ಆ ವೈದ್ಯಶಾಲೆಯ ವೆಚ್ಚಕ್ಕಾಗಿ ಕೊಟ್ಟರೆಂದು ಕೇಳುತ್ತೇವೆ.

ಬರೋಡಾ ಮಹಾರಾಜದಂಪತಿಗಳೊಡನೆ ತಿರುವನಂತಪುರ ಮೊದಲಾದ ಕಡೆಗೆ ಹೋಗಿದ್ದ ಆ ಸಂಸ್ಥಾನದ ಮಂತ್ರಿಗಳಾದ ಮ|| ವಿ. ಪಿ. ಮಾಧವರಾಯರು ಕಳೆದ ಬುಧವಾರ ಬೆಂಗಳೂರಿಗೆ ಬಂದರು. ಇವರು ತಮ್ಮ ಮಹಾರಾಜದಂಪತಿಗಳಿಗೆ ನಿನ್ನೆಯದಿನ ತಮ್ಮ ಪರ್ಟನ್ ಭವನಪ್ರಾಸಾದದಲ್ಲಿ ಔತಣಸತ್ಕಾರವನ್ನು ಮಾಡಿ ಅವರುಗಳೊಡನೆ ಅದೇ ರಾತ್ರಿ ಬರೋಡಾಕ್ಕೆ ಹಿಂದಿರುಗಿ ಪ್ರಯಾಣಮಾಡಿದರು.

ಗ್ವಾಲಿಯರ್ ಸಂಸ್ಥಾನದಲ್ಲಿ ಚೀಫ್‌ಜಡ್ಜರಾಗಿದ್ದು ಗತಿಸಿದ ಮ|| ಎ. ಶ್ರೀನಿವಾಸರಾಯರ ಪತ್ನಿಯವರಾದ ಶ್ರೀಮತಿ ಶಕುಂತಳಾಬಾಯಿ, ಉರುಫ್ ಕೃಷ್ಣವೇಣಿ ಬಾಯಿಯವರು ತಮ್ಮ ಪತಿಯವರ ಹೆಸರಿನಮೇಲೆ ಮೈಸೂರ ಬ್ರಾಹ್ಮಣ ಅನಾಥಾಲಯಕ್ಕೆ ೨ ಲಕ್ಷ ರೂ. ಗಳವರೆಗೆ ಸಹಾಯ ಮಾಡಿ ಅದರಲ್ಲಿ ೨೦೦ ವಿದ್ಯಾರ್ಥಿಗಳವರೆಗೆ ಪೋಷಣೆಗವಕಾಶವಾಗುವಂತೆ ಮಾಡಲು ಸಂಕಲ್ಪಿಸಿರುತ್ತಾರೆಂದು ಕೇಳುತ್ತೇವೆ.

ಶ್ರೀಮನ್ ಮಹಾರಾಜರವರು ರಾಣೀವಾಸದವರೊಡನೆ ತಾ|| ೧೭ನೆಯ ಶನಿವಾರ ಮೋಟಾರುಬಂಡಿಗಳಲ್ಲಿ ಮೇಲುಕೋಟೆಗೆ ದಯಮಾಡಿ ಅಲ್ಲಿಯ ಪುರನಿವಾಸಿಗಳು ಮಾಡಿದ ಸತ್ಕಾರವನ್ನು ಕೈಕೊಂಡು ದೇವರ ಸೇವೆಯನ್ನು ಮಾಡಿ ತಾ|| ೧೮ನೆಯ ಭಾನುವಾರ ಬೆಂಗಳೂರಿಗೆ ಹೊರಟು ಕಳೆದ ಬುಧವಾರ ರಾಜಧಾನಿಗೆ ಚಿತ್ತೈಸಿದರು. ಮಹಾರಾಣಿಯವರು ಮೊದಲಾದವರು ತಾ|| ೧೮ ರಲ್ಲಿಯೇ ರಾಜಧಾನಿಗೆ ಹಿಂದಿರುಗಿ ದಯಮಾಡಿಸಿದರು.

ಶಿಡ್ಲಘಟ್ಟದ ಮ್ಯುನಿಸಿಪಾಲಿಟಿಗೆ ಚಿಕ್ಕಬಳ್ಳಾಪುರದ ಸ|| ಡಿವಿಜನ್ ಆ|| ಕಮಿಷನರು ಪ್ರೆಸಿಡೆಂಟರಾಗಿಯೂ, ಶಿಡ್ಲಘಟ್ಟದ ತಾ|| ಅಮಲ್ದಾರರು ವೈಸ್‌ಪ್ರೆಸಿಡೆಂಟರಾಗಿಯೂ, ಸಬ್ ಅಸಿಸ್ಟೆಂಟ್ ಸರ್ಜನರು, ಚಿಂತಾಮಣಿಯ ಡಿ.ಪಿ.ಡಬ್ಲ್ಯು. ಸಬ್‌ಡಿವಿಜನ್ ಆಫೀಸರು, ಮ||ಗಳಾದ ಎಸ್. ಹಂಪಯ್ಯನವರು, ಖಾಜಿಜಾಮಿನ್ ಷರೀಫ್‌ರವರು, ದೊಡ್ಡ ಅಲಿಸಾಹೇಬರು, ರಾಮೇಗೌಡರು, ಜಿ. ಕದರಪ್ಪನವರು, ಎಂ. ಗುಂಡುರಾಯರು, ಎಚ್. ಹನುಮಂತಪ್ಪನವರು, ಮುತ್ತೂರು ಸೂರ್ಯನಾರಣಪ್ಪನವರು, ಟಿ. ಜೀವಣ್ಣರಾಯರು, ಮತ್ತೂ ದಂತಿನಾರಣಪ್ಪನವರು ಕೌನ್ಸಿಲರುಗಳಾಗಿಯೂ ನಿಯಮಿಸಲ್ಪಟ್ಟಿರುವರು.

ಚಿಕ್ಕಬಳ್ಳಾಪುರದ ಮ್ಯುನಿಸಿಪಾಲಿಟಿಗೆ ಸ|| ಡಿವಿಜನ್ ಆಫೀಸರು ಪ್ರೆಸಿಡೆಂಟರಾಗಿಯೂ, ಮ|| ಸಿ. ನಾರಾಯಣಸ್ವಾಮಿಸೆಟ್ಟರು ಆನರರಿ ವೈಸ್‌ಪ್ರೆಸಿಡೆಂಟರಾಗಿಯೂ, ತಾ|| ಅಮಲ್ದಾರರು, ಸ||ಅ|| ಸರ್ಜನರು ಡಿ.ಪಿ.ಡಬ್ಲ್ಯು. ಸ||ಅ|| ಆಫೀಸರು, ಸಬ್‌ರೆಜಿಸ್ಟ್ರಾರರು, ಮ||ಗಳಾದ ಸಿ. ಪಾರ್ಥಸಾರಥಯ್ಯನವರು, ಎಚ್. ಸುಬ್ಬರಾಯರು, ಎಚ್. ಸೆಟ್ಟಿರುದ್ರಪ್ಪನವರು, ಯನ್ನೂರಲು ವೆಂಕಟರಾಮಪ್ಪನವರು, ಎಚ್. ನಾರಣಯ್ಯನವರು, ಟಿ. ವೀರಪ್ಪನವರು, ಕೆ. ನರಸಿಂಹಯ್ಯನವರು, ಟಿ. ಸುಬ್ಬಾಯಪ್ಪನವರು ಮತ್ತೂ ಮಹಮ್ಮದ್ ಇಸೂಫ್‌ಖಾನ್ ಸಾಹೇಬರು ಕೌನ್ಸಿಲರುಗಳಾಗಿಯೂ ನಿಯಮಿಸಲ್ಪಟ್ಟಿರುವರು.

ತುಮಕೂರು ಕಾರಾಗೃಹದಿಂದ ತಪ್ಪಿಸಿಕೊಂಡುಹೋಗಿ ದೇವನಹಳ್ಳಿ, ಬೆಂಗಳೂರು ಮತ್ತೂ ನೆಲಮಂಗಲ ತಾಲ್ಲೂಕುಗಳಲ್ಲಿ ಮನೆಗಳಿಗೆ ಕನ್ನವನ್ನಿಕ್ಕಿ ಕಳುವನ್ನು ಮಾಡುತ್ತಿದ್ದ ಚಿಕ್ಕವೆಂಕಟರಮಣ ಎಂಬ ಬಂದಿಯನ್ನು ಹಿಡಿದವರಿಗೆ ೧೦೦ ರೂ. ಬಹುಮಾನವನ್ನು ಕೊಡುವುದಾಗಿ ನಮ್ಮ ಪೋಲೀಸು ಇ|| ಜನರಲ್‌ರವರು ಪ್ರಕಟಿಸಿದ್ದರು. ಈಗ ಇವನನ್ನು ಹಿಂದೂಪುರದ ಪೋಲೀಸರು ಹಿಡಿದು ತಮ್ಮ ಸೆರೆಯಲ್ಲಿಟ್ಟಿರುವರು. ಮೈಸೂರು ಪೋಲೀಸಿನವರು ಅವನನ್ನು ಹಿಡಿದು ತರಲು ಅಪ್ಪಣೆಯನ್ನು ಪಡೆದುಕೊಂಡು ಹೋಗುವುದರಲ್ಲಿದ್ದಾರೆ. ಈ ಕಳ್ಳನು ಹಿಂದೆ ಎಷ್ಟೋವೇಳೆ ಕಾರಾಗೃಹವಾಸ ಶಿಕ್ಷೆಯನ್ನನುಭವಿಸಿರುವವನಾಗಿದ್ದಾನೆ.

ಬೆಂಗಳೂರಲ್ಲಿ ಒಂದು ಸಂಸ್ಕೃತ ವಿದ್ಯಾಪೀಠವನ್ನು ಸ್ಥಾಪಿಸಬೇಕೆಂದು ಬಹು ದಿನಗಳಿಂದಲೂ ಆಲೋಚಿಸಲ್ಪಟ್ಟಿದ್ದಿತು. ಈಗ ಇದರ ಆರಂಭೋತ್ಸವವು ಬರೋಡಾ ಮಹಾರಾಜರವರಿಂದ ನಿನ್ನೆಯದಿನ ನಡೆಸಲ್ಪಡುವುದಾಗೇರ್ಪಟ್ಟಿದ್ದಿತು. ಈ ಸಂದರ್ಭದಲ್ಲಿ ಪೂನಾದ ಫರ್ಗುಸನ್ ಕಾಲೇಜಿನ ತತ್ವಶಾಸ್ತ್ರಪಂಡಿತರಾದ ಆರ್. ಡಿ. ರಾನಡೆ ಎಂ. ಎ., ಯವರು ಯೂರೋಪ್ಯ ತತ್ವಶಾಸ್ತ್ರ ಪಂಡಿತರುಗಳು ಉಪನಿಷತ್ತುಗಳ ಮೇಲೆ ಮಾಡಿರುವ ವ್ಯಾಖ್ಯಾನಗಳನ್ನನುಸರಿಸಿ ಒಂದು ಭಾಷಣವನ್ನು ಮಾಡುವವರಾಗಿದ್ದರು. ಈ ಪೀಠದ ಮೇಲ್ವಿಚಾರಣಾ ಸಂಘಕ್ಕೆ ಸರದಾರ್ ಕಾಂತರಾಜ ಅರಸ್, ಸಿ. ಎಸ್. ಐ., ರವರು ಪ್ರೆಸಿಡೆಂಟರಾಗಿಯೂ; ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಸೆಟ್ಟರು, ದಿ|| ಬ|| ಜೆ. ಎಸ್. ಚಕ್ರವರ್ತಿಯವರು, ರಾ|| ಬ|| ಕೆ. ಕೃಷ್ಣಯ್ಯಂಗಾರರು, ಮ|| ಪಿ. ಸುಬ್ರಹ್ಮಣ್ಯಯ್ಯರವರು, ಮ|| ಎಚ್. ಶಾಮಶಾಸ್ತ್ರಿ, ಬಿ. ಎ., ಎಂ. ಆರ್. ಎ. ಎಸ್. ರವರು ಮೆಂಬರುಗಳಾಗಿಯೂ; ಧಾರವಾಡದ ಪಂಡಿತ ಮಹಾ ಭಾಗವತ ವಿದ್ಯಾಭೂಷಣರವರು ಸೆಕ್ರೆಟರಿಯಾಗಿಯೂ ಇರುವರು.

ರಾಜಧಾನಿಯ ಶ್ರೀಮಂತ ಮೋತಿಖಾನೆ ವರ್ಧಮಾನಯ್ಯನವರ ಮಾತೃಶ್ರೀಯವರು ಕೆಲವರ್ಷಗಳಿಂದ ಕ್ಷಯರೋಗಗ್ರಸ್ತರಾಗಿದ್ದು ಎಷ್ಟು ಚಿಕಿತ್ಸೆಮಾಡಿದಾಗ್ಯೂ ಗುಣವನ್ನು ಹೊಂದದೆ ಕಳೆದವಾರ ವಿಧಿವಶರಾದರೆಂದು ತಿಳುಹಲು ವಿಷಾದವಾಗುತ್ತದೆ. ಇವರಿಗೆ ಮರಣಕಾಲದಲ್ಲಿ ಪ್ರಾಯಶಃ ೬೫ ವರ್ಷ ವಯಸ್ಸಾಗಿದ್ದಿತು. ಈಕೆಯವರು ದೈವಭಕ್ತರೂ, ರಿಕ್ತಜನಪೋಷಣಾಭಿಮಾನಿಗಳೂ, ನಿಗರ್ವಿಗಳೂ, ವಿಶೇಷ ತ್ಯಾಗಿಗಳೂ ಆಗಿದ್ದು ತಮ್ಮ ಪತಿಯವರು ಕಾಲವಾದ ಮೇಲೆ ತಮ್ಮ ಮಕ್ಕಳಾದ ಮ|| ವರ್ಧಮಾನಯ್ಯನವರು ಪ್ರಾಪ್ತವಯಸ್ಕರಾಗುವವರೆಗೂ ದೊಡ್ಡಾಡಳಿತವನ್ನು ವಹಿಸಿಕೊಂಡು ಬಹಳ ವಿಚಕ್ಷಣೆಯಿಂದ ನಿರ್ವಹಿಸಿ ತಮ್ಮ ಪತಿಯವರ ಹೆಸರಿನ ಮೇಲೆ ಒಂದು ಸತ್ರವನ್ನೂ ದೇವಾಲಯವನ್ನೂ ಕಟ್ಟಿಸಿ ಅವುಗಳ ಪೋಷಣೆಗಾಗಿ ೧ ಲಕ್ಷ ರೂ.ಗಳ ವರೆಗೂ ಕೊಟ್ಟುದಲ್ಲದೆ, ಸ್ವಜನರಲ್ಲಿ ಅನೇಕ ಬಡಕುಟುಂಬಿಗಳಿಗೆ ಪೂರ್ಣಾಶ್ರಯದಾತರಾಗಿದ್ದರು. ಇಂತಹ ಧರ್ಮಿಷ್ಠರ ಅಕಾಲಮರಣವು ಅನೇಕರಿಗೆ ಮನೋವ್ಯಥೆಯನ್ನುಂಟುಮಾಡಿರುತ್ತದೆ. ತಮ್ಮ ಯಜಮಾನರ ಹೆಸರಿನಲ್ಲಿ ಸ್ಥಾಪಿತವಾಗಿರುವ ಜೈನವಿದ್ಯಾರ್ಥಿನಿಲಯದ ಬಾಲಕರುಗಳನ್ನು ತಮ್ಮ ಸ್ವಂತ ಮಕ್ಕಳುಗಳಿಗಿಂತ ಅತಿಶಯವಾದ ವಾತ್ಸಲ್ಯದಿಂದ ಕಾಪಾಡುತ್ತಿದ್ದರು. ಮ|| ವರ್ಧಮಾನಯ್ಯನವರು ತಮ್ಮ ಶ್ರೀಮಂತಿಕೆಗೆತಕ್ಕಂತೆ ಮಾತೃಶ್ರೀಯವರ ಉತ್ತರಕರ್ಮಾದಿಗಳನ್ನು ನೆರವೇರಿಸುತ್ತಿರುವರು. ಮತ್ತೂ ಇವರ ಹೆಸರಿನ ಮೇಲೆ ಯಾವುದಾದರೊಂದು ಯುಕ್ತವಾದ ಧರ್ಮಕಾರ್ಯವನ್ನು ಮಾಡಬಹುದು ಎಂದು ಈ ಪತ್ರಿಕಾವಾಚಕರೊಬ್ಬರು ಬರೆದಿರುತ್ತಾರೆ.

ಯುದ್ಧವಾರ್ತೆಯು.

ಪಶ್ಚಿಮರಣರಂಗ.

ಈ ರಣರಂಗದಲ್ಲಿ ಮುಂದೆ ನಡೆಯಬಹುದಾದ ಮಹಾಯುದ್ಧಕ್ಕಾಗಿ ವಿಶೇಷವಾದ ಸನ್ನಾಹಗಳು ಜರುಗುತ್ತಲಿವೆ. ಇಂಗ್ಲೆಂಡಿನಿಂದ ಹೊಸಪಟಾಲಮ್ಮುಗಳು ವಿಶೇಷವಾಗಿ ಹೋಗಿ ಸೇರುತ್ತಿವೆ. ಕಳೆದವಾರ ಈ ಭಾಗದಲ್ಲಿ ನಡೆದಿರುವ ಯುದ್ಧಗಳಲ್ಲಿ ಶತ್ರುಗಳಿಗೆ ಅಲ್ಪಸ್ವಲ್ಪ ಲಾಭವಾಗಿದ್ದರೂ ಮಿತ್ರಮಂಡಲಿಯವರಿಗೆ ಉಂಟಾಗಿರುವ ಜಯಾನುಕೂಲ್ಯಗಳೇ ಹೆಚ್ಚಾಗಿವೆ. ಹಲವು ಕಡೆ ಯುದ್ಧಗಳು ನಡೆಯುತ್ತಲೇ ಇವೆ. ಮ್ಯೂಜು ಗುಡ್ಡಗಳ ಹತ್ತಿರವೂ ಲೇಬ್ರಿಂತಿನ ಹತ್ತಿರವೂ ಜರ್ಮನರು ಘೋರಯುದ್ಧವನ್ನು ಮಾಡಿ ಆ ಪ್ರದೇಶವನ್ನು ಆಕ್ರಮಿಸಬೇಕೆಂದು ಸಾಹಸಮಾಡಿ ಹಿಮ್ಮೆಟ್ಟಿಸಲ್ಪಟ್ಟರು. ಆರ್ಗೋನಿನಲ್ಲೂ ಲೊರೈನಿನಲ್ಲೂ ಶತ್ರುಗಳು ಬಹಳ ಸೈನ್ಯವನ್ನು ಕೂಡಿಸಿಕೊಂಡು ಬಂದು ಮಿತ್ರಮಂಡಲಿಯವರಮೇಲೆ ಬಿದ್ದು ಪದೇಪದೆ ಯುದ್ಧಮಾಡಿದರೂ, ಬಹಳ ನಷ್ಟಪಟ್ಟು ಹಿಂದಕ್ಕೋಡಿದರು. ಅವರಕಡೆ ಅನೇಕರು ಮಿತ್ರಮಂಡಲಿಯವರಿಗೆ ಸೆರೆ ಸಿಕ್ಕಿದರು. ಈಪ್ರೆಸ್ಸಿಗೆ ಉತ್ತರದಲ್ಲಿ ಇಂಗ್ಲೀಷರು ಆಕ್ರಮಿಸಿಕೊಂಡಿರುವ ಕಂದಕಗಳನ್ನು ತಾವು ವಶಪಡಿಸಿಕೊಳ್ಳಬೇಕೆಂದು ಜರ್ಮನರು ವಿಶೇಷ ಸಾಹಸದ ಯುದ್ಧಮಾಡಿದರು. ಆದರೆ ಸಫಲವಾಗದೆ ಹಿಮ್ಮೆಟ್ಟಿಹೋದರು. ಪೆರೋಯೆ ಕಾಡಿನಲ್ಲಿರುವ ಫ್ರೆಂಚರ ಕಂದಕಗಳ ಮೇಲೆ ರಾತ್ರಿಯ ಹೊತ್ತು ಜರ್ಮನರು ಬಿದ್ದರು. ಯುದ್ಧವಾದುದರಲ್ಲಿ ಅಪಜಯಹೊಂದಿದರು. ಬಾಡ್ಸಾಗ್ಟ್-ಜೊಸೋಮೇಗಳ ಹತ್ತಿರವೂ ಅವರಿಗೆ ಸೋಲಾಯಿತು. ಸೌಸೇಜಿನ ಹತ್ತಿರ ಜರ್ಮನರು ಕಳೆದ ತಾ|| ೧೮ ರಲ್ಲಿ ೧೨೦೦ ಗಜಗಳ ವಿಸ್ತಾರದ ರಣರಂಗದಲ್ಲಿ ತೀಕ್ಷ್ಣವಾದ ಯುದ್ಧವನ್ನು ಮಾಡಲಾಗಿ ಫ್ರೆಂಚರು ಅತ್ಯಂತ ಶೌರ್ಯದಿಂದ ಕಾದು ಶತ್ರುಗಳನ್ನು ಹಿಂದಕ್ಕೋಡಿಸಿದರು. ಆರ್ಗೋನಿನಲ್ಲಿ ಶತ್ರುಗಳು ಸಿಡಿಮದ್ದಿನ ಗೋಳಗಳಿಂದ ಈ ಯುದ್ಧವನ್ನು ಭೀಕರವಾಗಿ ಮಾಡಿದರು. ಮ್ಯೂಸ್ ಪರ್ವತಗಳಮೇಲೆ ಫಿರಂಗಿ ಕಾಳಗವಾಯಿತು. ಆದರೂ ಶತ್ರುಗಳು ವಿಶೇಷ ನಷ್ಟಪಟ್ಟು ತಾವೇ ಹಿಮ್ಮೆಟ್ಟಿದರು. ಸೆಂಟ್‌ಮಿಹಿಲ್ಸಿಗೆ ವಾಯವ್ಯದಲ್ಲಿ ೧೪ ಮೈಲಿಗಳ ದೂರದಲ್ಲಿರುವ ಲೈಸ್‌ಎರ್ಜೆಸ್ಸಿನಮೇಲೆ ಜರ್ಮನರು ಬಿದ್ದು ವಿಷವಾಯುಗೋಳಗಳನ್ನೂ, ಉರಿಯುವ ದ್ರಾವಕವನ್ನೂ ಸಹ ಫ್ರೆಂಚ್ ಸೈನಿಕರಮೇಲೆ ಪ್ರಯೋಗಿಸಿ ಭಯಂಕರವಾಗಿ ಯುದ್ಧಮಾಡಿದರು. ಇದರಿಂದ ಫ್ರೆಂಚರ ಮುಂಗಡೆಯ ಸಾಲಿನ ಕಂದಕಗಳನ್ನು ಹಿಡಿದುಕೊಂಡರು. ಆದರೆ ಫ್ರೆಂಚರು ಅವುಗಳನ್ನು ಮರಳಿ ವೀರಾವೇಶದಿಂದ ಕಾದಾಡಿ ವಶಪಡಿಸಿಕೊಂಡು ಶತ್ರುಗಳನ್ನು ಹಿಂದಕ್ಕೋಡಿಸಿದರು.

ಪೂರ್ವರಣರಂಗ.

ಈ ರಣರಂಗದಲ್ಲಿ ಶತ್ರುಗಳು ಮುಂದುಮುಂದಕ್ಕೆ ಒತ್ತಿ ರಷ್ಯನರನ್ನು ಕೆಲವು ಕಡೆ ಹಿಮ್ಮೆಟ್ಟಿಸುತ್ತಲೇ ಇದ್ದಾರೆ. ರಷ್ಯನರು ಹಿಮ್ಮೆಟ್ಟಿದರೂ ಸುರಕ್ಷಿತವಾದ ಸ್ಥಾನಗಳಲ್ಲಿ ನಿಂತು ಶತ್ರುಗಳನ್ನು ಇದಿರಿಸುತ್ತಲೂ ಅವರಿಗೆ ನಷ್ಟವನ್ನು ಹೆಚ್ಚಾಗಿ ಉಂಟುಮಾಡುತ್ತಲೂ ಇದ್ದಾರೆ. ಪೋಲಾಂಡಿನ ಆಗ್ನೇಯಭಾಗದಲ್ಲಿ ಬಲವಾದ ಕಾಳಗಗಳು ನಡೆದು ಈಗ ಶಾಂತವಾಗಿವೆ. ಜರ್ಮನರು ಉತ್ತರದಿಂದಲೂ ದಕ್ಷಿಣದಿಂದಲೂ ಸಹಸಾಗಿ ವಾರ್ಸಾವನ್ನು ಮುತ್ತಿ ವಶಪಡಿಸಿಕೊಳ್ಳಬೇಕೆಂದು ಬಲವಾದ ಸಾಹಸಮಾಡುತ್ತಿದ್ದಾರೆ. ಕಳೆದ ತಾ|| ೧೪ ರಲ್ಲಿ ಜರ್ಮನರ ಒಂದು ಬಲವಾದ ಸೈನ್ಯವು ರಿಗಾಪಾಲ್ಲಿ ಪ್ರಾಂತದಲ್ಲಿ ರಷ್ಯನರಮೇಲೆ ಬಿದ್ದು ಕಾದಿತು. ವಿಂಡಾವಾ-ವೆಂಟಾ ನದಿಗಳ ಮಧ್ಯದಲ್ಲಿ ನಡೆದ ಕಾಳಗದಲ್ಲಿ ರಷ್ಯನ್ ಅಶ್ವಿಕಸೈನ್ಯವನ್ನು ಶತ್ರುಗಳು ಹಿಂದೆಗೆಸಿದರು. ತಾ|| ೧೩ ರಲ್ಲಿ ಆಸ್ಟ್ರಿಯನ್ನರು ಬಲವಾಗಿ ಕಾದಾಡಿ ನೀಸ್ಟರ್ ನದಿಯನ್ನು ಹಲವು ಕಡೆಯಲ್ಲಿ ದಾಟಿಹೋದರು. ಉತ್ತರಪೋಲಾಂಡಿನಲ್ಲಿ ಜರ್ಮನರು ವಾರ್ಸಾಕ್ಕೆ ೫೦-೬೦ ಮೈಲಿ ದೂರದವರೆಗೂ ಬಂದು ಯುದ್ಧಮಾಡುತ್ತಿದ್ದಾರೆ. ಪಿಸ್ಸಾ ನದಿಯ ಬಲಭಾಗದಲ್ಲಿದ್ದ ರಷ್ಯನರ ಕಂದಕಗಳನ್ನು ಅವರು ಆಕ್ರಮಿಸಿಕೊಂಡಿದ್ದು ಬಿಟ್ಟುಬಿಟ್ಟರು. ಜಕ್ವಾ ನದಿಯ ಉಭಯ ತೀರಗಳಲ್ಲೂ ಬಲವಾದ ಯುದ್ಧಗಳು ನಡೆದಿವೆ. ಪ್ರಸ್ನಿಜ್ ಪ್ರಾಂತದಲ್ಲಾದ ಯುದ್ಧದಲ್ಲಿ ಶತ್ರುಗಳ ಸೈನ್ಯವು ಬಲವಾಗಿ ಬಂದಿದ್ದುದರಿಂದ ರಷ್ಯನರು ಹಿಮ್ಮೆಟ್ಟಬೇಕಾಯಿತು. ಈಗ ದಕ್ಷಿಣ ಗೆಲೀಷಿಯದ ಲೂಬ್ಲಿ ರಣರಂಗದಲ್ಲಿ ಜರ್ಮನರ ೬ ಪಟಾಲಮ್ ಸೈನ್ಯವಿರುವುದೆಂದೂ, ಉತ್ತರದ ಬಾಲ್ಟಿಕ್ ರಣರಂಗದಲ್ಲಿ ೩ ಪಟಾಲಮ್ಮುಗಳು ಇರುವುವೆಂದೂ, ಯುದ್ಧಕಲಾವಿದರು ಊಹಿಸಿದ್ದಾರೆ. ಓಪಿಜೆಟ್ಜಾ ನದಿಯಮೇಲೆ ಉಭಯಕಡೆಗೂ ತೀವ್ರವಾದ ಯುದ್ಧವಾಗಿ ಶತ್ರುಗಳ ಕಡೆಯ ೩ ಪಟಾಲಮ್ಮುಗಳು ನದಿಯನ್ನು ದಾಟಲು, ರಷ್ಯನರು ಸನೀನುಗಳ ಯುದ್ಧವನ್ನು ಮಾಡಿ ಬಹುಮಂದಿ ಶತ್ರುಗಳನ್ನು ನಾಶಪಡಿಸಿದರು. ಜಯಾಪಜಯಗಳು ಎರಡು ಕಡೆಗೂ ಸಮನಾದುವು. ಪಿಸ್ಸಾ-ವಿಶ್ಚುಲಾ ನದಿಗಳ ಮಧ್ಯದಲ್ಲಿ ತಾ|| ೧೬ ರಲ್ಲಿ ನಡೆದ ಯುದ್ಧದಲ್ಲಿ ರಷ್ಯನರು ಹಿಮ್ಮೆಟ್ಟಬೇಕಾಯಿತು. ವೀಪ್ರಿಜ್ಜಿನ ಹತ್ತಿರವು ಜರ್ಮನರು ಮುಂದಕ್ಕೆ ದಬ್ಬಿಕೊಂಡು ಬರುತ್ತಿದ್ದಾರೆ. ತಾವು ಹಿಮ್ಮೆಟ್ಟುತ್ತಿರುವುದನ್ನು ರಷ್ಯನರು ಒಪ್ಪಿಕೊಂಡಿದ್ದಾರೆ. ಜರ್ಮನರ ಕಡೆ ಉತ್ತರದ ಕಡೆಯಿಂದ ಜನರಲ್ ವಾಂಡೆನ್‌ಬರ್ಗರವರೂ ದಕ್ಷಿಣದ ಕಡೆಯಿಂದ ಜನರಲ್ ಮಾಕೆನ್‌ಸೇನ್ ರವರೂ ಸೈನ್ಯಗಳನ್ನು ನಡೆಯಿಸಿಕೊಂಡು ವಾರ್ಸಾದ ಕಡೆಗೆ ಸಾಗುತ್ತಿದ್ದಾರೆ. ವಾನ್ ಹಿಂಡೆನ್‌ಬರ್ಗ್‌ರವರೂ ಈ ರಣರಂಗದಲ್ಲಿದ್ದಾರಂತೆ. ಇದರಿಂದ ಉತ್ತರದ ಬಾಲ್ಟಿಕ್ ಸಮುದ್ರದಿಂದ ದಕ್ಷಿಣದ ಬೆಸರೇಬಿಯಾದ ವರೆಗೂ ೧ ಸಾವಿರ ಮೈಲಿಗಳ ವರೆಗೆ ಸೈನ್ಯಪಂಗ್ತಿಯು ಇದಿರುಬದಿರಾಗಿ ನಿಂತು ಹರಡಿಕೊಂಡಿದೆ. ಜರ್ಮನರ ಸೇನಾಪಂಗ್ತಿಯ ಮುಂಭಾಗದವರು ಉದ್ದಕ್ಕೂ ರಷ್ಯನರಮೇಲೆ ಬಿದ್ದು ಕಾದಾಡುತ್ತಿದ್ದಾರೆ. ಕೆಲಕಡೆ ರಷ್ಯನರು ಶತ್ರುಗಳನ್ನು ಚೆನ್ನಾಗಿ ಧ್ವಂಸಮಾಡುತ್ತಿದ್ದರೂ ತಾವು ಸುರಕ್ಷಿತವಾದ ಸ್ಥಾನಗಳ ಕಡೆಗೆ ಹಿಮ್ಮೆಟ್ಟಿ ಹೋಗುತ್ತಿದ್ದಾರೆ. ಬಾಲ್ಟಿಕ್ ಜಿಲ್ಲೆಯಲ್ಲಿ ಜನರಲ್ ಬೂಲೂರವರು ವಿಂಡಾ ನದಿಯನ್ನು ದಾಟಿ ಮಿಟಾಕ್ಕೆ ಉತ್ತರದಲ್ಲೂ ದಕ್ಷಿಣದಲ್ಲೂ ಮುಂದಕ್ಕೆ ಹೋಗಿದ್ದಾರೆ. ಇಲ್ಲಿ ಅಶ್ವಸೇನೆಗಳ ಯುದ್ಧವು ನಡೆಯುತ್ತಿದೆ. ಜನರಲ್ ಮಾಕೆನ್‌ಸೇನ್‌ರವರು ವಿಲೋಲಾಜಿನ ಹತ್ತಿರ ದೊಡ್ಡ ಪ್ರಯತ್ನವನ್ನು ಮಾಡಿ ೧೦ ಆವೃತ್ತಿ ರಷ್ಯನ್ ಸೇನಾಪಂಗ್ತಿಯಮೇಲೆ ಬಿದ್ದು ಯುದ್ಧಮಾಡಿ ಭೇದಿಸಲು ಪ್ರಯತ್ನಿಸಿದರು. ಅಷ್ಟು ಸಲವೂ ಅವರನ್ನು ರಷ್ಯನರು ಹಿಮ್ಮೆಟ್ಟಿಸಿದರು. ಕಡೆಗೆ ಜರ್ಮನರು ಬಹು ಪ್ರಯತ್ನದಿಂದ ಸ್ವಲ್ಪ ಮುಂದಕ್ಕೆ ನುಗ್ಗಿಯೇ ಹೋದರು. ನೀಸ್ಟರ್ ನದಿಯನ್ನು ದಾಟಿಹೋದ ಆಸ್ಟ್ರಿಯನ್ ಸೈನಿಕರಲ್ಲಿ ೨ ಸಾವಿರ ಮಂದಿಗಳನ್ನು ರಷ್ಯನರು ಸೆರೆಹಿಡಿದರು. ತಾ|| ೧೪ ರಲ್ಲಿ ಎಂಡ್ರಾ-ಬಾಲ್ಟಿಕ್ ಜಿಲ್ಲೆಗಳನ್ನು ದಾಟಿದ ಜನರಲ್ ಜಾಲೋರವರ ಸೈನ್ಯವು ಎಂಡ್ರಾ ನದಿಯ ಬಲದಡದಮೇಲಿನ ಸ್ವಲ್ಪ ಪ್ರದೇಶವನ್ನು ಆಕ್ರಮಿಸಿಕೊಂಡ ಬಳಿಕ ಟ್ಯೂಕುಂ, ಲೆಸ್ಟೊರಿಗಾ, ಅಲೌಡ್‌ಜುಮಿಾ, ಟೌಲು- ಇವುಗಳ ಮಾರ್ಗವಾಗಿ ಮುಂದಕ್ಕೆ ನುಗ್ಗಿಹೋಗುತ್ತಿವೆ. ರಷ್ಯನರು ಫ್ರಾಸ್‌ನಿಜ್ಜನ್ನು ಬಿಟ್ಟುಹೋದ ತರುವಾಯ ತಾವು ಇದುವರೆಗೂ ಬಲಪಡಿಸಿಕೊಂಡಿದ್ದ ಒಂದಾನೊಂದು ಸ್ಥಲಕ್ಕೆ ಹೋಗಿ ನಿಂತಿದ್ದರು. ಆದರೆ ಜರ್ಮನರು ಅಲ್ಲಿಗೂ ನುಗ್ಗಿ ತಾ|| ೧೫ ರಲ್ಲಿ ಅದನ್ನೂ ಹಿಡಿದುಕೊಂಡರು. ತಾ|| ೧೬ ರಿಂದ ರಷ್ಯನರು ಪಿಸ್ಸಾ-ವಿಶ್ಚುಲಾಗಳ ಮಧ್ಯದಲ್ಲಿರುವ ಯುದ್ಧರಂಗದಿಂದ ನಾರ್‍ಯೂವಿನ ಕಡೆಗೆ ಹೋಗುತ್ತಿದ್ದಾರೆ. ಜರ್ಮನರ ಕಡೆಗೆ ತಮಗಿಂತ ದ್ವಿಗುಣವಾದ ಸೈನ್ಯವಿರುವುದರಿಂದ ತಾವು ಹೀಗೆ ಹಿಮ್ಮೆಟ್ಟಬೇಕಾಯಿತೆಂದು ರಷ್ಯನರು ಪ್ರಕಟಿಸಿಕೊಂಡಿದ್ದಾರೆ. ಅಂತು ಜನರಲ್ ಮಾಕೆನ್‌ಸೇನ್‌ರವರ ಸೈನಿಕರು ಈಗ ವಿಶ್ಚುಲಾ-ಬಗ್ ನದಿಗಳ ಮಧ್ಯದಲ್ಲಿ ಬಹಳ ಪ್ರತಾಪದಿಂದ ಯುದ್ಧಮಾಡುತ್ತಿವೆ. ಅಲ್ಲಿನ ಕ್ರಾಸ್ನಾಸ್ಟೋವಿನ ಹತ್ತಿರ ಇದ್ದ ಬೆಟ್ಟಗಳ ಮೇಲಿನ ತಮ್ಮ ಸ್ಥಾನಗಳನ್ನು ಬಿಟ್ಟು ರಷ್ಯನರು ಓಡಿಹೋಗಿರುತ್ತಾರೆ. ಶತ್ರುಗಳು ಬಗ್‌ನದಿಯ ಬಲಭಾಗವನ್ನು ದಾಟುವುದಕ್ಕೆ ಪ್ರಯತ್ನಿಸುತ್ತಿದ್ದಾರೆ.

ಇಟಲಿ.

ಕೆಲದಿನಗಳಿಂದ ಇಟಲಿಯ ಸೇನಾಪಙ್ಕ್ತಿಯು ಶಾಂತವಾಗಿ ನಿಂತಿದ್ದು ಬಳಿಕ ಮತ್ತೆ ಯುದ್ಧವನ್ನಾರಂಭಿಸಿ, ಅಕಸ್ಮಾತ್ತಾಗಿ ಶತ್ರುಗಳಮೇಲೆ ಏರಿಹೋಗಿ ಫಿಲ್ಬರೀಗೋ ಎಂಬ ಪರ್ವತಶಿಖರವನ್ನು ಸ್ವಾಧೀನಪಡಿಸಿಕೊಂಡಿತು. ರಾತ್ರಿಯಹೊತ್ತು ಆಸ್ಟ್ರಿಯನ್ನರು ಪ್ರತಿಯುದ್ಧವನ್ನಾರಂಭಿಸಿಬಂದರೂ ಇಟಾಲಿಯನ್ನರು ಅವರಿಗೆ ವಿಶೇಷ ನಷ್ಟವನ್ನುಂಟುಮಾಡಿ ಹಿಮ್ಮೆಟ್ಟಿಸಿದರು. ಕಡೋರುರಂಗದಲ್ಲಿ ಅತ್ಯಂತ ದುರ್ಗಮವಾದ ಶತ್ರುಸ್ಥಾನಗಳನ್ನು ಇಟಲಿಯವರು ವಶಪಡಿಸಿಕೊಂಡಿದ್ದಾರೆ. ಹಲವು ಬೆಟ್ಟಗಳನ್ನೂ ನದಿಗಳನ್ನೂ ದಾಟಿ, ಶತ್ರುಗಳ ತಡೆಯನ್ನು ನಿವಾರಿಸಿ, ಕಣಿವೆಗಳಲ್ಲಿ ನುಗ್ಗಿ ಪ್ರೆಂಜಾಲೋಯಿಸು ಮೂಲಕವಾಗಿ ಹೋಗಿ ಲಾನಾಕಣಿವೆಗಳ ಮಾರ್ಗವನ್ನು ಇಟಾಲಿಯನ್ನರು ಸೇರಿರುವರು. ಅಲ್ಲಿ ಮುಷ್ಟಾಮುಷ್ಟಿ ಯುದ್ಧವು ನಡೆದಿತು. ಶತ್ರುಸ್ಥಾನವನ್ನು ಇಟಾಲಿಯನ್ನರು ಆಕ್ರಮಿಸಿದರು. ೧ ಸಾವಿರ ಅಡಿಗಳಿಗಿಂತ ಎತ್ತರವಾದ ಎನಿರೋಕೋಲೋ-ಬ್ರಿಚಿಯೋ ಕಣಿವೆಗಳನ್ನು ಆಸ್ಟ್ರಿಯನ್ನರು ದಾಟಿಹೋಗಿ ಇಟಲಿಯವರು ಇದ್ದ ಸ್ಥಾನಗಳಮೇಲೆ ಬಿದ್ದರು. ಆದರೆ ಅವರೇಟಿನಿಂದ ಹಿಮ್ಮೆಟ್ಟಿದರು. ಕಡೆಗೆ ಇಟಲಿಯವರು ಅಟ್ಟಿಕೊಂಡು ಹೋಗಿ, ಆಸ್ಟ್ರಿಯನ್ನರ ನುಗ್ಗಿಹೋಗಿದ್ದ ೨ ಕಣಿವೆಗಳನ್ನು ಇವರೇ ಆಕ್ರಮಿಸಿಕೊಂಡುಬಿಟ್ಟರು. ಐಸೋಂಜೋರಣರಂಗದಲ್ಲಿ ಇಟಾಲಿಯನ್ನರು ಕಳೆದ ಭಾನುವಾರದದಿನ ಫಿರಂಗಿಗಳ ಯುದ್ಧವನ್ನೂ ಪದಾತಿಗಳ ಯುದ್ಧವನ್ನೂ ಭಯಂಕರವಾಗಿ ನಡೆಯಿಸಿ ಕಾರ್ಸೋಕ್ಷೇತ್ರಭೂಮಿಯಲ್ಲಿ ಶತ್ರುಗಳು ಬಲವಾಗಿ ನಿರ್ಮಿಸಿಕೊಂಡಿದ್ದ ಅನೇಕ ಕಂದಕಗಳ ಸಾಲನ್ನು ಸ್ವಾಧೀನಪಡಿಸಿಕೊಂಡುದಲ್ಲದೆ, ೨ ಸಾವಿರ ಮಂದಿ ಆಸ್ಟ್ರಿಯನ್ ಸೈನಿಕರನ್ನೂ ೫ ಫಿರಂಗಿಗಳನ್ನೂ ೧೫೦೦ ತುಪಾಕಿಗಳನ್ನೂ ಅನೇಕ ಮದ್ದುಗುಂಡು ಮೊದಲಾದ ಸಾಮಗ್ರಿಗಳನ್ನೂ ವಶಪಡಿಸಿಕೊಂಡರು.

ಆಸ್ಟ್ರಿಯನ್ನರು ಅಕಸ್ಮಾತ್ತಾಗಿ ಇಟಲಿದೇಶಕ್ಕೆ ತಾವೇ ನುಗ್ಗಿ ಒಂದು ಯುದ್ಧವನ್ನು ನಡೆಯಿಸಿದರೆಂಬ ಹೊಸಸುದ್ದಿಯು ತಾ|| ೨೦ ರಲ್ಲಿ ಬಂದಿರುವುದು. ಇಟಲಿದೇಶದೊಳಗೆ ಇದೇ ಮೊದಲು ನಡೆದ ಯುದ್ಧವು. ಆಸ್ಟ್ರಿಯನ್ನರು ೬ ಮೈಲಿ ಅಗಲದ ಒಂದು ಗಡ್ಡೆಕಟ್ಟಿದ ಜಲಪ್ರದೇಶವನ್ನು ೧೦ ಗಂಟೆಯ ಹೊತ್ತಿನೊಳಗೆ ದಾಟಿ, ಅಕಸ್ಮಾತ್ತಾಗಿ ಇಟಲಿಯೊಳಕ್ಕೆ ನುಗ್ಗಿ ಅಲ್ಲಿದ್ದ ಸೈನ್ಯವನ್ನು ಹಿಂದಕ್ಕೋಡಿಸಿ, ಟೋನೆಲ್‌ಬೆಟ್ಟಗಳ ಹಿಂದಿರುವ ಸ್ಥಲಗಳನ್ನು ಹಿಡಿದುಕೊಳ್ಳಲು ಪ್ರಯತ್ನಿಸಿದರು. ಆಗ ಇಟಲಿದೇಶದ ದಿಣ್ಣೆ ನೆಲದಮೇಲೆ ಉಭಯಪಕ್ಷದವರಿಗೂ ಘೋರಯುದ್ಧವಾಯಿತು. ಅಷ್ಟರಲ್ಲಿ ಸಾಯಂಕಾಲವಾಯಿತು. ಗಾಳಿಯು ಬಲವಾಗಿ ಬೀಸುತ್ತಿದ್ದಿತು. ಇಟಾಲಿಯನ್ನರು ಆಸ್ಟ್ರಿಯಾಸೈನಿಕರನ್ನು ಶೀತದಿಂದ ಗಡ್ಡೆಕಟ್ಟಿದ್ದ ಜಲಭಾಗದ ಕಡೆಗೆ ಅಟ್ಟಿದರು. ಅವರು ಆ ಗಾಢಾಂಧಕಾರದಲ್ಲಿ ಆ ಹಿಮದ ಗಡ್ಡೆಯಂತಹ ಜಲಭಾಗದ ೬ ಮೈಲಿಯ ಪ್ರದೇಶವನ್ನು ದಾಟಿ ಹೋಗುವಾಗ ಏನಾದರೋ ತಿಳಿದಿಲ್ಲ.

ತುರ್ಕಿ.

ಡಾರ್ಡಿನಲ್ಸ್ ಜಲಸಂಧಿಯನ್ನು ಕಡೆಯವರೆಗೂ ರಕ್ಷಿಸಿಕೊಳ್ಳುವುದು ಸಾಧ್ಯವಲ್ಲವೆಂದು ತೋಚಿರುವುದರಿಂದ ಕಾನ್‌ಸ್ಟಾಂಟಿನೋಪಲ್ಲಿನಲ್ಲಿರುವ ಜರ್ಮನರು ಅಲ್ಲಿನ ಬ್ಯಾಂಕುಗಳಲ್ಲಿಡಲ್ಪಟ್ಟಿರುವ ತಮ್ಮ ಹಣವನ್ನೆಲ್ಲಾ ತೆಗೆದುಕೊಂಡು ಸ್ವದೇಶಕ್ಕೆ ತೆರಳುತ್ತಿರುವರೆಂದೂ, ಅಲ್ಲಿನ ಜರ್ಮನ್ ಸೈನಿಕೋದ್ಯೋಗಿಗಳೂ ಸ್ವದೇಶೋನ್ಮುಖರಾಗಿರುವರೆಂದೂ, ಮಿತ್ರಮಂಡಲಿಯವರೊಡನೆ ತಾವು ಪ್ರತ್ಯೇಕವಾಗಿ ಸಂಧಿಯನ್ನು ಮಾಡಿಕೊಳ್ಳುವುದಕ್ಕಾಗಿ ತುರ್ಕಿಯವರು ತಮ್ಮ ಪ್ರತಿನಿಧಿಗಳನ್ನು ಸ್ವಿಟ್ಜರ್ಲೆಂಡಿಗೆ ಕಳುಹಿಸಿಕೊಟ್ಟಿರುವರೆಂದೂ ಸೋಫಿಯಾದಿಂದಲೂ ಬುಖಾರೆಸ್ಟಿನಿಂದಲೂ ಬಂದಿರುವ ತಂತ್ರೀವಾರ್ತೆಗಳು ತಿಳಿಸಿರುವುವಂತೆ. ತುರ್ಕಿಯಲ್ಲಿದ್ದ ಜರ್ಮನ್ ರಾಯಭಾರಿಯು ಕಾಗದಪತ್ರಗಳ ಸಮೇತ ಸ್ವದೇಶಕ್ಕೆ ಹೋದನೆಂದೂ ಸುದ್ದಿಯುಂಟಾಗಿದೆ. ಡಾರ್ಡಿನಲ್ಸಿನಲ್ಲಿ ಮತ್ತೊಂದು ದೊಡ್ಡ ಯುದ್ಧವನ್ನು ಮಾಡಿ ಮಿತ್ರಮಂಡಲಿಯವರು ತುರ್ಕಿಯರ ೨ನೆಯ ಸೇನಾಪಂಕ್ತಿಯನ್ನು ಆಕ್ರಮಿಸಿಕೊಂಡಿರುವರು.

ದಕ್ಷಿಣಾಫ್ರಿಕಾ.

ಆಫ್ರಿಕಾದಲ್ಲಿ ಜರ್ಮನರಿಗೆ ಸೇರಿರುವ ಕಾಮರೂನ್ಸ್ ರಾಷ್ಟ್ರಭಾಗದ ಮುಖ್ಯಪಟ್ಟಣವಾದ ಗಾಂಡೀರ್ ಎಂಬುದನ್ನು ಮಿತ್ರಮಂಡಲಿಯ ಸೈನಿಕರು ವಶಪಡಿಸಿಕೊಂಡರು. ಇದು ಜರ್ಮನರಿಗೆ ಸುರಕ್ಷಿತಸ್ಥಾನವಾಗಿದ್ದಿತು. ಇದನ್ನು ಜರ್ಮನರು ತಿರಿಗಿ ಬಿಡಿಸಿಕೊಳ್ಳಬೇಕೆಂದು ಬಹಳ ಸಾಹಸಮಾಡಿದರೂ ವ್ಯರ್ಥವಾಯಿತು. ಸಮುದ್ರತೀರದಲ್ಲಿ ಕೆಲಸಮಾಡುತ್ತಿದ್ದ ಇಂಗ್ಲಿಷ್ ಫ್ರೆಂಚ್ ಸೈನ್ಯಗಳು ಡೇಹರ್‌ಸ್‌ಜಾಹೇ ಎಂಬ ಪಟ್ಟಣಗಳನ್ನು ಹಿಡಿದುಕೊಂಡರು.

ನೈರುತಿ ಆಫ್ರಿಕಾದಲ್ಲಿ ಸಂಪೂರ್ಣ ವಿಜಯವನ್ನು ಪಡೆದ ಬೂವರ್‌ಸೈನ್ಯಗಳಲ್ಲಿ ಕೆಲವು ಯುದ್ಧಭೂಮಿಯಿಂದ ರಾಜಧಾನಿಯಾದ ಕೇಪ್‌ಟವನ್ನಿಗೆ ಬಂದುವು. ಬೀದಿಯಲ್ಲಿ ಉತ್ಸವಗೊಂಡುಹೋಗುವಾಗ ಪುರಜನರು ಅಮಂದಾನಂದದಿಂದ ಗೌರವಿಸಿ ಸ್ವಾಗತಿಸಿದರು. ಪುರಮಂದಿರದಲ್ಲಿ ಪುರಾಧ್ಯಕ್ಷರು ಸ್ವಾಗತಮಾಡಿ ಕೊಂಡಾಡಿದರು.

ಕೃಷ್ಣಾನದಿಯ ಅಣೆಕಟ್ಟೆಯ ಆಶ್ರಯದಿಂದ ಈಗ ೧ಕೋಟಿ ಎಕರೆಯ ಭೂಮಿಯಲ್ಲಿ ತರೀವ್ಯವಸಾಯವು ಮಾಡಲ್ಪಡುತ್ತಿದೆ.

ತಿರುವಾಂಕೂರು ಶಾಸನಾನ್ವೇಷಣ ಶಾಖೆಯವರು ಈಚೆಗೆ ಮಾಡಿದ ಪರಿಶೋಧನೆಯಲ್ಲಿ ೨ ಪುರಾತನ ತಾಮ್ರಶಾಸನಗಳನ್ನು ಕಂಡುಹಿಡಿದಿರುವರು. ಅದರಲ್ಲಿ ೮ ನೆಯ ಶತಮಾನದ ಮಧ್ಯಕಾಲದಲ್ಲಿ ರಾಜಶೇಖರನೆಂಬ ರಾಜಶ್ರೇಷ್ಠನೊಬ್ಬನು ರಾಜ್ಯವಾಳುತ್ತಿದ್ದನೆಂಬ ಸಂಗತಿಯು ೧ ಶಾಸನದಿಂದ ವ್ಯಕ್ತವಾಗುವುದು. ಈತನು ಸತ್ಯೇಂದ್ರಚೋಳನ ಮಗ ರಾಜಶೇಖರನಾಗಿರಬಹುದೆ?

ಭರತಖಂಡದ ಸರ್ಕಾರದವರು ಈ ದೇಶದ ಕೈಗಾರಿಕೆಗಳ ಅಭಿವೃದ್ಧಿಗೆ ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಸಂಯುಕ್ತರಾಷ್ಟ್ರಗಳಲ್ಲಿರುವ ಗಾಜಿನ ಕಾರ್ಯಾಲಯಗಳಲ್ಲಿ ಉತ್ತಮವಾದ ಕೆಲಸವು ನಡೆಯುವಂತೆ ಮಾಡಿ ಅದನ್ನು ಪ್ರಬಲಪಡಿಸಬೇಕೆಂಬ ಯೋಚನೆಯನ್ನು ಆ ಕೆಲಸದಲ್ಲಿ ಕುಶಲರಾದ ಎಂದರೆ ಲ್ಯಾಂಪಿನ ಸಾಮಗ್ರಿಗಳನ್ನು ಮಾಡುವ ಪಂಡಿತನೊಬ್ಬನನ್ನೂ, ಮೂಲ ಗಾಜನ್ನೇ ನಿರ್ಮಿಸಬಲ್ಲವನೊಬ್ಬನನ್ನೂ ಸೀಮೆಯಿಂದ ಕರೆಯಿಸಿಕೊಳ್ಳುವುದಕ್ಕಾಗಿ ಸ್ಟೇಟ್‌ಸೆಕ್ರೆಟರಿಯವರಿಗೆ ಬರೆದಿರುತ್ತಾರೆ.

ಸ್ವೀಕಾರ.

ಕೈ॥ ವೀರಸಂಗಪ್ಪನವರ ಸ್ಮರಣಾರ್ಥವಾಗಿ ಹೊನ್ನಿಡಿಕೆಯಲ್ಲಿ ೩೦-೬-೧೫ ರಲ್ಲಿ ಮ॥ ಗುಬ್ಬಿ ಹೊರಳ್ಳಿ ಹಿರೇಮಠದ ಶ್ರೀ ಜೋಗಪ್ಪನವರ ಮಗಳು ಸೌ॥ ಗೌರಮ್ಮನನ್ನು ಕಲ್ಲೂರುಮಠದ ಶ್ರೀ ರುದ್ರದೇವರ ಮಕ್ಕಳು ಚಿ॥ ಸಿದ್ಧವೀರದೇವರಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ತೆಗೆದ ಅಗ್ರತಾಂಬೂಲದಬಗೆಗೆ ೧॥ ರೂ. ಮತ್ತು ೫-೬-೧೫ ರಲ್ಲಿ ಇದೇ ಊರಿನ ಸೋಮಲಿಂಗಪ್ಪನವರ ತಂಗಿ ಸೌ॥ ಕಲ್ಲಮ್ಮನನ್ನು ಸಿರಗವಹಳ್ಳಿ ಮ॥ ಲಿಂಗಣ್ಣನವರ ಮಗ ಚಿ॥ ಸಿದ್ಧಯ್ಯನಿಗೆ ಕೊಟ್ಟು ನಡೆಸಿದ ಲಗ್ನದಲ್ಲಿ ತೆಗೆದ ಅಗ್ರತಾಂಬೂಲದ ಬಗೆಗೆ ೧ ರೂ. ಒಟ್ಟು ೨ ರೂ. ಗಳು ಮ॥ ರಾ॥ ಯಜಮಾನ್ ಹೊನ್ನಶೆಟ್ಟಪ್ಪನವರ ಮೂಲಕವೂ, ಶಿಕಾರಿಪುರದ ತಾ॥ ಬೆಕ್ಕಾಪುರದ ಮ॥ ಹೊಳೆಯಪ್ಪನವರಿಂದ ಅವರ ತಂದೆ ಸಿದ್ಧಪ್ಪನವರು ಶಿವೈಕ್ಯರಾದ ಸಮಯದಲ್ಲಿ ಧರ್ಮಸಂಸ್ಥೆಗಳ ಸಹಾಯಾರ್ಥವಾಗಿ ತೆಗೆದ ಕಾಣಿಕೆಗಳಲ್ಲಿ ಅಗ್ರತಾಂಬೂಲದ ಬಗೆಗೆ ೧ ರೂ. ಸಂದಿರುತ್ತವೆ. ಪ. ಪ್ರ.

ಪತ್ರವ್ಯವಹಾರ.

ಕೋಲಾರ ಡಿ॥ ಸಿದ್ಲಘಟ್ಟ.

ಶ್ರೀಮದ್ವೀರಶೈವ ಮಹಾಸಭೆಗಳಲ್ಲಿ ತೀರ್ಮಾನವಾಗಿರುವಂತೆ ನಮ್ಮಗಳಲ್ಲಿ ನಡೆಯುವ ಶುಭಶೋಭನಾದಿ ಕಾರ್ಯಗಳಲ್ಲಿ ವೀರಶೈವ ವಿದ್ಯಾವರ್ಧಕ ಫಂಡಿಗೋಸ್ಕರ ಸ್ವಲ್ಪ ಹಣವನ್ನು ತೆಗೆದು ಇತರತ್ರ ಪದ್ಧತಿಯು ಎಲ್ಲಾ ಕಡೆಗಳಲ್ಲಿಯೂ ಜಾರಿಯಲ್ಲಿ ಬಂದಿದ್ದಾಗ್ಯೂ ಈ ಪ್ರಾಂತ ಮಾತ್ರ ರೂಢಿಗೆ ತರದೆ ಇದ್ದುದು ಒಂದು ಕೊರತೆಯಾಗಿದ್ದಿತು. ಕಳೆದ ಜ್ಯೇಷ್ಠಮಾಸದಲ್ಲಿ ಈ ಸಿದ್ಲಘಟ್ಟದಲ್ಲಿ ನಡೆದ ಲಗ್ನದಲ್ಲಿ ಈ ವಿಷಯವಾಗಿ ಚರ್ಚೆಯು ನಡೆದು ವೀರಶೈವ ವಿದ್ಯಾವರ್ಧಕಫಂಡಿಗೆ ನಮ್ಮ ಪ್ರಾಂತದಲ್ಲೂ ಇನ್ನು ಮುಂದೆ ಕಾಣಿಕೆಯನ್ನು ತೆಗೆಯಬೇಕೆಂದು ತೀರ್ಮಾನಿಸಲ್ಪಟ್ಟ ಮೇರೆಗೆ, ವಧೂವರರ ಕಡೆಯಿಂದ ಎರಡು ರೂಪಾಯಿಗಳು ತೆಗೆಯಲ್ಪಟ್ಟು ಇಲ್ಲಿನ ಮ್ಯುನಿಸಿಪಲ್ ಕೌನ್ಸಿಲರ್ ಮ॥ ರಾ॥ ಎಸ್. ಹಂಪಯ್ಯನವರ ವಶಕ್ಕೆ ಕೊಡಲ್ಪಟ್ಟಿತು. ಇವರು ಸದರಿ ಹಣವನ್ನು ಮೇಲ್ಕಂಡ ಸಂಘದ ಸೆಕ್ರಟರಿಯವರಲ್ಲಿಗೆ ರವಾನಿಸುವುದಾಗಿ ಒಪ್ಪಿಕೊಂಡರು. ಇನ್ನುಮೇಲಾದರೂ ಈ ಪ್ರಾಂತದ ವೀರಶೈವರು ಪ್ರತಿ ಶುಭಕಾರ್ಯದಲ್ಲೂ ತಮಗೆ ತೋಚಿದ ರೀತಿ ಸಹಾಯಮಾಡುತ್ತ ಮಹಾಸಭೆಯ ಉದ್ದೇಶವನ್ನು ಸಾರ್ಥಕಪಡಿಸುವರೆಂದು ನಂಬಿರುವ

ಒಬ್ಬ ಅಭಿಮಾನಿ.

ಮಡಕಸಿರಾ ತಾ॥ ತ್ಯಾಕಾತಿಯಲ್ಲಿರುವ ಸಂಜೀವಪ್ಪನ ಮಗಳು ಚಿ॥ ಸೌ॥ ಹನುಮಕ್ಕನನ್ನು ಜವನಡಕು ಮುದ್ದುಹನುಮಪ್ಪನ ಮಗ ವೀರನಾಗಪ್ಪನಿಗೆ ಕೊಟ್ಟು ಲಗ್ನ ಏರ್ಪಾಡಾದ ಕಾಲದಲ್ಲಿ ದಯಾಳುಗಳಾಗಿಯೂ ವೀರಶೈವ ಮತ ವಿಷಯಗಳಲ್ಲಿ ಅಭಿಮಾನಿಗಳಾಗಿಯೂ ಇರುವ ಮ॥ ಪಂ[illegible]ತಿ ಭೋಜೇಗೌಡರು, ಛಳಾರದ ಹನುಮಪ್ಪನೆಂಬುವನು ಬಹಳರಿಕ್ತನು ಅಂಥಾವನಿಗೆ ತ್ಯಾಕಾಸಿಯಲ್ಲಿರುವ ರುದ್ರಪ್ಪನನ್ನು ಬರಮಾಡಿ ತಕ್ಕ ಪ್ರೋತ್ಸಾಹಪಡಿಸಿ ಆತನ ಕುಮಾರ್ತಿ ಚಿ॥ ಸೌ॥ ನಂಜಮ್ಮನನ್ನು ಮೇಲ್‌ನಮೂದಿರುವ ಚಿ॥ ಹನುಮಪ್ಪನಿಗೆ ಕೊಡಿಸಿ ಈ ಜ್ಯೇಷ್ಠ ಶು॥ ೫ ಗುರುವಾರ ತಾ॥ ೧೭-೬-೧೫ ನೆ ದಿನ ನಡೆಯುವಂತೆ ನಿಶ್ಚಯಮಾಡಿದರು. ನಂತರ ಮಾದಲೂರು ಊಡೇದಮಠದ ಪಟ್ಟಾಧ್ಯಕ್ಷ ರುದ್ರದೇವರನ್ನ ಪೌರೋಹಿತ್ಯಕ್ಕೆ ಬರಮಾಡಿಕೊಂಡು, ಧಾರಾಮುಹೂರ್ತ ನಡೆಯುವ ಕಾಲದಲ್ಲಿ ತನ್ನ ಬಡಭಕ್ತಿಯನ್ನು ಶಿವಪ್ರೀತಿಯಾಗಿ ವಧೂವರರಿಗೆ ಸಮರ್ಪಣೆಮಾಡಿ ಸಾಲಂಕೃತ ಕನ್ಯಾದಾನಮಾಡಿ ಇತರರೆಲ್ಲರಿಗೂ ಮೇಲ್‌ಪಂಕ್ತಿಯನ್ನು ಹಾಕಿಕೊಟ್ಟದ್ದನ್ನು ಪ॥ ಭೋಜೇಗೌಡರೂ ಮ॥ಉ॥ ಮ॥ಮ॥ ರುದ್ರದೇವರೂ ನೆರೆದಿದ್ದ ಭಕ್ತಮಾಹೇಶ್ವರರೆಲ್ಲರಿಗೂ ತಿಳಿಸಿ ಅನಂತರ ಮೈಸೂರು ವಿದ್ಯಾಭಿವೃದ್ಧಿ ಫಂಡಿಗೂ ಕೈ॥ ಯಜಮಾನ್ ವೀರಸಂಗಪ್ಪನವರ ಅಗ್ರತಾಂಬೂಲಕ್ಕೂ ಕಾಣಿಕೆಯನ್ನು ಪದ್ಧತಿಪ್ರಕಾರ ತೆಗೆಯಬೇಕೆಂದು ಸೂಚಿಸಿದ ಮೇರೆಗೆ ಫಂಡಿಗೆ ೨ ರೂ. ತಾಂಬೂಲಕ್ಕೆ ೨ ರೂ. ಜುಮ್ಲಾ ೪ ರೂ. ರುದ್ರದೇವರವಶಕ್ಕೆ ಕೊಡಲ್ಪಟ್ಟಿತು. ವಾಚಕಮಹಾಶಯರಿಗೆ ಇನ್ನೊಂದು ಆನಂದದ ಸಂಗತಿ ತಿಳಿಸುವದೇನಂದರೆ-ತ್ಯಾಕಾರೆ, ಛಳಾರ, ಗುಡುಬಂಡೆಯಲ್ಲಿ ಮ॥ ಮುದ್ದೀರೆಗೌಡರು ಜಂಬಲಬಂಡೆಯಲ್ಲಿ ಪಟೇಲ್ ಭೋಜೇಗೌಡರು ಜವನಡಕು ಈ ಗ್ರಾಮಗಳಲ್ಲಿ ಶ್ರೀ ಬಸವಜಯಂತಿ ಹಬ್ಬವನ್ನು ಬಹಳ ಚನ್ನಾಗಿ ನಡಿಸಿ ಶ್ರೀ ಬಸವೇಶ್ವರ ಭಾವಚಿತ್ರಗಳು ದೇವರುಗಳನ್ನು ಸಹ ಉತ್ಸವಮಾಡಿ ಪ್ರತಿವರುಷವೂ ಇದರಂತೆ ನಡೆಯುವಂತೆ ತಕ್ಕ ಏರ್ಪಾಡುಮಾಡಿರುತ್ತಾರೆ. ಪ್ರತ್ಯಕ್ಷದರ್ಶಿ.

[ಮೇಲ್ಕಂಡ ತಾಂಬೂಲದ ಬಗೆಗೆ ೨ ರೂ. ಬಂದಿರುತ್ತೆ. ಪ. ಪ್ರ.]

ಶ್ರೀ ನಾರಕಂಠೆಮಠ.

ಇದೇ ರಾಕ್ಷಸನಾಮಸಂವತ್ಸರದ ಜ್ಯೇಷ್ಠ ಶುದ್ಧ ತ್ರಯೋದಶಿ (ತಾ ೨೫-೬-೧೫)ನೆ ಶುಕ್ರವಾರ ಸೂರ್ಯೋದಯಾನಂತರ ೧೦ ಘಳಿಗ್ಗೆ ಸಲ್ಲುವ ಶುಭ ಸಿಂಹಲಗ್ನ ಶುಭಾಂಶದಲ್ಲಿ, ಚಿಕ್ಕ ಮಗಳೂರು ತಾಲ್ಲೂಕ್ ಬಸವನಹಳ್ಳಿ ಮಾಗಣಿ ಶ್ರೀ ನಾರಕಂತೆ ಮಠಾಧ್ಯಕ್ಷ ವೇ॥ ಮಲ್ಲೀದೇವರಯ್ಯನವರ ದ್ವಿತೀಯ ಸುಪುತ್ರ ಕಂತಪ್ಪಶಾಸ್ತ್ರಿ ಎಂಬ ವರನಿಗೆ ಕಡೂರು ತಾಲ್ಲೂಕ್ ಸಖರಾಯಪಟ್ಟಣದ ಕೆಳ್ಳಮಠಾಧ್ಯಕ್ಷ ಶ್ರೀ॥ ರುದ್ರಯ್ಯನವರ ದ್ವಿತೀಯ ಸುಪುತ್ರಿ ಚಿ॥ ಹ॥ ಸೌ॥ ರುದ್ರಮ್ಮನೆಂಬ ವಧುವನ್ನು ಕೊಟ್ಟು ಸಖರಾಯಪಟ್ಟಣದ ಮೇಗಳ ಮಠದಲ್ಲಿ ಮುಗಳವಳ್ಳಿ ಮಠದ ವೇ॥ ಮುಪ್ಪಿನಯ್ಯಶಾಸ್ತ್ರಿಗಳಿಂದ ವಿಧಿಗನುಸಾರವಾಗಿ ನಡೆದ ಪೌರೋಹಿತ್ಯದಿಂದ ವಿವಾಹಮಹೋತ್ಸವವು ನೆರವೇರಿ, ಮಾರನೇದಿವಸ ಮಧ್ಯಾಹ್ನ ೨ ಘಂಟೆಗೆ ಸರಿಯಾಗಿ ಈವಿವಾಹ ಮಹೋತ್ಸವ ಸರ್ವಕಾರ್ಯಗಳನ್ನು, ಸ್ವಲ್ಪವೂ ನ್ಯೂನತೆ ಯಿಲ್ಲದಂತೆ ನೆರವೇರಿಸಿದ ಮುಖ್ಯ ಏಜಂಟರು ಮಾವಿನ ಕೆರೆಯಲ್ಲಿರುವ ಗುಬ್ಬಿಗೋಡು ವೇ॥ ಚನ್ನಬಸವಯ್ಯನವರ ಅಧ್ಯಕ್ಷತೆಯಲ್ಲಿ ಸಭಾಸೇರಿತು. ಸಕಾಲದಲ್ಲಿ ದಯಮಾಡಿಸಿದ ಶ್ರೀ ತಗಡೂರು ಮಠದ ಪಟ್ಟದ ಮರುಳಸಿದ್ಧಸ್ವಾಮಿಗಳು, ಬಸವನಹಳ್ಳಿ ಮಠದ ಶ್ರೀ॥ ಮಂಜಯ್ಯನವರು ಐರುವಳ್ಳಿ ಮಠದ ಶ್ರೀ॥ ಪಂಚಾಕ್ಷರಯ್ಯನವರು, ಮಾಗಡಿಮಠದ ಶ್ರೀ॥ ಮಲ್ಲಿಕಾರ್ಜುನಯ್ಯನವರು, ಸಖರಾಯಪಟ್ಟಣ ಮಠದ ಶ್ರೀ॥ ಗುರುನಂಜಯ್ಯನವರು, ಬದ್ರಗೆದ್ದೆ ಶ್ರೀ॥ ಪುಟ್ಟಯ್ಯನವರು, ಹುಣಸೇಕೆರೆ ಮ॥ ಜಿಟ್. ಪಿ. ಬಸಪ್ಪನವರು, ಮಾವಿನಕೆರೆ ಮ॥ ಕಲ್ಲಪ್ಪಶೆಟ್ಟರು, ಚಂದಪ್ಪ ಶೆಟ್ಟರು ಮುಗವಳ್ಳಿ ಮ॥ ಮಲ್ಲೇಗೌಡರು, ಕಾಳೇಗೌಡರು, ಕಂಡ್ರವಳ್ಳಿ, ಶಿವಲಿಂಗೇಗೌಡರು, ಇನ್ನೂ ಮೊದಲಾದ ನೂರಾರು ಜನಮಹಾನುಭಾವರಿಂದ ಸಭಾಸೇರಿ, ವೀರಶೈವ ಮತಾಧಿಕ್ಯವಿಷಯದಲ್ಲಿ ಸರ್ವರಿಗೂ ಮನನವಾಗುವಂತೆ ಉಪನ್ಯಾಸಮಾಡಿ, ಹಾಗು ಬೆಂಗಳೂರು ವೀರಶೈವ ವಿದ್ಯಾಭಿವೃದ್ಧಿ ಫಂಡಿಗೂ, ಮೈಸೂರು ಕೈಲಾಸವಾಸಿ. ವೈ. ವೀರಸಂಗಪ್ಪನವರ ಅಗ್ರತಾಂಬೂಲ ಬಗೆಗೂ. ಸ್ಟಾರ್‌ಪತ್ರಿಕೆಯ ಚಿರಜೀವಿತೆಯ ಫಂಡಿಗೂಸಹ ತಮ್ಮ ತಮ್ಮ ಶಕ್ತ್ಯನುಸಾರ ಮೊಬಲಗು ತೆಗೆಯುವಂತೆ ಸೂಚಿಸಿದರು. ಅದರಂತೆ ವರನಕಡೆಯವರ, ವೀರಶೈವವಿದ್ಯಾವೃದ್ಧಿ ಫಂಡಿಗೆ ೨ ರೂಪಾಯಿ, ಮ॥ರಾ॥ ವೈ. ವೀರಸಂಗಪ್ಪನವರ ಅಗ್ರತಾಂಬೂಲದ ಬಾಬತು ಸ್ಟಾರ್ ಪತ್ರಿಕೆಯ ಚಿರಜೀವಿತೆಯ ಘಂಟಿಗೆ ೨ ರೂಪಾಯಿಯನ್ನೂ ಕೊಡಲೊಪ್ಪಿ ನಂತರ ಸಭಾದವರಿಗೆ ಪರಿಮಳ ಗಂಧತಾಂಬೂಲ ಪುಷ್ಪಾದಿಗಳು ಹಂಚಲ್ಪಟ್ಟು ಸಭಾ ಭರಖಾಸ್ತಾಯಿತು. ಈ ಶುಭಮಹೋತ್ಸವಕ್ಕೆ ಬಂದು ಕಾರ್ಯ ಆಗಮಾಡಿಸಿದ ಕಂಡ್ರವಳ್ಳಿ ಮ॥ ರಾ॥ ಪಟೇಲ್ ವೀರೇಗೌಡರ ಧರ್ಮಪತ್ನಿ ಗೌರಮ್ಮನವರಿಗೂ, ಕಾರ್ಯಾಧ್ಯಕ್ಷ ಮಾವಿನಕೆರೆ ಶ್ರೀ॥ ಗು॥ ಚನ್ನಬಸವಯ್ಯನವರಿಗೂ ಸಹ ತುಂಬಾ ಕೃತಜ್ಞರಾಗಿರುತ್ತೇವೆ. ಹೀಗೆ ವಸೂಲು ಬಂದ ಮೊಬಲಗನ್ನು ಒಟ್ಟಾಗಿ ತಮ್ಮಲ್ಲಿಗೆ ರವಾನಿಸಿದೆ. ಪ್ರತ್ಯಕ್ಷದರ್ಶಿ

[೨ ರೂ. ನಮಗೆ ಸಂದಿದೆ. ಪ. ಪ್ರ.]

ಶಕ ೧೮೩೭ ನೆ ರಾಕ್ಷಸನಾಮ ಸಂವತ್ಸರದ ನಿಜವೈಶಾಖ ಶುದ್ಧ ೧ ಲಾಗಾಯಿತು ಶುದ್ಧ ೭ ತಿಥಿವರೆಗೆ ಶ್ರೀಮನ್ಮಹಾ ಕೆಳದಿ ಸಂಸ್ಥಾನ ಹಿರೇಮಠದಲ್ಲಿ ಶ್ರೀಮನ್ನಿರಂಜನ ಜಗದ್ಗುರು ಶೂನ್ಯಸಿಂಹಾಸನಾಧಿಪ ದ್ವಿತೀಯ ಮುರುಘಗುರುಸಿದ್ಧಸ್ವಾಮ್ಯನ್ವಯಾನಂತಪುರದ ಮಠದ ಶ್ರೀ ಲಿಂಗ ಮಹಾಸ್ವಾಮಿಗಳವರು ಶ್ರೀಮನ್ಮಹಾ ಹಾನಗಲ್ಲು ಮಹಾಸ್ವಾಮಿಗಳವರು ತ್ಯಾವಣಿಗಿ ಮಠದ ಶ್ರೀ ರುದ್ರಮುನಿಸ್ವಾಮಿಗಳವರು ಬೆಂಗಳೂರು ಶ್ರೀ ಶಂಕರದೇವರ ಮಠದ ಸ್ವಾಮಿಗಳವರು ತ್ಯಾವಣಿಗಿ ಮಠದ ಶ್ರೀ ಪಟ್ಟಾಧ್ಯಕ್ಷರವರು ಗಿಳಲುಗುಂಡಿ ಮಠದ ಶ್ರೀ ಚರಪಟ್ಟಾಧ್ಯಕ್ಷರವರು ಶಿವಯೋಗಮಂದಿರದ ಶ್ರೀ ಸಾಧಕರುಗಳು ಮತ್ತು ಸೋಮನಾಥಶಾಸ್ತ್ರಿಗಳು ವೈದಿಕರಾದ ಬಾಣಾಪುರದ ವಿರೂಪಾಕ್ಷಶಾಸ್ತ್ರಿಗಳು ಈ ಪ್ರಾಂತ್ಯದಲ್ಲಿರುವ ಸಮಸ್ತ ವೀರಶೈವ ಸದ್ಭಕ್ತ ಮಾಹೇಶ್ವರರು ಸಹ ಬಹು ಸಮಾರಂಭದಿಂದ ಸೇರಿ ಜರುಗಿಸಿದ ಮಹಾ ಸತ್ಕಾರ್ಯಗಳ ವಿವರ:—ಪ್ರತಿಪದ ಶನಿವಾರದ ದಿವಸ ನೂತನಮಠ ಪ್ರವೇಶೋತ್ಸವ ಮಂಟಪ ದೇವತಾಪ್ರತಿಷ್ಠೆ ಅಂಕುರಾರ್ಪಣ ಪುಣ್ಯಾಹ—ನಾಂದಿ—ದ್ವಿತೀಯ ಆದಿತ್ಯವಾರದ ದಿವಸ ಲಿಂಗಸಂಸ್ಕಾರ ತೃತೀಯ ಸೋಮವಾರದ ದಿವಸ ವಟುಗಳ ಅಂಗಸಂಸ್ಕಾರ ಮೊದಲಾದ ಕಾರ್ಯಗಳು ಶಿರಾಳಕೊಪ್ಪದ ಬಸವನಕಟ್ಟೆ ಶಿವಲಿಂಗಮ್ಮನವರು ಇದೇ ಮಠದ ಮಧ್ಯ ಮೇಲ್ಭಾಗದಲ್ಲಿ ತಮ್ಮ ಭಕ್ತಿಪೂರ್ವಕವಾಗಿ ಮಾಡಿದ ಮೇಲೆ ಶಿಖರಸ್ಥಾಪನೆ ಚತುರ್ಥಿ ಮಂಗಳವಾರ ಪಂಚಮಿ ಬುಧವಾರ ವಟುಗಳಿಗೆ ದೀಕ್ಷಾಸಂಸ್ಕಾರವೂ ಮಹಾ ಗಣಾರಾಧನೆಯೂ ಮಧ್ಯಾಹ್ನ ೨ರಿಂದ ೬ ಘಂಟೆವರೆಗೆ ಉಪನ್ಯಾಸಗಳು ಷಷ್ಠಿ ಗುರುವಾರ ಭಕ್ತಮಾಹೇಶ್ವರಾರಾಧನೆ ಉಪನ್ಯಾಸಗಳು ನಡೆದವು. ಇವುಗಳ ವಿವರ—೧ ನೆ ವಿರೂಪಾಕ್ಷಶಾಸ್ತ್ರಿಗಳು ವೈದಿಕ ವಿಷಯವಾಗಿಯೂ, ೨ ನೆ ಸೋಮನಾಥಶಾಸ್ತ್ರಿಗಳು ೩ ನೆ ಫಾಲಾಕ್ಷಯ್ಯನವರು ಸಹ ದೀಕ್ಷಾವಿಷಯದಲ್ಲೂ ೪ ನೆ ಹಾನಸ್ವಾಡಿ ಗಡಲ ಬಸಪ್ಪಗೌಡರು ೫ ನೆ ಸಾಗರ ಕೆರೆಕೋಡಿ ಮಠದ ಗುರುಲಿಂಗಯ್ಯನವರು ಸಹ ಕನ್ಯಾವಿಕ್ರಯ ನಿರೋಧಕ ಬಗ್ಗೆ ೬ ನೆ ಶಿಕಾರಿಪುರದ ಉಳ್ಳೇಗಡ್ಡಿ ರಾಚಪ್ಪನವರು ಸಮಾಜಸುಧಾರಣೆ ಬಗ್ಗೆ, ೭ ನೆ ಉಳವಿ ಸ್ಕೂಲ್ಮಾಸ್ಟರು ಈ ಪ್ರಾಂತ್ಯದ ವೀರಶೈವ ಜನಗಳ ಸುಧಾರಣೆ ಬಗ್ಗೆ ಸಹ ಬಹು ಸ್ವಾರಸ್ಯವಾದ ಉಪನ್ಯಾಸಗಳು ಮಾಡಲ್ಪಟ್ಟವು. ಈ ಸಭೆಯಲ್ಲಿ ಸರ್ವಾನುಮತದಿಂದ ಆದ ನಿರ್ಧಾರಗಳು—೧ ಅನಂತಪುರದ ಶಿವೈಕ್ಯರಾದ ಶ್ರೀ ಮಹಾಸ್ವಾಮಿಗಳವರ ಸ್ಮಾರಕಾರ್ಥವಾಗಿ ಒಂದು ವಿದ್ಯಾವರ್ಧಕ ಸಂಘವನ್ನು ಏರ್ಪಡಿಸತಕ್ಕದ್ದು. ೨ ಸದರಿ ಸ್ಮಾರಕಕ್ಕಾಗಿ ಸದ್ಯಕ್ಕೆ ಒಂದು ವೀರಶೈವ ಸೇವಿಂಗ್ಸ್ ಬ್ಯಾಂಕನ್ನು ಸ್ಥಾಪಿಸತಕ್ಕದ್ದು. ೩ ಕನ್ಯಾವಿಕ್ರಯ ನಿರೋಧಮಾಡತಕ್ಕದ್ದು. ೪ ಎಲ್ಲಾ ವೀರಶೈವರು ಶಿವದೀಕ್ಷಾ ಸಂಸ್ಕಾರವನ್ನು ತಪ್ಪದೆ ಮಾಡಿಕೊಳ್ಳುವಂತೆ ಪ್ರಯತ್ನಮಾಡತಕ್ಕದ್ದು. ೫ ವೀರಶೈವರೆಲ್ಲರೂ ತಮ್ಮ ಬಾಲಕ ಬಾಲಕಿಯರಿಗೆ ತಪ್ಪದೆ ವಿದ್ಯಾಭ್ಯಾಸ ಮಾಡಿಸತಕ್ಕದ್ದು. ೬ ಗೊಗ್ಗೆಹಳ್ಳಿಮಠವನ್ನುದ್ಧರಿಸುವುದಕ್ಕಾಗಿ ಶ್ರೀ ವೇ ಇಟ್ಟಿಗಿ ಸೋಮನಾಥಶಾಸ್ತ್ರಿಗಳಿಗೆ ಒಪ್ಪಿಸತಕ್ಕದ್ದೆಂದು ಸರ್ವಾನುಮತದಿಂದ ಪಾಸಾಗಿ ದಕ್ಷಿಣೆ ತಾಂಬೂಲ ಸಮರ್ಪಣಾನಂತರ ಮಂಗಲರವದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ.

ಗದಗಪಟ್ಟಣದಲ್ಲಿಯ ಶ್ರೀ ಮಹಾಲಕ್ಷ್ಮಿ ಜಿನ್ನಿಂಗ್ ಮತ್ತು ಪ್ರೆಸಿಂಗ್ ಕಂಪನಿ ಲಿಮಿಟೆಡ್ ಇವರ ನಾಟಕ ಗೃಹಪ್ರವೇಶ ಸಮಾರಂಭವು

ಜಿಲ್ಹಾ ಧಾರವಾಡ ತಾ॥ ಗದಗದಲ್ಲಿ ಇರುವ ಪ್ರಸಿದ್ಧ ಸಾಹುಕಾರ ಕೇಶವದಾಸ ಶೇಟಜಿ, ರಾವಸಾಹೇಬ ವೀರಪ್ಪಾ ಅಣ್ಣಾ ಮಾನ್ವಿ ಮ್ಯಾನೇಜಿಂಗ್ ಡಾಯಿರೆಕ್ಟರ ಶ್ರೀ ಮಹಾಲಕ್ಷ್ಮೀ ಕಂಪನಿಯವರು ಗದಗದಲ್ಲಿ ಜನಮನೋರಂಜನಾರ್ಥವಾಗಿ ಉತ್ತಮ ನಾಟಕಗೃಹವೊಂದು ತಮ್ಮ ಪಟ್ಟಣದಲ್ಲಿ ಇರುವುದು ಅವಶ್ಯವೆಂದು ಭಾವಿಸಿ, ಅದನ್ನು ತಮ್ಮ ಕಂಪನಿಯ ಡಾಯರೆಕ್ಟರ್ ವ ಶೇರ್ ಹೋಲ್ಡರ್‌ಜನರಿಗೆ ತಮ್ಮ ಸರ್ವಾನುಮತದಿಂದ ಪಾಸುಮಾಡಿಸಿಕೊಂಡು ರಾವಸಾಹೇಬ ವೀರಪ್ಪಾ ಅಣ್ಣಾ ಮಾನ್ವಿ ಇವರು ಸ್ವತಃ ಇಂಜನಿಯರಿರುವದರಿಂದ ಪ್ಲಾನತಯಾರಿಸಿ ಅದಕ್ಕೆ ಬೇಕಾಗುವ ಸಾಮಾನುಗಳನ್ನೆಲ್ಲಾ ಕಾಲಕಾಲಕ್ಕೆ ತರಿಸಿ ಈ ನಾಟಕದಲ್ಲಿ ಮೊದಲನೇನಂಬರ ಪಡೆಯುವಂಥ ಸುಂದರವಾದ ಥೇಟರವನ್ನು ತಮ್ಮಲ್ಲಿಯ ಬುದ್ಧಿ ಕೌಶಲ್ಯದಿಂದ ತಯಾರಿಸಿದ್ದು ಅವರಿಗೆ ಬಹಳ ಭೂಷಣವು. ಆಮಾನದಿಂದ ಅದಕ್ಕೆ ತಗಲಿದ ಖರ್ಚಾದರೂ ಬಹಳವಾಗಿದೆ. ಅದರಲ್ಲಿ ಆನಂದಕರವೆಂದರೆ ಅವರು ಸ್ವತಃ ಶಿಲ್ಪಗಾರರಿರುವದರಿಂದ ಯಾವಖರ್ಚು ದುಬಾರಿಆಗದಂತೆ ವ್ಯವಸ್ಥೆಮಾಡಿದರು. ಆ ಗೃಹವನ್ನು ನಿನ್ನೆ ಶನಿವಾರ ತಾ॥ ೧೦-೭-೧೫ ನೆ ದಿವಸ ರಾತ್ರಿ ೯॥ ಘಂಟೆಗೆ ತಳಿರುತೋರಣ ಧ್ವಜಪತಾಕೆಗಳಿಂದ ಶೃಂಗರಿಸಿ ಊರೊಳಗಿನ ಪ್ರಮುಖಜನರನ್ನೆಲ್ಲಾ ರಾ॥ ಸಾ॥ ಮಾಮಲೇದಾರ ವಗೈರೆ ಸರಕಾರಿ ಕಾಮದಾರರನ್ನೆಲ್ಲಾ ಆಮಂತ್ರಣಮಾಡಿ ಕರಿಸಿ ಅವರ ಸಮಕ್ಷಮದಲ್ಲಿ ರಾವಸಾಹೇಬ ಶಿವಮೂರ್ತಿಸ್ವಾಮಿ ಕಣಬರಗಿಮಠ ಇವರ ಹಸ್ತದಿಂದ ಪ್ರವೇಶಸಮಾರಂಭವನ್ನು ಸಾಂಗಗೊಳಿಸಿದರು. ಆ ಕಾಲಕ್ಕೆ ಜನಸ್ತೋಮವು ಬಹಳವಾಗಿತ್ತು. ಮೊದಲಿಗೆ ಶ್ರೀ ಮ॥ ಕೇಶವದಾಸ ಶೇಟಜಿಯವರು ಮಹಾಲಕ್ಷ್ಮಿ ಕಂಪನಿಯವರ ವತಿಯಿಂದ ಸರ್ವರನ್ನು ಅಭಿನಂದಿಸಿ ತಮ್ಮ ಆಮಂತ್ರಣವನ್ನು ಸ್ವೀಕರಿಸಿ ಬಂದುದಕ್ಕೆ ರಾ॥ ಸಾ॥ ಶಿವಮೂರ್ತಿಸ್ವಾಮಿಯವರ ಮತ್ತು ಕೊಣ್ಣೂರ ಕನ್ನಡ ಸಂಗೀತ ನಾಟಕಕಂಪನಿಯವರ ಉಪಕಾರವನ್ನು ಸ್ಮರಿಸಿ, ಈ ನಾಟ್ಯಶಾಲೆಯು ಸಾರ್ವಜನಿಕ ಕೆಲಸಕ್ಕೆ ಉಪಯೋಗಿಸಲ್ಪಡುವುದೆಂದು ತಿಳಿಸಿದರು. ಅನಂತರ ಎಂಜನಿಯರರು ಮರಾಠಿಯಲ್ಲಿಯೂ, ಅನ್ನದಾನಪ್ಪಾ ಮಾನ್ವಿ ಎಂಬ ಬಾಲಕನು ಕನ್ನಡದಲ್ಲಿಯೂ ಸರಸವಾಗಿ ಭಾಷಣಮಾಡಿದನಂತರ, ರಾ॥ ಸಾ॥ ಕಣಬರಗಿ ಮಠ ಇವರು ವಾಡಿಕೆಯಂತೆ ತಮ್ಮ ಗಂಭೀರತರವಾದ ಭಾಷಣಮಾಡಿ ರಾ॥ ಸಾ॥ ವೀರಪ್ಪಾ ಅಣ್ಣಾ ಮಾನ್ವಿ, ಮತ್ತು ರಾ॥ ಕೇಶವದಾಸ ಶೇಟಜಿ ಇವರು ತಮ್ಮ ಕಂಪನಿಪರವಾಗಿ ಈ ಪ್ರವೇಶ ಸಮಾರಂಭದ ಮಾನವನ್ನು ತಮಗೆ ಕೊಟ್ಟದ್ದಕ್ಕೆ ಅವರ ಆಭಾರ ಮನ್ನಿಸಿದರು. ಅದರಂತೆ ಗದಗಿನ ನಾಗರಿಕರು ಕೊಣ್ಣೂರ ನಾಟಕಕಂಪನಿಯ ಬಗ್ಗೆ ಇರುವ ತಮ್ಮ ಪ್ರೇಮವನ್ನು ತೋರಿಸುವುದಕ್ಕೆ ಬಂದಿದ್ದಕ್ಕೂ ಅವರೆಲ್ಲರ ಅಭಿನಂದನಮಾಡಿ, ಈ ನಾಟ್ಯಶಾಲೆಯು ಸಂಘಶಕ್ತಿಯಿಂದ ಆದುದಕ್ಕೆ ಬಹಳ ಆನಂದಪಟ್ಟು, ಸಂಘಶಕ್ತಿಯ ಮಹತ್ವವನ್ನು ಬಹಳ ಸರಸವಾಗಿ ವರ್ಣಿಸಿ, ಸಾಂಪ್ರತಕ್ಕೆ ನಮ್ಮ ಸಾರ್ವಭೌಮರು ಯುದ್ಧದಲ್ಲಿ ತೊಡಗಿದಕಾರಣ ಪ್ರತಿಯೊಬ್ಬರೂ ತಮ್ಮ ಶಕ್ತ್ಯನುಸಾರ ನಮ್ಮ ಸಾಮ್ರಾಜ್ಯದ ಪತಾಕೆಯು ಅನುದಿನವೂ ಜಯಜಯಕಾರ ಹೊಂದಲೆಂದು ಹೋರಾಡುವ ಶೂರಸಿಪಾಯಿಗಳು ಘಾಯಹೊಂದಿರುವದರಿಂದ ಅವರಿಗೂ ಅವರ ಕುಟುಂಬಕ್ಕೂ ನಾವು ಏನು ಸಹಾಯವನ್ನ ಕಳಿಯುವರಿಗೂ ಮಾಡಿದರೂ ಕಡಿಮೆಯೇ ಇರುವುದರಿಂದ ಕೊಣ್ಣೂರನಾಟಕಕಂಪನಿಯು ವತಿಯಿಂದ ಆ ರಾತ್ರಿ ಸುಭದ್ರಾನಾಟಕವಾಡಿ ಬಂದ ಉತ್ಪನ್ನದಲ್ಲಿ ಕೆಲವು ಭಾಗವನ್ನು ಯುದ್ಧಫಂಡಿಗೆ ಕೊಡಲೊಪ್ಪಿ ಸರ್ವಜನರಿಗೂ ಕಾಣುವಂತೆ ನಾಟಕಗೃಹಪ್ರವೇಶಮಾಡಿ, ನಾಟಕಕ್ಕೆ ಪ್ರಾರಂಭಿಸಬೇಕೆಂತಲೂ, ನಮ್ಮ ಸಾರ್ವಭೌಮರಿಗೆ ತೀವ್ರಜಯವಾಗುವುದಕ್ಕು ಸರ್ವಕಡೆಗೆ ಶಾಂತತೆಯಾಗಲೆಂದು ಈಶಸ್ತವನಮಾಡಿದರು. ಅನಂತರ ಬಂದ ಯಾವತ್ತರಿಗೂ ಹಾರ ತುರಾಯಿ ಗಂಧ ಪರಿಮಳತಾಂಬೂಲವನ್ನು ಹಂಚಿ, ನಾಟಕಕ್ಕೆ ಪ್ರಾರಂಭವಾಯಿತು. ವಿದ್ಯುಲ್ಲತೆಯ ತರತರದ ದೀವಿಗೆಗಳಿಂದಲೂ, ಉತ್ತಮ ಸೀನರಿ, ಡ್ರೆಸ್, ಪರದೆಗಳಿಂದಲೂ, ಉತ್ತಮ ಗಾಯಕರಿಂದಲೂ ಕೂಡಿದ ನಾಟಕಕಂಪನಿಯು ೪ ವರ್ಷ ಗದಗಿಗೆ ಬಾರದ್ದರಿಂದಲೂ ಜನರ ದಟ್ಟಣೆಯು ಹೆಚ್ಚಾಗಿ ೪೦೦-೫೦೦ ಪ್ರೇಕ್ಷಕರು ಸ್ಥಳವಿಲ್ಲದಮೂಲಕ ತಿರಿಗಿಹೋಗಬೇಕಾಯಿತು. ಪ್ರಯೋಗವು ಬಹಳ ರಮಣೀಯವಾಗಿ ಆಯಿತು. ಅದರಂತೆ, ನಿನ್ನಿನ ಬುಧವಾರ "ಮನೋವಿಜಯ" ಪ್ರಯೋಗವೂ ಶನಿವಾರ "ಶಾರದಾ" ನಾಟಕವೂ ಬಹಳ ಸರಸಾಗಿ ಆದವು. ಕಂಪನಿಯವರು ಬಹಳಮಾಡಿ ೨ ತಿಂಗಳು ಮುಕ್ಕಾಮುಮಾಡಬಹುದು. ಹೊಸಥಿಯೇಟರವೂ, ಅಪ್ರತಿಮ ಸಾಮಾನವೂ, ಗಾಯನವೂ, ವಿದ್ಯುಲ್ಲತೆಯ ದೀವಿಗೆಗಳೂ ಗದಗಿನ ಜನರ ಪ್ರೇಮವೂ ಒಂದಕ್ಕೊಂದು ಕೂಡಿದ್ದರಿಂದ ಕಬ್ಬಿಗೆ ಜೇನುಕಟ್ಟಿದಂತೆ ಆಗಿದೆ. ಈ ಕಂಪನಿಯವರು ಹೋದಹೋದಲ್ಲಿ ಸಾರ್ವಜನಿಕ ಕೆಲಸಕ್ಕೆ ಬಹಳ ಸಹಾಯಮಾಡುತ್ತ ಬಂದಿರುವರು. ಅದರಂತೆ ಅವರ ಕೀರ್ತಿಯು ಬಿದಿಗೆಯ ಚಂದ್ರನಂತೆ ಹೆಚ್ಚುತ್ತಿರುವುದು. ಈಗ್ಗೆ ಆ ಕಂಪನಿಯವರ ಸಾಮಾನು ೫೦ ಗಾಡಿಯಿಕ್ಕಿರುವುದು. ಇಂಥ ಬಲಾಢ್ಯಕಂಪನಿಯಾಗಿ ೧೬ ವರ್ಷಗಳವರೆಗೆ ಕನ್ನಡದಲ್ಲಿ ನಡೆದದ್ದು ಇದು ಒಂದೇಒಂದಾಗಿರುವುದರಿಂದಲೂ ಯುದ್ಧಫಂಡಿಗೂ ಸಾರ್ವಜನಿಕ ಕೆಲಸದ ಉಪಯೋಗಕ್ಕೂ ಈ ಕಂಪನಿಯು ಸದಾ ಉಪಯೋಗಬೀಳುವುದರಿಂದಲೂ ಹೆಚ್ಚಳಕ್ಕೆ ಕಾರಣವಾಗಿದೆ. ಈ ಕಂಪನಿಯು ಶ್ರೀ ಗುರುಸಿದ್ಧಸ್ವಾಮಿ ಕೊಣ್ಣೂರಮಠ ಇವರ ಜನರಲ್ ಮ್ಯಾನೇಜ್‌ಮೆಂಟದಲ್ಲಿರುವುದರಿಂದ ದಿನದಿನಕ್ಕೆ ಅದರ ಸುಧಾರಣೆ ಹೆಚ್ಚುತ್ತ ನಡೆದಿರುವುದೆಂದು ಮಾತಾಡಲಿಕ್ಕೆ ಪ್ರತಿ ಒಬ್ಬ ಕನ್ನಡಿಗನಿಗೆ ಬಹಳ ಅಭಿಮಾನದ ಸಂಗತಿಯಾಗಿದೆ. ಇವರು ಈಗ ತಯಾರಿಸಿರುವ ನಾಟಕಗಳು ೧ ಹರಿಶ್ಚಂದ್ರ, ೨ ವಿರಾಟಪರ್ವ, ೩ ಮದನಮಾಲಿನಿ, ೪ ತುಕಾರಾಮ, ೫ ಶಾರದಾ, ೬ ಮನೋವಿಜಯ, ೭ ಚಂದ್ರಹಾಸ, ೮ ಸೌಭದ್ರ, ೯ ಪದ್ಮಾವತಿ, ೧೦ ಪುಂಡರೀಕ, ೧೧ ಬಸವವಿಜಯ, ೧೨ ಶನಿಪ್ರಭಾವ ಈ ಪ್ರಕಾರ ಸಂಗೀತಪ್ರಯೋಗಗಳಿದ್ದು, ಹುಡುಗರು ಗಾಯನಕ್ಕಾಗಿ ಗವಯಿ, ಶಾಲೆಕಲಿಸಲಿಕ್ಕೆ ಮಾಸ್ತರರು, ಪ್ರಸಿದ್ಧ ಪೇಂಟರರೂ ಡ್ರೆಸ್‌ಮಾಡುವ ಜನರೂ ಇರುವುದರಿಂದ ಪ್ರತಿ ನಾಟಕಕ್ಕೆ ಹೊಸತರದ ಸೀನರಿಗಳೂ ಗಾನವೂ ಆಗುತ್ತಿರುವುದರಿಂದ ಪ್ರೇಕ್ಷಕರ ಆನಂದಕ್ಕೆ ಉಕ್ಕುಬಂದಂತಾಗಿದೆ

"ಪ್ರೇಕ್ಷಕ"

ವೀರಶೈವ ವಿದ್ಯಾಭಿವೃದ್ಧಿ ಫಂಡು.

(ಕಳೆದವಾರದ ಶೇಷ)

ಗುಂಡ್ಲುಪೇಟೆ ಕಸಬಾ ಶೇಕದಾರ್ ಎಂ. ಭದ್ರಯ್ಯನವರ ಮೂಲಕ ಗುಂಡ್ಲುಪೇಟೆ ತಾ॥ ದುಂದಾಸನಪುರದ ದೊಡ್ಡವೀರಶೆಟ್ಟರ ಮಕ್ಕಳು ಚಿ॥ ಬಸವಣ್ಣನವರಿಗೆ ತೆರಕಣಾಂಬಿ ರುದ್ರಪ್ಪನವರ ಕುಮಾರ್ತಿ ಚಿ॥ ಸೌ॥ ಗೌರಮ್ಮನನ್ನು ಕೊಟ್ಟು ನಡಿಸಿದ ಲಗ್ನದಲ್ಲಿ ತೆಗೆದುದು. ೩-೦-೦

ಬೆಂಗಳೂರು ಯಸ್. ಕಲ್ಲಪ್ಪನವರ ಮೂಲಕ ಬೆಂಗಳೂರು ಕಾಯಂಗಡಿ ಗುಬ್ಬಣ್ಣನವರ ಮನೆಯಲ್ಲಿ ಶಿವದೀಕ್ಷಾ ಮತ್ತು ಲಗ್ನನಡೆದ ಕಾಲದಲ್ಲಿ ತೆಗೆದುದು. ೨-೦-೦

ಬೆಂಗಳೂರು ಮ॥ಎಲಿ ಸಿದ್ಧಲಿಂಗಪ್ಪಶೆಟ್ಟರ ಮೂಲಕ ತಿಪಟೂರ್ ಸಾಹುಕಾರ್ ಗುರುಪಾದಯ್ಯನವರ ಕೊಟ್ಟೂರಪ್ಪನವರ ೪ ನೆ ಪುತ್ರಿ ಚಿ॥ ಸೌ॥ ವೀರಮ್ಮನನ್ನು ಗುಬ್ಬಿ ಹೊಸಹಳ್ಳಿ ರುದ್ರಣ್ಣನವರ ಪುತ್ರ ಚಿ॥ ಕೊಟ್ಟೂರಪ್ಪನವರಿಗೂ ೫ ನೆ ಪುತ್ರಿ ಚಿ॥ ಸೌ॥ ನೀಲಮ್ಮನನ್ನು ಬೆಂಗಳೂರು ಹಾಲಪ್ಪನವರ ಪುತ್ರ: ಚಿ॥ ವೀರಪ್ಪನವರಿಗೂ ಕೊಟ್ಟು ನಡಿಸಿದ ಲಗ್ನದಲ್ಲಿ ತೆಗೆದುದು. ೨೫-೦-೦

ತುಮಕೂರು ತಾ॥ ಕ್ಯಾತ್ಸಂದ್ರದ ಜವಳಿ ಅಂಗಡಿ ಕೆ. ಎಸ್ ವೀರಭದ್ರಪ್ಪನವರ ಮೂಲಕ ಕ್ಯಾತ್ಸಂದ್ರದ ಕಾಕಾರಿ ಹುಚ್ಚವೀರಪ್ಪನವರ ಪುತ್ರಿ ಚಿ॥ ಸೌ॥ ರುದ್ರಮ್ಮನನ್ನು ತುಮಕೂರು ಹುಲ್ಕುಂಟೆ ಸಿದ್ಧನಂಜಯ್ಯನವರ ಪುತ್ರ ಚಿ॥ ನಂಜುಂಡಯ್ಯನವರಿಗೆ ಕೊಟ್ಟು ನಡಿಸಿದ ಲಗ್ನದಲ್ಲಿ ತೆಗೆದುದು. ೨-೦-೦

ಬೆಂಗಳೂರು ದೇಶದ ಯಜಮಾನ್ ಬಸಪ್ಪನವರು ಬೆಂಗಳೂರು ಗೌಡರ ಮ॥ ವೀರಭದ್ರಪ್ಪನವರು ಇವರ ಮೂಲಕ ಬೆಂಗಳೂರು ಬುರಡಗುಂಟೆ ರುದ್ರಪ್ಪನವರ ಪುತ್ರ ಚಿ॥ ಬಸಪ್ಪನವರ ಲಗ್ನದಲ್ಲಿ ತೆಗೆದುದು. ೩-೦-೦

ಒಟ್ಟು ರೂಪಾಯಿ ೯೬-೨-೦

ಜಿ. ಕೆ. ರುದ್ರಾರ್‍ಯ, ಅಸಿಸ್ಟೆಂಟ್ ಸೆಕ್ರಟರಿ
ಮೈಸೂರು ವೀರಶೈವ
ವಿದ್ಯಾಭಿವೃದ್ಧಿ ಫಂಡ್‌ಸಭೆ ಬೆಂಗಳೂರು.

ಶ್ರೀಗುರುಪ್ರಸನ್ನಃ.

2

ಶ್ರೀಮನ್ನಿರಂಜನಮೂರ್ತಿ ಶ್ರೀಗುರು ಬಸವಸ್ವಾಮಿ ಬಿಳ್ಳೂರಮಠ ಇವರ ಕೃಪಾಛತ್ರದೊಳಗಿನ ಅಂಗಡಿಯು.

ಮುಂಬಯಿಯಿಂದ ಗಂಗಾಧರಪ್ಪಾ ಸಂಗಪ್ಪಾ ಸಾಬೋಜಿ ಮತ್ತು ಕಾಡಪ್ಪಾ ಶಿವಪ್ಪಾ ಮರೀಗುದ್ದಿ ಇವರು ತಿಳಿಯಪಡಿಸುವುದೇನಂದರೆ:—ನಾವು ಮಿತಿ ಶಕೆ ೧೮೩೭ ರಾಕ್ಷಸ ಸಂವತ್ಸರದ ಜ್ಯೇಷ್ಠ ಬಹುಳ ೯ ಸೋಮವಾರ ಪ್ರಾತಃಕಾಲದ (ಸ್ಟಾ. ಟಾ.) ೭ ಘಂಟೆಗೆ ಸುಮುಹೂರ್ತದಿಂದ ದಲಾಲಿ ಮತ್ತು ವ್ಯವಹಾರದ ಅಂಗಡಿಯನ್ನು ಸ್ಥಾಪಿಸಿ ಶ್ರೀ ಮಹಾಲಕ್ಷ್ಮಿ ಮತ್ತು ಶ್ರೀ ಸರಸ್ವತಿಪೂಜನವನ್ನು ಸಮಾರಂಭದಿಂದ ಮಾಡಿರುತ್ತೇವೆ. ತಮಗೆ ಬೇಕಾದ ಮಾಲನ್ನು ತರಿಸಿಕೊಳ್ಳಬೇಕು ಮತ್ತು ಮಾರಾಟದ ಬದಕನ್ನೂ ಕಳುಹಿಸಬೇಕು. ಕೆಲಸವನ್ನು ಸತ್ಯದಿಂದಲೂ ಕಾಳಜಿಯಿಂದಲೂ ಮಾಡುತ್ತೇವೆ. ಈ ನಮ್ಮ ಹೊಸ ಅಂಗಡಿಯಿಂದ ಉಭಯತರಿಗೂ ಪ್ರೀತಿ ಮತ್ತು ದ್ರವ್ಯದ ಲಾಭವು ವಿಶೇಷವಾಗಿ ಆಗಬೇಕೆಂದು ನಮಗಿದ್ದ ಅಪೇಕ್ಷೆಯನ್ನು ಪೂರ್ಣಮಾಡಲು ಶ್ರೀಗುರು ಸಮರ್ಥನಿದ್ದಾನೆ.

ಪ್ಯಾಟಿಧಾರಣೆ.

ಅರಶಿಣ	ಕುಂಕುಮ	ಭಂಗಾರ	ಬೆಳ್ಳಿ
೬	೫	೨೪-೧೨-೯	೬೮-೮-೦

ಪತ್ತಾ

ವಿಠ್ಠಲದಾಸ ಬಿಲ್ಡಿಂಗ ೨ ನೇ
ಮಜಲು ಬ್ಲಾಕನಂಬರ ೩ ಪ್ರಿ
ನ್‌ಸೆಸ್ ಸ್ಟ್ರೀಟ ಪೋಷ್ಟ
ಕಾಳಬಾದೇವಿ ತಾ॥ ೫-೭-೧೫

ತಮ್ಮ
ಗಂಗಾಧರಪ್ಪಾ ಸಂಗಪ್ಪಾ
ಸಾಬೋಜಿ.

S.U.N.&Co.
BENARES CITY.
KASHI
VISHWESHWAR.

43

ದೊಡ್ಡಕಂಪೆನಿ ! ಸೊಗಸಾದ ಸರಕುಗಳು !!

ಈ ನಮ್ಮ ಕಂಪನಿಯಲ್ಲಿ ತಯಾರಿಸಲ್ಪಡುವ ಉತ್ತಮವಾದ ಬನಾರಸ್ ರೇಷ್ಮೆ, ಜರೀಸೀರೆ, ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥಜಾಗಟೆ, ರುದ್ರಾಕ್ಷಿ ಮುಂತಾದ ಅಮೌಲ್ಯವಾದ ಸರಕುಗಳ ಕ್ಯಾಟ್ಲಾಗನ್ನು ಅಪೇಕ್ಷಿಸುವರಿಗೆ ೧೦೦ ಪುಟಗಳುಳ್ಳ ೧ ಕ್ಯಾಟ್ಲಾಗನ್ನು ಕಳುಹಿಸುವೆವು.

ವಿಳಾಸ-ಎಸ್. ಯು ಎನ್ ಮತ್ತು ಕಂಪೆನಿ,
ಬನಾರಿಸ್ ಸಿಟಿ (ಕಾಶೀ)

ಊದಬತ್ತಿಗಳು.

10

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨-೦-೦; ೫-೦-೦; ೩-೦-೦; ೨-೮-೦; ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿಗಂಧ ತೋಲಾ ೧ ಕ್ಕೆ ೧೨ ಆಣೆ ದಶಾಂಗಪೊಟ್ಟಣ ೧ ಕ್ಕೆ ೪ ಆಣೆ ಧೂಪದಗಟ್ಟಿ ೧ ಕ್ಕೆ ೨ ಆಣೆ ಬಾಲಗ್ರಹದೂಪ ಟಿನ್ ೧ ಕ್ಕೆ ೮ ಆಣೆ. ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ, ಅಂಡ್‌ಸನ್ಸ್
ಸುಗಂಧಕಾರಿ, ಮೈಸೂರು.

ಫಕ್ತ ವನಸ್ಪತಿಯಿಂದಲೇ ತಯಾರಿಸಿದ ಧಾತುಪೌಷ್ಟಿಕ ಲೇಹವು.

30

ರಕ್ತಶುದ್ಧಿ ಮತ್ತೂ ರಕ್ತವೃದ್ಧಿಯ ಮೇಲೆ ಅತಿಉತ್ತಮ. ದೇಶಿ! (ಗುಣವಾಗದಿದ್ದರೆ ಹಣ ಮರತ !!) ದೇಶಿ !!!

ಈ ಲೇಹವನ್ನು ವೃದ್ಧರು, ಬಾಲಕರು, ಮುಟ್ಟಾಗದ ಹೆಂಗಸರು, ವಾತರೋಗವುಳ್ಳವರು, ರಕ್ತವುದ್ರೇಕವಾದವರು, ತೃಷೆವುಳ್ಳವರು, ದಮ್ಮಿನವರು, ಕೆಮ್ಮಿನವರು, ಕಫ ಉಂಟಾದವರು, ಮೂಲವ್ಯಾಧಿಯವರು, ವಾಂತಿಯಾಗುವರು, ಮೇಹಸಂಬಂಧದ ರೋಗವಿದ್ದವರು, ಧಾತುಹೋಗುವವರು, ಉಷ್ಣಹೋಗುವವರು, ಸೇವಿಸಬೇಕು. ಇದರಿಂದ ಮೇಲೆ ಹೇಳಿರುವ ಎಲ್ಲಾ ರೋಗಗಳೂ ಪೂರ್ಣತೆಯಿಂದ ಗುಣವಾಗಿ ಜನನೇಂದ್ರಿಯದ ಶಿಥಿಲತೆ, ದುರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ, ಟಾಕಿ, ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾತರದ ಬಕ್ಕೆಗಳು, ಹುಣ್ಣುಗಳು, ಪಿತ್ಥದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್ಯಗುಣವಾಗಿ ಶರೀರಕ್ಕೆ ನೀರೋಗತ್ವವೂ, ಕಾಂತಿಯೂ ರತಿಸುಖಕ್ಕೆ ಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬ ಮನುಷ್ಯನಿಗೆ ೪೦ ತೋಲೆಯಿಂದ ೮೦ ತೊಲೆಯವರೆಗೆ ಬೇಕಾಗುವದು. ಕಿಮ್ಮತು ೪೦ ತೋಲೆಗೆ ರೂ. ೩-೮-೦. ೮೦ ತೊಲೆಗೆ ರೂಪಾಯಿ ೬ ಬೀಳುವದು. ಟಪಾಲು ಖರ್ಚು ಬೇರೆ ಅನುಪಾನ ಪತ್ರಿಕೆ ಔಷಧಿ ಸಂಗಡಲೇ ರವಾನಿಸುವೆವು.

ವಿಳಾಸ—ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

ಅಪೂರ್ವಗ್ರಂಥ ! ಅಪೂರ್ವಗ್ರಂಥ !!

ಬಳ್ಳಾರಿ ಶ್ರೀ ಮರಿಸ್ವಾಮಿಗಳು 4

ಸಕ್ಕರಿ ಕರಡೆಪ್ಪ

ಇವರ ಜೀವಿತಚರಿತ್ರೆ.

ಈ ಮಹಿಮರ ಚರಿತ್ರೆಯನ್ನು ಇಲ್ಲಿಯವರಿಗೂ ಯಾರೊಬ್ಬರು ಪ್ರಕಟನ ಮಾಡಿದ್ದಿಲ್ಲವೆಂಬುದು ತಿಳಿದದ್ದಾಗಿರುವುದಷ್ಟೆ. ಇಂತಹ ಅದ್ಭುತ ಮಹಿಮಶಾಲಿಗಳ ಚರಿತ್ರೆಗಳು ಅವಶ್ಯಕವಾಗಿಯೂ ಆದರಣೀಯಗಳಾಗಿರುವವು. ಈರ್ವರ ಮಹಿಮೆಯು ಅಸಾಧಾರಣವಾದುದು. ಒಂದೆ ದಿನ ಒಂದೆ ಕಾಲದಲ್ಲಿ ಬಳ್ಳಾರಿ, ಬೆಂಗಳೂರು, ಭೈರವಪುರ, ಎಂಬ ಮೂರು ಸ್ಥಳಗಳಲ್ಲಿ ಸಮಾಧಿಯನ್ನು ಹೊಂದಿದರೆಂಬುದೊಂದೆ ಅಪ್ರತಿಮ ಪ್ರಭಾವವನ್ನು ಸೂಚಿಸುತ್ತಿರುವುದು. ಇವರು ಅಲ್ಲಲ್ಲಿ ತೋರಿದ ಮಹಿಮೆಗಳು ಅನಂತವಾಗಿರವವು; ಇದಲ್ಲದೆ ಇವರ ಶಿಷ್ಯನಾದ ಸಕ್ಕರಿ ಕರಡೆಪ್ಪನ ಅಪಾರ ಮಹಿಮೆಯು ವಿಶದವಾಗಿ ವರ್ಣಿಸಲ್ಪಟ್ಟಿರುವುದು. ಈ ಸಕ್ಕರಿ ಶರಣನಂತಹ ಶರಣನು ಇಡೀ ಪ್ರಪಂಚದಲ್ಲಿ ವೀರಶೈವ ಮತದೊಳಗೆ ಹುಟ್ಟುವುದು ಅಪರೂಪ. ಆ ಗುರುಶಿಷ್ಯರೀರ್ವರ ಚರಿತ್ರೆಗಳು ಒಂದು ಗ್ರಂಥದಲ್ಲಿ ತಯಾರುಮಾಡಿರುವೆವು. ಈ ಗ್ರಂಥವನ್ನೋದುವವರು ಖಂಡಿತವಾಗಿಯೂ ನೀತಿ, ಭಕ್ತಿ, ಜ್ಞಾನಗಳ ಕಡೆ ಮನಸ್ಸನ್ನು ಕೊಡದಿರಲಾರರು ಇದಲ್ಲದೆ ಶಿಷ್ಯರಾದ ಕಂಬಳಿಸ್ವಾಮಿಗಳು ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಶ್ರೀ ಕೃಷ್ಣರಾಜಒಡೆಯರ್ ಬಹದ್ದೂರರವರ ಮತ್ತು ಸಮೇತ ಇರುವ ಮಹಾಸ್ವಾಮಿಗಳ ಭಾವಚಿತ್ರಪಟವು ಪ್ರಥಮ ಪುಟದಲ್ಲಿ ಅಂದವಾಗಿರಿಸಲ್ಪಟ್ಟಿರುವುದು. ಈ ಗ್ರಂಥವನ್ನು ತರಿಸಿಕೊಳ್ಳುವವರಿಗೆ ಪ್ರಾಚೀನಪಂಡಿತ ಗ್ರಂಥಗಳಿಂದ ಕ್ರೋಢೀಕರಿಸಲ್ಪಟ್ಟ ದಶಾಷ್ಟಕರತ್ನಾವಳಿ ಎಂಬುವ ಪುಸ್ತಕವನ್ನು ಉಚಿತವಾಗಿ ಕಳಿಸುವೆವು. ನಿಮ್ಮ ವಿಳಾಸ ಚೆನ್ನಾಗಿರಲಿ. ಇದರ ಬೆಲೆ ವಿ. ಪಿ. ಸಹಿತ ರೂ. ೧-೨-೦.

ನಮ್ಮ ವಿಳಾಸ:—
ಬಸವರಾಜಕಂಪೆನಿ, ಬಳ್ಳಾರಿ.

೫೦೦ ರೂಪಾಯಿಗಳ ಬಹುಮಾನ

11

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬ

ವನ್ನು ಸೇವಿಸಿ ಜೀವವಿಮೆಯನ್ನು ಮಾಡಿಕೊಳ್ಳಿರಿ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!! ಈ ಸಾಲಾಮಿಸ್ರೀ ಎಂಬುವುದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು, ಕಂದಾಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿಯ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಒಬ್ಬ ಮನುಷ್ಯನಿಗೆ ನಮ್ಮ ದೇಶದ ನಾಲ್ಕು ಜನರು ಎಂದಿಗೂ ಸಮಾನವಾಗಲಾರರು. ಸಾಲಾಮಿಸ್ರಿಯ ಧಾರಣೆಯು ಜಾಸ್ತಿಯಾಗಿರುವದರಿಂದ ಅನೇಕರು ಉರುಳಿಗಡ್ಡೆ, ಕಾಮಗಡ್ಡೆ ಇವುಗಳನ್ನು ಪಕ್ವಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದಲ್ಲಿ ಇದು ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುವದು ತಿಳಿದುಬರುತ್ತದೆ.

ಸಾಲಾಮಿಸ್ರಿ ಮುರಬ್ಬಾವು—ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವುದು.
ಸಾಲಾಮಿಸ್ರಿ ಮುರಬಾವು—ನಿದ್ರೆಯಲ್ಲಿ ಧಾತುವು ಹೋಗುವುದನ್ನು ನಿಲ್ಲಿಸುವುದ.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಮೂತ್ರದಲ್ಲ ಧಾತುಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕ್ಷಣ ಕ್ಷಣಕ್ಕೆ ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹಸಿವನ್ನು ಹೆಚ್ಚಿಸಿ ರಕ್ತವನ್ನು ವೃದ್ಧಿಪಡಿಸುವದು.
ಸಾಲಾಮಿಸಿ ಮುರಬ್ಬಾವು—ಶ್ವಾಸಖಾಸ ರೋಗಗಳನ್ನು ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಹೊಟ್ಟೆಯಲ್ಲಿರುವ ಜ್ವರದಗಡ್ಡೆ ನಾಶಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು—ಕೆಟ್ಟುಹೋಗಿರುವ ರಕ್ತವನ್ನು ಶುದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬಾವು—ಹಳೆತಲೆನೋವನ್ನು ಹೋಗಲಾಡಿಸಿ ಮೆದುಳಿಗೆ ಬಲವನ್ನುಂಟುಮಾಡುವದು.
ಸಾಲಾಮಿಸ್ರಿ ಮುರಬ್ಬಾವು—ಉತ್ಸಾಹ, ಧೈರ್ಯ, ಬುದ್ಧಿಕುಶಲತೆ, ಶರೀರಕಾಂತಿಯನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು—ತಾಂಬ್ರ, ಬೆಳ್ಳಿ, ಮತ್ತು ಬಂಗಾರ ಭಸ್ಮಕ್ಕಿಂತಲೂ ಉತ್ತಮವಾದುದು.
ಸಾಲಾಮಿಸ್ರಿ ಮುರಬ್ಬಾವು—ಸ್ತ್ರೀ ಸಂಗಕ್ಕೆ ಮೊದಲೆ ಧಾತು ಸ್ಖಲನವಾಗುವದನ್ನು ನಿಲ್ಲಿಸುವದು.

ಈ ಮುರಬ್ಬಾದೊಂದಿಗೆ ಬಲಬರುವಂಥ ಪದಾರ್ಥಗಳನ್ನು ಸೇರಿಸಿ ಪ್ರತಿಯೊಬ್ಬರೂ ಸೇವಿಸುವ ಹಾಗೆ ಕೈಯ್ಯಿಂದ ಮುಟ್ಟದೆ ತಯಾರುಮಾಡಲ್ಪಟ್ಟಿರುವದು.

ಒಂದು ಡಬ್ಬಿ ಮುರಬ್ಬಾವನ್ನು ೧೫ ದಿನಗಳು ಉಪಯೋಗಿಸುವುದರಿಂದ ಪೂರಾ ಗುಣಕೊಡುತ್ತದೆ. ೨-೩ ಡಬ್ಬಿಗಳನ್ನು ಉಪಯೋಗಿಸುವುದರಿಂದ ಜನ್ಮಾಂತ್ಯದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಸಾಲಾಮಿಸ್ರಿ" ಯಲ್ಲಿ ತಯಾರಿಸಲ್ಪಟ್ಟದ್ದಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರ್ಕಾರದ ಮೂಲಕ ನನ್ನಿಂದ ಪಡೆಯಬಹುದು. ೧೫ ತೊಲೆ ಮುರಬ್ಬಾವಿನ ಡಬ್ಬಿ ೧ ಕ್ಕೆ ಕ್ರಯ ೨—೦—೦ ರೂಪಾಯಿ. ಟಪ್ಪಾಲು ಖರ್ಚು ೧ ಡಬ್ಬಿಯಿಂದ ಡಬ್ಬಿಗಳ ವರೆಗೆ ೬ ಆಣೆ. ಅನುಭವ ಪತ್ರಿಕೆ ಔಷಧದ ಸಂಗಡ ಇರುತ್ತೆ.

ವಿಳಾಸ:—ಡಿ. ಮನ್ನಾಲಾಲ್, ಡೆಲ್ಲಿ ವೈದ್ಯರು,
೫, ಅವೆನ್ಯೂರೋಡ್ ಬೆಂಗಳೂರು ಸಿಟಿ.

ಪಾಳ್ಯದ ವೆಂಕಟಾಚಲಪಂಡಿತರ ಸಿದ್ಧೌಷಧಗಳು.

10

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಮೈ ಕಾಲು ಜೋತ (ಭಾರ), ಮೈನಡುಕ, ಶೀತವಾತಗಳಬಾಧೆ, ಅಜೀರ್ಣ, ಅಗ್ನಿ ನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ, ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುತುಕಶೂಲೆ, ಮಕ್ಕಳ ಎಳವು, ಜ್ವರ, ಸಜ್ಜಿಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವುದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ—೨೦೦ ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ; ೫ ಕುಪ್ಪಿ ೧ ಕುಪ್ಪಿ ಹೆಚ್ಚು. ೧ ರಿಂದ ೧೨ ಕುಪ್ಪಿವರೆಗೆ ಪೋಸ್ಟೇಜು ೪ ಆಣೆ



ವೈಶ್ವಾನರಾಸವ (ಕಾಲರಾ ಔಷಧಿ).

ವಾಂತಿಭೇದಿ, (ಕಾಲರಾ) ಶೀತಭೇದಿ, ಅಜೀರ್ಣಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ ಕೈ ಮೀರಿತೆಂದು ತೋರಿದಾಗಲೂ, ಆಶ್ಚರ್ಯವಾಗುವಂತೆ ರೋಗದಮೇಲೆ ಕೆಲಸಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಂ ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ, ಈ ಔಷಧಿಯನ್ನು ಕೊಟ್ಟ ಮೊದಲನೇ ವೇಳೆಯಲ್ಲೇ ಗುಣವು ತೋರುತ್ತದೆ. ಸಮಯದಲ್ಲಿ ಪೇಚಾಡಬೇಡಿರಿ. ಒಂದೇಒಂದು ಬುದ್ದಿಯು ನಿಮ್ಮಲ್ಲಿರಲಿ ದುಃಖ್ಖೊಂದು ಸಹಾಯಕ ಅನುಪಾನಪತ್ರವು ಔಷಧದೊಡನೆ ಇರುವುದು. ಒಂದು ಬುದ್ದಿಯ ಬೆಲೆ ೧—೦—೦

ಟಪಾಲ್ ಖರ್ಚು ಬೇರೆ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಮೈಸೂರ್ ಸ್ಟಾರ್ ಆಫೀಸಿನಲ್ಲಿದೊರೆಯುವ ಗ್ರಂಥಗಳು.

ಸಟೀಕ ಶತಕತ್ರಯ	೧—೧—೦
ಪರವಾದಿಗಜಾಂಕುಶತಾರಾವಳಿ	೧—೮—೦
ಶಿವಪೂಜಾವಿಧಿಃ	೦—೮—೦
ಚಾರುಶೀಲೆಚರಿತೆ	೦—೫—೦
ವಿವೇಕಮಂಜರಿ [೨ನೆಯ ಭಾಗ]	೦—೩—೦
ವ್ರತಪಂಚಕ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆಯವೆಚ್ಚ ಬೇರೆ.

ಆಯುರ್ವೇದ ವಿದ್ವಾನ್—ಬಿ. ವಿ. ಪಂಡಿತರ 41

ಶ್ರೀಕರಕಸ್ತೂರಿಮಾತ್ರೆ

ಟಿಬೆಟ್ ಕಸ್ತೂರಿ, ಚಿನ್ನದರೇಖು, ಲೋಹಭಸ್ಮ ಮುಂತಾದವುಗಳಿಂದ ವಂಶಪಾರಂಪರ್ಯವಾಗಿ ತಯಾರಿಸಲ್ಪಡುತ್ತಿರುವ ವಿಶೇಷ ಗುಣವುಳ್ಳ ಈ ಶ್ರೀಕರಕಸ್ತೂರಿಮಾತ್ರೆಗಳನ್ನು ತಾಂಬೂಲದೊಡನೆ ಅಥವಾ ಹಾಗೆ ಉಪಯೋಗಿಸಿದರೆ ಆಹಾರವು ಬೇಗನೆ ಜೀರ್ಣವಾಗಿ ಬಹಳಹೊತ್ತು ಬಾಯಿ ಘಮಘಮಿಸುತ್ತಿರುವುದು.

ಛಳಿಮಳೆಗಾಲಗಳಲ್ಲೂ, ಸೋಂಕುರೋಗಸ್ಥಳಗಳಲ್ಲೂ, ಪ್ರಯಾಣಕಾಲದಲ್ಲೂ, ಮಕ್ಕಳಿರುವ ಮನೆಗಳಲ್ಲೂ, ಮತ್ತಾವುದೂ ಈ ಮಾತ್ರೆಗಳಂತೆ ಆರೋಗ್ಯವನ್ನು ಕಾಪಾಡಲಾರದು.

ಶೀತವಾಯು, ಕೆಮ್ಮು, ನೆಗಡಿ, ಅಜೀರ್ಣಭೇದಿ, ಮಲಬಂಧ, ಮರಸೋಜ್ವರ, ಪ್ಲೇಗುಜ್ವರ, ಮಲೇರಿಯಾಜ್ವರ, ನಡುನೋವು, ಅರೋಚಕ, ಹಲ್ಲುನೋವು, ಮೈಕೈನೋವುಗಳು ಬಹಳಬೇಗನೆ ವಾಸಿಯಾಗುತ್ತವೆ. ಮಕ್ಕಳಿಗೆ ಸಂಜೀವನ—ಯಾವಾಗಲೂ ವಿಳಾಸವನ್ನು ಪರೀಕ್ಷಿಸಿ ಔಷಧವನ್ನು ಕೊಂಡುಕೊಳ್ಳಿರಿ—ಮೋಸಹೋಗಬೇಡಿರಿ. ೨೫೦ ಮಾತ್ರೆಯುಳ್ಳ ಸೀಸೆಯ ಬೆಲೆ ೦—೪—೦ ಆಣೆ. ಐದಕ್ಕೆ ಒಂದು ಮುಫತ್ತು. ಟಪಾಲ್ ಖರ್ಚು ಬೇರೆ.

ಆಮೋದಿನಿ.

ಸಂಗೀತಗಾರರಿಗೆ ಅತ್ಯಂತ ಸುಖವನ್ನೂ, ವಿದ್ಯಾರ್ಥಿಗಳಿಗೆ ಆನಂದವನ್ನೂ, ಪ್ರಯಾಣಿಕರಿಗೆ ಆಯಾಸಪರಿಹಾರವನ್ನೂ, ಉಂಟುಮಾಡಿ ಬಿಸಿಲುಕಾಲದ ಅಥವಾ ಆಯಾಸದ ಬಾಯಾರಿಕೆಯನ್ನು ತತ್ಕ್ಷಣ ಅಣಗಿಸಿ, ಎಂತಹ ಕೆಮ್ಮು, ಉಬ್ಬಸಗಳನ್ನಾದರೂ ವಾಸಿಮಾಡಿ ಆಬಾಲವೃದ್ಧರಿಂದಲೂ ಹೊಗಳ್ಪಡುತ್ತಲಿರುವ ಕೈಗಂಡಸಿದ್ಧಾಮೃತ, ಮತ್ತಾವ ಮಾತ್ರೆಗಳೂ ಇಷ್ಟು ಮನೋಹರವಾಗಿಲ್ಲವೆಂಬುದನ್ನು ನಂಬಿರಿ! ೧೫೦ ಮಾತ್ರೆಯ ಸೀಸೆ ೦—೪—೦ ಆಣೆ. ಐದಕ್ಕೆ ಒಂದು ಹೆಚ್ಚು. ಟಪಾಲ್ ಖರ್ಚು ಪ್ರತ್ಯೇಕ.

ವಿಳಾಸ:—ಸದ್ವೈದ್ಯಶಾಲಾ, ನಂಜನಗೂಡು.
ಮೈಸೂರು ಡಿ॥

೧೯೧೫ನೆಯ ಇಸವಿ ಜುಲೈ ತಾ॥ ೨೫ ರಿಂದ ೧೯೧೫ನೆಯ ಜುಲೈ ತಾ॥ ೩೧ರವರೆಗೆ ಸಲ್ಲುವ ಶಾಲೀವಾಹನಶಕ ೧೮೩೭ ನೆಯ ರಾಕ್ಷಸನಾಮಸಂವತ್ಸರದ ಆಷಾಢ ಶು॥ ಚತುರ್ದಶಿಯಿಂದ ಆಷಾಢ ಬ॥ ಪಂಚಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕರ್ನಾಟಕ ತೇದಿ
25	¹ಭಾನು	ಚತು	34-19	ಪೂಷಾ	34-32	10
26	²ಸೋ	ಪೌ	29-16	ಉಷಾ	30-58	11
27	ಮಂಗ	ಪಾಡ್ಯ	24-56	ಶ್ರವಣ	29-8	12
28	³ಬುಧ	ಬಿದಿಗೆ	21-42	ಧನಿಷ್ಠ	27-41	13
29	⁴ಗುರು	ತದಿಗೆ	19-12	ಶತಭಿಷ	27-19	14
30	⁵ಶುಕ್ರ	ಚೌತಿ	18-2	ಪೂಭಾ	28-7	15
31	⁶ಶನಿ	ಪಂಚ	18-4	ಉಭಾ	30-8	16

(1) ಶ್ರೀನಿವಾಸಬ್ರಹ್ಮತಂತ್ರ ಪರಕಾಲಸ್ವಾಮಿಗಳ ತಿ॥. (2) ವ್ಯಾಸಪೂರ್ಣಿಮಾ, ಆಳವಂದಾರ್ ತಿರುನ॥, ವೃತ್ಯೋಗಃ. (3) ಮೇಲುಕೋಟೆಯಲ್ಲಿ ಮಹಾಭಿಷೇಕಃ, ಮತ್ತು ಕಲ್ಯಾಣೋತ್ಸವಃ, ವೇದಾಂತಬ್ರಹ್ಮತಂತ್ರ ಪ॥ ಸ್ವಾಮಿಗಳಾರಾಧನೆ. (4) ಸಂಕಟಹರಚತುರ್ಥೀ. (5) ಸರ್ವತ್ರ ಪಂಚಮೀತಿಥಿಃ, ಆದಿಶುಕ್ರವಾರ. (6) ಟೀಕಾಚಾರ್ಯರ ಪುಣ್ಯದಿನ, ಮೇಲುಕೋಟೆಯಲ್ಲಿ ಕೃಷ್ಣರಾಜಮುಡಿಉತ್ಸವಃ, ಗುರುಚಂದ್ರಯೋಗಸ್ಸ್ವಾಪ್ನಂ.

ಮೈಸೂರ್ ಶ್ರೀ. ವಿರೂಪಾಕ್ಷಯ್ಯನವರಿಂದ ಶ್ರೀ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED NO. M. 124

ಮೈಸೂರ್ ಸ್ಟಾರ್

REGISTERED NO M. 124.

ಪ್ರತಿ ಭಾನುವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀತಾರಾ ಪರಮಾದಿಗತರಾಜಮಂಡಲಹಿತೈಷಾ । ಘನಪಥಕೃತಾವತಾರಾ ಪಶ್ಯಜ್ಜನಹೃತ್ತಮೋಹರಾಜೀಯಾತ್ ॥
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಕಲಿತಸಾದ್ಗುಣ್ಯಾಲವಾಲಂಪರಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬಿಭ್ರತಿ ಯಾಂ ಸದಾ ಪುರೀಗೆ ಗೌರೀಶಾನುಕಂಪೋಜ್ವಲಂ ॥

ವಾರ್ಷಿಕ ಚಂದಾ ೧—೦—೦
ಅಂಚೆವೆಚ್ಚ ಸೇರಿ ೧—೪—೦

ಸಂಪುಟ ೨೮) ಮೈಸೂರ್ ಸ್ಟಾರ್ ಸರ್ ೧೯೧೫ ನೆಯ ಇಸವಿ ಆಗಸ್ಟ ತಾರೀಖು ೧ ನೆಯ ಭಾನುವಾರ. (ಸಂಚಿಕೆ ೩೦

ರಖಂವಾರ್ ಹೊಸ ಹಾರ್ಮೋನಿಯಂಗಳು.

ಮಿತ್ರರೇ! ನಿಮ್ಮ ಹಣವನ್ನು ಸದ್ವ್ಯಯಮಾಡುವುದು ಹೇಗೆ? ಕ್ರಯಕ್ಕೆ ತಕ್ಕ ಉತ್ತಮವಾದ ಪದಾರ್ಥವನ್ನು ಕೊಂಡುಕೊಳ್ಳುವುದೇ ಅಲ್ಲವೆ? ಹಾಗಾದರೆ ನಮ್ಮಿಂದ ಒಂದುಸಾರಿ ತರಿಸಿ ಪರೀಕ್ಷಿಸಿರಿ. ನೀವೂ ಅನೇಕಕಡೆಗಳಿಂದ ನಾನಾತರಹ ಹಾರ್ಮೋನಿಯಂಗಳನ್ನು ತರಿಸಿಕೊಂಡಿರುವಿರಿ, ಆದರೆ ಈ ಕೆಳಗೆ ವಿವರಿಸಿರುವ ಪ್ರಖ್ಯಾತರಾದ ಕಾರ್ಖಾನೆಗಾರರಿಂದ ಬಹಳ ಬಂದೋಬಸ್ತಾಗಿ ತಯಾರಿಸಲ್ಪಟ್ಟು ನಮ್ಮಲ್ಲಿ ವಿಕ್ರಯಕ್ಕೆ ಸಿದ್ಧವಾಗಿರುವ ಹಾರ್ಮೋನಿಯಂಗಳನ್ನು ಒಂದುಸಾರಿ ತರಿಸಿಕೊಂಡು ಪರೀಕ್ಷಿಸಿದರೆ ಪದಾರ್ಥದ ಸೊಗಸೂ, ಬಾಳ್ವಿಕೆ, ಬಂದೋಬಸ್ತು, ಸ್ವಚ್ಛವಾದ ಸ್ವರ ಇವೇ ಮೊದಲಾದ ಅತ್ಯುತ್ಕೃಷ್ಟವಾದ ಗುಣಗಳೂ, ಅಗ್ಗವಾದ ದರಗಳೂ ತಾವಾಗಿ ಗೋಚರವಾಗುತ್ತವೆಯಾದ್ದರಿಂದ ನಮ್ಮಿಂದಹಾರ್ಮೋನಿಯಂಗಳನ್ನು ತರಿಸಿಕೊಂಡವರಿಂದ ಸಂತೋಷಪೂರ್ವಕವಾದ ಸನ್ಮಾನಪತ್ರಿಕೆಗಳು ಪ್ರತಿನಿತ್ಯವೂ ಬರುತ್ತಲಿವೆ ಇವುಗಳ ಪೈಕಿ ಸ್ಥಳಸಂಕೋಚದಿಂದ ಒಂದನ್ನು ಮಾತ್ರ ಇಲ್ಲಿ ವಿವರಿಸಿದೇವೆ.

ಸಯ್ಯದ್ ಜಮಾಲ್‌ಸಾಬ್ ಸ್ಕೂಲ್‌ಮಾಸ್ಟರ್ ಬೇಲೂರು ತಾಲ್ಲೋಕು ಚನ್ನಹಳ್ಳಿಗ್ರಾಮ ಇವರು ಬರೆಯುವದು. ಸ್ವಾಮಿ! ತಾವು ಕಳುಹಿಸಿಕೊಟ್ಟ ಹಾರ್ಮೋನಿಯಂ ಪಾರ್ಸಲನ್ನು ಡಿಲಿವರಿ ತೆಗೆದುಕೊಂಡೆನು. ನೋಡುವಲ್ಲಿ ಪದಾರ್ಥ ಬಹಳಸೊಗಸಾಗಿಯೂ ಬಂದೋಬಸ್ತಾಗಿಯೂ ಇರುವುದರಿಂದ ನನ್ನ ಮನಸ್ಸಿಗೆ ಬಹು ಸಮರ್ಪಕವಾಯಿತು. ಇದನ್ನು ನೋಡಿ ನನ್ನ ಸ್ನೇಹಿತರು ಇನ್ನು ಕೆಲವಕ್ಕೆ ಆರ್ಡರ್ ಕೊಡುವುದರಲ್ಲಿಧಾರೆ.

ಆರ್ಡರಿನ ಸಂಗಡ ಅಡ್ವಾನ್ಸು ಕಳುಹಿಸಿಕೊಡುತ್ತೇವೆ.

7

ಕ್ರಯದ ತಪ್ಸೀಲ್.

೧. "ಬಿಜಲೀಫ್ಲೂಟ್" ಸಿಂಗಲ್‌ರೀಡ್ಸ್ ಹಾರ್ಮೋನಿಯಂ ೧ ಕ್ಕೆ ೨೫—೦—೦
೨. ಡಿಟೋ ಉತ್ತಮತರಹ ಹಾರ್ಮೋನಿಯಂ ೧ ಕ್ಕೆ ೨೩—೮—೦
೩. "ಕೋಹಿನೂರು ಫ್ಲೂಟ್" ಸಿಂಗಲ್‌ರೀಡ್ಸ್ ಹಾರ್ಮೋನಿಯಂ ೧ ಕ್ಕೆ ೨೯—೮—೦
೪. ಡಿಟೋ ನಮೂನೆ ಅತ್ಯುತ್ತಮವಾದ ಹಾರ್ಮೋನಿಯಂ ೧ ಕ್ಕೆ ೩೨—೮—೦
೫. "ಮೋಸ್ಲೇಫ್ಲೂಟ್" ಸಿಂಗಲ್‌ರೀಡ್ಸ್ ಹಾರ್ಮೋನಿಯಂ ೧ ಕ್ಕೆ ೩೫—೦—೦
೬. ಪ್ರಖ್ಯಾತಿಹೊಂದಿದ ಎಂ. "ಮೋರ್ಹೆಫ್ಲೂಟ್" ಸಿಂಗಲ್‌ರೀಡ್ಸ್ ಹಾರ್ಮೋನಿಯಂ ೧ ಕ್ಕೆ ೩೩—೮—೦
೭. ಪ್ರಖ್ಯಾತಿಹೊಂದಿದ ಎಂ. "ಮೋರ್ಹೆಫ್ಲೂಟ್" ಹಾರ್ಮೋನಿಯಂನಲ್ಲಿ ಅತ್ಯುತ್ತಮವಾದ ಸಿಂಗಲ್‌ರೀಡ್ಸ್ ಹಾರ್ಮೋನಿಯಂ ೧ ಕ್ಕೆ ೪೨—೮—೦
೮. "ಕೊಹಿನೂರ್ ಫ್ಲೂಟ್" ಡಬ್ಬಲ್‌ರೀಡ್ಸ್ ಹಾರ್ಮೋನಿಯಂ ೧ ಕ್ಕೆ ೪೨—೮—೦
೯. "ಬಿಜಲೀಫ್ಲೂಟ್" ಡಬ್ಬಲ್‌ರೀಡ್ಸ್ ಹಾರ್ಮೋನಿಯಂ ೧ ಕ್ಕೆ ೪೨—೦—೦
೧೦. "ಮೋಸ್ಲೆಂಫ್ಲೂಟ್" ಡಬ್ಬಲ್‌ರೀಡ್ಸ್ ಹಾರ್ಮೋನಿಯಂ ೧ ಕ್ಕೆ ೪೩—೮—೦
೧೧. ಪ್ರಖ್ಯಾತಿಹೊಂದಿದ ಎಂ. "ಮೋರ್ಹೆಫ್ಲೂಟ್" ಡಬ್ಬಲ್‌ರೀಡ್ಸ್ ಹಾರ್ಮೋನಿಯಂ ೧ ಕ್ಕೆ ೫೦—೮—೦
೧೨. ಡಿಟೋ ಎಂ. "ಮೋರ್ಹೆಫ್ಲೂಟ್" ಡಬ್ಬಲ್‌ರೀಡ್ಸ್ ಅತ್ಯುತ್ತಮವಾದ ಹಾರ್ಮೋನಿಯಂ ೧ ಕ್ಕೆ ೫೨—೮—೦

ಹಾರ್ಮೋನಿಯಂಗಳಿಗೆ ಆರ್ಡರ್ ಮಾಡತಕ್ಕವರು ನಿಮ್ಮ ಊರಿಗೆಸಮೀಪವಿರುವ ರೈಲ್ವೇಸ್ಟೇಷನ್ ಬರೆಯುವದಲ್ಲದೆ ೫ರೂಪಾಯಿ ಅಡ್ವಾನ್ಸು ಕಳುಹಿಸಿಕೊಡಬೇಕು. ಅಡ್ವಾನ್ಸಿಲ್ಲದೇ ಬರತಕ್ಕ ಆರ್ಡರ್‌ಗಳಿಗೆ ಖಂಡಿತವಾಗಿಯೂ ರವಾನಿಸಲಾಗುವುದಿಲ್ಲ.

ಕಸ್ತೂರಿಮಾತ್ರೆ ಪ್ರಖ್ಯಾತರಾದ ಘನ ವೈದ್ಯರಿಂದ ತಯಾರಿಸಲ್ಪಟ್ಟ ಕಸ್ತೂರಿಮಾತ್ರೆ ಶೀಶೆ 1 ಕ್ಕೆ 0-4-0. 5 ಶೀಶೆಗೆ ಒಂದು ಶೀಶೆ ಇನಾಂ ಪೋಸ್ಟೇಜು ಅಲಾಯಿದಾ 12 ಶೀಶೆ ಒಟ್ಟಿಗೆ ತರಿಸಿಕೊಳ್ಳುವರಿಗೆ ಪೋಸ್ಟೇಜು ಸೇರಿ 2-8-0

ಪರಿಮಳಕಾರ್ಡುಗಳು ಒಂದುಕಾರ್ಡನ್ನು ಜೇಬಿನಲ್ಲಿಟ್ಟುಕೊಂಡಿದ್ದರೆ ಸುವಾಸನೆಯಾದ ಪುಷ್ಪವಾಟಿಗಳ ಮಧ್ಯದಲ್ಲಿರುವಂತೆ ಬಹು ಮನೋಹರವಾಗಿರುತ್ತೆ ಕಾರ್ಡು 1 ಕ್ಕೆ ಕ್ರಯ 0-1 0 12 ಕ್ಕೆ 0-10-0 ಪೋಸ್ಟೇಜು ಅಲಾಯಿದಾ ಒಂದು ಡಜನ್‌ಗಿಂತಲೂ ಕಡಿಮೆಯಾಗಿ ರವಾನಿಸಲಾಗುವುದಿಲ್ಲಾ.

ಸೆಕ್ಸೆಸ್ ತಾಂಬೂಲಮಿತ್ರ 250 ಮಾತ್ರೆಗಳಿರುವ ಪೊಟ್ನ 1 ಕ್ಕೆ 0-2-6 ಒಂದು ಡಜನ್ ಒಟ್ಟಿಗೆ ತರಿಸಿಕೊಳ್ಳುವರಿಗೆ 1-10-0 ಕೊಡುವುದಲ್ಲದೆ ಪೋಸ್ಟೇಜು ಸಹಾ ಮಾಫಿ ಮಾಡಿದೇನೆ. ಇದರ ಸೇವನೆಯಿಂದಾಗತಕ್ಕ ಗುಣಗಳ ಪ್ರಿಂಟಾದ ಚೀಟಿ ಪಾರ್ಸಲಿನ ಸಂಗಡ ರವಾನಿಸಲಾಗುತ್ತೆ.

ಶೆಮಿಂತಾನ್ 45 ಮಾತ್ರೆಗಳ ಪೊಟ್ನ 1 ಕ್ಕೆ 0-2-0, 95 ಮಾತ್ರೆಗಳ ಪೊಟ್ನ 1 ಕ್ಕೆ 0- -0, 200 ಮಾತ್ರೆಗಳ ಪೊಟ್ನ 1 ಕ್ಕೆ 0-7-0, 200 ಮಾತ್ರೆಗಳ ಟಿನ್ 1 ಕ್ಕೆ 0-9-0, 80 ಮಾತ್ರೆಗಳ ಟಿನ್ 1 ಕ್ಕೆ 0-4-0, 100 ಮಾತ್ರೆಗಳ ಶೀಸೆ 1 ಕ್ಕೆ 0-4-6.

ನಮ್ಮ ವಿಳಾಸ:—ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್, ಜನರಲ್ ಮರ್ಚೆಂಟ್ಸ್ ಕೃಷ್ಣರಾಜಮೊಹಲ್ಲಾ ಮೈಸೂರು.

ನಂಬಿರಿ—ಖಂಡಿತ ನಂಬಿರಿ. 26

ಜ್ವರದಮಾತ್ರೆ ಬಹು ಶ್ರೇಷ್ಠಮೂಲಿಕೆಗಳಿಂದ ತಯಾರಿಸಿದೆ. ಸರ್ವ ಜ್ವರಗಳಿಗೂ, ಖಾತರಿ ಗುಣಕಾರಿ ಶ್ರೇಷ್ಠ ಹೆಸರು ಬಂದಿದೆ. ಸಾವಿರಾರು ಸರ್ಟಿಫಿಕೇಟುಗಳು ಬಂದಿವೆ. ೫೪ ಮಾತ್ರೆ ಸೀಷೆಗೆ ೮ ಆಣೆ ೬ ಕ್ಕೆ ೨॥ ರೂ.

ಮುಖರಂಜನ ಮಾತ್ರೆ ಜನೋಪಕಾರಕ್ಕಿದೊಂದು ರತ್ನ ಬಾಯಿ ದುರ್ಗಂಧತಪ್ಪಿಸಿ, ಸುವಾಸನೆಯಾಗಿ ಜೀರ್ಣಶಕ್ತಿ ಹೆಚ್ಚಿಸಿ ಶರೀರವನ್ನು ಸರಿಮಾಡಿ, ಗಂಟಲುನೋವು, ಕೆರೆತ, ಗೊಗ್ಗರಧ್ವನಿ, ತಲೆಶೂಲಿ, ಹೊಟ್ಟೆನೋವು, ಪ್ರೋಕರಿಕೆ, ಮಲಬದ್ಧ, ವಾಂತಿ, ಅತಿಸಾರಾದಿಗಳನ್ನು ನಿವಾರಿಸಿ ಮನೋಲ್ಲಾಸಮಾಡುತ್ತೆ.

ಉಪಾಧ್ಯಾಯರು, ಲಾಯರುಗಳು, ವಿದ್ಯಾರ್ಥಿಗಳು, ಉಪನ್ಯಾಸಕರು, ಸಂಗೀತಗಾರರು, ನಾಟಕದವರು, ವ್ಯಾಯಾಮಮಾಡುವವರು, ಪ್ರಯಾಣಿಕರು, ಮುಂತಾದವರಿಗೆ ಅತ್ಯುಪಕಾರಿ ದಿನವಹಿ ಉಪಯೋಗಿಸುವದರಿಂದ ದೇಹಕ್ಕೆ ಉಷ್ಣಮಾಡುವುದಿಲ್ಲ. ೧೫೦ ಮಾತ್ರೆ ಸೀಷೆಗೆ ೪೮ ೫ಕ್ಕೆ ೧ರೂ.

ಬಾಲಸಂಜೀವಿನಿ ೪ ಆಣೆ ಟಾನಿಕ್ ಮಾತ್ರೆ ಸೀಷೆಗೆ ೧ರೂ. ಕೆಮ್ಮಿನ ಮಾತ್ರೆ ೮ ಆಣೆ ಸರಳಭೇದಿಮಾತ್ರೆ ೮ ಆಣೆ ಓರಿಯಂಟಲ್ ಪೇನ್‌ಬಾಂ ೪ ಆಣೆ ಹುಳಕಡ್ಡಿ ಮುಲಾಮು ೬ ಆಣೆ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ನಮ್ಮವಿಳಾಸ-ಪಂಡಿತ್ ಎಸ್. ಗರಳಪುರಿ, ಮೈಸೂರು.

ಹೊಸ ಪುಸ್ತಕಗಳು.

ಸಿದ್ಧಾಂತಶಿಖಾಮಣಿ.— ಶ್ರೀ ರೇಣುಕಾಚಾರ್ಯರು ಅಗಸ್ತ್ಯರಿಗೆ ಬೋಧಿಸಿದ ವೀರಶೈವ ಸಿದ್ಧಾಂತಶಾಸ್ತ್ರ). ವೀರಶೈವರ ಧರ್ಮಕರ್ಮಗಳು ನಿರೂಪಿತವಾಗಿವೆ. ೩೭೫ ಪುಟಗಳ ಉದ್ಗ್ರಂಥ. ಕನ್ನಡ ತಾತ್ಪರ್ಯವು ವಿಸ್ತಾರವಾಗಿದೆ. ಬೆಲೆ ೧—೮—೦.

ರೇವಣ ಸಿದ್ಧೇಶ್ವರ ಪುರಾಣಂ.— ಇದು ಶ್ರೀ ರೇಣುಕಾಚಾರ್ಯರ ಚರಿತ್ರೆ. ಷಟ್ಪದಿಗಳ ಕಾವ್ಯ. ಬೆಲೆ ೧೨ ಆಣೆ.

ಬಸವರಾಜವಿಜಯಂ.— ಬೆಲೆ ೧—೪—೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಿಡುಗನ್ನಡ ನುಡಿಯಿಂದ ಬಸವಪುರಾಣದ ಕಥೆಗಳೆಲ್ಲಾ ರಸವತ್ತಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶ ವಿಜಯಂ.— ಬೆಲೆ ೧—೮—೦ ದ್ವಿತೀಯಮುದ್ರಣವು ಮನೋಹರವಾದ ಅಕ್ಷರಗಳಿಂದ ಈಗತಾನೇ ಸಿದ್ಧವಾಗಿದೆ. ಚೆನ್ನಬಸವ ಪುರಾಣದಲ್ಲಿರುವ ಚೆನ್ನಬಸವೇಶಚರಿತ್ರೆ-ಶಿವನ ಪಂಚವಿಂಶತಿಲೀಲೆಗಳು-ಅನೇಕ ಶಿವಶರಣರ ಚರಿತ್ರೆಗಳು-ಷಟ್ಸ್ಥಲ-ಕರಣಹಸುಗೆ-ಪಂಚೀಕರಣ-ಕಾಲಜ್ಞಾನ- ಮೊದಲಾದ ವಿಷಯಗಳೆಲ್ಲಾ ಇದರಲ್ಲಿ ಲಲಿತವಾಗಿ ವಚನರೂಪದಿಂದ ಬರೆಯಲ್ಪಟ್ಟಿವೆ.

ಸಟೀಕ ಶಿವಯೋಗಪ್ರದೀಪಿಕೆ—ಬೆಲೆ ೧೪ ಆಣೆ ನಿಜಗುಣರ ಗುರುಗಳಾದ ಶ್ರೀ ಚೆನ್ನಸದಾಶಿವಯೋಗೀಂದ್ರರಿಂದ ರಚಿಸಲ್ಪಟ್ಟ ಈ ಗ್ರಂಥದಲ್ಲಿ ಮಂತ್ರ ಲಯ ಹಠ-ರಾಜಶಿವಯೋಗಗಳು ಸಪ್ರಮಾಣವಾಗಿ ಷಟ್ಸ್ಥಲಕ್ರಮರಕ್ಷೆದಿಂದ ನಿರೂಪಿತವಾಗಿವೆ. ಪ್ರತಿಯೊಂದು ಶ್ಲೋಕದ ಕೆಳಗೆ ಕನ್ನಡ ಟೀಕೆಯೂ ವಿಶೇಷಾರ್ಥ ವಿಚಾರವೂ ಇರುತ್ತವೆ.

ಪಾಲ್ಕುರಿಕೆ ಸೋಮೇಶ್ವರಪುರಾಣಂ— ಬೆಲೆ ೧-೩-೦ ಪಾಲ್ಕುರಿಕೆ ಸೋಮಾರಾಧ್ಯರ ಚರಿತ್ರವನ್ನೂ, ಅನೇಕ ಪುರಾಣ ಕಥೆಗಳನ್ನೂ ನಿರೂಪಿಸುವ ದೊಡ್ಡಗ್ರಂಥ.

ವೀರಶೈವ ಧರ್ಮಶಿರೋಮಣಿಃ— ಬೆಲೆ ೧-೩-೦ ವೀರಶೈವಮತಧರ್ಮವನ್ನು ನಿರೂಪಿಸುವುದು. ಸವ್ಯಾಖ್ಯಾನ.

ಪಂಚಶ್ಲೋಕೀ— ಬೆಲೆ ೧ ರೂ. ಶಿವಾಧಿಕ್ಯವನ್ನು ಅನೇಕ ವೇದಾಗಮಪುರಾಣಾದಿ ಪ್ರಮಾಣಗಳಿಂದ ಸಾಧಿಸುವ ಉದ್ಗ್ರಂಥ.

ಪಂಡಿತಾರಾಧ್ಯಚರಿತಂ—ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ. ಸಟಿಕ ೧ ನೆ ಪ್ರಕರಣಕ್ಕೆ ೧-೩-೦. ೨ ನೆ ಪ್ರಕರಣಕ್ಕೆ ೧ ರೂ. ೩ ನೆ ವಾದಪ್ರಕರಣ ೧-೩-೦

ಸೌಂದರಪುರಾಣಂ— ೧-೩-೦; ಸಟೀಕ ತತ್ವಪ್ರಕಾಶಿಕಾ ೬ ಆಣೆ; ಸಟೀಕ ಶತಸೂತ್ರರತ್ನ ೬ ಆಣೆ; ಪ್ರಮೀಲೋತ್ತ ಕಾರಾಗದುದ ಜ್ಞಾನಾಚಾರಬೋಧಕಪದಲ (ಸಟೀಕ) ೬ ಆಣೆ; ಸಟೀಕ ದೀಕ್ಷಾವಿಧಿ ೧೨ ಆಣೆ; ಸ್ತುತಿಮುಕ್ತಾವಳಿ ೬ ಆಣೆ; ರಕ್ಷಾಶತಕ ೨ ಆಣೆ; ಶಂಕರಲಿಂಗಕಂದಂ ೧ ಆಣೆ.

ಎನ್. ಆರ್. ಕರಿಬಸವಶಾಸ್ತ್ರಿ,
194 ಗ್ರಂಥಪ್ರಕಾರಕಮಂಡಲಿ, ಮೈಸೂರು.

ಭಕ್ತನ ಅದ್ಭುತಶಕ್ತಿ.

(ರೇಶಾಯಿ-ಶೇಷಗಿರಿರಾವು, ನಂದಿ.)

ಬಲವಂತರು ಬಲಹೀನರನ್ನು ಕೊಂಚಮಟ್ಟಿಗೆ ತಮಗೆ ಒಳಪಡಿಸಿಕೊಳ್ಳುತ್ತಿರುವರು. ಧನಿಕರು ದರಿದ್ರರನ್ನು ಸ್ವಲ್ಪಮಟ್ಟಿಗೆ ಸ್ವಾಧೀನಪಡಿಸಿಕೊಳ್ಳುತ್ತಿರುವರು. ಅಧಿಕಾರಿಗಳು ಕೂಡಿದಮಟ್ಟಿಗೂ ಸೇವಕರನ್ನು ವಶಪಡಿಸಿಕೊಳ್ಳುತ್ತಿರುವರು. ಇವರಿಗೆ ಈ ವಶೀಕರಣಶಕ್ತಿಯು ಹೇಗುಂಟಾಯಿತು? ಬಲವಂತರು ತಮ್ಮ ಬಲದಿಂದಲೂ, ಧನಿಕರು ತಮ್ಮ ಧನದಿಂದಲೂ, ಅಧಿಕಾರಿಗಳು ತಮ್ಮ ಅಧಿಕಾರದಿಂದಲೂ ಶಕ್ತಿವಂತರಾಗುತ್ತಿರುವರು. ಆದರೆ, ಇವರು ಸಮಸ್ತಮಾನವರನ್ನು ವಶಪಡಿಸಿಕೊಳ್ಳಲಾರರಾದುದರಿಂದ, ಇವರ ಶಕ್ತಿಯು ಅಲ್ಪವು. ಇವರು ತಮಗಿರುವ ಬಲವನ್ನೋ ಧನವನ್ನೋ, ಅಧಿಕಾರವನ್ನೋ ಕಳೆದುಕೊಳ್ಳುತ್ತಲೇ ಶಕ್ತಿಶೂನ್ಯರಾಗುತ್ತಿರುವರು ಆದುದರಿಂದ ಇವರ ಶಕ್ತಿಯು ಅಸ್ಥಿರವು. ಇಂತಹ ಅಲ್ಪವೂ, ಅಸ್ಥಿರವೂ ಆದ ಶಕ್ತಿಯ ಬಲವನ್ನು ನಾವುಗಳು ಪ್ರತಿದಿನವೂ ನೋಡುತ್ತಲೇ ಇರುವೆವು. ಆದರೆ ಬಲವಿಲ್ಲದೆ, ಧನವಿಲ್ಲದೆ, ಅಧಿಕಾರವಿಲ್ಲದೆ ಸಮಸ್ತ ಮಾನವರ ಹೃದಯಗಳನ್ನು ಶಾಶ್ವತವಾಗಿ ವಶಪಡಿಸಿಕೊಳ್ಳುವವನ ಶಕ್ತಿಯು ಸಾಧಾರಣವಾದುದಲ್ಲವು. ಅವನ ಶಕ್ತಿ ನಿಜವಾಗಿಯೂ ಅದ್ಭುತವಾದುದೇ. ಅಂತಹ ಅದ್ಭುತವಾದ ಶಕ್ತಿಯುಳ್ಳವನು ಭಕ್ತನು ಮಾತ್ರವೇ. ಕ್ರೈಸ್ತಮತಸ್ಥಾಪಕನಾದ ಜೀಸಸ್ ಮಹಾಭಕ್ತನು ಆತನ ಅದ್ಭುತ ಶಕ್ತಿಯನ್ನು ಸೂಚಿಸುವ ನಿದರ್ಶನಗಳು ಆತನ ಜೀವಿತದಲ್ಲಿ ಅನೇಕವಾಗಿರುವುವು. ಅವುಗಳಲ್ಲಿ ಒಂದನ್ನು ಹೇಳುವೆವು ಕೇಳಿ.

ಪೂರ್ವಕಾಲದಲ್ಲಿ ದಮಾಸ್ಕಸ್‌ನಿಂದ ಮಧ್ಯಧರಾಸಮುದ್ರಕ್ಕೆ ಹೋಗುವ ಮಾರ್ಗಮಧ್ಯದಲ್ಲಿ ಪ್ರಯಾಣಿಕರ ಬಳಿ ಸುಂಕವನ್ನು ವಸೂಲು ಮಾಡುವುದಕ್ಕಾಗಿ ಅನೇಕ ಸ್ಥಲಗಳು ಏರ್ಪಡಿಸಲ್ಪಟ್ಟುವು. ಆಸ್ಥಲಗಳಲ್ಲಿ ಸುಂಕವನ್ನು ವಸೂಲುಮಾಡುವುದಕ್ಕೆ ಕೆಲವುಮಂದಿ ಉದ್ಯೋಗಸ್ಥರು ನಿಯಮಿಸಲ್ಪಟ್ಟರು. ಅವರಲ್ಲಿ "ಮಾತ್ಯು" ಎಂಬಾತನೊಬ್ಬನಿದ್ದನು. ಆತನು ಸುಂಕವನ್ನು ವಸೂಲುಮಾಡುತ್ತಾ ದ್ರವ್ಯಸಂಬಂಧಗಳಾದ ಕಾರ್ಯಗಳಲ್ಲಿ ಕಾಲವನ್ನು ಕಳೆಯುತ್ತಿದ್ದನು. ಆತನಿದ್ದ ಸ್ಥಲಕ್ಕೆ ಒಂದು ದಿನ ಪ್ರಪಂಚೈಶ್ವರ್ಯಗಳಿಗೂ ಅಧಿಕಾರಕ್ಕೂ ದೂರನಾಗಿದ್ದ ಒಬ್ಬ ಪುರುಷನು ಬಂದನು. ಬಂದ ಆ ಮನುಷ್ಯನು ಮಾತ್ಯುನೊಡನೆ ಆರು ಮಾತುಗಳಿಗಿಂತಲೂ ಹೆಚ್ಚು ಮಾತನಾಡಲಿಲ್ಲವು. ಆದರೆ ಆ ಮಾತುಗಳಿಂದ ಮಾತ್ಯು ಬದಲಾಯಿಸಿ ಹೋದನು. ಆತನ ಹೃದಯವು ಧನದಿಂದ ಬಿಡುಗಡೆಯನ್ನು ಹೊಂದಿ ಧರ್ಮದ ಕಡೆಗೆ ತಿರುಗಿತು. ಧನವನ್ನೇ ತನ್ನ ಸಮಸ್ತವೆಂದೆಣಿಸಿ ಸೇವಿಸುತಿದ್ದವನು ಕೂಡಲೇ ತನ್ನ ಸುಖಜೀವನಕ್ಕೆ ಆಧಾರವಾಗಿದ್ದ ಕೈಯಲ್ಲಿನ ವೃತ್ತಿಯನ್ನು ವಿಸರ್ಜಿಸಿ ತನಗೆ ಉಪದೇಶವನ್ನು ಮಾಡಿದ ಮಹನೀಯನ ಹಿಂದೆ ನಡೆದನು. ಆ ಮಹಾ ಉಪದೇಶಕನು ಜೀಸಸ್ಸೇ. ಜೀಸಸ್ಸಿನ ಮಾರ್ಗವನ್ನವಲಂಬಿಸಿ ಆತನ ದ್ವಾದಶ ಶಿಷ್ಯರಲ್ಲಿ ಒಬ್ಬನಾಗಿ ಮಾತ್ಯು ಜಗದ್ವಿಖ್ಯಾತಿಯನ್ನು ಹೊಂದಿದನು. ಮಾತ್ಯು ಧನವನ್ನು ಬಿಟ್ಟು ದಾರಿದ್ರ್ಯವನ್ನು ಸ್ವೀಕರಿಸಿದನು! ಸುಖವನ್ನು ಬಿಟ್ಟು ಕಷ್ಟಗಳನ್ನು ಕೈಕೊಂಡನು!! ಇಂತಹ ಅದ್ಭುತವಾದ ಬದಲಾವಣೆಗೆ ಕಾರಣವೇನು? ಜೀಸಸ್ಸಿನ ಕೆಲವು ಮಾತುಗಳೇ ಅಲ್ಲವೆ? ಆಹಾ! ಆ ಮಾತುಗಳಿಗೆ ಎಷ್ಟು ಶಕ್ತಿ ಇರುವುದು! ಆ ಮಾತುಗಳಿಗಿರುವ ಶಕ್ತಿ ಯಾವ ಬಲವಂತನ ಯಾವ ಧನವಂತನ ಯಾವ ಅಧಿಕಾರಿಯ ಆಜ್ಞೆಗಾದರೂ ಇರುವುದೇ? ಅದ್ಭುತವು! ಅತ್ಯದ್ಭುತವು!! ಜೀಸಸ್ಸು ಮಹಾಭಕ್ತನಾದುದರಿಂದಲೇ ಆತನ ಮಾತುಗಳಿಗೆ ಅಷ್ಟು ಶಕ್ತಿಯು ಇದ್ದಿತು.

ಭಕ್ತಿಯೇ ನಿಜವಾದ ಶಕ್ತಿಯನ್ನು ಕೊಡುವುದು. ಭಕ್ತಿಯಿಂದುಂಟಾಗುವ ಶಕ್ತಿಯು ಮುಂದೆ ಮತ್ತಾವ ಶಕ್ತಿಯೂ ಸಮಾನವಾಗಲಾರದು. ಭಕ್ತನು ಬಲವಂತರನ್ನೂ ಧನವಂತರನ್ನೂ ಅಧಿಕಾರಿಗಳನ್ನೂ ಎಲ್ಲರನ್ನೂ ಬಾಹಾಕ್ರಾಂತರನ್ನಾಗಿ ಮಾಡಿಕೊಳ್ಳುವನು. ಭಕ್ತಿಯ ಶಕ್ತಿ ನಮಗೆ ತಿಳಿಯದೆ ಇರತಕ್ಕದಲ್ಲವು. ಈ ಶಕ್ತಿಯಿಂದಲೇ ನಮ್ಮ ಹಿಂದೂದೇಶವು ಪೂರ್ವದಲ್ಲಿ ಔನ್ನತ್ಯವನ್ನು ಹೊಂದಿದ್ದಿತು. ಈ ಶಕ್ತಿಯನ್ನುಂಟಾಗಿರುವ ಮಹಾಋಷಿಗಳ ಸಾಂಪ್ರದಾಯಕ್ಕೆ ನಾವು ಸೇರಿರುವೆವು. ಈ ಶಕ್ತಿಯ ಮಹಿಮೆಯನ್ನು ಇಂದಿಗೂ ನಾವುಗಳು ಕೊಂಡಾಡುತ್ತಿರುವೆವು. ಆದರೆ ಈಚೆಗೆ ಪ್ರಪಂಚ ಮೋಹದಲ್ಲಿ ಸಿಕ್ಕಿಕೊಂಡಿರುವೆವು; ಭ್ರಷ್ಟರಾಗಿರುವೆವು. ಎಷ್ಟು ಕಾಲ ಈ ಹೀನಸ್ಥಿತಿಯಲ್ಲಿರಬೇಕು? ಸೋದರರೇ! ಗಮನಿಸಿ, ಬಿಟ್ಟುಬಿಡೋಣವು ಕ್ಷುದ್ರದೃಷ್ಟಿಯನ್ನು! ಪಡೆಯೋಣವು ದಿವ್ಯದೃಷ್ಟಿಯನ್ನು! ಕಂಡುಕೊಳ್ಳೋಣವು ಭಕ್ತಿಪ್ರಭಾವವನ್ನು!! ಹೊಂದೋಣವು ಅದ್ಭುತಶಕ್ತಿಯನ್ನು!!!

ಹೋರಿಗಳಿಗೆ ಬೀಜ ಒಡೆಯುವ ಕ್ರಮ.

By Mr. K. N. Srinivasan, M. B. (Homaco)
G. B. V. C

ನಮ್ಮ ದೇಶದ ಹವಾಗುಣವೂ, ವಿಸ್ತಾರವಾದ ಹುಲ್ಲುಗಾವಲುಗಳೂ, ಜಲಸಮೃದ್ಧಿಯೂ, ಕಾಲ್ನಡೆಗಳ ಬೆಳವಣಿಗೆಗೆ ಬಹಳ ಅನುಕೂಲವಾಗಿರುವುದರಿಂದಲೇ ಮೈಸೂರು ದೇಶದ ದನಗಳು ಬಹು ಪುರಾತನ ಕಾಲದಿಂದಲೂ ಪ್ರಸಿದ್ಧವಾಗಿರುತ್ತವೆ. ವಿದೇಶೀಯರು ಇಲ್ಲಿಗೆ ಆಗಾಗ್ಗೆ ಬಂದು ಸಾವಿರಾರು ರಾಸುಗಳನ್ನು ಕೊಂಡುಹೋಗುವುದೇ ಇದಕ್ಕೆ ದೃಷ್ಟಾಂತವಾಗಿದೆ. ವಿದ್ಯುಚ್ಛಕ್ತಿಯ ಯಂತ್ರಗಳೂ ಹೊಸ ಯಂತ್ರಗಳೂ ಏರ್ಪಟ್ಟಿರುವ ಈ ನಾಗರಿಕ ಕಾಲದಲ್ಲಿಯೂ ನಮ್ಮ ದೇಶದಲ್ಲಿ ಮನುಷ್ಯನ ಜೀವನಕ್ಕೆ ಕೇವಲ ಕಾರಣಭೂತಗಳಾದ ವ್ಯವಸಾಯ ಮೊದಲಾದ ಸಕಲ ಕಾರ್ಯಗಳೂ ಪಶುಗಳಿಂದಲೇ ಆಗಬೇಕಾಗಿರುವುದರಿಂದ ಉತ್ತಮವಾಗಿದ್ದ ತಳಿಯು ವರ್ಷೇ ವರ್ಷೇ ಕ್ಷೀಣದಶೆಗೆ ಬಂದು ಈ ಕೆಲಸಗಳನ್ನು ತೃಪ್ತಿಕರವಾಗಿ ಮಾಡಲು ಯೋಗ್ಯವಾಗಿರುವುದಿಲ್ಲವಾದುದರಿಂದ ಕ್ಷೀಣಗತಿಯನ್ನು ಹೊಂದುತ್ತಿರುವ ತಳಿಯನ್ನು ಉತ್ತಮ ಸ್ಥಿತಿಗೆ ತರಲೇನು ಮಾಡಬೇಕೆಂದರೆ:—

೧. ಆರೋಗ್ಯ ನಿಯಮಗಳಿಗನುಸಾರವಾಗಿ ಉತ್ತಮವಾದ ಹುಲ್ಲು ನೀರಿನಿಂದುಪಚರಿಸಿ, ಸದಾ ದೇಹಾರೋಗ್ಯವು ಏಕರೀತಿಯಾಗಿರುವಂತೆ ಪೋಷಿಸುವಿಕೆ.

೨. ಉತ್ತಮವಾದ ಕರುಗಳನ್ನು ಹುಟ್ಟಿಸಲುಯೋಗ್ಯವಾದ ಹಸುಗಳನ್ನೂ ಗೂಳಿಗಳನ್ನೂ ಆಯಾಜಾತಿಗಳಿಂದಲೇ ಆರಿಸುವಿಕೆ.

೩. ಗರ್ಭಕಾಲದಲ್ಲಿ ಹಸುವನ್ನೂ ಅನಂತರ ಹುಟ್ಟಿದ ಕರುವನ್ನೂ ತಕ್ಕರೀತಿಯಲ್ಲಿ ಪೋಷಿಸುವಿಕೆ.

೪. ಬೀಜದ ಹೋರಿಗಳು ವಿನಾ ಇತರ ಎಲ್ಲಾ ಹೋರಿಗೂ ಚಿಕ್ಕವಯಸ್ಸಿನಲ್ಲಿಯೇ ಹಿತ ಮಾಡುವಿಕೆ. ಇವೇ ಮೊದಲಾದುವುಗಳು.

ಹಿತಮಾಡಬೇಕಾದ ಉದ್ದೇಶ.

ಗೂಳಿಯು ಅಂಗ ಲಕ್ಷಣಗಳನ್ನೂ, ಗುಣ ಬಲ ಮೊದಲಾದುವುಗಳನ್ನೂ ಹುಟ್ಟುವ ಕರುವು ವಿಶೇಷವಾಗಿ ಹೋಲುವುದರಿಂದ ಹಸುವಿಗಿಂತಲೂ ಗೂಳಿಯನ್ನು ಚುನಾಯಿಸುವುದರಲ್ಲಿ ನಾವು ಹೆಚ್ಚಾಗಿ ಗಮನಕೊಡಬೇಕು. ನಿರ್ಮಲವಾಗಿಯೂ ಗಟ್ಟಿಯಾಗಿಯೂ ಇರುವ ವಿಲಕ್ಷಣ ಹೋರಿಗಳನ್ನು ಹಸುವಿನ ಮಂದೆಯಿಂದ ತಡೆದು ಹಿತಮಾಡಬೇಕು. ಕೆಲವು ಜಾತಿದನಗಳು ಹೆಚ್ಚಾಗಿ ಹಾಲು ಕರೆಯುವುದಕ್ಕೂ ಕೆಲವು ವೇಗವಾಗಿ ಓಡುವುದಕ್ಕೂ ಮತ್ತೆ ಕೆಲವು ಉಳುವುದಕ್ಕೂ ಹೀಗೆ ಒಂದೊಂದು ಜಾತಿ ದನಗಳು ಒಂದೊಂದು ಗುಣಕ್ಕೆ ಪ್ರಸಿದ್ಧವಾಗಿರುವುದರಿಂದ ಯಾವ ಗುಣವನ್ನು ಯಾರು ತಮ್ಮ ದನದಲ್ಲಿ ಹೆಚ್ಚಿಸಬೇಕೆಂದು ಅಪೇಕ್ಷಿಸುವರೋ ಅವರು ಆ ಗುಣವಿರುವ ದನದಿಂದ ಬೀಜದ ಹೋರಿಯನ್ನು ಚುನಾಯಿಸಿ ಇತರ ಹೋರಿಗಳನ್ನೆಲ್ಲಾ ಹಿತಮಾಡಬೇಕು. ಮತ್ತು ದುಷ್ಟಹೋರಿಗಳನ್ನು ಪಳಗಿಸುವುದಕ್ಕೂ ಹಿತಮಾಡಬೇಕು.

ಹಿತಮಾಡಬೇಕಾದ ವಯಸ್ಸು.

ನಮ್ಮದೇಶದಲ್ಲಿ ೩ನೇ ಮತ್ತು ೪ನೇ ವಯಸ್ಸಿನಲ್ಲಿ ಹಿತಮಾಡುವುದು ಬಹಳ ರೂಢಿಯಲ್ಲಿರುತ್ತದೆ. ಇಷ್ಟುವಯಸ್ಸಾಗುವವರೆಗೂ ಹೋರಿಗಳನ್ನು ಬೆಳೆಯಲು ಬಿಡುವುದು ಒಳ್ಳೆಯದಾಗಿ ಕಾಣುವುದಿಲ್ಲ. ಏಕೆಂದರೆ ಈ ವಯಸ್ಸಿನ ಹೋರಿಗಳು ಹಸುಗಳಮೇಲೆ ಮಂದೆಯಲ್ಲಿ ದಾಟಿ ತಳಿಯನ್ನು ಕೆಡಿಸಬಹುದು; ಅಕ್ರಮದಿಂದ ವೀರ್ಯವನ್ನು ಕಳೆದುಕೊಂಡು ನಿರ್ಬಲವಾಗಲೂ ಬಹುದು. ಬುದ್ಧಿಯರಿತವುಗಳಾದುದರಿಂದ ಹಿತಮಾಡಿದರೂ ಅವುಗಳು ಅನೇಕವೇಳೆ ಪಳಗುವದು ಕಷ್ಟ. ಮತ್ತು ನರಗಳೆಲ್ಲಾ ಚೆನ್ನಾಗಿ ಬಲಿತಿರುವುದರಿಂದ ಹಿತಮಾಡುವಿಕೆಯು ಅವುಗಳಿಗೆ ಪೂರಾ ನೋವನ್ನುಂಟುಮಾಡುವುದು. ಜಾಗ್ರತೆಯಾಗಿ ಅವುಗಳು ಗುಣಹೊಂದಿ ಕೆಲಸಕ್ಕೆ ಒದಗುವುದಿಲ್ಲ. ಮತ್ತು ಅವುಗಳಿಗೆ ಕೆಲವು ವೇಳೆ ಅಪಾಯವು ಸಂಭವಿಸುವುದುಂಟು. ಸರ್ಕಾರಿ ಅಮೃತಮಹಲ್ ದನಗಳ ಹೋರಿಕರುಗಳನ್ನು ಚಿಕ್ಕವಯಸ್ಸಿನಲ್ಲಿಯೇ ಹಿತಮಾಡುವುದನ್ನು ಎಲ್ಲರೂ ಕೇಳಿರಬಹುದು ಇಂಗ್ಲೆಂಡ್ ಅಮೇರಿಕಾ ಮೊದಲಾದ ದೇಶಗಳಲ್ಲಿ ಸಣ್ಣ ಕರುಗಳಿಗೆ ಹಿತಮಾಡಿ ಬಿಡುವರು. ಆದುದರಿಂದಲೇ ಅವರುಗಳು ತಳಿಗಳನ್ನು ಉತ್ತಮಸ್ಥಿತಿಗೆ ತರುವುದರಲ್ಲಿ ನಿಸ್ಸೀಮರೆಂದು ಪ್ರಖ್ಯಾತಿಯನ್ನು ಪಡೆದಿರುವರು. ನಮಗೆ ಬೇಕಾದ ಕಷ್ಟಕಾರ್ಯಗಳನ್ನು ಮಾಡುವುದಕ್ಕೆ ದೇಹದಾರ್ಢ್ಯವೂ, ಸಹನ ಶಕ್ತಿಯೂ, ಸಾಧುತನವೂ ಮತ್ತು ಚಟುವಟಿಕೆಯೂ ಅತ್ಯವಶ್ಯಕಗಳಾಗಿರುವುದರಿಂದ ಅವುಗಳೆಲ್ಲಾ ಚಿಕ್ಕ ವಯಸ್ಸಿನಲ್ಲಿ ಹಿತಮಾಡುವುದರಿಂದಲೇ ಬರತಕ್ಕ ಗುಣಗಳಾಗಿವೆ. ಆದುದರಿಂದ ೬ ನೇ ತಿಂಗಳಿಂದ ೧ವರ್ಷದೊಳಗಾಗಿ ಹಿತಮಾಡುವುದು ಉತ್ತಮವಾಗಿರುವುದೆಂದು ತೋರುತ್ತದೆ.

ಈಗ ರೂಢಿಯಾಗಿರುವ ಕ್ರಮಗಳ ಮತ್ತು ಅವುಗಳ ನ್ಯೂನತೆಗಳು.

೧. ೨ ಸಣ್ಣಕೋಲುಗಳ ನಡುವೆ ಬೀಜಗಳನ್ನು ಸೇರಿಸಿಕೊಂಡು ಕೈಗಳಿಂದ ಅವುಗಳನ್ನು ಚಚ್ಚಿ ನೀರುಮಾಡುವಿಕೆ.

೨. ಚೀಲದ ಮೇಲ್ಭಾಗದಲ್ಲಿ ಬಿಗಿಯಾಗಿ ಒಂದುಹುರಿಯನ್ನು ಬೀಜಗಳು ತಾನಾಗಿಯೇ ಕೊಳೆತು ಬಿದ್ದು ಹೋಗುವವರೆಗೂ ಕಟ್ಟಿರುವಿಕೆ ಇವೇ ಮೊದಲಾದುವುಗಳು.

೧ ನೇ ಕ್ರಮದಂತೆ ಬೀಜ ಒಡೆಯುವುದಕ್ಕೆ ಸುಮಾರು ಅರ್ಧಘಂಟೆಯಾಗಬಹುದು. ಅದುವರೆಗೂ ದನವು ನೋವಿನಿಂದ ಆರ್ಭಟಿಸುತ್ತಲಿರುವುದು ಒಂದೊಂದುವೇಳೆ ಸತ್ತುಹೋಗುವುದೂ ಉಂಟು. ಬೀಜದ ಚೀಲವು ಪ್ರಮಾದವಾಗಿ ಬಾತುಕೊಂಡು ದನವು ಏಳಲಾರದೆ ಹುಲ್ಲು ನೀರನ್ನು ಕೆಲವು ದಿನಗಳು ಬಿಟ್ಟುಬಿಡುವುದು; ಮೈ ಇಳಿದುಹೋಗುವುದ; ಶಕ್ತಿಯು ತಗ್ಗುವುದು. ಪೂರ್ವದಂತೆ ಚೇತರಿಸಿಕೊಳ್ಳಬೇಕಾದರೆ ೧೨ ತಿಂಗಳುಗಳಾಗುವವು. ಆ ಕಾಲದಲ್ಲಿ ಸ್ವಲ್ಪ ವಿಶೇಷ ತಿಂಡಿಯು ಆರೈಕೆ ಬಗ್ಗೆ ಆವಶ್ಯಕವು. ಎರಡು ತಿಂಗಳವರೆಗೂ ಯಜಮಾನನಿಗೆ ಕೆಲಸಕ್ಕೆ ಕುಂದಕವಾಗುವುದು. ಮತ್ತು ಅವನಿಗೆ ಸ್ವಲ್ಪಮಟ್ಟಿಗೆ ದನವಿನ ವಿಶೇಷ ತಿಂಡಿಗಾಗಿ ವೆಚ್ಚವು ಆಗಬಹುದು. ಇಷ್ಟೆಲ್ಲಾ ಆದರೂ ಅನೇಕ ರಾಸುಗಳಲ್ಲಿ ಬೀಜದ ಭಾಗವು ನಿಂತೇಹೋಗುವುದು. ಇದು ಎಲ್ಲರಿಗೂ ತಿಳಿದೇ ಇರುವುದು ಇಂಥಾರಾಸುಗಳು ಹಸುಗಳಮೇಲೆ ಹಾರಿ ಕೆಡಿಸಿರುವ ಅನೇಕದನಗಳು ಈಗ ಎಷ್ಟೋ ಇವೆ.

ನೂತನ ಕ್ರಮ.

ಶಸ್ತ್ರಗಳಿಂದ ಬೀಜಗಳನ್ನು ತೆಗೆಯುವುದೇ ನೂತನ ಕ್ರಮವು. ಈ ಕ್ರಮಗಳಲ್ಲಿ ಅನೇಕ ವಿಧಗಳಿದ್ದಾಗ್ಯೂ ಸುಲಭವಾಗಿಯೂ ಎಲ್ಲರಿಂದಲೂ ಆಚರಿಸಬಹುದಾಗಿಯೂ ಇರುವ ಒಂದು ಕ್ರಮವನ್ನು ಮಾತ್ರ ಇಲ್ಲಿ ವಿವರಿಸುವೆನು. ಮೊದಲು ಬೀಜಗಳನ್ನು ಸಾಬೂನಿನಿಂದ ಚೊಕ್ಕಟವಾಗಿ ತೊಳೆದು ಹರಿತವಾದ ಚಾಕು (ಶಸ್ತ್ರ) ವಿನಿಂದ ಎರಡು ಬೀಜಗಳ ನಡುವೆ ಇರುವ ಗೀರಿನಮೇಲೆ ಸುಮಾರು ೨-೩ ಅಂಗುಲದಷ್ಟು ಸೀಳಿ ಬೀಜದ ಪೊರೆಗಳನ್ನು ಮೆಲ್ಲಗೆ ವಿಂಗಡಿಸಬೇಕು. ನಂತರ ಒಂದು ಬೀಜದ ಮೇಲ್ಭಾಗದಲ್ಲಿ ಬಿಗಿಯಾಗಿ ಹಿಡಿದುಕೊಳ್ಳುವ ಎರಡು ಉಕ್ಕಿನ ಅಲಗುಳ್ಳ ಕ್ಲಾಂಪ್ ಎಂಬ ಆಯುಧವನ್ನುಸೇರಿಸಿ ಹಿಡಿದುಕೊಳ್ಳಬೇಕು. ಅದರ ಕೆಳಭಾಗದಲ್ಲಿ ಟಾರ್ಷನ್‌ಫಾರ್ಸೆಪ್ಸ್ ಎಂಬ ಇಕ್ಕಳವನ್ನು ಸೇರಿಸಿ ಮೆಲ್ಲ ಮೆಲ್ಲಗೆ ತಿರುಗಿಸಿದರೆ ಬೀಜವು ಇಕ್ಕಳದೊಂದಿಗೆ ಕಳಚಿ ಬರುವುದು. ನಂತರ ಕ್ಲಾಂಪನ್ನು ತೆಗೆದುಬಿಡಬಹುದು. ಹೀಗೆಯೇ ಮತ್ತೊಂದನ್ನೂ ತೆಗೆಯುವುದು. ಆಮೇಲೆ ಬೀಜದ ಚೀಲಗಳನ್ನು ಚೊಕ್ಕಟವಾದ ತಣ್ಣೀರಿನಿಂದ ತೊಳೆದು ಗಾಯದ ಮೇಲ್ಭಾಗದಲ್ಲೆಲ್ಲಾ ಸ್ವಲ್ಪ ಹೊಂಗೆಯೆಣ್ಣೆಯನ್ನಾಗಲಿ ಅಥವಾ ಇನ್ನಾವ ಎಣ್ಣೆಯನ್ನಾಗಲಿ ಹಚ್ಚುವುದು. ಮೇಲೆಹೇಳಿದ ಆಯುಧಗಳನ್ನೆಲ್ಲಾ ಮೊದಲು ಕುದಿಯುವ ನೀರಿನಲ್ಲಿ ಹಾಕಿತೆಗೆದು ದ್ರಾವಕದ ನೀರಿನಲ್ಲಿ ಇಟ್ಟುಕೊಂಡಿರಬೇಕು.

ಈ ಕ್ರಮವು ೫ ನಿಮಿಷದೊಳಗಾಗಿ ಆಗುವುದು. ನೋವು ಕಡಮೆ; ರಕ್ತವೂ ಸುರಿಯುವುದಿಲ್ಲ. ೮-೧೦ ದಿನಗಳೊಳಗಾಗಿ ಸಂಪೂರ್ಣವಾಗಿ ಗುಣಹೊಂದಿ ಕೆಲಸಕ್ಕೆ ಸಿದ್ಧವಾಗುವುದು. ಹುಲ್ಲು, ನೀರು, ಮೊದಲಾದ ಆಹಾರ ಪದಾರ್ಥಗಳನ್ನು ಬಿಡುವುದಿಲ್ಲ. ಮೇಯುವುದಕ್ಕೆ ಎಲ್ಲಿಗೆ ಬೇಕಾದರೂ ಹೊಡೆದುಕೊಂಡು ಹೋಗಬಹುದು. ಈಕ್ರಮವು ಸಕಲರೂ ತಿಳಿದುಕೊಳ್ಳಬಹುದಾದಷ್ಟು ಸುಲಭವಾಗಿರುವುದು. ಚಿಕಿತ್ಸೆಯು ಅತಿಸುಲಭ ಒಂದು ದೊಡ್ಡ ಮಡಕೆಯಲ್ಲಿ ತಣ್ಣೀರಿಟ್ಟಿದ್ದು ಆ ನೀರನ್ನು ಆಗಾಗ್ಗೆ ಗಾಯದಮೇಲೆ ಎರಚುತ್ತಾ ಮೇಲೆ ಸ್ವಲ್ಪ ಎಣ್ಣೆಯನ್ನು ಸವರುವುದು ಇಷ್ಟೇ ಚಿಕಿತ್ಸೆ. ಯಾರುಬೇಕಾದರೂ ಈ ಕ್ರಮವನ್ನು ಕಲಿತುಕೊಳ್ಳಬಹುದು. ವಿಶೇಷ ತಿಂಡಿಯೂ ಅವಶ್ಯಕವಿಲ್ಲ. ಆದುದರಿಂದ ಸರ್ವರೂ ಈ ನೂತನಕ್ರಮವನ್ನು ಆಚರಿಸಿ ಈಗ ಹರಡಿರುವ ಕ್ರೂರಕ್ರಮದಬಾಧೆಯಿಂದ ದನಗಳನ್ನು ತಪ್ಪಿಸಿ ಕ್ಷೇಮವನ್ನುಂಟುಮಾಡಿರಿ. ಕಿ. ವೃ.

ಭರತಖಂಡದ ವೃತ್ತಾಂತಗಳು.

ಬರುವ ಡಿಸೆಂಬರ್ ತಿಂಗಳಲ್ಲಿ ಮದ್ರಾಸ್‌ಪಟ್ಟಣದೊಳಗೆ ಅಖಿಲ ಭಾರತಾಯುರ್ವೇದೀಯ ಮಹಾಸಭೆಯು ನಡೆಯುವುದು. ಅದಕ್ಕಾಗಿ ಸತ್ಕಾರಕಸಂಘವು ಏರ್ಪಡಿಸಲ್ಪಟ್ಟಿದೆ.

ಕಳೆದತಿಂಗಳು ಸಿಲೋನ್‌ದ್ವೀಪದಲ್ಲಿ ದೊಂಬಿಯನ್ನು ನಡೆಯಿಸಿದ ಜನರಲ್ಲಿ ಪ್ರಮುಖರಾಗಿದ್ದರೆಂದು ವಿಚಾರಣೆಯಲ್ಲಿ ತಿಳಿದುಬಂದ ಮೂವರು ಸಿಂಗಾಳಿಗಳಿಗೆ ಮರಣದಂಡನೆ ವಿಧಿಸಲ್ಪಟ್ಟಿತು.

ತಿರುವಾಂಕೂರು ಸಂಸ್ಥಾನದಲ್ಲಿ ಮೊನ್ನೆವಾರ ಆಗಿರುವ ವಿಪರೀತವೃಷ್ಟಿಯಿಂದ ನದಿಗಳಲ್ಲೆಲ್ಲಾ ಮಹಾಪ್ರವಾಹವು ಬಂದು ಪ್ರಜಾನಷ್ಟವೂ ಸೊತ್ತುಗಳ ನಷ್ಟವೂ ವಿಶೇಷವಾಗಿ ಆಗಿದೆ.

ಬಂಗಾಳದಲ್ಲಿ ಡಾರ್ಜಿಲಿಂಗ್ ಎಂಬ ಪರ್ವತಪ್ರದೇಶಪಟ್ಟಣಕ್ಕೆ ಲೋಹಮಾರ್ಗವನ್ನು ಹಾಕಿರುತ್ತಾರೆ. ಇದರಮೇಲೆ ಓಡಿಸಲ್ಪಡುವ ಹೊಗೆಬಂಡಿಗಳು ಗಂಟೆಗೆ ೪೦ ಮೈಲಿಗಳ ವೇಗದಿಂದ ನಡೆಯುತ್ತಿವೆ.

ಪಂಜಾಬಿಗೆ ಸೇರಿದ ಫರೀದ್‌ಕೋಟೆ ಸಂಸ್ಥಾನದ ಚಾಗ್ಗಲಾ ಎಂಬ ಊರಿನಲ್ಲಿರುವ ಒಬ್ಬ ಶ್ರೀಮಂತನ ಮನೆಗೆ ೬-೭ ಮಂದಿ ಸಾಯುಧರಾದ ಕಳ್ಳರು ಕಳೆದ ತಾ॥ ೧೯ ರಲ್ಲಿ ನುಗ್ಗಿ, ಮನೆ ಯಜಮಾನನನ್ನೂ ಅವನ ಹೆಂಡತಿಯನ್ನೂ ಹೊಡೆದು ಗಾಯಪಡಿಸಿ, ಕೆಲವು ಸೊತ್ತುಗಳನ್ನು ಅಪಹರಿಸಿಕೊಂಡು ಹೋಗಿರುವರು.

ಕರನೂಲಿನಿಂದ ಬಳ್ಳಾರಿ ಕಾರಾಗೃಹಕ್ಕೆ ಕರೆದುಕೊಂಡು ಹೋಗಲ್ಪಡುತ್ತಿದ್ದ ಇಬ್ಬರು ಕಳ್ಳರು ತಮ್ಮ ಮೇಲಿನ ಕಾವಲಿನ ಇಬ್ಬರು ಪೋಲೀಸರನ್ನು ವಂಚಿಸಿ ಹೇಗೋ ತಪ್ಪಿಸಿಕೊಂಡು ಓಡಿಹೋದರು ಕಾವಲಿನ ಒಬ್ಬ ಪೋಲೀಸನು ತನಗೇನಾಗುವುದೋ ಎಂಬ ಭಯದಿಂದ ತುಪಾಕಿಯಿಂದ ಹೊಡೆದುಕೊಂಡು ಸತ್ತನು.

ಬೊಂಬಾಯಿಗೌರ್ನರು ಪತ್ನೀಸಮೇತರಾಗಿ ಕಳೆದ ತಾ॥ ೨೬ ರಲ್ಲಿ ಹೈದರಾಬಾದಿಗೆ ಹೋಗಿ ಅಲ್ಲಿನ ರೆಸಿಡೆಂಟರ ಭವನದಲ್ಲಿಳಿದುಕೊಂಡರು. ಮಧ್ಯಾಹ್ನ ನೈಜಾಮರಿಗೂ ಅವರಿಗೂ ದರ್ಶನಪ್ರತಿದರ್ಶನಗಳಾದುವು. ಆ ರಾತ್ರಿ ಸಂಸ್ಥಾನದ ಪರವಾದ ಔತಣವಾಯಿತು. ಮರುದಿನ ಗೌರ್ನರ್‌ದಂಪತಿಗಳು ಗೋಲ್ಕೊಂಡವನ್ನು ನೋಡಿಕೊಂಡು ಬಂದರು ಬೇಟೆಗೆ ಹೋಗಿದ್ದರು. ಆ ರಾತ್ರಿ ರೆಸಿಡೆಂಟರ ಮನೆಯಲ್ಲಿ ಔತಣವಾಯಿತು.

ದಿಲ್ಲಿಪಟ್ಟಣದಲ್ಲಿ ಒಬ್ಬ ಹಳೆಯಕಳ್ಳನು ಒಬ್ಬ ವೈಶ್ಯನ ಜೇಬಿನಿಂದ ಹಣವನ್ನು ಕಳವುಮಾಡುತ್ತಿದ್ದಾಗ ಕಂಡುಹಿಡಿಯಲ್ಪಟ್ಟನು. ಆದರೆ ಅವನ ದೇಹವನ್ನು ಪರಿಶೋಧಿಸಿದಾಗ ಏನೂ ಸಿಕ್ಕಲಿಲ್ಲ. ವೈಶ್ಯನ ಜೇಬಿನಲ್ಲಿದ್ದ ಹಣದಲ್ಲಿ ೨ ರೂ. ಗಳು ಅಪಹರಿಸಲ್ಪಟ್ಟಿದ್ದುವು. ಅದರಮೇಲೆ ಅವನು ಅವುಗಳನ್ನುನುಂಗಿರಬೇಕೆಂದು ಸಂಶಯವುಂಟಾಗಲು, ವೈದ್ಯಶಾಲೆಗೆ ಕರೆದುಕೊಂಡುಹೋಗಿ ಎಕ್ಸ್‌ರೇಸ್ ಯಂತ್ರದ ಮೂಲಕ ಹೊಟ್ಟೆಯ ಒಳಭಾಗದ ಸ್ಥಿತಿಯನ್ನು ಪರೀಕ್ಷಿಸುವಾಗ್ಗೆ, ಅವನ ಹೊಟ್ಟೆಯಲ್ಲಿ ೨ ರೂ. ಗಳಿದ್ದುದು ಗೊತ್ತಾಯಿತು.

ಪೂರ್ವಬಂಗಾಳದ ಶಾಸನನಿರ್ಮಾಣಸಭೆಯು ಕಳೆದ ೨೩ ನೆ ತಾರೀಖಿನಲ್ಲಿ ಆರಂಭಿಸಲ್ಪಟ್ಟಿತು. “ಮದ್ರಾಸು ಪ್ರಭುತ್ವದವರು ಪರಿಶ್ರಮಿಕಾಭಿವೃದ್ಧಿಗಾಗಿ ನಾನಾಪ್ರಯತ್ನಗಳನ್ನು ನಡೆಯಿಸಿರುವರಂತೆ. ಗಾಜಿನಪದಾರ್ಥಗಳು ದೀಪದಪೆಟ್ಟಿಗೆ ಪೆನ್ಸಿಲ್ಲು ಮೊದಲಾದುವುಗಳ ನಿರ್ಮಾಣಕ್ಕಾಗಿ ಪರಿಶೋಧನಕಾರ್ಯವನ್ನು ಇಲ್ಲಿನ ಗೌರ್ನಮೆಂಟಿನವರೂ ಮಾಡಬೇಕು. ವಂಗದೇಶದ ಕೈಗಾರಿಕೆಗಳು ಪೂರ್ವದಲ್ಲಿ ಬಹಳ ಪ್ರಖ್ಯಾತವಾಗಿದ್ದುವು. ಈಗಲೂ ಸರ್ಕಾರದವರು ಅವುಗಳನ್ನು ಉದ್ಧರಿಸಬೇಕು” ಎಂಬ ಸೂಚನೆಯನ್ನು ಆ॥ ಸುರೇಂದ್ರನಾಥ ಬಾನರ್ಜಿಯವರು ಸಭೆಯ ಮುಂದಿಡಲು ಅದು ಅಂಗೀಕೃತವಾಯಿತು.

ಧಾರ್ವಾಡಜಿಲ್ಲಾ ಗದಗಿನಲ್ಲಿ ಸಬ್‌ಜಡ್ಜ್ ಕೋರ್ಟಿನ ಪ್ಲೀಡರಾಗಿರುವ ಬಲವಂತರಾವ್ ಕೃಷ್ಣನೀಲಕಂಠ ಎಂಬುವರು ೩ ವರ್ಷಗಳವರೆಗೆ ಕೋರ್ಟಿನಲ್ಲಿ ಬಂದು ವಾದಿಸಕೂಡದೆಂದು ಬೊಂಬಾಯಿ ಹೈಕೋರ್ಟಿನವರು ಆಜ್ಞೆ ಮಾಡಿದ್ದಾರೆ. ಕಾರಣವೇನೆಂದರೆ-ಈ ವಕೀಲರು ಒಂದು ವ್ಯಾಜ್ಯದಲ್ಲಿ ಪ್ರತಿವಾದಿಯೊಡನೆ ಸೇರಿಬಿಟ್ಟು ವಾದಿಗೆ ಸಲ್ಲಬೇಕಾದ ಪ್ರತಿಫಲವನ್ನು ಆತನಿಗೆ ಸೇರದಂತೆ ಮಾಡಿದರಂತೆ. ಇದೇತರದ ಇನ್ನು ಕೆಲ ಅಪರಾಧಗಳೂ ಇವರಮೇಲೆ ಹೊರಿಸಲ್ಪಟ್ಟಿದ್ದುವು. ಧಾರ್ವಾಡದ ಜಿಲ್ಲಾ ಜಡ್ಜಿಯವರು ವಿಚಾರಣೆಮಾಡಿ, ಹೈಕೋರ್ಟಿಗೆ ವರದಿಮಾಡಿದ್ದುದರಮೇಲೆ ಅವರು ಮೇಲೆಕಂಡ ಮೇರೆಗೆ ಆಜ್ಞೆ ಮಾಡಿರುವರು.

ಕಲ್ಕತ್ತಾಕ್ಕೆ ಸೇರಿದ ಸುನಾಗಂಜ್ ಸಬ್‌ಡಿವಿಜನ್ನಿನಲ್ಲಿ ವಿಪಿನಚಂದ್ರ ಭಟ್ಟಾಚಾರ್ಯ ಎಂಬ ೧೮ ವರ್ಷ ವಯಸ್ಸಿನ ಯುವಕನಿಗೆ ಹುಚ್ಚು ಹಿಡಿದಿತು. ಒಂದುದಿನ ಈತನು ಹಾವಳಿಮಾಡಿದುದರಿಂದ ಕೈಕಾಲುಗಳನ್ನು ಕಟ್ಟಿಹಾಕಿದರು. ಸಾಯಂಕಾಲದಹೊತ್ತಿಗೆ ಹುಚ್ಚು ಇಳಿದುಹೋಗಲು, ಆ ರಾತ್ರಿ ತನ್ನ ತಾಯಿಯಮಗ್ಗುಲಲ್ಲೇ ಮಲಗಿಕೊಂಡಿದ್ದನು. ಸರಿರಾತ್ರಿಯಲ್ಲಿ ಥಟ್ಟನೆ ಹುಚ್ಚೇರಲು, ತಾಯಿಯನ್ನು ಕೊಂದುಹಾಕಿದನು. ಆಕೆಯ ಕೂಗಿಗೆ ಮಗ್ಗುಲಮನೆಯವರು ಬಂದು ಸಂಗತಿಯೇನೆಂದು ವಿಚಾರಿಸುವಲ್ಲಿ “ನನ್ನ ತಾಯಿಯು ನನ್ನ ಕೈಕಾಲುಗಳ ಬಂಧನವನ್ನು ಬಿಡಿಸಿದಳು; ನಾನು ಆಕೆಯನ್ನು ಈ ಪ್ರಪಂಚದ ಸಂತಾಪಬಂಧನದಿಂದ ಬಿಡುಗಡೆಮಾಡಿದೆ” ಎಂದು ಉತ್ತರ ಕೊಟ್ಟನಂತೆ.

ಪ್ರಪಂಚದ ಪ್ರಮುಖರಾಷ್ಟ್ರಗಳಲ್ಲೆಲ್ಲಾ ಭಂಗಾರದ ನಾಣ್ಯಗಳು ವ್ಯವಹಾರದಲ್ಲಿವೆ. ನಮ್ಮ ಭರತಖಂಡದಲ್ಲೂ ಸುವರ್ಣದ ನಾಣ್ಯಗಳನ್ನು ವ್ಯವಹಾರಕ್ಕೆ ತರಬೇಕೆಂದು ಇಲ್ಲಿನ ದೇಶಾಭಿಮಾನಿಗಳು ಬಹುಕಾಲದಿಂದ ಪ್ರಭುತ್ವದವರನ್ನು ಒತ್ತಾಯಪಡಿಸುತ್ತಿದ್ದಾರೆ. ಆದರೆ ಇಲ್ಲಿನ ದೇಶಾಭಿಮಾನಿಗಳಲ್ಲಿ ಹೆಸರಾದ ಬೊಂಬಾಯಿಯ ವಾಚಾರವರು ಈ ದೇಶಕ್ಕೆ ಸುವರ್ಣದ ನಾಣ್ಯಗಳು ಅವಶ್ಯಕವಲ್ಲವೆಂದೂ, ಬೆಳ್ಳಿಯ ರೂ. ಗಳೇ ಉಪಯುಕ್ತವಾದುವುಗಳೆಂದೂ ಸಮರ್ಥನಮಾಡಿ ಒಂದು ಲೇಖನವನ್ನು ಬೊಂಬಾಯಿ ಕ್ರಾನಿಕಲ್ ಪತ್ರಿಕೆಗೆ ಬರೆದಿರುತ್ತಾರೆ. ಬರುಬರುತ್ತ ಬೆಳ್ಳಿಯಬೆಲೆಯು ಇಳಿಯುತ್ತಲಿರುವಾಗ, ಈ ದೇಶದ ಆಹಾರ್ಯವಸ್ತುಗಳ ಬೆಲೆಯು ಏರುತ್ತಿರುವಾಗ, ಪ್ರಪಂಚದವರೆಲ್ಲಾ ಚಿನ್ನದ ನಾಣ್ಯಗಳನ್ನು ಉಪಯೋಗಿಸುತ್ತಿರುವಾಗ, ಈ ದೇಶಕ್ಕೆ ಮಾತ್ರ ಅದು ಏತಕ್ಕೆ ಕೂಡದು?

ಬಂಗಾಳಕ್ಕೆ ಸೇರಿದ ಬಾರಕಪುರ್ ಗ್ರಾಮದಲ್ಲಿರುವ ಕೃಷ್ಣಗೋಪಾಲದಾಸ ಎಂಬುವವರಮನೆಗೆ ೧೫ ಮಂದಿ ದರೋಡೆಕಳ್ಳರು ಆಯುಧಪಾಣಿಗಳಾಗಿ ಹೋಗಿ, ಅವರಲ್ಲಿ ಒಬ್ಬನು ವಿನಯವಚನದಿಂದ ಮೊದಲು ಮನೆಯಜಮಾನನ ಹೆಸರನ್ನು ಹಿಡಿದು ಬಾಗಿಲನ್ನು ತೆಗೆಯಿರೆಂದು ಕೂಗಲು, ಯಾರೋ ಆಪ್ತರು ಬಂದಿರಬೇಕೆಂದು ಯಜಮಾನನು ಬಾಗಿಲನ್ನು ತೆರೆಯಲು, ಕೂಡಲೇ ಆತನಮೇಲೆ ತುಪಾಕಿಗುಂಡುಗಳನ್ನು ಕಳ್ಳರು ಪ್ರಯೋಗಿಸಿದರು. ಅವನಿಗೆ ಸ್ವಲ್ಪ ಗಾಯವಾದುದರಿಂದ ಅವನು ತಲೆತಪ್ಪಿಸಿಕೊಂಡನು. ಕಳ್ಳರು ಮನೆಗೆನುಗ್ಗಿ ಬೆಲೆಬಾಳುವ ವಸ್ತುಗಳನ್ನು ದೋಚಿಕೊಂಡು ದೋಣಿಯನ್ನು ಹತ್ತಿ ನದಿಯಮೇಲೆ ಹೊರಟುಹೋದರು. ಗ್ರಾಮಸ್ಥರೂ ಮತ್ತೊಂದು ದೋಣಿಯನ್ನೇರಿ ಆ ಕಳ್ಳರ ದೋಣಿಯನ್ನು ಬೆನ್ನಟ್ಟಿದರು. ಆದರೆ ಕಳ್ಳರು ತುಪಾಕಿಗುಂಡುಗಳನ್ನು ಹಾರಿಸುವುದಕ್ಕುಪಕ್ರಮಿಸಲು, ಗ್ರಾಮಸ್ಥರು ಹಿಂದಿರುಗಿಬಂದರು. ಬಳಿಕ ಪೋಲೀಸರು ಪರಿಶೋಧನೆಗೆ ಉಪಕ್ರಮಿಸಿರುವರು.

ಬೊಂಬಾಯಿ ಗೌರ್ನಮೆಂಟಿನವರು “ಮೆಡಿಕಲ್‌ರಿಜಿಸ್ಟ್ರೇಷನ್” ಎಂಬ ಒಂದು ವಿಧಿಯನ್ನು ಏರ್ಪಡಿಸಿಕೊಂಡಿದ್ದಾರೆ. ಇದು ವಿಧಿಯಾಗಿ ಮಾಡಲ್ಪಡುವಾಗ, ದೇಶೀಯವೈದ್ಯಕ್ಕೆ ಇದರಿಂದ ಕುಂದುಂಟಾಗುವುದೆಂದು ಆಕ್ಷೇಪಿಸಲ್ಪಡಲು, ಹಾಗೆಂದಿಗೂ ಮಾಡಲ್ಪಡುವುದಿಲ್ಲವೆಂದು ಉತ್ತರಕೊಡಲ್ಪಟ್ಟಿದ್ದಿತು. ಈಗ ನಡೆದಿರುವ ಒಂದು ಸಂಗತಿಯನ್ನು ಕೇಳುವಲ್ಲಿ ಈ ವಿಧಿಯು ದೇಶೀಯವೈದ್ಯಮೂಲಕ್ಕೇ ಕುಠಾರಪ್ರಯೋಗವನ್ನು ಮಾಡಿದಂತೆ ಕಾಣುತ್ತಿದೆ. ಅದೇನೆಂದರೆ—ಪುನಾಪಟ್ಟಣದಲ್ಲಿ ಈಗ್ಗೆ ೨೫ ವರ್ಷಗಳಿಂದಲೂ ಒಂದು ಆಯುರ್ವೇದ ವೈದ್ಯಶಾಲೆಯು ಜನಾದರಣೀಯವಾಗಿ ನಡೆದುಕೊಂಡು ಬರುತ್ತಿದೆ. ಈಗ ಪುನಾಜಿಲ್ಲೆಯ ಕಲೆಕ್ಟರೂ ಅಲ್ಲಿನ ಕಮಿಷನರೂ ಕೂಡಿ ರಿಜಿಸ್ಟ್ರೇಷನ್ ವಿಧಿಯ ಪ್ರಕಾರ ಪಟ್ಟಪರೀಕ್ಷೆಯಲ್ಲಿ ಉತ್ತೀರ್ಣರಾಗದಿದ್ದವರು ಇಂಥ ವೈದ್ಯಶಾಲೆಗಳನ್ನು ನಡೆಯಿಸಲಾಗದೆಂದೂ ಆ ವೈದ್ಯಶಾಲೆಯನ್ನು ಮುಚ್ಚಿಸಬೇಕೆಂದೂ ಮ್ಯುನ್ಸಿಪಾಲಿಟಿಯವರಿಗೆ ಅಪ್ಪಣೆಮಾಡಿರುವರೆಂದು ಬೊಂಬಾಯಿ ಕ್ರಾನಿಕಲ್ ಪತ್ರಿಕೆಯು ಬರೆದಿರುತ್ತದೆ.

ಕಲ್ಕತ್ತಾನಿವಾಸಿಯಾದ ಮನ್ಮಥಚಕ್ರವರ್ತಿ ಎಂಬಾತನು ಕಳೆದ ೫ ವರ್ಷಗಳಿಂದಲೂ ಕಳ್ಳ ಟಿಕೇಟುಗಳನ್ನು ಮಾರಿ ರೈಲ್ವೆಕಂಪೆನಿಯವರಿಗೆ ಮೋಸಮಾಡುತ್ತಿದ್ದನು. ಈ ಕೆಲಸವನ್ನು ಬಂಗಾಳ ನಾಗಪೂರ್ ರೈಲ್ವೆಯಲ್ಲಿ ವಿಶೇಷವಾಗಿ ಮಾಡುತ್ತಿದ್ದನು. ಜಗನ್ನಾಥ, ಭುವನೇಶ್ವರ ಮೊದಲಾದ ಸ್ಥಲಗಳಿಗೆ ಯಾತ್ರಾರ್ಥಿಗಳಾಗಿ ಹೋಗತಕ್ಕವರಿಗೆ ಮೋಸದ ಟಿಕೇಟುಗಳನ್ನು ಮಾರುತ್ತಿದ್ದನು. ಇವನ ಜತೆಯಲ್ಲಿ ಸಹಾಯಕರು ಅನೇಕರು ರೈಲ್ವೆಯಲ್ಲಿ ತಿರುಗುತ್ತಿದ್ದರು. ಈ ಮೋಸಗಾರನನ್ನು ಹಿಡಿಯಬೇಕೆಂದು ಪೋಲೀಸಿನವರು ಬಹುದಿನದಿಂದ ಹೊಂಚುಹಾಕುತ್ತಿದ್ದರು. ಕಡೆಗೆ ಮೊನ್ನೆತಾನೇ ಜರುಗಿದ ಜಗನ್ನಾಥ ಜಾತ್ರೆಯದಿವಸ ಇವನು ಸಿಕ್ಕಿಬಿದ್ದನು. ಇವನು ಆ ದಿನ ೧ ನೆ ತರಗತಿ ಬಂಡಿಯಲ್ಲಿ ಪ್ರಯಾಣಮಾಡುತ್ತಿದ್ದನು. ಇವನ ಅನುಚರರು ೨೦ ಮಂದಿಗಳು ಟಿಕೇಟಿಲ್ಲದೆಯೇ ೩ ನೆ ತರಗತಿ ಬಂಡಿಯಲ್ಲಿ ಹೋಗುತ್ತಿದ್ದರು. ಅವರುಗಳನ್ನು ಟಿಕೇಟಿಲ್ಲ? ಎಂದು ಕೇಳಲು, ಮನ್ಮಥಚಕ್ರವರ್ತಿಯವರ ಹತ್ತಿರ ಇರುವುದೆಂದು ಹೇಳಿದರು. ಅವನನ್ನು ವಿಚಾರಿಸುವಲ್ಲಿ ಟಿಕೇಟುಗಳಿರಲಿಲ್ಲ. ಆಗ ಅನುಮಾನಹುಟ್ಟಲು ಮೋಸಗಾರನು ಸಿಕ್ಕಿಬಿದ್ದನು.

ವಿದೇಶ ವೃತ್ತಾಂತಗಳು

ಜರ್ಮನರು ಇದುವರೆಗೆ ತಟಸ್ಥದೇಶೀಯರ ೬೪ ಹಡಗುಗಳನ್ನು ಮುಳುಗಿಸಿರುವರೆಂದು ಪಾರ್ಲಿಮೆಂಟಿನಲ್ಲಿ ಹೇಳಲ್ಪಟ್ಟಿರುವುದು.

ಟ್ರಾನ್ಸ್‌ವಾಲಿನಲ್ಲಿರುವ ಕಲ್ಲಿದ್ದಲಿನ ವ್ಯಾಪಾರಸಂಘದವರು ತಾವು ೧ ಲಕ್ಷ ಟನ್ನು ಕಲ್ಲಿದ್ದಲನ್ನು ಕೊಡುವೆವೆಂದು ಆಂಗ್ಲಪ್ರಭುತ್ವದವರಿಗೆ ಶ್ರುತಪಡಿಸಿಕೊಂಡಿದ್ದಾರೆ.

ಜರ್ಮನರು ರವಾರಸ್ಕಾದ ಹತ್ತಿರ ನಡೆದ ಯುದ್ಧದಲ್ಲಿ ಸೆರೆ ಹಿಡಿದುಕೊಂಡುಹೋದ ೫೦೦೦ ಮಂದಿ ರಷ್ಯನರನ್ನು ತುಪಾಕಿಗಳಿಂದ ಹೊಡೆದು ಒಟ್ಟಿಗೆ ಸುಟ್ಟು ಸಮಾಧಿಮಾಡಿದರೆಂದು ಅವರ ಜತೆಗಾರರಾದ ಆಸ್ಟ್ರಿಯನ್ನರೇ ಹೇಳಿರುವರು. ಇದಕ್ಕಿಂತಲೂ ಅಸುರಕೃತ್ಯವು ಬೇರೊಂದುಂಟೆ?

ಆಸ್ಟ್ರಿಯಾದೇಶದಲ್ಲಿ ಮದ್ದುಗುಂಡುಗಳ ನಿರ್ಮಾಣಕ್ಕೆ ತಾಮ್ರವು ವಿಶೇಷವಾಗಿ ಬೇಕಾಗಿರುವುದರಿಂದ ಕ್ರೈಸ್ತದೇವಾಲಯಗಳ ಮೇಲೆ ಹೊದ್ದಿಸಿರುವ ತಾಮ್ರದ ತಗಡುಗಳನ್ನೆಲ್ಲಾ ಶೇಖರಿಸಿದರೆ ಎಷ್ಟಾಗುವುದೆಂಬುದನ್ನು ಲೆಕ್ಕಮಾಡಿ ತಿಳಿಯಿಸಬೇಕೆಂದು ಅಲ್ಲಿನ ಒಬ್ಬ ಅಧಿಕಾರಿಯು ಅಪ್ಪಣೆ ಮಾಡಿರುವನಂತೆ.

ಜರ್ಮನಿಯವರು ಒಂದು ತರದ ದ್ರಾವಕವನ್ನು ಕಂಡುಹಿಡಿದಿದ್ದಾರೆ. ಕಂದಕಗಳ ಮುಂದೆ ಕಟ್ಟಿಕೊಂಡಿರುವ ಮುಳ್ಳಿನ ತಂತಿಯ ಬೇಲಿಯಮೇಲೆ ಇದನ್ನು ಪ್ರಯೋಗಿಸಿದರೆ ಅದು ಕ್ಷಣಕಾಲದೊಳಗೆ ನೀರಾಗಿ ಕರಗಿ ಹೋಗುವುದಂತೆ. ಇದನ್ನು ಜರ್ಮನರು ಈಗ ಪೂರ್ವರಣರಂಗದಲ್ಲಿ ಉಪಯೋಗಿಸುತ್ತಿದ್ದಾರೆ.

ಜರ್ಮನರ ಮೇಲಣ ಪಕ್ಷಪಾತದಿಂದ ದಕ್ಷಿಣಾಫ್ರಿಕಾ ಪ್ರಭುತ್ವದವರ ಮೇಲೆ ತಿರುಗಿಬಿದ್ದಿದ್ದ ಮಾರಿಟ್ಜ್ ಡೀವೆಟ್ ಎಂಬುವರಿಗೆ ಅರ್ಥದಂಡಕಾರಾಗೃಹವಾಸಶಿಕ್ಷೆಗಳು ಈ ಮೊದಲೇ ವಿಧಿಸಲ್ಪಟ್ಟಿದ್ದುವಷ್ಟೆ. ಅದೇತೆರದ ಅಪರಾಧಿಯಾದ ಇನ್ನೊಬ್ಬ ಕೆಂಪ್ ಎಂಬಾತನಿಗೆ ೧೫ ಸಾವಿರ ರೂಗಳ ಅರ್ಥದಂಡವೂ ೭ ವರ್ಷ ಕಾರಾಗೃಹವಾಸ ಶಿಕ್ಷೆಯೂ ಈಗ ವಿಧಿಸಲ್ಪಟ್ಟಿತು.

ಜರ್ಮನಿಯ ಕ್ರುಪ್ ಕರ್ಮಾಗಾರದಲ್ಲಿ ಕೆಲಸಗಾರರು ಮುಷ್ಕರಹಿಡಿದು ಕೆಲಸಕ್ಕೆ ಬರದೆ ನಿಂತುಬಿಟ್ಟರು. ಅವರ ಪ್ರತಿನಿಧಿಗಳೊಡನೆ ಸೈನ್ಯಾಧಿಕಾರಿಗಳು ಸೇರಿ ಮಾತನಾಡಿ, ಕೆಲಸಗಾರರ ಕೋರಿಕೆಗಳಲ್ಲಿ ಕೆಲವನ್ನು ನೆರವೇರಿಸಿಕೊಡುತ್ತೇವೆಂದು ಒಪ್ಪಿಕೊಂಡರು. ಆದರೂ ಕೆಲ ಕೆಲಸಗಾರರು ನಾವು ಕಂದಕಗಳಲ್ಲಿ ಸಾಯುವುದಕ್ಕಾದರೂ ಒಪ್ಪಿಕೊಳ್ಳುತ್ತೇವೆ. ಇಲ್ಲಿ ಕೆಲಸಮಾಡಲಾರೆವೆಂದು ಹೇಳಿ ಹೊರಟು ಹೋದರು.

ಲಂಡನ್‌ಪಟ್ಟಣದಲ್ಲಿ ಸಾವಿರಾರುಮಂದಿ ಸ್ತ್ರೀಯರು ಬೀದಿಯಲ್ಲಿ ಉತ್ಸವಗೊಂಡು ಹೋಗಿ ಲಾಯಿಡ್‌ಜಾರ್ಜ್‌ರವರನ್ನು ಕಂಡು, ತಮಗೂ ಕೂಡ ಮದ್ದು ಗುಂಡು ಮೊದಲಾದ ಸಾಮಗ್ರಿಗಳನ್ನು ನಿರ್ಮಿಸುವಲ್ಲಿ ಸಹಾಯವಾಗಿರುವುದಕ್ಕೆ ಅವಕಾಶಕೊಡಬೇಕೆಂದು ಕೇಳಿಕೊಳ್ಳಲು, ಈ ಕಾರ್ಯದಲ್ಲಿ ಸ್ತ್ರೀಯರನ್ನು ಉಪಯೋಗಿಸಿಕೊಳ್ಳುವಲ್ಲಿ ಪ್ರಭುತ್ವದವರು ಸಾಧ್ಯವಾದಮಟ್ಟಿಗೂ ಪ್ರಯತ್ನಿಸುವರು. ಸ್ತ್ರೀಯರು ಸಹಾಯಮಾಡದಿದ್ದರೆ ನಮ್ಮ ಜಯಪ್ರಾಪ್ತಿಯು ಸಾವಕಾಶವಾಗುವುದು ಎಂದು ಉತ್ತರವಿತ್ತು ಸಮಾಧಾನಪಡಿಸಿ ಕಳುಹಿದರು.

ಅಮೇರಿಕಾಕ್ಕೆ ಸೇರಿದ ಚಿಕಾಗೋನದಿಯಲ್ಲಿನ ಒಂದು ಹೊಗೆ ಹಡಗಿನಲ್ಲಿ ವಿದ್ಯುಚ್ಛಕ್ತಿ ಕಾರ್ಯಾಲಯದಲ್ಲಿ ಕೆಲಸಮಾಡುವ ಹುಡುಗರು ಮಕ್ಕಳು ಹೆಂಗುಸರು ಗಂಡುಸರುಗಳು ಬಹುಶಃ ೨ ಸಾವಿರ ಮಂದಿಗಳು ಕುಳಿತು ವಿನೋದಾರ್ಥವಾಗಿ ಸಂಚರಿಸಬೇಕೆಂದು ಹೊರಟಿರುವಲ್ಲಿ ಏನೋ ಅಚಾತುರ್ಯದಿಂದ ಹಡಗು ತಲೆ ಕೆಳಗಾಗಿ ಮುಳುಗಿಹೋಯಿತು. ಬಹುಶಃ ೨೦೦೦ ಮಂದಿಗಳು ಸತ್ತಿರಬಹುದೆಂದು ವಿಧಿಸಲ್ಪಟ್ಟಿದ್ದಾರೆ. ೪೦೦ ದೋಣಿಗಳ ಮೇಲೆಯೇ ಈಚೆಗೆ ತೆಗೆದರು. ಆ ಹಡಗಿನ ಉದ್ಯೋಗಿಗಳು ಮೊದಲಾದವರನ್ನು ಅಧಿಕಾರಿಗಳು ಹಿಡಿದು ಸೆರೆಯಲ್ಲಿಟ್ಟಿದ್ದಾರೆ.

ತುರ್ಕಿಯವರು ಗ್ರೀಸ್‌ದೇಶದ ಪ್ರಜೆಗಳನ್ನು ಬಾಧಿಸುತ್ತಿರುವ ವಿಷಯವನ್ನು ಕುರಿತು ಗ್ರೀಸ್ ಪ್ರಭುತ್ವದವರು ತುರ್ಕಿ ಸರ್ಕಾರಕ್ಕೆ ಬರೆದುದಲ್ಲದೆ ಅವರು ಹಾಗೆ ಮಾಡದಿರುವಂತೆ ನೀವು ಸರಿಪಡಿಸಬೇಕೆಂದು ಜರ್ಮನಿ ಆಸ್ಟ್ರಿಯಾ ಪ್ರಭುತ್ವಗಳವರಿಗೂ ತಿಳಿಯಪಡಿಸಿದರು. ತುರ್ಕಿದೇಶದ ಸಂಬಂಧವಾದ ಈ ವಿಷಯದಲ್ಲಿ ನಾವು ಪ್ರವೇಶಿಸಲಾರೆವೆಂದು ಅವೆರಡು ಪ್ರಭುತ್ವದವರೂ ಗ್ರೀಸಿನವರಿಗೆ ಉತ್ತರವನ್ನು ಕೊಟ್ಟಿರುವರೆಂದು ತಂತೀವರ್ತಮಾನ ಬಂದಿದೆ. ಇದು ನಿಜವಾಗಿರುವ ಪಕ್ಷದಲ್ಲಿ ಗ್ರೀಸೂ ಕೂಡ ಸ್ವಲ್ಪದಿವಸದಲ್ಲಿ ಮಿತ್ರಮಂಡಲಿಯೊಡನೆ ಸೇರಿ ತುರ್ಕಿಯಮೇಲೆ ಕತ್ತಿ ಹಿರಿಯಬಹುದು.

ಬರುವ ಆಗಸ್ಟ್ ತಾ॥೪ಕ್ಕೆ ಇಂಗ್ಲೀಷರು ಯುದ್ಧಪ್ರಕಟನಮಾಡಿ ೧ ವರ್ಷವಾಗುವುದರಿಂದ ಆದಿವಸ ಗ್ರೇಟ್‌ಬ್ರಿಟನ್ನಿನಲ್ಲೂ ಸಾಮ್ರಾಜ್ಯದಎಲ್ಲಪ್ರದೇಶಗಳಲ್ಲೂ ಸಭೆಗಳನ್ನು ಜರುಗಿಸುವುದಕ್ಕೆ ಅಧಿನಿವೇಶಗಳ ಪ್ರತಿನಿಧಿಗಳೆಲ್ಲರೂ ಉತ್ಸಾಹಗೊಂಡಿದ್ದಾರೆ. “ಮಿತ್ರಮಂಡಲಿಯವರು ಸ್ವಾತಂತ್ರ್ಯರಕ್ಷಣೆಗೂ ಧರ್ಮಸಂಸ್ಥಾಪನೆಗೂ ಸಹ ಈಗಿನ ಯುದ್ಧದಲ್ಲಿ ಪ್ರವರ್ತಿಸಿದವರಾದುದರಿಂದ ಜಯಪ್ರಾಪ್ತಿಯಾಗಿ ತಮ್ಮ ಸಂಕಲ್ಪವು ನೆರವೇರುವವರೆಗೂ ಯುದ್ಧವನ್ನು ನೆರವೇರಿಸುವವರಾಗಬೇಕೆಂದು ತಮ್ಮ ದೃಢನಿಶ್ಚಯವನ್ನು ತಿಳಿಯಿಸುತ್ತೇವೆ” ಎಂಬ ನಿರ್ಧಾರವನ್ನು ಆ ಸಭೆಗಳಲ್ಲಿ ಮಾಡಬೇಕು. ಎಂಬ ಸೂಚನೆಯು ಪಾರ್ಲಿಮೆಂಟಿನಲ್ಲಿ ಬರಲು, ಅದಕ್ಕೆ ಮುಖ್ಯಮಂತ್ರಿಯವರೂ, ಬೋನರ್‌ಲಾರವರೂ ಅನುಮೋದಿಸಿರುವರು. ಮತ್ತು ಅದಿನ ಮಿತ್ರಮಂಡಲಿಯ ಜಯಪ್ರಾಪ್ತಿಗಾಗಿ ಸರ್ವದೈವಪ್ರಾರ್ಥನೆಯು ಮಾಡುವುದಕ್ಕೆ ಏರ್ಪಾಟಾಗಿದೆ. ನಮ್ಮ ಭರತಖಂಡದಲ್ಲೂ ಎಲ್ಲ ಮತಸ್ಥರೂ ತಮ್ಮ ದೇವಾಲಯಗಳಲ್ಲಿ ಆ ವಿಷಯವಾಗಿ ಭಗವತ್ಪ್ರಾರ್ಥನೆಯನ್ನು ನಡೆಯಿಸುವವರಾಗಿದ್ದಾರೆ.